ಅರೆಭಾಷೆ ಪದಕೋಶ

ಅರೆಭಾಷೆ–ಕನ್ನಡ–ಇಂಗ್ಲಿಷ್

AREBHASHE DICTIONARY

AREBHASHE-KANNADA-ENGLISH

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ

ಅರೆಭಾಷೆ ಪದಕೋಶ

ಅರೆಭಾಷೆ–ಕನ್ನಡ–ಇಂಗ್ಲಿಷ್

AREBHASHE DICTIONARY

AREBHASHE-KANNADA-ENGLISH

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ

Decennial Year Publication 2022

ಅರೆಭಾಷೆ ಪದಕೋಶ : ಅರೆಭಾಷೆ–ಕನ್ನಡ–ಇಂಗ್ಲಿಷ್ ಡಿಕ್ಷನರಿ

ArebhashePadakosha: Arebhashe-Kannada-English Dictionary.
Karnataka Arebhashe Samskrithi mattuS ahitya Academy, Coffee Krupa, Rajaseat Road, Madikeri, Kodagu Dist. 571201.

Email :arebaseacademy@gmail.com, Mob: 6362522677
Web : https://arebhasheacademy.karnataka.gov.in

Published by - Registrar, Karnataka Arebhashe Samskrithi mattu Sahitya Academy

Year of publication	:	2022
Size	:	Crown ¼
Paper	:	80 GSM NS Maplitho
Pages	:	LIV + 892
Price	:	Rs. 1000/-
ISBN	:	978-81-956598-1-4
Cover page design	:	Sudhakar Acharya, Attegoli
Page Layout	:	Techfiz Inc., Bengaluru
Printed at	:	Diganta Mudrana, Yeyyadi, Mangaluru

ಸಂಪಾದಕ ಮಂಡಳಿ

EDITORIAL BOARD

ಸಲಹಾ ಸಮಿತಿ

ಗೌರವ ಸಂಪಾದಕರ್	:	**ಪ್ರೊ. ಕೆ. ಕುಶಾಲಪ್ಪಗೌಡ,** ವಿಶ್ರಾಂತ ಪ್ರಾಧ್ಯಾಪಕರ್, ಮದ್ರಾಸು ವಿಶ್ವವಿದ್ಯಾನಿಲಯ
ಸಂಕಲನ ಮತ್ತೆ ಭಾಷಾತಾಂತ್ರಿಕ ಸಲಹೆಗಾರರ್	:	**ಪ್ರೊ. ಚೆ. ರಾಮಸ್ವಾಮಿ,** ವಿಶ್ರಾಂತ ಪ್ರಾಧ್ಯಾಪಕರ್, ಮದ್ರಾಸು ವಿಶ್ವವಿದ್ಯಾನಿಲಯ
ಪ್ರಧಾನ ಸಂಪಾದಕರ್	:	**ಲಕ್ಷ್ಮೀನಾರಾಯಣ ಕಜೆಗದ್ದೆ,** ಅಧ್ಯಕ್ಷರ್, ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ
ಮುಖ್ಯ ಸಂಪಾದಕರ್	:	**ಡಾ. ವಿಶ್ವನಾಥ ಬದಿಕಾನ,** ಸಹಾಯಕ ಪ್ರಾಧ್ಯಾಪಕರ್, ಕನ್ನಡ ವಿಭಾಗ, ಸಂತ ಅಲೋಶಿಯಸ್ ಕಾಲೇಜು (ಸ್ವಾಯತ್ತ), ಮಂಗಳೂರು ಮತ್ತೆ ಸದಸ್ಯರ್, ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ
ಸಂಪಾದಕರ್	:	**ಭರತೇಶ ಅಲಸಂಡೆಮಜಲು,** ಬ್ಯಾಂಕ್ಆಫ್ ಬರೋಡ ಉದ್ಯೋಗಿ ಮತ್ತೆ ಸದಸ್ಯರ್, ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ
ಇಂಗ್ಲಿಷ್ ಸಂಪಾದಕರ್	:	**ಡಾ. ಗಿರೀಶ್ಎನ್.** ಸಹಾಯಕ ಪ್ರಾಧ್ಯಾಪಕರ್, ಇಂಗ್ಲಿಷ್ ವಿಭಾಗ, ಸಂತ ಅಲೋಶಿಯಸ್ ಕಾಲೇಜು (ಸ್ವಾಯತ್ತ), ಮಂಗಳೂರು

ಸಲಹಾ ಸಮಿತಿ:

ಪ್ರೊ. ಬಿ.ಎ. ವಿವೇಕ ರೈ, ವಿಶ್ರಾಂತ ಉಪಕುಲಪತಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪ್ರೊ. ಕೆ. ಚಿನ್ನಪ್ಪಗೌಡ, ವಿಶ್ರಾಂತ ಉಪಕುಲಪತಿ, ಜಾನಪದ ವಿಶ್ವವಿದ್ಯಾಲಯ, ಶಿಗ್ಗಾಂವಿ

ಪ್ರೊ. ಪುರುಷೋತ್ತಮ ಬಿಳಿಮಲೆ, ವಿಶ್ರಾಂತ ಪ್ರಾಧ್ಯಾಪಕರ್, ಜೆ.ಎನ್.ಯು. ಕನ್ನಡ ಅಧ್ಯಯನ ಕೇಂದ್ರ, ದೆಹಲಿ

ಡಾ. ಪದ್ಮನಾಭ ಕೇಕುಣ್ಣಾಯ, ಪ್ರಧಾನ ಸಂಪಾದಕರ್, ತುಳು ಜ್ಞಾತಿ ಪದಸಂಚಯ

ಸಂಪಾದಕ ಸಿಬ್ಬಂದಿ	:	**ಕೆಂಜನ ಮಮತಾ ಪ್ರಸಾದ್,** ಅರೆಭಾಷೆ ಪದಕೋಶ ಯೋಜನಾ ಸಹಾಯಕರ್, ಮಡಿಕೇರಿ
ಅರೆಭಾಷೆ ಪದಕೋಶ ಕರಡು ಪ್ರತಿ ತಿದ್ದಿದವು	:	**ಶ್ರೀ ಪುರುಷೋತ್ತಮ ಕಿರ್ಲಾಯ,** ಸದಸ್ಯರ್, ನಿವೃತ್ತ ಮುಖ್ಯೋಪಾಧ್ಯಾಯರ್ ಮತ್ತೆ ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ
	:	**ಶ್ರೀ ಪುರುಷೋತ್ತಮ ಕೆ.ವಿ. ಕರಂಗಲ್ಲು,** ಪ್ರಾಂಶುಪಾಲರ್, ಪೊಂಪೈ ಕಾಲೇಜು, ತಲಪಾಡಿ, ಐಕಳ ಮತ್ತೆ ಸದಸ್ಯರ್, ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ
	:	**ಶ್ರೀ ಕಿರಣ್ ಕುಂಬಲ್ಚೇರಿ,** ಸದಸ್ಯರ್, ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ
	:	**ಸೀತಾರಾಮ ಕೇವಳ,** ಪ್ರಾಂಶುಪಾಲರ್, ವಿದ್ಯಾರಶ್ಮಿ ಪದವಿಪೂರ್ವ ಕಾಲೇಜು, ಸವನೂರು
	:	**ಬಾರಿಯಂಡ ಜೋಯಪ್ಪ,** ನಿವೃತ್ತ ಅಧ್ಯಾಪಕರ್, ಮಡಿಕೇರಿ
	:	**ಮನೋಜ್ ಕುಡೆಕಲ್ಲು,** s/o ಸೀತಾರಾಮ ಕುಡೆಕಲ್ಲು, ಆಲೆಟ್ಟಿ ಗ್ರಾಮ ಮತ್ತು ಅಂಚೆ, ಸುಳ್ಯ
ಕ್ಷೇತ್ರಕಾರ್ಯ ಸಹಾಯಕರ್	:	**ಕೆಂಜನ ಮಮತಾ ಪ್ರಸಾದ್ । ದರ್ಶಿನ ಎಸ್. । ಜೀವ್ ಮಜ್ಲಿಂಡ್ರ ಕೋಟೇರ ಶ್ರುತಿ ಕಿಶೋರ್ । ರುಚಿತಾ ಅಮೆಮನೆ । ಡೀನಾ ಜಿ. ಕೆ. ಗೂಡಂಜಿ ಚೈತ್ರಾ ಪುರ । ಸುನಿಲ್ ಕುಮಾರ್ ಬಿ.ಬಿ.**

EDITORIAL COMMITTEE

ಸಂಪಾದಕ ಮಂಡಳಿ ಸದಸ್ಯರ್

ಅಕಾಡೆಮಿ ಅಧ್ಯಕ್ಷರ್



ಲಕ್ಷ್ಮೀನಾರಾಯಣ ಕಜೆಗದ್ದೆ

ಅಕಾಡೆಮಿ ಸದಸ್ಯರ್



ಬೈತಡ್ಕ ಜಾನಕಿ ಬೆಳ್ಯಪ್ಪ



ಸ್ಮಿತಾ ಅಮೃತರಾಜ್



ಚೊಕ್ಕಾಡಿ ಪ್ರೇಮ ರಾಘವಯ್ಯ



ಧನಂಜಯ ಅಗೋಳಿಕಜೆ



ದಂಬೆಕೋಡಿ ಯಸ್. ಆನಂದ



ಡಾ. ದಯಾನಂದ ಕೆ. ಸಿ.
ಕೂಡಕಂಡಿ



ಕುಸುಮಾಧರ ಎ.ಟಿ



ಡಾ. ವಿಶ್ವನಾಥ ಬದಿಕಾನ



ಜಯಪ್ರಕಾಶ್
ಮೋಂಟಡ್ಕ ಬಿಳಿನೆಲೆ



ಪುರುಷೋತ್ತಮ ಕಿರ್ಲಾಯ



ಡಾ. ಪುರುಷೋತ್ತಮ ಕೆ.ವಿ.
ಕರಂಗಲ್ಲು



ಕಿರಣ್ ಕುಂಬಳಚೇರಿ



ಭರತೇಶ ಅಲಸಂಡೆಮಜಲು

ರಿಜಿಸ್ಟ್ರಾರ್



ಶ್ರೀ ಚಿನ್ನಸ್ವಾಮಿ

ಅರ್ಥ ಸದಸ್ಯರ್



ಶ್ರೀಮತಿ ಕೆ.ಟಿ. ದರ್ಶನ

ಕಚೇರಿ ಸಿಬ್ಬಂದಿಗ



ಶ್ರೀಮತಿ ಜ್ಯೋತಿ



ಶ್ರೀಮತಿ ಶೋಭಾ



ಶ್ರೀ ವಿಘ್ನೇಶ್


ಬಸವರಾಜ ಬೊಮ್ಮಾಯಿ
ಮುಖ್ಯಮಂತ್ರಿ

ವಿಧಾನ ಸೌಧ,
ಬೆಂಗಳೂರು – 560001

ಸಂಖ್ಯೆ : ಮುಮಂ/ಪಶಾ/210/2022

ದಿನಾಂಕ: 31.05.2022

ಸಂದೇಶ



ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯು ಅರೆಭಾಷೆ–ಕನ್ನಡ–ಇಂಗ್ಲಿಷ್ ಭಾಷೆಗಳ 'ಅರೆಭಾಷೆ ಪದಕೋಶ'ವನ್ನು ಪ್ರಕಟಿಸುತ್ತಿರುವುದು ಸಂತೋಷದ ಸಂಗತಿ.

ಅರೆಭಾಷೆ ಸಂಸ್ಕೃತಿ, ಆಚಾರ–ವಿಚಾರ, ಆಹಾರ ಪದ್ಧತಿಗಳು, ಆರಾಧನೆಗಳು ವಿಭಿನ್ನತೆಯಿಂದ ಕೂಡಿದೆ. ಇಂತಹ ವೈವಿಧ್ಯಮಯ ವೈಶಿಷ್ಟ್ಯಗಳನ್ನು ಉಳಿಸಿಕೊಳ್ಳುವ ಸಲುವಾಗಿ ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯು ಕಾರ್ಯನಿರ್ವಹಿಸುತ್ತಿದ್ದು, ಅಕಾಡೆಮಿಯು ಕಳೆದ 18 ತಿಂಗಳಲ್ಲಿ ಕ್ಷೇತ್ರ ಕಾರ್ಯದ ಮೂಲಕ ಸಂಗ್ರಹಿಸಿ ಅರೆಭಾಷೆ ಪದಗಳಿಗೆ ವ್ಯಾಕರಣ ಸಂಕೇತ, ರೋಮನ್ ಲಿಪಿ, ಕನ್ನಡ ಅರ್ಥ, ಇಂಗ್ಲಿಷ್ ಅರ್ಥ, ಅರೆಭಾಷೆ ಗಾದೆ–ಒಗಟು–ನುಡಿಗಟ್ಟು, ವಾಕ್ಯಪ್ರಯೋಗ, ಪದಪ್ರಯೋಗ ಹೀಗೆ ಹಲವು ಹಂತಗಳಲ್ಲಿ ವಿಭಜನೆ ಮತ್ತು ವಿಶ್ಲೇಷಣೆ ಮಾಡಿ ಅರೆಭಾಷೆ ಪದಕೋಶವನ್ನು ಪ್ರಕಟಿಸುತ್ತಿರುವುದು ಹೆಮ್ಮೆಯ ಸಂಗತಿ.

ದಶಮಾನೋತ್ಸವದ ಸಂಭ್ರಮದಲ್ಲಿರುವ ಅಕಾಡೆಮಿಯಿಂದ ಕನ್ನಡ ನಾಡು–ನುಡಿ–ಸಂಸ್ಕೃತಿಯ ಬೆಳವಣಿಗೆಗೆ "ಅರೆಭಾಷೆ ಪದಕೋಶ"ವು ಉತ್ತಮ ಕೊಡುಗೆಯಾಗಲಿದೆ.

(ಬಸವರಾಜ ಬೊಮ್ಮಾಯಿ)

ಶ್ರೀ ಲಕ್ಷ್ಮೀನಾರಾಯಣ ಕಜೆಗದ್ದೆ
ಅಧ್ಯಕ್ಷರು,
ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ
ಕಾಫಿಕೃಪಾ, ರಾಜಾಸೀಟ್ ರಸ್ತೆ, ಮಡಿಕೇರಿ, ಕೊಡಗು ಜಿಲ್ಲೆ

ಡಿ.ವಿ. ಸದಾನಂದ ಗೌಡ
D.V. SADANANDA GOWDA

सत्यमेव जयते

ಬೆಂಗಳೂರು ಉತ್ತರ ಲೋಕಸಭಾ ಸದಸ್ಯರು,
ಮಾಜಿ ಮುಖ್ಯಮಂತ್ರಿಗಳು, ಕರ್ನಾಟಕ
ಹಾಗೂ ಮಾಜಿ ಕೇಂದ್ರ ಸಚಿವರು
Member of Parllament, Bengaluru North,
Former Chief Minister, Karnataka
Former Union Minister



ಸಂದೇಶ

15 ಡಿಸೆಂಬರ್ 2011ರಲ್ಲಿ ನಾನು ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಅರೆಭಾಷೆಗೆ ಅಧೀಕೃತವಾಗಿ ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಘೋಷಣೆಯಾಗಿ ಹತ್ತು ವರ್ಷ ತುಂಬಿರುವುದು ಸಂತಸದ ವಿಷಯ. ಅರೆಭಾಷಿಗರಲ್ಲಿರುವ ವಿಶಿಷ್ಟ ಸಂಸ್ಕೃತಿ ಮತ್ತು ಸಂಸ್ಕಾರವನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಅಕಾಡೆಮಿಯ ಅಧ್ಯಕ್ಷರು ಮತ್ತು ಸದಸ್ಯರು ವಿವಿಧ ಚಟುವಟಿಕೆಗಳನ್ನು ಹಮ್ಮಿಕೊಂಡಿದ್ದಾರೆ. ಅರೆಭಾಷೆ ನಾಟಕ, ಯಕ್ಷಗಾನ, ಸಂಸ್ಕೃತಿ ಶಿಬಿರ ಎಂಬಂತೆ ಹೊಸ ಆಲೋಚನೆಗಳನ್ನು ಅಕಾಡೆಮಿ ಹಮ್ಮಿಕೊಂಡಿದೆ. ಈ ಮೂಲಕ ಕರ್ನಾಟಕ ರಾಜ್ಯಾದ್ಯಂತ ಅಕಾಡೆಮಿಯ ಪರಿಚಯವಾಗಿದೆ ಮತ್ತು ಅಕಾಡೆಮಿ ಜನಸ್ಪಂದನೆಯಲ್ಲಿದೆ. ಈ ದಶಸಂಭ್ರಮದ ನೆಲೆಯಲ್ಲಿ ಅಕಾಡೆಮಿ 'ಅರೆಭಾಷೆ ಪದಕೋಶ'ವನ್ನು ರಚಿಸುತ್ತಿರುವುದು ಅರೆಭಾಷಿಗರಿಗೆ ಅಭಿಮಾನದ ಸಂಗತಿ. ಈ ಮೂಲಕ ಅರೆಭಾಷೆ ಅಂತಾರಾಷ್ಟ್ರೀಯ ಮನ್ನಣೆ ಪಡೆಯಲು ಸಹಕಾರಿಯಾಗಲಿದೆ. ಸಣ್ಣ ಭಾಷೆಯೊಂದು ತನ್ನ ಒಡಲಿನ ಭಾವನೆಗಳನ್ನು ವ್ಯಕ್ತಪಡಿಸುವ ಪದಸಂಪತ್ತನ್ನು ಗ್ರಂಥರೂಪದಲ್ಲಿ ತರುತ್ತಿರುವುದು ಸಂತಸ–ಸಂಭ್ರಮದ ಕ್ಷಣದಲ್ಲಿ ಪದಕೋಶ ತಯಾರಿಯಲ್ಲಿ ಪಾಲ್ಗೊಂಡ ಎಲ್ಲರನ್ನು ಅಭಿನಂದಿಸಿ ಶುಭ ಹಾರೈಸುತ್ತೇನೆ.

ದಿನಾಂಕ : 29–06–2022
ಸ್ಥಳ : ಬೆಂಗಳೂರು

ಡಿ. ವಿ. ಸದಾನಂದ ಗೌಡ

ಕಛೇರಿ : 1ನೇ ಮಹಡಿ, ಪೋಡಿಯಂ ಬ್ಲಾಕ್, ವಿವಿ ಟವರ್, ಡಾ ಬಿ ಆರ್ ಅಂಬೇಡ್ಕರ್ ರಸ್ತೆ, ಬೆಂಗಳೂರು – 560001 ದೂ: 080–22866699

Office:1st Floor, Podium Block, V.V.Tower,Dr. B R Ambedkar Road,Bengaluru-560001.Telephone :080-22866697 EMail:dvsbangalorenorth@gmail.com
Delhi Address : Bunglow No.3, Safdarjung Lane, New Delhi - 110011.
Phone : 011-23011230/011-23011231E-Mail:dvsbangalorenorth@gmail.com

V SUNILLKUMAR
ವಿ. ಸುನಿಲ್ ಕುಮಾರ್

ಇಂಧನ, ಕನ್ನಡ ಮತ್ತು ಸಂಸ್ಕೃತಿ ಸಚಿವರು
ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವರು
Minister for Energy, Kannada & Culture and Incharge Minister for Dakshina Kannada District

ಇ.ಕ & ಸಂ.ಸ /88/2022

ದಿನಾಂಕ : 05–05–2022



ಸಂದೇಶ

ಕರ್ನಾಟಕ ರಾಜ್ಯ ಸರ್ಕಾರದ ಸಂಸ್ಕೃತಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು, ದಶವರ್ಷ ಸಂಭ್ರಮದಲ್ಲಿದೆ. ಇಲಾಖೆ ನೀಡುವ ಅನುದಾನವನ್ನು ಸದುಪಯೋಗಪಡಿಸಿಕೊಂಡು 18 ತಿಂಗಳ ಅಲ್ಪಾವಧಿಯಲ್ಲಿ ಅಕಾಡೆಮಿಯ ಸದಸ್ಯರನ್ನು ಬಳಸಿಕೊಂಡು ಉತ್ತಮ ಚಟುವಟಿಕೆಗಳನ್ನು ನಡೆಸಿಕೊಂಡು ಹೋಗುತ್ತಿರುವ ಅಧ್ಯಕ್ಷರನ್ನು ಅಭಿನಂದಿಸುತ್ತಿದ್ದೇನೆ.

ರಾಜ್ಯದ ಎರಡು ಜಿಲ್ಲೆಗಳಲ್ಲಿ ಮಾತನಾಡುವ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯ ಕಾರ್ಯಚಟುವಟಿಕೆಯು ರಾಜ್ಯಾದ್ಯಂತ ಗುರುತಿಸಿಕೊಂಡಿದೆ. ಅರೆಭಾಷೆಯ ಬೆಳವಣಿಗೆಗೆ ಅಕಾಡೆಮಿಯು ರಚಿಸುವ 'ಅರೆಭಾಷೆ ಪದಕೋಶ'ವು ಮುಂದೆ ಕರ್ನಾಟಕದ ಭಾಷಾ ಪ್ರಪಂಚದಲ್ಲಿ ಮೈಲಿಗಲ್ಲಾಗಲೆಂದು ಶುಭ ಹಾರೈಸುತ್ತೇನೆ.

(ವಿ ಸುನಿಲ್ ಕುಮಾರ್)

Room No. 344 & 344A, 3rd Floor, Vidhana Soudha, Bengaluru - 560001.
Phone : 080-22251568 / 22033426
'Vikasa', Near Taluk Panchayath, Bypass Road, Karkala Taluk,
Udupi District - 574104, Tel : 08258-234589
E-mail : energyminvsunilkumar@gmail.com / Kannadacultureminister@gmail.com

SHOBHA KARANDALAJE

सत्यमेव जयते

75 ಸ್ವಾತಂತ್ರ್ಯದ ಅಮೃತಮಹೋತ್ಸವ

Minister of State For
Agriculture & Farmers Welfare
Government of India

D.O. No. 792 MOS
(A&FW)/VIP/2021-22

Date: 29.06.2022

ಸಂದೇಶ



ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯು ತನ್ನ ದಶ ವರ್ಷದ ಸಂಭ್ರಮಾಚರಣೆಯಲ್ಲಿರುವುದು ಅತ್ಯಂತ ಹೆಮ್ಮೆಯ ಸಂಗತಿ.

ಅಕಾಡೆಮಿಯು ಅತ್ಯಂತ ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸಿ ಅರಬಾಷೆ ಪದಕೋಶ ತಯಾರಿಸುವ ಯೋಜನೆ ಹಮ್ಮಿಕೊಂಡು, ಈ ಕಾರ್ಯದಲ್ಲಿ ಯಶಸ್ಸು ಗಳಿಸಿರುವುದು ಅತ್ಯಂತ ಶ್ಲಾಘನೀಯ. ಅಲ್ಪಾವಧಿ ಯೋಜನೆಯಲ್ಲಿ ನನ್ನ ಭಾವನಾ ವಲಯದ ಅರೆಭಾಷೆ ಪದಗಳನ್ನು ಹದಿನೆಂಟು ಸಾವಿರ ಅರೆಭಾಷೆ ಪದಗಳ ವ್ಯಾಕರಣ, ಸಂಕೇತ, ಅರೆಭಾಷೆ–ಕನ್ನಡ–ಇಂಗ್ಲಿಷ್ ಹೀಗೆ ಸಂಗ್ರಹಿಸಿ 'ಅರೆಭಾಷೆ ಪದಕೋಶ' ಶೀರ್ಷಿಕೆಯಡಿಯಲ್ಲಿ ಪ್ರಕಟಣೆಗೊಳಿಸುತ್ತಿರುವ ಅಕಾಡೆಮಿಯ ಸಾಧನೆಯನ್ನು ನಾನು ಅತ್ಯಂತ ಹೃದಯಪೂರ್ವಕವಾಗಿ ಮೆಚ್ಚಿದ್ದೇನೆ. ಈ ಅರೆಭಾಷೆ ಪದಕೋಶವು ಅರೆಭಾಷೆಯ ವಿದ್ವತ್ ವಲಯಕ್ಕೆ ದೊಡ್ಡ ಕೊಡುಗೆಯಾಗಲಿದೆ.

ಈ ಕಾರ್ಯದಲ್ಲಿ ತೊಡಗಿಕೊಂಡ ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರು, ಸದಸ್ಯರು, ಪದಾಧಿಕಾರಿಗಳು ಮತ್ತು ಇದಕ್ಕೆ ಸಹಕರಿಸಿದ ಪ್ರತಿಯೊಬ್ಬರನ್ನು ನಾನು ಈ ಮೂಲಕ ಅಭಿನಂದಿಸುತ್ತೇನೆ.

'ಅರೆಭಾಷೆ ಪದಕೋಶ' ಅರೆಭಾಷೆಯ ಅಭಿವೃದ್ಧಿಯ ದ್ಯೋತಕವಾಗಿ ಹೊರಹೊಮ್ಮಲೆಂದು ನಾನು ಹಾರೈಸುತ್ತೇನೆ.

(ಶೋಭಾ ಕರಂದ್ಲಾಜೆ)

Delhi Office: Room No. 322, 'A'Wing, Krishi Bhawan, Dr. Rajendra Prasad Road, New Delhi - 110001 Tel.: +23383975/76 Fax : +91-11-23383971,
Email : mos.shobha.agri@gmail.com
Residence: 101, Narmada Apartments, Dr. B.D. Marg, New Delhi - 110001

ಕೋಟ ಶ್ರೀನಿವಾಸ ಪೂಜಾರಿ
ಸಮಾಜ ಕಲ್ಯಾಣ ಮತ್ತು
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕೊಠಡಿ ಸಂಖ್ಯೆ : 343, 343ಎ
3ನೇ ಮಹಡಿ, ವಿಧಾನಸೌಧ
ಬೆಂಗಳೂರು – 560001
ದೂರವಾಣಿ : 080 – 22259183
080–22033475
ಇ–ಮೇಲ್: minswbc@gmail.com

ನಂ: ಸ.ಕ.ಹಿ.ವ/ಸ/9204/2021–22 ದಿನಾಂಕ : 10–05–2022

ಸಂದೇಶ



ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾತನಾಡುವ ಅರೆಭಾಷೆಗೆ ಸುಮಾರು ಹದಿನೆಂಟು ಸಾವಿರ ಪದಗಳಿರುವ ಪದಕೋಶವೊಂದು ತಯಾರಾಗುತ್ತಿದೆ. ಅರೆಭಾಷೆ ಇತಿಹಾಸದಲ್ಲಿ ಇಂತಹ ಅಪೂರ್ವ ಗ್ರಂಥವೊಂದು ತಯಾರಿಯಾಗುತ್ತಿರುವುದು ಹೆಮ್ಮೆಯ ಸಂಗತಿ. ಅಲ್ಪಾವಧಿಯಲ್ಲಿ ಸಾವಿರಾರು ಪದಗಳನ್ನು ಸಂಗ್ರಹಿಸಿ ಪ್ರಕಟಿಸುತ್ತಿರುವ ಅಕಾಡೆಮಿಯನ್ನು ಅಭಿನಂದಿಸುತ್ತೇನೆ.

ಕೋಟ ಶ್ರೀನಿವಾಸ ಪೂಜಾರಿ

ಎಸ್. ಅಂಗಾರ
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು ಹಾಗೂ
ಉಡುಪಿ ಜಿಲ್ಲಾ ಉಸ್ತುವಾರಿ ಸಚಿವರು

ದೂರವಾಣಿ ಸಂಖ್ಯೆ : 080–22255023
ಅಂತರಿಕ : 080–22033564
ಕೊಠಡಿ ಸಂಖ್ಯೆ : 305, 305ಎ
3ನೇ ಮಹಡಿ, ವಿಧಾನಸೌಧ
ಬೆಂಗಳೂರು
E-mail : angarasminister@gmail.com

ಸಂಖ್ಯೆ : ಮೀ.ಬ.ಒ.ಜ/330/2022 ಸುಳ್ಯ

ದಿನಾಂಕ : 06–06–2022

ಸಂದೇಶ



ಅರೆಭಾಷೆ ಮಾತನಾಡುವ ಪ್ರದೇಶದಲ್ಲಿ ಹುಟ್ಟಿ ಬೆಳೆದ ನನ್ನ ಮನೆಭಾಷೆ ತುಳುವಾದರೂ ನನ್ನ ಪರಿಸರದ ಭಾಷೆ ಅರೆಭಾಷೆ. ಯಾಕೆಂದರೆ, ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ಮತ್ತು ಕೊಡಗಿನ ಮಡಿಕೇರಿ ತಾಲೂಕಿನಲ್ಲಿ ಅರೆಭಾಷೆ ವ್ಯಾವಹಾರಿಕ ಭಾಷೆಯಾಗಿ ಬೆಳೆದಿದೆ. ಪ್ರಸ್ತುತ ಅವಧಿಯಲ್ಲಿ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಉತ್ತಮ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಈಗ 'ಅರೆಭಾಷೆ ಪದಕೋಶ'ವನ್ನು ತಯಾರಿಸುತ್ತಿರುವುದು ಅರೆಭಾಷೆ ಮತ್ತು ಕನ್ನಡ ಸಂಶೋಧನೆಗೆ ಹೆದ್ದಾರಿಯಾಗಲಿ. ವೈಯಕ್ತಿಕವಾಗಿ ನನ್ನ ವಿಧಾನಸಭಾ ಕ್ಷೇತ್ರದ ಅರೆಭಾಷೆಯನ್ನು ಗ್ರಂಥರೂಪದಲ್ಲಿ ಪ್ರಕಟಿಸಿ ಕನ್ನಡ ನಾಡು – ನುಡಿಯ ಬೆಳವಣಿಗೆಗೆ ಅಪೂರ್ವ ಕೊಡುಗೆಯಾಗುತ್ತಿರುವುದು ಹೆಮ್ಮೆಯ ಸಂಗತಿ. ಈ ಯೋಜನೆಯಲ್ಲಿ ಕೆಲಸ ಮಾಡಿದ ಎಲ್ಲರನ್ನೂ ಮತ್ತು ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯನ್ನು ಅಭಿನಂದಿಸುತ್ತೇನೆ.

ಅಭಿನಂದನೆಗಳೊಂದಿಗೆ,

(ಎಸ್. ಅಂಗಾರ)

ಕೆ.ಜಿ. ಬೋಪಯ್ಯ
ಶಾಸಕರು, ವಿರಾಜಪೇಟೆ
ಅಧ್ಯಕ್ಷರು,
ಸರ್ಕಾರಿ ಜಮೀನುಗಳ ಸಂರಕ್ಷಣಾ ಸಮಿತಿ

ಕೊಠಡಿ ಸಂಖ್ಯೆ : 234–235
2ನೇ ಮಹಡಿ, ವಿಕಾಸಸೌಧ
ಬೆಂಗಳೂರು – 560001
ದೂರವಾಣಿ : 080–22267889

ಸಂದೇಶ



ಸುಮಾರು 600 ವರ್ಷಗಳ ಇತಿಹಾಸವಿರುವ ಅರೆಭಾಷೆಯು 15 ಡಿಸೆಂಬರ್ 2011ರಂದು ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡಮಿಯೆಂಬ ಭಾಷಾ ಅಕಾಡೆಮಿಯು ನಾನು ಕರ್ನಾಟಕ ರಾಜ್ಯ ವಿಧಾನಸಭೆಯ ಸಭಾಧ್ಯಕ್ಷನಾಗಿದ್ದ ಸಂದರ್ಭದಲ್ಲಿ ಅನುಮೋದನೆಗೊಂಡು ಕಾರ್ಯರೂಪಕ್ಕೆ ಬಂತು ಎಂಬುವುದು ನನಗೆ ಹೆಮ್ಮೆಯ ಸಂಗತಿ. ಪ್ರಸ್ತುತ ದಶವರ್ಷ ಸಂಭ್ರಮಾಚರಣೆಯ ಸುಸಂದರ್ಭದಲ್ಲಿ ಅಕಾಡೆಮಿಯ ಅಧ್ಯಕ್ಷರು ಮತ್ತು ಸದಸ್ಯರು ಅರೆಭಾಷೆ ಪದಕೋಶ, ಅರೆಭಾಷೆ ವಿಶ್ವಕೋಶ, ಅರೆಭಾಷೆ ಪಾರಂಪರಿಕ ಕೋಶ, ಯಕ್ಷಗಾನ, ರಂಗಭೂಮಿ ಸಂಸ್ಕೃತಿ ಶಿಬಿರದಂತಹ ಹಲವಾರು ವಿನೂತನ ಯೋಜನೆಗಳನ್ನು ಹಮ್ಮಿಕೊಂಡಿರುವುದು ಕನ್ನಡ ಸಂಸ್ಕೃತಿ ಮತ್ತು ಸಾಹಿತ್ಯಕ್ಕೆ ವಿಶೇಷ ಕೊಡುಗೆಯಾಗಿದೆ. ಕನ್ನಡ ಸಂಶೋಧನಾ ಕ್ಷೇತ್ರಕ್ಕೆ ಮಾದರಿಯಾಗುವ ರೀತಿಯಲ್ಲಿ ಅರೆಭಾಷೆ ಪದಕೋಶ ಹೊರತರುತ್ತಿರುವುದು ಸಂತೋಷದ ವಿಚಾರ. ಇಂತಹ ಸಂಘಟನಾತ್ಮಕ, ಕ್ರಿಯಾತ್ಮಕ ಚಟುವಟಿಕೆಗಳಿಂದ ರಾಜ್ಯ ರಾಷ್ಟ್ರದಾದ್ಯಂತ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯವನ್ನು ಪಸರಿಸುವಂತೆ ಮಾಡಿದ ಯುವ ಉತ್ಸಾಹಿ ತಂಡದ ಅಕಾಡೆಮಿಯ ಸರ್ವರನ್ನು ಅಭಿನಂದಿಸುತ್ತಿದ್ದೇನೆ.

(ಕೆ.ಜಿ. ಬೋಪಯ್ಯ)

ಎಂ. ಪಿ. ಅಪ್ಪಚ್ಚು (ರಂಜನ್)
ವಿಧಾನಸಭಾ ಸದಸ್ಯರು
208 ಮಡಿಕೇರಿ ವಿಧಾನ ಸಭಾ ಕ್ಷೇತ್ರ
ಮಾಜಿ ಸಚಿವರು, ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆ,
ಮಾಜಿ ಸಧ್ಯಕ್ಷರು, ಅರ್ಜಿಗಳ ಸಮಿತಿ, ಕರ್ನಾಟಕ ವಿಧಾನ ಸಭೆ,
ಮಾಜಿ ಅಧ್ಯಕ್ಷರು, ಕರ್ನಾಟಕ ಭೂ ಸೇನಾ ನಿಗಮ,
ಮಾಜಿ ಅಧ್ಯಕ್ಷರು, ಕರ್ನಾಟಕ ಕ್ರೀಡಾ ಪ್ರಾಧಿಕಾರಿ

ಕಚೇರಿ : 08276 – 282475
ನಿವಾಸ : 08276 – 275138
ಮೊಬೈಲ್ : 9448004138
ಅಂಚೆಪೆಟ್ಟಿಗೆ – 15
ಮಾದಾಪುರ – 571251
ಸೋಮವಾರಪೇಟೆ, ತಾ. ಕೊಡಗು ಜಿಲ್ಲೆ,
ಕರ್ನಾಟಕ ರಾಜ್ಯ

ಸಂಖ್ಯೆ : ಮ.ವಿ.ಕ್ಷೇ. ಶಾ. ಕ/67/2022–23 **ದಿನಾಂಕ : 27/05/2022**



ಸಂದೇಶ

ಮಾನ್ಯರೇ,

ಕನ್ನಡ ನಾಡು ನುಡಿ ಸಂಸ್ಕೃತಿಯನ್ನು ಅಭಿವೃದ್ಧಿಪಡಿಸುವ ಉದ್ದೇಶದಿಂದ ತಾವುಗಳು ಅರೆಭಾಷೆ ಪದಗಳನ್ನು ಸಂಗ್ರಹಿಸುವ ಯೋಜನೆಯನ್ನು ಹಮ್ಮಿಕೊಂಡಿದ್ದು, ಅರೆಭಾಷೆ ಪದಗಳಿಗೆ ವ್ಯಾಕರಣ, ಸಂಕೇತ, ರೋಮನ್ ಲಿಪಿ, ಕನ್ನಡ ಅರ್ಥ, ಇಂಗ್ಲಿಷ್ ಅರ್ಥ್, ಅರೆಭಾಷೆ ಗಾದೆ–ಒಗಟು–ನುಡಿಗಟ್ಟುಗಳು ಹೀಗೆ ಒಟ್ಟುಗೂಡಿಸಿ, ಅರೆಭಾಷೆ ಪದಕೋಶ ತಯಾರಿಸಲು ತಾವು ಉದ್ದೇಶಿಸಿರುವುದು ಸ್ವಾಗತಾರ್ಹ. ದಶ ವರ್ಷ ಸಂಭ್ರಮದಲ್ಲಿರುವ ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯು ಹಮ್ಮಿಕೊಂಡ ಯೋಜನೆಗಳಲ್ಲಿ ಅರೆಭಾಷೆ ಪದಕೋಶವು ಒಂದಾಗಿದ್ದು, ಭವಿಷ್ಯದಲ್ಲಿ ಸಂಶೋಧನೆಗೆ ಸಾಕಷ್ಟು ಅವಕಾಶಗಳನ್ನು ಈ ಕೃತಿ ತಂದುಕೊಡಬಹುದು.

ಕಲೆ ಸಂಸ್ಕೃತಿ ಉಳಿವಿಗೆ ತಾವುಗಳು ಈ ರೀತಿ ಪದಕೋಶ ಮಾಡುವ ಮೂಲಕ ಅರೆಭಾಷೆ ಉಳಿವಿಗೆ ಸಹಕರಿಸುತ್ತಿರುವುದಕ್ಕೆ ತಮಗೆ ಹಾಗೂ ಆಡಳಿತ ಮಂಡಳಿಯವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ತಾವು ಹೊರತರುವ ಪದಕೋಶವು ಯಶಸ್ವಿಯಾಗಲಿ.

ಕೊಡಗು ಮತ್ತು ಸುಳ್ಯ ಪ್ರದೇಶದಲ್ಲಿ ಮಾತನಾಡುತ್ತಿರುವ ಪ್ರಾದೇಶಿಕ ಭಾಷೆಯ ಸಾವಿರಾರು ಪದಗಳನ್ನು ಸಂಗ್ರಹಿಸಿ ಪ್ರಕಟಿಸುತ್ತಿರುವ ಅಕಾಡಮಿಯ ಕೆಲಸ ಕಾರ್ಯಗಳನ್ನು ಶ್ಲಾಘಿಸುತ್ತಿದ್ದೇನೆ. ಶಬ್ದಕೋಶವು ಉತ್ತಮ ಪದಗಳಿಂದ ಕೂಡಿ ಮನೆ ಮನೆಗೆ ತಲುಪುವಂತಾಗಲಿ.

ತಾವು ಶಬ್ದಕೋಶ ಹೊರತ್ತರುವುದಕ್ಕೆ ನನ್ನ ಶುಭಾಶಯಗಳು

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

ಎಂ. ಪಿ. ಅಪ್ಪಚ್ಚು (ರಂಜನ್) ಶಾಸಕರು
ಮಡಿಕೇರಿ ವಿಧಾನಸಭಾ ಕ್ಷೇತ್ರ

Nalin Kumar Kateel
MEMBER OF PARLIMENT,
DAKSHINA KANNADA 2nd Floor,
D. C. Office Complex, Mangaluru - 575001
Dakshina Kannda, Karnataka.

ನಳಿನ್ ಕುಮಾರ್ ಕಟೀಲು
ಲೋಕಸಭಾ ಸದಸ್ಯರು, ದಕ್ಷಿಣ ಕನ್ನಡ
2ನೇ ಮಹಡಿ, ಡಿಸಿ ಆಫೀಸ್ ಕಾಂಪ್ಲೆಕ್ಸ್,
ಮಂಗಳೂರು – 757001
ದಕ್ಷಿಣ ಕನ್ನಡ, ಕರ್ನಾಟಕ

Delhi Res. : #20, Mahadev Road, New Delhi - 110001

ಸಂದೇಶ



ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯು ಕನ್ನಡ ನಾಡು–ನುಡಿ–ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ನೆಲೆಯಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ಕರ್ನಾಟಕ – ಕೇರಳ ರಾಜ್ಯಗಳ ಗಡಿ ಜಿಲ್ಲೆಗಳ ಪುತ್ತೂರು, ಕಡಬ, ಸುಳ್ಯ, ಮಡಿಕೇರಿ ಹಾಗೂ ಕಾಸರಗೋಡು ತಾಲೂಕುಗಳಲ್ಲಿ ಸುಮಾರು ಲಕ್ಷಕ್ಕೂ ಅಧಿಕ ಜನರು ಅರೆಭಾಷೆ ಮಾತನಾಡುವವರಿರುತ್ತಾರೆ.

ಅಕಾಡಮಿಯು ಸುಮಾರು ಹದಿನೆಂಟು ಸಾವಿರ ಅರೆಭಾಷೆ ಪದಗಳನ್ನು ಸಂಗ್ರಹಿಸಿ ವ್ಯಾಕರಣ, ಲಿಪಿ, ಕನ್ನಡ ಅರ್ಥ, ಆಂಗ್ಲ ಅರ್ಥ, ಅರಭಾಷೆ ಗಾದೆ, ಒಗಡು, ನುಡಿಗಟ್ಟು, ವಾಕ್ಯ ಪ್ರಯೋಗ, ಪದ ಪ್ರಯೋಗ ಇತ್ಯಾದಿಗಳ ಸಮಗ್ರ ಸಂಕಲನ "ಅರೆಭಾಷೆ ಪದಕೋಶ" ಪ್ರಕಟಗೊಳ್ಳುತ್ತಿರುವುದು ತಿಳಿದು ತುಂಬಾ ಸಂತೋಷವಾಯಿತು. ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯ ಈ ಕಾರ್ಯವು ಶ್ಲಾಘನೀಯವಾಗಿದೆ. ಈ ಅಕಾಡೆಮಿಯು ಮಂದೆಯೂ ಇಂತಹ ಉತ್ತಮ ಕಾರ್ಯಗಳನ್ನು ಮಾಡುತ್ತಾ ಬರಲಿ ಎಂದು ಆಸಿಸುತ್ತೇನೆ. ಹಾಗೂ "ಅರೆಭಾಷೆ ಪದಕೋಶ"ವು ಒಂದು ಉತ್ತಮ ಗ್ರಂಥವಾಗಿ ಹೊರಹೊಮ್ಮಲಿ ಎಂದು ಶುಭ ಹಾರೈಸುತ್ತೇನೆ.

ನಳಿನ್ ಕುಮಾರ್ ಕಟೀಲ್

Phone : 0824-2448888(O), Delhi Phone No : 011 23355383,
Mobile : +91-9448549445, e-mail :mpdkannada@gmail.com, web:nalinkateel.com

ಪ್ರತಾಪ್ ಸಿಂಹ
PRATHAP SIMHA
Member of Parliament (Lok Sabha)
Mysore - Kodagu, (Karnataka)

सत्यमेव जयते

MEMBER :
- Parliamentary Commitee on ESTIMATES
- Standing Commitee on DEFENCE
- Parliamentary Committess of PRIVILEGES
- Consultative Committee, Ministry of I & B
- COFFEE BOARD

ಸಂದೇಶ



ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಅರೆಭಾಷಿಗರ ಪ್ರಾದೇಶಿಕ ಭಾಷೆಯನ್ನು ಕಟ್ಟಿ ಬೆಳೆಸಲು 15 ಡಿಸೆಂಬರ್ 2011 ರಂದು ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಃಇತ್ಯ ಅಕಾಡೆಮಿ ರಚನೆಗೊಂಡಿದ್ದು, ಕಳೆದ ಹತ್ತು ವರ್ಷಗಳಿಂದ ಹಲವಾರು ನೂತನ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬಂದಿದೆ. ಪ್ರಸ್ತುತ ಅಕಾಡೆಮಿ ನಾಲ್ಕು ಕಾಲ ಶಾಶ್ವತವಾಗಿ ನೆನಪಿಡುವ ಯೋಜನೆಗಳನ್ನು ರೂಪಿಸಿಕೊಂಡಿರುವುದನ್ನು ಕೇಳಿ ಬಲ್ಲೆ. ಅವುಗಳಲ್ಲಿ ಅರೆಭಾಷೆ ಪದಕೋಶವು ಸಾರ್ವಕಾಲಿಕ ಮೈಲುಗಲ್ಲಾಗಿದ್ದು, ಅರೆಭಾಷೆಯ ಸಾಹಿತ್ಯ ಮತ್ತು ಸಾಂಸ್ಕೃತಿಕ ಲೋಕಕ್ಕೆ ಲೋಕಾರ್ಪಣೆಗೊಳ್ಳುತ್ತಿರುವುದು ಹೆಮ್ಮೆಯ ವಿಷಯ ಇಂತಹ ಶ್ರಮದಾಯಕ ಯೋಜನೆಯನ್ನು ಅಲ್ಪಾವಧಿಯಲ್ಲಿ ಪೂರ್ಣಗೊಳಿಸಿರುವ ಅಕಾಡೆಮಿ ಅಧ್ಯಕ್ಷರು ಮತ್ತು ಸದಸ್ಯರನ್ನು ಶ್ಲಾಘಿಸಿಸುತ್ತೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,
(ಪ್ರತಾಪ್ ಸಿಂಹ)

Delhi Res. : 18, Mahadev Road, New Delhi - 110001 | Phone : 011-23752342
Mysore Office : JALADARSHINI, DC-2 Cottage, Hunsur Main Road, Mysore - 570005, Karnataka
Phone : 0821-2444999 | Fax : 0821-2445999 | Mobile : +91-9013869722
Email : officoofprapsimha@gmail.com | Twitter : @mepratap | Website : pratapsimha.com

ಸಂಜೀವ ಮಠಂದೂರು
ಶಾಸಕರು,
206 ಪುತ್ತೂರು ವಿಧಾನಸಭಾ ಕ್ಷೇತ್ರ
Sanjeeva Matandoor
MLA, 206 Puttur, D.K. - 574201

08251 298669
08251 232669
9448868971
sanjeevmatandoor@ gmail.com

ಪುಶಾಕ/ಸಂಖ್ಯೆ/431/2022



ಸಂದೇಶ

ಸುಮಾರು 5 ಶತಮಾನಗಳ ಇತಿಹಾಸ ಹೊಂದಿರುವ ಅರೆಭಾಷೆಯು ಕನ್ನಡ ನಾಡಿನ ವೈವಿಧ್ಯಮಯ ಸಾಂಸ್ಕೃತಿಕ ಲೋಕದಲ್ಲಿ ತನ್ನದೇ ಆದ ಮಹತ್ವದ ಸ್ಥಾನವನ್ನು ಹೊಂದಿರುತ್ತದೆ. ಅರೆಭಾಷೆಯನ್ನು ಕಾಪಾಡಿ ಬೆಳೆಸುವ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರದಿಂದ ಸ್ಥಾಪನೆಗೊಂಡ ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ ಶ್ರೀ ಲಕ್ಷ್ಮೀನಾರಾಯಣ ಕಜೆಗದ್ದೆ ಇವರು ಅಧಿಕಾರ ಸ್ವೀಕರಿಸಿದ ನಂತರ ನಿರಂತರವಾಗಿ ಅಕಾಡೆಮಿಯ ಮೂಲಕ ಹೊಸ ಪ್ರಯೋಗಗಳ ಹತ್ತು ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಬಂದಿರುತ್ತಾರೆ. ಕ್ರಿಯಾಶೀಲ ವ್ಯಕ್ತಿತ್ವದ ಶ್ರೀ ಲಕ್ಷ್ಮೀನಾರಾಯಣ ಕಜೆಗದ್ದೆ ಇವರ ಮುತುವರ್ಜಿಯಲ್ಲಿ ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯ ಮೂಲಕ ಅರೆಭಾಷೆ ಪದಕೋಶವನ್ನು ಹೊರತರುತ್ತಿರುವ ವಿಚಾರ ತಿಳಿದು, ಅರೆಭಾಷೆ ಮಾತನಾಡಬಲ್ಲ ನನಗೆ ಅತೀವ ಸಂತೋಷವಾಗಿದೆ.

ಕರ್ನಾಟಕದ ಕೊಡಗು ಜಿಲ್ಲೆಯ 3 ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ, ಪುತ್ತೂರು, ಕಡಬ ತಾಲ್ಲೂಕುಗಳಲ್ಲಿ ಮತ್ತು ಕೇರಳದ ಕಾಸರಗೋಡು ಜಿಲ್ಲೆಯ ಕೆಲವು ಭಾಗಗಳಲ್ಲಿ ಸುಮಾರು 5 ಲಕ್ಷಕ್ಕಿಂತ ಹೆಚ್ಚು ಮಂದಿ ಜನರು, ಮನೆಯಾತಾಗಿ ಆಡುತ್ತಿರುವ ಅರೆಭಾಷೆಯ ಸುಮಾರು 18 ಸಾವಿರ ಪದಗಳನ್ನು ಸಂಗ್ರಹಿಸಿ, ಅವುಗಳಿಗೆ ವ್ಯಾಕರಣ ಸಂಕೇತ, ರೋಮನ್ ಲಿಪಿ, ಕನ್ನಡ ಅರ್ಥ, ಇಂಗ್ಲೀಷ್ ಅರ್ಥವನ್ನು ಬರೆಯುವುದರ ಜೊತೆಗೆ ಅರೆಭಾಷೆ ಗಾದೆ-ಒಗಟು-ನುಡಿಗಟ್ಟು, ವಾಕ್ಯಪ್ರಯೋಗ, ಪದಪ್ರಯೋಗ ಹೀಗೆ ಹಲವು ಹಂತಗಳಲ್ಲಿ ವಿಭಜನೆ, ವಿಶ್ಲೇಷಣೆ ಮಾಡಿ ಅರೆಭಾಷೆ-ಕನ್ನಡ-ಇಂಗ್ಲೀಷ್ 3 ಭಾಷೆಯಲ್ಲಿ ಹೊರತರುತ್ತಿರುವುದು ಅಸಾಮಾನ್ಯ ಸಂಗತಿಯಾಗಿರುತ್ತದೆ.

ಅರೆಭಾಷೆಯನ್ನು ಉಳಿಸಿ, ಬೆಳೆಸುವ ನಿಟ್ಟಿನಲ್ಲಿ ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯು ಕೈಗೆತ್ತಿಕೊಂಡಿರುವ ಈ ಮಹತ್ಕಾರ್ಯಕ್ಕೆ ಶುಭವನ್ನು ಆಶಿಸುತ್ತಾ, ಅರೆಭಾಷೆ ಪದಕೋಶವು ಸುಂದರವಾಗಿ ಮೂಡಿಬರಲಿ, ಮುಂದಿನ ಪೀಳಿಗೆಗೆ ಅರೆಭಾಷೆಯ ಪ್ರತ್ಯೇಕ ನುಡಿ, ಸಂಸ್ಕೃತಿ, ಪದ್ಧತಿ ಮತ್ತು ಆಚಾರ ವಿಚಾರಗಳನ್ನು ಪರಿಚಯಿಸುವ ಜ್ಞಾನ ದೀವಿಗೆಯಾಗಲಿ ಎಂದು ಶುಭ ಹಾರೈಸುತ್ತೇನೆ.

ಅಭಿನಂದನೆಗಳೊಂದಿಗೆ,

ಸಂಜೀವ ಮಠಂದೂರು
ಶಾಸಕರು, ಪುತ್ತೂರು

ಶಾಸಕರ ಕಛೇರಿ, 1ನೇ ಮಹಡಿ, ತಾಲೂಕು ಆಡಳಿತ ಸೌಧ, ಪುತ್ತೂರು ತಾಲೂಕು, ದ.ಕ. ಜಿಲ್ಲೆ – 574201

ಡಾ. ಬಿ.ಸಿ. ಸತೀಶ, ಭಾ. ಆ. ಸೇ
ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ
Dr. B.C. Satheesha I.A.S.,
Seputy Commissioner and District Magistrate
Kodagu District, Madikeri - 571201

Off.: 08272 - 225500
Res.: 08272 - 225700
Mob.: +91 9482628409
Email: dckodagu@nic.in
deo.kodagu@gmail.com
Website: http://www.kodagu.nic.in

ದಿನಾಂಕ: 05–07–2022

ಸಂದೇಶ



ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ವಿನೂತನ ಪ್ರಯತ್ನವಾಗಿ ಸುಮಾರು 18,000 ಅರೆಭಾಷೆಯ ಪದಗಳಿಗೆ ಅವುಗಳ ವ್ಯಾಕರಣ, ಸಂಕೇತ, ರೋಮನ್ ಲಿಪಿ, ಕನ್ನಡ ಅರ್ಥ, ಇಂಗ್ಲಿಷ್ ಅರ್ಥ, ವಾಕ್ಯ ಪ್ರಯೋಗ ಇತ್ಯಾದಿಗಳೊಂದಿಗೆ, “ಅರೆಭಾಷೆ ಪದಕೋಶ” ಶೀರ್ಷಿಕೆಯೊಂದಿಗೆ ಬೃಹತ್ ಪದಕೋಶವಾಗಿ ಪ್ರಕಟಪಡಿಸುತ್ತಿರುವುದು ಸಂತಸದ ವಿಷಯ, ಕೇವಲ 18 ತಿಂಗಳಿನಲ್ಲಿ ಕ್ಷೇತ್ರಕಾರ್ಯ ಮತ್ತು ವಿವಿಧ ಪುಸ್ತಕಗಳ ಅಧ್ಯಯನದಿಂದ 18,000 ಪದಗಳ ಸಂಗ್ರಹಣೆ, ವಿಶ್ಲೇಷಣೆ ಮಾಡಿರುವುದು ಅಭಿನಂದನಾರ್ಹವಾಗಿದೆ. ಪ್ರಾರಂಭಿಕ ಈ ಪ್ರಯತ್ನ ಯಶಸ್ವಿಯಾಗಿ ಪದಕೋಶವು ಪ್ರಕಟವಾಗುತ್ತಿದ್ದು, ಈ ಪದಕೋಶದಿಂದ ಅರೆಭಾಷೆ ಸಾಹಿತ್ಯ ಮತ್ತು ಸಂಸ್ಕೃತಿ ಇನ್ನೂ ಉತ್ತುಂಗಕ್ಕೇರಲಿ ಎಂದು ಆಶಿಸುತ್ತೇನೆ. ಹಾಗೆಯೇ ಅರೆಭಾಷೆ ಪದಕೋಶಕ್ಕೆ ಮತ್ತಷ್ಟು ಪದಗಳ ಸೇರ್ಪಡೆಯಾಗಲಿ ಹಾಗೂ ಅರೆಭಾಷೆಯನ್ನು ಕಲಿಯಲು ಇಚ್ಛಿಸುವವರಿಗೆ ಈ ಪದಕೋಶವು ಉಪಯುಕ್ತವಾಗಲಿ ಎಂದು ಹಾರೈಸುತ್ತೇನೆ.

(ಡಾ ಬಿ.ಸಿ. ಸತೀಶ್ ಐ.ಎ.ಎಸ್)
ಜಿಲ್ಲಾಧಿಕಾರಿ
ಕೊಡಗು ಜಿಲ್ಲೆ, ಮಡಿಕೇರಿ

3rd Floor, “Jilla Adalitha Bhavana”, Madikeri - 571201

ಡಾ. ರಾಜೇಂದ್ರ ಕೆ.ವಿ. ಭಾ.ಆ.ಸೇ
ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ
ದಕ್ಷಿಣ ಕನ್ನಡ ಜಿಲ್ಲೆ
Dr. RAJENDRA K.V. I A S
Deputy Commissioner and District Magistrate
Dakshina Kannada District

off : 0824 - 2220588
Fax : 0824 - 2441564
E-mail : dc.mnglr@gmail.com

ಸಂದೇಶ



ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ–ಪುತ್ತೂರು–ಕಡಬ ಮತ್ತು ಸುತ್ತುಮುತ್ತಿನ ಪ್ರದೇಶದಲ್ಲಿ ಮಾತನಾಡುತ್ತಿರುವ ಅರೆಭಾಷೆ ಪರಿಸರದ ಮತ್ತು ಸಮುದಾಯದ ಭಾಷೆ. ಜ್ಞಾನ ವಲಯವನ್ನು ಹೆಚ್ಚಿಸುವಲ್ಲಿ ವಿಶೇಷ ಮುತುವರ್ಜಿ ವಹಿಸಿ, ಈ ಅವಧಿಯ ಅಕಾಡೆಮಿ ಉತ್ಸಾಹಿ ತಂಡವು ಹಲವಾರು ಯೋಜನೆಗಳನ್ನು ಕೈಗೊಂಡು, ಅರೆಭಾಷಿಗರ ಜನಮಾನಸದಲ್ಲಿ ಅಚ್ಚಾಗಿದೆ. ಅಂತಹ ಯೋಜನೆಗಳಲ್ಲಿ ಒಂದಾದ 'ಅರೆಭಾಷೆ ಪದಕೋಶ'ವು ಪ್ರಕಟಗೊಳ್ಳುತ್ತಿರುವುದು ಸಂತಸದ ಸಂಗತಿ. ಶ್ರಮಿಸಿದ ಅಕಾಡೆಮಿ ಮತ್ತು ಅರೆಭಾಷೆ ಪರಿಸರದ ಎಲ್ಲರನ್ನು ಅಭಿನಂದಿಸುತ್ತೇನೆ.

(ಡಾ. ರಾಜೇಂದ್ರ ಕೆ.ವಿ)
ಜಿಲ್ಲಾಧಿಕಾರಿ
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು

Mangaluru - 575001. Dakshina Kannada District (Karnataka) www.dk.nic.in

ಆದಿವಾಸಿ ಸಂಸ್ಕೃತಿ ಮತ್ತು ಸಾಹಿತ್ಯ

ಅಧ್ಯಕ್ಷರ ಮಾತ್



✍ **ಲಕ್ಷ್ಮೀನಾರಾಯಣ ಕಜೆಗದ್ದೆ**
ಅಧ್ಯಕ್ಷರ್,
ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ
ಕಜೆಗದ್ದೆ ಮನೆ, ಅಂಚೆ ಕನಕಮಜಲು, ಸುಳ್ಯ, ದ.ಕ. – 574223
ಮೊ: +91 9449082249

ದಕ್ಷಿಣ ಕನ್ನಡ ಜಿಲ್ಲೆನ ಸುಳ್ಯ, ಕಡಬ, ಪುತ್ತೂರ್ ತಾಲೂಕ್‌ನ ಬಾಗಲಿ, ಹಂಗೆನೆ ಕೊಡಗ್‌ನ ಮಡಿಕೇರಿ, ಸೋಮವಾರಪೇಟೆ, ವಿರಾಜಪೇಟೆ ತಾಲೂಕ್‌ನ ಊರ್‌ಗಳ್‌ಲಿ ಹತ್ತ್ ಕುಟುಂಬ ಹದಿನೆಂಟ್ ಗೋತ್ರ ತೇಳುವ ಗೌಡ ಸಮುದಾಯದವರ ಅವ್ವಬಾಸೆ 'ಅರೆಬಾಸೆ'. ಅರೆಬಾಸೆ ಮಾತಾಡ್‌ವ ಗೌಡ ಸಮುದಾಯದವು ಕೃಸಿ ಹಿನ್ನಲೆಯವು, ಹಂಗಾಗಿ ಅವು ಶ್ರಮಜೀವಗ. ಕಳ್ದ 50 ವರ್ಸಲಿ ಶಿಕ್ಷಣ ಕ್ಷೇತ್ರಲಿ ಆದ ಬಾರಿದೊಡ್ಡ ಬದಲಾವಣೆಂದಾಗಿ ಇತ್ತೀಚಿನ ದಿನಗಳ್‌ಲಿ ಅರೆಬಾಸೆ ಸಮುದಾಯದವು ಕೃಸಿ ಒಟ್ಟಿಗೆ ಬೇರೆ ಬೇರೆ ಕ್ಷೇತ್ರಲಿನೂ ಕೆಲ್ಸ ಮಾಡ್ತಾ ಒಳೊ. ಅರೆಬಾಸೆ ಪ್ರಾದೇಸಿಕ ಬಾಸೆತ ಭಾಷಾ ವಿಜ್ಞಾನಗ ಹೇಳಿಯೊಳೊ. ಸುರುಗೆ ಅರೆಬಾಸೆನ 'ಗೌಡ ಕನ್ನಡ' ತಕರ್‌ದವು ಪ್ರೊ. ಮರಿಯಪ್ಪ ಭಟ್ರ್. ಮತ್ತೆ 1970ರ್‌ಲಿ ಪ್ರೊ. ಕೋಡಿ ಕುಶಾಲಪ್ಪ ಗೌಡ್ರ್ ಗೌಡ ಸಮುದಾಯದವು ಮಾತಾಡ್‌ವ ಕನ್ನಡನ 'ಗೌಡ ಕನ್ನಡ'ತ ಒಂದ್ ಅದ್ಯಯನ ಮಾಡಿ ಪುಸ್ತಕ ಪ್ರಕಟಿಸ್ದೊ.

ಮುಂದೆ ಅರೆಬಾಸೆ ಮಾತಾಡ್‌ವ ಗೌಡ ಜೆನಾಂಗ ಸಾಮಾಜಿಕವಾಗಿ ಮುಂದುವರ್‌ದ ಹಂಗೆ ರಾಜಕೀಯ ಕ್ಷೇತ್ರಲಿ ಕೂಡ ಒಳ್ಳೊಸ್ತಾನ ಮಾನ ಪಡ್ದೊ. ಅದರ್‌ಲಿ ಪ್ರಮುಕರ್ ಶ್ರೀ ಡಿ.ವಿ. ಸದಾನಂದ ಗೌಡ್ರ್ ಮತ್ತೆ ಶ್ರೀ ಕೆ. ಜಿ. ಬೋಪಯ್ಯನವು. ಅರೆಬಾಸೆ ಸಮುದಾಯದ ಹಿರಿಯರ ಕೇಳಿಕೆಗೆ ಸ್ಪಂದಿಸಿದ ಅಂದ್‌ನ ಮುಖ್ಯಮಂತ್ರಿ ಮಾನ್ಯ ಡಿ.ವಿ. ಸದಾನಂದ ಗೌಡ್ರ್ ಮತ್ತೆ ವಿಧಾನಸಭಾ ಸ್ಪೀಕರ್ ಆಗಿದ್ದ ಮಾನ್ಯ ಕೆ.ಜಿ. ಬೋಪಯ್ಯ ಅವರ್‌ಂದಾಗಿ ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಡಿಸೆಂಬರ್ 15, 2011ರಲ್ಲಿ ಹುಟ್ಟಿಕಂಡತ್.

ಒಂದ್ ಪ್ರದೇಶದ ಬಾಸೆಗೆ ಸಾಂಸ್ತಿಕ ಸ್ತಾನಮಾನ ಸಿಕ್ಕಿದ ಕೂಡ್ಲೆ ಆ ಬಾಸೆನ ಮಾತಾಡ್‌ವ ಜೆನಂಗಳಿಗೆ ಬಾಸೆ ಬಗ್ಗೆ ಇದ್ದ ಕೀಳರಿಮೆ ಹೋಗಿ ಬಾಸೆಗೆ ಶಕ್ತಿ ತುಂಬ್‌ವಕೆಲ್ಸ ಮಾಡಿಕೆ ಉಮೇದ್ ಬಂದದೆ.

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಹುಟ್ಟಿ 10 ವರ್ಸ ಆದರೂ ಬಾಸೆಗೆ ಒಂದ್ ಪೊರ್ಲುನ ಡಿಕ್ಸ್‌ನರಿ ಆಗಿ ಇತ್ಲೆ. ಹಿಂದೆಕೋಡಿ ಕುಶಾಲಪ್ಪ ಗೌಡ, ಕೆ. ಆರ್. ಗಂಗಾಧರ ಗೌಡ, ಪ್ರೊ. ಚೆ. ರಾಮಸ್ವಾಮಿ ಅವು ಡಿಕ್ಸ್‌ನರಿ ಕ್ಷೇತ್ರಲಿ ಒಂದಸ್ಟ್ ಕೆಲಸ ಮಾಡಿದ್ದೊ. ಆದ್ರೆ ಬಾಸೆಗೆ ಇನ್ನಸ್ಟ್ ಕೆಲ್ಸ ಮಾಡ್‌ವ ನಿಟ್ಟ್‌ಲಿ ಕ್ಷೇತ್ರಕಾರ್ಯಮಾಡಿ ಪದಸಂಗ್ರಹಂದ ಒಂದು ಡಿಕ್ಸ್‌ನರಿ ತರುವ ತುರ್ತು ಇತ್. ನಾ ಅಕಾಡೆಮಿ ಅಧ್ಯಕ್ಷನಾಗಿ ಕೆಲ್ಸ ಸುರು ಮಾಡ್‌ಕನ ವಿದ್ವತ್ ಕ್ಷೇತ್ರದ ಒಂದಸ್ಟ್ ಜೆನಗ ನಂಗೆ ಪೋನ್ ಮಾಡಿ ಶುಬ ಹಾರೈಸ್‌ಕನ ಅರೆಬಾಸೆಲಿ ಒಂದು ಪೊರ್ಲುನ ಡಿಕ್ಸ್‌ನರಿ ಆಕು. ಅಕಾಡೆಮಿ ಮಾಡಕಾದ ಬಾರಿ ದೊಡ್ಡ ಕೆಲ್ಸತ ಸಲಹೆ ಕೊಟ್ಟೊ. ಮುಂದೆ ನಾವು ನಮ್ಮ ಕ್ರಿಯಾ ಯೋಜನೆಲಿ ಡಿಕ್ಸನರಿಗೆ ದುಡ್ಡ್‌ನ ಹೊಂದಿಸಿಕಂಡ್ ಅಕಾಡೆಮಿ ಸದಸ್ಯ ಡಾ. ವಿಶ್ವನಾಥ ಬದಿಕಾನ ಅವುಕೆ ಕಾರ್ಯ ನಿರ್ವಹಣಾ ಜವಾಬ್ದಾರಿ ಕೊಟ್ಟೊ. ಸುರುಲಿ ಸುಳ್ಯ ಮತ್ತೆ ಮಡಿಕೇರಿಲಿ ಡಿಕ್ಸನರಿ ಬಗ್ಗೆ ಚರ್ಚೆ ಮಾಡಿಕೆ ಸಬೆ ಕರ್ದೊ. ಆ ಸಬೆಲಿ ಪ್ರೊ. ಚೆ. ರಾಮಸ್ವಾಮಿ ಮತ್ತೆ ಡಾ. ಪದ್ಮನಾಭ ಕೇಕುಣ್ಣಾಯ ಡಿಕ್ಸ್‌ನರಿನ ಸ್ವರೂಪ ಮತ್ತೆ ಡಿಕ್ಸ್‌ನರಿನ ಕಟ್ಟುವ ಕೆಲ್ಸದ ಬಗ್ಗೆ ಮಾಹಿತಿಕೊಟ್ಟ್ ಮಾರ್ಗದರ್ಶನ ಮಾಡ್ದೊ. ಹೀಂಗೆ ಎರಡು ಕಡೆಲಿ ನಡ್ದ ಸಬೆಲಿ 50 ಜೆನರ್‌ಂದ ಒಳ್ಳೊ ಸಲಹೆಗ ಬಾತ್. ಎರಡ್ ಸಬೆಗಳ ನಂತರ ನಂಗೆ ಅರ್ತ ಆದ್ ಏನ್‌ಂತೇಳ್ರೆ ಇದ್ ನಮ್ಮ ಅವದಿಲಿ ಮುಗ್ಸುವ ಕೆಲಸ ಅಲ್ಲಾ. ನಾವ್ ಅಂದ್ ಕಂಡಕ್ಕಿಂತ ಹೆಚ್ಚ್ ಸಮಯ ಬೇಕೂತ ಗೊತ್ತಾತ್.

ಇದೆಲ್ಲಾ ವಿಚಾರಗಳ ನಡುವೆ ಸರ್ಕಾರದ ಕೊರೊನಾ ನಿಯಮ ಜಾರಿಲಿ ಇದ್ದ ಕಾರಣ ಕೆಲ್ಸ ಮಾಡಿಕೆ ಬಾರಿ ಕಸ್ಟತ ಗೊತ್ತಿತ್. ಅದೇ ಸಮಯಕ್ಕೆ ನಾವು ಕೋಡಿ ಕುಶಾಲಪ್ಪ ಗೌಡ ಮನೆಲಿ ಕುದ್ದ್‌ಚರ್ಚೆ ಮಾಡ್ದೊ ಮತ್ತೆ ಪ್ರೊ. ಬಿ.ಎ. ವಿವೇಕ ರೈ ಅವರ ಮನೆಗೆ ಪದ ಸಂಗ್ರಹ ಕೆಲ್ಸನ ಸುರು ಮಾಡ್‌ವ ಬಗ್ಗೆ ಮಾತಾಡಿಕೆ ಡಾ. ವಿಶ್ವನಾಥ ಬದಿಕಾನ ಮತ್ತೆ ಶ್ರೀ ಭರತೇಶ

ಅಲಸಂಡೆಮಜಲು ಹೋಗಿದ್ದೊ. ಈ ಸಂದರ್ಬಲಿ ಡಿಕ್ಷನರಿ ಕೆಲ್ಸನ ಆನ್ಲೇನ್‌ಲಿ ಮಾಡಿ, ನೀವ್ಗೆ ಆದುನಿಕ ತಂತ್ರಜ್ಞಾನದ ತಿಳ್‌ವಳಿಕೆನೂ ಲಾಯ್ಕ್ ಉಟ್ಟುತ ಅವು ಸೂಚಿಸಿದೊ. ಒಂದ್ ಪ್ರಾದೇಶಿಕ ಬಾಸೆಗೆ ಆದುನಿಕ ತಂತ್ರಜ್ಞಾನ ಬಳಸಿಕಂಡ್ ಮಾಡ್ದ ಸುರುನ ಡಿಕ್ಷ್‌ನರಿ ಆದೆತ ಹೇಳಿ ಹಾರೈಸಿದೊ.

ಅಲ್ಲಿಂದ ಮೇಲೆ ನಮ್ಮ ತಂಡ ಹಿಂದೆ ತಿರ್‌ಗಿ ನೋಡ್ತ್‌ಲೆ. ಈ ಮಾತ್‌ಕತೆ ಆರಂಬ ಆಗಿ ಮುಂದೆ ನಾವ್ಗೆ ಇದ್ದದ್ ಬರಿ ಎರಡ್ ವರ್ಸದ ಅವಕಾಶ. ಕೂಡ್ಲೆ ಕ್ಷೇತ್ರಕಾರ್ಯಕ್ಕೆ ಜನಬೇಕತ ಪತ್ರಿಕೆಲಿ ಪ್ರಕಟಣೆ ಮಾಡ್ದೊ. ಆಯ್ಕೆ ಆದ ಎಂಟ್ ಜೆನ ಕ್ಷೇತ್ರಕಾರ್ಯ ಸಹಾಯಕರ್‌ಗೆ ಎರಡ್ ದಿನದ ತರಬೇತಿ ಕೊಟ್ಟೊ. ಆನ್‌ಲೈನ್‌ಲಿ ಪದಗಳ ಅಪ್‌ಲೋಡ್ ಮಾಡ್‌ವ ಕೆಲ್ಸ್ ಸುರುವಾತ್. ಈ ನೆಲೆಲಿ ಅವ್ಕೆ ಎರಡ್ ತಿಂಗಳ್‌ಲಿ ಕ್ಷೇತ್ರಕಾರ್ಯ ಮುಗ್ಸಿಕೊಡೊಕುತ ಹೇಳ್ದೊ. ಕ್ಷೇತ್ರಕಾರ್ಯ ಮಾಡೊವು ಆನ್ಲೇನ್‌ಲಿ ಪದಗಳ ಸೇರಿಸ್ತಾ ಹೋದೋ. ಅವು ಪದಗಳ ಅಪ್ಲೋಡ್ ಮಾಡ್ದಾಂಗೆ ನಮ್ಮ ಕೆಲ್ಸ ವೇಗನ ಪಡ್ಕನ್ತ್. ಎರಡ್ ತಿಂಗಳ್‌ಲಿ ಅಂದಾಜ್ ಮೂವತ್ತ್ ಸಾವಿರ ಪದಗಳ ಗುಡ್ಡೆ ಹಾಕಿ ಅವರ ಕೆಲ್ಸ ಮುಗ್ಸಿದೊ. ಈಗ ಹೊಸ ತಲೆಬೇನೆ ಸುರುವಾತ್. ಇಷ್ಟ್ ರಾಸಿ ಪದಗಳ ಡಿಕ್ಷ್‌ನರಿ ಸ್ವರೂಪಕೆ ತರುವ ಕೆಲ್ಸ ಹೆಂಗೆತ. ರಾತ್ರಿ ಹಗಲ್ ಸಮಯ ಸಿಕ್ಕ್‌ಕನ ನಮ್ಮ ಸದಸ್ಯ ಸಂಪಾದಕರಾದ ವಿಶ್ವನಾಥ ಬದಿಕಾನ, ಭರತೇಶ್ ಅಲಸಂಡೆಮಜಲ್ ಕೆಲಸ ಮಾಡ್ತಾ ಇದ್ದೊ. ಅರೆಬಾಸೆ ಪದಗಳಿಗೆ ಐಪಿಎ, ವ್ಯಾಕರಣ ವಿಸೇಸ, ಕನ್ನಡ–ಇಂಗ್ಲಿಸ್ ಅರ್ತ, ಗಾದೆ–ಒಗಟ್–ನುಡಿ ಕಟ್ಟ್‌ಗಳ ಸೇರ್ಸುದು, ವಾಕ್ಯ ಮತ್ತೆ ಪದ ಪ್ರಯೋಗರಚನೆ ಮಾಡಿಕೆ ಸುರುಮಾಡ್ದೊ. ಆಗ ಕ್ಷೇತ್ರಕಾರ್ಯ ಮಾಡಿ ಅರೆಬಾಸೆ ಕೆಲ್ಸ ಮಾಡಿಕೆ ಆಸಕ್ತಿ ತೋರ್ಸ್‌ದವು ಕೆಂಜನ ಮಮತಾ ಪ್ರಸಾದ್ ಅವು. ಅವರ ಸೇರಿಸ್‌ಕಂಡ್ ಕೆಲ್ಸಕ್ಕೆ ಇನ್ನಸ್ಟ್ ಸ್ಪೀಡ್ ಕೊಟ್ಟೊ. ಮುಂದೆ ಕನ್ನಡ ಪದಾರ್ತಗಳ್‌ಗೆ ಇಂಗ್ಲಿಷ್ ಪದಗಳ ಸೇರ್ಸಿಕೆ ಮಂಗಳೂರ್‌ನ ಸಂತ ಅಲೋಶಿಯಸ್ ಕಾಲೇಜ್‌ನ ಡಾ. ಎನ್. ಗಿರೀಶ್ ಒಪ್ಪಿಕೊಂಡೊ.


ಅಷ್ಟೊತ್ತಿಗೆ ಆಕನ ನಾವುಗೆ ಹಲವು ಅನುಬವ ಆತ್. ಒಂದ್ ಕೆಲ್ಸ ಒಪ್ಪಿಕೊಂಡೊವು ಮಾಡದೇ ಬಿಟ್ಟ್ ಸಲಹೆ ಕೊಡ್ತಾ ಇರ್‌ವಂತದ್ ಗೊತ್ತಾತ್. ಡಿಕ್ಷನರಿ ತಯಾರ್ ಮಾಡೊಕುತಾದರೆ ಎಡೆಬಿಡದ ಕೆಲ್ಸ ಮಾಡೊಕುತ ನಮ್ಮ ತಂಡಕ್ಕೆ ಗೊತ್ತಿತ್ತ್. ಹಿಂಗೆ ದಿನರಾತ್ರಿ ಗ್ರಾಫ್ ಶೀಟ್‌ಲಿ ಕೆಲ್ಸದ ಸೂಚ್ಯಂಕ ಮೇಲಕ್ಕೆ ಹೋಕುತ ತಪಸ್ಸ್‌ನಂತೆ ನಿರತರಾದೊ.

ಹಿಂಗಾಗಿ ಜೆನ ಕಾಲಮಿತಿಲಿ ಕೆಲಸ ಮಾಡುವೊನತ ಹೆದ್ರಿಕೆನೂ ನಾವ್‌ಗೆ ಇತ್ತ್. ನಾವು ಕೊಟ್ಟ ಹದಿನೆಂಟ್ ಸಾವಿರ ಪದಗಳಿಗೆ ಇಂಗ್ಲಿಷ್ ಪದಗಳ ಕೊಡ್ದು, ವಾಕ್ಯ ಪ್ರಯೋಗಗಳ ಕೊಡ್ದು ಹಿಂಗೆ ಸಂಪಾದನೆ ಕೆಲ್ಸ ಸಾಗಿತ್. ಎಲ್ಲ ಪದಗಳ ಸಂಪಾದನೆ ಮುಗ್ಸಿ ಅದರ ಅರೆಬಾಸೆ ಮಾತಾಡ್‌ವ ಶ್ರೀ ಬಾರಿಯಂಡ ಜೋಯಪ್ಪ ಮತ್ತೆ ಶ್ರೀ ಸೀತಾರಾಮ ಕೇವಳದವ್ಕೆ ಮೌಲ್ಯ ಮಾಪನಕ್ಕೆ ಕೊಟ್ಟೊ. ಅವರ ಸಲಹೆ, ತಿದ್ದುಪಡಿನ ಪಡ್ಕಂಡ್ ಪದಕೋಶಕ್ಕೆ ಸೇರಿಸಿಕೊಂಡೊ. ಮುಂದೆ ಭಾಷಾ ವಿಜ್ಞಾನ ಪ್ರೊ. ಕೆ. ರಾಮಸ್ವಾಮಿ ಅವರೊಟ್ಟಿಗೆ ಎರಡ್ ದಿನ ಮೈಸೂರ್‌ಲಿ ಇದ್ದ್ ಡಿಕ್ಷನರಿನ ಅವಲೋಕನ ಮಾಡ್ಸಿ ಸಂಪೂರ್ಣ ಅಂತಿಮರೂಪನ ಕಂಡ್‌ಕೊಂಡೊ. ಅರೆಬಾಸೆನ ಮೇಲೆ ಪ್ರೀತಿ ಇಸಿಕಂಡ್ ಡಿಕ್ಷನರಿನ ಓದಿ ಪೊರ್ಲ್‌ನ ಮುನ್ನುಡಿನ ಹಿರಿಯ ಭಾಷಾ ವಿಜ್ಞಾನ ಪ್ರೊ. ಕೋಡಿ ಕುಶಾಲಪ್ಪ ಗೌಡ್ರ್ ಬರ್ದ್ ಕೊಟ್ಟೊ.

ದೂರದ ದೆಹಲಿಲಿ ಇದ್ದರೂ ಮಾತಾಡ್‌ಕನ ಸುಳ್ಯದ ಬಿಳಿಮಲೆಲಿ ಇದ್ದ್‌ಕಂಡ ಹಾಂಗೆ ಮಾತಾಡ್‌ವ ಡಾ. ಪುರುಷೋತ್ತಮ ಬಿಳಿಮಲೆ ಅವು, ಮಂಗಳೂರ್‌ಂದ ಪ್ರೊ. ಬಿ. ಎ. ವಿವೇಕ ರೈಯವು, ಕೋಣಾಜೆಂದ ಡಾ.ಕೆ. ಚಿನ್ನಪ್ಪ ಗೌಡ್ರ್, ಮೈಸೂರ್‌ಂದ ಡಾ. ಹಾ. ತಿ. ಕೃಷ್ಣೇಗೌಡ್ರ್ ಡಿಕ್ಷನರಿನ ಕರಡು ಪ್ರತಿ ನೋಡಿ ಓದಿ ಮೆಚ್ಚ್‌ಗೆ ಮಾತ್‌ನ ಬರ್ದ್‌ಕೊಟ್ಟೊ. ದೂರದ ಹೈದರಾಬಾದ್‌ಲಿ ರಾತ್ರಿ ಕಂಪ್ಯೂಟರ್ ಮುಂದೆ ಕುದ್ದ್‌ಕಂಡ್ ಡಿಕ್ಷನರಿ ಕೆಲಸ ಮಾಡ್ದ ಮನೋಜ್ ಕುಡೆಕಲ್ಲ್‌ನ ಕೂಡ ಈ ಹೊತ್ತ್ ಮೆಚ್ಚಿಕಣೆ.

2020ರ ಅಕ್ಟೋಬರ್ 27ಕ್ಕೆ ಡಿಕ್ಷನರಿನ ಸುರುನ ಸಬೆ ಸುಳ್ಯಲಿ ನಡ್ತ್. ಇದರ ಜವಾಬ್ದಾರಿ ಹೊತ್ತವು ಡಾ.ವಿಶ್ವನಾಥ ಬದಿಕಾನ ಮತ್ತೆ ಅವರೊಟ್ಟಿಗೆ ಗಟ್ಟಿ ಹೆಗ್ಲ್ ಕೊಟ್ಟ್ ನಿಂತ್ ಕೆಲ್ಸ ಮಾಡ್ದವು ಭರತೇಶ್ ಅಲಸಂಡೆಮಜಲು ಇವು. ಬರೇ 18 ತಿಂಗಳ್‌ಲಿ ಡಿಕ್ಷನರಿ ಕೆಲಸ ಮಾಡಿ ಮುಗ್ಸಿದ್ ದೊಡ್ಡ ಸಾಧನೆಯೇ ಸರಿ. ಇವರಿಬ್ಬರ ಅರೆಬಾಸೆ ಸಮುದಾಯ ಯಾಗೋಳೂ ಕೊಂಡಾಡೊಕು. ಅಂತಾಕೆಲ್ಸನ ಮಾಡ್ದ ಅವ್ಕೆ ನಾ ಅಬಿನಂದನೆ ಸಲ್ಲಿಸ್ತಾ ಒಳೆ. ಡಿಕ್ಷನರಿ ಅಂತಿಮ ರೂಪಕೊಡುವ ಸಂದರ್ಬಲಿ ಶ್ರೀ ಪುರುಷೋತ್ತಮ ಕಿರ್ಲಾಯ, ಪುರುಷೋತ್ತಮ ಕೆ.ವಿ. ಕರಂಗಲ್ಲು, ಕಿರಣ ಕುಂಬಳ್ಚೇರಿ ಮತ್ತೆ ಅಕಾಡೆಮಿನ ಎಲ್ಲ ಸದಸ್ಯರ್ ಸಾಕಾರಕೊಟ್ಟೊಳೊ. ಅಕಾಡೆಮಿ ರಿಜಿಸ್ಟ್ರಾರ್ ಚಿನ್ನಸ್ವಾಮಿ, ಅರ್ಥ ಸದಸ್ಯೆ ದರ್ಶನ ಕೆ.ಟಿ., ಸಿಬ್ಬಂದಿಗಳಾದ ಜ್ಯೋತಿ, ಶೋಭಾ, ವಿಘ್ನೇಶ್ ಎಲ್ಲರ ಈ ಹೊತ್ತ್ ನೆನ್‌ಸ್ಕಣೆ. ಪ್ರಕಟಣೆ ಸಂದರ್ಬಲಿ ಕನ್ನಡ ಯೂನಿಕೋಡ್ ಬರವಣಿಗೆನ ಪ್ರಕಟಣೆಗೆ ತಾಂತ್ರಿಕ ಸಹಾಯ ಮಾಡ್ದ ಚೆಕ್‌ಫಿಟ್ ತಂತ್ರಾಂಶದ ಓಮ್ ಶಿವಪ್ರಕಾಶ್ ಮತ್ತೆ ಹೊಸದಿಗಂತ ಪ್ರೆಸ್‌ನ ಶ್ರೀ ರಾಜೇಶ್ ಮತ್ತೆ ಸುಧಾಕರ್ ಆಚಾರ್ಯ ಇವ್ಕೆ ಧನ್ಯವಾದಗ.

ಅರೆಬಾಸೆಗೊಂದು ಪಿರಿಗಂಟ್–ರಚನಾತ್ಮಕ ಅನುಬವ



✍ **ಡಾ. ವಿಶ್ವನಾಥ ಬದಿಕಾನ**
ಸಹಾಯಕ ಪ್ರಾಧ್ಯಾಪಕ
ಸಂತ ಅಲೋಶಿಯಸ್ ಕಾಲೇಜು(ಸ್ವಾಯತ್ತ), ಮಂಗಳೂರು
ಮೊ: +91 9449615474

ಅರೆಬಾಸೆ ಸಂಸ್ಕೃತಿ ಮತ್ತೆ ಬಾಸೆ ಅಧ್ಯಯನ:

ದ್ರಾವಿಡ ಬಾಸೆಗಳ ಪರಿವಾರಕೆ ಸೇರ್ದ ಪ್ರಾದೇಸಿಕ ಬಾಸೆಂತನೇ ಗುರ್ತಿಸಿಕಂಡ ಅರೆಬಾಸೆಗೆ ನೂರಾರು ವರ್ಸದ ಇತಿಹಾಸ ಉಟ್ಟುಂತ ವಿದ್ವಾಂಸರ್ ಹೇಳ್ವೆ. ಒಂದ್ ಬಾಸೆ ವಿಕಾಸ ಆಕುಂತಾದರೆ ಅದರ ಮಾತಾಡ್ವ ನಾಗರಿಕರ್‌ಂದ ಸಾದ್ಯತ ತಿಳ್ಕೊಕನೊಕ್. ಅದ್ ಆ ಬಾಸೆನ ಓದಿದ ಜೆನರ ಸಂಪ್ರದಾಯಂತ ಅರ್ತಮಾಡಿಕೊನೊಕು. ರಾಜಕೀಯ ಮತ್ತೆ ಸಾಮಾಜಿಕ ಕಾರಣಂದ ಅರೆಬಾಸೆಲಿ ಬರಹ ಸಾಹಿತ್ಯ ರಚನೆ ಆಗದಿದ್ದರೂ ಅರೆಬಾಸಿಗರ ಸೃಜನಶೀಲತೆಗೆ ಅದರ್‌ಂದ ಏನೂ ಕಡಿಮೆ ಆತ್ಲೆ. ಸಂಸ್ಕೃತಿನ ವಿಚಾರ ಬಾಕನ ಅದ್ ಜನಪದ ಸೊತ್ತುಂತೇ ತಿಳ್ಕೊನೊಕು. ಜನಪದ ಸೊತ್ತುಗ ಜೆನರ ಬೊದ್ಕ್ ಮತ್ತೆ ಆಚರಣೆಗಳ್‌ಲಿ ಉಟ್ಟು. ಬೊದ್ಕ್‌ತೇಳುವಂತದ್ ಪ್ರತಿಯೊಬ್ಬರ ವೈಯಕ್ತಿಕ ವಿಚಾರ. ಅವರ ಬಾಯಿಮಾತ್‌ಲಿರುವ ಹಾಡ್, ಕತೆ, ಗಾದೆ, ಒಗಟ್, ನುಡಿಗಟ್ಟ್ ಸಾಹಿತ್ಯಗ ತುಂಬ ಉಟ್ಟು. ಬೇಸಾಯ, ಮೊದುವೆ, ಹಬ್ಬ ಇಂತ ಸಾಮೂಹಿಕ ಜಂಬರಗ, ಕೊಣ್ತಗ, ಆಟ ವಿನೋದಗ ಹಿಂಗೆ ಅನೇಕ ಪ್ರಕಾರಲಿ ಪದ ಸಂಪೊತ್ತ್ ಅರೆಬಾಸಿಗರ್‌ಲಿ ಪಾರಂಪರಿಕವಾಗಿ ಬೆಳ್ಕೊಂಡ್ ಬಂದ್ ಜೆನರ ಮಾತ್‌ಕತೆಲಿ ಅರೆಬಾಸೆನ ಸಬ್ದಗ ಹಾಂಗೆ ಉಳ್ದುಟ್ಟು. ದ್ರಾವಿಡ ಬಾಸೆನ ಮೂಲರೂಪ ಮತ್ತೆ ನಿರ್ಮಾಣ ಮಾಡಿಕೆ ಇಂತ ಸಬ್ದಗ ಸಹಾಯ ಆದೆಂತ ಹಿರಿಯರ್ ಅಬಿಪ್ರಾಯ ಪಟ್ಟೊಳೊ.

ಜನಪದ ಆರಾದನೆ ಮತ್ತೆ ಆಚರಣೆ ಸಾಮಾಜಿಕ ಸೊತ್ತುಗ. ಇದರ ಸಮೂಹ ಅಲ್ಲರೆ ಸಮುದಾಯದವು ಒಟ್ಟಾಗಿ ಸೇರಿಕಂಡ್ ಮಾಡ್ವೆ. ಬಚ್ಚನಾಯಕ, ಪುರುಷಬೂತ, ಜಾಲಾಟ ಇಂತ ಆರಾದನೆಗ; ಸಿದ್ದವೇಸ, ಬೊಳಕಾಟ, ಕೋಲಾಟ ಮತ್ತೆ ಉಮ್ಮತ್ತಾಟ ಇಂತ ಕೊಣ್ತಗ; ಆಟಿಕಳೆಂಜ, ಸೋಣದ ಜೋಗಿ ಇಂತ ಆಚರಣಾತ್ಮಕ ಕೊಣ್ತಗ, ಕಂಬಳ, ಕೋಳಿಕಟ್ಟದಂತ ವಿನೋದದ ಆಟಗ, ಚೆನ್ನೆಮಣೆ, ಲಗೋರಿ, ಕುಟ್ಟಿದೊಣ್ಣೆ, ಪೊಲ್ಲಿಪತ್ತ್, ಜುಬ್ಲಿ, ಕಲ್ಲಾಟ, ತಪ್ಪಂಗಾಯಿ, ದೂಳುಕಾಯಿ, ಕಾಯಿಕುಟ್ಟುದು ಇಂತ ಮಕ್ಕಳ ಮತ್ತೆ ದೊಡ್ಡವರ ಆಟಗ, ಅಲ್ಲದೆ ಬೇಸಾಯ, ಬೇಟೆ, ಮೀನುಗಾರಿಕೆ, ಅಡ್ಗೆ ತಿನ್ಸ್, ಪಾರಂಪರಿಕ ಸೊತ್ತು ಹಿಂಗೆ ಹತ್ತ್ ಹಲವು ಅರೆಬಾಸೆ ಸಂಸ್ಕೃತಿ ವಿಚಾರಗ ಜೆನರ ಬಾಯಿಮಾತ್‌ನ ಸಾಹಿತ್ಯಲಿ ಉಟ್ಟು. ಅರೆಬಾಸೆ ಬೇರೆಬೇರೆ ನೆಲೆಲಿ ತೌಲನಿಕ ಅಧ್ಯಯನ ಮಾಡ್ವ ಸಾಂಸ್ಕೃತಿಕ ಬಾಸಾಕ್ಷೇತ್ರ. ಬಾಸೆನ ವೈಜ್ಞಾನಿಕವಾಗಿ, ಸಾಂಸ್ಕೃತಿಕವಾಗಿ, ಚಾರಿತ್ರಿಕವಾಗಿ ಅಧ್ಯಯನ ಮಾಡಕ್. ಸಾಂಸ್ಕೃತಿಕ ಪದಗ, ಸ್ತಳನಾಮಗ, ಜ್ಞಾತಿಪದಗ ಪದನಿಸ್ಪತ್ತಿ ಹಿಂಗೆ ಹಲವ್ ನೆಲೆಲಿ ಅರೆಬಾಸೆ ಪ್ರದೇಸಲಿ ಮಾತಾಡ್ವ ಇಂತ ನೂರಾರ್ ಪದಗಳ ಒಟ್ಟಾಗಿ ಸಂಗ್ರಹ ಮಾಡ್ವ ತುರ್ತು ಉಟ್ಟು.

ಅಂತ ಸಾವಿರಾರ್ ಪದಗಳ ಸಂಗ್ರಹ ಮಾಡಿ ಈ ಅರೆಭಾಷೆ ಪದಕೋಶ ತಯಾರಾವುಟು. ಸಂಸ್ಕೃತಿ ಮತ್ತೆ ಬಾಸೆನ ಬಗ್ಗೆ ಅದ್ಯಯನ ಮಾಡೊವುಕೆ ಈ ಕೋಶಂದ ತುಂಬ ಅವಕಾಸ ಉಟ್ಟು.

ಅರೆಭಾಷೆ ಪದಕೋಶ ರಚನೆ ಯೋಜನೆ ತಯಾರಿ :

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ 15 ಡಿಸೆಂಬರ್ 2011ರ್‌ಲಿ ಕರ್ನಾಟಕ ಸರ್ಕಾದ ಸಂಸ್ಕೃತಿ ಇಲಾಕೆನ ನಿರ್ದೇಶನಲಿ ಅದಿಕೃತವಾಗಿ ಸುರುವಾತ್. ಅರೆಬಾಸೆ ಪದಕೋಶ ತಯಾರ್ ಮಾಡ್‌ವ ಚರ್ಚೆ ಅಕಾಡೆಮಿಲಿ ಆರಂಬಂದಲೇ ಇತ್ತ್. ಅಕ್ಟೋಬರ್ 2019ರ್‌ಲಿ ಲಕ್ಷ್ಮೀನಾರಾಯಣ ಕಜೆಗದ್ದೆ ನೇತೃತ್ವಲಿ ಆರಂಬ ಆದ ನಾಲ್ಕನೆ ಅವದಿನ ಅಕಾಡೆಮಿ ಕ್ರಿಯಾಯೋಜನೆಲಿ ಲಕ್ಸಿಕನ್ ಮಾದರಿಲಿ ಅರೆಬಾಸೆ ಪದಕೋಶನ (Arebhashe-Kannada-English Dictionary) ತಯಾರ್ ಮಾಡೊಕುತ ಚರ್ಚೆ ಆಗಿ ಅಕಾಡೆಮಿನ ಸರ್ವ ಸದಸ್ಯರ್ 13.07.2020ರ ಸಬೆಲಿ ಸರ್ವಾನುಮತದ ತೀರ್ಮಾನ ತಕಂಡ್ ನಂಗೆ ಜವಾಬ್ದಾರಿ ವಹಿಸಿಕೊಟ್ಟೊ. ರಾಷ್ಟ್ರಕವಿ ಗೋವಿಂದಪೈ ಸಂಶೋಧನ ಕೇಂದ್ರ ಉಡುಪಿ ಇಲ್ಲಿ 1988ರಂದ್ 1997ರ್‌ಲಿ ಪ್ರಕಟ ಆದ TULU LEXICON–Tul-Kannada-English Dictionary ಮಾದರಿಲಿ ಅರೆಬಾಸೆ ಪದಕೋಶ ಬರೊಕುಂತ 08.08.2020 ಮತ್ತೆ 22.08.2020ರಂದ್ ಎರಡ್ ಸರ್ತಿ ಪ್ರೊ. ಕೋಡಿ ಕುಶಾಲಪ್ಪ ಗೌಡರ ಮನೆಲಿ ನಡ್ದ ಮಾತ್‌ಕತೆಲಿ ಅಬಿಪ್ರಾಯ ಬಾತ್. ಕುಶಾಲಪ್ಪ ಗೌಡರ ಸಲಹೆನಂತೆ ಸುಳ್ಯ ಮತ್ತೆ ಮಡಿಕೇರಿಲಿ ಅರೆಬಾಸೆ ವಿದ್ವಾಂಸರ ಸಬೆ ಮಾಡ್ದೊ. ಸಂಶೋದನಾ ಸಹಾಯಕರ್‌ಂದ ಕ್ಷೇತ್ರಕಾರ್ಯ ಮಾಡ್‌ಸಿ ಹಾಂಗೆ ಪದ ಸಂಗ್ರಹ ಮಾಡ್‌ವ ನೀಲನಕಾಸೆ ತಯಾರಾತ್.

ಅರೆಬಾಸೆ ಪದಕೋಶ ರಚನೆಯ ಪೂರ್ವತಯಾರಿ ಸಬೆ :

27.09.2020ರಂದ್ ಸುಳ್ಯದ ಯುವಕಮಂಡಲ ಚಾವಡಿಲಿ 10 ಗಂಟೆಗೆ ಮೊದಲ ಸಬೆ ನಡ್ತ್. ಸಬೆಗೆ ಸಂಪನ್ಮೂಲರಾಗಿ ಡಾ. ಪದ್ಮನಾಭ ಕೇಕುಣ್ಣಾಯ (ತುಳು ಲೆಕ್ಸಿಕನ್ ಕೆಲ್ಸ ಮಾಡ್ದವು) ಮತ್ತೆ ಮದ್ರಾಸ್ ವಿಶ್ವವಿದ್ಯಾಲಯ ವಿಶ್ರಾಂತ ಪ್ರಾಧ್ಯಾಪಕರ್ ಪ್ರೊ. ಚೆ. ರಾಮಸ್ವಾಮಿ ('ಎ ಗ್ರಾಮರ್ ಆಫ್ ಅರೆಬಾಸೆ' ಅಧ್ಯಯನ ಪುಸ್ತಕ ಬರ್ದವು) ಪುಣೆಂದ (ಆನ್‌ಲೈನ್‌ಲಿ) ಬಂದೊ. ಸುಳ್ಯಂದ ಶ್ರೀಮತಿ ಶೀಲಾವತಿ ಕೊಳಂಬೆ, ಶ್ರೀ ಸುಕುಮಾರ ಗೌಡ, ಡಾ. ಪ್ರಭಾಕರ ಶಿಶಿಲ, ಡಾ. ಕರುಣಾಕರ ನಿಡಿಂಜಿ, ಡಾ. ಪೂವಪ್ಪ ಕಣಿಯೂರು, ಕುಶಲಪ್ಪ ಗೌಡ ಕಂದ್ರಪ್ಪಾಡಿ, ಹೇಮನಾಥ ಕೆ.ವಿ, ನಾಗೇಶ್ ಕುಂದಲ್ಪಾಡಿ, ಕುಂಞೇಟಿ ಶಿವರಾಮಗೌಡ, ಜಯಪ್ರಕಾಶ ಕುಕ್ಕೇಟಿ, ಜಯರಾಜ ಕುಕ್ಕೇಟಿ, ಕುಯಿಂತೋಡ ದಾಮೋದರ, ಎ.ಕೆ.ಅಜಿಲ, ಭವಾನಿಶಂಕರ ಅಡ್ತಲೆ, ಕಿಶೋರ್ ಕುಮಾರ್ ಕೆ., ವಸಂತಗೌಡ ಕೆ., ಸೀತಾರಾಮ ಕೇವಳ, ಲೋಕೇಶ್ ಕುಂಚಡ್ಕ, ವಿನೋದ್ ಮೂಡಗದ್ದೆ, ಸಂಜೀವ ಕುದ್ಪಾಜೆ, ಎ.ಕೆ. ಹಿಮಕರ, ಗೋಪಾಲ ಪೆರಾಜೆ, ಕೆ.ಆರ್. ತೇಜಕುಮಾರ್ ಬಡ್ಡಡ್ಕ, ಬಾಬು ಗೌಡ ಅಚ್ರಪ್ಪಾಡಿ, ಅನಿಂದಿತ್ ಗೌಡ ಕೊಚ್ಚಿಬಾರಿಕೆ, ಅರೆಭಾಷೆ ಅಕಾಡೆಮಿ ಅಧ್ಯಕ್ಷರ್, ಸದಸ್ಯರ್, ಕಚೇರಿ ಸಿಬ್ಬಂದಿ ಸೇರಿದ್ದೊ.

11.10.2020ರಂದ್ ಕೊಡಗು ಮಹಿಳಾ ಒಕ್ಕೂಟ ಮಡಿಕೇರಿಲಿ 11 ಗಂಟೆಗೆ ಎರಡನೇ ಸಬೆ ನಡ್ತ್. ಸಬೆಗೆ ಸಂಪನ್ಮೂಲರಾಗಿ ಪ್ರೊ. ಚೆ. ರಾಮಸ್ವಾಮಿ ಪುಣೆಂದ (ಆನ್‌ಲೈನ್‌ಲಿ) ಬಂದೊ. ಡಾ. ಕೋರನ ಸರಸ್ವತಿ ಪ್ರಕಾಶ್, ಡಾ. ಕರುಣಾಕರ ನಿಡಿಂಜಿ, ಬಾರಿಯಂಡ ಜೋಯಪ್ಪ, ಡಾ. ಶ್ರೀಧರ ಹೆಗಡೆ, ವೈ.ಡಿ. ಮೋಹನ್, ಕುಯ್ಯಮುದಿ ಅಶ್ವಿನಿ ಕುಮಾರಿ, ವಿನೋದ್ ಮೂಡಗದ್ದೆ, ಶಿವದೇವಿ ಅವನೀಶಚಂದ್ರ, ಕಡ್ಲೇರ ತುಳಸಿ ಮೋಹನ್, ಭವ್ಯ ಪಾಂಡನ, ಪಾಂಡನ ಲೋಕನಾಥ, ಕಾವೇರಮ್ಮ ಸೋಮಣ್ಣ, ಬೈತಡ್ಕ ಎ. ಬೆಳ್ಯಪ್ಪ, ಪಟ್ಟಡ ಪ್ರಭಾಕರ, ಲೋಕನಾಥ ಅಮಚೂರು, ಭುವನೇಶ್ವರಿ, ವಿಶ್ವನಾಥ ಎಡಕೇರಿ, ಅಮೆ ಪಾಲಾಕ್ಷ ಮಡಿಕೇರಿ, ಸೂದನ ಈರಪ್ಪ, ಅನ್ವಿತ್ ವಿಬಿ, ಆಶಯ್ ವಿಬಿ ಮತ್ತೆ ಅಕಾಡೆಮಿನ ಅಧ್ಯಕ್ಷರ್, ಸದಸ್ಯರ್, ಕಚೇರಿ ಸಿಬಂದಿ ಸೇರಿದ್ದೊ.

28.11.2020 ಮತ್ತೆ 29.11.2020ರಂದ್ ಎರಡ್ ದಿನ ಮಡಿಕೇರಿ ಕೊಡಗು ಗೌಡ ಸಬಾಂಗಣಲಿ ಪದಕೋಶ ತಯಾರಿ ತರಬೇತಿ ಕಾರ್ಯಾಗಾರ ನಡ್ತ್. ನಾಗೇಶ್ ಕಾಲೂರು ಕಾರ್ಯಾಗಾರ ಉದ್ಘಾಟನೆ ಮಾಡ್ದೊ. ತರಬೇತಿ ಕಾರ್ಯಾಗಾರಕ್ಕೆ ಸಂಪನ್ಮೂಲರಾಗಿ ಪ್ರೊ. ಚೆ. ರಾಮಸ್ವಾಮಿ (ಪುಣೆಂದ ಆನ್‌ಲೈನ್‌ಲಿ) ಮತ್ತೆ ಡಾ. ಕರುಣಾಕರ ನಿಡಿಂಜಿ ಬಾಗವಹಿಸಿದೊ. ಜೀವನ್ ಮಜ್ಞಂಡ್ರ, ವಿಕ್ರಮ್ ಮೂಡಗದ್ದೆ, ನಿಶ್ಚಯ್ ವೈ,

ಎಸ್., ಸುನಿಲ್ ಕುಮಾರ್ ಬಿ.ಬಿ., ಮಹೇಶ್ ಮೂಲೆಮಜಲ್, ರುಚಿತಾ ಅಮೆಮನೆ, ಕೋಟೇರ ಶ್ರುತಿ ಕಿಶೋರ್, ಯಶ್ಮಿತ ಎ.ಎಸ್., ಬಿ.ಬಿ. ಕೆಂಜನ ಮಮತಾ ಪ್ರಸಾದ್., ಡೀನಾ ಜಿ.ಕೆ., ದರ್ಶಿನಿ ಎಸ್., ಚೈತ್ರಾ ಪುರ., ಮತ್ತೆ ಅಕಾಡೆಮಿನ ಅಧ್ಯಕ್ಷರ್, ಸದಸ್ಯರ್, ಕಚೇರಿ ಸಿಬಂದಿ ಕಾರ್ಯಾಗಾರಲಿ ಸೇರಿದ್ದೊ.

01.12.2020 ರ್‌ಂದ 31.03.2021ರ ವರೆಗೆ ನಾಲ್ಕು ತಿಂಗ ಮಡಿಕೇರಿಂದ ಏಳು ಜೆನ ಮತ್ತೆ ಸುಳ್ಯಂದ ಒಬ್ಬರ್ ಹಿಂಗೆ ಎಂಟ್ ಜೆನ ಸಂಶೋದನ ಸಹಾಯಕರ ಕ್ಷೇತ್ರಕಾರ್ಯಂದ 14,650 ಪದಗ, 1315 ಗಾದೆಗ, 424 ಒಗಟುಗ, 39 ಮನೆಮೊದ್ದ್ ಮಾಹಿತಿ ಸಂಗ್ರಹಿಸಿದೊ. 2013ರ್‌ಲಿ ಗೌಡ ಸೋಶಿಯೋ ಎಜ್ಯುಕೇಶನ್ ಟ್ರಸ್ಟ್(ರಿ), ಸುಳ್ಯ, ದಕ್ಷಿಣ ಕನ್ನಡಂದ ಪ್ರಕಟ ಆದ ಕೆ.ಆರ್. ಗಂಗಾಧರ್ ಸಂಪೊದನೆ ಮಾಡ್ದ ಅರೆಭಾಷೆ–ಕನ್ನಡ–ಇಂಗ್ಲಿಷ್ ಶಬ್ದಕೋಶ–ಅರೆಭಾಷೆ ಗಾದೆಗ ಮತ್ತು ನುಡಿಗಟ್ಟ್‌ಗ ಹಿಂಗೆ 239 ಪುಟಗಳ ಈ ಪುಸ್ತಕಂದ ಮಾಹಿತಿನ ಬಳಕೆ ಮಾಡಿಕೊಂಡೊ. 1992ರ್‌ಲಿ ಮಡಿಕೇರಿನ ಪೆರಾಜೆ ಮತ್ತೆ ಸುಳ್ಯದ ಅರಂತೋಡು, ಮಂಡೆಕೋಲು, ಮಡಪ್ಪಾಡಿ, ಕೊಲಮೊಗ್ರ, ಗುತ್ತಿಗಾರು ಪ್ರದೇಸಗಳ್‌ಲಿ ಡಾ. ವಿಶ್ವನಾಥ ಬದಿಕಾನ ಸಂಗ್ರಹ ಮಾಡ್ದ 'ಅರೆಬಾಸೆನ ಅಜ್ಜಿಕತೆಗ' ಪುಸ್ತಕಲಿ ಪ್ರಕಟ ಆದ 100 ಕತೆಂದ ತಕಂಡ ಪದಗ, ಎಂ.ಜಿ. ಕಾವೇರಮ್ಮ ಬರ್ದ್ ಕಳ್ಸಿದ ಪದಗ, ಚೊಕ್ಕಾಡಿ ಪ್ರೇಮಾ ರಾಘವಯ್ಯ ಸಂಗ್ರಹಿಸಿದ ಸಾಂಸ್ಕೃತಿಕ ಪದಗ, ಎ.ಸಿ. ಶೈಲಜಾ ಅವರ ಕೊಡವರು ಮತ್ತು ಕೊಡಗಿನ ಅರೆಭಾಷೆ ಗೌಡರ ಸಂಸ್ಕೃತಿ–ತೌಲನಿಕ ಅಧ್ಯಯನ ಪುಸ್ತಕಂದ ತಕಂಡ ಸಾಂಸ್ಕೃತಿಕ ಪದಗ, www.kdkgowdas.com ನಿಂದ ತಕಂಡ ಮನೆತನದ ಪದಗ, ಸುಳ್ಯ ವಿಧಾನ ಸಭಾಕ್ಷೇತ್ರ ವೋಟರ್ ಲಿಸ್ಟ್‌ಂದ ತಕಂಡ 990 ಸ್ಥಳನಾಮ ಪದಗ – ಹಿಂಗೆ ಹಲವು ಮೂಲಂದ ಒಟ್ಟು 30 ಸಾವಿರ ಪದ ಸಂಗ್ರಹಗಳ ಆರಂಬಲಿ ತಕಂಡೊಲೊ.

ಸಂಗ್ರಹ ಮತ್ತೆ ಸಂಪಾದನೆ ವಿದಾನ :

ಕೊರೋನಾಂದಾಗಿ ಪದ ಸಂಗ್ರಹ ಮತ್ತೆ ಸಂಪಾದನೆ ಕೆಲ್ಸ ಕಸ್ಟಂತ ನಮ್ಮ ಮನಸ್ಸ್‌ಲಿ ಇತ್ತ್. ಡಾ. ಪದ್ಮನಾಭ ಕೇಕುಣ್ಣಾಯರ್ ತುಳು ಲೆಕ್ಸಿಕನ್ ಮತ್ತೆ ತುಳು ಜ್ಞಾತಿ ಪದಕೋಶಲಿ ಕೆಲ್ಸ ಮಾಡ್ದ ಅನುಬವಲಿ ಸಾಂಪ್ರದಾಯಿಕ ವಿದಾನವಾದ ಕಾರ್ಡ್ ಬಳಕೆಂದ ಸಂಗ್ರಹ ಮತ್ತೆ ಸಂಪಾದನೆ ಮಾಡೊಕುತ ಸೂಚಿಸಿದ್ದೊ. ನಮ್ಮ ಒಟ್ಟು ಅವದಿ 3 ವರ್ಸ. ಅದರ್‌ಲೂ ಕೊರೋನಾಂದಾಗಿ ಒಂದ್ ವರ್ಸ ಮುಗ್‌ದಿತ್ತ್. ಇನ್ನ್ ಇರ್‌ವ ಎರಡ್ ವರ್ಸಲಿ ಅರೆಬಾಸೆ ಪದಕೋಶ ಮಾಡ್ದು ಸುಲಬದ ಕೆಲ್ಸ ಅಲ್ಲಂತ ನಾವ್ಗೆ ಗೊತ್ತಿತ್ತ್. ಸಲಹೆ ಕೊಡೊವು ತುಂಬ ಜೆನ ಇದ್ದರೂ ಹೇಳ್ದ ಕೆಲ್ಸನ ಮಾಡಿ ತೋರ್ಸುವೊವಾಗಲಿ ಅತವಾ ಮಾಡ್ದ ಕೆಲ್ಸನ ಮೆಚ್ಚುವೊವಾಗಲಿ ಕಮ್ಮಿ ಜೆನ.

ಪ್ರೊ. ಚೆ. ರಾಮಸ್ವಾಮಿಯವು ಕೊರೋನಾ ಕಾರಣಂದ ಮೂರು ಸಬೆಗೂ ಆನ್‌ಲೈನ್‌ಲೇ ಬಂದ್ ಮಾತಾಡ್ದೊ. 23.11.2020ರಂದ್ ನಾ ಮತ್ತೆ ಭರತೇಶ್ ಅಲಸಂಡೆಮಜಲ್ ಅವು ಮಂಗಳೂರ್‌ಲಿ ಪ್ರೊ. ಬಿ.ಎ. ವಿವೇಕ ರೈ ಅವರ ಮನೆಗೆ ಹೋಗಿದ್ದೊ. ಅಂದ್ ಅವು ತಂತ್ರಜ್ಞಾನ ಉಪಯೋಗ್ಸಿ ಸಂಪಾದನೆ ಮಾಡಿತ ಸಲಹೆ ಕೊಟ್ಟೊ. ಅವರ ಸಲಹೆ ಈ ಪದಕೋಶಕ್ಕೆ ವರದಾನ ಆತ್. 28.11.2020 ಮತ್ತೆ 29.11.2020ರಂದ್ ಎರಡ್ ದಿನ ಮಡಿಕೇರಿ ಕೊಡಗು ಗೌಡ ಸಬಾಂಗಣಲಿ ಪದಕೋಶ ತಯಾರಿ ತರಬೇತಿ ಕಾರ್ಯಾಗಾರಲಿ ಆನ್‌ಲೈನ್ ಸಂಪೊದನೆ ಬಗ್ಗೆನೇ ಗಮನಕೊಟ್ಟೊ. ಎಲ್ಲವ್ಕೂ ಆನ್‌ಲೈನ್ ಗೊತ್ತಿಲ್ಲದ ಕಾರಣ 2020 ಡಿಸೆಂಬರ್‌ಂದ 2021 ಫೆಬ್ರವರಿ ಕೊನೆವರೆಗೆ ವಾರಕ್ಕೊಮ್ಮೆ ಒಂದು ಗಂಟೆ ಎಲ್ಲ ಸಂಶೋದನಾ ಸಹಾಯಕರ ಜೊತೆ ಕ್ಷೇತ್ರಕಾರ್ಯ ಮೌಲ್ಯಮಾಪನ ಮಾಡ್‌ತಿದ್ದೊ. ಮತ್ತೆ ಮತ್ತೆ ತಂತ್ರಜ್ಞಾನದ ಅಜ್ಞಾನನ ಪರಿಚಯಿಸುವ, ನಾವುನೂ ಅದೇ ಅಜ್ಞಾನಲಿ ಕಲಿವ ಸಂದರ್ಬ ಆತ್. ಇಸ್ಟರ್‌ಲಿ ಕೆಲವ್ಕೆ ನೆಟ್‌ವರ್ಕ್ ಸಮಸ್ಯೆ ಆದರೆ, ಇನ್ನ್ ಕೆಲವರ್ ಸಂಶೋದನಾ ಸಹಾಯಕರ್ ನಮ್ಮ ಈ ಆನ್‌ಲೈನ್ ರಗಳೆಂದ ಬುಟ್ಟೇ ಹೋದೊ. ಆದರೆ ನಾವ್ಗೆ ಈ ಕೊರೋನಾ ಸಮಯಲಿ ಹಿಂಗೆ ಮಾಡದೆ ಉಪಾಯನೇ ಇತ್ಲೆ.

ಅರೆಬಾಸೆ ಪದಕೋಶ ಮತ್ತೆ ಆನ್‌ಲೈನ್ ಸಂಪೊದನೆ ವಿದಾನ :

ಕೋವಿಡ್ ಎರಡನೇ ಅಲೆಂದಾಗಿ ಏಪ್ರಿಲ್–ಮೇ ತಿಂಗಳ್‌ಲಿ (ನಾನೇ ಕೋವಿಡ್ ಪಾಸಿಟಿವ್ ಆಗಿಬಿಟ್ಟೆ) ಯಾವ ಕೆಲ್ಸನೂ ಮಾಡಿಕೆ ಆತ್ಲೆ. ಮತ್ತೆ 2021ನೇ ಜೂನ್ ಕೊನೆಕೊನೆಗೆ ನಮ್ಮ ಅದ್ಯಯನ ತಂಡ (ಡಾ. ವಿಶ್ವನಾಥ ಬದಿಕಾನ, ಭರತೇಶ ಅಲಸಂಡೆಮಜಲು) ಸಂಗ್ರಹ ಆದ 30 ಸಾವಿರಕಿಂತ ಹೆಚ್ಚಿ ಪದಗಳ ಆನ್‌ಲೈನ್‌ಗೆ ಹಾಕಿ ಎಡಿಟ್‌ಗೆ ಕುದ್ದೊ. ಒಂದ್ ರೀತಿಲಿ ತಪಸ್ಸ್‌ತ ಹೇಳಕ್. ಹಗಲೆಲ್ಲ ನಾವ್ಗೆ ಔದ್ಯೋಗಿಕ ಒತ್ತಡ. ರಾತ್ರಿ 12 ಗಂಟೆವರೆಗೆ ಎಡಿಟಿಂಗ್ ಕೆಲ್ಸ. ಈ ಸಂದರ್ಬಲಿ

ಮಡಿಕೇರಿಂದ ಕೆಂಜನ ಮಮತಾ ಪ್ರಸಾದ್ ನಮ್ಮ ಸಹಾಯಕೆ ಬಂದೊ. ಅವು ಕೃಸಿ ಕೆಲ್ಸದೊಟ್ಟ್‌ಗೆ ಈ ಪದಕೋಶದ ಎಲ್ಲಾ ಪದಕ್ಕೂ ವಾಕ್ಯಪ್ರಯೋಗ ಮಾಡಿಕೊಟ್ಟೊ. ಬಹಳಸ್ಟ್ ಅರೆಬಾಸೆ ಪದಕೆ ಕನ್ನಡ ಅರ್ತಗಳ ಕೊಟ್ಟೊ. ಕನ್ನಡ ಅರ್ತಕೆ ನಾವು ಕನ್ನಡ ಸಾಹಿತ್ಯ ಪರಿಷತ್‌ನ ಆನ್‌ಲೈನ್ ಪೀರಿಗಂಟ್‌ನ ಬಳಕೆ ಮಾಡಿಕೊಂಡೊ. ಹಿಂಗೆ 2021 ಜುಲೈಂದ ಅಕ್ಟೋಬರ್ ಅಕೇರಿಗಾಕನ ಐದ್ ತಿಂಗಳ್‌ಲಿ 30 ಸಾವಿರಂದ ಪದಗಳ ತೆಗ್ದ್‌ತೆಗ್ದ್ 15 ಸಾವಿರ ಪದಕ್ಕೆ ತಂದ್ ನಿಲ್ಸಿದೊ. ಮುಕ್ಯವಾಗಿ ಇಡೀ ಸಂಗ್ರಹಲಿ ಪುನರಾವರ್ತನೆ ಪದಗ ಜಾಸ್ತಿ ಇದ್ದೊ. ಅವೆಲ್ಲಾ ಡಿಲಿಟ್ ಆದೊ. ಒಬ್ಬೊಬ್ಬರ್ ಒಂದೊಂದ್ ಊರ್‌ಲಿ ಕುದ್ದ್‌ಕಂಡ್ ಒಟ್ಟ್‌ಗೆ ಅರೆಬಾಸೆ ಪದ–ಪದವಿಸೇಸ–ವ್ಯಾಕರಣ ವಿಸೇಸ–ಕನ್ನಡ ಅರ್ತ, ಅರೆಬಾಸೆ ವಾಕ್ಯ ಮತ್ತೆ ಪದ ಪ್ರಯೋಗ ಎಡಿಟ್ ಆತ್. 2021 ಡಿಸೆಂಬರ್‌ಂದ 2022 ಫೆಬ್ರವರಿ 28ರ ವರೆಗೆ ಇಂಗ್ಲಿಸ್ ಅರ್ತ ಆನ್‌ಲೈನ್ ಎಡಿಟ್ ಮಾಡಿಕೆ ಸಂತ ಅಲೋಶಿಯಸ್ ಕಾಲೇಜು (ಸ್ವಾಯತ್ತ) ಮಂಗಳೂರ್‌ನ ಇಂಗ್ಲಿಸ್ ವಿಬಾಗಂದ ಸಹಾಯಕ ಪ್ರಾಧ್ಯಾಪಕ ಡಾ. ಎನ್. ಗಿರೀಶ್ ಬಂದೊ. 2022 ಮಾರ್ಚ್ ಮತ್ತೆ ಎಪ್ರಿಲ್ ತಿಂಗಳ್‌ಲಿ ಮಡಿಕೇರಿ ಕಡೆಂದ ಅಕಾಡೆಮಿ ಮಾಜಿ ಸದಸ್ಯ ಶ್ರೀ ಬಾರಿಯಂಡ ಜೋಯಪ್ಪ ಮತ್ತೆ ಸುಳ್ಯ ಕಡೆಂದ ವಿದ್ಯಾರಶ್ಮಿ ಪದವಿಪೂರ್ವ ಕಾಲೇಜು ಸವಣೂರ್‌ನ ಪ್ರಾಂಶುಪಾಲರ್ ಶ್ರೀ ಸೀತಾರಾಮ ಕೇವಳ ಅವು ಅರೆಬಾಸೆ ಪದಗ ಮತ್ತೆ ಅದಕ್ಕೆ ಕೊಟ್ಟ ಕನ್ನಡ ಅರ್ತಗ ಹೊಂದಿಕೆ ಆದೆನಾತ ಓದಿ ತಿದ್ದುಪಡಿಮಾಡಿ ಕೊಟ್ಟೊ. 2022 ಮೇ 14–15 ಎರಡ್‌ದಿನ ಮೈಸೂರ್‌ಲಿ ಪ್ರೊ. ಚೆ. ರಾಮಸ್ವಾಮಿಯವರೊಟ್ಟ್‌ಗೆ ಪದಕೋಶದ ಅಂತಿಮ ರೂಪದ ಸಂಕಲನ ಸಬೆ ಮಾಡ್ದೊ. 2022 ಮೇ ತಿಂಗಳ ಕೊನೆಗೆ ಅರೆಬಾಸೆ ಪದಕೋಶದ ಟೆಂಡರ್ ಆತ್. 2022ರ ಮೇ 28ರ್‌ಂದ ಜೂನ್ 12ರ ವರೆಗೆ ಸತತ ಎರಡ್ ವಾರ ರಾತ್ರಿ ಹಗಲ್ 18 ಸಾವಿರ ಅರೆಬಾಸೆ ಪದಕೋಶನ ಒಂದ್ ತಂಡಮಾಡಿ ಪ್ರೊಜೆಕ್ಟರ್‌ಲಿ ಹಾಕಿ ಸುತ್ತ ಕುದ್ದ್‌ಕಂಡ್ ಓದಿದೊ. ಈ ತಂಡಲಿ ಲಕ್ಷ್ಮೀನಾರಾಯಣ ಕಜೆಗದ್ದೆ, ಡಾ. ವಿಶ್ವನಾಥ ಬದಿಕಾನ, ಪುರುಷೋತ್ತಮ ಕಿರ್ಲಾಯ, ಕಿರಣ ಕುಂಬಳ್ಚೇರಿ, ಭರತೇಶ ಅಲಸಂಡೆಮಜಲ್, ಡಾ. ಪುರುಷೋತ್ತಮ ಕೆ.ವಿ. ಕರಂಗಲ್ಲು, ಶ್ರೀಮತಿ ಸರೋಜ ಎಂ.ಕೆ. ಕುದ್ದಿದ್ದೊ. ಹಿಂಗೆ ಅರೆಬಾಸೆ ಪದಗ, ಪದವಿಸೇಸ, ವ್ಯಾಕರಣ ವಿಸೇಸ, ಐಪಿಎ–ರೋಮನ್ ಇಟಾಲಿಕ್, ಸಾಂಸ್ಕೃತಿಕ ಪದ, ಕನ್ನಡ–ಇಂಗ್ಲಿಸ್ ಅರ್ತ, ಗಾದೆ, ನುಡಿಗಟ್ಟು, ಒಗಟು, ವಾಕ್ಯಪ್ರಯೋಗ, ಪದಪ್ರಯೋಗ ಮತ್ತೆ ಸಂಗ್ರಹ ಮಾಡ್ದವರ ವಿವರ – ಹಿಂಗೆ 13 ಬಾಗಲಿ ಸಂಪೊದನೆ ಮಾಡಿಕೆ ಸುರು ಮಾಡ್ದ ಕೆಲ್ಸ 2022 ಜೂನ್ ಕೊನೆಗೆ ನಿಲ್‌ಸಿದೊ. ಸತತ 18 ತಿಂಗಳ್‌ಲಿ 18 ಸಾವಿರ ಪದಗಳ ಲೆಕ್ಸಿಕನ್ ಮಾದರಿ 'ಅರೆಬಾಸೆ ಪದಕೋಶ: ಅರೆಬಾಸೆ–ಕನ್ನಡ–ಇಂಗ್ಲಿಸ್ ಡಿಕ್ಷನರಿ' ತಯಾರಾತ್.

18 ಸಾವಿರ ಅರೆಬಾಸೆ ಪದಗ ಮತ್ತೆ ಅದಕ್ಕಿಂತ ಎರಡರಸ್ಟ್ ಹೆಚ್ಚಿ ಕನ್ನಡ ಮತ್ತೆ ಇಂಗ್ಲಿಸ್ ಪದಗ, 16 ಸಾವಿರಕ್ಕಿಂತ ಹೆಚ್ಚಿ ಅರೆಬಾಸೆ ವಾಕ್ಯ ಪ್ರಯೋಗ, ಅರೆಬಾಸೆ ಪದ ಪ್ರಯೋಗ – ಒಟ್ಟಾಗಿ ಒಂದ್ ಲಕ್ಸಂದ ಹೆಚ್ಚ್ ಪದಗ ಈ ಪದಕೋಶಲಿ ಬಳ್‌ಕೆ ಆವುಟು. ಜೊತೆಗೆ ಅಲ್ಲಲ್ಲಿ ತುಳು ಜ್ಞಾತಿ ಪದಗ ಉಟ್ಟು. ಅರೆಬಾಸೆ ಪ್ರದೇಸದ ಒಂದ್ ಸಾವಿರಕ್ಕಿಂತ ಹೆಚ್ಚ್ ಮನೆತನಗ, ಜಾಗೆಗಳ ಹೆಸ್ರ್ ಈ ಪದಕೋಶ ಸಂಗ್ರಹಲಿ ಉಟ್ಟು. ಸಂಶೋದನೆ ಮಾಡೊವ್ಕೆ ಇದೊಂದ್ ಆಕರಕೋಶ.

ಪದಕೋಶದ ಪದಗಳ ಸಂಗ್ರಹಣೆಯ ವ್ಯಾಪ್ತಿ :

ಕೊಡಗು ಜಿಲ್ಲೆ :

1. ಆಲೂರುಪೇಟೆ–ವಿರಾಜಪೇಟೆ–ಪಾಲಿಬೆಟ್ಟು–ಗೋಣಿಕೊಪ್ಪ

ದಕ್ಷಿಣಕನ್ನಡ ಜಿಲ್ಲೆ ಮತ್ತೆ ಕಾಸರಗೋಡು ಜಿಲ್ಲೆ :

1. ಕೊಲ್ಲಮೊಗ್ರ–ನಡುಗಲ್ಲ್–ಬಾಳ್ಗೋಡು–ಹರಿಹರ ಪಲ್ಲತಡ್ಕ–ಕಂದ್ರಪ್ಪಾಡಿ–ಗುತ್ತಿಗಾರು–ದೇವಚಳ್ಳ–ಪಂಬೆತ್ತಾಡಿ–ಉಪ್ಪುಕಳ–ಮೆಂಟೆಕಜೆ–ಕೊಪ್ಪಡ್ಕ–ಕಡಮಕಲ್ಲು–ಕರಂಗಲ್ಲು–ದೊಡ್ಡತೋಟ–ಮಡಪ್ಪಾಡಿ–ಎಲಿಮಲೆ–ಪೈಲಾರ್–ಚೊಕ್ಕಾಡಿ–ಕುಕ್ಕುಜಡ್ಕ–ನಾರ್ಣಕಜೆ (ಗುತ್ತಿಗಾರು ಜಿಲ್ಲಾ ಪಂಚಾಯತ್)
2. ಅರಂತೋಡು–ಮರ್ಕಂಜ–ಉಬರಡ್ಕ–ಆಲೆಟ್ಟಿ–ಬಡ್ಡಡ್ಕ–ಸುಳ್ಯ–ಐವರ್‌ನಾಡ್–ಚೊಕ್ಕಾಡಿ–ನಿಂತಿಕಲ್ಲು–ಬೆಳ್ಳಾರೆ (ಅರಂತೋಡು ಮತ್ತು ಬೆಳ್ಳಾರೆ ಜಿಲ್ಲಾ ಪಂಚಾಯತ್)
3. ಕಣ್ಕೂರು–ಕೋಲ್ಚಾರ್–ಬಂದಡ್ಕ–ಬಂದ್ಯಡ್ಕ–ಕನಕಮಜಲು–ಜಾಲ್ಸೂರು–ಪಂಜಿಕಲ್ಲು–ಅಜ್ಜಾವರ–ಅಡೂರು–ಪರಪ್ಪೆ–

ಮಂಡೆಕೋಲು–ಮುಡೂರು (ಜಾಲ್ಸೂರು ಜಿಲ್ಲಾ ಪಂಚಾಯತ್ ಮತ್ತು ಕಾಸರಗೋಡಿನ ಗಡಿ ಭಾಗ)

4. ಕಡಬ–ಸುಬ್ರಹ್ಮಣ್ಯ–ಏಣೆಕಲ್ಲು–ಪಂಜ–ಬಳ್ಪ–ಬಳ್ಳಕ್ಕ (ಕುಕ್ಕೆ ಸುಬ್ರಹ್ಮಣ್ಯ ಮತ್ತು ಕಡಬ)

ಪದಕೋಶ ಮಾಹಿತಿದಾರರ ವಿವರ :

ಮಾಹಿತಿದಾರರ ಹೆಸರು, ವಿಳಾಸ, ವೃತ್ತಿ, ವಯಸ್ಸು, ಲಿಂಗ, ದಿನಾಂಕ, ಸ್ಥಳ, ಸಮಯ, ಶಬ್ದ/ಪದ ವಿವರ, ಐಪಿಎ, ಪೂರಕ ಮಾಹಿತಿ ಇದ್ದಲ್ಲಿ – ಗಾದೆ, ನುಡಿಗಟ್ಟು, ಒಗಟು ಇತ್ಯಾದಿ.

ಅರೆಬಾಸೆ ಪದಕೋಶಕೆ ಮಾಹಿತಿ ಸಂಗ್ರಹ ವಿದಾನ ಮತ್ತೆ ವರ್ಗೀಕರಣ

ವಿಸಯ 1 : ಮನೆ ಮತ್ತೆ ಮನೆ ಒಳಗೆನ ಬಾಗ, ಮನೆ ಮತ್ತೆ ಒಕ್ಕಲ್ ಸಮ್ಮಂದಿ ಪದಗ, ಕೊಟಗೆ, ಕೊಟಗೆ ಒಳಗೆ ಉಪಯೋಗಿಸ್‌ವ ವಸ್ತು, ದನದ ಕೊಟಗೆ ಬೇರೆಬೇರೆ ಬಾಗ, ದಿಕ್ಕ್ ಮತ್ತೆ ವಾಸ್ತು ಇತ್ಯಾದಿ ವಿವರ ಸಂಗ್ರಹ

ವಿಸಯ 2 : ಮೊನ್ಸ ಮತ್ತೆ ಪ್ರಾಣಿ ಹಕ್ಕಿಗಳ ತೆನಸ್‌ಗ, ಹೆಣ್ಣ್ ಗಂಡ್‌ನ ಹೇಳ್‌ವ ಪದಗ, ದೇವರ್–ದೈವ–ದೆವ್ವಗಳ, ಲೌಕಿಕ–ಅಲೌಕಿಕ ಸಮ್ಮಂದಿ ಪದಗ, ಬಟ್ಟೆ ಬರೆ, ಮೊದುವೆ(ಹೆಣ್ಣ್ ಗಂಡ್ ಸಮ್ಮಂದಿ) ಮತ್ತೆ ಆಚರಣೆ ಸಮ್ಮಂದಿ ಪದ, ಮೊನ್ಸನ ಸರೀರದ ಅಂಗಗ, ಮೊನ್ಸ ಸಮ್ಮಂದಗ, ಹುಟ್ಟ್ ಮತ್ತೆ ಸಾವು,(ಹೆಣ್ಣ್ ಗಂಡ್) ಆಚರಣೆ ಸಮ್ಮಂದಿ ಪದಗ,

ವಿಸಯ 3 : ಅಡುಗೆ ಮತ್ತೆ ಅಡುಗೆ ತಯಾರ್ಸ್‌ವ ವಿದಾನಗ, ಬೇಸಾಯ, ಕೊಯ್ಲ್, ಬೀಜ ಸಂಸ್ಕರಣೆ, ಬತ್ತದ ವಿದಗ ಕಾಡ್ ಪ್ರಾಣಿ ಹಕ್ಕಿಗಳ ಹೆಸರ್‌ಗ, ಕೀಟಗ, ಕೃಸಿ ಉತ್ಪನ್ನಗ, ಉಪಕರಣಗ, ಕೃಸಿ ವಿದಾನಗ, ಕೃಸಿ ಸಮಯಗ, ಕೃಸಿ ವ್ಯಕ್ತಿವಾಚಕ ಪದಗ, ಕೆಲ್ಸನ ಹೇಳುವ ಪದಗ, ಜಾತಿವಾಚಕ ಪದಗ, ವಿಸ ಜಂತುಗ, ಪಾತ್ರೆಗ, ಲೋಕಜ್ಞಾನ ಪದಗ, ಬೈಗುಳ ಮತ್ತೆ ಹೊಗಳಿಕೆಗ, ರೋಗಗಳ ಹೆಸರ್‌ಗ, ಲೋಹದ ಹೆಸರ್‌ಗ, ವಿಸವಾಚಕ, ವೃತ್ತಿ ವಾಚಕಗ, ವೇಗ–ನಿದಾನ–ಮುಳ್ಗ್–ಈಜ್–ನೀರ್ ಮೊಗೆದು–ತುಂಬ್ಸುದು ಇತ್ಯಾದಿ ಪದಗ, ಸಂಕ್ಯಾವಾಚಕಗ, ಸಸ್ಯವಾಚಕಗ, ದಿಕ್‌ವಾಚಕಗ, ಪಂಚಬೂತಗಳ ಹೇಳುವ ಪದಗ ಇದರೊಟ್ಟ್‌ಗೆ ಮೂರೂ ಬಾಗಕ್ಕೂ ಸಮ್ಮಂದ ಆವ ಗಾದೆ, ಒಗಟು, ನುಡಿಗಟ್ಟು, ನಂಬಿಕೆ ಇತ್ಯಾದಿ ಪದಗ ಸಂಗ್ರಹ ಮಾಡಿಕೆ ಸೂಚಿಸಿದೊ.

ಕನ್ನಡ ಅಕ್ಸರ ಮತ್ತೆ ಲಿಪಿ ಬಳಕೆ

ಅರೆಬಾಸೆಗೆಂತ ಒಂದು ಪ್ರತ್ಯೇಕ ಲಿಪಿ ಇಲ್ಲೆ, ಅರೆಬಾಸೆನ ಕನ್ನಡ ಲಿಪಿಲೇ ಬರಿಯೊದು. ಬೇರೆ ಬಾಸೆನವು ಅರೆಬಾಸೆನ ಓದೊಕುಂತ ಐಪಿಎ (ಇಂಟರ್ನ್ಯಾಷನಲ್ ಫೊನೆಟಿಕ್ ಆಲ್ಫಾಬೆಟ್ಸ್) ರೋಮನ್ ಲಿಪಿ ಸಂಕೇತ ಅಕ್ಸರಗಳ ಬಳಕೆ ಮಾಡ್ಯೊಳದ್. ಈ ಪುಸ್ತಕಲಿ ಬಳಕೆ ಮಾಡ್ದ ಅರೆಬಾಸೆನ ಸ್ವರಾಕ್ಸರ ಮತ್ತೆ ವ್ಯಂಜನಾಕ್ಸರನ ಮುಂದೆ ನೋಡಕ್

ಸಂಕೇತಾಕ್ಸರಗ

ಐಪಿಎ ಅಕ್ಸರ ಬಳಕೆ ಹಿನ್ನೆಲೆ : ಕನ್ನಡ ಅಕ್ಸರಗಳ ಗಮನಿಸಿಕಂಡ್ ಅರೆಬಾಸೆಗೆ ಕೆಲವು ವಿಸೇಸ ದ್ವನಿಮಾ ಬೇಕೂಂತ ಪ್ರೊ. ಕೋಡಿ ಕುಶಾಲಪ್ಪ ಗೌಡರ್ 1970ರ್‌ಲಿ ಬರ್‌ದ ಅಣ್ಣಾಮಲೈ ವಿಶ್ವವಿದ್ಯಾನಿಲಯಂದ ಪ್ರಕಟ ಆದ 'GOWDA KANNADA' ಪುಸ್ತಕಲಿ ಹೇಳಿಯೊಳೊ. 2019ರ್‌ಲಿ ಗುಲ್ಬರ್ಗಾ ವಿಶ್ವವಿದ್ಯಾನಿಲಯ 'ಎನ್‌ಡೇಂಜರ್ ಲಾಂಗ್ವೇಜಸ್' ವಿಬಾಗದಿಂದ ಪ್ರೊ. ಚೆ. ರಾಮಸ್ವಾಮಿ ಅವರ 'ಎ ಗ್ರಾಮರ್ ಆಫ್ ಅರೆಬಾಸೆ' ಪುಸ್ತಕಲಿ ಐಪಿಎ ಸ್ವರ ಮತ್ತೆ ವ್ಯಂಜನ ಅಕ್ಸರಗಳ ಬಳಕೆ ಮಾಡ್ಯೊಳೊ. ಇವೆರಡೂ ಅರೆಬಾಸೆನ ಬಗ್ಗೆ ಬಂದ ವೈಜ್ಞಾನಿಕ ಸಂಸೋದನಾ ಪುಸ್ತಕಗ. ಈ ಅದ್ಯಯನಗಳ ಆದಾರಲಿ ಮುಂದೆನ ಐಪಿಎ ಪಟ್ಟಿ ತಯಾರ್ ಮಾಡ್ಯೊಳದ್.

ಅರೆಬಾಸೆನ ಸ್ವರಾಕ್ಸರಗ : ಒಟ್ಟ್ 17 ಸ್ವರಾಕ್ಸರಗಳ್‌ಲಿ 10 ಸಮಾನ ಹ್ರಸ್ವ ದೀರ್ಗ ಸ್ವರಗ, 7 ವಿಸೇಸ ದ್ವನಿಮಾ ಸ್ವರಗ ಪದದ ಸುರೂಗೆ ಮತ್ತೆ ನಡೂಲಿ ಬಳಕೆಯಾದ್ದರ ಗಮನಿಸಕ್. ಅಕ್ಸರ

10 ಸಮಾನ ಹ್ರಸ್ವ ದೀರ್ಗ ಸ್ವರಗ :

ಅಕ್ಷರ	ಐಪಿಎ ಸಂಕೇತ	ಪದಾದಿ ಅಕ್ಷರ	ಪದಾಂತ್ಯ ಅಕ್ಷರ
ಅ	/a/	ಅಡ್ಚಿಲ್ /aɖcɨlɨ/	ಮಳೆ /malɛ/
ಆ	/a:/	ಆನೆ /a:nɛ/	ಕಾಟಿ /ka:ʈi/
ಇ	/i/	ಇದ್ /idɨ/	ಕಿಡಿ /kidi/
ಈ	/i:/	ಈಗ /i: ga/	ಪೀಂಕ್ /pi: ŋ kɨ
ಉ	/u/	ಉಮಿ /umi/	ಕುಡಿ /kudi/
ಊ	/u:/	ಊದು /u:du/	ಪೂರ /pu:ra/
ಎ	/e/	ಎಲಿ /eli/	ಹೆರ್ /herɨ
ಏ/	e:/	ಏಳ್ /e:lɨ/	ನೇರ್ಳ್ /ne:rɭɨ
ಒ	/o/	ಒಳ್ಳಿ /oɭɭi/	ಬೊಳ್ಳ /boɭɭa/
ಓ	/o:/	ಓಡ್ /o:du/	ಗೋಡೆ /go:dɛ/

7 ವಿಸೇಸ ದ್ವನಿಮಾ ಸ್ವರಗ :

ಅಕ್ಷರ	ಐಪಿಎ ಸಂಕೇತ	ಪದಾದಿ ಅಕ್ಷರ	ಪದಾಂತ್ಯ ಅಕ್ಷರ
ಅ್	/ɘ/	ಅ್ತಿ /ɘti/	
ಇ್	/ɨ/	---	ಕದ್ರ್ /kadɨrɨ/
ಎ	/ə/	---	ಹೆರ್ /hərɨ
ವ್	/ɛ/	ವ್ಪ್ಪತ್ತ್ /ɛppattɨ/	ನೆಳ /nɛɭa
ಪ್	/ɛ:/	ಪ್ಮೆ /ɛ:mɛ/	ಬೇನೆ /bɛ:nɛ
ಜ್	/ɔ/	ಜ್ಳೆ /ɔɭə/	ಸೋಂತೆ /sɔnʈɛ/
ಔ್	/ɔ:/	ಔ್ಳ್ಪ್ /ɔ:ɭpɨ/	ಚೋರೆ /cɔ:rɛ/

ಅರೆಬಾಸೆನ ವರ್ಗೀಯ ವ್ಯಂಜನಗ : ಕನ್ನಡಲಿ ವರ್ಗೀಯ ವಂಜನಗ 25 ಅಕ್ಷರ. ಅರೆಬಾಸೆಲಿ ಖ, ಛ, ಠ್, ಥ್, ಫ್ ಮತ್ತೆ ಘ, ಝ, ಢ, ಧ, ಭ ಕನ್ನಡದ ಮಹಾಪ್ರಾಣ ಅಕ್ಷರಗಳ ಉಪಯೋಗ ಇಲ್ಲೆಂತ ವಿದ್ವಾಂಸರ ಅಬಿಪ್ರಾಯ. ಹಾಂಗಾಗಿ ಪದಕೋಶಲಿ 15 ವ್ಯಂಜನ ಅಕ್ಷರ ಇದ್ದ್, ಈ 10 ಅಕ್ಷರಂದ ಬಳಕೆ ಆವ ಪದಗ ರಚನೆ ಆತ್ಲೆಂತ ಹೇಳಕ್. ಈ ಪಟ್ಟಿ ಅಕ್ಷರ ಉಚ್ಚಾರಣೆ ಮಾಡ್ವ ಕ್ರಮಲಿ ಉಟ್ಟು. ತುಟಿ, ಹಲ್ಲ್, ನಾಲಗೆನ ಚಲನೆಂದ ಅಕ್ಷರಗಳ ಹುಟ್ಟಿಕೊಂಡವೆತ ವಿದ್ವಾಂಸ್ ಹೇಳ್ವೆ. ಇವುಗಳ್‌ಲಿ ಙ ಅಕ್ಷರಂದ ಸುರು ಆವ ಪದಗ ಇಲ್ಲೆ.

ತುಟಿಗಳ ಸಹಾಯಂದ ಉಚ್ಚರ್ಸುವ ಅಕ್ಷರ : ಕನ್ನಡಲಿ ಇದರ 'ಓಷ್ಠ್ಯ ಅಕ್ಷ್ಸರ'ನ್ತ ಕರ್ದೊಳೊ

ಅಕ್ಷರ	ಐಪಿಎ ಸಂಕೇತ	ಪದಾದಿ ಅಕ್ಷರ	ಪದಾಂತ್ಯ ಅಕ್ಷರ
ಪ್	/p/	ಪಾಯ್ಸ /pa:yɨsa	ಕೊಪ್ಪು /koppu/
ಬ್	/b/	ಬೊಡಿ /boḍi	ಕೊಬ್ಬ್ /kobbu/
ಮ್	/m/	ಮರ /mara	ಎಮ್ಮೆ /ɛmmɛ/

ಹಲ್ಲ್ ಮತ್ತೆ ನಾಲಗೆ ಸಹಾಯಂದ ಉಚ್ಚರ್ಸುವ ಅಕ್ಸರಗ : ಕನ್ನಡಲಿ ಇದರ 'ದಂತ್ಯ ಅಕ್ಷ್ಸರ'ನ್ತ ಕರ್ದೊಳೊ

ಅಕ್ಷರ	ಐಪಿಎ ಸಂಕೇತ	ಪದಾದಿ ಅಕ್ಷರ	ಪದಾಂತ್ಯ ಅಕ್ಷರ
ತ್	/t/	ತುಟಿ /tuṭi	ಕತ್ತಿ /katti/
ದ್	/d/	ದುಡಿ /duḍi	ಹೈದ /haida/
ನ್	/n/	ನಾ /na:	ಗೂನು /gu:nu/

ಮೇಲ್ ಹಲ್ಲಿನ ಒಳಬಾಗ ಮತ್ತೆ ನಾಲಗೆ ಸಹಾಯಂದ ಉಚ್ಚರ್ಸುವ ಅಕ್ಸರಗ : ಕನ್ನಡಲಿ ಇದರ 'ಮೂರ್ಧನ್ಯ ಅಕ್ಷ್ಸರ'ನ್ತ ಕರ್ದೊಳೊ

ಅಕ್ಷರ	ಐಪಿಎ ಸಂಕೇತ	ಪದಾದಿ ಅಕ್ಷರ	ಪದಾಂತ್ಯ ಅಕ್ಷರ
ಟ್	/ṭ/	ಟೊಳ್ಳ್ /ṭoḷḷɨ/	ನೆಟ್ಟಂಗೆ /neṭṭa ŋ gɛ/
ಡ್	/ḍ/	ಡಬ್ಬಿ /ḍabbi	ದೊಡ್ಡಿ /doḍḍi/
ಣ್	/ɳ	---	ಅಣಿ /aɳi/

ನಾಲಗೆ ಮಡಚಿ ಉಚ್ಚರ್ಸುವ ಅಕ್ಸರಗ : ಕನ್ನಡಲಿ ಇದರ 'ತಾಲವ್ಯ ಅಕ್ಷ್ಸರ'ನ್ತ ಕರ್ದೊಳೊ

ಅಕ್ಷರ	ಐಪಿಎ ಸಂಕೇತ	ಪದಾದಿ ಅಕ್ಷರ	ಪದಾಂತ್ಯ ಅಕ್ಷರ
ಚ್	/c/	ಚೀಲ/ci:la	ಕಿಚ್ಚಿ /kicci/
ಜ್	/ j/	ಜೋಡ್ /Jo:du/	ಇಜ್ಜೆಲ್ /ijjelɨ/
ಞ್	/ɲ/	ಞಕ್ಕ್ /ɲakkɨ/	ಕುಞ್ಞಕ್ಕ /kuɲɲakka/

ಗಂಟಲ್ ಸಹಾಯಂದ ಉಚ್ಚರ್ಸುವ ಅಕ್ಸರಗ : ಕನ್ನಡಲಿ ಇದರ 'ಕಂಠ್ಯ ಅಕ್ಷರ'ನ್ತ ಕರ್ದೊಳೊ

ಅಕ್ಸರ	ಐಪಿಎ ಸಂಕೇತ	ಪದಾದಿ ಅಕ್ಸರ	ಪದಾಂತ್ಯ ಅಕ್ಸರ
ಕ್	/k/	ಕೂಸು /ku:su/	ಹೊಕ್ಕುಳು /hokkuḷu/
ಗ್	/g/	ಗಗ್ಗರ /gaggara/	ಮಗ /maga/
ಙ್	/ ŋ /	ಅಂಗ /a ŋ ka/	ಮಙ್ಙಣೆ /ma ŋ ŋ an-/

ಅರೆಬಾಸೆನ ಅವರ್ಗೀಯ ವ್ಯಂಜನಗ : ಕನ್ನಡಲಿ ಅವರ್ಗೀಯತ 9 ವ್ಯಂಜನ ಅಕ್ಸರಗ ಒಳೊ. ಇವುಗಳ್‌ಲಿ ' ಳ್ ' ಅಕ್ಸರಂದ ಸುರು ಆವ ಪದಗ ಅರೆಬಾಸೆಲಿ ಇಲ್ಲೆ.

ಅಕ್ಸರ	ಐಪಿಎ ಸಂಕೇತ	ಪದಾದಿ ಅಕ್ಸರ	ಪದಾಂತ್ಯ ಅಕ್ಸರ
ಯ್	/y/	ಯಡ್ಡ /yaḍda/	ಮೇಯಿ /me:yi/
ರ್	/r/	ರಾಗಿ/ra:gi/	ಮರ /mara/
ಲ್	/l/	ಲಂಗ /la ŋ ga/	ಮೊಲೆ /molɛ/
ವ್	/v/	ವಾಲಗ /va:laga/	ಮರ್ವಾಯಿ /marva:yɨ/
ಶ್	/ʃ/	ಶಂಕ /ʃa ŋ ka/	ನಿಶ್ಚಯ /niʃcaya/
ಷ್	/ʂ/	ಷಂಡ /ʂa ŋ ḍa/	ವಿಷ /viʂa/
ಸ್	/s/	ಸರ /sara/	ತೊರ್ಸು /to:rsu/
ಹ್	/h/	ಹಾಲ್ /ha:lɨ/	ಅಟ್ಟಹಾಸ /aṭṭaha:sa/
ಳ್	/ḷ/	---	ಹಾಳ್ /ha:ḷɨ/

ಅರೆಭಾಷೆ ಪದಕೋಶಲಿ ಬಳಕೆ ಆದ ಸಂಕ್ಷೇಪ ಅಕ್ಸರಗ : ಕನ್ನಡದ ಹಾಂಗೆ ಅರೆಬಾಸೆಲಿ ನಾಮಪದ ಕ್ರಿಯಾಪದತ ವಿಬಾಗ ಉಟ್ಟು. ಜೊತೆಗೆ 27 ಸಂಕೇತ ಅಕ್ಸರಗಳ ಪದಗ ಪದಕೋಸಲಿ ಅಲ್ಲಲ್ಲಿ ಬಳಕೆ ಆವುಟು. ಅದರ ಪಟ್ಟಿ ಮುಂದೆನ ಬಾಗಲಿ ಉಟ್ಟು.

ಸಂಕ್ಷೇಪ ಅಕ್ಸರ	ವ್ಯಾಕರಣ ವಿಸೇಸ ಪದಗ
ಅ	ಅವ್ಯಯ
ಎಪ	ಎರವಲು ಪದ
ಏವ	ಏಕವಚನ
ಒಗಟು	ಒಗಟು
ಕ್ರಿ	ಕ್ರಿಯಾಪದ

ಕ್ರಿವಿ	ಕ್ರಿಯಾ ವಿಶೇಷಣ
ಗಾ	ಗಾದೆ
ಜಕ	ಜನಪದ ಕತೆ
ಜೋಪ	ಜೋಡಿಪದ
ತು	ತುಳು
ನ	ನಂಬಿಕೆ
ನಾ	ನಾಮಪದ
ನಾವಿ	ನಾಮ ವಿಶೇಷಣ
ನು	ನುಡಿಗಟ್ಟು
ಪಪ್ರ	ಪದ ಪ್ರಯೋಗ
ಪವಾ	ಪರಿಮಾಣ ವಾಚಕ
ಪುವಾ	ಪುರುಷ ವಾಚಕ
ಪ್ರ	ಪ್ರಶ್ನಾರ್ಥಕ
ಬವ	ಬಹುವಚನ
ಮ	ಮಲಯಾಳಿ
ಮಭಾ	ಮಕ್ಕಳ ಭಾಷೆ
ವಾಪ್ರ	ವಾಕ್ಯ ಪ್ರಯೋಗ
ವಿಪ್ರ	ವಿಭಕ್ತಿ ಪ್ರತ್ಯಯ
ಸಂವಾ	ಸಂಖ್ಯಾವಾಚಕ
ಸನಾ	ಸರ್ವನಾಮ
ಸ್ತ್ರೀವಾ	ಸ್ತ್ರೀವಾಚಕ

ಅರೆಬಾಸೆ ಸಂಶೋದನೆ :

1. ವ್ಯಾಕರಣ ಮತ್ತೆ ಭಾಷಾವಿಜ್ಞಾನ

- 1970ರಲ್ಲಿ ತಮಿಳುನಾಡ್‌ನ ಅಣ್ಣಾಮಲೈ ವಿಶ್ವವಿದ್ಯಾನಿಲಯಂದ ಪ್ರಕಟ ಆದ ಪ್ರೊ. ಕೆ. ಕುಶಾಲಪ್ಪ ಗೌಡರ ಅರೆಬಾಸೆ ಬಾಸಾವಿಜ್ಞಾನ ಮತ್ತೆ ವ್ಯಾಕರಣ ಬಗ್ಗೆ ''ಗೌಡಕನ್ನಡ' (ಅರೆಭಾಷೆ–ಐಪಿಎ–ಇಂಗ್ಲಿಷ್ ಶಬ್ದಕೋಶ) ಇಂಗ್ಲಿಸ್ ಪುಸ್ತಕ ಪ್ರಕಟ ಆತ್. ಈ ಪುಸ್ತಕಲಿ ಅರೆಬಾಸೆ ಮತ್ತೆ ವ್ಯಾಕರಣಗಳ ವಿವರಣೆಗೆ ಅರೆಬಾಸೆ ಪದಕೆ ಕನ್ನಡ ಅರ್ತಗಳ ಕೊಟ್ಟೊಳೊ. ಅರೆಬಾಸೆನ ತೌಲನಿಕ ಅದ್ಯಯನ ಮಾಡುವೊಕ್ಕೆ ಇದೊಂದ್ ಆರಂಬದ ಪುಸ್ತಕ.
- 2019ರ್‌ಲಿ ಗುಲ್ಬರ್ಗಾ ವಿಶ್ವವಿದ್ಯಾನಿಲಯ ಎನ್‌ಡೇಂಜರ್ ಲಾಂಗ್ವೇಜಸ್ ವಿಬಾಗಂದ ಪ್ರೊ. ಚೆ. ರಾಮಸ್ವಾಮಿ ಅವರ 'ಎ ಗ್ರಾಮರ್ ಆಫ್ ಅರೆಬಾಸೆ' ಪುಸ್ತಕ ಪ್ರಕಟ ಮಾಡ್ದೊ. ಅಳಿವಿನ ಅಂಚ್‌ಲಿರುವ ಭಾರತದ ಬಾಸೆಗಳ್‌ಲಿ ಅರೆಬಾಸೆ ಬಗ್ಗೆ ಮಾಡ್ದ ಅದ್ಯಯನ ಪುಸ್ತಕ. ಅರೆಬಾಸೆ ಪದಗಳ ಸಂಗ್ರಹಿಸಿ ಅದ್ಯಯನಕೆ ಒಳಪಡ್‌ಸ್ಯೊಳೊ. ಪುಸ್ತಕಲಿ ಅರೆಭಾಷೆ–ಐಪಿಎ–ಇಂಗ್ಲಿಷ್ ಶಬ್ದಕೋಶ ಉಟ್ಟು.

- 2019ರ್‌ಲಿ ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಂದ ಪ್ರೊ. ಕೆ. ಕುಶಾಲಪ್ಪ ಗೌಡರ ಅರೆಬಾಸೆ (ಗೌಡ ಕನ್ನಡ) ವ್ಯಾಕರಣ ಪ್ರಕಟ ಆಗುಟು. ಅರೆಬಾಸೆಗೆ ಸದ್ಯ ಇರ್‌ವ ಸಮಗ್ರ ವ್ಯಾಕರಣ ಪುಸ್ತಕ. ಇದರ್‌ಲಿ ಕನ್ನಡ–ಅರೆಭಾಷೆ ಶಬ್ದಕೋಶನ ಅಕೇರಿ ಅರ್ದಬಾಗಲಿ ಕೊಟ್ಟೊಳೊ.

2. ಪದಕೋಶ

- 2013ರ್‌ಲಿ ಗೌಡ ಸೋಶಿಯೋ ಎಜ್ಯುಕೇಶನ್ ಟ್ರಸ್ಟ್, ಸುಳ್ಯಂದ ಕೆ.ಆರ್. ಗಂಗಾಧರ್ ಅವರ 'ಅರೆಭಾಷೆ–ಕನ್ನಡ–ಇಂಗ್ಲಿಷ್ ಶಬ್ದಕೋಶ' ಅರೆಬಾಸೆ ಗಾದೆಗ ಮತ್ತು ನುಡಿಗಟ್ಟು ಪುಸ್ತಕ ಪ್ರಕಟ ಆತ್. ಈ ಪುಸ್ತಕಲಿ ಪದ, ನುಡಿಕಟ್ಟ್, ಗಾದೆಗಳ ಸಂಗ್ರಹ ಮಾಡಿ ಪ್ರಕಟಿಸಿಯೊಳೊ.

3. ಅರೆಬಾಸೆ ಸಂಸ್ಕೃತಿ ಮತ್ತೆ ಸಾಹಿತ್ಯ ಸಂಶೋದನೆ :

- ಪುರುಷೋತ್ತಮ ಬಿಳಿಮಲೆಯವರ 1985ರ್‌ಲಿ 'ಸುಳ್ಯ ಪರಿಸರದ ಗೌಡ ಸಮುದಾಯದ ಸಾಂಸ್ಕೃತಿಕ ಅಧ್ಯಯನ' – 2019ರ್‌ಲಿ 'ವಲಸೆ, ಸಂಘರ್ಷ ಮತ್ತು ಸಮನ್ವಯ'.
- 1992ರ್‌ಲಿ ಡಾ. ವಿಶ್ವನಾಥ ಬದಿಕಾನರ 'ಗೌಡಕನ್ನಡದ ಜನಪದ ಕತೆಗಳು : ವರ್ಗ ಮತ್ತು ಆಶಯ ಸೂಚಿ'.
- 2007ರ್‌ಲಿ ಡಾ. ಪೂವಪ್ಪ ಕಣಿಯೂರರ 'ಉಳ್ಳಾಕುಲು–ಐತಿಹಾಸಿಕತೆ, ಪ್ರಾದೇಶಿಕತೆ ಮತ್ತು ಆರಾಧನೆ'.
- 2010ರ್‌ಲಿ ಡಾ. ಕೋರನ ಸರಸ್ವತಿಯವರ 'ಕೊಡಗು ಗೌಡ ಸಮುದಾಯ–ಸಾಂಸ್ಕೃತಿಕ ಅನನ್ಯತೆ'.
- 2014ರ್‌ಲಿ ಡಾ. ಎ.ಸಿ. ಶೈಲಜಾ ಅವರ 'ಕೊಡವರು ಮತ್ತು ಕೊಡಗಿನ ಗೌಡರ ಸಂಸ್ಕೃತಿ–ತೌಲನಿಕ ಅಧ್ಯಯನ'.

ಈ ಸಂಶೋದನೆಗಳ್‌ಲಿ ಕೊಡಗು ಮತ್ತೆ ದಕ್ಷಿಣಕನ್ನಡ ಜಿಲ್ಲೆನ ಅರೆಬಾಸಿಕರ ಸಂಸ್ಕೃತಿ ಮತ್ತೆ ಬಾಸೆನ ಮಾಹಿತಿಗ ದಾಕಲಾವುಟು.

ಪದಕೋಶ ಓದಿಕೆ ಮೊದ್ಲ್ :

ಪದಕೋಶದ ಶಬ್ದಾರ್ತ ತೀರ್ಮಾನ ಮಾಡ್‌ವ ಜಂಬರ್ ಕಸ್ಟ. ಒಂದ್ ಶಬ್ದಕೆ ಇದೇ ಅರ್ತತ ನಿರ್ದಾರ ಮಾಡ್‌ವ ಸಂದರ್ಬಲಿ ವಾಕ್ಯ ಮತ್ತೆ ಪದ ಪ್ರಯೋಗ ಪ್ರಯೋಜನಕೆ ಬಾತ್. ಅರೆಬಾಸೆ ಪದಕೋಶ ಮಾಡಿಕೆ ಸಾಹಿತ್ಯ ಪ್ರಕಾರದ ಪುಸ್ತಕಗ, ಜನಪದ ಸಾಹಿತ್ಯ ಪ್ರಕಾರದ ಸಂಗ್ರಹಗ ಬೇಕಸ್ಟ್ ಬಾತ್ಲೆ. ಕ್ಷೇತ್ರಕಾರ್ಯಂದ ಬಂದ ಪದಗಳ್‌ನೇ ಜೋಡ್‌ಸಿ ಅರ್ತ ಬರ್‍ದೊ.

ಅರೆಭಾಷೆ ಪದಕೋಶ ಸಂಪೂರ್ಣ ಯೂನಿಕೋಡ್‌ಲಿ ತಯಾರಾವುಟು. ಯೂನಿಕೋಡ್‌ಲಿ ತಯಾರಾವ ಪಟ್ಯಗಳ ನೇರ ಪ್ರೆಂಟ್ ಮಾಡ್‌ವ ಪ್ರಯತ್ನ ಈಗೀಗ ನಡೇತ ಉಟ್ಟು. ಕನ್ನಡ ಯೂನಿಕೋಡ್‌ಲಿ ಪದಕೋಶ ತಯಾರಿ ಮಾಡ್ದು ಇದೇ ಮೊದಲಿರ್ದು. 12 ಸ್ವರಾಕ್ಸರ, 23 ವ್ಯಂಜನಾಕ್ಸರ ಮತ್ತೆ 8 ಅವರ್ಗೀಯ ವ್ಯಂಜನಾಕ್ಸರ ಹಿಂಗ ಒಟ್ಟ್ 43 ಅಕ್ಸರಗಳ ಬಾಗ ಉಟ್ಟು. ಎಲ್ಲ ಅಕ್ಸರಗಳ ಪದ ಮುಕ್ತಾಯ ಆಗಿ ಹಞ್ಞ ಜಾಗೆ ಕೊಟ್ಟೊಳೊ. ಪದಕೋಶನ ಓದುವವುಕೆ ಮುಂದೆ ಇನ್ನಸ್ಟ್ ಪದ ಸಿಕ್ಕಿಕಾಕನ ಆಯಾ ಪದದ ಅಕೇರಿಲಿ ಬರ್‍ದಿಸಿರೆ ಮುಂದೆ ಸಂಗ್ರಹ ಮಾಡೊವುಕೆ ಪ್ರೇಜನ ಆದು.

ನಾವ್ಗೆ ಗೊಂದಲ ಬಂದಲ್ಲೆಲ್ಲ ಅಂತ ಪದಗಳ ಗುರ್ತ್‌ಸಿ ಪದ ಪ್ರಯೋಗ ಬಾಗಕ್ಕೆ ಸೇರ್‍ಸಿದೊ. ಮುಂದೆ ಅರೆಬಾಸೆಗೆ ವಿಸ್ತಾರವಾದ ಪದಕೋಶ ಮಾಡೊಕುತ ಇದ್ದರೆ, ಇಲ್ಲಿ ಸೇರದೇ ಇರ್‌ವ ಸಾವಿರಾರ್ ಪದಗಳ ಸೇರ್‌ಸಿ ಕನ್ನಡ ಸಾಹಿತ್ಯ ಪರಿಷತ್‌ನವರಂಗೆ ಒಂದ್ ಬ್ರಹತ್ ಪದಕೋಶ ಮಾಡಕ್.

ನಾವ್ ಎಡಿಟ್ ಮಾಡ್‌ಕಾಕನ ಕಡಿಮೆ ಸಮೆಲಿ ಪದಕೋಶ ಬೇಗ ತಯಾರಾಕುತ ನಾವ್ಗೆ ಒತ್ತಡನೂ ಇತ್. ಅಕಾಡೆಮಿ ಅಧ್ಯಕ್ಷರ್ ಲಕ್ಷ್ಮೀನಾರಾಯಣ ಕಜೆಗದ್ದೆವು ದಿನಕೊಮ್ಮೆ ಪದಕೋಶ ತಯಾರಿ ಬಗ್ಗೆ ವಿಚಾರಿಸ್‌ತಿದ್ದೊ. ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯ ಸೀಮಿತ ಅವದಿಲಿ ಮಾಡ್ದ ಈ ಪದಕೋಶಂದ ಮೂರ್‌ಪಟ್ಟ್ ಜಾಸ್ತಿ ಪದಗ ಕ್ಷೇತ್ರಲಿ ಇರ್‌ವೊ. ಮುಂದೆ ಅರೆಬಾಸೆ ಮಾತಾಡ್‌ವ ಸಮುದಾಯದವು ಸರ್ಕಾರಂದ ಸಹಾಯ ಪಡ್ಕಂಡ್ ಈ ಕೆಲ್ಸನ ಮುಂದರ್ಸಿರೆ ಲಾಯ್ಕ್.

ಅರೆಬಾಸೆ ಪದಕೋಶ ತಯಾರ್ಸ್‌ದ ಕ್ರಮಗ :

1. ಕೊಡಗು, ದಕ್ಷಿಣಕನ್ನಡ ಮತ್ತೆ ಕಾಸರಗೋಡು ಜಿಲ್ಲೆಗಳ್‌ಲಿ ಮಾತಾಡ್‌ವ ಅರೆಬಾಸೆಲಿ ಪ್ರಾದೇಶಿಕ ಬಾಸೆನ ಪದಗಳ ಕೊಡುಕೊಳುಗೆ ಆಗುಟು. ನೂರಾರ್ ಪ್ರಾಚೀನ ಪದಗ ಅರೆಬಾಸೆಲಿ ಉಟ್ಟು. ಅದರ ಒಂದ್ ಪ್ರತ್ಯೇಕ ಅದ್ಯಯನ ಮಾಡಿ ಪುಸ್ತಕ ಮಾಡಕ್. ಉದಾರ್ಣೆಗೆ,

- ಐಮರ – ಕೈಸಾಲೆ, ಚಾವಡಿ, ಜಗಲಿಯ ಎತ್ತರದ ಮರದ ಆಸನ.
- ಕೋವಿ (ಕನ್ನಡ) – ಕೇಪುಬೆಡಿ (ಅರೆಬಾಸೆ), ಕೇಪುಕೋವಿ (ಅರೆಬಾಸೆ).
- ತೋಡು (ಕನ್ನಡ) – ಚೋಡಿ (ಅರೆಬಾಸೆ); ನದಿ (ಕನ್ನಡ) – ಹಳ್ಳ, ಹೊಳೆ (ಅರೆಬಾಸೆ).
- ಹೆದರಿಕ (ಕನ್ನಡ) – ಕೊಡಗ್ ಅರೆಬಾಸೆಲಿ ಹೊದ್ರಿಕೆ – ಸುಳ್ಯ ಅರೆಬಾಸೆಲಿ ಹೆದ್ರಿಕೆ.
- ಒಣಗು (ಕನ್ನಡ) ಪದ ಒಳ್‌ಂಗ್ (ಅರೆಬಾಸೆ), ಉಳ್‌ಂಗ್ (ತುಳು).
- ಚರ್ಚು (ಮಗುವನ್ನು ಕಂಕುಳಲ್ಲಿ ಎತ್ತಿಕೊಳ್ಳು) ತೆತ್ತ್ (ಅರೆಬಾಸೆ), ತಟ್ಪ್/ತರ್ಕ್ (ತುಳು).
- ತುರಿಸು/ತಿಕ್ಕು (ಕನ್ನಡ) – ತೊರ್ಸ್, ತರ್ಸ್ (ಅರೆಬಾಸೆ).
- ಕನ್ನಡದ 'ಸ್ವಲ್ಪ' ಅರೆಬಾಸೆಲಿ ಹಙ್ಞ, ಹನೀಯ, ಹನೀಸ್, ಹನ್ಸ್, ಹೊಸಿ, ಹೊಸಿಯ.
- ಹೌದಂತೆ (ಕನ್ನಡ) – ಹೌದ್‌ಗಡ (ಅರೆಬಾಸೆ).

2. ಕನ್ನಡ ಪಿರಿಗಂಟ್‌ಲಿ ಇರ್‌ವ ಆದರೆ ಅರೆಬಾಸೆ ಪ್ರದೇಸಲಿ ಮಾತಾಡ್‌ವ ಹಲವಾರ್ ಪದಗಳ ಈ ಪದಕೋಶಲಿ ಕಾಣಕ್. ಉದಾರ್ಣೆಗೆ, ಅ) ಕನ್ನಡದ ಒಂಟಿ ಅರೆಬಾಸೆಲೂ ಒಂಟಿ. (ಪೂರ್ವಪದ) ಒಂಟಿ+ (ಉತ್ತರಪದ) ಇಂಗ – 'ಒಂಟಿಂಗ'. ಆ) ಒಂಟಿಗ (ಅರೆಬಾಸೆ) – ಕಾಡಿನ ಗಂಡು ಹಂದಿ, ಇ) ಒಂಟಿಣ (ಅರೆಬಾಸೆ) – ಒಂಟಿ ಸಲಗ, ಒಬ್ಬನೇ ಇರುವವ.

3. ಅರೆಬಾಸೆ ಪ್ರದೇಸಲಿ ಕನ್ನಡದಂಗೆ ಬಳಕೆ ಆವ ಗ್ರಾಮ್ಯ ರೂಪಗಳ ಪದಕೋಶಲಿ ಬಳಸಿಕೊಂಡೊ.
ಉದಾರ್ಣೆಗೆ, ಕನ್ನಡದ ಕೋಟೆ ಅರೆಬಾಸೆಲಿ ಕ್ವಾಟೆ, ಅಂಕುಡೊಂಕು (ಕನ್ನಡ) – ಅಂಕ್‌ಡೊಂಕ್ (ಅರೆಬಾಸೆ), ಅಕ್ಷರ (ಕನ್ನಡ) – ಅಕ್ಸರ (ಅರೆಬಾಸೆ), ಮೇಲ್ಮುಕ/ಅಂಗಾತನೆ (ಕನ್ನಡ) – ಅಂಗತನೆ (ಅರೆಬಾಸೆ).

4. ಒಂದು ಪದಕ್ಕೆ ಅರ್ತಗಳ ಸೂಚಿಸಿಕನ ನಾಮವಾಚಕ, ಕ್ರಿಯಾವಾಚಕ, ಗುಣವಾಚಕ, ಸರ್ವನಾಮ, ಅವ್ಯಯ, ಪ್ರತ್ಯಯ, ಎರವಲು ಪದ ಹಿಂಗೆ ಪ್ರತಿಯೊಂದು ಪದಕೂ ವ್ಯಾಕರಣ ವಿಸೇಸ ಸೂಚಿನ ಅನುಕ್ರಮವಾಗಿ ಅನುಸರಿಸಿಯೊಳೊ.

5. ಅರೆಬಾಸೆಲಿ ಕ್ರಿಯಾವಾಚಕಗಳ ಬಳಕೆ ಜಾಸ್ತಿ. ಪ್ರತಿಯೊಂದ್ ಕ್ರಿಯಾಪದಕೂ ತುಂಬ ಅರ್ತ ಬಾವಂತ ಪದಗಳ ಸಂಗ್ರಹನೂ ಉಟ್ಟು. ಉದಾರ್ಣೆಗೆ, 'ಕಳ್ಸ್'–ಕಳುಹಿಸು ಕ್ರಿಯಾಪದ : ಕಳ್ಸಕ್ಕ್ – ಕಳಿಸಬಹುದು; ಕಳ್ಸಿಕೊಟ್ಟವೆ – ಕಳುಹಿಸಿ ಕೊಡುತ್ತೇವೆ; ಕಳ್ಸಿಕೆ – ಕಳುಹಿಸುವುದಕ್ಕೆ; ಕಳ್ಸುದೊ – ಕಳುಹಿಸಬಹುದಾ?; ಕಳ್ಸುದ್ – ಕಳುಹಿಸುವುದು; ಕಳ್ಸುವ – ಕಳುಹಿಸುವ; ಕಳ್ಸುವೆ – ಕಳುಹಿಸುತ್ತೇವೆ; ಕಳ್ಸೊಕು – ಕಳುಹಿಸಬೇಕು; ಕಳ್ಸೊಕುಂತ – ಕಳುಹಿಸಬೇಕೆಂದು.

6. ಅರೆಬಾಸೆಲಿ ಙ, ಞ, ಳ ಅಕ್ಸರಂದ ಸುರು ಆವ ಪದಗ ಇಲ್ಲೆ. ಈ ಅಕ್ಸರಗಳ ಪದ ಬಳಕೆ ಅರೆಬಾಸೆಲಿ ಪದನಡು, ಪದ ಅಕೇರಿಲಿ ಸಾಕಸ್ಟ್ ಸಿಕ್ಕಿವೆ.

7. ಪದಕೋಶಲಿ ಬಳ್ಸಿದ ವಿರಾಮ ಚಿಹ್ನೆಗ –

- ಪ್ರತಿ ಮುಕ್ಯಪದಕೆ ವ್ಯಾಕರಣ ವಿಸೇಸನ ಗುರ್ತಿಸಿ ಆ ಸಂಕೇತಾಕ್ಸರದ ಮುಂದೆ ' . ' ವಿರಾಮ ಚಿಹ್ನೆ. ಬೆಳ್‌ಂದ್ರ್‌ಮರ ನಾ. ನಂದಿಮರ, ಕೊಕ್ಕೆ ಕ್ರಿ. ಅಡ್ಡಿ, ಆಕ್ಷೇಪಣೆ
- ಮುಕ್ಯ ಪದಕೆ ಒಂದಕ್ಕಿಂತ ಹೆಚ್ಚ್ ಕನ್ನಡ ಮತ್ತೆ ಇಂಗ್ಲಿಸ್ ಅರ್ತಗ ಬಾಕನ 1. 2. 3. . . ಮತ್ತೆ ಪದಗಳ ಮುಕ್ತಾಯದ ಕೊನೆಲಿ ವಿರಾಮ ಚಿಹ್ನೆ. 1. ಗೊತ್ತುಗುರಿ ಇಲ್ಲದ, 2. ನಿಯತ್ತು ಇಲ್ಲದ, 3. ಶಿಸ್ತುಬದ್ಧವಲ್ಲದ. 1. aimless, 2. immoral, 3. Indisciplined.

- ವಾಕ್ಯ ಪ್ರಯೋಗದ ಕೊನೆಲಿ ವಿರಾಮ ಚಿಹ್ನೆ. ವಾ: ಬೇಟಿಗಂಬ ಕಳದ ನಡುಲಿ ಇದ್ದದೆ.
- ಪದಪ್ರಯೋಗದ ಕೊನೆಲಿ ವಿರಾಮ ಚಿಹ್ನೆ. ಪ: ಬೇಜಾರ್‌ಲಿ–ಬೇಸರದಲ್ಲಿ; ಬೇಜಾರಾತ್–ಬೇಸರವಾಯಿತು.

8. ಪದಕೋಶಲಿ ಬಳ್ಸಿದ ತುಂಡರಿಸಿ ಪ್ರತ್ಯೇಕಿಸ್ವ [ಸ್ಲ್ಯಾಶ್(slashes)] ' / ' ಚಿಹ್ನೆಗ – ಅರೆಬಾಸೆ ಪದಗಳ ಬೇರೆ ಬಾಸೆವು ಓದಿಕೆತ ಐಪಿಎ–ರೋಮನ್ ಲಿಪಿ ಬಳ್ಸಿಯೊಳೊ. ಉದಾರ್‌ಣೆಗೆ, ಕಾಡ್‌ಕಾಪಿ / ka:ḍɨka:pi /, ಬೆರ್ಕ್‌ಮೀನ್ / bɛrkɛmi:nɨ /.
9. ಮುಕ್ಯ ಪದಕೆ ವಾಕ್ಯ ಪ್ರಯೋಗ ಮಾಡ್‌ಕನ ಮತ್ತೆ ಪದ ಪ್ರಯೋಗ ಮಾಡ್‌ಕನ ಬಳ್ಸ್‌ದ ' : ' ವಿವರಣ ವಿರಾಮ ಮತ್ತೆ ಅರ್ದವಿರಾಮ ' ; ' ಚಿಹ್ನೆಗ. ಉದಾರ್‌ಣೆಗೆ, ವಾ : ಬೆಳೆ ಬಡಿಯದು ಕೆಲ್ಸ ಮಾಡ್ದದ್ವಕ್ಕೆ ಗೊತ್ತು. ಪ : ಬೆಳ್ಯೊದು–ಬೆಳೆಸುವುದು; ಬೆಳ್ಸಕಾಯಿತ್–ಬೆಳೆಸಬೇಕಾಗಿತ್ತು.

10. ಮುಖ್ಯಪದಕೆ ವಾಕ್ಯ ಪ್ರಯೋಗ ಮಾಡ್‌ಕನ ಬಳ್ಸ್‌ವ ಅಲ್ಪವಿರಾಮ ' , ' ಚಿಹ್ನೆಗ. ಉದಾರ್‌ಣೆಗೆ, ಬೇಟಿ / be:ṭi / ನಾ. 1. ಭತ್ತ ಬಡಿಯುವ ಕಂಬ, 2. ಒಕ್ಕಲು ಕಣದ ಮಧ್ಯದಲ್ಲಿ ಇರಿಸಿರುವ ಮರದ ಕಂಬ, 3. ಮೇಟಿ. ವಾ: ಬೆಳೆ ಬಡಿಯದು ಕೆಲ್ಸ ಮಾಡ್ದದ್ವಕ್ಕೆ ಗೊತ್ತು. ಪ : ಬೆಳ್ಯೊದು–ಬೆಳೆಸುವುದು; ಬೆಳ್ಸಕಾಯಿತ್–ಬೆಳೆಸಬೇಕಾಗಿತ್ತು.
11. ಕನ್ನಡ ಮತ್ತೆ ಬೇರೆ ದ್ರಾವಿಡ ನುಡಿಗಳ್‌ಲಿ ಕೊಳ್ಳು ಪ್ರತ್ಯಯಕ್ಕೆ ಕಂಬುದು, ಕೊಂಬೊದು ಪ್ರಯೋಗ ಉಟ್ಟು. ಈ ಪ್ರತ್ಯಯ ಕ್ರಿಯಾದಾತುಗೆ ಸಾರ್‌ದೆ. ಅರೆಬಾಸೆಲೂ ಹಿಂಗೆ ಸೇರಿಕೊಂಬ ಪ್ರತ್ಯಯಗ ಒಳೊ. ಉದಾರ್‌ಣೆಗೆ, ನಾಚಿಕೊಳ್ಳು–ನಾಚಿಕಂಬೊದು, ನಾಚಿಕೊಂಬೊದು; ಕುಳಿತುಕೊಳ್ಳು–ಕುದ್ದ್‌ಕಂಬುದು, ಕುದ್ದ್‌ಕೊಂಬೊದು; ಕಾಣಿಸಿಕೊಳ್ಳು – ಕಾಂಬಕನ.

12. ಅರೆಬಾಸೆಲಿ ಕೆಲವು ವಿಸೇಸ ವಿಬಕ್ತಿ ಪ್ರತ್ಯಯಗ ಉಟ್ಟು :

- ಕನ್ನಡದ 'ಬೇಕು' – ಅರೆಬಾಸೆಲಿ 'ಒಕು' ಆದೆ. 'ಬೇಡ' – 'ಬಡ'. ಉದಾರ್‌ಣೆಗೆ, ಬರಬೇಕು–ಬರೊಕು, ಬರಬೇಡ–ಬರ್ಬಡ
- ಕನ್ನಡದ 'ಅಂತೆ' – 'ಗಡ' ಆದೆ. ಉದಾರ್‌ಣೆಗೆ, ಏನಂತೆ–ಏನ್‌ಗಡ, ಹೌದಂತೆ–ಹೌದ್‌ಗಡ, ಹೋದಂತೆ–ಹೋತ್‌ಗಡ, ಬಂದಂತೆ–ಬಾತ್‌ಗಡ, ಇದ್ದಂತೆ–ಇತ್ತ್‌ಗಡ ಇತ್ಯಾದಿ. 'ಗಡ' ಪದನ ಕಾಸರಗೋಡ್‌ನ ಬಂದಡ್ಕ, ಮಡಿಕೇರಿನ ಭಾಗಮಂಡಲ ಪರಿಸರಲಿ ಹೆಚ್ಚಿ ಬಳ್ಸ್‌ವೆ.
- ಕನ್ನಡದ 'ಆನೆ' ಪುಲ್ಲಿಂಗ ಪ್ರತ್ಯಯ 'ಅತ್' ಆದೆ. ಇದ್ ಅರೆಬಾಸೆನ ವಿಸೇಸ ಪ್ರತ್ಯಯ. ಉದಾರ್‌ಣೆಗೆ, ಬಿದ್ದಿದ್ದಾನೆ–ಬಿದ್ದತ್, ಕೂತಿದ್ದಾನೆ–ಕುದ್ದತ್, ನಿಂತಿದ್ದಾನೆ–ನಿಂತತ್
- ಕನ್ನಡಲಿ ನಾಮಪದಕೆ 'ಇಗ' ಪ್ರತ್ಯಯ ಸೇರಿಕನ ಹಾವಾಡಿಗ, ಕಲ್ಲುಕುಟಿಗ, ಕನ್ನಡಿಗತ ಆದೆ. 'ಇಗ' ತೇಳುವ ಪ್ರತ್ಯಯ ಅರೆಬಾಸೆಲಿ ಪ್ರಾದೇಶಿಕ ರೂಪ ಪಡ್ಕಂಡ್ 'ಈಯ' (ಏಕವಚನ), 'ಈರಾ' (ಬಹುವಚನ) ಪ್ರತ್ಯಯಗ 'ಇಗ' ಆದೆ. ಉದಾರ್‌ಣೆಗೆ, ಏಕವಚನ – ಬರುತ್ತೀಯ–ಬಂದಿಗ, ನಿಲ್ಲುತ್ತೀಯ–ನಿಂತಿಗ, ಹೊಗುತ್ತೀಯ–ಹೋದಿಗ; ಬಹುವಚನ – ಬರುತ್ತೀರ–ಬಂದಿಗ, ಹೋಗುತ್ತೀರ–ಹೋದಿಗ ಆದೆ.

13. ಅರೆಬಾಸೆನ ಲಿಂಗ ಪ್ರಬೇದಗ ಕನ್ನಡಕಿಂತ ಬಿನ್ನ. ಅರೆಬಾಸೆನ ಸರ್ವನಾಮ, ಲಿಂಗ ಮತ್ತೆ ವಚನ ವಿಸೇಸಾಗಿ ಉಟ್ಟು.

- ಕನ್ನಡದ ಪುಲ್ಲಿಂಗ ಏವ ಅವನು – 'ಅಂವ', ಬವ ಅವರು – ಅವ್ರ್ ಆದೆ. ಉದಾ: ಅವನು ಹುಡುಗ – ಅಂವ ಹೈದ, ಅವರು ತಾತ – ಅವ್ರ್ ತಾತ.
- ಕನ್ನಡದ ಸ್ತ್ರೀಲಿಂಗ ಏವ ಅವಳು – ಅದ್, ಬವ ಅವರು – ಅವ್ರ್ ಆದೆ. ಉದಾ: ಅವಳು ಹುಡುಗಿ – ಅದ್ ಗೂಡೆ, ಅವರು ಅಜ್ಜಿ – ಅವ್ರ್ ಅವ್ವ.

- ಕನ್ನಡದ ನಪುಂಸಕಲಿಂಗ ಏವ ಅದು – ಅದ್, ಬವ ಅವು – ಅವ್ ಆದೆ. ಅದು ನಾಯಿ – ಅದ್ ನಾಯಿ, ಅವು ನಾಯಿಗಳು – ಅವ್ ನಾಯಿಗ.
- ಕನ್ನಡದ ಏಕವಚನ ಮದ್ಯಮ ಮತ್ತೆ ಉತ್ತಮ ಪುರುಷ ಸರ್ವನಾಮ : ನೀನು – ನೀ. ನಾನು – ನಾ. ನೀನು ಬಾ – ನೀ ಬಾಯ (ಹೆಣ್ಣ್‌ನೊಟ್ಟ್‌ಗೆ ಸಲ್‌ಗೆಂದ ಹೇಳ್‌ವ ಮಾತ್); ಬಹುವಚನ ನೀವ್–ನೀವು.
- ಕನ್ನಡದ ಏಕವಚನ ನಾನು ಹೋಗುತೇನೆ – ನಾ ಹೋನೆ; ಬಹುವಚನ ನಾವ್–ನಾವು.

14. ಕನ್ನಡದ 'ಗಳ್', 'ಗಳು' ಬಹುವಚನ ರೂಪ ಪ್ರತ್ಯಯಗ ಅರೆಬಾಸೆಲಿ ನಾಮಪದದ ಜೊತೆಗೆ 'ಗ' ದೊನಿಯಾಗಿ ಬಳಕೆಯಾಗುಟು. ಉದಾರ್‌ಣೆಗೆ, ಜೆನರ್–ಜೆನಗ, ಮನೆಗಳು–ಮನೆಗ, ಮರಗಳು–ಮರಗ, ಹಕ್ಕಿಗಳು–ಹಕ್ಕಿಗ, ಮೀನುಗಳು–ಮೀನ್‌ಗ ಇತ್ಯಾದಿ.

15. ಅರೆಬಾಸೆಲಿ ಕಾಲವಾಚಿ ಪ್ರತ್ಯಯ ಬಳಕೆ ಉಟ್ಟು:

- ಭೂತಕಾಲ 'ದ' ಪ್ರತ್ಯಯ 'ತ್'/ 'ಡ್ತ್' ಪ್ರತ್ಯಯ ಆದೆ. ಉದಾರ್‌ಣೆಗೆ, ಹೋದ–ಹೋತ್, ಬಂದ–ಬಾತ್, ನೋಡಿದ–ನೋಡ್ತ್, ಮಾಡಿದ–ಮಾಡ್ತ್, ಹಿಡಿದ–ಹಿಡ್ತ್ ಇತ್ಯಾದಿ.
- ವರ್ತಮಾನ ಕಾಲ 'ದಪ'/ಆನೆ ಪ್ರತ್ಯಯ 'ಉಟ್ಟು' ಆದೆ. ಉದಾರ್‌ಣೆಗೆ, ನೋಡಿದಪ/ನೋಡಿದ್ದಾನೆ – ನೋಡುಟ್ಟು, ಇಂದಪ/ತಿಂದನು–ತೀನ್ತ್ ಇತ್ಯಾದಿ.
- ಬವುಸತ್‌ಕಾಲದ 'ವ' ಪ್ರತ್ಯಯ 'ಡ್ದು' ಆದೆ. ನೋಡುವ–ನೋಡ್ದು, ಮಾಡುವ–ಮಾಡ್ದು, ಇಡುವ–ಇಡ್ದು/ಇಸುದು ಇತ್ಯಾದಿ.

16. ಅರೆಬಾಸೆ ಕಾಲವಾಚಿಗ ಬೂತಕಾಲ 'ಬಂದೆ', ವರ್ತಮಾನಕಾಲ 'ಬನ್ನೆ', ಬವುಸತ್ ಕಾಲ 'ಬಾಂವೆ' ಆದೆ. ಉದಾಹರ್‌ಣೆಗೆ, 'ನಿನ್ನೆ ಬಂದೆ' – ನಿನ್ನೆ ಬಂದಿದ್ದೆ, 'ಇಂದ್ ಬನ್ನೆ' – ಇವತ್ತು ಬರುತ್ತೇನೆ, 'ನಾಳೆ ಬಾಂವೆ' –ನಾಳೆ ಬರುವೆನು ಇತ್ಯಾದಿ.

17. ಕನ್ನಡದ ಅಂತ/ಎಂತ, ಅಂತಹ/ಎಂತಹ ಅವ್ಯಯ ಪದ ಮದ್ಯೆ ಬಾವ ಸ್ವರಬಿಂದು 'ಅಂ' ಅರೆಬಾಸೆಲಿ ಲೋಪ ಆದೆ. ಕನ್ನಡದ ಬರುತ್ತೇನೆಂದು ಅರೆಬಾಸೆಲಿ ಬನ್ನೆಂತ>ಬನ್ನೆತ, ಹೋಗುತ್ತೇನೆಂದು–ಹೋನೆಂತ>ಹೋನೆತ. ಒಟ್ಟ್‌ಗೆ, ಕನ್ನಡ ಕ್ರಿಯಾರೂಪ ಅರೆಬಾಸೆಲಿ ಅವ್ಯಯ ಆಗಿ ಪರಿವರ್ತನೆ ಆದೆ. ಹೇಳು, ಹೇಳುವುದು, ಹೇಳುತ್ತಾರೆ, ಹೇಳಿದರೆ ಕ್ರಿಯಾಪದಗ ಅರೆಬಾಸೆಲಿ ತೇಳ್, ತೇಳ್‌ದು, ತೇಳ್ವೆ, ತೇಳಿರೆ ಅವ್ಯಯ ಪದ ಬಳಕೆ ಆದೆ. ತೊಪ್ಪು ಮಾಡಿ ಇಲ್ಲೆತೇಳುದು ಅಬ್ಬೆಸ(ತಪ್ಪು ಮಾಡಿ ಇಲ್ಲವೆಂದು ಹೇಳುವುದು ಅಬ್ಯಾಸ). ಇಲ್ಲವೆಂದು ಹೇಳುವುದು–ಇಲ್ಲೆತೇಳುದು. ಇಲ್ಲೆ ತ ತೇಳುದು – 'ತ' ಲೋಪ ಆದೆ. ಬನ್ನೆತೇಳುದು, ಹೋನೆತೇಳುದು ಇತ್ಯಾದಿ.

18. ಅರೆಬಾಸೆ ಮಾತಾಡೊವು ಮಕ್ಕಳೊಟ್ಟ್‌ಗೆ ಮಾತಾಡ್‌ವ ಮಕ್ಕಳಬಾಸೆ ಪದಗ ಒಳೊ. ಉದಾರ್‌ಣೆಗೆ, ಅಪ್ಪಿ–ರೊಟ್ಟಿ ಆಬೂ–ನೀರು, ಕುಮ್ಮ–ಹೊಟ್ಟೆ, ಕೂಚ–ಕುಳಿತುಕೋ, ಚಾಚಿ–ಮಲಗು, ಚಾಂಪ>ಚಾಮಿಯಪ್ಪ – ತಾತ, ಜೂಜಿ – ನಿದ್ರೆ, ಬೋಬು–ಮೊಲೆಹಾಲು, ಮೀಯ – ಬೆಕ್ಕು, ಮಿಮ್ಮಿ– ಮೀನು, ಹಾವಿ – ಹುಳ.

19. ಅರೆಬಾಸೆಲಿ ವೈವಿದ್ಯಮಯ ಬೈಗುಳ ಪದಗ ಉಟ್ಟು, ಉದಾರ್‌ಣೆಗೆ, ತಕ್ಕಡ್ಜಿ – ಬಜಾರಿ, ಮೂರ್ ಕಾಸಿನಂವ–ಮರ್ಯಾದಿ ಇಲ್ಲದವ, ಮೊಣ್ಣ್‌ವಾಸನೆ – ಸಾವು ಸಮೀಪಿಸು, ಬುರ್ನಾಸ್–ಕತ್ತೆಗೆ ಹುಟ್ಟಿದವ, ಸಂತಾನ ಅಡ್ಸಿ ಹೋಕೆ – ನಿರ್‌ವಂಶವಾಗಲಿ, ಹಡ್ಬೆ – ದಿಕ್ಕು ದೆಸೆ ಇಲ್ಲದವ, ಹಲ್ಕ ಸೂಳೆಮಜ್ಜ – ನೀಚನಿಗೆ ಹುಟ್ಟಿದವನು.

20. ಅರೆಬಾಸೆಲಿ ನೂರಾರ್ ಎರವಲು ಪದಗ ಉಟ್ಟು. ಇಂತ ಪದಗ ಪದಕೋಶಕೆ ಬೇಕಾತ ಚರ್ಚೆನೂ ಆತ್. ದಿನನಿತ್ಯದ ಬಳಕೆಲಿ ಎರವಲು ಪದಗ ಇರ್‌ಕನ ಅದರ ಹಾಂಗೆ ಸಂಗ್ರಹ ಮಾಡಿ ಬಳಕೆ ಮಾಡ್ಯೊ ಉದಾರ್‌ಣೆಗೆ. ಟೇಸನ್ – ಪೋಲೀಸು ಠಾಣೆ, ದರ್ಕಾಸ್ – ಸರ್ಕಾರಿ ಭೂಮಿಯನ್ನು ಒತ್ತುವರಿ ಮಾಡಿಕೊಂಡು ಕೃಷಿ ಮಾಡಿದ ಭೂಮಿ, ಬರ್ಬಾತ್ – ಸರ್ವನಾಶ, ಬರ್ಕತ್ – ಉದ್ಧಾರ, ಮೇಜ – ಮೇಜು, ಮುಲಾಜಿ – ದಾಕ್ಷಿಣ್ಯ, ಮೀಟಿಂಗ್ – ಸಭೆ, ಮಿಸಾನ್ – ಮೆಶಿನ್.

ಕೃತಜ್ಞತೆಗ

ಅರೆಬಾಸೆ ಪದಕೋಶ ಕಾರ್ಯರೂಪಕ್ಕೆ ಬಾಕೆ ಹಲವ್ ಮಹನೀಯರ್ ಕೆಲ್ಸ ಮಾಡ್ಯೊಳೊ. ಪದಕೋಶ ತಯಾರ್ ಮಾಡೊಕುತ ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿನ ನಾಲ್ಕನೇ ಅವದಿ ಅಧ್ಯಕ್ಷರ್ ಲಕ್ಷ್ಮೀನಾರಾಯಣ ಕಜೆಗದ್ದೆವು ಪ್ರಸ್ತಾಪಿಸಿದೊ. ಸರ್ವ ಸದಸ್ಯರ್ ಇದು ಆಕುತ ಒಪ್ಪಿದೊ. ರಿಜಿಸ್ಟ್ರಾರ್ ಚೆನ್ನಸ್ವಾಮಿ ಮತ್ತೆ ಅರ್ತ ಸದಸ್ಯರ್ ದರ್ಶನ ಕೆ.ಟಿ. ಅವೂ ಒಪ್ಪಿದೊ. ಬಾಸೆ ಬಗ್ಗೆ ಅದ್ಯಯನ ಮಾಡ್ದ ಹಲವರ್ ವಿದ್ವಾಂಸರ್ ಕೊಟ್ಟ ಸಲಹ, ಸೂಚನೆ, ಮಾರ್ಗದರ್ಶನ ತಕಂಡ್ ಕಾರ್ಯಪ್ರವೃತ್ತರಾದೊ.

'ಗಾದೆಗ, ನುಡಿಗಟ್ಟುಗ, ಒಡ್ಪೊಕತೆಗೆ ಅರೆಬಾಸೆ ವಾಕ್ಯ ಮತ್ತೆ ಪದ ಪ್ರಯೋಗ, ಅನ್ಯಬಾಸೆನ ಪದಗ ಇರ್‌ವ ವಿಚಾರಗ ಮನೋಜ್ಞವಾಗುಟು. ಅರೆಬಾಸೆ ಸಂಸ್ಕೃತಿ ಬಗ್ಗೆ ಇದರ ಬಳಸಿ ಸಂಶೋದನೆ ಮಾಡೊವುಕೆ, ಚೊಕ್ಕ ಲೇಕನ ಬರೆಯೊವುಕೆ ಬೇಕಾದ ಸಾಮಾಗ್ರಿ ಇದರ್‌ಲಿ ಉಟ್ಟು'ತ ಹೇಳಿ ಪ್ರೊ. ಕೋಡಿ ಕುಶಾಲಪ್ಪ ಗೌಡ್ರ್ ಈ ಪುಸ್ತಕಕ್ಕೆ ಒಳ್ಳೊ ಮುನ್ನುಡಿ ಬರ್ದ್‌ದೊಳೊ.

ಡಿಕ್ಷನರಿ ಸಂಕಲನ, ಭಾಷಾ ತಾಂತ್ರಿಕ ಸಲಹೆ ಮತ್ತೆ ಆನ್ ಲೈನ್‌ಲಿ ಮಾಹಿತಿ ಕೊಟ್ಟ್ ಪ್ರತಿಯೊಂದ್ ಹಂತದ ಕೆಲ್ಸಕೂ ಮಾರ್ಗದರ್ಶನ ಮಾಡ್ದವು ಪ್ರೊ. ಜೆ. ರಾಮಸ್ವಾಮಿ.

ಕೋವಿಡ್–19 ತೇಳ್‌ವ ಕೊರೋನಾ ಮಹಾಮಾರಿ ಎದ್‌ರ ನಾವ್ಗೆ ಎಲ್ಲೂ ಹೋಕೆ ಆಗದ ಪರಿಸ್ತಿತಿ ಬಂದಿತ್. ಆಗ ಆನ್‌ಲೈನ್ ಡಿಕ್ಷನರಿ ಮಾಡಿತ ಸಲಹೆ ಕೊಟ್ಟ್ 'ಅರೆಭಾಷಿಕರ್ ಈ ಪದಕೋಶದ ನೆರವ್‌ಂದ ತಮ್ಮ ಆಡುಬಾಸೆನ ಇನ್ನಸ್ಟ್ ಸಮೃದವಾಗಿ ಬಳ್ಸಿಕೆ ಸಾದ್ಯ' ತೇಳ್ದವು ಪ್ರೊ. ಬಿ.ಎ. ವಿವೇಕ ರೈ.

'ಹಳೆ ಕಾಲದ ಪದಗಳ ಬಳ್ಸಿ ಅದರ ಉಳ್ಸ್‌ವ ಪ್ರಯತ್ನ'ತ ಹೇಳ್ದವು ಪ್ರೊ. ಕೆ. ಚಿನ್ನಪ್ಪ ಗೌಡ್ರ್.

ಸಣ್ಣಬಾಸೆಲಿ ಇಂತ ಕೆಲ್ಸ ಆತ್ಲೆ, ನಮ್ಮ ದೇಸಲಿ ಸಣ್ಣ ಬಾಸೆಗ ತುಂಬ ತೊಂದರೆಲಿರಿಕನ ಅರೆಬಾಸೆಗೊಂದು ಪದಕೋಶ ತಯಾರಾಗುಟು ತೇಳುವ ವಿಸಯಕೆ ಬಾರೀ ಮಹತ್ವ ಉಟ್ಟು. ಈ ಪದಕೋಶ ಕೆಲ್ಸ ಮುಂದೆ ಅರೆಬಾಸೆನ ಶಕ್ತಿನ ಹೆಚ್ಚಿಸಿದೆ'ತೇಳ್ದವು ಪ್ರೊ. ಪುರುಷೋತ್ತಮ ಬಿಳಿಮಲೆ.

'ಅರೆಬಾಸೆ ಪದಕೋಶ' ತುಂಬ ಕಮ್ಮಿ ಸಮಯಲಿ ತಯಾರಾವುಟು. ಅರೆಬಾಸೆಗೆ ಇದೊಂದು ಐತಿಹಾಸಿಕ ಮಹತ್ತ್ವ ಇರ್‌ವ ಪದಕೋಶತ ಹೇಳ್ದವು ಡಾ ಪದ್ಮನಾಭ ಕೇಕುಣ್ಣಾಯ.

'ತಮ್ಮ ಬಾಸೆ ಮತ್ತೆ ಸಂಸ್ಕೃತಿ ಬಗೆಗೆ ಅಭಿಮಾನ, ಪ್ರೀತಿ ಇರೊವು ಮಾತ್ರ ಕೈಗೊಳ್ಳುವ ಅಪರೂಪದ ಕೆಲಸ'ತೇಳ್ದವು ಡಾ. ಹಾ.ತಿ. ಕೃಷ್ಣೇಗೌಡ್ರು – ಹಿಂಗೆ ಇವೆಲ್ಲವೂ ಅರೆಬಾಸೆ ಪದಕೋಶದ ಬಗ್ಗೆ ರಚನಾತ್ಮಕ ಸಲಹೆಗಳ ಕೊಟ್ಟೊಳೊ.

ಅರೆಬಾಸೆ ಪದಕೋಶ ಮುಗಿವವರೆಗೆ ಪಟ್ಟ್‌ಹಿಡ್ದ್ ಸಂಪೊದನೆ ಕೆಲ್ಸ ಮಾಡ್ದವು ಐದ್ ಜೆನ.

ನೇರವಾಗಿ ಸಂಪೋದನೆ ಮಾಡದಿದ್ದರೂ ಮಾಡ್ದ ಕೆಲ್ಸನ ಓದಿ ಅಬಿಪ್ರಾಯ ಕೊಟ್ಟವು, ಸಂಪೊದನೆ ಮಾಡೊವು ಬೇರೆಬೇರೆ ಕೆಲಸಗಳ ಒತ್ತಡಲಿ ಒಳೊತ ಗೊತ್ತಿದ್ದೂ ಆಗಾಗ ಕೆಲ್ಸದ ಹಂತಗಳ ನೆಂಪು ಮಾಡ್‌ತಿದ್ದೊವು ಮತ್ತೆ ಸಂಪೂರ್ಣ ಸಂಗಟನೆ ಮಾಡ್‌ದವು ಅಕಾಡೆಮಿ ಅಧ್ಯಕ್ಷರಾದ ಲಕ್ಷ್ಮೀನಾರಾಯಣ ಕಜೆಗದ್ದೆಯವು.

ವಿದ್ವಾಂಸರೊಂದಿಗೆ ಮಾತುಕತೆ, ಕಾರ್ಯ ನಿರ್ವಹಣೆ, ಪ್ರತಿಯೊಂದು ಪದಗಳ ಅರೆಬಾಸೆ ಮತ್ತೆ ಕನ್ನಡ ಪದಗಳ ನಿರ್ದಾರ ಮಾಡ್ದವು ಡಾ. ವಿಶ್ವನಾಥ ಬದಿಕಾನ.

ಪ್ರತಿಯೊಂದು ಹಂತಲಿನೂ ಸಂಪೊದನೆ ಇದ್ ಸರಿ, ಇದ್ ತಪ್ಪುತ ಎತ್ತಿತೋರಿಸಿ ಎಲ್ಲಾ ಜವಾಬ್ದಾರಿಗಳ ನಿಬಾಯಿಸಿದವು ಶ್ರೀ ಭರತೇಶ ಅಲಸಂಡೆಮಜಲು.

ಎಲ್ಲಾ ಕನ್ನಡ ಪದಕೆ ಇಂಗ್ಲಿಸ್ ಅರ್ತ ಕೊಟ್ಟವು ಡಾ. ಎನ್. ಗಿರೀಶ್.

ಎಲ್ಲಾ ಅರೆಬಾಸೆ ಪದಕ್ಕೆ ವಾಕ್ಯ ಪ್ರಯೋಗಿಸಿದವು, ಕನ್ನಡ ಅರ್ತಗಳ ಜೋಡಿಸಿದವು ಶ್ರೀಮತಿ ಕೆಂಜನ ಮಮತಾ ಪ್ರಸಾದ್.

ಪದಕೋಶ ಸುರು ಆದ್ದೇ ಕ್ಷೇತ್ರಕಾರ್ಯ ಸಹಾಯಕರ್‌ಂದ. ತಾಂತ್ರಿಕವಾಗಿ ಅಸ್ಟೇನೂ ಗೊತ್ತಿಲ್ಲೆಂತಾದರೂ ನಮ್ಮ ತಾಳ್ಮೆನ ಪರೀಕ್ಷೆ ಮಾಡ್ದವು ಇವು. ದಿನ ದಿನ ಸಂಗ್ರಹ ಕೆಲ್ಸತ ನಮ್ಮ ಸೂಚನೆ ಇದ್ದರೂ ಎಲ್ಲವ್ಕೂ ಒಂದೇ ತರ ಕೆಲ್ಸ ಮಾಡಿಕೆ ಆತ್ಲೆ. ಕೆಂಜನ ಮಮತಾ ಪ್ರಸಾದ್., ಜೀವ್ ಮಝ್ಣಂಡ್ರ, ದರ್ಶಿನಿ ಎಸ್., ರುಚಿತಾ ಅಮೆಮನೆ, ಕೋಟೇರ ಶ್ರುತಿ ಬಿ.ಬಿ. ಕಿಶೋರ್, ಡೀನಾ ಜಿ.ಕೆ., ಸುನಿಲ್ ಕುಮಾರ್ ಬಿ.ಬಿ., ಚೈತ್ರಾ ಪುರ ಇವು ಎಡಿಟ್ ಜೆನ ಜವ್ವನರ್ ಕ್ಷೇತ್ರಕಾರ್ಯ ಮಾಡ್ದೊ. ಕೊರೋನಾ ಹೆದ್ರ್‌ಕೆ ಇದ್ದರೂ ಇವು ಊರೂರು ಸುತ್ತಿ ಪದಸಂಗ್ರಹ ಮಾಡ್ದೊ.

ಮಡಿಕೇರಿ ಮತ್ತೆ ಸುಳ್ಯಲಿ ಮಾತಾಡ್‌ವ ಅರೆಬಾಸೆಲಿ ತುಂಬ ಪ್ರಾದೇಶಿಕ ವ್ಯತ್ಯಾಸಗ ಉಟ್ಟು. ಹಂಗಾಗಿ ತಯಾರಾದ 18 ಸಾವಿರ ಪದಗಳ ಕರಡುಪ್ರತಿನ ಪೂರ್ತಿ ಓದಿದವು ಮಡಿಕೇರಿಂದ ಬಾರಿಯಂಡ ಜೋಯಪ್ಪನವು ಮತ್ತೆ ಸುಳ್ಯಂದ ಶ್ರೀ ಸೀತಾರಾಮ ಕೇವಳದವು. ತಕಂಡ ಪದಗ ಅರೆಬಾಸೆದ್ದೇತ ಇವಿಬ್ಬೊರ್ ಒಪ್ಪಿಗೆ ಕೊಟ್ಟೊ. ಅಂತಿಮ ಹಂತಲಿ ಇಡೀ ಪದಕೋಶನ ಓದಿ ಪ್ರತಿಯೊಂದು ಪದಗಳ ಓದಿ ತಿದ್ದಿದೊವು ಪದಗಳ, ಅಕಾರಾದಿ ಹೊಂದಿಸಿಕೊಟ್ಟೊವು ಶ್ರೀಮತಿ ಸರೋಜ ಎಂ.ಕೆ. ಅವು.

ಸಂತ ಅಲೋಶಿಯಸ್ ಕಾಲೇಜ್‌ನ ಪ್ರಾಂಶುಪಾಲರ್ ಡಾ. ರೆ.ಫಾ.ಪ್ರವೀಣ್ ಮಾರ್ಟಿಸ್ ಮತ್ತೆ ಕನ್ನಡ ವಿಬಾಗದ ಮುಕ್ಯಸ್ತರ್ ಡಾ. ಮಹಾಲಿಂಗ ಭಟ್ ಮತ್ತೆ ಸಹ ಪ್ರಾಧ್ಯಾಪಕರ್ ಅರೆಬಾಸೆ ಪದಕೋಶ ತಯಾರಿಗೆ ಪ್ರೋತ್ಸಾಹ ಕೊಟ್ಟೊ.

ಸಂತ ಅಲೋಶಿಯಸ್ ಕಾಲೇಜ್‌ನ ಕಂಪ್ಯೂಟರ್‌ಸೈನ್ಸ್ ವಿಬಾಗದ ಡೀನ್ ಡಾ. ರವೀಂದ್ರಸ್ವಾಮಿ ಮತ್ತೆ ಅನ್ವಿತ್ ವಿ. ಬಿ., ಆಶಯ್ ವಿ. ಬಿ. ಪ್ರತೀ ಹಂತಲಿನೂ ತಾಂತ್ರಿಕ ಸಹಾಯ ಮಾಡ್ಯೊಳೊ. ಇಡೀ ಪದಕೋಶದ ಕೆಲ್ಸ ಆನ್‌ಲೈನ್‌ಲಿ ನಡ್ತ್. ಇದರ ಸಂಪೂರ್ಣ ತಾಂತ್ರಿಕ ಜವಾಬ್ದಾರಿನ ಅಕಾಡೆಮಿ ಸದಸ್ಯರ್ ಶ್ರೀ ಭರತೇಶ ಅಲಸಂಡೆಮಜಲು ವಹಿಸಿಕೊಂಡೊ.

ಸುಳ್ಯ ಮತ್ತೆ ಮಡಿಕೇರಿಲಿ ಪದಕೋಶ ತಯಾರಿಗೆತ ಪೂರ್ವಬಾವಿ ಸಬೆ ನಡ್ಸಿದೊ. ಈ ಎರಡು ಕಡೆನ ಸಬೆಲಿನೂ ಅರೆಬಾಸೆ ಮಾತಾಡ್‌ವ ಹಿರಿಯ–ಕಿರಿಯ ವಿದ್ವಾಂಸರ್ ಪಾಲ್ಗೊಂಡ್ ಒಳ್ಳೊ ಸಲಹೆ ಸೂಚನೆ ಕೊಟ್ಟೊ.

ಯಾವುದೇ ಅಡ್ಡಿ ಆತಂಕಗ ಇಲ್ಲದೆ ರಿಜಿಸ್ಟ್ರಾರ್ ಚಿನ್ನಸ್ವಾಮಿ, ಅರ್ತ ಸದಸ್ಯರ್ ಕೆ.ಟಿ. ದರ್ಶನ ಮತ್ತೆ ಕಚೇರಿ ಸಿಬ್ಬಂದಿ ಶ್ರೀಮತಿ ಜ್ಯೋತಿ, ಶ್ರೀಮತಿ ಶೋಭಾ ಮತ್ತೆ ವಿಘ್ನೇಶ್ ಆರಂಬಂದ ಇಲ್ಲಿವರೆಗೂ ಸಹಾಯ ಮಾಡ್ಯೋಳೊ.

ಅರೆಭಾಷೆ ಪದಕೋಶ: ಒಂದೇ ತೊಡ್ಪೆಲಿ ಕೆಲ್ಸ ಮಾಡ್‌ದ ಅನುಭವ



✍ **ಭರತೇಶ ಅಲಸಂಡೆಮಜಲು**
ಬೋಜಪ್ಪ ಗೌಡರ ಮಗ, ಅಲಸಂಡೆ ಮಜಲು ಮನೆ,
ಪೆರ್ಲಂಪಾಡಿ ಅಂಚೆ, ಕೊಳ್ತಿಗೆ ಗ್ರಾಮ, ಪುತ್ತೂರು
ಮೊ: +91 9008027271

ತಲೆಮಾರ್‌ಂದ ತಲೆಮಾರ್‌ಗೆ, ಬಾಯಿಂದ ಬಾಯಿಗೆ, ನೆಂಪುಲಿ ಜಾಕ್ರತೆಲಿ ಕಾಪಾಡಿಕಂಡ್ ಬಂದ ಮಾತ್‌ಂದಲೇ ಮೌಖಿಕ ಜಗತ್ತ್ ತೇಳ್ದು ನಿತ್ತುಟು. ಔದ್ಯೋಗಿಕ ಜಗತ್ತ್‌ಲಿ ಪಂತ ಬೆಳ್ದಂಗೆ ಹೊರಗೆಂದ ಊರ್‌ಂದೂರ್‌ಗೆ ಬಾವ ಜೆನಗಳ್‌ಂದಾಗಿ ಬೇರೆ ಬಾಸೆಗಳ ಸೆಳ್‌ತ ಹೆಚ್ಚಾಗಿ ನಮ್ಮ ಅವ್ವ ಬಾಸೆ ಮಾತಾಡ್‌ವವರ ಸಂಕ್ಯೆ ಹಞಞ್ಞ ಆಗ್‌ತಾ ಉಟ್ಟು. ಕೆಲವ್ ಬಾಸೆನೇ ಮಾಯ ಆಗ್ತಾ ಉಟ್ಟು. ಜ್ಞಾನದ ಸೋದನೆ ಹೆಚ್ಚಾದಂಗೆ ಬಹುರೂಪಗ ಒಂದೇ ಕಡೆಗೆ ವಾಲಿದ್ ಒಂದೇ ರೂಪ ಆಣ್‌ತುಟ್ಟ್.

ಮಾಹಿತಿ ತಂತ್ರಜ್ಞಾನದ ಒಟ್ಟೊಟ್ಟ್‌ಗೆ ಹೋಗದೆಇದ್ದರೆ ಸುಲಬದ, ಪೊರ್ಲುನ ಸಣ್ಣಬಾಸೆಗ ಗೊತ್ತಿಲ್ಲದಂಗೆ ಯಾಜಮಾನಕೆ ಇರ್‌ವ ಬಾಸೆಗಳೊಟ್ಟ್‌ಗೆ ಸೇರಿಕೊಂಡದೆ. ಜಗತ್ತ್‌ನ ಬಹುತೇಕ ಬಾಸೆಗ ಆದುತೇಳ್‌ವ ಹೆದ್ರಿಕೆನೆ ತುಂಬ ತಜ್ಞರ ಗಂಬೀರ ಸಮಸ್ಯೆ ಆಗುಟು. ಅವು ಈ ಸಮಸ್ಯೆನ ಜಗತ್ತ್‌ನ ಜೆನರ ಮುಂದೆ ಇಸಿಯೊಳೊ. ಈ ಸಮಸ್ಯೆನ ಬೇಲಿ ಒಳೆಗೆ ನಮ್ಮ ಪರಿಸರದ ಅರೆಬಾಸೆನ ಅಬ್ಯಾಸ ಮಾಡೊಕಾದ ಅಗತ್ಯ ಉಟ್ಟು. ಅರೆಬಾಸೆನ ಈಗನ ಸ್ತಿತಿ ಎಂತ? ತಾಂತ್ರಿಕ ನೆಲೆಲಿ ಅರೆಬಾಸೆನ ಅದ್ಯಯನ ಮಾಡೊಕಾದ ತೊಡಕೇನ್? ಪ್ರಾದೇಸಿಕ ಆದ ಅರೆಬಾಸೆನ ರಾಜಕೀಯ ನೆಲೆ ಎಂತ? ಬಾಸೆ ಮತ್ತೆ ವ್ಯಾಕರಣ ಸಾಸ್ತ್ರಲಿ ಬಾವ ಅರೆಬಾಸೆನ ವಿಸೇಸ ದ್ವನಿನ ಕನ್ನಡ ಅಕ್ಷರಗಳ್‌ಲಿ ಗುರ್ತ್‌ಸಿ ಬರೆದು ಹೆಂಗೆ? ಅರೆಬಾಸೆನ ತಾಂತ್ರಿಕ ಸೌಲಬ್ಯಲಿ ಕಾಪಾಡಿಕಂಬೊದು ಹೆಂಗೆ? ಹಿಂಗೆ ನಾವ್ ಕೇಳಿಕಣಕಾದ ಅನೇಕ ಪ್ರಶ್ನೆ ಉಟ್ಟು. ಬಾಸೆತೇಳ್ದು ಬರಿ ಮಾತಾಡಿಕಂಬೊದರ ಗುರ್ತಅಲ್ಲ. ಅದ್ ಆ ಬಾಸೆನ ಮಾತಾಡ್‌ವ ಸಮುದಾಯದ ಸಂಸ್ಕೃತಿ, ನಾಗರಿಕ, ಸೃಜನಶಕ್ತಿ, ಆಚರಣೆ, ಅರಾದನೆ, ಕೊಣ್ತ, ಬುದ್ದಿಬಾವಗ ಹಿಂಗೆ ಎಲ್ಲಕೂಡಿಕಂಡ ಬೊದ್ಕ್‌ನ ಪ್ರತೀಕ, ಅದೇ ಸಮುದಾಯದ ಮತ್ತೆ ಬಾಸಾ ವ್ಯವಸ್ತೆನ ಉಸ್ರ್.

ರತ್ನಕೀರ್ತಿ ತೇಳಂವ ಬೌದ್ದ ದರ್ಮದ ಅಪೋಹ ಸಿದ್ದಾಂತಲಿ ಅಪೋಹ ಸಿದ್ದಿನ ಹೇಳ್ದಾಂಗೆ, 'ಪದ ಅರ್ತಂತೇಳಿರೆ ಅದ್ ಒಂದ್ ಪದ ಮತ್ತೆ ಒಂದ್ ಕಲ್ಪನೆನ ವಸ್ತುನ ಕೂಡಟ. ಆತನ ಪ್ರಕಾರ 'ಉಪಯೋಗಲಿರ್‌ವ ಯಾವ್‌ದೇಪದ ಬಾವಾತ್ಮಕ ಹಾಂಗೆ ನಕಾರಾತ್ಮಕ ಅರ್ತಗಳೇ, ಎರಡರ್‌ನೂ ಅದರ ಒಳೆಗೆ ಇಸಿಕಂಡಿದ್ದದೆ. ಬಾವಾತ್ಮಕ ವಸ್ತುನ ತೋರ್ಸಿಕನ ಅದ್ ಬಾವಾತ್ಮಕ ವಸ್ತುಂದ ಬೇರೆನೆ ಆಗಿದ್ದ್, ಅದ್ ಎಲ್ಲದರನು ಬುಟ್ಟಿದ್ದದೆತ ತಿಳ್ಸಿದೆ'. ಒಟ್ಟಾರೆ ಇದ್ ಪದ ಅರ್ತಗಳ ಬಗೆಗೆ ವಿವರಣೆಕೊಟ್ಟ ಸುರುನ ಪುಸ್ತಕತ ಕರಿಯಕ್.

ಕಾಲ ಬದಲಾವ ಈ ದಿನಗಳ್‌ಲಿ ಅರೆಬಾಸೆ ಪ್ರದೇಶದ ಸಂಸ್ಕೃತಿ ಎಲ್ಲ ಬಾಸೆಗಳಂಗೆ ಇಲ್ಲೆ. ಇಂದ್ ಪಂಡ್‌ನ ಗೌಜಿನ ದಿನಗ ಇಲ್ಲೆ. ಇರೋದರ ಉಳ್‌ಸಿ ಬೆಳ್‌ಸಿ ನೆಲೆಗೊಳ್‌ಸೊ ಪ್ರಯತ್ನ ನಡೀತ ಉಟ್ಟು. ಹೊಸ ಮಾದ್ಯಮ, ಹೊಸ ತಂತ್ರಜ್ಞಾನನ ಬಳ್‌ಸಿಕಂಡ್ ದೂರ ಸಂಪರ್ಕ ಮತ್ತೆ ಅಂತರಜಾಲನ ಸಹಾಯಂದ ಸುಮಾರ್ 18 ತಿಂಗಳ ಕಾಲ ಹಗ್ಲ್ ರಾತ್ರಿ ದುಡ್ದದರ ಪಲಂದಾಗಿ ಈ ಅರೆಬಾಸೆ ಪದಕೋಶ ಆಗುಟು. ಪುಸ್ತಕಗ ಅಕ್ಸರ ಲೋಕದ ಮೂರ್ತ ರೂಪಗ, ಆ ಅಮೂರ್ತ ಆದ ಜ್ಞಾನ ಸಂಪತ್ತ್‌ನ ಪೊರ್ಲೆ ಸಬ್ದರೂಪ. ಸಬ್ದ ಕೇವಲ ಸ್ವರ, ವ್ಯಂಜನಗಳೇ ಮಾತ್ರ ಆಗದೆ ಅದ್ ಆ ಜೆನಂಗ ಆಡಿಕಂಬ ಮಾತ್‌ನರೂಪ, ಅದ್ ನೂರಾರ್ ತಲೆಮಾರ್‌ನ ಸಂಸ್ಕೃತಿ–ನಾಗರಿಕತೆ ಇಸಿಕಂಡ್ ಕಟ್ಟಿದ ಒಂದ್ ಸಮ್ಮಂದ. ಅರೆಬಾಸೆ ಪದಕೋಶ ಪದಗಳ ಕಟ್ಟ್‌ನ ಅಳ್ಸ್‌ವ, ಅಕ್ಸಯ ಪಾತ್ರೆನಂಗೆ ಇರ್‌ವ ಅಕ್ಸರಲೋಕಕೆ ಕರ್ಕಂಡ್ ಹೋವ ಕೆಲಸ ಮಾಡ್ದೆತ ನನ್ನ ನಂಬಿಕೆ.

ಮಾತ್ ಸುರುಗೆ ಹುಟ್ಟುದು ಬಾಸೆಂದತ ಭಾಷಾವಿಜ್ಞಾನಗ ಹೇಳ್ವೆ. ಹಂಗಾಗಿ ದ್ರಾವಿಡ ಮೂಲಂದ ಅರೆಬಾಸೆನ ಅನೇಕ ಪದಗ ಹುಟ್ಟಿಕಂಡ್ ಪ್ರಾದೇಶಿಕ ಉಚ್ಚಾರಣೆ, ವ್ಯಾಕರಣ ಅಂಶಲಿ ಹೊಂದಿಕೆ ಇದ್ದರೂ ಬಳ್ಸವ ಪದಗಳ್‌ಲಿ ಬಿನ್ನ ಆಗಿರಿಕೆ ಸಾದ್ಯ ಉಟ್ಟು. ಅರೆಬಾಸೆನ ಈ ಬಿನ್ನತೆಗೆ ಭೌಗೋಳಿಕ ಹಿನ್ನೆಲೆ ಮುಕ್ಯ ಆದೆ. ಜೊತೆಗೆ ಸಾಮಾಜಿಕ, ವ್ಯವಾಹರಿಕ, ಪ್ರಾದೇಶಿಕ ಪರಿಣಾಮನೂ ಆಗಿದ್ದದೆ. ಭಾರತ ದೇಶದ ಜೆನರ ವೃತ್ತಿ, ಆಚರಣೆ, ಕಟ್ಟ್‌ಕಟ್ಟಳೆ, ಕೂಡ್‌ಕಟ್ಟ್‌ಗ ಆಯಾಜಾತಿ ಸಮುದಾಯದ ನೆಲೆಲಿ ಬಾಸೆ ಪ್ರಾದೇಶಿಕಾಗಿ ವ್ಯತ್ಯಾಸ ಆದೆ. ಮಾತ್‌ಲೇ ವ್ಯತ್ಯಾಸ ಇರ್‌ವ ಅಂತ ಪದಗ ಈ ಪದಕೋಶಲಿ ದಾಕಲಾಗುಟು.

ಪದಕೋಶ ಮಾಡಿಕೆ ಹಿಂದೆನವು ಕಾರ್ಡ್‌ಲಿ ಬರ್ದ್ ಪ್ರತಿಯೊಂದ್ ಪದಗಳ 'ಅ'ಕಾರಾದಿಯಾಗಿ ಜೋಡಿಸ್‌ತಿದ್ದೊ. ಇಂತ ಕೆಲ್ಸಕ್ಕೆ ತಾಳ್ಮೆ ಮತ್ತೆ ತುಂಬ ಸಮಯಬೇಕ್. ನಾವ್ಗೆ ಅಸ್ಟ್ ಸಮಯ ಇತ್ಲೆ. ಹಂಗಾಗಿ ನಾವು ತಂತ್ರಜ್ಞಾನದ ಪ್ರಯೋಜನನ ಈ ಪದಕೋಶದ ರಚನೆಗೆ ಬಳಕೆ ಮಾಡಿಕಂಡೊ. ಸುಮಾರ್ ಜೆನ ಸಂಶೋದನಾ ಸಹಾಯಕರ ಸಹಕಾರ ಪಡ್ಕಂಡ್, ಒಟ್ಟ್‌ಗೆ ಒಂದೇ ತೊಡ್ಪೆಲಿ ಕೆಲ್ಸ ಮಾಡ್‌ವಂಗೆ ಸಾದ್ಯತ ಕೆಲ್ಸ ಸುರು ಮಾಡ್‌ವ ವರೆಗೆ ಗೊತ್ತಿತ್ಲೆ. ಅರೆಬಾಸೆ ಪದ, ನುಡಿಕಟ್ಟ್, ಗಾದೆ, ಒಗಟ್‌ಗಳ ಸೇರ್ಸಿಕಂಡ್ ಅರೆಬಾಸೆ ಪದಕೆ ಹೊಂದಿ ಕೊಂಬಾಂಗೆ ಜೋಡನೆ ಮಾಡ್ದೊ.

ಹಿಂಗೆಲ್ಲ ಮಾಡೊಕಾರೆ ನಾವ್ಗೆ ಉಪಯೋಗ ಆದ್ದ್ ಕನ್ನಡ ಯೂನಿಕೋಡ್. ಏಕ ಕಾಲಲಿ ಹಲವರ್ ಬೇರೆ ಬೇರೆ ಕಡೆಂದ ಕುದ್ದ್‌ಕಂಡ್ ಎಡಿಟ್ ಮಾಡಿಕೆ ಆನ್‌ಲೈನ್ ಸಹಾಯ ಪಡ್ಕಂಡ. ನಿಜಾಗಿ ಪದಕೋಶ ಸಂಪಾದನೆ ಮಾಡ್‌ವ ಕಸ್ಟಂದ ಮುಂದೆ ಪ್ರಕಟಣೆ ಮಾಡ್‌ವ ಬಜ್ಜನೇ ಹಜ್ಞಾ ಆತ್. ಅಕ್ಷರ ವಿನ್ಯಾಸ, ಅಕ್ಷರಗಾತ್ರ ಇದ್ ಡಿಕ್ಷನರಿಗೆ ಪೊರ್ಲುಕೊಟ್ಟದೆ. ಹಿಂಗೆಲ್ಲ ಮಾಡ್‌ವ ವಿಚಾರಲಿ ಬೆಂಬಲ ಸಿಕ್ಕದೆ ಬಜ್ಜ ಆದ್ದರ ಹೇಳಕಾದ್ ನನ್ನ ಕರ್ತವ್ಯ. ಅರೆಬಾಸೆ ಮೂಲ ಪದ ದಪ್ಪ ಅಕ್ಸರಲಿ ಇರೊಕು, ಐಪಿಎ ಇಟಲಿಕ್ಸ್‌ಲಿ, ಕನ್ನಡ, ಇಂಗ್ಲಿಸ್ ಸಾಮಾನ್ಯ ಮತ್ತೆ ಗಾದೆ, ನುಡಿಗಟ್ಟ್, ಒಡ್ಪೊಕತೆ ಹಜ್ಞಾ ಸಣ್ಣದಾಗಿ ದಪ್ಪ ಅಕ್ಷರಲಿ ಬರೊಕುಂತ ಅಲೋಚನೆ ಇತ್ತ್. ಅದರೆ ಪ್ರಿಂಟ್ ಆಕನ ಸಣ್ಣ ಅಕ್ಸರ ಮಾಡಿಕಾಗದೆ ಒಟ್ಟಾರೆ ನಮ್ಮ ಅಲೋಚನೆನಾಂಗೆ ಬಾತ್ಲೆತೇಳ್ದು ಸತ್ಯ, ಅಂದರೆ ಇಂದ್ ಕನ್ನಡ ಬಾಸೆ ತಂತ್ರಜ್ಞಾನಲಿ ಇನ್ನೂ ಬೆಳಿಯೊಕುತ ಹೇಳಕ್.

ಅರೆಬಾಷೆ ಪದಕೊಶನ ತುಳು ಲೆಕ್ಸಿಕನ್ ಮಾದರಿನಂಗೆನೆ ಮಾಡೊಕುತ ಪ್ರಯತ್ನ ಪಟ್ಟರೆನು, ಪಂಡ್‌ನ ಸಾಹಿತ್ಯ, ಸಂಸ್ಕೃತಿ ಪುಸ್ತಕಗ, ಪಾರ್ದನ ಪರಂಪರೆ ಅರೆಬಾಸೆಲಿ ಇಲ್ಲದ ಕಾರಣ ವಾಕ್ಯ ಪ್ರಯೋಗ, ಪದ ಪ್ರಯೋಗಗಳ ಕೂಡ್ಸಿಕೆ ಒಂದಸ್ಟ್ ಸಮಯ ಬೇಕಾತ್. ಒಂದೇ ಅರ್ತ ಬಾವ 'ಲ', 'ಳ' ಮತ್ತೆ 'ನ', 'ಣ' ಹಂಗೆನೆ ಶ, ಳ, ಸ ವ್ಯತ್ಯಾಸದ ಗೊಂದಲಗ ಉಟ್ಟು. ಇದರೆಲ್ಲ ಅರೆಬಾಸೆವೆ ಪರಿಹಾರ ಮಾಡಿಕಣೊಕಾದೆ ತೇಳ್ದು ನನ್ನ ಅಬಿಪ್ರಾಯ.

ಅರೆಬಾಸೆ ಪದಕೋಶಲಿ ಪದಗಳಿಗೆ ಮೊಡಿ ಮೈಲಿಗೆ ಹಂಗ್‌ಇಲ್ಲೆ, ಶೀಲ ಅಶ್ಲೀಲ ಬೇದ ಇಲ್ಲೆ, ಪ್ರಾದೇಸಿಕತೆ ಗಡಿ ಇಲ್ಲೆ. ಇವೆಲ್ಲ ಒಟ್ಟಾಗಿ ಅರೆಬಾಸೆ ಶಬ್ದ ಸಾಗರವಾಗುಟ್ಟು. ಒಟ್ಟು ಹೇಳೊಕುತೇಳಿರೆ ಮುಂದೆಗೆ ಒಂದಸ್ಟ್ ಸಂಶೋದನೆ ಮಾಡೊವ್‌ಕೆ ಮಾಹಿತಿ ಉಟ್ಟು. ಒಂದು ಅವದಿಲಿ ಅಕಾಡೆಮಿ ಕಮ್ಮಿ ಸಮಯಲಿ ಮಾಡ್ವ ಈ ಯೋಜನೆಗೆ ನಾವ್‌ಗೆ ಅವಕಾಸ ಸಿಕ್ಕಿತ್. ನಿಘಂಟು ರಚನೆ ಕೆಲ್ಸದ ಅನುಬವದ ಕೊರತೆ ಇದ್ದಕಾರಣ ಒಂದಸ್ಟ್ ಪುಸ್ತಕಗಳ ನೋಡಿಕಂಡ್, ವಿಸಯ ತಜ್ಞರ ಒಟ್ಟಿಗೆ ಮಾತ್‌ಕತೆ ಮಾಡಿಕಂಡ್ ಸಲಹೆ ಮಾರ್ಗದರ್ಶನನ ಪಡ್ಕಂಡ್ ಇದರ ತಯಾರ್‌ಸಿದ್. ಸುಮಾರ್ 8000– 10000 ಸಾವಿರ ಗಂಟೆಗಳ ಎರಡ್ ಮೂರುಜೆನರ ಪುರ್ಸೊತಿಲ್ಲದ ಕೆಲ್ಸ ಉಟ್ಟು. ಔದ್ಯೋಗಿಕ ಒತ್ತಡಗಳ ನಡುಲಿನು, ಪದಕೋಶದಂತಹ ದೊಡ್ಡ ಕೆಲ್ಸನ ನಾವು ಮಾಡ್ಯೊಳೊ. ಈ ನೆಲೆಲಿ ನಂಗೆ ಡಾ. ವಿಶ್ವನಾಥ ಬದಿಕಾನರೊಟ್ಟ್‌ಗೆ ಕೆಲ್ಸ ಮಾಡ್‌ವ ಬಾಗ್ಯ ಸಿಕ್ಕಿತ್. ಹಾಂಗೆ ಅರೆಬಾಸೆ ಸಮುದಾಯ, ಅರೆಬಾಸೆ ಸಂಸ್ಕೃತಿ ಮತ್ತೆ ಸಾಹಿತ್ಯ ಅಕಾಡೆಮಿಗೆ ನಾ ಸದಾರುಣಿ. ಪದಕೋಶಲಿ ಸಾದ್ಯ ಆದಸ್ಟ್ ತೊಪ್ಪು ಒಪ್ಪುಗಳ ತಿದ್ದಿ ಸರಿ ಪಡ್ಸಿಯೊಳೊ.

ಮುಂದೆನ ದಿನಲಿ ಈ ಕೆಲ್ಸನ ಅಂತರಜಾಲಲಿ ಅಕಾಡೆಮಿಂದ ತಾಕೆ ಪ್ರಯತ್ನ ಮಾಡ್ತ ಒಳೊ. ಅ ಸಮಯಲಿ ಯಾರೆ ಅರೆಬಾಸೆಯವು ಪದಕೋಶಕ್ಕೆ ಬೇಕಾದ ಸಲಹೆ, ಸೂಚನೆಗಳ ಕೊಡಕ್, ಹಂಗೆನೆ ಹೊಸ ಪದ ಸೇರ್ಸಿ, ತೊಪ್ಪುಗಳಿದ್ದರೆ ತಿದ್ದಿಕಂಡ್ ಎಲ್ಲವುಕೂ ಅರೆಬಾಸೆ ಅಂತರಜಾಲಲೇ ಸುಲಬಲಿ ಓದಿಕೆ ಸಿಕ್ಕುವಂಗೆ ಆದು. ಇಲ್ಲಿ ತೊಪ್ಪುಗಳಿದ್ದರೆ ಅದರ ಸರಿ ಮಾಡಿ ಮುಂದೆನ ಅವದಿಲಿ ಹೊಸ ಅವೃತ್ತಿನ ಸಾ ತರಕ್‌ತ ನಂಬ್ಯೊಳೆ. ಹಿಂಗೆ ಅರೆಬಾಸೆಗೆ ಸಾಸ್ತ್ರೀಯ ಅಡಿಪಾಯ ಆಗಿ ಮುಂದೆನ ದಿನಲಿ ಗಟ್ಟಿನ ಭಾಷಾಶಾಸ್ತ್ರದ ಕೆಲಸಗ, ತಿರ್ಳ್ ಇರ್‌ವ ಸಾಹಿತ್ಯದ ಕ್ರಿಸಿ ಅಗಲಿ.

On the lexicography of Arebhashe



Dr Girish N
704, Deepa Sunny Apartment,
Ganesh Rao Lane, Kodialbail, Mangalore 575 003
Phone: 9845804806

Encyclopaedia Britannica defines a dictionary as a reference book that lists words in order and gives their meanings. In addition to the basic function of defining words, a dictionary also offers information about pronunciation, grammatical forms and functions, etymologies, syntactic peculiarities, variant spellings, and antonyms. Most often dictionaries are understood as “authoritative records of how people 'ought to' use language, and they are regularly invoked for guidance on 'correct' usage. They are seen…as prescriptive texts.” Whereas, James Murray, the founder Editor of the *Oxford English Dictionary*, working firmly within the tradition of descriptive lexicographydefines a dictionary as a description of the vocabulary used by members of a speech community. Therefore, he emphasises the compilation and description of a language and its varieties rather than attitudes on how it should be used (Atkins and Rundell 2).

How a language is used in a society is determined by its speech communities. According to Marcyliena H Morgan, speech communities develop through prolonged interaction among those who operate within certain shared and recognized beliefs and value systems regarding forms and styles of communication. Although our ability to learn a language is innate, we do so within cultures and societies that frame the process of learning how to talk to others. There are two ways in which speech communities define a language and its discourse. The first is “an analysis and description of linguistic, semantic and conversational features that are gathered from a group and are in turn deemed to be stable indicators of that speech community.” The second focuses on “how a language is used to represent an ideology, constructs relationships, identity and so on.”

ArebhashePadakosha: Arebhashe-Kannada-English Dictionary is an ambitious attempt of compiling 18,000 words of Arebhashe, with corresponding meanings in Kannada and English. Arebhashe once considered a dialect of Kannada is now officially identified as a separate language by the Government of Karnataka (Ramaswamy). It is spoken predominantly by the subgroup of Vokkaliga community VakkaligaGowdas who

are identified as 'SulliaGowdas' in the regions of Somwarpet, and Virajpet taluks of Kodagu district, Sullia and Puttur taluks of Dakshina Kannada district, parts of Bangalore and Mysore districts as well as Bandadka, Kasaragod District in Kerala.Prof.Che. Ramaswamy identifies other communities that co-exist with SulliaGowdas. Namely, Dasayya, Barbers, Viswakarma, Washermen, Ganigas, Weavers, Samagraras, Meras, etc., as users of Arebhsashe creating Puttur, Sullia and Madikeri dialects of Arebhashe, each one influenced by the dominant regional language of the area. Speech communities that speak Arebhashe have carved out distinct identities for themselves using their linguistic identity. The identity is not restricted to a single analytical level of language in terms of vowel quality, morphology, syntax and so on. Arebhashe, although a young language in comparison with Kannada, Tulu and Kodava, has a considerable history of over five hundred years. It is a language in use with a dynamic system of variation, creativity, and idiosyncrasy. It operates at multiple levels associating itself with many forms of discourses, such as the worldview, culture, customs, ethnicity, agricultural practices, folklore, etc.

Maheedas BV in “A Short History of Kannada Dictionaries” argues that in any language a dictionary perfect and complete in all respects will not come into existence all of a sudden and he suggests three stages of development in dictionaries. Production of very short monolingual dictionaries with limited vocabulary, purpose, and features is the first stage. The second is the publication of a bilingual dictionary and the third is a compilation of a comprehensive monolingual dictionary in the respective language. The author establishes these stages concerning Kannada with sufficient examples of *Rannakanda*, *KabbigaraKaipidi*, Rev William Reeve's dictionary: *English and Caranataca*, Rev Ferdinant Kittel's *A Kannada-English Dictionary*, *SiriganndaArthakosha*, nine-volume Kannada dictionary of Kannada SahityaParishat, etc. The fourth stage is a necessary addition to Maheedas's list in which a multi-lingual dictionary is published widening the reach and magnitude of the language.

In the history of Arebhashe lexicography, there hadn't been any significant works except the contributions of Prof.Kushalappa Gowda, CheRamaswamy and K R Gangadhar. Prof.Kushalappa Gowda's *Gowda Kannada* and CheRamaswamy's*A Grammar of Arebhashe* are important works but they predominantly deal with phonology, morphology, syntax and other aspects of the language. However, these two books have a very useful list of vocabulary with Kannada and English Equivalents. The first major attempt in Arebhashe lexicography wasthe*Arebhashe-Kannada-English dictionary with Arebhashe Idioms and Proverbs* edited by K R Gangadhar in 2013. It is a compilation of 4000 Arebhashe words, 500 idioms and 300 proverbs. The present work, *ArebhashePadakosha: Arebhashe-Kannada-English Dictionary* is a monumental work keeping in mind the lacuna in the field of Arebhashe lexicography. The present dictionary contains 18,000 words with reliable definitions of the given words in both Kannada and English, considering how an utterance acquires meanings in a combination of other words and contexts. The meanings are “generalizations about word behaviour approximate closely to the ways in which people normally use (and understand)

language when engaging in real communicative acts" (Atkins and Rundell 44). Along with meanings, all the words are classified on their grammatical function, an approximate pronunciation is offered, and word usage is suggested based on fieldwork.

Although the dictionary project began 18 months ago, I could join the team only six months ago. My primary responsibility was to offer English equivalents to the listed words. Not knowing Arebhashe, I relied completely on the Kannada equivalents. Though the Kannada version is clear, there are many linguistic variants which are very particular to Arebhashe which may have been lost in Kannada impacting the English version. At the same time, there are also culture-specific terms for which there are no English equivalents. I have attempted in every possible way to offer a suitable synonym and also taken limited liberty in offering the closest possible meaning in English. Along with Prof.VishwanathaBadikana and Mr BharatheshaAlasandemajalu, I have (literally) burnt the midnight oil to complete the task to the fullest satisfaction of the team. If I have omitted any expression, misinterpreted any term, and ignored an important phrase, all the blame is on me. However, every dictionary is a work in progress, and all dictionaries are incomplete, there is no such thing as a perfect dictionary, there is, equally, no 'right' way to produce a dictionary (Atkins and Rundell 2). Therefore, we appreciate your feedback about how we can improve our work in the future.

I'm extremely grateful to Dr VishwanathBadikana and Arebhashe Academy for commissioning this work for me. I'm also thankful to Mr BhratheshAlasademajalu for his continuous support and guidance in editing the dictionary.

Works Cited:

1.Atkins B T Sue and Rundell, Michael, *The Oxford Guide to Practical Lexicography*, OUP, 2008
2.Maheedas, B V. "A Short History of Kannada Dictionaries,"
3.https://www.academia.edu/28951769/A_Short_History_of_Kannada_Dictionaries
4.Morgan H, Marcyliena. *Speech Communities*, CUP, 2014.
5.Ramaswamy, Che. A Grammar of Arebhase, Central University of Karnataka, 2020.
6.Wikipedia contributors. "Arebhashe dialect." *Wikipedia, The Free Encyclopedia*.

ಅರೆಭಾಷೆ ಪದಕೋಶ
ನನ್ನ ಬೊದ್ಕ್‌ಲಿ ಮರೆಯಲಾರದ ಅನುಭವ



ಮಮತ ವೈ. ಎ
W/o. ಕೆಂಜನ ವಾಸುದೇವ್ ಪ್ರಸಾದ್
ಮನೆ ಸಂಖ್ಯೆ 18–62–1, ಸುದರ್ಶನ ಬಡಾವಣೆ
ಮಡಿಕೇರಿ– 571201, ಮೊಬೈಲ್ ಸಂಖ್ಯೆ– 8217293615
mamathacoorg125@gmail.com

ಮೊನ್ಸ ತನ್ನ ಬಾವನೆ, ವಿಚಾರ, ಅಬಿಪ್ರಾಯಗಳ ವ್ಯಕ್ತ ಪಡ್ಸಿಕೆ ಸಿದ್ದಿಸಿ ಕಂಡ ವಿಸೇಸ ಸಾಮರ್ತ್ಯ ತೇಳ್ರೆ ಅದ್ ಬಾಸೆ. ನಮ್ಮಲ್ಲಿ ಬಳಕೆಲಿರೊ ಹಲವಾರ್ ಬಾಸೆಗಳ್‌ಲಿ ಅರೆಬಾಸೆನೂ ಒಂದ್. ಸೀಮಿತ ಪ್ರದೇಶದ ಸಣ್ಣ ಜೆನಾಂಗದ ಲಿಪಿ ಇಲ್ಲದ ಬರೀ ಆಡ್ ಬಾಸೆನ ದಾಕಲೀಕರ್‌ಸುದು ಹಂಗೆನೆ ಆ ಸಬ್ದ ಶ್ರೀಮಂತಿಕೆನ ಎಲ್ಲೊವ್ಕ ಮನ್ಸಿಗೆ ಮುಟ್ಟುವಂಗೆ ಅರ್ತ ಮಾಡ್ಸುದು, ಬಾಸೆನ ಉಳ್ಸುದು ಸಾಮಾನ್ಯ ಕೆಲ್ಸ ಅಲ್ಲ. ಇಂತ ಒಂದ್ ದೊಡ್ಡ ಕೆಲ್ಸನ ಅರ್ತಕೋಸನ ರಚನೆ ಮಾಡ್ದುಕೆ ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯವು ಯೋಜನೆ ಹಾಕಂಡದ್ ಬಾರಿ ಹೆಮ್ಮೆನ ವಿಚಾರ. ಈ ಅರ್ತಕೋಸದ ಕೆಲ್ಸಲಿ ನಾನ್ ಸನ ಬಾಗೀದಾರಳಾದ್ ನಂಗೆ ಬಾರಿ ಕುಸಿ ಕೊಟ್ಟ ವಿಚಾರ. ಹಂಗಾಗಿ ಈ ಕೆಲ್ಸದ ಬಗ್ಗೆ ಕೆಲು ನನ್ನ ಅನುಬವನ ಇಲ್ಲಿ ಹಂಚಿಕಂಡೊಳೆ.

ಸುರೂಗೆ ಅರೆಬಾಸೆನ ಪದಗಳ ಹುಡ್ಕಿಕೆ ಕೆಲು ನಾಡ್ ಕಡೆ ಹಿರಿಯರ್‌ನ ಹುಡ್ಕಿಕಂಡ್ ಹೋದೆ. ಹೋದ ಕಡೆಲೆಲ್ಲ ವಿಸ್ಯ ತಿಳ್ದ್ ಕುಸಿ ಪಟ್ಟ್ ಗೊತ್ತಿದ್ದ ಪದ, ಸೋಬಾನೆ, ಕತೆ, ಗಾದೆ, ಒಡ್ಪೊಕತೆಗಳ್‌ನ್ನೆಲ್ಲ ಹೇಳಿಕೊಡ್‌ತ್ತಿದ್ರೊ. ಮಾತಾಡಿಕನ ಸಿಕ್ಕಿದ ಪದಗಳ, ಮತ್ತೆ ಅದರ ಅರ್ತಗಳ ಬರ್‌ಕಣ್‌ತಿದ್ದೆ. ಅಲ್ಲಿ ತಾತ, ಅವ್ವಂದರ್, ಅಕ್ಕಂದರ್, ಅಣ್ಣಂದರ್ ಕೃಸಿ ಸಮೇಲೂ ನನ್ನೊಟ್ಟ್‌ಗೆ ಕುದ್ದ್ ಅವರ ಸಮೆನ ನಂಗೆ ಕೊಟ್ಟ್ ಬಾರಿ ಉಮೇದ್‌ಲಿ ವಿವರ್ ಹೇಳಿಕೊಡ್‌ತ್ತಿದ್ರೊ. ಅವು ಹಿಂದೆ ಕಳ್ದ ದಿನಗಳ ಗ್ಯಾನ ಮಾಡಿಕಂಡ್ ಹಬ್ಬ, ಪೂಜೆ, ಕೃಸಿ ಸಮೇಲಿ ಬಳ್‌ಸೋ ಹಾಡ್, ಕೆಲು ಪದ್ದತಿಗ, ಕಾರಣಗ ಎಲ್ಲನೂ ಹೇಳಿಕೊಡ್‌ತ್ತಿದ್ರೊ. ಆ ಪದಗಳ ಕೇಳಿಕಾಕನ ನಾನ್ ಇಂದ್‌ನವರೆಗೆ ಮಾತಾಡ್‌ತಿದ್ದ ಪದಗಳೇ ಸೆರಿತ ತಿಳ್ಕಂಡಿದ್ದದ್ ತಪ್ಪುತ ಗೊತ್ತಾತ್. ಈಗ ನಮ್ಮ ಮಾತ್‌ಲಿ ಸುಮಾರ್ ಕನ್ನಡ ಪದಗ ಸೇರಿಬುಟ್ಟುಟು. ಹಂಗಾಗಿ ಅರೆಬಾಸೆನ ಪದಗಳ ರಸ, ಸ್ವಾರಸ್ಯ ಗಮ್ಮತ್ತೇ ಹೊರ್‌ಟ್ ಹೋವುಟು ಕಂಡದೆತ ಅನ್ಸಿತ್. ನಾ ಸಣ್ಣದಿರಿಕನ ನನ್ನ ಪೊಪ್ಪ ಮಾತಾಡಿಕನ ಅವ್ಕೆ ಉಚ್ಚಾರಣೆ ತೊಪ್ಪು, ಸೆರಿ ಮಾತಾಡಿತ ಎಸ್ಟೋ ಸೆರಿ ಹೇಳಿದ್ದೆ. ಈಗ ಅರ್ತಕೋಸದ ಕೆಲ್ಸಕೆ ಇಳ್ದ ಮೇಲೆ ಗೊತ್ತಾತ್ ಅವು ಮಾತಾಡ್‌ತಿದ್ದದೆ ಸೆರಿತ. ಅವರ್‌ಲಿ ಆ ಮೂಲ ಪದಗ ಮತ್ತೆ ಬಾಸೆನ ಸೊಗಡ್ ಹಂಗೆನೆ ಇತ್ತ್. ಈಗ ಬೇರೆ ಬಾಸೆಗಳ ಕೆಲು ಪದಗ ಸೇರಿಕಂಡ್ ಬಾಸೆನ ರೂಪ ಹಣ್ಣ್ ಬದಲಾಗುಟು. ಇದ್ ಬಾಸೆನ ಬೆಳವಣಿಗೆಗೆ ಪೂರಕನೂ ಆದೆ. ಇಲ್ಲಿಮುಟ್ಟ ಕೇಳದಿದ್ದ ತುಂಬ ಪದಗ ಸನ ಸಿಕ್ಕಿತ್. ಬಾಸೆ ಮೇಲೆ ಇದ್ದ ಪ್ರೀತಿನೂ, ಬಾಸೆ ತಿಳ್‌ವಳಿಕೆನೂ ಜಾಸ್ತಿ ಆತ್.

ಒಂದ್ ವರ್ಸಂದ ನಿತ್ತಲ್ಲಿ, ಕುದ್ದಲ್ಲಿ, ಮೊಲ್ಗಿದಲ್ಲಿ, ಹೋದಲ್ಲಿ, ಬಂದಲ್ಲಿ, ಕೆಲ್ಸ ಮಾಡ್‌ತಿದ್ದಲ್ಲಿ ಎಲ್ಲಕಡೆನೂ ಬರೀ ಪದಗಳ್ದೇ ಗ್ಯಾನ. ಕೆಲ್ಸ ಮಾಡಿಕೆ ಸಮೆನ ಪರಿವೇ ಇಲ್ಲದೆ ಕುದ್ದದ್, ಮೊಲ್ಗಿರಿಕನ ಎಸ್ಟೋ ರಾತ್ರೆ ಗ್ಯಾನ ಬಂದ ಪದಗಳ ಎದ್ದ್ ಬಂದ್ ಹೊತಾರೆ ಅದರ ಬಗ್ಗೆ ಚರ್ಚೆ ಮಾಡ್ದು, ಒಂದ್ ಪದದ ಅರ್ತ ತಿಳ್ಕಂಬಕೆ ಹೋಕನ ಅದರೊಟ್ಟ್‌ಗೆ ಸಿಕ್ಕಿದ ಬೇರೆ ಬೇರೆ ಪದಗ, ಹಿರಿಯರ್‌ನೆಲ್ಲ ಕೇಳ್ತಿದ್ದದ್, ಇನ್ನೂ ಹೆಚ್ಚಿ ಹೆಚ್ಚಿ ಪದಗಳ ಸಂಗ್ರಣೆ ಮಾಡೊಕುತ ಗ್ಯಾನ ಮಾಡಿಕಂಡ್ ಮಾಡ್ದಕೆಲ್ಸ ಮನ್ಸಿಗೆ ಬಾರಿ ಕುಸಿ ಕೊಟ್ಟದೆ. ಎಲ್ಲ ಹೊಸ್ತ್ ಅನುಬವ. ಕೆಲ್ಸ ಸುರು ಆದ ಮೇಲೆ ಸುಮಾರ್ ಪುಸ್ತಕಗಳ ಓದಿದೆ.

ಕತೆ, ಕವನ ಓದಿಕೆ ಉತ್ಸಾಹ ಹೆಚ್ಚಿ ಆತಿತ್. ಅದರ್‌ಲೂ ಸುಮಾರ್ ಪದಗ ಸಿಕ್ಕಿತ್. ಇದ್‌ಎರ್‌ಡ್ ರೀತಿಲಿ ಪ್ರೇಜನ ಆತ್. ಹಣ್ಣ್, ಹೂನ ಬಗ್ಗೆ ಬರೆಕನ ನಂಗೆ ಸಣ್ಣೆತರ್‌ಲಿ ನಾ ಕಳ್ದ ದಿನಗ, ಕಾಡ್ ಹಣ್ಣ್ ತಿಂಬತಿದ್ದದ್, ಅವ್ವ ಮೊಲ್ಗಿಕನ ಹೊನ್ನಮ್ಮನ ಕತೆ, ರಕ್ಕಸಜ್ಜಿಕತೆ ಹೇಳ್ತಿದ್ದದ್ ಎಲ್ಲ ನೆಂಪಾತಿತ್. ಯಾವ್ದೆ ಸಣ್ಣಕೆಲ್ಸ ಆಗಲೀ ದೊಡ್ಡಕೆಲ್ಸ ಆಗಲೀ ನೋಡಿರೆ ಗೊತ್ತಾಲೆ. ಸುಲಬತ ಆದೆ. ಅದರ ಆಳಕ್ಕೆ ಹೊಕ್ಕಿರೆ ಮಾತ್ರ ಕೆಲ್ಸದ ಅನುಬವ ಸಿಕ್ಕುದು. ನಮ್ಮ ಬಾಸೆನ ಪದಗ, ಗಾದೆಗ, ಒಡ್ಪೊಕತೆಗಳ ಗಮ್ಮತ್ತೇ ಬೇರೆ. ಗಾದೆ, ಒಡ್ಪೊಕತೆಗ ತಮಾಸೆ ತಕಂಡರೂ ಬೊದ್ಕಿಗೆ ಬೇಕಾದ ನೀತಿಗ ಸಿಕ್ಕಿದೆ. ಸಿಕ್ಕಿದ ಅಲ್ಪ ಸಮೇಲಿ ಇಸ್ಟ್‌ದೊಡ್ಡ ಕೆಲ್ಸಲಿ ನಂದೊಂದ್ ಸಣ್ಣಪಾಲ್. ಇದರ ಹಿಂದೆ ರಾತ್ರೆ, ಹಗ್‌ಲ್ ಸ್ರಮಪಟ್ಟ್ ಕೆಲ್ಸ ಮಾಡ್ದವು ಒಳೊ. ನಂಗೆ ಹೋದಜಾಗೆಲೂ ಹಿರಿಯರಂದ, ಕಿರಿಯರಂದ, ಮನೆಲೂ, ಅಕಾಡೆಮಿಯವರಂದನೂ ಬಾರಿ ಪ್ರೋತ್ಸಾಹ, ಸಾಕಾರ ಸಿಕ್ಕಿಟು. ಮನೆಲಿ ನಂಗೆ ನನ್ನ ಅತ್ತೆಯವರಂದನೆ ಸುಮಾರ್ ಹಳೆ ಪದಗ, ಗಾದೆಗ ಸಿಕ್ಕಿತ್. ಇವ್ಕೆಲ್ಲ ನಾ ಚಿರರುಣಿ.

ಪದಗತೇಳ್ದು ಸಂದ್ರಲಿ ಸಿಕ್ಕೊ ರತ್ನಗಳಂಗೆ. ಹುಡ್ಕಿದಸ್ಟ್ ರತ್ನಗ ಸಿಕ್ಕ್‌ತಾ ಹೋದೆಗಡ. ಸಿಕ್ಕಿದ ಅಲ್ಪ ಸಮೆಲಿ ಆದಸ್ಟ್ ಪದರತ್ನಗಳ ಹುಡ್ಕಿಯೊಳೊತ ಗ್ಯಾನ ಮಾಡಿನೆ. ಇಸ್ಟ್ ಮುದ್ದಾದ ಬಾಸೆನ ಯಾವ ಹಿಂಜರಿಕೆನೂ ಇಲ್ಲದೆ ಮಾತಾಡೊಕು, ಉಳ್ಸೊಕು, ಬೆಳ್ಸೊಕು ಯೋಚನೆ ಸುರಾವುಟು.

ಒಟ್ಟಾರೆ ನೋಡಿಕನ ಅರೆಬಾಸೆನೂ ಇಸ್ಟ್ ಪೊರ್ಲುಳ್ಳ ಉಟ್ಟುತ ಗೊತ್ತಾತ್. ನನ್ನ ಬೊದ್ಕ್‌ಲಿ ಮರೆಯಲಾಗದ ಬಾರಿದೊಡ್ಡ ಅನುಬವ ಇದ್. ಈ ಕೆಲ್ಸಕೆ ಅವಕಾಸ ಮಾಡಿಕೊಟ್ಟ್, ಪ್ರೋತ್ಸಾಹಕೊಟ್ಟ ಅಕಾಡೆಮಿಯವ್ಕೆ ನನ್ನ ತುಂಬು ಹೃದಯದ ಅನಂತ ವಂದನೆಗ.

ಅರ್ತ ಕೋಸದ ಕೆಲ್ಸಕ್ಕೆ ಅವಕಾಸ ಮಾಡಿಕೊಟ್ಟ್ ಹಂಗೆ ಹೊಸ ಪದಗಳ ಹೇಳಿಕೊಟ್ಟ್ ಪ್ರತ್ಯಕ್ಷ ಮತ್ತೆ ಪರೋಕ್ಷಾಗಿ ಸಹಾಯ ಮಾಡ್ದವು. ಅರೆಬಾಸೆ ಅಕಾಡೆಮಿನ ಅದ್ಯಕ್ಷರಾದ ಲಕ್ಷ್ಮೀ ನಾರಾಯಣ ಕಜೆಗದ್ದೆ, ವಿಶ್ವನಾಥ ಬದಿಕಾನ, ಭರತೇಶ ಅಲಸಂಡೆ ಮಜಲು, ಎ.ಪಿ.ಧನಂಜಯ ಅಗೋಳಿಕಜೆ, ಸ್ಮಿತ ಅಮೃತರಾಜ್, ಬೈತಡ್ಕ ಜಾನಕಿ, ಚೊಕ್ಕಾಡಿ ಪ್ರೇಮ ರಾಘವಯ್ಯ, ಬಾರಿಯಂಡ ಆರ್. ಜೋಯಪ್ಪ, ಬೈತಡ್ಕ ಬೆಳ್ಯಪ್ಪ, ಕೆಂಜನ ಗೋಪಮ್ಮರಾಮಯ್ಯ, ಕೆಂಜನ ವಾಸುದೇವ್ ಪ್ರಸಾದ್, ಕೆಂಜನ ಜಾನಕಿ ಪೂವಯ್ಯ, ಕೆಂಜನ ದಿವ್ಯ ನವೀನ, ಕೆಂಜನ ಭಾರತಿ ಭೀಮಯ್ಯ, ನಿಂಗಪ್ಪನ ಪಾರ್ವತಿ, ಕೊಂಪುಳಿರ ಇಂದಿರಾ, ಕೋರನ ಸುನಿಲ್, ಮುಕ್ಕಾಟಿ ಯಾದಾವತಿ, ಮುಕ್ಕಾಟಿ ಬೊಳ್ಳವ್ವ, ಯಾಲದಾಳು ಪೂವಮ್ಮ, ಯಾಲದಾಳು ಸುಶೀಲ, ಯಾಲದಾಳು ಅಂಕಿತ, ಕುದುಪಜೆ ರೇಖಾಸುಬ್ರಹ್ಮಣ್ಯ, ಕಡ್ಯದ ಪಾರ್ವತಿ, ಪಟ್ಟಡ ಪ್ರಭಾಕರ, ಪೊಡನೋಳನ ಚಂಗಪ್ಪ, ಪೊಡನೋಳನ ಪವಿತ್ರಗಿರೀಶ್, ಪೊಡನೋಳನ ಪುಷ್ಪವೇಣಿ(ರಾಧ), ಪೊಡನೋಳನ ಘನಾವತಿ, ಪೊಡನೋಳನ ವಿಮಲ ಸುಧೀರ್, ಪೊಡನೋಳನ ವಿಮಲ, ಪೊಡನೋಳನ ನೀಲಮ್ಮ – ಎಲ್ಲವ್ಕೂ ದನ್ಯವಾದಗ.

ಅರೆಭಾಷೆ ಪದಕೋಶ – ಕಡಿಮೆ ಕಾಲಾವಧಿಯಲ್ಲಿ ವ್ಯಾಪಕ ಹಾಗೂ ವೈಜ್ಞಾನಿಕ ಮಾದರಿ



ಪ್ರೊ. ಬಿ.ಎ. ವಿವೇಕ ರೈ
ವಿಶ್ರಾಂತ ಉಪಕುಲಪತಿ
ಹಂಪಿ ಕನ್ನಡ ವಿಶ್ವವಿದ್ಯಾಲಯ

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯು ಪ್ರಕಟಿಸುತ್ತಿರುವ 'ಅರೆಭಾಷೆ ಪದಕೋಶ'ವು ನಿಘಂಟು ಕ್ಷೇತ್ರಕ್ಕೆ ಒಂದು ಮಹತ್ವದ ಕೊಡುಗೆ ಎಂದು ಭಾವಿಸುತ್ತೇನೆ. ಉಡುಪಿಯ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರವು ಡಾ. ಯು .ಪಿ. ಉಪಾಧ್ಯಾಯರ ಪ್ರಧಾನ ಸಂಪಾದಕತ್ವದಲ್ಲಿ ಹೊರತಂದಿರುವ ತುಳು ನಿಘಂಟು ಯೋಜನೆಯ ಸಲಹಾ ಸಮಿತಿಯ ಸದಸ್ಯನಾಗಿ ಕೆಲಸಮಾಡಿದ ನನ್ನ ಅನುಭವದಿಂದ ಹೇಳುವುದಾದರೆ ಇಷ್ಟು ಕಡಿಮೆ ಕಾಲಾವಧಿಯಲ್ಲಿ ಇಷ್ಟು ವ್ಯಾಪಕ ಹಾಗೂ ವೈಜ್ಞಾನಿಕ ಮಾದರಿಯ 'ಅರೆಭಾಷೆ ಪದಕೋಶ' ರಚನೆ ಮಾಡಿರುವುದು ಒಂದು ವಿಶಿಷ್ಟ ಸಾಧನೆ.

ಈ ಪದಕೋಶದಲ್ಲಿ ಅರೆಭಾಷೆಯ ಪದವನ್ನು ಮೊದಲು ಕೊಟ್ಟು, ಬಳಿಕ ಅದರ ರೋಮನ್ ಲಿಪಿಯಲ್ಲಿನ(ಐಪಿಎ)ಲಿಪ್ಯಂತರ, ನಂತರ ಅದರ ಅರ್ಥವನ್ನು/ಗಳನ್ನು ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಕೊಡಲಾಗಿದೆ. ಮೂಲಪದದ ಅರ್ಥದ ಸ್ಪಷ್ಟತೆಗಾಗಿ ಸಂದರ್ಭಕ್ಕೆ ಅನುಗುಣವಾಗಿ ಅರೆಭಾಷೆಯ ನುಡಿಗಟ್ಟು, ಗಾದೆಗಳು, ಒಗಟುಗಳು ಮುಂತಾದವುಗಳ ಪ್ರಯೋಗಗಳನ್ನು ಬಳಸಲಾಗಿದೆ. ಅರೆಭಾಷೆಗಳ ಪದಗಳನ್ನು ನಮೂದಿಸುವಾಗ ವ್ಯಾಕರಣದ ನೆಲೆಯಲ್ಲಿ ನಾಮಪದ, ಕ್ರಿಯಾಪದ, ಸರ್ವನಾಮ, ನಾಮ ವಿಶೇಷಣ, ಗುಣವಿಶೇಷಣ ಮುಂತಾದ ಸೂಚನೆಗಳನ್ನು ಕೊಡಲಾಗಿದೆ. ಒಂದು ಪದಕ್ಕೆ ಭಿನ್ನ ಅರ್ಥಗಳು ಇರುವಾಗ ಅಂತಹ ಅರ್ಥಗಳನ್ನು ಪ್ರತ್ಯೇಕಿಸಲು 1,2,3 ಇತ್ಯಾದಿ ಅಂಕೆಗಳನ್ನು ಸೂಚಿಸಲಾಗಿದೆ.

ಅರೆಭಾಷೆಗೆ ಸಂಬಂಧಿಸಿದಂತೆ ಈ ಹಿಂದೆ ಪ್ರೊ. ಕೆ. ಕುಶಾಲಪ್ಪಗೌಡ, ಕೆ.ಆರ್. ಗಂಗಾಧರ್, ಪ್ರೊ. ಚೆ. ರಾಮಸ್ವಾಮಿ ಅವರು ರಚಿಸಿದ ವ್ಯಾಕರಣ ಗ್ರಂಥಗಳು, ಶಬ್ದಕೋಶಗಳು ಒಳ್ಳೆಯ ಅಡಿಪಾಯವನ್ನು ಹಾಕಿವೆ. ಈಗ ಅಕಾಡೆಮಿ ಪ್ರಕಟಿಸುತ್ತಿರುವ ಈ ಪದಕೋಶವು ಸುಮಾರು ೧೮ ಸಾವಿರ ಅರೆಭಾಷೆಯ ಪದಗಳನ್ನು ಒಳಗೊಂಡು ಅತ್ಯಂತ ಶಾಸ್ತ್ರೀಯವಾಗಿ ರೂಪಿತವಾಗಿದೆ. ಈ ಪದಕೋಶದ ಪ್ರತಿಫಲವನ್ನು ಅರೆಭಾಷೆಯ ಸಾಹಿತಿಗಳು ಮತ್ತು ಸಂಶೋಧಕರು ಬಳಸಿಕೊಂಡು ಅರೆಭಾಷೆಯ ಸಾಹಿತ್ಯ ನಿರ್ಮಾಣಕ್ಕೆ ಹೊಸ ಸೊಗಡನ್ನು ಕೊಡಲು ಉತ್ತಮ ಅವಕಾಶವಿದೆ. ಅರೆಭಾಷಿಕರು ಈ ಪದಕೋಶದ ನೆರವಿನಿಂದ ತಮ್ಮ ಆಡುಭಾಷೆಯನ್ನು ಇನ್ನಷ್ಟು ಸಮೃದ್ಧವಾಗಿ ಬಳಸಲು ಸಾಧ್ಯತೆಗಳಿವೆ. ತುಳು, ಕನ್ನಡ ಮತ್ತು ಇತರ ದ್ರಾವಿಡ ಭಾಷಾ ವಿದ್ವಾಂಸರು ಈ 'ಅರೆಭಾಷೆ ಪದಕೋಶ'ದ ಅಧ್ಯಯನದಿಂದ ತಮ್ಮ ಭಾಷೆಯ ಜೊತೆಗೆ ಅನುಸಂಧಾನ ಮಾಡುವ ಮೂಲಕ ತೌಲನಿಕ ದ್ರಾವಿಡ ಭಾಷಾ ವಿಜ್ಞಾನಕ್ಕೆ ಹೊಸ ಮಗ್ಗುಲುಗಳನ್ನು ಜೋಡಿಸಲು ಅವಕಾಶಗಳು ತೆರೆದುಕೊಂಡಿವೆ.

ಕೊರೊನಾ ಎಲ್ಲೆಡೆ ವ್ಯಾಪಿಸಿ, ಮನುಷ್ಯರ ನಡುವೆ ಸಂಪರ್ಕ ಸೇತು ಕಡಿದು ಹೋಗಿದ್ದಾಗಲೂ ಈ ಪದಕೋಶದ ಸಂಪಾದಕರಾದ ಡಾ. ವಿಶ್ವನಾಥ ಬದಿಕಾನ ಮತ್ತು ಭರತೇಶ ಅಲಸಂಡೆಮಜಲು ಅವರು ನನ್ನ ಮನೆಗೆ ಬಂದು ಪದಕೋಶದ ಬಗ್ಗೆ ಸಮಾಲೋಚನೆ ಮಾಡಿದ್ದನ್ನು ಸ್ಮರಿಸಿಕೊಳ್ಳುತ್ತಿದ್ದೇನೆ. ಅಂತಹ ವಿಷಮ ಪರಿಸ್ಥಿತಿಯಲ್ಲಿ ಕೂಡ ಪದಕೋಶದ ಕಾಯಕವನ್ನು ನಿರಂತರವಾಗಿ ನಡೆಸಿಕೊಂಡು ಬಂದ ಈ ಸಂಪಾದಕರ ಶ್ರದ್ಧೆ ಮತ್ತು ದುಡಿಮೆ ಅಪೂರ್ವವಾದುದು.

ಈ ವಿದ್ವತ್‌ನ ಘನಕಾರ್ಯಕ್ಕಾಗಿ ಅಕಾಡೆಮಿಯ ಅಧ್ಯಕ್ಷರನ್ನು ಮತ್ತು ಸಂಪಾದಕ ಬಳಗದ ಎಲ್ಲರನ್ನು ಅಭಿನಂದಿಸಲು ಸಂತೋಷಪಡುತ್ತೇನೆ.

ಅರೆಭಾಷೆ ಪದಕೋಶ – ಹೊಸ ಪದಗಳನ್ನು ಸೃಷ್ಟಿಸಿಕೊಳ್ಳುವ ಸೃಜನಶೀಲತೆ




✍ **ಡಾ. ಕೆ. ಚಿನ್ನಪ್ಪ ಗೌಡ**
ವಿಶ್ರಾಂತ ಕುಲಪತಿಗಳು
'ಸಿರಿಬಾಮ' ಅಸ್ಸೈಗೋಳಿ, ಮಂಗಳೂರು – 574199
ಮೊ: +91 9448726464

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಅಸ್ತಿತ್ವಕ್ಕೆ ಬಂದ ಮೇಲೆ, ಮುಖ್ಯವಾಗಿ ಕರ್ನಾಟಕದ ಸುಳ್ಯ ಮತ್ತು ಮಡಿಕೇರಿ ಭಾಗದ ಗೌಡರ ಮನೆ ಮಾತು ಮತ್ತು ಇತರ ಸಮುದಾಯಗಳ ಸಾಂಸ್ಕೃತಿಕ ಭಾಷೆಯಾಗಿರುವ ಅರೆಬಾಸೆಗೆ ಸಂಬಂಧಿಸಿದಂತೆ ಸಂಘಟಿತ ಪ್ರಯತ್ನದಿಂದ ನಡೆದ ಮಹತ್ವದ ಕೆಲಸವೆಂದರೆ ಅರೆಭಾಷೆ ಪದಕೋಶ ರಚನೆ. ಪ್ರಸಿದ್ಧ ಭಾಷಾವಿಜ್ಞಾನ ಪ್ರೊ. ಕೋಡಿ ಕುಶಾಲಪ್ಪ ಗೌಡರು 1970ರಲ್ಲಿ ಅವರ 'ಗೌಡ ಕನ್ನಡ ಕೃತಿಯಲ್ಲಿ ಅರೆಭಾಷೆಯ ಪದಗಳನ್ನು ಸಂಗ್ರಹಿಸಿಕೊಟ್ಟು ಅವುಗಳಿಗೆ ಇಂಗ್ಲಿಷಿನಲ್ಲಿ ಅರ್ಥಗಳನ್ನು ನೀಡಿದ್ದರು. ಶ್ರೀ ಕೆ.ಆರ್. ಗಂಗಾಧರ್ ತನ್ನ 'ಅರೆಭಾಷೆ–ಕನ್ನಡ–ಇಂಗ್ಲಿಷ್ ಶಬ್ದಕೋಶ'ದಲ್ಲಿ ಅವರು ಅರೆಭಾಷೆಯ ಪದಗಳಿಗೆ ಕನ್ನಡ ಇಂಗ್ಲಿಷ್ ಅರ್ಥಗಳನ್ನು ನೀಡುವುದರ ಜೊತೆಗೆ ಗಾದೆ ಮತ್ತು ನುಡಿಗಟ್ಟುಗಳನ್ನು ಸಂಗ್ರಹಿಸಿ ಪ್ರತ್ಯೇಕವಾಗಿ ಪ್ರಕಟಿಸುವುದರ ಮೂಲಕ ಶಬ್ದಕೋಶದ ಉಪಯುಕ್ತತೆಯನ್ನು ಹೆಚ್ಚಿಸಿದ್ದಾರೆ. ಪ್ರಸ್ತುತ ಅರೆಭಾಷೆ ಪದಕೋಶದಲ್ಲಿ ಹದಿನೆಂಟು ಸಾವಿರಕ್ಕಿಂತ ಹೆಚ್ಚು ಪದಗಳಿವೆ. ನಿಘಂಟು/ಪದಕೋಶ ರಚನೆಯ ಆಧುನಿಕ ತತ್ವಗಳನ್ನು ಅಳವಡಿಸಿಕೊಂಡು ಈ ಪದಕೋಶವನ್ನು ರಚಿಸಲಾಗಿದೆ. ತಂಡದ ಸದಸ್ಯರು ಕ್ಷೇತ್ರಕಾರ್ಯವನ್ನು ನಡೆಸಿ ದಿನ ಬಳಕೆಯಲ್ಲಿರುವ ಪದಗಳನ್ನು ದಾಖಲಿಸಿಕೊಂಡು ಪ್ರಚಲಿತ ಇರುವ ಅರ್ಥಗಳನ್ನು ಸಂಗ್ರಹಿಸಿ ಕೊಟ್ಟಿದ್ದಾರೆ. ಕೋಶದಲ್ಲಿ ಸೇರಬೇಕಾದ ಪದಗಳ ಸಂಗ್ರಹ, ಅವುಗಳ ಕ್ರೋಢೀಕರಣ, ಧ್ವನಿ ಮತ್ತು ಅಕ್ಷರ ಪಾತಳಿಯಲ್ಲಿ ಪದಗಳ ದಾಖಲೀಕರಣ, ಕನ್ನಡ ದೇಶಿಯ ಮತ್ತು ಇಂಗ್ಲಿಷ್ ಜಾಗತಿಕ ಭಾಷೆಯಲ್ಲಿ ಅರ್ಥ ವಿವರಣೆ, ಪ್ರಾಯೋಗಿಕ ವಾಕ್ಯಗಳು, ಪದಗಳ ಬಳಕೆಯ ನೆಲೆಗಳು ಹೀಗೆ ಪದಕೋಶ ರಚನಾಶಾಸ್ತ್ರದ ನಿರ್ದಿಷ್ಟ ನಿಯಮಗಳನ್ನು ಎಚ್ಚರವಹಿಸಿ ಪಾಲಿಸಿದ್ದಾರೆ. ಅರೆಭಾಷೆಯಲ್ಲಿರುವ ಬಹುಬಗೆಯ ಲಿಖಿತ ದಾಖಲೆಗಳನ್ನು ಪರಿಶೀಲಿಸಿ ಪದಗಳನ್ನು ಕಲೆಹಾಕಿದ್ದಾರೆ. ಗಾದೆ, ಒಗಟು, ನುಡಿಗಟ್ಟು ಹೀಗೆ ಅರ್ಥ ವಿವರಣೆಗೆ ಪೂರಕವಾದ ಸಾಹಿತ್ಯಿಕ ಸಾಮಗ್ರಿಗಳನ್ನು ಒದಗಿಸಿದ್ದಾರೆ. ಹಾಗಾಗಿ ಈ ಪದಕೋಶಕ್ಕೆ ಚಾರಿತ್ರಿಕ, ಸಮಕಾಲೀನ ಮತ್ತು ಸಾಂಸ್ಕೃತಿಕ ಮಹತ್ವ ಪ್ರಾಪ್ತವಾಗಿದೆ. ಪದಕೋಶದ ಬಗೆಗಿನ ನಮ್ಮ ಬದಲಾದ ಮನೋಧರ್ಮಕ್ಕೆ ಈ ಸಂಪುಟವು ಅನುಗುಣವಾಗಿದೆ. ಕೇವಲ ಪದಗಳ ಅರ್ಥಕ್ಕಾಗಿ ನಿಘಂಟು ನೋಡುವುದರ ಬದಲಾಗಿ ಕೋಶವನ್ನು ಓದುವ ಪರಿಪಾಠವನ್ನು ನಾವು ರೂಢಿಸಿಕೊಳ್ಳಬೇಕು. ಈ ದೃಷ್ಟಿಯಿಂದ ನೋಡಿದರೆ ಪದಕೋಶವು ಕೂಡಾ ಒಂದು ಸಾಹಿತ್ಯ ಕೃತಿ. ಅರೆಭಾಷೆಯ ಸಾಂಸ್ಕೃತಿಕ ಸಂರಚನೆಯನ್ನು ಈ ಪದಕೋಶವು ಸಮರ್ಥವಾಗಿ ಕಟ್ಟಿಕೊಡುತ್ತದೆ. ಅರೆಭಾಷೆಯು ಸ್ವತಂತ್ರ ಮತ್ತು ಸ್ವಾಯತ್ತವಾದ ಭಾಷೆ. ಇದನ್ನು ಮಾತನಾಡುವ ಜನರ ಎಲ್ಲಾ ಅಗತ್ಯಗಳನ್ನು ಪೂರೈಸಿದ ಪ್ರಬುದ್ಧವಾದ ಭಾಷೆ. ಅರೆಭಾಷಿಗರ ಲೋಕದೃಷ್ಟಿಯನ್ನು ಯಶಸ್ವಿಯಾಗಿ ಬಿಂಬಿಸಿದ ಭಾಷೆ. ಈ ಭಾಷೆಯನ್ನು ಮಾತನಾಡುವ ಜನರ ಭಾವನೆ ಮತ್ತು ವೈಚಾರಿಕತೆಯನ್ನು ಸಂವಹನ ಮಾಡಿದ ಭಾಷೆ. ಈ ಅಂಶಗಳನ್ನು ಈ ಪದಕೋಶವು ಸಾಬೀತು ಪಡಿಸಿದೆ. ಹಳೆಯ ಕಾಲದ ಪದಗಳನ್ನು ಬಳಸಿ ಅವುಗಳನ್ನು ಉಳಿಸುವ ಪ್ರಯತ್ನ ಮತ್ತು ಹೊಸಕಾಲದ ಅಗತ್ಯಕ್ಕೆ ತಕ್ಕ ಹಾಗೆ ಹೊಸ ಪದಗಳನ್ನು ಸೃಷ್ಟಿಸಿಕೊಳ್ಳುವ ಸೃಜನಶೀಲತೆ – ಈ ಎರಡು ನಿಟ್ಟುಗಳಲ್ಲಿ ಅರೆಭಾಷಿಗರು ತೊಡಗಿಸಿಕೊಳ್ಳಲು ಈ ಪದಕೋಶವು ಪ್ರೇರಕವಾಗಲಿ ಎಂದು ಹಾರೈಸುತ್ತೇನೆ.

ಅರೆಭಾಷೆ ಪದಕೋಶ ಯೋಜನೆಯ ಹದಿನೆಂಟು ತಿಂಗಳುಗಳ ಸಣ್ಣ ಅವಧಿಯಲ್ಲಿ ಕಾಯಕ ನಿಷ್ಠೆಯಿಂದ ಕೆಲಸ ಮಾಡಿದ ತಂಡದ ಎಲ್ಲ ಸದಸ್ಯರನ್ನು, ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಲಕ್ಷ್ಮೀನಾರಾಯಣ ಕಜೆಗದ್ದೆ ಮತ್ತು ಸರ್ವ ಸದಸ್ಯರನ್ನೂ, ಪದಕೋಶದ ರಚನೆಗೆ ಹಗಲಿರುಳು ಶ್ರಮಿಸಿದ ಡಾ. ವಿಶ್ವನಾಥ ಬದಿಕಾನ ಮತ್ತು ಭರತೇಶ ಅಲಸಂಡೆಮಜಲು ಅವರನ್ನೂ ತುಂಬು ಹೃದಯದಿಂದ ಅಭಿನಂದಿಸುತ್ತೇನೆ.

ಸಣ್ಣ ಬಾಸೆಗೆ ತುಂಬ ತೊಂದರೆಲಿರಿಕನ ಅರೆಬಾಸೆಗೊಂದ್ ಪದಕೋಶ



ಪುರುಷೋತ್ತಮ ಬಿಳಿಮಲೆ
ವಿಶ್ರಾಂತ ಪಾಧ್ಯಾಪಕರ್,
ಜೆಎನ್‌ಯು ನವದೆಹಲಿ

139 ಕೋಟಿ ಜೆನ ಇರ್‌ವ ನಮ್ಮ ದೇಸಲಿ 19,560ಕ್ಕೂ ಹೆಚ್ಚ್ ಸಣ್ಣ ಮತ್ತೆ ದೊಡ್ಡ ಬಾಸೆಗ ಒಳೊ. ಈ ಕಾರಣಂದ ಭಾರತ ಜಗತ್ತ್‌ಲೇ ಬಹು ಬಾಸೆಗಳ ದೇಸತ ಹೆಸ್ರ್ ಪಡ್ಕೊಂಡುಟ್ಟು. ನಮ್ಮ ಜೆನ ಅವ್ಕೆ ಬೇಕಾದ ಬಾಸೆಲೆ ಕುಸಿಲೇ ಮಾತಾಡ್ವೆ. ಅಗತ್ಯ ಬೀಳ್‌ಕನ ಬೇರೆ ಬೇರೆ ಬಾಸೆನ ಒಟ್ಟ್ ಸೇರ್ಸಿಕಂಡ್ ಕೂಡಾ ಮಾತಾಡ್ವೆ. ಸ್ವಾತಂತ್ರ್ಯ ಸಿಕ್ಕಿದ ಮೇಲೆ ಒಟ್ಟು 24 ಬಾಸೆಗಳ ಸಂವಿದಾನದ ಎಂಟನೇ ಪರಿಚ್ಚೇದಕ್ಕೆ ಸೇರಿಸಿದೊ. ಇದರ್‌ಂದಾಗಿ ಉಳ್ದ ಬಾಸೆಗ ಹಿಂದೆ ಬಿದ್ದು ಬುಟ್ವೊ. ಅದ್ರಲ್ಲಿನೂ ಸಣ್ಣ ಊರ್‌ಲಿ ಹಞ್ಞ ಸಂಕೆಲಿ ಇರ್‌ವ ಜೆನಗ ಮಾತಾಡ್ವ ಬಾಸೆನ ಕೇಳೊವೇ ಇಲ್ಲದಂಗಾತ್. ಇದರ ಬಗ್ಗೆ ಇತ್ತೀಚಿನ ದಿನಲಿ ಎಸ್ಟ್ ಬೇಕೋ ಅಸ್ಟೇ ಚರ್ಚೆನೂ ನಡೆತಾ ಇಲ್ಲೆ.

ಹಿಂಡೆ ನಮ್ಮ ದೇಸಲಿ ಸಣ್ಣ ಬಾಸೆಗ ತುಂಬ ತೊಂದರೆಲಿರಿಕನ ಅರೆಬಾಸೆಗೊಂದು ಪದಕೋಶ ತಯಾರಾಗುಟು ತೇಳುವ ವಿಸಯಕೆ ಬಾರೀ ಮಹತ್ವ ಉಟ್ಟು. ಈ ಪದಕೋಶ ಕೆಲ್ಸ ಮುಂದೆ ಅರೆಬಾಸೆನ ಶಕ್ತಿನ ಹೆಚ್ಚಿಸಿದೆ. ಅರೆಬಾಸೆನ ಸುತ್ತಮುತ್ತ ಇರ್‌ವ ಬಾಸೆಗ ಬೆಳ್ಕೊಂಡಿರಿಕನ ಅರೆಬಾಸೆನೂ ಬೆಳ್ದರೆ ಆ ಬಾಸೆನ ಮಾತಾಡ್ವ ಜೆನಗಳ ಸ್ವಾಬಿಮಾನನೂ ಹೆಚ್ಚಿದೆ. ಇಂದ್‌ನ ಕಾಲಕೆ ಇದ್ ಅಗತ್ಯ ಆಕ್ಕಾದ ಕೆಲ್ಸ.

ಅರೆಬಾಸೆನ ಹಾಂಗೆ ಮಾತ್‌ಲಿ ಮಾತ್ರ ಹೆಚ್ಚಿಗೆ ಕಾಂಬ ಒಂದ್ ಬಾಸೆಗೆ ಪದಕೋಶ ತಯಾರ್ ಮಾಡ್ದು ಎಸ್ಟ್ ಕಸ್ಟದ ಕೆಲ್ಸತ ನಂಗೆ ಗೊತ್ತುಟು. ಇದ್ಕೆ ಬಾಯಿ ಮಾತ್‌ಲಿರ್‌ವ ಪದಗಳ ಸಂಗ್ರಹ ಮಾಡೊಕು. ನೂರಾರ್ ಜೆನರ ಮಾತಾಡ್ಸೊಕು, ಒಂದೇ ಸಬ್ದನ ಬೇರೆ ಬೇರೆ ಜೆನ ಬೇರೆ ಬೇರೆ ರೀತಿಲಿ ಹೇಳ್ವೆ. ಆಗ ನಾವು ಯಾವುದರ ಪದಕೋಶಕ್ಕೆ ತಕೊಂಕೂತ ಚರ್ಚೆ ಮಾಡೊಕು. ಒಂದು ಸಬ್ದ ಯಾವ ಸಂದರ್ಬಲಿ ಹೆಂಗೆ ಬಳಕೆ ಆದೆ? ಊರ್‌ಂದ ಊರಿಗೆ ಅದ್ ಹೆಂಗೆ ಬದಲಾದೆತೇಳಿ ಹುಡ್ಕೊಕು. ಈ ಪದಕೋಶ ತಯಾರ್ ಮಾಡ್ದೊವು ಅಂತ ಕೆಲ್ಸಗಳ ಕಸ್ಟಪಟ್ಟ್ ಮಾಡ್ಯೊಳೊ. ಹೊಸ ಹೊಸ ಪದಗಳ ಹುಡ್‌ಕ್ಯೊಳೊ. ಅದರ ಇಂಗ್ಲಿಷ್ ಅನುವಾದ ಕೊಟ್ಟೊಳೊ. ಸರಿಯಾದ ರೀತಿಲಿ ಪದಗಳ ಜೋಡಿಸಿಯೊಳೊ. ಅರೆಬಾಸೆ ಮಾತಾಡೊವ್ಕ ಮತ್ತೆ ಅರೆಬಾಸೆನ ಬಗ್ಗೆ ಅದ್ಯಯನ ಮಾಡೊವ್ಕ ಇದ್ ಮುಂದಿನ ದಿನಲಿ ತುಂಬ ಉಪಯೋಗಕ್ಕೆ ಬಂದದೆ. ಅರೆಬಾಸೆನಂಗೇ ಇರ್‌ವ ಸಾವಿರಾರ್ ಸಣ್ಣ ಬಾಸೆಗಳಿಗೆ ಈ ಪದಕೋಶ ಕಂಡಿತಾ ಪ್ರೇರಣೆ ನೀಡಿಕ್ಕುಟ್ಟು.

ಇಂಥ ಬಾರೀ ಮಹತ್ವದ ಕೆಲ್ಸ ಪೊರ್ಲುಲಿ ಮಾಡ್‌ದ ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿನ ಅಧ್ಯಕ್ಷರ್ ಮತ್ತೆ ಸದಸ್ಯರಿಗೆಎಲ್ಲ ಭಾಷಾ ಪ್ರೇಮಿಗಳ ಪರವಾಗಿ ಅಬಿನಂದನೆಗ. ಈ ಕೆಲ್ಸ ಮಾಡ್ವ ಮೂಲಕ ಅರೆಭಾಷೆ ಅಕಾಡೆಮಿಯವು ಬೇರೆ ಅಕಾಡೆಮಿಗಳ್‌ಗೂ ಒಂದು ಮಾದರಿ ಹಾಕಿಕೊಟ್ಟಂಗೆ ಅತ್.

ಅರೆಭಾಷೆ ಪದಕೋಶಕ್ಕೆ ಐತಿಹಾಸಿಕ ಮಹತ್ವ




ಡಾ| ಕೆ. ಪದ್ಮನಾಭಕೇಕುಣ್ಣಾಯ
'ಶ್ರೀನವದುರ್ಗಾ',
ಅಂಚೆ : ಕೊರಂಗ್ರಪಾಡಿ–574 118, ಉಡುಪಿ.

ನಿಘಂಟು ಶಾಸ್ತ್ರ ಎಂಬುದು ಬಹಳ ವಿಸ್ತಾರವಾಗಿ ಹಬ್ಬಿದ ಒಂದು ಶಬ್ದಸಾಗರ. ಬೇರೆಲ್ಲ ಕೃತಿಗಳು ಒಂದೊಂದು ವಿಷಯದ ಆಧಾರದಲ್ಲಿ ರಚಿತವಾದರೆ ನಿಘಂಟು ಮಾತ್ರ ಅನೇಕ ವಿಷಯಗಳನ್ನು ಒಳಗೊಂಡು ನಿರ್ಮಾಣವಾಗುತ್ತದೆ. ಇದು ಒಳಗೊಳ್ಳುವ ವಿಚಾರಗಳಿಗೆ ಇತಿಮಿತಿಗಳಿಲ್ಲ; ಮಡಿ ಮೈಲಿಗೆಗಳಿಲ್ಲ; ಶ್ಲೀಲಾಶ್ಲೀಲಗಳ ಪರಿವೆಯಿಲ್ಲ; ಅಂತಃಶಿಸ್ತೀಯ ಗಡಿ ಗೊಂದಲಗಳಿಲ್ಲ; ಸಮಯದ ಗೊಡವೆಯಿಲ್ಲ; ವ್ಯಾಪ್ತಿ–ವಿಸ್ತಾರಗಳ ಪರಿಮಿತಿಯಿಲ್ಲ. ಎಲ್ಲ ವಿಷಯ ವಿಚಾರಗಳನ್ನೂ ತನ್ನಲ್ಲಿ ಒಳಗೊಳಿಸಿಕೊಳ್ಳುವ ವಿಶಾಲ ಸಂಸ್ಕಾರದ ಸಂಶೋಧನ ಕಾರ್ಯವಿದು. ಆದರೆ....

ನಿಘಂಟು ರಚನಾ ಕಾರ್ಯದಲ್ಲಿ ಕೋಶಕಾರನಿಗೆ ಪೂರ್ಣ ಸ್ವಾತಂತ್ರ್ಯವಿರಬೇಕು. ಸಮಯದ ಮಿತಿಯನ್ನು ಹೇರಬಾರದು; ಆತನೂ ಸಮಯದ ಗೊಡವೆಯಿಲ್ಲದೆಯೇ ಕೆಲಸ ಮಾಡಬೇಕು. ಬಹುಶ್ರುತನೂ ಆಗಿರಬೇಕು. ಶಾಸ್ತ್ರ ಶುದ್ಧನೂ ಶಾಸ್ತ್ರ ಬದ್ಧನೂ ಆಗಿರಬೇಕು. ಶಬ್ದ ಸಂಗ್ರಾಹಕರ ಗಡಣವೇ ಇದ್ದರೂ ಅಂತಿಮ ನಿರ್ಧಾರ ಪ್ರಧಾನ ಸಂಪಾದಕನದೇ ಆಗಿರಬೇಕು. ಅದರ ಗುಣಮಟ್ಟವು ಆತನ ಭಾಷಾಜ್ಞಾನ, ವಿಷಯ ಜ್ಞಾನ ಮೊದಲಾದುವುಗಳನ್ನು ಅವಲಂಬಿಸಿರುತ್ತದೆ. ಇವೆಲ್ಲ ಖಾಸಗಿಯಾಗಿ ನಿಘಂಟು ರಚಿಸುವವನಿಗೆ ಸಾಧ್ಯ. ಆದರೆ ಒಂದು ಸಂಸ್ಥೆಯು ಪ್ರಾಯೋಜಿಸುವಾಗ ಅದು ಹಾಕಿದ ಇತಿಮಿತಿಯೊಳಗೆ ಕೆಲಸ ಮಾಡಬೇಕಾದುದು ಅನಿವಾರ್ಯವಾಗುತ್ತದೆ. ಸಂಪಾದಕ ವರ್ಗವಿದ್ದರೆ ಅದರ ಸಹಕಾರದ ಮೇಲೆ ಅವಲಂಬಿತವಾಗಿರಬೇಕಾಗುತ್ತದೆ. ಇಂತಹ ಇತಿಮಿತಿಗಳನ್ನು ಸಹಿಸಿಕೊಂಡೂ ಉತ್ತಮ ನಿಘಂಟುವನ್ನು ಹೊರತರುವುದು ಒಂದು ಅಗಾಧ ಸಾಹಸವೇ ಸರಿ.

ಪ್ರಸ್ತುತ ಈ 'ಅರೆಭಾಷೆ ಪದಕೋಶ'ವು ಅತ್ಯಂತ ಕನಿಷ್ಠ ಸಮಯದಲ್ಲಿ ತಯಾರಿಸಲ್ಪಟ್ಟುದು. ಅರೆಭಾಷೆಗೆ ಇದೊಂದು ಐತಿಹಾಸಿಕ ಮಹತ್ತ್ವವುಳ್ಳ ಪದಕೋಶ. ಅರೆಭಾಷೆಯ ಬೆಳವಣಿಗೆಗೆ ಇದು ಅಡಿಪಾಯವಾಗಲೆಂದು ಆಶಿಸುವೆ. ಇದರಿಂದ ಅರೆಭಾಷೆಯನ್ನು ಶಾಸ್ತ್ರೀಯಗೊಳಿಸಲು, ಸತ್ತ್ವಯುತವಾದ ಸಾಹಿತ್ಯ ಬೆಳೆದು ಬರಲು, ವ್ಯಾಕರಣಾದಿ ಶಾಸ್ತ್ರಕೃತಿಗಳು ರಚನೆಗೊಳ್ಳಲು ಈ ಪದಕೋಶವು ಪ್ರೇರಕವಾಗಲಿ ಎಂದು ಆಶಿಸುತ್ತಾ, ಇದರ ಪ್ರಾಯೋಜಕರಿಗೆ, ಸಿದ್ಧಪಡಿಸಿದ ಸಂಪಾದಕರಿಗೆ, ಇದಕ್ಕಾಗಿದುಡಿದ ಪ್ರತಿಯೊಬ್ಬರಿಗೂ ಹೃತ್ಪೂರ್ವಕ ಅಭಿನಂದನೆಗಳನ್ನೂ ಶುಭಾಶಯಗಳನ್ನೂ ಸಲ್ಲಿಸುವೆ.

ಅರೆಭಾಷೆ – ಸಮುದಾಯದ ಸಾಂಸ್ಕೃತಿಕ ಪರಂಪರೆಯನ್ನು ಕಾಪಿಟ್ಟುಕೊಂಡಿದೆ



ಡಾ. ಹಾ. ತಿ. ಕೃಷ್ಣೇಗೌಡ,
ಗೌರವ ಸಂಪಾದಕ,
ಕನ್ನಡ ವಿಶ್ವಕೋಶ, ಮೈಸೂರು

ಅರೆಭಾಷೆ ಕರ್ನಾಟಕದ ಒಂದು ಪ್ರಾದೇಶಿಕ ಭಾಷೆ. ಇದನ್ನು ಕನ್ನಡದ ಅಪಭ್ರಂಶ ರೂಪವೆಂದು ಕರೆಯಬಹುದು. ಒಂದು ಭಾಷೆಯ ಪದ ಸಂಪತ್ತು ಆ ಭಾಷೆಯ ಸಮೃದ್ಧತೆಯನ್ನು ತಿಳಿಸುತ್ತದೆ. ಅರೆಭಾಷೆ ಆಡುವ ಸಮುದಾಯ ಕೊಡಗು ಜಿಲ್ಲೆಯ ಮಡಿಕೇರಿ, ಸೋಮವಾರಪೇಟೆ, ವಿರಾಜಪೇಟೆಯಲ್ಲಿ, ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು, ಸುಳ್ಯ, ಕಡಬ, ಬೆಳ್ತಂಗಡಿ, ಬಂಟ್ವಾಳ ತಾಲೂಕಿನ ವಿಟ್ಲ, ಪಾಣೆ ಮಂಗಳೂರುಗಳಲ್ಲಿ ಚದುರಿದಂತೆ ನೆಲೆಸಿದ್ದಾರೆ. ಸಾಂಸ್ಕೃತಿಕವಾಗಿ ಇವರನ್ನು ಹತ್ತು ಕುಟುಂಬ ಹದಿನೆಂಟು ಗೋತ್ರದ ಗೌಡರೆಂದು ಗುರುತಿಸಲಾಗುತ್ತದೆ. ಈ ಸಮುದಾಯದ ಜೊತೆ ಜೊತೆಗೆ ಇತರ ಜನರೂ ಅರೆಭಾಷೆಯನ್ನು ಮಾತನಾಡುತ್ತಾರೆ.

ಪ್ರತಿಯೊಂದು ಭಾಷೆಯನ್ನಾಡುವ ಜನಸಮುದಾಯಕ್ಕೆ ಒಂದು ಸಂಸ್ಕೃತಿ, ಪರಂಪರೆ ಇರುತ್ತದೆ. ಈ ದೃಷ್ಟಿಯಿಂದ ಅರೆಭಾಷೆ ಸಮುದಾಯ ತನ್ನ ಸಾಂಸ್ಕೃತಿಕ ಪರಂಪರೆಯನ್ನು ಕಾಪಿಟ್ಟುಕೊಂಡು ಬಂದಿದೆ. ಅರೆಭಾಷೆಯು ಹಳೆಗನ್ನಡದ ಕೆಲವು ಮೂಲ ರೂಪಗಳನ್ನು ಹಾಗೇ ಉಳಿಸಿಕೊಂಡು ಬಂದಿರುವುದನ್ನು ನಾವು ಗುರುತಿಸಬಹುದು. ಉದಾಹರಣೆಗೆ, 'ಒಳು' ಎಂಬ ಪದದ ಅರ್ಥ 'ಇದೆ', ಎಂದು (ಒಳೊ–ಇದ್ದಾರೆ / ಇದ್ದಾವೆ, ಒಳೆ–ಇದ್ದೇನೆ). ಹಳೆಗನ್ನಡ ಒಳ್–ಧಾತು ಮೂಲಸ್ವರೂಪದಲ್ಲಿಯೇ ಈ ಭಾಷೆಯಲ್ಲಿ ಉಳಿದಿರುವುದು ವಿಶೇಷ.

ಒಂದು ಪ್ರಾದೇಶಿಕ ಭಾಷೆಯ ಪದಕೋಶವನ್ನು ಸಿದ್ಧಪಡಿಸುವಾಗ ಮುಖ್ಯವಾಗಿ ವಿಶೇಷ ಪದಗಳನ್ನು ಸಂಗ್ರಹಿಸಿ, ಸಾಮಾನ್ಯ ಪದಗಳನ್ನು ಬಿಟ್ಟು, ಅವುಗಳಿಗೆ ಅರ್ಥ ನೀಡಬೇಕು. ಉದಾ: ಅಂಗಕಳಿ, ಅಡೊಳಿ, ಅಪೆ, ಏಪೆ, ಅರಂಬುಳಿ, ಗೈಪು, ಒಣ್ಕು, ಬರ್ಗೆಲ, ಒಳಿ (ಮಚಾನ್), ಕಂಗಣ, ಕೂಚು, ಕೂಳಕ್ಕಿ, ಕೈಮಡ, ಕೊಳಂಬೆ, ಕೈಪೊಲ್ಸ್ ಇತ್ಯಾದಿ ನೂರಾರು ಪದಗಳನ್ನು ಗಮನಿಸಬಹುದು. ಇವುಗಳ ಸಾಂಸ್ಕೃತಿಕ ಪರಿವೇಷ ವಿಶೇಷವಾದದ್ದು. ಈ ಸಮುದಾಯದ ಸಂಸ್ಕೃತಿಯ ಅಂಶಗಳನ್ನು ಇಂಥ ಪದಗಳು ಕೂಡಿಟ್ಟುಕೊಂಡಿವೆ ಎನ್ನಬಹುದು.

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಎರಡು ಮಹತ್ವದ ಕೆಲಸಗಳನ್ನು ಈಗ ಕೈಗೆತ್ತಿಕೊಂಡಿದೆ. ಒಂದು, ಅರೆಭಾಷೆ ವಿಶ್ವಕೋಶವನ್ನು ಸಿದ್ಧಪಡಿಸುತ್ತಿರುವುದು. ನನಗೆ ತಿಳಿದ ಹಾಗೆ ಕರ್ನಾಟಕದ ಪ್ರಾದೇಶಿಕ ಭಾಷೆಯಲ್ಲಿ ಪ್ರಕಟವಾಗುತ್ತಿರುವ ಮೊದಲ ವಿಶ್ವಕೋಶವಿದು. ಇನ್ನೊಂದು, ಅರೆಭಾಷೆ ನಿಘಂಟು ಅಥವಾ ಪದಕೋಶವನ್ನು ಸಿದ್ಧಪಡಿಸುತ್ತಿರುವುದು. ತಮ್ಮ ಭಾಷೆ ಮತ್ತು ಸಂಸ್ಕೃತಿಯ ಬಗೆಗೆ ಅಭಿಮಾನ, ಪ್ರೀತಿ ಇರುವವರು ಮಾತ್ರ ಕೈಗೊಳ್ಳಬಹುದಾಂತಹ ಅಪರೂಪದ ಕೆಲಸಗಳಿವು. ನಮಗೆ ತಿಳಿದಿರುವ ಹಾಗೆ ಇಂಥ ಒಳ–ಸಂಸ್ಕೃತಿಗಳ ಬಗೆಗೆ ಹೆಚ್ಚು ಕೆಲಸಗಳು ಆಗಿಲ್ಲ, ಅಲ್ಲೊಂದು ಇಲ್ಲೊಂದು ಕೆಲಸ ಆಗಿದೆ, ಅಷ್ಟೇ; ಹೆಚ್ಚಾಗಿ ಆಗಬೇಕಾಗಿದೆ. 'ಕುಂದಾಪ್ರ ಕನ್ನಡ' (ಪ್ರಧಾನ ಸಂಪಾದಕ: ಪಂಜುಗಂಗೊಳ್ಳಿ, 2021) ಹವಿ–ಸವಿಕೋಶ (ಪ್ರಧಾನ ಸಂಪಾದಕ: ವಿ.ಬಿ. ಕುಳಮರ್ವ, 2021) ಹವ್ಯಕ–ಕನ್ನಡ ನಿಘಂಟು ಎಂಬ ಎರಡು ಪ್ರಾದೇಶಿಕ ಭಾಷಾ ನಿಘಂಟುಗಳು ಪ್ರಕಟವಾಗಿವೆ, ಈಗ ಈ ಕ್ಷೇತ್ರಕ್ಕೆ ಅರೆಭಾಷೆ–ಕನ್ನಡ–ಇಂಗ್ಲಿಷ್ ನಿಘಂಟು ಸೇರ್ಪಡೆಗೊಳ್ಳುತ್ತಿದೆ. ನಿಜಕ್ಕೂ ಇದೊಂದು ಭಾಷಾ ಸಾಹಸವೇ. ಈ ಕೆಲಸವನ್ನು ನಿರ್ವಹಿಸುತ್ತಿರುವ ಅರೆಭಾಷೆ ಅಕಾಡೆಮಿಯ ಅಧ್ಯಕ್ಷರೂ ಅವರ ಸದಸ್ಯ ತಂಡದವರೂ ನಮ್ಮ ಅಭಿನಂದನೆಗಳಿಗೆ ಪಾತ್ರರಾಗಿದ್ದಾರೆ.


ಅರೆಭಾಷೆ ಪದಕೋಶ – ಇ ಪುಸ್ತಕ ರೂಪವಾಗಿ ದಿನನಿತ್ಯದ ಬಳಕೆಗೆ ಜಾಲತಾಣದ ಮೂಲಕ ಲಭ್ಯವಾಗಬೇಕು



ಓಂ ಶಿವಪ್ರಕಾಶ್
60/46/2/10ನೇ 'ಬಿ' ಮುಖ್ಯ 1ನೇ ಬ್ಲಾಕ್
ಜಯನಗರ, ಬೆಂಗಳೂರು – 560011
ಮೋ: 9902026518

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯ ತಂಡ ಸೃಷ್ಟಿಸಿರುವ ಈ ಪದಕೋಶ ಅನೇಕ ಆಯಾಮಗಳಿಂದ ವಿಶಿಷ್ಟ. ತಾಂತ್ರಿಕವಾಗಿ ಬಹುಶ: ಕನ್ನಡದಲ್ಲಿ ಸಂಪೂರ್ಣ ಯುನಿಕೋಡ್‌ಲ್ಲಿ ಮುದ್ರಿತಗೊಳ್ಳುತ್ತಿರುವ ಮೊದಲ ಪದಕೋಶ ಇದೇ ಆಗಿದೆ. ಕನ್ನಡ ಫಾಂಟುಗಳ ಇತಿಮಿತಿಗಳು ಮುದ್ರಣದಲ್ಲಿ ತೊಡಕಾಗದಂತೆ ತಂಡ ಜಾಗ್ರತೆವಹಿಸಿದ್ದು, ಕರಡನ್ನು ಪರಿಶೀಲಿಸಲು ಅವರು ನೀಡಿದ ಸಮಯ ಮೆಚ್ಚುವಂತದ್ದು. ಪದಕೋಶದಲ್ಲಿ ಪ್ರಾರಂಭಿಕ ಪದ ಬಳಸಿ ಪದಗಳನ್ನು ಅಧ್ಯಾಯಗಳಾಗಿ ವಿಂಗಡಿಸಲಾಗಿದೆ, ಜೊತೆಗೆ ಪದಕೋಶಗಳು ಕಾಲದಜೊತೆಗೆ ಬೆಳೆಯುವ ಕಾರಣ ಹೊಸ ಪದಗಳನ್ನು ಓದುಗ ಸೇರಿಸಲು ಸಾಧ್ಯವಾಗುವಂತೆ ಸ್ವಲ್ಪಜಾಗವನ್ನು ಉಳಿಸಿಕೊಳ್ಳಲಾಗಿದೆ. ಇಡೀ ಪುಸ್ತಕವನ್ನು 2 ಕಾಲಂಗಳ ಪಠ್ಯವನ್ನಾಗಿ ನಮ್ಮ ಟೆಕ್‌ಫಿಜ್ ತಂತ್ರಾಂಶ ಬಳಸಿ ಪ್ರಿಂಟ್ ಪ್ರತಿಯನ್ನಾಗಿಸಿದ್ದು ತಂಡದ ಸಮಯವನ್ನು ಉಳಿಸಲಾಯಿತು. ಈ ನಿಘಂಟು ಇ–ಪುಸ್ತಕ ರೂಪವಾಗಿಯೂ, ದಿನನಿತ್ಯದ ಬಳಕೆಗೆ ಜಾಲತಾಣದ ಮೂಲಕವೂ ಲಭ್ಯವಾಗಬೇಕು ಹಾಗೂ ಇದಕ್ಕೆ ಹೊಸ ಪದಗಳ ಜೋಡಣೆಗೆ ಅರೆಭಾಷೆ ಸಮುದಾಯಕ್ಕೆ ತಾಂತ್ರಿಕ ಸೌಲಭ್ಯ ಒದಗಿಸಿದರೆ, ಮುಂದಿನ ವರ್ಷಗಳಲ್ಲಿ ಇನ್ನೂ ವಿಸ್ತೃತ ಪದಕೋಶ ಭಾಷಾ ಪರಿಣಿತರಿಗೆ, ಆಸಕ್ತರಿಗೆ, ವಿದ್ಯಾರ್ಥಿಗಳಿಗೆ, ಜನರಿಗೆ ದೊರೆಯಲಿದೆ. ಈ ಯೋಜನೆಗೆ ನನ್ನನ್ನೂ ತೊಡಗಿಸಿಕೊಂಡದ್ದಕ್ಕೆ ನಾನು ಅಭಾರಿ.

ಮುನ್ನುಡಿ



ಪ್ರೊ. ಕೋಡಿ ಕುಶಾಲಪ್ಪ ಗೌಡ
ವಿಶ್ರಾಂತ ಪ್ರಾಧ್ಯಾಪಕರು, ಪುತ್ತೂರು

ಅರೆಬಾಸೆಂತೇಳುವುದು ಒಂದು ಜೀವಂತ ಭಾಷೆ. ಅದು ಇಂದೂ ಒಂದು ಪಂಗಡದ ಜನರ ಬಾಯಲ್ಲಿ ನಲಿದಾಡುತ್ತಿದೆಯೆಂದು ಅನೇಕರಿಗೆ ತಿಳಿದಿರಲಿಕ್ಕಿಲ್ಲ. ಅದಕ್ಕೊಂದು ಸರಿಯಾದ ಹೆಸರೂ ಇರುವುದಿಲ್ಲ. ಕೆಲವರಿಗೆ, ಬೇಸಾಯವೇ ಮುಖ್ಯ ವೃತ್ತಿಯಾಗಿರುವ ಅಲ್ಪಸಂಖ್ಯಾತರಾದ ಗೌಡರು ತಮ್ಮ ತಮ್ಮೊಳಗೆ ಮಾತಾಡಿಕೊಳ್ಳುವ ಒಂದು ನುಡಿ ಎಂದಿಷ್ಟು ತಿಳಿದಿರಬಹುದು. ಕಳೆದ ಶತಮಾನದ ಮಧ್ಯಕಾಲದವರೆಗೆ ಭಾರತೀಯ ಭಾಷಾ ವಿದ್ವಾಂಸರು ಸಾಂಪ್ರದಾಯಿಕ ವ್ಯಾಕರಣದಲ್ಲಿ ತಕ್ಕಷ್ಟು ಪರಿಣತರಾಗಿದ್ದರೂ ಆಧುನಿಕ ಭಾಷಾವಿಜ್ಞಾನ ಬಗ್ಗೆ ಅವರಿಗೇನೂ ತಿಳಿದಿರಲಿಲ್ಲ. ಅಮೇರಿಕಾದಲ್ಲಿ ಈ ಶಾಖೆ ತುಂಬಾ ಪ್ರಬಲಿಸಿತ್ತು. ಹಾಗೆ Rock Fellow Foundation ನವರು ಒಂದು ದೊಡ್ಡ ಅನುದಾನವನ್ನು ಭಾರತಕ್ಕೆ ಕೊಟ್ಟು ಆಧುನಿಕ ಭಾಷಾವಿಜ್ಞಾನವು ಇಲ್ಲಿ ವ್ಯಾಪಕವಾಗಿ ಪ್ರಚಾರವಾಗುವಂತೆ ಮಾಡಿದರು. ಅಮೇರಿಕಾದಿಂದ ಅನೇಕ ಪ್ರಸಿದ್ಧ ವಿದ್ವಾಂಸರು ಭಾರತಕ್ಕೆ ಬಂದು, ಭಾರತದ ವಿವಿಧ ವಿದ್ಯಾಕೇಂದ್ರಗಳಲ್ಲಿ ಭಾಷಾವಿಜ್ಞಾನದಲ್ಲಿ ಬೇಸಿಗೆ ಶಿಬಿರಗಳನ್ನು ತೆರೆದು, ಬೋಧನೆಯಲ್ಲಿ ತೊಡಗಿದರು. ಇದರಲ್ಲಿ ತರಬೇತಿ ಹೊಂದಿದವರು ಅಮೇರಿಕಾಕ್ಕೆ ಹೋಗಿ ಇನ್ನೂ ಹೆಚ್ಚಿನ ಲಾಭ ಪಡೆಯಬಹುದಾದುದರಿಂದ ನಮ್ಮವರು ಇದರಲ್ಲಿ ಉತ್ಸಾಹದಿಂದ ಭಾಗಿಯಾದರು. ಆಗ ಪ್ರಸಿದ್ಧ ಭಾಷೆಗಳ ಅಧ್ಯಯನಕ್ಕಿಂತಲೂ ಹೆಚ್ಚು ತಿಳಿದಿರದ ಉಪಭಾಷೆಗಳ ಅಧ್ಯಯನಕ್ಕೆ ಹೆಚ್ಚು ಗಮನ ಸಂದಿತ್ತು. ಹೆಸರಿಲ್ಲದ ಉಪಭಾಷೆಗಳನ್ನು ಮಾತಾಡುವ ಜನರ ಜಾತಿಯ ಹೆಸರಿಂದ ಗುರುತಿಸತೊಡಗಿದರು. ಉದಾ: ಬ್ರಾಹ್ಮಣರ ತುಳು, ಹವ್ಯಕ ಕನ್ನಡ ಈ ಸಂದರ್ಭದಲ್ಲಿ ಪ್ರೊ. ಮರಿಯಪ್ಪ ಭಟ್ಟರು ಅವರ ಒಂದು ಲೇಖನದಲ್ಲಿ ನಮ್ಮ ಈಗಣ ಅರೆಭಾಷೆಯನ್ನು ಗೌಡ ಕನ್ನಡ ಎಂದು ಹವ್ಯಕ ಕನ್ನಡ ಎಂದಂತೆ ಅದೇ ಕಾರಣದಿಂದ 'ಗೌಡ ಕನ್ನಡ' ಎಂದು ಕರೆದಿದ್ದರು. ನಾನು ಬರೆದ ಪುಸ್ತಕಕ್ಕೂ ಅದೇ ಹೆಸರಿಟ್ಟೆ. 1970ರಲ್ಲಿ ಅಣ್ಣಾಮಲೈ ಯೂನಿವರ್ಸಿಟಿ ಈ ಹೆಸರನ್ನು ಈ ಉಪಭಾಷೆಗಿಡುವುದರಲ್ಲಿ ಒಂದು ತೊಂದರೆಯಿದೆ. ಈ ಉಪಭಾಷೆಯನ್ನು ಮಾತಾಡುವ ಗೌಡರ ಕುಲಗೋತ್ರಗಳಿಗೆ ಸಮಾನರಾದ ಗೌಡ ಬಾಂಧವರು ಸಂಖ್ಯೆಯಲ್ಲಿ ಕನ್ನಡ ಮಾತಾಡುವವರಿಗೆ ಸರಿ ಸಮಾನರಾಗಿ ದಕ್ಷಿಣ ಕನ್ನಡದಲ್ಲಿ ವಾಸಿಸುವವರು, ತುಳುವನ್ನು ಮಾತೃಭಾಷೆಯಾಗಿ ಮಾತಾಡುತ್ತಾರೆ. ಆದುದರಿಂದ ಅವರನ್ನು ಗೌಡ ಕನ್ನಡ ವರ್ಗದವರೆಂದು ಪರಿಗಣಿಸುವುದು ಸರಿಯಾಗುವುದಿಲ್ಲ.

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯ ಉತ್ಪನ್ನಕ್ಕೆ ಕಾರಣಕರ್ತರಾದ ಮಹನೀಯರು 'ಅರೆಭಾಷೆ'ಯೆಂದು ನಾಮಕರಣ ಮಾಡಿದರು. ಶಾಸ್ತ್ರೀಯ ಪಂಡಿತರು ಅರೆಭಾಷೆಯೆಂಬ ಹೆಸರಿನಲ್ಲಿ ಮೊಸರಿನಲ್ಲಿ ಕಲ್ಲು ಹುಡುಕುವ ಚಿಕಿತ್ಸಕ ದೃಷ್ಟಿಯಿಂದ ತಪ್ಪು ಹುಡುಕುತ್ತಾರೆ. ಅವರ ದೋಷಾರೋಪಣೆ ಇಷ್ಟೆ. ಇಲ್ಲಿ 'ಅರೆ' ಎಂಬುದು ಕನ್ನಡ(ದ್ರಾವಿಡ) ಪದ. 'ಭಾಷೆ'ಯೆಂಬುದು ಸಂಸ್ಕೃತ(ಆರ್ಯನ್) ಪದ. ಅಂದರೆ ಒಂದು ದ್ರಾವಿಡ ಗುಂಪಿಗೆ, ಇನ್ನೊಂದು ಆರ್ಯನ್(ಸಂಸ್ಕೃತ) ಗುಂಪಿಗೆ ಸೇರಿದ ಪದ. ಆದುದರಿಂದ ಇಲ್ಲಿ ಸಂಪ್ರದಾಯಕ್ಕೆ ವಿರೋಧವಾದ ಅಂತರ್ಜಾತಿಯ ವಿವಾಹವಾದಂತೆ ಅರಿಸಮಾಸ ಆಗಿದೆಯೆಂದು ಟೀಕಾಸ್ತ್ರವನ್ನು ಪ್ರಯೋಗಿಸುತ್ತಾರೆ. ಹೇಗೆ ಇದನ್ನು ಸರಿಪಡಿಸುವುದೆಂದರೆ, ಮೊದಲು 'ಭಾ'ಕ್ಕಿರುವ ಬಾಲವನ್ನು ಕತ್ತರಿಸಿ ಆಗ 'ಬಾ' ಎಂದಾಗುತ್ತದೆ.

ಅಬ್ಬ! ಉಚ್ಚಾರಣೆ ಹಗುರವಾಯ್ತು! ಇನ್ನು 'ಷ' ಯನ್ನು 'ಶ' ಯೆಂದೇ ಉಚ್ಚರಿಸುತ್ತೀರಲ್ಲ. ಅದರ ಬಲ ಹೆಗಲಿಂದ, ನಾವು ನೋಡುವಾಗ ನಮ್ಮ ಬಲಕ್ಕೆ, ಆದರೆ ಸ್ವಯಂ ಅಕ್ಷರದ ಎಡಗಡೆಯಿಂದ ನೇಲುತ್ತದಲ್ಲ ಸೆಟೆದುಕೊಂಡು ' \ ' ಎಂಬ ಆಕಾರದ ಅದರ ಗರೆಯನ್ನು ಕಿತ್ತು ಹಾಕಿ. ಆಗ 'ಪ' ಎಂದು ಉಳಿಯಿತು. ಅದರ ಮೊದಲ ಸುರುಳಿಯನ್ನು ಅದರ ವಿರುದ್ಧ ದಿಕ್ಕಿಗೆ ತಿರುಗಿಸಿ. ಈಗ 'ಪ' ಎಂಬುದು 'ಸ' ಎಂದಾಯಿತು.

ಇಷ್ಟರವರೆಗೆ ಮಾಡಿದ ದ್ರಾವಿಡ ಪ್ರಾಣಾಯಾಮದ ಪರಿಣಾಮ ಇಷ್ಟೆ. ಅರೆಭಾಷೆ ಎಂಬುದನ್ನು 'ಅರೆಬಾಸೆ' ಎಂದು ಓದಿ ತೃಪ್ತಿ ಪಟ್ಟುಕೊಳ್ಳಿ ಎಂದು.

ಒಂದು ಭಾಷೆಗೆ ಶಬ್ದಗಳೇ ಅದರ ಸಂಪತ್ತು. ಶಬ್ದಕ್ಕೆ ಚಾಕ್ಷುಷ ರೂಪ, ಆಕಾರ, ಬಣ್ಣ ವಾಸನೆಯಂತೇನೂ ಇಲ್ಲ. ಶ್ರಾವ್ಯವಾಗಿ ಅದರ ಅಸ್ತಿತ್ವ ನಮಗೆ ಅರಿವಾಗುತ್ತದೆ. ನಮಗೆ ಪರಿಚಯವಿರುವ ಅಕ್ಷರಗಳ ಮೂಲಕ ಅದರ ಪದಗಳನ್ನು ಸೆರೆ ಹಿಡಿದಿಟ್ಟು ಬೇಕಾದಾಗ ಬೇಕಾದಂತೆ ಉಪಯೋಗಿಸುತ್ತೇವೆ. ನಮ್ಮ ಅರೆಭಾಷೆಯು ಎಷ್ಟೋ ಕಾಲದಿಂದ ಅಕ್ಷರ ಬಂಧನಕ್ಕೊಳಪಡದೆ ಗೌಡ ಸಮುದಾಯದವರ ನಾಲಗೆಯ ಮೇಲೆ ಶಬ್ದದಿನಾವಾವಿಂದ್ರಿಯದ ವಿಷಯಮಂ ಶ್ರೋತ್ರದೊಳುಧ್ಭಾವಿಸುತ್ತ, ಪರಂಜ್ಯೋತಿಸ್ತಮೋಪಹಾರಳಾಗಿ ಇಷ್ಟರವರೆಗೆ(ಎಂದಿನಿಂದ ಎಂದು ತಿಳಿಯದು) ಸರ್ವ ಭಾಷಾ ಸರಸ್ವತಿಯಾಗಿ ಮೆರೆದಳು. ಈಗ ಅಕಾಡೆಮಿಯವರು ಅವಳಿಗೊಂದು ಅರಮನೆ ನಿರ್ಮಿಸಿ, ಅವಳ ಸರ್ವ ಸಂಪತ್ತಿನೊಡನೆ ಭದ್ರಪಡಿಸಿ 'ಭದ್ರಂ ಶುಭಂ ಜಯಂ ಮಂಗಳಂ' ಹಾಡಬೇಕೆಂಬ ಉದ್ಯಮದಲ್ಲಿ ನಿರತರಾಗಿದ್ದಾರೆ. ಈ ಅರಮನೆಯೇ ಅರೆಭಾಷೆಯ ನಿಘಂಟು.

ಇದರ ಪ್ರಧಾನ ಸಂಪಾದಕರು ಬೇರೆಬೇರೆ ಲೇಖಕರು ಕೊಟ್ಟ ಪದಗಳ ಪಟ್ಟಿಯನ್ನು(ಅದನ್ನು ಗೌರವದಿಂದ ಕೋಶಗಳೆಂದೇ ಕರೆದಿದ್ದಾರೆ) ಹಲವರಿಂದ ರಚಿತವಾದುದೆಂದು ಹೇಳಿದ್ದಾರೆ.

ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಲಕ್ಷ್ಮೀನಾರಾಯಣ ಕಜೆಗದ್ದೆಯವರು 'ಅರೆಭಾಷೆ ನಿಘಂಟು' ಅಂತಿಮ ರೂಪದ ಹಸ್ತಪ್ರತಿಯನ್ನು ನನಗೆ ಕಳುಹಿಸಿ ಇದಕ್ಕೆ ಮುನ್ನುಡಿ ಬರೆದು ಕೊಡಬೇಕೆಂದು ಕೇಳಿದ್ದಾರೆ. ಅಕಾಡೆಮಿ ಪ್ರಾರಂಭಗೊಂಡಂದಿನಿಂದಲೇ ಅರೆಭಾಷೆಗೆ ಶಬ್ದಕೋಶವೊಂದು ತಯಾರಾಗಲೇಬೇಕೆಂದು ಹೇಳುತ್ತಲೇ ಇದ್ದೆ. ಇದನ್ನು ಮಾತಾಡುವವರು ವಾಸಿಸುವವರಿರುವ ಕ್ಷೇತ್ರಗಳನ್ನು ವಿಂಗಡಿಸಿ ಅಲ್ಲಿಯ ಹಿರಿಯರಿಂದ ಪದಗಳನ್ನು ಸಂಗ್ರಹಿಸಿ, ಭೌಗೋಳಿಕವಾಗಿರುವ ವ್ಯತ್ಯಾಸಗಳನ್ನು ಗುರುತಿಸಿ ಎಲ್ಲ ಒಟ್ಟಾದ ಕೋಶ ರಚನೆಯಾಗಬೇಕೆಂದು ನನ್ನ ಸೂಚನೆಯಾಗಿತ್ತು. ಇದನ್ನು ಪಂಚವಾರ್ಷಿಕ ಯೋಜನೆಯಂತೆ ಸರಕಾರದಿಂದ ಗ್ರ್ಯಾಂಟು ಪಡೆದು ಮಾಡಬೇಕೆಂದೂ ನನ್ನ ಯೋಚನೆಯಾಗಿತ್ತು.

ಬಸ್ಸು, ಕಾರು, ಲಾರಿ ಇತ್ಯಾದಿಯಾದ ಮೋಟಾರು ವಾಹನಗಳಿಗೆ ಹಾರ್ನ್ ಇಲ್ಲದೆ ರಸ್ತೆಗಿಳಿಯಲು ಸಾಧ್ಯವಿಲ್ಲ. ಹಾಗೆಯೇ ಅಚ್ಚುಕೂಟದಿಂದ ಹೊರಬರುವ ಪುಸ್ತಕಗಳಿಗೆ ಮುನ್ನುಡಿಯಿರಲೇಬೇಕು. ನನ್ನ ಪುಸ್ತಕಗಳಿಗೆ(ಅದೇನೂ ಹೆಚ್ಚಿಲ್ಲವೆನ್ನಿ) ಮುನ್ನುಡಿ ಬರೆಸಿದ್ದೇನೆ. ಅದಕ್ಕೆ ಪ್ರಾಯಶ್ಚಿತ ಮಾಡಿಕೊಳ್ಳಲು ಈಗ ಸಮಯ ಕೂಡಿ ಬಂದಿದೆ.

ಪದಕೋಶದಲ್ಲಿ ಪದಗಳನ್ನು ಅಕಾರಾದಿಯಾಗಿ ಜೋಡಿಸುತ್ತಾರೆ. 'ಅ' ದಿಂದಾರಂಭಿಸಿ 'ಳ' ಕಾರದವರೆಗೆ ಕನ್ನಡ ವರ್ಣಮಾಲೆಯ ಅಕ್ಷರಗಳು, ಳ ಮೂರ್ಧನ್ಯಾಕ್ಷರ, ಇದು ಆದ್ಯಕ್ಷರವಾಗಿರುವ ಪದಗಳು ಕನ್ನಡದಲ್ಲಿ ಇಲ್ಲ. ಆದುದರಿಂದ 'ಅ' ದಿಂದ ಆರಂಭಿಸಿ 'ಹ' ದವರೆಗಣ ಅಕಾರಾದಿಗಳಲ್ಲಿ ಪದಗಳು ಕೋದುಕೊಳ್ಳುತ್ತವೆ.

'ಬಜ್ಜ' ಎಂದು ಬರೆಯುವುದನ್ನು ಎಲ್ಲ ಕಡೆ ಬಂಜ ಎಂದು 'ಹಞ್ಞ' ಎಂದು ಬರೆಯುವುದನ್ನು ಹಂಞ ಎಂದೆಲ್ಲ ಬರೆದಿರುವುದು ಕಂಡು ಬಂತು. ಹಳೆಕಾಲದಲ್ಲಿ ದ್ವಿತ್ವ ಅನುನಾಸಿಕ ಬರೆಯುವಲ್ಲಿ ಅನುಸ್ವಾರವನ್ನು ಬಳಸಿ ಅಂಮ, ಅಂಣ, ತಂಮ ಎಂದೆಲ್ಲ ಬರೆಯುತ್ತಿದ್ದರು. ಈಗ ಆ ಕ್ರಮ ಇಲ್ಲ.

ಸ್ಟ್ಯಾಂಡರ್ಡ್ ಪದಕೋಶಗಳ ಕರ್ತೃಗಳು ಅನುಸರಿಸುವ ಕ್ರಮ ಹೀಗಿದೆ:

ಎಡಬದಿಗೆ ಅರ್ಥ ಕೊಡಬೇಕಾದ ಪದ. ದೇಶೀಯ ಮತ್ತು ಇತರ ಪದಗಳು ಭಾಷೆಯಲ್ಲಿ ಬೆರೆತಿದ್ದರೆ ಅರ್ಥವನ್ನು ಕೊಡಬೇಕಾದ ದೇಶೀಯ ಪದವನ್ನು ದಪ್ಪ ಅಕ್ಷರದಲ್ಲಿ ಕೊಡುತ್ತಾರೆ, ಮತ್ತೆ space ಕೊಟ್ಟು ಇಂಗ್ಲಿಷಿನಲ್ಲಿ ಅದರ ಉಚ್ಚಾರಣಾ ರೂಪ, ಮತ್ತೆ ಅರ್ಥ, ಮತ್ತಿತರ ವಿಷಯಗಳು ಇರುತ್ತವೆ.

ಈ ಪ್ಯಾರಾಗ್ರಾಫ್ ಮುಗಿದ ನಂತರ ಮತ್ತಿನ ಪದ ಹೀಗೆಯೇ ಒಂದಕ್ಷರದ ಕೆಳಗಿನ ಪದಗಳು ಮುಗಿದು ಇನ್ನೊಂದು ಅಕ್ಷರದ ಅಕಾರಾದಿಯ ಪದಗಳು ಮುಗಿದು ಇನ್ನೊಂದು ಅಕ್ಷರದ ಅಕಾರಾದಿಯ ಪದಗಳ ಆರಂಭ. ಇದು ನೋಡಲು ಸುಲಭ ಮತ್ತು ಸುಂದರ.

ಅರೆಭಾಷೆ ಅಕಾಡೆಮಿ ಅಧ್ಯಕ್ಷರಾದ ಲಕ್ಷ್ಮೀನಾರಾಯಣ ಕಜೆಗದ್ದೆಯವರು ಮುನ್ನುಡಿ ತಯಾರಿಗಾಗಿ ಕಳುಹಿಸಿದ ಪತ್ರದಲ್ಲಿಯ ಅಡಕದ ಕೊನೆಯ ಪ್ಯಾರಾದಲ್ಲಿ ಯೋಜನೆಯ ವಿವರದಲ್ಲಿ ಯಾವ ರೀತಿ ಶಬ್ದಗಳು ಬರುವ ರೀತಿಯನ್ನು ಓದಿದ ಮೇಲೆ ಸಮಾಧಾನಗೊಂಡೆ. ಗಾದೆಗಳು ನುಡಿಗಟ್ಟುಗಳು, ಒಗಟುಗಳು ಅರೆಭಾಷೆಯ ವಾಕ್ಯ ಮತ್ತು ಪದ ಪ್ರಯೋಗ, ಅನ್ಯ ಭಾಷೆಯ ಪದಗಳನ್ನೊಳಗೊಂಡ ವಿಚಾರವೆಲ್ಲ ಮನೋಜ್ಞವಾಗಿದೆ. ಅರೆಭಾಷೆಯ ಸಂಸ್ಕೃತಿಯ ಬಗ್ಗೆ ಇವುಗಳನ್ನು ಬಳಸಿ ಸಂಶೋಧನೆ ಮಾಡುವವರಿಗೆ, ಚೊಕ್ಕ ಲೇಖನ ಬರೆಯುವವರಿಗೆ ಬೇಕಾದ ಸಾಮಾಗ್ರಿ ಇಲ್ಲಿದೆ. ಇದನ್ನು ಕಲೆಹಾಕಿ ದಾಖಲಿಸಿದವರನ್ನು ನಾನು ಅಭಿನಂದಿಸುತ್ತೇನೆ. ಇಷ್ಟರ ಮಟ್ಟಿನ ಅರೆಬಾಸೆ ನಿಘಂಟು ತಯಾರಿಸಲು ಹೆಣಗಿದ ಅಕಾಡೆಮಿ ಸದಸ್ಯರಾದ ಡಾ. ವಿಶ್ವನಾಥ ಬದಿಕಾನ ಮತ್ತು ಶ್ರೀ ಭರತೇಶ ಅಲಸಂಡೆಮಜಲು ಇವರಿಗೆ ಅರೆಭಾಷಿಕರ ಕೃತಜ್ಞಪೂರ್ವಕ ಅಭಿನಂದನೆ ಸಲ್ಲಬೇಕು. ನಿಘಂಟು ಕೆಲಸ ಇಷ್ಟಕ್ಕೆ ಮುಕ್ತಾಯವಾಯಿತೆಂದು ಯಾರೂ ತಿಳಿಯಬಾರದು. ತಪ್ಪು ತಡೆಗಳ ತಿದ್ದುಪಡಿ, ಹೊಸ ಪದಗಳ ಸೇರ್ಪಡೆ, ಕಾಲ ಕಾಲಕ್ಕೆ ನಡೆಯುತ್ತಲೇ ಇರಬೇಕು. ಭಾಷಾ ಪಂಡಿತರು ಯಾವಾಗಲೂ ಎಚ್ಚೆತ್ತಿರಬೇಕಾದುದು ಅಗತ್ಯ.

ಅರೆಭಾಷೆ ಭವಿಷ್ಯದಲ್ಲಿ ಎಲ್ಲಾ ಕ್ಷೇತ್ರಗಳಲ್ಲೂ ಮೇಲ್ನೆಲೆಗೇರಲಿ. ಜೈ ಕರ್ನಾಟಕ ಮಾತೆ.

ಪುತ್ತೂರು
20–05–2022

ಕೆ. ಕುಶಾಲಪ್ಪ ಗೌಡ

ಅರೆಭಾಷೆ ಪದಕೋಶ

ಅರೆಭಾಷೆ ಪದಕೋಶ

ಅರೆಭಾಷೆ-ಕನ್ನಡ-ಇಂಗ್ಲಿಷ್ ಡಿಕ್ಷನರಿ

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ
ಮಡಿಕೇರಿ

This book was produced with ePustaka - Ink and Weave initiative by Techfiz Inc.
(https://techfiz.com) Reach us via info@techfiz.com.

ಅ

ಅಂಕೆ[1] /*aŋkɛ*/ ನಾ. 1. ಹತೋಟಿ, 2. ಹಿಡಿತ, 3. ಗುರುತು. 1. control, 2. grip, 3. identification. **ಅಂಕೆಯಿಲ್ಲದ ಕಪಿ ಲಂಕೆ ಸುಟ್ಟತ್(ಗಾ).** ವಾ: ಮಕ್ಕ ಅಂಕೆಲಿ ಇರೊಕು.

ಅಂಕೆ[2] /*aŋkɛ*/ ಸಂವಾ. ಎಣಿಕೆ. to count.

ಅಂಕ್‌ಡೊಂಕ್ /*aŋkɨḍoŋk*/ ನಾ. 1. ವಕ್ರತೆ, 2. ಓರೆಕೋರೆ, 3. ಕಕ್ಕರಿಬಿಕ್ಕರಿ. 1. curved, 2. meandering, 3. nefarious. **ಅಂಕ್‌ಡೊಂಕ್ ಸಂಕಪಾಲ ಮೂರ್ ತಲೆ ಹತ್ತ್ ಕಾಲ್-ನೊಗ, ನೇಗಿಲು – ಮನುಷ್ಯ ಮತ್ತು ಎರಡು ಎತ್ತುಗಳು(ಒ).** ವಾ: ಈ ದಾರಿ ಅಂಕ್‌ಡೊಂಕಾಗುಟು, ಹಾವು ಹರಿವ ರೀತಿ.

ಅಂಗ /*aŋga*/ ನಾ. 1. ಬಾಯಾರಿಕೆ, 2. ಚಿಕ್ಕ ಮಕ್ಕಳು ನೀರು ಕುಡಿಯಲು ಕೇಳುವಾಗ ಬಳಸುವ ಪದ. 1. thirst, 2. a term often used by children while asking for drinking water. ವಾ: ಅವ್ವ ಅಂಗ ಕೊಡು ಕುಡೆಕೆ. ಪ: ಅಂಗತ್‌ನೆ(ತು)

ಅಂಗಕಳಿ /*aŋgakaḷi*/ ನಾ. ಕುಟುಂಬದ ಯಜಮಾನನು ಮೃತನಾದಾಗ ಕೆಂಬಟ್ಟಿ ಜನಾಂಗದ ದಲಿತ ಆಳು ಶವದ ಮುಂದೆ ಪ್ರದರ್ಶಿಸುವ ನೃತ್ಯ. a dance performed by a dalit servant (belonging to Kembatti community) when the master of the house has passed away. ವಾ: ಹೆಣದ ಮುಂದೆ ಕೊಣಿಯದುಕೆ ಅಂಗಕಳಿ ತೇಳ್‌ವೆ.

ಅಂಗಡಿಮಜಲು /*aŋgaḍimajalu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮರ್ಕಂಜ, ಅರಂತೋಡು ಗ್ರಾಮದ ಜಾಗ. a locality in Markanja, aranthodu village in Sullia Taluk of Dakshina Kannada District.

ಅಂಗಣ /*aŋgaṇa*/ ನಾ. 1. ದೈವ ಕುಣಿಯುವ ಜಾಗ, 2. ಮನೆಗೆ ಸೇರಿರುವ ಆವರಣದ ಬಯಲು – ಮುಂಭಾಗ, 3. ಅಂಗಳ, 4. ಮಧ್ಯಸ್ಥಳ. 1. a place where daiva (deity or spirit) performs sacred dance, 2. a patio, 3. veranda, 4. a central place. ವಾ: ತೆರೆ ಕಟ್ಟಿಕಾಕನ ದೇವುರು ಅಂಗಣಲಿ ಬಂದ್ ಕೊಣಿಯದು.

ಅಂಗತ /*aŋgata*/ ನಾ. 1. ಅಂಗಾತ, 2. ಮೇಲ್ಮುಖವಾಗಿ ಮಲಗುವುದು. 1. supine position, 2. lying on the back (face upwards). ವಾ: ಹೊಟ್ಟೆ ಹಿಡ್ಕಂಡಂಗೆ ಆಕನ ಅಂಗತ ಮೊಲ್‌ಗ್. **ಅಂಗತನೆ** /*aŋgatanɛ*/ ನಾ. 1. ಮೇಲ್ಮುಖವಾಗಿ ಮಲಗು, 2. ಬೀಳು, 3. ಅಂಗಾತನೆ ಮಲಗು, ಅಂಗಾತನೆ ಬೀಳು. 1. supine position, 2. to fall, 3. to sleep on one's back-to fall on one's face. ವಾ: ಕೂಸು ಮೋರೆ ಮೇಲೆ ಆಗಿ ಅಂಗತನೆ ಬೀತ್. ಪ: ಅಂಗತನೆ ಮೊಗ್ಗದು – ಮಗು ಮೇಲ್ಮುಕವಾಗಿ ಮಗುಚುವುದು

ಅಂಗನಾ /*aŋgana:*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಅಂಗರ[1] /*aŋgara*/ ನಾ. ಒಂದು ವಿಧದ ತುರಿಕೆ

ಸೊಪ್ಪಿನ ಗಿಡ. a variety of plant that causes itching. ವಾ: ಅಂಗರೆ ಸೊಪ್ಪುನ ಮುಟ್ಟಿರೆ ಮುಟ್ಟಿದಲೆಲ್ಲ ತೊರ್‌ಸಿದೆ. ಪ: ಚುರ್ಚಂಗಿ – ತುರಿಕೆ ಸೊಪ್ಪು; ಅಕಿರೆ ಪಚ್‌ರೆಂಗಿ(ತು)

ಅಂಗರ[2] /*aŋgara*/ ನಾ. 1. ಕೆಂಡ, 2. ಇದ್ದಲು. 1. ember, 2. charcoal.

ಅಂಗರ[3] /*aŋgara*/ ನಾ. ವ್ಯಕ್ತಿನಾಮ, ಪುರುಷವಾಚಕ. masculine given name.

ಅಂಗಳ /*aŋgaḷa*/ ನಾ. 1. ಸಭೆ ಸೇರುವ ಸ್ಥಳ, 2. ಅಂಗಳ, 3. ಅಂಗಣ, 4. ಇಜ್ಜೇಲ್. 1. a place where meetings are held, 2. a courtyard, 3. a patio. **ಅಂಗಳಲಿ ಒದ್ದ್ ಅಡ್ಗೆ ಮನೇಲಿ ಕಾಲ್ ಹಿಡ್ಕದು(ಗಾ).** ವಾ: ಮಕ್ಕ ಅಂಗಳಲಿ ಆಡ್‌ವೆ.

ಅಂಗಳ ಡೊಂಕು /*aŋgaḷa ḍɔŋku*/ ನಾವಿ. ಸಮತಟ್ಟಿಲ್ಲದ ನೆಲ. an uneven ground/surface. ವಾ: ಅಂಗಳ ಡೊಂಕು ಆಗಿದ್ದರೆ ಕೆತ್ತಿ ಸಮತಟ್ಟ್ ಮಾಡೊಕು.

ಅಂಗಾತ /*aŋga:ta*/ ನಾ. 1. ಮೇಲ್ಮುಖವಾಗಿ ಮಲಗುವುದು, 2. ನೆಟ್ಟಗೆ ಮಲಗುವುದು. 1. supine position, 2. sleeping straight. ವಾ: ಕೂಸು ಅಂಗಾತ ಮೊಲ್‌ಗಿಟು.

ಅಂಗಾರ[1] /*aŋga:ra*/ ನಾ. ವ್ಯಕ್ತಿನಾಮ ಪುರುಷ. Name of a person. ವಾ: ಅಂಗಾರ ಬಂದುಟು.

ಅಂಗಾರ[2] /*aŋga:ra*/ ನಾ. 1. ಕೆಂಡ, 2. ಇದ್ದಲು, 3. ದೇವರ ಧೂಪಾರತಿಯ ಕೆಂಡವನ್ನು ನೀರಿನಲ್ಲಿ ಆರಿಸಿ ಅದನ್ನು ಮಾಧ್ವರು ಹಣೆಯಲ್ಲಿ ಧರಿಸುವ ಊರ್ಧ್ವರೇಖೆ, 4. ಮಂಗಳ ಗ್ರಹ. 1. ember, 2. charcoal, 3. 'U' shaped lines drawn on the forehead by using the cooled ember after the waving of fragrant resins – a practice among the members of Madhwa community. ವಾ: ದೂಪ ಹಾಕಿಕೆ ಅಂಗಾರ ಬೇಕಾದೆ.

ಅಂಗಾರ ಬಾಕುಡ /*aŋga:ra ba:kuḍa*/ ನಾ. 1. ಪ್ರಕೃತಿ ಶಕ್ತಿಯನ್ನು ಸಾಂಕೇತಿಸುವ ದೈವ, 2. ಕರು ಹಾಕಿದ ಆರಂಭದಲ್ಲಿ ಹಸುವಿನ ಹಾಲು ಕರೆದು ಈ ದೈವಕ್ಕೆ ಅರ್ಪಿಸುವ ಸಂಪ್ರದಾಯ. a daiva (deity/spirit) representing nature 2. a custom of offering milk of the newly delivered cow to this daiva. ವಾ: ಹಟ್ಟಿನ ಎದ್‌ರ್ ಅಂಗಾರ ಬಾಕುಡನ ಕಲ್ಲ್ ಇದ್ದದೆ, ಕರ್ ಬುಟ್ಟ್ ಸರೋಳಿ ಎಲೆಲಿ ಕಲ್ಲ್‌ಗೆ ಹಾಲ್ ಇಸುದು ಕ್ರಮ ಇದ್ಕೆ ಅಂಗಾರಂಗೆ ಇಸ್‌ದಂತ ಹೇಳ್ವೆ.

ಅಂಗಾರಡ್ಕ /*aŋga:raḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕೊಡಿಯಾಲ ಗ್ರಾಮದ ಜಾಗ. a locality in Kodiyala village in Sullia Taluk of Dakshina Kannada District.

ಅಂಗಾರೆ /*aŋga:rɛ*/ ಅ. 1. ಹಾಗಾದರೆ. so, in that way/manner. ವಾ: ಅಂಗಾರೆ ಈಗ ಪೋಯಲ ಮನೆಗೆ.

ಅಂಗಾಲ್ /*aŋga:li*/ ನಾ. 1. ಅಂಗಾಲು, 2. ಪಾದದ ಅಡಿ, 3. ಹೆಜ್ಜೆಯ ಕೆಳಭಾಗ. 1. sole of feet, 2. bottom of the feet, 3. sole. ವಾ: ಅಂಗಾಲ್‌ಗೆ ಕಲ್ಲ್ ಹೆಟ್ಟಿ ಬೇನೆ ಆಗುಟು. **ಅಂಗಾಳ್ ಗುತ್ತಿ** /*aŋga:ḷi gutti*/ ನಾವಿ. ಹಳೇಕಾಲದ ಬಾಗಿಲುಗಳು ನಿಲ್ಲುವಂತೆ ಮಾಡುವ ಮರದ ಗೂಟ. a wooden peg used in making the ancient doors stand still (erect). ವಾ: ಅಂಗಾಲ್ ಗುತ್ತಿ ಗಟ್ಟಿ ಮರದ್ ಆಕು.

ಅಂಗಿ /*aŋgi*/ ನಾ. 1. ಗಂಡಸರು ಮೈಗೆ ತೊಡುವ ಉಡುಪು, 2. ಮೇಲು ಹೊದಿಕೆ. a shirt. **ಅಂಗಿ ತೆಗ್ದ್ ಬಾಮಿಗೆ ಹಾರಿನೆ ನಾ ಯಾರ್? – ಬಾಳೆ ಹಣ್ಣ್(ಒ).** ವಾ: ಅಂವ ಅಂಗಿ ಹಾಕಣ್‌ತ್.

ಅಂಗುಲ /*aŋgula*/ ಪವಾ. 1. ಉದ್ದವನ್ನು ಅಳೆಯುವ ಸಾಧನ, 2. ಆಚಾರಿಕೋಲು – 24 ಅಂಗುಲ, 1. ಕೋಲು – 2 ಇಂಚು ಆಚಾರಿ ಕೋಲುಮರದ ಅಳತೆಯಲ್ಲಿ ಬಳಕೆ, ಮೂರು ಶಿಲ್ಪಿಕೋಲು – 36 ಇಂಚು – 1. ಗಜ ಕೋಲು, ಮಣ್ಣಿನ ಅಳತೆ, ಮನೆಯ ಆಯಗಳ ಅಳತೆಯಲ್ಲಿ ಬಳಕೆ, 4. ಒಂದು ಅಳತೆ. 1. a tool to measure length, 2. a winding stick used in carpentry – of 24 inches, 3. a winding stick used in carpentry -36 inches. ವಾ: ಅಂಗುಲತೇಳ್‌ದು ಒಂದ್ ಅಳ್‌ತೆ.

ಅಂಗುಸ್ಟ /*aŋgusṭa*/ ನಾ. 1. ಹೆಬ್ಬೆರಳು, 2. ಹೆಬ್ಬೆರಳಿನ ಅಳತೆ, 3. ಉಂಗುಟ. 1. thumb, 2. measure of

thumb. ವಾ: ಏಕಲವ್ಯ ಗುರು ದ್ರೋಣಾಚಾರ್‌ಯರಿಗೆ ತನ್ನ ಅಂಗುಸ್ಟನ ಗುರುದಕ್ಷಿಣೆಯಾಗಿ ಕೊಟ್ಟತ್.

ಅಂಗೆಯ್ /*aŋgai*/ ನಾ. 1. ಕೈಯ ಒಳಭಾಗ, 2. ಹಸ್ತದ ಒಳಭಾಗ, 3. ಅಂಗ್ಯೆ. 1. palm, 2. inner side of the hand, 3. Inside part of the hand covering wrist and tip of the fingers. ವಾ: ಸೊವ್ದೆ ಕಡ್ಡ್ ಕಡ್ಡ್ ಅಂಗ್ಯೆ ದಡ್ಡ್ ಗಟ್ಟಿಟು.

ಅಂಗೈಸ್ /*aŋgaisɨ*/ ನಾ. 1. ಮೇಲೆ ನೋಡು, 2. ನಿರೀಕ್ಷೆಮಾಡು, 3. ಗೆಬ್ಬುಳ್ಸ್. 1. to look up, 2. to expect. ವಾ: ಯಾರಂದನೂ ಎಂತರ್‌ನ ಸ ಅಂಗೈಸ್‌ಕಾಗದ್. ಪ: ಬಾನಮೂಸು(ತು)

ಅಂಗ್‌ಡಿ[1] /*aŋgɨḍi*/ ನಾ. 1. ಅಂಗಡಿ, ಮಾರಾಟ ಮಳಿಗೆ, 2. ಪದಾರ್ಥಗಳನ್ನು ಮಾರುವ ಜಾಗ. 1. place where goods are bought and sold, 2. a shop/store where things are sold. ವಾ: ಅಂವ ಸಾಮಾನ್ ತಾಕೆ ಅಂಗ್‌ಡಿಗೆ ಹೋವುಟು.

ಅಂಗ್‌ಡಿ[2] /*aŋgɨḍi*/ ನಾ. ಒರಳಿನ ಕುಳಿಯ ಸುತ್ತಲೂ ಇರುವ ಜಾಗ. space around the cavity in a grinding stone. ವಾ: ಒರ್ಳ್‌ನ ಅಂಗ್‌ಡಿ ಹಾಳಾವುಟು.

ಅಂಗ್ಳ /*aŋgḷa*/ ನಾ. 1. ಅಂಗಳ, 2. ಅಂಗಣ. 1. a courtyard, 2. a yard. ವಾ: ಇಜ್ಜಲ್ ಕೆರ್‌ದ್ ಮನಾರ ಮಾಡಿವೆ.

ಅಂಚೆಮನೆ /*aɲcɛmanɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಅಂಚೇರ /*aɲcɛ:ra*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಅಂಜರ /*aɲjara*/ ನಾ. ಬಿದಿರಿನಿಂದ ಮಾಡಿರುವ ಪಟ್ಟಿ. a reaper made of bamboo. ವಾ: ಮನೆದ್ ಮಾಡ್‌ಗೆ ಅಂಜರ ಹಾಕೊಳೊ.

ಅಂಜುರ /*aɲjura*/ ನಾ. 1. ಒಂದು ಜಾತಿಯ ಕೆಂಪು ಬಣ್ಣದ ಹಣ್ಣು, 2. ಅಂಜೂರ, 3. ಅಂಜೂರಿ ಹಣ್ಣು. 1. a red coloured fruit, 2. fig, 3. fig fruit. ವಾ: ಅಂಜುರ ಹಣ್ಣ್‌ಲಿ ಹೆಚ್ಚಿ ಕ್ಯಾಲ್ಸಿಯಂ ಇದ್ದ್ ತಿಂದರೆ ಮೂಳೆಗಳಿಗೆ ಒಳ್ಳದ್, ಇದ್ ನೋಡಿಕೆ ಅತ್ತಿ ಹಣ್ಣ್ ನಂಗೆ ಇದ್ದದೆ. ಪ: ಅಂಜೂರ.

ಅಂಜೆರಿರಾ /*aɲjerira:*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಅಂಜೇರಿ /*aɲje:ri*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ನಾಲ್ಕೂರು ಗ್ರಾಮದ ಜಾಗ. a locality in Nalkuru village in Sullia Taluk of Dakshina Kannada District.

ಅಂಜ್ /*aɲjɨ*/ ಕ್ರಿ. 1. ಅಂಜಿಕೆ, 2. ಹಿಂಜರಿ, 3. ಭಯಪಡು, 4. ಹೆದರು. 1. to be afraid of, 2. to hesitate, 3. to fear, 4. to get scared. ವಾ: ಒಳ್ಳ ಕೆಲ್‌ಸ ಮಾಡಿಕೆ ಯಾಕೆ ಅಂಜ್‌ದು. ಪ: ಅಂಜಿ – ಹೆದರಿ, ಅಳುಕಿ.

ಅಂಟ್[1] /*aɳʈɨ*/ ಕ್ರಿ. 1. ಅಂಟು, 2. ತಾಗು, 3. ಸೋಂಕು, 4. ಅಂಟುವ ಪದಾರ್ಥ, 5. ಗೋಂದು. 1. gum, 2. to touch, 3. to infect, 4. sticky substance, 5. resin. **ಎಣ್ಣೆ ಹಾಕಂಡ್ ಒದ್ದಾಡ್ದರೂ, ಪುಣ್ಯ ಇದ್ದಷ್ಟೇ ಅಂಟುದು(ಗಾ).** ವಾ: ಸೀತ ಒಂದ್ ಅಂಟ್ ಕಾಯ್ಲೆ, ಮನೆಲಿ ಒಬ್ಬಂಗೆ ಆದರೆ ಸಾಕ್ ಎಲ್ಲೊವ್‌ಕೂ ಬಂದದೆ. ಪ: ಅಂಟಿತ್ – ಅಂಟಿಕೊಂಡಿತು; ಅಂಟಿದೆ – ಅಂಟುತ್ತದೆ; ಅಂಟಿಸಿಕೊಟ್ಟತ್ – ಅಂಟಿಸಿಕೊಟ್ಟಿತು; ಅಂಟಿಟು/ಅಂಟ್ಯುಟ್ಟು – ಅಂಟಿಕೊಂಡಿದೆ; ಅಂಟ್‌ನಂಗೆ – ಅಂಟಿನಂತೆ.

ಅಂಟ್[2] /*aɳʈɨ*/ ನಾ. 1. ಮುಟ್ಟಿದರೆ ಹತ್ತಿಕೊಳ್ಳುವ ಸ್ವಭಾವ, 2. ಗೋಂದು, 3. ಕೊಳೆ, 4. ಮುಟ್ಟ್ಟು, 5. ಕಸಿ ಮಾಡಲು ಉಪಯೋಗಿಸುವ ಸಸ್ಯದ ರೆಂಬೆ. 1. too sticky, 2. gum, 3. dirt, 4. to touch, 4. stem of a plant used in grafting. ವಾ: ಅರ್‌ವೆಗೆ ಅಂಟ್ ಮಾಡಿಕಣ್‌ಬಡ.

ಅಂಟೊಳಕಾಯಿ /*aɲtoḷaka:yi*/ ನಾ. 1. ನೊರೆ ಕಾಯಿ, 2. ಕ್ಷಾರಯುಕ್ತ ಹೊಳಪು ಮಾಡುವ ಕಾಯಿ, 3. ನರ್‌ವೊಳು ಕಾಯಿ. an acidic nut used to brighten utensils. ವಾ: ಅಂಟೊಳಕಾಯಿಯ ನೊರೆನ ತಲೆಗೆ ಹಾಕಿ ಮೀದರೆ ಸೀತ ಹೋದೆ. ಪ: ಅಂಟೊಳಕಾಯಿ ಮರ – ಅಂಟುವಾಳ, ನೊರೆಕಾಯಿ ಮರ; ನರುವೋಲು(ತು). **ಅಂಟ್ವಾಳಮರ** /*aɳʈva:ḷamara*/ ನಾ. 1. ಅಂಟುವಾಳಕಾಯಿಯ ಮರ, 2. ನೊರೆಕಾಯಿ ಮರ, 3. ಅಂಟವಾಳ, 4. ಅಂಟರಳೆ, 5. ನರ್ವೊಳು. a soapnut tree. ವಾ:

ಅಂಟ್ವಾಳ ಮರ ಸುಮಾರ್ ಹತ್ತರ್‌ಂದ ಹನ್ನೆರ್‌ಡ್ ಮೀಟರ್ ಎತ್ತರ ಬೆಳ್‌ದದೆಗಡ.

ಅಂಟ್ ಪುರ್‌ಲೆ /*aṇṭi purlɛ*/ ನಾ. 1. ಅಂಟು ಪುರಲೆ, 2. ಬಟ್ಟೆಗೆ ಅಂಟುವ ಒಂದು ಜಾತಿಯ ಹುಲ್ಲು. 1. spear grass, 2. a variety of grass that sticks to cloth. ವಾ: ಅಂಟ್ ಪುರ್ಲೆ ಅರ್ವೆಗೆ ಅಂಟಿರೆ ಸದ್ಯಕೆ ಹೋಕಿಲೆ.

ಅಂಟ್‌ಸ್ /*aṇṭisi*/ ನಾ. 1. ಹತ್ತಿಸು, 2. ಅಂಟಿಸು, 3. ಬೆಂಕಿ ದೀಪ ಮುಂತಾದುವನ್ನು ಹಚ್ಚು. 1. to light, 2. to stick something, 3. to light a lamp etc. ವಾ: ಅಂವ ನಂಗೆ ಹರ್ದ ನೋಟುನ ಅಂಟ್‌ಸಿಟು.

ಅಂಡಟೆ /*aṇḍaṭɛ*/ ನಾ. 1. ಮರದ ಗಂಟೆ, 2. ಮೆಂಟೆ. a wooden bell. ವಾ: ಅಂಡಟೆ ಬೊಡ್ಕಂಡ್ ಇದ್ದರೆ ಹಂದಿಗ ಬಾಕಿಲೆ. ಪ: ಅಂಡಟ್ಟೆ – ಮೆಂಟೆ, ಮರದ ಗಂಟೆ; ಅಂಡಟೆ ಹೊಡಿ – ಕಾಡು ಪ್ರಾಣಿಗಳನ್ನು ಓಡಿಸಲು ಹೊಡೆವ ಒಂದು ವಿಧದ ವಾದ್ಯ; ಅಂಡಾಟೆ – ಹೊಲದಲ್ಲಿ ಕಾಡು ಪ್ರಾಣಿಗಳನ್ನು ಓಡಿಸಲು ತಯಾರಿಸಿದ ಬಿದಿರಿನ ಗಂಟೆ

ಅಂಡಿ[1] /*aṇḍi*/ ನಾ. 1. ಮಾವಿನ ಗೊರಟು, 2. ಓಟೆ. 1. seed of a mango, 2. a seed shell. ವಾ: ಅಂಡಿದ್ ತಿರ್‌ಳ್‌ನ ಹುಳಿಮಜ್ಜಿಗೆಲಿ ಅರ್‌ದ್ ಕೊಟ್ಟರೆ ಜುಲಾಪ್ ನಿತ್ತದೆ.

ಅಂಡಿ[2] /*aṇḍi*/ ನಾ. ಒತ್ತಿಕೊಂಡು. to move. ವಾ: ನೀ ಒಂಚೂರ್ ಅಂಡಿ ಕುದ್ದಿಯನ. ಪ: ಅಂಡಿಕಂಡ್ – ಒತ್ತಿಕೊಂಡು. **ಅಂಡಿ ಹೋದು** /*aṇḍi ho:du*/ 1. ಒತ್ತರಿಸು, 2. ಹಿಂದಕ್ಕೆ ಹೋಗು, 3. ಒಂದು ಕಡೆಗೆ ತಳ್ಳು. 1. to encroach, 2. to go back 3. to push into a corner. ವಾ: ಹಬ್ಬಲಿ ದೇಸ್ತಾನಲಿ ಪ್ರಸಾದ ತಕಣಿಕೆ ಸಾಲ್‌ಲಿ ನಿತ್ತಿರಕನ ಜಾಗೆ ಇಲ್ಲದೆ ಎಲ್ಲೊವು ಅಂಡಿ ಹೋದೊ. **ಅಂಡಿಸ್** /*aṇḍisi*/ 1. ಹತ್ತಿರ ಹೋಗು, 2. ಹಿಂದೆಗೆ, 3. ಒತ್ತಿ ಕುಳಿತುಕೊಳ್ಳು. 1. to go near, 2. to withdraw, 3. to sit very close to someone. ವಾ: ಕೂರಿಕೆ ಜಾಗೆ ಇಲ್ಲದೆ ಎಲ್ಲೊವು ಅಂಡಿಸಿ ಕುದ್ದೊ.

ಅಂಡಿಬೋಳ /*aṇḍibo:ḷa*/ ನಾ. 1. ಶತ ಪೆದ್ದ, 2. ಬೈಗುಳ ಪದ. 1. a stupid person, 2. a derogatory term. ವಾ: ಇಂವ ಎಂತಪ ಒಳ್ಳ ಅಂಡಿಬೋಳನಂಗೆ ಆಡ್‌ದೆ.

ಅಂಡಿಮಾರ್ಪು /*aṇḍima:rpu*/ ನಾ. ಗಂಟುಮೂಟೆ. belongings. ವಾ: ಅಂಡಿಮಾರ್ಪು ಕಟ್ಟಿಕಂಡ್ ಊರೆಲ್ಲಾ ಹೋದೆ.

ಅಂಡೆ[1] /*aṇḍɛ*/ ನಾ. 1. ಹತ್ತಿರ, 2. ಟೊಳ್ಳಾದ ಬಿದಿರು ಅಥವಾ ಲೋಹದ ಆಳವಾದ ಪಾತ್ರೆ, 3. ಬಿದಿರಿನಿಂದ ಮಾಡಿದ ಜೀರ್ಕೊಳವೆ, 4. ಮೂಗಿನ ಹೊಳ್ಳೆ, 5. ಊದುಕೊಳವೆ. 1. near, 2. a hollow or a deep bamboo/metal vessel, 3. syringe, 4. nostril, 5. blowpipe. **ಅಂಡೆಗು ಸಿಕ್ಕಿಕಿಲೆ ದೊಂಡೆಗು ಸಿಕ್ಕಿಕಿಲೆ(ಗಾ).** ವಾ: ಅಂಡೆವೊಳಗೆ ನೆಸೆನ ಹುಗ್‌ಸುದು.

ಅಂಡೆ[2] /*aṇḍɛ*/ ನಾ. 1. ಲೋಹದ ದೊಡ್ಡ ಪಾತ್ರೆ, 2. ನೀರು ತುಂಬಿಸುವ ದೊಡ್ಡ ಪಾತ್ರೆ. 1. a large vessel of metal, 2. a cauldron to fill water. **ಅಂಡೆ ಬಾಯಿನಾರೂ ಕಟ್ಟಕ್ ದೊಂಡೆ ಬಾಯಿ ಕಟ್ಟಿಕೆ ಆದ್ಲೆ(ಗಾ).** ವಾ: ನೀರ್‌ನ ಅಂಡೆಲಿ ತುಂಬುಸಿ ಇಸುದು. ಪ: ಅಂಡೆಲಿ – ಅಗಲ ಬಾಯಿ ಇರುವ ಪಾತ್ರೆಯಲ್ಲಿ

ಅಂಡೆ[3] /*aṇḍɛ*/ ನಾ. 1. ಮೊಸರು ಕಡೆಯುವ ಬಿದಿರಿನ ಸಾಧನ, 2. ಅಗಲ ಬಾಯಿಯ ಧಾತುವಿನ ಪಾತ್ರೆ. 1. curd churner made out of bamboo, 2. an alloy (a stainless steel) vessel with a wide mouth. ವಾ: ಮೊಸ್‌ರ್‌ನ ಅಂಡೆಗೆ ಹಾಕಿ ಕಡೆಯಕು.

ಅಂಡೆ[4] /*aṇḍɛ*/ ನಾ. ಒಂದು ಬೈಗುಳ ಪದ. a term of abuse. ವಾ: ಅಂವ ಅಂಡೆನಂಗೆ ಮಾಡ್ದೆ.

ಅಂಡೆದುರ್‌ಸು /*aṇḍɛ dursu*/ ನಾ. 1. ಏನೇನೋ ಮಾತನಾಡುವವ, 2. ಒಂದು ಬೈಗುಳ ಪದ. 1. a blabbering person, 2. a term of abuse. ವಾ: ಅಂವ ಅಂಡೆದುರ್‌ಸುನಂಗೆ ಮಾತಾಡ್‌ದೆ.

ಅಂಡೆಂದ ಕುಡ್ಪುಗೆ /*aṇḍɛnda kuḍpugɛ*/ ನಾವಿ. ದೊಡ್ಡ ಪಾತ್ರೆಯಿಂದ ಬುಟ್ಟಿಗೆ. from a big vessel to basket. ವಾ: ಹುಗ್ಗೆನ ಅಂಡೆಂದ ತೋಂಡಿ ಕುಡ್‌ಪುಗೆ ಹಾಕೊಕು.

ಅಂಡೆಗೂ ಇಲ್ಲೆ /*aṇḍɛgu: ille*/ ನಾ. 1. ಲೆಕ್ಕಕ್ಕೆ ಇಲ್ಲದ, 2. ಪ್ರಯೋಜನಕ್ಕೆ ಬಾರದ. 1. unimportant 2 useless. **ಅಂಡೆಗೂ ಸಿಕ್ಕಿಕಿಲೆ ಅಳಗೆಗೂ ಸಿಕ್ಕಿಕಿಲೆ, ಅಂಡೆಗೂ ಇಲ್ಲೆ, ಕೊಂಡೆಗೂ ಇಲ್ಲೆ(ಗಾ).** ವಾ: ಅಂವ ಅಂಡೆಗೂ ಅಳೆಗೆಗೂ ಸಿಕ್ಕಿಕಿಲೆ.

ಅಂಡೆಪಿರ್‌ಕಿ /*aṇḍɛpirki*/ ನಾವಿ. 1. ತಲೆ ಹರಟೆ, 2. ಒಂದು ಬೈಗುಳ. 1. an impertinent person/an insane 2. a term of abuse. ವಾ: ಅಯ್ಯೋ ಅಂವನೊಟ್ಟಿಗೆ ಮಾತಾಡಿಕೆ ಬೊತ್ತ್, ಅಂವ ಅಂಡೆಪಿರ್‌ಕಿನಾಂಗೆ ಆಡ್‌ದೆ.

ಅಂಡೆಬೆದ್ರ್ /*aṇḍɛbedrɨ*/ ನಾ. ದೊಡ್ಡ ಜಾತಿ ಬಿದಿರು. a giant bamboo.

ಅಂಡ್[1] /*aṇḍɨ*/ ನಾ. 1. ಕುಂಡೆ, 2. ತಿಕದ ಬೊಡ್ಡೆಗಳು, 3. ಪೃಷ್ಠ, 4. ಪಿರ್‌ರೆ, 5. ಗುದದ್ವಾರ. buttocks. **ಅಂಡ್ ಸುಟ್ಟ ಕೊತ್ತಿನಂಗೆ(ಗಾ). ಯಾವ ಕಾಲ್ ಜಾರಿರೆ ಏನ್? ಪೆಟ್ಟ್ ಅಂಡ್‌ಗೆ ಬಿದ್ದದೆ(ನು).** ವಾ: ಕೂಸುನ ಅಂಡ್ ತೊಳ್‌ಸೊಕು.

ಅಂಡ್[2] /*aṇḍɨ*/ ನಾ. 1. (ಪಾತ್ರೆ ಮುಂತಾದುವುಗಳ) ಅಡಿ, 2. ಒತ್ತಿಕೊಂಡು ನಿಲ್ಲು. 1. bottom of vessel, 2. to stand very close to someone. ವಾ: ಹೆಂಗೆ ನಿತ್ತುಟು ನೋಡು ಅಂಡಿಕಂಡ್.

ಅಂಡ್ ಬಾಪ್ಸಿ /*aṇḍɨ ba:psi*/ ನಾವಿ. ಅಂಡು ಉಬ್ಬಿಸಿ. excessive up-down motion of hips while walking. ವಾ: ಅಂವ ಅಂಡ್‌ನ ಬಾಪ್ಸಿ ಕುದ್ದುಟು.

ಅಂಡ್ಗುದು /*aṇḍgudu*/ ಕ್ರಿ. 1. ಅಡಗುವುದು, 2. ಮರೆಯಾಗು, 3. ಹಿಂದಕ್ಕೆ ಸರಿ, 4. ಕೊನೆಗೊಳ್ಳು, 5. ಅಡಗಿಕೊಳ್ಳುವ ಸ್ಥಳ, 6. ಸೇರಿಕೊಳ್ಳು, 1. to hide, 2. to disappear, 3. to withdraw, 4. to end, 5. a place of hiding, 6. to join. ವಾ: ಸಾಲ ವಸೂಲ್‌ಗೆ ಬಾಕನ ಅಂವ ಕೋಳಿಗೂಡ್‌ಲಿ ಅಡ್‌ಂಗಿ ಕುದ್ದುಟು.

ಅಂಡ್‌ಸಿ ಕುದ್ರು /*aṇḍɨsi ku:ru*/ ನಾವಿ. ಒತ್ತರಿಸಿ ಕೂರು. to sit pushing others aside. ವಾ: ಹಳ್ಳ ಅತ್ತ ಅಂಡ್‌ಸಿ ಕುದ್ರು.

ಅಂಡ್ಸಿದೊ /*aṇḍsidɔ*/ ನಾವಿ. ಮೂಲೆಗೆ ದೂಡಿದರು. sidelined. ವಾ: ನನ್ನ ಮೂಲೆಗೆ ಅಂಡ್ಸಿದೊ. ಪ: ಅಂಡುದು – ಮೂಲೆಗೆ ದೂಡು

ಅಂಡ್‌ಸ್ /*aṇḍɨsɨ*/ ನಾ. 1. ಮೂಲೆಗೆ ದೂಡು, 2. ಕಡೆಗಣಿಸು. 1. to push into a corner, 2. to ignore. ವಾ: ನಾವು ಯಾರ್‌ನೂ ಅಂಡ್‌ಸ್‌ಕಾಗದ್.

ಅಂತ /*anta*/ ನಾ. 1. ಎಂದು, 2. ಅಂತಹ-ಅಂಥ, 3. ಆ ತರಹದ. 1. when, 2. of that kind, 3. of that type. ವಾ: ನಾ ಮೊದುವೆಗೆ ಹೋಕೂಂತ ಒಳೆ. ಪ: ಅಂತರ್ಲಿ – ಅಂತಹದರಲ್ಲಿ; ಅಂತಮಾತೆಲ್ಲ – ಆ ತರಹದ ಮಾತು, ಅಂತದೇ – ಅದೇ ತರಹದ;

ಅಂತರ /*antara*/ ನಾ. 1. ಅಂತರ, 2. ಒಳಗಿನ, 3. ಒಳಗೆ, 4. ನಡುವೆ, 5. ಹತ್ತಿರ, 6. ದೂರ, 7. ಎಡೆ. 1. distance, 2. of inside, 3. inside, 4. between, 5. near, 6. in between. ವಾ: ಅವುಳಿಗು ನಂಗು ವಯ್‌ಸ್‌ಲಿ ಬಾರಿ ಅಂತರ ಉಟ್ಟು.

ಅಂತವು /*antavu*/ ಸನಾ. 1. ಅಂತಹವರು, 2. ಆ ರೀತಿಯವರು. people of that kind or type. ವಾ: ಅಂತವು ಊರಿಗೆ ಒಬ್ಬ ಇದ್ದರೆ ಸಾಕ್ ಊರ್ ಉದ್ದಾರ ಆದೆ. ಪ: ಅಂತವರ್‌ಂದ – ಅಂತಹವರಿಂದ

ಅಂತಸ್ತ್[1] /*antastɨ*/ ನಾ. 1. ಜೀವನ ಮಟ್ಟ, 2. ಪ್ರತಿಷ್ಠೆ, 3. ಸಾಮಾಜಿಕ ಸ್ಥಾನಮಾನ, 4. ಅಂತಸ್ತು. 1. status in life 2. honour, 3. social status, 4. position in society. ವಾ: ಅಂತಸ್ತ್ ಇದ್ದರೆಲ ಸಮಾಜಲಿ ಮೊರ್‌ಯಾದೆ ಸಿಕ್ಕುದು.

ಅಂತಸ್ತ್[2] /*antastɨ*/ ನಾವಿ. 1. ಒಂದರ ಮೇಲೆ ಒಂದರಂತೆ ಅಳವಟ್ಟಿರುವ ಶ್ರೇಣಿ, 2. ಮಹಡಿ, 3. ಹಂತ, 4. ಅಟ್ಟ. 1. a vertical arrangement of series of rows, 2. an upper storey, 3. a stage/a stair 4. an attic. ವಾ: ಅವು ನಾಕ್ ಅಂತಸ್ತ್ ನ ಮನೆ ಕಟ್ಟಿಸಿದ್‌ಗಡ.

ಅಂತಾ /*anta:*/ ಅ. 1. ಆ ತರಹ, 2. ಅಂತೂ. 1. in that way/manner, 2. at last. ವಾ: ಅಲ್ಲಿ ಅಂತಾ ಹೇಳ್ವಂತ ಕೆಲ್ಸ ಎಂತ ಇತ್ಲೆ.

ಅಂತಿಕಡಲು /*antikaḍalu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಅಂತಿಬೆಟ್ಟು /*anṭibɛṭṭu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಅಂತು /*antu*/ ಅ. 1. ಹಾಗೇ, 2. ಆದರೂ. 1. in that manner, 2. in spite of. ವಾ: ಅಂತು ಇಂತು ಅಂವಂದ್ ಓದಿ ಆತ್. **ಅಂತೋ** /*antɔ:*/ 1. ಅಂತೋ, 2. ಹಾಗೋ-ಹೀಗೋ. 1. despite of, 2. in that way or in this way. ವಾ: ಅಂತೋ ಇಂತೋ ಕೆಲ್ಸ ಆತ್.

ಅಂತ್ಯ /*antya*/ ನಾ. 1. ಅಂತ್ಯ, 2. ಕೊನೆ, 3. ಅಂತಿಮ.

1. end, 2. last, 3. final. ವಾ: ಬೊದ್‌ಕ್‌ನ ಅಂತ್ಯಮುಟ್ಟ ಗ್ರೈಮೆ ಮಾಡೊಕು.

ಅಂದಜಾತ್ /*andaja:ti*/ ನಾ. 1. ಅಂದಾಜಾಯಿತು, 2. ಊಹೆ, 3. ಅಂದಾಜು. 1. guessed it, 2. a guess, 3. approximate. ವಾ: ನಂಗೆ ಈಗ ಅಂದಜಾತ್.

ಅಂದರೂ /*andaru:*/ ನಾ. ಆದರೂ. despite of. ವಾ: ಅಂದರೂ ಅವು ಹಂಗೆ ಮಾತಾಡಿಕೆ ಆಗದಿತ್. **ಅಂದರೆ** /*andarɛ*/ ಹಾಗಾದರೆ. thus, so, in that manner. ವಾ: ಅಂದರೆ ಅವು ಇಂದ್ ಬಾಕಿಲೆ ಕಂಡದೆ. **ಅಂದರೆಂತ** /*andarɛnta*/ ಹಾಗೆಂದರೇನು. what does it mean? ವಾ: ಅವ್ವ ಸೆಟ್ಟ್ ಗ ತಾಕೆ ಹೇಳ್ತ್, ಸೆಟ್ಟ್‌ಗ ಅಂದರೆಂತ?

ಅಂದಾಜಿ /*anda:ji*/ ನಾ. 1. ಅಂದಾಜು, 2. ಊಹೆ, 3. ಒಂದು ವಸ್ತುವಿಗಾಗುವ ಬೆಲೆ ಕೆಲಸಕ್ಕಾಗಿ ತಗುಲುವ ವೆಚ್ಚ ಮುಂತಾದುವುಗಳ ಬಗೆಗೆ ಮಾಡುವ ಊಹೆ. 1. approximation, 2. a guess, 3. an estimate on the possible expenditure. **ಅಂದಾಜಾದು, ಅಂದಾಜು, ಅಂದಾಜ್.** ವಾ: ಈ ಲೆಕ್ಕಕ್ಕೆ ಉತ್ತರನ ಅಂದಾಜಿ ಮಾಡಿ ಹೇಳ್. ಪ: ಅಂದಾಜಿಲಿ – ಅಂದಾಜಿನಲ್ಲಿ; ಅಂದಾಜಿಲ್ಲೆ – ಅಂದಾಜು ಇಲ್ಲ

ಅಂದ್ /*andi*/ ಸನಾ. 1. ಅಂದು, 2. ಕಳೆದ ದಿನ. 1. on that day/then, 2. last day/the previous day/ yesterday. **ಅಂದ್ ಬಾಂತೇಳ್ರೆ ಮೀದ್ ಬಾತ್(ಗಾ).** ವಾ: ಅಂದ್ ನಾ ಕೊಟ್ಟ ಪಾತ್ರೆ ಕೊಡ್ (ಕೊಡು). **ಅಂದೊಂದ್** /*andondi*/ ನಾ. 1. ಆ ದಿನ, 2. ಕಳೆದ ದಿನ. 1. that day, 2. last day. ವಾ: ಅಂದೊಂದ್ ದಿನ ನಂಗೆ ಹಂಗೆ ತಲೆತಿರ್‌ಗಿದಂಗೆ ಆಗಿತ್ತ್. ಪ: ಅಂದೇ **ಅಂದಿಗೆ** /*andigɛ*/ 1. ಆ ದಿನಕ್ಕೆ, 2. ಆವತ್ತಿಗೆ. 1. for/to that day, 2. at/to/for that time. ವಾ: ಅಂದ್‌ನ ಕೆಲ್‌ಸ ಅಂದ್‌ಗೆ ಮಾಡಿ ಮುಗ್ಸೊಕು. **ಅಂದಿತ್ತ್** /*anditti*/ 1. ಆಗ ಇತ್ತು, 2. ಅವತ್ತು ಇತ್ತು. 1. then it was there 2 it was there on that day. ವಾ: ಬೀಟಿ ಮರ ಅಂದಿತ್ತ್, ಈಗ ಇಲ್ಲೆ. **ಅಂದೂ ಇಂದೂ** /*andu: indu:*/ ಆ ದಿನ ಈ ದಿನ. referring to all the time. ವಾ: ಅಂದೂ ಅದೇ ಹೇಳ್‌ದ ಇಂದೂ ಅದೇ ಹೇಳ್‌ತೊಳ. **ಅಂದ್‌ಂದ** /*andinda*/ 1. ಅಂದಿನಿಂದ, 2. ಅವತ್ತಿನಿಂದ. 1. since then, 2. since that day. ವಾ: ಅವ್ಳಿಗೆ ಬಾರಿ ಬಾಯಿತ ಗೊತ್ತಾದ ಮೇಲೆ ಅಂದ್‌ಂದ ಅಂವ್ನ ಸುದ್ದಿಗೇ ಇಲ್ಲೆ ನಾವು. **ಅಂದ್‌ದ್** /*andidi*/ ನಾ. 1. ಹಳೆಯದು, 2. ಆವಾಗಿನದ್ದು. 1. old, 2. of an ancient period. ವಾ: ಅಂದ್‌ದ್ ಅಂದ್‌ಗೆ ಆತ್ ಬುಡು. ಪ: ಅಂದ್‌ಗೆ – ಅವತ್ತಿಗೆ

ಅಂದಿಬೊಳಕ್ /*andibɔḷaki*/ ನಾ. ದೇವಾಲಯಗಳಲ್ಲಿ ದೇವರಿಗೆ ನಡೆಸುವ ದೀಪಾರಾಧನೆಯ ಸೇವೆ. ceremony of decorated lamps in temples – a ritual in a temple. ವಾ: ದೇಸ್ತಾನಲಿ ದೇವ್‌ರಿಗೆ ಅಂದಿಬೊಳಕ್ ಸೇವೆ ನಡ್‌ದದೆ.

ಅಂದ್ರಿಗೇರು /*andrige:ru*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಅಂದ್ರೆ /*andrɛ*/ ಅ. ಅಂದರೆ. it means. ವಾ: ಅಂದ್ರೆ ನೀವು ಹೇಳ್ದು ನಂದೇ ತಪ್ಪುತ ನಾ. **ಅಂದ್ರೆಮತ್ತೆ** /*andrɛmattɛ*/ ಹಾಗಾದರೆ. whereas. ವಾ: ಅಂದ್ರೆಮತ್ತೆ ಇತ್ತ ಕಡೆ ಬಾದುಲೆನ?

ಅಂಪುಗಾಲ /*ampuga:la*/ ನಾ. 1. ಕೊನೆಗಾಲ, 2. ಅಳಿಗಾಲ, 3. ಅಂತ್ಯಕಾಲ. 1. last days of one's life, 2. the moment of one's death, 3. the end. ವಾ: ಅದರ ಅಂಪುಗಾಲ ಹಕ್ಕಲೆ ಬಾತ್ ಕಂಡದೆ.

ಅಂಬ /*amba*/ ನಾ. ದನ(ಮಭಾ). cattle (in the vocabulary of children). ವಾ: ನೋಡಲ್ಲಿ ಉಗ್ಗಪ್ಪ ಅಂಬ ಬರ್ತಾ ಉಟ್ಟು.

ಅಂಬಟೆ /*ambaṭɛ*/ ನಾ. 1. ಉಪ್ಪಿನಕಾಯಿಗೆ ಬಳಸುವ ಒಂದು ಹುಳಿಕಾಯಿ, 2. ಅಂಬಟೆಕಾಯಿ, 3. ಅಮಟೆ. 1. a sour plum used in pickles, 2. Indian Hog plum, 3. hog plum. ವಾ: ಅಂಬಟೆ ಉಪ್ಪನಕಾಯಿ ಪಳ್‌ಂಗಿತ್‌ಲೆ. **ಅಂಬಟೆಮರ** /*ambaṭɛmara*/ 1. ಹುಳಿಕಾಯಿ ಬಿಡುವ ಮರ, 2. ಈ ಮರದ ಕಾಯಿಯನ್ನು ಉಪ್ಪಿನಕಾಯಿಯಲ್ಲಿ ಬಳಸುವರು. 1. a tree in which sour plum is grown, 2. Hog plum used in pickles. ವಾ: ಅಂಬಟೆ ಮರದ ಸೊಪ್ಪು ಕಾಯಿ ಎಲ್ಲ ಹುಳಿ ಹುಳಿ.

ಅಂಬಟೆ ಕಚ್ಚುದು /*ambaṭɛ kaccudu*/ ನಾ. ಅವುಡುಗಚ್ಚುವುದು. pressing one's lips with teeth. ವಾ: ಸಿಟ್ಟ್ ಬಾಕನ ಹೆಂಗೆ ಅಂಬಟೆಕಚ್ಚಿದೆ ನೋಡ್.

ಅಂಬಟೆಡ್ಕ /*ambaṭeḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಸುಳ್ಯ ನಗರ ಮತ್ತು ಕಲ್ಮಡ್ಕ ಗ್ರಾಮದ ಜಾಗ. a locality in Kalmadka village in Sullia Taluk of Dakshina Kannada District.

ಅಂಬಡೆ ಸೂಡಿ /*ambaḍɛ suḍi*/ ನಾ. 1. ತಲೆಕೂದಲಿನ ಸೂಡಿ, 2. ಕೇಶಾಲಂಕಾರದ ಒಂದು ಶೈಲಿ. 1. Hair plaited in the form of bun, 2. hairstyle. ವಾ: ಹೆಣ್ಮಕ್ಕ ಅಂಬಡೆ ಸೂಡಿ ಕಟ್ಟಿರೆ ನೋಡಿಕೆ ಕುಸಿ.

ಅಂಬರ್ಸು /*ambarɨsu*/ ನಾ. 1. ಒತ್ತು, 2. ಅಮುಕು, 3. ಅದುಮಿ ಹಿಡಿ, 4. ಹಿಚುಕು. 1. to press, 2. to put pressure, 3. hold something using pressure, 4. to squeeze. ವಾ: ನಾ ಬಸ್ಸ್‌ಲಿ ಬಾಕನ ಅಂಬುರಿ ಹೋದೆ.

ಅಂಬಲ /*ambala*/ ನಾ. ದೇವಾಲಯದ ಹೊರ ಆವರಣ. a courtyard/a verandah of a temple. ವಾ: ಹಬ್ಬಲಿ ಊರವೆಲ್ಲ ಅಂಬಲಲಿ ಸೇರುವೆ.

ಅಂಬಲಿ-ಬುಲುವ-ಕೂಳೆ /*ambali-buluva-ku:ḷɛ*/ ನಾ. ಅಂಬಲಿ ಹಲಸು. a variety of jackfruit. ವಾ: ಕೂಳೆ ಮಿಡಿ ಲಾಯ್ಕ ಹಿಡ್ದುಟು.

ಅಂಬಾಲ್ /*amba:lɨ*/ ನಾ. ಕಣ್ಣಮುಚ್ಚಾಲೆ ಆಟದಲ್ಲಿ ಬಳಸುವ ಪದ. a term used in eye spy game. ವಾ: ನನ್ನ ಹಿಡಿಯಕೆ ಬಾಕನ ನಾ ಅಂಬಾಲ್‌ತ ಹೇಳ್ವೆ.

ಅಂಬು¹ /*ambu*/ ನಾ. ಬಾಣ. an arrow. **ಅಂಬು ಅಟ್ಟಲಿ, ಬಿಲ್ಲ್ ಬೆಟ್ಟಲಿ(ಗಾ).** ವಾ: ಅಂಬುನು ಬಿಲ್ಲುನು ಒಟ್ಟಿಗಿರೊಕು.

ಅಂಬು² /*ambu*/ ನಾ. ಜೇನು ಹುಳದ ಕೊಂಡಿ. sting of honey bee. ವಾ: ಜೇನ್ ಕುಟ್ಟಿದ್ ಅಂಬು ಬಾಕಿಯಾದರೆ ಬಾಪಿದೆ.

ಅಂಬುಗಾಯಿ /*ambuga:yi*/ ನಾ. ಜನಪದ ಆಟ. a folk game. ವಾ: ಈಗೆಲ್ಲ ಅಂಬುಗಾಯಿ ಆಡಿಕೆ ಯಾರಿಗೆ ಗೊತುಟು.

ಅಂಬುಲಿ /*ambɨli*/ ನಾ. 1. ರಾಗಿಯಿಂದ ಮಾಡಿದ ಗಂಜಿ, 2. ಪಾಯಸ. gruel made out of ragi/ finger millet. **ಅಂಬುಲಿ ಉಂಡ್ ಮೀಸೆ ತಿಕ್ಕ್‌ಕೆ ಒಬ್ಬ(ಗಾ).** ವಾ: ಅಂಬುಲಿ ಕುಡೆಕೆ ಕೊಡು.

ಅಂಬೆ /*ambɛ*/ ನಾ. 1. ಕರು, 2. ಅಬ್ಬೆ, 3. ತಾಯಿ, 4. ಅಜ್ಜಿ, 5. ಪಾರ್ವತಿ. 1. a calf, 2. female parent, 3. mother, 4. grandmother, 4. goddess Parvathi. ವಾ: ಅಂಬೇ. ಬಾ ಅಂಬೇ. ಬಾ, ಎಲ್ಲಿ ಹೋತ್‌ತ ಇದ್.

ಅಂಬೆಕರ್ /*ambɛkarɨ*/ ನಾ. ದನದ ಕರು. a calf. ವಾ: ಕರ್ ಹಟ್ಟಿಗೆ ಬಾತ ತ ಹೋಗಿ ನೋಡೊಮ್ಮೆ.

ಅಂಬೆಕಲ್ಲು /*ambɛkallu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಅಂಬೆರ್ಪ್ /*ambɛrpɨ*/ ಕ್ರಿ. 1. ಅವಸರ, 2. ಲಗುಬಗೆ, 3. ಬೇಗ, 4. ಸಮಯ. 1. hurry, 2. haste, 3. fast, 4. time. ವಾ: ಇಸ್ಟೊಂದ್ ಅಂಬೆರ್ಪುಲಿ ಎತ್ತ ಹೊರ್‌ಟದ್.

ಅಂಬೊಡಿ /*amboḍi*/ ನಾ. ಜನಪದ ಆಟ. a folk game.

ಅಂಬ್ಯುಲಾ /*ambyula:*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಅಂಬ್ರಾಟಿ /*anṭi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಅಂಬ್ರಿ ಹೋತು /*ambri hɔ:tu*/ ನಾ. ಒತ್ತಿ ಹೋಯಿತು (ಬಾಗಿಲಲ್ಲಿ ಕೈ ಸಿಕ್ಕಿಹಾಕಿಕೊಂಡಾಗ ಹೇಳುವ ಮಾತು). got pressed/got jammed. ವಾ: ಹೊತಾರೆನೆ ಬಾಗ್ಲ್ ಸೆರೆಗೆ ಬೆರ್ಳ್ ಸೆಕ್ಕಿ ಅಂಬ್ರಿ ಹೋತು.

ಅಂಬ್ರಿಸಿ ಹಿಡಿ /*ambrisi hiḍi*/ ನಾ. ಒತ್ತಿ ಹಿಡಿ. to hold something applying pressure. ವಾ: ಕೊತ್ತಿ ಕಾಲ್‌ನ ಅಂಬ್ರಿಸಿ ಹಿಡಿನೆ ಇಲ್ಲರೆ ಓಡಿ ಹೋದೆ.

ಅಂಬ್ರೆಪ್ಪು /*ambrɛppu*/ ನಾ. ಅವಸರ. urgency. ವಾ: ನಮ್ಮ ಅಜ್ಜಪಂಗೆ ಹೆಚ್ಚಿ ಅಂಬ್ರೆಪ್ಪು. ಅಂಬೆರ್ಪು(ತು)

ಅಂಬ್ರೋಟಿ /*ambro:ṭi*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮಂಡೆಕೋಲು ಗ್ರಾಮದ ಜಾಗ. 1. family, 2. lineage, 3. a locality in Mandekolu village in Sullia Taluk of Dakshina Kannada District.

ಅಂಬ್ಲ /*ambla*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಅಂಬ್ಲಿ /*ambli*/ ನಾ. 1. ಬೆಂದ ಅನ್ನದೊಂದಿಗೆ ರಾಗಿಯನ್ನು ಮಿಶ್ರಣ ಮಾಡಿದ ಪದಾರ್ಥ, 2. ಅಂಬಿಲ, 3. ಅಂಬಲಿ(ತು), 4. ಒಂದು ಬಗೆಯ

ತೆಳುವಾದ ಬೇಯಿಸಿದ ಆಹಾರ ಪದಾರ್ಥ, 5. ಗಂಜಿ. 1. a gruel cooked by adding ragi flour (finger millet) with cooked rice, 2. a gruel made of finger millet, 3. porridge, 4. a cooked dish, 5. rice gruel. ವಾ: ಅಂಬ್ಲಿ ಉಂಡರೆ ತಡಿಗೆ ತಂಪು ಒಳ್ಳದಾದೆ. ಪ: ಅಂಬುಲಿ; ಅಂಬೆಲಿ

ಅಂವ /*anva*/ ಸನಾ. ಅವನು. he. ವಾ: ಅಂವ ನಂಗೆ ದುಡ್ಡು ಕೊಡಿಕಾದೆತ ಅಣ್‌ಗಿಕಂಬದುತ. **ಅಂವ ಬೊಗುಳ್ದು** /*anva bɔguḷdu*/ 1. ಅವನು ಬೊಗಳುವುದು, 2. ಕೋಪದಿಂದ ಹೇಳುವಾಗ ನಾಯಿ ಬೊಗಳುವುದಕ್ಕೆ ಹೋಲಿಸಿ ಹೇಳುವ ಮಾತು. 1. screaming/shouting, 2. to compare one's angry remarks to a dog's barking. ವಾ: ನೋಡು ಸುಮ್ಮ ಸುಮ್ಮನೆ ನನ್ನ ಮೇಲೆ ಎಂತೆಲ್ಲ ಅಂವ ಬೊಗುಳ್ದು. **ಅಂವ ಹೋತಾ** /*anva ho:ta:*/ 1. ಅವನು ತೀರಿಕೊಂಡನಾ?, 2. ತಿರಸ್ಕಾರದ ನುಡಿ. 1. did he pass away? 2. a term used in contempt on someone. ವಾ: ಅಂವ ಹೋತಾ ಹೋಗಲಿ, ಉರಿ ಬಂದ್ ಸಾಯತಿತ್ತ್. **ಅಂವಂಗೆ** /*anvaŋgɛ*/ ಅವನಿಗೆ. to him. ವಾ: ಅಂವಂಗೆ ಎಲ್ಲ ಹೇಳ್ದನ? **ಅಂವನ** /*anvana*/ ನಾ. ಅವನ. his. ವಾ: ಅಂವನ ಅಣ್ಣನು ನಾನು ಒಂದು ಸಮೆಲಿ ಬಾರಿ ದೋಸ್ತಿಗ ಆಗಿದ್ದೊ. **ಅಂವನಕ್ಕಲೆ** /*avanakkaḷɛ*/ ಅವನ ಹತ್ತಿರ. from him/near him. ವಾ: ಅಂವನಕ್ಕಲೆ ಹೋಬಡ, ಬೊಯ್ದದೆ. **ಅಂವಬಾತ್** /*anvaba:tɨ*/ ಅವನು ಬಂದನು. He came/ arrived. ವಾ: ಅಣಯ ಅಂವಬಾತ್. **ಅಂವಹಾಂಗೆ** /*avaha:ŋgɛ*/ ಅವನು ಹಾಗೇ. He is like that. ವಾ: ಅಂವಹಾಂಗೆ ಮಾಡಿದೆತ ಯಾರಿಗೆ ತಾನೆ ಗೊತ್ತಿತ್ತ್.

ಅಂಸರ /*ansara*/ ನಾ. 1. ಅವಸರ, 2. ಆತುರ, 3. ಅವಕಾಶ, 4. ತ್ವರೆಮಾಡು. 1. urgency, 2. haste, 3. opportunity, 4. to quicken. ವಾ: ಹಿಂಗೆ ಅಂಸರ ಮಾಡಿರೆ ಆತ್ ಯಾವ ಕೆಲ್ಸನೂ ಆಕಿಲೆ. ಪ: ಅಮ್ಸರ

ಅಕಲ್ /*akaḷɨ*/ ನಾ. 1. ಸ್ಥಿರತೆ, 2. ಎಚ್ಚರ. 1. stability, 2. consciousness/ state of wakefulness. ವಾ: ಅಕಲ್ ಕಮ್ಮಿನವ ಜಾರಿ ಬೀತ್.

ಅಕಸ್ಮತ್ /*akasmatɨ*/ ನಾ. 1. ಅಚಾನಕ್, 2. ಅನಿರೀಕ್ಷಿತ, 3. ಆಕಸ್ಮಿಕ, 4. ಆ ಕೂಡಲೆ. 1. suddenly, 2. unforeseen, 3. unexpectedly 4. immediately. ವಾ: ದಾರಿಲಿ ಬಾಕನ ಅಕಸ್ಮತ್ ಆನೆ ಕಂಡರೆ ಹೆಂಗಾದು?

ಅಕೇರಿ /*akɛ:ri*/ ನಾ. 1. ಅಂತಿಮ, 2. ಕಡೆ, 3. ಕೊನೆ, 4. ಮುಕ್ತಾಯ. 1. the end, 2. last, 3. terminal, 4. end. ವಾ: ಅಂವ ಅಕೇರಿನ ಮಜ್ಜ. ಪ: ಅಕೆರಿದ್ – ಕೊನೆಯದು; ಅಕೇರಿನ – ಕೊನೆಯ; ಕಡೆಯ

ಅಕೇಸಿಯ /*akɛ:siya*/ ನಾ. ಎಪ. ಕರಿಜಾಲಿ, ಅಕೇಶಿಯ ಫ್ಯಾಬಸಿಯೆ ಕುಟುಂಬಕ್ಕೆ ಸೇರಿದ ಮಿಮೋಸೋಯ್ಡಿ ಉಪಪ್ರಭೇದ ಪೊದೆಗಳು ಹಾಗು ಮರಗಳ ಕುಲಕ್ಕೆ ಸೇರಿದೆ. ಅಕೇಶಿಯಗಳನ್ನು ಮುಳ್ಳಿನಮರಗಳು, ಸಿಳ್ಳೆಯಂತೆ ಶಬ್ದಮಾಡುವ ಮುಳ್ಳುಗಳು ಅಥವಾ ವಾಟಲ್‌ಗಳು (ತಡಿಕೆಗಳು) ಎಂದೂ ಸಹ ಕರೆಯಲಾಗುತ್ತದೆ, ಇದರಲ್ಲಿ ಎಲ್ಲೊ-ಫೀವರ್ ಅಕೇಶಿಯ ಹಾಗು ಅಂಬ್ರೆಲಾ ಅಕೇಶಿಯಗಳೂ. an acacia tree – belonging to the Mimosoideae subfamily of Fabaceae (a large group of trees and shrubs). ವಾ: ಅರಣ್ಯ ಇಲಾಕೆಯವು ಅಕೇಸಿಯ ನೆಡ್‌ತೋಪ್ ಮಾಡುವೆ.

ಅಕ್ಕ /*akka*/ ನಾ. 1. ಹಿರಿಯ ಸಹೋದರಿ, 2. ಹೆಂಗಸರನ್ನು ಸಂಬೋಧಿಸುವಾಗ ಗೌರವಾರ್ಥವಾಗಿ ಬಳಸುವ ಮಾತು, 3. ಸ್ತ್ರೀ ಸಂಬಂಧ ಸೂಚಕ. 1. elder sister, 2. a title of respect for an adult female, 3. a term referring to an elderly woman. **ಅಕ್ಕನ ಮೇಲೆ ಪ್ರೀತಿ ಅಕ್ಕಿ ಮೇಲೆ ಆಸೆ(ಗಾ). ಅಕ್ಕ ಕೊಕ್ಕ ಕೊಯಿಲಾ ಮೊದ್ದು ಉಪ್ಪನಕಾಯಿ ಹಾಕಿಕೆ ಬರೊಕಡ, ಅಣ್ಣ ತುಣ್ಣೆ, ತುಣ್ಣೆನ ರೋಮ ಚಪ್ಪರ ಹಾಕಿಕೆ ಬರೊಕಡ(ನು). ಅಕ್ಕನ ಮನೆಗೆ ತಂಗೆ ಹೋದೆ, ತಂಗೆನ ಮನೆಗೆ ಅಕ್ಕ ಹೋದುಲೆ – ಸೇರ್, ಪಾವು(ಒ).** ವಾ: ಅಕ್ಕ ಹೆಂಗೊಳರಿ? ಪ: ಅಕ್ಕಂದರ್ – ಅಕ್ಕಂದಿರು;

ಅಕ್ಕಚ್ /*akkacɨ*/ ನಾ. 1. ಅಕ್ಕಿ ತೊಳೆದ ನೀರು, 2. ಕಲಗಚ್ಚು, 3. ಅಕ್ಕಿಕಚ್ಚು, 4. ಅಕ್ಕಿಗರ್ಚು. 1. water in which rice has been washed, 2. Kitchen waste in liquid form, 3. rice soaked water, 4. washing the rice. ವಾ: ಅಕ್ಕಚ್‌ನ ದನದ ಮರ್‌ಗಿಲ್‌ಗೆ ಹೊಯಿ. ಪ: ಅರ್ಕಂಜಿ(ತು)

ಅಕ್ಕಡ್ಕ /*akkaḍka*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಅಕ್ಕಪಾಡಿ /*akkapa:ḍi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮಂಡೆಕೋಲು ಗ್ರಾಮದ ಜಾಗ. a locality in Mandekolu village in Sullia Taluk of Dakshina Kannada District.

ಅಕ್ಕಯ[1] /*akkaya*/ ನಾ. 1. ಅಕ್ಕ 2. ಹಿರಿಯ ಸಹೋದರಿ. elder sister. ವಾ: ಅಕ್ಕಯ ಹೆಂಗೊಳನೆ?

ಅಕ್ಕಯಕ್ಕ /*akkayakka*/ ನಾ. ವ್ಯಕ್ತಿನಾಮ, ಸ್ತ್ರೀಲಿಂಗ. Name of a person (prosoponym). ವಾ: ಅಕ್ಕಯಕ್ಕ ಹೆರ್‌ಗೆ ಮಾಡ್‌ಸಿದೊ.

ಅಕ್ಕಸಾಲಿ /*akkasa:li*/ ನಾ. 1. ಚಿನ್ನ, ಬೆಳ್ಳಿ ಕೆಲಸ ಮಾಡುವವನು, 2. ನಾಣ್ಯಗಳ ಪರೀಕ್ಷಕ. 1. a goldsmith and a silversmith, 2. the one who examines coins. **ಅಕ್ಕನ ಬಂಗಾರನ ಅಕ್ಕಸಾಲಿ ಬಿಡ(ಗಾ).** ವಾ: ಅಕ್ಕಸಾಲಿಗರ್‌ತ ಹೇಳ್‌ರೆ ಚಿನ್ನದ ಕೆಲ್‌ಸ ಮಾಡೊವು.

ಅಕ್ಕಾ /*akka:*/ ನಾ. ಪ್ರ. ಆಗಬಹುದಾ? could it be? ವಾ: ನಾಳೆ ಬಂದರೆ ಅಕ್ಕಾ? ಪ: ಅಕ್ಕ್ – ಆಗಬಹುದು; ಅಕ್ಕ್ಯ – ಆಯಿತು

ಅಕ್ಕಾರಿ /*akkari*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಅಕ್ಕಿ /*akki*/ ನಾ. 1. ಬತ್ತದ ಹೊಟ್ಟು ತೆಗೆದ ಮೇಲೆ ಉಳಿಯುವ ಕಾಳು, 2. ಮಂತ್ರಾಕ್ಷತೆ. 1. dehusked rice, 2. rice coloured with either yellow or red or both – used in religious ceremonies. **ಅಕ್ಕಿ ತಕಂಡ್ ಅಕ್ಕನ ಮನೆಗೆ ಹೋಕ(ಗಾ). ಸಾವುರ ಹಕ್ಕಿಗ ಒಟ್ಟಿಗೆ ನೀರಿಗಿಳ್ದವೆ – ಅಕ್ಕಿ(ಒ).** ವಾ: ಅಕ್ಕಿನ ಮೆಟ್ಟಿಕಾಗದ್, ಅಕ್ಕಿ ಬಗ್ಗೆ ನಮ್ಮಲ್ಲಿ ಪೂಜ್ಯ ಬಾವನೆ ಉಟ್ಟು. ಪ: ಅಕ್ಕಿ ಕಡ್ಡ್ – ಅಕ್ಕಿಯನ್ನು ರುಬ್ಬಿ; ಅಕ್ಕಿ ಕೊಮ್ಮೆ – ಅಕ್ಕಿ ಶೇಖರಣೆ ಮಾಡುವ ಸಾಧನ; ಅಕ್ಕಿ ಬೀಸ್ವ ಕಲ್ – ಬೀಸುವ ಕಲ್ಲು; ಅಕ್ಕಿ ಮರ್ತ – ವಧು ವರರಿಗೆ ಮಾಡುವ ಶಾಸ್ತ್ರ; ಅಕ್ಕಿ ವಂಚುದು – ಅಕ್ಕಿ ಜರಡಿ ಹಿಡಿಯುವುದು; ಅಕ್ಕಿ ಹಸೆ – ಚಪ್ಪರದಡಿಯ ಅಂಗಳದಲ್ಲಿ ಅಕ್ಕಿಯಲ್ಲಿ ಬರೆಯುವ ಹಸೆ; ಅಕ್ಕಿ ಹಿಟ್ಟ್ – ಅಕ್ಕಿಯಿಂದ ಮಾಡಿದ ತಿನಿಸು

ಅಕ್ಕಿಹಸೆ /*akkihasɛ*/ ನಾವಿ. ಮದುಮಕ್ಕಳಿಗೆ ಅರೆಭಾಷೆ ಗೌಡರಲ್ಲಿ ಶಾಸ್ತ್ರ ಮಾಡುವ ಮೊದಲು ನೆಲದ ಮೇಲೆ ಅಕ್ಕಿಯಿಂದ ಹಸೆ ಬರೆದು ಹೊಸ ಮೊಂದ್ರಿಯನ್ನು ಹಾಸುತ್ತಾರೆ, ಇದನ್ನು ನೆಲ್ಲಕ್ಕಿ ಅಡಿಯಲ್ಲಿ ಚಪ್ಪರದ ಕೆಳಗೂ ಬರೆಯುತ್ತಾರೆ. a decorative, ritualistic pattern drawn during the wedding ceremony using rice flour. ವಾ: ಮೊದುವೆಲಿ ಒಂದ್ ಸಾಸ್ತ್ರಲಿ ಅಕ್ಕಿ ಹಸೆ ಬರ್‌ದವೆ.

ಅಕ್ಕಿಮಲೆ /*akkimale*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕನಕಮಜಲು ಗ್ರಾಮದ ಜಾಗ. a locality in Kanakamajalu village in Sullia Taluk of Dakshina Kannada District.

ಅಕ್ಕು /*akku*/ ನಾ. 1. ಸ್ತ್ರೀ ಅಂಕಿತ ನಾಮ, 2. ಸಣ್ಣ ಹೆಣ್ಣು ಮಕ್ಕಳನ್ನು ಪ್ರೀತಿಯಿಂದ ಸಂಭೋದಿಸುವುದು. 1. a common name for a woman, 2. a term of affection used while calling young girls. ವಾ: ಅಕ್ಕುಗೆ ಸಾಲೆಗೆ ಹೋವುಟ್ಟು.

ಅಕ್ಕುಳಿಮಣೆ /*akkuḷimaṇɛ*/ ನಾ. 1. ಚೆನ್ನಮಣೆ, 2. ಒಳಾಂಗಣದ ಜನಪದ ಆಟ. an indoor board game of “wooden block with holes” – usually consisting of two rows of 7 holes on each side. ವಾ: ಬನ್ನಿ ಎಲ್ಲೊವು ಸೇರಿಕಂಡ್ ಅಕ್ಕುಳಿ ಮಣೆ ಆಡೊಮೊ.

ಅಕ್ಕೆ /*akkɛ*/ ನಾ. ಬ್ರಾಹ್ಮಣ ಹೆಂಗಸರನ್ನು ಕರೆಯುವುದು. the way to address a brahmin woman. ವಾ: ಅಕ್ಕೆನ ಒಮ್ಮೆ ಕರಿ.

ಅಕ್ಕೋಜಿಪಾಲು /*akko:jipa:lu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಮರಪಡ್ನೂರು ಗ್ರಾಮದ ಜಾಗ. a locality in Amarapadnuru village in Sullia Taluk of Dakshina Kannada District.

ಅಕ್ಕ್ /*akkɨ*/ ನಾ. 1. ಆದೀತು, 2. ಆಗಬಹುದು. a term used for affirmation. ವಾ: ಅಕ್ಕ್‌ತೇಳಿ ಅಂವ ಬಾತ್‌ಲೆ. ಪ: ಅಕ್ಕ್‌ಂತ – ಆಯಿತು; ಆಯಿತಪ್ಪ/ಮ; ಅಕ್ಕ್‌ಂತೇಳಿ – ಆಯಿತೆಂದು ಹೇಳಿ; ಅಕ್ಕ್ಯ – ಆಯಿತು

ಅಕ್ಕ್ಯ[1] /*akkɨya*/ ನಾ. 1. (ಹೆಂಡತಿಯೊಂದಿಗೆ) ಸಲುಗೆಯ ಮಾತು, 2. ಆಗಬಹುದು. 1. an

intimate conversation with one's wife, 2. it can happen. ವಾ: ಅಕ್ಕ್ಯಯ ಏನ್ ಮಾಡಿಯನೆ?

ಅಕ್ಕ್ಯಯು^{2} /*akkɨya*/ ಕ್ರಿ. ಆಗಬಹುದು. it can happen. ವಾ: ಅಕ್ಕ್ಯಯ ನಾಳೆ ಬೊಳ್ಪ್‌ಗೆ ಬನ್ನೆ

ಅಕ್ಕ್‌ಸಲೆ /*akkɨsalɛ*/ ನಾ. 1. ಚಿನ್ನ, ಬೆಳ್ಳಿ, ಕೆಲಸ ಮಾಡುವವನು, 2. ನಾಣ್ಯಗಳ ಪರೀಕ್ಷಕ, 3. ಅಕ್ಕಸಾಲಿಗ. 1. a goldsmith and a silversmith, 2. the one who examines coins (Numismatics), 3. a goldsmith. ವಾ: ನಿನ್ನೆ ಅಕ್ಕ್‌ಸಲೆ ಹಕ್ಕಲೆ ಹೋಕಾಗಿತ್.

ಅಕ್ಣಿ /*akṇi*/ ನಾ. 1. ಚಿಕ್ಕಮ್ಮ, 2. ಹಿರಿಯ ಸಹೋದರಿಯನ್ನು ಅಕ್ಕರೆಯಿಂದ ಕರೆಯುವ ರೀತಿ. 1. aunt, 2. a way of addressing one's elder sister with affection. ವಾ: ಇವು ನನ್ನ ಅವ್ವನ ಅಕ್ಣಿ.

ಅಕ್ರ /*akra*/ ನಾ. 1. ನಾಲಗೆಯ ಮೇಲಿನ ಬಿಳಿ ಪದರು, 2. ನಾಲಗೆಯ ಕೊಳೆ. white tongue. ವಾ: ಕೂಸುನ ನಾಲಿಗೆಲಿ ಅಕ್ರ ಉಟ್ಟು. ಪ: ಅಕ್ರೆ

ಅಕ್ರಿಕಟ್ಟೆ /*akrikaṭṭe*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕಲ್ಮಡ್ಕ ಗ್ರಾಮದ ಜಾಗ. a locality in Kalmadka village in Sullia Taluk of Dakshina Kannada District.

ಅಕ್ಷತೆ /*akṣatɛ*/ ನಾ. 1. ಮೊನೆ ಮುರಿಯದ ಅಕ್ಕಿ, 2. ಮಂತ್ರಾಕ್ಷತೆ, 3. ಹಣೆಯಲ್ಲಿ ಇಟ್ಟು ಕೊಳ್ಳುವ ಬೊಟ್ಟು, 4. ಶುಭಕಾರ್ಯಗಳಲ್ಲಿ ಮಂತ್ರಪೂರ್ವಕವಾಗಿ ಬಳಸುವ ಅರಿಶಿನ ಅಥವಾ ಕುಂಕುಮದಲ್ಲಿ ಕಲಸಿದ ಅಕ್ಕಿ ಕಾಳು. 1. unbroken or whole rice grains , 2. consecrated rice, 3. a religious round mark/dot on the forehead, 3. unbroken rice mixed with either turmeric powder or vermilion powder or both – used in religious ceremonies. ವಾ: ಮೊದುಮಕ್ಕಳ ತಲೆಗೆ ಅಕ್ಷತೆ ಹಾಕ್.

ಅಕ್ಷರ /*aksara*/ ನಾ. 1. ಅಕ್ಷರ, 2. ಲಿಖಿತ ರೂಪ, 3. ಬರವಣಿಗೆ. 1. a letter, 2. a form of writing, 3. writing. ವಾ: ಕೂಸಿಗೆ ಅಕ್ಷರ ಅಬ್ಯಾಸ ಮಾಡ್ಸಿಯೊಳೆ.

ಅಕ್ಸಿ /*aksi*/ ನಾ. ಅ. 1. ಆಕ್ಸಿ, 2. ಸೀನುವಾಗ ಬರುವ ಶಬ್ದ. achoo' – an onomatopoeia – sound produced while sneezing. ವಾ: ಅಂವ ಹಂಚಿ ಹಾರುವಂಗೆ ಅಕ್ಸಿತೇಳ್‌ದೆ.

ಅಗರಿತೋಟ /*agarito:ṭa*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಅಗರ್ /*agarɨ*/ ನಾ. 1. ಕಂದಕ, 2. ದೊಡ್ಡಕಣಿ, 3. ಬೇಲಿಯಾಗಿ ಮತ್ತು ಗಡಿ ಗುರುತಿಸಲು ತೆಗೆಯುವ ದೊಡ್ಡ ಕಂದಕ, 4. ಕಣಿ, 5. ಕಡಂಗ. 1. trench, 2. a huge ditch 3. a trench used as a fence or a boundary, 4. a pit 5. a trough. ವಾ: ಹಂದಿ ಅಗರ್ ಹಾರಿಕಂಡ್ ಆ ಕಾಡಿಗೆ ಹೋತ್.

ಅಗರ್ತ /*agarta*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಅಗರ್ತಿಮಾರ್ /*agartima:rɨ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಅಗಲ /*agala*/ ನಾ. 1. ವಸ್ತುವಿನ ಅಡ್ಡಳತೆ, 2. ವಿಶಾಲತೆ. 1. measurement of width, 2. width/ breadth. **ಅಗಲ ಆಗಿ ಮಾಡ್ವ ಬದ್ಲ್ ಆಳ ಆಗಿ ಮಾಡ್(ಗಾ).** ವಾ: ಈ ಬಾಮಿ ಬಾರಿ ಅಗಲ ಉಟ್ಟು.

ಅಗಲ್ /*agalɨ*/ ನಾ. 1. ಎಡೆ, 2. ಭೂತ, ದೈವಗಳಿಗೆ ಆರಾಧನೆಯ ಸಂದರ್ಭದಲ್ಲಿ ಸಾಂಕೇತಿಕವಾಗಿ ಬಡಿಸುವ ಆಹಾರ, 3. ಅಗೆಲ್(ತು). The food that is symbolically served to the daiva (bhuta or deity) during the time of worship. ವಾ: ದೆವ್ವಕೆ ಅಗಲ್ ಇಕ್ಕಿಕೆ ಮಾಡ್ವ ಗೈಪುನ ರುಚಿ ನೋಡಿಕಿಲ್ಲೆ.

ಅಗಲ್ಪಾಡಿ /*agalpa:ḍi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಬಾಳಿಲ ಗ್ರಾಮದ ಜಾಗ. a locality in Balila village in Sullia Taluk of Dakshina Kannada District.

ಅಗಲ್‌ಸಿ /*agalɨsi*/ ಕ್ರಿ. 1. ಅಗಲಿಸಿ, 2. ಬಿಡಿಸಿ. 1. spread, 2. separated. ವಾ: ಕೂಸು ಹೆಂಗೆ ಕಣ್ಣ್ ಅಗಲ್‌ಸಿ ನೋಡ್ತೆತ ನೋಡು.

ಅಗಳಡ್ಕ /*agaḷaḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕಲ್ಮಕಾರು ಗ್ರಾಮದ ಜಾಗ. a locality in Kalmakar village in Sullia Taluk of Dakshina Kannada District.

ಅಗಳಿ /*agaḷi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಅಗಳಿಕಜೆ /*agaḷikajɛ*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಸುಬ್ರಹ್ಮಣ್ಯ ಗ್ರಾಮದ ಜಾಗ. a locality in Subramanya village in Sullia Taluk of Dakshina Kannada District. ಪ: ಅಗೋಳಿಕಜೆ

ಅಗಳಿಕೆ /*agaḷikɛ*/ ನಾ. 1. ಆಕಳಿಕೆ, 2. ನಿದ್ರೆ ಬರುವಾಗ ಬಾಯಿ ತೆರೆಯುವುದು. 1. yawning, 2. an involuntary act of opening the mouth widely, caused by drowsiness. ವಾ: ಇಂದ್ ಕುದ್ದಲಿ ನಿತ್ತಲಿ ಬಾರಿ ಅಗಳಿಕೆ ಬರ್‌ತಾ ಉಟ್ಟು.

ಅಗಳ್ತ /*agaḷta*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಬಳ್ಪ ಗ್ರಾಮದ ಜಾಗ. a locality in Balpaa village in Sullia Taluk of Dakshina Kannada District.

ಅಗಾಡಿ[1] /*aga:ḍi*/ ನಾ. ಪೈರಿನ ಮಡಿ. a plant bed. ವಾ: ಈ ಸರ್‌ತಿ ಅಗಾಡಿ ಬಾರಿ ಲಾಯ್ಕ್ ಉಟ್ಟು.

ಅಗಾಡಿ[2] /*aga:ḍi*/ ನಾ. 1. ಮುಂಭಾಗ, 2. ಕುದುರೆಯ ಮುಂಗಾಲುಗಳ ಹಗ್ಗ, 3. ಮುಂಚೆ, 4. ಆತುರ, 5. ಬೇಗ ಮುಗಿಯುವಿಕೆ. 1. frontal part, 2. a hobble or spancel, 3. something gets over early, 4. sense of urgency, 5. something gets completed early.

ಅಗಿ[1] /*agi*/ ಕ್ರಿ. 1. ಅಗೆ, 2. ತೋಡು, 3. ಬಗಿ. 1. to dig, 2. drawing something with a spade, 3. to remove soil with a shovel. ವಾ: ದೈ ನೆಡಿಕೆ ನೆಲ ಅಗಿಯೊಕು.

ಅಗಿ[2] /*agi*/ ಕ್ರಿ. ಜಗಿ. to chew. ವಾ: ಎಲಡ್ಕೆನ ಅಗ್‌ದ್ ತಿನ್ನೊಕು. ಪ: ಅಗ್ದ್ – ಜಗಿಯುವುದು;

ಅಗಿಸ್ಟಿಕೆ /*agisṭikɛ*/ ನಾ. 1. ಅಗ್ಗಸ್ಟಿಕಾ, 2. ಕುಲುಮೆ, 3. ಬೆಂಕಿ ಕೆಂಡದ ಪಾತ್ರೆ. 1. a fireplace, 2. a furnace, 3. a vessel to carry ember/cinder. ವಾ: ಮಳ್‌ಗಾಲಲಿ ಅಗಿಸ್ಟಿಕೆಲಿ ಕೆಂಡ ಮಾಡಿ ಅರ್ವೆ ವಣ್‌ಗುಸುದು.

ಅಗುಳು /*aguḷu*/ ನಾ. 1. ದೊಡ್ಡಕಣಿ, 2. ಕಂದಕ, 3. ಬೆಂದ ಅನ್ನದ ಕಾಳು. 1. a big trench, 2. a ditch, 3. cooked grain of rice. ವಾ: ಹಂದಿ ಅಗುಳು ಹಾರಿ ಓಡ್‌ತ್.

ಅಗೆ /*agɛ*/ ನಾ. 1. ಭತ್ತದ ಪೈರು, 2. ಸಣ್ಣ ಸಸಿ, 3. ಮೊಳಕೆ. 1. standing crop, 2. a small/young plant-a seedling, 3. spourt. ವಾ: ಈ ಸಲದ ಅಗೆ ನಾಟಿ ಮಾಡಿಕೆ ಬಾರಿ ಲಾಯ್ಕ ಆದೆ. ಪ: ಅಗೆ ಆಳ್ – ಪೈರು ತೆಗೆಯುವವರು; ಅಗೆ ಏಕಲ್ – ಬತ್ತದ ಸಸಿ ಇರುವ ಗದ್ದೆ; ಅಗೆ ಕಂತೆ – ಅಗೆ ತೆಗ್ಯದು – ಬತ್ತದ ಸಸಿಗಳನ್ನು ಕೀಳುವುದು; ಅಗೆ ಬೊಟ್ಟು – ಪೈರು ಕೆಲಸ ಆದ ಮೇಲೆ ಐದು ಕಂತೆ ಪೈರಿನ ತುದಿ ಸೇರಿಸಿ ಮುರಿದು ಅದನ್ನು ನೊರೆಹುಲ್ಲು; ಕೆನೆ ಮಣ್ಣು – ಸುಣ್ಣ ಸೇರಿಸಿ ಅರೆದು ಬೊಟ್ಟು ತಯಾರು ಮಾಡುವುದು; ಅಗೆಬಿ

ಅಗೆ ಒಡಿ /*agɛ oḍi*/ ನಾವಿ. 1. ಭತ್ತದ ಪೈರಿನ ಸಾಲುಗಳು, 2. ಪಾತಿ, 3. ಪಟ, 4. ಮಡಿ. 1. rows of paddy 2. seedling bed 3. , 4. a plant bed. ವಾ: ಅಗೆ ಒಡಿ ನೆಟ್ಟಂಗೆ ಇರೊಕು.

ಅಗೆಳ್ /*ageḷi*/ ನಾ. ದೈವಕ್ಕೆ ನೀಡುವ ಹರಕೆಯ ಪದ್ಧತಿ. a vow, the practice of solemn promise to a daiva (deity/spirit). ವಾ: ದೈವಕ್ಕೆ ಅಗೆಳ್ ಕೊಡೊಕು. ಪ: ಅಗೆಲ್(ತು); ಅಗಲ್

ಅಗೋಳಿಕಜೆ /*ago:ḷikajɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಅಗೋಳಿಬೈಲು /*ago:ḷibailu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಬಳ್ಪ ಗ್ರಾಮದ ಜಾಗ. a locality in Balpaa village in Sullia Taluk of Dakshina Kannada District.

ಅಗ್ಗ /*agga*/ ನಾ. 1. ಕಡಿಮೆ ಬೆಲೆ, 2. ಅಲ್ಪಬೆಲೆ, 3. ಕ್ರಯ. 1. inexpensive, 2. lesser price, 3. price/ value. **ಅಗ್ಗದ ಆಸೆಗೆ ಗೊಬ್ಬರ ತಕಂಡಂಗೆ(ಗಾ).** ವಾ: ಈ ಸರ್‌ತಿ ಗೊಬ್ಬರ ಅಗ್ಗಲಿ ಸಿಕ್ಕಿತ್.

ಅಗ್ಟೆ /*agṭɛ*/ ನಾ. 1. ಚಳಿಕಾಯಿಸಲು ಹಾಕುವ ಬೆಂಕಿ, 2. ಅಗ್ಗಿಷ್ಟಿಕೆ, 3. ಅಗ್‌ಡೆ. 1. to set the fire burning to keep oneself warm, 2. a fireplace, 3. a furnace. ವಾ: ಮಳ್‌ಗಾಲ ಮತ್ತೆ ಸಳಿಗಾಲಲಿ ಅಗ್ಟೆ ಬಳ್‌ಸುವೆ. ಪ: ಅಗುಡೆ(ತು)

ಅಗ್ತೆ /*agtɛ*/ ನಾ. 1. ಅಗೆಯುವುದು, 2. ಮಣ್ಣು ಮಗುಚುವುದು. 1. digging, 2. to turn the soil upside down. ವಾ: ದೈ ನೆಡಿಕೆ ಅಗ್‌ತೆ ಮಾಡೊಕು.

ಅಗ್ಯನ /*agyana*/ ನಾ. 1. ಸಂಶಯ, 2. ಅಜ್ಞಾನ. 1. an evil thought, 2. ignorance. ವಾ: ಅಂವ ಅಗ್ಯನನಂಗೆ ಮಾತಾಡ್‌ದೆ.

ಅಗ್ರ /*agra*/ ನಾ. 1. ಮುಂಭಾಗ, 2. ತುದಿ, 3. ಮೊದಲನೆಯ. 1. front 2. the end of something 3. the first. ವಾ: ಆ ಸಾಲೆ ನೂರಕ್ಕೆ ನೂರ್ ಪಲಿತಾಂಶ ತಕಂಬದರ್‌ಲಿ ಅಗ್ರ ಸ್ತಾನಲಿ ಉಟ್ಟು.

ಅಗ್ರಣೆ[1] /*agraṇɛ*/ ನಾ. ಸ್ವಾರಸ್ಯವಾದ ವಿಷಯವನ್ನು ಸೇರಿಸುವುದು. to add interesting issues/ matters. ವಾ: ಆ ಹೆಂಗ್‌ಸ್ ಮಾತಾಡಿಕನ ಅಗ್ರಣೆ ಹಾಕಿಯೇ ಹೇಳ್ವ ಅಬ್ಯಾಸ.

ಅಗ್ರಣೆ[2] /*agraṇe*/ ನಾ. 1. ಒಗ್ಗರಣೆ, 2. (ಆಹಾರದಲ್ಲಿ ರುಚಿ ಹುಟ್ಟಿಸಲು) ಸಾಂಬಾರ ಪದಾರ್ಥವನ್ನು ಕರಿದು ಕೂಡಿಸುವುದು. 1. seasoning – adding fried spices to the dish being cooked in order to increase the taste. ವಾ: ಅವರ್‌ಲಿ ಅಗ್ರಣೆ ಹಾಕದೆ ಗೈಪೇ ಇಲ್ಲೆ.

ಅಗ್ರಸಾಲೆ /*agrasa:lɛ*/ ನಾ. 1. ದೇವಸ್ಥಾನದ ಪಾಕಶಾಲೆ, 2. ಅಗ್ರಶಾಲೆ. kitchen in a temple. ವಾ: ಅಗ್ರಸಾಲೆಲಿ ಊಟ ತಯಾರ್ ಮಾಡುದು.

ಅಗ್ರಹಾರ /*agraha:ra*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಸುಬ್ರಹ್ಮಣ್ಯ ಗ್ರಾಮದ ಜಾಗ. a locality in Subramanya village in Sullia Taluk of Dakshina Kannada District.

ಅಗ್ರಾಣಿ ಹಾಕ್[1] /*agra:ṇi ha:kɨ*/ ಕ್ರಿವಿ. ಒಗ್ಗರಣೆ ಹಾಕು. seasoning – adding fried spices to the dish being cooked in order to increase the taste. ವಾ: ಆಂಬ್ರಕೆ ಅಗ್ರಾಣಿ ಹಾಕ್.

ಅಗ್ರಾಣಿ ಹಾಕ್[2] /*agra:ṇi ha:kɨ*/ ನಾವಿ. ಪುಸಲಾಯಿಸು. to motivate. ವಾ: ಅಂವ ಅಗ್ರಾಣಿ ಹಾಕಿ ಎಲ್ಲರ ಮೆಟ್ಟಿಸಿತ್.

ಅಗ್ರಾರ /*agra:ra*/ ನಾ. 1. ರಾಜರು ಮೊದಲಾದವರು ಬ್ರಾಹ್ಮಣರ ಪೋಷಣೆಗಾಗಿ ದಾನ ಕೊಟ್ಟ ಪ್ರದೇಶ – ಗ್ರಾಮ, 2. ಬ್ರಾಹ್ಮಣರು ವಾಸ ಮಾಡುತ್ತಿದ್ದ ಕೇರಿ – ಬೀದಿ, 3. ಅಗ್ರಹಾರ. 1. a part of land or a village donated by the kings and others for the upkeep of Brahmins, 2. a place/a road where brahmins live, 3. a name of a place. ವಾ: ಅಗ್ರಾರಲಿ ಹಾರಂವರ್ ವಾಸ ಮಾಡ್ದು.

ಅಗ್‌ಲ /*agɨli*/ ನಾ. 1. ಅಗಲ, 2. ವಿಸ್ತಾರ, 3. ಹರಹು, 4. ವ್ಯಾಪ್ತಿ, 5. ಅಡ್ಡಗಲ. 1. width, 2. wide, 3. extent 4. range. 5. width and depth. ವಾ: ಕಾಪಿ ಕಳ ಅಗ್‌ಲ ಇರೊಕು. ಪ: ಅಗ್‌ಲಿಸ್ – ಅಗಲ ಮಾಡು; ಅಗ್‌ಲ್ದ್ – ಅಗಲವಾದ

ಅಗ್‌ಲಿ /*agɨli*/ ನಾ. 1. ಚಿಲಕ, 2. ಬಾಗಿಲ ಇಕ್ಕಿ ತೆರೆಯದಂತೆ ಮಾಡುವ ಸಾಧನ, 3. ತಾಳ. 1. a latch, 2. a device to keep the door closed. ವಾ: ಬಾಗ್‌ಲ್‌ಗೆ ಸೆರಿಯಾಗಿ ಅಗ್‌ಲಿ ಹಾಕ್.

ಅಗ್ಸಾತಿ /*agsa:ti*/ ನಾ. 1. ಚಿನ್ನ, ಬೆಳ್ಳಿ, ಕೆಲಸ ಮಾಡುವವನು, 2. ನಾಣ್ಯಗಳ ಪರೀಕ್ಷಕ, 3. ಅಕ್ಕಸಾಲಿಗ. 1. a goldsmith and a silversmith, 2. the one who inspects coins, 3. a goldsmith. ವಾ: ಅಗ್ಸಾತಿ ಕೈಲಿ ಸರ್ಟಡಿಗೆ ಮಾಡ್‌ಸಿದ್.

ಅಗ್ಳಿ /*agḷi*/ ನಾ. 1. ಚಿಲಕ, 2. ಅಗುಳಿ, 3. ಬಾಗಿಲ ಇಕ್ಕಿ ತೆರೆಯದಂತೆ ಮಾಡುವ ಸಾಧನ. 1. a latch, 2. a bolt to close the door/window, 3. a device to keep the door closed. ವಾ: ಮನೆದ್ ಹಿಂದೆನ ಬಾಗ್‌ಲ್‌ಗೆ ಅಗ್ಳಿ ಹಾಕ್.

ಅಗ್‌ಳ್[1] /*agɨḷi*/ ನಾ. 1. ಬೆಂದ ಅನ್ನದ ಕಾಳು, 2. ಅಗುಳು. 1. cooked grain of rice, 2. a boiled grain of rice. ವಾ: ಅನ್ನ ಬೆಂದುಟಾತ ನೋಡಿಕೆ ಒಂದ್ ಅಗ್‌ಳ್ ಸಾಕ್.

ಅಗ್‌ಳ್[2] /*agɨḷɨ*/ ನಾ. ಕಂದಕ. a ditch. ವಾ: ಅಂವ ಅಗ್‌ಳ್ ಹಾರ್ದರ್‌ಲಿ ಬಾರಿ ಉಸಾರ್.

ಅಙ್ಙಣ /*aŋŋaṇa*/ ನಾ. 1. ಅಂಕಣ, 2. ಮನೆಯ ಎರಡು ಕಂಬಗಳ (ತೊಲೆಗಳ) ನಡುವಿನ ಪ್ರದೇಶ, 3. ಸ್ಥಳ, 4. ಅರೆ (ಸೆಳೆ ಖಾನೆ). 1. a column, 2. place between two pillars in the house, 3. a place, 4. to grind. ವಾ: ಅಙ್ಙಣಲಿ ಕುದ್ದೊಳ.

ಅಚಪಟ್ಟಿರ /*acapaṭṭira*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಅಚೂಡ /*acu:ḍa*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಅಚ್‌ಕಟ್ /*acikaṭi*/ ನಾ. 1. ಕೋಳಿ, ಹಂದಿ ಮತ್ತು ಬೇಟೆ ಮಾಡಿದ ಇತರ ಪ್ರಾಣಿಗಳ ಮಾಂಸವನ್ನು ಪದಾರ್ಥ ಮಾಡಲು ಸಜ್ಜುಗೊಳಿಸುವುದು, 2. ಹಜಿರ್. the cook organising the things required to prepare a dish using meat/mutton of the hunted hen, pig etc. ವಾ: ಹಂದಿ ಮಾಸನ ಅಚ್‌ಕಟ್ ಮಾಡ್ತಿದ್ದೊ.

ಅಚ್ಚಕ್ಕಿ /*accakki*/ ನಾ. ಸ್ವಚ್ಛ ಅಕ್ಕಿ. cleaned rice. ವಾ: ಉಂಬಕೆ ಅಚ್ಚಕ್ಕಿನೆ ಬಳ್ಸುವೆ.

ಅಚ್ಚಲ್ಪಡಿ /*accalpaḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಅಚ್ಚಳ್ಳಿ /*accaḷḷi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಗುತ್ತಿಗಾರು ಗ್ರಾಮದ ಜಾಗ. a locality in Guttigaru village in Sullia Taluk of Dakshina Kannada District.

ಅಚ್ಚಾಂಡಿರ /*acca:ṇḍira*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಅಚ್ಚಿ ಪಟ್ಟಿರ /*acci paṭṭira*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಅಚ್ಚಿನಾರ್ /*accina:r*/ ನಾ. ಹುತ್ತರಿ ಹಬ್ಬದಲ್ಲಿ ಕದಿರು ಕಟ್ಟಲು ಬಳಸುವ ಒಂದು ಜಾತಿಯ ಮರದ ನಾರು. a strand made of a tree used in tying the bunch of paddy spikes during the harvest festival. ವಾ: ಹುತ್ತೆರಿ ಹಬ್ಬಲಿ ಕದ್‌ರ್ ಕಟ್ಟಿಕೆ ಅಚ್ಚಿನಾರ್ ಬೇಕ್.

ಅಚ್ಚಿಬೆಲ್ಲ /*accɨ bella*/ ನಾ. 1. ಅಚ್ಚು ಬೆಲ್ಲ, 2. ಅಚ್ಚಿನಲ್ಲಿ ಹೊಯ್ದು ತಯಾರಿಸಿದ ಬೆಲ್ಲ. 1. blocks of jaggery, 2. jaggery made in moulds. ವಾ: ಅಚ್ಚ್ ಬೆಲ್ಲನೂ ಹಾಕಿ ಕಾಪಿ ಕಾಸಿವೆ.

ಅಚ್ಚು /*accu*/ ನಾ. 1. ಮರದಲ್ಲಿ ಅಥವಾ ಲೋಹದಲ್ಲಿ ಬೇಕಾದ ಆಕಾರವನ್ನು ಕೊರೆದು ಅದರಲ್ಲಿ ಎರಕ ಹೊಯ್ದು ಬಿಂಬವನ್ನು ಮಾಡಿಕೊಳ್ಳುವ ಸಾಧನ, 2. ಪಡಿಯಚ್ಚಿನ ಮೂಲಕ ಸಿದ್ಧಪಡಿಸಿದ ಪದಾರ್ಥ, 3. ಪಡಿಯಚ್ಚಿನಲ್ಲಿ ಎರಕಹೊಯ್ದು ತೆಗೆದ ಪ್ರತಿರೂಪ, 4. ನೆಯ್ಗೆಯ ಒಂದು ಉಪಕರಣ, 5. ಅಂದ ಅಕ್ಷರ, 6. ಚಿಹ್ನೆ, 7. ಒಂದೇ ತರಹದ. 1. a mould 2. a thing made up of a mould 3. a replica, made using a mould, 4. a weaving equipment 5. a beautiful letter 6. a sign 7. something that is similar. ವಾ: ಕೆಲು ತಿಂಡಿಗಳ ಅಚ್ಚು ಬಳ್‌ಸಿ ಮಾಡಿವೆ.

ಅಚ್ಚುಕಟ್ಟ್ /*accukaṭṭ*/ ನಾ. 1. ಕೆರೆ ಕಾಲುವೆ ಮುಂತಾದುವುಗಳ ಆಸರೆಯಲ್ಲಿರುವ ಭೂಮಿಯನ್ನು ಬೇಸಾಯಕ್ಕೆ ಅನುಕೂಲವಾಗುವಂತೆ ವಿಂಗಡಿಸಿದ ಜಮೀನು, 2. ಓರಣ, 3. ಅಣಿಮಾಡು, 4. ಚೊಕ್ಕ ವ್ಯವಸ್ಥೆ. 1. agricultural land fed by canal or tank, 2. a row, 3. to prepare. ವಾ: ಮನೆನ ಬಾರಿ ಅಚ್ಚುಕಟ್ಟ್‌ಲಿ ಇಸಿಕಂಡೊಳೊ.

ಅಚ್ಚುಡ /*accuḍa*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಅಚ್ಚ್ /*accɨ*/ ನಾ. 1. ಅಚ್ಚು, 2. ಅಚ್ಚೊತ್ತಿದಂತೆ ಇರು, 3. ಎರಕ ಹೊಯ್ದು ಬಿಂಬವನ್ನು ಮಾಡಿಕೊಳ್ಳುವ ಸಾಧನ, 4. ಪಡಿಯಚ್ಚು. 1. a mould, 2. look alike, 3. a utensil with which copies are made using a mould, 4. duplicate. ವಾ: ಅಚ್ಚ್‌ಬೆಲ್ಲನ ಹಾಕಿ ಕಾಪಿ ಕಾಸಿವೆ.

ಅಚ್ಚ್‌ಕಟ್ಟ್[1] /*accɨkaṭṭi*/ ನಾ. 1. ಅಚ್ಚುಕಟ್ಟು, 2. ಶುದ್ಧೀಕರಣ, 3. ಓರಣ, 4. ಸರಿಯಾಗಿ. 1. being tidy, 2. cleaning, 3. in a series/line, 4. in a correct manner. ವಾ: ಅಂವಂದ್ ಅಚ್ಚ್‌ಕಟ್ಟ್‌ನ ಕೆಲ್‌ಸ.

ಅಚ್ಚ್‌ಕಟ್ಟ್[2] /*accɨkaṭṭi*/ ನಾ. ಬಟ್ಟೆ ನೇಯುವಲ್ಲಿ ಅಣಿ ಬರುವಂತೆ ಅಚ್ಚನ್ನು ತಯಾರು ಮಾಡು. to make a mould in order to print the border.

ಅಚ್ಚ್‌ಕೋಲ್ /*accɨ ko:lɨ*/ ನಾ. 1. ಕೇಪಿನ ಕೋವಿಯ ಸಲಾಕೆ, 2. ಗಜಕೋಲು. a muzzleloader a metal bar used in loading the gunpowder to a cartridge. ವಾ: ಕೋವಿ ಒಳೆಗೆ ಮೊದ್ದ್‌ನ ಅಚ್ಚ್‌ಕೋಲ್‌ಲಿ ಜಡ್ಡ್ ತುಂಬ್ಲೊಕು.

ಅಚ್ಚ್‌ನಾರ್ /*accɨ na:ri*/ ನಾ. ಹುತ್ತರಿ ಹಬ್ಬದಲ್ಲಿ ಕದಿರು ಕಟ್ಟಲು ಬಳಸುವ ಒಂದು ಜಾತಿಯ ಮರದ ನಾರು. a creeper used during the festival of harvest

to tie the bunches of paddy spikes. ವಾ: ಹುತ್ತೆರಿ ಹಬ್ಬಲಿ ಕದ್‌ರ್ ಕಟ್ಟಿಕೆ ಅಚ್ಚ್‌ನಾರ್ ತಂದವೆ.

ಅಚ್ರಪ್ಪಾಡಿ /*acrappa:ḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಅಜಕಳ /*ajakaḷa*/ ನಾ. 1. ಹಸನು ಮಾಡುವುದು, 2. ಪ್ರಾಣಿಯನ್ನು ಮಾಂಸ ಮಾಡಿ ವಿಂಗಡಿಸುವುದು. 1. act of cleaning, 2. dividing the meat of an animal. ವಾ: ಹಂದಿ ಬೊಡ್‌ದ್ ಅಜಕಳ ಮಾಡುವೆ.

ಅಜಕ್ಕಳ ಮೂಲೆ /*ajakkaḷa mu:le*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಜಾಲ್ಸೂರು ಗ್ರಾಮದ ಜಾಗ. a locality in Jalsuru village in Sullia Taluk of Dakshina Kannada District.

ಅಜಕ್ಕೆ /*ajakkɛ*/ ನಾ. 1. ಕೂತು ಮಾತನಾಡು, 2. ಪಟ್ಟಾಂಗ ಹೊಡೆಯುವುದು. 1. to sit and talk, 2. useless/idle conversation. ವಾ: ಅವೆಲ್ಲ ಅಲ್ಲಿ ಕುದ್ಕಂಡ್ ಅಜಕ್ಕೆ ಹೊಡ್‌ದವೆ.

ಅಜಡ್ಕ /*ajaḍka*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಅಜರ್ಣ /*ajaraṇa*/ ನಾ. 1. ಅಜೀರ್ಣ, 2. ತಿಂದ ಆಹಾರ ಅರಗದಿರುವುದು. 1. indigestion, 2. food not being digested. ವಾ: ಸಿಕ್ಕಿದೆಲ್ಲ ತಿಂದ್ ಅಜರ್ಣ ಆಗುಟು.

ಅಜಲ /*ajala*/ ನಾ. 1. ಭೂತ ಕಟ್ಟುವ ಸಮುದಾಯ, 2. ನಲಿಕೆ ಜನಾಂಗ. 1. a group of people who traditionally impersonate the daiva, deity, spirit or bhuta 2. a community called Nalike. ವಾ: ಕೋಲ ಕಟ್ಟಿಕೆ ಅಜಲ ಬಂದುಟು. ಪ: ಅಜಲಾಯ – ಅಜಲರು, ನಲಿಕೆಯವರು.

ಅಜಾಮ /*aja:ma*/ ನಾ. 1. ಹಜಾಮ, 2. ನಾಯಿಂದ, 3. ನಾಪಿತ, 4. ಕ್ಷೌರಿಕ. 1. a barber, 2. people belonging to the caste of barbers, 3. hairdresser, 4. a barber. ವಾ: ಅಜಾಮನತ್ರ ಹೋಗಿ ಕೂದೊಲು ತೆಗ್‌ಸೋಕು.

ಅಜೀರ /*aji:ra*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಅಜ್‌ಕೋಲ್ /*ajiko:li*/ ನಾ. ಬಟ್ಟೆ ಒಣಗಲು ಹಾಕುವ ಕೋಲು. a rod or a stick used in drying clothes. ವಾ: ಅಜ್‌ಕೋಲ್‌ಲಿ ಅರ್ವೆ ವಣ್‌ಗಿಕೆ ಹಾಕುದು.

ಅಜ್ಜ /*ajja*/ ನಾ. 1. ತಂದೆಯ ಅಥವಾ ತಾಯಿಯ ತಂದೆ, 2. ಉಗ್ಗಪ್ಪ, 3. ಮುದುಕ, 4. ಚಾಮಪ್ಪ, 5. ಚಾಂಪ. 1. father of one's father or mother, 2. father of one's father or mother, 3. an old man, 4. an elderly person, 5. grand father. ವಾ: ಅವ್ವನ ಅಪ್ಪ, ಅಪ್ಪನ ಅಪ್ಪ ನಂಗೆ ಅಜ್ಜ ಆದವೆ, ಅವರ್‌ನೆ ಉಗ್ಗಪಾಂತ ಕರಿಯೊದು. ಪ: ಅಜ್ಜಂಗೆ – ಅಜ್ಜನಿಗೆ

ಅಜ್ಜಜ್ಜ /*ajjajja*/ ನಾ. 1. ಅಜ್ಜನ ಅಜ್ಜ, 2. ಮುತ್ತಜ್ಜ. 1. grandfather of one's grandfather, 2. a great grandfather. ವಾ: ಅಜ್ಜಜ್ಜ ಮನೆಲಿದ್ದರೆ ಅದೇ ಪುಣ್ಯ.

ಅಜ್ಜಜ್ಜಿ /*ajjajji*/ ನಾ. 1. ಅಜ್ಜಿಯ ಅಜ್ಜಿ, 2. ಮುತ್ತಜ್ಜಿ. 1. grandmother's grandmother, 2. a great grandmother. ವಾ: ಅಜ್ಜಜ್ಜಿಗೆ ಮರಿ ಹಲ್ಲ್ ಹುಟ್ಟಿತ್‌ಗಡ.

ಅಜ್ಜನಗದ್ದೆ /*ajjanagadde*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಮರಪಡ್ನೂರು ಮತ್ತು ತೊಡಿಕಾನ ಗ್ರಾಮದ ಜಾಗ. a locality in Amarapadnuru Todikana village in Sullia Taluk of Dakshina Kannada District.

ಅಜ್ಜಪ್ಪ /*ajjappa*/ ನಾ. 1. ಅಜ್ಜ, 2. ಉಗ್ಗಪ್ಪ. 1. grand father, 2. grand father. ವಾ: ಅಜ್ಜಪ್ಪ ಬೊರೀ ಪಾಪ.

ಅಜ್ಜಾವರ /*ajja:vara*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಜ್ಜಾವರ ಗ್ರಾಮದ ಜಾಗ. a locality in Ajjavara village in Sullia Taluk of Dakshina Kannada District.

ಅಜ್ಜಿ /*ajji*/ ನಾ. 1. ತಂದೆಯ ಅಥವಾ ತಾಯಿಯ ತಾಯಿ, 2. ಮುದುಕಿ, 3. ಚಾಮೆವ್ವ. 1. mother of one's father or mother, 2. an old woman, 3. an elderly woman. **ಒಂದ್ ಅಜ್ಜಿ ಬೆಳಗ್ಗೆ ಎದ್ದಂಗೆ ಹುತ್ತಕೆ ಕೈಹಾಕುದು – ಎಲೆ, ಅಡಿಕೆ, ಚೀಲ(ಒ).** ವಾ: ಅಜ್ಜಿ ಒಳ್ಳ ಗಟ್ಟಿಮುಟ್ಟು ಒಳೊ. ಪ: ಅಜ್ಜಿ ಕಪ್ಪೆ – ಮುಪ್ಪಾದ ಕಪ್ಪೆ; ಅಜ್ಜಿ ಕೋಳಿ – ವಯಸ್ಸಾದ ಕೋಳಿ; ಅಜ್ಜಿ ಕುಟ್ಟಿ ದೈವ ಅಜ್ಜಿಬೂತ – ಒಂದು ದೈವದ

ಹೆಸರು; ಅಜ್ಜಿ ಸೂಂಟಿ – ಬೈಗುಳ ಪದ; ಅಜ್ಜಿಕಳ – ಅಜ್ಜಿಯಂದಿರ

ಅಜ್ಜಿಗುಜ್ಜಿ /*ajjigujji*/ ನಾ. 1. ನಜ್ಜುಗುಜ್ಜು, 2. ಪೂರ್ಣವಾಗಿ ಜಜ್ಜಿ ಹೋಗಿರುವಿಕೆ. 1. crushed completely, 2. damaged completely. ವಾ: ಕಾರ್ ಅಜ್ಜಿಗುಜ್ಜಿ ಆಗುಟು.

ಅಜ್ಜಿಗೆ ಬೆಡಿ /*ajjigɛ beḍi*/ ನಾ. ಕೆಲಸ ಕಾರ್ಯದಲ್ಲಿ ಗುರಿ ತಲುಪದೆ ಸೋತವರ ಕುರಿತು ಹೇಳುವ ಬೈಗುಳ ಪದ. an expletive or a swear word used for someone who has failed to achieve according to the expectations. ವಾ: ಅಂವನ ಅಜ್ಜಿಗೆ ಬೆಡಿ ಆತ್, ಏನೋ ಮಾಡಿಕೆ ಹೋಗಿ ಏನೇನೋ ಆಗಿ ಬುಟ್ಟತ್.

ಅಜ್ಜಿಮನೆ /*ajjimanɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಅಜ್ಜಿಹಿತ್ಲು /*ajjihitlu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಸುಬ್ರಹ್ಮಣ್ಯ ಗ್ರಾಮದ ಜಾಗ. a locality in Subramanya village in Sullia Taluk of Dakshina Kannada District.

ಅಜ್ಜೆ ಗೌಡನ /*ajjɛ gauḍana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಅಜ್ಞಾನ /*ajɲa:na*/ ನಾ. 1. ಅರಿವಿಲ್ಲದಿರುವಿಕೆ, 2. ತಿಳುವಳಿಕೆ ಇಲ್ಲದ. 1. not being aware (ignorant), 2. not having knowledge. **ಅಜ್ಞಾನಕ್ಕಿಂತ ಅಲ್ಪ ಜ್ಞಾನನೇ ಬಜ್ಜ(ಗಾ).** ವಾ: ಅಜ್ಞಾನಂದ ಜೆನಗ ಹೊರೆಗೆ ಬರೊಕು.

ಅಞ್ಞನ /*aɲɲana*/ ನಾ. 1. ಅಂಜನ, 2. ಕಾಡಿಗೆ, 3. ನಿಧಿ ನಿಕ್ಷೇಪಾದಿಗಳನ್ನು ಕಂಡುಹಿಡಿಯಲು ಕಣ್ಣಿಗೆ ಹಚ್ಚಿಕೊಳ್ಳುವ ಕಪ್ಪು ಬಣ್ಣ. 1. collyrium, 2. a black eye wash applied on the eyelashes while searching for hidden treasure. ವಾ: ಕಣ್ಣಿಗೆ ಅಞ್ಞನ ಹಾಕಂಡುಟ್ಟು.

ಅಟ್ಟ /*aṭṭa*/ ನಾ. 1. ಮನೆಯ ಒಳಗಡೆ ಸಾಮಾನುಗಳನ್ನು ಇಡುವುದಕ್ಕೋಸ್ಕರ ಛಾವಣಿಗೆ ಹೊಂದಿಸಿ ಮಾಡಿರುವ ಅಂತಸ್ತು, 2. ಮಹಡಿ, 3. ವೇದಿಕೆ, 4. ಅಂಗುಳು. 1. an attic (a floor built just below the roof as a storage), 2. a storey, 3. a stage, 4. a platform, 4. palate. **ಅಂಬು ಅಟ್ಟಲಿ, ಬಿಲ್ಲ್ ಬೆಟ್ಟಲಿ(ಗಾ). ಹೊಗ್ಗಿ ಅಟ್ಟಕೇರ್ಸ್(ನು). ಅಟ್ಟದ ಮೇಲೆ ಪುಟ್ಟ ಲಕ್ಷ್ಮಿ – ಹಣೆದ್ ಬೊಟ್ಟ್, ಅಟ್ಟಲಿ ಕೆಂಪ ಕುದ್ದುಟು-ಬಾಳೆಹಣ್ಣ್ ಗೊನೆ(ಒ).** ವಾ: ಅಟ್ಟಲಿ ಬಾಳೆಗೊನೆ ಉಟ್ಟು. ಪ: ಅಟ್ಟಲಿ – ಮಾಳಿಗೆಯಲ್ಲಿ; ಅಟ್ಟದ್ಮನೆ – ಅಟ್ಟದ ಮನೆ, ಮಾಳಿಗೆ ಮನೆ;

ಅಟ್ಟಣಿಗೆ /*aṭṭaṇigɛ*/ ನಾವಿ. 1. ಎತ್ತರವಾದ ವೇದಿಕೆ, 2. ಎತ್ತರದಲ್ಲಿ ಕಾವಲು ಕಾಯಲು ಮಾಡಿದ ವ್ಯವಸ್ಥೆ. 1. raised platform, 2. watch tower. ವಾ: ಇರ್ಲ್ ಅಟ್ಟಣಿಗೆಲಿ ಕುದ್ದ್ ಪಾರಕಾಯಿನಿ.

ಅಟ್ಟಣೆ /*aṭṭaṇɛ*/ ನಾ. 1. ಅಟ್ಟಣ, 2. ಅಟ್ಟಣಿಗೆ, 3. ತಯಾರಿ. 1. a rampart, 2. a raised platform, 3. to prepare. ವಾ: ನಾಳೆನ ಜಂಬರಕೆ ಅಟ್ಟಣೆ ಮಾಡೋಕು. ಪ: ಅಟ್ಟಣೆ ಮಾಡ್ವೆ – ತಯಾರಿ ಮಾಡುತ್ತೇನೆ;

ಅಟ್ಟಪಾಳಿ /*aṭṭapa:ḷi*/ ನಾ. ಮಾಳ. ತೋಟ ಅಥವಾ ಗದ್ದೆಯ ಪೈರು ಕಾಯಲು, ರಾತ್ರಿ ಮಲಗಲು ಮಾಡಿದ ಪುಟ್ಟ ಮನೆ. 10*10 ಅಡಿ ವಿಸ್ತಾರದ ಹುಲ್ಲಿನ ಛಾವಣಿ. ಒಂದು ಅಟ್ಟಣಿಗೆ ಇರುತ್ತದೆ. ಇಲ್ಲಿ ಪೈರು ಕಾಯಲು ರಾತ್ರಿ ಮಲಗುತ್ತಾರೆ. ರಾತ್ರಿ ಕಾವಲು ಕಾಯಲು ಬಳಸುವ ಗುಡಿಸಲು. a watchtower. ವಾ: ಬೆಳೆ ಕೆಲ್ಸ ಸಮೆಲಿ ಗದ್ದೆ ಪಾರಕ್ಕೆ ಅಟ್ಟಪಾಳಿಲಿ ಮಲ್ಗಿಕೆ ಹೋಗಂವು ಲಾಟೀನ್‌ನ ಹಿಡ್ಕಂಡ್ ಹೋತಿದ್ದೊ.

ಅಟ್ಟಹಾಸ /*aṭṭaha:sa*/ ನಾ. 1. ತುಂಬ ಜೋರಾದ ನಗು, 2. ಆಡಂಬರ, 3. ದೊಡ್ಡ ನಗು, 4. ಜಂಬ, 5. ಬಡಿವಾರದ ನಗು. 1. to laugh out loudly, 2. extravagant, 2. loud laughter, 3. insolence, 4. pretentious laughter. ವಾ: ಅಟ್ಟಹಾಸಲಿ ಮೆರ್‌ದದೆ.

ಅಟ್ಟಳಿಗೆ /*aṭṭaḷigɛ*/ ನಾ. ಅಟ್ಟಣಿಗೆ. a raised platform. ವಾ: ಅಟ್ಟಳಿಗೆಲಿ ಕುದ್ದ್ ಗದ್ದೆಗೆ ಪ್ರಾಣಿಗ ಬರದಂಗೆ ಪಾರಕಾದವೆ.

ಅಟ್ಟಾಮುಟ್ಟಾ /*aṭṭa:muṭṭa:*/ ನಾ. ಜನಪದ ಆಟ. a folk game.

ಅಟ್ಟಾಸ್ /*aṭṭa:sɨ*/ ನಾ. 1. ಅಟ್ಟಹಾಸ, 2. ಜಂಭ. 1. guffaw, 2. false pride. ವಾ: ದುಡ್ಡ್ ನ ಅಟ್ಟಾಸ್‌ಲಿ ಮೆರೆಕಾಗದ್.

ಅಟ್ಟಿ[1] /*aṭṭi*/ ನಾ. 1. ದನದ ಹಟ್ಟಿ, 2. ಕೊಟ್ಟಿಗೆ, 3. ಮನೆಯ ಹೊರಭಾಗದಲ್ಲಿ ಕಟ್ಟಿದ ಚಿಕ್ಕ ಕೊಠಡಿ, 4. ಹಟ್ಟಿ. 1. a cowshed, 3. a cowshed or a pen, 3. a small shelter built outside the house. ವಾ: ಕರ್‌ಬುಡಿಕೆ ಅಟ್ಟಿಗೆ ಹೋಕು.

ಅಟ್ಟಿ[2] /*aṭṭi*/ ನಾ. ಒಂದರ ಮೇಲೆ ಇನ್ನೊಂದು ಇಡುವುದು. piling things. ವಾ: ಸೊವುದೆನ ಕೊಟಿಗೆಲಿ ಅಟ್ಟಿ ಇಸಮೊ.

ಅಟ್ಟುದು /*aṭṭudu*/ ನಾ. 1. ಬೆನ್ನಟ್ಟುವಿಕೆ, 2. (ದೂತನನ್ನು) ಕಳುಹಿಸುವಿಕೆ. 1. to chase, 2. sending an emissary. ವಾ: ಕೋಣಗಳ ಹೊಳೆಕರೆಗೆ ಅಟ್ಟುದು ಒಳ್ಳೆದ್ ಕಂಡದೆ.

ಅಟ್ಟೆ /*aṭṭɛ*/ ನಾ. ಅಷ್ಟು. referring to some quantity.

ಅಟ್ಟೆ[1] /*aṭṭɛ*/ ನಾ. 1. ಜಿಗಣೆ ಜಾತಿಯ ಜೀವಿ, 2. ಮುಂಡನ ಮಾಡಿದ ತಲೆಯವನು, 3. ಕೊಂಬೆ, ರೆಂಬೆಗಳನ್ನು ಕತ್ತರಿಸಿದ ಮರದ ಕಾಂಡ, 4. ನ್ಯೂನಗೊಂಡ ಅವಯವವುಳ್ಳವನು. 1. a leech like worm, 2. somebody who has tonsured his head, 3. a stem of a tree whose branches are trimmed, 4. a handicap. ವಾ: ಅಲ್ಲೋಡ್ ಅಟ್ಟೆ.

ಅಟ್ಟೆ[2] /*aṭṭɛ*/ ನಾ. 1. ತಲೆಯಿಲ್ಲದ ದೇಹ, 2. ಎಲುಬಿನ ಗೂಡು, 3. ಪಾದರಕ್ಷೆಯ ತಳಭಾಗದ ಹಲ್ಲೆ, 4. ಚರ್ಮ, 5. ರಸ ತೆಗೆದ ಕಬ್ಬಿನ ಸಿಪ್ಪೆ. 1. a headless body, 2. a skeleton, 3. loud laughter, 4. sole of a footwear, 5. skin, 6. bagasse of sugarcane. **ಅಟ್ಟೆ ಇಲ್ಲದವಂಗೆ ಮೊದುವೆ ಯಾಕೆ?(ಗಾ).** ವಾ: ಅಟ್ಟೆನ ಎಂತರ ಮಾಡ್ದು.

ಅಟ್ಟೆಮರ /*aṭṭɛmara*/ ನಾ. ದೀಪಾವಳಿ ಹಬ್ಬದಂದು ಅರೆಭಾಷೆ ಪ್ರದೇಶದಲ್ಲಿ ಅಂಗಳದಲ್ಲಿ ತುಳಸಿಕಟ್ಟೆ ಹತ್ತಿರ ಬಲೀಂದ್ರ ಮರ ಹಾಕುತ್ತಾರೆ. ಇದು ಮನುಷ್ಯ ರೂಪವನ್ನು ಹೋಲುವುದು. ಇದರ ಮೇಲ್ಭಾಗಕ್ಕೆ ತಲೆಯಂತೆ ಇರುವ ರಚನೆ. on the occasion of Deepavali festival, the head of human figurine of Baliyendra is made from the branch of this tree. ವಾ: ದೀಪಾವಳಿನ ಸುರುನ ದಿನದಂದ್ ಅಟ್ಟೆಮರ ಹಾಕೊಕು.

ಅಟ್ಟೆಕಾಲ್ /*aṭṭɛka:lɨ*/ ನಾ. ಬಗ್ಗಿದ ಕಾಲು. inward bent legs. ವಾ: ಅಂವಂದ್ ಅಟ್ಟೆಕಾಲ್.

ಅಟ್ಟೆಮುಟ್ಟೆಂಗ /*aṭṭɛmuṭṭɛŋga*/ ನಾ. ಒಂದು ಗಿಡದ ಹೆಸರು. a tree. ವಾ: ಅಟ್ಟೆಮುಟ್ಟೆಂಗತೇಳ್‌ದು ಒಂದ್ ಜಾತಿನ ದೈ, ಅಟ್ಟೆಮುಟ್ಟೆಂಗ ಕಾಡ್‌ಲಿ ಬೊರಿಕ್ಕಂಗ ಕಾಂಬಕೆ ಸಿಕ್ಕುದು.

ಅಟ್ಟೋಳಿಗೆ /*aṭṭo:ḷigɛ*/ ನಾ. 1. ಹೊಲಗಳಲ್ಲಿ ರಾತ್ರಿ ಕಾವಲು ಕಾಯುವ ಜಾಗ, 2. ಬೇಟೆಯಾಡಲು ಎತ್ತರದಲ್ಲಿ ಕಟ್ಟುವ ಮರೆಸು. 1. a platform built above the ground level to watch over the crops, 2. a shelter built on a higher ground for the purpose of hunting. ವಾ: ಅಟ್ಟೋಳಿಗೆಲಿ ರಾತ್ರೆ ಕಾಡ್ ಪ್ರಾಣಿಗ ಬಂದವೆನತ ಪಾರ ಕಾಯದು.

ಅಟ್ಣೆ /*aṭṇɛ*/ ನಾ. 1. ಗದ್ದೆ, 2. ಹೊಲದಲ್ಲಿ ಹಾಕಿದ ಕಾವಲು ಗುಡಿಸಲು. 1. an agricultural land with irrigational facilities especially to grow paddy, sugarcane etc, 2. a hut built in the agricultural field to watch over. ವಾ: ಗದ್ದೆಲಿ ಅಟ್ಣೆ ಕಟ್ಟೋಕು.

ಅಟ್ಲೂರು /*aṭlu:ru*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಜ್ಜಾವರ ಗ್ರಾಮದ ಜಾಗ. a locality in Ajjavara village in Sullia Taluk of Dakshina Kannada District.

ಅಟ್ಳಿಕೆ /*aṭḷikɛ*/ ನಾ. 1. ಅಟ್ಟಳಿಗೆ, 2. ಎತ್ತರದಲ್ಲಿ ಕುಳಿತುಕೊಳ್ಳುವುದು, 3. ಅಟ್ಟಣಿಗೆ. 1. an attic, 2. to sit on a platform, 3. storey. ವಾ: ಅಟ್ಳಿಕೆಲಿ ಇದ್ದ್ ರಾತ್ರೆ ಕಾಡ್ ಪ್ರಾಣಿಗ ಬಂದ್ ಬೆಳೆನ ಹಾಳ್ ಮಾಡದಂಗೆ ಪಾರ ಕಾಯದು. ಪ: ಅಟ್ಟೊಲಿಗೆ(ತು)

ಅಡಂಗ್ /*aḍaŋgɨ*/ ನಾ. 1. ಅವಿತು ಕುಳಿತುಕೋ, 2. ಅಡಗು. 1. to hide 2. to conceal. ವಾ: ಕೊಟ್ಟ ಸಾಲನ ಕೇಳಿಕೆ ಹೋಕೊರೆ ಅಂವ ಅಡಂಗಿ ಕುದ್ದದೆ. ಪ: ಅಡೆಂಗ್(ತು), ಅಡಂಗ್‌ವ – ಅಡಗುವ(ಅವ್‌ಕೆ ಅಡಂಗುವ ಜಾಗೆ ಗೊತ್ತ್‌ಟ್ಟು)

ಅಡಂಗಾಯ್ /*aḍiŋga:yɨ*/ ನಾ. ನಿಂಬೆ, ನೆಕ್ಕರೆಮಾವು, ಹೇರಳೆ ಮೊದಲಾದ ಕಾಯಿಗಳನ್ನು ಕತ್ತರಿಸಿ ಉಪ್ಪಿನಲ್ಲಿ ಊರಿಸಿ ಕಾರ ಹಾಕಿ ದಿಢೀರ್ ತಯಾರಿಸುವ ನಂಚಿಕೊಳ್ಳಲು ಬಳಸುವ ಉಪ್ಪಿನಕಾಯಿ. an instant pickle made of citrus based fruits,

especially lemon, mango, citron lime, etc. adding salt and spice. ವಾ: ಕಯ್ಯುಂಳಿನ ಅಡಂಗಾಯ್ ಹಾಕಿವೆ.

ಅಡರ್[1] /*aḍari*/ ನಾ. 1. ಎಲೆ ತೆಗೆದ ಚಿಕ್ಕ ರೆಂಬೆ, 2. ಎಲೆ ಇಲ್ಲದ ಮರದ ಗೆಲ್ಲು. 1. a trimmed small branch of a tree, 2. a twig. ವಾ: ಒಲೆಗೆ ಅಡರ್ ಹಾಕಿ ಹೊತ್ತ್‌ಸ್.

ಅಡರ್[2] /*aḍari*/ ನಾ. 1. ಒತ್ತು, 2. ಅಡರು. 1. to press, 2. to spread. ವಾ: ಗಬ್ಬುನಾತ ಬಂದ್ ಮೂಂಕಿಗೆ ಅಡರಿಕಣ್ತ್.

ಅಡವು[1] /*aḍavu*/ ನಾ. 1. ಅಡಮಾನ ಮಾಡುವುದು, 2. ಚಿನ್ನ, ಬೆಳ್ಳಿ, ಆಭರಣ, ವಾಹನ ಇತ್ಯಾದಿಗಳನ್ನು ಅಡವು ಇಟ್ಟು ಸಾಲ ಪಡೆಯುವುದು, 3. ಒತ್ತೆಯಿಡು. 1. mortgage, 2. to mortgage gold, silver or vehicles seeking debt, 3. hypothecate. ವಾ: ಚಿನ್ನ ಇದ್ದರೆ ಬಜ್ಜದ ಕಾಲಲಿ ಅಡವು ಇಸಿಕಾದೆ.

ಅಡವು[2] /*aḍavu*/ ನಾ. ಒಂದು ಜಾತಿಯ ಸಮುದ್ರ ಮೀನು. a variety of sea fish. ವಾ: ಒಣ್ಗಿಲ್ ಅಡವು ಮೀನ್ ತಿಂಬಕೆ ಬಾರೀ ಲಾಯ್ಕ್.

ಅಡಿ[1] /*aḍi*/ ನಾ. 1. ಅಳತೆ, 2. ಅಂಗುಲದ ಭಾಗ/ ಫೂಟು. 1. measure, 2. foot. ವಾ: ಒಂದು ಅಡಿ ಜಾಗೆನೂ ಬುಡದಂಗೆ ದೈ ಹಾಕೊಳೊ.

ಅಡಿ[2] /*aḍi*/ ನಾ. ಹಿಟ್ಟು ಮಾಡಿದಾಗ ತಳ ಹಿಡಿಯುವುದು. food getting charred or burnt. ವಾ: ಕಿಚ್ಚಿ ಜಾಸ್ತಿಯಾಗಿ ಕಲ್ತಪ್ಪ ಅಡಿ ಹಿಡ್ದುಟು.

ಅಡಿ ದಪ್ಪ /*aḍidappa*/ ನಾವಿ. ತಳ ದಪ್ಪ. thick bottom. ವಾ: ಈ ಪಾತ್ರೆದ್ ಅಡಿ ದಪ್ಪ ಉಟ್ಟು.

ಅಡಿಂಗಿ /*aḍiŋgi*/ ಕ್ರಿ. 1. ಅಡಗು, 2. ಅವಿತುಕೊಳ್ಳು. 1. to hide 2. to conceal oneself. ವಾ: ಅಂವ ಕಟ್ಲ್ ಅಡಿಲಿ ಅಡಿಂಗಿ ಕುದ್ದುಟು.

ಅಡಿಂಜ /*aḍiɲja*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಆಲೆಟ್ಟಿ ಗ್ರಾಮದ ಜಾಗ. a locality in Aletti village in Sullia Taluk of Dakshina Kannada District.

ಅಡಿಂಜೆ /*aḍiɲjɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಅಡಿಂಜ್ಲ್ /*aḍiɲjlɨ*/ ನಾ. ಗದ್ದೆ, ಹೊಲದಲ್ಲಿ ಹಾಕಿದ ಕಾವಲು ಗುಡಿಸಲು. a hut built in a field or a farm to watch over. ವಾ: ಗದ್ದೆಗೆ ಕಾಡ್‌ಪ್ರಾಣಿಗ ಬರದಂಗೆ ಪಾರ ಕೂರಿಕೆ ಅಡಿಂಜ್ಲ್ ಹಾಕುವೆ.

ಅಡಿಂದ /*aḍinda*/ ನಾ. 1. ಕೆಳಗಿನಿಂದ, 2. ತಳದಿಂದ. 1. from the bottom, 2. from below. ವಾ: ಆ ಮರಕ್ಕೆ ಅಡಿಂದ ಕೊಡಿಮುಟ್ಟ ಒರ್ಲೆ ಹಿಡ್ದುಟು. ಪ: ಈ ಬಾಳೆಗೊನೆ ಅಡಿಂದ ಕೊಡಿವರೆಗೆ ಒಂದೇ ದಪ್ಪಲಿ ಉಟ್ಟು

ಅಡಿಂದ ಕೊಡಿಗೆ /*aḍinda koḍiegɛ*/ ನಾವಿ. ಕೆಳಗಿನಿಂದ ಮೇಲಿನವರೆಗೆ. from bottom to the top. ವಾ: ಆ ಮರಕ್ಕೆ ಅಡಿಂದ ಕೊಡಿಮುಟ್ಟ ಒರ್ಲೆ ಹಿಡ್ದುಟು.

ಅಡಿಕುರುಂಟು /*aḍikuruṇṭu*/ ನಾ. ಮದುಮಕ್ಕಳ ಸಂಗಾತಿ. companions of bride or bridegroom=the best man or the best woman. ವಾ: ಮೊದುವೆ ಆದ ಮೇಲೆ ಗಂಡನ ಮನೆ ಹತ್ತಿಕನ ಮೊದುವಳ್ತಿ ಒಟ್ಟಿಗೆ ಅಡಿಕುರುಂಟು ಹೋದೆ.

ಅಡಿಕೆ /*aḍikɛ*/ ನಾ. 1. ಅಡಕೆ, 2. ಕೌಂಗು, 3. ವೀಳ್ಯದೆಲೆಯ ಸಂಗಡ ತಿನ್ನುವ ಕಾಯಿ. 1. areca nut, 2. betel nut, 3. a nut eaten with betel leaf. **ಅಡಿಕೆ ಕದ್ದರೂ ಕಳ್ಳನೇ, ಆನೆ ಕದ್ದರೂ ಕಳ್ಳನೇ(ಗಾ). ತಲೆಲಿ ಜಡೆ ಉಟ್ಟು ಋಷಿಮುನಿಯಲ್ಲ, ಎದೆಲಿ ಹಾಲುಟ್ಟು ಹಸ್ ಅಲ್ಲ, ಎಲೆ ಅಡಿಕೆ ಉಟ್ಟು ವೀಳ್ಯ ಅಲ್ಲ – ಆಲದ ಮರ(ಒ).** ವಾ: ಎಲೆ ಒಟ್ಟಿಗೆ ಅಡಿಕೆ, ಸುಣ್ಣನ ಹಾಕಣಿ. **ಅಡಿಕೆಕೀಲೆ** /*aḍikɛki:lɛ*/ ಅಡಕೆಯ ಗೊನೆ. bunch of areca nut. ವಾ: ಅಡಿಕೆ ಕೀಲೆ ಈ ಸಲ ದೊಡ್ಡದುಟ್ಟು. **ಅಡಿಕೆಚೊಪ್ಪು** /*aḍikɛceppu*/ ನಾ. ಅಡಕೆ ಸಿಪ್ಪೆ. Areca peel. ವಾ: ಅಡಿಕೆ ಚೊಪ್ಪುನ ಕಾಡ್‌ಬೋರ್ಡ್ ಮಾಡಿಕೆ ಬಳ್‌ಸುವೆ. **ಅಡಿಕೆಮರ** /*aḍikɛmara*/ ನಾ. 1. ಕಂಗು, 2. ಒಂದು ತೋಟಗಾರಿಕಾ ಬೆಳೆ, 3. ಕಮ್ಮು. 1. Areca nut palm, 2. betel palm – a plantation crop, 3. betel nut palm. ವಾ: ಕಮ್ಮು ದೈಗಳ್‌ಲಿ ಮೂರೇ ವರ್ಸಲಿ ಅಡಿಕೆ ಹಿಡ್ದದೆ.

ಅಡಿಕೆ ಹಿಟ್ಟ್ /*aḍikɛ hiṭṭɨ*/ ನಾ. ಹುತ್ತರಿ ಹಬ್ಬದಲ್ಲಿ ಮಾಡುವ ತಿಂಡಿ. a dish prepared during the

harvest festival. ವಾ: ಹುತ್ತೆರಿ ಹಬ್ಬಲಿ ಅಡಿಕೆ ಹಿಟ್ಟ್ ಮಾಡೊಕು.

ಅಡಿಕೆಹಿತ್ಲು /*aḍikehitlu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ನೆಲ್ಲೂರು ಕೆಮ್ರಾಜೆ ಗ್ರಾಮದ ಜಾಗ. a locality in Nelluru Kemraje village in Sullia Taluk of Dakshina Kannada District. ವಾ: ಅಡಿಕೆ ತೋಟ.

ಅಡಿಗಡಿಗೆ /*aḍigaḍigɛ*/ ನಾ. 1. ಆಗಾಗ, 2. ಹೆಜ್ಜೆ ಹೆಜ್ಜೆಗೆ, 3. ಪ್ರತಿ ಪ್ರಯತ್ನಕ್ಕೆ. 1. at regular intervals, 2. at every step, 3. at every attempt. ವಾ: ಅಂವ ಎಂತ ಅದ್ ಇದ್‌ತ ಹೇಳಿಕಂಡ್ ಮನೆಗೆ ಅಡಿಗಡಿಗೆ ಬಾದು.

ಅಡಿಗರ /*aḍigara*/ ನಾ. 1. ಕುಟುಂಬ, 2. ಮನೆತನ. 1. family, 2. lineage. ಅಡಿಗ್ಗರ

ಅಡಿಗಿಸಿ /*aḍigisi*/ ನಾ. 1. ಅಡಗಿಸಿ, 2. ಅಣಗಿಸಿ. concealed. ವಾ: ಮೊದ್ದ್ ಕುಪ್ಪಿ ಮಕ್ಕಳ ಕೈಗೆ ಸಿಕ್ಕದಂಗೆ ಅಡಿಗಿಸಿ ಇಸೊಕು. ಪ: ಅಡಂಗಿಸ್

ಅಡಿಗೆ /*aḍigɛ*/ ನಾ. 1. ಅಡುಗೆ, 2. ಬೇಯಿಸಿದ್ದು, 3. ಪಾಕವಾಗಿಸಿದ್ದು, 4. ಆಹಾರ ಸಿದ್ಧಗೊಳಿಸುವಿಕೆ, 6. ಬೇಯಿಸು. 1. cooking, 2. boiled/roasted, 3. cooked, 4. preparation of food, 5. to boil/roast. ವಾ: ನಮ್ಮ ಅವ್ವ ಬಾರಿ ಲಾಯ್ಕಲಿ ಅಡಿಗೆ ಮಾಡುವೆ. **ಅಡಿಗೊಳಗೆ** /*aḍigaḷagɛ*/ ಅಡುಗೆ ಮನೆ. a kitchen. ವಾ: ಅಯ್ಯೆ ಅಡಿಗೊಳಗೆ ಇರೋಕು ನೋಡು.

ಅಡಿಗೆರ /*aḍigera*/ ನಾ. ಅನ್ನ ಬಸಿದ ನೀರು ಸಂಗ್ರಹವಾಗುವ ಪಾತ್ರೆ. a vessel to keep rice gruel. ವಾ: ಅನ್ನ ಬೆಂದ ಮೇಲೆ ಅಡಿಗೆರ ಇಸಿ ಅದಿಕೆ ಬಾಗುದು. ಪ: ಅಡಿಗರ – ಅನ್ನ ಬಸಿಯುವಾಗ ಕೆಳಗಡೆ ಇಡುವ ಪಾತ್ರೆ; ಅಡಿಗಾರ, ಅಡಿಗೆರ, ಅಡ್ಗೆರ, ಅಡ್ಯರ(ತು)

ಅಡಿ /*aḍi*/ ನಾ. ಕೆಳಗಿನ. below. ವಾ: ಮರದ ಅಡಿನ ದೈ ಬೊರ್ಕತ್ ಇಲ್ಲೆ. **ಅಡಿನೋಡ್** /*aḍino:ḍi*/ ಕೆಳಗೆ ನೋಡು. to look below. ವಾ: ಅಡಿನೋಡ್ ಎಂತಾರ್ ಬಿದ್ದುಟತ. ಪ: ಅಡಿನೋಡ್ತ್ – ಕೆಳಗೆ ನೋಡಿತು. **ಅಡಿಪುಡೆ** /*aḍipuḍɛ*/ 1. ಕೆಳಗಿನ ಭಾಗ, 2. ಅಡಿಭಾಗ. 1. beneath, 2. bottom. ವಾ: ಗದ್ದೆನ ಅಡಿ ಪುಡೆಲಿ ನೋಡ್. **ಅಡಿಬಾಗ** /*aḍiba:ga*/ 1. ಕೆಳಭಾಗ, 2. ತಳಭಾಗ. 1. beneath, 2. bottom. ವಾ: ನೀರ್ ಮಂಡೆದ್ ಅಡಿಬಾಗ ಒಟ್ಟೆ ಆತ್. **ಅಡಿಮುಟ್ಟ** /*aḍimuṭṭa*/ 1. ತಳದವರೆಗೆ, 2. ಕೆಳಗಿನವರೆಗೆ. 1. to the bottom, 2. to the bottom. ವಾ: ಹಳ್ಳದ ಅಡಿಮುಟ್ಟ ಹೋಕಾದೆನ? **ಅಡಿಮುಡಿ** /*aḍimuḍi*/ ಪಾದದಿಂದ ತಲೆಯವರೆಗೆ. from toe to head. ವಾ: ಅವರ ಅಡಿಮುಡಿ ಬುಡದೆ ಕಡ್‌ಂದ್ ಕಚ್ಚಿಟು. **ಅಡಿಲಿ** /*aḍili*/ 1. ಕೆಳಗೆ, 2. ಕೆಳಬದಿ. 1. below, 3. downside. ವಾ: ಮಾಸ ಗೈಪುನ ಅಡಿಲಿಸಿರೆ ಕೊತ್ತಿಗ ಬಾಯೆಟ್ಟಿ ಮನಾರ ಮಾಡಿವೆ.

ಅಡಿಪಾಯ /*aḍipa:ya*/ ನಾ. ಅಡಿಪಾಯ. foundation. ವಾ: ಅಡಿಪಾಯ ಗಟ್ಟಿ ಇರೊಕು, ಅಡಿಪಾಯ ಅಲ್ಲಾಡಿರೆ ಎಲ್ಲನೂ ಕುಸ್ತದೆ.

ಅಡಿಮುಜ /*aḍimuŋa*/ ನಾವಿ. ಸದಾ ತಲೆಕೆಳಗೆ ಹಾಕಿಕೊಂಡು ಕುಳಿತುಕೊಳ್ಳುವವ, ಅಡಿಮುರ್‌ಂಗೆ(ತು). to keep one's head down always. ವಾ: ಮಾಡಿಕೆ ಕ್ಯಾಮೆ ಇಲ್ಲೆನ? ಯಾಕೆ ಯಾಗೊಳು ಅಡಿಮುಜನಾಂಗೆ ಕುದ್ರುದು.

ಅಡಿಮುರ್‌ಂಗ /*aḍimuriŋga*/ ನಾವಿ. ಕುತಂತ್ರ ಆಲೋಚನೆ ಇರುವವ. ಒಂದು ಬೈಗುಳ ಪದ. a man with wicked mind. ವಾ: ಅಡಿಮುರ್‌ಂಗರೊಟ್ಟಿಗೆ ಜಾಗ್‌ರ್ತೆಲಿ ಇರೊಕು.

ಅಡಿಮೇಲೆ /*aḍi me:lɛ*/ ನಾವಿ. ಯದ್ವಾ ತದ್ವಾ. chaotic (higgledy-piggledy). ವಾ: ಮಾತ್‌ಲಿ ಅಂವನ ಅಡಿಮೇಲೆ ಮಾಡ್ತ್.

ಅಡಿಯ /*aḍiya*/ ನಾ. 1. ಜಾತಿವಾಚಕ ಪುರುಷ, 2. ದಾಸ, 3. ಗುಲಾಮ, 4. ಆಳು. 1. a man belonging to Adiya Caste, 2. a menial servant, 3. a slave, 4. a servant. ವಾ: ಅಡಿಯಂಗ ಬಂದೊ.

ಅಡಿಯೆಚಿ /*aḍiyeci*/ ನಾ. ಜಾತಿವಾಚಕ ಸ್ತ್ರೀ. a woman of a Adiya caste. ವಾ: ಅಡಿಯೆಚಿನ ಕರ್‌ಕಂಡ್ ಬಂದೊ.

ಅಡಿಹಿಡಿ /*aḍihiḍi*/ ನಾವಿ. 1. ತಳ ಹಿಡಿ, 2. ತಳ ಹಿಡಿಯುವುದು, 3. ಬೆಂಕಿ ಹೆಚ್ಚಾದಾಗ ಪಾತ್ರೆಯ ತಳ ಹಿಡಿಯುವುದು. 1. food getting burnt, 2. food getting charred, 3. cooking vessel getting

burnt due to overheating. ವಾ: ಹಿಟ್ಟ್ ಉಕ್ಕರಿಸಿಕಾಕನ ಅಡಿ ಹಿಡ್‌ತ್.

ಅಡೆ ಇಸುದು /*aḍe isudu*/ ನಾ. 1. ಹರಿದ ಬಟ್ಟೆಗೆ ಬೇರೆ ಬಟ್ಟೆಯ ತುಂಡನ್ನು ಇಟ್ಟು ಹೊಲಿಯುವುದು, 2. ತೇಪೆ ಹಾಕುವುದು. 1. sewing a patch to the torn cloth, 2. to patch. ವಾ: ಹರ್‌ದ ಜಂಪರ್‌ಗೆ ಅಡೆ ಇಸೊಕು.

ಅಡೆ¹ /*aḍɛ*/ ನಾ. ಒಂದು ಬಗೆಯ ಸಿಹಿ ತಿಂಡಿ ಪ್ರಸಾದ. a sweet dish, prepared as an offering. ವಾ: ಕೈದ್‌ಲಿ ಅಡೆ ಕೊಟ್ಟವೆ. ಪ: ಅಡೆ – ವಯನಾಟ್ ಕುಲವನ್ ದೇವರಿಗೆ ಅರ್ಪಿಸುವ ಪ್ರಸಾದ;

ಅಡೆ² /*aḍɛ*/ ನಾ. 1. ತೇಪೆ, 2. ಬೆರಳಿನಿಂದ ಹೊಡೆ, 3. ಭರ್ತಿ ಮಾಡು, 4. ಮುಚ್ಚಿ ಹೋಗಿರು, 5. ಹೊಂದು, 6. ಒದಗು. 1. to patch, 2. to pat with fingers, 3. to fill up, 4. to close something, 5. to own, 6. to be available. ವಾ: ಅವ್ವನ ಹರ್‌ದ ಚಾಲೆಮುಂಡುಗೆ ಅಡೆ ಇಸಿಕೊಡೊಕಡ. ಪ: ಅಡೆಲಿ – ತೇಪೆಯಲ್ಲಿ

ಅಡೆತಡೆ /*aḍɛtaḍɛ*/ ನಾ. 1. ಅಡ್ಡಿ, 2. ಅಡಚಣೆ. 1. an obstacle, 3. a hurdle. ವಾ: ಒಳ್ಳೆ ಕೆಲ್ಸಕ್ಕೆ ನೂರೆಂಟ್ ಅಡೆತಡೆಗ.

ಅಡೊಳಿ /*aḍoḷi*/ ನಾ. 1. ಮದುಮಗನ ಜೊತೆ ಸಹಾಯಕ್ಕೆ ನಿಲ್ಲುವ ವರನ ಬಾವ, 2. ಮದುಮಗನ ಶಾಸ್ತ್ರ ಆರಂಭವಾಗಿ ಅಲ್ಲಿಂದ ಮದುವೆ ಮುಗಿಯುವವರೆಗೂ ಅವನೊಂದಿಗೆ ಇರುವ ಒಬ್ಬ ವ್ಯಕ್ತಿ. 1. a man who helps the bride groom – usually brother of a bride – a bridesman, 2. a man who assists the bride groom – groomsman. ವಾ: ಮೊದುವೆಲಿ ಹೈದಂಗೆ ಬಾವ ಮತ್ತೆ ಗೂಡೆಗೆ ಅತ್ತಿಗೆ ಅಡೊಳಿ ಆದವೆ.

ಅಡ್‌ಂಗ್ /*aḍiŋgɨ*/ ನಾ. ಅಡಗು. to hide. ವಾ: ಅಂವ ಮರದ ಹಿಂದೆ ಅಡ್‌ಂಗ್‌ದರ ನೋಡ್‌ದೆ.

ಅಡ್ಙೈ /*aḍiŋŋai*/ ನಾ. ದಿಢೀರ್ ಉಪ್ಪಿನಕಾಯಿ. instant pickle. ವಾ: ಅಡ್ಙೈ ಬಾರಿ ರುಚಿ. ಪ: ಅಡಂಗಾಯಿ(ತು)

ಅಡ್ಕ¹ /*aḍka*/ ನಾ. 1. ಸಣ್ಣ ಪೊದೆಗಳಿಂದ ಕೂಡಿದ ಸಮತಟ್ಟಾದ ಪ್ರದೇಶ, 2. ದನಗಳ ಮೇವಿನ ಬಯಲು ಪ್ರದೇಶ. 1. a flat grazing pasture with bushes, 2. a grazing ground for cattle. **ಅರಮನೆಗೆ ಅಡ್ಕ ಇಲ್ಲೆ, ದೆವ್ವದ ಕಾಟ ಇಲ್ಲೆ(ಗಾ).** ವಾ: ದನಗಳ ಅಡ್ಕಲಿ ಮೇಸುದು, ಅಡ್ಕಲಿ ಅಡ್ಗಿಂಕಾದೆನಾ?

ಅಡ್ಕ² /*aḍka*/ ನಾ. 1. ಬಯಲು, 2. ಸಮೇತ. 1. plains, 2 together. ವಾ: ಅವೆಲ್ಲ ಮೊದುವೆಗೆ ಸಣ್ಣ ಕೂಸುನ ಅಡ್ಕ ಬಂದೊಳೊ.

ಅಡ್ಕ³ /*aḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಐವತ್ತೊಕ್ಲು ಗ್ರಾಮದ ಜಾಗ. a locality in Aivattoklu village in Sullia Taluk of Dakshina Kannada District.

ಅಡ್ಕದ /*aḍkada*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಅಡ್ಕಬಳೆ /*aḍkabaḷɛ*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅರಂತೋಡು ಗ್ರಾಮದ ಜಾಗ. 1. family, 2. lineage, 3. a locality in Aranthodu village in Sullia Taluk of Dakshina Kannada District.

ಅಡ್ಕಲಿರ್ /*aḍkalirɨ*/ ನಾ. ಹದ್ದು ಬಸ್ತಿನಲ್ಲಿರು. to be in control or limit. ವಾ: ಚೆಲ್ಲ್ ಚೆಲ್ಲ್ ಆಡ್ಬಡ ಹಙ್ಙ ಅಡ್ಕಲಿರ್.

ಅಡ್ಕಾರು /*aḍka:ru*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಜಾಲ್ಸೂರು ಗ್ರಾಮದ ಜಾಗ. 1. family, 2. lineage, 3. a locality in Jalsuru village in Sullia Taluk of Dakshina Kannada District.

ಅಡ್ಕೆ /*aḍke*/ ನಾ. 1. ಅಡಕೆ, 2. ಅಡಿಕೆ. Areca nut. **ಅಡ್ಕೆ ಕದ್ದರು ಕಳ್ಳನೆ, ಆನೆ ಕದ್ದರು ಕಳ್ಳನೆ(ಗಾ). ಆಳೆತ್ತರದ ಮರಲಿ ಕೆಂಪಣ ಕುದ್ದುಟು – ಅಡ್ಕೆ(ಒ).** ವಾ: ಎಲೆ ತಿಂಬೊನೊತ ನೋಡಿರೆ ಅಡ್ಕೆ ಇಲ್ಲೆ. **ಅಡ್ಕೆ ದೈ** /*aḍkɛ dai*/ ಅಡಕೆ ಗಿಡ. areca nut palm. ವಾ: ತೋಟ ಕರೆಲಿ ಸುಮಾರ್ ಅಡ್ಕೆ ದೈಗಳ ನೆಟ್ಟೊಳೊ. **ಅಡ್ಕೆ ಬೆಂಡ್** /*aḍkɛ beŋḍi*/ ಅಡಕೆ ತಿರುಳು. kernel of areca nut. ವಾ: ಈ ಅಡ್ಕೆದ್ ಬೆಂಡ್ ದೊಡ್ಡದ್. **ಅಡ್ಕೆಹೂವ್** /*aḍkɛ hu:vɨ*/ 1. ಹಿಂಗಾರ, 2. ಅರ್ಧ ಬಿರಿದ ಅಡಕೆ ಹೂವಿನ ಕೋಶ. 1. flower – either of areca nut or coconut tree, 2. half opened

bud of areca flower. ವಾ: ಮೊದುವೆಲಿ ಬಣ್ಣ ಬಂಗಾರಕ್ಕೆ ಅಡ್ಕೆ ಹೂವ್ ಬೇಕ್. ಪ: ಪಿಂಗಾರೊ(ತು)

ಅಡ್ಕೆಮಣೆ /*aḍkɛmaṇɛ*/ ಅಡಿಕೆ ತೆಗೆಯುವಾಗ ಹಗ್ಗದಿಂದ ನೇತುಹಾಕಿ ಕುಳಿತುಕೊಳ್ಳುವ ಮಣೆ. a plank attached to a rope and tied to the tree, used for resting while plucking areca nut from the tree. ವಾ: ಅಡ್ಕೆಮಣೆಲಿ ಕುದ್ಕಂಡ್ ಅಡ್ಕೆ ಕೀಳುದು.

ಅಡ್ಕೆಗಿಳಿ /*aḍkɛgiḷi*/ ನಾ. ಸಣ್ಣ ಜಾತಿಯ ಗಿಳಿ. a parakeet. ವಾ: ಈ ಪೇರ್ಲ ಮರದ ಹಣ್ಣಿಗೆ ಅಡ್ಕೆಗಿಳಿಗ ಬಂದವೆ. ಪ: ಗೀಣ – ಸಣ್ಣ ಜಾತಿನ ಗಿಳಿ

ಅಡ್ಕೆಬೊಳ್ಳಿ /*aḍkɛboḷḷi*/ ನಾ. ಒಂದು ವಿಧದ ಕಾಡು ಬಳ್ಳಿ. a wild creeper. ವಾ: ಮರಕ್ಕೆಲ್ಲ ಅಡ್ಕೆ ಬೊಳ್ಳಿ ಸುತ್ತಿಟು.

ಅಡ್ಕೆಹಿಟ್ಟ್ /*aḍkɛhiṭṭi*/ ನಾ. ಹುತ್ತರಿ ಹಬ್ಬದ ದಿನ ಅಕ್ಕಿ ಬೆಲ್ಲದಿಂದ ತಯಾರಿಸಲಾದ ಒಂದು ಬಗೆಯ ಉಂಡೆ ತಿನಿಸು. a sweet dish in the shape of a ball made of rice and jaggery during the harvest festival. ವಾ: ಅಡ್ಕೆ ಹಿಟ್ಟ್ ತಿಂಬಕೆ ಸಣ್ಣದಾಗಿ ಲಾಯ್ಕ.

ಅಡ್ಕ್ /*aḍkɨ*/ ಕ್ರಿ. 1. ಹೇರು, 2. ಇಡು. 1. to load, 2. to keep. ವಾ: ಅಂವ ಆ ಮೂಲೆಲಿ ಸೌದೆ ಅಡ್ಕಿಸಿತ್.

ಅಡ್‌ಗುಳಿ /*aḍɨ guḷi*/ ನಾ. ಮೂಸಂಬಿ. sweet lemon. ವಾ: ಈ ಸರ್ತಿ ಅಡ್‌ಗುಳಿ ಪಸ್‌ಲ್ ಲಾಯ್ಕ ಉಟ್ಟು.

ಅಡ್ಗೆ/ಅಡ್‌ಗೆ /*aḍgɛ/aḍɨgɛ*/ ನಾ. 1. ಅಡುಗೆ, 2. ಅಡಿಗೆ, 3. ಪಾಕ ಕ್ರಿಯೆ, 4. ಬೇಯಿಸಿ ಸಿದ್ಧಪಡಿಸಿದ ಊಟದ ಪದಾರ್ಥ. 1. cooked food, 2. cooked food, 3. the act of cooking, 3. boiled or roasted food. ವಾ: ಮೊದುವೆಗೆ ಸಾವ್‌ರ ಜೆನಕೆ ಅಡ್‌ಗೆ ಮಾಡ್‌ಸೊಕು. ಪ: ಅಡ್‌ಗೆನ – ಅಡುಗೆಯ. **ಅಡ್ಗೆ ಒಳೆಗೆ** /*aḍgɛ oḷɛgɛ*/ ಅಡುಗೆ ಕೋಣೆ. a kitchen. ವಾ: ಒಮ್ಮೆ ಅಡ್ಗೆ ಒಳೆಗೆ ಬಂದ್ ನೋಡ್. **ಅಡ್ಗೆ ಮನೆ** /*aḍgɛ manɛ*/ 1. ಅಡುಗೆ ಕೋಣೆ, 2. ಪಾಕ ಕ್ರಿಯೆ ನಡೆಯುವ ಕೋಣೆ. 1. a kitchen, 2. a place to cook. ವಾ: ಅಡ್ಗೆ ಮನೆ ದೊಡ್ಡದ್ ಬೇಕ್. **ಅಡ್ಗೆವು** /*aḍgɛvu*/ ಅಡುಗೆಯವರು. people who cook as a profession. **ಹತ್ತ್ ಅಡ್ಗೆವು ಸೇರಿ ಊಟದ ರುಚಿ ಕೆಟ್ಟಿತ್(ಗಾ).** ವಾ: ಅಡ್ಗೆವು ಬಂದೊಳೊ.

ಅಡ್‌ಚಿಲ್ /*aḍacalɨ*/ ನಾ. 1. ಬೇಟೆಯ ವ್ಯವಸ್ಥೆ (ಹೋಗುವ ಆಯಕಟ್ಟಿನ ಸ್ಥಳದಲ್ಲಿ ಇರಿಸಿ) ಹೆಗ್ಗಣ, ಕಾಡುಕೋಳಿ, ಮೊಲ, ಹಂದಿ ಇವುಗಳನ್ನು ಹಿಡಿಯುತ್ತಾರೆ, 2. ಅಡೆಂಚಿಲ್(ತು). a trap with which one hunts a wild boar, rodent, rabbit etc. ವಾ: ಹೆಗ್ಗಣ ಅಡ್‌ಚಿಲ್‌ಗೆ ಬಿದ್ದುಟು.

ಅಡ್ಚ್‌ನಾರ್ ಮರ /*aḍcɨna:r maraɨ*/ ನಾ. 1. ಒಂದು ವಿಧದ ಕಾಡು ಮರ, 2. ಅಂಡಿಪುನಾರ್(ತು). a wild tree. ವಾ: ಅಡ್ಚ್‌ನಾರ್ ಮರ ಒಂದ್ ಜಾತಿನ ಕಾಡ್ ಮರ.

ಅಡ್ಡ^{1} /*aḍḍa*/ ನಾ. 1. ಅಡ್ಡ, 2. ತಡೆ, 3. ತೊಲೆ, 4. ಅರ್ಧ, 5. ಪಕ್ಕದಿಂದ ಪಕ್ಕಕ್ಕೆ ಸಾಗುವುದು, 6. ಅಡ್ಡಲಾಗಿರುವ, 7. ಹಿಂದೆ ಪ್ರಚಾರದಲ್ಲಿದ್ದ ಅರ್ಧ ಹಣದ ಬೆಲೆಯ ನಾಣ್ಯ. 1. to block, 2. to stop, 3. a beam, 4. to go sideways, 4. a hurdle, 4. an antic coin. ವಾ: ದಾರಿಲಿ ಮರ ಅಡ್ಡಕೆ ಬಿದ್ದುಟು.

ಅಡ್ಡ^{2} /*aḍḍa*/ ನಾ. 1. ಗೋಡೆಯಿಂದ ಗೋಡೆಗೆ, 2. ಮೇಲಿನಿಂದ ಮರದ ಹಲಗೆ ಹಾಕಲು ಹಾಕುವ ಮರದ ದಿಮ್ಮಿ, 3. ಅಟ್ಟಳಿಕೆಯ ಅಡಿಭಾಗ. 1. from one wall to another, 2. a crossbeam, 3. floor of an attic. ವಾ: ಚೋಡಿಗೆ ಅಡ್ಡ ಪಾಲ ಉಟ್ಟು. **ಅಡ್ಡಕಾಲಾಕುದು** /*aḍḍa ka:la:kudu*/ 1. ತೊಂದರೆ ಕೊಡುವುದು, 2. ತಡೆ ಉಂಟುಮಾಡುವುದು. 1. causing trouble, 2. to disturb. ವಾ: ಅಂವ ಎಲ್ಲ ಕೆಲ್‌ಸಕು ಅಡ್ಡ ಕಾಲಾಕುದು. **ಅಡ್ಡಚಿಗ್ರ್** /*aḍḍa cigrɨ*/ ಅಡ್ಡಲಾಗಿ ಬೆಳೆದಿರುವ ಗಿಡದ ಚಿಗುರುಗಳು. uneven growth of shoots in a plant. ವಾ: ಕಾಪಿ ದೈಲಿ ಅಡ್ಡ ಚಿಗ್ರ್ ಬಾರಿ ಉಟ್ಟು.

ಅಡ್ಡಪಂಕ್ತಿ /*aḍḍapaŋkti*/ ನಾ. 1. ವಿರುದ್ಧ ಪಂಕ್ತಿ, 2. ಹಿಂದಿನ ಕಾಲದಲ್ಲಿ ಮದುವೆ ಇನ್ನಿತರ ಸಮಾರಂಭಗಳಲ್ಲಿ ಹಿಂದುಳಿದ ಜಾತಿಗಳವರು ಊಟಕ್ಕೆ ಕುಳಿತುಕೊಳ್ಳುವ ಪ್ರತ್ಯೇಕ ಪಂಕ್ತಿ. 1. a transverse row, 2. a custom followed in the past of arranging a separate row meant for the people of backward castes during the lunch/dinner served in a marriage, festival, etc. ವಾ: ಅವೆಲ್ಲ ಅಡ್ಡ ಪಂಕ್ತಿಲಿ ಕುದ್ದೊಳೊ.

ಅಡ್ಡಬಾಳ್ /*aḍḍaba:ḷɨ*/ ನಾ. ಅಗಲವಾದ ಗರಗಸ. a

wide saw. ವಾ: ಮರ ಕೊಯ್ಯಕೆ ಅಡ್ಡಬಾಳ್ ತಕ ಒಳ್ಳದ್.

ಅಡ್ಡಮಾತ್ /*aḍḍama:tɨ*/ ನಾವಿ. ಒಂದು ವಿಷಯದ ಬಗ್ಗೆ ಮಾತನಾಡುತ್ತಿರುವಾಗ ಇನ್ನೊಂದು ವಿಷಯವನ್ನು ಪ್ರಸ್ತಾಪಿಸುವುದು. Intervening or interrupting the conversation. ವಾ: ಒಂದ್ ವಿಸ್ಯ ಮಾತಾಡಿಕನ ಅಡ್ಡ ಮಾತ್ ಆಡಿಕಾಗದ್.

ಅಡ್ಡಹಾಕ್ /*aḍḍaha:kɨ*/ ನಾವಿ. 1. ತಡೆಯುವುದು, 2. ಮುಂದುವರಿಯದಂತೆ ತಡೆಗಟ್ಟುವುದು. 1. stopping, 2. to stop from proceeding. ವಾ: ಒಳ್ಳ ಕೆಲ್‌ಸಕೆ ಅಡ್ಡ ಹಾಕ್‌ದು.

ಅಡ್ಡಂತಡ್ಕ /*aḍḍantaḍka*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಅಡ್ಡಗಟ್ಟ್ /*aḍḍagaṭṭɨ*/ ನಾ. 1. ದಾರಿಗಡ್ಡವಾಗಿ ನಿಲ್ಲು, 2. ಮುಂದೆ ಹೋಗುವುದನ್ನು ತಡೆಗಟ್ಟು. 1. blocking the movement, 2. to obstruct. ವಾ: ದಾರಿಲಿ ನಡ್ಕಂಡ್ ಬಾಕನ ಅವು ನನ್ನ ಅಡ್ಡಗಟ್ಟಿದೊ.

ಅಡ್ಡನಪಾರೆ /*aḍḍanapa:re*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ದೇವಚಳ್ಳ ಗ್ರಾಮದ ಜಾಗ. a locality in Devacalla village in Sullia Taluk of Dakshina Kannada District.

ಅಡ್ಡಬಲಿಪ /*aḍḍablipa*/ ನಾ. ದೊಡ್ಡ ಹುಲಿ. a large tiger.

ಅಡ್ಡಬಾಯಿ ಹಾಕ್ /*aḍḍaba:yiha:kɨ*/ ನಾವಿ. 1. ಎಡೆಯಲ್ಲಿ ಮಾತನಾಡು, 2. ಇಬ್ಬರು ಮಾತನಾಡುವಾಗ ಮಧ್ಯದಲ್ಲಿ ಮಾತನಾಡುವುದು. 1. interference in the conversation, 2. to interfere. ವಾ: ದೊಡ್ಡೊವ್ ಮಾತಾಡಿಕನ ಅಡ್ಡಬಾಯಿ ಹಾಕ್‌ಕಾಗದ್ ತ ಗೊತ್ತ್‌ಲ್ಲೆನ?

ಅಡ್ಡಬಿದ್ದೊ /*aḍḍabiddɔ*/ ನಾ. 1. ಸಾಷ್ಟಾಂಗ ಬಿದ್ದರು, 2. ಕಾಲಿಗೆ ನಮಸ್ಕರಿಸಿದರು. 1. to prostrate, 2. to touch the feet. ವಾ: ದೇವ್‌ರಿಗೆ ಅಡ್ಡಬಿದ್ದೊ.

ಅಡ್ಡಬೊಲಿಪ /*aḍḍabɔlipa*/ ನಾ. ಪಟ್ಟೆ ಹುಲಿ. a striped tiger. ವಾ: ಕಾಡ್‌ಲಿ ಅಡ್ಡಬೊಲಿಪ ಉಟ್ಟುಗಡ.

ಅಡ್ಡಮಾಡ್ /*aḍḍama:ḍɨ*/ ನಾ. ಉದ್ದನೆಯ ಮಾಡಿಗೆ ಅಡ್ಡವಾಗಿ ಹಾಕುವ ಛಾವಣಿ. a roof that covers the crossbeam ceiling. ವಾ: ಅಡ್ಡಮಾಡ್ ಕಟ್ಟಿಸಿದೊ.

ಅಡ್ಡಮಾತ್ /*aḍḍama:tɨ*/ ನಾ. ಎದುರು ಮಾತು. to contradict. **ಅಡ್ಡಮಾತ್ ಬುಟ್ಟ ಬಾಣ ಹಿಂದಿರುಗುಲೆ(ಗಾ).** ವಾ: ದೊಡ್ಡವ್‌ಕೆ ಅಡ್ಡಮಾತ್ ಆಡಿಕಾಗದ್.

ಅಡ್ಡಮುರಿ /*aḍḍamuri*/ ನಾ. ಮರವನ್ನು ಅಡ್ಡವಾಗಿ ಕೊಯ್ಯುವ ಗರಗಸ. a saw used for cutting the tree across. ವಾ: ಅಡ್ಡಮುರಿ ಇದ್ದರೆ ಲಾಯ್ಕಲಿ ಮರ ಕೊಯ್ಯಕ್. ಪ: ಅಡ್ಡಮೊರಿ – ಗರಗಸ

ಅಡ್ಡಾಡ್ /*aḍḍa:ḍɨ*/ ನಾ. 1. ತಿರುಗಾಡು, 2. ಸುಳಿದಾಡು. 1. to wander, 2. to roam. ವಾ: ಸುಮ್ಮನೆ ಅಡ್ಡಾಡ್ ಕಂಡಿದ್ದರೆ ಕ್ಯಾಮೆ ಇಲ್ಲೆನತ ಬೊಯಿದವೆ.

ಅಡ್ಡಾದಿಡ್ಡಿ /*aḍḍa:diḍḍi*/ ನಾ. 1. ಅವ್ಯವಸ್ಥಿತ, 2. ಅಸ್ತವ್ಯಸ್ತ. 1. unorganized, 2. in a haphazard manner. ವಾ: ಅಂವ ಕುಡ್ದ್ ಕಾರ್‌ನ ಅಡ್ಡಾದಿಡ್ಡಿ ಓಡ್ಸಿತ್.

ಅಡ್ಡಿ /*aḍḍi*/ ನಾ. 1. ತಕರಾರು, 2. ತಡೆಮಾಡು, 3. ತೊಂದರೆ. 1. object, 2. disturb, 3. to trouble. ವಾ: ಒಳ್ಳ ಕೆಲ್ಸಕೆ ನೂರೆಂಟ್ ಅಡ್ಡಿಗ.

ಅಡ್ಡಿಗೆ /*aḍḍigɛ*/ ನಾ. 1. ಅಡ್ಡಿಕೆ, 2. ಹೆಂಗಸರು ಕೊರಳಲ್ಲಿ ಧರಿಸುವ ಅರ್ಧಚಂದ್ರಾಕಾರದ ಒಂದು ಆಭರಣ. 1. necklace, 2. a crescent shaped jewellery worn by women. ವಾ: ಅವ್ಳ ಕುತ್ತಿಗೆಲಿರ್‍ವ ಅಡ್ಡಿಗೆ ಲಾಯಿಕ್‌ಟ್ಟು.

ಅಡ್ಡೆ /*aḍḍɛ*/ ನಾ. 1. ಹೆಗಲ ಮೇಲೆ ಎರಡು ತಂಬಿಗೆಯ ನೀರಿನ ಹೊರೆ, 2. ಹೆಗಲ ಮೇಲೆ ಅಥವಾ ಕೊರಳ ಮೇಲೆ ಹೊರುವುದಕ್ಕಾಗಿ ಮಾಡಿರುವ ಸಾಧನ (ಕಾವಡಿ/ಕಂಬಿ), 3. ಜನ ಸೇರುವ ಸ್ಥಳ, 4. ಕಟ್ಟೆ, 5. ಅಂಗಡಿ. 1. carrying two pots of water using one's shoulder, 2. a bamboo strip with sling to carry things, 3. a place where people assemble, 4. a raised platform, 5. a shop. ವಾ: ಅಂವ ಅಷ್ಟ್ ದೂರಂದ ಅಡ್ಡೆಲಿ ನೀರ್ ಹೊತ್ತ್ ತಾದು.

ಅಡ್ತಲೆ /*aḍtale*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ

ಅರಂತೋಡು ಗ್ರಾಮದ ಜಾಗ. 1. family, 2. lineage, 3. a locality in Aranthodu village in Sullia Taluk of Dakshina Kannada District.

ಅಡ್ಪ /*aḍpa*/ ನಾ. 1. ಮುಚ್ಚಿದ, 2. ಪೂರ್ತಿ. 1. closed, 2. complete. ವಾ: ಮುಚ್ಚಳ ಅಡ್ಪ ಆದೆ.

ಅಡ್ಪಂಗಾಯ /*aḍpaŋga:ya*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಜ್ಜಾವರ ಗ್ರಾಮದ ಜಾಗ. 1. family, 2. lineage, 3. a locality in Ajjavara village in Sullia Taluk of Dakshina Kannada District.

ಅಡ್ಪಳ /*aḍpaḷa*/ ನಾ. ನೆಲದಲ್ಲಿ ಸುಖಾಸನದಲ್ಲಿ ಕುಳಿತುಕೊಳ್ಳುವುದು. sitting in cross legged position on the floor.

ಅಡ್ಪಳೆ /*aḍpaḷɛ*/ ನಾ. ಒಣಗಿದ ತೆಂಗಿನ ಗೊನೆ. dried fronds of coconut. ವಾ: ಅಡ್ಪಳೆ ಬೀಳಿಕಾವುಟು.

ಅಡ್ಪು /*aḍpiḍɨ*/ ನಾ. ಮುಚ್ಚುವುದು. closing. ವಾ: ಅಂವ ಮೋಟೆಗೆ ಕಲ್ಲ್ ಅಡ್ಪಿಸಿತ್. ಪ: ಅಡ್ಪಿದೆ – ಮುಚ್ಚಿದೆ; ಅಡ್ಪಿನೆ – ಮುಚ್ಚುವೆ; ಅಡ್ಪಿಸಿತ್ – ಮುಚ್ಚಿಟ್ಟಿತು; ಅಡ್ಪಿಸ್ – ಮುಚ್ಚಿಡು; ಅಡ್ಪುದು – ಮುಚ್ಚುವುದು; ಅಡ್ಪೊಕು – ಮುಚ್ಚಬೇಕು

ಅಡ್ಮೆ /*aḍmɛ*/ ನಾ. ಕೆಳಗೆ. 1. below, under. ವಾ: ಬಾಮಿ ನೀರ್ ಅಡ್ಮೆಗೆ ಹೋವುಟು.

ಅಡ್ಯಡ್ಕ /*aḍyaḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ತೊಡಿಕಾನ ಗ್ರಾಮದ ಜಾಗ. a locality in Todikana village in Sullia Taluk of Dakshina Kannada District.

ಅಡ್ಯಣ /*aḍyaṇa*/ ನಾ. 1. ಅಡ್ಡಣ, 2. ಹರಿಗೆ, 3. ಗುರಾಣಿ. 1. a protective shield, 2. a metal shield, 3. an armour, used as a shield. ವಾ: ಯುದ್ಧ ಮಾಡಿಕನ ಕತ್ತಿ ತಡೆಕೆ ಅಡ್ಯಣನ ಬಳ್‌ಸುವೆ.

ಅಡ್ಯತ ಕಂಡ /*aḍyata kaṇḍa*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಪೆರುವಾಜೆ ಗ್ರಾಮದ ಜಾಗ. a locality in Peruvaje village in Sullia Taluk of Dakshina Kannada District.

ಅಡ್ರು /*aḍru*/ ನಾ. ಒಣಗಿದ ಕೋಲು. a dry stick. ವಾ: ಅಡ್ರು ಹಿಡ್ಡ ಉದ್ದದ್ ಬೇಕಿತ್ತ್.

ಅಡ್ವೆ /*aḍvɛ*/ ನಾ. ಒಂದು ಬೈಗುಳ ಪದ. an expletive. ವಾ: ಬಾರಿ ಅಡ್ವೆನಂಗೆ ಆಡ್‌ದೆ.

ಅಣಂಗ್ /*aṇaŋgɨ*/ ನಾ. 1. ಅಡಗು, 2. ಅವಿತುಕೊಳ್ಳು, 1. to hide, 2. hiding. ವಾ: ಮಕ್ಕೆಲ್ಲ ಸೇರಿಕಂಡ್ ಅಣಂಗ್‌ವ ಆಟ ಆಡಿವೆ. ಪ: ಅಣಗಿಸಿ; ಅಣಂಗಿಸಿ; ಅಡಂಗಿಸ್; ಅಡೆಂಗ್(ತು); ಅಣ್‌ಂಗ್ಯುಟ್ಟು – ಅಡಗಿದ್ದಾನೆ; ಅಡಗಿದ್ದಾಳೆ; ಅಣ್‌ಗಿಕ – ಅವಿತುಕೊಳ್ಳು(ಅಂವ ಬಾಕನ ಅಣ್‌ಗಿಕ)

ಅಣಯ /*aṇaya*/ ನಾ. 1. ಅಣ್ಣ, 2. ಸಹೋದರ. 1. elder brother, 2. brother. **ಅಕ್ಕ ಕೊಕ್ಕ ಕೊಯಿಲಾ ಮೊದ್ದು ಉಪ್ಪನ ಹಾಕಿಕೆ ಬರೊಕಡ, ಅಣ್ಣ ತುಣ್ಣೆ, ತುಣ್ಣೆನ ರೋಮ ದೊಂಪ ಹಾಕಿಕೆ ಬರೊಕಡ(ನು).** ವಾ: ಅವ್ವ ಅಣಯ ಬಾತ್. ಪ: ಅಣ್ಣಯ್ಯ

ಅಣಿ /*aṇi*/ ನಾ. 1. ದೈವದ ಕಿರೀಟ, 2. ಅಚ್ಚುಕಟ್ಟು, 3. ಸಿದ್ಧತೆ, 4. ಅವಕಾಶ, 5. ನೆಯ್ಗೆಯ ಮಗ್ಗದ ಹಾಸು ಹೊಕ್ಕುಗಳ ಜೋಡಣೆ. 1. crown of deity, 2. being tidy, 3. preparedness, 4. opportunity, 5. to spread (add) mats made in handloom. ವಾ: ದೇವ್ರ ಅಣಿನ ಹಂಗೆಲ್ಲ ಮುಟ್ಟಿಕಾಗದ್.

ಅಣಿಗಿಟು /*aṇigiṭu*/ ನಾ. 1. ಅಡಗಿಕೊಂಡಿದ್ದಾನೆ, 2. ಅವಿತುಕೊಂಡಿದ್ದಾನೆ. 1. He has hidden himself, 2. He is hiding. ವಾ: ಅಪ್ಪ ಬಾತ್‌ತ ಚಾಮಿ ಅಣಿಗಿಟು.

ಅಣಿಯೂರು /*aṇiyu:ru*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಅಣುಂಬು /*aṇɨmbu*/ ನಾ. 1. ಅಣಬೆ, 2. ನಾಯಿಕೊಡೆ. 1. mushroom, 2. edible fungus. ವಾ: ಅಣುಂಬು ಗೈಪು ತಿಂಬಕೆ ಲಾಯ್ಕ. ಪ: ಅಣ್ಬು, ಅಣ್‌ಂಬ್; ಅಳ್‌ಂಬ್(ತು)

ಅಣೆ /*aṇɛ*/ ನಾ. 1. ಹಣ/ದುಡ್ಡು, 2. ಪ್ರಮಾಣ, 3. ಶಪಥ, 4. ಆಣೆ. 1. money, 2. to swear, 3. an oath. **ಅಡ್ಕೆಗೆ ಹೋದ ಮಾನ ಆಣೆ ಕೊಟ್ರೊ ಬಾಕಿಲ್ಲೆ(ಗಾ).** ವಾ: ಸುಮ್ಮ ಸುಮ್ಮನೆ ಅಣೆ ಹಾಕಿಕಾಗದ್.

ಅಣೆಕಟ್ಟ್ /*aṇɛkaṭṭɨ*/ ನಾ. 1. ಅಣೆಕಟ್ಟು, 2. ನೀರಿನ ಪ್ರವಾಹಕ್ಕೆ ಹಾಕಿದ ಒಡ್ಡು. 1. a dam, 2. a barrier

to control the flow of water. ವಾ: ಹಿಂಗೆ ಮಳೆ ಹೊಯ್ದರೆ ಅಣೆಕಟ್ಟ್ ತುಂಬಿದೆ.

ಅಣ್ಂಕ್ /*alaŋki*/ ನಾ. ಚಿಪ್ಪುಹಂದಿ. a pangolin. ವಾ: ತೋಟಲಿ ಅಣ್ಂಕ್ ಉಟ್ಟುಗಡ ಬೇಲಿ ಕರೇಲಿ ಹೋತುಗಡ. **ಅಣ್ಕ್** /*aṇiki*/ ಚಿಪ್ಪು ಹಂದಿ. a pangolin. ವಾ: ತೋಟಕೆ ಅಣ್ಕ್‌ಗ ಬಂದವೆ. ಪ: ಅಣ್ಕು – ಅಳ್ಂಕ್(ತು); ಅಣ್ಕ್ – ಚಿಪ್ಪು ಹಂದಿ

ಅಣ್ಂಗೈ /*aṇiŋgai*/ ನಾ. 1. ಮಾವಿನಕಾಯಿ ಉಪ್ಪಿನಕಾಯಿ, 2. ಅಡ್ಂಗಾಯಿ. 1. mango pickle, 2. pickle. ವಾ: ಮಾಯ್ನಕಾಯ್ನ ಅಣ್ಂಗೈ ಹಾಕೊಳ.

ಅಣ್ಗ್ /*aṇgi*/ ಕ್ರಿ. 1. ಅಡಗು, 2. ಅವಿತುಕೊಳ್ಳು. 1. to hide, 2. to conceal. ವಾ: ಅಂವ ತಕಂಡ ದುಡ್ಡು ಕೊಡಿಕಾದೆತ ನನ್ನ ಕಾಂಬಕನ ಅಣ್ಗುದು. ಪ: ಅನ್ಗಿಟು – ಅಡಗಿದ್ದಾನೆ. **ಅಣ್ಂಗ್** /*aṇiŋgi*/ ಅಡಗು. to hide. ವಾ: ಮಾಸ್ಟ್ರ್‌ನ ಕಾಂಬಕನ ಅಂವ ಅಣ್ಂಗಿತ್. **ಅಣ್ಂಗ್ಯ** /*aṇiŋgya*/ 1. ಅವಿತುಕೊಳ್ಳು, 2. ಅಡಗುತ್ತೀಯಾ? 1. to hide, 2. will you hide? ವಾ: ನನ್ನ ನೋಡಿ ನೀ ಅಣ್ಂಗ್ಯ? **ಅಣ್ಂಗ್ಸ್** /*aṇiŋgisi*/ ಅಡಗಿಸು. to conceal. ವಾ: ಎಂತರ ಹಂಗೆ ಅಣ್ಂಗ್ಸುದು.

ಅಣ್ಣ /*aṇṇa*/ ನಾ. 1. ಹಿರಿಯ ಸಹೋದರ, 2. ಗಂಡಸರನ್ನು ಪ್ರೀತಿಯಿಂದ ಅಥವಾ ಗೌರವದಿಂದ ಸಂಬೋಧಿಸುವ ಮಾತು, 3. ತಿರಸ್ಕಾರವನ್ನು ಸೂಚಿಸಲು ವ್ಯಂಗ್ಯವಾಗಿ ಬಳಸುವ ಮಾತು. 1. elder brother, 2. an honorific term to address men, 3. a sarcastic term of rejection. **ಅಣ್ಣ ಮಾಡ್ಡರ ಅಣ್ಣನೇ ಮಾಡೊಕು(ಗಾ).** ವಾ: ಅಣ್ಣ ಮನೆದ್ ಜವಾಬ್ದಾರಿ ತಕಣ್ತ್.

ಅಣ್ಣಚ್ಚಿರ /*aṇṇaccira*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಅಣ್ಣಣ್ಣ /*aṇṇaṇṇa*/ ನಾ. ಅಣ್ಣ. elder brother. ವಾ: ಅಣ್ಣಣ್ಣ ನಾ ತೊಪ್ಪು ಮಾಡ್ತ್‌ಲೆ.

ಅಣ್ಣಪ್ಪ /*aṇṇappa*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. masculine given name. ಪ: ಅಣ್ಣು, ಅಣ್ಣಿ, ಅಣ್ಣಯ್ಯ, ಅಣ್ಣಕೂಸು

ಅಣ್ಣಿ /*aṇṇi*/ ನಾ. ಸಣ್ಣ ಮಕ್ಕಳನ್ನು ಕೊಂಡಾಟದಲ್ಲಿ ಕರೆಯುವುದು. ಅಣ್ಣಿ, ಅಣ್ಣು, ಬಾಬೆ, ಕುಞ್ಞಿ, ಕುಞ್ಞ, ಕುತ್ತಿ, ಮೋಞ್ಞಿ ಇತ್ಯಾದಿ. a nickname used to address small children. ವಾ: ಅಣ್ಣಿ ಇತ್ತ ಬಾ.

ಅಣ್ಣಿಯಣ್ಣ /*aṇṇiyaṇṇa*/ ನಾ. ವ್ಯಕ್ತಿ ನಾಮ ಪುರುಷ. masculine given name. ವಾ: ಅಣ್ಣಿಯಣ್ಣ ಬಾತ್.

ಅಣ್ಣು /*aṇṇu*/ ನಾ. ವ್ಯಕ್ತಿನಾಮ ಪುರುಷ. masculine given name. ವಾ: ಅಣ್ಣು ಬಂದರೆ ನನ್ನ ಕಾಂಬಕೆ ಹೇಳ್.

ಅಣ್ಯಣ /*aṇyaṇa*/ ನಾ. 1. ತಂಗಳು ಅನ್ನ, 2. ತಣಿದುದು. 1. leftover cooked rice, usually of the previous night, 2. cold. ವಾ: ಅಣ್ಯಣಲಿ ಚಿತ್ರಾನ್ನ ಮಾಡಕ್.

ಅಣ್ಯಣ ಸುಣ್ಣ /*aṇyaṇa suṇṇa*/ ನಾ. ಹುಳಿ ಬಂದ ಸುಣ್ಣ. sour processed lime.

ಅಣ್ಸ್ಯಣ /*aṇsiṇa*/ ನಾ. 1. ಅರಿಸಿನ ಪುಡಿ, 2. ಹಳದಿ ಬಣ್ಣ, 3. ಅರಸಿನ ಬೇರಿನ ಪುಡಿ. 1. turmeric powder, 2. yellow colour, 3. powder of turmeric root. ವಾ: ಅಣ್ಸ್ಯಣನ ಮೊದ್ದಿಗೆ, ಗೈಪಿಗೆ, ಆಂಬರಕೆ ಎಲ್ಲದಕ್ಕು ಬಳ್ಸುವೆ. ಪ: ಅಣ್ಸಣ – ಅರಸಿನ; ಅಣ್ಯಣ ಸೊಪ್ಪು – ಅರಶಿಣ ಎಲೆ; ಅರ್ಸಣೆಣ್ಣೆ – ಅರಸಿನ ಎಣ್ಣೆ

ಅತವಾ /*atava:*/ ಅ. 1. ಅಥವಾ, 2. ಇಲ್ಲವೆ, 3. ಅಲ್ಲದೆ, 4. ಪರ್ಯಾಯ ಸೂಚಕ ಪದ. 1. or, 2. otherwise, 3. apart from, 4. an alternative term. ವಾ: ನಾ ನಾಳೆ ಅತವಾ ನಾಡ್‌ದ್ ನಿಮ್ಮಲ್ಲಿಗೆ ಬನ್ನೆ.

ಅತಿ /*ati*/ ನಾವಿ. 1. ಜಾಸ್ತಿ, 2. ಹೆಚ್ಚಾಯಿತು, 3. ಅನಗತ್ಯ. 1. more/exceeding, 2. too much, 3. unnecessary. ವಾ: ಅಂವಂದ್ ಅತಿ ಆತ್.

ಅತಿರೇಕ /*attire:ka*/ ನಾ. 1. ರೂಢಿಗೆ ವಿರೋಧವಾದ ನಡೆ, 2. ಅಳತೆಗೆ ಮೀರಿದ ಸ್ಥಿತಿ, 3. ಮಿತಿಮೀರಿದ. 1. opposite to the norms, 2. a state beyond one's control, 3. excess. ವಾ: ಅಂವ ಅತಿರೇಕ ಆಡ್ದೆ.

ಅತೇಡಿ /*ate:ḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಅತ್ಕಾಯಿ ಮರ /*atka:yi mara*/ ನಾ. 1. ಅತ್ತಿ ಮರ, 2. ಹತ್ತಿಕಾಯಿ ಮರ. a fig tree. ವಾ: ಅಲೆಲ್ಲ ಅತ್ಕಾಯಿ ಮರ ಸುಮಾರಿತ್.

ಅತ್ತ /*atta*/ ಸನಾ. 1. ಆಚೆ, 2. ಆಕಡೆ. 1. the other side, 2. on that side. **ಅತ್ತ ಹೋದ್ರೆ ಕಷ್ಟ, ಇತ್ತ ಹೋದ್ರೆ ನಷ್ಟ(ಗಾ).** ವಾ: ಆ ದಾರಿಲಿ ಅತ್ತ ಹೋಗ್ಬಡನೆ ಮುಳ್ಳ್ ಹೆಟ್ಟಿದೆ. **ಅತ್ತ ಇಡ್** /*atta iḍi*/ ಆಚೆ ಎಸೆಯು. to throw it away. ವಾ: ಇದ ಈ ಚೆಟ್ಟಿನ ಅತ್ತ ಇಡ್ (ಅತ್ತ ಕಡೆ ಮಡ್ಗ್). ಪ: ಅತ್ತ ಇಸ್ – ಪಕ್ಕಕ್ಕೆ ಇಡು. **ಅತ್ತಕ್ಕೆ** /*attakkɛ*/ 1. ಆ ಕಡೆಗೆ, 2. ಪಕ್ಕಕ್ಕೆ. 1. on that side, 2. to the side. ವಾ: ಹಙ್ಞ ಅತ್ತಕ್ಕೆ ಕುದ್ರು. **ಅತ್ತತ್ತ** /*attatta*/ 1. ಆ ಕಡೆ, 2. ಆಪಕ್ಕ, 3. ದೂರದೂರ. 1. the other side, 2. on that side, 3. in a great distance. ವಾ: ಅತ್ತತ್ತ ಹೋದರೆ ಉಟ್ಟಿಲಾ ಕಾವೇರಿ ಹಳ್ಳ ಸಿಕ್ಕಿದೆ. **ಅತ್ತತ್ತಲೆ** /*attattale*/ 1. ಆ ಕಡೆನೇ, 2. ಆ ಕಡೆಯೇ, 3. ತಲೆ ಮರೆಸಿ ಹೋಗುವುದು. 1. on that side, 2. in that place, 3. to go absconding. ವಾ: ಅತ್ತತ್ತಲೆ ಹೋದು ಯಾಕೆನೆ ಇತ್ತ ಬಾ ಅಲ್ಲಿ ಗುಂಡಿ ಇರ್ದು. **ಅತ್ತನ** /*attana*/ 1. ಆ ಕಡೆಯ, 2. ಇನ್ನೊಂದು ಭಾಗದವರು. 1. of that region/side, 2. of another region. ವಾ: ಅತ್ತನ ಕರೆಲಿ ಬರೆ ಉಟ್ಟು. **ಅತ್ತಳೆ** /*attale*/ 1. ಆಚೆಗೆ, 2. ಬಾರದೇ ಇರುವ ಸಂದರ್ಭ. 1. on that side, 2. a situation of not visiting someone. ವಾ: ಅಣಯ ಬನ್ನೆ ಬನ್ನೆತ ಹೇಳಿ ಅತ್ತಳೆ ಹೋತು. **ಅತ್ತಿಂದಿತ್ತ** /*attinditta*/ ಆ ಕಡೆಯಿಂದ ಈ ಕಡೆ. from there to here. ವಾ: ಅಂವ ಕೊತ್ತಿನಂಗೆ ಅತ್ತಿಂದಿತ್ತ ಓಡಾಡ್‌ದೆ.

ಅತ್ತಿ /*atti*/ ನಾ. ಒಂದು ಬಗೆಯ ಮರ. Fig tree. **ಅತ್ತಿ ಹಣ್ಣ್ ಲಿ ಹುಳ ಇಲ್ಲದಿರ್ದ(ಗಾ).** ವಾ: ಅತ್ತಿ ಮರಲಿ ಅತ್ತಿಕಾಯಿ ಹಣ್ಣಾತ್.

ಅತ್ತಿಮರ /*attimara*/ ನಾ. 1. ಅತ್ತಿ ಹಣ್ಣಿನ ಮರ, 2. ಹಾಲು ಬರುವ ತಂಪು ಮರ, 3. ಔದುಂಬರ, 4. ಆಲದ ಜಾತಿಯ ಮರ, 5. ಒಳಗೆ ಹುಳುವಿರುವ ಹಣ್ಣಿನ ಮರ. 1. a fig tree, 2. a tree which exudes milk like substance, 3. fig tree, 4. a tree belonging to the family of banyan trees, 5. a tree which has worms inside its fruits. ವಾ: ಅತ್ತಿ ಮರಲಿ, ಮರದ ಬುಡಂದನೆ ಹಣ್ಣ್ ಜೊಂಪೆ ಜೊಂಪೆ ಹಿಡ್‌ದದೆ. **ಅತ್ತಿ ಹಣ್ಣ್** /*atti haṇṇi*/ 1. ಅತ್ತಿ ಹಣ್ಣು, 2. ಅಂಜೂರದ ಹಣ್ಣು. fig fruit. ವಾ: ಅತ್ತಿ ಹಣ್ಣ್ ತಿಂದರೆ ಆರೋಗ್ಯಕೆ ಬಾರಿ ಒಳ್ಳೆದ್.

ಅತ್ತಿಗೆ /*attigɛ*/ ನಾ. 1. ಅತ್ತಿಗೆ, 2. ಅಣ್ಣನ ಹೆಂಡತಿ, 3. ಗಂಡನ ಹಿರಿಯ ಸಹೋದರಿ. 1. wife of one's elder brother, 3. elder sister of one's husband (sister-in-law). ವಾ: ಅತ್ತಿಗೆಗೆ ಇಂದ್ ಪುರುಸೊತ್ತಿಲ್ಲದ ಕೆಲ್‌ಸ. **ಅತ್ತಿಗೆಕ** /*attigɛkka*/ ಅತ್ತಿಗೆಯಂದಿರು. sisters-in-law. ವಾ: ಅತ್ತಿಗೆಕ ಮನೆಗೆ ಬಂದೊ. ಪ: ಅತ್ತಿಗತ್ತಿಗೆ – ಅತ್ತಿಗೆ ಅತ್ತಿಗೆ

ಅತ್ತೆ /*attɛ*/ ನಾ. 1. ಅತ್ತೆ, 2. ಹೆಂಡತಿಯ ಅಥವಾ ಗಂಡನ ತಾಯಿ, 3. ತಂದೆಯ ಒಡಹುಟ್ಟಿದವರು, 4. ಸೋದರತ್ತೆ. 1. mother in law, 2. mother of either one's wife or husband, 3. sisters of one's father, 3. an aunt. **ಅತ್ತೆ ಒಡ್ಡ ಪಾತ್ರೆಗೆ ಬೆಲೆ ಇಲ್ಲೆ(ಗಾ).** ವಾ: ಅತ್ತೆ ಮೇಲೆ ನಂಗೆ ಬಾರಿ ಗೌರವ ಉಟ್ಟು. **ಅತ್ತೆಕ** /*attɛka*/ ಅತ್ತೆಯಂದಿರು. mother-in-law. ವಾ: ಅತ್ತೆಕ ಇಂದ್ ಬಾರಿ ಕುಸಿಲಿ ಒಳೊ.

ಅತ್ತೇಡಿ /*attɛ:ḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಅತ್ಯಡ್ಕ /*atyaḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಜ್ಜಾವರ ಗ್ರಾಮದ ಜಾಗ. a locality in Ajjavara village in Sullia Taluk of Dakshina Kannada District.

ಅತ್ಯಾಡಿ /*atya:ḍi*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಜ್ಜಾವರ ಗ್ರಾಮದ ಜಾಗ. 1. family, 2. lineage, 3. a locality in Ajjavara village in Sullia Taluk of Dakshina Kannada District.

ಅತ್ರಿಜಾಲು /*atrija:lu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಅತ್ರೋಣ /*atrɔ:ṇa*/ ನಾ. 1. ಕಿತಾಪತಿ, 2. ಸಮಾಜಬಾಹಿರ ಕೆಲಸ/ ವರ್ತನೆ, 3. ಅತ್ರ್‌ವಾಣ. 1. nuisance, 2. anti-social behaviour or work, 3. mischief. ವಾ: ಅಂವ ಅತ್ರೋಣ ಕೆಲ್‌ಸ ಮಾಡುದರ್‌ಲಿ ಎತ್ತಿದ ಕೈ.

ಅದರಂದ /*adaranda*/ ಸನಾ. 1. ಅದರಿಂದ, 2. ಅವನಿಂದ, 3. ಅವಳಿಂದ. 1. because of that, 2. because of him, 3. because of her. ವಾ: ಅದರಂದನೆ ಮನೆಲಿ ಯಾಗೊಳು ರಾಮಾಯಣ. ಪ: ಅದರ್‌ಂದ, ಅದರಂದಲೂ – ಅದರಿಂದಲೂ

ಅದರಂದಲೂ ಮದ್ದ್ ಮಾಡಕ್‌ಗಡ. **ಅದರವೂ** /*adaravu:*/ 1. ಅದನ್ನು, 2. ಅ ವಸ್ತುವನ್ನು. 1. that one, 2. that thing. ವಾ: ಮೀನ್ ಮಾಸನ ಗೈಪುನ ನೆಲಲಿ ಇಸಿರೆ ಕೊತ್ತಿಗ ಬುಡ್ದುಲೆ, ಅದರವೂ ನೆಲುಲಿ ಇಸಿಕೆ ಆದೆ. **ಅದರೆಡೆಲಿ** /*adareḍeli*/ 1. ಅದರ ಮಧ್ಯದಲ್ಲಿ, 2. ಅದರ ನಡುವಿನಲ್ಲಿ. 1. in the middle of, 2. in the centre of. ವಾ: ನಂದೇ ಕೆಲ್‌ಸ ಆತ್‌ಲೆ ಅದರೆಡೆಲಿ ಇಂವಂದ್ ಬೇರೆ. ಪ: ಅದರೆಡಿಲಿ. **ಅದರೊಟ್ಟಿಗೆ** /*adarɔṭṭige*/ ಅದರ ಜೊತೆಯಲ್ಲಿ. along with. ವಾ: ಮೆಂತೆ ಸೊಪ್ಪು ಅದರೊಟ್ಟಿಗೆ ಪಾಲಾಕ್ ಸೊಪ್ಪು ಹಾಕಿ ಗೈಪು ಮಾಡಕ್. **ಅದರೊಳೆಗೆಂದ** /*adarɔḷɛgɛnda*/ ನಾ. ಅದರ ಒಳಗಿಂದ. within it. ವಾ: ಅಲ್ಲಿ ಕಂಡದೆಲ ದೊಡ್ಡ ಮಾಳಿ ಅದರೊಳೆಗೆಂದ ಹೆಗ್ಗಣ ಬಂದದ್. ಪ: ಅದರೊಳಗೆ – ಅದರ ಒಳಗೆ; ಅದರೊಳಗೆಂತ – ಅದರ ಒಳಗೆ ಏನು. **ಅದರ್‌ಂದಾಗಿ** /*adarɨnda:gi*/ 1. ಅದರಿಂದಾಗಿ, 2. ಅವನಿಂದಾಗಿ, 3. ಅವಳಿಂದಾಗಿ. 1. because of that, 2. because of him, 3. because of her. ವಾ: ಅದರ್‌ಂದಾಗಿ ನಮಿಗೆ ನೆಮ್ಮದಿ ಇಲ್ಲೆ. **ಅದರ್‌ನ** /*adarna*/ 1. ಅವುಗಳನ್ನು, 2. ಅದನ್ನು. 1. they/them, 2. that. ವಾ: ಅದರ್‌ನ ಎಲ್ಲಿ ಇಸುದು? ಪ: ಅದರ್ನೆಲ್ಲಾ – ಅದರನ್ನೆಲ್ಲ/ ಅದನ್ನೆಲ್ಲ. **ಅದರ್ನೇ** /*adarane:*/ ಅದನ್ನೇ. to specify something. ವಾ: ನಾ ಅದರ್‌ನೇ ಹುಡ್‌ಕ್‌ತಿದ್ದದ್. **ಅದರ್‌ಲಿ** /*adarɨli*/ ಅದರಲ್ಲಿ. 1. in that, 2. on that. ವಾ: ಅಟ್ಟಲಿ ಕಡ್‌ಕೆ ಉಟ್ಟು, ಆದರೆ ಅದರ್‌ಲಿ ಬತ್ತ ಇಲ್ಲೆ.

ಅದರಿ ಹತ್ತುದು /*adari hattudu*/ ನಾ. 1. ಹಸು ಜೋಡಿಗೆ ಬರುವುದು, 2. ಅದಿರೆ, 3. ಬೆದೆ (ದನಗಳ ವಿಷಯದಲ್ಲಿ). 1. coupling of cattle to breed, 2. sexual interest/excitement among animals, 3. a period of sexual excitement among cattle. ವಾ: ಹಸ್ ಅದರಿ ಹತ್ತಿದೆ. ಪ: ಅದ್ರಿ – ಅದರಿ

ಅದರ್ತ /*adarata*/ ನಾ. 1. ಅದುರುತ್ತಾ, 2. ನಡುಗುತ್ತಾ, 3. ಕಂಪಿಸುತ್ತ. 1. to quiver, 2. to shake, 3. to tremble. ವಾ: ಯಾಕೋ ಬಲ್‌ದಕಣ್ಣ್ ಅದರ್‌ತ ಉಟ್ಟು.

ಅದರ್ದು /*adaradu*/ ನಾ. 1. ಅದುರುವುದು, 2. ನಡುಗುವುದು, 3. ಕಂಪಿಸುವುದು. 1. to quiver, 2. to shake, 3. to tremble. ವಾ: ಹೆಣ್ಮಕ್ಕಳಿಗೆ ಎಡ್‌ದ ಕಣ್ಣ್ ಅದರ್‌ದು, ಗಂಡ್ ಮಕ್ಕಳಿಗೆ ಬಲ್‌ದ ಕಣ್ಣ್ ಅದರ್‌ದು ಒಳ್ಳ ಸಕುನತೇಳ್ವ ನಂಬಿಕೆ ಉಟ್ಟು.

ಅದಲ್‌ಬದಲ್[1] /*adalɨ badalɨ*/ ನಾ. 1. ಬದಲಿ ಹೋಗುವುದು, 2. ಅದಲುಬದಲಾಗುವುದು,3. ಪರಿವರ್ತನ, 4. ಬದಲಿಸುವಿಕೆ. 1. to change completely, 2. exchanged, 3. transformation, 4. to substitute. ವಾ: ಪುಸ್ತಕ ಅದಲ್ ಬದಲ್ ಆಗೋತ್.

ಅದಲ್‌ಬದ್‌ಲ್[2] /*adalɨ badlɨ*/ ನಾ. ಆಚೆ ಈಚೆ ಬದಲಿಸು. to replace. ವಾ: ನಿನ್ನ ಬದ್‌ಲಿಗೆ ಆಡಿಕೆ ಯಾರ್ ಬಂದವೆಗಡ?

ಅದ್ /*adɨ*/ ಸನಾ. ಅದು. that. ವಾ: ದೂರಲಿ ಕಾಂಬೊದು ಅದ್ ನಮ್ಮ ದನಗ ಅಲ. **ಅದೆ** /*ade*/ ಅದೇ ಕೆಲಸ. that work. ವಾ: ಅದೇ ನಾ ಗ್ಯಾನ ಮಾಡ್ದೆ ನೀವು ಇಂದ್ ಇತ್ತ ಕಡೆ ಬಾವರಿತ. **ಅದಲ್ಲ** /*adalla*/ ಅದು ಅಲ್ಲ. not that. ವಾ: ನಾ ಹೇಳ್‌ದ್ ಅದಲ್ಲ, ಅದ್ ಬೇಡ ನಂಗೆ. ಪ: ಅದಲ್ಲೆ – ಅದರಲ್ಲೆ; ಅದಲ್ಲದೆ – ಅದು ಅಲ್ಲದೆ. **ಅದಾಕಿಲ್ಲೆ** /*ada:killɛ*/ ಅದು ಆಗುವುದಿಲ್ಲ. that won't do/work. ವಾ: ನಿಂಗೆ ಅದಾಕಿಲ್ಲೆ ಬುಡು. **ಅದಾತ್ಲೆ** /*ada:tlɛ*/ 1. ಅದು ಆಗಿಲ್ಲ, 2. ಅದು ಆಗುವುದಿಲ್ಲ. 1. it didn't happen, 2. that won't happen. ವಾ: ನಾ ಹೇಳ್‌ದ ಕೆಲ್‌ಸ ಆತ? ಇಲ್ಲೆ ಅದಾತ್ಲೆ. ಪ: ಅದಾತ್ – ಅದು ಆಯಿತು; ಅದಾದ್ಲೆ – ಅದು ಆಗುವುದಿಲ್ಲ; ಅದಾದೆ – ಅದು ಆಗುತ್ತದೆ; ಅದಾದೆನ? – ಅದು ಆಗುತ್ತದಾ? **ಅದಿಕೆ** /*adikɛ*/ 1. ಅದಕ್ಕೆ, 2. ಅವನಿಗೆ, 3. ಅವಳಿಗೆ. 1. to it (something), 2. to him, 3. to her. ವಾ: ಅದಿಕೆ ಹೇಳ್‌ದು ಹಿರಿಯರ ಮಾತ್ ಕೇಳೊಕುತ. ಪ: ಅದ್ – ಅವಳು; ಅದು ಸ್ತ್ರೀಲಿಂಗ ಮತ್ತು ನಪುಂಸಕ ಲಿಂಗಕ್ಕೆ ಒಂದೇ ಸರ್ವನಾಮ. **ಅದಿನ್ನ್** /*adinnɨ*/ ಅದು ಇನ್ನು. it is still. ವಾ: ಬಿದ್ದೋದ ವಾಚಿ ಅದಿನ್ನ್ ಸಿಕ್ಕಿಕಿಲೆ ಹೋತ್ ಕಂಡದೆ. **ಅದಿಲ್ಲರೆ** /*adillarɛ*/ ಅದು ಇಲ್ಲದಿದ್ದರೆ. if it was not there. ವಾ: ಅದಿಲ್ಲರೆ ಆದುಲೆನಾ? **ಅದುನ್** /*adunɨ*/ ಅದನ್ನು. even that. ವಾ: ಅದುನ್ ನಾನೇ ಹೇಳೊಕ. **ಅದೆಂತಾದ್** /*adenta:dɨ*/ ಅದು ಏನಾಗಿದೆ? what happened to it? ವಾ: ಅವ್ವ ಅದೆಂತಾದ್ ನಿನ್ನ ಕಾಲಿಗೆ? ಪ: ಅದೆಂಉಗ್ಗಪ್ಪ್. **ಅದೆಲ್ಯುಟ್ಟು** /*adelyuṭṭu*/ ಅದೆಲ್ಲಿದೆ?

where is it? ವಾ: ಅಕಯ ನೀ ಬೆಲ್ಲ ಒಳಗೆ ಇಸೆಳೆತ ಹೇಳ್ದ ಅಲಾ ಅದೆಲಿಟ್ಟು (ಅದೆಲ್ಯುಟ್ಟು). **ಅದೆಲ್ಲ** /*adella*/ ಅದು ಎಲ್ಲ. everything. ವಾ: ಅದೆಲ್ಲ ನಂಗೆ ಗೊತ್ಲೆ. **ಅದೆಲ್ಲಿಗೆ** /*adellige*/ 1. ಅದು ಎಲ್ಲಿಗೆ, 2. ಅವನು ಎಲ್ಲಿಗೆ, 3. ಅವಳು ಎಲ್ಲಿಗೆ. 1. Where is it going? 2. Where is he going? 3. Where is she going? ವಾ: ಅದೆಲ್ಲಿಗೆ ಹಂಗೆ ಒಂದೇ ಹೋದು. **ಅದೇನ್** /*adɛ:nɨ*/ ಅದು ಏನು? What is it? ವಾ: ಅದೇನ್? ನಾಳೆ ಬನ್ನೆತ ಹೇಳಿ ಇಂದೇ ಬಂದೊಳ. **ಅದೊಂದ್** /*adɔndɨ*/ 1. ಅದು ಒಂದು, 2. ಅವಳೊಂದು. 1. that one, 2. that girl. ವಾ: ಅದೊಂದ್ ದೊಡ್ಡ ಕತೆ. **ಅದ್ ಇದ್** /*adɨ idɨ*/ ಅದು ಇದು. that or this (random). ವಾ: ರಾತ್ರೆ ನಿದ್ದೆಲಿ ಅದ್ ಇದ್‌ತ ಏನೇನೋ ತಡ್‌ವರಿಸುವೆ. **ಅದ್ ಬಾದ** /*adɨ ba:da*/ 1. ಅವಳು ಬರುವಳೆ?, 2. ಅದು ಬರುವುದಾ? 1. will she come?, 2. will it come. ವಾ: ಅದ್ ಬಾದೇ ಹೊತ್ತು ಕಂತಿದ ಮೇಲೆ.

ಅದಿಕ ಪ್ರಸಂಗ /*adika prasaŋga*/ ನಾ. 1. ಅಪ್ರಸ್ತುತ, 2. ಅನಗತ್ಯ ಅಸಂಬದ್ಧ, 3. ಅನುಚಿತ, 4. ಮಿತಿಮೀರಿದ ಮಾತು, 5. ಮಿತಿಮೀರಿದ ವರ್ತನೆ, 6. ಅಧಿಕ ಪ್ರಸಂಗಿ. 1. irrelevant, 2. abused, 3. improper, 4. loquacious, 5. an impertinent person. ವಾ: ಅದಿಕ ಪ್ರಸಂಗಿತನ ಮಾಡ್ಬಡ.

ಅದೋಗೆತಿ /*adɔ:geti*/ ನಾ. 1. ಕೆಳಮುಖವಾಗಿ ಹೋಗುವುದು, 2. ಅವನತಿ, 3. ದುರ್ಗತಿ, 4. ಅಧೋಗತಿ. 1. down fall, 2. decline, 3. decay. ವಾ: ಹಿಂಗೆ ಕರ್‌ಚಿ ಮಾಡಿರೆ ಮುಂದೆ ಅದೋಗೆತಿ.

ಅದ್ಕೆ /*adkɛ*/ ಸನಾ. ಅದಕ್ಕೆ. for that reason. ವಾ: ಅದೆಕ್ಕೆ (ಅದ್ಕೆ) ನಾ ಹೇಳ್ದ್ ಅಲ್ಲಿಗೆ ಹೋಗ್ಬಡತ. **ಅದ್ಕಾಗಿ** /*adka:gi*/ ಅದಕ್ಕಾಗಿ. for that. ವಾ: ಅದ್ಕಾಗಿ ನಾ ಇಂದ್ ಕೆಲ್ಸ ಬುಟ್ಟ್ ನಿತ್ತದ್. **ಅದ್‌ಕಿಂತ** /*adɨkinta*/ ಅದಕ್ಕಿಂತ. other than that. ವಾ: ಅದಕ್ಕಿಂತ ಬೇರೆ ಬೇಕಾ. **ಅದ್ಕುಇದ್ಕು** /*adku idku*/ ಅದಕ್ಕೂ ಇದಕ್ಕೂ. for this and that. ವಾ: ಅದ್ಕು ಇದ್ಕು ಏನ್ ಸಂಬಂದಗಡ (ಹೋಲ್ಸುದು ಯಾಕೆಗಡ). **ಅದ್ಕೆಂತ** /*adkɛnta*/ ಅದಕ್ಕೆಂದು. for that reason. ವಾ: ನೀ ಜಂಬರಕೆ ಹೋದುಲೆನಾ ಸೆರಿ ಅದ್ಕೆಂತ ನಾ ಹೋಗದಿರಿಕೆ ಆದೆನಾ. **ಅದ್‌ಕೆಲ್ಲ** /*adɨkɛlla*/ ಸನಾ. ಅದಕ್ಕೆಲ್ಲ. for all that. ವಾ: ಅದಕ್ಕೆಲ್ಲ ಸಿಟ್ಟ್ ಮಾಡಿರೆ ಆದೆನಾ. **ಅದ್‌ಕ್ಕೂ** /*adɨkku:*/ ಅದಕ್ಕೂ. for that too. ವಾ: ಅದಕ್ಕೂ ಇದಕ್ಕೂ ಏನ್ ಸಂಬಂದಗಡ. **ಅದ್‌ಕ್ಕೆ** /*adɨkkɛ*/ ಅದಕ್ಕೆ. for that reason. ವಾ: ಅದಕ್ಕೆ ಹೇಳ್ದ್ ಆ ಬರಿ ಹೋಬಡಾಂತ. ಪ: ಅದಕ್ಕೆಂತ – ಅದಕ್ಕೆಂದು; ಅದಕ್ಕೇನ್; ಅದಕ್ಕೇನು – ಅದಕ್ಕೇನು. **ಅದ್‌ಪೂರ** /*adɨpu:ra*/ 1. ಅದು ಪೂರ್ತಿ, 2. ಅದು ಪೂರ್ಣ. 1. entirely, 2. completely. ವಾ: ನಿನ್ನೆ ಜೋರು ಬಂದ ಮಳೆಗೆ ಬರೆ ಹಕ್ಕಲೆ ಇದ್ದ ಮಣ್ಣ್ ಅದ್ ಪೂರ ಕೊಚ್ಚಿ ಹೋತ್. **ಅದ್‌ಬೊತ್ತ್** /*adɨbɔtti*/ ಹಾಗೆ ಮಾಡಬಾರದು. one shouldn't do that way. ವಾ: ಅದ್ ಬೊತ್ತ್ ಹಂಗೆ ಮಾಡಿರೆ ಆಕಿಲೆ. **ಅದ್ರಾಚೆದ್** /*adra:cɛdɨ*/ ಅದರಾಚೆಗಿರುವುದು. beyond that. ವಾ: ಅದ್ರಾಚೆದ್ ಗದ್ದೆ ನಮ್ಮದ್. **ಅದ್ರ್ಂದ** /*adrɨnda*/ ಅದರಿಂದ. because of that. ವಾ: ಮೊನ್ನಿಗೆ ಬೇನೆ ಕೊಡೊ ನೆಂಪುಗ ಇದ್ದರೆ ಅದ್ರ್ಂದ ಹೊರೆಗೆ ಬರೊಕು.

ಅದ್‌ರ್ /*adɨrɨ*/ ಕ್ರಿ. 1. ಅದುರು, 2. ಅಲುಗಾಡು, 3. ಅಲ್ಲಾಡು, 4. ಕಂಪಿಸು. 1. to shake, 2. to vibrate, 3. to wobble, 4. tremor. **ಅದ್‌ರ್‌ದೆ ಉದ್ರೊಕು(ಗಾ).** ವಾ: ದನಗೆಲ್ಲ ಒಟ್ಟಿಗೆ ಓಡಿಕಂಡ್ ಬಾಕನ ನೆಲ ಅದ್. ಪ: ಅದ್‌ರ್‌ಸ್ – ಅಳುಗಾಡಿಸು, ಅದ್‌ರ್‌ತ್ – ನಡುಗಿತು

ಅದ್ರ್/ಅದ್ರು[1] /*adrɨ/adru*/ ನಾ. ಸೋಮಾರಿತನ. laziness. ವಾ: ಅವಂಗೆ ಈಗೀಗ ಅದುರ್ದುಲೆ.

ಅದ್ರ್/ಅದ್ರು[2] /*adrɨ/adru*/ ನಾ. ಎರಡು ಜಾಗಗಳ ಮಧ್ಯೆ ಇರುವ ಗಡಿ. border between two spaces/places. ವಾ: ಈ ಅದ್ರುಲಿ ಬಾರಿ ಕಾಡ್ ತುಂಬಿಟು.

ಅದ್ಲ್ ಬದ್ಲ್ /*adlɨ badlɨ*/ ನಾ. 1. ಅದಲು ಬದಲು, 2. ಪರಿವರ್ತನ, 3. ಬದಲಿಸುವಿಕೆ. 1. exchange, 2. transformation, 3. to exchange. ವಾ: ನಿನ್ನ ನನ್ನ ಪುಸ್ತಕ ಅದ್ಲ್ ಬದ್ಲ್ ಆಗುಟುನೆ ನೋಡಿಲ್ಲಿ.

ಅದ್ವಾನ /*adva:na*/ ನಾ. ಅವ್ಯವಸ್ಥೆ. unsystematic. ವಾ: ಎಲ್ಲ ಕೆಲ್ಸನು ಅದ್ವಾನ ಮಾಡಿ ಹೋತು.

ಅನಂತಾಡಿ /*ananta:ḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಅನಪರ್ದೇಸಿ /*anaparadɛ:si*/ ನಾ. ಹುಟ್ಟು ಪರದೇಶಿ.

1. a foreigner, 2. a homeless person. ವಾ: ಅನಪರ್ದೇಸಿನಂಗೆ ಆಡ್ಚಡ.

ಅನವು ಗುಂಡಿ /*anavu guṇḍi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಪೆರುವಾಜೆ ಗ್ರಾಮದ ಜಾಗ. a locality in Peruvaje village in Sullia Taluk of Dakshina Kannada District.

ಅನಾಹುತ /*ana:huta*/ ನಾ. 1. ತೊಂದರೆ, 2. ಅವಘಡ. 1. a trouble/a disaster, 2. accident. ವಾ: ಎಂತ ಅನಾಹುತ ಆಗೋತುತ.

ಅನಿಸ್ /*anisɨ*/ ನಾ. 1. ಭಾಸವಾಗು, 2. ತೋಚು, 3. ಭಾವಿಸು. 1. to feel, 2. to opine, 3. to think. ವಾ: ಮುಂದೊಂದು ದಿನ ಹಿಂಗೆ ಆದೆತ ನಂಗೆ ಮನ್ಸಿಗೆ ಅನಿಸ್ತಿತ್ತ್.

ಅನಿಷ್ಟ /*aniṣṭa*/ ನಾ. 1. ಇಷ್ಟವಲ್ಲದುದು, 2. ಬೇಕಿಲ್ಲದವನು, 3. ಕೆಡುಕು, 4. ಕೆಟ್ಟದ್ದನ್ನು ಅಥವಾ ದುರ್ದೆಸೆಯನ್ನು ತರುವವ. 1. undesired, 2. an unwanted, 3. an evil, 4. the one who causes troubles or distress. ವಾ: ಮನೆಗೆ ಇದೊಂದ್ ಅನಿಷ್ಟ.

ಅನಿಸ್ಯುಟ್ಟು /*anisyuṭṭu*/ ನಾ. 1. ಅನಿಸಿದೆ, 2. ಮನಸ್ಸಿಗೆ ತೋರಿದೆ. 1. felt, 2. thought of. ವಾ: ಇಂದ್ ಗದ್ದೆ ಕಡೆ ಹೋಕುತ ಅನಿಸ್ಯುಟ್ಟು.

ಅನುಸರ್ಸ್ /*anusarsɨ*/ ನಾ. 1. ಅನುಸರಿಸು, 2. ಹೊಂದಿಕೊಂಡು ಹೋಗು, 3. ವಿಧೇಯತೆ, 4. ಆಚರಿಸು, 5. ಅನ್ವಯವಾಗು. 1. to follow, 2. to adjust, 3. obedience, 4. to celebrate, 5. applicable. ವಾ: ಎಲ್ಲರ ಒಟ್ಟಿಗೆ ಅನ್‌ಸರ್‌ಸಿಕಂಡ್ ಹೋಗೊ ಗುಣ ಇರೊಕು.

ಅನೇಕರ್ /*ane:karɨ*/ ನಾ. 1. ತುಂಬ, 2. ಬಹಳ. 1. abundance, 2. several. ವಾ: ಅವರ ಬಗ್ಗೆ ಅನೇಕರ್ ಹೇಳ್‌ದು ಕೇಳಿಯೊಳೆ.

ಅನ್ಕಿಸ್ /*ankisɨ*/ ನಾ. 1. ಅಣಕ, 2. ಅಪಹಾಸ್ಯ, 3. ಅಣಕಿಸು, 4. ಹೀಯಾಳಿಸು, 5. ಚುಚ್ಚುಮಾತು, 6. ವಿನೋದ. 1. imitation, 2. mocking, 3. teasing, 4. vilification, 5. a sneering comment, 6. sense of joy. ವಾ: ಯಾರ್‌ನು ನಾವು ಅನ್ಕಿಸ್‌ಕಾಗದ್.

ಅನ್‌ಕೂಲ /*anɨku:la*/ ನಾ. 1. ಅನುಕೂಲ, 2. ಸಹಾಯಕ, 3. ಸಮರ್ಥಕ, 4. ಪ್ರಸನ್ನ. 1. advantageous, 2. helpful, 3. supportive, 4. pleasant. ವಾ: ಈಗ ನಮಿಗೆ ಮನೇಲಿ ಅನುಕೂಲ ಉಟ್ಟು.

ಅನ್ಕೆ /*ankɛ*/ ನಾ. 1. ಅಪ್ಪಣೆ, 2. ಆಜ್ಞೆ, 3. ಹದ್ದು ಬಸ್ತು. 1. permission, 2. order, 3. control. ವಾ: ಮಕ್ಕ ಅನ್ಕೆಲಿ ಇರೋಕು.

ಅನ್ನ /*anna*/ ನಾ. ಬೇಯಿಸಿದ ಅಕ್ಕಿ. boiled/cooked rice. **ಅಕ್ಕಿ ಇದ್ದಷ್ಟ್ ಅನ್ನ ಆದೆ(ಗಾ). ಸಾವುರ ಹಕ್ಕಿಗ ಒಮ್ಮೆಗೆ ನೀರ್‌ಗೆ ಇಳಿಯದು – ಅನ್ನಕ್ಕೆ ಅಕ್ಕಿ ಹಾಕುದು(ಒ).** ವಾ: ಅಯೋ ನಿನ್ನೊಟ್ಟಿಗೆ ಪಟ್ಟಂಗ ಹೊಡ್‌ಕಂಡ್ ಕುದ್ದೊಳೆ ಒಲೆ ಮೇಲಿದ್ದ ಅನ್ನ ಏನಾತೊ.

ಅನ್ನ ಬಾಗುದು /*anna bɔ:gudu*/ ಕ್ರಿ. ಅನ್ನದ ಗಂಜಿಯನ್ನು ಬಸಿಯುವುದು. straining the starch of rice/draining off the excess starch from rice. ವಾ: ಅನ್ನ ಬೆಂದ ಮೇಲೆ ಅಡಿಗೆರನ ಇಸಿ ಅದಿಕೆ ಅನ್ನ ಬಾಗುದು.

ಅನ್ನ ಬಾಗ್ /*anna ba:gɨ*/ ಕ್ರಿ. ಅನ್ನ ಬಸಿ. straining the starch of rice/draining off the excess starch from rice. ವಾ: ಬೇಗ ಅನ್ನ ಬಾಗ್ ಬೆಂದ್ ಮೆಡ್ಡೆ ಆಗೋತ್.

ಅನ್ನ ಬಾಯಿ ಮೊಗ್ಚು /*anna ba:yi mɔgcu*/ ನಾ. ಬಸಿದ ಅನ್ನದ ಮಡಕೆಯ ಬಾಯಿ ತೆರೆ. to open the lid of rice pot. ವಾ: ಸವಿ ಬಾನೆ ಇಲ್ಲಿ ಹುಗ್ಗೆನ ಬಾಯಿ ಮೊಗ್ಚು.

ಅನ್ನಕೊಟ್ಟದರ /*annakɔṭṭadara*/ ಕ್ರಿ. ಅನ್ನ ಕೊಟ್ಟಿರುವುದು. the one who fed. ವಾ: ಅನ್ನ ಕೊಟ್ಟದರ ಮರೆಯಕಾಗದ್.

ಅನ್ನಕೊಡ್ದು /*annakɔḍdu*/ ಕ್ರಿ. ಹೊಸಕ್ಕಿ ಅನ್ನವನ್ನು ಮಗುವಿಗೆ ಮೊದಲ ಬಾರಿ ತಿನ್ನಿಸುವುದು. a ritual of feeding the newly harvested cooked rice to the infant. ವಾ: ಕೂಸ್‌ಗೆ ಹೊಸ್ತ್‌ಲಿ ಅನ್ನಕೊಡ್ದು.

ಅನ್ನದ ಕೈ /*annada kɛi*/ ನಾ. ಅನ್ನ ಬಡಿಸುವ ಸೌಟು. a ladle/ a rice spoon. ವಾ: ಅನ್ನ ಇಕ್ಕಿಕೆ ಅನ್ನದ ಕೈ ತಕ.

ಅನ್ನದಂಡ /*annadaṇḍa*/ ನಾ. 1. ಪ್ರಯೋಜನಕ್ಕೆ ಬಾರದು, 2. ದಂಡಪಿಂಡ. 1. useless, 2. a useless person. **ಅನ್ನದಂಡ ಬೂಮಿಗೆ ಬಾರ(ನು).** ವಾ: ಅನ್ನಕೆ ದಂಡ ಬೂಮಿಗೆ ಬಾರತೇಳ್‌ವ ಮಾತುಟ್ಟು ಹಂಗೆ ನಿನ್ನ ಕತೆ.

ಅನ್ನದ್ ಸೆಡೆ /*annadɨ saḍɛ*/ ನಾ. ಅನ್ನ ಬಡಿಸಲು ಕರಟ/ಗೆರಟೆಯಿಂದ ಮಾಡಿದ ಸೌಟು. a ladle made out of coconut shell. ವಾ: ಅನ್ನ ಇಕ್ಕಿಕೆ ಅನ್ನದ್ ಸೆಡೆ ತಂಬಾ.

ಅನ್ನಾಸ್ /*anna:sɨ*/ ನಾ. ಅನಾನಸ್. a pineapple. ವಾ: ಈ ಅನ್ನಾಸ್ ಹುಳಿಂದಾಗಿ ತಿಂಬಕೆ ಬತ್ತ್.

ಅನ್ಪರ ಹಿಡ್ದಂವ /*anpara hiḍdanva*/ ಕ್ರಿವಿ. 1. ತಿನ್ನುವವ, 2. ಹೊಟ್ಟೆಬಾಕ, 3. ಅತಿಯಾಗಿ ತಿನ್ನುವವ. 1. the one who eats, 2. a cormorant, 3. a glutton. ವಾ: ಇಂವ ಬರಿ ಅನ್ಪರ ಹಿಡ್ದಂವ, ಎಸ್ಟ್ ಕೊಟ್ಟ್‌ರೂ ಸಾಲ್‌ಕಿಲೆ ಇಂವಂಗೆ.

ಅನ್ಪರಕಟ್ಟುದು /*anparakaṭṭudu*/ ನಾ. ಆಸೆಮಾಡುವುದು. to desire. ವಾ: ಅವರ ಹತ್ತ್‌ರ ಎಂತನೂ ಕೇಳ್‌ಬಡ ಅನ್ಪರಕಟ್ಟುವೆ.

ಅನ್ಬವಿಸಿಯೊಳೊ /*anbavisiyɔḷɔ*/ ನಾ. ಅನುಭವಿಸಿದ್ದಾರೆ. the have experienced/ suffered. ವಾ: ಮಳೆಗಾಲಲಿ ಬಾರಿ ಕಷ್ಟ ಅನುಬೊವಿಸಿಯೊಳೊಪ ನಾವು ಸಾಕಾವ್ಲು.

ಅನ್ಬೋಗ /*anbɔ:ga*/ ನಾ. ಅನುಭವ. experience. ವಾ: ಮೊನ್‌ಸನ ಬೊದ್‌ಕ್‌ಲಿ ಅನ್ಬೋಗಕ್ಕಿಂತ ದೊಡ್ಡ ಗುರು ಇಲ್ಲೆ.

ಅನ್ಮಾನ /*anma:na*/ ನಾ. ಅನುಮಾನ. a doubt. ವಾ: ಅಂವ ಕುಡ್‌ದುಟಾತ ನಂಗೆ ಅನ್ಮಾನ. ಪ: ಅಲ್ಮಾನ

ಅನ್‌ವು /*anɨvu*/ ಕ್ರಿ. 1. ಸೊಗಸು, 2. ರೀತಿ, 3. ಅವಕಾಶ, 4. ಕುಶಲ, 5. ಸ್ನೇಹ, 6. ಸಾಮರ್ಥ್ಯ. 1. beauty, 2. manner, 3. opportunity, 4. skill, 5. friendship, 6. capacity. ವಾ: ಶಾಂತಿಲಿ ಹೋರಾಟ ಮಾಡಿಕೆ ಅನ್‌ವು ಮಾಡಿಕೊಡೊಕುತ ಕೇಳಿಕಂಡವೆ.

ಅನ್ಸಿದೆ /*ansidɛ*/ ನಾ. ಅನಿಸುತ್ತದೆ. felt. ವಾ: ಇದೇ ಸೆರಿತ ಅನ್‌ಸಿದೆ.

ಅಪಸಕುನ /*apasakuna*/ ನಾ. 1. ಕೆಟ್ಟಶಕುನ, 2. ಅಶುಭ ಲಕ್ಷಣ, 3. ಅಪಶಕುನ. 1. a bad omen, 2. a portent, 3. an evil omen. ವಾ: ಎಲ್ಲಿಗಾದರ್ ಹೊರಡಕನ ಕೊತ್ತಿ ಅಡ್ಡ ಬಂದರೆ ಅಪಸಕುನತ ನಂಬುವೆ.

ಅಪೆ /*apɛ*/ ನಾ. 1. ಮೀನುಹಿಡಿಯುವ ಸಾಧನ, 2. ಏಪೆ/ಏಂಪೆ. an equipment used in fishing. ವಾ: ಅಪೆ ತಕಂಡ್ ಚೋಡಿಗೆ ಕೊಯ್ಲೆ ಮೀನ್ ಹಿಡೆಕೆ ಪೋಯ?

ಅಪ್ಣೆ /*apṇɛ*/ ನಾ. 1. ಅಪ್ಪಣೆ, 2. ಆಜ್ಞೆ, 3. ಅನುಮತಿ, 4. ನೆರವೇರಿಸಲು ವಿಧಿಸಿದ ಮಾತು. 1. permission, 2. order, 3. consent, 4. promise. ವಾ: ನೀವು ಅಪ್ಣೆ ಕೊಟ್ಟರೆ ನಾವು ಈಗ ಹೊರ್ಟವೆ.

ಅಪ್ಪ[1] /*appa*/ ನಾ. 1. ತಂದೆ, 2. ಪೊಪ್ಪ, 3. ಪಪ್ಪ. 1. father, 2. dad, 3. daddy. **ಅಪ್ಪ ಆಸ್ತಿ ಮಾಡ್ತ್ ಮಜ್ಜ ಸಾಲ ಮಾಡ್ತ್(ಗಾ). ಅಪ್ಪ ಹತ್ತ್‌ರ ಅವ್ವ ದೂರ – ತುಟಿ(ಒ).** ವಾ: ನಾಳೆ ಇಸ್ಕೂಲ್‌ಗೆ ಬಾಕನ ನಿನ್ನ ಅಪ್ಪನ ಕರ್‌ಕಂಡ್ ಬರೋಕು ಆತ? **ಅಪ್ಪಂತ** /*appanta*/ ಅಪ್ಪನಂತಹ. father like, fatherly. ವಾ: ನಿನ್ನ ಅಪ್ಪಂತ ಹೈದನ ನಾ ಹುಡ್‌ಕಿ ಮೊದುವೆ ಮಾಡ್‌ಸಿನೆ.

ಅಪ್ಪ[2] /*appa*/ ನಾ. ಅಕ್ಕಿಹಿಟ್ಟು ಬೆಲ್ಲ ತೆಂಗಿನ ಕಾಯಿ ಮುಂತಾದುವುಗಳಿಂದ ತಯಾರಿಸುವ ಒಂದು ಬಗೆಯ ತಿಂಡಿ. a sweet dish made of rice flour, jaggery and coconut. ವಾ: ನೆಂಟ್ರ್‌ಗೆ ಅಪ್ಪದಿಟ್ಟ್ ಮಾಡಿ ಸಮ್ಮಾನ ಮಾಡ್ದೊ.

ಅಪ್ಪದಿಟ್ಟ್ /*appadiṭṭɨ*/ ನಾ. ಏಳು ಗುಳಿಗಳಿರುವ ಕಾವಲಿಯಲ್ಲಿ ತಯಾರಿಸಿದ ದುಂಡಗಿನ ತಿನಿಸು. a dish made in a mould consisting of seven indentations in which idli/dosa batter is steam cooked. **ಅಪ್ಪದಿಟ್ಟ್‌ನು ಹಂದಿ ಗೈಪುನು(ನು).** ವಾ: ಮಗಕ ಮನೆಗೆ ಬಂದವೆ ಅಲಾ ಅದ್ಕೆ ಅಪ್ಪದ ಹಿಟ್ಟ್ ಮಾಡೊಕು. ಪ: ಅಪ್ಪೊದಡ್ಯೆ(ತು). **ಅಪ್ಪದ್ ಕಾವುಲಿ** /*appadɨ ka:vuli*/ ಗುಳಿಯಪ್ಪದ ಕಾವಲಿ. paddu tawa/paddu pan. ವಾ: ಅಪ್ಪದ್ ಕಾವಲಿ ಗುಂಡಿ ಗುಂಡಿಯಾಗಿ ನೋಡಿಕೆ ಬಾರಿ ಲಾಯ್ಕ ಉಟ್ಟಲಾ, ಅದರ್‌ಲೆ ಹಿಟ್ಟ್ ಹೊಯ್ಯದು. **ಅಪ್ಪುದಿಟ್ಟ್ ಕಾವಲಿ** /*appudiṭṭɨ ka:vali*/ ಬಳಪದ ಕಲ್ಲಿನಿಂದ ತಯಾರಿಸಿದ ಕಾವಲಿ. a soapstone tawa/pan. ವಾ: ಅಪ್ಪುದಿಟ್ಟ್ ಕಾವಲಿಲಿ ಉರುಂಟೆದ್ದದೆ.

ಅಪ್ಪಮ್ಮ /*appamma*/ ನಾ. ಅಪ್ಪ, ಅಮ್ಮ. father, mother. ವಾ: ಮಕ್ಕ ಆಗಿ ನಾವು ಅಪ್ಪಮ್ಮನ ಎಂದೂ ಮರೆಯಕಾಗದ್. ಪ: ಅಪ್ಪನ ಅಮ್ಮನ – ತಂದೆಯವರ, ತಾಯಿಯವರ. **ಅಪ್ಪವ್ವ** /*appavva*/ ಅಪ್ಪ, ಅಮ್ಮ. father, mother. ವಾ: ಅಪ್ಪವ್ವ ಜಂಬರಕೆ ಹೋಗೊಳೊ.

ಅಪ್ಪಯ್ಯ /*appaya*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. masculine given name. **ಅಪ್ಪಯ** /*appaya*/ 1. ಅಪ್ಪ, 2. ಅಪ್ಪಯ್ಯ ವ್ಯಕ್ತಿನಾಮ. 1. father, 2. a term referring father. ವಾ: ಅಪ್ಪಯ ಗದ್ದೆಗೆ ಹೋಗೊಳೊ.

ಅಪ್ಪಳ್ಸ್ /*appaḷsi*/ ಕ್ರಿ. 1. ಅಪ್ಪಳಿಸು, 2. ಡಿಕ್ಕಿಹೊಡೆ, 3. ಜೋರಾಗಿ ಬಂದು ತಾಗು. 1. smash, 2. hit, 3. crash. ವಾ: ಬಸ್ ಬಂದ್ ರಸ್ತೆಕರೆ ಬರೆಗೆ ಅಪ್ಪಳ್ಸಿತ್.

ಅಪ್ಪಿ¹ /*appi*/ ನಾ. ರೊಟ್ಟಿ (ಮಭಾ). a flat bread/roti (in the vocabulary of children). ವಾ: ಅವಯ್ಯ ನಂಗೆ ಅಪ್ಪಿ ಬೇಕು ಕೊಡು.

ಅಪ್ಪಿ² /*appi*/ ನಾ. 1. ಪದನಾಮ (ಪು), 2. ಚಿಕ್ಕ ಮಗುವನ್ನು ಸಂಬೋಧಿಸುವ ಅಕ್ಕರೆಯ ಹೆಸರು. a referring to a child with affection. ವಾ: ಅಪ್ಪಿ ಕೂಸು ಬಾನೆ ಎತ್ತಿಕಣೆ.

ಅಪ್ಪಿತೊಪ್ಪಿ /*appitɔppi*/ ಕ್ರಿವಿ. 1. ಅಕಸ್ಮಿಕ, 2. ತಿಳಿಯದೆ. 1. by chance/ unknowingly, 2. not intentional. ವಾ: ಅಪ್ಪಿ ತೊಪ್ಪಿ ಆ ಕಡೆ ಹೋದ್ ಗೊತ್ತಾರೆ ಅಸ್ಟೆ ಕತೆ.

ಅಪ್ಪುಚ್ಚಿ¹ /*appucci*/ ನಾ. ಪದನಾಮ(ಸ್ತ್ರೀ). Appuuchchi, feminine given name. ವಾ: ಅಪ್ಪುಚ್ಚಿ ಗೂಡೆ ಎಲ್ಲೋ ಹೊರ್ಟಂಗೆ ಉಟ್ಟು.

ಅಪ್ಪುಚ್ಚಿ² /*appucci*/ ನಾ. ರೊಟ್ಟಿ(ಮಭಾ). roti/ flatbread. ವಾ: ಅಪ್ಪುಚ್ಚಿ ತಿನ್ನ್ ಕೂಸು.

ಅಪ್ಪುಣಿ /*appuṇi*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. masculine given name.

ಅಪ್ರಿಮೂಕ್ /*aprimu:kɨ*/ ನಾ. ಚಪ್ಪಟೆ ಮೂಗು. a flat nose. ವಾ: ಮೂಕ್‌ನ ದಿನಾ ಹೊತಾರೆ ಎಳಿ ಇಲ್ಲರೆ ಅಪ್ರಿ ಮೂಕ್ ಆದೆ.

ಅಪ್ರೂಪ /*apru:pa*/ ನಾ. 1. ಅಪರೂಪ, 2. ರೂಪವಿಲ್ಲದ, 3. ಅಪೂರ್ವವಾದ. 1. a rarity, 2. not in any shape, 3. unique. ವಾ: ಬಾರಿ ಅಪ್ರೂಪ ಕಂಡದೆ ನೀವು ಈ ಕಡೆ ಬಾದು.

ಅಬಾರಿ /*aba:ri*/ ನಾ. 1. ಆಭಾರಿ, 2. ಉಪಕೃತ. 1. indebted to, 2. favoured. ವಾ: ನಿಮಿಗೆ ನಾ ಬಾರಿ ಅಬಾರಿಯಾಗೊಳೆ.

ಅಬಿಕ್ಕಾರ /*abikka:ra*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಅಬೀರ /*abi:ra*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಅಬ್ಬರ /*abbara*/ ನಾ. 1. ಎತ್ತರವಾದ, 2. ಭವ್ಯ, 3. ದೊಡ್ಡ ಗದ್ದಲ. 1. on higher surface, 2. grand, 3. uproar. **ಅರ್ದ ಕಲ್ತವನ ಅಬ್ಬರ ಜಾಸ್ತಿ(ಗಾ).** ವಾ: ಇಂದ್ ಮಳೆ ಅಬ್ಬರ ಕಮ್ಮಿ ಆದು ಕಂಡದೆ.

ಅಬ್ಬೆ /*abbɛ*/ ನಾ. 1. ಅಮ್ಮ, 2. ತಾಯಿ. 1. mother, 2. female parent. ವಾ: ಅಬ್ಬೆ ಬಾ ಇಲ್ಲಿ. **ಅಬ್ಬೆಕ** /*abbɛka*/ ಅಮ್ಮಂದಿರು. mothers. **ಅಬ್ಬೆಗ ಒಟ್ಟಿಗೆ ಸೇರಿರೆ ಆತ್ ಮತ್ತೆ ಊಟ ಇಲ್ಲೆ ಎಂತದೂ ಇಲ್ಲೆ(ನು).** ವಾ: ಅಬ್ಬೆಕ ಬೋಳು ಪಂಚಾತಿಗೆಗೆ ಕುದ್ದರೆ ಬೇಗ ಏಳಿಕಿಲೆ. ಪ: ಅಬ್ಬೆಗ. **ಅಬ್ಬೆಗ** /*abbɛga*/ ಅಮ್ಮಂದಿರು. mothers. ವಾ: ಅಬ್ಬೆಗ ಎಲ್ಲಿ ಹೋದೊ? **ಅಬ್ಬೇ** /*abbɔ:*/ ಅಮ್ಮಾ. mother. **ಹುಬ್ಬೇ ಮಳೆ ಅಬ್ಬೇ ಹಾಲ್(ಗಾ).** ವಾ: ಅಬ್ಬೇನ ಪ್ರೀತಿಗೆ ಸರಿಸಾಟಿ ಯಾವುದುಟ್ಟು?

ಅಬ್ಬೆಸ /*abbesa*/ ನಾ. ಅಭ್ಯಾಸ. habit. ವಾ: ಕೆಟ್ಟ ಅಬ್ಬೆಸಗಳ ಬುಡೊಕು. **ಅಬ್ಯಾಸ** /*abya:sa*/ 1. ಅಭ್ಯಾಸ, 2. ರೂಢಿ. 1. hobby, 2. habit. ವಾ: ಅಂವನ ಅಬ್ಯಾಸ ಬಲನೇ ಹಂಗೆ.

ಅಬ್ರೋನಿಮೀನ್ /*abro:nimi:nɨ*/ ನಾ. ಒಂದು ವಿಧದ ನದಿ ಮೀನು. ಇದನ್ನು ಗುಜ್ಜೆಮೀನೆಂದೂ ಕರೆಯುತ್ತಾರೆ. a variety of fresh water fish. ವಾ: ಅಬ್ರೋನಿ ಮೀನ್‌ನ ಗುಜ್ಜೆ ಮೀನ್‌ತ ಸ ಕರ್‌ದವೆ.

ಅಬ್ಳಿಕೆ /*abḷikɛ*/ ನಾ. ಒಂದು ವಿಧದ ಕಾಡು ಹಣ್ಣು, ಅಬ್ಳಿಂಕೆ. a variety of wild fruit. ವಾ: ಅಬ್ಳಿಕೆ ಹಣ್ಣ್ ಕಾಡ್‌ಲಿ ಸಿಕ್ಕುದು.

ಅಮನ /*amana*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. masculine given name.

ಅಮರ್ಸ್ /*amarsɨ*/ ಕ್ರಿ. 1. ಅಮಕು, 2. ಅದುಮಿ ಹಿಡಿ,

3. ಅಮಗು, 4. ಒತ್ತು, 5. ಹಿಚುಕು. 1. to press, 2. to put pressure, 3. hold something using pressure, 4. to press, 5. to squeeze. ವಾ: ಕೈನ ಅಮರ್ಸಿ ಹಿಡಿಬೇಡ, ಬಾರಿ ಬೇನೆ ಉಟ್ಟು. ಪ: ಅಮೂರ್ಸ; ಅಮುರುಸು. **ಅಮುರ್ಸ್** /*amursɨ*/ ಒತ್ತಿ ಹಿಡಿ. to hold something by applying pressure. ವಾ: ಕೈನ ಅಮುರ್ಸಿ ಹಿಡಿ.

ಅಮಲ್ /*amalɨ*/ ನಾ. 1. ತಲೆಗೇರುವುದು, 2. ಅಮಲು, 3. ಮದ, 4. ಮದ್ಯಪಾನದ. 1. to feel dizzy, 2. intoxication, 3. state of intoxication, 4. due to consumption of alcohol. ವಾ: ಸರಾಯಿ ಕುಡ್ದರೆ ಅಮಲಾದೆ.

ಅಮಸರ /*amasara*/ ನಾ. 1. ಅವಸರ, 2. ಆತುರ, 3. ಆತುರಪಡು, 4. ತ್ವರೆಗೊಳಿಸು. 1. urgency, 2. impulsive, 3. to be impulsive, 4. to quicken. ವಾ: ಇಷ್ಟೊಂದು ಅಮಸರ ಒಳ್ಳದಲ್ಲ.

ಅಮಾಸೆ /*ama:sɛ*/ ನಾ. ಅಮಾವಾಸ್ಯೆ. the new moon day. **ಅಕ್ಕ ಸತ್ರೆ ಅಮಾಸೆ ನಿತ್ತದ್ಯಾ(ಗಾ). ಅಮಾಸೆಗೆ ಹುಟ್ಟಿದಂವ(ನು).** ವಾ: ಅಮಾಸೆ ದಿನ ರಾತ್ರೆ ಎಲ್ಲೆಲ್ಲೂ ಕತ್ತಲೆ ಇದ್ದದೆ, ಅಂದ್ ಚಂದ್ರ ಕಾಂಬದುಲೆ.

ಅಮುಕು /*amuku*/ ನಾ. ಅದುಮು. to press/to put pressure. ವಾ: ಕಾಲ್‌ನ ಅಮುಕುನೆ, ನಡ್ಡ್ ಬೇನೆ ಆದೆ. ಪ: ಅಮ್ಮು, ಅಮ್ಮ್; ಅಮುಂಕು; ಅಮ್ಮುನೆ

ಅಮುಲು /*amulu*/ ನಾ. 1. ಅಮಲು, 2. ಮದ, 3. ಮದ್ಯಪಾನದ ಮತ್ತು. 1. intoxication, 2. inebriation. ವಾ: ಹೆಂಡ ಹಾಕಿ ಅಮುಲು ಹಿಡ್ದುಟು ಕಂಡದೆ ನಡೆಕೆ ಆದುಲೆ.

ಅಮೃತಬೊಳ್ಳಿ /*amṛtabɔḷḷi*/ ನಾ. 1. ಗುಡುಚಿ (ಸಂ), 2. ಅಮೃತಬಳ್ಳಿ (ಸಂ), 3. ಮಧುಪರ್ಣಿ (ಸಂ), 4. ಕಪಿಹಂಬು, 5. ಕಪಿ ಉಡುದಾರ, 6. ಕಹಿ ಹಾಗು ಒಗರು ರುಚಿಯುಳ್ಳದ್ದು. 1. Tinospora cordifolia, a vine commonly known as guduchi, giloy, Amruthaballi etc. 2. the extract from the plant is used in curing fever, diabetes, piles and during imbalance of Vata, Pitta and Kapha. ವಾ: ಜೆರ, ವಾತ, ಪಿತ್ತ, ಕಾರ್ದು ಸಕ್ಕರೆಕಾಯ್‌ಲೆ, ಮೂಲವ್ಯಾದಿ, ಕಪ, ಎಲ್ಲದಕ್ಕು ಅಮೃತ ಬೊಳ್ಳಿಂದ ಮೊದ್ದ್ ಮಾಡಕ್.

ಅಮೃತ[1] /*amṛta*/ ನಾ. ಸಾವಿಲ್ಲದ. immortal. ವಾ: ಅಮೃತ ಕುಡ್ದರೆ ಅಮರರಾದವೆತ ಪುರಾಣದ ಕತೆ ಹೇಳ್ದೆ.

ಅಮೃತ[2] /*amṛta*/ ನಾ. 1. ಸಾವಿಲ್ಲದುದು, 2. ಸುಧೆ, 3. ಮೋಕ್ಷ, 4. ಬಿಳಿಯ ಬಣ್ಣ. 1. immortal, 2. food consumed by god, ambrosia, 3. salvation, 4. white colour. ವಾ: ಹಿಂದೆ ದೇವ್ರಿಗೂ, ರಾಕ್ಷಸರಿಗೂ ಅಮೃತಕ್ಕಾಗಿ ಯುದ್ದ ನಡ್‌ದಿತ್ತ್ ಗಡ.

ಅಮೆ ಓಡು /*amɛ o:ḍu*/ ನಾ. ಬೇಯಿಸದ ಹಸಿ ಹಂಚು, ಭತ್ತ ಅಕ್ಕಿ ಇತ್ಯಾದಿ ತುಂಬಿಸಲು ಬಳಸುವ ಮಣ್ಣಿನ ಸಾಧನ. an earthen utensil used in carrying paddy, rice etc. ವಾ: ಬತ್ತನ ಗೋಂಚಿಕೆ ಒಂದೋ ಮೊರ ಇಲ್ಲರೆ ಆಮೆ ಓಡುನ ಉಪಯೋಗಿಸಿವೆ.

ಅಮೆ ಮರ /*amɛ mara*/ ನಾ. ಕಾಡಿನಲ್ಲಿ ನೀಲಿ ಬಣ್ಣದ ಹಣ್ಣು ಬಿಡುವ ಮರ. a wild/forest tree which gives blue coloured fruit. ವಾ: ಅಮೆ ಮರಲಿ ಬಾರಿ ಹಣ್ಣ್ ಹಿಡ್ದುಟು.

ಅಮೆ ಹಣ್ಣ್ /*amɛ haṇṇɨ*/ ನಾ. ಕಾಡು ಜಾತಿಯ ಹಣ್ಣು, ಕಾಡಿನಲ್ಲಿ ಸಿಗುವ ಒಂದು ರೀತಿಯ ಹಣ್ಣು. a wild fruit. ವಾ: ಅಮೆ ಹಣ್ಣ್‌ನ ಸಣ್ಣದರ್‌ಲಿ ಇರಕನ ತಿಂದ ನೆಂಪು. ಪ: ಅಮ್ಮೆ ಹಣ್ಣ್

ಅಮೆ[1] /*amɛ*/ ನಾ. ಒಂದು ಜಾತಿಯ ಬಿದಿರು. a variety of bamboo. ವಾ: ಅಮೆ ಬಿದ್‌ರ್‌ನ ನೋಡಿಯೊಳನ?

ಅಮೆ[2] /*amɛ*/ ನಾ. ಮಗು ಜನಿಸಿದ ಐದನೆ ದಿನದ ಶಾಸ್ತ್ರ ಕ್ರಮ. a ritual performed on the fifth day after child birth. ವಾ: ಕೂಸು ಹುಟ್ಟಿದ ಐದ್ ಇಲ್ಲರೆ ಏಳನೇ ದಿನ ಅಮೆತೇಳುವ ಸುದ್ದ ಕ್ರಿಯೆ ಇದ್ದದೆ. **ಅಮೆ ತೆಗ್ಯೊದು** /*amɛ tegyɔdu*/ 1. ಸೂತಕ ತೆಗೆಯುವುದು, 2. ಮಗು ಹುಟ್ಟಿದ ಐದನೆಯ ದಿನದಂದು ಮಾಡುವ ಶುದ್ಧಾಚರಣೆ ಕ್ರಮ. 1. a purificatory regime, 3. the process of purifying the house on the fifth day after the birth of a child. ವಾ: ಕೂಸು ಹುಟ್ಟಿದ ಐದ್ ಇಲ್ಲರೆ ಏಳನೇ ದಿನ ಮೊಡ್ಯೋಳ್ತಿ ಮನೆಗೆ ಬಂದ್ ಅಮೆ ತೆಗ್ಯೊದು. **ಅಮೆಕತ್ತಿ** /*amɛkatti*/ ಬಾಣಂತಿಯ

ಹಾಸಿಗೆಯಲ್ಲಿ ಒಂದು ಚಿಕ್ಕ ಕತ್ತಿಯನ್ನು ಇಟ್ಟುಕೊಳ್ಳುವುದು. a practice of a pregnant woman keeping a small knife under the bed. ವಾ: ಬಾಣ್ತಿನ ಹಾಸಿಗೆ ಅಡಿಲಿ ಅಮೆಕತ್ತಿನ ಇಸುವೆ. **ಅಮೆಕಾಲೆ** /*amɛka:lɛ*/ ಬಾಣಂತಿಗೆ ಐದನೇ ದಿನದಲ್ಲಿ ಗ್ರಾಮದ ಮಡಿ. purificatory process on the fifth day after a childbirth. ವಾ: ಕೂಸು ಹುಟ್ಟಿದ ಐದನೆ, ಏಳನೇ ದಿನಕ್ಕೆ ಮಡೊಳ್ತಿ ಬಂದ್ ಅಮೆಕಾಲೆ ತೆಗ್ದ್ ಸುದ್ದ ಮಾಡ್ತು.

ಅಮೆತೋಟ /*ameto:ṭa*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ತೊಡಿಕಾನ ಗ್ರಾಮದ ಜಾಗ. a locality in Todikana village in Sullia Taluk of Dakshina Kannada District.

ಅಮೆಮನೆ /*amamanɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಅಮೆಸುಯಿ /*amɛsuyi*/ ನಾ. 1. ಮೆದುವಾದ ಗರಿ, 2. ಹೊಸ ಗರಿ. 1. a tender leaf/feather, 2. a fresh leaf/feather.

ಅಮೈ /*amai*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮಂಡೆಕೋಲು ಗ್ರಾಮದ ಜಾಗ. 1. family, 2. lineage, 3. a locality in Mandekolu village in Sullia Taluk of Dakshina Kannada District.

ಅಮ್ಕ್ /*amkɨ*/ ಕ್ರಿ. ಅದುಮಿ. to press. ವಾ: ನಾಯಿದ್ (ನಾಯಿನ) ಕೆಮಿನ ಅಮ್ಕಿ ಹಿಡ್ಕಂಡೊಳನ? **ಅಮ್‌ಕು** /*amɨku*/ 1. ಕಚ್ಚು, 2. ಅದುಮಿ ಹಿಡಿ, 3. ಒತ್ತಿಹಿಡಿ. 1. to bite, 2. to hold tightly, 3. to hold something with force. ವಾ: ಹಿಂದೆಂದ ನಾಯಿಬಂದ್ ಕಾಲಿಗೆ ಅಮ್‌ಕಿತ್.

ಅಮ್ಚಾರು /*amca:ru*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಅಮ್ಚಿನಡ್ಕ /*amcinaḍka*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಅಮ್ತ್ ಕಂಡ್ /*amtɨ kaṇḍɨ*/ ನಾ. ಅವಿತುಕೊಂಡು. to hide. ವಾ: ದಾರಿಲಿ ಬಾಕನ ಎಂತೋ ಸವುದ ಆತ್ ಹೆದ್ರಿ ಇಸ್ಟೊತ್ತು ಅಮ್ತ್ ಕಂಡ್ ಇದ್ದೆ.

ಅಮ್‌ತ್‌ಕುದ್ರು /*amɨtɨkudru*/ ಕ್ರಿ. 1. ಅಡಗಿ / ಅವಿತು ಕುಳಿತುಕೊಳ್ಳು, 2. ಅಣಗಿಸು. 1. to hide 2. to put out of sight. ವಾ: ಹುಲಿ ಕಂಡ್ ದೈನ ಸೆರೆಲಿ ಅಮ್‌ತ್‌ಕುದ್ರುದು.

ಅಮ್ನೋರ್ /*amno:rɨ*/ ನಾ. 1. ಅಮ್ಮನವರು, 2. ಒಂದು ದೈವ ಶಕ್ತಿ. 1. mother goddess, 2. a deity. **ಅಮ್ನೋರ್ ಪಟ್ಟಕೆ ಬಾಕನ ಅಯ್ನೋರ್ ಚಟ್ಟಕೆ ಹೋದೊ(ಗಾ).** ವಾ: ಅಮ್ನೋರ್ ತಾಯಿಗೆ ಹರ್‌ಕೆ ಹೇಳಿಕಂಡದ್.

ಅಮ್ಮ /*amma*/ ನಾ. 1. ತಾಯಿ, 2. ಅಬ್ಬೆ. 1. mother, 2. female parent. ವಾ: ಅಮ್ಮಂಗೇಳಿದ್ ನಾ ಬನ್ನೆ.

ಅಮ್ಮಕಾಯ್ಲೆ /*ammuka:ylɛ*/ ನಾ. ಸಿಡುಬು. smallpox. ವಾ: ಈಗೀಗ ಅಮ್ಮ ಕಾಯ್ಲೆ ಸುಮಾರ್ ನಿಯಂತ್ರಣಕೆ ಬಂದುಟು.

ಅಮ್ಮಕ್ಕ /*ammakka*/ ನಾ. ವ್ಯಕ್ತಿ ಹೆಸರು, ಸ್ತ್ರೀ ವಾಚಕ. feminine given name.

ಅಮ್ಮಣಿ /*ammaṇi*/ ನಾ. ಪ್ರೀತಿಯಿಂದ ಕರೆವ ಅಡ್ಡ ಹೆಸರು. a nickname used as an affectionate term. ವಾ: ಅಮ್ಮಣಿ ಬಾ ಇಲ್ಲಿ.

ಅಮ್ಮತಾಯಿ /*ammata:yi*/ ನಾ. ವ್ಯಕ್ತಿ ಹೆಸರು, ಸ್ತ್ರೀ ವಾಚಕ. feminine given name.

ಅಮ್ಮಪ[1] /*ammapa*/ ನಾ. ಗೊತ್ತಿಲ್ಲ ಎಂದು ಹೇಳಲು ಬಳಸುವ ಪದ. a term which means “I don’t know”. ವಾ: ಎಂತಗಡ ಅಂವಂದ್? ಅಮ್ಮಪ ಯಾರಿಗೊತ್ತು. ಪ: ಉಮ್ಮಪ್ಪ.

ಅಮ್ಮಪ್ಪ[2] /*ammappa*/ ನಾ. ಸಾಕಾಯಿತು ಎಂದು ಸೂಚಿಸುವುದು. to indicate how tired he/she is. ವಾ: ಅಮ್ಮಪ್ಪ ಸಾಕಾಗಿ ಹೋತ್. ಪ: ಅಮ್ಮಪ್ಪಾಂತ – ಅವ್ವ ಕೆಲ್ಸ ಮಾಡಿ ಬಂದ್ ಅಮ್ಮಪ್ಪಾಂತ ಸುಸ್ತಾಗಿ ಕುದ್ದೊಳೊ

ಅಮ್ಮವ್ವನ /*ammavvana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಅಮ್ಮಾಜೀರ /*amma:ji:ra*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಅಮ್ಮಾಜೆ /*amma:je*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕೇನ್ಯ ಗ್ರಾಮದ ಜಾಗ. a locality in

Kenya village in Sullia Taluk of Dakshina Kannada District.

ಅಮ್ಮುಣಿ /*amuṇi*/ ನಾ. ವ್ಯಕ್ತಿ ಹೆಸರು, ಸ್ತ್ರೀ ವಾಚಕ. feminine given name.

ಅಮ್ಮುಳು /*ammuḷu*/ ನಾ. ಸಣ್ಣ ಮಗುವನ್ನು ಕರಿಯುವುದು(ಮಭಾ). a term to address a child. ವಾ: ಅಮ್ಮುಳು ಇತ್ತ ಬಾ.

ಅಮ್ಮೆಮನೆ /*ammɛmanɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಅಮ್ರಂತ /*amranta*/ ನಾ. ಅಮೃತ. ambrosia. ವಾ: ಹೆಂಡನ ಅಮ್ರತ ಕುಡ್ದಂಗೆ ಕುಡ್ದವೆಪ. ಪ: ಅಮ್ರುತೊ

ಅಮ್ಸರ /*amsara*/ ನಾ. 1. ಅವಸರ, 2. ಬೇಗ, 3. ಲಗುಬಗೆ. 1. urgency, 2. quickly, 3. in a hurry. ವಾ: ಇಸ್ಟ್ ಅಮ್ಸರಲಿ ಎತ್ತ ಹೊರ್‌ಟದ್?

ಅಯಿಲೆ ಮೀನ್ /*ayilɛ mi:nɨ*/ ನಾ. 1. ಬಂಗುಡೆ ಮೀನು, 2. ಬಂಗಡೆ ಮೀನು. Mackerel fish. ವಾ: ಅಯಿಲೆ ಮೀನ್ ಹೊರ್‌ದದ್ ಬಾರಿ ರುಚಿ. ಪ: ಐಲೆ ಮೀನ್; ಅಯ್ಲೆ ಮೀನ್

ಅಯೋ /*ayɔ:*/ ನಾ. ಅಯ್ಯೋ. ayyo! (an interjection). ವಾ: ಅಯೋ ನಂಗೆ ಬೊತ್ತ್.

ಅಯ್ತೋರ /*aytɔ:ra*/ ನಾ. 1. ಭಾನುವಾರ, 2. ಆದಿತ್ಯವಾರ. Sunday. ವಾ: ಅಯ್ತೋರ ಒಂದು ಜಂಬರಕೆ ಹೋಕುಟ್ಟು ಅಲಾ ನೀವ್ಗೆ ಮರ್ತ್ ಹೋತ.

ಅಯ್ದ್ /*aydɨ*/ ನಾ. ಐದು. five. ವಾ: ಚಾಮೆವ್ವ ನಂಗೆ ಅಯ್ದ್ ರುಪಯಿ (ರೂಪಾಯಿ) ಕೊಟ್ಟೊಳೊ.

ಅಯ್ನೂರ್ /*aynu:rɨ*/ ನಾ. 1. ಐನೂರು, 2. ಐದುನೂರು. five hundred. ವಾ: ಅಯೋ ಅಯ್ನೂರ್ ರುಪಯಿಗೆಲ್ಲ ಈಗ ಬೆಲೆನೆ ಇಲ್ಲೆ.

ಅಯ್ನೋರ್ /*ayno:rɨ*/ ನಾ. 1. ಅಯ್ಯನವರು, 2. ತಂದೆಯವರು, 3. ಉಪಾಧ್ಯಾಯರು. 1. an elderly male, 2. Father, 3. a teacher. ವಾ: ಅಯ್ನೋರ್ ಬಂದೊಳೊ.

ಅಯ್ಯ /*ayya*/ ನಾ. ಅಯ್ಯೋ. ayyo! (an interjection). ವಾ: ಅಯ್ಯಾ ಇದೆಂತ ಹಿಂಗೆ ಆಡ್‌ದು ಕೊರ್ಮನಂಗೆ.

ಅಯ್ಯಂಡ್ರ /*ayyaṇḍra*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಅಯ್ಯಣ್ಣ /*ayyaṇṇa*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. masculine given name.

ಅಯ್ಯನ ಬಂಡೆ /*ayyana baṇḍɛ*/ ಅ. ಸೋತು ಹೋಗಿ ಸುಸ್ತಾಗಿ ಕುಳಿತಾಗ ಹೇಳುವ ಉದ್ಗಾರ. an exclamation after defeat or losing. ವಾ: ಅಯ್ಯನ ಬಂಡೆ! ಎಸ್ಟ್‌ತ ನಡೆದು, ಇಲ್ಲೆಲ್ಲಾರ್ ಕುದ್ರೊನೊ.

ಅಯ್ಯನಕಟ್ಟೆ /*ayyanakaṭṭe*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕಳಂಜ ಗ್ರಾಮದ ಜಾಗ. a locality in Kalanja village in Sullia Taluk of Dakshina Kannada District.

ಅಯ್ಯಯ್ಯೋ /*ayyayyɔ:*/ ನಾ. 1. ಅಯ್ಯೋ ಅಯ್ಯೋ, 2. ಕಷ್ಟ ಬಂದಾಗ ಹೇಳುವ ಉದ್ಗಾರ. 1. interjection – Ayyo, 2. an interjection expressed during the time of some trouble. ವಾ: ಅಯ್ಯಯ್ಯೋ ಬೇಡಪ ನಂಗೆ ಹೊಡಿಬಡಿ.

ಅಯ್ಯೆ /*ayyɛ*/ ನಾ. 1. ಅಮ್ಮ, 2. ತಾಯಿ. mother. **ಅಯ್ಯೆ ಹೊಟ್ಟೆ ನೋಡ್ತ್ ಹೆಣ್ಣ್ ಜೋಬು ನೋಡ್ತ್(ಗಾ). ಅಯ್ಯೆ ಇಲ್ಲದ ಮಜ್ಜನಾಂಗೆ(ನು).** ವಾ: ಮನೆಲಿ ಅಯ್ಯೆಕ ಒಳ್ಳೆದಾದ್ರೆ ಮಕ್ಕ ಒಳ್ಳೆದಾದವೆ, ಮನೆನು ಒಳ್ಳೆದಾದೆ. ಪ: ಅಯ್ಯೆಕ – ತಾಯಂದಿರು

ಅಯ್ಯೆಪ್ಪ /*ayyɛppa*/ ನಾ. 1. ಅಯ್ಯಪ್ಪ. an interjection to indicate 'enough of something'. ವಾ: ನಮ್ಮ ಊರ್‌ಲಿರೊ ಅಯ್ಯಪ್ಪನ ಬನ ಇಲ್ಲೆಂಗೆ ಹಕ್ಕಲೆ ಒಳದ್.

ಅಯ್ಯೇಟಿರ /*ayyɛ:ṭira*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಅಯ್ಯೇತಿ /*ayyɛ:ti*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಅಯ್ಯೋಕ್ಕ /*ayyo:kka*/ ನಾ. ಅಕ್ಕ. sister. ವಾ: ಅಯ್ಯೋಕ್ಕ ನಾ ಎಂತರ ಹೇಳ್ಲಿ.

ಅಯ್ವೊತ್ತ್ /*ayvɔ:ttɨ*/ ನಾ. ಐವತ್ತು. fifty. ವಾ: ತೋಟಲಿ ಇಂದಿಗೆ ಅಯ್ವೊತ್ತ್ ಕೆಲ್ಸ ಆತ್.

ಅಯ್ವೋಜಿ /*ayvɔ:ji*/ ನಾ. ಐವಜು, ಉತ್ಪನ್ನ. usually, the sum of agricultural produce.

ಅರ /*ara*/ ನಾ. 1. ಹರಿತಗೊಳಿಸುವ ಕಬ್ಬಿಣದ ಸಾಧನ, 2. ಅರೆ, 3. ಬರಗಾಲ, 4. ಕಬ್ಬಿಣ ಅಥವಾ ಕಟ್ಟಿಗೆಯ ವಸ್ತುವನ್ನು ಕುಗ್ಗಿಸುವ ಅಥವಾ ಮಿದುಗೊಳಿಸುವ ಕಬ್ಬಿಣದ ಹುರುಕ ಬುರುಕ ಉಪಕರಣ. 1. a file, a steel tool used in sharpeningany metal, 2. half, 3. drought, 4. a file (a metal tool with rough surface, used to smoothen and shape any iron or wooden object). ವಾ: ಅರ ತಕಂಡ್ ಕತ್ತಿಗೆ ಉಜ್ಜಿ ಹರ್‌ತ ಮಾಡ್.

ಅರಂಚೋಡಿ /*araɲco:ḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಅರಂತಹಿತ್ತಿಲು /*aranthittilu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಅರಂತೋಡು /*aranto:ḍu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅರಂತೋಡು ಗ್ರಾಮದ ಜಾಗ. a locality in Arantodu village in Sullia Taluk of Dakshina Kannada District.

ಅರಂಪಾಡಿ /*arampa:ḍi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಏನೆಕಲ್ಲು ಗ್ರಾಮದ ಜಾಗ. a locality in Enekallu village in Sullia Taluk of Dakshina Kannada District.

ಅರಂಬೂರು /*arambu:ru*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಆಲೆಟ್ಟಿ ಗ್ರಾಮದ ಜಾಗ. 1. family, 2. lineage, 3. a locality in Aletti village in Sullia Taluk of Dakshina Kannada District.

ಅರಕ್ಕಳ /*arakkaḷa*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಅರಗಣೆ ಬೆರಗಣೆ /*aragaṇɛ beragaṇɛ*/ ನಾ. ರಸವಾಗಿ ರಾಗ ಎಳೆದು ಮಾತನಾಡುವವರಿಗೆ ಹೇಳುವುದು. a singsong tone in speaking. ವಾ: ನಿನ್ನ ಅರಗಣೆ ಬೆರಗಣೆ ಮಾತಿಗೆಲ್ಲ ನಾ ಮೊರ್‌ಲಾದುಲೆ. ಪ: ಬೆರಂಜಣೆ(ತು)

ಅರಟ್ /*araṭi*/ ಕ್ರಿ. 1. ಹುಡುಕು, 2. ಅಲೆಯುತ್ತಾ ಹುಡುಕು. 1. search, 2. to wander in search of something. ವಾ: ಕೊತ್ತಿ ಅಟ್ಟಲಿ ಇಡಿ ಅರ್‌ಂಟಿದೆ. ಪ: ಅರಂಟ್(ತು) – ಹುಡುಕು

ಅರಣ್ಯ /*araṇya*/ ನಾ. ಎಪ. ಕಾಡು. 1. a forest. ವಾ: ಅರಣ್ಯ ಇಲಾಕೆವು ಬಂದ್ ಪೂರ ಜಪ್ತಿ ಮಾಡ್ಗೊ.

ಅರಮನೆ ಪಾರೆ /*aramane pa:re*/ ನಾ. ಕೊಡಗು ಜಿಲ್ಲೆಯ ಪೆರಾಜೆ ಗ್ರಾಮದ ಜಾಗ. a locality in peraje village in of Kodagu District.

ಅರಮನೆಗಾಯ /*aramanega:ya*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅರಂತೋಡು ಗ್ರಾಮದ ಜಾಗ. a locality in Arantodu village in Sullia Taluk of Dakshina Kannada District.

ಅರಸಣ ಬಣ್ಣ /*arasaṇa baṇṇa*/ ನಾ. ಅರಶಿನ ಬಣ್ಣ. yellow colour. ವಾ: ಅರಸಣ ಬಣ್ಣದ ಸುರಾಲ್ ಹಾಕಿಟು ಅಲ ಅವನೆ ನನ್ನ ದೋಸ್ತಿ.

ಅರಸಿಕಂಡ್ /*arasikaṇḍi*/ ನಾ. ಹುಡುಕಿಕೊಂಡು. searching. ವಾ: ಹಿಂದೆ ರಾಜರ್ ಕಾಡ್ ಪ್ರಾಣಿಗಳ ಅರಸಿಕಂಡ್ ಬೇಟೆಗೆ ಹೋಗ್‌ತಿದ್ದೊ.

ಅರಸಿನ ಮಂಡಿ ಕಾಯಿಲೆ /*arasina maṇḍi ka:yile*/ ನಾ. 1. ಕಾಮಾಲೆ, 2. ಮೈಯೆಲ್ಲ ಹಳದಿ ಬಣ್ಣಕ್ಕೆ ತಿರುಗಿ ಊದಿಕೊಳ್ಳುವ ಒಂದು ರೋಗ, 3. ಅರಸಿನ ಮುಂಡಿಗೆ. 1. Jaundice, 2. a health condition in which the skin becomes yellow, 3. icterus. ವಾ: ಅರಸಿನ ಮಂಡಿ ಕಾಯಿಲೆಗೆ ಕಬ್ಬ್‌ದ್ ಹಾಲ್ ಕುಡ್ಸೊಕು ಒಳ್ಳದ್.

ಅರಳಡ್ಕ /*araḷaḍka*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಅರಳಿ /*araḷi*/ ನಾ. 1. ಅಶ್ವತ್ಥ ವೃಕ್ಷ, 2. ಅರಣೆ, 3. ಬಿರಿದು. 1. Peepal tree, 2. a reptile, 3. to split open. ವಾ: ಅರಳಿ ಮರಕೆ ಪೂಜೆ ಮಾಡಿವೆ. ಪ: ಅರಳಿಕೊಂಡ್/ ಅರಳಿಕಂಡ್ – ಅರಳಿಕೊಂಡು; ಅರಳಿದ್ – ಅರಳಿದ

ಅರಳು /*araḷu*/ ನಾ. ಭತ್ತವನ್ನು ಹುರಿದಾಗ ಆಗುವ ಹುದುರಿ. popped paddy. ವಾ: ಬತ್ತನ ಹೊರೆಕನ ಅರಳು ಆದೆ.

ಅರಿಮಣಿ /*arimaṇi*/ ನಾ. ಚಿನ್ನದ ಗುಂಡು. a small golden bead (spherical), often threaded with

other precious stones. ವಾ: ಚಿನ್ನದ ಎಳೆಗಳ ನೊಡುಲಿ ಅರಿ ಮಣಿ ಸೇರ್‌ಸೊಕು.

ಅರಿ[1] /*ari*/ ನಾ. 1. ಎರಡು ಕೈಗಳಲ್ಲಿ ಹಿಡಿಯುವುದು, 2. ಅರಿಸೊಪ್ಪು, 3. ನಾಲ್ಕು ಅರಿ: ಒಂದು ಹೊರೆ. something that one holds using both the hands.

ಅರಿ[2] /*ari*/ ಕ್ರಿ. 1. ನುಣ್ಣಗೆ ಮಾಡು, 2. ಪುಡಿಮಾಡಲ್ಪಡು, 3. ಅರೆಯು. 1. to smoothen, 2. to grind (dry), 3. to pulverize. **ಅರಿಯಕೆ ಎಲ್ಲವು, ಕುಡಿಯಕ್ಕೆ ಒಬ್ಬೆನೆ(ಗಾ).** ವಾ: ಅಯೋ ನಂಗೆ ಮರ್‌ತ್ ಹೋತು. **ಅರಿಯಕಲ್ಲ್** /*ariyakəlli*/ 1. ಕಡೆಯುವ ಕಲ್ಲು, 2. ಅರೆಯುವ ಕಲ್ಲು. 1. a stone wet grinder, 2. a stone mortar. ವಾ: ಮಸಾಲೆನ ಅರಿಯಕಲ್ಲ್‌ಲೇ ಅರಿಯದು. **ಅರಿಯದು** /*ariyɔdu*/ ಅರೆಯುವುದು. to grind. ವಾ: ಚಿಕವ ಎಂತ ಮಾಡ್ತೊಳ? ಕಾಂಬದುಲೆನ ಮೊದ್ದ್ ಅರಿಯದು.

ಅರಿಕಟ್ಟೆ ಸೊಪ್ಪು ಕಸಾಯ /*arikaṭṭɛ sɔppu kaṣa:ya*/ ನಾ. ಬಾಣಂತಿಗೆ ಕೊಡುವ ಒಂದು ಬಗೆಯ ಔಷಧ. a medicine given to a new mother/a puerperal woman. ವಾ: ಅರಿಕಟ್ಟೆ ಸೊಪ್ಪುಲಿ ಕಸಾಯ ಮಾಡಿ ಬಾಣ್ತಿಗೆ ಕುಡೆಕೆ ಕೊಟ್ಟವೆ.

ಅರಿಕಲ್ಲು /*arikallu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಅರಿಗುಡಿ /*ariguḍi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಸುಬ್ರಹ್ಮಣ್ಯ ಗ್ರಾಮದ ಜಾಗ. a locality in Subramanya village in Sullia Taluk of Dakshina Kannada District.

ಅರಿದು[1] /*aridu*/ ಕ್ರಿ. ಅರೆಯುವುದು. grinding. wet pulverising. ವಾ: ಮೊದ್ದ್ ಬೇರ್ ಅರಿದು.

ಅರಿದು[2] /*aridu*/ ಕ್ರಿ. 1. ಸುರಿಯುವುದು, 2. ಸ್ರವಿಸು. 1. to pur 2. to ooze. ವಾ: ಬೆವರು ಅರಿದು.

ಅರಿಯಡ್ಕ /*ariyaḍka*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಅರಿವ /*ariva*/ ನಾ. ಹರಿಯುವ. flowing. ವಾ: ಇಲ್ಲೆ ಆಚೆ ನೀರ್ ಅರಿವ ಚೋಡಿ ಉಟ್ಟು.

ಅರಿವಾಣ /*ariva:ṇa*/ ನಾ. 1. ವೀಳ್ಯದೆಲೆ ಇಡುವ ಸಾಂಪ್ರದಾಯಕ ಚಿಕ್ಕ ಹಿತ್ತಾಳೆ ತಟ್ಟೆ. a small brass platter to keep betel life. ವಾ: ಮೊದುವೆಲಿ ಅರಿವಾಣಲಿ ಕಳ್‌ಸ ಇಸುದು. ಪ: ಹರಿವಾಣ

ಅರಿವೆ /*arivɛ*/ ನಾ. 1. ಬಟ್ಟೆ, 2. ಅರಿವೆ. clothes. **ಅಜ್ಜಿಗೆ ಅರಿವೆ ಚಿಂತೆ ಮೊಮ್ಮಗೀಗೆ ಗಂಡ್ನ ಚಿಂತೆ(ಗಾ).** ವಾ: ಬೇಲಿ ದಾಟಿಕನ ಅರಿವೆ ಹರ್‌ತ್.

ಅರಿವೆಸೊಪ್ಪ್ /*arivɛsɔppi*/ ನಾ. 1. ಒಂದು ಬಗೆಯ ತರಕಾರಿ ಸೊಪ್ಪು, 2. ಕೀರೆ ಸೊಪ್ಪು. 1. a variety of leaf vegetable, 2. Amaranthus. ವಾ: ಅರಿವೆ ಸೊಪ್ಪ್ ಕಿತ್ತ್ ತಂದೊಳೆ ಪಲ್ಯ ಮಾಡಿಕೆ.

ಅರುಣಗುಂಜ /*aruṇaguɲja*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಅರುವ /*aruva*/ ನಾ. ಕುಟುಂಬದ ಸ್ನೇಹಿತ, ವಿವಾಹ, ಶವಸಂಸ್ಕಾರದಲ್ಲಿ ಮುಖ್ಯ ಪಾತ್ರ ವಹಿಸುವವನು. a lead mourner. ವಾ: ಅರುವ ಬಾತ್.

ಅರೆ /*arɛ*/ ಅ. 1. ಎಲಾ!, 2. ಆಶ್ಚರ್ಯದಿಂದ ಹೇಳುವ ಉದ್ಗಾರ. an exclamation. oh!. ವಾ: ಅರೆ! ಇಲ್ಲೆ ಒಳೊರಿನ? ನಾ ಕಂಡತೇಲೆ.

ಅರೆ ಚಜ್ಞೊಲೆ /*arɛ caŋŋɔ:lɛ*/ ನಾ. ಕೊಡಗರು ಸಾಂಪ್ರದಾಯಿಕ ಉಡುಪು ಧರಿಸಿದಾಗ ಪೀಚೆಕತ್ತಿಯೊಂದಿಗೆ ಸೊಂಟದಲ್ಲಿ ಧರಿಸುವ ಬೆಳ್ಳಿಯ ಸರಪಳಿ. a richly designed silver chain or girdle to hold the traditional dagger of kodava people. ವಾ: ಕೊಡ್‌ಗರ್ ಅರೆ ಚಜ್ಞೊಲೆನ ಸೊಂಟಕೆ ಸೆಕ್ಕಿಸಿಕಂಡವೆ.

ಅರೆಚೆಟ್ಟ್ /*arɛ ceṭṭi*/ ನಾ. ಪೂರ್ಣ ಕಾಳು ಕಟ್ಟದಿರುವ. unripe. ವಾ: ಈ ಎಂತನೆ ನೀ ಅರೆಚೆಟ್ಟ್ ಕೊಯ್ಕ ಬಂದ ಅಸ್ಟ್ ಗೊತ್ತಾಲೆ ನಿಂಗೆ.

ಅರೆ[1] /*arɛ*/ ನಾವಿ. ಅರ್ಧ. half. **ಅಣ್ಣನ ಪೆಟ್ಟ್ ಅರೆ, ನನ್ನ ಪೆಟ್ಟ್ ನಿಜಂತೇಳ್ತ್(ಗಾ).** ವಾ: ತರ್‌ಕಾರಿ ಅರೆಬರೆ ಬೆಂದದ್.

ಅರೆ[2] /*arɛ*/ ನಾ. 1. ಗಟ್ಟಿ, 2. ಬಂಡೆ, 3. ತೇಯುವುದು. 1. hard, 2. rock, 3. to rub. ವಾ: ಸಾಣೆಕಲ್ಲ್‌ಲಿ ಗಂದನ ಅರೆ. **ಅರೆವ ಕಲ್ಲ್** /*arɛva kalli*/ ಮಸಾಲೆ ಅರೆಯುವ ಕಲ್ಲು. a grindstone. ವಾ: ಗೈಪುಗೆ ಅರೆವ ಕಲ್ಲ್‌ಲಿ ಅರೆಯಕು ಬಾರಿ ರುಚಿ ಇದ್ದದೆ.

ಅರೆಗಾಲ /*Arɛga:la*/ ಕ್ರಿ. ಬೇಸಿಗೆಕಾಲ. the summer.

ಆಟಿಂದತ್ತ ಅರೆಗಾಲ ಮಾಯಿಂದತ್ತ ಮಳೆಗಾಲ(ಗಾ). ವಾ: ಈ ಕೆರೆ ಅರೆಗಾಲ ಬಾತ್‌ತೇಳ್ರೆ ಒಣ್ಗಿ ಹೋದೆ.

ಅರೆಜ್ಞ[1] /*arɛŋŋa*/ ನಾ. ಮಲೆನಾಡಿನ ಹೊಳೆ, ತೋಡುಗಳಲ್ಲಿ ಕಂಡುಬರುವ ಉದ್ದ ಜಾತಿಯ ಮೀನು. a long fish of about one to two feet long found in the freshwater. **ಕಲ್ಲಡಿಲಿ ಇದ್ದ ಅರೆಂಜನಂಗೆ(ಗಾ).** ವಾ: ಚೋಡಿಲಿ ಅರೆಂಜ ಇದ್ದದೆ. ಪ: ನೊಳು(ತು)

ಅರೆಜ್ಞ[2] /*arɛŋŋa*/ ನಾ. ಜವಾಬ್ದಾರಿಯಿಂದ ಜಾರಿಕೊಳ್ಳುವವನನ್ನು ಹೇಳುವ ಪದ. a person who evades responsibility.

ಅರೆಚಂದ್ರ /*arɛcəndra*/ ನಾ. ಅರ್ಧ ಚಂದ್ರ. half moon. ವಾ: ಇಂದ್ ಬಾನಲಿ ಅರೆಚಂದ್ರ ಕಂಡದೆ.

ಅರೆಜೀವ /*arɛji:va*/ ನಾ. ಅರ್ಧಜೀವ. a condition of half dead. ವಾ: ಹಾವ್‌ಗೆ ಬೊಡ್ಡದರ್ಲಿ ಅದ್ ಅರೆಜೀವ ಆತ್.

ಅರೆಜ್ಞಾನ /*arɛjna:na*/ ನಾ. ಪೂರ್ಣ ಜ್ಞಾನ ಇಲ್ಲದಿರುವುದು. incomplete knowledge. **ಅರೆಜ್ಞಾನ ಅಜ್ಞಾನಕ್ಕಿಂತ ಕೀಳ್(ಗಾ).** ವಾ: ಅರೆಜ್ಞಾನಂದ ಅಪಾಯ ಹೆಚ್ಚಿ.

ಅರೆಪಿರಾಂದ್ /*arɛpira:ndɨ*/ ನಾ. ಅರೆ ಹುಚ್ಚು. ಬೈಗುಳ ಪದ. half mad. ವಾ: ಇಂವ ಎಂತ ಒಳ್ಳ ಅರೆಪಿರಾಂದ್‌ನಂಗೆ ಆಡ್ದೆ.

ಅರೆಪು /*arɛpu*/ ನಾ. 1. ಹುಳಿಮೆಣಸು ಸಂಬಾರ, 2. ಪದಾರ್ಥಕ್ಕೆ ಬಳಸುವ ಕಡೆದ ಮಸಾಲೆ. 1. spices consisting of both sour and pepper, 2. ground spices for curry. ವಾ: ಗೈಪುಗೆ ಅರೆಪು ಕಡ್‌ದ್ ಕೂಡ್‌ಸೊಕು.

ಅರೆಬರೆ /*arɛbarɛ*/ ನಾ. ಅಸ್ಪಷ್ಟ, ಅರ್ಧಂಬರ್ಧ. unclear, obscure. ವಾ: ಅರೆಬರೆ ಕಲ್‌ತೆ ಇಸ್ಟ್ ಮೆರ್‌ದದೆ ಇನ್ನ್ ಎಲ್ಲ ಕಲ್‌ತಿದ್ದರೆ ದೇವರೇ ಗೆತಿ.

ಅರೆಬಾಸೆ /*arɛba:sɛ*/ ನಾ. ದಕ್ಷಿಣ ಕನ್ನಡ, ಕೊಡಗು ಮತ್ತು ಕಾಸರಗೋಡು ಜಿಲ್ಲೆಯ ಗೌಡರು ಮಾತಾನಾಡುವ ಭಾಷೆ. a dialect spoken by gowda people of Dakshina Kannada, Kodagu, and Kasaragod District. ವಾ: ಅರೆಬಾಸೆ ಗೌಡರ್ ಮಾತಾಡ್‌ವ ಬಾರೀ ಪೊರ್ಲ್‌ನ ಬಾಸೆ.

ಅರ್‌ಂಬು /*Armbu*/ ನಾ. 1. ಪರದಾಡು, 2. ಒದ್ದಾಡು, 3. ಚಡಪಡಿಸು. 1. being restless, 2. to suffer, 3. being anxious. ವಾ: ಅವ್ವ ಹೊತಾರೆಂದ ಯಾಕಿಂಗೆ ಅರ್‌ಂಬು.

ಅರ್‌ಂಬುಳಿ /*armbuḷi*/ ನಾ. ಹೋರಿಯನ್ನು ಹಸುವಿಗೆ ಜೋಡಿಗಾಗಿ ಬಿಡುವುದು. to let a bull mate with a cow. **ಅಂವ ದೊಡ್ಡ ಅರ್‌ಂಬ್‌ಲಿ ಕೊಡ್ಯ.** ವಾ: ಇಡೀ ಊರಿಗೆ ಅರ್‌ಂಬುಲಿ ಹತ್ತಿಕೆ ಒಂದೇ ಹೋರಿ ಒಳದ್.

ಅರ್‌ಂಬೆಲ /*armbɛla*/ ನಾ. ಅರ್ಧಂಬರ್ಧ ಕೆಲಸ ಮಾಡುವ ವ್ಯಕ್ತಿ. a person who leaves something unfinished.

ಅರ್‌ಂಬೆಲ್ /*arɨmbelɨ*/ ನಾ. 1. ಗೊಂಚಲಿನಲ್ಲಿ ಪೂರ್ತಿ ಇಲ್ಲದಿರುವುದು, 2. ಮೇಲಿಂದ ಮೇಲೆ, 3. ಅರೆಬರೆ. 1. a loose bunch, 2. repeatedly, 3. incomplete. ವಾ: ಈ ಮಳೆಗೆ ದೈಲಿ ಅರ್‌ಂಬೆಲ್ ಕಾಪಿನೆ ಇರ್‌ದು.

ಅರ್ಕ /*arka*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಅರ್ಕಚಿ /*arkaci*/ ನಾ. 1. ಅಕ್ಕಚ್ಚು, 2. ಗಂಜಿ ನೀರು (ಗಂಜಿ). 1. water in which rice was soaked and washed, 2. rice-gruel. ವಾ: ಅರ್ಕಚಿನ ಮೊಡ್ಡಿ ಪಾತ್ರಗೆ ಹೊಯ್‌ದಿಸಿ. ಪ: ಅರ್ಕಂಜಿ

ಅರ್ಕಟ್[1] /*arkaṭɨ*/ ನಾ. 1. ಗಂಟುಕಟ್ಟು, 2. ತುಂಡಾದ ಬಳ್ಳಿಗಳನ್ನು ಜೊತೆಯಾಗಿ ಕಟ್ಟುವುದು. 1. to tie a knot, 2. to bind the creeper with something. ವಾ: ಅರ್ಕಟ್ ಬೊಳ್ಳಿನ ತಂದ್ ತುಂಡ್ ಮಾಡಿ ವಣ್‌ಗಿಸಿ ಇಸೊಕು, ಬತ್ತದ ಹೊರೆ ಕಟ್ಟಿಕೆ ಲಾಯ್ಕಾದೆ.

ಅರ್ಕಟ್[2] /*arakacɨ*/ ನಾ. ಗದ್ದೆಯಿಂದ ಕತ್ತರಿಸಿದ ಬೆಳೆಯನ್ನು ಹೊತ್ತು ತರಲು ಕಟ್ಟುವುದು. bundle of paddy. ವಾ: ಗದ್ದೆಂದ ಬೆಳೆನ ಹೊರಿಕೆ ಅರ್ಕಟ್ ಕಟ್ಟಿ ಆಕು ಮತ್ತೆ ಹೊರ್‌ದು. **ಅರ್ಕಟ್ ಬೊಳ್ಳಿ** /*arkaṭɨ bɔḷḷi*/ ಭತ್ತದ ಬೆಳೆ ಹೊರೆಯನ್ನು ಕಟ್ಟಲು ಬಳಸುವ ಕಾಡಿನಲ್ಲಿ ದೊರೆಯುವ ಗಟ್ಟಿಯಾದ ಬಳ್ಳಿ. a creeper used in tying the bundle of paddy. ವಾ: ಅರ್ಕಟ್ ಬೊಳ್ಳಿನ ತಂದ್ ತುಂಡ್ ಮಾಡಿ ಒಣ್‌ಗಿಸಿ

ಇಸೊಕು, ಬತ್ತದ ಹೊರೆ ಕಟ್ಟಿಕೆ ಲಾಯ್ಕಾದೆ. ಪ: ಅರ್ಕಟ್ ಬಳ್ಳಿ, **ಅರ್ಕಟ್ಟ್** /*arkaṭṭi*/ ಕೊಯ್ದ ಭತ್ತದ ಬೆಳೆಯ ಹೊರೆ. paddy bundle. ವಾ: ನಮಿಗೆ ಇಂದ್ ಗದ್ದೆಂದ ಅರ್ಕಟ್ ಹೊರೊ ಕೆಲ್ಸ

ಅರ್ಕಲ್ /*arkalɨ*/ ನಾ. ಅರೆಯುವ ಕಲ್ಲು. grinding stone. ವಾ: ಅರ್ಕಲ್‌ಲಿ ಮದ್ದ್ ಅರ್ದರೆ ಬೇಗ ಸಣ್ಣ ಆದೆ. ಪ: ಅರ್‌ಕಲ್ – ಅರೆಯುವ ಕಲ್ಲು

ಅರ್ಕಿಲ್[1] /*arkilɨ*/ ನಾ. 1. ಬೇಸಿಗೆ, 2. ಕಡು ಬಿಸಿಲಿನ ಕಾಲ. the summer. ವಾ: ದನಕರ್‌ಗಳಿಗೆ ಅರ್ಕಿಲ್‌ಲಿ ನೀರ್ ಕುಡ್ಯಕೆ ಸಿಕ್ಕುದು ಬಜ್ಜ, ಅರ್ಕಿಲ್ ಲಿ ನೀರ್ ಆರಿ ಹೋದೆ. ಪ: ಅರೆಗಾಲ

ಅರ್ಕಿಲ್[2] /*arkilɨ*/ ನಾ. 1. ಅಪ್ಪು/ಅಪ್ಪಿಕೋ, 2. ಹುಲ್ಲು, ಸೊಪ್ಪನ್ನು ತಬ್ಬಿ ಹಿಡಿದು ಹೊರೆ ಕಟ್ಟುವುದು. 1. to hug, 2. to tie a bundle of hay. ವಾ: ಒಂದ್ ಅರ್ಕಿಲ್ ದರ್ಗ್.

ಅರ್ಕೆ[1] /*arkɛ*/ ನಾ. 1. ಕೃಷಿ ಕಾರ್ಯಗಳಲ್ಲಿರುವ ಮನೆಗಳಲ್ಲಿ ಕತ್ತಿಗಳನ್ನು ಸಿಕ್ಕಿಸಿ ಇಡಲು ಬಿದಿರಿನಿಂದ ಮಾಡಿದ ಸಾಧನ, 2. ಕತ್ತಿನೇಕೆ, 3. ಕನ್ನಾಜೆ(ತು). a rack made of bamboo to keep sickles. ವಾ: ಅರ್ಕೆಲಿ ಕತ್ತಿಗಳ ಸೆಕ್ಕಿಸಿ ಇಸಿದ್.

ಅರ್ಕೆ[2] /*arakɛ*/ ನಾ. 1. ಒಟ್ಟಾಗಿ ಹಿಡಿ, 2. ಅರಿಕ್ಕೆಲ್ ಹಿಡ್ತ್. 1. to hold together, 2. to make a bundle of hay with the support of both hands and the chest. ವಾ: ಹುಲ್ಲ್ ಹರ್ದ್ ಅರ್ಕೆ ಹುಲ್ಲು ಕೊಯ್ದು-ಹುಲ್ಲು ಹೆರೆದು ಒಟ್ಟಾಗಿ ಹಿಡಿ.

ಅರ್ಕೆಬೊಳ್ಳಿ /*arkɛbɔḷḷi*/ ನಾ. ದನಗಳಿಗೆ ಆಹಾರವಾಗಿ ನೀಡುವ ಹಸಿರೆಲೆ ಬಳ್ಳಿ. a creeper used as fodder for cows. ವಾ: ದನಗಳಿಗೆ ಅರ್ಕೆಬಳ್ಳಿ ಇದ್ದರೆ ಮೇಯಕೆ ಒಳ್ಳೆದ್.

ಅರ್ಕ್ /*arkɨ*/ ನಾ. 1. ತಬ್ಬು, 2. ಅಪ್ಪು. 1. to hug, to embrace. ವಾ: ಅವ್ವ ಕೂಸುನ ಕುಸಿಲಿ ಅರ್ಕ್‌ದು. ಪ: ತರ್ಕ್(ತು)

ಅರ್ಕ್‌ಸೀರೆ /*arkɨsiːrɛ*/ ನಾ. ಹರಿದ ಸೀರೆ. torn saree. ವಾ: ಬೇರೆ ಸೀರೆ ಇಲ್ಲದವರಂಗೆ ಆ ಅರ್ಕ್ ಸೀರೆನ ಎಂತಕೆತ ಉಟ್ಟಿಯ.

ಅರ್ಗಂಟ್ /*arganṭi*/ ಕ್ರಿವಿ. 1. ತರ್ಕ, 2. ಹಟ, 3. ಮೊಂಡುತನ, 4. ಎರೋಗೆಂಟ್. 1. logic, 2. adamant, 3. stubborn 4. arrogant. ವಾ: ಮಕ್ಕ ಅರ್‌ಗಂಟ್ ಮಾಡಿಕಾದ್, ಹೇಳ್ದರ ಕೇಳೊಕು.

ಅರ್ಗಣೆ /*araganɛ*/ ನಾ. ಜೀರ್ಣ. digested. ವಾ: ಅಂವಂಗೆ ತಿಂದ ಆಹಾರ ಸೆರಿ ಅರ್ಗಣೆ ಆತ್‌ಲೆ. **ಅರ್ಗಣೆ ಮೊದ್ದು** /*argane moddu*/ ನಾ. ಹೆಚ್ಚು ಆಹಾರ ತಿಂದು ಹೊಟ್ಟೆ ಉಬ್ಬರಿಸಿದರೆ ಮೆಣಸು, ಬೆಳ್ಳುಳ್ಳಿ, ಉಪ್ಪು, ಉಂಡೆ ಹುಳಿ ಮತ್ತು ನೀರುಳ್ಳಿ ಸೇರಿಸಿ ಮಾಡುವ ಜನಪದ ಮದ್ದು. a folk medicine to cure bloating stomach, made of pepper, garlic, monkey jack, onion, etc. ವಾ: ಬೀಜದ ಸರಾಯಿ ಅರ್ಗಣೆ ಮೊದ್ದ್‌ನಂಗೆ ಕೆಲ್ಸ ಮಾಡ್ದೆ.

ಅರ್ಗಾಲ /*argaːla*/ ನಾ. ಬೇಸಗೆ ಕಾಲ. the summer. ವಾ: ಅರ್ಗಾಲಲಿ ನೀರಿಗೆ ಬಾರಿ ಬಂಗ ಆದೆ.

ಅರ್ಗಿಸ್ /*aragisɨ*/ ನಾ. 1. ಸ್ವಲ್ಪವೂ ಹಂದಾಡದಿರು, 2. ಅಲುಗಾಡದಿರು. 1. steady, 2. not shaky. ವಾ: ಈ ಹಂದಿ ಮೊರಿ ಅರ್‌ಗಿಸ್ ಹಂದಾಡ್ತುಲೆ.

ಅರ್ಗಿಳ್ /*argiḷɨ*/ ನಾ. 1. ಅನ್ನ ಬಸಿವ ಪಾತ್ರೆ, 2. ಅಡಿಗೆರ, 3. ಅಡ್ಯಾರ(ತು). rice strainer. ವಾ: ಅರ್ಗಿಳ್‌ನ ತಂಬಾ.

ಅರ್ಗು /*argu*/ ನಾ. ಜೀರ್ಣವಾಗು. get digested. ವಾ: ನೀರ್ ದೋಸೆ, ಇಡ್ಲಿ, ಕಡ್‌ಂಬಿಟ್ಟ್ ತಿಂದರೆ ಬೇಗ ಅರ್ಗುದು.

ಅರ್ಗುಡಿ /*arguḍi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಬಳ್ಪ ಗ್ರಾಮದ ಜಾಗ. a locality in Balpaa village in Sullia Taluk of Dakshina Kannada District.

ಅರ್ಚಿದೆ /*arcidɛ*/ ಕ್ರಿ. ಹಸು, ಕರು ಸಂಕಟದಿಂದ ಕೂಗುವುದು. bleating of a calf. ವಾ: ಸೀತೆ ಕರ್ ಬಾರಿ ಅರ್‌ಚಿದೆ ಹೋಗಿ ನೋಡಕಾಗಿತ್.

ಅರ್ಚುದು /*aracudu*/ ನಾ. ಕಣ್ಣಿಗೆ ಕಸ ಬಿದ್ದಾಗ ಅದು ಕಣ್ಣಿಗೆ ಅಡ್ಡ ಬಂದಂತಾಗುವುದು. the foreign body (dust) blocking the eye sight. ವಾ: ಕಣ್ಣಿಗೆ ಪೊಯ್ಯ ಬಿದ್ದುಟು ಕಂಡದೆ ಅರ್‌ಚಿದಂಗೆ ಆದೆ.

ಅರ್ಚೆಟಿಮರ /*arcɛṭimara*/ ನಾ. ದನಕರುಗಳ ಮೂಳೆ ಪೆಟ್ಟಾದಾಗ ಜೇಡಿ ಮಣ್ಣಿನೊಂದಿಗೆ ಈ ಮರದ ತುಂಡನ್ನು ಸೇರಿಸಿ ಕಟ್ಟುತ್ತಾರೆ. a bandage to repair the bones of cattle using clay and wooden

strips. ವಾ: ಅರ್ಚೆಟಿ ಮರದ ತುಂಡ್‌ನ ದನಕರ್‌ಗಳ ಕಾಲಿಗೆ ಪೆಟ್ಟಾದರೆ ಕಟ್ಟಿಕೆ ಬಳ್‌ಸುವೆ.

ಅರ್ಚ್ /*arcɨ*/ ಕ್ರಿ. ಒರಸು. to rub. ವಾ: ಚೆಂಡಿ ಕೋಮಣ ಕಟ್ಟಿರೆ ತೊಡೆ ಅರ್ಚುದು ಮಾರಾಯ.

ಅರ್ಜಿಕಜೆ /*arjikajɛ*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮರ್ಕಂಜ ಗ್ರಾಮದ ಜಾಗ. a locality in Markanja village in Sullia Taluk of Dakshina Kannada District.

ಅರ್ಜೆಂಟ್ /*arajɛnṭɨ*/ ನಾ. 1. ಅವಸರ, 2. ವೇಗ. 1. urgency, 2. speed. ವಾ: ನೀವು ಬಾರಿ ಅರ್ಜೆಂಟ್‌ಲಿ ಒಳರಿ ಕಂಡದೆ.

ಅರ್ಜೆಲ್ /*arjɛlɨ*/ ನಾ. 1. ಗೋಳು ಹೊಯ್ದುಕೊಳ್ಳು, 2. ಆಗ್ರಹಿಸು, 3. ಒತ್ತಾಯಿಸು. 1. compel, 2. urge, 3. persuade. ವಾ: ಈ ಮಕ್ಕ ಬಾರಿ ಅರ್ಜೆಲ್ ಮಾಡಿವೆಪ.

ಅರ್ತ /*arta*/ ನಾ. 1. ಅರ್ಥ, 2. ಶಬ್ದದ ಅಭಿಪ್ರಾಯ, 3. ವಿಷಯ, 4. ಕೋರಿಕೆ. 1. meaning, 2. sense of the word, 3. subject, 4. request. ವಾ: ಇದ್ಕೆಲ್ಲ ಅರ್‌ತ ಹುಡ್ಕಿಕಂಡ್ ಕುದ್ದರೆ ಆದುಲೆ.

ಅರ್ತಮಾಡ್ಕ /*artama:ḍka*/ ನಾವಿ. 1. ಅರ್ಥೈಸಿಕೊಳ್ಳು, 2. ಮನನ ಮಾಡಿಕೊಳ್ಳು, 1. to understand, 2. to grasp. ವಾ: ಪಾಟ ಮಾಡಿಕನ ಮನ್ಸಿಟ್ಟ್ ಅರ್ತಮಾಡ್ಕ.

ಅರ್ತಿ /*arti*/ ನಾ. ಅತ್ತಿ, ಒಂದು ಬಗೆಯ ಮರ. fig tree. ವಾ: ಅರ್‌ತಿಮರತ ಉಟ್ಟು. **ಅರ್ತಿಕಾಯಿ** /*artika:yi*/ ಅತ್ತಿಮರದ ಕಾಯಿ. unripe figs. ವಾ: ಅರ್ತಿಕಾಯಿನ ನೋಡ್ದನ? **ಅರ್ತಿಕೊಡಿ** /*artikoḍi*/ ಅತ್ತಿ ಮರದ ಕಾಂಡದ ಕೊಡಿ (ತುದಿ) ಪೂಜೆಗಳಲ್ಲಿ ಬಳಕೆ. a twig of fig tree used in rituals. ವಾ: ಅರ್ತಿಕೊಡಿ ಪೂಜೆಗೆ ಬೇಕಾದೆ.

ಅರ್ತೋಟಿ /*arto:ṭi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅರಂತೋಡು ಗ್ರಾಮದ ಜಾಗ. a locality in Arantodu village in Sullia Taluk of Dakshina Kannada District.

ಅರ್ದ /*arda*/ ಸಂವಾ. ಅರ್ಧ. half. ವಾ: ಅದರ್ಲಿ ಅರ್‌ದ ಬಾಗ ನಂಗೆ ಬರೋಕು ಆತ. **ಅರ್ದ ಕೊಂಡೆ** /*arada koṇḍɛ*/ ದ್ರವ ಪದಾರ್ಥ ಮಾಪನ. a measuring cup. ವಾ: ಅರ್‌ದಕೊಂಡೆ ಹಾಲ್ ಬೇಕ್. **ಅರ್ದ ಗಡಿ** /*arada gaḍi*/ 1. ಅರ್ಧಭಾಗ, 2. ತೆಂಗಿನಕಾಯಿಯ ಅರ್ಧಭಾಗ. 1. a half, 2. half of the coconut. ವಾ: ಅರ್ದಗಡಿಕಾಯಿ ಹಾಳಾಗುಟು. **ಅರ್ದ ಸೇರು** /*arada se:rɨ*/ ಅಚ್ಚೇರು. half of a seer. ವಾ: ಹಿಟ್ಟ್ ಮಾಡಿಕೆ ಅರ್‌ದ ಸೇರ್ ಅಕ್ಕಿ ಸಾಲಿಕಿಲೆ. **ಅರ್ದದಾರಿಗೆ** /*aradada:rigɛ*/ ಅರ್ಧದಾರಿಗೆ. to the half distance. ವಾ: ನಾವು ಈಗ ಸುಮಾರ್ ಅರ್‌ದ ದಾರಿಗೆ ಬಂದ್ ಎತ್ತಿದೊ. **ಅರ್ದಂದ** /*aradanda*/ ಅರ್ಧದಿಂದ. from the half. ವಾ: ಈ ಬೇಲಿದ್ ಅರ್‌ದಂದ ಆಚೆದ್ ಜಾಗೆ ನಮಿಗೆ ಸೇರ್‌ದ್. ಪ: ಅರ್ದಂದಳೆ – ಅರ್ಧದಿಂದಲೆ. **ಅರ್ದಂಬರ್‌ದ** /*aradambarda*/ 1. ಅರ್ಧ ಅರ್ಧ, 2. ಅಪೂರ್ಣ. 1. a half, 2. incomplete, 3. unfinished. ವಾ: ಇವಳದ್ ಎಲ್ಲ ಅರ್ದಂಬರ್‌ದದ ಕೆಲ್ಸ, ಒಂದೂ ಸೆರಿಯಾಗಿ ಮಾಡ್ದುಲೆ. **ಅರ್ದಗಂಟೆ** /*aradagaṇṭɛ*/ ಅರ್ಧಗಂಟೆ. half an hour. ವಾ: ಇರ್ ಅರ್‌ದ ಗಂಟೆ ಬುಟ್ಟ್ ಬನ್ನಿ. **ಅರ್ದಜೀವ** /*aradaji:va*/ 1. ಅರ್ಧಜೀವ, 2. ಅರೆಜೀವ. 1. partially alive, 2. a state of being half alive or half dead. ವಾ: ಸಣ್ಣಕ್ಕ ಕಾಯ್‌ಲಲಿ ನರ್‌ಳಿ ನರ್‌ಳಿ ಅರ್ದಜೀವ ಆಗುಟು ಪಾಪ.

ಅರ್ದಲ–ಅರ್ದಾಳ /*aradala*/-/*arada:ḷa*/ ನಾ. ಭೂತ ನರ್ತಕ, ಯಕ್ಷಗಾನ ಕಲಾವಿದ ಮೊದಲಾದವರು ವೇಷ ಧರಿಸುವಾಗ ಮುಖಕ್ಕೆ ಹಚ್ಚಿಕೊಳ್ಳುವ ಹಳದಿ ಬಣ್ಣ;ಅರದಾಳ. the yellow arsenic or yellow orpiment, arsenicum flavum, used by the spirit impersonator, or yakshagana artiste. ವಾ: ದೆವ್ವ ಕಟ್ಟಂವ ಅರ್ದಲ ಹಾಕಿಕೆ ಕುದ್ದುಟು.

ಅರ್ದ್ /*ardɨ*/ ಕ್ರಿ. ಅರೆದು. grind. ವಾ: ಮದ್‌ರಂಗಿ ಸೊಪ್ಪ್‌ನ ಅರ್‌ದ್ ತಲೆಗೆ ಹಾಕುದು. **ಅರ್ದಲ್ಲ** /*aradalla*/ ಅರೆದೆಯಲ್ಲ. Have you ground? ವಾ: ಆಗಲೆ ಮದ್‌ರಂಗಿ ಅರ್ದಲ್ಲ ಎಲ್ಲಿ ಮಡ್ಗಿಯೊಳ ತಕಂಡ್ ಬಾ. **ಅರ್ದಳ** /*aradaḷa*/ ಅರೆದಿದ್ದೀಯಾ? Did you grind? ವಾ: ಗೈಪುಗೆ ಮಸಾಲೆ ಅರ್‌ದಳನಾ?

ಅರ್ದಾಂಸ /*arada:nsa*/ ನಾ. ಅರ್ಧಾಂಶ. half of something. ವಾ: ಈ ಹಾಲ್‌ಲಿ ಅರ್‌ದಾಂಸ ನೀರೆ ಇರ್ದು.

ಅರ್ದ್ ತಿಳ್ಯೊಕು /*aridɨ tiḷyoku*/ ನಾ. ಸಂಶೋಧಿಸಿ

ಎಲ್ಲ ತಿಳಿಯಬೇಕು. need to know after proper research. ವಾ: ಎಲ್ಲ ವಿಸ್ಯನ ಸೆರಿಯಾಗಿ ಅರ್ದ್ ತಿಳ್ಕೊಕು.

ಅರ್ದ್ ಬಾತ್ /*ardɨ ba:tɨ*/ ಕ್ರಿ. 1. ಇಳಿದು ಬಂತು, 2. ಹರಿದು ಬಂತು. 1. descended, 2. it flowed. ವಾ: ತಲೆಗೆ ಹಾಕಿದ ಹರ್ಳೆಣ್ಣೆ ಬಿಸ್‌ಲ್‌ಗೆ ಕಾದ್ ಕಾಗಡೆ ಗಡ್ಡದವರೆಗೆ ಅರ್ದ್ ಬಾತ್.

ಅರ್ದ್‌ಕುಡ್ಸ್ /*ard kuḍsɨ*/ ನಾ. ಅರೆದು ಕುಡಿಸು. make someone drink what has been ground. ವಾ: ಇಬ್ಬರು ಅಜ್ಜಿಕ ಸೇರಿಕಂಡ್ ಕೂಸುಗೆ ಮೊದ್ದ್‌ನ ಅರ್ದ್‌ಕುಡ್ಸ್‌ವೆ.

ಅರ್ನಾಡಿ /*arna:ḍi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಪೆರುವಾಜೆ ಗ್ರಾಮದ ಜಾಗ. a locality in Peruvaje village in Sullia Taluk of Dakshina Kannada District.

ಅರ್ಪಗಟ್ಟೆ /*arpagaṭṭɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಅರ್ಪು /*arpu*/ ನಾ. 1. ಸೋಸು, 2. ಶೋಧಿಸು, 3. ಜಾಲಿಸು, 4. ಅರಿಪ್ಪು(ತು). 1. filter, 2. strain, 3. to clean grains with water, 4. to sieve. ವಾ: ಕಾಪಿನ ಅರ್ಪುದು. **ಅರ್ಪುದು** /*arapudu*/ 1. ಬಸಿಯುವುದು, 2. ಒಸರು, 3. ಅನ್ನದ ಗಂಜಿ, ತರಕಾರಿ ಬೇಯಿಸಿದ ನೀರು ಮೊದಲಾದುವನ್ನು ಪಾತ್ರೆಯಿಂದ ಸೋರಿಸು. 1. to strain 2. to strain the gruel, 3. to strain the gruel of rice or excess water from the boiled vegetable. ವಾ: ಅರ್‌ಪೆಲಿ ಕಾಪಿನ ಅರ್‌ಪುದು.

ಅರ್ಪುಸುದು /*arapusudu*/ ನಾವಿ. ಅರ್ಪಣೆ ಮಾಡುವುದು. dedication. ವಾ: ಹಬ್ಬಲಿ ಊರವೆಲ್ಲ ಸೇರಿ ದೇವ್ರಿಗೆ ಬೆಳ್ಳಿ ಕಿರೀಟ ಅರ್‌ಪಿಸಿದೊ. ಪ: ಅರ್ಪುಸ್ತಾ – ಅರ್ಪಿಸುತ್ತಾ

ಅರ್ಪೆ /*arpɛ*/ ನಾ. 1. ಆಲಿಕೆ, 2. ಸೀಮೆಎಣ್ಣೆ ಮುಂತಾದ ದ್ರವಗಳನ್ನು ಸಣ್ಣ ಬಾಯುಳ್ಳ ಸೀಸೆ ಮುಂತಾದುವುಗಳಿಗೆ ಸುರಿಯಲು ಉಪಯೋಗಿಸುವ ಒಂದು ಸಾಧನ, 3. ಬಸಿಯುವ ಸಾಧನ, 4. ಕಾಫಿ ಟೀ ಎಣ್ಣೆ ಸೋಸುವ ಸಾಧನ. 1. a funnel, 2. a hollow utensil having a wide mouth in a conical shape with a small hole, used in channelling the flow of liquids, 3. a strainer, 4. a coffee, tea, oil strainer. **ಅರ್ಪೆಲಿ ನೀರ್ ತಂದಂಗಾತ್(ಗಾ).** ವಾ: ಅರ್‌ಪೆ ಇಸಿಕಂಡ್ ಎಣ್ಣೆನ ಕುಪ್ಪಿಗೆ ಹೊಯಿ.

ಅರ್ಪೆಣ್ಣ್ /*arapɛṇṇi*/ ನಾ. ಹಣ್ಣುಗಳ ವಿಧಗಳು. variety of fruits.

ಅರ್ಬಟೆ /*arabaṭɛ*/ ನಾ. 1. ಆರ್ಭಟೆ, 2. ಜೋರಾಗಿ ಕೂಗುವುದು. 1. to roar, 2. to scream. ವಾ: ಮೈಸಾಸುರನ ಅರ್‌ಬಟೆನೇ ಬಾರಿ ಜೋರ್.

ಅರ್ಬಡ್ಕ /*arbaḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಜಾಲ್ಸೂರು ಗ್ರಾಮದ ಜಾಗ. a locality in Jalsuru village in Sullia Taluk of Dakshina Kannada District.

ಅರ್ಬರ್ಬು /*arbarbu*/ ಕ್ರಿವಿ. 1. ಅರೆಬರೆ, 2. ಕಾಟಾಚಾರದ ಕೆಲಸ, 3. ಅರ್ಧಂಬರ್ಧ. 1. incomplete 2. a perfunctory work, 3. fractional. ವಾ: ಅಂವಂದೆಲ್ಲ ಹಿಂಗೆನೆ ಅರ್ಬರ್ಬು ಕೆಲ್ಸ

ಅರ್ಬಿ /*arbi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಅರ್‌ಮನೆ /*arɨmanɛ*/ ನಾ. 1. ಅರಸನ ಮನೆ, 2. ಭವ್ಯ ಗೃಹ. 1. a palace, 2. a bungalow. **ಅಪ್ಪನ ಅರಮನೆಂದ ಗಂಡನ ಕಿರ್ಮನೆ ಲೇಸ್(ಗಾ).** ವಾ: ನಾಲ್ಕ್‌ನಾಡ್ ಅರ್‌ಮನೆ ನೋಡಿಕೆ ಬಾರಿ ಕುಸಿ ಆದೆ.

ಅರ್ಮನೆ ಕಡ್‌ಂಗ /*armane kaḍiŋga*/ ನಾ. ರಾಜರ ಕಾಲದಲ್ಲಿ ತೆಗೆದ ಹದ್ದುಬಸ್ತಿನ ದಾರಿ. a protected street, usually during monarchy. ವಾ: ಹಿಂದೆ ಅರಮನೆ ಕಡ್‌ಂಗಲಿ ರಾಜ ಓಡಾಡ್ತಿದ್ದದ್ ಗಡ.

ಅರ್ಲಡ್ಕ /*arlaḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅರಂತೋಡು ಗ್ರಾಮದ ಜಾಗ. a locality in Arantodu village in Sullia Taluk of Dakshina Kannada District.

ಅರ್ಲಿದೆ /*aralidɛ*/ ನಾ. ಅರಳುತ್ತದೆ. will blossom. ವಾ: ನಾಳೆಗೆ ಈ ದಾಸ್ವಾಳ ಹೂವ್ ಅರ್ಲಿದೆ. ಪ: ಅರ್ಲುದು – ಅರಳಬಹುದು/ಅರಳುವುದು; **ಅರ್ಲಿಸ್** /*aralisɨ*/ ಅರಳಿಸು. to open widely. ವಾ: ಹಂಗೆಲ್ಲ

ಕಣ್ಣ್ ಅರ್ಲಿಸಿ ನೋಡ್ಚಡ. **ಅರ್ಲುದು** /*ariludu*/ ಅರಳುವುದು. blossom. ವಾ: ಹೂ ಅರ್ಲುದು.

ಅರ್ವೇ /*arvɛ*/ ನಾ. 1. ಬಟ್ಟೆ, 2. ಅರಿವೆ. 1. clothing, 2. clothes. **ಹಿಟ್ಟ್ ಹೋತ್, ಹಿಟ್ಟ್ ಕಟ್ಟಿದ ಅರ್ವೇನೂ ಹೋತ್(ಗಾ).** ವಾ: ಅರ್ವೇ ಒಗೆಕಿತಲ? ಪ: ಅರ್ವೇನ – ಅರ್ವೇಯ; ಅರ್ವೇ ಗಿಟ್ಟೆ. **ಅರ್ವೇ ಜಾಲ್ಸುದು** /*arvɛ ja:lsudu*/ 1. ಬಟ್ಟೆಯನ್ನು ನೀರಿನಲ್ಲಿ ಜಾಲಾಡಿಸುವುದು, 2. ತೊಳೆಯುವುದು. 1. to rinse clothes, 2. washing. ವಾ: ಚೋಡ್‌ಲಿ ಅರ್ವೇ ಜಾಲ್ಸುದು. **ಅರ್ವೇ ತುಂಡ್** /*aravɛ tuṇḍi*/ ಅರಿವೆ ತುಂಡು. a piece of cloth. ವಾ: ಒಂದು ಸಣ್ಣ ಅರ್‌ವೆ ತುಂಡ್ ಹರ್‌ಕಂಡ್ ಬಾ. **ಅರ್ವೇಕೊಡೆ** /*arvɛkoḍɛ*/ ಸಾವಿನ ಸಂದರ್ಭದಲ್ಲಿ ಬಳಸುವ ಕೊಡೆ, ಕರ್ಮ ಹಿಡಿದವರು ಸಮಾದಿಯ ಹತ್ತಿರ ಹೋಗುವಾಗ ಈ ಬಟ್ಟೆಯನ್ನು ಕೊಡೆಯಂತೆ ಬಳಸುತ್ತಾರೆ. a cloth umbrella, used during the procession of carrying the dead body. ವಾ: ಹೆಣನ ಸುಡ್ಕುಳಿಗೆ ತಕಂಡ್ ಹೋಕನ ಅರ್ವೇಕೊಡೆನ ಹಿಡ್ಯದು.

ಅರ್ವೇಸೊಪ್ಪ್ /*arvɛ soppi*/ ನಾ. ಕೀರೆ ಸೊಪ್ಪು. amaranthus. ವಾ: ಅರ್ವೇ ಸೊಪ್ಪು ಉಪ್ಪುಕರಿ ಮಾಡಿ ತಿಂದರೆ ಎಂತ ಲಾಯ್ಕ (ಅರ್ವೇ ಸೊಪ್ಪು ಗೈಪುದ್ ಮುಂದೆ ಯಾವ್ದು ಇಲ್ಲೆ).

ಅರ್ಸಿಕಂಡ್ /*arasikaṇḍi*/ ನಾ. ಚೆಲ್ಲಿಕೊಂಡು. to spread here and there. ವಾ: ಪೆಟ್ಟಾದ ಹಂದಿ ರಕ್ತ ಅರ್ಸಿಕಂಡ್ ಹೋಗುಟು.

ಅರ್ಸ್‌ಣ /*arsiṇa*/ ನಾ. ಅರಸಿನ. turmeric. **ಕಾಮಾಲೆ ಕಣ್ಣಕ್ಕೆ ಲೋಕವೆಲ್ಲ ಅರ್‌ಸಣ(ಗಾ).** ವಾ: ಹಸಿ ಅರ್‌ಸಣ ಮೋರೆಕೆ ಹಾಕಿವೆ. **ಅರ್ಸಿನ ಹೊಡಿ** /*arsina hɔḍi*/ 1. ಅರಶಿನ ಪುಡಿ, 2. ಅರಶಿನ. 1. turmeric powder, 2. turmeric. ವಾ: ಅರ್ಸಿನ ಹೊಡಿ ಗೈಪುಗೂ ಬೇಕ್ ಮದ್ದಿಗೂ ಬೇಕ್. ಪ: ಅರ್ಶಣ, ಅರ್ಸ್ನ. **ಅರ್ಸ್‌ಣ ದೈ** /*arsiṇa dai*/ ಅರಶಿನ ಗಿಡ. a turmeric plant. ವಾ: ಅರ್ಸಿಣದೈನು ಕುಕ್ಕು ಸುಂಠಿ ದೈನು ನೋಡಿಕೆ ಒಂದೆ ನಮುನೆ ಇದ್ದದೆ. **ಅರ್ಸ್‌ನ ಅಳಂಬು** /*arsina aḷambu*/ ಮರದಲ್ಲಿ ಆಗುವ ಅಣಬೆ. a variety of mushroom grown on trees. ವಾ: ಅರ್ಸ್‌ನ ಅಳಂಬು ತಿಂದವೆನ? **ಅರ್‌ಸ್‌ನ ಎಣ್ಣೆ** /*arisina eṇṇe*/ 1. ಮದುವೆಯಲ್ಲಿ ಗಂಡು ಹೆಣ್ಣಿಗೆ ಮಾಡುವ ಶಾಸ್ತ್ರ, 2. ಎಣ್ಣೆ ಅರಶಿಣ. a ritual performed for both the bride and the bridegroom during their wedding. ವಾ: ಅರ್‌ಸ್‌ನ ಎಣ್ಣೆ ಸಾಸ್ತ್ರಕೆ ಬಂದ್ಬುಡಿ.

ಅರ್ಸ್¹ /*arsi*/ ನಾ. 1. ರಾಜ, 2. ದೊರೆ, 3. ರಸವಿಲ್ಲದ, 4. ರಸಿಕನಲ್ಲದವನು. 1. a King, 2. a Monarch, 3. without taste/substance, 4. unromantic. ವಾ: ಹಿಂದೆನ ಕಾಲಲಿ ಅರ್ಸ್‌ಗಳ ಆಡಳ್ತೆ ಲಾಯ್ಕಿತ್ತ್.

ಅರ್ಸ್² /*arsi*/ ನಾ. ಚೆಲ್ಲು. to spill. ವಾ: ಹೂಂ ಹಿಂಗೆ ಎಲ್ಲ ಕಡೆ ಅರ್ಸ್ ಅವ್ವನ ಕೈಂದ ಸಿಕ್ಕಿಕಾಕನ ಗೊತ್ತಾದೆ.

ಅರ್‌ಳಿಮರ /*arḷimara*/ ನಾ. 1. ಅರಳಿ ಮರ, 2. ಅಶ್ವತ್ಥ ವೃಕ್ಷ. 1. a Peepal tree, 2. Ficus religiosa or sacred fig tree. ವಾ: ಅರ್‌ಳಿ ಮರ ಹೆಚ್ಚಾಗಿ ದೇಸ್ತಾನಲಿ ಕಾಂಬಕೆ ಸಿಕ್ಕಿದೆ.

ಅರ್ಳ್ /*arḷi*/ ನಾ. ಅರಳು. to look happy/to blossom. ವಾ: ಮೊದುವೆತ ಹೇಳಿಕನ ಗೂಡೆನ ಮೋರೆ ಅರ್‌ಳಿತ್.

ಅಲಂಗಾರು /*alaŋga:ru*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಅಲಂಗೂರು /*alaŋgu:ru*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಅಲಗಿನಡ್ಕ /*alaginaḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಮರಪಡ್ನೂರು ಗ್ರಾಮದ ಜಾಗ. a locality in Amarapadnuru village in Sullia Taluk of Dakshina Kannada District.

ಅಲಸಂಡೆ ಬಿತ್ತ್ /*alasaṇḍɛ bitti*/ ನಾ. ಅಲಸಂಡೆ ಬೀಜ. cow pea. ವಾ: ಅಲಸಂಡೆ ಬಿತ್ತ್ ಬಿತ್ತಿದ್.

ಅಲಸಂಡೆಮಜಲು /*alasaṇḍemajalu*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲೂಕಿನ ಕೊಳ್ತಿಗೆ ಗ್ರಾಮದ ಜಾಗ. 1. family, 2. lineage, a locality in Kolthige village in Puttr Taluk of Dakshina Kannada District.

ಅಲಾಜೆ /*ala:jɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಅಲಾಯಿದ /*ala:yida*/ ನಾ. ಬೇರೆ. different. ವಾ: ನಿಂಗೆನೂ ಅಲಾಯಿದ ಹೇಳ್ತ್‌ಲೆ.

ಅಲಿ /*ali*/ ನಾ. 1. ತಿರುಗು, 2. ಅಲೆ, 3. ಸಂಚರಿಸು, 4. ಗುರಿಯಿಲ್ಲದೆ ತಿರುಗಾಡು. 1. to turn, 2. to roam, 3. to travel, 4. to wander. ವಾ: ಸುಮ್ಮನೆ ಎಲ್ಲಿಗೆತ ಅಲಿಯದು.

ಅಲಿ ಬೂತ /*ali bu:ta*/ ನಾ. ಕಾಸರಗೋಡಿನ ಕುಂಬಳೆಯಲ್ಲಿರುವ ಮುಸ್ಲಿಂ ದೈವ. a muslim daiva/spirit worshipped in Kumble of Kasaragod. ವಾ: ಅಲಿ ಬೂತತೇಳ್‌ದು ಕಾಸರಗೋಡ್‌ನ ಕುಂಬಳೆಲಿರೊ ದೈವ. ಪ: ಆಲಿಬೂತ

ಅಲುಗುಂಜಿ /*aluguṇji*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಅಲೆ /*alɛ*/ ನಾ. 1. ನೀರಿನ ತೆರೆ, 2. ತರಂಗ. 1. a wave, 2. a ripple. ವಾ: ಸಮುದ್ರಲಿ ನೀರ್‌ನ ಅಲೆ ಹೆಂಗೆ ಬಂದದೆ ಅಲಾ ನೋಡಿಕೆ ಹೆದ್ರಿಕೆ ಆದೆ.

ಅಲೆಂಗಾರ ಮಾಡತ್ತಾರು /*aleŋga:ra ma:ḍatta:ru*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಎಣ್ಮೂರು ಗ್ರಾಮದ ಜಾಗ. a locality in Enmuru village in Sullia Taluk of Dakshina Kannada District.

ಅಲೆಕ್ಕಾಡಿ /*alekka:ḍi*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮುರುಳ್ಯ ಗ್ರಾಮದ ಜಾಗ. 1. family, 2. lineage, 3. a locality in Murulya village in Sullia Taluk of Dakshina Kannada District.

ಅಲೆಜ್ಜಿ /*alejji*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಅಲೆತೊಳ /*aletoḷa*/ ಕ್ರಿ. ಅಲೆಯುತ್ತಾ ಇದ್ದಾರೆ. they are wandering. ವಾ: ಸೆರಿಯಾದ ನೆಲೆ ಇಲ್ಲದೆ ಅಲೆತೊಳ.

ಅಲೆಪ್ಪಾಡಿ /*aleppa:ḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಅಲ್ಕಬೆ /*alkabe*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಬಳ್ಪ ಗ್ರಾಮದ ಜಾಗ. a locality in Balpaa village in Sullia Taluk of Dakshina Kannada District.

ಅಲ್ಕಾಬೆ /*alka:be*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಅಲ್ಗ್ /*algɨ*/ ನಾ. 1. ತೂಗಾಡು, 2. ಅಲುಗಾಡುವುದು. 1. to spill over, 2. to shake. ವಾ: ಗಾಳಿ ಬೀಸ್ಕನ ಮರದ ಗೆಲ್ಲ್ ಜೋರಾಗಿ ಆಲ್ಗಿದೆ. **ಅಲ್ಗ್‌ಸ್** /*algsɨ*/ 1. ಅತ್ತಿತ್ತ ಅಲುಗಾಡಿಸು, 2. ಅಲುಗಾಡು, 3. ಬೆದರಿಸು. 1. to move from one direction to another, 2. to shake, 3. to threaten. ವಾ: ನಾಯಿ ಬಾಲ ಅಲ್ಗ್‌ಸುದ್ ನೋಡ್.

ಅಲ್ದಾಡ್ /*alda:ḍɨ*/ ನಾ. ತಿರುಗಾಡು. to wander. ವಾ: ಅಂವ ಹಂಗೆನೆ ಕ್ಯಾಮೆ ಒಂದು ಇಲ್ಲೆ ಸುಮ್ಮನೆ ಅಲ್ದಾಡ್ದು.

ಅಲ್ಪ /*alpa*/ ನಾ. 1. ಜಿಪುಣ, 2. ಆಸೆಬುರುಕ, 3. ತುಚ್ಛ, 4. ಹೀನ, 5. ಸಣ್ಣ, 6. ಕೊಂಚ, 7. ತಿಳುವಳಿಕೆಯ ಕೊರತೆ ಇರುವವ. 1. a stingy person, 2. a greedy person, 3. a despicable person, 4. a vile person, 5. small, 6. little, 7. a person with little knowledge. **ಅಲ್ಪಂಗೆ ಸಿಟ್ಟ್ ಜಾಸ್ತಿ(ಗಾ). ಅಲ್ಪಂಗೆ ಐಶ್ವರ್ಯ ಬಂದಾಕನ ಅರ್ದರಾತ್ರಿಲಿ ಕೊಡೆ ಹಿಡ್ದಾಂಗೆ(ನು).** ವಾ: ಅಂವ ಬೊರೀ ಅಲ್ಪ, ಕೊಯ್ದ ಕೈಗೆ ಉಪ್ಪು ಹಾಕಿಕಿಲೆ.

ಅಲ್ಪರ /*alpara*/ ನಾ. 1. ಆತುರ, 2. ಅವಸರ. 1. urgency, 2. haste. ವಾ: ಅಲ್ಪರ ಸಂಗ ಅಬಿಮಾನ ಬಂಗ ತ ಹೇಳ್‌ವ ಒಂದ್ ಗಾದೆನಂಗೆ ಆತ್. ಪ: ಅನಪ್ಪರ(ತು) – ಅವಸರ; ಅಲ್ಪರ ಕಟ್ಟ್ – ಆತುರ ಪಡು; ಅವಸರ ಪಡು

ಅಲ್ಪೆ ತೋಟ /*alpe to:ṭa*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಅಲ್ಯ /*alya*/ ಕ್ರಿ. ಆಗದು. not possible/not acceptable. ವಾ: ಗೈಮೆ ಮಾಡದೆ ಸುಮ್ಮನೆ ಕುದ್ರಿಕೆ ಅಲ್ಯ.

ಅಲ್ಯೊಳೊ /*alyɔḷɔ*/ ನಾ. ಅಲ್ಲಿದ್ದಾರೆ. they are there. ವಾ: ನೋಡ್ ನಿಮ್ಮ ಅವ್ವ ಅಲ್ಯೊಳೊ ಕಂಡತ ನಿಂಗೆ. ಪ: ಅಲ್ಲಿಯೊಳೊ

ಅಲ್ಲ /*alla*/ ಅ. 1. ಅಲ್ಲವೆಂದು ವಾದಿಸು, 2. ನಿರಾಕರಣೆ.

1. to deny, 2. to reject. ವಾ: ನಾ ಅದ್ ಅಲ್ಲಂತ ಎಸ್ಟ್ ಸರ್ತಿ ಹೇಳೊಕು. ಪ: ಅಲ್ಲಂತಾದರೆ – ಅಲ್ಲ ಎಂದಾದರೆ. **ಅಲ್ಲಣ್ಣ** /*allaṇṇa*/ ಅಲ್ಲ ಅಣ್ಣ. to contradict in a conversation (No, brother. .). ವಾ: ಅಲ್ಲಣ್ಣ ಹಂಗೆಲ್ಲ ಸಿಟ್ಟ್ ಮಾಡಿಕಣ್ಬಡ ನೀ. **ಅಲ್ಲನಾ** /*allana:*/ 1. ಅಲ್ಲವೆ?, 2. ಅಲ್ಲವಾ? 1. isn't it?, 2. isn't. ವಾ: ಹಂಗಾರೆ ಅಲ್ಲಿ ಇದ್ದದ್ ನೀ ಅಲ್ಲನಾ? ಪ: ಅಲ್ಲವೋ – ಹೌದಲ್ಲವೋ. **ಅಲ್ಲಪ್ಪ** /*allappa*/ ಅದಲ್ಲ. not that way/not that. ವಾ: ಅಲ್ಲಪ್ಪ ನಾ ಹೇಳ್‌ದ್ ಹಂಗೆ ಅಲ್ಲ. **ಅಲ್ಲರೆ** /*allarɛ*/ ಅಲ್ಲದಿದ್ದರೆ. if not. ವಾ: ನಾ ಅಲ್ಲದ್ರೆ ನೀ ಏನ್ ಮಾಡಿಯಾ? ಪ: ಅಲ್ಲದ್ರೆ; ಅಲ್ಲಂದ್ರೆ. **ಅಲ್ಲಲ್ಲ** /*allalla*/ ಅಲ್ಲವೇ ಅಲ್ಲ. absolutely no. ವಾ: ಅಯೋ ಅಲ್ಲಲ್ಲ ನಾ ಹೇಳ್‌ದ ಕತೆಗು ಇಂವಂಗು ಸಂಬಂದ ಇಲ್ಲೆ. ಪ: ಅಲ್ಲಾ. **ಅಲ್ಲಾಂತ** /*alla:nta*/ ಅಲ್ಲವೆಂದು. to say no to something. ವಾ: ನಾ ಅಲ್ಲಾಂತ ಹೇಳ್ದೆ ಅಲಾ ಮತ್ತೆಂತ ನಿಂದ್.

ಅಲ್ಲಾಡ್ಸ್ /*alla:ḍsɨ*/ ನಾ. 1. ಅತ್ತಿತ್ತ ಅಲುಗಾಡಿಸು, 2. ಅಲುಗಾಡು, 3. ಬೆದರಿಸು. 1. to move from one direction to another, 2. to wag, 3. to threaten. ವಾ: ನಾಯಿ ಬೀಲ ಅಲ್ಲಾಡ್ಸುದು ನೋಡ್.

ಅಲ್ಲಿ /*alli*/ ಸನಾ. ಆ ಜಾಗದಲ್ಲಿ. there, in that place. ವಾ: ಅಲ್ಲಿ ನೋಡು ಕುಂದು ಕಾಂಬದು. **ಅಲ್ಲಿ ಸಾ** /*alli sa:*/ ಅಲ್ಲಿಯೂ ಕೂಡ. there also. ವಾ: ಈ ಮಕ್ಕ ಅಲ್ಲಿ ಸಾ ಹಿಂಗೆನೆ ಗಲಾಟೆ ಮಾಡ್ದುಪ. **ಅಲ್ಲೆ** /*allɛ*/ ಅಲ್ಲಿಯೆ. in that place. ವಾ: ಅಲ್ಲೆ ಇರ್ ಇತ್ತ ಬರ್ಬಡ. **ಅಲ್ಲೆಂತ ಉಟ್ಟು?** /*allɛnta uṭṭu?*/ ಅಲ್ಲಿ ಏನಿದೆ? What is there? ವಾ: ಅಲ್ಲೆಂತ ಉಟ್ಟು ದೆವ್ವ ಕೊಣ್ದದೆನ? **ಅಲ್ಲೆಲ್ಲಾ** /*allɛlla:*/ 1. ಅಲ್ಲಿಯೇ, 2. ಹತ್ತಿರದಲ್ಲಿ, 1. only there, 2. near to it. ವಾ: ಅಲ್ಲೆಲ್ಲಾ ನೋಡಿಕ ಮುಳ್ಳು ಇರ್ದು. **ಅಲ್ಲೇ** /*allɔ:*/ ಅದೇ ಸ್ಥಳ. that is the place. ವಾ: ನಾ ನೋಡ್ಕನ ಅಲ್ಲೇ ಇತ್ತ್.

ಅಲ್ಲೊ /*allɔ*/ ನಾ. ಅಲ್ಲವೇ. isn't it? ವಾ: ನಾ ಹೇಳ್ದ್ ಸೆರಿ ಅಲ್ಲೊ.

ಅಲ್ಲೊಂದ್ /*allɔndɨ*/ ನಾ. ಅಲ್ಲೇ ಒಂದು. to mean – in a particular place. ವಾ: ತೋಟಲಿ ಅಲ್ಲೊಂದ್ ಪಣ್ಣುಳಿ ಮರ ಇತ್ತ್.

ಅಲ್ಸಂಡೆ /*alsaṇḍɛ*/ ನಾ. 1. ಎಲ್ಸಂಡೆ, 2. ಅಲಸಂಡೆ, 3. ದ್ವಿದಳ ಧಾನ್ಯ, 4. ಅಲಸಂದೆ. 1. cow pea, black eyed pea, an edible legume 2. lentil. **ಅಂವ ಬರೇ ಅಲ್ಸಂಡೆ ಜಾತಿ(ನು).** ವಾ: ಬೊಳ್ಳಿಲಿ ಅಲ್ಸಂಡೆ ಬಾಳ್ ಬುಟ್ಟುಟು. **ಅಲ್ಸಂಡೆ ಬಾಳ್** /*alsaṇḍɛ ba:ḷɨ*/ 1. ಅಲಸಂಡೆ ಬಾಳು, 2. ಅಲಸಂದೆ ಬಾಳು. long and cylindrical pods of cow pea. ವಾ: ನಾಲ್ಕ್ ಅಲ್ಸಂಡೆ ಬಾಳ್ ಕೊಯ್ಕಂಡ್ ಬಾ.

ಅವಗಡ /*avagaḍa*/ ನಾ. 1. ತೊಂದರೆ, 2. ಅಪಘಾತ, 3. ಭಯಂಕರವಾದುದು. 1. a trouble, 2. an accident, 3. a terrible/dangerous thing. ವಾ: ಬಸ್ ಅವಗಡಲಿ ಸುಮಾರ್ ಜೆನ ಸತ್ತೊ.

ಅವನ್ನೆ /*avannɛ*/ ಸನಾ. ಅವನನ್ನೆ. referring to 'him'. ವಾ: ಇಸ್ಟ್ ಹೊತ್ತು ಅವನ್ನೆ ಹುಡ್‌ಕಿಕಂಡ್ ಹೋದ್‌ತ. **ಅವರ ಇವರ** /*avara ivara*/ ಅವರ ಇವರ ಮಾತು. hearsay. ವಾ: ನಾನ್ ಅವರ ಇವರ ಮಾತ್ ಕೇಳ್ದುಲೆ. **ಅವರ ಸಾ** /*avara sa:*/ ಅವರನ್ನು ಕೂಡ. including them. ವಾ: ಮೊದುವೆಲಿ ದಿಬ್ಬಣ ಹೋಕಾಕನ ಅವರ ಸಾ ಕರ್ಕಂಡ್ ಪೋಯಲ. **ಅವರ್ಲಿ** /*avarali*/ ಅವರಲ್ಲಿ. from him/near him. ವಾ: ಅವರ್‌ಲಿ ನಿಂಗೆ ಯಾರ್ ಕುಸಿ.

ಅವಲಕ್ಕಿ ಸರ /*avalakki sara*/ ನಾ. ಅವಲಕ್ಕಿಯ ಹಾಗೆ ಇರುವ ಕತ್ತಿನ ಸರ. a necklace with decorative gold beads/small plates with designs of flattened rice. ವಾ: ಹಿಂದೆಲ್ಲ ಅವಲಕ್ಕಿ ಸರ ಹಾಕಂಬದೇ ಕುಸಿ, ಈಗೆಲ್ಲ ನೋಡಿಕೂ ಸಿಕ್ಕುಲೆ.

ಅವಲಕ್ಸಣ /*avalaksaṇa*/ ನಾ. 1. ಕೆಟ್ಟ ಸಮಯ, 2. ಅವಲಕ್ಷಣ. 1. bad time, 2. inauspicious. ವಾ: ಕೈ ತೋರ್‌ಸಿ ಅವಲಕ್ಸಣತ ಹೇಳ್‌ಸಿಕಂಬದು ಯಾಕೆ?

ಅವಸ್ತೆ /*avaste*/ ನಾ. 1. ಅವಸ್ಥೆ, 2. ಸ್ಥಿತಿ, 3. ಘಟ್ಟ, 4. ಮಜಲು. 1. a condition, 2. a state, 3. a phase, 4. a stage. ವಾ: ಕಾಡಿಗೆ ಹೋಗಿ ಬಂದ್ ಅಂವನ ಅವಸ್ತೆನ ನೋಡೊಮ್ಮೆ.

ಅವು /*avu*/ ಸನಾ. ಅವರು. they. ವಾ: ಅವು ಬಾರಿ ಒಳ್ಳ ಜೆನ. **ಅವಿಬ್ಬೊರ್** /*avibborɨ*/ ಅವರು ಇಬ್ಬರೂ. both of them. ವಾ: ಅವಿಬ್ಬೊರ್ ಸೇರಿ ಕೆಲ್‌ಸ ಮಾಡುವೆ. **ಅವುಕೆ** /*avukɛ*/ ಅವರಿಗೆ. them. ವಾ: ಯಾಗೊಳು ಅವುಕೆ ಹೆದ್‌ರಿಕಂಡ್ ಇರಿಕೆ ಆದೆನ?

ಅವೇ ಇವೇತಿಲ್ಲೆ /*anvɛ: ivɛ:tillɛ*/ ಅವರು ಇವರು ಎಂದಲ್ಲ. from everyone. ವಾ: ಅವ್‌ಕೆ ಅವೇ ಇವೇತಿಲ್ಲೆ, ಎಲ್ಲೊರೊಟ್ಟಿಗೆನೂ ಒಂದೇ ತರಲಿ ಇದ್ದವೆ. **ಅವ್ಕೆ** /*avkɛ*/ ಅವರಿಗೆ. to them. ವಾ: ಅವ್ಕೆ ಎಂತ ಬೇಕಡ? **ಅವೊತ್ತ್** /*anvɔtti*/ 1. ಅಂದು, 2. ಆವಾಗ, 3. ಆ ಸಂದರ್ಭ. 1. that day, 2. then, 3. in that situation. ವಾ: ಅವೊತ್ತ್‌ನಂಗೆ ಮಳೆ ಬಾತ್ಲೆ. **ಅವ್ರವ್ರ** /*avravra*/ ನಾ. ಅವರವರ. belonging to other/ personal / respective. ವಾ: ಅವ್ರವ್ರ ಇಸ್ಟ ನಾವ್ಗೆ ಬಜ್ಜ. **ಅವ್ರಸ್ಟ್ಕೆ** /*avrasṭikɛ*/ ಅವರಷ್ಟಕೆ. on their own. ವಾ: ಎಂತತ ಗೊತ್ಲೆ ಅವರಸ್ಟಕೆ ಅವು ಒಬ್ಬನೇ ಮಾತಾಡಿಕಂಡವೆಪ. **ಅವ್ರಿಬ್ಬ್‌ರ** /*avribbɨra*/ ಅವರಿಬ್ಬರ. between the two. ವಾ: ಅವರಿಬ್ಬರ ನಡುಲಿ ನಾ ಸೆಕ್ಕಿ ಪಜ್ಜಿ ಆದೆ.

ಅವುಡು /*avuḍu*/ ನಾ. 1. ಹಲ್ಲಿನಿಂದ ಕಚ್ಚು, 2. ಮೆಲುಕಾಡಿಸು, 3. ಒರಟಾದದ್ದು. 1. to bite with one's teeth, 2. to ruminate, 3. rough. ವಾ: ಸಿಟ್ಟ್‌ಲಿ ಅವುಡು ಕಚ್ಚಿದೆ ಅಂವ.

ಅವುಲು ಹಾಕುದು /*avulu ha:kudu*/ ನಾ. 1. ಅವಲಕ್ಕಿ ಹಾಕುವುದು, 2. ದೀಪಾವಳಿಯ ಸಮಯದಲ್ಲಿ ಸತ್ತವರಿಗೆ ಗೌಡ ಜನಾಂಗದಲ್ಲಿ ಮಾಡುವ ಕ್ರಮ. 1. to serve flattened rice, 2. a ritual performed by the people of Gowda community during Deepavali in the memory of dead ancestors. ವಾ: ಹಬ್ಬೊಲಿ ಅಮಾಸೆ ದಿನ ಹೆಂಗ್‌ಸರಿಗೆ, ಪಾಡಲಿ ಗಂಡ್‌ಗಳಿಗೆ ಅವುಲು ಹಾಕಿವೆ.

ಅವುಸಾನ /*avusa:na*/ ನಾ. 1. ಸಾವಿನ ಸಮಯ, 2. ಸಾವು, 3. ಕೊನೆಯ ಕಾಲ. 1. the time of death, 2. death, 3. the last phase one's life. ವಾ: ಅಂವ ಎಂತ ಮಾರಾಯ ಅಂವನ ಅವುಸಾನಕೆ ಹಿಂಗೆ ಆಡ್ದ?

ಅವುಳಿ ಮಕ್ಕ /*avuḷi makka*/ ನಾ. 1. ಅವಳಿ ಮಕ್ಕಳು, 2. ಜೋಡಿ ಮಕ್ಕಳು. 1. twins, 2. a pair of children. ವಾ: ಅವುಳಿ ಮಕ್ಕ ಹೆಂಗೆ ಕೊಣ್ದವೆ ನೋಡ್. ಪ: ಅವ್ಳಿಜವ್ಳಿ – ಅವಳಿಜವಳಿ

ಅವ್‌ಡ್ಲೆಣ್ಣೆ /*aviḍlɛŋŋɛ*/ ನಾ. ಹರಳೆಣ್ಣೆ. castor oil. ವಾ: ಅವ್‌ಡ್ಲೆಣ್ಣೆನ ತಲೆಗೆ ಹಾಕಿರೆ ತಂಪಾದೆ.

ಅವ್‌ತಾರ /*avɨta:ra*/ ನಾ. 1. ಮರುಹುಟ್ಟು, 2. ವೇಷಭೂಷಣ. 1. rebirth, 2. costume. ವಾ: ಅಂವನ ಅವ್‌ತಾರ ನೋಡ್!. ಪ: ಅಬತಾರ

ಅವ್‌ಮಾನ ಮಾಡ್ /*avma:na ma:ḍi*/ ನಾ. 1. ಅವಮಾನ, 2. ನಿಂದಿಸು, 3. ಅಗೌರವ. 1. insult, 2. to accuse, 3. disrespect. ವಾ: ಯಾರಿಗು ಅವ್‌ಮಾನ ಮಾಡಿಕಾಗದ್.

ಅವ್ರೆ /*avrɛ*/ ನಾ. 1. ಒಂದು ಬಗೆಯ ದ್ವಿದಳಧಾನ್ಯ, 2. ಅವರೆಕಾಯಿ, 3. ದೇವರಮಣಿ. 1. leguminous seed, 2. hyacinth beans, 3. a celestial bead. ವಾ: ರೊಟ್ಟಿಗೆ ಅವರೆ, ಒಣ್ಗಿಲ್ ಮೀನ್ ಹಾಕಿ ಗೈಪು ಮಾಡೋಕು.

ಅವ್ರೆಚಪ್ರ /*avrɛcapra*/ ನಾ. ಅವರೆಕಾಯಿ ಬಳ್ಳಿ ಚಪ್ಪರ. a canopy of hyacinth beans. ವಾ: ಅವರೆ ಚಪ್ರಲಿ ಲಾಯ್ಕಲಿ ಬೊಳ್ಳಿ ಹಬ್ಬಿಟು.

ಅವ್ಲಕ್ಕಿ /*avlakki*/ ನಾ. 1. ಅವಲಕ್ಕಿ, 2. ಭತ್ತದಿಂದಾದ ಖಾದ್ಯ. 1. flattened rice, 2. an edible made of paddy. ವಾ: ಇಂದ್ ಹೊತಾರೆಗೆ ಎಂತ ಮಾಡ್ದೆ? ಅವ್ಲಕ್ಕಿ ಉಪ್ಪಿಟ್. ಪ: ಅವುಲೆಕಿ; ಅವುಲು. **ಅವ್‌ಲಕ್ಕಿ** /*avɨlakki*/ 1. ಭತ್ತವನ್ನು ಬೇಯಿಸಿ ಹುರಿದು ಕುಟ್ಟಿದ ಅಕ್ಕಿ, 2. ಅವಲಕ್ಕಿ. 1. beaten rice, 2. flattened rice. ವಾ: ಅವ್‌ಲಕ್ಕಿಲಿ ಹಪ್ಪಳ ಮಾಡಿವೆ.

ಅವ್ವ /*avva*/ ನಾ. 1. ಅಮ್ಮ, 2. ತಾಯಿ. 1. mother, 2. female parent – mother. **ಅಪ್ಪನೊಟ್ಟಿಗೆ ಉಂಡರೂ ಒಂದೇ, ಅವ್ವನೊಟ್ಟಿಗೆ ಉಂಡರೂ ಒಂದೇ(ಗಾ). ಅಪ್ಪ ಕಾಲೆತ್ತಿ ಹಾಕುದು, ಅವ್ವ ಕೈ ಎತ್ತಿ ಹಾಕುದು – ಪ್ಯಾಂಟ್ ಹಾಕುದು, ಜಾಕಿಟ್ ಹಾಕುದು(ಒ).** ವಾ: ಅವ್ವ ಇಲ್ಲದ ತವುರು ಮನೆಗೆ ಹೆಣ್ಮಕ್ಕ ಹೋಕ್ಯಾಗದ್ ತೇಳ್‌ದು ಸತ್ಯದ ಮಾತ್. **ಅವ್ವಬಾಸೆ** /*avvaba:sɛ*/ ಮಾತೃಭಾಷೆ. mother tongue. ವಾ: ಏನೇ ಆದ್‌ರೂ ಅವ್ವಬಾಸೆನ ಮರ್‌ಯಕಾಗದ್, ಗೌರವಿಸಿ ಆದರ್‌ಸುದರ ಕಲಿಯಕು. **ಅವ್ವಯ್ಯ** /*avvayya*/ ಮುತ್ತಜ್ಜಿ. great grandmother. ವಾ: ಅವ್ವಯ್ಯಂಗೆ ಸುಕ ಇಲ್ಲೆಗಡ ಉಗ್ಗಪ್ಪ. **ಅವ್ವವ್ವ** /*avvavva*/ 1. ತಾಯಿಯ ತಾಯಿ, 2. ಅಮ್ಮಮ್ಮ. 1. mother's mother, 2. great grandmother. ವಾ: ಅವ್ವವ್ವ ನಾಳೆ ಮನೆಗೆ ಬಂದವೆಗಡ.

ಅವ್‌ಸ್ರ /*avisra*/ ನಾ. 1. ಆತುರ, 2. ಅವಕಾಶ, 3. ತ್ವರೆ.

1. urgency, 2. opportunity, 3. quick. **ಅವಸರಕ್ಕೆ ನಿಯಮ ಇಲ್ಲೆ(ನು).** ವಾ: ಯಾಕೆ ಇಸ್ಟ್ ಅವ್‌ಸ್ರ ಮಾಡಿಯ? ಪ: ಅಮ್‌ಸರ

ಅವ್ಳು /*avḷu*/ ಸನಾ. ಅವಳು. hers/her. ವಾ: ನೀ ಅವ್ಳ ನೋಡ್ದನ?

ಅವ್ಳಿಜವ್ಳಿ /*avḷijavḷi*/ ನಾ. 1. ಜೋಡಿ, 2. ಅವಳಿ ಜವಳಿ, 3. ಯುಗಳ, 4. ಯಮಳ. 1. a pair, 2. twins, 3. two, 4. a pair of two. ವಾ: ಅವ್ಳಿ ಜವ್ಳಿ ಮಕ್ಕಳ ಸಾಂಕುದು ತಮಾಸೆ ಅಲ್ಲ.

ಅಶ್ವತ್ಥಾದಿ /*aśvat'tha:di*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಅಸಡ್ಡೆ /*asaḍḍɛ*/ ನಾ. 1. ಅಲಕ್ಷ್ಯ, 2. ಉಡಾಫೆ. 1. negligence, 2. apathy. ವಾ: ಯಾರ್‌ನು ಅಸಡ್ಡೆ ಮಾಡಿಕಾಗದ್.

ಅಸಲ್‌ಬಾಜಿ /*asalɨba:ji*/ ನಾ. ಎಪ. ಮೋಸಗಾರ. swindler.

ಅಸಾಮಿ /*asa:mi*/ ನಾ. 1. ಬೈಗುಳ ಪದ, 2. ವ್ಯಕ್ತಿ, 3. ಮನುಷ್ಯ. 1. an offensive term, 2. a person, 3. a human. ವಾ: ಒಳ್ಳ ಅಸಾಮಿ ಅಂವ.

ಅಸುಬ /*asuba*/ ನಾ. 1. ಅಶುಭ, 2. ಅಮಂಗಳ, 3. ಅನಿಷ್ಟಕರವಾದ, 4. ದುರದೃಷ್ಟ. 1. inauspicious, 2. ill-omened, ominous, 4. unfortunate. ವಾ: ಗೌಡರ್‌ಲಿ ಕೆಲವ್ ಅಸುಬ ನಂಬಿಕೆಗ ಒಳೊ.

ಅಸ್ವತ ಮರ /*asṭata mara*/ ನಾ. 1. ಅರಳಿ ಮರ, 2. ಅಶ್ವತ್ಥ ಮರ. 1. a sacred fig tree, 2. peepal tree. ವಾ: ದಿನಾ ಬೊಳ್ಪಾಕನ ಅಸ್ವತ ಮರಕೆ ಸುತ್ತ್ ಬಂದ್ ಪೂಜೆ ಮಾಡಿರೆ ಒಳ್ಳದ್.

ಅಸ್ಟಾಕನ /*asṭa:kana*/ ನಾ. 1. ಆ ಹೊತ್ತಿಗೆ, 2. ಆ ಸಮಯಕ್ಕೆ. at that time. ವಾ: ಅಸ್ಟಾಕನ (ಹಟ್ಟಾಕನ) ಬೊಳ್ಪಾತ್.

ಅಸ್ಟ್ /*asṭɨ*/ ನಾ. ಅಷ್ಟು. referring to some quantity. ವಾ: ಅಸ್ಟ್ ದೂರ ನಡ್ಯಕುಟ್ಟಾ ನಂಗಾದುಲೆ. **ಅಸ್ಟೆಯಾ** /*asṭeya:*/ ಅಷ್ಟೇನಾ? only that much? ವಾ: ಅಸ್ಟೆಯಾ ನಾ ಎಂತಾಗೋತುತ ಗ್ಯಾನ ಮಾಡ್‌ದೆ.

ಅಳಂಕ್ /*aḷaŋkɨ*/ ನಾ. ಚಿಪ್ಪುಹಂದಿ. a Pangolin. ವಾ: ಅಳಂಕ್ ಈಗ ಕಾಂಬಕೆ ಸಿಕ್ಕಿಕಿಲೆ. ಪ: ಅಳ್‌ಂಕ್

ಅಳಕೆ /*aḷake*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಎಡಮಂಗಲ ಗ್ರಾಮದ ಜಾಗ. a locality in Edamangala village in Sullia Taluk of Dakshina Kannada District.

ಅಳಗೆ /*nɛsalɛ*/ ನಾ. 1. ಪದಾರ್ಥ ಮಾಡುವ ಮಣ್ಣಿನ ಪಾತ್ರೆ, 2. ಅಳಿಗೆ. a pot in which curry is made. **ಸಸಾರ ಕೊಟ್ಟ ನಾಯಿ ನೆಸಲೆ ನೆಕ್ಕಿತ್ ಗಡ(ಗಾ).** ವಾ: ನೆಸಲೆನ ಎಲ್ಲಿಸದ್? ಪ: ನೆಸಲೆ(ತು)

ಅಳಪೆ /*aḷape*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಐವತ್ತೊಕ್ಲು ಗ್ರಾಮದ ಜಾಗ. a locality in Aivattoklu village in Sullia Taluk of Dakshina Kannada District.

ಅಳವುಪಾರೆ /*aḷavupa:re*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮರ್ಕಂಜ ಗ್ರಾಮದ ಜಾಗ. a locality in Markanja village in Sullia Taluk of Dakshina Kannada District.

ಅಳಿ[1] /*aḷi*/ ನಾ. 1. ಅಳತೆ ಮಾಡು, 2. ಅಳೆ. 1. to measure, 2. to weigh. ವಾ: ಬತ್ತನ ಅಳಿಯೊಕು ಆಗ ಗೊತ್ತಾದೆ ಎಸ್ಟ್ ಉಟ್ಟುತ.

ಅಳಿ[2] /*aḷi*/ ನಾ. ಶಾಶ್ವತ. permanent. ವಾ: ಆ ಮನೆನ ಬಾರೀ ಗಟ್ಟಿ ಕಟ್ಯೊಳ, ಅದ್ಕೆ ಅಳಿಯೇ ಇಲ್ಲೆ.

ಅಳಿ[3] /*aḷi*/ ನಾ. ನಾಶ. destruction. ವಾ: ಈಗ ಪೊಂಗರೆ ಅಳ್ದ್ ಹೋಗುಟು. **ಅಳಿಯದು** /*aḷiyadu*/ 1. ನಾಶ, 2. ನಾಶವಾಗುವುದು, 3. ಹಾಳಾಗು, 4. ಸಾಯು. 1. destroy, 2. destroyed, 3. ruined, 4. dead. ವಾ: ಮಳ್‌ಗಾಲಲಿ ಹೂನ ದೈಗೆಲ್ಲ ಅಳಿಯದು.

ಅಳಿಕುಂಚ /*aḷikuŋca*/ ನಾ. 1. ಅಳಿಲು, 2. ಇಣಚಿ. 1. a squirrel, 2. rodent – squirrel. ವಾ: ಅಳಿಕುಂಚದ ಬೆನ್ನ್ ಮೇಲೆ ಮೂರ್ ನಾಮ ಇದ್ದದೆ, ಅದ್ ರಾಮ ಕುಸಿಗೆ ಅಳಿಕುಂಚನ ಮೈನ ಪೂಜಿದ್ ಗಡ.

ಅಳಿಕೆ /*aḷikɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಅಳಿಕೆಮಜಲು /*aḷikemajalu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಸುಳ್ಯ ನಗರದ ಜಾಗ. a

locality in Suḷya Nagara village in Sullia Taluk of Dakshina Kannada District.

ಅಳಿಯ /*aḷiya*/ ನಾ. 1. ಅಳಿಯ, 2. ಸೋದರರಿಯ ಮಗ, 3. ಮಗಳ ಗಂಡ, 4. ಸೋದರರಳಿಯ. 1. son-in-law, 2. son of one's sister, 3. husband of one's daughter, 4. son of one's sister. **ಅತ್ತೆ ಮನೆಗೆ ಅಳಿಯ ಹೋದಂಗೆ(ಗಾ).** ವಾ: ಮಾವ ಮಾರಿಚ ಅಳಿಯ ಕುಂಡತ.

ಅಳೆಗೆ /*aḷege*/ ನಾ. 1. ಮಣ್ಣಿನ ಪಾತ್ರೆ, 2. ಅಳಗೆ. an earthen pot used in making curry. **ಸಸಾರ ಕೊಟ್ಟರೆ ನಾಯಿ ಅಳೆಗೆ ನೆಕ್ಕಿತ್(ಗಾ).** ವಾ: ಹಿಂದೆಲ್ಲ ಅಳೆಗೆಲಿ ಹಾಲ್ ಕಾಸ್‌ತಿದ್ದೊ. ಪ: ಅಳಗೆ

ಅಳೆಸರ್ /*aḷɛsari*/ ನಾ. ಕೆಸರು. muddy. ವಾ: ಕೆರೆಲಿ, ಚೋಡ್‌ಲಿ ಮೀನ್‌ಗ ಓಡಾಡಿಕನ ಅಳೆಸರ್ ಎದ್ದದೆ.

ಅಳ್ /*aḷi*/ ನಾ. 1. ಅಳುಕು, 2. ಹಿಂಜರಿಕೆ. 1. fear, 2. hesitation. ವಾ: ಮೊನ್ಸೊಳಗೆ ಅಳ್ ಇದ್ದದೆ, ಅದರ ತೆಗ್ದಾಕೊಕು.

ಅಳ್ಂಚ್ /*aḷiŋci*/ ನಾ. 1. ಅಲ್ಲಾಡು, 2. ನೀರಿನ ಒಳಗೆ ಅತ್ತಿತ್ತ ಓಡಾಡುತ್ತಾ ಕೆಸರು ಎಬ್ಬಿಸುವುದು. 1. to shake, 2. to splash the muddy water. ವಾ: ಚೋಡ್ ನೀರ್‌ಲಿ ಮೀನ್‌ಗ ಅಳ್ಂಚ್‌ಕಂಡ್ ಹೋದವೆ. **ಅಳ್ಂಚುದು** /*aḷiŋcudu*/ 1. ಅಲ್ಲಾಡಿಸು, 2. ಅಲುಗಾಡಿಸು. 1. to shake, 2. to jerk. ವಾ: ದನಗಳಿಗೆ ತೆಳಿನ ಅಳ್ಂಚಿ ಕುಡ್ಸೊಕು. ಪ: ಅಲೆಂಚು(ತು)

ಅಳ್ಂಬು /*aliṁbi*/ ನಾ. 1. ಅಣಬೆ, 2. ನಾಯಿಕೊಡೆ. 1. mushroom, 2. toadstool. ವಾ: ಅಳ್ಂಬ್ ಗೈಪುಗೆ ಅಕ್ಕಿ ರೊಟ್ಟಿ ಮಾಡಿರೆ ತಿಂಬಕೆ ಲಾಯ್ಕ.

ಅಳ್ಕೆ /*aḷkɛ*/ ನಾ. ಕತ್ತಿಗಳನ್ನು ತೂಗು ಹಾಕುವ ಸಾಧನ. sword hanger. ವಾ: ಒಳ್ಳೆದ್, ಕತ್ತಿನೆಲ್ಲ ಹಿಂಗೆ ಅಳ್ಕೆಲಿ ತೂಗಿರೆ ಹುಡ್ಕುವ ಕೆಲ್‌ಸ ಇರ್‌ದುಲೆ.

ಅಳ್ಕ್ /*aḷki*/ ನಾ. 1. ಅಂಜಿಕೆ, 2. ಅಳುಕು, 3. ಹಿಂಜರಿಕೆ. 1. fear, 2. hesitation, 3. inhibition. **ಅಂಜಿಕಂಡ್ ಅಳ್ಕಿಕಂಡ್ ತಿಂದರೆ ಅಮೃತನೂ ನಂಜಾದೆ(ಗಾ).** ವಾ: ನಿಂಗೆ ಮೊನ್‌ಸ್‌ಲಿ ಯಾವ ಅಳ್ಕ್ ಬೇಡ.

ಅಳ್ಗೆಲ್ /*aḷgeli*/ ನಾ. 1. ಅಳು, 2. ಕೂಗು, 3. ರೋಧಿಸು. 1. to sob, 2. to cry, 3. to weep. ವಾ: ಹೆಣ್ಣ್ ಇಳ್‌ಸಕನ ನಂಗೆ ಅಳ್ಗೆಲ್ ತಡಿಯಕಾತ್‌ಲೆ.

ಅಳ್ಚಿ[1] /*aḷci*/ ನಾ. ತುಳುಕು. to slash the muddy water. ವಾ: ಮಡಿಕೆಲಿ ತುಂಬ ನೀರ್ ತಕಂಡೋದರೆ ಅಳ್ಚಿ ಸೂಸುದ್‌ಲೆ. ಪ: ಅಲೆಜ್ಜಿ(ತು)

ಅಳ್ಚಿ[2] /*aḷci*/ ನಾ. ಕೋಲು ಸೌದೆ. kindling – small pieces of firewood. ವಾ: ಕೆಂಬಡೆ ಬೊಳ್ಳಿ ಹತ್ತಿಕೆ ಅಳ್ಚಿ ಹಾಕಿವೆ. ಪ: ಅಡ್ರ್; ಅಡರ್(ತು)

ಅಳ್ತೆ /*aḷtɛ*/ ನಾ. 1. ಅಳತೆ, 2. ಪ್ರಮಾಣ, 3. ಪರಿಮಿತಿ. 1. measure, 2. proportion, 3. limit. **ಲೆಕ್ಕಕುಟ್ಟು ಅಳ್ತೆಗಿಲ್ಲೆ(ಗಾ).** ವಾ: ಅನ್ನ ಮಾಡಿಕನ ಅಕ್ಕಿಗೆ ನೀರ್‌ನ ಅಳ್ತೆ ಮಾಡಿ ಹಾಕೊಕು.

ಅಳ್ದ್ /*aḷdi*/ ನಾ. 1. ಅಳಿದು, 2. ಅಳಿಯು, 3. ನಾಶವಾಗು. 1. ruined, 2. destroyed. ವಾ: ನಮ್ಮಲ್ಲಿದ್ದ ಮದ್‌ರಂಗಿ ದೈ ಅಳ್‌ದ್ ಹೋತ್.

ಅಳ್ಪೆ /*aḷpe*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ನೆಲ್ಲೂರು ಕೆಮ್ರಾಜೆ ಗ್ರಾಮದ ಜಾಗ. 1. family, 2. lineage, 3. a locality in Nelluru Kemraje village in Sullia Taluk of Dakshina Kannada District.

ಅಳ್ಯ /*aḷya*/ ನಾ. 1. ಸೋದರಿಯ ಮಗ, 2. ಮಗಳ ಗಂಡ, 3. ಅಳಿಯ. 1. son of one's sister, 2. daughter's husband, 3. son-in-law. **ಅಳಿಯ ಮನೆ ತೊಳಿಯ(ಗಾ).** ವಾ: ಅಳ್ಯ ಬಂದವೆನಾ ಮನೆಗೆ ಮಗಳೊಟ್ಟಿಗೆ?

ಅಳ್ಳೆ /*aḷḷɛ*/ ನಾ. 1. ಪಕ್ಕೆ, 2. ಭುಜದ ಕೆಳಗಿನ/ ಎದೆಯ ಪಕ್ಕದ ಭಾಗ, 3. ಕಿಬ್ಬೊಟ್ಟೆ, 4. ಪಕ್ಕೆಲುಬು ಕೊನೆಯಾಗುವುದು. 1. rib cage, 2. rib cage, 3. central abdomen, 4. the end of rib cage. **ಅಳ್ಳೆಗೆಂತ ಹೊಡ್ಡ ಗುಂಡು ಉಳ್ಳೆಗಾತ್(ಗಾ).** ವಾ: ಅಳ್ಳೆಲೆ ಯಾಕೊ ಬಾರಿ ಬೇನೆಪ.

ಅಳ್ಳೆಸಿಡ್ತ /*aḷḷɛsiḍta*/ ನಾ. 1. ಕಿಬ್ಬೊಟ್ಟೆ ಸಿಡಿತ, 2. ಸ್ನಾಯುಗಳ ಮಿಡಿತ, 3. ಹೊಡೆತ. 1. pain in the lower abdominal region, 2. muscle cramps, 3. intolerable pain. ವಾ: ಅಳ್ಳೆ ಸಿಡ್‌ತದೆ ಆಸ್ಪತ್ರೆಗೆ ಹೋಗಿ ಬಾದೋತ.

ಆ

ಆ ಕಡೆ /*a:kaḍɛ*/ ನಾ. 1. ಅತ್ತ, 2. ಆಚೆಬದಿ, 3. ಆಚೆದಡ. 1. the other side 2. that side.3. on the other side of the bank. ವಾ: ಆಕಡೆ ಹೋಕಾಗದ್‌ತ ಹೇಳ್ದೊ.

ಆ ಕರೆ /*a: karɛ*/ ನಾ. ಆ ಕಡೆ. towards that side. ವಾ: ತಿಂಟೆ ಆ ಕರೆಲಿ ರೊಟ್ಟಿ ಓಡ್ ಉಟ್ಟು ತೆಗಿ ಅದರ.

ಆ ಜನ /*a: jana*/ ನಾ. ಅವರು. them. ವಾ: ಆ ಜನ ಹಂಗೆನೆ ನೆಗಾಡಿಕಂಡೆ ಇರ್‌ದು.

ಆ ಬುಟ್ಟದೆ /*a: buṭṭadɛ*/ ಕ್ರಿ. ಆಗಿ ಬಿಡುತ್ತದೆ. will happen. ವಾ: ನಾಡ್ದ್‌ಗೆ ನಮ್ಮ ಕೆಲ್‌ಸ ಆ ಬುಟ್ಟದೆ.

ಆ ಮಾತ್‌ನ /*a: ma:tina*/ ನಾ. ಆ ಮಾತನ್ನು. that thought/ expression/word. ವಾ: ನೀ ಆ ಮಾತ್‌ನ ಹಿಂದೆ ಮುಂದೆ ಗ್ಯಾನ ಮಾಡದೆ ಹೆಂಗೆ ಹೇಳ್ದ.

ಆ ಲಗಾಯ್ತ್ /*a: laga:yti*/ ನಾ. 1. ಅಲ್ಲಿಂದ, 2. ಆ ಸಂದರ್ಭದಿಂದ. 1. from there, 2. from that situation/moment. ವಾ: ಲಾಗಾಯ್ತ್‌ಂದ ಆ ಕಲ್ಲ್ ಅಲ್ಲೇ ಉಟ್ಟು.

ಆ ಸನಿಗ /*a: saniga*/ ನಾ. 1. ಆ ಶನಿಗಳು, 2. ಬೈಗುಳ ಪದ. 1. troublesome people, 2. a pejorative term. ವಾ: ಆ ಸನಿಗ ಬಂದ ಮೇಲೆ ನಮಿಗೆ ಒಂದೊಂದ್‌ತ ತಪ್ಪಿತ್‌ಲೆ.

ಆ ಸ್ತಾನಲಿ /*a: sta:nali*/ ನಾ. ಆ ಸ್ಥಾನದಲ್ಲಿ. in that place. ವಾ: ಆ ಸ್ತಾನಲಿ ಯಾರೇ ಇದ್ದರೂ ಹಂಗೆ ಮಾಡ್‌ತಿದ್ದೊ.

ಆಂಜುದು /*a:ɲjudu*/ ನಾ. ಮಿಂಚಿದಂತೆ ಕಾಣು. to have a glimpse of something. ವಾ: ಯಾರೋ ಅಲ್ಲಿ ಆಂಜಿದಂಗೆ ಆತ್.

ಆಂ /*a:ṁ*/ ಅ. ಮಗುವಿಗೆ ಊಟ ಕೊಡುವಾಗ ಮಾಡುವ ಅನುಕರಣೆ ಪದ. an onomatopoeic expression used while feeding a child. ವಾ: ಎಲ್ಲಿ ಚುಮ್ಮು ಕೂಸು ಬಾಯಿ ಆ ಮಾಡ್ ನೋಡ್ನೊ.

ಆಂಕರಿಕೆ[1] /*a:ŋkarikɛ*/ ನಾ. 1. ಅಹಂ, 2. ಅಹಂಕಾರ. 1. false ego, 2. arrogance. ವಾ: ಮೊನ್‌ಸಂಗೆ ಐಸುರ ಬಾಕನ ಆಂಕರಿಕೆ ಬಾಕೆ ಬೊತ್ತ್.

ಆಂಕರಿಕೆ[2] /*a:ŋkarikɛ*/ ನಾ. ಮುಟ್ಟಿದರೆ ತುರಿಸುವ ಗಿಡ. a poison ivy. ವಾ: ಆಂಕರಿಕೆ ದೈ ಮುಟ್ರೆ ತೊರ್ಸಿದೆ ಅಲಾ!.

ಆಂಕ್ರಿಕೆ /*a:ŋkrikɛ*/ ನಾ. 1. ತುರಿಕೆ ಸೊಪ್ಪು, 2. ಒಂದು ಬಗೆಯ ಸಸ್ಯ. 1. Urticaceae, 2. Indian stinging nettle. ವಾ: ಆಂಕ್ರಿಕೆ ಸೊಪ್ಪ್‌ನ ಮುಟ್ಟಿರೆ ತೊರ್‌ಸಿದೆ. ಪ: ಅಕಿರೆ(ತು). **ಆಕಿರೆ** /*a:kirɛ*/ ನಾ. ತುರಿಕೆ ಸೊಪ್ಪು. 1. Urticaceae, 2. Indian stinging nettle. ವಾ: ಆಕಿರೆ ಸೊಪ್ಪ್ ಮುಟ್ಟಿರೆ ತೊರ್‌ಸುದು. ಪ: ಆಂಕ್ರಿಕೆ

ಆಂಜುದು /*a:ŋjudu*/ ನಾ. ಕಂಡ ಹಾಗೆ ಆಗುವುದು. illusory. ವಾ: ಎಂತದೋ ಬೆಳಿದಾಗಿ ಕಣ್ಣಿಗೆ ಆಂಜಿದಂಗೆ ಆತ್. **ಆಂಜಿಬುಡು** /*a:ŋjibuḍu*/ 1.

ಕಣ್ಣಿಗೆ ಕಂಡ ಹಾಂಗೆ ಆಗಿ ಮಾಯವಾಗುವುದು, 2. ಕಂಡೂ ಕಾಣದ ಹಾಗಾಗುವುದು. 1. an illusion, 2. delusion. ವಾ: ಕೊತ್ತಿನಂಗೆ ಕಣ್ಣಿಗೆ ಆಂಜಿಬುಡ್ತ್.

ಆಂತೆ /*a:ntɛ*/ ನಾ. ಚಿಕ್ಕ ಜಾತಿಯ ಜಿರಳೆ. a cockroach. ವಾ: ಕೋಂಬರೆ ವಳೆಗೆ ಆಂತೆಗ ತುಂಬಿ ಹೋಗುಟು.

ಆಂಬರ /*a:mbara*/ ನಾ. 1. ಸಾಂಬಾರು, 2. ಗಟ್ಟಿ ಸಾರು. 1. a soup or a broth (eaten by mixing with rice etc), 2. gravy or curry. ವಾ: ಆಂಬರಕೆ ಉಪ್ಪ್ ಬೇಕಿತ್ತ್.

ಆಂವೆ /*a:nve*/ ನಾ. 1. ಆಗುವೆ, 2. ಆಗುತ್ತೇನೆ. 1. I will become, 2. I shall become. ವಾ: ಈ ದೇಸದ ಒಳ್ಳ ಪ್ರಜೆ ಆಂವೆ. ಪ: ಆವೆಂತ

ಆಕ್ಕ್ /*a:kkɨ*/ ಕ್ರಿ. ಆಗಬಹುದು. can happen. ವಾ: ನಾಡ್ದ್ ಬನ್ನೆ ನಾ ಆದೊ? ಆಕ್ಕ್. **ಆಕು** /*a:ku*/ ಆಗಬೇಕು. to fulfil/to become/to serve. **ಊಟ ನಂಗೆ ಮೆಚ್ಚ್‌ಗೆ ಆಕು, ಮಾನ ಉಳ್ದವ್‌ಕೆ ಮೆಚ್ಚುಗೆ ಆಕು(ಗಾ).** ವಾ: ಈ ತಿಂಗಳ್‌ಲಿ ಎಲ್ಲ ಕೆಲ್‌ಸ ಆಕು. ಪ: ಆಕೆ – ಆಗೋದಕ್ಕೆ. **ಆಕಾ** /*a:ka:*/ ಆಗಬೇಕಾ? do you need any help? **ಅಕ್ಕಿ ಕೊಟ್ಟು ಉಂಬಕೆ ಅಕ್ಕನ ಮನೆನೇ ಆಕಾ?(ಗಾ).** ವಾ: ನನ್ನಂದೇನಾರ್ ಉಪಕಾರ ಆಕಾ? ಪ: ಆಕಾಯ್ತ್; ಆಕಾಗಿತ್ತ್ – ಆಗಬೇಕಿತ್ತು. **ಆಕಂಡ್** /*a:kaṇḍɨ*/ ಆಗುತ್ತ. can it be? ವಾ: ಇಸ್ಟ್ ವರ್‌ಸ ಆ ದೈಲಿ ಹೂವ್ ಆಕಂಡ್ ಇತ್ತ್. **ಆಕನ**[1] /*a:kana*/ ಆಗುವಾಗ. during that time. ವಾ: ಗಂಜಿ ಆಕನ ಕರ್‌ದನೆ ಮಕ್ಕಳೆ ಆಗ ಬನ್ನಿ ಬಲಾ. **ಆಕನ**[2] /*a:kana*/ ಆಗುವ ಹೊತ್ತು. during that period. **ಕೊತ್ತಿ ಸಿಟ್ಟ್ ಮಾಡಿಕಂಡ್ ಮನೆ ಹಿಂದೆ ಹೋಗಿ ಕತ್ತಲೆ ಆಕನ ಬಾತ್(ಗಾ).** ವಾ: ಹುತ್ತೆರಿ ಹಬ್ಬಕೆ ಆಕನ ಮನೆಗೆ ಸುಣ್ಣ ಬಣ್ಣ ಬಳಿಯಕು. **ಆಕರೆ** /*a:karɛ*/ ನಾ. ಆಗಬೇಕಾದರೆ. during that. ವಾ: ಕೆಲ್‌ಸ ಆಕರೆ ಹೆಂಗೆ ಮಾತಾಡ್‌ಸಿಕಂಡ್ ಬಂದದೆ ನೋಡ್. **ಆಕಲ್ಸ್** /*a:kalsɨ*/ ನಾ. 1. ಆಕಳಿಕೆ, 2. ಆಕಳಿಸು. 1. yawning, 2. to yawn. ವಾ: ಆಕಲ್ಸ್ ಕಂಡ್ ಯಾಕೆ ಕುದ್ರುದು, ನಿದ್ದೆ ಬಂದರೆ ಹೋಗಿ ಮಲ್ಗ್. ಪ: ಆಕಳ್ಸುದು – ಆಕಳಿಸುವುದು. **ಆಕಾಕನ** /*a:ka:kana*/ ನಾ. ಆಗುವಾಗ. during that time. ವಾ: ಎಲ್ಲ ಕೆಲ್ಸ ಆಕಾಕನ ರಾತ್ರೆ ಆಗೋತು. **ಆಕಿತ್ತ್** /*a:kittɨ*/ ನಾ. ಆಗಬೇಕಿತ್ತು. It should have happened. ವಾ: ಹರ್‌ಸಿವೆ ಹೋದ್ವರ್‌ಸನೇ ಆಕಿತ್ತ್ ತಪ್ಪಿಯೋತ್. **ಆಕಿಲೆ** /*a:kilɛ*/ ಕ್ರಿ. 1. ಆಗಲಿಕ್ಕಿಲ್ಲ, 2. ಆಗುವುದಿಲ್ಲ, 3. ಆಗಲಾರದು. 1. won't happen, 2. will not happen, 3. can not happen. **ಅಕ್ಕಿ ಹಾಕದೆ ಅನ್ನ ಆಕಿಲೆ, ಮಾತ್‌ಲೆ ಹೊಟ್ಟೆ ತುಂಬಿಕಿಲೆ(ಗಾ). ಅಂವಂದ ಹೆಣ ಹೊರಿಕೂ ಆಕಿಲೆ(ನು).** ವಾ: ಈ ಕುಂಟೆನ ಹಂದಾಡ್ಸಿಕೆ ಆಕಿಲೆ. ಪ: ಆಕಿಲ್ಲಿ – ಆಗಬೇಕಿಲ್ಲಿ. **ಆಕಿಲ್ಲೆ** /*a:killɛ*/ ಆಗುವುದಿಲ್ಲ. won't happen. ವಾ: ನನ್ನಂದ ಈ ಸುಳ್ಳ್ ಹೇಳ್ವ ಕೆಲ್ಸ ಆಕಿಲ್ಲೆ. **ಆಕುತ** /*a:kunta*/ ಆಗಬೇಕೆಂದು. to expect something to be completed. ವಾ: ನಾಳೆಗೆ ಗದ್ದೆ ಹೂಡಿ ಆಕುತ ಹೇಳ್‌ತಿದ್ದೊ. **ಆಕೆ ಆದು** /*a:kɛ a:du*/ ಆಗಬಹುದು. it can happen. ವಾ: ಇಂದ್ ಕೊಯ್‌ದರೆ ನಾಳೆ ಹಣ್ಣ್ ಆಕೆ ಆದು. **ಆಕೆ ಮುಟ್ಟ** /*a:kɛ muṭṭa*/ ಆಗುವ ತನಕ. until then. ವಾ: ಕೆಲ್ಸ ಆಕೆ ಮುಟ್ಟ ಮಾತ್ರ ಗ್ಯಾನ ಇರ್‌ದು. **ಆಕೆಬೊತ್ತು** /*a:kebɔtt*/ ಆಗಬಾರದು. it shouldn't happen. ವಾ: ಇನ್ನ್ ಮುಂದೆ ಹಿಂಗೆ ಆಕೆಬೊತ್ತು ಉಗ್ಗಪ್ಪ. **ಆಕೇಲೆ** /*a:kɛ:lɛ*/ 1. ಆಗುವುದಿಲ್ಲ, 2. ಆಗುವುದೇ ಇಲ್ಲ. 1. it will not happen, 2. it will never happen. ವಾ: ನನ್ನಂದ ಈ ಕೆಲ್ಸ ಆಕೇಲೆ. **ಆಕೊರೆ** /*a:kɔrɛ*/ ಆಗಬೇಕಾದರೆ. for something to happen/during. ವಾ: ಸಮೆ ಇದ್ದರೆ ಕೆಲ್ಸ ಆಕೊರೆ ಕಾಲ್ ಹಿಡ್ದವೆ ಇಲ್ಲರೆ ಗೊತ್ತಿಲ್ದಂಗೆ ಓಡಾಡ್ವೆ.

ಆಕಾರ /*a:ka:ra*/ ನಾ. ಆಕಾರ. shape. ವಾ: ಆ ಮನೆದ್ ಆಕಾರ ನೋಡ್ ಬಾರಿ ಪೊರ್ಲುಟ್ಟಲಾ.

ಆಕಾಸ /*a:ka:sa*/ ನಾ. ಆಕಾಶ. the sky. ವಾ: ಆಕಾಸ ನೋಡ್ ಹೆಂಗೆ ಮೋಡಗ ಓಡ್ವೆತ.

ಆಕಾಸಲಿ /*a:kasali*/ ನಾ. ಆಕಾಶದಲ್ಲಿ. in the sky. ವಾ: ಆಕಸಲಿ ಚಂದ್ರ ದೊಡ್ಡದಾಗಿ ಕಂಡದೆ.

ಆಕಾಸವಾಣಿ /*a:ka:sava:ṇi*/ ನಾ. ಆಕಾಶವಾಣಿ. All India Radio. ವಾ: ಕ್ರಸಿ ಬಗ್ಗೆ ಆಕಾಸವಾಣಿಲಿ ಒಳ್ಳ ಲಾಯ್ಕ ಹೇಳ್ವೆ.

ಆಕಿರಿ /*a:kiri*/ ನಾ. ಕೊನೆಯ. last. ವಾ: ಈ ತಿಂಗಳ ಆಕಿರಿಗೆ ನೋಡ್ಳೊ ಅಲಾ ಕೆಲ್ಸದ ಲೆಕ್ಕ. ಪ: ಆಕೀರಿ

ಆಕ್ರಿಕಟ್ಟೆ /*a:krikaṭṭɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಆಕ್ಲಿಕೆ /*a:klikɛ*/ ನಾ. ಆಕಳಿಕೆ. yawning. ವಾ: ಯಾಕಿಸ್ಟ್ ಆಕ್ಲಿಕೆ ಬರ್‌ತಾ ಉಟ್ಟು.

ಆಕ್ಷೀಂ /*a:kṣi:ṁ*/ ಅ. ಸೀನುವ ಶಬ್ದ. sound produced during sneezing -onomatopoeic expression. ವಾ: ಊರಿಗೆ ಕೇಳ್‌ವಂಗೆ ಆಕ್ಷೀಂ ತ ಹೇಳ್ದೆ.

ಆಗ /*a:ga*/ ನಾ. 1. ಆಗ್ಗೆ, 2. ಆ ಸಮಯದಲ್ಲಿ. 1. then, 2. during that time. ವಾ: ಆಗ ನೋಡಿಕಂಬೊನೊ.

ಆಗ್ /*a:gɨ*/ ಕ್ರಿ. ಆಗು. to happen. ವಾ: ಲಾಯ್ಕಲಿ ಓದಿ ದೊಡ್ಡ ಆಪಿಸರ್ ಆಗ್. **ಆಗಂಗಿಲ್ಲೆ** /*a:gaŋgillɛ*/ ಆಗುವಂತಿಲ್ಲ. it couldn't happen. ವಾ: ಇಂದ್ ಯಾವ ಕೆಲ್ಸನೂ ಆಗಂಗಿಲ್ಲೆ ವಾಪಸ್ ಹೋದೆ ಒಳ್ಳದ್. **ಆಗದಂಗೆ** /*a:gadaŋgɛ*/ ಆಗದಂತೆ. to stop it from happening. ವಾ: ಬರೆಕನ ತೊಪ್ಪಾಗದಂಗೆ ನೋಡಿಕಂಕು. **ಆಗಲಿ** /*a:gali*/ 1. ಆಯಿತು, 2. ಆಗಬಹುದು, 3. ಆಗಿಹೋಗಲಿ. 1. to become, 2. may become/may happen, 3. let it happen. ವಾ: ಕೆಲ್‌ಸ ಬೇಗ ಬೇಗ ಆಗಲಿ. **ಆಗಿದ್ದದೆ** /*a:giddadɛ*/ ಆಗಿರುತ್ತದೆ-ಆಗುತ್ತದೆ. it may/ should have happened. ವಾ: ಇನ್ನ್ ನಾಕ್ ದಿನಲಿ ಕೆಲ್ಸ ಆಗಿದ್ದದೆ. **ಆಗಿರಕು** /*a:giraku*/ ಆಗಿರಬೇಕು. may have been completed. ವಾ: ಮೊದೊಳಿಗೆನೆ ತಂಗೆ ಆ ಗೂಡೆ ಆಗಿರಕು. **ಆಗಿರಿಕ್** /*a:girikɨ*/ ಆಗಿರಬಹುದು. happened/done/over. ವಾ: ಆ ಸುದ್ದಿ ಆಗಿರಿಕ್ ಸಾಕ್ ಹೇಳಿಕಾದುಲೆ. **ಆಗಿರ್ತಿತ್ತ್** /*a:girititti*/ ಆಗಿರುತಿತ್ತು. used to get completed before the occurrence of something. ವಾ: ಹಿಂದೆ ಹುತ್ರಿಗಾಕನ ಕೆಲ್ಸ ಎಲ್ಲ ಆಗಿರ್‌ತಿತ್. **ಆಗಿರ್ದು**[1] /*a:girdu*/ ಆಗಿರುವುದು. may have happened/ may have been completed. ವಾ: ಅಲ್ಲಿ ವಾಲಾಡಿಕಂಡ್ ಬಾದು ನಿನ್ನ ಬೋಜಪನೇ ಆಗಿರ್‌ದು ಕಂಡದೆ. **ಆಗಿರ್ದು**[2] /*a:girdu*/ ಆಗಿರಬಹುದು. likely. ವಾ: ಅದ್ ಅವನೆ ಆಗಿರ್ದು. **ಆಗಿರ್ಲಿ** /*a:girli*/ ಆಗಿರಲಿ. let it happen. ವಾ: ದೇವ್ರೇ ಒಮ್ಮೆ ಪಾಸಾಗಿರ್‌ಲಿ ಸಾಕ್. **ಆಗುಟು** /*a:guṭu*/ ಆಗಿದೆ. completed. ವಾ: ಅರ್ವೆ ಹೊಲ್ದ್ ಆಗುಟು. **ಆಗೊಳೆ**[1] /*a:gɔḷɛ*/ ಆಗಿದ್ದೇನೆ. I have become. ವಾ: ನಾ ಮೊಂತ್ರಿ ಆಗೊಳೆ. **ಆಗೊಳೆ**[2] /*a:gɔḷɛ*/ ಆಗಿದ್ದೀನಿ, ಆಗಿದ್ದೇನೆ. I have become, I became. ವಾ: ಒಳ್ಳದ್ ಹೇಳಿ ಇಂದ್ ನಾ ಎಲ್ಲವ್ನ ಕೆಟ್ಟವ್ನಾಗೊಳೆ. **ಆಗೊಳೆನಾ** /*a:gɔḷɛna:*/. ಆಗಿದ್ದೇನಾ? Have i become? ವಾ: ನಾ ದಪ್ಪ ಆಗೊಳೆನಾ? **ಆಗೊಳೇಂತ** /*a:gɔḷɛ:nta*/ ಆಗಿದ್ದೇನೆಂದು. became. ವಾ: ನಾ ಸಪೂರ ಆಗೊಳೇಂತ ಹೇಳ್ದೊ. **ಆಗುಹೋಗು** /*a:guho:gu*/ 1. ಮನೆಯಲ್ಲಿ ನಡೆಯುವ ಕಾರ್ಯಕ್ರಮಗಳು, 2. ಚಟುವಟಿಕೆಗಳು. 1. events/ incidnets/programs at home, 2. activities. ವಾ: ದೊಡ್ಡ ಮನೆಲಿ ಆಗುಹೋಗು ಆಗ್ತಿದ್ದದೆ. **ಆಗೊಳೊ** /*a:gɔḷɔ*/ ಆಗಿದ್ದಾರೆ. accomplished/ became. ವಾ: ಇಬ್ಬರ್ ಮಕ್ಕ ಪಾಸ್ ಆಗೊಳೊ. **ಆಗೊಳ್ದ್** /*a:gɔḷdɨ*/ ಆಗಿರುವುದು. something that has happened. ವಾ: ಅಂದ್ ಅದೇ ಆಗೊಳ್ದ್. **ಆಗೋತಿತ್** /*a:gɔ:titɨ*/ 1. ಆಗುತ್ತಿತ್ತು 2 ಆಗಿ ಹೋಗುತ್ತಿತ್ತು. 1. was going on, 2. it must have happened by now. ವಾ: ಅಯ್ಯೋ ಮಳೆ ಬರದಿದ್ರೆ ತೋಟಲಿ ಕಾಡ್ ಕಡಿಯದು ಆಗೋತಿತ್. **ಆಗ್ತಿತ್** /*a:gtitɨ*/ ಆಗುತಿತ್ತು. was happening. ವಾ: ನಿನ್ನೆನೆ ಆಪಿಸ್ ಕಡೆ ಹೋಗಿದ್ದರೆ ಕೆಲ್‌ಸ ಆಗ್ತಿತ್ತ್. **ಆಗ್ಬಡ** /*a:gbaḍa*/. ಆಗುವುದು ಬೇಡ. shouldn't become. ವಾ: ನೀನ್ ಅವನಂಗೆ ಆಗ್ಬಡ. **ಆಗ್ಯುಟ್ಟು** /*a:gyuṭṭu*/ ಆಗಿದೆ. happened. ವಾ: ಜಂಪರ್ ಹೊಲ್ಯಕೆ ಕೊಟ್ಟಿದೆಲ ಆಗುಟಾ? ಓ ಆಗ್ಯುಟ್ಟು. **ಆಗ್ಯೊಳದ್** /*a:gyɔḷadɨ*/ ಆಗಿರುವುದು. something happened. ವಾ: ಹಿಂಗೆ ಆಗ್ಯೊಳದ್. **ಆಗ್ಲಿ** /*a:gli*/ ಆಗಲಿ. let it be. ವಾ: ಅವ್ವ ನಂಗೆ ಕೆಲ್‌ಸ ಸಿಕ್ಕಿತ್ ನಾಳೆನೆ ಹೊರ್‌ಡೊಕು, ಆಗ್ಲಿ ಕೂಸು ಒಳ್ಳದಾಗಲಿ.

ಆಗೋಮೊ /*a:gɔ:mɔ*/ ಕ್ರಿ. ಆಗುವ. something that can happen. ವಾ: ನಾವ್ ಮೊದ್ವೆ ಆಗಮೊ.

ಆಗೊಮೊ /*a:gɔmɔ*/ ಕ್ರಿ. ಆಗೋಣ. we shall become. ವಾ: ನಾವ್ ಅವರ ಪಾಲ್‌ದಾರರ್ ಆಗೊಮೊ.

ಆಗೊಳೂ /*a:gɔḷu:*/ ನಾ. ಆವಾಗಲೂ. during then. ವಾ: ಆಗೊಳೂ ಹಿಂಗೆನೆ ಇದೇ ಗೋಳು.

ಆಗಳೇ /*a:gaḷɛ:*/ ನಾ. ಆವಾಗಲೇ. during/while. ವಾ: ಅಣ್ಣ ಆಗಳೇ ಹೋದೊ ಮನೆಗೆ. **ಆಗಲೆಂದ** /*a:galɛnda*/ 1. ಅಷ್ಟು ಹೊತ್ತಿನಿಂದ, 2. ಆಗಿನಿಂದ. 1.

for some time, 2. since then. ವಾ: ಆಗಲೆಂದ ಅವು ನಿನ್ನ ಕರೆತೊಳೊ.

ಆಗಳ್ಸು /*a:gaḷsu*/ ನಾ. ಆಕಳಿಕೆ. yawning. ವಾ: ಆಗಳ್ಸುದು ಯಾಕೆ ನಿದ್ದೆ ಬಂದರೆ ಹೋಗಿ ಮೊಲ್ಗ್. ಪ: ಆಕಳ್ಸು

ಆಗಿನ /*a:gina/nɛ*/ ನಾ. 1. ನೇಮ, 2. ಕೋಲ, 3. ಧರ್ಮ ನಡಾವಳಿ, 4. ಜಾತ್ರೆಗೆ ಗೊನೆ ಕಡಿದ ನಂತರದ ದಿನಗಳಲ್ಲಿ ಮುಂದೆ ಆ ಕಾರ್ಯಕ್ರಮ ಮುಗಿಯುವ ತನಕ ಊರಿನಲ್ಲಿ ಯಾವುದೇ ಕಾರ್ಯಕ್ರಮ ನಡೆಯುವಂತಿಲ್ಲ ಮತ್ತು ಆಗಿನ ಸಂದರ್ಭದಲ್ಲಿ ಮಾಂಸಾಹಾರ ಸೇವನೆ ನಿಷಿದ್ಧ. 1. a custom, 2. worship a spirit/deity/bhuta, 3. a religious ritual, 4. prohibition on meat consumption and any other programmes during the period of temple/car/chariot festival. ವಾ: ಆಗಿನ ದಿನಗಳ್ಲಿ ಮೀನ್ ಮಾಸ ಮಾಡಿಕಾಗದ್, ಸುದ್ದಲಿ ಇರೊಕು.

ಆಚಂದಿರ /*a:candira*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಆಚರಿ /*a:cari*/ ನಾ. 1. ಜಾತಿಸೂಚಕ ಪದ, 2. ಆಚಾರಿ, 3. ಮರ ಕೆಲಸದವರು, 4. ಬಡಿಗ, 5. ಆಚಾರ್ಯ, 6. ಆಚಾರವಂತ. 1. term referring to a caste, 2. an artisan, 3. carpenter, 4. the one who works with wood (carpenter), 5. a learned person/teacher, 6. one who conducts oneself very well. ವಾ: ಮರ ಕೆಲ್ಸನ ಆಚರಿನೆ ಮಾಡ್ದು. **ಆಚಾರಿ** /*a:ca:ri*/ 1. ಬಡಗಿ, 2. ಮರದ ಕೆಲಸಗಾರ, 3. ಜಾತಿ ಸೂಚಕ ಪದ. 1. carpenter, 2. one who works with wood (carpenter), 3. term referring to a caste. ವಾ: ಆಚಾರಿಗ ಮರದ ಕೆಲ್ಸ ಮಾಡ್ದು.

ಆಚರ್ಣೆ /*a:carṇɛ*/ ನಾ. ಆಚರಣೆ. celebration. ವಾ: ಹಿಂದೆಂದ ಹಿರಿಕರ್ ನಡ್‌ಸಿಕಂಡ್ ಬಂದ ಆಚರ್ಣೆನ ನಿಲ್ಲಿಸಿಕೆ ಬೊತ್ತ್. **ಆಚರಿಸೊಕು/ ಆಚರ್‌ಸೋಕು** /*a:carisɔku/ a:carsɔ:ku*/ ಆಚರಿಸಬೇಕು. must celebrate. ವಾ: ವರ್‌ಸ ವರ್‌ಸ ಹಬ್ಬ ಆಚರಿಸೊಕು.

ಆಚಾರ /*a:ca:ra*/ ನಾ. 1. ಕಟ್ಟುಪಾಡು, 2. ಒಳ್ಳೆಯ ನಡತೆ. 1. custom 2. proper behaviour. **ಆಚಾರಕ್ಕೂ ಆತ್, ನೀತಿಗೂ ಆತ್(ಗಾ).** ವಾ: ಅವು ಆಚಾರ ವಿಚಾರಗಳ ಇಂದಿಗೂ ಬುಟ್ಟಿತ್‌ಲೆ.

ಆಚೆ[1] /*a:cɛ*/ ಸನಾ. ನಂತರ. after/later. ವಾ: ಆಚೆ ಕರೆಗೆ ಬಾ.

ಆಚೆ[2] /*a:cɛ*/ ಸನಾ. 1. ಆತ್ತ, 2. ಆಕಡೆ. 1. there, 2. that side. ವಾ: ಆಚೆ ನೋಡ್‌ಬಡ. **ಆಚೀಚೆ** /*a:ci:cɛ*/ ಆಚೆ ಈಚೆ. here and there. ವಾ: ಕೆಲ್‌ಸ ಹಙ್ಞ ಆಚೀಚೆ ಆದು ನೋಡಿಕಣಿ. **ಆಚೆ ಕರೆ** /*a:cɛ karɛ*/ 1. ಆ ಬದಿ. that side. ವಾ: ಕೆಸ ತಾಕೆ ಹಳ್ಳಂದ ಆಚೆ ಕರೆಗೆ ಹೋಕು. **ಆಚೆಮನೆ** /*a:cɛmanɛ*/ ಪಕ್ಕದ ಮನೆ. neighbour's house. ವಾ: ಆಚೆಮನೆಲಿ ನಾಡ್ದ್ ಮೊದುವೆ ಉಟ್ಟು.

ಆಜಡ್ಕ /*a:jaḍka*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಆಜಿನಮರ /*a:jinamara*/ ನಾ. ಹೆಬ್ಬಲಸು ಮರ. wild jack tree. ವಾ: ಆಜಿನ ಮರ ಬಾರಿ ದೊಡ್ಡದಾದೆ. **ಆಜಿನ ಹಣ್ಣ್** /*a:jinahaṇṇi*/ ಹೆಬ್ಬಲಸು ಹಣ್ಣು. wild jack fruit. ವಾ: ಆಜಿನ ಹಣ್ಣ್ ನೋಡಿಕೆ ಹಲ್ಸ್ ನಣ್ಣ್ ನಂಗೆ ಉಟ್ಟಲಾ.

ಆಜಿನಕಾಯಿ /*a:jinaka:yi*/ ನಾ. ಹೆಬ್ಬಲಸು ಕಾಯಿ. unripe fruit of wild jack tree. ವಾ: ಆಜಿನ ಕಾಯಿ ಮರ ಕಾಡ್‌ಲಿ, ತೋಟಲಿ ಎಲ್ಲ ಕಡೆ ಇದ್ದದೆ.

ಆಜೀರ /*a:ji:ra*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಆಟ /*a:ṭa*/ 1. ಕ್ರೀಡೆ, 2. ನಾಟಕ. 1. sports, 2. drama/play. ವಾ: ಮನೆ ಒಳಗೆ ಸೇರ್‌ಕಂಡ್ ಎಂತ ಮಾಡಿರೆ ಹೊರೆಗೆ ಹೋಗಿ ಆಟ ಆಡಿಕಂಡ್ ಬನ್ನಿ. **ಆಟ ನೋಡ್ನೋತ** /*a:ṭa nɔ:ḍnɔ:ta*/ ಆಟ ನೋಡೋಣಾಂತ. to watch a play. ವಾ: ಆಟ ನೋಡ್ನೋತ ಕುದ್ದೆ. **ಆಟ ಪಾಟ** /*a:ṭa pa:ṭa*/ ಆಟ ಪಾಠ. play and studies. ವಾ: ಬರೀ ಆಡ್ದಲ್ಲ, ಆಟಪಾಟ ಎರ್‌ಡೂ ಬೇಕಲ. **ಆಟಆಡ್ದು** /*a:ṭa'a:ḍdu*/ ಆಟ ಆಡುವುದು. playing. ವಾ: ಎಲ್ಲ ಸೇರ್‌ಕಂಡ್ ಎಂತ ಮಾಡಿರೆ ಮಕ್ಕಳೆ? ಆಟ ಆಡ್ದು ಉಗ್ಗಪ್ಪ. **ಆಟಕೆ** /*a:ṭakɛ*/ ಆಟಕ್ಕೆ. to play. ವಾ: ಆಟಕೆ ನಾ ಬನ್ನೆ ನನ್ನೂ ಸೇರ್‌ಸಿ ಕಣಿ. **ಆಟದವರ** /*a:ṭadavara*/ ಆಟ ಆಡುವವರ. those who play. ವಾ: ಆಟ ಆಡ್ಕನ ಆಟದವರ ಹಕ್ಕಲೆ ಹೋಗ್ಬಡ.

ಆಟಿ /*a:ṭi*/ ನಾ. ಅರೆಭಾಷೆಯ ನಾಲ್ಕನೇಯ ತಿಂಗಳು. the fourth month in Arebhashe. **ಆಟಿಂದತ್ತ ಅರೆಗಾಲ ಮಾಯಿಂದತ್ತ ಮಳೆಗಾಲ(ಗಾ).** ವಾ: ಆಟಿ ತಿಂಗಳ್ಲಿ ಸುಬಕಾರ್‌ಯ ಮಾಡ್ತುಲೆ ಅಲಾ.

ಆಟಿ ಪಾಯ್ಸ /*a:ṭi pa:ysa*/ ನಾ. ಆಟಿ ಹದಿನೆಂಟನೇ ದಿನ ಕೊಡಗಿನಲ್ಲಿ ಮದ್ದು ಸೊಪ್ಪಿನಿಂದ ಮಾಡುವ ಪಾಯಸ, ಆಟಿ ತಿಂಗಳಲ್ಲಿ ಮಾಡುವ ಹದಿನೆಂಟು ತರಹದ ಮದ್ದಿನ ಅಂಶಗಳಿರುವ ಮದ್ದು. a pudding that is made out of the leaves of Maddu Thoppu or the leaves of Justicia wynaadensis . It is prepared on the 18th day after the onset of Aati month and it has 18 medicinal properties. ವಾ: ಆಟಿ ತಿಂಗ ಸುರಾಗಿ ಹದ್ನೆಂಟನೇ ದಿನಕ್ಕೆ ಆಟಿ ಸೊಪ್ಪುಲಿ ಆಟಿ ಪಾಯ್ಸ ಮಾಡೋಕು, ಆಗ ಅದರ್‌ಲಿ ಹದಿನೆಂಟ್ ಮೊದ್ದ್‌ನ ಗುಣ ಇದ್ದದೆಗಡ.

ಆಟಿ ಸೊಪ್ಪು /*a:ṭi soppu*/ ನಾ. 1. ಒಂದು ವಿಧದ ಔಷಧಿ ಸೊಪ್ಪು, 2. ಆಟಿ ತಿಂಗಳಲ್ಲಿ ಈ ಸೊಪ್ಪಿನ ಕಷಾಯ ಮಾಡಿ ಕುಡಿಯುತ್ತಾರೆ, 3. ಆಟಿ ತಿಂಗಳಲ್ಲಿ ಪಾಯಸ ಮಾಡುವ ಸೊಪ್ಪು. 1. a shrub with medicinal properties, 2. Aati kashaya is prepared using these leaves, 3. leaves with which aati pudding is prepared. ವಾ: ಆಟಿ ಸೊಪ್ಪುಲೇ ಆಟಿ ಪಾಯ್ಸ ಮಾಡ್ತು.

ಆಟಿಕುದ್ರುದು /*a:ṭikudrudu*/ ನಾ. ಮಗಳು ಮದುವೆಯಾಗಿ ಆಟಿ ತಿಂಗಳಲ್ಲಿ ತವರುಮನೆಗೆ ಬಂದಿರುವುದು. married daughter visiting her parents during the month of Aati. ವಾ: ಇಬ್ಬರು ಮಗಕ ಆಟಿ ಕುದ್ರಿಕೆ ಬಂದೊಳನಾ.

ಆಡಳ್ತೆ /*a:ḍaḷtɛ*/ ನಾ. ಆಡಳಿತ. administration. ವಾ: ಈಗ ಬಂದ ಸರ್‌ಕಾರಂದ ಒಳ್ಳ ಆಡಳ್ತೆ ಸಿಕ್ಕಿದೆನ ನೋಡೋಕು.

ಆಡ್[1] /*a:ḍɨ*/ ನಾ. ಆಡು. goat. **ಆಡ್ ಮುಟ್ಟದ ಸೊಪ್ಪಿಲ್ಲೆ(ಗಾ). ಆಡ್ ಬೇಕುಂತೇಳ್ದವಂಗೆ ಆನೆ ಸಿಕ್ಕಿದಾಂಗೆ(ನು).** ವಾ: ಬಾಣ್ತಿಗಳಿಗೆ ಆಡ್ ಮಾಸನ ಕೊಟ್ಟವೆ.

ಆಡ್[2] /*a:ḍɨ*/ ಕ್ರಿ. 1. ಆಡು, 2. ಆಟ. 1. played, 2. play ವಾ: ಆಟ ಆಡಿ ಸುಸ್‌ಉಗ್ಗಪ್ಪ್ ಇಂದ್. **ಆಡಿಕಂಡ್** /*a:ḍikaṇḍɨ*/ ಆಡಿಕೊಂಡು. played. ವಾ: ಮಕ್ಕ ಎಲ್ಲಿ ಹೋದೊತ? ಆಗಳೆ ಅಂಗಳಲಿ ಆಡಿಕಂಡ್ ಇದ್ದೊಲ. **ಆಡಿಕನ** /*a:ḍikana*/ ಆಟವಾಡುವಾಗ. while playing. ವಾ: ಆಡಿಕನ ಬಿದ್ದ್ ಗಾಯ ಆಗುಟು. **ಆಡಿಕೆ** /*a:ḍikɛ*/ ಆಟ ಆಡಲು. to play. ವಾ: ಅವಯ್ಯ ನಾ ಆಡಿಕೆ ಹೋನೆ. **ಆಡಿಸಿಕೊಣೊಕು** /*a:ḍisikɔŋɔku*/ ಆಡಿಸಿಕೊಳ್ಳಬೇಕು. to mix properly. ವಾ: ಮಜ್ಜಿಗೆನ ಆಡಿಸಿಕೊಣೊಕು (ಆಡ್ಸಿಕೊಣೊಕು). **ಆಡುವೊ** /*a:ḍuvɔ*/ ಆಡಬಹುದು. can play. ವಾ: ನಂಗೆ ಗೊತ್ತೆ ಅವು ಆಡುವೊ ಕಂಡದೆ. **ಆಡೊಮೊ** /*a:ḍɔmɔ*/ ಆಡುವಾ. shall we play. ವಾ: ನಾಳೆ ಆಡೊಮೊ ಅಲಾ. **ಆಡ್ಕನ** /*a:ḍkana*/ 1. ಆಡುತ್ತಿರುವಾಗ, 2. ಆಡುವಾಗ. 1. while playing, 2. during the play. **ಆಡ್ಕನ ಇರ್ಕನ ಊರೆಲ್ಲ ನೆಂಟರ್ತ(ಗಾ).** ವಾ: ಆಡ್ಕನ ಬಿದ್ದದ್.

ಆಡ್ ಮಾಸ /*a:ḍɨ ma:sa*/ ನಾ. ಆಡು ಮಾಂಸ. goat's meat. ವಾ: ಆಡ್ ಮಾಸ ತಿಂದರೆ ಒಳ್ಳದ್.

ಆಡ್ ಸೋಗೆ /*a:ḍɨ sɔ:gɛ*/ ನಾ. 1. ಆಡುಸೋಗೆ ಸೊಪ್ಪು, 2. ಆಡು ಸೋಕದ ಗಿಡ, 3. ಆಡು ಮುಟ್ಟದ ಸೊಪ್ಪು, 4. ಅಲ್ಲೂಗೆ, 5. ಎಡೆ ಮುತ್ತಂಡಿ ಸೊಪ್ಪು. 1. malabar nut, adhatoda, vasuka shrub, 2. a shrub that is beyond the reach of a goat, 3. Tylophora indica, 4. leaf of malabar nut shrub, 5. leaf of vasuka shrub. ವಾ: ಆಡ್ ಸೋಗೆನ ಕಪ, ಸೀತ, ನ್ಯಾವಸ, ಪಿತ್ತವಿಕಾರ, ನಿತ್ರಾಣ ಕಮ್ಮಿ ಮಾಡಿಕೆ ಮೊದ್ದಾಗಿ ಬಳ್ಸುವೆ.

ಆಡ್ದರ್ನೆ(ಆಡ್ದರ್‌ನೇ) /*a:ḍdarnɛ (a:ḍdarnɛ◈*/ ನಾ. ಆಡುವುದನ್ನೇ. referring to the play. ವಾ: ಮಕ್ಕೆಲ್ಲ ಮೊಬೈಲ್ ಬಂದ ಮೇಲೆ ಆಡ್ದರ್ನೆ (ಆಡ್ದರ್‌ನೇ) ನಿಲ್ಸಿಬುಟ್ಟೊಳೊ.

ಆಡ್ಯಾಡಿ /*a:ḍya:ḍi*/ ನಾ. ಆಡಿ ಆಡಿ. to play continuously. ವಾ: ಆಡ್ಯಾಡಿ ಬಿದ್ದದೇ ಆತಿಂದ್.

ಆಡ್ಸ್[1] /*a:ḍsɨ*/ ಕ್ರಿ. ಆಡಿಸು. to play with someone/ to make someone play. ವಾ: ಕೂಸುನ ಆಡ್ಸಿ ಈಗ ಬಂದದಸ್ಟೆ.

ಆಡ್ಸ್[2] /*a:ḍsɨ*/ ಕ್ರಿ. 1. ಅಲ್ಲಾಡಿಸು, 2. ಅಲುಗಾಡಿಸು. 1.

to shake, 2. to rock. ವಾ: ದೈನ ಆಡ್ಸ್ ಆಗ ಹೂವು ಬಿದ್ದದೆ.

ಆಣಿ[1] /*a:ṇi*/ ನಾ. ಮೊಳೆ. nail. ವಾ: ಗೋಡೆಗೆ ಹೆಚ್ಚಿ ಆಣಿ ಹೊಡಿಬಡಿ.

ಆಣಿ[2] /*a:ṇi*/ ನಾ. ಅಂಗಾಲಿಗೆ ಏನಾದರು ತಗುಲಿ ದುರ್ಮಾಂಸ ಬೆಳೆಯುವುದು. growth of calluses in the feet. **ಕಾಂಬಕೆ ರಾಣಿ ಮೈ ಎಲ್ಲ ಆಣಿ(ಗಾ).** ವಾ: ಕಾಲ್‌ಲಿ ಆಣಿ ಆಗುಟು ದಪ್ಪ ಆಗಿ ನಡ್ಯಕಾದುಲೆ.

ಆಣಿಕಲ್ಲ್ /*a:ṇikallɨ*/ ನಾ. ಆಲಿಕಲ್ಲು. hail storm. ವಾ: ಮಳೆ ಜತೆ ಆಣಿಕಲ್ಲ್ ಬಿದ್ದುಟು.

ಆಣೆ[1] /*a:ṇɛ*/ ನಾ. ನಾಣ್ಯ. coin. ವಾ: ನಾಕ್ ಆಣೆಗು ಅದ್ ಹೋಕಿಲೆ.

ಆಣೆ[2] /*a:ṇɛ*/ ನಾ. ಆಣೆ ಇಡುವುದು. to swear. ವಾ: ನಿನ್ನ ಮೇಲೆ ಆಣೆ ಮಾಡಿ ಹೇಳ್ನೆ ಅಕಯ ನಾ ಕದ್ದತ್ಲೆ. **ಆಣೆ ಮಾಡ್** /*a:ṇema:ḍɨ*/ ದೇವರ ಅಥವಾ ತನ್ನ ಆತ್ಮೀಯರ ಹೆಸರು ಹೇಳಿ ಪ್ರಮಾಣ ಮಾಡುವುದು. to swear in the name of god or on the people who are close to someone. ವಾ: ಕುಡಿಯದುಲೆತ ಆಣೆಮಾಡ್.

ಆಣ್ಯಲ /*a:nyaḷa*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಆತ್ /*a:tɨ*/ ಕ್ರಿ. 1. ಆಯಿತು, 2. ಪೂರ್ಣವಾಯಿತು, 3. ಪೂರ್ಣವಾಗಿದೆ. 1. finished/completed/done, 2. completed, 3. accomplished. **ಆಡ್ಡೆ ಆಟ ಆತ್(ಗಾ).** ವಾ: ನಂದ್ ಊಟ ಆತ್. ಪ: ಆತ್‌ಂತೇಳಿ – ಆಯಿತು ಎಂದು ಹೇಳಿ. **ಆತ** /*a:ta*/ ಆಯ್ತಾ. is it done/over/completed? ವಾ: ಮೀದ್ ಆತ ಬಾನೆ ಒಮ್ಮೆ ಬೇಗ ಎಸ್ಟ್ ಹೊತ್ತ್ ಮಾಡಿಯಾ. **ಆತಾ** /*a:ta:*/ ಆಯಿತಾ. Have you finished? ವಾ: ನಿಂದ್ ಎಲ್ಲ ಬರ್‌ದ್ ಆತಾ? **ಆತಿತ್** /*a:titɨ*/ ಆಗುತ್ತಿತ್ತು. it could have happened. ವಾ: ನಿನ್ನೆನೆ ಹೇಳ್ರೆ ಆತಿತ್. ಪ: ಆತಿತ್ತ್. **ಆತಿತ್ಲೆ** /*a:titlɛ*/ ಆಗುತ್ತಿರಲಿಲ್ಲ. it couldn't have happened. ವಾ: ಹೆಲ್ಮೆಟ್ ಹಾಕಿದ್ರೆ ತಲೆಗೆ ಪೆಟ್ಟ್ ಆತಿತ್ಲೆ. **ಆತಿದ್ದಂಗೆ** /*a:tiddaŋgɛ*/ 1. ಆಗುತ್ತಿದ್ದ ಹಾಗೆ, 2. ಆಗುವಾಗ, 3. ಆಗುತ್ತಿದ್ದಂತೆ. 1. at the same time/while 2. during that time, 3. in that period. ವಾ: ಕೆಲ್ಸ ಆತಿದ್ದಂಗೆ ಮಳೆ ಬಾತ್. **ಆತಿಲ್ಲರೆ** /*a:tillarɛ*/ ಇಲ್ಲದಿದ್ದರೆ. if not/otherwise. ವಾ: ಆತಿಲ್ಲರೆ ನೀ ಮನೆಗೆ ಹೋಗ್ ನಾ ಮತ್ತೆ ಬನ್ನೆ. **ಆತಿಲ್ಲೆ** /*a:tillɛ*/ ಆಗಲಿಲ್ಲ. it didn't happen. ವಾ: ಮನೆದ್ ಸಾರಣೆ ಕೆಲ್‌ಸ ಆತಿಲ್ಲೆ. ಪ: ಆತಿಲೆ. **ಆತುಟು** /*a:tuṇṭu*/ 1. ಆಗುತ್ತಿದೆ, 2. ಆಗುತ್ತಾ ಇದೆ, 3. ಆಗುಟು, 4. ಆವುಟು. 1. going on/in progress, 2. on going, 3. under way, 4. being performed. ವಾ: ಲೆಕ್ಕ ಬರ್‌ದ್ ಆತುಟು. **ಆತೇಲೆ** /*a:tɛ:lɛ*/ ಆಗಲೇ ಇಲ್ಲ. it didn't happen. ವಾ: ನಂದ್ ಓದಿ ಆತೇಲೆ. **ಆತೊ** /*a:tɔ*/ 1. ಆಯಿತೊ, 2. ಆಯಿತಾ. 1. did it happen?, 2. are you done? ವಾ: ನಿನ್ನದ್ ಬರ್‌ದ್ ಆತೊ. **ಆತೋಂತ** /*a:tɔ:nta*/ ಆಯಿತೋ ಅಂತ. it may have happened. ವಾ: ನಿಂದ್ ಓದಿ ಆತೋಂತ. **ಆತ್‌ಂತ** /*a:tɨnta*/ ಆಯಿತೆಂದು. to say that something has been completed. ವಾ: ಉಂಡ್ ಆತ್‌ಂತ ಹೇಳ್‌ತ್. **ಆತ್‌ಗಡ** /*a:tɨgaḍa*/ ಆಯಿತಂತೆ. it seems something has been completed. ವಾ: ಅಂವಂದ್ ಓದಿ ಆತ್ ಗಡ. **ಆತ್ಲರೆ** /*a:tlarɛ*/ ಆಗದಿದ್ದರೆ. if it doesn't work/happen. ವಾ: ಕೆಲ್‌ಸ ಲಾಯ್ಕಲಿ ಆತ್ಲರೆ ಕರ್‌ದ್ ಹೇಳಿರೆ ಆತ್. **ಆತ್ಲೆ** /*a:tlɛ*/ ಆಗಲಿಲ್ಲ. not completed/finished/done. ವಾ: ನಿಂದ್ ಉಂಡಾತ ಉಗ್ಗಪ್ಪ? ಆತ್ಲೆ ಕೂಸು.

ಆತುರ /*a:tura*/ ಕ್ರಿ. 1. ಅವಸರ, 2. ತ್ವರೆ. 1. urgency, 2. speed. **ಆತುರಗಾರಂಗೆ ಬುದ್ಧಿ ಮಂಕ್(ಗಾ). ಆತುರಂದ ಅನಾಹುತ(ನು).** ವಾ: ಆತುರಲಿ ಕೊಯ್‌ಕಂಡ ಮೂಕು ಸಮಾದಾನ ಆದ ಮೇಲೆ ಬಾಕಿಲೆ.

ಆತ್ ಕಾಯಿ /*a:tɨ ka:yi*/ ನಾ. ಕಾಯಿಯ ಹೆಸರು. an unripe fruit. ವಾ: ಆತ್‌ಕಾಯಿಂತೇಳ್‌ದು ಒಂದ್ ಕಾಯಿನ ಹೆಸ್‌ರ್.

ಆತ್ ಮರ /*a:tɨ mara*/ ನಾ. ಮರಗಳಲ್ಲಿ ಒಂದು ಬಗೆ. a tree. ವಾ: ಆತ್‌ಮರತೇಳ್‌ದು ಒಂದ್ ಜಾತಿನ ಮರ.

ಆದರ್ಸ್ /*a:darsɨ*/ ನಾ. 1. ಆದರಿಸು, 2. ಗೌರವಿಸು. 1. to honour, 2. to show respect. ವಾ: ಹಿರಿಯರ್‌ನ ಹೆಂಗೆ ಆದರ್‌ಸೋಕುತ ಸುರೂಗೆ ಕಲಿ.

ಆದ್ /*a:dɨ*/ ಕ್ರಿ. ಆಯಿತು. completed/over/done. **ಆದು** /*a:du*/ 1. ಆಗಬಹುದು, 2. ಆಗುತ್ತದೆ. 1. it may happen, 2. will happen. ವಾ: ಈ ಬಟ್ಟೆ

ಅಂವಂಗೆ ಸೆರಿ ಆದು. **ಆದಾ** /*a:da:*/ ಆಗಬಹುದಾ? would it do?/Is it proper? ವಾ: ಈ ಅರ್ವೆ ಸೆರಿ ಆದಾ ನೋಡ್. **ಆದಂಗೆ[1]** /*a:daŋgɛ*/ ಆದ ಹಾಗೆ. as if happened. ವಾ: ದಿನ ಆದಂಗೆ ಆದಂಗೆ ಎಲ್ಲ ಸೆರಿಯಾದೆ. **ಆದಂಗೆ[2]** /*a:daŋgɛ*/ ಆದ ಹಾಗೆ. as if something happened. ವಾ: ನಿಂದ್ ಬರ್‌ದ್ ಆದಂಗೆ ನಂಗೆ ಕೊಡು ಆತ. **ಆದಂವ** /*a:danva*/ ಆದವನು. the one who is. ವಾ: ಹಿರಿಯ ಆದಂವ ಬುದ್ದಿ ಮಾತ್ ಹೇಳಿರೆ ಕೇಳುವೆ. **ಆದಂವಂಗೆ** /*a:danvaŋgɛ*/ ಆದವನಿಗೆ. the one who is. ವಾ: ಹಿರಿಯ ಆದಂವಂಗೆ ಹಣ್ಣನಾದ್ರು ಮನೆಕಡೆ ನಿಗಾ ಇರೋಕು. **ಆದವೆ** /*a:davɛ*/ ಆಗುತ್ತಾರೆ. to happen/in agreement with. ವಾ: ಇವೆಲ್ಲ ನಿಂಗೆ ಮುಂದಕೆ ಅತ್ತೆಕ ಆದವೆ, ಬೇಕರೆ ನೋಡಿಕ. ಪ: ಆದವೆಂತ – ಆಗುತ್ತಾರೆಂದು. **ಆದುಟ್ಟು** /*a:duṭṭu*/ ಕ್ರಿ. ಆಗುತ್ತದೆ. will happen. ವಾ: ಒಮ್ಮೊಮ್ಮೆ ಹಿಂಗೆ ಆದುಟ್ಟು. **ಆದುಲೆ** /*a:dulɛ*/ 1. ಆಗುವುದಿಲ್ಲ, 2. ಆಗಲಾರದು. 1. won't happen, 2. can't happen. **ಉಪ್ಪರಿಗೆಲಿ ಇದ್ದರೂ, ಉಪ್ಪು ಇಲ್ಲದೆ ಅದುಲೆ(ಗಾ). ನೆರಳ್ ಕಂಡರೆ ಆದುಲೆ(ನು).** ವಾ: ಅವಳ ಕಂಡರೆ ಆದುಲೆ. **ಆದುಲೆತ** /*a:dulɛta*/ ಆಗುವುದಿಲ್ಲವೆಂದು. was assumed that it won't happen. ವಾ: ಆದುಲೆತ ಕುದ್ದರೆ ಎಂತದೂ ಮಾಡಿಕೆ ಆದುಲೆ. **ಆದೆ** /*a:dɛ*/ ಆಗುತ್ತದೆ. it will happen. ವಾ: ನಿನ್ನಂದ ಆದೊ ಈ ಮರ ಎತ್ತಿಕೆ? ಯಾಕಾದುಲೆ ಆಗಿಯೇ ಆದೆ. **ಆದೆತ** /*a:dɛta*/ 1. ಆಗುತ್ತದೆ, 2. ಆಗುತ್ತದೆಯೆಂದು. 1. it will happen, 2. that something will happen. ವಾ: ಕೆಲ್ಸಕೆ ಸೇರಿ ನಾಳೆಗೆ ಒಂದು ತಿಂಗ ಆದೆತ ಅವ್ವಂಗೆ ಹೇಳ್. **ಆದೆನಾ** /*a:dɛna:*/ ಆಗಬಹುದೇ? is it okay? is it alright? **ಆದೆಯೋ** /*a:dɛyɔ:*/ ಆಗುವುದೇ? will it happen? ವಾ: ಎಲ್ಲ ಅಂವ ಹೇಳ್ದಾಂಗೆ ಆದೆಯೋ?(ನು). **ಆದೊರು** /*a:dɔru*/ ಆದರೂ. in spite of. ವಾ: ಆದೊರು ನೀ ಹಿಂಗೆ ಮಾಡಿಕಾಗದಿತ್. **ಆದೋ** /*a:dɔ:*/ ಆಗುವುದೋ. is it okay? is it alright? **ಆದೋವು** /*a:dɔ:vu*/ ಆದವರು. the one who had. ವಾ: ಊಟ ಆದೋವು ಕುದ್ದಲಿಂದ ಎದ್ರಿ ನೋಡ್ಲೊ. **ಆದೋವ್ಕೆ** /*a:dɔ:vke*/ ಆದವರಿಗೆ. to those who had. ವಾ: ಊಟ ಆದೋವ್ಕೆ ಎಲೆಡ್ಕೆ ಕೊಡಕಿತ್. **ಆದ್ಯ[1]** /*a:dya*/ 1. ಆಗುವುದೇ?, 2. ಆಗುತ್ತದಾ. 1. Is it suitable/May it happen? 2. Can it happen? **ಎಮ್ಮೆಗೆ ಅದರ ಕೊಂಬ್ ಬಾರ ಆದ್ಯ(ಗಾ).** ಪ: ಆದೆಯೋ? **ಆದ್ಯ[2]** /*a:dya*/ ಆಗಬಹುದು. It may fit. ವಾ: ನಂಗೆ ಇದ್ ಆದ್ಯ. **ಆದ್ಯ[3]** /*a:dya*/ ಆಗುತ್ತೀಯಾ. will you become? ವಾ: ನೀ ನಂಗೆ ತಮ್ಮ ಆದ್ಯ. **ಆದ್ಲೆ** /*a:dlɛ*/ ಆಗುವುದಿಲ್ಲ. It won't happen. ವಾ: ಆದೇ ಇಲ್ಲೆ – ಆಗುವುದೇ ಇಲ್ಲ.

ಆದ್ರೆ /*a:drɛ*/ ಅ. ಆದರೆ. but. **ಆದ್ರೆ ಒಂದೇ ಮರ, ಹೋದ್ರೆ ಒಂದೇ ಬೀಜ(ಗಾ).** ವಾ: ಆದ್ರೆ ನಾ ಬಾದುಲೆ.

ಆದಿಂಜೆ /*a:diɲjɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಆದಿಸುಬ್ರಮಣ್ಯ /*a:disubramaɳya*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಸುಬ್ರಹ್ಮಣ್ಯ ಗ್ರಾಮದ ಜಾಗ. a locality in Subramanya village in Sullia Taluk of Dakshina Kannada District.

ಆದಿಸೇಸ /*a:dise:sa*/ ನಾ. ಆದಿಶೇಷ. the snake god/ the serpent god. ವಾ: ವಿಸ್ಣು ದೇವ್ರು ಆದಿಸೇಸನ ಮೇಲೆ ಮಲ್ಗಗಿದ್ದದೆ.

ಆನಿಸಿ /*a:nisi*/ ನಾ. ಒರಗಿಸಿ. to keep something in a reclining position. ವಾ: ಅವ್ವ ಎದೆಗೆ ಆನಿಸಿ ಸಮಾದಾನ ಮಾಡ್ತ್ ನಂಗೆ.

ಆನೆ ಕಂದೊಡಿ /*a:nekannaḍi*/ ನಾ. ಆನೆ ಕನ್ನಡಿ ಹಾವು. Russell's Viper.

ಆನೆ ಗೀಳಿಡ್ದು /*a:nɛ gi:ḷiḍdu*/ ನಾ. ಆನೆ ಕೂಗುವುದು. trumpeting sound of an elephant. ವಾ: ಆನೆ ಗೀಳಿಡ್ದು ಕೇಳಿರೆ ಕಾಲ್ ನಡ್ಗುದು.

ಆನೆ ಮೀನ್ /*a:nɛ mi:n*/ ನಾ. ಮೀನಿನ ಹೆಸರು. a variety of fish. ವಾ: ಆನೆ ಮೀನ್ ನೋಡ್ದಳ? ಹೆಂಗಿದ್ದದೆ?

ಆನೆ[1] /*a:nɛ*/ ನಾ. ಆನೆ. an elephant. **ಹಿಂದೆ ಮುಂದೆ ನಾಲ್ಕಾಳ್, ಚಂಡೆ ಬಡೆವವು ಇಬ್ಬರ್, ಕೊಂಬು ಊದುವಂವ ಒಬ್ಬ – ಆನೆ(ಒ).** ವಾ: ಆನೆಗ ನಾಡ್‌ಲಿ ತುಂಬಿ ಹೋಗೊಳೊ.

ಆನೆ[2] /*a:nɛ*/ ಕ್ರಿ. ಆಗುತ್ತೇನೆ. I will become. ವಾ: ನಾ ಮಾಷ್ಟ್ರ ಆನೆ.

ಆನೆಕಲ್ಲು ಬಾಳೆಹಿತ್ಲು /*a:nekallu ba:ḷehitlu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಆಲೆಟ್ಟಿ ಗ್ರಾಮದ ಜಾಗ. a locality in Aletti village in Sullia Taluk of Dakshina Kannada District.

ಆನೆಕಾರು /*a:neka:ru*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಮರಪಡ್ನೂರು ಗ್ರಾಮದ ಜಾಗ. a locality in Amarapadnuru village in Sullia Taluk of Dakshina Kannada District.

ಆನೆಕಾಲ್ /*a:nɛka:lɨ*/ ನಾ. ಆನೆಕಾಲು ರೋಗ. filariasis, elephantiasis. ವಾ: ಆನೆಕಾಲ್ ಕಾಯ್ಲತ ಉಟ್ಟು.

ಆನೆಗುಂಡಿ /*a:neguṇḍi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕನಕಮಜಲು ಗ್ರಾಮದ ಜಾಗ. a locality in Kanakamajalu village in Sullia Taluk of Dakshina Kannada District.

ಆನೆಚಗ್ತೆ /*a:nɛcakke*/ ನಾ. ಸಾಕಷ್ಟು ದೊಡ್ಡದಾದ ಎಲೆ ಹೊಂದಿರುವ ಔಷಧಿಯ ಗಿಡ. a medicinal plant with large leaves. ವಾ: ಆನೆಚಗ್ತೆಲಿ ಮೊದ್ದ್ ಮಾಡಿವೆ.

ಆನೆಮಲೆ /*a:nɛmalɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಆನೆಮುಟ್ಟಿ /*a:nemuṭṭi*/ ನಾ. 1. ಅಂಗಳ ಗುದ್ದಲು ಬಳಸುವ ಮರದ ಸಾಧನ. ಇದು ಆನೆಯ ಕಾಲಿನಂತೆ ಅಗಲವಾಗಿದ್ದು ಒಂದು ಅಡಿ ಎತ್ತರವಿರುತ್ತದೆ. ಕೆಲವು ಆನೆಮುಟ್ಟಿಗಳ ಎರಡೂ ಬದಿಯೂ ಅಂಗಳ ಗುದ್ದಲು ಆಗುತ್ತದೆ, 2. ಕೈಮುಟ್ಟಿ. 1. a rammer, used in levelling the ground, 2. a rammer. ವಾ: ಆನೆಮುಟ್ಟಿನ ಇಜ್ಜೆಲ್ ಗುದ್ದಿ ಗಟ್ಟಿ ಮಾಡಿಕೆ ಬಳ್‌ಸುವೆ.

ಆನೆಮೆಟ್ಟು /*a:nɛmeṭṭu*/ ನಾ. 1. ನೆಲ ಹದಮಾಡುವ ಸಾಧನ, 2. ನೆಲ ಸಮಮಾಡುವ ಸಾಧನ. 1. a rammer, used in levelling the ground, 2. an earth rammer. ವಾ: ಬಿದ್ದ ಮಣ್ಣ್‌ನ ಆನೆಮೆಟ್ಟು ತಕಂಡ್ ಹದ ಮಾಡಿರೆ ಆತ್.

ಆನೆಮೆಟ್ಟ್ ಸೊಪ್ಪ್ /*a:nɛmeṭṭɨ sɔppɨ*/ ನಾ. ಅಗಲವಾದ ತೆಳು ಎಲೆಯ ಸಪೂರ ಗಿಡ. a slender plant with large and thin leaf. ವಾ: ಆನೆಮೆಟ್ಟ್ ಸೊಪ್ಪ್ ಬಾರಿ ಸಪೂರದ ದೈ.

ಆನೆಲೆಡ್ಡಿ /*a:nɛladdi*/ ನಾ. ಆನೆಯ ಲದ್ದಿ. elephant poop/dung. ವಾ: ಆನೆಲೆಡ್ಡಿನ ಮೆತ್ತಿರೆ ಕೂದೊಲು ಉದ್ದ ಬೆಳ್‌ದದೆತ ಯಾರೋ ಹೇಳ್‌ದ ನೆಂಪು.

ಆನೇರ /*a:nɛra*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಆಪತ್ /*a:patti*/ ನಾ. 1. ಕಷ್ಟ, 2. ಸಂಕಷ್ಟ, 3. ಆಪತ್ತು, 4. ತೊಂದರೆ. 1. difficulty, 2. a problem, 3. a threat, 4. a trouble. ವಾ: ಆಪತ್ಕಾಲಲಿ ಆದವನೇ ನೆಂಟ ತ ಹೇಳ್ವ ಮಾತ್‌ನ ನೀ ಕೇಳ್‌ತ್‌ಲೆನ?

ಆಪು /*a:pu*/ ನಾ. 1. ಸೌದೆ ಒಡೆಯಲು ಬಳಸುವ ಕಬ್ಬಿಣದ ಸಾಧನ, 2. ಮರಕೆಲಸದಲ್ಲಿ ಬಳಸುವ ಕಬ್ಬಿಣ/ಮರದ ಗೂಟ, 3. ಮಸಲತ್ತು ಮಾಡುವುದು. 1. an axe, used in splitting wooden blocks, 2. a wooden or a metal peg or wedge, 3. to conspire. ವಾ: ದೊಡ್ಡ ಕುಂಟೆನ ಒಡ್ಯೊಕೊರೆ ಆಪು ಇಸಿರೆ ಬೇಗ ಸಿಗ್‌ದ್ ಬಂದದೆ. ಪ: ಆಪ್

ಆಪೂಜೆ /*a:pu:jɛ*/ ನಾ. ಆ ಪೂಜೆ. worshipping a particular deity. ವಾ: ಆಪೂಜೆನ ಮಾಡಕಿತ್ತ್, ಯಾಕೆ ಬೇಡತ ಹೇಳ್ವೊನೊ ಗೊತ್ಲೆ.

ಆಪ್ /*a:pɨ*/ ನಾ. ನೇಗಿಲು, ನೊಗದ ಕೀಲು. a peg attached to the plough. ವಾ: ನೇಗ್ಲ್‌ಗೆ ಆಪ್ ಹಾಕೊಕು.

ಆಬಿ /*a:bi*/ ನಾ. ಹುಳು (ಚಿಕ್ಕ ಮಕ್ಕಳಿಗೆ ಹುಳುವನ್ನು ಮುದ್ದಿನಿಂದ ಪರಿಚಯಿಸುವ ರೀತಿ). a worm. ವಾ: ಬಾನೆ ಕೂಸು ನೀರ್‌ಲಿ ಆಬಿ ಉಟ್ಟು ತೋರ್‌ಸಿನೆ.

ಆಬುಟ್ಟದೆ /*a:buṭṭadɛ*/ ನಾ. ಆಗಿಬಿಡುತ್ತದೆ. It will certainly happen. ವಾ: ಸಾಲ ಸೋಲ ಮಾಡಿ ಮೊದುವೆ ಜಂಬರೇನೊ ಆಬುಟ್ಟದೆ ಮತ್ತೆ ಇರ್‌ದು ಅಲಾ.

ಆಬೂ /*a:bu:*/ ನಾ. ಅ. ನೀರು (ಮಕ್ಕಳ ಭಾಷೆ). water (in the vocabulary of children). ವಾ: ಆಬೂ ನೋಡಲ್ಲಿ.

ಆಮ /*a:ma*/ ನಾ. 1. ಒಂದು ಜಲಚರ ಪ್ರಾಣಿ, 2. ಆಮೆ, 3. ಯಾಮೆ, 4. ಏಮೆ. 1. an aquatic creature, 2. a turtle, 3. an uncooked food, 4. a tortoise, 5. a chelonian. **ಆಮ ಆಮನೂ ಇಲ್ಲೆ ಬೊದ್ದೆ ಬೊದ್ದೆನೂ**

ಇಲ್ಲೆ(ಗಾ). ವಾ: ಆಮ ಮೊಲನ ಸೋಲ್‌ಸಿದ ಒಂದ್ ಕತೆ ಉಟ್ಟು. ಪ: ಏಮೆ

ಆಮೆಬೈಲು /*a:mebailu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಮರಪಡ್ನೂರು ಗ್ರಾಮದ ಜಾಗ. a locality in Amarapadnuru village in Sullia Taluk of Dakshina Kannada District.

ಆಮೇಲೆ /*a:me:lɛ*/ ಅ. 1. ಅನಂತರ, 2. ಮತ್ತೆ. 1. after that, 2. later 3. and. ವಾ: ನಾನ್ ಆಮೇಲೆ ಸಿಕ್ಕಿನೆ.

ಆಮ್ /*a:mɨ*/ ಅ. ಮಾಮ್, ಮಕ್ಕಳಿಗೆ ಊಟ ತಿನ್ನಿಸುವಾಗ ಹೇಳುವ ಪದ(ಮಭಾ) an onomatopoeic term used while feeding small children. ವಾ: ಇಂದಾ ಆಮ್ ಮಾಡ್.

ಆಮ್ರ /*a:mra*/ ನಾ. ತಿಳಿಸಾರು ಅಥವಾ ಹುಳಿ ಸಾರು, ನೀರಿನಂತೆ ಇರುವ ಸಾರು. rasam. ವಾ: ತಿಳಿ ಆಮ್ರಲಿ ಉಂಬಕೆ ಲಾಯ್ಕ. ಪ: ಆಂಬ್ರ

ಆಯ /*a:ya*/ ನಾ. 1. ವಾಸ್ತುವಿಗೆ ಅನುಗುಣವಾಗಿ ಮನೆಯ ಸುತ್ತಳತೆಯ ಲೆಕ್ಕಾಚಾರ, 2. ಧ್ವಜ ಆಯ ಗರ್ಭ ಆಯ ಇತ್ಯಾದಿ, 3. ಪಾಯ, 4. ಉಪಾಯ, 5. ಸರಾಗ, 6. ಸಲೀಸು. 1. calculating the perimeter of a property based on Vastu, 2. measurement for the foundation for a flag post, 3. foundation, 4. a clever plan 5. dexterity, 6. ease. **ಪ್ರಾಯ ಬಾಕನ ಆಯ ತೊಪ್ಪಿತ್(ಗಾ).** ವಾ: ಮನೆ ಕಟ್ಟಿಕೆ ಆಯ ಸೆರಿ ಇರೋಕು. ಪ: ಆಯ ನೋಡ್ದು – ಸುತ್ತಳತೆಯ ಲೆಕ್ಕಾಚಾರ ಮಾಡುವುದು

ಆಯಕಟ್ /*a:yakaṭɨ*/ ನಾ. 1. ಆಯಕಟ್ಟು, 2. ಒಳ್ಳೆಯ ಸ್ಥಿತಿಯ, 3. ಮರ್ಮ ಸ್ಥಳ, 4. ಮುಖ್ಯ, 5. ಉತ್ತಮಾಂಶ. 1. strategic location, 2. a proper condition, 3. a sensitive part of the body, 4. important, 5. excellent part/section. ವಾ: ಒಳ್ಳ ಆಡಳ್ತೆ ನಡ್‌ಸೊವು ಆಯಕಟ್ಟ್ ನ ಜಾಗೆಗೆ ದಕ್ಷ ಅದಿಕಾರಿಗಳ್‌ನ ನೇಮಿಸುವೆ.

ಆಯಿ /*a:yi*/ ಅ. ನೋವು(ಮಭಾ). pain (in the vocabulary of children). ವಾ: ಅವಯ್ಯ ಕಾಲಿಗೆ ಆಯಿ ಆವ್ಟು.

ಆಯಿದ /*a:yida*/ ನಾ. 1. ಆಯುಧ, 2. ಯುದ್ಧ ಸಾಧನ. 1. a weapon, 2. instruments of warfare. ವಾ: ಆಯಿದ ಪೂಜೆಲಿ ಎಲ್ಲ ಆಯಿದಗಳ ಇಸಿ ಪೂಜೆ ಮಾಡುದು.

ಆಯಿಸ /*a:yisa*/ ನಾ. ಆಯುಷ್ಯ. life spanವಾ: ಯಾಗ ಯಾವ ಕಾಯ್‌ಲ ಬಂದದೆತ ಹೇಳಿಕಾದುಲೆ, ಆಯಿಸ ಗಟ್ಟಿ ಇದ್ರೆ ವಳ್ದವೆ. **ಆಯ್ಸ** /*a:ysa*/ ಆಯಸ್ಸು, tenure of one's life. ವಾ: ಆಯ್ಸ ಇದ್ದಷ್ಟೆ ಮೊನ್‌ಸನ ಬೊದ್‌ಕ್.

ಆಯ್ತೋರ /*a:yto:ra*/ ನಾ. 1. ಆದಿತ್ಯವಾರ, 2. ಭಾನುವಾರ, 3. ರವಿವಾರ. Sunday. ವಾ: ಹರ್‌ಸವೆ ಯಾಗ? ಸನಿವಾರನ? ಆಯ್ತೋರನ? ಪ: ಆಯ್ತವಾರ

ಆಯ್ದ್ /*a:ydɨ*/ ನಾ. 1. ಆಯ್ಕೆ ಮಾಡು, 2. ಹೆಕ್ಕಿ, 3. ಆರಿಸಿ, 4. ಒಟ್ಟುಗೂಡಿಸಿ. 1. selected, 2. picked, 3. chosen, 4. putting it together. ವಾ: ಬಿದ್ದ ಕಾಯ್‌ನೆಲ್ಲ ಆಯ್ದ್ ಚೀಲಕ್ಕೆ ಹಾಕ್.

ಆರಪ್ಪ /*a:rappa*/ ನಾ. ಯಾರಪ್ಪ. Who is that? ವಾ: ಹಂಗೆ ಈ ಕರಿಕತ್ಲೆಲಿ ಆರಪ್ಪ ಬಾಯ್ಬಡ್ಯದು.

ಆರಾಟ /*a:ra:ṭa*/ ನಾ. 1. ಜಾತ್ರೋತ್ಸವದ ಕೊನೆಯ ದಿನ ದೇವರ ಪ್ರದಕ್ಷಿಣೆ, 2. ಜಳಕ, 3. ಪ್ರಸಾದ ವಿತರಣೆಯ ಆಚರಣಾ ಉತ್ಸವ. 1. carrying the portable deity in a circumambulatory motion on the day of festival 2. a ritualistic bathing, 3. distribution of consecrated food on a religious occasion. ವಾ: ನಮ್ಮೂ ರ್‌ಲಿ ಆರಾಟ ನಡಿತುಟ್ಟು.

ಆರಾಟು /*a:ra:ṭu*/ ನಾ. ದೇವರನ್ನು ಹೊತ್ತವರು ಚಂಡೆ ವಾದ್ಯದೊಡನೆ ಶಾಸ್ತ್ರೀಯವಾಗಿ ನರ್ತನ ಮಾಡುತ್ತಾ ದೇವಸ್ಥಾನಕ್ಕೆ ಒಂಭತ್ತು ಅಥವಾ ಹನ್ನೊಂದು ಸುತ್ತು ಬರುವುದು. a custom of performing any classical dance and circumambulating the temple either nine or ten times carrying the portable deity with an accompaniment of musical instruments, especially drums. ವಾ: ದೇವುರ ಮೂರ್‌ತಿನ ಹೊತ್ತ್ ಕಂಡ್ ಆರಾಟು ಬಂದವೆ.

ಆರಾದ್ರೆ /*a:ra:drɛ*/ ನಾ. ಒಂದು ನಕ್ಷತ್ರದ ಹೆಸರು. name of a star. ವಾ: ಆರಾದ್ರೆ ಅಸ್ಟ್ ತೆಂಗ್‌ನ ಕಾಯಿನ ನಾ ಕೊಟ್ಟನೆ. **ಆರಿದ್ರಮಳೆ** /*a:ridramaḷɛ*/

1. ಆರಿದ್ರಾ ನಕ್ಷತ್ರದಲ್ಲಿ ಬರುವ ಮಳೆ, 2. ಆರಿದ್ರಾ, 3. ಹಸಿಯಾಗುವ, 4. ಆರ್ದ್ರ. 1. a star, 2. Ardra star, 3. causing moisture, 4. Ardra star. ವಾ: ಆರಿದ್ರ ಮಳೆ ಸೆರಿ ಹೊಡ್ದದೆ.

ಆರಾಮು /*a:ra:ma*/ ನಾ. 1. ವಿರಾಮ, 2. ಬಿಡುವು. 1. rest, 2. repose. ವಾ: ಏನ್ ಬಾರಿ ಆರಾಮಲಿ ಕುದ್ದೊಳರಿ ಕಂಡದೆ.

ಆರಾಳ್ /*a:ra:ḷi*/ ಸಂವಾ. ಆರು ಆಳು. six servants. ವಾ: ಇಂದಿಗೆ ಆರಾಳ್ ಕೆಲ್ಸ ಆತ್.

ಆರಿಕಲ್ಲು /*a:rikallu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಐವರ್ನಾಡು ಗ್ರಾಮದ ಜಾಗ. a locality in Aivarnadu village in Sullia Taluk of Dakshina Kannada District.

ಆರೆಂಬಿ ಗುತ್ತಿಗೆ /*a:rembi guttige*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಎಣ್ಮೂರು ಗ್ರಾಮದ ಜಾಗ. a locality in Enmuru village in Sullia Taluk of Dakshina Kannada District.

ಆರೊಸ /*a:rɔ:sa*/ ನಾ. 1. ಆವಿ ಆಗುವಿಕೆ, 2. ನೀರು ಬತ್ತು. 1. vaporizing, 2. to get dry. ವಾ: ಅರೆಗಾಲಲಿ ಬಾಮಿ, ಚೋಡಿ, ಕೆರೆಗಳ್‌ಲಿ ಆರೊಸ ಹೆಚ್ಚಾಗಿ ಕಂಡ್ ಬಂದೆ.

ಆರೋಗ್ಯ /*a:rɛ:gya*/ ನಾ. ರೋಗವಿಲ್ಲದಿರುವುದು. healthy. ವಾ: ಆರೋಗ್ಯನೆ ಬಾಗ್ಯ.

ಆರ್ /*a:ri*/ ಕ್ರಿ. 1. ಆರು, 2. ತಣ್ಣಗಾಗು. 1. six, 2. to cool down. **ಆಗೋಗಂಟ ಇದ್ದ್ ಆರ್‌ಕಾಕನ ಇಲ್ಲೆ(ಗಾ). ಕೆರೆಲಿ ನೀರ್ ಆರ್ಕನ ಗಿಳಿ ಹಕ್ಕಿಗೆ ಮರಣ – ದೀಪ(ಒ).** ವಾ: ಬೇಗ ಅನ್ನ ಮಾಡಿಸಿ ಅದ್ ಆರ್‌ತ್.

ಆರ್ಣೆ /*a:raṇɛ*/ ನಾ. ಒಂದು ಸರೀಸೃಪ, ಹಾವುರಾಣಿ. a Bronze Grass Skink. ವಾ: ಕೊತ್ತಿ ಆರಣೆನ ಹಿಡ್‌ದ್ ತೀಂತ್.

ಆರ್ತಜೆ /*a:rtaje*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಜಾಲ್ಸೂರು ಗ್ರಾಮದ ಜಾಗ. a locality in Jalsuru village in Sullia Taluk of Dakshina Kannada District.

ಆರ್ತಿ /*a:rti*/ ನಾ. 1. ಅರಿಸಿನ, ಕುಂಕುಮ ಬೆರಸಿದ ನೀರು ಅಥವಾ ದೀಪಗಳಿಂದ ಎತ್ತುವ ನೀರಾಜನ, 2. ಆರತಿಯನ್ನು ಮಾಡುವ ಉಪಕರಣ, 3. ಆರತಿಯನ್ನು ಮಾಡುವಾಗ ಹಾಡುವ ಹಾಡು. 1. a ritual, waving of lamp, or a ritual of waving of a platter in which water is mixed with turmeric and vermilion powder, 2. a platter used in the ritual of waving the lamp, 3. songs sung during the ritual of waving of lamps. **ಹಾಕುದೊಬ್ಬ, ನೂಕುದೊಬ್ಬ, ಆರ್ತಿಮಾಡ್ದು ಇನ್ನೊಬ್ಬ – ಸೇಮಿಗೆ ಹಿಟ್ಟ್(ಒ).** ವಾ: ಸುಬ ಕಾರ್ಯಗಳ್‌ಲಿ ಆರ್ತಿ ಮಾಡುವೆ.

ಆರ್ತ್ /*a:riti*/ ನಾ. ಆರಿತು. extinguished. ವಾ: ದೀಪ ಆರಿತ್ ಕಂಡದೆ.

ಆರ್ದ್ರೆ /*a:rdrɛ*/ ನಾ. ಮಳೆ ನಕ್ಷತ್ರ. a star that is associated with rain. ವಾ: ಆರ್ದ್ರೆ ಒಂದು ಮಳೆ ನಕ್ಷತ್ರ.

ಆರ್ನೋಜಿ /*a:rno:ji*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಮರಪಡ್ನೂರು ಗ್ರಾಮದ ಜಾಗ. 1. family, 2. lineage, 3. a locality in Amarapadnuru village in Sullia Taluk of Dakshina Kannada District.

ಆರ್ಬಾಯ್ /*a:rba:yi*/ ಕ್ರಿ. ದೊಡ್ಡ ಸ್ವರದಿಂದ ಕಿರುಚು. to scream with a loud voice. ವಾ: ಹಞ್ಞ ನಿನ್ನ ಆರ್‌ಬಾಯಿ ಕೊಡ್ದು ಕಮ್ಮಿ ಮಾಡ್ ಎಲ್ಲಿಗೆ ಕೇಳ್ದೆ ಗೊತ್ತುಟಾ.

ಆರ್ಯಾಪು /*a:rya:pu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಆರ್ಲಿ /*a:rili*/ ಕ್ರಿ. 1. ಆರಲಿ, 2. ತಣ್ಣಗಾಗಲಿ. let it cooldown. ವಾ: ಹಿಟ್ಟ್ ಬಿಸಿ ಉಟ್ಟು, ಹಞ್ಞ ಆರ್‌ಲಿ.

ಆರ್‌ವಾಡ್ /*a:riva:ḍi*/ ನಾ. 1. ಅಬ್ಬರ, 2. ಆರ್ಭಟ. 1. to shout, 2. to scream loudly. ವಾ: ಅಂವನ ಆರ್‌ವಾಡ್ ಕೇಳಿಕಾದುಲೆ.

ಆರ್ಸು /*arsu*/ ನಾ. ಆರಿಸು. to let the water flow into the fields. ವಾ: ಗದ್ದೆ ನೀರ್‌ನ ಆರ್ಸು. **ಆರ್ಸಿದ ಗೈಪು** /*a:rsida gɛipu*/ ಪಲ್ಯ. a vegetabel side dish/a vegetable dish. ವಾ: ಆರ್ಸಿದ ಗೈಪು ಇಕ್ಕಿಕೆ ಸಣ್ಣ ಚಿಪ್ಪಿ ಸೆಡೆ ಬೇಕ್.

ಆಲ /*a:la*/ ನಾ. ಆಲದ ಮರ. a peepal tree. **ಅಪ್ಪ**

ನೆಟ್ಟ ಆಲ ಮರಂತ ಬದುಕುದು(ಗಾ). ವಾ: ಎಸ್ಟ್ ದೊಡ್ಡದಲಾ ಆಲದ ಮರ. **ಆಲ ಸೊಪ್ಪ್** /*a:la sɔ:ppɨ*/ ಆಲದ ಮರದ ಸೊಪ್ಪು. leaf of peepal tree. ವಾ: ಆಲ ಸೊಪ್ಪ್‌ನ ಆನೆಗಳಿಗೆ ಮೇವಾಗಿ ಬಳ್‌ಸುವೆ.

ಆಲಂಕಲ್ಯ /*a:laŋkalya*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮಂಡೆಕೋಲು ಗ್ರಾಮದ ಜಾಗ. 1. family, 2. lineage, 3. a locality in Mandekolu village in Sullia Taluk of Dakshina Kannada District.

ಆಲಂಗಾರು /*a:laŋga:ru*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಆಲಂತಡ್ಕ /*a:lantaḍka*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಪೆರುವಾಜೆ ಗ್ರಾಮದ ಜಾಗ. 1. family, 2. lineage, 3. a locality in Peruvaje village in Sullia Taluk of Dakshina Kannada District.

ಆಲಡ್ಕ /*a:laḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಸಂಪಾಜೆ ಗ್ರಾಮದ ಜಾಗ. a locality in Sampaje village in Sullia Taluk of Dakshina Kannada District.

ಆಲಾಜೆ /*a:la:je*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮುರುಳ್ಯ ಗ್ರಾಮದ ಜಾಗ. a locality in Murulya village in Sullia Taluk of Dakshina Kannada District.

ಆಲಿ /*a:li*/ ನಾ. ಕಿವಿಯಲ್ಲಿನ ಓಲೆ ಹಾಕುವ ತೂತು. a hole made in the earlobe to put an earring/ stud. ವಾ: ದೊಡ್ಡ ವಾಲೆ ಹಾಕಿ ಹಾಕಿ ಆಲಿ ದೊಡ್ಡದಾಗುಟು.

ಆಲಿಕಲ್ /*a:likalɨ*/ ನಾ. 1. ಆಣಿಕಲ್ಲು, 2. ಆಲಿಕಲ್ಲು, 3. ಮಳೆಯ ಹಿಮದ ತುಂಡು. 1. hailstone, 2. hail, 3. water ice. ವಾ: ಈ ಸರ್‌ತಿ ಆಲಿಕಲ್ ಬಿದ್ದ್ ಬೆಳೆ ಎಲ್ಲ ಹಾಳ್ ತ.

ಆಲಿಬಾಬ /*a:liba:ba*/ ನಾ. ಆಲಿ ಬಾಬ. Ali Baba, a masculine given name. ವಾ: ಸಣ್ಣವು ಇರ್‌ಕಾಕನ ಆಲಿ ಬಾಬಂತ ಕತೆ ಕೇಳ್ಯೊಳೊ.

ಆಲೆ ಪೊರೆಮನೆ /*a:lɛ porɛmanɛ*/ ನಾ. ಐನ್‌ಮನೆಗೆ ಹೊಂದಿಕೊಂಡಂತೆ ಸಮೀಪದಲ್ಲೇ ಇರುವ ಹೊರ ಮನೆ. out-house next to Ainmane (ancestral homes). ವಾ: ಐನ್‌ಮನೆ ಒಟ್ಟಿಗೆ ಇರೊ ಮನೆಗ ಆಲೆ ಪೊರೆಮನೆ.

ಆಲೆ¹ /*a:lɛ*/ ಕ್ರಿ. ಆಗುವುದಿಲ್ಲ. impossible. **ಜಟ್ಟಿ ಕೆಳಗೆ ಬಿದ್ದರೂ ಮೀಸೆ ಮಣ್ಣಾಲೆ(ಗಾ).** ವಾ: ನಂಗೆ ಪೂಜೆಗೆ ಬಾಕೆ ಆಲೆ ಬೋಜವ, ನೀವೆ ಹೋಗಿ ಬನ್ನಿ. **ಆಲೆನಾ** /*a:lena:*/ ಆಗುವುದಿಲ್ಲವೇ? will it not do/ happen? ವಾ: ನಿಂಗೆ ಬಾಕೆ ಆಲೆನ?

ಆಲೆ² /*a:lɛ*/ ನಾ. ಕಿವಿ ಓಲೆ ಹಾಕುವ ಜಾಗ. earlobe. ವಾ: ವಾಲೆ ಹಾಕಿಕೆ ಆಲೆ ಸಣ್ಣದಾಗುಟು ಕಡ್ಡಿ ಹಾಕಿಸ್ ಮತ್ತೆ ನೋಡೊಮು.

ಆಲೆಟ್ಟಿ /*a:leṭṭi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಆಲೆಟ್ಟಿ ಗ್ರಾಮದ ಜಾಗ. a locality in Aletti village in Sullia Taluk of Dakshina Kannada District.

ಆಲೋಚೆನೆ /*a:lo:cɛnɛ*/ ನಾ. ಆಲೋಚನೆ. thought. ವಾ: ಎಂತ ಆಲೋಚನೆ ಮಾಡಿಕಂಡ್ ಕುದ್ದದ್.

ಆಲ್ಗೆಂಡೆ /*a:lɨgenḍɛ*/ ನಾ. 1. ಆಲೂಗೆಡ್ಡೆ, 2. ಬಟಾಟೆ. 1. potato, 2. Solanum tuberosum. ವಾ: ಗೈಪುಗೆ ಆಲ್ಗೆಂಡೆ ಹಾಕಿರೆನೆ ಊಟಕೆ ರಸ ಆದು.

ಆಲ್ಪರೆ /*a:lparɛ*/ ನಾ. ದೊಡ್ಡ ಮನೆ ಹತ್ತಿರ ಇರುವ ಸಣ್ಣ ಮನೆಗಳು. small houses near bigger houses. ವಾ: ಆಲ್ಪರೆಗೆ ಹೋಗಿ ಬನ್ನೆ.

ಆಲ್ಸಿಕನ್ತ್ /*a:ḷsikant*/ ನಾ. ಕೇಳಿಕೊಂಡ. heard/ listened. ವಾ: ನಾವು ಮಾತಾಡ್‌ದರ ಅಂವ ಮರೆಲಿ ನಿತ್ತ್ ಆಲ್ಸಿಕನ್ತ್.

ಆಲ್ಸ್¹ /*a:lsi*/ ನಾ. ಆಲೋಚಿಲಿಸು. to envisage. ವಾ: ಯಾರೋ ಕರ್‌ದಂಗೆ ಆತ್, ಹಂಗೆ ಆಲ್ಸ್.

ಆಲ್ಸ್² /*a:lsɨ*/ ಕ್ರಿ. ಆಲಿಸು. to listen. ವಾ: ರೇಡ್ಯಲಿ ಒಳ್ಳ ಹಳೆ ಹಾಡ್ ಬರ್‌ತಾ ಉಟ್ಟು ಆಲ್ಸ್. ಪ: ಆಲ್ಸಿಕ – ಆಲಿಸಿಕೊ; ಆಲ್ಸಿದೆ – ಆಲಿಸುತ್ತಿದ್ದಾನೆ/ಆಲಿಸುತ್ತಿದ್ದಾಳೆ; ಆಲ್ಸುದು – ಆಲಿಸುವುದು;

ಆವ /*a:va*/ ಕ್ರಿ. ಆಗುವ. something that may happen. ವಾ: ನೀ ಬರ್‌ಬಡ ಬಂದರೆ ಆವ ಕೆಲ್ಸನೂ ಆದುಲೆ. **ಆವಂಗಿಲ್ಲೆ** /*a:vaŋgillɛ*/ ಆಗುವಂತಿಲ್ಲ. it couldn't happen. ವಾ: ಮಳೆ ಬಂದರೆ ಯಾವ ಕೆಲ್ಸನೂ ಆವಂಗಿಲ್ಲೆ. **ಆವಂತ** /*a:vanta*/

ಆಗುವಂತಹದು. something that can happen. ವಾ: ಸುಲಾಬಲಿ ಆವಂತ ಕೆಲ್ಸಕೆ ಪೆದುಂಬ ಮಾತಾಡಿ ಕಲ್ಲ್ ಬೀಳ್ಸಿಕಣ್ಡ್. **ಆವದಂದರೆ** /*a:vadandarɛ*/ ಆಗುವುದಾದರೆ. if it is possible. ವಾ: ಆವದಂದರೆ ಆಗಲಿ ಬುಡು. **ಆವಾಂಗೆ** /*a:va:ŋgɛ*/ ಆಗುವ ಹಾಗೆ. to make something happen. ವಾ: ಈ ಮೊದುವೆ ಆವಾಂಗೆ ಏನಾರ್ ಮಾಡಕಿತ್ತ್. **ಆವುಟು** /*a:vuṭu*/ ಆಗಿದೆ. finished/completed. ವಾ: ಕಾಪಿ ದೈದ ಚಿಗ್‌ರ್ ತೆಗ್‌ದ್ ಆವುಟು. ಪ: ಆವುಟ್/ಆವ್ಟ್ – ಆಗಿದೆ; ಆವುಟೊಂತ – ಆಗಿದೆಯಂತ. **ಆವೊ** /*a:vɔ*/ 1. ಆಗುತ್ತಾರೆ, 2. ಆಗಬಹುದು. 1. they will become, 2. can happen/possible. ವಾ: ಕಾಪಿ ಕೊಯ್ಯಕೆ ಅವು ಆವೊ.

ಆವುತಿ /*a:vuti*/ ನಾ. 1. ಬಲಿ, 2. ಆಹುತಿ, 3. ಪ್ರಾಣತೆತ್ತಿರುವುದು, 4. ಯಜ್ಞಯಾಗಾದಿಗಳಲ್ಲಿ ದೇವತೆಗಳಿಗಾಗಿ ಅಗ್ನಿಯಲ್ಲಿ ಅರ್ಪಿಸುವ ಹವಿಸ್ಸು. 1. sacrifice, 2. an offering, 3. sacrificing one's life, 4. an oblation offered to gods in a yajna (sacrificial fire). ವಾ: ಹಿಂದೆ ಎಸ್ಟ್ ಹೆಣ್ಮಕ್ಕ ಬೆಂಕಿಗೆ ಆವುತಿಯಾಗೊಳೊ. ಪ: ಆವುತಿಯಾಗೊಳೊ – ಬಲಿಯಾಗಿದ್ದಾರೆ, ಆಹುತಿಯಾಗಿದ್ದಾರೆ

ಆವುಲಿ ಮೀನ್ /*a:vuli mi:n*/ ನಾ. ಮೀನಿನ ಬಗೆ. variety of fish. ವಾ: ಆವುಲಿ ಮೀನ್ ಗೈಪುಗೆ ಲಾಯ್ಕ.

ಆವೇಸ /*a:ve:sa*/ ನಾ. 1. ಆವೇಶ, 2. ರೋಷ. 1. anger, 2. fury. ವಾ: ಆವೇಸಲಿ ಮಾತಾಡಿಕಾಗದ್.

ಆಸನ[1] /*a:sana*/ ನಾ. 1. ಗುದ, 2. ಮಲದ್ವಾರ ಪ್ರದೇಶ, 3. ನಿತಂಬ. 1. anus, 2. anus, 3. thighs.

ಆಸನ[2] /*a:sana*/ ನಾ. 1. ಕುಳಿತುಕೊಳ್ಳುವುದು, 2. ಕುರ್ಚಿ, 3. ಪೀಠ, 4. ಕೂಡ್ರುವಿಕೆ. 1. to sit down, 2. chair, 3. a seat, 4. sitting down. ವಾ: ರಾಜ ಆಸನಲಿ ಕುದ್ದತ್.

ಆಸೆ /*a:sɛ*/ ನಾ. 1. ಆಸೆ, 2. ದಿಕ್ಕು, 3. ಗತಿ, 4. ಬಯಕೆ. 1. desire, 2. direction, 3. pace, 4. longing. **ಮೀಸೆ ಬಿಳಿಯಾದರೂ ಆಸೆ ಬುಟ್ಟತ್‌ಲೆ(ಗಾ).** ವಾ: ಆಸೆ ಇರೋಕು ಆದ್ರೆ ಅತಿಯಾಸೆ ಇರಿಕಾಗದ್. **ಆಸೆಬಾಸೆ** /*a:sɛba:sɛ*/ ಜೋಪ. 1. ಆಸೆಭಾಷೆ, 2. ಗೊತ್ತುಗುರಿಯಿಲ್ಲದ. 1. undesired/unwanted 2. aimless. **ಆಸ್ಲೇಸ ಮಳೆ ಆಸೆಬಾಸೆ ಇಲ್ಲದ ಮಳೆ(ಗಾ).** ವಾ: ಆಸೆಬಾಸೆ ಇಲ್ಲದೆ ಕೆಲ್‌ಸ ಮಾಡಿ ಏನ್ ಪ್ರೇಜನ.

ಆಸ್ಚರ್‌ಯ /*a:scarya*/ ನಾ. 1. ಆಶ್ಚರ್ಯ, 2. ವಿಸ್ಮಯ, 3. ಅದ್ಭುತ. 1. surprise, 2. astonishment, 3. marvellous. ವಾ: ನಿನ್ನ ಮಾತ್ ಕೇಳಿರೆ ನಂಗೆ ಆಸ್ಚರ್‌ಯ ಆದೆ.

ಆಸ್ತಿ /*a:sti*/ ನಾ. 1. ಆಸ್ತಿ, 2. ಸೊತ್ತು, 3. ಸಂಪತ್ತು. 1. property, 2. asset, 3. wealth. **ಅತ್ತೆದ್ ಆಸ್ತಿನ ಅಳಿಯ ದಾನ ಮಾಡುದು(ಗಾ).** ವಾ: ಕಂಡವ್ರ ಆಸ್ತಿಗೆ ಆಸೆ ಪಡಿಕಾಗದ್. ಪ: ಆಸ್ತಿಕಂಡ್ರೆ – ಆಸ್ತಿ ಕಂಡರೆ, ಆಸ್ತಿ ನೋಡಿದರೆ; ಆಸ್ತಿನ – ಆಸ್ತಿಯ. **ಆಸ್ತಿಪಾಸ್ತಿ** /*a:stipa:sti*/ ಜೋಪ. 1. ಆಸ್ತಿ ಅಂತಸ್ತು, 2. ಸಂಪತ್ತು, 3. ಸೊತ್ತು, 4. ಐಶ್ವರ್ಯ. 1. property, 2. wealth, 3. asset, 4. riches. ವಾ: ಈಗೆಲ್ಲ ಆಸ್ತಿಪಾಸ್ತಿ ಇದ್ದರೆ ಬೆಲೆ, ಇಲ್ಲರೆ ತಿರ್‌ಗಿಯೂ ನೋಡ್ದುಲೆ.

ಆಸ್ತಿಮನೆಮಟ /*a:stimanɛmaṭa*/ ನಾ. 1. ಆಸ್ತಿ ಮನೆ ಮಠ, 2. ಸೊತ್ತು, 3. ಸಂಪತ್ತು. 1. property, 2. asset, 3. wealth. ವಾ: ಕುಡ್ಡ್ ಆಸ್ತಿ ಮನೆಮಟ ಎಲ್ಲ ಮಾರಿಕಂಡೊ. ಮನೆಮಟ(ಜೋಪ)

ಆಸ್ಪತ್ರೆ /*a:spatrɛ*/ ನಾ. 1. ಆಸ್ಪತ್ರೆ, 2. ದವಾಖಾನೆ, 3. ಔಷಧಾಲಯ. 1. Hospital, 2. a clinic, 3. a medical store. ವಾ: ಈ ಊರ್‌ಲಿ ಒಂದೊಳ್ಳ ಆಸ್ಪತ್ರೆ ಇಲ್ಲೆ.

ಆಸ್‌ಪಾಸ್ /*a:sipa:si*/ ನಾ. ಜೋಪ. 1. ಅಕ್ಕಪಕ್ಕ, 2. ನೆರೆಹೊರೆ. 1. neighbourhood, 2. neighbours. ವಾ: ಆಸ್‌ಪಾಸ್‌ನವರ ಒಟ್ಟಿಗೆ ಹೊಂದಿಕಂಡ್ ಹೋಕು.

ಆಸ್ರಯ /*a:sraya*/ ನಾ. 1. ಆಶ್ರಯ, 2. ಆಧಾರ, 3. ಆಸರೆ. 1. shelter, 2. security, 3. support. ವಾ: ಸಂನ್ಯಾಸಿಗಳಿಗೆ ಆಸ್ರಯ ಕೊಟ್ಟೊಳಗಡ.

ಆಸ್ಲೆ /*a:slɛ*/ ನಾ. 1. ಆಶ್ಲೇಷ ನಕ್ಷತ್ರ, 2. ಒಂದು ಮಳೆಯ ನಕ್ಷತ್ರ. 1. Ashlesha, Clinging Star, 2. one of 27 stars associated with rain. ವಾ: ಆಸೆಬಾಸೆ ಇಲ್ಲದೆ ಹೊಡ್ಯದು ಆಸ್ಲೆ ಮಳೆ. ಪ: ಆಸ್ಲೇಸ

ಆಹಾರ /*a:ha:ra*/ ನಾ. 1. ಆಹಾರ, 2. ಭೋಜ್ಯ ವಸ್ತು, 3. ತಿನ್ನುವ ಪದಾರ್ಥ4. ಕೂಳು. 1. food, 2. edible,

3. food stuff, 3. meal. ವಾ: ಈಗನ ಆಹಾರ ಪದ್ಧೆತಿ ಸರಿ ಇಲ್ಲೆ.

ಆಳ್[1] /*a:ḷa*/ ನಾ. ರಾಜ ಆಡಳಿತ ಮಾಡದಿರುವುದು. province that has not been ruled over. ವಾ: ರಾಜ ಆಳತಿದ್ದ ಕಾಲಲಿ ಜೆನ ಹೆದ್‌ರಿಕಂಡ್ ಇರ್‌ತಿದ್ದೊಗಡ.

ಆಳ್[2] /*a:ḷa*/ ನಾ. ಆಳವಾಗಿರುವ. deep. **ನೀರಿಗೆ ಇಳ್ದ ಮೇಲೆ ಆಳ ಗೊತ್ತಾದು(ಗಾ).** ವಾ: ಈ ಕೆರೆ ಬಾರಿ ಆಳ ಉಟ್ಟು.

ಆಳಿಕೆ /*a:ḷikɛ*/ ನಾ. 1. ಆಳುವುದಕ್ಕೆ, 2. ರಾಜ್ಯಭಾರ ಮಾಡುವುದಕ್ಕೆ. 1. to rule over, 2. to govern/ to administer. ವಾ: ಹಿಂದೆನ ಕಾಲದ ಕೆಲು ರಾಜರ ಆಳಿಕೆಲಿ ಪ್ರಜೆಗ ನೆಮ್ಮದಿನ ಬೊದ್‌ಕ್‌ನ ಕಳೆತಿದ್ದೊ. ಪ: ಆಳ್ವಂತ – ಆಳುವಂತ; ಆಳಂವ – ಆಳುವವರು; ಆಳಿಯ – ಆಳುತ್ತೀಯ

ಆಳೆತ್ತರ /*a:ḷettara*/ ಪವಾ. ಒಬ್ಬ ಮನುಷ್ಯನಷ್ಟು ಎತ್ತರ. as tall as a human being. ವಾ: ಮನೆ ಮುಂದೆಲಿರೊ ತೊಳ್ಸಿ ದೈ ಆಳೆತ್ತರ ಬೆಳ್ದುಟು, ಈ ದಾಸ್ವಾಳ ದೈ ಆಳೆತ್ತರ ಬೆಳ್ದುಟು.

ಆಳ್ /*a:ḷi*/ ನಾ. 1. ಆಳು, 2. ಸೇವಕ, 3. ಜನ, 4. ವ್ಯಕ್ತಿ. 1. servant, 2. helper, 3. a person/people, 4. an individual. **ಆಳ್ ಮಾಡ್ದ ಕೆಲ್ಸ ಹಾಲ್(ಗಾ).** ವಾ: ಆಳ್ ಮಾಡ್ದು ಹಾಳ್, ತಾನ್ ಮಾಡ್ದು ಉತ್ತಮತ ಗಾದೆನೆ ಉಟ್ಟು, ಅಂವ ಬಾರಿ ಗಟ್ಟಿಮುಟ್ಟಾದ ಆಳ್. ಪ: ಆಳ್‌ಗ – ಆಳುಗಳು

ಆಳ್ಪ /*a:ḷpa*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಐವತ್ತೊಕ್ಲು ಗ್ರಾಮದ ಜಾಗ. a locality in Aivattoklu village in Sullia Taluk of Dakshina Kannada District.

ಆಳ್ಪುದು /*a:ḷpudu*/ ನಾ. 1. ಸುಧಾರಿಸು, 2. ಆಡಳಿತ ಮಾಡು. 1. manage, 2. to administer. ವಾ: ಸೊಸೆ ಸಂಸಾರನ ಲಾಯ್ಕಲಿ ಆಳ್ಪುದು, ಸಣ್ಣ ಮಕ್ಕಳ್ನ ಆಳ್ಪುದು ಅಸ್ಟ್ ಸುಲಬನ?

ಆಳ್ಸಿಕನ್ತ್ /*a:ḷsikant*/ ನಾ. ಕೇಳಿಸಿಕೊಂಡ. ruled over. ವಾ: ಆಳ್ಸಿಕಂಡ್ ಹೋತ್ ಅಂವ. ಪ: ಆಳ್ಸಿಕೊಂಡುಟ್ಟು

ಆ್ಞಂ /*a:ɲaṁ*/ ಅ. 1. ಇನ್ನೊಬ್ಬರ ಮಾತಿಗೆ ಹೂಂಗುಡುವುದು, 2. ಅಜ್ಜಿ ಕತೆ ಹೇಳುವಾಗ ಮೊಮ್ಮಗು ಹ್ಞಾಂ, ಹ್ಞಂತ, ಆ್ಞಂತ ಹೇಳುವುದು. 1. to affirm, 2. children saying 'yes' as an act of positive confirmation while listening to the stories told by grandparents. ವಾ: ಆ್ಞಂ ತೇಳಿ ಕಣ್ಣ್ ಪಿಳಿಪಿಳಿ ಬುಟ್ಟದೆ. ಪ: ಆ್ಞಂತ

ಇ

ಇಂಗ್[1] /*iŋgɨ*/ ಕ್ರಿ. 1. ನೀರು ಇಂಗುವುದು, 2. ಒಣಗು, 3. ಬತ್ತು. 1. to evaporate, 2. to dry, 3. to reduce in size and shape. ವಾ: ಅರೆಗಾಲಲಿ ಈ ಕೆರೆಲಿ ನೀರ್ ಬೇಗ ಇಂಗ್‌ದು. ಪ: ಇಂಗಿತ್ – ಇಂಗಿತು; ಇಂಗ್ಸಿತ್ – ಇಂಗಿಸಿತು; ಇಂಗ್ಸಿನೆ – ಇಂಗಿಸುವೆ; ಇಂಗ್ಸುದು – ಇಂಗಿಸುವುದು

ಇಂಗ್[2] /*iŋgɨ*/ ನಾ. 1. ಇಂಗು, 2. ಸಂಬಾರ ಪದಾರ್ಥ3. ಒಂದು ತರಹದ ತೀಕ್ಷ್ಣ ಮತ್ತು ಸುವಾಸಿಕ ದ್ರವ್ಯ, 4. ಅಡಿಗೆಗು ಔಷಧಕ್ಕೂ ಬಳಸುವ ಒಂದು ಮರದ ಹಾಲಿನಿಂದ ದೊರೆಯುವ ವಸ್ತು. 1. asafoetida, 2. a spice, 3. a gum/resin with a strong smell, 4. the latex from Ferula assa-foetida. **ಇಂಗ್ ತಿಂದ ಮಂಗನಂಗೆ ಆಡ್ದು(ಗಾ).** ವಾ: ಬೇಳೆ ಆಂಬರಕೆ ಇಂಗ್ ಅಗ್ರಣೆ ಹಾಕೊಕು, ಇಲ್ಲರೆ ಹೊಟ್ಟೆ ಉಬ್ಬರಿಸಿದೆ.

ಇಂಚ್ /*iɲcɨ*/ ನಾ. 1. ಅಂಗುಲ, 2. ಇಂಚು. 1. a measure – an inch, 2. an inch. ವಾ: ಉದ್ದನ ಅಳ್ತೆ ಮಾಡ್‌ವ ಮಾಪನ.

ಇಂಚ್ಲಪಾಡಿ /*iɲclapa:ḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಇಂಜಿರ್ /*iŋjiri*/ ನಾ. ಒಂದು ವಿಧದ ಪೊದೆ. a variety of bush. ವಾ: ಇಂಜಿರ್‌ತೇಳ್‌ದು ಒಂದ್ ಬೊಳ್ಳಿ. ಪ: ಎಂಜಿರ್(ತು). **ಇಂಜಿರ್ ಬೊಳ್ಳಿ** /*iŋjiri bɔḷḷi*/ ಒಂದು ವಿಧದ ಬಳ್ಳಿ, a creeper. ವಾ: ಇಂಜಿರ್ ಬೊಳ್ಳಿಲಿ ಹೆಡೆಗೆ ಮಾಡಿಕೆ ಆದೆ.

ಇಂಟಾನ್ ಬತ್ತ /*Iɲṭa:nɨ batta*/ ನಾ. ಒಂದು ಭತ್ತದ ತಳಿ. a variety of paddy. ವಾ: ಈ ಸರ್ತಿ ಇಂಟಾನ್ ಬತ್ತ ನೆಡೊಕುತ ವಳೊ.

ಇಂತ /*inta*/ ಅ. ಇಂತಹ. similar to, of a particular type. ವಾ: ಇಂತ ಹಣ್ಣ್‌ನ ನಾ ಇಂದೊರೆಗೆ ನೋಡ್‌ತೇಲೆ. ಪ: ಇಂತದೂಂತ – ಇಂತಹದೆಂದು; ಇಂತಲ್ಲಿಟ್ಟು – ಇಂತಲ್ಲಿಟ್ಟು; ಇಂತದೆಲ್ಲ – ಇಂತಹದೆಲ್ಲ; ಇಂತದ್ – ಇಂತಹದು; ಇಂತದೂಂತ – ಇಂತಹದೆಂದು; ಇಂತವೇ – ಇಂತವರು; ಇಂತಾ – ಇಂತಹ ಇಂತದಿನ – ಇಂತಹ ದಿನ; ಇಂತದೊಂದ್ – ಇಂತಹದೊಂದು;

ಇಂದನಿ /*indani/indaniya:*/ ನಾ. ಗಂಡನನ್ನು ಕರೆಯಲು ಬಳಸುವ ಪದ. a term used by the wife to call her husband. ವಾ: ಇಂದನಿ ಎಲಾಡ್ಕೆ ತಕಣಿ. ಪ: ಇಂದೆನಿಂತ – ತೆಗೆದುಕೊಳ್ಳಿಂತ; ಇಂದನಿಯಾ

ಇಂದನೆ /*indanɛ*/ ನಾ. 1. ಸ್ತ್ರೀ ಸೂಚಕ ಏಕವಚನ ಪದ, 2. ತಗೋ ಎಂದು ಹೇಳುವುದು. 1. singular – referring to a woman, 2. take it. ವಾ: ಇಂದನೆ ಹೊಸ ಸೀರೆ ತಂದೊಳೆ ನಿಂಗೆ, ನೋಡ್ ಹೆಂಗುಟ್ಟುತ? ಪ: ಇಂದಣ್ಣ – ತೆಗೆದುಕೊಳ್ಳಿ ಅಣ್ಣ; ಇಂದನಿ – ತೆಗೆದುಕೊಳ್ಳಿ; ಇಂದಪ್ಪ – ತೆಗೆದುಕೊ

ಇಂದಯ /*indaya*/ ನಾ. ಹೆಂಡತಿಯನ್ನು ಕರೆಯಲು ಬಳಸುವ ಸಂಬೋಧನಾ ಪದ. a term used to call one's wife. ವಾ: ಇಂದಯ ಎಲ್ಲಿ ಒಳ?

ಇಂದಾ /*inda:*/ ನಾ. 1. ಇಕೊ, 2. ತೆಗೆದುಕೊ. 1. take

it, 2. have it. ವಾ: ಇಂದಾ ನಿನ್ನ ತೊಪ್ಪಿ ತಕ. ಪ: ಇಂದನೆ(ಏವ); ಇಂದನಿ(ಬವ); ಇಂದಾ ನೀ – ತೆಗೆದುಕೊ ನೀನು; ಇಂದನೆ – ತೆಗೆದುಕೊಳ್ಳಿ

ಇಂದ್ /*indi*/ ನಾ. 1. ಇಂದು, 2. ಇವತ್ತು, 3. ಈ ದಿನ. 1. today, 2. on this day, 3. this very day. **ನಿನ್ನೆ ಹೇಳ್ದ ಮಾತ್ ಇಂದ್‌ಗಿಲ್ಲೆ, ಇಂದ್ ಹೇಳ್ದ ಮಾತ್ ನಾಳೆಗಿಲ್ಲೆ(ಗಾ).** ವಾ: ಇದೊಂದ್ ಸುಟ್ಟದ್ ಮರ್‌ಟ್ ಕಂಡೆ ಇದ್ದದೆ. ಪ: ಇಂದ್‌ಂದ – ಇವತ್ತಿನಿಂದ; ಇಂದ್‌ಮನಿ – ಇವತ್ತೇನಾದರು; ಇಂದ್‌ಂದಲೇ – ಇವತ್ತಿನಿಂದಲೇ; ಇಂದ್ ಸಾ – ಇವತ್ತು ಕೂಡ; ಇಂದ್‌ನ – ಇಂದಿನ; ಇಂದಿಗಾಕನ – ಇವತ್ತಿಗೆ ಆಗುವಾಗ; ಇಂದಿಗೆ – ಇವತ್ತಿಗೆ. **ಇಂದ್‌ಗೆ** /*indigɛ*/ 1. ಇಂದಿಗೆ, 2. ಇವತ್ತಿಗೆ. 1. for today, 2. for this day. **ಅಂದ್ಗೆ ಅದೇ ಸುಖ, ಇಂದ್ಗೆ ಇದೇ ಸುಖ(ಗಾ).** ವಾ: ಇಂದ್‌ಗೆ ಇಸ್ಟ್ ಪಾಟ ಸಾಕಲ. ಪ: ಇಂದ್ಗೆ – ಇವತ್ತಿಗೆ. **ಇಂದ್‌ದ್** /*indidi*/ 1. ಇಂದಿನದು, 2. ಇವತ್ತಿನದು. 1. today's, 2. of this day. ವಾ: ಇಂದ್‌ದ್ ಕೆಲ್‌ಸನ ಇಂದೇ ಮಾಡಿ ಮುಗ್‌ಸಿರೆ ಅದ್ ಒಳ್ಳ ಅಬ್ಬೆಸ. **ಇಂದ್‌ನೊವುಕೆ** /*indinɔvukɛ*/ 1. ಇಂದಿನವರಿಗೆ, 2. ಇವತ್ತಿನವರಿಗೆ, 3. ಈ ಕಾಲದವರಿಗೆ. 1. until this day, 2. up to the present day, 3. upto this moment. ವಾ: ಇಂದ್‌ನೊವುಕೆ ಹಙ್ಞನು ಎಂತನೂ ಹೇಳಿಕಾಗದ್ ಬೇಗ ಸಿಟ್ಟ್ ಬಾದು. ಪ: ಇಂದ್‌ಗೆ – ಇವತ್ತಿಗೆ; ಇಂದ್‌ದ್ – ಇವತ್ತಿನದು

ಇಂದ್ರಾಜೆ /*indra:je*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮುಪ್ಪೇರ್ಯ ಗ್ರಾಮದ ಜಾಗ. a locality in Mupperia village in Sullia Taluk of Dakshina Kannada District.

ಇಂಬು /*imbu*/ ನಾ. 1. ನೆಲೆ, 2. ಆಶ್ರಯ, 3. ಸ್ಥಾನ. 1. shelter, 2. protection, 3. position. ವಾ: ಇಂಬು ಕೊಡವು ಇದ್ದಿ. **ಇಂಬುಕೊಡು** /*imbukɔḍu*/ 1. ರಕ್ಷಣೆ ಕೊಡು, 2. ಆಶ್ರಯ. 1. offer security, 2. offer shelter. ವಾ: ಬಜ್ಜಲಿರೋವ್‌ಕೆ ಇಂಬುಕೊಡು.

ಇಂವ /*iva*/ ಸನಾ. ಏವ. ಇವನು. this man. ವಾ: ಇವ ನನ್ನ ಎರ್‌ಡನೆ ಮಜ್ಜ. ಪ: ಇಂವ – ಇವನು; ಇಂವಂಗಲ್ಲಿ – ಇವನಿಗಲ್ಲಿ; ಇಂವಂಗೂ – ಇವನಿಗೂ; ಇಂವಂಗೆ – ಇವನಿಗೆ; ಇಂವಂದ – ಇವನಿಂದ; ಇಂವಂಗಾದರೂ – ಇವನಿಗಾದರೂ; ಇಂವಂದ್ – ಇವನದು; ಇಂವನ – ಇವನ; ಇಂವನು – ಇವನು; ಇಂವನೂ – ಇವನೂ. **ಇಂವನೆ** /*ivanɛ*/ ಇವನೆ. this man (emphatic). ವಾ: ಇವನೆ ಉಗ್ಗಪ್ಪ ನಂಗೆ ಯಾಗೊಳು ಹೊಡೆದು. ಪ: ಇಂವನೇ – ಇವನೇ; ಇವನೊಟ್ಟಿಗೆ(ಇಂವನೊಟ್ಟಿಗೆ) – ಇವನ ಜೊತೆ; ಇವನ್ – ಇವನ. **ಇಂವಹೋತ್** /*invahɔ:ti*/ 1. ಇವನು ಹೋದ, 2. ಇವನು ಸತ್ತ ಎಂಬ ವ್ಯಂಗ್ಯ ನುಡಿ. 1. he (this man) went, 2. a term of sarcasm to indicate the death of someone. ವಾ: ಇಂವ ಹೋತ್ ಕಂಡದೆ ಅಲಾ. **ಇಂವ್‌ನ** /*invina*/ ಏವ. ಇವನ. his. ವಾ: ಅರ್ವೆಗೆಲ್ಲ ಮೊಣ್ಣ್ ಮೆತ್ತಿಕಂಡ್ ಬಂದುಟಲ ಇಂವ್‌ನ ಏನ್ ಮಾಡೋಕು.

ಇಕ್ಕಡೆ /*ikkaḍɛ*/ ಸಂವಾ. 1. ಎರಡೂ ಕಡೆ, 2. ಆಚೆ ಈಚೆ ಬದಿ. 1. on both the sides, 2. on either of the sides. ವಾ: ದಾರಿ ಇಕ್ಕಡೆ ಉದ್ದೋಕೆ ತೋಟ ಉಟ್ಟು.

ಇಕ್ಕಾಳ್ /*ikka:ḷi*/ ನಾ. 1. ಇಕ್ಕು, 2. ಬಡಿಸು. 1. to keep, 2. to serve. ವಾ: ಇಕ್ಕಾಳ್ ಸಟ್ಟುಗ.

ಇಕ್ಕುಳಿ /*ikkuḷi*/ ನಾ. 1. ಇಕ್ಕಳ, 2. ಚಿಮುಟ. 1. pair of tongs, 2. a pincer. ವಾ: ಇಕ್ಕುಳಿಲಿ ಬಿಸಿ ಪಾತ್ರನ ಹಿಡ್ಕ.

ಇಕ್ಕ್ /*ikki*/ ಕ್ರಿ. 1. ಬಡಿಸು, 2. ಹೊಡಿ, 3. ಉಣಬಡಿಸು, 4. ಇಕ್ಕು. 1. to serve, 2. to beat, 3. to serve, 4. serving. **ಇಕ್ಕಲಾರದವ್ನ ಹಿತ್ಲಿಗೋತು ಕೊಡಲಾರದವ್ನ ಕೋಂಬರೆಗೆ ಹೋತು(ಗಾ).** ವಾ: ನಂಗೆ ಹೊಟ್ಟೆ ಇಸಿದೆ ಅವ್ವ ಬೇಗ ಇಕ್ಕ್. ಪ: ಇಕ್ಕಿನೆ – ಬಡಿಸುತ್ತೇನೆ; ಇಕ್ಕಿಸಿದ – ಬಡಿಸಿ ಇಟ್ಟ; ಇಕ್ಕುದು – ಬಡಿಸುವುದು; ಇಕ್ಕೊಕುಂತ – ಬಡಿಸಬೇಕೆಂದು; ಇಕ್ತಾ – ಬಡಿಸುತ್ತಾ; ಇಕ್ವಲ್ಲಿ – ಬಡಿಸುವಲ್ಲಿ; ಇಕ್ಕಿ – ಬಡಿಸಿ; ಇಕ್ಕಕು(ಇಕ್ಕೊಕು) – ಬಡಿಸಬೇಕು; ಇಕ್ಕಿಕಂಡ್ – ಬಡಿಸಿಕೊಂಡು; ಇಕ್ಕಿಕನ್ತ್ ಬಡಿಸಿಕೊಂಡನು(ಳು); ಇಕ್ಕಿತ್ – ಬಡಿಸಿದನು(ಳು); ಇಕ

ಇಕ್ಕ್‌ಳ /*ikkiḷa*/ ನಾ. 1. ಬಿಸಿ ಪಾತ್ರೆಯನ್ನು ಹಿಡಿಯಲು ಬಳಸುವ ದೊಡ್ಡ ಚಿಮ್ಮಟ, 2. ಇಕ್ಕಳ. 1. a pincer, 2. a pair of tongs. ವಾ: ಇಕ್ಕ್‌ಳ ಹಿಡ್ಕಂಡ್ ಕೊದ್ದ ನೀರ್ ಗಂಜಿ ಮಡ್ಕೆನ ಇಳ್ಸ್

ಇಗ್ಗ್‌ತಪ್ಪ /*iggi tappa*/ ನಾ. 1. ಇಗ್ಗುತ್ತಪ್ಪ, 2. ಈಶ್ವರ. 1. Igguthappa, a Kodava deity, 2. Lord Shiva.

ವಾ: ಕಕ್ಕಬ್ಬೆಲಿರ್‌ವ ಇಗ್ಗ್‌ತಪ್ಪ ದೇಸ್ತಾನಲಿ ಯಾಗೊಲು ಪೂಜೆ, ಅನ್ನದಾನ ಇದ್ದದೆ.

ಇಚಾರ /*ica:ra*/ ನಾ. 1. ವಿಚಾರ, 2. ವಿಮರ್ಶೆ, 3. ತತ್ವಪರೀಕ್ಷೆ. 1. an idea, 2. criticism, 3. philosophical enquiry. ವಾ: ಇಚಾರ ಮಾಡದೆ ಸುಮ್ಮನೆ ಮಾತಾಡ್‌ದು ತೊಪ್ಪಲಾ. ಪ: ಇಂಗಿತ್ – ಇಂಗಿತು; ಇಂಗ್ಸಿತ್ – ಇಂಗಿಸಿತು; ಇಂಗ್ಸಿನೆ – ಇಂಗಿಸುವೆ; ಇಂಗ್ಸುದು – ಇಂಗಿಸುವುದು

ಇಚ್ಚೂರು /*iccu:ru*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಇಚ್ಚೆ /*iccɛ*/ ನಾ. 1. ಅಪೇಕ್ಷೆ, 2. ಆಸೆ. 1. expectation, 2. desire. **ಇಚ್ಚೆ ಇಲ್ಲದ ಗಂಡಂಗೆ ಮೊಸ್ರ್ ಲಿ ಕಲ್ಲ್ ಗಡ(ಗಾ).** ವಾ: ಯಾವ್‌ದೆ ಕೆಲ್‌ಸ ಆದ್‌ರೂ ಇಚ್ಚೆ ಪಟ್ಟ್ ಮಾಡೊಕು.

ಇಜಿನ್ /*ijini*/ ನಾ. 1. ದಾಲ್ಚಿನ್ನಿ, 2. ಸಂಬಾರ ದಿನಸು. 1. Cinnamon, 2. a spice. ವಾ: ಪಲಾವ್, ಮಾಸ ಗೈಪುಗೆ ಇಜಿನ್ ಹಾಕಿರೆ ಲಾಯ್ಕ ಪೊರ್‌ಮಳ ಬಂದೆ. ಪ: ಈಜಿನ್, ಇಜ್ಜಿನ್

ಇಜ್ಜಾಲ್ /*ijja:ḷ*/ ನಾ. ಅಂಗಳ. a courtyard/a verandah. ವಾ: ಇಜ್ಜಾಲ್‌ಲಿಒ ಜಾರಿ ಬಿದ್ದದ್.

ಇಜ್ಜು /*ijju*/ ಕ್ರಿ. ಎಳೆದು ತೆಗೆ. pluck out. ವಾ: ಅಡ್ಕ ಇಜ್ಜುದು.

ಇಜ್ಜೋಲ್ /*ijjɔ:ḷi*/ ನಾ. 1. ಅಂಗಳ, 2. ಜಾಲು, 3. ಅಂಗಣ. 1. a yard in the house, 2. veranda, 3. front yard. ವಾ: ಬತ್ತ ಒಣ್‌ಂಗಿಸಿಕೆ ಇಜ್ಜೊಲ್‌ಗೆ ಸೆಗ್‌ಣಿ ಗುಡ್ಡೊಸ್ಕು. ಪ: ಇಜ್ಜಾಲ್ – ಅಂಗಳ

ಇಟ್ಕಂಡ್ /*iṭkanḍi*/ ಕ್ರಿ. 1. ಇಟ್ಟುಕೊಂಡು, 2. ಇರಿಸಿಕೊಂಡು. 1. by keeping something, 2. to keep/place something. **ಅಂಗೈಲಿ ತುಪ್ಪ ಇಟ್ಕಂಡ್ ಊರೆಲ್ಲ ಸುತ್ತಿದಂಗೆ(ಗಾ).** ವಾ: ಕೊಡಪಾನನ ಸೊಂಟಲಿ ಇಟ್ಕಂಡ್ ಬಾತ್.

ಇಟ್ಕಲ್ /*iṭkali*/ ನಾ. ಮೃದುಕಲ್ಲು. a soft stone. ವಾ: ಇಟ್ಕಲ್ ಬೇಗ ಹೊಡಿ ಹೊಡಿಯಾದೆ.

ಇಟ್ಗೆ /*iṭgɛ*/ ನಾ. ಇಟ್ಟಿಗೆ. brick. ವಾ: ಎಲ್ಲ ಹಳೆ ಮನೆ ಗೋಡೆಲಿರ್‌ದು ಮೊಣ್ಣ್ ಇಟ್ಟ್ ಗೆನೆ. ಪ: ಇಟಿಗೆ – ಇಟ್ಟಿಗೆ; ಇಟ್ಟಿಕಲ್ಲ್ – ಇಟ್ಟಿಗೆ;

ಇಟ್ಟಂಗೆ /*iṭṭaŋgɛ*/ ನಾ. 1. ಇಡುವಂತೆ, 2. ಅಣಿಗೊಳಿಸುವಂತೆ. 1. as if kept, 2. as if prepared. **ಆಕಾಸಕ್ಕೆ ಏಣಿ ಇಟ್ಟಂಗೆ(ಗಾ).** ವಾ: ದೇವುರು ಇಟ್ಟಂಗೆ ಮೊನ್‌ಸ ಇರೊಕುತ ದಾಸರ್ ಹೇಳಿಯೊಳೊ. ಪ: ಇಸಿದಂಗೆ

ಇಟ್ಟಣಿಕೆ /*iṭṭaṇikɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಇಟ್ಟಿ[1] /*iṭṭi*/ ನಾ. 1. ಸಣ್ಣ ಸಿಗಡಿ, 2. ಎಟ್ಟಿ. 1. shrimp, 2. decapod crustaceans. ವಾ: ಹಸಿ, ಒಣ್ಗಿಲ್ ಎರ್‌ಡ್ ತರದ ಇಟ್ಟಿ ಮೀನ್ ಸಿಕ್ಕಿದೆ.

ಇಟ್ಟಿಗುಂಡಿ /*iṭṭigunḍi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಮರಪಡ್ನೂರು ಗ್ರಾಮದ ಜಾಗ. a locality in Amarapadnuru village in Sullia Taluk of Dakshina Kannada District. ವಾ: ಇಟ್ಟಿಗುಂಡಿ ಕಡೆ ಒಮ್ಮೆ ಹೋಗಿ ಬನ್ನೆ.

ಇಟ್ಟಿಮೀನ್ /*iṭṭimi:ni*/ ನಾ. ಸಿಗಡಿ. prawns. **ಇಟ್ಟಿ ಮೀನ್ ಎಷ್ಟ್ ಹಾರಿರು ಚೆಟ್ಟಿಗೇ ಬೀಳ್ದು(ಗಾ).** ವಾ: ಅಂವಂಗೆ ಇಟ್ಟಿಮೀನ್‌ತೇಳಿರೆ ಬಾರಿ ಕುಸಿ.

ಇಟ್ಟಿಮೀಸೆ /*iṭṭimi:sɛ*/ ನಾ. ಒಂದು ವಿಧದ ಮೀಸೆ. a variety of moustache. ವಾ: ಅಂವನ ಇಟ್ಟಿ ಮೀಸೆನ ಒಮ್ಮೆ ನೋಡು ಇಟ್ಟಿ ಮೀಸೆನಾಂಗೆ.

ಇಟ್ಟೆ /*iṭṭɛ*/ ನಾ. ಕಣದಲ್ಲಿ ಆಚೆ ಈಚೆ ಮಣ್ಣಿನಿಂದ ದೊಡ್ಡ ಪ್ರಮಾಣದಲ್ಲಿ ಕಟ್ಟೆಯ ರೀತಿಯಲ್ಲಿ ಕಟ್ಟಿರುವುದು. a dike, a barrier built to stop water from overflowing in a paddy field. ವಾ: ಕಳಲಿ ಇಟ್ಟೆ ಕಟ್ಟೊಕು ಇಲ್ಲರೆ ಬತ್ತ ಬೊಡೆಕನ ಎಲ್ಲ ಕೆಳೆಗೆ ಹಾರಿದೆ.

ಇಟ್ಟೆಙ್ಙ /*iṭṭɛŋŋa*/ ನಾ. ದೊಡ್ಡ ಎಲೆಯ ಒಂದು ಕಾಡುಗಿಡ. a forest tree with big leaves. ವಾ: ಇಟ್ಟೆಂಙ ಒಂದ್ ಕಾಡ್ ದೈ. **ಇಟ್ಟೆಙ್ಙ ಸೊಪ್ಪ್** /*iṭṭɛŋga sɔppu*/ ಮೈ ತುರಿಸುವುದಕ್ಕೆ ಬಳಸುವ ಸೊಪ್ಪು. medicinal plant used to rub on the skin to stop the itchy skin. ವಾ: ಇಟ್ಟೆಙ್ಙ ಸೊಪ್ಪುಲಿ ಕಟ್ಟಿಕಂಡ್ ಬಂದೆ. ಪ: ಇಟ್ಟೋವು(ತು)

ಇಟ್ಟೋವು /*iṭṭɔ:vu*/ ನಾ. 1. ಕಾಡು ಗಿಡ, 2. ಇಟ್ಟೋವು ಸೊಪ್ಪು. 1. wild plant, 2. wild herb. ವಾ: ಇಟ್ಟೋವು ಸೊಪ್ಪುನ ಬತ್ತನ ಮೊಳ್ಕೆ ಬರ್ಸಿಕೆ ಬಳ್ಸ್‌ವೆ.

ಇಟ್ಟ್[1] /*iṭṭi*/ ನಾ. ಅಣಿಗೊಳಿಸು. to prepare. ವಾ: ಮೊದುವೆಗೆ ಒಳ್ಳೊ ದಿನ ಇಟ್ಟೊ.

ಇಟ್ಟ್[2] /*iṭṭi*/ ಕ್ರಿ. 1. ಕಾಣಿಸದಿರುವುದು, 2. ಕಾಣೆಯಾಗು. 1. not seen, 2. to disappear. ವಾ: ಮೊದುವೆ ಮನೆಲಿ ಕೂಸ್‌ನ ಚಿನ್ನ ಇಟ್ಟೋವುಟು.

ಇಟ್ಟ್[3] /*iṭṭi*/ ಕ್ರಿ. 1. ಬಿಸಾಡು, 2. ಎಸೆ. 1. to throw away, 2. to throw. ವಾ: ಹಣ್ಣ್ ಹಾಳ್‌ತ ತೋಟಕೆ ಇಟ್ಟೊ. ಪ: ಇಸ್ಟ್ – ಇಷ್ಟು; ಇಟ್ಟ್ – ಇಡು. **ಇಟ್ಟೋ** /*iṭṭɔ:*/ ಬಿಸಾಡಿದರು. they threw it away. ವಾ: ಹಳ್ಸಿದ ಅನ್ನನ ಇಟ್ಟೋ. **ಇಟ್ಟ್‌ದ್** /*iṭṭidi*/ 1. ಬಿಸಾಡಿ, 2. ಎಸೆದು, 3. ತೆಗೆದಿರಿಸಿದ್ದು. 1. to throw away, 2. to discard, 3. kept away. ವಾ: ಅಲ್ಲಿ ಎಂತರ್‌ನ ಇಟ್ಟ್‌ದ್.

ಇಟ್ರಾಡಿ /*iṭra:ḍi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕೊಡಿಯಾಲ ಗ್ರಾಮದ ಜಾಗ. a locality in Kodiyala village in Sullia Taluk of Dakshina Kannada District.

ಇಡಂಜಿ /*iḍaŋji*/ ನಾ. ಕಾಡುಹಣ್ಣು. a forest fruit. ವಾ: ಇಡಂಜಿ ಹಣ್ಣ್ ಕಾಡ್‌ಲಿ ಸಿಕ್ಕಿದೆ. ಪ: ಇಡಂಜಿ ಮರ – ಕಾಡಿನಲ್ಲಿರುವ ಹಣ್ಣು ಬಿಡುವ ಮರ

ಇಡಾಳ /*iḍa:ḷa*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಇಡಿ /*iḍi*/ ನಾ. 1. ಪೂರ್ಣ, 2. ಪೂರ್ತಿ, 3. ಸಮಗ್ರ. 1. complete, 2. full/entire, 3. comprehensive. ವಾ: ದೊಡ್ಡ ಇಡೀ ಹಲ್ಸ್‌ನಣ್ಣ್‌ನ ಒಂದೇ ಹೊತ್ಕಂಡ್ ಹೋತ್.

ಇಡಿಬಾಳೆ /*iḍiba:ḷɛ*/ ನಾ. 1. ಬಾಳೆ ಎಲೆ, 2. ಉದ್ದವಾದ ಪೂರ್ಣ ಬಾಳೆ ಎಲೆ, 3. ಕಾಂಡ ಸಹಿತ ಬಾಳೆ. 1. plantain leaf, 2. entire banana leaf, 2. banana with the stem. ವಾ: ಕಾರೋಣಕೆ ಇಸಿಕೆ ಇಡಿಬಾಳೆ ಬೇಕಾದೆ.

ಇಡಿಮುಡಿ /*iḍimuḍi*/ ನಾ. 1. ತಲೆಯಿಂದ ಕಾಲಿನವರೆಗೆ, 2. ಅಡಿಯಿಂದ ಮುಡಿವರೆಗೆ. 1. head to toe, 2. from toe to head. ವಾ: ಅವುಳು ನೋಡಿಕೆ ಇಡಿಮುಡಿ ಒಂದೇ ಆಗುಟು. ಪ: ಇಡಿಕೆ – ಇಡುವುದಕ್ಕೆ; ಇಡಲಿಕ್ಕೆ; ಇಡ್ದು(ಇಡುದು) – ಇಡುವುದು; ಇಡ್ಕನ – ಇಡುವಾಗ

ಇಡಿಂಜಿ ಅಳಂಬು /*iḍiŋji aḷambu*/ ನಾ. 1. ಅಣಬೆಯ ವಿಧಗಳು, 2. ಇಡಿಂಜಿ ಮರದಲ್ಲಿ ಏಳುವ ಅಣಬೆ. 1. a variety of mushroom, 2. a variety of mushroom that grows on South-Indian Commiphora tree. ವಾ: ಬಿದ್ದ ಮರಲಿ ಇಡಿಂಜಿ ಅಳಂಬು ಎದ್ದುಟು ನೋಡ್ಕೆ.

ಇಡ್ /*iḍi*/ ಕ್ರಿ. 1. ಮಡಗುವುದು, 2. ಬಿಸಾಡು, 3. ಎಸೆ, 4. ಇಟ್ಟ್. 1. to keep, 2. to throw, 3. to toss, 4. to put. ವಾ: ಹಾಳಾದ ಹಣ್ಣ್‌ಗಳ ತೆಗ್‌ದ್ ಇಡ್. ಪ: ಇಡೊಕು – ಇಡಬೇಕು; ಇಡ್‌ಂತ(ಇಡ್‌ತ) – ಇಡು ಎಂದು; ಇಡ್ನೊ – ಇಡುವ

ಇಡ್ತಲೆ /*iḍtalɛ*/ ನಾ. 1. ಇರ್ತಲೆ, 2. ಎರಡು ತಲೆ, 3. ಎರಡು ತಲೆಯ ಹಾವು. 1. two heads, 2. two heads, 3. a two-headed snake. ವಾ: ಇಡ್ತಲೆ ಹಾವ್‌ನ ಕಂಡೆ.

ಇಡ್ತಲೆ ಮಂಡಲ /*iḍtalɛ manḍala*/ ನಾ. ಎರಡು ತಲೆ ಹಾವು. a two headed snake. ವಾ: ತೋಟಲಿ ಕಚಡ ಕಡಿಯಕನ ಇಡ್ತಲೆ ಮಂಡಲ ಹಾವ್‌ನ ನೋಡ್‌ದೆ.

ಇಡ್ದ್ /*iḍdi*/ ನಾ. ಹಿಡಿದು. held/caught. ವಾ: ಹಾವ್ನ ತಲೆನ ಇಡ್ದ್ ಎಳ್ದ್ ಬಿಸಾಕಿದೆ.

ಇಡ್ನೂರು ಮಜಲು /*iḍnu:ru*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕೊಲ್ಲಮೊಗ್ರು ಗ್ರಾಮದ ಜಾಗ. a locality in Kollamogru village in Sullia Taluk of Dakshina Kannada District.

ಇಡ್ಮಣೆ /*iḍmaṇɛ*/ ನಾ. ಶ್ಯಾವಿಗೆ ಮಣೆ. a pedestal or a stool used in making rice vermicelli. ವಾ: ಇಡ್ಮಣೆ ಹಿಟ್ಟ್ ಗೆ ಕಾಯಿ ಹಾಲ್ ಹಾಕಿ ತಿನೊಕು. ಪ: ನೂಲುಪುಟ್ಟು; ಇಡ್ಮಣೆ ಹಿಟ್ಟ್ ವರ್ಲ್; ನೂಪಿಟ್ಟು

ಇಡ್ಮಣೆ ಒರ್ಲ್ /*iḍmaṇɛ orli*/ ನಾ. ಶ್ಯಾವಿಗೆ ಮಾಡುವ ಒರಳು. a vermicelli maker. ವಾ: ಇಡ್ಮಣೆ ಒರ್ಲ್‌ಲಿ ಹಿಟ್ಟ್ ಒತ್ತುದು.

ಇಡ್ಮಣೆ ಹಿಟ್ಟ್ /*iḍmaṇɛ hiṭṭi*/ ನಾ. ಶ್ಯಾವಿಗೆ. rice vermicelli/noodle/spaghetti. **ಬೆಂದವನ ಹಿಡ್‌ಕಂಡ್ ಹೋಗಿ ಹೊಸಮನೆನ ಕೂಡಿಬುಟ್ಟ್ ಒಳ್ಳ ಒಳ್ಳ ಗೂಡೆಗ ಒಟ್ಟಿಗೆ ಮೆಟ್ಟಿದೊ ನೂರಾತ್ ನೋಡಿ**

– **ಇಡ್ಮಣಿ ಹಿಟ್ಟ್, ಸೇವಿಗೆ(ಒ).** ವಾ: ಇಡ್ಮಣಿ ಹಿಟ್ಟ್ ನೋಡಿಯೊಳನ?

ಇಡ್ಯಡ್ಕ /*iḍyaḍka*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕಲ್ಮಕಾರು ಗ್ರಾಮದ ಜಾಗ. 1. family, 2. lineage, 3. a locality in Kalmakar village in Sullia Taluk of Dakshina Kannada District.

ಇಡ್ಯಾಡಿ /*iḍya:ḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಇಡ್ಲಿ /*iḍli*/ ನಾ. ಅಕ್ಕಿ ಹಿಟ್ಟಿನಿಂದ ಮಾಡುವ ಒಂದು ವಿಧದ ಭಕ್ಷ್ಯ. rice cake. ವಾ: ಇಡ್ಲಿ ಇಂದ್ ಬಾರಿ ಮೆತ್ತಂಗೆ ಉಟ್ಟು.

ಇಡ್ಲಿ ಮಿಳ್ಳಿ /*iḍli miḷḷi*/ ನಾ. ಇಡ್ಲಿ ಬೇಯಿಸುವ ಚಿಕ್ಕ ಪಾತ್ರೆ. a small pot used to bake idli – rice cake steamer. ವಾ: ಇಡ್ಲಿ ಮಿಳ್ಳಿಲಿ ಇಡ್ಲಿನ ಬೇಯಕೆ ಇಸಿದ್. ಪ: ಗಿನ್ನಲ್(ತು)

ಇಣ್ಕಿನೋಡ್ /*iṇkino:ḍi*/ ನಾ. 1. ಬಾಗಿನೋಡು, 2. ಇಣುಕಿನೋಡು, 3. ಬಗ್ಗಿನೋಡು. 1. to bend in order to see something, 2. to peep, 3. to bend and see. **ಅಂಕ್ ಡೊಂಕ್ ನ ಬಾಮಿ ಇಣ್ಕಿ ನೋಡಿರೆ ನೀರಿಲ್ಲೆ – ಕೆಮಿ(ಒ).** ವಾ: ಬಾಮಿನ ಇಣ್ಕಿ ನೋಡ್ತ್.

ಇಣ್ಕ್ /*iṇki*/ ನಾ. 1. ಬಾಗು, 2. ಬಾಗಿಸು, 3. ಇಣುಕು. 1. to bend, 2. to bend, 3. to peek. ವಾ: ಎಂತ ಇಣ್ಕುದು ಅಲ್ಲಿ ಹಂಗೆ. ಪ: ಇಣ್ಕುವಾಂಗೆ – ಇಣುಕುವ ಹಾಗೆ; ಇಣ್ಕ್‌ತಿತ್ತ್ – ಇಣುಕುತಿದ್ದಳು; ಇನ್ಕ್ – ಇಣುಕು

ಇತ್ತ /*itta*/ ಸನಾ. 1. ಈ ಕಡೆ, 2. ಇತ್ತಲು. 1. this side/ way, 2. towards particular direction. ವಾ: ಗದ್ದೆಗೆ ಇತ್ತನ ಕರೆಂದ ಹೋಕು. ಪ: ಇತ್‌ಉಗ್ಗಪ್ಪ – ಇತ್ತಾಂತ; ಇತ್ತನಕಡೆ – ಈ ಕಡೆ; ಇತ್ತಂದ – ಇಲ್ಲಿಂದ; ಈಚೆಯಿಂದ; ಇತ್ತಂದತ್ತ – ಈಚೆಯಿಂದ ಆಚೆಗೆ; ಇತ್ತನ – ಈ ಕಡೆಯ; ಇತ್ತಿಂದ – ಈ ಕಡೆಯಿಂದ; ಇತ್ತಳೇ – ಈ ಕಡೆಯೇ; ಇತ್ತಿಂದ – ಈ ಕಡೆಯಿಂದ; ಇಂತಾದರೆಲ್ಲ – ಇಂತಹದನ್ನೆಲ್ಲ;

ಇತ್ /*itti*/ ಕ್ರಿ. 1. ಇದೆ, 2. ಇತ್ತು. 1. to be there, 2. it was there. ವಾ: ನಾ ಆಗಲೆ ನೋಡ್ಕನ ನಾಯಿಮರಿ ಅಳುಂಬು ಅಲ್ಲೇ ಇತ್. **ಇತ್‌ಲರೆ** /*itliarε*/ ಇರದಿದ್ದರೆ. if something is not available. ವಾ: ಮೊದ್ದ್‌ಗೆ ದೊಡ್ಡವ್ರತ್ರೆ ಸೊಪ್ಪ್ ಇತ್‌ಲರೆ ಬೇಡಬುಡಿ. ಪ: ಇತ್ಲರೆ. **ಇತ್ಲರ್** /*itlari*/ ಇಲ್ಲದಿದ್ದರು. if someone/ something is not there. ವಾ: ದುಡ್ಡು ಇತ್ಲರ್ ಈಗ ಬೇಡಬುಡಿ. **ಇತ್ಲೆ** /*itlε*/ ಇರಲಿಲ್ಲ. it was not there. ವಾ: ನಾ ಹೋಕನ ಅವು ಅಲ್ಲಿ ಇತ್ಲೆ. ಪ: ಇತ್ಲೆತ – ಇರಲಿಲ್ಲವೆಂದು;

ಇತ್ಯರ್ತ /*ityarta*/ ನಾ. 1. ಇತ್ಯರ್ಥ, 2. ನಿರ್ಣಯ, 3. ಪೂರ್ಣ ವಿಷಯ, 4. ತೀರ್ಮಾನ. 1. to solve, 2. decision, 3. complete matter, 4. a decision. ವಾ: ಕೇಸ್ ನಾಳೆಗೆ ಇತ್ಯರ್ತ ಆದು.

ಇದುಂಗುಳಿ /*iduŋguḷi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮುರುಳ್ಯ ಗ್ರಾಮದ ಜಾಗ. a locality in Murulya village in Sullia Taluk of Dakshina Kannada District.

ಇದ್ /*idi*/ ಸನಾ. 1. ಇವಳು, 2. ಇವನು. 1. this girl, 2. this boy. ವಾ: ಇದೊಂದ್ ಸುಟ್ಟದ್ ಮರ್‌ಟ್ ಕಂಡೆ ಇದ್ದದೆ. ಪ: ಇದೆಂತ – ಇದು ಎಂತ(ಏನು); ಇದೆಂತಕೆ – ಇದು ಎಂತಹದಕ್ಕೆ; ಇದೆಲ್ಲದರ – ಇದೆಲ್ಲವನ್ನು; ಇಂದೆಲ್ಲ – ಇವತ್ತು ಎಲ್ಲ; ಇದೆಲ್ಲಿಟ್ಟುಂತ – ಇದು ಎಲ್ಲಿದೆ ಅಂತ; **ಇದರ್‌ಲಿ** /*idarili*/ ಇದರಲ್ಲಿ. in this. ವಾ: ಇದರ್‌ಲಿ ನಿನ್ನ ಪೆನ್ಸ್ ಯಾವ್ದ್? **ಇದಾಗುಟು** /*ida:guṭu*/ ಇದಾಗಿದೆ. this is it. ವಾ: ಇದಾಗುಟು ಕಂಡದೆ. ಪ: ಇದಾತ್ಲೆ – ಇದು ಆಗಲಿಲ್ಲ; ಇದಾದ್ರೂ – ಇದಾದರೂ; ಇಂದಾರ್ – ಇವತ್ತಾದರು. **ಇದೆಲ್ಲ** /*idella*/ ಇದು ಎಲ್ಲ. all of this. ವಾ: ಇದೆಲ್ಲ ನಂಗೆ ಗೊತ್ತಾದುಲೆ. **ಇದೊಂದ್ ಸುಟ್ಟದ್** /*idɔndi suṭṭadi*/ (ಹೆಂಡತಿಗೆ) ಬೈಯುವ ಪದ. a swear word. ವಾ: ಇದೊಂದ್ ಸುಟ್ಟದ್ ಮರ್‌ಟ್ ಕಂಡೆ ಇದ್ದದೆ. **ಇದ್ಕನಿ** /*idkani*/ 1. ಇದ್ದುಕೊಳ್ಳಿ, be the way you are. ಪ: ಇದ್ದ್ ಕನಿ. **ಇದ್ಕೆ** /*idkε*/ 1. ಇದಕ್ಕೆ 2. ಇವನಿಗೆ, 3. ಇವಳಿಗೆ. 1. referring to a thing/an animal, 2. to him, 3. to her. ಪ: ಇದ್ಕಾಗಿ – ಇದಕ್ಕಾಗಿ; ಇದ್ಕೆನಾ – ಇದಕ್ಕೆನಾ; ಇದ್ಕಂಡ್ – ಇದ್ದುಕೊಂಡು; ಇದ್ಕೆಂತದ್ – ಇದಕ್ಕೇನು; ಇದ್ಕೆಂತಾದ್ – ಇದಕ್ಕೆನಾಗಿದ್ದು. **ಇದ್ಕೆಲ್ಲ** /*idkεlla*/ ಇದಕ್ಕೆಲ್ಲ. for all this. ವಾ: ಇದ್ಕೆಲ್ಲ ನಮ್ಮ ಉಗ್ಗಪ್ಪ ಇರಕಾಗಿತ್ ಒಳ್ಳ ಮೊದ್ದ್ ಮಾಡ್‌ತಿದ್ದೊ. ಪ: ಇದ್ಕೆನಾಕು – ಇದಕ್ಕೆ ಏನಾಗಬೇಕು; ಇದ್ಕೇನ್ – ಇದಕ್ಕೆ ಏನು. **ಇದ್‌ನ್ನ** /*idinna*/ ಇದನ್ನು. this one. ವಾ:

ಇದ್‌ನ ಹಿಂಗೆ ಬುಡಿಕಾಗದ್. ಪ: ಇದ್ನೆಲ್ಲ – ಇದನ್ನೆಲ್ಲ; ಇದ್ನೂ – ಇದನ್ನೂ; ಇದೇನಾ – ಇದೇಯಾ; ಇದ್ಯಾಕೆ – ಇದು ಯಾಕೆ? **ಇದ್ಯಾಕೆ** /*idya:kɛ*/ 1. ಇದು ಯಾಕೆ?, 2. ಇದು, 3. ಇವನು, 4. ಇವಳು. 1. Why is this? 2. this, 3. him 4. her. ವಾ: ಇದ್ಯಾಕೆ ಹಿಂಗೆ ಇಂದ್ ಮರ್‌ಡುದು. ಪ: ಇದರಂಗೆ – ಇದರ ಹಾಗೆ; ಇದರಂದ – ಇದರಿಂದ; ಇದರ್‌ನು – ಇದರನ್ನು; ಇದರ್‌ನಾದ್ರು – ಇದರನ್ನಾದರು; ಇದರಸ್ಟ್ – ಇದರಷ್ಟು; ಇದ್ರೆಲ್ಲ – ಇದರೆಲ್ಲ; ಇದರೊಟ್ಟಿಗೆ – ಇದರೊಂದಿಗೆ(ಇದರ ಜೊತೆ); ಇದರ್‌ನ – ಇದರನ್ನು; ಇದರ್‌ಲಿ – ಇದರಲ್ಲಿ. **ಇದ್ಯಾರ್** /*idya:rɨ*/ ಇದು ಯಾರು? ಇವಳು ಯಾರು? 1. who is this, 2. who is she? ವಾ: ಇದ್ಯಾರ್ ನಿನ್ನೊಟ್ಟಿಗೆ ಬಂದದ್. ಪ: ಇದ್ರಿಂದ – ಇದರಿಂದ; ಇದ್ರೂ – ಇದ್ದರೂ; ಇದರ್‌ಲೆ – ಇದರಲ್ಲೆ. **ಇದ್ಯೆ** /*idyɛ*/ ನಾ. ಇದುವೇ. is this the one? / this one. ವಾ: ಇದ್ಯೆ ನಮ್ಮ ಬೊದ್‌ಕ್. **ಇದ್ರ** /*idra*/ 1. ಇದರ, 2. ಇದನ್ನು. 1. of this, 2. this. ವಾ: ಈ ಕೊತ್ತಿ ಉಟ್ಟಲಾ ಇದ್ರ ಏನ್ ಮಾಡೋಕು ಹಿಂಗೆ ಕದ್ದ್ ತಿಂದದೆ ಅಲಾ. ಪ: ಇಂದ್ ಸಾ – ಇವತ್ತು ಕೂಡ

ಇದ್ದ್ /*iddɨ*/ ಕ್ರಿ. 1. ಇದ್ದು, 2. ಇರುವುದು. 1. existing, 2. something that is there (alive) – being. ವಾ: ನೀನೊಂದ್ ಇದ್ದ್ ಇಲ್ಲದಂಗೆ ಯಾವ್ದಕ್ಕು ಆದುಲೆ. **ಇದ್ದ** /*idda*/ 1. ಇರುವ, 2. ಇದ್ದಿರುವ. 1. the one that is available, 2. this one. ವಾ: ಇದ್ದ ಒಂದ್ ಕೊಡೆನು ಬುಳ್‌ಗ್‌ಕನ ಮುರ್‌ದೋತ್. ಪ: ಇತ್ತ್ – ಇದ್ದಿತು; ಇದ್ದದರ – ಇದ್ದದ್ದನ್ನು; ಇದ್ದದರ್ಲಿ – ಇರುವುದರಲ್ಲಿ; ಇದ್ದದರೆಲ್ಲ – ಇರುವುದನ್ನೆಲ್ಲ. **ಇದ್ದಂವ** /*iddanva*/ 1. ಸಂಪತ್ತು ಹೊಂದಿದವ, 2. ಶ್ರೀಮಂತ. 1. a wealthy person, 2. a rich man. ವಾ: ಇದ್ದಂವಂಗೆ ಕೊಡಿಕೆ ಮನ್‌ಸಿಲ್ಲೆ, ಇಲ್ಲದವಂಗೆ ಮನ್‌ಸಿದ್ದರೂ ಕೊಡಿಕೆ ಆದುಲೆ. **ಇದ್ದದೆ** /*iddadɛ*/ 1. ಇರುತ್ತಾನೆ, 2. ಇರುತ್ತಾಳೆ, 3. ಇರುತ್ತದೆ. 1. He will be there, 2. She will be there, 3. It will be there. **ತಲೆಗೆ ಹೊಯ್ದ ನೀರ್ ಕಾಲಿಗೆ ಬೀಳದೆ ಇದ್ದದೆನಾ(ಗಾ).** ವಾ: ಹಸ್‌ನ ಬಾಣೆಲಿ ಗೂಟ ಹೊಡ್‌ದ್ ಕಟ್ಟಿರೆ ಅಲ್ಲೆ ಮೇದ್‌ಕಂಡ್ ಇದ್ದದೆ. ಪ: ಇದ್ದದ್ದ್ – ಇದ್ದಿದ್ದು; ಇದ್ದದ್ದರ – ಇದ್ದದ್ದನ್ನು; ಇದ್ದದ್ನ – ಇದ್ದದ್ದನ್ನು; ಇದ್ದನಾ – ಇದ್ದೆಯಾ; ಇದ್ದನೆ – ಇರುತ್ತೇನೆ; ಇದ್ದರಿ(ಇದ್ದರಿಯ) – ಇದ್ದೀರಾ; ಇದ್ರೂ – ಇದ್ದರೂ; ಇದ್ರೆ – ಇದ್ದರೆ; ಇದ್ದಲ್ಲಿ – ಇರುವಲ್ಲಿ. **ಇದ್ದವೆ** /*iddavɛ*/ ಇರುತ್ತಾರೆ. they will be there? ವಾ: ತೆರೆ ಹಬ್ಬಲಿ ಬಾರಿ ಜೆನ ಇದ್ದವೆ. ಪ: ಇದ್ದೊ – ಇದ್ದರು; ಇದ್ದಾಕನ – ಇರುವಾಗ(ಇದ್ದಾಗ); ಇದ್ದವರ – ಇರುವವರ; ಇದ್ದವು(ಇದ್ದವ್) – ಇರುವವರು; ಇದ್ದವ್ಕೆ – ಇರುವವರಿಗೆ; ಇದ್ದಾ – ಇದ್ದೆಯಾ; ಇದ್ದಿದ್ರೆ – ಇದ್ದಿದ್ದರೆ; ಇದ್ದದ್ದ್ – ಇದ್ದಿದ್ದು; ಇದ್ದೂ – ಇದ್ದರೂ; ಇದ್ದೆ – ಇದ್ದೆ. **ಇದ್ದಾಂಗೆ** /*idda:ŋgɛ*/ ನಾ. ಇರುವ ಹಾಗೆ. as if. **ಇದ್ದೊ** /*iddɔ*/ 1. ಇದ್ದರು, 2. ವಾಸಿಸುತ್ತಿದ್ದರು. 1. They were there, 2. They were living. ವಾ: ಐನ್ ಮನೆಲಿ ನಾವೆಲ್ಲ ಒಟ್ಟಿಗೆ ಇದ್ದೊ.

ಇದ್ನೆಂಟಿ /*idnɛɳʈi*/ ನಾ. ಟಿಟ್ಟಿಬ ಹಕ್ಕಿ. Red wattled lapwing. ವಾ: ಇದ್ನೆಂಟಿ ಹಕ್ಕಿ ಹೊತಾರೆನೆ ಕೂಂಗಿದೆ. ಪ: ಇದ್ಯೆ – ಇದುವೆ; ಇದ್ರ – ಇದರ; ಇದರ್‌ನ – ಇದರನ್ನು

ಇನಾಮು /*ina:mu*/ ಎಪ. 1. ಬಹುಮಾನ, 2. ಉಡುಗೊರೆ. 1. a prize, 2. a gift. ವಾ: ಆಟಲಿ ಗೆದ್ದದ್‌ಕೆ ಇನಾಮು ಕೊಟ್ಟೊ.

ಇನ್ನ್ /*innɨ*/ ಸನಾ. ಇನ್ನು. still. ವಾ: ಇನ್ನ್ ಇತ್ತ ಬಾದುಲೆ. ಪ: ಇನ್ನೀಗ – ಇನ್ನು ಈಗ; ಇನ್ನೂ – ಇನ್ನೂ; ಇನ್ನೇನ್ – ಇನ್ನು ಏನು; ಇನ್ನಾರ್(ಇನ್ನಾದ್ರೂ) – ಇನ್ನಾದರೂ; ಇನ್ನಿದ್ – ಇನ್ನು ಇದು; , ಇನ್ನೆಂತ – ಇನ್ನು ಏನು; ಇನ್ನೇನ್ – ಇನ್ನು ಏನು; ಇನ್ನೆರಡ್ – ಇನ್ನೆರಡು; ಇನ್ನೇನೊ – ಇನ್ನು ಏನೋ; ಇನ್ನೊಂದ್ – ಇನ್ನೊಂದು. **ಇನ್ನೂ ಸಾ** /*innu: sa:*/ 1. ಇನ್ನೂ ಸಹ, 2. ಇನ್ನೂ ಕೂಡ. 1. still, 2. still more/yet. ವಾ: ಇಸ್ಕೂಲ್‌ಲಿ ಇನ್ನೂ ಸಾ ಪೀಸ್ ಕಟ್ಟಿತ್‌ಲೆನಾ. **ಇನ್ನೊಂದರ್ನ** /*innɔndarna*/ ಇನ್ನೊಂದನ್ನು. another one. ವಾ: ಒಂದ್ ಪೆನ್ಸಿಲ್ ನೀ ತಕ ಇನ್ನೊಂದನ ತಂಗೆಗೆ ಕೊಡ್. **ಇನ್ನೊಂದ್‌ಟ್ಟು** /*innɔndiʈʈu*/ 1. ಇನ್ನೊಂದು ಇದೆ, 2. ಮತ್ತೊಂದಿದೆ. 1. there is another one, 2. there is one more. ವಾ: ಸೂಸ್ಲ್ ಹಿಟ್ಟ್ ಇನ್ನೊಂದ್‌ಟ್ಟು ಬೇಕಾ ತಿಂದಿಯನ?

ಇಪರೀತ /*ipari:ta*/ ನಾ. 1. ವಿರುದ್ಧವಾದ, 2. ಅತ್ಯಧಿಕವಾದ, 3. ವಿಲಕ್ಷಣವಾದ, 4. ತಿರುವುಮುರುವಾದ, 5. ತೀವ್ರವಾದ. 1. opposite, 2. great quantity /excessive, 3. strange, 3. twisted. **ಇಪರೀತ ಬುದ್ಧಿ ವಿನಾಸಕ್ಕೆ ದಾರಿ(ಗಾ).** ವಾ:

ಇಪರೀತ ಬುದ್ಧಿ ವಿನಾಸಕ್ಕೆ ದಾರಿತ ಹಿರಿಯರ್ ಹೇಳುವೆ.

ಇಪ್ಪುಲಿಮರ /*ippuli mara*/ ನಾ. ಹಿಪ್ಪಲಿ ಮರ. a long pepper tree – Piper longum. ವಾ: ಇಪ್ಪುಲಿ ಮರಲಿ ಹಣ್ಣ್ ಕಂಡದೆ.

ಇಪ್ಪೆ /*ippɛ*/ ನಾ. 1. ಗಾಯದಲ್ಲಿ ಆಗುವ ಸೋಂಕು, 2. ಗಾಯದ ಸುತ್ತ ಇಟ್ಟ ನೊಣದ ಮೊಟ್ಟೆ. 1. infection 2. lies depositing their eggs on or near a wound. ವಾ: ದನದ ಕಾಲ್‌ಗೆ ಆದ ಗಾಯಕ್ಕೆ ಇಪ್ಪೆ ಆಗುಟು.

ಇಪ್ಪೆಮಣೆ /*ippɛmaṇɛ*/ ನಾ. ಭತ್ತ, ಅಡಿಕೆ ಇತ್ಯಾದಿಗಳನ್ನು ರಾಶಿ ಮಾಡಲು ಉಪಯೋಗಿಸುವ ಸಾಧನ. a tool to gather paddy, areca nut, etc. ಪ: ಉಪ್ಪೆಮಣೆ

ಇಪ್ಲಿ ಹಣ್ಣ್ /*ipli haṇṇɨ*/ ನಾ. ಕಾಡು ಹಣ್ಣು. a forest fruit. ವಾ: ಇಪ್ಪುಲಿ ಹಣ್ಣ್ ತಿಂದವೆನಾ? ಪ: ಪಿಪ್ಪಳಿ

ಇಬ್ಬೊರು /*ibbɔru*/ ಸಂವಾ. 1. ಇಬ್ಬರು, 2. ಈರ್ವರು. 1. two persons, 2. two people. ವಾ: ಒಟ್ಟಿಗೆ ಇಬ್ಬೊರು ಇಸ್ಕೂಲಿಗೆ ಹೋದು. ಪ: ಇಬ್ಬುರ್‌ನು – ಇಬ್ಬರು; ಇಬ್ಬರ್ನ – ಇಬ್ಬರನ್ನು

ಇಬ್ಬ್‌ನಿ /*ibbɨni*/ ನಾ. 1. ಇಬ್ಬನಿ, 2. ಮಂಜು ನೀರಿನ ಹನಿ, 3. ಹಿಮ. 1. dew, 2. fog drip, 3. snow. **ಹಸ್ರ್ ಎಲೆ ಮೇಲೆ ಬೆಳ್ಳಿ ಕೊಣ್ಣದೆ – ಇಬ್ಬನಿ (ಒ).** ವಾ: ದೈನ ಮೇಲೆ ಇಬ್ಬುನಿ ಬಿದ್ದ್ ನೋಡಿಕೆ ಮುತ್ತ್ ನಂಗೆ ಉಟ್ಟಲಾ. ಪ: ಇಬ್ಬುನಿ

ಇಮಾನ /*ima:na*/ ನಾ. 1. ವಿಮಾನ, 2. ಆಕಾಶದಲ್ಲಿ ಹಾರಾಡುವ ವಾಹನ. 1. an aeroplane, 2. a vehicle that flies in the sky. ವಾ: ನಾ ಒಂದ್ ದಪನೂ ಇಮಾನಲಿ ಕುದ್ದತ್‌ಲೆ.

ಇಮ್ಮೆ /*immɛ*/ ಸಂವಾ. 1. ಎರಡು ಸಲ, 2. ಎರಡು ಬಾರಿ, 3. ಎರಡನೆಯ ಬಾರಿ. 1. twice, 2. two times, 3. second time. ವಾ: ಇಮ್ಮೆನಾರ್ ಬೇಡದ್ ಮಾತಾಡ್‌ರೆ ನನ್ನಸ್ಟ್ ಕೆಟ್ಟಂವ ಬೇರೆ ಯಾರೂ ಇರ್‌ಕಿಲೆ.

ಇಯೆರ್ /*iyɛrɨ*/ ನಾ. ಕಾಡು ಗೆಣಸಿನ ವಿಧ. a variety of tuber.

ಇರಂತಕಜೆ /*irantakajɛ*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ನೆಲ್ಲೂರು ಕೆಮ್ರಾಜೆ ಗ್ರಾಮದ ಜಾಗ. a locality in Nelluru Kemraje village in Sullia Taluk of Dakshina Kannada District.

ಇರಂತಮಜಲು /*irantamajalu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಜ್ಜಾವರ ಗ್ರಾಮದ ಜಾಗ. a locality in Ajjavara village in Sullia Taluk of Dakshina Kannada District.

ಇರಳಿ /*iraḷi*/ ನಾ. 1. ಎರಚಲು/ಇರಚಲು, 2. ಗಾಳಿ ಬೀಸುವಿಕೆಯಿಂದ ಅಡ್ಡಲಾಗಿ ಬೀಳುವ ಮಳೆ. 1. splashing rain, 2. uprooting of tree due to heavy wind. ವಾ: ಸಣ್ಣದಾಗಿ ಇರಳಿ ಬಿದ್ದದೆ.

ಇರಾದೆ /*ira:dɛ*/ ನಾ. 1. ಇಚ್ಛೆ, 2. ವಿಚಾರ, 3. ಸಂಕಲ್ಪ, 4. ಉದ್ದೇಶ, 5. ಅಭಿಪ್ರಾಯ. 1. a desire, 2. an idea, 3. an intent, 4. an objective, 5. an opinion. ವಾ: ಉಗ್ಗಪ್ಪನ ಇರಾದೆ ಎಂತತ ನಂಗೆ ಗೊತ್ಲೆ.

ಇರಿಂಟಿ /*iriṇṭi*/ ನಾ. 1. ಜೀರುಂಡೆ, 2. ಚಿಮ್ಮಂಡೆ . 1. Cicadas insect, 2. Hemiptera (true bugs). ವಾ: ಮಳೆಗಾಲಲಿ ಇರಿಂಟಿ ರೊಂಯೊ ರೊಂಯೊ ಸದ್ದ್ ಮಾಡ್ದೆ.

ಇರುಂಪಾರೆ /*irumpa:rɛ*/ ನಾ. 1. ಹಾರೆ, 2. ಗುಂಡಿ ತೆಗೆಯಲು ಬಳಸುವ ಕಬ್ಬಿಣದ ಒಂದು ಉಪಕರಣ. 1. crowbar, 2. an iron bar used to dig the hard surface/ground. ವಾ: ಇರುಂಪಾರೆ ತಕಂಡ್ ಗುಂಡಿ ತೆಗ್‌ದ್ ಕಂಬ ಹಾಕನೊ.

ಇರುದ್ದ /*irudda*/ ನಾ. 1. ವಿರುದ್ಧ, 2. ವಿರೋಧವುಳ್ಳ, 3. ತಡೆದ, 4. ಪ್ರತಿರೋಧಿಸಲ್ಪಟ್ಟ. 1. opposite, 2. opposed, 3. stopped, 4. protested. ವಾ: ಯಾರಾರ್ ದೊಡ್ಡವ್‌ರ ಇರ್‌ದ್ದ ಹಂಗೆ ಮಾತಾಡ್‌ವೆನ ಅಸ್ಟ್ ಗೊತ್ತಾಲೆನ ನಿಂಗೆ. ಪ: ಇರ್‌ಕೆ – ಇರುವುದಕ್ಕೆ; ಇರ್‌ದುಲೆ – ಇರುವುದಿಲ್ಲ; ಇರ್‌ದಕು – ಇರುವುದಕ್ಕು

ಇರುವಂಬಳ್ಳ /*iruvambaḷḷa*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮಂಡೆಕೋಲು ಗ್ರಾಮದ ಜಾಗ. a locality in Mandekolu village in Sullia Taluk of Dakshina Kannada District.

ಇರುವೆ /*iruvɛ*/ ಕ್ರಿ. 1. ಇರುವೆನು, 2. ಇದ್ದೇನು, 3. ಇರುತ್ತೇನೆ. 1. I will be there, 2. I may be there,

3. I shall be there. ವಾ: ನಾ ಯಾಗೊಳು ನಿಮ್ಮೊಟ್ಟಿಗೆ ಇರುವೆ.

ಇರ್[1] /*iri*/ ನಾ. 1. ಉಳಿಯು, 2. ತಂಗು. 1. to remain, 2. to stay back. ವಾ: ಇಂದ್ ನಮ್ಮಲ್ಲೆ ಇರ್ ನಾಳೆ ಹೋಕಲ.

ಇರ್[2] /*iri*/ ಕ್ರಿ. 1. ಇರು, 2. ಕಾದಿರು. 1. to be there, 2. to wait. **ಅಕ್ಕ ಇರಿಕೆ ಮುಟ್ಟ ಬಾವ(ಗಾ).** ವಾ: ಇಲ್ಲೆ ಇರ್ ನಾ ಅತ್ತ ಹೋಗಿ ಬನ್ನೆ. ಪ: ಇರ್‌ಕಾಕನ – ಇರುವಾಗ; ಇರ್‌ದರ್‌ನ – ಇರುವುದನ್ನು. **ಇರಿಕಾಗದ್** /*irika:gadi*/ ಇರಬಾರದು. shouldn't be. **ಗುಣಕ್ಕೆ ಮತ್ಸರ ಇರಿಕಾಗದ್(ನು).** ವಾ: ಮೊನ್‌ಸಂಗೆ ಹೊಟ್ಟೆ ಉರಿ ಇರಿಕಾಗದ್. **ಇರುವಾಂಗೆ** /*iruva:ŋgɛ*/ ಇರುವ ಹಾಗೆ. the way one lives/as if. ವಾ: ನೀ ಇರುವಾಂಗೆ ಇರ್‌ತ ಹೇಳ್‌ರೆ ನಂಗೆ ಹಂಗೆನೆ ಇರಿಕೆ ಆದೆನ ಹೇಳೊಮ್ಮೆ. **ಇರೊಂವ** /*irɔnva*/ ಇರುವವನು. someone who is there. ವಾ: ಮನೆಲಿ ಇರೊಂವ ಇಂವ ಒಬ್ಬ ಹೊರಗೆ ಹೋದರೆ ಮನೆ ಕಡೆ ನೋಡಿಕಂಬದು ಯಾರ್. **ಇರೊಮೊ** /*irɔmɔ*/ ಇರೋಣ. to be together. ವಾ: ನಾವು ಲಾಯ್ಕಲಿ ಇರೊಮೊ. **ಇರೋಕು** /*irɔ:ku*/ ಇರಬೇಕು. should be there. **ಕೈ, ಬಾಯಿ, ಕಚ್ಚೆ ಮೂರೂ ಸರಿ ಇರೋಕು(ಗಾ).** ವಾ: ನನ್ನಕ್ಕಲೆ ಗಾದೆ, ಸೋಬಾನೆ ಪುಸ್ತಕ ಇರೋಕು. **ಇರಿಕಿಲೆ** /*irikilɛ*/ ಇರಲಾರದು. may not be. ವಾ: ಇಂದ್ ಅವು ಮನೇಲಿ ಇರಿಕಿಲೆ. **ಇರಿಕೆ** /*irikɛ*/ 1. ಇರಲು, 2. ವಾಸಿಸಲು, 3. ನೆಲೆಸಲು. 1. to stay, 2. to live, 3. to reside. ವಾ: ಬೋಜಪಂಗೆ ಇಂದ್ ಮನೆಲಿ ಇರಿಕೆ ಹೇಳ್ಯೊಳೆರ. ಪ: ಇರೊಕು, ಇರೋಕು(ಇರೊಕ್) – ಇರಬೇಕು; ಇರೊಕುಂತ – ಇರಬೇಕೆಂದು; **ಇರಿನಿ** /*irini*/ ಇದ್ದುಕೊಳ್ಳಿ, ಬಹುವಚನ ರೂಪದ ಸಂಬೋಧನ ಪದ. to request the guests to stay back. ವಾ: ನೀವು ಇಂದ್ ನಮ್ಮಲ್ಲೇ ಇರಿನಿ, ಆ ಈಗ ಬನ್ನೆ. **ಇರ್ಕನ** /*irikana*/ ಇರುವಾಗ. during/while. **ಇರ್ಕನ ಕಣ್ಣುರಿ ಸತ್ತ ಮೇಲೆ ಹೊಟ್ಟೆ ಉರಿ(ಗಾ).** ವಾ: ಲಾಯ್ಕಲಿ ಇರ್‌ಕನ ಎಲ್ಲೊವು ಇದ್ದವೆ ತಿಂಬಕಿಲ್ಲರೆ ಯಾರೂ ಇಲ್ಲೆ. ಪ: ಇರ್‌ವೊ – ಇರಬಹುದು; ಇದ್ದವೆ – ಇರುತ್ತಾರೆ. **ಇರ್‌ಕಾಗದ್** /*irika:gadi*/ ಇರಬಾರದು. shouldn't be (there). ವಾ: ಮೊನ್ಸಂಗೆ ದುರಂಕಾರ ಇರ್‌ಕಾಗದ್.

ಇರ್‌ಮಜಿರ್ /*iriŋjiri*/ ನಾ. 1. ಗುಡ್ಡ ಕಾಡಿನಲ್ಲಿರುವ ಪೊದರು ಮತ್ತು ಬಳ್ಳಿ, 2. ಇಂಜಿರ್. 1. bush or a thicket near the forest or a hillock, 2. bush or a thicket. ವಾ: ಅಲ್ಲಿ ನೋಡಿ ಇರ್‌ಂಜಿರ್.

ಇರ್‌ಂಬರೆ /*irimbarɛ*/ ನಾ. 1. ಹಾರೆಯ ಹಾಗೆ ಬಳಸುವ ಉಪಕರಣ, 2. ಹಾರೆಕೋಲು. 1. a tool similar to a crowbar, 2. a crowbar. ವಾ: ನೆಲ ಎಳ್ಳಿಕೆ ಇರ್‌ಂಬರೆ ಇದ್ದರೆ ಆತಿತ್. ಪ: ಇರ್ಬಾಂರೆ – ಹಾರೆ ಕೊಲು

ಇರ್ಣ ಅಮಾಸ್ಯೆ /*irṇa ama:syɛ*/ ನಾ. 1. ಈರಣ ಅಮವಾಸ್ಯೆ, 2. ತೀರ್ಥದ ಅಮವಾಸ್ಯೆ, 3. ಹಿರಣ್ಯ ಅಮಾವಾಸ್ಯೆ ಎಂಬ ಹಬ್ಬ, ಸೋಣ ತಿಂಗಳಲ್ಲಿ ಬರುವ ಅಮಾವಾಸ್ಯೆ. 1. Hiranya Amavasya (a new moon day), 2. a new moon day, 3. a festival celebrated on a new moon day in the month of Sona in Arebhashe calendar. ವಾ: ಸೋಣ ತಿಂಗಳ್‌ಲಿ ಇರ್ಣ ಅಮಾಸ್ಯೆ ಬಾದು.

ಇರ್ಣೆ /*irṇe*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅರಂತೋಡು ಗ್ರಾಮದ ಜಾಗ. a locality in Arantodu village in Sullia Taluk of Dakshina Kannada District.

ಇರ್ದ್ /*iradi*/ ಕ್ರಿ. ಇರುವುದು. existing/having. ವಾ: ಅವುಳು ಮನೆಲಿ ಇರ್ದ್. **ಇರ್ದು** /*irdui*/ ಇರುವುದು. having/being. **ಐದ್ ಬೆರಳ್ ಒಂದೇ ಸಮಿ ಇರ್ದುಲೆ(ಗಾ).** ವಾ: ಇಂದ್ ಅಂವ ಮನೆಲೆ ಇರ್ದು. **ಇರ್ದೆ** /*iradɛ*/ ಇರುವುದೆ. existing/having. ವಾ: ಅಂವಂದ್ ಗೋಳು ಯಾಗೊಳು ಅದ್ ಇರ್ದೆ. **ಇರ್‌ದರ**[1] /*irdara*/ 1. ಎರಡನೇ ಬಾರಿ, 2. ಪುನಃ. 1. the second time, 2. again. ವಾ: ಇರ್‌ದರ ಮಳೆ ಸುರಾತ್. **ಇರ್‌ದರ**[2] /*irdara* / ಇರುವುದನ್ನು. something that is there. ವಾ: ಈ ಕುಂಬ್ ಮರ ಇರ್‌ದರ ಎಂತ ಮಾಡ್‌ದು. **ಇರ್ದುಲೆ** /*irdulɛ*/ ಇರುವುದಿಲ್ಲ. won't be there. **ಊಟ ಗೊತ್ತಿರೊಂವಂಗೆ ಕಾಯಿಲೆ ಇರ್ದುಲೆಗಡ(ಗಾ).** ವಾ: ನಾಳೆ ಅವು ಇರ್ದುಲೆ. **ಇರ್ಲಿ** /*irali*/ ಇರಲಿ. let it be. ವಾ: ಇರ್‌ಲಿ ಇರ್‌ಲಿ ನಾ ನೋಡಿಕಣೆ. ಪ: ಇರ್‌ಸಕಾಯಿತ್ – ಉಳಿಸಬಹುದಿತ್ತು; ಇರ್‌ಸೋಕು – ಉಳಿಸಬೇಕು; ಇರ್‌ದರ – ಇರುವುದನ್ನು; ಇರ್‌ದು –

ಇರುತ್ತದೆ; ಇರ್‌ದುತ – ಇರುವುದೆಂದು; ಇರ್‌ದೆನೊ – ಇರಬಹುದೇನೊ

ಇರ್‌ನೆ /*irinɛ*/ ನಾ. ಇರು ಎಂದು ಏಕವಚನದಲ್ಲಿ ಕಿರಿಯರನ್ನು ಸಂಬೋಧಿಸುವುದು. be there (usually used for younger people). ವಾ: ಇರ್‌ನೆ ನಾ ಬನ್ನೆ, ಬುಟ್ಟ್ ಎಲ್ಲಿಗೆ ಹೋದು?

ಇರ್‌ಮುಡಿ /*irimuḍi*/ ನಾ. ಅಯ್ಯಪ್ಪ ಸ್ವಾಮಿ ಭಕ್ತರು ಕಾಣಿಕೆಗಳ ಕಪ್ಪು ಅಥವಾ ಕಾವಿ ಬಟ್ಟೆಯ ಕಟ್ಟು. two pouches (black and saffron) that are carried on the head by the devotees of Lord Ayyappa. ವಾ: ಸ್ವಾಮಿಗ ಇರ್‌ಮುಡಿ ಕಟ್ಟಿ ಸಬರಿಮಲೆಗೆ ಹೊರ್‌ಟೊ.

ಇರ್ಲ್ /*irli*/ ನಾ. 1. ಕತ್ತಲೆ, 2. ರಾತ್ರಿ, 3. ಇರುಳು. 1. darkness, 2. night, 3. night. **ಅಲ್ಪಂಗೆ ಐಸಿರಿ ಬಾಕನ ಇರ್ಲ್ ಕೊಡೆ ಹಿಡ್ತ್ ಗಡ(ಗಾ).** ವಾ: ಇರ್‌ಲ್ ಕಣ್ಣ್ ಕಾಂಬದುಲೆ.

ಇರ್ಲ್‌ಮನಿ /*irlimani*/ ನಾ. 1. ಒಂದು ವೇಳೆ ರಾತ್ರಿಯಲ್ಲಿ, 2. ಇರುಳಲ್ಲಿ. 1. in the night, 2. after sunset, 3. night time. ವಾ: ಇದೊಂದ್ ಸುಟ್ಟದ್ ಮರ್‌ಟ್ ಕಂಡೆ ಇದ್ದದೆ. ಪ: ಇರ್‌ದರ – ಇರುವುದನ್ನು; ಇರ್‌ದು – ಇರುತ್ತದೆ; ಇರ್‌ದುತ – ಇರುವುದೆಂದು; ಇರ್‌ದೆನೊ – ಇರಬಹುದೇನೊ

ಇರ್ವೆ /*irvɛ*/ ನಾ. ಇರುವೆ. an ant. **ಯಾರ್ ಹತ್ತದ ಮರನ ಕರಿಯಣ್ಣ ಹತ್ತಿದೆ – ಇರುವೆ(ಒ).** ವಾ: ಸಕ್ಕರೆಗೆ ತೀರ ಇರ್ವೆ ಬಂದುಟು.

ಇರ್ಸಿ /*irsi*/ ನಾ. 1. ಇರಿಸಿ, 2. ಉಳಿಸಿ. 1. to keep, 2. to save. ವಾ: ಅಕ್ಕನ, ಬಾವನ ಇಂದ್ ಇರ್ಸಿಕನಿ. ಪ: ಇರ್ಸ್ – ಉಳಿಸು

ಇಲಾತಿ ಗೆಂಡೆ /*ila:ti gɛnḍɛ*/ ನಾ. ಆಲೂಗೆಡ್ಡೆ. potato. ವಾ: ಗೈಪುಗೆ ಇಲಾತಿ ಗೆಂಡೆ ಹಾಕಿರೆ ರುಚಿ ಆದು. ಪ: ಇಲಾತ್ಗೆಂಡೆ

ಇಲಾತಿ ಚಟ್ಟ್ /*ila:ti caṭṭi*/ ನಾ. 1. ಹುರುಳಿಕಾಯಿ ಕಾಳು, 2. ಬೀನ್ಸ್ ಕಾಳು, 3. ಇಲಾತಿಬಾಳ್, 4. ವಿಲಾಯತಿ ಚಟ್ಟ್. 1. beans, 2. ripe beans. ವಾ: ಇಲಾತಿ ಚಟ್ಟ್ ಹಿಡ್‌ದುಟು.

ಇಲಿಕಳ /*ilikaḷa*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಆಲೆಟ್ಟಿ ಗ್ರಾಮದ ಜಾಗ. a locality in Aletti village in Sullia Taluk of Dakshina Kannada District.

ಇಲೆತ್ರ /*ilɛtra*/ ನಾ. 1. ಕರವಸ್ತ್ರ, 2. ಚೌಕಬಟ್ಟೆ. 1. handkerchief, 2. a rectangular piece of cloth used as a handkerchief. ವಾ: ಇಲೆತ್ರನ ಕೈಲೆ ಹಿಡ್ಕ

ಇಲ್ಲಿ /*illi*/ ಕ್ರಿವಿ. ಈ ಸ್ಥಳದಲ್ಲಿ. here – in this place. ವಾ: ಇಲ್ಲಿ ನೋಡ್‌ನೆ ಕಾಲ್‌ಗೆ ಉಂಬುಳು ಹತ್ತಿಟು. ಪ: ಇಲ್ಲಿ ಮುಟ್ಟ – ಇಲ್ಲಿಯ ತನಕ; ಇಲ್ಲಿಗೆತ್ತಿಕನ – ಇಲ್ಲಿಗೆ ತಲಪುವಾಗ; ಇಲ್ಲಿಯೂ – ಇಲ್ಲಿನೂ; ಇಲ್ಲಿಗೆಂತ – ಇಲ್ಲಿಗೆ ಎಂದು. **ಇಲ್ಲಿರ್ವ** /*illirva*/ ಇಲ್ಲಿರುವ. here/ in this. ವಾ: ಇಲ್ಲಿರ್‌ವ ತೋಟಲಿ ಕಾಪಿ ಪಸ್‌ಲ್ ಕಮ್ಮಿ ತ.

ಇಲ್ಲೆ /*illɛ*/ ಅ. 1. ಇದರಲ್ಲಿ ಇಲ್ಲ, 2. ಏನೂ ಇಲ್ಲ, 3. ಇಲ್ಲ. 1. something is not here, 2. nothing, 3. not there. **ಅತ್ತಳೂ ಇಲ್ಲೆ ಇತ್ತಳೂ ಇಲ್ಲೆ(ಗಾ). ಇದ್ದಲ್ಲಿಯೂ ಇಲ್ಲೆ ಹೋದಲ್ಲಿಯೂ ಇಲ್ಲೆ(ನು).** ವಾ: ಈ ಪಪ್ಪಾಯಿ ಚಪ್ಪೆ, ಹಣ್ಣನೂ ಸೀಂಯೆ ಇಲ್ಲೆ. ಪ: ಇಲ್ಲೆಗಡ – ಇಲ್ಲವಂತೆ; ಇಲ್ಲೆನಾಂತ – ಇಲ್ಲವೋ ಅಂತ; ಇಲ್ಲೆನೊ – ಇಲ್ಲಕಣೊ; ಇಲ್ಲೆಪ – ಇಲ್ಲಪ್ಪ; ಇಲ್ಲೆಲ್ಲ – ಇಲ್ಲಿ ಎಲ್ಲ; ಇಲ್ಲೆಲ್ಲೆ – ಇಲ್ಲಲ್ಲ. **ಇಲ್ಲದಿರ್ವನೊ** /*illadirvanɔ*/ ಇಲ್ಲದಿರುವರೆ. may not be there/probably. ವಾ: ಈಗೊಳೂ ಅಂತವು ಇಲ್ಲದಿರ್ವನೊ. ಪ: ಇಲ್ಲದ್ದ್ – ಇಲ್ಲದ; ಇಲ್ಲದ್‌ಕೆ – ಇಲ್ಲದಿರುವುದಕ್ಕೆ. **ಇಲ್ಲರೂ** /*illaru:*/ ಇಲ್ಲದಿದ್ದರೂ. even if they are not there. ವಾ: ಇಲ್ಲರೂ ನಾ ಆಕಡೆ ಹೋದೇಲೆ. ಪ: ಇತ್ತ್‌ಲರೂ – ಇಲ್ಲದಿದ್ದರೂ; ಇತ್ಲೆ – ಇರಲಿಲ್ಲ; ಇಲ್ಲರೆ – ಇಲ್ಲದಿದ್ದರೆ. **ಇಲ್ಲೆನ**[1] /*illɛna*/ ಇಲ್ಲವೆ. Isn't it there? ವಾ: ಪಾಯ್‌ಸ ಮಾಡಕಿತ್ತ್ ಬೆಲ್ಲ ಇಲ್ಲೆನ? ಪ: ಇಲ್ಲೆನಾ – ಇಲ್ಲವೇ. **ಇಲ್ಲೆನೆ**[1] /*illɛne*/ 1. ಇಲ್ಲ, 2. ಹುಡುಗಿಗೆ ಹಿರಿಯರು ಏಕವಚನಲ್ಲಿ ಹೇಳುವ ಪದ. 1. No/not there, 2. Is it not there? (a term used when elders ask a girl about something). ವಾ: ನೀ ನಾಳೆ ಹೊಳೆಕರೆಗೆ ಬಂದಿಯನ? ಇಲ್ಲೆನೆ ಬಾಕಾದುಲೆ ಸೌದೆ ಹೊರೊಕು. **ಇಲ್ಲೆಯ** /*illɛya*/ 1. ಇಲ್ಲ, 2. ಗಂಡ ಹೆಂಡತಿಗೆ ಇಲ್ಲವೆಂದು ಹೇಳುವ ಪದ. 1. no/not there, 2. Is it not there? (a term usually used by a husband to his wife, to mean that something is not there). **ಇಲ್ಲೆರ** /*illɛra*/ 1. ಇಲ್ಲ, 2. ಹುಡುಗನಿಗೆ ಹಿರಿಯರು ಏಕವಚದಲ್ಲಿ ಹೇಳುವ

ಪದ. 1. no/ not there, 2. Is it not there? (a term used when elders ask a boy about something). ವಾ: ಬಾರ ಪೋಯಿ ನಾಟಿ ಕೋಳಿ ತರೊನೊ, ಇಲ್ಲೆರ ನಾ ಬಾದುಲೆ. **ಇಲ್ಲೇಲೆ** /*ille:le*/ ಇಲ್ಲವೇ ಇಲ್ಲ. saying 'no' with an emphasis. ವಾ: ಸಿಂಪೆ ಇಸುದು ಕಮ್ಮಿ, ಇಲ್ಲೇಲೆತೇಳ್ರೂ ಆದು. **ಇಲ್ಲೇ** /*illɛ:*/ 1. ಇಲ್ಲಿಯೇ, 2. ಇಲ್ಲವೇ ಇಲ್ಲ. 1. here in this place 2. no, never. ವಾ: ಕುಂಡಕೋಳಿ ಇಲ್ಲೇ ಇತ್ತ್ ನಾ ಆಗಲೆ ನೋಡ್ಕನ. **ಇಲ್ಲೊಂದ್** /*illɔndɨ*/ 1. ಇಲ್ಲೊಂದು, 2. ಇಲ್ಲಿ ಒಂದು. 1. here, 2. in this place. ವಾ: ಇಲ್ಲೊಂದ್ ಪಾಸಣಮೂರ್ತಿ ಕಲ್ಲ್ ಉಟ್ಟು ನೋಡಿಕ, ಎಲ್ಯಾರ್ ಮೆಟ್ಟಿ ಬುಡ್ಬಡ.

ಇವರ /*ivara*/ ಸನಾ. ಬವ. ಇವರನ್ನು. these people. ವಾ: ಇವರ ನಾ ಕಾಣದೆ ಬಾರಿ ಸಮೆ ಆಗೋತ್. ಪ: ಇವರ್‌ನೆಲ್ಲ – ಇವರನ್ನೆಲ್ಲ; ಇವರ್‌ದೆಲ್ಲ – ಇವರದ್ದೆಲ್ಲ; ಇವರಸ್ಟ್ – ಇವರಷ್ಟು; ಇವರಂದ – ಇವರಿಂದ; ಇವರಿಬ್ಬರ – ಇವರಿಬ್ಬರ; ಇವರೊಟ್ಟಿಗೆ – ಇವರಜೊತೆ; ಇವರೊಟ್ಟಿಗೆನೇ – ಇವರ ಜೊತೆನೇ; ಇವರೊಳಗೆ – ಇವರೊಳಗೆ. **ಇವರ್ದ್** /*ivardɨ*/ ಇವರದ್ದು. of these people/belonging to some people. ವಾ: ಅಬಾ ಇವರ್‌ದ್ ರಾಮಾಯಣ ಮುಗಿಯದೇಲೆನ.

ಇವಳ /*ivaḷa*/ ಸನಾ. ಏವ. ಇವಳ. her. ವಾ: ಇವಳೊಟ್ಟಿಗೆ ಬಾರಿ ಉಸಾರಾಗಿರೋಕು ಆತ. ಪ: ಇವಳ್ನ – ಇವಳನ್ನು; ಇವಳ್ – ಇವಳು. **ಇವುಳು** /*ivuḷu*/ ಇವಳು. this woman. ವಾ: ಇವುಳು ನನ್ನ ಹೆಣ್ಣ್. ಪ: ಇವ್ಳು – ಇವಳು; ಇವುಳಿಗೆ – ಇವಳಿಗೆ

ಇವು /*ivu*/ ಸನಾ. ಬವ. 1. ಪತಿಯ ಹೆಸರನ್ನು ಕರೆಯದೆ ಗೌರವಯುತವಾಗಿ ಹೇಳುವ ರೀತಿ, 2. ಇವರು. 1. an honorific term used by a wife to address her husband, 2. these people. ವಾ: ಇಸ್ಟ್ ಹೊತ್ತಾದ್‌ರು ಇವು ಉಂಬಕೆ ಬಾತ್‌ಲೆಲ. ಪ: ಇವ್ – ಇವರು. **ಇವೆ** /*ivɛ*/ ಇವರೆ. this person. ವಾ: ಇವೆ ನನ್ನ ಮಗಳ ಅತ್ತೆ. ಪ: ಇವೆಲ್ಲ – ಇವರೆಲ್ಲ; ಇವೆಲ್ಲವೂ – ಇವರೆಲ್ಲರೂ ; ಇವೇ – ಇವರೇ. **ಇವೆರಡ್** /*iveraḍɨ*/ ಇವರಿಬ್ಬರು. these two people. ವಾ: ಇವೆರೆಡ್ ಸೇರಿರೆ ಮುಗ್‌ತ್ ದೇವ್‌ರೆ ಆಕಾಸ ಬೂಮಿನ ಒಂದ್ ಮಾಡುವೆ. **ಇವ್ಕಾತ್** /*ivka:tɨ*/ ಇವರಿಗಾಯಿತು. to these people. ವಾ: ಇವ್ಕಾತ್ ಕಂಡದೆ ನನ್ನ ಕೈಲಿ ಒಂದೂ ಹರಿಯಕಿಲೆತ. **ಇವ್ಕೆ** /*ivkɛ*/ ಬವ. 1. ಇವರಿಗೆ, 2. ಹಿರಿಯರ ಸಂಬೋಧನೆಗೆ ಬಳಸುವ ಪದ. 1. to/for them, 2. an honorific term used for the elderly. ವಾ: ಇವ್ಕೆ ಹೇಳದೆ ಎಂತ ವ್ಯವರನು ಮಾಡ್‌ದುಲೆ. ಪ: ಇವುಕೆ – ಇವರಿಗೆ; ಇವ್ಕೆಲ್ಲ – ಇವರಿಗೆಲ್ಲ; ಇವ್‌ಕ್ಕೆ ಇವರಿಗೆ(ಇವುಗಳಿಗೆ); ಇವ್ರಲ್ಲಿ – ಇವರಲ್ಲಿ

ಇಸ /*isa*/ ನಾ. 1. ವಿಷ, 2. ವಿಪರೀತ ಕಹಿ, 3. ನಂಜು. 1. poison, 2. too bitter, 3. infection. ವಾ: ಇಸ ಕುಡ್ದ್ ಅಂವ ಸತ್ತತ್‌ಗಡ.

ಇಸ್ /*isɨ*/ ಕ್ರಿ. 1. ಇಡು, 2. ಇರಿಸು. 1. keep, 2. to put something. **ಆರೆಡೆಗೆ ಇರ್ಸಿಕಂಡ್ ಮೂರೆಡೆಗೆ ಸಾರ್ದೆ(ಗಾ). ಒಂದು ಕಡ್ಡಿ ಎತ್ತಿ ಇಸಿಕಿಲೆ(ನು).** ವಾ: ದೇವ್‌ರ ಪಟಕೆ ಹೂನ ಮಾಲೆ ಮಾಡಿ ಇಸ್. **ಇಸ್‌ಕನ** /*isɨkana*/ 1. ಇರಿಸಿಕೊಳ್ಳುವಾಗ, 2. ಇಡುವಾಗ. 1. while receiving it, 2. while keeping it. ವಾ: ಕುಪ್ಪಿ ಬಾಟ್ಲಿನ ಇಸ್‌ಕನ ಬಿದ್ದೋತ್. **ಇಸ್ಕನ್ತ್**[1] /*iskantɨ*/ ತೆಗೆದುಕೊಂಡ. (he) took it. ವಾ: ನನ್ನತ್ರಂದ ಚೆಂಡ್‌ನ ಇಸ್ಕನ್ತ್. **ಇಸ್ಕನ್ತ್**[2] /*iskantɨ*/ ಇರಿಸಿಕೊಂಡನು. He kept it with him. ವಾ: ಅಂವ ದುಡ್ಡುನ ಇಸ್ಕಂತ್. **ಇಸಕ್** /*isita:du*/ ಇಡಬಹುದು. (you) may keep it. ವಾ: ಜೆಮಿನ ಕೊಟಗೆಲಿ ಇಸಿತಾದು. ಪ: ಇಸಿಕಿಲೆಂತ – ಇಡಲಿಲ್ಲಾಂತ; ಇಸುದುಲೆ – ಇಡಲಿಕ್ಕಿಲ್ಲ(ಮಡಗಿಲಿಕ್ಕಿಲ್ಲ) **ಇಸಮೊ** /*isamɔ*/ ಇಡೋಣ. where do we keep it/this? ವಾ: ಆ ಕುಕ್ಕೆನ ಎಲ್ಲಿ ಇಸಮೊ.

ಇಸಯ /*isaya*/ ನಾ. 1. ವಿಷಯ, 2. ಸಂಗತಿ, 3. ಇಂದ್ರಿಯಗಳು ಬಯಸುವ ವಸ್ತು. 1. matter, 2. subject, 3. things desired by the five sensory organs. ವಾ: ಇಂಗ್ ಗುಂಡಿ ಮಾಡ್ವ ಇಸಯನ ಊರವ್ಕೆಲ್ಲ ತಿಳ್ಸಿಕೊಟ್ಟ್ ಒಳ್ಳ ಕೆಲ್ಸ ಮಾಡ್ದ.

ಇಸಾಪು /*isa:pu*/ ನಾ. ತಿಳುವಳಿಕೆ. knowledge/ awareness. ವಾ: ನಿಂಗೆ ಬಾರಿ ಇಸಾಪು ಉಟ್ಟುತ ನಂಗೆ ಗೊತ್ತ್ ಬುಡು.

ಇಸಿ /*isi*/ ಕ್ರಿ. 1. ಇಟ್ಟು, 2. ಇರಿಸಿ, 3. ಮಡಂಗು>ಮಡಗು>ಮಡುಗು>ಮಡಗಿ. 1. to keep, 2. to put, 3. to arrange. **ಸುದ್ದಿ ತಂದವನ**

ಮದ್ದ್ ಇಸಿ ಕೊಂದೋ(ಗಾ). ವಾ: ಹಪ್ಪಳ ಮಾಡ್ದಂಗೆ ಬಿಸ್‌ಲ್‌ಗೆ ಇಸಿ. **ಇಸಿಕ** /*isika*/ 1. ಇಟ್ಟುಕೊಳ್ಳು, 2. ಇರಿಸಿಕೊ, 3. ಮಡಗಿಕೊ. 1. keep it with you, 2. keep it, 3. retain the possession. **ಆಗ ಬೋಗ ಇಸಿಕಂಡವುಳ್ಡ್, ಬಳಿಯೋದು ಬಾಚೂದು ಕಟ್ಟಿಕಂಡವುಳ್ಡ್(ಗಾ).** ವಾ: ಈ ದುಡ್ಡುನ ನೀನೆ ಇಸಿಕ. ಪ: ಇಸಿಕಣಿ – ಮಡಗಿಕೊಳ್ಳಿ(ಇಟ್ಟುಕೊಳ್ಳಿ); ಇಸಿಕಂಡತ್ – ಇಟ್ಟುಕೊಂಡನು(ಳು); ಇಸಿಕಂಡದೆ – ಇಟ್ಟುಕೊಳ್ಳುತ್ತಾಳೆ; ಇಸಿಕಂಡ್ – ಇಟ್ಟುಕೊಂಡು; ಇಸಿಕನ – ಇಡುವಾಗ(ಇಡುವಾಗ); ಇಸಿಕನ್ತ್ – ಇಟ್ಟುಕೊಂಡನು/ಳು; ಇಸಿಕಂಬದು – ಇಟ್ಟುಕೊಳ್ಳುವುದು; ಇಸಿಕೆ – ಇಡಲು(ಇಟ್ಟುಕೊಳ್ಳಲು); ಇಸಿಕೊಂಬೊದು – ಇಟ್ಟುಕೊಳ್ಳುವುದು; ಇಸಿಟ. **ಇಸಿಕಂಕು** /*isika:ŋku*/ ಇಟ್ಟುಕೊಳ್ಳಬೇಕು. should keep it. ವಾ: ವಸ್ತುಗಳ ಲಾಯ್ಕಲಿ ಇಸಿಕಾಂಕು. **ಇಸಿಕಂಡ್**[1] /*isikaṇḍi*/ ಇಟ್ಟುಕೊಂಡು. to keep something with oneself/having something. **ಅಂಗೈಲಿ ಬೆಣ್ಣೆ ಇಸಿಕಂಡ್ ಊರೆಲ್ಲ ಅಲ್ದೊಗಡ(ಗಾ).** ವಾ: ನಾ ನಾಕ್ ಬಿತ್ತ್‌ನ ಸೋರೆಕಾಯಿ ಇಸಿಕಂಡಳೆ. **ಇಸಿಕಂಡ್**[2] /*isikaṇḍi*/ ಅನೈತಿಕ ಸಂಬಂಧ ಹೊಂದು. having an illicit romantic/sexual relationship. ವಾ: ಅಂವ ಮೊದುವೆ ಆದರ್‌ನ ಕರ್‌ಕಂಡ್ ಬಂದ್ ಇಸಿಕಂಡುಟ್ಟು. **ಇಸಿಕಂದೆ** /*isika:ndɛ*/ 1. ಇಟ್ಟುಕೊಂಡೆ, 2. ಇರಿಸಿಕೊಂಡೆ. 1. kept with me, 2. retained with me. ವಾ: ಕರ್ಚಿಗೆ ತ ನೂರ್ ರೂಪಾಯಿ ಇಸಿಕಾಂದೆ. **ಇಸಿಕಂಬಡ** /*isikambaḍa*/ ಇಟ್ಟುಕೊಳ್ಳಬೇಡ. don't keep it with you. ವಾ: ಕಂಡವರ,ತನ್ನದಲ್ಲದ ವಸ್ತುಗಳ ಇಸಿಕಂಬಡ. **ಇಸಿಕನ** /*isikana*/ 1. ಇಟ್ಟುಕೊಳ್ಳುವಾಗ, 2. ಇರಿಸಿಕೊಳ್ಳುವಾಗ. 1. while keeping, 2. while retaining the possession. ವಾ: ಬೇರೆಯವರ ವಸ್ತ್ ಗಳ ಇಸಿಕನ ಎಚ್ಚರ ಇರೊಕು. **ಇಸಿಕಾ** /*isika:*/ ಇಟ್ಟುಕೊ. keep it. ವಾ: ಈ ಅರ್ವೆನ ನೀನೆ ಇಸಿಕಾ. **ಇಸಿಕಿಲೆ** /*isikilɛ*/ ಇಡಲಿಕ್ಕಿಲ್ಲ. wouldn't have kept. ವಾ: ಹಂಗೆಲ್ಲ ಅವುಳು ಹೋದಲಿ ಬಂದಲಿ ವಸ್ತುಗಳ ಇಸಿಕಿಲೆ ಅಲಾ. ಪ: ಇಸಿಕಿಲೆಂತ – ಇಡುವುದಿಲ್ಲಾಂತ ; ಇಸುದುಲೆ – ಇಡುವುದಿಲ್ಲ; ಇಸಕ್ – ಇಡಬಹುದು. **ಇಸಿತ್** /*isiti*/ 1. ಇಟ್ಟನು, 2. ಇಟ್ಟಳು, 3. ಇಟ್ಟಿತು. 1. he kept, 2. she kept, 3. it kept. **ಮೋಸ ಕೊಟ್ಟತಲ್ಲೆ ಅಂವ ಕುಂಡೆಗೆ ಇಸಿತಲ್ಲೆ(ನು).** ವಾ: ದೋಸೆನ ಹೊಯ್‌ದ್ ಇಸಿತ್. ಪ: ಇಸಿದಾಂಗೆ – ಇಟ್ಟ ಹಾಗೆ/ಮಡಗಿದ ಹಾಗೆ; ಇಸಿಬುಟ್ಟು – ಇಟ್ಟು; ಇಸುದಿಲ್ಲೆ – ಇಡುವುದಿಲ್ಲ; ಇಸುದರ್ಲಿ – ಮಡಗುವುದರಲ್ಲಿ/ ಇಡುವುದರಲ್ಲಿ. **ಇಸಿತ್ಲೆ** /*isitlɛ*/ ಇಡಲಿಲ್ಲ. didn't keep. ವಾ: ಸೇ ಎಂತದ್ ನೀ ಹಸ್‌ಗೆ ಮೊಡ್ಡಿ ಇಸಿತ್ಲೆ ನಾ. **ಇಸಿದನ** /*isidana*/ ಇಟ್ಟೆಯಾ? did you keep? ವಾ: ಮಾಸ ಗೈಪುನ ಕೊಡಿಗೆ ಇಸಿದನ? **ಇಸಿನಿ** /*isini*/ 1. ಇಟ್ಟುಕೊಳ್ಳಿ, 2. ಇಡಿರಿ. 1. keep it with you, 2. keep it. ವಾ: ಈ ವಾಲೆನ ನೀವೆ ಇಸಿನಿ. **ಇಸಿಯೊಳ** /*isiyoḷa*/ 1. ಇಡು, 2. ಬಚ್ಚಿಡು, 3. ಅಲುಗಾಡದಂತೆ ಇಡು, 4. ಉಳಿಸು, 5. ಇಟ್ಟುಕೊಂಡಿರು, 6. ಹೊಡೆ, 7. ಮಡ್ಗ್, 8. ಇಸೆಳೊ. 1. to keep/to put 2. to keep secretly, 3. to keep something straight, 4. to save, 5. to keep, 6. to beat, 7. to put, 8. to keep. ವಾ: ಮೀನ್‌ನ ಕೊಡಿಲಿ ಇಸಿಯೊಳ, ಅಡಿಲಿ ಇಸಿರೆ ಕೊತ್ತಿ ಮನಿ ಬಾಯಿ ಹಾಕುದು. ಪ: ಇಸಿಯೊಳನ – ಇಟ್ಟಿದ್ದಾರ? **ಇಸುದು** /*isudu*/ ಕ್ರಿ. ಇಡುವುದು. keeping. **ಉಂಡೆ ಇಸುದು(ನು).** ವಾ: ನಾಳೆ ಕಾರ್ನೂರ್‌ಗೆ ಇಸುದು. **ಇಸುವನ** /*isuvana*/ ಇಡುತ್ತೀಯಾ? would you keep it? ವಾ: ರಾಗಿ ಮೂಟೆನ ಹೊತ್ತ್ ಇಸುವನ ಒಳಗೆ ಪತಾಯ ಕೋಂಬರೆಲಿ. **ಇಸೆಳೊ** /*isɛḷɔ*/ 1. ಇಡು, 2. ಬಚ್ಚಿಡು, 3. ಅಲುಗದಂತೆ ಇಡು, 4. ಉಳಿಸು, 5. ಇಟ್ಟುಕೊಂಡಿರು, 6. ಹೊಡೆ, 7. ಮಡ್ಗ್, 8. ಇಸಿಯೊಳ. 1. to keep, 2. to keep secretly, 3. to keep something straight, 4. to save, 5. to keep, 6. to beat, 7. to put, 9. to keep. ವಾ: ಮೀನ್‌ನ ಕೊಡಿಲಿ ಇಸೆಳೊ, ಅಡಿಲಿ ಇಸಿರೆ ಕೊತ್ತಿ ಮನಿ ಬಾಯಿ ಹಾಕುದು. ಪ: ಇಸೆಳೊಗಡ – ಇಟ್ಟಿದ್ದಾರಂತೆ. **ಇಸೊಕು** /*isoku*/ ಇರಿಸಬೇಕು. have to be kept. **ಎಕ್ಕಡನ ಹೊರಗೆ ಇಸೋಕು, ದುಷ್ಟನ ದೂರ ಇಸೋಕು(ಗಾ).** ವಾ: ಹೊರ್‌ದ ತಿಂಡಿನ ಕೊಡಿಗೆ ಇಸೊಕು. ಪ: ಇಸೊಕಾ?; ಇರಿಸಬೇಕಾ? **ಇಸ್ಕೂಲ್** /*isku:li*/ ಎಪ. 1. ಶಾಲೆ, 2. ಸ್ಕೂಲು. a school. ವಾ: ಹೊತ್‌ಉಗ್ಗಪ್ಪ್ ಕಂಡದೆ ಇಂದ್ ಇಸ್ಕೂಲ್ ಗೆ ಹೋದುಲೆನಾ ಕೂಸು ನೀ?

ಇಸ್ಟ /*isṭa*/ ನಾ. 1. ಇಷ್ಟ, 2. ಬಯಸಿದ, 3. ಆಸೆ, 4. ಪ್ರಿಯ, 5. ಪ್ರೀತಿಪಾತ್ರ, 6. ಬಯಕೆ. 1. like (d), 2. desired, 3. crave, 4. favourite, 5 . most

favoured, 6. longing/craving. ವಾ: ನನ್ನ ಇಸ್ಟ ಬಜ್ಜನ ಯಾರ್ ಕೇಳ್‌ವೆ. ಪ: ಇಸ್ಟಕೆ – ಇಷ್ಟಕೆ

ಇಸ್ಟ್ /*isṭi*/ ಕ್ರಿ. 1. ಇಷ್ಟು, 2. ಪರಿಮಾಣ ಸೂಚಕ ಪದ. 1. this much, 2. unit of measure, 3. a little bit 4. of this much quantity. ವಾ: ಇಸ್ಟ್ ಉಂಬಕೆ ನನ್ನಂದ ಆದುಲೆ. **ಇಸ್ಟೆ** /*isṭɛ*/ 1. ಇಷ್ಟೆ, 2. ಇನಿತು, 3. ಪ್ರೀತಿ ಪಾತ್ರಳು/ನು. 1. only this much, 2. of this much quantity, 3. dearest woman/men. **ಇಸ್ಟ್ರ** /*isṭra*/ ಇಷ್ಟರ. so much. ವಾ: ನೀ ಇಸ್ಟ್ರ ಮಟ್ಟಿಗೆ ವಳತ ನಂಗೆ ಗೊತ್‌ಉಗ್ಗಪ್‌ಪ್‌ಲೆ. ಪ: ಇಸ್ಟ್ರವರೆಗೆ – ಇಷ್ಟರವರೆಗೆ; ಇಸ್ಟಾಕನ – ಇಷ್ಟಾಗುವಾಗ; ಇಸ್ಟಾತ್‌ತ – ಇಷ್ಟಾಯಿತೆಂದು; ಇಸ್ಟಾರು – ಇಷ್ಟಾದರು'; ಇಸ್ಟೆಲ್ಲ – ಇಷ್ಟೆಲ್ಲ; ಇಸ್ಟೊಂದ್ – ಇಷ್ಟೊಂದು;

ಇಸ್‌ಬಲ /*isɨ bala*/ ಕ್ರಿ. ಇಡು ಆಯ್ತಾ? put it, okay? ವಾ: ಸೆಂಡಿ ಕೊಡೆನ ರಾತ್ರೆ ಬುಳ್‌ಗಿ ಇಸ್‌ಬಲ.

ಇಸ್‌ಮುಳ್ಳು /*isɨmuḷḷu*/ ನಾ. ಮಣ್ಣಿನ ಅಗತೆ ಮಾಡಲು ಬಳಸುವ ಚೂಪಾದ ತ್ರಿಶೂಲದಂತೆ ಮುಳ್ಳುಗಳುಳ್ಳ ಸಾಧನ. a spading fork (digging fork), used in loosening the soil. ವಾ: ಇಸ್‌ಮುಳ್ಳುನ ಅಗ್‌ತೆ ಮಾಡಿಕನ ಬಳ್‌ಸುವೆ.

ಇಸ್ವಿ /*isvi*/ ನಾ. ಇಸವಿ. 1. Anno Domini (AD), 2. in the year of the lord (Julian calendar). ವಾ: ಈ ಮನೆ ಎಂಬತ್ತಾರ್‌ನೆ ಇಸ್ವಿದ್.

ಇಳಂಡಿಲಾ /*iḷaṇḍila:*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಇಳಂತಿಲ /*iḷantila*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಇಳಿ[1] /*iḷi*/ ಕ್ರಿ. ಕೆಳಗೆ ಇಳಿ. to get down/to alight from. ವಾ: ಬಸ್ಸ್‌ಂದ ಕೆಳೆಗೆ ಇಳಿ.

ಇಳಿ[2] /*iḷi*/ ಕ್ರಿ. 1. ಕೆಳಭಾಗಕ್ಕೆ ಹೋಗು, 2. ಧುಮುಕು, 3. ಸೋರು. 1. to descend (climb down), 2. to jump, 3. to leak. ವಾ: ನಿತ್ತ್‌ಕಂಡ್ ನೋಡಿರೆ ಆದುಲೆ ಬಾಮಿಗೆ ಬೇಗ ಬೇಗ ಇಳಿಯಕು. ಪ: ಇಳ್ತ್ – ಇಳಿದನು/ಳು; ಇಳ್ಕಂಡ್ – ಇಳಿದುಕೊಂಡು; ಇಳ್ದ್ – ಇಳಿದು; ಇಳ್ದವ – ಇಳಿದವರು

ಇಳಿ[3] /*iḷi*/ ನಾ. 1. ಕೆಳಗೆ ಬರು, 2. ಕಡಿಮೆಯಾಗು. 1. climbing down/going down, 2. to reduce. ವಾ: ಅಡ್ಕೆಗೆ ರೇಟ್ ಇಳಿತಾ ಉಟ್ಟು. ಪ: ಇಳಿಯಕನ – ಇಳಿಯುವಾಗ; ಇಳಿಯಕೆ – ಇಳಿಯುವುದಕ್ಕೆ; ಇಳಿಯಕ್ಕಿಲೆಂತ – ಇಳಿಯುವುದಿವೆಂದು; ಇಳಿಂತ – ಇಳಿ ಎಂದು; ಇಳಿತ – ಇಳಿಯುತ್ತ; ಇಳಿಯೊಕು – ಇಳಿಯಬೇಕು; ಇಳಿಯಕೆ – ಇಳಿಯುವುದಕ್ಕೆ; ಇಳಿಕಾಕನ – ಇಳಿಯುವಾಗ; ಇಳಿನಿ – ಇಳಿಯಿರಿ; ಇಳ್ಕಂಡ್ – ಇಳಿದುಕೊಂಡು. **ಇಳಿಕೆಬೊತ್ತ್** /*iḷikɛbɔtti*/ ಇಳಿಯಬಾರದು. shouldn't enter/ go down into. ವಾ: ಹೊಂಡ ಇರ್‌ದು ನೀರಿಗೆ ಇಳಿಕೆಬೊತ್ತ್ ಮಕ್ಕಳೆ ನೋಡಿಕನಿ. ಪ: ಇಳಿಕೆಬೊತ್ತ್. **ಇಳಿಯದು** /*iḷiyadu*/ ಇಳಿಯುವುದು. to come/ get down/descend. **ಸಾವುರ ಹಕ್ಕಿಗ ಒಮ್ಮೆಗೆ ನೀರ್‌ಗೆ ಇಳಿಯದು – ಅನ್ನಕ್ಕೆ ಅಕ್ಕಿ ಹಾಕುದು(ಒ).** ವಾ: ಮೊನ್‌ಸನ ಬೊದ್‌ಕ್‌ಲಿ ಏರ್‌ದು ಇಳಿಯದು ಇದ್ದದ್ದೆ. **ಇಳಿಯದುಲೆ** /*iḷiyadulɛ*/ ಇಳಿಯುವುದಿಲ್ಲ. won't come down/won't descend. ವಾ: ಕೂಸು ಸೊಂಟಂದ ಇಳಿಯದುಲೆ. **ಇಳೆದ್ಲೆ** /*iḷedle*/ ಇಳಿಯುವುದಿಲ್ಲ. won't descend. ವಾ: ಅನ್ನದ ಮಡಿಕೆ ಚೆಟ್ಟಿನೆಲ್ಲಾ ಸಿಂಪೆ ಮೇಲೆ ಇಸಿವೆ, ಆಗ ಬಿಸಿ ಕೆಳಗೆ ಇಳೆದ್ಲೆ. ಪ: ಇಳಿದೊ – ಇಳಿಯುವುದೊ.

ಇಳಿಯ /*iḷiya*/ ನಾ. ಪೂರ್ತಿ. complete. ವಾ: ನೀರ್‌ಲಿ ಇಳಿಯ ಮುಳ್‌ಗಿದ್.

ಇಳಿವಯ್ಸ್ /*iḷi vaysɨ*/ ನಾ. 1. ಮುಪ್ಪು, 2. ಇಳಿ ವಯಸ್ಸು, 3. ವಯಸ್ಸಾದ. 1. senescence, 2. old age, 3. aged. ವಾ: ಈ ಇಳಿ ವಯ್‌ಸ್‌ಲಿ ಪಿಳ್ಳೆಕಳೊಟ್ಟಿಗೆ ಆಡಿಕಂಡ್ ಇರಕಾಯ್ತ್.

ಇಳ್‌ಂಜಿ ಮರ /*iḷɨŋji mara*/ ನಾ. ಕಾಡು ಹಣ್ಣಿನ ಮರ. a fruit tree in the forest. ವಾ: ಇಳ್‌ಂಜಿ ಮರಲಿ ಹಣ್ಣಾದೆ.

ಇಳ್‌ಂಜಿ ಮರ ಅಳಂಬು /*iḷɨŋji mara aḷambu*/ ನಾ. ಕಾಡು ಹಣ್ಣಿನ ಮರದಲ್ಲಿ ಏಳುವ ಅಣಬೆ. mushroom grown on a fruit tree in the forest. ವಾ: ಇಳ್‌ಂಜಿ ಮರದ ಅಳಂಬು ತಿಂದವೆ.

ಇಳ್‌ಂಜಿ ಹಣ್ಣ್ /*iḷɨŋji haṇṇ*/ ನಾ. ಕಾಡು ಹಣ್ಣು. a forest fruit. ವಾ: ಇಳ್‌ಂಜಿ ಹಣ್ಣ್ ನೀಲಿ ಬಣ್ಣಲಿದ್ದದೆ.

ಇಳ್ಗ್ /*iḷgɨ*/ ಕ್ರಿ. ಇಳಿಸು. unload. ವಾ: ಒಲೆಂದ ಪಾತ್ರೆನ ಇಳ್ಗ್. ಪ: ಇಳ್ಗಿಸಿ – ಇಳಿಸಿ; ಇಳ್ಗಿದ್ – ಇಳಿಸಿದ್ದು; ಇಳ್ಗಿಕಂಡ್ – ಇಳಿಸಿಕೊಂಡು. **ಇಳ್ಕಂಡ್** /*iḷkaṇḍɨ*/ 1.

ಇಳಿದುಕೊಂಡು, 2. ಕೆಳಗಿಳಿದು ಕೊಂಡುಹೋಗು. 1. to descend/to go down 2. to get down. ವಾ: ನಮ್ಮ ಮನೆಗೆ ಹೋಕನ ಹಞ್ಞ ಇಳ್ಕಂಡ್ ಹೋಕು. **ಇಳ್ಗಿಸ್** /*iḷgisi*/ ಇಳಿಸು. unload. ವಾ: ಒಲೆಂದ ಗಂಜಿ ಇಳ್ಗಿಸಿತ್. ಪ: ಇಳ್ಗಿಸ್ – ಇಳಿಯಿತು; ಇಳ್ಗಿಸಿತ್ – ಇಳಿಸಿದನು/ಳು; ಇಳ್ಗಿದೊ – ಇಳಿಸಿದರು

ಇಳ್ಜಾರ್ /*iḷja:ri*/ ನಾವಿ. ಇಳಿಜಾರು ಪ್ರದೇಶ, 2. ಇಳಕಲು, 3. ಇಳವಾರೆ, 4. ಇಳವರೆ. 1. slope, 2. a steep, 3. incline, 4. descent. ವಾ: ಇಳ್ಜಾರ್ ಉಟ್ಟು ನಡೆಕನ ನೋಡಿಕ ಎಲ್ಲಾರ್ ಜಾರ್‌ದು. ಪ: ಇಳ್ಜಾರ್ – ಇಳಿಜಾರು

ಇಳ್ತ್ /*iḷti*/ ನಾ. 1. ಇಳಿಯಿತು, 2. ಇಳಿದನು, 3. ಇಳಿದಳು. 1. reduced/descended 2. (he) got down, 2. she got down. **ತಲೆ ಮೇಲಿನ ಬಾರ ಇಳ್ತ್(ನು).** ವಾ: ಈ ವರ್‌ಸ ಹೊಳೆ ನೀರ್ ಗದ್ದೆಗೆ ಇಳ್ತ್, ಅಂವ ಮರಕೆ ಹತ್ತಿ ಇಳ್ತ್. ಪ: ಇಳ್ದ್ – ಇಳಿದು; ಇಳ್ದರೆ – ಇಳಿದರೆ; ಇಳ್ತ್‌ಲೆ – ಇಳಿಯಲಿಲ್ಲ; ಇಳ್ದ – ಇಳಿದೆಯಾ?, ಇಳ್ದಂವ – ಇಳಿದವನು; ಇಳ್ದೊ – ಇಳಿದರು; ಇಳ್ದರೆ – ಇಳಿಯುತ್ತೀರಾ. **ಇಳ್ದದೆ** /*iḷdadε*/ ಇಳಿಯುತ್ತದೆ. it will reduce. **ತಲೆಗೆ ಹೊಯ್ದು ದ್ ಕಾಲಿಗೆ ಇಳ್ದದೆ(ಗಾ).** ವಾ: ಮಳೆ ಕಮ್ಮಿ ಆಕನ ಗದ್ದೆಗೆ ಹತ್ತಿದ ನೀರ್ ಇಳ್ದದೆ. **ಇಳ್ಯಕಾಕನ** /*iḷyaka:kana*/ ಇಳಿಯುವಾಗ. while climbing down/ descending/getting down. ವಾ: ಬರೆಂದ ಇಳ್ಯಕಾಕನ ಬಿದ್ದದ್ ಗಡ. **ಇಳ್ಯತಿತ್** /*iḷyatitti*/. ಇಳಿಯುತ್ತಿತ್ತು. was trickling. ವಾ: ಓಡಿ ಬಂದ ರಬಸಕ್ಕೆ ಮೈಲಿ ಬೆಗ್ರ್ ನೀರ್‌ನಂಗೆ ಇಳ್ಯತಿತ್. **ಇಳ್ಯೊದುಲೆ** /*Iḷyodulε*/ ಇಳಿಯುವುದಿಲ್ಲ. will not reduce/trickle. ವಾ: ಮಳೆ ಕಮ್ಮಿ ಆಗದೆ ಗದ್ದೆಗೆ ಹತ್ತಿದ ನೀರ್ ಇಳ್ಯೊದುಲೆ. **ಇಳ್ಸಿ**[1] /*iḷsi*/ 1. ಇಳಿಸಿ, 2. ಒಪ್ಪಿಸು. 1. to reduce 2. to see the bride off. ವಾ: ಹೆಣ್ಣ್ ಇಳ್ಸಿ ಕೊಡ್ದು ಎಷ್ಟೊತಿಗೆ. **ಇಳ್ಸಿ**[2] /*iḷsi*/ 1. ಇಳಿಸಿ, 2. ಕೆಳಗಿಳಿಸಿ. 1. to reduce, 2. to put it down/to unload. ವಾ: ಬತ್ತ ಚೀಲನ ಅಟ್ಟಂದ ಇಳ್ಸಿ ಕೊಡಿ. ಪ: ಇಳ್ಸಿಕನ – ಇಳಿಸುವಾಗ; ಇಳ್ಸಿತ್ – ಇಳಿಸಿದನು /ಳು; ಇಳ್ಸಿದ್ – ಇಳಿಸಿದ್ದು; ಇಳ್ಸ್ – ಇಳಿಸು

ಈ

ಈ ಕರೆ /*i: karε*/ ನಾವಿ. 1. ಈ ಕಡೆ, 2. ಇತ್ತ ಕಡೆ, 3. ಈಚೆ ದಡ. 1. this side, 2. in this direction, 3. on this shore. ವಾ: ಈಕರೆಗೆ ಬಾ ಅತ್ತ ಹೋಬಡ ಬರೆ ಉಟ್ಟು ಅಲ್ಲಿ.

ಈ ಕುರೆ /*i: kurε*/ ನಾವಿ. 1. ಈ ಮಂಗ, 2. ಈ ಮರ್ಕಟ, 3. ಈ ಕಪಿ, 4. ಈ ಕೋತಿ. this monkey. ವಾ: ಆ ಕಾಡಿಗಾದ.

ಈ ಕೋಲಲಿ /*i: kɔ:lali*/ ನಾವಿ. 1. ಈ ಅವತಾರದಲ್ಲಿ, 2. ಈ ವೇಷದಲ್ಲಿ. 1. in this manifestation/incarnation, 2. in this costume/dress. ವಾ: ಈ ಕೋಲಲಿ ಹೊರೆಗೆ ಹೋದರೆ ಜೆನ ನೆಗಾಡ್ಡೊ.

ಈ ಜನ /*i: jana*/ ನಾವಿ. 1. ಇವರು, 2. ಈ ಜನರು. 1. this person, 2. these people. ವಾ: ಈ ಜನವೊಳಲಾ ಹೆಂಗಿದ್ದರೂ ಮಾತಾಡ್ವೆ.

ಈ ಬಾ /*i: ba:*/ ನಾ. 1. ಹಸುವನ್ನು ಕರೆಯುವುದು, 2. ಹೂಡುವಾಗ ಎತ್ತುಗಳಿಗೆ ಎಡಕ್ಕೆ ತಿರುಗು ಎಂಬ ಸೂಚನೆ. 1. calling one's cow, 2. to indicate the bullock to turn left while ploughing. ವಾ: ಹೂಡ್‌ಕನ ಈ ಬಾತ ಕರೆದು.

ಈ ಸರ್ತಿ /*i: sarti*/ ನಾವಿ. 1. ಇದೊಂದು ಸಲ, 2. ಇದೊಂದು ಬಾರಿ. 1. once, 2. (this) one time. ವಾ: ಈ ಸರ್‌ತಿ ಕಾಪಿಗೆ ಒಳ್ಳ ರೇಟ್ ಸಿಕ್ಕಿರೆ ಆಗ್ತಿತ್ (ಈ ಸರ್‌ತಿ ಮಳೆ ಜೋರುಟ್ಟು ಕಂಡದೆ. ಪ: ಈ ಸರ್ತಿನ – ಈ ಬಾರಿಯ; ಈ ಸರ್ತಿಯ – ಈ ಬಾರಿಯ

ಈಂಚಣಿಗೆ /*i:ŋcaŋigε*/ ನಾ. ತಲೆಯಿಂದ ಹೇನು ತೆಗೆಯಲು ಬಳಸುವ ಬಾಚಣಿಗೆ. a comb used to remove louse from the hair. ವಾ: ಈಂಚಣಿಗೆಲಿ ಹೇನ್ ತೆಗೆದು.

ಈಂಚ್ /*i:nci*/ ನಾ. ಹಿಡಿಸೂಡಿ ತಯಾರಿಸಲು ಸೋಗೆಯಿಂದ ಕಡ್ಡಿ ತೆಗೆಯುವುದು. removing the stick from the leaflet/fronds of coconut tree in order to make a broom out of it – Coconut Fiber Broomstick. ವಾ: ಮಾಯ್‌ಪು ಸೂಡಿ ಮಾಡಿಕೆ ಮಡ್ಲ್ ಈಂಚ್‌ತ ಒಳೆ.

ಈಂದುಗುಂಡಿ /*i:nduguṇḍi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ನೆಲ್ಲೂರು ಕೆಮ್ರಾಜೆ ಗ್ರಾಮದ ಜಾಗ. a locality in Nelluru Kemraje village in Sullia Taluk of Dakshina Kannada District.

ಈಂದ್ ಮರ /*i:ndi mara*/ ನಾ. 1. ತೆಂಗಿನ ಮರದ ಜಾತಿಗೆ ಸೇರಿದ ಮರ, 2. ಬೈನೆಮರ, 3. ಈ ಮರದ ಹಿಂಗಾರದಿಂದ ಶೇಂದಿ ತೆಗೆಯುತ್ತಾರೆ. 1. a variety of palm tree, 2. toddy palm (Cycas), 3. palm wine or toddy is extracted from this tree. ವಾ: ಈಂದ್ ಮರಲಿ ಹೆಂಡ ತೆಗ್‌ದವೆ.

ಈಗ /*i:ga*/ ಸನಾ. 1. ಇದೀಗ, 2. ಇದೇ ಸಮಯ. 1. right now, 2. at this time. ವಾ: ಈಗ ಬಂದರಿಯಾ? **ಈಗನೊವುಕೆ** /*i:ganɔ:vukε*/ 1. ಈಗಿನವರಿಗೆ, 2. ಈ ಕಾಲದವರಿಗೆ. 1. until this

time, 2. until this period. ವಾ: ಈಗನೊವುಕೆ ಊರ್‌ಲಿ ಇರ್‌ಕೆ ಕುಸಿ ಇಲ್ಲೆ. **ಈಗ್ಲೆ** /*i:glɛ*/ 1. ಈಗಲೇ, 2. ಈ ಕೂಡಲೇ. 1. right now, 2. immediately. ವಾ: ಈಗ್ಲೆ ಹೋಗಿ ನೀರ್ ಸೋಂತೆ ಕೊಯ್ಕಂಡ್ ಬನ್ನೆ. ಪ: ಈಗಳೆ – ಈವಾಗಲೆ; ಈಗಾದ್ರ್ – ಈಗಲಾದರೂ; ಈ ಗೂಡೆ – ಈ ಹುಡುಗಿ; ಈಗೆಲ್ಲ – ಈವಾಗೆಲ್ಲ

ಈಚಕುತ್ರ /*i:cakutra*/ ನಾವಿ. ಕೆಳಗಿನ ಏರಿ. a bund. ವಾ: ಚಪ್ಪರ ಈಚಕುತ್ರ ಆಗುಟು. ಪ: ಕರ್ಣಕುತ್ತ

ಈಚಲ ಮರ /*i:cala mara*/ ನಾ. ತೆಂಗಿನಮರದ(ಅಡಿಕೆ) ಕುಂಟುಂಬಕ್ಕೆ ಸೇರಿದ ಒಂದು ಜಾತಿ, ಇದರಲ್ಲಿ ಐದಾರು ಪ್ರಭೇದಗಳಿವೆ, ಮುಖ್ಯವಾದುವು ಖರ್ಜೂರದ ಮರ ಮತ್ತು ಈಚಲು. a variety of palm tree. **ಈಚಲ ಮರಕ್ಕೆ ಆಚಾರ ಬಂದೆನಾ(ಗಾ).** ವಾ: ಈಚಲ್ ಮರದ ಕೆಳಗೆ ಮಜ್ಜಿಗೆ ಕುಡ್‌ದರೂ ಹೆಂಡ ಕುಡ್ತ್‌ತ ಹೇಳುವೆ. ಪ: ತಾಳೆಯ ಮರದ ಜಾತಿಯ ಒಂದು ಮರ

ಈಚಾರ್ /*i:ca:ri*/ ನಾ. 1. ಆರಾಮ ಕುರ್ಚಿ, 2. ಆರಾಮವಾಗಿ ಕುಳಿತುಕೊಳ್ಳಬಹುದಾದ ಕುರ್ಚಿ. 1. an easy chair, 2. a comfortable chair. ವಾ: ಈಚಾರ್‌ಲಿ ಕುದ್ರಿಕೆ ಒಳ್ಳದಾದೆ.

ಈಚೆ /*i:ce*/ ಸನಾ. 1. ಇತ್ತ, 2. ಈ ಬದಿ. 1. this side, 2. on this side/shore . ವಾ: ಈಚೆನ ದಾರಿಲಿ ಬಂದರೆ ನಮ್ಮಲ್ಲಿಗೆ ಹೋಕ್. ಪ: ಈಚೆಕರೆ – ಈಕಡೆ; ಈಚೆಗೆ – ಈ ಕಡೆಗೆ; ಈಚೆಲಿ – ಈ ಕಡೆಯಲ್ಲಿ; ಈಯಕ್ಕ – ಈ ಅಕ್ಕ. **ಈಚೆಕರೆ** /*i:cɛkarɛ*/ 1. ಈ ಬದಿ, 2. ಇತ್ತ ಬದಿ, 3. ಈ ದಡ. 1. this side, 2. on this side, 3. on this shore . ವಾ: ಈಚೆಕರೆಲಿ ಹೋದರೆ ಕುಂದ್ ಕಾಂಬೊದ?

ಈಜ್ /*i:ji*/ ನಾ. 1. ಈಜು, 2. ಈಸು. 1. to swim, 2. to take. ವಾ: ಸಣ್ಣೆತಂದಳೆ ಹಳ್ಳಲಿ ಮೀದರೆ ಮಕ್ಕಳಿಗೆ ಈಜ್ ಗೊತ್ತಿದ್ದದೆ.

ಈಟಿ /*i:ṭi*/ ನಾ. 1. ಬರ್ಚಿ, 2. ಸಬಳ. 1. a spear, 2. a spear. ವಾ: ಈಟಿ ತಕಂಡ್ ಕುತ್ತುದು.

ಈಟ್ /*i:ṭ*/ ನಾ. ಗೊಬ್ಬರ. fertilizer/manure. ವಾ: ಸೆಗ್‌ಣಿ ಈಟ್ ದೈಕೆ ಒಳ್ಳದ್.

ಈಡ್^{1} /*i:ḍi*/ ನಾ. ಬೇಟೆಯ ಗುರಿ. to aim at (in hunting). ವಾ: ಬೇಟೆಲಿ ಈಡ್ ಇರೊಕು. **ಈಡ್ಡಾಗರ** /*i:ḍga:ra*/ 1. ಗುರಿಕಾರ, 2. ಬಲಶಾಲಿ. 1. an expert archer, 2. a powerful person. ವಾ: ಅಂವ ಬಾರಿ ಈಡ್ಡಾರ.

ಈಡ್^{2} /*i:ḍi*/ ನಾ. ಕೇಪು ಕೋವಿಗೆ ಒಂದು ಹೊಡೆತಕ್ಕೆ ತುಂಬಿಸುವಷ್ಟು ಕೋವಿ ಮದ್ದು. loading gun powder for a shot using a rifle or a gun. ವಾ: ಕೋವಿಗೆ ಈಡ್ ತುಂಬುಸು.

ಈಡ್^{3} /*i:ḍi*/ ನಾ. ಹರಕೆ ಸಂಕಲ್ಪ. undertaking a solemn vow. ವಾ: ಅವಂಗೆ ಸೌಖ್ಯ ಇಲ್ಲದಿರಿಕನ ದೇವರಿಗೆ ಈಡ್ ತೆಗ್ದಿಸಿದೊ. **ಈಡ್ ಕಟ್ಟುದು** /*i:ḍi kaṭṭudu*/ 1. ಮನೆಯ ಭದ್ರತೆಗೆ ಕಟ್ಟುವ ಮಂತ್ರಿಸಿದ ವಸ್ತುಗಳು, 2. ದೇವರಿಗೆ ಹರಕೆ ಹೇಳಿಕೊಂಡಾಗ ಕಟ್ಟಿಡುವ ಹಣ. 1. conjured items tied to any of the house for protection, 2. money that is set apart (kept separately) for the god as a vow. ವಾ: ಕೆಟ್ಟ ದೃಸ್ಟಿ ತಾಗದಾಂಗೆ ಮನೆಲಿ ಈಡ್ ಕಟ್ಟುದು.

ಈಡ್‌ಕಾಯಿ /*i:ḍika:yi*/ ನಾ. ದೃಷ್ಟಿಗೆ ಒಡೆಯುವ ತೆಂಗಿನಕಾಯಿ. breaking a coconut to avoid / ward off the evil. ವಾ: ಗಣ್‌ಪತಿ ದೇವುರಿಗೆ ಈಡ್ಡಾಯಿ ಒಡೆದು.

ಈದ್ /*i:di*/ ನಾ. ಕೊಡವರ ಹುತ್ತರಿ ಹಬ್ಬದಲ್ಲಿ ವಿವಿಧ ನೃತ್ಯಗಳನ್ನು ಪ್ರದರ್ಶಿಸಲು ಕೋಲಾಟ, ಉಮ್ಮತಾಟ್, ಬೊಳ್‌ಕಾಟ್ ನೃತ್ಯಗಳನ್ನು ಅಭ್ಯಾಸ ಮಾಡುವ ಸ್ಥಳ. a place where Kodava people practice various forms of dances during Huttari(harvest)festival. ವಾ: ಎಲ್ಲ ಹೆಣ್ಮಕ್ಕ ಈದ್‌ಲಿ ಸೇರಿಯೊಳೊ.

ಈಯಿ /*i:yi*/ ನಾ. 1. ಈಯಲು, 2. ಮರಿ ಹಾಕುವಿಕೆ, 3. ಹೆರು. 1. act of giving birth, 2. parturition, 3. delivering a child. ವಾ: ನಾಯಿ ಈಯಕೆ ಆವುಟು.

ಈಯೆರ್ /*i:yeri*/ ನಾ. ಒಂದು ಕಾಡು ಗೆಣಸು. ನರೆಗೆಣಸಿನಂತೆ ಹೋಲುವ ಈ ಗಡ್ಡೆಯನ್ನು ಬೇಯಿಸಿ ತಿನ್ನುವರು. a forest tuber, it is boiled and eaten.

ಈರ್ಚೆಗಾರರ್ /*i:rcɛga:rari*/ ನಾ. ಗರಗಸದಲ್ಲಿ ಮರ ಕುಯ್ಯುವವರು. workers who cut a tree using a hand saw. ವಾ: ಈರ್ಚೆಗಾರರ್ ಸಿಕ್ಕುವನ?

ಈರ್ಮುಂಡ ಹಾಕಿ /*i:rɨ muṇḍa ha:ki*/ ನಾ. 1. ಮಂಡಿಯೂರಿ, 2. ಮೊಣಕಾಲು ಊರಿ. 1. on the knees, 2. on one's knee. ವಾ: ಈರ್ಮುಂಡ ಹಾಕಿ ಕೂರಿಕಾಗದ್.

ಈಸಾನ್ಯ /*i:sa:n'ya*/ ನಾ. 1. ಈಶಾನ್ಯ, 2. ಉತ್ತರ – ಪೂರ್ವ ದಿಕ್ಕಿನ ಮಧ್ಯೆ. 1. north-east, 2. between north and east. ವಾ: ಈಸಾನ್ಯ ದಿಕ್ಕ್‌ಂದ ಬಂದದ್.

ಈಸ್ವರ /*i:svara*/ ನಾ. ಈಶ್ವರ ದೇವರು. Lord Shiva. ವಾ: ಬಿಲ್ಪತ್ರೆ ಎಲೆನ ಈಸ್ವರ ದೇವ್ರಿಗೆ ಪೂಜೆಗೆ ಕೊಡೋಕು. ಪ: ಈಸ್ವರನು – ಈಶ್ವರನು; ಈಸ್ವರ ದೇವ್ರೊಟ್ಟಿಗೆ – ಈಶ್ವರ ದೇವರ ಜೊತೆ

ಈಸ್ವರ ಬೇರ್ /*i:svara bɛ:rɨ*/ ನಾ. ನಾಟಿ ಔಷಧಿಗೆ ಬಳಸುವ ಬೇರು, ಇದು ತೆಳ್ಳಗಿನ ಉದ್ದ ಎಲೆಯ ಬಳ್ಳಿಯಾಕಾರದ ಗಿಡ, ನಂಜು ತೆಗೆಯಲು ಬಳಸುತ್ತಾರೆ. Indian Birthwort, a root used as herbal medicine. Used to remove infection. ವಾ: ನಂಜಿ ತೆಗೆಕೆ ಈಶ್ವರ ಬೇರ್‌ನ ಬಳ್‌ಸುವೆ.

ಈಳ್ಯಸಾಸ್ತ್ರ /*i:ḷyasa:stra.*/ ನಾ. 1. ವೀಳ್ಯಶಾಸ್ತ್ರ, 2. ಗಂಡು ಹೆಣ್ಣಿನ ಮದುವೆಯ ನಿಶ್ಚಯದ ಶಾಸ್ತ್ರ, 3. ನಿಶ್ಚಿತಾರ್ಥ. 1. a custom of exchanging/using betel leaves on the day of engagement, 2. betrothal ceremony, 3. engagement day. ವಾ: ಮೊದುವೆಗೆ ಮುಂದೆ ಈಳ್ಯಸಾಸ್ತ್ರ ಮಾಡುವೆ.

ಉ

ಉಂಗಿಲ /*uŋgila*/ ನಾ. 1. ಉಂಗುರ, 2. ಬೆರಳಿನ ಆಭರಣ. 1. ring, 2. a finger ring-jewellery. ವಾ: ಉಂಗಿಲ ಹಾಕ.

ಉಂಗುಟ /*uŋguṭa*/ ನಾ. 1. ಕಾಲಿನ ಅಥವಾ ಕೈಯ ಹೆಬ್ಬೆರಳು, 2. ಎಕ್ಕಡದಲ್ಲಿ ಕಾಲಿನ ಹೆಬ್ಬೆರಳನ್ನು ತೂರಿಸಲು ಮಾಡಿರುವ ಉಂಗುರದಂತಹ ರಚನೆ, 3. ಹೆಬ್ಬೆಟ್ಟು. 1. a thumb, 2. a ring made of leather in slippers for the thumb toe (hallux), 3. a thumb. ವಾ: ಬರೆಕೆ ಗೊತ್ತಿಲ್ಲದೆ ಹಿಂದೆಲ್ಲ ಜೆನ ಕಾಗದದ ಮೇಲೆ ಉಂಗುಟ ಒತ್ತುತಿದ್ದೊ. ಪ: ಉಂಗಿಸ್ಟ – ಉಂಗುಷ್ಟ

ಉಂಗುರಹಣ್ಣ್ /*uŋgurahaṇṇi*/ ನಾ. ಒಂದು ಜಾತಿಯ ಕಾಡು ಹಣ್ಣು. a forest fruit. ವಾ: ಉಂಗುರ ಹಣ್ಣ್‌ನ ತಿಂದವೆನಾ?

ಉಂಗ್ರ /*uŋgra*/ ನಾ. 1. ಕೈ ಬೆರಳುಗಳಿಗೆ ತೊಡುವ ಆಭರಣ, 2. ಬೆರಳಿನ ಆಭರಣ, 3. ಉಂಗುರ. 1. a ring that one wears on the finger, 2. a finger ring, 3. ring. ವಾ: ಬೆರ್‌ಳ್ ದಪ್ಪ ಆಗಿ ಉಂಗ್ರ ಹಿಡೆದುಲೆ. ಪ: ಉಂಗ್‌ರನ – ಉಂಗುರವನ್ನು; ಉಂಗ್‌ರಲಿ – ಉಂಗುರದಲ್ಲಿ; ಉಂಗ್‌ರಕೆ – ಉಂಗುರಕ್ಕೆ; ಉಂಗ್‌ರೊನು – ಉಂಗುರನು. **ಉಂಗ್ರಬೆರ್ಳ್** /*uŋgrabɛrḷi*/ ಉಂಗುರ ಬೆರಳು. ring finger. ವಾ: ಹಿಂದೆಲ್ಲ ಉಂಗ್ರ ಬೆರ್‌ಳಿಗೆ ಮಾತ್ರ ಉಂಗ್ರ ಹಾಕ್‌ತಿದ್ದೊ, ಈಗ ಎಲ್ಲ ಬೆರ್‌ಳಿಗೂ ಹಾಕುವೆ.

ಉಂಡ್ /*uṇḍi*/ ಕ್ರಿ 1. ಊಟ ಮಾಡಿ, 2. ಉಂಡು, 3. ಭೋಜನ ಮಾಡಿ. 1. after having meals, 2. after the food, 3. after the dinner/lunch. **ಗಂಡ ಹೆಣ್ಣ್‌ನ ಜಗಳ ಉಂಡ್ ಮಲಗಿಕೆ ಮುಟ(ಗಾ).** ವಾ: ಉಂಡಾತ ನಿಂದ್. **ಉಂಡ** /*uṇḍa*/ ಊಟ ಮಾಡಿದೆಯಾ? did you have lunch/dinner/ supper? **ಉಂಡ ಮ್ಯಾಲೆ ಜಾತಿ ಕೇಳಿ ಕಾಗದ್(ಗಾ).** ವಾ: ನೀ ಎಂತರ ಉಂಡದ್? ಪ: ಉಂಡನ – ಊಟ ಮಾಡಿದೆಯ; ಉಂಡನೆಂತ – ಊಟ ಮಾಡುತ್ತೇನೆಂದು; ಉಂಡವರ – ಊಟ ಮಾಡಿದವರ; ಉಂಡಳೆ – ಊಟಮಾಡಿದ್ದೇನೆ; ಉಂಡ್ಕಂಡ್ – ಊಟಮಾಡಿಕೊಂಡು; ಉಂಡ್ಕಂಡೊ – ಊಟಮಾಡಿಕೊಂಡರು; ಉಂಡೆದ್ದೊ – ಊಟಮಾಡಿ ಎದ್ದರು; ಉಂಡೊ – ಊಟ ಮಾಡಿದರು; ಉಂಡನಾ – ಊಟಮಾಡಿದೆಯಾ; ಉಂಡ್ಕನ್ತ್ – ಊಟಮಾಡಿಕೊಂಡನು/ಳು. **ಉಂಡವ** /*uṇḍava*/ ಊಟ ಮಾಡಿದವ. the one who had food already. **ಅಕ್ಕಿ ಉಂಡವ ಹಕ್ಕಿ ಜೋಳ ತಿಂದವ ತೋಳ(ಗಾ).** ವಾ: ನೀ ಉಂಡವನಂಗೆ ಕಂಡಿಯ. **ಉಂಡಳೆ** /*uṇḍaḷe*/ ಊಟ ಮಾಡಿದ್ದೇನೆ. I had food. ವಾ: ನಾ ಉಂಡಳೆ. ಪ: ಉಂಡರೇ? – ಊಟ ಮಾಡುತ್ತೀರಾ?; ಉಂಡಾತಾ? – ಊಟ ಆಯಿತಾ?; ಉಂಡುಕಣಿ – ಊಟ ಮಾಡಿಕೊಳ್ಳಿ; ಉಂಡುಕ – ಊಟ ಮಾಡಿಕೊ. **ಉಂಡುಕ** /*uṇḍuka*/ ಊಟ ಮಾಡಿಕೊ. to have one's food/meals. ವಾ: ಬೇಗ ಬೇಗ ಉಂಡುಕ.

ಉಂಡಾಡಿ /*uṇḍa:ḍi*/ ನಾ. 1. ಸದಾ ತಿರುಗಾಡುವವ,

2. ಕೆಲಸ ಇಲ್ಲದವ3. ಸೋಮಾರಿ4. ಉಂಡು ತಿರುಗುವವನು. 1. wanderer. 2. a man without work, 3. a lazy person, 4. an indolent person. ವಾ: ಮನೆಲ್ಲೊಂದ್ ಉಂಡಾಡಿ ಉಟ್ಟು.

ಉಂಡೆ /*uṇḍɛ*/ ನಾ. 1. ಉರುಟಾದ ತಿಂಡಿ, 2. ಲಾಡು ಉಂಡೆ, 3. ಸುಕುಂಡೆ. 1. ball shaped dish, 2. a round sweet dish, 3. a sweet dish, round in shape. ವಾ: ಉಂಡೆ ತಿಂಬಕೆ ಬಾರಿ ಲಾಯ್ಕ.

ಉಂಡೆ ಜಾರ್ದು /*uṇḍɛ ja:rdu*/ ನಾ. ಕೀಲು ಜಾರುವುದು. slipped joints (slip disk). ವಾ: ಜಾರಿ ಬಿದ್ದ ರಬಸಕೆ ಉಂಡೆಜಾರಿಟುಗಡ.

ಉಂಡೆ ಹುಳಿ /*uṇḍɛ huḷi*/ ನಾ. 1. ಮರದಲ್ಲಿ ಬೆಳೆಯುವ ಉರುಟಾದ ಹುಳಿಕಾಯಿ, 2. ಮರಹುಳಿ, 3. ಕೆತ್ತೆ ಹುಳಿ. Monkey jack (Artocarpus lacucha), Monkey fruit. ವಾ: ಉಂಡೆ ಹುಳಿ ಮರಲಿ ಆದೆ.

ಉಂಬ /*umba*/ ನಾ. ಊಟ ಮಾಡುವ. let us have food. **ಅಕ್ಕಿ ಕೊಟ್ಟುಂಬಕೆ ಅಕ್ಕನ ಹಂಗ್ಯಾಕೆ?(ಗಾ).** ವಾ: ನೀ ಇಸ್ಟ್ ಉಂಬನ? **ಉಂಬಕೈನ** /*umba kaina*/ ಊಟ ಮಾಡುವ ಕೈಯನ್ನು. the hand that is used in eating. ವಾ: ಉಂಬಕೈನ ಹಂಗೆಲ್ಲ ಕೊಡ್ಕಿಕಾಗದ್. **ಉಂಬಗಂಗ್ಳ** /*umba gaŋgḷa*/ 1. ಉಣ್ಣುವ ಬಟ್ಟಲು, 2. ಊಟ ಮಾಡುವ ಬಟ್ಟಲು. 1. a dinner plate, 2. a large plate, used for eating food. ವಾ: ಉಂಬ ಗಂಗ್ಳಲಿ ಕೈ ತೊಳೆಯಕಾದ್. **ಉಂಬಕನ** /*umbakana*/ ಊಟ ಮಾಡುವಾಗ. while eating. ವಾ: ಉಂಬಕನ ಯಾಕೆ ಕರೆದು. **ಉಂಬಕೆ** /*umbakɛ*/ ಊಟ ಮಾಡುವುದಕ್ಕೆ. to eat. ವಾ: ಎಲ್ಲೊವು ಉಂಬಕೆ ಬನ್ನಿ. ಪ: ಉಂಬಕನ – ಊಟ ಮಾಡುವಾಗ; ಉಂಬಕನೂ – ಊಟ ಮಾಡುವಾಗಲೂ; ಉಂಬಕಾದ್ – ಊಟ ಮಾಡಬಾರದು; ಉಂಬಕಿಲೆ – ಊಟ ಮಾಡಲಿಕ್ಕಿಲ್ಲ; ಉಂಬಕೆ – ಊಟ ಮಾಡುವುದಕ್ಕೆ; ಉಂಬೊದು – ಊಟ ಮಾಡುವುದು; ಉಂಬದು – ಊಟ ಮಾಡುವುದು; ಉಂಬನ – ಊಟ ಮಾಡೋಣ. **ಉಂಬದು** /*umbadu*/ ಊಟ ಮಾಡುವುದು. eating. ವಾ: ಹೊತ್ತಾಗಿ ಉಂಬದು. **ಉಂಬೊಳಗೆ** /*umboḷagɛ*/ 1. ಅಡುಗೆ ಮಾಡಿ ಬಡಿಸುವ ಜಾಗ, 2. ಶುಭ ಮತ್ತು ಅಶುಭ ಕಾರ್ಯಗಳಲ್ಲಿ ಗುರುಹಿರಿಯರಿಗೆ ಕಾರ್ಣಿಕರಿಗೆ ಎಡೆ ಇಡುವುದು, 3. ಐನ್ ಮನೆಯ ಊಟ ಮಾಡುವ ಕೋಣೆ. 1. kitchen – a dining hall, 2. an offering made to the ancestors/deceased. ವಾ: ಉಂಬೊಳಗೆ ಎಡೆ ಹಾಕುದು.

ಉಂಬಳಿ[1] /*umbaḷi*/ ನಾ. 1. ದಾನವಾಗಿ ನೀಡು, 2. ಬಹುಮಾನವಾಗಿ ಕೊಡು, 3. ದಾನವಾಗಿ ಸಿಕ್ಕಿದ ಭೂಮಿ, 4. ಉಡುಗೊರೆಯ ರೂಪದಲ್ಲಿ ದೊರೆತ ಭೂಮಿ. 1. to give in alms, 2. to gift away, 3. the land received as donation, 3. land received as a gift. ವಾ: ಹಾಂರವಂಗೆ ಉಂಬಳಿ ಕೊಡೊಕು, ಈ ಜಾಗೆ ಹಿರಿಯರ್ ಕಾಲಲೆ ಸಿಕ್ಕಿದಂತದ್. **ಉಂಬಳಿಪತ್ರ** /*umbaḷipatra*/ ದಾನಪತ್ರ. a gift deed. ವಾ: ಉಂಬಳಿ ಪತ್ರ ಕೊಡಕಿತ್.

ಉಂಬಳಿ[2] /*umbaḷi*/ ನಾ. ಹಾಸಿಗೆ ಮೇಲೆ ಹೊದೆಸುವ ಬಟ್ಟೆ. bed – spread, bed sheet. ವಾ: ಹಾಸಿಗೆ ಮೇಲೆ ಉಂಬಳಿ ಹಾಸಕಿತ್.

ಉಂಬಳೆ /*umbaḷɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಉಂಬುಳು /*umbuḷu*/ ನಾ. 1. ಜಿಗಣೆ, 2. ಇಂಬುಳು, 3. ಅಡೆ. 1. leeches, 2. predatory worms, 3. bloodsucking worms. **ಕಚ್ಚಿದ ಉಂಬುಳು ರಕ್ತ ಕುಡಿಯದೆ ಇರ್ದುಲೆ(ಗಾ). ಕಣ್ಣ್ ಕಾಣದ ಹಾವು ಪಾಲದಾಟುದು – ಉಂಬುಳು(ಒ).** ವಾ: ಉಂಬುಳು ಮೈಗೆ ಹತ್ತುದೆ ಗೊತ್ತಾಲೆ. ಪ: ಉಂಬ್ಳು – ಜಿಗಣೆ

ಉಂಬೆ /*umbɛ*/ ನಾ. ಹಸುವಿನ ಕರು. a calf. ವಾ: ಉಂಬೆ ಹಟ್ಟಿಗೆ ಬಾತ. **ಉಂಬೇ ಬಾ** /*umbe: ba:*/ ಕರು ಕರೆಯುವ ಪದ. an onomatopoeia used to call out a calf.

ಉಂಬ್ಳ್ ಬಾಗೆ /*umbiḷi ba:gɛ*/ ನಾ. ಬಾಗೆ ಮರದ ಒಂದು ವಿಧ. one variety of Rain Tree (Albizia).

ಉಂರ್ಟಿ /*unriṭi*/ ನಾ. ಚೆನ್ನಾಗಿ. very well. ವಾ: ಹುಣ್ಸುಳಿನ ಉರುಂಟಿ ಚಿರುಂಬು.

ಉಕ್ಕಪ್ಪ /*ukkappa*/ ನಾ. 1. ಅಜ್ಜ, ಉಗ್ಗಪ್ಪ, ತಂದೆ ಅಥವಾ ತಾಯಿಯ ತಂದೆ ಅಥವಾ ಅವರಿಗೆ

ಸಮಾನರು, 2. ಬಂಧು, 3. ಮುದುಕ, 4. ಉಗ್ಗಪ್ಪ. 1. grandfather, 2. a relative 3. an old man, 4. an elderly person. ವಾ: ಉಕ್ಕಪ್ಪ ಬನ್ನೆ ತ ಹೇಳ್‌ತಿದ್ದೊ.

ಉಕ್ಕರ್ಸು /*ukkarsu*/ ಕ್ರಿ. ಕುದಿಸು. to boil. ವಾ: ಕಡ್‌ಂಬಿಟ್ಟ್ ಮಾಡಿಕೆ, ರೊಟ್ಟಿ ಮಾಡಿಕೆ ಹಿಟ್ಟ್ ಉಕ್ಕರ್ಸುದು. ಪ: ಉಕ್ಕುರ್ಸು – ನೀರಿನಲ್ಲಿ ಅಕ್ಕಿ ಹುಡಿಯನ್ನು ಹಾಕಿ ಕದಡಿ ಸ್ವಲ್ಪ ಬೇಯಿಸುವುದು(ರೊಟ್ಟಿ, ಕಡುಬು)

ಉಕ್ಕು /*ukku*/ ನಾ. 1. ಉಕ್ಕು, 2. ಉಬ್ಬು, 3. ಕುದಿ, 4. ಸೊಕ್ಕು, 5. ಗರ್ವ. 1. to overflow, 2. to expand, 3. to boil, 4. arrogance, 4. ego, 3. steel (iron alloy). ವಾ: ಒಲೆಲಿ ಕಾಯಕೆ ಇಟ್ಟ ಹಾಲ್‌ನ ನೋಡಿಕ ಎಲಾರ್ ಕೊದ್ದ್ ಉಕ್ಕುದು. ಪ: ಉಕ್ಕ್ – ಉಕ್ಕು; ಉಕ್ಕುದು – ಉಕ್ಕುವುದು; ಉಕ್ಕಿತ್ – ಉಕ್ಕಿತು;

ಉಕ್ಕುಡೆ /*ukkuḍɛ*/ ನಾ. 1. ಪುಡಿ ಹುಲ್ಲು, 2. ಕಸಕಡ್ಡಿ ಮಿಶ್ರಣದ ಹುಲ್ಲು. 1. remaining grass/grass dust, 2. grass mixed with waste matter. ವಾ: ಉಕ್ಕುಡೆನ ಗೊಬ್ಬರ ಗುಂಡಿಗೆ ಹಾಕ್. **ಉಕ್ಕುಡೆಬತ್ತ** /*ukkuḍɛbatta*/ 1. ಪುಡಿ ಹುಲ್ಲಿನ ಜೊತೆ ಉಳಿಯುವ ಭತ್ತ, 2. ಅರೆಚೆಟ್ಟು ಭತ್ತ. 1. grass dust along with hay husk, 2. paddy waste matter. ವಾ: ಉಕ್ಕುಡೆ ಬತ್ತನ ಗುಡ್ಡೆ ಹಾಕಿಸಿರಾತ್.

ಉಕ್ರಾಜೆ /*ukra:je*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅರಂತೋಡು ಗ್ರಾಮದ ಜಾಗ. a locality in Arantodu village in Sullia Taluk of Dakshina Kannada District.

ಉಗಿ /*ugi*/ ಕ್ರಿ. 1. ಉಗುಳು 2 ಹೊರಸೂಸು. 1. spit, 2. to spill over. **ಮೇಲೆ ಉಗ್ದ್ ನಮ್ಮ ಮೋರೆಗೆ ಬೀಳ್ವಿಕಂಡ ಹಾಂಗೆ(ಗಾ).** ವಾ: ಹಂಗೆಲ್ಲ ಹೋದಲ್ಲಿ ಬಂದಲ್ಲಿ ಉಗಿಯಕಾಗದ್ ಕೂಸು. ಪ: ಉಗ್ದ್ – ಉಗಿದು; ಉಗಿಯದು – ಉಗುಳುವುದು; ಉಗಿಯಕೆ – ಉಗುಳುವುದಕ್ಕೆ; ಉಗಿಯಕಾಗದ್ – ಉಗುಳಬಾರದು; ಉಗ್ದಂಗೆ – ಉಗಿಯುತ್ತಿದ್ದಂತೆ/ ಉಗುಳುತ್ತಿದ್ದ ಹಾಗೆ/ ಉಗುಳಿದ ಹಾಗೆ; ಉಗ್ದಿಯಾ – ಉಗಿಯುತ್ತೀಯಾ? ಉಗ್ಯದು – ಉಗುಳುವುದು; ಉಗ್ಯಬೊಡಿ – ಉಗಿಯಬೇಡಿ. **ಉಗಿಪಾತ್ರೆ** /*ugipa:trɛ*/ ಉಗುಳುವ ಪಾತ್ರೆ. a spittoon. ವಾ: ಉಗಿಪಾತ್ರೆನ ಉಗೆಕೆ ಬಳ್‌ಸುವೆ.

ಉಗುರ್ ಬಿಸಿ /*uguri bisi*/ ನಾ. 1. ನೀರು ಸಣ್ಣ ಬಿಸಿಯಾಗಿರುವುದು, 2. ಉಗುರು ಬೆಚ್ಚಗೆ. 1. warm water, 2. lukewarm water. ವಾ: ನೀರ್ ಕಾತ್‌ಲೆ, ಉಗುರ್ ಬಿಸಿ ಆದಸ್ಟೆ.

ಉಗುರ್ ಸುತ್ತು /*uguri suttu*/ ನಾ. ಕೈ ಉಗುರಿನ ಸುತ್ತು ಬರುವ ಹುಣ್ಣು. Herpetic Whitlow/Whitlow finger. ವಾ: ಉಗುರ್ ಸುತ್ತು ಆದ್ರೆ ಹಿಟ್ಟ್ ತೊಳ್ಸಿ ಕಟ್ಟಕು.

ಉಗೆದು /*ugɛdu*/ ನಾ. 1. ಉಗುಳುವುದು, 2. ಬಾಯಿಂದ ನೀರು ಸಿಡಿಸುವುದು. 1. to spit, 2. to spit the water out of the mouth. ವಾ: ಎಂತಕೆ ಹಂಗೆ ಅಂಗ್ಳಲಿ ಉಗೆದು ಹಾಳ್ ಬುದ್ದಿ.

ಉಗ್ಗಪ್ಪ /*uggappa*/ ನಾ. ಅಜ್ಜ. grandfather. ವಾ: ಉಗ್ಗಪ್ಪ ಮಾತಡ್ಸಿದೊ. ಪ: ತಾಂತ

ಉಗ್ಗಪ್ಪಪ್ಪ /*uggappappa*/ ನಾ. ಮುತ್ತಜ್ಜ. great grandfather. ವಾ: ಉಗ್ಗಪ್ಪಪ್ಪ ಎಲ್ಲಿ ಹೋದರಿ?

ಉಗ್ಗಪ್ಪಿ /*uggappi*/ ನಾ. 1. ರಕ್ಷಾ ಯಂತ್ರ, 2. ತಾಯತ. 1. a chain with a talisman, worn around the neck, 2. a talisman. ವಾ: ಕೂಸಿಗೆ ಉಗ್ಗಪ್ಪಿ ಕಟ್ಟಿಸೊಕು.

ಉಗ್ಗಪ್ಪಿತ್ತ್ /*uggappitti*/ ನಾ. ತರುತ್ತಿದ್ದಳು/ನು. he/she was bringing. ವಾ: ಅಪ್ಪ ಮನೆಗೆ ಬಾಕನ ಯಾಗೊಳು ಮಿಟಾಯಿ ಉಗ್ಗಪ್ಪಿದ್ದೊ. ಪ: ಉಗ್ಗಪ್ಪಿತ್ಲೆ – ತರುತ್ತಿರಲಿಲ್ಲ

ಉಗ್ಗಪ್ಪ್ /*uggappi*/ ನಾ. 1. ತಂದ, 2. ತಂದನು, 3. ತಂದಳು, 4. ತಂದಿತು. 1. he brought, 2. he brought, 3. she brought, 4. it brought. **ಕೊಟ್ಟ ಮನೆಲಿ ಅಟ್ಟ್ ಇಕ್ಕಿತ್‌ಲೆ, ಕಟ್ಟೆಂದ ನೀರ್ ಉಗ್ಗಪ್ಪ್‌ಲೆ, ಇದ್ದರೆ ಇತ್ತ್ ಹೋದರೆ ಹೋತ್(ಗಾ).** ವಾ: ಬಾಕನ ಮಾಸ ಉಗ್ಗಪ್ಪ್. ಪ: ಉಗ್ಗಪ್ಪ್ಂತ – ತಂದನೂಂತ

ಉಗ್ಗಪ್ಪ್‌ಲೆ /*uggappilɛ*/ ನಾ. ತಂದಿಲ್ಲ. has not brought. ವಾ: ನಾ ಎಂತನೂ ಉಗ್ಗಪ್ಪ್‌ಲೆ. ಪ: ಉಗ್ಗಪ್ಪ್‌ಲೆ – ತರಲಿಲ್ಲ; ಉಗ್ಗಪ್ಪ್‌ಲೆತ – ತರಲಿಲ್ಲವೆಂದು; ತಾದಲ್ಲ – ತರುವುದಲ್ಲ; ಉಗ್ಗಪ್ಪ್‌ಲೆ ಯಾಕೆ – ಯಾಕೆ ತರಲಿಲ್ಲ

ಉಗ್ಗವ್ವ /*uggavva*/ ನಾ. 1. ಅಜ್ಜಿ, 2. ತಂದೆ ಅಥವಾ ತಾಯಿಯ ತಾಯಿ ಅಥವಾ ಅವರಿಗೆ ಸಮಾನರು. 1.

grandmother, 2. mother of one's father or mother, 3. a woman who is as old as one's grandmother. ವಾ: ಸೌಕ್ಯನ ಉಗ್ಗವ್ವ, ಉಗ್ಗವ್ವಂದ್ ಕಾಲ್ ಚಾಮಿ ಮಾಡ್ ಕೂಸು.

ಉಗ್ಗು[1] /*uggu*/ ನಾ. 1. ಚಿಕ್ಕ ಮಕ್ಕಳಿಗೆ ಅರೆದು ಕೊಡುವ, 2. ಮಗುವಿಗೆ ಗಂಜಿ ಕೊಡುವುದಕ್ಕೆ ಉಗ್ಗ ಕೊಡುವುದು ಎಂದು ಹೇಳುವರು. softened food given to little babies. ವಾ: ಕೂಸಿಗೆ ಉಗ್ಗು ಕೊಡೊಕು.

ಉಗ್ಗು[2] /*uggu*/ ನಾ. 1. ತೊದಲು, 2. (ನೀರು) ಚೆಲ್ಲು, 3. ಉಕ್ಕಿಬರು. 1. to stammer, 2. to spill (water), 3. swell. ವಾ: ಅಂವ ಮಾತಾಡಿಕನ ಉಗ್ಗುದು.

ಉಗ್ಗೆ /*uggɛ*/ ನಾ. 1. ಅನ್ನ, 2. ಹುಗ್ಗಿ. 1. cooked rice, 2. steamed rice or boiled rice. ವಾ: ಅವ್ವಾ ಉಗ್ಗೆ ಬೇತೋ. ಪ: ಉಗ್ಗೆನ – ಅನ್ನವನ್ನು; ಉಗ್ಗೆಗೆ – ಅನ್ನಕ್ಕೆ

ಉಗ್ರಾಣ /*ugra:ṇa*/ ನಾ. 1. ಧಾನ್ಯ ಸಂಗ್ರಹ ಸ್ಥಳ, 2. ಖಜಾನೆ, 3. ಕೊಟ್ಟಾರ. 1. a place where grains are stored, 2. treasury, 3. a granary. ವಾ: ಬೆಳ್ದ ಬೆಳೆ, ಬೇಳೆಕಾಳ್ ಗಳ ಹಿಂದೆ ಉಗ್ರಾಣಲಿ ಮಡ್ಗ್ ತಿದ್ದೊಗಡ.

ಉಗ್ರಾಣಿ /*ugra:ṇi*/ ನಾ. ಹಿಂದೆ ಗ್ರಾಮದ ರೆವಿನ್ಯೂ ಮುಖ್ಯಸ್ಥರಾದ ಶ್ಯಾನುಭೋಗರ ಸಹಾಯಕ. an assistant of village collector (Shanubhoga). ವಾ: ಉಗ್ರಾಣಿ ಬಂದೊಳಗಡ.

ಉಗ್ರಾಣಿರ /*ugra:ṇira*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಉಗ್ರ್ /*ugɨri*/ ನಾ. 1. ಉಗುರು, 2. ನಖ, 3. ಬೆರಳಿನ ತುದಿಯ ಭಾಗ. 1. nail, 2. nail, 3. end of a finger/toe. ವಾ: ಉಗ್ರ್‌ಲಿ ಜಿಡ್ಡ್ ಕುದ್ದರೆ ನೋಡಿಕೆ ಹೇಸಿಗೆಯಾದೆ. ಪ: ಉಗ್ರ್‌ಲಿ – ಉಗುರಿನಲ್ಲಿ; ಉಗ್ರಿದ್ದಾಂಗೆ – ಉಗುರಿದ್ದ ಹಾಗೆ

ಉಚ್ಚರ್ಸುವ /*uccarɨsuva*/ ನಾ. 1. ಉಚ್ಚರಿಸುವ, 2. ಶಬ್ದಗಳನ್ನು ಬಾಯಿಂದ ಹೊರಡಿಸುವಿಕೆ, 3. ವರ್ಣಗಳನ್ನು ಹೇಳುವ ರೀತಿ. 1. the way of pronunciation, 2. producing sounds using vocal cords, 3. pronouncing letters. ವಾ: ಬಾಯಿಲಿ ಹಲ್ಲಿಲ್ಲರೆ ಉಚ್ಚರ್ಸುವ ಪದಗ ಅರ್ತನೇ ಆಲೆ.

ಉಚ್ಚು[1] /*uccu*/ ನಾ. ಕಚ್ಚುವಂತಹ ಕೀಟಗಳು. biting insects. ವಾ: ಉಚ್ಚುಗ ಎಲ್ಲಂಡೆ ಬೊಳ್ಳಿಲಿ ಕುದ್ದೊಳೊ.

ಉಚ್ಚು[2] /*uccu*/ ನಾ. 1. ಬಿಚ್ಚು, 2. ಸಡಿಲಿಸು, 3. ಭೇದಿಯಾಗು, 4. ತೆಳ್ಳಗೆ ಮಲವಿಸರ್ಜನೆಯಾಗು. 1. to open, 2. to loosen, 3. dysentery, 4. diarrhea. ವಾ: ಉಚ್ಚು ಸುರಾತ್. ಪ: ಉರ್ಚು(ತು) – ಭೇದಿ

ಉಚ್ಚೆ /*uccɛ*/ ನಾ. ಮೂತ್ರ. urine. **ಕಪ್ಪೆ ಉಚ್ಚೆ ಹೊಯ್ದುಟುಂತೇಳಿ ಇದ್ದ ನೀರ್ನ ಸೂಸಿತ್(ಗಾ). ಇನ್ನೊಬ್ಬ ಬಾಲ ಎತ್ತದಿದ್ದರೆ ಉಚ್ಚೆ ಹೊಯ್ಯಕೆ ಆದುಲೆ (ನು). ಕಚ್ಚಿದವನ ಬಾಯ್ಗೆ ಉಚ್ಚೆ ಹೊಯ್ದದೆ – ಕಬ್ಬು(ಒ).** ವಾ: ಹಿಂದೆಲ್ಲ ಉಂಗ್ರ ಬೆರ್‌ಳಿಗೆ ಮಾತ್ರ ಉಂಗ್ರ ಹಾಕ್‌ತಿದ್ದೊ, ಈಗ ಎಲ್ಲ ಬೆರ್‌ಳಿಗೂ ಹಾಕುವೆ. **ಉಚ್ಚೆಪೊಟ್ಟೆ** /*uccɛpoṭṭɛ*/ ಮೂತ್ರಕೋಶ. urinary bladder. ವಾ: ಮೂತ್ರಪಿಂಡಂದ ಉತ್ಪತ್ತಿಯಾಗೊ ಉಚ್ಚೆನ ಕೂಡಿಟ್ಟ್ ಕಂಬ ಕೋಶನೆ ಈ ಉಚ್ಚೆಪೊಟ್ಟೆ.

ಉಜಿರ್ ಕಣಿ /*ujir kaṇi*/ ನಾ. ತೋಟಗಳಲ್ಲಿ ಸದಾ ನೀರು ಇಳಿದು ಹೋಗುವಂತೆ ಮಾಡುವ ಆಳವಾದ ಕಣಿ. a trench inside the garden to let the excess water flow away. ವಾ: ತೋಟಕೆ ನೀರ್ ಹರ್‌ದ್ ಹೋಕೆ ಉಜಿರ್ ಕಣಿ ಮಾಡ್ಡ್.

ಉಜಿರ್‌ಪಾದೆ /*ujirpa:dɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಉಜುಂಬು /*ujumbu*/ ನಾ. ನೆಕ್ಕು. to lick or suck continuously. ವಾ: ಹೈದ ಐಸ್‌ಕ್ಯಾಂಡಿನ ಉಜುಂಬುತುಟ್ಟು.

ಉಜ್ಜಾಲ್ /*ujja:lɨ*/ ನಾ. 1. ಉಯ್ಯಾಲೆ, 2. ಜೋಕಾಲಿ. 1. a swing, 2. swing. ವಾ: ರಜೆಲಿ ಮರಕ್ಕೆ ಉಜ್ಜಾಲ್ ಕಟ್ಟಿ ಆಡುದೆ ಒಂದು ಮಜ ಅಲಾ. ಪ: ಉಜ್ಜಾಲ್‌ಲಿ – ಉಯ್ಯಾಲೆಯಲ್ಲಿ; ಉಜ್ಜಾಲ್‌ಂದ – ಉಯ್ಯಾಲೆಯಿಂದ. **ಉಜ್ಜಾಲ್‌ಲಿ ಒಚ್ಚ್** /*ujja:lɨli occɨ*/ 1. ಉಯ್ಯಾಲೆಯಲ್ಲಿ ತೂಗು, 2. ತೂಗಾಡುವ ತೊಟ್ಟಿಲು. 1. to swing, 2. rocking cradle. ವಾ: ಉಜ್ಜಾಲ್‌ಲಿ ಒಚ್ಚಿರೆ ಮಾತ್ರ ಕೂಸು ನಿದ್ದೆ ಮಾಡ್‌ದು.

ಉಜ್ಜಿ /*ujji*/ ಕ್ರಿ. 1. ಉಜ್ಜುವುದು, 2. ತಿಕ್ಕುವುದು. 1. rub, 2. to scrub. ವಾ: ಅಡ್‌ಗೆ ಮನೆಲಿ ಅಗ್ರಣಿ ಹಾಕಿಕಾಕನದ ಎಣ್ಣೆನ ಉಜ್ಜಿ ತೆಗ್ದೊಕರೆ ಜೀವ ಬಾಯ್‌ಗೆ ಬಂದದೆ. ಪ: ಉಜ್ಜಿಕಂಡ್ – ಉಜ್ಜಿಕೊಂಡು; ಉಜ್ಜಿಕೆ – ಉಜ್ಜುವುದಕ್ಕೆ; ಉಜ್ಜಿಕಾಗಿ – ಉಜ್ಜುವುದಕ್ಕಾಗಿ; ಉಜ್ಜಿರೆ – ಉಜ್ಜಿದರೆ; ಉಜ್ಜಿವೆ – ಉಜ್ಜುತ್ತಾರೆ. **ಉಜ್ಜಿಕೆ ಬತ್ತ್** /*ujjikɛ bɔtɨ*/ 1. ಉಜ್ಜಬಾರದು, 2. ತಿಕ್ಕಬಾರದು. 1. should not rub, 2. should not scrub. ವಾ: ಕಣ್ಣಿಗೆ ಕಸ ಬಿದ್ದರೆ ಉಜ್ಜಿಕೆಬತ್ತ್. ಪ: ಉಜ್ಜಿಕೆ ಬೊತ್ತ್ **ಉಜ್ಜು** /*ujju*/ 1. ಉಜ್ಜು, 2. ತಿಕ್ಕು. 1. to rub, 2. to scrub. **ಹಣೆಲಿ ಬರ್ದ ದ್ ಎಲೆಲಿ ಉಜ್ಜಿರು ಹೋಕಿಲೆ(ಗಾ).** ವಾ: ಮೋರೆನ ಉಜ್ಜು. ಪ: ಉಜ್ಜಿಕೆ – ಉಜ್ಜಲು

ಉಜ್ಜಿಟ್ /*ujjiṭi*/ ನಾ. ಅಕ್ಕಿಯಿಂದ ಮಾಡುವ ತಿಂಡಿ. a dish made of rice. ವಾ: ಉಜ್ಜಿಟ್ ಮಾಡಿಕೆ ಅಕ್ಕಿ ಬೇಕ್.

ಉಜ್ಜಿರಡ್ಕ /*ujjiraḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ನಾಲ್ಕೂರು ಗ್ರಾಮದ ಜಾಗ. a locality in Nalkuru village in Sullia Taluk of Dakshina Kannada District.

ಉಜ್ವಾಲ್ /*ujva:lɨ*/ ನಾ. ಉಯ್ಯಾಲೆ. swing. ವಾ: ಉಜ್ವಾಲ್‌ಲಿ ಆಡ್‌ದು.

ಉಟ್ಟ[1] /*uṭṭa*/ ಕ್ರಿ. ಇದೆಯಾ? Is it there? **ಅನ್ನ ದೇವರ ಮುಂದೆ ಅನ್ನ ದೇವ್ರು ಉಟ್ಟ(ಗಾ). ಗುಣಕ್ಕೆ ಮತ್ಸರ ಉಟ್ಟ?(ನು).** ವಾ: ಅಂವ ಮನೆ ವಳೆಗೆ ಉಟ್ಟ? **ಉಟ್ಟಳೆ** /*uṭṭalɛ*/ ಇದೆಯಲ್ಲ. Isn't it there? ವಾ: ಅವುಳು ಅಲ್ಲೆ ಉಟ್ಟಳೆ. ಪ: ಉಟ್ಟಲ – ಇದೆಯಲ್ಲ; ಉಟ್ಟಲಿ – ಇದೆಯಲ್ಲಿ; ಉಟ್ಟಲ್ಲೆ – ಇದೆಯಲ್ಲೆ; ಉಟ್ಟುಡಗ – ಇದೆಯಂತೆ; ಉಟ್ಟೊ – ಇದೆಯೋ. **ಉಟ್ಟಾ** /*uṭṭa:?*/ 1. ಉಂಟಾ?, 2. ಇದೆಯಾ? 1. Do you have? 2. Is it there? ವಾ: ನಿಮ್ಮಲ್ಲಿ ಮೀನ್ ಹಿಡಿಯೊ ಕೂಳಿ ಉಟ್ಟಾ? **ಉಟ್ಟು** /*uṭṭu*/ 1. ಇದೆ, 2. ಉಂಟು. 1. It is there, 2. It is available. **ಆಟಕ್ಕೆ ಉಟ್ಟು ಲೆಕ್ಕಕೆ ಇಲ್ಲೆ(ಗಾ). ಅಂವನಕ್ಕಲೆ ಹಲ್ಲುಟ್ಟು ಕಡ್ಲೆನೂ ಉಟ್ಟು(ನು).** ವಾ: ಕುಡೆಕೆ ಮಜ್ಜಿಗೆ ಉಟ್ಟಾ? ಉಟ್ಟು. ಪ: ಉಟ್ಟುಗಡ ; ಉಂಟಂತೆ.

ಉಟ್ಟ[2] /*uṭṭa*/ ಕ್ರಿ. 1. ಧರಿಸು, 2. ತೊಡು. wear. ವಾ: ಗೂಡೆ ಸೀರೆ ಉಟ್ಟುಟು. ಪ: ಉಟ್ಟಳೆ – ತೊಟ್ಟಿದ್ದೇನೆ.

ಉಟ್ಟು[2] /*uṭṭu*/ 1. ಧರಿಸಿ, 2. ಉಟ್ಟುಕೊಂಡು. 1. to wear, 2. to dress. ವಾ: ಸೀರೆ ಉಟ್ಟು ಬಾತ್. ಪ: ಉಟ್ಟುಕ; ಧರಿಸಿಕೊ ; ಉಟ್ಟ್ – ಧರಿಸಿ; ಉಟ್ಟಾತ – ಸೀರೆ ತೊಟ್ಟು ಆಯಿತ; ಉಟ್ಕಂಡ್ – ಧರಿಸಿಕೊಂಡು; ಉಟ್ಟಿಯಾ – ಧರಿಸುತ್ತೀಯಾ; ಉಟ್ಟಿತ್ – ಧರಿಸಿದಳು; ಉಟ್ಟದ್ – ಧರಿಸಿದ್ದು; ಉಟ್ಟ – ಧರಿಸಿರುವ; ಉಟ್ಟೊ – ಧರಿಸಿದೆವು/ಧರಿಸಿದರು; ಉಡೊಕ – ಧರಿಸಬೇಕ

ಉಡಾಳ /*uḍa:ḷa*/ ನಾ. 1. ಬೇಜವಾಬ್ದಾರಿಯವ, 2. ಕೆಲಸಕ್ಕೆ ಬಾರದವ. 1. an irresponsible, 2. a useless person. ವಾ: ಉಡಾಳನಂಗೆ ಆಡಿಕಾದ್.

ಉಡ್ /*uḍɨ*/ ಕ್ರಿ. ಉಡುಪು ತೊಡುವುದು. to wear clothes. **ಉತ್ತದೆ ಬೆಳೆ ಆಕಿಲೆ, ಉಡದೆ ಕೊಳೆ ಆಕಿಲೆ(ಗಾ).** ವಾ: ಹೆಣ್ಮಕ್ಕೆಲ್ಲ ಸೀರೆ ಉಡ್‌ತೊಳೊ. **ಉಡು** /*uḍu*/ 1. ಸೀರೆ ಅಥವಾ ಪಂಚೆಯನ್ನು ಧರಿಸು, 2. ತೊಡು, 3. ಸೊಂಟದ ಸುತ್ತ ಬಟ್ಟೆ ಸುತ್ತು. 1. to wear either a sari or a dhoti, 2. to wear. ವಾ: ಪಂಚೆ ಉಡು. ಪ: ಉಡಿಕೆ – ಉಡಲು; ಉಡಿಕನ – ಉಡುವಾಗ. **ಉಡಿಕೆ** /*uḍikɛ*/ ನಾ. 1. ಧರಿಸಲು, 2. ಉಡಲು. 1. to wear, 2. to clothe. ವಾ: ಸೀರೆ ಉಡಿಕೆ ಅರ್‌ದ ಗಂಟೆ ಬೇಕಾತ್. ಪ: ಉಡ್ದು – ಉಡುವುದು; ಉಡೋಕ – ಧರಿಸಬೇಕ;

ಉಡಿಗಿರೆ /*uḍigirɛ*/ ನಾ. 1. ಉಡುಗೊರೆ, 2. ಕಾಣಿಕೆ, 3. ಉಚಿತವಾಗಿ ಕೊಡುವ ವಸ್ತ್ರಾದಿಗಳು. 1. a gift, 2. a contribution, 3. clothes given in charity. ವಾ: ಹುಟ್ಟಿದ ದಿನ ಅಪ್ಪ ಸೈಕಲ್ ಉಡಿಗಿರೆಯಾಗಿ ಕೊಟ್ಟನೆತ ಹೇಳ್ದೊ (ಹೇಳ್ಯೊಳೊ). ಪ: ಉಡಿಗೆರೆ – ಉಡುಗೊರೆ; ಉಡ್ಗಿರೆ – ಉಡುಗೊರೆ; ಉಡ್ಗೊರೆ – ಉಡುಗೊರೆ(ಬಹುಮಾನ)

ಉಡಿಗೆ /*uḍigɛ*/ ನಾ. 1. ಉಡುಗೆ, 2. ಪೋಷಾಕು, 3. ಬಟ್ಟೆ. 1. clothing, 2. costume, 3. dress. ವಾ: ನಮ್ಮ ಚಾಮೆವ್ವನ ಉಡಿಗೆ ತೊಡಿಗೆ ಬಾರಿ ಲಾಯ್ಕ. ಪ: ಉಡ್ಗೆ – ಉಡುಗೆ

ಉಡಿದಾರ /*uḍɛda:ra*/ ನಾ. 1. ಸೊಂಟಕ್ಕೆ ಕಟ್ಟುವ ದಾರ, 2. ಉಡುದಾರ, 3. ನಡುಪಟ್ಟಿ, 4. ಒಡ್ಯಾಣ. 1. a thread tied around one's waist, 2. string tied around the waist, 3. a belt, 4. a girdle. **ಅಜ್ಜಿಗೈದದೆಲ್ಲಾ ಅಜ್ಜನ ಉಡೆದಾರಕ್ಕೆ ಸರಿ(ಗಾ).** ವಾ: ಸೊಂಟಕೆ ಬೆಳ್ಳಿದ್ ಉಡೆದಾರ ಹಾಕುವೆ. ಪ:

ಉಡೆನೂಲು – ಉಡೆದಾರ; ಉಡ್ನೂಲ್ – ಉಡುದಾರ, ನೇವಳ

ಉಡಿವಾಳ /*uḍiva:ḷa*/ ನಾ. ಒಡಿವಾಳ (ಕಬ್ಬಿನ ರೀತಿಯ ಒಂದು ವಿಧದ ಔಷಧ ಬಳ್ಳಿ). a medicinal plant (resembling sugar cane). ವಾ: ಉಡಿವಾಳತೇಳ್‌ದು ಒಂದ್ ಮೊದ್ದ್ ನ ಬೊಳ್ಳಿ.

ಉಡು /*uḍu*/ ನಾ. 1. ಹಲ್ಲಿ ಜಾತಿಗೆ ಸೇರಿದ ಸರೀಸೃಪ, 2. ಅನಿಷ್ಟದ ಸಂಕೇತ. 1. Iguana, 2. a symbol of ill-omen. **ಉಡು ಹುಕ್ಕಂಗಾತ್(ನು).** ವಾ: ಉಡುನ ಹಿಡ್‌ತಂದ ಬುಡ್‌ಸಿಕಂಬದು ಬಜ್ಜ.

ಉಡುಂಬು /*uḍumbu*/ ನಾ. ಉಡ. an Iguana. ವಾ: ಉಡುಂಬು ಹಿಡ್ದರೆ ಬುಡ್ದುಲೆ. ಪ: ಉಡುಂಬು/ ಹೊಳ್ಕ್‌ಯ – ಉಡ

ಉಡುದೋಳಿ /*uḍudo:ḷi*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಏನೆಕಲ್ಲು ಗ್ರಾಮದ ಜಾಗ. 1. family, 2. lineage, 3. a locality in Enekallu village in Sullia Taluk of Dakshina Kannada District.

ಉಡುವೆ ಕೋಡಿ /*uḍuve ko:ḍi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕಲ್ಮಡ್ಕ ಗ್ರಾಮದ ಜಾಗ. a locality in Kalmadka village in Sullia Taluk of Dakshina Kannada District.

ಉಡೆನೂಲು /*uḍɛnu:lu*/ ನಾ. ಸೊಂಟಕ್ಕೆ ಕಟ್ಟಿಕೊಳ್ಳುವ ದಪ್ಪನೆಯ (ಪಟ್ಟೆ) ನೂಲು. a thread tied around the waist. **ಸಾವ್ರಾರು ಮಕ್ಕಳಿಗೆ ಒಂದೇ ಉಡೆನೂಲು – ಮಾಯ್ಪುಸೂಡಿ(ಒ).** ವಾ: ಉಡೆನೂಲು ಸಿಕ್ಕಿತಾ? ಪ: ಪಟೆನೂಲು(ತು)

ಉಡ್ತಲೆ ಮರ /*uḍtalɛ mara*/ ನಾ. ಮರದ ಹೆಸರು. a kind of a tree. ವಾ: ಕೊಟ್ಟ್‌ದ್ ಕಾವ್‌ಗೆ ಉಡ್ತಲೆ ಮರ ಒಳ್ಳದ್, ಅದ್ ಬಾರಿ ಗಟ್ಟಿನ ಮರ.

ಉಡ್ಸ್ /*uḍsɨ*/ ಕ್ರಿ. ಉಡಿಸು. to make someone wear clothes. ವಾ: ಅದ್‌ಕೆ ಸೀರೆ ಉಡ್ಸ್. ಪ: ಉಡ್ಸಿದೊ – ಉಡಿಸಿದರು; ಉಡ್ಸುದು – ಉಡಿಸುವುದು

ಉಣು /*uṇu*/ ಕ್ರಿ. 1. ಊಟಮಾಡು, 2. ತಿನ್ನು. 1. to eat, 2. to have food. **ನಿನ್ನ ಅಡ್ಗೆನ ನೀನೆ ಉಣದಿದ್ದರೆ ಹೇಂಗೆ(ಗಾ).** ವಾ: ಉಣಿಸು, ತಿನ್ನಿಸು, ಮೊಲೆ ಉಣ್ಣು, ಉಣಿ.

ಉಣ್ಂಗ್ /*uṇiŋgɨ*/ ನಾ. 1. ಉಣ್ಣಿ, 2. ಉಳುಂಗು. 1. parasitic ticks, 2. parasitic arachnids. ವಾ: ನಾಯಿ, ದನಂಗಳ ಮೈಲೆಲ್ಲಾ ಉಣ್ಂಗ್ ಇದ್ದದೆ. ಪ: ಉಣುಂಗು – ಉಣ್ಣಿ

ಉಣ್ಣಿ ಪೋಳೆ /*uṇṇi po:ḷɛ*/ ನಾ. ಪಕ್ಷಿಗಳ ವಿಧಗಳು. a variety of birds. ವಾ: ಉಣ್ಣಿ ಪೋಳೆ ಗದ್ದೆಲಿತ್ತ್.

ಉಣ್ಣಿಸ /*uṇṇisa*/ ಕ್ರಿವಿ. ತಿಂದು ಜಾಸ್ತಿ ಆದ ಸ್ಥಿತಿ. over eating. ವಾ: ಬಿರಿಯಾನಿ ತಿಂದ್ ಉಣ್ಣಿಸ ನಾಂಗೆ ಆವುಟು.

ಉಣ್ಣು /*uṇṇu*/ ಕ್ರಿ. 1. ಉಣಿಸು, 2. ತಿನ್ನಿಸು, 3. ಮೊಲೆ ಉಣ್ಣು, 4. ಉಣಿ. 1. to have meals, 2. to eat, 3. to eat food. ವಾ: ಎತ್ತ ನೋಡಿಯ ಅನ್ನ ಬಿಸಿ ಇರ್‌ಕನನೆ ಬೇಗ ಉಣು. ಪ: ಉಣಿ – ಊಟ ಮಾಡಿ; ಉಣದಿದ್ದರೆ – ಊಟ ಮಾಡದಿದ್ದರೆ; ಉಣಾದೆ – ಊಟ ಮಾಡದೆ; ಉಣಿಕೆ – ಊಟ ಮಾಡುವುದಕ್ಕೆ; ಉಣೊಕು – ಊಟ ಮಾಡಬೇಕು; ಉಣ್ಸಿ – ಊಟ ಮಾಡಿಸಿ; ಉಣ್ಸು – ಊಟ ಮಾಡಿಸು; ಉಣ್ಸಿತ್ – ಉಣಿಸಿದನು/ಳು

ಉಣ್ಣೆ /*uṇṇɛ*/ ನಾ. ಕುರಿಯ ಕೂದಲು. wool. ವಾ: ಉಣ್ಣೆಲಿ ಕಂಬುಳಿ ಮಾಡಿವೆ.

ಉಣ್ಪು /*uṇpu*/ ನಾ. ಎತ್ತು, ಗೂಳಿಗಳ ಭುಜದ ಮೇಲಿನ ಎತ್ತರದ ಭಾಗ. hump on a bull. ವಾ: ಎತ್ತ್‌ನ ಉಣ್ಪುಗೆ ಕಕ್ಕೆಗ ಕೊಡ್ಪಿ ಗಾಯ ಮಾಡಿಯೊಳೊ.

ಉತ್ತಂಗರಿ /*uttaŋgari*/ ನಾ. ಒಲೆಯ ಮೇಲ್ಭಾಗಕ್ಕೆ ಅಂಟಿದ ಹೊಗೆಯ ಅಂಟು. soot. ವಾ: ಬೆಸೆಗೆ ಅಡಿನ ಕರಿ. ಪ: ಉತ್ತುಂಗರಿ – ಗೋಡೆ ಮತ್ತು ಹೆಂಚಿನಲ್ಲಿ(ಹಂಚು) ಅಂಟಿರುವ ಹೊಗೆಯ ಕಪ್ಪಾದ ಕಣಗಳು

ಉತ್ತರಾಣಿ /*utra*/ ನಾ. 1. ಉತ್ತರಾಣಿ ಬೀಜವನ್ನು ಹಾಲಿನಲ್ಲಿ ಅರೆದು ತಲೆಗೆ ಹಾಕುವುದರಿಂದ ತಲೆಸುತ್ತು ನಿಲ್ಲುತ್ತದೆ, 2. ಬೆವರು ವಾಸನೆಗೆ ಉತ್ತರಾಣಿ ಸೊಪ್ಪನ್ನು ಸ್ನಾನದ ನೀರಿಗೆ ಹಾಕಬೇಕು, 3. ಬಾಯಿವಾಸನೆ ಸಮಸ್ಯೆಗೆ ಉತ್ತರಾಣಿ ಸೊಪ್ಪನ್ನು ಕಾಫಿಗೆ ಹಾಕಿ ಕುಡಿಯಬಹುದು, 4. ಒಂದು ಸಸ್ಯ ವಿಶೇಷ, 5. ಟಾಕಿ ಬಳ್ಳಿ. 1. Prickly chaff flowers/ devils horse whip (a paste made by the seeds of this plant is used in healing headaches), 2. to avoid body odour the

leaves of this plant is put in bathing/warm water, 3. to get rid of bad breath one should drink coffee mixed wit. ವಾ: ಉತ್ತರಾಣಿ ಸೊಪ್ಪು ಮೊದ್ದಿಗೆ ಹೇಳಿಯೋದ್. ಪ: ಉತ್ರಾಣಿ – ಒಂದು ಸಸ್ಯ ವಿಶೇಷ; ರೈತರು ಕಣದಲ್ಲಿ ಮೇಟಿಯನ್ನು ಪೂಜಿಸುವಾಗ ಮೇಟಿಯ ತಲೆಯ ಮೇಲೆ ದನದ ಸಗಣಿಯ ಮಿದಿಕೆಯನ್ನಿಟ್ಟು ಅಲ್ಲಿ ಈ ಸಸ್ಯದ ದಳಗಳನ್ನು ಸಿಕ್ಕಿಸುತ್ತಾರೆ;

ಉತ್ಮ */utt ma/ utma/* ನಾ. 1. ಉತ್ತಮ, 2. ಎಲ್ಲಕ್ಕಿಂತ ಒಳ್ಳೆಯ, 3. ಶ್ರೇಷ್ಠ, 4. ಮೇಲಾದ. 1. excellent, 2. the best, 3. unsurpassed, 4. superior. ವಾ: ಕೇಡ್ ಮಾಡವ್‌ರಂದ ದೂರ ಇರುದೇ ಉತ್ಮ. ಪ: ಉತ್ಮಾಂತ – ಉತ್ತಮ ಎಂದು

ಉತ್ರ^1 */utra/* ನಾ. ಉತ್ತರ ದಿಕ್ಕು. the North direction. ವಾ: ಉತ್ತರಕೆ ತಲೆ ಹಾಕಿ ಮೊಲ್‌ಗಿಕಾಗದ್‌ಗಡ.

ಉತ್ರ^2 */utra/* ನಾ. ಪ್ರಶ್ನೆಗೆ ಉತ್ತರ. answer to a question.

ಉದಾರ್ಣೆ */uda:rṇɛ/* ನಾ. 1. ಉದಾಹರಣೆ, 2. ದೃಷ್ಟಾಂತ, 3. ನಿದರ್ಶನ. 1. an example, 2. an illustration, 3. an instance. ವಾ: ವಿಸಯನ ಉದಾರ್ಣೆ ಕೊಟ್ಟ್ ವಿವರಿಸಿರೆ ಲಾಯ್ಕಲಿ ಅರ್‌ತ ಆದೆ.

ಉದಾಸಿನ */uda:sina/* ನಾ. 1. ಅನಾಸಕ್ತಿ, 2. ತಟಸ್ಥ, 3. ಅಲಕ್ಷ್ಯ, 4. ಉದಾಸೀನ. 1. uninterested, 2. neutral 3. negligence, 4. indifference. **ಹಾಂಕಾರಕ್ಕೆ ಉದಾಸಿನ ಮೊದ್ದು(ಗಾ).** ವಾ: ಉದಾಸಿನ ಮಾಡಿಕಂಡಿದ್ದರೆ ಕೆಲ್‌ಸ ಮುಂದಕ್ಕೆ ಹೋದುಲೆ.

ಉದಿಯನ */udiyana/* ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ನಾಲ್ಕೂರು ಗ್ರಾಮದ ಜಾಗ. 1. family, 2. lineage.

ಉದುರಿ */uduri/* ನಾ. ಹೆಂಗಸರ ಕೃತಕ ತಲೆಕೂದಲು. a wig, especially used by women. ವಾ: ಕೆಲು ಹೆಣ್ಮಕ್ಕ ಉದುರಿ ಹಾಕಂಡವೆ.

ಉದುರಿಗೆಂಡೆ */udurigɛṇḍɛ/* ನಾ. ಒಂದು ವಿಧದ ಗೆಣಸು. ಇದನ್ನು ಉದ್ದಿನ ರೂಪವಾಗಿ ಹಿಂದೆ ಅಕ್ಕಿ ಹಿಟ್ಟು ಮಾಡುವಾಗ ಬಳಸುತ್ತಿದ್ದರು. a variety of tuber. ವಾ: ದೋಸೆ ಮಾಡ್ಕನ ಉದುರಿಗೆಂಡೆ ಹಾಕಿ ಕಡ್ದರೆ ಹಿಟ್ಟ್ ಬೆಳ್ದ್ ಬಂದದೆ.

ಉದುರು */uduru/* ನಾ. 1. ಕೆಳಗೆಬೀಳು, 2. ಬೀಳು. 1. to fall down naturally, 2. to fall. **ಅದ್‌ರದೆ ಉದುರುದಿಲ್ಲ(ನು).** ವಾ: ಗಾಳಿ ಬಂದ್ ಹಣ್ಣ್ ಎಲ್ಲಾ ಉದುರಿಬೀತ್. ಪ: ಉದುರಿಟು – ಉದುರಿದೆ. **ಉದುರುವೆ** */uduruvɛ/* ಉದುರುತ್ತವೆ. will fall. ವಾ: ಪಿಜಿನ್‌ಗ ಮರಂದ ಉದುರುವೆ. **ಉದುರುಸು** */udurusu/* 1. ಕೆಳಗೆ ಬೀಳಿಸು, 2. ಉದುರಿಸು. 1. to cause the fall, 2. to make something fall down using some force. ವಾ: ನಿಂಬುಳಿ ದೈಂದ ಹಣ್ಣಾದರ್‌ನ ಮಾತ್ರ ಉದುರ್‌ಸು. ಪ: ಉದುರ್‌ಸು – ಉದುರಿಸು; ಉದ್ರಿತ್ – ಉದುರಿತು; ಉದ್ರುಸು – ಉದುರಿಸು

ಉದ್ಕ */udka/* ನಾ. 1. ಸಾಂಬಾರು, 2. ಸಾರು. a lentil based vegetable soup/stew/broth, cooked with tamarind and usually eaten with rice – as in rice and sambar. ವಾ: ಎಂತ ಉದ್ಕ ಮಾಡ್‌ದ್.

ಉದ್ಗಾಟನೆ */udga:ṭanɛ/* ನಾ. 1. ಉದ್ಘಾಟನೆ, 2. ತೆರೆಯುವಿಕೆ, 3. ಪ್ರಕಟಿಸುವಿಕೆ. 1. inauguration, 2. to open, 3. to publish. ವಾ: ಗೌಡ ಸಮಾಜ ಉದ್ಗಾಟನೆ ಮಾಡಿಕೆ ಮಿನಿಸ್ಟ್ರ್ ಬಂದಿದ್ದೊ.

ಉದ್ಗಿಲ್ */udgiḷi/* ನಾ. 1. ಮರ ಅಥವಾ ಬಿದಿರಿನಿಂದ ಮಾಡಿದ ದ್ವಾರ, 2. ರಟ್ಟೆ ಗಾತ್ರದ ಬಿದಿರು ಅಥವಾ ಮರವನ್ನು ಅಡ್ಡ ಹಾಕಿರುವುದು. 1. a door/an entrance made of wood or bamboo, 2. a barrier made out of thick bamboo or logs of wood. ವಾ: ದನಗ ಉದ್ಗಿಲ್ ಹಾರಿ ಬಂದವೆ.

ಉದ್ದ */udda/* ನಾ. 1. ಉದ್ದ, 2. ದೀರ್ಘತೆ, 3. ಎತ್ತರ, 4. ನೀಳ, 5. ಆಳ, 6. ಲಂಬ. 1. long, 3. lengthy, 3. high, 4. tall, 5. deep, 5. perpendicular. ವಾ: ಹಾವ್ ಬಾರಿ ಉದ್ದ ಇತ್ತ್. ಪ: ಉದ್ದಕೂ(ಉದ್ದೊಕು) – ಉದ್ದಕ್ಕೂ; ಉದ್ದಂದ – ಉದ್ದದಿಂದ; ಉದ್ದದ್ – ಉದ್ದದ್ದು

ಉದ್ದ ಕಡ್ಂಬಿಟ್ಟ್ */udda kaḍimbiṭṭi/* ನಾ. 1. ಆಕಾರದಲ್ಲಿ ಉದ್ದನೆಯ ಕಡುಬು, 3. ತಿಥಿಯಲ್ಲಿ ಮಾತ್ರ ಕಡುಬನ್ನು ಉದ್ದವಾಗಿ ಮಾಡಲಾಗುತ್ತದೆ. 1. a

variety of rice cake, 2. a rice cake prepared on the death anniversary. ವಾ: ಉದ್ದ ಕಡ್ಂಬಿಟ್ಟ್‌ನ ತಿತಿಲಿ ಮಾತ್ರ ಮಾಡಿವೆ.

ಉದ್ದಗುಡ್ಡ /*uddaguḍḍa*/ ನಾ. ಉದ್ದ ಗಿಡ್ಡ. long and short. ವಾ: ನಿನ್ನ ಸಾಕ್ಸ್ ನೋಡ್ ಒಂದ್ ಉದ್ದ ಒಂದ್ ಗುಡ್ಡ ಆಗುಟು. **ಉದ್ದಗುಡ್ಡು** /*uddaguḍḍu*/ ವಾ: ಈ ಹಗ್ಗ ಉದ್ದ ಗುಡ್ಡು ಆಗೋವ್ಟು.

ಉದ್ದನೋಡ್[1] /*uddanɔ:ḍɨ*/ ನಾ. ಮೇಲೆ ನೋಡು. to look up. ವಾ: ಒಮ್ಮೆ ಹಂಗೆ ಉದ್ದ ನೋಡ್.

ಉದ್ದನೋಡ್[2] /*uddanɔ:ḍɨ*/ ನಾ. ಅಸಹಾಯಕತೆ. helplessness. ವಾ: ತೋಟಕೆ ರೋಗ ಬಂದರೆ ಉದ್ದ ನೋಡೊಕಷ್ಟೆ.

ಉದ್ದ ಸ್ವಾಂತೆ /*udda sva:ntɛ*/ ನಾ. ಉದ್ದವಾಗಿರುವ ಸೌತೆಕಾಯಿ. cucumber (long). ವಾ: ಉದ್ದ ಸ್ವಾಂತೆ ಒಂದ್ ಇದ್ರೆ ಸಾಕ್ ಹತ್ತ್ ಜೆನ್ರಿಗೆ ಅಡ್ಗೆ ಮಾಡಿ ಇಕ್ಕಕ್.

ಉದ್ದಂತಡ್ಕ /*uddantaḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮಂಡೆಕೋಲು ಗ್ರಾಮದ ಜಾಗ. a locality in Mandekolu village in Sullia Taluk of Dakshina Kannada District.

ಉದ್ದಂಪಾಡಿ /*uddampa:ḍi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಐವರ್ನಾಡು ಗ್ರಾಮದ ಜಾಗ. a locality in Aivarnadu village in Sullia Taluk of Dakshina Kannada District.

ಉದ್ದಿಸ್ /*uddisɨ*/ ಕ್ರಿ. ಒರೆಸಿಡು. to wipe. ವಾ: ಮೇಜದ ಮೇಲಿರೊ ದೂಳ್‌ನ ಅರ್ವೆ ತಕಂಡ್ ಉದ್ದಿಸ್. ಪ: ಉಜ್ಜಿಸು

ಉದ್ದು[1] /*uddu*/ ನಾ. 1. ಉದ್ದು ಎಂಬ ದ್ವಿದಳ ಧಾನ್ಯ, 2. ಹುಳಿ ಹಿಟ್ಟು ಮಾಡಲು ಅಕ್ಕಿಯ ಜೊತೆ ಬಳಸುತ್ತಾರೆ. 1. pulses used with rice to make dosa, idli etc. Black gram, 2. Black lentils, Black gram. **ಉದ್ದ್ ಮದ್ದಲ್ಲ(ಗಾ).** ವಾ: ದೋಸೆ, ಇಡ್ಲಿಗೆ ಉದ್ದು ಹಾಕಿವೆ. ಪ: ಉದ್ದ್‌ನ ಬೇಳೆ – ಉದ್ದಿನ ಬೇಳೆ

ಉದ್ದು[2] /*uddu*/ ನಾ. 1. ತಿಕ್ಕು 2. ಉಜ್ಜು. 1. to rub, 2. to scrub. ವಾ: ನೆಲನ ಲಾಯ್ಕಲಿ ಉದ್ದು.

ಉದ್ರಾಂಡಿಗುಡ್ಡೆ /*udra:ɳḍiguḍḍe*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಎಡಮಂಗಲ ಗ್ರಾಮದ ಜಾಗ. a locality in Edamangala village in Sullia Taluk of Dakshina Kannada District.

ಉದ್ರಿ /*udri*/ ನಾ. 1. ಉದುರಿ, 2. ಕಳಚಿ ಬೀಳು, 3. ಕೆಳಗೆ ಬೀಳು, 4. ಬಿಡಿಬಿಡಿಯಾಗು. 1. dropped, 2. discend, 3. to fall down, 4. to split into parts. ವಾ: ಗಾಳಿಗೆ ಮರದ ಎಲೆಗೆಲ್ಲ ಉದ್ರಿ ಬೋಳಾತ್. ಪ: ಉದ್ರು(ಉದ್ರ್) – ಉದುರು; ಉದುರು – ಉದುರು; ಉದುರ್‌ದು – ಉದುರುವುದು

ಉಪಕತೆ /*upakatɛ*/ ನಾ. 1. ಒಳಗಿನ ಕಥೆ, 2. ಚಿಕ್ಕ ಕಥೆ, 3. ಅಡ್ಡ ಕಥೆ, 4. ಮುಖ್ಯವಾದ ಕಥೆಯ ನಡುವೆ ಬರುವ ಸಣ್ಣ ಕಥೆ. 1. an inside story, 2. a small story, 3. a parallel story, 4. a subplot within the main story. ವಾ: ಕತೆಲೊಂದ್ ಉಪಕತೆ ಇದ್ದದೆ.

ಉಪಕಾರಿ /*upaka:ri*/ ನಾ. ಉಪಕಾರ ಮಾಡಿದವನು. a benefactor. **ಮನೆಗೆ ಮಾರಿ ಊರಿಗೆ ಉಪಕಾರಿ(ಗಾ).** ವಾ: ಅಂವ ಬಾರಿ ಉಪಕಾರಿ ಮೊನ್‌ಸ.

ಉಪದ್ರ /*upadra*/ ನಾ. ಕಿರುಕುಳ, ತೊಂದರೆ. 1. to disturb, 2. to trouble. **ಉಪಕಾರ ಮಾಡದಿದ್ದರು ಉಪದ್ರ ಮಾಡ್ಬಡಿ(ಗಾ).** ವಾ: ಯಾರಿಗು ಉಪದ್ರ ಮಾಡಿಕಾದ್.

ಉಪಾಯ /*upa:ya*/ ನಾ. 1. ಉಪಾಯ, 2. ಯುಕ್ತಿ. 1. a plan, 3. a clever trick. ವಾ: ಉಪಾಯಲಿ ಅಪ್ಪನ ಹಕ್ಕಲೆ ದುಡ್ಡ್ ಪೀಕ್ಸಿಕಂಡ್ ಬುಟ್ಟಿಯಲಾ.

ಉಪಾಸ /*upa:sa*/ ನಾ. 1. ಉಪವಾಸ, 2. ಆಹಾರ ನೀರು ಸೇವಿಸದಿರುವುದು, 3. ಹಸಿದಿರುವುದು, 4. ಊಟ ಮಾಡದಿರುವುದು. 1. fasting, 2. to abstain from food and water, 3. to remain hungry, 4. not having food. **ಇರ್‌ಕನ ಹಬ್ಬ, ಇಲ್ಲದಿರ್‌ಕನ ಉಪಾಸ(ಗಾ). ಉಳ್ಸಿಕಾಗಿ ಉಪಾಸಬೇಡ(ನು).** ವಾ: ಪೂಜೆ ಮಾಡಿ ಉಪಾಸ ಮಾಡ್ದು, ಆಗಾಗ ಉಪಾಸ ಮಾಡಿರೆ ಆರೋಗ್ಯಕೆ ಒಳ್ಳೆದ್. ಪ: ಉಪಾಸನೆ – ಉಪವಾಸವೆ

ಉಪ್ಕಲ್ /*upkalɨ*/ ನಾ. 1. ಕಲ್ಲುಪ್ಪು, 2. ಹರಳು ಉಪ್ಪು. 1. rock salt, 3. crystal salt. ವಾ: ಗೈಪುಗೆ ಎರ್‌ಡ್ ಉಪ್ಕಲ್ ಹಾಕ್.

ಉಪ್ಕಾರ /*upka:ra*/ ನಾ. 1. ಉಪಕಾರ, 2. ಸಹಾಯ, 3.

ನೆರವು. 1. help, 2. assistance, 3. benefaction. ವಾ: ಎಸ್ಟೆ ಬಜ್ಜ ಬಂದರು ಉಪಕಾರ ಮಾಡ್ದವರ ಮರೆಕಾಗದ್.

ಉಪ್ಚಾರ /*upca:ra*/ ನಾ. 1. ಉಪಚಾರ, 2. ಸೇವೆ, 3. ಚಿಕಿತ್ಸೆ. 1. courteous treatment, 2. service, 3. treatment. ವಾ: ಮಲ್ಗಿದಲ್ಲೆ ಆದ ಗಂಡನ ಬಾರಿ ಲಾಯ್ಕ ಉಪ್ಚಾರ ಮಾಡ್ದೆ.

ಉಪ್ಪಂಗಳ /*uppaŋgaḷa*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಬೆಳ್ಳಾರೆ ಗ್ರಾಮದ ಜಾಗ. a locality in Bellare village in Sullia Taluk of Dakshina Kannada District.

ಉಪ್ಪಣ /*uppaṇa*/ ನಾ. ಒಣಗಿಸಿದ ಮಾಂಸ. dried meat. ವಾ: ಪಂಡ್‌ಲಿ ಕಡ್ಡೆವೆ ಮಾಸನ ಉಪ್ಪಣ ಮಾಡ್ತಿದ್ದೊ.

ಉಪ್ಪಣ ಬೊಡ್ಡ /*uppaṇa boḍḍa*/ ನಾ. ಮಲೆನಾಡಿನಲ್ಲಿ ಕಂಡುಬರುವ ಹಕ್ಕಿ. a bird found in the malnad regions. ವಾ: ಮಲೆನಾಡ್ ಲಿ ಉಪ್ಪಣ ಬೊಡ್ಡ ಕಾಂಬಕೆ ಸಿಕ್ಕುದು.

ಉಪ್ಪನಕಾಯಿ /*uppanaka:yi*/ ನಾ. 1. ಉಪ್ಪಿನ ಕಾಯಿ, 2. ಉಪ್ಪು, ಮೆಣಸು ಹಾಕಿದ ಮಾವಿನ ಅಥವಾ ನಿಂಬೆಯ ಹೋಳಿಕೆ. 1. pickle, 2. pieces of mango and lemon mixed in salt and pepper. **ಊಟಕಿಲ್ಲದ ಉಪ್ಪನಕಾಯಿ ಎಂತಕಿರ್ದು(ಗಾ). ಊಟಕ್ಕಿಲ್ಲದ ಉಪ್ಪನಕಾಯಿ(ನು).** ವಾ: ಒಳ್ಳ ಉಂಬಕೆ ಉಪ್ಪನಕಾಯಿ ಇದ್ದರೆ ಸಾಕ್. ಪ: ಉಪ್ನಕಾಯಿ – ಉಪ್ಪಿನಕಾಯಿ

ಉಪ್ಪರಿಗೆ /*upparigɛ*/ ನಾ. 1. ಅರಮನೆ, 2. ಮೇಲು ಮಾಳಿಗೆ, 3. ಮಹಡಿಯ ಸೌಧ, 4. ಮೇಲಂತಸ್ತು. 1. a palace, 2. a balcony, 3. an upper storey, 4. upper floor. **ಉಪ್ಪರಿಗೆ ಮನೆ ಇದ್ದರೂ ಉಪ್ಪಿಲ್ಲದೆ ಊಟ ಇಲ್ಲೆ(ಗಾ).** ವಾ: ದಸರ ಅಂಬಾರಿನ ನೋಡಿಕೆ ಜೆನ ಉಪ್ಪರಿಗೆಲಿ ಕುದ್ದವೆ. ಪ: ಉಪ್ಪುರಿಗೆ – ಒಲೆಯ ಮೇಲಿನ ಜಾಗ; ಉಪ್ಪುರಿಗೆ – ಪಲ್ಲಕ್ಕಿ/ ಸಿಂಹಾಸನ;

ಉಪ್ಪರ್ ಬೈಟ್ /*uppari baiṭi*/ ನಾವಿ. 1. ಉಪಾಯ, 2. ಯುಕ್ತಿ. 1. a plan, 3. a clever trick. ವಾ: ಹೆಂಗಾರ್ ಉಪ್ಪರ್ ಬೈಟ್ ಮಾಡಿ ತನ್ನ ಕೆಲ್ಸ ಮಾಡಿಸಿಕಂಬದು.

ಉಪ್ಪಳಿಕೆ /*uppaḷikɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಉಪ್ಪಳಿಕೆ ಮರ /*uppiḷikɛ mara*/ ನಾ. ಒಂದು ವಿಧದ ಮರ. a tree. ವಾ: ಉಪ್ಪಳಿಕೆ ಮರದ ಸೊಪ್ಪುಲಿ ಮೂಡಿಟ್ಟ್ ಮಾಡಿವೆ. ಪ: ಉಪ್ಪೊಳಿಕೆ

ಉಪ್ಪಿಟ್ಟ್ /*uppiṭṭi*/ ನಾ. 1. ಉಪ್ಪಿಟ್ಟು, 2. ರವೆಯಿಂದ ಮಾಡಿದ ತಿನಿಸು, 3. ಸಜ್ಜಿಗೆ. 1. upma, 2. a dish made of semolina. ವಾ: ಅಕ್ಕಿ ತರಿ ಉಪ್ಪಿಟ್ಟ್ ಮಾಡೊಕ.

ಉಪ್ಪಿನಂಗಡಿ /*uppinaŋgaḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಉಪ್ಪು /*uppu*/ ನಾ. 1. ಉಪ್ಪು, 2. ಲವಣ. 1. salt, 2. crystalline sodium chloride. **ಉಪ್ಪು ಹಾಕಿದರ್ನ, ಮುಪ್ಪುವರೆಗೂ ಮರಿಬಡ(ಗಾ).** ವಾ: ರುಚಿ ಬಾಕೆ ಎಲ್ಲದಕು ಉಪ್ಪು ಬೇಕೆ ಬೇಕ್. ಪ: ಉಪ್ಪ್ – ಉಪ್ಪು

ಉಪ್ಪು ಗೋಳಿ ಮರ /*uppu go:ḷi mara*/ ನಾ. ಮರದ ಹೆಸರು. a tree. ವಾ: ಉಪ್ಪು ಗೋಳಿ ಮರ ಬಾರಿ ದೊಡ್ಡದಿದ್ದದೆ, ಕಲ್ಲುಪ್ಪಸ್ಟೇ ದೊಡ್ಡದ್ ಅದರ ಹಣ್ಣ್.

ಉಪ್ಪು ತೋಳೆ /*uppu to:ḷɛ*/ ನಾ. ಹಲಸಿನ ಹಣ್ಣಿನ ತೋಳೆಯನ್ನು ಕೆಡದಂತೆ ಉಪ್ಪಿನಲ್ಲಿ ಹಾಕಿ ಇರಿಸುವುದು. preserving jackfruit slices/pods in salt. ವಾ: ಹಲ್‌ಸ್‌ನ ತೊಳೆನ ಹಾಳಾಗದಂಗೆ ಉಪ್ಪು ತೋಳೆ ಮಾಡಿಸುವೆ.

ಉಪ್ಪು ಪಚ್ಯ /*uppu pacya*/ ನಾ. ಉಪ್ಪನ್ನು ತುಂಬಿಸಿ ಇಡುವ ಬಿದಿರಿನ ಪಾತ್ರೆ. a bamboo jar to store salt. ವಾ: ಉಪ್ಪು ಪಚ್ಯನ ಎಲ್ಲಿಸಿದ?

ಉಪ್ಪುಂಡಿರ /*uppuṇḍira*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಉಪ್ಪುಕರಿ /*uppukari*/ ನಾ. 1. ಉಪ್ಪು, ತೆಂಗಿನಕಾಯಿ ಹುರಿ ಹಾಕಿ ಎಣ್ಣೆಯಲ್ಲಿ ಕರಿದ ಪದಾರ್ಥ, 2. ಉಪ್ಪಗರಿ. 1. a stir fried side dish using coconut, salt. etc, 2. a stir fry. ವಾ: ಉಪ್ಪುಕರಿ ತಿಂಬಕೆ ಬಾರಿ ಲಾಯ್ಕ.

ಉಪ್ಪುಕಳ /*uppukaḷa*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಬಾಳುಗೋಡು ಗ್ರಾಮದ ಜಾಗ. a locality in

Balagodu village in Sullia Taluk of Dakshina Kannada District.

ಉಪ್ಪುಕುಳಿ /*uppukuḷi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಉಪ್ಪುಗುತ್ತಿ /*uppugutti*/ ನಾ. ಬಿದಿರಿನಿಂದ ಮಾಡಿದ ಉಪ್ಪು ಹಾಕಿಡುವ ಸಾಧನ. a bamboo jar to store salt. ವಾ: ಹಿಂದೆಲ್ಲ ಉಪ್ಪುನ ಉಪ್ಪುಗುತ್ತಿಲೆ ಹಾಕಿಸ್‌ತಿದ್ದೊ.

ಉಪ್ಪುಗೋಣಿ /*uppugo:ṇi*/ ನಾ. ಜನಪದ ಆಟ. a folk game.

ಉಪ್ಪುಟೀಂಟಿ /*upputi:ṇṭi*/ ನಾ. ತಿಥಿ ತಿಥಿ ಎಂದು ಶಬ್ದ ಮಾಡುವ ಹಕ್ಕಿ. ಈ ಪಕ್ಷಿ ಕೂಗಿದರೆ ಅಪಶಕುನವೆಂದು ಭಾವಿಸಲಾಗುತ್ತದೆ. ಆಕಾಶ ಬಿದ್ದರೆ ತಡೆಯಲೆಂದು ಅದು ಕಾಲುಗಳನ್ನು ಮೇಲೆ ಮಾಡಿ ಮಲಗುವುದಂತೆ!. lapwing bird. ವಾ: ಹೊತಾರೆನೆ ಉಪ್ಪುಟೀಂಟಿ ಕೂಂಗಿದೆ ಎಂತ ಸುದ್ದಿ ಕೇಳಿಕಾದೆನೊ. ಪ: ಉಪ್ಪುಟೀಂಟಿ – ಮೈನಾ ಪಕ್ಷಿ

ಉಪ್ಪುಸುಂಟಿ[1] /*uppusuṇṭi*/ ನಾ. ಹೊಸ ಅಕ್ಕಿ ಊಟದ ಸಮಯದಲ್ಲಿ ಬಡಿಸುವ ಉಪ್ಪು. salt served during the feast of newly harvested rice. ವಾ: ಹೊಸ್ತ್‌ಉಂಬಕನ ಸುರೂಗೆ ಇಕ್ಕುದು ಉಪ್ಪುಸುಂಟಿ.

ಉಪ್ಪುಸುಂಟಿ[2] /*uppusuṇṭi*/ ನಾ. ಉಪ್ಪಿನಲ್ಲಿ ಒಣಗಿಸಿದ ಶುಂಠಿ. ಬಾಯಲ್ಲಿರಿಸಿಕೊಂಡರೆ ಕೆಮ್ಮು ದೂರವಾಗುತ್ತದೆ. salted dry ginger, used to drive out cough. ವಾ: ಉಪ್ಪುಸುಂಟಿ ತಿಂದರೆ ಕಪ ಕಮ್ಮಿ ಆದೆ.

ಉಪ್ಪೆಮಣೆ /*uppɛmaṇɛ*/ ನಾ. ಭತ್ತ, ಅಡಿಕೆ ಇತ್ಯಾದಿಗಳನ್ನು ರಾಶಿ ಮಾಡಲು ಉಪಯೋಗಿಸುವ ಸಾಧನ. a tool to gather paddy, areca nut, etc. ಪ: ಇಪ್ಪೆಮಣೆ

ಉಪ್ಪ್ ಮೀನ್ /*upp mi:ni*/ ನಾ. 1. ಒಣಗಿದ ಮೀನು, 2. ಸಮುದ್ರದ ಮೀನು. 1. dried fish, 2. sea fish. ವಾ: ಉಪ್ಪ್ ಮೀನ್ ಗೈಪಿಗಿಂತ ಹೊರ್‌ಯಕೆ ಒಳ್ಳದ್.

ಉಪ್ಮಣೆ /*upmaṇɛ*/ ನಾ. ಅಡಿಕೆ/ಭತ್ತ ರಾಶಿ ಮಾಡುವ ಸಾಧನ. hoarding areca nut. ವಾ: ಇಜ್ಜಾಲಿಲಿ ಹರ್‌ಗಿದ ಅಡ್ಕೆನ ಉಪ್ಮಣೆಲಿ ರಾಸಿ ಮಾಡುದು.

ಉಪ್ಮೆಣ್ಸ್ /*upmɛṇsi/ upmɛnsi*/ ನಾ. ಈರುಳ್ಳಿ, ಉಪ್ಪು ಖಾರ ಹಾಕಿ ಮಾಡಿದ ಸಾಂಬರು. a soup/stew made of onion, salt, and spices. ವಾ: ಕಿತ್ತುಳಿ ಉಪ್ಮೆಣ್ಸ್ ಬಾರಿ ಲಾಯ್ಕ. ಪ: ಉಪ್ಮೆಣ್ಸ್ – ಉಪ್ಪು ಹುಳಿ ಮೆಣಸಿನ ರಸ

ಉಪ್ರಿಕೆ /*uprikɛ*/ ನಾ. ಉಪ್ಪರಿಗೆ, ಎತ್ತರದಲ್ಲಿ ಕುಳಿತುಕೊಳ್ಳುವುದು. 1. attic, 2. sitting on a raised platform. ವಾ: ತೆರೆ ಹಬ್ಬಲಿ ರಾತ್ರೆ ಜೆನ ಉಪ್ರಿಕೆಲಿ ಕುದ್ದುರ್‌ದು.

ಉಪ್ಳಿಕೆ /*upḷikɛ*/ ನಾ. 1. ಉಪ್ಪರಿಗೆ ಮನೆ, 2. ಮಹಡಿ, 3. ಮೇಲಂತಸ್ತು. 1. a multiple storeyed house, 2. upper floor, 3. upper storey. ವಾ: ಆಗಾಗ ಉಪ್ಳಿಕೆಗೆ ಹತ್ತಿ ಇಳಿಕೆ ಬೊತ್ತ್. ಪ: ಉಪ್ಪಳಿಕೆ – ಉಪ್ಪರಿಗೆ

ಉಬರಡ್ಕ /*ubaraḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಉಬರಡ್ಕ ಮಿತ್ತೂರು ಗ್ರಾಮದ ಜಾಗ. a locality in Ubaradka Mitturu village in Sullia Taluk of Dakshina Kannada District.

ಉಬರ್ /*ubari*/ ನಾ. 1. ಮೇಲಕ್ಕೇರಿ, 2. ಮಳೆಗಾಲದಲ್ಲಿ ನೀರು ಉಕ್ಕೇರಿದಾಗ ನದಿಯಿಂದ ಮೀನುಗಳು ನೀರಿನ ಇತರ ಮೂಲಗಳ ಮೂಲಕ ಮೇಲೆ ಬರುವುದು. 1. climbing up, 2. fish emerging out of flooded river and other water bodies during monsoon. ವಾ: ಹಳ್ಳಂದ ಮೀನ್‌ಗ ಗದ್ದೆಗೆ ಉಬರ್ ಹತ್ತಿಯೊಳೊ. **ಉಬರ್ ಮೀನ್** /*ubar mi:n*/ ಮಳೆಗಾಲದಲ್ಲಿ ಭಾರಿ ಮಳೆ ಬಂದಾಗ ಮೊಟ್ಟೆ ಇಡಲು ಮೀನುಗಳು ಹೊಳೆಗಳಿಂದ ಚಿಕ್ಕ ಪುಟ್ಟ ತೋಡುಗಳ ಮುಖಾಂತರ ಮೇಲಕ್ಕೆ ಸಾಗುವುದು. fish returning to their habitats to lay eggs after the first rain. ವಾ: ಮಳ್ಗಾಲಲಿ ಗದ್ದೆಗೆ ಉಬರ್ ಮೀನ್ ಬಾದು.

ಉಬೈಲ /*ubaila*/ ನಾ. 1. ಹೊಗಳಿ, 2. ಮುಖಸ್ತುತಿ ಮಾಡಿದಾಗ ಮಾನಸಿಕವಾಗಿ ಉತ್ತೇಜನ ಗೊಳ್ಳುವವ. 1. to flatter, 2. go get flattered. ವಾ: ಹೊಗಳಿಕನ ಉಬೈಲ ಆತ್.

ಉಬ್ಬುಲು /*ubbulu*/ ನಾ. 1. ಮರ ಅಥವಾ ಬಿದಿರಿನಿಂದ ಮಾಡಿದ ದ್ವಾರ, 2. ರಟ್ಟೆ ಗಾತ್ರದ ಬಿದಿರು ಅಥವಾ

ಮರವನ್ನು ಅಡ್ಡ ಹಾಕಿರುವುದು. 1. a door made of either wood or bamboo, 2. a barrier made of think bamboo or wooden logs. ವಾ: ದನಗ ಉಬ್ಬುಲು ಹಾರಿ ಬಂದವೆ. ಪ: ಉಬ್ಬುಲ್ – ಬಿದಿರಿನ ದ್ವಾರ; ಉಬ್ಬ್‌ಲ್/ಉಬ್ಬುಲ್ – ಬಿದಿರಿನ ದ್ವಾರ,ಬಿದಿರಿನಿಂದ ತಯಾರಿಸಲಾದ ತಡೆಬಾಗಿಲು

ಉಬ್ಬೆನಾರ್ದು /*ubbɛna:rdu*/ ನಾ. ಊಟ ಮಾಡಿ ಹೆಚ್ಚಾದಾಗ ಬಳಸಲಾಗುತ್ತದೆ. used after eating excess food. ವಾ: ಉಬ್ಬೆನಾರ್ದು ಆದಂಗೆ ಆತ್.

ಉಬ್ಬೆಲ /*ubbɛla*/ ನಾ. 1. ಹೊಗಳಿಕೆ, 2. ಹೊಗಳಿಕೆಗೆ ಉತ್ತೇಜನಗೊಳ್ಳು. 1. to praise, 2. to get flattered when praised. ವಾ: ಹೊಗಳ್‌ಕನ ಮೋರೆ ಉಬ್ಬೆಲ ಆಗೋತ್.

ಉಬ್ಬೆಸ /*ubbɛsa*/ ನಾ. 1. ಗೂರಲು ರೋಗ, 2. ದಮ್ಮು, 3. ಸಂಕಟ, 4. ಮೇಲುಸಿರು, 5. ಹೊಟ್ಟೆ ತುಂಬ ಊಟ ಮಾಡಿದಾಗ ಆಗುವ ಸಂಕಟ. 1. wheezing, 2. asthmatic, 3. distress, 4. panting, 5. dyspnea. ವಾ: ಉಂಡದ್ ಹೆಚ್ಚಿ ಆಗಿ ಉಬ್ಬೆಸನಂಗೆ ಆದೆ. ಪ: ಉಬ್ಬಸ – ಉಬ್ಬಸ

ಉಬ್ಬ್ /*ubbɨ*/ ನಾ. 1. ಉಬ್ಬು, 2. ಸಂತೋಷ, 3. ಬಾವು. 1. to swell, 2. happiness, 3. swelling. ವಾ: ಹೊಟ್ಟೆ ಉಬ್ಬಿಟು. ಪ: ಉಬ್ಬುದು – ಉಬ್ಬುವಿಕೆ; ಉಬ್ಬುರ್ಸುದು – ಉಬ್ಬರಿಸುವುದು; ಉಬ್ಬಿಕೊಂಡ್ – ಉಬ್ಬಿಕೊಂಡು

ಉಬ್ರಾಳ /*ubra:ḷa*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಬಾಳಗೋಡು ಗ್ರಾಮದ ಜಾಗ. a locality in Balagodu village in Sullia Taluk of Dakshina Kannada District.

ಉಮಿ /*umi*/ ನಾ. ಭತ್ತದ ಹೊಟ್ಟು, ಉಮ್ಮಿ. rice hulls or rice husk. **ಉಮಿ ಮಿದ್ದ್ ಕೈ ದಡ್ಡ್ ಮಾಡಿಕಂಡಂಗೆ(ಗಾ).** ವಾ: ಬತ್ತ ಮಿಜ್ಯಕನ ಉಮಿ ಸಿಕ್ಕಿದೆ.

ಉಮಿಕರಿ /*umikɛri*/ ನಾ. ಭತ್ತದ ಸಿಪ್ಪೆಯಿಂದ ಮಾಡಿದ ಕರಿ ಇದನ್ನು ಗೊಬ್ಬರವೆನ್ನುವರು. soot of the husk, used as manure. ವಾ: ಉಮಿಕರಿ ಮಾಡಿ ಉಪ್ಪು ಹಾಕಿಸಿರೆ ಹಲ್ಲುಜ್ಜಿಕೆ ಒಳ್ಳೆದಾದೆ.

ಉಮಿಕ್ಕಳ /*umikkaḷa*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಬೆಳ್ಳಾರೆ ಗ್ರಾಮದ ಜಾಗ. a locality in Bellare village in Sullia Taluk of Dakshina Kannada District.

ಉಮೇದ್ /*umɛ:dɨ*/ ನಾ. 1. ಉತ್ಸಾಹ, 2. ಆಸಕ್ತಿ, 3. ಹುರುಪು. 1. interest. 2. motivation, 3. spirit. ವಾ: ಓದುವ ವಿಸ್ಯಲಿ ಅಂವನ ಉಮೇದ್ ನೋಡೊಕು.

ಉಮ್ಮ ಕೊಡು /*umma kɔ:ḍu*/ ನಾ. 1. ಮಕ್ಕಳ ಜೊತೆ ಮುತ್ತು ಕೇಳುವುದು, 2. ಮುದ್ದು. 1. asking for a kiss from children, 2. showing affection. ವಾ: ಒಂದ್ ಉಮ್ಮ ಕೊಡುನೆ ಕೂಸು.

ಉಮ್ಮ[1] /*umma*/ ನಾ. ಮುತ್ತು (ಮಕ್ಕಳ ಪದ). kiss (in the vocabulary of children). ವಾ: ಮಕ್ಕ ಆಡಿಕನ ಉಮ್ಮ ಕೊಟ್ಟ್ ಕಂಬದು.

ಉಮ್ಮ[2] /*umma*/ ಅ. ಗೊತ್ತಿಲ್ಲ. do not know. ವಾ: ಉಮ್ಮ ನಂಗೆ ಗೊತ್ತ್‌ಲೆ. **ಉಮ್ಮಪ್ಪ** /*ummappa*/ 1. ಗೊತ್ತಿಲ್ಲ, 2. ನನಗೇನು ಆ ಬಗ್ಗೆ ತಿಳಿದಿಲ್ಲ. 1. I don't know, 2. I don't know anything about it. ವಾ: ಅಂವ ಎಂತ ಹಂಗೆ ಕೆಮಿಲಿ ಪಿಸಿ ಪಿಸಿ ಹೇಳ್ದ್ ಉಮ್ಮಪ.

ಉಮ್ಮಕ್ಕ /*ummakka*/ ನಾ. ವ್ಯಕ್ತಿ ಹೆಸರು, ಸ್ತ್ರೀ ವಾಚಕ. feminine given name.

ಉಮ್ಮಡ್ಕ /*ummaḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಮರಪಡ್ನೂರು ಗ್ರಾಮದ ಜಾಗ. a locality in Amarapadnuru village in Sullia Taluk of Dakshina Kannada District.

ಉಮ್ಮತ್ತ /*ummatta*/ ನಾ. 1. ಒಂದು ಔಷಧಿಯ ಸಸ್ಯ, 2. ಕಪ್ಪಾಟ್ರಾಯಕ್ಕೆ ಚಿಕಿತ್ಸೆ ನೀಡಲು ಇದರ ಎಲೆಯನ್ನು ಅರೆದು ಲೇಪಿಸುತ್ತಾರೆ ಹಾಗೂ ಕುಡಿಯಲು ನೀಡುತ್ತಾರೆ, 3. ದತ್ತೂರ. 1. medicinal plant, 2. Flowering Thistle or Gamboge Thistle or Gold Thistle, a medicated plant used in the treatment of mumps, 3. Flowering Thistle. ವಾ: ಉಮ್ಮತ್ತನ ಮೊದ್ದಿಗೆ ಬಳ್‌ಸುವೆ. ಪ: ಉಮ್ಮತನ ದೈ – ಔಷದಿಯ ಸಸ್ಯ/ ದತ್ತೂರ

ಉಮ್ಮತ್ತಾಟ್ /*ummatta:ṭɨ*/ ನಾ. ಕೊಡಗಿನ ಜನಪದ

ಕುಣಿತ. a folk dance form of Kodagu. ವಾ: ಉಮ್ಮತ್ತಾಟ್ ಕೊಡವರ ಸಂಪ್ರದಾಯದ ಕೊಣ್ತ.

ಉಮ್ಮರೆ ಬೊಳ್ಳಿ /*ummarɛ bɔḷḷi*/ ನಾ. 1. ಒಂದು ಕಾಡು ಬಳ್ಳಿ, 2. ಕೆಡ್ಡಸದಂದು ಈ ಬಳ್ಳಿಯ ರಸ ತೆಗೆದು ಬೂದಿಯೊಂದಿಗೆ ಮಿಶ್ರಣ ಮಾಡಿ ನದಿ ಮತ್ತು ತೋಡುಗಳಲ್ಲಿ ಮೀನು ಹಿಡಿಯುವರು. 1. a wild creeper, 2. juice from the creeper is mixed with ash and used during fishing in the ponds and rivers. ವಾ: ಉಮ್ಮರೆ ಬೊಳ್ಳಿದ್ ರಸನ ಮೀನ್ ಹಿಡೆಕೆ ಬಳ್ಸುವೆಗಡ.

ಉಮ್ಮಳ /*ummaḷa*/ ನಾ. ಹೆಚ್ಚು ತಿಂದವರನ್ನು ಹೇಳುವ ಪದ. ಅಹಂಕಾರ ಪ್ರವೃತ್ತಿ. a term used to describe a glutton. ವಾ: ಅವಂಗೆ ತಿಂದ್ ಉಮ್ಮಳ ಆವುಟು. ಪ: ನೆಯ್ಬುಲೆ

ಉಮ್ಮಳ್ಸ್ /*ummaḷsi*/ ನಾ. 1. ಉಮ್ಮಳಿಸು, 2. ಅಳುಮುಖ, 3. ದುಃಖ. 1. a feeling of grief, 2. crying face, 3. sorrow. ವಾ: ಕೂಸು ಉಮ್ಮಳ್ಸಿ ಮರ್‌ಟದೆ.

ಉಮ್ಮಿ ಬೊಳ್ಳಿ /*ummi bɔḷḷi*/ ನಾ. ಒಂದು ಬಗೆಯ ಮದ್ದಿನ ಬಳ್ಳಿ, ಅದನ್ನು ಹೊಸಕಿ ಮೂಗಿಗೆ ಹಿಡಿದರೆ ಖಾರ ಏರುತ್ತದೆ. a medicinal creeper with a strong smell. ವಾ: ಉಮ್ಮಿ ಬೊಳ್ಳಿನ ಮೊದ್ದ್ ಮಾಡಿಕೆ ಬಳ್ಸುವೆ.

ಉಮ್ಮಿಸೂಲೆ /*ummisu:lɛ*/ ನಾ. ಸಣ್ಣ ಜಂತು ಹುಳ. Intestinal worms. ವಾ: ಉಮ್ಮಿಸೂಲೆಗೆ ಮದ್ದ್ ತಕಣಕು.

ಉಮ್ಮುಣಿ /*ummuṇi*/ ನಾ. ಚಿಕ್ಕ ನುಸಿ. tiny mosquito/gnat. **ಉಮ್ಮುಣಿ ತಿಂದ್ ಕುಲಗೆಟ್ಟಾಂಗೆ(ಗಾ).** ವಾ: ಉಂಬಕನ ಉಮುಣಿ ಮೋರೆದ ಹಕ್ಕಲೆ ಬಾದು. ಪ: ಉಮುಲಿ; ಉಂಬುಲಿ(ತು)

ಉಯ್ಯಪಾರ್ /*uyya pa:ri*/ ನಾ. ನೇಗಿಲನ್ನು ನೊಗದೊಂದಿಗೆ ಸಂಪರ್ಕಿಸಲು ಇರುವ ಹಂತ ಹಂತವಾದ ನೇಗಿಲಿನ ಭಾಗ. frame in the plough to connect to yoke. ವಾ: ನೇಗಿಲ್‌ನ ನೊಗದೊಟ್ಟಿಗೆ ಸೇರ್‌ಸಿಕೆ ಉಯ್ಯಪಾರ್ ಬೇಕ್.

ಉಯ್ಯಾಲೆ /*uyya:lɛ*/ ನಾ. 1. ಮಕ್ಕಳು ಆಡುವ ಜೋಕಾಲಿ ಆಟ, 2. ಉಜ್ಜಾಲ್. 1. swing game, 2. a swing. ವಾ: ರಜೆಲಿ ಮರಕೆ ಉಯ್ಯಾಲೆ ಕಟ್ಟಿ ಆಡೊಕು.

ಉರಿ ಬಿಸ್ಲ್ /*uri bisli*/ ನಾವಿ. 1. ಮಟ ಮಟ ಮಧ್ಯಾಹ್ನದ ಬಿಸಿಲು, 2. ಉರಿ ಬಿಸಿಲು. 1. scorching heat of the noon, 2. hot sun. ವಾ: ಈ ಉರಿ ಬಿಸ್‌ಲ್‌ಲಿ ಬಂದರಿಯ? **ಉರಿ ಉಟ್ಟಾಣ ಬಿಸಿಲ್** /*uri uṭṭa:ṉa bisili*/ ಧಗಧಗನೆ ಉರಿವ ಬಿಸಿಲು. unbearable heat of the sun. ವಾ: ಅಬ್ಬ ಉರಿ ಉಟ್ಟಾಣ ಬಿಸಿಲ್ ಹೊರೆಗೆ ಬರಿ ನೆತ್ತಿಲಿ ಹೋದರೆ ಸುಟ್ಟೋದು.

ಉರಿ ಬಂದ್ ಸಾಯದು /*uri bandɨ sa:yadu*/ ನಾವಿ. 1. ತುಂಬ ಗಲಾಟೆ ಮಾಡುವವರಿಗೆ, ತೊಂದರೆ ನೀಡುವವರಿಗೆ ಕೋಪದಿಂದ ಹೇಳುವ ಮಾತು. a term used to describe people who are very noisy and quarrelsome. ವಾ: ಈ ಜೆನಗ ಹೆಂಗೆ ಉರಿಬಂದ್ ಸಾಯದುತ.

ಉರಿ[1] /*uri*/ ಕ್ರಿ. 1. ಸುಡು, 2. ಜ್ವಾಲೆ, 3. ಬೆಂಕಿ, 4. ಕಾವು. 1. to burn 2. flames, 3. fire, 4. heat. ವಾ: ಕೆಂಡ ಮುಟ್ಟಿ ಕೈ ಉರಿ ಉರಿ.

ಉರಿ[2] /*uri*/ ನಾ. 1. ಮತ್ಸರ, 2. ಸಂಕಟ, 3. ಕೆರಳು. 1. hatredness, 2. anxiety, 3. to enrage. ವಾ: ಬಜ್ಜಪಟ್ಟ್ ಬೊದ್‌ಕ್‌ಲಿ ಮುಂದೆ ಬಾಕನ ಜೆನಕ್ಕೆ ಹೊಟ್ಟೆ ಉರಿ ಅದೆ.

ಉರಿಕಣ್ಣ್ /*urikaṇṇi*/ ನಾ. ಕೆಂಗಣ್ಣು. red eye. ವಾ: ಉರಿಕಣ್ಣ್ ಕಣ್ಣಿಗೆ ಬರೊ ಒಂದ್ ಕಾಯಿಲೆ.

ಉರಿಕೊಳ್ಳಿ /*urikoḷḷi*/ ನಾವಿ. 1. ಭಾರಿ ತುಂಟ, 2. ಕಿಡಿಗೇಡಿ, 3. ಅಧಿಕ ಪ್ರಸಂಗಿ. 1. mischievous, 2. overzealous/officious. ವಾ: ಈ ಮಕ್ಕ ಬಾರಿ ಉರಿಕೊಳ್ಳಿಗ.

ಉರಿಜುಂಗ /*urijuŋga*/ ನಾ. ಕಾಫಿಗಿಡಗಳಲ್ಲಿ ಕಾಣಸಿಗುವ ಜುಂಗಿನ ಹುಳ. a worm found in coffee plants. ವಾ: ಉರಿಜುಂಗನ ಮುಟ್ಟಿಕಾಗದ್.

ಉರಿದುಂಡು /*uriduṇḍu*/ ನಾವಿ. 1. ಸಿಡುಕು ಮುಖ, 2. ಕೆರಳಿದ ಮುಖ, 3. ಉರಿಮುಸುಂಡು. 1. an angry face. 2. enraged face. 3. irated face. ವಾ:

ಯಾಗೊಳು ಉರಿದುಂಡ್ ಮಾಡಿಕಂಬದು, ಮೋರೆಲಿ ನೆಗೆನೆ ಕಾಂಬಲೆ.

ಉರಿಬಾತಿದ್ದೊ /*uriba:tiddɔ*/ ಕ್ರಿವಿ. 1. ತೊಂದರೆ ಮಾಡುತ್ತಿದ್ದರು, 2. ಉಪದ್ರವ ನೀಡುತ್ತಿದ್ದರು. 1. were troubling, 2. causing distress. ವಾ: ಬಾರಿ ಉರಿಬಾತಿದ್ದೊ.

ಉರಿಬಾದು /*uriba:du*/ ನಾವಿ. 1. ತುಂಬ ಗಲಾಟೆ ಮಾಡುವುದು, 2. ತೊಂದರೆ ನೀಡುವವರಿಗೆ ಹೇಳುವ ಮಾತು. 1. mischievous , 2. referring to a troublesome person. **ತಾಳಿದಂವ ಬಾಳಿದೆ ಉರಿಬಂದವು ಉಪ್ಪು ನೀರ್ ಕುಡ್ದವೆ(ಗಾ).** ವಾ: ಸುಮ್ಮನೆ ಉರಿಬಾದು.

ಉರಿಮಜಲು /*urimajalu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಹರಿಹರ ಪಲ್ಲತಡ್ಕ ಗ್ರಾಮದ ಜಾಗ. a locality in Harihara Pallatadka village in Sullia Taluk of Dakshina Kannada District.

ಉರಿಮಾರಿ /*urima:ri*/ ನಾ. 1. ಅಹಂಕಾರ ಪಡು, 2. ಬೇರೆಯವರಿಗೆ ತೊಂದರೆ ಕೊಡು. 1. to be arrogant, 2. to trouble someone. ವಾ: ಹುಂಜ ಉರಿಮಾರಿ ಬಂದದೆತ ಕಟ್ಟಿಹಾಕಿದೊ.

ಉರಿಯೊಳು /*uriyɔḷu*/ ನಾ. ಕಾಡು ಪಾಪ. 1. Slender loris, 2. an animal that is bigger than a squirrel. **ಕಾಡಿಗೆ ಹೋಕನ ಉರಿಯೊಳು ಅಡ್ಡ ಬಂದಾಂಗೆ(ಗಾ).** ವಾ: ಈಗೆಲ್ಲ ಉರಿಯೊಳು ಕಾಂಬಕೆ ಸಿಕ್ಕುಲೆ. **ಉರಿಯೋಳು ಮೋರೆ** /*uriyɔ:ḷu mɔ:rɛ*/ ಕಣ್ಣೀರು ಸುರಿಯುತ್ತಿರುವ ಮುಖ. 1. an angry face, 2. a face that indicates an unpleasant mood of person. ವಾ: ಅವ್ಳ ಉರಿಯೋಳು ಮೋರೆ ನೋಡಿಕಾಲೆ.

ಉರಿಯೋಳು /*uriyo:ḷu*/ ನಾ. ಹೊಳೆ ತೋಡುಗಳಲ್ಲಿ ಕಂಡುಬರುವ ಉದ್ದ ಜಾತಿಯ ಮೀನು. a long fish of about one to two feet, usually found in ponds. ವಾ: ಉರಿಯೋಳು ಚೋಡಿಲಿ ಕಾಂಬಕೆ ಸಿಕ್ಕುದು.

ಉರಿಯೋಳ್ /*uriyo:ḷi*/ ನಾ. ಚೇಳು. a scorpion. ವಾ: ಉರಿಯೋಳ್ ಕೊಂಡಿಲೆ ಕೊಡ್ವುದು.

ಉರಿಸೀತ /*urisi:ta*/ ನಾ. 1. ಶೀತವಾದರು ನೆಗಡಿ ಬರದಿರುವುದು, 2. ಉಷ್ಣವಾದಾಗ ಶೀತವಾಗುವುದು. 1. suffering from cold in summer, without running nose, 2. catching cold due to excessive heat. ವಾ: ಉರಿಸೀತ ಆಗುಟು.

ಉರು /*uru*/ ನಾ. 1. ಉರು ಹೊಡೆಯುವುದು, 2. ಬಾಯಿಪಾಠ ಮಾಡು, 3. ಗಟ್ಟಿ ಮಾಡುವುದು, 4. ಕಂಠಪಾಠ ಮಾಡುವುದು. 1. to by heart, 2. memorize, 3. learn by rote, 4. rote learning. ವಾ: ಪದನ ಉರು ಹೊಡೆಯದು.

ಉರುಂಟಿ /*Uruṇṭi*/ ನಾ. 1. ಸಿಡಿಮಿಡಿ, 2. ವಿರೋಧ ಮಾತು, 3. ಉರುಟುತನ. 1. to get agitated, 2. to oppose, 3. to express dissatisfaction. ವಾ: ಅಂವಂದ್ ಒಂತರಾ ಉರುಂಟಿ ಮಾತ್. ಪ: ಪೆದಂಬು.

ಉರುಂಟು /*uruṇṭu*/ ನಾ. 1. ದುಂಡಗಿರುವ, 2. ಉರುಟು. 1. round in shape, 2. round. ವಾ: ಉರುಂಟು ಮೋರೆ.

ಉರುಂಡೆ /*uruṇḍɛ*/ ನಾ. 1. ದುಂಡಗೆ, 2. ಗೋಲಾಕಾರ. 1. round, 2. spherical. ವಾ: ಈ ಕಲ್ಲ್ ಉರುಂಡೆ ಆಗುಟು.

ಉರುಂಬಿ /*urumbi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಉರುಂಬು /*urumbu*/ ನಾ. 1. ಉದುರಿಸು, 2. ಕೈಯಿಂದ ಜಾರಿ ಹೋಗು. 1. to make something fall down, 2. slipped from the hands. ವಾ: ಹಣ್ಣ್ ಕಾಪಿನ ದೈಂದ ಉರುಂಬು. ಪ: ಉರ್ಂಬು – ಉದುರಿಸು; ಉರ್ಂಬುದು – ಎಳೆಯುವುದು

ಉರುಂಬೇಲ್ /*urumbɛ:lɨ*/ ನಾ. 1. ಸಣ್ಣ ಸಣ್ಣ ತುಂಡುಗಳು, 2. ಅರ್ಧಂಬರ್ಧ. 1. small pieces, 2. half done. ವಾ: ಹಸಿ ಹುಲ್ಲುನ ಉರುಂಬೇಲ್ ಮಾಡಿ ದನಗಳಿಗೆ ಹಾಕ್.

ಉರುಜರ /*urujara*/ ನಾ. ಬೇಸರವಾಗು. feeling sad. ವಾ: ಅವರ ಮಾತ್ ಕೇಳಿ ಮನ್ಸಿಗೆ ಉರುಜರ ಆತ್.

ಉರುಟು /*uruṭu*/ ನಾ. 1. ದುಂಡಗಿನ, 2. ಗೋಲಾಕಾರದ. 1. round in shape, 2. round. ವಾ: ಚೆಂಡ್ ಮತ್ತೆ ಬೂಮಿದ್ ಆಕಾರ ಉರುಟು.

ಉರುಡು /*uruḍu*/ ನಾ. ಪರಸ್ಪರ ದೂಡಿಕೊಳ್ಳು, to

complain against each other, accuse. ವಾ: ಅಂಬುಕಾಯಿ ಹಿಡಿಯಕೆ ಜೆನ ಉರುಡುತ್ತಿದ್ದೊ.

ಉರುರು /*ururu*/ ನಾವಿ. ಯಾರು ಇಲ್ಲದ ಭಾವನೆ. feeling of being alone. ವಾ: ಯಾರಿಲ್ಲದೇ ಉರುರು ಆದೆ.

ಉರುವೆ /*uruvɛ*/ ನಾ. ಮಿಡಿ, ಅಡಿಕೆ ಮಿಡಿ. 1. an unripe fruit, 2. tender areca nut, 3. a tender nut. ವಾ: ಅಡ್ಕೆ ಉರುವೆ ಉದುರುದು.

ಉರೊಲಾನಾ /*urola:na:*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಉರ್ಂಬಿ ಓಡ್ /*urimbi o:ḍi*/ ನಾವಿ. ಹಿಡಿತದಿಂದ ತಪ್ಪಿಸಿ ಕೊಂಡು ಹೋಗು. escape from the clutches. ವಾ: ಪೋಲಿಸರ ಹಿಡ್‌ತಂದ ಕಳ್ಳ ಉರುಂಬಿ ಓಡ್‌ತ್.

ಉರ್ಂಬಿಕ /*urimbika*/ ಕ್ರಿ. ಎಳೆದುಕೊ. to pull something towards oneself. ವಾ: ಕಾಪಿ ಹಣ್ಣ್‌ನ ದೈಂದ ಉರ್ಂಬಿಕ.

ಉರ್ಂಬೆಲ /*urmbɛla*/ ನಾ. ಅರ್ಧಂಬರ್ಧ ಕೆಲಸ ಮಾಡುವ ವ್ಯಕ್ತಿ. someone who leaves things unfinished.

ಉರ್ಕು /*urku*/ ನಾ. 1. ತಾಯತ, 2. ಮಂತ್ರಿಸಿದ ಚಿಕ್ಕ ಉರುಟಾದ ಪೆಟ್ಟಿಗೆ. 1. amulet, 2. talisman. ವಾ: ಸೊಂಟಕೆ ಉರ್‌ಕು ಕಟ್ಟಿಕಣಕು. ಪ: ಉರ್ಕ್ ಉದುರಿ ಹೋತ್ – ತಾಯತ ಬಿದ್ದು ಹೋಯಿತು

ಉರ್ಕೊಳಿ /*urkɔḷi*/ ನಾ. ತುಂಟ, ಕೀಟಲೆ. noisy. ವಾ: ಅದ್ ಬಾರಿ ಉರ್ಕೊಳಿ ಹೈದ.

ಉರ್ಕೊಳಿ ಮಕ್ಕ /*urkɔḷi makka*/ ನಾವಿ. ತುಂಬ ಗಲಾಟೆ ಮಾಡುವ ಮಕ್ಕಳು. too noisy children. ವಾ: ಸುಮ್ಮನೆತ ಕುದ್ದಲಿ ಕೂರ್‌ದುಲೆ ಈ ಉರ್ಕೊಳಿ ಮಕ್ಕ.

ಉರ್ಗಿಲ್ /*urgili*/ ನಾ. 1. ಮರ ಅಥವಾ ಬಿದಿರಿನಿಂದ ಮಾಡಿದ ದ್ವಾರ, 2. ರಟ್ಟೆ ಗಾತ್ರದ ಬಿದಿರು ಅಥವಾ ಮರವನ್ನು ಅಡ್ಡ ಹಾಕಿರುವುದು. 1. door made of wood or bamboo, 2. blocking the path using a wooden log or bamboo poles. ವಾ: ದನಗ ಉರ್ಗಿಲ್ ಹಾರಿ ಬಂದವೆ. ಪ: ಉರ್ಗೆಲ್, ಉರುವೆಲ್(ತು)

ಉರ್ಗ್[1] /*urigi*/ ಕ್ರಿ. 1. ಊದು, 2. ಬೆಂಕಿ ಉರಿಸಲು ಊದುವುದು. 1. to blow air to start the fire 2. blowing the fire. **ಕೆಬಿ ಉರ್ಗುದು(ನು). ನೆಲ ಉರ್‌ಗಿ ಮೆದೆ ಒಟ್ಟ್‌ದು – ಹೇಲ್‌ದು(ಒ).** ವಾ: ಕಣ್ಣಿಗೆ ದೂಳ್ ಬಿದ್ದುಟು ಹಳ್ಳ ಉರ್‌ಗು. ಪ: ಉರ್ಗಿ – ಉರುಗಿ, ಉರ್ಗಿರೆ – ಊದಿದರೆ

ಉರ್ಚು /*urcu*/ ನಾ. 1. ಭೇದಿ, 2. ಜುಲಾಬು. 1. a condition of diarrhea, 2. loose, watery stools. ವಾ: ಜೆಗ್‌ಲ್‌ಲಿ ನಾಯಿ ಉರ್‌ಚಿಟು.

ಉರ್ಡ್ /*uriḍi*/ ಕ್ರಿ. 1. ಉರುಳಾಡು, 2. ನೆಲದಮೇಲೆ ಉರುಳಾಡು, 3. ಜನರ ಗುಂಪಿನ ಮಧ್ಯೆ ನುಗ್ಗು. 1. to roll over 2. to roll over on the floor, 3. to rush in the middle of people. ವಾ: ಸಿಟ್ಟ್ ಬಾಕನ ಹೈದ ನೆಲಲಿ ಉರ್‌ಡ್‌ದು. ಪ: ಉರ್ಡಿಕಂಡ್ – ಉರುಳಾಡಿಕೊಂಡು/ಎಳೆದಾಡಿಕೊಂಡು. **ಉರ್ಡಪತ್ತ** /*urḍapatta.*/ 1. ಗುದ್ದಾಟ, 2. ಉರುಡು. 1. to fight or punch someone, 2. to fight/ to quarrel. ವಾ: ಅವು ಹಾಂಗೆ ಒಬ್ಬೊರಿಗೊಬ್ಬ ಉರ್ಡಪತ್ತ ಮಾಡುದು ನೋಡಿಕಾಲೆ. **ಉರ್ಡಾಟ** /*Urḍa:ṭa*/ ಕಿತ್ತಾಟ. fighting. ವಾ: ಅವ್ರ ಉರ್‌ಡಾಟ ಜೋರಾಗುಟು.

ಉರ್ತ /*urta*/ ನಾ. ಮಿತಿಮೀರಿದ ತುಂಟತನ. over mischievousness. ವಾ: ಮಕ್ಕ ಉರ್‌ತ ಬಾಕೆ ಆಗದ್. **ಉರ್ತ ಕೊಳ್ಳಿ** /*urta koḷḷi*/ 1. ವಿಪರೀತ ತುಂಟತನ ಮಾಡುವುದು, 2. ಗಲಾಟೆ ಮಾಡುವುದು. 1. being too mischievous, 2. being noisy. ವಾ: ಆಚೆಮನೆ ಮಕ್ಕ ಬಾರಿ ಉರ್‌ತಕೊಳ್ಳಿಗ.

ಉರ್ತ್[1] /*urtti*/ ಕ್ರಿ. 1. ಉರಿಯಿತು, 2. ಕೋಪಗೊಳ್ಳು. 1. to be in flames, 2. to get angry. ವಾ: ಸೌದೆ ಒಲೆ ಉರ್ತ್. ಪ: ಉರ್ದದೆ – ಉರಿಯುತ್ತದೆ

ಉರ್ತ್[2] /*urtti*/ ನಾ. ಮತ್ಸರ. envy.

ಉರ್ದಕೋಲ್ /*uradakɔ:li*/ ಕ್ರಿವಿ. ಹೂತ ಕೋಲು. buried stick. ವಾ: ಉರ್‌ದಕೋಲ್ ಗೆ ಸಣ್ಣದಾಗಿ ಬೊಳ್ಳಿನ ಹಬ್ಬ್ ಸಕ್.

ಉರ್ದಾಳ /*urda:ḷa*/ ಕ್ರಿವಿ. 1. ಬೇಯು, 2. ಉರಿಯುವಿಕೆ. 1. to boil, 2. to burn. ವಾ: ಬಾರಿ ಉರಿ ಉರ್ದಾಳ ಎದ್ದುಟು, ಮಳೆ ಬಂದದೆನಾಂತ. **ಉರ್ದೋಳ ಸಂಕಟ** /*urdɔ:ḷa saŋkaṭa*/ ಉರಿ

ಸಂಕಟ. discomfort. ವಾ: ಕಾರ ತಿಂದ್ ಹೊಟ್ಟೆಲಿ ಉರ್ದೋಳ ಸಂಕಟ.

ಉರ್ದ್ ಬೀಳು /*uridi bi:ḷu*/ ನಾ. ಉರಿದು ಬೀಳು. to express anger. ವಾ: ನಮ್ಮನ ಕಾಂಬಕನ ಅವುಳು ಉರ್ದ್ ಬೀಳುದು.

ಉರ್ಪೊದ ಕೊಳ್ಳಿ /*urpoda koḷḷi*/ ನಾ. 1. ಗಲಾಟೆಗಾರರು, 2. ತುಂಬ ಗಲಾಟೆ ಮಾಡುವ ಮಕ್ಕಳಿಗೆ ಹೇಳುವ ಮಾತು. 1. noisy, 2. term usually used for the noisy children. ವಾ: ಆ ಮಕ್ಕ ಬಾರಿ ಉರ್ಪೊದ ಕೊಳ್ಳಿಗ.

ಉರ್ಬುಲು /*urbulu*/ ನಾ. 1. ಮರ ಅಥವಾ ಬಿದಿರಿನಿಂದ ಮಾಡಿದ ದ್ವಾರ, 2. ರಟ್ಟೆ ಗಾತ್ರದ ಬಿದಿರು ಅಥವಾ ಮರವನ್ನು ಅಡ್ಡ ಹಾಕಿರುವುದು. 1. a door made of either wood or bamboo, 2. using large bamboo poles or logs of wood to block the movement. ವಾ: ನಾಯಿಗ ಉರ್ಬುಲು ಹಾರಿ ಬಂದವೆ.

ಉರ್ಬುಳಿ /*urbuḷi*/ ನಾವಿ. 1. ನಗ್ನ, 2. ಬೆತ್ತಲೆ. 1. nude 2. without any clothes on the body. ವಾ: ಉರ್ಬುಳಿಯಾಗಿ ಬಂದದೆ ಕೂಸು.

ಉರ್ಬೆಲ[1] /*urbɛla*/ ನಾವಿ. 1. ಅವಸರ ಮಾಡುವವ, 2. ಅವಸರದಲ್ಲಿ ಕೆಲಸ ಮಾಡುವವ. 1. the one who is always in a hurry, 2. hasty. ವಾ: ಇಂವ ಉರ್ಬೆಲ.

ಉರ್ಬೆಲ[2] /*arbɛla*/ ನಾ. ಅರ್ಧಂಬರ್ಧ ಕೆಲಸ ಮಾಡುವ ವ್ಯಕ್ತಿ. someone who leaves things unfinished.

ಉರ್ಲಿ /*urli*/ ನಾ. ಸಪಾತ ಭಕ್ಷ್ಯ, ತುಪ್ಪ, ಕಲ್ತಪ್ಪ ತಯಾರು ಮಾಡುವ ಹಿತ್ತಾಳೆ ಪಾತ್ರೆ. a brass vessel used in making ghee, kalthappa etc. ವಾ: ಉರ್ಲಿಲಿ ಹಿಟ್ಟ್ ಮಾಡ್‌ದು.

ಉರ್ಲು /*urlu*/ ನಾ. 1. ಉರುಳು, 2. ಕಾಡುಪ್ರಾಣಿಗಳನ್ನು ಹಿಡಿಯಲು ಹಾಕುವುದು, 3. ಹಗ್ಗದಿಂದ ಉರುಳು ಹಾಕುವುದು, 4. ನೇಣು, 5. ಕುಣಿಕೆ ಪಾಶ, 6. ಉರಲು. 1. to roll over, 2. a trap/a noose to catch animals, 3. make a loop in a rope, 4. hangman's noose, 5. noose to trap something or someone, 6. a rope with loop. ವಾ: ಉರ್ಲು ಹಾಕಿ ಕಾಡ್ ಪ್ರಾಣಿಗಳ ಹಿಡೆದು. ಪ: ಉರ್ಲು ಹಾಕುದು – ಕಾಡು ಪ್ರಾಣಿಗಳನ್ನು ಹಿಡಿಯಲು ಕುಣಿಕೆ ಹಾಕುವುದು

ಉರ್ಸು /*ursu*/ ಕ್ರಿ. 1. ಉರಿಸು, 2. ಹೊತ್ತಿಸು. 1. to burn, 2. to kindle. ವಾ: ಸ್ಟೌನ ಉರ್ಸು. ಪ: ಉರ್ಸಿನೆತ; ಉರಿಸುವೆ ಅಂತ; ಉರ್ಸಿವೆತ; ಉರಿಸುತ್ತಾರೆ ಅಂತ; ಉರ್ಸುದೆ; ಉರಿಸಿದೆ; ಉರ್ಸೊಕುತ; ಉರಿಸಬೇಕೆಂದು; ಉರ್ಸಿದೆತ – ಉರಿಸಿದೆನೆಂದು

ಉರ್ಳಾಂಡಿ /*urḷa:ṇḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಉರ್ಳ್ /*urḷi*/ ಕ್ರಿ. ಉರುಳಿ. to roll. ವಾ: ಕಲ್ಲ್ ಉರ್ಳಿ ಬೀತ್. ಪ: ಉರ್ಳ್‌ಸುವ – ಉರುಳಿಸುವ. **ಉರ್ಳುದು** /*urḷudu*/ ಉರುಳುವುದು. to roll over. ವಾ: ಕೂಸು ಮಿಟಾಯಿ ಕೊಟ್ಟಿತ್‌ಲೆತ ಹಟ ಮಾಡಿ ನೆಲಲಿ ಉರ್ಳುದ್.

ಉಲಿಯ /*uliya*/ ನಾ. ನದಿ ತೀರದಲ್ಲಿ ಮರಳು ಇರುವ ಜಾಗ. sand on the bank of river.

ಉಲಿಯಾ /*uliya:*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಉಸಾಬರಿ /*usa:bari*/ ನಾ. 1. ಜವಾಬ್ದಾರಿ, 2. ಹೊಣೆಗಾರಿಕೆ, 3. ಸುದ್ದಿ, 4. ಗೊಡವೆ, 5. ವಿಷಯ. 1. responsibility 2. duty, 3. news, 4. matter, 5. subject. ವಾ: ಕಂಡವರ ಉಸಾಬರಿ ನಮಿಗೆ ಬೇಕಾ.

ಉಸಾರಿಲ್ಲೆ /*usa:rille*/ ನಾ. 1. ಹುಷಾರಿಲ್ಲದಿರುವುದು, 2. ಅನಾರೋಗ್ಯ. 1. unwell, 2. ill. ವಾ: ಇಂದ್ ಬಾಕೆ ಆದುಲೆ, ನಂಗೆ ಹಞ್ಞ ಉಸಾರಿಲ್ಲೆ. ಪ: ಉಸಾರಿಲ್ಲೆ; ಉಸಾರೊಳ

ಉಸಾರ್ /*usa:ri*/ ನಾ. 1. ಜಾಣ, 2. ಬುದ್ದಿವಂತ, 3. ಚುರುಕಿನವ. 1. intelligent, 2. clever, 3. sharp. ವಾ: ಓದುದರ್‌ಲಿ ಅಂವ ಉಸಾರ್.

ಉಸುರ್ /*usuri*/ ನಾ. 1. ಉಸಿರು, 2. ಪ್ರಾಣವಾಯು, 3. ಉಸಿರು, 4. ಶ್ವಾಸ. 1. breath, 2. oxygen, 3. life breath, 4. to respire. ವಾ: ಉಸುರ್ ನಿತ್ತತ್.

ಉಸ್ಕ್ಡಂ /*uskiḍaṁ*/ ನಾ. ಎಪ. 1. ಮಾತೆತ್ತದೆ ಸುಮ್ಮನಾಗು, 2. ಏನು ಮಾಡಬೇಕೆಂದು

ತೋಚದಾಗು. 1. keeping silence, 2. a state of not knowing what to do. ವಾ: ಎಸ್ಟ್ ಬಾಯಿ ಬಡ್‌ದರೂ ಅಂವ ಮಾತ್ರ ಉಸ್ಕ್‌ಡಂ ಎತ್ತ್‌ತ್ಲೆ.

ಉಸ್ಣ /*usṇa*/ ನಾ. 1. ಉಷ್ಣತೆ. heat, temperature. ವಾ: ಏಪ್ರಿಲ್ ತಿಂಗಳ್‌ಲಿ ವಾತಾವರಣದ ಉಸ್ಣ ಗರಿಷ್ಟ ಮಟ್ಟಕ್ಕೆ ತಲ್‌ಪಿದೆ.

ಉಸ್ರ್ /*usri*/ ನಾ. 1. ಉಸಿರು, 2. ಪ್ರಾಣವಾಯು, 3. ಉಸಿರು, 4. ಶ್ವಾಸ. 1. breath, 2. oxygen, 3. life breath, 4. to respire. ವಾ: ಉಸ್ರ್ ಮೇಲೆ ಎಳ್‌ಕ. ಪ: ಉಸ್ರೆಳ್ದ್ ಬುಡು – ಉಸಿರು ಒಮ್ಮೆ ತೆಗೆದು ಮತ್ತೆ ಬಿಡು; ಉಸ್ರ್ ಕಟ್ಟಿದೆ – ಉಸಿರು ಕಟ್ಟುತ್ತಿದೆ. **ಉಸ್‌ರಾಟ** /*usɨra:ṭa*/ ಉಸಿರು ತೆಗೆಯುವುದು ಮತ್ತು ಬಿಡುವುದು. to breathe-inhale and exhale. ವಾ: ಯೋಗ ಮಾಡಿಕನ ಉಸ್‌ರಾಟದ ಕ್ರಿಯೆ ಮುಕ್ಯ.

ಉಳಯ /*uḷaya*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಉಳಾರ ಕೊಡ್ದು /*uḷa:ra kɔḍdu*/ ಕ್ರಿವಿ. ನಾಯಿ ಕಿರುಚುವುದು. barking of a dog. ವಾ: ಯಾಕೆ ಹಿಂಗೆ ನಾಯಿ ರಾತ್ರೆ ಪೂರ ಉಳಾರ ಕೊಡ್‌ದು.

ಉಳಿ[1] /*uḷi*/ ಕ್ರಿ. ಬದುಕಿ ಉಳಿ. to survive. ವಾ: ನೀ ಇಲ್ಲರೆ ನಾ ಉಳಿಯಕಿಲೆ.

ಉಳಿ[2] /*uḷi*/ ನಾ. 1. ಬಡಗಿಯ ಒಂದು ಆಯುಧ, 2. ಮರಕೆತ್ತಲು ಬಳಸುವ ಸಾಧನ. 1. a carpenter's tool, 2. a chisel. ವಾ: ಮರ ಕೆಲ್‌ಸ ಮಾಡಿಕನ ಉಳಿಲಿ ಚಿಪ್ಲ್ ಹಾಕುದು. ಪ: ಗೀಸುಳಿ ಹಾಕುದು. **ಉಳಿಬಾಜ** /*uḷiba:ja*/ ಆಚಾರಿ ಕೆಲಸಕ್ಕೆ ಬಳಸುವ ಸಾಧನ. a carpenter's tool. ವಾ: ಉಳಿಬಾಜ ತಂಬಾ.

ಉಳಿ[3] /*uḷi*/ ಕ್ರಿ. 1. ತಂಗು, 2. ಉಳಿದುಕೊ. 1. to stay, 2. to lodge. ವಾ: ನೀ ಇಂದ್ ನಮ್ಮಲ್ಲೆ ಉಳಿ. ಪ: ಉಳಿದೊ – ತಂಗಿದ್ದರು

ಉಳಿಯ /*uḷiya*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಆಲೆಟ್ಟಿ ಗ್ರಾಮದ ಜಾಗ. a locality in Aletti village in Sullia Taluk of Dakshina Kannada District.

ಉಳುವರನ /*vuḷuvarana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಉಳುವಾರನ /*uḷuva:rana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಉಳುವಾರು /*tuḷuva:ru*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅರಂತೋಡು ಗ್ರಾಮದ ಜಾಗ. 1. family, 2. lineage, 3. a locality in Arantodu village in Sullia Taluk of Dakshina Kannada District.

ಉಳ್‌ಂಗು /*uḷiŋgu*/ ನಾ. 1. ಉಣ್ಣಿ, 2. ಉಣುಗು. 1. a mite, 2. an insect found on animals. ವಾ: ಕಡ್‌ವೆ ಕುತ್ತಿಗೆಲಿ ಅಂಗೈ ಅಗಲದಸ್ಟ್ ಜಾಗೆಲಿ ಉಳ್‌ಂಗುಗ ರಕ್ತ ಕುಡಿತಿದ್ದವೆ. ಪ: ಉಳುಂಗು – ಉಣ್ಣಿ(ಉಣ್ಣೆ)

ಉಳ್ಕೆಪಳ್ಕೆ /*uḷkɛ paḷkɛ*/ ನಾ. ಜೋಪ. 1. ಉಳಿದುದು, 2. ಬಾಕಿಯಾದುದು, 3. ಮಿಕ್ಕಿರುವುದು. 1. remaining, 2. left, 3. left over. ವಾ: ನಿನ್ನೆದ್ ಉಳ್ಕೆ ಪಳ್ಕೆ ಏನಾರ್ ಉಟ್ಟ?

ಉಳ್ಕ್ /*uḷkɨ*/ ನಾ. ಉಳುಕು. sprain. ವಾ: ನಡೆಕನ ಜಾರಿ ಬಿದ್ದ್ ಕಾಲ್ ಉಳ್ಕಿಟು. **ಉಳ್ಕ್ ಸೊಪ್ಪ್** /*uḷk sɔpp*/ ಉಳುಕಿದಕ್ಕೆ ಉಪಯೋಗಿಸುವ ಔಷಧಿ ಸೊಪ್ಪು. a herb used to cure sprain. ವಾ: ಉಳ್ಕ್ ಸೊಪ್ಪು ಮದ್ದ್ ಉಳ್ಕ್ ತೆಗೆಕೆ ಆದೆ.

ಉಳ್ಸ್[1] /*uḷsi*/ ಕ್ರಿ. ಉಳಿಯುವಂತೆ ಮಾಡು, ploughing the field. **ಉಳ್ದ** /*uḷda*/ ಉಳಿದ. left over. **ಅಳ್ದ್ ಉಳ್ದ ಊರಿಗೆ ಇದ್ದವನೇ ಗೌಡ(ಗಾ).** ವಾ: ರಾತ್ರೆದ್ ಉಳ್ದ ಅನ್ನನ ಚಿತ್ರಾನ್ನ ಮಾಡಕ್. ಪ: ಉಳ್ದದ್ – ಉಳಿದದ್ದು, ಉಳ್ದುಟ್ಟು – ಉಳಿದಿದೆ, ಉಳ್ದವೇ – ಉಳಿದವರಿಗೆ, ಉಳ್ಯಕಿಲ್ಲೆ – ಉಳಿಯಲಾರದು. **ಉಳ್‌ಸಿ** /*uḷɨsi*/ 1. ಉಳಿಸಿ, 2. ಉಳಿತಾಯ ಮಾಡಿ. 1. to save, 2. to save. ವಾ: ಎಲ್ಲ ತಿಂಡಿನ ಇಂದೇ ಕಾಲಿ ಮಾಡ್‌ಬಡಿ. ಪ: ಉಳಿಯಕಾದ್ – ಉಳಿಯಬಾರದು; ಉಳಿವಂಗಿಲ್ಲೆ – ಉಳಿಯುವ ಹಾಗಿಲ್ಲ; ಉಳಿ – ಉಳಿಯು; ಉಳ್ಕಂಡದೆ – ಉಳಿದುಕೊಳ್ಳುತ್ತದೆ. **ಉಳ್ಸಿಕಂಬ** /*uḷsikamba*/ ಉಳಿಸಿಕೊಳ್ಳುವ. let us save. ವಾ: ನಾಳೆಗೆ ಬೇಕು ತ ಉಳ್ಸಿಕಂಬ ಮಾತೇ ಇಲ್ಲೆಲ.

ಉಳ್ಸ್[2] /*uḷsɨ*/ ಕ್ರಿ. ನೇಗಿಲಿನಿಂದ ಭೂಮಿಯನ್ನು ಉಳುವಂತೆ ಮಾಡು. ploughing the field. ವಾ: ನೇಗ್‌ಲ್ ತಕಂಡ್ ಗದ್ದೆನ ಉಳ್ಸ್.

ಉಳ್ಳ /*uḷḷa*/ ಕ್ರಿ. 1. ಉಳಿದುಕೊಳ್ಳು, 2. ಉಳಿ. 1. to stay, 2. to halt. ವಾ: ಇಂದ್ ಇಲ್ಲೆ ಉಳ್ಳ.

ಉಳ್ಳಾಕ್ಲು /*uḷḷa:klu*/ ನಾ. ತುಳುನಾಡಿನ ಒಂದು ಅವಳಿ ಭೂತಗಳ ಹೆಸರು. Name of a pair of Bhutas. ವಾ: ಉಳ್ಳಾಕ್ಲು ತುಳುನಾಡಿನ ದೈವ.

ಉಳ್ಳಾಯ /*uḷḷa:ya*/ ನಾ. ಯಜಮಾನ. Head of the family. ವಾ: ಮನೆಲಿ ಉಳ್ಳಾಯನ ಮಾತೆ ನಡ್ಯದು.

ಉಳ್ಳಿ /*uḷḷi*/ ನಾ. ಗುಪ್ತಾಂಗ. vagina, a private part. **ಅಳ್ಳೆಗೆಂತ ಹೊಡ್ಡ ಗುಂಡು ಉಳ್ಳಿಗಾತ್(ಗಾ).** ಪ: ಉಳ್ಳಿ ತಿರ್‌ಗಿಸಿಕೊಂಡ್ ಹೊತ್ತ್

ಉಳ್ಳಿಗಡ್ಡ /*uḷḷigaḍḍa*/ ನಾ. ತೆಳುವಾಗಿ ಬೆಳೆದ ಗಡ್ಡ. thinly or sparsely grown beard. ವಾ: ಅಂವಂದ್ ಉಳ್ಳಿಗಡ್ಡ.

ಉಳ್ಳು[1] /*uḷḷu*/ ಕ್ರಿ. ಉಳುಕು, ನರ ಹೊರಳುವುದು. sprain. ವಾ: ಕಾಲ್‌ಲಿ ಇದ್ದಕ್ಕಿದ್ದಂಗೆ ಉಳ್ಳುದು.

ಉಳ್ಳು[2] /*uḷḷu*/ ನಾ. ಉಳಿಸು, ಉಳಿತಾಯ ಮಾಡು. to save. ವಾ: ದುಡ್‌ದ ದುಡ್ಡುನ ಹಷ್ಟ ಉಳ್ಳು.

ಉಳ್ಳುಕಿಣಿ /*uḷḷukɛṇi*/ ನಾ. 1. ಒಳಗಿಂದೊಳಗೆ ಉಪಾಯ ಮಾಡುವುದು, 2. ಇತರರಿಗೆ ಅರಿವಾಗದಂತೆ ವಂಚಿಸುವುದು. 1. scheming/ conniving, 2. to cheat. ವಾ: ನಿನ್ನ ಉಳ್ಳಿ ಕಿಣಿ ನಂಗೆ ಗೊತ್ತಾತ್. **ಉಳ್ಳುಕಿಣಿಯ** /*uḷḷukɛṇiya*/ ಬೇರೆಯವರಿಗೆ ಗೊತ್ತಾಗದಂತೆ ವಂಚಿಸುವುದು. to cheat/to deceive. ವಾ: ಬೇರೆಯವುಕ್ಕೆ ಗೊತ್ತಾಗದಂಗೆ ಮೋಸ ಮಾಡಂವ.

ಉಳ್ಳೆಲಾಡಿ /*uḷḷela:ḍi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಎಣ್ಮೂರು ಗ್ರಾಮದ ಜಾಗ. a locality in Enmuru village in Sullia Taluk of Dakshina Kannada District.

ಊ

ಊಂದ /*u:nda*/ ನಾ. 1. ತಡೆ ಕಂಬ, 2. ಆಧಾರ ಕಂಬ. 1. supporting pillar, 2. a foundation pillar. ವಾ: ಐನ್ ಮನೆಲಿ ದೊಡ್ಡ ದೊಡ್ಡ ಊಂದಗಿದ್ದವೆ. ಪ: ಊಂದ್ ಇಸ್ – ಬೀಳುವ ದೈಕ್ಕೆ ತಡೆ ಒಡ್ಡು; ಊಂದ್ ಹಿಡಿ – ಮಡಿಕೆ ತೂತನ್ನು ತಡೆಹಿಡಿ

ಊಂದು[1] /*undu*/ ನಾ. 1. ಒರಗು, 2. ಆಧಾರ. 1. to push, 2. shove. ವಾ: ಅಂವನ ಉಂದುಬಡ ಬಿದ್ದ್ ಬುಡ್‌ದು.

ಊಂದು[2] /*u:ndu*/ ನಾ. 1. ತಳ್ಳು, 2. ದೂಡು, 3. ನೂಕು. 1. to push, 2. to shove, 3. to jostle. ವಾ: ಯಾಕೆ ನಿತ್ತಿರಕನ ಊಂದುದು. ಪ: ಊಂದಿ – ನೂಕಿ, ತಳ್ಳಿ; ಊಂದಿಕೆ – ತಳ್ಳುವುದಕ್ಕೆ; ಊಂದುದು – ತಳ್ಳುವುದು; ಊಂದುವೆ – ತಳ್ಳುತ್ತಾರೆ

ಊಂಸ್ /*u:si*/ ನಾ. 1. ಹೂಸು, 2. ಅಪಾನವಾಯು. 1. fart, 2. wind breaking. ವಾ: ಊಸ್ ಬುಟ್ಟಿತ್.

ಊಂಹ್ಞು /*u:nhɲu*/ ಅ. ಇಲ್ಲ ಎಂಬ ಸಂಜ್ಞೆ. a sign expressing 'no'. ವಾ: ನೀ ತಿಂದನಾ? ಊಂಹ್ಞು.

ಊಚು /*u:cu*/ ನಾ. 1. ಉತ್ತಮ, 2. ಉತ್ಕೃಷ್ಟ. 1. of good quality, 2. excellent. ವಾ: ಬಾರಿ ಊಚುನ ಕೆಲ್‌ಸನ ನೀ ಮಾಡ್‌ದ. ಪ: ಊಚಿಗ – ಉತ್ತಮ

ಊಜುದು /*u:judu*/ ನಾ. 1. ನೀರು ಜಿನುಗುವುದು, 2. ನೀರಿನ ಸಣ್ಣ ಸೋರಿಕೆ. 1. water oozing, 2. dripping water. ವಾ: ಕಟ್ಟಂದ ನೀರು ಊಜುದು.

ಊಟನಾರ್ತ್ /*u:ṭana:rtɨ*/ ನಾವಿ. ಹಳಸಿದ ಊಟ. stale food.

ಊಡ್ದು /*u:ḍdu*/ ಕ್ರಿ. 1. ಹೂಡುವುದು, 2. ಉಳುಮೆ. 1. to put harness on the ox, 2. to plough. ವಾ: ಗದ್ದೆ ಊಡ್ದು. ಪ: ಊಡಂವ – ಊಳುವವನು; ಊಡಕನೇ – ಊಳುವಾಗಲೇ

ಊಡ್ಸು /*u:ḍsu*/ ಕ್ರಿ. ಊಟ ಮಾಡಿಸು. to make someone have food/ to feed someone. ವಾ: ಕೂಸು ಮರ್‌ಟದೆ ಅದಿಕೆ ಊಡ್ಸು. ಪ: ಊಡ್ಸಿತ್ – ಊಟ ಮಾಡಿಸಿದನು(ಳು); ಊಡ್ಸಿದೊ – ಊಟ ಮಾಡಿಸಿದರು

ಊತ[1] /*u:ta*/ ನಾ. 1. ಬಾವು, 2. ಊದು. 1. swelling, 2. swollen. ವಾ: ಕೈ ಊತ ಹೋತ?

ಊತ[2] /*u:ta*/ ನಾ. ತೂಗುದೊಲೆ. wooden beam. **ಊತ ಇಡ್‌ದು** /*u:ta iḍɨdu*/ 1. ತೂಗುದೊಲೆ, 2. ಬಾಳೆ ಗಿಡ ಗಾಳಿಗೆ ಅಥವಾ ಬಾಳೆ ಗೊನೆಯ ಭಾರಕ್ಕೆ ಬೀಳದಂತೆ ಅಡ್ಡಕೋಲು ಇಡುವುದು. posting a stake in support of banana sapling or posting a stake to support the bunch of banana. ವಾ: ಬಾಳೆ ದೈ ಗಾಳಿಗೆ ಬಾಗಿ ಬೀಳದಂಗೆ ಊತ ಇಡ್‌ದು. **ಊತಕೋಲು** /*u:takɔ:lu*/ 1. ತೂಗುಕೋಲು, 2. ಅಡ್ಡಕೋಲು, 3. ತಡೆಕೋಲು. 1. a single pan balance, 2. a barrier of wooden logs, 3. a staff, used as a barrier. ವಾ: ಗಾಳಿ ಮಳೆಗೆ ಬಾಳೆ ಬೀಳಿಕಾಗದ್‌ತ ಊತಕೋಲ್ ಇಸ್‌ವೆ.

ಊದು /*u:du*/ ಕ್ರಿ. 1. ದಪ್ಪಗಾಗು, 2. ಉರ್ಗು. 1. to put on weight, 2. obesity. **ಕೆಟ್ಟ ಮೇಲೆ ಅಟ್ಟಲಿ ಒಲೆ ಊದುದು(ಗಾ).** ವಾ: ಕುದ್ದ್ ತಿಂದ್‌ಕಂಡಿದ್ದರೆ ಊದುದು.

ಊದು ಬತ್ತಿ /*u:du bɔtti*/ ನಾ. 1. ಅಗರಬತ್ತಿ, 2. ಗಂಧದಕಡ್ಡಿ, 3. ಊದುಕಡ್ಡಿ. 1. Incense sticks, 2. fragrant sticks, 3. aromatic sticks. ವಾ: ದೇವ್ರಿಗೆ ಊದು ಬತ್ತಿ ಹೋಸಿತ್. ಪ: ಬಾಪುಕಡ್ಡಿ – ಊದುಬತ್ತಿ

ಊನ /*u:na*/ ನಾ. 1. ಅಂಗಹೀನತೆ, 2. ವಿಶೇಷಚೇತನ, 3. ಕುಂದು, 4. ನ್ಯೂನತೆ. 1. physical impairment, 2. physically challenged, 3. weakness, 4. a lack. ವಾ: ಗೂಡೆನ ಕಾಲ್ ಊನ ಆಗುಟು.

ಊನೆ /*u:nɛ*/ ನಾ. 1. ಸೂನೆ, 2. ಕೊಂಕು, 3. ಲೋಪ, 4. ಊನ, 5. ಅಂಗವಿಕಲತೆ. 1. a problem, 2. sarcasm, 3. weakness, 4. physically challenged, 5. handicap. ವಾ: ಅಂವಂಗೆ ಯಾವುದೇ ಊನೆ ಇಲ್ಲೆ.

ಊಮೆ /*u:mɛ*/ ನಾ. ಮಡಿವಾಳ ಹಾಗು ಕ್ಷೌರಿಕರಿಗೆ ನೀಡುವ ಕಾಯಂ ಹಣ. regular payment made to the washerman or barber. ವಾ: ಮೊಡ್ಯಾಳಂಗೆ ಊಮೆ ಕೊಡಿಕೆ ಬಾಕಿ ಉಟ್ಟು.

ಊರಗೌಡ /*u:ra gowda*/ ನಾ. ಗೌಡ ಸಮುದಾಯದ ಸಾಂಸ್ಕೃತಿಕ ಮತ್ತು ಸಾಮಾಜಿಕ ನೇತೃತ್ವ ಹೊಂದಿದ ಆಡಳಿತ ವರ್ಗ. a head of Gowda community, cultural and social issues of the community are conducted under his guidance.

ಊರವರ ಸುದ್ದ /*u:ravara sudda*/ ನಾವಿ. ಸಾವಿಗೆ ಸೇರಿದ ಊರಿನವರನ್ನು ಮಡಿವಾಳ ಶುದ್ಧೀಕರಿಸುವುದು. a ritual cleaning with the help of a washerman. ವಾ: ಮೊಡ್ಯೊಳ ಊರವರ ಸುದ್ದ ಮಾಡುದು.

ಊರು ಕೂಡ್ದು /*u:ru ku:ḍdu*/ ನಾವಿ. 1. ವಿವಾಹದ ಮುನ್ನಾ ದಿನದ ಆಚರಣೆ, 2. ಚಪ್ಪರ. 1. rituals performed one day before the marriage, 2. pandal (canopy) ceremony, a ritual performed one day before the wedding. ವಾ: ಊರು ಕೂಡ್ದು ಜಂಬರಕೆ ಊರವೆಲ್ಲ ಬಂದವೆ. ಪ: ಊರ್ ಕೂಡುದು – ಊರಿನವರೆಲ್ಲ ಸೇರುವುದು. **ಊರ್ ಕೂಡುವೊ** /*u:rɨ ku:ḍuvɔ*/ ವಿವಾಹದ ಹಿಂದಿನ ದಿನ ಊರಿನ ಪ್ರತಿ ಮನೆಯಿಂದ ಒಬ್ಬರಾದರೂ ಬಂದು ಮದುವೆ ಮನೆಯ ಕೆಲಸಕ್ಕೆ ಸಹಕರಿಸುವುದು. at least one member from each of the families of the village helping the family that is conducting a wedding on the previous night of the actual wedding day. ವಾ: ಊರ್ ಕೂಡುವೊಕೆ ಹೋಕು.

ಊರು ಪತ್ತಿ ನೀಡಿಕೆ /*u:ru pɔtti ni:ḍike*/ ನಾವಿ. ವಿವಾಹದ ಚಪ್ಪರದ ದಿನ ಸಹಕರಿಸಿದ ಊರಿನವರಿಗೆ ಕುಟುಂಬದ ಯಜಮಾನ ನೀಡುವ ಗೌರವ ಸಂಭಾವನೆ, ಕಡ್ಲೆ ಪುರಿ, 5 ವೀಳ್ಯದೆಲೆ, 5 ಅಡಿಕೆ, ಬಾಳೆಹಣ್ಣು, ತೆಂಗಿನ ಕಾಯಿ ಚೂರು ಇದರಲ್ಲಿ ಇರುತ್ತದೆ. a token of respect given on the day of pandal ceremony by the head of the family to the people who helped in arranging the wedding. Usually it will consist of puffed rice, betel leaves, areca nut, banana, coconut, etc. ವಾ: ಊರು ಪತ್ತಿ ನೀಡಿಕೆ ಸುರು ಮಾಡ್‌ದೊ.

ಊರು[1] /*u:ru*/ ನಾ. 1. ನೆಡು, 2. ನೆಲಕ್ಕೆ ಚುಚ್ಚಿ ಇಡು. 1. to plant, 2. to plant/to post something in the ground. ವಾ: ನೀರಿನ ಪಸೆ ಇದ್ದಲ್ಲಿ ದೈನ ಊರಿಸಿರೆ ಬೇಗ ಬೆಳ್ದದೆ. ಪ: ಊರ್ತ್‌ – ನೆಟ್ಟನು; ಊರ್ಸಿದೆ – ನೆಡಿಸಿದೆ; ಊರ್ಸಿನೆ – ನೆಡಿಸುತ್ತೇನೆ; ಊರ್ಸೊಕು – ನೆಡಿಸಬೇಕು;

ಊರು[2] /*u:ru*/ ನಾ. ನಡೆಯಲು ಬೇಕಾದ ಆಧಾರದ ಕೋಲು. ಊರುಕೋಲು. a walking stick. ವಾ: ಉಗ್ಗಪ್ಪ, ದೊಣ್ಣೆ ಊರಿಕಂಡ್ ನಿದಾನಕ್ಕೆ ಹೋತ್ತಿದ್ದೊ. **ಊರ್ ಗೋಲ್** /*u:rɨ gɔ:lɨ*/. 1. ಊರುಗೋಲು, 2. ನಡೆಯುವಾಗ ಆಧಾರವಾಗಿ ಸಹಾಯಕ್ಕಾಗಿ ಕೈಯಲ್ಲಿ ಹಿಡಿದುಕೊಳ್ಳುವ ಕೋಲು. 1. walking stick, 2. to use a stick while walking. ವಾ: ವಯಸಾದ ಕಾಲಲಿ ಊರ್ ಗೋಲು ಹಿಡ್ಕಂಡ್ ನಡ್ದಾಡೊಕು.

ಊರು[3] /*u:ru*/ ನಾ. 1. ಊರು, 2. ಗ್ರಾಮ, 3. ನಾಡು, 4. ಹಳ್ಳಿ, 5. ಚಿಕ್ಕ ಪಟ್ಟಣ, 6. ಜನರು ವಾಸಿಸುವ ಪಟ್ಟಣ. 1. a town, 2. a village, 3. a province, 4. a

village, 5. a small town, 6. a city. ವಾ: ನಮ್ಮದ್ ಸಣ್ಣ ಊರು. ಪ: ಊರವು – ಊರಿನವರು

ಊರುಗೌಡ್ರು /*u:rugauḍru*/ ನಾ. ಹಿರಿಯ ಯಜಮಾನ. an elderly person/head of the family or village. ವಾ: ಊರುಗೌಡ್ರ ಮಾತ್ನ ಎಲ್ಲವು ಕೇಳುವೆ.

ಊರುಪಂಜ /*u:rupaɲja*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ತೊಡಿಕಾನ ಗ್ರಾಮದ ಜಾಗ. a locality in Todikana village in Sullia Taluk of Dakshina Kannada District.

ಊರುಪಂತಿ /*u:rupɔnti*/ ನಾ. ಊರವರೊಂದಿಗೆ ಮಾತನಾಡುವುದು. having conversation with the people of the town. ವಾ: ಜಂಬರಕೆ ಮುಂದೆ ಊರುಪಂತಿ ಮಾಡ್ಡು ಪದ್ದೆತಿ.

ಊರುಬೈಲು /*u:rubailu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಊರೊರ್ಮೆ /*u:rɔrmɛ*/ ನಾ. ಹುತ್ತರಿ ಹಬ್ಬದ ನಂತರ ಮನೆಪಾಟ್‌ನಲ್ಲಿ ಸಂಗ್ರಹಿಸಿದ ಹಣವನ್ನು ಬಳಸಿ ಊರವರು ಏರ್ಪಡಿಸುವ ಭೋಜನ ಕೂಟ. a community dinner hosted by the villagers after the harvest festival. ವಾ: ಹುತ್ತೆರಿ ಹಬ್ಬದ ಮಾರ್ನೆ ದಿನ ಊರವೆಲ್ಲ ಸೇರಿಕಂಡ್ ಊರೊರ್ಮೆ ಮಾಡಿವೆ.

ಊರೋಳನ /*u:ro:ḷana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಊರ್‌ಕುಂಟಿ /*u:rɨkuṇṭi*/ ನಾ. ಊರ ಮುಖ್ಯಸ್ಥನಿಗೆ ಅಂತ್ಯಸಂಸ್ಕಾರವಾದ ನಂತರ ನೀಡುವ ವಸ್ತ್ರ. a garment given to the head of the village after the funeral rites. ವಾ: ಹಬ್ಬದ ದಿನನ ಊರ್‌ಕುಂಟಿ ಹಕ್ಕಲೆ ಕೇಳೊಕು.

ಊರ್‌ಮಂದ್ /*u:rɨmandɨ*/ ನಾ. ಊರಮಂದೆ, ಹಬ್ಬ, ಹರಿದಿನಗಳಲ್ಲಿ ಒಟ್ಟಿಗೆ ಸೇರಿ ವಿವಿಧ ನೃತ್ಯಗಳನ್ನು ಮಾಡುವ ಊರಿನ ಬಯಲು, ಇದು ವಿಶಾಲ ಪ್ರದೇಶವಾಗಿದ್ದು, ಕಟ್ಟೆ ಕಟ್ಟಿದ ಅರಳಿ ಮರ ಇಲ್ಲಿ ಇರುತ್ತದೆ. ಪರಂಬೋಕ್ ಜಾಗೆ. a public place, usually a large field with a peepal tree where people gather and dance during important occasions. ವಾ: ವಿಸೇಸ ದಿನಗಳ್‌ಲಿ ಊರ್‌ಮಂದ್‌ಲಿ ಸೇರುವೆ.

ಊಳಿಗ /*u:ḷiga*/ ನಾ. 1. ಊಳಿಗ 2 ಕೆಲಸ, 3. ಸೇವೆ. 1. servitude, 2. work, 3. service. ವಾ: ಊಳಿಗ ಪದ್ದೆತಿ ಹಿಂದೆ ಇತ್ತ್.

ಎ

ಎಂಕ /*eŋka*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. masculine given name. **ಎಂಕ ಪಣಂಬೂರಿಗೆ ಹೋದಾಂಗೆ(ಗಾ).** ವಾ: ಎಂಕ ಬಾತ್.

ಎಂಗ್ /*eŋgɨ*/ ನಾ. ಹೇಗೆ. how? **ಎಂಗ್ ರೊಟ್ಟಿತ ಹೇಳ್ರೆ ನಂಗೊಂದ್ ರೊಟ್ಟಿತ ಹೇಳಿಯ(ಗಾ).**

ಎಂಜಿರ /*eɲjira*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಎಂಜಿರಾ /*eɲjira:*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಎಂಜಿರ್ /*eɲjiri*/ ನಾ. ಪೊದರು ಗಿಡ. a bush. ವಾ: ಎಂಜಿರ್‌ನ ಕಡೆಕು.

ಎಂಜಿರ್ ಬೊಳ್ಳಿ /*eɲjirɨ bɔḷḷi*/ ನಾ. ಒಂದು ವಿಧದ ಕಾಡುಬಳ್ಳಿ, ಬುಟ್ಟಿ ಹೆಣೆಯಲು ಬಳಸುತ್ತಾರೆ. a creeper used in weaving baskets. ವಾ: ಎಂಜಿರ್ ಬೊಳ್ಳಿ ಒಂದ್ ಕಾಡ್ ಬೊಳ್ಳಿ.

ಎಂಜಿಲ್ /*eɲjilɨ*/ ನಾ. 1. ಎಂಜಲು, 2. ಒಬ್ಬರು ಉಂಡು ಕುಡಿದು ಬಿಟ್ಟ ಆಹಾರ, ನೀರು, 3. ತಿಂದು ಉಳಿದದ್ದು, 4. ಮಡೆ. 1. saliva, 2. left-over food, 3. surplus food, 4. left over. **ಇಕ್ಕಿಕಾಗದ ಕೈ ಎಂಜಿಲ್ ತೇಳ್ದಂಗೆ(ಗಾ).** ವಾ: ಎಂಜಿಲ್ ಬಟ್ಲ್‌ನ ಹೊರೆಗೆ ಇಸ್. ಪ: ಎಂಜ್‌ಲ್ – ಎಂಜಲು; ಎಂಜ್ಲ್ – ಎಂಜಲು

ಎಂಟಾಣೆ /*eɳʈa:ɳi*/ ನಾ. 1. ಐವತ್ತು ಪೈಸೆ, 2. ಎಂಟು ಆಣೆಗಳು, 3. ಅರ್ಧ ರೂಪಾಯಿ. 1. 50 paisa, 2. 8 annas, 3. half a rupee. ವಾ: ಹಿಂದೆಲ್ಲ ಮಕ್ಕಳಿಗೆ ಎಂಟಾಣೆ ಸಿಕ್ಕಿರೆ ಕುಸಿಯೊ ಕುಸಿ.

ಎಂಟ್ ಕುದ್ರುದು /*eɳʈu kudrudu*/ ನಾ. ಅರೆಭಾಷೆ ಗೌಡರಲ್ಲಿ ಮದುವೆಯಾದ ಹುಡುಗಿಯನ್ನು ಮದುವೆಯ ಬಳಿಕ 8ನೇ ದಿನ ವಿಶ್ರಾಂತಿಗೆಂದು ತವರುಮನೆಗೆ ಕಳುಹಿಸುವುದು. a custom of sending the daughter- in-law to her parents home for resting on the 8th day after the marriage. ವಾ: ಸೊಸೆ ಎಂಟ್ ಕುದ್ರಿಕೆ ಹೋವುಟು.

ಎಂಟ್ ಪರೆ /*ɛɳʈɨ parɛ*/ ನಾ. 1. ಒಂದು ಬಟ್ಟಿ, 2. ಒಂದು ಅಳತೆ ಮಾಪನ. 1. 80 seers, 2. a measure of quantity. ವಾ: ಎಂಟ್ ಪರೆ ಬತ್ತನ ಅಳ್ದದ್. ಪ: ಒಂದು ಪರೆ ಎಂದರೆ ಎಷ್ಟು? – ಹತ್ತ್ ಸೇರ್

ಎಂತ /*ɛnta*/ ನಾ. 1. ಎಂಥ, 2. ಏನು. 1. What? 2. Which? ವಾ: ಆಗಲೆಎಂತ ಹೇಳ್ದ ನೀ. **ಎಂತ ಬ್ಯಾಡ** /*ɛnta bya:ḍa*/ ಏನೂ ಬೇಡ. don’t want anything. ವಾ: ನಾ ಹೊರ್‌ಟನೆ ಎಂತ ಬೇಡ ನಂಗೆ. **ಎಂತಕೆ** /*ɛntakɛ*/ ಏಕೆ? ಏಕಾಗಿ? Why? What for? ವಾ: ಎಂತಕೆ ಮರ್‌ಡುದು? **ಎಂತತ ಹೇಳ್ರೆ** /*ɛntata he:ḷrɛ*/ ಏನು ಅಂತ ಹೇಳಿದ್ರೆ. what did you say? ವಾ: ಎಂತತ ಹೇಳ್ರೆ ನಮಿಗೆ ಮನೆಲಿ ಬಾರಿ ಬಜ್ಜ ಉಟ್ಟು. **ಎಂತರ ಹೇಳ್ದು** /*ɛntarahɛ:ḷdu*/ ಏನು ಹೇಳುವುದು. what are (you) saying. ವಾ: ನೀ ಮಾಡ್‌ದ ಕೆಲ್‌ಸಕೆ ಎಂತರ ಹೇಳ್‌ದು. **ಎಂತೆಂತ** /*ɛntɛnta*/ ಎಂತೆಂತಹ. a term describing

manner. ವಾ: ಎಂತೆಂತ ಜೆನಗ ಒಳೊ ಈ ಲೋಕಲಿ. **ಎಂತೆಲ್ಲ ಮಾಡುವೆ** /*ɛntɛlla ma:ḍuvɛ*/ ಏನೆಲ್ಲ ಮಾಡುತ್ತಾರೆ. What do they do? ವಾ: ಮಕ್ಕ ಎಲ್ಲ ಸೇರಿಕಂಡ್ ಎಂತೆಲ್ಲ ಮಾಡುವೆ. **ಎಂತೊ** /*ɛntɔ:*/ 1. ಎಂತದೋ 2 ಏನೋ. 1. What?, 2. which? ವಾ: ಎಂತೊ ಹೇಳುವೆ ಒಂದೂ ತಲೆಗೆ ಹೋದುಲೆ. **ಎಂತೊದು** /*ɛntɔdu*/ 1. ಏನು ಹೋಗಿದ್ದು, 2. ಏನು. 1. Why did you go?, 2. what? ವಾ: ಎಂತೊದು ಆ ಕೆಳಗೆನ ದಾರಿಲಿ ಹೋದ್.

ಎಕ್ಕಪಾಲಿ ಮರ /*ekkapa:li mara*/ ನಾ. ಎಕ್ಕದ ಮರ. Calotropis gigantea, stabragh (crown flower). ವಾ: ಎಕ್ಕ ಪಾಲಿ ಮರಕ್ಕೆ ಪೂಜೆ ಮಾಡುವೆ.

ಎಕ್ಕಸಕ್ಕ /*ekkasakka*/ ನಾವಿ. 1. ಬೇಕಾದಷ್ಟು, 2. ವಿಪರೀತ, 3. ಲೆಕ್ಕಕ್ಕಿಂತ ಹೆಚ್ಚು. 1. as much as needed, 2. too much, 3. more than accounted. ವಾ: ಎಕ್ಕಸಕ್ಕ ಉಂಡತ್.

ಎಕ್ಕಡ[1] /*ekkaḍa*/ ನಾ. 1. ಚಪ್ಪಲಿ, 2. ಪಾದರಕ್ಷೆ. 1. slipper, 2. footwear. ವಾ: ಎಕ್ಕಡ ಹಾಕಂಡ್ ಅಡ್‌ಗೆಮನೆ ವಳೆಗೆಲ್ಲ ಹೋಕಾದ್.

ಎಕ್ಕಡ್ಕ[2] /*ekkaḍka*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಎಕ್ಕದೈ /*ekkadai*/ ನಾ. ಎಕ್ಕದ ಗಿಡ. of Calotropis gigantea, stabragh (crown flower). ವಾ: ಎಕ್ಕದ ದೈ ದೇಸ್ತಾನಲಿ ಇದ್ದದೆ.

ಎಕ್ಕಳೆ /*ekkaḷɛ*/ ನಾ. 1. ಜಿರಳೆ, 2. ಒಂದುಜಾತಿಯ ಕೀಟ. 1. a cockroach, 2. an insect. ವಾ: ಕೋಂಬರೆಲಿ ಎಕ್ಕಳೆ ತುಂಬಿ ಹೋಗುಟು.

ಎಕ್ಕ್‌ಡಿಕೆ /*ekkɨḍikɛ*/ ನಾ. ಬಿಕ್ಕಳಿಕೆ, ಎಕ್ಕ್‌ತೆ, ಎಕ್ಕ್‌ಳಿಕೆ. hiccup. ವಾ: ಎಕ್ಕಳ್ ತ ಬಾಕನ ಮಾತಾಡ್ಸಿಕೆ ಆಗದ್. ಪ: ಎಕ್ಕ್ ಕೆ – ಬಿಕ್ಕಳಿಕೆ

ಎಕ್ಕ್‌ಳ್‌ಸ್ /*ekkɨḷisɨ*/ ಕ್ರಿ. ತುದಿಗಾಲಿನಲ್ಲಿ ನಿಂತು ಎತ್ತರದಲ್ಲಿ ವಸ್ತುವನ್ನು ಹುಡುಕುವುದು. standing on the tip of one's feet (toe) and searching for something. ವಾ: ಎಂತರ ಹೀಂಗೆ ಎಕ್ಕ್‌ಳ್‌ಸ್‌ದು. ಎಕ್ಕಲ್ಪು(ತು)

ಎಕ್ರೆ /*ekrɛ*/ ನಾ. 1. ಎಕರೆ, 2. ಭೂಮಿಯ ವಿಸ್ತಾರದ ಒಂದು ಅಳತೆ. 1. an acre, 2. a measure of an area. ವಾ: ಅಂದಾಜಿ ಎಸ್ಟ್ ಎಕ್ರೆ ಕಾಪಿ ತೋಟ ಇರ್‌ದು.

ಎಕ್ಸ್[1] /*eksɨ*/ ಕ್ರಿ. 1. ಅಗೆಯುವುದು, 2. ಎಳ್ಳುವುದು. 1. digging, 2. to dig. ವಾ: ನೆಲನ ಎಕ್ಸ್

ಎಕ್ಸ್[2] /*eksɨ*/ ಕ್ರಿ. ಎಳ್ಳು, sesame seed. ವಾ: ಎಕ್ಸ್ ಮೆಂತೆ ಮಾಡಿ ತಿಂದರೆ ಒಳ್ಳೆದ್. **ಎಕ್ಸ್‌ಸ್** /*ekss*/ 1. ಎಳ್ಳಿಸು, 2. ಅಗೆಯಿಸು. 1. to make someone dig, 2. to dig. ವಾ: ಅಡ್ಕೆ ದೈನ ಎಕ್ಸ್‌ಸ್.

ಎಗಲಳುಂಬು /*egalaḷumbu*/ ನಾ. 1. ಅಣಬೆಯ ವಿಧ, 2. ದೊಡ್ಡಜಾತಿ ಅಣಬೆ, 3. ಹೆಗಲಳುಂಬು. 1. a variety of mushroom, 2. big mushroom. ವಾ: ಎಗಲಳುಂಬು ಬಾರಿ ರುಚಿ, ಹಂಗೆ ಸುಟ್ಟ್ ಉಪ್ಮೆಣ್ಸ್ ಹಾಕಿರೆ ಸಾಕ್. ಪ: ಎಗ್ಲಣಬೆ – ದೊಡ್ಡಜಾತಿ ಅಣಬೆ

ಎಗ್ಗೆ /*egge*/ ನಾ. ಗಿಡದಲ್ಲಿ ಕೊಂಬೆ ಒಡೆಯುವುದು. the process of shoot branching. ವಾ: ಹೂನ ದೈಲಿ ಸುಮಾರ್ ಎಗ್ಗೆ ಹೊರ್‌ಟುಟು.

ಎಚ್ಚರ್‌ಕೆ /*eccarikɛ*/ ನಾ. 1. ಎಚ್ಚರಿಕೆ, 2. ಜಾಗ್ರತೆ. 1. caution, 2. careful. ವಾ: ಮಳೆಗಾಲಲಿ ಓಡಾಡಿಕನ ಎಚ್ಚರ್‌ಕೆಲಿ ಇರೋಕು.

ಎಜಮಾನ್ರ್ /*ejama:nrɨ*/ ನಾ. 1. ಯಜಮಾನ, 2. ಪತಿ, 3. ಮನೆಯ ಒಡೆಯ, 4. ಹಿರಿಯ, 5. ಮಾಲೀಕ. 1. head of a family, 2. husband, 3. head of the family, 4. an elderly person, 5. owner. ವಾ: ಎಜಮಾನ್ರ್ ಮನೆಲಿ ಒಳೊನ? ಪ: ಎಜ್ಮಾನ – ಯಜಮಾನ

ಎಟ್ಕ್ /*ɛṭki*/ ನಾ. 1. ಎಟುಕು, 2. ನಿಲುಕು, 3. ಎತ್ತರದಲ್ಲಿರುವ ವಸ್ತು ಕೈಗೆ ಸಿಗುವಿಕೆ. 1. to reach, 3. within the reach, 3. reaching out to things that are kept on higher places. ವಾ: ಬೆಸಗೆಲಿ ಇಸಿಕೆ ಕೈ ಎಟ್ಕುಲೆ.

ಎಟ್ಟಿ /*ɛṭṭi*/ ನಾ. 1. ಸಿಗಡಿ, 2. ಒಂದುಬಗೆಯ ಸಣ್ಣ ಮೀನು. 1. prawns, 2. shrimps. ವಾ: ಎಟ್ಟಿ ತಿಂಬೊನ?

ಎಟ್ಟಿಯಾಳ್ /*ɛṭṭiya:ḷi*/ ನಾ. ಕೆಲವು ಕಡೆ ಪರಿಶಿಷ್ಟರು ಯಜಮಾನರನ್ನು ಸಂಭೋದಿಸುವುದು. an honorific used for the landlord or head of

the family by the people belonging Scheduled tribes.

ಎಟ್ಟೆ-ಎಸ್ಳ್ /*ɛṭṭɛ-esḷɨ*/ ನಾವಿ. ಟಿಕ್ಕಿ. a glass bead. ವಾ: ಅರ್ವೆಗೆ ಎಟ್ಟೆ-ಎಸ್ಳ್ ಹಾಕಿರೆ ಮಿಣಮಿಣತೇಳ್‌ದೆ.

ಎಡ ಮಗ್ಗ್‌ಲ್ /*eḍa maggɨlɨ*/ ನಾ. 1. ಎಡಭಾಗ. left side. ವಾ: ಇಂದ್ ನೀ ಎಡಮಗ್ಗ್ ಲ್‌ಲಿ ಎದ್ದೊಳ ಕಂಡದೆ.

ಎಡಕೇರಿ /*eḍake:ri*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಎಡಪತ್ಯ /*eḍapatya*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕಲ್ಮಡ್ಕ ಗ್ರಾಮದ ಜಾಗ. a locality in Kalmadka village in Sullia Taluk of Dakshina Kannada District.

ಎಡಮಲೆ /*eḍamalɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಎಡರಂಗ /*eḍaraŋga*/ ನಾ. 1. ಒಂದು ಜಾತಿ ಮೀನು, 2. ಮೀನಿನ ಬಗೆಗಳು. 1. a variety of fish, 2. varieties of fish. ವಾ: ಎಡರಂಗ ಮೀನ್ ತೇಳಿರೆ ಗೊತ್ತ?

ಎಡವಟ್ಟ್ /*eḍavaṭṭɨ*/ ನಾ. 1. ತಿಳಿದು, ತಿಳಿದು ತಪ್ಪು ಮಾಡುವುದು, 2. ಕ್ರಮತಪ್ಪಿದ್ದು, 3. ತೊಂದರೆ ಮಾಡಿಕೊಳ್ಳು. 1. committing a mistake knowingly very well the consequences of it, 2. losing the order, 3. to cause trouble to oneself. ವಾ: ಎಡವಟ್ಟ್ ಮಾಡಿಕಣ್ತ್.

ಎಡೆ[1] /*ɛḍɛ*/ ನಾ. 1. ಎರಡು ವಸ್ತುಗಳ ಮಧ್ಯೆ ಇರುವ ಜಾಗ, 2. ಸೆರೆ, 3. ಸಂದಿ, 4. ಇಕ್ಕಟ್ಟಾದ ಸ್ಥಳ. 1. a place between two things, 2. confined, 3. a narrow lane, 4. an alley. ವಾ: ಎಡೆಲಿ ಎಲ್ಲಿಗೆ ಹುಗ್ಗುದು/ಹುಗ್‌ದು.

ಎಡೆ[2] /*ɛḍɛ*/ ನಾ. 1. ನೈವೇದ್ಯ, 2. ಪೂಜಾ ಸಾಮಾಗ್ರಿಗಳ ಜೊತೆಗೆ ಆಹಾರ ಪದಾರ್ಥಗಳನ್ನು ಇಟ್ಟು ಪೂಜಿಸುವಿಕೆ. 1. offering to god, 2. offering prayers to god with sacred things and food items. **ದೇವುರಿಗೆ ಎಡೆ ಇಕ್ಕುದು, ಕಡೆಗೆ ನಾವೆ ಎಳ್ದ್ ತಿಂಬದು(ಗಾ).** ವಾ: ದೇವ್ರಿಗೆ ಪೂಜೆ ಮಾಡಿ ಎಡೆ ಇಸೋಕು. **ಎಡೆ ಇಸುದು** /*eḍɛ isudu*/ 1. ಎಡೆ ಇಡುವುದು, 2. ಸತ್ತವರಿಗೆ ಮಾಂಸಾಹಾರದ ಅಡುಗೆ ಬಾಳೆ ಎಲೆಯಲ್ಲಿ ಬಡಿಸುವುದು. 1. an offering, usually to god, 2. serving non-vegetarian food on plantain leaf to the ancestors. ವಾ: ಸತ್ತ ಹಿರಿಯವ್ಕೆ ಎಡೆ ಇಸುದು. **ಎಡೆಇಕ್ಕ್** /*eḍɛikk*/ ಭೂತ, ತೀರಿ ಹೋದ ಹಿರಿಯರಿಗೆ ಕೋಳಿ ಪದಾರ್ಥ ಮತ್ತು ಅಕ್ಕಿ ತಿನಿಸುಗಳನ್ನು ಬಡಿಸುವುದು. an offering of chicken curry and ragi ball to spirits. ವಾ: ಆಟಿ ತಿಂಗಳ್‌ಲಿ ಎಡೆಇಕ್ಕ್‌ದು. ಪ: ಎಡೆ ಹಾಕುದು – ಎಡೆ ಇಡುವುದು; ಎಡೆ ಬಳ್ಸುದು – ಎಡೆ ಬಡಿಸುವುದು

ಎಡೆಕ್ಕಟ್ಟ್ /*eḍɛkkaṭṭ*/ ನಾ. 1. ಎಡವಟ್ಟು, 2. ತೊಂದರೆ, 3. ತೊಡರು. 1. a blunder, 2. a problem, 3. an obstacle. ವಾ: ಏನೇನೋ ಮಾತಾಡಿ ಎಡೆಕ್ಕಟ್ಟ್ ಮಾಡಿಕಣ್‌ಬಡ.

ಎಡೆಕ್ಕಾಲ್ /*eḍɛkka:lɨ*/ ನಾ. 1. ಎರಡು ಕಾಲುಗಳನ್ನು ಅಗಲಿಸಿಟ್ಟಾಗ ಏರ್ಪಡುವ ನಡುವಣ ಜಾಗ, 2. ಕಾಲುಗಳ ಎಡೆ. 1. the space between the legs, when they are spread, 2. between legs. ವಾ: ಎಡೆಕ್ಕಾಲ್ ಮಾಡಿ ಕೂರ್‌ಬಡ.

ಎಡೆಬಿಡೆಂಗಿ /*ɛḍɛbiḍɔŋgi*/ ನಾವಿ. 1. ಎಡಬಿಡಂಗಿ, 2. ಗೊಂದಲಗೊಂಡವನು. 1. someone who is not sure of anything, 2. a confused person. ವಾ: ಎಡೆಬಿಡಂಗಿನಂಗೆ ಆಡ್ದೆ.

ಎಡೆಬುಡದ /*eḍɛbuḍada*/ ಕ್ರಿವಿ. 1. ಎಡೆಬಿಡದ, 2. ವಿರಾಮವಿಲ್ಲದ. 1. continuous, 2. without rest. ವಾ: ಎಡೆಬುಡದ ಮಳೆಲಿ ಹೊರ್‌ಗೆ ಹೋಕಾದುಲೆ.

ಎಡೇಲಿ /*eḍɛ:li*/ ನಾ. 1. ಅವುಗಳ/ ಇವುಗಳ ಮಧ್ಯೆ, 2. ನಡುವಿನಲ್ಲಿ. 1. in the midst of this/ that, 2. in the middle. ವಾ: ಎಡೆಲಿ ಬಂದ ತಡಿ ಎಡೆಲೇ ಹೋತ್.

ಎಡ್ಂಗ್‌ಲ್ /*ɛḍɨŋgɨlɨ*/ ನಾ. 1. ಎರಡು ಕಾಲಿನ ನಡುವಿನ ಜಾಗ, 2 ತೊಡೆಗಳ ನಡುವಿನ ಅಂತರ. 1. the space between two legs, 2. the distance between the thighs. **ಪುಕುಳಿ ಒಟ್ಟೆ ಗೈಪುನು ಎಡ್ಂಗ್‌ಲ್ ನಡುನ ನೀರ್‌ನು ಉಟ್ಟು. ಬಾದಾದರೆ ಬೊನ್ನಿ ನೆಂಟ್ರೆ, ಹೋದಾದರೆ ಹೋಗಿ ನೆಂಟ್ರೆ- ಮೊಟ್ಟೆ**

ಗೈಪು, ನೂಕಡ್ಯೆ(ಒ). ವಾ: ಹೈದ ಎಡ್ಂಗ್ಲ್‌ಲಿ ಹುಕ್ಕ್ ಓಡ್ತ್. ಪ: ಎಡೆಕ್ಕಾರ್, ಡೆಕ್ಕಾರ್(ತು)

ಎಡ್ಕ್ /*ɛḍki*/ ಕ್ರಿ. ಎಟುಕು. within the reach. ವಾ: ನೆಲ್ಲಿಕಾಯಿ ಕೊಯ್ಯಕೆ ಕೈ ಎಡ್ಕ್ ದುಲೆ.

ಎಡ್ಗ್ /*ɛḍgi*/ ನಾ. 1. ಎಡವು, 2. ಮುಗ್ಗರಿಸು, 3. ಕಾಲಿನ ತುದಿಗೆ ತಾಕು. 1. to stumble, 2. to trip, 3. to lose balance. **ನಡ್ದರೆ ತಾನೆ ಎಡ್ಗುದು(ಗಾ).** ವಾ: ನಡೆಕನ ಕಲ್ಲ್ ಸೆಕ್ಕಿ ಎಡ್‌ಗಿ ರಟ್ಟಿ ಹೋದೆ. ಪ: ಎಡ್ಗಿ ಬೀಳ್ದು – ಎಡವಿ ಬೀಳುವುದು; ಎಡ್ಗುದು – ಎಡವುದು; ಡಂಕ್(ತು). **ಎಡ್ಗುದ್** /*ɛḍgudi*/ 1. ಎಡಹು, 2. ಎಡವು, 3. ಮುಗ್ಗರಿಸಿ ಬೀಳು. 1. to stumble, 2. to trip, 3. to fall because of stumbling. **ನಡ್ದರೆ ತಾನೆ ಎಡ್ಗುದು(ನು).** ವಾ: ನಂಗೆ ಕಾಲ್ ಎಡ್ಗುದು ಎಂತಕೆತ ಗೊತ್ತಾಗತಿಲ್ಲೆ.

ಎಡ್ಚ /*ɛḍca*/ ನಾ. 1. ಎಡಗೈ ಕೆಲಸದವ, 2. ಎಡಚ. 1. left handed person, 2. lefty. ವಾ: ಅವು ಎಡ್ಚ ಕೈಲಿ ಎಸ್ಟ್ ಬೇಗ ಬರ್‌ದವೆ. ಪೀಚೆಕೈ, ಡೆಮ್ಮೆಕೈ(ತು) **ಎಡ್ಚೆಕೈ** /*ɛḍcekai*/ ಎಡಗೈ. left hand. ವಾ: ಎಡ್ಚೆಕೈಲಿ ಬರ್‌ಯದು. **ಎಡ್ದ ಕೈ** /*ɛḍda kai*/ ಎಡ ಕೈ. left hand. ವಾ: ಎಡ್ದ ಕೈಲಿ ಕೊಡಿಕಾಗದ್, ಕೇಳಿಕಣ್ಕಾಗದ್. ಪ: ಎಡ್ದ ಕೈ ಕೊಣ್ಸಿತ್ – ನಿಲ್ಲಿಸುವಂತೆ ಬಸ್ಸಿಗೆ ಕೈ ತೋರಿಸುವುದು

ಎಡ್ದ ಕಡೆ /*ɛḍda kaḍe*/ ನಾ. ಎಡಗಡೆ. left side. ವಾ: ಎಡ್ದ ಕಡೆ ಎದ್ರಿಕಾಗದ್.

ಎಡ್ದ ಪುಡೆ /*ɛḍda puḍɛ*/ ನಾ. ಎಡ ಬದಿ. on the left side. ವಾ: ಗದ್ದೆದ್ ಎಡ್ದಪುಡೆ ಹೋದರೆ ಕೆಸ, ಚರ್‌ಮೆ ಸೊಪ್ಪ್ ಸಿಕ್ಕಿದೆ.

ಎಡ್ದಿಂದ್ /*eḍdiŋda*/ ನಾ. ಎಡಗಡೆಯಿಂದ. from the left side.

ಎಡ್‌ಮ್ಯಾರ್ /*ɛḍimya:ri*/ ನಾ. ಕೊಡವರ ಹೊಸವರ್ಷಾಚರಣೆ, ಇದನ್ನು ಮೇಷ ಮಾಸ ಎನ್ನಲಾಗುತ್ತದೆ, ಏಪ್ರಿಲ್ ತಿಂಗಳಿನಲ್ಲಿ ಈ ಆಚರಣೆ ಇರುತ್ತದೆ. celebration of Kodava New Year in the month of April, the month of Mesha according to the Hindu calendar. ವಾ: ಏಪ್ರಿಲ್ ತಿಂಗಳ್‌ಲಿ ಎಡ್‌ಮ್ಯಾರ್ ಆಚರಣೆ ಮಾಡುವೆ.

ಎಡ್ರಾಸ್ ಇಲ್ಲೆ /*aḍra:si illɛ*/ ಎಪ. ಪತ್ತೆ ಇಲ್ಲ. unknown whereabouts. ವಾ: ಅವನ ಎಡ್ರಾಸ್ ಇಲ್ಲೆ.

ಎಡ್ಸ್ /*ɛḍsi*/ ಎಪ. ಎಡವು. to tread. ವಾ: ನಡೆಕನ ಎಡ್ಸ್‌ದಂಗೆ ನೋಡಿಕ.

ಎಣೆ /*ɛṇɛ*/ ನಾ. 1. ಲೆಕ್ಕಾಚಾರ, 2. ಸರಿಸಾಟಿ, 3. ಸಮಾನ. 1. calculation, 2. equivalent, 3. equal. **ಆಸೆಗೆ ಮಿತಿ ಇಲ್ಲೆ, ದುಕ್ಕಕ್ಕೆ ಎಣೆ ಇಲ್ಲೆ(ಗಾ).** ವಾ: ಅಂವನ ಎಣೆ ಯಾರಿಲ್ಲೆ. **ಎಣ್ಕೆ** /*ɛṇkɛ*/ 1. ಎಣಿಕೆ , 2. ನಂಬಿಕೆ. 1. counting/a guess, 2. trust. ವಾ: ನಮ್ಮ ಎಣ್ಕೆ ಸುಳ್ಳಾತ್. **ಎಣಿಕೆ ಆಗದಸ್ಟ್** /*ɛṇikɛ a:gadasṭi*/ 1. ಅಗಾಧ, 2. ತುಂಬ, 3. ಲೆಕ್ಕ ಮಾಡಲು ಅಸಾಧ್ಯವಾದಷ್ಟು, 4. ಬಹಳ. 1. vast, 2. too much, 3. impossible to count, 4. a huge quantity. ವಾ: ಆಕಾಸಲಿ ಎಣಿಕೆ ಆಗದಸ್ಟ್ ನಕ್ಷತ್ರಗ ವಳೊ.

ಎಣೆಯಾರು /*eṇeya:ru*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಎಣ್ಣೆ /*ɛṇṇɛ*/ ನಾ. 1. ತೈಲ, 2. ಜಿಡ್ಡು, 3. ದ್ರವ ಪದಾರ್ಥ. 1. oil, 2. sticky/greasy, 3. liquid. ವಾ: ಮರಕೆ ಎಣ್ಣೆ ಕೊಡ್ದು ಬಾಕಿ ಉಟ್ಟ್.

ಎಣ್ಣೆ ಅಣ್ಸಣ /*ɛṇṇɛ aṇsaṇa*/ ನಾ. 1. ಮದುವೆಯಲ್ಲಿ ಗಂಡು ಹೆಣ್ಣಿಗೆ ಮಾಡುವ ಶಾಸ್ತ್ರ, 2. ಅರ್‌ಸ್‌ನ ಎಣ್ಣೆ. 1. a ritual performed to the bride and the bridegroom during their wedding, 2. applying turmeric mixed oil. ವಾ: ಮೊದುವೆಲಿ ಗೂಡೆ ಮತ್ತೆ ಹೈದಂಗೆ ಎಣ್ಣೆ ಅಣ್ಸಣ ಸಾಸ್ತ್ರ ಮಾಡಿವೆ.

ಎಣ್ಣೆಚರ್ಕ್ /*ɛṇṇɛcarki*/ ನಾ. ಎಣ್ಣೆ ಹಾಕುವ ಹಿತ್ತಾಳೆ ಬಟ್ಟಲು. a bowl made of brass to keep oil. ವಾ: ಮೊದುವೆಲಿ ಸಾಸ್ತ್ರ ಮಾಡಿಕನ ಕಾಯೆಣ್ಣೆ, ಅರ್‌ಸಣ ಹೊಡಿ ಮತ್ತೆ ಗರ್‌ಕೆನ ಎಣ್ಣೆ ಹಾಕಿಸುವೆ.

ಎಣ್ಣೆ ಪೂಜಿವೆ /*ɛṇṇɛ pu:jivɛ*/ ಕ್ರಿವಿ. ಎಣ್ಣೆ ಸವರುತ್ತಾರೆ. apply oil/massage with oil. ವಾ: ಮೈಗೆ ಎಣ್ಣೆ ಪೂಜಿವೆ.

ಎಣ್ಣೆ ಬದ್ನೆ /*ɛṇṇɛ badnɛ*/ ನಾ. ಒಂದು ವಿಧದ ಸಣ್ಣ ಬದನೆ. a variety of small brinjal. ವಾ: ಎಣ್ಣೆಬದ್ನೆ ಗೊಜ್ಜು, ಪಲ್ಯ ರೊಟ್ಟಿಗೆ ಲಾಯ್ಕ.

ಎಣ್ಣೆ ಬುಡ್ದು /*ɛṇṇɛ buḍdu*/ ಕ್ರಿವಿ. ಫಸಲು ಬಂದಾಗ ಗದ್ದೆ ಸೂತಕ ಕಳೆಯಲು ಮಾಡುವ ಆಚರಣೆ. a

ritual performed during the harvest time. ವಾ: ಕಿಡ್ಡಾಸ ಹಬ್ಬಲಿ ಬೂಮಿಗೆ ಎಣ್ಣೆ ಬುಡ್ದು.

ಎಣ್ಣೆ ಮಜಲು /*ennɛmajalu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಎಣ್ಣೆ ಮರ /*eɳɳɛ mara*/ ನಾ. ಒಂದು ಜಾತಿಯ ಮರ. a variety of tree. ವಾ: ಎಣ್ಣೆ ಮರ ನೋಡ್ಯಳರಿಯ.

ಎಣ್ಣೆಕಾಳುಮನೆ /*eɳɳeka:ḷumanɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಎಣ್ಣೆಕೊಡ್ಡು /*eɳɳɛkɔḍḍu*/ ಕ್ರಿ. ಭೂತಕ್ಕೆ ಎಣ್ಣೆ ಕೊಡು, ಭೂತ ಕಟ್ಟುವವರಿಗೆ ಭೂತ ಕಟ್ಟಿಸುವವರು ಎಣ್ಣೆ ಕೊಡುವುದರ ಮೂಲಕ ಅಧಿಕೃತವಾಗಿ ಭೂತ ಕಟ್ಟಲು ಆದೇಶ ನೀಡುವುದು. an order/an indicator issued by the organiser of Bhuta Kola to the impersonator of bhuta/deity/spirit by giving oil. ವಾ: ದೆವ್ವಕೆ ಎಣ್ಣೆ ಕೊಡ್ಡು.

ಎಣ್ಣೆಮಜಲು /*eɳɳemajalu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಬಳ್ಪ ಗ್ರಾಮದ ಜಾಗ. a locality in Balpaa village in Sullia Taluk of Dakshina Kannada District.

ಎಣ್ಮೆಕಾರು /*eɳmeka:ru*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಜಾಲ್ಸೂರು ಗ್ರಾಮದ ಜಾಗ. a locality in Jalsuru village in Sullia Taluk of Dakshina Kannada District.

ಎಣ್ಸ್^{1} /*ɛɳsi*/ ಕ್ರಿ. 1. ಎಣಿಸು, 2. ಲೆಕ್ಕ ಹಾಕು. 1. to count, 2. to calculate. ವಾ: ದುಡ್ಡು ಎಸ್ಟುಟುತ ಎಣ್ಸ್‌ಕ.

ಎಣ್ಸ್^{2} /*ɛɳsi*/ ನಾ. 1. ಆಲೋಚಿಸು, 2. ವಿಚಾರ ಮಾಡು. 1. to think, 2. to reflect over. ವಾ: ಮಾಡ್‌ದ್ ಸೆರಿನಾತ ಒಮ್ಮೆ ನೀನೆ ಎಣ್ಸ್ ನೋಡ್ಕೊ.

ಎತೆ /*ɛtɛ*/ ನಾ. 1. ವ್ಯಥೆ, 2. ಕಳವಳ, 3. ಚಿಂತೆ, 4. ದುಃಖ. 1. suffering, 2. restlessness, 3. worry, 4. sadness. **ಚಿಂತೆ-ಎತೆ ಇಲ್ಲದಂವಂಗೆ ಸಂತೆಲೂ ನಿದ್ದೆ(ಗಾ).** ವಾ: ಮಗಳಿಗೆ ಮೊದ್ವೆ ಆತ್ಲೆಂತ ಒಂದೇ ಎತೆ.

ಎತ್ತ /*etta*/ ನಾ. 1. ಯಾವಕಡೆ, 2. ಎಲ್ಲಿ. 1. in which direction, 2. where. ವಾ: ಎತ್ತ ಹೋದು. ಪ: ಎತ್ತಂದ. **ಎತ್ತ ಹೋದು** /*etta hɔ:du*/ 1. ಎಲ್ಲಿಗೆ ಹೋಗುವುದು, 2. ಯಾವ ಕಡೆ ಹೋಗುವುದು. 1. to where, 2. where to go. ವಾ: ಚಾಂಪ ಎತ್ತ ಹೋದು. **ಎತ್ತಂದಳೋ** /*ettandaḷɔ:*/. ಎಲ್ಲಿಂದಲೋ. from where? ವಾ: ಎತ್ತಂದಳೋ ತಂದದ್. **ಎತ್ತಳೂ** /*ettaḷu:*/ 1. ಎಲ್ಲಿಗೂ, 2. ಯಾವ ಕಡೆಯೂ. 1. to where? 2. in which direction? ವಾ: ನಾ ಎತ್ತಳೂ ಹೋದುಲೆ. ಪ: ಎತ್ತಳೋ – ಎತ್ತ ಕಡೆಯೋ

ಎತ್ತಕು /*ettaku*/ ಕ್ರಿ. 1. ತಲುಪಬೇಕು, 2. ಮುಟ್ಟು, 3. ಸೇರು. 1. need to reach (somewhere), 2. to reach, 3. to get to. ವಾ: ಕತ್ತಲಾಕೆ (ಹೊತ್ತು ಮುಳ್ಗಿಕೆ) ಮುಂದೆ ಮನೆಗೆ ಎತ್ತಕು.

ಎತ್ತರ /*ettara*/ ನಾ. 1. ಮೇಲೇರು, 2. ಎತ್ತರಕ್ಕೆ ಹೋಗು. 1. to ascend 2. to climb higher. **ಉತ್ತರಕ್ಕೆ ಉತ್ತರ ಕೊಟ್ಟರೆ ಅದ್ ಎತ್ತರಕ್ಕೆ ಹೋದೆ(ಗಾ).** ವಾ: ನೀ ಬಾರಿ ಎತ್ತರಕೆ ಹೋಗೊಳ.

ಎತ್ತಿ^{1} /*etti*/ ನಾ. 1. ತಲುಪಿ, 2. ಸೇರಿ, 3. ಮುಟ್ಟಿ. 1. to reach, 2. to join/to get to, 3. to arrive at. ವಾ: ನಡ್‌ಕಂಡ್ ಇಸ್ಕೂಲಿಗೆ ಎತ್ತಿಕಾಕನ ಹೊತ್‌ಉಗ್ಗಪ್ಪ್. ಪ: ಎತ್ತಿಕಣೋಕು; ತಲುಪಿಕೊಳ್ಳಬೇಕು; ಎತ್ತಿಕನ; ತಲುಪುವಾಗ; ಎತ್ತಿಕನನೆ; ತಲುಪುವಾಗಲೇ; ಎತ್ತಿತ್ – ತಲುಪಿದ; ತಲುಪಿತು; ಎತ್ತಿತ್ಲೆ – ಸಾಕಾಗಿಲ್ಲ; ಎತ್ತಿದ – ತಲುಪಿದೆಯಾ; ಎತ್ತುದುಲೆ – ಸಾಕಾಗುವುದಿಲ್ಲ; ಎತ್ತೋಕು – ತಲುಪಬೇಕು

ಎತ್ತಿ^{2} /*etti*/ ನಾ. 1. ಎತ್ತುವುದು, 2. ಎತ್ತಿ, 3. ಮೇಲಕ್ಕೇರಿಸಿ. 1. to lift something, 2. to raise, 3. to lift something upward. ವಾ: ಚೀಲನ ಎತ್ತಿ ತಲೆ ಮೇಲೆ ಹೊರ್‌ಸ್.

ಎತ್ತಿಕಟ್ಟ್ /*ɛttikaṭṭi*/ ಕ್ರಿ. 1. ಪ್ರೇರಿಸು, 2. ಪ್ರಚೋದಿಸು, 3. ಪುಸಲಾಯಿಸು. 1. instigate, 2. whip up, 3. provoke. ವಾ: ಅಂವನ ಮಾಡದೇ ಇದ್ದ ಕೆಲ್ಸಕ್ಕೆ ಎತ್ತಿಕಟ್ಟಿದೊ.

ಎತ್ತಿತ್ /*ettiti*/ ನಾ. ಸಾಕಾಯಿತು,ಎಲ್ಲರಿಗು ಹಂಚಲು ಸಾಕಾಯಿತು. enough of something. ವಾ: ಹುಗ್ಗೆ ಎಲ್ಲವ್ಕೆ ಎತ್ತಿತ್.

ಎತ್ತಿದ ಕೈ /*ettida kai*/ ನಾ. ಎಲ್ಲ ಕೆಲಸಕ್ಕೂ ತಯಾರಿ. ready for everything. ವಾ: ಅವುಳು ಹೆರ್‌ಗೆ ಮಾಡ್‌ಸುದರ್‌ಲಿ ಎತ್ತಿದ ಕೈ.

ಎತ್ತಿನಹೊಳೆ /*ettinahoḷe*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ನೆಲ್ಲೂರು ಕೆಮ್ರಾಜೆ ಗ್ರಾಮದ ಜಾಗ. a locality in Nelluru Kemraje village in Sullia Taluk of Dakshina Kannada District.

ಎತ್ತು /*ɛttu*/ ನಾ. 1. ಹೋರಿ, 2. ನಂದಿ, 3. ವೃಷಭ. 1. an ox, 2. a bull, 3. a bullock. ವಾ: ನಾಕ್ ಎತ್ತ್‌ಗ ಒಳೊ.

ಎತ್ತು ಪೋರಾಟ /*ɛttu pɔ:ra:ṭa*/ ನಾವಿ. ಎತ್ತು ಹೇರಾಟದ ಹರಕೆಯ ಪದ್ಧತಿ ಇದಾಗಿದೆ, ದೇವಾಲಯದ ಉತ್ಸವಗಳಿಗೆ ಬೇಕಾದ ಅಕ್ಕಿ, ಕಾಯಿ ಇತ್ಯಾದಿ ವಸ್ತುಗಳನ್ನು ಅಲಂಕರಿಸಿದ ಎತ್ತಿನ ಬೆನ್ನಿನ ಮೇಲೆ ಹೇರಿಕೊಂಡು ಹೋಗಿ ದೇವರಿಗೆ ಒಪ್ಪಿಸುವ ಆಚರಣೆ. carrying an offering of rice, jaggery etc. on the back of a bullock to a temple as a part of a vow undertaken. ವಾ: ಎತ್ತು ಪೋರಾಟತೇಳ್‌ದು ಒಂದ್ ಹರ್‌ಕೆನ ಪದ್ದತಿ.

ಎತ್ತೊಕು /*ettɔku*/ ಕ್ರಿ. ತಲುಪಬೇಕು. need to reach somewhere. ವಾ: ಹೊತ್ತ್ ಮುಳ್‌ಗಿಕೆ ಮುಂದೆನೆ ಮನೆಗೆ ಎತ್ತೊಕು.

ಎತ್ತೊಳೊ /*ettɔḷɔ*/ ನಾ. ಯಾವ ಕಡೆಯೊ. which direction? ವಾ: ಎತ್ತೊಳೊ ನೋಡ್ದೆ.

ಎತ್ತೋಗೊಳೊ /*etto:goḷo*/ ಸನಾ. ಯಾವ ಕಡೆ ಹೋಗಿದ್ದಾರೆ? where have they gone? ವಾ: ಅಪ್ಪ ಎತ್ತೋಗೊಳೊ?

ಎತ್ತ್ ಕಟ್ಟುದು /*etti kəṭṭudu*/ ನಾ. ಹೊಸ ವರ್ಷದ ಆರಂಭದ ದಿನ ಗದ್ದೆ ಉಳುವುದು. to plough on the day of new year. ವಾ: ನಾಳೆ ಎತ್ತ್ ಕಟ್ಟುದು.

ಎತ್ತ್ ಗೂಮೆ ಮರ /*ɛtti gu:mɛ mara*/ ನಾ. 1. ಎತ್ತು ಕೂಮೆ ಮರ, 2. ಒಂದು ಕಾಡು ಮರ. 1. a forest tree, 2. forest tree. ವಾ: ಎತ್ತ್ ಗೂಮೆ ಮರ ಒಂದ್ ಜಾತಿನ ಕಾಡ್‌ಮರ.

ಎತ್ತ್^{1} /*etti*/ ಕ್ರಿ. 1. ಸಾಕಾಗು, 2. ತಲುಪುವುದು. 1. to have enough of something, 2. to reach somewhere. ವಾ: ಊಟ ಎಲ್ಲೊವ್ಕೆ ಎತ್ತ್‌ದೊತ. ಪ: ಎತ್ತಿಟು – ಸಾಕಾಗಿದೆ; ಎತ್ತಿಟು – ಎಲ್ಲರಿಗೂ ಸಾಕಾಗಿದೆ,ತಲುಪಿದೆ; ಎತ್ತ್ ಕನ – ಎತ್ತುವಾಗ; ಎತ್ – ಎತ್ತು/ಹೋರಿ. **ಎತ್ತ್‌ತಿತ್ತ್** /*ɛttititti*/ ಸಾಕಾಗುತ್ತಿತ್ತು. it was enough. ವಾ: ಈಗ ಮಾಡ್‌ದ ಅನ್ನನೆ ಎತ್ತ್‌ತಿತ್ತ್ ಮತ್ತೆ ಯಾಕೆ ಮಾಡ್‌ದ್? **ಎತ್ತ್‌ತ್‌ಲೆ** /*ɛttitilɛ*/ ಸಾಕಾಗುತ್ತಿರಲಿಲ್ಲ. it was not enough. ವಾ: ದನಗಳಿಗೆ ಹಸಿ ಹುಲ್ಲ್ ಎತ್ತ್‌ತ್‌ಲೆ. **ಎತ್ತ್‌ಸ್** /*ɛttisi*/ ತಲುಪಿಸು. to deliver. ವಾ: ಈ ಕಾಗದನ ಅಂವಂಗೆ ಎತ್ತ್‌ಸ್. **ಎತ್ತ್ಯೊಳ** /*ɛtyɔḷa*/ ತಲುಪಿದ್ದೀಯಾ? have you reached? ವಾ: ಮನೆಗೆ ಎತ್ತ್ಯೊಳ?

ಎತ್ತ್^{2} /*etti*/ ಕ್ರಿ. 1. ಎತ್ತುವುದು, 2. ಕಾಲು ಎತ್ತುವುದು, 3. ಮೇಲಕ್ಕೆತ್ತು. 1. to raise/to lift, 2. raise one's legs, 3. to hold something up. **ಎತ್ತಿ ಬೀಳ್‌ಸುವ ಕುದ್ರೆಂದ ಹೊತ್ತ್ ಸಾಗ್‌ಸುವ ಕತ್ತೆ ಲೇಸ್(ಗಾ).** ವಾ: ಮೂಟೆನ ಎತ್ತ್. **ಎತ್ತುದು** /*ettudu*/ ಬಾರವನ್ನು ಎತ್ತುವುದು. lifting weight. ವಾ: ಅಂವ ಎತ್ತಿ ಕೊಟ್ಟತ್ತ್. **ಎತ್ತೆತ್ತ್** /*ɛttɛtti*/ ಎತ್ತು ಎತ್ತು. telling someone to lift quickly. ವಾ: ಹ್ಞೂಂ ಬೇಗ ಎತ್ತೆತ್ತ್. **ಎತ್ತೊವು** /*ettɔvu*/ ಎತ್ತುವವರು. people who will lift/hold/raise. ವಾ: ಇಸ್ಟ್ ತೂಕದ ಕಡಿಯಕಲ್‌ನ ಎತ್ತೊವು ಯಾರ್. **ಎತ್ತೊಕು** /*ettɔku*/ ಎತ್ತಬೇಕು. need to lift something. ವಾ: ಈಗ ಉಂಡ ಎಲೆನ ಎತ್ತೊಕು. **ಎತ್ರ್‌ಸಿ** /*ɛtrisi*/ ಎತ್ತರಿಸಿ. to raise/to lift something. ವಾ: ತಲೆಗಡಿನ ಎತ್ರ್‌ಸಿ ಇಸಿಕ.

ಎತ್ತ್^{3} /*etti*/ ನಾ. 1. ಎತ್ತು, 2. ಹೋರಿ. 1. an ox, 2. a bull. **ಗಾಣದ ಎತ್ತ್‌ನಾಂಗೆ ದುಡ್ದದೆ(ನು).** ವಾ: ಎತ್ತ್‌ಗ ಇದ್ದರೆ ಹೂಡಿಕೆ ಆದೆ.

ಎತ್ರಕೊತ್ರ /*ɛtrakɔtra*/ ನಾವಿ. 1. ಮೇಲೆ ಕೆಳಗೆ, 2. ಹಿಂದು ಮುಂದಾಗಿರುವುದು, 3. ಎತ್ತರ ತಗ್ಗು. 1. up and down, 2. back and forth, 3. ups and downs. ವಾ: ಕುಣಿಯಕೆ ಬಾರದಂವ ಇಜ್ಞಾಲ್ ಎತ್ರಕೊತ್ರಂತೇಳ್‌ತ್.

ಎದ್ದುರ್ದು /*edurdu*/ ಕ್ರಿ. ಎದ್ದೇಳುವುದು. to get up/to wake up. ವಾ: ಹೊತಾರೆ ಎದುರ್ದು ತಡ ಆತ್.

ಎದುರ್ಸಿ /*edursi*/ ನಾ. ಎದುರಿಸಿ. to face/to oppose. ವಾ: ಕಷ್ಟಗಳ ಎದುರ್‌ಸಿ ನಿಲ್ಲೊಕು.

ಎದೆ /*edɛ*/ ನಾ. 1. ಎದೆಯ ಭಾಗ, 2. ವಕ್ಷ ಸ್ಥಳ. 1. Chest, 2. chest, 3. breast. ವಾ: ಯಾಕೊ ಎದೆ ಬೇನೆ. **ಎದೆ ಒಡ್ಡಿಕಂಡ್** /*edɛ oḍḍikəṇḍi*/ 1. ಎದೆಯುಬ್ಬಿಸಿ, 2. ಮುಂದೆ ಬರು. 1. to walk with

lifted chest, 2. to come forward. ವಾ: ಅಂವ ಎದೆ ಒಡ್ಡಿಕಂಡ್ ಬಾತ್. ಪ: ಎದೆ ಒಡ್ಡುಸುದು.

ಎದೆಗಾರಿಕೆ /*edɛga:rikɛ*/ ನಾ. 1. ಧೈರ್ಯ, 2. ಸಾಹಸ, 3. ದಿಟ್ಟತನ. 1. courage, 2. bravery, 3. valour. ವಾ: ಎದೆಗಾರಿಕೆ ಉಟ್ಟ ಹೈದಂಗೆ. **ಎದೆ ತಟ್ಟಿ ಹೇಳ್** /*edɛ tɘṭṭi hɛ:ḷi*/ 1. ಧೈರ್ಯದಿಂದ ಹೇಳುವುದು, 2. ನಿಜವನ್ನೂ ನಿರೂಪಿಸುವುದು. 1. saying something with courage, 2. establishing truth. ವಾ: ಎದೆ ತಟ್ಟಿ ಹೇಳ್ ತಪ್ಪು ಮಾಡ್‌ತ್‌ಲೆತ. **ಎದೆಗುಂದ್‌ಬಡ** /*edɛgundibɘḍa*/ ಹೆದರದಿರು. do not be afraid. ವಾ: ಎಷ್ಟೇ ಬಜ್ಜ ಬಂದರೂ ನೀ ಎದೆಗುಂದ್‌ಬಡ ಬಲಾ.

ಎದೆಗೆ ಆನಿಸಿ /*edegɛ a:nisi*/ ನಾವಿ. ಎದೆಗೆ ಒರಗಿಸಿ. to lean on the chest. ವಾ: ಕೂಸು ಮರ್ಡ್‌ಕನ ಅವ್ವ ಎದೆಗೆ ಆನಿಸಿ ಸಮಾದಾನ ಮಾಡ್ದೊ.

ಎದೆಮುರ್ದ್ /*edemurdi*/ ನಾ. 1. ಕಷ್ಟ ಪಟ್ಟು, 2. ಬಹಳ ಶ್ರಮವಹಿಸಿ, 3. ಪರಿಶ್ರಮದಿಂದ. 1. working hard, 2. with great effort, 3. with hard work. ವಾ: ಎದೆಮುರ್‌ದ್ ಕೆಲ್‌ಸ ಮಾಡೊಕು.

ಎದ್ದ್ /*eddi*/ ಕ್ರಿ. 1. ಏಳು, 2. ಎದ್ದು. 1. to get up, 2. to wake up. ವಾ: ಇದ್ದದರ ಇದ್ದಾಂಗೆ ಹೇಳಿರೆ ಎದ್ದ್ ಬಂದ್ ಎದೆಗೆ ಒದ್ದೊ ಗಡ. **ಎದ್ದೊ** /*eddɔ*/ ಎದ್ದರು. (they) got up. ವಾ: ಉಂಡ್ ಎಲ್ಲೊವು ಎದ್ದೊ. **ಎದ್ದತ್** /*eddati*/ 1. ಎದ್ದನು, 2. ಎದ್ದಳು. 1. he got up, 2. she got up. **ಎತ್ತ್ ಎದ್ದತ್ ಬಾಲ ಬೀಸಿತ್(ಗಾ).** ವಾ: ಇಂದ್ ಅವುಳು ಬೇಗ ಎದ್ದತ್. **ಎದ್ದುರ್ದು** /*ɛddurdu*/ 1. ಏಳುವುದು, 2. ಏಳ್ಳು. 1. to raise, 2. to get up. ವಾ: ಬೆಳ್ಗರ್‌ಗೆ ಎದ್ದುರ್ದ ಅಬ್ಬೆಸ ಮಾಡಿಕಾಂಕು. **ಎದ್ದುರ್‌ದುಲೆ** /*ɛdduridulɛ*/ ಏಳುವುದಿಲ್ಲ. won't finish early/won't get up early. ವಾ: ಅಬ್ಬೆಕ ಬೋಳು ಪಂಚಾತಿಗೆಗೆ ಕುದ್ದರೆ ಬೇಗ ಎದ್ದುರ್‌ದುಲೆ. **ಎದ್ದ್‌ರ್** /*eddiri*/ 1. ಎದ್ದೇಳು, 2. ಎದ್ದು ನಿಲ್ಲು. 1. to wake up, 2. to get up. ವಾ: ಬೇಗ ಎದ್ದ್‌ರ್ ಪೋಯಿ. ಪ: ಎದ್ನಿಲ್ – ಎದ್ದುನಿಲ್ಲು; ಎದ್ರಿಕೆ – ಏಳುವುದಕ್ಕೆ; ಎದ್ರಿನಿ – ಏಳಿ; ಎದ್ರಿಸಿ – ಎದ್ದೇಳಿಸಿ. **ಎದ್ರಿಕಿಲೆ** /*edrikilɛ*/ ಏಳುವುದಿಲ್ಲ. won't finish early/won't get up early. ವಾ: ಅವು ಮಾತಿಗೆ ಕುದ್ದರೆ ಎದ್ರಿಕಿಲೆ.

ಎದ್ದ್ ಕಾಂಬ ಹಾಂಗೆ /*eddi ka:mbaha:ŋgɛ*/ ನಾವಿ. 1. ಕಣ್ಣಿಗೆ ಕಾಣುವ ಹಾಗೆ, 2. ಸಾಕಾರ ಮೂರ್ತಿ, 3. ಎದ್ದು ಕಾಣುವ ಹಾಗೆ. 1. as seen, 2. in reality, 3. explicitly seen. ವಾ: ಎದ್ದ್ ಕಾಂಬ ಹಾಂಗೆ ಕೆಂಪ್ ಅರ್ವೆ ಹಾಕೊಳ.

ಎದ್ದ್ ಬಿದ್ದ್ /*eddi biddi*/ ನಾವಿ. 1. ಎದ್ದು ಬಿದ್ದು, 2. ಅವಸರದಿಂದ, 3. ಆತುರದಿಂದ. 1. in great urgency, 2. in a hurry, 3. haste. ವಾ: ಆನೆನ ಕಾಂಬಕನ ಎದ್ದ್ ಬಿದ್ದ್ ಓಡ್‌ದೊ.

ಎದ್ರ್[1] /*edri*/ ಕ್ರಿ. ಎದುರು. opposite. **ಎದ್ರ್ ಎದ್ರ್ ನೋಡ್ರು ತಿಳ್ದ್ ನೋಡೊಕು(ಗಾ).** ವಾ: ಹೊರಡಿಕನ ಕೊತ್ತಿ ಎದ್ರ್ ಬಂದದ್. ಪ: ಎದ್ರ್‌ನ ಪುಡೆ – ಎದುರು ಕಡೆ. **ಎದ್‌ರ್** /*ediri*/ ನಾ. 1. ಎದುರು, 2. ಮುಂದುಗಡೆ, 3. ಮುಂಭಾಗ, 4. ಅಭಿಮುಖ, 5. ಇದಿರು. 1. opposite, 2. ahead, 3. in front of, 4. face to face, 5. facing. **ಎದ್‌ರ್ ಹಾಕಿಕಂಬದು(ನು).** ವಾ: ಎದ್‌ರ್ ಮನೆದ್ ಮರದ ಮೇಲೆ ಕುರೆಗ ಕುದ್ದೊಳೊ. **ಎದ್ರ್‌ಗಡೆ** /*edrigaḍɛ*/ ಎದುರು – ಮುಂದುಗಡೆ. in the opposite direction. ವಾ: ಎದ್ರ್‌ಗಡೆ ಮರಲಿ ಚೊಂಬುಕ ಕುದ್ದುಟು. **ಎದ್‌ರ್ಗೆ** /*edirigeɛ*/ ಎದುರಿಗೆ. in front of. ವಾ: ಎದ್‌ರ್ಗೆ ಹೋದರೆ ಬೊಯ್ದವೆ. **ಎದ್ರ್‌ಸ್** /*ɛdrisi*/ ಎದುರಿಸು. to oppose/to face. ವಾ: ಹೆದ್ರದೆ ಬಜ್ಜನ ಎದ್ರ್‌ಸ್.

ಎದ್ರ್[2] /*edri*/ ಕ್ರಿ. 1. ಎದ್ದೇಳು, 2. ಏಳು. 1. to wake up, 2. to get up. ವಾ: ಹೊತಾರೆ ಬೇಗ ಎದ್ರ್‌ನೆ. ಪ: ಎದ್ರ್ ಸಿಕ್ಕ್ – ಎದುರು ಸಿಗು. **ಎದ್ರ್‌ಕೆ** /*edrikɛ*/ 1. ಏಳುವುದಕ್ಕೆ, 2. ಎದ್ದೇಳುವುದಕ್ಕೆ. 1. to wake up, 2. to get up. ವಾ: ಕುದ್ದಲ್ಲಿಂದ ಎದ್ರ್‌ಕೆ ಇಸ್ಟ್ ಹೊತ್ತು ಬೇಕಾತ. ಪ: ಎದ್ರಿಕೆ

ಎದ್ರ್‌ತ್ತರ /*edrittara*/ ನಾ. 1. ಎದುರುತ್ತರ, 2. ಮಾತಿಗೆ ಮಾತು ಕೊಡು. 1. to retort, 2. to argue. ವಾ: ದೊಡ್ಡವ್ಕೆ ಎದ್ರ್‌ತ್ತರ ಕೊಡಿಕಾಗದ್.

ಎದ್‌ರ್-ಬದ್‌ರ್ /*badiri*/ ನಾ. ಮುಖಾಮುಖಿ. 1. in front of, 2. next to. ವಾ: ಎದ್ರ್ ಬದ್‌ರಾಗಿ ಕುದ್ದೊ.

ಎನ್ನೆತೊಡಿ /*ennɛtoḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಎನ್ಸ್‌ದಾಂಗೆ /*ensidda:ŋgɛ*/ ನಾ. 1. ಎಣಿಸಿದ ರೀತಿ,

2. ಯೋಚಿಸಿದ ರೀತಿ, 3. ಲೆಕ್ಕ ಹಾಕಿದ ರೀತಿ, 4. ಆಲೋಚಿಸಿದ ಹಾಗೆ, 5. ಗ್ರೇಸಿದಾಂಗೆ. 1. the way of counting, 2. the way of thinking, 3. the way of calculation, 4. as thought, 5. as understood. ವಾ: ನಾವ್ ಎನ್ಸ್‌ದಾಂಗೆ ಒಂದೂ ಆದುಲೆ.

ಎಪ್ಪೆ /*ɛppɛ*/ ನಾ. 1. ಮೋಸ, 2. ವಂಚನೆ. 1. deceit, 2. cheating. ವಾ: ಅಂವ ದುಡ್ಡ್ ತಕಂಡ್ ಎಪ್ಪೆ ಹಿಡ್ಸಿತ್. ಪ: ಎಪ್ಪೆ ಹಿಡ್ಸ್ – ಮೋಸಮಾಡು. **ಎಪ್ಪೆ ಹಿಡ್ಸುದು** /*ɛppɛ hiḍsudu*/ ಮೋಸ ಮಾಡು. to cheat. ವಾ: ದುಡ್ಡ್ ಕೊಟ್ಟರೆ ಎಪ್ಪೆ ಹಿಡ್ಸುವವೇ ಒಳೊ.

ಎಬ್ಬೆಟ್ /*ɛbbɛṭi*/ ನಾ. ಹೆಬ್ಬೆಟ್ಟು. thumb. ವಾ: ಹಿಂದೆಲ್ಲ ಹೆಚ್ಚಿಗೆ ಜೆನ ಓದಿಕೆ, ಬರೆಕೆ ಗೊತ್ತಿಲ್ಲದೆ ಎಬ್ಬೆಟ್ ಒತ್ತುತ್ತಿದ್ದೊ.

ಎಬ್ಸ್ /*ɛbsi*/ ಕ್ರಿ. 1. ಏಳಿಸು, 2. ಎಬ್ಬಿಸು. 1. to make someone get up, 2. to make someone wake up. ವಾ: ಯಾಕೆ ಮೋಲ್‌ಗಿದಂವನ ಎಬ್ಸ್‌ದು. ಪ: ಎಬ್ಸ್‌ಸ್ – ಎಬ್ಬಿಸು, ಎದ್ರ್‌ಸ್

ಎಮ್ಮಾರ್ಪೆಮೀನ್ /*ɛmma:rpemi:ni*/ ನಾ. ಒಂದು ವಿಧದ ದೊಡ್ಡ ನದಿ ಮೀನು. a variety of fish. ವಾ: ಎಮ್ಮಾರ್ಪೆಮೀನ್ ಸಿಕ್ಕಿದ್.

ಎಮ್ಮೆ /*ɛmmɛ*/ ನಾ. 1. ಎಮ್ಮೆ, 2. ಮಹಿಷ. 1. a buffalo, 2. a bison. ವಾ: ಎಮ್ಮೆ ಹಾಲ್ ಬಾರಿ ಮಂದ ಇದ್ದದೆ.

ಎಮ್ಮೆಕಾರೆ /*ɛmmeka:rɛ*/ ನಾ. 1. ಸಣ್ಣ ಗಾತ್ರದ ತಿನ್ನುವ ಕಾಯಿ, 2. ಮುಡ್ಕರೆಕಾಯಿ. an eatable nut. ವಾ: ಎಮ್ಮೆಕಾರೆ ಕಾಯಿನ ತಿಂಬೊದು.

ಎಯ್ಪೊಂಜಿ /*ɛypɔŋji*/ ನಾ. 1. ಮುಳ್ಳುಹಂದಿ, 2. ಮುಳ್ಳಂದಿ. 1. a porcupine, 2. a rodent with quills. **ಹೇಡಿ ಕಾಳಪ್ಪನ ಮಜ್ಜನೇ, ನೂರೊಂದು ಗೆಜ್ಜೆದವನೆ, ಬಾರಪ್ಪ ಗಿಲಿಗಿಲಿ – ಮುಳ್ಳು ಹಂದಿ(ಒ).** ವಾ: ತೋಟ, ಗದ್ದೆಗೆ ಎಯ್ಪೊಂಜಿಗ ಬಂದವೆ. ಪ: ಮುಳ್ಳಂದಿ, ಎಯ್ಪಂಜಿ

ಎರಚ್ /*ɛraci*/ ಕ್ರಿ. 1. ಎಸೆಯು, 2. ಹರಡು. 1. to throw, 2. to spread. ವಾ: ಮೊರಲಿ ಬತ್ತ ತಕಂಡ್ ಹಳ್ಳ ಎತ್ತರದ ಒಂದ್ ಕ್ರಮಲಿ ಎರಚಿವೆ.

ಎರಣೆ /*ɛraṇɛ*/ ನಾ. 1. ಹಾವುರಾಣಿ, 2. ಅರಣೆ. 1. golden skink, 2. the golden skink. ವಾ: ಎರಣೆನ ಕೊತ್ತಿ ಹಿಡ್‌ದ್ ತಿಂದದೆ. ಪ: ಅರಣೆ – ಹಾವುರಾಣಿ

ಎರವು /*ɛravu*/ ನಾ. 1. ಸಾಲ, 2. ಎರವಲು, 3. ಬೇಡು, 4. ಅಂತರ, 5. ಕೊರತೆ. 1. loan, 2. to borrow, 3. to beg, 4. distance, 5. shortage. ವಾ: ಎರವು ತಕಂಬದು ದೊಡ್ಡದಲ್ಲ, ತೀರ್‌ಸಿಕಾಕನ ಇರ್‌ದು.

ಎರಿ /*ɛri*/ ನಾ. 1. ಎರೆ, 2. ಜೇನಿನ ಗೂಡು, 3. ಜೇನಿನ ಹುಟ್ಟು. 1. beehive, 2. a bee box, 3. birth of a bee. **ಒಂದ್ ಮನೆಗೆ ನೂರೆಂಟ್ ಬಾಗ್ಲ್ – ಜೇನ್‌ಎರಿ(ಒ).** ವಾ: ಎರಿ ಇದ್ದರೆ ಪೆಟ್ಟಿಗೆಲಿ ಜೇನ್ ಕೂರ್‌ಸಕ್. ಪ: ಜೇನ್ ಎರಿ

ಎರಿಂಕೆ /*ɛriŋkɛ*/ ನಾ. ರೆಕ್ಕೆ. feather. ವಾ: ಹಕ್ಕಿದ್ ಎರಿಂಕೆ ಬಿದ್ದುಟು.

ಎರುಕಡಪು /*erukaḍapu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಸಂಪಾಜೆ ಗ್ರಾಮದ ಜಾಗ. a locality in Sampaje village in Sullia Taluk of Dakshina Kannada District.

ಎರುಮೈಂದ /*erumainda*/ ನಾ. 1. ಬೋಧಾಳ, 2. ಅಸಡ್ಡೆಯಿಂದ ಕೂಡಿದ. 1. naive, 2. negligent. ವಾ: ನೀನ್ ಎರುಮೈಂದನಾಂಗೆ ಆಡ್ಬಡ.

ಎರೆಕ್ಕಳ /*erɛkkaḷa*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಎರ್ಕಲ್ಪಾಡಿ /*erkalpa:ḍi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮಂಡೆಕೋಲು ಗ್ರಾಮದ ಜಾಗ. a locality in Mandekolu village in Sullia Taluk of Dakshina Kannada District.

ಎರ್ಕ್ /*ɛrki*/ ಕ್ರಿ. 1. ನೀರು ಹರಿದು ಬಂದು ತುಂಬು, 2. ಕಟ್ಟ ಹಾಕಿದಾಗ ನೀರು ನಿಲ್ಲುವುದು. 1. water filling something, 2. the stagnant water. ವಾ: ಕಟ್ಟಲಿ ನೀರ್ ಎರ್ಕಿಟು.

ಎರ್ಚ್ /*ɛrci*/ ಕ್ರಿ. 1. ಎರಚು, 2. ಚಿಮುಕಿಸು, 3. ಚೆಲ್ಲು. 1. to spill/to throw, 2. to sprinkle, 3. to throw. ವಾ: ಮೋರೆಗೆ ನೀರ್ ಎರ್‌ಚುದು. **ಎರ್ಚ್‌ಲ್** /*ɛrcili*/ 1. ನೀರು ಸಿಂಪಡಿಕೆ, 2. ಎರಚಲು, 3. ಇರಿಸಲು ಮಳೆ. 1. sprinkling water, 2.

splashing water, 3. splashing rain. ವಾ: ಕೊಟಗೆದ್ ಗೋಡೆಗೆ ಎರ್ಚ್‌ಲ್ ಹೊಡ್ದದೆ.

ಎರ್ಡ್ ಗಡಿ /*ɛrḍɨ gaḍi*/ ನಾವಿ. 1. ಎರಡು ಗಡಿ, 2. ಎರಡು ತೆಂಗಿನ ಹೋಳು. 1. two pieces, 2. two halves of a broken coconut. ವಾ: ಕಾಯಿ ಒಡ್ದದ್ ಎರ್‌ಡ್ ಗಡಿ ಹಾಳ್.

ಎರ್ಡ್ ತಲೆ ಹಾವು /*ɛrḍɨ talɛ ha:vu*/ ನಾವಿ. 1. ಇರ್‌ತಲೆ, 2. ಮಣ್ಣು ಹಾವು, 3. ಮುಂಭಾಗ ಹಿಂಭಾಗದಲ್ಲಿ ತಲೆ ಇರುವ ಹಾವು. 1. two heads, 2. a mud snake, 3. snake with heads on both ends. ವಾ: ಎರ್‌ಡ್ ತಲೆ ಹಾವ್‌ನ ಮಾರುವೆ.

ಎರ್ಡ್ ದೋಣಿ /*ɛrḍɨ do:ṇi*/ ನಾವಿ. 1. ಗೊಂದಲ, 2. ಚಂಚಲ ಮನಸ್ಸು. 1. confusion, 2. a fickle mind. **ಎರ್ಡ್ ದೋಣಿ ಮೇಲೆ ಕಾಲಿಟ್ಟಂಗೆ(ಗಾ).** ವಾ: ಎರ್ಡ್ ದೋಣಿ ಮೇಲೆ ಯಾಗೊಳು ಕಾಲ್ ಇಸಿಕಾಗದ್.

ಎರ್ಡ್ ಪಾಲ್ /*ɛrḍɨ pa:li*/ ನಾವಿ. ಎರಡು ಭಾಗ. heel. ವಾ: ಎರ್‌ಡ್ ಪಾಲ್ ತಿಂಡಿ ನಂಗೆ ಸಿಕ್ಕಿತ್.

ಎರ್‌ಡ್ ಬಗಿದು /*ɛriḍɨ bagidu*/ ನಾವಿ. 1. ಇಬ್ಬಗೆ, 2. ಎದುರೊಂದು ಹಿಂದೊಂದು ಮಾತನಾಡುವುದು. 1. deceitful, 2. talking insidiously. ವಾ: ಮೊನ್‌ಸಂಗೆ ಎರ್‌ಡ್ ಬಗಿದು ಬುದ್ದಿ ಇರಿಕಾಗದ್.

ಎರ್ಡ್ ಬಾಗ /*ɛrḍɨ ba:ga*/ ನಾವಿ. ಇಬ್ಭಾಗ. two halves. ವಾ: ಹಣ್ಣ್‌ನ ಎರ್‌ಡ್ ಬಾಗ ಮಾಡಿ ಕೊಡ್.

ಎರ್ದಡ್ಕ /*erdaḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ನಾಲ್ಕೂರು ಗ್ರಾಮದ ಜಾಗ. a locality in Nalkuru village in Sullia Taluk of Dakshina Kannada District.

ಎರ್ಪು /*ɛrpu*/ ನಾ. 1. ಜಿಪುಣ, 2. ಆಸೆಬುರುಕ. 1. stingy, 2. greedy. ವಾ: ಬಾರಿ ಎರ್ಪುನಂವ ಅಂವ. ಪ: ಎರ್ಪ, ಎರ್ಪೇಲ

ಎರ್ಮೆಕಲ್ಲ್ /*ermɛkal*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಎರ್ಮೆಕಾಲು /*ermɛka:lu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಎರ್ಮೆಟ್ಟಿ /*ermeṭṭi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ನೆಲ್ಲೂರು ಕೆಮ್ರಾಜೆ ಗ್ರಾಮದ ಜಾಗ. a locality in Nelluru Kemraje village in Sullia Taluk of Dakshina Kannada District.

ಎಲಾಡ್ಕೆ /*ela:ḍkɛ*/ ನಾ. ಎಲೆ ಅಡಿಕೆ ವೀಳ್ಯದೆಲೆ ಮತ್ತು ಅಡಕೆ ವೀಳ್ಯಹಾಕಲು ಬೇಕಾದ ವಸ್ತುಗಳು, ಎಲಡ್ಕೆ, betel leaf and areca nut, betel leaf and arecanut, the object for chewing with betel leaves. ವಾ: ಎಲಾಡ್ಕೆಲಿ ಕಬ್ಬಿಣಾಂಶ ಸಿಕ್ಕಿದೆ, ಹಂಗಾಗಿ ಉಂಡ ಮೇಲೆ ಎಲಾಡ್ಕೆ ತಿಂಬದು ಒಂದು ಒಳ್ಳ ಅಬ್ಬೆಸ.

ಎಲಿ /*ɛli*/ ನಾ. ಇಲಿ. a rat. **ಎಲಿ ಹೋತುತೇಳ್ರೆ ಹುಲಿ ಹೋತುತೇಳ್ವೆ(ಗಾ). ಎಲಿಗೆ ಹೆದ್‌ರಂವ ಹುಲಿ ಹಿಡಿಯಕೆ ಹೋತ್(ನು).** ವಾ: ಎಲಿನ ಕೊತ್ತಿ ಹಿಡ್ತ್. ಪ: ಎಲಿ ಪೆಟ್ಟಿಗೆ. **ಎಲಿ ಪಾಸಾಣ** /*ɛli pa:saṇa*/ ಇಲಿಗಳನ್ನು ಕೊಲ್ಲಲು ಬಳಸುವ ವಿಷ. rat poison. ವಾ: ಎಲಿ ಪಾಸಾಣ ಇಸಿ.

ಎಲಿಮಲೆ /*ɛlimale*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ನೆಲ್ಲೂರು ಕೆಮ್ರಾಜೆ ಗ್ರಾಮದ ಜಾಗ. a locality in Nelluru Kemraje village in Sullia Taluk of Dakshina Kannada District.

ಎಲು /*ɛlu*/ ನಾ. 1. ಎಲುಬು2 ಮೂಳೆ, 3. ಅಸ್ಥಿ. 1. a skeleton, 2. bone, 3. bones. ವಾ: ನಾಯಿಗೆ ಎಲು ಕೊಟ್ಟರೆ ಅಕ್ಕಂಡೆ ಇದ್ದದೆ. ಪ: ಎಲ್ಬ್ – ಎಲುಬು

ಎಲುಂಬ /*ɛlumba*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. masculine given name. ಪ: ಎಲ್‌ಂಬ

ಎಲೆ /*ɛlɛ*/ ನಾ. 1. ವೀಳ್ಯದೆಲೆ, 2. ಎಲೆ. 1. betel leaf, 2. a leaf. **ಮೋರೆ ನೋಡೆ ಎಲೆ ಹಾಕ್(ಗಾ). ಕೊಡಿಲಿ ಬ್ಯಾಟೆ ಮಾಡ್ದು, ಅಡಿಲಿ ಅಚ್ಚ್‌ಕಟ್ಟ್ ಮಾಡ್ದು – ಎಲೆ ಕೊಯ್ಯೊದು(ಒ).** ವಾ: ಎಲೆ ತಿನೊಕು. **ಎಲೆಕೊಡಿ** /*ɛlɛkɔḍi*/ ವೀಳ್ಯದೆಲೆಯ ತುದಿ. edge of a betel leaf. ವಾ: ಎಲೆಕೊಡಿನ ಜಿಂಟಿ ತೆಗಿ. **ಎಲೆಬೊಳ್ಳಿ** /*ɛɛbɔḷḷi*/ ವೀಳ್ಯದೆಲೆ ಬಳ್ಳಿ, betel vine. ವಾ: ಎಲೆಬೊಳ್ಳಿ ಮನೆಲಿ ಉಟ್ಟು. **ಎಲೆಸೂಡಿ** /*ɛlɛsu:ḍi*/ ವೀಳ್ಯದೆಲೆಯ ಕಟ್ಟು. a bunch of betel leaf. ವಾ: ಎಲೆಸೂಡಿ ಸಂತೆಲಿ ಸಿಕ್ಕಿದೆ.

ಎಲೆ ಹಾರೆ /*ɛlɛ ha:rɛ*/ ನಾ. ಹಾರೆಯ ಮುಂಭಾಗ ಅಗಲವಾಗಿರುವುದು. a broad surface of a

crowbar/digging bar. ವಾ: ಎಲೆ ಹಾರೆಲಿ ಮಣ್ಣ್ ಅಗ್ದ್ ತೆಗ್ಯಕೆ ಸುಲಬ. ಪ: ಪುಂಗೋಟು

ಎಲೆನಾಗ /*ɛlɛna:ga*/ ನಾ. ವೀಳ್ಯದೆಲೆ ಅಥವಾ ಬಾಳೆ ಎಲೆಯಲ್ಲಿ ಹರಿದಾಡುವ ಚಿಕ್ಕ ಹಾವು, ಇದು ಮಲೆನಾಡಿನಲ್ಲಿ ಹೆಚ್ಚು ತೋಟದಲ್ಲಿ ಕಂಡುಬರುತ್ತದೆ. a small snake that crawls on betel leaf or plantain. ವಾ: ಎಲೆ ಮೇಲೆ ಎಲೆನಾಗ ಹರ್‌ದಾಡಿರೆ ಗೀಟ್‌ಗ ಕಂಡದೆ.

ಎಲೆಪಚ್ಚೆ /*elepaccɛ*/ ನಾ. 1. ಬಳ್ಳಿಯಿಂದ ಮಾಡಿದ ವೀಳ್ಯದೆಲೆ ಹಾಕುವ ತಟ್ಟೆ. 2. ಎಲೆತಟ್ಟೆ. a platter to keep betel leaf made of the firbres of a creeper/climber.

ಎಲೆಹುಳು /*ɛlɛhuḷu*/ ನಾ. 1. ಮಿಡತೆ, 2. ಹಾರುವ ಸಣ್ಣ ಕೀಟ. 1. a locust, 2. a grasshopper. ವಾ: ಎಲೆಹುಳು ಹೂನ ದೈನ ಎಲೆನೆಲ್ಲ ಮನಾರ ಮಾಡಿಟು.

ಎಲ್ ತಟ್ಟೆ /*ɛlɨ taṭṭɛ*/ ನಾ. 1. ಎಲೆ ತಟ್ಟೆ, 2. ವೀಳ್ಯದೆಲೆ ಹರಿವಾಣ. a plate made out of plantain leaf, 2. a plate made out of betel leaf. ವಾ: ಎಲ್ ತಟ್ಟೆನ ತಂಬಾ. ಪ: ಎಲ್ತಟೆ – ವೀಳ್ಯದೆಲೆ ಹರಿವಾಣ

ಎಲ್ಯಣ್ಣ /*elyaṇṇa*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. masculine given name.

ಎಲ್ಯಾರ್ /*elya:ri*/ ನಾ. ಎಲ್ಲಿಯಾದರೂ. somewhere. ವಾ: ಎಲ್ಯಾರ್ ಒಟ್ಟಿಸಿದ ಸೊವುದೆ ಬಿದ್ದೋದರೆ ಎಂತರ ಮಾಡ್‌ದು.

ಎಲ್ಯುಟ್ಟು /*ɛlyuṭṭu*/ ನಾ. ಎಲ್ಲಿ ಉಂಟು. where is it? ವಾ: ಹೈದ ಎಲ್ಯುಟ್ಟುಗಡ.

ಎಲ್ಯೊಳಾ /*elyɔḷɔ:*/ ನಾ. ಎಲ್ಲಿ ಇದ್ದಿಯ? where are you? ವಾ: ಎಲ್ಯೊಳಾ?, ಮನೆಗೆ ಬಂದಿಯನ?

ಎಲ್ಲ /*ɛlla*/ ನಾ. 1. ಸರ್ವ, 2. ಸಕಲ. 1. omni, 2. everything. ವಾ: ಇಸ್ಟ್ ಎಲ್ಲ ಬೇಡ ನಂಗೆ. **ಎಲ್ಲರ ಬಾಯಿಲೂ ಅದೇ** /*ɛllara ba:yilu: adɛ:*/ ಎಲ್ಲರೂ ಒಂದೇ ವಿಚಾರದ ಬಗ್ಗೆ ಮಾತನಾಡುವುದು. everyone talking about the same thing. ವಾ: ಎಲ್ಲರ ಬಾಯಿಲೂ ಅದೇ ವಿಚಾರ. **ಎಲ್ಲರಕ್ಕಲೇ** /*ɛllarakkalɛ:*/ ಎಲ್ಲರ ಹತ್ತಿರ. with everyone. ವಾ: ನಿನ್ನೆನೆ ಎಲ್ಲರಕ್ಕಲೇ ಹೇಳಿಯಾತ್. **ಎಲ್ಲವು** /*ɛllɔvu*/ 1. ಎಲ್ಲರು, 2. ಸರ್ವರೂ. 1. all, 2. everyone. ವಾ: ಎಲ್ಲವು ಒಟ್ಟಿಗೆ ಇದ್ದರೆ ಒಳ್ಳೆದ್. ಪ: ಎಲ್ಲವ್ – ಎಲ್ಲರು; ಎಲ್ಲವೂ – ಎಲ್ಲವರು; ಎಲ್ಲವ್ಕೂ – ಎಲ್ಲವರಿಗೂ; ಎಲ್ಲವ್ಕ್ – ಎಲ್ಲವರಿಗು; ಎಲ್ಲಾವ್ಕೆ – ಎಲ್ಲವರಿಗೆ

ಎಲ್ಲಪಡ್ಕ /*ɛllapaḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಹರಿಹರ ಪಲ್ಲತಡ್ಕ ಗ್ರಾಮದ ಜಾಗ. a locality in Harihara Pallatadka village in Sullia Taluk of Dakshina Kannada District.

ಎಲ್ಲಾ ಇದ್ದ್ ಬೇಕಾದ್ದೇ ಇಲ್ಲೆ /*ɛlla: iddɨ be:ka:ddɛ: illɛ*/ ನಾವಿ. ಇರಬೇಕಾದದ್ದು ಇಲ್ಲದ ಸಂದರ್ಭ. something that should have been there. ವಾ: ಎಲ್ಲಾ ಇದ್ದ್ ಬೇಕಾದ್ದೇ ಇಲ್ಲೆ ನನ್ನ ಹತ್ತ್ ರ.

ಎಲ್ಲಾರ್ /*ɛlla:ri*/ ನಾ. 1. ಎಲ್ಲಿಯಾದರು, 2. ಎಲ್ಲಾದರು. 1. somewhere, 2. anywhere. ವಾ: ಎಲ್ಲಾರ್ ಮನೆಲಿ ಗೊತ್ತಾದ್‌ರೆ ಅಸ್ಟೆ. ಪ: ಎಲ್ಯಾರ್ – ಎಲ್ಲಾದರು

ಎಲ್ಲಿ ಹೋಗಿರ್ದು /*ɛlli hɔ:girdu*/ ನಾವಿ. ಎಲ್ಲಿಗೆ ಹೋಗಿರಬಹುದು. where (he) must have gone? ವಾ: ನಾಯಿ ಮೂರ್ ದಿನ ಆತ್ ಮನೆಗೆ ಬರದೆ ಎಲ್ಲಿ ಹೋಗಿರ್‌ದುತ.

ಎಲ್ಲಿಟು /*ɛlliṭu*/ ನಾ. 1. ಎಲ್ಲಿದೆ, 2. ಯಾವ ಸ್ಥಳದಲ್ಲಿದೆ. 1. where is it?, 2. in which place? ವಾ: ಆಟಿ ಸೊಪ್ಪ್ ಎಲ್ಲಿಟು? ಪ: ಎಲ್ಲುಟ್ಟು – ಎಲ್ಲಿದೆ

ಎಲ್ಲಿರೋಕು /*ɛllirɔ:ku*/ ಕ್ರಿವಿ. 1. ಎಲ್ಲಿರಬೇಕೊ, 2. ಎಲ್ಲಿರಬೇಕು. 1. Where should it have been? 2, where it must have been? ವಾ: ಎಲ್ಲಿರೋಕೋ ಅಲ್ಲಿದ್ರೆ ಒಳ್ಳೆದ್.

ಎಲ್ಲಿರ್ದು /*ɛllirdu*/ ಕ್ರಿವಿ. ಎಲ್ಲಿರುವುದು. Where is it? ವಾ: ನೀವು ಈಗ ಎಲ್ಲಿರ್‌ದು.

ಎಲ್ಲೊವು /*ɛllɔ:vu*/ ನಾ. ಎಲ್ಲವರು. all. ವಾ: ಎಲ್ಲೊವು ಬಂದವೆಗಡ. ಪ: ಎಲ್ಲೋವೂ – ಎಲ್ಲವರೂ

ಎಲ್ಲೊವ್ಕೆ /*ɛllɔ:vkɛ*/ ನಾ. ಎಲ್ಲವರಿಗೆ. to/for all. ವಾ: ಎಲ್ಲೊವ್ಕೆ ಬಾಕೆ ಹೇಳಿಯೊಳೆ.

ಎಲ್ಸಂಡೆ /*ɛlsaṇḍɛ*/ ನಾ. 1. ಅಲಸಂದೆ, 2. ಒಂದು ಬಗೆಯ ದ್ವಿದಳ ಧಾನ್ಯ. 1. cow pea, 2. leguminous seed. ವಾ: ಎಲ್ಸಂಡೆ ದೈ ನೆಟ್ಟೊಳೆ.

ಎಸ್ಂಡ್ /*ɛsiṇḍi*/ ನಾ. 1. ಏಡಿ, 2. ಎಸಡಿ, 3. ಕರ್ಕಟಕ, 4. ಕುಳೀರ, 5. ಏಡಿಕಾಯಿ. 1. a crab, 2. crustacean, 3. Cancer, 4. Brachyura, 5. phylum Arthropoda. **ಎಸ್ಂಡ್‌ದ್ ಕಾಲ್ ಎಸ್ಂಡ್‌ಗೆ ಸೂಲ(ಗಾ). ಎಂಟು ಕಾಲು ಸೊಂಟ ಮುರ್ಕ ನೆಂಟ್ರ್ ಬಂದ್ರೆ ಕ್ವಾಂಬರೆಗೆ ಹುಕ್ಕ?, ದೇವ್ರು ಒಳಗೆ ಗಂದ ಹೊರೆಗೆ? – ಎಸ್ಂಡ್(ಒ).** ವಾ: ಎಸ್ಂಡ್ ನ ಸುಟ್ಟ್ ತಿನೊಕು.

ಎಸ್ಟ್ /*ɛsṭi*/ ಕ್ರಿವಿ. 1. ಎಷ್ಟು, 2. ಯಾವ ಪ್ರಮಾಣ, 3. ಯಾವ ಗಾತ್ರ. 1. how much, 2. what quantity, 2. what size. ವಾ: ಕಾಲ್ ಗೌಸ್‌ಗೆ ಎಸ್ಟ್‌ಗಡ. **ಎಷ್ಟ್ಂತ** /*ɛṣṭnta*/ ಎಷ್ಟು ಅಂತ. how much? ವಾ: ಅವಂಗೆ ಎಷ್ಟುಂತ ಹೇಳುದು, ಅವಂಗೆ ಅರ್ತವೆ ಆದುಲೆ. **ಎಸ್ಟಾರ್** /*ɛsṭa:ri*/ ಎಷ್ಟೇ ಆದರೂ. whatever it is. ವಾ: ಎಸ್ಟಾರ್ ರಕ್ತ ಸಂಬಂದಲಾ. ಪ: ಎಷ್ಟಾರು – ಎಸ್ಟಾದರು. **ಎಸ್ಟೊತ್ತ್** /*ɛsṭɔti*/ ಎಸ್ಟು ಹೊತ್ತು. how much time? ವಾ: ಬಾಕೆ ಎಸ್ಟೊತ್ತ್. **ಎಸ್ಟೊಸರ್‌ತಿ** /*ɛsṭɔsarti*/ ಎಷ್ಟೋ ಬಾರಿ, 2. ಎಸ್ಟೋ ಸಾರಿ. 1. a number of times, 2. often. ವಾ: ಎಸ್ಟೊಸರ್‌ತಿ ನಿಮ್ಮ ಗ್ಯಾನ ಮಾಡಿನೆ. **ಎಸ್ಟ್ ಸುತ್ತಿರು** /*ɛsṭi suttiru*/ 1. ಎಷ್ಟು ಅಡ್ಡಾಡಿದರು, 2. ಎಷ್ಟು ಸುತ್ತಿದರೂ. 1. in spite of wandering, 2. inspite of roaming about. ವಾ: ಎಸ್ಟ್ ಸುತ್ತಿರು ಅವರ ಮನೆ ಎಲ್ಲಿತ ಗೊತ್ತೇ ಆತ್‌ಲೆ.

ಎಸ್ಳ್ /*ɛsiḷi*/ ನಾ. 1. ಹೂವಿನ ಎಸಳು, 2. ದಳ. 1. petal of a flower, 2. a petal. ವಾ: ಹೂನ ಎಸ್ಳ್‌ನ ಬುಡ್‌ಸುದು. ಪ: ಎಸ್ಳು – ದಳ

ಎಳಿ /*ɛḷi*/ ಕ್ರಿ. ಎಳೆಯು. to pull. ವಾ: ಇದಕ್ಕೆ ಉಪ್ಪು ಎಳ್ದುಟು. ಪ: ಎಳಿನಿಂತ – ಎಳೆಯಿರಿ, ಎಳಿಯಕನ – ಎಳೆಯುವಾಗ, ಎಳಿಯದು – ಎಳೆಯುವುದು; ಎಳಿವ – ಎಳೆಯುವ

ಎಳಿಗಿತ್ /*ɛḷigiti*/ ನಾ. ಕೋಪ ನಿರಾಸೆ ಅಸಹನೆಯಿಂದ ಕಿರುಚಾಡಿದಾಗ ಎದ್ದಿತು ಎಂದು ಹೇಳುವ ವ್ಯಂಗ್ಯ ನುಡಿ. a sarcastic remark. ವಾ: ಮತ್ತೆ ಸಿಟ್ಟ್ ಎಳಿಗಿತ್ ಕಂಡದೆ ಅಂವಂಗೆ.

ಎಳಿನೆ /*eḷinɛ*/ ಕ್ರಿ. ಎಳಿಯು ಎಂಬುದರ ಸ್ತ್ರೀ ಲಿಂಗ ರೂಪ. to pull, a feminine form.

ಎಳಿರಾ /*eḷira:*/ ನಾ. ಎಳಿಯು ಎಂಬುದರ ಪುಲ್ಲಿಂಗ ರೂಪ. to pull, a masculine form.

ಎಳಿವ ಗುಣ /*eḷiva guṇa*/ ನಾವಿ. ಹಿಡಿದುಕೊಳ್ಳುವ ಶಕ್ತಿ. ability to withhold/tolerate. ವಾ: ಹತ್ತಿ ಅರ್ವೆಗೆ ನೀರ್ ಎಳಿವ ಗುಣ ಇದ್ದದೆ.

ಎಳುವೆ /*eḷuve*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮಡಪ್ಪಾಡಿ ಗ್ರಾಮದ ಜಾಗ. a locality in Madappadi village in Sullia Taluk of Dakshina Kannada District.

ಎಳೆ ಮಾಸ /*ɛḷɛ ma:sa*/ ನಾವಿ. ಎಳೆಯದಾದ ಮಾಂಸ. tender meat. ವಾ: ಎಳೆಮಾಸ ಲಾಯ್ಕಲಿ ಬೆಂದದೆ.

ಎಳೆ ಹುತ್ತೆರಿ /*ɛḷɛ huttɛri*/ ನಾವಿ. 1. ರೋಹಿಣಿ ನಕ್ಷತ್ರದ ನವೆಂಬರ್ ತಿಂಗಳಲ್ಲಿ ನಡೆದರೆ ಎಳೆ ಹುತ್ತರಿ ಎನ್ನುವರು, 2. ನವೆಂಬರ್ ತಿಂಗಳ ಹುತ್ತರಿ. 1. celebrating Huttari (harvest) festival on the full moon day of Rohini star, 2. celebrating Huttari festival in the month of November. ವಾ: ರೋಹಿಣಿ ನಕ್ಷತ್ರದ ನವಂಬರ್ ತಿಂಗಳ್‌ಲಿ ನಡ್‌ದರೆ ಅದರ ಎಳೆ ಹುತ್ತೆರಿತ ಕರೆದು.

ಎಳೆನೆಗೆ /*ɛḷɛnɛgɛ*/ ನಾವಿ. 1. ಎಳೆಯ ನಗು, 2. ಮುಗುಳುನಗು. 1. an infant's smile, 2. an affectionate smile. ವಾ: ಹುಟ್ಟಿದ ಕೂಸುನ ಎಳೆನೆಗೆ ನೋಡಿರೆ ಮನ್‌ಸಿಗೆ ಕುಸಿ.

ಎಳೆಸರ /*ɛḷɛsara*/ ನಾ. ಒಂದು ಎಳೆಯ ಸರ. a chain/necklace of one line. ವಾ: ಚಿನ್ನದ ಎಳೆಸರ ಕಾಂಬಲೆ.

ಎಳ್ /*ɛḷi*/ ನಾವಿ. 1. ಎಳೆಯ, 2. ಬಲಿಯದ. 1. tender, 2. unripe. ವಾ: ಎಳ್ ಪೇರಲಕಾಯಿ ಇದ್. ಪ: ಎಳ್ಸ್ – ಎಳೆಯ. **ಎಳಕ** /*ɛḷaka*/ 1. ಎಳೆಯದಾದ, 2. ಬಲಿಯದ, 3. ಹೀಚು. 1. tender 2. unripe, 3. not fully grown. ವಾ: ಎಳಕ ಕಾಯಿನ ಕೊಯ್‌ಬಡ.

ಎಳ್ಂದ್ಲೆ /*ɛḷindlɛ*/ ನಾ. ಹಸಿರು ಬಣ್ಣದ ಹಕ್ಕಿ. a green coloured bird. ವಾ: ಅದ್ ಎಳ್ಂದ್ಲೆ ಹಕ್ಕಿ. ಪ: ಏರ್ಂದ್ಲೆ(ತು)

ಎಳ್ಕ /*ɛḷka*/ ಕ್ರಿ. 1. ಸೆಳೆತ, 2. ಕಾಮುಕತನ. 1. attraction, 2. lustfulness. ವಾ: ಅಂವ ಬಾರೀ ಎಳ್ಕದಂವ.

ಎಳ್ಕಂಡ್ /*ɛɭkəɳɖɨ*/ ಕ್ರಿವಿ. ಎಳೆದುಕೊಂಡು. to pull. ವಾ: ದನ ಬೊಳ್ಳಿನ ಎಳ್‌ಕಂಡ್ ಹೋತ್.

ಎಳ್ಕಿತ್ /*elkitɨ*/ ಕ್ರಿ. ಎದ್ದಿತು. raised. ವಾ: ದೋಸೆ ಎಳ್‌ಕಿತ್. ಪ: ಎಲ್ಕ್‌ಸ್ – ಏಳಿಸು, ಎದ್ದೇಳಿಸು; ಎಳ್ಳಿತ್ – ಎದ್ದಿತು

ಎಳ್ಕಿಸು /*ɛɭkisu*/ ಕ್ರಿ. 1. ಸಿಪ್ಪೆ ತೆಗೆ, 2. ಸುಲಿಯು. 1. peeled, 2. to remove the skin. ವಾ: ಕಾಯಿನ ಎಳ್ಕಿಸಿ ಕೊಡಿ. ಪ: ಎಳ್ಕುಸುದು – ಸುಲಿಯುವುದು/ ಎಬ್ಬಿಸುವುದು

ಎಳ್ಕೊಸ್ /*ɛɭkosɨ*/ ಕ್ರಿ. 1. ಎಬ್ಬಿಸು, 2. ಕಿತ್ತು ತೆಗೆ. 1. to arouse, 2. to open by force. ವಾ: ಡೊಬ್ಬಿದ್ ಮುಚ್ಚಳನ ಎಳ್ಕೊಸ್.

ಎಳ್ತ[1] /*ɛɭta*/ ಕ್ರಿ. 1. ಎಳೆಯು, 2. ಎಳಕ/ಸೆಳೆತ. 1. a pulling sensation (having pain in parts of body), 2. muscle cramp. ವಾ: ಚಳಿಗೆ ಕಾಲ್ ಎಳ್ತ ಸುರಾದೆ.

ಎಳ್ತ್[2] /*ɛɭtɨ*/ ನಾ. 1. ಎಳಸು, 2. ಎಳೆಯ, 3. ಹೀಚು. 1. tender, 2. unripe, 3. not fully developed. **ಎಳ್ತ್‌ಲೇ ಜಿಂಟಿ ಹಾಕೊಕು(ನು).** ವಾ: ನೀರ್ ಸೋಂತೆ ಬಾರಿ ಎಳ್ತ್.

ಎಳ್ತ್‌ಕಾರ /*ɛɭtka:ra*/ ನಾ. ಬರಹಗಾರ. a writer. ವಾ: ಎಳ್ತ್‌ಕಾರನ ಬರವಣಿಗೆ ಲಾಯ್ಕ ಉಟ್ಟು.

ಎಳ್ದರೆ /*ɛ:ɭdarɛ*/ ನಾ. ಎಳೆದರೆ. if something is pulled. ವಾ: ಬಾಗ್‌ಲ್‌ನ ಎಳ್ದರೆ ಬಾದೆಲೆ.

ಎಳ್ದಾಟ /*ɛɭda:ʈa*/ ಕ್ರಿವಿ. ಎಳೆದಾಟ. pulling each other. ವಾ: ಮಕ್ಕಳ ಎಳ್ದಾಟ ನೋಡಿಕಾಲೆ. ಪ: ಎಳ್ದಾಡುದು – ಎಳೆದಾಡುವುದು

ಎಳ್ದ್[1] /*ɛɭdɨ*/ ಕ್ರಿ. 1. ಎಳೆದು, 2. ಚಾಚು, 3. ವಿಸ್ತರಿಸು. 1. to pull, 2. to spread, 3. to extend. **ತಲೆಗೆ ಎಳ್ದರೆ ಕಾಲಿಗೆ ಇಲ್ಲೆ, ಕಾಲಿಗೆ ಎಳ್ದರೆ ತಲೆಗೆ ಇಲ್ಲೆ(ನು).**

ಎಳ್ದ್[2] /*ɛldɨ*/ ನಾ. ಎಳೆದು. to pull. **ಮಾತ್ ಎಳ್ದಷ್ಟ್ ಉದ್ದ ಆಕಂಡೆ ಹೋದೆ(ನು).** ವಾ: ಕರ್‌ನ ಎಳ್‌ದ್ ಇತ್ತನ ಬರಿಗೆ ಕಟ್ಟ್.

ಎಳ್ಪಕಜೆ /*eɭpakajɛ*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅರಂತೋಡು ಗ್ರಾಮದ ಜಾಗ. a locality in Arantodu village in Sullia Taluk of Dakshina Kannada District.

ಎಳ್ಳಿಸ್ /*ɛɭɭisɨ*/ ಕ್ರಿ. 1. ಎಬ್ಬಿಸು, 2. ಕಿತ್ತಿಡು. 1. to arouse, 2. to pull. ವಾ: ಬಾಳೆದೈನ ಎಳ್ಳಿಸ್ ಮತ್ತೆ ತಕಣೆ.

ಎಳ್ಳೊಂಬಾಂತ /*ɛɭɭɔ:mbɔ:nta*/ ಕ್ರಿವಿ. ಎಳೆದುಕೊಂಡು ಬಾ ಅಂತ. come on. ವಾ: ನೀ ದನನ ಎಳ್ಕೊಂಬಾಂತ ಹೇಳ್ದೆ ಅಲ.

ಎಳ್ಳ್[1] /*ɛɭɭɨ*/ ಕ್ರಿ. ಅಗೆಯು. to dig. **ದೈನ ಬೇರ್ ಬುಟ್ಟು ಮರದ ಬೇರ್ ಎಳ್ಳಿಕೋತು(ಗಾ). ಎಳ್ಳ್ ನೀರ್ ಬುಡ್(ನು).** ವಾ: ಕೊಟ್ಟ್‌ಲಿ ಮೊಣ್ಣು ಎಳ್ಳುದು. ಪ: ಎಳ್ಳಿಕೆತ – ಅಗೆಯಲೆಂದು; ಎಳ್ಳುದು – ಅಗೆದುಕೊಂಡು ಇತ್ತು; ಎಳ್ಳಿತ್ತು – ಅಗೆಯುವುದು

ಎಳ್ಳ್[2] /*ɛɭɭɨ*/ ನಾ. ಎಳ್ಳು. ಒಂದು ವಿಧದ ಎಣ್ಣೆಕಾಳು. sesame. **ಎಳ್ಳ್ ಉಂಡೆ** /*ɛɭɭɨ uɳɖɛ*/ ಎಳ್ಳುಉಂಡೆ. a round sweet dish made of sesame and jaggery. ವಾ: ಬೆಲ್ಲದ ಜೋನಿಲಿ ಮಾಡ್‌ದ ಎಳ್ಳ್‌ಉಂಡೆ ಲಾಯ್ಕ.

ಎಳ್ಳ್ ನೀರ್ /*ɛɭɭɨ ni:rɨ*/ ನಾವಿ. 1. ಎಳ್ಳುನೀರು, 2. ತಿಲಾಂಜಲಿ. 1. to give up, 2. to quit. ವಾ: ಕೊಟ್ಟ ದುಡ್ಡುಗೆ ಎಳ್ಳ್ ನೀರ್ ಬುಡುದೆ ಒಳ್ಳೆದ್ ಕಂಡದೆ.

ಎಳ್ಳ್ ಮೆಂತೆ /*ɛɭɭɨ mɛntɛ*/ ನಾ. ಎಳ್ಳು, ಮೆಂತ್ಯ, ಬೆಲ್ಲ, ತುಪ್ಪದ ಮಿಶ್ರಣ, 2. ಎಳ್ಳಡಿಗೆ, 3. ಬಾಣಂತಿ ಹಾಗು ಹೆಣ್ಣು ಮಕ್ಕಳು ಮೈ ನೆರೆದಾಗ ಕೊಡುವುದು. a mixture of sesame, fenugreek seed, jaggery and ghee (usually served to a new mother (a woman who has delivered a baby). ವಾ: ಬಾಣ್ತಿಗೆ ಎಳ್ಳ್ ಮೆಂತೆ ಮಾಡಿ ಕೊಟ್ಟವೆ.

ಏ

ಏಂಟ್ /*ɛ:ṇṭi*/ ನಾ. ಕುಂಟುತ್ತಾ ನಡೆ. to limp. ವಾ: ಅಂವ ಏಂಟಿಕೊಂಡು ಹೋದೆ.

ಏಂದುದು /*endudu*/ ಕ್ರಿವಿ. ಹಾಲು, ಪಾಯಸ ಕುದಿಸುವಾಗ ಸೌಟಿಂದ ಮಗುಚುವುದು. stirring the milk with a spoon while it is getting boiled. ವಾ: ಹಾಲ್‌ನ ಏಂದಿರೆ ನೊರೆ ಬಂದ್ ಬೇಗ ಕಾದದೆ.

ಏಂಪೆ /*ɛ:mpɛ*/ ನಾ. ಮೀನುಹಿಡಿಯುವ ಸಾಧನ. a fish trap. ವಾ: ಏಂಪೆ ತಕಂಡ್ ಚೋಡಿಗೆ ಕೊಯ್‌ಲೆ ಮೀನ್ ಹಿಡೆಕೆ ಪೋಯ.

ಏಕ್‌ದಂ /*e:kidaṁ*/ ಏಪ. 1. ಒಂದೇ ಸಮನೆ, 2. ಏಕಾಏಕಿ. 1. continuously, 2. all of a sudden. ವಾ: ಅಂವನ ಮಾತಾಡ್‌ಸಿಕೆ ಹೋದರೆ ಏಕ್‌ದಂ ಹೊಡೆಕೆ ಬಂದಂಗೆ ಬಂದದೆ.

ಏಕ್ರೆ /*ɛ:krɛ*/ ನಾ. 1. ಎಕರೆ, 2. ಭೂಮಿಯ ಒಂದು ಅಳತೆ. 1. one acre, 2. a unit of land. ವಾ: ಒಂದ್ ಏಕ್ರೆಲಿದ್ದ ಬಾಳೆದೈ ಮಳೆಗೆ ಮನಾರ ಹಾಳಾಗಿ ಹೋತು.

ಏಕ್ಲ್ /*ɛ:kli*/ ನಾ. 1. ಯಾಕಲು ಗದ್ದೆ, 2. ಬೀಜ ಹಾಕುವ ಗದ್ದೆ, 3. ಭತ್ತದ ಸಸಿ ಮಡಿಯ ಗದ್ದೆ. a part of the paddy field earmarked for the growth seedling for transplanting. ವಾ: ಏಕ್ಲ್ ಗದ್ದೆ ವಣ್‌ಗಿ ಹೋವ್ಯು. ಪ: ಏಕಲ್

ಏಗು /*ɛ:gu*/ ಕ್ರಿ. 1. ಸಾಗಿಸು, 2. ಏನು ಪ್ರಯೋಜನವಾಗು, 3. ಮೇಲುಸಿರು ಬಿಡು. 1. to transport, 2. what is the advantage, 3. to pant. ವಾ: ಹೆಂಡ ಕುಡ್‌ಕರ ಒಟ್ಟಿಗೆ ಏಗುದು ಬಾರಿ ಬಜ್ಜ. ಪ: ಏಗುದು – ಹೊಂದಿಕೊಂಡು ಹೋಗುವುದು; ಅಸಾಧ್ಯ ಎಂಬ ಮಾತು ಹೇಳುವುದಕ್ಕೆ ಬಳಸುವ ಪದ

ಏಚನೆ /*ɛ:canɛ*/ ನಾ. 1. ಯೋಚನೆ, 2. ಆಲೋಚನೆ. 1. thought, 2. thinking. ವಾ: ಹಂಗೆ ಎಂತ ಏಚನೆಲಿ ಮುಳ್‌ಗಿದ್.

ಏಚಿಮರ /*ɛ:cimara*/ ನಾ. ಸರಳೀ ಮರ. a variety of tree. ವಾ: ಏಚಿ ಮರದ ಗೆಲ್ಲ್‌ಲಿ ಕೊಟ್ಟುಗೆ ಕಾವ್ ಮಾಡುವೆ. **ಏಚಿಹಣ್ಣ್** /*ɛ:ci haṇṇi*/ 1. ಒಂದು ವಿಧದ ಹಣ್ಣು, 2. ಸರಳಿ ಹಣ್ಣು. a fruit. ವಾ: ಆ ಮರಲಿ ಏಚಿ ಹಣ್ಣ್ ಬುಟ್ಟದ್ ನೋಡು.

ಏಟ್ /*ɛ:ṭi*/ ಕ್ರಿ. 1. ಏಟು, 2. ಪೆಟ್ಟು, 3. ಹೊಡೆತ. 1. to hit, 2. to beat, 3. to thrash. ವಾ: ಇಸ್ಕೂಲ್‌ಲಿ ಏಟ್/ಪೆಟ್ಟ್ ಬೀತ್.

ಏಡಗಡೆ /*eḍagaḍɛ*/ ನಾ. 1. ಎಡಗಡೆ, 2. ಎಡಬದಿ. 1. on the left, 2. left side. ವಾ: ಏಡಗಡೆ ಏಳಿಕಾದ್.

ಏಡ್ /*ɛ:ḍi*/ ನಾ. 1. ಆಡು, 2. ಮೇಕೆ. a goat. **ಏಡ್ ಹೋದ ಕಾಡ್ ಹಾಳ್(ಗಾ).** ವಾ: ಏಡ್ ಸಾಂಕಿರೆ ಬಾರಿ ಲಾಬ ಉಟ್ಟು.

ಏಡ್ ಗಡ್ಡ /*ɛ:ḍi gaḍḍa*/ ನಾ. ಹೋತನ

ಗಡ್ಡದಂತಿರುವ ಗಡ್ಡ. A goatee. ವಾ: ಅಂವಂದ್ ಏಡ್ ಗಡ್ಡ.

ಏಡ್ಂದ್ಲೆ /*ɛ:ḍindle*/ ನಾ. 1. ಗುಂಪಾಗಿ ವಾಸಿಸುವ ಹಸಿರು ಬಣ್ಣದ ಹಕ್ಕಿ, 1. ಸಿಳ್ಳೆಹಕ್ಕಿ. 1. green coloured birds that live together, 2. Malabar whistling thrush.

ಏಣಾವರ /*e:ṇa:vara*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಆಲೆಟ್ಟಿ ಗ್ರಾಮದ ಜಾಗ. a locality in Aletti village in Sullia Taluk of Dakshina Kannada District.

ಏಣಿ /*ɛ:ṇi*/ ನಾ. 1. ಮೇಲಕ್ಕೆ ಹೋಗಲು ಬಳಸುವ ಸಾಧನ, 2. ನಿಚ್ಚಣಿಕೆ, 3. ಅಟ್ಟ ಹತ್ತಲು ಇರಿಸಿರುವ ಮರದ ಅಥವಾ ಬಿದಿರಿನ ಏಣಿ. a ladder. ವಾ: ಅಟ್ಟ ಹತ್ತಿಕೆ ಏಣಿ ಬೇಕ್. ಪ: ಏಣಿ ಮೆಟ್ಟ್(ಟ್ಲ್) – ಏಣಿ ಮೆಟ್ಟಿಲು. **ಏಣಿಕಾಲ್** /*ɛ:ṇikalɨ*/ 1. ಮರ ಅಥವಾ ಬಿದಿರಿನ ಪಟ್ಟಿ (ಮೆಟ್ಟಿಲು) ಗಳನ್ನು ಅಳವಡಿಸಿದ ಮರ. rungs of a ladder. ವಾ: ಏಣಿಕಾಲ್ ಬಾರಿ ಸಣ್ಣದಾಗಿ ಕಾಲ್ ಇಸಿಕೆ ಹೆದ್‌ರಿಕೆ ಆದೆ. **ಏಣಿಮೆಟ್ಟ್ ಮರ** /*ɛ:ṇimɛṭi mara*/ ಅಟ್ಟಕ್ಕೆ ಹತ್ತುವ ಮರದ ಏಣಿ. a ladder to climb the attic. ವಾ: ಬಾಳೆಗೊನೆ ಏಣಿ ಮೆಟ್ಟ್‌ನ ಮರಕೆ ತೂಂಗುಸಿಯೊಳೊ.

ಏಣಿಯಾರ್ /*e:ṇiya:r*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಏಣೇಲ್ /*ɛ:ṇe:lɨ*/ ನಾ. ಮಳೆಯನ್ನೇ ಆಶ್ರಯಿಸಿ ಮಾಡುವ ಆರು ತಿಂಗಳ ಬೆಳೆಯುವ ಬೇಸಾಯ ಕ್ರಮ. rain fed agriculture, usually for six months. ವಾ: ಮಳೆನ ನಂಬಿ ಏಣೇಲ್ ಸುರು ಮಾಡ್‌ದು.

ಏದುದು /*e:dudu*/ ಕ್ರಿ. 1. ಹೊಂದಿಕೊಳ್ಳು, 2. ಸುಧಾರಿಸಿ ಕೊಳ್ಳು, 3. ನಿಭಾಯಿಸು. 1. to adjust, 2. to rest/ tolerate, 3. to manage. ವಾ: ಈಗನೊವ್ ಹಿರಿಯರೊಟ್ಟಿಗೆ ಏದುದು ಬಜ್ಜತ ತಿಳ್ಕಂಡವೆ.

ಏನಡ್ಕ /*e:naḍka*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಎಡಮಂಗಲ ಗ್ರಾಮದ ಜಾಗ. 1. family, 2. lineage, 3. a locality in Edamangala village in Sullia Taluk of Dakshina Kannada District.

ಏನಾ /*e:na:?*/ ಕ್ರಿವಿ. 1. ಹಿರಿಯರು ಕಿರಿಯ ಹುಡುಗರನ್ನು ಅಥವಾ ಗೆಳೆಯರು/ ಆಪ್ತರು ಒಬ್ಬರನ್ನೊಬ್ಬರು ಮಾತನಾಡಿಸುವ ರೀತಿ, ಹೇಗಿದ್ದಿಯಾ? ಚೆನ್ನಾಗಿದ್ದೀಯಾ? How are you? (used while talking to children and friends). ವಾ: ಏನಾ? ಕಾಂಬದೇಲೆ.

ಏನಾಕು /*e:na:ku*/ ಕ್ರಿವಿ. ಏನಾಗಬೇಕು. what do you want/need? ವಾ: ಅವು ನಿಂಗೆ ಏನಾಕು? ಪ: ಏನಾಗುಟ್ಟು ತ – ಏನಾಗಿದೆಯೆಂದು; ಏನಾತಪ್ಪ – ಏನಾಗಿದೆಯಪ್ಪ

ಏನಾರ್ /*ɛ:na:ri*/ ನಾ. ಏನಾದರು. anything? ವಾ: ಏನಾರ್ ಮಾಡಿಕಣಿ ನನ್ನ ತಲೆ ತಿಂಬದು ಮಾತ್ರ ಬೇಡ.

ಏನಿಯಾ /*e:niya:*/ ನಾ. 1. ಏನು?, 2. ಕಿರಿಯರನ್ನು ಅಥವಾ ಸಮಾನರನ್ನು ಕೇಳುವ ರೀತಿ. 1. What? 2. used while talking to children or equals. ವಾ: ಏನಿಯಾ? ಎಂತಕೆ ನನ್ನ ಅಸ್ಟ್ ಜೋರುಲಿ ಕರ್‌ದದ್.

ಏನಿಲ್ಲೆ /*e:nillɛ*/ ಕ್ರಿವಿ. ಏನೂ ಇಲ್ಲ. nothing. ವಾ: ಏನಿಲ್ಲೆ ಸುಮ್ಮನೆ ಇತ್ತ ಹಾಂಗೆ ಬಂದೆಸ್ಟೆ. ಪ: ಏನಿಲ್ಲದೆ ಇರಿಕಿಲೆ

ಏನುಟ್ಟು /*e:nuṭṭu*/ ಕ್ರಿವಿ. ಏನು ಇದೆ? what is there? ವಾ: ತಿಂಬಕೆ ಏನುಟ್ಟು?

ಏನೆಕಲ್ಲ್ /*e:nekall*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಬಳ್ಪ ಗ್ರಾಮದ ಜಾಗ. a locality in Balpaa village in Sullia Taluk of Dakshina Kannada District.

ಏನೇಳ್ರೆ /*e:ne:ḷrɛ*/ ಕ್ರಿವಿ. ಏನು ಹೇಳುತ್ತೀರಾ? what will you tell/say. ವಾ: ಏನೇಳ್ರೆ ನನ್ನ ಮಾತಿಗೆ.

ಏನೊ /*e:nɔ:*/ ಕ್ರಿವಿ. ಹೇಗೋ. somehow. ವಾ: ಏನೋ ಪಂಚಾತಿಗೆ ಮಾಡ್‌ತೊಳೊ.

ಏನ್‌ಂತ /*e:nɨanta*/ ಕ್ರಿವಿ. ಏನೂಂತ. what? ವಾ: ಏನ್‌ಂತ ಹೇಳ್‌ದು ನಮ್ಮ ಹಣೆಬರನ.

ಏನ್‌ನೆ /*e:ninɛ*/ ಕ್ರಿವಿ. ಹಿರಿಯರು ಕಿರಿಯ ಹುಡುಗಿಯರನ್ನು ಮಾತನಾಡಿಸುವ ರೀತಿ (ಏವ), ಹೇಗಿದ್ದೀಯಾ? ಎಂಬ ಅರ್ಥದಲ್ಲಿ ಈ ರೀತಿ ಕೇಳುತ್ತಾರೆ. How are you (used while talking

to younger girls). ವಾ: ಏನ್‌ನೆ ಗೂಡೆ ಹೆಂಗೊಳ? ಪ: ಏನ್ನೆ – ಹೇಗಿದ್ದಿಯಾ?(ಏವ)

ಏನ್ಯಾ /*ɛ:nya:*/ ಕ್ರಿವಿ. ಹಿರಿಯರು ಕಿರಿಯ ಹುಡುಗರನ್ನು ಅಥವಾ ಗೆಳೆಯರು/ ಆಪ್ತರು ಒಬ್ಬರನ್ನೊಬ್ಬರು ಮಾತನಾಡಿಸುವ ರೀತಿ, ಹೇಗಿದ್ದಿಯಾ? ಚೆನ್ನಾಗಿದ್ದೀಯಾ? How are you? (used while talking to children and friends). ವಾ: ಏನ್ಯಾ? ಪತ್ತೇ ಇಲ್ಲೆ ಇಸ್ಟ್ ದಿನಂದ?

ಏಪೆ /*ɛ:pɛ*/ ನಾ. ಹೊಳೆ, ತೋಡುಗಳಲ್ಲಿ ಕಂಡುಬರುವ ಉದ್ದ ಜಾತಿಯ ಮೀನು. 1. a rectangular bamboo trap to catch fish in water falls, canals, fields, ponds, 2. Ubar fish/ fishing activity during monsoon. **ಏಪೆಲಿ ಸೆಕ್ಕಿದಂಗೆ ಆಗುಟು(ನು).** ವಾ: ಮೀನ್‌ಗಳ ಹಿಡೆಕೆ ಏಪೆನ ಬಳ್‌ಸುವೆ.

ಏಮೆ /*ɛ:mɛ*/ ನಾ. 1. ಆಮೆ, 2. ಕೂರ್ಮ, 3. ಕಮಠ, 4. ಕಚ್ಛಪ. a tortoise. ವಾ: ಏಮೆದ್ ಮೈಯೆಲ್ಲ ಚಿಪ್ಪಿ.

ಏಯ್ /*ɛ:yi*/ ಅ. ಸಲುಗೆಯ ಮಾತು. leniency. ವಾ: ಏಯ್ ಬಾನೆ ಇತ್ತ ಒಮ್ಮೆ.

ಏರಿ¹ /*e:ri*/ ನಾ. 1. ದಿಣ್ಣೆ, 2. ಕಟ್ಟದ ದಂಡೆ, 3. ಎತ್ತರವಾದ ಕಟ್ಟೆ. 1. an uphill, 2. bank of a water body, 3. a lake. **ಏತ್ ಏರಿಗೆಳ್ಯಕನ ಕೋಣ ನೀರಿಗೆಳ್ತ್(ಗಾ). ಎರಡ್ ಕೆರೆಗೆ ಒಂದೇ ಏರಿ – ಕಣ್ಣ್(ಒ).** ವಾ: ಗದ್ದೆ ಏರಿಲೆ ನಡ್‌ಕಂಡ್ ಹೋಕು.

ಏರಿ² /*e:ri*/ ನಾ. ಒಂದು ಜಾತಿಯ ಕಡಲ ಮೀನು. a salt water fish.

ಏರಿಕಿಲೆ /*ɛ:rikilɛ*/ ಕ್ರಿ. ಏರುವುದಿಲ್ಲ. won't raise/ climb. **ಆರಕ್ಕೆ ಏರಿಕಿಲೆ ಮೂರಕ್ಕೆ ಇಳಿಯಕಿಲೆ(ನು).** ವಾ: ಮಳೆ ಬಂದರೆ ಬೀಜಕೆ ಕ್ರಾಯ ಏರಿಕಿಲೆ.

ಏರೆಸ್ಟ್ /*ɛ:rɛsṭi*/ ನಾ. ಎಪ. 1. ಬಂಧನ, 2. ಕೈದು. arrest. ವಾ: ಅಂವನ ಏರೆಸ್ಟ್ ಮಾಡಿಯೊಳೊಗಡ.

ಏರ್ಕಿ /*ɛ:rki*/ ನಾ. ಸದಾ ಕಿರಿಕಿರಿ ಮಾಡುತ್ತಾ ಏನಾದರೂ ಮಾತನಾಡುತ್ತಾ ಇರುವವ. troublesome. ವಾ: ಏರ್ಕಿ ಮೊನ್ಸ.

ಏರ್ತ್ /*ɛ:rtti*/ ಕ್ರಿ. ಏರಿತು. increased/raised. ವಾ: ಅಂವನ ಮಾತ್ ಕೇಳಿ ಪಿತ್ತ ನೆತ್ತಿಗೇರ್‌ತ್.

ಏರ್ದು /*ɛ:rdui*/ ಕ್ರಿ. 1. ಎತ್ತರದ ಜಾಗಕ್ಕೆ ಹತ್ತುವುದು, 2. ಉದ್ಧಾರವಾಗದಿರುವುದು. 1. to climb a higher ground, 2. not rising higher in social position. **ಆರಕ್ಕೆ ಏರ್ದುಲೆ ಮೂರಕ್ಕೆ ಇಳಿಯದುಲೆ(ಗಾ).** ವಾ: ನಾಳೆ ಕೊಡಿ ಏರ್ದು. **ಏರ್‌ದಂವ** /*ɛ:ridanva*/ 1. ಏರಿದವನು, 2. ಮೇಲೇರು. 1. the one who has climbed the higher ground, 2. to climb up. **ಏರ್ ದಂವ ಇಳಿಯಕು(ಗಾ).** ವಾ: ಮರದ ಕೊಡಿಗೆ ಏರ್‌ದಂವ ಇಳಿಕೆ ಎಸ್ಟ್ ಹೊತ್ತು. **ಏರ್‌ದಸ್ಟೇ ಇಳಿಯೊಕು** /*ɛ:ridasṭɔ: iḷiyɔ:ku*/ 1. ಮೇಲೆ ಏರಿದವನು ಕೆಳಗೆ ಇಳಿಯಲೇಬೇಕು, 2. ಎತ್ತರ ತಗ್ಗು ಸಮಸಮ. what goes up will come down. ವಾ: ಮಳೆ ಬಂದರೆ ಬೀಜಕೆ ಕ್ರಾಯ ಏರಿಕಿಲೆ.

ಏರ್‌ದೆ /*ɛ:rḍɛ*/ ಕ್ರಿ. 1. ಹೆಚ್ಚಾಗುತ್ತದೆ, 2. ಏರು, 3. ಏರ್ತೆ. 1. to increase, 2. to raise, 3. higher. ವಾ: ಈ ಸರ್‌ತಿ ಪೆಟ್ರೋಲಿಗೆ ರೇಟ್ ಏರ್‌ದೆ. ಪ: ಏರ್ಸುದು – ಏರಿಸುವುದು

ಏರ್ಪ /*ɛ:rpa*/ ಕ್ರಿ. ಬೇಡುವುದು. to beg. ವಾ: ಏರ್ಪದ ಬೊದ್ಕ್ ಯಾರಿಗು ಬೇಡ.

ಏರ್ಪಡ್ಸ್ /*ɛ:rpa:ḍsi*/ ಕ್ರಿ. 1. ಏರ್ಪಡಿಸು, 2. ಹೊಂದಾಣಿಕೆ ಮಾಡು. 1. to organise, 2. to adjust. ವಾ: ಕ್ರಿಕೆಟ್ ಜಂಬರ ಏರ್‌ಪಡ್ಸಿಯೊಳೊ.

ಏರ್ಪಾಡ್ /*e:rpa:ḍi*/ ನಾವಿ. ವ್ಯವಸ್ಥೆ ಮಾಡು. to arrange. ಪ: ಏರ್ಪಡ್ಸ್ – ವ್ಯವಸ್ಥೆ ಮಾಡು, ಏರ್ಪಾಟ್

ಏಲಂ /*ɛ:laṁ*/ ನಾ. ಹರಾಜು. to auction. ವಾ: ಸಾಲ ಮಾಡಿ ಮನೆ ಏಲಂಗೆ ಬಂದುಟು.

ಏಲಕ್ಕಿ /*ɛ:lakki*/ ನಾ. 1. ವಾಣಿಜ್ಯ ಬೆಳೆ, 2. ಏಲಕ್ಕಿ, 3. ಸುವಾಸನೆಯ ಕಾಳುಗಳು ಇರುವ ಒಂದು ಬಗೆಯ ಕಾಯಿ. 1. a commercial crop, 2. cardamom, 3. a spice. **ಪಟ್ಟಿ ಪಟ್ಟಿ ಕಾಯಿ ಪರಿಮಳದ ಕಾಯಿ, ತಿಂದವರ ಬಾಯಿ ಗಮ ಗಮ – ಏಲಕ್ಕಿ(ಒ).** ವಾ: ಏಲಕ್ಕಿನ ಅಡಿಗೆಗೂ, ಮೊದ್ದಿಗು ಬಳ್‌ಸುವೆ. **ಏಲಕ್ಕಿ ಕೊತ್ತ್** /*ɛ:lakki kɔtti*/ ಏಲಕ್ಕಿ ಬೆಳೆದಿರುವ ಗೊಂಚಲು. bunch of cardamom. ವಾ: ಏಲಕ್ಕಿ ಕೊತ್ತ್‌ನ ಎಳಿ.

ಏಲಿಕಂಡ್ ಬಾದು /*e:likaṇḍi ba:du*/ ನಾವಿ. 1. ಕಲೆಸಿಟ್ಟ ಹಿಟ್ಟು ತೆಳ್ಳಗಾಗುತ್ತ ಬಂದರೆ ಹೇಳುವ

ಮಾತು, 2. ತೆಳ್ಳಗಾಗು. 1. dough melting, 2. becoming thin. ವಾ: ಬಂದ ಏಲಿಕಂಡ್ ಬಂದದೆ ಹೆಂಗೆ ರೊಟ್ಟಿ ಮಾಡ್ಡು.

ಏಲೆಕ್ಕಿ ಬಾಳೆ /*ɛ:lekki ba:ḷɛ*/ ನಾ. 1. ಬಾಳೆಯಲ್ಲಿ ಒಂದು ವಿಧ, 2. ಹೂ ಬಾಳೆ. 1. a variety of plantain/banana. ವಾ: ಪೂಜೆಗೆ ಏಲೆಕ್ಕಿ ಬಾಳೆನ ಇಸಕ್.

ಏವುದು /*e:vudu*/ ನಾ. 1. ಉತ್ಸಾಹ, 2. ಆಸಕ್ತಿ, 3. ಹುರುಪಿನ ಕೆಲಸ. 1. enthusiasm, 2. interest, 3. zeal. ವಾ: ಓದುದರ್‌ಲಿ ಹೈದನ ಏವುದು ನೋಡೊಕು.

ಏವ್‌ರ /*ɛ:vɨra*/ ನಾ. 1. ಆತುರ, 2. ಅಲ್ಪತನ ಮಾಡುವುದು. 1. urgency, 2. being silly. ವಾ: ಯಾವ್ದಕ್ಕು ಏವ್‌ರ ಮಾಡಿಕಾದ್. ಪ: ಏವ್ರಕಟ್ಟುದು

ಏಸ /*ve:ṣa*/ ನಾವಿ. 1. ಉಡುಪು, 2. ವಿಶೇಷ ಉಡುಪು, 3. ಮಾಮೂಲಿಯಲ್ಲದ ಉಡುಪು, 4. ರೂಪ ಬದಲಾಯಿಸುವ ಉಡುಪು, 5. ನಾಟಕದ ವೇಷ, 6. ಯಕ್ಷಗಾನ ವೇಷ. 1. clothing, 2. a special costume, 3. costume worn rarely, 4. a costume that changes one's personality, 5. a costume worn in dramas, 6. costume used in Yakshagana. ವಾ: ನಾಟಕ ಮಾಡಿಕನ ಏಸ ಹಾಕುದು. ಪ: ಏಸ

ಏಳಿಗೆ /*ɛ:ḷigɛ*/ ನಾ. 1. ಅಭಿವೃದ್ಧಿ, 2. ಪ್ರಗತಿ, 3. ಅಭ್ಯುದಯ. 1. development, 2. growth, 3. prosperity. ವಾ: ಒಬ್ಬನ ಏಳಿಗೆ ಕಂಡ್ ಕುಸಿ ಪಡೊಕು.

ಏಳ್ /*e:ḷɨ*/ ಕ್ರಿ. 1. ಎದ್ದೇಳು, 2. ಏಳು. 1. to get up, 2. to raise. ವಾ: ಹೊತಾರೆ ಬೇಗ ಏಳ್ ದೇಸ್ತಾನಕೆ ಪೋಯಿ, ಕುದ್ದಲ್ಲಿಂದ ಬೇಗ ಏಳ್. ಪ: ಏಳಿಕಾದ್ – ಏಳಬಾರದು; ಏಳಿಕೆತ – ಏಳಲೆಂದು; ಏಳಿಕ್ಕಿಲ್ಲೆ – ಏಳುವುದಿಲ್ಲ. **ಏಳಿಕಿಲೆ** /*ɛ:ḷikilɛ*/ ಏಳುವುದಿಲ್ಲ, won't finish early/won't get up early. ವಾ: ಹೆಣ್ಮಕ್ಕ ಮಾತಿಗೆ ಕುದ್ದರೆ ಸದ್ಯಕೆ ಏಳಿಕಿಲೆ. **ಏಳ್ಡು** /*ɛ:ḷdu*/ 1. ಏಳುವುದು, 2. ಎದ್ದುರ್ದು. to raise. ವಾ: ಹೊತಾರೆ ಬೇಗ ಏಳ್ಡು ಅಬ್ಬೆಸ ಮಾಡೊಕು. **ಏಳ್‌ನೆ** /*ɛ:ḷɨnɛ*/ ಎದ್ದೇಳು (ಏಕವಚನದ ಮಾತು). to get up. ವಾ: ಏಳ್‌ನೆ ಇಸ್ಕೂಲ್ ಬಸ್ಸ್ ಬಾಕಾತ್. **ಏಳ್ಸುದು** /*ɛ:ḷsudu*/ ಏಳಿಸುವುದು. make (something/ someone) to raise. ವಾ: ಅವ್ವ ಯಾಗೊಳು ಕರ್‌ದ್ ಏಳ್ಸುದು. ಪ: ಎದ್ದುರ್ಸುದು – ಎಬ್ಬಿಸುವುದು/ ಏಳಿಸುವುದು

ಏಳ್ ತಿಂಗಳ್‌ಲಿ ಹುಟ್ಟಿದಂವ /*ɛ:ḷɨ tiŋgaḷɨli huṭṭidanva*/ ನಾವಿ. 1. ಅವಸರ, 2. ಬೆಳವಣಿಗೆಯಿಲ್ಲ, 3. ಪರಿಪಕ್ವವಿಲ್ಲ. 1. urgency, 2. stunted, 3. unripe. ವಾ: ಯಾಗೊಳು ಏಳ್ ತಿಂಗಳ್‌ಲಿ ಹುಟ್ಟಿದಂವನಂಗೆ ಆಡ್‌ದೆ.

ಏಳ್ಕುಂಡ /*ɛ:ḷkuṇḍa*/ ನಾ. 1. ಒಂದು ವಿಧದ ಇರುವೆ, ಈ ಇರುವೆ ಕಚ್ಚಿದರೆ ಏಳುಕಡೆ ಕಚ್ಚುತ್ತವೆ. a variety of an ant. ವಾ: ಏಳ್ಕುಂಡ ಪಿಜಿನ್ ಕಚ್ಚಿರೆ ಉರಿ ಉರಿಯಾದೆ. ಪ: ಕುಂಡ ಪಿಜಿನ್

ಏಳ್ಕೊಂದ್ /*ɛ:ḷkɔŋḍɨ*/ ನಾ. ಗುಂಪು ಗುಂಪಾಗಿ ಇರುವ ತಿಳಿ ಹಸಿರು ಬಣ್ಣದ ಕಾಡುಹಕ್ಕಿ. a wild bird in green colour, usually found in flocks. ವಾ: ಏಳ್ಕೊಂದ್ ಹಕ್ಕಿಗ ಹಾರ್‌ದೊ.

ಐ

ಐಕುರೆ ಮೀನ್ /*aikura mi:nɨ*/ ನಾ. ಒಂದು ವಿಧದ ಮೀನು. a variety of fish. ವಾ: ಐಕುರ ಮೀನ್ ತಿಂದರೆ ಕೆಲೊವ್‌ಕೆ ನಂಜಿ ಆದೆ. ಪ: ಐಕುರೆ ಮೀನ್

ಐಡಿಯ /*aiḍiya*/ ನಾ. ಎಪ. ಉಪಾಯ. a plan. ವಾ: ಒಂದ್ ಐಡಿಯ ಬಾತ್ ನಂಗೆ.

ಐತಪ್ಪ /*aitappa*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. masculine given name.

ಐತಾರ /*aita:ra*/ ನಾ. 1. ಭಾನುವಾರ, 2. ಆದಿತ್ಯವಾರ. Sunday. ವಾ: ಅಲ್ಲಿಗೆ ಐತಾರ ಪೋಯಿ ಆದೊ. ಪ: ಐತ್ವಾರ – ಬಾನುವಾರ

ಐತೊಳು /*aitɔ:ḷu*/ ನಾ. ಸಣ್ಣಮಕ್ಕಳಿಗೆ ಈ ಸೊಪ್ಪಿನಿಂದ ಎಣ್ಣೆ ಕಾಯಿಸುವುದು. warming the oil mixed with herbs to massage children. ವಾ: ಐತೊಳು ಸೊಪ್ಪ್‌ಲಿ ಎಣ್ಣೆ ಕಾಸಿವೆ. ಪ: ಐತೊಳ್ ಬೊಳ್ಳಿ

ಐತ್ತೂರು /*aittu:ru*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಐದನೆ ಅಮೆ /*aidanɛ amɛ*/ ಕ್ರಿವಿ. ಹೆರಿಗೆ ಆದ, ಮಗು ಜನಿಸಿದ ಐದನೇ ದಿನದ ಸೂತಕ. fifth day of the newborn child. ವಾ: ಐದನೆ ಅಮೆಲಿ ಮಡೊಳ್ತಿ ಮನೆಗೆ ಬಂದ್ ಸುದ್ದ ಮಾಡಿವೆ.

ಐನೆಕ್ಕಿದು /*ainekkidu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಹರಿಹರ ಸಮೀಪದ ಜಾಗ. a locality in Haruhara village in Sullia Taluk of Dakshina Kannada District.

ಐನ್ /*ainɨ*/ ಸಂವಾ. 1. ಮುಖ್ಯವಾದ, 2. ಪ್ರಧಾನ, 3. ಶುದ್ಧ. 1. important, 2. main, 3. pure. ವಾ: ಹಬ್ಬ ಹರಿದಿನಲಿ ಎಲ್ಲೊವು ಐನ್ ಮನೆಲೆ ಸೇರ್‌ದು.

ಐನ್‌ಮನೆ /*ainɨmanɛ*/ ನಾ. 1. ಹಿಂದೆ ಅವಿಭಕ್ತ ಕುಟುಂಬದವರು ವಾಸ ಮಾಡುತ್ತಿದ್ದ ನಾಲ್ಕು ಸೂತ್ರದ ಮೂಲ ಮನೆ, 2. ಪ್ರಧಾನ ಮನೆ, 3. ಮುಖ್ಯ ಮನೆ, 4. ಆದಿಮನೆ, 5. ದೊಡ್ಡಮನೆ. 1. ancestral house where joint families lived, 2. a main house, 3. an important house, 4. original home, 5. big home. ವಾ: ಐನ್ ಮನೆ ಹಿರಿಯರ್ ಬಾಳಿ ಬೊದ್ಕಿದ ಮನೆ, ಸುದ್ದಲಿ ಇರೊಕು. ಪ: ಐನ್ಮನೆ – ಪ್ರದಾನ ಮನೆ

ಐಮರ /*aimara*/ ನಾ. 1. ಕೈಯಾಲೆಯಲ್ಲಿರುವ ತಿಂಟೆಯ ಮೇಲಿರಿಸಿದ ದಪ್ಪ ಹಲಗೆ, 2. ನ್ಯಾಯ ತೀರ್ಮಾನ ಮಾಡುವ ಪಟ್ಟೆದಾರ ಇದರ ಮೇಲೆ ಕುಳಿತುಕೊಳ್ಳುತ್ತಾನೆ, 3. ಜಗಲಿಯಲ್ಲಿನ ಎತ್ತರವಾದ ಮರದ ಆಸನ, 4. ತಿಂಟೆಯ ಮೇಲಿರಿಸಿದ ಖಾಯಂ ಹಲಗೆ. a permanent high wooden seat on the veranda (usually long slabs of wood fixed on low parapets between pillars). Reserved for the head of the family who sits on this and settles disputes. ವಾ: ಐಮರಲಿ ಕುದ್ರಿಕಾದ್. ಪ: ಐಮರ – ಐನ್ ಮನೆಯಲ್ಲಿ ಹೊರ ಕೋಣೆಯಲ್ಲಿ ಪುರುಷರು ಮತ್ತು ದೇವರು ಕುಳಿತುಕೊಳ್ಳುವ ಸ್ಥಳ; ಐಮರ – ಮನೆಯಲ್ಲಿ ಇರುವ ಪವಿತ್ರ ಪೀಟ. **ಐಮರಕಂಬ** /*aimarakamba*/ ಐನ್

ಮನೆಯಲ್ಲಿ ಕುಳಿತುಕೊಳ್ಳುವ ಸ್ಥಳದ ಮಧ್ಯೆ ನೆಟ್ಟಿರುವ ಕಂಬ. a wooden pillars around the wooden slab (Aimara). ವಾ: ಐಮರ ಕಂಬ ಬಾರಿ ಗಟ್ಟಿ ಉಟ್ಟು.

ಐಮೂಲೆ /*aimu:lɛ*/ ನಾ. ಕಟ್ಟಡ ಮೊದಲಾದವುಗಳ ವಿವಿಧ ಭಾಗಗಳ ಸಮ ಪ್ರಮಾಣತೆ, ಕರಾರುವಾಕ್ಕಾದ ಅಳತೆ. Symmetrical measurement of different parts of buildings.

ಐಯಂಡ್ರ /*aiyanḍra*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಐಯೇಟಿ ಮರ /*aiyɛ:ṭi mara*/ ನಾ. ದನಕರುಗಳ ಮೂಳೆಗೆ ಪೆಟ್ಟಾದಾಗ ಜೇಡಿ ಮಣ್ಣಿನೊಂದಿಗೆ ಈ ಮರದ ತುಂಡನ್ನು ಸೇರಿಸಿ ಕಟ್ಟುತ್ತಾರೆ. a bandage to repair the bones of cattle using clay and wooden strips. ವಾ: ಐಯೇಟಿ ಮರದ ತುಂಡ್‌ನ ದನಕರ್‌ಗಳ ಕಾಲಿಗೆ ಪೆಟ್ಟಾದರೆ ಕಟ್ಟಿಕೆ ಬಳ್‌ಸುವೆ.

ಐಲಾಟ /*aila:ṭa*/ ನಾ. ತಮಾಷೆ. fun/mock. ವಾ: ಇಂವಂಗೆನೊ ಯಾಗೊಳು ಐಲಾಟನೆ.

ಐಲೆ ಮೀನ್ /*ailɛ mi:nɨ*/ ಎಪ. 1. ಬಂಗಡೆ ಮೀನು, 2. ಸಮುದ್ರದಲ್ಲಿ ದೊರೆಯುವ ಒಂದು ಜಾತಿಯ ಮೀನು. a mackerel fish.

ಐಲ್‌ಪೈಲ್ /*ailɨ pailɨ*/ ನಾ. ಜೋಪ. 1. ಮತಿಭ್ರಮಣೆ, 2. ಹುಚ್ಚು, 3. ಮರುಳು. insanity, 2. madness, 3. unsound mind. ವಾ: ಇಂವಂದೆಂತ ಐಲ್ ಪೈಲ್ ಆಟ.

ಐವತ್ತೊಕ್ಲು /*aivattoklu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಐವತ್ತೊಕ್ಲು ಗ್ರಾಮದ ಜಾಗ. a locality in Aivattoklu village in Sullia Taluk of Dakshina Kannada District.

ಐಸುರ /*aisɨra*/ ನಾ. 1. ಸಂಪತ್ತು, 2. ಭಾಗ್ಯ. 1. wealth, 2. fortune. ವಾ: ಅಂವ ಐಸ್‌ರ ತುಂಬಿ ಮಾತಾಡ್ತುಲೆ. ಪ: ದೊಡ್ಡಸ್ತಿಕೆ. **ಐಸುರ ಬಾಕನ** /*aisura ba:kana*/ 1. ಐಶ್ವರ್ಯ ಬರುವಾಗ, 2. ಸಂಪತ್ತು ಬರುವಾಗ. when wealth comes. ವಾ: ಐಸುರ ಬಾಕನ ಹಾಂಕರ ಬಾಕಾಗದ್. **ಅಲ್ಪಂಗೆ ಐಸುರ ಬಾಕನ ಅರ್ದರಾತ್ರೆಲಿ ಎದ್ದ್ ಕೊಡೆ ಹಿಡ್ತ್ ಗಡ(ಗಾ).**

ಐಸ್ /*aisɨ*/ ನಾವಿ. ದೊಡ್ಡಸ್ತಿಕೆ. an ostentatious behaviour. ವಾ: ಮೊನ್ನಂಗೆ ಐಸ್ ಬಾಕೆ ಆಗದ್. ಪ: ಐಸ್‌ರ – ದೊಡ್ಡಸ್ತಿಕೆ; ಐಸ್ವೊರ್‌ಯ – ಐಶ್ವರ್ಯ

ಐಸ್ ಗಡ್ಡೆ /*aisɨ gaḍḍɛ*/ ನಾ. ಮಂಜುಗಡ್ಡೆ. ice. ವಾ: ಐಸ್ ಗಡ್ಡೆನ ಕೈಲಿ ಮುಟ್ಟಿಕಾಲೆ.

ಐಸ್ರಿ /*aisɨri*/ ನಾ. 1. ಐಶ್ವರ್ಯ, 2. ಸಂಪತ್ತು, 3. ಐಸಿರಿ. 1. a treasure, 2. wealth, 3. riches. ವಾ: ಐಸ್ರಿ ಬಾಕನ ತಗ್ಗಿ ಬೊಗ್ಗಿ ನಡೆಯೊಕು.

ಒ

ಒಂಚುದು /*oŋcudu*/ ನಾ. 1. ಜರಡಿ ಹಿಡಿಯುವುದು, 2. ವಂದ್ರಿಯಲ್ಲಿ ಹಾಕಿ ಅಲುಗಾಡಿಸುವುದು. 1. to sift, 2. to sieve. ವಾ: ಪೊಯ್ಯ ಒಂಚುದು.

ಒಂಚೂರು /*oŋcu:ru*/ ನಾ. 1. ಒಂದು ಚೂರು, 2. ಹಿಙ್ಞವೂ. 1. a small piece, 2. little bit. ವಾ: ಒಂಚೂರು ಕನಿಕರ ಇಲ್ಲೆ ಆ ಹೆಂಗ್‌ಸಿಗೆ.

ಒಂಟಿ ಗುಂಡ /*oṇṭi guṇḍa*/ ನಾವಿ. ಹರಿಸೇವೆಯಲ್ಲಿ ದೇವರಿಗೆ ಬಾಳೆದಿಂಡಿನಿಂದ ಕಟ್ಟಿಸುವ ಮಂಟಪ (ಗುಡಿ). building a pavilion (temple)/ a canopy using banana stem. ವಾ: ಹರಿಸೇವೆಲಿ ಒಂಟಿ ಗುಂಡ ಇಲ್ಲರೆ ಜೋಡುಗುಂಡತ ಮಾಡಿವೆ.

ಒಂಟಿ ನಳಿಗೆ ಕೋವಿ /*oṇṭi naḷigɛ kɔ:vi*/ ನಾ. ಒಂದು ನಳಿಗೆ. pipe/tube. ವಾ: ಒಂಟಿ ನಳಿಗೆ ಕೋವಿಲಿ ಹೊಡ್ದದ್.

ಒಂಟಿ ಬೆತ್ತ /*oṇṭi bɛtta*/ ನಾ. 1. ಒಂದೇ ಬೆತ್ತದ ಬಳ್ಳಿ, 2. ಜನಪದರ ಪ್ರಕಾರ ಒಂಟಿಬೆತ್ತದ ಬಳಕೆ ಕಡಿಮೆ, ಇಂತಹವುಗಳನ್ನು ಆರಾಧನೆಯ ಸಂದರ್ಭದಲ್ಲಿ ಆಯ್ದು ಕೊಂಡುಹೋಗುವರು. 1. belonging to family of cane/rattans, 2. used sparingly. ವಾ: ಒಂಟಿ ಬೆತ್ತನ ಬಳ್‌ಸುದು ಕಮ್ಮಿಗಡ.

ಒಂಟಿ[1] /*oṇṭi*/ ನಾ. 1. ಒಂದು, 2. ಒಬ್ಬ, 3. ಏಕಾಂಗಿ. one, one person, lonely, alone, ear ornament. **ಒಂಟಿ ಎತ್ತ್‌ನ ಗಾಡಿನಂಗೆ(ಗಾ).** ವಾ: ಅದ್ ಆ ಮನೆಲಿ ಒಂಟಿಯಾಗಿರ್‌ದು. ಪ: ಒಂಟಿ ಮಜ್ಜ – ಒಬ್ಬನೇ ಮಗ

ಒಂಟಿ[2] /*oṇṭi*/ ನಾ. ಗಂಡಸರು ಕಿವಿಗೆ ಧರಿಸುವ ಒಂದು ಬಗೆಯ ಆಭರಣ. an ear ornament worn by men. ವಾ: ಹಿಂದೆನ ಕಾಲಲಿ ಗಂಡ್ ಜೆನಗ ಕೆಬಿಗೆ ಒಂಟಿ ಹಾಕಣ್ತಿದ್ದೊ.

ಒಂಟಿಂಗ /*oṇṭiŋga*/ ನಾ. 1. ಗಂಡು ಹಂದಿ, 2. ಒಂಟಿಯಾಗಿರುವ ಹಂದಿ. 1. male pig(boar), 2. a lone pig. ವಾ: ಒಂಟಿಂಗ ಬಂದರೆ ಬಾಳೆದೈನೆಲ್ಲ ಮನಾರ ಮಾಡಿದೆ.

ಒಂಟಿಕಾಲ್ /*oṇṭika:lɨ*/ ನಾ. 1. ಒಂಟಿಕಾಲು, 2. ಒಂದೇ ಕಾಲು, 3. ಒಕ್ಕಾಲು. 1. one leg, 2. a uniped. ವಾ: ಒಂಟಿ ಕಾಲ್‌ಲಿ ನಿತ್ತ್ ಯೋಗ ಮಾಡ್‌ದು. ಪ: ಒಂಟಿ ಕಾಲ್‌ಲಿ – ಒಂಟಿಕಾಲಿನಲ್ಲಿ

ಒಂಟಿಣ /*oṇṭiṇa*/ ನಾ. 1. ಒಂಟಿ ಸಲಗ, 2. ಒಬ್ಬನೇ ಇರುವವ. 1. a lone tusker, 2. a person who is alone. ವಾ: ಅಂವ ಮನೆಲಿ ಒಂಟಿಣನಂಗೆ ಇರ್‌ದು.

ಒಂಟಿಪಾರ್ /*oṇṭipa:rɨ*/ ನಾ. ಒಂದೇ ಹಲಗೆ. one plank. ವಾ: ಅಡ್ಗೆಮನೆ ಒಂಟಿಪಾರ್ ಲಿ ಚೊಂಬು ಇಸಿದ್.

ಒಂಟಿಮನೆ /*oṇṭimanɛ*/ ನಾ. ಒಂದೇ ಮನೆ. one house. ವಾ: ಎಸ್ಟೇಟ್‌ಲಿ ಒಂಟಿಮನೆ ಉಟ್ಟು.

ಒಂಟೆ /*oṇṭɛ*/ ನಾ. 1. ಒಂಟೆ, 2. ಮರುಭೂಮಿಯಲ್ಲಿ ವಾಸಿಸುವ, ಉದ್ದನೆಯ ಕತ್ತುಳ್ಳ ಒಂದು ಚತುಷ್ಪಾದ ಪ್ರಾಣಿ, 3. ಒಟ್ಟೆ, 4. ಮರುಭೂಮಿ ಹಡಗು. 1. a camel, 2. an animal with long neck which

lives in the desert, 3. a whole, 4. ship of a desert. **ಅದ್ ಒಂಟೆನಂಗೆ ನಡ್ದದೆ(ನು).** ವಾ: ಒಂಟೆ ಎಸ್ಟ್ ಎತ್ತರಲ. ಪ: ಒಂಟೆನಾಂಗೆ – ಒಂಟೆಯ ಹಾಗೆ; ಕೆಲವರ ಕತ್ತು ಉದ್ದ ಇದ್ದರೆ ಒಂಟೆಯ ಹಾಗೆ ಎನ್ನುವರು;

ಒಂಟೆಗುಂಡಿ /*oṇteguṇḍi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಸುಬ್ರಹ್ಮಣ್ಯ ಗ್ರಾಮದ ಜಾಗ. a locality in Subramanya village in Sullia Taluk of Dakshina Kannada District.

ಒಂತರ /*ontara*/ ನಾ. 1. ಒಂದು ರೀತಿ, 2. ಅನುಮಾನವನ್ನು ಸೂಚಿಸುವ ಪದ. 1. a variety, 2. indicates suspicion/doubt. ವಾ: ನಂಗೆ ಬಾಯಿ ಒಂತರ ಆದೆ.

ಒಂದುದು /*ondudu*/ ಕ್ರಿ. ಒಂದು ಬದಿಯಲ್ಲಿ ಸೇರು. to be/join at one side. ವಾ: ಮಳೆಗೆ ಬಿದ್ದ ಅಡ್ಕೆ ಪೂರ ಒಂದ್ ಕಡೆಗೆ ಒಂದಿಟು.

ಒಂದ್ ಕವುಳೆ ಎಲೆ /*ondɨ kavuḷɛ elɛ*/ ನಾ. 1. 25 ವೀಳ್ಯದೆಲೆಗಳ ಕಟ್ಟು(ಈಗ 20 ಎಳೆ ಲೆಕ್ಕ), 2. ಒಂದು ಸೂಡಿಯ ನಾಲ್ಕನೆ ಒಂದು ಭಾಗ. a bundle of twenty five/twenty betel leaves. ವಾ: ಒಂದು ಕವುಳೆ ಎಲೆ ಕಟ್ಟ್.

ಒಂದ್[1] /*ondɨ*/ ಸಂವಾ. 1. ಭತ್ತವನ್ನು ಅಥವಾ ಅಕ್ಕಿಯನ್ನು ಮೊರದಲ್ಲಿ ಒಂದು ಮೂಲೆಗೆ ತರುವುದು, 2. ಒಂದಾವುನೆ(ತು). to push paddy or rice to a corner in the winnowing fan. **ಒಂದಿದ್ದರೆ ಒಂದಿಲ್ಲೆ(ಗಾ).** ವಾ: ಮೊರಲಿ ಅಕ್ಕಿನ ಹೊಡ್ಕಿ ಒಂದ್ ಮಾಡ್ದು.

ಒಂದ್[2] /*ondɨ*/ ಸಂವಾ. 1. ಒಂದು, 2. ಏಕ, 3. ಒಂದು ಸಂಖ್ಯೆ. one, a number. **ಒಂದಿದ್ದರೆ ಒಂದಿಲ್ಲೆ(ಗಾ).** ವಾ: ಒಂದ್ ಕಡೆ ಸುಮ್ಮನೆ ಕುದ್ರು. **ಒಂದ್ರಾಸಿ** /*ondra:si*/ 1. ರಾಶಿ, 2. ಗುಪ್ಪೆ 3. ಗುಡ್ಡೆ, 4. ಗುಂಪು. 1. a pile, 2. a mass, 3. a heap, 4. a group. ವಾ: ಒಂದ್ರಾಸಿ ಅರ್ವೆ ಉಟ್ಟು ಒಗ್ಯಕೆ. **ಒಂದಪ** /*ondapa*/ 1. ಒಂದು ಸಾರಿ, 2. ಒಂದು ಬಾರಿ. one time. ವಾ: ಒಂದಪ ಹೇಳ್‌ರೆ ಅರ್‌ತ ಮಾಡಿಕಣಕು. **ಒಂದರ್ನ** /*ondarna*/ ಒಂದನ್ನು. one. ವಾ: ಸಾಂಕಿಕೆ ಬೊತ್ತ್ ತ ಹಸ್ ಒಂದರ್‌ನ ಕೊಟ್ಟೊ. **ಒಂದಿನ** /*ondina*/ ಒಂದು ದಿನ. one day. ವಾ: ಒಂದಿನ ಕಾಸಿಗೆ ಪೋಯಿ. **ಒಂದಿಸ್ಟ್** /*ondisṭi*/ ಒಂದಷ್ಟು. some quantity (not determined). ವಾ: ಒಂದಿಸ್ಟ್ ಮಾತ್ ಕೇಳ್ದುಲೆ. **ಒಂದೂ ಗೊತ್ತಾದುಲೆ** /*ondu: gotta:dulɛ*/ ಏನೂ ಗೊತ್ತಾಗುವುದಿಲ್ಲ. don't/ doesn't understand. ವಾ: ವಯಸಾದ ಮೇಲೆ ಅವ್ವಂಗೆ ಹೇಳಿರೆ ಒಂದೂ ಗೊತ್ತಾದುಲೆ. **ಒಂದೇ ಎಳ್ತ** /*ondɛ: eḷta*/ 1. ಒಂದೇ ಎಳೆತ, 2. ಒಂದೇ ಬಾರಿಗೆ ಎಳೆಯುವುದು. to pull at once. ವಾ: ಒಂದೇ ಎಳ್ತಕೆ ಬಿದ್ದದ್. ಪ: ಒಂದೆ ಪಟ್ಟ್. **ಒಂದ್ ಕಡೆಂದ** /*ondɨ kaḍɛnda*/ 1. ಒಂದು ಕಡೆಯಿಂದ, 2. ಒಂದು ಬದಿಯಿಂದ. from one side. ವಾ: ಒಂದ್ ಕಡೆಂದ ಗುಂಡಿ ತೆಗೆನಿ. **ಒಂದ್ ಕೊಂಬ್** /*ondɨ kombɨ*/ ಒಂದು ತುಂಡು. one piece. ವಾ: ಒಂದ್ ಕೊಂಬ್ ಹಸಿ ಅರ್ಸಣ ಬೇಕಿತ್. **ಒಂದ್ ಜೋಡಿ** /*ondɨ co:ḍi*/ ಒಂದು ಜೊತೆ. a pair. ವಾ: ಒಂದ್ ಜೋಡಿ ಎತ್ತ್ ಹೂಡಿಕೆ ಸಾಕ್. **ಒಂದ್ ತೊಟ್ಟ್** /*ondɨ tɔṭṭɨ*/ ಒಂದು ಹನಿ. one drop. ವಾ: ಒಂದ್ ತೊಟ್ಟ್ ನೀರಿಲ್ಲೆ ಕೆರೆಲಿ. **ಒಂದ್ ಪುಂಡಿ** /*ondɨ punḍi*/ ಒಂದು ಹಿಡಿ. one handle/a handful. ವಾ: ಒಂದ್ ಪುಂಡಿ ಹೊಡಿ ಹಾಕ್. **ಒಂದ್ ಬರಿ** /*ondɨ bari*/ 1. ಒಂದು ಬದಿ, 2. ಒಂದು ಕಡೆ. one side. ವಾ: ಒಂದ್ ಬರಿ ಬೇನೆ. **ಒಂದ್ ಬೊಟ್ಟು** /*ondɨ boṭṭu*/ ಒಂದು ಹನಿ. one drop. ವಾ: ಮನೆಲಿ ಒಂದ್ ಬೊಟ್ಟು ನೀರಿಲ್ಲೆ. **ಒಂದ್ ಮುಕ್ಕುಳಿ** /*ondɨ mukkuḷi*/ ಒಮ್ಮೆ ಬಾಯಲ್ಲಿ ಹಿಡಿಯುವಷ್ಟು ನೀರು. a quantity of water one can hold in the mouth at one time. ವಾ: ಒಂದು ಮುಕ್ಕುಳಿ ನೀರ್ ಕುಡಿಯೊಕು. **ಒಂದ್ ರೂಪಾಯಿ** /*ondɨ ru:pa:yi*/ ನೂರು ಕಾಸು ಸೇರಿ ಒಂದು ರೂಪಾಯಿ. hundred copper coins. ವಾ: ಒಂದ್ ರುಪಯಿ ಬೇಕ್. **ಒಂದ್ ಸೆಡೆ** /*ondɨ sɛḍɛ*/ ಒಂದು ಸೌಟು. one ladle. ವಾ: ಒಂದ್ ಸೆಡೆ ಅನ್ನ ಹಾಕ್. **ಒಂದ್ ಹಿಡಿ** /*ondɨ hiḍi*/ ಒಂದು ಮುಷ್ಟಿ. one fist. ವಾ: ಒಂದ್ ಹಿಡಿ ನುಚ್ಚ್ ನ ಕೋಳಿಗಳಿಗೆ ಹಾಕ್. **ಒಂದ್ಸಲ** /*ondsala*/ 1. ಒಂದು ಬಾರಿ, 2. ಒಂದು ಸಲ. 1. one time, 2. once. ವಾ: ಒಂದ್ಸಲ ಅಬ್ಬೆಪಾಲ್ಸ್ ನೋಡಿಕೆ ಹೋಕು.

ಒಂದ್ರಿ /*ondri*/ ನಾ. 1. ಜರಡಿ ಹಿಡಿಯುವ ಸಾಧನ, 2. ಅಕ್ಕಿ ಆರಿಸುವ ಸಾಧನ, 3. ವಂದರಿ, 4. ಬಿದಿರಿನಿಂದ ಮಾಡಿದ ಜರಡಿ ಹಿಡಿಯುವ ಸಾಧನ, 4. ವನಲೆ. 1. a sieve, 2. a sifter, 3. a fine mesh strainer, 4.

a bamboo strainer, 5. a sifter. ವಾ: ಸಣ್ಣ ಕಣ್ಣ್ ಒಂದ್ರಿ ತಯಾರ್ ಮಾಡ್ದು ಹಚ್ಚ ಕಷ್ಟದ ಕೆಲ್ಸ.

ಒಕ್ಕ /*okka*/ ನಾ. ಕೊಡವರ ಕುಟುಂಬ. a family of Kodava people. ವಾ: ಅಲ್ಲಿ ಒಂದ್ ಒಕ್ಕದವ್ ಸುಮಾರ್ ವರ್ಸಂದನೆ ಒಳೊ.

ಒಕ್ಕಣೆ /*okkaṇɛ*/ ನಾವಿ. 1. ಹೇಳುವ ಶೈಲಿ, 2. ಮಾತನಾಡುವ ವಿಧಾನ, 3. ಬರೆಯುವ ಶೈಲಿ. 1. a manner of recitation/declaration etc, 2. a way of speaking, 3. a style of writing. ವಾ: ಎಡೆ ಮುಂದೆ ಒಕ್ಕಣೆ ಹೇಳಿವೆ. **ಒಕ್ಕಣೆ ಮಾತ್** /*okkaṇɛ ma:tɨ*/ 10 ಕುಟುಂಬ 18 ಗೋತ್ರದ ಒಕ್ಕಣೆ ಮಾತನ್ನು ಮೂರು ಬಾರಿ ಹೇಳುವುದು. a three time recitation of the invocation and the declaration about the ancestry of 10 families and 18 lineages of Gowda community. ವಾ: ಮೊದ್‌ವೆಲಿ ಒಕ್ಕಣೆ ಮಾತ್‌ನ ಲಾಯ್ಕಲಿ ಹೇಳ್‌ದೊ.

ಒಕ್ಕಣ್ಣ /*okkaṇṇa*/ ನಾ. ಒಂದು ಕಣ್ಣಿನವ. one eyed. **ಕುರ್ಡರ ರಾಜ್ಯಲಿ ಒಕ್ಕಣ್ಣ ರಾಜ(ಗಾ).** ವಾ: ಒಕ್ಕಣ್ಣತ ಕರೆಕೆ ಬೊತ್ತ್.

ಒಕ್ಕಪೆದ /*okkapɛda*/ ನಾ. ಕೊಡವರ ಪ್ರತಿ ಕುಟುಂಬಕ್ಕೂ ಇರುವ ಮನೆ ಹೆಸರು. a family name of the kodavas-each family has a particular name. ವಾ: ಒಕ್ಕಪೆದತೇಳಿರೆ ಮನೆ ಹೆಸ್ರ್.

ಒಕ್ಕಲಿಗ /*okkaliga*/ ನಾ. ವ್ಯವಸಾಯ ಮಾಡುವವರು, ಕೃಷಿಕ ಸಮುದಾಯ. a farmer. okkaliga

ಒಕ್ಕಲಿಗ ಗೌಡ /*okkaliga gowda*/ ನಾ. ಕೃಷಿಕ ಸಮುದಾಯ. a farming community.

ಒಕ್ಕಲ್ /*okkalɨ*/ ನಾ. ಒಕ್ಕಲು. farming. **ಮಕ್ಕಳ ಮಾತ್ ಕೇಳಿ ಒಕ್ಕಲೆದ್ದ್ ಹೋದೋಗಡ(ಗಾ).** ವಾ: ಒಕ್ಕಲ್ ಕೆಲ್ಸ ಆತ? ಪ: ಒಕ್ಕ್‌ಲ್ – ಪೈರಲ್ಲಿ ಬಡಿದು ಉಳಿದ ಬತ್ತಕ್ಕಾಗಿ ಪೈರ ಮೇಲೆ ದನಗಳು, ಟಿಲ್ಲರ್ ಅತವಾ ಟ್ರಾಕ್ಟರ್ ನ್ನು ಓಡಿಸುತ್ತಾರೆ, ಒಕ್ಕಲು

ಒಕ್ಕಾಲ್ /*okka:lɨ*/ ನಾ. ಮಂದಬುದ್ಧಿ. a dim-witted. **ಓದ್ ಒಕ್ಕಾಲ್ ಬುದ್ದಿ ಮುಕ್ಕಾಲ್(ಗಾ).** ವಾ: ಅಂವಂದ್ ಒಕ್ಕಾಲ್ ಬುದ್ದಿ.

ಒಕ್ಕು[1] /*okku*/ ಕ್ರಿ. 1. ಕೇರು, 2. ಕೈ ಅಥವಾ ಕಾಲಿನಿಂದ ಕೆರೆಯುವುದು. 1. winnow, 2. burrow with hands or legs. **ಕೋಳಿ ಒಕ್ಕಿದಾಂಗೆ(ನು).** ವಾ: ಕೋಳಿ ಎಲ್ಲ ದೈದ ಬುಡನ ಒಕ್ಕುದು.

ಒಕ್ಕು[2] /*okku*/ ನಾ. 1. ಬೆಳೆದ ಬೆಳೆಯಿಂದ ಕಸಕಡ್ಡಿಯನ್ನು ಬೇರ್ಪಡಿಸುವುದು, 2. ಕಣಕೆಲಸ. 1. to separate chaff from grain, 2. threshing grains. ವಾ: ಬತ್ತಂದ ಕಡ್ಡಿಗಳ ಒಕ್ಕುದು.

ಒಕ್ಕು[3] /*okku*/ ನಾ. ನುಗ್ಗು. to rush/to enter forcefully. ವಾ: ನಾಯಿ ನೆಲ ಒಕ್ಕಿದೆ.

ಒಕ್ಕುದ್ /*okkudɨ*/ ನಾ. 1. ಉಕ್ಕು, 2. ಹೊರಸೂಸು, 3. ಹೆಚ್ಚಾಗು. 1. to spill/ to swell, 2. to come out, 3. to increase. ವಾ: ಚೋಡ್ ನೀರ್ ಗದ್ದೆಗೆ ಒಕ್ಕುದು. ಪ: ಒಕ್ಕಿದ್ – ಉಕ್ಕಿದ್

ಒಕ್ಕುಲು ಕೋಲು /*okkulu kɔ:lu*/ ನಾ. ಭತ್ತ ಬಡಿಯುವ ಕೋಲು. threshing stick. ವಾ: ಒಕ್ಕುಲು ಕೋಲು ಉದ್ದ ಬೇಕ್.

ಒಕ್ಕುಲು ಗಳೆ /*okkulu gaḷɛ*/ ನಾ. 1. ಹುಲ್ಲನ್ನು ಬಡಿಯುವ ಕೋಲು, 2. ಬಾರ್‌ಕೋಲು. 1. paddy threshing stick, 2. a whip having leather straps. ವಾ: ಬತ್ತ ಬಡೆಕೆ ಒಕ್ಕಲು ಗಳೆ ಬೇಕ್.

ಒಕ್ಕುಲು ಹೊಡೆಯದು /*okkulu hoḍɛyadu*/ ನಾ. ಕಳದಲ್ಲಿ ಭತ್ತದ ಹುಲ್ಲಿನ ಮೇಲೆ ದನಗಳನ್ನು ನಡೆಸುವುದು. the process of threshing paddy – bullock treading on the threshing floor in a circular path. ವಾ: ಇಂದ್ ಒಕ್ಕುಲು ಹೊಡೆಯಕು.

ಒಕ್ಲು[1] /*oklu*/ ನಾ. 1. ಒಕ್ಕಲು, 2. ವಾಸ, 3. ಬಾಡಿಗೆಗೆ ಇರುವವ, 4. ಗೇಣಿಗೆ, 5. ಬೇಸಾಯ ಮಾಡುವವ. 1. to live in a house, 2. to reside, 3. someone who has taken a house for rent, 4. a tenant, 5. a farmer. ವಾ: ನೀವು ಇಲ್ಲಿ ಎಸ್ಟ್ ವರ್ಸಂದ ಒಕ್ಲ್ ಒಳರಿ.

ಒಕ್ಲು[2] /*oklu*/ ನಾ. ಜೇನು ಕುಟುಂಬ. family of bees. ವಾ: ಜೇನ್ ಕುಡಿ ಒಕ್ಲೆದ್ದತ್.

ಒಕ್ಲ್ /*oklɨ*/ ಕ್ರಿ. 1. ಒಕ್ಕುವಿಕೆ, 2. ಬೇಸಾಯಗಾರ, 3. ಗುತ್ತಿಗೆದಾರ. 1. farming 2. a farmer, 3. a

contractor. **ಮಕ್ಕ ಇಲ್ಲದ ಮನೆ, ಒಕ್ಕುಲು ಇಲ್ಲದ ಮನೆನೂ ಒಂದೆ(ಗಾ). ಒಕ್ಲ್ ಇಲ್ಲದ ಮನೆನಾಂಗೆ(ನು).** ವಾ: ನೀವು ಇಲ್ಲಿ ಎಸ್ಟ್ ವರ್ಸಂದ ಒಕ್ಲ್ ಒಳರಿ.

ಒಗಟ್ /*ogaṭi*/ ನಾ. 1. ಒಗಟು, 2. ಸಮಸ್ಯೆ. 1. a riddle, 2. a problem. ವಾ: ಒಗ್ಟ್ ಬುಡ್ಸುದುತೇಳಿರೆ ಕುಸಿ.

ಒಗರ್ಣೆ /*ogarṇɛ*/ ಕ್ರಿವಿ. 1. ಆಹಾರದಲ್ಲಿ ರುಚಿ ಹುಟ್ಟಿಸಲು ಸಂಬಾರ ಪದಾರ್ಥವನ್ನು ಕರಿದು ಕೂಡಿಸುವುದು, 2. ಸ್ವಾರಸ್ಯವಾದ ವಿಷಯವನ್ನು ಸೇರಿಸುವುದು. 1. seasoning to increase taste, 2. to add intersting matters in a conversation. **ಒಗರ್ಣೆ ಹಾಕ್(ನು).** ವಾ: ಗೈಪುಗೆ ಒಗರ್ಣೆ ಹಾಕಿರೆ ರುಚಿ ಆದು. **ಒಗ್ಗರಣೆ** /*oggaraṇɛ*/ 1. ಪದಾರ್ಥಗಳ ರುಚಿ ಹೆಚ್ಚಿಸಲು ಹಾಕುವ ಎಣ್ಣೆಯ ಪಾಕ, 2. ಅಗಾಣಿ. seasoning. ವಾ: ಉದ್ಕ ಕೊದ್ದ ಮೇಲೆ ಒಗ್ಗರಣೆ ಹಾಕ್, ಉದ್ಕಕೆ ಒಗ್ಗರಣೆ ಹಾಕ್.

ಒಗಿ /*ogi*/ ಕ್ರಿ. 1. ಒಗೆಯು, 2. ಬಟ್ಟೆ ಒಗಿ, 3. ಬಟ್ಟೆ ತೊಳೆ. 1. to wash, 2. washing clothes, 3. ವಾ: ನಿನ್ನ ಅರ್ವೆನ ಒಗಿನೆ. ಪ: ಒಗ್ತ್ – ಒಗೆದನು/ಳು; ಒಗ್ದನೆ – ಒಗ್ದನೆ; ಒಗ್ದುಕೊಡಿಕೆ – ಒಗೆದು ಕೊಡುವುದಕ್ಕೆ; ಒಗ್ಯಕೆ – ಒಗಿಯಲಿಕ್ಕೆ

ಒಗುಳು /*oguḷu*/ ನಾ. ಗದ್ದೆಯಲ್ಲಾದ ಗುಳಿ. a pit in a field/farm. ವಾ: ಗದ್ದೆಲಿ ಸುಮಾರ್ ಒಗುಳು ಆಗುಟು.

ಒಗ್ಗಟ್ಟ್ /*oggaṭṭi*/ ನಾ. 1. ಒಗ್ಗಟ್ಟು, 2. ಏಕೀಕರಣ, 3. ಐಕ್ಯ, 4. ಒಂದೇ ಎಂಬ ಭಾವ. 1. unity, 2. unification, 3. together, 4. a feeling of oneness. ವಾ: ಒಗ್ಗಟ್ಟ್‌ಲಿ ಬಲ ಉಟ್ಟು. ಪ: ಒಗ್ಗಟ್ಟೆ – ಒಗ್ಗಟ್ಟಾಗಿರುವುದೆ

ಒಗ್ಗಿತ್ಲೆ /*oggitlɛ*/ ನಾ. 1. ಹಿಡಿಸಲಿಲ್ಲ, 2. ಒಗ್ಗಲಿಲ್ಲ, 3. ಹೊಂದಿಕೊಳ್ಳಲಿಲ್ಲ. 1. didn't like, 2. didn't get used to, 3. didn't get adjusted. ವಾ: ಮಳೆಗಾಲಕೆ ಇನ್ನೂ ಒಗ್ಗಿತ್ಲೆ.

ಒಗ್ಗು[1] /*oggu*/ ನಾ. 1. ಹೊಂದಿಕೆಯಾಗು, 2. ಮೆಚ್ಚಿಕೆಯಾಗು. 1. to match, 2. to like. ವಾ: ಅವ್ಕಿಬ್ಬರ್‌ಗೆ ಲಾಯ್ಕ್ ಒಗ್ಗಿದೆ.

ಒಗ್ಗು[2] /*oggu*/ ನಾ. 1. ಗೊಬ್ಬರ, 2. ಮೆದು. 1. manure, 2. soft. ವಾ: ದೈಗೆ ಒಗ್ಗು ಹಾಕಿರಾದು.

ಒಗ್ಗೆ /*oggɛ*/ ನಾ. ಗಂಟು ಹಾಕುವುದು. to tie a knot. ವಾ: ಕಾಯಿ ಒಗ್ಗೆ ಹಾಕಿ ತಕಂಡೋಗಿ. ಪ: ಒಗ್ಗೆ ಹಾಕುದು

ಒಗ್ತಾನ /*ogta:na*/ ನಾ. 1. ಜೋಪಾನ, 2. ರಕ್ಷಣೆ, 3. ಕಾಯುವಿಕೆ. 1. being careful, 2. protection, 3. waiting. ವಾ: ದುಡ್ಡ್‌ನ ಒಗ್ತಾನ ಮಾಡಿಸೊಕು.

ಒಗ್ರ್ /*ogrɨ*/ ನಾ. 1. ಒಗರು, 2. ಕನರು, 3. ಸವುಳು ರುಚಿ, 4. ಷಡ್ರಸಗಳಲ್ಲಿ ಒಂದು. 1. bitter in taste 2 irritating taste, 3. a bad taste, 4. one of the six tastes. ವಾ: ಲಕ್ಷ್ಮಣ ಪಲ ಒಂತರಾ ಒಗ್ರ್ ಒಗ್ರ್ ಹಣ್ಣ್.

ಒಚ್ಚಿಮಣೆ /*occimaṇɛ*/ ನಾ. ಕತ್ತಿ ಹರಿತ ಮಾಡುವ ಮಣೆ. a knife sharpener. ವಾ: ಒಚ್ಚಿಮಣೆಲಿ ಕತ್ತಿನ ಹರ್ತ ಮಾಡ್‌ದು.

ಒಚ್ಚು /*occu*/ ಕ್ರಿ. 1. ತೂಗು, 2. ತೊಟ್ಟಿಲು ತೂಗುವುದು. 1. rocking, 2. rocking the cradle. ವಾ: ಕೂಸುನ ಒಚ್ಚು. ಪ: ಒಚ್ಚಿಕನ – ತೂಗುವಾಗ; ಒಚ್ಚಿದಸ್ಟ್ – ತೂಗಿದಷ್ಟು; ಒಚ್ಚಿದ್ – ತೂಗಿದು; ಒಚ್ಚಿಸಿಕೆ – ತೂಗಲು/ ಸಾಗು ಹಾಕಲು; ಒಚ್ಚುದು – ತೂಗುವುದು; ಒಚ್ಚಿಕೆ – ತೂಗುವುದಕ್ಕೆ; ಒಚ್ಚಿ – ತೂಗಿ

ಒಚ್ಚುದು /*occudu*/ ಕ್ರಿ. 1. ಮಗುವನ್ನು ತೊಟ್ಟಿಲಲ್ಲಿ ತೂಗುವುದು, 2. ಕತ್ತಿಯನ್ನು ಹರಿತಗೊಳಿಸುವುದು. 1. rocking a baby in a cradle, 2. to sharpen the knife. **ಕೂಸುನ ಜಿಂಟುದು ತೊಟಿಗಿಲ್‌ನೂ ಒಚ್ಚುದು(ಗಾ).** ವಾ: ಕೂಸುನ ತೊಟಿಗಿಲ್‌ಲಿ ಮೊಲ್‌ಗಿಸಿ ಒಚ್ಚುದು.

ಒಚ್ಚುಮರ /*occumara*/ ನಾ. ಕತ್ತಿ ಹರಿತ ಮಾಡುವ ಅಡಿಮರ. knife sharpener (from areca nut palm). ವಾ: ಒಚ್ಚುಮರ ಇಸಿಕಂಡ್ ಕತ್ತಿನ ಮಸೆಕು.

ಒಚ್ಚೊಡಿ /*occɔ:ḍi*/ ನಾ. 1. ಕತ್ತಿ ಮಸಿಯುವ ಕಲ್ಲಿನ ಹುಡಿ, 2. ಬೆಣಚು ಕಲ್ಲಿನ ಹುಡಿ. 1. grit used in sharpening the knife, 2. a millstone grit. ವಾ: ಒಚ್ಚೊಡಿ ಹಾಕಿ ಕತ್ತಿನ ಹರ್ತ ಮಾಡ್‌ದು.

ಒಟೆಡ್ಕ /*o:ṭeḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅರಂತೋಡು ಗ್ರಾಮದ ಜಾಗ. a

locality in Arantodu village in Sullia Taluk of Dakshina Kannada District.

ಒಟ್ /*oṭi*/ ಕ್ರಿ. 1. ಒಟ್ಟು ಮಾಡಿ, 2. ಒಂದೆಡೆ ಸೇರಿಸಿ. 1. to put something together, 2. to bring together. ವಾ: ನೀರುಳಿನೆಲ್ಲ ಒಟ್ ಮಾಡಿಸ್. **ಒಟ್ಟಿಗೆ** /*oṭṭigɛ*/ 1. ಒಂದಾಗಿ, 2. ಒಟ್ಟಿಗೆ, 3. ಒಟ್ಟಿನಲ್ಲಿ. 1. united, 2. together, 3. in total. **ಹತ್ತರೊಟ್ಟಿಗೆ ಹನ್ನೊಂದ್ ಗೋವಿಂದ(ನು).** ವಾ: ಎಲ್ಲೊವು ಒಟ್ಟಿಗೆ ಇರಿಕಾಕನ ಎಂತ ಕುಸಿಯಾದೆ. ಪ: ಒಟ್ಟುಗೆ – ಒಟ್ಟಿಗ್ಗೆ **ಒಟ್ಟಿಗೆ ಕುದ್ದ್** /*oṭṭigɛ kuddi*/ 1. ಒಟ್ಟಿಗೆ ಕುಳಿತು, 2. ಒಂದಾಗಿ ಕುಳಿತು. 1. sitting together, 2. sitting united. ವಾ: ಮನೆವೆಲ್ಲ ಒಟ್ಟಿಗೆ ಕುದ್ದ್ ಉಂಬನೊ. **ಒಟ್ಟುಗೂಡ್ಸ್** /*oṭṭugu:ḍsi*/ 1. ಸಂಗ್ರಹಿಸು, 2. ಒಂದು ಕಡೆ. 1. collection, 2. at one place. ವಾ: ಕಾಪಿನ ಒಂದ್ ಕಡೆ ಒಟ್ಟು ಗೂಡ್ಸ್

ಒಟ್ಟಾರೆ /*oṭṭa:rɛ*/ ಕ್ರಿವಿ. 1. ವ್ಯವಸ್ಥಿತವಲ್ಲದ, 2. ಸಂಪೂರ್ಣ, 3. ಒಟ್ಟಿನಲ್ಲಿ, 4. ಒಟ್ಟುಗೂಡಿ. 1. unorganised, 2. complete, 3. in total, 4. united. ವಾ: ಒಟ್ಟಾರೆ ಕೆಲ್ಸ ಆದರೆ ಆತ್.

ಒಟ್ಟಿ ಇಸಿದ /*oṭṭi isida*/ ನಾ. 1. ಅಟ್ಟಿ ಇಟ್ಟ, 2. ಜೋಡಿಸಿ ಇಟ್ಟ. 1. keeping together, 2. piled. ವಾ: ಒಟ್ಟಿ ಇಸಿದ ಸೊವುದೆ ಬಿದ್ದುಟು.

ಒಟ್ಟಿಗಿರ್ಕನ /*oṭṭigirkana*/ ನಾ. ಜೊತೆಯಲಿರುವಾಗ. at the time of being together. ವಾ: ಒಟ್ಟಿಗಿರ್ಕನ ಯಾರಿಗೂ ಯಾವುದರ ಬೆಲೆ ಗೊತ್ತಾಲೆ.

ಒಟ್ಟಿಹೋದು /*oṭṭihɔ:du*/ ನಾವಿ. 1. ಜಜ್ಜಿ ಹೋಗುವುದು, 2. ಮುದುಡಿಹೋಗುವುದು. 1. crushed, 2. fade away. ವಾ: ಪಾತ್ರನ ಆಗಾಗ ಕೆಳಗೆ ಬೀಳ್‌ಸಿರೆ ಒಟ್ಟಿಹೋದು.

ಒಟ್ಟು /*oṭṭu*/ ಕ್ರಿ. 1. ಅಟ್ಟು, 2. ಸೌದೆ ಅಟ್ಟುವುದು, 3. ರಾಶಿಹಾಕು, 4. ಕೂಡಿಸು, 5. ಮೊತ್ತ. 1. to pile, 2. to pile the firewood, 3. to gather, 3. to add, 4. total. ವಾ: ಎಲ್ಲ ಲೆಕ್ಕ ಹಾಕಿ ಒಟ್ಟು ಎಸ್ಟಾತ್‌ತ ಹೇಳ್. **ಒಟ್ಟುದು** /*oṭṭudu*/ 1. ಅಟ್ಟಿ ಇಡುವುದು, 2. ಮುದುಡಿ ಹೋಗುವುದು. 1. piled, 2. faded. ವಾ: ಕುಂಟೆಗಳ ಕೊಟಗೆಲಿ ಒಟ್ಟುದು.

ಒಟ್ಟೆ /*oṭṭɛ*/ ನಾ. 1. ತೂತು, 2. ರಂಧ್ರ. a whole. **ಜೋಬು ಯಾಗೋಳು ಒಟ್ಟೆ(ನು).** ವಾ: ಒಟ್ಟೆ ಕೊಡ್‌ಪಾನಲಿ ನೀರ್ ನಿತ್ತದೆನ. ಪ: ಒಟ್ಟೆ ಪಾತ್ರೆ – ತೂತು ಪಾತ್ರೆ; ಒಟ್ಟೆಗೆ – ತೂತಿಗೆ

ಒಟ್ಟೆ ಕೋಳಿ /*oṭṭɛ ko:ḷi*/ ನಾ. 1. ಕೋಳಿಕಟ್ಟದಲ್ಲಿ ಸೋತ ಕೋಳಿ, 2. ಸತ್ತ ಕೋಳಿ, 3. ಬಂಟಕೋಳಿ. 1. a rooster which has been defeated in a cock fight, 2. a dead hen/coock, 3. a brave cock/ rooster/hen. ವಾ: ಅದ್ ಒಟ್ಟೆ ಕೋಳಿ.

ಒಟ್ಟೆ ಮುಕ್ಕಾಲ್ /*oṭṭɛ mukka:li*/ ನಾ. ಹಳೆಯ ನಾಣ್ಯ. old/antique coins.

ಒಟ್ಟೊಟ್ಟಿಗೆ /*oṭṭɔṭṭigɛ*/ ನಾ. 1. ಒಟ್ಟೊಟ್ಟಿಗೆ, 2. ಜೊತೆಜೊತೆಗೆ. together. ವಾ: ಒಟ್ಟೊಟ್ಟಿಗೆ ನೆಂಟ್ರ್ ಬಂದೊ ಮನೆಗೆ.

ಒಟ್ಟ್ ಮಾಡ್ /*oṭṭi ma:ḍi*/ ಕ್ರಿವಿ. ಒಂದು ಕಡೆ ಸೇರಿಸು. to bring together. ವಾ: ಹರ್‌ಗಿದ ದರ್‌ಗ್‌ನೆಲ್ಲ ಒಟ್ಟ್ ಮಾಡ್. ಪ: ಒಟ್ಟ್‌ಗೂಡ್ಸ್ – ಒಂದು ಕಡೆ ಸೇರಿಸು

ಒಟ್ಟ್[1] /*oṭṭi*/ ಕ್ರಿ. 1. ಒಟ್ಟು ಮಾಡು, 2. ಸೇರಿಸು. 1. to put it together, 2. to add. **ಒಟ್ಟ್‌ಗೆ ದುಡಿಯೊಕು, ಒಟ್ಟ್‌ಗೆ ತಿನ್ನೊಕು(ಗಾ).** ವಾ: ಬಿದ್ದ ಮೊಣಿಗಳ ಹೆರ್‌ಕಿ ಒಟ್ಟಿಸ್. ಪ: ಒಟ್ಟ್‌ಮಾಡ್ – ಜೊತೆ ಮಾಡು, ಒಂದಾಗಿ ಸೇರಿಸು; ಒಟ್ಟ್ ಸೇರ್ಸ್ – ಜೊತೆ ಸೇರಿಸು; ಒಟ್ಟು ಮಾಡು

ಒಟ್ಟ್[2] /*oṭṭi*/ ನಾ. ಒಳಗೆ ಬಾಗಿದ. bent inside. ವಾ: ಇಡ್ಲಿ ಮಾಡಿಕೆ ಒಳೆಗೆನ ಪುಡೆನ ನಡುಲಿ ಸುತ್ತಲೂ ಹಞ್ಞ ಒಟ್ಟಿದ ಹಾಂಗೆ ಇದ್ದದೆ.

ಒಟ್ರಾಸಿ /*oṭra:si*/ ನಾವಿ. 1. ರೀತಿ ನೀತಿ ಇಲ್ಲದೆ, 2. ವ್ಯವಸ್ಥಿತವಲ್ಲದ. 1. disorganised, 2. unsystematic. ವಾ: ಎಂತದೋ ಏನೋ ಒಟ್ರಾಸಿ ಕೆಲ್ಸನ ಮುಗ್‌ಸೋಕು ಅಸ್ಟೆ.

ಒಡನಾಟ /*oḍana:ṭa*/ ನಾ. 1. ಸಹವಾಸ, 2. ಗೆಳೆತನ, 3. ಸ್ನೇಹದಿಂದ ಕೂಡಿ. 1. association, 2. friendship, 3. friendly. ವಾ: ನಮ್ಮ ಒಡನಾಟ ಪಂಡ್ ಕಾಲದ್ದ್.

ಒಡಹುಟ್ಟಿದಂವ /*oḍahuṭṭidanva*/ ನಾ. 1. ಸಹೋದರ, 2. ಒಂದೆ ತಾಯಿಯ ಹೊಟ್ಟೆಯಲ್ಲಿ ಹುಟ್ಟಿದವರು. brother. ವಾ: ನಂಗೆ ಒಬ್ಬನೆ ಒಡಹುಟ್ಟಿದಂವ.

ಒಡಿ /*oḍi*/ ನಾ. ಸಾಲು. a line/row. ವಾ: ತರ್‌ಕಾರಿ ದೈನ ಒಡಿಲೆ ನೆಡೊಕು.

ಒಡಿ ಕಡಿಯದು /*oḍi kɘḍiyadu*/ ಕ್ರಿವಿ. ಇದೊಂದು ಜನಪದ ನಂಬಿಕೆ, ಸೋಂಕು ಆದವರಿಗೆ ಒಡಿ ಕಡಿಯುವ ಕ್ರಮ ಮಾಡುತ್ತಾರೆ. a folk belief on sacrificing something in order to get rid of an infection. ವಾ: ಹಳೇ ಬೇನೆಗ, ಕಾಯ್ಲ ಹೋಗದಿದ್ದರೆ ಒಡಿ ಕಡಿಯದು ಮಾಡುವೆ, ಯಾರಾರ್ ಏನಾರ್ ಮಾಡಿಸಿದರ ದಾಟಿರೆ ಹಂಗೆ ಆದೆತ ಒಂದ್ ನಂಬಿಕೆಂದ ಒಡಿ ಕಡಿಯದು ಮಾಡಿವೆ.

ಒಡಿಕತ್ತಿ[1] /*oḍikɘtti*/ ನಾ. 1. ಗೌಡರ ಸಾಂಪ್ರದಾಯಿಕ ಕತ್ತಿ, 2. ಕೊಡಗಿನ ಸಾಂಪ್ರದಾಯಿಕ ಆಯುಧ, 3. ಪೀಚೆ ಕತ್ತಿ. 1. a traditional sword of the Gowda community, 2. a traditional sword of the Kodavas, 3. an ornamental dagger. ವಾ: ಒಡಿಕತ್ತಿ ಗೌಡುಗಳ ಸಾಂಪ್ರದಾಯಿಕ ಕತ್ತಿ.

ಒಡಿಕತ್ತಿ[2] /*oḍikɘtti*/ ನಾ. ಕೊಡವ ಸಾಂಪ್ರದಾಯಿಕ ಉಡುಪು ಧರಿಸಿ, ಸೊಂಟದಲ್ಲಿ ಧರಿಸುವ ಕತ್ತಿ, ಬಾಳೆ ಬಿರುದು ನೀಡುವಾಗ ಬಾಳೆ ಕತ್ತರಿಸಲು ಇದನ್ನು ಬಳಸುತ್ತಾರೆ. a traditional sword of the Kodavas, worn at the back without a scabbard and used in cutting the plantain stump in the ceremony of honouring the groom's/bride's family. ವಾ: ಒಡಿಕತ್ತಿನ ಸೊಂಟಕೆ ಸೆಕ್ಕಿಸಿಕಂಡವೆ.

ಒಡಿಯಾನ /*oḍiya:na*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಒಡಿಯಾಳ /*oḍiya:ḷa*/ ನಾ. ಔಷಧಿ ಗಿಡ. a herbal plant.

ಒಡೆ /*oḍɛ*/ ಕ್ರಿ. 1. ಮುರಿ, 2. ಚೂರುಮಾಡು, 3. ಭಾಗ ಮಾಡು. 1. to cut, 2. to break, 3. to make something into parts. ವಾ: ಕಾಯಿನ ಕಲ್ಲಿಗೆ ಕುಟ್ಟಿ ಒಡೆ.

ಒಡೆನಾಡಿ /*oḍɛna:ḍi*/ ನಾ. 1. ಒಡನಾಡಿ, 2. ಗೆಳೆಯ, 3. ಜೊತೆಗಾರ, 4. ಸ್ನೇಹಿತ. a friend. ವಾ: ಒಡೆನಾಡಿ ಈ ಲೋಕನೆ ಬುಟ್ಟ್ ಹೋತ್.

ಒಡ್ಕ /*oḍka*/ ನಾ. ಕೊನೆಯ. the last. ವಾ: ಇದೇ ನಿನ್ನ ಒಡ್ಕ ಮಾತ? ಒಡ್ಕದ ಮಜ್ಜನೊಟ್ಟ್‌ಗೆ ಬಾರಿ ಪ್ರೀತಿ. ಪ: ಒಡ್ಕಕೆ – ಕೊನೆಗೆ; ಒಡ್ಕನ – ಕೊನೆಯ

ಒಡ್‌ಕತ್ತಿ /*oḍɨ kɘtti*/ ನಾ. ರಾಜರ ಕತ್ತಿ. a sword used by kings. ವಾ: ಒಡ್‌ಕತ್ತಿನ ನೋಡಿಯೊಳನ?

ಒಡ್ಕೆ /*oḍkɛ*/ ನಾ. 1. ಒಡಕು, 2. ಬಿರುಕು. a crack. ವಾ: ಗೋಡೆ ಒಡ್ಕೆ ಬುಟ್ಟುಟು. ಪ: ಒಡ್ಕ್ – ಒಡಕು; ಒಡ್ಕ್‌ಲ್ – ಒಡೆದಿರುವುದು

ಒಡ್ಚಿಲ್ /*oḍcilɨ*/ ನಾ. ಆವರಣದೊಳಗಿರುವ ಅವರವರ ಸ್ವಂತ ಜಾಗ. unused land within one's property. ವಾ: ಒಡ್ಚಿಲ್‌ಲಿ ಹುಲ್ಲು ಬೆಳ್ದುಟು.

ಒಡ್ಡ /*oḍḍa*/ ನಾ. 1. ಕೊಳಕ, 2. ಕಲ್ಲುಮಣ್ಣು ಕೆಲಸ ಮಾಡುವವನು, 3. ಕಲ್ಲುಕುಟ್ಟಿಗ 4 ಸ್ವಚ್ಛತೆಗೆ ಗಮನ ಕೊಡದವನು. 1. an unclean person, 2. the one who works with stones and soil, 3. a stone crusher. ವಾ: ಮಣ್ಣ್‌ಲಿ ಆಡಿ ಬಂದ್ ಒಡ್ಡನಂಗೆ ಆಗುಟು.

ಒಡ್ಡರ್ /*oḍḍarɨ*/ ನಾವಿ. 1. ಒಡ್ಡರು, 2. ಕಲ್ಲು ಮಣ್ಣು ಕೆಲಸ ಮಾಡುವವರು. 1. a tribe, 2. stone and earth/soil workers. ವಾ: ಒಡ್ಡರ್ (ವಡ್ರ್) ಮೈ ಬೊಗ್ಗಿ ಕೆಲ್ಸ ಮಾಡಿವೆ.

ಒಡ್ಡಿ /*oḍḍi*/ ನಾ. 1. ಜೂಜಿಗೆ ಕಟ್ಟುವ ಹಣ, ವಸ್ತು ಮುಂತಾದುವು, 2. ಸ್ಪರ್ಧೆಯ ಮಾತು, 3. ದೊಡ್ಡಿ, 4. ನಾಲ್ಕರ ಗುಂಪು. 1. money/things used in betting, 2. a stake, 3. a group/a mass, 4. a group of four people. ವಾ: ಒಡ್ಡಿ ಕಟ್ಟಿ ಎಲ್ಲ ಕಳ್ಕನ್ತ್. ಪ: ಒಡ್ಡಿ ಬೀಜ – ನಾಲ್ಕು ಗೇರುಬೀಜಕ್ಕೆ ಒಂದು ಒಡ್ಡಿ ಲೆಕ್ಕ

ಒಡ್ಡು[1] /*oḍḍu*/ ನಾ. 1. ತೆನೆ ಕೊಯ್ದ ನಂತರ ಉಳಿಯುವ ಬುಡದ ಭಾಗ, 2. ಗುತ್ತಿ, 3. ಕೂಳಿಗುತ್ತಿ. the remaining stem of the paddy plant after spikelet has been removed. ವಾ: ಒಡ್ಡುನ ಗದ್ದೆಲೆ ಬುಡ್‌ದು. ಪ: ಒಡ್ಡ್ – ತೆನೆ ಕೊಯ್ದ ನಂತರ ಉಳಿಯುವ ಬುಡದ ಬಾಗ/ಕುಯ್ಲು ಮುಗಿದಾಗ ಗದ್ದೆಯಲ್ಲಿ ಉಳಿವ ಪೈರಿನ/ಹುಲ್ಲಿನ ಬುಡ

ಒಡ್ಡು[2] /*oḍḍu*/ ನಾ. ತಡೆಗೋಡೆ. a blocking wall. ವಾ: ಮಣ್ಣ್‌ನ ಒಡ್ಡು ಬಿದ್ದೋತ್.

ಒಡ್ಡು[3] /*oḍḍu*/ ನಾ. 1. ಆವರಿಸು, 2. ಸುತ್ತುವರಿ, 3. ಮುತ್ತು. 1. engulf, 2. to surround, 3. to attack. ವಾ: ಒಂದ್ ಕಡ್‌ವೆನ ಸಿಂಹಗ ಒಡ್ಡುದು. **ಒಡ್ಡಿದ** /*oḍḍida*/ ಮೋಡ ಕವಿದ. cloudy. ವಾ: ಮಳೆ ಒಡ್ಡಿಕಂಡ್ ಉಟ್ಟು, ಒಣ್ಗಿಕೆ ಹಾಕಿದ ಸೀರೆನ ಒಳಗೆ ತಂದ್ ಇಸಿ.

ಒಡ್ಡು[4] /*oḍḍu*/ ನಾ. ಹೊಲಗದ್ದೆಗಳ ಬದು. ridge in the field/farm. **ಒಡ್ಡು ಇಲ್ಲದ ಹೊಲ ಗೊಡ್ಡೆಮ್ಮೆ ಇದ್ದಂಗೆ(ಗಾ).** ವಾ: ಒಡ್ಡು ಕರೆಗೆ ಹೋಗ್ಬಡ. ಪ: ಗದ್ದೆಹುಣಿ

ಒಡ್ಡುನ ಬಾಗಿಲು /*oḍḍuna ba:gilu*/ ನಾ. ಪ್ರವೇಶ ದ್ವಾರ. an entrance. ವಾ: ರಾಜನ ಸೈನಿಕರ್ ಒಡ್ಡ್‌ನ ಬಾಗಿಲ್‌ಲಿ ಬಂದ್ ನಿತ್ತೊಳೊ.

ಒಡ್ಡುವ ಕತೆ /*oḍḍuva kathɛ*/ ನಾ. 1. ಒಗಟು, 2. ಒಡಪು, 3. ಗೂಢವಾದ ಮಾತು. 1. a riddle, 2. a puzzle. ವಾ: ಒಡ್ಡುವ ಕತೆ ಬುಡ್‌ಸಿಕೆ ಕುಸಿ.

ಒಡ್ಡುಸು /*oḍḍusu*/ ಕ್ರಿ. 1. ಅರ್ಪಿಸು, 2. ಪ್ರತಿಭಟಿಸು, 3. ಹಾಯಿಸು, 4. ಚಾಚು. 1. to offer, 2. to protest, 3. to let the water flow, 4. to spread. ವಾ: ಹಸ್ ತನ್ನ ಕರ್‌ಗೆ ಒಡ್ಡಿಸಿ ಹಾಲ್ ಕೊಟ್ಟದೆ.

ಒಡ್ಡುಹುಳಿ /*oḍḍuhuḷi*/ ನಾ. 1. ಒಂದು ಜಾತಿಯ ಹುಳಿ, 2. ಬಡ್ಡು ಹುಳಿ. a citrus fruit, belonging to the family of Rutaceae, widely used used making pickle. ವಾ: ಒಡ್ಡುಹುಳಿನ ಉಪ್ಪನಕಾಯಿ ಹಾಕುವೆ.

ಒಡ್ಡೋಲಗ /*oḍḍɔ:laga*/ ನಾ. 1. ಒಡ್ಡೋಲಗ, 2. ದರ್ಬಾರು, 3. ರಾಜಸಭೆ, 4. ಸಭೆ, 5. ದೊಡ್ಡಸಭೆ. 1. a royal entourage, 2. a durbar, 3. a royal counsel, 4. a meeting, 5. a big conference. ವಾ: ರಾಜರ ಕಾಲಲಿ ಒಡ್ಡೋಲಗ ನಡೆತಿತ್.

ಒಡ್ಡ್ ಸೌಂತೆ /*oḍḍɨ sauntɛ*/ ನಾ. 1. ಮಂಗಳೂರು ಸೌತೆ, 2. ಬೆಳ್ಳೇರಿ. Mangalore cucumber. ವಾ: ಆಟಿ ತಿಂಗಲಿ ಒಡ್ಡ್ ಸೌಂತೆಗೆ ತುಪ್ಪಗಡ!. ಪ: ಕಳಸೌಂತೆ

ಒಡ್ಡ್[1] /*oḍḍɨ*/ ನಾ. 1. ರಾಶಿ, 2. ಸೈನ್ಯ, 3. ಅಡ್ಡಗಟ್ಟೆ, 4. ನೀರು ನಿಂತಿರುವ ಕುಂಟೆ, 5. ರಚನಾಕ್ರಮ, 6. ಜೂಜಿನಲ್ಲಿ ಒಡ್ಡುವ ಹಣ, 7. ಒಕ್ಕಣೆಗಾಗಿ ಕಣದಲ್ಲಿ ತುಳಿಸಲು ಹಾಕಿದ ಧಾನ್ಯದ ತೆನೆ. 1. stacked, 2. an army, 3. blocked, 4. a pond, 5. a structure 6. a stake – money used in betting, 7.paddy stacked for threshing by the treading cattle. ವಾ: ಅಡ್ಕೆ ಒಡ್ಡ್ ನೋಡ್.

ಒಡ್ಡ್[2] /*oḍḍɨ*/ ಕ್ರಿ. 1. ಬೇಡು, 2. ಕೇಳು, 3 ಅರ್ಪಿಸು, 4. ಪ್ರತಿಭಟಿಸು, 5. ಮಡಗು, 6. ಮುಂದಿಡು, 7. ವ್ಯೂಹರಚನೆ ಮಾಡು, 8. ಹಾಯಿಸು, 9. ಚಾಚು. 1. to beg, 2. to ask, 3. to offer, 4. to protest, 5. to keep, 6. to keep in front, 7. to plan a strategy, 8. to let the water flow, 9. to spread. ವಾ: ಅವರ ಮುಂದೆ ಕೈ ಒಡ್ಡ್ ದು ಬೇಡ.

ಒಡ್ಡ್‌ಸಿ ಕೊಡು /*oḍḍɨsi kɔḍu*/ ನಾ. ತಾನೇ ಅವಕಾಶ ಮಾಡಿ ಕೊಡು. to let something happen/ to allow. ವಾ: ನೀ ಒಡ್ಡುಸಿ ಕೊಟ್ಟದ್ಕೆ ಅಂವ ಹಂಗೆ ಮಾಡ್ದ್.

ಒಡ್ತ್ /*oḍtɨ*/ ಕ್ರಿ. 1. ಒಡೆಯಿತು, 2. ಚೂರಾಯಿತು, 3. ಮುರಿಯಿತು. 1. broken, 2. broken in to pieces, 3. cut. ವಾ: ಕುಪ್ಪಿ ಗಲಾಸ್ ಒಡ್ತ್. **ಒಡ್ದ** /*oḍda*/ 1. ಒಡೆದು ಹೋದ, 2. ಚೂರಾದ, 3. ಸೀಳಿದ. 1. broken, 2. broken into pieces, 3. split. ವಾ: ಒಡ್ದ ಕುಪ್ಪಿ ಬಳೆನ ಹಾಕಿಕಾಗದ್. ಪ: ಒಡ್ದುಟ್ಟುಂತ – ಒಡೆದಿದೆಯೆಂದು; ಒಡ್ದುಟ್ಟ್ – ಒಡೆದಿದೆ; ಒಡ್ದೊತ್ – ಒಡೆದು ಹೋಯಿತು; ಒಡ್ದ್ – ಒಡೆದು. **ಒಡ್ಯಕೆ** /*oḍyakɛ*/ 1. ಒಡೆಯುವುದಕ್ಕೆ, 2. ಸೀಳುವುದಕ್ಕೆ, 3. ಭಾಗಬಿಡುವುದಕ್ಕೆ. 1. broken, 2. split open, 3. to split. ವಾ: ತಡಿಲಿ ಉಷ್ಣ ಜಾಸ್ತಿಯಾಕನ ಕಾಲ್ ಒಡ್ಯಕೆ ಸುರಾತ್.

ಒಡ್ಯೆ /*oḍyɛ*/ ನಾ. 1. ಶಾಂಪೂ ತಲೆ ತೊಳೆಯಲು ಬಳಸುವ ಹಸುರು ಸೊಪ್ಪುಗಳ ಲೋಳೆರಸ, 2. ಬಾಗೆಹುಡಿ; ಸೀಗೆಪುಡಿಯಂತೆ ಉಪಯೋಗಿಸಬಹುದಾದ (ಬಾಗೆ ಮರದಿಂದ ತಯಾರಿಸಿದ) ಹುಡಿ. 1. aloe vera extract used in washing hair, 2. powder prepared out of the bark of tree Acacia speciosa, or Mimosa sirisa, which can be used as a shampoo. ವಾ: ತಲೆ ತೊಳೆಕೆ ಒಡ್ಯೆನ ಬಳ್‌ಸುವೆ.

ಒಡ್ಯೊದ್ /*oḍyɔdɨ*/ ಕ್ರಿ. 1. ಹೊಡೆ, 2. ಪೆಟ್ಟು ಹಾಕು,

3. ಬಡಿ. 1. to hit, 2. to beat, 3. to strike. ವಾ: ಯಾಗೊಲು ಕುಡ್‌ದ್ ಬಂದ್ ಒಡ್ಯೊದ್.

ಒಡ್ಲ್ /*odḷi*/ ನಾ. 1. ಒಡಲು, 2. ಶರೀರ, 3. ದೇಹ. body. ವಾ: ಒಡ್ಲ್ ವಣ್‌ಗಿಕಂಡುಟು.

ಒಡ್ವೆ /*odvɛ*/ ನಾ. 1. ಒಡವೆ, 2. ಆಭರಣ. jewellery. ವಾ: ಅವುಳು ಹಾಕಿದ ಒಡ್ವೆನ ನೋಡ್‌ದ.

ಒಡ್ಸಿ /*odsi*/ ನಾ. 1. ಬಿಡಿಸಿ, 2. ಒಡೆಸಿ. 1. to open/detach, 2. to break. ವಾ: ಹಲ್‌ಸ್‌ನ ತೊಳೆ ಒಡ್ಸಿ ಕೊಡು. ಪ: ಒಡ್ಸಿಕೊಡ್ – ಬಿಡಿಸಿಕೊಡು

ಒಡ್ಸೊಕತೆ /*odsɔkatɛ*/ ನಾ. 1. ಒಗಟು, 2. ಸಮಸ್ಯೆ. 1. a riddle, 2. a problem. ವಾ: ಚಾಮೆವ್ವಂಗೆ ಸುಮಾರ್ ಒಡ್ಸುವಕತೆ ಗೊತ್ತ್.

ಒಣೆ /*oṇɛ*/ ನಾ. 1. ಒನಕೆ, 2. ಒನಿಕೆ. a pestle. ವಾ: ಒಣೆಲಿ ಬತ್ತ ಕುಟ್ಟುದು.

ಒಣ್ಕಟೆ /*oṇkaṭɛ*/ ನಾ. 1. ಒಣಗಿ ಹೋದ 2 ಸಣಕಲು, 3. ಬಡಕಲಾದ ಶರೀರ, 4. ಕೃಶನಾದ ಶರೀರ. 1. dried completely, 2. thin, 3. lean body, 4. a frail/week body. ವಾ: ಸೆರಿ ಉಣದೆ ಒಣ್ಕಟೆನಂಗೆ ಆವ್ಟ್. ಪ: ಒಣ್ಗೆಲ್. **ಒಣಂಗಿಲ್** /*oṇaŋgili*/ 1. ಒಣಗಿದ, 2. ಒಣಮೀನು. dried fish. ವಾ: ಒಣಂಗಿಲ್ ಮೀನ್ ಇದ್ದರೆ ಉಂಬಕೆ ರುಚಿ. ಪ: ಉಲ್‌ಂಗೆಲ್(ತು)

ಒಣ್ಕು /*oṇku*/ ನಾ. 1. ದ್ರವದ ಅಳತೆಯ ಒಂದು ಮಾನ 2. ದೊಡ್ಡ ಗೆರಟೆಗೆ ಹಿಡಿಹಾಕಿ ಮಾಡಿದ ಸೌಟಿನಂತಹ ರಚನೆ. 1. a measure, 2. a measure of about one sixth of a litre, 3. a coconut shell ladle/spoon, 4. used in taking water from a pot. ವಾ: ಇಂದಾರೂ ನಂಗೆ ಎರಡ್ ಒಣ್ಕ್ ಮೀಯೊಕು. ಪ: ವರಂಕ(ತು)

ಒಣ್ಕೆ /*oṇkɛ*/ ನಾ. 1. ಒನಕೆ, 2. ಧಾನ್ಯ ಕುಟ್ಟುವ ದಂಡ. pestle. **ಕಪ್ಪುಟ್ಟು, ಕಾಲುಂಗುರ ಹಾಕುಟ್ಟು ಸೊಂಯ್ಯ ಹೋದೆ ಸುಂಯ್ಯ ಬಂದೆ – ಒಣ್ಕೆ(ಒ).** ವಾ: ಹಿಂದೆ ಒಣ್‌ಗಿದ ಇಡಿ ಕಾಪಿನಸ ಒಣ್ಕೆಲಿ ಕುಟ್ಟಿ ಬೇಳೆ ಮಾಡ್ತಿದ್ದೊಗಡ.

ಒಣ್ಗಿಕಂಡ್[1] /*oṇgikaṇḍi*/ ಕ್ರಿ. 1. ಒಣಗಿಕೊಂಡು, 2. ಬಾಡಿಕೊಂಡು. 1. dried, 2. withered. ವಾ: ದೈ ಬಾಡಿ ಒಣ್ಗಿಕಂಡ್‌ಟ್ಟು.

ಒಣ್ಗಿಕಂಡ್[2] /*oṇgikaṇḍi*/ ನಾ. 1. ಸಣಕಲು, 2. ಲಾಚಾರು, 3. ಬಡಕಲು. 1. lean, 2. feeble, 3. week. ವಾ: ದಿನ ಹೋದಂಗೆ ಒಣ್ಗಿಕಂಡ್ ಬರ್‌ತೊಳ. ಪ: ಒಣ್ಗೇಳ

ಒಣ್ಗ್ /*oṇgi*/ ಕ್ರಿ. 1. ಒಣಗು, 2. ನೀರು ಆರು, 3. ರಸವಿಲ್ಲದಂತಾಗು. 1. to dry 2. water evaporating, 3. sapless. ವಾ: ಬಿಸ್‌ಲ್‌ಲಿ ನಿತ್ತ್ ಬಾಯೆಲ್ಲ ಒಣ್‌ಗುದು. ಪ: ಒಣ್‌ಗ್ಲ್ – ಒಣಗಿಲು; ಒಣ್ಗ್‌ಸ್ – ಒಣಗಿಸು. **ಒಣ್‌ಗಿಲ್** /*oṇigili*/ ಒಣಗಿರುವ. dried. **ಒಣ್‌ಗಿಲ್ ರೊಟ್ಟಿಗೆ ಹೊಡ್ದಾಡ್ದಂಗೆ(ಗಾ). ಒಣ್ಗಿಲ್ ಮೊತ್ತಿನಾಂಗೆ(ನು).** ವಾ: ದೈಗಳಿಗೆ ನೀರಿಲ್ಲದೆ ಒಣ್‌ಗ್‌ತಾ ಉಟ್ಟು. ಪ: ಉಣ್ಗೆಲ್(ತು). **ಒಣ್ಗಿಲ್ ಅಡ್ಕೆ** /*oṇgili adki*/ 1. ಒಣಗಿದ ಅಡಕೆ, 2. ಗೋಟು ಅಡಕೆ. dried areca nut. ವಾ: ಒಣ್ಗಿಲ್ ಅಡ್ಕೆ ಅಗೆಕಾದುಲೆ. ಪ: ಕೊಟ್ಟಾಯಿ(ತು). **ಒಣ್ಗಿಲ್ ಮಾಸ** /*oṇgili ma:sa*/ 1. ಒಣಗಿದ ಮಾಂಸ, 2. ಬಿಸಿಲಿನಲ್ಲಿ ಒಣಗಿಸಿದ ಮಾಂಸ, 3. ರಸರಹಿತವಾದ. 1. dried meat, 2. sun dried meat, 3. tasteless. ವಾ: ಒಣ್ಗಿಲ್ ಮಾಸ (ಉಪ್ಪಣ)ತಿಂಬಕೆ ಬಾರಿ ರುಚಿ. **ಒಣ್ಗಿಲ್ ಮೆಣ್ಸ್** /*oṇgili meṇsi*/ ಒಣ ಮೆಣಸು. black pepper. ವಾ: ಅಗ್ರಣೆಗೆ ಒಣ್ಗಿಲ್ ಮೆಣ್ಸ್ ಹಾಕ್. **ಒಣ್ಗ್‌ಸ್** /*oṇsi*/ 1. ಒಣಗಿಸು, 2. ಆರಿಸು, 3. ಶುಷ್ಕವಾಗಿಸು. 1. to dry, 2. to cool down, 3. to shrink. ವಾ: ಅರ್ವೆನ ಬಿಸ್‌ಲ್‌ಲಿ ಒಣ್ಗ್‌ಸ್. ಪ: ಒಣ್ಗು ಸುಲೆ – ಒಣಗಿಸುವುದಿಲ್ಲ

ಒತ್ತ /*otta*/ ನಾ. 1. ಒದೆ, 2. ಒದೆತ. to kick. ವಾ: ಸೆರಿ ಒದದಿದ್ದರೆ ಒತ್ತ ಬಿದ್ದದೆ ಅಸ್ಟೆ.

ಒತ್ತಡ /*ottaḍa*/ ನಾ. ಒತ್ತುವಿಕೆ. 1. to press, 2. pressure. ವಾ: ಈಗೀಗ ಕೆಲ್ಸದ ಒತ್ತಡ ಹೆಚ್ಚಿ ಆತ್.

ಒತ್ತರ /*ottara*/ ನಾ. 1. ಒಂದೇ ರೀತಿ, 2. ಗುಂಪು, 3. ಸಮೂಹ, 4. ಒಂದು ಸಾಲು, 5. ಒಟ್ಟಿಗೆ. 1. a variety/kind/mono, 2. a group, 3. a collective, 4. one row, 5. together. ವಾ: ಕಾಪಿ ದೈನ ಒತ್ತರ ಮಾಡಿ ನೆಡಿಕಾಗದ್.

ಒತ್ತರೆ /*ottarɛ*/ ಕ್ರಿವಿ. 1. ಮುಗಿಸು, 2. ಎಲ್ಲವನ್ನು ಸ್ವಚ್ಛಗೊಳಿಸಿ ಮತ್ತೆ ವ್ಯವಸ್ಥಿತವಾಗಿ ಇರಿಸುವುದು. 1. to complete, 2. to clean everything and to

organise things. ವಾ: ಮನೆ ಕೆಲ್ಸ ಒತ್ತರೆ ಮಾಡಿ ಆತ? ಪ: ಒತ್ತರೆ ಮಾಡ್ದೊ – ಶುಚಿಗೊಳಿಸಿದರು

ಒತ್ತಲೆ ನೋವು /*ottalɛ nɔ:vu*/ ಕ್ರಿ. 1. ಅರೆತಲೆ ನೋವು, 2. ಅರ್ಧ ತಲೆನೋವು. headache on one side of the head. ವಾ: ಹಿಂಬೊತ್ತ್ ಯಾಗೊಲು ಒತ್ತಲೆ ನೋವು ಬಾದು. ಪ: ಒರಕೆನ್ನಿ(ತು)

ಒತ್ತಾಯ /*otta:ya*/ ನಾ. 1. ನಿರ್ಬಂಧ, 2. ಕಂಡಿತ. forbidden. ವಾ: ಜಾಸ್ತಿ ಒತ್ತಾಯ ಮಾಡ್ಬಡ.

ಒತ್ತಿಕಂಡ್ /*ottikaṇḍɨ*/ ಕ್ರಿ. 1. ತಾಗಿಕೊಂಡು, 2. ಒತ್ತಿ ಹಿಡಿದು. 1. to touch, 2. to keep something pressed. ವಾ: ಮೊಬೈಲ್ ಒತ್ತಿಕಂಡ್ ಕುದ್ದುಟು. ಪ: ಒತ್ತಿಕೆ ಬೊತ್ತ್ – ಒತ್ತಬಾರದು

ಒತ್ತಿಕೆ /*ottikɛ*/ ಕ್ರಿ. ಕಡಗ, ಭತ್ತ ಕುಟ್ಟುವ ಭಾಗ. a metal ring at the end of a pestle. ವಾ: ನಂಗೆ ಮೊಬೈಲ್ ಒತ್ತಿಕೆ ಗೊತ್ತಾದ್ಲೆ ಅಪಿಯ.

ಒತ್ತುಕಲ್ಲು /*ottukallu*/ ನಾ. ಭತ್ತ ಕುಟ್ಟುವ ಕಲ್ಲು. a stone slab to thresh paddy. ವಾ: ಒತ್ತುಕಲ್ಲುಲಿ ಬತ್ತ ಹಾಕಿ ಕುಟ್ಟುದು.

ಒತ್ತುಗೌಡ /*ottu gowda*/ ನಾ. ಗೌಡ ಸಮುದಾಯದ ಸಾಂಸ್ಕೃತಿಕ ಮತ್ತು ಸಾಮಾಜಿಕ ನೇತೃತ್ವ ಹೊಂದಿದ ಆಡಳಿತ ವರ್ಗ. a community that leads the Gowda community in the cultural and social matters.

ಒತ್ತುವರಿ /*ottuvari*/ ನಾ. ಅತಿಕ್ರಮಣ. invasion/ occupance. ವಾ: ಅವು ಸುಮಾರ್ ಜಾಗೆನ ಒತ್ತುವರಿ ಮಾಡಿಕಂಡದ್.

ಒತ್ತೆ ಒಂದ್ /*ottɛ ondɨ*/ ಸಂವಾ. ಒಂದೇ ಒಂದು. only one. ವಾ: ಒತ್ತೆ ಒಂದ್ ರಸಬಾಳೆ ದೈ ಇರ್‌ದು.

ಒತ್ತೆ[1] /*ottɛ*/ ನಾ. 1. ಅಡವು, 2. ಆಧಾರವಾಗಿ ಕೊಡುವ ವಸ್ತು. mortgage. ವಾ: ಸಾಲ ತಕಣಿಕೆ ಮನೆನ ಒತ್ತೆ ಇಸಿದ್.

ಒತ್ತೆ[2] /*ottɛ*/ ನಾ. ಒಂದು. one. ವಾ: ದೂರಲಿ ಒತ್ತೆ ಮನೆ ಕಂಡದೆ.

ಒತ್ತೆ[3] /*ottɛ*/ ನಾ. 1. ಒಣಗಿದ ತೆಂಗಿನ ಗರಿ ಮೊದಲಾದುವುಗಳಿಂದ ಮಾಡಿದ ದೀವಟಿಗೆ, 2. ಪಂಜಿಗಾಗಿ ಉಪ ಯೋಗಿಸುವ ತೆಂಗಿನ ಗರಿಯ ಮೇಲ್ಭಾಗ, 3. ಸೂಟೆ. 1. a torch made out of a coconut frond, 2. the end of the coconut frond-used as a fire-brand, 3. a torch. ವಾ: ಹಬ್ಬಲಿ ಒತ್ತೆ ಹಿಡ್‌ಕಂಡ್ ಬಾದು.

ಒತ್ತೆಕೋಲ /*ottɛkɔ:la*/ ನಾ. ವಿಷ್ಣುಮೂರ್ತಿ ದೈವವನ್ನು ಆರಾಧಿಸುವ ಭೂತಕೋಲ. a bhuta kola in which deity Vishnumoorthy is worshipped. ವಾ: ವರ್‌ಸೊಳು ಒತ್ತೆಕೋಲ ನಡ್ದದೆ.

ಒತ್ತ್[1] /*ottɨ*/ ಕ್ರಿ. ಒದೆ. to kick. ವಾ: ಒಂದ್ ಒತ್ತ್ ಕೊಡ್.

ಒತ್ತ್[2] /*ottɨ*/ ಕ್ರಿ. 1. ಒತ್ತು, 2. ಅದುಮು, 3. ತಳ್ಳು, 4. ಹಿಸುಕು. 1. to press, 2. to apply pressure, 3. to push, 4. to squeeze. ವಾ: ತಲೆನ ಒತ್ತ್.

ಒದುರ್ದು /*odurdu*/ ಕ್ರಿ. 1. ಕೊಡಹು, 2. ಕಿರುಚು, 3. ಕರೆ, 4. ಒದರು. 1. to dust something out, 2. to scream, 3. to call out, 4. to shake. ವಾ: ಸುಮ್ಮನಾರ್ ಬಾಯಿಗೆ ಬಂದಂಗೆ ಒದುರ್‌ದು.

ಒದ್‌ಗ್ /*odigɨ*/ ನಾ. 1. ಹೆಚ್ಚು, 2. ಲಭ್ಯತೆ, 3. ಜಾಸ್ತಿ. 1. more, 2. availability, 3. a great quantity. ವಾ: ಹಂದಿ ಗೈಪು ಒಳ್ಳೊ ಒದ್ಗ್ ಉಟ್ಟ್. ಪ: ಒದ್ಗ್ ಇಲ್ಲೆ – ಹೆಚ್ಚುವುದಿಲ್ಲ; ಒದ್ಗ್ – ಒದಗು

ಒದ್ದಾಟ /*odda:ṭa*/ ಕ್ರಿ. 1. ಚಡಪಡಿಸು, 2. ಹೊರಳಾಡು. 1. be anxious, 2. to roll over. ವಾ: ಅವುಳ ಒದ್ದಾಟ ನೋಡಿಕಾದುಲೆ.

ಒದ್ದ್ /*oddɨ*/ ಕ್ರಿ. 1. ಒದೆದು, 2. ಮೆಟ್ಟಿ. 1. kicked, 2. stamped on. **ಅಂಗಳಲಿ ಒದ್ದ್ ಅಡ್ಗೆ ಮನೇಲಿ ಕಾಲ್ ಹಿಡ್ಯದು(ಗಾ).** ವಾ: ಅಂವ ಸಿಟ್ಟ್‌ಲಿ ನಾಯಿನ ಒದ್ದ್ ಹಾಕಿದ್. **ಒದಿ** /*odi*/ ಕಾಲಿನಿಂದ ಒದೆಯುವುದು. to kick. ವಾ: ಸುಮ್ಮನೆ ಕಾಲಿಗೆ ಒದಿಯದು. ಪ: ಒದಿಯದು – ಒದೆಯುವುದು. **ಒದ್ದನೆ** /*oddanɛ*/ ಒದೆಯುತ್ತೇನೆ. will kick (you). ವಾ: ಜಾಸ್ತಿ ಮಾತಾಡ್ರೆ ಒದ್ದನೆ. **ಒದ್ದೊ** /*oddɔ*/ 1. ಒದೆದರು, 2. ಮೆಟ್ಟಿದರು, 3. ತುಳಿದರು. 1. kicked, 2. to stamp on, 3. trampled. **ಇದ್ದದ್ ಇದ್ದಂಗೆ ಹೇಳ್ರೆ ಎದ್ದ್ ಬಂದ್ ಎದೆಗೆ ಒದ್ದೊಗಡ(ಗಾ).** ವಾ: ಅವು ನಂಗೆ ಒದ್ದೊ. ಪ: ತೊರಿಪ್ಪು(ತು) **ಒದ್ದ್ ಹಲ್ಲ್ ಮುರ್ದನೆ** /*oddɨ hallɨ murdanɛ*/ ಬೈಗುಳ ಪದ. an

expletive/a swear word. ವಾ: ಹುಚ್ಚುಚ್ಚಾಗಿ ಆಡಿರೆ ಒದ್ದ್ ಹಲ್ಲ್ ಮುರ್‌ದನೆ.

ಒದ್ರ್ /*odri*/ ಕ್ರಿ. 1. ಹೇಳು, 2. ವ್ಯಕ್ತಪಡಿಸು. 1. tell/say, 2. to express. ವಾ: ಬೇಗ ಬೇಗ ಒದ್ರ್.

ಒದ್ಲು /*odlu*/ ನಾ. 1. ಒಂದು ರಾಶಿ, 2. ಗುಡ್ಡೆ. 1. a pile/ mass, 2. a heap.

ಒನಲೆ[1] /*onalɛ*/ ನಾ. 1. ದವಸಧಾನ್ಯಗಳನ್ನು ಗಾಳಿಸಲು ಬಿದಿರಿನ ಅಥವಾ ಬೆತ್ತದ ಸಲಾಕೆಯಿಂದ ಮಾಡಿದ ಸಾಧನ, 2. ಒಂದರಿ, 3. ಜರಡಿ. a sieve/sifter. ವಾ: ಅಕ್ಕಿನ ಒನಲೆಲಿ ವಂಚುದು.

ಒನಲೆ[2] /*onalɛ*/ ನಾ. 1. ಜರಡಿ, 2. ವಂದ್ರಿ. a sieve/ sifter. ವಾ: ಒನಲೆದ್ ಕಣ್ಣ್ ಹಙ್ಞ ದೊಡ್ಡದ್ ಬೇಕಿತ್ತ್.

ಒನ್ಕೆ /*onkɛ*/ ನಾ. ಒನಕೆ. a pestle. ವಾ: ಒನ್ಕೆಲಿ ಕುಟ್ಟಿ ಹೊಡಿ ಮಾಡ್‌ದು. ಪ: ಒನಿಕೆ – ಒನಕೆ

ಒಪ್ಪ /*oppa*/ ನಾ. ಲೇಪ. to coat. **ಒಪ್ಪದ ಸೀರೆ ಒಂಬತ್ತಿದ್ದರೇನ್(ಗಾ). ಚಿನ್ನಕ್ಕೆ ಒಪ್ಪ ಕೊಟ್ಟಾಂಗೆ(ನು).** ವಾ: ಚಿನ್ನಕ್ಕೆ ಒಪ್ಪ ಕೊಡ್‌ದು.

ಒಪ್ಪ ಓರಣ ಮಾಡ್ /*oppa o:raṇa ma:ḍi*/ ನಾ. 1. ಶುದ್ಧ ಮಾಡು, 2. ಅಚ್ಚುಕಟ್ಟು. to clean. ವಾ: ಹಬ್ಬ ಹಕ್ಕಲೆ ಬಾಕನ ಮನೆನ ಒಳಗೆ, ಹೊರೆಗೆ ಒಪ್ಪ ಓರಣ ಮಾಡೊಕು. ಪ: ಒಪ್ಪಮಾಡ್ದೊ – ಸರಿ ಮಾಡಿದರು ಲೇಪ ಹಾಕಿದರು

ಒಪ್ಪ ಮಾಡ್ /*oppa ma:ḍi*/ ನಾ. ಮೃತ ಶರೀರದ ಅಂತ್ಯ ಸಂಸ್ಕಾರ. performing last rites to the dead/funeral service/burial service. ವಾ: ತೀರಿ ಹೋದವರ ಒಪ್ಪ ಮಾಡ್‌ದು.

ಒಪ್ಪಂದ /*oppanda*/ ನಾ. 1. ಒಡಂಬಡಿಕೆ, 2. ಒಪ್ಪಿಗೆ, 3. ಕರಾರು. 1. a contract, 2. consent, 3. an agreement. ವಾ: ಒಪ್ಪಂದ ಮಾಡಿಕೊಂಡೊಳೊ.

ಒಪ್ಪತ್ /*oppati*/ ನಾ. 1. ದಿನದಲ್ಲಿ ಒಂದು ಹೊತ್ತು ಮಾತ್ರ ಶಾಖಾಹಾರಿ ಊಟ ಮಾಡಿ ಆಚರಿಸುವ ಉಪವಾಸ ವ್ರತ, 2. ಒಪ್ಪೊತ್ತು. 1. a ritual fasting in which one eats only one meal throughout the day, 2. one division of the day. ವಾ: ತಿಂಗಳಿಗೊಮ್ಮೆ ಒಪ್ಪತ್ ಮಾಡಿನೆ.

ಒಪ್ಪಮಾಡ್ದೊ /*oppama:ḍḍɔ*/ ನಾ. 1. ಸರಿ ಮಾಡಿದರು, 2. ಲೇಪ ಹಾಕಿದರು. 1. corrected, 2. coated. ವಾ: ಬಿದ್ದ ಗೋಡೆನ ಒಪ್ಪಮಾಡ್ದೊ.

ಒಪ್ಪ್ /*oppi*/ ನಾ. 1. ಒಪ್ಪು, 2. ಸಮ್ಮತಿಸು, 3. ಒಪ್ಪಿಗೆ ನೀಡು. 1. to agree, 2. to consent, 3. to grant permission. ವಾ: ಕೆಲ್‌ಸಕೆ ಹೋಕೆ ಒಪ್ಪ್. ಪ: ಒಪ್ಪಿಕಂಡ್ರೆ – ಒಪ್ಪಿಕೊಂಡರೆ; ಒಪ್ಪಿಕಣಕ್ – ಒಪ್ಪಿಕೊಳ್ಳಬೇಕು; ಒಪ್ಪಿತ್ಲೆ – ಒಪ್ಪಲಿಲ್ಲ; ಒಪ್ಪಿದೊ – ಒಪ್ಪಿದರು; ಒಪ್ಪಿಸೊಕು – ಒಪ್ಪಿಸಬೇಕು. **ಒಪ್ಪು** /*oppu*/ 1. ಸಮ್ಮತಿಸು, 2. ಒಪ್ಪಿಗೆ ನೀಡು. agreed/ consented. ವಾ: ಮೊದುವೆಗೆ ಬೇಗ ಒಪ್ಪು. **ಒಪ್ಪುಸು** /*oppusu*/ ಒಪ್ಪಿಸು. to convince someone. ವಾ: ಅಲ್ಲಿಗೆ ಹೋಕೆ ಅಪ್ಪನ ಒಪ್ಪುಸು

ಒಬ್ಬ /*obba*/ ಸಂವಾ. 1. ಒಂದು ವ್ಯಕ್ತಿ, 2. ಒಬ್ಬನೆ, 3. ಒಂಟಿಗ, 4. ಒಬ್ಬಂಟಿಗ, 5. ಓರ್ವ. 1. a person, 2. one man, 3. alone, 4. lonely, 5. one person. ವಾ: ಅಂವ ಒಬ್ಬ ನೆ ಇರ್‌ದು. ಪ: ಒಬ್ಬಂಗೆ – ಒಬ್ಬನಿಗೆ; ಒಬ್ಬೆನೆ – ಒಬ್ಬನೆ. **ಒಬ್ಬ ಇಬ್ಬ** /*obbɔ ibbɔ*/ ಸಂವಾ. ಒಬ್ಬರು ಇಬ್ಬರು. one or two. ವಾ: ಒಬ್ಬ ಇಬ್ಬಂದ ಆಗೊ ಕೆಲ್‌ಸ ಅಲ್ಲ ಎಲ್ಲೊವು ಸೇರೊಕು.

ಒಬ್ಬೆ /*obbɛ*/ ನಾ. ನೀರು ಬಿದ್ದು ಬಿದ್ದು ಗುಂಡಿಯಾದ ಜಾಗ. formation of a pit due to continuous dripping of water. ವಾ: ಪಾತಿಂದ ನೀರ್ ಬಿದ್ದ್ ಬಿದ್ದ್ ಅಂಗ್ಳಲಿ ಒಬ್ಬೆಯಾವುಟು.

ಒಬ್ಳು /*obḷi*/ ಸಂವಾ. 1. ಒಬ್ಬಳು, 2. ಒಂಟಿ, 3. ಏಕಾಂಗಿ. one woman/lone woman. ವಾ: ನಂಗೆ ಒಬ್ಳು ತಂಗೆ ಉಟ್ಟು.

ಒಮ್ಮತ /*ommata*/ ನಾ. 1. ಸಹಮತ, 2. ಒಂದೇ ಅಭಿಪ್ರಾಯ, 3. ಒಪ್ಪಿಗೆ. 1. mutual consent, 2. common opinion, 3. permission. ವಾ: ಒಮ್ಮತದ ಬೊದ್ಕ್‌ಲೆ ನೆಮ್ಮದಿ.

ಒಮ್ಮೆ /*ommɛ*/ ನಾ. 1. ಒಂದು ಬಾರಿ, 2. ಒಂದುಸಲ. once. ವಾ: ಒಮ್ಮೆ ವಾಲಗಕೆ ಕೊಣ್ಣ ಹಾಕಕು. ಪ: ಒಮ್ಮೆತ – ಒಂದು ಬಾರಿಂತ. **ಒಮ್ಮೆಗೆ** /*ommɛgɛ*/ ಒಂದೇ ಸಲಕ್ಕೆ. at once. ವಾ: ಒಮ್ಮೆಗೆ ನಾಕೈದ್ ಪ್ರಸ್ನೆ ಕೇಳ್ರೆ ಹೆಂಗೆ ಉತ್ರ ಕೊಡ್ದು. **ಒಮ್ಮೆಲೆ** /*ommɛlɛ*/ 1. ಇದ್ದಕ್ಕಿದ್ದಂತೆ, 2. ಒಂದೇ ಬಾರಿ, 3. ಕೂಡಲೆ. 1. all of a sudden, 2. at once, 3. immediately. ವಾ: ಸಮುದ್ರಲಿ ಒಮ್ಮೆಲೆ ಅಲೆಗ ಬಂದ್ ಹೊಡ್ದವೆ.

ಒಯ್ಪಣೆ[1] /*oypaṇɛ*/ ನಾ. ಚೀರ್ ಹೇನು ತೆಗೆಯಲು ಬಳಸುವ ಬಾಚಣಿಗೆ. a comb to remove lice from the hair. ವಾ: ಒಯ್ಪಣೆಲಿ ತಲೆಂದ ಚೀರ್ ತೆಗೆದು.

ಒಯ್ಪಣೆ[2] /*oypaṇɛ*/ ನಾ. ತಳ್ಳಗೆ ಉದ್ದ ಇರುವ ಹೆಣ್ಣನ್ನು ಬೈಯ್ಯುವ ಪದ. a term used in describing a lean and a tall woman. ವಾ: ಅವುಳೊಂದ್ ಒಯ್ಪಣೆ ಹೆಣ್ಣ್.

ಒಯ್ಯಾರ /*oyya:ra*/ ನಾ. 1. ಬೆಡಗು, 2. ಅಂದ, 3. ವಯ್ಯಾರ. 1. beauty, 2. charming, 3. airs and graces (idiom). ವಾ: ಒಯ್ಯಾರದ ಗೂಡೆ ಅದ್.

ಒಯ್ಯು /*oyyu*/ ಕ್ರಿ. 1. ಹೊಡೆ, 2. ಸುರಿ, 3. ಕಡಿ, 4. ವರ್ಷಿಸು. 1. to beat, 2. to spill, 3. to bite/ to cut, 4. to rain. ವಾ: ನಿನ್ನೆಂದ ಮಳೆ ಬಾರಿ ಒಯ್ಯು ತುಟ್ಟು.

ಒಯ್ಯೊದು /*oyyɔdu*/ ಕ್ರಿ. 1. ಹುಯ್ಯುವುದು. to pour. ವಾ: ಚಾಯನ ಕುಪ್ಪಿ ಗಲಾಸಿಗೆ ನೊರೆ ಬರ್‌ಲಿತ ಎತ್ತಿ ಒಯ್ಯೊದು.

ಒರಗ್ /*oragi*/ ನಾ. 1. ಮಲಗು, 2. ಬೀಳು, 3. (ಸೂರ್ಯನು) ಮುಳುಗು, 4. ಸಾಯು, 5. ಸಂಭೋಗಿಸು, 6. ಹೊಂದು. 1. to sleep, 2. to fall, 3. sun set, 4. to die, 5. to copulate, 6. to own/ have. ವಾ: ಅಂವ ಉಂಡಂಗೆನೆ ಒರಗಿತ್.

ಒರಟ /*oraṭa*/ ನಾ. 1. ಸೌಜನ್ಯತೆ ಇಲ್ಲದವ, 2. ನಯ, ವಿನಯ ಇಲ್ಲದವ, 3. ಮೊಂಡ. 1. ungracious, 2. impolite, 3. rude. ವಾ: ಸ್ವಲ್ಪನು ನಯನಾಜೂಕಿಲ್ಲೆ ಬೊರಿ ಒರಟ.

ಒರಲು /*oralu*/ ನಾ. 1. ಉಳುಮೆ ಮಾಡುವಾಗ ನೇಗಿಲು ಹಿಡಿದವ ಮಾಡುವ ಓSSSS ಎಂಬ ಆಲಾಪನೆ. a spontaneous expression while ploughing, an interjection. ವಾ: ಗದ್ದೆ ಹೂಡಿಕನ ಒರಲು ಹೇಳ್‌ದು. ಪ: ಉರಲ್(ತು)

ಒರಳ್[1] /*oraḷi*/ ನಾ. 1. ಸಾಮಾನ್ಯವಾಗಿ ಕಲ್ಲಿನಿಂದ ಮಾಡಿದ, ನೆಲಮಟ್ಟಕ್ಕೆ ಹುಗಿದಿಟ್ಟ, ಭತ್ತ, ಮೊದಲಾದವುಗಳನ್ನು ಕುಟ್ಟುವ ಕಲ್ಲು, 2. ಒರಳು. A stone set in the ground or a pit prepared in the ground for pounding paddy etc. **ಒನಕೆ ಪೆಟ್ಟ್ ಒರಳ್‌ಗೆ ಗೊತ್ತ್(ಗಾ).** ವಾ: ಒರಳ್‌ಲಿ ಕುದ್ದ್‌ಕೊಂಡ್ ಒನಕೆನ ಪಟ್ಟ್ ತೊಪ್ಪಿಸಿಕೆ ಆಕಿಲ್ಲೆ. ಪ: ನೆಲಕ್ಕುರಿ, ನಿಲಕ್ಕುರಿ(ತು)

ಒರಳ್[2] /*oraḷi*/ ನಾ. ಎಲೆ ಅಡಿಕೆ ಕುಟ್ಟುವ ಕಲ್ಲು. a pestle/stone to crust betel leaf and areca nut. ವಾ: ಎಲೆಡ್ಕೆನ ಒರಳ್‌ಕಲ್ಲ್‌ಲಿ ಗುದ್ದಿದ್ ಸಣ್ಣ ಮಾಡಿಕೊಡ್.

ಒರು /*oru*/ ಕ್ರಿ. 1. ಉಜ್ಜು, 2. ತಿಕ್ಕು. 1. to rub, 2. to scrub. ವಾ: ಪಾತ್ರನ ಒರು. **ಒರೆಕಲ್ಲ್** /*orɛkalli*/ 1. ಉಜ್ಜುವ ಕಲ್ಲು, 2. ಸಾಣೆಕಲ್ಲು. a rubbing stone. ವಾ: ಒರೆಕಲ್ಲ್ ಸಿಕ್ಕಿತಾ?

ಒರೆ /*orɛ*/ ನಾ. ಚೂರಿ ಅಥವಾ ಖಡ್ಗ ಇರಿಸುವ ಜಾಗ. a sheath, a scabbard. ವಾ: ಕಡ್‌ಗನ ಒರೆಲಿ ಇಸುದು.

ಒರ್ /*ori*/ ನಾ. 1. ಒಂದು ಕೈಯಿಂದ ಕೆಲಸ ಮಾಡು, 2. ಒಬ್ಬನೇ ಮಾಡಿದ ಕೆಲಸ. 1. to work using only one hand, 2. a work done by only one person. ವಾ: ಇಸ್ಟೊಂದ್ ಒರ್ ಕೈಲಿ ಕೆಲ್‌ಸ ಮಾಡ್‌ದ್.

ಒರ್‌ಂಕೆ /*oriŋkɛ*/ ನಾ. ಕುಡ್ತೆ, ದ್ರವ ಅಳತೆಯ ಒಂದು ಮಾನ, ಲೀಟರಿನ ಸುಮಾರು ಆರನೆಯ ಒಂದು ಭಾಗ. A liquid measure of about 1. /6 of a litre. ವಾ: ಒಂದ್ ಒರ್‌ಂಕೆ ಹಾಲ್ ತಕಂಡದ್.

ಒರ್‌ಂಗಿಸ್ /*oriŋgisi*/ ನಾ. ಮುಖವನ್ನು ಸೊಟ್ಟ ಮಾಡಿ ಹಿಯಾಳಿಸಿ. grimace. ವಾ: ಬಾಯಿ ಒರ್‌ಂಗಿಸಿ ಮಾತಾಡ್‌ದು. **ಒರ್‌ಂಗ್‌ಸ್** /*oriŋgisi*/ ಆಂಗಿಕ ಭಾಷೆಯಲ್ಲಿ ಗೇಲಿ ಮಾಡುವುದು. to mock someone using a sign (body language). ವಾ: ನನ್ನ ನೋಡಿ ಅವುಳು ಮೋರೆ ಒರ್‌ಂಗ್‌ಸ್‌ದು. ಪ: ಒರ್‌ಂಗ್‌ಸ್ – ಬಾಯಿಯನ್ನು ಸೊಟ್ಟ ಮಾಡು; ಒರ್‌ಂಗಿಸಿ – ಮುಕವನ್ನು ಓರೆ ಮಾಡಿ/ವ್ಯಂಗ್ಯ ಮಾಡಿ. **ಒರ್‌ಂಗೇಲ** /*oriŋge:la*/ ಮುಖವನ್ನು ಸೊಟ್ಟ ಮಾಡಿ ಹಿಯಾಳಿಸುವವ. to grimace. ವಾ: ನಾ ಆ ಒರ್‌ಂಗೇಲನೊಟ್ಟಿಗೆ ಮಾತಾಡ್ತುಲೆ.

ಒರ್ಕೆ /*orkɛ*/ ನಾ. ಬಿಡುವು. leisure. ವಾ: ಈಗ ನಮಿಗೆ ಒರ್ಕೆಯಿಲ್ಲದ ಕೆಲ್‌ಸ.

ಒರ್ಕೆನ್ನೆ /*orkɛnnɛ*/ ನಾ. ತಲೆಯ ಒಂದು ಭಾಗದಲ್ಲಿ ಪದೇ, ಪದೇ ತಲೆ ನೋವಾಗುವುದು. pain on one

side of the head. ವಾ: ಒರ್ಕೆನ್ನೆ (ಒತ್ತಲೆಬೇನೆ) ಬಂದರೆ ತಡೆಕಾದುಲೆ.

ಒರ್ಗೇಲ /*orgɛla*/ ನಾ. 1. ಒಂಟಿ ಕಾಡು ಹಂದಿ, 2. ಗಂಡು ಹಂದಿ, 3. ದಡೂತಿ. 1. lone wild boar, 2. a male boar, 3. fat/obese/stout. ವಾ: ಗೆಣ್ಸ್ ಬೊಳ್ಳಿ ಇದ್ದರೆ ತೋಟಕೆ ಒರ್ಗೇಲ ಬಂದದೆ.

ಒರ್ಗ್[1] /*orgi*/ ಕ್ರಿ. 1. ವಾಲು, 2. ಒರಗು, 3. ಬಾಗು. 1. to slant, 2. to lean, 3. to bend. ವಾ: ಗಾಳಿ ಮಳೆಗೆ ಮರದ ಗೆಲ್ಲ್ ಒರ್‌ಗಿಟು.

ಒರ್ಗ್[2] /*orgi*/ ಕ್ರಿ. 1. ಮಲಗು, 2. ನಿದ್ದೆಹೋಗು. 1. to sleep. ವಾ: ಕೆಲ್‌ಸ ಮಾಡಿ ಸುಸ್ತಾಗಿ ಮರಕೆ ಒರ್‌ಗಿ ಕುದ್ದತ್. ಪ: ಒರ್ಗು – ಒರಗು

ಒರ್ಗಿಸಿ /*orgisi*/ ಕ್ರಿ. 1. ತಾಗುವಂತೆ ಇಡು, 2. ಒರಗಿಸಿ. to lean over. ವಾ: ಹಲಗೆನ ಬೀಳದಂಗೆ ಗೋಡೆಗೆ ಒರ್ಗಿಸಿ ಇಸ್. ಪ: ಒರ್ಗುಸಿ

ಒರ್ಚಿಕಂಡ್ /*orcikaṇḍi*/ ಕ್ರಿವಿ. 1. ತಾಗಿಕೊಂಡು, 2. ಸವರಿ ಕೊಂಡು, 3. ಹತ್ತಿರದಿಂದ. 1. leaned over, 2. touched, 3. nearby. ವಾ: ಅವಿಬ್ಬರ್ ಒರ್ಚಿಕಂಡ್ ಕುದ್ದೊಳ.

ಒರ್ಚ್ /*orci*/ ಕ್ರಿ. 1. ತಾಗು, 2. ಉಜ್ಜು, 3. ತರಚು, 4. ಘರ್ಷಿಸು. 1. to touch, 2. to rub, 3. to scratch, 4. to scuff. ವಾ: ಕಾಲಿಗೆ ಕಲ್ಲ್ ಒರ್ಚುದು. ಪ: ಒರ್ಚಿಕಂಡ್ – ತಾಗಿಕೊಂಡು

ಒರ್ತೆ /*ortɛ*/ ನಾ. 1. ಒರತೆ, 2. ನೀರಿನ ಒರತೆ, 3. ಅಂತರ ಜಲ4. ಭೂಮಿಯಿಂದ ನೀರು ಒಸರು. 1. a spring, 2. water oozing from the ground, 3. ground water, 4. water coming from the ground. **ರಸಿಕತೆ ಇಲ್ಲದ ಬಾಳ್ ಒರ್ತೆ ಇಲ್ಲದ ಬಾಮಿ(ಗಾ).** ವಾ: ಒರ್ತೆ ನೀರ್ ಕುಡ್ಯಕ್. ಪ: ಒರ್ತೆನೀರ್ – ಅಂತರ್ಜಲ

ಒರ್ದ /*orda*/ ನಾ. 1. ಒಂದು ಪಕ್ಕಕ್ಕೆ, 2. ಒಂದು ಬದಿಗೆ. towards one side. ವಾ: ಮದ ಒಂದ್ ಒರ್ದಕೆ ಮಾಲಿಟು.

ಒರ್ಪಾತ್ /*orpa:ti*/ ನಾ. ಸರಿಯಾಯಿತು. to correct/ to settle. ವಾ: ಹಳೆ ಲೆಕ್ಕ ಒರ್‌ಪಾತ್. ಪ: ಒರ್ಪಾಕನ – ಸರಿಯಾಗುವಾಗ

ಒರ್ಪು /*orpu*/ ನಾ. 1. ಸಮ, 2. ಸರಿ, 3. ಹದ. 1. equal, 2. correct, 3. proper state. ವಾ: ಹಣ್ಣ್ ನ ಒರ್ಪು ಮಾಡ್.

ಒರ್ಮಾ /*orma:*/ ನಾ. ಒಂದು ಬದಿಯಲ್ಲಿ ಇಳಿಸಿದ ಮಾಡು. a roof with a downward slide at one place. ವಾ: ಮನೆಗೆ ಒರ್ಮಾಡ್.

ಒರ್ಲೆ /*ollɛ*/ ನಾ. 1. ಗೆದ್ದಲು, 2. ಬಿಳಿ ಇರುವೆ, 3. ಒರಲೆ. a termite/a white ant. ವಾ: ಗೋಡೆ ಕರೆಲಿ ಸೀತಕ್ಕೆ ಒರ್ಲೆ ಬಂದುಟು.

ಒರ್ಸ್ /*orsi*/ ಕ್ರಿ. 1. ತಿಕ್ಕು, 2. ಒರಸು. 1. to scrub, 2. to smear. ವಾ: ನೆಲ ಒರ್‌ಸುದು. ಪ: ಒರ್ಸಿಕೊಂಬಕನ – ಒರಸಿಕೊಳ್ಳುವಾಗ

ಒರ್ಳ್ /*orḷi*/ ನಾ. 1. ನೆಲಗುರಿ, 2. ಭತ್ತಕುಟ್ಟುವ ಕಲ್ಲು. a stone mortar. ವಾ: ಒರ್ಳ್‌ಲಿ ಬತ್ತನ ಹಾಕಿ ಕುಟ್ಟುದು. **ಒರ್ಳ್ ಕಲ್ಲ್** / *orḷi kalli*/ ಭತ್ತ ಕುಟ್ಟಲು ಬಳಸುವ ಕಲ್ಲು, 2. ನೆಲಗುಳಿ, 3. ಒರಳು. 1. a mortar used in husking rice, 2. cavity in the ground (usually stone based), 3. a mortar. ವಾ: ಬತ್ತನ ಒರ್ಳ್‌ಕಲ್ಲ್‌ಗೆ ಹಾಕಿ ಮಿದೆದು/ಮಿಜುದು.

ಒಲಿ /*oli*/ ನಾ. ತೆಂಗಿನ ಗರಿ. coconut fronds. ವಾ: ಒಲಿನ ಚೀಪೆ ಗುಡ್‌ಸಿಕೆ ಲಾಯ್ಕ. **ಒಲಿ ಕೂಪೆ** /*oli cɔpe*/ ತೆಂಗಿನ ಗರಿಯ ಚಾಪೆ. a mat made out of coconut fronds. ವಾ: ಕುದ್ರಿಕೆ ಒಲಿಕೂಪೆನ ಹಾಸ್.

ಒಲಿಕ್ಕಜೆ /*olikkajɛ*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ನೆಲ್ಲೂರು ಕೆಮ್ರಾಜೆ ಗ್ರಾಮದ ಜಾಗ. a locality in Nelluru Kemraje village in Sullia Taluk of Dakshina Kannada District.

ಒಲಿಮೊಂದ್ರಿ /*olimondri*/ ನಾ. ಮುಂಡೋವು ಎಂಬ ಗಿಡದ ಮುಳ್ಳಿನ ಗರಿಗಳನ್ನು ಸಿಗಿದು ಒಣಗಿಸಿ ಮಾಡುವ ಮೊಂದ್ರಿ. a mat made of Pandanus adoratissimus (Pandanaceae) leaves. ವಾ: ಒಲಿಮೊಂದ್ರಿ ಗಟ್ಟಿ ಇದ್ದದೆ.

ಒಲೆ ಕಟ್ಟೆ /*olɛ kaṭṭɛ*/ ನಾ. ಒಲೆ ಇಟ್ಟಿರುವ ಸ್ಥಳದಲ್ಲಿರುವ ವಿಶಾಲವಾದ ಜಾಗ. place where an oven / a stove is kept. ವಾ: ಒಲೆ ಕಟ್ಟೆ ಕರೆಲಿ ಗಂಜಿಗುಂಡಿ ಇರ್‌ದು.

ಒಲೆ[1] /*olɛ*/ ಕ್ರಿ. 1. ತೊನೆ, 2. ಅಲ್ಲಾಡಿಸು, 3. ಬಾಗು. 1. to oscillate 2. to shake, 3. to bend.

ಒಲೆ[2] /*olɛ*/ ನಾ. ಅಡುಗೆ ಮಾಡಲು, ನೀರು ಕಾಯಿಸಲು ಬೆಂಕಿಯನ್ನು ಉರಿಸುವ ಸಲಕರಣೆ. an oven. **ಉತ್ತರನ ಪೌರುಸ ಒಲೆ ಮುಂದೆ(ಗಾ).** ವಾ: ಮೊಣ್ಣ್‌ನ ಒಲೆಲಿ ಅಡ್‌ಗೆ ಮಾಡ್‌ದು. ಪ: ಒಲೆ ಕರೆಲಿ – ಒಲೆಯ ಬದಿಯಲ್ಲಿ; ಒಲೆ ಬುಡಲಿ – ಒಲೆಯ ಬುಡದಲ್ಲಿ; ಒಲೆ ಬೆಂಡೆ – ಒಲೆಯ ಮೂಲೆ

ಒಲೆಕಲ್ಲ್ /*olɛkalli*/ ನಾ. ಒಲೆಗೆ ಜೋಡಿಸಿದ ಕಲ್ಲು. stones used in a traditional three stone stove. ವಾ: ಒಲೆ ಒಟ್ಟಿಗೆ ಒಲೆಕಲ್ಲ್‌ನ ಇಸುದು.

ಒಲೆಕಿಂಡೆ /*olɛkiṇḍɛ*/ ನಾ. ಒಲೆಯಿಂದ ಕೊಳವೆಯ ಮೂಲಕ ಸ್ವಲ್ಪದೂರ ಇರುವ ಕೋಡಿ ಒಲೆ. a smaller pothole in the traditional mud stove/clay stove/clay oven with two or three potholes, with raised lumps where pots can rest. The smaller pot hole used the heat from the adjoining pot hole next to it. ವಾ: ಒಲೆಕಿಂಡೆಲಿ ಬೆಂಕಿ ದೊಡ್ಡದಾಗಿ ಹೊತ್ತಿದೆ.

ಒಲೆತಿಂಟೆ /*olɛtiṇṭɛ*/ ನಾ. ಒಲೆಯ ಮೇಲ್ಭಾಗದ ಸುತ್ತಲಿನ ಜಾಗ. ಇದರ ಮೇಲೆ ಕೆಲವು ಅಗತ್ಯ ವಸ್ತುಗಳನ್ನು ಒಣಗಿಸಲು ಬಳಸುತ್ತಾರೆ. top portion of traditional mud stove/clay stove/clay oven. Used in drying essential items like grains, spices etc. ವಾ: ಅನ್ನನ ಬಾಗಿ ಒಲ್ತಿಂಟೆ ಮೇಲೆ ಇಸ್. ಪ: ಒಲ್ತಿಂಟೆ – ಒಲೆಯ ಮೂರು ಬದಿಯ ಸ್ಥಳ; ಒಲೆಚಿಂಟೆ – ಒಲೆಯ ಮೂರು ಬದಿಯ ಸ್ಥಳ, ಒಲೆಯ ಸುತ್ತ ಇರುವ ಜಾಗ

ಒಲ್ಲಿ /*olli*/ ನಾ. ಮಲಗುವಾಗ ಹೊದೆದುಕೊಳ್ಳುವ ಹೊದಿಕೆ. a blanket. **ಒಲ್ಲಿಲಿ ತಲೆ ಮುಚ್ಚಿರೆ ಕಾಲ್ ಕಂಡದೆ ಕಾಲ್ ಮುಚ್ಚಿರೆ ತಲೆ ಕಂಡದೆ(ಗಾ).** ವಾ: ಒಲ್ಲಿ ಹೊದ್ದ್ ಬಿದ್ದುಟು (ಮಲ್ಗಿಟು). ಪ: ಒಲ್ಲಿ ಹೊದ್ದ್ – ಹೊದಿಕೆ ಹೊದ್ದು

ಒಲ್ಸು /*olsu*/ ಕ್ರಿ. 1. ಒಲಿಸಿಕೊ, 2. ಒಪ್ಪಿಸು. 1. to win over, 2. to convince. **ಹೆಣ್ಣ್‌ನ ಒಲ್ಸಿಕೂ ಕಲ್ಸಿಕೂ ಗೊತ್ತ್‌ಬೇಕ್(ಗಾ).** ವಾ: ನಾವು ಸುರುಗೆ ಮಾಡುವ ಕೆಲ್ಸನ ಒಲ್ಸಿಕಣಕು. ಪ: ಒಲ್ಸಿಕ

ಒಸಿ /*osi*/ ನಾ. 1. ಹಿಷ್ಟ, 2. ಕೊಂಚ, 3. ತುಸು. 1. a little bit, 2. a small quantity, 3. a slight. ವಾ: ಒಸಿ ಉಪ್ಪುನ ಹಾಕ್. ಪ: ಹಜ – ಹಿಷ್ಟ; ಚೂರು – ಹಿಷ್ಟ

ಒಸಿ[1] /*osi*/ ಅ. 1. ಹಿಷ್ಟ, 2. ಒಸಿ. 1. a little, 2. a small quantity. ವಾ: ಒಸಿ ಉಪ್ಪು ಹಾಕಿ. ಪ: ಒಸಿ, ಹೊಸಿ

ಒಸಿಯೊಸಿ /*osiyɔsi*/ ಪವಾ. ಸ್ವಲ್ಪ, ಹಿಷ್ಟ. little bit. ವಾ: ಉಪ್ಪನಕಾಯಿನ ಒಸಿಯೊಸಿ ತಿನೊಕು.

ಒಸ್‌ಡ್ /*osiḍi*/ ನಾ. 1. ವಸಡು, 2. ದಂತಪಂಕ್ತಿ. 1. gums, 2. a row of teeth. ವಾ: ಒಸ್‌ಡ್ ಲಿ ರಕ್ತ ಬಾದು.

ಒಳ ಅಂಕಣ /*oḷa aŋkaṇa*/ ನಾ. ಎರಡು ಅಡ್ಡಜಂತಿ ಅಥವಾ ಕಂಬಗಳ ನಡುವಿನ ಸ್ಥಳಾವಕಾಶ. The space between two cross beams or pillars (supporting roof). ವಾ: ಒಳ ಅಂಕಣನ ಅಚ್ಚ್ ಕಟ್ಟ್ ಮಾಡುದು.

ಒಳ[1] /*oḷa*/ ಕ್ರಿ. 1. ಇರು, 2. ಇದ್ದಿಯ. 1. to be, 2. to exist. ವಾ: ಆಗ ನೀ ಅಲ್ಲಿ ಒಳ. **ಒಳಂತೇಳಿ** /*oḷante:ḷi*/ 1. ಇದ್ದೀಯ ಎಂದು, 2. ಇರಬಹುದೆಂದು. I thought you might be there. ವಾ: ನೀ ಒಳಂತೇಳಿ ಅಕಯ ಹೇಳ್ತ್. **ಒಳನಾ** /*oḷana:*/ 1. ಇದ್ದಿಯಾ?, 2. ಇದ್ದಾರಾ? 1. Are you there? 2. Are they there? ವಾ: ನೀ ಅಲ್ಲಿ ಒಳನಾ? ಪ: ಒಳನಾ(ಏವ); ಒಳರಿಯಾ(ಬವ)

ಒಳ[2] /*oḷa*/ ನಾ. 1. ಒಳಗಡೆ, 2. ಒಳಭಾಗ. inside. ವಾ: ಡೊಬ್ಬಿನ ಒಳ ನೋಡ್. **ಒಳಗಡೆ** /*oḷagaḍɛ*/ 1. ಒಳಗೆ, 2. ಒಳಭಾಗದಲ್ಲಿ. inside. ವಾ: ಅರಮನೆ ಒಳಗಡೆ ಹೆಂಗುಟ್ಟು? **ಒಳಗಾವುಟ್ಟ್** /*oḷaga:vuṭṭi*/ 1. ಒಳಗೆ ಆಗಿದೆ, 2. ಒಳಗೆ ಇದೆ. It is there inside. ವಾ: ಮುಚ್ಚುಳ ಡಬ್ಬಿದ್ ಒಳಗಾವುಟ್ಟ್.

ಒಳ[3] /*oḷa*/ ನಾ. 1. ಉಳಿದ, 2. ಬಾಕಿಯಾದ, 3. ಉಳಿಕೆ. 1. remaining, 2. left over. ವಾ: ತೋಟಲಿ ಸುಮಾರ್ ಕುರೆಗ ಒಳೊ.

ಒಳ[4] /*oḷa*/ ಸನಾ. ಇದ್ದಾರೆ. they are there. ವಾ: ಬನ್ನಿ ಅಪ್ಪ ಮನೆಲೆ ಒಳ. **ಒಳಗಡ** /*oḷagaḍa*/ ದ್ದಾರಂತೆ. They are there. ವಾ: ಆಪೀಸರ್ ಒಳಗಡ.

ಒಳ[5] /*oḷḷɔ*/ ನಾ. 1. ಉಳಿದುಕೊಳ್ಳು, 2. ಉಳಿ. 1. to stay, 2. to halt. ವಾ: ನೀ ಇಂದ್ ಅಲ್ಲೇ ಒಳನ?

ಒಳಗೆ /*oḷagɛ*/ ನಾ. 1. ಒಳಗಡೆ, 2. ಅಂತರಂಗದಲ್ಲಿ, 3. ಅಷ್ಟರಲ್ಲಿ. 1. inside, 2. deep within, 3. right then. ವಾ: ಮನ್‌ಸ್ ಒಳಗೆ ಕೆಟ್ಟ ಬಾವನೆ ಇರಿಕಾದ್.

ಪ: ಒಳಗೆ ಹುಗ್ಗುನೆ – ಒಳಗೆ ನುಗ್ಗು; ಒಳಗೆಕೂಡ್ಸ್ – ಒಳಗೆ ಬಂದಿಸು; ಒಳಗೆಂದ – ಒಳಗಿನಿಂದ; ಒಳಗಿದ್ದ – ಒಳಗಿದ್ದ. **ಒಳಗೆನ** /*oḷagɛna*/ 1. ಒಳಗಿನ, 2. ಅಂತರಂಗದ. 1. interior 2. inside one's mind. ವಾ: ಮನ್ಸ್ ಒಳಗೆನ ಗುಟ್ಟು ಹೆಂಗೆ ಗೊತ್ತಾದೆ.

ಒಳಜಾತಿ /*oḷaja:ti*/ ನಾ. ಉಪಜಾತಿ. a sub-caste. ವಾ: ಒಳಜಾತಿಗ ಸುಮಾರ್ ಉಟ್ಟಲ.

ಒಳದ್[1] /*oladɨ*/ ಕ್ರಿ. ಇರುವುದು. being there. ವಾ: ದಿನಕೆ ಇಪ್ಪತ್‌ನಾಕ್ ಗಂಟೆ ಒಳದ್. **ಒಳದಲ್ಲ** /*oḷadalla*/ ಇರುವುದಲ್ಲ. something that is not there. ವಾ: ನಾ ಹಂಗೆನೆ ಒಳದಲ್ಲ.

ಒಳದ್[2] /*oḷadɨ*/ ನಾ. ನನ್ನಲ್ಲಿರುವುದು. something that i have. ವಾ: ಒಂದೆ ರುಮಾಲ್ ಒಳದ್.

ಒಳಮೈ /*oḷamai*/ ನಾವಿ. ಒಳಗಿನ ಭಾಗ. inside. ವಾ: ಕೊಡಪಾನದ್ ಒಳಮೈ ದಪ್ಪ ಉಟ್ಟು.

ಒಳರಿ /*oḷari*/ ಸನಾ. ಇದ್ದೀರಾ? Are you there? ವಾ: ಎಲ್ಲಿ ಒಳರಿ ಅಕ್ಕ? ಪ: ಒಳರಿಯಾ – ಇದ್ದೀರಾ

ಒಳಸಂಚ್ /*oḷasanɨ*/ ನಾ. 1. ಒಳಸಂಚು, 2. ಗುಪ್ತ ಸಂಚು. 1. a secret plot, 2. a conspiracy. ವಾ: ನೆಗಾಡಿಕಂಡೆ ಒಳಸಂಚ್ ಮಾಡಿವೆ.

ಒಳಿ[1] /*oḷi*/ ನಾ. ರಾತ್ರಿ ಹೊತ್ತು ಬೇಟೆಯಾಡಲು ಕಾಡುಪ್ರಾಣಿಗಳು ಅಲೆದಾಡುವ ಜಾಗದಲ್ಲಿ ಸಾಕಷ್ಟು ಎತ್ತರದಲ್ಲಿ ಮರದ ಮೇಲೆ ಕಟ್ಟುವ ಅಟ್ಟಣಿಗೆ. a hunting tower in the forest to hunt animals during night. ವಾ: ಮರದ ಮೇಲೆ ಒಳಿ ಕಟ್ಟುದು.

ಒಳಿ[2] /*oḷi*/ ಕ್ರಿ. 1. ಉಳಿ, 2. ಉಳಿದುಕೊ, 3. ತಂಗು, 4. ಇರು. to stay. ವಾ: ನೀ ಹೋಬಡ ಇಲ್ಲೆ ಒಳಿ. **ಒಳಿಯಕೆ** /*oḷiyakɛ*/ 1. ಉಳಿಯುವುದಕ್ಕೆ, 2. ತಂಗುವುದಕ್ಕೆ. 1. to live, 2. to stay. ವಾ: ಒಳಿಯಕೆ ಇನ್ನೊಮ್ಮೆ ಬಂದವೆ ಬಲಾ. ಪ: ಒಳಿದೊ – ಉಳಿದರು/ ತಂಗಿದ್ದರು. **ಒಳಿಯಕ್ಕಿಲ್ಲೆ** /*oḷiyakkillɛ*/ 1. ಉಳಿಯಲಿಕ್ಕಿಲ್ಲ, 2. ಬದುಕಲಿಕ್ಕಿಲ್ಲ. 1. may not stay, 2. may not live. ವಾ: ಅಂವ ಒಳಿಯಕ್ಕಿಲ್ಲೆ ಬಜ್ಜ ಉಟ್ಟು ಕಂಡದೆ. ಪ: ಒಳಿಯುದಿಲ್ಲೆಂತ – ಉಳಿಯುವುದಿಲ್ಲವೆಂದು

ಒಳಿ[3] /*oḷi*/ ನಾ. 1. ಗದ್ದೆಯನ್ನು ಉಳುಮೆ ಮಾಡುವಾಗ ಹಾಕಿಕೊಂಡ ಸಾಲು, 2. ನಾಲ್ಕಾರು ಸುತ್ತು ಉತ್ತಗದ್ದೆ. 1. making furrow while ploughing, 2. a field ploughed four to five times. ವಾ: ಗದ್ದೆ ಹೂಡ್ಕನ ಒಳಿ ತೆಗೆಯದು.

ಒಳಿ[4] /*oḷi*/ ನಾ. 1. ಸಂಚಿನ ಸ್ಥಳ, 2. ಮರೆಯಾಗಿ ಕುಳಿತು ಆಡುವ ಬೇಟೆ. 1. a place of stalking (during a hunting expedition), 2. a hunter hiding himself in order to hunt an animal. ವಾ: ಒಳಿ ಕುದ್ದ್ ಬೇಟೆಯಾಡೊಕು. ಪ: ಒಳಿಕುದ್ರು – ಕಾಡು ಪ್ರಾಣಿಗಳನ್ನು ಬೇಟೆಯಾಡುವ ಸ್ತಳ; ಒಳಿ ಕೂರ್ದು – ಮರೆಯಾಗಿ ಕೂರು; ಬೇಟೆಯಾಡಲು ಅವಿತು ಕೂರುವುದು;

ಒಳಿಕುದ್ರುದು /*oḷikudrudu*/ ನಾ. ಬೇಟೆಯಾಡಲು ಹೊಂಚುಹಾಕುತ್ತಾ ಕುಳಿತುಕೊಳ್ಳುವುದು. to stay hidden in the hunting tower waiting for a favourable time to hunt an animal. ವಾ: ಬೇಟೆ ಆಡಿಕನ ಒಳಿಕುದ್ರುದು.

ಒಳೆ[1] /*oḷɛ*/ ಸನಾ. 1. ಇದ್ದೇನೆ, 2. ಇರುವೆನು. I am there. ವಾ: ನಾ ನಿಮ್ಮೊಟ್ಟಿಗೆ ಒಳೆ. ಪ: ನಾ ಒಳೆ – ನಾನಿದ್ದೇನೆ

ಒಳೆ[2] /*oḷɛ*/ ಕ್ರಿ. ಉಳಿದುಕೊ. (please) stay. ವಾ: ನಾ ಮನೆಲೆ ಒಳೆ.

ಒಳೆಕುಡಿ /*oḷɛkuḍi*/ ನಾ. 1. ಒಂದು ಔಷಧಿಯ ಸಸ್ಯ. ಅಜೀರ್ಣ, ಚವಿ, ತುರಿಕೆ ಮೊದಲಾದುವುಗಳಿಗೆ ಇದರ ಚಿಗುರು ಔಷಧಿ. ಚಟ್ನಿ ಇತ್ಯಾದಿಗಳಿಗೆ ಉಪಯುಕ್ತ. 2. ಗಂಡು ಕೇಪುಳ. a medicinal plant, Memecylon amplexicaule, (memecylaceae), Its shoots cure indigestion, certain allergies, skin diseases, etc. Also used in preparing chutney, etc. ವಾ: ಒಳೆಕುಡಿ ನಂಜ್‌ಗೆ ಮೊದ್ದ್.

ಒಳೆಗೆ /*oḷɛgɛ*/ ನಾ. ಒಳಗೆ. inside. ವಾ: ಮನೆ ಒಳೆಗೆ ಬನ್ನಿ.

ಒಳೆಣ್ಣ /*oḷɛṇṇa*/ ನಾ. ಇದ್ದೇನೆ ಅಣ್ಣ. I am there brother. ವಾ: ಇಲ್ಲೆ ಒಳೆಣ್ಣ.

ಒಳೆಯ /*oḷɛya*/ ಸನಾ. 1. ಇದ್ದೇನೆ, 2. ಇದ್ದೀಯ? 1. I am there. 2. Are you there? ವಾ: ನಾ ಹೊರೆಗೆ ಒಳೆಯ.

ಒಳೊ /*oḷɔ*/ ಸನಾ. ಇದ್ದಾರೆ (ಬ,ವ), ಒಳೆ (ಏ,ವ) ಇದ್ದಾನೆ,

ಒಳೊ (ಬ,ವ), ಒಳೆ. They are there. ವಾ: ಉಗ್ಗಪ್ಪ ಕೋಂಬರೆಲಿ ಒಳೊ. ಪ: ಒಳೊಗಡ – ಇದ್ದಾರೆ ಅಂತೆ; ಒಳೊಂತ – ಇದ್ದಾರೆ. **ಒಳೊನ** /*olɔna*/ ಇದ್ದಾರಾ? Are they there? ವಾ: ಇಲ್ಲೆ ಒಳೊನ ನಾ ಅಲ್ಲೆಲ್ಲ ಹುಡ್ ಕಿ ಬಂದೆ.

ಒಳ್ಂಗಿಸ್ /*oḷiŋgisɨ*/ ನಾ. ಒಣಗಿಸು. to dry. ವಾ: ಅರ್ವೆನ ಬಿಸ್‌ಲ್‌ಲಿ ಒಳ್ಂಗಿಸ್.

ಒಳ್ಂಗ್ /*oḷiŋgɨ*/ ನಾ. 1. ಒಣಗು, 2. ಶುಷ್ಕವಾಗು. 1. to dry, 2. bone dry. ವಾ: ಅರ್ವೆ ಒಳ್ಂಗ್‌ಕೆ ಹಾಕ್. ಪ: ಒಳ್ಂಗ್ಸುಲೆ – ಒಣಗಿಸುವುದಿಲ್ಲ.

ಒಳ್‌ಕಂತ್ /*oḷkanti*/ ಕ್ರಿ. 1. ಉಳಿದುಕೊಂಡಿತು, 2. ಉಳಿದುಕೊಂಡನು, 3. ಉಳಿದುಕೊಂಡಳು. 1. it stayed back, 2. (he) stayed back, 3. (she) stayed back. ವಾ: ಪಾಯ್ಸ ಮಾಡಿದ್ದೆ ಚೂರ್ ಒಳ್‌ಕಂಡತ್. ಪ: ಒಳ್ ಕಂಡತ್ – ಉಳಿದುಕೊಂಡನು, ಉಳಿದುಕೊಂಡಳು

ಒಳ್ಗೆ /*oḷgɛ*/ ನಾ. 1. ಒಳಭಾಗ, 2. ಆಂತರ್ಯ, 3. ಅಂತರಾಳದಲ್ಲಿ. 1. inside, 2. one's inner self/ mind, 3. in the mind. ವಾ: ಮೊನ್‌ಸನ ಒಳ್ಗೆ ಎಂತ ವಿಚಾರಗ ಇದ್ದದೆತ ಯಾರಿಗೆ ತಾನೆ ಗೊತ್ತಾದೆ.

ಒಳ್ತ್[1] /*oḷti*/ ಕ್ರಿ. ಉಳಿಯಿತು. to remain. ವಾ: ಅನ್ನ ಸುಮಾರ್ ಒಳ್ತ್.

ಒಳ್ತ್[2] /*oḷtɨ*/ ಕ್ರಿ. 1. ಉಳಿದುಕೊಂಡನು, 2. ಉಳಿದುಕೊಂಡಳು. 1. (He) stayed, 2. (She) stayed. ವಾ: ನಿನ್ನೆ ಅವ್ವು ನಮ್ಮಲಿ ಒಳ್ತ್.

ಒಳ್ದ ಬಂದ /*oḷda banda*/ ಕ್ರಿ. 1. ಉಳಿದ ಹಿಟ್ಟು, 2. ಹೆಚ್ಚಾದ ಹಿಟ್ಟು. left over food. ವಾ: ಒಳ್ದಬಂದನ ಹಂಗೆನೆ ಇಸಿರೆ ನಾಳೆಗೆ ಆದೆ.

ಒಳ್ದ್ /*oḷdɨ*/ ಕ್ರಿ. 1. ಉಳಿದು, 2. ತಂಗು. to stay at. ವಾ: ದೋಸ್ತಿ ಮನೆಲಿ ಒಳ್ದ್ ಬಂದೆ. **ಒಳ್ದ** /*oḷda*/ 1. ಉಳಿದ, 2. ಹೆಚ್ಚಾದ. 1. remaining, 2. extra/additional. ವಾ: ಒಳ್ದ ಅನ್ನನ ರೊಟ್ಟಿ ಮಾಡಿಕೆ ಬಂದ ಕಲ್‌ಸಿರೆ ಆತ್. ಪ: ಒಳ್ದ್ – ಉಳಿದು; ಒಳ್ದುಟ್ಟು – ಉಳಿದಿದೆ; ಒಳ್ದೋದೆ – ಉಳಿದು ಹೋಗುತ್ತದೆ; ಒಳ್ಯೊತಿತ್ತ್ – ಉಳಿಯುತಿತ್ತು; ಒಳ್ದದರ – ಉಳಿದದ್ದನ್ನು

ಒಳ್ಬೆ /*obbɛ*/ ನಾ. 1. ಕಣಿವೆ, 2. ಎರಡು ಬೆಟ್ಟಗಳು ಸಂಧಿಸುವ ಇಳಿಜಾರು ಜಾಗ. 1. a valley. 2 a low area enclosed by hills or mountains. ವಾ: ದನಂಗ ಒಳ್ಬೆಲೆ ಆಗಿ ಆಚೆಗುಡ್ಡೆಗೆ ಹೋಗೊಳೊ. ಪ: ಒಲ್‌ಬೆ(ತು)

ಒಳ್ಸಿ ಬೆಳ್ಸಿದ /*oḷsi beḷsida*/ ನಾವಿ. ಉಳಿಸಿ ಬೆಳೆಸಿದ. something that you have taken care of/ nurtured. ವಾ: ಬಜ್ಜಪಟ್ಟ್ ಒಳ್ಸಿ ಬೆಳ್ಸಿದ ದೈಗ ಇದ್. ಪ: ಒಳ್ಸಿಕಂಡಿರ್‌ವ – ಉಳಿಸಿಕೊಂಡಿರುವ; ಒಳ್ಸಿಕನ್ತ್ – ಉಳಿಸಿಕೊಂಡನು; ಒಳ್ಸಿಕೊಣೊಕು – ಉಳಿಸಿಕೊಳ್ಳಬೇಕು

ಒಳ್ಸು /*oḷsu*/ ಕ್ರಿ. 1. ಉಳಿಸು, 2. ಉಳಿತಾಯ ಮಾಡು. to save. ವಾ: ದುಡ್ಡುನ ಒಳ್ಸು ಎಲ್ಲ ಕರ್‌ಚಿ ಮಾಡ್ಬಡ. ಪ: ಒಳ್ಸಿದ – ಉಳಿಸಿದ; ಒಳ್ಸಿತ್ – ಉಳಿಸಿದನು

ಒಳ್ಸ್ /*oḷsɨ*/ ನಾ. 1. ಒಲಿಯುವಂತೆ ಮಾಡು, 2. ಮನವೊಲಿಸು. 1. to win over, 2. to convince. ವಾ: ಆ ಗೂಡೆನ ಒಳ್ಸ್.

ಒಳ್ಳ ಕತೆ /*oḷḷa katɛ*/ ನಾ. ಉತ್ತಮ ಕಥೆ. a good story. ವಾ: ನಿಂದ್ ಒಳ್ಳ ಕತೆ ಆತ್.

ಒಳ್ಳ[2] /*oḷḷɔ*/ ನಾ. 1. ಒಳ್ಳೆಯ, 2. ಶುಭ, 3. ಸುಂದರತೆಯ, 4. ಕಲ್ಯಾಣ. 1. good, 2. auspicious, 3. beautiful, 4. welfare. **ಕೆಟ್ಟಕಣ್ಣ್ ಒಳ್ಳದರ ಮಾಡಿಕಿಲೆ, ಒಳ್ಳ ಕಣ್ಣ್ ಕೆಟ್ಟದರ ನೋಡಿಕಿಲೆ(ಗಾ).** ವಾ: ಒಳ್ಳ ಗುಣದ ಗೂಡೆ. ಪ: ಒಳ್ಳದಲ್ಲನೋ – ಒಳ್ಳೆಯದಲ್ಲವೋ. **ಒಳ್ಳ ಬಿಸ್ಲ್** /*oḷḷa bisli*/ ತುಂಬ ಬಿಸಿಲು. too hot/too sunny. ವಾ: ಇಂದ್ ಒಳ್ಳ ಬಿಸ್ಲ್ ಉಟ್ಟು. **ಒಳ್ಳ ಮೆಣ್ಸ್** /*oḷḷa mɛŋsi*/ ಕರಿಮೆಣಸು. black pepper. ವಾ: ಒಳ್ಳಮೆಣ್ಸ್ ಬೊಳ್ಳಿ ಸುಮಾರ್ ಸತ್ತತ್.

ಒಳ್ಳದಿತ್ತ್ /*oḷḷaditti*/ ನಾ. ಚೆನ್ನಾಗಿತ್ತು. it was good. ವಾ: ತುಂಬ ಹಣ್ಣಾಗಿದ್ದರೆ ಒಳ್ಳದಿತ್ತ್.

ಒಳ್ಳದ್ /*oḷḷadɨ*/ ನಾ. ಒಳ್ಳೆಯದು. good. **ಹೆಳ್ದೊಕ್ಕಿಂತ ಸುಮ್ಮನೆ ಕರ್ದೆ ಒಳ್ಳದ್(ಗಾ). ಒಬ್ಬಂಗೆ ಒಳ್ಳದೆ ಇನ್ನೊಬ್ಬಂಗೆ ಕೆಟ್ಟದ್(ನು).** ವಾ: ಒಳ್ಳದ್ ಹೋಗಿ ಬನ್ನಿ. ಪ: ಒಳ್ಳದ್‌ಂತ – ಒಳ್ಳೆಯದು ಎಂದು

ಒಳ್ಳಹಾವು /*oḷḷɔha:vu*/ ನಾ. ಸರ್ಪ. a serpent. ವಾ: ಗುಡ್ಡದತ್ರ ಒಳ್ಳಹಾವ್ ಆಗಾಗ ಬಂದದೆ.

ಒಳ್ಳುಸು /*oḷḷusu*/ ನಾ. ಬೀಸು. to throw/to fling. ವಾ: ಅಂವ ಕಡ್‌ಗನ ಒಳ್ಳುಸುದು.

ಒಳ್ಳೆ /*oḷḷɛ*/ ನಾ. 1. ಎರಡೂ ಬದಿ ಇಳಿಜಾರು ಪ್ರದೇಶ ವಿದ್ದು ಮಧ್ಯದ ತಳಭಾಗ, 2. ಕಣಿವೆ. a valley. ವಾ: ಬಾರಿ ಉದ್ದದ ಒಳ್ಳೆ.

ಒಳ್ಳೆಮೆಣ್ಸ್ /*oḷḷɛmɛṇsɨ*/ ನಾ. 1. ಕರಿಮೆಣಸು, 2. ಕಾಳು ಮೆಣಸು. Black Pepper. ವಾ: ಒಳ್ಳೆ ಮೆಣ್ಸ್ ನ ಗೈಪುಗು, ಮೊದ್ದಿಗು ಬಳ್‌ಸುವೆ. **ಒಳ್ಳಮೆಣ್ಸ್ ಆಂಬರ** /*oḷḷamɛṇsɨ a:mbara*/ ಕಾಳು ಮೆಣಸಿನ ಸಾಂಬಾರು. pepper rasam/soup. ವಾ: ಸೀತಕ್ಕೆ ಒಳ್ಳಮೆಣ್ಸ್ ಆಂಬರಲಿ ಉಂಡರೆ ಒಳ್ಳದ್. **ಒಳ್ಳೆ ಮೆಣ್ಸ್ ಸೊಪ್ಪ್** /*oḷḷɛ mɛṇsɨ sɔ:ppɨ*/ ಕೈ ಕಾಲು ನೋವಿಗೆ ಔಷಧಿ ಮಾಡುತ್ತಾರೆ. leaves from this plant are used in preparing medicine for pain in legs and hands. ವಾ: ಒಳ್ಳೆ ಮೆಣ್ಸ್ ಸೊಪ್ಪ್‌ನ ಮೊದ್ದಿಗೆ ಬಳ್‌ಸುವೆಗಡ. **ಒಳ್ಳೆಮೆಣ್ಸ್ ಉಂಡೆ** /*oḷḷɛmɛṇsɨ uṇḍɛ*/ (ಬಾಣಂತಿಗೆ)ಕರಿಮೆಣಸಿನ ಪುಡಿ, ಬೆಲ್ಲ ಮತ್ತು ತುಪ್ಪ ಸೇರಿಸಿ ಮಾಡುವ ಉಂಡೆ. a sweet dish, round in shape, made of black pepper powder, jaggery and ghee. usually given to a new mother. ವಾ: ಒಳ್ಳೆಮೆಣ್ಸ್ ಉಂಡೆನ ಬಾಣ್ತಿಗೆ ಕೊಟ್ಟವೆ.

ಒಳ್ಳೆಹಾವು /*oḷḷɛha:vu*/ ನಾ. ನೀರುಹಾವು. water snake. ವಾ: ಒಳ್ಳೆಹಾವುಗೆ ವಿಸ ಇಲ್ಲೆ. ಪ: ನೀರೊಳ್ಳೆ

ಒಳ್ಳೊ[1] /*oḷḷɔ*/ ನಾ. ಜೋರು. aggressive.

ಒಳ್ಳೊ[2] /*oḷḷɔ*/ ನಾ. ಚೆನ್ನಾಗಿರು. to be good. **ಅವ್ವ ಒಳ್ಳೊದಾದ್ರೆ ಮಕ್ಕ ಒಳ್ಳೊದಾದವೆ(ಗಾ). ಒಳ್ಳೆದ್** /*oḷḷɛdɨ*/ ಒಳ್ಳೆಯದು. something good. ವಾ: ನಾವು ಬಂದವೆ, ಸೆರಿ ಆತ್ ಒಳ್ಳೆದ್ ಹೋಕ ಬನ್ನಿ.

ಓ

ಓಂಕನ್ /*o:ŋkanɨ*/ ನಾ. 1. ಓಗೊಡು, 2. ಕರೆವಾಗ ಓಓ ಎಂದು ಹೇಳುವುದು. 1. to listen to someone, 2. an onomatopoeic expression. ವಾ: ಕರೆಕನ ಓಂಕಣಕು. **ಓಂಕಂಬುದು** /*o:ŋkambudu*/ ಇನ್ನೊಬ್ಬರು ಕರೆದಾಗ ತಾನು 'ಓ' ಎಂದು ಕೂಗಿ ತನ್ನ ಇರುವಿಕೆಯನ್ನು ತೋರಿಸಿಕೊಳ್ಳುವುದು. an onomatopoeic expression used as a reaction to the calling of someone. ವಾ: ಕರೆಕನ ಓಂಕಂಬದು. ಪ: ಓಂಕಣ್ದು; ಓಗೊಡ್ದು. **ಓಂಕನಿಕೆ ಬೊತ್ತಾ** /*o:ŋkanikɛ bɔtta:*/ ಯಾರಾದರೂ ಕರೆದಾಗ ಪ್ರತಿಕ್ರಿಯೆ ನೀಡದಿದ್ದಾಗ ಹೇಳುವ ಮಾತು. usually, the term is used when someone doesn't react to one's call. ವಾ: ಕರೆಕನ ಓಂಕನಿಕೆ ಬೊತ್ತಾ ನಿಂಗೆ. ಪ: ಓಂಕಬೊದು – ಇನ್ನೊಬ್ಬರು ಕರೆದಾಗ 'ಓ' ಎನ್ನುವುದು

ಓಂಗ್ /*o:ŋgɨ*/ ನಾ. 1. ಒ0ದು ವಸ್ತುವನ್ನು ಪಡೆಯುವ ಆಸೆಯಿ0ದ ಅಥವಾ ಒ0ದು ವಿಷಯವನ್ನು ಕದ್ದಾಲಿಸುವ ದುರುದ್ದೇಶದಿ0ದ ಒ0ದೇ ಕಡೆಯಲ್ಲಿ ನಿಲ್ಲು ಅಥವಾ ಅತ್ತಿತ್ತ ಅಲೆಯು ಅಥವಾ ಸುಳಿಯು, 2. ಇನ್ನೊಬ್ಬರು ತಿನ್ನುವಾಗ ದುರಾಸೆಯಿ0ದ ನೋಡು, 3. ಹೊ0ಚು. 1. Loiter about or hide in the same place with the sinister purpose of overhearing or getting something, 2. Look greedily (especially when someone else eats), 3. Lie in ambush. ವಾ: ನಮ್ಮ ಮಾತ್‌ನ ಅಂವ ಮರೆಲಿ ನಿತ್ತ್ ಓಂಗ್‌ದು. ಪ: ಓಂಗಿಕಂಡ್ – ಆಸೆಯಿಂದ ನಿರೀಕ್ಷಿಸಿಕೊಂಡು, ಕಾತುರದಿಂದ ಕಾದುಕೊಂಡು

ಓಂಗ್ಲ್‌ಪಾರೆ /*o:n:glpa:re*/ ನಾ. ಕೊಡಗು ಜಿಲ್ಲೆಯ ಪೆರಾಜೆ ಗ್ರಾಮದ ಜಾಗ. a locality in peraje village in of Kodagu District.

ಓಂಜಲಪ್ಪ /*o:ŋjalappa*/ ನಾ. ಮಿಡತೆ ರೂಪದ ಕೀಟ. an insect resembling a grasshopper. ವಾ: ಓಂಜಲಪ್ಪ ದೈನ ತಿಂದದೆ.

ಓಂಟೆ /*o:ɳʈɛ*/ ನಾ. ಓಟೆ. hollow.

ಓಂತಿ /*o:nti*/ ನಾ. 1. ಓತಿ, 2. ಓತಿಕ್ಯಾತ, 3. ಹೆಂಟೆಗೊದ್ದ. 1. a lizard, 2. a chameleon, 3. Lacerta Cristata. **ಓಂತಿಗೆ ಬೇಲಿ ಸಾಕ್ಷಿ(ನು).** ವಾ: ಕೊತ್ತಿ ಓಂತೀಕ್ಯಾತನ ಹಿಡ್ದ್ ಅರೆಜೀವ ಮಾಡಿ ಆಟ ಆಡ್ದು ನೋಡಿಕೆ ಬೊತ್ತ್. ಪ: ಓಂತಿನ – ಓತಿಕ್ಯಾತನ; ಓಂತಿಯಲ್ಲಾಂತ – ಓತಿಯಲ್ಲಾಂತ; ಓಂತಿಕೇತ – ಓತಿಕ್ಯಾತ

ಓಂತಿ ಮೀನ್ /*o:nti mi:nɨ*/ ನಾ. ಒಂದು ಜಾತಿಯ ಮೀನು. a variety of fish. ವಾ: ಓಂತಿ ಮೀನ್‌ತೇಳ್‌ದು ಒಂದ್ ಜಾತಿನ ಮೀನ್.

ಓಂತಿಕುತ್ತ /*o:ntikutta*/ ನಾ. ಮುಖ ಸೀದುಹೋಗುವ ಒಂದು ರೋಗ. a disease; causing burning sensation on the face. ವಾ: ಓಂತಿಕುತ್ತಂತೇಳ್‌ದು ಮೋರೆಕೆ ಬರೊ ಒಂದ್ ರೀತಿನ ಕಾಯ್‌ಲ.

ಓಂತಿಬಾಪು /*o:ntiba:pu*/ ನಾ. ಜಾನುವಾರುಗಳಿಗೆ

ಬರುವ ಒಂದು ರೋಗ. a disease in cattle. ವಾ: ದನಗಳಿಗೆ ಓಂತಿಬಾಪುತ ಕಾಯ್‌ಲ ಬಂದದೆ.

ಓಂತಿಬೀಲ /*o:ntibi:la*/ ನಾ. 1. ಹಾಸ್ಯಪದ, 2. ಸಣ್ಣದು, 3. ಸಪೂರ, 4. ಸಣಕಲು. 1. a joke, 2. small, 3. thin, 4. lean. ವಾ: ನಿನ್ನ ಕೂದೊಲು ಓಂತಿ ಬೀಲದಾಂಗೆ ಆವುಟು.

ಓಕ್ಳಿ /*o:kḷi*/ ನಾ. 1. ಓಕುಳಿ, ಅರಸಿನ ಮತ್ತು ಸುಣ್ಣ ಬೆರಸಿದ (ಅಥವಾ ಕುಮಕುಮ ಬೆರೆಸಿದ) ನೀರು, 2. ಓಕುಳಿ ನೀರನ್ನು ಒಬ್ಬರಿನ್ನೊಬ್ಬರ ಮೇಲೆ ಎರಚುವ ಆಚರಣೆ,3. ಅವಭೃತ ಸ್ನಾನ. 1. coloured water used in the festival of colors (when lime and turmeric are dissolved in water, the water turns red or crimson in colour), 2. The ritual of splashing coloured water on each other, 3. Ritual bathing in coloured water at the end of the fe. ವಾ: ಹೋಳಿ ಹಬ್ಬಲಿ ಓಕುಳಿ ಆಟ ಆಡಿವೆ.

ಓಕ್ಳಿ ಸಾಸ್ತ್ರ /*o:kḷi sa:stra*/ ನಾ. ಓಕುಳಿಶಾಸ್ತ್ರ, ಸಾಂಪ್ರದಾಯಿಕ ವಿವಾಹ ಸಂದರ್ಭದಲ್ಲಿ ವಧೂವರರು ಪರಸ್ಪರ ಓಕುಳಿಯನ್ನು ಎರಚಿಕೊಳ್ಳುವ ಆಚರಣೆ. The ritual in which crimson water is splashed on each other by the bride and the bridegroom during a traditional marriage ceremony. ವಾ: ಮೊದುವೆಲಿ ಗಂಡ್ ಹೆಣ್ಣ್ ಸಂಪ್ರದಾಯದಂಗೆ ಓಕ್ಳಿ ಸಾಸ್ತ್ರ ಆಚರಣೆ ಮಾಡಿವೆ.

ಓಕ್ಳಿಯಾಟ /*o:kḷiya:ṭa*/ ನಾ. ಒಬ್ಬರಿನ್ನೊಬ್ಬರ ಮೇಲೆ ಓಕುಳಿ ನೀರನ್ನು ಚಿಮುಕಿಸುವ ಆಟ. splashing coloured water on each other in the festival of colors. ವಾ: ಹೋಳಿ ಹಬ್ಬಲಿ ಬಣ್ಣದ ನೀರ್‌ನ ಚೋಂಪಿಕಂಡ್ ಓಕ್ಳಿಯಾಟ ಆಡುದು.

ಓಜಿ[1] /*o:ji*/ ನಾ. ಮಹಾರಾಷ್ಟ್ರದಿಂದ ತುಳುನಾಡಿಗೆ ವಲಸೆಬಂದ, ಶಿವಾಜಿಯ ವಂಶಜರೆಂದು ಹೇಳಲಾದ, ಒಂದು ಜನಾಂಗ ಮತ್ತು ಅದಕ್ಕೆ ಸೇರಿದ ವ್ಯಕ್ತಿ ಹಾಗು ಆತನ ಕುಲನಾಮ. A community which migrated into Tulunadu from Maharashtra, believed to be the descendants of Shivaji's clan; a person belonging to that clan and also his surname. ವಾ: ಓಜಿತೇಳಿರೆ ಮಹಾರಾಷ್ಟ್ರಂದ ತುಳುನಾಡಿಗೆ ಬಂದಂತ ಜನಾಂಗ.

ಓಜೆ[2] /*o:jɛ*/ ನಾ. ಕಮ್ಮಾರ. a blacksmith. ವಾ: ಅಪ್ಪ ಓಜೆ ಹಕ್ಕಲೆ ಹೋಗೊಳೊ. **ಓಜೆರ್ತಿ** /*o:jɛrti*/ 1. ಕಮ್ಮಾರರ ಹೆಂಗಸು, 2. ಕಮ್ಮಾರಗಿತ್ತಿ. a woman belonging to the family of a blacksmith. ವಾ: ಅಲ್ಲಿ ಬಾದು ಓಜೆರ್ತಿ ಕಂಡದೆ.

ಓಟ /*o:ṭa*/ ನಾ. 1. ಓಡುವಿಕೆ, 2. ವೇಗ, 3. ತ್ವರೆಯಿಂದ ಹೋಗು. 1. to run, 2. in speed, 3. to go quickly. ವಾ: ನಾಟಿ ನೆಟ್ಟ ಮೇಲೆ ಗದ್ದೆಲಿ ಓಟ ಇದ್ದದೆ. **ಓಟಕಿತ್ತತ್** /*o:ṭakittatɨ*/ 1. ಓಡಿ ಹೋಗು, 2. ಪರಾರಿಯಾಗು, 3. ಪಲಾಯನ. 1. to run away, 2. to escape, 3. to evade. ವಾ: ಅಂವ ಕೆಲ್‌ಸ ಮಾಡಿಕೆ ಆದೆತ ಕಳ್ಳತನಲಿ ಓಟಕಿತ್ತತ್.

ಓಟುನಾಟಿ /*o:ṭuna:ṭi*/ ನಾ. ದೊಡ್ಡ ಗದ್ದೆ. a large field. ವಾ: ನಾಟಿ ಆದ ಮೇಲೆ ಓಟುನಾಟಿಲಿ ಓಡುದು. ಪ: ಓಟದ್ ನಾಟಿ – ದೊಡ್ಡಗದ್ದೆ

ಓಟುಪಿಜಿನ್ /*o:ṭupijinɨ*/ ನಾ. ಸಕ್ಕರೆ ಇರುವೆ. ants. ವಾ: ಓಟುಪಿಜಿನ್ ಸಿಂಯಿ ಇದ್ದಲೆಲ್ಲ ಬಂದದೆ.

ಓಟೆ ಮನೆ /*o:ṭe manɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಓಟೆ ಹುಳಿ /*o:ṭɛ huḷi*/ ನಾ. ಹುಣಸೆ ಹುಳಿ. Tamarind;The fruit of the tree, Tamarindus indica, Linn. (Papilionaceae). ವಾ: ಓಟೆಹುಳಿನ ಬಾಯಿ ಚಪ್ಪರ್‌ಸಿಕಂಡ್ ತಿಂದದೆ.

ಓಟೆ[1] /*o:ṭɛ*/ ನಾ. 1. ಬಿದಿರಿನ ಜಾತಿಯ ಒಂದು ಗಿಡ, ಓಟೆ, 2. ಊದುಕೊಳವೆ, 3. ಬಳಪದ ಕಡ್ಡಿಯ ಹಿಡಿ. 1. a variety of large, thin reed, Ochlandra travancorica, Gamb. (Poaceae), 2. A blowing pipe (usually made of bamboo), 3. the spot where one grasps a slate pencil. **ನಾಯಿ ಬೀಲಕ್ಕೆ ಓಟೆ ಹಾಕಿದಂಗೆ(ಗಾ).** ವಾ: ಓಟೆಲಿ ಕುಕ್ಕೆ ಮಾಡಿವೆ. **ಓಟೆ ಬೆದ್‌ರ್** /*o:ṭɛ bedɨri*/ ಉದ್ದವಾಗಿ ಬೆಳೆಯುವ ಬಿದಿರು. a bamboo that grows taller. ವಾ: ಓಟೆ ಬೆದ್‌ರ್ ಉದ್ದಕೆ ಹೋದೆ.

ಓಟೆ[2] /*o:ṭɛ*/ ನಾ. 1. ಟೊಳ್ಳು, 2. ಉದ್ದವಾಗಿಯೂ,

ಟೊಳ್ಳಾಗಿಯೂ ಇರುವಂತಹದು. 1. hollow, 2. an object which is tall and hollow. **ನಾಯಿ ಬೀಲಕ್ಕೆ ಓಟೆ ಹಾಕಿದಂಗೆ(ಗಾ).** ವಾ: ಇದ್ ಓಟೆ ಬಿದ್ರ್.

ಓಟೆಕಜೆ /*o:ṭekajɛ*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕಲ್ಮಡ್ಕ ಗ್ರಾಮದ ಜಾಗ. a locality in Kalmadka village in Sullia Taluk of Dakshina Kannada District.

ಓಟ್ /*o:ṭi*/ ನಾ. 1. ಮತ, 2. ಓಟು. A vote. ವಾ: ಮನೆ ಮನೆಗೆ ಓಟ್ ಕೇಳಿಕಂಡ್ ಬಂದವೆ.

ಓಡ /*o:ḍa*/ ನಾ. 1. ದೋಣಿ, 2. ಹರಿಗೋಲು, 3. ನಾವೆ. 1. a boat, 2. an oar, 3. a barge. ವಾ: ಹೊಳೆ ದಾಟಿಕೆ ಓಡ ಬಳ್ಸುವೆ. **ಓಡ ಒಚ್ಚ್‌ದು** /*o:ḍa occidu*/ 1. ದೋಣಿ ನಡೆಸುವುದು, 2. ದೋಣಿ ನಡೆಸುವವನು, 3. ಹುಟ್ಟು ಹಾಕುವುದು ಅಂಬಿಗ. 1. to row a boat, 2. a boatman, 3. an oarsman. ವಾ: ಅಂಬಿಗ ದೋಣಿಲಿ ನಡ್‌ಸಿಕೆ ಓಡಒಚ್ಚ್‌ದು.

ಓಡಬಲಿ /*o:ḍabali*/ ನಾ. ದೇವಾಲಯಗಳ ಉತ್ಸವದ ಸಂದರ್ಭದಲ್ಲಿ ದೇವರ ಉತ್ಸವಮೂರ್ತಿಯನ್ನು ತಲೆಯ ಮೇಲೆ ಹೊತ್ತುಕೊಂಡು ಗುಡಿಯ ಸುತ್ತಲೂ ಓಡುತ್ತಾ ಪ್ರದಕ್ಷಿಣೆ ಬರುವ ಮೆರವಣಿಗೆ. to circumambulate a shrine (carrying the portable idol of the deity, during a temple festival). ವಾ: ದೇಸ್ತಾನಲಿ ವಿಶೇಸ ದಿನಗಳ್‌ಲಿ ಓಡಬಲಿ ನಡ್‌ದದೆ.

ಓಡಬಾಯಿ /*o:ḍaba:yi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಸುಳ್ಯ ನಗರದ ಜಾಗ. a locality in Suḷya Nagara village in Sullia Taluk of Dakshina Kannada District.

ಓಡಾಡ್ /*o:ḍa:ḍi*/ ಕ್ರಿ. 1. ಓಡಾಡು, 2. ನಡೆದಾಡು. to walk. ವಾ: ಚಾಂಪ ಮೆಲ್ಲ ಓಡಾಡಿವೆ.

ಓಡಿಕಂಡ್ /*o:ḍikaṇḍi*/ ಕ್ರಿ. 1. ಓಡಿಕೊಂಡು, 2. ಅವಸರದಲ್ಲಿ ಬರುವುದು, 3. ದೌಡಾಯಿಸು. 1. running, 2. in a hurry, 3. to run quickly. ವಾ: ಯಾಕೆ ಹಿಂಗೆ ಒಂದೇಸರಿ ಓಡಿಕಂಡ್ ಬಂದ? ಪ: ಓಡಿಕೊಂಡ್ – ಓಡಿಕೊಂಡು

ಓಡಿಕಟ್ಟ್ /*o:ḍikaṭṭi*/ ನಾ. ಒಂದು ವರ್ಗದ ಜನರ ಕೂಡುಕಟ್ಟು ಆ ಒಕ್ಕೂಟ ರೂಪಿಸಿಕೊಂಡ ಸಂಪ್ರದಾಯ, ನಡೆನುಡಿಗಳು, ಕಟ್ಟುಪಾಡುಗಳು. traditions, lifestyle and values developed by a clan. ವಾ: ಓಡಿಕಟ್ಟ್ ಒಂದ್ ಜೆನಾಂಗದ ಸಂಪ್ರದಾಯ, ಕಟ್ಟ್ ಪಾಡ್‌ಗ.

ಓಡಿಗೆ ಕಟ್ಟುದು /*o:ḍigɛ kaṭṭudu*/ ನಾ. ಷರತ್ತುಬದ್ಧ ಕೋಳಿಯನ್ನು 'ಓಡಿ'ಗೆ' ಕಟ್ಟುವುದು. To arrange a cockfight on the condition of. ವಾ: ಪಂತ ಕಟ್ಟಿ ಕೋಳಿನ ಓಡಿಗೆ ಕಟ್ಟುದು.

ಓಡಿಟ್ಟ್ /*o:ḍiṭṭi*/ ನಾ. ಹೆಂಚಿನಲ್ಲಿ ಹೊಯ್ಯುವ ರೊಟ್ಟಿ. a flatbread roasted on frying pan (tawa). **ಓದುವ ಮಕ್ಕಳಿಗೆ ಓಡಿಟ್ಟ್ ಆಡುವ ಮಕ್ಕಳಿಗೆ ಆಡಿಟ್ಟ್, ದನ ಮೇಸುವ ಮಕ್ಕಳಿಗೆ ದರ್ಗ್ ಹಿಟ್ಟ್(ಗಾ).** ವಾ: ಪದ್ನಿಸಿದ ಅಕ್ಕಿನೊಟ್ಟಿಗೆ ಅನ್ನ ಹಾಕಿ ಕಡ್‌ದ್ ಹೊಯ್ದರೆ ಓಡಿಟ್ಟ್ ಆದೆ. ಪ: ಓಡದ್ಯೆ(ತು) **ಓಡಿಟ್ಟ್ ಕಾವುಲಿ** /*o:ḍiṭṭi ka:vuli*/ 1. ದೋಸೆ ಹೆಂಚು, 2. ದೋಸೆತವ, 3. ದೋಸೆ ಕಾವಲಿ. a dosa tawa (dosa making pan). ವಾ: ಓಡಿಟ್ಟ್ ಕಾವುಲಿಲಿ ಓಡಿಟ್ಟ್ ಹೊಯ್ಯದು.

ಓಡಿಯನ /*o:ḍiyana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಓಡು /*o:ḍu*/ ನಾ. ರೊಟ್ಟಿ ಕಾಯಿಸುವ ಹೆಂಚು. roti (flat bread) making pan or tawa. ವಾ: ಅಕ್ಕಿ ರೊಟ್ಟಿನ ಓಡುಲಿ ಕಾಸುದು. ಪ: ಓಡುರೊಟ್ಟಿ – ಓಡಿನಲ್ಲಿ ಕಾಯಿಸಿದ ರೊಟ್ಟಿ

ಓಡೆಯಪ್ಪನ /*o:ḍɛyappana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಓಡ್ ಕಸಾಯ /*o:ḍi kasa:ya*/ ನಾ. 1. ಮಡಕೆಯೋಡಿನಲ್ಲಿ ಮೊದಲು ಜೀರಿಗೆಯನ್ನು ಕೆಂಪಗೆ ಹುರಿದು ಅದಕ್ಕೆ ನೀರು ಹಾಕಿ ಕುದಿಸಿ ತಯಾರಿಸಿದ ಕಷಾಯ, 2. ಜೀರಿಗೆ ಕಷಾಯ. a decoction prepared with fried cumin seeds in a clay pot. ವಾ: ಓಡ್ ಕಸಾಯನ ಮಾಡಿ ಕುಡೆಕು.

ಓಡ್[1] /*o:ḍi*/ ಕ್ರಿ. ಓಡಿ. to run. ವಾ: ಮಕ್ಕ ಹೆಂಗೆ ಓಡ್‌ದು ನೋಡು. ಪ: ಓಡಿಕೆ – ಓಡುವುದಕ್ಕೆ. **ಓಡುದ್** /*o:ḍudi*/ ಓಡುವುದು. to run. ವಾ: ಹೈದ ಜೋರಾಗಿ ಓಡುದು. ಪ: ಓಡ್ತಲ್ಲೆ – ಓಡಿತಲ್ಲಿಯೆ; ಓಡ್ತಿತ್ – ಓಡುತಿದ್ದಳು / ಓಡುತಿದ್ದನು. **ಓಡಿದ್** /*o:ḍidi*/ ಓಡಿದ್ದು. to run. ವಾ: ಆಗಲೆ ಚೋಡಿ ಕರೆಲಿ ಓಡಿದ್ ನೀನಾ? ಪ: ಓಡಿತ್ – ಓಡಿದ್ದ. **ಓಡಿನೆ**

/o:ḍinɛ/ ಓಡುತ್ತೇನೆ. I will run. ವಾ: ಅಪ್ಪ ಬಾತ್ ನಾ ಓಡಿನೆ. **ಓಡಿಬಂದ್** /o:ḍibandɨ/ ಓಡಿಬಂದು. running. ವಾ: ಕೂಸು ಓಡಿಬಂದ್ ತಬ್ಬಿಕನ್ತ್. ಪ: ಓಡಿಬಾತ್ – ಓಡಿಬಂದನು/ಳು; ಓಡಿಬುಟ್ಟವೆ – ಓಡಿ ಬಿಡುತ್ತಾರೆ; ಓಡಿಹೊತ್ – ಓಡಿಹೋದ; ಓಡುವೆ – ಓಡುತ್ತಾರೆ. **ಓಡೇ ಬುಡ್ತ್** /o:ḍe: buḍt/ ಓಡಿಯೇ ಬಿಟ್ಟಿತು. ran away. ವಾ: ಪೆರ್‌ಪಣ ಒಂದೇ ಸಮ ಓಡೇಬುಡ್ತ್. **ಓಡೇ ಬುಡ್ದು** /o:ḍɛ:buḍt/ ಓಡಿಯೇ ಬಿಟ್ಟ. He ran away. ವಾ: ಅಂವ ಒಂದೆ ಸಮ ಓಡೇ ಬುಡ್ದು. ಪ: ಓಡೊಕುಂತ – ಓಡಬೇಕೆಂದು; ಓಡೊಮುತ – ಓಡೋಣವೆಂದು. **ಓಡ್ಕನ** /o:ḍkana/ ಓಡುವಾಗ. while running. ವಾ: ಓಡ್ಕನ ರೆಟ್ಟೆ ಬೀತ್. **ಓಡ್ತ್** /o:ḍtɨ/ 1. ಓಡಿದ, 2. ಓಡಿತು, 3. ಓಡಿದಳು. 1. He ran away, 2. It ran away, 3. She ran away. ವಾ: ಎಲಿ ಬಾಡೆಲಿ ಓಡ್ತ್. ಪ: ಓಡ್ತ್ – ಓಡಿದಳು, ಓಡಿದನು; ಓಡ್ದ – ಓಡಿದ; ಓಡ್ತ್‌ಲೆ – ಓಡಲಿಲ್ಲ; ಓಡ್ದೋ – ಓಡಿದರು; ಓಡ್ದ್ – ಓಡಿದ್ದು. **ಓಡ್ದೆ ಓಡ್ದೆ** /o:ḍdɛ o:ḍdɛ/ ಓಡಿದೆ ಓಡಿದೆ. to run continuously. ವಾ: ಓಡ್ದೆ ಓಡ್ದೆ ಮನೆಮುಟ್ಟ ಓಡ್ದೆ. **ಓಡ್‌ನೆ** /oḍinɛ/ ಓಡು (ಏಕವಚನ). to run. ವಾ: ನಾಯಿ ಬೆರ್‌ಸಿಕಂಡ್ ಬಾತ್ ಬೇಗ ಒಡ್‌ನೆ. ಪ: ಓಡ್ನೆ – ಓಡು. **ಓಡ್ಯ** /o:ḍya/ ಓಡುತ್ತೀಯಾ? Will you run? ವಾ: ನೀ ಓಡ್ಯ. ಪ: ಓಡ್ಯಾಕನ – ಓಡಿಯಾಗುವಾಗ; ಓಡ್ಯಾಡಿದೆ – ಓಡಿ ಆಡುತ್ತಾನೆ, ಓಡಿ ಆಡುತ್ತಾಳೆ; ಓಡ್ಯಾಡುವೆ – ಓಡಿ ಆಡುತ್ತಾರೆ, ನಡೆದಾಡುತ್ತಾರೆ. **ಓಡ್ಯೋಗಿ** /o:ḍyɔ:gi/ ಓಡಿ ಹೋಗಿ. to run away. ವಾ: ಓಡ್ಯೋಗಿ ಮರನ ಮುಟ್ಟ್. ಪ: ಓಡ್ಯೋಡಿ – ಓಡಿ ಓಡಿ; ಓಡ್ಯೋತು – ಓಡಿ ಹೋಯಿತು. **ಓಡ್ರ** /oḍra/ ಓಡು(ಏ). to run. ವಾ: ಓಡ್ರ ಯಾರ್ ಮುಂದೆ ಹೋಗಿ ಹಣ್ಣ್ ಹೆರ್‌ಕುದುತ ನೋಡ್‌ನೊ. **ಓಡ್ರಾ** /o:ḍra:/ ಓಡು. to run. ವಾ: ದನಗ ಬೇಲಿ ಹುಕ್ಕೊ/ನುರ್ಪಿದೊ ಬೇಗ ಓಡ್ರಾ. **ಓಡ್ರೆ** /o:ḍrɛ/ ಓಡಿದರೆ. If i run. ವಾ: ಒಂದೇ ಸಮ ಓಡ್ರೆ ಸುಸ್ತಾದೆ.

ಓಡ್² /o:ḍɨ/ ನಾ. 1. ಮಣ್ಣಿನ ಕಾವಲಿ, 2. ಹೆಂಚು, 3. ಮನೆಯ ಹೆಂಚು, 4. ಮಾಳಿಗೆಯ ಹೆಂಚು. 1. a clay tawa/pan, 2. roof tiles, 3. tiles used for the roof, 4. tiles. **ಕಾದ ಓಡುಲಿ ನಡ್ದಂಗೆ(ಗಾ).** ವಾ: ರೊಟ್ಟಿ ತಟ್ಟಿ ಓಡ್‌ಗೆ ಹಾಕ್. **ಓಡು** /o:ḍu/ ವಾ: ಮನೆ ಓಡು ಮೇಲೆ ಕೊತ್ತಿಗ ಜೆಗಳ ಮಾಡಿಕಂಬದು.

ಓಡ್‌ರೊಟ್ಟಿ /o:ḍirɔṭṭi/ ನಾ. ಬಳಪದ ಕಾವಲಿಯಲ್ಲಿ ಬೇಯಿಸಿದ ರೊಟ್ಟಿ. a flat bread cooked on a soapstone tawa/pan. ವಾ: ಓಡ್‌ರೊಟ್ಟಿ ತಿಂಬಕೆ ಲಾಯ್ಕ.

ಓಡ್ಸ್ /o:ḍsɨ/ ಕ್ರಿ. 1. ಬೆನ್ನಟ್ಟು, 2. ಅಟ್ಟು, 3. ಓಡಿಸು. 1. to chase, 2. to follow, 3. to make someone run. **ಮಡೆಕೈಲಿ ಓಡ್ಸಿಕಿಲೆ-ಮಹಾ ಜಿಪುಣ(ನು).** ವಾ: ಜೆಗ್‌ಲ್‌ಗೆ ಕೋಳಿಗ ಬಂದ್ ಹೇತವೆ ಬೇಗ ಓಡ್ಸ್. ಪ: ಓಡ್ಸಿಕೆ – ಓಡಿಸಲು; ಓಡ್ಸುದು – ಓಡಿಸುವುದು; ಓಡ್ಸೊಕುಂತ – ಓಡಿಸಬೇಕೆಂದು. **ಓಡ್ಸ್‌ಕಂಡ್ ಹೋತ್** /o:ḍsikaṇḍɨ hɔ:tɨ/ ಓಡಿಸಿಕೊಂಡು ಹೋದನು/ಳು. He/She chased someone. ವಾ: ನಾಯಿನ ಓಡ್ಸ್ ಕಂಡೊತ್. ಪ: ಓಡ್ಸಿಕಂಡ್ – ಓಡಿಸಿಕೊಂಡು

ಓಡ್‌ಹಿಟ್ಟ್ /o:ḍɨ hiṭṭi/ ನಾ. ಮಣ್ಣಿನ ಕಾವಲಿಯಲ್ಲಿ ಬೇಯಿಸಿದ ಒಂದು ಬಗೆಯ ದಪ್ಪ ರೊಟ್ಟಿ. a flat bread cooked on a clay tawa/pan. ವಾ: ಓಡ್ ಹಿಟ್ಟ್‌ನ ಹಙ್ಞ ದಪ್ಪಲಿ ಹೊಯ್ಯದು. ಪ: ಓಡ್ವಾಲೆ

ಓಣಿ¹ /o:ṇi/ ನಾ. 1. ಕಿರಿದಾದ ದಾರಿ, 2. ಗಲ್ಲಿ. 1. a narrow path, 2. a lane. **ಓಣಿ ಹಕ್ಕಲೆ ಗದ್ದೆ ಮಾಡ್‌ಬಡ(ಗಾ).** ವಾ: ಮಳ್ಗಾಲಲಿ ಓಣಿಲಿ ನಡೆಕಾದುಲೆ ಜಾರ್‌ದೆ.

ಓಣಿ² /o:ṇi/ ನಾ. 1. ಓರೆ, 2. ಅಂಕುಡೊಂಕು. 1. curved, 2. crooked.

ಓಣಿಕಂಡಿ /o:ṇikaṇḍi/ ನಾ. 1. ಸಣ್ಣದಾರಿ, 2. ಗಲ್ಲಿ, 3. ಕೇರಿ. 1. a narrow path, 2. a lane 3. an area. ವಾ: ಓಣಿಕಂಡಿಲೆ ಹೋಕಡ.

ಓಣ್ಯಡ್ಕ /o:ṇyaḍka/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕಲ್ಮಡ್ಕ ಗ್ರಾಮದ ಜಾಗ. a locality in Kalmadka village in Sullia Taluk of Dakshina Kannada District.

ಓತಪ್ರೋತ /o:taprɔ:ta/ ನಾ. 1. ಸಂಪೂರ್ಣವಾಗಿ, 2. ಸಮಗ್ರವಾಗಿ. 1. completely, 2. entirely. ವಾ: ಇಂದಿಗೂ ಓತಪ್ರೋತ ಸ್ವತಂತ್ರ ಸಿಕ್ಕಿತ್‌ಲೆ.

ಓದ್ /o:dɨ/ ಕ್ರಿ. 1. ಓದು, 2. ಅಭ್ಯಾಸ ಮಾಡು, 3. ಪಠನ ಮಾಡು. 1. to read, 2. to practice, 3. to recite. ವಾ: ಲಾಯ್ಕಲಿ ಪಾಟನ ಓದು. **ಓತುಟ್ಟು** /otuṭṭu/

ಓದುತ್ತಿದ್ದಾನೆ. he is reading. ವಾ: ಅಂವ ಕೋಂಬರೆಲಿ ಓತುಟ್ಟು. **ಓದಕ್** /*o:daki*/ ಓದಬಹುದು. can read. ವಾ: ಕನ್ನಡಿ ಇಲ್ಲದೆ ಪೇಪರ್, ಪುಸ್ತಕ ಓದಕ್. ಪ: ಓದಿಕಂಡಿದ್ದ – ಓದಿಕೊಂಡಿದ್ದರು; ಓದಂವಂಗೇನ್ – ಓದುವವನಿಗೇನು. **ಓದಿಕಂಡ್** /*o:dikaṇḍi*/ ಓದಿಕೊಂಡು. while reading. ವಾ: ಓದಿಕಂಡ್ ಕೆಲ್‌ಸಕೆ ಹೋದು. **ಓದಿಕನ** /*o:dika:na*/ ಓದುವಾಗ. while studying. ವಾ: ಓದಿಕನ ತಲೆಬೇನೆ ಬಾದು. ಪ: ಓದುವಾಂಗೆ – ಓದುವಾಗೆ; ಓದುವೆ – ಓದುತ್ತಾರೆ; ಓದೊಕು – ಓದಬೇಕು; ಓದೊಕಾಂತ – ಓದಬೇಕಾಂತ; ಓದ್ವರ – ಓದುವವರ; ಓದ್ಸು – ಓದಿಸು. **ಓದ್ಯಳೆ** /*odyaḷε*/ ಓದಿದ್ದೇನೆ. (/has/have) read. ವಾ: ನಾ ಕುವೆಂಪು ಅವ್‌ರ ಸುಮಾರ್ ಕತೆನ ಒದ್ಯಳೆ.

ಕಡಿ ಅಕ್ಕಿ /*kaḍi akki*/ ನಾ. 1. ನುಚ್ಚು, 2. ಪುಡಿ ಅಕ್ಕಿ 3. ಎರಡು ತುಂಡಾದ ಅಕ್ಕಿ. broken rice. ವಾ: ಕಡಿ ಅಕ್ಕಿಲಿ ಉಪ್ಪಿಟ್ ಮಾಡೊಕು. ಕಡ್ಯೆರಿ(ತು)

ಕಡಿಕೆ /*kəḍikɛ*/ ನಾ. 1. ಕಣಜ, 2. ಭತ್ತ ಸಂಗ್ರಹ ಮಾಡುವ ಮರ ಅಥವಾ ಬೆತ್ತದ ಕೋಡಿ. 1. a granary, 2. a cane or a wooden basket to store rice. ವಾ: ಕಡಿಕೆಲಿ ವರ್‌ಸಕಾಗೋವಸ್ಟ್ ಬತ್ತನ ತುಂಬ್‌ಸಿ ಇಸುದು. ಕದಿಕೆ(ತು)

ಕಡಿಯಕಲ್ /*kəḍiyakəlɨ*/ ನಾ. ರುಬ್ಬುವ ಕಲ್ಲು. a grinding stone. ವಾ: ಕರೆಂಟ್ ಇಲ್ಲರೆ ಮಸಾಲೆ ಕಡೆಕೆ ಕಡಿಯಲ್‌ನೆನೆ ಗೆತಿ.

ಕಡಿಯಕು /*kaḍiyaku*/ ಕ್ರಿ. 1. ಆಡಿಸಬೇಕು, 2. ರುಬ್ಬಬೇಕು. need to grind. ವಾ: ಗೈಪುಗೆ ಮಸಾಲೆ ಕಡಿಯಕು.

ಕಡಿಯತ್ ನಾಡು /*kaḍiyatɨ na:ḍu*/ ನಾ. ಕೊಡಗಿನ 9 ನಾಡುಗಳಲ್ಲಿ ಕಡಿಯತ್ ನಾಡು ಕೂಡ ಒಂದು, ಕೋಕೇರಿ, ಕೈಕಾಡು, ಬಲಮುರಿ, ಕುಂಜಿಲಗೇರಿ, ನರಿಯಂದಡ, ಪೊದವಾಡ, ಚೇಲಾವರ, ಪಾಲಂಗಾಲ, ಕರಡ ಗ್ರಾಮಗಳನ್ನು ಒಳಗೊಂಡ ನಾಡು ಕಡಿಯತ್ ನಾಡು. one of the 35 provinces of Kodagu. Kadiyath Nadu consists of Kokeri, Kaikadu, Balamuri, Kunjilageri, Nariyandada, Podvada, Chelavara, Palangala, Karada, etc. villages. ವಾ: ಕೊಡಗ್‌ನ ಒಂಬತ್ತ್ ನಾಡ್‌ಗಳ್‌ಲಿ ಕಡಿಯತ್ ನಾಡು ಸ ಒಂದ್.

ಕಡಿಯತ್ತೂರು /*kaḍiyattu:ru*/ ನಾ. ಸ್ಥಳನಾಮ. a place.

ಕಡಿವಾಣ /*kaḍiva:ṇa*/ ನಾ. 1. ಕಡಿವಾಣ, 2. ನಿಯಂತ್ರಣ, 3. ಹತೋಟಿ, 4. ತಡೆ. 1. to control, 2. to restrain, 3. to constrain, 4. to stop. ವಾ: ಹುಚ್ಚುಚ್ಚು ಆಡಿರೆ ಕಡಿವಾಣ ಹಾಕಿಕಾದೆ.

ಕಡೀರ /*kaḍi:ra*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮುರುಳ್ಯ ಗ್ರಾಮದ ಜಾಗ. 1. family, 2. lineage, 3. a locality in Murulya village in Sullia Taluk of Dakshina Kannada District.

ಕಡು[1] /*kaḍu*/ ನಾವಿ. 1. ಭಾರಿ ಘಾಟಿ, 2. ಜೋರು, 3. ಆಳವಾಗಿ ತಿಳಿದವ. 1. astute, 3. aggressive, 3. intellectual. **ಕಾಲ ಹೋದರೆ ಕಡು ಹೋಕಿಲೆ(ಗಾ).** ವಾ: ಬಾರಿ ಕಡುನ ಹೆಣ್ಣ್.

ಕಡು[2] /*kaḍu*/ ನಾವಿ. ಮೀನುಗಳನ್ನು ಹಿಡಿಯಲಿಕ್ಕಾಗಿ ಅವುಗಳ ಪ್ರಜ್ಞೆ ತಪ್ಪಿಸಲು ಹಳ್ಳದ ಅಥವಾ ತೋಡಿನ

ನೀರಿಗೆ ಬೆರೆಸುವ ಸಸ್ಯಜನ್ಯ ವಿಷ. An anesthetic poison of a particular seed put into the water in a pond or rivulet to catch fish by rendering them unconscious.

ಕಡು[3] /*kaḍu*/ ನಾ. ಕಾಡು ಪ್ರಾಣಿಗಳ ನಿಶ್ಚಿತ ದಾರಿ. the usual routes of animal movement (also migrational routes of animals). ವಾ: ಕಾಡ್ಲಿ ಪ್ರಾಣಿಗ ಕಡುಲೆ ಓಡಾಡ್ವು.

ಕಡುಂಬಿಟ್ಟ್ /*kɘḍumbiṭṭɨ*/ ನಾ. ಅಕ್ಕಿ ತರಿಯನ್ನು ಬೇಯಿಸಿ ಉಂಡೆ ಕಟ್ಟಿ, ಹಬೆಯಲ್ಲಿ ಬೇಯಿಸುವ ತಿಂಡಿ. a variety of rice cake. ವಾ: ಕಡುಂಬಿಟ್ಟ್ ಬೇಯ್ತುಟ್ಟು. ಪ: ಕಡ್‌ಬಿಟ್ಟ್; ಕಡ್‌ಂಮಿಟ್ಟ್; ಕಡ್‌ಂಬು

ಕಡುವಾರ /*kaḍuva:ra*/ ನಾ. ವಾರದಲ್ಲಿ ಕಠಿಣವಾದ ದಿನವೆಂದು ಮಂಗಳವಾರ, ಶುಕ್ರವಾರ ಎಂಬ ನಂಬಿಕೆ. a belief that Monday and Friday are rather difficult/challenging days. ವಾ: ಕಡುವಾರ ಮನೆಲಿ ಮೆಣ್ಸ್ ಹೊರ್‌ಯಕಾದ್.

ಕಡುವೆ /*kaḍuvɛ*/ ನಾ. 1. ಕಡವೆ, 2. ಸಾರಂಗ. a stag. ವಾ: ಕಡುವೆಗೆ ಕಾಲ್ ಬಚ್ಚ್ ಕನ ನಾಯಿಗೆ ಹೇಲ್ ಬಾತ್‌ಗಡ. ಪ: ಕಡ್ಡವೆ; ಕಡ್ಡೆ – ಕಡವೆ

ಕಡೆ ಅಕ್ಕಿ /*kaḍɛakki*/ ನಾ. 1. ತುಂಡು ತುಂಡಾದ ಅಕ್ಕಿ 2. ಕಡಿಯಕ್ಕಿ. 3. ಕಡ್ಯರಿ(ಕಡಿ+ಅಕ್ಕಿ). broken rice. ವಾ: ತುಂಡು ತುಂಡು ಅಕ್ಕಿ. ಪ: ಕಡ್ಯರಿ

ಕಡೆ ಉಸ್ರ್ /*kaḍɛ usrɨ*/ ನಾ. 1. ಕೊನೆಯ ಉಸಿರು, 2. ಅಂತಿಮ ಕ್ಷಣ, 3. ಕೊನೆಯ. 1. final breath, 2. last breath, 3. the last. ವಾ: ನನ್ನ ಕಡೆ ಉಸ್‌ರ್ ಇರಿಕನ ಮುಟ್ಟ ಮರೆದುಲೆ ನಿಮ್ಮ.

ಕಡೆ ಬಾಳೆ /*kaḍɛ ba:ḷɛ*/ ನಾ. ಬಾಳೆ ಎಲೆಯ ಕೊನೆ ಭಾಗ. the edge of a plantain leaf. ವಾ: ಕಡೆಬಾಳೆಲಿ ಉಂಬದು.

ಕಡೆ[1] /*kaḍɛ*/ ನಾವಿ. 1. ತಳಭಾಗ, 2. ಕೆಳಭಾಗ. 1. bottom, 2. below, 3. lesser than dog, 4. which direction? ವಾ: ನಾಯಿಗಿಂತ ಕಡೆ ಆತ್ ನನ್ನ ಬೊದ್‌ಕ್.

ಕಡೆ[2] /*kaḍɛ*/ ನಾ. 1. ಕೊನೆಯ, 2. ಅಂತ್ಯ, 3. ಮುಕ್ತಾಯ. 1. end, 2. the last, 3. the end. **ಕಡೆ ನಾ ಕೊಡೆ ಹಂದಿ ಮಾಪ್ಳೆ ತಿಂಬೊದ್ಲೆ ಕುಂಡತನ ಮೂರ್ ಪಾಲ್ ಮಾಡಮ(ಗಾ).** ವಾ: ಇದೇ ಕಡೆ ಮತ್ತೆ ದುಡ್ಡು ಕೇಳಿಕೆ ಬೊತ್ತ್. **ಕಡೆಕಡೆಗೆ** /*kaḍɛkaḍɛgɛ*/ ಕೊನೆಕೊನೆಗೆ. in the end. ವಾ: ಕಡೆಕಡೆಗೆ ಹೆಂಗೆಲ್ಲ ಆಡ್‌ತಿದ್ದೊ.

ಕಡೆ[3] /*kaḍɛ*/ ಕ್ರಿ. 1. ಕತ್ತರಿಸು, 2. ಕಡಿ. 1. to cut, 2. to sever. ವಾ: ಮರದ ಗೆಲ್ಲ್‌ನ ಕಡೆ. ಪ: ಕಡೆಕೆ – ಕಡಿಯಲು

ಕಡೆ[4] /*kaḍɛ*/ ನಾ. ಕಡೆಗಣಿಸು. ignore. ವಾ: ನಾಯಿ ಸಾಕಿದಂವ ನಾಯಿಗಿಂತ ಕಡೆ ಆಕಾಗದ್. **ಕಡೆಗಣ್ಸ್** /*kaḍɛgaṇsɨ*/ 1. ಕಡೆಗಣಿಸು, 2. ತಿರಸ್ಕಾರದಿಂದ ಕಾಣು. 1. ignore, 2. disregard. ವಾ: ಯಾರ್‌ನೂ ನಾವ್ ಕಡೆಗಣ್ಸ್‌ಕಾಗದ್.

ಕಡೆ[5] /*kaḍɛ*/ ನಾ. ದಿಕ್ಕು ಸೂಚಿಸುವುದು. to indicate the direction/path.

ಕಡೆಂಪರ್ /*kaḍempari*/ ನಾ. ಕೊನೆಯ ಹಲ್ಲು. the last teeth. ವಾ: ಕಡೆಂಪರ್ ಸಿಡೆಕೆ ಸುರಾತ್.

ಕಡೆಕಣ್ಣ್ /*kaḍekaṇṇɨ*/ ನಾ. 1. ಓರೆ ನೋಟ ಬೀರು, 2. ಕುಡಿನೋಟ, 3. ಕಡೆಗಣ್ಣು. 1. a glance, 2. a scan, 3. ignore. ವಾ: ಕಡೆಕಣ್ಣ್‌ಲಿ ನೋಡ್‌ದು.

ಕಡೆಕನ /*kaḍɛkana*/ ನಾ. ಕಡಿಯುವಾಗ. while cutting. ವಾ: ಸೊವುದೆ ಕಡೆಕನ ಕೈಗೆ ಪೆಟ್ಟಾತ್.

ಕಡೆಕಾಗದ್ /*kaḍɛka:gadɨ*/ ನಾ. 1. ಕಡಿಯಬಾರದು, 2. ಕತ್ತರಿಸಬಾರದು. not to cut (something). ವಾ: ತೆಂಗ್‌ನ ಮರನ ಕಡೆಕಾಗದ್. ಪ: ಕಡೆತಿತ್ತ್ – ಕಡಿಯುತ್ತಿದ್ದ; ಕಡೆವ – ಕಡಿಯುವ

ಕಡೆಕೊಡಿ[1] /*kaḍɛkoḍi*/ ನಾ. 1. ತಲೆ ಮತ್ತು ಬುಡ, 2. ವ್ಯವಸ್ಥೆ, 3. ಅಚ್ಚುಕಟ್ಟುತನ. 1. Top and bottom, 2. orderliness, 3. arrangement. **ಬೆಲ್ಲಲಿ ಕಡೆಕೊಡಿ ಇಲ್ಲೆ(ಗಾ).** ವಾ: ಕಾಯರ್ ಮರದ ಬೇರ್‌ದ್ ಕಡೆಕೊಡಿ ಕಂಹಿ.

ಕಡೆಕೊಡಿ[2] /*kaḍɛkoḍi*/ ನಾ. 1. ತುದಿ ಮತ್ತು ಬುಡ, 2. ತುದಿಬುಡ, 3. ಕೊನೆಮೊದಲು, 4. ಆದ್ಯಂತ, 5. ಸಂಪೂರ್ಣ. 1. the top and the bottom, 2. the top and the bottom, 3. the end and the beginning, 4. the first and the last, 5. complete. ವಾ: ಕಾಯರ ಮರದ ಕಡೆಕೊಡಿ ಎಲ್ಲ ಒಂದೆ.

ಕಡೆಕೊಡಿ[3] /*kaḍɛkoḍi*/ ನಾ. ಸಂತಾನ ಇಲ್ಲದವರನ್ನು ಹೇಳುವ ಪದ. a term used for the childless couple. ವಾ: ಅಂವಂಗೆ ಕಡೆಕೊಡಿ ಯಾವುದೂ ಇಲ್ಲೆ.

ಕಡೆಕೊಡಿ[4] /*kaḍɛkoḍi*/ ನಾ. ಒಂದು ಪಾರಂಪರಿಕ ಔಷಧ. a traditional medicine. ವಾ: ಅಂವಂಗೆ ಹೊಟ್ಟೆಬೇನಗೆ ಕಡೆಕೊಡಿ ಅರ್ದ್ ಕೊಟ್ಟೊ.

ಕಡೆಗೆ /*kaḍɛgɛ*/ ನಾ. 1. ಬದಿಗೆ, 2. ಕೊನೆಗೆ. 1. in the side, 2. in the end. ವಾ: ಇತ್ತ ಕಡೆಗೆ ಬಾ. ಪ: ಕಡೆನ – ಕೊನೆಯ; ಕಡೆಬಾಗ – ಕೊನೆಯಬಾಗ; ಕಡೆಯವ್ಕೆ – ಕೊನೆಯವರಿಗೆ; ಕಡೆಯಾದರೆ – ಕೊನೆಯಾದರೆ. **ಕಡೆಗೆನೂ** /*kaḍɛgɛnu:*/ 1. ಕೊನೆಗೂ, 2. ಅಂತಿಮವಾಗಿ. 1. in the end, 2. at last. ವಾ: ಕಡೆಗೆನೂ ನ್ಯಾಯ ಸಿಕ್ಕಿತ್‌ಲೆ. **ಕಡೆತನವು** /*kaḍɛtanavu*/ ಕೊನೆಯವರೆಗೆ. till the end. **ಕಡೆಮುಟ್ಟ** /*kaḍɛmuṭṭa*/ ಕೊನೆಯ ತನಕ. until the last. ವಾ: ಕಡೆಮುಟ್ಟ ನಿಮ್ಮ ಸೇವೆ ಮಾಡಿಕಂಡಿದ್ದನೆ. **ಕಡೆಲಿ** /*kaḍɛli*/ 1. ಕಡೆಯಲ್ಲಿ, 2. ಕೊನೆಯಲ್ಲಿ, 3. ಅಂತಿಮದಲ್ಲಿ. in the end. ವಾ: ಎಲ್ಲ ಆದ ಮೇಲೆ ಕಡೆಲಿ ಸಿಕ್ಕಿರೆ ಸಾಕ್. **ಕಡೆವು** /*kaḍɛvu*/ 1. ಕಡೆಯುವರು, 2. ಕಡೆಯುವಿಕೆ. churning. **ಕಡೇಗೆ** /*kaḍɛ:gɛ*/ 1. ಕೊನೆಗೆ, 2. ಕಟ್ಟ ಕಡೆಗೆ. in the end. ವಾ: ಕಡೇಗೆ ಬಾ ಬಲ. ಪ: ಕಡೆಗೊಂದ್ – ಕೊನೆಗೆ ಒಂದು; ಕಡೆವ್ – ಕಡೆಯವರು

ಕಡೆಗೋಲು /*kaḍɛgɔ:lu*/ ನಾ. 1. ಕೈಯಲ್ಲಿ ಕುಲುಕಿ ಮಜ್ಜಿಗೆ ತಯಾರಿಸುವ ಮಜ್ಜಿಗೆ ಗುತ್ತಿಯಲ್ಲಿರುವ ಉಪಕರಣ, 2. ಕಡೆಯುವ ಕೋಲು, 3. ಮಥಿಸುವ ಕೋಲು, 4. ಕಡಗೋಲು. a buttermilk churning stick. ವಾ: ಕಡೆಗೋಲುಲಿ ಮಜ್ಜಿಗೆ ಕಡೆದು.

ಕಡೆಬೂಮಿ /*kaḍɛbhu:mi*/ ನಾ. 1. ಭೂಮಿಯ ಕೊನೆಯ ಭಾಗ, 2. ಅಂತಿಮ ಭಾಗ. 1. edge of the earth, 2. a section at the end. ವಾ: ಕಡೆಬೂಮಿ ಕರೇಲಿ ಅಡ್ಕೆ ದೈ ಇರ್‌ದು.

ಕಡೆಹಲ್ಲ್ /*kaḍɛhallɨ*/ ನಾ. ದವಡೆಯ ಕೊನೆಯ ಹಲ್ಲು. wisdom teeth, the last teeth in the jaw bone. ವಾ: ಕಡೆಹಲ್ಲ್ ಬೇನೆ/ಬೇನೆ.

ಕಡೇಪಾಲ /*kaḍe:pa:la*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಸಂಪಾಜೆ ಗ್ರಾಮದ ಜಾಗ. a locality in Sampaje village in Sullia Taluk of Dakshina Kannada District.

ಕಡೋಡಿರ /*kaḍo:ḍira*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕಡ್ /*kɘḍɨ*/ ನಾ. ಮೀನು ಹಿಡಿಯಲು ಹೊಳೆಗೆ ಹಾಕುವ ಕಾಡುವಸ್ತುಗಳಿಂದ ತಯಾರಿಸಿದ ವಿಷ. poison used to kill freshwater fish. ವಾ: ಕಡ್ ಹಾಕಿ ಮೀನ್ ಹಿಡೆದು.

ಕಡ್ಂಗ /*kaḍɨŋga*/ ನಾ. 1. ದೊಡ್ಡ ಹೊಂಡ, 2. ಅಗರು. a large pond. ವಾ: ಬೇಲಿ ಕರೆಲಿ ಕಡ್ಂಗ ಇದ್ದರೆ ದನಗ ಹಾರಿ ಇತ್ತ ಬಾದುಲೆ.

ಕಡ್ಂಜ /*kaḍɨɲja*/ ನಾ. ಕಣಜ ಹುಳ. a wasp. ವಾ: ಕಡ್ಂಜ ಕಚ್ಚಿರೆ ಉರಿ.

ಕಡ್ಂದೋಳು /*kaḍɨndo:ḷu*/ ನಾ. 1. ಕಣಜದ ಹುಳು, 2. ಕೂಡೋಳು, 3. ದೊಡ್ಡ ಜಾತಿಯ ಕಚ್ಚುವ ಕ್ರೂರ ನೊಣ. a wasp. ವಾ: ಕಡ್ಂದೊಳು ಕಚ್ಚಿರೆ ಊದಿಕಂಬದು.

ಕಡ್ಂಬಿಟ್ಟ್ /*kaḍɨmbiṭṭɨ*/ ನಾ. 1. ಕಡುಬು, 2. ಅಕ್ಕಿಯಿಂದ ಮಾಡಿದ ತಿಂಡಿ. steamed rice cake. **ಕೆಳೆಗೆ ಗದ್ದೆಲಿ ನೀರ್ ಕಟ್ಟುದು ಮ್ಯಾಲೆ ಗದ್ದೆಲಿ ಬಿತ್ತುದು – ಕಡ್ಂಬಿಟ್ಟ್(ಒ).** ವಾ: ಕಡ್ಂಬಿಟ್ಟ್ ಅಕ್ಕಿ ತರಿನ ಉಕ್ಕರ್‌ಸಿನೂ ಮಾಡಕ್, ಅನ್ನ ಕಲ್‌ಸಿನೂ ಮಾಡಕ್.

ಕಡ್ಂಬು /*kaḍɨmbu*/ ನಾ. ರಾಗಿಯ ತೆನೆ. flower of ragi/finger millet. **ದಾಸ ನೆಂಟ ಅಲ್ಲ, ದೋಸೆ ಕಡ್ಂಬು ಅಲ್ಲ(ಗಾ).** ವಾ: ಕಡ್ಂಬು ಹೂನ ನೋಡಿಯೊಳನ? ಪ: ರಾಗಿ ಕಲಂಬು(ತು)

ಕಡ್ಂಬ್ /*kaḍɨmbɨ*/ ನಾ. ಪುಂಡಿ. steamed rice cake. ವಾ: ಕಡ್ಂಬ್ ನ ಸೆಕೆಲಿ ಬೇಸುದು.

ಕಡ್ಕಂಡ್ /*kɘḍkaṇḍɨ*/ ನಾ. 1. ಕಡಿದುಕೊಂಡು, 2. ಕತ್ತರಿಸಿಕೊಂಡು. 1. cut, 2. sever. ವಾ: ಸೊಪ್ಪೆ ಕಡ್ಕಂಡ್ ಬನ್ನೆ.

ಕಡ್ಕಲ್ಲ್[1] /*kɘḍkallɨ*/ ನಾ. ರುಬ್ಬುವ ಕಲ್ಲು. a grinding stone. **ಅಯ್ಯೆ ಪಡಾರಿ ಮಗ ಬೋಳಿ – ಕಡ್ಕಲ್ಲ್(ಒ).** ವಾ: ಕಡ್ಕಲ್ ಹಜ್ಜ ದೊಡ್ಡದಾತ್. ಪ: ಕಡ್ಕ್‌ಲ್ಲ್ – ಕಡೆಯುವ ಕಲ್ಲು;

ಕಡ್ಕಲ್ಲ್[2] /*kɘḍkallɨ*/ ನಾ. 1. ತಡಮೆ, 2. ಬೇಲಿ ದಾಟಲು

ವ್ಯವಸ್ಥೆ ಮಾಡಿರುವ ಕಲ್ಲಿನ ಪಾಲ. an arrangement to cross the fence. ವಾ: ದನಗ ಕಡ್ಕಲ್ಲ್ ದಾಟಿ ಬಂದವೆ.

ಕಡ್ಕೆ /*kɘḍkɛ*/ ನಾ. ಭತ್ತ ಶೇಖರಣೆ ಮಾಡುವ ಓಟೆ ಅಥವಾ ಬೆತ್ತದಿಂದ ತಯಾರಿಸಿದ ಸಾಧನ. a cane basket to store paddy. ವಾ: ಕಡ್ಕೆಂದ ಬತ್ತನ ಚೀಲಕ್ಕೆ ತುಂಬೊಕು. ಪ: ಕಡ್‌ಕೆ, ಕದಿಕೆ(ತು)

ಕಡ್ಕ್ /*kɘḍkɨ*/ ನಾ. ಗಂಡಸರು ಧರಿಸುವ ಕಿವಿಯ ಆಭರಣ. an earring/stud worn by men. ವಾ: ಕೆಂಪ್ ಹರ್‌ಳ್, ಬೆಳಿ ಹರ್‌ಳ್‌ದ್ ಕಡ್ಕ್‌ನ ಗಂಡ್ ಜೆನ ಹಾಕ್‌ತಿದ್ದೊ.

ಕಡ್ಗ /*kɘḍga*/ ನಾ. 1. ಕತ್ತಿ, 2. ಖಡ್ಗ. 1. a knife, 2. a sword. **ಕತ್ತೆ ಕಾಲಿಗೆ ಕಡ್ಗ ಯಾಕೆ?(ಗಾ).** ವಾ: ಮೈಸೂರ್ ಅರಮನೆಗೆ ಹೋದರೆ ರಾಜರ ಕಡ್ಗ ನೋಡಕ್.

ಕಡ್ಡಿ ಆಟ /*kaḍḍi a:ṭa*/ ನಾ. ಜನಪದ ಆಟ. a folk game.

ಕಡ್ಡಿ ಚೀಪೆ /*kaḍḍi ci:pɛ*/ ನಾ. ತೆಂಗಿನ ಗರಿಯಿಂದ ಮಾಡಿರುವ ಪೊರಕೆ. broom made of a coconut frond. ವಾ: ಕಡ್ಡಿ ಚೀಪೆ ಉದ್ದದ್ ಬೇಕಿತ್ತ್, ಈ ತುಂಡು ಕಡ್ಡಿಚೀಪೆಲಿ ಗುಡ್‌ಸುದಾದುರೂ ಹೆಂಗೆ?

ಕಡ್ಡಿ ಮಾಯ್ಪು /*kaḍḍi ma:ypu*/ ನಾ. ತೆಂಗಿನ ಗರಿಯಿಂದ ಮಾಡಿರುವ ಪೊರಕೆ. broom made of coconut fronds. ವಾ: ಕಡ್ಡಿ ಮಾಯ್ಪುಲಿ ಇಜ್ಜೆಲ್ ಗುಡ್‌ಸೊಕು.

ಕಡ್ಡಿ ಹೆರ್ಕ್ /*kɘḍḍi hɛrkɨ*/ ನಾ. ಕಾಫಿಯಲ್ಲಿರುವ ಕಡ್ಡಿಯನ್ನು ಹೆಕ್ಕು. to pluck small twigs in coffee seeds. ವಾ: ಒಣ್ಗಿದ ಕಾಪಿಂದ ಕಡ್ಡಿ ಹೆರ್‌ಕುದೆ ದೊಡ್ಡ್ ಕೆಲ್ಸ.

ಕಡ್ಡಿ[1] /*kɘḍḍi*/ ನಾ. 1. ಚಿಕ್ಕ ದೇಟು, 2. ಸಣ್ಣ ಸಿಗುರು, 3. ಲೆಕ್ಕಣಿಕೆ. 1. a tiny stem of a plant, 2. a splinter of wood, 3. a pen. ವಾ: ಒಳ್‌ಂಗಿಲ್ ಕಾಪಿಂದ ಕಡ್ಡಿ ಹೆರ್‌ಕಕು.

ಕಡ್ಡಿ[2] /*kɘḍḍi*/ ನಾ. ಬಳಪದ ಕಡ್ಡಿ. a slate pencil. ವಾ: ಕಡ್ಡಿ ತಕಂಡ್ ಸ್ಲೇಟ್ಲಿ ಬರೆದು.

ಕಡ್ಡಿವಾಣ ಸೊಪ್ಪ್ /*kaḍḍiva:ṇa sɔppɨ*/ ನಾ. ಪಲ್ಯ ಮಾಡಲು ಮತ್ತು ತಲೆ ಕೂದಲು ಉದುರುವಿಕೆಗೆ ಬಳಸಲಾಗುತ್ತದೆ. a variety of leaf used in making a curry. Also used in controlling hair fall. ವಾ: ಕಡ್ಡಿವಾಣ ಸೊಪ್ಪ್ ಹಾಕಿ ಎಣ್ಣೆ ಕಾಸೊಕು.

ಕಡ್ಡೆ /*kaḍḍɛ*/ ನಾ. 1. ಕಾಡು ದನ, 2. ಕಡವೆ. 1. a stray cattle, 2. a deer. ವಾ: ಕಡ್ಡೆನ ಬೇಟೆ ಆಡ್ತಿದ್ದೊ.

ಕಡ್ತ[1] /*kaḍta*/ ನಾ. ಇನ್ನೂ ಮೊಟ್ಟೆ ಇಡದ ಹೇಂಟೆ ಕೋಳಿ. a pullet – a hen (chicken) which has not laid any eggs. ವಾ: ಕಡ್ತ ಕೋಳಿಗ ನಾಕೈದ್ ವಳೊ. **ಕಡ್ತಕೋಳಿ** /*kɘḍatako:ḷi*/ ಈಗ ತಾನೆ ಮೊಟ್ಟೆ ಇಡಲು ಆರಂಭಿಸಿದ ಕೋಳಿ. a chick/a chicken. ವಾ: ಕಡ್ತ ಕೋಳಿಗ ಸುಮಾರ್ ವಳೊ. ಪ: ಪೆರಡೆಲಾಕಿ(ತು)

ಕಡ್ತ[2] /*kaḍta*/ ನಾ. 1. ನವೆ, 2. ತುರಿಕೆ, 3. ಕಡಿತ. itching sensation. ವಾ: ದೈನ ಸೆರೆಗೆ ಹೋಗಿ ಬಂದ್ ಮೈಯೆಲ್ಲ ಕಡ್ತ.

ಕಡ್ತ[3] /*kaḍta*/ ನಾ. 1. ಬಳಪದಿಂದ ಬರೆಯುವುದಕ್ಕೆ ಉಪಯೋಗಿಸುವ ಕಪ್ಪು ಲೇಪನದ ಬಟ್ಟೆಯ ಪಟ್ಟಿ, 2. ಫೈಲು. 1. 2. a file. **ಹೊಟ್ಟೆಗಿಲ್ಲದ ಶ್ಯಾನುಭೋಗ ಕಡ್ತ ಬಿಚ್ಚತ್(ಗಾ).**

ಕಡ್ತಲೆ /*kɘḍtalɛ*/ ನಾ. ಕೈ ಇದ್ದ ದೊಡ್ಡ ಖಡ್ಗ. a large sword with a handle. ವಾ: ಕಡ್ತಲೆನ ನೋಡ್ದ.

ಕಡ್ತಲ್ಕಜೆ /*kaḍtalkajɛ*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಗುತ್ತಿಗಾರು ಗ್ರಾಮದ ಜಾಗ. a locality in Guttigaru village in Sullia Taluk of Dakshina Kannada District.

ಕಡ್ತಿಕಾಯರ ಅಡಿಬಾಯಿ /*kaḍtika:yara aḍiba:yi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಐವತ್ತೊಕ್ಲು ಗ್ರಾಮದ ಜಾಗ. a locality in Aivattoklu village in Sullia Taluk of Dakshina Kannada District.

ಕಡ್ತ್[1] /*kaḍtɨ*/ ಕ್ರಿ. ಕಡಿದನು/ಳು. he/she cut it off. ವಾ: ಅಂವ ಮರ ಕಡ್ತ್. **ಕಡ್ದ** /*kaḍda*/ 1. ಕತ್ತರಿಸಿದ, 2. ಕಡಿದ. 1. cut, 2. severed. ವಾ: ಮರ ಕಡ್ದ ನ? ಪ: ಕಡ್ದೆ – ಕಡಿದೆ; ಕಡ್ದನೆ – ಕಡಿಯುತ್ತೇನೆ; ಕಡ್ದರೆ – ಕಡಿದರೆ; ಕಡ್ಯಕೆ – ಕಡಿಯುವುದಕ್ಕೆ; ಕಡ್ಯಕ್ – ಕಡಿಯಬಹುದು; ಕಡ್ಯಾಕನ – ಕಡೆಯುವಾಗ;

ಕಡ್ತ್[2] /*kaḍti*/ ಕ್ರಿ. ಕಚ್ಚು. to bite. ವಾ: ನಾಯಿ ಕಾಲಿಗೆ ಕಡ್ತ್.

ಕಡ್ದಕಲ್ಲ್ /*kaḍdakalli*/ ನಾ. 1. ಘನಾಕೃತಿಯಲ್ಲಿ ಕಡಿದಮುರಕಲ್ಲು, 2. ಜಂಬಿಟ್ಟಿಗೆ. laterite stone (a brick). ವಾ: ಕಡ್ದಕಲ್ಲ್ ಬಾರಿ ಗಟ್ಟಿ.

ಕಡ್ದ್[1] /*kɘḍidui*/ ಕ್ರಿ. 1. ಕಡಿಯುವುದು, 2. ತುಂಡು ಮಾಡುವುದು, 3. ಕತ್ತರಿಸುವುದು. 1. to cut, 2. to break, 3. to sever. ವಾ: ಸೊವುದೆ ಕಡಿದು ಸುಸ್ತ್ ಆತ್. **ಕಡ್ದಳೆ** /*kaḍdaḷɛ*/ 1. ರುಬ್ಬಿದ್ದೇನೆ, 2. ಆಡಿಸಿದ್ದೇನೆ. ground. ವಾ: ದೋಸೆಗೆ ಕಡ್ದಳೆ.

ಕಡ್ದ್[2] /*kɘḍidui*/ ನಾ. ಗಾಢ ಬಣ್ಣ. dark colour. ವಾ: ಗುಲಾಬಿ ಹೂವ್‌ನ ಬಣ್ಣ ಕಡ್ದ್ ಕೆಂಪು.

ಕಡ್ದ್[3] /*kaḍdi*/ ಕ್ರಿ. 1. ಕಡಿದು, 2. ಕತ್ತರಿಸಿ. to cut. ವಾ: ಗೆಲ್ಲ್ ಕಡ್ದ್ ಗಳೆ ಮಾಡ್‌ದು.

ಕಡ್ದ್[4] /*kaḍdi*/ ನಾ. 1. ರುಬ್ಬಿ, 2. ಆಡಿಸಿ. to grind. ವಾ: ಅಕ್ಕಿ ಕಡ್ದ್ ಇಸೊಕು. ಪ: ಕಡ್ದೊಳೆ – ಕಡಿದಿದ್ದೇನೆ

ಕಡ್ಪ ಅಯ್ಯೆಕ /*kaḍpa ayyɛka*/ ನಾ. ತೀಕ್ಷ್ಣ ಸ್ವಭಾವದ ತಾಯಂದಿರು. mothers with intense nature. ವಾ: ಕಡ್ಪ ಅಯ್ಯೆಕಳ ಮಾತ್ ಹೊಡ್ದ್ ಬುಟಂಗೆ ಜೋರು.

ಕಡ್ಪ ಮಾತಾಡ್ /*kaḍpa ma:ta:ḍi*/ ನಾ. 1. ಕಠಿಣವಾಗಿ ಮಾತಾಡು, 2. ತೀಕ್ಷ್ಣವಾಗಿ ಮಾತನಾಡು. 1. talking firmly, 2. talking harshly. ವಾ: ಮಕ್ಕ ತೊಪ್ಪು ಮಾಡಿರೆ ಕಡ್ಪ ಮಾತಾಡ್ದು.

ಕಡ್ಪ ಮೊಜ್ಜಿಗೆ /*kaḍpa mɔjjige*/ ನಾ. ಹುಳಿ ಮಜ್ಜಿಗೆ. sour buttermilk. ವಾ: ಕಡ್ಪ ಮೊಜ್ಜಿಗೆ ಕುಡೆಕಾದುಲೆ.

ಕಡ್ಪ[1] /*kaḍpa*/ ನಾ. 1. ಗಾಢ, 2. ತೀಕ್ಷ್ಣ 3. ಖಡಕ್. 1. deep/thick, 2. sharp, 3. crispy. ವಾ: ಅಂವ ಬಾರಿ ಕಡ್ಪ ಉಟ್ಟು.

ಕಡ್ಪ[2] /*kaḍpa*/ ನಾ. ಮುಟ್ಟದೆ ಹಾರು. to jump. ವಾ: ಅಂವ ಆ ಕಣ್ಣಿನ ಕಡ್ಪ ಹಾರ್ತ್.

ಕಡ್ಪ[3] /*kaḍpa*/ ನಾ. 1. ಅಡ್ಡ ದಾಟು, 2. ಆ ಕಡೆಗೆ. 1. to walk across, 2. that side. ವಾ: ಕೂಸುನ ಕಡ್ಪ ದಾಟಿಕಾದ್. ಪ: ಕಡ್ಪ ದಾಟಿ – ಅಡ್ಡ ದಾಟಿ; ಕಡ್ಪದಾಟ್ – ಅಡ್ಡ ದಾಟು; ಕಡ್ಪ ಹಾರ್‌ದು – ಅಡ್ಡ ದಾಟಿ ಹೊರ್‌ಗೆ ಹಾರ್‌ದು

ಕಡ್ಪಕತ್ತಿ /*kaḍpa kɘtti*/ ನಾ. ಕಡಿಗತ್ತಿ, 2. ದೊಡ್ಡ ಕುಡುಗೋಲು, 3. ಮಂಡಗತ್ತಿ. 1. a huge bill hook, 2. a large sickle, 3. a blunt bill hook. **ಕಡ್ಡ ಕತ್ತಿನೂ ಗಂದದ ಮರ ಪರ್‌ಮಳ ಕೊಟ್ಟದೆ(ಗಾ).** ವಾ: ಕಡ್ಪತ್ತಿ ಕೊಡ್, ಮರದ ಗೆಲ್ಲ್ ಕಡ್‌ಕಂಡ್ ಬನ್ನೆ.

ಕಡ್ಪು /*kaḍpu*/ ನಾ. ಕಾಡಿನಲ್ಲಿ ಪ್ರಾಣಿಗಳು ಅಡ್ಡಾಡುವ ದಾರಿ. a track or the trail of animals. ವಾ: ಪ್ರಾಣಿಗ ಕಡ್ಪು ದಾಟಿ ಬಂದವೆ. ಪ: ಕಡಪ್ಪು(ತು)

ಕಡ್‌ಪೆ /*kaḍipɛ*/ ನಾ. ಬಿದಿರಿನಿಂದ ಮಾಡಿದ ದ್ವಾರ. a door made of bamboo. ವಾ: ದನಗ ಕಡ್ಪೆ ಹಾರಿ ಬಂದೊಳಲ. ಪ: ಕಡ್ಪೆ

ಕಡ್ಯ /*kaḍya*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮಡಪ್ಪಾಡಿ ಗ್ರಾಮದ ಜಾಗ. 1. family, 2. lineage, 3. a locality in Madappadi village in Sullia Taluk of Dakshina Kannada District.

ಕಡ್ಯಕಲ್ಲ್ /*kaḍyakalli*/ ನಾ. 1. ಕಡಿಯುವ ಕಲ್ಲು, 2. ರುಬ್ಬುವ ಕಲ್ಲು. grinding stone. ವಾ: ಕರೆಂಟ್ ಹೋದರೆ ಏನಾತ್ ಕಡ್ಯಕಲ್ಲ್ ಉಟ್ಟಲ?

ಕಡ್ಯಕ್ಕಿ /*kaḍyakki*/ ನಾ. 1. ಕಡಿ ಅಕ್ಕಿ, 2. ತುಂಡು ತುಂಡಾದ ಅಕ್ಕಿ, 3. ನುಚ್ಚು. broken rice. ವಾ: ಕಡ್ಯಕ್ಕಿಲಿ ಉಪ್ಪಿಟ್ ಮಾಡಿವೆ.

ಕಡ್ಯತಿದ್ದೆ /*kaḍyatidde*/ ಕ್ರಿ. ರುಬ್ಬುತ್ತಿದ್ದೆ. was grinding. ವಾ: ಕಾಯಿ ಕಡ್ಯತಿದ್ದೆ. ಪ: ಕಡ್ಯಾಕನ – ರುಬ್ಬುವಾಗ

ಕಡ್ಯದ /*kaḍyada*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕಡ್ಯೊದ್ /*kaḍyodi*/ ಕ್ರಿ. ಕತ್ತರಿಸುವುದು. cutting. ವಾ: ಗೆಲ್ಲ್ ಕಡ್ಯೊದ್.

ಕಡ್ಲಾರು /*kaḍla:ru*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ದೇವಚಳ್ಳ ಗ್ರಾಮದ ಜಾಗ. 1. family, 2. lineage, 3. a locality in Devacalla village in Sullia Taluk of Dakshina Kannada District.

ಕಡ್ಲೆ /*kaḍlɛ*/ ನಾ. 1. ಕಡಲೆ, 2. ಒಂದು ಬಗೆಯ ದ್ವಿದಳ ಧಾನ್ಯ. fried gram. **ಕಡ್ಲೆ ಇರ್‌ಕನ ಹಲ್ಲಿಲ್ಲೆ, ಹಲ್ಲ್ ಇರ್‌ಕನ ಕಡ್ಲೆ ಇಲ್ಲೆ(ಗಾ).** ವಾ: ಕಡ್ಲೆ ಪಜ್ಜಿ ಮಾಡೊಕು.

ಕಡ್ಲೆ ಹೊಡಿ /*kaḍle hoḍi*/ 1. ಕಡಲೆ ಹಿಟ್ಟು, 2. ಪುಡಿ. gram flour. ವಾ: ಕಡ್ಲೆ ಹೊಡಿ ಹಾಕಿ ನೀರುಳಿ ಬಜೆ ಮಾಡ್ದು.

ಕಡ್ಲೆ ಲಾಕಿ /*Kaḍlɛ la:ki*/ ನಾ. ಚುಕ್ಕಿ ಚುಕ್ಕಿ ಬಣ್ಣದ ಸಣ್ಣ ಕೋಳಿ. a small hen with dots/spots on its body. ವಾ: ಕಡ್ಲೆ ಲಾಕಿ ಇತ್ತ ಎಲ್ಲಾರ್ ಬಾತ.

ಕಡ್ಲೆ-ಸೇಂಗ /*kaḍlɛ-se:ŋga*/ ನಾ. 1. ಶೇಂಗ, 2. ಕಡ್ಲೆ ಬೀಜ, 3. ನೆಲಗಡಲೆ. ground nut. ವಾ: ಕಡ್ಲೆನ ತಿಂಬಕೆ ಸುರು ಮಾಡಿರೆ ನಿಲ್ಸಿಕಾದುಲೆ.

ಕಡ್ಲೇರ /*kaḍle:ra*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕಡ್‌ಲ್ /*kaḍɨlɨ*/ ನಾ. 1. ಕಡಲು, 2. ಸಮುದ್ರ, 3. ಅಂಬುಧಿ. sea/ocean. ವಾ: ಕಡ್‌ಲ್‌ಲಿ ಅಲೆಗಳ ರಬಸ ಜೋರಾಗಿದ್ದದೆ.

ಕಡ್‌ವಾಣ /*kaḍɨva:ŋa*/ ನಾವಿ. 1. ಕಡಿವಾಣ, 2. ತಡೆ. 1. a hurdle, 2. a stop/ a block. **ಕಡ್‌ವಾಣ ಇಲ್ಲದ ಕುದುರೆನಾಂಗೆ(ನು).** ವಾ: ಅದಿಕೆ ಕಡ್‌ವಾಣ ಹಾಕೊಕು ಇಲ್ಲರೆ ಬಂಗ ಆದೆ.

ಕಡ್ವೆ /*kaḍvɛ*/ ನಾ. 1. ಕಡವೆ, 2. ಜಿಂಕೆಯ ಜಾತಿಗೆ ಸೇರಿದ ಪ್ರಾಣಿ, 3. ಸಾರಂಗ, 4. ಗಂಡು ಕುದುರೆ. a stag. **ಕಡ್ವೆಗೆ ಕಾಲ್ ಬೊಚ್ಚಿಕನ ನಾಯಿಗೆ ಹೇಲ್ ಬಾತ್(ಗಾ).** ವಾ: ಹಿಂದೆನ ಕಾಲಲಿ ಕಡ್ವೆ ನ ಬೇಟೆ ಆಡ್‌ತಿದ್ದೊ.

ಕಡ್ವೆಬೊಳ್ಳಿ /*kaḍvɛbɔḷḷi*/ ನಾ. ಒಂದು ವಿಧದ ಬಳ್ಳಿ. a creeper. ವಾ: ಅದ್ ಕಡ್ವೆಬಳ್ಳಿಗಡ.

ಕಡ್ಸಿದೆ /*kaḍsidɛ*/ ಕ್ರಿ. 1. ಕಡಿಸಿದೆ, 2. ಹೇಳಿ ಕತ್ತರಿಸಿದೆ. to get something cut. ವಾ: ಕಾಪಿ ದೈಕೆ ನೆರ್‌ಳಾದೆತ ದೊಡ್ಡ ದೊಡ್ಡ ಮರನೆಲ್ಲ ಕಡ್ಸಿದೆ. ಪ: ಕಡ್ಸಿತ್ – ಕಡಿಸಿದನು/ಳು; ಕಡ್ಸುವೆಂತ – ಕಡಿಸುತ್ತೇವೆಂದು; ಕಡ್ಸೊಕು – ಕಡಿಸಬೇಕು

ಕಡ್ಸ್ /*kaḍsɨ*/ ನಾ. ಪ್ರೌಢ ಹಂತದ ಹೆಂಗರು. 1. a heifer 2. a mature female calf. ವಾ: ನಮ್ಮದೊಂದ್ ಕಡ್ಸ್ ಕಾಂಬದುಲೆ. ಪ: ಕಡ್‌ಸ್ – ಹೆಣ್ಣು ಕರು; ಗೆಡಸ್ಸ್(ತು)

ಕಣ /*kaŋa*/ ನಾ. 1. ಕಳ, 2. ಧಾನ್ಯ ಒಕ್ಕುವ ಸ್ಥಳ. a threshing floor. ವಾ: ಕಣಕೆ ಸೆಗ್ಣಿ ಹಾಕಕು.

ಕಣಕ್ಕೂರು /*kaŋakku:ru*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಆಲೆಟ್ಟಿ ಗ್ರಾಮದ ಜಾಗ. a locality in Aletti village in Sullia Taluk of Dakshina Kannada District.

ಕಣಜಲ್ /*kaŋajal*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕಣಜಾಲು /*kaŋaja:lu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕಣಲೆ /*kaŋalɛ*/ ನಾ. 1. ಬಿದಿರಿನ ಚಿಗುರು, 2. ಕಣಿಲೆ. bamboo shoot. **ಮರ ಹತ್ತ್‌ಕನ ಅಂವನ ಕಚ್ಚೆ ಬಿಚ್ಚಿ ಬಿಚ್ಚಿ ಹೋದೆ – ಕಣಲೆ(ಒ).** ವಾ: ಕಣಲೆನ ಮಳೆಗಾಲಲಿ ತಿನೊಕು.

ಕಣವು ಕೂರೂಡಿ /*kaŋavu ku:ru:ḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕಣವು ಜಾಲು /*kaŋavu ja:lu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕಣಿ ಇಸುದು[1] /*kaŋi isudu*/ ನಾ. ಅರೆಭಾಷೆಯ ಮೊದಲ ತಿಂಗಳಾದ ಪೊಗ್ಗು ತಿಂಗಳ ಹೊಸವರ್ಷದ ಪ್ರಾರಂಭದ ದಿನ ನಡೆಯುವ ಒಂದು ಆಚರಣೆ; ದೇವರೆದುರಲ್ಲಿ ಹಣ್ಣು, ಕಾಯಿ, ಅಕ್ಕಿ, ಚಿನ್ನ, ಕನ್ನಡಿ ಇತ್ಯಾದಿಗಳನ್ನಿಟ್ಟು ಬೆಳಗ್ಗೆ ಎದ್ದು ಅವುಗಳನ್ನು ನೋಡಿ ನಮಸ್ಕರಿಸುವ ಆಚರಣೆ. A ritual on the New Year day;Fruit, coconut, rice, jewel, mirror and such other auspicious objects are kept in front of the idol of god or Tulsi plant and it is seen and saluted in the morning soon after getting up. ವಾ: ನಮ್ಮ ದನ ಕಾಣೆ ಆಗಿತ್ತ್ ಕಣಿ ಇಸಿದ್ ನೋಡಿಕನ ಜೀವಲಿ ಉಟ್ಟುಂತ ಹೇಳ್ದೊ.

ಕಣಿ ಇಸುದು[2] /*kaŋi isudu*/ ನಾ. ಅರೆಭಾಷೆಯ ಜನಾಂಗ ಹೊಸ ವರುಷವನ್ನು ಬಿಸುವಿನಂದು ಆಚರಿಸುತ್ತಾರೆ, ಸೌರ ಯುಗಾದಿಯಂದು ಮುಂಜಾನೆ ಎದ್ದೊಡನೆ ಶುಭ ದರ್ಶನಕ್ಕಾಗಿ (ಸಾಮಾನ್ಯವಾಗಿ ದೇವರ ವಿಗ್ರಹದೆದುರು) ಜೋಡಿಸಿಟ್ಟ ಫಲವಸ್ತುಗಳು, ಕನ್ನಡಿ ಮೊದಲಾದ ಮಂಗಳದ್ರವ್ಯಗಳು. celebration of New Year by the members of Arebhashe speaking communities. Auspicious objects, inclusive of, frutis, mirror, etc. are usually placed before the idol of a deity, and they

are to be seen and saluted by the members of the family immediatel. ವಾ: ದೇವುರ ಮುಂದೆ ಕಣಿ ಇಸುದು. ಪ: ಬಿಸುಕಣಿ

ಕಣಿ[1] /*kaṉi*/ ನಾ. ಅಗಲ ಕಿರಿದಾದ ಚಿಕ್ಕ ಕಾಲುವೆ. 1. A narrow canal dug for irrigation. ವಾ: ನೀರ್ ಕಣಿಲಿ ಹರ್‌ದ್ ಹೋದೆ.

ಕಣಿ[2] /*kaṉi*/ ನಾ. 1. ಶಾಸ್ತ್ರ ಕೇಳುವಿಕೆ, 2. ಭವಿಷ್ಯ. 1. foretelling, 2. divination. **ಕಳ್ಳನ ಒಟ್ಟಿಗೆ ಕಣಿ ಕೇಳ್ದಂಗೆ(ಗಾ).** ವಾ: ಹೋಗಿ ಕಣಿ ಕೇಳ್.

ಕಣಿ[3] /*kaṉi*/ ನಾ. ಸಾಕೆನಿಸಿತು. enough.

ಕಣಿ[4] /*kaṉi*/ ನಾ. ಪುಟ್ಟ ದೋಸೆ. small dosa (flat rice cake). ವಾ: ಕಣಿ ಹೊಯಿ.

ಕಣಿ[5] /*kaṉi*/ ನಾ. ಬಲವಾದ ಪೆಟ್ಟು, ಜಜ್ಜುವಿಕೆ ಮೊದಲಾದವುಗಳಿಂದ ರಕ್ತ ಹೆಪ್ಪುಗಟ್ಟಿ ಚರ್ಮ ವಿವರ್ಣವಾಗಿ ಮೇಲ್ಮೈಯಲ್ಲಿ ನೀಲಿಗಪ್ಪು ಬಣ್ಣದ ಕಲೆ ಉಂಟಾಗುವುದು. a contusion – clotted blood under the skin, will be black and blue at first, then the colour changes. ವಾ: ಪೆಟ್ಟ್ ಬಿದ್ದ್ ಕೈಲಿ ಕಣಿ ಆವುಟು.

ಕಣಿಕೆ /*kaṉikɛ*/ ಕ್ರಿ. ಕೊಳ್ಳು, to buy. ವಾ: ಕೈ ಬೇನೆಂದ ಕೂಸುನ ಎತ್ತಿಕಣಿಕೆ ಆದುಲೆ.

ಕಣಿಕೋಲು /*kaṉiko:lu*/ ನಾ. ನೊಗದ ಎರಡೂ ತುದಿಗಳಲ್ಲಿ ಎರಡೆರಡು ರಂಧ್ರಗಳಿಗೆ ತೂರಿಸುವ ಕೋಲು. pegs used in the holes of a yoke. ವಾ: ಕಣಿಕೋಲುನ ನೊಗದ ಎರೆಡ್ ತೂತಗಳಿಗೆ ಸೆಕ್ಕಿಸೋ ಕೋಲು. ಪ: ಕಿಣಿಕೋಲು

ಕಣಿಪ್ಪಿಲ /*kaṉippila*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಮರಪಡ್ನೂರು ಗ್ರಾಮದ ಜಾಗ. a locality in Amarapadnuru village in Sullia Taluk of Dakshina Kannada District.

ಕಣಿಮರಡ್ಕ /*kaṉimaraḏka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮಂಡೆಕೋಲು ಗ್ರಾಮದ ಜಾಗ. a locality in Mandekolu village in Sullia Taluk of Dakshina Kannada District.

ಕಣಿಯ[1] /*kaṉiya*/ ನಾ. 1. ಮಾಂತ್ರಿಕ, 2. ಮಾಟಗಾರ, 3. ಜ್ಯೋತಿಷಿ, 3. ಕೇರಳ ಮೂಲದಿಂದ ಬಂದು ಕೊಡಗಿನಲ್ಲಿ ನೆಲೆನಿಂತ ಜ್ಯೋತಿಷಿ. 1. a magician, 2. a sorcerer, 3. an astrologer, 3. an astrologer from Kerala who has settled in Kodagu. ವಾ: ಕಣಿಯನತ್ರ ಸಾಸ್ತ್ರ ಕೇಳ್‌ದು.

ಕಣಿಯ[2] /*kaṉiya*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕಣಿಯಾರ್ /*kaṉiya:r*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕಣಿಲೆಗುಂಡಿ /*kaṉileguṉḏi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಐವರ್ನಾಡು ಗ್ರಾಮದ ಜಾಗ. a locality in Aivarnadu village in Sullia Taluk of Dakshina Kannada District.

ಕಣೀರ್ /*kaṉi:rɨ*/ ನಾ. 1. ಕಂಬನಿ, 2. ಅಶ್ರು, 3. ಕಣ್ಣೀರು. tears. ವಾ: ಮನೆಲಿ ಹೆಣ್ಮಕ್ಕ ಕಣೀರ್ ಹಾಕಿಕಾಗದ್.

ಕಣೆ[1] /*kaṉɛ*/ ನಾ. 1. ಕೋಲು, 2. ಸೊಪ್ಪಿನಕಣೆ, 3. ಹಸಿ ಅಡರ್. 1. a stick, 2. a twig of a leaf vegetable, 3. a tendril. ವಾ: ಸೊಪ್ಪ್ ಬೇರೆ ಕಣೆ ಬೇರೆ ಮಾಡಿಕನಿ.

ಕಣೆ[2] /*kaṉɛ*/ ನಾ. 1. ಅಟ್ಟಿ, 2. ಸೌದೆ ಯನ್ನು ಒಟ್ಟಾಗಿಸಿದ ಪರಿ. 1. to pile, 2. the way firewood has been piled. ವಾ: ಸೌದೆನ ಕಣೆಂದ ಒಂದ್ ಹೊರೆ ತಂದಿಸಿ.

ಕಣೆಬುಡ್ಡು /*kaṉɛbuḏḏu*/ ನಾ. ಕಾಲಿನ ಬೆರಳಿನ ಅಡಿ ಒಡೆಯುವುದು ಅಥವಾ ಸೀಳುವುದು. cracked and split skin under toes. ವಾ: ಕಾಲ್ ಬೆರ್‌ಳ್ ಅಡಿಲಿ ಕಣೆಬುಡ್ಡು.

ಕಣೆರೋಗ /*kaṉɛro:ga*/ ನಾ. ದನಗಳ ಗೊರಸಿನ ಅಡಿಯಲ್ಲಿ ಹುಣ್ಣಾಗುವುದು. swollen wounds in the hoof of cattle. ವಾ: ದನದ್ ಕವಣೆ ಸೆರೆಲಿ ಕಣೆರೋಗ ಆದೆ.

ಕಣೆರ್ /*kaṉɛrɨ*/ ನಾ. 1. ಒಗರು ರುಚಿ, 2. ಅಪಕ್ವ ಹಣ್ಣಿನ ಒಗರು ರುಚಿ, 3. ಕನರು. 1. bitter, 2. unripe, 3. pungent. ವಾ: ಕರ್‌ಟ್ ಪೇರ್‌ಲ ಕನರ್ ಕನರ್.

ಕಣೆಹಿತ್ಲು /*kaṉɛhitlu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕಣ್ ತೊಪ್ಪು /*kaṉɨ tɔppu*/ ನಾ. ಸೂಕ್ಷ್ಮವಾಗಿ

ಗಮನಿಸದೆ ಮಾಡುವ ತಪ್ಪು, impetuous. ವಾ: ಕಣ್ ರೊಪ್ಪುಂದ ಬಂಗ ಆದ್.

ಕಣ್ ನೆತ್ತಿಲಿ /*kaṇɨ nɛttili*/ ನಾ. ಅಹಂಕಾರ ಅಥವಾ ಜಂಭದ ಪರಮಾವಧಿ. heights of excessive pride. ವಾ: ಐಸುರ ಬಂದ್ ಕಣ್ ನೆತ್ತಿಗೆ ಹೋವ್ವು.

ಕಣ್ ಬೀಳ್[1] /*kaṇɨ bi:ḷ*/ ನಾವಿ. 1. ಕೆಟ್ಟದೃಷ್ಟಿ, 2. ಕೆಟ್ಟಕಣ್ಣು, 3. ದೃಷ್ಟಿತಾಗು. evil eye. ವಾ: ಬಜ್ಜಪಟ್ಟ್ ಮುಂದೆ ಬಂದರೆ ಕಣ್ ಬೀಳ್ ದು.

ಕಣ್ ಬೀಳ್[2] /*kaṇɨ bi:ḷɨ*/ ನಾವಿ. 1. ತೂತು ಬೀಳುವುದು, 2. ದೋಸೆಗೆ ಕಣ್ಣು ಬೀಳು. 1. perforation, 2. hole in the dosa. ವಾ: ದೋಸೆ ಬಂದ ಬೆಳ್ದ್ ಬಂದರೆ ಹೊಯ್ಯಕನ ಕಣ್ ಬೀಳ್‌ದು.

ಕಣ್ ಬೇನೆ /*kaṇɨ be:nɛ*/ ನಾ. 1. ಕಣ್ಣು ನೋವು, 2. ಕಣ್ಣೊತ್ತು. 1. pain in the eye, 2. a sore eye. ವಾ: ಕಣ್ ಬೇನೆ ಸುರಾತ್.

ಕಣ್ ಸನ್ನೆ /*kaṇɨ sannɛ*/ ನಾ. 1. ಕಣ್ಣಿನ ಸಂಕೇತ, 2. ಕಣ್ಣಿನಲ್ಲಿ ಸನ್ನೆ ಮಾಡು, 3. ಮೂಕ ಸನ್ನೆ. 1. to indicate something using one's eyes, 2. a sign made using an eye, 3. a gesture. ವಾ: ಕಳಂಕ್ ನೀರ್‌ಲಿ ಆಡ್ಬಡ.

ಕಣ್/ ಕಳಂಕ್ /*kaṇ/ kaḷaŋkɨ*/ ನಾವಿ. ಮಣ್ಣುಮಿಶ್ರಿತ. mixed with soil.

ಕಣ್[1] /*kaṇɨ*/ ನಾ. 1. ಕಣ್ಣು, 2. ನೇತ್ರ. eyes.

ಕಣ್[2] /*kaṇɨ*/ ನಾ. ಜರಡಿ ಹಿಡಿಯುವ ಬುಟ್ಟಿಯ/ಪಾತ್ರೆ ತಳಭಾಗದಲ್ಲಿರುವ ಸಣ್ಣ ಸಣ್ಣ ತೂತು. perforation in a strainer. ವಾ: ಗೂಡೆದ್ ಬಟ್ಲ್ ಕಣ್.

ಕಣ್[3] /*kaṇɨ*/ ನಾ. ಮೊಳಕೆ. sprout. ವಾ: ಕಾಯಿ, ಅಡ್ಕೆಗಳ್‌ಲಿ ಮೊಳ್‌ಕೆ ಒಡ್‌ದ್ ಬರೊ ಜಾಗೆಗೆ ಕಣ್‌ತ ಹೇಳಿವೆ.

ಕಣ್ಕಟ್ /*kaṇkaṭi*/ ನಾ. 1. ಕಣ್ಣುಕಟ್ಟು, 2. ಜಾದು, 3. ಮೋಸಮಾಡು, 4. ನೋಟದಿಂದ ಭ್ರಾಂತಿ ಹುಟ್ಟಿಸು, 5. ಇಂದ್ರಜಾಲ, 6. ಯಕ್ಷಿಣಿವಿದ್ಯೆ. 1. magic, 2. conjuring, 3. to cheat, 4. to mesmerize, 5. to cast a magic spell, 6. art of magic. ವಾ: ಮ್ಯಾಜಿಕ್ ತೇಳ್ದು ಒಂದ್ ಕಣ್ಕಟ್. ಪ: ಕಣ್ಕಟ್ಟ್, ಕಣ್ಣು ಕಟ್ಟು(ಇಂದ್ರಜಾಲ)

ಕಣ್ಕತ್ತಲೆ /*kaṇkattalɛ*/ ನಾ. ಕಣ್ಣಿಗೆ ಕತ್ತಲಾವರಿಸಿದಂತೆ ಆಗು. to go blind. ವಾ: ಕುದ್ದ್ ಒಮ್ಮೆಗೆ ಏಳ್ಕನ ಕಣ್ಕತ್ತಲೆ ಬಂದಂಗೆ ಆತ್.

ಕಣ್ಕತ್ತಲೆ ತೆಗೆಕು /*kaṇkattalɛ tɛgɛku*/ ನಾ. ಹೆದರಿದಾಗ ರಾತ್ರಿ ಹೊತ್ತಿನಲ್ಲಿ ಒಂದು ಬಟ್ಟಲಿನಲ್ಲಿ ಅರಶಿನ ನೀರು ಮತ್ತು ಬತ್ತಿಯ ಆರತಿ ಮಾಡಿ ಚೆಲ್ಲುವುದು. to spill away turmeric water and the wick after waving at the scared person. ವಾ: ಹೆದ್ರಿಕಂಡಿದ್ದರೆ ಕಣ್ಕತ್ತಲೆ ತೆಗೆಕು.

ಕಣ್ಕಪ್ಪು /*kaṇkappu*/ ನಾ. 1. ಕಾಡಿಗೆ, 2. ಅಂಜನ. Collyrium. ವಾ: ಗೂಡೆಗ ಕಣ್ಕಪ್ಪು ಹಾಕುದು.

ಕಣ್ಕಲ್ /*kaṇkal*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕಣ್ಕಲ್ಲು /*kaṇkallu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕೇನ್ಯ ಗ್ರಾಮದ ಜಾಗ. a locality in Kenya village in Sullia Taluk of Dakshina Kannada District.

ಕಣ್ಕ್ /*kaṇkɨ*/ ನಾ. 1. ಕಲುಷಿತ, 2. ರಾಡಿ. 1. polluted, 2. mire. ವಾ: ಚೋಡಿ ನೀರ್ ಕಣ್ಕ್ ಆವುಟು, ಅರ್ವೆ ಒಗ್ಯಕೆ ಆಕಿಲೆ. **ಕಣ್ಕ್ ನೀರ್** /*kɜṇkɨ ni:rɨ*/ 1. ರಾಡಿನೀರು, 2. ಕಲುಷಿತ ನೀರು, 3. ಮಣ್ಣು ಮಿಶ್ರಿತ ನೀರು. 1. muddy water, 2. unclean water, 3. sediment water. ವಾ: ಕಣ್ಕ್‌ನೀರ್ ಕುಡೆಕಾದುಲೆ. ಪ: ಕಳ್‌ಂಕ್ ನೀರ್

ಕಣ್ಣ /*kaṇṇa*/ ನಾ. ಹಾಲು ಹಾಕದ ಕಾಫಿ/ಚಾ. black coffee or tea. ವಾ: ಕಣ್ಣ ಚಾಯ ಕುಡೆಕಿತ್. **ಕಣ್ಣ ಚಾಯ** /*kaṇṇa ca:ya*/ 1. ಖಾಲಿ ಚಹ, 2. ಹಾಲು ಬೆರಕೆ ಮಾಡದ ಚಹ. a black tea. ವಾ: ಬೇ ಬೊಳ್ಪಿಗೆ ಕಣ್ಣಚಾಯ ಕುಡ್ದರೆ ಲಾಯ್ಕ್ ಆದೆ.

ಕಣ್ಣಜ್ಜಿ/ಕಣೋಜಿ /*kaṇṇajji/kaṇɔ:ji*/ ನಾ. 1. ನೇರ ನಡೆನುಡಿ ಇಲ್ಲದವ, 2. ಒಳಗೊಂದು ಹೊರಗೊಂದು ವರ್ತನೆಯವ. 1. circuitous, 2. equivocal. ವಾ: ಕಣೋಜಿ ಬುದ್ಧಿ ಇರಿಕಾಗದ್.

ಕಣ್ಣ್[1] /*kaṇṇi*/ ನಾ. 1. ತೂತು. a hole. ವಾ: ಹೊಯ್ದ ದೋಸೆ ಕಣ್ಣ್ ಒಡೆಯಕು, ಆಗ ಮೆತ್ತಂಗಿದ್ದದೆ.

ಕಣ್ಣ್[2] /*kaṇṇi*/ ನಾ. 1. ಕಣ್ಣು, 2. ನಯನ, 3. ನೇತ್ರ, 4. ಅಕ್ಷಿ. eyes. **ಕಣ್ಣ್‌ಲಿ ರಕ್ತ ಇಲ್ಲದ ಜಾತಿ(ನು).**

ನೂರಾರ್‌ದರೆ ಶ್ರೀ ರಾಮನ ಏರಿ, ಏರಿಮ್ಯಾಲೆ ನಿತ್ತ್ ಕೈಬೀಸಿ ಕರಿ – ಕಣ್ಣ್(ಒ). ವಾ: ಕಣ್ಣ್ ಕಾಂಬದುಲೆಗಡ. ಪ: ಕಣ್ಣ್‌ಲಿ – ಕಣ್ಣಿನಲ್ಲಿ; ಕಣ್ಣ್‌ಂದ – ಕಣ್ಣಿನಿಂದ. **ಕಣ್ಣಿತ್ಲರೆನೂ** /*kaṇṇittlarɛnu:*/ 1. ಕಣ್ಣಿಲ್ಲದಿದ್ದರು, 2. ಕುರುಡಾದರು, 3. ದೃಷ್ಟಿಹೀನವಾದರು. blind. ವಾ: ಕಣ್ಣಿತ್ಲರೆನೂ ಬೊದ್ಕಿ ಕೆಲೊವು ಸಾದನೆ ಮಾಡುವೆ.

ಕಣ್ಣನೀರ್ /*kaṇṇani:rɨ*/ ನಾ. 1. ಕಣ್ಣೀರು, 2. ಅಶ್ರು, 3. ಕಂಬನಿ. tears. ವಾ: ಕಣ್ಣನೀರ್ ಉಪ್ಪುಪ್ಪು. ಪ: ಕಣನೀರ್

ಕಣ್ಣಾಡ್ಸ್ /*kaṇṇa:ḍsɨ*/ ಕ್ರಿವಿ. ದೃಷ್ಟಿ ಹಾಯಿಸು. gaze. ವಾ: ಗದ್ದೆಗೆ ದನಗ ಬಂದೊಳನತ ಒಮ್ಮೆ ಕಣ್ಣಾಡ್ಸ್

ಕಣ್ಣಾರೆ /*kaṇṇa:rɛ*/ ನಾ. 1. ಪ್ರತ್ಯಕ್ಷ, 2. ಎದುರು. 1. to appear, 2. opposite. ವಾ: ಕಣ್ಣಾರೆ ಕಂಡರೂ ಪ್ರಾಮಾಣಿಸಿ ನೋಡ್ ತ ಹೇಳ್ ವ ಮಾತುಟ್ಟು.

ಕಣ್ಣಾಲಿ /*kaṇṇa:li*/ ನಾ. ಕಣ್ಣು ಒಳಗಿನ ಗೋಲಾಕಾರ. cornea. ವಾ: ಅವರ ಕತೆ ಕೇಳಿ ನನ್ನ ಕಣ್ಣಾಲಿ ತುಂಬಿ ಬಾತ್.

ಕಣ್ಣಾಸ[1] /*kaṇṇa:sa*/ ನಾ. ದೃಷ್ಟಿ ತೆಗೆಯುವುದು. warding off the evil: an act of waving a piece of charcoal, salt and redc hilli around a person who has been assumed to be affected by a malicious eye of a person. ವಾ: ಕಣ್ಣಾಸ ತೆಗೆಕು.

ಕಣ್ಣಾಸ[2] /*kaṇṇa:sa*/ ನಾ. ಕಣ್ಣಿನ ನರ ಬಡಿದುಕೊಳ್ಳುವಾಗ ಹೇಳುವ ಪದ. twitching of the nerve in the eye. ವಾ: ನಿನ್ನೆಂದ ಕಣ್ಣಾಸ ಆದೆ.

ಕಣ್ಣಿಗೆ ಕಾಂಬ /*Kaṇṇigɛ ka:mba*/ ನಾ. ಕಣ್ಣಿಗೆ ಕಾಣುವ. something that can be seen. ವಾ: ಕಣ್ಣಿಗೆ ಕಾಂಬದೆಲ್ಲ ಸತ್ಯಲ್ಲ.

ಕಣ್ಣಿಗ್ ಇರಳ್ /*kaṇṇig iraḷi*/ ನಾ. ಸಂಜೆ ಕತ್ತಲು. dusk. ವಾ: ಕಣ್ಣಿಗ್ ಇರಳ್ ಹತ್ತಿಕನ ಎತ್ತ ಹೊರ್‌ಟದ್.

ಕಣ್ಣಿರಿ /*kaṇṇiri*/ ನಾ. ಕಣ್ಣು ಕೆಂಪಾಗುವುದು. red eye. ವಾ: ಕಣ್ಣಿರಿಯಾಗಿ ಕಣ್ಣ್ ಬುಡಿಕಾದುಲೆ.

ಕಣ್ಣೀರಿ /*kaṇṇi:ri*/ ನಾ. ಆಹಾರ ವಸ್ತುಗಳನ್ನು (ದಿನಸಿ) ಹೊರತುಪಡಿಸಿ ಉಳಿದಂತೆ ಎಲ್ಲಾ ದಿನಬಳಕೆಯ ವಸ್ತುಗಳು, ಕಣ್ಣೀರಿ ಅಂಗಡಿ. a shop where one can by any household items except grocery. ವಾ: ಕಣ್ಣೀರಿ ಅಂಗ್‌ಡಿಲಿ ಪೆನ್ನ್, ಪೆನ್ಸಿಲ್, ಪೇಪರ್ ಸಿಕ್ಕುದು.

ಕಣ್ಣೀರ್ /*kaṇṇi:rɨ*/ ನಾ. 1. ಕಂಬನಿ, 2. ಅಶ್ರು, 3. ಕಣ್ಣೀರು. tears. **ಮೊಸ್‌ಳೆ ಕಣ್ಣೀರ್(ನು).** ವಾ: ಕಣ್ಣೀರ್ ಹಾಕ್‌ಬಡ.

ಕಣ್ಣೀರ್ ಪೂಜಿಕಂಡೊ /*kaṇṇi:rɨ pu:jikaṇḍɔ*/ ಕ್ರಿವಿ. ಕಣ್ಣೀರನ್ನು ಒರೆಸಿಕೊಂಡರು. wiped the tears. ವಾ: ಬೇಜರ ತಡೆಕಾಗದೆ ಕಣ್ಣೀರ್ ಪೂಜಿಕಂಡೊ.

ಕಣ್ಣು ಮುಟ್ಟದು /*kaṇṇu muṭṭadu*/ ನಾ. ಕ್ಷೇಮವಾಗಿರುವವರಿಗೆ ಕೆಟ್ಟ ಗಳಿಗೆಯಲ್ಲಿ ಏನಾದರೂ ಕೆಟ್ಟದು ಬಯಸಿದರೆ ಅದು ವ್ಯಕ್ತಿಯ ಮೇಲೆ ಕೆಟ್ಟ ಪರಿಣಾಮವನ್ನು ಬೀರುತ್ತದೆಂದು ನಂಬಲಾಗುತ್ತದೆ. a belief that if one wishes harm to somebody in an evil time it will really affect them. ವಾ: ಕೂಸುನ ಜನರೆದುರ ಕರ್ಕಂಡ್ ಹೋಬಡಿ ಕಣ್ಣ್ ಮುಟ್ಟುದು.

ಕಣ್ಣುಟು /*kaṇṇuṭu*/ ಕ್ರಿ. 1. ಸಿಕ್ಕಿಬೀಳು, 2. ಶರಣಾಗು. 1. to get caught, 3. to surrender.

ಕಣ್ಣುರಿ /*kaṇṇuri*/ ನಾವಿ. 1. ಹೊಟ್ಟೆಕಿಚ್ಚು, 2. ಅಸೂಯೆ. jealousy. ವಾ: ಮೊನ್ಸಂಗೆ ಕಣ್ಣುರಿ ಇರಿಕಾಗದ್.

ಕಣ್ಣೆ /*kaṇṇe*/ ನಾ. ಸೌದೆಯ ಅಟ್ಟಿ. pile of firewood. ವಾ: ಕಣ್ಣೆಂದ ಸೊವ್ದೆನ ತಂಬ.

ಕಣ್ಣೊಜ್ಜಿ[1] /*kaṇṇɔjji*/ ನಾವಿ. 1. ಕಣ್ಣುಜ್ಜಿ, 2. ಕಣ್ಣು ಒರೆಸಿ. to rub one's eye. ವಾ: ಕಣ್ಣೊಜ್ಜಿಕಂಡ್ ಕುದ್ದುಟು.

ಕಣ್ಣೊಜ್ಜಿ[2] /*kaṇṇɔjji*/ ನಾವಿ. 1. ಕೆಲಸದ ಕಳ್ಳ, 2. ನಂಬಿಕೆಗೆ ಅನರ್ಹ. 1. irresponsible, 2. untrustworthy.

ಕಣ್ಣೊಲೆ /*kaṇṇɔlɛ*/ ನಾ. ದೊಡ್ಡ ಒಲೆಯಿಂದ ಉಷ್ಣತೆ ಮತ್ತು ಜ್ವಾಲೆ ಬರುವ ಹಾಗೆ ತೂತು ಇರಿಸಿಕೊಂಡು ಪಕ್ಕದಲ್ಲೇ ನಿರ್ಮಿಸಿದ ಚಿಕ್ಕ ಒಲೆ. a small stove/ oven which uses the heat of the large oven/ stove next to it. ವಾ: ಕಣ್ಣೊಲೆಲಿ ಕಾಪಿ ಕಾಸ್.

ಕಣ್ಣ್ ಇಸ್ /*kaṇṇɨ isɨ*/ ನಾ. 1. ಕಣ್ಣಿಡು, 2. ದೃಷ್ಟಿ ಇಡು, 3. ಗಮನವಿಡು. 1. to keep an eye, 2. to focus , 3. paying attention. ವಾ: ಅಂವನ ಮೇಲೆ ಒಂದ್ ಕಣ್ಣ್ ಇಸ್.

ಕಣ್ಣ್ ಕಣ್ಣೆಟಿ /*kaṇṇɨ kaṇṇɛṭi*/ ನಾ. 1. ಕನ್ನಡಕ, 2. ಚಾಳೀಸು. spectacles. ವಾ: ಕಣ್ಣ್ ಕಣ್ಣೆಟಿನ ಎಲ್ಲಿ ಇಸಿದ?

ಕಣ್ಣ್ ಕಣ್ಣ್ ಬುಡ್ /*kaṇṇɨ kaṇṇɨ buḍɨ*/ ನಾ. 1. ಮುಖ ಮುಖ ನೋಡು, 2. ಅರ್ಥ ಆಗದಿರು. 1. look into each other, 2. unable to understand. ವಾ: ಎಂತಕೆ ಹೀಂಗೆ ಕಣ್ಣ್ ಕಣ್ಣ್ ಬುಡ್‌ದು.

ಕಣ್ಣ್ ಕುಕ್ಕು /*kaṇṇɨ kukki*/ ನಾ. 1. ಬೆಳಕಿನಿಂದ ಕಣ್ಣು ಮುಚ್ಚು, 2. ಕಣ್ಣು ಕೋರೈಸು. 1. closing one's to eyes avoid the bright lights, 2. dazzled by the light. ವಾ: ದೀಪದ ಬೊಳ್ಪ್ ಕಣ್ಣ್ ಕುಕ್ಕುದು.

ಕಣ್ಣ್ ಕೆಂಪು ಮಾಡ್ /*kaṇṇɨ kɛmpu ma:ḍɨ*/ ನಾ. 1. ಕೋಪ ಮಾಡಿಕೊಳ್ಳು, 2. ಸಿಟ್ಟಾಗು, 3. ಕಣ್ಣಿನ ನೋಟದಲ್ಲಿ ಗದರು. 1. to get angry, 2. to get enraged, 3. to scare with one's eyes. ವಾ: ಅಪ್ಪ ಕಣ್ಣ್ ಕೆಂಪ್ ಮಾಡಿರೆ ಮಕ್ಕ ಸದ್ದಿಲ್ಲದೆ ಇದ್ದವೆ.

ಕಣ್ಣ್ ಗೋಲಿ /*kaṇṇɨ go:li*/ ನಾ. 1. ದೃಷ್ಟಿಪಟಲ, 2. ಕಣ್ಣಾಲ. retina. ವಾ: ಕಣ್ಣ್ ಗೋಲಿ ಬೆಳ್‌ಕ್ ಗ್ರಹಿಸೊ ಸಕ್ತಿನ ಕಳ್‌ಕಂಬಕನ ಕಣ್ಣ್ ಮಂಜ್ ಮಂಜಾದೆಗಡ.

ಕಣ್ಣ್ ತಾಂಗುದು /*kaṇṇɨ ta:ŋgudu*/ ನಾ. 1. ಕೆಟ್ಟಕಣ್ಣು, 2. ದೃಷ್ಟಿಯಾಗು. 1. an evil eye, 3. affected by the malicious eye of a person. ವಾ: ಮೊನ್‌ಸನ ಕಣ್ಣ್ ತಾಂಗಿರೆ ಬರ್ಕತಿಲ್ಲೆ. ಪ: ಕಣ್ಣ್‌ತಾಂಗಿಟು

ಕಣ್ಣ್ ತೊಪ್ಪುಸು /*kaṇṇɨ tɔppusu*/ ನಾ. 1. ಕಣ್ಮರೆಯಾಗಿ, 2. ಮಾಯವಾಗು. to disappear. ವಾ: ಅಂವ ನಮ್ಮ ಕಾಂಬಕನ ಕಣ್ಣ್ ತೊಪ್ಪುಸುದರ್ಲಿ ಬಾರಿ ಉಸಾರ್.

ಕಣ್ಣ್ ನೆತ್ತಿಲಿ /*kaṇṇɨ nɛttili*/ ನಾ. 1. ಬೈಗುಳ ಪದ, 2. ವಸ್ತುವನ್ನು ಹಾಳು ಮಾಡಿದಾಗ, ತುಳಿದಾಗ, ಅಸಡ್ಡೆಯಿಂದ ವರ್ತಿಸಿದಾಗ ಹೇಳುವ ಮಾತು. 1. an expletive, 2. used for someone who has destroyed something, stepped on something, ignored something etc. ವಾ: ಎಲ್ಲಿ ನೋಡಿಕಂಡ್ ಬಾದು ಕಣ್ಣ್ ನೆತ್ತಿಲಿ ಉಟ್ಟಾ?

ಕಣ್ಣ್ ಪಾಪತ್ತ್ /*kaṇṇɨ pa:patti*/ ನಾ. 1. ಅನ್ಯಾಯ, ಸಾವು, ನೋವು, ಪ್ರಕೃತಿ ವಿಕೋಪಗಳಂತಹ ಘಟನೆಗಳು ಸಂಭವಿಸಿದಾಗ ನೋವನ್ನು ವ್ಯಕ್ತಪಡಿಸಲು ಬಳಸುವ ಪದ, 2. ನೋಡಲು ಅಸಾಧ್ಯ ಎಂಬುದನ್ನು ಸ್ಪಷ್ಟಪಡಿಸುವ ಶಬ್ದ. 1. expression of sorrow in situations of injustice, death, pain, natural calamity, etc. 2. to express the impossibility of seeing something. ವಾ: ಎಂತ ಕಣ್ಣ್ ಪಾಪತ್ತ್, ಹಿಂಗಾಕಾಗದಿತ್ತ್.

ಕಣ್ಣ್ ಬಲೆ ಬಲೆ ಆದೆ /*kaṇṇɨ balɛ balɛ a:dɛ*/ ನಾ. 1. ಕಣ್ಣು ಸರಿಯಾಗಿ ಕಾಣದಿರುವ ಸ್ಥಿತಿ, 2. ದೃಷ್ಟಿ ಮಂಜಾಗುವುದು, 3. ಅಸ್ಪಷ್ಟ ಸ್ಥಿತಿ. blurred vision. ವಾ: ಯಾಕೊ ಕಣ್ಣ್ ಬಲೆ ಬಲೆ ಆದೆ.

ಕಣ್ಣ್ ಬೇನೆ /*kaṇṇɨ bɛ:nɛ*/ ನಾ. 1. ಕಣ್ಣು ನೋವು, 2. ಕಣ್ಣೊತ್ತು. 1. pain in the eye, 2. an eyesore. ವಾ: ಕಣ್ಣ್ ಬೇನೆ ಸುರಾತ್.

ಕಣ್ಣ್ ಮಟ್ಸುದು /*kaṇṇɨ maṭsudu*/ ನಾ. 1. ಕೆಟ್ಟಕಣ್ಣು, 2. ಕಣ್ಣುತಾಗು. a malicious eye. ವಾ: ಮಕ್ಕಳಿಗೆ ಬೇಗ ಮೊನ್‌ಸರ ಕಣ್ಣ್ ಮಟ್ಸುದು. ಪ: ಕಣ್ಣ್‌ತಾಂಗಿಟು – ಕಣ್ಣುತಾಗಿದೆ, ದೃಷ್ಟಿಯಾಗಿದೆ

ಕಣ್ಣ್ ಮಯ ಮಯ ಆದು /*kaṇṇɨ maya mayaa:du*/ ನಾ. 1. ಕಣ್ಣು ಮಂಜಾಗು. blurred vision. ವಾ: ಆಗಾಗ ಕಣ್ಣೆಲ್ಲ ಮಯ ಮಯ ಆದೆ.

ಕಣ್ಣ್ ಮಿಟ್‌ಕಿಸುದ್ /*kaṇṇɨ miṭikisudɨ*/ ನಾ. 1. ಕಣ್ಣು ಮಿಟುಕಿಸುವುದು, 2. ಕಣ್ಣು ಸನ್ನೆ ಮಾಡುವುದು. to wink. ವಾ: ನೋಡಿಕಂಡಿದ್ದಾಂಗೆ ಕಣ್ಣ್ ಮಿಟ್‌ಕಿಸುದ್.

ಕಣ್ಣ್ ಮುಚ್ಚಾಟ /*kaṇṇɨ mucca:ṭa*/ ನಾ. ಕಣ್ಣಾಮುಚ್ಚಾಲೆ. I-spy game. ವಾ: ಕಣ್ಣ್ ಮುಚ್ಚಾಟ ಆಡಮೊ ಬನ್ನಿ.

ಕಣ್ಣ್ ಮುಟ್ಟುದು /*kaṇṇɨ muṭṭudu*/ ನಾ. 1. ದೃಷ್ಟಿಯಾಗು, 2. ಕೆಟ್ಟದಾಗು. 1. affected by a malicious eye, 2. occurrence of something bad. ವಾ: ಕೂಸು ಗೊಂಬೆನಂಗುಟ್ಟು ಎಲ್ಲೊವು ಹೇಳಿ ಹೇಳಿ ಕಣ್ಣ್ ಮುಟ್ಟುದು.

ಕಣ್ಣ್ ಮೂಳಿಯೋಗುಟು /*kaṇṇɨ mu:ḷiyo:guṭu*/ ನಾ. ಕಣ್ಣು ಕಾಣೋದಿಲ್ವ ಎಂಬ ಮಾತನ್ನು ವ್ಯಂಗ್ಯ ವಾಗಿ ಕೇಳುವುದು. asking if one couldn't see (sarcasm). ವಾ: ಹೆಂಗೆ ದೂಡಿಕಂಡ್ ಹೋದು ಕಣ್ಣ್ ಮೂಳಿಯೋಗುಟು ಕಂಡದೆ.

ಕಣ್ಣ್ ಸೆಡೆ /*kaṇṇɨ sɛḍɛ*/ ನಾ. ಕರಟದಿಂದ ಮಾಡಿದ, ಅದಕ್ಕೆ ತೂತುಗಳನ್ನು ಮಾಡಿರುವ ಚಮಚ. a spoon made out of coconut shell. ವಾ: ಕಣ್ಣ್ ಸೆಡೆಲಿ ಗೋಂಚು. ಪ: ಒಟ್ಟೆ ಸೆಡೆ – ತೂತಿರುವ ಸೌಟು

ಕಣ್ಣ್ ಹಾರ್‌ದೆ /*kaṇṇɨ ha:rdɛ*/ ನಾ. 1. ಎಡೆಬಿಡದೆ ಕಣ್ಣಿನ ರೆಪ್ಪೆ ಬಡಿದುಕೊಳ್ಳುವುದು, 2. ಅಪಶಕುನ ಎಂಬ ನಂಬಿಕೆಯೂ ಇದೆ. 1. continuous blinking of the eye, 2. an ill-omen. ವಾ: ಗಂಡ್ಜೆನಕೆ ಎಡ್ದ ಕಣ್ಣ್, ಹೆಣ್ಣ್ ಜೆನಕೆ ಬಲ್ದ ಕಣ್ಣ್ ಹಾರಿರೆ ಅಪಶಕುನತ ನಂಬಿಕೆ.

ಕಣ್ಣ್ ಹೊಡ್ಡೊಗುಟ /*Kaṇṇɨ hoḍḍoguṭa*/ ನಾ. ಯಾವುದಾದರು ವಸ್ತು ಅಲ್ಲೆ ಇದ್ದರು ಅದನ್ನು ಕಾಣಿತ್ತಿಲ್ಲ ಎಂದು ಹೇಳಿದಾಗ ಕೋಪದಿಂದ ಹೇಳುವ ಮಾತು. an angry remark when someone couldn't see something that is right in front of him/her. ವಾ: ನಿನ್ನ ಕಣ್ಣ್ ಹೊಡ್ಡೊಗುಟ ದೂಡಿಕಂಡ್ ಹೋದಿಯಲ? ಪ: ಕಣ್ಣ್ ಹೊಡ್ಡೊಗಲಿ – ಕೆಟ್ಟದ್ದಾಗಲಿ

ಕಣ್ಣ್ ಹೊಣ್ಕುಸುದು /*kaṇṇɨ hoṇkusudu*/ ನಾ. 1. ಕಣ್ಣು ಮಿಟುಕಿಸುವುದು, 2. ಕಣ್ಣು ಸನ್ನೆ ಮಾಡುವುದು. to wink. ವಾ: ನೋಡಿಕಂಡಿದ್ದಾಂಗೆ ಕಣ್ಣ್ ಹೊಣ್ಕುಸುದು.

ಕಣ್ಣ್ ಹೊಣ್ಕ್‌ಸ್ /*kaṇṇɨ hoṇksɨ*/ ನಾ. ಕಣ್ಣನ್ನು ಹೊರಳಿಸು. to roll one's eyes. ವಾ: ಅತ್ತ ಇತ್ತ ಕಣ್ಣ್ ಹೊಣ್‌ಕ್‌ಸ್.

ಕಣ್ಣ್‌ಂದ /*kaṇṇɨnda*/ ನಾ. 1. ಕಣ್ಣಿನಿಂದ, 2. ಕಣ್ಣಿನ ಮೂಲಕ. through/from the eye. ವಾ: ಕಣ್ಣಂದ ನರ್ಕ ಬಾದೊರ ನೋಡಿಕಾಲೆ/ನೋಡಿಕಾದುಲೆ.

ಕಣ್ಣ್‌ಉಟ್ಟು /*kaṇṇɨ uṭṭu*/ ನಾ. 1. ಕಣ್ಣಿದೆ, 2. ದೃಷ್ಟಿ ಇದೆ, 3. ಗಮನವಿದೆ. 1. having eyes, 2. having sight, 3. being focussed. ವಾ: ನಿನ್ನ ಮೇಲೆ ಒಂದ್ ಕಣ್ಣುಟು.

ಕಣ್ಣ್‌ಕತ್ತಲೆ ಆದೆ /*kaṇṇikɘttalɛ a:dɛ*/ ನಾ. 1. ತಲೆತಿರುಗುತ್ತಿದೆ, 2. ಕಣ್ಣು ಕತ್ತಲಾದಂತೆ ಆಗುತ್ತಿದೆ. 1. feeling dizzy, 2. blinded. ವಾ: ಹಿಡ್ಕನೆ ನಂಗೆ ಕಣ್ಕತ್ತಲೆ ಆದೆ.

ಕಣ್ಣ್‌ಕಳ್ಳ /*kaṇṇɨ kaḷḷa*/ ನಾ. ಕಣ್ಣು ರೆಪ್ಪೆಯಲ್ಲಿ ಏಳುವ ಸಣ್ಣವ ಕುರ. Styes caused by infection of the eyelash follicle. ವಾ: ಕಣ್ಣ್‌ಕಳ್ಳ ಪಾಂಡಿಬೊಳ್ಳಿ ಸೊಪ್ಪುನ ಮೊದ್ದ್‌ಲಿ ಗುಣಾದೆ.

ಕಣ್ಣ್‌ಕೊಡ್ಡು /*kaṇṇikoḍḍu*/ ನಾ. ಬೇಟೆಯಲ್ಲಿ ಲೈಟ್ ಬೆಳಕಿಗೆ ಪ್ರಾಣಿಗಳು ಗಮನಕೊಟ್ಟು ಬೆಳಕನ್ನೇ ನೋಡಿ ನಿಲ್ಲುವುದು. blinding effect on animals. ವಾ: ಬೇಟೆಲಿ ಲೈಟ್‌ಗೆ ಮ್ರುಗಂಗ ಕಣ್ಣ್‌ಕೊಡ್ಡು ನೋಡಿದ್ ಗುಂಡಿ ಹೊಡಿದು.

ಕಣ್ಣ್‌ಗೆ ತುಪ್ಪ ತುಂಬಿಟು /*kaṇṇigɛ tuppa tumbiṭu*/ ನಾ. ಕಣ್ಣು ಕಾಣೋದಿಲ್ವ ಎಂಬ ಮಾತನ್ನು ವ್ಯಂಗ್ಯ ವಾಗಿ ಕೇಳುವುದು. asking if one couldn't see (sarcasm). ವಾ: ಹೆಂಗೆ ಮೆಟ್ಟಿಕಂಡ್ ಹೋದು ಕಣ್ಣ್‌ಗೆ ತುಪ್ಪ ತುಂಬಿಟು ಕಂಡದೆ.

ಕಣ್ಣ್‌ಗೆ ಹಬ್ಬ /*kaṇṇigɛ habba*/ ನಾ. 1. ಸುಂದರ ಕ್ಷಣ, 2. ನೋಡಲು ಸುಂದರ. 1. a beautiful moment, 2. a beautiful sight. ವಾ: ದಸರ ನೋಡ್ದೆ ಕಣ್ಣ್‌ಗೆ ಹಬ್ಬ.

ಕಣ್ಣ್‌ನ ಕೀಂಜ್ /*kaṇṇina ki:ŋjɨ*/ ನಾ. 1. ಪಿಸರು, 2. ಗೀಜು. rheum. ವಾ: ಉಷ್ಣಾದರೆ ಕಣ್ಣ್‌ಲಿ ಕೀಂಜ್ ಬಂದದೆ.

ಕಣ್ಣ್‌ನ ಚೂಡು /*kaṇṇina cu:ḍu*/ ನಾ. 1. ಕಣ್ಣಿನ ಬೆಂಕಿ, 2. ತೀಕ್ಷ್ಣ ನೋಟ. 1. to express anger using eyes 2. a sharp sight. ವಾ: ಗಲಾಟೆ ಮಾಡ್‌ತಿದ್ದ ಮಕ್ಕ ಮಾಸ್ಟರ ಕಣ್ಣ್ ನ ಚೂಡು ನೋಡಿ ಸುಮ್ಮನೆ ಕುದ್ದೊ.

ಕಣ್ತರೆ /*kaṇtarɛ*/ ನಾ. 1. ಬಾವಿಗೆ ಹಗ್ಗದಿಂದ ರಾಟೆ ಮೂಲಕ ಬಿಂದಿಗೆ ಇಳಿಸಿ ನೀರು ಸೇದುವುದು, 2. ಸೇದುಬಾವಿ. a well. ವಾ: ಕಣ್ತರೆಂದ ನೀರ್ ಹೊರುದು.

ಕಣ್ಮಂಗ /*kaṇmaŋga*/ ನಾ. 1. ಕಂದಕ, 2. ಅಗರು, 3. ಗಡಿ ಗುರುತಿಗಾಗಿ ಅಥವಾ ಬೇಲಿಗಾಗಿ ತೆಗೆಸುವ ಆಳವಾದ ಕಣಿ. 1. a ditch 2 a canal, 3. a trench built to mark the boundary. ವಾ: ಬೇಲಿ ಹಾಕಿಕೆ ಕಣ್ಮಂಗ ತೆಗೆದು.

ಕಣ್ರೆಪ್ಪೆ /*kaṇrɛppɛ*/ ನಾ. 1. ಕಣ್ಣಿನ ರೆಪ್ಪೆ, 2. ಕಣ್ಣೆವೆ, 3. ರೆಪ್ಪೆಗೂದಲು. 1. eyelid, 2. eye lind, 3. eye lashes. ವಾ: ಕಣ್ರೆಪ್ಪೆ ಕಣ್ಣ್‌ನ ರಕ್ಷಣೆಗೆ ಇರ್‌ದು.

ಕಣ್‌ಸನ್ನೆ /*kaṇṇa ka:pi*/ ನಾ. 1. ಖಾಲಿ ಕಾಫಿ-ಕಪ್ಪು

ಕಾಫಿ, 2. ಹಾಲು ಬೆರಕೆ ಮಾಡದ ಕಾಫಿ. black coffee. ವಾ: ಹೊತಾರೆ/ಬೊಳ್ಪಿಗೆ ಕಣ್ಣಕಾಪಿ ಕುಡ್ದರೆ ಯದಾ ಆದು.

ಕಣ್ಲೆ /*kaɳ̣ɭɛ*/ ನಾ. 1. ಕಣಿಲೆ, 2. ಎಳೆಯ ಬಿದಿರು. bamboo shoot. ವಾ: ಕಣ್ಲೆ ಲಿ ವಾಟೆ ಕಣ್ಲೆ, ಬಿದ್‌ರ್ ಕಣ್ಲೆತ ಎರ್‌ಡ್ ತರದ್ ಉಟ್ಟು.

ಕಣ್ಲೆ ಉಪ್ಪನಕಾಯಿ /*kaɳ̣ɭɛ uppanaka:yi*/ ನಾ. ಎಳೆಬಿದಿರಿನ ಉಪ್ಪಿನಕಾಯಿ. bamboo shoot pickle. ವಾ: ಮಳೆಗಾಲಲಿ ಕಣ್ಲೆ ಉಪ್ಪನಕಾಯಿ ತಿನಕ್.

ಕಣ್ಲೆ ಗೈಪು /*kaɳ̣ɭɛ gaipu*/ ನಾ. ಎಳೆ ಬಿದಿರಿನಿಂದ ಮಾಡಿದ ಸಾರು. bamboo curry/soup/stew. ವಾ: ರೊಟ್ಟಿಗೆ ಕಣ್ಲೆ ಗೈಪು ಲಾಯ್ಕ್.

ಕತಂಗೆ /*kataŋgɛ*/ ನಾ. ಹಾಗೆಯೇ. in that way/like that. ವಾ: ಎಲ್ಲರ ಕತ್ತಂಗೆ ಇರೊಕು, ಅಂತ ಕಳ್ಳರ ಕತ್ತಂಗೆ ಮಾಡ್ಲೆ.

ಕತೆಗ /*katɛga*/ ನಾ. 1. ಕಥೆಗಳು, 2. ಹೇಳಿಕೆ, 3. ನಡೆದ ಅಥವಾ ಕಲ್ಪಿತವಾದ ಸಂಗತಿ, 4. ವಿವರವಾದ ಸಂಗತಿ, 5. ಪ್ರಸಂಗ. 1. stories, 2. statements, 3. imagined situations, 4. detailed situations, 5. an event. ವಾ: ಒಳ್ಳೊಳ್ಳ ಕತೆಗಳ ಹೇಳುವೆ ನಮ್ಮವ್ವ. ಪ: ಕತೆಗ ಒಳ – ಕತೆಗಳು ಇವೆ; ಕತೆಂತ – ಕತೆಯೆಂದು; ಕತೆನೆ – ಕತೆಯೆ; ಕತೆನ – ಕತೆಯ; ಕತೆಕಟ್ಟಿತ್ – ಕತೆ ಕಟ್ಟಿದನು/ಳು; ಕತೆಗೊತ್ತುಟ್ಟ – ಕತೆಗೊತ್ತಿದೆಯಾ?

ಕತ್ತರಮನೆ /*kattaramanɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕತ್ತರ್ಸ್ /*kattarsɨ*/ ನಾ. 1. ಕತ್ತರಿಸು, 2. ಭಾಗ ಮಾಡು, 3. ತುಂಡುಮಾಡು. 1. to cut, 2. to make something into parts, 3. to cut into pieces. ವಾ: ಸೊರೆಕಾಯಿನ ಕತ್ತರ್‌ಸ್. ಪ: ಕತ್ತರಿಸಕಾದು – ಕತ್ತರಿಸಬಹುದು

ಕತ್ತಲೆ /*kattalɛ*/ ನಾ. ರಾತ್ರಿ. night. ವಾ: ಹೊರೆಗೆ ಕರಿ ಕತ್ತಲೆ. ಪ: ಕತ್ತಲಾಕನ – ಕತ್ತಲಾಗುವಾಗ; ಕತ್ತಾಲೆ – ಕತ್ತಲೆ; ಕತ್ತಲೆವರೆಗೆ – ರಾತ್ರಿಯವರೆಗೆ. **ಕತ್ತಲೆ ಆತ್** /*kattalɛ a:tɨ*/ ರಾತ್ರಿ ಆಯಿತು. the coming of night. ವಾ: ಕತ್ತಲೆ ಆತ್ ನೀ ಇನ್ನ್ ಹೊರ್‌ಡ್. ಪ: ಕತ್ತಲೆಗೆ – ಕತ್ತಲೆಗೆ; ಕತ್ತಲೆಗೆಲ್ಲ – ಕತ್ತಲೆಗೆಲ್ಲ; ಕತ್ತಲೆನ – ಕತ್ತಲೆಯನ್ನು; ಕತ್ಲ್ – ಕತ್ತಲೆ. **ಕತ್ತಲ್ಯಾಗಿ** /*kattalya:gi*/ ಕತ್ತಲಾಗಿ. falling of darkness/ night fall. ವಾ: ಕತ್ತಲ್ಯಾಗಿ ಹೋಗುಟು. **ಕತ್ತಾಲೆ ಮುಟ್ಟ** /*katta:ɭɛ muʈʈa*/ 1. ರಾತ್ರಿವರೆಗೆ, 2. ರಾತ್ರಿಯ ತನಕ. until the night. ವಾ: ಕತ್ತಾಲೆ ಮುಟ್ಟ ಪಾರ ಕಾಯಕೆ ನನ್ನಂದ ಆಕಿಲೆ.

ಕತ್ತಿ /*kɘtti*/ ನಾ. ಕತ್ತಿ. a knife. **ಕಡಿಯಕಾಗದ ಕತ್ತಿ ಕೈಲಿ ಇದ್ದರೇನ್(ಗಾ). ಸತ್ತ ಹಕ್ಕಿ ಮರ ಹತ್ತಿದೆ – ಕತ್ತಿ(ಒ).** ವಾ: ಕತ್ತಿನ ಹರ್‌ತ ಮಾಡೊಕು. ಪ: ಕತ್ತಿಗಡಿ – ಕತ್ತಿಯ ಗಾಯ. **ಕತ್ತಿ ಕೊಟ್ಟತ್** /*kɘatti koʈʈatɨ*/ ಕತ್ತಿಯನ್ನು ಕೊಟ್ಟನು/ಳು. he/she gave the knife. ವಾ: ಅವುಳ ಕೈಗೆ ಕತ್ತಿಕೊಟ್ಟತ್. ಪ: ಕತ್ತಿಕೊಟ್ಟಿಯಾ – ಕತ್ತಿ ಕೊಡುತ್ತೀಯಾ?; ಕತ್ತಿಟ್ಟು – ಕತ್ತಿ ಇದೆ; ಕತ್ತಿಂತ – ಕತ್ತಿಅಂತ, ಕತ್ತಿ ಎಂದು; ಕತ್ತಿನೂ – ಕತ್ತಿಯನ್ನೂ; ಕತ್ತಿಲಿ – ಕತ್ತಿಯಲ್ಲಿ

ಕತ್ತಿ ಅರ್ಕೆ /*kɘtti arkɛ*/ ನಾ. ಕುಡುಗೋಲುಗಳನ್ನು ಇಡುವ ಸಾಧನ. an equipment where a sickle is placed. ವಾ: ಕತ್ತಿನ ಕತ್ತಿ ಅರ್‌ಕೆಲಿ ಸೆಕ್ಕಿಸಿ ಇಸ್.

ಕತ್ತಿ ಕೂಡ್ಸುದು /*kɘtti ku:ḍsudu*/ ನಾ. 1. ಕತ್ತಿ ಸಾಣೆ ಹಿಡಿಯುವುದು, 2. ಕತ್ತಿ ಹರಿತಮಾಡುವುದು. 1. hone the knife, 2. sharpen the knife. ವಾ: ನಾಳೆ ತೋಟಕೆ ಹೋಕಲ ಅದಿಕೆ ಕತ್ತಿ ಕೂಡ್ಸುದು.

ಕತ್ತಿ ನೇಕೆ /*kɘtti ne:kɛ*/ ನಾ. ಕತ್ತಿಯನ್ನು ಸಿಕ್ಕಿಸಿಡುವುದಕ್ಕೆ ಹೇಳುವುದು. hanging the knife. ವಾ: ಕತ್ತಿಗಳ ಕತ್ತಿನೇಕೆಲೆ ಸೆಕ್ಕಿಸಿರೆ ಹುಡ್‌ಕೊ ಕೆಲ್‌ಸ ಕಮ್ಮಿ ಆದೆ.

ಕತ್ತಿ ಮೊಸಿ /*kɘtti mɔsi*/ ನಾ. 1. ಹಗೆತನ ಸಾಧಿಸು, 2. ದ್ವೇಷ ಸಾಧಿಸು, 3. ವೈರತ್ವ. 1. being hostile, 2. to remain vindictive, 3. enmity. ವಾ: ಅಂವ ಕಾರಣ ಇಲ್ಲದೆನೆ ಸುಮ್ಮನಾರ್ ನಮ್ಮ ಮೇಲೆ ಕತ್ತಿಮೊಸ್ದದೆ.

ಕತ್ತಿ ಮೊಸೆಕೆ /*kɘtti mɔsekɛ*/ ನಾ. 1. ಕತ್ತಿ ಹರಿಮಾಡಲು, 2. ಕತ್ತಿ ಸಾಣೆ ಹಿಡಿಯಲು. 1. to hone the knife, 2. to sharpen the knife. ವಾ: ಕತ್ತಿ ಮೊಸೆಕೆ ಹೋವ್ವು. ಪ: ಕತ್ತಿಮಸೆಯೊಕೆ – ಕತ್ತಿಹರಿಮಾಡಲು; ಕತ್ತಿಮೊಸಿ – ಕತ್ತಿ ಹರಿತ ಗೊಳಿಸು

ಕತ್ತಿ ಮೊಸ್ದದೆ /*kɘtti mɔsdadɛ*/ ನಾ. ಹಗೆ/ದ್ವೇಷ

ಸಾಧಿಸುತ್ತಾನೆ/ಳೆ. being hostile, vengeful, vindictive. ವಾ: ಅಂವ ಅಂದ್‌ಂದಿತ್ತ ನನ್ನೊಟ್ಟಿಗೆ ಕತ್ತಿ ಮೊಸ್ಟದೆ.

ಕತ್ತಿಬೆಡಿ /*kɘttibeḍi*/ ನಾ. ಕತ್ತಿ ಮತ್ತು ಕೋವಿ ಬೇಟೆ ಅಥವಾ ಯುದ್ಧಕ್ಕೆ ಹೋಗುವ ತಯಾರಿ. a prepartaion for hunting or war. ವಾ: ಗೌಡ್ರ ಲಾಂಛನಲಿ ಕತ್ತಿಬೆಡಿ ಇದ್ದದೆ.

ಕತ್ತೆ /*kattɛ*/ ನಾ. 1. ಕತ್ತೆ, 2. ಒಂದು ಪ್ರಾಣಿ. a donkey. **ಕತ್ತೆ ಕೆಟ್ರೆ ಪಾಳ್ ಮನೆ ಹೆಣ್ಣ್ ಕೆಟ್ರೆ ತವುರು ಮನೆ ಹಾಳ್(ಗಾ). ಕತ್ತೆಗೆ ಪ್ರಾಯ ಆದಂಗೆ(ನು).** ವಾ: ಕತ್ತೆಗೇನ್ ಗೊತ್ತು ತಾನ್ ಹೊತ್ತ ಕಸ್ತೂರಿನ ಪೊರ್‌ಮಳ?

ಕತ್ತೆ ಅರ್ಚುದು /*kattɛ arcudu*/ ನಾ. ಕತ್ತೆ ಕೂಗುವುದು. bray, a loud an an unpleasant sound produced by a donkey. ವಾ: ಕತ್ತೆ ಅರ್ಚುದು ಕೇಳಿಕಾದುಲೆ.

ಕತ್ರ /*katra*/ ನಾ. ಕತ್ತರಿ. scissors. ವಾ: ಅರ್ವೆನ ಕತ್ರಲಿ ಕತ್ರ್ ಸುದು.

ಕತ್ರಿ /*katri*/ ನಾ. 1. ಕತ್ತರಿ, 2. ಕತ್ತರಿಸುವುದಕ್ಕಾಗಿ ಉಪಯೋಗಿಸುವ, ಇಕ್ಕುಳದ ಆಕಾರದಲ್ಲಿ ಎರಡು ಅಲಗುಗಳನ್ನು ಹೊಂದಿಸಿರುವ ಒಂದು ಸಾಧನ. a pair scissors. ವಾ: ಕತ್ರಿಲಿ ಕೂದೊಲು ಕತ್ರ್‌ಸ್ವೆ.

ಕತ್ರಿಕೊಲ್ಲಿ /*katrikolli*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕತ್ರಿಬೆಕ್ಕ್ /*katri bɛkki*/ ನಾ. ಪುನುಗು ಬೆಕ್ಕು, ನೆಲಬೆಕ್ಕು. civet. ವಾ: ಕತ್ರಿಬೆಕ್ಕ್‌ನ ಹಿಂದೆನವು ತಿಂಬೊತ್ತಿದ್ದೊ.

ಕತ್ರಿಮನೆ /*katrimanɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕತ್ರಿರ /*katrira*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕತ್ರುಸು /*katrusu*/ ಕ್ರಿ. ಕತ್ತರಿಸು. to cut. ವಾ: ಕಾಡ್ ಬೊಳ್ಳಿನ ಕತ್ರುಸು. **ಕತ್ರುಸುದು** /*katrusudu*/ ಕತ್ತರಿಸುವುದು. to cut. ವಾ: ನೀರುಳಿನ ಅಗ್ರಣೆ ಹಾಕಿಕೆ ಕತ್ರುಸುದು.

ಕತ್ಲಡ್ಕ /*katlaḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಐವರ್ನಾಡು ಗ್ರಾಮದ ಜಾಗ. a locality in Aivarnadu village in Sullia Taluk of Dakshina Kannada District.

ಕದಂಬಲ /*kadambala*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕದಳಿ ಬಾಳೆ /*kadaḷi ba:ḷɛ*/ ನಾ. 1. ಹೂ ಬಾಳೆ, 2. ಏಲಕ್ಕಿ ಬಾಳೆ. kadali banana/plantain. ವಾ: ಕದಳಿ ಬಾಳೆನ ಪೂಜೆಗೆ ಮಡ್ಗುದು.

ಕದಿ[1] /*kɘdi*/ ನಾ. ಭತ್ತದ ರಾಶಿಯಲ್ಲಿ ಇರುವ ಕಸ. waste matter in a heap of paddy. ವಾ: ರಾಗಿ ಹೊಡಿನ ವಂಚಿರೆ ಕದಿ ಸಿಕ್ಕಿದೆ.

ಕದಿ[2] /*kɘdi*/ ಕ್ರಿ. 1. ಕಳವು ಮಾಡು, 2. ಕಳ್ಳತನ ಮಾಡು, 3. ಅಪಹರಿಸು, 4. ಕದಿಯು. 1. steal, 2. act of stealing, 3. to abduct, 4. to steal. **ಆನೆ ಕದ್ದರು ಕಳ್ಳನೆ ಅಡಿಕೆ ಕದ್ದರೂ ಕಳ್ಳನೆ(ಗಾ).** ವಾ: ಕದೆವ ಬುದ್ದಿ ಇರಿಕಾಗದ್. ಪ: ಕದಿಯಕೆ – ಕದಿಯಲು. **ಕದೆಕೆ** /*kɘdɛkɛ*/ 1. ಕದಿಯಲಿಕ್ಕೆ, 2. ಕಳ್ಳತನ ಮಾಡಲಿಕ್ಕೆ. to steal. ವಾ: ಹಣ್ಣ್ ಕದೆಕೆ ಹೋದೆ ಸಿಕ್ಕಿತ್ಲೆ. **ಕದಿದು** /*kadi:du*/ 1. ಕದಿಯುವುದು, 2. ಕಳ್ಳತನ ಮಾಡುವುದು. stealing. ವಾ: ಈ ಜೆನ ಏನೇ ಆದರೂ ಕದಿದು ಮಾತ್ರ ಬುಡ್ದುಲೆ. ಪ: ಕದೆದು. **ಕದ್‌ಕದ್** /*kadikadi*/ 1. ಕದ್ದು ಕದ್ದು, 2. ಅವಿತು, 3. ಅಡಗಿ, 3. ಮರೆಯಲ್ಲಿ. hiding. ವಾ: ಕದ್ ಕದ್ ಎಂತರ ನೋಡ್ದು. **ಕದ್ದವೆ** /*kaddavɛ*/ ಕದಿಯುತ್ತಾರೆ. they will/may steal. ವಾ: ಬೆಂಡನೆಲ್ಲ ಯಾರೋ ಕದ್ದವೆ. ಪ: ಕದ್ಕಂಡ್ – ಕದ್ದುಕೊಂಡು; ಕದ್ದನೆ – ಕದಿಯುತ್ತೇನೆ; ಕದ್ದಂವ – ಕದ್ದಿರುವವ; ಕದ್ಸಿನೆ – ಕದಿಸುತ್ತೇನೆ. **ಕದ್ದ್** /*kaddi*/ 1. ಕದ್ದು, 2. ಕಳ್ಳತನ ಮಾಡಿ, 3. ಕಳವು ಮಾಡಿ. to steal. ವಾ: ಕದ್ದ್ ತಿಂದ್ ಯಾರೂ ಉದ್ದಾರಾಕಿಲೆ.

ಕದಿಕಡ್ಕ /*kadikaḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಜಾಲ್ಸೂರು ಗ್ರಾಮದ ಜಾಗ. a locality in Jalsuru village in Sullia Taluk of Dakshina Kannada District.

ಕದಿರು /*kadiru*/ ನಾ. ಭತ್ತದ ತೆನೆ. paddy spike/ear of paddy. ವಾ: ಹುತ್ತೆರಿ ಹಬ್ಬಲಿ ಕದಿರು ಕೊಯ್ದವೆ.

ಕದ್ದ್‌ಗಾರ /*kɘddiga:ra*/ ನಾ. ಮೀನಿನ ಬಗೆಗಳು. varieties of fishes. ವಾ: ಕದ್ದ್‌ಗಾರ ಮೀನ್‌ನ ನೋಡಿಯೊಳನ?

ಕದ್ವಂಜಿ /*kɘdpaŋji*/ ನಾ. ತಲೆಗೆ ಸ್ನಾನ ಮಾಡಲು ಬಳಸುವ ಲೋಳೆಯ ಅಂಶವಿರುವ ಸಸ್ಯ. soapnut. ವಾ: ಕದ್ವಂಜಿಲಿ ತಲೆ ತೊಳ್‌ದವೆ.

ಕದ್ಪುದು /*kɘdpudu*/ ನಾ. 1. ವಟಗುಟ್ಟು, 2. ಒಂದೇ ಸಮನೆ ಮಾತನಾಡು, 3. ಕಪ್ಪೆ ಮೊದಲಾದವು ಸದ್ದು ಮಾಡು. 1. to talk all the time 2. to talk continuously, 3. croaking sound of frogs. ವಾ: ಎಂತರ ಹಂಗೆ ಅವುಳು ಕದ್ಪುದು.

ಕದ್ರ್ ಬಾತ್ /*kɘdri ba:ti*/ ನಾ. ಭತ್ತ ಕದಿರು ಬೆಳೆದು ಬರುವುದು. a mature ear of paddy. ವಾ: ಈ ಸರಿ ಲಾಯ್ಕಲಿ ಕದ್ರ್ ಬಾತ್.

ಕದ್ರ್[1] /*Kɘdiri*/ ನಾ. ಫಲಭರಿತ ತೆನೆ. a spike/an ear full of grains. ವಾ: ಈ ಸರ್ತಿ ಕದ್ ಲಾಯ್ಕುಟ್ಟು.

ಕದ್ರ್[2] /*kɘdri*/ ನಾ. ಭತ್ತದ ತೆನೆ. ear of paddy. ವಾ: ಬೆಳೆ ಕದ್ರ್ ಹೋವುಟು. ಪ: ಕದ್‌ರ್ – ಬತ್ತದ ತೆನೆ

ಕದ್ರ್‌ಗುತ್ತಿ /*kɘdri gutti*/ ನಾ. ಧಾನ್ಯದ ತೆನೆಗುತ್ತಿ. tip in the ear of paddy. ವಾ: ಹುತ್ತೆರಿ ಹಬ್ಬಲಿ ಕದ್ರ್ ಕೊಯ್ದ್ ಕದ್ರ್ ಗುತ್ತಿಲಿ ಹಾಕಂಡ್ ಬಾದು.

ಕನ /*kana*/ ನಾ. 1. ಕನಸು, 2. ಸ್ವಪ್ನ. dream. ವಾ: ಬೊಳ್ಪುಗೆ ಬೀಳೊ ಕನ ನಿಜ ಆದೆಗಡ.

ಕನಕಮಜಲು /*kanakamajalu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕನಕಮಜಲು ಗ್ರಾಮದ ಜಾಗ. a locality in Kanakamajalu village in Sullia Taluk of Dakshina Kannada District.

ಕನರ್ /*kɘnari*/ ನಾ. ಒಗರು ರುಚಿ. bitter. ವಾ: ಹಣ್ಣ್ ಕನರ್ ಬಂದದೆ. ಪ: ಕನಾರ್; ಕನೇರ್ – ಒಗರು

ಕನಿಕರ /*kɘnikara*/ ಕ್ರಿವಿ. 1. ಅನುಕಂಪ, 2. ಸಹಾನುಭೂತಿ, 3. ಮರುಕ. sympathy. ವಾ: ಮೊನ್‌ಸಂಗೆ ಕನಿಕರ ಇರೊಕು.

ಕನಿಕರಪಳ್ಳ /*kanikarapaḷḷa*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಸುಳ್ಯ ನಗರದ ಜಾಗ. a locality in Suḷya Nagara village in Sullia Taluk of Dakshina Kannada District.

ಕನು /*kɘnu*/ ನಾ. ಜೀರ್ಣಾಂಗ. liver. ವಾ: ಕೋಳಿದ್ ಕಣುನ ಗೈಪುಗೆ ಹಾಕಿದರ್ಯಾ.

ಕನ್‌ಕಾಂಬರ ಹೂವ್ /*kɘni ka:mbara hu:vi*/ ನಾ. ಕನಕಾಂಬರ ಹೂ. Firecracker Flower. ವಾ: ಕನ್‌ಕಾಂಬರ ಹೂವ್ ಮುಡ್ದರೆ ಬೇಗ ಬಾಡ್ತುಲೆ, ಅದ್‌ನ ಎರ್‌ಡ್ ಮೂರ್ ದಿನ ಮುಡಿಯಕ್.

ಕನ್ಕ್‌ನೀರ್ /*kɘnki ni:ri*/ ನಾ. 1. ಕೊಳಕು ನೀರು, 2. ರಾಡಿ ನೀರು. dirty water. ವಾ: ಬಿಂದಿಗೆಗೆ ಕನ್ಕ್ ನೀರ್ ತುಂಬುಸ್ ಬಡ.

ಕನ್‌ಗುಂಡ್ /*kalluṇḍu*/ ನಾ. ಕೋಳಿಯ ಜಠರ. intestine of hen. ವಾ: ಕನ್‌ಗುಂಡ್ ಎಡೆ ಹಾಕಿಕೆ ಬೇಕ್.

ಕನ್ತ್ /*kɘnti*/ ನಾ. 1. ಮುಳುಗು, 2. ಚುಚ್ಚು. 1. to drown, 2. to pierce. ವಾ: ಜೇನ್ ನೊಣ ಮುತ್ತಿಕಂಡ್ ಕನ್ತಿದೊ.

ಕನ್ನ /*kɘnna*/ ನಾ. 1. ಕಿಂಡಿ, 2. ತೂತು, 3. ಕಳ್ಳತನ ಮಾಡು, 4. ಗೋಡೆಯಲ್ಲಿ ಕೊರೆಯುವ ಕಂಡಿ. 1. a hole, 2. an aperture, 3. to steal, 4. to make a hole in the wall to steal. **ಅನ್ನ ಕೊಟ್ಟ ಮನೆಗೆ ಕನ್ನ ಹಾಕಿದಂಗೆ(ಗಾ).** ವಾ: ಕಳ್ಳ ಮನೆಗೆ ಕನ್ನ ಹಾಕಿತ್.

ಕನ್ನಡಕ /*kɘnnaḍaka*/ ನಾ. 1. ಕನ್ನಡಕ, 2. ಚಾಳೀಸು. spectacles. ವಾ: ಕನ್ನಡಕ ಹಾಕಿರೆ ಮಾತ್ರ ಓದಿಕೆ ಬರೆಕೆ ಕಾಂಬೊದು. ಪ: ಕನ್ನಡ್ಕ – ಚಾಳೀಸು

ಕನ್ನಡ್ಕ /*kannaḍka*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕನಕಮಜಲು ಗ್ರಾಮದ ಜಾಗ. 1. family, 2. lineage, 3. a locality in Kanakamajalu village in Sullia Taluk of Dakshina Kannada District.

ಕನ್ನಾಜೆ[1] /*kɘnna:jɛ*/ ನಾ. ಕೃಷಿ ಕಾರ್ಯಗಳಲ್ಲಿರುವ ಮನೆಗಳಲ್ಲಿ ಕತ್ತಿಗಳನ್ನು ಸಿಕ್ಕಿಸಿ ಇಡಲು ಬಿದಿರಿನಿಂದ ಮಾಡಿದ ಸಾಧನ. a rack in which one keeps knives used in agriculture. ವಾ: ಕನ್ನಾಜೆಲಿ ಕತ್ತಿಗಳ ಸೆಕ್ಕಿಸಿ ಇಸುದು.

ಕನ್ನಾಯ /*kanna:ya*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕನ್ನಿಕಂಬ /*kɘnni kamba*/ ನಾ. ಐನ್‌ಮನೆಯ ಚಾವಡಿಯಲ್ಲಿರುವ ಕಂಬ. a sacred pillar in the drawing room of Ainmane (ancestral house

of Gowdas and Kodava). ವಾ: ಐನ್ ಮನೆಲಿ ಕನ್ನಿಕಂಬನ ನೋಡಕ್.

ಕನ್ನಿಕೋಂಬರೆ /*kənniko:mbarɛ*/ ನಾ. 1. ಐನ್‌ಮನೆಗಳಲ್ಲಿ ಕನ್ನಿಕಂಬವಿರುವ ಕೋಣೆ, 2. ಐನ್‌ಮನೆಯಲ್ಲಿ ಗೌಡರು, ಕೊಡವರು ಶುಭ ಕಾರ್ಯ, ದೇವತಾ ಕಾರ್ಯಗಳನ್ನು ನೆರವೇರಿಸುವ ದೇವರ ಕೋಣೆ. 1. a courtyard where one can see the sacred pillar. ವಾ: ಕನ್ನಿಕೋಂಬರೆನ ಸುದ್ದಲಿ ಇಸೊಕು.

ಕನ್ನಿಗೂಡೆ[1] /*kənni gu:ḍɛ*/ ನಾ. 1. ಅಪ್ರಾಪ್ತೆ. a minor girl. ವಾ: ಕನ್ನಿಗೂಡೆ ಬಾತಲ.

ಕನ್ನಿಗೂಡೆ[2] /*kənnikamba*/ *kənnɛkamba*/ ನಾ. ಐನ್‌ಮನೆಗಳಲ್ಲಿ ಶುಭಕಾರ್ಯಗಳ ಆರಂಭಕ್ಕೆ ಮುನ್ನ ದೇವರಿಗೆ ದೀಪ ಇರಿಸುವ ಸ್ಥಳದಲ್ಲಿ ಸ್ಥಾಪಿಸುವ ಹಲಸಿನ ಮರದ ಶಿವಲಿಂಗದಂತಹ ಕಂಬ. a sacred pillar in Ainmane. ವಾ: ಐನ್ ಮನೆಗಳ್‌ಲಿ ಕನ್ನಿಕಂಬ ನೋಡಿಕೆ ಸಿಕ್ಕುದು.

ಕನ್ನಿಬೊಳ್ಳಿ /*kənnibo[l̤]i*/ ನಾ. ಬೈನೆ ಮೊದಲಾದ ಮರಗಳ ಕಾಯಿಗಳ ಗೊಂಚಲಿನ ಸುತ್ತ ಜೋತಾಡುತ್ತಿರುವ ಗಟ್ಟಿಯಾದ ಬಳ್ಳಿ, a hanging fruit stalk from the toddy palm tree. ವಾ: ಮೊಡ್ವಾಳೆ ಮೊಡೆಕನ ಕನ್ನಿಬೊಳ್ಳಿ ಬೇಕ್.

ಕನ್ನು ಗುಂಡು /*kənnu gunḍu*/ ನಾ. ಗುಲ್ಮಗ್ರಂಥಿ. spleen.

ಕನ್ನೆ /*kannɛ*/ ನಾ. 1. ಕನ್ಯೆ, 2. ಹುಡುಗಿ. a girl. ವಾ: ಪೂಜೆ ಮಾಡಿಕೆ ಕನ್ನೆ ಗೂಡೆನೆ ಆಕು.

ಕನ್ನೆಟಿ /*kannɛṭi*/ ನಾ. 1. ಕನ್ನಡಿ, 2. ದರ್ಪಣ. a mirror. **ಕಣ್ಣ್ ಮನ್ಸದ್ ಕನ್ನೆಟಿ?(ಗಾ).** ವಾ: ಕನ್ನೆಟಿಲಿ ದೂಳ್ ಕುದ್ದುಟು ಅದ್‌ನ ಪೂಜಿ ತೆಗಿ. ಪ: ಕನ್ನೆಟಿ ನೋಡಿ – ಕನ್ನಡಿಯನ್ನು ನೋಡಿ. **ಕನ್ನೆಡಿ** /*kannɛḍi*/ ವಾ: ಅವುಳು ಕನ್ನೆಡಿಲಿ ಆಗಾಗ ಮೋರೆ ನೋಡಿಕಂಬದು.

ಕನ್ಯಾನ /*kanya:na*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮಂಡೆಕೋಲು ಗ್ರಾಮದ ಜಾಗ. a locality in Mandekolu village in Sullia Taluk of Dakshina Kannada District.

ಕನ್ಸ್ /*kansi*/ ನಾ. 1. ಸ್ವಪ್ನ, 2. ಕನಸು. dream. **ಕನ್ಸ್‌ಗ ಇಲ್ಲದವು ನೆನ್ಪುಗಳಿಗೆ ಜೋತು ಬಿದ್ದಂಗೆ(ಗಾ). ಕನ್ಸ್‌ಲಿ ಬಾಳೆಹಣ್ಣ್ ತಿಂದಾಂಗೆ(ನು).** ವಾ: ಆಟಿ ತಿಂಗಳ್‌ಲಿ ಕೆಟ್ಟ ಕನ್ಸ್ ಬೀಳ್‌ದು. ಪ: ಕನಸಲೂ – ಕನಸಿನಲ್ಲೂ; ಕನ್ಸ್‌ಸ್ ಕಟ್ಟಿತ್ – ಕನಸು ಕಟ್ಟಿತ್ತು

ಕಪ[1] /*kapa*/ ನಾ. 1. ಗಂಟಲು ದ್ರವ, 2. ದಪ್ಪನೆಯ ಎಂಜಲು, 3. ಕಫ. savila, 3. phlegm. ವಾ: ಕಪ ಇದ್ದರೆ ಆಗಾಗ ಸೀತ ಆದು.

ಕಪ[2] /*kapa*/ ನಾ. 1. ಕಫ, 2. ಶರೀರದ ಮೂರು ಧಾತುಗಳಲ್ಲಿ (ವಾತ, ಪಿತ್ತ, ಕಫ) ಒಂದು ಶ್ಲೇಷ್ಮ. saliva, 2. phlegm. ವಾ: ಎದೆಲಿ ಕಪ ಕಟ್ಟಿಟು.

ಕಪಟು /*kapaṭu*/ ಎಪ. ಕಪಾಟು. cupboard. ವಾ: ಕಪಟುಲಿ ಅರ್ವೆಗಳ್‌ನ ಇಸಿದ್.

ಕಪಾಟ್ /*kapa:ṭɨ*/ ಎಪ. ಕಪಾಟು. a cupboard. ವಾ: ಕಪಾಟ್‌ಲಿ ಅರ್ವೆ ಉಟ್ಟು ನೋಡಿ.

ಕಪಾತ್ /*kapa:tɨ*/ ನಾ. ಅಲಂಕಾರಕ್ಕಾಗಿ ಬೆಳೆಸುವ ಗಿಡಗಳನ್ನು ಓರಣವಾಗಿ ತುಂಡರಿಸುವುದು. to prune the plants. ವಾ: ಕಾಪಿ ದೈನ ಕಪಾತ್ ಆಕು.

ಕಪಾತ್‌ಕತ್ತಿ /*kapa:tɨ kətti*/ ನಾ. 1. ಕತ್ತಿಯ ಒಂದು ಬಗೆ, 2. ಗಿಡದ ಚಿಗುರು ತೆಗೆಯುವ ಕತ್ತಿ. 1. a variety of knife, 2. a knife to cut the shoot/ sprout. ವಾ: ಕಪಾತ್‌ಕತ್ತಿ ಹರ್‌ತ ಇಲ್ಲೆ.

ಕಪಾಲ /*kapa:la*/ ನಾ. 1. ಕಪಾಳ, 2. ಗಲ್ಲ, 3. ಕೆನ್ನೆ, 4. ಕಪೋಲ. cheek. ವಾ: ಕಪಾಲಕೆ ಒಂದ್ ರಪ್‌ತ ಬುಟ್ಟತ್.

ಕಪಿ /*kapi*/ ನಾ. 1. ಮಂಗ, 2. ಮರ್ಕಟ, 3. ಕೋತಿ. a monkey. ವಾ: ಕಪಿಗ ಬಾಳೆನ ಕಂಡರೆ ಮನಾರ ಮಾಡಿವೆ.

ಕಪಿಲೆ /*kapilɛ*/ ನಾ. 1. ಬಿಳಿ ಜಾತಿಯ ಹಸು, 2. ಕಂದು ಬಣ್ಣದ ಹಸು. a white cow. ವಾ: ಕಪಿಲೆಗಳ ಕೊಟಗೆಗೆ ಕೂಡ್‌ಸಕಾಯ್ತ್.

ಕಪ್ಪಲ್ /*kappalɨ*/ ನಾ. ಅಗಲ ಬಾಯಿಯ ಪಾತ್ರೆ. a wide mouthed vessel. ವಾ: ಕಪ್ಪಲ್ ಅಟ್ಟಲುಟ್ಟು.

ಕಪ್ಪುಡಿ /*kappuḍi*/ ನಾ. 1. ಕಪ್ಪಡಿ, 2. ಹರಕು ಅರಿವೆ ತೊಟ್ಟವನು, 3. ಕಾವಿಯ ಬಟ್ಟೆ. 1. rags, 2. torn clothes, 3. saffron clothes. ವಾ: ಕಪ್ಪುಡಿ ಬಾತ್.

ಕಪ್ಪೆ[1] /*kappɛ*/ ನಾ. 1. ಕಪ್ಪೆ, 2. ಉಭಯವಾಸಿ ಜೀವಿ.

1. a frog, 2. an amphibian. **ಹಾರ್‌ರೆ ಹನುಮಂತ, ಕುದ್ದರೆ ಮುನಿ, ಮರ್ಟರೆ ಕಾಡ್ – ಕಪ್ಪೆ(ಒ).** ವಾ: ಕಪ್ಪೆ ಕೂಂಗಿರೆ ಮಳೆ ಬಂದದೆಗಡ.

ಕಪ್ಪೆ^{2} /*kappɛ*/ ನಾ. ಗುಪ್ತಾಂಗ. vagina.

ಕಪ್ಪೆ ಕೋಲು /*kappɛ ko:lu*/ ನಾ. 1. ಬಿಲದಲ್ಲಿರುವ ಏಡಿಯನ್ನು ಹಿಡಿಯಲು ಉಪಯೋಗಿಸುವ ಕೋಲು ಇದರ ತುದಿಗೆ ಕಪ್ಪೆ, ಮರಿಮೀನು ಇತ್ಯಾದಿಗಳನ್ನು ಕಟ್ಟಿ ಬಿಲದ ಬಾಗಿಲಿಗೆ ಹಿಡಿದಾಗ ಏಡಿ ಹೊರ ಬರುತ್ತದೆ, ಆಗ ತೆಂಗಿನ ಮರದ ಕಡ್ಡಿ ಉರುಳು ಮಾಡಿ ಏಡಿಯ ಕೊಂಡಿಗೆ ಹಾಕಿ ಎಳೆಯುತ್ತಾರೆ, 2. ಚೋಕುಲ ಹಾಕುವುದು. to put a stick attached with a frog or a tadpole as a bait near the burro in order to catch crabs. ವಾ: ಕಪ್ಪೆ ಕೋಲು ಹಾಕಿ ಎಸ್‌ಂಡ್‌ನ ಹಿಡೆದು. ಪ: ಚೋಕುಲ ಹಾಕುದು

ಕಪ್ಪೆ ಚಿಪ್ಪ್ /*kappɛ cippɨ*/ ನಾ. 1. ಕಪ್ಪೆಚಿಪ್ಪು, 2. ದೊಡ್ಡ ಸಿಂಪು. sea-shell. ವಾ: ಕಪ್ಪೆ ಚಿಪ್ಪ್ ಹೆರ್‌ಕಿಕಂಡ್ ಬಾನೊ.

ಕಪ್ಪೆ ತಕ್ಡಿ ಬುದ್ದಿ /*kappɛ takḍi buddi*/ ನಾ. ಕುತಂತ್ರಿ ಬುದ್ದಿ. a person with wicked mind. ವಾ: ಅಂವಂಗೆ ಬರಿ ಕಪ್ಪೆ ತಕ್ಡಿ ಬುದ್ದಿನೆ ಇರ್‌ದು.

ಕಪ್ಪೆ ನೊರೆ /*kappɛ norɛ*/ ನಾ. 1. ಕಪ್ಪೆಯ ನೊರೆ, 2. ಬುರುಗು. 1. frog foam, 2. foam. ವಾ: ಕಪ್ಪೆನೊರೆ ದೈದ ಸೆರೆಲೆಲ್ಲ ಅಂಟಿಕಂಡಿದ್ದದೆ.

ಕಪ್ಪೆ ಬರ್‌ಸಿನೆ /*kappɛ bərsinɛ*/ ನಾ. ತೋಳನ್ನು ಹಿಡಿದು ಎಳೆದಾಗ ತೋಳು ಉಬ್ಬಿ ಬಂದಾಗ, ತಮಾಷೆಗೆ ಆಟ ಆಡುವಾಗ ಹೇಳುವುದು. a twitch in the muscle in the form of frog. ವಾ: ನನ್ನ ಕೈಲಿ ಕಪ್ಪೆ ಬರ್‌ಸಿನೆ ನೋಡಿಗ.

ಕಪ್ಪೆ ಹಾರ್ದು /*kappɛ ha:rdu*/ ನಾ. ಕಪ್ಪೆ ಹಾರುವ ಆಟ. frog jump-a race. ವಾ: ಇಸ್ಕೂಲ್‌ಲಿ ಕಪ್ಪೆ ಹಾರ್‌ದು ಆಟ ಆಡ್ಸಿದೊ.

ಕಪ್ಪೆಕಣ್ಣ್ /*kappɛkaṇṇɨ*/ ನಾ. 1. ಸೀಮೆ ಅಕ್ಕಿ, 2. ಸಬ್ಬಕ್ಕಿ. sago. ವಾ: ಕಪ್ಪೆಕಣ್ಣ್ ನ ಪಾಯ್‌ಸ ಮಾಡಿಕನ ಹಾಕಿವೆ.

ಕಪ್ಪೆಲಾಗ /*kappela:ga*/ ನಾ. ಜನಪದ ಆಟ. a folk game. ವಾ: ಮಕ್ಕಳಿಗೆ ಕಪ್ಪೆಲಾಗ ಓಟ ಉಟ್ಟುಗಡ.

ಕಪ್ಪ್ /*kappɨ*/ ನಾ. 1. ಕಪ್ಪು ಬಣ್ಣ, 2. ಕರಿಯ ಬಣ್ಣ. black colour. **ಹಸ್ ಕಪ್ಪಾದ್ರೆ ಹಾಲ್ ಕಪ್ಪಾದೆನ(ಗಾ).** ವಾ: ಕಪ್ಪ್ ತ ಹಂಗ್ಸಿಕಾಗದ್.

ಕಬರ್ /*kabarɨ*/ ನಾ. ಕವಲು. a branch. ವಾ: ದೈ ಕಬರ್ ಒಡ್ದುಟು. **ಕಬರ್ ಕೋಲು** /*kabarɨ ko:lu*/ 1. ಆಧಾರಕೋಲು, 2. ಮಾಡಿನ ಮಧ್ಯದಲ್ಲಿ ಆಧಾರಕ್ಕಾಗಿ ಕೊಡುವ. 1. a column (pilaster), 2. a column – a pillar. ವಾ: ಮನೆದ್ ಮಾಡ್‌ಲಿ ಕಬರ್‌ಕೋಲುನ ಆದಾರಾಗಿ ಕೊಟ್ಟವೆ.

ಕಬರ್ ಗೆಣ್ಸ್ /*kabarɨ gɛṇsɨ*/ ನಾ. ಕವಲೊಡೆದ ಗೆಣಸು. branched out sweet potato/tuber. ವಾ: ಕಬರ್ ಗೆಣ್ಸ್ ಸಿಕ್ಕಿತ?

ಕಬರ್ ಬೊಳಿ /*kabarɨ bɔḷi*/ ನಾ. ಒಂದು ಗೋತ್ರದ ಹೆಸರು. a lineage. ವಾ: ಕಬರ್ ಬೊಳಿಯವು ಮೂಲತಃ ರಾಜವಂಸದವುಗಡ.

ಕಬಳಾಡಿ /*kabaḷa:ḍi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಮರಪಡ್ನೂರು ಗ್ರಾಮದ ಜಾಗ. a locality in Amarapadnuru village in Sullia Taluk of Dakshina Kannada District.

ಕಬಿಲೆ /*kabilɛ*/ ನಾ. ಕಪಿಲವರ್ಣದ ದನ. a tawny coloured ox. ವಾ: ಕಬಿಲೆ ಹಟ್ಟಿಗೆ ಬಾತ?

ಕಬಿಲ್ಚಿ /*kabilci*/ ನಾ. 1. ಕಪಿಲವರ್ಣದ ಹಸು, 2. ಕಪಿಲೆ. a tawny coloured cow. ವಾ: ಕಬಿಲ್ಚಿನ ಮೇಸಿಕೆ ಹೋದು.

ಕಬುರು /*kaburu*/ ನಾ. ಸೀಳುವುದು. to split. ವಾ: ಬಾಳೆನಾರ್ ನ ಕಬುರು ಮಾಡಿ ಹಾಕ್.

ಕಬುರ್ ಸಿಡಿ /*kaburɨ siḍi*/ ನಾ. ಕವಡೆಗಳನ್ನು ಬಳಸಿ ಮಾಡಿದ ಸಿಡಿ. made of cowrie. ವಾ: ಕಬುರ್ ಸಿಡಿ ಹಾಕಿರೆ ಎಂತಾರ್ ಸಿಕ್ಕುದು.

ಕಬುಲ್ತಿ /*kabulti*/ ನಾ. ಕಬಿಲ್ಚಿ. a tawny coloured cow. ವಾ: ಕಬುಲ್ತಿನ ಹಟ್ಟಿಗೆ ಹೊಡ್‌ಕಂಡ್ ಬರಕಾಗಿತ್ತ್.

ಕಬೆ /*kabɛ*/ ನಾ. ಕವೆಗೋಲು;(ಮುಳ್ಳು, ಹುಲ್ಲು ಮೊದಲಾದುವುಗಳನ್ನು ಎತ್ತಿ ಸಾಗಿಸಲು ಉಪಯೋಗಿಸುವ) ಕವಲುಗೋಲು. 1. a pitchfork, 2. a forked or lateral branch. ವಾ: ನಾಕ್ ಕಡೆ ಕಬೆ ಹಾಕಿ ಬಸ್ಲೆಗೆ ಚಪ್ಪರ ಹಾಕಿರಾದು. ಪ: ಕವಟೆ – ಕವಣೆಗಳಿರುವ ಕೋಲು

ಕಬ್‌ಚ /*kabɨca*/ ನಾ. ಮರದ ಗೂಟ. wooden peg. ವಾ: ಕಬ್‌ಚಲಿ ದನನ ಕಟ್ಟುದು.

ಕಬ್ಬಿಣ ನೇಗ್‌ಲ್ /*kabbiṇa nɛ:gɨlɨ*/ ನಾ. ಕಬ್ಬಿಣದ ನೇಗಿಲು. iron ploughshare. ವಾ: ಕಬ್ಬಿಣ ನೇಗ್‌ಲ್ ಬಂದುಟಾ?

ಕಬ್ಬಿನಡ್ಕ /*kabbinaḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮರ್ಕಂಜ ಗ್ರಾಮದ ಜಾಗ. a locality in Markanja village in Sullia Taluk of Dakshina Kannada District.

ಕಬ್ಬೆಕ್ಕ್ /*kabbɛkkɨ*/ ನಾ. 1. ಕಬ್ಬೆಕ್ಕು, 2. ಕಾಡುಬೆಕ್ಕು, 3. ಅಡವಿಬೆಕ್ಕು. a wild cat. ವಾ: ಕಂಬೈನ ಉಟ್ಟ್‌ಕ.

ಕಬ್ಬೆತ್ /*kabbɛtɨ*/ ನಾ. ಗದ್ದೆಯಲ್ಲಿ ಬೆತ್ತ ಚುಚ್ಚುವುದು. to post a cane in the paddy field. ವಾ: ಗದ್ದೆಲಿ ಕಬ್ಬೆತ್ ಹಾಕಿದೊ.

ಕಬ್ಬ್‌ಣ /*kabbɨṇa*/ ನಾ. 1. ಕಬ್ಬಿಣ, 2. ಲೋಹ, 3. ಕಬ್ಬೊನ್. 1. iron, 2. metal. ವಾ: ಕಬ್ಬ್‌ಣದ ಬಾಗ್‌ಲ್‌ನ ಎಳೆಕೆ ಬೊತ್ತ್.

ಕಮಂಗಿ /*kamaŋgi*/ ನಾ. ಕೋಡಂಗಿ. a joker/a clown. ವಾ: ಯಾಗೊಲು ಕಮಂಗಿನಂಗೆ ಆಡ್ದುತ.

ಕಮಾನ್ /*kama:nɨ*/ ನಾ. ಕಮಾನು ಆಕಾರದ. in the shape of an arch. ವಾ: ದೇಸ್ತಾನದ ಮುಂದೆ ಕಮಾನ್ ಕಟ್ಟ್ಯೊಳೊ.

ಕಮಾನ್ ಬೀಲ್ಸೊದ್ /*kama:nɨ bi:lsodɨ*/ ನಾ. ಭತ್ತದ ದಂಡೆ. bunch/cluster of paddy.

ಕಮಾಯಿ /*Kama:yi*/ ನಾ. 1. ಗಳಿಕೆ, 2. ಸಂಪಾದನೆ. earning. ವಾ: ಈಗೀಗ ಕಮಾಯಿ ಜೋರು ಕಂಡದೆ.

ಕಮಿಲ /*kamila*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಗುತ್ತಿಗಾರು ಗ್ರಾಮದ ಜಾಗ. 1. family, 2. lineage, 3. a locality in Guttigaru village in Sullia Taluk of Dakshina Kannada District.

ಕಮ್ಚಿ /*kamci*/ ಕ್ರಿ. 1. ತಲೆ ಕೆಳಗಾಗಿ, 2. ಕವುಚಿ. 1. upside down, 2. keeping something facing downward. ವಾ: ತಾಂಬ್ರದ ಕೊಡ್‌ಪಾನನ ಕಮ್ಚಿಡ್. **ಕಮ್ಚಿ ಹಾಕ್** /*kamci ha:kɨ*/ ಕವುಚಿ ಇಡು. to put something facing downward. ವಾ: ತಪಲೆನ ಕಮ್ಚಿ ಹಾಕ್. **ಕಮ್ಚಿಮಲ್ಗ್** /*kamcimalgɨ*/ ಹೊಟ್ಟೆ ಕೆಳಗೆ ಬೆನ್ನು ಮೇಲೆ ಮಾಡಿ ಮಲಗು. Prone position, lying flat on one's stomach. ವಾ: ಕೂಸುನ ಕಮ್ಚಿ ಮಲ್ಗ್‌ಸಿ.

ಕಮ್‌ಟೆಕಾಯಿ /*kamɨṭɛ ka:yi*/ ನಾ. 1. ಕವಟೆಕಾಯಿ, 2. ಕಹಿ ರಸವನ್ನು ನೀಡುವ ಸೌತೆಕಾಯಿ ಜಾತಿಯ ಬಳ್ಳಿಯಲ್ಲಿ ಬಿಡುವ ಸಣ್ಣ ಕಾಯಿ. colocynth, bitter apple, bitter cucumber. **ಕಮ್‌ಟೆ ಕಾಯಿಲಿ ಸಿಹಿ ಹುಡ್ಕಿದಂಗೆ(ಗಾ).** ವಾ: ಕಮ್‌ಟೆಕಾಯಿ ಬಾರಿ ಕಂಯಿ. ಪ: ಕೌಂತೆಕಾಯಿ, ನುರ್ತಂಗ(ತು)

ಕಮ್ಮ /*kamma*/ ನಾ. 1. ಕಂಪು, 2. ಸುವಾಸನೆ, 3. ಸುಗಂಧ, 4. ಪರಿಮಳ, 5. ಘಮಘಮಿಸು, 6. 1. fragrance, 2. scent, 3. aroma, 4. ambrosia, 5. fragrant. ವಾ: ಮಲ್ಲಿಗೆ ಹೂದ್ ಕಮ್ಮ ಅಸ್ಟ್ ದೂರಕೆ ಬಂದದೆ. **ಕಮ್ಮನೆ** /*kammanɛ*/ 1. ಕಂಪಿನಿಂದ, 2. ರುಚಿಯಿಂದ ಕೂಡಿದ, 3. ಸುವಾಸನೆಯಿಂದ ಕೂಡಿದ. good smell. ವಾ: ದೊರೆ ಹಣ್ಣ್ ಬಾರಿ ಕಮ್ಮನೆ ಹಣ್ಣ್.

ಕಮ್ಮಾರ /*kamma:ra*/ ನಾ. 1. ಕಬ್ಬಿಣದ ಕೆಲಸ ಮಾಡುವವ, 2. ಕೊಲ್ಲ. a blacksmith. **ಕಮ್ಮಾರನ ಮನೆಲಿ ಸೂಜಿ ಸಿಕ್ಕಿಕಿಲೆ(ಗಾ).** ವಾ: ಕಮ್ಮಾರನ ಹುಡ್‌ಕಿಕಂಡ್ ಬಂದೊ.

ಕಮ್ಮಿ /*kammi*/ ನಾ. ಕಡಿಮೆ. less/few. ವಾ: ದೈಗಳಿಗೆ ಸೆಗ್‌ಣಿ ಗೊಬ್ಬರ ಹಾಕಿದ್ ಕಮ್ಮಿ ಆತ್. ಪ: ಕಮ್ಮಿತ – ಕಡಿಮೆಯೆಂದು; ಕಡಿಮೆ ಅಂತ. **ಕಮ್ಮಿಟ್ಟು** /*kammiṭṭu*/ ಕಡಿಮೆ ಇದೆ. less/few. ವಾ: ಒಂದ್ ಎಕರೆಗೆ ಇಪ್ಪತ್ ಸೆಂಟ್ ಕಮ್ಮಿಟ್ಟು.

ಕಮ್ಮಿ ಹಾಕ್ /*kammi ha:kɨ*/ ಕ್ರಿ. 1. ತಲೆಕೆಳಗಾಗಿ ಇಡು, 2. ಕವಚಿ ಹಾಕ್. upside down. ವಾ: ಆ ಪಾತ್ರನ ಕಮ್ಮಿ ಹಾಕ್.

ಕಮ್ಮಿರೊಕು /*kammiroku*/ ನಾ. ಕಡಿಮೆ ಇರಬೇಕು. should be less. ವಾ: ಅವುಕೆ ಜಾಗೆ ನಮಿಗಿಂತ ಕಮ್ಮಿರೊಕು.

ಕಮ್ಮು /*kammu*/ ನಾ. ಅಡಿಕೆ ಮರ. areca nut palm. ವಾ: ಕಮ್ಮುಗೆ ಹತ್ತಿದ್. **ಕಮ್ಮು ಬುಡ** /*kammu buḍa*/ ಅಡಿಕೆಮರದ ಬುಡ. stem of areca palm. ವಾ: ಕಮ್ಮು ಬುಡನ ಕೆರ್‌ದ್ ಮನಾರ ಮಾಡಕಿತ್. **ಕಮ್ಮುನ ಸೋಗೆನ ಕಡ್ಡಿ** /*kammuna sɔ:gɛna kɘḍḍi*/

ಅಡಿಕೆಮರದ ಗರಿಯ ಕಡ್ಡಿ. sticks from areca leaf. ವಾ: ಕಮ್ಮುನ ಸೋಗೆನ ಕಡ್ಡಿನ ಹೆರ್‌ಕುದು.

ಕಮ್ಯೂನಿಸ್ಟ್ /*kamyu:nisṭi*/ ನಾ. 1. ಗಾಂದಿ ಗುಲಾಬಿ ಗಿಡ, 2. ಕಳೆ ಗಿಡ. Siam Weed, Christmas Bush, Devil Weed. ವಾ: ಅದೊಂದ್ ಕಳೆ ದೈ, ಗುಲಾಬಿತನೂ ಕರ್‌ದವೆ.

ಕಯಿ /*kayi*/ ನಾ. 1. ಕೈ, 2. ಹಸ್ತ, 3. ಕರ. hand. ವಾ: ಬೇನೆ ಕಯಿನ ಎತ್ತ್ ನೋಡ್‌ನೊ.

ಕಯಿಂಪೆ /*kayimpɛ*/ ನಾ. 1. ಪಿತ್ತ ಜನಕಾಂಗ, 2. ಪಿತ್ತಕೋಶ, 3. ಯಕೃತ್ತು, 4. ಲಿವರ್. liver. ವಾ: ಕೋಳಿ ಸಜ್ಜಿ ಮಾಡಿಕನ ಕೈಂಪೆ ಜಾಗ್ರತೆಲಿ ತೆಗಿಯಕು.

ಕಯಿಲ /*kayila*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕಯ್ಪೆ /*kaypɛ*/ ನಾ. ಕಹಿ. bitter. ವಾ: ಕೈಬೇವ್ ರಸ ಕಯ್ಪೆನೆ ಇರ್‌ದು.

ಕಯ್ಪೆ ಕಳಿಯೊದು /*kaypɛ kaḷiyɔdu*/ ನಾವಿ. 1. ದುಃಖವನ್ನು ತೆಗೆಯುವುದು, 2. ಅಹಂಕಾರವನ್ನು ತೆಗೆಯುವುದು. 1. removing/expressing sorrow, 2. removing false pride. ವಾ: ಪೋಲಿಸ್ ಬೊಯ್ದ್ ಕಯ್ಪೆ ಕಳೆಯೊದು ಜಾಗ್ರತೆ.

ಕಯ್‌ಮೆ /*kaymmɛ*/ ನಾ. ಭತ್ತದ ತಳಿ. a variety of paddy. **ಏಣೇಲ್ ಬೆಳೆ ಕಯ್‌ಮೆ, ಸುಗ್ಗಿ ಬೆಳೆ ಅತಿಕರಯ.** ವಾ: ಏನೇಲ್ ಬೆಳೆ ಕಯ್‌ಮೆ. ಪ: ಕಯಮ್ಮೆ(ತು) **ಕಯ್ಮೆಕ್ಕಿ** /*kaymɛkki*/ ವಾ: ಕಯ್ಮೆಕ್ಕಿನ ನೋಡ್‌ದ? ಪ: ಕಯಮ್ಮೆ ಬಾರ್(ತು)

ಕಯ್ಯಾರೆ /*kayya:rɛ*/ ನಾ. ಕಯ್ಯಾರೆ. in person. ವಾ: ನಿನ್ನ ಕಯ್ಯಾರೆ ಕೊಡ್ ನೋಡ್ನೊ.

ಕಯ್ಯಾಲೆ /*kayya:lɛ*/ ನಾ. ಮನೆಯ ಮೆಟ್ಟಿಲುಗಳನ್ನು ಹತ್ತಿ ಬರುತ್ತಿದ್ದಂತೆಯೇ ಸಿಗುವ ಹಜಾರ. a drawing room. ವಾ: ಎಲ್ಲೊವು ಪಟ್ಟಾಂಗ ಬುಟ್ಕಂಡ್ ಕಯ್ಯಾಲೆಲಿ ಕುದ್ದೊಳೊ.

ಕಯ್ಯಾಳ್ /*kayya:ḷi*/ ನಾ. ಸಹಾಯಕ ಕರ್ಮಚಾರಿ. a assistant/helper. ವಾ: ಗಾರೆ ಕೆಲ್‌ಸಕೆ ಕಯ್ಯಾಳ್ ಬೇಕ್.

ಕರ[1] /*kara*/ ನಾ. ಕರು. a calf. ವಾ: ಕರನ ಹೊಡ್‌ಕಂಡ್ ಬಂದೊ.

ಕರ[2] /*kara*/ ನಾ. ಮಡಿಕೆ. a clay pot.

ಕರಂಗಲ್ಲು /*karaŋgallu*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ದೇವಚಳ್ಳ ಗ್ರಾಮದ ಜಾಗ. 1. family, 2. lineage, 3. a locality in Devacalla village in Sullia Taluk of Dakshina Kannada District.

ಕರಂಗಿಲಡ್ಕ /*karaŋgilaḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ದೇವಚಳ್ಳ ಗ್ರಾಮದ ಜಾಗ. a locality in Devacalla village in Sullia Taluk of Dakshina Kannada District.

ಕರಂಜಿ /*karaŋji*/ ನಾ. 1. ಕಪ್ಪು ಬಣ್ಣ, 2. ಕರಿ. black. ವಾ: ಗೂಡೆ ಕರಂಜಿಗಡ ಹೌದ?

ಕರಂಟಡ್ಕ /*karaŋṭaḍka*/ ನಾ. ಕೊಡಗು ಜಿಲ್ಲೆಯ ಪೆರಾಜೆ ಗ್ರಾಮದ ಜಾಗ. a locality in peraje village in of Kodagu District.

ಕರಂಟಿ /*karaŋṭi*/ ನಾ. 1. ಸೀದು ಹೋಗು, 2. ಸುಟ್ಟು ಹೋಗು, 3. ಕರಟು. burnt. ವಾ: ಸೊಪ್ಪ್ ಪಲ್ಯ ಕರಂಟಿ ಹೋತ್.

ಕರಂಟ್ /*karaŋṭi*/ ನಾ. ವಿದ್ಯುತ್. electricity. ವಾ: ಕರಂಟ್ ಹೋತು.

ಕರಂಡೆಕಾಯಿ /*karaŋḍeka:yi*/ ನಾ. ಉರುಟಾದ ಚಿಕ್ಕ ಕಾಯಿ. Carandas-plum. ವಾ: ಕರಂಡೆಕಾಯಿ ಉರ್‌ಟುಗಡ.

ಕರಂದ್ಲಾಜೆ /*karandla:jɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕರಂಬಿ /*karambi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕರಂಬು /*karambu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಐವತ್ತೊಕ್ಲು ಗ್ರಾಮದ ಜಾಗ. a locality in Aivattoklu village in Sullia Taluk of Dakshina Kannada District.

ಕರಂಬು ನೆಕ್ಕಿಲ /*karambu nekkila*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಐವತ್ತೊಕ್ಲು ಗ್ರಾಮದ ಜಾಗ. a locality in Aivattoklu village in Sullia Taluk of Dakshina Kannada District.

ಕರಂಬುಳಿ */karambuḷi/* ನಾ. ಬಚ್ಚಲು ಮನೆಯ ಒಲೆಯ ಮೇಲ್ಭಾವಣಿಯಲ್ಲಿ ಕರಿ ಹಿಡಿದಿರುವುದು. soot on the roof of bathroom. ವಾ: ಹೊಗೆಕಂಡಿಲಿ ಕರಂಬುಳಿ ಹಿಡ್ದುಟು.

ಕರಕರನ */karakarana/* ನಾ. 1. ಕುಟುಂಬ, 2. ಮನೆತನ. 1. family, 2. lineage.

ಕರಕೊಂಡ್ */karakoṇḍɨ/* ಕ್ರಿ. ಕರೆದುಕೊಂಡು. along with/together. ವಾ: ಚಿಕವನ ಕರಕೊಂಡ್ ಬಂದಿಯಾ?

ಕರಜನ */karajana/* ನಾ. ಒಡವೆ, ಬಟ್ಟೆ ಮೊದಲಾದವುಗಳನ್ನು ಸುರಕ್ಷಿತವಾಗಿಡಲು ಉಪಯೋಗಿಸುವ ಮುಚ್ಚಳವುಳ್ಳ ಮಣ್ಣಿನ ಅಥವಾ ಲೋಹದ ಪಾತ್ರೆ. An earthen or metal vessel with a lid to preserve jewels, clothes etc. ವಾ: ಕರಜನಲಿ ಅರ್ವೆ, ಚಿನ್ನನ ಇಸುದು.

ಕರಡಿ */karaḍi/* ನಾ. 1. ಭಲ್ಲೂಕ, 2. ಮೈತುಂಬ ಉದ್ದನೆಯ ಕೂದಲುಳ್ಳ ವನ್ಯ ಮೃಗ. a bear. ವಾ: ಕರಡಿ ನಾಡಿಗೆ ಬಾತ್.

ಕರಡಿ ಮರ */karaḍi mara/* ನಾ. ಮರಗಳ ವಿಧ. variety of trees. ವಾ: ಕರಡಿಮರತೇಳ್‌ದು ಒಂದ್ ಜಾತಿನ ಮರ. ಪ: ಕರ್‌ಡಿ ಮರ

ಕರಡಿಗೆ */karaḍiga/* ನಾ. 1. ಕುಂಕುಮ ಕರಡಿಗೆ, 2. ಚಿನ್ನದ ಕರಡಿಗೆ, 3. ಮುಚ್ಚಳ ಇರುವ ಚಿಕ್ಕ ಉರುಟಾದ ಪಾತ್ರೆ. 1. a casket to keep vermilion powder, 2. golden casket, 3. a round casket with a lid. ವಾ: ಕುಂಕುಮನ ಕರಡಿಗಲಿ ಹಾಕಿಸುದು.

ಕರಳ್ */karaḷɨ/* ನಾ. 1. ಕರುಳು. intestine. ವಾ: ಕೋಳಿ ಕರಳ್ ಹಾಕಿ ಮೀನ್ ಹಿಡ್ಯದು.

ಕರಾಟೆ ಪಿಜಿನ್ */kara:ṭɛ pijinɨ/* ನಾ. ಇವುಗಳು ಒಂದು ಜಾತಿಯ ಇರುವೆಗಳು. a variety of ant. ವಾ: ಕರಾಟೆ ಪಿಜಿನ್ ಗ ಸಾಲಾಗಿ ಹೋಗ್ತೊಳೊ.

ಕರಾಯ */kara:ya/* ನಾ. 1. ಕುಟುಂಬ, 2. ಮನೆತನ. 1. family, 2. lineage.

ಕರಾರ್ */kara:ri/* ನಾ. ಒಪ್ಪಂದ. an agreement. ವಾ: ಕಡೆಗೆ ಅವು ಕರಾರ್ ಮಾಡಿಕಂಡೊ.

ಕರಿ ಆತ್ */kɘria:tɨ/* ನಾ. 1. ಕಪ್ಪಾಗು, 2. ಕಪ್ಪು ಬಣ್ಣಕ್ಕೆ ತಿರುಗು. to turn black. ವಾ: ಬಿಸ್‌ಲ್‌ಲಿ ಆಡಿ ಆಡಿ ಮೈಕೈಯೆಲ್ಲ ಕರಿ ಆತ್.

ಕರಿ ಆದು */kɘria:du/* ನಾ. 1. ಕಪ್ಪು ಆಗುವುದು, 2. ಮಸಿ ಹಿಡಿಯುವುದು. 1. to turn black, 2. gathering of soot. ವಾ: ಸೊವುದೆ ಒಲೆಲಿ ಅಡ್‌ಗೆ ಮಾಡಿರೆ ಪಾತ್ರಗ ಕರಿ ಆದು. ಪ: ಕರಿಹಿಡಿದು – ಮಸಿ ಹಿಡಿಯುವುದು

ಕರಿ ಆಮೆ */kɘria:mɛ/* ನಾವಿ. ಕಪ್ಪು ಬಣ್ಣದ ಆಮೆ. black turtle. ವಾ: ಕರಿ ಏಮೆನ ನೋಡ್ಯೊಳನ.

ಕರಿ ಉಮ್ಮತ ಕಾಯಿ */kɘri ummata ka:yi/* ನಾವಿ. 1. ದತ್ತೂರ, 2. ಕರಿ ದತ್ತೂರಿ, 3. ಶಿವಪ್ರಿಯ ಗಿಡ, 4. ಕರಿ ಉಮ್ಮತ್ತಿ. Mexican prickly poppy, flowering thistle. ವಾ: ಕರಿ ಉಮ್ಮತ ಕಾಯಿದ್ ಕರಿ ಬೀಜಗ ವಿಸಗಡ.

ಕರಿ ಎಸ್‌ಂಡ್ */kɘri ɛsiṇḍi/* ನಾವಿ. ಕಪ್ಪು ಏಡಿ. mud crab/black crab. ವಾ: ಕರಿ ಎಸ್‌ಂಡ್‌ನ ಆಟಿ ತಿಂಗಳ್‌ಲಿ ನಮ್ಮ ಕಡೆ ಮಾರ್‌ತಿದ್ದವೆ.

ಕರಿ ಕಾಪಿ */kari ka:pi/* ನಾವಿ. 1. ಕಪ್ಪು ಕಾಫಿ, 2. ಹಾಲನ್ನು ಬೆರಸದಿರುವ ಕಾಫಿ. 1. black coffee, 2. coffee without milk. ವಾ: ಕೋಳಿ ಕರಳ್ ಹಾಕಿ ಮೀನ್ ಹಿಡ್ಯದು.

ಕರಿ ಕೆಸ */kari kɛsa/* ನಾವಿ. ಬಹಳ ರುಚಿಕರವಾದ ತಿನ್ನಲು ಯೋಗ್ಯವಾದ ಕಪ್ಪು ಬಣ್ಣದ ಕೆಸ. cocoyam (black). ವಾ: ಕರಿಕೆಸನ ಮನೆ ಕರೆಲಿ ನೆಟ್ಟ್ ಕಂಡರೆ ಆಗ್‌ತಾ ಇದ್ದದೆ.

ಕರಿ ಚಿಬ್ಬು */kari cibbu/* ನಾವಿ. 1. ಮಚ್ಚೆ, 2. ಬಂಗು, 3. ಒಂದು ರೀತಿಯ ಚರ್ಮ ರೋಗ. 1. a mole, 2. Melasma (skin pigmentation), 3. a skin disease. ವಾ: ಮೋರೆಲಿ ಕರಿಚಿಬ್ಬು ಬಂದುಟು. ಕರಿಯ ಸುಬ್ಬೊ(ತು)

ಕರಿ ಚೌಂಡಿ */kari cauṇḍi/* ನಾವಿ. ಚಾಮುಂಡಿ ದೇವಿ. 1. goddess Chamundi, 2. female goddess (Devi). ವಾ: ಕರಿ ಚೌಂಡಿಗೆ ಪೂಜೆ ಮಾಡೊಕು.

ಕರಿ ಜೀರಿಗೆ */kari ji:rigɛ/* ನಾವಿ. 1. ಕಪ್ಪು ಜೀರಿಗೆ, 2. ಕಾಳು ಜೀರಿಗೆ. cumin seeds. ವಾ: ಕರಿ ಜೀರಿಗೆನ ಮೊದ್ದಿಗೆ ಬಳ್‌ಸುವೆ. ಪ: ಕಾಲಜೀರಿಗೆ

ಕರಿ ತೊಳ್ಸಿ */kari toḷsi/* ನಾವಿ. 1. ಕಪ್ಪು ತುಳಸಿ, 2.

ಕೃಷ್ಣ ತುಳಸಿ. Black Tulasi (Basil). ವಾ: ನ್ಯಾವ್‌ಸ, ನೆಗ್‌ಡಿ, ಕಜ್ಜಿ, ಸೆಳಿಜೆರ, ವಾತರೋಗ, ರಕ್ತ ಸುದ್ದ ಮಾಡಿಕೆ ಎಲ್ಲದಕ್ಕು ಕರಿತೊಳ್ಸಿ ಎಲೆ, ಬೀಜ ಮತ್ತೆ ಬೇರ್‌ನ ಬಳ್‌ಸಕ್. ಪ: ಕರಿ ತೊಳ್ಸಿ ದೈ – ಕಪ್ಪು ತುಳಸಿ ದೈ

ಕರಿ ನೆಕ್ಕಿ /*kəri nɛkki*/ ನಾವಿ. 1. ಲಕ್ಕಿ ಗಿಡ, 2. ನೆಕ್ಕಿಗಿಡ, 3. ನೋಚಿ, 4. ನೆಕ್ಕಿಲಿ. Indian privet. ವಾ: ನೆಕ್ಕಿದೈಲಿ ಕರಿನೆಕ್ಕಿ, ಬೆಳಿ ನೆಕ್ಕಿತ ಎರ್‌ಡ್ ತರದ್ ಉಟ್ಟು, ಮೊದ್ದಿಗೆ ಕರಿನೆಕ್ಕಿನೆ ಒಳ್ಳೆದ್, ಕರಿನೆಕ್ಕಿ ಎಲೆದ್ ಹೊಗೆ ಹಾಕಿರೆ ಸೊಳ್ಳೆ, ನುಸಿ, ಕ್ರಿಮಿಗ ಸತ್ತವೆ.

ಕರಿಪಿಜಿನ್ /*kəri pijini*/ ನಾವಿ. ಕಪ್ಪು ಇರುವೆ. black ant. ವಾ: ಕರಿಪಿಜಿನ್ ಎಂತ ಮಾಡ್‌ದುಲೆ.

ಕರಿಬದ್ನೆ /*karibadnɛ*/ ನಾವಿ. ಕಪ್ಪು ಬಣ್ಣದ ಬದನೆ. aubergine (black eggplant/brinjal). ವಾ: ಕರಿ ಬದ್ನೆ ತಂದನಾ?

ಕರಿ ಬಾಳೆಮೊರಿ /*kəri ba:ḷɛmɔri*/ ನಾವಿ. ಹಾವಿನ ಹೆಸರು. a snake. ವಾ: ಕರಿಬಾಳೆಮೊರಿ ಹಾವ್‌ನ ಕಂಡದ್.

ಕರಿಬೊಳ್ಳಿ /*kəribɔḷḷi*/ ನಾವಿ. ಬೆತ್ತ ಚುಚ್ಚಲು ಬಳಸುವ ಬಳ್ಳಿ, a creeper.

ಕರಿಮರ /*kərimara*/ ನಾವಿ. ಕಾಡು ಮರ. a forest tree. ವಾ: ಕರಿ ಮರತೇಳ್‌ದು ಒಂದ್ ಕಾಡ್ ಮರ.

ಕರಿ ಮುಂಡೋಳಿ /*kəri muṇḍɔ:ḷi*/ ನಾವಿ. ಹಾವಿನ ಹೆಸರು. a snake. ವಾ: ಕರಿ ಮುಂಡೋಳಿ ಹಾವ್.

ಕರಿ ಹೊಡೆಯದು /*kəri hoḍɛyadu*/ ನಾ. ಮನೆಯೊಳಗಿನ ಧೂಳು, ಕಸ ತೆಗೆದು ಸ್ವಚ್ಛಗೊಳಿಸುವುದು. dusting. ವಾ: ಹುತ್ತೆರಿ (ಹುತ್ರಿ) ಹಬ್ಬಕೆ ಕರಿ ಹೊಡೆಯದು.

ಕರಿ[1] /*kəri*/ ನಾ. 1. ಬಾ ಎಂದು ಕರಿ, 2. ಕರೆಯೋಲೆ. to call someone. **ಕೆಲ್ಸಕ್ಕೆ ಕರಿಬೇಡ ಊಟಕ್ಕೆ ಮರಿಬೇಡ(ಗಾ).** ವಾ: ಅವರ್‌ನ ಕರಿ. ಪ: ಕರಿನಿ – ಕರೆಯಿರಿ; ಕರಿಯಕು – ಕರೆಯಬೇಕು; ಕರಿಯಕನ – ಕರೆಯುವಾಗ.

ಕರಿ[2] /*kəri*/ ನಾ. 1. ಕಪ್ಪು ಬಣ್ಣದ ಹುಡಿ, 2. ಮಸಿಹುಡಿ, 3. ಸೀಮೆಎಣ್ಣೆಯ ಕರಿ. 1. black powder, 2. powder of charcoal, 3. soot formed due to kerosine use. **ಅವ್ವ ಕರಿ, ಮಗ್ಳ್ ಬೆಳಿ, ಮೊಮ್ಮಗ್ಳ್ ಚಿನ್ನ – ಬೆಣ್ಣೆಗಾರ್ತಿ ಸೊಪ್ಪ್(ಒ).** ವಾ: ಕರಿನ ಮುಟ್ಟ್‌ಬಡ, ಕೈಗೆಲ್ಲ ಆದೆ. ಪ: ದೀಪದ ಕರಿ.

ಕರಿಂಗುತ್ತಿ /*kariŋgutti*/ ನಾ. ನಾಟಿ ಗದ್ದೆಯ ನಡುವೆ ನೆಡುವ ಕರಿಕಂಬ. a pillar erected in the middle of a paddy field. ವಾ: ನಾಟಿ ಗದ್ದೆನ ನಡುಲಿ ಕರಿಂಗುತ್ತಿ ನೆಟ್ಟವೆ.

ಕರಿಂತ /*karinta*/ ಕ್ರಿ. ಕರೆಯೆಂದು. asking someone to call. ವಾ: ಉಂಬಕೆ ಒಮ್ಮೆ ಅವರ ಕರಿಂತ.

ಕರಿಂಬಿಲ /*karimbila*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಎಡಮಂಗಲ ಗ್ರಾಮದ ಜಾಗ. a locality in Edamangala village in Sullia Taluk of Dakshina Kannada District.

ಕರಿಕರಿ /*kərikəri*/ ಅ. 1. ಸೀದು ಹೋಗು, 2. ಕರಕಲಾಗು. 1. burnt, 2. charred. ವಾ: ಎಂತರ ಹಿಂಗೆ ಕರಿಕರಿ ಮಾಡ್‌ದ್.

ಕರಿಕರಿಬಾತ್ /*kərikəriba:tɨ*/ ನಾವಿ. 1. ಒಲೆಯಲ್ಲಿ ಬೇಯುವ ಪದಾರ್ಥ, ಹಾಲು ಅಡಿಹಿಡಿದು ಸೀದು ಹೋದಾಗ ಬರುವ ವಾಸನೆ, 2. ಸೀದು ಹೋದ ವಾಸನೆ, 3. ಸುಡುಮಣ್ಣು ವಾಸನೆ. burnt smell. ವಾ: ಹಾಲ್ ಕಾದೋಗಿ ಕರಿಕರಿಬಾತ್.

ಕರಿಕೂಟಿ ಕತ್ತಲೆ /*kariku:ṭi kattalɛ*/ ನಾವಿ. 1. ಗಾಢ ಕತ್ತಲೆ, 2. ಅಂಧಕಾರ. 1. darkness, 2. think darkness. ವಾ: ಕರಿಕೂಟಿ ಕತ್ತಲೆಲಿ ಒಂದ್‌ಚೂರೂ ಕಾಂಬೊದ್ಲೆ. ಕರ್ಗೂಡಕತ್ತಲೆ(ತು)

ಕರಿಕೆ /*karikɛ*/ ನಾ. ಭಾಗಮಂಡಲ ಸಮೀಪದ ಗ್ರಾಮ, ಕೊಡಗು-ಕೇರಳದ ಗಡಿ. a village near Bhagamandala, in the border of Kodagu and Kerala. ವಾ: ಸುಳ್ಯಂದ ಬಾಗಮಂಡ್ಲಕೆ ಕರಿಕೆ ಆಗಿದ್ ಹೋಕೆ ಆದೆ.

ಕರಿಕ್ ಮುರಿಪ /*kərikɨ muripa*/ ನಾ. ವಿವಾಹದ ಹಿಂದಿನ ದಿನ ತರಕಾರಿಗಳನ್ನು ಕತ್ತರಿಸಿ, ವಿವಾಹಕ್ಕೆ ಸಿದ್ಧತೆ ನಡೆಸುವುದು, ವಿವಾಹಕ್ಕೆ ಸಂಪೂರ್ಣ ಸಿದ್ಧತೆ. preparation done one night before the day of wedding, by cutting vegetables. ವಾ: ಕರಿಕ್ ಮುರಿಪ ಎಲ್ಲ ಆತ್.

ಕರಿಕ್ಕಳ /*karikkaḷa*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಪಂಬೆತ್ತಾಡಿ ಗ್ರಾಮದ ಜಾಗ. a locality

in Pambettadi village in Sullia Taluk of Dakshina Kannada District.

ಕರಿದು /*karidu*/ ಕ್ರಿ. ಕರೆಯುವುದು. to call. ವಾ: ಅವು ನಮ್ಮ ಕರಿದು.

ಕರಿನಿಂತ /*karininta*/ ಕ್ರಿ. ಕರೆಯಿರಿ ಎಂದು. to call. ವಾ: ಅಳಿಯನ ಹಬ್ಬಕೆ ಕರಿನಿಂತ.

ಕರಿನೆ /*karinɛ*/ ಕ್ರಿ. 1. ಕರೆಯುವುದು, 2. ಕೂಗುವುದು (ಏಕವಚನ). 1. to call, 2. a loud calling. ವಾ: ಅಂವನ ಬೇಗ ಕರಿನೆ.

ಕರಿಬಡಿ /*karibaḍi*/ ಕ್ರಿ. 1. ಕರೆಯಬಾರದು, 2. ಕರೆಯಬೇಡಿ. don't call. **ಕೆಲ್ಸಕ್ಕೆ ಕರಿಬಡಿ, ಊಟಕೆ ಮರಿಬಡಿ(ಗಾ).** ವಾ: ಮೊಲ್‌ಗಿದವರ್‌ನ ಕರಿಬಡಿ.

ಕರಿಬೂತನ ಕೋಡಿ /*karibu:tana ko:ḍi*/ ನಾ. ಕೊಡಗು ಜಿಲ್ಲೆಯ ಪೆರಾಜೆ ಗ್ರಾಮದ ಜಾಗ. a locality in peraje village in of Kodagu District.

ಕರಿಬೆಲ್ಲ /*kɘribɛlla*/ ನಾ. ಕಪ್ಪುಬೆಲ್ಲ. black jaggery. ವಾ: ಕರಿಬೆಲ್ಲ ಹಾಕಿ ಕಾಪಿ ಕಾಸ್.

ಕರಿಮಣಿ ಬಿಚ್ಚೋಲೆ /*kɘrimaṇi bicco:lɛ*/ ನಾ. ಮದುವೆಯ ಶಾಸ್ತ್ರ ಹಾಗು ಶುಭ ಕಾರ್ಯಗಳಲ್ಲಿ ಬಳಸುವ ಒಣಗಿದ ತಾಳೆಎಲೆ, ಸಣ್ಣ ಕಪ್ಪು ಬಳೆ ಹಾಗು ಸಣ್ಣ ಕರಿಮಣಿಗಳ ಮಾಲೆ. a necklace made out of palmyra leaf, black bangles and black beads – worn on auspicious occasions. ವಾ: ಮೊದುವೆಲಿ ಕರಿಮಣಿ ಬಿಚ್ಚೋಲೆ ಬೇಕ್.

ಕರಿಮೀನ್ /*kɘrimi:nɨ*/ ನಾ. 1. ಕಪ್ಪು ಮೀನು, 2. ಹೊಳೆಗಳಲ್ಲಿ ಇರುವ ದೊಡ್ಡ ಜಾತಿಯ ಮೀನು. 1. blackfish, 2. a big freshwater fish. ವಾ: ಕರಿಮೀನ್ ಹೊಳೆಲಿ ಇದ್ದದೆ.

ಕರಿಮುಂಡ /*kɘrimuṇḍa*/ ನಾ. ಕರಿಮೆಣಸಿನ ಒಂದು ವಿಧ. a variety of black pepper. ವಾ: ಕರಿಮುಂಡ ಬೊಳ್ಳಿಲಿ ಮೆಣ್ಸ್ ಜೊಂಪೆ ಜೊಂಪೆ ಹಿಡ್ದೆ.

ಕರಿಮೊಣಿ /*kɘrimɔṇi*/ ನಾ. 1. ಕರಿಮಣಿ, 2. ಹೆಂಗಸರು ಕೊರಳಲ್ಲಿ ತಾಳಿಯ ಜೊತೆಗೆ ಧರಿಸುವ ಕಪ್ಪು ಬಣ್ಣದ ಸಣ್ಣ ಮಣಿಗಳು, 3. ಮಂಗಳಸೂತ್ರ. 1. Black beads, 2. a necklace of auspicious bead (black) worn by a married woman (Whose husband is alive), 3. a necklace/a chain used as a visual marker of a married woman. ವಾ: ಕುತ್ತಿಗೆಲಿ ಕರಿಮೊಣಿ ಇದ್ದರೆ ಮೊದ್ವೆ ಆದ್ ತ ಗೊತ್ತಾದೆ, ಕರಿಮೊಣಿ ಮುತ್ತೈದೆಯ ಲಕ್ಷಣ. ಪ: ಕರಿಮೊಣಿ ಮಾಲೆ. **ಕರಿಮೊಣಿತಾಲಿ** /*kɘrimɔṇita:li*/ ಕರಿಮಣಿ ಮತ್ತು ತಾಳಿ. The black beads and the golden pendant. ವಾ: ಕರಿಮೊಣಿತಾಲಿ ಮುತ್ತೈದೆಯ ಗುರ್ತ್.

ಕರಿಮೊಸಿ /*kɘrimɔsi*/ ನಾವಿ. 1. ಇದ್ದಲು, 2. ಆರಿದ ಕೆಂಡ. charcoal. ವಾ: ಕರಿಮೊಸಿನ ಗುಡ್ಡೆ ಹಾಕಿಡ್. ಪ: ಕರಿಮಸಿ

ಕರಿಮೋಡ /*kɘrimo:ḍa*/ ನಾ. ಕಾರ್ಮೋಡ. dark cloud. ವಾ: ಕರಿಮೋಡ ಆಕಂಡ್ ಬಂದದೆ ಮಳೆ ಉಟ್ಟಾತ?

ಕರಿಯ /*kɘriya*/ ನಾ. ಕಪ್ಪಗಿರುವವ. dark in complexion. ವಾ: ಕರಿಯತ ಯಾಕೆ ಕರೆದು.

ಕರಿಯ ಮರ /*Kɘriya mara*/ ನಾ. ಒಂದು ಜಾತಿಯ ಕಾಡು ಮರ. a forest tree. ವಾ: ಕರಿಯ ಮರತ ಕಾಡ್ ಮರ.

ಕರಿಯಕನ /*kɘriyakana*/ ನಾ. ಕರೆಯುವಾಗ. while calling. ವಾ: ಉಂಬಕೆ ಕರಿಯಕನ ಬಾಕೆನ್. ಪ: ಕರಿಯಕ್ಕನ – ಕರೆಯುವಾಗ; ಕರಿಯಕೆ – ಕರೆಯಲು; ಕರಿಯಕ್ಕೆ – ಕರೆಯುವುದಕ್ಕೆ; ಕರಿಯಕ್ಕೆನೂ – ಕರೆಯುವುದಕ್ಕೂ; ಕರಿವ – ಕರೆಯುವ; ಕರಿಯನ – ಕರೆಯುವ; ಕರಿಸ್ಸಿ – ಕರೆಸಿ; ಕರೀದು – ಕರೆಯುವುದು; ಕರೀದುಗಡ – ಕರೆಯುವುದಂತೆ; ಕರೀದು – ಕರೆಯುವುದು; ಕರೆಕಾಗಿತ್ – ಕರೆಯಬೇಕಾಗಿತ್ತು; ಕರೆಕೆ – ಕರೆಯುವುದಕ್ಕೆ; ಕರಿಯಕಾ

ಕರಿಯಕಾಕನ /*kariyaka:kana*/ ನಾ. ಹಸುವಿನ ಹಾಲು ಹಿಂಡುವ ಸಮಯ. the time of milking. ವಾ: ಕರಿಯಕಾಕನ ಬರೊಕು.

ಕರಿಯಡ /*kariyaḍa*/ ನಾ. ಯಕೃತ್ತು. liver. ವಾ: ಕೋಳಿ ಕರಿಯಡನ ಎಡೆ ಹಾಕುದು. ಪ: ಕರ್ನಡ, ಕರೆಡ, ಕರ್ಯಟ(ತು)

ಕರಿಯಣ ಹಣ್ಣ /*kariyaṇahaṇṇɨ*/ ನಾ. ಹೊಟ್ಟೆ

ನೋವಿಗೆ ಕೊಡುವ ನಾಟಿ ಔಷಧಿ. a native medicine for stomach pain/ailment.

ಕರಿಯಪ್ಪ /*kariyappa*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. masculine given name.

ಕರಿಯಮೂಲೆ /*kariyamu:le*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಜ್ಜಾವರ ಗ್ರಾಮದ ಜಾಗ. a locality in Ajjavara village in Sullia Taluk of Dakshina Kannada District.

ಕರಿಯುವೆ /*kariyuvɛ*/ ನಾ. ಕರೆಯುತ್ತಾರೆ. they are calling. ವಾ: ಅವು ನಿನ್ನ ಕರಿಯುವೆ.

ಕರಿಯೊದು /*kariyodu*/ ನಾ. ಸತ್ತವರನ್ನು ಅವರು ಸತ್ತು ಮೂರು ದಿನ ಕಳೆದ ನಂತರ ಸಮಾದಿಯೆದುರು ಕುಳಿತು ಕರೆಯುವುದು. a ritual calling – to call the dead back to life after three days of their death while sitting near to the tomb. ವಾ: ಸುದ್ದದ ದಿನ ಚೂಟ್‌ಕಳಲಿ ಕುದ್ದ್ ಸತ್ತವರ ಕರಿಯೊದು.

ಕರಿರಾಜ /*karira:ja*/ ನಾ. ಜನಪದ ಕತೆಗಳಲ್ಲಿ ಬರುವ ಒಬ್ಬ ರಾಜನ ಪಾತ್ರ. a king who is featured in folk stories. ವಾ: ಕರಿರಾಜ ಜನಪದ ಕತೆಗಳ್‌ಲಿ ಬರೊ ಒಬ್ಬ ರಾಜ.

ಕರಿರಾಯ /*karira:ya*/ ನಾ. 1. ಸ್ವಾಮಿ ವೆಂಕಟರಮಣನ ಎಡಬಂಟ, 2. ಕೆಂಚರಾಯ. lieutenant of god Venkataramana. ವಾ: ಹರಿಸೇವೆಲಿ ಕರಿರಾಯಂಗೆ ಬಲಿ ಕೊಡ್‌ದು.

ಕರೀದ್ /*kari:dɨ*/ ನಾವಿ. ಕಪ್ಪು ಬಣ್ಣದ. of dark complexion. ವಾ: ಅರೆಗಾಲಲಿ ಕರೀದ್ ಅರ್ವೆ ಹಾಕಿರೆ ಸೆಕೆ ಆದೆ.

ಕರು /*kɘru*/ ನಾ. 1. ಕರು, 2. ಹಸು, ಎಮ್ಮೆ ಮೊದಲಾದವುಗಳ ಮರಿ. a calf. ವಾ: ಹುಲ್ಲ್ ತಿಂಬಕೆ ಕರು ಬಂದದೆ. ಪ: ಕರುನ – ಕರುವನ್ನು

ಕರುಂಬಿ /*karumbi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಪಂಬೆತ್ತಾಡಿ ಗ್ರಾಮದ ಜಾಗ. a locality in Pambettadi village in Sullia Taluk of Dakshina Kannada District.

ಕರುಂಬುಳಿ /*kɘrumbuḷi*/ ನಾ. 1. ಕಪ್ಪಾಗಿ ತೊನೆಯಿಕ್ಕು 2. ಅಟ್ಟ ಬೆಸಗೆ ಅಡಿಯ ಮಸಿ. to blacken. ವಾ: ಬೆಸಗೆಂದ ಕರುಂಬುಳಿ ಬಿದ್ದದೆ.

ಕರುಣೆ /*kɘruṇɛ*/ ನಾ. 1. ಕರುಣೆ, 2. ದಯೆ, 3. ಅನುಕಂಪ. 1. compassion, 2. kindness, 3. sympathy. ವಾ: ಕರುಣೆ ಇಲ್ಲದ ಜೆನಗ ವಳೊ.

ಕರುಬುಟ್ಟ್ /*kɘrubuṭṭɨ*/ ನಾ. ಹಾಲು ಕರೆದು. milking. ವಾ: ಕರುಬುಟ್ಟ್ ಬಾಕನ ಹೊತ್‌ಉಗ್ಗಪ್ಪ್. ಪ: ಕರುಬುಟ್ಟತ್ಲೆ – ಹಾಲು ಕರೆದಿಲ್ಲ. **ಕರುಬುಡಿಕೆ** /*kɘrubuḍikɛ*/ ಹಾಲು ಕರೆಯಲು. to milk. ವಾ: ನಿಮಿಗೆ ಕರುಬುಡಿಕೆ ಉಟ್ಟಾ. ಪ: ಕರ್‌ಬುಡಡಿಕನ – ಹಾಲು ಕರೆಯುವಾಗ

ಕರುಬುಡ್ /*kɘrubuḍɨ*/ ನಾ. ಹಾಲು ಕರೆಯು. milking. ವಾ: ಹೊತಾರೆ ಮತ್ತೆ ಹಿಂಬೊತ್ತ್ ಎರ್‌ಡ್ ಸರ್ತಿ ಕರುಬುಡುದು. ಪ: ಕರುಬುಡ್ದು – ಹಾಲು ಕರೆಯುವುದು; ಕರ್ ಬುಡ್‌ದು – ಹಾಲು ಕರೆಯುವುದು; ಕರ್ ಬುಡ್ಕೆ – ಹಾಲು ಕರೆಯುವುದಕ್ಕೆ; ಕರ್ ಬುಟ್ಟ್ – ಹಾಲುಕರೆದುಕೊಂಡು; ಕರ್‌ಬುಡಿಕನ – ಹಾಲು ಕರೆಯುವಾಗ; ಕರ್‌ಬುಟ್ಟ್ – ಹಾಲುಕರೆದು; ಕರ್‌ಬುಡ್‌ಕನ – ಹಾಲುಕರೆಯುವಾಗ; ಕರ್‌ಬುಡುವ – ಹಾಲುಕರೆಯುವ

ಕರೆ ತೋಟ /*karɛ to:ṭa*/ ನಾ. 1. ಹೊಳೆ ಬದಿಯಲ್ಲಿ, 2. ಗದ್ದೆ ಬಿಟ್ಟು ಬೇರೆ ಕಡೆ ತರಕಾರಿ ಬೆಳೆಸುವುದು. 1. on the river bank, 2. growing vegetable in other place other than a field. ವಾ: ಕರೆ ತೋಟಲಿ ತರ್‌ಕಾರಿ ಬೆಳ್‌ಸುದು.

ಕರೆ^{1} /*karɛ*/ ನಾ. 1. ಬದಿ, 2. ಅಂಚು. 1. side, 2. edge. **ಬರೆಕರೆ ಮನೆ ಬೇಡ, ಹೊಳೆ ಕರೆ ಗದ್ದೆ ಬೇಡ(ಗಾ).** ವಾ: ಸೀರೆ ಕರೆನ ಹೊಲಿಯೊಕು. ಪ: ಕರೆ ಮಾಡಿಕೆ – ಒಂದು ಬದಿಯಲ್ಲಿ ಹಾಕಲು; ಕರೆಂದ – ಬದಿಯಿಂದ; ಕರೆಲಿ – ಬದಿಯಲ್ಲಿ; ಕರೇಲೆ – ಬದಿಯಲ್ಲೆ. **ಕರೆ ಬುಟ್ಟ್‌ಕಂಡ್** /*karɛ buṭṭikaṇḍɨ*/ ಬಟ್ಟೆಯ ಅಂಚು ಬಿಟ್ಟುಕೊಂಡು ಬರುವುದು. border of the cloth getting seperated. ವಾ: ಸೀರೆನ ಹೊಲ್‌ದಂಗೆ ಕರೆ ಬುಟ್ಟ್ ಕಂಡ್ ಬಾದು.

ಕರೆ^{2} /*karɛ*/ ನಾ. ಕರೆ ಮಾಡು. to call. ವಾ: ಅಂವಂಗೆ ಒಂದು ಫೋನ್ ಕರೆ ಮಾಡ್.

ಕರೆ^{3} /*karɛ*/ ನಾ. 1. ಬಟ್ಟೆಗೆ ಕಲೆ ಆಗುವುದು, 2. ಬಣ್ಣ ಅಳಿಸಿ ಹೋಗದಿರುವುದು. 1. stained clothes, 2.

unfading. ವಾ: ಅರ್ವೆಗೆ ಬಾಳೆಕಾಯಿ ಕರೆ ಆದರೆ ಹೋದುಲೆ. ಪ: ಕರೆ ಆಗುಟು – ಕಲೆ ಆಗಿದೆ

ಕರೆ^{4} /*karɛ*/ ಕ್ರಿ. ಕೂಗು. to shout/to scream/to call out. ವಾ: ಅವ್ವನ ಕರೆ. **ಕರೆತ** /*karɛta*/ 1. ಕರೆಯುವುದು, 2. ಕೂಗುವುದು. 1. to call, 2. to call out (to scream). ವಾ: ಅಂವ ನಿನ್ನ ಆಗಲೆಂದ ಕರೆತ ಉಟ್ಟು. ಪ: ಕರೆವನ – ಕರೆಯುತ್ತೀಯಾ? **ಕರೆಕೆ** /*karikɛ*/ ಕರೆಯುವುದಕ್ಕೆ. to call. ವಾ: ಪೂಜೆಗೆ ಕರೆಕೆ ಹೋಗೊಲೊ.

ಕರೆ^{5} /*karɛ*/ ನಾ. ಹಾಲು ಹಿಂಡು. milking. ವಾ: ಅಯ್ಯೆ ಹಾಲ್ ಕರೆಯಕೆ ಹಟ್ಟಿಗೆ ಹೋವುಟು.

ಕರೆಂಚ್^{1} /*karɛnci*/ ನಾ. 1. ತಳ ಹಿಡಿ, 2. ಸೀದುಹೋಗು, 3. ಸೀಕರಿಗೊಳ್ಳು. 1. burnt, 2. charred (acrylamide) food. ವಾ: ಹಿಟ್ಟ್ ಕರೆಂಚ್ ಹೋತ್.

ಕರೆಂಚ್^{2} /*karɛnci*/ ನಾ. ಸೂರ್ಯನ ಬಿಸಿಲಿಗೆ ಬಾಡಿ ಕರಟಿಹೋಗು. sunburn. ವಾ: ಬಿಸ್ಲಿಗೆ ಕೊಮ್ಮನ ಒಲಿ ಕರ್ಂಚಿ ಹೋವುಟು.

ಕರೆಂಟ್ /*karɛnṭi*/ ನಾ. ಎಪ. 1. ವಿದ್ಯುತ್, 2. ವಿದ್ಯುಚ್ಛಕ್ತಿ. electricity. ವಾ: ಆ ಮನೆಲಿ ಕರೆಂಟ್ ಇಲ್ಲೆಗಡ.

ಕರೆಗೆ ಮಡ್ಗ್ /*karɛgɛ maḍgi*/ ನಾ. ಒಂದು ಬದಿ (ಅಂಚಿನಲ್ಲಿ) ಯಲ್ಲಿ ಇಡು. to keep something in the side. ವಾ: ಚೀಪೆನ ಕರೆಗೆ ಮಡ್‌ಗ್.

ಕರೆಮುರೆ /*karɛmarɛ*/ ನಾ. 1. ಅಂಚು. edge/border. ವಾ: ಹಿಟ್ಟ್‌ನ ಕರೆಮುರೆ ಕರ್ಂಚಿಟು.

ಕರೆಸಿಕೊನೊಕು /*karɛsikɔnɔku*/ ನಾ. ಕರೆಸಿಕೊಳ್ಳಬೇಕು. need to invite (someone). ವಾ: ಆಟಿ ಕೂರಿಕೆ ಕರೆಸಿಕೊನೊಕು.

ಕರೊಂಡ್ /*karoṇḍ*/ ನಾ. ಕರಂಡೆ ಕಾಯಿ. ಉಪ್ಪಿನಕಾಯಿ ಹಾಕಲು ಬಳಸುವ ಕಾಡುಕಾಯಿ. Bengal currant or carandas plum (Carissa carandas), used in making pickles.

ಕರ್ ಕಾಯದು /*kɜri ka:yadu*/ ನಾ. ಹೊಟ್ಟೆಗಿಲ್ಲದೆ ಕರುಳು ನಿಮಿರಿಕೊಳ್ಳುವುದು. kwashiorkor disease. ವಾ: ತಿಂಬಕಿಲ್ಲದೆ ಕರ್ ಕಾಯದು.

ಕರ್ /*kɜri*/ ನಾ. ಕರು. a calf. **ಕರ್‌ನ ಸೆಗಣಿ ಸುದ್ದಕ್ಕೆ ಸಾಲದ್(ಗಾ).** ವಾ: ಕರ್ ನಿನ್ನೆಂದ ಕಾಂಬಲೆ. ಪ: ಕರ್‌ನ – ಕರುವನ್ನು

ಕರ್ಂಗಟ್ಟ್ ಮರ /*kariŋgaṭṭi mara*/ ನಾ. ಒಂದು ಕಾಡು ಮರ. a forest tree.

ಕರ್ಂಗಡ /*kariŋgaḍa*/ ನಾ. 1. ಕರಿಮುಸ್ಯ, 2. ಕರಿಮುಚ್ಚ. black-footed gray langur. ವಾ: ಕರ್ಂಗಡನ ನೀ ನೋಡಿಯೊಳನ?, ಅದ್ ಒಂದ್ ಜಾತಿನ ಕುರೆ ಅಲ.

ಕರ್ಂಗಲ್ಲ್ /*kariŋgalli*/ ನಾ. ಕರಿಕಲ್ಲು. black stone. ವಾ: ಮನೆ ಹಕ್ಕಲೆ ಗುರ್‌ತಕೆ ದೊಡ್ಡ ಕರ್ಂಗಲ್ಲ್ ಉಟ್ಟು.

ಕರ್ಂಚಿ /*karinci*/ ನಾ. 1. ಕರಟಿ, 2. ಸೀದು ಹೋಗಿ. 1. burnt, 2. charred. ವಾ: ಹಾಲ್ ಕೊದ್ದ್ ಕೊದ್ದ್ ಕರ್ಂಚಿ ಹೋತು.

ಕರ್ಂಚ್ /*karinci*/ ನಾ. ಅಡಿಹಿಡಿ – ತಳಹಿಡಿ. charred/burnt. ವಾ: ಪಲಾವ್ ಕರ್ಂಚಿತ್ ಕಂಡದೆ. ಪ: ಕರಂಚಿತ್ – ತಳಹಿಡಿಯಿತು

ಕರ್ಂಜಿ /*Karŋji*/ ನಾವಿ. ಕಪ್ಪು ಬಣ್ಣ. black colour/ dark complexion. ವಾ: ಅವುಳು ಕರ್ಂಜಿ ಆದರು ಲಕ್ಷಣ ಉಟ್ಟು.

ಕರ್ಂಟಿ ಹೋದು /*karnṭi ho:du*/ ನಾ. ಅತಿ ಬಿಸಿಯಾಗಿ ಕರಟ. charred/burnt. ವಾ: ಸಾರ್ ಕರ್ಂಟಿ ಹೋದು.

ಕರ್ಂಡಿ /*kariṇḍi*/ ನಾ. ಮಿಶ್ರ ಮಾಡಿ. mixed. ವಾ: ಸಕ್ರೆನ ಕರ್ಂಡಿ ಹಾಕ್. ಪ: ಕರ್ಂಡ್‌ಸ್

ಕರ್ಂಡಿ ಹೋಗುಟು /*kariṇḍi ho:guṭu*/ ನಾ. ತುಂಬ ಬೆಂದು ಹೋಗು. overcooked. ವಾ: ಗೈಪುಲಿ ಗೆಂಡೆ ಕರ್ಂಡಿ ಹೋಗುಟು.

ಕರ್ಂಡುದು /*karinḍudu*/ ನಾ. 1. ಕರಗುವುದು, 2. ಕರಗಿಸುವುದು. 1. melting, 2. getting something melted. ವಾ: ಗೆಂಡೆ ಬೆಂದ್ ಬೇಗ ಕರ್ನುದು.

ಕರ್ಂಡೆ /*kariṇḍɛ*/ ನಾ. ಕರೆದು ಹೋಗುವುದು. invited.

ಕರ್ಂಬೊಳಿಕೆ /*kɜrimboḷikɛ*/ ನಾ. ಒಂದು ಜಾತಿಯ

ಮರ. a variety of tree. ವಾ: ಕರ್ಂಬೊಳಿಕೆ ಮರ ಕೊಚ್ಚಿದ್ ಸೊಪ್ಪು ಮಾಡ್ದೊ.

ಕರ್ಕ /*karkaɨ*/ ನಾ. ಕರೆದುಕೊ. to take/go with someone. ವಾ: ಕೂಸ್ನ ಕರ್ಕನೆ. **ಕರ್ಕಂಡ್** /*karkaṇḍɨ*/ ಕರೆದುಕೊಂಡು. to take/go with someone. **ರಟ್ಟೆ ಗಟ್ಟಿ ಉಟ್ಟುತ ಜಗಳಕ್ಕೆ ಕಾಲ್ ಕರ್ಕಂಡ್ ಹೋಕಾಗದ್(ಗಾ).** ವಾ: ಗಂಡನ ಕರ್ಕಂಡ್ ಬಾ. ಪ: ಕರ್ಕಬಾ, ಕರ್ಕಂಡ್ ಬಾ, ಕರ್ಕನ್‌ಬಾ – ಕರೆದುಕೊಂಡು ಬಾ; ಕರ್ಕೊಂಡು – ಕರೆದುಕೊಂಡು

ಕರ್ಕರನ /*karkarana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕರ್ಕುಂಜ /*karkuɲja*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕರ್ಕ್[1] /*karkɨ*/ ನಾ. 1. ಎಳೆಯ, 2 ಬಲಿಯದ, 3. ಅರೆಬೆಳೆದ, 4. ಮಿಡಿಗಿಂತ ದೊಡ್ಡದು. 1. tender, 2. unripe, 3. half grown, 3. middle stage. ವಾ: ಕರ್ಕ್ ಪೇರಲನ ಕೊಯ್ದದ?

ಕರ್ಕ್[2] /*karkɨ*/ ನಾ. 1. ಕೆರೆಯು. to scrape. ವಾ: ಕಾಯಿ ಚಿಪ್ಪಿನ ಪೊರ್ಲುಲಿ ಕರ್ಕಿ ಸೆಡೆ ಮಾಡಕ್.

ಕರ್ಕ್‌ಲ್[1] /*karikɨli*/ ನಾ. 1. ಸೀದು ಹೋದ, 2. ಸುಟ್ಟು ಕಪ್ಪಾದ ಪದಾರ್ಥ. 1. burnt, 2. charred. ವಾ: ಸುಟ್ಟ್ ಕರ್ ಕ್ ಲ್ ಆವುಟು.

ಕರ್ಕ್‌ಲ್[2] /*karkɨlɨ*/ ನಾ. 1. ಕರಿಯಾದ, 2. ಸೀದುಹೋದ. 1. burnt, 2. charreed. ವಾ: ಪಲ್ಯ ಕರ್ಕ್ಲ್ ಆತ್.

ಕರ್ಗ /*kariga*/ ನಾ. ಕರಗ. a water pot/a festival/a folk dance. ವಾ: ದಸರಲಿ ಮನೆ ಮನೆಗೆ ಕರ್ ಗ ಬಂದದೆ.

ಕರ್ಗಲ್ಲು /*kargallu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕರ್ಗಿ /*kargi*/ ಕ್ರಿ. 1. ಕರಗಿ, 2. ದ್ರವರೂಪವಾಗಿ, 3. ನೀರಾಗಿ, 4. ಮರುಗಿ, 5. ಸಂತಾಪಟ್ಟು, 6. ದುಃಖಪಟ್ಟು, 7. ಕನಿಕರಪಟ್ಟು. 1. to melt, 2. to liquify, 3. to become water, 4. to express empathy, 4. to feel sympathy, 4. grief stricken/ feel the grief of someone else, 5. express compassion. ವಾ: ಮನ್ಸ್ ಕರಗಿ ಹೋತ್. ಪ: ಕರ್ಗಿತ್ – ಕರಗಿತು; ಕರ್ಗುದು – ಕರಗುವುದು, ಕೊಳೆಯುವುದು; ಕರ್ಗಿ ಹೋಗುಟು – ಕೊಳೆತು ಹೋಗಿದ್ದೆ **ಕರ್ಗಿ ನೀರಾತ್** /*karginiːraːtɨ*/ ಕರಗಿ ನೀರಾಯಿತು. melted. ವಾ: ಐಸ್ ಕರ್ಗಿ ನೀರಾತ್. **ಕರ್ಗುಸುದು** /*kargusudu*/ ಕರಗಿಸುವುದು. melting. ವಾ: ದುಕ್ಕನ ಮನ್ಸ್‌ಲೆ ಕರ್ಗುಸುದು.

ಕರ್ಗುಡೆ ಕತ್ತಾಲೆ /*karguḍɛ kattaːlɛ*/ ನಾವಿ. 1. ಗಾಢ ಕತ್ತಲೆ, 2. ಅಂಧಕಾರ. 1. pitch dark, 2. darkness. ವಾ: ಹೊರ್‌ಗೆ ಕರ್ಗುಡೆ ಕತ್ತಲೆ ಕಣ್ಣೆ ಕಾಂಬೊದ್ಲೆ.

ಕರ್ಗೆಲ್ /*kargɛlɨ*/ ಕ್ರಿ. ಕರಗಿರುವುದು. melted. ವಾ: ಕರ್ಗೆಲ್ ಹಣ್ಣ್ ವಿಸಕೆ ಸಮ.

ಕರ್ಗೋಟ್ /*kari goṭṭi*/ ನಾ. ಸುಲಿದ ಅಡಿಕೆಯಲ್ಲಿ ಕಪ್ಪಾಗಿರುವ ಅಡಿಕೆ. peeled brown/black areca nut. ವಾ: ಕೆಲೊವು ಕರ್ಗೋಟ್ ಅಡ್ಕೆ ಸಿಕ್ಕಿತ್.

ಕರ್ಗೋಟ್[2] /*karigoːṭi*/ ನಾ. ಕರಿಗೋಟು. darkened peeled areca nut. ವಾ: ಕರ್ಗೋಟ್‌ನ ಎಂತರ ಮಾಡ್‌ದು.

ಕರ್ಗ್[1] /*kargɨ*/ ನಾ. 1. ಕರಗು, 2. ಮಿಶ್ರವಾಗು. 1. to met, 2. to get mix/to mix. ವಾ: ಉಂಡದ್ ಈ ಮೆಟ್ಟ್ ಹತ್ತಿ ಬಾಕನ ಕರ್ಗಿತ್. ಪ: ಕರ್ಗುದು – ಕರಗುವುದು

ಕರ್ಗ್[2] /*kargɨ*/ ಕ್ರಿ. ಕೊಳೆಯು. to rot. ವಾ: ಮಳೆಗೆ ಕಾಲ್‌ದ್ ಬೆರ್ಳ್ ಕರ್‌ಗುದು.

ಕರ್ಚಟೆ /*karcaṭɛ*/ ನಾ. 1. ಮಣ್ಣಿನ ಬಟ್ಟಲು, 2. ಗದ್ದಗ. an earthern/clay bowl. ವಾ: ಹಿಂದೆನ ಕಾಲಲಿ ಸಣ್ಣ ಮಕ್ಕಳಿಗೆ ಅನ್ನನ ಅರ್‌ದ್ ಕೊಡಿಕೆ ಕರ್ಚಟೆನ ಬಳ್‌ಸ್ತಿದ್ದೊ.

ಕರ್ಚಿ /*kɘrci*/ ನಾ. 1. ಖರ್ಚು, 2. ವ್ಯಯ, 3. ವೆಚ್ಚ. 1. expenses, 2. spending, 3. expenditure. ವಾ: ಕರ್ಚಿ ಮಾಡಿಕೆ ಹಿಂದೆಮುಂದೆ ನೋಡ್ದೆ ಜೆನ. ಪ: ಕರ್ಚಾದೆಂತ – ಕರ್ಚಾಗುವುದೆಂದು

ಕರ್ಚೆ /*karcɛ*/ ನಾ. 1. ಮರಕ್ಕೆ ಹತ್ತುವಾಗ ಕತ್ತಿಯಿಂದ ಮೆಟ್ಟಿಲು ಕೆತ್ತುತ್ತಾ ಹೋಗುವುದು, 2. ಮರ ಹತ್ತಲು ಕಾಲಿಗೆ ಸಿಕ್ಕಿಸುವ ಬಟ್ಟೆಯ ಅಥವಾ ಬಳ್ಳಿಯ ಸಿಂಬೆ. striking the sickle the tree's bark to form a

grip while climbing a tree. ವಾ: ಮರಕೆ ಹತ್ಕನ ಕರ್‌ಚೆ ಹಾಕಂಡ್ ಹೋದರೆ ಹತ್ತಿಕೆ ಸುಲಬ. ತಲೆ(ತು)

ಕರ್ಚ್ ಮಾಡ್ದು /*karci ma:ḍdu*/ ನಾ. 1. ವ್ಯಯಿಸು, 2. ವೆಚ್ಚ ಮಾಡು. to spend. ವಾ: ಕರ್ಚ್ ಮಾಡೋವಲ್ಲಿ ಮಾಡಿಕಾದೆ.

ಕರ್ಜಾ /*karja:*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕರ್ಜಿಮೆ /*karjimɛ*/ ನಾ. ಕತ್ತಲೆ. darkness. ವಾ: ಹೊರೆಗೆ ಬಾರಿ ಕರ್ಜಿಮೆ ಆವುಟು. ಪ: ಕರ್ಜಿಮೆಲಿ – ಇರುಳಲ್ಲಿ

ಕರ್ಟಿ /*karṭi*/ ನಾ. 1. ಪೀಚೆ, 2. ಬಲಿಯದಿರುವುದು, 3. ಮಿಡಿಯೂ ಅಲ್ಲದ ಬಲಿತದೂ ಅಲ್ಲದ. 1. (fruit) in the initial phase of growth, 2. un ripe, 3. in the middle phase of growth. ವಾ: ಪೇರ್‌ಲ ಕರ್ಟಿ ಕಾಯಿನ ಕೊಯ್‌ಬಡ. ಪ: ಕರ್ಟಿಕಾಯಿ

ಕರ್ಡಿಗೆ /*karḍigɛ*/ ನಾ. ದುಂಡನೆಯ ಚಿಕ್ಕ ಪಾತ್ರೆ. a small vessel with rough exterior. ವಾ: ಕರ್ಡಿಗೆನ ತಂಬ.

ಕರ್ಣಕುತ್ತ /*karṇakutta*/ ನಾ. ತಲೆ ಕೆಳಗಾಗಿ ಕಾಲು ಮೇಲಾಗಿ ಉರುಳುವುದು. to roll upside down/ somersault. ವಾ: ಹಿಂಗ್ಯಾಕೆ ಕರ್ಣಕುತ್ತ ಹಾಕುದು.

ಕರ್ಣಯ್ಯನ /*karṇayyana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕರ್ಣಾಯನ /*karṇa:yana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕರ್ತೆಪಿತ್ರೆ /*kartɛpitrɛ*/ ನಾ. 1. ಒಟ್ರಾಸಿ, 2. ಒಟ್ಟಾರೆ. 1. haphazard 2. in total. ವಾ: ಸೆರಿನೊ ತಪ್ಪೊ ಕರ್ತೆಪಿತ್ರೆ ಕೆಲ್‌ಸ ಮಾಡಿ ಹೊರ್‌ಟತ್.

ಕರ್ತ್ /*karti*/ ಕ್ರಿ. 1. ಕರೆದನು, 2. ಕರೆದಳು. 1. he called, 2. she called. ವಾ: ಅವ್ವ ನಿನ್ನ ಕರ್‌ತ್, ನಿಮಗೆ ಕೇಳ್‌ತ್‌ಲೆನ. **ಕರ್ತ್ಲೆ** /*kartlɛ*/ 1. ಕರೆಯಲಿಲ್ಲ, 2. ಕೂಗಲಿಲ್ಲ. didn't call. ವಾ: ನಿನ್ನ ಕರ್ತ್ಲೆ. ಪ: ಕರ್ದವೆ – ಕರೆಯುತ್ತಾರೆ. **ಕರ್ದೆ** /*kardɛ*/ 1. ಕರೆದೆ, 2. ಕೂಗಿದೆ. I called. ವಾ: ನಾ ಆಗಳೆ ಕರ್‌ದೆ ನಿನ್ನ. ಪ: ಕರ್ದಾಂಗೆ – ಕರೆದ ಹಾಗೆ. **ಕರ್ದ್ ಕೂಡ್ದೆ** /*kardi ku:ḍdɛ*/ 1. ಪದೇ ಪದೇ ಕರೆಯುವುದು, 2. ಒಂದೇ ಸಮನೆ ಕರೆಯುವುದು. calling (someone) repeatedly. ವಾ: ಅಯ್ಯೋ ರಾಮ ಈ ಹೈದ ಬನ್ನೆತ ಹೇಳಿರು ಎಂತಕೆ ಹಿಂಗೆ ಕರ್‌ದ್ ಕೂಡ್ದೆ.

ಕರ್ದ್ ಹೇಳ್ದು /*karidi he:ḷidu*/ ನಾ. 1. ಮದುವೆಯಲ್ಲಿ ಮಾಡುವ ಘೋಷಣೆ, 2. ಒಕ್ಕಣೆ. 1. an announcement made in the wedding, 2. a declaration, an invocation. **ಅರಮನೆ ಗುರುಮನೆ ಹತ್ತು ಕುಟುಂಬ ಹದಿನೇಂಟು ಗೋತ್ರನ ಹೆಮ್ಮನ ಬೊಳಿ ಹೈದಂಗೆ ಬಂಗಾರ್ ಬೊಳಿನ ಗೂಡೆಗೂ ದಾರೆ ಹೊಯ್ದ್‌ವೆತಾ ಹೇಳ್‌ವೇ. (ನು).** ವಾ: ಊರ್ ಗೌಡ್ರು ಕರ್ದ್ ಹೇಳುವೆ.

ಕರ್ನಾಜೆ /*karna:jɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕರ್ಪಿತಿಂಬದು /*karpitimbadu*/ ನಾ. ಹಲ್ಲಿನಿಂದ ಕೆರೆದು ತಿನ್ನುವುದು. removing (scraping) the lodged food particles from or between the teeth and eating them (detritus). ವಾ: ಕರ್‌ಟ್ ಪೇರಲನ ಹೆಂಗೆ ಕರ್‌ಪಿ ತಿಂಬದು. ಪ: ಕರ್ಪಿ ತಿಂಬಕನ

ಕರ್ಪು /*karpu*/ ನಾ. ಕೊರೆದು ತಿನ್ನುವುದು. to carve and eat. ವಾ: ಪೇರಲ ತೊಪ್ಪಿನ ಹಲ್ಲ್ ಲಿ ಕರ್‌ಪು. ಪ: ಕರ್ಪಿನೆ – ಕೊರೆದು ತಿನ್ನುತ್ತೇನೆ; ಕರ್ಪಿರೆ – ಕೊರೆದು ತಿಂದರೆ; ಕರ್ಪುದು – ಹಲ್ಲಿನಿಂದ ಕೆರೆದು ತಿನ್ನುವುದು

ಕರ್ಪುಡಿಕಾನ /*karpuḍika:na*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕರ್ಪೂರ[1] /*karpu:ra*/ ನಾ. ಆರತಿ ತಟ್ಟೆಯಲ್ಲಿ ದೀಪ ಉರಿಸುವಾಗ ಬಳಸುವ ವಸ್ತು. camphor. ವಾ: ದೇವ್ರಿಗೆ ಕ ಹಾಕಿ ಆರ್ ತಿ ಮಾಡಿ.

ಕರ್ಪೂರ[2] /*karpu:ra*/ ನಾ. 1. ಕರ್ಪೂರ, 2. ಸಿನ್ನಮೋಮಮ್ ಕ್ಯಾಂಫೋರ ಎಂಬ ಮರದಿಂದ ನೈಸರ್ಗಿಕವಾಗಿ ದೊರೆಯುವ ವಿಶಿಷ್ಟ ಘಾಟು ವಾಸನೆಯುಳ್ಳ ಪದಾರ್ಥ, ಸಾಮಾನ್ಯವಾಗಿ ಬಿಳಿ ಬಣ್ಣದ ಅಶ್ರಗರೂಪಿ, 2. ಆರತಿ ತಟ್ಟೆಯಲ್ಲಿ ದೀಪ ಉರಿಸುವಾಗ ಬಳಸುವ ವಸ್ತು. camphor. ವಾ: ದೇವ್ರಿಗೆ ಕರ್ಪೂರದ ಆರ್‌ತಿ ಮಾಡಿವೆ.

ಕರ್ಬನ್ನ ಬೊಳಿ /*karbanna bɔḷi*/ ನಾ. ಒಂದು ಗೋತ್ರದ ಹೆಸರು. a lineage. ವಾ: ಗೌಡ ಜೆನಾಂಗದ ಬೊಳಿದ್ ಹೆಸ್‌ರ್. ಪ: ಕಬರ್‌ಬೊಳಿ

ಕರ್ಬಾರ್ /*karba:ri*/ ಕ್ರಿವಿ. ಕಾರುಬಾರು, ಆಡಳಿತ ಮಾಡು. What is the matter? ವಾ: ನಾಳೆದ್ ನಿಮ್ಮ ಕರ್‌ಬಾರೆಂತದ್.

ಕರ್ಬುಡ್ /*karɨbuḍi*/ ನಾ. ಹಸುವಿನ ಹಾಲು ಕರೆಯುವುದು. milking a cow. **ಕರ್ ಬುಡಿಕೆ ಹೋಕನ ಎತ್ತ್, ಹೂಡಿಕೆ ಹೋಕನ ಹಸ್(ಗಾ).** ವಾ: ಅವ್ವ ಕರ್‌ಬುಡ್‌ಕೆ ಹೋವುಟು. **ಕರ್ಬುಡೋ ಹಸ್** /*karbuḍɔhasɨ*/ ಹಾಲು ಕರೆಯುವ ಹಸು. a milch cow. ವಾ: ಕರ್ಬುಡೋ ಹಸ್ ಮನೆಲಿದ್ದರೆ ಹಾಲ್ ಮೊಸ್‌ರ್ ತಪ್ಪುಲೆ.

ಕರ್ಬೂಜ /*karbu:ja*/ ನಾ. 1. ಕರ್ಬೂಜ ಹಣ್ಣು. muskmelon. ವಾ: ಕರ್‌ಬೂಜ ಹಣ್ಣ್ ತಿನ್ನೊಕು.

ಕರ್ಬೆಳ್ಳೆ /*karbɛḷḷɛ*/ ನಾ. ಕಪ್ಪು ಬಿಳಿ ಮಿಶ್ರಿತ ಗರಿಗಳಿರುವ ಹುಂಜ. a rooster with black and white feather. ವಾ: ಕರ್ಬೆಳ್ಳೆ ಹಾರಿಕಂಡ್ ಹೋತ್.

ಕರ್ಮ[1] /*kɜrma*/ ನಾ. ಕೊರೆದು ತಿನ್ನು. to surface/ carve and eat. ವಾ: ಕಾಯಿನ ಕರ್ಮಿ ತೀನ್ಸ್.

ಕರ್ಮ[2] /*kɜrma*/ ನಾ. 1. ಕರ್ಮಫಲ, 2. ಜನ್ಮಾಂತರದ ಒಳ್ಳೆಯ ಅಥವಾ ಕೆಟ್ಟ ಫಲ, 3. ಸುಖ ದುಃಖಗಳಿಗೆ ಕಾರಣವಾದ ಪೂರ್ವ ಜನ್ಮದ ಕಾರ್ಯ. principle of retributive justice/inevitable consequence/belief of one's actions in the present will determine the future consequences. **ಚರ್ಮ ತೊಳ್ದರೆ ಕರ್ಮ ಹೋದೆನಾ?(ಗಾ).** ವಾ: ಎಂತ ಕರ್‌ಮ ನಮ್ಮದ್.

ಕರ್ಮಂಜಿ ಬಲ್ಲೆ /*karmaŋji ballɛ*/ ನಾ. ಕರ್ಮಂಜಿ ಹಣ್ಣಿನ ಪೊದೆ. Carissa shrub. ವಾ: ಕರ್‌ಮಂಜಿ ಬಲ್ಲೆಗೆ ಕೈ ಹಾಕಿರೆ ಬಾರಿ ಮುಳ್ಳು. **ಕರ್‌ಮಂಜಿ ಹಣ್ಣ್** /*karɨmaŋji haṇṇɨ*/ 1. ಕರ್‌ಮಜೆ ಹಣ್ಣು, 2. ಒಂದು ಜಾತಿ ಹಣ್ಣು. Bengal currant, carandas plum and karanda. ವಾ: ಕರ್ ಮಂಜಿ ಹಣ್ಣ್‌ನ ಮುಳ್ಳುತಡೆ ಹಣ್ಣ್‌ತ ಸ ಕರ್‌ದವೆ.

ಕರ್ಮಕಾಂಡ /*kɜrmaka:ṇḍa*/ ನಾ. 1. ದುಷ್ಕರ್ಮ, 2. ಕುತ್ಸಿತ, 3. ಕೆಟ್ಟ. a wicked deed. ವಾ: ಅಂವನ ಇಸ್ಟ್ ವರ್‌ಸದ ಕರ್‌ಮಕಾಂಡ ಈಗ ಹೊರೆಗೆ ಬಾತ್.

ಕರ್ಮಕೋಡಿ /*karmako:ḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕರ್ಮಜೆ /*karmajɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕರ್ಮಜೆ ಕಾಯಿ /*karmajɛ ka:yi*/ ನಾ. ಅಂಟು ಅಂಟಾದ ಮೇಣವಿರುವ ಕಾಯಿಯಲ್ಲಿ ಹುಳಿ, ಹಣ್ಣಿನಲ್ಲಿ ಸಿಹಿ ರುಚಿ ಹೊಂದಿರುವ ಒಂದು ರೀತಿಯ ತಿನ್ನುವ ಕಾಯಿ. Carissa berry. ವಾ: ಕರ್‌ಮಜೆಕಾಯಿಲಿ ಮೇಣದಂಗೆ ಹಾಲ್ ಬಂದದೆ.

ಕರ್ಮಳ /*karmaḷa*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕರ್ಯ /*karaya*/ ನಾ. 1. ಕಾರ್ಯಕ್ರಮ, 2. ಕೆಲಸ. 1. a programme, 2. a work. ವಾ: ಸುದ್ದ ಕರ್‌ಯ ಎಲ್ಲ ಆತ? ಪ: ಕರ್ಯವೆಲ್ಲ – ಕಾರ್ಯವೆಲ್ಲ; ಕಾರ್‌ಯನೆಲ್ಲ – ಕಾರ್ಯವನ್ನೆಲ್ಲ; ಕರ್ಯ್ರೊ – ಕರೆಯೋ; ಕರ್ಯೋಕು; – ಕರೆಯಬೇಕು; ಕರ್ಯ್ರೊಂ – ಕರೆಯುವ

ಕರ್ಯಕ್ರಮ /*karayakrama*/ ನಾ. 1. ಕಾರ್ಯಕ್ರಮ. a programme. ವಾ: ಕರ್‌ಯಕ್ರಮಕೆ ಹೋಕಾಗಿತ್.

ಕರ್ಯಟ /*karyaṭa*/ ನಾ. 1. ಕರೆಯುವುದು, 2. ಕರೆಯುವಿಕೆ, 3. ಕೂಗುವಿಕೆ. 1. an invitation, 2. to call, 3. calling out for someone. ವಾ: ಎಂತ ಕರ್‌ಯಟ ಅದ್ ಹಂಗೆ. ಪ: ಕರ್‍ಯನೀಂತ – ಕರೆಯಿರಿ ಎಂದು

ಕರ್ಯಡ/ಕರ್ಯಟ /*karyaḍa/karyaṭa*/ ನಾ. 1. ಯಕೃತ್, 2. ಲಿವರ್. liver. ವಾ: ಕೋಳಿ ಕರ್ಯಟನ ತಿಂದವೆ.

ಕರ್ಯಬೊಡಿ /*karyabɔḍi*/ ಕ್ರಿವಿ. ಕರಿಯಬೇಡಿ. don't call. ವಾ: ಮೊಲ್‌ಗಿದ ಮಕ್ಕಳ ಕರ್‌ಯಬೊಡಿತ.

ಕರ್ಲಪ್ಪಾಡಿ /*karlappa:ḍi*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಜ್ಜಾವರ ಗ್ರಾಮದ ಜಾಗ. 1. family, 2. lineage, 3. a locality in Ajjavara village in Sullia Taluk of Dakshina Kannada District.

ಕರ್ಲುರಿ /*karluri*/ ನಾ. 1. ಹೊಟ್ಟೆಕಿಚ್ಚು, 2. ಅಸೂಯೆ, 3. ಕರುಬು. jealousy. ವಾ: ಮೊನ್ನಂಗೆ ಕರ್ಲುರಿ ಇರಿಕಾಗದ್.

ಕರ್ಲ್ /*karlɨ*/ ನಾ. ಕರುಳು. intestine. ವಾ: ಕೋಳಿ ಕರ್ಲ್ ಹಾಕಿ ಮೀನ್ ಹಿಡ್ದವೆ. **ಕರ್ಲ್ ಕಾಯೊದು** /*karlɨ ka:yɛdu*/ ಕರುಳು ಸೊರಗುವುದು. hunger

pangs. ವಾ: ಹೊತ್ತಿಗೆ ಸೆರಿ ಉಂಬಕೆ ಇಲ್ಲರೆ ಕರ್‌ಲ್ ಕಾಯೊದು.

ಕರ್ವಂಗ /*karvaŋga*/ ನಾ. ಮುಖದ ಚರ್ಮದ ಮೇಲೆ ಕಪ್ಪು ಚುಕ್ಕೆಗಳುಂಟಾಗುವ ಒಂದು ಬಗೆಯ ಚರ್ಮರೋಗ. pigmentation on the skin.

ಕರ್ಸಲಿ /*karsali*/ ನಾ. ಕರೆಸಲಿ. let them invite or call. ವಾ: ಅಪ್ಪನ ಕರ್ಸಲಿ ಅಂದರೆ.

ಕರ್ಸ್ /*karsɨ*/ ಕ್ರಿ. ಕರೆಸು. invite/call. ವಾ: ನಿನ್ನ ಮಜ್ಜನ ಕರ್‌ಸ್. ಪ: ಕರ್ಸಿದರಿಯ – ಕರೆಸಿದ್ದೀರ. **ಕರ್ಸಿ** /*karsi*/ ಕ್ರಿ. ಕರೆಯಿಸಿ. to be invited. ವಾ: ಗೂಡೆನ ಕರ್‌ಸಿ ಒಮ್ಮೆ ನೋಡ್‌ನೊ. ಪ: ಕರ್ಸ್ಸಿದೆ – ಕರೆಸಿದೆ; ಕರ್ಸ್ಸಿದೆಗಡ – ಕರೆಸುತ್ತಾನಂತೆ, ಕರೆಸುತ್ತಾಳಂತೆ; ಕರ್‌ಸಿಬುಟ್ಟು – ಕರೆಸಿಬಿಟ್ಟು; ಕರ್ಸಿವೆ – ಕರೆಸುತ್ತಾರೆ; ಕರ್ಸುದು – ಕರೆಸುವುದು. **ಕರ್ಸುದು** /*karsudu*/ ನೆಂಟರನ್ನು ಕರೆಸುವುದು. to invite or to call. ವಾ: ಮೊದುವೆ ಆದ ಹೊಸದರ್‌ಲಿ ಮೊದುಮಕ್ಕಳ ಸಮನಕ್ಕೆ ಕರ್ಸುದು.

ಕರ್‌ಳ್ /*kariḷɨ*/ ನಾ. ಕರುಳು. intestine. **ಕರ್‌ಳ್ ಕಿತ್ತ್ ಹೋದಾಂಗಾತ್(ನು).** ವಾ: ಅವುಳ ಕತೆ ಕೇಳಿ ಕರ್‌ಳ್ ಹಿಂಚಿದಂಗಾತ್.

ಕಲಕಲ /*kalakala*/ ಅ. ತುಂಬ ಮಾತನಾಡುವಾಗ ಆಗುವ ಅನುಕರಣ ಧ್ವನಿ. an onomatopoeia – to indicate a noise. ವಾ: ಪಾತ್ರ ಅಲ್ಗಿ ಕಲಕಲ ಸದ್ದ್ ಆತ್.

ಕಲಯ /*kalaya*/ ನಾ. 1. ಕಲಾಯಿ, 2. ಪಾತ್ರೆಗಳಿಗೆ ತವರ ಹಚ್ಚುವಿಕೆ, 3. ಲೇಪನ. coating tin on the copper or brass cooking pot. ವಾ: ಹಿತ್ತಾಳೆ ಪಾತ್ರದೊಳಗೆ ಕಲಯ ಹಾಕೊಕು, ಇಲ್ಲರೆ ಕಿಲಂಬು ಬುಟ್ಟದೆ. ಪ: ಕಲಾಯ

ಕಲಸೆ /*kalasɛ*/ ನಾ. ಪವಾ. 1. ಹದಿನಾಲ್ಕು ಸೇರು ಧಾನ್ಯ ತುಂಬುವ ಅಳತೆಯ ಒಂದು ದೇಶೀಯ ಮಾನ, 2. ಕಳಸಿಗೆ. a measure of 14 seer. ವಾ: ಕಲಸೆನ ಕೊಡ್ ಇತ್ತ.

ಕಲಾಂಜನ /*kala:ɲjana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕಲಾಯಿ[1] /*kala:yi*/ ನಾ. ಹಿತ್ತಾಳೆ ಪಾತ್ರೆಗೆ ತವರ ಲೇಪ ಹಾಕುವುದು. coating tin on the copper or brass cooking pot. ವಾ: ತಾಮ್ರದ ಹಂಡೆಗೆ ಕಲಾಯಿ ಹಾಕ್‌ಸಿದೊ. **ಕಲಾಯಿ ಹಾಕುದು** /*kala:yi ha:kudu*/ ಪಾತ್ರೆಗಳ ಒಳಭಾಗಕ್ಕೆ ತವರವನ್ನು ಲೇಪಿಸುವುದು. coating tin on the copper or brass cooking pot. ವಾ: ಕಲಾಯಿಗಾರ, ಕಲಾಯಿ ಪುರ್ಬು.

ಕಲಾಯಿ[2] /*kala:yi*/ ನಾ. ಕಾಡಿನ ದೇವರಿಗೆ ಎಡೆ. an offering of food to gods in the forest. ವಾ: ತಮ್ಮಚ್ಚಂಗೆ ಕಲಾಯಿ ಇಸುದು.

ಕಲಾಸ್[1] /*kala:sɨ*/ ನಾ. ಖಾಲಿ. empty. ವಾ: ಎಲ್ಲ ಕೂಡಿ ಕಳ್ಳ್ ಕುಪ್ಪಿನ ಕಲಾಸ್ ಮಾಡ್‌ದೊ.

ಕಲಾಸ್[2] /*kala:sɨ*/ ನಾ. 1. ಮುಕ್ತಾಯ, 2. ಸಾವು. 1. end, 2. death. ವಾ: ಅಂವ ಕಲಾಸ್ ಆತ್.

ಕಲಿ /*kəli*/ ಕ್ರಿ. 1. ಕಲಿಯುವುದು, 2. ಅಧ್ಯಯನ ಮಾಡುವುದು. 1. learning, 2. studying. ವಾ: ನೀ ಪಾಟನ ಲಾಯ್ಕಲಿ ಓದಿ ಕಲಿ. ಪ: ಕಲಿವ – ಕಲಿಯುವ; ಕಲಿವಂತದ್ – ಕಲಿಯುವಂತದ್ದು; ಕಲಿಯಕ್ಕೆ – ಕಲಿಯಲು; ಕಲಿಯೊಕು – ಕಲಿಯಬೇಕು; ಕಲಿಯೊದುಂತ – ಕಲಿಯುವುದಂತ; ಕಲಿವುದರಲ್ಲಿ – ಕಲಿಯುವುದರಲ್ಲಿ. **ಕಲಿಯೊಕು/ ಕಲೆಕ್ಕು** /*kaliyɔku/kalɛkku*/ 1. ಕಲಿಯಬೇಕೆಂದು, 2. ಅರಿಯಬೇಕೆಂದು. want(ed) to learn/study. ವಾ: ನಾಟಕ ಕಲೆಕ್ಕುತಾ ಬಾರಿ ಆಸೆ ನಂಗೆ. **ಕಲಿಸಟ** /*kalisaṭa*/ 1. ಕಲಿಸುವ ರೀತಿ/ವಿಧಾನ, ಬಗೆ, 2. ಕಲಿಸಿದ ರೀತಿ. 1. knowledge that has been imparted/taught, 2. ways of teaching. ವಾ: ಎಂತ ಬುದ್ದಿ ಕಲಿಸಟ ಇದ್. **ಕಲಿಸಿ** /*kalisi*/ ಕಲಿಸಿ. teach. ವಾ: ಹೊಲಿಗೆ ಕಲಿಸಿ ಕೊಡಿ. ಪ: ಕಲಿಸಿನೆಂತ – ಕಲಿಸಿಕೊಡುತ್ತೇನೆಂದು

ಕಲಿಕಾಲ /*kalika:la*/ ನಾ. 1. ಧರ್ಮ ಕ್ಷೀಣಿಸುವ ಕಾಲ, 2. ಅಧರ್ಮ ಹೆಚ್ಚಾಗುತ್ತಿರುವ ಕಾಲ, 3. ನಾಲ್ಕು ಯುಗಗಳಲ್ಲಿ ಒಂದು (ಕೃತ, ತ್ರೇತ, ದ್ವಾಪರ, ಕಲಿ), 4. ಪಾಪ ದುರಾಚಾರಿಗಳ ಕಾಲ. 1. the period of unrighteousness, 2. the period of lawlessness, 3. one among the Yuga Cycle—Krita Yuga, Treta Yuga, Dvapara Yuga, and Kali Yuga, 4. the period of unjust

practices. **ಕಲಿಕಾಲ ಮುಗೆಕಾತ್.** ವಾ: ಕಲಿಕಾಲಲಿ ಅನ್ಯಾಯ ಹೆಚ್ಚಿ ಆದೆ.

ಕಲೆ[1] /*kalε*/ ನಾ. ಕೊಳೆ. stain. ವಾ: ಸುರಾಲ್ ಗೆ ಕಲೆ ಆಗುಟು, ಎಂತ ಮಾಡಿಕಂಡ.

ಕಲೆ[2] /*kalε*/ ನಾ. 1. ಕಲೆ, 2. ಶೋಭೆ, 3. ಜಾಣತನ. 1. art, 2. grandeur, 3. intelligence. ವಾ: ಕೊಣ್ತ ಹಾಕುದು ಒಂದು ಕಲೆ.

ಕಲ್ ಮುಳ್ /*kalɨ muḷɨ*/ ನಾ. ಬೀಸುವ ಮತ್ತೆ ಮಸಾಲೆ ರುಬ್ಬುವ ಕಲ್ಲಿಗೆ ಮುಳ್ಳು ಹಾಕುವುದು. ರುಬ್ಬುವ ಪದಾರ್ಥಗಳು ಬೇಗ ನುಣ್ಣಗೆ ಆಗಲು ಇದನ್ನು ಹಾಕಲಾಗುತ್ತದೆ. stones and thorns. ವಾ: ಕಡಿಯಕಲ್‌ಗೆ ಕಲ್ ಮುಳ್ ಹಾಕುದು.

ಕಲ್ಂಕ್ /*kaliŋkɨ*/ ನಾ. 1. ರಾಡಿ, 2. ಕೆಸರು, 3. ಕಲಕು. 1. slimy, 2. sludge, 3. to mix/to stir. ವಾ: ನೋಡಿ ಕಲ್ಂಕ್ ನೀರ್ ಹೆಂಗೆ ಹರ್‌ದ್ ಬಂದದೆ. ಪ: ಕಲ್ಂಕ್ ನೀರು

ಕಲ್ಕಚ್ /*kalkacɨ*/ ನಾ. ಅಕ್ಕಿ ತೊಳೆದ ನೀರು. water in which rice has been soaked and washed. ವಾ: ಕೆಂಪಕ್ಕಿದ್ ಕಲ್ಕಚ್ ನೀರ್ ಒಮ್ಮೆ ತೊಳ್ದ್ ಸೂಸಿ/ ತೂಸಿ ಮತ್ತೊಮ್ಮೆ ತೊಳ್‌ದ ನೀರ್ ಕುಡ್‌ದರೆ ಬಾರಿ ಒಳ್ಳೆದ್.

ಕಲ್ಕಲ /*kalkala*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮುಪ್ಪೇರ್ಯ ಗ್ರಾಮದ ಜಾಗ. 1. family, 2. lineage, 3. a locality in Mupperia village in Sullia Taluk of Dakshina Kannada District.

ಕಲ್ಕುಡ /*kalkuḍa*/ ನಾ. ತುಳುನಾಡಿನಲ್ಲಿ ಆರಾಧಿಸಲ್ಪಡುವ ದೈವ. a deity/a spirit worshipped in Tulu Nadu (Dakshina Kannada). ವಾ: ಅದ್ ಕಲ್ಕುಡ ದೈವ.

ಕಲ್ಕುಡಿ /*kalkuḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕಲ್ಕುದಿ /*kalkudi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಏನೆಕಲ್ಲು ಗ್ರಾಮದ ಜಾಗ. a locality in Enekallu village in Sullia Taluk of Dakshina Kannada District.

ಕಲ್ಕ್[1] /*kalkɨ*/ ನಾ. 1. ಕಲಕು, 2. ಮಣ್ಣು ಮಿಶ್ರಿತ ನೀರು. 1. to mix/to stir, 2. muddy water. ವಾ: ನೀರಿಗೆ ಸೋಪು ಹೊಡಿನ ಹಾಕಿ ಕಲ್ಕ್.

ಕಲ್ಕ್[2] /*kalkɨ*/ ನಾ. 1. ಕಿರುಚು, 2. ಬೊಬ್ಬೆ, 3. ಕೂಕೂ ಹಾಕುವುದು. to scream. ವಾ: ಜೋರಾಗಿ ಕಲ್ಕ್ ಹಾಕುದು.

ಕಲ್ಗಚ್ಚಿ /*kalgacci*/ ನಾ. ಕಲ್ಕಚ್. water with which rice has been soaked and washed. ವಾ: ಕಲ್ಗಚ್ಚಿ ನೀರ್‌ನ ತೂಸ್.

ಕಲ್ಗಿಚ್ಚಿ /*kalgicci*/ ನಾ. 1. ಅಕ್ಕಿ ತೊಳೆದ ನೀರು, 2. ಕಲಗಚ್ಚು, 3. ಅಕ್ಕಿಕಚ್ಚು, 4. ಅಕ್ಕಿಗರ್ಚು. 1. water in which rice has been washed, 2. Kitchen waste in liquid form, 3. rice soaked water, 4. washing the rice. ವಾ: ಕಲ್ಗಿಚ್ಚಿನ ಮರ್‌ಗಿಲ್‌ಗೆ ಹೊಯಿ.

ಕಲ್ಗೋಣಿ /*kalgo:ṇi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಬೆಳ್ಳಾರೆ ಗ್ರಾಮದ ಜಾಗ. a locality in Bellare village in Sullia Taluk of Dakshina Kannada District.

ಕಲ್ಚಾರು /*kalca:ru*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಪಂಬೆತ್ತಾಡಿ ಗ್ರಾಮದ ಜಾಗ. a locality in Pambettadi village in Sullia Taluk of Dakshina Kannada District.

ಕಲ್ಚಾರ್ /*kalca:r*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಉಬರಡ್ಕ ಮಿತ್ತೂರು ಗ್ರಾಮದ ಜಾಗ. a locality in Ubaradka Mitturu village in Sullia Taluk of Dakshina Kannada District.

ಕಲ್ತ[1] /*kalta*/ ನಾ. ಕಲಿತೆಯ? Did you learn? ವಾ: ಪರೀಕ್ಷೆಗೆ ಎಲ್ಲ ಓದಿ ಕಲ್ತ?

ಕಲ್ತ[2] /*kalta*/ ನಾ. ಕಲಿತ. (he) learnt. ವಾ: ಮೂರ್ ವರ್‌ಸಲಿ ಕಲ್ತ ಬುದ್ದಿ ನೂರ್ ವರ್‌ಸಗಂಟ. **ಕಲ್ತಂವ** /*kaltanva*/ ಕಲಿತವ. knowledgeable. ವಾ: ಬಾರಿ ಕಲ್ತಂವನಂಗೆ ಆಡ್ಡೆ. **ಕಲ್ತತ್** /*kaltatɨ*/ ಕಲಿತನು/ಳು. he/she learnt. ವಾ: ಕೂಸು ಎಲ್ಲನು ಬೇಗ ಕಲ್ತತ್.

ಕಲ್ತ[3] /*kalta*/ ನಾ. ಯಾವುದಕ್ಕು ಸಿಕ್ಕಿಹಾಕಿಕೊಳ್ಳದೆ ಕಾರ್ಯ ಸಾಧಿಸುವವರಿಗೆ ಹೇಳುವ ಮಾತು. an opportunist. ವಾ: ಬಾರಿ ಕಲ್ತ ಮರಿ ಅದ್. ಪ: ಕಲ್ಪತ್ತೆ, ಕಲ್ಪಾದಿಗೆ(ತು)

ಕಲ್ತಪ್ಪ /*kaltappa*/ ನಾ. ಏಪ. 1. ಕೆಳಗಿನಿಂದ ಮತ್ತು ಮೇಲಿನಿಂದ ಕೆಂಡ ಇಟ್ಟು ಬೇಯಿಸುವ ತಿನಿಸು, 2. ಕೆಂಡದ ಹಿಟ್ಟ್. a method of broiling the food from both the ends. ವಾ: ಕಲ್ತಪ್ಪತೇಳಿರೆ ಚೆಟ್ಟಿಟ್ಟ್, ಆ ಕಲ್ತಪ್ಪಕೆ ಕಾಯಿ ಹೂ ಹಾಕಿರೆ ರುಚಿ ಇದ್ದದೆ. ಪ: ಕಾಲ್ತೆ ಅಪ್ಪ(ಮ)

ಕಲ್ತರಿಯ /*kaltariya*/ ನಾ. ಕಲಿತಿರಾ. Did you learn? ವಾ: ಎಲ್ಲ ಹಾಡ್ ನ ಕಲ್ತರಿಯ.

ಕಲ್ತರೆ /*kaltarɛ*/ ನಾ. 1. ಕಲಿತರೆ, 2. ಓದಿದರೆ. if you learn. ವಾ: ಸೋಬಾನೆ ಹೇಳಿಕೆ ಕಲ್ತರೆ ಒಳ್ಳೆದಲ. ಪ: ಕಲ್ಉಗ್ಗಪ್ಪ್ – ಕಲಿತಾಯಿತು; ಕಲ್ತುಟು – ಕಲಿತಿದ್ದಾಳೆ; ಕಲ್ತೊ – ಕಲಿತರು; ಕಲ್ತೊಲನಾಂತ – ಕಲಿತರಾಂತ

ಕಲ್ತ್ /*kaḷtti*/ ನಾ. ಕಲಿತು. learnt. ವಾ: ಪದ ಕಲ್ತ್ ಆತ? ಪ: ಕಲ್ತರೆ – ಕಲಿತರೆ. **ಕಲ್ತ್ ಕಲ್ಲಡಿಗೆ ಹೋವ್ತು** /*kalti kallaḍigɛ hɔ:vṭu*/ ನಾ. ತುಂಬ ಕಾನೂನು ಮಾತನಾಡುವವರಿಗೆ ಹೇಳುವ ಮಾತು. someone who is rigorous about rules/law. ವಾ: ಅಂವನೊಟ್ಟಿಗೆ ಮಾತಾಡಿಕಾದುಲೆ ಕಲ್ತ್ ಕಲ್ಲಡಿಗೆ ಹೋವ್ತು.

ಕಲ್ಪ /*kalpa*/ ನಾ. ತಲೆ ಹರಟೆ ಮಾಡುವವರಿಗೆ, ತುಂಬ ಕಾನೂನು ಮಾತನಾಡುವವರಿಗೆ ಹೇಳುವ ಪದ. used to describe a person who is loquacious. **ತಬ್ಬುಲಿ ಮಕ್ಕಳಿಗೆ ತಲೆಲಿಲ್ಲದ ಕಲ್ಪ(ಗಾ).** ವಾ: ಬಾರಿ ಕಲ್ಪದ ಗೂಡೆ.

ಕಲ್ಪಡ[1] /*kalpaḍa*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕೊಡಿಯಾಲ ಗ್ರಾಮದ ಜಾಗ. a locality in Kodiyala village in Sullia Taluk of Dakshina Kannada District.

ಕಲ್ಪಡ[2] /*kalpaḍa*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕಲ್ಪದ ಗೆಂಡೆ /*kalpada gɛṇḍɛ*/ ನಾ. ತುಂಬ ಕಾನೂನು ಮಾತನಾಡುವವರಿಗೆ ಹೇಳುವ ಮಾತು. someone who is rigorous about rules/law. ವಾ: ಅಪ್ಪನಂಗೆ ಬಾರಿ ಕಲ್ಪದ ಗೆಂಡೆ.

ಕಲ್ಬಾಗೆ ಮರ /*kalba:gɛ mara*/ ನಾ. 1. ಕಲ್ಲು ಬಾಗೆ ಮರ, 2. ಒಂದು ಕಾಡು ಮರ. a forest tree. ವಾ: ಕಲ್ಬಾಗೆ ಮರ ಅದೊಂದ್ ಕಾಡ್ ಮರ.

ಕಲ್ಮಕಾರು /*kalmaka:ru*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕಲ್ಮಕಾರು ಗ್ರಾಮದ ಜಾಗ. a locality in Kalmakar village in Sullia Taluk of Dakshina Kannada District.

ಕಲ್ಮಡ್ಕ /*kalmaḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕಲ್ಮಡ್ಕ ಗ್ರಾಮದ ಜಾಗ. a locality in Kalmadka village in Sullia Taluk of Dakshina Kannada District.

ಕಲ್ಮರ /*kalmara*/ ನಾ. ಒಂದು ಜಾತಿಯ ಕಾಡು ಮರ. a forest tree. ವಾ: ಕಲ್ಮರತೇಳ್‌ದು ಒಂದ್ ಕಾಡ್ ಮರ.

ಕಲ್ಮಸ /*Kalmasa*/ ನಾ. 1. ಕಲ್ಮಷ, 2. ಕೆಟ್ಟದ್ದು. 1. dirt, 2. bad. ವಾ: ನೀರ್ ಲಿ ಬಾರಿ ಕಲ್ಮಸ ಉಟ್ಟು.

ಕಲ್ಮುರ ಮೀನ್ /*kalmura mi:nɨ*/ ನಾ. 1. ಒಂದು ಜಾತಿಯ ಹೊಳೆ ಹಳ್ಳ ಮೀನು, 2. ಕಲ್ಮುಳ್ಳ. a fresh water fish. ವಾ: ಕಲ್ಮುರ ಮೀನ್ ಹೊರ್‌ಯದು. ಪ: ಕಲ್ಂಬುರ ಮೀನ್(ತು)

ಕಲ್ಮುಳ್ಳ ಮೀನ್ /*kalmuḷḷa mi:nɨ*/ ನಾ. 1. ಒಂದು ಜಾತಿಯ ಹೊಳೆ ಹಳ್ಳ ಮೀನು, 2. ಕಲ್ಮುರ. a fresh water fish. ವಾ: ಕಲ್ಮುಳ್ಳ ಮೀನ್ ಹೊರ್‌ಯದು.

ಕಲ್ಯಾಣ ಬಾಳೆ /*kalya:ṇa ba:ḷɛ*/ ನಾ. ಬಾಳೆ ಹಣ್ಣಿನ ವಿಧಗಳು. a variety of plantain/banana. ವಾ: ಕಲ್ಯಾಣ ಬಾಳೆ ಕುರ್ಲೆ ಸಿಕ್ಕುದೊ.

ಕಲ್ಲ /*kalla*/ ನಾ. ಕಲ್ಲು. stone. ವಾ: ಅಲ್ಲಿ ದೂರಲಿ ಇರ್‌ದು ಕಲ್ಲ?

ಕಲ್ಲಂಟೆಕಾಯಿ /*kallaṇṭɛka:yi*/ ನಾ. ಪದಾರ್ಥಕ್ಕೆ ಬಳಸುವ ಕಾಡು ಕಾಯಿ. a vegetable used in making curry.

ಕಲ್ಲಂಬಳ /*kallambaḷa*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ತೊಡಿಕಾನ ಗ್ರಾಮದ ಜಾಗ. a locality in Todikana village in Sullia Taluk of Dakshina Kannada District.

ಕಲ್ಲಗದ್ದೆ /*kallagadde*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ತೊಡಿಕಾನ ಗ್ರಾಮದ ಜಾಗ. a

locality in Todikana village in Sullia Taluk of Dakshina Kannada District.

ಕಲ್ಲಗುಡ್ಡೆ /*kallaguḍḍe*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಜ್ಜಾವರ ಗ್ರಾಮದ ಜಾಗ. a locality in Ajjavara village in Sullia Taluk of Dakshina Kannada District.

ಕಲ್ಲಡ್ಕ /*kallaḍka*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮಂಡೆಕೋಲು ಗ್ರಾಮದ ಜಾಗ. 1. family, 2. lineage, 3. a locality in Mandekolu village in Sullia Taluk of Dakshina Kannada District.

ಕಲ್ಲಪಣೆ /*kallapaṇe*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ದೇವಚಳ್ಳ ಗ್ರಾಮದ ಜಾಗ. a locality in Devacalla village in Sullia Taluk of Dakshina Kannada District.

ಕಲ್ಲಪಳ್ಳಿ /*kallapalli*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕಲ್ಲಳ್ಂಬು /*kallaḻimbu*/ ನಾ. ಕಲ್ಲಿನ ರೀತಿಯಂತೆ ಕಾಣುವ ಅಣಬೆ. mushroom which resembles a stone. ವಾ: ಕಲ್ಲಳ್ಂಬು ಸುಮಾರ್ ಎದ್ದುಟು.

ಕಲ್ಲಾಕಿತ್[1] /*kalla:kiti*/ ನಾ. ಕಲ್ಲು ಹಾಕಿದನು/ಳು. he/she put/laid stones. ವಾ: ಅಂವ ಬಾಡೆಗೆ ಕಲ್ಲಾಕಿತ್. ಪ: ಕಲ್ಲಾಗಲಿಂತ – ಕಲ್ಲಾಗಲೆಂದು; ಕಲ್ಲಾಕಿದೊ – ಕಲ್ಲು ಹಾಕಿದರು; ಕಲ್ಲಿತ್ತ್ – ಕಲ್ಲು ಇತ್ತು; ಕಲ್ಲುನು – ಕಲ್ಲೂಕೂಡ

ಕಲ್ಲಾಕಿತ್[2] /*kalla:kiti*/ ನಾ. ಯಾರಾದರು ತೊಂದರೆ ನೀಡಿದಾಗ ಬೇಸರದಿಂದ ಹೇಳುವ ಮಾತು. to indicate trouble caused by others. ವಾ: ಅಂವ ಉಂಬೊ ಅನ್ನಕು ಕಲ್ಲಾಕಿತ್.

ಕಲ್ಲಾಜೆ /*kalla:rε*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಏನೆಕಲ್ಲು ಗ್ರಾಮದ ಜಾಗ. 1. family, 2. lineage, 3. a locality in Enekallu village in Sullia Taluk of Dakshina Kannada District.

ಕಲ್ಲಾಟ /*kalla:ṭa*/ ನಾ. ಸಣ್ಣ ಮಕ್ಕಳ ಕಲ್ಲಿನಾಟ. children playing with marble/stones. ವಾ: ಏಳ್ ಉರ್‌ಟು ಸಣ್ಣ ಕಲ್ಲಿದ್ದರೆ ಕಲ್ಲಾಟ ಆಡಕಿತ್ತ್ (ಕಲ್ಲಾಟ ಗೂಡೆಗ ಆಡ್ದುನೆ). ಪ: ಕಲ್ಲಾಟಾಡಿಕನ – ಕಲ್ಲಾಟ ಆಡುವಾಗ

ಕಲ್ಲಿಗೆ ಮುಳ್ಳು ಹಾಕಂವ /*kallige muḻḻu ha:kanva*/ ನಾವಿ. ಸವೆದ ಕಡಿವ ಕಲ್ಲು, ಬೀಸುವ ಕಲ್ಲಿಗೆ ಉಳಿ ಹಾಕುವವನು. a stone mason who repairs griding stone. ವಾ: ಹಳ್ಳಿಗಳ ಮನೆ ಮನೆಗೆ ಕಲ್ಲಿಗೆ ಮುಳ್ಳು ಹಾಕಂವ ಬಾತಿತ್, 'ಕಲ್ಲ್ ಮುಳ್ಳೋ'ತ ಅಂವ ಹೇಳಿಕಂಡ್ ಬಾತಿತ್.

ಕಲ್ಲು /*kallu*/ ನಾ. 1. ಕಲ್ಲು, 2. ಶಿಲೆ. 1. a stone, 2. a rock. ವಾ: ಕಲ್ಲು ರಟ್ಟಿದ್.

ಕಲ್ಲುಗದ್ದೆ /*kallugaddε*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕಲ್ಲುಗುಂಡಿ /*kalluguṇḍi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಸಂಪಾಜೆ ಗ್ರಾಮದ ಜಾಗ. kallugundi locality in Sampaje village in Sullia Taluk of Dakshina Kannada District.

ಕಲ್ಲುಗುಡ್ಡೆ /*kalluguḍḍε*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕಲ್ಲುಚರ್ಪೆ /*kallucarpe*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಆಲೆಟ್ಟಿ ಗ್ರಾಮದ ಜಾಗ. a locality in Aletti village in Sullia Taluk of Dakshina Kannada District.

ಕಲ್ಲುಚೆರ್ಪೆ /*kallucεrpε*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕಲ್ಲುಮುಟ್ಲು /*kallumuṭlu*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಸುಳ್ಯ ನಗರ, ಅರಂತೋಡಿನ ಜಾಗ. 1. family, 2. lineage, 3. a locality in Suḷya Nagara, Aranthodu village in Sullia Taluk of Dakshina Kannada District.

ಕಲ್ಲುರ್ಟಿ /*kallurṭi*/ ನಾ. 1. ಆದಿಶಕ್ತಿ, 2. ದೇವಿಯ ಅಂಶವಿರುವ ದೈವ ಎಂಬ ನಂಬುಗೆಯಿಂದ ಆರಾಧನೆಗೆ ಒಳಪಡುವ ದೈವ, 3. ಪಾಷಾಣಮೂರ್ತಿ ದೈವ, 4. ಸ್ತ್ರೀ ಶಕ್ತಿಯ ಆರಾಧನೆ. 1. Kallurti, the creator and the destroyer of the universe 2. Kallurti, a daiva/bhuta/spirit with elements of goddess in him, 3. Pashanamoorthi deity,

4. worshipping female form of goddess. ವಾ: ವರ್ಸಕೊಮ್ಮೆ ಕಲ್ಲುರ್ಟಿ ಕೋಲ ಕೊಡ್ತು.

ಕಲ್ಲುಳಿ /*kalluḷi*/ ನಾ. ಕಲ್ಲುಳಿ. making/carving a hole in the stone. ವಾ: ಕಲ್ಲುಳಿಲಿ ಕೆತ್ತುದು.

ಕಲ್ಲೆ /*kallɛ*/ ನಾ. ಭತ್ತದ ಮುಡಿಯನ್ನು ಕಟ್ಟಲು ಬೆತ್ತದಿಂದ ಮಾಡಿದ ಪರಿಕರ. cane strips used in tying a bundle of paddy.

ಕಲ್ಲೆಂಬಿ /*kallembi*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಆಲೆಟ್ಟಿ ಗ್ರಾಮದ ಜಾಗ. 1. family, 2. lineage, 3. a locality in Aletti village in Sullia Taluk of Dakshina Kannada District.

ಕಲ್ಲೆಗ /*kallɛga*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕಲ್ಲೆತ್ತುದು /*kallɛttudu*/ ನಾ. ಭಾರ ಎತ್ತುವುದು. lifting weight. ವಾ: ಕಲ್ಲೆತ್ತುದು ಅಸ್ಟ್ ಸುಲಬನ?

ಕಲ್ಲೆಮಠ /*kallemaṭha*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಹರಿಹರ ಪಲ್ಲತಡ್ಕ ಗ್ರಾಮದ ಜಾಗ. a locality in Harihara Pallatadka village in Sullia Taluk of Dakshina Kannada District.

ಕಲ್ಲೆಮ್ಮನ /*kallɛmmana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕಲ್ಲೇರಿ /*kalle:ri*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಎಣ್ಮೂರು ಗ್ರಾಮದ ಜಾಗ. 1. family, 2. lineage, 3. a locality in Enmuru village in Sullia Taluk of Dakshina Kannada District.

ಕಲ್ಲೊತ್ತು /*kallɔttu*/ ನಾ. 1. ಅಂಗಾಲು ಅಥವಾ ಹಿಮ್ಮಡಿಗೆ ಕಲ್ಲು ಒತ್ತಿ ಉಂಟಾಗುವ ಗಂಟು, 2. ಆಣಿ. corns and callus in the feet. ವಾ: ಕಾಲ್‌ಲಿ ಕಲ್ಲೊತ್ತು ಆವುಟು.

ಕಲ್ಲ್ /*kallɨ*/ ನಾ. 1. ಕಲ್ಲು, 2. ಶಿಲೆ. 1. a stone, 2. a rock. **ಒಂದೇ ಕಲ್ಲ್‌ಲಿ ಎರಡ್ ಹಕ್ಕಿ(ನು).** ವಾ: ನಾಯಿಗೆ ಕಲ್ಲ್ ಹೊಡೆನೊ. ಪ: ಕಲ್ಕೊಟ್ಟನೆ – ಕಲ್ಲು ಕೊಡುತ್ತೇನೆ

ಕಲ್ಲ್ ನೇಚುದು /*kallu ne:cudu*/ ನಾ. ಜನಪದ ಆಟ. a folk game. ವಾ: ದಾರಿಗೆ ಬಿದ್ದ ಕಲ್ಲು ನೇಚುದು ಯಾಗ.

ಕಲ್ಲ್‌ಕರ್ಪ /*kallɨ karpa*/ ನಾ. 1. ಮೀಸೆಯುಳ್ಳ ಒಂದು ವಿಧದ ನದಿ/ತೋಡು ಮೀನು, 2. ಚೀಕೊಟೆ(ತು). 1. a fish with moustache/whisker 2. a variety of fish. ವಾ: ಕಲ್ಲ್‌ಕರ್ಪಂತೇಳ್‌ವ ಮೀನ್‌ಗಡ ಅದ್.

ಕಲ್ಲ್‌ಕಾವ್ಲಿ /*kallɨ ka:vli*/ ನಾ. 1. ಬಳಪ ಕಲ್ಲಿನ ಕಾವಲಿ, 2. ರೊಟ್ಟಿ ಕಾವಲಿ. 1. soapstone tawa, 2. roti tawa. ವಾ: ಕಲ್ಲ್‌ಕಾವ್ಲಿ ಲಿ ನೀರ್ ದೋಸೆ ಹೊಯ್ಯದು.

ಕಲ್ಲ್‌ಕೂವೆ /*kallɨ ku:vɛ*/ ನಾ. ಕುಮುದ ಗೆಡ್ಡೆ. Kalanchoe glandulosa. ವಾ: ಚಾಯಕೆ ಕಲ್ಲ್ ಕೂವೆ.

ಕಲ್ಲ್‌ಕೋರೆ /*kallɨ kɔ:rɛ*/ ನಾ. ಕ್ವಾರಿ. stone quarry. ವಾ: ಕಲ್ಲ್ ಕೋರೆಲಿ ಕೆಲ್‌ಸ ಮಾಡ್‌ದು.

ಕಲ್ಲ್‌ಗುಂಡು /*kallguṇḍɔ*/ ನಾ. ಕಲ್ಲಿನ ಗುಂಡು. a stone ball. ವಾ: ಕಲ್ಲುಂಡೊ ಬಾರಿ ಬಾರ.

ಕಲ್ಲ್‌ಚಡ್ಲೆ /*kallɨ caḍlɛ*/ ನಾ. ಇದೊಂದು ಕಟ್ಟಿಗೆಯ ಮರ, ಈ ಮರ ಕೊಂಚ ಗಟ್ಟಿ ಜಾಸ್ತಿ. a hardwood tree, used for fuel. ವಾ: ಹೆಣ ಸುಡಿಕನ ಕಲ್ಲ್ ಚಡ್ಲೆ ಮರನ ಬಳ್‌ಸುವೆ.

ಕಲ್ಲ್‌ನಂತ /*kallɨnanta*/ ನಾವಿ. 1. ಕಲ್ಲಿನಂತಹ, 2. ಕಠೋರ. 1. like that of stone, 2. hard. ವಾ: ಕಲ್ಲ್ನಂತ ಮನ್ಸ್.

ಕಲ್ಲ್‌ಪಣೆ /*kallɨ paṇɛ*/ ನಾ. ಮುರಕಲ್ಲು ಕಡಿಯುವ ಜಾಗ. a laterite quarry. ವಾ: ಕಲ್ಲ್‌ಪಣೆ ಹತ್ತ್ ರ ಕುದ್.

ಕಲ್ಲ್‌ಬಾಗೆಮರ /*kallɨ ba:gɛ mara*/ ನಾ. ಇದು ಹೆಚ್ಚು ಗಟ್ಟಿ ಮರ. ಇದನ್ನು ಪೀಠೋಪಕರಣಕ್ಕೆ ಬಳಸುವರು. a hardwood tree, used for furniture. ವಾ: ಕಲ್ಲ್ ಬಾಗೆ ಮರ ಬಾರಿ ಗಟ್ಟಿನ ಮರ.

ಕಲ್ಲ್‌ಬಾಳೆ /*kallɨ ba:ḷɛ*/ ನಾ. ಕಲ್ಲುಬಾಳೆ, ಕಾಡುಬಾಳೆಗಿಡ, ಒಂದು ವಿಧದ ಬಾಳೆ. a kind of wild plantain in which there are stone like seeds inside the fruit and hence are uneatable; the wild plantain tree. ವಾ: ಕಲ್ಲ್ ಬಾಳೆನ ಬೀಜನ ವಣ್‌ಗಿಸಿ ಮಿದ್ದ್ ಹೊಡಿಮಾಡಿ

ಹೊತಾರೆ ನೀರೊಟ್ಟಿಗೆ ಸೇರ್‌ಸಿ ಕುಡ್‌ದರೆ ಕಿಡ್ನಿಲಿರೊ ಕಲ್ಲ್ ಹೋದೆ.

ಕಲ್ಲ್‌ಬಿತ್ /*kallɨ bitɨ*/ ನಾ. ಕಾಲಿನ ಹಿಮ್ಮಡಿ ನೋವು. pain the heels. ವಾ: ಕಲ್ಲ್‌ಬಿತ್ ಸುರಾತ್.

ಕಲ್ಲ್‌ಮುಳ್ಳ /*ka:llɨmuḷḷa*/ ನಾ. 1. ಒಂದು ವಿಧದ ನದಿ ಮೀನು, 2. ಕಳಂಬುರ ಮೀನ್. a fresh water fish. ವಾ: ಕಲ್ಲ್ ಮುಳ್ಳತ ಒಂದ್ ಜಾತಿನ ಮೀನ್.

ಕಲ್ಲ್‌ವಾಟೆ /*kallɨ va:ṭɛ*/ ನಾ. ಹೊಳೆ ಬದಿಯಲ್ಲಿ ಬೆಳೆಯುವ ಬಿದಿರು ಜಾತಿಯ ಹುಲ್ಲು. a plant grown on the riverbank. ವಾ: ಕಲ್ಲ್ ವಾಟೆ ಬಾರಿ ಎತ್ರ ಹೋವುಟು.

ಕಲ್ಲ್‌ಸಕ್ಕರೆ /*kallɨ sakkarɛ*/ ನಾ. 1. ಕಲ್ಲು ಸಕ್ಕರೆ, 2. ಗಟ್ಟಿಯಾದ ಸಕ್ಕರೆ ತುಂಡು. 1. crystal sugar, 2. rock candy. ವಾ: ಬೊಂಡದೊಟ್ಟಿಗೆ ಕಲ್ಲ್ ಸಕ್ಕರೆ ಹಾಕಿ ಕುಡ್‌ದವೆ.

ಕಲ್ಲ್‌ಹಾಕ್[1] /*kallɨ ha:kɨ*/ ಕ್ರಿವಿ. 1. ಕೆಟ್ಟದ್ದನ್ನು ಮುಚ್ಚು, 2. ತಿಂದದ್ದು ಕರಗದೇ ಇರು. 1. to cover up the wrong/bad, 2. a state of indigestion. ವಾ: ಬೇರೆವರ ತಲೆಗೆ ಕಲ್ಲ್ ಹಾಕಿಕೆ ಬೊತ್ತು.

ಕಲ್ಲ್‌ಹಾಕ್[2] /*kallɨ ha:kɨ*/ ನಾ. ಮೃತರ ಸಾವಿನ ನಂತರ ನಡೆಯುವ ಒಂದು ಕ್ರಮ, ಮೃತರ ಹೆಸರಿನಲ್ಲಿ ಗುರುಕಾರ್ನೂರ್‌ಗೆ ಬಡಿಸುವುದು. a custom of serving food in the name of the dead. ವಾ: ಕೆಲವ್ ಕಡೆ ಅವುಲ್ ಹಾಕಿಕೆ ಆಗದ್ದರೆ ಕಲ್ಲ್ ಹಾಕುವೆ.

ಕಲ್ಸ್[1] /*kalsɨ*/ ನಾ. 1. ಕಲಸುವುದು, 2. ಮಿಶ್ರ ಮಾಡುವುದು. 1. to mix, 2. to blend. ವಾ: ಗೋದಿ ಹೊಡಿನ ಕಲ್ಸಿ ಹಷ್ಟ ಹೊತ್ತು ಇಸೊಕು. ಪ: ಕಲ್ಸಿಕಿಲ್ಲೆ – ಕಲಸುವುದಿಲ್ಲ; ಕಲ್ಸಿತ್ – ಕಲಸಿದಳು; ಕಲ್ಸಿದೊ – ಕಲಸಿದರು; ಕಲ್ಸೋಕು – ಕಲಸಬೇಕು; ಕಲ್ಸ್‌ಂತ – ಕಲಸು ಎಂದು

ಕಲ್ಸ್[2] /*kalsɨ*/ ಕ್ರಿ. ಕಲಿಸು. to teach. ವಾ: ಓದಿಕೆ ಕಲ್ಸ್. ಪ: ಕಲ್ಸಿತ್ – ಕಲಿಸಿದನು/ಳು; ಕಲ್ಸಿದೊ – ಕಲಿಸಿದರು; ಕಲ್ಸೋಕು – ಕಲಿಸಬೇಕು; ಕಲ್ಸಿನಿ – ಕಲಿಸಿರಿ; ಕಲ್ಸಿದ – ಕಲಿಸಿದ; ಕಲ್ಸಿ – ಕಲಿಸಿ

ಕವಂಗ /*kavaŋga*/ ನಾ. ದೊಡ್ಡ ಪಾತ್ರೆಯಿಂದ ಚಿಕ್ಕ ಪಾತ್ರೆಗೆ ಬಡಿಸಲು ಉಪಯೋಗಿಸುವ ಕೈಯುಳ್ಳ ಪಾತ್ರೆ. a utensil (vessel) with a handle, usually used in transferring liquid from a big vessel to a small vessel. ವಾ: ಉದ್ದನ ಚೆಟ್ಟಿಂದ ಕವಂಗಕೆ ಹಾಕಿಸಿಕಂಬದು.

ಕವಡೆ /*kavaḍɛ*/ ನಾ. ತಳ್ಳುವ ಕವೆ. a forked stick. **ಅಂವನತ್ರ ಕೊಕ್ಕೆನೂ ಉಟ್ಟು ಕವಡೆನೂ ಉಟ್ಟು(ಗಾ).** ವಾ: ಕೊಕ್ಕೆನೂ ನಿಂದೇ ಕಬುರುನೂ ನಿಂದೇ.

ಕವಣೆ /*kavaṇɛ*/ ನಾ. ಕಲ್ಲನ್ನು ದೂರಕ್ಕೆ ಎಸೆಯಲು ಹಗ್ಗದಿಂದ ಮಾಡಿದ ಸಾಧನ. a catapult, a sling. ವಾ: ಮರಲಿರ್‌ವ ಹಣ್ಣ್ ನ ಕವಣೆಲಿ ಹೊಡ್‌ದ್ ಬೀಳ್‌ಸುದು.

ಕವಳ /*kavaḷa*/ ನಾ. ದನಗಳ ಕಣ್ಣಿನಲ್ಲಿ ಪೊರೆಯ ರೀತಿ ಕಾಣಿಸಿಕೊಳ್ಳುವ ರೋಗ. cataract in the cattle. ವಾ: ದನಗಳ ಕಣ್ಣಿಗೆ ಕವಳತೇಳ್‌ವ ಕಾಯ್‌ಲ ಬಂದದೆ.

ಕವಳೆ ಹಿಡಿ /*kavaḷɛ hɘḍi*/ ನಾ. ವೀಳ್ಯದೆಲೆಗಳನ್ನು 25ರಂತೆ ಅಟ್ಟಿ ಇಡುವುದು. a bunch of betel leaves – 25 betel leaves. ವಾ: ಕವಳೆ ಹಿಡಿ ತಂದನ? ಪ: ಕವುಳಿ, ಕವುಳೆ, ಕವುಲೆ(ತು)

ಕವಳೆ[1] /*kavaḷɛ*/ ನಾ. 25 ವೀಳ್ಯದೆಲೆಗಳುಳ್ಳ ಒಂದು ಅಟ್ಟಿ, 4 ಕವಳೆ = 1. ಸೂಡಿ. a bunch of betel leaves – 25 betel leaves. ವಾ: ಒಂದ್ ಕವಳೆ ಎಲೆ ತಕಂಬನೊ.

ಕವಳೆ[2] /*kavaḷɛ*/ ನಾ. ಮಳೆಗಾಲದಲ್ಲಿ ಸದಾ ಹೊಗೆ ತುಂಬಿರುವ ಸ್ಥಳ, ಮದೆನಾಡಿನ ಮುಖ್ಯ ಜಾಗ- ಕವಳೆಪೇಟೆ. Kavalepete, a town. ವಾ: ಕವಳೆತೇಳಿರೆ ಮಳ್‌ಗಾಲಲಿ ಹೊಗೆ ತುಂಬಿಕಂಡಿರೊ ಜಾಗೆತ.

ಕವಿ /*kɘvi*/ ನಾ. 1. ಕವಿತೆ ರಚಿಸುವವ, 2. ಮೇಧಾವಿ, 3. ಕಬ್ಬಿಗ. 1. a poet, 2. an intelligent person, 3. a poet. ವಾ: ಕವಿ ಕಣ್ಣಾರೆ ಕಂಡ ಸಂಗತಿಗಳಿಗೆ, ಕಲ್ಪನೆಗಳಿಗೆ ಬಾವದೊಟ್ಟಿಗೆ ಜೀವ ತುಂಬಿ ಮನ್ಸಿಗೆ ಮುಟ್ಟುವಂಗೆ ತಿಳ್‌ಸಿ ಹೇಳುವೆ.

ಕವೆ[1] /*kavɛ*/ ನಾ. ಕವಡೆ. cowrie shells.

ಕವೆ[2] /*kavɛ*/ ನಾ. 1. ಕಂಬ, 2. ಕವಲಾಗಿರುವ ಮರದ ಕೋಲು, 3. ಕವೆಗೋಲು. 1. a pillar, 2. a forked stick, 3. a pitchfork. ವಾ: ಚಪ್ಪರದ ನಾಕ್ ಮೂಲೆಗೆ ಕವೆ ಕೊಡೊಕು.

ಕವ್ಕೋಲು ಬಳೆ /*kavko:lu baḷɛ*/ ನಾ. ಕವ್ಕೋಲು ಮೇಲಿನ ರೀಪರ್, ರೀಪರಿಗಿಂತ ಎರಡು ಪಟ್ಟು ದಪ್ಪ ಇರುವುದು ಬಳೆ, ಅದರ ಮೇಲೆ ಹಂಚನ್ನು ಕೂರಿಸಲಾಗುವುದು. trusses and rafters. ವಾ: ಕವ್ಕೋಲು ಬಳೆ ಮೇಲೆ ಹಂಚಿನ ಕೂರ್‌ಸಿವೆ.

ಕವ್ಕೋಲ್ /*kavko:lɨ*/ ನಾ. 1. ಕವ್ಕೋಲು, 2. ಹಂಚು ಜೋಡಿಸಲು ಮೇಲಿನಿಂದ ಕೆಳಗೆ ಜೋಡಿಸುವ ಕುಯ್ದು ಮರ. roof battens. ವಾ: ಕೊಟಗೆದ್ ಕವ್ಕೋಲ್ ಗೆದ್ಲ್ ತಿಂದ್ ಎಲ್ಲ ಹೋವುಟು.

ಕವ್‌ಚ್ /*kaɨvcɨ*/ ನಾ. 1. ಹೊಟ್ಟೆ ಅಡಿ ಬೆನ್ನು ಮೇಲು ಮಾಡಿ ಮಲಗು, 2. ಕವುಚು, 3. ವಸ್ತುವನ್ನು ಕವುಚಿ ಹಾಕು. 1. a prone position, 2. put something upside down, 3. face downwards. ವಾ: ಕುಕ್ಕೆ ಕವ್‌ಚ್, ಕೋಳಿ ಮುಚ್ಚು.

ಕವ್ಟೆಕಾಯಿ /*Kavṭɛ ka:yi*/ ನಾ. ಕಹಿಯಿಂದ ಕೂಡಿದ ಕಾಡು ಸೌತೆಕಾಯಿ. wild cucumber. ವಾ: ಕವ್ಟೆ ಕಾಯಿ ಬಾರಿ ಕಂಯಿ.

ಕವ್ಡಿಆಟ /*kavḍi a:ṭa*/ ನಾ. 1. ಕವಡೆ ಆಟ, 2. ಕವುಡೆ ಆಟ. a game played with cowry shells. ವಾ: ಬನ್ನಿ ಕವ್ಡಿ ಆಟ ಆಡ್‌ನೊ.

ಕವ್ಡೆ[1] /*kavḍɛ*/ ನಾ. 1. ಕವಡೆ, 2. ಕವುಡೆ, 3. ಒಂದು ಬಗೆಯ ಗಿಡ. 1. cowry shells, 2. cowry shells, 2. a variety of plant. ವಾ: ಸಾಸ್ತ್ರ ನೋಡಿಕನ ಕವ್ಡೆ ಹಾಕಿ ನೋಡಿ ಹೇಳ್‌ವೆ.

ಕವ್ಡೆ[2] /*kavḍɛ*/ ನಾ. ದನಗಳು ಹೊಲ ಗದ್ದೆಗಳಿಗೆ ಹೋಗದಂತೆ, ಬೆಲಿ ಹಾರದಂತೆ ಗುಣಾಕಾರದ ಆಕಾರದಲ್ಲಿ ಕುತ್ತಿಗೆಗೆ ದಪ್ಪ ಕೋಲಿನಿಂದ ಕಟ್ಟುವುದು. forked branches tied around the neck of a cattle to restrain them from entering the field of others. ವಾ: ದನದ ಕುತ್ತಿಗೆಗೆ ಬೇಲಿ ಹಾರ್‌ದೆತ ಕವ್ಡೆ ಕಟ್ಟಿಯೊಳೊ.

ಕವ್ಡೆಬಿಲ್ಲ್ /*kavḍɛ billɨ*/ ನಾ. 1. ರಬ್ಬರ್ ಬಿಲ್ಲು, 2. ಕಲ್ಲನ್ನು ಎಸೆಯುವ ಒಂದು ಸಾಧನ. 1. a catapult, 2. a sling. ವಾ: ಕವ್ಡೆ ಬಿಲ್ಲ್ ಲಿ ಒಂದ್ ಬುಟ್ಟತ್.

ಕವ್ಣೆ /*kavṇɛ*/ ನಾ. 1. ಗೊರಸು, 2. ದನ, ಕುದುರೆ ಮುಂತಾದವುಗಳ ಕೊಳಗು, 3. ಖುರ. hoof of cattle, horse etc. ವಾ: ಕವ್ಣೆಗೆ ಲಾಳ ಹೊಡ್‌ದವೆ.

ಕವ್ನ /*kɘvna*/ ನಾ. 1. ಕವನ, 2. ಕವಿತೆ, 3. ಕಾವ್ಯ, 4. ಪದ್ಯ. poetry. ವಾ: ಕವ್ನ ಬರೆಯೊದು.

ಕವ್ಲ್ /*kavlɨ*/ ನಾ. 1. ಕವಲು, 2. ಟಿಸಿಲು, 3. ಸೀಳು. 1. fork, 2. branch, 3. split. ವಾ: ಕವ್ಲ್ ವಡ್‌ದ ಎಡ್ದ ಬರಿನ ಹಾದಿಲಿ ಹೋದರೆ ಹೊಳೆಗೆ ಹೋಕ್.

ಕಸ[1] /*kɘsa*/ ನಾ. ಕಸುವಿನ ಗಿಡ. Colocasia / Taro plant.

ಕಸ[2] /*kɘsa*/ ನಾ. 1. ಹಸು ಕರು ಹಾಕಿದ ಮೇಲೆ ಬೀಳುವ ಗರ್ಭದ ಹೊರೆ, 2. ಹೆರಿಗೆಯ ನಂತರ ಬರುವ ರಕ್ತ ಮಿಶ್ರಿತ ಮಾಂಸ. 1. placenta, 2. placenta and other membranes. ವಾ: ಕರ್ ಹಾಕಿಕನ ಕಸ ಬೀಳ್‌ದು.

ಕಸಂಡ್ ವಾಸ್ನೆ /*k1saṇḍɨ va:snɛ*/ ನಾ. ಜಿಡ್ಡು ಪದಾರ್ಥವನ್ನು ತುಂಬ ದಿನ ಹಾಗೆಯೇ ಬಿಟ್ಟಾಗ ಬರುವ ಹುಳಿಹುಳಿ ವಾಸನೆ. rancid smell.

ಕಸರತ್ /*kasaratɨ*/ ನಾ. ಏಪ. 1. ವ್ಯಾಯಾಮ, 2. ಶಕ್ತಿಯ ಹಾಗೂ ಚಮತ್ಕಾರದ ಪ್ರದರ್ಶನ, 3. ಒಳ ಉಪಾಯ. 1. exercise, 2. a display of power and trick, 3. secret plan. ವಾ: ಕಸರತ್ ಮಾಡಿ ಕೆಲ್‌ಸಕೆ ಸೇರ್‌ತ್.

ಕಸಾಯ /*kasa:ya*/ ನಾ. ಕಷಾಯ, ಎಲೆ, ಮೂಲಿಕೆ, ತೊಗಟೆ, ಬೇರುಗಳನ್ನು ಕುದಿಸಿ ತಯಾರಿಸುವ ದ್ರವ ಔಷಧ. a concoction made of boiled herbs, roots and bark. ವಾ: ಸೀತಕೆ ಸುಂಟಿ ಕಸಾಯ ಮಾಡಿ ಕುಡ್ದರೆ ಒಳ್ಳೆದಾದೆ.

ಕಸಿ /*kɘsi*/ ನಾ. 1. ಕಸಿ ಮಾಡುವುದು, 2. ಕಲಮಿ, 3. ಗಿಡ+ ಗಿಡ ಬೆಸೆದು ಸಸಿ ಮಾಡುವುದು. grafting. ವಾ: ದಾಸ್ವಾಳ ದೈಗೆ ಕಸಿ ಮಾಡ್ದು.

ಕಸೆಂಟ್ /*kaseṇṭɨ*/ ನಾ. 1. ಕಮಟು ವಾಸನೆ, 2. ಕೆಟ್ಟದಾದ, 3. ಕ್ಷುಲ್ಲಕವಾದ, 4. ಬೈಗುಳ ಪದ. 1. rancidity, 2. bad, 3. mean, 3. an expletive. ವಾ: ತುಪ್ಪ ಹಣ್ಣ ಕಸೆಂಟ್ ಬಂದದೆ. ಪ: ಕಸಂಟ್(ತು)
ಕಸೆಂಟ್ ಎಣ್ಣೆ /*kɘsɛṇṭi ɛṇṇɛ*/ 1. ಜಿಡ್ಡು ಎಣ್ಣೆ, 2. ಕಮಟುವಾಸನೆ ಎಣ್ಣೆ. rancid – unpleasant smell from oil. ವಾ: ಕಸೆಂಟ್ ಎಣ್ಣೆನ ಬಳ್‌ಸಿಕೆ ಆದುಲೆ.

ಕಸ್ಂಡ್[1] /*kɘsiṇḍɨ*/ ನಾ. 1. ಎಣ್ಣೆ ಪದಾರ್ಥಗಳು

ಕೆಟ್ಟಾಗ ಬರುವ ಗಮಟು ವಾಸನೆ, 2. ಜಿಡ್ಡು ವಾಸನೆ. rancid smell. ವಾ: ಹಾಲ್ ಕಾಸೊ ಪಾತ್ರ ಕಸ್ಂಡ್ ಬಂದದೆ.

ಕಸ್ಂಡ್[2] /*kɘsiṇḍi*/ ನಾ. 1. ಅನಾಗರಿಕ, 2. ಸೌಜನ್ಯತೆ ಇಲ್ಲದವ, 3. ಉತ್ತಮ ಸಂಬಂಧ ಹೊಂದದವ, 4. ಬೈಗುಳ ಪದ. 1. uncivilised, 2. discourteous, 3. the one who has strained relationship, 4. an expletive/ a swear word. ವಾ: ಅಂವ ಕಸ್ಂಡ್ ಮೊನ್ಸ.

ಕಸ್ಬು /*kasbu*/ ನಾ. 1. ಕಸುಬು, 2. ಉದ್ಯೋಗ, 3. ಕೆಲಸ. 1. career, 2. job, 3. work. ವಾ: ನಿಮ್ಮದ್ ಎಂತ ಕಸ್ಬು?

ಕಸ್ರಿಕೆ /*kasrikɛ*/ ಕ್ರಿ. ಕಟ್ಟಿದ ದಾರದಿಂದ ಬಿಗಿಗೊಂಡ ಗುರುತು. marks of thread found on the skin. ವಾ: ಕರ್‌ನ ಕಟ್ಟಿಹಾಕಿದರ್ಲಿ ಕುತ್ತಿಗೆಲಿ ಕಸ್ರಿಕೆ ಬಿದ್ದುಟು.

ಕಳ[1] /*kaḷa*/ ನಾ. 1. ಪಾತಿ, 2. ತರಕಾರಿ ಅಥವಾ ಹೂವಿನ ಪಾತಿ. 1. a seed bed, 2. a seedling bed to grow vegetable or flowering plant. ವಾ: ಕಳ ಉದ್ದೋಕೆ ಉಟ್ಟು.

ಕಳ[2] /*kaḷa*/ ನಾ. 1. ಕಣ, 2. ಭತ್ತ ಬಡಿಯುವ ಸ್ಥಳ, 3. ಕಾಫಿ ಒಣಗಿಸುವ ಸ್ಥಳ, 4. ಧಾನ್ಯಗಳನ್ನು ಒಕ್ಕುವ ಸ್ಥಳ, 5. ಸಸಿ ನೆಡುವ ಮಡಿ. 1. a threshing floor, 2. a place/floor where paddy is threshed, 3. a patio where coffee is sun dried, 4. place where harvest crop is stored/ kept, 5. a seed bed. ವಾ: ಕಳಲಿ ಒಳ್ಳಮೆಣ್ಸ್ ಕಾಪಿನ ವಣ್ಗಿಕೆ ಹಾಕಿದೊ.

ಕಳಂಕ್ /*kɘḷaŋki*/ ನಾ. ಮಣ್ಣುಮಿಶ್ರಿತ ಕೆಂಪು ನೀರು. muddy water. ವಾ: ಇಜ್ಜಾಲ್ ಗೆ ಕಳಂಕ್ ನೀರ್ ಹರ್‌ದ್ ಬಾತ್.

ಕಳಂಜ /*kaḷaɲja*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕಳಂಜ ಗ್ರಾಮದ ಜಾಗ. 1. family, 2. lineage, 3. a locality in Kalanja village in Sullia Taluk of Dakshina Kannada District.

ಕಳಂಜನ /*kaḷaɲjana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕಳಂಜಿ ಕಾಯಿ /*kaḷaŋji ka:yi*/ ನಾ. ಗಜ್ಜೆಗಕಾಯಿ, 2. ಚಿಟ್ಟಿಕಾಯಿ. nicker bean, yellow nicker. ವಾ: ಕಳಂಜಿ ಕಾಯಿನ ಜೆರಕೆ ಮೊದ್ದ್ ಮಾಡಿ ಕೊಟ್ಟವೆ.

ಕಳಂತೆ /*kaḷantɛ*/ ನಾ. ಕಳದಲ್ಲಿ / ಪಾತಿಯಲ್ಲಿ ಬೆಳೆಸಿದ ಸೌತೆಕಾಯಿ. a cucumber grown in a seed-bed. ವಾ: ಕಳಂತೆಲಿ ಬೆಳ್‌ದ ಸೋಂತೆ.

ಕಳಗಿ /*kaḷagi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕಳತ್ತಾಜೆ /*kaḷatta:je*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮುರುಳ್ಯ ಗ್ರಾಮದ ಜಾಗ. a locality in Murulya village in Sullia Taluk of Dakshina Kannada District.

ಕಳಲೆ /*kaḷalɛ*/ ನಾ. ಎಳೆ ಬಿದಿರು, ವಿವಿಧ ಖಾದ್ಯಗಳನ್ನು ಇದರಿಂದ ತಯಾರಿಸುತ್ತಾರೆ. bamboo shoot. ವಾ: ಕಳಲೆ ಗೈಪು ಸುಮಾರ್ ಸಲ ಮಾಡಿದ್ದೊ. ಪ: ಕಣಲೆ; ಕಣಿಲೆ; ಕಣಿರೆ

ಕಳಸ /*kaḷasa*/ ನಾ. 1. ಕಳಸ, 2. ಕೊಡದ ಆಕಾರದಲ್ಲಿದ್ದು ಸ್ವಲ್ಪ ಉದ್ದ ಕೊರಳಿರುವ ಲೋಹದ ಸಣ್ಣ ಪಾತ್ರೆ, 3. ಮದುವೆ ಮತ್ತಿತರ ಶುಭಕಾರ್ಯಗಳಲ್ಲಿ ಬಳಸುತ್ತಾರೆ. a copper pitcher used during auspicious occasions with decorations of mango leaves, coconut, flowers, etc. ವಾ: ಕಳಸ ಇಸಿಕೆ ಮಾಯ್ನ ಎಲೆ, ಅಕ್ಕಿ, ಹೂವ್, ಕಾಯಿ ಎಲ್ಲ ಬೇಕ್.

ಕಳಸಕನ್ನಡಿ /*kaḷasakannaḍi*/ ನಾ. ಮದುವೆ ಶಾಸ್ತ್ರಗಳಲ್ಲಿ ಕಂಚಿನಕ್ಕಿ ಹಿಡಿಯುವ ಅಕ್ಕಿ ತೆಂಗಿನಕಾಯಿ ಗಿಂಡಿಚೆಂಬುಗಳಿಂದ ಕೂಡಿದ ಆರತಿ ತಟ್ಟೆ, ಕಳಸಕನ್ನೆಡಿ. a ritual of keeping a Kalasha Kannadi (a copper pitcher with a mirror) on a bronze platter. On the platter, rice is spread first and water is sprinkled on to it. Then, a water filled copper pitcher with a coconut and with decorations of mango leaves is. ವಾ: ಕಳಸಕನ್ನಡಿನ ಮೊದ್ವೆಲಿ ಹಿಡ್ಯದು.

ಕಳಸಿಗೆ[1] /*kaḷasigɛ*/ ನಾ. 14 ಸೇರುಗಳಷ್ಟು ಧಾನ್ಯ

ಹಿಡಿಯುವ ಅಳತೆಯ ಮರ ಅಥವಾ ಬೆತ್ತದಿಂದ ಮಾಡಿದ ಸಾಧನ. a cane basket that can hold 14 seers of grains. ವಾ: ಕಳಸಿಗೆನ ಎಲ್ಲಿಸಿದ?

ಕಳಸಿಗೆ[2] /*kaḷasigɛ*/ ನಾ. ಹಿಟ್ಟಿನಂತಹ ಪದಾರ್ಥಗಳನ್ನು ಹಬೆಯಲ್ಲಿ ಬೇಯಿಸಲು ಬಳಸುವ ಒಂದು ವಿಧದ ಪಾತ್ರೆ. a vessel used for steaming food. ವಾ: ಕಳಸಿಗೆಲಿ ಕಡುಂಬು ಮಾಡಿ ಬೇಯಕೆ ಹಾಕುದು.

ಕಳಸೊಂತೆಕಾಯ್ /*kaḷasɔntɛka:yɨ*/ ನಾ. ಮಂಗಳೂರು ಸೌತೆ. Mangalore/Madras/ Malabar cucumber. ವಾ: ಕಳಸೊಂತೆಕಾಯ್ ಗೈಪು, ಪಲ್ಯ ಮಾಡಕ್.

ಕಳಿ ಅಡಿ /*kaḷi aḍi*/ ನಾ. ಬೆಸಗೆಯ ಅಡಿಭಾಗ. under the shelf. ವಾ: ಕಳಿ ಅಡಿಲಿ ಕರಿ ಹಿಡ್ದುಟು.

ಕಳಿ ಕೋಲು /*kaḷi ko:lu*/ ನಾ. ಅಡುಗೆಯನ್ನು ತಿರುಗಿಸಲು ಬಳಸುವ ಮರದ ಕೋಲು. a long piece of wood used in mixing food items. ವಾ: ಕಳಿಲಿ ಹಿಟ್ಟ್‌ನ ತಿರ್ಗ್‌ಸ್.

ಕಳಿ ಮರ /*kaḷi mara*/ ನಾ. ಕಾಡು ಮರ. a forest tree. ವಾ: ಕಳಿ ಮರತೇಳ್‌ದು ಒಂದ್ ಕಾಡ್ ಮರ.

ಕಳಿ ಮರ ಅಳಂಬು /*kaḷi mara aḷambu*/ ನಾ. ಅಣಬೆಯ ಹೆಸರು. a mushroom. ವಾ: ಕಳಿ ಮರ ಅಳಂಬು ಕಳಿ ಮರಲಿ ಏಳ್ದು.

ಕಳಿ[1] /*kaḷi*/ ನಾ. 1. ದಾಣೆ, 2. ಕಡಾಯದಂತಹ ದೊಡ್ಡ ಪಾತ್ರೆಗಳಲ್ಲಿ ಆಹಾರವನ್ನು ತಿರುವಲು ಬಳಸುವ ಮರದ ಉದ್ದನೆಯ ಸಟ್ಟುಗ. thick wooden spoon. ವಾ: ಹಿಟ್ಟ್‌ನ ಉಕ್ಕುರ್‌ಸುಕನ ಕಳಿಲಿ ತಿರ್‌ಗುಸುದು.

ಕಳಿ[2] /*kaḷi*/ ನಾ. 1. ಇದ್ದುದೆಲ್ಲ ಕಳೆಯುವುದು, 2. ಮುಗಿಸಿಕೊ, 3. ತೀರಿಸಿಕೊ. 1. losing everything, 2. to get something completed, 3. to complete/end something. ವಾ: ಅಪ್ಪ ಮಾಡಿಟ್ಟದ್ನೆಲ್ಲ ಕಳಿ ನೀ ಆತ.

ಕಳಿ[3] /*kaḷi*/ ನಾ. ಕಳೆಯುವ ಲೆಕ್ಕ. subtraction. ವಾ: ಎಂಟ್ರ್‌ಂದ ಐದರ್‌ನ ಕಳಿ.

ಕಳಿಕೋಲು /*kaḷiko:lu*/ ನಾ. ನೊಗದ ರಂಧ್ರಕ್ಕೆ ಹಾಕುವ ಕೋಲು. a peg that is put inside the yoke. ವಾ: ನೊಗಕ್ಕೆ ಕಳಿಕೋಲುನ ಸೆಕ್ಕಿಸ್. ಪ: ಕಳಿಕೋಲ್

ಕಳಿಯಕೆ /*kaḷiyakɛ*/ ನಾ. 1. ಹಾಳುಮಾಡು, 2. ವೆಚ್ಚ ಮಾಡು, 3. ಇಲ್ಲದಂತೆ ಮಾಡು. 1. to spoil, 2. to spend, 3. to make something disappear. ವಾ: ಮಾಡಿಟ್ಟ ಆಸ್ತಿನ ಕಳಿಯಕೆತನೆ ಒಂದ್ ಹುಟ್ಟಿಟು. ಪ: ಕಳೆಯೊಕ್ಕಂತ – ಕಳೆಯುವುದಕ್ಕೆಂದು

ಕಳುಬೈಲು /*kaḷubailu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅರಂತೋಡು ಗ್ರಾಮದ ಜಾಗ. a locality in Arantodu village in Sullia Taluk of Dakshina Kannada District.

ಕಳುವಾಜೆ /*kaḷuva:jɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕಳೆ ತೆಗಿಯದು /*kaḷɛ tɛgiyadu*/ ನಾ. ನಾಟಿ ಆದಮ್ಯಾಲೆ ನಾಟಿ ಮದ್ಯಲಿ ಇರುವ ಹುಲ್ಲು ಕಳೆ ತೆಗೆಯುದು. weeding the paddy field after planting paddy. ವಾ: ಕಳೆ ತೆಗಿಯದು ಕೆಲ್ಸಇನ್ನು ಸ ಆತ್ಲೆ. ಪ: ಕಳೆ ಕೀಳ್ದು

ಕಳೆ[1] /*Kaḷɛ*/ ಕ್ರಿ. ಕಳೆಯುವುದು. subtraction. ವಾ: ಹತ್ತರ್‌ಂದ ನಾಕರ್‌ನ ಕಳೆ. ಪ: ಕಳಿಯಕೆ

ಕಳೆ[2] /*Kaḷɛ*/ ನಾ. 1. ಕಳೆ, 2. ಕಾಡು ಗಿಡ, 3. ಹೊಲದೊಳಗಿನ ಕಸಕಡ್ಡಿ. 1. weed, 2. weed plant, 3. unwanted plants in a field/farm. ವಾ: ನಾಟಿ ಮಾಡ್ದ ಮೇಲೆ ಕಳೆಗ ಬೇಗ ಬಾದು. ಪ: ಕಳೆ ಕೀಳ್ದು

ಕಳೆಂಜ /*kaḷɛŋja*/ ನಾ. ಆಟಿ ತಿಂಗಳಲ್ಲಿ ಮಾರಿ ಓಡಿಸಲು ಮನೆ ಮನೆ ಬರುವ ಭೂತ. a spirit/a deity who visits the houses after harvest season to drive away evil spirits. ವಾ: ಆಟಿ ಕಳೆಂಜ ಮನೆ ಮನೆಗೆ ಬಂದವೆ.

ಕಳೆಯಂಡ /*kaḷɛyaṇḍa*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕಳ್ /*kaḷi*/ ನಾ. 1. ಸರಾಯಿ, 2. ಕಳ್ಳು, 3. ಹೆಂಡ. alcoholic beverage. ವಾ: ಕಳ್ ಕುಡ್ದನ?

ಕಳ್ಂಕ್ ನೀರ್ /*kaḷiŋkɨ ni:rɨ*/ ನಾ. 1. ಕಲುಷಿತ ನೀರು, 2. ರಾಡಿ ನೀರು. muddy water. ವಾ: ಕಳ್ಂಕ್ ನೀರ್ ಕುಡೆಕಾದೆನ?

ಕಳ್‌ಂಜಿ ಕೊಡಿ /*kaḷɨŋji kɔḍi*/ ನಾ. 1. ಗೆಜ್ಜುಗದ ಚಿಗುರು, 2. ಚಿಟ್ಟೆ ಚಿಗುರು. shoots of gray nicker plant. ವಾ: ಕಳ್‌ಂಜಿ ಕೊಡಿನ ಬಾಣ್ತಿಗೆ ಕಸಾಯ ಮಾಡಿ ಕೊಟ್ಟವೆ. ಪ: ಗಜ್ಜಿಗೆದ ಕೊಡಿ

ಕಳ್ಕ /*kɘḷka*/ ಕ್ರಿ. ಕಳೆದುಕೋ. to lose everything. ವಾ: ಎಲ್ಲನು ಕಳ್ಕ. **ಕಳ್ಕಂಡ್** /*kɘḷkaṇḍɨ*/ ಕಳೆದುಕೊಂಡು. lost everything. **ಎಲ್ಲಾ ಕಳ್ಕಂಡ್, ಕೈ ಕಾಲ ಮುಕ ತೋಳ್ಕಂಡಂಗೆ(ಗಾ).** ವಾ: ವಾಚಿ ಕಳ್ಕಂಡ್ ಕುದ್ದುಟು. ಪ: ಕಳ್ಕಂವ – ಕಳೆದುಕೊಂಡವನು. **ಕಳ್ಕಣ್‌ಬೇಡ** /*kaḷkaṇɨbɛ:ḍa*/ ಕಳೆದುಕೊಳ್ಳಬೇಡ. don't lose. ವಾ: ಸುಮ್ಮನೆ ದುಡ್ಡು ಕಳ್ಕಂಬಡ.

ಕಳ್ಚ್ /*kaḷci*/ ಕ್ರಿ. ಬಿಚ್ಚುವುದು. opened. ವಾ: ಪಿಟ್ಟರ್ ಬಂದ್ ಇಂಜಿನ್‌ನ ಕಳ್ಚಿ ಹಾಕಿಟು. **ಕಳ್‌ಚ್** /*kaḷɨci*/ 1. ಕಳಚು, 2. ಕೆಡವು. 1. remove/dismantle / undress, 2. knock something down. ವಾ: ಕುಕ್ಕೆ ಅಟ್ಟಂದ ಕಳ್‌ಚಿ ಬೀತ್. **ಕಳ್ಚಿತ್** /*kaḷcitɨ*/ 1. ಕಳಚು, 2. ಬೀಳು. 1. pull off/fell off/ removed, 2. fell. ವಾ: ಅಂವನ ಮೋರೆವಾಡ ಕಳ್ಚಿತ್. ಪ: ಕಳ್ಚಿರೆ – ಕಳಚಿದರೆ; ಕಳ್ಚುದು – ಕಳಚುವುದು; ಕಳ್ಚೊಕು – ಕಳಚಬೇಕು

ಕಳ್ತ್ /*kaḷtɨ*/ ಕ್ರಿ. 1. ಕಳೆಯಿತು, 2. ಸರಿದು ಹೋಯಿತು. 1. got over, 3. completed. ವಾ: ಕಳೆ ತೆಗಿಯದು ಕೆಲ್ಸ ಇನ್ನು ಸ ಆತ್ಲೆ. ಪ: ಕಳ್ತ್‌ಗಡ – ಕಳೆಯಿತಂತೆ; ಕಳ್ತಲ್ಲೆ – ಕಳೆಯಿತು ಅಲ್ಲವೇ. **ಕಳ್ದಂಗೆ** /*kaḷdaŋgɛ*/ ಕಳೆದ ಹಾಗೆ. felt like. ವಾ: ನಿನ್ನೆಮೊನ್ನೆ ಕಳ್ದಂಗೆ ಆದೆ. **ಕಳ್ದ** /*kaḷda*/ 1. ಕಳೆದ, 2. ಹಿಂದಿನ. 1. the last, 2. the previous. **ಒಡ್ಡ ಮುತ್ತು, ಕಳ್ದ ಹೊತ್ತು ಮತ್ತೆ ಬಾಕಿಲೆ(ಗಾ).** ವಾ: ಕಳ್ದ ರಾತ್ರೆಂದ ನಂಗೆ ನಿದ್ದೆ ಇಲ್ಲೆ. ಪ: ಕಳ್ದ ಮೇಲೆ. **ಕಳ್ದಕೂಡ್ಲೆ** /*kaḷdaku:ḍlɛ*/ ಕಳೆದ ಕೂಡಲೆ. immediately after something. ವಾ: ಪರೀಕ್ಷೆ ಕಳ್‌ದ ಕೂಡ್‌ಲೆ ಮನೆಗೆ ಬಾ. ಪ: ಕಳ್ದದೆ – ಕಳೆಯುತ್ತದೆ; ಕಳ್ದವೆ – ಕಳೆಯುತ್ತಾರೆ; ಕಳ್ದರೆ – ಕಳೆದರೆ; ಕಳ್ದಾಕನ – ಕಳೆದಾಗುವಾಗ; ಕಳ್ದುಟು – ಕಳೆದಿದೆ – ಕಳ್ದುಟ್ಟು; ಕಳೆದು ಹೋಯಿತು; ಕಳ್ದಿರ್ದು – ಕಳೆದಿರಬಹುದು; ಕಳ್ದೋತ್ – ಕಳೆದು ಹೋಯಿತು; ಕಳ್ದ್ – ಕಳೆದು. **ಕಳ್ದ್‌ಕಂಬೊದು** /*kaḷdɨkambɔdu*/ ಕಳೆದುಕೊಳ್ಳುವಂತಹ. to lose things. ವಾ: ವಸ್ತುಗಳ ಕಳ್ದ್ ಕಂಬ ಹೈದ ಅಲ್ಲ ಅಂವ. ಪ: ಕಳ್ಕೊಂಬೊದು

ಕಳ್ದಂಬೆ /*kaḷdambe*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಸುಳ್ಯ ನಗರದ ಜಾಗ. a locality in Suḷya Nagara village in Sullia Taluk of Dakshina Kannada District.

ಕಳ್ದೊರ್‌ಸ /*kaḷdɔrsa*/ ನಾ. ಕಳೆದ ವರುಷ. last year. ವಾ: ಕಳ್ದೊರ್‌ಸ ಅವೆಲ್ಲ ಮನೆಗೆ ಬಂದಿದ್ದೊ. ಪ: ಕಳ್ದೊರ್ಸದ – ಕಳೆದ ವರುಷದ

ಕಳ್ದ್ ತೆಗಿದು /*kaḷdɨ tɛgidu*/ ನಾ. 1. ದೇಹಕ್ಕೆ ಸೋಂಕಿರುವ ಮಾನಸಿಕ ಆತಂಕವನ್ನು ಮಾಂತ್ರಿಕ ಶಕ್ತಿ ಮೂಲಕ ನಿವಾರಿಸುವ ವಿಧಾನ. removing one's anxiety by using sorcery. ವಾ: ನಿನ್ನ ಹುಚ್ಚಾಟನ ಕಳ್ದ್ ತೆಗ್ದನೆ ನೋಡ್.

ಕಳ್ಯಕೆ /*kaḷyakɛ*/ ನಾ. ಕಳೆಯಲು. to spend. ವಾ: ರಜೆ ಕಳ್ಯಕೆತ ಪಿಳ್ಳೆ ನಾಡಿಗೆ ಬಂದುಟು. ಪ: ಕಳ್ಯದ್ದರೆ – ಕಳೆಯದಿದ್ದರೆ

ಕಳ್‌ರಲ್ಲ /*kaḷɨralla*/ ನಾ. 1. ಕಳ್ಳರಲ್ಲ, 2. ಚೋರರಲ್ಲ. not thieves. ವಾ: ನಾವು ಕಳ್ರಲ್ಲ.

ಕಳ್ಸ ಕನ್ನೆಡಿ /*kaḷsa kannɛḍi*/ ನಾವಿ. 1. ಕಳಶ ಕನ್ನಡಿ, 2. ಶುಭಸಮಾರಂಭಗಳಲ್ಲಿ ಕಳಶಕನ್ನಡಿ ಹಿಡಿದು ಹೋಗುವುದು ಕ್ರಮ. a ritual of keeping a Kalasha Kannadi (a pitcher pot with a mirror) on a bronze platter. On the platter, rice is spread first and water is sprinkled on to it. Then, a water filled copper pitcher with a coconut and with decorations of mango leaves is pl. ವಾ: ಮೊದುವೆಲಿ ಮೊದುವೆ ಹೈದ ಮತ್ತೆ ಗೂಡೆಗೆ ಕಳ್ಸ ಕನ್ನೆಡಿ ಹಿಡ್ದವೆ.

ಕಳ್ಸಿಗೆ^{1} /*kaḷsigɛ*/ ನಾ. ಕಡುಬು ಬೇಯಿಸುವ ಪಾತ್ರೆ. rice cooker. **ಎಲೆ ಇಲ್ಲೆ ಸುಣ್ಣ ಇಲ್ಲೆ ಬಾಯೆಲ್ಲ ಕೆಂಪು, ಕೆಳಗೆ ಗದ್ದೆಲಿ ನೀರ್ ಕಟ್ಟುದು, – ಕಳ್ಸಿಗೆ(ಒ).** ವಾ: ಕಳ್ಸಿಗೆದ್ ಅಟ್ಟ ಕಾಂಬದುಲೆ.

ಕಳ್ಸಿಗೆ^{2} /*kaḷsigɛ*/ ನಾ. ಭತ್ತ ಅಳತೆ ಮಾಡುವ ಸಾಧನ. an instrument to measure paddy. ವಾ: ಒಂದ್ ಕಳ್ಸಿಗೆ ಬತ್ತ. ಪ: ಕಳ್ಸಿಗೆಲಿ. **ಕಳ್‌ಸಿಗೆ ಅಟ್ಟ** /*kaḷɨsigɛ aṭṭa*/ ಕಳಸಿಗೆ ಒಳಗೆ ಹಾಕುವ ಒಂದು ಅಗಲವಾದ

ತೂತುಗಳಿರುವ ತಟ್ಟೆ. a platter with wide perforations. ವಾ: ಕಳ್ ಸಿಗೆ ಅಟ್ಟದ ಮೇಲೆ ಕಡ್‌ಂಬಿಟ್ಟ್‌ನ ಹಾಕಿ ಬೇಸುದು.

ಕಳ್ಸ್ /*kaḷsi*/ ಕ್ರಿ. 1. ಕಳುಹಿಸು, 2. ಬೀಳ್ಕೊಡು. 1. to send, 3. to send off. ವಾ: ಮಗಳ್‌ನ ಗಂಡನ ಮನೆಗೆ ಕಳ್ಸ್. ಪ: ಕಳ್ಸಕ್ಕ್ – ಕಳಿಸಬಹುದು; ಕಳ್ಸಿಕೊಟ್ಟವೆ – ಕಳುಹಿಸಿ ಕೊಡುತ್ತೇವೆ; ಕಳ್ಸಿಕೆ – ಕಳುಹಿಸುವುದಕ್ಕೆ; ಕಳ್ಸುದೊ – ಕಳುಹಿಸಬಹುದಾ?; ಕಳ್ಸುದ್ – ಕಳುಹಿಸುವುದು; ಕಳ್ಸುವ – ಕಳಿಸುವ; ಕಳ್ಸುವೆ – ಕಳುಹಿಸುತ್ತೇವೆ; ಕಳ್ಸೊಕು – ಕಳುಹಿಸಬೇಕು; ಕಳ್ಸೊಕೊಲೆ – ಕಳುಹಿಸಬೇಕಲ್ಲ; ಕಳ್ಸೊಕುಂತ – ಕಳುಹಿಸಬೇಕೆಂದು. **ಕಳ್ಸುದು** /*kaḷsudu*/ 1. ಕಳುಹಿಸುವುದು, 2. ಕಳುಹಿಸಿ ಕೊಡುವುದು. sending someone. ವಾ: ಮಗಳ್ನ ಅತ್ತೆ ಮನೆಗೆ ಕಳಸುದು. ಪ: ಕಳಿಸಿತ್ – ಕಳುಹಿಸಿದನು/ಳು; ಕಳಿಸಿದ್ – ಕಳುಹಿಸಿದ್ದು

ಕಳ್ಸ್ ನೀರ್ /*kaḷsɨ ni:ri*/ ನಾ. ಕಳಸದ ನೀರು. water used in copper pitcher/pitcher pot. ವಾ: ಕಳ್ಸ್ ನೀರ್ ಚೆಲ್ಬಡ.

ಕಳ್ಳ ಪೋಲಿಸ್ /*kaḷḷa po:lisɨ*/ ನಾ. ಜನಪದ ಆಟ. a folk game. ವಾ: ಹಿಂದೆಲ್ಲ ಮಕ್ಕಳಿಗೆ ಕಳ್ಳ ಪೋಲಿಸ್ ಆಟ ಆಡ್ದು ಬಾರಿ ಜೋರಿತ್ತ್, ಈಗನವುಕೆ ಇದಾವುದರ ಗಂದ ಗಾಳಿಯೆ ಇಲ್ಲೆ.

ಕಳ್ಳ[1] /*kaḷḷa*/ ನಾ. 1. ಕದಿಯುವವ, 2. ಕದ್ದವ, 3. ಮಾತಿಗೆ ತಪ್ಪುವವ, 4. ಮೈಗಳ್ಳ, 5. ಸೋಮಾರಿ, 6. ಅಪ್ರಾಮಾಣಿಕ. 1. a thief, 2. a stealer, 3. a renegade, 4. a lazy person, 5. an indolent person, 6. a dishonest person. ವಾ: ಕಳ್ಳ ಬಂದಿತ್ತ್ ಗಡ. **ಕಳ್ಳಂಗ** /*kaḷḷaŋga*/ 1. ಕಳ್ಳರು, 2. ಕಳವು ಮಾಡುವವರು, 3. ಚೋರರು. thieves. ವಾ: ಕಳ್ಳಂಗ ಬ್ಯಾಂಕಿಗೆ ಹುಕ್ಕಿದೊಗಡ. ಪ: ಕಳ್ಳಂತ. **ಕಳ್ಳಂತಾತ್** /*kaḷḷanta:nti*/ 1. ಕಳ್ಳನೆಂದಾಯಿತು, 2. ಸೋಮಾರಿ. 1. proven thief, 2. lazy. ವಾ: ಅಮವ ಕೆಲ್‌ಸಕೆ ಬಾರಿ ಕಳ್ಳಂತಾತ್. **ಕಳ್ಳರ್** /*kaḷḷarɨ*/ 1. ಕಳ್ಳರು, 2. ಚೋರರು. thieves. ವಾ: ಕಳ್ಳರ್ ತುಂಬಿ ಹೊಗೊಳೊ. ಪ: ಕಳ್ಳಂಗ

ಕಳ್ಳ[2] /*kaḷḷa*/ ನಾ. ಕೋವಿಯಲ್ಲಿ ಗುಂಡು ಹಾರಿಸುವ. to pull the trigger. ವಾ: ಗುಂಡು ಹೊಡೆಕೆ ಕಳ್ಳನ ಎಳಿ.

ಕಳ್ಳ[3] /*kaḷḷa*/ ನಾ. 1. ಕಣ್ಣಿನಲ್ಲಿ ಏಳುವ ಹುಣ್ಣು, 2. ಕಣ್ಣುಗುಳ್ಳೆ. eye sore. ವಾ: ಉಸ್ಣ ಆದರೆ ಕಣ್ಣ್ ಲಿ ಕಳ್ಳ ಎದ್ದುರ್ದು.

ಕಳ್ಳಚಾಲ್ /*kaḷḷaca:lɨ*/ ನಾ. 1. ಕಳ್ಳ ಕೆಲಸ, 2. ಕಳ್ಳ ಬುದ್ದಿ, 3. ಸೋಂಬೇರಿತನ. 1. stealing, 2. wickedness, 3. laziness. ವಾ: ಎತ್ತ್ ಹೂಡಿಕೆ ಬಾರಿ ಕಳ್ಳ ಚಾಲ್ ಮಾಡ್‌ದೆ.

ಕಳ್ಳತನ /*kɘḷḷa*/ ಕ್ರಿ. ಕಳೆದುಕೊಳ್ಳು. to lose. ವಾ: ಪರ್ಸ್ ಕಳ್ಳತನ ಆತ್.

ಕಳ್ಳತನ ಆದೆ /*kaḷḷatana a:dɛ*/ ನಾ. 1. ಉದಾಸೀನವಾಗು, 2. ಆಲಸ್ಯವಾಗು. 1. negligence, 2. tired. ವಾ: ಸೆಳಿಗೆ ಕೆಲ್‌ಸ ಮಾಡಿಕೆ ಕಳ್ಳತನ ಆದೆ.

ಕಳ್ಳದಾರಿ /*kaḷḷada:ri*/ ನಾ. 1. ನೆಲದಾರಿ, 2. ಗುಪ್ತಮಾರ್ಗ. a secret passage. ವಾ: ಕಳ್ಳದಾರಿಲಿ ಕದೆಕೆ ಹೋದವೆ.

ಕಳ್ಳಿ ದೈ /*kaḷḷi dai*/ ನಾ. ಕಳ್ಳಿ ಗಿಡ. cactus. ವಾ: ಬೇಲಿ ಕರೆಲಿ ಕಳ್ಳಿ ದೈನ ನೆಟ್ಟವೆ, ದೃಸ್ಟಿಗು ಕಳ್ಳಿ ದೈನ ನೆಟ್ಟವೆ.

ಕಳ್ಳಿ[1] /*kaḷḷi*/ ನಾ. ಕದಿಯುವ ಹೆಂಗಸು/ಹೆಣ್ಣು. a thief (woman). ವಾ: ಕಳ್ಳಿನ ಹಕ್ಕಲೆ ಸೇರ್‌ಸ್ ಬಡ.

ಕಳ್ಳಿ[2] /*kaḷḷi*/ ನಾ. 1. ಕಿಂಡಿ, 2. ರಂಧ್ರ. a hole. ವಾ: ಕಳ್ಳಿಲಿ ಹಾಂತೆಗ ಬಂದವೆ.

ಕಳ್ಳಿಗೆ /*kaḷḷigɛ*/ ನಾ. ಮಿಡಿ ಹಲಸು. a tender jackfruit.

ಕಳ್ಳು /*kaḷḷu*/ ನಾ. 1. ಶೇಂದಿ, 2. ಹೆಂಡ. toddy. ವಾ: ಎಡೆಗೆ ಕಳ್ಳು ಇಸಿವೆ. ಪ: ಕಳ್ಳ್

ಕಳ್ಳೆ /*kaḷḷɛ*/ ನಾ. 1. ಕಳ್ಳಿ, 2. ಕದಿಯುವವಳು, 3. ಕಳ್ಳತನ ಮಾಡುವವಳು. a female thief. **ಕೆಲ್ಸದ ಕಳ್ಳೆಗೆ ಕೂಸ್‌ನ ನ್ಯಾವನ(ಗಾ).** ವಾ: ಕಳ್ಳೆ ಬಾತ್ ನೋಡಲ್ಲಿ.

ಕಳ್ಳ್ /*kaḷḷɨ*/ ನಾ. 1. ಕಳ್ಳಭಟ್ಟಿ, 2. ಸಾರಾಯಿ. spurious liquor. ವಾ: ಕಳ್ಳ್ ಕುಡ್‌ದ್ ಸಾಯದು.

ಕಾ /*ka:*/ ನಾ. ಅ. ಕಾಗೆ(ಮಕ್ಕಳ ಭಾಷೆ). crow (in the vocabulary of children). ವಾ: ನೋಡಲ್ಲಿ ಕಾ ಪೇರ್‌ಲ ಮರಲಿ ಕುದ್ದುಟು.

ಕಾಂಕರ್ಸ್ /*ka:ŋkarsɨ*/ ಕ್ರಿ. ಕ್ಯಾಕರಿಸು. to hawk. ವಾ: ಎಸ್ಟ್ ಜೋರಾಗಿ ಕಾಂಕರ್ಸ್ ದು. ಪ: ಕಾಂಕ್ರ್ಸ್. **ಕಾಂಕ್ರ್ಸಿ ಉಗೆದು** /*ka:ŋkrɨsi ugɛdu*/ ಕ್ಯಾಕರಿಸಿ ಉಗಿಯುವುದು. to hawk and spit. ವಾ: ಹೋದಲೆಲ್ಲ ಕಾಂಕ್ರ್ಸಿ ಉಗಿದು ಬಾರಿ ಹಾಳ್ ಅಬ್ಬೆಸ. **ಕಾಂಕ್ರ್ಸ್** /*ka:ŋkrsɨ*/ ಮೊಟ್ಟೆ ಇಡುವ ಸಮಯದಲ್ಲಿ ಹೇಂಟೆ ಕೂಗುವುದು. warbling of hen during the time of laying eggs. ವಾ: ಕೋಳಿ ಕಾಂಕ್ರ್ಸ್‌ದು ಕೇಳ್‌ದೆ.

ಕಾಂಗೀರ /*ka:ŋgi:ra*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕಾಂಚೋಡು /*ka:ɲco:ḍu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಬಾಳಿಲ ಗ್ರಾಮದ ಜಾಗ. a locality in Balila village in Sullia Taluk of Dakshina Kannada District.

ಕಾಂಜಿ /*ka:ɲji*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಬಳ್ಪ ಗ್ರಾಮದ ಜಾಗ. a locality in Balpaa village in Sullia Taluk of Dakshina Kannada District.

ಕಾಂಜಿಪೀಂಜಿ /*ka:ɲjipi:ɲgi*/ ನಾ. ಸಣ್ಣತನದ ಮನೋಭಾವನೆಯ ವ್ಯಕ್ತಿ. pettiness. ವಾ: ಅಂವ ಕಾಂಜಿಪೀಂಜಿ ಬುದ್ದಿನಂವ.

ಕಾಂಡ /*ka:ṇḍa*/ ನಾ. 1. ಕಾಂಡ, 2. ದಂಟು. 1. stem, 2. stalk. ವಾ: ದೈಂದ ಕಾಂಡ ಗಟ್ಟಿ ಉಟ್ಟು, ಕಿತ್ತೆ ಬಾಲೆ.

ಕಾಂತಮಂಗಲ /*ka:ntamaŋgala*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಜ್ಜಾವರ ಗ್ರಾಮದ ಜಾಗ. a locality in Ajjavara village in Sullia Taluk of Dakshina Kannada District.

ಕಾಂತಿಲ /*ka:ntila*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಗುತ್ತಿಗಾರು ಗ್ರಾಮದ ಜಾಗ. a locality in Guttigaru village in Sullia Taluk of Dakshina Kannada District.

ಕಾಂತುಕುಮೇರಿ /*ka:ntukume:ri*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಪಂಬೆತ್ತಾಡಿ ಗ್ರಾಮದ ಜಾಗ. a locality in Pambettadi village in Sullia Taluk of Dakshina Kannada District.

ಕಾಂಪಾರಿ /*ka:mpa:ri*/ ನಾ. ಗಲೀಜು – ಕೊಳಕು. dirt/ filth. ವಾ: ಎಂತ ಕಾಂಪಾರಿ ಜಾಗೆ ಇದ್.

ಕಾಂಪ್ರಿ /*kɔ:mpri*/ ನಾ. 1. ಹೊಲಸು, 2. ಕೊಳಕು ಪದಾರ್ಥ. 1. dirt, 2. filth. ವಾ: ಕಾಂಪ್ರಿನ ಮುಟ್ಟೆಕಾಗದ್. ಪ: ಕಾಂಪಾರಿ

ಕಾಂಬ /*ka:mba*/ ನಾ. ಕಂಡು ಬರುವ. see you (as in see you tomorrow). **ಉಪ್ಪರಿಗೆ ಮೇಲೆ ಇದ್ದ ನಾಯಿ ಹೇಲ್ ಕಾಂಬಕನ ಅಡಿಗೆ ಇಳ್ದದ್(ಗಾ).** ವಾ: ನಾಳೆ ಕಾಂಬ. **ಕಾಂಬ ಹಾಂಗೆ** /*ka:mba ha:ŋgɛ*/ 1. ಕಾಣುವ ಹಾಗೆ, 2. ನೋಡುವ ಹಾಗೆ. 1. as seen, 2. as visible. ವಾ: ಕಣ್ಣಿಗೆ ಕಾಂಬ ಹಾಂಗೆ ಅಲ್ಲ ಅಂವ. ಪ: ಕಾಂಬಂಗೆ. **ಕಾಂಬಂಗಾತ್** /*ka:mbaŋga:tɨ*/ ಕಂಡ ಹಾಗೆ ಆಯ್ತು. as if i saw. ವಾ: ಎಂತದೊ ಕಾಂಬಂಗಾತ್. ಪ: ಕಾಂಬಾಂಗೆ – ಕಾಣುವ ಹಾಗೆ. **ಕಾಂಬಕನ** /*ka:mbakana*/ ಕಾಣುವಾಗ. when something is visible. ವಾ: ನನ್ನ ಕಾಂಬಕನ ಅಣ್ಣಿಕಂಬೊದು. ಪ: ಕಾಂಬಕ್ಕನ. **ಕಾಂಬಕಾತ್‌ಲೆ** /*ka:mbaka:tɨlɛ*/ ಕಾಣಲಾಗಲಿಲ್ಲ. didn't/ couldn't see. ವಾ: ನಿನ್ನೆ ನಿನ್ನ ಕಾಂಬಕಾತ್‌ಲೆ. **ಕಾಂಬಕಿಲೆ** /*ka:mbakilɛ*/ ಕಾಣಲಿಕಿಲ್ಲ. may not be able to see. ವಾ: ನೀ ಅತ್ತ ನಿತ್ತರೆ ಕಾಂಬಕಿಲೆ. **ಕಾಂಬಕೆ** /*ka:mbakɛ*/ 1. ಕಾಣಲು, 2. ನೋಡಲು, 3. ಭೇಟಿ ಮಾಡಲು. 1. to see, 2. to visit, 2. to pay a visit. ವಾ: ನನ್ನೊಮ್ಮೆ ಕಾಂಬಕೆ ಹೇಳ್. ಪ: ಕಾಂಬಕ್ಕೆ – ನೋಡಲು; ಕಾಂಬತಿತ್ – ಕಾಣುತ್ತಿತ್ತು. **ಕಾಂಬಡ** /*ka:mbaḍa*/ ಕಾಣಿಸಿಕೊಳ್ಳಬೇಡ. don't be seen around. ವಾ: ನೀ ಅವರ ಕಣ್ಣಿಗೆ ಕಾಂಬಡ. **ಕಾಂಬದು[1]** /*ka:mbadu*/ ಕಾಣುವುದು. to see. ವಾ: ಅಲ್ಲಿ ಕಾಂಬದು ಗುಡ್ಡ. ಪ: ಕಾಂಬೊದು. **ಕಾಂಬದು[2]** /*ka:mbadu*/ ಬಹುಶಃ ಕಾಣಬಹುದು. may be seen. ವಾ: ಇನ್ನೂ ಅತ್ತ ಹೋದರೆ ನೀರ್ ಬೀಳ್ದು ಕಾಂಬದು. **ಕಾಂಬದುಲೆ** /*ka:mbadulɛ*/ 1. ಕಾಣುವುದಿಲ್ಲ, 2. ಕಂಡಳಾ3. ಕಂಡಿದ್ದೀಯಾ? 1. can't be seen, 2. did she see, 3. did you see. ವಾ: ನಂಗೆ ಎಂತದೂ ಕಾಂಬದುಲೆ. ಪ: ಕಾಂಬೆದ್ಲೆಂತ – ಕಾಣುವುದಿಲ್ಲಾಂತ; ಕಾಂಬೋದ್ಲೆ – ಕಾಣುವುದಿಲ್ಲ; ಕಾಂಬದ್ಲೆ – ಕಾಣುವುದಿಲ್ಲ. **ಕಾಂಬಲೆ** /*ka:mbalɛ*/ 1. ಕಾಣುತ್ತಿಲ್ಲ, 2. ಕಾಣುವುದಿಲ್ಲ. 1. can't see, 2. not visible. ವಾ: ಕಣ್ಣ್ ಕಾಂಬಲೆ. ಪ: ಕಾಂಬೊದ್ಲೆ. **ಕಾಂಬೊಕಾ** /*ka:mbɔka:*/ 1. ಕಾಣಬೇಕಾ, 2.

ಭೇಟಿಮಾಡಬೇಕೆ? 1. do you want to see?, 2. do you want to meet? ವಾ: ಅವರ್‌ನ ಕಾಂಬೊಕಾ. ಪ: ಕಾಂಬೊಕು – ಕಾಣಬೇಕು; ಕಾಂಬೊತ್ತಿದ್ದೊ – ಕಾಣುತ್ತಿದ್ದರು. **ಕಾಂಬೊದು** /*ka:mbɔdu*/ ಕಾಣುವುದು. seeing. **ಅರ್ಶಿಣ ಕಾಯಿಲೆಯವಂಗೆ ಊರೆಲ್ಲಾ ಅರ್ಶಿಣ ಕಾಂಬೊದು(ಗಾ).** ವಾ: ಗುಡ್ಡದಕ್ಕಲೆ ಹೋದರೆ ಗದ್ದೆ ಕಾಂಬೊದು. **ಕಾಂಬೊದೆಲ್ಲ** /*ka:mbɔdɛlla*/ ಕಾಣುವುದೆಲ್ಲ, everything that one sees. ವಾ: ಕಣ್ಣಿಗೆ ಕಾಂಬೊದೆಲ್ಲ ಸತ್ಯಲ್ಲ. ಪ: ಕಾಂಬೊದೆಲ್ಲದರ್ನು – ಕಾಣುವುದೆಲ್ಲವನ್ನು. **ಕಾಂಬೊನೊ** /*ka:mbɔnɔ*/ 1. ಕಾಣುವ, 2. ಸಿಗುವ. 1. let us meet again, 2. bye, 3. good bye. ವಾ: ಮತ್ತೆ ಯಾಗಾರ್ ಕಾಂಬೊನೊ. ಪ: ಕಾಣಮೊ – ಸಿಗೋಣ. **ಕಾಂಬೊಲೆ** /*ka:mbɔlɛ*/ ಕಾಣುವುದಿಲ್ಲ. can't see. **ಕಲ್ಲ್ ಬಾಮಿ ಕಬ್ಬಿಣದ ಮುಚ್ಚಳ ಟಿಪ್ ತೇಳ್ರೆ ಒಬ್ಬಂಗೂ ಕಾಂಬೊಲೆ – ಕಣ್ಣ್(ಒ).** ವಾ: ಜೋಬುಲಿಸಿದ್ದ ದುಡ್ಡು ಕಾಂಬೊಲೆ.

ಕಾಕಿ /*ka:ki*/ ನಾ. 1. ಕಾಕಿ ಬಣ್ಣ, 2. ಮಾಸಲು ಬಣ್ಣದ ಬಟ್ಟೆ. 1. khaki colour, 2. colour faded clothes. ವಾ: ಪೋಲಿಸ್‌ನವ್ ಕಾಕಿ ಅರ್ವೆ ಹಾಕಂಬದು.

ಕಾಕಿ ಮೊರ್‌ಡವು /*ka:ki moradɨavo*/ ನಾ. ಸತ್ತವರ ಮುಂದೆ ಅಳುತ್ತಾ ಅವರ ಹೆಸರು ಹೇಳಿ ಹಾಡುವುದು. weeping in front of the dead body.

ಕಾಕೆ /*ka:kɛ*/ ನಾ. 1. ಕಾಗೆ, 2. ಕಾಕ. a crow. ವಾ: ಕಾಕೆ ಮನೆ ಮೇಲೆ ಕುದ್ದ್ ಕೂಂಗಿದೆ/ಮರ್ಟದೆ. ಪ: ಕಕ್ಕೆ

ಕಾಕೆ ಹಣ್ಣ್ /*ka:kɛ haɳɳi*/ ನಾ. 1. ಗಣಿಕೆ ಸೊಪ್ಪಿನ ಹಣ್ಣು, 2. ಕಾಗೆ ಸೊಪ್ಪಿನ ಹಣ್ಣು. fruit of indian nightshade plant. ವಾ: ಕಾಕೆ ಹಣ್ಣ್ ಸಣ್ಣದಾಗಿ, ತಿಂಬಕೆ ಲಾಯ್ಕ.

ಕಾಕೇರಾ /*ka:ke:ra:*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕಾಕ್ವೆ /*ka:kvɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕಾಗಜ್ /*Ka:gaji*/ ಎಪ. 1. ಕಾಗದ. paper. ವಾ: ಕಾಗಜ್‌ಲಿ ಬರಿನೆ ಗೂಡೆ.

ಕಾಗಡೆ /*ka:gaḍe*/ ನಾ. 1. ಕೆಳಗೆ, 2. ಕೆಳಭಾಗ. 1. below, 2. bottom. ವಾ: ಬೆಟ್ಟದ/ಗುಡ್ಡೆನ ಕಾಗಡೆ ನೋಡೊಮ್ಮೆ ಹೆಂಗುಟ್ಟು ತ. ಪ: ಕಾಗಡೆಮನೆ

ಕಾಗದ /*ka:gada*/ ನಾ. ಪತ್ರ. letter. ವಾ: ನಾ ಅಪ್ಪಂಗೆ ಕಾಗದ ಬರ್‌ದಳೆ. ಪ: ಕಾಗ್ದ

ಕಾಚ /*ka:ca*/ ನಾ. ಜನನಾಂಗವನ್ನು ಮುಚ್ಚಿ ಕೊಳ್ಳಲು ಬಳಸುವ ಒಳ ಉಡುಪು. innerwear/brief. ವಾ: ಕೂಸಿಗೆ ಕಾಚ ಹಾಕಿಕೊಡಕಾಗಿತಲ.

ಕಾಚಲ್‌ಂಬು /*ka:canḷbu*/ ನಾ. ಬೇಲಿ ಕಾಚು ಗಿಡದ ಅಣಬೆ. a variety of mushroom. ವಾ: ಕಾಚಲ್‌ಂಬು ಎದ್ದುಟು.

ಕಾಚಲು /*ka:calu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕಾಚಿಗಿ ದೈ /*ka:cigi ḍai*/ ನಾ. 1. ಬೇಲಿ ಗಿಡ. ಇದನ್ನು ಜತ್ರೋಪ ಗಿಡವೆಂದು ಕರೆಯುತ್ತಾರೆ, 2. ಬೇಲಿಗಾಗಿ ನೆಡುವ ಮುಳ್ಳಿನ ಅಥವಾ ಹಾಲು ಸೋರುವ ಕಂಟಿ. 1. a cactus plant, 2. a live fence of cactus. ವಾ: ಕಾಚಿದೈನ ಬೇಲಿಗೆ ನೆಟ್ಟರೆ ನಿಗ್ಗಲಿ ಬಂದದೆ.

ಕಾಚಿಲ /*ka:cila*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕಲ್ಮಡ್ಕ ಗ್ರಾಮದ ಜಾಗ. a locality in Kalmadka village in Sullia Taluk of Dakshina Kannada District.

ಕಾಚುಕುಳ್ಳ /*ka:cukuḷḷa*/ ನಾ. ಕಾಜಾಣ ಹಕ್ಕಿ, ಉದ್ದ ಗರಿಗಳ ಬಾಲ ವಿರುವ ಒಂದು ಜಾತಿಯ ಸಣ್ಣ ಹಕ್ಕಿ. a bird with longer tail. ವಾ: ಕಾಚುಕುಳ್ಳ ಹಕ್ಕಿ ಮರಲಿ ಉಟ್ಟು.

ಕಾಚುಪುಳಿ /*ka:cupuḷi*/ ನಾ. ಪನ್ನುಳಿ / ಮಂತುಳಿ, ಹೊಳೆಮಾವು, ಪಣ್ಪುಳಿ ಹಣ್ಣಿನಿಂದ ತಯಾರಿಸಿದ ಹುಳಿರಸ. a sour juice made up of brindleberry, or Malabar tamarind. ವಾ: ಗೈಪು ಹುಳಿರುಚಿ ಬಾಕೆ ಕಾಚುಪುಳಿನ ಹಾಕುವೆ.

ಕಾಚುಳಿ /*ka:cuḷi*/ ನಾ. 1. ಕಾಚಂಪುಳಿ, 2. ಮೀನು ಮಾಂಸಕ್ಕೆ ಹಾಕುವ ಹುಳಿ. 1. brindleberry/ Malabar tamarind, 2. the sour juice of this fruit extract is usually used in cooking fish. ವಾ: ಕಾಚುಳಿನ ಮಾಸ, ಮೀನ್ ಗೈಪುಗೆ ಹೆಚ್ಚಿ ಬಳ್‌ಸುದು. ಪ: ಕಾಚ್ಪುಳಿ ನೀರು, ಕಾಚ್ಪುಳಿ ಹಣ್ಣ್

ಕಾಚೆಲ್ /*ka:cɛli*/ ನಾವಿ. 1. ಭಾರಿ ಬಿಸಿಲಿನ ತಾಪ, 2.

ಭಾರಿ ಸೆಕೆ, 3. ಅತ್ಯಧಿಕ ಉಷ್ಣತೆ. 1. hot, 2. too hot, 3. increased temperature. ವಾ: ಅಡ್ಕೆ ಕಾಚೆಲ್‌ಲೆ ಒಣ್ಗೊತು.

ಕಾಚೇಲು /*ka:ce:lu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕಾಜಿ /*ka:ji*/ ನಾ. 1. ಅಂಗಿ, ಕೋಟು ಮೊದಲಾದವುಗಳಿಗೆ ಗುಂಡಿ ಹಾಕುವುದಕ್ಕಾಗಿ ಮಾಡಿದ ತೂತು, 2. ಕಾಜ. a button hole. ವಾ: ಬುಸ್ಕೊಟಿಗೆ ಕಾಜಿ ಹೊಲಿ.

ಕಾಜಿಮಡ್ಕ /*ka:jimaḍka*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕಾಜೋವು /*ka:jɔ:vu*/ ನಾ. ಹೊಳೆಗಳಲ್ಲಿ ಕಂಡುಬರುವ 6 ಇಂಚಿನಿಂದ 1. ಅಡಿ ಉದ್ದದ ಮೀನು. a freshwater fish usually of 5 inches to a foot. ವಾ: ಕಾಜೋವು ಮೀನ್ ಹಳ್ಳಗಳ್ಲಿ ಇದ್ದದೆ.

ಕಾಟ ಒಟ್ಟುವೆ /*ka:ṭa oṭṭuvɛ*/ ನಾ. ಹೆಣ ಸುಡಲು ಸೌದೆಯನ್ನು ಜೋಡಿಸುವುದು. piling firewood for funeral pyre. ವಾ: ಹೆಣ ಸುಡಿಕೆ ಕಾಟ ಒಟ್ಟುವೆ.

ಕಾಟ ಒಯ್ಯುದು /*ka:ṭa ɔyda*/ ನಾ. ಹೆಣ ಮಲಗಿಸಲು ಸೌದೆಯನ್ನು ಅಟ್ಟಿಯಾಗಿ ಇಡುವುದು. piling firewood to make a pyre for the dead body. ವಾ: ಸುಡ್ಕುಳಿಲಿ ಕಾಟ ಒಯ್ದು. ಪ: ಕಾಟ ಒಯ್ಪಿಕೆ

ಕಾಟ ಕೊಡ್ದು /*ka:ṭa kɔḍdu*/ ನಾ. 1. ತೊಂದರೆ ಕೊಡು, 2. ಉಪದ್ರವ ನೀಡು. trouble (someone). ವಾ: ಮನೆವೆಲ್ಲ ಸೇರಿಕಂಡ್ ಕಾಟ ಕೊಡ್ದು. ಪ: ಕಾಟ ಕೊಡ್ಪಡಿ

ಕಾಟ[1] /*ka:ṭa*/ ನಾ. 1. ಉಪದ್ರ, 2. ಉಪಟಳ, 3. ತೊಂದರೆ. trouble. ವಾ: ಕೊತ್ತಿಗಳ ಕಾಟ ತಡೆಕಾದುಲೆ.

ಕಾಟ[2] /*ka:ṭa*/ ನಾ. ಚಿತೆ. funeral pyre. ವಾ: ಹೆಣನ ಕಾಟದ ಮೇಲೆ ಮೊಲ್ಗುಸುದು. ಪ: ಕಾಟ ಒಟ್ಟುವೆ – ಹೆಣ ಸುಡಲು ಸೌದೆಯನ್ನು ಜೋಡಿಸುವುದು, ಕಾಟಕೆ ಇಸುದು. **ಕಾಟಕೆ ಇಸುದು** /*ka:ṭakɛ isudu*/ 1. ಶವವನ್ನು ಸುಡಲು ಜೋಡಿಸಿದ ಸೌದೆಯ ಮೇಲೆ ಮಲಗಿಸುವುದು, 2. ಹೆಣ ಸುಡುವುದು. 1. keeping the dead body on the pyre, 2. cremating the dead. ವಾ: ಹೆಣನ ಕಾಟಕೆ ಇಸುದು ಎಷ್ಟೊತಿಗೆ. ಪ: ಕಾಟಕಿಸುದು. **ಕಾಟಕ್ಕಿಸುದು** /*ka:ṭakkisudu*/ ಸತ್ತ ವ್ಯಕ್ತಿಯ ಮೊದಲ ದಿನದ ಕ್ರಮ. a ritual perfomed on the first day of the dead. ವಾ: ಹೆಣನ ಕಾಟಕ್ಕಿಸಿದ್ ಮುಗೆಕನ ತಡ ಆತ್.

ಕಾಟಾಚಾರ /*ka:ṭa:ca:ra*/ ನಾ. 1. ಬೇಕೋ ಬೇಡವೋ ಎಂಬಂತ ರೀತಿ, 2. ಜವಾಬ್ದಾರಿ ಇಲ್ಲದ, 3. ಬೇಕಾಬಿಟ್ಟಿ ಕೆಲಸ, 4. ಶ್ರದ್ಧೆಯಿಲ್ಲದೆ ಬಲವಂತಕ್ಕೆ ಮಾಡುವ ಕೆಲಸ. doing any work perfunctorily. ವಾ: ಯಾವ್ದೆ ಆದ್ರು ಮನ್ಸಿಸಿ ಕೆಲ್ಸ ಮಾಡೊಕು ಕಾಟಾಚಾರಕೆ ಮಾಡಿಕಾದ್.

ಕಾಟಾಯಿ /*ka:ṭa:yi*/ ನಾ. 1. ಪುಂಡುಗಾರಿಕೆ, 2. ಕಾಟಕಾಯಿ, 3. ಸೂರೆ, 4. ಮುತ್ತಿಗೆ. 1. a hoodlum, 2. robbery, 3. to loot someone, 4. to attack. ವಾ: ಪೇಟೆಲಿ ಕಾಟಾಯಿ ಸುರು ಆವ್ಟು.

ಕಾಟಿ /*ka:ṭi*/ ನಾ. ಕಾಡುಕೋಣ. a wild bison. ವಾ: ಗುಡ್ಡೆಲೆಲ್ಲ ಕಾಟಿಗ ಓಡಾಡುವೆ.

ಕಾಟೂರು /*ka:ṭu:ru*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಜಾಲ್ಸೂರು ಗ್ರಾಮದ ಜಾಗ. 1. family, 2. lineage, 3. a locality in Jalsuru village in Sullia Taluk of Dakshina Kannada District.

ಕಾಟ್‌ಮುರ್ಕ /*ka:ṭi murka*/ ನಾ. 1. ಹಾವಿನ ಹೆಸರು, 2. ವಿಷದ ಹಾವು, 3. ಕಡುಮೂರ್ಖ. 1. a variety of snake, 2. a poisonous snake. ವಾ: ಕಾಟ್‌ಮುರ್‌ಕ ಹಾವು ಬಾರಿ ವಿಸ. ಪ: ಕಾಟಿಮೂರ್ಕ

ಕಾಟ್ರ /*ka:ṭra*/ ನಾ. ಗಿಡಕ್ಕೆ ಪಾಚಿಯಂತೆ ಅಂಟಿಕೊಂಡಿರುವುದು. sticking to a plant like that of moss. ವಾ: ಕಾಪಿ ದೈಕೆ ಅಂಟಿದ ಕಾಟ್ರನ ತೆಗೆಕು.

ಕಾಟ್ಲ ಮೀನ್ /*ka:ṭla mi:nɨ*/ ನಾ. ಹೊಳೆ, ಕೆರೆಯಲ್ಲಿ ದೊರೆಯುವ ದೊಡ್ಡ ಜಾತಿಯ ಸಾಕು ಮೀನು. a big freshwater fish. ವಾ: ಕಾಟ್ಲ ಮೀನ್ ಹೊರ್‌ದರೆ ರುಚಿ.

ಕಾಡಂದಿ /*ka:ḍandi*/ ನಾ. ಕಾಡುಹಂದಿ. a wild boar. ವಾ: ಕಾಡಂದಿ ಬಾಳೆ ದೈನ ಮನಾರ ಮಾಡಿಟು. ಪ: ಕಾಡಂದಿಗ

ಕಾಡವ್ಂತ /*ka:ḍavɨnta*/ ನಾ. 1. ಕಾಡುವವರು, 2.

ಹಿಂಸಿಸು, 3. ಪೀಡಿಸು, 4. ಅವಹೇಳನ ಮಾಡು. 1. troublesome, 2. torture, 3. to annoy, 4. an expletive. ವಾ: ಅವು ಇಸ್ಟೊಂದ್ ಕಾಡವ್‌ಂತ ಗೊತ್ತಿಲ್ಲೆ.

ಕಾಡಿಗರ ಮರ /*ka:digara mara*/ ನಾ. ಕಾಡಿನ ಮರ, ಮರದ ಸಿಪ್ಪೆ, ಹಣ್ಣಿನ ರಸ ಚರ್ಮಕ್ಕೆ ತಾಗಿದರೆ ತುರಿಸುವುದು. a forest tree, coming in contact with the skin and the sap of the tree causes irritation.

ಕಾಡಿಗೆರ /*ka:ḍigɛra*/ ನಾ. ಒಂದು ಜಾತಿಯ ಕಾಡು ಮರ, ಇದನ್ನು ಕಡಿದಾಗ ಹೊರಸೂಸುವ ಸೊನೆ ದೇಹದಲ್ಲಿ ಹುಣ್ಣು ಉಂಟು ಮಾಡುತ್ತದೆ. a variety of tree found in forest. Milk of the tree causes ulcers on the skin. ವಾ: ಕಾಡಿಗೆರ ಒಂದು ಕಾಡ್ ಮರ. ಪ: ಚೇರೆಮರ

ಕಾಡುಜಬಳೆ /*ka:ḍujabaḷe*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ದೇವಚಳ್ಳ ಗ್ರಾಮದ ಜಾಗ. a locality in Devacalla village in Sullia Taluk of Dakshina Kannada District.

ಕಾಡುತೋಟ /*ka:ḍuto:ṭa*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕಾಡುಪಂಜ[1] /*ka:ḍupaɲja*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕಾಡುಪಂಜ[2] /*ka:ḍupaɲja*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ತೊಡಿಕಾನ ಗ್ರಾಮದ ಜಾಗ. a locality in Todikana village in Sullia Taluk of Dakshina Kannada District.

ಕಾಡುಸೊರಂಜ[1] /*kaḍusɔraɲja*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕಾಡುಸೊರಂಜ[2] /*ka:ḍusoraɲja*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮಂಡೆಕೋಲು ಗ್ರಾಮದ ಜಾಗ. a locality in Mandekolu village in Sullia Taluk of Dakshina Kannada District.

ಕಾಡುಹಗಲ /*ka:ḍʿuhagala*/ ನಾ. ಮಾಡ ಹಾಗಲಕಾಯಿ. bitter gourd. ವಾ: ಕಾಡ್ ಹಗಲಲಿ ತುಂಬ ಪ್ರೊಟಿನ್ ಗ ಸಿಕ್ಕಿದೆ, ಈಗೆಲ್ಲ ಅದರ ಬೆಳ್ಸುವೆ, ಇದ್ ಕಂಹಿ ಇಲ್ಲೆ.

ಕಾಡೋಕಾಡ್ /*ka:ḍo:ka:ḍɨ*/ ನಾ. ತುಂಬ ಬೆಳೆದಿರುವ ಬೇಡದ ಗಿಡಗಳು. unwanted plants (weed). ವಾ: ಮನೆ ಮುಂದೆ ಕಾಡೋ ಕಾಡ್.

ಕಾಡ್ ರಂಜೋಳ್ ಮರ /*ka:ḍɨ raŋjo:ḷɨ mara*/ ನಾ. ಒಂದು ಜಾತಿಯ ಸಣ್ಣದಾದ ಕಾಡು ಹಣ್ಣು. a forest fruit. ವಾ: ಕಾಡ್ ರಂಜೋಳ್ ಮರಲಿ ಆಗೊ ಹಣ್ಣ್ ಮಕ್ಕರೆ ಮಕ್ಕರೆ ಆಗಿದ್ದದೆ.

ಕಾಡ್ ಸೀಲ /*ka:ḍɨ si:la*/ ನಾ. ಕೆಟ್ಟ ನಡತೆ. bad behaviour. ವಾ: ಕಾಡ್ ಸೀಲದ ಗೂಡೆ ಅದ್.

ಕಾಡ್ ಹತ್ತಿತ್ /*ka:ḍɨ hattitɨ*/ ನಾ. 1. ಎಲ್ಲ ಮಾಯವಾಗಿದೆ, 2. ಆಚಾರ ವಿಚಾರ, ಸಂಸ್ಕೃತಿಗಳು ಆಚರಣೆಯಲ್ಲಿ ಕಂಡು ಬರದಿದ್ದಾಗ ಹೇಳುವ ಮಾತು. 1. disappeared, 2. term indicates the disappearance of rituals and traditional practices. ವಾ: ಹಳೆ ಕಂಚ್‌ನ ಪಾತ್ರಗ, ಆಚಾರ ವಿಚಾರ, ಕತೆ ಹೇಳ್ದು ಎಲ್ಲ ಕಾಡ್ ಹತ್ತಿತ್. ಪ: ಕಾಡ್ ಹತ್ತ್

ಕಾಡ್[1] /*ka:ḍɨ*/ ನಾ. 1. ಅರಣ್ಯ, 2. ಕಾಡು, 3. ಅಡವಿ, 4. ಕೃಷಿ ಮಾಡದ ಮರ ಮತ್ತು ಪೊದೆಗಳಿಂದ ತುಂಬಿದ ವಿಶಾಲ ಪ್ರದೇಶ. a forest. ವಾ: ಕಾಡ್ ಬೆಳ್ದೊಕು. ಪ: ಕಾಡಿಡೀ ಹುಡ್ಕ್. **ಕಾಡ್ ಬಾಳೆದಿಂಡ್** /*ka:ḍ ba:ḷɛdiṇḍ*/ 1. ಕಾಡಿನಲ್ಲಿ ದೊರೆಯುವ ಬಾಳೆಗಿಡದ ದಿಂಡು, 2. ಬಾಳೆದಿಂಡು. stem of Plantain/ Plantain stalk. ವಾ: ಕಾಡ್ ಬಾಳೆದಂಡ್ ಪಲ್ಯ ಮಾಡಕ್. **ಕಾಡ್‌ಂದ** /*ka:ḍɨnda*/ 1. ಕಾಡಿನಿಂದ, 2. ಅಡವಿಯಿಂದ, 3. ಅರಣ್ಯದಿಂದ. from the forest. ವಾ: ಕಾಡ್‌ಂದ ಬಾಕನ ಒಂದು ಹೊರೆ ಸೌದೆ ತಂದದ್.

ಕಾಡ್[2] /*ka:ḍɨ*/ ನಾ. ಕಸ. waste. ವಾ: ಚೀಪೆಲಿ/ ಮಾಯ್‌ಪುಲಿ ಗುಡ್ಸಿ ಕಾಡ್‌ನ ಇಡ್. ಪ: ಕಾಡ್‌ಕಡೆದು

ಕಾಡ್‌ಅಂಬಟೆ ಮರ /*ka:ḍɨ ambaṭɛ mara*/ ನಾ. 1. ಕಾಡು ಅಮಟೆಕಾಯಿ ಮರ, 2. ಹುಳಿಕಾಯಿ ಬಿಡುವ ಮರ. wild Hog Plum. ವಾ: ಅದೇ ಕಾಡ್ ಅಂಬಟೆ ಮರ ಕಂಡದೆ.

ಕಾಡ್ಕಲ್ಲ್ /*ka:ḍkallɨ*/ ನಾ. ಕಾಡಿನಲ್ಲಿ ದೊರೆಯುವ ಕಲ್ಲುಗಳು. wild stones/rocks. ವಾ: ಕಾಡ್ಕಲ್ಲ್ ನ ಕಟ್ಟೆ ಕಟ್ಟಿಕೆ ಹಾಕಕ್.

ಕಾಡ್‌ಕಾಪಿ /*ka:ḍɨ ka:pi*/ ನಾ. ಕಾಡುಕಾಫಿ. wild coffee. ವಾ: ಕಾಡ್ ಕಾಪಿ ದೈ ಅದ್.

ಕಾಡ್ಕಿಚ್ಚಿ /*ka:ḍkicci*/ ನಾ. ಕಾಡ್ಗಿಚ್ಚು. wildfire. ವಾ: ಬಿಸ್ಲ್ ಜಾಸ್ತಿಯಾಗಿ ಕಾಡ್ಕಿಚ್ಚಿ ಹಬ್ಬಿತ್.

ಕಾಡ್‌ಕುಂಬಳ /*ka:ḍɨ kumbaḷa*/ ನಾ. ಕಾಡು ಕುಂಬಳ. a wild pumpkin. ವಾ: ನೋಡಿನೆ ಕಾಡ್ ಕುಂಬಳ ಬೊಳ್ಳಿನ.

ಕಾಡ್‌ಕೂಡ್ತ್ /*ka:ḍɨ ku:ḍt*/ ನಾ. ಕಾಡು ತುಂಬಿತು. full of trees. ವಾ: ಸೆರಿ ತೋಟನ ನೋಡದೆ ಎಲ್ಲ ಕಾಡ್ ಕೂಡ್ತ್.

ಕಾಡ್‌ಕೆತ್ತಿ /*ka:ḍketti*/ ನಾ. ಹಾಳಾದ ಮೊಟ್ಟೆ. spoiled egg. ಪ: ಕಾಳ್‌ಕೆತ್ತಿ, ಕಾಲ್‌ಕೆತ್ತಿ(ತು)

ಕಾಡ್‌ಕೆಸ /*ka:ḍɨ kɛsa*/ ನಾ. ತಿನ್ನಲು ಯೋಗ್ಯವಲ್ಲದ ಕೆಸ. inedible Colocasia. **ಕಾಡ್ ಕೆಸಕ್ಕೆ ಮಣ್ಣಾಕಿದಂಗೆ(ಗಾ).** ವಾ: ಕಾಡ್ ಕೆಸಂದ ಯಾವ ಪ್ರೇಜನನು ಇಲ್ಲೆ.

ಕಾಡ್‌ಕೆಸನ್ ಗೆಂಡೆ /*ka:ḍɨ kɛsanɨ gɛnḍɛ*/ ನಾ. ಕಾಡಿ ಕೆಸುವಿನ ಗೆಡ್ಡೆ. ಕುರ, ಕಜ್ಜಿಗೆ ಈ ಗೆಡ್ಡೆ ಬೇಯಿಸಿ ಕಟ್ಟುವುದರಿಂದ ವಾಸಿಯಾಗುತ್ತದೆ. the root of colocasia is boiled and used to treat scabies. ವಾ: ಕಾಡ್ ಕೆಸನ್ ಗೆಂಡೆನ ಬೇಸ್.

ಕಾಡ್ಕೊತ್ತಿ /*ka:ḍkɔtti*/ ನಾ. ಕಾಡುಬೆಕ್ಕು. 1. a wild cat, 2. civet cat. ವಾ: ತೋಟಲಿ ಅಲ್ಲೊಂದು ಇಲ್ಲೊಂದು ಕಾಡ್ಕೊತ್ತಿಗ ಕಂಡವೆ.

ಕಾಡ್ಕೋಳಿ /*ka:ḍkɔ:ḷi*/ ನಾ. ಕಾಡು ಕೋಳಿ. a wild hen. **ಕಾಡ್ ಕೋಳಿಗೆ ಸಂಕ್ರಾಂತಿ ಇಲ್ಲೆ(ಗಾ).** ವಾ: ಕಾಡ್ಕೋಳಿನ ಹಿಡಿ. ಪ: ಕಾಡ್ಕೋಳಿ ಹಿಂಡ್

ಕಾಡ್‌ಗಂದ /*ka:ḍɨ ganda*/ ನಾ. ಅದೊಂದು ಬಗೆಯ ಕಾಡು ಮರ. a forest tree. ವಾ: ಕಾಡ್ ಗಂದ ಒಂದ್ ಕಾಡ್ ಮರ.

ಕಾಡ್‌ಗೆಣ್ಸ್ /*ka:ḍɨ gɛṇsi*/ ನಾ. ಕಾಡಿನಲ್ಲಿ ಸಿಗುವ ಗೆಣಸು. a wild root /a wild sweet potato/ tuber. ವಾ: ಕಾಡ್ ಗೆಣ್ಸ್/ಗೆಳ್ಸ್ ನೋಳಿಯಾಗಿ ಹುತ್ತೆರಿ ಗೆಣ್ಸ್ ನಂಗೆ ರುಚಿ.

ಕಾಡ್‌ಗೆಣ್ಸ್ ಬೊಳ್ಳಿ /*ka:ḍɨ gɛṇsɨ bɔḷḷi*/ ನಾ. ಕಾಡು ಗೆಣಸಿನ ಬಳ್ಳಿ, a creeper of wild sweet potato. ವಾ: ಕಾಡ್ ಗೆಣ್ಸ್ ಬೊಳ್ಳಿ ನ ಕಾಡ್ ಹಂದಿಗ ಎಳ್ದ್ ಹಾಕೊಳೊ.

ಕಾಡ್‌ಗೇರ್ /*ka:ḍɨ gɛ:ri*/ ನಾ. ಗೇರನ್ನು ಹೋಲುವ ಕಾಯಿ. a nut that resembles cashew. ವಾ: ಕಾಡ್ ಗೇರ್ ಗೊತ್ತ ನಿಂಗೆ? **ಕಾಡ್‌ಗೇರ್ದ್ ಮರ** /*ka:ḍɨ gɛ:rdɨ mara*/ ಕಾಡು ಗೇರು ಹಣ್ಣಿನ ಮರ. wild cashew nut tree. ವಾ: ಅಲ್ಲಿ ಕಾಂಬದು ಕಾಡ್ ಗೇರ್ದ ಮರನ?

ಕಾಡ್‌ಜೇನ್ /*ka:ḍɨ je:nɨ*/ ನಾ. 1. ಕಾಡು ಜೇನು. forest honey. ವಾ: ಹುತ್ತಲಿ, ಮರದ ಪೋಟೆಲೆಲ್ಲ ಕಾಡ್‌ಜೇನ್ ಇದ್ದದೆ. ಪ: ಕಾಡ್‌ಜೇನ್ ತುಪ್ಪ

ಕಾಡ್‌ದಾರಿ /*ka:ḍɨda:ri*/ ನಾ. ಕಾಡು ದಾರಿ. on the way to the forest. ವಾ: ಕಾಡ್ ದಾರಿಲಿ ಹೋಕು.

ಕಾಡ್ಡೆ /*ka:ḍḍɛ*/ ನಾ. 1. ಕಾಡುವುದು, 2. ಪೀಡಿಸು, 3. ಹಿಂಸಿಸು. 1. troubling, 2. pleading, 3. torturing. ವಾ: ದುಡ್ಡು ಬೇಕುತ ಬಾರಿ ಕಾಡ್ಡೆ, ಕುದ್ರಿಕೆ ನಿಲ್ಲಿಕೆ ಬುಡ್ಡುಲೆ.

ಕಾಡ್‌ಬಾಳೆ /*ka:ḍɨ ba:ḷɛ*/ ನಾ. 1. ಕಾಡಿನಲ್ಲಿ ಬೆಳೆಯುವ ಬಾಳೆ, 2. ಮಲೆಕಾಡಿನಲ್ಲಿ ಬೆಳೆಯುವ ಬಾಳೆ. 1. a variety of plantain that is grown in the forest, 2. a variety of plantain that is grown in the hilly/mountainous regions. ವಾ: ಕಾಡ್ ಬಾಳೆಲಿ ಬರಿ ಬಿತ್ತ್‌ಗಳೆ ಸಿಕ್ಕುದು, ಚಪ್ಪಿ ಹಾಕೊಕು ಅಸ್ಟೆ. ಕಲ್ಲ್‌ಬಾರೆ(ತು)

ಕಾಡ್‌ಬೆಕ್ಕು /*ka:ḍɨ bɛkku*/ ನಾ. 1. ಕಾಡು ಬೆಕ್ಕು, 2. ಕಾರ್ನಿವೊರ ಗಣ ಮತ್ತು ಫೆಲಿಡೀ ಕುಟುಂಬಕ್ಕೆ ಸೇರಿದ ಸ್ತನಿ, 3. ಕೋರೆ ಹಲ್ಲುಗಳು ಉದ್ದ ಹಾಗೂ ಚೂಪು, ನಖಗಳು ಕೂಡ ಚೂಪು, ಮೂಗು ಸದಾ ಒದ್ದೆಯಾಗಿದ್ದು ಗ್ರಹಣ ಶಕ್ತಿ ಉನ್ನತ ಮಟ್ಟದಲ್ಲಿರುತ್ತದೆ. wild cat. ವಾ: ಕಾಡ್ ಬೆಕ್ಕು ಹೋತಲ್ಲಿ.

ಕಾಡ್‌ಬೊಳ್ಳಿ ಸೂಂಪೆ /*ka:ḍɨbɔḷḷi su:mpɛ*/ ನಾ. ಕಾಡಿನಲ್ಲಿ ಸಿಗುವ ಬಳ್ಳಿಯಿಂದ ಮಾಡುವ ಪಾತ್ರೆಯ ಅಡಿಗೆ ಇಡುವ ಸಾಧನ. a ring made of grass/ reed to keep vessels on it. ವಾ: ಕಾಡ್‌ಬೊಳ್ಳಿ ಸೂಂಪೆನ ಪಾತ್ರಗಳ ಅಡಿಗೆ ಇಸಿಕೆ ಬಳ್‌ಸುವೆ.

ಕಾಡ್‌ಮಣ್ಣ್ /*ka:ḍɨ maṇṇi*/ ನಾ. 1. ಕಾಡುಮಣ್ಣು, 2. ಮರಗಿಡಗಳಿರುವಲ್ಲಿ ಇರುವ ಫಲವತ್ತಾದ ಮಣ್ಣು.

fertile soil from the forest. ವಾ: ಕಾಡ್ ಮಣ್ಣ್‌ನ ಹೂನ ದೈಕೆ ಹಾಕಿರೆ ಒಳ್ಳೆ ಗೊಬ್ರ ನಂಗೆ ಆದೆ.

ಕಾಡ್‌ಮಾವ್ /*ka:ḍɨ ma:vɨ*/ ನಾ. 1. ಕಾಡು ಮಾವು, 2. ಕಾಡಿನಲ್ಲಿ, ತೋಟಗಳಲ್ಲಿ ದೊರೆಯುವ ಆಕಾರದಲ್ಲಿ ಸಣ್ಣದಾಗಿದ್ದು ಹುಳಿ ಮಿಶ್ರಿತ ಮಾವಿನ ಹಣ್ಣು. a wild mango. ವಾ: ಕಾಡ್ ಮಾವ್‌ನ ಉಪ್ಪಿಗೆ ಹಾಕಿಸಿಯೊಳೆ. ಪ: ಕಾಡ್ ಮಾಯ್ನ ಕಾಯಿ. **ಕಾಡ್‌ಮಾಂವ್ನ ಹಣ್ಣ್** /*ka:ḍɨ ma:nvna haṇṇɨ*/ ತೋಟಗಳಲ್ಲಿ, ಕಾಡಿನಲ್ಲಿ ಸಿಗುವ ಸಣ್ಣ ದಾದ ಮಾವಿನ ಹಣ್ಣು, ಈ ಮರವು ಬಹಳ ಎತ್ತರವಾಗಿರುತ್ತದೆ. a small fruit in a tall mango tree, grown either in a farm or in the forest. ವಾ: ಕಾಡ್ ಮಾಂವ್‌ನ ಹಣ್ಣ್‌ದ್ ಗೊಜ್ಜು ಮಾಡೊಕು. ಪ: ಕಾಡ್‌ಮಾಯ್ಣ ಹಣ್ಣ್. **ಕಾಡ್‌ಮಾವ್‌ನ ಮರ** /*ka:ḍɨ ma:vɨna mara*/ ಕಾಡು ಮಾವಿನಹಣ್ಣಿನ ಮರ. a wild mango tree. ವಾ: ಕಾಡ್ ಮಾವ್‌ನ ಮರಲಿ ಎಸ್ಟ್ ಕಾಯಿ ಹಿಡ್ದುಟು. ಪ: ಕಾಡ್‌ಮಾಯ್ಣ ಮರ

ಕಾಡ್ಮುರ /*ka:ḍmura*/ ನಾ. 1. ಕಸಬರಿಕೆ 2 ಗುಡಿಸಿದ ಕಸವನ್ನು ಎತ್ತುವ ಸಾಧನ. 1. a broom, 2. a dustpan. ವಾ: ಕಾಡ್‌ನ ಗುಡ್ಸಿ ಕಾಡ್ಮುರಲಿ ಎತ್ತಿ ಇಡ್.

ಕಾಡ್‌ಮುರ್ಗ /*ka:ḍɨ murga*/ ನಾ. ಕಾಡು ಮೃಗ. a wild animal. ವಾ: ಕಾಡ್ ಮುರ್‌ಗನಂಗೆ ಆಡ್ದೆ.

ಕಾಡ್‌ಮೇಡ್ /*ka:ḍɨ mɛ:ḍɨ*/ ನಾ. ಕಾಡುಮೇಡು (ಜೋಡು ಪದ). forest. ವಾ: ಕಾಡ್ ಮೇಡ್ ಸುತ್ತಿಕಂಡ್ ಹೆಂಗೊ ಬಂದೆತ್ತಿದೊ.

ಕಾಡ್‌ಮೊಲ್ಲಿಗೆ /*Ka:ḍɨ mɔlligɛ*/ ನಾ. ಫೆಬ್ರವರಿ ತಿಂಗಳಲ್ಲಿ ಅರಳುವ ಹೂವು. a flower that blooms in the month of February. ವಾ: ಕಾಡ್ ಮಲ್ಲಿಗೆ ಪೊರ್‌ಮಳ ಬಂದದೆ.

ಕಾಡ್ಯ /*ka:ḍya*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕಾಡ್‌ಸಂಪಿಗೆ ಮರ /*ka:ḍɨ sampigɛ mara*/ ನಾ. ಕಾಡು ಸಂಪಿಗೆ ಮರ. wild champaka tree. ವಾ: ಕಾಡ್ ಸಂಪಿಗೆ ಮರ ಅಲ್ಯುಟ್ಟು.

ಕಾಡ್‌ಸೀಗೆ /*ka:ḍɨ si:gɛ*/ ನಾ. ಕಾಡು ಸೀಗೆ. wild Shikakai, Soap nut pod. ವಾ: ಕಾಡ್ ಸೀಗೆ ಬಲ್ಲೆ ಒಳಗೆ ಹುಗ್ಗಿಕಾದುಲೆ.

ಕಾಡ್‌ಹರ್ಳ್ /*ka:ḍɨ harḷɨ*/ ನಾ. 1. ಅವುಡಲ ಮರ, 2. ಹರಳು ಮರ. castor-oil plant, (Ricinus communis). ವಾ: ಕಾಡ್ ಹರ್ಳ್‌ಲಿ ಎಣ್ಣೆ ಕಾಸಿ ತೆಗ್ದವೆ.

ಕಾಡ್‌ಹಲ್ಸ್ /*ka:ḍɨ halsɨ*/ ನಾ. 1. ಹೆಬ್ಬಲಸು, 2. ಆಜಿನ ಮರ. ಇದರ ಎಲೆಗಳು ಬೆರಳಿನಾಕಾರದಲ್ಲಿರುತ್ತದೆ. a wild jackfruit tree. ವಾ: ಕಾಡ್ ಹಲ್ಸ್‌ನ ಮರ ಇದ್, ಇದರ್ಲಿ ಹಲ್ಸ್‌ನ ಕಾಯಿನಂಗೆ ಬುಟ್ಟದೆ.

ಕಾಡ್‌ಹೀರೆ /*ka:ḍɨ hi:rɛ*/ ನಾ. ತರಕಾರಿಯಾಗಿ ಪದಾರ್ಥಕ್ಕೆ ಬಳಸುತ್ತಿದ್ದರು. wild ridge gourd. ವಾ: ಗೈಪು ಮಾಡ್ಕನ ತರ್‌ಕಾರಿಗಳ ಒಟ್ಟಿಗೆ ಕಾಡ್ ಹೀರೆನು ಹಾಕಿರಾದು.

ಕಾಣಿಕೆ[1] /*ka:ṇikɛ*/ ನಾ. ಅರ್ಪಣೆಯ ವಸ್ತುಗಳು ಅಥವಾ ಹಣ. things and money offered to god. ವಾ: ದೇವ್ರಿಗೆ ಕಾಣಿಕೆ ಹಾಕೊಕು.

ಕಾಣಿಕೆ[2] /*ka:ṇike*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಐವತ್ತೊಕ್ಲು ಗ್ರಾಮದ ಜಾಗ. a locality in Aivattoklu village in Sullia Taluk of Dakshina Kannada District.

ಕಾಣಿಚ್ಚಾರ್ /*ka:ṇicca:r*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕಾಣೆ[1] /*ka:ṇɛ*/ ನಾ. ಕಂಡುಬರುವುದಿಲ್ಲ. can't be found. ವಾ: ಅಂವ ಎಲ್ಲಿ ಕಾಣೆ ಆಗೋತುತ?

ಕಾಣೆ[2] /*ka:ṇɛ*/ ನಾ. ಹೊಳೆ ಸಮುದ್ರಕ್ಕೆ ಸೇರುವಲ್ಲಿ ವಾಸಿಸುವ ಉದ್ದನೆಯ ತಿನ್ನಲು ರುಚಿಕರವಾದ ಮೀನು. a lady fish, usually found in the eustery. ವಾ: ಕಳೆ ತೆಗಿಯದು ಕೆಲ್ಸ ಇನ್ನುಸ ಆತ್ಲೆ. ಪ: ಕಾಣೆಮೀನ್

ಕಾಣೊಕ್ /*ka:ṇɔkɨ*/ ಕ್ರಿವಿ. 1. ಕಾಣಬೇಕು, 2. ಭೇಟಿಮಾಡಬೇಕೆ? 1. do you want to see?, 2. do you want to meet? ವಾ: ಅವರ ಕಾಣೊಕಾ. ಪ: ಕಾಣೊಕಾರೆ

ಕಾಣ್ /*ka:ṇɨ*/ ಕ್ರಿ. 1. ಕಾಣು, 2. ಸಿಕ್ಕು, 3. ಭೇಟಿಮಾಡು, 4. ಬಂದು ನೋಡು. 1. to see, 2. to meet, 3. to visit, 4. to go and see someone. ವಾ: ನಾಳೆ ಬಂದ್ ನನ್ನ ಕಾಣ್ ಆತ. ಪ: ಕಾಣಕ್ – ಕಾಣಬಹುದು; ಕಾಣೊಕು – ಕಾಣಬೇಕು; ಕಾಣೊಮು

– ಕಾಣುವ; ಕಾಣ್ತುಟ್ಟ – ಕಾಣುತ್ತಿದೆಯಾ?; ಕಾಣ್ತೊಳೊ – ಕಾಣುತ್ತಿದೆ; ಕಾಣ್ಸಿರೆ – ಕಾಣಿಸಿದರೆ

ಕಾತ /*ka:ta*/ ಕ್ರಿ. ಕಾಯಿತೆ? ಬಿಸಿಯಾಯಿತೆ? is it hot/warm. ವಾ: ರೊಟ್ಟಿ ಕಾತ ನೋಡು. ಪ: ಕಾತ್ಲೆ – ಕಾಯಾಲಿಲ್ಲ; ಕಾದುಟ – ಕಾದಿದೆಯೆ; ಕಾದದೆ – ಬಿಸಿಯಾಗುತ್ತದೆ. **ಕಾತ್ಲೆ** /*ka:tlɛ*/ 1. ಕಾಯಲಿಲ್ಲ, 2. ಬಿಸಿಯಾಗಲಿಲ್ಲ. not hot/warm yet. ವಾ: ದೋಸೆ ಕಾತ್ಲೆ. ಪ: ನೀರ್ ಕಾತ್ಲೆ. **ಕಾದನೆ** /*ka:danɛ*/ ಕಾಯುತ್ತೇನೆ. I will wait. ವಾ: ನೀ ಬಾಕನಮುಟ್ಟ ಕಾದನೆ. **ಕಾದರೆ** /*ka:darɛ*/ ಕಾಯುತ್ತಿದ್ದರೆ. if he/she had waited. ವಾ: ಒಳ್ಳ ಕಾಲ ಬರ್‌ಲಿ ತ ಕಾದರೆ ಬೊದ್ಕಿಕಾದುಲೆ. **ಕಾದುಟು** /*ka:duṭṭu*/ 1. ಕಾದಿದೆ, 2. ಬಿಸಿಯಾಗಿದೆ. 1. hot, 2. warm. ವಾ: ಮೀಯಕೆ ನೀರ್ ಕಾದುಟು. ಪ: ಕಾದ್‌ಕಂಡುಟ್ಟು – ಕಾಯುತ್ತಿದೆ. **ಕಾದರೆ** /*ka:darɛ*/ ಬಿಸಿಯಾದರೆ. if it is warm. ವಾ: ಕಾಪಿ ಕಾದರೆ ಕುಡ್ಯಕಿತ್.

ಕಾತ್ರಿ /*ka:tri*/ ನಾ. 1. ಸಂದೇಹ ನಿವಾರಿಸಿಕೊಳ್ಳು, 2. ಖಾತ್ರಿಪಡಿಸಿಕೊಳ್ಳುವುದು, 3. ಖಚಿತಪಡಿಸಿಕೊಳ್ಳುವುದು. 1. to clear doubts, 2. confirm, 3. confirming. ವಾ: ಬಂದೊಳೊ ಇಲ್ಲೆನತ ನೋಡ್ದ ಮೇಲೆ ಕಾತ್ರಿ ಆತ್.

ಕಾದಾಡುವ /*ka:da:ḍuva*/ ನಾ. 1. ಹೋರಾಡುವ, 2. ಜಗಳವಾಡುವ. 1. the one who fights, 2. quarrelsome. ವಾ: ಕಾದಾಡುವ ಹೋರಿಗ ಇದ್ದರೆ ಬಜ್ಜ.

ಕಾದೆಣ್ಣೆ /*ka:dɛṇṇɛ*/ ನಾ. ಬಿಸಿಯಾದ ಎಣ್ಣೆ. warm/hot oil. **ಬೇರೆಯವ್ರ ಕಾದೆಣ್ಣೆಲಿ ತನ್ನ ಹಪ್ಪಳ ಹೊರ್ದಂಗೆ(ಗಾ).** ವಾ: ಕಾದೆಣ್ಣೆಗೆ ಕೈ ಹಾಕ್ಬಡ.

ಕಾದ್ /*ka:dɨ*/ ಕ್ರಿ. 1. ಕಾದು, 2. ಕಾಯ್ದು. waiting continuously. ವಾ: ಕಾದ್ ಕಾದ್ ಸಾಕಾತ್. **ಕಾದುಟುಗಡ** /*ka:duṭugaḍa*/ ಕಾಯುತ್ತಿದ್ದನಂತೆ /ಕಾಯುತ್ತಿದ್ದಳಂತೆ. she/he was waiting. **ಬೇಯುವವರೆಗೆ ಕಾದುಟುಗಡ ಆರೋವರೆಗೆ ಕಾಯಕೇನ್(ಗಾ).** ವಾ: ಅವು ಬರೋವರೆಗು ಕುದ್ದ್ ಕಾದುಟುಗಡ. **ಕಾದವೆ** /*ka:davɛ*/ ಕಾಯುತ್ತಾರೆ. They will wait. ವಾ: ಅವು ಹೊರ್‌ಗೆ ಕಾದವೆ. ಪ: ಕಾದವೆಂತ – ಕಾಯುತ್ತೇವೆಂದು. **ಕಾದೊಳೆ** /*ka:dɔḷɛ*/ ಕಾದಿದ್ದೇನೆ. waited. ವಾ: ರಾತ್ರೆ ಪೂರ ಕಣ್ಣಿಗೆ ಎಣ್ಣೆ ಬುಟ್ಟ್ ಕಂಡ್ ಕಾದೊಳೆ. **ಕಾದ್ಕ್ಕಂಡ್** /*ka:dɨkkiṇḍi*/ ಕಾದುಕೊಂಡು. waiting/waited. ವಾ: ಮಕ್ಕಳಿಗೆ ಕಾದ್ ಕಂಡ್ ಕುದ್ದದ್.

ಕಾನ /*ka:na*/ ನಾ. 1. ಕಾಡು 2. ಕಾನನ. land that is granted for lesser tax. **ಆ ಕಾನಕ್ಕಾದ ಈ ಕುರೆ ಈ ಕುರೆಗಾದ ಆ ಕಾನ(ಗಾ).** ವಾ: ಕಾನದಕ್ಕಲೆ ಪೋಯ? ಪ: ಕಾನದ ಕರೆ – ಕಾಡು ಬದಿ

ಕಾನಜೆ /*ka:najɛ*/ ನಾ. ರಾಮಪತ್ರೆ. Wild Nutmeg. ವಾ: ಕಾನಜೆ ನೋಡಿಕೆ ಜಾಯಿಕಾಯಿನಾಂಗೆ ಇದ್ದ್, ಮಸಾಲೆ, ಎಲಾಡ್ಕೆ, ಮೊದ್ದ್ ಗೆ ಬಳ್ಸುವೆ. ಪ: ಕಾನಕಜೆ ಮರ

ಕಾನಡ್ಕ /*ka:naḍka*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕಾನತ್ತಿಲ /*ka:nattila*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕಾನಾವು /*ka:na:vu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕಾನೆಹಿತ್ಲು /*ka:nɛhitlu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕಾಪಳ /*ka:paḷa*/ ನಾ. ಅದೊಂದು ಬಗೆಯ ವೇಷ. a costume.

ಕಾಪಾಡ್ /*ka:pa:ḍɨ*/ ನಾ. 1. ರಕ್ಷಿಸು, 2. ಉಳಿಸು, 3. ಸಂರಕ್ಷಿಸು. to protect/to preserve. ವಾ: ದೇವ್ರೆ ಎಲ್ಲವರ್‌ನ ಕಾಪಾಡ್.

ಕಾಪಿ[1] /*ka:pi*/ ನಾ. ಬೆಳಗ್ಗಿನ ಉಪಾಹಾರಕ್ಕೆ ಕಾಫಿ ಎಂದೇ ಕರೆಯುತ್ತಾರೆ, ಉದಾ : ಕಾಫಿ, ತಿಂಡಿ ಆಯಿತಾ? referring to breakfast. ವಾ: ಕಾಪಿ ಆತಾ?

ಕಾಪಿ[2] /*ka:pi*/ ನಾ. ಕಾಫಿ. coffee. **ಕಾಪಿ ಅಳ್ತೆ ಮಾಡ್ದು** /*ka:pi aḷtɛ ma:ḍdu*/ ಕಾಫಿ ಅಳತೆ ಮಾಡುವುದು. a measure of coffee. ವಾ: ಎಂತ ಮಾಡ್ದು? ಕಾಪಿ ಅಳ್ತೆ ಮಾಡ್ದು ಅಣ್ಣ. **ಕಾಪಿ ಉರುಂಬುದು** /*ka:pi urumbudu*/ 1. ಕಾಫಿ ಉದುರಿಸು, 2. ಎಳೆ. 1. to make the berry of coffee to fall from the tree, 2. to pull. ವಾ: ದೈಂದ ಹಿಂಗೆ ಕಾಪಿ ಉರುಂಬುದು. **ಕಾಪಿ ಕಪಾತ್** /*Ka:pi kapa:tɨ*/ ಗಿಡದಲ್ಲಿನ ಅನವಶ್ಯಕವಾದ ಸಣ್ಣ ಸಣ್ಣ ಕೊಂಬೆಗಳನ್ನು

ತೆಗೆಯುವುದು. pruning the plant. ವಾ: ಕಾಪಿ ಕಪಾತ್ ಆತ್ ನಮ್ಮದ್. **ಕಾಪಿ ಕೊಯ್ಯದು** /*ka:pi koyyadu*/ ಕಾಫಿಯನ್ನು ಗಿಡದಿಂದ ಕುಯ್ಯುವುದು. harvesting coffee/picking coffee berry. ವಾ: ಕಾಪಿ ಕೊಯ್ಯದು ಕೆಲ್ಸ. **ಕಾಪಿ ಗುಡ್ಡೆ ಹಾಕ್** /*ka:pi guḍḍɛ ha:kɨ*/ ಒಣಗಲು ಹಾಕಿದ ಕಾಫಿಯನ್ನು ಗುಡ್ಡೆ ಮಾಡುವುದು. to gather coffee beans that are kept for drying. ವಾ: ಕೊಯ್ದ ಕಾಪಿನ ಕಳಲಿ ಗುಡ್ಡೆ ಹಾಕ್. **ಕಾಪಿ ಚಿಗ್ರ್ ತೆಗೆದು** /*ka:pi cigrɨ tɛgɛdu*/ ಗಿಡದಲ್ಲಿನ ಬೇಡದ ಚಿಗುರನ್ನು ತೆಗೆಯುವುದು. removing unwanted shoots. ವಾ: ಕಾಪಿ ಚಿಗ್ರ್ ತೆಗೆಕು. **ಕಾಪಿ ಪೀಂಕುಸುದು** /*ka:pi pi:ŋkusudu*/ ಕಾಫಿಯನ್ನು ಗಿಡದಿಂದ ಎಳೆಯುವುದು. pulling/ plucking berries from coffee plant/ harvesting. ವಾ: ಕಾಪಿ ಪೀಂಕುಸುದು ಹೆಂಗೆತ ಗೊತ್ತಾ? **ಕಾಪಿ ಹೊಡಿ** /*ka:pi hoḍi*/ ಕಾಫಿ ಪುಡಿ. coffee powder. ವಾ: ಕಾಪಿ ಹೊಡಿ ಬೇಕಿತ್ತ್.

ಕಾಪಿನಕಾಡು /*ka:pinaka:ḍu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಬಳ್ಪ ಗ್ರಾಮದ ಜಾಗ. a locality in Balpaa village in Sullia Taluk of Dakshina Kannada District.

ಕಾಪಿಲ /*ka:pila*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕಾಪು[1] /*ka:pu*/ ನಾ. ಹೇಂಟೆ ಕೋಳಿಗೆ ಮೊಟ್ಟೆ ಇಟ್ಟು ಕಾವು ಕೊಡಲು ಸ್ವಲ್ಪಎತ್ತರದಲ್ಲಿ ಕಟ್ಟುವುದು. a hen preparing a nest to lay its eggs. ವಾ: ಹೇಂಟೆ ಕಾಪು ಕುದ್ದುಟು.

ಕಾಪು[2] /*ka:pu*/ ನಾ. ಕೋಳಿ ಮರಿ ಮಾಡುವ ವ್ಯವಸ್ಥೆ. an arrangement for hen to lay its eggs. ವಾ: ಕೋಳಿ ಕಾಪು ಕುದ್ದುಟು.

ಕಾಪು[3] /*ka:pu*/ ನಾ. ಗದ್ದೆಯ ನಡುವಿನಲ್ಲಿ ಊರಿನಲ್ಲಾಗುವ ಹಂದಿಗಳನ್ನು ಓಡಿಸಲು ಮಾಡುವ ಬೆರ್ಚಪ್ಪನ ರೂಪ. a scarecrow. ವಾ: ಗದ್ದೆ ನಡುಲಿ ಕಾಪು ಮಾಡಿಸಿವೆ.

ಕಾಪುತಡ್ಕ /*ka:putaḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮುರುಳ್ಯ ಗ್ರಾಮದ ಜಾಗ. a locality in Murulya village in Sullia Taluk of Dakshina Kannada District.

ಕಾಪುಮಲೆ /*ka:pumale*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಆಲೆಟ್ಟಿ ಗ್ರಾಮದ ಜಾಗ. a locality in Aletti village in Sullia Taluk of Dakshina Kannada District.

ಕಾಮ ಕಸ್ತೂರಿ /*ka:ma kastu:ri*/ ನಾ. 1. ತುಳಸಿ ಜಾತಿಗೆ ಸೇರಿದ ಸುವಾಸನೆಯ ಸಸ್ಯ. a plant belonging to the family of basil plant. ವಾ: ಕಾಮಕಸ್ತೂರಿ ಬೀಜನ ಅರೆಗಾಲಲಿ ನೀರಿಗೆ ಹಾಕಿ ಕುಡ್ದರೆ ತಂಪಾದೆ.

ಕಾಮಾಲೆ /*ka:ma:lɛ*/ ನಾ. 1. ಅರಸಿನ ಮುಂಡಿಗೆ, 2. ಮೈಯೆಲ್ಲ ಹಳದಿ ಬಣ್ಣಕ್ಕೆ ತಿರುಗಿ ಊದಿಕೊಳ್ಳುವ ಒಂದು ರೋಗ. jaundice. **ಕಾಮಲೆ ರೋಗದಂವಂಗೆ ಕಾಂಬದೆಲ್ಲ ಕಾಮಲೆ(ಗಾ).** ವಾ: ಕಾಮಾಲೆ ರೋಗಕೆ ಬಾರಿ ಪತ್ಯ ಬೇಕ್. **ಕಾಮಾಲೆ ಕಣ್ಣ್** /*ka:ma:lɛ kaṇṇɨ*/ 1. ಅಹಂಕಾರ, 2. ಒಂದು ಬೈಗುಳ ಪದ. 1. ego, 2. an expletive. ವಾ: ಕಾಮಲೆ ರೋಗ ಬಂದರೆ ಕಬ್ಬ್‌ನ ಹಾಲ್ ಕುಡ್ಸುವೆ.

ಕಾಮುಕುತ್ತುದು /*ka:mukuttudu*/ ನಾ. ಭತ್ತದ ಗದ್ದೆಯ ತೆನೆಗಳ ಮಧ್ಯದಲ್ಲಿ ದೃಷ್ಟಿ ತಾಗದಂತೆ ನೆಲದ ಮೇಲೆ ಕುತ್ತಿ ಇಡುವ ಎಲೆಗಳಿರುವ ಕಾಸರಕನ ಕೊಂಬೆ. a scarecrow. ವಾ: ಗದ್ದೆಲಿ ಕಾಮುಕುತ್ತುದು. ಕಾಪು(ತು)

ಕಾಮುಣಿ /*ka:muṇi*/ ನಾ. ವ್ಯಕ್ತಿ ನಾಮ (ಸ್ತ್ರಿ). a name (feminine). ವಾ: ಕಾಮುಣಿ ಅಕ್ಕ ಬಾತ.

ಕಾಯರ[1] /*ka:yara*/ ನಾ. ಕಾಸರಕನ ಮರ. poison nut, semen strychnos. ವಾ: ಕಾಯರ ಮರದ್ ಅಡಿಮುಡಿ ಎಲ್ಲ ಒಂದೆ ರುಚಿ ಬರಿ ಕಂಯಿ. **ಕಾಯರ ಮರ** /*ka:yara mara*/ 1. ಕಹಿ ಮರ, 2. ಕಾಸರಕ ಮರ. a poison nut tree. **ಕಾಯರ ಮರಲಿ ಕಡೆಕೊಡಿ ಇಲ್ಲೆ(ಗಾ).** ವಾ: ಕಾಯರ ಮರ ಎಲ್ಲ ಬಾಗನೂ ಕಂಹಿ.

ಕಾಯರ[2] /*ka:yara*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮರ್ಕಂಜ ಗ್ರಾಮದ ಜಾಗ. 1. family, 2. lineage, 3. a locality in Markanja village in Sullia Taluk of Dakshina Kannada District.

ಕಾಯರತ್ತಡ್ಕ /*ka:yarattaḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕೊಡಿಯಾಲ ಗ್ರಾಮದ

ಜಾಗ. a locality in Kodiyala village in Sullia Taluk of Dakshina Kannada District.

ಕಾಯರ್ ಕೊನೆ /*ka:yarɨ konɛ*/ ನಾ. ಕಾಸರಕನ ಮರದ ಚಿಗುರು. the shoots of poison nut tree. ವಾ: ಕಾಯರ್ ಕೊನೆನ ಮುರ್ಕ.

ಕಾಯರ್ಗ /*ka:yarga*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕಾಯತ್ರೋಡಿ /*ka:yarto:ḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕಾಯರ್ಮಾರ್ /*ka:yarma:rɨ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕಾಯರ್ಮುಗೇರ್ /*ka:yarmuge:rɨ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕಾಯಾರ /*ka:ya:ra ka:ṇiyu:ru*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮುಪ್ಪೇರ್ಯ ಗ್ರಾಮದ ಜಾಗ. 1. family, 2. lineage, 3. a locality in Mupperia village in Sullia Taluk of Dakshina Kannada District.

ಕಾಯಿ[1] /*ka:yi*/ ನಾ. 1. ಮಿಡಿಗೂ ಹಣ್ಣಿಗೂ ಇರುವ ಮಧ್ಯದ ಸ್ಥಿತಿ, 2. ಮಾವಿನಕಾಯಿ. unripened nut/ fruit. ವಾ: ಮಾಯಿನ ಕಾಯಿನ ಕೊಯ್ದನ?

ಕಾಯಿ[2] /*ka:yi*/ ನಾ. ಹಣ್ಣಾಗುವುದಕ್ಕೆ ಮೊದಲೇ ಕೀಳುವ ಫಲಗಳು ಹಾಗೂ ತರಕಾರಿಗಳು ನೆಲ್ಲಿಕಾಯಿ, ತೊಂಡೆಕಾಯಿ, ಬೆಂಡೆ ಕಾಯಿ ಇತ್ಯಾದಿ, ಚಿಪ್ಪು ಇರುವಂತಹ ಫಲಗಳು ಕಾಯಿ ಇತ್ಯಾದಿ. vegetable. ವಾ: ಕಾಯಿನ ಸುಲೇಕು/ಚೊಲ್ಲೊಕು. ಪ: ಕಾಯಿ ಚೊಲ್ಲುದು

ಕಾಯಿ[3] /*ka:yi*/ ಕ್ರಿ. ಕಾಯುವುದು. to wait. **ಎಲ್ಲವು ಕಾಯಿ ಹೆರಿಯಕ್‌ನ ನಾವು ಚಿಪ್ಪಿಯಾರ್ ಹೆರಿಯೋಕಲ್ಲ(ಗಾ).** ವಾ: ನಾ ಬಾಕನ ಮುಟ್ಟ ಕಾಯಿ. ಪ: ಕಾಯಿದು. **ಕಾಯಕನ** /*ka:yakana*/ ಕಾಯುವಾಗ. while waiting. ವಾ: ಬಸ್ಸಿಗೆ ಕಾಯಕನ ಹೊಟ್ಟೆಸಿತಿತ್. ಪ: ಕಾಯದು – ಕಾಯುವುದು. **ಕಾಯುದು** /*ka:yudu*/ 1. ಕಾಯುವಂತೆ ಮಾಡು, 2. ಸ್ವಲ್ಪ ಕಾಯಿ. to make someone wait. ವಾ: ಬಸ್ ಬಂದದೆತ ಕಾಯುದು.

ಕಾಯೊಕು /*ka:yɔku*/ ಕಾಯಬೇಕು. need to wait. ವಾ: ಬಸ್ಸ್ ಬಾಕೆ ಹೊತ್ತು ಉಟ್ಟುಗಡ ಕಾಯೊಕು ಅಷ್ಟೆ.

ಕಾಯಿ[4] /*ka:yi*/ ನಾ. ತೆಂಗಿನಕಾಯಿ. coconut. **ಎಲ್ಲವು ಕಾಯಿ ಹೆರಿಯಕ್‌ನ ನಾವು ಚಿಪ್ಪಿಯಾರ್ ಹೆರಿಯೋಕಲ್ಲ(ಗಾ). ಕಲ್ಲ್ ಒಡ್ಡ್ ಬೆಳ್ಳಿ ತೆಗ್ಯದು – ತೆಂಗಿನಕಾಯಿ(ಒ).** ವಾ: ಕಾಯಿ ಒಡೆಕು. ಪ: ಕಾಯಿ ಒಡೆಕೆ ಬೊತ್ – ಕಾಯಿ ಒಡೆಯಲು ಕೂಡದು

ಕಾಯಾಲ್ /*ka:ya:lɨ*/ ನಾ. ತೆಂಗಿನಕಾಯಿ, ಗಸಗಸೆ, ಏಲಕ್ಕಿ, ಬೆಲ್ಲ ಮುಂತಾದವುಗಳನ್ನು ರುಬ್ಬಿ ಬಿಸಿ ಮಾಡುವ ಪಾಯಸದಂತಹ ಸಿಹಿ ಪದಾರ್ಥ. a dessert made of coconut milk, ground poppy seeds, cardamom and jaggery. ವಾ: ಇಡ್ಮಣೆ ಹಿಟ್ಟಿಗೆ ಕಾಯಾಲ್ ಮಾಡಿರೆ ಆದೆ.

ಕಾಯಿ ಕರ್ಕ್ /*ka:yi kɔ:rkɨ*/ ನಾ. ತೆಂಗಿನಕಾಯಿ ಮಿಡಿ. tender nuts of coconut trees. ವಾ: ಕಾಯಿಕರ್ಕ್ ಈಗಸ್ಟೆ ಬುಟ್ಟುಟು.

ಕಾಯಿ ಕಲ್ಲ್ /*ka:yi kallɨ*/ ನಾ. ತೆಂಗಿನಕಾಯಿಗೆ ಕಲ್ಲಿನಿಂದ ಗುರಿಯಿಟ್ಟು ಹೊಡೆ. to aim at coconut. ವಾ: ಹಬ್ಬಲಿ ಕಾಯಿಕಲ್ಲ್ ಆಟ ಆಡಿವೆ.

ಕಾಯಿ ಕುಟ್ಟುದು /*ka:yi kuṭṭudu*/ ನಾ. ಜನಪದ ಆಟ. a folk game. ವಾ: ಕೋಳಿ ಕಟ್ಟ ಆಗುವಲ್ಲಿ ಕಾಯಿಕುಟ್ಟುದುನು ಉಟ್ಟುಗಡ.

ಕಾಯಿ ಗಿಳಿ ಆಟ /*ka:yi giḷi a:ṭa*/ ನಾ. ಹಳ್ಳಿಯ ಒಂದು ಆಟ. a game played in villages. ವಾ: ಕಾಯಿ ಗಿಳಿ ಆಟ ಆಡಮೊ.

ಕಾಯಿ ಗುದ್ದುದು /*ka:yi guddudu*/ ನಾ. ಜನಪದ ಆಟ. a folk game

. ವಾ: ಆ ಹುಡ್ಗರ್ ಕಾಯಿ ಗುದ್ದುದರ್ಲಿ ಬಾರಿ ಹುಸಾರ್.

ಕಾಯಿ ಚಿಪ್ಪಿ /*ka:yi cippi*/ ನಾ. 1. ತೆಂಗಿನಕಾಯಿಯ ಕರಟ, 2. ತೆಂಗಿನ ಚಿಪ್ಪು, 3. ಚೊಟ್ಟೆ. shell of a coconut. ವಾ: ಕಾಯಿ ಚಿಪ್ಪಿಲಿ ಕಿಚ್ಚಿ ಹೊತ್ತಿಕಾದೆ.

ಕಾಯಿ ಬೆಂಡ್ /*ka:yi bɛṇḍɨ*/ ನಾ. ತೆಂಗಿನಕಾಯಿ ಒಳಗಿನ ತಿರುಳು. Coconut kernel. ವಾ: ಕಾಯಿ ಬೆಂಡ್ ಬೇಕಾ?

ಕಾಯಿ ಮರ /*ka:yi mara*/ ನಾ. ತೆಂಗಿನ ಮರ.

coconut tree. ವಾ: ಸುಮಾರ್ ಕಾಯಿ ಮರಗೊಳೊ. ಪ: ಚಾಳೆ

ಕಾಯಿ ಹಾಲ್ /*ka:yi ha:lɨ*/ ನಾ. 1. ತೆಂಗಿನಕಾಯಿ,ಗಸಗಸೆ,ಏಲಕ್ಕಿ ಬೆಲ್ಲ ಮುಂತಾದವುಗಳನ್ನು ರುಬ್ಬಿ ಬಿಸಿ ಮಾಡುವ ಪಾಯಸದಂತಹ ಸಿಹಿ ಪದಾರ್ಥ, 2. ತೆಂಗಿನಕಾಯಿಯನ್ನು ರುಬ್ಬಿ ಹಿಂಡಿದಾಗ ಸಿಗುವ ದ್ರವ ಪದಾರ್ಥ. a dessert made of coconut milk, ground poppy seeds, cardamom and jaggery. ವಾ: ಕಾಯಿಹಾಲ್ ಮಾಡೊಕು. ಪ: ಕಾಯಾಲ್

ಕಾಯಿ ಹಿಂಡಿ /*ka:yi hiṇḍi*/ ನಾ. ಕೊಬ್ಬರಿಯಿಂದ ಎಣ್ಣೆ ತೆಗೆದಾಗ ಉಳಿಯುವುದು. coconut oil cake. ವಾ: ದನಕೆ ಕಾಯಿ ಹಿಂಡಿ ಜಾಸ್ತಿ ಕೊಡ್ಬಡಿ.

ಕಾಯಿ ಹೆರ್ಯುದು /*ka:yi hɛryudu*/ ನಾ. ಕಾಯಿ ತುರಿಯುವುದು. grating the coconut. ವಾ: ಹೆರ್‌ಮಣೆಲಿ ಕಾಯಿ ಹೆರ್ಯುದು. ಪ: ಕಾಯಿಹೆರಿದು

ಕಾಯಿ ಹೋಳ್ /*ka:yi hɔ:ḷɨ*/ ನಾ. ಒಂದು ಗಡಿಯಿಂದ ಎಬ್ಬಿಸಿದ ಚಿಕ್ಕ ಚಿಕ್ಕ ಕಾಯಿಚೂರು. pieces of coconut kernel. ವಾ: ಕಾಯಿ ಹೋಳ್ ತಕ.

ಕಾಯಿಗಡಿ /*ka:yi gəḍi*/ ನಾ. ತೆಂಗಿನಕಾಯಿಯ ಒಂದು ಭಾಗ. part of a coconut. ವಾ: ಕಾಯಿಗಡಿ ಹಾಳಾಗುಟು.

ಕಾಯಿಗೆ ಕಲ್ಲೊಡಿದು /*ka:yigɛ kalloḍidu*/ ನಾ. ಜನಪದ ಆಟ. a folk game. ವಾ: ಕಾಯಿ ಕಲ್ಲೊಡಿದು ನೋಡಿಕೆ ಬಾರಿ ಮಜ ಇದ್ದದೆ.

ಕಾಯಿಪಳ್ಳ /*ka:yipalla*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮರ್ಕಂಜ ಗ್ರಾಮದ ಜಾಗ. a locality in Markanja village in Sullia Taluk of Dakshina Kannada District.

ಕಾಯಿಪೊಲ್ಯ /*Ka:yipɔlya*/ ನಾ. ತರಕಾರಿ. vegetables. ವಾ: ಕಾಯಿ ಪಲ್ಯನ ನಾವೆ ಗದ್ದೆಲಿ ಬೆಳ್ಸುವೆ.

ಕಾಯಿಮಣ /*ka:yimaṇa*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕಾಯಿಲೆ /*ka:yilɛ*/ ನಾ. 1. ರೋಗ, 2. ಅನಾರೋಗ್ಯ. 1. disease, 2. ill health. ವಾ: ಕಾಯಿಲೆ ಬಂದ್ ಮಲ್ಗಿರೆ ನೊಡೋವ್ವಾರ್. **ಕಾಯಿಲ** /*ka:yila*/ ವಾ: ಕಾಯ್‌ಲ ಮೊನ್‌ಸಂಗೆ ಬರದೆ ಮರಕೆ ಬಂದದ್ದಾ. ಪ: ಕಾಯ್ಲ – ಕಾಯಿಲೆ; ಕಾಯ್ಲೆನು – ಕಾಯಿಲೆಯು. **ಕಾಯಿಲೆ ಕಸಾಲೆ** /*ka:yilɛ kasa:lɛ*/ ರೋಗ ರುಜಿನ. disease. ವಾ: ಇವಂಗೆ ಕಾಯಿಲೆ ಕಸಲೆ ತಪ್ಪಿಕಿಲ್ಲೆ.

ಕಾಯೆ /*ka:yɛ*/ ನಾ. ತೆಂಗಿನಕಾಯಿ. a coconut. ವಾ: ಕಾಯೆನ ಕೊಯ್ಯಕಾಯ್ತ್.

ಕಾಯೆ ಪೊಜ್ಜಿ /*ka:yɛ pojji*/ ನಾ. ತೆಂಗಿನಕಾಯಿಂದ ತಯಾರಿಸಿದ ಚಟ್ನಿ. coconut chutney. ವಾ: ನೀರ್ ದೋಸೆಗೆ ಕಾಯೆ ಪೊಜ್ಜಿ ಲಾಯ್ಕ.

ಕಾಯೆ ಹೂವ್ /*ka:yɛ hu:vɨ*/ ನಾ. ಕಾಯಿಯ ಹೂ. coconut flower – the inflorescence. ವಾ: ಕಾಯೆ ಹೂವ್ ಜೊಂಪೆಯಾಗಿದ್ದದೆ.

ಕಾಯೆಣ್ಣೆ /*ka:yɛṇṇɛ*/ ನಾ. 1. ತೆಂಗಿನಕಾಯಿ ಎಣ್ಣೆ, 2. ಕೊಬ್ಬರಿ ಎಣ್ಣೆ. coconut oil. ವಾ: ಕಾಯೆಣ್ಣೆನ ಅಡ್ಗೆಗೆ ಬಳ್ಸುವೆ.

ಕಾಯೆರ ಕಾಯಿ /*ka:yɛra ka:yi*/ ನಾ. 1. ಕಾಸರಕನ ಮರದ ಕಾಯಿ, 2 ಒಂದು ಜಾತಿಯ ಮತ್ತು ಬರುವ ಕಾಯಿ. unripe fruits of poison nut tree. ವಾ: ಕಾಯೆರ ಕಾಯಿನ ನೋಡ್‌ತ್‌ಲೆ.

ಕಾಯೆಳೆಯೊದು /*ka:yɛḷɛyodu*/ ನಾ. ಕೈಯಿಂದ ಕಾಯಿ ಎಳೆಯುವ ಸ್ಪರ್ಧೆ. a competition of plucking coconuts. ವಾ: ಕಾಯೆಳೆಯೊದು ಆಟನ ಆಡ್‌ತಿದ್ದೊ. 'ತಪ್ಪಂಗಾಯಿ' ಜನಪದ ಆಟ

ಕಾಯ್ /*ka:y*/ ನಾ. 1. ಬಿಸಿಯಾಗು 2ಕಾವು ಏರು. to get warm, 2. increase in temperature. ವಾ: ಬಿಸ್‌ಲ್‌ಗೆ ತಲೆ ಕಾಯ್‌ತುಟ್ಟು. ಪ: ಕಾಯ್ದು. **ಕಾಯ್ದರೆ** /*ka:ydarɛ*/ ಬಿಸಿಯಾಗು. to become hot/warm. ವಾ: ನೀರ್ ಕಾಯ್ದರೆ ಕುಡಿನೆ. ಪ: ಕಾದರೆ. **ಕಾಯ್ಸು** /*ka:ysu*/ 1. ಕಾಯಿಸು, 2. ಬೇಯಿಸು, 3. ಕುದಿಸು. 1. to warm, 2. to bake, 3. to boil. ವಾ: ಹಾಲ್ ಕಾಯ್ಸು. **ಕಾಯ್ಸ್**[1] /*ka:ysuɨ*/ 1. ಕಾದಿರುವಂತೆ ಮಾಡು, 2. ಕಾಯುವ ಕೆಲಸಕ್ಕೆ ತೊಡಗಿಸು. 1. to make someone wait, 2. to keep someone waiting. ವಾ: ಹಾಲ್ ಕಾಯ್ಸಿನೆ. **ಕಾಯ್‌ಸ್**[2] /*ka:yisɨ*/ 1. ಬಿಸಿಮಾಡು, 2. ಕೋಪವುಂಟುಮಾಡು, 3. ಕಾಯಾಗುವಂತೆ ಮಾಡು, 4. (ಕೊಳ್ಳುವವರ) ಬಲವಾದ ಬೇಡಿಕೆ. 1. to heat, 2. to make

someone angry, 3. to ripen, 4. demand by customers. ವಾ: ಅವರ ಸುಮ್ಮನೆ ಕಾಯ್ಸ್‌ಬಡ. ಪ: ಕಾಯ್ಸದೆ – ಕಾಯಿಸದೆ

ಕಾಯ್ಮು /*ka:ymu*/ ಎಪ. 1. ಖಾಯಂ ಆಗಿ, 2. ಯಾವಾಗಲೂ, 3. ಸದಾ. 1. permanent, 2. always, 3. all the time. ವಾ: ಅಂವ ನಮ್ಮಲ್ಲೆ ಕಾಯ್ಮು ಕೆಲ್ಸ ಮಾಡ್ತು.

ಕಾರ /*ka:ra*/ ನಾ. ತೀಕ್ಷ್ಣವಾದ ರುಚಿ, ಮೆಣಸಿನ ಕಾರ. too spicy, the spicy taste of of pepper/chilli. ವಾ: ಮೆಣ್ಸ್ ಬಜ್ಜಿ ಎಂತ ಕಾರ. ಪ: ರಣಕಾರ – ಅತೀಕಾರ. **ಕಾರ ಹೊಗೆದು** /*ka:ra hɔgɛdu*/ ಖಾರವಾದಾಗ ನಾಲಗೆ ಬಿಸಿ ಬರುವ ಸ್ಥಿತಿ. burning sensation on the tongue. ವಾ: ಮೆಣ್ಸ್ ಅಗ್ದ್ ಬಾಯಿಲಿ ಕಾರ ಹೊಗೆದು.

ಕಾರಕರಣ /*ka:rakaraṇa*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕಾರಗುಂದ /*ka:ragunda*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕಾರಡಿ /*ka:raḍi*/ ನಾ. ಕಾರಿನ ಕೆಳಗೆ. under the car. ವಾ: ನಾಯಿ ಕಾರಡಿಗೆ ಆಗೋತಿತ್.

ಕಾರನೀರ್[1] /*ka:rani:rɨ*/ ನಾ. ಮಡಿವಾಳ ನೀಡುವ ಬಟ್ಟೆ ಸೋಡದ ನೀರು. water mixed with washing soda, given by a washerman. ವಾ: ಕಾರನೀರ್ ನ ಮೊಡಿವಾಳ ತಂದದೆ.

ಕಾರನೀರ್[2] /*ka:rani:rɨ*/ ನಾ. ಅಡುಗೆ ಸೋಡಕ್ಕೆ ನೀರು ಬೆರೆಸಿದ ನೀರು. water mixed with baking soda. ವಾ: ಕಾರನೀರ್ ಮೊಡ್ಯಾಳನತ್ರ ಸಿಕ್ಕಿದೆ, ಸುದ್ದಲಿ ಕಾರನೀರ್ ಬಳ್ಸುವೆ.

ಕಾರಿ[1] /*ka:ri*/ ನಾ. ಹಕ್ಕಿಗೂಡು. a bird's nest. **ಕಕ್ಕೆ ಕಾರಿಗೆ ಕೈ ಹಾಕ್ಬಡ ಕೂಡೋಳು ಗೂಡ್ ನ ಸುಮ್ಮನೆ ಬುಡುಬಡ(ಗಾ).** ವಾ: ಕಾರಿಲಿ ಹಕ್ಕಿ ಮೊರಿಗೊಳೊ. ಪ: ಕಾರಿಲಿ – ಗೂಡಿನಲ್ಲಿ

ಕಾರಿ[2] /*ka:ri*/ ನಾ. 1. ಕಪ್ಪು ಬಣ್ಣದ ಗಂಡು ದನಗಳು, 2. ಹೋರಿ, 3. ಎತ್ತುಗಳು. 1. black coloured bulls, 2. a bull, 3. oxen. ವಾ: ಕಾರಿಗಳ ಹೂಡಿಕೆ ಗದ್ದೆಗೆ ಹೊಡ್ಕಂಡ್ ಹೋದೊ.

ಕಾರಿರ್ಲ್ /*ka:rirlɨ*/ ನಾ. 1. ಕಾರಿರುಳು, 2. ನಡುರಾತ್ರಿ. middle of the night. ವಾ: ಕಾರಿರ್ಲ್‌ಲಿ ಮಕ್ಕ ಮನೆಗೆ ಬಂದೊ.

ಕಾರುಗುಂದ /*ka:rugunda*/ ನಾ. ಮಡಿಕೇರಿ ತಾಲೂಕಿನ ಗ್ರಾಮ. a locality in Madikeri Taluk of Kodagu District.

ಕಾರೆಂಳ್ಬು /*ka:rɛnḷbu*/ ನಾ. ಗಿಡದ ಬುಡದಲ್ಲಿ ಬೆಳೆಯುವ ಅಣಬೆ. mushroom grown under other plants. ವಾ: ಬೇಲಿ ಕರೆಲಿ ಕಾರೆಂಳ್ಬು ಎದ್ದುಟು.

ಕಾರೆಕಾಯಿ /*ka:re ka:yi*/ ನಾ. 1. ನೀರೊಳಗಿರುವ ಮೀನಿಗೆ ಮತ್ತು ಬರಿಸುವ ಕಾಯಿ, 2. ಮುಳ್ಳುಕಾರೆ. 1. a nut that intoxicates fish, 2. a poisonous nut, Ziziphus xylopyrus Wild,woody-fruited jujube fruit. ವಾ: ಕಾರೆ ಕಾಯಿನ ಗುದ್ದಿ ಬೂದಿವಟ್ಟಿಗೆ ಸೇರ್‌ಸಿ ಮೀನ್ ಹಿಡಿಕೆ ನೀರಿಗೆ ಹಾಕುದು. ಪ: ಕಾರೆಕ್ಕಾಯಿ ಮರ – ಒಂದು ಜಾತಿ ವಿಷದ ಕಾಯಿ ಬಿಡುವ ಮರ; ಕಾರೆ ಹಣ್ಣ್ – ಒಂದು ಜಾತಿ ವಿಷದ ಹಣ್ಣು; ಕಾರೆಮುಳ್ಳು – ವಿಷದ ಮರದ ಮುಳ್ಳು

ಕಾರೋಣ /*ka:rɔ:ṇa*/ ನಾ. 1. ಕುಟುಂಬದಲ್ಲಿ ಗತಿಸಿದ ಹಿರಿಯರು, 2. ಕುಟುಂಬದ ಮೂಲ ಪುರುಷರು. 1. dead ancestors of the family, 2. ancestors. ವಾ: ಕಾರೋಣಕೆ ಇಸುದು. ಪ: ಕಾರೋಣಕೆ – ಕುಟುಂಬದಲ್ಲಿ ಗತಿಸಿದ ಹಿರಿಯರುಕುಟುಂಬದ ಮೂಲ ಪುರುಷರು. **ಕಾರಣಕೆ ಇಸಿಕೆ** /*ka:raṇakɛ isikɛ*/ ಗುರು ಕಾರೋಣರಿಗೆ, ಕುಟುಂಬದಲ್ಲಿ ಗತಿಸಿದ ಹಿರಿಯರು, ಕುಟುಂಬದ ಮೂಲ ಪುರುಷರಿಗೆ ಎಡೆ ಹಾಕುವುದು. an offering made for the dead ancestors. ವಾ: ಮೊದ್ವೆಗೆ ಮುಂದೆ ಕಾರಣಕೆ ಇಸಿಕೆ ಐನ್‌ಮನೆಗೆ ಹೋಕು. **ಕಾರೋಣಂಗ್ ಕೊಡ್‌ಪೋ** /*ka:rɔ:ṇaŋgɨ koḍipɔ:*/ ಪ್ರತಿ ವರ್ಷ ಕೊಡವರು ಐನ್ ಮನೆಯಲ್ಲಿ ಸೇರಿ, ತಮ್ಮ ಪೂರ್ವಿಕರಿಗೆ ನೈವೇದ್ಯ ಅರ್ಪಿಸುವ ಪದ್ಧತಿ, ಇದನ್ನು ಪತ್ತಲೋದಿಯಂದು ಮಾಡುತ್ತಾರೆ. an offering to dead ancestors made in the Ainmane. **ಕಾರೋಣರ್** /*ka:rɔ:ṇari*/ ಕುಟುಂಬದಲ್ಲಿ ಗತಿಸಿದ ಹಿರಿಯರು, ಕುಟುಂಬದ ಮೂಲ ಪುರುಷರು. ancestors. ವಾ: ಗುರು ಕಾರೋಣರ್ ನ ಮರೆಕಾದ್.

ಕಾರ್^{1} /*ka:ri*/ ನಾ. 1. ವಾಂತಿಮಾಡು, 2. ಕಾರುವುದು. 1. to vomit, 2. to puke. **ಕಾರ್‌ದರೇ ತಿಂಬೊದು(ನು).** ವಾ: ಎಂತ ತಿಂದ್ ಹಿಂಗೆ ಕಾರ್‌ದು. ಪ: ಕಾರ್‌ದು – ವಾಂತಿ ಮಾಡುವುದು

ಕಾರ್^{2} /*ka:ri*/ ನಾ. 1. ಕಾರು, 2. ವಾಹನ. 1. a car, 2. a vehicle. ವಾ: ಕಾರ್ ಮನೆಗೆ ಬಂದದೆ.

ಕಾರ್‌ಂಗಿಲ /*ka:riŋgila*/ ನಾ. ಕಾಲ ಉಂಗುರ. a toe ring.

ಕಾರ್ಗೋಡು /*ka:rgo:ḍu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕಲ್ಮಕಾರು ಗ್ರಾಮದ ಜಾಗ. a locality in Kalmakar village in Sullia Taluk of Dakshina Kannada District.

ಕಾರ್ಜ /*ka:rja*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಬಳ್ಪ ಗ್ರಾಮದ ಜಾಗ. a locality in Balpaa village in Sullia Taluk of Dakshina Kannada District.

ಕಾರ್ಣಿಕ /*ka:rṇika*/ ನಾ. 1. ಕಾರ್ಣಿಕೆ, 2. ಸತ್ಯ, 3. ನಂಬಿಕೆ. 1. belief in the supernatural ability of a person, 2. truth, 3. belief. ವಾ: ಬಾರಿ ಕಾರ್ಣಿಕ ಇರೋ ದೇವ್ರು.

ಕಾರ್ತಿಂಗ /*ka:rtiŋga*/ ನಾ. ಅರೆಭಾಷೆ ಮೂರನೇಯ ತಿಂಗಳು. third month in Arebhase calendar. ವಾ: ಕಾರ್ತಿಂಗಲಿ ಬಾರಿ ಸೆಕೆ. **ಕಾರ್ತಿಂಗಳ ಹರ್ಕೆ** /*ka:rtiŋgaḷa harkɛ*/ ಅರೆಭಾಷೆ ಮೂರನೇಯ ತಿಂಗಳಲಿನಲ್ಲಿ ದೈವಗಳಿಗೆ ಕೊಡುವ ಹರಕೆ. an offering made to the daiva/deity in the third month of Arebhase calendar. ವಾ: ಕಾರ್ತಿಂಗಳ ಹರ್ಕೆಲಿ ಪಾಸಣಮೂರ್‌ತಿಗೆ ಎಡೆ ಹಾಕುದು.

ಕಾರ್ನೂರು /*ka:rnu:ru*/ ನಾ. ಅಗಲಿದ ಹಿರಿಯರಿಗೆ ಊಟ ಬಡಿಸಿ ಪ್ರಾರ್ಥಿಸುವ ಮೂಲಕ ಆಶೀರ್ವಾದ ಪಡೆಯುವ ಸಂಪ್ರದಾಯ. remembering the ancestors by serving food as an offering and praying for their blessings. ವಾ: ಗುರು ಕಾರ್ನೂರಿಗೆ ಎಡೆ ಹಾಕುದು. ಪ: ಕಾರ್ನೂರ್‌ಗೆ ಇಸುದು

ಕಾರ್‌ಬಾರ್ /*ka:riba:ri*/ ನಾ. 1. ವ್ಯವಹಾರ, 2. ಆಡಳಿತ, 3. ಸ್ಥಿತಿಗತಿ, 4. ಪರಿಸ್ಥಿತಿ, 5. ಕಾರ್ಯಭಾಗ. 1. business, 2. administration, 3. position, 3. condition, 4. status. **ಕೈಲಿ ಕಾಸಿಲ್ಲೆ ಕಾರ್ಬಾರ್ ದೊಡ್ಡದ್(ಗಾ).** ವಾ: ಮೊದ್ವೆ ಕಾರ್‌ಬಾರ್ ಹೆಂಗಾತ್?

ಕಾರ್ಯ /*ka:rya*/ ನಾ. 1. ಕಾರ್ಯ, 2. ಕೆಲಸ. 1. work, 2. a task. ವಾ: ಎಂತದೊ ಕಾರ್‌ಯತ ಹೊರ್‌ಗೆ ಹೋದೊ.

ಕಾರ್ಯತಡ್ಕ /*ka:ryataḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮುರುಳ್ಯ ಗ್ರಾಮದ ಜಾಗ. a locality in Murulya village in Sullia Taluk of Dakshina Kannada District.

ಕಾರ್ಯಪ್ಪ /*ka:ryappa*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. masculine given name.

ಕಾರ್ಲಾಡಿ /*ka:rla:ḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕಾರ್‌ಸವೆ /*ka:ri savɛ*/ ನಾ. 1. ಸೆವ್, 2. ಚೌಚೌ. deep fried thin strands of gram flour. ವಾ: ಕಾರ್ ಸವೆ ತಿಂಬೊದು.

ಕಾಲ ಬೈರವ /*ka:la bairava*/ ನಾ. 1. ಶಿವ, 2. ಪರಮೇಶ್ವರ. 1. Lord Shiva, 2. Parameshwara. ವಾ: ಕಾಲ ಬೈರವ ದೇಸ್ತಾನಕೆ ಹೋಕಾಗಿತ್.

ಕಾಲಡಿ /*ka:laḍi*/ ನಾ. 1. ಕಾಲಡಿಯಲ್ಲಿ, 2. ಕಾಲಿನ ಕೆಳಗೆ. below the feet. ವಾ: ಕಾಲಡಿ ಕೊತ್ತಿ ಉಟ್ಟು ಮೆಟ್ಟಡ.

ಕಾಲಮಂದಿರ /*ka:lamandira*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕಾಲಮೈಮೆ /*ka:lamaimɛ*/ ನಾ. ಕಾಲದ ಮಹಿಮೆ. to indicate the role played by the time. ವಾ: ಎಲ್ಲ ಕಾಲಮೈಮೆ.

ಕಾಲಾಕ್ /*ka:la:ki*/ ನಾ. ಕಾಲಾಡು. dip one's legs (in water). ವಾ: ಹೊಳೆ ನೀರ್‌ಲಿ ಕಾಲಾಕ್.

ಕಾಲಾಣಿ /*ka:la:ṇi*/ ನಾ. ಕಲ್ಲೊತ್ತು. corn on the feet, toe. ವಾ: ಕಾಲ್‌ಲಿ ಕಾಲಾಣಿ ಆದೆ.

ಕಾಲಿ^{1} /*ka:li*/ ನಾ. 1. ಖಾಲಿ, 2. ರಿಕ್ತ, 3. ಶೂನ್ಯ, 4. ಬರಿದಾದ. 1. empty, 2. devoid, 3. vacuum, 4. emptied. ವಾ: ಮೆಣ್ಸ್ ನಾಂಬರ ಕಾಲಿ ಆಗೊತ್.

ಕಾಲಿ^{2} /*ka:li*/ ನಾ. 1. ಬರಿದಾಗು, 2. ಏನೂ ಇಲ್ಲದಿರು.

1. to empty, 2. the state of not having anything. ವಾ: ಒಳ್ಳ ಕೆಲ್ಸಕೆ ಹೊರ್‌ಡಿಕನ ಕಾಲಿ ಕೊಡಪಾನ ಹೊತ್ಕಂಡ್ ಬಾತ್.

ಕಾಲಿಡ್ಕಂದು /*ka:liḍkandu*/ ನಾ. ಗುರುಹಿರಿಯರ ಕಾಲು ಹಿಡಿದು ಆಶೀರ್ವಾದ ಪಡೆಯುವುದು. to touch the feet of the elders seeking their blessings. ವಾ: ದೊಡ್ಡವರ ಕಾಲಿಡ್ಕಂದು.

ಕಾಲಿಸಿದ್ /*ka:lisidi*/ ನಾ. 1. ಕಾಲಿಟ್ಟಿದ್ದು, 2. ಮನೆಯೊಳಗೆ ಹೊಕ್ಕಿದ್ದು. 1. entering the house. ವಾ: ಮೆಲ್ಲ ಮನೆ ಒಳಗೆ ಕಾಲಿಸಿದ್ ಅಸ್ಟೆ ಸುರಾತ್ ಬೊಯ್‌ಗುಳಗಳ್.

ಕಾಲು ಚಿಮೇರ್ಪುದು /*ka:lu cimɛ:rpudu*/ ನಾ. ಕಾಲು ಸೆಳೆಯುವುದು. pain in the legs. ವಾ: ಕ್ವಾಟಕೆ ಕಾಲು ಚಿಮೇರ್ಪುದು. ಪ: ಕಾಲ್ ಚಿನೆರ್ಪುದು

ಕಾಲು ನೀಂಡಿ /*ka:lu ni:ṇḍi*/ ನಾ. ಕಾಲು ಚಾಚಿ. to stretch one's legs. ವಾ: ಅವುಳು ಕಾಲು ನೀಂಡಿ ಕುದ್ದುಟು.

ಕಾಲು ಪುಳೆದು /*ka:lu puḷɛdu*/ ನಾ. ಕಾಲು ಸೆಳೆಯುವುದು. strain in the legs. ವಾ: ರಾತ್ರೆಲ್ಲ ಕಾಲು ಪುಳೆದು.

ಕಾಲುಂಗುರ /*ka:luŋgura*/ ನಾ. ಮದುವೆಯಾದ ಸ್ತ್ರೀಯರು ಕಾಲಿನ ಬೆರಳಿಗೆ ಹಾಕುವ ಉಂಗುರ. a toe ring worn on the second toe of the right and left leg by the married women. ವಾ: ಮುತ್ತೈದೆಗ ಕಾಲುಂಗುರ ಹಾಕುವೆ.

ಕಾಲುಪಲೆ /*ka:lupalɛ*/ ನಾ. ಭೂತದ ಆಯುಧಗಳನ್ನಿಡುವ ಮಂಚ. A wooden platform on which the weapons of bhootha/deity are kept. ವಾ: ಕಾಲುಪಲೆಲಿ ಆಯ್ದಗಳ ಇಸುದು. ಪ: ಕಾಲ್‌ಪಲಯ

ಕಾಲುಬಚ್ಚೆಲು /*ka:lubaccɛlu*/ ನಾ. ಮದುವೆಯ ಹುಡುಗಿಗೆ ಸುಸ್ತಾಗಿರುವುದರಿಂದ ವಿರಾಮಕ್ಕೆಂದು ತವರುಮನೆಗೆ ಕಳುಹಿಸುವುದು. a practice of sending the bride to her parent's home to rest for some days. ವಾ: ಹೊಸ ಗೂಡೆ ಕಾಲ್ ಬೊಚ್ಚೆಲ್‌ಗೆ ತೊವ್ರುಗೆ ಹೋಗುಟುಗಡ. ಪ: ಕಾರಬಚ್ಚಲ್(ತು)

ಕಾಲೂರು /*ka:lu:ru*/ ನಾ. ಮಡಿಕೇರಿ ಸಮೀಪದ ಊರು. a town near Madikeri.

ಕಾಲೆ /*ka:lɛ*/ ನಾ. ಸತ್ತವರ ಆತ್ಮ ಹೋಗುವುದು. departure of the soul. **ಕಾಲೆ ನೋಡ್ಸುದು** /*ka:lɛ nɔ:ḍsudu*/ 1. ಸತ್ತವರ ಆತ್ಮದ ಬಗ್ಗೆ, ಸತ್ತ ಸಮಯದ ಬಗ್ಗೆ ಜೋತಿಷ್ಯ ಕೇಳುವುದು, 2. ಮಲೆಯರ ಹತ್ತಿರ ಹೋಗಿ ಸಾವಿಗೆ ಕಾರಣ, ಮುಂದಿನ ಬೆಳವಣಿಗೆಗಳ ಬಗ್ಗೆ ಶಾಸ್ತ್ರ ಕೇಳುವುದು. 1. asking an astrologer about the time of soul's departure from the body, 2. seeking information from the astrologers about the reasons for death and asking for guidance in the related rituals. ವಾ: ಕಾಲೆ ನೋಡ್ಸಿ ಆತ? ಪ: ಕಾಳೆ ಹೊದು – ಸತ್ತವರ ಆತ್ಮ ಹೋಗುವುದು

ಕಾಲೆಳಿದು /*ka:lɛḷidu*/ ನಾ. ಏಳಿಗೆ ಆಗದಂತೆ ಒಳಗಿಂದೊಳಗೆ ತೊಂದರೆ ಕೊಡುವುದು. to pull one's legs/to trouble someone. **ಒಬ್ಬಂದೊಬ್ಬ ಕಾಲ್ ಎಳಿಯವೆ.** ವಾ: ಬೊದ್‌ಕ್‌ಲಿ ಮುಂದೆ ಬಾಕನ ಜೆನ ಕಾಲೆಳಿದು.

ಕಾಲೊರಗೆ /*ka:lɔragɛ*/ ನಾ. ಕಾಲು ಹೊರಗೆ. to put the legs outside. ವಾ: ರೈಲ್‌ಂದ ಕಾಲೊರೆಗೆ ಹಾಕ್‌ಬಡ.

ಕಾಲ್ /*ka:lɨ*/ ನಾ. 1. ಕಾಲು, 2. ಮೊಣಕಾಲಿನಿಂದ ಪಾದದವರೆಗಿನ ಭಾಗ, 3. ಜಡೆ ಹೆಣೆಯುವಾಗ ಮಾಡಿಕೊಳ್ಳುವ ಕೂದಲಿನ ಭಾಗ, 4. ಮಂಚ, ಮೇಜು, ಕುರ್ಚಿಗಳನ್ನು ನಿಲ್ಲಿಸಲು ಜೋಡಿಸುವ ಕೋಲು. 1. leg, 2. a part of the leg between ankle and foot, 3. making plaits in the hair, 4. legs of a cot or a table. **ಕಾಲ್‌ನ ಮೆಟ್ಟ್ ಕಾಲ್‌ಲೇ ಬೇಕ್(ಗಾ).** ವಾ: ಕುರ್ಸಿದ್ ಒಂದ್ ಕಾಲು ಮುರ್‌ದುಟು. **ಕಾಲ್ ಎಳ್ಯದು** /*ka:lɨ eḷyadu*/ ಚಳಿಗೆ ಕಾಲಿನ ನರಗಳಲ್ಲಿ ಸೆಳೆತದ ಅನುಭವವಾಗುವುದು. the sensation of leg cramps due to cold. ವಾ: ಮಳೆ ಬಂದರೆ ಸಾಕ್ ಕ್ವಾಟಕೆ ಕಾಲ್‌ಎಳ್ಯದು. **ಕಾಲ್ ಕಡೆ** /*ka:lɨ kaḍɛ*/ ಕಾಲಿನ ಕಡೆ. towards the leg. ವಾ: ಕಾಲ್ ಕಡೆ ಕಂಬಳಿ ಹೋಸ್. **ಕಾಲ್ ಕಡೆಂದ** /*ka:lɨ kaḍɛnda*/ 1. ಕಾಲು ಕಡೆಯಿಂದ, 2. ಕಾಲಿನ ಬದಿಯಿಂದ. 1. from the legs, 2. near the legs. ವಾ: ಕಾಲ್‌ಕಡೆಂದ ನೀರ್ ಹಾಕಿ ತೊಳಿಯೊಕು. **ಕಾಲ್**

ಕೆರ್ಕಂಡ್ */ka:lɨ kerkaṇḍɨ/* 1. ಕಾಲು ಕೆರೆದುಕೊಂಡು, 2. ಅನಾವಶ್ಯಕವಾಗಿ ಜಗಳ ಮಾಡು. a provocation for quarrel. ವಾ: ಕಾಲ್ ಕೆರ್ಕಂಡ್ ಜಗಳಕೆ ಬಾದು. **ಕಾಲ್‌ಗೆ** */ka:lɨgɛ/* ಕಾಲಿಗೆ. to the feet. ವಾ: ಕಾಲಿಗೆ ಮುಳ್ಳ್ ಹೆಟ್ಟಿದ್. **ಕಾಲ್‌ಲಿ ಮೆಟ್ಟುದು** */ka:lɨli mɛṭṭudi/* ಕಾಲಿನಲ್ಲಿ ತುಳಿಯುವುದು. to stamp something with foot. ವಾ: ಒಳ್ಳೆಮೆಣ್ಸ್‌ನ ಕಾಲ್‌ಲಿ ಮೆಟ್ಟುದು, ಆಗ ಕೊತ್ತ್‌ಂದ ಬುಟ್ಟ್ ಬಂದದೆ, ಮತ್ತೆ ವಣ್ಗುಸುದು.

ಕಾಲ್ ಗಂಟೆ */ka:lɨ gaṇṭɛ/* ಪವಾ. ಕಾಲು ಗಂಟೆ. a quarter of an hour. ವಾ: ಕಾಲ್‌ಗಂಟೆಲಿ ಬನ್ನೆ ಇಲ್ಲೆ ನಿಲ್ಲ್.

ಕಾಲ್ ಗೌಸ */ka:lɨ gausa/* ನಾ. ಕಾಲು ಚೀಲ. socks. ವಾ: ಕ್ವಾಟಕೆ ಕಾಲ್ ಗೌಸ ಹಾಕ.

ಕಾಲ್ ತೊಡ್ಚಿ */ka:lɨ tɔḍci/* ನಾ. ಕಾಲಿಗೆ ಕಾಲು ತಾಗಿ. to stumble. ವಾ: ಕಾಲ್ ತೊಡ್ಚಿ ಬೀತ್.

ಕಾಲ್ ಬಡ್ಕಂಡ್ */ka:lɨ baḍkaṇḍ/* ನಾ. ಕಾಲು ಬಡಿದುಕೊಂಡು. kicking one's legs. ವಾ: ಕಾಲ್ ಬಡ್ಕಂಡ್ ಮರ್‌ಡುದು.

ಕಾಲ್ ಬೊಚ್ಚಿದೆ */ka:lɨ bɔccidɛ/* ನಾ. ಕಾಲು ಸೋಲುತ್ತಿದೆ. tiresome feeling. ವಾ: ನಡ್ಡ್ ನಡ್ಡ್ ಕಾಲ್ ಬಚ್ಚಿದೆ. ಪ: ಕಾಲ್ ಬಚ್ಚ್ – ಕಾಲು ಸೋತು ಹೋಗು

ಕಾಲ್ ಮುರಿಯೊಕ್ */ka:lɨ muriyɔkɨ/* ನಾ. 1. ಕಾಲು ಮುರಿಯಬೇಕು, 2. ಉಪದ್ರ ಮಾಡುವವರ ಬಗ್ಗೆ ಮಾತನಾಡುವುದು. 1. should break one's leg, 2. to express anger about the troublesome people. ವಾ: ಜಾಸ್ತಿ ಉರಿಬಂದರೆ ಕಾಲ್ ಮುರಿಯೊಕ್.

ಕಾಲ್ ಮೊಂದ್ರಿ */ka:lɨ mɔndr/* ನಾ. ಮಲಗುವ ಹೊತ್ತಿನಲ್ಲಿ ಕಾಲೊರಸಲು ಬಳಸುವ ನೊಜದಿಂದ ಮಾಡಿದ ಕಾಲೊರಸು. a foot-rug. ವಾ: ಕಾಲ್ ಮೊಂದ್ರಿ ನ ಕಟ್ಲ್ ಹಕ್ಕಲೆ ಇಸ್.

ಕಾಲ್ ಹಿಡ್ಯದು */ka:lɨ hiḍyadu/* ನಾ. ಹಿರಿಯರ ಕಾಲಿಗೆ ನಮಸ್ಕಾರ ಮಾಡುವುದು, ಹಿರಿಯರ ಆಶೀರ್ವಾದ ಪಡೆಯುವುದು. seeking blessings of elders by touching their feet. ವಾ: ಹಿರ್‌ಯರ ಕಾಲ್ ಹಿಡ್ಯದು ನಮ್ಮ ಪದ್ದತಿ.

ಕಾಲ್‌ಊರ್ */ka:lɨu:ri/* ನಾ. ಕಾಲನ್ನು ನೆಲದ ಮೇಲೆ ಇರಿಸುವುದು. to put the legs on the floor. ವಾ: ಬೇನೆತ ಸುಮ್ಮನಿದ್ದರೆ ಆದುಲೆ ನೆಲದ ಮೇಲೆ ಕಾಲ್ ಊರ್ ನಡೆಕೆ ನೋಡ್.

ಕಾಲ್‌ಕಿತ್ತತ್ */ka:lɨkittatɨ/* ನಾ. ಓಡಿ ಹೋದಳು/ನು. He/She ran away. ವಾ: ಮಾಸ್ಟರ್‌ನ ನೋಡಿ ಅವ್ನು ಕಾಲ್ ಕಿತ್ತತ್.

ಕಾಲ್‌ಕೀಳ್ */ka:lɨki:ḷɨ/* ನಾ. 1. ಕಾಲುಕೀಳು, 2. ಓಡಿಹೋಗು. 1. to escape, 2. to run away. ವಾ: ನಮ್ಮ ನೋಡಿಕನ ಅಂವ ಕಾಲ್ ಕೀಳ್ ದು.

ಕಾಲ್ಕೋಸುದು */ka:lkɔ:sudu/* ನಾ. ಚಳಿಗೆ ಕಾಲಿನ ನರಗಳಲ್ಲಿ ಸೆಳೆತ ಹಾಗು ಹಿಡಿದುಕೊಂಡ ಅನುಭವವಾಗುವುದು. leg cramps. ವಾ: ಕ್ವಾಟಕೆ ಕಾಲ್ಕೋಸುದು.

ಕಾಲ್‌ಗಂಟ್ */ka:lɨ gaṇṭei/* ನಾ. ಕಾಲಿನ ಪಾದದ ಮೇಲಿನ ಗಂಟು. ankle. ವಾ: ಕಾಲ್ಗಂಟ್ ಬಾಪಿಕಂಡ್ ಬೇನೆ.

ಕಾಲ್ಗಡಗ */ka:lgaḍaga/* ನಾ. 1. ಬೇಡಿ, 2. ಕಾಲಿನ ಬಳೆ. shackles, footcuffs, fetters, etc. ವಾ: ಹಿಂದೆನ ಕಾಲಲಿ ಕಾಲ್ಗಡಗ ಹಾಕ್ ತಿದ್ದೊ.

ಕಾಲ್‌ಗೆಜ್ಜೆ */ka:lgɛjjɛ/* ನಾ. ಕಾಲಿಗೆ ಹಾಕುವ ಗೆಜ್ಜೆ. anklet chain. ವಾ: ಕಾಲ್‌ಗೆಜ್ಜೆ ಹಾಕಿರೆ ಗೂಡೆಗಳಿಗೆ ಲಕ್ಷಣ.

ಕಾಲ್ಗೊಸು */ka:lgɔ:su/* ನಾ. 1. ಸಾಕ್ಸ್, 2. ಕಾಲು ಚೀಲ. socks. ವಾ: ಕಾಲ್ಗೊಸುನ ಎಲ್ಲಿ ಮಡ್ಗಿತಪ.

ಕಾಲ್‌ಚೈನ್ */ka:lɨ cɛin/* ನಾ. 1. ಹೆಣ್ಣು ಮಕ್ಕಳು ಕಾಲಿಗೆ ತೊಡುವ ಗೆಜ್ಜೆ, 2. ಕಾಲು ಗೆಜ್ಜೆ. anklet – ankle chain. ವಾ: ಕಾಲ್ ಚೈನ್ ಹಾಕೊಳನ?

ಕಾಲ್ದಾರಿ */ka:lda:ri/* ನಾ. ನಡೆದುಕೊಂಡು ಹೋಗುವ ದಾರಿ. a footpath. ವಾ: ಕಾಲ್ದಾರಿಲೆ ಇಸ್ಕೂಲಿಗೆ ಹೋಕು.

ಕಾಲ್‌ದೀಪ */ka:lɨdi:pa/* ನಾ. 1. ನೀಲಾಂಜನ, 2. ಎತ್ತರದ ಪೀಠದ ಮೇಲಿರುವ ದೀಪ. 1. a lamp, 2.

a lamp kept on the high stand. ವಾ: ಕಾಲ್ ದೀಪನ ಬೆಳ್ಗಕು.

ಕಾಲ್ನಡಿಗೆ /*ka:lnaḍigɛli*/ ನಾ. 1. ಕಾಲ್ನಡಿಗೆ, 2. ಕಾಲು ನಡಿಗೆ. on/by foot'. ವಾ: ಕಾಲ್ನಡಿಗೆಲಿ ಇಸ್ಕೂಲಿಗೆ ಹೋದು.

ಕಾಲ್ಪಿಲ್ಲಿ /*ka:lpilli*/ ನಾ. ಕಾಲಿನ ಬೆರಳಿಗೆ ಹಾಕುವ ಆಭರಣ. toe ring made of either silver or gold. ವಾ: ಕಾಲ್ಪಿಲ್ಲಿ ಹಾಕಿರೆ ಲಾಯ್ಕ.

ಕಾಲ್‌ಬಳೆ /*ka:lɨbaḷɛ*/ ನಾ. 1. ಕಾಲುಗಳಲ್ಲಿ ಧರಿಸುವ ಬೆಳ್ಳಿಯ ಬಳೆ, 2. ಕಾಲುಕಡಗ. silver anklets. ವಾ: ಕಾಲ್ ಬಳೆ ಹಾಕ್.

ಕಾಲ್‌ಬೀಣೆ /*ka:lɨbi:ɳɛ*/ ನಾ. ಕಾಲಿನ ಹಿಮ್ಮಡಿಯ ದಪ್ಪ ನರ. Achilles tendon

. ವಾ: ಕಾಲ್‌ಬೀಣೆ ಉಬ್ಬಿಟು.

ಕಾಲ್‌ಬೆರಳ್ /*ka:lɨbɛraḷɨ*/ ನಾ. ಕಾಲಿನ ಬೆರಳು. toes. ವಾ: ಮಳೆಗೆ ಕಾಲ್ಬೆರ್ಳ್ ಸೆರೆಲಿ ಕರ್ಗುದು.

ಕಾಲ್ಮಡ್ಗ್ /*ka:lmaḍg*/ ನಾ. 1. ಕಾಲು ಹೊರ ಹಾಕಲು ಜಾಗ ಇಲ್ಲದಿರುವಷ್ಟು ಕಷ್ಟ, 2. ಕಾಲು ಇಡು. 1. too crowded, 2. to step. ವಾ: ಮಳೆಗಾಲಲಿ ಮನೆಂದ ಅಂಗ್‌ಳಕೆ ಕಾಲ್ಮಡ್ಗಿರೆ ಜಾರ್‌ದೆ.

ಕಾಲ್ಮೊಂದ್ರಿ /*ka:lmɔndri*/ ನಾ. ಹುಲ್ಲಿನ ಚಾಪೆ. a straw mat. ವಾ: ಕಾಲ್ಮೊಂದ್ರಿ ಎಲ್ಲಿ ಕಾಂಬದುಲೆಲ.

ಕಾಲ್ಯನ /*ka:lyana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕಾಲ್ವೆ /*ka:lvɛ*/ ನಾ. 1. ಕಾಲುವೆ, 2. ನೀರು ಹರಿಯುವುದಕ್ಕೆ ಮಾಡಿದ ತಗ್ಗು ಮಾರ್ಗ. 1. a canal, 2. channel. ವಾ: ಕಾಲ್ವೆ ನೀರ್ ಗದ್ದೆಗೆ ಬಾದು.

ಕಾಲ್‌ಸುತ್ತು /*ka:lɨsuttu*/ ನಾ. ಕಾಲಿನ ಬೆರಳಿನಲ್ಲಿ ಊತ ಬರುವುದು. swelling in the toes. ವಾ: ಕಾಲ್ ಸುತ್ತು ಆವುಟು.

ಕಾಲ್‌ಹಿಡಿ /*ka:lɨhiḍi*/ ಕ್ರಿವಿ. 1. ಕಾಲುಹಿಡಿ, 2. ಅಡ್ಡಬೀಳು, 3. ಸಮಯಸಾಧನೆ. 1. to touch one's feet, 2. to prostrate in front of someone, 3. opportunism. **ಕೆಲ್‌ಸ ಆಕೊರೆ ಕತ್ತೆ ಕಾಲ್ ಹಿಡಿಯೋಕು(ನು).** ವಾ: ಅಂವ ಕೆಲ್‌ಸ ಮಾಡ್‌ಸಿಕಣಿಕೆ ಯಾರ ಕಾಲ್ ಹಿಡಿಯೊಕೂ ಹಿಂಜರಿಯಲೆ.

ಕಾವಂಗ /*ka:vaŋga*/ ನಾ. ಆಹಾರ ಪದಾರ್ಥ ಬಡಿಸಲು ಕೈ ಇರುವ ದುಂಡಗಿನ ಸಣ್ಣ ಪಾತ್ರೆ. A small vessel with a snout and a handle used to serve liquid food. ವಾ: ಕಾವಂಗಕೆ ಎಣ್ಣೆ ಹಾಕ್. ಪ: ಕಾವುಂಗ

ಕಾವಟೆ ಮರ /*ka:vaṭɛ mara*/ ನಾ. ಅದೊಂದು ಕಾಡು ಮರ. a forest tree. ವಾ: ಕಾವಟೆ ಮರ ಒಂದ್ ಕಾಡ್ ಮರ.

ಕಾವತ್ /*ka:vatɨ*/ ನಾ. ಒಂದು ಜಾತಿಯ ಬಳ್ಳಿ ಗೆಣಸು. a variety of sweet potato a creeper.

ಕಾವಲಿರೊಟ್ಟಿ /*ka:valiroṭṭi*/ ನಾ. ಬಳಪದ ಕಲ್ಲಿನ ಕಾವಲಿಯಲ್ಲಿ ಹೊಯ್ಯುವ ರೊಟ್ಟಿ. roti/flatbread made using a soapstone tawa/pan. ವಾ: ಕಾವಲಿರೊಟ್ಟಿ ಮಾಡ್ತೊಳೊ.

ಕಾವಿ /*ka:vi*/ ನಾ. 1. ಕೆಂಪು ಬಣ್ಣದ ಮಣ್ಣು, 2. ಕೇಸರಿ ಬಣ್ಣ, 3. ಕಾಷಾಯ ವಸ್ತ್ರ, 4. ಕಾವಿ ಬಣ್ಣದ ಬಟ್ಟೆ. 1. red soil, 2. saffron coloured soil, 3. a reddish-brown coloured cloth worn by monks, 4. saffron coloured dress. **ಕಾವಿ ಉಟ್ಟವೆಲ್ಲ ಸನ್ಯಾಸಿಗ ಅಲ್ಲ(ಗಾ).** ವಾ: ನೆಲಕೆ ಕಾವಿ ಹಾಕಿದ್.

ಕಾವಿನಮೂಲೆ /*ka:vinamu:le*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಬೆಳ್ಳಾರೆ ಗ್ರಾಮದ ಜಾಗ. a locality in Bellare village in Sullia Taluk of Dakshina Kannada District.

ಕಾವು[1] /*ka:vu*/ ನಾ. 1. ಗುದ್ದಲಿ, 2. ಫಿಕ್ಕಾಸುಗಳ ಮರದ ಹಿಡಿ, 3. ತಳ್ಳಿ, 1. a crow bar, 2. handle of pick-axe, 3. to push. **ಕೊಡಲಿನ ಕಾವು ತನ್ನ ಕುಲನೇ ನಾಸ ಮಾಡ್ತ್(ಗಾ).** ವಾ: ಕೊಟ್ಟುಗೆ ಕಾವು ಹಾಕೊಕು.

ಕಾವು[2] /*ka:vu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕಾವು[3] /*ka:vu*/ ನಾ. ಕಾಯು, ಕಾಪು. waiting. **ಕಾವು ಕೊಡು** /*ka:vu kɔḍu*/ ಮರಿ ಮಾಡಲು ಕೋಳಿ ಮೊಟ್ಟೆ ಮೇಲೆ ಕುಳಿತು ಶಾಖ ಕೊಡುವುದು. a broody hen sitting on the eggs to incubate

them. ವಾ: ಮಟ್ಟೆ ಹಾಕಿ ಹೇಂಟೆ ಕಾವು ಕೊಡುದು. **ಕಾವುಕೊಡ್ತ್** /*ka:vukɔḍti*/ 1. ಕಾಪುಕೊಟ್ಟಿತು, 2. ಕಾಯುತ್ತಿತ್ತು. 1. incubating, 2. waiting. ವಾ: ಹೇಂಟೆ ಕಾವುಕೊಡ್ತ ಉಟ್ಟು.

ಕಾವುಲಿ /*ka:vuli*/ ನಾ. 1. ದೋಸೆ ಕಾವಲಿ, 2. ದೋಸೆ ಹೆಂಚು. a dosa tawa. ವಾ: ಕಾವುಲಿಲಿ ದೋಸೆ ಹೊಯಿ.

ಕಾವೆಲಿ /*ka:vεli*/ ನಾ. ಕಾವಲಿ. tawa/pan. **ಎಲ್ಲವರ ಮನೆ ದೋಸೆ ತೂತ್, ನಮ್ಮ ಮನೆ ಕಾವೆಲಿ ತೂತಾ?(ಗಾ).** ವಾ: ಕಾವೆಲಿನ ದೋಸೆ ಹೊಯ್ಯಕೆ ಬಳ್‌ಸುವೆ.

ಕಾವೇರಿ ಮನೆ /*ka:ve:ri manε*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕಾವೇರಿ ಸಂಕ್ರಮಣ /*ka:vε:ri saŋkramaṇa*/ ನಾ. 1. ಅಕ್ಟೋಬರ್ 17 ರ ಕೊಡಗಿನ ಹಬ್ಬ, 2. ಕಾವೇರಿ ತೀರ್ಥ ಉಕ್ಕುವ ದಿನ, 3. ಕಾವೇರಿ ಜಾತ್ರೆ. 1. a festival celebrated on the 17 of October in Kodagu region, 2. the gushing out of the water at the fountain head in the pond in Talakaveri, the place of the origin of river Kaveri, 2. festival of Kaveri. ವಾ: ಕಾವೇರಿ ಸಂಕ್ರಮಣದ ದಿನ ಕಾವೇರಿಗೆ ಹೋಗಿ ಪಿಂಡ ಹಾಕುವ ಕ್ರಮನು ಉಟ್ಟು.

ಕಾವೇರಿಯಮ್ಮ /*ka:vε:riyamma*/ ನಾ. ಕಾವೇರಿತಾಯಿ. mother Kaveri. ವಾ: ಕಾವೇರಿಯಮ್ಮ ನಮ್ಮೂರ್‌ನ ದೇವಿ.

ಕಾವ್ಲಿ /*ka:vli*/ ನಾ. ದೋಸೆ ಕಾವಲಿ. a dosa tawa. **ಕಾವ್ಲಿಂದ ಕಿಚ್ಚಿಗೆ ಬಿದ್ದಾಂಗೆ(ಗಾ).** ವಾ: ದೋಸೆನ ಕಾವ್ಲಿಲಿ ಹೊಯ್ಯೊಕು.

ಕಾವ್ಲು ಗೂಡು /*ka:vlu gu:ḍu*/ ನಾ. ಹೊಲ, ಗದ್ದೆ ಪಹರೆಯ ಗುಡಿಸಲು. a hut built to guard the farm/field, like that of watch tower. ವಾ: ಕಾವ್ಲು ಗೂಡುಲಿ ಪಾರ ಕಾಯೊದು.

ಕಾಸ /*ka:sa*/ ನಾ. 1. ಸ್ವಂತ, 2. ತುಂಬ ಹತ್ತಿರದ. 1. own, 2. very near/close. ವಾ: ನನ್ನ ಕಾಸ ತಮ್ಮ ಅಂವ.

ಕಾಸರ್‌ಕೋಡ್ /*ka:sariko:ḍinai*/ ನಾ. ಸ್ಥಳ ನಾಮ. a place.

ಕಾಸಿಗೆ /*ka:sigε*/ ನಾ. ಕಾಶಿಗೆ. to Kashi. ವಾ: ಕಾಶಿಗೆ ಒಮ್ಮೆಯಾರ್ ಹೋಕುತ ಆಸೆ.

ಕಾಸಿನಗೋಡ್ಲು /*ka:sinago:ḍlu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕಾಸುಳಿ /*ka:suḷi*/ ನಾ. 1. ಕಾಚುಪುಳಿ, 2. ಪನಪುಳಿ ಎಂಬ ಕಾಯಿಯ ರಸವನ್ನು ತೆಗೆದು ಕಾಯಿಸುವುದು, 3. ಮಾಂಸ ಸಾರಿಗೆ ಬಳಸುವ ಹುಳಿ. 1. boiling the juice/extract of brindleberry/ Malabar tamarind, 2. the sour juice of this fruit extract is usually used in cooking meat. ವಾ: ಮಾಸ ಗೈಪುಗೆ ಕಾಸುಳಿ ಹಾಕುವೆ.

ಕಾಸ್[1] /*ka:si*/ ನಾ. 1. ಕಾಯುವಂತೆ ಮಾಡು, 2. ತಡೆಯುವುದು, 3. ಸುಡುವುದು. 1. to make someone wait, 2. to stop, 3. to burn. ವಾ: ಚಾಯ ಕಾಸಿ ಇಸಿ ಬನ್ನೆ.

ಕಾಸ್[2] /*ka:si*/ ನಾ. 1. ಕಾಸು, 2. ಹಣ, 3. ದುಡ್ಡು. money. **ನಮ್ಮಪ್ಪನ ಕಾಸ್‌ನ ಲೆಕ್ಕ ಮಾಡಿಕೇ ಆಲೆ – ನಕ್ಷತ್ರ(ಒ).** ವಾ: ನಂಗೆ ಕಾಸ್ ಕೊಡ್‌ನೆ.

ಕಾಸ್[3] /*ka:si*/ ನಾ. 1. ಕಾಯಿಸು, 2. ಬಿಸಿಮಾಡು, 3. ನೋವು ಮಾಡು. 1. to heat, 2. to warm, 3. to inflict pain. ವಾ: ಉರಿ ಬರೊವ್ಕೆ ಪುಕುಳಿಗೆ ಕಾಸಿಸೊಕು. **ಕಾಸಿ ಹಾಕುದು** /*ka:si ha:kudu*/ ನಾ. ಪದಾರ್ಥಗಳಿಗೆ ಒಗ್ಗರಣೆ ಹಾಕುವುದು, ಒಗ್ಗರಣೆ ಹಾಕುದು. seasoning the dishes. ವಾ: ಉದ್ಕ ಕೊದ್ದ ಮೇಲೆ ಕಾಸಿ ಹಾಕುದು. ಪ: ಕಾಸಿ ಇಸ್. **ಕಾಸಿಕಂಡ ಮ್ಯಾಲೆ** /*ka:sikaṇḍa mya:lε*/ ನಾ. ಕಾಯಿಸಿಕೊಂಡ ನಂತರ. after warming/ heating/cooking. ವಾ: ಕಾಪಿ ಕಾಸಿಕಂಡ ಮ್ಯಾಲೆ ಚೆಣ್ಣಿಕಂಡ್ ಕುಡ್ಯದು. ಪ: ಕಾಸಿಕಂಡ್ – ಬಿಸಿ ಮಾಡಿಕೊಂಡು, ಕಾಯಿಸಿಕೊಂಡು. **ಕಾಸಿರೆ** /*ka:sirε*/ 1. ಕಾಯಿಸಿದರೆ, 2. ಬಿಸಿ ಮಾಡಿದರೆ. 1. if it is warmed, 2. if it is heated. ವಾ: ಒಮ್ಮೆ ಕಾಸಿದ ಟೀ ನ ಮತ್ತೆ ಕಾಸಿರೆ ಲಾಯ್ಕಿರ್‌ದುಲೆ. **ಕಾಸಿಸುದು** /*ka:sisudu*/ ಸಟ್ಟುಗವನ್ನು ಬಿಸಿ ಮಾಡಿ ಇಡುವುದು. heating the spoons. **ಕಾಸುದ್** /*ka:sudi*/ ಕಾಯಿಸುವುದು. to warm something/to hot/to

boil etc. ವಾ: ಕಿಚ್ಚಿ ಕಾಸುದ್. **ಕಾಸೊಕು** /*ka:soku*/ ಕಾಯಿಸಬೇಕು. to warm something/to hot/to boil etc. ವಾ: ಕಾಪಿ ಕಾಸೊಕು.

ಕಾಸಿಸುದು /*ka:sisudu*/ ಕ್ರಿ. ಮಗು ಹುಟ್ಟಿದ ಹಾಗೆ ಅಥವಾ ಹುಟ್ಟಿದ ಒಂದೆರಡು ತಿಂಗಳಲ್ಲಿ ಮಗುವಿನ ನೆತ್ತಿಯಲ್ಲಿ ಸಣ್ಣ ಬಿರುಕು ಬಿಡುವುದನ್ನು ತಡೆಯಲು ಕಪ್ಪು ಗಾಜಿನ ಬಳೆಗಳನ್ನು ಕೆಂಪಗೆ ಕಾಯಿಸಿ ಬಿರುಕು ಬಿಟ್ಟ ನೆತ್ತಿಗೆ ಒತ್ತುವ ಜನಪದ ವೈದ್ಯ ಪದ್ಧತಿ. branding the child with a piece of glass bangle on the middle of the head. ವಾ: ಸಣ್ಣ ಕೂಸುನ ತಲೆಗೆ ಕಾಸಿಸುವೆ.

ಕಾಸ್‌ತಾಳಿ[1] /*ka:sita:ḷi*/ ನಾ. 1. ವಧು ವರರಿಗೆ ಮದುವೆ ಕಾರ್ಯಕ್ರಮ ಆರಂಭಕ್ಕೆ ಮುನ್ನ ಕಟ್ಟುವ ಸರ, ನಂತರ ಸೂತಕ ಇಲ್ಲ, 2. ಮುಹೂರ್ತ ಮಣಿ. 1. a chain worn by the bride and the bridegroom before the onset of the wedding, 2. an auspicious bead. ವಾ: ಕಾಸ್ ತಾಳಿನ ಮೊದುವೆಲಿ ಎಣ್ಣೆ ಅರ್‌ಸಣಕೆ ಮುಂದೆ ಸೋದರ ಮಾವನೆ ಕಟ್ಟುದು. **ಕಾಸ್ತಾಳಿ ಕಟ್ಟುವ ಕ್ರಮ** /*ka:sta:ḷi kaṭṭuva krama*/ ಸೋದರ ಮಾವಂದಿರು,ಬಾವಂದಿರು ಕಟ್ಟುವಂತದ್ದು. a customary jewellery tied by the maternal uncle. ವಾ: ಕಾಸ್ತಾಳಿ ಕಟ್ಟುವ ಕ್ರಮ ಗೌಡ ಸಂಪ್ರದಾಯ.

ಕಾಸ್ತಾಳಿ[2] /*ka:sta:ḷi*/ ನಾ. ಚಪ್ಪರದ ದಿನ ಕೊಡಗಿನ ಅರೆಭಾಷೆ ಗೌಡರಲ್ಲಿ ವಧು/ವರರಿಗೆ ಅವರ ಸೋದರ ಮಾವ ಕೊರಳಿಗೆ ಕಟ್ಟುವ ಮುಹೂರ್ತ ಮಣಿ, ಹವಳ ಮತ್ತು ಚಿನ್ನದ ಗುಂಡನ್ನು ನೂಲಿನಲ್ಲಿ ಪೋಣಿಸಿದ್ದು, ಮಂಗಳಸೂಚಕವಾಗಿದೆ. a necklace made by coral stone with golden beads tied to either the bride or the bridge groom by the maternal uncle on the day of wedding. ವಾ: ಮೊದುವೆಲಿ ಗೂಡೆ ಹೈದಂಗೆ ಅವರವರ ಸೋದರ ಮಾಂವ ಸಾಸ್ತ್ರಕೆ ಮುಂದೆ ಹತ್ತ್ ಕುಟುಂಬ ಹದ್ನೆಂಟ್ ಗೋತ್ರದ ಒಕ್ಕಣೆ ಹೇಳಿ ಕಾಸ್ತಾಳಿ ಕಟ್ಟುವೆ.

ಕಾಸ್‌ನ ಸರ /*ka:sna sara*/ ನಾ. 1. ಕಾಸುಗಳನ್ನೆಲ್ಲಾ ಸೇರಿಸಿ ಪೋಣಿಸಿದ ಕತ್ತಿನ ಸರ, 2. ಹೆಂಗಳೆಯರ ಕಂಠ ಹಾರ. coin necklace. ವಾ: ಕಾಸ್‌ನ ಸರ ಒಂದೇ ಸಾಕ್ ಹಾಕಿರೆ ಕುತಿಗೆ ತುಂಬ ಕಂಡದೆ. ಪ: ಕಾಸ್ನಸರ, ಕಾಸಿನ ಸರ

ಕಾಸ್ಪಾಡಿ /*ka:spa:ḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕಾಸ್ಮಿ ಸೀರೆ /*ka:smisi:rɛ*/ ನಾ. 1. ಪೀತಾಂಬರ ಸೀರೆ, 2. ರೇಷ್ಮೆ ಸೀರೆ. 1. a yellow silk sari (auspicious and precious), 2. silk saree. ವಾ: ಮೊದುವೆಗೆ ಕಾಸ್ಮಿ ಸೀರೆ ತೆಗೆಕು.

ಕಾಳ /*ka:ḷa*/ ನಾ. 1. ಕರಿಯ, 2. ಕಪ್ಪು. 1. a person with dark complexion, 2. black. **ಕಾಳಂಗೆ ಬಂದದ್ ಬೋಳ್ಳಂಗೆ ಬಾರದಿರ್‌ದೋ?(ಗಾ).** ವಾ: ಕಾಳ ಎಲ್ಲಿ ಹೋತು.

ಕಾಳಗ /*ka:ḷaga*/ ನಾ. 1. ಕಾಳಗ, 2. ಜಗಳ. 1. war, 2. quarrel. ವಾ: ಮೊದುವೆಲಿ ಗೂಡೆ ಹೈದಂಗೆ ಅವರವರ ಸೋದರ ಮಾಂವ ಸಾಸ್ತ್ರಕೆ ಮುಂದೆ ಹತ್ತ್ ಕುಟುಂಬ ಹದ್ನೆಂಟ್ ಗೋತ್ರದ ಒಕ್ಕಣೆ ಹೇಳಿ ಕಾಸ್ತಾಳಿ ಕಟ್ಟುವೆ.

ಕಾಳಜಿ /*ka:ḷaji*/ ನಾ. 1. ಚಿಂತೆ, 2. ಗೊಡವೆ, 3. ಆರೈಕೆ, 4. ಜೋಪಾನ, 5. ಜಾಗರೂಕತೆ. 1. a concern – often worrisome, 2. problem, 3. nursing, 4. careful, 5. cautious. ವಾ: ಮೊನ್‌ಸಂಗೆ ಕಾಳಜಿ ಇರೊಕು.

ಕಾಳಪ್ಪಜ್ಜಮನೆ /*ka:ḷappajjamanɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕಾಳಮನೆ /*ka:ḷamane*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಜಾಲ್ಸೂರು ಗ್ರಾಮದ ಜಾಗ. 1. family, 2. lineage, 3. a locality in Jalsuru village in Sullia Taluk of Dakshina Kannada District.

ಕಾಳಿಂಗ /*ka:ḷiŋga*/ ನಾ. ಸರ್ಪ. King Cobra. ವಾ: ಕಾಳಿಂಗ ಸರ್ಪ ಮನೆಯೊಳೆಗೆ ಹೊಕ್ಕಿತ್.

ಕಾಳಿಯಂಡ್ರ, /*ka:ḷiyaṇḍra*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕಾಳೆ /*ka:ḷɛ*/ ನಾ. ಮುಖ್ಯಸ್ಥ. the head/leader/alpha male. ವಾ: ಕಾಳೆ ಕಪಿದ್ ಬಾಲ ನೋಡ್.

ಕಾಳೆಕಪಿ /*ka:ḷe kapi*/ ನಾ. 1. ಬಲಾಢ್ಯವಾದ ಮಂಗ, 2.

ಮಂಗಗಳ ಯಜಮಾನ. 1. feracious monkey, 2. alpha male. ವಾ: ಕಾಡೊಳಗೆ ಕಾಳೆ ಕಪಿಗ ಸುಮಾರ್ ವಳೊ.

ಕಾಳೇರಮ್ಮನ /*ka:ḷe:rammana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕಾಳ್ /*ka:ḷɨ*/ ನಾ. ಕಾಳು. grains. ವಾ: ಇಲಾತಿ ಕಾಳ್‌ನ ಬುಡ್‌ಸು.

ಕಾಳ್ಜೀರಿಗೆ[1] /*ka:ḷji:rigɛ*/ ನಾ. 1. ಕರಿಜೀರಿಗೆ, 2. ಕಪ್ಪು ಜೀರಿಗೆ, 3. ಔಷಧಿ ಕಾಳು. black cumin seeds. ವಾ: ಕಾಳ್ಜೀರಿಗೆ ನಂಜಿನ್ ಬಿತ್ತ್‌ನ ಆರ್‌ತಿಂಗಳಿಗೊಮ್ಮೆ ಕುಡ್ಯಕೆ ಕೊಡೊಕು. ಪ: ಕಾಳಜೀರಿಗೆ(ತು)

ಕಿಂಕಳ್ /*kiŋkaḷɨ*/ ನಾ. 1. ಭುಜದ ಕೆಳಭಾಗ, 2. ಕಂಕುಳು. armpit. ವಾ: ಕಿಂಕಳ್ ಊದಿಟು. ಪ: ಕಿಂಕ್ಳಡಿ, ಕಿತ್‌ಕ್ಲಡಿ(ತು)

ಕಿಂಕ್‌ಣಿ /*kiŋkṇi*/ ನಾ. 1. ಕಂಕುಳು. armpit. ವಾ: ಕಿಂಕ್‌ಣಿ ಅಡಿ ಸುದ್ದಲಿ ಇಸಿಕಹೊಕು ಇಲ್ಲರೆ ಸಿಂಡ್ ವಾಸ್‌ನೆ ಬಾದು. ಪ: ಕಿಂಕ್‌ಣಿಕೆ ಅಡಿ – ಕಂಕುಳು; ಕಿಂಕ್ಣಿ – ಕಂಕುಳ; ಕಿಂಕ್ಳ್ – ಕಂಕುಳು

ಕಿಂಕ್‌ಣಿಕೆ ಬೆರ್ಲ್ /*kiŋkṇike bɛrlɨ*/ ನಾ. ಕಿರುಬೆರಳು. little finger/pinky. ವಾ: ಕಿಂಕ್‌ಣಿಕೆ ಬೆರ್ಲ್‌ಗೆ ಗಾಯ ಆತ್. ಕಿನ್ನಿಬಿರೆಲ್(ತು)

ಕಿಂಡಿ /*kiṇḍi*/ ನಾ. 1. ತೂತು, 2. ರಂಧ್ರ. a hole. ವಾ: ಕಿಂಡಿಲಿ ಎಲಿಗ ಬಾದು. ಪ: ಕಿಂಡಿಲಾಗಿ – ತೂತಿನಿಂದಾಗಿ

ಕಿಕ್ಕರ /*kikkara*/ ನಾ. ಒಕ್ಕದಲ್ಲಿರುವ ಸದಸ್ಯರು. members.

ಕಿಕ್ಕರಿ /*kikkari*/ ನಾ. ಕೆಳಗಿನ ಬದು. the bund in a low lying area. ವಾ: ಒಮ್ಮೆ ಗದ್ದೆನ ಕಿಕ್ಕರಿ ಕಡೆ ಹೋಗಿ ಬನ್ನೆ.

ಕಿಕ್ಕಿ /*kikki*/ ನಾ. ಮಾಂಸ (ಮಕ್ಕಳ ಭಾಷೆ). meat (in the vocabulary of children). ವಾ: ಕಿಕ್ಕಿ ಬೇಕ್ ನಂಗೆ. ಪ: ಕಿಕ್ಕಿ ಮಾಸ – ಮಾಂಸದ ತುಂಡು

ಕಿಕ್ಕೀರಿ /*kikki:ri*/ ನಾ. ಕೆಳಗಡೆ. below/bottom. ವಾ: ಕಿಕ್ಕೀರಿ ಕಡೆ ನೋಡ್.

ಕಿಕ್ಕ್‌ಲಿ ಪಿಜಿನ್ /*kikkḷi iruveɨ*/ ನಾ. ಇವುಗಳು ಕಪ್ಪು ಬಣ್ಣದ ಸಾಧು ಇರುವೆಗಳು. black ants. ವಾ: ಕಿಕ್ಕ್‌ಲಿ ಪಿಜಿನ್‌ಗ ಮೈಮೇಲೆ ಓಡಾಡ್‌ರೆ ಕಿಕ್ಳಿ ಆದೆ.

ಕಿಕ್ಳಿ /*kikḷi*/ ನಾ. ಕಚಗುಳಿ. to tickle. ವಾ: ಕೂಸಿಗೆ ಕಿಕ್ಳಿ ಮಾಡ್‌ದು. ಪ: ಕಿಳಿಕಿಳಿ

ಕಿಚಿಕಿಳಿ /*kicikiḷi*/ ನಾ. ಕಚಗುಳಿ. to tickle. ವಾ: ಕಿಚಿಕಿಳಿ ಮಾಡ್‌ದು.

ಕಿಚ್ಚಿ /*kicci*/ ನಾ. ಬೆಂಕಿ. fire. **ಕಾವಲಿಂದ ಕಿಚ್ಚಿಗೆ ಬಿದ್ದಾಂಗೆ(ಗಾ).** ವಾ: ಗುಡ್ಡಕೆ ಕಿಚ್ಚಿ ಹಾಕಿದನ? ಪ: ಕಿಚ್ಚಾತ್ – ಬೆಂಕಿಯಾಯಿತು; ಕಿಚ್ಚಿಕೊಟ್ಟನೆಂತ – ಬೆಂಕಿಕೊಡುತ್ತೇನೆಂದು; ಕಿಚ್ಚಿಕೊಡು – ಬೆಂಕಿಕೊಡು; ಕಿಚ್ಚಿಗೆ – ಬೆಂಕಿಗೆ; ಕಿಚ್ಚಿಲಿ – ಬೆಂಕಿಯಲ್ಲಿ; ಕಿಚ್ಚ್ – ಬೆಂಕಿ, ಜ್ವಾಲೆ

ಕಿಚ್ಚಿ ಮರ್ಡುದು /*kicci marḍudu*/ ನಾ. ಬೆಂಕಿಯಲ್ಲಿ ಸೌದೆ ಉರಿಯುವಾಗ ಉಂಟಾಗುವ ಸದ್ದು. the crackling sound of firewood burning. ವಾ: ಸೊವುದೆ ಹೊತ್ತ್‌ಕನ ಒಮ್ಮೊಮ್ಮೆ ಕಿಚ್ಚಿ ಮರ್ಡುದು.

ಕಿಚ್ಚಿ ಮೊಟ್ಟ್ /*kicci mɔṭṭɨ*/ ನಾ. ಬೆಂಕಿಮಾಡಿ. to light a fire. ವಾ: ಕೋಲ್ ಸೌದೆ ಒಟ್ಟಿಗೆ ವಡೆರ ಸೊವುದೆ ಇದ್ದರೆ ಬೇಗ ಕಿಚ್ಚಿ ಮೊಟ್ಟ್ ಮಾಡಕ್.

ಕಿಚ್ಚಿ ಹೆಟ್ಟ್ /*kicci hɛṭṭi*/ ನಾ. ಬೆಂಕಿಹಾಕು. to light a fire. ವಾ: ಕಿಚ್ಚಿ ಹೆಟ್ಟಿಕೆ ಚೀಂಕ್ ಬೇಕ್.

ಕಿಚ್ಚಿನ ಪೆಟ್ಟಿಗೆ /*kiccɨ peṭṭige*/ ನಾ. ಬೆಂಕಿಪೆಟ್ಟಿಗೆ. matchbox. ಪ: ಸೂತಪೆಟ್ಟಿಗೆ(ತು)

ಕಿಚ್ಚಿಮಾಡ್ದು /*kiccimoḍdu*/ ನಾ. ಬೆಂಕಿ ಉರಿಸುವುದು. to keep the fire burning. ವಾ: ಅವ್ವ ಗುಡ್ಡಲಿ ಕಿಚ್ಚಿಮಾಡ್‌ದು.

ಕಿಚ್ಚಿವೊಟ್ಟ್ /*kiccivɔṭṭɨ*/ ನಾ. ಬೆಂಕಿಹೊತ್ತಿಸು. to light a fire. ವಾ: ಬಾರಿ ಸೆಳಿಯಾದೆ ಬೇಗ ಕಿಚ್ಚಿವೊಟ್ಟ್.

ಕಿಚ್ಚ್ /*kiccɨ*/ ನಾ. 1. ಬೆಂಕಿ, 2. ಮತ್ಸರ, 3. ಹೊಟ್ಟೆಕಿಚ್ಚು. 1. fire, 2. jealousy, 3. envious. **ಉಮ್ಮಿಯೊಳಗಿನ ಕಿಚ್ಚ್‌ನಂಗೆ(ಗಾ). ಕಿಚ್ಚ್ ನ ಬಾಯಿಲಿ ಹುಣ್ಣ್ ಉಟ್ಟಾ(ನು). ಗಾಳಿ ಕುಡ್ದ್ ಬೊದ್ದಿದೆ, ನೀರ್ ಕುಡ್ದ್ ಸತ್ತದೆ – ಕಿಚ್ಚ್(ಒ).** ವಾ: ಹೊಟ್ಟೆಲಿ ಕಿಚ್ಚ್ ಇಸಿಕಂಡ್ ಮಾತಾಡಿಕಾಗದ್.

ಕಿಟಿಕಿಟಿ /*kiṭi kiṭi*/ ಅ. 1. ಒಂದು ಬಗೆಯ ನಗು, 2. ನಗುವಿನ ರೀತಿ. a king of laughter, an

onomatopoeia. ವಾ: ಎಂತ ಸುಮ್ಮನೆ ಕಿಟಿ ಕಿಟಿತ ನೆಗಾಡ್‌ದು.

ಕಿಟ್ಟ /*kiṭṭa*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. masculine given name.

ಕಿಟ್ಟಪ್ಪ /*kiṭṭappa*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. masculine given name.

ಕಿಟ್ಟಮ್ಮ /*kiṭṭamma*/ ನಾ. ವ್ಯಕ್ತಿ ಹೆಸರು, ಸ್ತ್ರೀ ವಾಚಕ. feminine given name.

ಕಿಡಾಕ್ /*kiḍa:kɨ*/ ನಾ. 1. ಸಣ್ಣದು, 2. ಚಿಕ್ಕ ಗಾತ್ರದು. 1. small, 2. something small in size. ವಾ: ಇದ್ ಬಾರಿ ಕಿಡಾಕ್ ಕೋಳಿಯಾತ್.

ಕಿಡಾಸ ಹಬ್ಬ /*kiḍa:sa habba*/ ನಾ. ತುಳುನಾಡು ಮತ್ತು ಆರೆಭಾಷೆ ಪ್ರದೇಶದಲ್ಲಿ ಭೂಮಿತಾಯಿಯು ಋತುಮತಿಯಾಗುತ್ತಾಳೆ ಎಂದು ಮಾಡುವ ಆಚರಣೆ, ಮಕರ ಮಾಸದ ಇಪ್ಪತ್ತೇಳನೆಯ ದಿನ ಮೊದಲುಗೊಂಡು ಕುಂಭ ಸಂಕ್ರಮಣದ ವರೆಗಿನ ದಿನಗಳಲ್ಲಿ ಆಚರಿಸುವ ತುಳುನಾಡಿನ ಒಂದು ಹಬ್ಬ (ಈ ಮೂರು ದಿನಗಳಲ್ಲಿ ಭೂದೇವಿಯು ಪುಷ್ಪವತಿಯಾಗಿ ಫಲವತಿಯಾಗುವಳೆಂಬುದು ಜನಪದ ನಂಬಿಕೆ, ಈ ಸಮಯದ. A festival celebrated in Tulunadu and Arebhashe region in the month of February. It is believed that the Mother Earth gets menstruation during this time, and a four-day fertility festival celebrated. ವಾ: ಬತ್ತದ ಒಕ್ಕುಲು ಆದ ಮೇಲೆ ಬತ್ತನ ಪೂಜೆ ಮಾಡುವ ಹಬ್ಬಕೆ ಕಿಡಾಸ ಹಬ್ಬತೇಳಿವೆ, ಕಿಡಾಸ ಹಬ್ಬನ ಮೂರ್ ದಿನ ಆಚರಿಸುವೆ, ಬೂಮಿ ತಾಯಿನ ಪೂಜೆ ಮಾಡಿವೆ. ಪ: ಕೆಡ್ಡಸ(ತು)

ಕಿಡಿ /*kiḍi*/ ನಾ. 1. ಬೆಂಕಿಯ ಕಣ, 2. ಕೆಂಡದ ಕಣ. 1. an ember, 2. glowing ember. ವಾ: ಬೆಂಕಿ ಕಿಡಿ ಸೀರೆಗೆ ಹಾರಿ ತೂತ ಆತ್, ಪಟಾಕಿ ಕಿಡಿ ಅರ್ವೆಗೆ ಹಾರ್‌ತ್.

ಕಿಡಿಂಜೋಳು /*kiḍiŋjɔ:ḷu*/ ನಾ. ತೆಂಗಿನಮಡಲಿನಿಂದ ತಯಾರಿಸಿದ ಗೊರಬೆ. a hood/cap prepared by coconut fronds. ವಾ: ಮಳ್ಗಾಲಲಿ ತಲೆಗೆ ಕಿಡಿಂಜೋಳು ಹಾಕಂಡೆ ಹೊರೆಗೆ ಕೆಲ್‌ಸಕೆ ಹೋದು. ಪ: ಕಿಡಂಜೊಳ್, ಕಿಡಿಂಜೊಳ್

ಕಿಡಿಕೆ /*kiḍikɛ*/ ನಾ. 1. ಕಿಟಕಿ, 2. ಬೆಳಕು ಬರುವ ಕಿಂಡಿ, 3. ಕಿಂಡಿ, 4. ಗವಾಕ್ಷ, 5. ಗಾಳಿ ಬೆಳಕು ಬರುವುದಕ್ಕಾಗಿ ಮಾಡಿರುವ ಕಂಡಿ. a window. ವಾ: ಕಿಡಿಕೆ ಬಾಗ್‌ಲ್ ಹಾಕಕಾಗಿತ್. ಪ: ಕಿಡಿಕ್ಕೆಲಿ – ಕಿಟಕಿಯಲ್ಲಿ; ಕಿಡ್ಕೆ – ಕಿಟಕಿ

ಕಿಡು /*kiḍu*/ ನಾ. 1. ಕಾಲಿನಲ್ಲಿ ಗಟ್ಟಿಯಾಗಿ ಮಾಂಸ ಬೆಳೆಯುವುದು, 2. ದೇಹದ ಯಾವುದಾದರು ಭಾಗದಲ್ಲಿ ಸಣ್ಣದಾಗಿ ದುರ್ಮಾಂಸ ಬೆಳೆಯುವುದು, 3. ಕೆಟ್ಟ ಭಾಗ. the growth of diseased flesh as a tumor or as a sore in the leg or any other part of the body. ವಾ: ಕೈಲಿ ಕಿಡು ಎದ್ದುಟು.

ಕಿಡ್ಕೆ /*Kiḍkɛ*/ ನಾ. 1. ಕಿಟಕಿ. a window. ವಾ: ಕಿಡ್ಕೆಲಿ ಲಾಯ್ಕಲಿ ಗಾಳಿ ಬಾದು.

ಕಿಡ್ಡಾಸ ಹಬ್ಬ /*kiḍḍa:sa habba*/ ನಾ. ಜನವರಿ-ಫೆಬ್ರವರಿ ತಿಂಗಳಿನಲ್ಲಿ ಒಕ್ಕಲು ಕೆಲಸ ಆದ ನಂತರ ಭತ್ತವನ್ನು ಪೂಜಿಸುವ ಹಬ್ಬ. Festival of worshipping Mother Earth. Celebrated during January or February. Harvested paddy is worshipped during this festival. ವಾ: ಒಕ್ಲು ಕೆಲ್ಸ ಆದ ಮೇಲೆ ಬತ್ತನ ಪೂಜೆ ಮಾಡೊ ಹಬ್ಬ ನೆ ಕಿಡ್ಡಾಸ, ಇದ್ನ ಪೊನ್ನಿ (ಪೆಬ್ರವರಿ) ತಿಂಗಳ್ಲಿ ಮೂರ್ ದಿನ ಆಚರ್‌ಸುವೆ, ಬೂಮಿ ತಾಯಿಗೆ ಎಣ್ಣೆ ಬುಟ್ಟ್ ಪೂಜೆ ಮಾಡಿವೆ.

ಕಿಣಬೆರ್ಲ್ /*kiṇaberlɨ*/ ನಾ. ಕಿರು ಬೆರಳು. little finger/pinky. ವಾ: ಕಿಣ ಬೆರ್ಲ್‌ಗೆ ಎಂತಾದ್?

ಕಿಣಿ /*kiṇi*/ ನಾ. 1. ಒಳಸಂಚು, 2. ಉಪಾಯಗಾರಿಕೆ. 1. a conspiracy, 2. a contrivance. ವಾ: ಬಾರಿ ಕಿಣಿಗಾರ ಹೈದ.

ಕಿಣಿಬೆಳ್ಳ್ /*kiṇi bɛrḷi*/ ನಾ. 1. ಕಿರು ಬೆರಳು, 2. ಕುರುಳ ಬೆರಳು, 3. ಕಿಬ್ಬೆರಳು. little finger/pinky. ವಾ: ಕಿಣಿ ಬೆರ್‌ಳ್‌ನ ಹೆಂಗೆ ಬೊಗ್ಸುದು ನೋಡು. ಪ: ಕಿಣಿ ಬೆರಳ್ – ಕಿರು ಬೆರಳು, ಕುರುಳ ಬೆರಳು

ಕಿಣಿಬೆರಳ್ /*kiniberaḷɨ*/ ನಾ. ಕಿರುಬೆರಳು. small finger/pinky finger. ವಾ: ಕಿಣಿಬೆರಳ್‌ಗೆ ಉಂಗುರ ಹಾಕುಲೆ.

ಕಿಣ್ಕಿ /*kiṇki*/ ನಾ. 1. ಜಿಗುಟಿ, 2. ಚಿವುಟಿ, 3. ಚಿಮುಟಿ,

4. ಚಿವುಂಟಿ. to pinch. ವಾ: ಕೂಸುಗೆ ಕಿಣ್ಕಿ ಮರ್‌ಡುಸುದು.

ಕಿಙ್ಕ್‌ನ್‌ಕೆ /*kiŋkɨnɨkɛ*/ ನಾ. ಕಿರು ಬೆರಳು. little finger/pinky. ವಾ: ಕಿಙ್ಕ್‌ನ್‌ಕೆಗೆ ಉಗುರ್ರು ಸುತ್ತಾವುಟು.

ಕಿತಾಪತಿ /*kita:pati*/ ನಾ. 1. ಗಲಾಟೆ, 2. ಅಪಥ್ಯ ಕೆಲಸ. 1. a nuisance, 2. a disturbing behaviour. ವಾ: ಎಲ್ಲ ಕಿತಾಪತಿನು ಮಾಡಿ ಒಳ್ಳೆದಾಕಂಬೊದು.

ಕಿತ್ತರೆ /*kittarɛ*/ ನಾ. 1. ಕಿತ್ತು ತೆಗೆದರೆ, 2. ಎಳೆದರೆ. 1. if something is pulled out, 2. if pulled. ವಾ: ಬಾಳೆಕಂದ್ ಕಿತ್ತರೆ ಆದೊ.

ಕಿತ್ತಾಟ /*kitta:ʈa*/ ನಾ. ಒಂದು ವಸ್ತುವನ್ನು ಕಿತ್ತು ಕೊಳ್ಳಲು ಕಸಿದುಕೊಳ್ಳಲು ನಡೆಯುವ ಜಗಳ/ ಹೋರಾಟ. a quarrel in order to snatch something. ವಾ: ಅವರ ಕಿತ್ತಾಟ ಸುರಾತ್.

ಕಿತ್ತುಳಿ /*kittuḷi*/ ನಾ. 1. ಕಿತ್ತಳೆ ಹಣ್ಣು. an orange. **ಒಂದವ್ವನ ಹೊಟ್ಟೆಲಿ ಹನ್ನೊಂದ್ ಮಕ್ಕ – ಕಿತ್ತುಳಿ(ಒ).** ವಾ: ಕಿತ್ತುಳಿನ ಮಾರಿಕೆ ಹೋಕು.

ಕಿತ್ತೆ /*kittɛ*/ ನಾ. 1. ಕಿತ್ತೆನು, 2. ಕೀಳುವಿಕೆ. 1. I pulled it out, 2. plucking. ವಾ: ಕಾಡ್ ದೈನ ಕಿತ್ತೆ.

ಕಿತ್ /*kittɨ*/ ಕ್ರಿ. 1. ಕಿತ್ತು, 2. ಕೀಳು. 1. to pull, 2. to pluck. ವಾ: ಬೆಳ್ದ್ ಹಣ್ಣಾದ ಚೆಟ್ಟ್ ಬೊಳ್ಳಿನ ಕಿತ್ ಹಾಕೊಕು. **ಕಿತ್‌ಕ** /*kittɨka*/ 1. ಕಿತ್ತುಕೊ, 2. ಎಳೆದು ತೆಗೆದುಕೊ, 3. ಕಸಿದುಕೊ. 1. to pull it from someone, 2. to pull, 3. to take something from someone by force. ವಾ: ಅಂವನ ಕೈಂದ ಹಣ್ಣ್ ಕಿತ್‌ಕ.

ಕಿನಾರ /*kina:ra*/ ನಾ. ಪ್ರತ್ಯೇಕವಾಗಿ. seperated. **ಕಿನಾರ ಕುದ್ದ್ ಮನಾರ ಉಂಬದು(ಗಾ).** ವಾ: ಕಿನಾರಕೆ ಕರ್‌ಕಂಡೋಗಿ ಮಾತಾಡ್ಸ್.

ಕಿನಾರೆ /*kina:rɛ*/ ನಾ. 1. ಕರೆ, 2. ಬದಿ. 1. to call, 2. a river bank/side. ವಾ: ಸಂದ್ರ ಕಿನಾರೆಗೆ ಹೋಗಿ ಬರೊನೊ.

ಕಿನಾಲ /*kina:la*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅರಂತೋಡು ಗ್ರಾಮದ ಜಾಗ. a locality in Arantodu village in Sullia Taluk of Dakshina Kannada District.

ಕಿನಿಬೆರಳ್ /*kinibɛraḷɨ*/ ನಾ. ಕಿರುಬೆರಳು. little finger. ವಾ: ಕಿನಿಬೆರಳ್ ಸಣ್ಣದ್.

ಕಿನ್ನರಿ ಬಾರ್ಸ್ /*kinnari ba:rsɨ*/ ನಾ. 1. ಕಿನ್ನರಿ ಒಂದು ವಿಧದ ವಾದ್ಯ, 2. ಏನೂ ಪ್ರಯೋಜನವಿಲ್ಲದ ಕೆಲಸ ಮಾಡು. 1. a stringed musical instrument, 2. doing useless thing/work. **ಕೋಣನ ಮುಂದೆ ಕಿನ್ನರಿ ಬಾರ್ಸಿದಾಂಗೆ(ನು).** ವಾ: ನಿಂಗೆ ಹೇಳ್ದು ಒಂದೆ,ಕೋಣನೆದುರ ಕಿನ್ನರಿ ಬಾರ್ಸುದು ಒಂದೆ.

ಕಿನ್ನಿ /*kinni*/ ನಾ. ಸಣ್ಣ ಮರಿ. an infant/a baby.

ಕಿನ್ನಿಕುಮ್ರಿ /*kinnikumri*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಗುತ್ತಿಗಾರು ಗ್ರಾಮದ ಜಾಗ. 1. family, 2. lineage, 3. a locality in Guttigaru village in Sullia Taluk of Dakshina Kannada District.

ಕಿನ್ನಿಗೋಳಿ /*kinnigo:ḷi*/ ನಾ. 1. ಸ್ಥಳನಾಮದ ಹೆಸರು, 2. ಗೋಳಿಯಲ್ಲಿ ಒಂದು ಜಾತಿ ಮರ. 1. Kinnigoli, a town 2. brown woolly fig tree/ hairy fig tree/ Mysore fig tree. ವಾ: ಕಿನ್ನಿಗೋಳಿತ ಒಂದ್ ಗೋಳಿಮರ.

ಕಿನ್ನಿಮಜಲು /*kinnimajalu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕಿನ್ನಿರಿಬೊಳ್ಳಿ /*kinniribɔḷḷi*/ ನಾ. 1. ಮುಂಡರಕೆ ಬಳ್ಳಿ, ಮುಳ್ಳು ಇರುವ ಬಳ್ಳಿ, 2. ನೂತನ ಮನೆಯ ಗೃಹಪ್ರವೇಶ ಸಂದರ್ಭದಲ್ಲಿ ಮನೆಯ ಸುತ್ತಲೂ ಈ ಬಳ್ಳಿ ಯನ್ನು ಕಟ್ಟುತ್ತಾರೆ. 1. a creeper having medicated elements, 2. This creeper is tied around the house during the housewarming ceremony. ವಾ: ಹೊಸ ಮನೆ ಕೂಡ್‌ಕನ ಮನೆ ಸುತ್ತ ಕಿನ್ನಿರಿಬೊಳ್ಳಿನ ಕಟ್ಟುವೆ. ಪ: ಚೆನ್ನರಬೂರು, ಇಲ್ಲ್‌ಬಲ್ಲ್(ತು),

ಕಿನ್ಯಾಳ /*kinya:ḷa*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಎಡಮಂಗಲ ಗ್ರಾಮದ ಜಾಗ. a locality in Edamangala village in Sullia Taluk of Dakshina Kannada District.

ಕಿಬ್ಬೊಟ್ಟೆ /*kibbɔʈʈɛ*/ ನಾ. 1. ಕಿರು ಹೊಟ್ಟೆ, 2. ಕೆಳಗಿನ ಹೊಟ್ಟೆ, 3. ಕೆಳ ಹೊಟ್ಟೆ. 1. abdomen, 2. part of

the central abdomen, 3. the rectum. ವಾ: ಕಿಬ್ಬೊಟ್ಟೆಲಿ ಬೇನೆ.

ಕಿಮಿ /*kimi*/ ನಾ. 1. ಕಿವಿ, 2. ಶಬ್ದವನ್ನು ಗ್ರಹಣ ಮಾಡುವ ಇಂದ್ರಿಯ, 3. ಶ್ರವಣೇಂದ್ರಿಯ, 4. ಕರ್ಣ. 1. ears, 2. organ that helps hearing, 3. organ with which one can hear, 4. ears. ವಾ: ಉಗ್ಗಪ್ಪಂಗೆ ಕಿಮಿ ಕೇಳ್ದುಲೆ.

ಕಿರಿನೆಲ್ಲಿ /*kirinɛlli*/ ನಾ. 1. ನೆಲನೆಲ್ಲಿ, 2. ಔಷಧೀಯ ಗಿಡ. 1. country gooseberry, star gooseberry, 2. a medicinal plant. ವಾ: ತಲೆಗೆ ಹಾಕಿಕೆ ಎಣ್ಣೆ ಕಾಸಿಕನ ಕಿರಿ ನೆಲ್ಲಿನ ಹಾಕುವೆ.

ಕಿರಿಂಜೋಳು /*kiriŋjɔ:ḷu*/ ನಾ. ತೆಂಗಿನ ಮಡಲಿನ ಎಸಳುಗಳನ್ನು ಬಳಸಿ ಮಾಡಿದ ಸಾಧನ, ಇದನ್ನು ಮಳೆಗಾಲದಲ್ಲಿ ನೆನೆಯದ ಹಾಗೆ ತಲೆ ಮೇಲೆ ಹಾಕಿ ಕೆಲಸ ಮಾಡುತ್ತಾರೆ. a hat made of coconut palm leaf, usually used as a protection from rain while working in the padddy field. ವಾ: ಗದ್ದೆಗೆ ಹೋಕನ ಚೆಂಡಿ ಆಗದಾಂಗೆ ಕಿರಿಂಜೋಳು ಹಾಕಂಬೊದು. ಕಿಡಿಂಜೋಳು(ತು)

ಕಿರಿಕಿರಿ /*kirikiri*/ ಅ. 1. ಮಾನಸಿಕ ಅಡಚಣೆ, 2. ಮಾನಸಿಕ ತೊಂದರೆ. 1. mental disturbance, 2. psychological disturbance. ವಾ: ಮನೆಗೆ ಹತ್ತಿಕನ ಮಕ್ಕ ಕಿರಿಕಿರಿ ಮಾಡ್‌ದು.

ಕಿರಿಕ್ /*kiriki*/ ನಾ. ಕಿರಿಕಿರಿ ಮಾಡು. to irritate. ವಾ: ಹೈದ ಕಿರಿಕ್ ಮಾಡಿಕಂಡಿರ್‌ದು.

ಕಿರಿಚಿಕಂಡ್ /*kiricikaṇḍi*/ ನಾ. 1. ಕಿರುಚುತ್ತಾ, 2. ಅರಚುತ್ತಾ. 1. shouting, 2. screaming. ವಾ: ಕಿರಿಚಿಕಂಡ್ ಬಾತ್ ಹೈದ ಎಂಉಗ್ಗಪ್‌ಪ್‌ನೆ?

ಕಿರಿಟ್ /*kiriṭi*/ ನಾ. ಗಟ್ಟಿ ನೆಗಡಿ. severe cold. ವಾ: ಕಜ್ಜಿ ಮೇಲೆನ ಕಿರಿಟ್ ತೆಗಿ. ಪ: ಕಿರ್‌ಂಟ್(ತು)

ಕಿರಿಬಾಗ /*kiriba:ga*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಬಾಳುಗೋಡು ಗ್ರಾಮದ ಜಾಗ. 1. family, 2. lineage, 3. a locality in Balagodu village in Sullia Taluk of Dakshina Kannada District.

ಕಿರಿಮಗ /*kirimaga*/ ನಾ. ಸಣ್ಣಮಗಳು. the youngest daughter. ವಾ: ಇದ್ ನಮ್ಮ ಕಿರಿಮಗ.

ಕಿರಿಮಣ್ಣ /*kirimaṇṇa*/ ನಾ. ಸಣ್ಣಮಗ. the youngest son. ವಾ: ಇಂವ ಮನೆಗೆ ಸಣ್ಣಮಣ್ಣ.

ಕಿರುಗೋಳಿ ಮರ /*kirugo:ḷi mara*/ ನಾ. ಒಂದು ಜಾತಿಯ ಕಾಡು ಮರ. a forest tree. ವಾ: ಕಿರುಗೋಳಿ ಮರತೇಳ್‌ದು ಒಂದ್ ಜಾತಿನ ಕಾಡ್‌ಮರ.

ಕಿರುಬೆದ್ರ್ /*kiru bɛrdi*/ ನಾ. ನೆಟ್ಟು ಬೆಳೆಸುವಂತಹ ಬಿದಿರು. cultivated bamboo. ವಾ: ಕಿರುಬೆದ್ರ್ ನೆಟ್ಟರೆ ಲಾಬ.

ಕಿರ್ ಕೋಳಿ /*kir ko:ḷi*/ ನಾ. ಕಾಡು ಕೋಳಿ. a wild hen. ವಾ: ಕಿರ್ ಕೋಳಿನ ಸಿಡಿ ಹಾಕಿ ಹಿಡೆದು. ಪ: ಕಿರ್ಕೋಳಿ

ಕಿರ್‌ಂಟ್ /*kiriṇṭi*/ ನಾ. ಗಾಯದ ಮೇಲಿನ ಒಣಗಿದ ಭಾಗ. the dried part of the wound. ವಾ: ಬೇನೆ ಗುಣ ಆಕೆಮುಂದೆ ಕಿರ್‌ಂಟ್ ಎಳ್ಕ್‌ಸ್‌ಬಡ.

ಕಿರ್‌ಕ /*kirika*/ ನಾ. 1. ಚಿಕ್ಕ ಜಾತಿಯ ಚಿರತೆ, 2. ದರ್ಗ್ ಹುಲಿ. 1. a cheetah, 2. a leopard. ವಾ: ಕಿರ್‌ಕ ಕಾಡ್‌ಲಿ ಕಾಂಬಕೆ ಸಿಕ್ಕುದು.

ಕಿರ್‌ಕಂಯಿ /*kiri kanyi*/ ನಾ. ಸ್ವಲ್ಪ ಕಹಿ. little bitter. ವಾ: ನೀರ್ ಸೋಂತೆ ಕಿರ್ ಕಂಯಿ ಬಂದದೆ.

ಕಿರ್ಕೋಟ /*kirkɔṭa*/ ನಾ. 1. ಗಿಡುಗ ಜಾತಿಯ ಒಂದು ಸಣ್ಣ ಪಕ್ಷಿ, 2. ಕೋಳಿ ಮರಿಗಳನ್ನು ಬೇಟೆಯಾಡುವ ಚಿಕ್ಕ ಗಿಡುಗ. 1. a bird belonging to the family of hawk, 2. a hawk. ವಾ: ಕಿರ್ಕೋಟ ಕೋಳಿನ ಹಿಡ್‌ತ್.

ಕಿರ್ಕ್ /*kirki*/ ನಾ. ಸದಾ ಕಿರಿಕಿರಿ ಮಾಡುವ ವ್ಯಕ್ತಿ. an annoying person. ವಾ: ಹೋದಲೆಲ್ಲ ಕಿರ್ಕ್ ಮಾಡಿಕಂಡ್ ಬಂದದೆ.

ಕಿರ್ಗಿಜ /*kirgija*/ ನಾ. ಗಿಜೆಹುಳ. a variety of worm.

ಕಿರ್ಗೆ /*kirgɛ*/ ನಾ. 1. ತುಂಡು ಸೀರೆ, 2. ಚಿಕ್ಕ ಸೀರೆ, 3. ಕಿರಿಗೆ, 4. ಬಾಲಕಿಯರು ಉಡುವ ಸೀರೆ. 1. a short saree 2. a small saree, 3. a short saree 4. children's saree. ವಾ: ಸಣ್ಣ ಗೂಡೆಗ ಕಿರ್ಗೆ ಉಟ್ಟ್ ಕಂಬದು.

ಕಿರ್ಚಾಟ /*kirca:ṭa*/ ಕ್ರಿ. 1. ಕೂಗಾಟ, 2. ಅರಚಾಟ.

1. shouting, 2. screaming. ವಾ: ನಿನ್ನ ಕಿರ್ಚಾಟಿಕೆ ಎಲ್ಲೊವು ಓಡಿ ಬರೊಕು.

ಕಿರ್ಚ್‌ /*kirci*/ ಕ್ರಿ. ಕಿರುಚು. to scream. ವಾ: ಜೋರಾಗಿ ಕಿರ್ಚ್‌. ಪ: ಕಿರ್ಚುದು – ಕಿರುಚುವುದು; ಕಿರ್ಚಕಾಯಿತ್ – ಕೂಗಬಹುದಿತ್ತು

ಕಿರ್‌ಟ್[1] /*kiriṭi*/ ನಾ. ಮೂಗಿನ ಹೊಲಸು. boogers. ವಾ: ಮೂಕ್‌ಂದ ಕಿರ್‌ಟ್ ತೆಗಿ.

ಕಿರ್ಟ್[2] /*kirṭi*/ ನಾ. ಕಜ್ಜಿ ಮೇಲಿನ ಒಣಗಿದ ಕೀವು. dried pus on scabies. ವಾ: ಕಿರ್ಟ್ ನ ಜಿಂಟ್ಬಡ. ಪ: ಕಿರ್‌ಂಟ್

ಕಿರ್ದದೆ /*kirdadɛ*/ ನಾ. 1. ಹಲ್ಲು ಬಿಡು, 2. ಹಲ್ಲು ತೆರೆ, 3. ಹಲ್ಲು ಕಿರಿ. 1. showing one's teeth, 2. opening the mouth showing teeth, 3. display teeth. **ಹಲ್ಲ್ ಕಿರ್ದದೆ ಕುರೆನಂಗೆ(ಗಾ).** ವಾ: ಹಲ್ಲ್ ಕಿರ್ದದೆ.

ಕಿರ್ನಾಲಿಗೆ /*kirna:ligɛ*/ ನಾ. 1. ಕಿರುನಾಲಿಗೆ, 2. ಚಿಕ್ಕ ನಾಲಗೆ. 1. epiglottis, 2. a flap of tissue located in the throat which stops food from entering the windpipe. ವಾ: ಕಿರ್ನಾಲಿಗೆಲಿ ಹುಣ್ಣಾಗುಟು.

ಕಿರ್‌ಬ /*kiriba*/ ನಾ. 1. ಸಣ್ಣ ಜಾತಿಯ ಚಿರತೆ, 2. ಹುಲಿಯ ಜಾತಿಗೆ ಸೇರಿದ ಒಂದು ಕಾಡುಮೃಗ. 1. a leopard, 2. a wild animal belonging to the family of tigers. ವಾ: ಕಿರ್‌ಬ ಕಾಡ್‌ಲಿ ಇದ್ದದೆ.

ಕಿರ್ಮನೆ /*kirmanɛ*/ ನಾ. 1. ಸಣ್ಣಮನೆ, 2. ಕಿರಿದಾದ ಮನೆ. 1. a small house, 2. a tiny house. **ಅಪ್ಪನ ಅರಮನೆಂದ ಗಂಡನ ಕಿರ್ಮನೆ ಲೇಸ್(ಗಾ).** ವಾ: ಇದ್ ಬಾರಿ ಕಿರ್ಮನೆ ಆತ್.

ಕಿರ್‌ಮೀಸೆ /*kiri mi:sɛ*/ ನಾ. ಚಿಕ್ಕ ಮೀಸೆ. a thin moustache. ವಾ: ಹೈದಂದ್ ಕಿರ್ ಮೀಸೆ ನೋಡಿಯ.

ಕಿರ್ಲಾಯ /*kirla:ya*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅರಂತೋಡು ಗ್ರಾಮದ ಜಾಗ. 1. family, 2. lineage, 3. a locality in Arantodu village in Sullia Taluk of Dakshina Kannada District.

ಕಿರ್ಲಾಯ ಪೂಜಾರಿಮನೆ /*kirla:ya pu:ja:rimane*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅರಂತೋಡು ಸಮೀಪದ ಜಾಗ. a locality in Aranthodu village in Sullia Taluk of Dakshina Kannada District.

ಕಿಲಂಬು /*kilambu*/ ನಾ. 1. ಕಿಲುಬು. verdigris – encrustation formed on copper/brass. ವಾ: ಹಿತ್ತಾಳೆ ಚೊಂಬು ಕಿಲಂಬು ಬುಟ್ಟುಟು.

ಕಿಲಾಂಬೆ /*kila:mbɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕಿಲಾಡಿ /*kila:ḍi*/ ನಾ. 1. ತುಂಟ, 2. ಪೋಲಿ. 1. naughty, 2. risqué. ವಾ: ಅಂವ ಬಾರಿ ಕಿಲಾಡಿನ ಹೈದ.

ಕಿಲಾತ್ ಕಡ್ಡಿ /*kila:tɨ kaḍḍi*/ ನಾ. ಕಿರಾತ ಕಡ್ಡಿ. King of bitters, Kalmegh. ವಾ: ಕಿರಾತ ಕಡ್ಡಿ ಸೊಪ್ಪು ಬಾರಿ ಕೈಂಯಿ.

ಕಿಲೆಂಬಿ /*kilɛmbi*/ ನಾ. ತುಕ್ಕು. to rust. ವಾ: ತಾಮ್ರದ ಪಾತ್ರಕೆ ಕಿಲೆಂಬಿ ಹಿಡ್ದುಟು. ಪ: ತುಕ್ಕುಹಿಡಿ – ಜಂಗು ತಿನ್ನು, ದೋಷಯುಕ್ತವಾಗು;

ಕಿಲೆಂಬು /*kilɛmbu*/ ನಾ. 1. ಕಿಲುಬು, 2. ಜಿಡ್ಡಿನಕೊಳೆ. 1. verdigris – encrustation formed on copper/brass, 2. grime caused by grease. ವಾ: ಎಣ್ಣೆ ಚರ್‌ಕ್ ಕಿಲೆಂಬು ಬುಟ್ಟುಟು.

ಕಿಲೇಂಬಿ /*kile:mbi*/ ನಾ. ತಾಮ್ರದ ಪಾತ್ರೆಯ ತಳ ಭಾಗದ ಕಲಾಯಿ ಹೋದರೆ ಪಾತ್ರೆಯ ತಳ ಹಿಡಿಯುವುದು. ತಳ ಹಿಡಿಯದಂತೆ ಕಲಾಯಿ ಹಾಕಿಸುತ್ತಾರೆ. coating copper utensils so that they do not get oxidised and rusted. ವಾ: ತಾಂಬ್ರದ ಪಾತ್ರಗಳಿಗೆ ಕಲಾಯ ಹಾಕದಿದ್ದರೆ ಕಿಲೇಂಬಿ ಬುಟ್ಟದೆ.

ಕಿವುಂಚಿ /*kivuŋci*/ ಕ್ರಿ. 1. ಕಿವುಚಿ, 2. ಹಿಂಡಿ. 1. squeeze, 2. squash. ವಾ: ಹುಣ್ಸುಳಿ ರಸನ ಕಿವುಂಚಿ ರಸ ತೆಗೆಕು.

ಕಿವ್ಚುದು /*kivcudu*/ ಕ್ರಿ. 1. ಹಿಚುಕುವುದು, 2. ಹಿಂಡುವುದು, 3. ಹಿಸುಕುವುದು. 1. to squeeze, 2. to squash, 3. to press. ವಾ: ಕೂಸಿಗೆ ಕೊಡಿಕೆ ಅನ್ನನ ಕಿವ್ಚುದು.

ಕಿವ್ರ್ /*kivri*/ ನಾ. 1. ಮೀನಿನ ಕಿವಿಯ ಭಾಗ, 2. ಕಿವಿರು,

3. ಮೀನು ಮೊದಲಾದ ಜಲಚರಗಳ ಶ್ವಾಸಾಂಗ. 1. gills of fish, 2. the gills, 3. respiratory organ of fish and other acquatic creatures. ವಾ: ಮೀನ್ ಸುದ್ದ ಮಾಡಿಕನ ಕಿವ್ರ್ ತೆಗಿಯಕು.

ಕಿಸುವೆ /*kisuvɛ*/ ನಾ. ನೆಟ್ಟು ಬೆಳೆಸುವಂತಹ ಬಿದಿರು. cultivated bamboo. ವಾ: ಮಾತಾಡಿಕನ ಎಡೆಲಿ ಕಿಸುವೆ ಬೇಡ.

ಕಿಸೆ /*kisɛ*/ ನಾ. ಜೇಬು. pocket attached to the shirt or pant. ವಾ: ಕಿಸೆಲಿ ಒಂದ್ ರುಪಯಿ ಇಲ್ಲೆ.

ಕಿಸ್ಗಾರ /*kisga:ra*/ ನಾ. 1. ಕಡುಗೆಂಪು ಬಣ್ಣದ ಹೂವು ಬಿಡುವ ಒಂದು ಗಿಡ, 2. ಕೇಪಲಗಿಡ. 1. flowering plant with dark red flowers, 2. Jungle Geranium, Flame of the woods. ವಾ: ಕಿಸ್ಗಾರ ಹೂವ್.

ಕಿಸ್ತ್ /*kistɨ*/ ನಾ. 1. ಭಾಗ, 2. ಕಂತು, 3. ಕಂತಿನ ಮೂಲಕ ಪಾವತಿ ಮಾಡುವಿಕೆ, 4. ಕಂದಾಯದ ಹಣ. 1. a part, 2. an episode, 3. an installment, 4. tax money. ವಾ: ಕಿಸ್ತ್ ಕಟ್ಟೊಕು.

ಕಿಳಿಕಿಳಿ /*kiḷikiḷi*/ ಕ್ರಿ. ಕಚಗುಳಿ. tickling sensation. ವಾ: ಕಿಳಿಕಿಳಿ ಮಾಡಿ ಕೂಸುನ ನೆಗಾಡ್‌ಸುದು.

ಕಿಳ್ಳಿ /*kiḷḷi*/ ನಾ. ದ್ರವರೂಪದ ಆಹಾರ ಹೊರ ಚೆಲ್ಲದಂತೆ ಬಾಳೆ ಎಲೆಯ ಮೂಲೆಗಳನ್ನು ಕಟ್ಟುವುದು, ಹಾಳೆಯ ಎರಡೂ ಬದಿಗೆ ಕಟ್ಟಿದಾಗ ಬರುವ ರೂಪ. a cup/a bowl made of plantain leaf. ವಾ: ಮೊದುವೆ ಜಂಬರಲಿ ಪಾಯ್ಸ ತಿಂಬಕೆ ಬಾಳೆಲೆನ ಕಿಳ್ಳಿ ಕಟ್ಟುದು. ಪ: ಹಾಳೆಕಿಳ್ಳಿ, ಬಾಳೆ ಎಲೆ ಕಿಲ್ಲಿ

ಕಿಳ್ಳ್/*kiḷḷɨ*/ ಕ್ರಿ. 1. ಕೀಳು, 2. ಕಿತ್ತು ತೆಗೆ, 3. ಕಸಿದುಕೊ. 1. to pull, 2. to pull out, 3. to snatch. ವಾ: ಮುಳ್ಳು ದೈನ ಕಿಳ್ಳ್. **ಕಿಳ್ಳುದು** /*kiḷḷudu*/ 1. ಕೀಳುವುದು, 2. ಕಿತ್ತು ತೆಗೆಯುವುದು. 1. to pull, 2. to pull out. ವಾ: ಕಾಡ್ ದೈನ ಕಿಳ್ಳುದು.

ಕೀಂಚ್‌ರ್ ಮರ /*ki:nciri mara*/ ನಾ. ಒಂದು ಜಾತಿಯ ಕಾಡು ಮರ. a forest tree. ವಾ: ಕೀಂಚ್‌ರ್ ಮರ ಒಂದ್ ಕಾಡ್ ಮರ. ಪ: ಕೀಂಚ್‌ರ್ ಹಣ್ಣ್

ಕೀಂಜಿ /*ki:ŋji*/ ನಾ. 1. ಕಣ್ಣೊಳಗಿನ ಪಿಚ್ಚು, 2. ಪಿಸುರು, 3. ಕಣ್ಣಿನ ಗೀಜು. 1. crusty eye, 2. rheum, 3. eye boogers. ವಾ: ಕಣ್ಣ್‌ನ ಕೀಂಜಿ ತೆಗಿ.

ಕೀಂತ್[1] /*ki:ntɨ*/ ನಾ. ಎಲೆ ಅಥವಾ ಬಟ್ಟೆಯ ತುಂಡು. a piece of leaf or cloth. ವಾ: ಕೀಂತ್ ಬಾಳೆಲೆ.

ಕೀಂತ್[2] /*ki:ntɨ*/ ಕ್ರಿ. 1. ಹರಿಯುವುದು, 2. ಬಾಳೆ ಎಲೆ ಹರಿದಿರುವುದು. 1. to tear, 2. torn plantain leaf. ವಾ: ಗಾಳಿಗೆ ಆಡಿ ಆಡಿ ಬಾಳೆಲೆ ಎಲ್ಲ ಕೀಂತ್ ಕೀಂತ್ ಆಗುಟು. ಪ: ಕೀಂತ್ ಕೀಂತಾಗಿ – ಹರಿದು ಛಿದ್ರವಾಗುವುದು; ಚೀಂತ್, ಚೀತ್(ತು)

ಕೀಂತ್[3] /*ki:ntɨ*/ ನಾ. ಕಾಲುಭಾಗ. one fourth. ವಾ: ಒಂದ್ ಕೀಂತ್ ರೊಟ್ಟಿ.

ಕೀಂತ್[4] /*ki:ntɨ*/ ನಾ. 1. ಕೀಸು, 2. ಸಣ್ಣಗೆ ಹೆರೆ, 3. ಕೆತ್ತು, 4. ಉಜ್ಜಿ ಅಗಲ ಮಾಡು. 1. to smoothen the surface, 2. to remove the layer, 3. to sculpt, 4. to widen something by rubbing. ವಾ: ಕಬ್ಬ್‌ನ ಕೀಂತ್.

ಕೀಜಣ್ /*ki:jaṇɨ*/ ನಾ. ಮಲೆನಾಡಿನ ನದಿ/ಹೊಳೆಗಳಲ್ಲಿ ಕಂಡುಬರುವ ಒಂದು ಜಾತಿಯ ಮೀನು. a fish found in the malnad rivers. ವಾ: ಕೀಜಣ್ ಹೊಳೆಗಳ್‌ಲಿ ಇರೋ ಮೀನ್.

ಕೀಜನ /*ki:jana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೀಜಿ /*ki:ji*/ ನಾ. 1. ಅಲ್ಯೂಮಿನಿಯಂ, 2. ಕೀಜಿ ಪಾತ್ರೆ. 1. aluminium utensils, 2. aluminium cookware. ವಾ: ಅಡ್‌ಗೆ ಮಾಡಿಕೆ ಕೀಜಿ ಪಾತ್ರಗಳ ಬಳ್‌ಸುವೆ.

ಕೀಟ್ಲೆ /*ki:ṭlɛ*/ ಕ್ರಿ. 1. ಚೇಷ್ಟೆ, 2. ತೊಂದರೆ ಕೊಡು, 3. ಕಿರಿಕಿರಿ ಮಾಡು. 1. mischief, 2. to create nuisance, 3. to annoy. ವಾ: ನಾಯಿಗೆ ಕೀಟ್ಲೆ ಮಾಡ್ಬಡ ತಿರ್‌ಗಿ ಕಚ್ಚುದು.

ಕೀರಿ /*ki:ri*/ ನಾ. 1. ಮುಂಗುಸಿ, 2. ಮುಂಗುಲಿ. 1. a mongoose, 2. Herpestidae-a mongoose. ವಾ: ಕೀರಿ ಹಾವ್‌ನ ಕೊಂದತ್.

ಕೀರೆ ಸೊಪ್ಪ್ /*ki:re sɔppɨ*/ ನಾ. 1. ಒಂದು ಬಗೆಯ ತರಕಾರಿ ಸೊಪ್ಪು, 2. ಹರಿವೆ ಸೊಪ್ಪು. 1. green leafy vegetable, 2. amaranthus. ವಾ: ಕೀರೆ ಸೊಪ್ಪ್ ಗೈಪು ಮಾಡ್‌ದ್.

ಕೀರ್ತಿ /*ki:rti*/ ನಾ. 1. ಯಶ, 2. ಕೀರುತಿ, 3. ಖ್ಯಾತಿ, 4. ದಕ್ಷ ಪ್ರಜಾಪತಿಯ ಮಗಳು ಮತ್ತು ಧರ್ಮನ ಹೆಂಡತಿ, 5. ಹೆಸರು. 1. success, 2. recognition, 3. popularity, 4. proficient, 4. a daughter of Daksha Prajapati and the wife of Dharma, 5. a name. ವಾ: ಆಟ ಆಡಿ ಗೆದ್ದ್ ಬಂದ್ ಊರಿಗೆ ಕೀರ್ತಿತ ತಕಂಡ್ ಬಾ.

ಕೀಲಂಗೋಡಿ /*ki:laŋgo:ḍi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕಳಂಜ ಗ್ರಾಮದ ಜಾಗ. a locality in Kalanja village in Sullia Taluk of Dakshina Kannada District.

ಕೀಲಾರು /*ki:la:ru*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಸಂಪಾಜೆ ಗ್ರಾಮದ ಜಾಗ. 1. family, 2. lineage, 3. a locality in Sampaje village in Sullia Taluk of Dakshina Kannada District.

ಕೀಲಾರ್ಕಜೆ /*ki:la:rkajɛ*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ನೆಲ್ಲೂರು ಕೆಮ್ರಾಜೆ ಗ್ರಾಮದ ಜಾಗ. a locality in Nelluru Kemraje village in Sullia Taluk of Dakshina Kannada District.

ಕೀಲು /*ki:lu*/ ನಾ. ಸೌದೆ ಅಟ್ಟಿ. piling the firewood/ stacked firewood. ವಾ: ಕೀಲುಂದ ನಾಕ್ ಸೊವುದೆನ ತಂಬ.

ಕೀಲೆ¹ /*ki:lɛ*/ ನಾ. 1. ಗೊಂಚಲು, 2. ಗುಚ್ಛ, 3. ಜೊಂಪೆ. 1. a bunch, 2. a bouquet, 3. a bundle. ವಾ: ಅಡ್‌ಕೆ ಕೀಲೆನ ನೋಡೊಮ್ಮೆ.

ಕೀಲೆ² /*ki:lɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೀಲ್ /*ki:li*/ ನಾ. 1. ಕೀಲ, 2. ಸಂದು, 3. ಗುಟ್ಟು. 1. joints 2. a corner, 3. secret. ವಾ: ಕೈ ಕಾಲ್‌ದ್ ಕೀಲ್ ಬೇನೆ.

ಕೀಸ್ /*ki:sɨ*/ ಕ್ರಿ. ಗೀಸು. to smoothen. ವಾ: ಅಂವ ಕೊಟ್ಟ್‌ನ ತಳ್ಳೆನ ಕೀಸಿ ನೈಸ್ ಮಾಡ್ತ್. **ಕೀಸುದು** /*ki:sudu*/ 1. ಸೀಳುವುದು, 2. ಸಣ್ಣಗೆ ಹೆರೆಯುವುದು, 3. ಕೆತ್ತು ವುದು. 1. to split, 2. to peel something off, 3. to chisel. ವಾ: ಕಬ್ಬ್‌ನ ಕೀಸುದು ತಿಂಬೊನತ. ಪ: ಗೀಸು(ತು)

ಕೀಳ್ /*ki:ḷɨ*/ ಕ್ರಿ. 1. ಕೀಳು, 2. ಕೆಳಮಟ್ಟದ. 1. pluck, 2. of a lower rank. ವಾ: ಬಾರಿ ಕೀಳಾಗಿ ಕಂಡವೆ. ಪ: ಕೀಳೊಕು – ಕೀಳಬೇಕು

ಕುಂಕುಮ /*kuŋkuma*/ ನಾ. 1. ಕುಂಕುಮ, 2. ಮುತ್ತೈದೆಯರು ಹಣೆಗೆ ಹಚ್ಚಿಕೊಳ್ಳುವ ಕೆಂಪು ತಿಲಕ, 3. ಕೇಸರ. 1. vermilion, 2. red turmeric powder, 3. saffron. ವಾ: ಹೆಣ್ಮಕ್ಕಳಿಗೆ ಹಣೆಗೆ ಕುಂಕುಮನೆ ಲಕ್ಷಣ.

ಕುಂಕುಮ ಮರ /*kuŋkuma mara*/ ನಾ. ಮರಗಳ ವಿಧಗಳು. types of trees. ವಾ: ಕುಂಕುಮ ಕಾಯಿ ಬಿತ್ತ್ ರಕ್ತ ಬಣ್ಣ.

ಕುಂಕುಮನ ಬೊಟ್ಟ್ /*kuŋkumana boṭṭi*/ ನಾ. ಕುಂಕುಮದ ಬೊಟ್ಟು. a red circular sticker put on the forehead. ವಾ: ಕುಂಕುಮನ ಬೊಟ್ಟ್ ನ ಹಾಕೊಕು.

ಕುಂಚಡ್ಕ /*kuɲcaḍka*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಆಲೆಟ್ಟಿ ಗ್ರಾಮದ ಜಾಗ. 1. family, 2. lineage, 3. a locality in Aletti village in Sullia Taluk of Dakshina Kannada District.

ಕುಂಜತ್ತಾಡಿ /*kuɲjatta:ḍi*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಬಳ್ಪ ಗ್ರಾಮದ ಜಾಗ. 1. family, 2. lineage, 3. a locality in Balpaa village in Sullia Taluk of Dakshina Kannada District.

ಕುಂಜಿಲನ /*kuɲjilana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕುಂಟ /*kuṇṭa*/ ನಾ. 1. ಊನ ಕಾಲಿನ ಪುರುಷ. a lame person. **ಕುಂಟಂಗೆ ಎಂಟ್ ಚೇಷ್ಟೆ(ಗಾ).** ವಾ: ಕುಂಟ ಚೊಟ್ಟ ಹಾಕಂಡ್ ಕರೆಕೆ ಬಾತ್. **ಕುಂಟಿಕಂಡ್** /*kuṇṭikaṇḍ*/ ಕುಂಟಿಕೊಂಡು. limping. ವಾ: ನೀ ಯಾಕೆ ಹಿಂಗೆ ಕುಂಟಿಕಂಡ್ ಬಾದು.

ಕುಂಟಿ /*kuṇṭi*/ ನಾ. ಊನ ಕಾಲಿನ ಸ್ತ್ರೀ. a limping woman. ವಾ: ಕುಂಟಿ ಬಂದದೆ ಅಲ್ಲಿ.

ಕುಂಟಿಕಾನ /*kuṇṭika:na*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಮರಪಡ್ನೂರು ಗ್ರಾಮದ ಜಾಗ. 1. family, 2.

lineage, 3. a locality in Amarapadnuru village in Sullia Taluk of Dakshina Kannada District.

ಕುಂಟಿಗೆ ನಿಲ್ಲುದು /*kuncigɛ nilludu*/ ನಾ. ಸತ್ತವರ ಕಾರ್ಯ ಶಾಸ್ತ್ರ ಮಾಡಲು ನಿಲ್ಲುವುದು. performing the last rites. ವಾ: ಸತ್ತವರ ಕಾರ್‌ಯ ಮಾಡಿಕೆ ಕುಂಟಿಗೆ ನಿಲ್ಲುದು. ಪ: ಕುಂಟಿಗೆ ನಿತ್ತವ –

ಸತ್ತವರ ಕಾರ್ಯ ಶಾಸ್ತ್ರ ಮಾಡಲು ನಿತ್ತವನು

ಕುಂಟಿಗೆದಾರ /*kuṉṯigɛda:ra*/ ನಾ. ಕೊಡಗಿನ ಅರೆಭಾಷೆ ಗೌಡರಲ್ಲಿ ದೀಕ್ಷೆಗೆ ನಿಲ್ಲುವ ಮೃತನ ಮಗ, ಈತ ಸಾವಿನಿಂದ ಹಿಡಿದು ತಿಥಿಯವರೆಗೆ ಕೆಲವು ನಿಯಮಗಳನ್ನು ಪಾಲಿಸಬೇಕಾಗುತ್ತದೆ. son of the dead person who performs the obsequies. ವಾ: ಕುಂಟಿಗೆದಾರ ಹೆಗ್‌ಲ್ ಮೇಲೆ ಅರ್‌ಸಣ ಮಿಸ್ರ ಮಾಡ್ದ ಅಕ್ಕಿನ ಕಂಚ್ಚ್‌ನ ಬಟ್ಲ್‌ನ ಹೊತ್ಕಂಡ್ ಹೋದು.

ಕುಂಟಿಗೆಯವ /*kuṉṯigɛyava*/ ನಾ. ಸತ್ತವರ ಕಾರ್ಯ ಶಾಸ್ತ್ರ ಮಾಡಲು ನಿಂತವರನ್ನು ಕರೆಯುವುದು. a lead mourner, someone who performs the obsequies. ವಾ: ಕುಂಟಿಗೆಯವನ ಮೆಟ್ಟ್‌ಲಿ ಈರ್‌ಮುಂಡ ಹಾಕ್‌ಸಿ ಕೂರ್‌ಸುವೆ. ಪ: ಕುಂಟುಗೆ – ಸತ್ತವನ ಕರ್ಮ ಮಾಡಲು ನಿಲ್ಲುವವನು

ಕುಂಟಿನ ವಸ್ತ್ರ ಹಾಸಿ /*Kuṉṯina vastra ha:si*/ ನಾ. ಮರಣೋತ್ತರ ಕ್ರಿಯೆಯಲ್ಲಿ ಬಳಸುವ ಬಿಳಿ ಬಟ್ಟೆ. white clothes used while performing last rites. ವಾ: ಸುದ್ದಲಿ ದೂಪೆ ಹಕ್ಕಲೆ ಕುಂಟಿನ ವಸ್ತ್ರ ಹಾಸಿ ಅದರ ಮ್ಯಾಲೆ ಈರ್‌ಮುಂಡ ಹಾಕಿ ಕುದ್ರುದು.

ಕುಂಟಿನಿ /*kuṉṯini*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕೊಡಿಯಾಲ ಗ್ರಾಮದ ಜಾಗ. a locality in Kodiyala village in Sullia Taluk of Dakshina Kannada District.

ಕುಂಟು ಚೀಪೆ /*kuṉṯu ci:pɛ*/ ನಾ. ಗುಡಿಸಿ ಸಣ್ಣದಾದ ಪೊರಕೆ. a broom that has become smaller due to dusting. ವಾ: ಕುಂಟು ಚೀಪೆಲಿ ಗುಡ್‌ಸುದಾದ್‌ರು ಹೆಂಗೆ? ಪ: ಕುಂಟು ಮಾಯ್ಪು – ಗುಡಿಸಿ ಸಣ್ಣದಾದ ಪೊರಕೆ

ಕುಂಟು ನೆಪ /*kuṉṯu nɛpa*/ ನಾ. 1. ಸಕಾರಣವಲ್ಲದ ಸಮರ್ಥನೆ, 2. ಸಣ್ಣ ಪುಟ್ಟ ಕಾರಣ. 1. a silly reason, 2. silly justification. ವಾ: ಕೆಲ್‌ಸ ಮಾಡಿಕನ ಕುಂಟು ನೆಪ ಹೇಳಿಕಾಗದ್. **ಕುಂಟುನೆಪ ಹೇಳ್ತ್** /*kuṉṯunɛpa hɛ:ḻtɨ*/ ನೆಪ ಹೇಳುವುದು. 1. to give a reason, 2. to give an excuse. ವಾ: ಅಂವ ಎಲ್ಲದಕ್ಕು ಕುಂಟುನೆಪ ಹೇಳ್ತ್. ಪ: ನೆವನ ಪನ್ಪುನೆ(ತು)

ಕುಂಟು ನೇರಳೆ /*kuṉṯu nɛ:raḻɛ*/ ನಾ. ಹಣ್ಣು ನೇರಳೆ ಬಣ್ಣದಲ್ಲಿದ್ದು, ಇದು ಸಣ್ಣ ಮಕ್ಕಳಿಗೆ ಔಷಧಿಯಾಗಿ ಬಳಸುತ್ತಾರೆ. a purple fruit used as a medicine for children. ವಾ: ಕುಂಟು ನೇರಳೆನ ಮೊದ್ದಿಗೆ ಬಳ್‌ಸುವೆ. ಪ: ಕುಂಟುನೇರ್ಲ್ – ಸಣ್ಣ ಜಾತಿಯ ನೇರಳೆ

ಕುಂಟು ಬದ್ರ /*kuṉṯu badra*/ ನಾ. 1. ಕಿರು ಬೆರಳು, 2. ಕುಳ್ಳ ಶರೀರ. 1. small finger/pinky, 2. short stature. ವಾ: ಆ ಹಸ್‌ರ್ ಹಾವ್ ಕುಂಟು ಬದ್ರನಷ್ಟೆ ದಪ್ಪ ಇದ್ದದ್.

ಕುಂಟುಕಾಡು /*kuṉṯuka:ḍu*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ತೊಡಿಕಾನ ಗ್ರಾಮದ ಜಾಗ. 1. family, 2. lineage, 3. a locality in Todikana village in Sullia Taluk of Dakshina Kannada District.

ಕುಂಟುಮಾಯ್ಪು /*kuṉṯuma:ypu*/ ನಾ. ಚಿಕ್ಕದಾದ ಹಿಡಿಸೂಡಿ. worn out broom. ವಾ: ಕುಂಟುಮಾಯಿಪುನ ಮೂಲೆಲಿ ಇಸ್.

ಕುಂಟೆ ನೇಗಿಲ್ /*kuṉṯɛ nɛ:giḻɨ*/ ನಾ. ನೇಗಿಲಿನ ವಿಧ. a variety of plough. ವಾ: ಕುಂಟೆ ನೇಗಿಲ್‌ನ ಕಟ್ಟೊಕು.

ಕುಂಟೆ ಮೆಣ್ಸ್ /*kuṉṯɛ mɛŋsɨ*/ ನಾ. 1. ಮೆಣಸಿನ ಒಂದು ವಿಧ, 2. ಕುಮಟಾ ಮೆಣಸು. 1. a variety of chilli 2, Kumta or Byadgi chilli. ವಾ: ಕುಂಟೆ ಮೆಣ್ಸ್‌ನ ವಣ್‌ಗಿಕೆ ಬಿಸ್‌ಲ್‌ಗೆ ಹಾಕಿದ್.

ಕುಂಟೆ[1] /*kuṉṯɛ*/ ನಾ. ದೊಡ್ಡ ಗಾತ್ರದ ಸೌದೆ. a heavy firewood. ವಾ: ಕುಂಟೆನ ನನ್ನಂದ ಹಂದಾಡ್‌ಸಿಕೆ ಬೊತ್.

ಕುಂಟೆ[2] /*kuṉṯɛ*/ ನಾ. ತಲೆಯಲ್ಲಿರುವ ದೊಡ್ಡ ಹೇನು. large lice found in the hair. ವಾ: ತಲೆಲಿ ಕುಂಟೆನ ನೋಡಿರೆ ಹೇಸಿಗೆಯಾದು. ಪ: ಕೊಟ್ಟೆ(ತು)

ಕುಂಟೆ[3] /*kuṇṭɛ*/ ನಾ. ಬೇಲಿ ಹಾರದ ಹಾಗೆ ದನಗಳ ಕುತ್ತಿಗೆಗೆ ಉದ್ದವಾದ ಮರದ ಸಣ್ಣ ಹಲಗೆಯನ್ನು ಕಟ್ಟುವುದು. a block of wood tied around the neck of cattle in order to stop them from jumping over the fence. ವಾ: ದನಗಳ ಕುತ್ತಿಗೆಗೆ ಕುಂಟೆ ಕಟ್ಟೊಕು.

ಕುಂಟ್ /*kuṇṭi*/ ಕ್ರಿ. 1. ಕುಂಟುವುದು, 2. ಕುಂಟುತ್ತಾ ಹೋಗು. 1. limping, 2. to limp and move around.

ಕುಂಟ್ ನಾಲಿಗೆ /*kuṇṭɨ na:ligɛ*/ ಕ್ರಿವಿ. 1. ಕಿರು ನಾಲಗೆ, 2. ಅಂಗುಳ್, 3. ಗಂಟಲ ಮೇಲಟ್ಟ, 4. ತಾಲು. 1. epiglottis, 2. a flap of tissue located in the throat which stops food from entering the windpipe, 3. a flap just above the larynx, 4. a cartilage behind the tongue. ವಾ: ಕುಂಟ್ ನಾಲಿಗೆಲಿ ಹುಣ್ಣಾದ್.

ಕುಂಟ್ ಮಾಯ್ಪು /*kuṇṭɨ ma:ypu*/ ನಾವಿ. ಚಿಕ್ಕದಾಗಿರುವ ಪೊರಕೆ. a worn out broom. ವಾ: ಕುಂಟ್ ಮಾಯ್ಪು ಕರಿಹೊಡೆಕೆ ಬೇಕಾದೆ, ಮತ್ತೆ ಮಾರಿ ನೀಕಿಕೆ ಬೇಕಾದೆ.

ಕುಂಟ್ಯಾನ /*kuṇṭya:na*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕುಂಡ /*kuṇḍa*/ ನಾ. ಕಚ್ಚುವಂತಹ ಒಂದು ಜಾತಿಯ ಕಪ್ಪು ಬಣ್ಣದ ಚಿಕ್ಕ ಇರುವೆ. a small black stinging ant. ವಾ: ಕುಂಡ ಕಚ್ಚಿರೆ ಬಾರಿ ಉರಿ, ಕೆಲು ಕಾಪಿ ದೈಲಿ ಬರಿ ಅದೇ ಇರ್‌ದು.

ಕುಂಡಪಿಜನ್[1] /*Kuṇḍɛ pijan*/ ನಾ. ಕಚ್ಚುವಂತಹ ಒಂದು ಜಾತಿಯ ಕಪ್ಪು ಬಣ್ಣದ ಚಿಕ್ಕ ಇರುವೆ. a small biting ant. ವಾ: ಕುಂಡೆ ಪಿಜನ್ ದೈಲಿ ಇದ್ದದೆ. ಪ: ಕುಂಡೆ ಪಿಜಿನ್(ತು)

ಕುಂಡಪಿಜಿನ್[2] /*kuṇḍa pijin*/ ನಾ. ಕಚ್ಚುವ ಕಪ್ಪು ಮತ್ತು ಕಂದು ಬಣ್ಣದ ಸಣ್ಣ ಜಾತಿಯ ಇರುವೆ. ಕಾಫಿ ಗಿಡ ಹಾಗೂ ಹಣ್ಣಿನ ಗಿಡಗಳಲ್ಲಿ ಕಂಡು ಬರುತ್ತವೆ. carpenter ants and fire ants. Usually found on coffe plants and fruit bearing plants. ವಾ: ಕುಂಡ ಪಿಜಿನ್‌ಂದಾಗಿ ಕಾಪಿದೈಗೆ ಕೈ ಹಾಕಿಕಾದುಲೆ.

ಕುಂಡಕೋಳಿ /*kuṇḍako:ḷi*/ ನಾ. ಒಂದು ಜಾತಿಯ ನೆಲದ ಹಕ್ಕಿ. Storks, large birds with long neck, living near the paddy fields. ವಾ: ಕುಂಡಕೋಳಿ ಕುಂಡೆ ಕುಸ್ಕಿಕಂಡ್ ಹೋತಿತ್. ಪ: ಕುಂಡಕೋರಿ(ತು)

ಕುಂಡಚ್ಚ /*kuṇḍacca*/ ನಾ. 1. ಅಳಿಲು, 2. ಇಣಿಚಿ, 3. ಅಳ್ಳಿಕುಂಚ. 1. a squirrel, 2. a rodent belonging to the family of Sciuridae, 3. a squirrel. **ಮಾವ ಮಾರೀಚ ಅಳಿಯ ಕುಂಡಚ್ಚ(ನು).** ವಾ: ಮರಲಿ ನೋಡ್ ಎಸ್ಟ್ ಕುಂಡಚ್ಚಗ.

ಕುಂಡಡ್ಕ /*kuṇḍaḍka*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಪೆರುವಾಜೆ ಗ್ರಾಮದ ಜಾಗ. 1. family, 2. lineage, 3. a locality in Peruvaje village in Sullia Taluk of Dakshina Kannada District.

ಕುಂಡತ /*kuṇḍata*/ ನಾ. 1. ಅಳಿಲು, 2. ಇಣಿಚಿ, 3. ಅಳ್ಳಿಕುಂಚ. 1. a squirrel, 2. a rodent belonging to the family of Sciuridae, 3. a squirrel. **ಹಂದಿ ಮಾಪ್ಲೆ ತಿಂಬಕಿಲ್ಲೆ, ಹೊನ್ನೆ ಸಿಕ್ಕಿರೆ ಕೊಡ್ತುಲ್ಲೆ, ಕುಂಡತ ಸಿಕ್ಕಿರೆ ಮೂರ್ ಪಾಲ್(ಗಾ).** ವಾ: ಕುಂಡತನ ಗೂಡ್ ಹದ್ದ್‌ನ ಗೂಡ್‌ನಸ್ಟೆ ವಿಶಾಲಲಿ ಇದ್ದದೆಗಡ ಬಂದದೆ. ಪ: ಕುಂಡತಂಗ – ಅಳಿಲುಗಳು; ಕುಂಡತನ – ಅಳಿಲನ್ನು; ಕುಂಡಚ್ಚ(ತು)

ಕುಂಡಪ್ಪಾರೆ /*kuṇḍappa:re*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮಂಡೆಕೋಲು ಗ್ರಾಮದ ಜಾಗ. a locality in Mandekolu village in Sullia Taluk of Dakshina Kannada District.

ಕುಂಡಾಡು /*kuṇḍa:ḍu*/ ನಾ. ಕೊಡಗು ಜಿಲ್ಲೆಯ ಪೆರಾಜೆ ಗ್ರಾಮದ ಜಾಗ. a locality in peraje village in of Kodagu District.

ಕುಂಡಿ /*kuṇḍi*/ ನಾ. 1. ನಿತಂಬ, 2. ಪಿರ್ರೆ, 3. ಕುಂಡೆ. 1. buttocks, 2. rump, 3. posterior. **ದೇವ್ರಿಗೆ ಕೊಡಿಕೆ ಮನ್ಸಿದ್ದರೆ ಕುಂಡಿಗೆ ಕುತ್ತಿ ಕೊಟ್ಟದೆ(ಗಾ).** ವಾ: ಕುಂಡಿಲಿ ಕುರ ಎದ್ದುಟು. ಪ: ಕುಂಡೆ ತೊರ್ಸುದು

ಕುಂಡಿಕೆ /*kuṇḍikɛ*/ ನಾ. ತಲಕಾವೇರಿಯಲ್ಲಿ ತುಲಾ ಸಂಕ್ರಮಣ ದಿನ ತೀರ್ಥೋದ್ಭವವಾಗುವ ಸ್ಥಳ. a spring from the fountain head in which sacred water gushes up on the day of Kaveri

Sankramana in Talakaveri. ವಾ: ತಲಕಾವೇರಿ ಕುಂಡಿಕೆಲಿ ಸಂಕ್ರಮಣದ ದಿನ ತೀರ್‌ತ ಬಾದು.

ಕುಂಡೆ ಹಬ್ಬ /*kuṇḍɛ habba*/ ನಾ. ಜೇನು ಕುರುಬರಿಗೆ ಸೋರೆ ಬುರುಡೆ ಅಗತ್ಯ. ಅವರ ವಿಸೇಸ ಹಬ್ಬ ಕುಂಡೆ ಹಬ್ಬ, ಆ ಹಬ್ಬದಲ್ಲಿ ಬುಂಡೆ ಆಡಿಸುತ್ತಾರೆ. ಬುಂಡೆ ಎಂದರೆ ಬುರುಡೆ. a festival celebrated in the community of Jenu kuruba. ವಾ: ದೇವ್ರಿಗೆ, ಮೊನ್ನರಿಗೆ ಬೈಕಂಡ್ ದುಡ್ಡು ವಸೂಲ್ ಮಾಡಿ, ಮತ್ತೆ ತಪ್ಪಾತ್‌ತ ಕ್ಷಮೆ ಕೇಳೊ ಹಬ್ಬನೆ ಈ ಕುಂಡೆ ಹಬ್ಬ, ಇದ್ ದಕ್ಷಿಣ ಕೊಡಗ್‌ನ ಬುಡಕಟ್ಟ್ ಜೆನ ಆಚರ್‌ಸೊ ಹಬ್ಬ.

ಕುಂಡೆ¹ /*kuṇḍɛ*/ ನಾ. 1. ಪೃಷ್ಠ, 2. ತಿಕ, 3. ನಿತಂಬ, 4. ಕುಂಡಿ. 1. buttocks, 2. rump, 3. posterior, 4. buttock. **ಕೆಲಸ ಇಲ್ಲದಂವ ಕೂಸ್‌ನ ಕುಂಡೆ ಕೆತ್ತಿತ್ ಗಡ(ಗಾ). ಕುಂಡೆಗೆ ಚವುಳಿ ಕಚ್ಚಿದಾಂಗೆ(ನು).** ವಾ: ಅಂವ ಕುಂಡೆ ಕೆರ್‌ಕಣ್ತ್.

ಕುಂಡೆ² /*kuṇḍɛ*/ ನಾ. ಕಚ್ಚುವ ಕೆಂಬಣ್ಣದ ಇರುವೆ. red ant. ವಾ: ಕುಂಡೆ ಕೆಂಚ್ ಬಣ್ಣಲಿ ಇರ್‌ದು.

ಕುಂಡೆಡಿಗೆ /*kuṇḍɛḍigɛ*/ ನಾ. 1. ಕುಂಡಿ ಕೆಳಗೆ, 2. ನಿತಂಬದ ಕೆಳಗೆ. below the buttocks. ವಾ: ನೆಲಲಿ ಕುದ್ರ್‌ಕನ ಕುಂಡೆಡಿಗೆ ಅರ್ವೆ ಹಾಕ.

ಕುಂಡೋಳಿಂಜ /*kuṇḍo:ḷiŋna*/ ನಾ. ಲಕ್ಷ್ಮೀ ಚೇಳು. a scorpion. ವಾ: ಕುಂಡೋಳಿಂಜ ಕಚ್ಚಿರೆ ರಕ್ತ ಉಚ್ಚೆ ಹೋದೆಗಡ.

ಕುಂಡ್ಯಾನ /*kuṇḍya:na*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕುಂತಿನಡ್ಕ /*kuntinaḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಸುಳ್ಯ ನಗರದ ಜಾಗ. a locality in Suḷya Nagara village in Sullia Taluk of Dakshina Kannada District.

ಕುಂತೂರು /*kuntu:ru*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕುಂತೊಟ್ಟು /*kuntoṭṭu*/ ಕ್ರಿ. 1. ಕುಳಿತಿದ್ದಾನೆ/ಳೆ, 2. ಕುಳಿತಿದೆ. 1. he/she is sitting, 2. it is sitting. ವಾ: ಅಂವ ಸುಮ್ಮನೆ ಕುಂತೊಟ್ಟು. ಪ: ಕುದ್ದುಟು

ಕುಂತ್ /*kunti*/ ಕ್ರಿ. ಕುಳಿತು. sat/sitting. ವಾ: ಇಸ್ಕೊತ್ ಬಾಣೆಲಿ ಕುಂತ್ ಬಂದೊ.

ಕುಂದ¹ /*kunda*/ ನಾ. ಮಣ್ಣಿನಿಂದ ಮಾಡಿದ ಕೊಟ್ಟಿಗೆಯ ನಾಲ್ಕು ಬದಿಗಳಲ್ಲಿರುವ ಕಂಬಗಳು. mud pillars in the four directions of a cattle shed. ವಾ: ಕುಂದಕೆ ದನಗ ಮೈ ಉಜ್ಜುದು. ಪ: ಕುಂದಲಿ – ಕಂಬಕ್ಕೆ

ಕುಂದ² /*kunda*/ ನಾ. ಸ್ಥಳನಾಮ. Kunda, a town.

ಕುಂದಕೆ ಕೋಸಿದ /*kundakɛ kɔ:sida*/ ನಾ. ಕಂಬಕ್ಕೆ ನೇತು ಹಾಕಿದ. hung on the pillar. ವಾ: ಕುಂದಕೆ ಕೋಸಿದ ಗೋಣಿಚೀಲ ಹರ್‌ದುಟು.

ಕುಂದಟಿ /*kundaṭi*/ ನಾ. ಕುಂದೊಟಿ ಗಿಡ. Caralluma fimbriata, an edible cactus.

ಕುಂದಲ್ಪಾಡಿ /*kundalpa:ḍi*/ ನಾ. 1. ಕುಟುಂಬ, 2. ಮನೆತನ, 3. ಕೊಡಗು ಜಿಲ್ಲೆಯ ಪೆರಾಜೆ ಗ್ರಾಮದ ಜಾಗ. 1. family, 2. lineage.

ಕುಂದು¹ /*kundu*/ ನಾ. 1. ಕಡಿಮೆ ಆಗು, 2. ಆರು. 1. to lessen, 2. to cool down. ವಾ: ಹುಣ್ಮೆ ಕಳ್‌ದ ಮೇಲೆ ಚಂದ್ರ ಕುಂದುದು.

ಕುಂದು² /*kundu*/ ನಾ. 1. ಬೆಟ್ಟದ ಹೆಸರು, 2. ಕುಂದಾದ್ರಿ, 3. ಬೆಟ್ಟ. Kundadri, a hill. **ದೂರದ ಕುಂದು ಬಾರಿ ಲಾಯ್ಕ(ಗಾ).** ವಾ: ಕುಂದು ನೋಡಿಕೆ ಪೋಯ.

ಕುಂದೋಳಿಜ್ಜ /*kundo:ḷiŋna*/ ನಾ. ಲಕ್ಷ್ಮೀ ಚೇಳು. a scorpion. ವಾ: ಕುಂದೋಳಿಜ್ಜ ಕಚ್ಚಿಕಾದ್. ಪ: ಕುಂಡೋಳಿಜ್ಜ

ಕುಂದ್ರುಕೋಡಿ /*kundruko:ḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕುಂಬಕೋಡು /*kumbako:ḍu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಆಲೆಟ್ಟಿ ಗ್ರಾಮದ ಜಾಗ. a locality in Aletti village in Sullia Taluk of Dakshina Kannada District.

ಕುಂಬಗೌಡನ /*kumbagauḍana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕುಂಬತ್ತಿಮಾರ್ ಗದ್ದೆ /*kumbattima:r*/ ನಾ. ಪವಿತ್ರಗದ್ದೆ. sacred field.

ಕುಂಬನ /*kumbana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕುಂಬರ್ತಿ /*kumbarati*/ ನಾ. ಕುಂಬಾರ ಗಿತ್ತಿ. a potter woman. ವಾ: ಕುಂಬರ್ತಿ ಮಡ್‌ಕೆ ಹಿಡ್‌ಕಂಡ್ ಬರ್‌ತುಟ್ಟು. ಪ: ಕುಂಬರ್ತಿಗ – ಕುಂಬಾರತಿಯರು; ಕುಂಬರ್ತಿನ – ಕುಂಬಾರತಿಯನ್ನು;

ಕುಂಬಲಾಡಿ /*kumbala:ḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕುಂಬಳ ಮರ /*kumbaḷa mara*/ ನಾ. ಒಂದು ಕಾಡು ಮರ, ಈ ಮರವು ಮೃದು, ಹಗುರವಾಗಿದ್ದು ನೊಗ, ನೇಗಿಲು ಮಾಡಲು ಉಪಯೋಗಿಸುತ್ತಾರೆ. ಇದು ಎತ್ತರವಾಗಿ ಬೆಳೆಯುತ್ತದೆ, ಎಲೆಗಳು ಅಗಲವಿದ್ದು ಚೆಂಡಿನಾಕಾರದ ಕಾಯಿಗಳು ಆಗುತ್ತದೆ. a forest tree, used in making a yoke, a plough, etc. ವಾ: ಕುಂಬಳ ಮರನ ನೇಗ್‌ಲ್ ಮಾಡಿಕೆ ಬಳ್‌ಸುವೆ. ಪ: ಕುಂಬುಡೊ ಮರ(ತು)

ಕುಂಬಳಕೊಟ್ಟ ಮೀನ್ /*kumbaḷakoṭṭa mi:n*/ ನಾ. ಮೀನುಗಳ ವಿಧಗಳು. variety of fish. ವಾ: ಅದರ ಕುಂಬಳಕೊಟ್ಟ ಮೀನ್‌ತ ಕಕುಂಬಳಕೊಟ್ಟ ಮೀನ್‌ತ ಕರ್‌ದವೆ.

ಕುಂಬಳಚೇರಿ /*kumbaḷace:ri*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕುಂಬಳಮರ /*kumbḷamara*/ ನಾ. ನೊಗ ತಯಾರಿಸಲು ಬಳಸುವ ಕಾಡು ಮರ. a forest tree used in making yokes. ಪ: ನೊಚ್ಚದ ಮರ

ಕುಂಬಳ್‌ಕಾಯಿ /*kumbaḷika:yi*/ ನಾ. 1. ಕುಂಬಳಕಾಯಿ, 2. ತರಕಾರಿಯಾಗಿ ಅಡುಗೆಯಲ್ಲಿ ಬಳಸುವ ಬಳ್ಳಿಯಲ್ಲಿ ಬಿಡುವ ಕಾಯಿ. 1. pumpkin, 2. a vegetable used in cooking, grows on a vine. **ಹಗ್ಗದ ಹಾಸಿಗೆಲಿ ಗೂಳಿ ಮಲ್ಗಿಟ್ಟು – ಕುಂಬಳ ಕಾಯಿ(ಒ).** ವಾ: ಬೊಳ್ಳಿಲಿ ಕುಂಬಳಕಾಯಿ ಮಿಡಿಗ ಸುಮಾರೊಳ.

ಕುಂಬಾಡಿ /*kumba:ḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕುಂಬಾರ /*kumba:ra*/ ನಾ. 1. ಮಡಿಕೆ ಮಾಡುವವ, 2. ಕುಶವ. a pot maker, 2. a potter. **ಕುಂಬಾರಂಗೆ ವರ್ಸ ದೊಣ್ಣೆಗೆ ನಿಮಿಸ(ಗಾ).** ವಾ: ಕುಂಬಾರ ಮಣ್ಣ್‌ನ ಮಡ್ಕೆ ಮಾಡ್ದು.

ಕುಂಬಾರಕೇರಿ /*kumba:rake:ri*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ದೇವಚಳ್ಳ ಗ್ರಾಮದ ಜಾಗ. a locality in Devacalla village in Sullia Taluk of Dakshina Kannada District.

ಕುಂಬಾರ್ತಿ /*kumba:rti*/ ನಾ. ಕುಂಬಾರಗಿತ್ತಿ. a female potter. ವಾ: ಕುಂಬಾರ್ತಿ ಹೋಗ್ತುಟ್ಟು.

ಕುಂಬಾರ್ತಿ ಹುಳ /*kumba:rti huḷa*/ ನಾ. ನೀರಿನಲ್ಲಿ ವಾಸಿಸುವ ಹುಳ. a worm found in water. ವಾ: ನಿತ್ತ ನೀರ್‌ಲಿ ನೋಡ್ ಕುಂಬಾರ್ತಿ ಹುಳ.

ಕುಂಬು^{1} /*kumbu*/ ನಾ. 1. ಕುಂಬಾದ ಮರ ಅಥವಾ ಮರದ ವಸ್ತುಗಳು ಗೆದ್ದಲು ಹಿಡಿದು ಹಾಳಾದುದು, 2. ಲೊಡ್ಡಾದುದು. 1. termite infested wood, 2. hollowed. **ಕುಂಬುಮರ ಬೀಳ್ಕನ ಬಾಣೆ ಮಕ್ಕ ಪದ ಹೇಳ್ದು – ಹೇಲ್ ಮತ್ತೆ ಹೇಲ್ ನೊಣ(ಒ).** ವಾ: ಗೆದಲೆ ಹಿಡ್‌ದ್ ಮರ ಕುಂಬು ಆದ್.

ಕುಂಬು^{2} /*kumbu*/ ನಾವಿ. 1. ಮುರುಕು, 2. ಕುಂಬಾದ, 3. ಹುಳುತುಹೋದ, 4. ಲೊಡ್ಡಾದ. 1. broken, 2. termite infested, 2. rotten, 3. carious. ವಾ: ಕುಂಬು ಮರ ಯಾವ್‌ದಕ್ಕು ಪ್ರೇಜನ ಇಲ್ಲೆ. ಪ: ಕುಂಬಟೆ

ಕುಂಬು^{3} /*kumbu*/ ನಾ. 1. ನಡುಗು, 2. ಕಂಪಿಸು. 1. to shiver, 2. to tremble, 3. to shudder. ವಾ: ಮಳೆಗೆ ನೆನ್ದ್ ನಾ ಕುಂಬಾದೆ. ಪ: ದರ್ಸನ, ಕುಂಬರುನೆ(ತು)

ಕುಂಬುಗೆಲ್ಲ್ /*kumbugɛlli*/ ನಾ. 1. ಕುಂಬಾದ ಕೊಂಬೆ, 2. ಶಿಥಿಲಗೊಂಡ ರೆಂಬೆ, 3 ಟೊಳ್ಳಾದ ಕೊಂಬೆ. 1. a weakened branch, 2. a weathered branch. ವಾ: ಕುಂಬುಗೆಲ್ಲ್ ಮುರ್‌ದ್ ಬೀತ್.

ಕುಂಬುಗೌಡನ ಮನೆ /*kumbugowdana mane*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕುಂಬುಳಿ ಎಲೆ /*kumbuḷi elɛ*/ ನಾ. 1. ಎಲೆಗಳು ಅಗಲವಾಗಿದ್ದು ಅರಳಿ ಎಲೆಯನ್ನು ಹೋಲುತ್ತದೆ, 2. ಹುತ್ತರಿ ಹಬ್ಬದಲ್ಲಿ ಇದರ ಎಲೆಗಳನ್ನು ನೆರೆ ಕಟ್ಟಲು ಬಳಸುವರು. 1. a white teak tree, 2. leaves from this tree are used during the harvest festival. ವಾ: ಕುಂಬುಳಿ ಎಲೆನ ಹುತ್ತೆರಿಲಿ ನೆರೆ ಕಟ್ಟಿಕೆ ಬಳ್‌ಸುವೆ.

ಕುಂಬುಳಿ ಮರ /*kumbuḷi mara*/ ನಾ. 1. ಕಾಡು ಮರ, 2. ನೇಗಿಲು, ನೊಗ ಮಾಡಲು ಬಳಸುವರು, 3. ಕಾಡು ಪ್ರಾಣಿಗಳಿಗೆ ಬಲು ಇಷ್ಟ. 1. a forest tree-a white teak tree, 2. plough, yoke, etc. are made out of this tree, 3. a favourite tree of wild animals. ವಾ: ಕುಂಬುಳಿ ಮರದ ಎಲೆನ ಕಿತ್ತಿಸ್.

ಕುಂಬೆ /*kumbɛ*/ ನಾ. ಮೇಲಿರುವ ಗದ್ದೆಯಿಂದ ಕೆಳಗಿನ ಗದ್ದೆಗೆ ನೀರು ಬಿಡುವುದು. releasing water from a field on a higher ground to lower ground. ವಾ: ಕುಂಬೆಲಿ ಪೊಡ ಇಸಿರೆ ಕೊಯ್‌ಲೆ, ಚಯ್‌ಂಪೆ ಮೀನ್‌ಗ ಬಿದ್ದವೆ. ಪ: ಕುಂಬೆಕಂಡಿ – ಗದ್ದೆಯಲ್ಲಿ ನೀರು ಒಂದು ಗದ್ದೆ ಯಿಂದ ಇನ್ನೊಂದು ಗದ್ದೆಗೆ ಬೀಳುವ ಜಾಗ

ಕುಂಬೆಕಂಡಿ /*kumbɛkaṇḍi*/ ನಾ. 1. ಗದ್ದೆಯಿಂದ ನೀರು ಹೋಗಲು ಮಾಡುವ ವ್ಯವಸ್ಥೆ, 2. ಗದ್ದೆಯ ನೀರು ಹಾಯ್ಕು. a canal/drainage dug in the field/farm so that the excess water can flow away. ವಾ: ಗದ್ದೆಂದ ಕುಂಬೆಕಂಡಿಲಿ ನೀರ್ ಬುಡೊಕು, ಅಲ್ಲಿ ಪೊಡ ಇಸಿರೆ ಮೀನ್ ಬಿದ್ದದೆ.

ಕುಂಬೆತ್ತಿಬನ /*kumbettibana*/ ನಾ. 1. ಕುಟುಂಬ, 2. ಮನೆತನ. 1. family, 2. lineage, 3. a locality in Ubaradka Mitturu village in Sullia Taluk of Dakshina Kannada District.

ಕುಂಬೇರ /*kumbe:ra*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕುಂಬ್ ಕುದಂಟಿ /*kumbɨ kudaṇṭi*/ ನಾ. ಒಣಗಿ ಟೊಳ್ಳಾದ ಮರದ ದಿಮ್ಮಿ. a hollow wooden log. ವಾ: ನೀರ್ ಯೆಳ್ದ್ ಸೌದೆ ಕುಂಬ್ ಕುದೆಂಟಿ ಆಗುಟು.

ಕುಂಬ್‌ಕರ್ಣ /*kumbɨkarṇa*/ ನಾ. 1. ಕುಂಭಕರ್ಣ, 2. ರಾವಣನ ತಮ್ಮ. 1. Kumbhakarna, Ravana's brother. ವಾ: ಅಂವ ಕುಂಬ್‌ಕರ್ಣನಾಂಗೆ ತಿಂಬೊದು.

ಕುಂಬ್‌ಮರ /*kumbɨmara*/ ನಾ. 1. ಒಣಗಿ ಹಾಳಾದ ಮರ, 2. ತ್ರುಟಿತ, 3. ಸವೆದ, 4. ಕೊಳೆತ. 1. a hollow log, 2. broken, 3. worn out, 4. rotten. ವಾ: ಕುಂಬ್‌ಮರ ಯಾಗಾರ್ ಬಿದ್ದದೆ.

ಕುಂಬ್ರುಮನೆ /*kumbrumanɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕುಂಬ್ಲಾಡಿ /*kumbla:ḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕುಂಬ್ಳ /*kumbḷa*/ ನಾ. ಬೂದು ಕುಂಬಳ. ash gourd. ವಾ: ಕುಂಬ್ಳ ಬೊಳ್ಳಿ ಅದೇ ಬಿದ್ದ್ ಹುಟ್ಟಿದ್.

ಕುಂಬ್ಳೆಕಾಯಿ /*kumbḷeka:yi*/ ನಾ. 1. ಕುಂಬಳಕಾಯಿ, 2. ಬೂದುಗುಂಬಳ. 1. pumpkin, 2. ash gourd. ವಾ: ಪೂಜೆಲಿ ದೃಷ್ಟಿ ತೆಗೆಕನ ಕುಂಬ್ಳೆಕಾಯಿನ ಒಡ್ಡವೆ.

ಕುಂಯ್‌ಗುಟ್ಟು /*kunyɨguṭṭu*/ ನಾ. ನಾಯಿಮರಿ ಕುಂಯ್‌ಗುಟ್ಟುವುದು. the whining of a puppy. ವಾ: ಗೂಡ್‌ಲಿ ನಾಯಿ ಮೊರಿ ಕುಂಯ್‌ಗುಟ್ಟುದು.

ಕುಂರ್ಜಿ /*Kunrji*/ ನಾ. 1. 2 ವರ್ಷಕ್ಕೊಮ್ಮೆ ಅರಳುವ ನೀಲಿ ಬಣ್ಣದ ಹೂವು. a flower that blooms once in twelve years. ವಾ: ಕುಂರ್ಜಿ ಹೂಗ ಹನ್ನೆರ್‌ಡ್ ವರ್‌ಸಕ್ಕೊಮ್ಮೆ ಆದು.

ಕುಕ್ಕ /*kukka*/ ನಾ. 1. ವ್ಯಕ್ತಿನಾಮ, 2. ಕುಕ್ಕಣ್ಣ, 3. ಕುಕ್ಕಜ್ಜ, 4. ಕುಕ್ಕಪ್ಪ. 1. Kukka, a masculine given name, 2. Kukkanna, a masculine given name, 3. Kukkajja, a masculine given name, 4. Kukkapa, a masculine given name. **ಅಕ್ಕಂಗೆ ಆಳಿಲ್ಲೆ ಕುಕ್ಕಂಗೆ ಕೂಳಿಲ್ಲೆ(ಗಾ).** ವಾ: ಕುಕ್ಕ ಬಂದೊಳೊ.

ಕುಕ್ಕಂದೂರು /*kukkandu:ru*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಜಾಲ್ಸೂರು ಗ್ರಾಮದ ಜಾಗ. 1. family, 2. lineage, 3. a locality in Jalsuru village in Sullia Taluk of Dakshina Kannada District.

ಕುಕ್ಕಟ್ಟೆ /*kukkaṭṭe*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮುರುಳ್ಯ ಗ್ರಾಮದ ಜಾಗ. a locality in Murulya village in Sullia Taluk of Dakshina Kannada District.

ಕುಕ್ಕತಿ ದೇವಿ /*kukkati dɛ:vi*/ ನಾ. ಒಂದು ದೈವ ನಾಮ. a deity. ವಾ: ಬಂಗಾರ ಬೊಳಿಯವರ ಮನೆಗಳ್ಲಿ ಕುಕ್ಕೆತಿ ಬೊಳ್ಳು ದೆವ್ವಗ ಇದ್ದದೆ.

ಕುಕ್ಕನೂರು /*kukkanu:ru*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕುಕ್ಕಪ್ಪ /*kukkappa*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. Kukkappa, a masculine given name. ಪ: ಕುಕ್ಕ, ಕುಕ್ಕಣ್ಣ

ಕುಕ್ಕಪ್ಪನಮನೆ /*kukkappanamanɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕುಕ್ಕಾಜೆಕಾನ /*kukka:jeka:na*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಸುಳ್ಯ ನಗರದ ಜಾಗ. a locality in Suḷya Nagara village in Sullia Taluk of Dakshina Kannada District.

ಕುಕ್ಕಾಯಕೋಡಿ /*kukka:yako:ḍi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಎಣ್ಮೂರು ಗ್ರಾಮದ ಜಾಗ. a locality in Enmuru village in Sullia Taluk of Dakshina Kannada District.

ಕುಕ್ಕುಂದ್ರಡ್ಕ /*kukkundraḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಹರಿಹರ ಪಲ್ಲತಡ್ಕ ಗ್ರಾಮದ ಜಾಗ. a locality in Harihara Pallatadka village in Sullia Taluk of Dakshina Kannada District.

ಕುಕ್ಕುಜಡ್ಕ /*kukkujaḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಮರಪಡ್ನೂರು ಗ್ರಾಮದ ಜಾಗ. a locality in Amarapadnuru village in Sullia Taluk of Dakshina Kannada District.

ಕುಕ್ಕುಡೇಲು /*kukkuḍe:lu*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮಂಡೆಕೋಲು ಗ್ರಾಮದ ಜಾಗ. 1. family, 2. lineage, 3. a locality in Mandekolu village in Sullia Taluk of Dakshina Kannada District.

ಕುಕ್ಕುತ್ತಡಿ /*kukkuttaḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕುಕ್ಕುದು¹ /*kukkudu*/ ಕ್ರಿ. ಬಟ್ಟೆಯನ್ನು ಮೆಲ್ಲನೆ ಒಗೆ. to wash clothes softly. ವಾ: ಅರ್ವೆನ ಕಲ್ಲ್ ಮೇಲೆ ಕುಕ್ಕುದು. ಪ: ಕುಕ್ಕೊಕು – ಒಗೆಯಬೇಕು

ಕುಕ್ಕುದು² /*kukkudu*/ ನಾ. 1. ಕೋಪದಿಂದ ಎತ್ತಿ ಬಡಿಯುವುದು, 2. ಕೊಕ್ಕಿನಿಂದ ಕುಟುಕು. 1. to wash clothes in anger, 2. to peck with a beak. ವಾ: ಪಾತ್ರನ ಸಿಟ್ಟ್‌ಲಿ ಹಂಗೆ ಕುಕ್ಕುಬಡ. ಪ: ಕುಕ್ಕುಬಡ – ಬಡಿಯಬೇಡ

ಕುಕ್ಕುನೂರು /*kukkunu:ru*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕುಕ್ಕುಮೂಲೆ /*kukkumu:le*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಪೆರುವಾಜೆ ಗ್ರಾಮದ ಜಾಗ. a locality in Peruvaje village in Sullia Taluk of Dakshina Kannada District.

ಕುಕ್ಕುರು ಬಡ್ದುಟು /*kukkuru baḍduṭu*/ ನಾ. 1. ಕುಳಿತುಕೊಂಡಿದ್ದಾರೆ/ನೆ ಎಂಬುದನ್ನು ಮುನಿಸಿನಿಂದ ಹೇಳುವುದು, 2. ಸದ್ದಿಲ್ಲದೆ ಕುಳಿತಿರು. 1. to say in anger that someone is sitting for a long time, 2. to sit quiet. ವಾ: ಕ್ಯಾಮೆ ಇಲ್ಲದೆ ಕುಕ್ಕುರು ಬಡ್ದುಟು.

ಕುಕ್ಕುರು ಬಡ್ದುಟ್ಟು /*kukkuru baḍdaṭṭu*/ ನಾ. ಸುಮ್ಮನೆ ಒಂದೇ ಕಡೆ ಕೂತಿರುವಾಗ ಹೇಳುವ ಪದ. sit (idly) by. ವಾ: ಹೊತಾರೆಂದ ಜೆಗ್‌ಲ್‌ಲಿ ಕುಕ್ಕುರು ಬಡ್ದಟ್ಟು.

ಕುಕ್ಕುರುಬಡಿ /*kukkurubaḍi*/ ನಾ. 1. ಒತ್ತಾಯದಿಂದ ಕುಕ್ಕಿ ಕುಳ್ಳಿರಿಸು, 2. ಎತ್ತಿ ಅಪ್ಪಳಿಸು, 3. ಸದ್ದಿಲ್ಲದೆ ಕುಳಿತಿರು. 1. forcing someone to sit down, 2. to smash, 3. to sit quiet. ವಾ: ಇಲ್ಲೇ ಕುಕ್ಕುರುಬಡಿ.

ಕುಕ್ಕುರ್ ಕಾಲ್‌ಲಿ ಕೂರ್ದು /*kukkurɨ ka:lili ku:rdu*/ ನಾ. ಮೊಣಕಾಲು ಮಡಚಿ ಕುಳಿತುಕೊಳ್ಳುವುದು. sitting cross legged. ವಾ: ಹೇಲಿಕೆ ಕೂರ್‌ಕನ ಕುಕ್ಕುರ್ ಕಾಲ್‌ಲಿ ಕೂರ್‌ದು. ಪ: ಕುಕ್ಕ್‌ರ್ ಕೂರ್‌ದು – ಮೊಣಕಾಲು ಮಡಚಿ ಕೂರುವುದು

ಕುಕ್ಕುಲು /*kukkulu*/ ನಾ. ಕೆಂಬೂತ ಹಕ್ಕಿ ಭಾರದ್ವಾಜಪಕ್ಷಿ(ಸಂ). Greater Coucal or Crow Pheasant. ವಾ: ಕುಕ್ಕುಲು ಹಕ್ಕಿ ಹಾರ್‌ದೆ. ಪ: ಕುಪ್ಪುಲು(ತು) ಕುಪ್ಪುಳು

ಕುಕ್ಕೆ¹ /*kukkɛ*/ ನಾ. ಬೆತ್ತ ಅಥವಾ ಬಿದಿರಿನ ಸಲಾಕೆಯಿಂದ ಮಾಡಿದ ಬುಟ್ಟಿ. basket prepared out of cane or bamboo strips. ವಾ: ಮಣ್ಣ್ ಗೊಬ್ಬರ ಹೊರಿಕೆ ಕುಕ್ಕೆ ಬೇಕಾದೆ. ಪ: ಕುಕ್ಕೆಂತ – ಬುಟ್ಟಿಯಂತ; ಕುಕ್ಕೆನ – ಬುಟ್ಟಿಯನ್ನು; ಕುಕ್ಕೆಲಿ – ಕುಕ್ಕೆಯಲ್ಲಿ; ಕುಕ್ಕೆಲಿದ್ದ – ಕುಕ್ಕೆಯಲ್ಲಿದ್ದ

ಕುಕ್ಕೆ² /*kukkɛ*/ ನಾ. 1. ಸ್ಥಳನಾಮ, 2. ಕುಕ್ಕೆ ಸುಬ್ರಹ್ಮಣ್ಯ.

1. a place name , 2. Subramanya, a town. ವಾ: ಕುಕ್ಕೆಲಿ ಕುಮಾರದಾರ ಹಳ್ಳ ಉಟ್ಟು.

ಕುಕ್ಕೇಟಿ /*kukke:ṭi*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮಂಡೆಕೋಲು ಗ್ರಾಮದ ಜಾಗ. 1. family, 2. lineage, 3. a locality in Mandekolu village in Sullia Taluk of Dakshina Kannada District.

ಕುಕ್ಕೇರ /*kukke:ra*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕುಕ್ಕೋಜ /*kukko:ja*/ ನಾ. ಶಿಶುಪ್ರಾಸದಲ್ಲಿ ಅಳಿಲನ್ನು ಸಂಬೋಧಿಸುವ ಪದ. a word denoting squirrel in a chidren's song. **ಕುಕ್ಕೋಜ' 'ಮೋರಾಜ' ನಂಗೊಂದ್ ಮಾವ್‌ನಣ್ಣ್ ಹಾಕ್, ನಿಂಗೊಂದ್ (ಮಾವ್‌ನ) ಗೊರ್ಟ್ ಬಿಸಾಕ್‌ನೆ, ಡಬ್‌ಡಿಬ್(ಶಿಶುಗೀತೆ).** ವಾ: ಮಾವ್‌ನ ಹಣ್ಣ್‌ಗೆ ಕಲ್ಲ್ ಹೆರ್ಕಿ ಇಸಿಕನ ಕುಕ್ಕೋಜ ಮೋರಾಜಾಂತ ಹೇಳ್ದು.

ಕುಗ್ಗಿಕಾದ್ /*kuggika:di*/ ಕ್ರಿ. ಕುಗ್ಗಬಾರದು. shouldn't feel dejected. ವಾ: ಮೊನ್‌ಸ ಬಜ್ಜ ಬಾಕನ ಕುಗ್ಗಿಕಾದ್.

ಕುಗ್ಗ್ /*kuggɨ*/ ನಾ. 1. ಕುಗ್ಗು, 2. ಕಡಿಮೆಯಾಗು, 3. ಉತ್ಸಾಹಗುಂದು, 4. ಕುಸಿತ. 1. slump, 2. to lessen/to reduce, 3. to lose interest, 4. to collapse. ವಾ: ಯಾರು ಇಲ್ಲೆತ ಮೊನ್‌ಸ್‌ಲಿ ಕೊರ್ಗಿಕಂಡ್ ಕುಗ್ಗ್‌ಬಡ. ಪ: ಕುಗ್ಗಿಕಾದ್ – ಕುಗ್ಗಬಾರದು/ಉತ್ಸಾಹಗುಂದಬಾರದು

ಕುಚಿನೆ /*kucinɛ*/ ನಾ. 1. ಕಠಿಣವಾದದ್ದು, 2. ಕೆಟ್ಟವನು, 3. ಶ್ರಮ, 4. ಹಗೆ, 5. ಕ್ಷೌರ, 6. ತೊಂದರೆ. 1. hard, 2. an evil, 3. hard labour, 4. hatred, 5. shave, 6. trouble. ವಾ: ಅಂವ ಬರಿ ಕುಚಿನೆ ಬುದ್ದಿ ಇಂರಂವ.

ಕುಚುಲಕ್ಕಿ /*kuculakki*/ ನಾ. 1. ಕುಸಲಕ್ಕಿ 2. ಕುಸುಬಲಕ್ಕಿ. 1. boiled rice, 2. Parboiled rice. ವಾ: ಅರೆಗಾಲಲಿ ಕುಚುಲಕ್ಕಿ ಗಂಜಿನೆ ಉಂಬೊದು.

ಕುಚೇಸ್ಟೆ /*kucɛ:sṭe*/ ನಾ. 1. ಕುಚೇಷ್ಟೆ, 2. ಅಪಹಾಸ್ಯ, 3. ಕೆಟ್ಟ ಚೇಷ್ಟೆ, 4. ಕುಚೋದ್ಯ, 5. ದುಷ್ಟ ಯೋಜನೆ, 5. ಕಿಡಿಗೇಡಿತನ. 1. pranks, 2. to mock, 3. a mischief, 4. to mock, 4. evil intention, 4. notoriety. ವಾ: ಅಂವ ಬೊರೀ ಕುಚೇಸ್ಟೆ ಮಾಡ್‌ದು.

ಕುಚ್ಚಿ[1] /*kucci*/ ನಾ. 1. ಕುಚ್ಚು, 2. ಜಡೆಯ ಕೊನೆಗೆ ಕಟ್ಟುವ ಆಭರಣ. 1. a tassel, 2. jewellery tied at the end of braided hair. ವಾ: ಜಡೆಗೆ ಕುಚ್ಚಿ ಹಾಕಿರೆ ಲಾಯ್ಕ್.

ಕುಚ್ಚಿ[2] /*kucci*/ ನಾ. ದೊಡ್ಡ ಜಾತಿಯ ಎತ್ತು. a dwarfish bullock.

ಕುಚ್ಚಿ[3] /*kucci*/ ನಾ. ತಲೆಗೂದಲು. cropped hair on the head.

ಕುಚ್ಚಿ[4] /*kucci*/ ನಾ. 1. ಗಿಡ, ಪೊದೆಗಳನ್ನು ಸವರಿ ಉಳಿದ ಭಾಗ, 2. ಕುರುಚಲು. the stump of a plant 2. shrub. ವಾ: ಕುಚ್ಚಿನ ಕಡೆಕು.

ಕುಚ್ಚಿ[5] /*kucci*/ ನಾ. ಒಂದು ಜಾತಿಯ ನದಿ ಮೀನು, ಸ್ವರೂಪದಲ್ಲಿ ಮಡೆಂಜಿ ಮೀನಿನಂತೆ ಇರುತ್ತದೆ. a variety of fish. ವಾ: ಕುಚ್ಚಿತೇಳ್‌ದು ಒಂದು ಜಾತಿನ ಮೀನ್.

ಕುಚ್ಚಿಮೀಸೆ /*kuccimi:sɛ*/ ನಾ. 1. ಗಿಡ್ಡಮೀಸೆ, 2. ಕುರುಚಲು ಮೀಸೆ. 1. trimmed moustache, 2. patchy mustache. ವಾ: ಅಂವ ಕುಚ್ಚಿ ಮೀಸೆ ಬುಟ್ಟುಟು.

ಕುಚ್ಚುಹಾಕುದು /*kuccuha:kudu*/ ನಾ. 1. ಸೀರೆಯ ಸೆರಗಿನ ಅಂಚಿನ ಅಂದ ಹೆಚ್ಚಿಸಲು ಗೊಂಡೆ ಕಟ್ಟುವುದು. attach a tassel to a saree. ವಾ: ಅವ್ವ ಸೀರೆಗೆ ಕುಚ್ಚುಹಾಕುದು.

ಕುಜಪು /*kujapu*/ ನಾವಿ. 1. ಜಗಿದದ್ದನ್ನೇ ಜಗಿಯುತ್ತಿರು, 2. ಮತ್ತೆಮತ್ತೆ ಜಗಿಯು, 3. ಚರ್ವಿತಚರ್ವಣ ಮಾಡು. 1. to chew something repeatedly, 2. to gnaw, 2. repeated discussion of something. ವಾ: ದನಗ ಹುಲ್ಲ್‌ನ ಕುಜಪುದು. ಪ: ಕೊಜಿಲು(ತು)

ಕುಜಿಲಿ[1] /*kujili*/ ನಾ. ಕುಡಿಕೆ ಮೂರ್ತೆಯಲ್ಲಿ ಬಳಸುವ ಮಣ್ಣಿನ ಮಡಕೆ. an earthen pot. ವಾ: ಒಂದ್ ಕುಜಿಲಿ ಕಳ್ಳ್‌ಗೆ ಕ್ರಾಯ ಎಷ್ಟ್.

ಕುಜಿಲಿ[2] /*kujili*/ ನಾ. ಹೆಂಡಕುಡುಕ. a drunkard. ವಾ: ಅಂವ ದೊಡ್ಡ ಕುಜಿಲಿ.

ಕುಜಿಲ್ ಕುತ್ತ ಹಿಡಿಯೊದು /*kujilɨ kutta hiḍiyodu*/ ನಾ. ಅತಿಯಾಗಿ ಕಳ್ಳು ಕುಡಿಯುವ ಚಟ ಹಿಡಿಯುವುದು. habituated to heavy drinking. ವಾ: ಅಂವಂಗೆ ಆಗಾಗ ಕುಜಿಲ್ ಕುತ್ತ ಹಿಡಿಯೊದು.

ಕುಜುಂಬ /*kujumba*/ ನಾ. ವ್ಯಕ್ತಿನಾಮ, ಪುರುಷವಾಚಕ. masculine given name.

ಕುಜುಂಬು /*kujumbu*/ ನಾ. 1. ಹರಕು, 2. ಚಿಂದಿ, 3. ತುಂಡು. 1. torn, 2. rag, 3. fragment. ವಾ: ಕುಜುಂಬು ಅರ್ವೆನ ಹಾಕಂಬಡ.

ಕುಜ್ಜೆ /*kujjɛ*/ ನಾ. 1. ಎಳೆಯ ಅಥವಾ ಬೆಳೆದ ಆದರೆ ಹಣ್ಣಾಗದ ಹಲಸಿನಕಾಯಿ. an unripe jackfruit. **ಅರ್ಸ್ ಬಾತ್ ತೇಳಿ ಕುಜ್ಜೆ ಹಣ್ಣ್ ಮಾಡಿಕಾದೆನಾ(ಗಾ).** ವಾ: ಕೆಲ ದೇವ್ರ ಹಬ್ಬಕ್ಕೆ ಮುಂದೆ ಕುಜ್ಜೆ ಪಲ್ಯ ಮಾಡ್‌ದುಲೆ, ನೀರ್‌ದೋಸೆ ಅದರ ಪಲ್ಯ ದೇವ್ರಿಗೆ ಪ್ರಸಾದ. ಪ: ಕುಜ್ಜೆ(ಗುಜ್ಜೆ) – ಎಳೆ ಹಲಸಿನ ಕಾಯಿ

ಕುಞಿಮೊರ /*kuɲi mora*/ ನಾ. ಭತ್ತ ಎರಚುವ ಸಣ್ಣ ಮೊರ. a winnow. ವಾ: ಕುಞಿಮೊರಲಿ ಬತ್ತನ ಹೊಡಿ.

ಕುಞ್ಞ ಕತ್ತಿ /*kuɲa katti*/ ನಾ. ಸಣ್ಣ ಕತ್ತಿ. a small knife. ವಾ: ಕುಞ್ಞ ಕತ್ತಿಲಿ ಕೊಯ್ಯಿ.

ಕುಞ್ಞ ಚೆಟ್ಟಿ /*kuɲɲa cɛṭṭi*/ ನಾ. ಸಾಂಬಾರು ಮಾಡುವ ಚಿಕ್ಕ ಪಾತ್ರೆ. a small vessel used to make curry/ soup. ವಾ: ಕುಞ್ಞ ಚೆಟ್ಟಿ ತೂತ ಆವುಟು.

ಕುಞ್ಞ ಮೊರ /*kuɲa mɔra*/ ನಾ. ಸಣ್ಣ ಮೊರ. a small winnow. ವಾ: ಕುಞ್ಞ ಮೊರಲಿ ಅಕ್ಕಿನ ಹೊಡ್ಕ್. ಪ: ಕುಞ್ಞ ಮೊರ – ಬತ್ತ ಬಿಸಾಕುವ ಮೊರ, ಕಿನ್ಯತಡ್ಪೆ(ತು)

ಕುಞ್ಞಕಣ್ಣ್ /*kuɲɲakaṇṇi*/ ನಾ. ಸಣ್ಣ ಕಣ್ಣು. a small eye. ವಾ: ಅಂವಂದ್ ಒಂದ್ ಕುಞ್ಞಕಣ್ಣ್.

ಕುಞ್ಞಕತ್ತಿ /*kuɲakatti*/ ನಾ. ಪುಟ್ಟ ಕತ್ತಿ. a small sickle. ವಾ: ಕುಞ್ಞಕತ್ತಿನ ಮರಕೆ ಕೊಡ್ವಿ ಇಸಿದ್. ಪ: ಕುಞ್ಞಿಕತ್ತಿ ಕುಞ್ಞಪ್ಪಯ್ಯ – ಸಿದ್ದವೇಷ ಹಾಡಿನಲ್ಲಿ ಬರುವ ಸಂದರ್ಭ

ಕುಞ್ಞಕ್ಕ[1] /*kuŋŋakka*/ ನಾ. ಸಣ್ಣಚಿಕ್ಕಮ್ಮ. the youngest sister of one's mother. ವಾ: ಕುಞ್ಞಕ್ಕ ಮನೆಗೆ ಬಂದೊ.

ಕುಞ್ಞಕ್ಕ[2] /*kuɲɲakka*/ ನಾ. ವ್ಯಕ್ತಿ ಹೆಸರು, ಸ್ತ್ರೀ ವಾಚಕ. feminine given name. ಪ: ಕುಞಿ, ಕುಞ್ಞ

ಕುಞ್ಞಣ್ಣ[1] /*kuɲaṇṇa*/ ನಾ. 1. ಸಣ್ಣ ಅಣ್ಣ, 2. ವ್ಯಕ್ತಿನಾಮ. 1. a brother, 2. a name. ವಾ: ಕುಞ್ಞಪ ಕಾರ್‌ಬಾರ್ ನೋಡಿಕಂಡವೆ.

ಕುಞ್ಞಣ್ಣ[2] /*kuɲɲaṇṇa*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. masculine given name.

ಕುಞ್ಞಪ್ಪ[1] /*kuɲappa*/ ನಾ. 1. ಚಿಕ್ಕಪ್ಪ, 2. ವ್ಯಕ್ತಿನಾಮ. younger brother of one's father, 2. masculine given name. ವಾ: ಕುಞ್ಞಪ್ಪ ಎಲ್ಲೋದೊ.

ಕುಞ್ಞಪ್ಪ[2] /*kuŋŋappa*/ ನಾ. ಸಣ್ಣಚಿಕ್ಕಪ್ಪ. the youngest brother of one's mother. ವಾ: ಕುಂಜಪ್ಪ ಹೋದವೆಗಡ.

ಕುಞ್ಞಬಾಡೆ /*kuɲɲa ba:ḍɛ*/ ನಾ. ಐನ್ ಮನೆಯಲ್ಲಿ ದೇವರಿಗೆ ಕೊಡುವ ಸ್ಥಳ. a temple in the Ainmane. ವಾ: ಉಗ್ಗಪ್ಪ ಕುಞ್ಞ ಬಾಡೆಲಿ ನಿತ್ತೊಳೊ.

ಕುಞ್ಞಮೂಲೆ /*kuɲɲamu:le*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಐವರ್ನಾಡು ಗ್ರಾಮದ ಜಾಗ. a locality in Aivarnadu village in Sullia Taluk of Dakshina Kannada District.

ಕುಞ್ಞಮ್ಮ /*kuɲamma*/ ನಾ. 1. ಚಿಕ್ಕಮ್ಮ, 2. ವ್ಯಕ್ತಿನಾಮ. 1. younger sister of one's father, 2. feminine given name. ವಾ: ಕುಞ್ಞಮ್ಮ ಬಂದಿದ್ದೊ.

ಕುಞ್ಞವ್ವ /*kuɲavva*/ ನಾ. 1. ಸಣ್ಣ ಅಮ್ಮ, 2. ವ್ಯಕ್ತಿನಾಮ. younger sister of one's father, 2. feminine given name. ವಾ: ಕುಞ್ಞವ ಬಾರಿ ಪಾಪ. ಪ: ಕುಞ್ಞಪ್ವೆ(ತು)

ಕುಞ್ಞಳಿ /*kuɲɲaḷi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕುಞ್ಞಿ[1] /*kuɲi*/ ನಾ. ಸಣ್ಣ. small. ವಾ: ಕುಞ್ಞಿ ಮರ ಅದ್.

ಕುಞ್ಞಿ[2] /*kuɲi*/ ನಾ. ಪುಟ್ಟ ಮಗು. an infant. ವಾ: ಕುಞ್ಞಿನ ಎತ್ತಿಕ.

ಕುಞ್ಞಿಬಿತ್ತ್ /*kuɲibitti*/ ನಾ. ಸಣ್ಣ ಮಗುವಿಗೆ ಇಡುವ ಅಡ್ಡ ಹೆಸರು. a pet name for an infant. ವಾ: ಕುಞ್ಞಿಬಿತ್ತ್ ಎಲ್ಲಿ ಅಣ್‌ಂಗಿದ್?

ಕುಞ್ಞಿಮಾವ /*kuɲɲima:va*/ ನಾ. ಸಣ್ಣಮಾವ. the youngest maternal uncle. ವಾ: ಕುಞ್ಞಿಮಾವ ಯಾಗ ಬಂದದ್?

ಕುಞ್ಞಿಮುರ /*kuŋŋimura*/ ನಾ. ಭತ್ತವನ್ನು ಎತ್ತರ ಹಾರಿಸಿ ಹೊಟ್ಟು ತೆಗೆಯುವುದು. winnowing the

paddy to remove husk. ವಾ: ಕುಂಜಿಮುರಲಿ ಬತ್ತನ ಹೊಡ್‌ಕುದು.

ಕುಞ್ಞಿರ /*kuɲɲira*/ ನಾ. ವ್ಯಕ್ತಿನಾಮ, ಪುರುಷವಾಚಕ. a masculine given name.

ಕುಞ್ಞಿಹಿತ್ಲು /*kuɲɲihitlu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಪಂಬೆತ್ತಾಡಿ ಗ್ರಾಮದ ಜಾಗ. a locality in Pambettadi village in Sullia Taluk of Dakshina Kannada District.

ಕುಞ್ಞೇಟಿ /*kuɲɲe:ʈi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕೊಲ್ಲಮೊಗ್ರು ಗ್ರಾಮದ ಜಾಗ. a locality in Kollamogru village in Sullia Taluk of Dakshina Kannada District.

ಕುಟುಂಬ /*kuʈumma/kuʈumba*/ ನಾ. 1. ಮನೆತನ ರಕ್ತ ಸಂಬಂಧಿಕರ ಸಮುದಾಯ ಒಂದು ಮನೆತನದ ವೃದ್ಧಿಕ್ಷಯ ಸೂತಕಗಳನ್ನು ಸಮಾನವಾಗಿ ಆಚರಿಸುವ ರಕ್ತ ಸಂಬಂಧಿಗಳೊಳಗಿನ ಒಂದು ಪಂಗಡ, 2. ವಂಶ. a clan of blood relatives who practice the customary observances related to births and deaths together, 2. a lineage. ವಾ: ನಮ್ಮ ಕುಟುಂಬದವ್ ಎಲ್ಲೊವು ಒಗ್ಗಟ್ಟಾಗೊಳೊ. ಪ: ಕುಟುಮ್ಮ(ತು)

ಕುಟುಂಬದವು /*kuʈummadavu/kuʈumbadavu*/ ನಾ. 1. ಕುಟುಂಬದವರು, 2. ರಕ್ತಸಂಬಂಧಿಕರು. 1. members of a family, 2. blood relatives. ವಾ: ನಮ್ಮ ಕುಟುಂಬದವು ಇಲ್ಲಿ ಮಾತ್ರ ಅಲ್ಲ ಬೇರೆ ಕಡೆನೂ ಒಳೊ. ಪ: ಕುಟುಮ್ಮದವು

ಕುಟ್ಟ[1] /*kuʈʈa*/ ಸನಾ. 1. ಹರಯದ ಗಂಡು ಪ್ರಾಣಿ, 2. ಮನುಷ್ಯ, 3. ಆಡು, 4. ಕುರಿ, 5. ಹೋರಿ. 1. a young animal (male), 2. human, 3. a goat, 4. a sheep, 5. a bull. ವಾ: ಕುಟ್ಟ ಓಡಿ ಹೋತ್.

ಕುಟ್ಟ[2] /*kuʈʈa*/ ನಾ. ಸಣ್ಣ ಜಾತಿಯ ಕಪ್ಪಗಿನ ಅಕ್ಕಿಕಾಳುಗಳಲ್ಲಿ ಸೇರಿಕೊಂಡಿರುವ ಹುಳುಗಳು. small, black worms in rice. ವಾ: ಕಡ್ಲೆಗೆ ಕುಟ್ಟ ಬಂದುಟು.

ಕುಟ್ಟ[3] /*kuʈʈa*/ ನಾ. ಆಡಿನ ಅಥವಾ ಕುರಿಯ ಗಂಡುಮರಿ ಹೋತ. a he-goat. ವಾ: ಕುಟ್ಟ ಹೂನ ದೈನ ಮನಾರ ಮಾಡ್‌ತ್.

ಕುಟ್ಟ[4] /*kuʈʈa*/ ನಾ. ಸ್ಥಳನಾಮ. Kuttala, a town.

ಕುಟ್ಟನ /*kuʈʈana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕುಟ್ಟಾಣಿ /*kuʈʈa:ɳi*/ ನಾ. ಅಡಕೆ, ವೀಳ್ಯದೆಲೆ ಮೊದಲಾದುವುಗಳನ್ನು ಕುಟ್ಟಲು ಬಳಸುವ ಒರಳಿನಂತಹ ಚಿಕ್ಕ ಕಲ್ಲು ಅಥವಾ ಮರದ ತುಂಡು. a wooden or a stone mortar to crush betel nut and betel leaf. ವಾ: ಕುಟ್ಟಾಣಿಲಿ ಎಲಡ್ಕೆನ ಕುಟ್ಟಿಕೊಣಕು.

ಕುಟ್ಟಿ ಕಯಮ್ಮೆ /*kuʈʈi kayammɛ*/ ನಾ. ಭತ್ತದ ಒಂದು ತಳಿ. a variety of paddy.

ಕುಟ್ಟಿ ಹಾಕುದು[1] /*kuʈʈiha:kudu*/ ನಾ. ಮನೆ ಕಟ್ಟಲು ಆಯಕ್ಕನು ಗುಣವಾಗಿ ಗೂಟ ಹಾಕುವುದು. to drive a wedge into the ground marking the foundation while building a house. ವಾ: ಮನೆ ಕಟ್ಟಿಕೆ ಕುಟ್ಟಿಹಾಕುದು.

ಕುಟ್ಟಿ ಹಾಕುದು[2] /*kuʈʈiha:kudu*/ ನಾ. ತಲೆಗೆ ಮುಷ್ಟಿಯಿಂದ ಹೊಡೆಯುವುದು. to strike a blow on the head with one's fist. ವಾ: ಅಂವ ಆಗಾಗ ನನ್ನ ತಲೆಗೆ ಕುಟ್ಟಿಹಾಕುದು.

ಕುಟ್ಟಿ[1] /*kuʈʈi*/ ನಾ. 1. ಬಿಗಿಹಿಡಿದ ಮುಷ್ಟಿ, 2. ತಲೆಗೆ ಕೊಡುವ ಮುಷ್ಟಿಯ ಹೊಡೆತ. 1. holding the fist tightly 2. a blow given to head with the fist. ವಾ: ಅವು ಸಿಟ್ಟ್‌ಲಿ ತಲೆ ತಲೆ ಕುಟ್ಟಿಕಂಡೊ.

ಕುಟ್ಟಿ[2] /*kuʈʈi*/ ನಾ. 1. ಆಯದ ಗೂಟ, 2. ಚಿಕ್ಕಗೂಟ, 3. ಬೆಣೆ. 1. a peg, 2. a stump, 3. a wedge. ವಾ: ಗದ್ದೆಲಿ ಗೂಟನ ಹೊಡೆತೊಳೊ.

ಕುಟ್ಟಿ[3] /*kuʈʈi*/ ನಾ. ಬಡಗಿಗಳು ಬಳಸುವ ಚಿಕ್ಕ ಮರದ ಅಥವಾ ಬಿದಿರಿನ ತುಂಡು. a small pieces of wood or bamboo used by a carpenter. ವಾ: ಕುಟ್ಟಿ ತಕಂಡ್ ತಟ್ಟುದು.

ಕುಟ್ಟಿ[4] /*kuʈʈi*/ ನಾ. 1. ಚಿಕ್ಕಮಗು, 2. ಹಸುಗೂಸು. 1. a small child, 2. an infant. ವಾ: ಕುಟ್ಟಿ ಮೊಲ್‌ಗಿತ?

ಕುಟ್ಟಿ[5] /*kuʈʈi*/ ನಾವಿ. ಹಂದಿಯನ್ನು ಈ ಹೆಸರಿನಿಂದ ಕರೆಯುತ್ತಾರೆ. a pig. ವಾ: ಕುಟ್ಟಿ ಬಾ.

ಕುಟ್ಟಿ[6] /*kuʈʈi*/ ನಾ. ಬಿದಿರಿನಿಂದ, ಸೌದೆಯಿಂದ ಬೀಳುವ

ಪುಡಿ. yellow dust from bamboo or firewood. ವಾ: ಕುಟ್ಟಿ ನೆಲಲಿ ಹರಂಡಿಟು. ಪ: ಕುಟ್ಟೆ(ತು)

ಕುಟ್ಟಿ[7] /*kuṭṭi*/ ನಾ. ಪುರುಷ ವ್ಯಕ್ತಿನಾಮ. a masculine given name. ವಾ: ಕುಟ್ಟಿ ಬಂದೊಳೊ. ಪ: ಕುಟ್ಟಿಯಣ್ಣ, ಕುಟ್ಟಿಯಪ್ಪ

ಕುಟ್ಟಿಕರ್ಲ್ /*kuṭṭikarlɨ*/ ನಾ. ಹೆಣ್ಣು ಹಂದಿಯ ಗರ್ಭಕೋಶ. womb of a pig. ವಾ: ಕುಟ್ಟಿಕರ್ಲ್‌ಗೆ ಎಂತಾದ್ ಗಡ?

ಕುಟ್ಟಿಕಲ್ಲ್ /*kuṭṭikallɨ*/ ನಾ. ಎಲೆ ಅಡಿಕೆ ಗುದ್ದುವ ಕಲ್ಲು. a stone mortar to crush betel leaf and betel nut. ವಾ: ಕುಟ್ಟಿಕಲ್ಲ್‌ಲಿ ಅಡ್‌ಕೆ ಗುದ್ದಿಕಂಡ್ ಬಾನೆ. ಪ: ಒರ್ಲ್‌ಕಲ್ಲ್

ಕುಟ್ಟಿಕೊಂಡ್ /*kuṭṭikoṇḍɨ*/ ಕ್ರಿ. ಕುಟ್ಟಿಕೊಂಡು. pounding/crushing. ವಾ: ದೊಣ್ಣೆ ಕುಟ್ಟಿಕೊಂಡ್ ಬಾದು.

ಕುಟ್ಟಿಕೋಲು /*kuṭṭiko:lu*/ ನಾ. ಚಿಕ್ಕಕೋಲು. a small piece of wood/a stick. ವಾ: ಕುಟ್ಟಿಕೋಲುನ ತಂಬ.

ಕುಟ್ಟಿಜಾತ /*kuṭṭija:ta/kuṭṭica:ta*/ ನಾ. 1. ಒಂದು ಭೂತದ ಹೆಸರು, 2. ಬಹಳ ಶಕ್ತಿಶಾಲಿ ಹಾಗೂ ಉಪದ್ರವಕಾರಿ ಭೂತ. 1. a bhuta/deity, 2. a ferocious/vengeful bhuta/deity. ವಾ: ಕುಟ್ಟಿಜಾತತೇಳ್‌ದು ಒಂದು ಬೂತದ ಹೆಸ್‌ರ್. ಪ: ಕುಟ್ಟಿಚಾತ

ಕುಟ್ಟಿತ್ /*kuṭṭitɨ*/ ನಾ. 1. ಕುಟ್ಟಿದನು/ಳು 2. ಒನಕೆ ಮೊದಲಾದವುಗಳಿಂದ ಧಾನ್ಯಾದಿಗಳಿಗೆ ಏಟು ಹಾಕಿದನು, 3. ಡಿಕ್ಕಿ ಹೊಡೆ. 1. he/she pounded, 2. ponded using a pestle, 2. to crash into. ವಾ: ಅವ್ವ ಬತ್ತನ ಕುಟ್ಟಿತ್.

ಕುಟ್ಟಿದೊಣ್ಣೆ /*kuṭṭidoṇṇɛ*/ ನಾ. ಜನಪದ ಆಟ. a folk game.

ಕುಟ್ಟಿಪೂಜೆ /*kuṭṭipu:je*/ ನಾ. ಮನೆ ಒಕ್ಕಲಿಗಿಂತ ಮೊದಲು ಮಾಡುವ ಕ್ರಿಯೆ. a custom followed before the house warming ceremony.

ಕುಟ್ಟಿಹಾಕಿತ್ /*kuṭṭiha:kitɨ*/ ನಾ. ಮರಿ ಹಾಕು. to deliver a baby. ವಾ: ಹಂದಿ ಕುಟ್ಟಿ ಹಾಕಿತ್.

ಕುಟ್ಟು /*kuṭṭu*/ ನಾ. ಭತ್ತ ಕುಟ್ಟುವುದು. pounding the rice. ವಾ: ಒರ್ಲ್‌ಲಿ ಬತ್ತನ ಹಾಕಂಡ್ ಕುಟ್ಟುದು.

ಕುಟ್ಟು[2] /*kuṭṭu*/ ಕ್ರಿ. ತಾಗು. to touch.

ಕುಟ್ಟುದು /*kuṭṭudu*/ ಕ್ರಿ. 1. ಕುಟ್ಟುವುದು, 2. ಪುಡಿಮಾಡು, 3. ಬಡಿ, 4. ಹೊಡೆತ, 5. ಗುದ್ದುವುದು. 1. to pound, 2. to powder, 3. to strike, 4. to beat, 5. to punch. **ಅಡಿಗೆ ಮಾಡಿಕೆ ಆಗದವುಳಿಗೆ ಸೌದೆಡೊಂಕು, ಕುಟ್ಟಿಕೆ ಆಗದವುಳಿಗೆ ಒನಿಕೆ ಡೊಂಕು(ಗಾ).** ವಾ: ಬತ್ತನ ರಾಟೆಲಿ ಕುಟ್ಟುದು.

ಕುಟ್ಟೆ ಚುರ್ಯದು /*kuṭṭɛ curyadu*/ ನಾ. 1. ಬಿದಿರಿನಿಂದ, ಓಟೆಯಿಂದ ಮಾಡಿದ ಮೊರ, 2. ಬುಟ್ಟಿ ಮುಂತಾದವುಗಳನ್ನು ಹುಳಗಳು ತಿಂದು ಪುಡಿ ಮಾಡುವುದು. 1. termite infested winnowing fan, basket etc. 2. insects that eat baskets. ವಾ: ಬೇಳೆ ಕಾಳ್ ನೆಲ್ಲ ಕುಟ್ಟೆ ಚುರ್ಯದು. ಪ: ಕುಟ್ಟೆ ಸುರಿಪುನೆ(ತು)

ಕುಟ್ಟೆ[1] /*kuṭṭɛ*/ ನಾ. ಮರವನ್ನು ಕೊರೆದು ಹುಡಿ ಮಾಡುವ ಹುಳು. a termite. ವಾ: ಮರಕೆ ಕುಟ್ಟೆ ಹಿಡ್‌ದುಟು. ಪ: ಕುಟ್ಟೆದ ಪೊಡಿ(ತು)

ಕುಟ್ಟೆ[2] /*kuṭṭɛ*/ ಕ್ರಿ. ತಟ್ಟು. to clap.

ಕುಟ್ಟೆ[3] /*kuṭṭɛ*/ ನಾ. 1. ಕುಂಟೆ, 2. ಮರದ ತುಂಡು. 1. a log of wood, 2. a piece of wood. ವಾ: ಕುಟ್ಟೆನ ಬೇರೆ ಒಟ್ಟೊಕು.

ಕುಟ್ಟೆತೆಗಿ /*kuṭṭɛtɛgi*/ ನಾ. 1. ನಾಶ ಮಾಡಿ, 2. ಸರ್ವನಾಶಮಾಡುವುದು. 1. destroyed/spoiled, 2. to destroy completely. ವಾ: ನೀ ಮನೆನ ಕುಟ್ಟೆ ತೆಗಿಯಕೆ ಹುಟ್ಯಾಳ್ದ್ ಕಂಡದೆ.

ಕುಟ್ಟೆಹಿಡ್ತ್ /*kuṭṭɛhiḍti*/ ನಾ. ಮನುಷ್ಯನಿಗೆ ಕೇಡುಗಾಲ ಪ್ರಾಪ್ತಿಯಾಗುವುದು. to encounter a bad phase in one's life. ವಾ: ವಿನಾಸ ಕಾಲಕೆ ಮೊನ್‌ಸಂಗೆ ಕುಟ್ಟೆಹಿಡ್ತ್.

ಕುಟ್ಟೆಹುಳ /*kuṭṭɛhuḷa*/ ನಾ. ಒಣಗಿದ ಮರದಲ್ಲಿ ಸಾಮಾನ್ಯವಾಗಿ ಕಾಣಸಿಗುವ ಕಪ್ಪು ಹುಳ/ಕೀಟ. black worms/insects found in rice. ವಾ: ಅಕ್ಕಿಗೆ ಕುಟ್ಟೆಹುಳ ಸೇರಿಟು.

ಕುಟ್ಟೆಹೋಗ್ /*kuṭṭɛhɔ:gɨ*/ ನಾ. ಖರ್ಚು ಮಿತಿಮೀರು.

increased expenditure. ವಾ: ಈ ತಿಂಗ ಬಾರಿ ಕರ್‌ಚಿ ಕುಟ್ಟಿಹೋಗುಟು.

ಕುಟ್ಟೊ /*kuṭṭɔ*/ ನಾ. ಮಣ್ಣಿನ ಅತಿ ದೊಡ್ಡ ಮಡಕೆ, (ಹಿಂದಿನ ಕಾಲದಲ್ಲಿ ಒಂದು ವರ್ಷಕ್ಕೆ ಬೇಕಾದಷ್ಟು ಬೆಲ್ಲ ಮೊದಲಾದುವುಗಳನ್ನು ಇದರಲ್ಲಿ ಸಂಗ್ರಹಿಸಿಡುತ್ತಿದ್ದರು). a large clay pot used to store jaggery, etc. required for the whole year. ವಾ: ಹಿಂದೆನ ಕಾಲಲಿ ಕುಟ್ಟೊಲಿ ಬೆಲ್ಲನ ಇಸ್‌ತಿದ್ದೊಗಡ.

ಕುಟ್ಟೊಕಲ್ಲ್ /*kuṭṭɔkalli*/ ನಾ. ಮಸಾಲೆ ಪದಾರ್ಥವನ್ನು ಕುಟ್ಟುವಕಲ್ಲು. a metate/a grinding stone. ವಾ: ಕುಟ್ಟೊಕಲ್ಲ್‌ನ ತೊಳಿ.

ಕುಟ್ಟೊಳು /*kuṭṭɔḷu*/ ನಾ. ಚಾಪೆ ಹೆಣೆಯುವವರು, ಗೊರಬೆ ಹೆಣೆಯುವವರು ಮೊದಲಾದವರು ಉಪಯೋಗಿಸುವ ಬಿದಿರಿನ ಅಥವಾ ಕಬ್ಬಿಣದ ಚೂಪಾದ ಸಾಧನ. a needle like instrument made of bamboo or iron, used by certain artisans like mat makers, basket weavers, etc. ವಾ: ಮೊಂದ್ರಿ ಹೆಣೆಯವು ಕುಟ್ಟೋಳ್‌ನ ಬಳ್‌ಸುವೆ. ಪ: ಕುತ್ತೋಳು(ತು)

ಕುಟ್ಟ್ /*kuṭṭi*/ ಕ್ರಿ. 1. ಕುಟ್ಟುವುದು, 2. ಜಜ್ಜುವುದು. 1. to pound, 2. to crush. ವಾ: ಕಾಪಿ ಬ್ಯಾಳೆನ ಕುಟ್ಟ್.

ಕುಟ್ಯಾಡಿ /*kuṭya:ḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕುಟ್ರುಪ್ಪಾಡಿ /*kuṭruppa:ḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕುಟ್ರ್ ಪಕ್ಷಿ /*kuṭri pakṣi*/ ನಾ. 1. ಹಸಿರು ಹಕ್ಕಿ, 2. ಮಂಡೆಮುಕ್ರ. 1. small green barbet, 2. white-cheeked barbet. ವಾ: ನಿಂಗೆ ಕುಟ್ರ್ ಪಕ್ಷಿ ಎಲ್ಲಿ ಕಂಡತ್?

ಕುಟ್ಲಮನಿಯನ /*kuṭlamaniyana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕುಡಂಗೆ /*kuḍaŋgɛ*/ ನಾ. ಗಂಡಸರು ಧರಿಸುವ ಕಿವಿಯ ಆಭರಣ. an earring worn by men. ವಾ: ಕುಡಂಗೆ ಹಾಕಿಬುಟ್ಟೊಳ. ಪ: ಕೊಡಂಗೆ(ತು)

ಕುಡಿ[1] /*kuḍi*/ ಕ್ರಿ. 1. ಕುಡಿಯುವುದು, 2. ಪಾನ ಮಾಡು, 3. ದ್ರವ ಪದಾರ್ಥವನ್ನು ಹೀರು(ಸೇವಿಸು), 4. ಕುಡುಕ. 1. to drink, 2. to drink, 3. to sip, 4. a drunkard. **ನುಂಗಿ ನೀರ್ ಕುಡ್ದಂಗೆ(ಗಾ). ಬಂಗಾರದ ಹಕ್ಕಿ ಬಾಲಲಿ ನೀರ್ ಕುಡ್ದದೆ – ದೀಪ(ಒ).** ವಾ: ನೀರ್ ತುಂಬ ಕುಡಿ.

ಕುಡಿ[2] /*kuḍi*/ ನಾ. 1. ಉತ್ತರಾಧಿಕಾರಿ, 2. ವಂಶದ ಕುಡಿ. 1. a successor, 2. a heir. ವಾ: ವಂಸದ ಕುಡಿತ ನಮಿಗೆ ಇಂವನೊಬ್ಬನೆ ಇರ್‌ದು.

ಕುಡಿ[3] /*kuḍi*/ ನಾ. 1. ಒಕ್ಕಲು, 2. ಕಾರ್ಮಿಕರ ಸಂಸಾರ. 1. a home, 2. a family of workers. ವಾ: ಒಂದ್ ಕುಡಿ ಕೆಲ್ಸಕೆ ಒಳೊ.

ಕುಡಿ[4] /*kuḍi*/ ನಾ. ಜೇನಿನ ಸಂಸಾರ. a colony of honey bee. ವಾ: ಜೇನ್ ಪೆಟ್ಟಿಗೆಲಿ ಕುಡಿ ಸೇರ್‌ಸೊಕು.

ಕುಡಿಕೆ /*kuḍikɛ*/ ನಾ. ಕುಡಿಯಲು. to drink. ವಾ: ದನಗ ನೀರ್ ಕುಡಿಕೆ ಚೋಡ್ ಹಕ್ಕಲೆ ಬಂದೊಳೊ.

ಕುಡಿಗ್‌ಲ್ /*kuḍigili*/ ನಾ. ಚಿಕ್ಕ ಕತ್ತಿ. a small knife. ವಾ: ಕುಡಿಗ್‌ಲ್‌ದ್ ಹಿಡಿ ಮುರ್‌ದುಟು.

ಕುಡಿದು /*kuḍidu*/ ಕ್ರಿ. ಕುಡಿಯುವುದು. to drink. **ಅಂಗೈಲಿದ್ದ ಹಾವು ಬಾಲಲಿ ನೀರ್ ಕುಡ್ದದೆ – ದೀಪ(ಒ).** ವಾ: ದಿನಕೆ ನಾಕ್ ಹೊತ್ ಕಾಪಿ ಕುಡೆದು. ಪ: ಕುಡಿಯಕನ – ಕುಡಿಯುವಾಗ; ಕುಡಿಯಕಾದ್ – ಕುಡಿಯಬಾರದು; ಕುಡಿಯಕೆಂತ – ಕುಡಿಯಲೆಂದು; ಕುಡಿಯಕ್ – ಕುಡಿಯಬಹುದು; ಕುಡಿಯಕ್ಕಾಕನ – ಕುಡಿಯುವಾಗ; ಕುಡಿಯಕ್ಕಾಗಿ – ಕುಡಿಯುವುದಕ್ಕಾಗಿ; ಕುಡಿಯಕ್ಕೆ – ಕುಡಿಯುವುದಕ್ಕೆ; ಕುಡಿಯಕ್ಕೆಲ್ಲ – ಕುಡಿಯುವುದಕ್ಕೆಲ್ಲ; ಕುಡಿಯದು – ಕುಡಿಯುವುದು; ಕುಡಿಯನಿ – ಕುಡಿಯಿರಿ; ಕುಡಿಯಕ. **ಕುಡಿದ್ಲೆ** /*kuḍidlɛ*/ ಕುಡಿಯೋದಿಲ್ಲ. I will not drink. ವಾ: ಕೂಸು ಮೊದ್ದ್ ಕುಡಿದ್ಲೆ. **ಕುಡಿನಿ** /*kuḍini*/ ಕುಡಿಯಿರಿ. drink. ವಾ: ಕಾಪಿ ಕುಡಿನಿ, ಚೆಣ್ದ್ ಹೋದೆ. **ಕುಡಿಯಕು** /*kuḍiyaku*/ ಕುಡಿಯಬೇಕು. must drink. **ಉಪ್ಪ್ ತಿಂದಂವ ನೀರ್ ಕುಡಿಯಕು(ಗಾ).** ವಾ: ಕಾಸಿದ ನೀರ್‌ನೆ ಕುಡಿಯಕು. ಪ: ಕುಡಿಯಕಾಗದ್ – ಕುಡಿಯಬಾರದು. **ಕುಡಿಯಕೆ** /*kuḍiyakɛ*/ ಕುಡಿಯಲು. to drink. **ಅರಿಯಕೆ ಎಲ್ಲವು ಇದ್ರು ಕುಡಿಯಕೆ ಒಬ್ಬನೇ(ಗಾ).** ವಾ: ಕಳ್ಳ್ ಕುಡಿಯಕೆ ಹೋದರೆ ನನ್ನ ಮನೆಂದ ಹೊರೆಗೆ ಹಾಕುವೊ.

ಕುಡಿಯಕೆ ಆದೆ /*kuḍiyakɛ a:dɛ*/ ಬಾಯಾರಿಕೆ ಆಗುತ್ತದೆ. feeling thirsty. ವಾ: ಬಿಸ್‌ಲ್‌ಲಿ ಓಡಿ ಬಂದ್ ಕುಡಿಯಕೆ ಆದೆ. ಪ: ಕುಡಿಯಕೆ ಆತ್ – ಬಾಯಾರಿಕೆ ಆಗು. **ಕುಡಿಯೊಕು** /*kuḍiyoku*/ ಕುಡಿಯಬೇಕು. must drink. ವಾ: ಕಾಯ್ಲ ವಾಸಿಯಾಕೊರೆ ಮದ್ದ್ ಕುಡಿಯೊಕು. ಪ: ಕುಡಿಯೊಕ್ – ಕುಡಿಯಬೇಕು; ಕುಡಿಯೊದು – ಕುಡಿಯುವುದು; ಕುಡಿಯೊದ್ – ಕುಡಿಯುವುದು; ಕುಡಿಯೋಕು – ಕುಡಿಯಬೇಕು. **ಕುಡಿಯೊಕೆ** /*kuḍiyokɛ*/ 1. ಬಾಯಾರಿಕೆ, 2. ಕುಡಿಯುವುದಕ್ಕೆ. 1. to feel thirsty, 2. to drink. **ಉಪ್ಪು ತಿಂದಂವ ನೀರ್ ಕುಡಿಯೋಕೆ(ನು).** ವಾ: ಕುಡಿಯೊಕೆ ನಿಂಬುಳಿ ಸರ್ಬೊತ್ ಮಾಡಿ ಕೊಡಕ? ಪ: ಕುಡ್ಯಕೆ – ಕುಡಿಯಲು. **ಕುಡಿವೋಸ್ಟ್** /*kuḍivsṭi*/ 1. ಕುಡಿಯುವಷ್ಟು, 2. ಕುಡಿಯಲು ಸಾಧ್ಯವಾಗುವಷ್ಟು. 1. as much as one needs to drink, 2. to drink. ವಾ: ಅಂವ ಹೆಂಡ ಕುಡಿವೋಸ್ಟ್ ಯಾರ್ ಕುಡ್ಯದುಲೆ. ಪ: ಕುಡೀದಪ್ಪ – ಕುಡಿಯುವುದಪ್ಪ; ಕುಡೀದು – ಕುಡಿಯುವುದು; ಕುಡೀಯಕ್ಕೆ – ಕುಡಿಯುವುದಕ್ಕೆ; ಕುಡೀವಪ್ಪ – ಕುಡಿಯಬಹುದು

ಕುಡಿಯ[1] /*kuḍiya*/ ನಾ. ಕುಡುಕ. a drunkard. **ಕುಡಿಯನ ಕತೆ ಬುಡ್‌ಯ(ನು).** ವಾ: ನೀ ಬಾರಿ ದೊಡ್ಡ ಕುಡಿಯ ಆಗಿ ಬುಟ್ಟ ಅಲ.

ಕುಡಿಯ[2] /*kuḍiya*/ ನಾ. ಸಮುದಾಯದ ಹೆಸರು. a community/a tribe. ಪ: ಮಲೆಕುಡಿಯ

ಕುಡು /*kuḍu*/ ನಾ. ಹುರುಳಿ. horse gram. **ಕಡ ಕುಡು ಕೊಡೊಕಡ(ಗಾ).** ವಾ: ಕುಡು ಪಜ್ಜಿ ಲಾಯ್ಕ. ಪ: ಕುಡುಮೀನ್ ಗೈಪು – ಹುರುಳಿ ಒಣ ಮೀನು ಸಾರು

ಕುಡುಂಬಿಲ /*kuḍumbila*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಮರಪಡ್ನೂರು ಗ್ರಾಮದ ಜಾಗ. a locality in Amarapadnuru village in Sullia Taluk of Dakshina Kannada District.

ಕುಡುಂಬು /*kuḍumbu*/ ನಾ. 1. ಮೂಲ, 2. ಹುಟ್ಟು, 3. ಬೇರು, 4. ನೆಲೆ, 5. ಆದಿ, 6. ಮೊದಲು, 7. ಉತ್ಪತ್ತಿ ಸ್ಥಾನ. 1. origin, 2. birth, 3. roots, 4. a place, 4. genesis, 5. the beginning, 6. the place of birth/origin. ವಾ: ಹೆಣ್ಣ್ ಹೊನ್ನ್ ಮಣ್ಣ್ ದ್ ಕುಡುಂಬು ಹುಡ್ಕಿಕಾದ್.

ಕುಡುಕು ಪಚ್ಚೆ /*kuḍuku paccɛ*/ ನಾ. ಬಿದಿರಿನ ಸಣ್ಣ ಬಗೆಯ ಕುಕ್ಕೆ. a small basket made of bamboo. ವಾ: ಕುಡುಕು ಪಚ್ಚೆ ಎಲ್ಲಿ ಇಟ್ಟೊಳವ್ವ.

ಕುಡುಕೋಳಿರ /*kuḍuko:ḷira*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕುಡುನ ಪಜ್ಜಿ /*kuḍuna pajji*/ ನಾ. ಹುರುಳಿಯ ಚಟ್ನಿ. chutney made of horsegram. ವಾ: ರೊಟ್ಟಿಗೆ ಕುಡುನ ಪಜ್ಜಿ ತಿಂಬಕೆ ಎಂತ ಲಾಯ್ಕ ಆದೆ ಗೊತ್ತ. ಪ: ಕುಡು ಪೊಜ್ಜಿ

ಕುಡುಪು /*kuḍupu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕುಡುಪೋಳು ಜೇನು /*kuḍpo:ḷu je:nu*/ ನಾ. ಒಂದು ವಿಧದ ಜೇನಿನ ತಳಿ. a honey bee variety. ಪ: ಪಜೆಮಡ್ಕೆಲ್(ತು)

ಕುಡುಮುಂಡೂರು /*kuḍumuṇḍu:ru*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಬಾಳುಗೋಡು ಗ್ರಾಮದ ಜಾಗ. a locality in Balagodu village in Sullia Taluk of Dakshina Kannada District.

ಕುಡೆ /*kuḍɛ*/ ನಾ. 1. ಬಿಲ, 2. ಇಲಿಯ ವಾಸಸ್ಥಳ. 1. a hole, 2. rat hole. ವಾ: ಕುಡೆನ ಕಲ್ಲ್ ಹಾಕಿ ಮುಚ್ಚೊಕು.

ಕುಡೆಂಗಿಲ್ಲೆ /*kuḍɛŋgillɛ*/ ನಾ. ಕುಡಿಯುವ ಹಾಗಿಲ್ಲ. should not drink. ವಾ: ಹಸಿ ನೀರ್ ಕುಡೆಂಗಿಲ್ಲೆ.

ಕುಡೆಂಚಿ ಮರ /*kuḍɛnci mara*/ ನಾ. 1. ಒಂದು ಜಾತಿಯ ಔಷಧೀಯ ಸಸ್ಯ, 2. ಕೊಡಸಿಗೆ, 3. ಕೊಕ್ಕೆಕಾಯಿ ಮರ. 1. Rosebay, 2. a medicinal tree, Wrightia antidysenterica, R. Br. (Apocynaceae). ವಾ: ಕುಡೆಂಚಿ ಮರನ ಮೊದ್ದಿಗೆ ಬಳ್‌ಸುವೆ.

ಕುಡೆಂಬಿ /*kuḍembi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಆಲೆಟ್ಟಿ ಗ್ರಾಮದ ಜಾಗ. a locality in Aletti village in Sullia Taluk of Dakshina Kannada District.

ಕುಡೆಕಲ್ಲು /*kuḍekallu*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಆಲೆಟ್ಟಿ ಗ್ರಾಮದ ಜಾಗ. 1. family, 2. lineage, 3.

a locality in Aletti village in Sullia Taluk of Dakshina Kannada District.

ಕುಡೆಕೆ /*kuḍɛkɛ*/ ನಾ. 1. ಬಾಯಾರಿಕೆ, 2. ಕುಡಿಯಲು, 3. ದಾಹವಾಗು. 1. thirsty, 2. to drink, 3. to feel thirsty. ವಾ: ಬಾರಿ ಕುಡೆಕೆ ಆದೆ.

ಕುಡ್ಕ[1] /*kuḍka*/ ನಾ. 1. ಮದ್ಯವ್ಯಸನಿ, 2. ಮದ್ಯಪಾನಿ, 3. ಮದ್ಯಪಾನ ವ್ಯಸನಿ. 1. a drunkard, 2. an alchohol addict, 3. a person who is addicted to alcohol. ಪ: ಕುಡ್ಚೆಲ(ತು)ವಾ: ಅಂವ ಬೊರಿ ಕುಡ್ಕ.

ಕುಡ್ಕ[2] /*kuḍka*/ ನಾ. ಕುಡಿದುಕೊ. drink. ವಾ: ಬೊಚ್ಚಿರೆ ನೀರ್ ಕುಡ್ಕ.

ಕುಡ್ಕಂಡ್ /*kuḍkaṇḍɨ*/ ನಾ. ಮದ್ಯ ಸೇವಿಸಿಕೊಂಡು. drinking alcohol. ವಾ: ದಿನಾನು ಕುಡ್ಕಂಡ್ ಬಾದು. ಪ: ಕುಡ್ಕೊಂಡ್ – ಮದ್ಯ ಸೇವಿಸಿಕೊಂಡು; ಕುಡ್ಕೊಂತ – ಕುಡಿದುಕೊಳ್ಳುತ್ತಾ; ಕುಡ್ಕೊಂಬೊದು – ಕುಡಿದುಕೊಳ್ಳುವುದು

ಕುಡ್ಕೆ /*kuḍkɛ*/ ನಾ. 1. ಮಡಿಕೆ, 2. ಕುಡಿಕೆ, 3. ಮಣ್ಣಿನಿಂದ ಮಾಡಿದ ಚಿಕ್ಕ ಪಾತ್ರೆ. 1. a clay pot, 2. a clay pot , 3. a small clay pot. ವಾ: ಕುಡ್ಕೆಲಿ ಮೊಸ್ರ್ ಹೊಯ್ದಿಸುವೆ.

ಕುಡ್ಚಿಲ /*kuḍcila*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕುಡ್ಚೆಲ /*kuḍcela*/ ನಾ. ಮದ್ಯಪಾನ ವ್ಯಸನಿ. a person who is addicted to alcohol.

ಕುಡ್ತ /*kuḍta*/ ನಾ. ಅಂಗಿ. a shirt. ವಾ: ಕುಡ್ತ ಹಾಕಂಡ್ ಬಾ. ಪ: ಕುಡ್ತ – ಕುರ್ತ, ಸಣ್ಣ ಮಕ್ಕಳ ಉಡುಪು; ಕುಡ್ತ – ಬನಿಯನ್ ಲಂಗದ ಮೇಲೆ ಹಾಕುವ ರವಿಕೆ

ಕುಡ್ತ ಹಾಕ್ /*kuḍta ha:kɨ*/ ನಾ. ಬಟ್ಟೆ ಹಾಕಿಕೊಂಡು ಬಾ. wear clothes and come. ವಾ: ಹೊಸ ಕುಡ್ತ ಹಾಕಂಡ್ ಬಾ.

ಕುಡ್ತೆ /*kuḍtɛ*/ ನಾ. ಹಾಲು, ತುಪ್ಪ, ಎಣ್ಣೆಯನ್ನು ಅಳೆಯುವ ಸಾಧನ 6ಕುಡ್ತೆ = 1 ಸೇರು, 1 ಕುಡ್ತೆ=ಸುಮಾರು 165ಎಂಎಲ್. an equipment to measure milk, ghee and oil. **ಸತ್ತ ಎಮ್ಮೆಗೆ ಹತ್ತ್ ಕುಡ್ತೆ ಹಾಲ್ ಜಾಸ್ತಿಗಡ(ಗಾ).** ವಾ: ಕುಡ್ತೆಲಿ ಹಾಲ್ ತುಪ್ಪನ ಅಳೆದು. ಪ: ಕುಡ್ತೆ – ಅಕ್ಕಿ ದಾನ್ಯದ ಮಾಪನ

ಕುಡ್ತ್ /*kuḍti*/ ಕ್ರಿ. 1. ಕುಡಿದನು/ಳು, 2. ಕುಡಿಯಿತು. 1. he/she drank, 2. it drank. ವಾ: ಕೊತ್ತಿ ಹಾಲ್ ಕುಡ್ತ್. **ಕುಡ್ದಂವ** /*kuḍdanva*/ 1. ಕುಡಿದವನು, 2. ಅಮಲಾದವನು, 3. ನಶೆಯಾದವ. 1. the one who is drunk, 2. got intoxicated, 3. got inebriated. **ಏಳ್ ಕೆರೆ ನೀರ್ ಕುಡ್ದಂವ(ನು).** ವಾ: ಕುಡ್ದಂವ ಯಾಗೊಳು ಸತ್ಯನೆ ಹೇಳ್‌ದು. **ಕುಡ್ದತ್** /*kuḍdatɨ*/ 1. ಕುಡಿಯಿತು, 2. ಕುಡಿದನು/ಳು. 1. it drank, 2. he/she drank. ವಾ: ಅವ್ವ ಮಜ್ಜಿಗೆ ಕುಡ್ದತ್. ಪ: ಕುಡ್ದತ್ಲೆಂತ – ಕುಡಿಯಲಿಲ್ಲಾಂತ; ಕುಡ್ದಾಕನ – ಕುಡಿದಾಗುವಾಗ. **ಕುಡ್ದುಕುಡ್ದ್** /*kuḍdukuḍdɨ*/ 1. ಕುಡಿದು ಕುಡಿದು, 2. ವಿಪರೀತ ಮದ್ಯಪಾನ ಮಾಡಿ. excessive drinking of alcohol. ವಾ: ಕುಡ್ದುಕುಡ್ದ್ ಸತ್ತತ್. **ಕುಡ್ದುಟು** /*kuḍduṭu*/ 1. ಕುಡಿದಿದ್ದಾನೆ, 2. ತಿಳಿದುಕೊಂಡಿದ್ದಾನೆ. 1. has drunk, 2. has knowledge. **ಅರ್ದ್ ಕುಡ್ದುಟು(ನು).** ವಾ: ಓದಿ ಎಲ್ಲ ವಿಸ್ಯನು ಅರ್ದ್ ಕುಡ್ದುಟು. ಪ: ಕುಡ್ದೊ – ಕುಡಿದರು; ಕುಡ್ದ್ – ಕುಡಿದು; ಕುಡ್ದು – ಕುಡಿದು; ಕುಡ್ದ್ – ಕುಡಿದು; ಕುಡ್‌ದಾಕನ – ಕುಡಿದಾಗುವಾಗ; ಕುಡ್ದುಟ್ಟು – ಕುಡಿದಿದ್ದಾನೆ

ಕುಡ್ಪಿ /*kuḍpi*/ ನಾ. 1. ಕೊಕ್ಕಿ, 2. ಕುಟುಕಿ. 1. to peck, 2. to poke. ವಾ: ಹಕ್ಕಿಗ ಪೇರ್‌ಲ ಕಾಯಿನ ಕುಡ್ಪಿ ಹಾಕೊಳೊ. ಪ: ಕೊಡ್ಪಿ – ಕೋಳಿ ಕೊಡ್ಪಿ ಕೊಡ್ಪಿ ತೀಂತ್, ಕೊಡಪ್ಪು(ತು)

ಕುಡ್ಪೆ /*kuḍpɛ*/ ನಾ. ಸಣ್ಣ ಮಣ್ಣಿನ ಮಡಕೆ. a small clay pot. ವಾ: ಕುಡ್ಪೆ ಮೂಲೆಲುಟ್ಟು.

ಕುಡ್ಪ್ /*kuḍpi*/ ನಾ. ಅನ್ನ ಬಸಿಯಲು ಹಾಗೂ ಬಸಿದ ಅನ್ನವನ್ನು ತುಂಬಿಸಿಡಲು ಬಳಸುವ ಬೆತ್ತ ಅಥವಾ ಬಿದಿರಿನ ಸಲಾಕೆಯಿಂದ ಮಾಡಿದ ಅಗಲವಾದ ಬುಟ್ಟಿ. a large basket made of bamboo to strain the starch from the rice and to store it. ವಾ: ಕುಡ್ಪುಗೆ ಮುಚ್ಚಿಸ್. ಪ: ಕುದ್ಪೆ(ತು)

ಕುಡ್ಸ್ /*kuḍsɨ*/ ಕ್ರಿ. 1. ಕುಡಿಸು, 2. ಕುಡಿಯುವಂತೆ ಮಾಡು, 3. ಪಾನ ಮಾಡುವಂತೆ ಮಾಡು. to make someone drink/consume alcohol. **ಕಪಿಗೆ ಕಳ್ಳ್ ಕುಡ್ಸಿದಂಗೆ(ಗಾ). ನೀರ್ ಕುಡ್ಸ್(ನು).** ವಾ: ಹೊತ್ತಿಗೆ ಸೆರಿಯಾಗಿ ಮದ್ದ್ ಕುಡ್ಸ್. ಪ: ಕುಡ್ಸಿಕೆ – ಕುಡಿಸಲು. **ಕುಡ್ಸಿ** /*kuḍsi*/ 1. ಕುಡಿಸಿ(ಬ.ವ) 2. ಪಾನ ಮಾಡಿಸಿ ಕುಡಿಯುವಂತೆ ಮಾಡಿ. to make someone

drink/consume alcohol. ವಾ: ಕೂಸಿಗೆ ಹಾಲ್ ಕುಡ್ಸಿ ಬಂದದ್. ಪ: ಕುಡ್ಸಿದ್‌ಂತ – ಕುಡಿಸಿದು ಎಂದು; ಕುಡ್ಸಿರೆ – ಕುಡಿಸಿದರೆ; ಕುಡ್ಸಿವೆ – ಕುಡಿಸುತ್ತಾರೆ; ಕುಡ್ಸುದು – ಕುಡಿಸುವುದು; ಕುಡ್ಸೋಕು – ಕುಡಿಸಬೇಕು. **ಕುಡ್ಯಕೆ** /*kuḍyakɛ*/ ನಾ. 1. ಕುಡಿಯಲಿಕ್ಕೆ, 2. ಬಾಯಾರಿಕೆ. 1. to drink, 2. thirst. ವಾ: ಕುಡ್ಯಕೆ ಎಂತಾರ್ ಬೇಕಿತ್.

ಕುಡ್ಯರ್ /*kuḍyari*/ ನಾ. ಕುಡಿಯರು (ಜಾತಿವಾಚಕ ಪದ). Kudiyar community. ವಾ: ಕುಡ್ಯರ್ ನಮ್ಮ ಕಡೆ ವಳೊ.

ಕುಡ್ಯೆತಿ /*kuḍyɛti*/ ನಾ. ಕುಡಿಯತಿ. a woman from Kudiyar community. ವಾ: ಕುಡ್ಯೆತಿ ಕೆಲ್ಸಕೆ ಬಂದದೆ.

ಕುಡ್ಯೊದು /*kuḍyodu*/ ನಾ. 1. ಮದ್ಯಪಾನ ಮಾಡುವುದು, 2. ಹೆಂಡ ಕುಡಿಯುವುದು. to drink alcohol. ವಾ: ಕುಡ್ಯೊದು ನಿಲ್ಸಿಯೊಳೊ.

ಕುಡ್ಲು /*kuḍlu*/ ನಾ. ಬೆಳೆ ಕುಯ್ಯಲು ಬಳಸುವ ಕತ್ತಿ. a sickle. ವಾ: ಕುಡ್ಲು ತಕಂಡ್ ಹುಲ್ಲ್ ಕೊಯ್ಯದು.

ಕುಣಿ/ಕೊಣಿ /*kuḍs*/ ಕ್ರಿ. 1. ನೃತ್ಯ, 2. ಕುಣಿದಾಡು, 3. ಹಾರಾಡು, 4. ನರ್ತಿಸು. 1. to dance, 2. to jump around, 3. fly around, 4. to dance. ವಾ: ಮೊದುವೆಲಿ ಕುಣಿ. ಪ: ಕುಣಿತಾ – ಕುಣಿಯುತ್ತಾ; ಕುಣಿಯೊದು – ಕುಣಿಯುವುದು; ಕುಣೀದು – ಕುಣಿಯುವುದು; ಕುಣ್ದತ್ – ಕುಣಿದನು/ಳು; ಕುಣ್ದದೆ – ಕುಣಿಯುತ್ತಾನೆ/ಳೆ

ಕುತಂತ್ರ /*kutantra*/ ನಾ. 1. ಕುತಂತ್ರ, 2. ಕುಟಿಲೋಪಾಯ, 3. ಕೆಟ್ಟ ಉಪಾಯ. 1. a conspiracy, 2. a machination, 3. a wicked plan. ವಾ: ಕುತಂತ್ರ ಮಾಡಿಕಾಗದ್.

ಕುತಂತ್ರಿ /*kutantri*/ ನಾವಿ. 1. ಒಳಂಗಿದೊಳಗೆ ಮೋಸ ಮಾಡುವವ, 2. ಕಪಟಿ. 1. a plotter, 2. conspirator. ವಾ: ಬೊರಿ ಕುತಂತ್ರಿ ಬುದ್ದಿ.

ಕುತ್ಗೆ /*kutgɛ*/ ನಾ. 1. ಕುತ್ತಿಗೆ, 2. ಕೊರಳು, 3. ಕತ್ತು. neck. ವಾ: ಕುತ್ಗೆನ ಒಂದ್ ಬರಿಲಿ ಗಂಟಾಗುಟು.

ಕುತ್ತ ಸಾಲ್ /*kutta sa:li*/ ನಾ. ಕೆಳಗಿನ ಸಾಲು. a line at the bottom. ವಾ: ಕುತ್ತ ಸಾಲ್‌ಗೆ ಗೊಬ್ಬರ ಹಾಕುದು.

ಕುತ್ತ[1] /*kutta*/ ಕ್ರಿ. ಕುಳಿತು. sitting. ವಾ: ಹೊಳೆಕರೆಲಿ ಎಲ್ಲೊವು ಕುತ್ತದ್. ಪ: ಕುತ್ತ – ನೆಪ, ಸಂಕಟ, ಕಾಯಿಲೆ.

ಕುತ್ತ[2] /*kutta*/ ನಾ. 1. ಖಾಯಿಲೆ, 2. ರೋಗ, 3. ಬೇನೆ. a disease. ವಾ: ಅವು ಕುತ್ತೇಟಿ ಮಕ್ಕ ಒಂದಲ್ಲಾ ಒಂದ್ ತಪ್ಪುದುಲೆ. ಪ: ಮಂಡೆಕುತ್ತ ರೋಗ.

ಕುತ್ತ[3] /*kutta*/ ನಾ. ನೇರ-ನೆಟ್ಟಗೆ. straight. ವಾ: ಕುತ್ತ ದೊಣ್ಣೆ ಬೇಕ್. **ಕುತ್ತಮಾಡ್** /*Kuttama:ḍti*/ 1. ನೇರ ಮಾಡು, 2. ನೆಟ್ಟಗೆ ಮಾಡು. to straighten. ವಾ: ಅಂವ ಬಿದ್ದ ದೈನ ಕುತ್ತಮಾಡ್.

ಕುತ್ತಕಂಡೆ /*kuttakaṇḍɛ*/ ನಾ. ಕಾಲುಮೇಲೆ ತಲೆಕೆಳಗಾಗಿ ಬೀಳು. to fall upside down. ವಾ: ಕುತ್ತಕಂಡ ಬೀಳ್.

ಕುತ್ತಮೊಟ್ಟೆ /*kuttamoṭṭe*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ತೊಡಿಕಾನ ಗ್ರಾಮದ ಜಾಗ. a locality in Todikana village in Sullia Taluk of Dakshina Kannada District.

ಕುತ್ತಹಾರ್ಸ್ /*kuttaha:rsi*/ ನಾ. ಮೇಲಕ್ಕೆ ಹಾರಿಸು. to make something fly. ವಾ: ಬತ್ತನ ಕುಞ್ಞಮೊರಲಿ ಕುತ್ತಹಾರ್‌ಸ್.

ಕುತ್ತಿ[1] /*kutti*/ ನಾ. ಹಾಲು, ಎಣ್ಣೆ, ತುಪ್ಪ ಅಳೆಯುವ ಮಾನ 6 ಕುಡ್ತೆ ಒಂದು ಸೇರು; 1. 2 ಸೇರು = ಒಂದು ಕುತ್ತಿ. a measure of liquid, milk, oil, etc. **ಸತ್ತ ಎಮ್ಮೆಗೆ ಹತ್ ಕುತ್ತಿ ಹಾಲ್(ಗಾ).** ವಾ: ಕುತ್ತಿಲಿ ತುಪ್ಪನ ಅಳೆದು.

ಕುತ್ತಿ[2] /*kutti*/ ನಾ. 1. ಕುಟುಂಬ, 2. ಸ್ವಂತ ಅಣ್ಣ ತಮ್ಮಂದಿರ ಕುಟುಂಬ. 1. a family, 2. a family of one's brother. ವಾ: ಆ ಕುತ್ತಿನೇ ನಾಸ ಆತ್‌ಗಡ.

ಕುತ್ /*kutti*/ ಕ್ರಿ. 1. ಚುಚ್ಚು, 2. ತಿವಿ, 3. ಇರಿ, 4. ಹೊಡೆತ. 1. to pierce, 2. to penetrate, 3. to stab, 4. to hit. **ಕಣ್ಣ್ ಕುತ್ತಿರೂ ಕಾಂಬದುಲೆ(ಗಾ).** ವಾ: ಎತ್ ಕೊಂಬ್‌ಲಿ ಕುತ್ತುದು. ಪ: ಕುತ್ತಿ – ತಿವಿದು; ಕುತ್ತಿಕೆ – ತಿವಿಯಲು. **ಕುತ್ತು** /*kuttu*/ 1. ಚುಚ್ಚು, 2. ಇರಿಯು, 3. ತಿವಿ, 4. ಊರು. 1. to pierce, 2. to stab, 3. to penetrate, 2. to put something firmly. **ತುಂಬ ಪ್ರೀತಿ ಪ್ರಾಣಕ್ಕೆ ಕುತ್ತು(ಗಾ).** ವಾ: ದೊಣ್ಣೆಲಿ ಕುತ್ತು. ಪ: ಕುತ್ತಿಕಂಬೊದು – ತಿವಿದುಕೊಳ್ಳುವುದು. **ಕುತ್ತಿ** /*kutti*/

1. ಚುಚ್ಚಿ, 2. ನೆಲಕೆ ಊರಿ. 1. to stab, 2. to put firmly on to the ground. ವಾ: ತೀನನ ನೆಲಕೆ ಕುತ್ತಿಸ್. **ಕುತ್ತಿಕೊಂಡ್** /*kuttikoṇḍɨ*/ 1. ಊರಿಕೊಂಡು, 2. ನೆಲಕ್ಕೆ ಊರುತ್ತಾ. to put the walking stick, etc. firmly on to the ground. ವಾ: ದೊಣ್ಣೆನ ಕುತ್ತಿಕಂಡ್ ಹೋದು. **ಕುತ್ತಿತ್** /*kuttitɨ*/ 1. ಚುಚ್ಚಿತು, 2. ಚುಚ್ಚಿದನು, 3. ಚುಚ್ಚಿದಳು. it/he/she pierced. ವಾ: ಅರ್ವ ಹೊಲೆಕನ ಕೈಗೆ ಸೂಜಿ ಕುತ್ತಿತ್. ಪ: ಕುತ್ತಿದೊ – ಚುಚ್ಚಿದರು – ಚುಚ್ಚಿದೆವು; ಕುತ್ತಿನೆ – ಚುಚ್ಚುತ್ತೇನೆ; ಕುತ್ತುವೆ – ಚುಚ್ಚುತ್ತಾರೆ; ಕುತ್ತೊಕು – ಚುಚ್ಚಬೇಕು. **ಕುತ್ತಿದೆ** /*kuttidɛ*/ ಚುಚ್ಚುತ್ತದೆ. will pierce. ವಾ: ಬರಿ ಕಾಲ್‌ಲಿ ನಡ್ದರೆ ಮುಳ್ಳು ಕುತ್ತಿದೆ. **ಕುತ್ತಿಸಿಕಂಬದು** /*kuttisikambadu*/ 1. ಚುಚ್ಚುಮದ್ದು, 2. ಸೂಜಿಮದ್ದು, 3. ಸೂಜಿ ಚುಚ್ಚುವುದು. 1. an injection, 2. an injection, 2. injecting. ವಾ: ಜರ ಬಂದರೆ ಸೂಜಿ ಕುತ್ತಿಸಿಕಂಬದು.

ಕುತ್ತಿಕೊಡು /*kuttikoḍu*/ ನಾ. 1. ಚಾಡಿಹೇಳು, 2. ಎತ್ತಿ ಕಟ್ಟು, 3. ಇನ್ನೊಬ್ಬರ ಮೇಲೆ ದ್ವೇಷ ಹೊರಿಸುವ ಮಾತಾಡುವುದು, 4. ಪಿಸುಣು, 5. ರಹಸ್ಯವಾಗಿ ಒಬ್ಬರನ್ನು ದೂಷಿಸಿ ಇನ್ನೊಬ್ಬರ ಬಳಿ ಹೇಳುವುದು. 1. to slander, 2. to defame, 3. to express hatred about someone, 4. to slander about someone, 5. to plot against someone. ವಾ: ಮೊನ್ನಂಗೆ ಕುತ್ತಿಕೊಡ್‌ವ ಬುದ್ಧಿ ಇರಿಕಾಗದ್.

ಕುತ್ತಿಗೆ /*kuttigɛ*/ ನಾ. 1. ಕುತ್ತಿಗೆ, 2. ಕತ್ತು, 3. ಕೊರಳು, 4. ಗಂಟಲಿನ ಹೊರಭಾಗ ತಲೆ ಮತ್ತು ದೇಹವನ್ನು ಜೋಡಿಸುವ ಭಾಗ. the neck. **ಚಿನ್ನದ ಕತ್ತಿತಾ ಕುತಿಗೆ ಕೊಯ್ಯಕಾದುಲೆ(ಗಾ).** ವಾ: ಸೆಳಿಗೆ ಕುತ್ತಿಗೆಗೆ ಮಫ್ಲರ್ ಸುತ್ತಿಕಂಬದು. ಪ: ಕುತ್ತಿಗೆಗೆ – ಕೊರಳಿಗೆ

ಕುತ್ತಿಗೆ ಕೊಯ್ಯಂವ /*kuttigɛ koyyanva*/ ನಾವಿ. 1. ಅಪಾಯಕಾರಿ ವ್ಯಕ್ತಿ, 2. ಮೋಸದಿಂದ ಸೋಲಿಸುವವ, 3. ವಂಚಿಸುವ. 1. a dangerous person, 2. a fraudulent, 3. a cheater. ವಾ: ನಯಲಿ ಮಾತಾಡಿ ಹಿಂದೆಂದ ಕುತ್ತಿಗೆ ಕೊಯ್ಯಂವ ಅಂವ.

ಕುತ್ತಿಗೆಗೆ ಕಟ್ಟಿಕ /*kuttigɛgɛ kaṭṭika*/ ನಾವಿ. 1. ಅನಗತ್ಯವಾಗಿ ಎಳೆದುಕೊಂಡ ಸಮಸ್ಯೆಯನ್ನು ಅನುಭವಿಸು, 2. ಸಮಸ್ಯೆ ಎಳೆದುಕೊಳ್ಳು. inviting trouble. ವಾ: ಉಪಕಾರ ಮಾಡಿಕೆ ಹೋಗಿ ಎಲ್ಲನು ಕುತ್ತಿಗೆಗೆ ಕಟ್ಟಿಕಣ್ತ್.

ಕುತ್ತಿಮುಂಡ /*kuttimuṇḍa*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕುತ್ತಿಮುತ್ತ್[1] /*kuttimuttɨ*/ ನಾ. ಸಂತಾನ ನಾಶವಾಗು. to lose one's children. ವಾ: ಅವರ ಕುತ್ತಿಮುತ್ತ್ ಆತ್.

ಕುತ್ತಿಮುತ್ತ್[2] /*kuttimuttu*/ ನಾವಿ. ಬೈಗುಳ ಪದ. an expletive. ವಾ: ಕುತ್ತಿಮುತ್ತಿಯೇ ಹೋಗಲಿಂತ ಸಾಪ ಕೊಡ್ತು.

ಕುತ್ತುಂಗೂಳಿ /*kuttuŋgu:ḷi*/ ನಾ. 1. ಗೂಳಿ, 2. ವೃಷಭ, 3. ಎತ್ತು, 4. ಹೋರಿ, 5. ಮೀನು ಹಿಡಿಯುವ ಸಾಧನ. 1. an ox, 2. a bull, 3. a heifer, 4. male cattle, 5. a fishing tool. ವಾ: ಕುತ್ತುಂಗೂಳಿಲಿ ಮೀನ್ ಹಿಡೆದು.

ಕುತ್ತೂರು /*kuttu:ru*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕುತ್ತೆಂಗೆಲು /*kuttɛŋgɛlu*/ ನಾ. ಮಾಡಿಗೆ ಇರುವ ಆಧಾರ ಸ್ತಂಭ. a pillar supporting the roof. ವಾ: ಕುತ್ತೆಂಗೆಲುಗೆ ಪೇಂಟ್ ಮಾಡೊಕು. ಪ: ಮೋಂದಾಯ, ಕುತ್ತಂಗೋಲು

ಕುತ್ತೇಟಿ /*kuttɛ:ṭi*/ ನಾ. 1. ಸದಾ ಕಾಯಿಲೆ ಸ್ಥಿತಿಯಲ್ಲಿರುವುದು, 2. ಕೆಟ್ಟದ್ದು. 1. being in the state of illness all the time / hypochondria, 2. bad/evil. ವಾ: ಅಂವ ಬರೆ ಕುತ್ತೇಟಿನಂವ.

ಕುತ್ತೋಳ್ /*kuttɔ:ḷɨ*/ ನಾ. 1. ಹೇನು ಕೊಲ್ಲಲು ಉಪಯೋಗಿಸುವ ಮರದ ಚಿಕ್ಕ ಸಾಧನ, 2. ಕುಟ್ಟೋಳ್. small wooden instrument used to kill louse. ವಾ: ಕುತ್ತೋಳ್ ಬಳ್‌ಸಿ ಹೇನ್‌ನ ಕೊಲ್ಲುದು.

ಕುತ್ತ್ಂ ಬೊಳ್‌ಚ /*kuttɨṁ boḷɨca*/ ನಾ. ಹಿತ್ತಾಳೆಯ ದೀಪಾಲೆ ಕಂಬಗಳಲ್ಲಿ ಹಚ್ಚಿರುವ ದೀಪ. bronze lamp. ವಾ: ಕುತ್ತ್ಂ ಬೊಳ್‌ಚನ ಹೋಸಿದ್.

ಕುತ್ಯಾಡಿ /*kutya:ḍi*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಬೆಳ್ಳಾರೆ ಗ್ರಾಮದ ಜಾಗ. 1. family, 2. lineage, 3. a locality in Bellare village in Sullia Taluk of Dakshina Kannada District.

ಕುತ್ಯಾಳ /*kutya:ḷa*/ ನಾ. 1. ಕುಟುಂಬ, 2. ಮನೆತನ,

3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕನಕಮಜಲು ಗ್ರಾಮದ ಜಾಗ. a locality in Kanakamajalu village in Sullia Taluk of Dakshina Kannada District.

ಕುತ್ರಿ /*kutri*/ ನಾ. 1. ಪುನಗು ಬೆಕ್ಕು, 2. ಕಾಡು ಬೆಕ್ಕು. 1. a civet, 2. a wild cat. ವಾ: ಕುತ್ರಿನ ಹಿಡ್‌ದದ್. ಪ: ಕುತ್ರಿನ – ಪುನುಗು ಬೆಕ್ಕುವಿನ; ಕುತ್ರಿನ್ – ಪುನುಗು ಬೆಕ್ಕುವಿನ; ಕುತ್ರಿಯಾ – ಪುನುಗು ಬೆಕ್ಕಿನ

ಕುದಂಟಿ /*kudaṇṭi*/ ನಾ. 1. ಕೋಲು, 2. ಅಡರ್, 3. ಒಣಗಿದ. 1. a stick, 2. prop, 3. dried. ವಾ: ಕುದಂಟಿಗಳ ಹೆರ್ಕುದು. ಪ: ಕುದೆಂಟಿ – ದಪ್ಪಗಿನ ಸಣ್ಣ ಗಾತ್ರದ ಸೌದೆ

ಕುದನಕೋಡಿ /*kudanako:ḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕುದನೆ /*kudanɛ*/ ನಾ. 1. ಕುದುನೆಕಾಯಿ, 2. ಕಾಡಿನಲ್ಲಿ, ಬೇಲಿ ಬದಿಗಳಲ್ಲಿ ಬೆಳೆಯುವ ಹಸಿರು ಬಣ್ಣದ ದುಂಡನೆಯ ಬದನೆ ರೀತಿಯ ಸಣ್ಣ ಕಾಯಿಗಳು, 3. ಚುಂಡೆಕಾಯಿ, 4. ಕಾಡು ಬದನೆ. a wild eggplant. **ಬದನೆ ಕೊಟ್ಟ್ ಕುದನೆ ತಕಂಡ ಹಂಗೆ(ಗಾ).** ವಾ: ಮೊಸ್‌ರ್ ಉಪ್ಪು ಹಾಕಿಸಿದ ಮಿಸ್ರಣಕೆ ಚುಂಡೆಕಾಯಿನ ಹಾಕಿಸಿ ವಣ್‌ಗಿಸಿರೆ ಮೆಣ್ಸ್ ಹೊರ್‌ದಂಗೆ ಎಣ್ಣೆಲಿ ಹೊರ್‌ಕಣಕ್, ಉಂಬಕನ ಲಾಯ್ಕಾದೆ.

ಕುದಿ /*kudi*/ ಕ್ರಿ. 1. ಶಾಖದಿಂದ ಉಕ್ಕು, 2. ಕುದಿಯುವಿಕೆ, 3. ರೋಷ, 4. ಕೆರಳು, 5. ಕರುಬು, 6. ಅಸೂಯೆಪಡು. 1. to swell due to heating (usually milk etc.), 2. boiling, 3. anger, 4. enraged state, 5. to envy, 6. jealousy. ವಾ: ನಮ್ಮ ನೋಡಿಕನ ಮನ್ಸ್ ಒಳಗೆ ಕೊದೆದು. **ಕುದಿಯಕು** /*kudiyaku*/ 1. ಕುದಿಯಬೇಕು, 2. ಶಾಖದಿಂದ ಉಕ್ಕಬೇಕು. 1. should boil, 2. should swell by heat. ವಾ: ನೀರ್ ಇನ್ನ್ ಕುದಿಯಕು. ಪ: ಕುದಿಯದು – ಕುದಿಯುವುದು

ಕುದು /*kudu*/ ನಾ. 1. ಬೆಟ್ಟ, 2. ಪರ್ವತ, 3. ಗುಡ್ಡ. 1. a hill, 2. a mountain. ವಾ: ಕುದುಲಿ ನೋಡ್ ನೀರ್ ಬೀಳ್‌ದು. ಪ: ಕುದುಕಂಡ – ಬೆಟ್ಟವನ್ನು ನೋಡಿದೆಯಾ?; ಕುದ್ – ಬೆಟ್ಟ

ಕುದುಂಗು /*kuduŋgu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಐವರ್ನಾಡು ಗ್ರಾಮದ ಜಾಗ. a locality in Aivarnadu village in Sullia Taluk of Dakshina Kannada District.

ಕುದುಂಬ್ಲಾಡಿ /*kudumbla:ḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕುದುಕುಳಿ /*kuduku*ḷ*i*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕುದುಪಜೆ /*kudupaje*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕುದುಮಾರುಬೆಟ್ಟು /*kuduma:rubeṭṭu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಪಂಬೆತ್ತಾಡಿ ಗ್ರಾಮದ ಜಾಗ. a locality in Pambettadi village in Sullia Taluk of Dakshina Kannada District.

ಕುದುರು /*kuduru*/ ಕ್ರಿ. ಕುಳಿತುಕೊ. sit down. ವಾ: ನೆಲಲಿ ಕುದುರು. **ಕುದುರಮ** /*kudurama*/ 1. ಕೂರೋಣ, 2. ಕುಳಿತುಕೊಳ್ಳುವ. 1. let us sit, 2. we shall sit. ವಾ: ಸುಸ್‌ಉಗ್ಗಪ್ಪ್ ಮರದ ಕೆಳ್ಗೆ ಕುದುರಮ ಹಷ್ಟ ಹೊತ್. ಪ: ಕುದ್ರೊಮ

ಕುದುರೆ[1] /*kudurɛ*/ ನಾ. ಕೋವಿಯ ಕೊತ್ತ್‌ನ್ನು ಏರಿಸುವುದಕ್ಕೆ ಹೇಳುವ ಪದ. a trigger. ವಾ: ಕುದುರೆ ಎಳೆಕೆ ಗೊತ್ತಿಲ್ಲದವಂಗೆ ಬೆಡಿ ಎಂತಕೆ.

ಕುದುರೆ[2] /*kudurɛ*/ ನಾ. ತೋಟೆಗೆ ತಾಗುವ ಕೋವಿಯ ಭಾಗ. a trigger. ವಾ: ಕೋವಿನ ಕುದುರೆನ ಎಳಿ.

ಕುದುರೆ[3] /*kudurɛ*/ ನಾ. ಕೊಡೆಯ ದಂಡಿನಲ್ಲಿರುವ ಪಿನ್ನು. bottom spring attached at the button of an umbrella. ವಾ: ಕೊಡೆ ಬುಳುಗೊಕರೆ ಕುದುರೆ ಬೇಕ್.

ಕುದುರೆ[4] /*kudurɛ*/ ನಾ. 1. ಕುದುರೆ, 2. ಅಶ್ವ, 3. ಸವಾರಿ, ಯುದ್ಧ ಮುಂತಾದುವಕ್ಕೆ ಬಳಸುವ ನಾಲ್ಕು ಕಾಲಿನ ಪ್ರಾಣಿ. a horse. ವಾ: ಕುದುರೆ ಹೆಂಗೆ ಓಡ್‌ದು ನೋಡು.

ಕುದೊಲು ತೆಗೆದು /*kudolu tɛgɛdu*/ ನಾ. ಕೂದಲು ತೆಗೆಯುವುದು. to tonsure. ವಾ: ಕೂಸುನ ಕುದೊಲು ತೆಗೆದು ಬಾರಿ ಬಜ್ಜದ ಕೆಲ್ಸ. ಪ: ಕುಚ್ಚಿ ತೆಗೆದು

ಕುದೊಳು /*kudo:ḷu*/ ನಾ. ಸಣ್ಣ ನೇಗಿಲು. a small plough. ವಾ: ಗದ್ದೆ ಹೂಡಿಕೆ ಕುದೊಳು ಇದ್ದರೆ ಆತಿತ್.

ಕುದೋಲು/ಕುದಾಲ್ /*kudo:lu/kuda:l*/ ನಾ. 1. ಕೂದಲು, 2. ಕೇಶ, 3. ತಲೆಗೂದಲು. hair. ವಾ: ಅವ್ಳ ತಲೆ ಕುದಾಲ್ ಎಸ್ಟ್ ಉದ್ದ. ಪ: ಕೂಜಲ್(ತು)

ಕುದ್ಕ /*kudka*/ ನಾ. 1. ನರಿ, 2. ಜಾಣ. 1. fox, 2. clever. **ಕುದ್ಕನ ಮಾತ್ ಕೇಳಿ ಸಿಂಹ ಬಾಮಿಗೆ ಬೀತ್‌ಗಡ(ಗಾ).** ವಾ: ಬಿಸ್‌ಲಿರ್‌ಕನ ಮಳೆ ಬಂದರೆ ಕಾಮನ ಬಿಲ್ಲ್ ಕಂಡದೆ, ಆಗ ಮಕ್ಕ ಕುದ್ಕನ ಮೊದುವೆತ ಹೇಳ್‌ಕಂಡ್ ಕೊಣ್‌ದವೆ. ಪ: ಕುದ್ಕನ ಬುದ್ಧಿ – ನರಿಬುದ್ಧಿ; ಕುದ್ಕಂಗ – ನರಿಗಳು; ಕುದ್ಕಂಗಳ – ನರಿಗಳ; ಕುದ್ಕಂಗಳ – ನರಿಗಳ; ಕುದ್ಕಂಗೂ – ನರಿಗು; ಕುದ್ಕಂಗೆ – ನರಿಗೆ; ಕುದ್ಕನ – ನರಿಯ; ಕುದ್ಕನೂ – ನರಿಯೂ; ಕುದ್ಕನೇ – ನರಿಯೇ; ಕುದ್ಕನೊಟ್ಟಿಗೆ – ನರಿಯ ಜೊತೆ; ಕುದ್ಕನ್ – ನರಿನ; ಕುದ್ಕಯಾಗೋಳು – ನರಿ ಯಾವಾಗಲು

ಕುದ್ಕಂಡ್ /*kudkaṇḍɨ*/ ಕ್ರಿ. ಕುಳಿತುಕೊಂಡು. to sit/ sitting. ವಾ: ಹೊತಾರೆಂದ ಕುದ್ಕಂಡ್ ಉಟ್ಟು. **ಕುದ್ಕಂಬದ್** /*kudkambadɨ*/ ಕುಳಿತುಕೊಳ್ಳುವುದು. to sit down. ವಾ: ಕಾಲ್ ನೀಂಡಿ ಕುದ್ಕಂಬದ್. **ಕುದ್ಕಣ್ಣ** /*kudkaṇṇa*/ ಕುಳಿತುಕೋ ಅಣ್ಣ. sit brother (elder). ವಾ: ಬಾ ವಳೆಗೆ ಕುದ್ಕಣ್ಣ.

ಕುದ್ಕನ್ತ್ /*kudkantɨ*/ ಕ್ರಿ. 1. ಕುಳಿತುಕೊಂಡಿತು, 2. ಕುಳಿತುಕೊಂಡನು/ಳು. 1. It sat down, 2. He/She sat down. ವಾ: ನಾಯಿ ಗೂಡೊಳೆಗೆ ಕುದ್ಕನ್ತ್.

ಕುದ್ಕುಳಿ /*kudkuḷi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕುದ್ಕೊಂಡಿದ್ದಲ್ಲೆ /*kudkoṇḍiddallɛ*/ ಕ್ರಿ. ಕುಳಿತುಕೊಂಡಿದ್ದಲ್ಲೆ. apart from sitting down. ವಾ: ಕುದ್ಕೊಂಡಿದ್ದಲ್ಲೆ ಗೋಡೆಗೆ ಒರ್‌ಗಿದ್.

ಕುದ್ಕೊಂಡಿದ್ದವೆ /*kudkoṇḍiddavɛ*/ ಕ್ರಿ. ಕುಳಿತುಕೊಂಡಿರುತ್ತಾರೆ. they have sat down. ವಾ: ಮೋರಿ ಮ್ಯಾಲೆ ಕುದ್ಕೊಂಡಿದ್ದವೆ. ಪ: ಕುದ್ಕೊಂಡಿದ್ದೆ – ಕುಳಿತುಕೊಂಡಿದ್ದೆ; ಕುದ್ಕೊಂಡು – ಕುಳಿತುಕೊಂಡು; ಕುದ್ಕೊಂಡುಟ್ಟಲ್ಲ – ಕುಳಿತುಕೊಂಡಿದ್ದಾನಲ್ಲ; ಕುದ್ಕೊಂಡುಟ್ಟು – ಕುಳಿತುಕೊಂಡಿದ್ದಾನೆ; ಕುದ್ಕೊಂಡೇ – ಕುಳಿತುಕೊಂಡೇ; ಕುದ್ಕೊಂಡ್ – ಕುಳಿತುಕೊಂಡು;

ಕುದ್ಕೊಂಬೊದು /*kudkombɔdu*/ ಕ್ರಿ. ಕುಳಿತುಕೊಳ್ಳುವುದು. sitting down. ವಾ: ಕೆಲ್‌ಸ ಮಾಡದೆ ಕುದ್ಕೊಂಬೊದು ಬಜ್ಜ.

ಕುದ್ಕೊನಿ /*kudkoni*/ ಕ್ರಿ. ಕುಳಿತುಕೊಳ್ಳಿ. sit down (request). ವಾ: ಬನ್ನಿ ಇಲ್ಲಿ ಕುದ್ಕೊನಿ.

ಕುದ್ಕೊನೆ /*kudkonɛ*/ ಕ್ರಿ. ಕುಳಿತುಕೊ (ಏಕವಚನ ಸಂಬೋಧನೆ). sit down (order). ವಾ: ಬಾನೆ ಹಕ್ಕಲೆ ಕುದ್ಕೊನೆ.

ಕುದ್ದ[1] /*kudda*/ ಕ್ರಿ. ನೀನು ಕುಳಿತುಕೊಂಡೆ. you sat. **ಕದ್ದ್ ಹೋದ ಮೇಲೆ ಪಾರ ಕುದ್ದಂಗೆ(ಗಾ).** ವಾ: ನೀ ಇಲ್ಲಿ ಕುದ್ದ ಅಲಾ? ಪ: ಕುದ್ದನ – ಕುಳಿತೆಯ

ಕುದ್ದ[2] /*kudda*/ ಕ್ರಿ. ಕುಳಿತೆಯಾ? Did you sit down? **ಅಲ್ಲಿ ಕೊಣ್ದ್ ಇಲ್ಲಿ ಕೊಣ್ದ್ ಮೂಲೆಲಿ ಕುದ್ದದೆ – ಮೊಂದ್ರಿ(ಒ).** ವಾ: ಬಸ್ಸ್‌ಲಿ ಕುದ್ದನ? ಪ: ಕುದ್ದತ್ಲೆ – ಕುಳಿತುಕೊಳ್ಳಲಿಲ್ಲ; ಕುದ್ದನ – ಕುಳಿತೆಯ; ಕುದ್ದಲ್ಲಿಂದ – ಕುಳಿತಲ್ಲಿಂದ. **ಕುದ್ದಂವ** /*kuddanva*/ ಕುಳಿತುಕೊಂಡವ. the one who has sat down. ವಾ: ಹೊತಾರೆ ಹೋಗಿ ಕುದ್ದಂವ ನಾ ಅಲ್ಲೆ ಬಾಕಿ. ಪ: ಕುದ್ದವಂಗೆ – ಕುಳಿತುಕೊಂಡವನಿಗೆ; ಕುದ್ದಂವಂಗೆ – ಕುಳಿತುಕೊಂಡವನಿಗೆ; ಕುದ್ದವನ – ಕುಳಿತುಕೊಂಡವನ; ಕುದ್ದವೆ – ಕೂರುತ್ತೇವೆ/ ಕೂರುತ್ತಾರೆ; ಕುದ್ದವೆಗಡ – ಕುಳಿತುಕೊಳ್ಳುತ್ತಾರಂತೆ; ಕುದ್ದವ್ – ಕುಳಿತವರು; ಕುದ್ದವೆಂತ – ಕುಳಿತುಕೊಳ್ಳುತ್ತೇವೆಂದು. **ಕುದ್ದತ್‌ಗಡ** /*kuddatɨgaḍa*/ ಕುಳಿತನಂತೆ. it seems, he sat down. ವಾ: ಜೇನ್ ಒಕ್ಕಲ್ ಕುದ್ದತ್ ಗಡ. **ಕುದ್ದದ್** /*kuddadɨ*/ ಕುಳಿತುಕೊಂಡದ್ದು. sitting down, sat down. ವಾ: ಕೊತ್ತಿ ಬಾಲನ ಮೊಡ್ಷಿ ಕುದ್ದದ್ ನೋಡ್. ಪ: ಕುದ್ದದ್‌ಂತ – ಕುಳಿತಿರುವುದು ಎಂದು; ಕುದ್ದನೆ – ಕುಳಿತುಕೊಳ್ಳುತ್ತೇನೆ; ಕುದ್ದರಿ – ಕುಳಿತುಕೊಂಡಿರಿ; ಕುದ್ದರೂ – ಕುಳಿತರೂ; ಕುದ್ದರೆ – ಕುಳಿತರೆ/ ಕುಳಿತುಕೊಂಡರೆ; ಕುದ್ದಲ್ಲಿ – ಕುಳಿತಲ್ಲಿ; ಕುದ್ದಲ್ಲಿಗೆ – ಕುಳಿತಲ್ಲಿಗೆ; ಕುದ್ದಲ್ಲೆ – ಕುಳಿತಲ್ಲಿಯೆ; ಕುದ್ದಲ್ಲೇ – ಕುಳಿತಲ್ಲಿಯೇ. **ಕುದ್ದುರ್‌ದು** /*kuddurdu*/ 1. ಕುಳಿತುಕೊಳ್ಳುವುದು, 2. ಆಸೀನವಾಗುವುದು. 1. sitting, 2. to have a seat. ವಾ: ಸುಸ್ತಾದರೆ ಮರದ ನೆಳಲ್‌ಲಿ ಕುದ್ದುರ್ದು ಒಳ್ಳೆದ್. ಪ: ಕುದ್ದುರ್ದುಲೆ – ಕುಳಿತುಕೊಳ್ಳುವುದಿಲ್ಲ

ಕುದ್ದತ್[1] /*kuddatɨ*/ ಕ್ರಿ. ಕುದಿಯಿತು. boiled. ವಾ: ನೀರ್ ಕುದ್ದತ್. ಪ: ಕುದ್ದದೆ – ಕುದಿಯುತ್ತದೆ

ಕುದ್ದತ್[2] /*kuddatɨ*/ ಕ್ರಿ. ಕುಳಿತನು (ಳು), ಕುಳಿತ. he/she sat down. ವಾ: ನೆಲಲಿ ಕುದ್ದತ್. ಪ: ಕುದ್ದತ್ – ಕುಳಿತನು, ಕುಳಿತಳು, ಕುಳಿತಿತು

ಕುದ್ದಳ /*kuddaḷa*/ ಕ್ರಿ. ಏವ. 1. ಕುಳಿತಿದ್ದಿ? 2. ಕುಳಿತಿದ್ದೀಯ? 1. are you sitting?, 2. are you sitting? ವಾ: ಅಲ್ಲೆ ಎಲ್ಲ ಹೊರ್‌ಗೆ ಕುದ್ದಳ. ಪ: ಕುದ್ದಾಕನ – ಕುಳಿತಾಗುವಾಗ; ಕುದ್ದಾಂಗೆ – ಕುಳಿತುಕೊಳ್ಳುತ್ತಿದ್ದಂತೆ; ಕುದ್ದಾಂತ – ಕುಳಿತುಕೊಂಡೆಯಾಂತ; ಕುದ್ದಾತ್ – ಕುಳಿತಾಯಿತು; ಕುದ್ದಿರಿಕನ – ಕುಳಿತಿರುವಾಗ; ಕುದ್ದಳನ – ಕುಳಿತಿದ್ದೀಯ?

ಕುದ್ದಿದ್ದೊ /*kuddiddɔ*/ ಕ್ರಿ. ಕುಳಿತಿದ್ದರು. they were sitting. ವಾ: ಆಗಳೆ ಕಟ್ಟೆ ಹಕ್ಕಲೆ ನಾವೆಲ್ಲ ಕುದ್ದಿದ್ದೊ. ಪ: ಕುದ್ದಿದ್ದೊವು – ಕುಳಿತುಕೊಂಡವರು

ಕುದ್ದುಟು /*kudduṭu*/ ಕ್ರಿ. ಕುಳಿತಿದ್ದಾನೆ (ಳೆ). he/she sat down. **ಹಡಿಕೆ ದೆವ್ವ ಹಟ್ಟಂಗೆ ಹಟ್ಟುಟ್ಟು, ಈಗ ಕುರೆ ಕುದ್ದಂಗೆ ಕುದ್ದುಟ್ಟು(ಗಾ).** ವಾ: ಕಟ್ಟೆ ಹಕ್ಕಲೆ ಒಂದೇ ಕುದ್ದುಟು. ಪ: ಕುದ್ದುಟ್ಟು – ಕುಳಿತಿದ್ದಾನೆ(ಳೆ); ಕುದ್ದುಟ್ಟ್ – ಕುಳಿತಿದ್ದಾನೆ(ಳೆ);

ಕುದ್ದುರಿ /*kudduri*/ ಕ್ರಿ. ಕುಳಿತುಕೊಳ್ಳಿ. please sit down. ವಾ: ಹಙ್ಗ ಹೊತ್ ಕುದ್ದುರಿ. ಪ: ಕುದ್ದುರು – ಕುಳಿತುಕೊ

ಕುದ್ದೊ /*kuddɔ*/ ಕ್ರಿ. 1. ಕುಳಿತರು, 2. ಕುಳಿತೆವು. 1. they sat down, 2. we sat down. ವಾ: ಎಲ್ಲೊವು ಬೆಂಕಿ ಹಾಕಂಡ್ ಸುತ್ತೊಳು ಕುದ್ದೊ. ಪ: ಕುದ್ದೋಂತ – ಕುಳಿತರೆಂದು

ಕುದ್ದೊಳೊ /*Kuddɔḷɔ*/ ಕ್ರಿ. ಬವ. 1. ಕುಳಿತಿದ್ದಾರೆ, 2. ಕುಳಿತಿದ್ದೀರಾ? 1. they have sat down, 2. are you sitting? ವಾ: ಅಲ್ಲೆ ಎಲ್ಲ ಹೊರಗೆ ಕುದ್ದೊಳೊ. ಪ: ಕುದ್ದೊಳೊಂತ – ಕುಳಿತಿದ್ದಾರೆಂದು

ಕುದ್ದ್ /*Kuddɨka*/ ಕ್ರಿ. ಏವ. ಕುಳಿತು. to sit. **ಕುದ್ದ್ ಉಂಡರೆ ಕುಡಿಕೆ ಹೊನ್ನ್ ಸಾಲ್ದುಲೆಗಡ(ಗಾ).** ವಾ: ಕುದ್ದ್ ಕುದ್ದ್ ಸಾಕಾತ್. ಪ: ಕುದ್ದಾಕನ – ಕುಳಿತಾಗುವಾಗ; ಕುದ್ದುಟು – ಕುಳಿತಿದೆ/ಕುಳಿತಿದ್ದಾನೆ/ಳೆ; ಕುದ್ದ್‌ರಾಂವ – ಕುಳಿತು ಕೊಳ್ಳುವವ; ಕುದ್ದ್‌ರುದು – ಕೂರುವುದು; ಕುದ್ದ್‌ರ್ಸಿ – ಕುಳ್ಳರಿಸಿ; ಕುದ್ದ್ಕಂಡೊಲೊ – ಕುಳಿತುಕೊಂಡಿದ್ದಾರೆ; ಕುದ್ದ್‌ಕಂಡ್ – ಕುಳಿತುಕೊಂಡು; ಕುದ್ದ್‌ಕನ್ತ್ – ಕುಳಿತುಕೊಂಡನು/ಳು/ ಕುಳಿತುಕೊಂಡಿತು; ಕುದ್ದ.

ಕುದ್ದ್‌ಕ /*Kuddɨka*/ ಕುಳಿತುಕೊ. sit down. ವಾ: ಕಟ್ಟೆಲಿ ಕುದ್ದ್‌ಕನೆ. ಪ: ಕುದ್ದ್‌ಕೊಂಡಿದ್ದವೆ – ಕುಳಿತುಕೊಂಡಿರುತ್ತಾರೆ; ಕುದ್ದ್‌ಕೊಂಡಿದ್ದೆ – ಕುಳಿತುಕೊಂಡಿದ್ದೆ; ಕುದ್ದ್‌ಕೊಂಡು – ಕುಳಿತುಕೊಂಡು; ಕುದ್ದ್‌ಕೊಂಡುಟ್ಟಲ್ಲ – ಕುಳಿತುಕೊಂಡಿದ್ದಾನಲ್ಲ; ಕುದ್ದ್‌ಕೊಂಡುಟು – ಕುಳಿತುಕೊಂಡಿದ್ದಾನೆ; ಕುದ್ದ್‌ಕೊಂಡೆ – ಕುಳಿತುಕೊಂಡೇ; ಕುದ್ದ್‌ಕೊಂಡ್ – ಕುಳಿತುಕೊಂಡು.

ಕುದ್ದ್‌ಕಂಡ್ /*kuddɨ kɘṇḍɨ*/ ಕುದಿಯುತ್ತ. boiling/while boiling. ವಾ: ಹಾಲ್ ಕುದ್ದ್ ಕಂಡ್ ಉಟ್ಟು.

ಕುದ್ದ್‌ಕಣಕು /*kuddɨ kaṇaku*/ ಕುಳಿತುಕೊಳ್ಳಬೇಕು. should sit down. ವಾ: ಮೊಂದ್ರಿಲಿ ಕುದ್ದ್ ಕಣಕು. ಪ: ಕುದ್ದ್‌ಟು – ಕುಳಿತಿದೆ/ಕುಳಿತಿದ್ದಾನೆ/ಳೆ

ಕುದ್ದ್‌ಕುದ್ದ್ /*kuddɨ kuddɨ*/ ಕ್ರಿ. ಕುಳಿತು ಕುಳಿತು. monotony, boredom due to sitting continuously. ವಾ: ಬಸ್ ಬರೋಗಂಟ ಕುದ್ದ್ ಕುದ್ದ್ ಸಾಕಾತ್. ಪ: ಕುದ್ದುಕೊಂಡು – ಕುಳಿತುಕೊಂಡು; ಕುದ್ದುಕೊಂಡುಟ್ಟಾಂತ – ಕುಳಿತುಕೊಂಡಿದೆಯಾಂತ; ಕುದ್ದುಕೊಂಡುಟ್ಟು – ಕುಳಿತುಕೊಂಡಿದೆ/ಕುಳಿತುಕೊಂಡಿದ್ದಾನೆ/ ಕುಳಿತುಕೊಂಡಿದ್ದಾಳೆ; ಕುದ್ದುಕೊಂಡೆ – ಕುಳಿತುಕೊಂಡೆ; ಕುದ್ದುಕೊಂಡ್ – ಕುಳಿತುಕೊಂಡು; ಕುದ್ದುಕೊಂತ – ಕುಳಿತುಕೋಂತ; ಕುದ್ದುಕೊನಿ – ಕುಳಿತುಕೊಳ್ಳಿ

ಕುದ್ದ್‌ಟು /*kuddɨṭu*/ ಕ್ರಿ. ಕುಳಿತಿದ್ದಾನೆ(ಳೆ). he/she sat down. **ಸುತ್ತ್ ಸುತ್ತ್ ಬಂದೀಯ ನಂಗಾಗಿ ಮೇಲೊಬ್ಬ ಕುದ್ದುಟು ನಿಂಗಾಗಿ – ಬೀಸೋಕಲ್ಲ್(ಒ).** ವಾ: ಅವುಳು ಮರದ ಕೆಳೆಗೆ ಕುದ್ದುಟು. ಪ: ಕುದ್ದುಟ – ಕುಳಿತಿದ್ದಾಳ/ನ

ಕುದ್ದ್‌ರ್ /*kuddɨri*/ ಕ್ರಿ. ಕುಳಿತುಕೊ. sit down. ವಾ: ಸುಮ್ಮನೆ ಕುದ್ದ್‌ರ್. ಪ: ಕುದ್ರ್‌ಕನ – ಕುಳಿತು ಕೊಳ್ಳುವಾಗ; ಕುದ್ರುದು – ಕುಳಿತು ಕೊಳ್ಳು

ಕುದ್ವಾಜೆ /*kudpa:je*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ನೆಲ್ಲೂರು ಕೆಮ್ರಾಜೆ ಗ್ರಾಮದ ಜಾಗ. a

locality in Nelluru Kemraje village in Sullia Taluk of Dakshina Kannada District.

ಕುದ್ಮಾರ್ /*kudma:r*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕುದ್ಯೋನೀರ್ /*kudyo:ni:rɨ*/ ನಾ. ಕುದಿಯುವ ನೀರು. boiling water. ವಾ: ಕುದ್ಯೋನೀರ್ ಕಾಲಿಗೆ ಹೊಯ್‌ಕನ್ತ್. ಪ: ಕುದ್ಯೊ ನೀರ್‌ಲಿ – ಕುದಿಯುವ ನೀರ್‌ಲಿ

ಕುದ್ರಣ್ಣ /*kudraṇṇa*/ ಕ್ರಿ. ಕುಳಿತುಕೊಳ್ಳಿ ಅಣ್ಣ. please sit down brother. ವಾ: ನಿತ್ತದ್ಯಾಕೆ ಕುದ್ರಣ್ಣ.

ಕುದ್ರವ್ವ /*kudravva*/ ಕ್ರಿ. ಕುಳಿತುಕೊಳ್ಳಿ ಅವ್ವ. please sit down mother. ವಾ: ಅಲ್ಲಿ ಕುದ್ರವ್ವ. ಪ: ಕುದ್ರಾದಿರಿಕಿಲೆ – ಕುಳಿತು ಕೊಳ್ಳದೆ ಇರುವುದಿಲ್ಲ; ಕುದ್ರಿ – ಕುಳಿತುಕೊಳ್ಳಿ; ಕುದ್ರಿಕನ – ಕುಳಿತುಕೊಳ್ಳುವಾಗ; ಕುದ್ರಿಕಾಕನ – ಕುಳಿತುಕೊಳ್ಳುವಾಗ

ಕುದ್ರಿ /*kudri*/ ಕ್ರಿ. ಕುಳಿತುಕೊಳ್ಳಿ. please sit down. ವಾ: ಬನ್ನಿ ಕುದ್ರಿ. ಪ: ಕುದ್ರಿಕೆ – ಕೂರಲಿಕ್ಕೆ. **ಕುದ್ರಕೆ** /*kudrakɛ*/ ಕುಳಿತುಕೊಳ್ಳುವುದಕ್ಕೆ. to sit down. ವಾ: ಕುದ್ರಕೆ ಮೊಂದ್ರಿ ಹಾಸಕಾಗಿತ್. ಪ: ಕುದ್ರಿಕೆ. **ಕುದ್ರಿಕಾಗದ್** /*kudrika:gadɨ*/ ಕುಳಿತುಕೊಳ್ಳಬಾರದು. don't sit down. **ತಲೆಗೆ ಕೈ ಹೊತ್ತ್ ಕುದ್ರಿಕಾಗದ್(ನು).** ವಾ: ಐಮರಲಿ ಕುದ್ರಿಕಾಗದ್.

ಕುದ್ರಿಕೆ[1] /*kudrikɛ*/ ಕ್ರಿ. ಕುಳಿತುಕೊಳ್ಳುವುದಕ್ಕೆ. to sit down. ವಾ: ಕುದ್ರಿಕೆ ಮೊಂದ್ರಿ ಹಾಸಕಾಗಿತ್. ಪ: ಕುದ್ರಿಕೆ ಮುಂದೆ – ಕುಳಿತುಕೊಳ್ಳುವ ಮೊದಲು.

ಕುದ್ರಿಕೆ [2] /*kudrikɛ*/ ಕ್ರಿ. ಕುಳಿತುಕೊಳ್ಳಲು. sit down. ವಾ: ಕುದ್‌ರಿಕೆ ಇಲ್ಲಿ ಜಾಗೆ ಇಲ್ಲೆ. ಪ: ಕುದ್ಕಂತ – ಕುಳಿತುಕೊಳ್ಳಲೆಂದು

ಕುದ್ರಿಸಿ /*kudrisi*/ ಕ್ರಿ. 1. ಕೂರಿಸಿ, 2. ಕುಳ್ಳಿರಿಸಿ. to make some sit. ವಾ: ಉಗ್ಗಪ್ಪನ ಮನೆಲಿ ಕುದ್ರಿಸಿ ಬಂದೊಳೆ. ಪ: ಕುದ್ರಿಸಿಕಂಡ್ – ಕುಳ್ಳಿರಿಸಿಕೊಂಡು; ಕುದ್ರಿಸಿಕನ್ತ್ – ಕುಳ್ಳಿರಿಸಿಕೊಂಡನು/ಳು; ಕುದ್ರಿಸಿತ್ – ಕುಳ್ಳಿಸಿದ; ಕುದ್ರಿಸಿದೊ – ಕುಳ್ಳಿರಿಸಿದರು; ಕುದ್ರಿಸಿನೆಂತ – ಕೂರಿಸುತ್ತೇನೆಂದು; ಕುದ್ರುದುಗಡ – ಕುಳಿತುಕೊಳ್ಳುವುದಂತೆ; ಕುದ್ರುವ – ಕೂರುವ; ಕುದ್ರುಸು – ಕುಳ್ಳಿರಿಸು; ಕುದ್ರೊಕಷ್ಟೆ – ಕುಳಿತುಕೊಳ್ಳಬೇಕು.

ಕುದ್ರುದುಲೆ /*kudrudulɛ*/ ಕ್ರಿ. ಕುಳಿತುಕೊಳ್ಳುವುದಿಲ್ಲ. won't sit. ವಾ: ಕುರೆಗ ಕುದ್ದಲಿ ಕುದ್ರುದುಲೆ. ಪ: ಕುದ್ರುದುಲೆಂತ – ಕುಳಿತುಕೊಳ್ಳುವುದಿಲ್ಲವೆಂದು.

ಕುದ್ರುಸ್ /*kudrusɨ*/ ನಾ. ಪೆಟ್ಟುಕೊಡು. to beat/to hit someone. ವಾ: ಅಂವಂಗೆ ಎರ್ಡ್ ಕುದ್ರಿಸಿಯೊಳೆ.

ಕುದ್ರೆ[1] /*kudrɛ*/ ನಾ. 1. ಕುದುರೆ, 2. ಅಶ್ವ. horse. **ರಾಯನ ಕುದ್ರೆ ಕತ್ತೆ ಆದಂಗೆ(ಗಾ). ಕೆಂಪು ಕುದ್ರೆಗೆ ಉದ್ದ ಬಾಲ ಒಬ್ಬ ಹತ್ತಿದೆ ಇನ್ನೊಬ್ಬ ಇಳ್ದದೆ – ಬೆಂಕಿ, ಬಾಣಲೆ, ದ್ವಾಸೆ(ಒ).** ವಾ: ಕುದ್ರೆನ ಲಾಯಲಿ ಕಟ್ಟುದು. ಪ: ಕುದ್‌ರೆ – ಕುದುರೆ; ಕುದ್‌ರೆಗಳ – ಕುದುರೆಗಳ; ಕುದ್‌ರೆಲಿ – ಕುದುರೆಯಲ್ಲಿ. **ಕುದ್ರೆ ಲಡ್ಡಿ** /*kudrɛ laḍḍi*/ ಕುದುರೆಯ ಮಲ. horse poop/horse excrement. ವಾ: ಕುದ್ರೆ ಲಡ್ಡಿ ಮೆಟ್ಟಿದ್.

ಕುದ್ರೆ[2] /*kudrɛ*/ ನಾ. ಗತ್ತಿನಿಂದ ಓಡಾಸುವ ಹುಡುಗಿಯರನ್ನು ಬೈಯುವ ಪದ. an abuse used for girls. ವಾ: ಏ ಕುದ್ರೆ ನೀ ಒಮ್ಮೆ ಸುಮ್ಮನೆ ಕುದ್ರ್.

ಕುದ್ರೆಗೋಸ್ /*kudrɛ go:sɨ*/ ನಾ. ಗಂಡು ಕುದುರೆಯ ಜನನಾಂಗ. penis of a horse. ವಾ: ಕುದ್ರೆ ಗೋಸ್ ನೋಡ್.

ಕುದ್ರ್‌ಬೇಡಿ /*kudrɨbɛ:ḍi*/ ಕ್ರಿ. ಕುಳಿತುಕೊಳ್ಳಬೇಡಿ. do not sit down. ವಾ: ಐಮರಲಿ ಕುದ್ರ್‌ಬೇಡಿ.

ಕುದ್ರ್‌ವಲ್ಲೆ /*kudrɨvallɛ*/ ಕ್ರಿ. ಕುಳಿತಲ್ಲೇ. from where one is sitting. ವಾ: ಕುದ್ರ್‌ವಲ್ಲೆ ಜೊಂಪು ಹತ್ತಿತ್. ಪ: ಕುದ್ರ್‌ವೊ – ಕುಳಿತುಕೊಳ್ಳಬಹುದು; ಕುದ್ರ್‌ಸಿ – ಕುಳ್ಳಿರಿಸಿ; ಕುದ್ರ್‌ಸಿದೊ – ಕುಳ್ಳಿರಿಸಿದರು; ಕುದ್ರ್‌ಸಿದ್ – ಕುಳ್ಳಿರಿಸಿದ್ದು; ಕುದ್ರ್‌ಸು – ಕುಳ್ಳಿರಿಸುವುದು

ಕುದ್ವ /*kudva*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕುತ್ಕುಂಜ ಗ್ರಾಮದ ಜಾಗ. 1. family, 2. lineage, 3. a locality in Kutkunja village in Sullia Taluk of Dakshina Kannada District.

ಕುಪ್ಪ[1] /*kuppa*/ ನಾ. ಕೆಂಬೂತ ಹಕ್ಕಿಯ ಬಣ್ಣದ ಹುಂಜ. a purple rooster. ವಾ: ಕುಪ ಹಾರ್‌ದೆ.

ಕುಪ್ಪ[2] /*kuppa*/ ನಾ. ಸಣ್ಣ ಮಕ್ಕಳ ಹೊಸಬಟ್ಟೆ. new clothes of children. ವಾ: ಹೊಸ ಕುಪ್ಪ ಹಾಕೊನೊ.

ಕುಪ್ಪಸ /*kuppasa*/ ನಾ. 1. ಕೊಡಗಿನ ಗೌಡರ ಉದ್ದನೆಯ ಬಿಳಿ ನಿಲುವಂಗಿ, 2. ಅರೆಭಾಷೆ ಗೌಡರ ಸಾಂಪ್ರದಾಯಿಕ ಬಿಳಿ ಉಡುಗೆ, 3. ಮಗುವಿನ ಧಿರಿಸು. 1. a cloak worn by Gowda men of Kodagu, 2. Traditional white dress worn by men of Gowda community. **ಕೂಸು ಹುಟ್ಟಿಕೆ ಮುಂದೆ ಕುಪ್ಪಸ ಹೊಲ್ಸುದು(ಗಾ).** ವಾ: ಕುಪ್ಪಸ ಹಾಕಿ ಜಂಬರಕೆ ಹೋಕು.

ಕುಪ್ಪಸ ದಟ್ಟಿ /*Kuppasa daṭṭi*/ ನಾ. 1. ಗೌಡರ ಸಾಂಪ್ರದಾಯಿಕ ಉಡುಗೆ, 2. ಸೊಂಟಕ್ಕೆ ಸುತ್ತುವ ಬಟ್ಟೆ. 1. Traditional white dress worn by men of Gowda community, 2. a cloth worn around one's waist. ವಾ: ಕುಪ್ಪಸ ದಟ್ಟಿ ಕಟ್ಟಿಕ.

ಕುಪ್ಪಳ್ಸ್ /*kuppaḷisi*/ ನಾ. 1. ಕುಪ್ಪಳಿಸು, 2. ಹಾರು, 3. ನೆಗೆದಾಡು. 1. to jump, 2. to fly, 3. to jump around. ವಾ: ಕುಸಿಲಿ ಕುಪ್ಪಳಸ್.

ಕುಪ್ಪಿ[1] /*kuppi*/ ನಾ. 1. ಗಾಜು, 2. ಗಾಜಿನ ಬಾಟ್ಲಿ, 3. ಸೀಸೆ. 1. glass, 2. a glass bottle 3 bottle. **ದುಡ್ಡುನ ಆಸೆಗೆ ತುಪ್ಪ ಮಾರಿ, ಕುಪ್ಪಿ ನೆಕ್ಕಿತ್‌ಗಡ(ಗಾ). ಒಂದ್ ಕುಪ್ಪಿಲಿ ಎರಡ್ ತರ ಎಣ್ಣೆ – ಮೊಟ್ಟೆ(ಒ).** ವಾ: ಒಂದು ಕುಪ್ಪಿ ಕಸಾಯ ಕೊಟ್ಟೊಳೊ. ಪ: ಕುಪ್ಪಿ ಚೂರು, ಕುಪ್ಪಿ ಬಾಟ್ಲಿ, ಕುಪ್ಪಿ ಬಳೆ. **ಕುಪ್ಪಿ ಗಲಾಸ್** /*kuppi gala:si*/ 1. ಗಾಜಿನ ಲೋಟ, 2. ಗಾಜಿನ ಸೀಸೆ. 1. a glass, 2. a glass bottle. ವಾ: ಕುಪ್ಪಿ ಗಲಾಸ್ ಲಿ ಚಾ ಕುಡ್ಯಕು. **ಕುಪ್ಪಿ ತಂಬಾ** /*kuppi tamba:*/ ಗಾಜಿನ ಬಾಟಲಿ ತೆಗೆದುಕೊಂಡು ಬಾ. bring a glass bottle. ವಾ: ನಾಕ್ ಕುಪ್ಪಿ ತಂಬಾ. ಪ: ಕುಪ್ಪಿಂತಾ – ಬಾಟಲಿಂತ; ಕುಪ್ಪಿನು – ಬಾಟಲಿಯನ್ನು.

ಕುಪ್ಪಿ[2] /*kuppi*/ ನಾ. 1. ಸರಾಯಿ, 2. ಹೆಂಡ, 3. ಕಳ್ಳು. 1. alcohol, 2. alcoholic drink, 3. toddy. ವಾ: ಒಂದ್ ಕುಪ್ಪಿ ಕುಡ್ದರೆ ಯದಾ ಆದು.

ಕುಪ್ಪುಳು /*kuppuḷu*/ ನಾ. 1. ಜಂಬುಕ ಪಕ್ಷಿ, 2. ಕೆಂಬೂತ, 3. ಸಂಬಾರ ಕಾಗೆ, 4. ಭರದ್ವಾಜ ಪಕ್ಷಿ. Greater Coucal or Crow Pheasant. **ಕುಪ್ಪುಳು ಕಣ್ಣ್ ಚಪ್ಪರ ತಲೆ(ಗಾ).** ವಾ: ಕಾಗೆ ಕಪ್ಪ್ ಕುಪ್ಪುಳು ಕೆಂಪ್.

ಕುಪ್ಪುಳ್ಳು /*kuppuḷḷu*/ ನಾ. ನೆಗೆಯುತ್ತಾ ಸಾಗುವುದು. to jump and move forward. ವಾ: ಕುಪ್ಪುಳ್ಳು ಹಾಕಂಡ್ ಹೋದು.

ಕುಪ್ಪೆ /*kuppɛ*/ ನಾ. 1. ಹೊಲಸು ತಿಪ್ಪೆ, 2. ಗುಡ್ಡೆ, 3. ರಾಶಿ, 4. ಕೊಪ್ಪೆ. 1. garbage, 3. a heap of trash, 3. a heap, 4. a heap of waste. ವಾ: ಕುಪ್ಪೆಗೆ ಬೆಂಕಿ ಕೊಡೊಕು.

ಕುಪ್ಪೆ ಪಂಜುರ್ಲಿ /*kuppɛ paŋjurli*/ ನಾ. ಅರೆಭಾಷಿಗರು ಆರಾಧಿಸಲ್ಪಡುವ ಭೂತ. Kuppe Panjurli, a bhuta/deity worshpped by Are Bhase speaking communities. ವಾ: ದೂಮಾವತಿನೊಟಿಗೆ ಕುಪ್ಪೆ ಪಂಜುರ್ಲಿ ಇದ್ದಂಗೆ.

ಕುಪ್ಪ್‌ಳ್ /*kuppiḷi*/ ನಾ. ಕುಪ್ಪುಳ್ಳು, to hop. **ನವಿಲ್‌ನ ನೋಡಿ ಕುಪ್ಪ್‌ಳ್ ಪುಕ್ಕ ಕಿತ್ತ್‌ಕಣ್ತ್ ಗಡ(ಗಾ).** ವಾ: ಕುಪ್ಪುಳು ದೋಸೆ ಹೊಯತುಟ್ಟು.

ಕುಪ್ಯ /*kupya*/ ನಾ. ಬಿಳಿ ಮತ್ತು ಕಪ್ಪು ಬಣ್ಣದ ಕೊಡವರ ಸಾಂಪ್ರದಾಯಿಕ ಉಡುಪು. a traditional black and white dress worn by kodava people. ವಾ: ಜಂಬರಕೆ ಹೋಕನ ಕುಪ್ಯ ಹಾಕಂಬದು.

ಕುಪ್ಸ /*kupsa*/ ನಾ. 1. ಕುಪ್ಪುಸ, 2. ಕುಪ್ಪಸ, 3. ಅಂಗಿ. 1. a blouse, 2. a blouse, 3. a shirt. ವಾ: ಕುಪ್ಸ ಹಾಕಿರೆ ಪೊರ್‌ಲು ಕಾಂಬದು.

ಕುಪ್ಳಕೋಳಿ /*kupḷako:ḷi*/ ನಾ. ಕೆಂಪು ಮತ್ತು ಕಪ್ಪು ಬಣ್ಣವಿರುವ ಕೋಳಿ. a black and red coloured hen. ವಾ: ಕುಪ್ಳಕೋಳಿಗ ಹುಳ ಹುಪ್ಪಟೆ ಎಲ್ಲ ತಿಂದವೆ.

ಕುಪ್ಳ್ /*kupḷi*/ ನಾ. 1. ಕೆಂಬೋತ, 2. ನಸುಗೆಂಪು ಬಣ್ಣ. 1. a Crow Pheasant, 2. reddish brown colour. ವಾ: ಕುಪ್ಪುಳು ದೋಸೆ ಹೊಯತುಟ್ಟು ಮಕ್ಕಳೆ.

ಕುಪ್ಳ್ ಮಣ್ಣು /*kupḷi maɳɳu*/ ನಾ. 1. ಎರೆಹುಳು ಹೋದ ಜಾಗದ ಮಣ್ಣು, 2. ಒಂದು ಜಾತಿಯ ಚಿಕ್ಕ ಹುಳು ಹಸಿನೆಲವನ್ನು ತೋಡಿ ಹೊರಹಾಕಿದ ಕಂದುಬಣ್ಣದ ಮಣ್ಣು. fertile soil due to the presence of earthworm in them. ವಾ: ಕುಪ್ಳ್ ಮಣ್ಣುನ ಎರೆಹುಳ ತೆಗ್‌ದ್ ಹಾಕುದು.

ಕುಬಾಲ್ /*kuba:li*/ ನಾ. 1. ಮನೆಯ ಮಾಡಿನ ತುದಿ ಭಾಗ, 2. ಎತ್ತರದ ಸ್ಥಳ, 3. ಕುಬೆ. 1. end or edge of

the roof, 2, a higher place, 3. the top of aree. ವಾ: ಅಡ್ಕೆ ಮರದ ಕುಬಾಲ್‌ನ ನೋಡ್.

ಕುಬೆ /*kubɛ*/ ನಾ. ಕವಲುಕೊಂಬೆಗಳಿಲ್ಲದ ಅಡಕೆ, ತೆಂಗು ಮೊದಲಾದ ತಾಳೆಯ ಜಾತಿಯ ಮರದ ತುದಿ. the tip of palmaceous trees like areca, coconut tree etc, from where leaves and flowers branch off. ವಾ: ಚಾಳೆ ಕುಬೆಲಿ ಕುರೆಗ ಕುದ್ದೊಳ. **ಕುಬೆ ಹೊಡ್ಯೊದು** /*kubɛ hoḍyodu*/ ಕವಲುಕೊಂಬೆಗಳಿಲ್ಲದ ಅಡಕೆ, ತೆಂಗು ಮೊದಲಾದ ತಾಳೆಯ ಜಾತಿಯ ಮರದ ಚಿಗುರು. areca/ coconut shoot. ವಾ: ರೋಗ ಬಂದ್ ಕುಬೆ ಹೊಡ್ದುಟು.

ಕುಬೆ ಪಸಲ್ /*kubɛ pasali*/ ನಾ. ವಾರ್ಷಿಕ ಬೆಳೆ. annual crop.

ಕುಬೋಳು /*kubɛ:ḷu*/ ನಾ. ಮನೆಯ ಮಾಡಿನ ತುದಿಯ ಭಾಗ. edge of the roof. ವಾ: ನೀ ಕುಬೋಳುಗೆ ಹತ್ತುವನ? **ಕುಬೋಳು ಮುಚ್ಚುದು** /*kubɛ:ḷu muccudu*/ ಚಾವಣಿಯ ಮೇಲ್ತುದಿಯನ್ನು ಹುಲ್ಲಿನಿಂದ ಮುಚ್ಚುವುದು. to cover the top of the roof with straw, reed, etc. – a thatch. ವಾ: ಮನೆದ್ ಮಾಡಿಗೆ ಕುಬೋಳು ಮುಚ್ಚುದು.

ಕುಮಾರ /*kuma:ra*/ ನಾ. 1. ಕುವರ, 2. ನಾಮಪದ. 1. a young man, 2. name of a person. ವಾ: ಅಂವನ ಹೆಸ್ರ್ ಕುಮಾರ.

ಕುಮಾರದಾರೆ /*kuma:rada:re*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಸುಬ್ರಹ್ಮಣ್ಯ ಗ್ರಾಮದ ಜಾಗ. a locality in Subramanya village in Sullia Taluk of Dakshina Kannada District.

ಕುಮೆ ಮರ /*kumɛ mara*/ ನಾ. ಕಾಡು ಜಾತಿಯ ಮರ. a forest tree. ವಾ: ಕುಮೆ ಮರಲಿ ಕಪಿಗ ಕುದ್ದೊಳೊ. **ಕುಮೆ ಹಣ್ಣ್** /*kumɛ haṇṇi*/ ಕಾಡು ಜಾತಿಯ ತಿನ್ನುವ ಹಣ್ಣು. a wild fruit. ವಾ: ಕುಮೆ ಹಣ್ಣ್ ನ ತಿಂದವೆ.

ಕುಮೇರ್ /*Kumɛ:ri*/ ನಾ. ಗುಡ್ಡೆಗಳಲ್ಲಿ ಕಾಡುಕಡಿದು ಅದನ್ನು ಸುಟ್ಟು ಉಂಟಾದ ಫಲವತ್ತಾದ ಮಣ್ಣಿನಲ್ಲಿ ಮಾಡುವ ಭತ್ತ, ರಾಗಿಯ ಕೃಷಿ. growing paddy/ finger millet near the hillock by following slash-and-burn agriculture. ವಾ: ಕುಮೇರ್ ಕಡೆಕೆ ಉಟ್ಟು. ವಾ: ಕುಮೇರಿ ಬೆಳೆ ಲಾಯ್ಕಲಿ ಬಂದುಟು. ಪ: ಕುಮೆರಿ ಬಿತ್ತುದು.

ಕುಮ್ಟೆಮೆಣ್ಸ್ /*kumṭɛmɛṇsi*/ ನಾ. 1. ಒಣ ಮೆಣಸು, 2. ಕುಮಟ ಮೆಣಸು. 1. red chilli, 2. Kumta or Byadgi chilli. ವಾ: ಕುಮ್ಟೆ ಮೆಣ್ಸ್‌ನ ಹೊಡಿ ಮಾಡಿ ಅಡ್‌ಗೆಗೆ ಬಳ್‌ಸುವೆ. ಪ: ಕುಂಟೆ ಮೆಣ್ಸ್

ಕುಮ್ಮ /*kumma*/ ನಾ. ಹೊಟ್ಟೆ (ಮಕ್ಕಳ ಭಾಷೆ). stomach (in the vocabulary of children). ವಾ: ಕುಮ್ಮ ಮುಚ್ಚಿಕ. **ಕುಮ್ಮ ಆಯಿ** /*kumma a:yi*/ ಹೊಟ್ಟೆ ನೋವು (ಚಿಕ್ಕ ಮಕ್ಕಳು ಹೇಳುವ ಮಾತು). stomach pain. ವಾ: ಕೂಸು ಕುಮ್ಮ ಆಯಿತ ಹೇಳ್‌ದೆ.

ಕುಮ್ಮಾಯ /*kumma:ya*/ ನಾ. ಸುಣ್ಣದ ಹುಡಿ. powder of limestone. ವಾ: ನೆಲ ಜಾರಿರೆ ಕುಮ್ಮಾಯ ಹಾಕಿ.

ಕುಮ್ಮು /*kummu*/ ನಾ. ಮಕ್ಕಳ ಹೊಟ್ಟೆಗೆ ಹೇಳುವ ಪದ. stomach (in the vocabulary of children). ವಾ: ಕುಮ್ಮು ತೋರ್‌ಸ್‌ನೆ.

ಕುಮ್ಮುಣಿ /*kummuṇi*/ ನಾ. ಪ್ರೀತಿಯಿಂದ ಕರೆಯುವ ಪದ. an expression used out of affection. ವಾ: ಕುಮ್ಮುಣಿ ಬಂದನಾ?

ಕುಯಿಂತೋಡು /*kuyinto:ḍu*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಸಂಪಾಜೆ ಗ್ರಾಮದ ಜಾಗ. 1. family, 2. lineage, 3. a locality in Sampaje village in Sullia Taluk of Dakshina Kannada District.

ಕುಯಿಲಂಬು /*kuyilambu*/ ನಾ. 1. ಪೈಚೆ, 2. ಅಂಟುಪುರಲೆ. spear grass. ವಾ: ಕುಯಿಲಂಬು ಅರ್ವೆಗೆ ಅಂಟಿರೆ ಬೇಗ ತೆಗೆಕೆ ಆದುಲೆ.

ಕುಯೊದೆ /*kuyodɛ*/ ಕ್ರಿ. ಕುಯ್ಯುವುದು. to cut. ವಾ: ಬೆಳ್‌ದ ಬಾಳೆ ಗೊನೆನ ಕುಯೊದೆ.

ಕುಯ್ಕತ್ತಿ /*kuykatti*/ ನಾ. ಕುಯ್ಲು ಕತ್ತಿ. a sickle. ವಾ: ಕುಯ್ಕತ್ತಿಲಿ ಬೆಳೆ ಕೊಯ್ಯದು.

ಕುಯ್ತ್ /*kuyti*/ ಕ್ರಿ. ಕೊಯ್ದನು/ಳು. he/she has cut. **ಮಾತಾಡ್ತ ಮಾತಾಡ್ತ ಗೌಡ ಅವರೆ ಕಾಯಿ ಕುಯ್ತ್ ಗಡ(ಗಾ).** ವಾ: ಅವುಳು ಹೂನ ಕುಯ್ತ್.

ಕುಯ್ದವೆ /*kuydavɛ/kɔydavɛ*/ ಕ್ರಿ. ಕೊಯ್ಯುತ್ತಾರೆ. they will cut. ವಾ: ಮರಂದ ಗೇರಣ್ಣ್ ಕುಯ್ದವೆ. ಪ: ಕೊಯ್ದವೆ

ಕುಯ್ಯಮುಡಿ /*kuyyamuḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕುಯ್ಯೋಕು/ಕೊಯ್ಯೊಕು /*kuyyo:ku/kɔyyo:ku*/ ಕ್ರಿ. 1. ಕುಯ್ಯಬೇಕು, 2. ತೆಗೆಯಬೇಕು. 1. need to cut, 2. need to take. ವಾ: ಮಾಯ್ನಣ್ಣ್‌ನ ಮರಂದ ಕುಯ್ಯೋಕು ಇಲ್ಲರೆ ಬಿದ್ದ್ ಹಾಳಾದೆ.

ಕುಯ್ಲ್ /*kuylɨ*/ ನಾ. 1. ಕಟಾವು, 2. ಬೆಳೆಕೊಯ್ತ, 3. ಪೈರು ಕೊಯ್ಯುವಿಕೆ, 4. ಕುಯಿಲು. harvesting, gathering ripe parts of the plant. ವಾ: ಬೆಳೆ ಹಣ್ಣಾಗಿ ಕುಯ್ಲ್ ಗೆ ಬಂದುಟು.

ಕುರ /*kura*/ ನಾ. 1. ಕುರು, 2. ಹುಣ್ಣು, 3. ಮೈಮೇಲೆ ಏಳುವ ಬೊಕ್ಕೆ ಅಥವಾ ಬಾವು. 1. abscess, 2. a boil, 3. a swelling on the skin-pus-filled inflammation of the skin. **ಅವ್ವಂಗೆ ಜ್ವರ ಅಪ್ಪಂಗೆ ಕುರ(ಗಾ).** ವಾ: ಕುರ ಎದ್ದುಟು. ಪ: ಕುರು

ಕುರಂಗಿ /*kuraŋgi*/ ನಾ. ಸಣ್ಣ ಜಾತಿಯ ಜಿಂಕೆ. a small deer. ವಾ: ಕುರಂಗಿ ಕಂಡಂಗೆ ಆತ್.

ಕುರಿ /*kuri*/ ನಾ. 1. ಕುರಿ, 2. ಮೇಷ, 3. ಮೈ ತುಂಬ ಉಣ್ಣೆಯುಳ್ಳ ಒಂದು ಪ್ರಾಣಿ. 1. a sheep, 2. zodiacal sign of Aries, 3. a mammal with a thick woolly coat. ವಾ: ಕುರಿಗ ಸೆಳಿ ತಡ್‌ಕಂಬದುಲೆ. **ಕುರಿ ಗೈಪು** /*kuri gaipu*/ ಕುರಿ ಸಾಂಬಾರು. mutton curry. ವಾ: ಮೊದುವೆಲಿ ಕುರಿ ಗೈಪು, ಕೋಳಿ ಗೈಪು ಎಲ್ಲ ಇತ್ತ್.

ಕುರಿಕಾಡ /*kurika:ḍa*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕುರಿಯ /*kuriya*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಜಾಲ್ಸೂರು ಗ್ರಾಮದ ಜಾಗ. 1. family, 2. lineage, 3. a locality in Jalsuru village in Sullia Taluk of Dakshina Kannada District.

ಕುರಿಯಾಜೆ /*kuriya:je*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕೊಡಿಯಾಲ ಗ್ರಾಮದ ಜಾಗ. a locality in Jalsuru village in Sullia Taluk of Dakshina Kannada District.

ಕುರು /*kuru*/ ನಾ. 1. ಹುಣ್ಣು, 2. ಕಣ್ಣುಗುಳ್ಳೆ. 1. a boil or a swelling on the skin, 2. swelling in the eye. ವಾ: ಕಣ್ಣ್‌ಲಿ ಕುರು ಎದ್ದುಟು. ಪ: ಉಮಿಕುರು – ಚಿಕ್ಕ ಕುರು

ಕುರುಂಜಿ /*kuruɲji*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕುರುಂಜಿ ಹೂವ್ /*kuruŋji hu:vɨ*/ ನಾ. ಹನ್ನೆರೆಡು ವರ್ಷಕ್ಕೊಮ್ಮೆ ಬೆಟ್ಟದ ತಪ್ಪಲಿನಲ್ಲಿ ಬಿಡುವ ನೀಲಿ ಬಣ್ಣದ ಸಣ್ಣ ಹೂವುಗಳು. Neelakurinji flower (Strobilanthes kunthiana), blossoms once in 12 years. ವಾ: ಕುರುಂಜಿ ಹೂವ್ ಹನ್ನೆರ್‌ಡ್ ವರ್‌ಸಕ್ಕೊಮ್ಮೆ ಆದು.

ಕುರುಂಟು ಕಲ್ಲ್ /*kuruɳʈu kallɨ*/ ನಾವಿ. 1. ಉಳುಮೆಯಾಗಿ, ಹಲಗೆಮೆಟ್ಟಿ ಸಮತಟ್ಟು ಮಾಡಿ ನಂತರ ನೀರು ಇಳಿದು ಹೋಗಲು ಒಂದು ಚಿಕ್ಕ ಕಣಿ ಮಾಡಲು ಉರುಳಿಸುವ ಕಲ್ಲು, 2. ಬರೆಕಲ್ಲ್. a stone used in making trenches. ವಾ: ಕುರುಂಟು ಕಲ್ಲ್ ಎಳ್ದ್ ಆತ.

ಕುರುಂಟು[1] /*kuruɳʈu*/ ನಾ. ದೇವಸ್ಥಾನಕ್ಕೆ ಭಕ್ತಿಯಿಂದ ಅರ್ಪಿಸುವ ಧಾನ್ಯದ ಕಟ್ಟು. bags of grain offered to a temple. ವಾ: ದೇಸ್ತಾನಕೆ ಬಕ್ತಿಂದ ಕುರುಂಟುನ ಕೊಡ್‌ದು.

ಕುರುಂಟು[2] /*kuruɳʈu*/ ನಾ. ಮದುವೆಯ ಬಳಿಕ ಮದುಮಗಳು ಗಂಡನ ಮನೆಗೆ ಹೋಗುವಾಗ ಜೊತೆಯಲ್ಲಿ ಕಳುಹಿಸುವ ಒಡನಾಡಿ ವ್ಯಕ್ತಿ. a companion sent along with the bride when she goes to her husband's home for the first time. ವಾ: ಮೊದುವೆಯಾಗಿ ಗಂಡನ ಮನೆಗೆ ಹೋಕನ ಗೂಡೆನೊಟ್ಟಿಗೆ ಕುರುಂಟು ಸನ ಹೋದು.

ಕುರುಂಬಿ /*kurumbi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕುರುಂಬು ಕಂತೆ /*kurumbu kantɛ*/ ನಾವಿ. ಸ್ವಲ್ಪ ಪ್ರಮಾಣದ ಹುಲ್ಲನ್ನು ಕಂತೆ ಕಟ್ಟುವುದು. making a small bundle of grass. ವಾ: ಕುರುಂಬು ಕಂತೆ ಕಟ್ಟುದು.

ಕುರುಂಬು ಮೂಡೆ /*kurumbu mu:ḍɛ*/ ನಾವಿ. 1. ತುಂಡು ತುಂಡು ಹುಲ್ಲನ್ನು ಸೇರಿಸಿ ಕಟ್ಟುವುದು, 2. ಪುಡಿ ಹುಲ್ಲನ್ನು ಕಂತೆ ಕಟ್ಟುವುದು. making a bundle of grass. ವಾ: ಕುರುಂಬು ಮೂಡೆನ ಮೂಲೆಲಿ ಇಸಿರಾದು.

ಕುರುಂಬುಡೇಲು /*kurumbuḍe:lu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಬೆಳ್ಳಾರೆ ಗ್ರಾಮದ ಜಾಗ. a locality in Bellare village in Sullia Taluk of Dakshina Kannada District.

ಕುರುಟು /*kuruṭu*/ ನಾ. ಒರಟು. rough. ವಾ: ಕೈಯೆಲ್ಲ ಕುರುಟು ಆವುಟು.

ಕುರುಟುದು /*kuruṭudu*/ ಕ್ರಿ. ಕಲಸುವುದು. mixing. ವಾ: ಬೇಗ ಬೆಗ ಊಟ ಮಾಡ್, ಎಂತ ಹಂಗೆ ಕುರುಟುದು?

ಕುರುಡ /*kuruḍa*/ ನಾ. 1. ಕುರುಡ, 2. ಅಂಧ, 3. ಕಣ್ಣು ಕಾಣದವನು, 4. ಅಜ್ಞಾನಿ, 5. ತಿಳುವಳಿಕೆ ಇಲ್ಲದವ. 1. a male blind person, 2. a blind man, 3. someone who cannot see, 4. ignorant, 5. unlettered. ವಾ: ಕುರುಡ ಆದ್‌ರೂ ಎಲ್ಲ ಕೆಲ್‌ಸನು ಅವೆ ಮಾಡಿಕಂಡವೆ.

ಕುರುಡಿ /*kuruḍi*/ ನಾ. 1. ಕುರುಡಿ, 2. ಅಂಧೆ, 3. ಕಣ್ಣು ಕಾಣದವಳು. a female blind person. ವಾ: ಕುರುಡಿ ಲಾಯ್ಕಲಿ ಕೊಣ್ತ ಹಾಕಿದೆ.

ಕುರುಡು /*kuruḍu*/ ನಾ. 1. ಅಜ್ಞಾನಿ, 2. ಕಣ್ಣಿಲ್ಲದವ. 1. unwise, 2. a blind person. ವಾ: ಮೊನ್‌ಸಂಗೆ ಕುರುಡು ನಂಬಿಕೆ ಒಳ್ಳೆದಲ್ಲ.

ಕುರುಡೇಲು /*kuruḍe:lu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕುರುಬ್ತಿ /*kurubti*/ ನಾ. ಕುರುಬತಿ. a shepherdess. ವಾ: ಕುರುಬ್ತಿ ಮನೆ ಹಕ್ಕಲೆ ಬಂದುಟು.

ಕುರುವಾಜೆ /*kuruva:jɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕುರುಳಿ /*kuruḷi*/ ನಾ. 1. ಸುರುಳಿ, 2. ಬಾಳೆಯೆಲೆ ಸುಳಿ. 1. a coil, 2. a tender leaf of plantain. ವಾ: ಕುರುಳಿನ ಜಿಂಟ್‌ಬಡ.

ಕುರುಳು /*kuruḷu*/ ನಾ. 1. ಕೊರಳು, 2. ಕೂದಲು, 3. ಮುಂಗೂದಲು, 4. ಅಗಲ ಬಾಯಿಯ ಮಣ್ಣಿನ ಪಾತ್ರೆ, 5. ಹರಿವೆ, 6. ಕುರುಲ್, 7. ಬೆರಣಿ. 1. neck, 2. hair, 3. lock of hair around the forehead, 4. a clay pot with a wide mouth, 6. cow-pat, 7. a dried flat cake made of cow dung, 7. dried cake of cow-dung. ವಾ: ಅವುಳ ಕುರುಳು ಉದ್ದ ಉಟ್ಟು.

ಕುರೆ[1] /*kurɛ*/ ನಾ. 1. ಜಿಪುಣತನ, 2. ಲೋಭ, 3. ಅತಿಯಾಸೆ, 4. ದೈನ್ಯ. 1. stinginess, 2. meanness, 3. humility. ವಾ: ಅವು ಬೊರಿ ಕುರೆಗ. ಪ: ಕುರೆಪಟ್ಟ್ – ಜಿಪುಣತನ

ಕುರೆ[2] /*kurrɛ*/ ನಾ. 1. ಮಂಗ, 2. ಮರ್ಕಟ, 3. ಕಪಿ. a monkey. **ಕುರೆ ಮೊಸ್ರ್ ತಿಂದ್ ಕತ್ತೆನ ಮುಸುಂಡಿಗೆ ಉಜ್ಜಿದ ಹಂಗೆ(ಗಾ). ಕಳ್ಳ್ ಕುಡ್ದ ಕುರೆನಾಂಗೆ(ನು).** ವಾ: ಮರಲಿ ಎಸ್ಟೊಂದ್ ಕುರೆಗ ನೋಡ್. ಪ: ಕುರೆಂಗ. **ಕುರೆಣ್ಣ** /*kurɛṇṇa*/ ಮಂಗಣ್ಣ. a monkey. ವಾ: ಕುರೆಣ್ಣ ಬಂದರೆ ಬಾಳೆ ಮನಾರ ಆದೆ.

ಕುರೇಂಗಿ /*kurɛ:ŋgi*/ ನಾ. 1. ಜಿಂಕೆ ಜಾತಿಯ ಜೀವಿ, 2. ಕಾಡಿನಲ್ಲಿರುವ ಕುರಿ. Indian muntjac, red muntjac or barking deer. ವಾ: ತೋಟಲಿ ಕುರೇಂಗಿನ ಕಂಡೊ.

ಕುರೊಟು /*kuroṭu*/ ನಾ. ಸಣ್ಣಗದ್ದೆ. a small field/ farm. ವಾ: ಓಟು ಗದ್ದೆ ಹತ್ತ್ ರ ಇರ್‌ದು ಕುರೋಟು.

ಕುರೋಡಿ /*kuro:ḍi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಪೆರುವಾಜೆ ಗ್ರಾಮದ ಜಾಗ. a locality in Peruvaje village in Sullia Taluk of Dakshina Kannada District.

ಕುರ್‌ಂಟ್ /*kuriṇṭi*/ ನಾ. ಮದುವೆ ನಂತರ ಮದುಮಗಳ ಜೊತೆ ಕಳುಹಿಸುವ ಹುಡುಗಿ ಅಥವಾ ವ್ಯಕ್ತಿ. the practice of sending a child along with the bride when she goes to her husband's home for the first time. ವಾ: ಮೊದೊಳಿಗೆನೊಟಿಗೆ ಕುರುಂಟ್‌ನ ಕಳ್ಸುವೆ.

ಕುರ್ಕ /*kurka*/ ನಾ. ಗುಳ್ಳೆ ನರಿ. a jackal. ವಾ: ಕುರ್ಕ ಓಡ್‌ದು ನೋಡ್.

ಕುರ್ಕ್ ತಿಂಡಿ /*kurikɨ tiṇḍi*/ ನಾ. 1. ಬಾಯಿ ರುಚಿಯನ್ನು ಕಲಿತವರು ಸದಾ ಏನಾದರೂ ತಿಂಡಿ

ಪದಾರ್ಥವನ್ನು ತಿನ್ನುತ್ತಿರುವಿಕೆ, 2. ಬೇಕರಿ ತಿನಿಸು. 1. to eat snacks all the time, 2. bakery food. ವಾ: ಕುರ್ಕ್ ತಿಂಡಿ ತಿಂದರೆ ಮತ್ತೆ ಮಕ್ಕ ಉಂಬಲೆ. ಪ: ಕುರ್ಕ್‌ತಿಂಡಿ – ಬೇಕರಿ ತಿನಿಸು

ಕುರ್ಚಟೆ /*kurcaṭɛ*/ ನಾ. ಮಣ್ಣಿನ ಬಟ್ಟಲು. a clay bowl. ವಾ: ಕುರ್ಚಟೆಲಿ ಸಣ್ಣ ಮಕ್ಕಳಿಗೆ ಅನ್ನನ ಅರ್‌ದ್ ಕೊಡ್‌ದು.

ಕುರ್ಚಟ್ಟೆ /*kurcaṭṭe*/ ನಾ. ಚಿಕ್ಕ ಮಕ್ಕಳಿಗೆ ಅನ್ನ ಕೊಡಲು ಉಪಯೋಗಿಸುವ ಮಣ್ಣಿನ ಬಟ್ಟಲು. an earthen vessel used to feed children.

ಕುರ್ಚಿ /*kurci*/ ನಾ. 1. ಕುರ್ಚಿ, 2. ಕುಳಿತುಕೊಳ್ಳಲು ಬಳಸುವ ನಾಲ್ಕು ಕಾಲಿನ ಸಾಧನ. 1. a chair, 2. a four legged furniture to sit on. **ಕಾಲ್ನಾಕ್, ಕೈ ಎರ್ಡ್, ಬೆನ್ನುಟ್ಟು ತಲೆ ಇಲ್ಲೆ – ಕುರ್ಚಿ(ಒ).** ವಾ: ಬೀಟಿ ಮರಲಿ ಮನೆಗೆ ಬೇಕಾದ ಮರದ ಸಾಮಾನ್‌ಗಳ ಮಾಡ್‌ಸಿಕಂಡವೆ.

ಕುರ್ಚಿ ಮೀನ್ /*kurci mi:ni*/ ನಾ. ಅಗಲವಾದ ಸಣ್ಣದಾದ ಸಮುದ್ರ ಮೀನು. a fish found in ocean which is wide in its shape. ವಾ: ಕುರ್ಚಿ ಮೀನ್‌ನ ಉಪ್ಪುಳಿ ಹಾಕಿ ಹೊರ್‌ಯಕು.

ಕುರ್ಟ್ ನೇಗ್ಲ್ /*kurṭi nɛ:gli*/ ನಾ. ಸವೆದ ನೇಗಿಲು. a worn out plough. ವಾ: ಕುರ್ಟ್ ನೇಗ್ಲ್‌ನ ಸೆರಿ ಮಾಡೊಕು.

ಕುರ್ಟ್ ಮಾಯ್ಪು /*kurṭi ma:ypu*/ ನಾ. 1. ಸವೆದ ಕಸಬರಿಗೆ, 2. ಪೊರಕೆ, 3. ಹಿಡಿಗಿಲು. 1. a worn out broom, 2. a broom, 3. a broom. ವಾ: ಕುರ್ಟ್ ಮಾಯ್ಪುನ ಬಿಸಾಕ್.

ಕುರ್ಡ[1] /*kurḍa*/ ನಾ. 1. ಕುರುಡ, 2. ಅಂಧ, 3. ವಿಶೇಷ ಚೇತನ. 1. a blind man, 2. a blind person, 3. specially abled person. **ಕಣ್ಣಿದ್ದೂ ಕುರ್ಡ ಕಿವಿಯಿದ್ದೂ ಕಿವ್‌ಡ(ಗಾ). ಕಣ್ಣಿದ್ದೂ ಕುರ್ಡನಾಂಗೆ(ನು).** ವಾ: ಕುರ್ಡ ಎಸ್ಟ್ ಲಾಯ್ಕಲಿ ಹಾಡ್‌ದು. **ಕುರ್ಡಿ** /*kurḍi*/ 1. ಕುರುಡಿ, 2. ಅಂಧೆ, 3. ವಿಶೇಷ ಚೇತನ, 4. ಕಣ್ಣು ಕಾಣದವಳು. a blind woman. ವಾ: ಕುರ್ಡಿ ರಂಗೋಲೆ ಹಾಕುದು.

ಕುರ್ಡ[2] /*kuruḍu*/ ನಾ. 1. ಕಣ್ಣಿಲ್ಲದವ. a blind man. **ಕುರ್ಡ ಕತ್ತಿ ಬೀಸಿದಂಗೆ.** ವಾ: ಅಂವ ಕುರ್ಡ.

ಕುರ್ಡಿ ಹೂ /*kurḍi hu:*/ ನಾ. ದೀಪಾವಳಿ ಸಮಯದಲ್ಲಿ ದನಗಳಿಗೆ ತಿನ್ನಲು ಕೊಡುವುದು. ಇದು ಬಳ್ಳಿಯ ರೂಪದಲ್ಲಿರುತ್ತದೆ. a creeper/flower fed to cattle during Deepavali festival. ವಾ: ದೀಪೊಳಿ ಸಮೆಲಿ ದನಗಳಿಗೆ ತಿಂಬಕೆ ಕುರ್ಡಿ ಹೂನ ಕೊಟ್ಟವೆ.

ಕುರ್ಣಿ /*kurṇi*/ ಕ್ರಿ. ಕುಳಿತುಕೊಳ್ಳಿ, sit down (request). ವಾ: ಬನ್ನಿ ಒಲೆ ಹಕ್ಕಲೆ ಕುರ್ಣಿ.

ಕುರ್ಣಿಹಕ್ಕಿ /*kurṇihəkki*/ ನಾ. ಮೈನಾಹಕ್ಕಿ. Rufous Treepie bird. ವಾ: ಅಲ್ಲಿ ದೂರಲಿ ಕಂಡದೆ ಅಲ ಅದೇ ಕುರ್ಣಿಹಕ್ಕಿ.

ಕುರ್ತ ಅರ್ವೆ /*kurta,baṭṭe*/ ನಾ. ಬಟ್ಟೆ. clothes. ವಾ: ಕುರ್ತ ಹಾಕಂಡ್ ಬಾ ಪೇಟೆಗೆ ಪೋಯಿ.

ಕುರ್ತೆಲ್ /*kurtɛli*/ ನಾವಿ. ಹೊಲಸು. dirt/filth. ವಾ: ಹಾಮಜಿ ಕುರ್ತೆಲ್ ವಾಸನೆ ಬಾದು.

ಕುರ್ತ್ /*kurti*/ ಅ. ಕುರಿತು. about. ವಾ: ಊರ ಹಬ್ಬ ನಡ್‌ಸೊ ಕುರ್ತ್ ಚರ್‌ಚೆ ಮಾಡ್‌ತೊಳೊ.

ಕುರ್ದಿ /*kurdi*/ ನಾ. ಸುಣ್ಣ ಮತ್ತು ಅರಸಿನ ಮಿಶ್ರಿತ ನೀರು, ಶುಭಕಾರ್ಯಗಳಲ್ಲಿ, ಭೂತಾರಾಧನೆಯಲ್ಲಿ ಬಳಸುತ್ತಾರೆ. water mixed with processed lime and turmeric, used on auspicious occasions. ವಾ: ಕುರ್ದಿ ನೀರ್‌ಲಿ ದೃಷ್ಟಿ ತೆಗೆದು. **ಕುರ್ದಿನೀರು** /*kurdini:ru*/ ನೀರಿಗೆ ಅರಿಶಿಣ, ಸುಣ್ಣ ಸೇರಿಸಿ ಕೆಂಪು ಬಣ್ಣ ಬರುವಂತೆ ತಯಾರಿಸಿದ ನೀರು, ಶುಭ ಕಾರ್ಯಗಳಲ್ಲಿ ಆರತಿ ಮಾಡಿ, ದೃಷ್ಟಿ ತೆಗೆಯಲು ಈ ನೀರನ್ನು ಬಳಸುತ್ತಾರೆ. mixing turmeric and processed lime in water to turn the water into red colour. ವಾ: ಮೊದುಮಕ್ಕಳಿಗೆ ಮೊದುವೆಲಿ ಕುರ್ದಿನೀರು ಮಾಡಿ ಚೆಲ್ಲುವೆ.

ಕುರ್ನೆಟ್ಟಿ /*kurnɛṭṭi*/ ನಾ. ಒಂದು ಬಗೆಯ ಗಿಡದ ಪೊರಕೆ. a broom made out of a plant/reed. ವಾ: ಅದ್ ಕುರ್ನೆಟ್ಟಿ ದೈದ ಚೀಪೆ.

ಕುರ್ನೆರಿ /*kurnɛri*/ ನಾ. ಗುಳ್ಳೆ ನರಿ. a cunning person/ a jackal. ವಾ: ಕುರ್ನೆರಿನ ನೋಡ್ಯೊಳನ?

ಕುರ್‌ನೇರಿ /*kurne:ri*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕುರ್ಬ /*kurba*/ ನಾ. 1. ಕುರುಬ, 2. ಕುರಿ ಕಾಯುವವ,

3. ಕುರಿಗಾಹಿ. a shepherd. ವಾ: ಕುರ್ಬ ಜೆನಗ ಬಜ್ಜ ಜೀವಿಗ.

ಕುರ್ಬುತಿ /*kurbuti*/ ನಾ. 1. ಕುರುಬತಿ, 2. ಕುರುಬರ ಸಮುದಾಯಕ್ಕೆ ಸೇರಿದವಳು, 3. ಕುರುಬನ ಹೆಂಡತಿ. 1. a shepherdess, 2. belonging to the family of shepherds, 3. wife of a shepherd. ವಾ: ಕುರ್ಬೆತಿಗ ಕೆಲ್‌ಸಲಿ ಉಸಾರ್. **ಕುರ್ಬೆತಿ** /*kurbɛti*/ ವಾ: ಕುರ್ಬೆತಿ ಬಂದುಟು.

ಕುರ್ಮಜೆ /*kurmaje*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಮರಪಡ್ನೂರು ಗ್ರಾಮದ ಜಾಗ. a locality in Amarapadnuru village in Sullia Taluk of Dakshina Kannada District.

ಕುರ್ಲೆ /*kurlɛ*/ ನಾ. ಎಳೆಯ ಬಾಳೆಗಿಡ. a young plant of banana/plantain. ವಾ: ಕುರ್ಲೆಗ ಸುಮಾರ್ ಹುಟ್ಟಿಕಂಡುಟು.

ಕುರ್ಸಿ /*kursi*/ ನಾ. 1. ಕುರ್ಚಿ, 2. ಎತ್ತರವಾದ ಪೀಠ, 3. ಆಸನ. 1. a chair, 2. a higher seat, 3. a seat. ವಾ: ಅಂವ ಕುರ್ಸಿ ಮೇಲೆ ಕುದ್ದತ್. **ಕುರ್ಸು** /*kursu*/ ವಾ: ಕುರ್ಸುಲಿರೊ ದೂಳ್‌ನ ಪೂಜಿ ತೆಗಿ.

ಕುರ್ಳಿ ಹಕ್ಕಿ /*kur[i hakki*/ ನಾ. 1. ಮೈನಾ ಹಕ್ಕಿಯ ವರ್ಗ, 2. ಸಣ್ಣದಾದ ಪಕ್ಷಿ. belongs to the family of Indian myna (Acridotheres tristis). ವಾ: ಕುರ್ಳಿ ಹಕ್ಕಿ ಸಣ್ಣದ್. ಪ: ಪೂರ್ಲಿಪಕ್ಕಿ(ತು)

ಕುಲಗುರು /*kulaguru*/ ನಾ. ಕುಟುಂಬದ ದೇವರು. a house/family deity/god. ವಾ: ಕುಲಗುರುಗೆ ಪೂಜೆ ಮಾಡ್‌ದು.

ಕುಲಗೆಡ್ಸ್ /*kulagɛḍsɨ*/ ನಾ. ಹಾಳು ಮಾಡು. to destroy/to spoil. **ನೆಳ ತಿಂದ್ ಕುಲಗೆಡ್ಸಿಕಂಬದು(ಗಾ).** ವಾ: ಆಗ್‌ತಿದ್ದ ಕೆಲ್‌ಸನ ಕುಲಗೆಡ್ಸಿತ್. ಪ: ಕುಲಗೆಡ್ಸಿನೆ – ಕುಲಗೆಡಿಸುವೆ.

ಕುಲದೇವರು /*kuladɛ:varu*/ ನಾ. ಕುಟುಂಬದ ದೇವರು. a house/family deity/god. ವಾ: ಗೌಡರ ಕುಲದೇವ್ರ್ ಶ್ರೀ ವೆಂಕಟ್ರಮಣ.

ಕುಲಾಯಿ /*kula:yi*/ ನಾ. 1. ತಲೆಯುಡಿಗೆ, 2. ಕೂಸಿನ ತಲೆಗೆ ಕಟ್ಟುವ ಟೋಪಿ, 3. ಬೆನ್ನು ಮತ್ತು ತಲೆಯನ್ನು ಪೂರ್ತಿಯಾಗಿ ಮುಚ್ಚುವಂತೆ ಹಾಕುವ ಕುಲಾವಿ,- ಕುಲಾಯಿ. 1. a headdress, 2. a cap put on a child, 3. a cap that covers the head and the back. **ಕೂಸ್ ಹುಟ್ಟಿಕೆ ಮುಂದೆ ಕುಲಾಯಿ / ಕುಪ್ಪಸ ಹೊಲ್ಸುದು(ಗಾ).** ವಾ: ತಲೆಗೆ ಕುಲಾಯಿ ಕಟ್ಟಿಕ.

ಕುಲಾವಿ /*kula:vi*/ ನಾ. 1. ತಲೆಗೆ ಹಾಕುವ ಕಿವಿ ಟೊಪ್ಪಿಗೆ, 2. ಟೋಪಿ. a cap. **ಕೂಸು ಹುಟ್ಟಿಕೆ ಮುಂದೆ ಕುಲಾವಿ ಹೊಲ್ಸಿದಂಗೆ(ಗಾ).**

ಕುಲುಕು /*kuluku*/ ಕ್ರಿ. ಅಲ್ಲಾಡಿಸು. to shake. ವಾ: ಮದ್ದ್ ಕುಪ್ಪಿನ ಕುಲುಕು.

ಕುಲುವಾಡಿ /*kuluva:ḍi*/ ನಾ. 1. ಕುಳುವಾಡಿ, 2. ತೆರಿಗೆ ವಸೂಲಿ ಮಾಡುವವ. a tax collector. ವಾ: ಕುಲುವಾಡಿ ಕೆಲ್ಸ ಮಾಡ್ದು.

ಕುಲ್ಕುಂದ /*kulkunda*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಸುಬ್ರಹ್ಮಣ್ಯ ಗ್ರಾಮದ ಜಾಗ. a locality in Subramanya village in Sullia Taluk of Dakshina Kannada District.

ಕುಲ್ಕ್ /*kulkɨ*/ ಕ್ರಿ. 1. ಕುಲುಕು, 2. ಅಲ್ಲಾಡಿಸು. to shake. ವಾ: ನೆಲ್ಲಿ ಮರನ ಕುಲ್ಕ್, ನೆಲ್ಲಿ ಕಾಯಿ ಬೀಳಲಿ. ಪ: ಕುಲ್ಕಿಸಿ – ಅಲ್ಲಾಡಿಸಿ, ಕುಲುಕಿಸಿ

ಕುಲ್ಚಾರು /*kulca:ru*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅರಂತೋಡು ಗ್ರಾಮದ ಜಾಗ. a locality in Arantodu village in Sullia Taluk of Dakshina Kannada District.

ಕುಲ್ಲಚೆಟ್ಟಿ /*kullacɛṭṭi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕುಲ್ಲಚೆಟ್ಟೀರ /*kullacɛṭṭi:ra*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕುಲ್ಲಚ್ಚನ /*kullaccana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕುವೆ /*kuvɛ*/ ನಾ. ಒಂದು ರೀತಿಯ ಗಡ್ಡೆ, ಅರಸಿನ ಗಿಡದಂತೆ ಹೋಳುವ ಸಸ್ಯ ಪ್ರಭೇದ, ಆರಾರೂಟ್. arrowroot plant, maranta plant. ವಾ: ಕುವೆ ದೈಲಿ ಹೂವಾದೆ. **ಕುವೆ ದೈ** /*kuvɛ dai*/ ಹಿಂಡಿಲು ಹಿಂಡಿಲಾಗಿ ಬೆಳೆಯುವ ದೊಡ್ಡ ಸೊಪ್ಪಿನ ಬಾಳೆಯಂತಹ ಎಲೆಯ ಗಿಡ, ಕಾಡಾನೆಗಳು ಇವುಗಳಿದ್ದಲ್ಲಿ ಹುಡುಕಿಕೊಂಡು ಬರುತ್ತವೆ. ಇದರ ಗೆಡ್ಡೆಯನ್ನು ತುಂಡು ಮಾಡಿ, ಒಣಗಿಸಿ, ಹುಡಿ ಮಾಡಿ ಆರಾರೋಟ್ ಹುಡಿಯಂತೆ ಬಳಸುತ್ತಾರೆ.

arrowroot plant, maranta plant. The root of the plant is dried and powdered. arrowroot powder. ವಾ: ಕುವೆ ದೈನ ಆನೆಗ ಹುಡ್ಕಿಕಂಡ್ ಬಂದವೆ.

ಕುವೆಕೋಡಿ /*kuveko:ḍi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಗುತ್ತಿಗಾರು ಗ್ರಾಮದ ಜಾಗ. a locality in Guttigaru village in Sullia Taluk of Dakshina Kannada District.

ಕುವೆತ್ತಡ್ಕ /*kuvettaḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಪೆರುವಾಜೆ ಗ್ರಾಮದ ಜಾಗ. a locality in Peruvaje village in Sullia Taluk of Dakshina Kannada District.

ಕುವೇಂದ್ರ /*kuve:ndra*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕುವೊಕುವೊ /*kuvokuvo*/ ಅ. ಕೋಳಿಗಳನ್ನು ಕರೆಯುವ ಪದ. a term used to call out hens.

ಕುವ್ವೆ ಗೆಂಡೆ /*Kuvvɛ gɛŋḍɛ*/ ನಾ. ತಂಪುದಾಯಕ ಒಂದು ಗೆಡ್ಡೆ ಗೆಣಸು. root of arrowroot plant, maranta plant. ವಾ: ಕುವ್ವೆ ಗೆಂಡೆನ ಬೇಸಿ ತಿಂಬೊದು.

ಕುಶಾಲಪ್ಪ /*kuʃa:lappa*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. masculine given name. ಪ: ಕುಶಲ

ಕುಷಿ /*kuṣi*/ ನಾ. 1. ಖುಷಿ, 2. ಸಂತೋಷ, 3. ಇಷ್ಟ. 1. Joy, 2. happiness, 3. desire. ವಾ: ಯಾಗೊಲು ಕುಷಿಲಿ ಇರ್‌ತ ಹಾರೈಸಿನೆ.

ಕುಷ್ಠ /*kuṣṭha*/ ನಾ. 1. ಮಹಾರೋಗ, 2. ಅಂಗಾಂಗ ಒಂದೊಂದಾಗಿ ಮೊಂಡಾಗುವಿಕೆ, 3. ಒಂದು ಬಗೆಯ ಚರ್ಮ ರೋಗ. leprosy, Hansen disease. ವಾ: ಕುಸ್ಟ ರಕ್ತ ಮತ್ತೆ ಚೆರ್ಮಕ್ಕೆ ಬರೊ ಒಂದ್ ಕಾಯ್‌ಲ.

ಕುಸಾಲ್[1] /*kusa:lɨ*/ ನಾ. 1. ಕ್ಷೇಮ, 2. ಕುಶಲ. 1. content, 2. comfortable. ವಾ: ನಾ ಕುಸಾಲ್‌ಗೆ ಹೇಳ್ದ್.

ಕುಸಾಲ್[2] /*kusa:lɨ*/ ನಾ. 1. ತಮಾಷೆ/ಸಂತೋಷ ನಗುವಿನಿಂದ ಕೂಡಿ, 2. ಕುಶಾಲು. 1. fun, 2. joyful. ವಾ: ಅವು ಯಾಗೊಳು ಕುಶಾಲ್‌ಲಿ ಮಾತಾಡ್‌ಸುದು. ಪ: ಕುಸೆಲ್.

ಕುಸಿ /*kusi*/ ನಾ. 1. ಸಂತೋಷ, 2. ಸುಖ. 1. happiness, 2. pleasure. **ದೀರ್ಗಾಯುಸ್ಸಿಗೆ ಕುಸಿನೇ ಕಾರಣ(ಗಾ).** ವಾ: ಇಂದ್ ನಂಗೆ ಬಾರಿ ಕುಸಿಯಾಗುಟು.

ಕುಸಿಪಟ್ಟ್ /*kusi paṭṭi*/ ನಾ. 1. ಖುಷಿ ಪಟ್ಟು, 2. ಸಂತೋಷ ಪಡು. 1. to feel happy, 2. to be delighted. ವಾ: ಕುಸಿ ಪಟ್ಟ್ ಕೆಲ್ಸ ಮಾಡೊಕು. ಪ: ಕುಸಿಂದ – ಕುಷಿಯಿಂದ; ಕುಸಿಯಾತ್ – ಕುಷಿಯಾಯಿತು; ಕುಸಿಯಾದೆ – ಸಂತೋಷವಾಗುತ್ತದೆ; ಕುಸಿಯಾತ್ – ಕುಷಿಯಾಯಿತು.

ಕುಸ್ಕುಂಡಿ /*kuskundi*/ ನಾ. ಲೈಂಗಿಕ ಕ್ರಿಯೆ. a sexual act.

ಕುಸ್ಕುದು /*kuskudu*/ ಕ್ರಿ. 1. ಕುಸುಕಿಕೊಂಡು ಹೋಗುವುದು, 2. ಹಿಡಿತದಿಂದ ಬಿಡಿಸಿಕೊಳ್ಳುವುದು. 1. to escape from the tight grip, 2. to escape from the clutches. ವಾ: ಹಂದಿನ ಹಿಡ್‌ದಿರಿಕನ ಕೈನ ಕುಸ್ಕಿ ಓಡ್‌ತ್.

ಕುಸ್ತಿ /*kusti*/ ನಾ. 1. ಮಲ್ಲಯುದ್ಧ, 2. ಜಟ್ಟಿಕಾಳಗ. 1. wrestling, 2. hand-to-hand combat. ವಾ: ಮಕ್ಕ ಹಾಸ್‌ಗೆಲಿ ಕುಸ್ತಿ ಮಾಡ್‌ತೊಳೊ.

ಕುಸ್‌ಲಕ್ಕಿ /*kusɨlakki*/ ನಾ. 1. ಬೇಯಿಸಿದ ಭತ್ತದ ಅಕ್ಕಿ 2. ಕುಚಲಕ್ಕಿ 3. ಕುಸಲಕ್ಕಿ 4. ಕುಸುಬಲಕ್ಕಿ. boiled rice, parboiled rice. ವಾ: ಕುಸ್‌ಲಕ್ಕಿ ಗಂಜಿ ಮಾಡಿ ಉಂಡರೆ ಸೆಕೆಲಿ ಒಳ್ಳೆದಾದೆ.

ಕುಳ[1] /*kuḷa*/ ನಾ. 1. ಆಸಾಮಿ, 2. ಕುಂಟೆ ನೇಗಿಲುಗಳ ಬಾಯಿಗೆ ತೊಡಿಸುವ ಕಬ್ಬಿಣದ ಪಟ್ಟಿ/ಹಲ್ಲು (ಗುಳ), 3. ಗೇಣಿದಾರ. 1. a person, 2. a ploughshare – a broad curved metal blade used in a plough, 3. tenant. ವಾ: ಅವು ಬಾರಿ ದೊಡ್ಡ ಕುಳ. ಪ: ಕುಳಂಗ – ಅಸಾಮಿಗಳು.

ಕುಳ[2] /*kuḷa*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಬಳ್ಪ ಗ್ರಾಮದ ಜಾಗ. 1. family, 2. lineage, 3. a locality in Balpaa village in Sullia Taluk of Dakshina Kannada District.

ಕುಳರ್ ಮಾವು /*kuḷarɨ ma:vu*/ ನಾ. ಬಣ್ಣದ

ತಯಾರಿಕೆಯಲ್ಲಿ ಉಪಯೋಗಿಸುವ ಮರ. a tree used in making colours. ವಾ: ಕುಳರ್ ಮಾವುದ್ ಎಲೆ ಮಾಯಿನ ಮರದಂಗೆ ಸುವಾಸನೆಂದ ಕೂಡಿದ್ದದೆ.

ಕುಳವಾರ್ /*kuḷava:rɨ*/ ನಾ. ಪ್ರತಿಯೊಂದು. everything. ವಾ: ಅಂವಂದ್ ಕುಳವಾರ್ ಲೆಕ್ಕ.

ಕುಳಾಯಿತ್ತೋಡಿ /*kuḷa:yitto:ḍi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕಲ್ಮಡ್ಕ ಗ್ರಾಮದ ಜಾಗ. a locality in Kalmadka village in Sullia Taluk of Dakshina Kannada District.

ಕುಳಿಚುಂಬ ಸಾಸ್ತ್ರ /*kuḷicumba sa:stra*/ ನಾ. ತಿಥಿ ಹಿಂದಿನ ದಿನ ದೀಕ್ಷೆ ನಿಂತವನು ಸ್ನಾನ ಮಾಡಿ, ಆತನಿಗಾಗಿ ಮಾಡಿದ ಅಡುಗೆಯನ್ನು ಊಟ ಮಾಡಿ ಶುದ್ಧನಾಗುವುದು. a ritual (inclusive of bathing and dinner) performed by a male descendant, on the day before the ceremony performed in the honour of the dead ancestor. ವಾ: ತಿತಿದ್ ಹಿಂದೆನ ದಿನ ಕುಳಿಚುಂಬ ಶಾಸ್ತ್ರ ಮಾಡಿವೆ.

ಕುಳುಕುಂಬೆ /*kuḷukumbɛ*/ ನಾ. 1. ಕಾಡು ಪಾರಿವಾಳ, 2. ಕೊಡಗಿನ ಮಲೆ ಕಾಡುಗಳಲ್ಲಿ ವಾಸಿಸುವ ದೊಡ್ಡ ಜಾತಿಯ ಹಕ್ಕಿ. 1. Nilgiri Wood Pigeon, 2. a bird found in the forests of Coorg. ವಾ: ಕೋಂಬಕ್ಕಿ- ಕುಳುಕುಂಬೆ ನ ತಿಂದವೆ.

ಕುಳುಗುಮ್ಮೆ /*kuḷugummɛ*/ ನಾ. 1. ಒಂದು ವಿಧದ ಕಾಡುಹಕ್ಕಿ, 2. ಗುಲ್ಗುಮೆ ಹಕ್ಕಿ. 1. a forest bird, 2. Mountain Imperial- Pigeon. ವಾ: ಕುಳುಗುಮ್ಮೆ ಮರದ ಕೊಡೀಲಿ ಕುದ್ರುದು. ಪ: ಗುಳ್‌ಗುಮ್ಮೆ, ಕೋಂಬಕ್ಕಿ, ಗೂರ್ಮೆ(ತು)

ಕುಳ್ಚಟ /*kuḷcaṭa*/ ನಾ. ವಿಷ್ಣುಮೂರ್ತಿ ದೈವದ ಕೋಲದ ಮುನ್ನಾ ನಡೆಯುವ ದೈವ. Kulchata daiva/spirit. ವಾ: ಇಂದ್ ಕುಳ್ಚಾಟ ನಾಳೆ ದೆವ್ವ.

ಕುಳ್ದ್ ಕಣಿ /*kuḷdɨ kaṇi*/ ಕ್ರಿ. 1. ಕುಳಿತುಕೊಳ್ಳಿ, 2. ಆಸೀನರಾಗಿ. to sit down. ವಾ: ಮತ್ತೆ ಹೋಕ್ ಈಗ ಕುಳ್ದ್ ಕಣಿ. ಪ: ಕುದ್ದ್‌ಕಣಿ

ಕುಳ್ಮ /*kulmamara*/ ನಾ. ಒಂದು ವಿಧದ ಕಾಡು ಮರ. a tree. ವಾ: ಮೊಣ್ಣ್‌ಪಾಕಕ್ಕೆ ಕುಳ್ಮ ನೋಳಿನ ಉಪಯೋಗಿಸ್ವೆ. ಪ: ಕುಳ್ಮಮರ, ಬೆಟ್ಟ್‌ಕುಳ್ಮ

ಕುಳ್ಮಾವು ಮರ /*kuḷma:vu mara*/ ನಾ. 1. ಕುಳಿರ್ ಮಾವು, 2. ಕೆತ್ತೆ (ತೊಗಟೆ) ಮತ್ತು ಎಲೆ ಮಾವಿನ ಮರದ ಸುವಾಸನೆಯಿಂದ ಕೂಡಿದ್ದು,ಕೆತ್ತೆ ಲೋಳೆಯಾಗಿರುತ್ತದೆ. a variety of mango. ವಾ: ಕುಳ್ಮಾವು ಮರದ ಕೆತ್ತೆ ನೋಳಿ ನೋಳಿ.

ಕುಳ್ಯಾರ /*kuḷya:ra*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಬಳ್ಪ ಗ್ರಾಮದ ಜಾಗ. a locality in Balpaa village in Sullia Taluk of Dakshina Kannada District.

ಕುಳ್ಳ[1] /*kuḷḷa*/ ನಾವಿ. ಎತ್ತರವಿಲ್ಲದವನು, ಗಿಡ್ಡ. small in height. **ಕಳ್ಳನ ನಂಬಿರೊ ಕುಳ್ಳನ ನಂಬಿಕಾಗದ್(ಗಾ). ಕುಳ್ಳ ಮೊನ್ನಂಗೆ ಕಪ್ಪ್ ಟೊಪ್ಪಿ – ಬೆಂಕಿ ಕಡ್ಡಿ(ಒ).** ವಾ: ಕುಳ್ಳಪ್ಪ ಬರ್‌ತಾ ಉಟ್ಟು. **ಕುಳ್ಳಿ** /*kuḷḷi*/ 1. ಎತ್ತರವಿಲ್ಲದವಳು, ಗಿಡ್ಡಿ, 2. ಕುಳ್ಳಮ್ಮ. a short woman. ವಾ: ಎಲ್ಲೊವು ಕುಳ್ಳಿತನೆ ಕರ್‌ಯದು. ಪ: ಕುಳ್ಳಿಗ – ಕುಳ್ಳಿಯಂದಿರು

ಕುಳ್ಳ[2] /*kuḷḷa*/ ನಾ. 1. ಸಣ್ಣದಾದ, 2. ಚಿಕ್ಕದಾದ 3. ಮೊಟಕಾದ. 1. small, 2. short, 3. dwarfish. **ಕಳ್ಳನ ನಂಬಿರೊ ಕುಳ್ಳನ ನಂಬಿಕಾಗದ್(ಗಾ).** ವಾ: ಅದೊಂದು ಕುಳ್ಳ ಮರ.

ಕುಳ್ಳಂಪಾಡಿ /*kuḷḷampa:ḍi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಐವರ್ನಾಡು ಗ್ರಾಮದ ಜಾಗ. a locality in Aivarnadu village in Sullia Taluk of Dakshina Kannada District.

ಕುಳ್ಳಾಜೆ /*kuḷḷa:je*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಮರಪಡ್ನೂರು ಗ್ರಾಮದ ಜಾಗ. a locality in Amarapadnuru village in Sullia Taluk of Dakshina Kannada District.

ಕೂಂಗಿಕಂಡ್ /*ku:ŋgikaṇḍɨ*/ ನಾ. 1. ಕೂಗಿಕೊಂಡು, 2. ಅತ್ತುಕೊಂಡು, 3. ಕಣ್ಣೀರು ಹಾಕಿಕೊಂಡು. 1. sobbing, 2. crying, 3. shedding tears. ವಾ: ಗೂಡೆ ಕೂಂಗಿಕಂಡ್ ಹೋದೆ. ಪ: ಕೂಂಗಿಕನ – ಕೂಗುವಾಗ; ಕೂಗಿತ್ – ಕೂಗಿದನು/ಳು; ಕೂಂಗಿತ್ – ಕೂಗಿದನು;

ಕೂಂಗು /*ku:ŋgu*/ ಕ್ರಿ. ಕೋಳಿ (ಹುಂಜ) ಕೂಗುವುದು.

crowing of a rooster. ವಾ: ಹುಂಜ ಕೂಂಗು ಹಾಕ್‌ತಾ ಉಟ್ಟು ನೋಡಕಾಯ್ತ್ ಎಂಲುಗ್ಗಪ್‌ಪ್‌ತ? ಪ: ಕೂಂಗಿಕನ – ಕೂಗುವಾಗ; ಕೂಂಗಿಕೆ – ಕೂಗಲು. **ಕೂಂಗೀರೆ** /*ku:ŋgi:rɛ*/ ಕೂಗಿದರೆ. if shouted or screamed. **ಅಜ್ಜಿನ ಕೋಳಿ ಕೂಂಗೀರೆ ಬೆಳಗಾದುನಾ(ಗಾ).** ವಾ: ಬೊಳಿಬುಡ್‌ಕನ ಕೋಳಿ ಕೂಂಗೀರೆ ಎಚ್ಚರಾದೆ. **ಕೂಂಗುದು** /*ku:ŋgudu*/ 1. ಕೂಗುವುದು, 2. ಕೋಳಿ ಕೂಗುವುದು. 1. to shout, 2. crowing of a rooster. ವಾ: ಹೊತಾರೆ ಕೋಳಿ ಕೂಂಗುದು ಕೇಳಿ ನಂಗೆ ಎಚ್ಚರ ಆದ್. ಪ: ಕೂಂಗುವ – ಕೂಗುವ; ಕೂಂಗೊ – ಕೂಗುವ; ಕೂಂಗ್ – ಕೂಗು;

ಕೂಂಜಿ /*ku:ŋji*/ ನಾ. ಹಲಸಿನ ಹಣ್ಣಿನ ಗೂಂಜು. jackfruit rind and core. ವಾ: ಕೂಂಜಿನ ಹಸ್ ತಿಂಬೊದು ಅಪಾಯ. ಪ: ಗೂಂಜಿ

ಕೂಂಜೋಳು /*ku:ŋjo:ḷu*/ ನಾ. ಮೀನು ಹಿಡಿಯಲು ಬಳಸುವ ಬೆತ್ತ / ಬಿದಿರಿನ ಸಲಾಕೆಯಿಂದ ಮಾಡಿದ ಸಾಧನ. a fishing rod made of bamboo. ವಾ: ಮೀನ್ ಹಿಡೆಕೆ ಕೂಂಜೋಳು ಬಳ್‌ಸುವೆ. ಪ: ಕೂಂಜೋಳ್

ಕೂಂಟಾಯಿ /*ku:ṇṭage*/ ನಾ. ಕೋಳಿ ಮುಚ್ಚಿ ಹಾಕುವ ಮಾದರಿ ಬಳ್ಳಿಯಿಂದ ಹೆಣೆದ ಬುಟ್ಟಿ. a basket to keep the chicken together/a bamboo coop. ವಾ: ಕೂಂಟಾಯಿ ಒಳೆಗೆ ಕೋಳಿಗಳ ಹಾಕುದು. **ಕೂಂಟೆಗೆ** /*ku:ṇṭɛgɛ*/ ನಾ. ಕೋಳಿಗಳನ್ನು ಮುಚ್ಚಿ ಹಾಕಲು ಬಳಸುವ ದೊಡ್ಡ ಬುಟ್ಟಿ. a big basket to keep the chicken together. ವಾ: ಕೋಳಿ ಪಿಳ್ಳೆಗಳ ಕೂಂಟೆಗೆ ಹಾಕಿ ಮುಚ್ಚಿಸುದು.

ಕೂಂತೊಳ್ /*ku:ntɔḷɨ*/ ನಾ. ಮೀನು ಹಿಡಿಯಲು ಬಳಸುವ ಉಪಕರಣ. equipments used in fishing. ವಾ: ಕೂಂತೋಳ್ ತಕಂಡ್ ಮೀನ್ ಹಿಡೆಕೆ ಪೋಯಿ. ಪ: ಕೂಂಜೋಳು

ಕೂಂಬೆ /*ku:mbɛ*/ ನಾ. 1. ಬಾಳೆಯ ಹೂವು, 2. ಬಾಳೆ ಮೋತೆ. Banana blossoms. ವಾ: ಬಾಳೆದೈಲಿ ಕೂಂಬೆ ಬುಟ್ಟುಟು. ಪ: ಪೂಂಬೆ(ತು)

ಕೂಕುಳು /*ku:kuḷu*/ ನಾ. ಕೂ, ಎಂದು ಕೂಗು ಹಾಕುವುದು. making ‘Koo’ sound. ವಾ: ಯಾರೋ ದೂರಲಿ ಕೂಕುಳು ಹಾಕಿವೆ. ಪ: ಕೂಕ್ಳ ಹಾಕುದು – ಕೂ. ಎಂದು ಕೂಗು ಹಾಕುವುದು; ಕೂಕುಳ ಹಾಕುದು – ಕೂಗು ಹಾಕುವುದು

ಕೂಗಲಿಟ್ಟ್ /*ku:galiṭṭɨ*/ ನಾ. ಹಲಸಿನ ಹಣ್ಣಿನ ರಸದಿಂದ ಮಾಡುವ ಸಿಹಿ ಖಾದ್ಯ. a dessert made of jackfruit juice. ವಾ: ಕೂಗಲಿಟ್ಟ್ ಮಾಡ್ಯೊಳೊ ತಿಂದರೆನ? ಪ: ಕೂಗಲೆ ಹಿಟ್ಟ್ – ಬಾಳೆ ಎಲೆಯಲ್ಲಿ ಮಡಚಿಟ್ಟು ಮಾಡುವ ಹಲಸಿನ ತಿಂಡಿ(ಹಿಟ್ಟು); ಕೂಗ್ಲಿಟ್ಟ್

ಕೂಗಲೆ /*ku:galɛ*/ ನಾ. ಗೊರಬೆಗೆ ಹೊದಿಸುವ ಎಲೆ. a leaf used to cover a hood. **ಆಚೆ ವಾಟೆ ಪಡ, ಈಚೆ ವಾಟೆ ಪಡ, ನಡೂಲಿ ಕೂಗಲೆ ಪಡ – ಕೊರ್‌ಂಬೆ(ಒ).** ವಾ: ಕೂಗಲೆ ಸೊಪ್ಪು ಕೊಯಕೆ ಪೋಯ. ಪ: ಕೂಗ್‌ಲೆ – ಗೊರ್ಗದಲ್ಲಿ ಬಳಸುವ ಏಲಕ್ಕಿ ಎಲೆಯ ರೂಪದ ಉದ್ದ ಎಲೆ

ಕೂಗ್ /*ku:gɨ*/ ಕ್ರಿ. 1. ಅಳು, 2. ಕಣ್ಣೀರು ಹಾಕು. 1. to cry, 2. to shed tears. ವಾ: ಜೋರಾಗಿ ಕೂಗ್ ಬಡನೆ. **ಕೂಗಿತ್ ಗಡ** /*ku:gitɨ gaḍa*/ 1. ಕೂಗಿದನಂತೆ, 2. ಕರೆದನಂತೆ, 3. ಧ್ವನಿಮಾಡಿದನಂತೆ. 1. called out, 2. called, 3. to call out. ವಾ: ಆಗಲೆ ಮನೆ ಹಕ್ಕಲೆ ಬಂದ್ ಕೂಗಿತ್ ಗಡ ಗೊತ್ತೇ ಆತ್ಲೆ ನಮಿಗೆ.

ಕೂಚ /*ku:ca*/ ನಾ. ಚಿಕ್ಕ ಮಕ್ಕಳಿಗೆ ಕುಳಿತುಕೊ ಎಂದು ಮುದ್ದಿನಿಂದ ಹೇಳುವುದು. asking infant’s to sit out of affection. ವಾ: ಅತ್ತಿತ್ತ ಹೋಗ್ಬಡ ಇಲ್ಲೆ ಕೂಚ ಆತ. ಪ: ಕೂಚಿಕ – ಕುಳಿತುಕೊ

ಕೂಚು /*ku:cu*/ ನಾ. 1. ಅನ್ಯೋನ್ಯ, 2. ಆತ್ಮೀಯ. 1. relationship of reciprocity, 2. affectionate. ವಾ: ಅವಿಬ್ಬರ್ ಬಾರಿ ಕೂಚು.

ಕೂಜುಗೋಡು /*ku:jugo:ḍu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೂಜುಗೋಡು ಕಟ್ಟೆಮನೆ /*ku:jugo:ḍu kaṭṭemane*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಐನೆಕಿದು ಗ್ರಾಮದ ಜಾಗ. a locality in Inekidu village in Sullia Taluk of Dakshina Kannada District.

ಕೂಟ /*ku:ṭa*/ ನಾ. ಸಮಾನ ಮನಸ್ಕರ ಒಂದು ಕೂಟ.

a group of likeminded people, a coterie. ವಾ: ಸಂತೋಸ ಕೂಟಕೆ ಹೋಕು.

ಕೂಟಾಜೆ /*ku:ṭa:je*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಎಡಮಂಗಲ ಗ್ರಾಮದ ಜಾಗ. 1. family, 2. lineage, 3. a locality in Edamangala village in Sullia Taluk of Dakshina Kannada District.

ಕೂಟಿಕೂಟಿ /*ku:ṭiku:ṭi*/ ನಾ. ಒಟ್ಟೊಟ್ಟಿಗೆ, 2. ಜೊತೆಜೊತೆಗೆ. 1. together, 2. in conjunction. ವಾ: ಬಂದರೆ ಕೂಟಿಕೂಟಿ ಬಜ್ಜ ಬಾದು.

ಕೂಟು /*Ku:ṭu*/ ನಾ. 1. ಜೊತೆ, 2. ಅನೇಕ ತರಕಾರಿಗಳನ್ನು ಕೂಡಿಸಿ ತಯಾರಿಸಿದ ಮೇಲೋಗರ. 1. together, 2. a dish prepared by using many vegetables -korma (kurma). ವಾ: ಇಂದ್ ಕೂಟು ಗೈಪ್ ಮಾಡ್‌ದ್.

ಕೂಟೆ /*ku:ṭɛ*/ ನಾ. ಮರದ ತುಂಡು. a piece of wood. ವಾ: ಕೂಟೆನ ಎಲ್ಲಿ ಹಾಕಿಸೊಕು. ಪ: ಕುಂಟೆ

ಕೂಟೇಲು /*ku:ṭe:lu*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಮರಪಡ್ನೂರು ಗ್ರಾಮದ ಜಾಗ. 1. family, 2. lineage, 3. a locality in Amarapadnuru village in Sullia Taluk of Dakshina Kannada District.

ಕೂಟ್ ಕಾಲ್ /*ku:ṭɨ ka:lɨ*/ ನಾ. ಒಂದಕ್ಕೊಂದು ಮುಟ್ಟಿಕೊಳ್ಳುವ ಮೊಣಕಾಲು. knee knock. ವಾ: ಕೂಟ್ ಕಾಲ್ ಹಾಕಿ ನಡೆದು.

ಕೂಟ್ ಗೈಪು /*ku:ṭɨ gaipu*/ ನಾ. 1. ಮಿಶ್ರ ತರಕಾರಿಯ ಸಾಂಬಾರು, 2. ಅನೇಕ ತರಕಾರಿಗಳನ್ನು ಕೂಡಿಸಿ ತಯಾರಿಸಿದ ಮೇಲೋಗರ. a mixed vegetable kurma. ವಾ: ಸುಬ್ರಮಣ್ಯ ಸಸ್ಟಿಗೆ ಕೂಟ್ ಗೈಪು ಮಾಡುದು. ಪ: ಕೂಟ್‌ಕರಿ(ಮ)

ಕೂಟ್‌ಕರಿ /*ku:ṭikari*/ ನಾ. 1. ಮಿಶ್ರ ತರಕಾರಿಯ ಸಾಂಬಾರು, 2. ಅನೇಕ ತರಕಾರಿಗಳನ್ನು ಕೂಡಿಸಿ ತಯಾರಿಸಿದ ಮೇಲೋಗರ. a mixed vegetable korma/kurma. ವಾ: ಕೂಟ್‌ಕರಿ ಮಾಡಿರೆ ಲಾಯ್ಕ.

ಕೂಡ /*ku:ḍa*/ ನಾ. 1. ಕೂಡ, 2. ಸಹ, 3. ಜೊತೆ. 1. together, 2. too, 3. jointly. ವಾ: ಅವು ಕೂಡ ಬಂದವೆಗಡ.

ಕೂಡಕಂಡಿ /*ku:ḍakaṇḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೂಡಬೊಳಿ /*ku:ḍabɔḷi*/ ನಾ. ಪರಸ್ಪರ ಹೊಂದಾಣಿಕೆಯಾಗುವ ಬಳಿ ಅಥವಾ ಗೋತ್ರ. a clan which is suitable for a prospective alliance. ವಾ: ಕಬರ್ ಮತೆ ನಾಯರ್ ಬೊಳಿಯವ್ ಕೂಡು ಬೊಳಿಯವ್ ಗಡ.

ಕೂಡಲ್ಲೆ /*ku:ḍallɛ*/ ಕ್ರಿ. ಸೇರುವುದಿಲ್ಲ. not able to. ವಾ: ಉಂಬಕೆ ಕೂಡಲ್ಲೆ.

ಕೂಡಾಡಿ /*ku:ḍa:ḍi*/ ನಾ. ಜೊತೆಸೇರಿ. together. ವಾ: ಕೂಡಾಡಿ ಮಾಡಿರೆ ಕೆಲ್‌ಸ ಸುಲಬ. ಪ: ಕೂಡಿಕಂಡ್

ಕೂಡಾವಳಿ /*ku:ḍa:vaḷi*/ ನಾ. 1. ಪುನರ್ ವಿವಾಹ, 2. ಕೂಡಿಕೆ, 3. ಹೆಣ್ಣಾಗಲಿ ಗಂಡಾಗಲಿ ತನ್ನ ಸಂಸಾರದ ಬಾಳಿನಲ್ಲಿ ದುರಂತ ಸಂಭವಿಸಿ ಏಕಾಂಗಿಯಾದರೆ ಅವರಿಗೆ ಪುನಃ ಮದುವೆ ಮಾಡಿಸುವುದು. 1. a re-marriage, 2. a widow/divorcee getting married again, 3. getting married for the second time due the unfortunate death of one's spouse. ವಾ: ಸಣ್ಣ ವಯ್‌ಸ್‌ಗೆ ಗಂಡ ಸತ್ತರೆ ಕೂಡಾವಳಿ ಮಾಡಿವೆ.

ಕೂಡಾಳ್ /*ku:ḍa:ḷɨ*/ ನಾ. 1. ಮುಯ್ಯಾಳು, 2. ಹಣವನ್ನು ನೀಡದೆ ಕೆಲಸಕ್ಕೆ ಕೆಲಸದ ಸಹಕಾರ ನೀಡುವುದು, 2. ಸಹಾಯಕ ಕೆಲಸಗಾರರು. 1. a substitute worker, 2. to work without seeking any money, 3. helpers. ವಾ: ಕೆಲ್‌ಸಕೆ ಕೂಡಾಳ್‌ನ ಕರ್‌ಕಣಕು, ಒಬ್ಬಂದ ಆಗುವಂತದಲ್ಲ. ಪ: ಕೂಡ್ಯಾಳ್

ಕೂಡಿ /*ku:ḍi*/ ನಾ. 1. ಸೇರಿ, 2. ಜೊತೆ ಸೇರಿ. 1. joinlty, 2. together. ವಾ: ಮನೆವೆಲ್ಲ ಕೂಡಿ ಕಾರ್‌ಬಾರ್ ಮುಗ್‌ಸಿದೊ. ಪ: ಕೂಡಿಕಂಡ್ – ಕೂಡಿಕೊಂಡು

ಕೂಡಿ ಉಂಬ /*ku:ḍi umba*/ ನಾವಿ. ಮನೆಯವರೆಲ್ಲರು ಒಟ್ಟಾಗಿ ಕುಳಿತು ಭೋಜನ ಮಾಡುವುದು. all the members of the family having food together. ವಾ: ಹೊಸ್ತೂಟ ಕೂಡಿ ಉಂಬ ಪದ್ದತಿ. **ಕೂಡಿ ಉಂಬೊದು** /*ku:ḍi umbodu*/ ವಾ: ಕೂಡಿ

ಉಂಬೊದು ಪದ್ದೆತಿನೆ ಲಾಯ್ಕ ಅಲಾ. ಪ: ಕೂಡಿ ಉಂಬಕೆ – ಕೂಡಿ ಊಟ ಮಾಡಲು

ಕೂಡಿಕಂಡ್ /*ku:ḍikaṇḍɨ*/ ಕ್ರಿ. ಜೊತೆ ಸೇರಿಕೊಂಡು. together. ವಾ: ಎಲ್ಲ ಕೂಡಿಕಂಡ್ ಬಾರಿ ನೆಗಾಡುವೆ. ಪ: ಕೂಡಿಕೊಡ್ದೂಂತ – ಸೇರಿ ಕೊಡುವುದೆಂದು

ಕೂಡಿಕೆ /*ku:ḍikɛ*/ ನಾ. 1. ಕೂಡಾವಳಿ, 2. ಸ್ಮಶಾನದಲ್ಲಿ ಶವ ಸುಟ್ಟ ಮರುದಿನ ನಡೆಯುವ ಒಂದು ಪದ್ಧತಿ, 3. ಸೇರುವಿಕೆ. 1. joining together, 2. a ritual performed the next day after cremating the dead, 3. being/coming together. ವಾ: ಕೂಡಿಕೆತೇಳಿರೆ ಸತ್ತ ಮಾರನೆ ದಿನ ಮಾಡೊ ಪದ್ದೆತಿ. ಪ: ಕೂಡಿಕೆಂತ – ಕೂಡಲೆಂದು

ಕೂಡಿತ್ತ್ /*ku:ḍittɨ*/ ಕ್ರಿ. 1. ಕೂಡಿತ್ತು, 2. ಸೇರಿತ್ತು. 1. joined, 2. gathered. ವಾ: ಅಂವಂಗೆ ಬಾರಿ ಹಣ ಕೂಡಿತ್ತ್.

ಕೂಡಿನೆ /*ku:ḍinɛ*/ ಕ್ರಿ. 1. ಕೂಡಿಸುತ್ತೇನೆ, 2. ಸೇರಿಸುತ್ತೇನೆ. 1. will join, 2. will gather. ವಾ: ದನಗಳ ಹಟ್ಟಿಗೆ ಕೂಡಿನೆ. ಪ: ಕೂಡಿಯಾಕನ – ಕೂಡಿಯಾಗುವಾಗ

ಕೂಡ್ /*ku:ḍɨ*/ ನಾ. 1. ಕೂಡು, 2. ಸೇರು. 1. to join, 2. join. ವಾ: ಅವ್ವಂಗೆ ಮನೆ ಕೆಲ್‌ಸಕೆ ಕೂಡ್. **ಕೂಡುದು** /*ku:ḍudu*/ 1. ಸೇರುವುದು, 2. ಸಂಗಮವಾಗುವುದು. 1. joining, 2. unifying. ವಾ: ಕಾವೇರಿ ಹೊಳೆ ಎಲ್ಲಿ ಕೂಡುದು. ಪ: ಕೂಡುವಲ್ಲಿ – ಸೇರುವಲ್ಲಿ; ಕೂಡ್ – ಸೇರು; ಕೂಡ್‌ಸಿ – ಸೇರಿಸಿ; ಕೂಡ್‌ಕನ – ಸೇರುವಾಗ; ಕೂಡ್‌ವಂತವ್ – ಸೇರಿಸುವಂತವರು.

ಕೂಡು /*ku:ḍu*/ ಕ್ರಿ. 1. ಸೇರಿಸು, 2. ಸೇರು. 1. will join, 2. to join/to reach. ವಾ: ಹಂದಿನ ಗೂಡೊಳೆಗೆ ಕೂಡು. ಪ: ಕೂಡುಂತ – ಕೂಡೆಂದು.

ಕೂಡುಕೂಟ /*ku:ḍu ku:ṭa*/ ನಾ. ಒಟ್ಟಾಗಿ ಸೇರು. to join/being together. ವಾ: ನಾಡ್‌ಲಿ ಹುತ್ತೆರಿ ಮಾರನೆ ದಿನ ಊರೊವೆಲ್ಲ ಸೇರಿ ಕೂಡು ಕೂಟ ಮಾಡಿವೆ. ಪ: ಕೂಡ್ಕೂಟ – ಜನಾಂಗ ಬಾಂದವರು ಒಂದೆಡೆ ಒಟ್ಟಿಗೆ ಸೇರಿ ನಡೆಸುವ ಕಾರ್ಯಕ್ರಮ

ಕೂಡುರಸ್ತೆ /*ku:ḍu rastɛ*/ ನಾ. 1. ಸೇರುವ ರಸ್ತೆ, 2. ಕೂಡುವ ರಸ್ತೆ. 1. adjoining road, 2. joining road. ವಾ: ನೀ ಕೂಡು ರಸ್ತೆಲಿ ನಿತ್ತ್‌ಕ ನಾ ಅಲ್ಲಿಗೆ ಬನ್ನೆ.

ಕೂಡೂಟ /*ku:ḍu:ṭa*/ ನಾ. 1. ಹೊಸ್ತೂಟ, 2. ಹೊಸ ಅಕ್ಕಿ ಊಟ. a feast of having dishes made out of newly harvested rice. ವಾ: ಎಲ್ಲಾ ಮನೆವು ತಲಕಾವೇರಿ ಸಂಕ್ರಮಣಕ್ಕೆ ಮುಂದೇನೆ ಕೂಡೂಟ ಮಾಡಿ ಮುಗ್ಸೊಕುತ ಹಿಂದೆಂದ ನಡ್ದ್ ಬಂದ ಸಂಪ್ರದಾಯ.

ಕೂಡೋಳು /*ku:ḍo:ḷu*/ ನಾ. ಜೇನುನೊಣದಂತೆ ಕೊಂಡಿಯುಳ್ಳ ಒಂದು ಕೀಟ, 2. ಕಡಜೀರಿಗೆ, 3. ಕಣಜದಹುಳು. a wasp. ವಾ: ಕೂಡೋಳು ಕಚ್ಚಿದೆ. ಪ: ಕಡಂದೋಳು

ಕೂಡ್‌ಕಟ್ಟ್ /*ku:ḍikaṭṭɨ*/ ನಾ. 1. ಒಂದು ವರ್ಗದ ಜನರ ಕೂಡುಕಟ್ಟು, 2. ಒಕ್ಕೂಟ. 1. a group/class related to each other, a clan, a family, etc, 2. an association/an organisation. ವಾ: ಮನೆವರ ಕೂಡ್‌ಕಟ್ಟ್‌ಲಿ ಜಂಬರ ಸುದಾರ್ತ್.

ಕೂಡ್‌ಕುಟುಂಬ /*ku:ḍikuṭumba*/ ನಾ. ಕುಟುಂಬದ ಬಂಧುಗಳ ಸಮೂಹ. members of a family – members of a joint family. ವಾ: ಕೂಡ್‌ಕುಟುಂಬದವೆಲ್ಲ ವಿಸೇಸ ದಿನಗಳ್‌ಲಿ, ಹಬ್ಬ ಹರಿದಿನಗಳ್‌ಲಿ ಐನ್ ಮನೆಲಿ ಸೇರುವೆ. ಪ: ಕೂಡ್‌ಕುಟುಮ್ಮೊ

ಕೂಡ್ಕೂಟ /*ku:ḍku:ṭa*/ ನಾ. ಕೂಡು ಕೂಟ. joining together. ವಾ: ನಾಡ್‌ಲಿ ಹುತ್ತೆರಿ ಮಾರನೆ ದಿನ ಊರೊವೆಲ್ಲ ಸೇರಿ ಕೂಡ್ಕೂಟ ಮಾಡಿವೆ.

ಕೂಡ್‌ಗಟ್ಟ್ /*ku:ḍigaṭṭɨ*/ ನಾ. 1. ಒಡನಾಟ, 2. ಪಾಲ್ಗೊಳ್ಳುವಿಕೆ. 1. contact, 2. participation. ವಾ: ನನ್ನ ಅಂವನ ಕೂಡ್‌ಗಟ್ಟ್ ಬಾರಿ ವರ್‌ಸದ್.

ಕೂಡ್ತ್ /*ku:ḍtɨ*/ ಕ್ರಿ. 1. ಕೂಡಿತು, 2. ಸೇರಿತು. 1. joined, 3. added. ವಾ: ಮುರ್‌ದ ಕಾಲ್ ದ್ ಮೂಳೆ ಮದ್ದ್ ಕಟ್ಟಿ ಕೂಡ್ತ್. ಪ: ಕೂಡ್ದಾಗೆ – ಸೇರಿದಾಗೆ

ಕೂಡ್ದು /*ku:ḍdu*/ ಕ್ರಿ. 1. ಸೇರುವುದು, 2. ಸೇರಿಸುವುದು. 1. reached, 2. to collect/gather. ವಾ: ದನಗಳ ಹಟ್ಟಿಗೆ ಕೂಡ್ದು.

ಕೂಡ್ದುಲೆ /*ku:ḍdulɛ*/ ಕ್ರಿ. ಸೇರುವುದಿಲ್ಲ, not able to. ವಾ: ಉಂಬಕೆ ಕೂಡ್ದುಲೆ.

ಕೂಡ್ಯಾಡ್ದ್ /*ku:ḍya:ḍdɨ*/ ನಾ. 1. ಕೂಡಿ ಆಡಿದ್ದು, 2.

ಜೊತೆ ಸೇರಿ ಆಟ ಆಡಿದ್ದು. played together. ವಾ: ಸಣ್ಣದರ್‌ಲಿ ಕೂಡ್ಯಾಡ್ದ್ ಈಗ ನೆಂಪಾದೆ.

ಕೂಡ್ಯೊಳೊ /*ku:ḍyɔḷɔ*/ ನಾ. 1. ಜೊತೆ ಸೇರು, 2. ಸೇರಿದ್ದೇವೆ. 1. to join, 2. assembled. ವಾ: ಕೆಲ್‌ಸಕೆ ನಾವು ಕೂಡ್ಯೊಳೊ.

ಕೂಡ್ರು /*ku:ḍru*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೂಡ್ಲೆ /*ku:ḍlɛ*/ ನಾ. 1. ಕೂಡಲೆ, 2. ತಕ್ಷಣ, 3. ಆ ಕ್ಷಣ. 1. immediately, 2. all of a sudden, 3. in that moment. ವಾ: ನೀ ಈ ಕೂಡ್ಲೆ ಹೊರ್‌ಟ್ ಬರೊಕಡ.

ಕೂಡ್ಸ್[1] /*ku:ḍsi*/ ಕ್ರಿ. ಕೂಡಿಸು. to add. ವಾ: ಎಂಟ್‌ನೂರಕ್ಕೆ ಐನೂರೆಂಬತ್‌ನ ಕೂಡ್ಸ್. ಪ: ಕೂಡ್ಸಿವೆ -ಕೂಡಿಸುತ್ತಾರೆ; ಕೂಡ್ಸುದು – ಕೂಡಿಸುವುದು; ಕೂಡ್ಸೊಕು – ಕೂಡಿಸಬೇಕು; ಕೂಡ್ಸೊನ – ಕೂಡಿಸೋಣ

ಕೂಡ್ಸ್[2] /*ku:ḍsi*/ ಕ್ರಿ. ಸೇರಿಸು. to gather. ವಾ: ಗೈಪುಗೆ ಮಸಾಲೆ ಕೂಡ್ಸ್. **ಕೂಡ್ಸಿ** /*ku:ḍsi*/ 1. ಸೇರಿಸಿ, 2. ಜೋಡಿಸಿ, 3. ಒಟ್ಟು ಸೇರಿಸಿ. 1. to add, 2. to join, 3. to gather. ವಾ: ಎರ್‌ಡ್ ಬೆಂಚಿನ ಕೂಡ್ಸಿ ಇಸ್. ಪ: ಕೂಡ್ಸಿಕೊಂಡತ್ – ಸೇರಿಸಿಕೊಂಡಿತು/ ಸೇರಿಸಿಕೊಂಡನು/ಳು; ಕೂಡ್ಸಿಕೊಂಡ್ – ಸೇರಿಸಿಕೊಂಡು; ಕೂಡ್ಸಿತ್ – ಸೇರಿಸಿತು/ಸೇರಿಸಿದನು/ ಳು; ಕೂಡ್ಸಿದೊ – ಸೇರಿಸಿದರು; ಕೂಡ್ಸಿದ್ – ಸೇರಿಸಿದ್ದು. **ಕೂಡ್ಸಿನೆ** /*ku:ḍsinɛ*/ 1. ಕೂಡಿಸುತ್ತೇನೆ, 2. ಸೇರಿಸುತ್ತೇನೆ. 1. will join, 2. will gather. ವಾ: ದನಗಳ ಹಟ್ಟಿಗೆ ಕೂಡ್ಸಿನೆ. **ಕೂಡ್ಸುದು** /*ku:ḍudu*/ ಕೂಡಿಸುವುದು. addition. ವಾ: ಕೂಡುದು ಹೆಂಗೆತ ಗೊತ್ತಾ ನಿಂಗೆ? ಪ: ಕೂಡ್ – ಗುಣಿಸು; ಕೂಡ್‌ಸಿ – ಗುಣಿಸಿ; ಕೂಡ್‌ಕನ – ಗುಣಿಸುವಾಗ

ಕೂಡ್ಸ್[3] /*ku:ḍsi*/ ನಾ. 1. ಬಂಧಿಸು, 2. ಕೂಡಿ ಹಾಕು. 1. to imprison, 2. to arrest. ವಾ: ಹಟ್ಟಿಗೆ ದನಗಳ ಕೂಡ್ಸ್.

ಕೂತಿದ್ದೊ /*ku:tiddɔ*/ ಕ್ರಿ. ಕುಳಿತಿದ್ದರು. they were sitting. ವಾ: ಆಗಳೆ ಕಟ್ಟೆ ಹಕ್ಕಲೆ ನಾವೆಲ್ಲ ಕೂತಿದ್ದೊ.

ಕೂತ್‌ಕ /*ku:tɨka*/ ಕ್ರಿ. 1. ಕೂರು, 2. ಕುಳಿತುಕೊ. to sit. ವಾ: ಇಲ್ಲೆ ಏರಿಲಿ ಕೂತ್ಕಾ.

ಕೂತ್ಕುಂಜ /*ku:tkuɲja*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕುತ್ಕುಂಜ ಗ್ರಾಮದ ಜಾಗ. a locality in Kutkunja village in Sullia Taluk of Dakshina Kannada District.

ಕೂದ್ಲ್ /*ku:dlɨ*/ ನಾ. ಕೂದಲು. hair. **ಅಂವನ ಮಾತ್ ಬೆಣ್ಣೆಂದ ಕೂದ್ಲೆಳ್ದಂಗೆ(ಗಾ). ಕೆಂಪು ಕೂದ್ಲುಟ್ಟು ಪ್ರಾಣಿಯಲ್ಲ, ಮುತ್ತುಟ್ಟು ಕಪ್ಪೆ ಚಿಪ್ಪಲ್ಲ – ಮುಸುಕಿನ ಜೋಳ(ಒ).** ವಾ: ಅವುಳು ಉದ್ದ ಕೂದ್ಲ್ ನ ಕತ್ತ್ ರಿಸಿದ್. **ಕೂದಲ್** /*Ku:dalɨ*/ 1. ಕೂದಲು, 2. ಕೇಶ. hair. ವಾ: ಕೂದಲ್ ಬೆಳ್ದುಟು, ಕತ್‌ರ್‌ಸಕಾಯ್ತ್. **ಕೂದೊಲು** /*ku:dolu*/ ವಾ: ಕೂದೊಲು ಬೆಳಿಯಾಗುಟು. **ಕೂದೊಲುನ ಇಳ್ಸಿ ಬುಡ್ದು** /*ku:doluna iḷsi buḍḍu*/ ಕೂದಲನ್ನು ಹರಡಿ ಬಿಟ್ಟುಕೊಳ್ಳುವುದು. spreading one's hair. ವಾ: ಗೂಡೆಗ ಕೂದೊಲುನ ಇಳ್ಸಿ ಬುಡ್ದು ಈಗನ ಪ್ಯಾಸನ್.

ಕೂಪದಿ ಕೂಳ್ /*ku:padi ku:ḷɨ*/ ನಾ. ಬಾಳೆ ಎಲೆಯನ್ನು ಸ್ವಲ್ಪಬೆಂಕಿಯಲ್ಲಿ ಬಾಡಿಸಿ, ಅದರಲ್ಲಿ ವಿವಿಧ ಖಾದ್ಯಗಳನ್ನು ಕಟ್ಟಿ ಬುತ್ತಿ ತಯಾರಿಸುವುದು. to cook food wrapped in a slighly burnt banana/ plantain leaf. ವಾ: ಊಟನ ಕೂಪದಿ ಕೂಳ್‌ಲಿ ಕಟ್ಟಿಕಂಡ್ ಹೋದೊ.

ಕೂಪು[1] /*ku:pu*/ ನಾ. 1. ನೆಡುತೋಪು, 2. ಗೇರು ಬೀಜ ಬೆಳೆಯುವ ಜಾಗ. 1. a plantation, 2. a cashew plantation. ವಾ: ರಬ್ಬರ್ ಕೂಪುಲಿ ದನಗ ಒಳೊ.

ಕೂಪು[2] /*ku:pu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಐವರ್ನಾಡು ಗ್ರಾಮದ ಜಾಗ. a locality in Aivarnadu village in Sullia Taluk of Dakshina Kannada District.

ಕೂಪೇರ /*ku:pe:ra*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೂಮೆಮರ /*ku:mɛmara*/ ನಾ. ಕಾಡು ಜಾತಿಯ ದೊಡ್ಡ ಹಣ್ಣಿನ ಮರ. a fruit tree grown in the forest. ವಾ: ಕೂಮೆ ಮರಕೆ ಹತ್ತೊಮೊ.

ಕೂಮೆಣ್ಣ್ /*ku:mɛɳɳɨ*/ ನಾ. ಎರಡು ರೀತಿಯ ಹಣ್ಣು ಇದೆ. ಪ್ರಾಣಿಗಳು ಮಾತ್ರ ತಿನ್ನುವ ಹಣ್ಣು. ಇನ್ನೊಂದು ಮನಷ್ಯರೂ ತಿನ್ನಬಹುದಾದ ಹಣ್ಣು. two types of fruit grown on a forest tree, one variety is eaten only by animals and the other can

be eaten by both humans and animals. ವಾ: ಕೂಮೆ ಹಣ್ಣ್ ತಿಂಬೊದು. ಪ: ಕೂಮೆ ಹಣ್ಣ್

ಕೂರ[1] /*ku:ra*/ ನಾ. ನಾಯಿಗಳನ್ನು ಕರೆಯುವ ಪದ. a term used to call out a dog. ವಾ: ನಾಯಿನ ಕೂರ ಕೂರತ ಕರ್‌ದರೆ ಓಡಿ ಬಂದದೆ. ಪ: ಕೂರಂಗ – ನಾಯಿಗಳು.

ಕೂರ[2] /*ku:ra*/ ನಾ. ಬರಿಕ. a mouse deer. ವಾ: ಕಾಡ್‌ಲಿ ಕೂರ ಕಾಂಬಕೆ ಸಿಕ್ಕಿಟುಗಡ. ಪ: ಬರ್ಕ್.

ಕೂರ[3] /*ku:ra*/ ನಾ. 1. ಒಂದು ಜಾತಿಯ ಪ್ರಾಣಿ, 2. ಕಾಡಿನಲ್ಲಿರುವ ಅರಶಿನ ಬಣ್ಣದ ಸಣ್ಣ ಹಂದಿ. a small wild boar, yellow in colour. ವಾ: ಕೂರನ ಮೈಮೇಲೆ ಅರ್‌ಸಣ ಬಣ್ಣ ಇದ್ದದೆ. ಪ: ಬೊರಿಕ್ಯ, ಬರಿಂಕ(ತು)

ಕೂರಂಬಡ್ಕ /*ku:rambaḍka*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೂರಂಬೇಲ್ /*ku:rambɛ:lɨ*/ ನಾ. ತೊಂಡೆಬಳ್ಳಿ ಹಬ್ಬಲು ಚಪ್ಪರದಲ್ಲಿ ಬಳಸುವ ಗಿಡ. a creeper used in the canopy to support the ivy gourd.

ಕೂರಕೂರ /*ku:raKu:ra*/ ಅ. ನಾಯಿಗಳನ್ನು ಕರೆಯುವ ಪದ. a term used to call out dogs.

ಕೂರಕ್ /*ku:rakɨ*/ ಕ್ರಿ. ಕುಳಿತುಕೊಳ್ಳಬಹುದ. may (i) sit. ವಾ: ನೆಲಲಿ ಕೂರಕೋ ಬೇಡನ? ಪ: ಕೂರದಿರಿಕಿಲೆ – ಕುಳಿತು ಕೊಳ್ಳದೆ ಇರುವುದಿಲ್ಲ. **ಕೂರಿಕಾದು** /*ku:rika:du*/ ಕುಳಿಕೊಳ್ಳಬೇಕಾಗಬಹುದು. may have to sit down. ವಾ: ಆಸ್ಪತ್ರೆಲಿ ಸುಮಾರ್ ಹೊತ್ತ್ ಕೂರಿಕಾದು. **ಕೂರಿಕಾದ್** /*ku:rika:d*/ 1. ಕೂರಬಾರದು, 2. ಕುಳಿತುಕೊಳ್ಳಬಾರದು. should not sit down. ವಾ: ದೊಡ್ಡವರ ಮುಂದೆ ಹಂಗೆಲ್ಲ ಕಾಲ್ ಮೇಲೆ ಕಾಲ್ ಹಾಕಿ ಕೂರಿಕಾದ್. ಪ: ಕೂರಿಕಾಗದ್

ಕೂರನ /*ku:rana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೂರಿಕೂರಿ /*ku:riku:ri*/ ಅ. ನಾಯಿ ಮರಿಗಳನ್ನು ಕರಿಯುವ ಪದ. a term used to call puppies.

ಕೂರಿಕೆ /*ku:rikɛ*/ ನಾ. 1. ಕೂರಲಿಕ್ಕೆ, 2. ಕುಳಿತುಕೊಳ್ಳುವುದಕ್ಕೆ. to sit down. ವಾ: ಕೂರಿಕೆ ಹೋಕನ ಅವು ಬುಟ್ಟತ್ಲೆ.

ಕೂರೇಲು /*ku:re:lu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೂರ್ /*ku:rɨ*/ ನಾ. ಕುಳಿತುಕೋ. sit. **ಚಾಳೆ ಮರದ ಕೆಳಗೆ ಕೂರ್ ಬಡ, ಕಡಂದಿ ಇರೊ ಮರಕ್ಕೆ ಹತ್ತ್ ಬಡ(ಗಾ). ಚದುರಂಗ ಬದುರಂಗ ಯಾಗ, ಎದ್ರ್ ಬದ್ರ್ ಕೂರ್ಕನ, ಸಿಟ್ಟ್ ಪಟ್ಟ್ ಯಾಗ, ಅರ್ದ ದಾರಿಗೆ ಬಾಕನ, ನಗಸರ ಬಿಗಸರ ಯಾಗ, ಪೂರ್ತಿ ಮೇಲೆ ಹೋಕಾಕನ – ಕೈ ಬಳೆ ತೊಡ್ದು(ಒ).** ವಾ: ಬಾನೆ ಹಕ್ಕಲೆ ಕೂರ್. ಪ: ಕೂರುವಲ್ಲಿ – ಕುಳಿತುಕೊಳ್ಳುವಲ್ಲಿ. **ಕೂರುಂತ** /*ku:runta*/ 1. ಕೂರು ಎಂದು, 2. ಕುಳಿತುಕೋ ಎಂದು. to tell someone to sit down. ವಾ: ಅವು ನನ್ನ ಹೊರೆಗೆ ಕೂರುಂತ ಹೇಳ್‌ದೊ. **ಕೂರ್‌ದುಲೆ** /*ku:rdulɛ*/ ಕುಳಿತುಕೊಳ್ಳುವುದಿಲ್ಲ. won't sit. ವಾ: ಕುರೆಗ ಕುದ್ದಲಿ ಕೂರ್‌ದುಲೆ.

ಕೂರ್‌ಂಗೊದಿ ಮುರಿಪ /*ku:rɨŋgodi muripa*/ ನಾವಿ. ವಧುವಿಗೆ ಮನೆಯಲ್ಲಿ ಪ್ರಥಮ ಮುಹೂರ್ತದ ನಂತರ ವಧುವಿನ ಅತ್ತಿಗೆ ವಧುವಿನ ಒಂದೆರಡು ತಲೆಗೂದಲು, ಕೈಕಾಲಿನ ಉಗುರು ತೆಗೆದು ಹಾಲು ಇರುವ ತಟ್ಟೆಗೆ ಹಾಕಿ, ನಂತರ ಅದನ್ನು ಹಾಲು ಬರುವ ಮರದ ಅಡಿಗೆ ಹಾಕಿ ದೃಷ್ಟಿ ತೆಗೆಯುವ ಶಾಸ್ತ್ರ. a custom of removing the effect of malicious eyes on the bride by waving a platter of milk, one or two strands of hair and nails (of both toe and fingers) put in the platter. Usually done by the sister- in – law on the first morning after the wedding. ವಾ: ಮೊದುವೆಲಿ ಕೂರ್‌ಂಗೊದಿ ಮುರಿಪ ಸಾಸ್ತ್ರತ ಮಾಡಿವೆ.

ಕೂರ್ನಡ್ಕ /*ku:rnaḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಆಲೆಟ್ಟಿ ಗ್ರಾಮದ ಜಾಗ. a locality in Aletti village in Sullia Taluk of Dakshina Kannada District.

ಕೂರ್ಮಕೋಡಿ /*ku:rmako:ḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೂರ್ಲು /*ku:rlu*/ ನಾ. ಹೊಳೆಯಲ್ಲಿ ವಾಸಿಸುವ

ಮೀನು. a fresh water fish. ವಾ: ಕೂರ್ಲು ಮೀನ್‌ಗ ಹಳ್ಳಲಿ ಕಾಂಬಕೆ ಸಿಕ್ಕುದು. ಪ: ಕೂರ್ಲ

ಕೂರ್ಸುದು /*ku:rsudu*/ ನಾ. ಕೂರಿಸುವುದು. to make someone/something sit. ವಾ: ನಾಡ್‌ದ್ ನಮ್ಮ ಊರುಲಿ ಗಣ್ಪತಿ ಕೂರ್ಸುದು.

ಕೂಲಿ /*ku:li*/ ನಾ. 1. ದುಡಿಮೆಗಾಗಿ ಕೊಡುವ ಪ್ರತಿಫಲ, 2. ಗಳಿಕೆ, 3. ಸಂಪಾದನೆ, 4. ಶ್ರಮ, 5. ದುಡಿಯುವ ಆಳು. 1. wages, 2. earning, 3. salary, 4. hard work, 5. a labourer. ವಾ: ಕೂಲಿ ನಾಲಿ ಮಾಡಿ ಬೊದ್ಕ್ ಸಾಗ್ಸುದು. **ಕೂಲಿಕೆಲ್ಸ** /*ku:likɛlsa*/ 1. ದುಡಿಮೆ, 2. ಸಂಪಾದನೆ, 3. ದಿನಗೂಲಿ. 1. salary, 2. earnings, 3. daily wages. ವಾ: ನಾವೆಲ್ಲ ಕೂಲಿಕೆಲ್‌ಸಕೆ ಹೋದು.

ಕೂವ /*ku:va*/ ನಾ. ಕೂವ ಕೂವ ಎಂದು ಹಾಡುವ ಕಂದು ಬಣ್ಣದ ಕೂವ ಪಕ್ಷಿ. a variety of bird. ವಾ: ಕೂವ ಹಕ್ಕಿ ಕೂಂಗಿದೆ.

ಕೂಸಕ್ಕ /*ku:sakka*/ ನಾ. ವ್ಯಕ್ತಿ ಹೆಸರು, ಸ್ತ್ರೀ ವಾಚಕ. feminine given name. ಪ: ಕೂಸ, ಕೂಸಮ್ಮ

ಕೂಸಪ್ಪ /*ku:sappa*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. masculine given name. ಪ: ಕೂಸ, ಕೂಸಣ್ಣ

ಕೂಸ್ /*ku:sɨ*/ ನಾ. ಮಗು. an infant. **ಅವ್ವಪ್ಪನ ಜಗಳಲಿ ಕೂಸು ಬಡವಾತ್(ಗಾ).** ವಾ: ಕೂಸ್ ಹರ್‌ಕಂಡ್ ಹೊರೆಗೆ ಮೆಟ್ಟ್ ಹಕ್ಕಲೆ ಹೋದೆ. **ಕೂಸು** /*ku:su*/ 1. ಮಗು, 2. ಹಸುಳೆ. 1. an infant, 2. a toddler. **ಮರದೊಳಗೆ ಮರಹುಟ್ಟಿ, ಮರಚಕ್ರ ಕಾಯಾಗಿ ತಿಂಬಕಾಗದಂತ ಹಣ್ಣ್ ಬಾರೀಲಯ್ಯ – ಕೂಸು(ಒ).** ವಾ: ಕೂಸುನ ಲಾಲಿ ಹಾಡಿ ಮೊಲ್‌ಗುಸುದು. ಪ: ಕೂಸುಗೆ – ಮಗುವಿಗೆ; ಕೂಸುದು – ಮಗುವಿನ; ಕೂಸುನ – ಮಗುವನ್ನು. **ಕೂಸುಟ್ಟು** /*ku:suṭṭu*/ ಮಗುವಿದೆ. the infant is here. ವಾ: ಮನೆಲಿ ಕೂಸುಟ್ಟು, ಬೊಬ್ಬೆ ಹಾಕುದು ಯಾಕೆ? **ಕೂಸುನ ತಲೆ ಬುಟ್ಟುಟು** /*ku:suna talɛ buṭṭuṭu*/ ಮಗು ಹುಟ್ಟಿದ ಹಾಗೆ ಅಥವಾ ಹುಟ್ಟಿದ ಒಂದೆರಡು ತಿಂಗಳಲ್ಲಿ ಮಗುವಿನ ನೆತ್ತಿಯಲ್ಲಿ ಸಣ್ಣ ಬಿರುಕು ಬಿಡುವುದು. linear skull fractures in an infant, usually observed immediately after the birth or within one/two moths after the birth. ವಾ: ಕೂಸುನ ತಲೆ ಬುಟ್ಟುಟುಗಡ. **ಕೂಸುನ ತೊಟ್ಲುಗೆ ಹಾಕುದು** /*ku:su toṭlugɛ ha:kudu*/ 1. ನಾಮಕರಣ, 2. ಹೆಸರಿಡುವುದು. christening/naming ceremony. ವಾ: ಕೂಸುನ ತೊಟ್ಲುಗೆ ಹಾಕುದು. **ಕೂಸ್‌ಗೆ ಹೆಸ್ರಾಕುದು** /*ku:sɨ hɛsra:kudu*/ 1. ನಾಮಕರಣ, 2. ಹೆಸರಿಡುವುದು, 3. ಹುಟ್ಟಿದ ಮಗುವಿಗೆ ಹೆಸರಿಡುವ ಒಂದು ಸಾಂಪ್ರದಾಯಿಕ ವಿಧಿ. naming ceremony/ christening ceremony. ವಾ: ಕೂಸ್‌ಗೆ ಹೆಸ್ರಾಕುದು ನಾಳೆಗೆಂಟಕೆ. **ಕೂಸ್‌ನಕ್ಕಲೆ** /*ku:sɨnakkalɛ*/ 1. ಮಗುವಿನ ಹತ್ತಿರ, 2. ಮಗುವಿನ ಜೊತೆ. near the child/with the child. ವಾ: ಕೂಸ್‌ನಕ್ಕಲೆ ಯಾರಾರ್ ಇರೋಕು. **ಕೂಸ್‌ನೊಟ್ಟಿಗೆ** /*ku:sɨnoṭṭigɛ*/ 1. ಮಗುವಿನ ಜೊತೆ, 2. ಮಗುವಿನೊಂದಿಗೆ. with the child. ವಾ: ಕೂಸ್‌ನೊಟ್ಟಿಗೆ ನಾನಿದ್ದನೆ.

ಕೂಳಕ್ಕಿ /*ku:ḷakki*/ ನಾ. ಊಟ ಮಾಡುವ ಅಕ್ಕಿ. rice. ವಾ: ಕೂಳಕ್ಕಿ ತರೋಕು.

ಕೂಳಿ /*ku:ḷi*/ ನಾ. ಮೀನು ಹಿಡಿಯಲು ಬಳಸುವ ಉಪಕರಣಗಳು. equipments used in fishing. **ಕೂಳಿಲಿ ಇದ್ದ ಮೀನ್ ಬುಟ್ಟ್ ಗೋರಿಲಿದ್ದ ಮೀನ್ ಹಿಡ್ದದೆ(ಗಾ). ಆರು ಮೂರು ಗೂಟ, ಶ್ಯಾನ್ ಬಾಯಿ ತೋಟ, ಹೋಕೆ ದಾರಿಯುಟ್ಟು, ಬಾಕೆ ದಾರಿಯಿಲ್ಲೆ – ಕೂಳಿ(ಒ).** ವಾ: ಕೂಳಿ ಹಾಕಿ ಮೀನ್ ಹಿಡ್ಯದು.

ಕೂಳಿಯಡ್ಕ /*ku:ḷiyaḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಆಲೆಟ್ಟಿ ಗ್ರಾಮದ ಜಾಗ. a locality in Aletti village in Sullia Taluk of Dakshina Kannada District.

ಕೂಳೆಗುತ್ತಿ /*ku:ḷɛgutti*/ ನಾ. 1. ಪೈರನ್ನು ಕೊಯ್ದ ಬಳಿಕ ತಳದಲ್ಲಿ ಉಳಿಯುವ ಮೋಟು, 2. ತುಂಡು ಕೋಲಿ. the remaining stump of the paddy. ವಾ: ಗದ್ದೆಲಿ ನಡ್ಯಕನ ಕೂಳೆ ಗುತ್ತಿಗ ಇದ್ದದೆ ನೋಡಿಕ ಕಾಲಿಗೆ ಹೆಟ್ಟುದು.

ಕೂಳೆ[1] /*ku:ḷɛ*/ ನಾ. 1. ಭತ್ತದ ಸಿಪ್ಪೆ 2. ಒಳಗಿನ ತೆನೆಯ ಹುಲ್ಲಿನ ತುಂಡು. 1. paddy husk, 2. the remaining husk and silks ofa corn ear. ವಾ: ಕೂಳೆನ ಮೊಡ್ಡಿಯೊಟ್ಟಿಗೆ ಹಾಕಿ ಬೇಸಕ್.

ಕೂಳೆ[2] /*ku:ḷɛ*/ ನಾ. ಬಿಳುವ (ದೊಡ್ಡ ಹಲಸಿನ ಕಾಯಿ).

a large jackfruit. ವಾ: ಕೂಳೆ ಹಲ್‌ಸ್‌ನ ಹಣ್ಣ್ ಹಿಟ್ಟ್ ಮಾಡಿಕೆ ಲಾಯ್ಕ. ಪ: ಬಳುವ – ಹಲಸಿನ ಹಣ್ಣಿನ ವಿದಗಳು(ಸಣ್ಣ ಹಣ್ಣಿನ ತೋಳೆಗಳಿರುತ್ತದೆ) **ಕೂಳೆ ಹಲ್ಸ್** /*ku:ḷɛ halsi*/ 1. ಮೆದು ಹಲಸಿನ ಹಣ್ಣು, 2. ಬಿಳುವ ಹಲಸಿನ ಹಣ್ಣು. soft arils of a jackfruit. ವಾ: ಕೂಳೆ ಹಲ್ಸ್‌ಲಿ ದೋಸೆ ಮಾಡ್ದ್. ಪ: ತುಳುವ ಪೆಲಕ್ಕಾಯಿ. **ಕೂಳೆ ಹಲ್ಸ್‌ನ ಮರ** /*ku:ḷɛ halsɨna mara*/ ನಾ. ಮೆತ್ತಗಿನ ತೊಳೆಗಳಿರುವ ಒಂದು ಜಾತಿಯ ಹಲಸಿನ ಹಣ್ಣು. a variety of jackfruit whose arils/pods are soft and sticky. ವಾ: ಕೂಳೆ ಹಲ್ಸ್‌ನ ಮರಲಿ ಸುಮಾರ್ ಕುಜ್ಜೆ ಉಟ್ಟು.

ಕೂಳೆಗುತ್ತಿ /*ku:ḷɛgutti*/ ನಾ. ಬೆಳೆ ಕಟಾವಿನ ಬಳಿಕ ಅದರ ಬುಡವನ್ನು ಕೂಳೆ ಗುತ್ತಿ ಎನ್ನುವರು. stump of paddy. ವಾ: ಗದ್ದೆಲಿ ಕೂಳೆಗುತ್ತಿ ಇರಕನ ನಡೆದು ಬಜ್ಜ, ಕೂಳೆಗುತ್ತಿಲಿರುವ ನೀರ್ ತಾಂಗಿರೆ ಹಿಮ್ಮಡಿ ಒಡ್‌ದದೆ.

ಕೂಳೆಬೆಳೆ /*ku:ḷɛbɛḷɛ*/ ನಾ. ಬೆಳೆ ಕಟಾವಿನ ಬಳಿಕ ಅದರ ಬುಡ ಚಿಗುರಿ ಬರುವ ಬೆಳೆಯನ್ನು ಕೂಳೆಬೆಳೆ ಎನ್ನುವರು. new shoot emerging from the stump or stubble after harvest. ವಾ: ಕೂಳೆಗುತ್ತಿ ಚಿಗ್‌ರಿ ಬರುವ ಬೆಳೆನ ಕೂಳೆ ಬೆಳೆತೇಳ್‌ದು.

ಕೃತಜ್ಞತೆ /*kṛtajnatɛ*/ ಎಪ. 1. ಉಪಕಾರ ಸ್ಮರಣೆ. remembering the help received. ವಾ: ಅಂವ ಸಹಾಯ ಮಾಡ್‌ದಕ್ಕೆ ಕೃತಜ್ಞತೆ ಹೇಳ್‌ತ್. ಪ: ಉಪಕಾರ ಆತ್

ಕೃಸಿ /*kṛsi*/ ನಾ. 1. ಕೃಷಿ, 2. ಬೇಸಾಯ, 3. ನೆಲವನ್ನು ಉತ್ತು, ಬಿತ್ತಿ, ಪೈರು ಬೆಳೆಸಿ, ಫಸಲು ಕೊಯ್ಲು ಮಾಡುವುದು, 4. ಪಶು ಸಂಪತ್ತನ್ನು ವರ್ಧಿಸುವ ಕಲೆ. 1. agriculture, 2. to farm, 3. cultivating plant and harvesting them, 4. animal husbandry. ವಾ: ಬಾರತಲಿ ಹೆಚ್ಚಿಗೆ ಜೆನ ಕೃಸಿ ಮಾಡಿ ಬೊದ್‌ಕ್ ಕಟ್ಟಿಕಂಡದ್.

ಕೆ/ಗೆ /*ke/ge*/ ವಿಪ್ರ. ಕನ್ನಡದ ಚತುರ್ಥ ವಿಭಕ್ತಿ ಕೆ/ಗೆ ಅಕ್ಷರದಿಂದ ಕೊನೆಗೊಳ್ಳುವ ನಪುಂಸಕ ಲಿಂಗ ಪ್ರಕೃತಿಗೆ ಸೇರುವ ಕೆ/ಗೆ. ಉದಾಹರಣೆಗೆ ಮರಕ್ಕೆ ದನಕ್ಕೆ ಅರೆಭಾಷೆಯಲ್ಲಿ ಮರಕೆ, ದನಕೆ ಅಗುತ್ತದೆ. a suffix.

ಕೆಂಚಪ್ಪ /*kɛncappa*/ ನಾ. ವ್ಯಕ್ತಿನಾಮ, ಪುರುಷವಾಚಕ. masculine given name.

ಕೆಂಚಮ್ಮ[1] /*kɛncamma*/ ನಾ. 1. ಮಹಾಕಾಳಿ, 2. ದೇವತೆ. 1. goddess Maha Kali, 2. a goddess. ವಾ: ಕೆಂಚಮ್ಮ ದೇವಿ ಹಬ್ಬ ಬಾತ್.

ಕೆಂಚಮ್ಮ[2] /*kɛncappa*/ ನಾ. ವ್ಯಕ್ತಿನಾಮ, ಸ್ತ್ರೀವಾಚಕ. feminine given name.

ಕೆಂಚರಾಯ /*kɛncara:ya*/ ನಾ. 1. ವಿಷ್ಣುವಿನ ದ್ವಾರಪಾಲಕರು, 2. ದೇವತೆಗಳ ಗಣಗಳು. 1. gate keepers of god Vishnu, 2. a group of gods. ವಾ: ಹರಿಸೇವೆಲಿ ಕೆಂಚಿರಾಯಂಗೆ ಆಡ್‌ನ ಬಲಿ ಕೊಡ್‌ದು. ಪ: ಕೆಂಚಿರಾಯ – ದೇವರ ಹೆಸರು. **ಕೆಂಚಿರಾಯ** /*kɛncira:ya*/ ವಾ: ಹರಿಸೇವೆಲಿ ಕೆಂಚಿರಾಯಂಗೆ ಆಡ್‌ನ ಬಲಿ ಕೊಡ್‌ದು. **ಕೆಂಚ್ರಾಯ** /*kɛŋcra:ya*/ ನಾ. 1. ವೆಂಕಟರಮಣ ದೇವರ ಧೂತ, 2. ಸ್ವಾಮಿ ವೆಂಕಟರಮಣನ ಬಲಬಂಟ, 1. an emissary of god Venkataramana, 2. the right hand man of god Venkataramana, ವಾ: ಕೆಂಚ್ರಾಯಂಗೆ ಹರಿಸೇವೆಲಿ ಬಲಿ ಕೊಟ್ಟವೆ.

ಕೆಂಚಿ /*kɛnci*/ ನಾವಿ. ಕೆಂಪುಬಣ್ಣ. of red colour. ವಾ: ಅವಳ್‌ದ್ ಕೆಂಚಿಕೂದೊಲು.

ಕೆಂಚಿರುವೆ /*Kɛnciruvɛ*/ ನಾ. ಕೆಂಪು ಬಣ್ಣದ ಇರುವೆ. red ant. ವಾ: ಕೆಂಚಿರುವೆ ಕಚ್ಚಿದೆನ?

ಕೆಂಚಿಲ್ /*kɛncili*/ ನಾ. ಕರುಗಳನ್ನು ಕಟ್ಟಿ ಹಾಕುವ ಜಾಗ. a calf pen. ವಾ: ಅವ್ವ ಕರ್‌ನ ಕೆಂಚಿಲ್‌ಲಿ ಕಟ್ಟಿಕೆ ಹೋವುಟು. ಪ: ಕೆಂಚಿಲು – ಕರುಗಳನ್ನು ಕಟ್ಟಿ ಹಾಕುವ ಜಾಗ

ಕೆಂಚು /*kɛncu*/ ನಾ. 1. ಕೆಂಪುಬಣ್ಣ. red colour. ವಾ: ರಾಜನ ಕೂದೊಲು ಕೆಂಚು. ಪ: ಕೆಂಚ್

ಕೆಂಜಪಿಜಿನ್ /*kɛŋjapijinɨ*/ ನಾ. 1. ಕೆಂಪಿರುವೆ, 2. ಕೆಂಪು ಬಣ್ಣದ ಇರುವೆ. a red ant. ವಾ: ಮರಲಿ ಬೊರಿ ಕೆಂಜ ಪಿಜಿನ್‌ಗಳೆ ಇರ್‌ದು.

ಕೆಂಜನ /*keŋjana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೆಂಜೆರಿ /*kɛŋjɛri*/ ನಾ. ಚಿಕ್ಕ ಶರೀರದ, ದಪ್ಪ ಬಾಲದ ಮರದಲ್ಲಿ, ಕಾಡಿನಲ್ಲಿ ಕಾಣಸಿಗುವ ಬೆಕ್ಕು. a red

squirrel. ವಾ: ಕೆಂಜೆರಿದ್ ಬಾಲ ಉದ್ದ ಆಗಿ ದಪ್ಪ ಇದ್ದದೆ. ಪ: ಚೆಣಿಲ್

ಕೆಂಡ /*kɛŋḍa*/ ನಾ. ಬೆಂಕಿ ಇರುವ ಇದ್ದಲಿನ ತುಂಡು. a piece of charcoal. **ಇದ್ದದ್ ಇದ್ದಾಂಗೆ ಹೇಳ್ರೆ ಕೆಂಡದಂತ ಕೋಪಗಡ(ಗಾ).** ವಾ: ಕೆಂಡನ ಮುಟ್ಟಡ.

ಕೆಂಡಸಂಪಿಗೆ /*kɛŋḍasampigɛ*/ ನಾ. 1. ಒಂದು ಹೂವಿನ ಹೆಸರು, 2. ತೆಳು ಹಳದಿ ಬಣ್ಣದ ಹೂವು. Magnolia champaca/Champaka/. ವಾ: ಕೆಂಡಸಂಪಿಗೆ ಗಮ ಗಮಾ ಹೂವು.

ಕೆಂಡಕಾರ್ /*k6ŋḍaka:rɨ*/ ಕ್ರಿವಿ. 1. ಕೆಂಡವನ್ನು ಸುರಿಸು, 2. ರೇಗು, 3. ವಿರೋಧಿಸು, 4. ಕೋಪಗೊಳ್ಳು, 5. ಕೆರಳು. 1. to spread embers, 2. to express anger on someone, 3. to oppose, 4. to get angry, 5. to get incited. ವಾ: ಅವುಳು ನನ್ನ ಕಾಂಬಕನ ಕೆಂಡಕಾರ್‌ದೆ. ಪ: ಕೆಂಡಕಾರಿಕಂಡ್ – ಕಿಡಿಕಾರುತ್ತ; ಕೆಂಡಕಾರಿರೆ – ಕಿಡಿಕಾರಿದರೆ

ಕೆಂಡಕೂಡ್ /*kɛŋḍaku:ḍɨ*/ ನಾ. ಬೆಂಕಿ ಚೆನ್ನಾಗಿ ಉರಿಯಲು ಒಲೆಗೆ ಕೆಂಡವನ್ನು ಸೇರಿಸು. to put embers in the oven so that the fire can burn properly. ವಾ: ಗುಡ್ಡಲಿ ಒಲೆಗೆ ಕೆಂಡಕೂಡ್. ಪ: ಕೆಂಡಕೂಡಿಕನ – ಕೆಂಡವನ್ನು ಸೇರಿಸುವಾಗ

ಕೆಂಡದಿಟ್ಟ್ /*kɛŋḍadiṭṭi*/ ನಾ. ಹಿಟ್ಟಿನ ಮೇಲ್ಭಾಗ ಹಾಗೂ ಕೆಳಭಾಗದಲ್ಲಿ ಕೆಂಡ ಇಟ್ಟು ಮಾಡುವ ತಿನಿಸು. dumpukht style of cooking, food is cooked in sealed vessel on slow fire, and some embers are also placed on the lid. ವಾ: ಕಲ್ತಪ್ಪನ ಕೆಂಡದಿಟ್ಟ್‌ತನು ಕರ್ದವೆ. ಪ: ಕಲ್ತಪ್ಪ

ಕೆಂಡರಾಶಿ /*kɛŋḍara:si*/ ನಾ. 1. ಕೆಂಡದ ರಾಶಿ, 2. ಬೆಂಕಿರಾಶಿ. a heap of burning embers. ವಾ: ತೆರೆ ಹಬ್ಬಲಿ ಕೆಂಡ ರಾಶಿಲಿ ನಡ್ದವೆ.

ಕೆಂದ /*kɛnda*/ ನಾ. 1. ಕೆಂಪು, 2. ಕೆಂಬಣ್ಣ, 2. ಕಂದುಬಣ್ಣ. 1. red, 2. red colour, 3. brown colour. ವಾ: ಕೆಂದ ಅರ್ವೆ ಹಾಕೊಂಡೊಳ? ಪ: ಗೆಂದ

ಕೆಂದಾಡಿ /*kenda:ḍi*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮಡಪ್ಪಾಡಿ ಗ್ರಾಮದ ಜಾಗ. 1. family, 2. lineage, 3. a locality in Madappadi village in Sullia Taluk of Dakshina Kannada District1. family, 2. lineage.

ಕೆಂದಾಳಿ /*kɛnda:ḷi*/ ನಾ. 1. ಕೆಂದೆಂಗು, 2. ಕಿತ್ತಳೆ, 3. ಹಳದಿ ಮಿಶ್ರಿತ ಬಣ್ಣದ ಗಿಡದ ಜಾತಿಯ ತೆಂಗಿನಕಾಯಿ. 1. King coconut (Cocos nucifera), 2. an orange, 3. a yellow dwarf Coconut. ವಾ: ಕೆಂದಾಳಿ ಕುಡ್‌ದರೆ ಆರೋಗ್ಯಕೆ ಒಳ್ಳೆದ್.

ಕೆಂದಿಟು /*kɛndiṭu*/ ನಾ. 1. ನಾಟಿದೆ, 2. ಮುಟ್ಟಿದೆ, 3. ಪರಿಣಾಮ ಬೀರಿದೆ, 3. ತಾಗಿದೆ. 1. transplanted 2 reached, 3. impacted, 4. touched. ವಾ: ನಾ ಹೇಳ್‌ದ ಮಾತ್ ಮೊನ್‌ಸಿಗೆ ಕೆಂದಿಟು. ಪ: ಕೆಂದ್ಯುಟು

ಕೆಂದುಲೆ /*kɛndulɛ*/ ನಾ. 1. ಮುಟ್ಟುವುದಿಲ್ಲ, 2. ಮನಸ್ಸಿಗೆ ಮುಟ್ಟದಿರು. wouldn't reach. ವಾ: ಅಂವಂಗೆ ಅಸ್ಟ್ ಸುಲಬಲಿ ಕೆಂದುಲೆ.

ಕೆಂಪ ಹೊಡ್‌ದುಟು /*kɛmpa hoḍɨduṭu*/ ನಾವಿ. 1. ಹುಡುಗಿ ಋತುಮತಿಯಾಗು, 2. ಮೈನೆರೆ. 1. the beginning of menstrual period, 2. attaining puberty. ವಾ: ಕೆಳಗಿನ ಮನೆ ಗೂಡೆ ಕೆಂಪ ಹೊಡ್‌ದುಟು. ಪ: ನೆರ್ದುಟು

ಕೆಂಪ[1] /*kurɛ:ŋgi-kɛmpa*/ ನಾ. ಕಾಡು ಕುರಿ. Indian muntjac, red muntjac or barking deer. **ಕೆಂಪ ಅಲ್ಲಿ ಕೆನೆಕನ ಕೋಳಿ ಇಲ್ಲಿ ಕೂಂಗಿದೆ(ಗಾ).**ವಾ: ಹಿಂದೆ ಕೆಂಪನ ಬೇಟೆ ಆಡ್‌ತಿದ್ದೊ. ಪ: ಕೆಮ್ಮ(ತು).

ಕೆಂಪ[2] /*kɛmpa*/ ನಾ. 1. ಆಡನ್ನು ಹೋಲುವ ಕೆಂಪು ಬಣ್ಣದ ಕಾಡು ಪ್ರಾಣಿ, resembles wild goat. **ಅಟ್ಟದ ಮೇಲೆ ಕೆಂಪ ಕುದ್ದುಟು-ಬಾಳೆಗೊನೆ(ಒ).** ವಾ: ಕೆಂಪಗ ತೋಟಕೆ ಬಂದವೆ, ನಮ್ಮ ಕಾಂಬಕನ ಓಡುವೆ.

ಕೆಂಪಕ್ಕಿ /*kɛmpakki*/ ನಾವಿ. 1. ಪಾಲೀಸು ಮಾಡದಿರುವ ಅಕ್ಕಿ, 2. ಕಜೆ ಅಕ್ಕಿ. unpolished rice. ವಾ: ಕೆಂಪಕ್ಕಿನೆ ಉಂಬೊಕು, ಬೆಳಿ ಅಕ್ಕಿಲಿ ಎಂತ ಸತ್ವನು ಇಲ್ಲೆ.

ಕೆಂಪಾತ್ /*kɛmpa:tɨ*/ ನಾ. 1. ರಕ್ತ ವರ್ಣವಾಯಿತು, 2. ಕೆಂಪಾಯಿತು. 1. it became red in colour, 2. to redden. ವಾ: ಎಲಡ್ಕೆ ತಿಂದ್ ನಾಲ್‌ಗೆ ಕೆಂಪಾತ್.

ಪ: ಕೆಂಪಾಕನ – ರಕ್ತ ವರ್ಣವಾಗುವಾಗ; ಕೆಂಪಾದೆಲ ಹಂಗೆ – ಕೆಂಪು ಆಗುತ್ತದಲ್ಲ ಹಾಗೆ

ಕೆಂಪಿ[1] /*kɛmpi*/ ಸನಾ. ಕೆಂಪು ಬಣ್ಣದ ದನ. a brown cattle. ವಾ: ಕೆಂಪಿ ಇನ್ನು ಕೊಟಗೆಗೆ ಬಾತ್ಲೆ.

ಕೆಂಪಿ[2] /*kɛmpi*/ ನಾ. ಕಾಡು ಆಡು. Indian muntjac. ವಾ: ಕೆಂಪ ಕೆಂಪಿ ಕಾಂಬಕೆ ಸಿಕ್ಕಿಟು.

ಕೆಂಪಿರುವೆ /*kɛmpiruvɛ*/ ನಾವಿ. ಕೆಂಪು ಬಣ್ಣದ ಇರುವೆ. red ant. ವಾ: ಕೆಂಪಿರುವೆ ಕಚ್ಚಿರೆ ಉರಿ ಉರಿಯಾದೆ. ಪ: **ಕೆಂಪ್ ಪಿಜನ್**/*kɛmpɨ pijanɨ*/ ವಾ: ಕೆಂಪ್ ಪಿಜನ್ ಕಚ್ಚಿದೆ.

ಕೆಂಪ್ /*kɛmpɨ*/ ನಾ. 1. ಕೆಂಪು ಬಣ್ಣ, 2. ರಕ್ತ ವರ್ಣ. 1. red colour 2 colour of blood. **ಮಣ್ಣ್ ಕೆಂಪಾಕನ ಕಣ್ಣ್ ಕೆಂಪಾದೆ(ಗಾ).** ವಾ: ಕೆಂಪ್ ಅರ್ವೆ ಹಾಕಿರೆ ಕಣ್ಣಿಗೆ ಕುತ್ತಿದೆ.

ಕೆಂಪ್ ಗೆಣ್ಸ್ /*kɛmpɨ gɛɳsi*/ ನಾವಿ. 1. ಕೆಂಪು ಗೆಣಸು, 2. ಬೆಲ್ಲದ ಗೆಣಸು. red tapioca. ವಾ: ಕೆಂಪ್ ಗೆಣ್ಸ್‌ನ ಹಸಿನೂ, ಬೇಸಿನೂ ತಿನ್ನಕ್.

ಕೆಂಪ್ ದಾಸಾಳ /*kɛmpɨ da:sa:ḷa*/ ನಾವಿ. ಕೆಂಪು ಬಣ್ಣದ ದಾಸವಾಳ. red hibiscus. ವಾ: ಕೆಂಪ್ ದಾಸಾಳ ಎಲೆನ ಕಿವುಂಚಿ ರಸನ ತಲೆ ಮೀಯಕನ ಬಳ್ಸಕ್.

ಕೆಂಪ್ ಬಾಳೆ /*kɛmpu ba:ḷɛ*/ ನಾವಿ. ಬಾಳೆಹಣ್ಣಿನ ವಿಧಗಳು. varieties of banana. ವಾ: ಕೆಂಪು ಬಾಳೆ ದೈ ನೆಟ್ಟದ್.

ಕೆಂಪ್ ಬೆಟ್ಟ ತಾವರೆ /*kɛempɨ bɛṭṭa ta:varɛ*/ ನಾವಿ. 1. ಕೆಂಪು ಬೆಟ್ಟದಾವರೆ, 2. ಒಂದು ಬಗೆಯ ಹೂವು. 1. red chinese rose, 2. a variety of flower. ವಾ: ಕೆಂಪ್ ಬೆಟ್ಟ ತಾವರೆ ಹೂನ ಬಸ್ಸ್ ಲಿ ಹೋಕನೆಲ್ಲೊ ನೋಡ್ದ್ ನೆಂಪಾತ್.

ಕೆಂಪ್ ಮೆಣ್ಸ್ /*kɛmpɨ mɛɳsi*/ ನಾವಿ. ಕೆಂಪು ಬಣ್ಣದ ಮೆಣಸು. red chilly. ವಾ: ಹಸಿ ಕೆಂಪ್ ಮೆಣ್ಸ್ ಹಾಕಿ ಪಜ್ಜಿ ಮಾಡಿನೆ.

ಕೆಂಬಡೆ /*kɛmbaḍɛ*/ ನಾ. 1. ಸಿಹಿಕುಂಬಳಕಾಯಿ, 2. ಚೀನಿಕಾಯಿ, 3. ಸಿಹಿಗುಂಬಳ. pumpkin. **ಆ ಗೂಡೆ ಕೆಂಬಡೆ ಹೂನಂಗೆ ಉಟ್ಟು(ಗಾ). ಹಗ್ಗ ಹೋಗ್ತಾ ಉಟ್ಟು, ಎತ್ತು ಮಲ್ಗುಟ್ಟು – ಕೆಂಬಡೆ ಬಳ್ಳಿ(ಒ).** ವಾ: ಕೆಂಬಡೆನ ಪಲ್ಯ, ಉದ್ಕ ಮಾಡಕ್. ಪ: ಕೆಂಬಡೆಕಾಯಿ – ಸಿಹಿಕುಂಬಳಕಾಯಿ, ಚೀನಿಕಾಯಿ, ಸಿಹಿಗುಂಬಳ. **ಕೆಂಬಡೆಬೆಂಡ್** /*kɛmbaḍɛbɛɳḍɨ*/ ಸಿಹಿ ಕುಂಬಳದ ಬೀಜಗಳಿರುವ ಮಧ್ಯದ ಚೀಲ. pulp of pumpkin. ವಾ: ಕೆಂಬಡೆ ಬೆಂಡ್‌ಲಿ ಪಜ್ಜಿ ಮಾಡಕ್. **ಕೆಂಬುಡೆ** /*kɛmbuḍɛ*/ ವಾ: ಕೆಂಬುಡೆ ಬೀಜಲಿ ಪೊಜ್ಜಿ ಮಾಡುವೆ. ಪ: ಕೆಂಬುಡೆಕಾಯಿ – ಸಿಹಿಕುಂಬಳಕಾಯಿ. **ಕೆಂಬ್ಡೆಕಾಯ್** /*kɛmbḍɛka:yi*/ ಸಿಹಿ ಕುಂಬಳ. sweet pumpkin. ವಾ: ಕೆಂಬ್ಡೆಕಾಯ್‌ಲಿ ವಿಟಮಿನ್ ಸಿ ಸತ್ವ ಹೆಚ್ಚಿ ಇದ್ದದೆ.

ಕೆಂಬಾರೆ /*kemba:re*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ನಾಲ್ಕೂರು ಗ್ರಾಮದ ಜಾಗ. a locality in Nalkuru village in Sullia Taluk of Dakshina Kannada District.

ಕೆಂಬಾವು /*kɛmba:vu*/ ನಾ. ಯಾವುದಾದರು ಹುಳ ಕಡಿದಾಗ ಕೆಂಪಾಗಿ ಊದುವುದು. swelling caused by the sting of an insect. ವಾ: ಕಡಂದ್ ಕಚ್ಚಿ ಮೋರೆ ಕೆಂಬಾವು ಆವುಟು.

ಕೆಂಬಾಳೆ /*kɛmba:ḷɛ*/ ನಾ. 1. ಹೊರ ಮೈ ಕೆಂಪು ಬಣ್ಣದಿಂದ ಕೂಡಿದ್ದು ದೊಡ್ಡದಾದ ಬಾಳೆಹಣ್ಣು, 2. ಕೆಂಪುಬಾಳೆ. red banana. ವಾ: ಕೆಂಬಾಳೆದ್ ಹೊರೆಗೆ ಕೆಂಪ್ ಬಣ್ಣ ಇದ್ದದೆ.

ಕೆಂಬಿ /*kɛmbi*/ ನಾ. 1. ಕೆಂಚು, 2. ಕೆಂಪು ಬಣ್ಣ. reddish. ವಾ: ಕೆಂಬಿ ಹಸ್.

ಕೆಂಬ್ರೋಲಿ /*kembro:li*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೆಕ್ಕರ್ಸಿ /*kekkarsi*/ ಕ್ರಿವಿ. 1. ದುರುಗುಟ್ಟಿ, 2. ಕೆಕ್ಕರ್ಸಿ ನೋಡು. to stare at someone. ವಾ: ಮಕ್ಕ ಗಲಾಟೆ ಮಾಡಿಕನ ಮಾಸ್ಟರ್ ಕೆಕ್ಕರ್ಸಿ ನೋಡಿರೆ ಸುಮ್ಮನೆ ಕುದ್ದವೆ. ಪ: ಕೆಕ್ಕರಿಸಿತ್

ಕೆಚ್ಚಲ್ /*kɛccalɨ*/ ನಾ. 1. ದನ ಹಾಲು ಕೊಡುವ ಅಂಗ, 2. ದನದ ಮೊಲೆ. udder. **ಬೆಳ್ಳಗುಟ್ಟು ಸುಣ್ಣ ಅಲ್ಲ, ರುಚಿ ಉಟ್ಟು ಜೇನಲ್ಲ, ನಾಕ್ ನಲ್ಲಿಲಿ ಬಂದೆ ನೀರಲ್ಲ – ಕೆಚ್ಚಲಿಂದ ಬರ್‌ವ ಹಾಲ್(ಒ).** ವಾ: ಹಸ್ ಕೆಚ್ಚಲ್‌ಗೆ ಕೈ ಹಾಕಿಕೆ ಬುಡ್‌ದುಲೆ. ಪ: ಕೆಚ್ಚೆಲ್ – ಕೆಚ್ಚಲು; ಕೆಚ್ಲ್ – ಹಸುವಿನ ಕೆಚ್ಚಲು

ಕೆಚ್ಚ್ /*kɛccɨ*/ ನಾ. 1. ಧೈರ್ಯ, 2. ಸಾಹಸ. 1. courage,

2. bravery. ವಾ: ಗೂಡೆನ ಕೆಚ್ಚ್ ನೋಡಿ ಕುಸಿಯಾತ್.

ಕೆಟೋಲಿ /*keṭo:li*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೆಟ್ಟ /*kɛṭṭa*/ ನಾ. 1. ಕೆಟ್ಟ, 2. ಒಳ್ಳೆಯದಲ್ಲದ, 3. ಕೆಡುಕಿನ, 4. ಹಾಳಾದ. 1. bad, 2. not good, 3. evil, 4. spoiled. **ಕೆಟ್ಟ ಊಟಂದ ದಿನ ಹಾಳ್, ಕೆಟ್ಟ ಹೆಣ್ಣ್‌ಂದ ರಾತ್ರಿ ಹಾಳ್(ಗಾ).** ವಾ: ಅಂವಂದ್ ಬಾರಿ ಕೆಟ್ಟ ಸೊಬಾವ.

ಕೆಟ್ಟೋತ್ /*kɛṭṭo:tɨ*/ ಕ್ರಿ. 1. ಅಳಿ, 2. ಇಲ್ಲವಾಗು, 3. ಗುಣಹೊಂದು, 4. ಚದರು, 5. ಸೋಲು, 6. ನಿರ್ಗತಿಕನಾಗು, 7. ಮೀರು, 8. ಕಳೆದು ಹೋಗು, 9. ಕೀಳಾಗು, 10. ಶೀಲವನ್ನು ಕಳೆದುಕೊಳ್ಳು, 11. ಸಾಯು, 1. 2. ಮಸುಕಾಗು, 1. 3. ಹದಗೆಡು, 1. 4. ನಂದು. 1. to ruin, 2. to extinct, 3. to get cured, 4. to get scattered, 5. to lose, 6. to become impoverished, 7. to cross the hurdle/break the boundary, 8. to lose oneself in something, 9. to lose a position (become inferior), 10. to lose virginity, 11. to die. ವಾ: ದೀಪ ಗಾಳಿಗೆ ಕೆಟ್ಟೋತ್. ಪ: ಕೆಟ್ಟೋಕನ – ಕೆಟ್ಟುಹೋಗುವಾಗ

ಕೆಡ /*kɛḍa*/ ಕ್ರಿ. ಬೀಳು. to fall. ವಾ: ಆನೆಗಳಿಗೆ ಕೆಡ ತೋಂಡಿಯೊಳೊ.

ಕೆಡು[1] /*kɛḍu*/ ನಾ. 1. ಚರ್ಮದಲ್ಲಿ ಏಳುವ ಚಿಕ್ಕ ಕಪ್ಪಗಿನ ದುರ್ಮಾಂಸ, 2. ನರೋಲಿ, 3. ಮನುಷ್ಯರ ಚರ್ಮದ ಮೇಲಿನ ಸಣ್ಣ ಗಂತಿ. a wart which appears on the skin, 2. a lump that grows on the skin, 3. a hard lump that grows on the skin. ವಾ: ಚೆರ್ಮಲಿ ಕೆಡು ಏಳ್‌ದು. ಪ: ಕೆಡುನಾಂಗೆ – ಕೆಡುವಿನಂತೆ

ಕೆಡು[2] /*kɛḍu*/ ಕ್ರಿ. 1. ಹಾಳಾಗು, 2. ಕೆಟ್ಟು ಹೋಗು. to get spoiled. ವಾ: ಅಂವ ಹಿಂಗೆ ತಿರ್‌ಗಿರೆ ಹಾಳಾದು.

ಕೆಡುಕು /*kɛḍuku*/ ನಾ. 1. ಕೆಟ್ಟತನ, 2. ದುಷ್ಟತನ. 1. being evil, 2. wickedness. ವಾ: ಯಾರಿಗೂ ಕೆಡುಕು ಮಾಡಿಕಾಗದ್.

ಕೆಡೆಂಜಿ /*keḍɛnji*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೆಡ್ /*kɛḍi*/ ಕ್ರಿ. 1. ನಂದಿಸು, 2. ಕೆಡಿಸು. 1. to put off, 2. to extinguish. ವಾ: ದೀಪನ ಕೆಡ್‌ಸ್. ಪ: ಕೆಡ್ಸ್ – ಕೆಡಿಸು

ಕೆಡ್ಕ್ /*kɛḍkɨ*/ ನಾ. 1. ಕೆಡಕು, 2. ಕೇಡು, 3. ಹಾಳು, 4. ನಾಶ, 5. 1. harm, 2. evil, 3. spoil, 4. destroy. **ಕೇಡ್ ಕಾಲಕ್ಕೆ ಕೆಡ್‌ಕ್ ಬುದ್ಧಿ(ಗಾ).** ವಾ: ಕೆಡ್ಕ್ ಮಾಡ್ಬಡ ಒಳ್ಳದಲ್ಲ.

ಕೆಡ್ಗ್ /*kɛḍgɨ*/ ಕ್ರಿ. 1. ಬೀಳಿಸು, 2. ಕೆಡುಹು. 1. to cause a fall of something, 2. to make something fall. ವಾ: ಮರಂದ ಕಾಯಿನ ಕೆಡ್ಗ್. ಪ: ಕೆಡ್ಗುದು

ಕೆಡ್ಡಸ /*kɛḍḍasa*/ ನಾ. ಭೂತಾಯಿಯನ್ನು ಪೂಜಿಸುವ ಹಬ್ಬ. a festival where mother goddess is worshipped. ವಾ: ಕೆಡ್ಡಸ ಹಬ್ಬನ ಮೂರ್ ದಿನ ಆಚರಿಸುವೆ. ಪ: ಕೆಡ್ಡಾಸ

ಕೆಡ್ತ್ /*kɛḍtɨ*/ ಕ್ರಿ. ಕೆಟ್ಟು ಹೋಗು. got spoiled. **ಅಂಕೆಲಿರೋ ಹೆಣ್ಣ್ ಕೆಡ್ದುಲೆ, ಮಜ್ಜಿಗೆಲಿರೋ ಬೆಣ್ಣೆ ಕೆಡ್ದುಲೆ(ಗಾ).** ವಾ: ಅಂವ ತಿರ್‌ಗಿ ಕೆಡ್ತ್. **ಕೆಡ್‌ಸಿಕಂಡತ್ಲೆ** /*kaḍisikanḍatlɛ*/ ಹಾಳು ಮಾಡಿಕೊಂಡಿಲ್ಲ. not spoiled. ವಾ: ಅವರ ಮಾತಿಗೆಲ್ಲ ನಾ ತಲೆ ಕೆಡ್‌ಸಿಕಂಡತ್‌ಲೆ. **ಕೆಡ್‌ಸಿಕಂಡೊ** /*kɛḍisikanḍɔ*/ ಹಾಳುಮಾಡಿಕೊಂಡರು. spoiled by themselves. ವಾ: ಅವು ಕೆಟ್ಟ ಕೆಲ್‌ಸ ಮಾಡಿಕಂಡ್ ಹೆಸ್‌ರ್ ಕೆಡ್‌ಸಿಕಂಡೊ.

ಕೆಡ್‌ಸ್ /*kɛḍisi/kɛḍsi*/ ಕ್ರಿ. 1. ಆರಿಸು, 2. ನಂದಿಸು. to extinguish. ವಾ: ದೇವುರ ದೀಪನ ಕೆಡ್‌ಸಿಕಾಗದ್. ಪ: ಕೆಡ್ಸಿಕೆ – ಕೆಡಿಸಲು, ಕೆಡ್ಸ್

ಕೆಣಿಕೇಳ್ದು /*kɛṇikɛ:ḷdu*/ ನಾ. 1. ಭವಿಷ್ಯ ಕೇಳುವುದು, 2. ಶಾಸ್ತ್ರ ಕೇಳುವುದು. seeking advice from an astrologer. ವಾ: ಅಂವಂಗೆ ಕೆಣಿ ಕೇಳ್ದು ಅಬ್ಬೆಸ. ಪ: ಕಣಿ ಕೇಳಿಕೆ – ಕಣಿ ಕೇಳಲು

ಕೆಣಿ[1] /*kɛṇi*/ ನಾ. 1. ಯುಕ್ತಿ, 2. ಉಪಾಯ, 3. ಸಾಧನ ತಂತ್ರ, 4. ಕೌಶಲ ಕುತಂತ್ರ, 5. ಮೋಸ. 1. a stratagem, a clever trick, 3. a machination, 4. wicked means, 5. cheating. ವಾ: ಕೆಣಿ ಮಾಡಿ

ಕೆಲ್ಸ ಮಾಡ್‌ಸಿಕಂಡ್‌ಬುಟ್ಟದೆ. ಪ: ಕೆಣಿಯ – ಚಾಲಾಕಿನವ

ಕೆಣಿ[2] /*kεni*/ ನಾ. 1. ಉಪಾಯ, 2. ಜಾಣತನ, 3. ಹಗ್ಗದ ಕುಣಿಕೆ, ಬೋನು ಮೊದಲಾದುವುಗಳೊಳಗೆ ಸಿಕ್ಕಿಬೀಳು, 4. ಸಿಲುಕು ಮೋಸಹೋಗು, 5. ವಿವಂಚನೆಗೊಳಗಾಗು. 1. a scheme/plan, 2. being clever, 3. a noose, 4. to get cheated, 5. to get duped. ವಾ: ಅಂವ ಬಾರೀ ಕೆಣಿಯ, ಅಸ್ಟ್ ಸುಲಬಲಿ ಸಿಕ್ಕಿಬೀಳಿಕಿಲ್ಲೆ.

ಕೆಣ್‌ಕ್ /*kεηikɨ*/ ಕ್ರಿ. 1. ರೇಗಿಸು, 2. ಮುತ್ತು, 3. ಪ್ರೇರಿಸು, 4. ಕೆದರು. 1. to annoy, 2. to kiss, 3. to inspire, 4. to scatter. ವಾ: ಸುಮ್ಮನಾರ್ ಕೆಣ್ಕ್‌ದು. ಪ: ಕೆಣ್ಕ್ **ಕೆಣ್ಕಿತ್** /*kεηkitɨ*/ 1. ಕೆಣಕಿದನು/ಳು, 2. ರೇಗಿಸಿದನು. 1. he/she provoked, 2. he annoyed. ವಾ: ದಾರಿಲಿ ಹೋಕನ ಸುಮ್ಮನೆ ಅಂವನ ಕೆಣ್ಕಿತ್. ಪ: ಕೆಣ್ಕಿರೆ – ಕೆಣಕಿದರೆ; ಕೆಣ್ಕುದು – ಕೆಣಕುವುದು; ಕೆಣ್ಕೊಕು – ಕೆಣಕಬೇಕು; ಕೆಣ್ಕೊಮ – ಕೆಣಕೋಣ. **ಕೆಣ್‌ಕಿರೆ** /*kεηɨkirε*/ 1. ಕೆಣಕಿದರೆ, 2. ರೇಗಿಸಿದರೆ, 3. ಪ್ರಚೋದಿಸಿದರೆ. 1. if provoked, 2. if annoyed, 3. if tempted. ವಾ: ನನ್ನ ಕೆಣ್‌ಕಿರೆ ಸುಮ್ಮನಿರ್‌ದುಲೆ.

ಕೆಣ್ಸು /*kεηsu*/ ಕ್ರಿ. 1. ಕೆಣಿ, 2. ಕುತಂತ್ರ. 1. machination, 2. conspiracy. ವಾ: ಅಂವನ ಮಾತ್‌ಲೆ ಕೆಣ್ಸು ಗೊತ್ತಾದೆ.

ಕೆತ್ತಂಗಲ್ಲ್ /*kεttaŋgallɨ*/ ನಾ. ಕೆತ್ತಿದ ಕಲ್ಲು. a carved stone. ವಾ: ಕೆಂಪು ಕಲ್ಲ್ ಕೆತ್ತಿಯೊಳೊ ಗೋಡೆಕಟ್ಟಿಕೆ.

ಕೆತ್ತನೆ /*kεttanε*/ ನಾ. 1. ಕೆತ್ತುವ ಕೆಲಸ, 2. ರತ್ನ ಕೂಡಿಸುವಿಕೆ, 3. ಕೆತ್ತಿ ಮಾಡುವಿಕೆ. 1. carpentry, 2. assembling pearl and jewels, 3. carpentry. ವಾ: ಕೆತ್ತನೆ ಕೆಲ್ಸ ಹ್ಯಾಂಗೆ ಮಾಡುವೆತ.

ಕೆತ್ತಿ /*kεtti*/ ನಾ. 1. ತತ್ತಿ, 2. ಮೊಟ್ಟೆ, 3. ಅಂಡ, 4. ಮೀನಿನ ಮೊಟ್ಟೆ. an egg. ವಾ: ದೊಡ್ಡ ಹೊಳೆ ಮೀನ್‌ಲಿ ಕೆತ್ತಿನೆ ಜಾಸ್ತಿ ಇರ್‌ದು.

ಕೆತ್ತಿ/ಕತ್ತಿ /*kεtti/kɘtti*/ ನಾ. 1. ಕುಡುಗೋಲು, 2. ಖಡ್ಗ, 3. ಒಂದು ಬಗೆಯ ಆಯುಧ. 1. a sickle, 2. a sword, 3. a weapon. ವಾ: ಕತ್ತಿನ ಹರ್‌ತ ಮಾಡಿ ಕೊಡಿ.

ಕೆತ್ತೆ /*kεttε*/ ನಾ. 1. ಮರದ ತೊಗಟೆಯನ್ನು ಚಪ್ಪಟೆಯಾಗಿ ಕಡಿದು ತೆಗೆದ ತುಂಡು, ಮಾವು ಮೊದಲಾದ ಕಾಯಿ ಅಥವಾ ಹಣ್ಣುಗಳನ್ನು ಚಪ್ಪಟೆಯಾಗಿ ಕೊಯಿದು ತೆಗೆದ ಹೋಳು, 2. ಹಸಿ ಮರದ ತೊಗಟೆ, 3. ಕತ್ತರಿಸಿ ತೆಗೆದ ಚೂರು, 4. ಚಕ್ಕೆ. 1. to slice a mango and other fruits using a splinter from the bark, 2. a chip from the bark of a tree, 3. a slice, 4. splinter. ವಾ: ಅಶ್ವತ ಮರದ ಕೆತ್ತೆನ ಬಿಸ್‌ಲ್‌ಲಿ ವಣ್‌ಗಿಸಿ ಹೊಡಿ ಮಾಡಿ ಗಾಯ, ಹುಣ್ಣಿಗೆ ಹಾಕಿರೆ ಬೇಗ ವಾಸಿ ಆದೆ. ಪ: ಕೆತ್ತೆನ – ಮರದ ತೊಗಟೆಯನ್ನು; ಕೆತ್ತೆನೂ – ಮರದ ತೊಗಟೆಯನ್ನೂ

ಕೆತ್ತೆ ಉಪ್ಪಣ /*kεttε uppaηa*/ ನಾ. ಮಾವು ಮೊದಲಾದ ಕಾಯಿ ಅಥವಾ ಹಣ್ಣುಗಳನ್ನು ಚಪ್ಪಟೆಯಾಗಿ ಕೊಯಿದು ತೆಗೆದ ಹೋಳಿನ ಉಪ್ಪಿನ ಕಾಯಿ. pickle prepared with the pulp cut in the shape of cubes of raw mango and other fruit/vegetables. ವಾ: ಕೆತ್ತೆ ಉಪ್ಪಣ ಹಾಕಿಸಿದ್ ಉಟ್ಟಾ?

ಕೆತ್ತೆ ಹುಳಿ /*kεttε huḷi*/ ನಾ. 1. ಮುರ್ಗಿನಹುಳಿ, 2. ಮುರಿನ ಹುಳಿ, 3. ಉಂಡೆಹುಳಿ. Monkey jack (Artocarpus lacucha), Monkey fruit. ವಾ: ಮಾಸ ಗೈಪುಗೆ ಕೆತ್ತೆ ಹುಳಿನ ಹಾಕಿವೆ.

ಕೆತ್ /*kεttɨ*/ ನಾ. 1. ಕೆತ್ತುವುದು, 2. ತೆಳ್ಳಗೆ ಮಾಡು, 3. ಮೇಲ್ಭಾಗವನ್ನು ಸುಲಿ. 1. chiselling, 2. to make something thinner, 3. to peel. **ಕೆತ್ತಿಕೆ ಮೊಣ್ಣ್ ಇಲ್ಲೆ ಮೆಟ್ಟಿಕೆ ನೆಲೆ ಇಲ್ಲೆ(ಗಾ).** ವಾ: ಸಿಲ್ಪಿ ಮೂರ್ತಿನ ಕೆತ್ತಿತ್. ಪ: ಕೆತ್ತುವೆ – ಕೆತ್ತುತ್ತಾರೆ; ಕೆತ್ತಿದ್ – ಕೆತ್ತಿರುವುದು

ಕೆದಂಬಾಡಿ /*kedamba:ḍi*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಉಬರಡ್ಕ ಮಿತ್ತೂರು ಗ್ರಾಮದ ಜಾಗ. 1. family, 2. lineage, 3. a locality in Ubaradka Mitturu village in Sullia Taluk of Dakshina Kannada District.

ಕೆದರಿಟ್ಟು /*Kεdariṭṭu*/ ನಾ. 1. ಕೆದರಿದೆ, 2. ಹರಡಿದೆ, 3. ಚದುರಿಸು. 1. scattered, 2. spread, 3. to scatter. ವಾ: ಗಾಳಿಗೆ ಕೂದೊಲು ಕೆದರಿಟ್ಟು.

ಕೆದಲ್ /*kεdalɨ*/ ನಾ. ಮುಳಿ ಹುಲ್ಲು. a variety of

grass. **ಕೆದಲ್‌ಗೆ ಒರ್ಲೆ ಬಾತ್.** ವಾ: ನಮ್ಮ ಹಳೆ ಮನೆ ಕೆದಲ್‌ನ ಮನೆ.

ಕೆದಿಕ್ಕಾನ /*kedikka:na*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಸುಳ್ಯ ನಗರದ ಜಾಗ. 1. family, 2. lineage, 3. a locality in Madappadi village in Sullia Taluk of Dakshina Kannada District.

ಕೆದಿಲ /*kedila*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕಳಂಜ ಗ್ರಾಮದ ಜಾಗ. 1. family, 2. lineage, 3. a locality in Kalanja village in Sullia Taluk of Dakshina Kannada District.

ಕೆದ್ಕಾರ್ /*kedka:rɨ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೆದ್‌ಕ್ /*kɛdikɨ*/ ಕ್ರಿ. 1. ಕೆದಕುವುದು, 2. ಮತ್ತೆ ಮತ್ತೆ ಅದೇ ವಿಷಯವನ್ನು ಪ್ರಸ್ತಾಪಿಸುವುದು, 3. ಪುನ: ನೆನಪಿಗೆ ತರು. 1. to dig up, 2. to remind repeatedly, 3. to remind. **ಕೋಳಿ ಕೆದ್ಕಿ ಹೊಟ್ಟೆ ಅಡಿ ಹಾಕಿಕಂಡಂಗೆ(ಗಾ).** ವಾ: ಮತ್ತೆ ಮತ್ತೆ ಅದೇ ವಿಸ್ಯನ ಕೆದ್‌ಕ್‌ಬಡ. **ಕೆದ್ಕಿ** /*kɛdki*/ 1. ಕೆದಕಿ, 2. ಕೆದರಿ, 3. ಪುನಃ ನೆನಪಿಗೆ ತರುವುದು. 1. to stirr, 2. to scatter, 3. to remember. ವಾ: ಮನ್ಸಿಗೆ ಬೇನೆ ಆಗ್ವಂತ ವಿಸ್ಯನ ಕೆದ್ಕಿಕೆ ಹೋಕಾದ್ ಆತ. ಪ: ಕೆದ್ಕಿಕೆ – ಕೆದಕಲು; ಕೆದ್ಕ್ – ಕೆದಕು. **ಕೆದ್ಕುದು** /*kɛdkudu*/ 1. ಕೋಳಿ ಕೆರೆಯುವುದಕ್ಕೆ ಹೇಳುವುದು, 2. ಕೆದರುವುದು. 1. hen pecking, 2. to scatter. ವಾ: ಕೋಳಿ ದೈದ ಬುಡನ ಕೆದ್ಕುದು. **ಕೆದ್ಕ್‌ಬಡ** /*kɛdkɨ baḍa*/ 1. ಕೆದಕಬೇಡ, 2. ಮತ್ತೆ ನೆನಪಿಗೆ ತರಬೇಡ. 1. don't dig up/stir, 2. don't remind. ವಾ: ದೋಪರ ಕಾಲಲಿ ನಡ್‌ದ ವಿಸ್ಯನ ಮತ್ತೆ ಮತ್ತೆ ಕೆದ್‌ಕ್‌ಬಡ.

ಕೆದ್ರ್ /*kɛdrɨ*/ ನಾ. 1. ಕೆದರು, 2. ಹರಡು, 3. ಚದುರಿಸು, 4. ಉಗುರು ಮೊದಲಾದವುಗಳಿಂದ ಬಗೆ. 1. to scatter, 2. to spread, 3. to stir up, 4. to dig up with nails. ವಾ: ಕೆದ್ರಿದ ತಲೆಕೂದೊಲುನ ಬಾಚ್. ಪ: ಕೆದ್ರೊಕು – ಕೆದರಬೇಕು; ಕೆದ್ರ್‌ತ್ – ಕೆದರಿತು; ಕೆದ್ರ್‌ದು – ಕೆದರುವುದು. ಕೆದ್ರುಟ್ಟು – ಕೆದರಿದೆ, ಹರಡಿದೆ, ಚದುರಿದೆ.

ಕೆನೆ[1] /*kɛnɛ*/ ನಾ. 1. ಹೇಷಾರವವನ್ನು ಮಾಡು, 2. ಕುದುರೆಯ ಕೆನೆತ. 1. neighing sound, 2. neigh- a long high sound of a horse. ವಾ: ಕುದುರೆ ಕೆನೆಯದು. ಪ: ಕೆನೆಯದು – ಹೇಷಾರವ ಮಾಡು

ಕೆನೆ[2] /*kɛnɛ*/ ನಾ. ಕಾಡು ಕುರಿಯ ಕೂಗು. screaming or hoarse barking of an Indian Muntjac (barking deer). **ಕೆಂಪ ಅಲ್ಲಿ ಕೆನೆಕನ ಕೋಳಿ ಇಲ್ಲಿ ಕೂಂಗಿದೆ(ಗಾ).** ವಾ: ಕೆಂಪ ಕೆನೆತಿತ್.

ಕೆನೆ[3] /*kɛnɛ*/ ನಾ. 1. ಕುದಿಸಿದ ಹಾಲಿನ ಮೇಲೆ ಇರುವುದು, 2. ಹಾಲಿನ ಕೆನೆ, 3. ಹಾಲಿನ ಅಥವಾ ಮೊಸರಿನ ಸಾರವತ್ತಾದ ಭಾಗ, 4. ಸಾರ, 5. ಚೆಲುವು, 6. ಹಾಲು ಕಾಯಿಸಿದಾಗ ಉಂಟಾಗುವಾಗ ಪೊರೆಯಂತಹ ಮೇಲುಭಾಗ. 1. Milk skin or lactoderm, 2. cream of milk, 3. the nutritional part of milk and curds, 4. substance, 5. beauty, 6. Milk skin or lactoderm. ವಾ: ಮಕ್ಕ ಕೆನೆ ತಿಂಬೊದು.

ಕೆನೆಮಣ್ಣ್ /*kɛnɛmaṇṇɨ*/ ನಾ. 1. ಗದ್ದೆಯಲ್ಲಿರುವ ಮೆದು ಮಣ್ಣು, 2. ಕೆಸರು ನೀರು ಹರಿದು ಬಂದ ನಂತರ ಭೂಮಿಯ ಮೇಲೆ ನಿಲ್ಲುವ ಮೃದುವಾದ, ನುಣುಪಾದ ಮಣ್ಣು. 1. soft soil in the irrigated field/farm, 2. the collected sediment after the muddy water is washed away. ವಾ: ಕೆಸ್ರ್ ನೀರ್ ಹರ್‌ದ್ ನಿತ್ತ ಮೇಲೆ ಅಲ್ಲಿ ಕೆನೆಮಣ್ಣ್ ಕಾಂಬಕೆ ಸಿಕ್ಕಿದೆ.

ಕೆನ್ನಾಯಿ /*kenna:yi*/ ನಾ. 1. ಕಾಡು ನಾಯಿ, 2. ತೋಳ. a wolf. ವಾ: ಕೆನ್ನಾಯಿ ಬಂದರೆ ಕೋಳಿಗ ಒಂದೂ ಇರ್‌ದುಲೆ. ಪ: ಕೆನನಾಯಿ(ತು)

ಕೆನ್ನೆ ಸರ /*kɛnnɛ sara*/ ನಾ. 1. ಕತ್ತಿನ ಸರ, 2. ಕಿವಿಯಿಂದ ಕಣತಲೆಯ ಮೂಲಕ ಕೂದಲಿಗೆ ಸಿಕ್ಕಿಸುವ ಸರಪಣಿ. 1. a necklace/chain, 2. an ornamental chain attached to the ear and the hair which passes over the temples. ವಾ: ಅವುಳು ಕೆನ್ನೆ ಸರನ ಹಾಕಂಡುಟ್ಟು.

ಕೆನ್ನೆಗುಳಿ /*kɛnnɛguḷi*/ ನಾ. ಕೆನ್ನೆಯಲ್ಲಿ ಗುಳಿ ಬೀಳುವುದು. dimple / gelasin. ವಾ: ಅಮ್ಮ ನೆಗಾಡಿಕನ ಕೆನ್ನೆಗುಳಿ ಬಿದ್ದದೆ.

ಕೆಪ್ನ ಕೋವಿ /*kɛpna ko:vi*/ ನಾ. 1. ಕೇಪಿನ ಕೋವಿ, 2. ಕೋವಿ ನಳಿಗೆಗೆ ಮದ್ದನ್ನು, ಪೊಂದು, ಗುಂಡನ್ನು

ಸೇರಿಸಿ ಈಡು ತಯಾರಿಸಿ ಹೊಡೆಯುವುದು. 1. a rifle, 2. to fill gunpowder in a barrel and shoot. ವಾ: ಕೆಪ್ಪ ಕೋವಿದ್ ಕರಿ ತೆಗೆಕಾಗಿತ್.

ಕೆಪ್ಪ[1] /*kɛppa*/ ನಾ. ಕಿವುಡ. a deaf person/ a person with hearing impairment. ವಾ: ಕೆಪ್ಪಂಗೆ ಕೇಳ್‌ದುಲೆ ಜೋರಾಗಿ ಮಾತಾಡೊಕು. ಪ: ಕೆಪ್ಪನಾಂಗೆ – ಕಿವುಡನಂತೆ

ಕೆಪ್ಪ[2] /*kɛppa*/ ನಾವಿ. 1. ಕಿವಿ ಕೇಳದಂತೆ ವರ್ತಿಸು, 2. ಮಂದ ಬುದ್ಧಿಯವ, 3. ಬೋಧಾಳ, 4. ಬೋಳ, 5. ಬೈಗುಳ ಪದ. 1. to act as if one is deaf, 2. slow witted, 3. a person with cognitive disability, 4. a dull person, 5. an expletive. ವಾ: ನೀ ಕೆಪಪ್ಪಂಗೆ ಆಡ್‌ಬಡ.

ಕೆಪ್ಪಟೆ /*kɛppaṭɛ*/ ನಾ. 1. ಕೆನ್ನೆ, 2. ಕಪ್ಪೆ. 1. cheek, 2. a frog. ವಾ: ಅಂವನ ಕೆಪ್ಪಟೆಗೆ ಎರ್‌ಡ್ ಬುಟು. ಪ: ಕೆಪ್ಪಟೆಗೆ – ಕೆನ್ನೆಗೆ; ಕೆಪ್ಪಟೆಲಿ – ಕೆನ್ನೆಯಲ್ಲಿ

ಕೆಪ್ಪಟ್ರಾಯ /*kɛppaṭra:ya*/ ನಾ. ಕೆನ್ನೆ ಬಾವು ರೋಗ. Swollen cheeks. ವಾ: ಕೆಪ್ಪಟೆಲಿ ಕೆಪ್ಪಟ್ರಾಯ ಸುರಾವ್ಚು.

ಕೆಪ್ಪೆ /*keppe*/ ನಾ. ಕೆನ್ನೆ. cheek. ವಾ: ನಿನ್ನ ಕೆಪ್ಪೆಗೆ ಇಸುವೆ.

ಕೆಬಿ /*kɛbi*/ ನಾ. 1. ಕಿವಿ, 2. ಕರ್ಣ, 3. ಶ್ರವಣೇಂದ್ರಿಯ. ears. ವಾ: ವಾಲೆ ಹಾಕಿಕೆ ಕೆಬಿ ಚುಚ್ಚುಸೊಕು. ಪ: ಕೆಬಿಗ – ಕಿವಿಗಳು; ಕೆಬಿಗೆ – ಕಿವಿಗೆ; ಕೆಬಿದ್ – ಕಿವಿಯದ್ದು; ಕೆಬಿನ – ಕಿವಿಯ; ಕೆಬಿನೆಲ್ಲಾ – ಕಿವಿಯನ್ನೆಲ್ಲಾ. **ಕೆಬಿಗೆ ನಾಟ್‌ವಂಗೆ** /*kɛbigɛ na:ṭvaŋgɛ*/ 1. ಕಿವಿಗೆ ನಾಟುವ ಹಾಗೆ, 2. ಅರ್ಥ ಆಗುವ ಹಾಗೆ ತಿಳಿಸುವುದು. 1. to make someone understand, 2. to explain properly so that he/she understands. ವಾ: ಕೆಬಿಗೆ ನಾಟ್‌ವಂಗೆ ತಿಳ್‌ಸಿ ಹೇಳಕಾಯ್‌ತ್. **ಕೆಬಿಚಂಡೆ** /*kɛbicaṇḍɛ*/ ಕಿವಿ ಮತ್ತು ಕೆನ್ನೆ ಭಾಗ. the part containing cheek and ear. ವಾ: ನಿನ್ನ ಕೆಬಿಚಂಡೆಗೆ ಇಸಿರೆ ಬೆಳ್ಳೆಪಿಳ್ಳೆ ಹಾರೋಕು. **ಕೆಬಿಲಿ** /*kɛbili*/. ಕಿವಿಯಲ್ಲಿ. in the ear. ವಾ: ಕೆಬಿಲಿ ಪಿಸಿಪಿಸಿತ ಹೇಳ್‌ದ್ ಒಂದೂ ಅರ್‌ತ ಆತ್‌ಲೆ.

ಕೆಬಿನ /*kɛbina*/ ನಾ. ಭೂತದ ಕಿವಿಯ ಆಭರಣ. ear jewellery of the deity/bhuta. ವಾ: ಕೋಲ ಕಟ್ಟಿಕನ ಕೆಬಿನ ಹಾಕಂಬದು.

ಕೆಬುಳು /*kɛbuḷu*/ ನಾ. 1. ಕಿವಿರು, 2. ಮೀನು ಮೊದಲಾದ ಜಲಚರ ಪ್ರಾಣಿಗಳ ಶ್ವಾಸಾಂಗ. 1. the gill, 2. respiratory organs of fish. ವಾ: ಮೀನ್ ಕೆಬುಳುಲಿ ಉಸಿರಾಡ್‌ದು.

ಕೆಬ್ಚಂಡೆ /*kɛbcaṇḍɛ*/ ನಾ. ಕಿವಿಗಡ್ಡೆ. temple, side of one's head behind the eyes. ವಾ: ಅಂವನ ಕೆಬ್ಚಂಡೆಗೆ ಕೊಡ್‌ವೆ, ಬೋಳಿಮಜ್ಜ. ಪ: ಕೆಬಿತಕಂಡೆ, ಕೆಬಿತಂಡೆ, ಕೆಬ್ತಂಡೆ, ಕೆಪ್ಪಂಡೆ(ತು)

ಕೆಬ್ಲಾಡಿ /*kebla:ḍi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಐವತ್ತೊಕ್ಲು ಗ್ರಾಮದ ಜಾಗ. a locality in Aivattoklu village in Sullia Taluk of Dakshina Kannada District.

ಕೆಮಿ /*kɛmi*/ ನಾ. ಕಿವಿ. ear. **ಕೆಪ್ಪಂಗೆ ಕೆಮಿ ಕೇಳ್ ಕಾಕನ ಗೊಗ್ಗರೆನ ಹಲ್ಲ್ ಬೀತ್(ಗಾ). ಅಂಕ್ ಡೊಂಕ್ದ್ ಬಾವಿ ಸಂಕ ಚಕ್ರದ ಬಾಮಿ ಬಗ್ಗಿ ನೋಡ್ರೆ ನೀರಿಲ್ಲೆ – ಕೆಮಿ(ಒ).** ವಾ: ಕೆಮಿನ ಉಜ್ಜ್‌ಬಡ. ಪ: ಕೆಮಿ ಕೇಳ್ದೆ – ಕಿವಿ ಕೇಳುತ್ತದೆ. **ಕೆಮಿ ಚೆಂಡೆ** /*kɛmi ceṇḍɛ*/ ಕಿವಿ ಮತ್ತು ಕೆನ್ನೆ ಭಾಗ. the part containing cheek and ear. ವಾ: ಕೆಮಿ ಚೆಂಡೆಲೆ ಬೇನೆ ಆದುತ. ಪ: ಕೆಬಿತಂಡೆ(ತು); ಕೆಬಿಚೆಂಡೆಗೆ. **ಕೆಮಿ ತಮಟೆ** /*kɛmi tamaṭɛ*/ ಕಿವಿಯ ತಮಟೆ. ear drum. ವಾ: ಕೆಮಿ ತಮಟೆಗೆ ಪೆಟ್ಟಾಕಾಗದ್ ಪಿನ್ನ್ ಹಾಕ್‌ಬಡ. **ಕೆಮಿ ಬೇನೆ** /*kɛmi bɛ:nɛ*/ 1. ಕಿವಿ ನೋವು, 2. ಕಿವಿಶೂಲೆ. pain in the ear. ವಾ: ಕೆಮಿ ಬೇನೆ ತಡೆಕಾಗದೆ ಡಾಕ್ಟ್ರತ್ರ ಹೋಗಿದ್ದೊ. **ಕೆಮಿ ಹಿಂಡ್** /*kɛmi hiṇḍi*/ 1. ಕಿವಿ ಹಿಂಡು, 2. ಕಿವಿ ತಿರುವು, 3. ಬುದ್ಧಿವಾದ ಹೇಳು. 1. to twist someone's ear, 2. to twist the ear of someone, 3. to advise someone. ವಾ: ಕೆಮಿ ಹಿಂಡಿ ಬುದ್ಧಿ ಕಲ್‌ಸೊಕು. **ಕೆಮಿ ಹೊಟ್ಟಿಯೋಟು** /*kɛmi hoṭṭiyo:ṭu*/ ಕರೆದಾಗ ಓಗೊಡದಿದ್ದರೆ, ಮಾತನಾಡದಿದ್ದರೆ ಕೋಪದಿಂದ ಕಿವುಡು ಎಂಬ ಅರ್ಥ ಬರುವಂತೆ ನುಡಿಯುವುದು. asking if someone is deaf when he/she didn't respond to one's call (out of anger). ವಾ: ಎಷ್ಟ್ ಕರೆದು ಕೆಮಿ ಹೊಟ್ಟಿಯೋಟು ಕಂಡದೆ.

ಕೆಮಿಕುತ್ತಿ ಮೊದುವೆ /*kɛmikutti mɔduvɛ*/ ನಾ.

ಗಂಡುಮಕ್ಕಳಿಗೆ ಕಿವಿ ಚುಚ್ಚಿ ಮಾಡುವ ಮದುವೆ ಸಮಾರಂಭ. the ceremony of making a hole in the earlobe. ವಾ: ಗಂಡ್ ಮಕ್ಕಳಿಗೆ ಕೆಮಿಕುತ್ತಿ ಮೊದುವೆ ಮಾಡಿವೆ.

ಕೆಮಿಕೊಟ್ಟ್ /*kεmikoṭṭi*/ ಕ್ರಿವಿ. 1. ಕಿವಿಗೊಟ್ಟು, 2. ಶ್ರದ್ಧೆಯಿಂದ ಕೇಳು, 3. ಮನಸ್ಸಿಟ್ಟು ಕೇಳು, 4. ಲಕ್ಷಿಸು, 5. ಆಲಿಸು. 1. to listen with concentration, 2. hearing attentively, 3. mindful listening, 4. to focus, 5. to hear. ವಾ: ಕೆಮಿಕೊಟ್ಟ್ ಸೆರಿಯಾಗಿ ಪಾಟನ ಕೇಳೊಕು.

ಕೆಮಿಸ್ಯಾಟ /*kεmisya:ṭa*/ ನಾ. ಕಿವಿಯ ಮೇಲೆ ಮತ್ತು ಒಳಬದಿ ಬೆಳೆದಿರುವ ಕೂದಲು. hair, on and inside the ear. ವಾ: ಕೆಮಿಸ್ಯಾಟನ ತೆಗಿ.

ಕೆಮ್ಮಟೆ /*kemmaṭε*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೆಮ್ಮತಡ್ಕ /*kemmataḍka*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೆಮ್ಮನಬಳ್ಳಿ /*kemmanabaḷḷi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಜಾಲ್ಸೂರು ಗ್ರಾಮದ ಜಾಗ. a locality in Jalsuru village in Sullia Taluk of Dakshina Kannada District.

ಕೆಮ್ಮಾರ /*kemma:ra*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೆಮ್ಮು[1] /*kεmmu*/ ನಾ. 1. ಕೆಮ್ಮುವಿಕೆ, 2. ಕೆಮ್ಮುವ ಸದ್ದು ಮಾಡು. 1. to cough, 2. sound produced while coughing. ವಾ: ಸೀತ ಆಕನ ಕೆಮ್ಮು ಸುರಾದೆ. ಪ: ಒಣಕೆಮ್ಮು; ನಾಯಿಕೆಮ್ಮು; ಕಪ್ಪೆಕೆಮ್ಮು; ಕೆಮ್ಮಿಕಂಡ್ – ಕೆಮ್ಮಿ ಕೊಂಡು

ಕೆಮ್ಮು[2] /*kεmmu*/ ನಾ. 1. ಕೇಕರಿಸು, 2. ವಿರೋಧಿಗಳನ್ನು ಕಂಡಾಗ ಅನಗತ್ಯ ಕೆಮ್ಮುವುದು. 1. to hawk, 2. to cough unnecessarily when you see your enemies. ವಾ: ನಮ್ಮನ ಕಾಂಬಕನ ಅವು ಸುಮ್ಮನಾರ್ ಕೆಮ್ಮುದು.

ಕೆಮ್ಮುಲು /*kεmmulu*/ ನಾ. 1. ಕೆಮ್ಮು, 2. ಶ್ವಾಸಕ್ರಿಯೆಗೆ ಅಡ್ಡಿಯಾಗಿ ಉಂಟಾಗುವ ಒಂದು ಕ್ರಿಯೆ, 3. ಗಂಟಲಲ್ಲಿ ಕೆರೆತ ಉಂಟಾದಾಗ ಸಹಜವಾಗಿ ಮೂಡುವ ಕ್ರಿಯೆ. 1. to cough, 2. to expel the air from the lungs suddenly when there is a disturbance in the air passage, 3. done to clear the throat when there is an irritation. **ಕೆಮ್ಮುಲು ಇದ್ದರೂ ನಮ್ಮವುಳೆ ಸರಿ(ಗಾ).** ವಾ: ನೆನ್ನೆಂದ ಬಾರಿ ಕೆಮ್ಮುಲು. ಪ: ಕೆಮ್ಮುಲುಲಿ – ಕೆಮ್ಮಿನಿಂದ

ಕೆಮ್ಮೂರು /*kemmu:ru*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಐವತ್ತೊಕ್ಲು ಗ್ರಾಮದ ಜಾಗ. a locality in Aivattoklu village in Sullia Taluk of Dakshina Kannada District.

ಕೆಮ್ಮೈರ /*kεmmaira*/ ಸನಾ. ಕೆಂಪು ಕಪ್ಪುಮಿಶ್ರಿತ ಬಣ್ಣದ ಹುಂಜ. a rooster with black and red feathers. ವಾ: ಕೆಮ್ಮೈರ ಹಾರಿಕಂಡ್ ಬಾತ್.

ಕೆಯ್ಯಿ /*kεyyi*/ ನಾ. ಭತ್ತದ ಪೈರು. crop of paddy. ವಾ: ಈ ಸರಿನ ಕೆಯ್ಯಿ ಲಾಯ್ಕುಟ್ಟು.

ಕೆಯ್ಯೂರು /*keyyu:ru*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೆರಿ /*kεri*/ ನಾ. 1. ಕೆರೆದುಕೊಳ್ಳು, 2. ತುರಿಸಿಕೊಳ್ಳು. 1. to scratch, 2. to rub. **ಕರಿಯಕನ ಬರದಂವ, ಕೆರಿಯಕನ ಬಾತ್ ಗಡ(ಗಾ).** ವಾ: ಕಜ್ಜಿನ ಕೆರಿಬಡ ನಂಜಾದೆ.

ಕೆರಿದು[1] /*kεeridu*/ ನಾ. 1. ಗುದ್ದಲಿಯಲ್ಲಿ ಕೆರೆಯುವುದು, 2. ಸೆಗಣಿ ಕೆರೆಯುವುದು/ ಸಾರಿಸುವುದು. 1. scratch using a crowbar, 2. spreading the cow dung on to the floor. ವಾ: ಇಜ್ಜಾಲ್‌ಗೆ ಸೆಗ್‌ಣಿ ಹಾಕಿ ಕೆರಿದು.

ಕೆರಿದು[2] /*kεridu*/ ನಾ. ಜಗಳ ಸಾರು. to start a quarrel. ವಾ: ನಾವು ಸುಮ್ಮನಿದ್ದರೂ ಅವು ಕಾಲ್ ಕೆರಿದು ನೋಡ್.

ಕೆರಿಮಾರ್ /*kerima:ri*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೆರಿಯಕು ಗಡ /*kεriyaku gaḍa*/ ನಾ. ಕೆರೆಯಬೇಕಂತೆ. need to scratch/should scratch. ವಾ: ಬೆನ್ನ್ ಕೆರಿಯಕು ಗಡ.

ಕೆರುಗು /*kεrugu*/ ನಾ. 1. ಕೊರಗು, 2. ಸೊರಗು, 3. ಬಾಡು, 4. ವ್ಯಥೆಪಡು, 5. ಚಿಂತೆ, 6. ಕಳವಳ. 1. to feel anxious, 2. to weaken, 3. to lose vitality,

4. to feel pathetic, 5. to worry, 6. to feel disquiet. ವಾ: ಎಲ್ಲೊವ್ಕ ಒಂದೊಂದು ಕೆರುಗು ಇದ್ದದೆ.

ಕೆರೆ /*kɛrɛ*/ ನಾ. 1. ಕೆರೆ, 2. ತಟಾಕ, 3. ಏರಿ ಹಾಕಿ ನೀರು ನಿಲ್ಲಿಸಿದ ಸ್ಥಳ. either natural or artificial pond/ tank /lake. ವಾ: ಕೆರೆ ಕರೆಗೆ ಹೋಗಿ ಬನ್ನೆ. **ಕೆರೆಕರೆಲಿ** /*kɛrɛekarɛli*/ 1. ಬದಿಯಲ್ಲಿ, 2. ಅಂಚಿನಲ್ಲಿ, 3. ಕೊನೆಯಲ್ಲಿ, 4. ತುದಿಯಲ್ಲಿ. 1. in the side, 2. in the edge, 3. in the end, 4. in the margin. ವಾ: ಬರೆನ ಕೆರೆಕರೆಲಿ ಹೋಗ್ಬಡ.

ಕೆರೆಕ್ಕೋಡಿ /*kerekko:ḍi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕೇನ್ಯ, ಕಲ್ಮಡ್ಕ ಗ್ರಾಮದ ಜಾಗ. a locality in Kenya, Kalmadka village in Sullia Taluk of Dakshina Kannada District.

ಕೆರೆಮೂಲೆ /*kerɛmu:lɛ*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ನೆಲ್ಲೂರು ಕೆಮ್ರಾಜೆ ಗ್ರಾಮದ ಜಾಗ. 1. family, 2. lineage, 3. a locality in Nelluru Kemraje village in Sullia Taluk of Dakshina Kannada District.

ಕೆರ್ಕ್ /*kɛrki*/ ಕ್ರಿ. 1. ಕೆರೆಯುವುದು. to scratch. ವಾ: ಅಡಿಕೆ ಕೆರ್ಕ್‌ದು. ಪ: ಕೆರ್ಕಿಕೆ – ಕೆರೆಯಲು. **ಕೆರ್ಕಂಬದು** /*kɛrkambadu*/ ಕ್ರಿ. 1. ಕೆರೆದುಕೊಳ್ಳುವುದು, 2. ತುರಿಸಿಕೊಳ್ಳುವುದು. 1. scratching 2. scraping. ವಾ: ತಲೆನ ಹಾಂಗೆ ಕೆರ್ಕಂಬದು ಯಾಕೆ?

ಕೆರ್ತ /*kɛrta*/ ಕ್ರಿ. 1. ಕೆರೆತ, 2. ಕಡಿತ, 3. ನವೆ, 4. ಕಚ್ಚುವಿಕೆ, 5. ತುರಿಕೆ. itching sensation. ವಾ: ಕಜ್ಜಿ ಒಣ್ಗಿದ ಮೇಲೆ ಕೆರ್ತ ಜಾಸ್ತಿ.

ಕೆರ್ದ್ /*kɛrdi*/ ಕ್ರಿ. 1. ಕೆರೆ, 2. ಪರಚು, 3. ಉಗುರಿನಿಂದ ಕೆರೆ, 4. ಬಗಚು, 5. ಗೀರು. 1. scratch, 2. to scratch using nails, 3. to claw at something, 4. to scrape at 5. to scrape. ವಾ: ಗೆರೆಕಾಡ್‌ಲಿ ಮಣ್ಣ್‌ನ ಕೆರ್‌ದ್ ಹಾಕೊಳೊ.

ಕೆರ್ದು /*kɛrdu*/ ಕ್ರಿ. ಬೆದಕು. scratching. **ಕೋಳಿ ಕೆರ್ದು ಹೊಟ್ಟೆ ಕೆಳಗೆ(ಗಾ).** ವಾ: ಹುತ್ತೆರಿ ಬಾಕಾತ್, ಕಳ ಕೆರ್ದು ಆತ್‌ಲೆ.

ಕೆರ್ಸ್[1] /*kɛrisi*/ ನಾ. 1. ಬೈಗುಳ ಪದ. an expletive. **ಆಚಾರ ಹೇಳಿ ಕೆರ್ಸಿದಂವ, ಹೆಣ್ಣ್ ಬುಟ್ಟ್ ಆರ್‌ತಿಂಗ ಆತ್(ಗಾ).** ವಾ: ನೀ ಬೇಕಾದಂಗೆ ಮಾಡಿ ಕೆರ್‌ಸ್.

ಕೆರ್ಸ್[2] /*kɛrisi*/ ಕ್ರಿ. 1. ಅಡಕೆ ಮೊದಲಾದುವುಗಳ ಸಿಪ್ಪೆಯನ್ನು ಕೆರೆಸಿ ತೆಗೆ, 2. ನೆಲದ ಹುಲ್ಲನ್ನು ಕೆರೆಸಿ ತೆಗೆ. 1. to scrape and remove the skin of areca nut, etc, 2. to scrape and remove the grass from the ground/floor. ವಾ: ಇಜ್ಜಾಲ್‌ದ್ ಹುಲ್ಲ್‌ನ ಕೆರ್‌ಸ್‌ದು. ಪ: ಕೆರ್ಸಿಕೆ – ಕೆರೆಯಲು;

ಕೆರ್ಸ್[3] /*kɛrisi*/ ಕ್ರಿ. 1. ಕೆರೆಸು, 2. ಕೆತ್ತಿಸು. 1. to scrape, 2. to chisel. ವಾ: ಇಜ್ಜೆಲ್‌ಲಿ ಬೆಳ್‌ದ ಹುಲ್ಲ್‌ನ ಕೆರ್‌ಸುದು. ಪ: ಕೆರ್ಸಕು; ಕೆರ್ಸೋಕು – ಕೆರೆಸಬೇಕು; ಕೆರ್ಸನೊ – ಕೆರೆಸೋಣ; ಕೆರ್ಸಲಿ – ಕೆರೆಸಲಿ; ಕೆರ್ಸಿದೊ – ಕೆರೆಸಿದರು; ಕೆರ್ಸಿನೆ – ಕೆರೆಸುತ್ತೇನೆ; ಕೆರ್ಸಿವೆ – ಕೆರೆಸುವರು

ಕೆರ್ಳ್ /*kɛrḷi*/ ನಾ. 1. ಕೆರಳು, 2. ರೇಗು, 3. ಉದ್ರಿಕ್ತವಾಗು, 4. ಕೆದಳು, 5. ಸಿಟ್ಟಿಗೇಳು. 1. to get angry, 2. to scream, 3. to get enraged, 4. to get infuriated, 5. to become furious. ವಾ: ಹೇಳ್‌ದ್ ಕೇಳದಿದ್ರೆ ಕೆರ್‌ಳುದು. **ಕೆರ್ಳ್ಸುದು** /*kɛrḷisudu*/ 1. ಕೆರಳಿಸುವುದು, 3. ರೇಗಿಸುವುದು. 1. to make someone angry, 2. to annoy someone. ವಾ: ಎಂತೆಲ್ಲ ಹೇಳಿ ಕೆಳ್ರ್ಸುದು.

ಕೆಲು /*kelu*/ ಅ. 1. ಕೆಲವು. some. ವಾ: ಕೆಲು ಮರಲಿ ಕಾಯಿ ಬುಟ್ಟ್‌ಟು. **ಕೆಲವು** /*kelɔvu*/ 1. ಕೆಲವರು, 2. ಹಲವು, 3. ಹಙ್ಗ, 4. ತುಸು, 5. ಕೊಂಚ. 1. some people, 2. many, 3. some, 4. little, 5. small. ವಾ: ಕೆಲೊವು ಒಳ್ಳೆ ಜೆನಗ ವಳೊ. **ಕೆಲವ್‌ಕೆ** /*kelɔvikɛ*/ ಕೆಲವರಿಗೆ. for/to some. ವಾ: ಕೆಲೊವ್‌ಕೆ ಹೇಳಿರೆ ಅರ್‌ತನೆ ಆದುಲೆ. **ಕೆಲೊವು** /*kelovu*/ ತುಸು. a little.

ಕೆಲ್ಲಟಿ /*kellaṭi*/ ನಾ. ನೆಂಟರಿಷ್ಟರು ಶವ ದರ್ಶನಕ್ಕೆ ಕೊಂಬು, ವಾಲಗ, ವಾದ್ಯ,ಕೋವಿ ಮತ್ತು ಬಿಳಿ ಬಟ್ಟೆ ತರುವುದನ್ನು ಕೆಲ್ಲಟಿ ಎನ್ನುತ್ತಾರೆ. relatives of the dead carrying white cloth, wind instruments, etc. when they go to pay last respects to the dead. ವಾ: ಕೆಲ್ಲಟಿ ತಂದೊ.

ಕೆಲ್ಲ್ /*kelli*/ ನಾ. ಸಣ್ಣತುಂಡು. a small piece. ವಾ: ಸೌದೆ ಹೂಳ್‌ಕನ ಆಪ್‌ಂದ ಕೆಲ್ಲ್ ರೆಟ್ಟಿತ್. ಪ: ಚೂರ್

ಕೆಲ್ಲ್‌ಬೊಳ್ಳಿ /*kelli bɔḷḷi*/ ನಾ. ಒಂದು ವಿಧದ ಕಾಡುಬಳ್ಳಿ. a creeper. ವಾ: ಕೆಲ್ಲ್ ಬೊಳ್ಳಿತ ಇದೊಂದ್ ಕಾಡ್‌ಬೊಳ್ಳಿ.

ಕೆಲ್ಲ್‌ಮೀರು /*kellimi:ru*/ ನಾ. ಅಹಂಕಾರ. vanity. ವಾ: ತಿಂದ್ ಕೆಲ್ಲ್‌ಮೀರಿಟ್ಟು ಅವಂಗೆ.

ಕೆಲ್ಲ್‌ಸಾರುದು /*kelsai sa:rudu*/ ನಾ. ಕಾಲಿನ ಹೆಬ್ಬೆರಳಿನ ಬದಿಯಲ್ಲಿ ಕಲ್ಮಶ ತುಂಬಿ ಕೊಳೆಯುವುದು. toe jam. ವಾ: ಹೆಬ್ಬೆರ್‌ಳ್ ಸೆರೆಲಿ ಕೆಲ್ಲ್ ಸಾರುದು.

ಕೆಲ್ಸ /*kelsa*/ ನಾ. 1. ಕೆಲಸ, 2. ಉದ್ಯೋಗ, 3. ಚಾಕರಿ, 4. ಕಾರ್ಯ. 1. work, 2. a job, 3. a service, 4. a task. **ಊಟಕ್ಕೆ ಮುಂದೆ ಕೆಲ್ಸಕ್ಕೆ ಹಿಂದೆ(ಗಾ).** ವಾ: ಇನ್ನ್ ಕೆಲ್ಸ ಹುಡ್ಕೊಕು. **ಕೆಲ್ಸಕೆ** /*kelsakɛ*/ 1. ಕೆಲಸಕ್ಕೆ 2. ದುಡಿಮೆಗೆ, 3. ಉದ್ಯೋಗಕ್ಕೆ. 1. to/for work, 2. to/for job, 3. for an occupation. ವಾ: ಕೆಲ್ಸಕೆ ಹೋದರೆ ಬಾದು ರಾತ್ರೆನೆ. **ಕೆಲ್ಸಗಾರ** /*kelsaga:ra*/ 1. ಕೆಲಸಗಾರ, 2. ಪರಿಶ್ರಮಿ, 3. ಶ್ರಮಿಕ. 1. worker, 2. a hard working person, 3. a labourer. ವಾ: ಬಾರಿ ಕೆಲ್ಸಗಾರ ಹೈದಗಡ. **ಕೆಲ್ಸದಂವ** /*kelsadanva*/ 1. ಕೆಲಸ ಮಾಡುವವನು, 2. ಕಾರ್ಮಿಕ. 1. worker, 2. labour. ವಾ: ಕೆಲಸದಂವ ಕೆಲ್ಸ ಮಾಡ್ತ ಉಟ್ಟು. ಪ: ಕೆಲ್ಸದವುಕ್ಕೆಲ್ಲ – ಕೆಲಸದವರಿಗೆಲ್ಲ. **ಕೆಲ್ಸದವ್** /*kelsadavi*/ 1. ಕಾರ್ಮಿಕರು, 2. ಕೆಲಸ ಮಾಡುವವರು. 1. labourers, 2. workers. ವಾ: ಕಾಪಿ ಕೊಯ್ಯಕೆ ಕೆಲ್ಸದವ್ ಬಾತ್ಲೆ.

ಕೆಲ್ಸಿ /*kelsi*/ ನಾ. ಬೈಗುಳ ಪದ. an expletive.

ಕೆಸ /*Kɛsa*/ ನಾ. 1. ಮಲೆನಾಡ ತೋಟದಲ್ಲಿ ನೆಲೆದಲ್ಲಿ ಬೆಳೆವ ಅಗಲ ಎಲೆಯ ಸಸ್ಯ, 2. ಕೆಸು. Taro, Colocasia esculenta. **ಕೆಸದ ಎಲೆಲಿ ನೀರಿದ್ದಾಂಗೆ(ನು). ಅಪ್ಪ ತಂದ ಅಂಗಿ, ನೀರಿಗೆ ಹಾಕಿರೆ ಚಂಡಿನೇ ಆಲೆ – ಕೆಸದ ಸೊಪ್ಪು(ಒ).** ವಾ: ಕೆಸನ ದಂಟ್ ಗೈಪು ಮಾಡ್‌ದು. ಪ: ಕೆಸಗೈಪು – ಕೆಸುವಿನ ಸಾರು; ಕೆಸ – ಚೇವು/ತೇವು(ತು)

ಕೆಸದ ಹೋಕು /*kɛsada ho:ku*/ ನಾ. ಕೆಸದ ಗೆಡ್ಡೆ. tuber of Taro, Colocasia esculenta. ವಾ: ಕೆಸದ ಹೋಕುನ ನೆಟ್ಟರಾದು. **ಕೆಸದ ಹೋಕ್ ಚಿರಿ** /*kɛsada ho:ki ciri*/ ಕೆಸದ ಗಿಡದ ಚಿಗುರು. shoot of Taro, Colocasia esculenta. ವಾ: ಕೆಸದ ಚಿರಿನ ಗೈಪು ಮಾಡೊಕು. **ಕೆಸನ ಗೆಂಡೆ** /*kɛsana genḍɛ*/ ವಾ: ಕೆಸನ ಗೆಂಡೆ ಕಾಳ್ ಹಾಕಿ ಗೈಪು ಮಾಡ್ದ್.

ಕೆಸರ್ ಗದ್ದೆ /*kɛsari gaddɛ*/ ನಾ. 1. ಕೆಸರು ಗದ್ದೆ, 2. ಹಸಿಮಣ್ಣಿನಿಂದ ಕೂಡಿದ ಗದ್ದೆ, 3. ರಾಡಿ ಗದ್ದೆ. 1. slushy/watered paddy field, 2. a field with wet mud, 3. slushy field. ವಾ: ಕೆಸರ್ ಗದ್ದೆಲಿ ಓಟ ನಡ್ಸುದು. ಪ: ಕೆಸ್ರ್ ಗದ್ದೆ. **ಕೆಸರ್ ಗದ್ದೆ ಓಟ** /*kesari gadde o:ṭa*/ ಜನಪದ ಆಟ. a folk game. ವಾ: ಕೋಣಕಂಬಳ ನಡಿವಂದ್ ಕೆಸರುಗದ್ದೆ ಓಟನು ಇದ್ದದೆ.

ಕೆಸಳಿಕೆ /*kɛsaḷikɛ*/ ನಾ. ಹಂದಿಯ ಶರೀರದಲ್ಲಿರುವ ವಸ್ತು, 2. ಚುಟ್ಟಿ. an organ in the body of pig. ವಾ: ಬರಿ ಹಂದಿ ಕೆಸಳಿಕೆ ತಿಂಬಕಾದುಲೆ. **ಕೆಸಳ್ಕೆ** /*kɛsaḷkɛ*/ ಹಂದಿ ಮಾಂಸದ ಜೊತೆಯ ಭಾಗ. a part of pig's body. ವಾ: ಕೆಸಳ್ಕೆ ಮಾಸದೊಟ್ಟಿಗೆ ಅಂಟಿಕಂಡಿದ್ದದೆ.

ಕೆಸ್ರ್ /*kɛsri*/ ನಾ. 1. ಕೆಸರು, 2. ರಾಡಿ, 3. ಹಸಿಮಣ್ಣು. 1. slush, 2. muddy, 3. soft wet mud. **ಕೈ ಕೆಸ್‌ರಾದ್ರೆ ಬಾಯಿಗೆ ಮೊಸ್‌ರ್(ಗಾ).** ವಾ: ಕೆಸ್ರ್‌ನ ಮೋರೆಕೆ ಹಾರ್‌ಸಿತ್. **ಕೆಸ್ರ್ ಕಜ್ಜಿ** /*kɛsri kajji*/ ರಾಡಿಯಿಂದ ಉಂಟಾಗುವ ಕಜ್ಜಿ. eczema due to dampness. ವಾ: ಕಾಲ್‌ಲಿ ಕೆಸ್ರ್ ಕಜ್ಜಿ ಆವುಟು. **ಕೆಸ್ರ್ ಹಾವ್** /*kɛsri ha:vi*/ ನೀರಿನಲ್ಲಿರುವ ಹಾವು. a water snake. ವಾ: ನೀರ್‌ಲಿ ಕೆಸ್ರ್ ಹಾವ್ ಹೋದೆ. **ಕೆಸ್ರ್‌ಲಿ ಪೊಳ್ಳ ಬೀಳ್ದು** /*kɛsrili pɔḷḷa bi:ḷdu*/ 1. ಕೆಸರಿನಲ್ಲಿ ಬಿದ್ದು ಹೊರಳಾಡು, 2. ಹಂದಿ, ಕೋಣಗಳು ಬೇಸಿಗೆಯಲ್ಲಿ ಕೆಸರಿನ ನೀರಿನಲ್ಲಿ ಹೊರಳಾಡುವುದು. 1. to roll over in slush, 2. pigs and buffaloes rolling over in slush during summer. ವಾ: ಎಮ್ಮೆ ಕೆಸ್ರ್‌ಲಿ ಪೊಳ್ಳ ಬೀಳ್ದು.

ಕೆಳ ಅಂತಸ್ /*kɛḷa antasi*/ ನಾ. ನೆಲ ಅಂತಸ್. ground floor. ವಾ: ಕೆಳ ಅಂತಸ್ ಜೆರ್ತ್.

ಕೆಳಗೆಮನೆ /*keḷagɛmanɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೆಳಿಗೆ /*kɛḷigɛ*/ ನಾ. 1. ಕೆಳಗೆ, 2. ಅಡಿಯಲ್ಲಿ. 1. below/under, 2. at the bottom. **ಅವ್ವ ಹಾಸಿಗೆ**

ಕೆಳಿಗೆ ನುಗ್ಗಿರೆ, ಮಗ್ಗ್ಯ ಮೊಂದ್ರಿ ಕೆಳಿಗೆ ನುಗ್ಗಿದೆ(ಗಾ). ವಾ: ಮರದ ಕೆಳಿಗೆ ಕುದ್ರೊಮೊ.

ಕೆಳ್ಗೆ /*kɛḷgɛ*/ ನಾ. ಕೆಳಗೆ, 2. ಅಡಿಯಲ್ಲಿ. 1. below/ under, 2. at the bottom. ವಾ: ಮೇಜಿ ಕೆಳ್ಗೆ ಎಂತೊ ಸೌದಾತ್. **ಕೆಳಗೆಂದ** /*kɛḷagɛnda*/ ಕೆಳಗಿನಿಂದ. from below. ವಾ: ಕೆಳಗೆಂದ ಹತ್ತಿಕಂಡ್ ಬಾದು. ಪ: ಕೆಳಗೆನ – ಕೆಳಗಿನ

ಕೇಂಡಿ /*ke:ṇḍi*/ ಕ್ರಿ. ಕೇಳುವುದು. to listen. ವಾ: ಕೇಂಡಿ ತಿಂದರು ಆದು, ಆದ್‌ರೆ ಕದಿಯಕಾದ್.

ಕೇಕಡ /*ke:kaḍa*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೇಗಡೆ /*kɛ:gaḍɛ*/ ನಾ. 1. ಕೆಳಗಡೆ. below/under. ವಾ: ಮನೆದ್ ಕೇಗಡೆ ಗುಡ್ಡೆ ಇರ್‌ದು. ಪ: ಕಾಗಡೆ

ಕೇಚಕ್ಕಿ /*kɛ:cakki*/ ನಾ. ಬಲಿಯುವ ಹಂತದ ರಾಗಿ ತೆನೆ. almost fully grown ear of finger millet/ ragi. ವಾ: ಕೇಚಕ್ಕಿ ಬಾಗಿಟು.

ಕೇಚಪ್ಪನ /*ke:cappana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೇಜಿ /*ke:ji*/ ನಾ. ಎಪ. ಕಿಲೋ ಗ್ರಾಂ. kilogram. ವಾ: ಒಂದ್ ಕೇಜಿ ಮಾಸ ತಕಂಡದ್.

ಕೇಟಾಮೆ /*ke:ṭa:mɛ*/ ನಾ. ವಿವಾಹಕ್ಕೆ ಬೇಕಾದ ಸಾಮಗ್ರಿಗಳನ್ನು ಬಂಧುಗಳು ತೆಗೆದುಕೊಂಡು ಹೋಗಿ, ಕುಟುಂಬಕ್ಕೆ ನೆರವು ನೀಡುವ ಪದ್ಧತಿ. a custom of relatives carrying the required items for the wedding, in order to help the family who is arranging the marriage. ವಾ: ಒಂದೊಂದ್ ಕಡೆ ಕೇಟಾಮೆ ಪದ್ದೆತಿ ಉಟ್ಟು.

ಕೇಟೋಳಿರ /*ke:ṭo:ḷira*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೇಡನ /*ke:ḍana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೇಡಿ /*ke:ḍi*/ ನಾವಿ. ಪಾತಕಿ. a sinner. ವಾ: ಕೇಡಿ ಬುದ್ದಿ ಇರಿಕಾಗದ್.

ಕೇಡೆ /*ke:ḍɛ*/ ನಾ. ನಂಜಿನ ಪ್ರವೃತ್ತಿ ಉಳ್ಳವಳು. a venomous woman.

ಕೇಡ್ /*ke:ḍɨ*/ ನಾವಿ. 1. ನಂಜು, 2. ಅಸೂಯೆ, 3. ದ್ವೇಷ. 1. venomous, 2. jealous, 3. hatred. **ಮರದ ಕೇಡ್ ಮರನೇ ತಿಂಬೊದು(ಗಾ).** ವಾ: ಕೇಡ್ ಮಾಡಿಕಾದ್. **ಕೇಡ** /*kɛ:ḍa*/ 1. ಕೆಡುಕ, 2. ನಂಜು ಸ್ವಭಾವ. 1. evil, 2. jealous. **ಕೇಡಂಗೆ ಮೈ ಎಲ್ಲ ವಿಸ(ಗಾ).** ವಾ: ಅಂವ ಬಾರಿ ಕೇಡ.

ಕೇಡ್‌ಗಾಲ /*kɛ:ḍɨga:la*/ ನಾ. 1. ಕೆಟ್ಟಕಾಲ, 2. ಸಂಕಟದಕಾಲ, 3. ದುರ್ದೈವದ ಕಾಲ. 1. bad time, 2. evil hour, 3. unlucky hour. ವಾ: ಅಂವನ ಕೇಡ್‌ಗಾಲಕ್ಕೆ ಹಿಂಗೆ ಉರಿ ಬಾದು.

ಕೇತ್ /*ke:tɨ*/ ಕ್ರಿ. 1. ಕೇಯು, 2. ಸಂಭೋಗಿಸು. to have sex with somebody. ಪ: ಜಂಬರ ಮಾಲ್ತೆ(ತು), **ಕೇತಿತ್** /*ke:titɨ*/ 1. ಸಂಭೋಗಿಸುತ್ತಿದ್ದನು, 2. ಕೇಯುತ್ತಿದ್ದನು. to have sex with somebody.

ಕೇದಗ /*ke:daga*/ ನಾ. ಒಂದು ಜಾತಿ ಪರಿಮಳಯುಕ್ತ ಹೂವು. a fragrant screw-pine. ವಾ: ಕೇದಿಗೆ ಹೂನ ಬ್ರಮ್ಮನ ಪೂಜೆಗೆ ಮಾತ್ರ ಬಳ್‌ಸುದು.

ಕೇನಡ್ಕ /*ke:naḍka*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಮರಪಡ್ನೂರು ಗ್ರಾಮದ ಜಾಗ. 1. family, 2. lineage, 3. a locality in Amarapadnuru village in Sullia Taluk of Dakshina Kannada District.

ಕೇನಾಜೆ /*ke:na:je*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮಂಡೆಕೋಲು ಗ್ರಾಮದ ಜಾಗ. 1. family, 2. lineage, 3. a locality in Mandekolu village in Sullia Taluk of Dakshina Kannada District.

ಕೇನೆ /*kɛ:nɛ*/ ನಾ. ಸುವರ್ಣಗೆಡ್ಡೆ. elephant foot yam. ವಾ: ಕೇನೆಲಿ ವಿಟಮಿನ್ ಮತ್ತೆ ಕನಿಜಾಂಸ ಹೆಚ್ಚಿ ಇದ್ದ್ ಆರೋಗ್ಯಕೆ ಒಳ್ಳೆದ್. ಪ: ಕೇನೆ ಗೆಂಡೆ

ಕೇನೆಮಂಜಳ /*ke:nɛmaṇjaḷa*/ ನಾ. ಹಳದಿ ಬಣ್ಣದ ಕಾಡುಹಕ್ಕಿ. a yellow bird. ವಾ: ಕೇನೆಮಂಜಳ ಹಕ್ಕಿ ಅಹ್‌ಸನ ಬಣ್ಣ.

ಕೇನೆರ /*ke:nera:*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೇನೇರ /*ke:ne:ra*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೇನ್ಯ /*ke:nya*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕೇನ್ಯ ಗ್ರಾಮದ ಜಾಗ. a locality in Kenya village in Sullia Taluk of Dakshina Kannada District.

ಕೇಪಕ್ಕ /*ke:pakka*/ ನಾ. ವ್ಯಕ್ತಿ ಹೆಸರು, ಸ್ತ್ರೀ ವಾಚಕ. feminine given name. ಪ: ಕೇಪು

ಕೇಪಣ್ಣ /*ke:pakka*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. masculine given name. ಪ: ಕೇಪು

ಕೇಪಳ ಹೂವ್ /*ke:paḷa hu:vɨ*/ ನಾ. 1. ಕೇಪಳ ಹೂ, 2. ಇಕ್ಸೋರ, 3. ಗೊಂಚಲು ಗೊಂಚಲಾಗಿ ಗಾಢ ಕೆಂಪು ಬಣ್ಣದಿಂದ ಕೂಡಿದ ಹೂವು. Ixora flower. ವಾ: ಕೇಪಳ ಹೂವ್ ಐದರ್‌ಂದ ಏಳ್ ಅಡಿ ಉದ್ದ ಬೆಳಿಯೊ ದೈಲಿ ಆದೆ, ಈ ಹೂ ಸಿವಂಗೆ ಬಾರಿ ಕುಸಿ, ಕೋಲಲಿ ಸನ ಈ ಹೂನ ಬಳ್‌ಸುವೆ. ಪ: ಕೇಪ್ಳ – ಕೇಪಳ ಹೂವು

ಕೇಪಳಕಜೆ /*ke:paḷakajɛ*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ನೆಲ್ಲೂರು ಕೆಮ್ರಾಜೆ ಗ್ರಾಮದ ಜಾಗ. 1. family, 2. lineage, 3. a locality in Nelluru Kemraje village in Sullia Taluk of Dakshina Kannada District.

ಕೇಪು /*ke:pu*/ ನಾ. 1. ಮದ್ದು ತುಂಬಿಸಿ ಬಳಸುವ ಕೋವಿ ಯಲ್ಲಿ ಗುಂಡು ಹಾರಾಟವನ್ನು ಚಾಲು ಮಾಡಲು ಬಳಸುವ ಚಿಕ್ಕ ಸ್ಫೋಟಕ, 2. ಕೇಪು ಕೋವಿ. a percussion primer. ವಾ: ಕೇಪು ಹಿಡ್‌ದ್ ಬರ್‌ತುಟ್ಟು.

ಕೇಪು ಕೋವಿ /*ke:pu ko:vi*/ ನಾ. 1. ಕೈಯಲ್ಲಿ ಮದ್ದು ತುಂಬಿಸಿ ಬಳಸುವ ಕೋವಿ, 2. ಕೋವಿ. 1. a rifle that requires a gun powder to be loaded 2. a rifle. ವಾ: ಕೇಪು ಕೋವಿನ ಹಿಡ್‌ಕ.

ಕೇಪುನ ಬೆಡಿ /*bɛḍi*/ ನಾ. ಕೋವಿ. a gun. ವಾ: ಈಗ ಬೆಡಿ ತಕಂಡ್ ಹೊರ್‌ಟದೆಲ್ಲಿಗೆ? ಪ: ಬೆಡಿಗೆ – ಬೇಟೆಗೆ; ಬೆಡಿಲಿ – ಬೇಟೆಯಲ್ಲಿ. **ಕೇಪ್‌ನಬೆಡಿ** /*ke:p beḍi*/ ಕೇಪು ಕೋವಿಯಲ್ಲಿ ಬಳಸುವ ವೃತ್ತಾಕಾರದ ಲೋಹದ ವಸ್ತು. a circular metal part of percussion primer. ವಾ: ಕೇಪ್‌ನ ಬೆಡಿಲಿ ಹಂದಿ ಹೊಡ್ಡೊ.

ಕೇಮ/ಕೆಮ್ಮ /*ke:ma/kemma*/ ನಾ. ಆಡಿನಂತಹ ಕಾಡುಪ್ರಾಣಿ. an animal which looks like goat. ವಾ: ನಮಿಗೆ ಕೇಮ ಕಾಂಬಕೆ ಸಿಕ್ಕಿತ್.

ಕೇಮಾಟಿ /*ke:ma:ṭi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕೊಲ್ಲಮೊಗ್ರು ಗ್ರಾಮದ ಜಾಗ. a locality in Kollamogru village in Sullia Taluk of Dakshina Kannada District.

ಕೇಯಿಸಿಕ /*kɛ:yisika*/ ಕ್ರಿ. 1. ಕೇಯಿಸಿಕೊಳ್ಳು, 2. ಸಂಭೋಗಕ್ಕೆ ಒಳಗಾಗು. 1. to have sex with, 2. to have sexual intercourse. ವಾ: ಅದ್ ಕೇಯಿಸಿಕಂತ್. **ಕೇಯ್ದು** /*ke:yda*/ 1. ಕೇಯು, 2. ಸಂಭೋಗಿಸು. to have sex with somebody.

ಕೇರ /*ke:ra*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ದೇವಚಳ್ಳ ಗ್ರಾಮದ ಜಾಗ. a locality in Devacalla village in Sullia Taluk of Dakshina Kannada District.

ಕೇರಟೆ /*ke:raṭɛ*/ ನಾ. ಸಹಸ್ರಪದಿ. a centipede. ವಾ: ಕೇರಟೆ ಹರ್‌ಕಂಡ್ ಹೋದೆ.

ಕೇರಿ[1] /*ke:ri*/ ನಾ. 1. ಮಣ್ಣು, ಕಸ ಕಡ್ಡಿಗಳನ್ನು ಕೆರೆ, 2. ಕೋಳಿ ಮಣ್ಣನ್ನು ಕೆದರುವುದು. 1. to scatter the mud and other waste particles, 2. hen foraging the ground. **ಕೋಳಿ ಕೇರಿ ಕೇರಿ ಮೂರು ಕಾಸ್ ಮಾಡ್ತ್(ಗಾ).** ವಾ: ಕೋಳಿ ಗುಡ್ಡೆ ಹಾಕಿದ ದರ್‌ಗ್‌ನೆಲ್ಲ ಕೇರುದು. ಪ: ಕೇರುದು – ಮಣ್ಣನ್ನು ಕೆದರುವುದು

ಕೇರಿ[2] /*ke:ri*/ ನಾ. 1. ಮನೆಸಾಲುಗಳ ನಡುವಿನ ಹಾದಿ, 2. ಬೀದಿ, 3. ಓಣಿ, 4. ಸಾಲು. 1. a path/road between the rows of houses, 2. a street, 3. a narrow lane, 4. row. ವಾ: ನಾವು ಕೇರಿ ಕಡೆಂದ ಬಂದದ್.

ಕೇರೆ /*ke:rɛ*/ ನಾ. 1. ಕೇರೆಹಾವು, 2. ಇಲಿ ಹಿಡಿಯುವ ಹಾವು. 1. a rat snake, 2. a snake that catches rat. **ಒಳ್ಳೆಯವರ ಹೊಟ್ಟೇಲಿ ಕೇರೆ ಹುಟ್ಟಿದಂಗೆ(ಗಾ).** ವಾ: ಕೇರೆ ಹಾವ್ ಎಲಿನ ಹಿಡ್‌ದದೆ. ಪ: ಕೇರೆನಾಂಗೆ – ಕೆರೆಹಾವಿನಂತೆ

ಕೇರ್[1] /*ke:rɨ*/ ಕ್ರಿ. 1. ಒಕ್ಕುವುದು, 2. ಉಗುರಿನಿಂದ ಕೆರೆಯುವುದು. to scratch with nail. ವಾ: ಅಕ್ಕಿನ

ಕೇರ್. ಪ: ಕೇರೊಕು – ಒಕ್ಕಬೇಕು; ಕೇರ್ದು – ಕೇರುವುದು; ಕೇರ್ತ್ – ಕೇರಿದನು, ಒಕ್ಕಿದಳು

ಕೇರ್[2] /*ke:rɨ*/ ನಾ. 1. ಗಣನೆಗೆ ತೆಗೆದುಕೊಳ್ಳು, 2. ಲೆಕ್ಕಕ್ಕೆ ತೆಗೆದುಕೊಳ್ಳು. 1. to consider, 2. to count. ವಾ: ಅವು ಮಕ್ಕಳ್‌ನ ಬಾರಿ ಕೇರ್ ಮಾಡಿವೆ.

ಕೇರ್ದು[1] /*ke:rduɨ*/ ನಾ. 1. ಭತ್ತ, ಅಕ್ಕಿ ಮುಂತಾದುವನ್ನು ಒಕ್ಕುವುದು, 2. ಕೇರುವುದು. 1. threshing paddy, 2. winnowing. ವಾ: ಮೊರಲಿ ಬತ್ತನ ಕೇರ್‌ದು.

ಕೇರ್ದು[2] /*ke:rduɨ*/ ಕ್ರಿ. 1. ಕೋಳಿ ಕಸ ಕಡ್ಡಿ, ಮಣ್ಣು, ಗಿಡಗಳನ್ನು ಕೆದರುವುದು, 2. ಚದುರಿಸುವುದು, 3. ಬಗೆ, 4. ಕೆರೆ. 1. a hen foraging the ground, 2. scattering, 3. to dig, 4. to scratch. ವಾ: ಬೂದಿನ ಕೋಳಿಗ ಕೇರ್ದು. ಪ: ಕೇರ್ದಂರ್ದ – ಕೇರುವುದರಿಂದ

ಕೇರ್ನಡ್ಕ /*ke:rnaḍka*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೇರ್ಪಡ /*ke:rpaḍa*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಎಡಮಂಗಲ ಗ್ರಾಮದ ಜಾಗ. a locality in Edamangala village in Sullia Taluk of Dakshina Kannada District.

ಕೇರ್ಪಡ್ಕ /*ke:rpaḍka*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೇರ್ಪಳ /*ke:rpaḷa*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಸುಳ್ಯ ನಗರದ ಜಾಗ. a locality in Sullia town, Sullia Taluk of Dakshina Kannada District.

ಕೇರ್ಪು /*ke:rpu*/ ನಾ. ಬಿದಿರಿನಿಂದ ಮಾಡಿದ ಏಣಿ. bamboo ladder. ವಾ: ಕೇರ್ಪು ಇಸಿಕಂಡ್ ಒಳ್ಳಮೆಣ್ಸ್ ಕೊಯ್ಯದು.

ಕೇರ್‌ಬೊಳ್ಳಿ /*ke:rɨ bɔḷḷi*/ ನಾ. ವೀಳ್ಯದೆಲೆ, ಕರಿಮೆಣಸು ಬಳ್ಳಿ ನೆಲದಲ್ಲಿ ಹಬ್ಬುವುದು. betel leaf creeper or pepper vine growing/creeping on the surface. ವಾ: ಕೇರ್ ಬಳ್ಳಿ ನೆಲಲಿ ಸುಮಾರ್ ಹೋವುಟು, ಇದರ ತಿಂಬಕಾಲೆ.

ಕೇವಳ /*ke:vaḷa*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮಡಪ್ಪಾಡಿ ಗ್ರಾಮದ ಜಾಗ. 1. family, 2. lineage, 3. a locality in Madappadi village in Sullia Taluk of Dakshina Kannada District.

ಕೇಸರಿ /*ke:sari*/ ನಾ. 1. ಕೆಂದೆಂಗು, 2. ಕಿತ್ತಳೆ, 3. ಹಳದಿ ಮಿಶ್ರಿತ ಬಣ್ಣದ ಗಿಡ್ಡ ಜಾತಿಯ ತೆಂಗಿನಕಾಯಿ. 1. saffron, 2. Crocus sativus, 3. flower of saffron crocus, 4. a spice, 5. a colour, 6. an intense colour, 7. an intense golden yellow powder. ವಾ: ಬೊಸ್ರಿ ಹೆಣ್ಮಕ ಹಾಲಿಗೆ ಕೇಸರಿ ಹಾಕಿ ಕುಡ್ಯೊಕು.

ಕೇಸಿಕಂತ್ /*kɛ:sikant*/ ಕ್ರಿ. ಕೇಯಿಸಿಕೊಂಡರು. had sexual intercourse. **ಜಾಣೆ ಜಾರಿಕಂತ್, ಹೆಡ್ಡೆ ಕೇಸಿಕಂತ್(ಗಾ).** ವಾ: ಅದ್ ಕೇಸಿಕಂತ್.

ಕೇಸ್ರಿ /*ke:sri*/ ನಾ. 1. ಕೇಸರಿ, 2. ಒಂದು ಬಣ್ಣ. 1. saffron, 2. a colour. ವಾ: ಕೇಸ್ರಿನ ಅಡ್‌ಗೆಲಿ ಬಳ್‌ಸುವೆ.

ಕೇಳ್ /*ke:ḷi*/ ಕ್ರಿ. 1. ಕೇಳುವುದು, 2. ಆಲಿಸುವುದು. 1. asking, 2. listening. ವಾ: ದಿನಾ ಹೊತಾರೆ ರೇಡಿಯ ಕೇಳ್. ಪ: ಕೇಳುವೆ – ಕೇಳುತ್ತಾರೆ; ಕೇಳೊಕು – ಕೇಳಬೇಕು; ಕೇಳ್ವವು – ಕೇಳುವವರು; ಕೇಳ್ತಲ್ಲ – ಕೇಳಿದನಲ್ಲ/ಕೇಳಿದಳಲ್ಲ; ಕೇಳ್‌ಕನ – ಕೇಳುವಾಗ; ಕೇಳಿಕಾದ್ – ಕೇಳಬಾರದು; ಕೇಳಿಕಿಲ್ಲೆ – ಕೇಳಲಿಕ್ಕಿಲ್ಲ; ಕೇಳಿದ್ – ಕೇಳಿದ್ದು. **ಕೇಳಿಕ** /*ke:ḷika*/ ಕೇಳಿಕೊ. to ask. ವಾ: ಕೊಟ್ಟ ಅರ್ವೆನ ಕೇಳಿಕ. ಪ: ಕೇಳಿಕಂಡ್; ಕೇಳಿಕನ್ತ್; ಕೇಳಿಕಾನ – ಕೇಳುವಾಗ; ಕೇಳಿಕುಟ್ಟು – ಕೇಳಲಿಕ್ಕಿದೆ; ಕೇಳಿಕೆ – ಕೇಳುವುದಕ್ಕೆ; ಕೇಳಿನೆ – ಕೇಳುತ್ತೇನೆ; ಕೇಳಿರುವರಿ – ಕೇಳಿರಬಹುದು; ಕೇಳುದ್ದುಂತ – ಕೇಳುವುದು ಅಂತ; ಕೇಳೊಕು – ದೊಡ್ಡವರ ಮಾತ್ ನ ಕೇಳೊಕು – ಕೇಳಿಕಂಡೆ – ಕೇಳಿಕೊಂಡೆ. **ಕೇಳಿಕಣೆ** /*ke:ḷikaṇɛ*/ ಕೇಳಿಕೊಳ್ಳುತ್ತೇನೆ. I will ask. ವಾ: ಕೊಟ್ಟ ಪುಸ್ತಕ ಕೇಳಿಕಣೆ. **ಕೇಳಿಕನೆ** /*ke:ḷika:nɛ*/ ಕೇಳಿಕೊ (ಏಕವಚನ). to ask. ವಾ: ಅರ್ವೆ ಹೊಲೆಕೆ ಕೊಟ್ಟದರ ಕೇಳಿಕನೆ. ಪ: ಕೇಳಿಕೊನ್ತ್ – ಕೇಳಿಕೊಂಡನು/ಳು; ಕೇಳಿಕೊಂಬೊದ್ – ಕೇಳಿಕೊಳ್ಳುವುದು – ಕೇಳಿಕೊಮ್ಮೊ; – ಒಂದು ಸರಿ ಕೇಳಿಕೊ. **ಕೇಳ್ಕನಿ** /*ke:ḷkani*/ 1. ಕೇಳಿಕೊಳ್ಳಿ, 2. ಹಿಂತೆಗೆದುಕೊಳ್ಳಿ, 3. ಹಿಂಪಡೆದುಕೊಳ್ಳಿ, 1. listen, 2. withdraw, 3. take back. ವಾ: ಕೊಟ್ಟ ಕೊಟ್ಟುನ

ಕೇಳ್ಕನಿ. ಪ: ಕೇಳ್ಕಣ – ಕೇಳಿಕೋ ಅಣ್ಣ. **ಕೇಳ್ತೊಳದ್** /*ke:ḷtɔḷadɨ*/ 1. ಕೇಳುತ್ತಿರುವುದು, 2. ಆಲಿಸುತ್ತಿರುವುದು. 1. act of listening, 2. act of hearing. ವಾ: ಯಕ್ಷಗಾನ ಹಾಡ್‌ನ ಕೇಳ್ತೊಳದ್. **ಕೇಳ್ತೊಳೆ** /*ke:ḷtɔḷɛ*/ ಕೇಳುತ್ತಿದ್ದೇನೆ. I am listening. ವಾ: ನೀ ಹೇಳ್‌ದರ್‌ನೆ ಕೇಳ್ತೊಳೆ ಅಲ. ಪ: ಕೇಳ್ತೊಳದ್ – ಕೇಳುತ್ತಿರುವುದು, ಆಲಿಸುತ್ತಿರುವುದು. **ಕೇಳ್ದಾಂಗಾತ್** /*ke:ḷda:ŋga:tɨ*/ ಕೇಳಿದ ಹಾಗೆ ಆಯಿತು. I must have heard. ವಾ: ಕೂಸು ಮರ್‌ಟದ್ ಕೇಳ್ದಾಂಗಾತ್. ಪ: ಕೇಳ್ದಂಗಾದೆ – ಕೇಳಿದಂತಾಗುತ್ತಿದೆ. **ಕೇಳ್ದಾಂಗೆ** /*Ke:ḷda:ŋgɛ*/ 1. ಕೇಳಿದ ತಕ್ಷಣ, 2. ಕೇಳಿದ ಹಾಗೆ. 1. immediately after asking, 2. as if asked. **ಇಲ್ಲದ ಊರಿಗೆ ದಾರಿ ಕೇಳ್ದಾಂಗೆ(ನು).** ವಾ: ಕೇಳ್ದಾಂಗೆ ಎಂತದು ಕೊಡ್ಬಡಾತ. ಪ: ಕೇಳ್ದಾಂಗೆಲ್ಲ – ಕೇಳಿದಂತೆಲ್ಲ. **ಕೇಳ್ವಂಗೆ** /*ke:ḷvaŋgɛ*/ ಕೇಳುವ ಹಾಗೆ. loudly. ವಾ: ಕೇಳ್ವಂಗೆ ಜೋರಾಗಿ ಮಾತಾಡ್‌ದು ಯಾಕೆ? ಪ: ಕೇಳ್ವಂತ – ಕೇಳುವಂತಹ;

ಕೇಳ್ತ್ /*ke:ḷtɨ*/ ಕ್ರಿ. 1. ಕೇಳಿದಳು, 2. ಕೇಳಿದನು, 3. ಕೇಳಿತು. 1. she asked, 2. he asked, 3. it asked. ವಾ: ಬೈದದ್ ನಂಗೆ ಕೇಳ್ತ್.

ಕೇಳ್ದೆ /*ke:ḷdɛ*/ ಕ್ರಿ. 1. ಕೇಳುತ್ತದೆ, 2. ಆಲಿಸುತ್ತದೆ, 3. ಬೇಕೆಂದು ಕೇಳಿದೆ. 1. can hear, 2. can hear, 3. to ask deliberately. ವಾ: ದೂರಲಿ ಯಾರೋ ಕರ್‌ಯದು ಕೇಳ್ದೆ. ಪ: ಕೇಳ್ದೊ – ಕೇಳಿದರು; ಕೇಳ್ದ – ಕೇಳಿದೆಯ

ಕೇಳ್ನೆ /*ke:ḷnɛ*/ ಕ್ರಿ. ಕೇಳುತ್ತೇನೆ. I will ask. ವಾ: ಎಂತ ಬೈದದ್‌ತ ಕೇಳ್ನೆ ನಿಲ್ಲ್. ಪ: ಕೇಳ್ನೊ – ಕೇಳೋಣ, ಕೇಳುವ; ಕೇಳ್ಯೊಳೊ – ಕೇಳಿದ್ದಾರೆ, ಕೇಳಿದ್ದೇವೆ; ಕೇಳ್ನೊಕು – ಕೇಳಿಸಬೇಕು

ಕೇಳ್ವೊ /*ke:ḷvɔ*/ ಕ್ರಿ. ಕೇಳಬಹುದು. may ask. ವಾ: ನಾಳೆ ಮನಿ ದುಡ್ಡು ಕೇಳ್ವೊ. ಪ: ಕೇಳ್ಸ್‌ನೇ – ಕೇಳಿಸು(ಏಕವಚನ)

ಕೈ /*kai*/ ನಾ. 1. ಹಸ್ತ. hand. ವಾ: ಉಂಬಕೆ ಮುಂದೆ ಕೈ ತೊಳಿ. **ಕೈ ಎಳ್ಯದು** /*kai ɛḷyadu*/ 1. ಚಳಿಗೆ ಕೈಗಳ ನರಗಳಲ್ಲಿ ಸೆಳೆತದ ಅನುಭವವಾಗುವುದು. nerve pain in the hand due to cold. ವಾ: ಜಾಸ್ತಿ ಕೆಲ್‌ಸ ಮಾಡಿರೆ ರಾತ್ರೆ ಕೈ ಎಳ್ಯದು. ಪ: ಕೈ ಎಳ್ದದೆ – ಕೈ ಎಳೆಯುತ್ತಿದೆ. **ಕೈ ಕಾಲ್ ಎಳ್ದದೆ** /*kai ka:lɨ ɛḷdadɛ*/ ಕೈ ಕಾಲಿನ ನರ ಸೆಳೆತ. pain in the hands and legs. ವಾ: ಕ್ವಾಟಕೆ/ಚೆಳಿಗೆ ಕೈ ಕಾಲ್ ಎಳ್ದದೆ. **ಕೈ ಕಾಲ್ ಬಾದುಲೆ** /*kai ka:lɨ ba:dule*/ ಕೈ ಕಾಲಿನಲ್ಲಿ ಸೋಲು. pain the arms and legs resulting in the feeling of weakness. ವಾ: ಬುಡದೆ ಕೆಲ್‌ಸ ಮಾಡಿ ಮಾಡಿ ಕೈ ಕಾಲ್ ಬಾದುಲೆ. **ಕೈ ಕಾಲ್ ಬಿದ್ದೋಕೆ** /*kai ka:lɨ biddo:ke*/ ಬೈಗುಳ ಪದ. an expletive. ವಾ: ನಿನ್ನ ಕೈ ಕಾಲ್ ಬಿದ್ದೋಕೆ. **ಕೈ ಕಾಲ್ ಬೊಚ್ಚಿದೆ** /*kai ka:lɨ baccidɛ*/ ಕೈ ಕಾಲು ಸೋಲು, ಸುಸ್ತು. feeling of weakness in the legs and hands. ವಾ: ಸಕ್ತಿ ಇಲ್ಲದೆ ಹಙ್ಞ ನಡ್ದರೆ ಕೈ ಕಾಲ್ ಬಚ್ಚಿದೆ. **ಕೈ ಕಾಲ್ ಸೇದಿದೆ** /*kai ka:lɨ se:dide*/ ಕೈ ಕಾಲಿನ ನರಗಳ ಎಳೆತ. pinched sensation or pain in the nerve of hands and legs. ವಾ: ಯಾಕೋ ನಂಗೆ ಬಾರಿ ಕೈ ಕಾಲ್ ಸೇದಿದೆ.

ಕೈ ಕೂಸ್ /*kai ku:sɨ*/ ನಾ. 1. ಚಿಕ್ಕ ಮಗು, 2. ಕೈಯ ಮೇಲಾಡುವ ಮಗು, 3. ಸದಾ ಎತ್ತಿಕೊಂಡಿರುವಂತೆ ರಚ್ಚೆ ಹಿಡಿಯುವ ಮಗು. 1. an infant, 2. a toddler, 3. a child who wants to be held all the time. ವಾ: ಯಾಗೊಳು ಎತ್ತಿಕಂಡ್ ಅಬ್ಬೆಸ ಆಗಿ ಕೈ ಕೂಸ್ ಆಗೋವುಟು. ಪ: ಕೈಕುಞ್ಞಿ

ಕೈ ಕೊಟ್ಟತ್ /*kai koṭṭatɨ*/ ನಾವಿ. 1. ಕೈ ನೀಡು, 2. ಸಹಾಯ ಮಾಡು, 3. ಕೈಯನ್ನು ಆಸರೆಯಾಗಿ ನೀಡು, 4. ನೆರವು ನೀಡು, 5. ಮೋಸ ಮಾಡು, 6. ವಂಚಿಸು. 1. give a helping hand, 2. to help, 3. give one's hand for support, 4. to support someone, 5. to cheat, 6. to betray. ವಾ: ಜಾರಿ ಬೀಳಕನ ಕೈ ಕೊಟ್ಟತ್. ಪ: ಕೈ ಕೊಟ್ಟದೆ – ಕೈ ಕೊಡುತ್ತದೆ

ಕೈ ಕೊಡ್ಲಿ /*kai koḍli*/ ನಾ. ಒಂದು ಕೈಯಲ್ಲಿ ಕಡಿಯಬಹುದಾದ ಕೊಡಲಿ. a small axe held in one hand. ವಾ: ಕೈ ಕೊಡ್ಲಿಲಿ ಮರದ ಗೆಲ್ಲ್ ನ ಕಡೆದು. ಪ: ಕೈಕೊಡರಿ

ಕೈ ಗೌಸ /*kai gausa*/ ನಾ. ಕೈಗೆ ಧರಿಸುವ ಚೀಲ. hand glouse. ವಾ: ಕೈ ಗೌಸ ಹಾಕಂಡ್ ಕಾಪಿ ಕೊಯ್ಯದು. ಪ: ಕೈ ಗವ್ಸು – ಕರ ಕವಚ

ಕೈ ಚೆಲ್ಲ್ /*kai cɛllɨ*/ ನಾ. ತನ್ನಿಂದ ಸಾಧ್ಯವಾಗಲಾರ ದೆಂದು ಕೈಚೆಲ್ಲಿ ಕುಳಿತುಕೊಳ್ಳುವವ. giving up on

something. ವಾ: ಡಾಕ್ಟರತ್ರ ಹೋಗಿ ಹೋಗಿ ಸಾಕಾಗಿ ಕೈ ಚೆಲ್ಲಿ ಕುದ್ದುಟು.

ಕೈ ಚೋಡಿ /*kai cɔ:ḍu*/ ನಾ. 1. ಮುಖ್ಯ ತೋಡಿನ ಕವಲು, 2. ತೋಡಿನ ಒಂದು ಭಾಗ. 1. a small pond, 2. part of a pond, ditch etc. ವಾ: ಕೈ ಚೋಡಿ ಕರೆಗೆ ಹೋಕು.

ಕೈ ಚೌಕ /*kai cauka*/ ನಾ. ಕರವಸ್ತ್ರ. handkerchief. ವಾ: ಕೂಸು ಕೈ ಚೌಕಲಿ ಮೋರೆನ ಪೂಜಿಕಣ್ತ್.

ಕೈ ಜಾರ್ /*kai ja:rɨ*/ ನಾ. ಪರಿಸ್ಥಿತಿ ಮೀರು. situation going out of control. ವಾ: ಕೈ ಜಾರಿ ಹೋತು. ಪ: ಕೈ ಜಾರ್ದೆ – ಕೈ ಜಾರುತ್ತಿದೆ

ಕೈ ತಾಂಗ್ /*kai ta:ŋgɨ*/ ನಾ. 1. ಕೈ ಆಸರೆ, 2. ತೋಡು ದಾಟಲು ಆಧಾರವಾಗಿರುವ ಮರ, 3. ಸೇತುವೆ ದಾಟುವಾಗ ಹಿಡಿದುಕೊಂಡು ಹೋಗಲು ಕಟ್ಟಲಾಗುವ ಹಗ್ಗ ಅಥವಾ ಮರ. 1. support, 2. a log of wood used as a bridge to cross over the pond, 3. rope attached to the railing. ವಾ: ಕೈ ತಾಂಗ್ ಹಿಡ್‌ಕಂಡ್ ದಾಟುದು. ಪ: ಕೈತಾಂಗ್‌ಕಟ್ಟ್ – ಸೇತುವೆ ದಾಟಲು ಹಗ್ಗ ಅತವಾ ಮರವನ್ನು ಕಟ್ಟು

ಕೈ ತೊಪ್ಪು /*kai tɔppu*/ ನಾ. 1. ತನ್ನ ಹಿಡಿತದಿಂದ ಪಾರಾಗುವುದು, 2. ಅವಕಾಶ ವಂಚಿತನಾಗುವುದು. 1. to escape, 2. to lose an opportunity. ವಾ: ಆಗೋ ಕೆಲ್‌ಸ ಕೈ ತೊಪ್ಪಿ ಹೋತ್.

ಕೈ ದೀಪ /*kai di:pa*/ ನಾ. ಕೈಯ್ಯಲ್ಲಿ ಹಿಡಿದುಕೊಂಡು ಹೋಗುವ ಸೀಮೆಣ್ಣೆ ದೀಪ. kerosine handlamp. ವಾ: ಕೈ ದೀಪನ ಅಡ್‌ಗೆಮನೆಲಿ ಇಸ್.

ಕೈ ನೀಂಡ್ /*kai ni:ṇḍɨ*/ ನಾ. 1. ಕೈಯನ್ನು ಚಾಚು, 2. ಕೈಯನ್ನು ಮುಂದೆ ಒಡ್ಡು, 3. ಹಸ್ತವನ್ನು ಮುಂದಕ್ಕೆ ಚಾಚು. 1. spread one's hand, 2. spread one's hand forward, 3. to stretch one's hand. ವಾ: ತಿಂಬಕನ ಕೈ ನೀಂಡ್‌ದು. ಪ: ಕೈ ನೀಂಡಿಕೆ – ಕೈ ಚಾಚು

ಕೈ ನೋಡಂವ /*kai no:ḍanva*/ ನಾ. ಹಸ್ತ ನೋಡಿ ಭವಿಷ್ಯ ಹೇಳುವವ. a palmist. ವಾ: ಕೈ ನೋಡಂವ ಹೇಳ್ದ್ ಸೆರಿಯಾತ್.

ಕೈ ಪಲ್ಸ್ /*kai pɔlpɨ*/ ನಾ. 1. ಕೈಯ ಗುಣ, 2. ಕೈಯ ಸಾಮರ್ಥ್ಯ, 3. ಹಸ್ತ ಕೌಶಲ, 4. ಸಫಲಗೊಳಿಸುವ ಕೈಯ ಪ್ರಭಾವ, 5. ಹಿಡಿದ ಕಾರ್ಯವನ್ನು ಸಫಲಗೊಳಿಸುವ ಹಸ್ತ ಪ್ರಭಾವ. 1. an effect someone has (a magical touch), 2. the ability of a person, 3. skill of the hand, 4. the influence of someone in any successful act, 5. dexterity. **ನಿನ್ನ ಕೈಪಲ್ಪ್ ಬಾರಿ ಲಾಯ್ಕುಟ್ಟಲಾ(ನು).** ವಾ: ಅವು ಒಳ್ಳ ಕೈ ಪೊಲ್ಸ್ ಡಾಕ್ಟರ್. ಪ: ಕೈ ಪೊಲ್ಸು – ಕೈ ಗುಣ

ಕೈ ಪುಳೆದ್ /*kai puḷyadɨ*/ ನಾ. 1. ಕೈ ಸೆಳವು, 2. ಕೈಯ್ಯಲ್ಲಿನ ನರಗಳ ಸೆಳೆತ. 1. sensation felt due to pinched nerve in the hand, 2. pulling of nerve in the hand. ವಾ: ಚಳಿಗೆ ಕೈ ಪುಳ್ಯದ್. ಪ: ಪುಳ್ಯದ್ – ಸೆಳವು

ಕೈ ಪೊಲ್ಸ್ /*kai polsɨ*/ ನಾ. 1. ಕೈಯ ಗುಣ, 2. ಕೈಯ ಸಾಮರ್ಥ್ಯ, 3. ಹಸ್ತ ಕೌಶಲ, 4. ಸಫಲಗೊಳಿಸುವ ಕೈಯ ಪ್ರಭಾವ, 5. ಹಿಡಿದ ಕಾರ್ಯವನ್ನು ಸಫಲಗೊಳಿಸುವ ಹಸ್ತ ಪ್ರಭಾವ. 1. an effect someone has (a magical touch), 2. the ability of a person, 3. skill of the hand, 4. the influence of someone in any successful act, 5. dexterity. ವಾ: ಅವು ಒಳ್ಳ ಕೈ ಪೊಲ್ಸ್ ಡಾಕ್ಟರ್.

ಕೈ ಪೊಳಿಮಣೆ /*kai poḷimaṇɛ*/ ನಾ. ನೆಲವನ್ನು ಗುದ್ದಿ ಸಮತಟ್ಟು ಮಾಡಲು ಬಳಸುವ ಮರದಿಂದ ಮಾಡಿದ ಸಣ್ಣ ಸಾಧನ. a rammer, a wooden plank to flatten the ground. ವಾ: ಕೈ ಪೊಳಿಮಣೆ ತಕಂಡ್ ನೆಲನ ಗುದ್ದಿ ಸಮತಟ್ಟ್ ಮಾಡ್‌ದು.

ಕೈ ಬುಡು /*kai buḍu*/ ನಾ. 1. ಮಧ್ಯದಲ್ಲಿ ತನ್ನ ಜವಾಬ್ದಾರಿ ಯಿಂದ ನುಣುಚಿಕೊಳ್ಳುವವ, 2. ಆಸರೆ ನೀಡಿ ಮಧ್ಯದಲ್ಲಿ ಹಿಂತೆಗೆದುಕೊಳ್ಳುವವ. 1. an evasive person, 2. a person who is not reliable. ವಾ: ನಂಬುಸಿ ಅರ್‌ದಲಿ ಕೈ ಬುಡುದು.

ಕೈ ಬೇರ್ /*kai be:rɨ*/ ನಾ. ಹೊಡೆಯಲು ಕೈ ಎತ್ತು. to raise hands to strike at someone. ವಾ: ಅಂವ ಹೊಡೆಕೆತ ಕೈ ಬೇರಿಕಂಡ್ ಬಾತ್. ಪ: ಕೈ ಬೇರಿಕೆ – ಕೈ ಬೀಸುವ

ಕೈ ಮಗ್ಗು /*kai maggu*/ ನಾ. ಹಣಕಾಸಿನ ವ್ಯವಹಾರ. financial transaction. ವಾ: ನಿನ್ನ ಕೈ ಮಗ್ಗು ವ್ಯವಾರ ಹೆಂಗುಟ್ಟು?

ಕೈ ಮರಿಗೆ /*kai marigɛ*/ ನಾ. ಅನ್ನ, ಪದಾರ್ಥ ಇತ್ಯಾದಿ ಬಳಸುವ ಚಿಕ್ಕಪಾತ್ರೆ. a rice pot. ವಾ: ಕೈ ಮರಿಗೆಲಿ ಹುಗ್ಗೆ ಹಾಕಿಸುದು. ಪ: ಕೈ ಮರ್ಗಿಲ್

ಕೈ ಮಾಡ್ /*kai ma:ḍi*/ ನಾ. ದೈಹಿಕವಾಗಿ ಹಲ್ಲೆ ಮಾಡು. physical abuse/assault. ವಾ: ಅಂವನ ಮೇಲೆ ಕೈ ಮಾಡ್‌ದ್ ಸೆರಿಯಲ್ಲ.

ಕೈ ಮೀರ್ /*kai mi:ri*/ ನಾ. ತನ್ನ ಸಾಧ್ಯತೆಗೆ ಮೀರಿ. beyond one's possibilities. ವಾ: ಕಣ್ಣ್ ಮುಚ್ಚಿ ಬುಡಿಕೆ ಮುಂದೆ ಎಲ್ಲ ಕೈ ಮೀರಿ ಹೋತ್. ಪ: ಕೈ ಮೀರಿಕೆ – ಕೈ ಮೀರುವ

ಕೈ ಮುಗ್ದನೆ /*kai mugdanɛ*/ ನಾ. 1. ಕೈ ಮುಗಿ, 2. ವಿನಂತಿಸಿಕೊಳ್ಳು, 3. ಪ್ರಾರ್ಥಿಸಿಕೊಳ್ಳು, 1. to fold hands, 2. to request, 3. to pray. ವಾ: ಕೈ ಮುಗ್ದನೆ ಬುಟ್ಬುಡಿ ಹೊಡಿಬಡಿ.

ಕೈ ಮೊದ್ದು ಹಾಕುದು /*kai mɔddu ha:kudu*/ ನಾ. ಪ್ರಾಣಿಗಳನ್ನು ಕೊಂದು ಅವುಗಳ ರಕ್ತಕ್ಕೆ ಸ್ವಲ್ಪವಿಷ ಸೇರಿಸಿ, ಅದಕ್ಕೆ ಮತ್ತೆ ಕೆಲವು ಗಿಡಮೂಲಿಕೆಗಳನ್ನು ಸೇರಿಸಿ, ವೈರಿಗಳಿಗೆ ಕೊಟ್ಟು ಅವರನ್ನು ಕೊಲ್ಲುವುದು. to kill one's enemies by serving them poisonous meat. ವಾ: ಕೆಲೊವು ಮೊನ್‌ಸಂಗೆ ಕೈ ಮೊದ್ದು ಹಾಕುದು ಉಟ್ಟುತ ಹೇಳಿವೆ.

ಕೈ ರಟ್ಟೆ /*kai raṭṭɛ*/ ನಾ. 1. ತೋಳು, 2. ಭುಜಬಲ, 3. ಸಾಮರ್ಥ್ಯ. 1. shoulder, 2. strength of the shoulder, 3. capacity. ವಾ: ಕೈ ರಟ್ಟೆ ಗಟ್ಟಿ ಇದ್ದರೆ ಲಾಯ್ಕಲಿ ಕೆಲ್ಸ ಮಾಡಕ್.

ಕೈ ಸಾಲ /*kai sa:la*/ ನಾ. 1. ಸಣ್ಣ ಪುಟ್ಟ ಬಡ್ಡಿ ರಹಿತ ಮುಂಗಡ ಸಾಲ, 2. ನಂಬಿಕೆ ಮೇಲೆ ಕೊಡುವ ಸಾಲ, 3. ಕೈಗಡ. 1. a small loan without intereset, 2. to offer a loan based on mutual trust, 3. loan without any security. ವಾ: ಕೈ ಸಾಲ ಸುಮಾರುಟ್ಟು.

ಕೈ ಸಾಲ್ /*kai sa:li*/ ನಾ. ತೋಟದ ಮಡಿಗಳು. seed beds/seedling bed in the farm. ವಾ: ನೆಟ್ಟಿಕಾಯಿ ಕೈ ಸಾಲ್.

ಕೈ ಸೇರ್ /*kai se:ri*/ ನಾ. 1. ಪರಿಸ್ಥಿತಿ ತಿಳಿಗೊಳ್ಳು, 2. ಪ್ರಾಪ್ತಿ. 1. de-escalation of a situation, 2. attainment. ವಾ: ಕೊಟ್ಟ ದುಡ್ಡ್ ಕೈ ಸೇರ್‌ತ್.

ಕೈ ಸ್ಯಾಟ /*kai sya:ṭa*/ ನಾ. ಕಂಕುಳುವಿನಲ್ಲಿ ಇರುವ ಕೂದಲು. underarm hair or axillary hair. ವಾ: ಕೈ ಸ್ಯಾಟನ ತೆಗಿನೆ.

ಕೈ ಹಾಕ್ /*kai ha:ki*/ ಕ್ರಿ. 1. ಪಾಲ್ಗೊಳ್ಳು, 2. ತೊಡಗಿಸಿಕೊಳ್ಳು, 1. to participate, 2. to involve. ವಾ: ದೊಡ್ಡ ಯಾಪಾರಕೆ ಕೈ ಹಾಕಿಯೊಳೆ.

ಕೈ ಹಿಡೆದು /*kai hiḍɛdu*/ ಕ್ರಿ. 1. ಕೈ ಹಿಡಿಸುವುದು, 2. ಎರಡನೇ ಮದುವೆ ಮಾಡುವ ಕ್ರಮ, 3. ಮರು ಮದುವೆ. 1. arranging a wedding, 2. arranging a second marriage, 3. re-marriage. ವಾ: ಗಂಡ ಸತ್ತರೆ ಮತ್ತೆ ಹೆಣ್ಣಿಗೆ ಕೈ ಹಿಡ್ಸುದು ಮಾಡುವೆ. ಪ: ಕೈ ಹಿಡ್ಸುದು, ಕೈ ಪತ್ತಾವುನೆ(ತು)

ಕೈ ಹೊಡಿ /*kai hɔḍi*/ ನಾ. ತೆನೆಯನ್ನು ಹೊಡೆದು ಭತ್ತವನ್ನು ಬೇರ್ಪಡಿಸುವುದು. threshing the paddy. ವಾ: ಕಳಲಿ ಬತ್ತನ ಕೈ ಹೊಡಿಯದು. ಪ: ಕೈ ಹೊಡೆಕಾಕನ – ತೆನೆಯನ್ನು ಹೊಡೆದು ಭತ್ತವನ್ನು ಬೇರ್ಪಡಿಸುವಾಗ

ಕೈಂಕಟೆ /*kaiŋkaṭɛ*/ ನಾವಿ. ಅತಿಯಾದ ಕಹಿ. too bitter. ವಾ: ನಾಡ್ ಮೊದ್ದ್ ಬಾರಿ ಕೈಂಕಟೆ.

ಕೈಂಕುತ್ತ /*kaiŋkutta*/ ನಾ. ಅಡುಗೆ ಕೋಣೆಯಲ್ಲಿ ಬಿಸಿ ಪಾತ್ರೆಯನ್ನು ಹಿಡಿಯಲು ಬಳಸುವ ಬಟ್ಟೆ. kitchen towel. ವಾ: ಕೈಂಕುತ್ತ ಹಿಡ್ಕಂಡ್ ಬಿಸಿ ಪಾತ್ರನ ಒಲೆಂದ ಇಳ್ಸಕಾಯ್ತ್.

ಕೈಂತದೆ /*kaintadɛ*/ ನಾ. 1. ಕಹಿಯಾಗುತ್ತದೆ, 2. ಕಹಿಯಾಗುತ್ತಿದೆ. feeling bitter taste. ವಾ: ನೀರ್ ಸೋಂತೆ ಹಞ್ಞ ಕೈಂತದೆ.

ಕೈಂತಿಲ /*kaintila*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೈಂತುಟು /*kaintuṭu*/ ನಾ. 1. ಮನಸ್ತಾಪ ಉಂಟಾಗಿದೆ, 2. ಸಂಬಂಧ ಹದಗೆಟ್ಟಿದೆ. 1. antagonism between people due to difference of opinion, 2. spoilt relationships. ವಾ: ಇಬ್ಬೊರ್ ಜೂನ್ ಜುಲೈನಂಗೆ ಇದ್ದೊ ಈಗ ಕೈಂತುಟು ಕಂಡದೆ.

ಕೈಂದಳೇ /*kaindaḷɛ:*/ ನಾ. 1. ಕೈಯ್ಯಾರೆ, 2. ಕೈಯಿಂದಲೆ. with one's hand. ವಾ: ನಿನ್ನ ಕೈಂದಳೇ ಕೊಡು.

ಕೈಂದೆ /*kaindɛ*/ ನಾ. ಕೈಯ್ಯಿಂದಲೆ. with one's hands. ವಾ: ನನ್ನ ಕೈಂದೆ ಹಲ್ಲ್ ಕೀಳಂಗಾತ್.

ಕೈಂಪೆ ಇಲ್ಲದಂವ /*kaimpɛ illadava*/ ನಾ. 1. ಮರ್ಯಾದೆ ಇಲ್ಲದವನು, 2. ಧೈರ್ಯ ಇಲ್ಲದವ. 1. someone who has lost respect, 2. not courageous. ವಾ: ಕೈಂಪೆ ಇಲ್ಲದವನಂಗೆ ಆಡುದು.

ಕೈಂಪೆ[1] /*kaimpɛ*/ ನಾವಿ. 1. ಪಿತ್ತಕೋಶ, 2. ಪಿತ್ತಜನಕಾಂಗ. gallbladder. ವಾ: ಆಹಾರ ಜೀರ್ಣ ಆಕೆ ಸಾಯ ಮಾಡೊ ಅಂಗನೆ ಕೈಂಪೆ.

ಕೈಂಪೆ[2] /*kaimpɛ*/ ನಾ. 1. ಹಟ, 2. ಧೈರ್ಯ. 1. stubbornness, 2. courage. ವಾ: ಮೊನ್ಸಂಗೆ ಕೈಂಪೆ ಇರೋಕು.

ಕೈಂಯಿ /*kainyi*/ ನಾ. 1. ಕಹಿ, 2. ಆರು ರಸಗಳಲ್ಲಿ ಒಂದು. 1. bitter taste, 2. one of six rasas. ವಾ: ಕರಿ ಹಗಲೆಕಾಯಿ ಬಾರಿ ಕೈಂಯಿ.

ಕೈಂಯುಳಿ ಮರ /*kainyuḷi mara*/ ನಾ. ಹೆರಳೆಕಾಯಿ ಮರ. a citron lime tree. ವಾ: ಕೈಂಯುಳಿ ಮರಲಿ ಮುಳ್ಳುಗಿದ್ದವೆ ಹತ್ತಕನ ನೋಡಿಕಣೊಕು. ಪ: ಕೈಪುರ ಕಾಯಿ

ಕೈಂಹುಳಿ ಸೊಪ್ಪ್ /*kainhuḷi sɔppɨ*/ ನಾ. ತಲೆ ನೋವಿಗೆ ಮಾಡುವ ನಾಟಿ ಔಷಧಿ ಸೊಪ್ಪು. a herb used as a medicine for headache. ವಾ: ಕೈಂಹುಳಿ ಸೊಪ್ಪ್‌ಲಿ ಚಾಯ ಮಾಡಿ ಕುಡ್ಯಕ್.

ಕೈಕಣೆ /*kaikaṇɛ*/ ನಾ. ಸೌಟು. a ladle/a long spoon. ವಾ: ಕೈಕಣೆಲಿ ಗೈಪುನ ಗೋಂಚು.

ಕೈಕಲ್ /*kaikalɨ*/ ನಾ. 1. ಕೈಕಾಲು, 2. ಕರ, ಪಾದ. hands and legs. ವಾ: ಹೊರೆಗೆ ಹೋಗಿ ಬಂದಾಂಗೆ ಕೈಕಲ್ ತೊಳ್‌ಕಣಕು.

ಕೈಕಳ ಕಾಯಿ /*Kaikaḷa ka:yi*/ ನಾ. ಕೆಂಪು ಬಣ್ಣದ ಕಾಯಿ, ಕಾಯಿಯನ್ನು ಹಿಂಡಿ ಬತ್ತಿ ಮಾಡುತ್ತಾರೆ ಹಾಗು ಬೀಜದಿಂದ ದೇವರ ದೀಪಕ್ಕೆ ಎಣ್ಣೆ ತಯಾರಿಸುತ್ತಾರೆ. a red coloured fruit, oil is extracted from the seeds this fruit. ವಾ: ಕೈಕಳ ಕಾಯಿದ್ ಎಣ್ಣೆ ಸಿಕ್ಕಿದೆ. **ಕೈಕಳ ಮರ** /*kaikaḷa mara*/ ಎಣ್ಣೆ ತೆಗೆಯುವ ಮರ. a fruit tree from which oil is extracted. ವಾ: ಕೈಕಳ ಮರದ ಬೀಜಂದ ದೀಪಕ್ಕೆ ಎಣ್ಣೆ ತೆಗ್‌ದವೆ.

ಕೈಕಾಲ್ /*kaika:lɨ*/ ನಾ. 1. ಕರ, 2. ಪಾದ, 3. ಕೈಕಾಲು. 1. hands, 2. feet, 3. hands and legs. ವಾ: ಹೊರೆಗೆ ಹೋಗಿ ಬಂದಾಂಗೆ ಕೈಕಾಲ್ ತೊಳ್ಕಣಕು. ಪ: ಕೈಕಲ್ – ಕರಪಾದ, ಕೈಕಾಲು

ಕೈಕಾಲ್ ತೊಳೆ /*kaika:lɨ toḷyakɛ ni:rɨ koḍḍu*/ ನಾ. ನೆಂಟರಿಸ್ಟರು ಮನೆಗೆ ಬಂದಾಗ ಮೊದಲು ಕೈಕಾಲು ತೊಳೆಯಲು ನೀರು ಕೊಟ್ಟು ಉಪಚರಿಸುವುದು. a practice of giving water to the relatives to wash their hands and legs when they visit. ವಾ: ಮನೆಗೆ ಹತ್ತ್ ಕನ ಕೈಕಾಲ್ ತೊಳೆಕೆ ನೀರ್ ಕೊಡ್‌ದು ನಮ್ಮ ಪದ್ದೆತಿ.

ಕೈಕಾಲ್ ಬುಡ್‌ದು /*kaika:lɨ buḍɨdu*/ ನಾ. 1. ಹೆದರುವುದು, 2. ಭಯಗೊಳ್ಳುವುದು, 3. ಏನೂ ತಿಳಿಯದಂತಾಗುವುದು. 1. to fear, 2. to get scared, 3. sense of ignorance. ವಾ: ಆನೆನ ಹತ್ತ್ ರಂದ ನೋಡಿ ಕೈಕಾಲ್ ಬುಡ್‌ದು.

ಕೈಕುಞ[1] /*kaikuɲi*/ ನಾ. ಒಂದು ಕಟ್ಟು ಪೈರಿನ ಅರ್ಧಭಾಗ. half of a bundle. ವಾ: ಕೈಕುಞ ನ ಒಂದ್ ಕಟ್ಟ್ ಗದ್ದೆ ಕರೆಲಿ ಬಿದ್ದುಟು.

ಕೈಕುಞ[2] /*kaikuɲi*/ ನಾವಿ. 1. ಮುದ್ದು, 2. ಸದಾ ಮಗುವನ್ನು ಎತ್ತಿಕೊಂಡಿರುವುದು. 1. showing affection, 2. holding the baby all the time. ವಾ: ಎತ್ತಿ ಎತ್ತಿ ಕೈಕುಞ ಆವ್ವು ಕೂಸು.

ಕೈಕುಞ್ಞ /*kaikuɲɲɛ*/ ನಾ. 1. ನಿಯಂತ್ರಣಕ್ಕೆ ಬಂದಿರುವ ವಸ್ತು ಅಥವ ಪ್ರಾಣಿ. domesticated animal. ವಾ: ನಾಯಿ ಕೈಕುಂಜಿ ಆಗುಟು.

ಕೈಕುರೆ /*kaikurɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೈಕೆಸ್ರ್ /*kaikɛsri*/ ನಾವಿ. 1. ದುಡಿಮೆ, 2. ಪರಿಶ್ರಮ, 3. ಕೈಕೆಸರು. 1. labour, 2. hard work, 3. toil. ವಾ: ಕೈಕೆಸ್ರ್ ಆದರೆ ಬಾಯ್ಗೆ ಮೊಸ್ರ್ ಸಿಕ್ಕುದು, ಬಜ್ಜಪಟ್ಟ್ ಕೆಲ್‌ಸ ಮಾಡಿರೆ ಅಲ ಸುಕ ಸಿಕ್ಕುದು.

ಕೈಕೊಡು /*kaikɔḍu*/ ನಾ. 1. ತಪ್ಪಿಸಿಕೋ, 2. ಜವಾಬ್ದಾರಿಯಿಂದ ಜಾರಿಕೋ. 1. to escape, 2. to avoid responsibility. ವಾ: ಅಂವ ಅರ್ದಕ್ಕೆ ಕೈಕೊಡ್ದು ನೋಡಿಕ.

ಕೈಗಡ /*kaigaḍa*/ ನಾ. ಕೈಸಾಲ. loan without any

security. ವಾ: ಅಂವಂಗೆ ಕೈಗಡ ಸುಮಾರ್ ಇತ್ತ್‌ಗಡ.

ಕೈಗುಣ /*kaiguṇa*/ ನಾ. ಕೊಟ್ಟ ಮದ್ದು ಒಮ್ಮೆಲೇ ಫಲಿತವಾಗುವ ಗುಣ. the immediate positive result of a medicine. ವಾ: ಆ ಡಾಕ್ಟ್ರ ಕೈ ಗುಣ ಲಾಯ್ಕ ಉಟ್ಟು.

ಕೈಗೆಜ್ಜೆ /*kaigɛjjɛ*/ ನಾ. ಕೈಗೆ ಕಟ್ಟಿಕೊಳ್ಳುವ ಗೆಜ್ಜೆ. jiggling bell. ವಾ: ಕೈಗೆಜ್ಜೆ ಕಟ್ಟಿಕಂಡ್ ಕೊರ್ಗ ಬಾತ್.

ಕೈಗೊಂಬೆ /*kaigombɛ*/ ನಾವಿ. 1. ಒಬ್ಬ ಹೇಳಿದಂತೆ ಕೇಳುವವ, 2. ನಿರ್ಧಾರ ಕೈಗೊಳ್ಳಲು ಇನ್ನೊಬ್ಬನನ್ನು ಅವಲಂಬಿಸುವವ. 1. a puppet, 2. a person who is dependant on others for taking decisions. ವಾ: ಅಂವ ಅವರ ಕೈಗೊಂಬೆಯಾವುಟು.

ಕೈಚೋಡ್ /*kaicɔːḍɨ*/ ನಾ. ಗದ್ದೆ ಬದಿಯಲ್ಲಿ ಮಾಡುವ ಚಿಕ್ಕ ಕಾಲುವೆ. a canal near the field. ವಾ: ಕೈಚೋಡ್ ಲಿ ಸಣ್ಣ ಕಟ್ಟೆ ಕಟ್ಟೊಕು.

ಕೈತೊಳ್ತ್ /*kaitɔḷtɨ*/ ನಾ. ಕೈಯನ್ನು ತೊಳೆದನು/ಳು. he/she washed hands. ವಾ: ಉಂಡ್ ಕೈತೊಳ್ತ್. ಪ: ಕೈತೊಳ್ತ್‌ಲೆ – ಕೈ ತೊಳೆದಿಲ್ಲ

ಕೈದಳೆ /*kaidaḷɛ*/ ನಾ. ಮರ ಹತ್ತಲು ಬಳಸುವ ಹಗ್ಗ. a rope used in climbing trees. ವಾ: ಕೈದಳೆ ಹಿಡ್‌ಕಂಡ್ ಮರ ಹತ್ತಿತ್.

ಕೈದ್[1] /*kaidɨ*/ ನಾ. 1. ಕೈಯ, 2. ಹಸ್ತದ, 3. ಕರದ. of hands. ವಾ: ಕೈದ್ ಬೆರ್ಳ್ ದಪ್ಪಾಗಿ ಉಂಗುರ ಹಾಕಿಕೆ ಆದುಲೆ.

ಕೈದ್[2] /*kaidɨ*/ ನಾ. ಬೈನಾಟಿ ಭೂತದ ಎಡೆ. an offering to the Bainati deity/bhuta/spirit. ವಾ: ಇಂದ್ ಕೈದ್ ಉಟ್ಟ.

ಕೈದ್[3] /*kaidɨ*/ ಕ್ರಿ. ಮುಕ್ತಾಯ. the end. ವಾ: ಬೆಸ್ತ್‌ವಾರ ಜಾತ್ರೆ ಕೈದ್ ಆದೆ.

ಕೈನ /*kaina*/ ನಾ. 1. ಕೈಯ್ಯನ್ನು, 2. ಹಸ್ತವನ್ನು, 3. ಕರವನ್ನು. hands. ವಾ: ಉಂಡಂಗೆ ಕೈನ ಕೊಡ್ಕ್ ಕಾದ್.

ಕೈಪಡ್ಕ /*kaipaḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಸಂಪಾಜೆ ಗ್ರಾಮದ ಜಾಗ. a locality in Sampaje village in Sullia Taluk of Dakshina Kannada District.

ಕೈಪಾರೆ /*kaipaːrɛ*/ ನಾ. ಕೈಯ ತೋಳಿನ ಭಾಗ. a portion of one's arm. ವಾ: ಹಂದಿ ಕೈಪಾರೆಗೆ ಗುಂಡಾದರೆ ಅಲ್ಲೆ ಬಿದ್ದದೆ. ಪ: ಕೈಪರೆ

ಕೈಪುಂಡಿ /*kaipuṇḍi*/ ನಾ. 1. ಅಂಗೈ ಅಳತೆ, 2. ಒಂದು ಹಿಡಿ. 1. a handful, 2. a fistful. ವಾ: ಕೈಪುಂಡಿ ಜಾಗೆಗೆ ಅಣ್ಣ ತಮ್ಮಂದರ್ ದಾಯಾದಿಗಳಂಗೆ ಕಿತ್ತಾಡುವೆ.

ಕೈಪುಡ[1] /*kaipuḍa*/ ನಾ. ಭೂತದ ಚಾಕರಿ ಮಾಡುವವನನ್ನು ಕರೆಯುವ ಪಾರಿಭಾಷಿಕ ಪದ, ಇವರು ಪರಿಶಿಷ್ಟ ವರ್ಗಕ್ಕೆ ಸೇರಿದವರಾಗಿರುತ್ತಾರೆ. a person who serves the deity/bhuta/spirit, usually belongs to the scheduled castes. ವಾ: ಕೈಪುಡ ಬಂದ್ ಬಾರಿ ಹೊತ್‌ಉಗ್ಗಪ್ಪ್.

ಕೈಪುಡ[2] /*kaipuḍa*/ ನಾ. ದೂಳು ಮಣ್ಣು ಮೆತ್ತಿಕೊಂಡಿರುವವ. muddy. ವಾ: ಮಕ್ಕ ಮೊಣ್ಣುಲಿ ಆಡಿ ಕೈಪುಡಂಗಾಗೊಳೊ.

ಕೈಪೆ /*kaipɛ*/ ನಾ. ಕಹಿ. bitter. ವಾ: ಕೋಳಿದ್ ಕೈಪೆ ತೆಗ್ಗದೆ ಗೈಪು ಮಾಡಿರೆ ಕಂಯಿ ಆದೆ.

ಕೈಬಾಳ್ /*kaibaːḷɨ*/ ನಾ. ಕೈಯಲ್ಲಿ ಹಿಡಿದು ಮರವನ್ನು ಕುಯ್ಯುವ ಚಿಕ್ಕ ಹಿಡಿಕೆ ಇರುವ ಸಣ್ಣದಾದ ಗರಗಸ. a small -hand saw. ವಾ: ಕೈಬಾಳ್ ಹಿಡ್‌ಕಂಡ್ ಸಣ್ಣ ಮರನ ಕೊಯ್ಯದು.

ಕೈಬಿಲ್ಲಿರ /*kaibillira*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೈಬೆರ್ಳ್ /*kaibɛrḷɨ*/ ನಾ. ಕೈಯ್ಯಲ್ಲಿನ ಬೆರಳು. fingers. ವಾ: ಕೂಸುನ ಕೈಬೆರ್ಳ್ ಉದ್ದುದ್ದ ಅಲ.

ಕೈಮಡ /*kaimaḍa*/ ನಾ. ವೀರಮರಣ ಹೊಂದಿದ ಕುಟುಂಬದ ಹಿರಿಯ ಆತ್ಮಗಳಿಗೆ ಐನ್ ಮನೆ ಬಳಿ ನಿರ್ಮಿಸಿರುವ ಪುಟ್ಟ ಆಲಯ. a small temple situated next to the Ainmane (ancestral house) for the people who died performing heroic deeds. ವಾ: ಕೈಮಡದತ್ರ ಹೋಬಡ.

ಕೈಮರ್ಗಿಲ್ /*kaimargilɨ*/ ನಾ. ಸಾಂಬಾರು ತೋಡಿ ಇಡಲು ಬಳಸುವ ಪಾತ್ರೆ. a small vessel used to

transfer stew from a larger vessel. ವಾ: ಕೈಮರ್ಗಿಲ್‌ಲಿ ಆಂಬರ ಗೋಂಚ್.

ಕೈಮೀನ್ /*kaimi:nɨ*/ ನಾ. 1. ಹೊಳೆಗಳಲ್ಲಿ ದೊರೆಯುವ ಸಣ್ಣ ಜಾತಿಯ ಮೀನು, 2. ಒಣಗಿದ ಮೀನು. 1. a small fish found in rivers, 2. dried fish. ವಾ: ಕೈಮೀನ್‌ದ್ ಗೈಪುನ ಮಳೆಗಾಲಲಿ ರೊಟ್ಟಿಗೆ ಮಾಡೊಕು ಬಾರಿ ರುಚಿಯಾದೆ.

ಕೈಮುಗ್ದ್ /*kaimugdɨ*/ ನಾ. 1. ಕೈಮುಗಿದು, 2. ಕೈ ಜೋಡಿಸಿ. 1. to fold hands, 2. to join hands. ವಾ: ದೇವ್ರಿಗೆ ಕೈಮುಗ್ದ್ ಬಾ.

ಕೈಮುಟ್ಟಿ /*kaimuṭṭi*/ ನಾ. 1. ನೆಲವನ್ನು ಗುದ್ದಿ ಗಟ್ಟಿ ಮಾಡಲು ಬಳಸುತ್ತಿದ್ದ ಮರದ ಸಣ್ಣ ಸಾಧನ, 2. ಆನೆಮುಟ್ಟಿ. a rammer. ವಾ: ಕೈಮುಟ್ಟಿಲಿ ನೆಲನ ಗುದ್ದಿ ಗಟ್ಟಿ ಮಾಡ್ದು.

ಕೈಮೊರೆ /*kaimɔ:rɛ*/ ನಾ. ಕೈ ಮುಗಿದು ಕೇಳಿಕೊ. to request with folded hands. ವಾ: ದೇವ್ರ ಮುಂದೆ ಕೈಮೊರೆಯಿಟ್ಟ್ ಬೇಡಿಕ.

ಕೈಯಾಡ್ಸ್ /*kaiya:ḍsɨ*/ ಕ್ರಿ. 1. ಭಾಗವಹಿಸು, 2. ಪಾಲ್ಗೊಳ್ಳು, 3. ಪಾತ್ರಗೊಳ್ಳು, 1. to participate, 2. to take part, 3. to play a role. ವಾ: ಅವು ಎಲ್ಲರ ವಿಸಯಕೆ ಕೈಯಾಡ್‌ಸುದು.

ಕೈಯಾರೆ /*kaiya:rɛ*/ ನಾ. ತನ್ನದೇ ಕೈಗಳಲ್ಲಿ. in one's hand. ವಾ: ನನ್ನ ಕೈಯಾರೆ ಕೊಟ್ಟದ್.

ಕೈಯಾಲೆ /*kaiya:lɛ*/ ನಾ. 1. ಜಗಲಿ, 2. ಹೊರಾಂಗಣ. 1. a sit-out in front of the house, 2. a veranda. ವಾ: ಕೈಯಾಲೆಲಿ ಮಕ್ಕ ಆಡಿಕಂಡಿದ್ದೊ.

ಕೈಯಿ /*kaiyi*/ ನಾ. 1. ಪೈರು, 2. ತೆನೆ. 1. crop, 2. an ear of corn. ವಾ: ಬತ್ತದ ಕೈ ಗಾಳಿಗೆ ಬೊಗ್ಗಿ ಹೋತ್. ಪ: ಕೆಯಿ(ತು)

ಕೈಯಿಸ್ /*kaiyisɨ*/ ನಾ. 1. ಕೈ ಇಡು, 2. ಪ್ರಮಾಣ ಮಾಡು. 1. to put one's hand, 2. to promise. **ಎದೆ ಮೇಲೆ ಕೈಯಿಸಿ ಹೇಳ್(ನು).** ವಾ: ಸುಳ್ಳು ಹೇಳದಿದ್ದರೆ ದೇವ್ರ ಮುಂದೆ ಕೈಯಿಸ್.

ಕೈಯೆಣ್ಣೆ /*kaiyɛṇṇɛ*/ ನಾ. 1. ಹರಳೆಣ್ಣೆ, 2. ಔಡಲೆಣ್ಣೆ, 3. ಹರಳು ಬೀಜದಿಂದ ತೆಗೆದ ಎಣ್ಣೆ. castor oil. ವಾ: ಕೈಯೆಣ್ಣೆ ತಲೆಗೆ ತಂಪ್.

ಕೈಲಿ /*kaili*/ ಕ್ರಿ. ಕೈಯಲ್ಲಿ. in the hand. ವಾ: ಅಕ್ಕಿ ರೊಟ್ಟಿನ ಕೈಲಿ ತಟ್ಟಿ ಮಾಡ್ದು. ಪ: ಕೈಲೇ – ಕೈಯಲ್ಲೇ

ಕೈಲಿ ಹರ್‌ಯೊದುಲೆ /*kaili harɨyodulɛ*/ ನಾ. 1. ಅಶಕ್ತ, 2. ಏನೂ ಮಾಡಲು ಆಗದಿರುವ ಸ್ಥಿತಿ, 3. ಬಲಹೀನ, 4. ದುರ್ಬಲವಾದ, 5. ಅಸ್ವಸ್ಥತೆಯಿಂದ ಕೈಯ ಸಹಾಯದಿಂದ ಚಲಿಸುವುದು. 1. a weak person, 2. a situation of helplessness, 3. weakness, 4. weak, 4. to use hands to move due to weakness. ವಾ: ಕೈಲಿ ಹರ್‌ಯೊದುಲೆ ಆದ್‌ರೂ ಕೆಲ್‌ಸ ಮಾಡಿನೆತ ಬಾದು. ಪ: ಕೈಲಿ ಹರೆದಿದ್ದರೂ – ಏನೂ ಮಾಡಲಾಗದಿದ್ದರೂ

ಕೈಲಿಟ್ಟು /*kailiṭṭu*/ ನಾ. ಕೈಯ್ಯಲ್ಲಿದೆ. in the hand. ವಾ: ವಸ್ತ್ರ ಕೈಲಿಟ್ಟು.

ಕೈಲಿತ್ತ್ /*kailittɨ*/ ನಾ. ಕೈಯ್ಯಲ್ಲಿ ಇತ್ತು. was in the hand. ವಾ: ಸದ್ಯ ದುಡ್ಡು ಕೈಲಿತ್ತ್.

ಕೈಲ್ ಮುಹೂರ್ತ /*kailɨ muhu:rta*/ ನಾ. ಸೆಪ್ಟಂಬರ್ ಮೂರನೇ ತಾರೀಖಿನಂದು ಕೊಡಗಿನವರು ಆಚರಿಸುವ ರೈತ ಮಿತ್ರರ ಒಂದು ಪ್ರಸಿದ್ಧವಾದ ಆಯುಧ ಪೂಜೆಯ ಹಬ್ಬ. the festival of arms, celebrated on 3 September by the farmers of Kodagu. ವಾ: ಕೈಲ್ ಮುಹೂರ್ತ ಹಬ್ಬಲಿ ಕೃಸಿಗೆ ಬಳ್ಸಿದ ನೇಗ್‌ಲ್, ನೊಗ, ಕೊಟ್ಟುಕತ್ತಿ, ಕೋವಿನ ತೊಳ್ದ್ ಮಡಿ ಮಾಡಿ ಪೂಜೆ ಮಾಡಿವೆ, ಈ ದಿನದ ವಿಸೇಸ ಅಡ್ಗೆತೇಳಿರೆ ಹಂದಿಮಾಸದ ಗೈಪು ಮತ್ತೆ ಬಟ್ಲಿಟ್ಟ್.

ಕೈವಸ್ತ್ರ /*kaivastra*/ ನಾ. ಕರವಸ್ತ್ರ. handkerchief. ವಾ: ಮೊದ್ವೆಲಿ ಸಾಸ್ತ್ರ ಮಾಡಿಕನ ತಲೆಗೆ ಕೈವಸ್ತ್ರ ಹಾಕಂಡವೆ.

ಕೈಶಾಲೆ /*kaisa:le*/ ನಾ. ಶಾಲೆಯ ಆವರಣ. premises of school. ವಾ: ಎಲ್ಲ ಮಕ್ಕ ಸೇರಿಕಂಡ್ ಕೈಶಾಲೆನ ಗುಡ್ಸಿ ರಂಗೊಲೆ ಹಾಕಿದೊ.

ಕೈಸಾಂಗ್ /*kaisa:ŋgɨ*/ ನಾ. ಪಾಲ ದಾಟುವಾಗ ಹಿಡಿದುಕೊಳ್ಳಲು ಬಳಸುವ ಆಧಾರ ಮರ. a supporting wooden strcutre. ವಾ: ಪಾಲ ದಾಟಿಕನ ಕೈಸಾಂಗ್ ಹಿಡ್ಕಂಡ್ ಹೋದು.

ಕೈಹಾಕ್ /*kaiha:kɨ*/ ನಾ. 1. ಪಾಲ್ಗೊಳ್ಳುವುದು, 2. ಹಿಡಿದ ಕೆಲಸ. 1. to participate, 2. a task that

one is perfroming. ವಾ: ಅಂವ ಕೈ ಹಾಕಿದ ಕೆಲ್‌ಸ ಎಲ್ಲ ಒಳ್ಳೆದಾವುಟು.

ಕೈಹುಳಿ /*kaihuḷi*/ ನಾ. ಹೆರಳೆಕಾಯಿ. citron lime. ವಾ: ಉಂಬಕೆ ಕೈಹುಳಿ ಪೊಜ್ಜಿ ಒಂದಿದ್ರೆ ಸಾಕ್. ಪ: ಕೈಂಹುಳಿ. **ಕೈಹುಳಿ ಮರ** /*kaihuḷi mara*/ 1. ಹೆರಳೆಕಾಯಿ, 2. ಉಪ್ಪಿನಕಾಯಿ ಹಾಗು ಶರಬತ್ತು ಮಾಡಲು ಬಳಸುವ ಹುಳಿ ರುಚಿಯ ಕಾಯಿ ಅಥವಾ ಹಣ್ಣು. 1. citron lime, 2. a citrus fruit used in making pickles and juce. ವಾ: ಕೈಹುಳಿ ಮರಕೆ ಹತ್ತಿಕಾಗದಿದ್ರೆ ಕೋಲ್ ತಕಂಡ್ ಬಡ್ಕ್.

ಕೊಂಕಣ /*koŋkaṇa*/ ನಾ. ಪಶ್ಚಿಮ ಭಾರತದ ಒಂದು ಪ್ರದೇಶ ಮತ್ತು ಆ ಪ್ರದೇಶದವನು. a person from the western coast/part of india. **ಕೊಂಕಣ ಸುತ್ತಿ ಮೈಲಾರ ಹೋದಂಗೆ(ಗಾ).** ವಾ: ತೆಂಕಣ ದೇಸಕೆ ಹೋಗಿ ಕೊಂಕಣ ಕೆಟ್ಟತ್.

ಕೊಂಕನಾಳಿ /*koŋkana:ḷi*/ ನಾ. ಕೋಳಿಯ ಕುತ್ತಿಗೆಯ ಭಾಗ. neck of a hen. ವಾ: ಕೋಳಿದ್ ಕೊಂಕನಾಳಿನ ಕೊಯ್ಯದು.

ಕೊಂಕಿಣಿ ದೈ /*koŋkiṇi giḍa*/ ನಾ. ಪಲ್ಲಿಸೊಪ್ಪು ಗಿಡದಂತೆ ಇರುವ ಗಿಡ. a variety of plant. ವಾ: ಕೊಂಕಿಣಿ ದೈದ ಕೊಂಬೆನ ಮುರ್‌ಕಂಡ್ ಮಕ್ಕ ಹಿಡಿ ಹಿಡಿ ಬೂತ ಕೊಂಕ್‌ಣಿ ಬೂತತ ಹೇಳಿಕಂಡ್ ಆಡಿವೆ.

ಕೊಂಕುಮಾತ್ /*kɔŋkuma:tɨ*/ ನಾ. ವಿನಾಕಾರಣ ತಪ್ಪು ಕಂಡುಹಿಡಿದು ಹಂಗಿಸಿ ಹೇಳುವ ಮಾತು. unnecessary finding faults with others and insulting them. ವಾ: ಎಸ್ಟೆ ಏನೇ ಕೆಲ್‌ಸ ಮಾಡಿರು ಕೊಂಕುಮಾತ್ ತೊಪ್ಪುಲೆ.

ಕೊಂಕ್ /*kɔŋkɨ*/ ನಾ. 1. ಕೊಂಕು, 2. ವಕ್ರ, 3. ಓರೆ, 4. ಡೊಂಕು, 5. ವಕ್ರ ನುಡಿ, 6. ಅಣಕವಾಡು. 1. wicked, 2. crooked, 3. slant, 4. bent, 5. sarcastic, 6. mock. ವಾ: ಅವುಳು ಕೊಂಕ್ ಮಾತಾಡ್ದರಲಿ ಎತ್ತಿದ ಕೈ. ಪ: ಕೊಂಕ್ ಮಾತ್ – ವಿರೋದ ಮಾತು

ಕೊಂಕ್‌ಣಿ[1] /*koŋkɨṇi*/ ನಾ. ಕೊಂಕಣಿ. Konkani, a language. ವಾ: ಅವು ಕೊಂಕ್‌ಣಿಗ.

ಕೊಂಕ್‌ಣಿಕೆ /*koŋkṇikɛ*/ ನಾ. ಪಲ್ಲಿಸೊಪ್ಪಿನಂತೆ ಕಂಡುಬರುವ ಸಣ್ಣ ಸೊಪ್ಪಿನ ಔಷಧಿ ಗಿಡ. a plant resembling coral berry.

ಕೊಂಗ ಮೊರ /*koŋga mora*/ ನಾ. 1. ಭತ್ತ ಬೀಸುವ ಮೊರ, 2. ಭತ್ತದ ಧೂಳು ಬೀಸುವ ಸಾಧನ. a winnowing fan. ವಾ: ಕೊಂಗ ಮೊರ ಎಲ್ಲಿ? **ಕೊಂಗಮುರ** /*koŋgamura*/ ಭತ್ತದ ಧೂಳನ್ನು ತೆಗೆಯುವುದು. removing dust from the paddy. ವಾ: ಕೊಂಗಮುರಲಿ ಬತ್ತನ ಹೊಡ್ಕುದು.

ಕೊಂಟ್ /*konṭi*/ ಕ್ರಿ. 1. ಕೊಡು, 2. ಸಲ್ಲಿಸು, 3. ನೀಡು. 1. to give, 2. to submit, 3. to give. ವಾ: ನನ್ನ ಪುಸ್ತಕ ಕೊಂಟ್.

ಕೊಂಡಳ /*konḍaḷa*/ ನಾ. 1. ದನಗಳಿಗೆ ಮೂಗಿಗೆ ಹಾಕುವ ಒಂದು ಬಗೆಯ ದಾರ, 2. ವೃತ್ತಾಕಾರದ ಮೂಗುತಿ. 1. reins to control the cattle, 2. a circular nose ring. ವಾ: ಹಂದಿ ಮೂಕ್‌ಗೆ ಕೊಂಡಳ ಹಾಕೊಟೊ.

ಕೊಂಡಾಟ /*konḍa:ṭa*/ ನಾವಿ. 1. ಮುದ್ದು; ಪ್ರೀತಿ; ವಾತ್ಸಲ್ಯ, 2. ಪ್ರಶಂಸೆ, 3. ಬೆಡಗು, 4. ವಯ್ಯಾರ, 5. ಒನಪು, 6. ಮಂಕ್‌ಟೆ. 1. affection; love; fondling, 2. praise, 3. eulogy, 4. showiness, 5. coquetry, 6. Coquettishness. **ಒಂದಕೆ ಕೊಂಡಾಟ ಎರಡಕ್ಕೆ ಬಂಡಾಟ ಮೂರಕ್ಕೆ ಕೋಲಾಟ(ಗಾ).** ವಾ: ಕೊಂಡಾಟ ಜಾಸ್ತಿ ಆದ್ರೆ ಮಕ್ಕ ಹಟ ಮಾಡಿ ಹಾಳಾದವೆ. ಪ: ಮಂಗಟೊ(ತು)

ಕೊಂಡಾಡ್ /*konḍa:ḍɨ*/ ನಾ. 1. ಹೊಗಳು, 2. ಮುದ್ದಿಸು, 3. ಪ್ರೀತಿಸು, 4. ವ್ಯಕ್ತಪಡಿಸು. 1. to praise, 2. to pamper, 3. to love, 4. to express. ವಾ: ನನ್ನ ಸೋಬಾನೆ ಪದ ಕೇಳಿ ಎಲ್ಲೊವು ಕೊಂಡಾಡ್‌ದೊ.

ಕೊಂಡಾಳ /*konḍa:ḷa*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೊಂಡಿ /*konḍi*/ ನಾ. 1. ಒಂದಕ್ಕೊಂದು ಸೇರಿಸುವ ಕೊಕ್ಕೆ, 2. ಅಂಗಿಯ ಗುಂಡಿ. 1. hook, 2. button. ವಾ: ಚೆಡ್ಡಿನ ಕೊಂಡಿ ಬಿದ್ದೋವುಟು. ಪ: ಗುಬ್ಬಿ

ಕೊಂಡಿ ಹುಳ /*konḍi huḷa*/ ನಾ. 1. ಮಾನವನ ಶರೀರದಲ್ಲಿರುವ ಹುಳು, 2. ಗಿಡದ ಚಿಗುರೆಲೆ ಹಾಗು ಬೀಜ ಕೋಶಗಳನ್ನು ತಿನ್ನುವ ಹುಳು. 1. a worm in

the body, 2. a worm which eats tendrils and shoots. ವಾ: ಹಸ್ರ್ ಬಣ್ಣಲಿರೊ ಕೊಂಡಿ ಹುಳ ದೈನ ಮೊಗ್ಗ್, ಹೂನ ತಿಂದ್ ಹಾಕಿದೆ.

ಕೊಂಡೆ /*koṇḍɛ*/ ನಾ. ಹಾಲನ್ನು ಅಳತೆ ಮಾಡುವ ಸಾಧನ. a measure to check the quantity of milk. **ಅಂಡೆಗೂ ಸಿಕ್ಕಿಕಿಲೆ, ಕೊಂಡೆಗೂ ಸಿಕ್ಕಿಕಿಲೆ?(ಗಾ).** ವಾ: ಸತ್ತ ಎಮ್ಮೆಗೆ ಹತ್ತ್ ಕೊಂಡೆ ಹಾಲ್.

ಕೊಂಡೆ ಕಟ್ಟುದು /*koṇḍɛ kaṭṭudu*/ ಕ್ರಿವಿ. 1. ಕೂದಲನ್ನು ವೃತ್ತಾಕಾರವಾಗಿ ಕಟ್ಟುವುದು, 2. ಗೊಂಡೆ ಕಟ್ಟು, 3. ಕೂದಲನ್ನು ತುರುಬು ಕಟ್ಟು, 4. ಜಡೆಯ ಮುಡಿ. tying the hair in the shape of a coil. ವಾ: ಅಕ್ಕ ಯಾಗೊಳು ಕೊಂಡೆ ಕಟ್ಟುದು.

ಕೊಂಡೆಪ್ಪಾಡಿ /*koṇḍeppa:ḍi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಪೆರುವಾಜೆ ಗ್ರಾಮದ ಜಾಗ. a locality in Peruvaje village in Sullia Taluk of Dakshina Kannada District.

ಕೊಂಡೆಬಾಯಿ /*koṇḍeba:yi*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಮರಪಡ್ನೂರು ಗ್ರಾಮದ ಜಾಗ. 1. family, 2. lineage, 3. sa locality in Amarapadnuru village in Sullia Taluk of Dakshina Kannada District.

ಕೊಂತಣ ಮಂತಣ /*kontaṇa mantaṇa*/ ನಾವಿ. 1. ತಾಟಕಿತನ, 2. ದುಷ್ಟತನ, 3. ಮಾತಿಗೆ ಮುಂಚೆ ಜಗಳಕ್ಕೆ ನಿಲ್ಲುವ ಸ್ವಭಾವ. 1. quarrelsome, 2. evil, 3. quarrelsome. ವಾ: ನೀ ಒಮ್ಮೆ ಅವುಳ ಕೊಂತಣ ಮಂತಣ ಆಟಗಳ ನೋಡೊಕು.

ಕೊಂತಣ[1] /*kontaṇa*/ ಕ್ರಿವಿ. ಹಳ್ಳಿಯ ಸಣ್ಣಪುಟ್ಟ ತಾಂತ್ರಿಕ ಕೆಲಸ. technical/mechanical work in the village. ವಾ: ಕೊಂತಣ ಕೆಲ್ಸ ಆತ? ಪ: ಕೊಂತಾಣ

ಕೊಂತಣ[2] /*kontaṇa*/ ನಾ. 1. ವಿಚಿತ್ರ ವೇಷ ಹಾಕು. to wear mysterious costumes. ವಾ: ಅದ್ ಒಮ್ಮೊಮ್ಮೆ ಎಂತೆಲ್ಲ ಕೊಂತಣ ಕಟ್ಟುದು.

ಕೊಂತಿ /*konti*/ ನಾವಿ. 1. ಮೂತಿ ಚೂಪಾಗಿರುವ ಮೀನು, 2. ಅತೀ ತೆಳ್ಳಗಿನ ಎತ್ತರದ ಸಪೂರದ ಹುಡುಗಿಗೆ ತಮಾಷೆಗೆ ಮಾಡುವ ಪದ. 1. a variety of fish with sharp head, 2. a term used to describe a lean/ girl. ವಾ: ಕೊಂತಿ ಮೀನ್‌ಲಿ ಮುಳ್ಳು ಕಮ್ಮಿ.

ಕೊಂದಾಳ /*konda:ḷa*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕೊಲ್ಲಮೊಗ್ರು ಗ್ರಾಮದ ಜಾಗ. a locality in Kollamogru village in Sullia Taluk of Dakshina Kannada District.

ಕೊಂದೆ ಮರ /*konde mara*/ ನಾ. 1. ಕಕ್ಕೇಮರ, 2. ಅರಗಿನ ಮರ. 1. a tree with clusters of yellow flowers and long round legumes, Cassia fistula (Papilionaceae), 2. the pudding pipe tree. ವಾ: ಕೊಂದೆ ಮರಲಿ ಅರ್‌ಸಣ ಬಣ್ಣದ ಹೂಗ ಬುಟ್ಟದೆ.

ಕೊಂದೆ ಸೊಪ್ಪು /*kɔndɛ soppu*/ ನಾ. 1. ಕೆಂಚರಾಯನ ಆವಾಹನೆ ಸೊಪ್ಪು, 2. ಇದರ ಬೇರು ಜ್ವರಕ್ಕೆ ಹಾಗೂ ಮಲಭೇದಿ ತಡೆಯಲು ಉಪಯುಕ್ತ ತೊಗಟೆ ಹಾಗೂ ಎಲೆಗಳ ಕಷಾಯ ಬೀಗು, ಕಾಮಾಲೆ, ಬೊಕ್ಕೆ ಮೊದಲಾದುವುಗಳ ಶಮನಮಾಡುತ್ತದೆ. 1. a variety of herbal plant, 2. the roots of this plant cure fever and constipation, a decoction from the bark and leaf cures skin rashes, etc. ವಾ: ಕೊಂದೆ ಸೊಪ್ಪು ಮೊದ್ದ್ ಮಾಡಿಕೆ ಒಳ್ಳೆದ್.

ಕೊಂದ್ /*kondɨ*/ ನಾ. 1. ಕೊಂದು, 2. ಸಾಯಿಸಿ, 3. ಜೀವ ಹರಣ ಮಾಡಿ. to kill. ವಾ: ಹಾಂತೆನ ಮೆಟ್ಟಿ ಕೊಂದ್ ಹಾಕಿತ್. ಪ: ಕೊಂದೆ – ಕೊಂದೆನು, ಸಾಯಿಸಿದೆ; ಕೊಂದೊ – ಕೊಂದರು; ಕೊಂದೊಟ್ಟು – ಕೊಂದಿದ್ದಾನೆ/ಳೆ; ಕೊಂದೊಳೊ – ಕೊಂದಿದ್ದಾರೆ; ಕೊಂದ್ – ಕೊಂದು; ಕೊಂದ್‌ದ್ – ಕೊಂದಿದ್ದು. **ಕೊಂದ** /*konda*/ ನಾ. 1. ಕೊಂದೆಯಾ? Did you kill? ವಾ: ಕೋಳಿ ಕೊಂದ? ಪ: ಕೊಂದತ್ – ಕೊಂದನು/ಳು; ಕೊಂದತ್‌ಗಡ – ಕೊಂದನಂತೆ; ಕೊಂದದಲ್ಲಂತ – ಕೊಂದಿದಲ್ಲಂತ; ಕೊಂದದ್ – ಕೊಂದಿದ್ದು; ಕೊಂದನೆ – ಕೊಲ್ಲುತ್ತೇನೆ; ಕೊಂದರೆ – ಕೊಂದರೆ; ಕೊಂದವೆ – ಕೊಲ್ಲುತ್ತಾರೆ. **ಕೊಂದುಕೊಟ್ಟರೆ** /*kɔndukoṭṭarɛ*/ ನಾ. ಸಾಯಿಸಿಕೊಟ್ಟರೆ. if you kill. ವಾ: ಕೋಳಿನ ಕೊಂದುಕೊಟ್ಟರೆ ತಕಂಡೋನೆ. **ಕೊಂದುಬುಡ್ತಿತ್ತಲ್ಲ**

/kondubuḍtittallai/ ನಾ. 1. ಕೊಂದು ಬಿಡುತ್ತಿತ್ತಲ್ಲ, 2. ಕೊಂದು ಬಿಡುತ್ತಿದ್ದನಲ್ಲ. 1. it must have killed, 2. he must have killed. ವಾ: ಹಸ್ ಹಗ್ಗ ಸುತ್ತಿ ಎಳ್ದ್ ನನ್ನ ಬೀಳ್ಸಿ ಕೊಂದುಬುಡ್ತಿತ್ತಲ್ಲ, ಸೊಲ್ಪದರ್‌ಲಿ ತೊಪ್ಪಿತ್.

ಕೊಂಪುಳಿ */kompuḷi/* ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮರ್ಕಂಜ ಗ್ರಾಮದ ಜಾಗ. 1. family, 2. lineage, 3. a locality in Markanja village in Sullia Taluk of Dakshina Kannada District.

ಕೊಂಬ ಕಾಲ್ */komba ka:li/* ನಾ. ಏಡಿಯ ಕಚ್ಚುವ ದೊಡ್ಡ ಕಾಲು. sting of a scrab. ವಾ: ಕೊಂಬಕಾಲ್ ಮುರ್‌ತ್.

ಕೊಂಬ[1] */komba/* ನಾ. 1. ನಾಯಕ, 2. ಆನೆಗಳ ನಾಯಕ. 1. treasure, 2. wealth, 3. riches, 4. wealth, 5. a hidden treasure, 6. a treasure. ವಾ: ಕೊಂಬನ ಹಿಂದೆ ಎಲ್ಲ ಆನೆಗ ಹೋದವೆ.

ಕೊಂಬ[2] */Komba/* ನಾ. 1. ಸೊಕ್ಕಿದ ಕುರಿ, 2. ಗಂಡು. 1. fully grown sheep, 2. male. ವಾ: ಕೊಂಬ ಕಡ್‌ವೆ ಓಡ್ತ್.

ಕೊಂಬಂಡ */kombaṇḍa/* ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೊಂಬಚ್ಚೇಳ್ */kombacce:ḷi/* ನಾ. 1. ಚೇಳು, 2. ದೊಡ್ಡಜಾತಿಯ ಕಪ್ಪು ಅಥವಾ ಕಡು ನೀಲಿಬಣ್ಣದ ಚೇಳು. 1. a scorpion, 2. an insect with poison in its sting. ವಾ: ಕೊಂಬಚ್ಚೋಳ್ ಕಚ್ಚಿರೆ ತುಂಬ ಸಿಡ್ತ ಆದೆ. ಪ: ಕೊಂಬಚೋಳ್ – ಕೊಂಬು ಇರುವ ಚೇಳು; ಕೊಂಬಾರ್ಚೇಳ್ – ವಿಷದ ಚೇಳು

ಕೊಂಬಟೆ ಹಲ್ಲ್ */kombaṭɛ halli/* ನಾ. ಹಲ್ಲಿನ ಮೇಲೆ ಹಲ್ಲು ಇರುವುದು. overlapping teeth. ವಾ: ಕೊಂಬಟೆ ಹಲ್ಲ್ ಬರ್‌ತುಟ್ಟು. ಪ: ಕೊಂಬಟೆ – ಒಂದರ ಮೇಲೊಂದು ಇರು

ಕೊಂಬಡ್ರ */kombaḍra/* ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೊಂಬತ್ತ */kombatta/* ನಾ. ದೊಡ್ಡದು. a big one. ವಾ: ದೊಡ್ಡ ಕೊಂಬತ್ತ ಎಸಂಡ್ ಸಿಕ್ಕಿತ್.

ಕೊಂಬನ */kombana/* ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೊಂಬಬೆರ್ಳ್ */kombabɛrḷi/* ನಾ. 1. ಹೆಬ್ಬೆರಳು, 2. ಅಂಗುಷ್ಟ, 3. ವಸ್ತುಗಳನ್ನು ಹಿಡಿಯಲು ಮತ್ತು ಇತರ ಕಾರ್ಯ ನಿರ್ವಹಿಸಲುಉಪಯುಕ್ತ, 4. ಹೆಬ್ಬೆಟ್ಟು. a thumb (finger). ವಾ: ಕೊಂಬಬೆರ್ಳ್ ಇಲ್ಲರೆ ಯಾವ ಕೆಲ್ಸನೂ ಮಾಡಿಕೆ ಕಸ್ಟ.

ಕೊಂಬರಡ್ಕ */kombaraḍka/* ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಜ್ಜಾವರ ಗ್ರಾಮದ ಜಾಗ. a locality in Ajjavara village in Sullia Taluk of Dakshina Kannada District.

ಕೊಂಬರೆ */kɔmbarɛ/* ನಾ. 1. ಕೋಣೆ, 2. ಕೊಠಡಿ. a room. **ಹಾದರ ಗಿತ್ತಿ ನಡುಮನೆ ಲಾಯಿಕ, ಗರತಿ ಮನೆ ಕೊಂಬರೆ ಪರ್ಲು(ಗಾ).** ವಾ: ಕೊಂಬಾರೆ ಕರಿ ಕತ್ತಲೆ ಹೆಂಗೆ ಹೋದು. ಪ: ಕೊಂಬಾರೆ – ಕೋಣೆ

ಕೊಂಬಾರನ */komba:raṇa/* ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೊಂಬು ಕುಡಿಯೊದು */kɔmbu kuḍiyodu/* ನಾವಿ. ಚಿಕ್ಕ ಮಕ್ಕಳ ಭಾಷೆಯಲ್ಲಿ ಹಾಲು ಕುಡಿಯುವುದು ಎಂಬರ್ಥ. expression used by children to mean that they drink milk. ವಾ: ಕೂಸು ಅಮ್ಮನ ಮೊಮ್ಮ ಹಿಡ್‌ಕಂಡ್ ಕೊಂಬು ಕುಡಿಯೊದು. ಪ: ಕೊಂಬು ಊದುದು

ಕೊಂಬು ಮಿಳ್ಳಿ */kɔmbu miḷḷi/* ನಾವಿ. ಮದುವೆ ಶಾಸ್ತ್ರದಲ್ಲಿ ಕಳಸ ಕನ್ನಡಿ ಹಿಡಿಯುವಾಗ ಕಂಚಿನ ತಟ್ಟೆಯಲ್ಲಿ ಇಡುವ ಕೊಂಬಿರುವ ಕಮಂಡಲು, ಇದರಲ್ಲಿ ಹಾಲನ್ನು ಹಾಕಿರುತ್ತಾರೆ. a small container of water with a handle and a nozzle. ವಾ: ಮೊದುವೆ ಸಾಸ್ತ್ರಲಿ ಕೊಂಬು ಮಿಳ್ಳಿನೆ ಬೇಕಾದ್. ಪ: ಕೊಂಬುಗಿಂಡಿ

ಕೊಂಬು ವಾಲಗ */kombu va:laga/* ನಾ. ಕೋಡು ಅಥವಾ ಕೊಂಬಿನಂತಹ ವಾಲಗ, ಯುದ್ಧ ಸಮಯದಲ್ಲಿ ಊದಲಾಗುತ್ತಿತ್ತು. a horn, a two and half feet, letter "C" shaped musical instrument made of brass. ವಾ: ಯುದ್ದ ಸುರಾಕೆ ಮುಂದೆ ಕೊಂಬು ವಾಲಗ ಬಾಪುತಿದ್ದೊ.

ಕೊಂಬು ಹಿಡಿ */kombu hiḍi/* ನಾ. 1. ಆನೆಯ ಘೀಳು,

2. ಆನೆಯ ಕೂಗು. elephant's trumpet. ವಾ: ಆನೆಗ ಕೊಂಬು ಹಿಡಿಯದು ಕೇಳಿರೆ ಓಡಿಕಾದುಲೆ, ಕಾಲ್ ನಡ್‌ಗಿದೆ.

ಕೊಂಬು ಹಿಡ್ಯೊದು /*kombuhiḍyodu*/ ನಾ. ಬಿಕ್ಕಿ ಅಳುವುದು, ಬೈಗುಳ ಪದ. crying inconsolably. ವಾ: ಏ ಕೂಸು ನಿನ್ನ ಕೊಂಬು ಹಿಡ್ಯೊದರ ನಿಲ್ಸ್.

ಕೊಂಬು[1] /*kɔmbu*/ ನಾ. 1. ಕೋಡು ಅಥವಾ ಕೊಂಬಿನಂತಹ ವಾಲಗ, ಯುದ್ಧ ಸಮಯದಲ್ಲಿ ಊದಲಾಗುತ್ತಿತ್ತು. a horn, letter "C" shaped musical instrument, played during the war. ವಾ: ಹಿಂದೆನ ಕಾಲಲಿ ಕೊಂಬು ಉರ್ಗಿ ಯುದ್ಧ ಸುರು ಮಾಡ್‌ತಿದ್ದೊ.

ಕೊಂಬು[2] /*kɔmbu*/ ನಾ. ತೆಂಗಿನ ಮರದ, ತಾಳೆ ಮರದ , ಈಚಲು ಮರದ ಹಿಂಗಾರ, ಈ ಕೊಂಬಿನಿಂದ ಸೇಂದಿ ತೆಗೆಯುವರು. flower of coconut tree/ palm tree. The part from where toddy is extracted. ವಾ: ಕೊಂಬುಲಿ ಬೈನೆ ಕಳ್ಳ್ ತೆಗೆದು.

ಕೊಂಬು[3] /*kɔmbu*/ ನಾ. ಕಂಚು ಅಥವಾ ಹಿತ್ತಾಳೆಯಲ್ಲಿ ತಯಾರಾದ ಊದುವ ವಾದ್ಯ, ಕೊಂಬಿನಂತೆ ಬಾಗಿರುತ್ತದೆ, ಎರಡೂವರೆ ಅಡಿ ಉದ್ದವಿರುತ್ತದೆ. a horn, a two and half feet, letter "C" shaped musical instrument made of brass. ವಾ: ಮೊದುವೆಲಿ ಕೊಂಬು ಉರ್ಗುವೆ.

ಕೊಂಬು[4] /*kɔmbu*/ ನಾ. 1. ಜಂಭ, 2. ಗರ್ವ, 3. ಒಣ ಆಡಂಬರ, 4. ತನ್ನ ಬಗ್ಗೆ ತಾನೆ ಹೆಮ್ಮೆ ಪಡು, 5. ಅಹಂ. 1. pride, 2. vanity, 3. ostentatiousness, 4. ego, 4. egotism. ವಾ: ಅವನತ್ರ ದುಡ್ಡು ಉಟ್ಟುತ ಕೊಂಬು.

ಕೊಂಬು[5] /*kɔmbu*/ ನಾ. 1. ಪ್ರಾಣಿಗಳ ಕೋಡು, ಶೃಂಗ, 2. ದ್ರವ ಪದಾರ್ಥಗಳನ್ನು ತುಂಬಿಡಲು ಪ್ರಾಣಿಗಳ ಕೋಡಿನಿಂದ ಮಾಡಿದ ಕೊಳವೆ, 3. ಕೊಂಬಿನಾಕಾರದ ಊದುವ ವಾದ್ಯ, 4. ಟೊಂಗೆ, 5. ನೆತ್ತಿ, 6. ಸಂಕೇತ ಸ್ಥಳ, 7. ಹೆಚ್ಚುಗಾರಿಕೆ, 8. ಗರ್ವ, 9. ಆಶ್ರಯ, 10. ಉಕಾರವನ್ನು ಸೂಚಿಸುವ ಕಾಗುಣಿತ ಚಿಹ್ನೆ, 11. ಆನೆಯ ಕೋರೆ,- ದಂತ. 1. horn of an animal, 2. a hollow horn of an animal used to store liquid, etc. 3. a horn- a musical instrument, 4. a branch, 4. top of the skull or head, 6. a symbolic place, 7. excessive pride, 8. pride, 9. shelter, 10. symbol used in Kannada alphabet, 1. **ಎಮ್ಮೆಗೆ ಎರಡ್ ಕೊಂಬು, ಜಂಬಕೆ ಎಂಟ್ ಕೊಂಬು(ಗಾ).** ವಾ: ಎತ್ತ್ ಕೊಂಬುಲಿ ಕುತ್ತಿದೆ.

ಕೊಂಬುಗಿಂಡಿ /*kombugiṇḍi*/ ನಾ. 1. ಹಿತ್ತಾಳೆಯ ಕಮಂಡಲು, 2. ಮದುವೆ ಶಾಸ್ತ್ರಗಳಲ್ಲಿ ಹಾಲು ಹಾಕಿ ಬಳಸುತ್ತಾರೆ. 1. copper container of water, a pitcher 2. used to keep milk in the rituals of wedding. ವಾ: ಕೊಂಬುಗಿಂಡಿನ ಕಂಚಿಮಿ ತಟ್ಟೆಲಿ ಇಸಿ.

ಕೊಂಬುಗಿಂಡೆ /*kɔmbugiṇḍɛ*/ ನಾವಿ. 1. ಮದುವೆ ಧಾರೆ ಎರೆಯಲು ಬಳಸುವ ತಾಮ್ರದ ತಂಬಿಗೆ. ಈ ತಂಬಿಗೆಗೆ ಮಧ್ಯಭಾಗದಲ್ಲಿ ಕೊಂಬಿನ ನಳಿಗೆಯಿದ್ದು, ಅದರ ಮೂಲಕ ಧಾರೆ ಎರೆಯುವುದು, 2. ಶುಭಕಾರ್ಯಗಳಲ್ಲಿ ಬಳಕೆಯಾಗುವ ಪಾತ್ರೆ. a small metal pitcher with a handle and a nozzle, used in auspicious ceremonies such as the solemnisation of marriage. ವಾ: ಕೊಂಬುಗಿಂಡೆನ ಮೊದುವೆಲಿ ಸಾಸ್ತ್ರಕೆ ಬಳ್‌ಸುವೆ. ಪ: ಕೊಂಬುಗಿಂಡಿ

ಕೊಂಬೆ[1] /*kombe*/ ನಾ. 1. ಮಡೆಗುತ್ತಿ, 2. ಪೀಕದಾನಿ, 3. ಎಂಜಲು ಉಗಿಯುವ ಪಾತ್ರೆ. a spittoon. ವಾ: ಕೊಂಬೆನ ಎಲಾಡ್‌ಕೆ ತಿಂದ್ ಉಗೆಕೆ ಬಳ್‌ಸುವೆ.

ಕೊಂಬೆ[2] /*koḷmbɛ*/ ನಾ. 1. ಮರದ ಕವಲು, 2. ಟಿಸಿಲು, 3. ರೆಂಬೆ. a branch of a tree. ವಾ: ಕೊಂಬೆಗೆ ಹತ್ತಬೇಡ ಮುರೆದು ನೋಡಿಕ.

ಕೊಂಬೆಟ್ಟು /*kombɛṭṭu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೊಂಬೊಲಗ /*kɔmbolaga*/ ನಾ. 1. ಕೊಂಬು ಓಲಗ, 2. ಸಂಭ್ರಮದ ಸಂದರ್ಭದಲ್ಲಿ ನುಡಿಸುವ ವಾದ್ಯ ಪರಿಕರ. a horn, letter "C" shaped musical instrument, played during any celebration. ವಾ: ಜಂಬರಲಿ ಕೊಂಬೊಲಗ ಇದ್ದದೆ.

ಕೊಂಬ್ /*kombɨ*/ ನಾ. 1. ಪ್ರಾಣಿಗಳ ಕೊಂಬು, 2. ಕೋಡು. horn of an animal. ವಾ: ಎತ್ತ್ ಕೊಂಬ್‌ಲಿ ಕುತ್ತಿದೆ. **ಕೊಂಬ್ ಕೊಯ್ದ ಕೋಣನಂಗೆ** /*kombɨ koyda koṇanaŋgɛ*/ ನಿಧಾನಗತಿಯ ಚಲನೆ. to

move slowly. ವಾ: ಅಂವ ಕೊಂಬ್ ಕೊಯ್ದು ಕೋಣನಂಗೆ ಹೋದೆ.

ಕೊಂಬ್ ಕೊಟ್ಟ /*kombɨ koṭṭa*/ ನಾವಿ. ವಾದ್ಯ ವಿಶೇಷ. musical instruments. ವಾ: ದೂರಲಿ ಕೊಂಬ್ ಕೊಟ್ಟ ಕೇಳ್‌ದೆ.

ಕೊಂಬ್‌ಚೇಳ್ /*kɔmbɨ ce:ḷɨ*/ ನಾವಿ. ಕೊಂಬಿರುವ ಚೇಳು. a scorpion with a sting. ವಾ: ಕೊಂಬ್‌ಚೇಳ್ ಕಚ್ಚಿತ್.

ಕೊಂಬ್‌ನ ಮಿಳ್ಳಿ /*kombɨna miḷḷi*/ ನಾ. ತೀರ್ಥ ಕೊಡುವಂತಹ ಚಿಕ್ಕ ಹಿತ್ತಾಳೆಯ ಚೊಂಬು (ಚಿಕ್ಕ ಮಿಳ್ಳಿ). a pitcher, used in distributing the holy water. ವಾ: ಕೊಂಬ್‌ನ ಮಿಳ್ಳಿ ತಕಣೊಕು.

ಕೊರ್‌ಂಗು /*korɨngu*/ ನಾ. ಕೊಕ್ಕರೆ. a crane. ವಾ: ಕೊರ್‌ಂಗುಗೆ ಉದ್ದುದ್ದ ಕಾಲ್, ಮೋಟು ಕುತ್ಗೆ, ಅಗಲ ಬಾಯಿ ಇದ್ದದೆ.

ಕೊಕೊ /*koko*/ ನಾ. 1. ವಾಣಿಜ್ಯ ಬೆಳೆ, 2. ಕೊಕ್ಕೊ. 1. a commercial crop, 2. coco plant. ವಾ: ಕೊಕೊ ಹೊಡಿನ ತಿಂಡಿ ಮಿಟಾಯಿಗೆಲ್ಲ ಬಳ್ಸುವೆ. ಪ: ಕೊಕ್ಕ; ಕೊಕ್ಕ ಕಾಯಿ

ಕೊಕ್ಕ /*kɔkka*/ ನಾ. 1. ಕೋಳಿ, 2 ಚಿಕ್ಕ ಮಕ್ಕಳು ಬಳಸುವ ಪದ. 1. a hen, 2. usually small children use this term. ವಾ: ಉಗ್ಗಪ್ಪ ಕೊಕ್ಕ ಬಾತ್ ಬಾಡೆಗೆ.

ಕೊಕ್ಕ ಮಕ್ಕ /*kɔkka makka*/ ನಾ. 1. ಅಂಕುಡೊಂಕು, 2. ವಾರೆಕೋರೆ, 3. ವಕ್ರತೆ. 1. narrow, 2. curve, 3. deformed. ವಾ: ಸೌದೆಗೆಲ್ಲ ನೆಟ್ಟಂಗಿಲ್ಲೆ ಎಲ್ಲ ಕೊಕ್ಕ ಮಕ್ಕ, ಒಟ್ಟಿಕೆ ಬಜ್ಜಲ.

ಕೊಕ್ಕಚಿಚ್ಚಿ /*kokkacicci*/ ನಾ. ಕೋಳಿ ಹಿಕ್ಕೆ. chicken droppings. ವಾ: ಕೋಳಿಹೇಲ್.

ಕೊಕ್ಕಚ್ಚಿ /*kokkacci*/ ನಾ. 1. ಮಾತು ಮಾತಿಗೆ ಜಗಳ ಆಡುವುದು, 2. ಮಾತಿಗೆ ಮಾತು ಕೊಡುವುದು. quarrelsome. ವಾ: ಮಾತಾಡಿರೆ ಕೊಕ್ಕಚ್ಚಿನಂಗೆ ಹಾರಿಕಂಡ್ ಬಂದದೆ. ಪ: ಕೊಕ್ಕೆಚ್ಚಿ(ತು)

ಕೊಕ್ಕಡ /*kokkaḍa*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೊಕ್ಕರೇ. ಕೋ. /*kokkarɛ: ko:*/ ಅ. ಕೋಳಿ ಕೂಗುವುದು. crowing of hen.

ಕೊಕ್ಕರ್ಚಿ ಮುಳ್ಳ್ /*kokkarci muḷḷɨ*/ ನಾ. ಪೊದೆಯಂತೆ ಬೆಳೆಯುವ ಮುಳ್ಳು ಗಿಡ. thorny bush. ವಾ: ಕೊಕ್ಕರ್ಚಿ ಮುಳ್ಳ್ ಹಕ್ಕಲೆ ಹೋಕಾಲೆ. **ಕೊಕ್ಕರ್ಚಿ ಹಣ್ಣ್** /*kokkarci haṇṇɨ*/ ಮುಳ್ಳು ಗಿಡದಲ್ಲಿ ಬೆಳೆಯುವ ಹಣ್ಣು. fruit grown on a thorny bush. ವಾ: ಕೊಕ್ಕರ್ಚಿ ಹಣ್ಣ್‌ನ ಮುಳ್ಳ್‌ಂದಾಗಿ ಕೊಯ್ಯಕಾಲೆ.

ಕೊಕ್ಕಲೆ /*kokkalɛ*/ ನಾ. 1. ಪುರುಳೆ, 2. ಒಣಗಿದ ಎಲೆಯ ರಾಶಿ. 1. dried grass/leaf etc, 2. a heap of dry leaf. ವಾ: ಕೊಕ್ಕಲೆಗೆ ಬೆಂಕಿ ಹಾಕಿ ಬನ್ನೆ.

ಕೊಕ್ಕು /*kokku*/ ನಾ. ಹಕ್ಕಿಗಳ ಕೊಕ್ಕು. beak of a bird. ವಾ: ಹಕ್ಕಿಗ ಕೊಕ್ಕುಲಿ ಕೊಡ್ವಿ ತಿಂಬೊದು.

ಕೊಕ್ಕೆ ಉಗ್ಗಪ್ಪಿ /*kokkɛ uggappi*/ ನಾ. 1. ಕೊಡಗಿನಲ್ಲಿ ಬಳಸುವ ಸಾಂಪ್ರದಾಯಿಕ ಆಭರಣ, 2. ಚಂದ್ರಾಕೃತಿಯಲ್ಲಿ ಇರುವ ಪದಕ. a necklace in the shape of a crescent moon used by the Gowdas of Kodagu. ವಾ: ಕೊಕ್ಕೆ ಉಗ್ಗಪ್ಪಿ ಹೊಸ್ತ?

ಕೊಕ್ಕೆ ಕಣ್ಣಿ /*kokkɛ kaṇṇi*/ ನಾ. ನೀರಿನಲ್ಲಿ ಓಡಾಡುವ ನಾಯಿ. a wild dog usually found walking in the water. ವಾ: ಗದ್ದೆ ಬರಿಲಿ ಕೊಕ್ಕೆ ಕಣ್ಣಿ ಓಡ್‌ದೆ.

ಕೊಕ್ಕೆ ಕತ್ತಿ /*kokkɛ katti*/ ನಾ. 1. ಕೊಕ್ಕೆ ರೀತಿ ಇರುವ ಕತ್ತಿ, 2. ಹುಲ್ಲು ಕತ್ತರಿಸಲು ಬಳಸುವ ಕುಡುಗೋಲು. a sickle. ವಾ: ಕೊಕ್ಕೆ ಕತ್ತಿಗ ಸುಮಾರಿದ್ದೊ ಈಗ ಒಂದೂ ಕಾಂಬೆಲೆ.

ಕೊಕ್ಕೆಕಾಯಿ ಮರ /*kokkɛka:yi mara*/ ನಾ. 1. ಈ ಮರದ ಕಾಯಿ ಕೊಕ್ಕೆಯಾಗಿ ಇರುತ್ತದೆ, 2. ಕೊಡೆಂಚಿ ಕಾಯಿ. an unripe fruit in the shape of a hook. ವಾ: ಕೊಕ್ಕೆಕಾಯಿ ಮರಕೆ ಗಾಯ ಮಾಡಿರೆ ಅದ್‌ರಂದ ಬೆಳಿರಸ ಬಂದದೆ.

ಕೊಕ್ಕೆ ಹುಳ /*kokkɛ huḷa*/ ನಾ. 1. ಕೊಕ್ಕೆಹುಳು, 2. ಜಂತುಹುಳು. 1. a hookworm, 2. a worm found in the intestine. ವಾ: ಕೊಕ್ಕೆ ಹುಳ ನೋಡಿಕೆ ಡೊಂಕು ಡೊಂಕಾಗಿದ್ ಕರ್‌ಳ್‌ಂದ ರಕ್ತ ಹೀರ್‌ದೆ.

ಕೊಕ್ಕೆ[1] /*kokkɛ*/ ನಾ. ಕಾಯಿ ಕೀಳಲು ಗಳೆಗೆ ಅಡ್ಡಲಾಗಿ

ಕಟ್ಟುವ ಕುಟ್ಟಿ. a hook used in plucking coconut from the tree. ವಾ: ಕೊಕ್ಕೆ ತಕಂಡ್ ಕಾಯಿನ, ಹಣ್ಣ್‌ನ ಬೀಳ್ಸಕ್. ಪ: ದೋಟಿ

ಕೊಕ್ಕೆ[2] /*kokkɛ*/ ನಾ. 1. ಅಡ್ಡಿ, 2. ಆಕ್ಷೇಪಣೆ. 1. to stop, 2. an objection. **ಅಂವನತ್ರ ಕೊಕ್ಕೆನೂ ಉಟ್ಟು ಕವಡೆನೂ ಉಟ್ಟು(ಗಾ).** ವಾ: ಅಯೊ ಅಂವನ ಸಾವಸ ಬೇಡಪ, ಮಾತ್ ಮಾತಿಗು ಕೊಕ್ಕೆ ಹಾಕಿದೆ.

ಕೊಕ್ಕೆಕಣ್ಣ /*kokkɛ kaṇṇa*/ ನಾ. ದೊಡ್ಡ ಜಾತಿಯ ಮುಂಗುಸಿ. a large mangoose. ವಾ: ದೊಡ್ಡ ಜಾತಿನ ಮುಂಗುಲಿ.

ಕೊಕ್ಕ್ /*kokkɨ*/ ನಾ. 1. ಕೊಕ್ಕು, 2. ಪಕ್ಷಿಯ ಚಂಚು, 3. ಪಕ್ಷಿಯ ಮೂತಿ. beak of a bird. **ಕೊತ್ತಿ ಬಡಕ್‌ಲಾದರೆ ಕೋಳಿ ಕೊಕ್ಕಿ ನೋಡ್ತ್(ಗಾ).** ವಾ: ಹಕ್ಕಿಗ ಕೊಕ್ಕ್ ಲಿ ತಿಂಬೊದು.

ಕೊಚ್ಚಿ[1] /*kocci*/ ನಾ. 1. ಮರಗಳಿರುವ ಗುಡ್ಡ, 2. ಬೀಜದ ಕೊಚ್ಚಿ. 1. a hillock with trees, 2. a heap of seeds. ವಾ: ಹಂದಿಗ ಪೂರ ಬೀಜ ಕೊಚ್ಚಿಲಿ ಒಳೊ. ಪ: ಕೊಚ್ಚನೊ – ಕೊಚ್ಚೋಣ; ಕೊಚ್ಚಿನೆ – ಕೊಚ್ಚುತ್ತೇನೆ

ಕೊಚ್ಚಿ[2] /*kocci*/ ನಾ. ದಲಿತ ಆಳುಗಳಿಗೆ ನೀಡುವ ಗೌರವ ಸಂಭಾವನೆ. an honorarium given to a dalit labourer. ವಾ: ಕೂಲಿ ಕೆಲ್‌ಸದವ್‌ಕೆ ಬತ್ತ, ರಾಗಿ, ಅಕ್ಕಿ ಕೊಡ್‌ದುಕೆ ಕೊಚ್ಚಿತ ಹೇಳಿವೆ. ಪ: ಕೊಚ್ಚಿಕೆ – ಕೊಚ್ಚಲು

ಕೊಚ್ಚಿ[3] /*kocci*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಐವರ್ನಾಡು ಗ್ರಾಮದ ಜಾಗ. a locality in Aivarnadu village in Sullia Taluk of Dakshina Kannada District.

ಕೊಚ್ಚಿಕಂಬದು /*koccikambadu*/ ನಾ. 1. ತನ್ನನ್ನು ತಾನೇ ಹೊಗಳಿಕೊಳ್ಳುವುದು, 2. ಬಣ್ಣಿಸಿಕೊಳ್ಳುವುದು, 3. ಅಹಂಕಾರದಿಂದ ಮಾತನಾಡುವುದು. 1. to boast about oneself, 2. bragging about oneself. ವಾ: ಬರೀ ಅವ್ನೇ ಕೊಚ್ಚಿಕಂಬದು. ಪ: ಕೊಚ್ಚಿದೆ – ತನ್ನನ್ನು ತಾನೇ ಹೊಗಳಿಕೊಳ್ಳುವುದು

ಕೊಚ್ಚುದು[1] /*koccudu*/ ನಾ. ಮರದ ಕೊಂಬೆಯನ್ನು ತುಂಡರಿಸುವುದು. to cut the branch of a tree. ವಾ: ಗೊರ್ಜಿ ಗದ್ದೆನ ಕೊಚ್ಚಿ ನಾಟಿ ಮಾಡಿವೆ.

ಕೊಚ್ಚುದು[2] /*koccudu*/ ನಾ. ತರಕಾರಿ,ಮಾಂಸ, ಇತ್ಯಾದಿಗಳನ್ನು ಚಿಕ್ಕ ತುಂಡುಗಳನ್ನಾಗಿ ಮಾಡುವುದು. to cut vegetable, meat, etc. into small pieces. ವಾ: ಪಚ್ಚ್‌ಡಿ ಮಾಡಿಕೆ ಸೋಂತೆನ ಕೊಚ್ಚುದು.

ಕೊಚ್ಚುದು[3] /*koccudu*/ ನಾ. 1. ಜಂಭ ಕೊಚ್ಚಿಕೊಳ್ಳುವುದು, 2. ತನ್ನನ್ನು ತಾನೇ ಹೊಗಳಿ ಕೊಳ್ಳುವುದು, 3. ಆತ್ಮಸ್ತುತಿ. 1. to brag, 2. to boast, 3. self-praise. ವಾ: ನಮ್ಮನ ನಾವೆ ಮಾಡ್‌ದ ಕೆಲ್‌ಸದ ಬಗ್ಗೆ ಕೊಚ್ಚುದು ಸೆರಿಯಲ್ಲ.

ಕೊಚ್ಚೆ[1] /*koccɛ*/ ನಾ. ಕೊಳಕು ನಿಲ್ಲುವ ಪ್ರದೇಶ. mire. ವಾ: ಕೊಚ್ಚೆಗೆ ಕಲ್ಲ್ ಹಾಕಿರೆ ನಮ್ಮ ಮೋರೆಕೆ ಹಾರ್‌ದು.

ಕೊಚ್ಚೆ[2] /*koccɛ*/ ನಾ. 1. ಕೊಳಕು, 2. ಗಲೀಜು. 1. filth, 2. dirt. ವಾ: ಕೊಚ್ಚೆ ನೀರ್ ಮೆಟ್ಟ್‌ಬಡ. **ಕೊಚ್ಚೆನೀರ್** /*koccɛni:rɨ*/ 1. ಕೊಳಕು ನೀರು, 2. ಕಲುಷಿತ ನೀರು. 1. filthy water, 2. polluted water. ವಾ: ಕೊಚ್ಚೆನೀರ್‌ಗೆ ಮಕ್ಕ ಆಡಿಕಂಡ್ ಚೆಂಡ್‌ನ ಹಾಕಿದೊ.

ಕೊಚ್ಚ್‌ಕಂಡ್ /*koccɨkaṇḍɨ*/ ನಾ. 1. ಕೊಚ್ಚಿಕೊಂಡು. washed way. ವಾ: ಅರ್ವೆ ನೀರ್‌ಲಿ ಕೊಚ್ಚ್‌ಕಂಡ್ ಹೋತು. ಪ: ಕೊಚ್ಚಿಸ್‌ದೆ – ಕೊಚ್ಚಿಸಿದೆನು; ಕೊಚ್ಚಿಸ್‌ನೆ – ಕೊಚ್ಚಿಸುತ್ತೇನೆ; ಕೊಚ್ಚಿಸ್‌ವೆ – ಕೊಚ್ಚಿಸುತ್ತಾರೆ; ಕೊಚ್ಚಿಸಕ್ – ಕೊಚ್ಚಿಸಬೇಕು

ಕೊಞ್ಞಟೆ /*koɲɲaṭɛ*/ ನಾ. 1. ತೊದಲು ತೊದಲಾಗಿ ಮಕ್ಕಳೊಂದಿಗೆ ಮಾತನಾಡುವುದು, 2. ಮಗುವಿನ ಮುದ್ದು ಪೆದ್ದು ತೊದಲು ಮಾತುಗಳು. 1. talking to children using simple words and sentences, 2. a babbling child. ವಾ: ಮಕ್ಕಳೊಟ್ಟಿಗೆ ಕೊಂಞಟೆ ಮಾತಾಡ್‌ದು.

ಕೊಞ್ಞಲೆ /*koɲɲalɛ*/ ನಾ. ತೊದಲು ಮಾತು. babbling. ವಾ: ಕೂಸು ಕೊಞ್ಞಲೆ ಮಾತ್ ಸುರು ಮಾಡಿಟು.

ಕೊಞ್ಞೆ /*koɲɲɛ*/ ನಾ. ಳ' ಕಾರ, 'ರ' ಕಾರ ಉಚ್ಚಾರಣೆ ಸರಿಯಾಗಿ ಬಾರದೆ ಮಾತಾಡುವ ಮಾತು. a person who incorrectly pronounces sounds like "l" and "r". ವಾ: ನಾಲಿಗೆ ಸೆರಿ ಮೊಗ್ಗದೆ ಕೊಂಞೆ ಮಾತಾಡ್ದು. ಪ: ಕೊಞ್ಞೆಂತೇಳಿ – ತೊದಲೆಂದು

ಕೊಟ /*koṭa*/ ನಾ. ಕೋಳಿ ವಟಗುಟ್ಟುವುದು. clucking of hen. ವಾ: ಕೋಳಿಗ ಕೊಟಗೂಡ್ದು. ಪ: ಕದೆಪ್ಪುನೆ(ತು)

ಕೊಟಕ್ಕನೆ /*koṭakkanɛ*/ ನಾ. 1. ಬಾಯಿಗೆ ಹಿಡಿಸುವ ಹಾಗೆ, 2. ರುಚಿಯಾಗಿ ಉಪ್ಪು ಹುಳಿ, ಖಾರ ಸ್ವಲ್ಪಜಾಸ್ತಿ ಇದ್ದು ಬಾಯಿಗೆ ಹಿಡಿಸುವ ಹಾಗೆ ರುಚಿಯಾಗಿರುವುದು. 1. as per one's taste, 2. adding more flavour to increase the taste. ವಾ: ಆಂಬರ ಕಾರ ಆಗಿ ಒಳ್ಳೊ ಕೊಟಕ್ಕನೆ ಮಾಡ್.

ಕೊಟೆಗೆ /*koṭɛgɛ*/ ನಾ. 1. ಕೊಟ್ಟಿಗೆ, 2. ದನಗಳ ಹಟ್ಟಿ, 3. ದನ ಕರುಗಳನ್ನು ಕಟ್ಟುವ ಜಾಗ. a cattle shed. **ಇಕ್ಕವು ಇರ್‌ಕನ, ಕೊಟೆಗೆ ಅರ್‌ನೂ ಸೈ(ಗಾ).** ವಾ: ಕೊಟೆಗೆಲಿ ದನ ಕಾಂಬಲೆ. ಪ: ಕೊಟಗೆ, ಕೊಟಿಗೆ – ಕೊಟ್ಟಗೆ

ಕೊಟ್ಕಂಡ್ /*koṭkaṇḍɨ*/ ನಾ. 1. ಕೊಟ್ಟುಕೊಂಡು, 2. ಹಂಚಿ. 1. giving, 2. sharing. ವಾ: ಪ್ರಸಾದನ ಎಲ್ಲೊವ್ಕೆ ಕೊಟ್ಕಂಡ್ ಬಂದದ್.

ಕೊಟ್ಟ ಹಿಡಿ /*koṭṭa hiḍi*/ ನಾವಿ. ಕುಷ್ಠರೋಗ ಹಿಡಿಯುವುದು, ಬೈಗುಳ ಪದ. to be infected by leprosy.

ಕೊಟ್ಟ[1] /*koṭṭa*/ ನಾ. 1. ಬಾಪು, 2. ಬಾವು. swelling. ವಾ: ಬಿದ್ದ್ ತಲೆಲಿ ಕೊಟ್ಟ ಬಂದುಟು, ಐಸ್ ಮಡ್‌ಗೊಕು. ಪ: ಕೊಟ್ಟ ಏಳ್ದು – ಬಿದ್ದು ತಲೆಗೆ ಪೆಟ್ಟಾದಾಗ ಆ ಬಾಗ ದಪ್ಪವಾಗುವುದು

ಕೊಟ್ಟ[2] /*koṭṭa*/ ನಾ. ಬೇಟೆಯ ಪಾಲು. share in the hunted (meat). ವಾ: ಬೆಡಿ ಇರವ್ಕೆ ಎರಡ್ ಕೊಟ್ಟ ಮಾಸ.

ಕೊಟ್ಟ[3] /*koṭṭa*/ ನಾ. 1. ಗಂಡು ಕರು, 2. ಎಳೆಯ ಪ್ರಾಯದ ದನ, 3. ಎತ್ತು, 4. ಹೋರಿ, 5. ವೃಷಭ, 6. ಗೂಳಿ. 1. a bull calf, 2. a young bull, 2. an ox, 4. a bull, 5. a bullock, 6. a male cattle. ವಾ: ಹಸ್ ಎರ್‌ಡ್ ಸರ್ತಿನೂ ಕೊಟ್ಟನೇ ಹಾಕಿದ್.

ಕೊಟ್ಟ[4] /*koṭṭa*/ ನಾ. 1. ಕೊಟ್ಟೆಯಾ? did you give? ವಾ: ಉಗ್ಗಪ್ಪಂಗೆ ತಿಂಡಿ ಕೊಟ್ಟ?

ಕೊಟ್ಟ[5] /*koṭṭa*/ ನಾ. ಮಳೆ ನಿಂತ ಮೇಲೆ ಬೀಳುವ ಹನಿ. last drops of rain. ವಾ: ಮೆಲ್ಲ ಆಲ್‌ಸ್ ನಿಂಗೆ ಸಣ್ಣದಾಗಿ ಹೊರೆಗೆ ನೀರ್ ಕೊಟ್ಟ ಬೀಳ್‌ವ ಸದ್ದ್ ಕೇಳ್‌ದೆನ?

ಕೊಟ್ಟ[6] /*koṭṭa*/ ನಾ. 1. ದನಕರುಗಳಿಗೆ ಔಷಧಿಯನ್ನು ಕುಡಿಸಲು ಬಳಸುವ ಬಿದಿರಿನ ಕೊಳವೆ, 2. ಗೊಟ್ಟ. an instrument made of bamboo (closed from one end), used in feeding medicine to cattle. ವಾ: ಕೊಟ್ಟನ ದನಕರ್‌ಗಳಿಗೆ ಮೊದ್ದ್ ಕುಡ್‌ಸಿಕೆ ಬಳ್‌ಸುವೆ.

ಕೊಟ್ಟ[7] /*koṭṭa*/ ನಾ. ಬೈಗುಳ ಪದ. an expletive. ವಾ: ಕೊಟ್ಟ ಹಿಡ್ದವು ಎಲ್ಲ ಹಣ್ಣ್‌ನಕೊಯ್ಕಂಡ್ ಹೋದೊ.

ಕೊಟ್ಟಂಗೇರಿ /*koṭṭaŋge:ri*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೊಟ್ಟಕಾಯಿ[1] /*koṭṭaka:yi*/ ನಾ. ಒಣಗಿದ ಅಡಿಕೆ (ಕೊಟ್ಟಾಯಿ). dried areca nut. **ಕೊಟ್ಟೆಕಾಯಿ ಅವುಟ್ಟು(ಗಾ).** ವಾ: ಕೊಟ್ಟಕಾಯಿನ ಗುದ್ದಿ ಹೊಡಿ ಮಾಡಿ ಎಲೆಯೊಟ್ಟಿಗೆ ತಿಂಬೊದು.

ಕೊಟ್ಟಕಾಯಿ[2] /*koṭṭaka:yi*/ ನಾ. ಸತ್ತುಹೋಗು. to die. **ಕೊಟ್ಟೆಕಾಯಿ ಕಟ್ಟ್(ನು).** ವಾ: ಅಂವ ಕೊಟ್ಟಕಾಯಿ ಆತ್.

ಕೊಟ್ಟಕಾಯಿ[3] /*koṭṭaka:yi*/ ನಾ. ಸ್ಥಳನಾಮ. Kottakayi, a place.

ಕೊಟ್ಟಕೂಡ್ಲೆ /*koṭṭaku:ḍlɛ*/ ನಾ. 1. ಕೊಟ್ಟ ಕೂಡಲೆ, 2. ನೀಡಿದ ತಕ್ಷಣ. immediately after giving something. ವಾ: ದುಡ್ಡು ಕೊಟ್ಟ ಕೂಡ್ಲೆ ಮನೆಗೆ ಬನ್ನೆ.

ಕೊಟ್ಟಕೇರಿಯನ /*koṭṭake:riyana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೊಟ್ಟಗಡ /*koṭṭagaḍa*/ ನಾ. 1. ಕೊಟ್ಟರಂತೆ, 2. ನೀಡಿದರಂತೆ, 3. ಕೊಟ್ಟೆಯಂತೆ. 1. must have given, 2. seemed to have given, 3. you seem to have given. ವಾ: ನೀ ಮನೆನ ಬೋಗ್ಯಕ್ಕೆ ಕೊಟ್ಟಗಡ ಹೌದ?

ಕೊಟ್ಟತ್ /*koṭṭatɨ*/ ಕ್ರಿ. 1. ಕೊಟ್ಟನು, 2. ಕೊಟ್ಟಳು, 3. ಒಪ್ಪಿಸು. 1. he gave, 2. she gave, 3. to convince. ವಾ: ತಕಂಡಿದ್ದ ಪುಸ್ತಕನ ನಂಗೆ ಕೊಟ್ಟತ್. ಪ: ಕೊಟ್ಟತ್‌ಗಡ – ಕೊಟ್ಟನಂತೆ; ಕೊಟ್ಟತ್ತಲ್ಲಂತ – ಕೊಟ್ಟನಲ್ಲನೆಂದು; ಕೊಟ್ಟದೆ – ಕೊಡುತ್ತಾನೆ/ ಕೊಡುತ್ತಾಳೆ; ಕೊಟ್ಟದ್ – ಕೊಟ್ಟಿದ್ದು, ಕೊಟ್ಟಿರುವುದು.

ಕೊಟ್ಟತ್ಲೆ /*koṭṭatlɛ*/ ನಾ. 1. ಕೊಟ್ಟಿದ್ದೇ ಆದರೆ, 2. ಮಾರಿದ್ದೇ ಆದರೆ. 1. if you give, 2. if you sell. ವಾ: ನಾ ಎಂತನು ಕೊಟ್ಟತ್ಲೆ. ಪ: ಕೊಟ್ಟತ್ಲರೆ – ಕೊಡದಿದ್ದರೆ; ಕೊಟ್ಟದರನ್ನ – ಕೊಟ್ಟಿರುವುದನ್ನು

ಕೊಟ್ಟತ್‌ಗಡ /*koṭṭatigaḍa*/ ಕ್ರಿವಿ. 1. ಕೊಡು, 2. ಮಾರು, 3. ವಿಕ್ರಯಿಸು, 4. ಯಾವುದಾದರೊಂದು ವಸ್ತುವನ್ನು ಕೊಟ್ಟು ಹಣವನ್ನು ಪಡೆದುಕೊಳ್ಳು, 5. ಕೊಟ್ಟನಂತೆ. 1. to give, 2. to sell, 3. selling, 4. to exchange something for money. ವಾ: ಕಾಪಿ, ಯಾಲನ ಕೊಟ್ಟತ್‌ಗಡ.

ಕೊಟ್ಟತ್ತಾದರೆ /*koṭṭatta:darɛ*/ ಕ್ರಿವಿ. 1. ಕೊಟ್ಟಿದ್ದೇ ಆದರೆ, 2. ಮಾರಿದ್ದೇ ಆದರೆ. 1. if you give, 2. if you sell. ವಾ: ಯಾಲ, ಕಾಪಿ ಕೊಟ್ಟದೆತಾರ್ ನನ್ನ ಸಾಲನ ವಾಪಸ್ಸ್ ಕೊಡ್.

ಕೊಟ್ಟದೆತಾರ್ /*koṭṭadɛta:ri*/ ನಾ. 1. ಕೊಟ್ಟಿದ್ದೇ ಆದರೆ, 2. ಮಾರಿದ್ದೇ ಆದರೆ. 1. if you give, 2. if you sell. ವಾ: ಯಾಲ, ಕಾಪಿ ಕೊಟ್ಟತ್ತಾದರೆ ನನ್ನ ಸಾಲನ ವಾಪಸ್ಸ್ ಕೊಡ್.

ಕೊಟ್ಟನ ಕೊಡಿ /*koṭṭana kɔḍi*/ ನಾ. 1. ತುತ್ತ ತುದಿ, 2. ಕೊಟ್ಟಕೊನೆ, 3. ಬಹಳ ಎತ್ತರ, 4. ತೀರಕೊನೆ, 5. ಕಟ್ಟಕಡೆ. 1. the apex, 2. the end, 3. too high, 4. the end, 5. the last. ವಾ: ಅವೆಲ್ಲ ಕುಂದ್‌ನ ಕೊಟ್ಟನ ಕೊಡಿಗೆ ಹತ್ತಿದೊ.

ಕೊಟ್ಟನೆ /*koṭṭanɛ*/ ನಾ. ಕೊಡುತ್ತೇನೆ. I will give. ವಾ: ಪೆನ್ನ್ ಮತ್ತೆ ಕೊಟ್ಟನೆ. ಪ: ಕೊಟ್ಟವೆ – ಕೊಡುತ್ತಾರೆ; ಕೊಟ್ಟಳೆ – ಕೊಟ್ಟಿದ್ದೇನೆ; ಕೊಟ್ಟಾಕನ – ಕೊಟ್ಟಿರುವಾಗ/ಕೊಟ್ಟಾಗುವಾಗ

ಕೊಟ್ಟಪಾಳೆ /*koṭṭampa:ḷɛ*/ ನಾ. 1. ಅಡಕೆಮರದ ಹಾಳೆಯಿಂದ ಮಾಡಿದ ಟೊಪ್ಪಿಗೆಯಂತಹ ರಚನೆ, 2. ಹಾಳೆಯಿಂದ ಮಾಡಿದ ಶಿರಸ್ತ್ರಾಣ, 3. ಮೊಡ್ಪಳೆ. a cap made up of the spathe of an areca palm. ವಾ: ಕೊಟ್ಟಂಪಾಳೆ ಮಾಡಿಕೆ ಅಡ್ಕೆ ಹಾಳೆ ಬೇಕಾದೆ. ಪ: ಕೊಟ್ಟಂಪಾಳೆ, ಮುಟ್ಟಾಳೆ(ತು)

ಕೊಟ್ಟಬಾತ್ /*koṭṭa ba:ti*/ ನಾವಿ. ಏಟಾದ ಜಾಗದಲ್ಲಿ ಊದಿಕೊಳ್ಳುವುದು. swelling on the wounded part of the body. ವಾ: ತಲೆಗೆ ಕುಟ್ಟಿ ಹಾಕಿದರ್ಲಿ ಕೊಟ್ಟನೇ ಬಾತ್.

ಕೊಟ್ಟವ್ /*koṭṭavi*/ ಕ್ರಿ. 1. ಕೊಟ್ಟವರು, 2. ನೀಡಿದವರು. someone who gave. ವಾ: ಜಾಗೆ ಕೊಟ್ಟವ್ ಗೊತ್ತಿದ್ದವೆ. ಪ: ಕೊಟ್ಟವಂಗೆ – ನೀಡಿದವನಿಗೆ/ ಕೊಟ್ಟಿರುವವನಿಗೆ

ಕೊಟ್ಟಸ್ಟ್ /*koṭṭasṭi*/ ನಾ. 1. ಕೊಟ್ಟಷ್ಟು, 2. ನೀಡಿದಷ್ಟು. 1. as much as one wants to give, 2. as much as one can give. ವಾ: ಅವ್‌ಕೆ ಕೊಟ್ಟಸ್ಟ್ ಸಾಲ್ದುಲೆ.

ಕೊಟ್ಟಳರಿನಾ /*koṭṭaḷarina:*/ ಕ್ರಿ. 1. ಕೊಟ್ಟಿದ್ದೀರಾ?, 2. ನೀಡಿದ್ದೀರ? Have you given? ವಾ: ಗೊತ್ತಿಲ್ದೆ ಚಿನ್ನನ ಕೊಟ್ಟಳರಿನಾ?

ಕೊಟ್ಟಾನ ಕೊಡಿ /*koṭṭa:na kɔḍi*/ ನಾ. ಅತ್ಯಂತ ಎತ್ತರ. the tallest/the highest. ವಾ: ಹಕ್ಕಿ ಮರದ ಕೊಟ್ಟಾನ ಕೊಡಿಲಿ ಕುದ್ದುಟು.

ಕೊಟ್ಟಾಳೆ /*Koṭṭa:ḷɛ*/ ನಾ. 1. ಅಡಿಕೆ ಹಾಳೆಯ ಟೋಪಿ, 2. ಮೊಡ್ಪಾಳೆ. cap made of areca spathe. ವಾ: ಮಳ್ಗಾಲಲಿ, ಅರೆಗಾಲಲಿ ಹೊರೆಗೆ ಕೆಲ್‌ಸಕೆ ಹೋಕನ ತಲೆಗೆ ಕೊಟ್ಟಾಳೆನ ಹಾಕಂಡವೆ. ಪ: ಕೊಟ್ಟಪಾಳೆ

ಕೊಟ್ಟಿಕರ್ತಲೆ /*koṭṭikartalɛ*/ ನಾ. ಮರಕುಟಿಗ. a woodpecker. ವಾ: ಕೊಟ್ಟಿಕರ್ತಲೆ ಮರನ ಕೊಡ್‌ಪಿಕಂಡ್ ಇದ್ದದೆ. ಪ: ಕೊಟ್ಟುಕಡ್ತಲೆ

ಕೊಟ್ಟಿಗೆ ಕೊಡ್ಡು /*koṭṭigɛ koḍḍu*/ ನಾ. ಚಿಕ್ಕ ಮಗು ತಿನ್ನುವ ಎಲ್ಲ ಪದಾರ್ಥಗಳನ್ನು ಕೊಟ್ಟಿಗೆಯಲ್ಲಿ ಎಲೆಯ ಮೇಲೆ ಹಾಕುವುದು (ನಂತರದಲ್ಲಿ ಮಗು ಕಡಿಮೆ ಊಟ ಮಾಡುತ್ತದೆ ಎಂಬ ನಂಬಿಕೆ). a custom of keeping the eatables of a child on a banana leaf in the cattle shed (it is assumed that a child will eat less after this). ವಾ: ಕೂಸಿಗೆ ಕೊಟ್ಟಿಗೆ ಕೊಡ್ಡು.

ಕೊಟ್ಟಿಗೆ^{1} /*koṭṭigɛ*/ ನಾ. ಹಲಸಿನ ಎಲೆಯಲ್ಲಿ ಮಾಡಿದ ಇಡ್ಲಿಯಂತಹ ತಿನಿಸು. a rice cake steamed in jackfruit leaf. ವಾ: ಕೊಟ್ಟಿಗೆ ಹಿಟ್ಟ್ ತಿಂಬಕೆ ಲಾಯ್ಕ್.

ಕೊಟ್ಟಿಗೆ^{2} /*koṭṭigɛ*/ ನಾ. 1. ಕಟ್ಟಿಗೆ ಸಂಗ್ರಹಿಸಿಡುವ ಸ್ಥಳ, 2. ದನ ಕಟ್ಟುವ ಸ್ಥಳ. 1. a place where firewood is stored, 2. a cattle shed. ವಾ: ಕೊಟ್ಟಿಗೆಂದ ಐದ್ ಕೊಳ್ಳಿ ಸೌದೆ ಎಳ್ಕಂಡ್ ಬಾನೆ.

ಕೊಟ್ಟಿತ್ /*koṭṭitti*/ ಕ್ರಿ. 1. ಕೊಟ್ಟಿದ್ದನು, 2. ಕೊಟ್ಟಿದ್ದಳು, 3. ನೀಡಿದ್ದನು/ಳು. 1. he had given, 2. she had given. ವಾ: ಅಂವ ಅಂದ್ ನಂಗೆ ಪುಸ್ತಕ ಕೊಟ್ಟಿತ್. ಪ: ಕೊಟ್ಟುಟ್ಟ್ – ಕೊಟ್ಟಿದ್ದಾನೆ/ಳೆ

ಕೊಟ್ಟಿಯ /*koṭṭiya*/ ನಾ. ಕೊಡುತ್ತೀಯ. will you

give? ವಾ: ಕೂಸಿಗೆ ಅನ್ನನ ಅರ್‌ದ್ ಕೊಟ್ಟಿಯ. ಪ: ಕೊಟ್ಟಿಯಾ

ಕೊಟ್ಟು /*koṭṭu*/ ನಾ. 1. ಹಾರೆ, 2. ಗುದ್ದಲಿ, 3. ಒಂದು ಗುದ್ದಲಿಯಲ್ಲಿ ಹಿಡಿಯುವಷ್ಟು ಪ್ರಮಾಣದ ಮಣ್ಣು, ಮರಳು ಮೊದಲಾದುವುಗಳು. 1. a spade, 2. a hoe, 3. a quantity of soil, sand, etc, which is held in a spade. ವಾ: ಕೊಟ್ಟುಲಿ ಮಣ್ಣ್ ಎಳ್ಳಿ ಗುಂಡಿ ತೆಗೆದು. ಪ: ಕೊಟ್ಟ್ – ಗುದ್ದಲಿ

ಕೊಟ್ಟುಕುಡ್ತಲೆ /*koṭṭukuḍtalɛ*/ ನಾ. 1. ತಲೆಯ ಕೊಟ್ಟಿನಲ್ಲಿ ಜುಟ್ಟು ಇರುವ ಪಕ್ಷಿ, 2. ಒಂದು ಜಾತಿಯ ಹಕ್ಕಿ. a species of woodpecker. ವಾ: ಕೊಟ್ಟು ಕುಡ್ತಲೆ ಹಕ್ಕಿನ ತಲೆ ಮೇಲೆ ಜುಟ್ಟ್ ಇದ್ದದೆ.

ಕೊಟ್ಟುಮುಚ್ಚಕ್ಕಿ /*koṭṭu muccakki*/ ನಾ. 1. ಒಂದು ವಿಧದ ತಲೆಯ ಮೇಲೆ ಜುಟ್ಟುಳ್ಳ ಸಣ್ಣ ಹಕ್ಕಿ, 2. ಕೊಟ್ಟುಕ. a lapwing bird. ವಾ: ಕೊಟ್ಟು ಮುಚ್ಚಕ್ಕಿ ದೈಲಿರೊ ಹುಳಗಳ ತಿಂಬೊದು.

ಕೊಟ್ಟುಮುಡ್ಚ /*koṭṭu muḍca*/ ನಾ. 1. ಪುಟ್ಟ ಪಕ್ಷಿ, 2. ಕೊಟ್ಟುಕ, 3. ತಲೆಯ ಮೇಲೆ ಜುಟ್ಟುಳ್ಳ ಒಂದು ಜಾತಿಯ ಪಕ್ಷಿ, 4. ಕೋಯಷ್ಟಿಕ, 5. ಬುಲ್‌ಬುಲ್, 6. ಪಿಕಳಾರ. lapwing bird. ವಾ: ಕೊಟ್ಟು ಮುಡ್ಚ ಹಕ್ಕಿ ಅಂಗ್ಳಲಿ ಕುದ್ದುಟು. ಪ: ಕೊಟ್ಟುಕಡ್ತಲೆ(ತು)

ಕೊಟ್ಟುದು /*koṭṭudu*/ ಕ್ರಿ. ಡೋಲು ಬಡಿಯುವುದು. beating the drum. ವಾ: ಎಲ್ಲೊ ಮೊದುವೆ ಮನೆಲಿ ಕೊಟ್ಟುದು ಕೇಳ್‌ದೆ.

ಕೊಟ್ಟುಬುಟ್ಟೆ /*koṭṭubuṭṭɛ*/ ನಾ. 1. ಕೊಟ್ಟುಬಿಟ್ಟೆ, 2. ನೀಡಿದೆ. 1. I have given already, 2. I gave. ವಾ: ಸುಮಾರ್ ಅರ್ವೆಗಳ್‌ನ್ನೆಲ್ಲ ಅವುಳಿಗೆ ಕೊಟ್ಟುಬುಟ್ಟೆ. ಪ: ಕೊಟ್ಟುಬುಡಿ – ಕೊಟ್ಟುಬಿಡಿ

ಕೊಟ್ಟುವ /*koṭṭuva*/ ನಾ. ಕುಟ್ಟುವ. let us pound. ವಾ: ಕೊಟ್ಟುವ ಕಲ್ಲ್ ತೊಳಿಯಕು.

ಕೊಟ್ಟೆಚಾಳೆ /*koṭṭɛca:ḷɛ*/ ನಾವಿ. ಅತೀ ಎತ್ತರಕ್ಕೆ ಬೆಳೆದ ಅತೀ ಹಳೆಯ ತೆಂಗಿನ ಮರ. an ancient coconut tree which has grown very tall. ವಾ: ಕೊಟ್ಟೆ ಚಾಳೆ ಗಾಳಿಗೆ ಬೊಗ್ಗಿ ಹೋದೆ. ಪ: ಕೊಟ್ಟೆತಾರೆ(ತು)

ಕೊಟ್ಟೆಹಣ್ಣ್ /*koṭṭɛhaṇṇi*/ ನಾ. 1. ಒಂದು ವಿಧದ ಮುಳ್ಳು ಗಿಡದ ಹಣ್ಣು, 2. ಬಾಯಿ ಹುಣ್ಣಿಗೆ ಈ ಗಿಡದ ಹಣ್ಣು, ತೊಗಟೆ ಕಷಾಯ ಬಳಕೆ ಮಾಡಲಾಗುತ್ತದೆ. 1. fruit grown on a thorny plant, 2. the bark of this plant is used to cure mouth ulcers. ವಾ: ಕೊಟ್ಟೆ ಹಣ್ಣ್ ಕಸಾಯ ಕಾಸನೊ, ಕೊಟ್ಟೆಹಣ್ಣ್ ತಿಂಬಕೆ ಬೆಣ್ಣೆನಂಗೆ ಆದೆ. ಪ: ಕೊಟ್ಟೆದ ಪರ್‌ಂದ್(ತು)

ಕೊಟ್ಟೆ[1] /*koṭṭɛ*/ ಕ್ರಿ. ಕೊಟ್ಟಾಯಿತು. have/has given it. ವಾ: ಕಾಪಿ ಕುಡ್ಯಕೆ ಕೊಟ್ಟೆ. ಪ: ಕೊಟ್ಟಾತ್ – ಕೊಟ್ಟಾಯಿತು

ಕೊಟ್ಟೆ[2] /*koṭṭɛ*/ ನಾ. 1. ಎತ್ತರದ ಮರ, 2. ಗೊಟ್ಟ, 3. ಎಲೆಗಳ ಗೂಡು, 4. ಹಣ್ಣು ಅಥವಾ ಕಾಯಿಯ ಒಳಗಿನ ಗಟ್ಟಿಯಾದ ಬೀಜ (ಗೊರಟ, ಗೊರಟೆ), 5 ಅಡಕೆಯ ಹಾಳೆಯಿಂದ ಮಾಡಿದ ದೊನ್ನೆ, 6. ಗೂಡು, 7. ಕೊಳೆರೋಗ ತಾಗದಂತೆ ಅಡಕೆ ಗೊನೆಗಳಿಗೆ ಕಟ್ಟುವ ಹಾಳೆಯ ಮುಸುಕು, 8. ಈಜು ಬುರುಡೆಯಾಗಿ ಉಪಯೋಗಿಸುವ ಗೋಟು ತೆಂಗಿನ ಕಾಯಿ. 1. a tall tree, 2. a cowshed, 3. nest made of leaf, 4. a seed, 5. a cup made of areca leaf, 6. a nest, 7. a covering made of plastic on the bunches of areca to avoid the spreading of Koleroga or fruit rot, 8. a dried whole coconut used in learning swimmin. ವಾ: ಕೊಟ್ಟೆಲಿ ಕಪಿಗ ಕುದ್ದೊಳೊ. ಪ: ಕೊಟ್ಟೆ ಕಮ್ಮು – ಉದ್ದಕ್ಕೆ ಬೆಳೆದ ಅಡಕೆ ಮರ

ಕೊಟ್ಟೆ[3] /*koṭṭɛ*/ ನಾ. ಹೋರಿಗಳ ಬೀಜ. the testicles. ವಾ: ಹೋರಿನ ಕೊಟ್ಟೆನ/ಗೊಟ್ಟೆನ ನೀರ್ ಮಾಡ್‌ವೆ.

ಕೊಟ್ಟೆ[4] /*koṭṭɛ*/ ನಾ. ಹಣ್ಣು, ಕಾಯಿ ಮೊದಲಾದುವುಗಳೊಳಗಿನ (ಒಣಗಿದ) ಬೀಜ. a seed. ವಾ: ಕೊಟ್ಟೆನ ತೆಗ್‌ದಿಸ್.

ಕೊಟ್ಟೆ[5] /*koṭṭɛ*/ ನಾ. ದನ ಕರುಗಳಿಗೆ ಔಷಧಿ ಕೊಡಲು ಉಪಯೋಗಿಸುವ ಬಿದಿರಿನ ಕೊಳವೆ, ಬಿದಿರಿನ ಒಂದು ಗಂಟನ್ನು ಉಳಿಸಿ ಇನ್ನೊಂದು ತುದಿಯನ್ನು ಅರ್ಧ ಬಾಯಿ ಚೂಪಾಗುವಂತೆ ಕೊಯ್ದು ಅದರೊಳಗೆ ದ್ರವ ಔಷಧಿಯನ್ನು ಹಾಕಿ ದನ ಕರುಗಳ ಬಾಯಿಗೆ ಹುಯ್ಯುವುದು. a bamboo instrument used in feeding medicine to cattle. ವಾ: ಕೊಟ್ಟೆಲಿ ದನಕರ್‌ಗಳಿಗೆ ಮೊದ್ದ್ ಕುಡ್‌ಸುದು. ಪ: ಬಿದಿರಿನ ಗೊಟ್ಟೆ

ಕೊಟ್ಟೆ[6] /*koṭṭɛ*/ ನಾವಿ. 1. ಒಣಗಿ ಗಟ್ಟಿಯಾದ, ಗೋಟಾದ, 2. ದೊಡ್ಡ ಹರಳಿನಂತಿರುವ, ಹರಳು

ಹರಳಾದ, 3. ಗುಂಡಗಿನ ಹಾಗೂ ದೊಡ್ಡದಾದ. 1. dry and hard, 2. crystal like; solid and hard, 3. round and big. ವಾ: ಕೊಟ್ಟೆಕಾಯಿ ಅಡ್ಕೆಗೆ ಕ್ರಾಯ ಏರಿಟು.

ಕೊಟ್ಟೆ[7] /*koṭṭɛ*/ ನಾ. ಕಡುಬು, ಒಂದು ಬಗೆಯ ತಿನಿಸು. a steam boiled rice cake. ವಾ: ನಾಳೆ ಹೊತಾರೆಗೆ ಕೊಟ್ಟೆ ಮಾಡ್‌ನೊ.

ಕೊಟ್ಟೆಕಣ್ಣ್ /*koṭṭɛkaṇṇɨ*/ ನಾ. ಗುಂಡಗಿನ ದೊಡ್ಡ ಕಣ್ಣು. a big and round eye. ವಾ: ಅಂವಂದ್ ಕೊಟ್ಟೆಕಣ್ಣ್.

ಕೊಟ್ಟೆಕಮ್ಮು /*koṭṭɛkammu*/ ನಾ. ಬಲಿತ, ಹಳೆಯ ಕಂಗಿನ ಮರ. an old, fully grown areca nut palm. ವಾ: ಕೊಟ್ಟೆಕಮ್ಮು ಬೀಳಿಕಾವುಟು.

ಕೊಟ್ಟೆಕಲ್ಲ್ /*Koṭṭɛkallɨ*/ ನಾವಿ. ದೊಡ್ಡ ಹರಳಿನಂತಿರುವ ಕಲ್ಲು. solid and hard crystal like stone. ವಾ: ಹಳ್ಳಲಿ ಬರಿ ಕೊಟ್ಟೆ ಕಲ್ಲ್‌ಗಳೆ.

ಕೊಟ್ಟೆಕಾಯಿ ಕಟ್ಟ್ /*koṭṭɛka:yi kaṭsɨ*/ ನಾವಿ. 1. ನಿಧನ ಹೊಂದು, 2. ಸತ್ತು ಹೋಗು, 3. ಶಾಪ ಇಡುವುದು. to die. ವಾ: ಕಾಯ್ಲಲಿ ನರ್‌ಳಿ ನರ್‌ಳಿ ಕೊಟ್ಟೆಕಾಯಿ ಕಟ್ಟಲಿ.

ಕೊಟ್ಟೆಕಾಯಿ[1] /*koṭṭɛka:yi*/ ನಾವಿ. ಮುರುಟಿದ ಹಾಗೂ ಒಣಗಿದ ವಸ್ತು. dried and shrunk object. ವಾ: ಕೊಟ್ಟೆಕಾಯಿ ಅಗೆಕೆ ಕಸ್ಟ. ಪ: ಕೊಟ್ಟಾಯಿ; ಕೊಟ್ಟಯಿ(ತು)

ಕೊಟ್ಟೆಕಾಯಿ[2] /*koṭṭeka:yi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಪೆರುವಾಜೆ ಗ್ರಾಮದ ಜಾಗ. a locality in Peruvaje village in Sullia Taluk of Dakshina Kannada District.

ಕೊಟ್ಟೆಗಣ /*koṭṭɛgaṇa*/ ನಾ. ತಲೆ ಚಪ್ಪಟೆಯಾಕಾರದ ಒಂದು ವಿಧದ ಮೀನು. a flathead fish. ವಾ: ಕೊಟ್ಟೆಗಣತ ಒಂದ್ ತರದ ಮೀನ್.

ಕೊಟ್ಟೆಪಿಜಿನ್ /*koṭṭɛpijinɨ*/ ನಾ. ತನ್ನ ಕಡಿತದಿಂದ ತೀವ್ರ ನೋವನ್ನುಂಟುಮಾಡುವ ದೊಡ್ಡಜಾತಿಯ ಕಪ್ಪು ಇರುವೆ. a big black ant (the bite of which causes severe pain). ವಾ: ಕೊಟ್ಟೆಪಿಜಿನ್ ಕಚ್ಚಿ ಬೇನೆ ಬಾರಿ ಬೇನೆ ಅದೆ. ಪ: ಕೊಟ್ಟೇರಿ ಪಿಜಿನ್

ಕೊಟ್ಟೆರಾ /*koṭṭɛra:*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೊಟ್ಟೆಹೇನ್ /*koṭṭɛhɛ:nɨ*/ ನಾ. 1. ದೊಡ್ಡ ಹೇನು, 2. ಕುಂಟೆ ಹೇನು. a large louse. ವಾ: ನಿನ್ನ ತಲೆಲಿ ನೋಡ್ ಕೊಟ್ಟೆಹೇನ್.

ಕೊಟ್ಟೊ[1] /*koṭṭɔ*/ ನಾ. 1. ಕೊಟ್ಟಿದ್ದಾರೆ, 2. ಕೊಟ್ಟರು. 1. have given, 2. gave. ವಾ: ದೈಲಿದ್ದ ಹೂನ ಕೇಳ್‌ದಂಗೆನೆ ಕೊಟ್ಟೊ. ಪ: ಕೊಟ್ಟವೆ – ಕೊಡುತ್ತಾರೆ; ಕೊಟ್ಟೊಳ – ಕೊಟ್ಟಿದ್ದಾರೆ/ಕೊಟ್ಟಿದ್ದೀಯ; ಕೊಟ್ಟೊಳರಿ – ಕೊಟ್ಟಿದ್ದೀರ; ಕೊಟ್ಟೊಳರಿಯಾ – ಕೊಟ್ಟಿದ್ದೀರಾ; ಕೊಟ್ಟೋಳೊ – ಕೊಟ್ಟಿದ್ದಾರೆ

ಕೊಟ್ಟೊ[2] /*koṭṭɔ*/ ನಾ. ಬೇಟೆಯಲ್ಲಿ ಸಹಾಯ ಮಾಡಿದವರಿಗೆ ಕೊಡುವ ಮಾಂಸದ ಪಾಲು. a share of meat of hunted animals given to those who assisted in hunting. ವಾ: ಮಾಸ ಆದಂಗೆ ಕೊಟ್ಟ ಹಾಕಿ. ಪ: ಕೊಟ್ಟ

ಕೊಟ್ಟೊ[3] /*koṭṭɔ*/ ನಾ. 1. ಒಂದು ಬಗೆಯ ಚರ್ಮರೋಗ, 2. ಕುಷ್ಠ, 3. ಅಮಂಗಳ, 4. ಕೇಡುಕು, 5. ಅನಿಷ್ಟ, 6. ದೌರ್ಭಾಗ್ಯ. 1. leprosy, 2. misfortune, 3. bad luck;inauspiciousness, 4. adversity, 5. ill fortune, 7. ill luck. ವಾ: ಕೊಟ್ಟೊತೇಳ್‌ದು ಒಂದ್ ಚೆರ್ಮ ಕಾಯ್‌ಲ. ಪ: ಕೊಟ್ಟ

ಕೊಟ್ಟೊ[4] /*koṭṭɔ*/ ನಾ. 1. ಕೆಲವು ಪರಿಶಿಷ್ಟ ಸಮುದಾಯದವರ ಸಾಂಪ್ರದಾಯಿಕ ಮನೆಗಳು, 2. ಗುಡಿಸಲುಗಳು. 1. a traditional house of certain scheduled communities, 2. a hut. ವಾ: ಅವೆಲ್ಲ ಕೊಟ್ಟೊಲೇ ಇರ್‌ದುಗಡ. ಪ: ಬೊಟ್ಟೊ/ ಬೊಟ್ಟ

ಕೊಟ್ಟೊವು /*koṭṭɔvu*/ ನಾ. 1. ಕೊಟ್ಟವರು, 2. ನೀಡಿದವರು. someone who gave. ವಾ: ಜಾಗೆ ಕೊಟ್ಟೊವುಕೆ ಗೊತ್ತಿದ್ದದೆ.

ಕೊಟ್ಟ್ ಕತ್ತಿ ಬಾಳ್ /*koṭṭɨ katti ba:ḷɨ*/ ನಾ. ಕಾಡಿನಲ್ಲಿ ದೊರೆಯುವ ಹಿರಿಯರು ಇಟ್ಟ ವಸ್ತುಗಳು. a four-inch blade, found in the forest. ವಾ: ಕೊಟ್ಟ್ ಕತ್ತಿ ಬಾಳ್ ಸಿಕ್ತ್.

ಕೊಟ್ಟ್ ಗುದ್ದೊಲಿ[1] /*koṭṭɨ guddɔli*/ ನಾ. 1. ಗುದ್ದಲಿ, 2.

ಮಣ್ಣನ್ನು ಅಗೆದು ಹಾಕುವ ಸಾಧನ. 1. a spade, 2. a spade. ವಾ: ಕೊಟ್ಟ್ ತಕಂಡ್ ದೈ ನೆಡಿಕೆ ಗುಂಡಿ ತೆಗೆದು.

ಕೊಟ್ಟ್ ಗುದ್ದೊಲಿ^{2} /*koṭṭi guddɔli*/ ನಾ. 1. ಒಂದು ಜಾತಿಯ ಪಕ್ಷಿ, 2. ಹಂಗನ ಪಕ್ಷಿ, 3. ನವಿಲು ಮೊದಲಾದ ಪಕ್ಷಿಗಳ ತಲೆಯ ಮೇಲಿರುವ ಜುಟ್ಟು(ಶಿಖೆ). 1. a variety of bird, 2. a bird, 6. drum-a musical instrument, 3. peafowl crest.

ಕೊಟ್ಟ್ ಗುದ್ದೊಲಿ^{3} /*koṭṭi guddɔli*/ ನಾ. ಅಕ್ಷರಗಳ ತಲೆಕಟ್ಟು. sign used with kannada letters.

ಕೊಟ್ಟ್^{1} /*koṭi*/ ನಾ. 1. ಕೊಟ್ಟು, 2. ನೀಡಿ. giving. **ಕೊಡಿಕಾಗದವುಕೆ ಕೊಟ್ಟ್ ನೋಡು, ಇಕ್ಕಿಕಾಗದವುಳಿಗೆ ಇಕ್ಕಿ ನೋಡು(ಗಾ).** ವಾ: ಕೆಲ್‌ಸದವ್‌ಕೆ ಸಂಬಳ ಕೊಟ್ಟ್ ಬಂದೊ.

ಕೊಟ್ಟ್^{2} /*koṭṭi*/ ನಾ. 1. ಅಕ್ಷರಗಳ ಮೇಲ್ಭಾಗದಲ್ಲಿ ಕೊಡುವ ಕೊಂಬು, 2. ತಲೆಕೊಟ್ಟು. a hook shaped sign used with letters of alphabet. ವಾ: ಅಕ್ಷರದ ಮೇಲೆ ಸೆರಿಯಾಗಿ ಕೊಟ್ಟ್ ಕೊಡು.

ಕೊಟ್ಟ್‌ಕುಡ್ಪ /*koṭṭi kuḍpa*/ ನಾ. 1. ಮರಕುಟಿಕ, 2. ಮರಕುಟಿಗ, 3. ಮರದ ಪೊಟರೆಯಲ್ಲಿ ವಾಸಿಸುವ ಹಕ್ಕಿ, 4. ಕಟ್ಟಿಗೆಗೆ ತೂತು ಹಾಕುವ ಪಕ್ಷಿ. a woodpecker. ವಾ: ಕೊಟ್ಟ್‌ಕುಡ್ಪ ಮರಲಿ ಕುದ್ಕಂಡ್ ಕುಡ್ಡಿದೆ.

ಕೊಟ್ರಿಞ್ಞ /*koṭriɲɲa*/ ನಾ. 1. ಒಂದು ಜಾತಿಯ ಹಕ್ಕಿ, 2. ಮರಕುಟಿಗ. 1. a bird, 2. a woodpecker. ವಾ: ಕೊಟ್ರಿಞ್ಞಂತೇಳ್‌ದು ಒಂದ್ ಹಕ್ಕಿ.

ಕೊಟ್ರೆ /*koṭrɛ*/ ನಾ. 1. ಕೊಟ್ಟರೆ, 2. ನೀಡಿದರೆ. if given. ವಾ: ದುಡ್ಡ್ ಕೊಟ್ರೆ ಯಾರ್ ಬೇಡಂತೇಳಿವೆ. ಪ: ಕೊಟ್ರಾಕಿಲೆ – ಕೊಟ್ಟರೆ ಆಗುವುದಿಲ್ಲ

ಕೊಡಂಗೆ^{1} /*koḍaŋgɛ*/ ನಾ. ಸಣ್ಣ ಗದ್ದೆ. a small field/ farm. ವಾ: ಕೊಡಂಗೆಲಿ ನೀರ್ ತುಂಬಿ ಬಂದುಟು.

ಕೊಡಂಗೆ^{2} /*koḍaŋgɛ*/ ನಾ. ಗಂಡಸರ ಕಿವಿಯ ಆಭರಣ. an ornament worn by men to their ears. ವಾ: ಹೈದನ ಕೆಬಿಗೆ ಕೊಡಂಗೆ ಕುತ್ಯೊಳೊ.

ಕೊಡಂಗೆ^{3} /*koḍaŋge*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಎಡಮಂಗಲ ಗ್ರಾಮದ ಜಾಗ. a locality in Edamangala village in Sullia Taluk of Dakshina Kannada District.

ಕೊಡಂಚಡ್ಕ /*koḍaɲcaḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಮರಪಡ್ನೂರು ಗ್ರಾಮದ ಜಾಗ. a locality in Amarapadnuru village in Sullia Taluk of Dakshina Kannada District.

ಕೊಡಕಡ /*koḍakaḍa*/ ನಾ. 1. ಕೊಡಬೇಕಂತೆ, 2. ನೀಡಬೇಕಂತೆ. it seems one should give. **ಅಪ್ಪ ಹೇಳ್ಯೊಳೊ ಒಂದ್ ಸೇರ್ ಕುಡು ಕಡ ಕೊಡಕಡ.** ವಾ: ಕೊಡೆ ಕೊಡೊಕಡ.

ಕೊಡಕ್ /*koḍakɨ*/ ನಾ. 1. ಕೊಡಬೇಕು, 2. ಕೊಡಬಹುದು. 1. should give, 2. may give. ವಾ: ಕೂಸುಗೆ ಅನ್ನ ಕೊಡಕ್. ಪ: ಕೊಡಕಾಯ್ತ್ – ಕೊಡಬಹುದಿತ್ತು; ಕೊಡಕಾರೆ – ಕೊಡಬೇಕಾದರೆ

ಕೊಡಗದ್ದೆ /*koḍagaddɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೊಡಗನ /*koḍagana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೊಡಪಾನ /*koḍapa:na*/ ನಾ. 1. ಬಿಂದಿಗೆ, 2. ನೀರು ತುಂಬುವ ಗುಂಡನೆಯ ಪಾತ್ರೆ, 3. ಕೊಡ, 4. ಮಣ್ಣು ಅಥವಾ ಲೋಹದಿಂದ ಮಾಡಿದ ಕೊಡ. 1. a pot, 2. a vessel to carry water, 3. pot, 4. a clay pot, 5. a clay or a metal pot. ವಾ: ಕೊಡಪಾನಲಿ ನೀರ್ ತುಂಬಿ ತಾದು.

ಕೊಡಪಾಲು /*koḍapa:lu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೊಡಪ್ಪಾಲ /*koḍappa:la*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ನೆಲ್ಲೂರು ಕೆಮ್ರಾಜೆ ಗ್ರಾಮದ ಜಾಗ. 1. family, 2. lineage, 3. a locality in Nelluru Kemraje village in Sullia Taluk of Dakshina Kannada District.

ಕೊಡವತಿ /*koḍavati*/ ನಾ. ಜಾತಿವಾಚಕ ಮಹಿಳೆ. a Kodava female. ವಾ: ಕೊಡವತಿ ಇತ್ತಳೆ ಬಂದದೆ.

ಕೊಡಾರಿ /*koḍa:ri*/ ನಾ. 1. ಕೊಡಲಿ, 2. ಮರ, ಕಟ್ಟಿಗೆ ಮೊದಲಾದವುಗಳನ್ನು ಕಡಿಯಲು ಬಳಸುವ ಕಬ್ಬಿಣದ ಸಾಧನ, 3. ಪರಶು, 4. ಕುಠಾರ, 5. ಕೊಡ್ಲಿ. 1.

an axe, 2. a metal blade with wooden handle to cut trees, 2. an axe, 3. an axe, 4. an axe. ವಾ: ಸೌದೆ ಒಡೆಕೆ ಕೊಡಾರಿ ಬೇಕಲ. ಪ: ಕೊಡರಿ

ಕೊಡಿ ಉಟ್ಟು /*koḍi uṭṭu*/ ನಾ. 1. ನಾಲಗೆಯಲ್ಲಿನ ಮಚ್ಚೆ, 2. ನುಡಿದಂತೆ ಆಗು. 1. a black spot on the tongue, 2. occurrence of an incident as prediction. ವಾ: ಕೂಸಿಗೆ ಅನ್ನನ ಅರ್ದ್ ಕೊಟ್ಟೆಯ.

ಕೊಡಿ ಎತ್ತುದು /*koḍi ettudu*/ ನಾವಿ. 1. ಕೊನೆಯ ತನಕ ತಲುಪುವುದು, 2. ಕೊನೆಮುಟ್ಟುವುದು, 3. ಗುರಿ ಸಾಧಿಸುವುದು. 1. reaching the goal, 2. to reach the destination. ವಾ: ಅಂವ ಯಾವ ಕೆಲ್ಸನೂ ಕೊಡಿ ಎತ್ಸುದ್ಲೆ. ಪ: ಕೋಡಿ ಎತ್ತುಸುದು

ಕೊಡಿ ಎಲೆ ಪ್ರಸಾದ /*koḍi ɛlɛ bu:ḷya*/ ನಾವಿ. ಗೌರವಾನ್ವಿತರಿಗೆ ತುದಿ ಎಲೆಯಲ್ಲಿ ಕೊಡುವ ಪ್ರಸಾದ. the practice of sharing the sanctified food (prasada) on a plantain leaf to the respectable people. ವಾ: ಅವುಕೆ ಕೊಡಿ ಎಲೆ ಪ್ರಸಾದ ಕೊಟ್ಟೊ. ಪ: ಕೊಡಿ ಇರೆ ಬೂಳ್ಯ(ತು)

ಕೊಡಿ ಏರುದು /*koḍi ɛ:rudu*/ ನಾ. ದೇವಸ್ಥಾನದಲ್ಲಿ ದೇವರ ಉತ್ಸವದ ಸಮಯದಲ್ಲಿ ಧ್ವಜ ಏರುವುದು. hoisting or raising the flag of god in the temple during a ritualistic celebration. ವಾ: ಪೂಜೆಲಿ ಹೂವ್ ಹಾಕಿಕೆ ಕೊಡಿ ಏರುದು. ಪ: ಕೊಡಿ ಏರಿಟು, ಕೊಡಿ ಏರುನೆ(ತು)

ಕೊಡಿಕಟ್ಟ್‌ದು /*koḍikaṭṭidu*/ ನಾವಿ. ಬೆಳೆ, ತರಕಾರಿ, ಕಾಯಿ ಮೊದಲಾದುವುಗಳನ್ನು ಒಂದು ನಿಶ್ಚಿತ ಅವಧಿಯವರೆಗೆ ಯಾರೂ ಕೀಳದಂತೆ, ಕಳ್ಳರು ಕದಿಯದಂತೆ ಗಿಡವ ದೇವರುಗಳ ಹೆಸರಿನಲ್ಲಿ ಘೋಷಿಸಿ ಗ್ರಾಮ ದೈವಕ್ಕೆ ಅಥವಾ ಕುಟುಂಬ ದೈವಕ್ಕೆ ಪ್ರಾರ್ಥನೆ ಸಲ್ಲಿಸಿ ಸಾಂಕೇತಿಕವಾಗಿ ನಿಷೇಧವನ್ನು ಸೂಚಿಸುವ ಸೊಪ್ಪು, ಚಿಗುರು, ತೆಂಗಿನ ಗರಿ ಮೊದಲಾದುವುಗಳನ್ನು ಕಟ್ಟುವುದು. a practice of tying leaves, tender coconut fronds or any other objects to crops, vegetables, etc. as an indicator of a vow which is made by invoking a village deity or a house deity, so that the crop, vegetables, fruit, etc. are not be reaped, cut or. ವಾ: ಬೆಳೆ, ತರ್‌ಕಾರಿನ ಯಾರೂ ಕದೆಕಾಗದ್‌ತ ದೇವ್‌ರಿಗೆ ಹೇಳಿಕಂಡ್ ಕೊಡಿ ಕಟ್ಟ್‌ದು.

ಕೊಡಿನಾಟಿ /*koḍina:ṭi*/ ನಾ. ಗದ್ದೆ ಮಧ್ಯದಲ್ಲಿ ಮೂರು ನುಲಿಗಳ ನೆಟ್ಟಗಿನ ಸಾಲು. a straight line with three strands in the middle of a farm. ವಾ: ಕೊಡಿನಾಟಿ ನಾವೆ ಮನೆವು ಸೇರಿ ಮಾಡ್ದೊ.

ಕೊಡಿಬತ್ತ /*koḍibatta*/ ನಾ. 1. ದಂಡೆಯ ತುದಿಯ ಭತ್ತ, 2. ಅರೆಜಳ್ಳು ಭತ್ತ. Inferior variety of paddy, containing chaff. ವಾ: ಕೊಡಿ ಬತ್ತ ಪ್ರೇಜನ ಇಲ್ಲೆ. ಪ: ಜಳ್ಳುಬತ್ತ

ಕೊಡಿ ಬಾಳ್‌ಲೆ /*koḍi ba:ḷɨlɛ*/ ನಾ. 1. ಬಾಳೆಗಿಡದ ಎಲೆಯ ತುದಿಭಾಗ, 2. ತುದಿ ಎಲೆ. the upper portion of a plantain leaf (used to serve food). ವಾ: ದೇವ್‌ರಿಗೆ ನೈವೇದ್ಯ ಇಸಿಕೆ ಕೊಡಿಬಾಳೆ ಬೇಕ್.

ಕೊಡಿ ಮುಟ್ಟ /*koḍi muṭṭa*/ ನಾ. 1. ಮೇಲಿನವರೆಗೆ, 2. ತುದಿಯವರೆಗೆ, 3. ತುತ್ತತುದಿ. 1. until the top, 2. until the edge, 3. the end. ವಾ: ಮರದ ಕೊಡಿ ಮುಟ್ಟ ಹತ್ತಿಕಾದುಲೆ.

ಕೊಡಿ[1] /*koḍi*/ ನಾ. 1. ಕೊಡಲಿ, 2. ಮರ, ಕಟ್ಟಿಗೆ ಮೊದಲಾದವುಗಳನ್ನು ಕಡಿಯಲು ಬಳಸುವ ಕಬ್ಬಿಣದ ಸಾಧನ, 3. ಪರಶು. 1. an axe, 2. a metal blade with wooden handle to cut trees, 3. an axe. ವಾ: ಮರದ ಕುಂಟೆನ ಕೊಡಿಲಿಲಿ ಒಡೆಯಕು. ಪ: ಕೊಡಿಗೆ – ತುದಿಗೆ

ಕೊಡಿ[2] /*koḍi*/ ನಾ. 1. ನೀಡಿ, 2. ಹಂಚಿ. 1. to give, 2. to distribute. ವಾ: ನಂಗೆ ಹಞ್ಞ ಜೇನ್ ಕೊಡಿ, ಸೀತ ಆವುಟು.

ಕೊಡಿ[3] /*koḍi*/ ನಾ. 1. ತುದಿ, 2. ಮೇಲೆ. 1. tip (the end), 2. on top. ವಾ: ಎಡೆ ಹಾಕಿಕೆ ಕೊಡಿ ಬಾಳೆಲೆನೆ ಬೇಕಾದ್ಮ.

ಕೊಡಿ[4] /*koḍi*/ ನಾ. ಉತ್ಸವ, ಧಾರ್ಮಿಕ ವಿಧಿ, ಮದುವೆ ಮೊದಲಾದ ಸಂದರ್ಭಗಳಲ್ಲಿ ಮಡಿವಾಳನು ಅವು ನಡೆಯುವ ಸ್ಥಳದ ಮೇಲ್ಗಡೆ ಚಪ್ಪರಕ್ಕೆ ಬಿಡಿಸಿ ಕಟ್ಟುವ ಮಡಿಮಾಡಿದ ಬಿಳಿ ಬಟ್ಟೆ. a ritually purified white cloth spread and tied by the

washerman beneath the pandal over the place where temple festival, religious performances, marriage etc take place. ವಾ: ಮೊಡಿವಾಳ ಮೊದುವೆಲಿ ಕೊಡಿ ಕಟ್ಟುದು.

ಕೊಡಿ[5] /*koḍi*/ ನಾ. ದೇವಸ್ಥಾನದ ಧ್ವಜ. flag. ವಾ: ಕೊಡಿ ಏರ್ದ ಮೇಲೆ ಮರ ಹತ್ತುಬಡಿ.

ಕೊಡಿ[6] /*koḍi*/ ನಾ. ಸ್ಥಳನಾಮ ಘಟಕ. a place. ವಾ: ಆಚೆ ಕೊಡಿಂದ ಈಚೆ ಕೊಡಿವರೆಗೆ. ಪ: ಕೊಡಿಗೆ – ಮೂಲೆಯವರೆಗೆ

ಕೊಡಿ[7] /*koḍi*/ ನಾ. ಸ್ವಲ್ಪ. little. ವಾ: ಮಕ್ಕ ಕೊಡಿ ಕೊಡಿನೆ ಉಂಬೊದು.

ಕೊಡಿ[8] /*koḍi*/ ನಾ. 1. ಚಿಗುರು, 2. ಬಳ್ಳಿಯ ತುದಿ 4 ಚಿಗುರು, 3. ಕುಡಿ. 1. top of a plant, 2. sprout, 5. Tender shoot of a plant. **ಕಾಯರ ಮರದ ಕಡೆ ಕೊಡಿ ಒಂದೆ(ಗಾ).** ವಾ: ತೊಳ್ಸಿ ಕೊಡಿ. ಪ: ಕೊಡಿ ಕೊಡಿ ಪೂರ – ತುದಿಗಳೆಲ್ಲ

ಕೊಡಿಕಣ್ಣ್ /*koḍikaṇṇi*/ ನಾವಿ. 1. ಕಣ್ಣಿನ ತುದಿ, 2. ಓರೆನೋಟ. 1. the edge of an eye, 2. a side glance. ವಾ: ಅವುಳು ನಿನ್ನ ಕೊಡಿಕಣ್ಣ್‌ಲಿ ನೋಡ್‌ದೆ.

ಕೊಡಿಕನ /*koḍikana*/ ನಾ. ಕೊಡುವಾಗ. while giving. ವಾ: ಸಾಂಕಿದ ಕೊತ್ತಿ ಮರಿನ ಕೊಡಿಕನ ಬೇಜಾರಾತ್. ಪ: ಕೊಡಿಕೆ – ಕೊಡಲು; ಕೊಡಿಕೆಂತ – ಕೊಡಲೆಂದು; ಕೊಡಿಕೆಲ್ಲೆ – ಕೊಡಲಿಕ್ಕಿಲ್ಲ; ಕೊಡಿಕಾಗದ್ – ಕೊಡಬಾರದು;

ಕೊಡಿಕಾದು /*koḍika:du*/ ನಾ. 1. ಕೊಡಬೇಕಾಗಬಹುದು, 2. ಕೊಡಬೇಕಾಗುತ್ತದೆ. 1. may have to give, 2. will have to give. ವಾ: ಹಬ್ಬಕೆ ಇನ್ನೂ ಹಣ್ಣ ಅಕ್ಕಿ ಕೊಡಿಕಾದು.

ಕೊಡಿಕಾಲ್ /*koḍika:li*/ ನಾ. 1. ಕಾಲಿನ ತುದಿ, 2. ತುದಿಗಾಲು. 1. end-fee, 2. the forend of a foot. ವಾ: ಕೊಡಿಕಾಲ್‌ಗೆ ಉಂಬುಳು ಕಚ್ಚಿದ್.

ಕೊಡಿಕಿಲೆ /*koḍikilɛ*/ ನಾ. ಕೊಡಲಾರೆ. can't give. ವಾ: ನಾ ದುಡ್ಡು ಕೊಡಿಕಿಲೆ.

ಕೊಡಿಗೆ[1] /*koḍigɛ*/ ನಾ. 1. ಕೊಡುಗೆ, 2. ದಾನ, 3. ಕೊಡುವಿಕೆ, 4. ಕಾಣಿಕೆ, 5. ನೀಡುವಿಕೆ. 1. donation, 2. charity, 3. to give, 4. a gift, 5. giving. ವಾ: ಹಬ್ಬಕೆ ಕೊಡಿಗೆ ಕೊಟ್ಟೊ.

ಕೊಡಿಗೆ[2] /*koḍigɛ*/ ನಾ. 1. ಮೇಲೆಗೆ, 2. ತುದಿಗೆ. 1. to the top, 2. to the end. ವಾ: ಮರದ ಕೊಡಿಗೆ ಹತ್ತಿದ್. ಪ: ಕೊಡಿಂದ – ಮೇಲಿನಿಂದ; ಕೊಡಿನ – ತುದಿಯ; ಕೊಡೀಲಿ – ಮೇಲೆ

ಕೊಡಿನೀರು /*koḍini:ru*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಎಡಮಂಗಲ ಗ್ರಾಮದ ಜಾಗ. a locality in Edamangala village in Sullia Taluk of Dakshina Kannada District.

ಕೊಡಿಪ್ಪಾಡಿ ಗುತ್ತು /*koḍippa:ḍi guttu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೊಡಿಬಲಿ /*koḍibali*/ ನಾ. ಧ್ವಜ ಏರಿಸುವುದಕ್ಕಾಗಿ ಮಾಡಿದ ಧ್ವಜಲಾಂಛನವನ್ನು ಹೊತ್ತುಕೊಂಡು ದೇವರ ಸುತ್ತ ಪ್ರದಕ್ಷಿಣೆ ಬರುವ ಆಚರಣೆ. a ritual of circumambulating the deity carrying the temple flag before hoisting it. ವಾ: ದೇಸ್ತಾನಲಿ ಕೊಡಿಬಲಿ ನಡ್‌ದದೆ.

ಕೊಡಿಬಾಗ /*koḍiba:ga*/ ನಾ. 1. ತುದಿಯಭಾಗ, 2. ಮೇಲಿನವರೆಗೆ. 1. a fraction of the apex, 2. until the top. ವಾ: ನಂಗೆ ಬಾಣೆದ್ ಕೊಡಿಬಾಗಕೆ ಹೋಗಿಬಾಕೆ ಬೊತ್ತ್.

ಕೊಡಿಬೆರ್‌ಳ್ /*koḍibɛriḷi*/ ನಾವಿ. 1. ತುದಿಬೆರಳು, 2. ಬೆರಳಿನ ತುದಿ. tip of a finger. ವಾ: ಕೊಡಿಬೆರ್‌ಳ್‌ಗೆ ಗಾಯ ಆದ್.

ಕೊಡಿಮರ /*koḍimara*/ ನಾ. ದೇವಾಲಯದ ಮುಂಭಾಗದಲ್ಲಿ ಇರುವ ಕಂಚು ಲೋಹದ ಹೊದಿಕೆ ಇರುವ ಎತ್ತರದ ಮರದ ಸ್ತಂಭ, ಜಾತ್ರೆಯ ಆರಂಭದ ದಿನ ಕೊಡಿ ಏರುವುದರೊಂದಿಗೆ ಜಾತ್ರೋತ್ಸವ. a flagpole in a temple, decked with bronze plates. ವಾ: ಅವೆಲ್ಲ ಕೊಡಿ ಮರದ ಹಕ್ಕಲೆ ನಿತ್ತೊಳೊ.

ಕೊಡಿಮೊದ್ದ್ /*koḍimɔddi*/ ನಾವಿ. 1. ಔಷಧೀಯ ಸಸ್ಯಗಳ ಚಿಗುರುಗಳಿಂದ ತಯಾರಿಸಿದ ಔಷಧಿ, 2. ಹಳ್ಳಿಮದ್ದು. 1. a medicine prepared with herbs, sprouts and creepers, 2. native medicine. ವಾ: ಕೊಡಿಮೊದ್ದ್ ಕುಡೆಕೆ ಹಣ್ಣ ಬಜ್ಜನೆ.

ಕೊಡಿಯಡ್ಕ /*koḍiyaḍka*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೊಡಿಯಾಲ ಬೈಲು /*koḍiya:la bailu*/ ನಾ. ದಕ್ಷಿಣ

ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಉಬರಡ್ಕ ಮಿತ್ತೂರು ಗ್ರಾಮದ ಜಾಗ. a locality in Ubaradka Mitturu village in Sullia Taluk of Dakshina Kannada District.

ಕೊಡಿಯಾಳ್ /*koḍiya:ḷi*/ ನಾ. 1. ಮುಂಪಂಕ್ತಿಯ ವ್ಯಕ್ತಿ, 2. ಮದುವೆ ಸಮಯದಲ್ಲಿ ಗಂಡಿನ ಮನೆಯಿಂದ ಹೆಣ್ಣಿನ ಕಡೆಯವರಿಗೆ ಅಧಿಕೃತ ಹೇಳಿಕೆ ಕೊಡುವ ವ್ಯಕ್ತಿ. a person at the front of any row. ವಾ: ದಿಬ್ಬಣದ ಕೊಡಿಯಾಳ್ ಯಾರ್? ಪ: ಕೊಡಿಯಾಳು

ಕೊಡಿಯೊಳು /*koḍiyɔḷu*/ ನಾ. ಸುದ್ದಿಯನ್ನು ತಲುಪಿಸುವವನು. a messenger. ವಾ: ಕೊಡಿಯೊಳು ಎಂತ ಸುದ್ದಿ ಉಗ್ಗಪ್ಪೊ.

ಕೊಡಿಹಬ್ಬ /*koḍ'ihabba*/ ನಾ. 1. ದೀಪಾವಳಿ ಹಬ್ಬ, 2. ಬಲೀಂದ್ರ ಹಬ್ಬ. 1. a festival of lights; Deepaavaḷi, 2. a festival in which King Bali is worshipped. ವಾ: ಕೊಡಿಹಬ್ಬಕೆ ನೆಂಟ್ರ್‌ಗಳೆಲ್ಲ ಮನೆಗೆ ಬಂದೊಳೊ.

ಕೊಡುನೆ /*Koḍunɛ*/ ಕ್ರಿ. ಕೊಡೆಂದು ಹುಡುಗಿಯೊಂದಿಗೆ ಕೇಳುವುದು (ಏವ). asking a girl to give something. ವಾ: ಒಮ್ಮೆ ನನ್ನ ರಿಬ್ಬನ್ ಕೊಡುನೆ ಸತಾಯ್‌ಸ್‌ಬಡ. **ಕೊಡುವನ** /*koḍuvana*/ ಕೊಡುತ್ತೀಯಾ? ಕೊಡಲು ಸಾಧ್ಯವೆ? 1. will you give, 2. can you give. ವಾ: ದುಡ್ಡು ಕೊಡುವನ? **ಕೊಡುವೊ** /*koḍuvɔ*/ 1. ಕೊಡುವರು, 2. ಕೊಡಬಹುದು. 1. they will give, 2. they may give. ವಾ: ನಂಗೆ ಗೊತ್ತ್‌ಲೆ ಹೆಂಗೆತ ಕೇಳಿರೆ ಮನಿ ಕೊಡುವೊ ಏನೋ.

ಕೊಡೆ ಕಣ್ಣಿ ಮೀನ್ /*koḍɛ kaṇṇi mi:ni*/ ನಾ. ಒಂದು ಬಗೆಯ ಮೀನು. a variety of fish. ವಾ: ಕೊಡೆ ಕಣ್ಣಿ ಮೀನ್‌ದ್ ಹೆಸ್‌ರ್‌ನ ನಾ ಇಂದೇ ಕೇಳ್‌ದ್.

ಕೊಡೆ ಬುಳ್ಗು /*koḍɛ buḷgu*/ ನಾವಿ. ಕೊಡೆ ಬಿಡಿಸು. opening the umbrella. ವಾ: ಮಳೆ ಹನ್ನಿದೆ ಕೊಡೆ ಬುಳ್ಗು. ಪ: ಕೊಡೆ ಬುಳ್ಗಿಕಂಡ್ – ಕೊಡೆಯನ್ನು ಬಿಡಿಸಿಕೊಂಡು

ಕೊಡೆ[1] /*koḍɛ*/ ನಾ. 1. ಕೊಡೆ, 2. ಛತ್ರಿ. an umbrella. **ಐಸ್ವರ್ಯ ಬಾಕನ ಅರ್ದ ರಾತ್ರಿಲಿ ಕೊಡೆ ಹಿಡ್ದಾಂಗೆ(ಗಾ). ಅವ್ವನ ಲಂಗದೊಳಗೆ ಅಪ್ಪನ ಕೈ – ಕೊಡೆ(ಒ).** ವಾ: ಕೊಡೆನ ಸೆರಿ ಹಿಡ್‌ಕನೆ.

ಕೊಡೆ[2] /*koḍɛ*/ ನಾ. ಕೊಡುವುದಿಲ್ಲ. will not give. **ನಾ ಕಡೆ ಕೊಡೆ, ಹಂದಿ ಮಾಪ್ಳೈ ತಿಂಬೊಲ್ಲೆ, ಕುಂಡತನ ಮೂರು ಪಾಲ್ ಮಾಡೊಮ(ನು).**

ಕೊಡೆಂಕಿರಿ /*koḍeŋkiri*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅರಂತೋಡು ಗ್ರಾಮದ ಜಾಗ. a locality in Arantodu village in Sullia Taluk of Dakshina Kannada District.

ಕೊಡೆಂಚಿ /*koḍɛŋci*/ ನಾ. 1. ಒಂದು ಜಾತಿಯ ಔಷಧೀಯ ಸಸ್ಯ, 2. ಕೊಡಸಿಗೆ. 1. a medicinal plant, 2. oval leaved Rose Bay (Wrightia antidysenterica). ವಾ: ಕೊಡೆಂಚಿತೇಳ್‌ದು ಒಂದ್ ಮೊದ್ದ್‌ನ ದೈ.

ಕೊಡೆಂಚಿಕಾರು /*koḍeɲcika:ru*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮಂಡೆಕೋಲು ಗ್ರಾಮದ ಜಾಗ. 1. family, 2. lineage, 3. a locality in Mandekolu village in Sullia Taluk of Dakshina Kannada District.

ಕೊಡೆಂಚಿಕಾರ್ /*koḍɛŋcika:ri*/ ನಾ. ಸ್ಥಳನಾಮ ಘಟಕ. Kodanchikar, a place.

ಕೊಡೆಕಣ್ಣ /*koḍɛkaṇṇa*/ ನಾ. ಒಂದು ಬಗೆಯ ಮೀನು. varieties of fish. ವಾ: ಕೊಡೆಕಣ್ಣ ಮೀನ್ ನೋಡಿಕೆ ಹೆಂಗಿದ್ದದೆ. ಪ: ಕೊಡ್ಯನತು)

ಕೊಡೆಕಲ್ಲು /*koḍɛkallu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೊಡೆಕಾಲ್ /*koḍeka:li*/ ನಾ. 1. ಕೊಡೆಯಕಾಲು, 2. ತೆಳ್ಳಗಿನ ಕಾಲು. curved handle of an umbrella. ವಾ: ಅವನ ಕಾಲ್ ಕೊಡೆಕಾಲ್‌ನಾಂಗಾಗುಟು.

ಕೊಡೆಕೋಲು /*koḍɛkɔ:lu*/ ನಾ. ದಿಬ್ಬಣದ ಮುಖ್ಯಸ್ಥನ ಗುರುತು. a staff held by the head of a wedding procession.

ಕೊಡ್[1] /*koḍi*/ ಕ್ರಿ. 1. ಕೊಡು, 2. ನೀಡು, 3. ಸಲ್ಲಿಸು. 1. to give, 2. give, 3. to present. **ಆರ್ ಕೊಟ್ರೆ ಅತ್ತೆಕಡೆ, ಮೂರ್ ಕೊಟ್ರೆ ಸೊಸೆಕಡೆ(ಗಾ).** ವಾ: ನನ್ನ ಟವುಲ್‌ನ ಇತ್ತ ಕೊಡ್. ಪ: ಕೊಡುಕುಂತ – ಕೊಡಬೇಕೆಂದು **ಕೊಡೊಕು** /*koḍɔku*/ ಕೊಡಬೇಕು. should give. ವಾ: ದೇವ್ರಿಗೆ, ದೆವ್ವಕೆತ ವರ್‌ಸೊಳು ಕೋಳಿ ಕೊಡೊಕು. **ಕೊಡ್ಕನ** /*koḍkana*/ 1.

ಕೊಡುವಾಗ, 2. ನೀಡುವಾಗ. while giving. ವಾ: ನೀರ್ ಕೊಡ್ಕನ ಸೂಸಿತ್/ತೂಸಿತ್.

ಕೊಡ್[2] /*koḍɨ*/ ನಾ. ಹಸ್ತಾಂತರಿಸು. to transfer. ವಾ: ಬೇಗ ತಿಂಡಿ ಕೊಡ್ ಹೊಟ್ಟೆಸ್ತದೆ.

ಕೊಡ್ಕಿ /*koḍki*/ ನಾ. 1. ಕೊಡವಿ, 2. ಒದರಿ. to shake out. ವಾ: ನಾಯಿ ಕೆಮಿನ ಕೊಡ್ಕಿ ನೀರ್‌ನೆಲ್ಲ ರಟ್ಟಿಸಿತ್. ಪ: ಕೊಡ್ಕಿ ಹಾಕುದು – ಒದರುವುದು/ಕೊಡವುದು

ಕೊಡ್ಕ್[1] /*koḍkɛ*/ ನಾ. 1. ಕೊಡಹು, 2. ಚದುರಿಸು, 3. ಜಾಡಿಸು, 4. ಕೊಡಪು. 1. to wipe off/to dust out, 2. to scatter, 3. to push/kick. ವಾ: ಅರ್ವೆನ ಕುಡ್ಸ್. ಪ: ಕುಡ್ಪು

ಕೊಡ್ಕ್[2] /*koḍkɨ*/ ನಾ. 1. ಒದರು, 2. ಕೊಡಹು. to shake out. **ಕೋಳಿಗೆ ಕೊಡ್ಕಿಲ್ಲೆ ನಾಯಿಗೆ ನಾಚಿಕೆ ಇಲ್ಲೆ(ಕೊಡ್ಕ್-ಜನನಾಂಗ)(ಗಾ).** ವಾ: ಅರ್ವೆನ ಹೊರೆಗೆ ಕೊಡ್ಕ್. ಪ: ಕೊಡ್ಕು – ಒದರು ಕೊಡ್ಕ್ – ಕೊಡಕು; ಕೊಡ್ಕುದು – ಕೊಡವುದು/ಕೊಡಕುವುದು;

ಕೊಡ್ಗ್ /*koḍgɨ*/ ನಾ. 1. ಕೊಡಗು, 2. ಕರ್ನಾಟಕದಲ್ಲಿರುವ ಸಣ್ಣ ಜಿಲ್ಲೆ, 3. ಹಸಿರು, ಬೆಟ್ಟ ಗುಡ್ಡಗಳಿಂದ ಕಂಗೊಳಿಸುವ ಪ್ರದೇಶ. 1. Kodagu (Coorg), 2. a small district of Karnataka, 3. a hilly-green region. **ಕೊಡ್ಗ್‌ನ ಬೆಡ್ಗಿ.** ವಾ: ಕೊಡ್ಗ್‌ನ ಹಸ್ರ್ ಮಂಜ್, ಬೆಟ್ಟ ಗುಡ್ಡ ನೋಡಿಕೆ ಎರ್ಡ್ ಕಣ್ಣ್ ಸಾಲ್‌ದ್. ಪ: ಕೊಡ್ಗ್‌ನ – ಕೊಡಗಿನ

ಕೊಡ್ಚಿ /*koḍci*/ ನಾ. ಸೌಜನ್ಯತೆ ಇಲ್ಲದ ಹೆಚ್ಚು ಚಟುವಟಿಕೆಯಿಂದ ಕೂಡಿದ ಹುಡುಗಿ. a discourteous, but a very active girl. ವಾ: ಅದ್ ಕೊಡ್ಚಿ ಗೂಡೆ. ಪ: ಕೊಡ್ಚಿದೆ – ನುಲಿಯುತ್ತಾಳೆ

ಕೊಡ್ಡಿಯ /*koḍḍiya*/ ನಾ. ನಾಯಕನಂತೆ ವರ್ತಿಸು. to act like a leader. **ಅಂವ ಬಾರಿ ಹರ್‌ಂಬ್‌ಳಿ ಕೊಡ್ಯ(ನು).** ವಾ: ಬಾರಿ ದೊಡ್ಡ ಕೊಡ್ಡಿಯನಂಗೆ ಆಡ್ದೆಪ. ಪ: ಕೊಡ್ಡಿಯನಂಗೆ – ಪುಡಾರಿಯಂತೆ

ಕೊಡ್ತ /*koḍɨta*/ ನಾ. 1. ಕೊಡೆಂದು, 2. ನೀಡು ಎಂದು. ask to give something. ವಾ: ಪೆನ್ನ್ ಕೊಡುತ ಆಗಲೆ ಹೇಳ್‌ದೆಲ. ಪ: ಕೊಡುಂತ – ಕೊಡು ಎಂದು; ಕೊಡೆಕುಂತ – ಕೊಡಬೇಕೆಂದು

ಕೊಡ್ತಿ /*koḍti*/ ನಾ. 1. ಕೊಡತಿ, 2. ಕಟ್ಟಿಗೆಯ ಸುತ್ತಿಗೆ, 3. ಕೊಡಂತಿ, 4. ಮುಟ್ಟಿ. 1. a hammer, 2. a wooden hammer, 3. a hammer, 4. a hammer. ವಾ: ಕಡೆಕಲ್ಲ್‌ಲಿ ಮಸಾಲೆ ಕಡೆಕನ ಕಾಯಿನ ಕೊಡ್ತಿಲಿ ಜಜ್ಜಿ ಹಾಕಿರಾತ್, ಬೇಗ ಸಣ್ಣ ಆದೆ ಇದರ್‌ಂದ ಕಾಯಿನ ಹೆರ್‌ಯಕುತ ಇಲ್ಲೆ.

ಕೊಡ್ತುಗುಳಿ /*koḍtuguḷi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೊಡ್ದು /*koḍdu*/ ಕ್ರಿ. 1. ಕೊಡುವುದು, 2. ನೀಡುವುದು. to give. ವಾ: ಈಗ ಅಲ್ಲಿ ಪ್ರಾಣಿಬಲಿ ಕೊಡ್‌ದು ನಿತ್ತುಟು. ಪ: ಕೊಡ್ತಿದ್ದೊ – ಕೊಡುತ್ತಿದ್ದರು. **ಕೊಡ್‌ದುಲೆ** /*koḍɨdulɛ*/ ಕೊಡುವುದಿಲ್ಲ. won't give. ವಾ: ಆ ಮನೆನ ನಾವು ಬಾಡ್‌ಗೆಗೆ ಕೊಡ್‌ದುಲೆ. **ಕೊಡ್ನೋ** /*koḍnɔː*/ ಕೊಡೋಣ. let us give. ವಾ: ಕರ್‌ಚಿಗೆ ಏನಾರ್ ಕೊಡ್ನೋ ಬುಡು.

ಕೊಡ್ಪ /*koḍpa*/ ನಾ. 1. ಕಡಿಯುವುದು, 2. ಕಚ್ಚು. to cut. ವಾ: ಅದ್ ಮರ ಕೊಡ್ಪ ಹಕ್ಕಿ.

ಕೊಡ್ಪಣ /*koḍpaṇa*/ ನಾ. 1. ಕೊಡಪಾನ, 2. ಕೊಡ. a pot. ವಾ: ಕೊಡ್ಪಣನ ಬೆಳ್‌ಗೊಕು.

ಕೊಡ್ಪ್ /*koḍpɨ*/ ಕ್ರಿ. 1. ಕುಟುಕು, 2. ಕುಕ್ಕು, 3. ಕಚ್ಚು. 1. to poke, 2. to peck at. **[1]. ಅಂವಂಗೆ ಹಾವ್ ಕೊಡ್ಪಿತ್, [2]. ಬೊಳ್ಳಿಮುಟ್ಟಿತ್ ಗಡ(ನು).** ವಾ: ಮರ ಕೊಡ್ಪ ಮರನ ಕೊಡ್ಪಿದೆ. ಪ: ಕೊಡ್ಪುದು – ಕುಟುಕುವುದು. **ಕೊಡ್ಪು** /*koḍpu*/ ಕುಕ್ಕು. to keep something forcefully. ವಾ: ಗಿಣಿಗ ಮರಲಿದ್ದ ಹಣ್ಣ್ ನ ಕೊಡ್ಪಿ ಹಾಕುದು. ಪ: ಕೊಡ್ಪಿತ್ – ಕುಕ್ಕಿತು/ ಕುಕ್ಕಿದನು; ಕುಕ್ಕಿದಳು; ಕೊಡ್ಪುದು – ಕುಕ್ಕುವುದು. **ಕೊಡ್‌ಪುದ್** /*koḍɨ pudɨ*/ 1. ಕುಟುಕುವುದು, 2. ಕುಕ್ಕುವುದು. pecking. **ಕೋಳಿ ಕೊಡ್ಪಿ ಕೊಡ್ಪಿ ತೀಂತ್(ನು).** ವಾ: ಹಕ್ಕಿಗ ಕೊಡ್‌ಪುದ್.

ಕೊಡ್ರ /*koḍra*/ ನಾ. ಕೊಡು ಎಂದು ಹುಡುಗನಲ್ಲಿ ಕೇಳುವುದು. asking a boy to give. ವಾ: ನಂಗೆ ಹಳ್ಳ ದುಡ್ಡು ಕೊಡ್ರ.

ಕೊಡ್ಲಿ /*koḍli*/ ನಾ. 1. ಕೊಡಲಿ, 2. ಪರಶು, 3. ಮರ, ಕಟ್ಟಿಗೆ ಮೊದಲಾದವುಗಳನ್ನು ಕಡಿಯುವ ಸಾಧನ. an axe. **ಉಗುರುಂದ ಆದಕ್ಕೆ ಕೊಡ್ಲಿ ಯಾಕೆ(ಗಾ).** ವಾ: ಕೊಡ್ಲಿಲಿ ಮರದ ಕುಂಟೆನ ಒಡೆದು.

ಕೊಡ್ಸಿತ್ /*koḍsiti*/ ಕ್ರಿ. ಕೊಡಿಸಿದನು. he bought it for me. ವಾ: ಹೈದ ಗೂಡೆಗೆ ಜ್ಯೂಸ್ ಕೊಡ್ಸಿತ್. ಪ:

ಕೊಡ್ಸನೊ – ಕೊಡಿಸೋಣ; ಕೊಡ್ಸಿನೆ – ಕೊಡೆಸುತ್ತೇನೆ; ಕೊಡ್ಸಿರೆ – ಕೊಡೆಸಿದರೆ; ಕೊಡ್ಸುದುಂತ – ಕೊಡಿಸುವುದೆಂದು. **ಕೊಡ್ಬಡ** /*koḍbaḍa*/ ಕೊಡಬೇಡ. don't give. ವಾ: ಅಂವ್ವನ ಕೇಳದೆ ಎಂತನು ಕೊಡ್ಬಡ. **ಕೊಡ್ಯಾಂತ** /*koḍya:nta*/ 1. ಕೊಡೆಂದು, 2. ಹಸ್ತಾಂತರಿಸು ಎಂದು. asking someone to give. ವಾ: ಅವುಳು ನನ್ನ ಸೀರೆನ ಉಡಿಕೆ ಕೊಡ್ಯಾಂತ ಕೇಳ್ತ್. **ಕೊಡ್ಸು** /*koḍsu*/ ಕೊಡಿಸು. to buy for someone. ವಾ: ಅಪ್ಪ ಪುಸ್ತಕ ಕೊಡ್ಸು. ಪ: ಕೊಡ್ಸದಿದ್ದರೆ – ಕೊಡಿಸದಿದ್ದರೆ. **ಕೊಡ್ಸ್** /*koḍsi*/ ನಾ. 1. ಕೊಡೆಸು, 2. ಕೊಡಿಸು. to buy. ವಾ: ಹೊಸದ್ ಅರ್ವೆ ಕೊಡ್ಸ್.

ಕೊಣಲೆ[1] /*kona:lɛ*/ ನಾ. ಭತ್ತದ ಗದ್ದೆಯಲ್ಲಿ ಬೆಳೆಯುವ ಒಂದು ಬಗೆಯ ಕಳೆ. a weed grown in paddy fields. ಪ: ಕುನಾಲ್, ಕುನಾಲು

ಕೊಣಲೆ[2] /*kona:lɛ*/ ನಾ. ಬೈಗುಳ ಪದ. an expletive. ವಾ: ಅಂವ ಒಂದ್ ಕೊಣಲೆ.

ಕೊಣಿ /*koṇi*/ ಕ್ರಿ. ಕುಣಿಯು. to dance. **ಕೊಣಿಯಕೆ ಗೊತ್ತಿಲ್ಲದವಂಗೆ ನೆಲ ಡೊಂಕ್(ಗಾ).** ವಾ: ಹೆಣ್ಮಕ ಕೊಣಿದು ನೋಡ್‌ನೆ ಅಲ್ಲಿ. ಪ: ಕೊಣಿಯಕು – ಕುಣಿಯಬೇಕು; ಕೋಣಿಯದು – ಕುಣಿಯುವುದು; ಕೋಣಿಯದು – ಕುಣಿಯುವುದು; ಕೋಣಿಯದೆ – ಕುಣಿಯದೆ. **ಕೋಣಿದು** /*koṇidu*/ ನಾ. ಕುಣಿಯುವುದು. dancing. ವಾ: ಮೊದುವೆ ಜಂಬರಲಿ ಎಲ್ಲೊವು ವಾಲಗಕೆ ಕೋಣಿದು ನೋಡಿಕೆ ಬಾರಿ ಪೊರ್ಲಿದ್ದದೆ.

ಕೊಣಿಯ /*koṇiya*/ ನಾ. 1. ಚುರುಕಿನವನು, 2. ಸುಮ್ಮನೆ ಇರಲಾರದವ, 3. ಚೇಷ್ಟೆಮಾಡುವ ಹುಡುಗ. 1. energetic/vigorous boy, 2. a hyperactive person, 3. a mischievous boy. ವಾ: ಕೊಣಿಯ ಬಾತ್ ಇನ್ನ್ ಸುಮ್ಮನೆ ಕೂರಿಕೆ ಬುಡ್ದುಲೆ.

ಕೊಣ್ /*koṇi*/ ನಾ. ಕೊಳ್ಳು, to buy. ವಾ: ಕುಂಕುಮನ ಕೊಣ್.

ಕೊಣ್ಕಂಡ್ /*koṇkaṇḍi*/ ನಾ. 1. ಕುಣಿದುಕೊಂಡು, 2 ನೆಗೆಯುತ್ತಾ. dancing. ವಾ: ಗೂಡೆ ಕೊಣ್ಕಂಡ್ ಕೊಣ್ಕಂಡ್ ಬಂದದೆ. ಪ: ಕೊಣ್ಕೊಂಡು – ಕುಣಿದುಕೊಂಡು

ಕೊಣ್ಚ /*koṇca*/ ನಾ. ಚುರುಕಿನವ. active.

ಕೊಣ್ಚಿ /*koṇci*/ ನಾ. 1. ಚುರುಕಿನವಳು, 2. ಸುಮ್ಮನೆ ಕುಳಿತಲ್ಲಿ ಕುಳಿತಿರಲಾರದವಳು, 3. ಚೆಲ್ಲು ಚೆಲ್ಲು ಹುಡುಗಾಟದ ಹರೆಯದ ಹುಡುಗಿ. 1. energetic/ vigorous girl, 2. a hyperactive girl, 3. mischievous young girl. ವಾ: ಕೊಣ್ಚಿ ಸುಮ್ಮನೆತ ಇರ್‌ದುಲೆ, ಕುದ್ದಲಿ ಕೂರ್‌ದುಲೆ.

ಕೊಣ್ತ /*koṇta*/ ಕ್ರಿ. ಕುಣಿತ. a dance. **ಕೊಣ್ದರೆ ಗಂಜಿ ಬೆಂದದ್ಯಾ(ಗಾ).** ವಾ: ನಾಕ್ ಕೊಣ್ತ ಹಾಕೊಮೊ. ಪ: ಕೊಣ್ತಗ – ಕುಣಿತಗಳು; ಕೊಣ್ತ್ – ಕುಣಿದನು/ಳು.

ಕೊಣ್ದದೆ /*koṇdadɛ*/ ಕ್ರಿ. ಕುಣಿಯುತ್ತಾನೆ/ಳೆ. he/she is (will be) dancing. **ಕಲ್ಲ್‌ನ ಮೇಲೆ ಕೊಣ್ದದೆ ತಂತಿ ಮೇಲೆ ಮಲ್ಗಿದೆ – ಅರ್ವೆ(ಒ).** ವಾ: ಹಬ್ಬಲಿ, ಮೊದ್ವೆಲಿ ಕೊಣ್ದದೆ. ಪ: ಕೊಣ್ದವೆ – ಕುಣಿಯುತ್ತಾರೆ; ಕೊಣ್ದಾಡುವೆ – ಕುಣಿದಾಡುತ್ತಾರೆ

ಕೊಣ್ಸ್ /*koṇsi*/ ಕ್ರಿ. ಕುಣಿಸು. to make someone dance. ವಾ: ಕಾಲ್ ಕೊಣ್ಸ್. ಪ: ಕೊಣ್ಸು – ಕುಣಿಸು. **ಕೊಣ್ಸಿತ್** /*koṇsiti*/ 1. ಕುಣಿಸಿತು, 2. ನಾಯಿ ಬಾಲ ಕುಣಿಸಿತು. 1. made some dance/move, 2. a dog wagged its tail. ವಾ: ನಾಯಿ ನಮ್ಮ ಕಾಂಬಕನ ಬಾಲ ಕೊಣ್ಸಿತ್. ಪ: ಕೊಣ್ಸಿತ್ – ಕುಣಿಸಿದನು; ಕುಣಿಸಿದಳು; ಕೊಣ್ಸಿನೆ – ಕುಣಿಸುತ್ತೇನೆ; ಕೊಣ್ಸಿವೆ – ಕುಣಿಸುತ್ತಾರೆ; ಕೊಣ್ಸುದು – ಕುಣಿಸುವುದು; ಕೊಣ್ಸೊಕು – ಕುಣಿಸಬೇಕು. **ಕೊಣ್ಸು** /*koṇsu*/ ನಾ. ಕುಣಿಯುವಂತೆ ಮಾಡು. to make someone dance. ವಾ: ಅಂವ ಹೇಳ್‌ದಂಗೆ ನಮ್ಮ ಕೊಣ್ಸುದು. ಪ: ಕೊಣ್ಸದ್ದರೆ – ಕುಣಿಸದಿದ್ದರೆ.

ಕೊತ್ತ /*kotta*/ ನಾ. ಆಧಾರ ಕಂಬ. a supporting pillar. ವಾ: ಮನೆಗೆ ಕೊತ್ತ ಬಲ ಇರೋಕು.

ಕೊತ್ತಂಬರಿ /*kottambari*/ ನಾ. ಪದಾರ್ಥಕ್ಕೆ ಬಳಸುವ ಸಂಬಾರ ಜಿನಸು. coriander. ವಾ: ಕೊತ್ತಂಬರಿ ಬಿತ್ತ್ ಬಿತ್ತಿದ್. ಪ: ಕೊತ್ತಂಬ್ರಿ – ಕೊತ್ತಂಬರಿ; ಕೊತ್ತೆಂಬೊರಿ – ಕೊತ್ತಂಬರಿ

ಕೊತ್ತಳಿಕೆ /*kottaḷikɛ*/ ನಾ. ಒಣಗಿದ ತೆಂಗಿನ ಸೋಗೆಯ ಬುಡ, ಸೌದೆಯಾಗಿ ಬಳಸುತ್ತಾರೆ. dried petiole of coconut leaf/fronds, petiole used as firewood. ವಾ: ಕೊತ್ತಳಿಕೆನ ತಕ ಸೊವ್ದೆಗೆ ಆದೆ. ಪ: ಕೊತ್ತೊಳ್ಕೆ; ಕೊತ್ತೊಳಿಕೆ

ಕೊತ್ತಿ /*kotti*/ ನಾ. 1. ಬೆಕ್ಕು, 2. ಮಾರ್ಜಾಲ. a cat.

1. ಅಂಡ್ ಸುಟ್ಟ ಕೊತ್ತಿನಂಗೆ ನಂಗೆ(ಗಾ), 2. ಒಳಗೆ ಕೊತ್ತಿದ್ ಕಾಟ, ಹೊರಗೆ ನಾಯಿದ್ ಕಾಟ(ಗಾ). ಕೊತ್ತಿ ಕಣ್ಮುಚ್ಚಿ ಹಾಲ್ ಕುಡ್ದಾಂಗೆ(ನು). ಬೊಳ್ಪಿಗೆ ಮಲ್ಗಿದೆ, ಕತ್ಲೆಗೆ ಒಡಾಡ್ದೆ – ಕೊತ್ತಿಗುಮ್ಮ(ಒ). ವಾ: ಕೊತ್ತಿ ಮೂರ್‌ತಿಂಗಳಿಗೊಮ್ಮೆ ಮರಿ ಹಾಕುದು. ಪ: ಕೊತ್ತಿಗೆ, ಪುಚ್ಚೆ(ತು). **ಕೊತ್ತಿಕಣ್ಣ್** /*kottikaṇṇɨ*/ 1. ಬೆಕ್ಕು ಕಣ್ಣು, 2. ಬೆಕ್ಕಿನ ಕಣ್ಣುಗಳಂತಿರುವ ಕಣ್ಣು, 3. ಕೆಂಚಗಣ್ಣು. 1. eyes of cat, 2. grey eyes (eyes that resembles the eyes of cat), 3. brown eyes. ವಾ: ಅವಳ್‌ದ್ ಕೊತ್ತಿಕಣ್ಣ್. **ಕೊತ್ತಿಪಾಡ್** /*kottipa:ḍɨ*/ ಬೆಕ್ಕಿನ ಪಾಡು. state/life of a cat. ವಾ: ಕೊತ್ತಿಪಾಡ್ ನೋಡಿಕಾಲೆ.

ಕೊತ್ತಿ ಗುಮ್ಮ /*kotti gumma*/ ನಾ. ಚಿಕ್ಕ ಜಾತಿಯ ಗೂಬೆ. a small owl. ವಾ: ಕೊತ್ತಿ ಗುಮ್ಮ ಕಾಡ್‌ಲಿ ಇದ್ದದೆ.

ಕೊತ್ತು /*kottu*/ ನಾ. 1. ಏಲಕ್ಕಿ ಗೊಂಚಲು, 2. ಏಲಕ್ಕಿ ಹಿಡಿಯುವ ಭಾಗ. bunch of cardamom. ವಾ: ಯಾಲ ಕೊತ್ತು ಸಣ್ಣದ್. ಪ: ಕೊತ್ – ಚಿರಿ

ಕೊತ್ತೋಳಿರ /*kotto:ḷira*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೊತ್ /*kottɨ*/ ನಾ. 1. ಕೋವಿಯ ಕುದುರೆ, 2. ಕೋವಿಯ ಕೇಪು ಒಡೆದು ಮದ್ದು ಗುಂಡು. 1. trigger of a gun, 2. shells of bullets. **ಒಳಗೆ ಕೊತ್ತಿದ್ ಕಾಟ, ಹೊರಗೆ ನಾಯಿದ್ ಕಾಟ(ಗಾ).** ವಾ: ಕೋವಿದ್ ಕೊತ್ತಿನ ಎಳ್‌ದ್ ನಿಲ್‌ಸಿದ ಮೇಲೆ ಕಳ್ಳನ ಎಳಿ. **ಕೊತ್ ಎಳೆದು** /*kottɨ ɛḷɛdu*/ ಕೋವಿಯ ಕೇಪು ಒಡೆಯಲು ಇರುವ ಕುದುರೆ ರೂಪದ ರಚನೆ. a trigger. ವಾ: ಕೊತ್ ಎಳೆಕೆ ಗೊತ್ ಬೇಕಲ.

ಕೊತ್ನಡ್ಕ /*kotnaḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಬಾಳುಗೋಡು ಗ್ರಾಮದ ಜಾಗ. a locality in Balagodu village in Sullia Taluk of Dakshina Kannada District.

ಕೊದಂಟಿ /*kodaṇṭi*/ ನಾ. 1. ಮರದ ಕೋಲು, 2. ಕಣೆ, 3. ಸುತ್ತಿಗೆಯಂತೆ ಉಪಯೋಗಿಸಬಹುದಾದ ಮರದ ಚಿಕ್ಕ ತುಂಡು, 4. ಕೊರಡು

ಮರದ ಸುತ್ತಿಗೆ, 5. ಅಕ್ಕಿ ಮುಡಿಕಟ್ಟುವಾಗ ಹಗ್ಗಕ್ಕೆ ಹೊಡೆಯಲು ಉಪಯೋಗಿಸುವ ಸಾಧನ. 1. wooden stick, 2. a piece of wood, 3. a piece of wood used as a hammer, 4. a wooden hammer, 5. a hand tool. **ಕೊಂಕ್‌ಣಿ ಎಮ್ಮೆಗೆ ಕೊದಂಟಿ ಮೊದ್ದ್(ಗಾ).** ವಾ: ದನಗ ಓಡಿ ಹೋಗದಂಗೆ ಕುತ್ತಿಗೆಗೆ ಕೊದಂಟಿ ಕಟ್ಟಿವೆ.

ಕೊದಿ[1] /*kɔdi*/ ನಾ. 1. ಅತಿಯಾಸೆ, 2. ಆಸೆ. 1. an intense desire, 2. desirous. ವಾ: ಹೊರೆಗೆ ಉಂಬಕೆ ಕುದ್ದಿದ್ದೆ ಕೊದಿ ಆಗಿರೊಕು, ಹಂಗಾಗಿ ಹೊಟ್ಟೆ ಬೇನೆ. **ಕೊದಿ ತೆಗೆದು** /*kɔdi tɛgɛdu*/ ದೃಷ್ಟಿ ನಿವಾಳಿಸು. to remove the evil eye/malicious eye on someone. ವಾ: ದಿಸ್ಟಿ ಆದರೆ ಕೊದಿ ತೆಗೆದು. ಪ: ಕೊದಿ ತೆಗೆವ್ – ಮಂತ್ರವಾದಿಗಳು. **ಕೊದಿ ತೆಗೆವ ಗೊಜ್ಜು** /*kɔdi tɛgɛva gojju*/ ಹೆಚ್ಚು ಆಹಾರ ತಿಂದು ಹೊಟ್ಟೆ ಉಬ್ಬರಿಸಿದರೆ ಮೆಣಸು, ಬೆಳ್ಳುಳ್ಳಿ, ಉಪ್ಪು, ಉಂಡೆ ಹುಳಿ ಮತ್ತು ನೀರುಳ್ಳಿ ಸೇರಿಸಿ ಮಾಡುವ ಜನಪದ ಮದ್ದು. a native medicine prepared by using pepper, garlick, salt, monkey jack fruit, and onion for stomach ailments. ವಾ: ಕೊದಿ ತೆಗೆವ ಗೊಜ್ಜುತ್ತೇಳಿರೆ ಉಂಡ್ ಹೆಚ್ಚಿ ಆಕನ ಹೊಟ್ಟೆ ಉಬ್ಬರಿಸಿರೆ ಮಾಡೊ ಮೊದ್. **ಕೊದಿ ಬಿದ್ದದೆ** /*kɔdi biddadɛ*/ ತಿನ್ನುತ್ತಿರುವಾಗ ಇನ್ನೊಬ್ಬನು ಆಸೆಯಿಂದ ನೋಡಿದ ಪರಿಣಾಮವಾಗಿ ಹೊಟ್ಟೆನೋವು ಮೊದಲಾದ ದುಷ್ಪರಿಣಾಮಗಳಾಗುವುದು. to cause an evil effect on someone by casting a covetous look at one's eating. ವಾ: ಉಂಬಕನ ನೋಡಿಕಂಡಿದ್ದರೆ ಕೊದಿ ಬಿದ್ದದೆತೇಳಿವೆ.

ಕೊದಿ[2] /*kɔdi*/ ಕ್ರಿ. 1. ಕುದಿಯು, 2. ಶಾಖದಿಂದ ಉಕ್ಕು. 1. to boil, 2. to spill. ವಾ: ನೀರ್ ಕೊದಿ ಬಂದದೆ. ಪ: ಕೊದಿವ – ಕುದಿಯುವ. **ಕೊದ್ದ** /*kodda*/ 1. ಕುದಿದ, 2. ಶಾಖದಿಂದ ಉಕ್ಕಿದ. 1. boiled, 2. spilled. ವಾ: ಕೊದ್ದ ಹಾಲ್ ನ ಒಲೆಂದ ಇಳ್ಸಿ ಕರೆಗಿಸಿ ಬಂದೆ. ಪ: ಕೊದ್ದಿಸಿ – ಕುದಿಸಿ; ಕೊದ್ದ್‌ಸಿ – ಕುದಿಸಿ; ಕೊದ್ದ್‌ಸ್ – ಕುದಿಸು; ಕೊದ್ದನೀರ್ – ಕುದಿಬಂದ ನೀರು. **ಕೊದ್ದ್‌ಕಂಡ್** /*kɔddɨ kɘṇḍɨ*/ ಕುದಿಯುತ್ತಿರುವ. boiling. ವಾ: ಹಾಲ್ ಕೊದ್ದ್‌ಕಂಡುಟ್ಟು. **ಕೊದ್ಯಕೆ** /*kodyakɛ*/ ಕುದಿ ಬರಲು. come to boil. ವಾ: ಗೈಪು ಕೊದ್ಯಕೆ ಸುರಾತ್. **ಕೊದ್ಸಿ** /*kodsi*/ ಕುದಿಸಿ. to boil. ವಾ: ಕೊದ್ಸಿ ಆರಿದ ನೀರ್ ಕುಡೆಕೆ ಬೇಕಿತ್.

ಕೊದಿಕೂಸು /*kɔdi ku:su*/ ನಾ. ಮೊದಲನೇ ಮಗು. a

first child. ವಾ: ಕೊದಿಕೂಸು ಗಂಡ್ ಕೂಸು. ಪ: ಕಡೀರಬಾಲೆ(ತು)

ಕೊದಿನೀರ್ /*kɔdini:rɨ*/ ನಾ. ಇನ್ನೊಬ್ಬರು ತಿನ್ನುವುದನ್ನು ಆಸೆಯಿಂದ ನೋಡಿದಾಗ ಬಾಯಿಯಲ್ಲಿ ಒಸರುವ ಜೊಲ್ಲು. to salivate when casting a covetous look at a person while eating. ವಾ: ಅಂವ ಹುಳಿ ತಿಂಬದು ನೋಡಿಕನ ಕೊದಿನೀರ್ ಬಾದು.

ಕೊದೆವ ನೀರ್ /*kodɛva ni:r*/ ನಾ. ಕುದಿಯುವ ನೀರು. boiling water. ವಾ: ಕೊದೆವ ನೀರ್ ಕಾಲಿಗೆ ಹೊಯ್‌ಕನ್ತ್.

ಕೊದ್‌ಂಬ್ /*kodɨmbɨ*/ ನಾ. ತೆಂಗಿನ ಹಿಂಗಾರದ ಹೊದಿಕೆ. made up of coconut flower. ವಾ: ತೆಂಗ್‌ನ ಮರಲಿ ಕೊದ್‌ಂಬ್ ನೋಡ್.

ಕೊದ್ದದೆ /*koddade*/ ಕ್ರಿ. ಕೋಪಗೊಳ್ಳು. to get angry. ವಾ: ಅಂವ ಸಿಟ್ಟ್‌ಲಿ ಕೊದ್ದದೆ.

ಕೊನಲೆ /*konalɛ*/ ನಾ. ಗದ್ದೆಯಲ್ಲಿ ಪೈರಿನ ಮಧ್ಯೆ ಬೆಳೆವ ಹುಲ್ಲು. grass grown in between paddy. **ಮಾವು ಬಿತ್ತಿ ಕೊನಲೆ ಕೊಯ್ದಂಗೆ(ಗಾ).** ವಾ: ಕೊನಲೆ ಪೈರ್ ನಡುಲಿ ಬೆಳ್‌ಕಂಡಿದ್ದದೆ. ಪ: ಕೊಣಲೆ

ಕೊನಿಕೆ /*konikɛ*/ ನಾ. ಕುಣಿಕೆ. a hook/a noose. ವಾ: ಅವುಳು ಕೊನಿಕೆ ಹಾಕಂಡ್ ಸತ್ತತ್.

ಕೊನೆ /*konɛ*/ ನಾ. 1. ಕೊನೆಯ, 2. ತುದಿ, 3. ಅಂತ್ಯ, 4. ಮುಕ್ತಾಯ, 5. ಮೂಲೆ. 1. last, 2. the edge, 3. the end, 4. over/completed, 5. a corner. ವಾ: ಇದೇ ಕೊನೆ ಮಾತ ನಿಂದ್.

ಕೊನೇ ಮೂಕು /*konɛ: mu:ku*/ ನಾವಿ. ಚೂಪಾದ ಮೂಗು. sharp nose. ವಾ: ಕೂಸುದ್ ಕೊನೇ ಮೂಕು.

ಕೊನ್ತ್ /*kɔntɨ*/ ಕ್ರಿ. 1. ಕುಣಿದನು, 2. ಕುಣಿದಳು, 3. ಕುಣಿಯಿತು. 1. he danced, 2. she danced, 3. it danced. ವಾ: ಗೂಡೆ ಒಳ್ಳ ಲಾಯ್ಕಲಿ ಕೊನ್ತ್. **ಕೊನ್ದು** /*kɔndu*/ 1. ಕುಣಿದು, 2. ನರ್ತನ ಮಾಡಿ, 3. ಜಿಗಿದು. to dance. ವಾ: ಕೊನ್ದು ಕೊನ್ದು ಸುಸ್ತ್ ಉಗ್ಗಪ್ಪ.

ಕೊನ್ನಡ್ಕ /*konnaḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಬಳ್ಪ ಗ್ರಾಮದ ಜಾಗ. a locality in Balpaa village in Sullia Taluk of Dakshina Kannada District.

ಕೊಪ್ಪಡ್ಕ /*koppaḍka*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕಲ್ಮಕಾರು ಗ್ರಾಮದ ಜಾಗ. 1. family, 2. lineage, 3. a locality in Kalmakar village in Sullia Taluk of Dakshina Kannada District.

ಕೊಪ್ಪತ್ತಡ್ಕ /*koppattaḍka*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಐವರ್ನಾಡು ಗ್ರಾಮದ ಜಾಗ. 1. family, 2. lineage, 3. a locality in Aivarnadu village in Sullia Taluk of Dakshina Kannada District.

ಕೊಪ್ಪದವ್ /*kɔppadavɨ*/ ನಾ. ದೂರದಲ್ಲಿರುವ ಮನೆಗಳು. nearby houses. ವಾ: ಅವ್ವ ಕೊಪ್ಪದವ್ ಹಕ್ಕಲೆ ಹೋಗೊಳೊ.

ಕೊಪ್ಪರಕಾಯಿ /*kɔpparaka:yi*/ ನಾ. 1. ಕೊಬ್ಬರಿ, 2. ಗೋಟು ತೆಂಗಿನಕಾಯಿ. 1. a copra, 2. dry coconut. ವಾ: ಕೊಪ್ಪರಕಾಯಿಲಿ ಮಿಟಾಯಿ ಮಾಡಕ್. **ಕೊಪ್ರಿಕಾಯಿ** /*kɔprika:yi*/ ನಾ. 1. ಒಣಕಾಯಿ, 2. ಕೊಬ್ಬರಿ. 1. dry coconut, 2. a copra. ವಾ: ಸಂಕ್ರಾಂತಿಗೆ ಕೊಪ್ರಿಕಾಯಿ,ಎಳ್ಳ್, ಬೆಲ್ಲ ತಂದ್ ಹಂಚೊಕು. ಪ: ಕೊಪ್ರಿಕಾಯಿನೂ – ಕೊಬ್ಬರಿನೂ; ಕೊಪ್ಪರಿಕಾಯಿ

ಕೊಪ್ಪರಿಗೆ¹ /*kɔpparigɛ*/ ನಾ. 1. ಸಿಂಹಾಸನ, 2. ಎತ್ತರದ ಪೀಠ, 3. ರಾಜರು ಕುಳಿತುಕೊಳ್ಳುತ್ತಿದ್ದ ಪೀಠ. a throne. ವಾ: ಹಸ್ ಹಗ್ಗ ಸುತ್ತಿ ಎಳ್ದ್ ನನ್ನ ಬೀಳ್ಸಿ ಕೊಂದುಬುಡ್ತಿತ್ತಲ್ಲ, ಸೊಲ್ಪದರ್‌ಲಿ ತೊಪ್ಪಿತ್.

ಕೊಪ್ಪರಿಗೆ² /*kɔpparigɛ*/ ನಾ. 1. ನಿಧಿ, 2. ಸಂಪತ್ತು, 3. ಐಶ್ವರ್ಯ, 4. ಹುದುಗಿಟ್ಟ ಧನ, 5. ನಿಕ್ಷೇಪ, 6. ಕಡಾಯಿ, 7. ಹಂಡೆ. 1. treasure, 2. wealth, 3. riches, 3. hidden treasure, 4. wealth secretly kept, 5. a large vessel/a vat, 6. a barrel, 7. a cauldron. ವಾ: ಅಂವ ಕೊಪ್ಪರಿಗೆ ಸಿಕ್ಕಿದಂಗೆ ಆಡ್‌ದೆ.

ಕೊಪ್ಪರಿಗೆ³ /*kɔpparigɛ*/ ನಾ. ಮದುವೆ ಸಮಾರಂಭಗಳಲ್ಲಿ ಅನ್ನ ಬೇಯಿಸಲು ಬಳಸುವ ಅಗಲ ಬಾಯಿಯ ಪಾತ್ರೆ. a large vessel with wide mouth, usually used to cook rice in weddings. ವಾ: ಕೊಪ್ಪರಿಗೆನ ಮೊದುವೆ ಮನೆಗಳ್‌ಲಿ ಬಳ್‌ಸುವೆ.

ಕೊಪ್ರಿಕೆ /*kɔprikɛ*/ ನಾ. 1. ಕೊಪ್ಪರಿಗೆ, 2. ನಿಧಿ, 3.

ಸಂಪತ್ತು, 4. ಐಶ್ವರ್ಯ, 5. ಹುದುಗಿಟ್ಟ ಧನ, 6. ನಿಕ್ಷೇಪ. 1. treasure, 2. wealth, 3. riches, 3. money that was hidden, 4. wealth secretly kept. ವಾ: ನಿಂಗೆಂತ ಕೊಪ್ರಿಕೆ ಸಿಕ್ಕಿತಾ? ಪ: ಕೊಪ್ರಿ

ಕೊಬ್ಬ್[1] /*kobbɨ*/ ನಾ. ಅಹಂಕಾರ ಪಡು. to have false pride. ವಾ: ಅಂವಂಗೆ ಈಗೀಗ ಬಾರಿ ಕೊಬ್ಬ್. ಪ: ಕೊಬ್ಬಿಟು – ಬಲಿತಿದೆ

ಕೊಬ್ಬ್[2] /*kobbɨ*/ ನಾ. 1. ದಪ್ಪನಾಗು, 2. ಸೊಕ್ಕುವುದು, 3. ಮೇದಸ್ಸು, 4. ಬಲಿಯು. 1. to become fat, 2. to grow proud, 3. intelligence, 4. to ripen. ವಾ: ಕುರಿ ಲಾಯ್ಕಲಿ ಕೊಬ್ಬಿಟು.

ಕೊಬ್ರಿ /*kobri*/ ನಾ. 1. ಕೊಬ್ಬರಿ, 2. ತೆಂಗಿನಕಾಯಿಯ ಒಳತಿರುಳು, 3. ಗೋಟುಕಾಯಿ, 4. ಒಣಗಿದ ಕಾಯಿ. 1. copra, 2. kernel, 3. kernel/flesh of coconut, 4. dry coconut. **ಸಣ್ಣವಿರ್ಕನ ತುಂಬಿದ ಕರೆ – ಎಳ್ನೀರ್, ತೆಂಗಿನ ಕಾಯಿ, ಕೊಬ್ರಿಕಾಯಿ(ಒ).** ವಾ: ಕೊಬ್ರಿನ ಹೆರ್‌ಯಕು. **ಕೊಬ್ಬರಿ** /*kobbari*/ ವಾ: ಕೊಬ್ಬರಿ ಮಿಟಾಯಿ ಮಾಡ್‌ನೊ. ಪ: ಕೊಬ್ಬರಿಕಾಯಿ

ಕೊಮ್ಮು[1] /*kommu*/ ನಾ. ಅಡಿಕೆ ಮರ. an areca nut palm. ವಾ: ಕೊಮ್ಮು ಗೆ ಹತ್ತಿಕೆ ಗೊತುಟ?

ಕೊಮ್ಮು[2] /*kommu*/ ನಾ. 1. ಕೊಂಬು, 2. ಕೋಡು. horn of an animal. ವಾ: ಎತ್ತ್‌ನ ಕೊಮ್ಮುನ ನೋಡೊಮ್ಮೆ ಹೆಂಗುಟ್ಟುತ? ಪ: ಕೊಮ್ಮುಗ – ಕೊಂಬುಗಳು

ಕೊಮ್ಮೆ[1] /*kommɛ*/ ನಾ. ಭತ್ತ ಸಂಗ್ರಹಿಸಿಡುವ ದೊಡ್ಡ ಮರದ ಪೆಟ್ಟಿಗೆ. a wooden box to store paddy. ವಾ: ಕೊಮ್ಮೆಲಿ ಅಕ್ಕಿ ಹಾಕಿಸುದು. ಪ: ಕೊಮ್ಮೆ – ಬತ್ತ ಸಂಗ್ರಹಿಸಿ ಇಡುವ ಸಾದನ; ಕೊಮ್ಮೆ – ಅಕ್ಕಿ ತುಂಬಿಸಿಡಲು ಬಿದಿರು, ವಾಟೆಯಿಂದ ತಯಾರಿಸಿದ ಸಾದನ; ಕೊಮ್ಮೆ – ಅಕ್ಕಿ ಶೇಕರಣೆ ಮಾಡುವ ಬೆತ್ತದ ಉಪಕರಣ; ಕೊಮ್ಮೆ – ಬೆತ್ತದಿಂದ ಮಾಡಿದ ಅಕ್ಕಿ ಬಾಳೆಕಾಯಿ ಹಾಕಿಡುವ ಸಾದನ;

ಕೊಮ್ಮೆ[2] /*kommɛ*/ ನಾ. ಡೊಳ್ಳು ಹೊಟ್ಟೆ. a fat stomach. ವಾ: ಕೊಮ್ಮೆ ಹೊತ್ಕಂಡ್ ಬಾತ್.

ಕೊಮ್ಮೆಮನೆ /*kommemane*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಜಾಲ್ಸೂರು ಗ್ರಾಮದ ಜಾಗ. a locality in Jalsuru village in Sullia Taluk of Dakshina Kannada District.

ಕೊಯಿ /*koyi*/ ನಾ. 1. ಕೀಳುವುದು, 2. ಕುಯ್ಯುವುದು. 1. to pull something off, 2. to pluck something. ವಾ: ಗೊರಟೆ ಹೂನ ಕೊಯಿ ಮಾಲೆ ಕಟ್ಟೊನೊ. ಪ: ಕೊಯಿತ್ – ಕುಯ್ದನು/ಳು; ಕೊಯಿದ – ಕುಯ್ದ; ಕೊಯಿದ್ – ಕುಯ್ದು; ಕೊಯಿದ್ದಾಕ್‌ಂತ – ಕುಯ್ದು ಹಾಕು ಎಂದು; ಕೊಯಿದ್ದಾತ್ – ಕುಯ್ದು ಆಯಿತು; ಕೊಯಿದ್ದ್ – ಕುಯ್ದು; ಕೊಯಿಸಿತ್ – ಕುಯ್ಯಿಸಿದನು

ಕೊಯಿಂಗಾಜೆ /*koyiŋga:jɛ*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಆಲೆಟ್ಟಿ ಗ್ರಾಮದ ಜಾಗ. 1. family, 2. lineage, 3. a locality in Aletti village in Sullia Taluk of Dakshina Kannada District.

ಕೊಯಿಂಗುಡು /*koyiŋguḍu*/ ಕ್ರಿವಿ. ಜೇನುನೊಣ ಗುಯಿಂಗುಟ್ಟುವುದು. buzzing honey bee. ವಾ: ಇಲ್ಲೆಲ್ಲೊ ಜೇನ್‌ನೊಣಗ ಕೊಯಿಂಗುಡುದು ಕೇಳ್‌ದೆ.

ಕೊಯಿಂಗುಳಿ /*koyiŋguḷi*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಮರಪಡ್ನೂರು ಗ್ರಾಮದ ಜಾಗ. 1. family, 2. lineage, 3. a locality in Amarapadnuru village in Sullia Taluk of Dakshina Kannada District.

ಕೊಯಿಂತು /*koyintu*/ ನಾ. 1. ನಿಷ್ಕ್ರಿಯ, 2. ಜಡ, 3. ನಿಸ್ತೇಜ. 1. inactive, 2. inert, 3. lacking energy. ವಾ: ಕೊಯಿಂತುನಾಂಗೆ ನಿತ್ತುಟು.

ಕೊಯಿಕುಳಿ /*koyikuḷi*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಸುಳ್ಯ ನಗರದ ಜಾಗ. 1. family, 2. lineage, 3. a locality in Suḷya Nagara village in Sullia Taluk of Dakshina Kannada District.

ಕೊಯಿಗೋಂಡಿ /*koyigo:ṇḍi*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಸುಳ್ಯ ನಗರದ ಜಾಗ. 1. family, 2. lineage, 3. a locality in Suḷya Nagara village in Sullia Taluk of Dakshina Kannada District.

ಕೊಯಿಲ /*koyila*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಐವರ್ನಾಡು ಗ್ರಾಮದ ಜಾಗ. 1. family, 2. lineage, 3. a locality in Aivarnadu village in Sullia Taluk of Dakshina Kannada District.

ಕೊಯ್ಕತ್ತಿ[1] /*koyɨ katti*/ ನಾ. 1. ಚಾಕು, 2. ಚೂರಿ, 3. ಸಣ್ಣ ಕತ್ತಿ, 4. ಸುರಿಗೆ. a knife. ವಾ: ಕೊಯ್‌ಕತ್ತಿನ ಹರ್‌ತ ಮಾಡ್. ಪ: ಕೊಯ್ ಕತ್ತಿ

ಕೊಯ್ಕತ್ತಿ[2] /*koykatti*/ ನಾ. 1. ಹುಲ್ಲನ್ನು ಕುಯ್ಯಲು ಬಳಸುವ ಹಲ್ಲು ಕತ್ತಿ, 2. ಭತ್ತದ ಬೆಳೆ, ರಾಗಿ ಬೆಳೆಯನ್ನು ಕುಯ್ಯುವ ಕತ್ತಿ. a sickle. ವಾ: ದನಗಳಿಗೆ ಹಸಿ ಹುಲ್ಲ್‌ನ ಕೊಯ್ಕತ್ತಿಲಿ ಕೊಯ್ದರೆ ಬೇಗ ಆದೆ. ಪ: ಪರುತ್ತ ಕತ್ತಿ > ಪರ್ದತ್ತಿ(ತು)

ಕೊಯ್ದ್ /*koydɨ*/ ಕ್ರಿ. 1. ಕತ್ತರಿಸಿ, 2. ಕುಯ್ಯು. 1. to cut, 2. to pluck. ವಾ: ತರ್‌ಕಾರಿ ಕೊಯ್ದ್ ಆತ್. **ಕೊಯ್ಕಂಡ್** /*koykaṇḍɨ*/ 1. ಕುಯ್ದು, 2. ಕುಯ್ಯು, 3. ಕೀಳು. 1. to cut, 2. to pluck, 3. to pull something off. ವಾ: ಮಾಯ್ನಣ್ಣ್ ಕೊಯ್ಕಂಡ್ ಹೋತು. ಪ: ಕೊಯ್ಕನ್ತ್ – ಕುಯ್ದುಕೊಂಡನು; ಕೊಯ್ದ್ಲೆ – ಕುಯ್ಯಲಿಲ್ಲ; ಕೊಯ್ತಿದ್ದೊ – ಕುಯ್ಯುತ್ತಿದ್ದರು; ಕೊಯ್ತ್ – ಕುಯ್ದನು; ಕೊಯ್ದರೆ – ಕತ್ತರಿಸಿದರೆ; ಕೊಯ್ದವೆ – ಕುಯ್ಯುತ್ತಾರೆ; ಕೊಯ್ದುಟ್ಟ್ – ಕುಯ್ದಿದ್ದಾನೆ/ಳೆ; ಕೊಯ್ದೊ – ಕುಯ್ದರು; ಕೊಯ್ದೊಗಡ – ಕುಯ್ದರಂತೆ; ಕೊಯ್ಕಂಡತ್ – ಕುಯ್ದುಕೊಂಡನು. **ಕೊಯ್ಯಕೆ** /*koyyakɛ*/ ಕೊಯ್ಯಲು. to cut/to harvest. ವಾ: ಅಡ್ಕೆ ಕೊಯ್ಯಕೆ ಉಟ್ಟ್. **ಕೊಯ್ಯನೊ** /*koyyanɔ*/ 1. ಕೊಯ್ಯುವ, 2. ಕೊಯ್ದುಕೊಳ್ಳುವ. 1. let us pluck, 2. plucking. ವಾ: ಕೇಪ್ಳ ಇಸಿ ಹಣ್ಣ್ ಕೊಯ್ಯನೊ.

ಕೊಯ್ಯು /*koyyu*/ ಕ್ರಿ. 1. ತುಂಡುಮಾಡು, 2. ತುಂಡರಿಸು. 1. to cut, 2. to severe. **ಸತ್ತ ಹೆಣದ ಮೂಗು ಕೊಯ್ಯಕೂ ಅದುಲೆ(ಗಾ).** ವಾ: ಕೋಳಿನ ಕೊಯ್ಯುದು. **ಕೊಯ್ಯೊದು** /*koyyɔdu*/ 1. ಕುಯ್ಯು, 2. ಕೀಳು, 3. ಎಳೆದು ಹಾಕು. 1. to pluck, 3. to pull off, 4. to pull forcefully. ವಾ: ಒಳ್ಳಮೆಣ್ಸ್ ಕೊಯ್ಯೊದ್. ಪ: ಕೊಯ್ಯಕೆ – ಕುಯ್ಯಲು; ಕೊಯ್ಯಕ್ – ಕುಯ್ಯಬೇಕು; ಕೊಯ್ಯಕ್ಕೆ – ಕುಯ್ಯುವುದಕ್ಕೆ; ಕೊಯ್ಯದು – ಕುಯ್ಯುವುದು; ಕೊಯ್ಸಿಕಂಬ – ಕುಯ್ಸಿಕೊಳ್ಳುವ. **ಕೊಯ್ಯೊಮ** /*koyyɔma*/ 1. ಕೊಯ್ಯುವ, 2. ಕೊಯ್ದುಕೊಳ್ಳುವ. plucking. ವಾ: ಕೇಪ್ಳ ಇಸಿ ಹಣ್ಣ್ ಕೊಯ್ಯೊಮ.

ಕೊಯ್ಲೆ /*koylɛ*/ ನಾ. 1. ಸಣ್ಣಗಿರುವುದು, 2. ಸಣಕಲು, 3. ಲಾಚಾರು, 4. ಬಡಕಲಾದ. 1. being lean, 2. being thin, 3. being feeble, 4. being weak. ವಾ: ಗೂಡೆ ಸೆರಿ ತಿನ್ನದೆ ಕೊಯ್ಲೆನಂಗುಟ್ಟು.

ಕೊಯ್ಲೆ ಮೀನ್ /*koylɛ mi:nɨ*/ ನಾ. 1. ಚೂಪಾದ ತಲೆಯುಳ್ಳ ಉದ್ದನೆಯ ಸಣ್ಣ ಮೀನುಗಳು, ಇವುಗಳು ಹೆಚ್ಚಾಗಿ ನೀರಿನ ತಳಭಾಗದಲ್ಲಿ ಇರುತ್ತವೆ, 2. ಒಂದು ಬಗೆಯ ಅತೀ ಸಣ್ಣ ಜಾತಿಯ ತೋಡಿನಲ್ಲಿ, ಗದ್ದೆಗಳಲ್ಲಿ ದೊರೆಯುವ ಮೀನು. 1. a fish with sharp head, usually found in deep waters, 2. a freshwater fish found in small ponds. ವಾ: ಕೊಯ್ಲೆ ಮೀನ್ ಗೈಪುನ ಕಾರಾಗಿ ಮಾಡಿರೆ ಅಕ್ಕಿ ರೊಟ್ಟಿಗೆ ತಿಂಬಕೆ ಬಾರಿ ಲಾಯ್ಕ. ಪ: ಕೊಯಿಲೆ – ಸಣ್ಣ ಮೀನು

ಕೊಯ್ಲ್[1] /*koylɨ*/ ನಾ. 1. ಕಠಾವು, 2. ಕೊಯ್ಯುವಿಕೆ. 1. harvesting, 2. yielding. ವಾ: ಬೆಳೆ ಕೊಯ್ಲ್ ಕೆಲ್ಸ ಸುರಾದರೆ ಅತ್ತಿತ್ತ ಹಂದಾಡಿಕಾದುಲೆ.

ಕೊಯ್ಲ್[2] /*koylɨ*/ ನಾ. 1. ಕೊಂಬೆ, 2. ರೆಂಬೆ, 3. ಟೊಂಗೆ. a branch of a tree. ವಾ: ಮರಂದ ದೊಡ್ಡ ಕೊಯ್ಲ್ ಕಾಪಿ ದೈದ ಮೇಲೆ ಬೀತ್.

ಕೊರ[1] /*kora*/ ನಾ. 1. ಧ್ವನಿ ಪೆಟ್ಟಿಗೆ, 2. ಧ್ವನಿ ತಂತುಗಳಿರುವ ಗಂಟಲ ಕುಹರ. vocal cords. ವಾ: ಕೊರ ಒಡ್ಡುಟು.

ಕೊರ[2] /*kora*/ ನಾ. ಕೋಳಿಯ ಕುತ್ತಿಗೆ. neck of a hen. ವಾ: ಕೋಳಿ ಕೊರನ ಹಿಡ್ಕ.

ಕೊರಂಗು /*koraŋgu*/ ನಾ. ಉದ್ದ ಕಾಲಿನ ಕೊಕ್ಕರೆ. long legged crane. **ಬುದ್ದಿ ಇಲ್ಲದ ಯೇಮೆ ಕೊರಂಗು ಸಹವಾಸ ಮಾಡ್ದಂಗೆ(ಗಾ).** ವಾ: ಕೊರಂಗು ಗದ್ದೆಗೆ ಬಂದದೆ. ಪ: ಕೊರಂಗ್

ಕೊರಂಬಟ /*korambaṭa*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ನಾಲ್ಕೂರು ಗ್ರಾಮದ ಜಾಗ. a locality in Nalkuru village in Sullia Taluk of Dakshina Kannada District.

ಕೊರಂಬಡ್ಕ /*korambaḍka*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ

ಸುಳ್ಯ ನಗರದ ಜಾಗ. 1. family, 2. lineage, 3. a locality in Suḷya Nagara village in Sullia Taluk of Dakshina Kannada District.

ಕೊರಂಬಾಡಿ /*koramba:ḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೊರಂಬೆ /*korambɛ*/ ನಾ. 1. ಗೊರಬೆ, 2. ಕಿಡಿಂಜೋಳು, 3. ಮಳೆಯಿಂದ ರಕ್ಷಣೆ ಪಡೆಯಲು ಕೆಲಸಕ್ಕೆ ಹೋಗುವಾಗ ಹಾಕಿಕೊಳ್ಳುವ ಓಟೆಯಿಂದ ಮಾಡಿರುವ ವಸ್ತು. a hood to protect from rain, made of areca sheath, etc. ವಾ: ಮಳ್‌ಗಾಲಲಿ ಕೊರಂಬೆ ಹಾಕಂಡ್ ಕೆಲ್‌ಸಕ್ಕೆ ಹೊರೆಗೆ ಹೋದು.

ಕೊರಗ /*koraga*/ ನಾ. ಬುಡಗಟ್ಟು ಸಮುದಾಯ. a tribe. ವಾ: ಅವು ಕೊರಗ ಸಮುದಾಯದವ್ ಗಡ.

ಕೊರಗಪ್ಪ /*koragappa*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. masculine given name.

ಕೊರಗ್ /*koragɨ*/ ನಾ. 1. ಚಿಂತಿಸು, 2. ದುಃಖಿಸು, 3. ವ್ಯಥೆಪಡು. 1. to think, 2. so suffer, 3. to be agonised. ವಾ: ಈ ಲೋಕಲಿ ಕೊರಗ್ ಇಲ್ಲದ ಮೊನ್ಸ ಉಟ್ಟಾ? ಸುಮ್ಮನಾರ್ ಕೊರಗ್‌ದು ಯಾಕೆಗಡ? ಪ: ಕೊರ್ಗಿಕಂಡ್ – ಚಿಂತಿಸಿಕೊಂಡು; ಕೊರ್ಗ್ – ಚಿಂತೆ

ಕೊರತ್ಯಡ್ಕ /*korattyaḍka*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಮರಪಡ್ನೂರು ಗ್ರಾಮದ ಜಾಗ. 1. family, 2. lineage, 3. a locality in Amarapadnuru village in Sullia Taluk of Dakshina Kannada District.

ಕೊರಪೊಳು /*korapoḷu*/ ನಾ. ವ್ಯಕ್ತಿ ಹೆಸರು, ಸ್ತ್ರೀ ವಾಚಕ. feminine given name.

ಕೊರಪ್ಪಣೆ /*korappaṇe*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಬಳ್ಪ ಗ್ರಾಮದ ಜಾಗ. a locality in Balpaa village in Sullia Taluk of Dakshina Kannada District.

ಕೊರವುಕಾರ /*koravuka:ra*/ ನಾ. 1. ಒಕ್ಕದಲ್ಲಿನ ಮುಖ್ಯಸ್ಥ, 2. ಮನೆಯಲ್ಲಿ ಯಾವುದಕ್ಕೂ ಕಡಿಮೆಯಾಗದಂತೆ ನೋಡಿಕೊಳ್ಳುವವನು. 1. the head of a family, 2. the one who takes care of all the members in a family. ವಾ: ಕೊರವುಕಾರ ಯಾವುದಕ್ಕು ಕೊರತೆ ಇಲ್ಲದಾಂಗೆ ನೋಡಿಕಂಡವೆ.

ಕೊರಳ್ /*koraḷɨ*/ ನಾ. ಭತ್ತದ ತೆನೆ. an ear of paddy. ವಾ: ಕೊರಳ್ ಕೊಯ್ಲಿಗೆ ಬಂದುಟು.

ಕೊರಿ /*Kori*/ ನಾ. 1. ಕೊರೆ, 2. ತೂತು ಮಾಡು, 3. ಕೆತ್ತು. 1. to carve, 2. to make a hole, 4. to chisel. ವಾ: ನೆಲ ಕೊರಿಯಕೆ ಈಗೆಲ್ಲ ಮಿಸನ್‌ಗ ಉಟ್ಟು. ಪ: ಕೊರಿಯಕು – ಕೊರಿಯಬೇಕು; ಕೊರಿಯೆಕೇಂತ – ಕೊರಿಯಲೆಂದು; ಕೊರ್ತ್ – ಕೊರೆದನು/ಳು; ಕೊರ್ದನೆ – ಕೊರೆಯುತ್ತೇನೆ; ಕೊರ್ದವೆ – ಕೊರೆಯುತ್ತಾರೆ; ಕೊರ್ದೆ – ಕೊರೆದೆ; ಕೊರ್ದೊ – ಕೊರೆದರು **ಕೊರಿಯದು** /*koriyadu*/ ನಾವಿ. 1. ಕೊರೆಯುವುದು, 2. ತೂತು ಮಾಡುವುದು. 1. to drill, 2. to make a hole. ವಾ: ಕೊಳವೆ ಬಾಮಿನ ಕೊರೆದುಗಡ. ಪ: ಕೊರೆಕನ – ಕೊರೆಯುವಾಗ

ಕೊರಿಯದು /*koriyadu*/ ನಾವಿ. ಬೇಸರ ಬರುವಂತೆ ಒಂದೇ ಸಮನೆ ಮಾತನಾಡು. talking continuously to bore someone. ವಾ: ಅಂವನೊಟ್ಟಿಗೆ ಮಾತಾಡ್ದು ಬಾರಿ ಬಜ್ಜ, ಸುಮ್ಮನೆ ಕೊರಿಯದು. ಪ: ಕೊರೆದು – ತುಂಬ ಮಾತಾಡು

ಕೊರಿಯನ /*koriyana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೊರ್ಂಬ /*kormba*/ ನಾ. ಕೊರಮ ಸಮುದಾಯ. Korama community. ವಾ: ಕೊರ್ಂಬರ್ ಕಾಡ್‌ಲಿ ಜೇನ್ ತೆಗೆದರ್‌ಲಿ ಉಸಾರ್.

ಕೊರೆ /*korɛ*/ ನಾ. 1. ಹಜ್ಜ, 2. ಉಳಿಕೆ, 3. ಉಳಿದ ಭಾಗ. 1. a little, 2. remaining, 3. left over. ವಾ: ಬೇಲಿ ಹಾಕಿಕೆ ಕೊರೆ ಒಳ್ದುಟು. ಪ: ಕೊರೆಗ – ಉಳಿಕೆಗಳು

ಕೊರೆಜ್ಞ /*korɛŋa*/ ನಾ. ಮಂಗ, ಬೈಗುಳ ಪದ. Monkey, an expletive. ವಾ: ನಿನ್ನ ಕೊರೆಜ್ಞ ಬುದ್ದಿ ಬೇಡ.

ಕೊರೇಂಗಿ /*korɛ:ŋgi*/ ನಾ. ಕಾಡು ಕುರಿ. Indian muntjac. ವಾ: ಕೊರೇಂಗಿ ಮಾಸ ಬೇಕಿತ್ತಾ?

ಕೊರೊಡ /*korɔḍa*/ ಕ್ರಿವಿ. ಒಂದು ಕೋಲಿಗೆ ಬಳ್ಳಿಕಟ್ಟಿ ನೇಯುವುದು. to weave using a creeper tying it to a twig. ವಾ: ಕೊರೊಡ ಕೆಲ್‌ಸ ಮಾಡ್ತೊಳೊ.

ಕೊರ್ಂಗ್‌ಮರ /*koriŋgɨmara*/ ನಾ. 1. ಹೊಂಗೆ ಮರ,

2. ತಮಾಲ ವೃಕ್ಷ, 3. ಹುಲಗಲಿ. an Indian beech tree. ವಾ: ಕೊರ್ಂಗ್‌ಮರಲಿ ಗೊಂಚ್‌ಲ್ ಆಗಿ ನೀಲಿ ಬಣ್ಣಲಿ ಹೂ ಬುಟ್ಟದೆ.

ಕೊರ್ಂಟ್ /*koriṇṭi*/ ನಾ. 1. ಗೊರಟ, 2. ಮಾವಿನ ಬೀಜ, 3. ವಾಟೆ, 4. ಮಾವಿನ ಹಣ್ಣಿನ ಗೋಟು. 1. a seed, 2. a mango seed, 3. mango seed shell, 4. mango seed. ವಾ: ಮಾಯ್ನ ಕೊರಂಟ್ ಇಸಿರೆ ಹುಟ್ಟಿ ಬಂದದೆ. ಪ: ಕೊರಂಟ್‌ನ – ಗೊರಟಿನ; ಕೊರಂಟ್‌ಲಿ – ಗೊರಟಿನಲ್ಲಿ

ಕೊರ್ಂಬಡ್ಕ /*kormbaḍka*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲೂಕಿನ ಕೊಳ್ತಿಗೆ ಗ್ರಾಮದ ಜಾಗ. 1. family, 2. lineage, 3. a locality in Kolthige village in Puttur Taluk of Dakshina Kannada District.

ಕೊರ್ಂಬೆ /*korimbɛ*/ ನಾ. 1. ಗೊರಗು, 2. ಗೊರ್ಗ, 3. ಗೊರಬು. a hood made of areca sheath or ther plants and leaf. **ಆಚೆ ವಾಟೆ ಪಡ, ಈಚೆ ವಾಟೆ ಪಡ, ನಡೂಲಿ ಕೂಗಲೆ ಪಡ – ಕೊರ್ಂಬೆ(ಒ).**

ಕೊರ್ಕಂಡ್ /*korkaṇḍi*/ ನಾ. 1. ಕೊರೆದುಕೊಂಡು, 2. ಸವೆಯಿಸಿ. 1. by carving, 2. to wear out. ವಾ: ನೀರ್ ಹರ್‌ದ್ ಹರ್‌ದ್ ಮಣ್ಣೆಲ್ಲ ಕೊರ್‌ಕಂಡ್ ಹೋತು. ಪ: ಕೊರ್ಕಂಡೋಕನ – ಕೊರೆದುಕೊಂಡು ಹೋಗುವಾಗ

ಕೊರ್ಗ /*korga*/ ನಾ. 1. ಬುಡಕಟ್ಟು ಸಮುದಾಯ, 2. ಅರೆಭಾಷೆ ಪ್ರದೇಶದ ಒಂದು ಆಚರಣೆಯ ವೇಷ. a costume worn in the Are bhase regions. ವಾ: ಕೊರ್ಗ ಬಾಕನ ಮಕ್ಕ ಪೂರ ಓಡುವೆ. **ಕೊರ್ಗುವೇಸ** /*korguvɛ:ṣa*/ ದಸರ ಸಮಯದಲ್ಲಿ ದೇಹಕ್ಕೆ ಸಂಪೂರ್ಣವಾಗಿ ಕರಿ ಲೇಪಿಸಿ ಕೊಂಡು, ಮುಟ್ಟಪ್ಪಾಳೆ ಇರಿಸಿಕೊಂಡು, ಕೊಳಲು ಊದುತ್ತಾ ಸಾಗುವ ವೇಷ. a procession during dasara festival in which a performer paints himself in black colour, puts a cap made of areca sheath, and moves around playing a wind instrument, a flute. ವಾ: ದಸರಲಿ ಕೊರ್ಗುವೇಸ ಹಾಕಿವೆ. ಪ: ಕೊರ್ಗ ವೇಸ

ಕೊರ್ಚು /*korcu*/ ನಾ. 1. ಸದಾ ಕಿರಿ ಕಿರಿ ಮಾತಾಡುತ್ತಾ ಇರು, 2. ಪರ್ಚು. 1. to annoy, 2. to scratch. ವಾ: ಯಾಗೊಳು ಹಿಂಗ್ಯಾಕೆ ಕೊರ್ಚುದು. ಪ: ಕೊರ್ಚುದು – ಜೋರಾಗಿ ಕಿರುಚುವುದು; ಕೊರ್ಚಿಕಂಡ್ – ಕಿರುಚುತ್ತಾ

ಕೊರ್ಜಿ[1] /*korji*/ ನಾ. ನೀರು ನಿಂತ ಜಾಗ ಅಥವಾ ಗದ್ದೆ. a paddy field. ವಾ: ಕೊರ್ಜಿ ಜಾಗೆಲ್ಲೆ ಮನೆ ಕಟ್ಟ್ಯೊಳೊ.

ಕೊರ್ಜಿ[2] /*korji*/ ನಾವಿ. ಅನಾಗರಿಕನಂತೆ ಇರುವವ. someone who behaves like an uncivilized person. ವಾ: ನಿನ್ನ ಕೊರ್ಜಿಕೋಲ ಕಟ್ಟ್‌ಬಡ.

ಕೊರ್ಜಿ [3] /*korji*/ ನಾ. ಅಶಿಸ್ತು. indescipline. ವಾ: ನೀಕೊರ್ಜಿಗಳಂಗೆ ಮಾಡ್ಬಡ.

ಕೊರ್ಟಕಾಯಿ /*korṭaka:yi*/ ನಾ. ಸೊಟ್ಟಗಿರುವ ಕಾಯಿ. a twisted vegetable. ವಾ: ಕೊರ್‌ಟಕಾಯಿ ವಳಿಗೆ ಹೆಂಗುಟ್ಟ್ಯೊ. ಕೊರ್ಟಸೋಂತೆ**(ತು).**

ಕೊರ್ಟ್ /*korṭi*/ ನಾ. 1. ಗೊರಟು, 2. ಮಾವಿನ ಬೀಜ, 3. ವಾಟೆ, 4. ಮಾವಿನ ಹಣ್ಣಿನ ಗೋಟು. 1. a seed, 2. a mango seed, 3. mango seed shell, 4. mango seed. ವಾ: ಮಾಯ್ನ ಹಣ್ಣ್ ತಿಂದ್ ಕೊರ್‌ಟ್ ಹಿಡ್ಕಂಡ್ ದೂವೆತ ಹೇಳ್ದು. ಕೊರಂಟ್(ತು).

ಕೊರ್ಡ್ /*korḍi*/ ನಾ. 1. ಮರದ ಕೊರಡು, 2. ಮರದ ಸಣ್ಣ ತುಂಡು. 1. a long of wood, 2. a small piece of wood. ವಾ: ಗಂದ ಮರದ ಕೊರ್‌ಡ್‌ನ ಮನೆಲಿ ಇಸಿಕ ಬೇಕಾದೆ.

ಕೊರ್ತಿ /*korti*/ ನಾ. ಆರಾಧ್ಯ ದೈವ. a place deity, a goddess of a particular place. ವಾ: ಕೊರ್ತಿಗೆ ಸಮ್ಮಾನ ಕೊಡ್‌ದುಗಡ.

ಕೊರ್ತಿಕಜೆ /*kortikajɛ*/ ನಾ. ಕೊಡಗು ಜಿಲ್ಲೆಯ ಪೆರಾಜೆ ಗ್ರಾಮದ ಜಾಗ. a locality in peraje village in of Kodagu District.

ಕೊರ್ತೆ[2] /*kortɛ*/ ನಾ. 1. ಕೊರತೆ, 2. ನ್ಯೂನತೆ, 3. ದೋಷ, 4. ಕಡಿಮೆ. 1. shortage, 2. deficiency, 3. a problem/ a fault, 4. less. ವಾ: ನಮಿಗೆ ಬೊದ್ಕಿಕೇನ್ ಕೊರ್ತೆ ಇಲ್ಲೆ. ಪ: ಕೊರ್‌ತೆನ – ಕೊರತೆಯನ್ನು

ಕೊತೋ಼ಡಿ /*korto:ḍi*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ನೆಲ್ಲೂರು ಕೆಮ್ರಾಜೆ ಗ್ರಾಮದ ಜಾಗ. 1. family, 2.

lineage, 3. a locality in Nelluru Kemraje village in Sullia Taluk of Dakshina Kannada District.

ಕೊರ್ಮ[1] /*korma*/ ನಾ. ಬೈಗುಳ ಪದ. a flexible person.

ಕೊರ್ಮ[2] /*korma*/ ನಾ. 1. ಚೇಷ್ಟೆಮಾಡುವ ಹುಡುಗ, 2. ತುಂಟ ಹುಡುಗ, 3. ಕೀಟಲೆ ಬುದ್ಧಿಯವ, 4. ಬೈಗುಳ ಪದ. 1. naughty boy, 2. a mischievous, 3. annoying boy. ವಾ: ಅಂವ ಬಾರಿ ಕೊರ್ಮ ಹೈದ.

ಕೊರ್ಯದು /*koryadu*/ ಕ್ರಿ. 1. ಕೊರೆ, 2. ತೂತುಮಾಡು, 3. ಕೆತ್ತು. 1. to dig, 2. to make a whole 3 to chisel. ವಾ: ಮರನ ಒರ್ಲೆಗ ಕೊರ್ದ್ ತಿಂದವೆ.

ಕೊರ್ರೆ ಗುಟ್ಟು /*korrɛ guṭṭu*/ ನಾ. ಅ. ಗಾಬರಿಯಿಂದ ಕೋಳಿ ಕೂಗುವುದು. a rooster crowing out of fear/anxiety. ವಾ: ಕೋಳಿ ಕೊರೊಕೊರೊಂತ ಕೊರ್ರೆ ಗುಟ್ಟಿದೆ ಹಾವ್ ಮನಿ ಬಂದಿರೊಕು.

ಕೊರ್ಲ್ /*korlɨ*/ ನಾ. 1. ಕೊರಳು, 2. ಕುತ್ತಿಗೆ, 3. ಕತ್ತು. neck. ವಾ: ಕೋಳಿದ್ ಕೊರ್ಲ್ ಹಿಡ್ಕ.

ಕೊರ್ಸಂಡಿ[1] /*korsaṇḍi*/ ನಾ. ವಾಸನೆಭರಿತ ಎಣ್ಣೆ. a fragrant oil. ವಾ: ಕೊರ್ಸಂಡಿ ಎಣ್ಣೆ.

ಕೊರ್ಸಂಡಿ[2] /*korsaṇḍi*/ ನಾವಿ. 1. ಜಿಡ್ಡು ಮನುಷ್ಯ, 2. ನಳ್ಳ, 3. ಬೈಗುಳ ಪದ. a stubborn, a flexible person. ವಾ: ಅಂವ ಬೊರಿ ಕೊರ್ಸಂಡಿ ಮೊನ್ಸ.

ಕೊರ್ಸಂಡಿ[3] /*korsaṇḍi*/ ನಾ. ಜಿಪುಣ. a stingy person. ವಾ: ಅಂವ ಬಾರೀ ಕೊರ್ಸಂಡಿ, ಒಂದ್ ಪೈಸ್ ಬಿಚ್ಚುದ್ಲೆ.

ಕೊರ್ಸನೊ /*korsanɔ*/ ಕ್ರಿವಿ. 1. ಕೊರೆಸೋಣ, 2. ಕೆತ್ತಿಸೋಣ. 1. shall get something dug, 2. shall get something chiselled/carved. ವಾ: ಬೋರ್ ಬಾಮಿ ಕೊರ್ಸನೊ, ಆಗ ನೀರ್ ಸಿಕ್ಕುದು. ಪ: ಕೊರ್ಸಿತ್ – ಕೊರೆಸಿದನು/ಳು; ಕೊರ್ಸಿದೆ – ಕೊರೆಸಿದೆ; ಕೊರ್ಸಿದೊ – ಕೊರೆಸಿದರು; ಕೊರ್ಸಿನೆ – ಕೊರೆಸುತ್ತೇನೆ; ಕೊರ್ಸಿವೆ – ಕೊರೆಸುತ್ತಾರೆ; ಕೊರ್ಸೊಕು – ಕೊರೆಸಬೇಕು; ಕೊರ್ಸ್ – ಕೊರೆಸು

ಕೊಲೆಪಿಜಿನ್ /*kolɛpijini*/ ನಾ. 1. ಕೆಂಪಾದ ದೊಡ್ಡ ಇರುವೆ, 2. ಕೊಲೆಗಳ ಉಪದ್ರವಿದ್ದರೆ ಈ ಇರುವೆಗಳು ಏಳುತ್ತವೆಂದು ನಂಬಿಕೆ. 1. a red ant, 2. a belief that big red ants are found in a place of murder. ವಾ: ಕೊಲೆ ಪಿಜಿನ್ ಗ ಮನೆಗೆ ಬಾಕಾದ್ ಒಳ್ಳದಲ್ಲ.

ಕೊಲೆ[1] /*kolɛ*/ ನಾ. ಸತ್ತ ವ್ಯಕ್ತಿಗಳ ಆತ್ಮ ಎಂಬ ನಂಬುಗೆ. belief in souls of the dead/spirits. ವಾ: ಕೊಲೆಗ ಬಂದವೆತ ನಂಬಿಕೆ ಉಟ್ಟು. ಪ: ಕೊಲೆಗ – ಸತ್ತವರ ಆತ್ಮ. **ಕೊಲೆಮೊದ್ವೆ** /*kolɛmɔdvɛ*/ ಆತ್ಮಆತ್ಮಗಳ ನಡುವೆ ಮಾಡುವ ಮದುವೆ. a marriage performed between souls. ವಾ: ಕೊಲೆ ಮೊದ್ವೆತ ಮಾಡಿವೆಗಡ. **ಕೊಲೆ ಹೆಜ್ಜೆ ನೋಡ್ದು** /*kolɛ hejjɛ no:ḍdu*/ಸತ್ತವರು ನೀರ ನೆರಳು ಇಟ್ಟಿರುವಲ್ಲಿಗೆ ಬರುತ್ತಾರೆಂದು ನಂಬುತ್ತಾರೆ, ಹಾಗೆ ಅವರು ಬರುತ್ತಾರೆಂದು ನೀರ ನೆರಳು ಇಟ್ಟಿರುವ ಸ್ಥಳದಲ್ಲಿ ಅಕ್ಕಿಹುಡಿಯನ್ನು ಹರಡಿರುತ್ತಾರೆ, ಸತ್ತವರು ಬಂದರೆ ಅವರ ಕಾಲ ಹೆಜ್ಜೆ ಕಾಣಿಸುತ್ತದೆಂದು ಹೇಳುತ್ತಾರೆ. a belief that one's dead ancestors will return to receive the offerings made by their relatives. Rice flour would be spread next to the offering, and it is believed that the relatives can see the footprints of their dead ancestors who had come to receive. ವಾ: ನೀರ್ ನೆರ್‌ಲಿಗೆ ಇಸಿ ಕೊಲೆ ಹೆಜ್ಜೆ ನೋಡ್‌ದು. **ಕೊಲೆಕೂಡ್ಸೂದ್** /*kolɛku:ḍsu:dɨ*/ ಸತ್ತವರನ್ನು 16 ಪೂರ್ವಜರೊಂದಿಗೆ ಸೇರಿಸುವುದು. the process of making the dead join the 16 ancestors. ವಾ: ಸತ್ತ್ ಹದ್ನಾರಕೆ ಕೊಲೆಕೂಡ್ಸೂದ್ ಮಾಡಿವೆ. **ಕೊಲೆಗೆ ಇಸುದು** /*kolegɛ isudu*/ 1. ಆತ್ಮಕ್ಕೆ ಮಾಡಿದ ಅಡುಗೆ ಬಡಿಸುವುದು, 2. ಎಡೆ ಹಾಕುವುದು. 1. an offering (food) for the soul, 2. an offering. ವಾ: ಮಾಡ್‌ದ ಅಡ್‌ಗೆನ ಕೊಲೆಗೆ ಇಸುದು.

ಕೊಲೆ[2] /*kolɛ*/ ನಾ. ಕೊಲ್ಲುವುದು. to murder someone. ವಾ: ಕೊಲೆ ಮಾಡ್ಕ್.

ಕೊಲ್ಕಾಲ್ /*kolka:lɨ*/ ನಾ. 1. ಕೋಲುಕಾಲು, 2. ಸಣಕಲು ಕಾಲು. lean legs. ವಾ: ಕೊಲ್ಕಾಲ್‌ತ ಯಾಕೆ ಕರ್‌ಯದು.

ಕೊಲ್ತ್ರಿ /*koltɨri hakki*/ ನಾ. 1. ಸಣ್ಣ ಕಡ್ಡಿಗೆ ಬಿಳಿ ಬಟ್ಟೆ ಸುತ್ತಿ ಎಣ್ಣೆ ಸುರಿದು ಬೆಂಕಿ ಉರಿಸುವುದು, 2. ತಿರಿಬತ್ತಿ,

3. ಗುಳಿಗ, ಚೌಂಡಿಗೆ ಎಡೆ ಇಡುವಾಗ ಇದನ್ನು ಉರಿಸುತ್ತಾರೆ. a torch made of wrapping a white cloth (dipped in oil) around the end of a stick. ವಾ: ಕೊಲ್ತ್‌ರಿನ ಎಡೆ ಇಸಿಕನ ಉರ್‌ಸುವೆ.

ಕೊಲ್ಯ /*kolya*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ನಾಲ್ಕೂರು ಗ್ರಾಮದ ಜಾಗ. 1. family, 2. lineage, 3. a locality in Nalkuru village in Sullia Taluk of Dakshina Kannada District.

ಕೊಲ್ಯದ /*kolyada*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೊಲ್ಲ /*kolla*/ ನಾ. ಕಬ್ಬಿಣದ, ಮರದ ಕೆಲಸ ಮಾಡುವವನು. a carpenter. ವಾ: ಕೊಲ್ಲ ಮೇಜ ಕೆಲ್ಸ ಮಾಡ್ತುಟ್ಟು. ಪ: ಕೊಲ್ಲ ಕೆಲ್ಸ – ಚಿಕ್ಕ ಪುಟ್ಟ ತಾಂತ್ರಿಕ ಕೆಲಸ. **ಕೊಲ್ಲಕೆಲ್ಸ** /*kolla kelsa*/ ಚಿಕ್ಕ ಪುಟ್ಟ ತಾಂತ್ರಿಕ ಕೆಲಸ. a small mechanical work. ವಾ: ನಿಂದ್ ಕೊಲ್ಲ ಕೆಲ್‌ಸ ಮಾಡಿ ಆತ? ಪ: ಕೊಲ್ಲಬೇಲೆ(ತು)

ಕೊಲ್ಲ ಚೆರ್ಗ್ /*kolla cergɨ*/ ನಾವಿ. ಒಂದು ವಿಧದ ಸಣ್ಣ ಮೀನು. a small fish found in paddy fields. ವಾ: ಕೊಲ್ಲ ಚೆರ್‌ಗ್‌ನ ಸಾರ್ ಉಂಬಕೆ ಲಾಯ್ಕ್. ಪ: ಕೊಲ್ಲತರು(ತು)

ಕೊಲ್ಲಮೊಗ್ರು /*kollamogru*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕೊಲ್ಲಮೊಗ್ರು ಗ್ರಾಮದ ಜಾಗ. a locality in Kollamogru village in Sullia Taluk of Dakshina Kannada District.

ಕೊಲ್ಲರಮೂಲೆ /*kollaramu:le*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಆಲೆಟ್ಟಿ ಗ್ರಾಮದ ಜಾಗ. a locality in Aletti village in Sullia Taluk of Dakshina Kannada District.

ಕೊಲ್ಲರ್ನೂಜಿ /*kollarnu:ji*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕಳಂಜ ಗ್ರಾಮದ ಜಾಗ. a locality in Kalanja village in Sullia Taluk of Dakshina Kannada District.

ಕೊಲ್ಲಿ /*kolli*/ ನಾ. ಜಲ ಉಕ್ಕಿ ಹರಿಯುವ ಸ್ಥಳ. a spring, a where water gushes from the ground. ವಾ: ಕೊಲ್ಲಿಂದ ನೀರ್ ಹೊರ್‌ದು.

ಕೊಲ್ಲಿನೀರ್ /*kollini:rɨ*/ ನಾ. ಕೊಲ್ಲಿನೀರು; ಗುಡ್ಡಗಳ ಕಣಿವೆಗಳಿಂದ ಹರಿದು ಬರುವ ನೀರು. a stream in a valley. ವಾ: ಕೊಲ್ಲಿ ನೀರ್ ಐಸ್ ನಂಗೆ ಉಟ್ಟು.

ಕೊಲ್ಲೀರ /*kolli:ra*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೊಲ್ಲ್ /*kollɨ*/ ನಾ. ಕೊಂದು ಹಾಕು. to murder. ವಾ: ಹಸ್ರ್ ಹುಳನ ಕೊಲ್ಲ್ ಇಲ್ಲರೆ ದೈ ತಿಂದದೆ. ಪ: ಕೊಲ್ಲೊಕಲ್ಲಂತ – ಕೊಲ್ಲಬೇಕಲ್ಲ ಎಂದು; ಕೊಲ್ಬೇಡೀಂತ – ಕೊಲ್ಲಬೇಡಿ ಎಂದು; ಕೊಲ್ಲಕ್ – ಕೊಲ್ಲಬಹುದು; ಕೊಲ್ಲಮತಾ – ಕೊಲ್ಲುವ ಎಂದು; ಕೊಲ್ಲಿ – ಕೊಂದುಹಾಕಿ; ಕೊಲ್ಲಿಕಾಗಿ – ಕೊಲ್ಲುವುದಕ್ಕಾಗಿ; ಕೊಲ್ಲಿಕೆ – ಕೊಲ್ಲಲು; ಕೊಲ್ಲಿಂತ – ಕೊಲ್ಲಿ ಎಂದು; ಕೊಲ್ಲುದು – ಕೊಲ್ಲುವುದು; ಕೊಲ್ಲುದುಂತ – ಕೊಲ್ಲುವುದೆಂದು; ಕ

ಕೊಸಂಡೆ /*kosanḍɛ*/ ನಾ. 1. ಮಾತಿಗೆ ಅಡ್ಡ ಹಾಕುವುದು, 2. ಅಡ್ಡ ಅಡ್ಡ ಮಾತನಾಡು. 1. to speak in between the conversation, 2. to argue. ವಾ: ಕೊಸಂಡೆ ಮಾತ್ ಕೇಳಿರೆ ಸಿಟ್ಟ್ ಬಾದು.

ಕೊಸರಂಕೊಳ್ಳಿ /*kosaraŋkoḷḷi*/ ನಾವಿ. 1. ತೊಂದರೆ ಮಾಡುವವ, 2. ಉಪದ್ರವ ಕೊಡುವವ. 1. a troublesome person, 2. an annoying person. ವಾ: ಅಂವ ಬಾರಿ ಕೊಸರಂಕೊಳ್ಳಿ. ಪ: ಕೊಸ್ರಕೊಳ್ಳಿ – ಬಿನ್ನಾಬಿಪ್ರಾಯ ತೆಗೆಯುವುದು

ಕೊಸ್ಕ್^{1} /*koskɨ*/ ನಾ. ತಲೆ ಒದ್ದೆ ತೆಗೆಯುವುದು. drying the wet hair. ವಾ: ಅವುಳು ತಲೆ ಮೀದ್ ಬಂದ್ ಕೊಸ್ಕ್‌ದು.

ಕೊಸ್ಕ್^{2} /*koskɨ*/ ನಾ. ಹಿಸುಕು. to press hard/to squeeze hard. ವಾ: ಕೋಳಿನ ಹಿಡ್‌ಕಂಡ್ ಕುತ್ತಿಗೆನ ಕೊಸ್ಕಿತ್.

ಕೊಸ್ಲಕ್ಕಿ /*koslakki,*/ ನಾ. ಕಜೆ ಅಕ್ಕಿ. boiled rice. ವಾ: ಕೊಸ್ಲಕ್ಕಿ ಗಂಜಿ ಉಪ್ಪನಕಾಯಿ ಇದ್ದರೆ ಒಳ್ಳ ಊಟ. ಪ: ಕೊಸ್ಲೆಕ್ಕಿ – ಕುಚ್ಚಲಕ್ಕಿ

ಕೊಸ್ಲುಬತ್ತ /*koslubatta, kosl batta*/ ನಾ. 1. ಬೇಯಿಸಿದ ಭತ್ತ, 2. ಕುಸಲು ಭತ್ತ. boiled paddy. ವಾ: ಕೊಸ್ಲುಬತ್ತನ ಇಸಿಯೊಳೆ.

ಕೊಹ್ಲಿ /*kohli*/ ನಾ. ಬೆಕ್ಕು. a cat. ವಾ: ಕೊಹ್ಲಿ ಬಂದ್ ಹಾಲ್‌ನ ಕದ್ದ್ ಕುಡ್‌ತ್.

ಕೊಳಂಗಾಯ /*koḷaŋga:ya*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೊಳಂಜಿ /*koḷaŋji*/ ನಾ. ಸಣ್ಣ ಗದ್ದೆ. a small paddy field. ವಾ: ಕೊಳಂಜಿ ಗದ್ದೆ ನೇಜಿ ಹಾಕೊಳೊ. ಪ: ಕೊಳಂಜಿ ಗದ್ದೆ – ಪುಟಾಣಿ ಗದ್ದೆ; ಕೊಳ್‌ಂಜಿ – ಅತಿ ಚಿಕ್ಕ ಗದ್ದೆ

ಕೊಳಂತಾಡಿ /*koḷanta:ḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೊಳಂಬಳ /*koḷambaḷa*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಬೆಳ್ಳಾರೆ ಗ್ರಾಮದ ಜಾಗ. a locality in Bellare village in Sullia Taluk of Dakshina Kannada District.

ಕೊಳಂಬೆ[1] /*koḷambɛ*/ ನಾ. 1. ಪೀಕುದಾನಿ, 2. ಎಂಜಲು ಉಗುಳುವ ಪಾತ್ರೆ. spittoon. ವಾ: ಕೊಳಂಬೆಲಿ ಉಗ್ಯದು.

ಕೊಳಂಬೆ[2] /*koḷambe*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಎಡಮಂಗಲ ಗ್ರಾಮದ ಜಾಗ. 1. family, 2. lineage, 3. a locality in Edamangala village in Sullia Taluk of Dakshina Kannada District.

ಕೊಳಕೆ[1] /*koḷakɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೊಳಕೆ[2] /*koḷakɛ*/ ನಾ. ಒಂದು ಬೇಸಾಯ ಪದ್ಧತಿ. an agricultural practice.

ಕೊಳಗುಂಡಿ /*koḷaguṇḍi*/ ನಾ. ನೀರಿನ ಗುಂಡಿ. a drain/a pond. ವಾ: ಅಲ್ಲಲ್ಲಿ ಸುಮಾರ್ ಕೊಳಗುಂಡಿಗ ಒಳ.

ಕೊಳಗೆ /*koḷage*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕೊಲ್ಲಮೊಗ್ರು ಗ್ರಾಮದ ಜಾಗ. a locality in Kollamogru village in Sullia Taluk of Dakshina Kannada District.

ಕೊಳಚಿಪ್ಪು /*koḷacippu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕಲ್ಮಡ್ಕ ಗ್ರಾಮದ ಜಾಗ. a locality in Kalmadka village in Sullia Taluk of Dakshina Kannada District.

ಕೊಳಪೆ /*koḷapɛ*/ ನಾ. ಒಲೆ ಊದಲು ಬಳಸುವ ಕೊಳವೆ. blowing pipe. ವಾ: ಹೊಗೆ ಎದ್ದುಟು ಕೊಳಪೆ ತಕಂಡ್ ಊದಕಾಯ್ತ್.

ಕೊಳಲ್ /*koḷaɨ*/ ನಾ. ಬಿದಿರು, ಓಟೆಯಿಂದ ಮಾಡುವ ವಾದ್ಯ, ಮುರಳಿ. a flute. ವಾ: ಬಿದ್‌ರ್‌ಲಿ ಕೊಳಲ್ ಮಾಡಿವೆ.

ಕೊಳವೆ /*koḷavɛ*/ ನಾ. 1. ಕೊಳವೆ, 2. ಬಿದಿರು ಮೊದಲಾದವುಗಳ ಪೊಳ್ಳಾದ ಉದ್ದನೆಯ ನಾಳ, 3. ನಳಿಕೆ. 1. a pipe, 2. a bamboo pipe/culm, 3. a tube. ವಾ: ಬಿದ್‌ರ್‌ದ್ ಕೊಳವೆಲಿ ಕೊಳಲ್ ಮಾಡ್‌ದು. ಪ: ಕೊಳವೆಲಿ – ಕೊಳವೆಯಲ್ಲಿ

ಕೊಳಿ /*koḷi*/ ಕ್ರಿ. 1. ಕೊಳೆತು ಹೊಗು 2 ಕೆಟ್ಟು ಹೋಗು, 3. ಉಪಯೋಗಿಸಲು ಯೋಗ್ಯವಿಲ್ಲದಂತಾಗು. 1. to rot, 2. to spoil, 3. to become useless. ವಾ: ಮಳೆಗೆ ತರ್‌ಕಾರಿಗೆಲ್ಲ ಕೊಳಿದು. ಪ: ಕೊಳಿಯಕು – ಕೊಳೆಯಬೇಕು; ಕೊಳಿಯದು – ಕೊಳೆಯುವುದು; ಕೊಳಿಯಲಿ – ಕೊಳೆಯಲಿ; ಕೊಳ್ಸ್ – ಕೊಳೆಸು; ಕೊಳ್ಸಲಿ – ಕೊಳೆಸಲಿ; ಕೊಳ್ಸಿತ್ – ಕೊಳೆಸಿದನು/ಳು; ಕೊಳ್ಸಿನೆ – ಕೊಳೆಸುತ್ತೇನೆ; ಕೊಳ್ಸಿರೆ – ಕೊಳೆಸಿದರೆ; ಕೊಳ್ಸೊಕು – ಕೊಳೆಸಬೇಕು. **ಕೊಳಿದು** /*koḷidu*/ ಕೊಳೆತು ಹೋಗುವುದು. to rot. ವಾ: ಮಳೆ ಹೆಚ್ಚಿ ಆಗಿ ಹೂನ ದೈಗೆಲ್ಲ ಕೊಳಿದುತ. ಪ: ಕೊಳ್ದುಟು – ಕೊಳೆತಿದೆ

ಕೊಳುಂಬೆ /*koḷumbɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೊಳೆ /*koḷɛ*/ ನಾ. 1. ಕಸ, 2. ಕಲ್ಮಶ, 3. ಮಲಿನ. 1. waste, 2. dirt, 3. filth. ವಾ: ಅರ್ವೆಗೆ ಕೊಳೆ ಆತ್.

ಕೊಳೆಂಜಿಕೋಡಿ /*koḷeɲjiko:ḍi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮುಪ್ಪೇರ್ಯ ಗ್ರಾಮದ ಜಾಗ. a locality in Mupperia village in Sullia Taluk of Dakshina Kannada District.

ಕೊಳೆಂಜಿರೋಡಿ /*kolɛɲjiro:ḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೊಳ್‌ಂಬಿ /*koḷmbi*/ ನಾ. 1. ಎಲೆ ಅಡಕೆ ಉಗಿಯುವ ಪಾತ್ರೆ, 2. ಉಗುಳುದಾನಿ, 3. ಪೀಕದಾನಿ. a spittoon. ವಾ: ಎಲಡ್ಕೆ ತಿಂದ್ ಉಗ್ಯಕೆ ಕೊಳ್‌ಂಬೆ ಬೇಕಡ. ಪ: ಕೊಳ್‌ಂಬೆ

ಕೊಳ್ಕ /*ko]ka*/ ನಾ. 1. ಗಲೀಜು ವ್ಯಕ್ತಿ, 2. ಕೊಳಕ, 4. ಸ್ವಚ್ಛತೆ ಇಲ್ಲದವ. 1. an unclean person, 2. a dirty person, 3. a grimy person. ವಾ: ಬರೀ ಕೊಳ್ಕ ಹೈದ ಅಂವ. ಪ: ಕೊಳ್ಕೇಲ – ಕೊಳಕ

ಕೊಳ್ಕೆ /*ko]kɛ*/ ನಾ. 1. ಕೊಳಕೆ, 2. ಮೂರನೇ ಭತ್ತದ ಬೆಳೆ. the third crop grown in a paddy field. ವಾ: ಕೊಳ್ಕೆ ಗದ್ದೆ ಮೂರು ಬೆಳೆ ಮಾಡುವ ಗದ್ದೆ. **ಕೊಳ್ಕೆ ಬೆಳೆ** /*ko]kɛ bɛ]ɛ*/ ಭತ್ತದ ಬೇಸಾಯದ ಕಾಲಸೂಚಿ ಪದ. a term indicating a season to grow paddy. ವಾ: ನಾಟಿ ಬೆಳೆ, ಪುಂಡಿ ಬೆಳೆ, ಕೊಳ್ಕೆ ಬೆಳೆತ ಮೂರ್ ತರದ ಬೆಳೆಗೊಳ.

ಕೊಳ್ಕ್ /*ko]kɨ*/ ನಾ. 1. ಕೊಳಕು, 2. ಗಲೀಜು, 3. ಹೊಲಸು. 1. dirt, 2. filth, 3. soily. ವಾ: ಕೊಳ್ಕ್ ನೀರ್ ಹರ್‌ದ್ ಬಾದು. ಪ: ಕೊಳ್ಕ್‌ಂದಾಗಿ – ಗಲೀಜಿನಿಂದಾಗಿ. **ಕೊಳ್ತ** /*ko]ta*/ ನಾ. 1. ಕೊಳೆತು ಹೋದ, 2. ಕೆಟ್ಟು ಹೋದ. 1. rotten, 2. spoiled. ವಾ: ಕೊಳ್ತ ಸೊಪ್ಪು, ತರ್‌ಕಾರಿನೆಲ್ಲ ಗೊಬ್ಬರ ಗುಂಡಿಗೆ ಹಾಕುದು. ಪ: ಕೊಳ್ತರೆ – ಕೊಳೆತರೆ; ಕೊಳ್ತ್ – ಕೊಳೆತು. **ಕೊಳ್ತು ಹೋದೊ** /*ko]tu ho:dɔ*/ ಹಾಳಾಗಿ ಹೋದರು. ruined. ವಾ: ಉರಿ ಬಂದ್ ಕೊಳ್ತು ಹೋದೊ. ಪ: ಕರ್ಗಿ ಹೋದು

ಕೊಳ್ತಿಗೆ /*ko]tigɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೊಳ್ತಿಮಾರ್ /*ko]tima:r*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಜ್ಜಾವರ ಗ್ರಾಮದ ಜಾಗ. a locality in Ajjavara village in Sullia Taluk of Dakshina Kannada District.

ಕೊಳ್ಪೆ /*ko]pɛ*/ ನಾ. 1. ಕೊಳವೆ, 2. ನಳಿಕೆ, 3. ತುದಿ ಚೂಪು, 4. ಊದು ಕೊಳವೆ. 1. a pipe, 2. pipe, 3. sharp edge, 4. a blow pipe. **ನಾಯಿ ಬಾಲಕೆ ಕೋಳ್‌ಪೆ ಹಾಕಿದಂಗೆ(ಗಾ).** ವಾ: ನಾಯಿ ಬಾಲಕೆ ಕೊಳ್ಪೆ ಹಾಕಿರೆ ನೆಟ್ಟಂಗೆ/ಸರ್ತ ಆದೆನ? **ಕೊಳ್ಪೆ ಸುರಾಲ್** /*ko]pɛ sura:lɨ*/ ಚೂಪು ತುದಿಯ ಪ್ಯಾಂಟ್. pants with sharp edges. ವಾ: ಕೊಳ್ಪೆ ಸುರಾಲ್ ಹಿಂದೆನ ಕಾಲಲಿ ಹಾಕ್ತಿದ್ದೊ. **ಕೊಳ್ಪೆ ಹೂ** /*ko]pɛ hu:*/ ಕೊಳವೆ ರೀತಿಯ ಅರಿಶಿನ ಬಣ್ಣದ ಹೂವು. a yellow flower in the shape of a blowpipe. ವಾ: ಕೊಳ್ಪೆ ಹೂ ನೋಡಿಕೆ ಲಾಯ್ಕ ರ.

ಕೊಳ್ಳ /*ko]]a*/ ನಾವಿ. ಗಲೀಜು ಮನುಷ್ಯ. a dirty person. ವಾ: ಕೊಳ್ಳ ಮೊನ್ಸ.

ಕೊಳ್ಳಿ /*ko]]i*/ ನಾ. 1. ಬೆಂಕಿ ಇರುವ ಸೌದೆ ತುಂಡು, 2. ಉರಿಯುತ್ತಿರುವ ಸೌದೆ ತುಂಡು. a piece of wood that is burning at one end. **ಒಂಟಿ ಕೊಳ್ಳಿ ಹೊತ್ತುದು ಕಷ್ಟ(ಗಾ).** ವಾ: ಒಲೆಗೆ ಕೊಳ್ಳಿ ಕೂಡ್ಸಕಾಯ್ತ್.

ಕೊಳ್ಳಿ ಕಡಿದು¹ /*ko]]i kaḍidu*/ ನಾವಿ. 1. ವಿಷ್ಣುಮೂರ್ತಿ ದೈವದ ಕೋಲಕ್ಕೆ ನಿರ್ಮಿಸುವ ಮೇಲೇರಿಗೆ ಸೌದೆ ಕಡಿಯುವುದು, 2. ಮೇಲೇರಿ. 1. cutting firewood for fire walking ritual during the kola of Vishnumoorthy deity, 2. the ritual of running on burning coal. ವಾ: ಮೇಲೇರಿಗೆ ಕೊಳ್ಳಿ ಕಡಿದು. ಪ: ಕೊಳ್ಳಿಕಡಿವಂದ್ – ಕೊಳ್ಳಿ ಕಡಿವ ದಿನ

ಕೊಳ್ಳಿ ಕಡಿದು² /*ko]]i kaḍidu*/ ನಾ. ಸತ್ತವರನ್ನು ಸುಡಲು ಸೌದೆ ಕಡಿಯುವುದು. preparing wood for funeral pyre.

ಕೊಳ್ಳಿ ಕೂಡುದು /*ko]]i ku:ḍudu*/ ನಾವಿ. ಶವ ಸಂಸ್ಕಾರ ಪ್ರಕ್ರಿಯೆಯಲ್ಲಿ ದಹನಕ್ರಿಯೆ ನಡೆದ ಮಾರನೇ ದಿನ ಕಾಟದ ಸುತ್ತ ಚೆಲ್ಲಿದ ಸೌದೆಗಳನ್ನು ಪುನಃ ಮಧ್ಯಕ್ಕೆ ಹಾಕಿ ಸಂಪೂರ್ಣ ಸುಟ್ಟು ಹೋಗುವ ಹಾಗೆ ಮಾಡುವುದು. burning the unburnt/half burnt firewood after three days from the cremation. ವಾ: ನಾಳೆ ಕೊಳ್ಳಿ ಕೂಡುದು. ಪ: ಕೊಳ್ಳಿ ಕೂಡ್ಸುದು/ಕೊಳ್ಳಿ ಕೂಡ್ಸೊದ್ – ಕೊಳ್ಳಿ ಸೇರಿಸುವುದು

ಕೊಳ್ಳಿ ದೆವ್ವ /*ko]]i dɛvva*/ ನಾ. 1. ಪಿಶಾಚಿ, 2. ಬೆಂಕಿ ಹಿಡಿದು ಅಲೆಯುವ ಭೂತ. a ghost, 2. a ghost which carries a piece of burning wood (fire -brand). ವಾ: ಉಗ್ಗಪ್ಪ ನಮಿಗೆ ಕೊಳ್ಳಿ ದೆವ್ವದ ಕತೆಗಳ ಹೇಳ್ತಿದ್ದೊ, ಕೊಳ್ಳಿ ದೆವ್ವನ ಕತೆ ಕೇಳ್ರೆ ಮೈಯೆಲ್ಲ ಗಡಗಡ ತೇಳ್ದೆ, ಕೊಳ್ಳಿದೆವ್ವ ಬೆಂಕಿ ಹಿಡ್ಕಂಡ್ ಹೋದುಗಡ.

ಕೊಳ್ಳಿ ಸೇರ್‌ಸುದು /*ko]]i se:rɨsudu*/ ನಾ. ಚಿತೆಯಲ್ಲಿ ಉರಿದು ಬೀಳುವ ಕಟ್ಟಿಗೆಗಳನ್ನು ಹತ್ತಿರ ಮಾಡುವುದು. to gather the half burnt pieces of wood in a pyre. ವಾ: ಸತ್ತ ಮಾರ್ನೆ ದಿನ

ಕೊಳ್ಳಿಸೇರ್‌ಸುದು ಕ್ರಮ. ಪ: ಕೊಳ್ಳಿ ಸೇರ್ಸಿಕನ – ಕೊಳ್ಳಿಗಳನ್ನ ಕೂಡಿಸುವಾಗ

ಕೊಳ್ಳಿಕೊರ /*koḷḷikora*/ ನಾ. 1. ಔಷಧ ಸಸ್ಯ, 2. ಸಣ್ಣ ಮಗುವಿನ ಮೈಮೇಲೆ ತರಿಕಜ್ಜಿಗಳು ಬಂದಾಗ ಈ ಸಸ್ಯವನ್ನು ನೀರಿನಲ್ಲಿ ಹಾಕಿ ಸ್ನಾನ ಮಾಡಿಸುತ್ತಾರೆ, 3. ಸಾಸಿವೆಯಂತಹ ಚಿಕ್ಕ ಚಿಕ್ಕ ಕಾಯಿಗಳಿಂದ ಕೂಡಿದ ಸಣ್ಣ ಗಾತ್ರದ ಹಸಿರಿನ ಗಿಡ. 1. a medicinal plant, 2. a plant which is put in the bathing water of a child which is suffering from scabies, 2. a green plant which has small fruit. ವಾ: ಸಣ್ಣ ಮಕ್ಕಳ ಮೀಸಿಕನ ನೀರಿಗೆ ಕೊಳ್ಳಿಕೊರ ಹಾಕಿವೆ. ಪ: ಕೊಳ್ಳಿಕೋರ – ಕಾಡು ಸಂಬಾರ ಔಷದ ಸಸ್ಯ

ಕೊಳ್ಳೀರ /*koḷḷi:ra*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೊಳ್ಳೆ /*koḷḷɛ*/ ನಾ. 1. ಚಾಡಿ ಹೇಳು, 2. ಬೇರೆಯವರ ಬಗೆಗೆ ಅನಗತ್ಯ ಮಾತನಾಡುವುದು. 1. to complain, 2. to talk unnecessarily about others. ವಾ: ಮೊನ್ಸಂಗೆ ಕೊಳ್ಳೆಬುದ್ಧಿ ಇರಿಕಾಗದ್.

ಕೋಂಕ[1] /*kɔ:ŋka*/ ನಾ. 1. ಡೊಂಕು, 2. ಬಾಗಿರುವುದು. 1. bent, 2. to bend forward. **ಕೋಂಕ ಗದ್ದೆ** /*kɔ:ŋka gaddɛ*/ 1. ಸೊಟ್ಟಗಿರುವ ಗದ್ದೆ, 2. ವಕ್ರ. 1. a paddy field which is narrow in its shape, 2. curved. ವಾ: ಕೋಂಕ ಗದ್ದೆನ ಹೂಡ್ದು ಹಞ್ಞ ಬಜ್ಜ.

ಕೋಂಕ[2] /*kɔ:ŋka*/ ನಾ. ಕೋಳಿಯ ಕುತ್ತಿಗೆಯ ಭಾಗ. neck of hen. ಪ: ಕೋಂಕನಾಳಿ, ಕೋಂಕನಾಲಿ(ತು)

ಕೋಂಕನಾಳಿ /*kɔ:ŋkana:ḷi*/ ನಾ. ಕೋಳಿಯ ಗಂಟಲಿನ ಭಾಗ. throat of hen.

ಕೋಂಬಕ್ಕಿ /*ko:mbakki*/ ನಾವಿ. ಕೊಡಗಿನ ಮಲೆ ಕಾಡುಗಳಲ್ಲಿ ವಾಸಿಸುವ ದೊಡ್ಡ ಜಾತಿಯ ಹಕ್ಕಿ (ದಕ್ಷಿಣಕನ್ನಡ ಜಿಲ್ಲೆಯಲ್ಲಿ ಇದನ್ನು ಗುಳ್ಳುಮೆ ಎಂದು ಕರೆಯುತ್ತಾರೆ). Mountain Imperial- Pigeon. ವಾ: ಕೋಂಬಕ್ಕಿ ದೂಪದ ಹಣ್ಣ್‌ನ ನುಂಗ್‌ವ ಹಕ್ಕಿ. ಪ: ಕೋಂಬೆಕ್ಕಿ /ಕ್ವಾಂಬಕ್ಕಿ

ಕೋಂಬರೆ /*ko:mbarɛ*/ ನಾ. 1. ಕೋಣೆ, 2. ಕೊಠಡಿ. a room. **ಇಕ್ಕಲಾರದವ್ನು ಹಿತ್ಲಿಗೋತು ಕೊಡಲಾರದವ್ನು ಕೋಂಬರೆಗೆ ಹೋತು(ಗಾ). ಕತ್ತಲೆ ಕೋಂಬರೆಲಿ ಗುಬ್ಬಚ್ಚಿ ಕುದ್ದುಟ್ಟು – ಕಣ್ಣ್(ಒ).** ವಾ: ಕೋಂಬರೆನ ಗುಡ್ಸೊಕು, ಅವ್ವ ಮೊಲ್ಗಿಕೆ ಕೋಂಬರೆಗೆ ಹೋತ್, ಕೋಂಬರೆ ವಳಗೆ ಕರಿಕತ್ತಲೆ. ಪ: ಕೋಂಬರೆಂದ – ಕೋಣೆಯಿಂದ

ಕೋಂಬರ್ /*ko:mbar*/ ನಾ. ಐನ್‌ಮನೆ ನಡುಮನೆಯ ಸುತ್ತ ಇರುವ ಸಣ್ಣ ಸಣ್ಣ ಕೋಣೆಗಳು. small rooms adjacent to the living room in Ain mane. ವಾ: ಕೋಂಬರೆ ವಳಗೆ ಯಾರ್ ವಳದ್?

ಕೋಂಬಳೆ /*ko:mbaḷɛ*/ ನಾವಿ. ಚಿಕ್ಕ ಮಗುವಿನ ಹಾಗೆ ವರ್ತಿಸುವವ. a person who behaves like a child. ವಾ: ಎಲ್ಲೊವು ಸೇರಿಕಂಡ್ ನಂಗೆ ಕೋಂಬಳೆತ ತಮಾಸೆ ಮಾಡ್‌ದು.

ಕೋಂಬು /*ko:mbu*/ ನಾ. ಎಪ. 1. ಬಾಚಣಿಗೆ, 2. ತಲೆಗೂದಲನ್ನು ಬಾಚಲು ಬಳಸುವ ಸಾಧನ, 3. ಹಣಿಗೆ. a comb. ವಾ: ಕೋಂಬು ತಕಂಡ್ ತಲೆ ಬಾಚ್.

ಕೋಂಬ್ರೆ /*ko:mbrɛ*/ ನಾ. 1. ಕೋಣೆ, 2. ಕೊಠಡಿ. a room. ವಾ: ನಾ ಕೋಂಬ್ರೆಲಿ ವಳೆ. ಪ: ಕೋಂಬ್ರೆಂದ – ಕೋಣೆಯಿಂದ

ಕೋಕು /*Ko:ku*/ ನಾ. 1. ಕೊಕ್ಕೊ, 2. ಒಂದು ವಾಣಿಜ್ಯ ಬೆಳೆ. 1. cocoa, 2. a commercial crop. ವಾ: ಕೋಕುನ ಚಾಕ್ಲೆಟ್ಗೆ ಹಾಕುವೆಲ.

ಕೋಕುಮಣಿ /*ko:kumaṇi*/ ನಾ. 1. ಗಂಡು ಮಗುವಿನ ಜನನಾಂಗಕ್ಕೆ ಬಳಸುವ ಪದ, 2. ಗಂಡು ಮಕ್ಕಳ ಶಿಶ್ನ. penis. ವಾ: ಕೋಕುಮಣಿನ ಮುಚ್ಚಿಕ ಕೂಸು.

ಕೋಗಿಲೆ /*ko:gilɛ*/ ನಾ. 1. ಕೋಗಿಲೆ, 2. ಕೋಕಿಲ, 3. ಇಂಪಾಗಿ ಹಾಡುವ ಒಂದು ಚಿಕ್ಕ ಕಪ್ಪು ಹಕ್ಕಿ, 4. ಕೋಕಿಲ. Indian cuckoo. ವಾ: ಕೋಗಿಲೆ ಇಂಪಾಗಿ ಹಾಡ್ದೆ.

ಕೋಚ /*ko:ca*/ ನಾ. ಅಡ್ಡ ಹೆಸರು. a nick name, a term of endearment. **ಓದಿ ಓದಿ ಕೆಟ್ಟ ಕೋಚ ಬಟ್ಟೆ(ಗಾ).** ವಾ: ಅಂವ ಬೊರಿ ಕೋಚ.

ಕೋಚಣ್ಣ /*ko:caṇṇa*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. masculine given name.

ಕೋಚನ /*ko:cana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೋಟ[1] /*ko:ṭa*/ ನಾ. 1. ತಣ್ಣಗೆ, 2. ಆರಿ ಹೋಗುವಿಕೆ,

3. ತಂಪು. to cool down. ವಾ: ಗಂಜಿ/ಹುಗ್ಗೆ ಕೋಟ ಆದರೆ ಉಂಬಕಾಲೆ. ಪ: ತಂಪುಕೋಟ – ತಣ್ಣನೆ

ಕೋಟ[2] /*ko:ṭa*/ ನಾ. ಸ್ಥಳನಾಮ. place name.

ಕೋಟಿ ಮನೆ /*ko:ṭi manɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೋಟಿ[1] /*ko:ṭi*/ ನಾ. ಕೇಪುವಿನ ಕೋವಿಗಳಿಗೆ ತುಂಬಿಸಿದ ಮದ್ದು ಬಂದು ನಿಲ್ಲುವ ಜಾಗ. an angle in a gun.

ಕೋಟಿ[2] /*ko:ṭi*/ ನಾ. 1. ಕಪ್ಪು ಬಣ್ಣದ ಶಂಖ ಆಕಾರದ ಚಿಪ್ಪು ಹೊಂದಿರುವ ಒಂದು ಜಲಚರ, 2. ಕಪ್ಪೆ ಚಿಪ್ಪು. 1. a marine species with a black shell, 2. sea shells, 3. a number.

ಕೋಟಿ[3] /*ko:ṭi*/ ನಾ. ಸಂಖ್ಯಾವಾಚಕ. a numerical. ವಾ: ಅವರತ್ರ ಕೋಟಿಗಟ್ಟಲೆ ದುಡ್ಡ್ ಉಟ್ಟು.

ಕೋಟಿಗೌಡನ ಮನೆ /*ko:ṭigauḍana manɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೋಟೀರ /*ko:ṭi:ra*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೋಟುಮಾಡ /*ko:ṭuma:ḍa*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೋಟೆ /*ko:ṭe*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕಳಂಜ ಗ್ರಾಮದ ಜಾಗ. a locality in Kalanja village in Sullia Taluk of Dakshina Kannada District.

ಕೋಟೆ ಮುಂಡುಗಾರು /*ko:ṭemunḍuga:ru*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕಳಂಜ ಗ್ರಾಮದ ಜಾಗ. a locality in Kalanja village in Sullia Taluk of Dakshina Kannada District.

ಕೋಟೆ[1] /*ko:ṭɛ*/ ನಾ. 1. ಮೈಲಿ ಬೀಳುವುದು, 2. ಸೀತಾಳೆ, 3. ಸಿಡುಬು, 4. ಅಮ್ಮ. smallpox. ವಾ: ಕೋಟೆಗೆ ಹಸಿಅರ್ಸಣ ಮತ್ತೆ ಕಯಿಬೇವ್‌ನ ಅರ್‌ದ್ ಮೈಗೆ ತಿಕ್ಕುವೆ, ಇಲ್ಲರೆ ಪೊಲ್ಲೊಪ್ಪುನ ಅರ್‌ದ್ ಹಾಕಿವೆ. ಪ: ಕೋಟ್ಲೆ

ಕೋಟೆ[2] /*ko:ṭɛ*/ ನಾ. 1. ಕೋಟೆ, 2. ದುರ್ಗ, 3. ಬಹಳ ಎತ್ತರದ ಸುತ್ತುಗೋಡೆ. 1. fort, 2. fortress, 3. a raised compound. ವಾ: ಬೇಕಲ ಕೋಟೆ ಸಿವಪ್ಪ ನಾಯಕ ಕಟ್ಟ್‌ಸಿದ್.

ಕೋಟೆಂಜಿ /*ko:ṭɛji*/ ನಾ. 1. ಬಸವನಹುಳು, 2. ಒಂದು ತರಹದ ಚಿಪ್ಪುಳ್ಳ ಸಣ್ಣ ಕೋಡುಗಳುಳ್ಳ ಸರಿಯುವ ಹುಳ, 3. ಶಂಬುಕ, 4. ಗೊಣ್ಣೆ ಹುಳ. a snail. ವಾ: ಕೋಟೆಂಜಿನ ಮುಟ್ಟಿರೆ ಬರೀ ನೋಳಿ ನೋಳಿ, ಎಸ್ಟ್ ತೊಳ್‌ದರೂ ಹೋಕಿಲೆ. ಪ: ನೌಕೆಹುಳ, ಪೂವಚ್ಚಿ, ಪುರು(ತು)

ಕೋಟೆಗುಡ್ಡೆ /*ko:ṭeguḍḍe*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಪಂಬೆತ್ತಾಡಿ ಗ್ರಾಮದ ಜಾಗ. a locality in Pambettadi village in Sullia Taluk of Dakshina Kannada District.

ಕೋಟೆಬೈಲು /*ko:ṭebailu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಐನೆಕಿದು ಗ್ರಾಮದ ಜಾಗ. a locality in Inekidu village in Sullia Taluk of Dakshina Kannada District.

ಕೋಟೆಮನೆ /*ko:ṭɛmanɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೋಟ್ /*ko:ṭi*/ ನಾ. 1. ಕೋಟು, 2. ಮೈಗೆ ತೊಟ್ಟುಕೊಳ್ಳುವ ಒಂದು ಬಗೆಯ ದಪ್ಪನಾದ ಉಡುಪು, 3. ಮೇಲಂಗಿ. 1. a coat, 2. a clothing made of thick wool or cotton, 3. an overcoat. ವಾ: ಉಗ್ಗಪ್ಪ ಕೋಟ್ ಹಾಕಂಡ್ ಬಂದೊ. ಪ: ಕೋಟುಜೋಬುಲಿ – ಕೋಟಿನ ಜೇಬಿನಲ್ಲಿ

ಕೋಟ್ಯಾದೀಸ /*ko:ṭyadi:sa*/ ನಾ. ಕೋಟಿ ಗಟ್ಟಲೆ ಹಣ ಇರುವವರನ್ನು ಹೇಳುವ ಸಂಖ್ಯಾವಾಚಕ. a millionaire, a billionaire. ವಾ: ಅವು ಕೋಟ್ಯಾದೀಸರ್.

ಕೋಡ /*ko:ḍa*/ ನಾ. 1. ಮಂಗ, 2. ಕಪಿ, 3. ಮರ್ಕಟ, 4. ಕೋತಿ, 5. ಮುಜು. a monkey. **ಕೋಡ ಸತ್ತ ಕೊರ್ಮ ನಂಗೆ ಆಡ್‌ಬಡ(ಗಾ).** ವಾ: ಕೋಡಗ ಬಂದರೆ ಬಾಳೆ ತೋಟ ಪೊಡಿಪೊಡಿಯಾದೆ.

ಕೋಡ ಕಿತ್ತುಳಿ /*ko:ḍa kittuḷi*/ ನಾ. ಬೀಜ ಹೆಚ್ಚಾಗಿರುವ ಚಿಕ್ಕದಾದ ಹುಳಿಯಾದ ಕಿತ್ತಳೆ ಹಣ್ಣು. a small sour orange having many seeds. ವಾ: ಕೋಡ ಕಿತ್ತುಳಿ ಒಂದೊಂದು ಹುಳಿ, ಒಂದೊಂದು

ಸೀಂಯಿ. ಪ: ಕೋಡಂಗಿತ್ತಳೆ ಮರ – ಸಣ್ಣ ಕಿತ್ತಳೆ ಹಣ್ಣಿನ ಮರ

ಕೋಡಂಗಿ[1] /*ko:ḍaŋgi*/ ನಾ. 1. ಯಕ್ಷಗಾನ ಪಾತ್ರ, 2. ಸರ್ಕಸ್‌ಗಳಲ್ಲಿ ಬರುವ ಹಾಸ್ಯ ಪಾತ್ರ, 3. ವಿದೂಷಕ, 4. ಹಾಸ್ಯಗಾರ. 1. Yakshagana, 2. a joker in a circus, 3. a jester, 4. comedian. ವಾ: ಬಯಲಾಟ, ನಾಟಕಲಿ, ಸರ್‌ಕಸ್‌ಲಿ ಕೋಡಂಗಿ ಪಾತ್ರಗ ನೋಡಿಕೆ ಸಿಕ್ಕುದು.

ಕೋಡಂಗಿ[2] /*ko:ḍaŋgi*/ ನಾ. 1. ಮಂಗ, 2. ಕೋತಿ, 3. ಮರ್ಕಟ. a monkey. **ಕೊಟ್ಟವ ಕೋಡಂಗಿ, ಇಸ್ಕಂಡಂವ ಈರ್ಬದ್ರ(ಗಾ).** ವಾ: ಕೋಡಂಗಿಗ ಬಾಳೆಣ್ಣ್ ನ ಮನಾರ ಮಾಡಿವೆ.

ಕೋಡಂಗಿ[3] /*ko:ḍaŋgi*/ ನಾ. ಬೈಗುಳ ಪದ. an expletive. ವಾ: ನಿನ್ನ ಕೋಡಂಗಿ ಬುದ್ಧಿ ತೋರ್ಸ್‌ಬಡ.

ಕೋಡಂಗಿತ್ತಳೆ ಮರ /*ko:ḍaŋgittaḷɛ mara*/ ನಾ. ಬೀಜ ಹೆಚ್ಚಾಗಿರುವ ಚಿಕ್ಕದಾದ ಹುಳಿಯಾದ ಕಿತ್ತಳೆ ಹಣ್ಣು ಬಿಡುವ ಮರ. an orange tree (with small oranges having more seeds than usual). ವಾ: ಕೋಡಂಗಿತ್ತಳೆ ಮರಲಿ ಒಂದೇ ಒಂದು ಕಿತ್ತುಳಿ ಬುಟ್ಟತ್ತೆ.

ಕೋಡಂದೂರು /*ko:ḍandu:ru*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೋಡ-ಕಪಿ /*ko:ḍa-kapi*/ ನಾ. 1. ಮಂಗ- ಕೋತಿ, 2. ಮುಜು. a monkey. ವಾ: ಅಂವ ಕೋಡ-ಕಪಿನಂಗೆ ಮಾಡ್ದೆ.

ಕೋಡಕಳಿ /*ko:ḍakaḷi*/ ನಾ. ಕೋತಿ ಆಟ. monkeying. ವಾ: ಅಲ್ಲಿ ಕೋಡಕಳಿ ಸುರಾತ್.

ಕೋಡಿ /*ko:ḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೋಡಿಂಬಾಳ /*ko:ḍimba:ḷa*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೋಡಿಕಜೆ /*ko:ḍikajɛ*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಸುಬ್ರಹ್ಮಣ್ಯ ಗ್ರಾಮದ ಜಾಗ. a locality in Subramanya village in Sullia Taluk of Dakshina Kannada District.

ಕೋಡಿಬೈಲು /*ko:ḍibailu*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಬೆಳ್ಳಾರೆ ಗ್ರಾಮದ ಜಾಗ. 1. family, 2. lineagelocality in Bellare village in Sullia Taluk of Dak, 3. hina Kannada District.

ಕೋಡಿಮಜಲು /*ko:ḍimajalu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕೊಡಿಯಾಲ ಗ್ರಾಮದ ಜಾಗ. a locality in Kodiyala village in Sullia Taluk of Dakshina Kannada District.

ಕೋಡಿಮೂಲೆ /*ko:ḍimu:lɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೋಡಿಯಡ್ಕ /*ko:ḍiyaḍka*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕಳಂಜ ಗ್ರಾಮದ ಜಾಗ. 1. family, 2. lineage, 3. a locality in Kalanja village in Sullia Taluk of Dakshina Kannada District.

ಕೋಡ್ /*ko:ḍɨ*/ ನಾ. 1. ಕೋಡು, 2. ಕೊಂಬು. horns. ವಾ: ಹೆಣ್ಣ್ ಕಡವೆ, ಸಾರಂಗಗಳಿಗೆ ಕೋಡು ಇರ್‌ದುಲೆ.

ಕೋಡ್ತಿಲು /*ko:ḍtilu*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಐವರ್ನಾಡು ಗ್ರಾಮದ ಜಾಗ. 1. family, 2. lineage, 3. a locality in Aivarnadu village in Sullia Taluk of Dakshina Kannada District.

ಕೋಡ್ತುಗುಳಿ /*ko:ḍtuguḷi*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಮರಪಡ್ನೂರು ಗ್ರಾಮದ ಜಾಗ. 1. family, 2. lineage, 3. a locality in Amarapadnuru village in Sullia Taluk of Dakshina Kannada District.

ಕೋಣ /*ko:ṇa*/ ನಾ. 1. ಕೋಣ, 2. ಮಹಿಷ. a buffalo. **ಕೊಂಬುಕೊಯ್ದ ಕೋಣನಂಗೆ ಹೋದು(ಗಾ). ಕೋಣನ ಬೆನ್ನಿಗೆ ಮಳೆ ಬಿದ್ದಾಂಗೆ(ನು).** ವಾ: ಕತ್ತಲಾತ್ ಕೋಣಗಳ ಹೊಡ್ಕಂಬಾಕೆ ಹೋಕುನೆ. ಪ: ಕೋಣಂಗ – ಕೋಣಗಳು

ಕೋಣಕಜೆ /*ko:ṇakajɛ*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಮರಪಡ್ನೂರು ಗ್ರಾಮದ ಜಾಗ. a

locality in Amarapadnuru village in Sullia Taluk of Dakshina Kannada District.

ಕೋಣೆ /*ko:ηε*/ ನಾ. 1. ಕೊಠಡಿ, 2. ಕಿರುಮನೆ, 3. ಕೋಂಬರೆ. 1. a room, 2. a small room. **ಕೊಡ್ಡ್ ಮೂರ್ ಕಾಸ್, ಕೋಣೆ ತುಂಬಾ ಹಾಸಿಗೆ ಹಾಸ್(ಗಾ).** ವಾ: ಕೋಣೆಗೆ ಸುಣ್ಣ ಬಳಿಯೊಕು, ಚಾಂಪ ಕೋಣೆಲಿ ಮೊಲ್‌ಗಿಯೊಳೊ.

ಕೋತಿ /*ko:ti*/ ನಾ. 1. ಮಂಗ, 2. ಕಪಿ, 3. ಮರ್ಕಟ, 4. ಕೋಡ. a monkey. ವಾ: ಕೋತಿ ಮರಂದ ಮರಕೆ ಹಾರ್‌ದೆ.

ಕೋತಿವಿದ್ಯೆ /*ko:tividyε*/ ನಾ. 1. ಮಂಗವಿದ್ಯೆ, 2. ಇತರರಿಗೆ ಚೇಷ್ಟೆ ಮಾಡು. to cause mischief. **ಕಲಿಯುವ ಮುಟ್ಟ ಬ್ರಹ್ಮ ವಿದ್ಯೆ ಗಡ, ಕಲ್ತ ಮೇಲೆ ಅದ್ ಕೋತಿ ವಿದ್ಯೆ ಗಡ(ಗಾ).** ವಾ: ಅಂವ ಕೋತಿವಿದ್ಯೆಂದ ಮೋಸ ಮಾಡ್ತ್.

ಕೋನಡ್ಕ /*ko:nadka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಜಾಲ್ಸೂರು ಗ್ರಾಮದ ಜಾಗ. a locality in Jalsuru village in Sullia Taluk of Dakshina Kannada District.

ಕೋಪ /*ko:pa*/ ನಾ. 1. ಕೋಪ, 2. ಸಿಟ್ಟು, 3. ಮುನಿಸು. 1. anger, 2. vehemence, 3. hostility. **ಕಂಡದರ ಕಂಡಾಂಗೆ ಹೇಳ್ರೆ ಕೆಂಡದಂತ ಕೋಪ(ಗಾ).** ವಾ: ಗಡಿಗಡಿಗೆ ಕೋಪ ಮಾಡಿಕಂಬೊದು ಸರಿನಾ?, ಕೋಪಲಿ ಮನೆ ಬುಟ್ಟ್ ಹೋತು. ಪ: ಕೋಪಲಿ – ಸಿಟ್ಟಿನಲ್ಲಿ; ಕೋಪಬಾಕನ – ಕೋಪಬರುವಾಗ; ಕೋಪದವು – ಸರಿ ಇಲ್ಲದವರು; ಕೋಪಿಸ್ಟ – ಮುನಿಸಿಕೊಳ್ಳುವವ

ಕೋಪಟೆ[1] /*ko:paṭε*/ ನಾ. ಮುದ್ದು. pampering. ವಾ: ಬಾರಿ ಕೋಪಟೆ ಕೂಸಿದ್, ಹಠ್ಠ ಜೋರು ಮಾಡಿರೆಸಾಕ್ ಮರ್‌ಟದೆ.

ಕೋಪಟೆ[2] /*ko:paṭε*/ ಕ್ರಿ. ಕೋಪ ಮಾಡಿಕೊಳ್ಳುವವನು. someone who gets angry. ವಾ: ಅಂವ ಬರೇ ಕೋಪಟೆ.

ಕೋಪನ /*ko:pana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೋಪು /*ko:pu*/ ಪವಾ. ದ್ರವ ಪದಾರ್ಥವನ್ನು ಸುರಿಯಲು ಬಳಸುವ ಸಾಧನ. an instrument used in pouring liquid. ವಾ: ಹಾಲ್‌ನ ಕೋಪು ತಕಂಡ್ ಅಳೆಕು. ಪ: ಕೋಪೆ

ಕೋಪೆ /*ko:pε*/ ನಾ. 1. ಗುಂಪು, 2. ಜೊತೆ. 1. a group, 2. a pair. ವಾ: ಅವೆಲ್ಲ ಕೋಪೆಲಿ ನಿತ್ತೊಳೊ.

ಕೋಬಿ /*ko:bi*/ ನಾ. 1. ಕೋವಿ, 2. ತುಪಾಕಿ, 3. ಗುಂಡು ಹಾರಿಸುವ ಸಾಧನ. 1. a gun, 2. a rifle, 3. a firearm. ವಾ: ಕೋಬಿ ತಕಂಡ್ ಗುಂಡ್ ಹೊಡ್ತ್.

ಕೋಮಟಿ[1] /*ko:maṭi*/ ನಾ. ಒಂದು ವ್ಯಾಪಾರಿ. a merchant community. **ಕೋಮಟಿ ಮೋಸ ಹೋಕಿಲ್ಲೆ, ಹೋದರೂ ಹೇಳಿಕಿಲ್ಲೆ(ಗಾ).** ವಾ: ಕೋಮಟಿ ಅಂಗ್ಡಿಲಿ ಮೊದ್ದಿಗೆ ಬೇಕಾದೆಲ್ಲ ಸಿಕ್ಕಿದೆ. ಪ: ಕೋಮಟಿಲಿ – ನಾಟಕೀಯ ವರ್ತನೆ

ಕೋಮಟಿ[2] /*ko:maṭi*/ ನಾ. ಮಂಕು ಮಾಡುವುದು. to fool someone. ವಾ: ಅಂವ ಕೋಮಟಿನಂಗೆ ಆಡ್ದೆ.

ಕೋಮಟಿ[3] /*ko:maṭi*/ ನಾ. ಜಾತಿವಾಚಕ ಪದ. Komati caste. **ಒಬ್ಬ ಗೌಡನ ಸೋಲ್ಸಿಕೆ ಒಬ್ಬ ಮಾಪ್ಳೆ ಸಾಕ್, ಒಬ್ಬ ಮಾಪ್ಳೆನ ಸೋಲ್ಸಿಕೆ ಒಬ್ಬ ಕೊಂಕ್‌ಣಿ ಸಾಕ್, ಒಬ್ಬ ಕೊಂಕ್‌ಣಿನ ಸೋಲ್ಸಿಕೆ ಒಬ್ಬ ಕೋಮಟಿ ಸಾಕ್(ನು).**

ಕೋಮಣ /*kɔ:maηa*/ ನಾ. 1. ಜನನಾಂಗಗಳನ್ನು ಮುಚ್ಚಿ ಕಟ್ಟುವ ಬಟ್ಟೆ, 2. ಕೌಪೀನ, 3. ಲಂಗೋಟಿ. 1. a strip of cloth used to cover the genitals, 2. a loincloth, 3. langot (underclothing). **ಕೋಮಟಿ ನಡಿಯಕನ ಕೋಮಣ ಜರ್ದು, ಲೆಕ್ಕಚಾರ ಜಾರಿಕಿಲೆ(ಗಾ). ಚವುಳಿ ಮೂಡೆನ ಕೋಮಣದೊಳಗೆ ಇಸಿ ಕಟ್ಟಿಕಂಡಾಂಗೆ(ನು).** ವಾ: ಕುಸ್ತಿ ಮಾಡ್ಕನ ಕೋಮಣ ಕಟ್ಟಿಕಂಬದು. ಪ: ಕೋಮಣಲಿ – ಕೌಪೀನದಲ್ಲಿ

ಕೋರಚೌಕ /*ko:ra cauka*/ ನಾವಿ. ಮದುವಣ ತಲೆಗೆ ಧರಿಸುವ ಕೆಂಪು ವಸ್ತ್ರ. a red cloth worn by the bridegroom. ವಾ: ಮೊದುವೆಲಿ ಹೈದ ಕೋರ್‌ಚೌಕನ ತಲೆಗೆ ಹಾಕುದು.

ಕೋರನ /*ko:rana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೋರಿಕಾರ್ /*ko:rika:rɨ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೋರಿಹಾರ್ /*ko:riha:ri*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೋರೆ[1] /*ko:rɛ*/ ನಾ. 1. ದಾಡೆ, 2. ದವಡೆ, 3. ಕೋರೆಹಲ್ಲು, 4. ದಂತ. 1. pointed tooth, 2. jaw, 3. a canine tooth, 4. tooth. ವಾ: ಆನೆ ಕೋರೆಲಿ ಎತ್ತಿದೆ.

ಕೋರೆ[2] /*ko:rɛ*/ ನಾ. ಕೆಂಪುಕಲ್ಲು, ಮುರಕಲ್ಲು, ಕರಿಗಲ್ಲು ಕಡಿಯುವ ಪ್ರದೇಶ. a mine where laterite stone is extracted. ವಾ: ಕೋರೆ ಕಡೆ ಹೋಗಿ ಬನ್ನೆ. ಪ: ಕೋರೆ ಹಕ್ಕಲೆ – ಕೋರೆ ಹತ್ತಿರ

ಕೋರೆಹಂದಿ /*ko:rɛhandi*/ ನಾವಿ. 1. ಮೂತಿಯಿಂದ ಕೋರೆ ಹಲ್ಲು ಹೊರಬಂದಿರುವ ಹಂದಿ, 2. ಕೋರೆ ಹಲ್ಲುಗಳಿರುವ ಹಂದಿ. 1. upper canine teeth of a wild boar, 2. a wild boar with canine teeth. ವಾ: ಕೋರೆ ಹಂದಿ ಕಾಡ್‌ಲಿ ಕಾಂಬಕೆ ಸಿಕ್ಕುದು.

ಕೋರೆಕಾನ /*ko:reka:na*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಜಾಲ್ಸೂರು ಗ್ರಾಮದ ಜಾಗ. a locality in Jalsuru village in Sullia Taluk of Dakshina Kannada District.

ಕೋರ್ಟ್ /*ko:rṭi*/ ನಾ. ಎಪ. 1. ನ್ಯಾಯಾಲಯ, 2. ನ್ಯಾಯಸ್ಥಾನ, 3. ಕೋರ್ಟು. a court of justice. ವಾ: ಜಗಳ ಮಾಡಿ ಕೋರ್ಟ್ ಹತ್ತಿಸ್ತ್. **ಕೋರ್ಟ್ ಕಟ್ಲೆ** /*ko:rṭi kaṭlɛ*/ ಎಪ. 1. ನ್ಯಾಯಾಲಯದ ಕಟಕಟೆ, 2. ಸಾಕ್ಷಿಕಟ್ಟೆ, 3. ಆರೋಪಿ ಅಥವಾ ಸಾಕ್ಷಿ ನಿಲ್ಲುವ ಕಟ್ಟೆ. 1. a dock in the court, 2. a witness box, 3. a dock in a court where a witness or the accused stands to give evidence. ವಾ: ಕೋರ್ಟ್ ಕಟ್ಲೆ ಲಿ ನಿತ್ತ್ ಸಾಕ್ಷಿ ಹೇಳ್ದು.

ಕೋರ್ಯೊಳೊ /*ko:ryɔḷɔ*/ ನಾ. 1. ಕೋರಿದ್ದಾರೆ, 2. ಕೇಳಿಕೊಳ್ಳು. 1. have/has requested, 2. to request/plead. ವಾ: ಕೆಲ್‌ಸಕೆ ಅರ್‌ಜಿ ಹಾಕಿಕೆ ಕೋರ್ಯೊಳೊ.

ಕೋಲ ಕಟ್ಟುದು[1] /*ko:la kaṭṭudu*/ ನಾವಿ. ಭೂತ ನರ್ತಕನು ಅಲಂಕಾರ ಮಾಡಿಕೊಂಡು ಕುಣಿತ ಮೊದಲಾದ ಕ್ರಿಯೆ, ಅಭಿನಯಗಳನ್ನು ಮಾಡುವುದು. a ritualistic dance performed by the impersonator of the bhuta/deity. ವಾ: ತುಳುನಾಡ್‌ಲಿ ಕೋಲ ಕಟ್ಟುದು ಆಗಾಗ ನಡಿತಿದ್ದದೆ. ಪ: ಕೋಲಕಟ್ಟೊವ್ – ಭೂತ ಕಟ್ಟುವವರು

ಕೋಲ ಕಟ್ಟುದು[2] /*ko:la kaṭṭudu*/ ಕ್ರಿವಿ. ನೋಡಲು ಹಿತಕರವಲ್ಲದ ವಿಚಿತ್ರ ರೀತಿಯ ಉಡುಗೆ ತೊಡುಗೆ ಧರಿಸುವುದು. to dress peculiarly. ವಾ: ಆ ಗೂಡೆ ಎಂತೆಂತೋ ಕೋಲ ಕಟ್ಟುದು, ತನ್ನ ಕೋಲ ಬುಟ್ಟ್ ನಾಯಿಕೋಲ ಕಟ್ಟಿದಂಗೆ. ಪ: ಕೋಲಕಟ್ಟಟ – ವಿಚಿತ್ರ ವರ್ತನೆ

ಕೋಲ[1] /*ko:la*/ ನಾವಿ. ಭೂತಗಳಿಗೆ ಕೊಡುವ ಸೇವೆ, 2. ಭೂತ ನರ್ತನ. 3. ಭೂತದ ವೇಷಧಾರಿಯು ಕುಣಿಯುವ ಕುಣಿತ. 1. a spirit worship to honor the local deities, 2. a ritualistic dance performed by the deity, 3. a ritualistic dance performed by the impersonator of the bhuta/deity. ವಾ: ಗುಳಿಜ್ಜನ ಕೋಲಕೆ ಕೋಳಿ ಹರ್ಕೆ ಕೊಡಿಕೆ ಇದ್ದದೆ.

ಕೋಲ[2] /*ko:la*/ ನಾ. 1. ಅಸಾಧಾರಣ ರೀತಿಯಲ್ಲಿ ಧರಿಸಿದ ಉಡುಗೆತೊಡುಗೆ, 2. ವಿಚಿತ್ರ ರೀತಿಯ ವೇಷಭೂಷಣ ರೂಪ, 3. ಆಕೃತಿ. 1. an elaborate costume, makeup, etc. worn by the impersonator of the bhuta/deity 2. spectacular costume worn by the impersonator of the bhuta/deity, 3. form/ shape. **ತನ್ನ ಕೋಲ ನಾಯಿ ಕೋಲ ಮಾಡಿಕಂಬದು(ಗಾ).** ವಾ: ಅವುಳ ಕೋಲ ನೋಡಿಕಾಲೆ.

ಕೋಲಂಗಾಯ /*ko:laŋga:ya*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೋಲಂಜಿ /*ko:lanji*/ ನಾ. 1. ಗೊಣ್ಣೆ ಹುಳು. a white grub. ವಾ: ಕೋಲಂಜಿ ದೈನೆಲ್ಲ ತಿಂಬೊದು.

ಕೋಲಂಟೆ /*ko:laṇṭɛ*/ ನಾ. 1. ಉಪಯೋಗವಿಲ್ಲದ ಕೆಲಸ, 2. ಲೋಟನೆ. 1. useless work, 2. a pointless work.

ಕೋಲಂತ್ರಿ /*ko:lantri*/ ನಾ. ಪತಂಗ ಹಾಗೂ ಚಿಟ್ಟೆಗಳನ್ನು ತಿನ್ನುವ ಹಕ್ಕಿ. a bird that eats butterflies and moths. ವಾ: ಕೋಲಂತ್ರಿ ಹಕ್ಕಿ ಗದ್ದೆನ ಕಾಪುಲಿ ಕುದ್ದ್ ಚಿಟ್ಟೆ ಹಿಡಿಯಕೆ ಕಾದ್‌ಕೊಂಡೇ ಇದ್ದದೆ.

ಕೋಲಕಟ್ಟುದು[3] /*ko:la kaṭṭudu*/ ನಾವಿ. ಜಿಪುಣನಾಗಿರುವುದು. stingy. ವಾ: ಅಂವ ಅಸ್ಟು ದುಡ್ಡಿದ್ದರೂ ಕೋಲಕಟ್ಟುದು.

ಕೋಲಾಟ /*ko:la:ṭa*/ ನಾ. ಜನಪದ ಕುಣಿತ, ಕೋಲುಗಳನ್ನು ಹಿಡಿದು ಮಾಡುವ ಸಾಮೂಹಿಕ ನೃತ್ಯ. a folk dance form usually performed in a group with coloured sticks. ವಾ: ಕೊಣ್‌ತಲಿ ಕೋಲಾಟ ನೋಡಿಕೆ ಕುಸಿಯಾದು.

ಕೋಲು ಕೈ /*ko:lu kai*/ ನಾ. 1. ಉದ್ದ ಕೈ, 2. ಸಣಕಲು ಕೈ. lean arms. ವಾ: ಕೋಲು ಕೈ ಹೈದ ಕೆಲ್ಸಲಿ ಜಾಣ.

ಕೋಲು ಮಿಟಾಯಿ /*ko:lu miṭa:yi*/ ನಾ. 1. ಲಾಲಿಪಪ್ಪು, 2. ಮಿಠಾಯಿ. 1. lollipop, 2. sweet dish. ವಾ: ಮಕ್ಕಳಿಗೆ ಕೋಲು ಮಿಟಾಯಿತೇಳಿರೆ ಬಾರಿ ಕುಸಿ, ಇದರ ಗದೆ ಮಿಟಾಯಿತ ಸನ ಕರ್‌ದವೆ.

ಕೋಲು ಮೋರೆ /*ko:lu morɛ*/ ನಾ. 1. ಆಕಾರದಲ್ಲಿ ಉದ್ದ, 2. ಉದ್ದನೆಯ ಮುಖ. an oblong face. ವಾ: ಹೈದಂದ್ ಕೋಲು ಮೋರೆ.

ಕೋಲು[1] /*ko:lu*/ ನಾ. 1. ಮರದ ಚಿಕ್ಕ ದೊಣ್ಣೆ, 2. ಬಡಿಗೆ. 1. a stick, 2. a club. ವಾ: ಕೋಲ್ ಹಿಡ್ಕಂಡ್ ಆಡ್ಬಡ ಕಣ್ಣಿಗೆ ಹೆಟ್ಟಿರೆ ಎಂತರ ಮಾಡ್‌ದು?

ಕೋಲು[2] /*ko:lu*/ ನಾ. 1. ಅಳತೆಕೋಲು, 2. ಮಣ್ಣಿನ/ಮರದ ಅಳತೆಗೆ ಬಳಸುವ ಕೋಲು ಆಚಾರಿ ಕೋಲು 24 ಅಂಗುಲ=231. ಗಜ ಕೋಲು 36ঌ=3 ಅಡಿ. 1. a measuring stick, 2. a three feet measuring stick. ವಾ: ಕೋಲುನ ಆಚಾರಿಗ ಅಳ್‌ತೆ ಮಾಡಿಕೆ ಬಳ್‌ಸುವೆ.

ಕೋಲುಮಾದನ /*ko:luma:dana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೋಲ್ ಜೀಟಿಗೆ /*Ko:lɨ ji:ṭigɛ*/ ನಾ. ಒಂದೇ ಪಂಜು ಇರುವ ಉದ್ದವಾದ ದೀವಟಿಗೆ. a single flame torch or a firebrand. **ಹಾಕಂವ ಒಬ್ಬ ನೂಕಂವ ಒಬ್ಬ ಜೀಟಿಗೆ ದೀಪ ಹಿಡಿಯಂವ ಒಬ್ಬ – ಇಡ್ಮಣಿ ಹಿಟ್ಟ್(ಒ).** ವಾ: ರಾತ್ರೆ ಕೋಲ್ ಜೀಟಿಗೆ ಹಿಡ್‌ಕಂಡ್ ಹೋದು.

ಕೋಲ್‌ಉಳಿ /*ko:lɨ uḷi*/ ನಾ. 1. ಸಪುರವಾಗಿರುವ ಉಳಿ, 2. ಕೋಲುಳಿ. a thin (long and narrow edged) chisel. ವಾ: ಕೋಲ್ ಉಳಿನ ತಂಬಾ.

ಕೋಲ್ಕಾರ /*kolka:ra*/ ನಾ. ದೇವಸ್ಥಾನದ ವ್ಯವಸ್ಥೆಯ ಸಹಾಯಕ. an assistant manager in a temple. ವಾ: ಜಾತ್ರೆ ಸಮಯಲಿ ಕೋಲ್ಕಾರಂಗೆ ತುಂಬ ಕೆಲ್ಸ ಇದ್ದದೆ.

ಕೋಲ್‌ಕಾಲ್ /*ko:lɨ ka:lɨ*/ ನಾ. 1. ಸಣಕಲು ಕಾಲು, 2. ಉದ್ದನೆಯ ಕಾಲು. 1. lean legs, 2. long legs. ವಾ: ಕೋಲ್ ಕಾಲ್ ಆಗಿ ಹೈದ ಉದ್ದ ಕಾಂಬೊದು.

ಕೋಲ್ಚಾರು /*ko:lca:ru*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಆಲೆಟ್ಟಿ ಗ್ರಾಮದ ಜಾಗ. 1. family, 2. lineage, 3. a locality in Aletti village in Sullia Taluk of Dakshina Kannada District.

ಕೋಲ್‌ಜೇನ್ /*ko:lɨ je:nɨ*/ ನಾ. ಮರ ಗಿಡಗಳ ಕೊಂಬೆಗಳಲ್ಲಿ ಎರಿ ಕಟ್ಟುವ ಜೇನು. apis florea – honey bee. ವಾ: ಕೋಲ್ಜೆನ್‌ನ ಮೊದ್ದಿಗೆ ಬಳ್‌ಸುವೆ. ಪ: ಕೋಲ್ಜೆನ್

ಕೋಲ್ತಾಡಿ /*ko:lta:ḍi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಬಳ್ಪ ಗ್ರಾಮದ ಜಾಗ. a locality in Balpaa village in Sullia Taluk of Dakshina Kannada District.

ಕೋಲ್ತಿರಿ /*ko:ltɨri*/ ನಾ. 1. ಬಟ್ಟೆ ಸುತ್ತಿದ ಚಿಕ್ಕ ದೊಂದಿ, 2. ಹಬ್ಬದಲ್ಲಿ ಕೋಲಿಗೆ ಬಿಳಿ ಬಟ್ಟೆ ಸುತ್ತಿ ಎಣ್ಣೆ ಮುಟ್ಟಿಸಿ ಉರಿಸಿಡುವುದು. 1. a small torch/firebrand made of cloth tied to the end of a stick. ವಾ: ಕೋಲ್ತ್‌ರಿನ ಹಬ್ಬಲಿ ಹೋಸಿ ಇಸುದು.

ಕೋಲ್‌ನ /*ko:lɨna*/ ಕ್ರಿವಿ. ಕೋಲನ್ನು. stick. ವಾ: ಕೋಲ್‌ನ ಬಿಸಾಕ್ ಹೈದ, ಅದರ್‌ಲಿ ಆಡಿಕಾದ್.

ಕೋಲ್‌ನುರ್‌ಗೆ /*ko:lɨ nurigɛ*/ ನಾ. ನುಗ್ಗೆಕಾಯಿಯ ಕೋಡು. pods of drum stick. ವಾ: ಕೋಲ್ ನುರ್‌ಗೆನ ಮುರಿ.

ಕೋಲ್ಪೆ /*ko:lpɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೋಲ್‌ಮೂಗ್ /*ko:lɨ mu:gɨ*/ ನಾ. ಚೂಪಾದ ಮೂಗು. a straight nose. ವಾ: ಕೋಲ್ ಮೂಗ್ ಮೋರೆಕೆ ಲಕ್ಷಣ.

ಕೋಲ್‌ಮೇಸ್ತ್ರಿ /*kolmestri*/ ನಾ. ಉದಾಸೀನ ಮನೋಭಾವ, ಬೈಗುಳ ಪದ. a lethargic person.

ವಾ: ನೀ ಎಂತ ಕೆಲ್ಸ ಮಾಡದೆ ಕೋಲ್‌ಮೇಸ್ತ್ರಿನಂಗೆ ನಿತ್ತ್‌ಕಂಡ್ ನೋಡ್ತು.

ಕೋಲ್ವಾರು /*ko:lva:ru*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೋಲ್ಸೆವೆ /*ko:lsɛvɛ*/ ನಾ. 1. ಬೈಗುಳ ಪದ, 2. ಹೊಡೆಯುವುದು. an expletive. ವಾ: ನಿಂಗೆ ಕೋಲ್ಸೆವೆ ಆಕು ಕಂಡದೆ ಇಲ್ಲರೆ ಮಾತ್ ಕೇಳ್ದುಲೆ ನೀ.

ಕೋವಿ /*ko:vi*/ ನಾ. 1. ಕೋವಿ, 2. ಬಂದೂಕು, 3. ತುಪಾಕಿ, 4. ಗುಂಡು ಹಾರಿಸುವ ಸಾಧನ. a gun. **ಸತ್ತ ಎತ್ತ್ ಗುಟ್ ರ್ ಹಾಕುದು – ಕೋವಿ(ಒ).** ವಾ: ಕೋವಿ ತಕಂಡ್ ಬೇಟೆಗೆ ಪೋಯ. **ಕೋವಿ ಪೂಜೆ** /*ko:vi pu:jɛ*/ ಬಂದೂಕು ಪೂಜೆ. worship the gun. ವಾ: ಆಯ್ದ ಪೂಜೆಲಿ ಕೋವಿ ಪೂಜೆ ಮಾಡಿವೆ. **ಕೋವಿನ ಕಳ್ಳ** /*ko:vina kaḷḷa*/ ಬಂದೂಕು ಸಿಡಿಸಲು ಬಳಸುವ ಭಾಗ. a trigger. ವಾ: ಕೋವಿನ ಕಳ್ಳನ ಎಳೆಕು.

ಕೋಸ[1] /*ko:sa*/ ನಾ. 1. ಕೋಶ, 2. ಖಜಾನೆ, 3. ಭಂಡಾರ, 4. ನಿಘಂಟು. 1. books, 2. treasury, 3. a chest, 4. a dictionary. **ದೇಸ ಸುತ್ತಿ ನೋಡ್ ಕೋಸ ಓದಿ ನೋಡ್(ಗಾ).** ವಾ: ಕೋಸ ಓದಿರೆ ತಿಳುವಳಿಕೆ ಹೆಚ್ಚಾದೆ.

ಕೋಸ[2] /*ko:sa*/ ನಾ. ಓರೆ ಕಣ್ಣಿನವ. squint eyed. ವಾ: ಅಂವ ಒಂಚೂರು ಕೋಸ. **ಕೋಸ್ಕಣ್** /*ko:skaṇɨ*/ ಮೆಳ್ಳೆಗಣ್ಣು. squint eyes. ವಾ: ಹೈದಂದ್ ಕೋಸ್ಕಣ್‌ಗಡ. **ಕೋಸ್‌ಕಣ್ಣ** /*ko:skaṇṇa*/ ಓರೆ ಕಣ್ಣ. squint eyes. ವಾ: ಕುರುಡಂದ ಕೋಸ್‌ಕಣ್ಣ ಆದು. **ಕೋಸ್‌ಕಣ್ಣಿ** /*ko:sɨ kaṇṇi*/ ಮೆಳ್ಳೆಗಣ್ಣು (ಹೆಂಗಸರಿಗೆ ಹೇಳುವುದು). having a squint eye (woman). ವಾ: ಕೋಸ್ ಕಣ್ಣಿ ಕಾಂಬಲೆ. **ಕೋಸ್‌ಕಣ್ಣ್** /*Ko:sɨ kaṇṇ*/ 1. ಮಾಲುಗಣ್ಣು, 2. ಮೆಳ್ಳೆಗಣ್ಣು. squint eyes. **ಕುರ್‌ಡ್ ಕಣ್ಣ್‌ಗಿಂತ ಕೋಸ್ ಕಣ್ಣ್ ಮೇಲ್(ಗಾ).** ವಾ: ಆ ಹೈದನ ಕಣ್ಣ್ ಚೂರು ಕೋಸ್ ಅಲ.

ಕೋಸಿಕಂಡುಟು[2] /*kɔ:sikaṇḍuṭu*/ ನಾವಿ. 1. ಮೈ ತುಂಬ ಒಡವೆ ಹಾಕಿ ಅಲಂಕಾರ ಮಾಡಿಕೊಂಡಾಗ ಈ ಮಾತನ್ನು ಹೇಳಲಾಗುತ್ತದೆ, 2. ಸಿಕ್ಕಿಸಿಕೊಂಡಿದ್ದಾಳೆ, 3. ಸೆಕ್ಕೆಂಟು/ಸೆಕ್ಕೆಂಡುಟು. 1. refers to someone who is wearing excessive jewelry, 2. has put on, worn etc. ವಾ: ಇರೊಬರೊ ಚಿನ್ನನೆಲ್ಲ ಕೋಸಿಕಂಡುಟು. ಪ: ಕೋಸಿಕಂಡ್ – ಸಿಕ್ಕಿಸಿಕೊಂಡು; ಕೋಸಿತ್ – ಸಿಕ್ಕಿಸಿದನು/ಳು; ಕೋಸುದು – ಸಿಕ್ಕಿಸಿಡುವುದು; ಕೋಸ್ – ಸಿಕ್ಕಿಸು

ಕೋಸಿದೆ /*ko:sidɛ*/ ಕ್ರಿವಿ. 1. ಕೊಕ್ಕೆ ಕಟ್ಟುತ್ತದೆ, 2. ಶರೀರದ ಯಾವುದಾದರು ಭಾಗದಲ್ಲಿ ಹಿಡಿದುಕೊಂಡಂತಹ ಅನುಭವವಾಗು, 3. ಸೆಕ್ಕೆಂದೆ. feeling of numbness in any part of the body. ವಾ: ಕ್ವಾಟಿಕೆ ಕಾಲ್ ಕೋಸಿದೆ. ಪ: ಕೋಸಿದಂಗಾದೆ – ಸಿಲುಕಿಕೊಂಡಂತಾಗುತ್ತಿದೆ

ಕೋಸ್ /*ko:si*/ ಕ್ರಿ. 1. ಸಿಕ್ಕಿಸು, 2. ನೇತುಹಾಕು. 1. to hang, 2. to suspend something. ವಾ: ಬ್ಯಾಗ್‌ನ ಆಣಿಗೆ ಕೋಸು. ಪ: ಕೋಸಿ – ನೇತುಹಾಕಿ. **ಕೋಸಿಕಂಡುಟು** /*kɔ:sikaṇḍuṭu*/ 1. ಸಿಕ್ಕಿ ಹಾಕಿಕೊಳ್ಳು, 2. ಹಿಡಿದುಕೊಂಡಂತಹ ಅನುಭವವಾಗು. 1. to get stuck in something, 2. to feel cramps. ವಾ: ದೊಂಡೆಲಿ (ಎದೆಲಿ) ಎಂತದೊ ಕೋಸಿಕಂಡುಟು. **ಕೋಸಿಕಂಬುದು** /*ko:si kɔmbudu*/ 1. ನೇತಾಡಿಕೊಳ್ಳುವುದು, 2. ಶರೀರದ ಯಾವುದಾದರು ಭಾಗದಲ್ಲಿ ಹಿಡಿದುಕೊಂಡಂತಹ ಅನುಭವವಾಗು, 3. ನೇಲ್ದು. 1. hanging onto something, 2. to feel cramps in any part of the body 3. a hook. ವಾ: ಕುರೆಗ ಮರದ ಗೆಲ್ಲ್‌ಲಿ ನೇಲಿಕಂಬುದು. **ಕೋಸಿಕನ್ತ್** /*ko:sikant*/ 1. ಸಿಕ್ಕಿಕೊಂಡಿತು, 2. ಸುತ್ತಿಕೊಳ್ಳು, 3. ಸೆಕ್ಕೆಂತ್. 1. to get caught by, 2. got coiled. ವಾ: ನಾಯಿನ ಕಾಲಿಗೆ ಬೊಳ್ಳಿ ಕೋಸಿಕನ್ತ್. **ಕೋಸಿಕೊಂಬದ್** /*ko:sikombadɨ*/. ಸಿಕ್ಕಿಸಿಕೊಳ್ಳುವುದು. getting stuck. ವಾ: ಬ್ಯಾಗ್‌ನ ಹೆಗ್‌ಲ್‌ಗೆ ಕೋಸಿಕೊಂಬದ್.

ಕೋಳ /*ko:ḷa*/ ನಾ. 1. ಸಂಕೋಲೆ, 2. ಬೇಡಿ, 3. ಕೈ ಅಥವಾ ಕಾಲನ್ನು ಬಂಧಿಸುವ ಮರದ, ಕಬ್ಬಿಣದ ಒಂದು ಉಪಕರಣ. 1. handcuffs, 2. shackles, 3. a wooden or iron fretters. ವಾ: ಕಳ್ಳನ ಕೋಳ ಹಾಕಂಡ್ ಕರ್‌ಕಂಡೊದೊ.

ಕೋಳಿ /*ko:ḷi*/ ನಾ. 1. ಕೋಳಿ, 2. ಕುಕ್ಕುಟ. a hen. **ಕೋಳಿ ಇರ್ಕಾಕನ ಕೊರಂಗ್ ಯಾಕೆ(ಗಾ). ಕೋಳಿ ತನ್ನಂದಲೇ ಬೊಳ್ವಾದೂಂತ ಹೇಳ್ದಾಂಗೆ(ನು).** ವಾ: ಬೊಳ್ಪಿಗೆ ಕೋಳಿ ಕೂಂಗಿಕಾಕನ ಎಚ್ಚರಿಕಾತ್. ಪ: ಕೋಳಿ ಪಿಳ್ಳೆ – ಕೋಳಿಮರಿ; ಕೋಳಿ ಗೈಪು – ಕೋಳಿ ಪದಾರ್ಥ. **ಕೋಳಿ ಒಡ್ಡುದು** /*ko:ḷi oḍḍudu*/

ಕೋಳಿಕಟ್ಟದಲ್ಲಿ ಕಾಳಗಕ್ಕೆ ಮೊದಲು ಎದುರು ಬದುರು ನಿಲ್ಲಿಸಿ ಕಾಳಗಕ್ಕೆ ಪ್ರೇರೇಪಿಸುವುದು. encouraging roosters in a cockfight. ವಾ: ಕೋಳಿ ಒಡ್ಡದಿದ್ದರೆ ಕಟ್ಟಿಕಾದುಲೆ. **ಕೋಳಿ ಕದ್ಪುದು** /*ko:ḷi kadpudu*/ ಕೋಳಿ ವಟಗುಡು. cluck of hen. ವಾ: ಹೇಂಟೆ ಕೋಳಿ ಮೊಟ್ಟೆ ಇಸಿ ಕದ್ಪಿದೆ. **ಕೋಳಿ ಕೂಂಗನ ಮುಟ್ಟ** /*ko:ḷi ku:ŋga muṭṭa*/ ಬೆಳಗಾಗುವ ತನಕ. until one hears the crowing of a rooster. ವಾ: ಕೋಳಿ ಕೂಂಗಿನ ಮುಟ್ಟ ಸುಮ್ಮನಿರ್. **ಕೋಳಿ ಕೇರ್ದು** /*ko:ḷi kɛ:rdu*/ ಕೋಳಿ ತನ್ನ ಕಾಲಲ್ಲಿ ಕಸವನ್ನೆಲ್ಲ ಕೆರೆಯುವುದು. hen foraging for food by scratching the ground. ವಾ: ತೆಗ್ದಾಕಿದ ಮಣ್ಣ್ ನೆಲ್ಲ ಕೋಳಿ ಕೇರ್ದ್. **ಕೋಳಿ ಗೈಪು** /*ko:ḷi gɛipu*/ ಕೋಳಿ ಸಾಂಬಾರು. chicken curry. ವಾ: ಕೋಳಿ ಗೈಪು ಕೂರ ರೊಟ್ಟಿ ಸುಪರ್. **ಕೋಳಿ ಜುಟ್ಟ್** /*ko:ḷi juṭṭ*/ ಕೋಳಿ ತಲೆಮೇಲಿನ ಕಿರೀಟ. a comb, fleshy, red outgrowth on a chicken's head. ವಾ: ಹುಂಜ ಕೋಳಿನ ಜುಟ್ಟು ನೋಡಿಕೆ ಲಾಯ್ಕ್. **ಕೋಳಿ ಜೂಜು** /*ko:ḷi ju:ju*/ ಕೋಳಿ ಜೂಜಾಟ. Cockfight/rooster fight. ವಾ: ಕೋಳಿ ಜೂಜುನ ಆಡುವೆ. **ಕೋಳಿ ಪಿಳ್ಳೆ** /*ko:ḷi piḷḷɛ*/ ಕೋಳಿ ಮರಿ. a chick. ವಾ: ಕೋಳಿ ಪಿಳ್ಳೆನ ಕೀರಿ ಹೊತ್ತತ್. **ಕೋಳಿ ಬಲ್‌ಂಜಿ** /*ko:ḷi baliŋji*/ ಕೋಳಿಗಳನ್ನು ಮುಚ್ಚಲು ಬಳಸುವ ಕುಕ್ಕೆ ಅಥವಾ ಪಂಜರ. a basket made of bamboo splits, used as a cage or fence around hen – a coop. ವಾ: ಕೋಳಿಗಳ ಕೋಳಿ ಬಲ್‌ಂಜಿಲಿ ಮುಚ್ಚಿ ಹಾಕುದು. **ಕೋಳಿ ಮಟ್ಟೆ ಓಡು** /*ko:ḷi maṭṭɛ o:ḍu*/ 1. ಮೊಟ್ಟೆಯ ಸಿಪ್ಪೆ, 2. ಮೊಟ್ಟೆಯ ಹೊರ ಕವಚ. 1. egg shell, 2. outer layer of an egg. ವಾ: ಕೋಳಿ ಮಟ್ಟೆ ಓಡುನ ಹೊಡಿ ಮಾಡಿ ದೈನ ಬುಡಕೆ ಹಾಕೊಕುಯ. **ಕೋಳಿ ಲಾಕಿ** /*ko:ḷi la:ki*/ ವಯಸ್ಸಿಗೆ ಬಂದ ಊರುಕೋಳಿ. a middle aged hen. ವಾ: ನಿಮ್ಮಲ್ಲಿ ಕೋಳಿ ಲಾಕಿಗ ವಳೊನ? **ಕೋಳಿಕೂಂಗಿತ್** /*ko:ḷiku:ŋgitɨ*/ ಕೋಳಿ ಕೂಗಿತು. rooster crew. ವಾ: ಕೋಳಿಕೂಂಗಿತ್ ಬೆಳಗಾತ್ ಎದ್ರ್. **ಕೋಳಿಕೂಗಿಕನ** /*ko:ḷiku:gikana*/ ಕೋಳಿ ಕೂಗುವಾಗ. when the rooster crows. ವಾ: ಕೋಳಿಕೂಗಿಕನ ಎಚ್ಚರಾದೆ. **ಕೋಳಿಕೇರ್ದ್** /*ko:ḷi kɛ:rdɨ*/ ಕೋಳಿ ತನ್ನ್ನ ಕಾಲಿನಿಂದ ಚದುರಿಸಿ ಹಾಕಿದ್ದು. foraged by a hen. ವಾ: ಅದೆಲ್ಲ ಕೋಳಿಕೇರ್ದ್ ಅಣ. **ಕೋಳಿಗರಿ** /*ko:ḷigari*/ 1. ಕೋಳಿಯ ಗರಿ, 2. ಪುಕ್ಕ, 3. ಪಿಚ್ಛ. 1. feather of a hen, 2. feather, 3. feater. ವಾ: ಕೋಳಿಗರಿನ ಕೆಮಿಗೆ ಹಾಕಿ ಗುಗ್ಗೆ ತೆಗೆದು. **ಕೋಳಿಗೂಡಕ್ಕೊ** /*ko:ḷigu:ḍakko*/ ಕೋಳಿಗಳನ್ನು ಕೂಡಿಸಬೇಕೊ? should I put the hen in the coop? ವಾ: ಎಲ್ಲ ಕೋಳಿಗೂಡಕ್ಕೊ? **ಕೋಳಿಗೂಡ್** /*ko:ḷigu:ḍɨ*/ ಕೋಳಿಗೂಡು. a chicken coop. ವಾ: ಅಪ್ಪ ಎಲ್ಲೂ ಇಲ್ಲೆ, ಕೋಳಿಗೂಡ್‌ಲಿನೂ ಇಲ್ಲೆಂತ ಹೇಳಿಕೆ ಹೇಳ್ಯೊಳ. **ಕೋಳಿಲಡ್ಡಿ** /*ko:ḷilaḍḍi*/ 1. ಕೋಳಿ ಹೇಲು, 2. ಕೋಳಿ ಕಕ್ಕಸ್. feces of hen. ವಾ: ಕೋಳಿಲಡ್ಡಿ ಬಾರಿ ವಾಸನೆ, ಹಕ್ಕಲೆ ಹೋಕೆ ಬೊತ್ತ್.

ಕೋಳಿ ಜುಟ್ಟ್ ಹೂವ್ /*ko:ḷi juṭṭ hu:vɨ*/ ನಾ. ಕೋಳಿ ಜುಟ್ಟಿನ ಆಕಾರದ ಹೂವು. cocks comb flower. ವಾ: ಕೋಳಿ ಜುಟ್ಟ್ ಹೂವ್‌ನ ನೋಡಿಕೆ ಕುಸಿ.

ಕೋಳಿಕಟ್ಟ /*ko:ḷikaṭṭa*/ ನಾ. 1. ಕೋಳಿಅಂಕಣ, 2. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಚಲಿತ ಸ್ಪರ್ಧೆ. 1. a cockfight arena, 2. cockfight, widely held in the district of Dakshina Kannada. ವಾ: ದೈವ ನೇಮ ಆದ ಕೂಡ್ಲೆ ನಮ್ಮಲ್ಲಿ ಕೋಳಿಕಟ್ಟ ನಡ್ದದೆ.

ಕೋಳಿಕರ್ ಹಣ್ಣ್ /*ko:ḷikar haṇṇi*/ ನಾ. ಕಾಡಲ್ಲಿ ಸಿಗುವ ಕೆಂಪು ಬಣ್ಣದ ಸಿಪ್ಪೆ ಒಳಗೆ ಬಿಳಿ ಬಣ್ಣದ ಸ್ವಲ್ಪಹುಳಿಕರವಾದ ಹಣ್ಣು. a fruit found in forest. It will have red skin and white kernel. ವಾ: ಕೋಳಿಕರ್ ಹಣ್ಣ್ ಸಿಕ್ಕಿತ್.

ಕೋಳಿಕಾಪು /*ko:ḷika:pu*/ ನಾ. ಹೇಂಟೆ ಮರಿ ಮಾಡಲು ಬುಟ್ಟಿಯಲ್ಲಿ ಬೈಹುಲ್ಲು/ಮುಳಿಹುಲ್ಲು ಹಾಕಿಡುವುದು. a hen gathering dry grass to build a nest to lay its eggs. ವಾ: ಕೋಳಿಕಾಪು ಕೂರಿಕೆ ಜಾಗೆ ಮಾಡೊಕು.

ಕೋಳಿಕೂಡು /*ko:ḷigu:ḍakko*/ ನಾ. ಗೂಡಿಗೆ ಕೋಳಿಗಳನ್ನು ಸೇರಿಸುವುದು. to put the hen in a coop. ವಾ: ಗೂಡಿಗೆ ಕೋಳಿಗಳ್‌ನ ಕೂಡು. ಪ: ಕೋಳಿಗೂಡು

ಕೋಳಿಕ್ಕಿಮಲೆ /*ko:ḷikkimale*/ ನಾ. ಕೊಡಗು ಜಿಲ್ಲೆಯ ಪೆರಾಜೆ ಗ್ರಾಮದ ಜಾಗ. a locality in peraje village in of Kodagu District.

ಕೋಳಿಬೈಲು /*ko:ḷibailu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೋಳಿಮಾಡು /*ko:ḷima:ḍu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೋಳುಮಾಡನ /*ko:ḷuma:ḍana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೋಳುಮುಡಿಯನ /*ko:ḷumuḍiyana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಕೌಂಟೆ ಕಾಯಿ[1] /*kauṇṭɛ ka:yi*/ ನಾ. ಕಹಿಯಿಂದ ಕೂಡಿದ ಸೌತೆಯಂತಿರುವ ಸಣ್ಣ ಕಾಯಿ, 2. ಕವುಟೆ ಕಾಯಿ. 1. Colocynth, 2. bitter apple, bitter cucumber. ವಾ: ಅಬಾ! ಕೌಂಟೆ ಕಾಯಿ ಎಂತ ಕಂಯಿ.

ಕೌಂತೆ ಕಾಯಿ[2] /*kauntɛ ka:yi*/ ನಾ. 1. ಕಹಿ ಸೌತೆಕಾಯಿ, 2. ದೀಪಾವಳಿ ಹಬ್ಬದಂದು ಈ ಸೌತೆಯನ್ನು ಭಾಗಮಾಡಿ ಒಳಭಾಗದ ಬೀಜ ತೆಗೆದು ಎಣ್ಣೆದೀಪ ಮಾಡುವುದು, 3. ನುರ್ತಾಂಗ(ತು). 1. bitter cucumber, 2. it is used to make lamps during Deepavali, 3. colocynth. ವಾ: ಕೌಂತೆನ ದೀಪೊಳಿ ಹಬ್ಬಲಿ ದೀಪ ಮಾಡಿಕೆ ಬಳ್‌ಸುವೆ. ಪ: ಕೌಂತೆಕಾಯಿ ಬೊಳ್ಳಿ – ಕಹಿ ಸೌತೆಬಳ್ಳಿ

ಕೌಂಪಿಡ್ /*kaumpiḍɨ*/ ನಾ. 1. ಮುಚ್ಚಿಡು, 2. ಹೊಂಡದಲ್ಲಿಡು. 1. to keep something closed, 2. to keep in the pit/cavity in the ground, etc. ವಾ: ಹೆಡೆಗೆನ ಕೌಂಪಿಸ್.

ಕೌಕೋಲ್ /*kauko:lɨ*/ ನಾ. 1. ತೊಲೆ, 2. ಛಾವಣಿಯ ಹೊದಿಕೆ, 3. ಹೆಂಚಿಗೆ ಕೆಳಭಾಗದಲ್ಲಿ ಆಧಾರವಾಗಿರುವ ದೂಳು, 4. ಜಂತಿ, 5. ಛಾವಣಿಗೆ ಆಧಾರವಾಗಿ ಭಾರವನ್ನು ತಡೆಯಲು ಗೋಡೆಗಳ ಮೇಲೆ ಅಡ್ಡಲಾಗಿ ಹಾಕುವ ಮರದ ಅಡ್ಡ. 1. a beam, 2. covering the roof, 3. the joist which supports the roof tiles, 4. cross beams, 5. beams, joist. ವಾ: ಕೌಕೋಲ್‌ಗೆ ವೇಸ್ಟ್ ಆಯಿಲ್ ಹೊಡ್‌ದವೆ.

ಕ್ಯಾಕರ್ಸುದು /*kya:karsudu*/ ನಾವಿ. ಕ್ಯಾಕರಿಸುವುದು. hawking. ವಾ: ಹೊತಾರೆ ಮೋರೆ ತೊಳ್ಯಕನ ಜೋರು ಕ್ಯಾಕರ್ಸುದು, ಉಗೆದು. ಪ: ಕ್ಯಾಂಕರ್ಸುದು

ಕ್ಯಾತೆ /*kya:tɛ*/ ನಾ. 1. ಕಿರಿಕ್ಕು, 2. ಕೆರಳಿಸು, 3. ಕಿರಿಕಿರಿ ಉಂಟುಮಾಡು, 4. ಉಪದ್ರವನೀಡು, 5. ಅಸಮಾಧಾನ. 1. to trouble, 2. to enrage 3 to cause irritation, 4. to create a problem, 5. to cause disappointment. ವಾ: ಕ್ಯಾತೆ ತೆಗಿಬಡ.

ಕ್ಯಾನ ಮಾಂಜೊಳ ಹಕ್ಕಿ /*kya:na ma:ŋjoḷa hakki*/ ನಾವಿ. ಹಳದ ಬಣ್ಣದ ಕಾಡುಹಕ್ಕಿ. a green coloured bird like that of a pigeon. ವಾ: ಕ್ಯಾನೆಮಂಜಳ ಹಾರಿಕಂಡ್ ಬಾತ್. ಪ: ಕೇನೆ ಮಂಜೊಳ

ಕ್ಯಾನೆ /*kya:ne*/ ನಾ. ಹಕ್ಕಿಗಳು ತಿನ್ನುವ ಜೋಳದ ತೆನೆಯಂತಿರುವ ಹಣ್ಣಿನ ಗಿಡ. a plant that has fruit resembling ear of corn.

ಕ್ಯಾನೆ ಗೆಂಡೆ /*kya:nɛ gɛŋḍɛ*/ ನಾವಿ. 1. ಸುವರ್ಣ ಗೆಡ್ಡೆ, 2. ಕಂದಗೆಡ್ಡೆ, 3. ಚೂರ್ಣಗೆಡ್ಡೆ. Elephant foot yam. ವಾ: ಕ್ಯಾನೆ ಗೆಂಡೆ ತಿನೊಕು.

ಕ್ಯಾಮ /*kya:ma*/ ನಾ. 1. ಕಾಡು ಕುರಿ, 2. ಕೆಂಪ, 3. ಕೆಮ್ಮ(ತು). Indian muntjac (deer). **ಕ್ಯಾಮನ ಕಾಂಬಕನ ಕಡ್ವೆನ ಬುಟ್ಟತ್(ಗಾ).** ವಾ: ಕ್ಯಾಮನ ಹೊಡ್‌ದದ್.

ಕ್ಯಾಮ ಚಕ್ಕಳ /*kya:ma cakkaḷa*/ ನಾ. ಕಾಡುಕುರಿಯ ಚರ್ಮ. a skin of Indian muntjac (deer). **ಕಾಡ್‌ಂದ ತಂದ ಕೆಂಪ್ ಹೂ ಎಷ್ಟ್ ವರ್ಷ ಕಳ್ದರೂ ಬಾಡ್ತೇಲೆ – ಕ್ಯಾಮ ಚಕ್ಕಳ(ಒ).** ವಾ: ಕ್ಯಾಮ ಚಕ್ಕಳನ ಲಾಯ್ಕಲಿ ವಣ್‌ಗಿಸಿ ಬೀಸ್‌ಕನ ಕಲ್ಲ್ ನ ಅಡಿಗೆ ಹಾಕಂಬದುಕ್ಯಾಮ ಚಕ್ಕಳ ಇರ್‌ತಿತ್ತ್.

ಕ್ಯಾಮನ ಹಾಳೆ /*kya:mana ha:ḷɛ*/ ನಾ. 1. ಕಾಡುಕುರಿಯ ಒಣಗಿದ ಚರ್ಮ, 2. ಕಾಡುಕುರಿಯ ಒಣಗಿದ ಚರ್ಮವನ್ನು ಅಕ್ಕಿ ರಾಗಿ ಬೀಸುವಾಗ ಬೀಸುವ ಕಲ್ಲಿನ ಕೆಳಗೆ ಹಾಸಲಾಗುತ್ತದೆ. 1. the dried skin of Indian muntjac (deer), 2. the skin of Indian muntjac is spread around the grinding stone. **ಕ್ಯಾಮನ ಹಾಳೆ ಸಣ್ಣ ಕೂಸಿಗೆ ಎಣ್ಣೆ ಹಾಕಿ ಮಲಗಿಸುವರು.** ವಾ: ಅಕ್ಕಿ ಬೀಸ್ಕನ ಕಲ್ಲ್ ಅಡಿಗೆ ಕ್ಯಾಮನ ಹಾಳೆನ ಹಾಸಿಕಣೊಕು, ಆಗ ಅಕ್ಕಿ ಹೊಡಿ ಅದರ ಮೇಲೆ ಬಿದ್ದದೆ. ಪ: ಕೆಂಪನ ಚರ್ಮ

ಕ್ಯಾಮೆ /*kya:mɛ*/ ನಾ. 1. ಕೆಲಸ, 2. ಕೇಮೆ, 3. ಗೈಮೆ. 1. work, 2. job, 3. labour. ವಾ: ಮಾಡಿಕೆ ಎಂತ

ಕ್ಯಾಮೆ ಇಲ್ಲದೆ ಸುಮ್ಮನೆ ಕುದ್ದೊಳ. **ಕ್ಯಾಮೆ ಇಲ್ಲೆ** /*kya:mɛ illɛ*/ 1. ಕೆಲಸ ಮಾಡದೆ ಸುಮ್ಮನೆ ಹರಟುವುದು, 2. ವ್ಯರ್ಥ ಮಾತುಗಳಿಂದ ಕಾಲ ಹರಣ ಮಾಡು. 1. to squander, 2. to engage in meaningless/casual conversation. ವಾ: ಅವ್ಕೆ ಮಾಡಿಕೆ ಕ್ಯಾಮೆ ಇಲ್ಲೆ ಅದ್ಕೆ ಪಟ್ಟಂಗ ಬುಟ್ಕಂಡ್ ಕುದ್ದೊಳೊ.

ಕ್ಯಾರೆ /*kya:rɛ*/ ನಾ. 1. ಗಣನೆ, 2. ಲೆಕ್ಕ, 3. ಗೌರವ, 4. ಆದರ. 1. to consider, 2. to count, 3. respect, 4. veneration. ವಾ: ಅವು ಹೇಳ್‌ದ ಮಾತ್‌ನ ಯಾರು ಕ್ಯಾರೆ ಮಾಡ್‌ತ್‌ಲೆ. **ಕ್ಯಾರೆಮಾಡ್ದುಲೆ** /*kya:rɛma:ḍdulɛ*/ 1. ಗಣನೆಗೆ ತೆಗೆದುಕೊಳ್ಳದಿರು, 2. ಲೆಕ್ಕಕ್ಕೆ ತೆಗೆದುಕೊಳ್ಳದಿರು. 1. to not consider, 2. not take into account. ವಾ: ನಾ ಬೇನೆನ ಕ್ಯಾರೆ ಮಾಡ್ದುಲೆ.

ಕ್ಯಾರೆ ಬೊಳ್ಳಿ /*kya:rɛ bɔḷḷi*/ ನಾ. ಒಂದು ಕಾಡು ಬಳ್ಳಿ, a wild creeper. ವಾ: ಕ್ಯಾರೆ ಬಳ್ಳಿತ ಒಂದ್ ಕಾಡ್‌ಬಳ್ಳಿ. ಪ: ಕೇರೆಬೊಳ್ಳಿ

ಕ್ಯಾರೆಟ್ /*kya:rɛṭ*/ ನಾ. 1. ಕ್ಯಾರೆಟ್, 2. ಗಜ್ಜರಿ, 3. ಗಾಜುಗೆಡ್ಡೆ. carrot. ವಾ: ಕ್ಯಾರೆಟ್ ಹಸಿ ತಿನ್ನೊಕು ಕಣ್ಣಿಗೆ ಒಳ್ಳದ್.

ಕ್ಯಾರೆವು /*kya:rɛvu*/ ನಾ. 1. ಕೇರೆ ಹಾವು, 2. ಇಲಿಯನ್ನು ಹಿಡಿದು ತಿನ್ನುವ ಹಾವು. a rat snake. ವಾ: ಕ್ಯಾರೆವು ಎಲಿಗಳ ಕಾಲಿ ಮಾಡ್‌ದೆ.

ಕ್ರಮ /*krama*/ ನಾ. 1. ಕ್ರಮ, 2. ರೀತಿ, 3. ನಿಯಮ, 4. ಕಾನೂನು ಬದ್ಧವಾಗಿ ಕೈಗೊಂಡ ಕಾರ್ಯವಿಧಾನ. 1. an order, 2. a procedure, 3. rules. 4. acing as per the law. ವಾ: ಪೂಜೆ ಮಾಡಿಕು ಕೆಲ ಕ್ರಮಂತೇಳಿ ಉಟ್ಟು.

ಕ್ರಯ /*kraya*/ ನಾ. 1. ಬೆಲೆ, 2. ದರ. 1. price, 2. rate. **ಮಜ್ಜಿಗೆಗೆ ಬಂದಂವಂಗೆ ಎಮ್ಮೆ ಕ್ರಯ ಯಾಕೆ(ಗಾ).** ವಾ: ಮರಗೆಣ್ಸ್‌ಗೆ ಕ್ರಯ ಎಸ್ಟ್ ಗಡ ಕೇಳ್ದನಾ? ಪ: ಕ್ರಯಲಿ – ಬೆಲೆಯಲ್ಲಿ, ಕ್ರಾಯ, ಕ್ರಾಯಕೆ – ಮಾರಾಟಕ್ಕೆ.

ಕ್ರಾಪು ಮಾಡುದು /*kra:pu ma:ḍudu*/ ನಾ. 1. ತಲೆಕೂದಲನ್ನು ಕತ್ತರಿಸುವುದು. to cut the hair in a particular style. ವಾ: ಕೊರೊನ ಕಾಲಲೆ ಬಂದ ಮೇಲೆ ಮನೆಲೆ ಕ್ರಾಪು ಮಾಡುದು.

ಕ್ರೂರ /*kru:ra*/ ನಾ. 1. ಕ್ರೂರ, 2. ನಿರ್ದಯವಾದ, 3. ದಯೆಯಿಲ್ಲದ, 4. ಕಠೋರ ಹೃದಯದ. 1. cruel, 2. ruthless, 3. merciless, 4. heartless. ವಾ: ಕ್ರೂರ ಜೆನಗ.

ಕ್ಲರ್ಕ್ /*klarkɨ*/ ನಾ. ಎಪ. 1. ಕ್ಲಾರ್ಕು, 2. ಗುಮಾಸ್ತ, 3. ಕಾರಕೂನ. a clerk. ವಾ: ಕ್ಲರ್ಕ್ ಹಕ್ಕಲೆ ಹೋಗಿ ಬನ್ನೆ, ಹಣ್ಟ ಕೆಲ್ಸ ಬಾಕಿ ಉಟ್ಟು.

ಕ್ಲಾಸ್ /*kla:sɨ*/ ನಾ. 1. ವರ್ಗ, 2. ತರಗತಿ, 3. ದರ್ಜೆ, 4. ಸಮಾಜದ ಶ್ರೇಣಿ, 5. ಅಂತಸ್ತು, 6. ಶ್ರೇಷ್ಠತೆ. 1. a class in society , 2. a class, 3. grade, 4. hierarchical position in society, 5. status, 6. glorious. ವಾ: ಕ್ಲಾಸ್ ಇಲ್ಲೆನ ಹಿಂಗೆ ತಿರ್‌ಗಿರೆ?

ಕ್ವಾಚಪ್ಪನಂಗೆ /*kva:cappanaŋgɛ*/ ನಾ. ಬೈಗುಳದ ಮಾತು. an expletive. ವಾ: ಕ್ವಾಚಪ್ಪನಂಗೆ ಆಡ್ಡೆ. ಪ: ಕೋಚನಾಂಗೆ

ಕ್ವಾಟ /*kva:ṭa*/ ನಾ. 1. ತಣ್ಣನೆ, 2. ತಂಪು, 3. ಚಳಿ, 4. ಥಂಡಿ, 5. ಶೀತಹವೆ. 1. cold, 2. cool, 3. feeling cold, 4. chilly (temperature), 5. breeze. ವಾ: ಕ್ವಾಟ ಗಾಳಿ ಬೀಸಿದೆ.

ಕ್ವಾಟೆಂಜಿ /*kva:ṭɛŋji*/ ನಾ. ಗೊಣ್ಣೆ ಹುಳು. a white grub worm. ವಾ: ಕ್ವಾಟೆಂಜಿ ಮುಟ್ಟಿರೆ ನೋಳಿ ನೋಳಿ, ಎಸ್ಟ್ ತೊಳ್ದರು ಹೋದುಲೆ. ಪ: ನೊವ್ಕೆ

ಕ್ವಾಡ /*kva:ḍa*/ ನಾ. 1. ಮಂಗ, 2. ಕಪಿ, 3. ಕೋತಿ. a monkey. ವಾ: ಕ್ವಾಡಕೆ ತಿಂಬಕೆ ಬಾಳೆಣ್ಣ್ ಕೊಟ್ಟದ್.

ಕ್ವಾಡ ಕಿತ್ತುಳಿ /*kva:ḍa kittuḷi*/ ನಾ. ಹುಳಿ ರುಚಿಯ ನಿಂಬೆ ಗಾತ್ರದ ಕಿತ್ತಳೆ ಹಣ್ಣು. a citrus fruit. ವಾ: ಕ್ವಾಡ ಕಿತ್ತುಳಿ ಗಾತ್ರಲಿ ಬಾರಿ ಸಣ್ಣದಾಗಿ ಹುಳಿಯಾಗಿದ್ದದೆ.

ಕ್ವಾಡಕಣ್ಣ /*kva:ḍakaṇṇa*/ ನಾ. ಮುಖದಲ್ಲಿ ಬೊಟ್ಟಿರುವ ಮೀನುಗಳು. fish with marks of dot on its face. ವಾ: ಕ್ವಾಡಕಣ್ಣ ಮೀನ್‌ನ ನೋಡ್.

ಕ್ವಾಣ /*kva:ṇa*/ ನಾ. 1. ಕೋಣ, 2. ಮಹಿಷ, 3. ನಾಲ್ಕು ಕಾಲಿನ ದೊಡ್ಡ ಪ್ರಾಣಿ. a buffalo. a quadruped animal. ವಾ: ಕ್ವಾಣ ಕೆಸ್ರ್ ನೀರ್‌ಲಿ ಮೊಲ್ಗಿತ್.

ಕ್ವಾಲ/ಕೋಲ /*kva:la*/ ನಾ. 1. ವೇಷ, 2. ಕೆಟ್ಟದಾಗಿ ಧರಿಸಿದ ಬಟ್ಟೆ, 3. ಅವತಾರ. 1. costume, 2. costume worn improperly, 3. an

incarnation. ವಾ: ತನ್ನ ಕ್ವಾಲನ ನಾಯಿ ಕ್ವಾಲ ಮಾಡಿಕಂಬದು. **ಕ್ವಾಲ ಕಟ್ಟುದು** /*kva:la kaṭṭudu*/ 1. ಹಿತಕರವಲ್ಲದ ವೇಷಭೂಷಣ, 2. ವಿಚಿತ್ರವಾದ ಉಡುಗೆ, ತೊಡುಗೆ. 1. an unpleasant costume, 2. strange costume. **ನೀ ಎಂತನೆ ಕ್ವಾಲ ಕಟ್ಟುದು(ನು).** ವಾ: ಹಿಂಗೆ ನೀ ಎಂತನೆ ಕ್ವಾಲ ಕಟ್ಟುದು, ತನ್ನ ಕ್ವಾಲ ಬುಟ್ಟ್ ನಾಯಿ ಕ್ವಾಲ ಕಟ್ಟಿದಂಗೆ.

ಕ್ವಾಳೆ /*kva:ḷɛ*/ ನಾ. 1. ಕೊಕ್ಕರೆ, 2. ಒಂದು ಜಾತಿಯ ನೀರು ಹಕ್ಕಿ. 1. a crane 2. a water bird. ವಾ: ಕ್ವಾಳೆನ ಕಾಲ್ ಉದ್ದುದ್ದ.

ಕ್ಷಮೆ /*ksamɛ*/ ನಾ. ಇತರರ ತಪ್ಪನ್ನು ಮನ್ನಿಸುವ ಗುಣ. quality of forgiving the other. ವಾ: ನೀ ಮಾಡ್‌ದ ತಪ್ಪಿಗೆ ಕ್ಷಮೆ ಇಲ್ಲೆ. ಪ: ಕ್ಸಮೆ

ಕ್ಷೀಣ /*kṣi:ṇa*/ ನಾ. 1. ಕ್ಷೀಣ, 2. ಕಡಿಮೆ, 3. ಕುಗ್ಗಿದ, 4. ಸೊರಗಿದ. 1. reduced, 2. lesser, 3. reduced, 4. weakened. ವಾ: ಅಂವ ಸರಿ ತಿನದೆ ಕ್ಷೀಣ ಆವುಟು. ಪ: ಕ್ಸೀಣ

ಕ್ಷೇತ್ರ ಪಾಲ /*kṣe:tra pa:la*/ ನಾ. 1. ಕ್ಷೇತ್ರವನ್ನು ರಕ್ಷಿಸುವ ದೇವತೆ, 2. ಹೊಲ ಕಾಯುವವ, 3. ಭೈರವನ ಒಂದು ಪ್ರಕಾರ. 1. a goddess who protects one's pastoral land, 2. the one who guards one's field, 3. one form of god Bhairava. ವಾ: ಕ್ಷೇತ್ರ ಪಾಲ ತೇಳ್‌ದು ದೇವುರ ಹೆಸ್‌ರ್. ಪ: ಕ್ಸೇತ್ರಪಾಲ

ಕ್ಷೌರ ಮಾಡ್ದು /*kṣaura ma:ḍdu*/ ನಾ. 1. ಕೂದಲು ಕತ್ತರಿಸುವುದು, 2. ಗಡ್ಡ ಬೋಳಿಸುವುದು. 1. to cut hair, 2. to shave the beard. ವಾ: ಹಿಂದೆಲ್ಲ ಮನೆ ಮನೆಗೆ ಬಂದ್ ಕ್ಷೌರ ಮಾಡ್ದು ಇತ್ತ್. ಪ: ಚೌವುರ, ಚೊವ್‌ರಿಜ್ಜ

ಖ

ಖಂಡಿಗೆ /*khaṇḍigɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಗ

ಗಂಗಮ್ಮ /*gaŋgamma*/ ನಾ. ವ್ಯಕ್ತಿ ಹೆಸರು, ಸ್ತ್ರೀ ವಾಚಕ. feminine given name.

ಗಂಗಯ್ಯ /*gaŋgayya*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. masculine given name. ಪ: ಗಂಗಣ್ಣ

ಗಂಗಳ /*gaŋgaḷa*/ ನಾ. 1. ಕಂಚಿನ ಊಟದ ತಟ್ಟೆ, 2. ಕಂಚಿನ ಬಟ್ಟಲು. a bowl or a plate made of bronze. ವಾ: ಗಂಗಳ ತಂದಿಯನ? **ಗಂಗಳ ಬೆಳ್ಗುದು** /*gaŋgaḷa beḷgudu*/ ಪಾತ್ರೆ ತೊಳೆಯುವುದು. doing the dishes/washing dishes. ವಾ: ಎಂತ ಮಾಡ್‌ತೊಳರಿ? ಗಂಗಳ ಬೆಳ್ಗುದು.

ಗಂಗೆ /*gaŋgɛ*/ ನಾ. 1. ಭಾರತದ ಒಂದು ಪ್ರಸಿದ್ಧವಾದ ನದಿಯ ಹೆಸರು, 2. ಶಿವನ ತಲೆಯ ಮೇಲಿರುವ ಗಂಗಾದೇವಿ. 1. the Ganga (Ganges), a famous river of India, 2. Ganga, a goddess situated on the head of lord Shiva. ವಾ: ಗಂಗೆ ಸಿವನ ತಲೆ ಮೇಲೆ ಕುದ್ದುಟು. **ಗಂಗೆ ಪೂಜೆ** /*gaŋgɛ pu:jɛ*/ ವಧುವರರು ಮುಹೂರ್ತದ ಮುನ್ನಾ ದಿನ ಕೈಗೊಳ್ಳುವ ಪೂಜೆ. a ritual performed by both the bride and bridegroom on the day before the wedding. ವಾ: ಗಂಗೆ ಪೂಜೆಗೆ ಹೊತ್‌ಉಗ್ಗಪ್ಪ್ ಬೇಗ ಬನ್ನಿ ಎಲ್ಲೊವು.

ಗಂಗೆ ಹುಳ /*gaŋgɛ huḷa*/ ನಾ. ಮಲೆನಾಡಿನಲ್ಲಿ ತೋಟದಲ್ಲಿ ಕಾಣ ಸಿಗುವ ಹುಳ. a worm found in ponds of Malnad region. ವಾ: ಗಂಗೆ ಹುಳನ ಮುಟ್ಟಿರೆ ಸುರ್‌ಟಿಕಂಬೊದು.

ಗಂಜಳ /*ganjaḷa*/ ನಾ. 1. ಗೋಮೂತ್ರ, 2. ದನದ ಮೂತ್ರ. cow urine. ವಾ: ಗಂಜಳನ ದೈಗಳಿಗೆ ಹಾಕಿರೆ ಹುಳಗ ಬಾದುಲೆ. ಪ: ಗಂಜ್ಳ

ಗಂಜಿ[1] /*gɘŋji*/ ನಾ. 1. ತೆಳಿ ಇರುವ ಅನ್ನ, 2. ಅನ್ನ ಬಸಿದಾಗ ಸಿಗುವ ದ್ರವ, 3. ಅಕ್ಕಿಯನ್ನು ಬೇಯಿಸಿ ಬಸಿದು ತೆಗೆದ ಸಾರ. 1. rice gruel, 2. starch (a white liquid) obtained when the rice is boiled, 3. starch from boiled rice. **ಅಪ್ಪನ ಕಾಲಂದ ಕಂಡತ್‌ಲೆ, ಉಪ್ಪು ಹಾಕಿದ ಗಂಜಿ(ಗಾ). ಉಂಬ ಗಂಜಿಗೆ ಕಲ್ ಹಾಕಿಕಾಗದ್(ನು).** ವಾ: ಗಂಜಿಗೆ ಉಪ್ಪಾಕಿ ಕುಡಿಯಕ್. ಪ: ಗಂಜಿ ಉಗ್ಗಪ್ಪ್ – ಗಂಜಿ ತಂದನು/ಳು **ಗಂಜಿ ಬಾಗುದು** /*gaŋji bɔ:gudu*/ ಅನ್ನದ ಗಂಜಿಯನ್ನು ಬಸಿಯುವುದು. straining the starch of rice/draining off the excess starch from rice. ವಾ: ಅನ್ನ ಬೆಂದ ಮೇಲೆ ಅಡಿಗೆರನ ಇಸಿ ಅದಿಕೆ ಅನ್ನ ಬಾಗುದು. **ಗಂಜಿ ಮಡ್ಕೆ** /*gɘŋji maḍkɛ*/ ಅನ್ನದ ಮಡಕೆ (ಪಾತ್ರೆ). a rice pot. ವಾ: ಗಂಜಿ ಮಡ್ಕೆ ಒಟ್ಟೆಯೋತ್. **ಗಂಜಿಕೊಡ್ಡು** /*gaŋjikɔḍdu*/ ಹೊಸಕ್ಕಿ ಅನ್ನವನ್ನು ಮಗುವಿಗೆ ಮೊದಲ ಬಾರಿ ತಿನ್ನಿಸುವುದು. a ritual of feeding the newly harvested cooked rice to the infant. ವಾ: ಕೂಸುಗೆ ಸುರೂಗೆ ಗಂಜಿಕೊಡ್ಡು. **ಗಂಜಿಗುಂಡಿ** /*gɘŋjiguṇḍi*/ ನಾ. ಒಲೆಯ ಪಕ್ಕದಲ್ಲಿ ಅನ್ನ ಬಸಿದ ನೀರನ್ನು ಹುಯ್ಯಲು ಮಣ್ಣಿನ ಮಡಕೆ ಹೂತಿರುವುದು. a pot placed in the kitchen floor to strain the excess water from the cooked rice. ವಾ:

ಗಂಜಿಗುಂಡಿಂದ ಗಂಜಿ ತೆಗ್‌ದ್ ಹಸ್‌ಗಳಿಗೆ ಹೊಯ್ಯೊಕು. **ಗಂಜಿತೆಳಿ** /*gɘŋjiteḷi*/ ಅಕ್ಕಿಯನ್ನು ಬೇಯಿಸಿ ಬಸಿದು ತೆಗೆದ ಸಾರ. rice gruel/congee/ porridge. ವಾ: ಗಂಜಿತೆಳಿ ಕುಡ್ಯಕು. **ಗಂಜಿನೀರ್** /*gɘŋjini:ri*/ 1. ಗಂಜಿನೀರು, 2. ಅಕ್ಕಿಯನ್ನು ಬೇಯಿಸಿ ಬಸಿದು ತೆಗೆದ ಸಾರ. rice gruel/congee/ porridge. ವಾ: ಗಂಜಿನೀರ್ ಕುಡ್ಯಕೆ ಬೇಕಿತ್. **ಗಂಜಿಯನ್ನ** /*gɘŋjiyanna*/ 1. ದ್ರವ ಮಿಶ್ರಿತ ಅನ್ನ. rice gruel/ a thick gruel with grains of rice. ವಾ: ಅರೆಗಾಲಲಿ ಕೊಸ್ಲಕ್ಕಿ ಗಂಜಿಯನ್ನ ಉಂಬಕೆ ಲಾಯ್ಕ.

ಗಂಜಿ² /*gɘŋji*/ ನಾ. ಸಭೆ ಸಮಾರಂಭಗಳಲ್ಲಿ ಅಡುಗೆಗೆ ಬಳಸುವ ಸ್ಟೀಲ್ ಪಾತ್ರೆ. a steel vessel used for cooking in big events. ವಾ: ಕರ್‌ಗೆ ಗಂಜಿ ಪಾತ್ರೆಲಿ ನೀರ್ ಇಸ್.

ಗಂಜಿಪುರಾಕ್ /*gɘŋjipura:ki*/ ನಾ. ಒಳ ಅಂಗಿ. inner wear – vest – undershirt. ವಾ: ಗಂಜಿಪುರಾಕ್ ಹಾಕ.

ಗಂಟೆ /*gaṇṭɛ*/ ನಾ. 1. ಸಮಯ, 2. ಅರವತ್ತು ನಿಮಿಷಗಳ ಅವಧಿ, 3. ತಾಸು, 4. ಗಂಟೆ. 1. time, 2. a period of 60 minutes, 3. an hour, 4. one hour. **ಆನೆಗೆ ಗಂಟೆ ಬೇಕಾ?(ಗಾ).** ವಾ: ವಾಚಿ ನೋಡಿ ಗಂಟೆ ಎಸ್ಟಾತ್‌ತ ಹೇಳ್. **ಗಂಟೆ ಆಕನ** /*gaṇṭɛ a:kana*/ 1. ಹೊತ್ತು ಮುಳುಗು, 2. ಸಮಯವಾಗುವಾಗ. 1. sunset, 3. at/during that time. ವಾ: ಆರ್ ಗಂಟೆ ಆಕನ ಕತ್ತಲಾತ್.

ಗಂಟೆಕಟ್ಟ್ /*gaṇṭɛkaṭṭi*/ ನಾ. ಘಂಟೆಯನ್ನು ಕಟ್ಟು. to tie the bell. **ಕೊತ್ತಿಗೆ ಗಂಟೆ ಕಟ್ಟ್‌ವವು ಯಾರ್?(ಗಾ).** ವಾ: ಇಸ್ಕೂಲ್‌ಲಿ ಗಂಟೆಕಟ್ಟ್‌ತಿದ್ದೊ. ಪ: ಗಂಟೆ ಕಟ್ಟಿಕೆ – ಗಂಟೆಕಟ್ಟಲು

ಗಂಟೆಮಣಿ /*gaṇṭɛmaṇi*/ ನಾ. ಪೂಜೆ ಮಾಡುವಾಗ ಬಳಸುವ ಸಣ್ಣ ಗಂಟೆ. ringing a small bell while praying. ವಾ: ಮನೆಲಿ ಪೂಜೆ ಮಾಡ್ಕನ ಗಂಟೆಮಣಿ ಬಳ್‌ಸುವೆ.

ಗಂಟ್ ಪರಂಗಿ ಹುಣ್ಣ್ /*gaṇṭi parangi huṇṇi*/ ನಾ. ಗಂಟು ಗಂಟಾಗಿ ಹುಣ್ಣಾಗುವ ಕಾಯಿಲೆ. a disease – swellings over the body. ವಾ: ಗಂಟ್ ಪರಂಗಿ ಹುಣ್ಣ್ ಆದರೆ ಬಾರಿ ಬೇನೆ.

ಗಂಟ್ ಮೂಟೆ ಕಟ್ಟುದು /*gaṇṭi mu:ṭɛ kaṭṭudu*/ ನಾವಿ. ಜಾಗ ಖಾಲಿಮಾಡು. to leave the place. **ಗಂಟ್‌ಮೂಟೆ ಹೋತ್(ನು).** ವಾ: ಅವುಳು ಗಂಟ್ ಮೂಟೆ ಕಟ್ಟಿ ಹೊರ್‌ಟತ್. ಪ: ಗಂಟ್‌ಮೂಟೆ ಕಟ್ಟಿಕಂಡ್ – ಜಾಗ ಖಾಲಿಮಾಡಿಕೊಂಡು

ಗಂಟ್¹ /*gaṇṭi*/ ನಾ. ಕಟ್ಟು. to tie. **ನಂಟ್ ಕಳಿಯಕೂ ಆಗದ್ ಗಂಟ್ ಬುಡಿಕೂ ಆಗದ್(ಗಾ).** ವಾ: ಹಗ್ಗಕೆ ಗಂಟ್ ಹಾಕಿತ್.

ಗಂಟ್² /*gaṇṭi*/ ನಾ. ನಿಧಿ. a treasure. **ನಂಟ್ ಕಳಿಯಕೂ ಆಗದ್ ಗಂಟ್ ಬುಡಿಕೂ ಆಗದ್(ಗಾ). ಗಂಟ್ ಕರ್‌ಗುದು(ನು).** ವಾ: ಅಂವ ಬಾರಿ ಗಂಟ್ ಸಿಕ್ಕಿದವರಂಗೆ ಆಡ್‌ದೆ. ಪ: ಗಂಟ್ಟ್‌ಕಟ್ಟ್‌ದು – ಹಣ ಶೇಖರಿಸಿಡುವುದು

ಗಂಟ್³ /*gaṇṭi*/ ನಾ. 1. ಶರೀರದ ಯಾವುದಾದರು ಭಾಗದಲ್ಲಿ ಗೆಡ್ಡೆ ಕಟ್ಟುವುದು, 2. ಸಣ್ಣ ಉಬ್ಬು, 3. 1. a tumor in the body, 2. a swelling. ವಾ: ಹಣೆ ಮೇಲೆ ಒಂದ್ ದೊಡ್ಡ ಗಂಟ್ ಉಟ್ಟು.

ಗಂಟ್⁴ /*gaṇṭili*/ ನಾ. 1. ಗಂಟಲು, 2. ಗೋಣು, 3. ಕಂಠ. throat. ವಾ: ಗಂಟಲಿಗೆ ಒಳಗೆನ ಬರಿಗೆ ಮೀನ್ ಮುಳ್ಳ್ ಕುತ್ತಿತ್. ಪ: ಮೊಣ್‌ಕೈ ಗಂಟ್. **ಗಂಟೆಬೇನೆ** /*gaṇṭɛ be:nɛ*/ ಗಂಟಲು ನೋವು. pain in the throat. ವಾ: ಗಂಟೆಬೇನೆಗೆ ಮೊದ್ದ್ ಎಂತರ ಮಾಡ್‌ದು.

ಗಂಟ್‌ಕಟ್ಟ್¹ /*gaṇṭikaṭṭi*/ ನಾ. ಸಂಪತ್ತನ್ನು ಕೂಡಿಡು, ಉಳಿತಾಯ ಮಾಡು. accumulate wealth, to save.

ಗಂಟ್‌ಕಟ್ಟ್² /*gaṇṭikaṭṭi*/ ನಾ. ವಾಸಿಯಾದ ಗಾಯದ ಗಂಟು. scar, marks of healed wound.

ಗಂಟ್‌ಬಿಚ್ಚ್ /*gaṇṭi bicci*/ ನಾ. 1. ಜಿಪುಣ, 2. ಯಾವುದಕ್ಕು ಸಹಾಯ, ಖರ್ಚು ಮಾಡದೆ ಸದಾ ಹಣವನ್ನು ಕೂಡಿಡುವವರಿಗೆ ಹೇಳುವ ಮಾತು. 1. a miser, 2. one who doesn't spend money and lives a meager life in order to hoard money. ವಾ: ಅಂವ ಗಂಟ್‌ಬಿಚ್ಚ್‌ದುಲೆ.

ಗಂಟ್‌ಬೀತ್ /*gaṇṭi bi:ti*/ ನಾವಿ. 1. ಗಂಟುಬೀಳು, 2. ಕುಣಿಕೆ ಬಿತ್ತು. 1. to be with someone all the

time causing irritation, 2. to tie a knot. ವಾ: ಅಯ್ಯೊ ಇದೊಂದ್ ಎಲ್ಲಿಂದ ನಂಗೆ ಗಂಟ್‌ಬೀತ್‌ತ?

ಗಂಟ್‌ಬೀಳ್ /*ganṭi bi:ḷi*/ ಕ್ರಿವಿ. ಅಂಟಿಕೊಳ್ಳು, ಬೆನ್ನ ಹಿಂದೆ ಬೀಳುವವರು, ನಮಗೆ ಮನಸ್ಸಿಲ್ಲ ದಿದ್ದರೂ ನಮ್ಮ ಜೊತೆ ಸಂಬಂಧವನ್ನು ಬಯಸುವವರು. to persistently associate oneself with others causing annoyance to them. ವಾ: ಮಾತಾಡ್‌ಸಿರೆ ಸಾಕ್ ಅವುಳು ಗಂಟ್‌ಬೀಳ್‌ದು. ಪ: ಗಂಟ್ ಬೀಳಿಕೆಮುಂದೆ – ಗಂಟುಬೀಳುವ ಮೊದಲು

ಗಂಟ್‌ಮೂಟೆ /*ganṭimu:ṭɛ*/ ನಾ. ಎಲ್ಲಾ ರೀತಿಯ ವಸ್ತುಗಳು. all things.

ಗಂಟ್‌ಮೂಟೆ ಕಟ್ಟ್ /*ganṭimu:ṭɛ kaṭṭi*/ ನಾ. ಎಲ್ಲಾ ವಸ್ತುಗಳನ್ನು ಕಟ್ಟಿಕೊಂಡು ಹೋಗುವುದು. packing everything. ವಾ: ಅಂವ ಕೋಪಲಿ ಗಂಟ್‌ಮೂಟ್ ಕಟ್ಟಿ ಜಾಗ ಕಾಲಿ ಮಾಡ್ತ್.

ಗಂಟ್‌ಮೂಟೆ ಹೋತ್ /*ganṭimu:ṭɛ ho:ti*/ ಕ್ರಿವಿ. 1. ಅನಗತ್ಯ ವಸ್ತುಗಳನ್ನು ಖಾಲಿಮಾಡು, 2. ಸಂಪತ್ತು ಹೋಗು. 1. clearing unwanted things, 2. to become impoverished. **ಗಂಟ್‌ಮೂಟೆ ಹೋತ್(ನು).** ವಾ: ಅವರ ಎಲ್ಲ ಗಂಟ್‌ಮೂಟೆ ಹೋತ್.

ಗಂಟ್ಲ್ /*ganṭli*/ ನಾ. 1. ಗಂಟಲು, 2. ಗೋಣು, 3. ಕಂಠ. throat. ವಾ: ಪ್ರಾಣಿಗಳ ಬಾಯಿ ಬುಡ್‌ಸಿ ಗಂಟ್ಲ್‌ಗೆ ಮೊದ್ದ್ ಹುಯ್ಯೊಕು. **ಗಂಟ್ಲ್ ಹರ್ಕಂದೆ** /*ganṭli harkandɛ*/ 1. ಜೋರಾಗಿ ಕಿರುಚು, 2. ಬೊಬ್ಬೆಹಾಕು. 1. to scream , 2. to shout. ವಾ: ಗೂಡೆ ಗಂಟ್ಲ್ ಹರ್ಕಂದೆ, ಹೋಗಿ ಕೇಳ್ ಎಂತತ?

ಗಂಟ್‌ಹಾಕ್[1] /*ganṭiha:ki*/ ನಾವಿ. 1. ನಾಯಿಗಳು ಜೋಡಿಯಾಗುವುದು, 2. ಜೊತೆ ಸೇರುವುದು. 1. canine copulation, 2. act of sexual union. **ಗಂಟ್ ಹಾಕ್(ನು).** ವಾ: ನಾಯಿಗ ಗಂಟ್ ಹಾಕಂಬದು.

ಗಂಟ್‌ಹಾಕ್[2] /*ganṭiha:ki*/ ನಾವಿ. ಲೈಂಗಿಕ ಕ್ರಿಯೆಯನ್ನು ಸೂಚಿಸುವ ಪದ. a term that refers to the canine copulation. ವಾ: ಸೊಂಟಕೆ ಹಗ್ಗಲಿ ಗಂಟ್‌ಹಾಕ್‌ದು.

ಗಂಟ್‌ಹಾಕ್[3] /*ganṭiha:ki*/ ನಾ. ಎರಡು ಹಗ್ಗವನ್ನು ಪರಸ್ಪರ ಕಟ್ಟಿಕೊಳ್ಳುವುದು. to tie rope around each other.

ಗಂಡ /*ganḍa*/ ನಾ. 1. ಗಂಡ, 2. ಪತಿ, 3. ಒಡೆಯ. 1. husband, 2. spouse, 3. consort. **ಅಳಿಯ ಅಲ್ಲ ಮಗಳ ಗಂಡತ ಹೇಳ್ದಂಗೆ(ಗಾ).** ವಾ: ಅವುಳ ಗಂಡ ದಂಡ್‌ಲಿ ಇರ್‌ದು. **ಗಂಡಂಗೆ** /*ganḍangɛ*/ 1. ಗಂಡನಿಗೆ, 2. ಪತಿಗೆ. 1. to the husband, 2. to the spouse. ವಾ: ಗಂಡಂಗೆ ಸೆರಿಯಾದ ಹೆಣ್ಣ್ ಅದ್.

ಗಂಡಲ್ಲ /*ganḍalla*/ ನಾ. 1. ಗಂಡಾಗಿದ್ದರು ಹೆಚ್ಚು ಹೆದರುವ ಸ್ವಭಾವದವರಿಗೆ ಹೇಳುವ ಮಾತು, 2. ಪುಕ್ಕಲು ಸ್ವಭಾವ. 1. effeminate, 2. timid. ವಾ: ಬರಿ ಹೆದ್‌ರ್ ಪುಕ್ಲ ಅದ್ ಗಂಡಲ್ಲ ಬುಡು.

ಗಂಡಹೆಣ್ಣ್ /*ganḍahɛṇṇi*/ ನಾ. 1. ಗಂಡ ಹೆಂಡತಿ, 2. ಪತಿಪತ್ನಿ. husband and wife. ವಾ: ಆ ಗಂಡಹೆಣ್ಣ್‌ಗೆ ಯಾಗೊಲು ತಮಾಸೆನೆ.

ಗಂಡಾಂತರ /*ganḍa:ntara*/ ನಾವಿ. 1. ಆಪತ್ತು, 2. ಅಪಾಯ. 1. danger, 2. threat. ವಾ: ಕಳ್ಳರ ಸಾವಾಸ ಮಾಡಿರೆ ಗಂಡಾಂತರ ತಪ್ಪಿದಲ್ಲ.

ಗಂಡಾಳ್ /*ganḍa:ḷi*/ ನಾ. ಗಂಡು ಕೆಲಸಗಾರ. a male worker. ವಾ: ತೋಟಲಿ ಹೆರ್ತೆ ಕೆಲ್‌ಸಕೆ ಗಂಡಾಳ್‌ಗ ಇದ್ದರೆ ಒಳ್ಳದ್.

ಗಂಡಿ /*ganḍi*/ ನಾ. 1. ಕಂದಕ, 2. ಅಗಳು, 3. ಕಂಡಿ. 1. a ditch, 2. a moat, 3. a hole. ವಾ: ದನಗ ಬೇಲಿನ ಗಂಡಿ ಮಾಡಿ ಒಳೆಗೆ ನುಗ್ಗಿದೊ.

ಗಂಡಿತಡ್ಕ /*ganḍitaḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಎಡಮಂಗಲ ಗ್ರಾಮದ ಜಾಗ. a locality in Edamangala village in Sullia Taluk of Dakshina Kannada District.

ಗಂಡ್ /*ganḍi*/ ನಾ. 1. ಗಂಡು, 2. ಗಂಡಸು, 3. ಪುರುಷ, 4. ಪರಾಕ್ರಮಿ, 5. ಶೂರ, 6. ಕೆಚ್ಚು. 1. male, 2. a man, 3. an adult male, 4. a powerful man, 5 a courageous person, 6. a person with self-esteem. ವಾ: ಊರಿಗೆ ಅಂವನೆ ಗಂಡು ಮಜ್ಜ. **ಗಂಡ್ ಕೂಸು** /*ganḍi ku:su*/ ಗಂಡು ಮಗು. male child. ವಾ: ಅವುಳ ಸುರೂನ ಕೂಸು ಗಂಡುಕೂಸು.

ಗಂಡ್ ಬೀರಿ /*ganḍi bi:ri*/ ನಾವಿ. 1. ಗಂಡಸರಂತೆ

ವರ್ತಿಸುವ ಹೆಣ್ಣು, 2. ಬಜಾರಿ. 1. a manly (Masculine) woman, 2. a quarrelsome woman. ವಾ: ಅದ್ ಬಾರಿ ಗಂಡ್ ಬೀರಿ ಹೆಣ್ಣ್.

ಗಂಡ್ ಹಂದಿ /*gaṇḍi hindi*/ ನಾ. ಗಂಡು ಹಂದಿ. a male wild boar. ವಾ: ಗಂಡ್ ಹಂದಿಗ ಐದಾರೊಳೊ.

ಗಂಡ್‌ಗಡಿ /*gaṇḍi gɛḍi*/ ನಾ. 1. ಒಂದು ತೆಂಗಿನ ಕಾಯಿಯ ಎರಡು ಭಾಗಗಳಲ್ಲಿ ಕಣ್ಣುಗಳಿಲ್ಲದ ಭಾಗ, 2. ಗಂಡು ಭಾಗ. 1. the lower half of a coconut (without three eyes at the top of it), 2. male portion of coconut. ವಾ: ತೆಂಗ್‌ನಕಾಯಿಲಿ ಕಣ್ಣ್ ಇಲ್ಲರೆ ಅದ್ ಗಂಡ್ ಗಡಿತ ಅರ್‌ತ.

ಗಂಡ್‌ಮಕ್ಕ /*gaṇḍi makka*/ ನಾ. 1. ಗಂಡುಮಕ್ಕಳು, 2. ಹುಡುಗರು. 1. male children, 2. boys. ವಾ: ಈಗನ ಕಾಲಲಿ ಗಂಡುಮಕ್ಕ ಹೆಣ್ಮಕ್ಕ ಎಲ್ಲೊವು ಒಂದೇ.

ಗಂಡ್‌ಮಜ್ಜ /*gaṇḍamaṇṇa*/ ನಾವಿ. ಧೈರ್ಯವಂತ. a courageous person. ವಾ: ಹಿಡ್ದ ಕೆಲ್ಸನ ಬುಟ್ಟತ್ಲೆ, ಗಂಡ್‌ಮಜ್ಜ.

ಗಂಡ್ಸ್ /*gaṇḍsi*/ ನಾ. 1. ಗಂಡಸು, 2. ಪುರುಷ. 3. ಪೌರುಷವುಳ್ಳವನು. 1. a man, 2. an adult male, 3. a courageous man. ವಾ: ಗಂಡ್ಸ್‌ತ ಹೇಳ್‌ದ ಮೇಲೆ ಕಡಕ್ ಮಾತಾಡೊಕು.

ಗಂಡ್‌ಹಕ್ಕಿ /*gaṇḍihakki*/ ನಾ. ಹುಂಜ. a rooster. ವಾ: ಗಂಡ್ ಹಕ್ಕಿ (ಕೋಳಿ ಹುಂಜ), ಗಂಡ್ ನವಿಲ್ ಎಂತಾ ಪೊರ್‌ಲು ಅಲಾ?

ಗಂಡ್‌ಹೆಣ್ಣ್ /*gaṇḍihɛṇṇ*/ ನಾ. ಗಂಡು ಹೆಣ್ಣು, 2. ಪುರುಷ, ಸ್ತ್ರೀ. 1. a man and a woman, 2. male and female. ವಾ: ಗಂಡ್‌ಹೆಣ್ಣ್ ಕುದ್ದೊಳೊ.

ಗಂದ /*ganda*/ ನಾ. 1. ಶ್ರೀಗಂಧ, 2. ಚಂದನ. Sandalwood. ವಾ: ಉಗಾದಿಲಿ ಗಂದ ಅರ್‌ದ್ ಬೊಟ್ಟು ಹಾಕಿವೆ. **ಗಂದ ಮರ** /*ganda mara*/ ಶ್ರೀಗಂಧದ ಮರ. sandalwood tree. ವಾ: ಗಂದ ಮರನ ಬುಡಂದನೆ ಕೊಯ್ದೊಳೊ. **ಗಂದಕೊರ್ಡ್** /*gandakɔrḍi*/ 1. ಶ್ರೀಗಂಧದ ತುಂಡು, 2. ಕೊರಡು. 1. a piece/a stick of sandalwood tree, 2. a log of Sandalwood. ವಾ: ಗಂದಕೊರ್ಡ್ ಕೆತ್ತಕಾಯ್ತ್ ಹೋಮ ಹಾಕಿಕೆ ಬೇಕ್. **ಗಂದದ ಕಲ್ಲ್** /*gandada kalli*/ ಗಂಧವನ್ನು ತೇಯುವ ಕಲ್ಲು. a stone for grinding or rubbing sandalwood. ವಾ: ಗಂದದ ಕಲ್ಲ್ ಲಿ ಗಂದನ ಅರೆದು. **ಗಂದದ ಬೊಟ್ಟು** /*gandada boṭṭu*/ ಹಣೆಯಲ್ಲಿ ಇಡುವ ಗಂಧದ ಬೊಟ್ಟು. a mark of sandalwood paste on forehead. ವಾ: ಗಂದದ ಬೊಟ್ಟು ಹಾಕ.

ಗಂದ್‌ಸಾಲೆ /*gandisa:lɛ*/ ನಾ. ಒಂದು ವಿಧದ ಭತ್ತದ ತಳಿ. a variety of paddy. ವಾ: ಗಂದ್‌ಸಾಲೆ ಬತ್ತದ ಒಂದ್ ತಳಿ.

ಗಂಬ /*gamba*/ ನಾ. 1. ಕಂಬ, 2. ಮಾಡಿನ ಆಧಾರಕ್ಕೆ ನಿಲ್ಲಿಸುವ ಮರ, ಕಲ್ಲು ಮುಂತಾದವು. 1. pillar, 2. a pillar made of wood or stone to support the roof. ವಾ: ಕೊಟೆಗೆ ಸುತ್ತ ಆರ್ ಗಂಬ ಹಾಕಿದೊ. ಪ: ಮಲ್ಲಗಂಬ – ಎತ್ತರಕ್ಕೆ ನಿಲ್ಲಿಸಿದ ದೊಡ್ಡ ಕಂಬ

ಗಂಬೀರ /*gambi:ra*/ ನಾ. 1. ಗಾಂಭೀರ್ಯ, 2. ಘನವಾದ, 3. ಆಳವಾದ, 4. ಗಹನವಾದ. 1. solemn, 2. venerable, 3. intense, 4. dense. ವಾ: ಇಂದ್ ಮಕ್ಕ ಗಂಬೀರಲಿ ಕೊದ್ದೊಳೊ.

ಗಂಬೂಟ್ /*gambu:ṭi*/ ನಾ. ಕಾಲಿಗೆ ಹಾಕುವ ಬೂಟು. shoes. ವಾ: ಗಂಬೂಟ್ ಹಾಕಂಡ್ ತೋಟಕೆ ಹೋದು.

ಗಂಯ್ಕ್ /*ganyki*/ ಅ. ಕಂಠ ಪೂರ್ತಿ ಕುಡಿದು ಅಮಲಿನಲ್ಲಿ ತೂರಾಡುವುದು. inebriated. ವಾ: ಅಂವ ಮೊದುವೆ ಮನೆಲಿ ಲಾಯ್ಕಲಿ ಕುಡ್‌ದ್ ಗಂಯ್ಕ್ ಆವುಟು.

ಗಗ್ಗರ[1] /*gaggara*/ ನಾ. ಭೂತ ಕಟ್ಟುವವರು ಕಾಲಿಗೆ ಕಟ್ಟುವ ನೃತ್ಯಾಭರಣ. anklets worn by the impersonator of Buta/deity. ವಾ: ಕಾಲಿಗೆ ಗಗ್ಗರ ಕಟ್ಟಿ ಕೊಣ್ಯದು.

ಗಗ್ಗರ[2] /*gaggara*/ ನಾ. ಅತಿಯಾದ ಶೋಕಿ, ಬೈಗುಳ ಪದ. excessive indulgence. ವಾ: ಆ ಗೂಡೆನ ಗಗ್ಗರನೊಮ್ಮೆ ನೋಡ್.

ಗಜ /*gaja*/ ಪವಾ. ಅಳತೆ ಮಾಪನ. a measuring device. ವಾ: ಅದ್ ನಾಕ್ ಗಜದ ಮಾರ್ಗಗಡ.

ಗಜ ನಿಂಬುಳಿ /*gaja nimbuḷi*/ ನಾ. 1. ದೊಡ್ಡ ಜಾತಿಯ ನಿಂಬೆಹಣ್ಣು, 2. ತಂಪು ಪಾನೀಯ, ಜ್ಯಾಮ್,

ಉಪ್ಪಿನಕಾಯಿ ತಯಾರಿಕೆಯಲ್ಲಿ ಬಳಕೆ ಮಾಡಲಾಗುತ್ತದೆ, ಒಗರು ಹಾಗು ಹುಳಿಯಿಂದ ಕೂಡಿದ ರುಚಿಯನ್ನು ಹೊಂದಿರುತ್ತದೆ, 3. ಹಣ್ಣು ಸಿಟ್ರಿಕ್ ಆಮ್ಲದಿಂದ ಕೂಡಿರುತ್ತದೆ. 1. citrus fruit (Citrus Maxima), 2. used in cold drinks, jam, pickle – will be sour and bitter. ವಾ: ಗಜ ನಿಂಬುಳಿನ ಜೂಸ್ ಮಾಡಿಕೆ ಬಳ್‌ಸುವೆ.

ಗಜ ಮರ /*gaja mara*/ ನಾ. ಒಂದು ಕಾಡುಮರ. a forest tree. ವಾ: ಗಜ ಮರ ಇದೊಂದ್ ಕಾಡ್ ಮರ.

ಗಜಕೋಲು^{1} /*gajako:lu*/ ನಾ. ಮೂರು ಅಡಿ ಉದ್ದದ ಅಳತೆಕೋಲು. a three feet stick. ವಾ: ಗಜಕೋಲುನ ಅರ್ವೆನ ಅಳ್‌ತೆ ಮಾಡಿಕೆ ಬಳ್‌ಸುವೆ.

ಗಜಕೋಲು^{2} /*gajako:lu*/ ನಾ. ಕೇಪುವಿನ ಕೋವಿಗೆ ಮದ್ದು ತುಂಬಿಸುವ ಕಬ್ಬಿಣದ ತೆಳುವಾದ ಕೋಲು. a muzzleloader, a metal bar used in loading the gunpowder to a cartridge. ವಾ: ಗಜಕೋಲುನ ಎಲ್ಲಿಸಿದ? ಪ: ಗಜಪಟ್ಟಿ /*gajapaṭṭi*/ ವಾ: ಗಜಪಟ್ಟಿನೊಮ್ಮೆ ಇತ್ತ ಕೊಡು.

ಗಜ್ಜಿಗೆಕೊಡಿ /*gɘjjigɛkoḍi*/ ನಾ. 1. ಔಷಧಿಗೆ ಬಳಸುವ ಗಜ್ಜುಗದ ಚಿಗುರು, 2. ಕಳ್‌ಂಜಿ ಕೊಡಿ. shoot of yellow nicker/fever nut plant. ವಾ: ಗಜ್ಜುಗದ ಕೊಡಿನ ಮೊದ್ದಿಗೆ ಬಳ್‌ಸುವೆ.

ಗಟಗಟ /*gaṭagaṭa*/ ಅ. ನೀರು ಕುಡಿವಾಗ ಬರುವ ಶಬ್ದದ ಅನುಕರಣೆ ರೂಪ. onomatopoeic expression to describe the sound of drinking water in a hurry. ವಾ: ಗಟಗಟತ ಒಂದೆಸಮ ಸರ್ಬೊತ್ ಕುಡ್ತ್.

ಗಟ್ಟ^1 /*gaṭṭa*/ ನಾ. 1. ಘಟ್ಟ, 2. ಹಂತ. 1. a phase, 2. a stage. ವಾ: ಮನೆ ಕಟ್ಟುದು ಒಂದ್ ಗಟ್ಟಕೆ ಬಂದ್ ನಿತ್ತತ್.

ಗಟ್ಟ^2 /*gaṭṭa*/ ನಾ. 1. ಬೆಟ್ಟ ಗುಡ್ಡ ಪ್ರದೇಶ, 2. ಬೆಟ್ಟಗಳ ಸಾಲು. 1. a hilly region, 2. a range of hills. **ಹುಟ್ಟು ಗುಣ ಗಟ್ಟ ಹತ್ತಿರೂ ಬುಡಿಕಿಲೆ(ಗಾ).** ವಾ: ಗಟ್ಟಕೆ ಹೋಗಿ ಬನ್ನೆ. **ಗಟ್ಟದಂವ** /*gaṭṭadaṇva*/ ಬಯಲು ಸೀಮೆಯವರನ್ನು ಕರೆವ ಪದ. people from the plains. **ಗಟ್ಟಲಿ ನಿಲ್ಲ್** /*gaṭṭali nill*/ 1. ಎತ್ತರದಲ್ಲಿ ನಿಲ್ಲು, 2. ಬಯಲು ಸೀಮೆಯಲ್ಲಿ ನಿಲ್ಲು, 3. ಘಟ್ಟದಲ್ಲಿ ನಿಲ್ಲು, 1. to stand on a higher ground, 2. to stand in the plains, 3. to stand on the hill. **ಗಟ್ಟಲಿ ನಿಲ್ಲ್(ನು).** ವಾ: ನೀ ಗಟ್ಟಲಿ ನಿಲ್ಲ್, ನಾ ಅಲ್ಲಿಗೆ ಬನ್ನೆ ಆದೊ.

ಗಟ್ಟಮಣೆ /*gaṭṭamaṇɛ*/ ನಾ. 1. ಪೊಳಿಮಣೆ, 2. ಅಂಗಳವನ್ನು ಹೊಡೆದು ಸಮಗೊಳಿಸಲು ಬಳಸುವ ಮರದ ಚಪ್ಪಟೆಯಾಕಾರದ ಮುಟ್ಟಿ. 1. a rammer, 2. a tool used to flatten the surface of the ground. ವಾ: ಗಟ್ಟಮಣೆಲಿ ನೆಲ ಸಮ ಮಾಡ್‌ದು.

ಗಟ್ಟಿಬಳೆ /*gaṭṭi baḷɛ*/ ನಾ. 1. ಮದುವಣ ಕೈಗೆ ಹಾಕುವ ಚಿನ್ನದ ಬಳೆ, 2. ಗಂಡಸರ ಬಳೆ. 1. a golden bracelet given to the bridegroom, 2. bracelet worn by men. ವಾ: ಮೊದ್ವೆ ಹೈದಂಗೆ ಗಟ್ಟಿ ಬಳೆ ಹಾಕಿ.

ಗಟ್ಟಿಮನ್ಸ್ /*gaṭṭi mansɨ*/ ನಾ. 1. ದೃಢ ಮನಸ್ಸು, 2. ಸ್ಥಿರ ಮನಸ್ಸು. 1. a firm mind, 2. a stable mind. ವಾ: ಗಟ್ಟಿ ಮನ್ಸ್ ಮಾಡಿ ಕೆಲ್‌ಸಕೆ ಇಳಿಯಕು.

ಗಟ್ಟಿ^{1} /*gaṭṭi*/ ನಾ. ಅಕ್ಕಿಯ ಗಟ್ಟಿಹಿಟ್ಟನ್ನು ಸಾಮಾನ್ಯವಾಗಿ ಬಾಳೆ ಅಥವಾ ಉಪ್ಪಲಿಗೆ ಎಲೆಯಲ್ಲಿ ಸುತ್ತಿಟ್ಟು (ಆವಿಯಲ್ಲಿ) ಬೇಯಿಸಿ ತಯಾರಿಸಿದ ತಿಂಡಿ;ಅಕ್ಕಿಯ ಗಟ್ಟಿಕಡುಬು

. a steam boiled rice cake prepared out of the thick dough of rice, usually wrapped in plantain leaf. ವಾ: ಗಟ್ಟಿ ಹಿಟ್ಟ್‌ನ ಪುಂಡಿ ಮಡ್ಕೆಲಿ ಮಾಡ್ದು.

ಗಟ್ಟಿ^{2} /*gaṭṭi*/ ನಾ. ಘನವಾದ ಸಾಧನ. a solid block. ವಾ: ಬೀಟಿ ಮರ ಗಟ್ಟಿ ಮರ.

ಗಟ್ಟಿ^{3} /*gaṭṭi*/ ನಾ. 1. ಗಟ್ಟಿಯಾದ, 2. ಬಿರುಸಾದ. 1. hard, 2. brisk. **ಗಟ್ಟಿ ಇದ್ದರೆ ರೊಟ್ಟಿ ತಟ್ಟಿದೆ, ತೆಳ್ಳಂಗಾದರೆ ದೋಸೆ ಹೊಯ್ದೆ(ಗಾ).** ವಾ: ಚಕ್ಕುಲಿ ಬಾರಿ ಗಟ್ಟಿ ಉಟ್ಟು ಅಗೆಕಾದುಲೆ.

ಗಟ್ಟಿ^{4} /*gaṭṭi*/ ನಾ. 1. ಏರು ಧ್ವನಿ, 2. ಜೋರಾಗಿ, 3. ದೊಡ್ಡಧ್ವನಿ. 1. raised pitch of the voice, 2. loudly, 4. in a raised voice. ವಾ: ಗಟ್ಟಿ ಕಿರ್‌ಚ್ ನೆ ಹೈದ, ಮೆಲ್ಲ ಕಿರ್‌ಚಿರೆ ಕೇಳ್‌ದುಲೆ.

ಗಟ್ಟಿಂಜ /*gaṭṭiŋja*/ ನಾ. 1. ಗಟ್ಟಿಗ, 2. ಶೂರ, 3. ಹುಷಾರು. 1. brave, 2. a courageous person, 3. careful. ವಾ: ಅಂವ ಬಾರಿ ಗಟ್ಟಿಂಜ ಹೈದ ಕಂಡದೆ.

ಗಟ್ಟಿಕುಳ /*gaṭṭikuḷa*/ ನಾವಿ. 1. ಶ್ರೀಮಂತ, 2. ಸ್ಥಿತಿವಂತ, 3. ಆರ್ಥಿಕವಾಗಿ ಸಬಲರು. 1. a rich person, 2. a person with wealth, 3. financially stable. ವಾ: ಊರಿಗೆ ಅಂವ ಬಾರಿ ಗಟ್ಟಿಕುಳ.

ಗಟ್ಟಿಗಾರು /*gaṭṭiga:ru*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ನೆಲ್ಲೂರು ಕೆಮ್ರಾಜೆ ಗ್ರಾಮದ ಜಾಗ. 1. family, 2. lineage, 3. a locality in Nelluru Kemraje village in Sullia Taluk of Dakshina Kannada District.

ಗಟ್ಟಿಗೆತಿ /*gaṭṭigeti*/ ನಾ. 1. ಎದೆಗುಂದದೆ ಎಲ್ಲವನ್ನು ನಿಭಾಯಿಸುವ ನಿಪುಣಳು, 2. ಸಮರ್ಥಳು, 3. ಧೈರ್ಯವಂತೆ, 4. ಗಡಸುಗಾರ್ತಿ, 5. ಗಟ್ಟಿಗಿತ್ತಿ. 1. a woman who faces any obstacle with courage, 2. a capable woman, 3. a courageous woman, 4. a hardened woman, 5. a woman with strong personality. ವಾ: ಗಟ್ಟಿಗೆತಿಂತ ನಿನ್ನ ನೋಡಿರೆ ಗೊತ್ತಾದೆ.

ಗಟ್ಟಿಙ್ಙ /*gaṭṭiŋŋa*/ ನಾ. ದೃಢ ಮನಸ್ಸಿನವ. a determined person. ವಾ: ಅಂವ ಬಾರಿ ಗಟ್ಟಿಙ್ಙ.

ಗಟ್ಯಾವ್ಟ್ /*gaṭya:vṭɨ*/ ನಾ. 1. ಗಟ್ಟಿಯಾಗಿದೆ, 2. ಬಿರುಸಾಗಿದೆ. 1. hard, 2. solid. ವಾ: ಚಕ್ಕುಲಿ ಬಾರಿ ಗಟ್ಯಾವ್ಟ್ ಅಗೆಕೆ ಬೊತ್ತ್. ಪ: ಗಟ್ಯುಟ್ಟು

ಗಟ್ಯುಟ್ಟು /*gaṭyuṭṭu*/ ನಾ. 1. ಗಟ್ಟಿಯಾದ, 2. ಭದ್ರ, 3. ದೈಹಿಕವಾಗಿ ಬಲಶಾಲಿಯಾಗಿರು, 4. ಪ್ರಬಲ. 1. firm/hard, 2. secure, 3. be physically strong, 4. strong. ವಾ: ಅಜ್ಜಿ ಬಾರಿ ಗಟ್ಯುಟ್ಟು.

ಗಡ¹ /*gaḍa*/ ಅ. ಪರರ ಮಾತನ್ನು ಒಪ್ಪಿಸುವಾಗ ಬಳಕೆ ಆಗುವ ಅವ್ಯಯ ಪದ. usually used while describing events about others. **ಅವ್ವ ಪಟ್ಟಕ್ಕೇರ್ಕನ ಅಪ್ಪ ಚಟ್ಟಕ್ಕೇರ್ದೆ ಗಡ(ಗಾ).** ವಾ: ನಿಂಗೆ ಬಾರಿ ದೊಡ್ಡ ಗಂಟ್ ಸಿಕ್ಕಿಟುಗಡ. ಪ: ಗಡಂತ – ಹೌದಂತೆ

ಗಡ² /*gaḍa:*/ ಅ. ಅಂತೆ ಎಂಬುದನ್ನು ಸೂಚಿಸುವ ಶಬ್ದ. the term used to indicate “in that way” etc. ವಾ: ಅಮಂದ್ ಎಂತಗಡ. **ಗಡಪ್ಪಾ** /*gaḍappa:*/ 1. ಹೌದಂತಪ್ಪ, 2. ಹೌದಂತೆ, 3. ನಿಖರವಾಗಿ ತಿಳಿಯದಿದ್ದರು ಸಂಶಯದಲ್ಲಿ ಮಾತನಾಡುವುದು. 1. a term used to indicate partial affirmation, 2. indicating probability, 3. speaking inaccurately about something. ವಾ: ಅವುಳು ಮನೆ ಬುಟ್ಟ್ ಓಡಿಹೋತುಗಡಪ್ಪಾ, ನಂಗೆ ಸೆರಿ ಗೊತ್ಲೆ, ಹಂಗೆತ ಮಾತಾಡ್ತ್ತಿದ್ದೊ. **ಗಡಾ** /*gaḍa:*/ ಅಂತೆ ಎಂಬುದನ್ನು ಸೂಚಿಸುವ ಶಬ್ದ. a term used to affirm something. ವಾ: ಅವಳ್‌ದ್ ಮೊದ್ವೆಗಡಾ.

ಗಡಂಗ್ /*gaḍaŋgɨ*/ ನಾ. ಸರಾಯಿ ಅಂಗಡಿ, 2. ಸಾರಾಯಿ ಅಡ್ಡೆ, 3. ಸೇಂದಿ ಅಂಗಡಿ, 4. ಛಾಪೆ. 1. a liquor shop, 2. a toddy shop, 3. wine shop, 4. a wine store. ವಾ: ಅಂವೆಲ್ಲ ಸೇರಿಕಂಡ್ ಗಡಂಗ್ ಕಡೆ ಹೋತಿದ್ದೊ. ಪ: ಗಡ್‌ಂಗ್ – ಸರಾಯಿ ಅಂಗಡಿ

ಗಡದ್ದ್ /*gaḍaddɨ*/ ನಾ. 1. ಗಡದ್ದು, 2. ಆಡಂಬರ, 3. ವೈಭವ, 4. ಗಮ್ಮತ್ತ್. 1. ostentation, 2. Pomp, 3. grandeur, 4. impressiveness. ವಾ: ಅವು ನಿನ್ನೆ ಜಂಬರಲಿ ಗಡದ್ದ್ ತಿಂದೊಳೊ.

ಗಡಸ್ /*gaḍasɨ*/ ನಾವಿ. 1. ಗಡಸುಧ್ವನಿ, 2. ಕರ್ಕಶ ಧ್ವನಿ. 1. harsh voice, 2. coarse voice. ವಾ: ಅವಳ್ದ್ ಗಂಡ್ ಜೆನರಂಗೆ ಗಡಸ್ ಸೊರ.

ಗಡಿ¹ /*gaḍi*/ ನಾ. ಗಾಯ. a wound. ವಾ: ಕಾಲಿಗೆ ದೊಡ್ಡ ಗಡಿ ಆದ್. **ಗಡಿಮೊದ್ದ್‌ನ ಸೊಪ್ಪ್** /*gaḍimɔddɨna sɔppɨ*/ ಗಾಯಕ್ಕೆ ಹಚ್ಚುವ ಸೊಪ್ಪು ಮದ್ದು. a herb used to heal wounds.

ಗಡಿ² /*gaḍi*/ ನಾ. 1. ಗಡಿ, 2. ತೆಂಗಿನ ಹೋಳು. 1. half, 2. half of a broken coconut. ವಾ: ಈಡ್ಗಾಯಿ ಒಡ್ಡ ಗಡಿನ ಹೆರ್‌ಕ್ ತೊಳೊ. ಪ: ಕಾಯಿಗಡಿ – ತೆಂಗಿನಕಾಯಿ ಗಡಿ

ಗಡಿ ಕಟ್ಟುದು /*gaḍi kaṭṭudɘ*/ ಕ್ರಿವಿ. ಮೇಲಿರುವ ಗದ್ದೆಯಿಂದ ಕೆಳಗಿನ ಗದ್ದೆಗೆ ನೀರು ಬಿಡುವುದು. to release water from the upper fields to the lower fields. ವಾ: ಗದ್ದೆಗೆ ಗಡಿ ಕಟ್ಟುದು.

ಗಡಿಕಲ್ಲು /*gaḍikallu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಸಂಪಾಜೆ ಗ್ರಾಮದ ಜಾಗ. a locality in Sampaje village in Sullia Taluk of Dakshina Kannada District.

ಗಡಿಗಡಿಗೆ /*gaḍigaḍigɛ*/ ನಾ. 1. ಆಗಾಗ, 2. ಪದೇಪದೇ, 3. ಗಳಿಗೆ. 1. again and again, 2. repeatedly, 3. ove and over again. ವಾ: ಕೂಸು ರಾತ್ರೆ ಗಡಿಗಡಿಗೆ ಎದ್ರುದು, ಉಚ್ಚೆ ಹೊಯ್ಯದು.

ಗಡಿಹಾಕ್ /*gaḍi ha:kɨ*/ ಕ್ರಿವಿ. 1. ಕತ್ತಿ ಅಥವಾ ಕೊಡಲಿಯಿಂದ ಕಡಿ, 2. ಗುರುತು ಮಾಡು. 1. to cut with a knife or an axe, 2. to mark. ವಾ: ಮರಕೆ ಗಡಿ ಹಾಕ್‌ದು.

ಗಡಿಗಿಡ್ಡು /*gaḍigiḍdɨu*/ ಕ್ರಿ. ಎಡೆ ಇಡುವುದು. an offering. ವಾ: ಸತ್ತ ಹಿರಿಯವ್ಕೆ ಗಡಿಗಿಸುದು.

ಗಡಿಗುಡ್ಡೆ /*gaḍiguḍḍe*/ ನಾ. ಕೊಡಗು ಜಿಲ್ಲೆಯ ಪೆರಾಜೆ ಗ್ರಾಮದ ಜಾಗ. a locality in peraje village in of Kodagu District.

ಗಡಿಗೆ ಕಲ್ಲ್ /*gaḍigɛ kallɨ*/ ನಾ. 1. ಗಡಿ ಗುರುತಿಸುವ ಕಲ್ಲು, 2. ವಿಂಗಡಣೆ ಭಾಗ. 1. a a boundary stone, 2. a fraction. ವಾ: ಅಲ್ಲಿ ದೂರಲಿ ಒಂದ್ ಗಡಿಗೆ ಕಲ್ಲ್ ಉಟ್ಟಲ ಅಲ್ಲಿವರೆಗೆ ಮಾತ್ರ ನಮ್ಮ ಊರು, ಅದರ ಆಚೆಗೆ ಬೇರೆ ಊರ್ ಸಿಕ್ಕುದು.

ಗಡಿಬಿಡಿ /*gaḍibiḍi*/ ಕ್ರಿವಿ. 1. ಅವಸರ, 2. ಅಂಬೆರ್ಪು. 1. urgency, 2. exigency. ವಾ: ಅವು ಗಡಿಬಿಡಿಲಿ ಹೊರ್‌ಟೊ, ನಾವೂ ಗಡಿಬಿಡಿಲಿ ಉಗ್ಗಪ್ಪೊತ ಹೊರ್‌ಟ್ ಬಂದೊ.

ಗಡಿಯರ /*gaḍiyara*/ ನಾ. 1. ಗಡಿಯಾರ, 2. ಕಾಲ ಅಳೆಯುವ ಅಥವಾ ಸೂಚಿಸುವ ಸಾಧನ, 3. ಕಾಲ ಮಾಪಕ, 4. ಕಾಲ ಮಾಪಕ ಯಂತ್ರ. 1. a clock, 2. an instrument to measure time, 3. an instrument that measures time, 4. a machine that indicates and measures time. ವಾ: ಗಡಿಯರ ನಿತ್ತೋವುಟು.

ಗಡಿಯಾರ ಸರ್ಪುಳಿ /*gaḍiya:ra sarpuḷi*/ ನಾ. ಅವಲಕ್ಕಿ ಸರ. a variety of necklace. ವಾ: ಅವುಳು ಗಡಿಯಾರ ಸರ್ಪುಳಿನ ಹಾಕಂಡುಟ್ಟು.

ಗಡು /*gaḍu*/ ನಾ. ವಾಯಿದೆ. a deadline. ವಾ: ನಿಂಗೆ ಕೊಟ್ಟ ಗಡು ಮುಗ್‌ತ್.

ಗಡ್ಗೆ /*gaḍgɛ*/ ನಾ. 1. ನೀರು ಹೊತ್ತೊಯ್ಯುವ ಪಾತ್ರೆ, 2. ಮಣ್ಣಿನ ಕೊಡಪಾನ. 1. a pot to carry water, 2. a clay pot. **ಹಡ್‌ಗೇ ಹೋದ ಮೇಲೆ ಗಡಿಗೆದೇನ್(ಗಾ).** ವಾ: ಸಿಂಪೆ ಮೇಲೆ ಗಡ್ಗೆನ ಇಸೊಕು.

ಗಡ್ಡ /*gaḍḍa*/ ನಾ. 1. ಗಡ್ಡ, 2. ದಾಡಿ, 3. ಗದ್ದ. 1. beard, 2. facial hair, 3. chin. ವಾ: ಗಡ್ಡ ಬುಟ್ಟರೆ ಲಾಯ್ಕಿಲ್ಲೆ. **ಗಡ್ಡ ಗೀಸುದು** /*gaḍḍa gi:sudu*/ 1. ಗಡ್ಡ ಬೋಳಿಸುವುದು, 2. ಗಡ್ಡ ತೆಗೆಯುವುದು. 1. to shave the beard, 2. to remove the beard. ವಾ: ಅಂವ ಗಡ್ಡ ಗೀಸುದು. ಪ: ಗಡ್ಡಬೋಳ್ಸುದು – ಗಡ್ಡ ಗೀಸುವುದು. **ಗಡ್ಡ ಬೆಳ್ಸುದು** /*gaḍḍa bɛḷsudu*/ ಗಡ್ಡ ಬೆಳೆಸುವುದು. growing beard. ವಾ: ಈಗನ ಹೈದಂಗ ಗಡ್ಡ ಬೆಳ್ಸುದು. **ಗಡ್ಡ ಬೋಳ್ಸುದು** /*gaḍḍa bo:ḷsudu*/ ಗಡ್ಡ ಬೋಳಿಸುವುದು. shaving beard.

ಗಡ್ದ್ /*gaḍḍɛ*/ ನಾ. 1. ಸಂಭ್ರಮ, 2. ಉತ್ಸಾಹ, 3. ಸಡಗರ, 4. ಅಧಿಕವಾದ ಸಂತೋಷ. 1. a celebration, 2. enthusiasm, 3. excitement, 4. excessive happiness. ವಾ: ಈ ಮೊದ್ವೆ ಗಡ್ದೆಲಿ ಎಲ್ಲ ಮರ್‌ತೋತು.

ಗಡ್ಸ್ /*gaḍsɨ*/ ನಾವಿ. 1. ತಾಕತ್ತು, 2. ಧೈರ್ಯ. 1. strength, 2. courage. ವಾ: ಯಾವ್‌ದೆ ಕೆಲ್‌ಸ ಮಾಡಿಕು ಗಡ್ಸ್ ಇರೊಕು.

ಗಣಕಿಕ್ಕುದು[1] /*gaṇakikkudu*/ ನಾ. ಇನ್ನೊಬ್ಬರಿಗೆ ಆಸೆ ಆಗದ ಹಾಗೆ ಕಾಡು ಮಾಂಸವನ್ನು ಕೊಡುವುದು. sharing the meat of a wild animal in a way others don't feel greedy about it. ವಾ: ಗಣಕಿಕ್ಕಿ ಆತ.

ಗಣಕಿಕ್ಕುದು[2] /*gaṇakikkudu*/ ನಾ. ಏಣೇಲು ಬೇಸಾಯ ಕಳೆದು ಗದ್ದೆ ಹುಣಿಯಲ್ಲಿ ಗಣಗಳಿಗೆ ಎಡೆ ಬಡಿಸುವುದು. an offering made to the minor deities, on the ridges of a paddy field after harvesting the crop of the first seasonal rains

ಗಣಕೂಟ /*gaṇaku:ṭa*/ ನಾ. ವಧು ವರರ ಸಾಲಾವಳಿ ಕೋಷ್ಟಕ. horoscopes of bride and bridegroom. ವಾ: ಮೊದುವೆಗೆ ಗಣಕೂಟ ಕೂಡಿ ಬಂದದೆನತ ನೋಡ್‌ಸೊಕು.

ಗಣನೆ /*gaṇanɛ*/ ನಾ. ಗಮನಕ್ಕೆ ತೆಗೆದುಕೊಳ್ಳು. take into consideration. ವಾ: ಅವು ಹೇಳ್‌ದ ಮಾತ್‌ನ ಯಾರೂ ಗಣನೆಗೆ ತಕಣ್‌ತ್‌ಲೆ.

ಗಣಪತಿಗೆ ಇಸುದು /*gaṇapatigɛ isudu*/ ಕ್ರಿವಿ. ಅರೆಭಾಷೆ ಗೌಡರ ಶುಭ ಕಾರ್ಯಗಳಲ್ಲೆಲ್ಲಾ ಗಣಪತಿಯನ್ನು ಪೂಜಿಸುವ ಕ್ರಮ ಇದೆ, ಒಂದು ಬಾಳೆ ಎಲೆಯಲ್ಲಿ ಅಕ್ಕಿ, ಹಣ್ಣು, ಕಾಯಿ, ಎಲೆ ಅಡಿಕೆ, ಹೂಗಳನ್ನು ಇಟ್ಟು ಎಲೆಯ ತುದಿಯಲ್ಲಿ ಬತ್ತಿ ಉರಿಸಿ, ಗಂಧದ ಕಡ್ಡಿ ಹಚ್ಚಿ, ಕರ್ಪೂರದ ಆರತಿ ಬೆಳಗುವ ಪದ್ಧತಿ ಇದಾಗಿದೆ. a ritual of worshipping lord Ganesha by Arebhashe Gowdas. An offering of rice, coconut, plantain, flowers, etc. is made on a plantain leaf. Incense sticks are burnt, and buring camphors are waved at Ganesha. ವಾ: ಸುಬಕಾರ್‌ಯಲಿ ಗಣಪತಿಗೆ ಇಸುದು. ಪ: ಗಣಪತಿಗೆ ಇಸಿಕೆ

ಗಣಿ ಮೂಗ್ /*gaṇi mu:gɨ*/ ನಾ. ಗಿಳಿಯ ಕೊಕ್ಕಿನಂತೆ ಬಾಗಿದ ಚೂಪಾದ ಮೂಗು. an aquiline nose, nose with a prominent bridge. ವಾ: ಆ ಗೂಡೆದ್ ಗಣಿ ಮೂಗ್.

ಗಣೊದಿಗೆ ಮಡ್ಗುದು /*gaṇodigɛ maḍgudu*/ ನಾ. ಕುಚಲಕ್ಕಿ ಮತ್ತು ಹಲಸಿನ ಬೀಜ ಹುರಿದು ಇಡುವುದು. serving boiled rice and roasted seeds of jackfruit. ವಾ: ಗದ್ದೆ ಕೆಲ್‌ಸಕೆ ಮುಂದೆ ಗಣೊದಿಗೆ ಮಡ್ಗುದು.

ಗಣೋದಿ /*gaṇo:di*/ ನಾವಿ. 1. ಗದ್ದೆ ಕೆಲಸ, 2. ನಾಟಿ ಕೆಲಸವನ್ನು ಆರಂಭಿಸುವ ಮೊದಲು ದೇವರನ್ನು ಸ್ತುತಿಸುವ ಕ್ರಮ, ಕುಸಲಕ್ಕಿ ಹುರಿದು, ಹಲಸಿನ ಬೀಜ, ತೆಂಗಿನ ಕಾಯಿ ಸೇರಿಸಿ ಗದ್ದೆಯಲ್ಲಿ ಇಡುವ ಪದ್ಧತಿ. 1. working in a paddy field, 2. the practice of praying to god before transplanting the seedling along with an offering of a dish made of boiled rice, roasted jackfruit seeds and grated coconut. ವಾ: ಗಣೋದಿಗೆ ಇಸೊಕು. ಪ: ಗಣೋದಿ ಗದ್ದೆಲಿ – ನಾಟಿಮುಗಿದ ನಂತರ ಗಣಪತಿಗೆ ಪ್ರಸಾದ ಇಡುವುದು. **ಗಣೋದಿ ಕೂರ್ಸದ್** /*gaṇo:di ku:rsadɨ*/ ನಾಟಿಯ ನಂತರ ದೊಡ್ಡ ಗದ್ದೆಯಲ್ಲಿ ನಡೆಸುವ ಓಟದ ಸ್ಪರ್ಧೆ. a running race conducted in the larger paddy field after transplanting padd. ವಾ: ಗಣೋದಿ ಕೂರ್ಸದ್ ವರ್‌ಸೊಳು ನಡ್ಸಿಕಂಡ್ ಬಂದೊಳೊ.

ಗಣ್ಣಗದ್ದೆ /*gaṇṇagaddɛ*/ ನಾ. ಸಣ್ಣ ಗದ್ದೆ. a small paddy field. ವಾ: ಗಣ್ಣ ಗದ್ದೆ ಹೊಳೆ ನೀರ್ ಬಂದ್ ಮುಳ್‌ಗಿಟು.

ಗಣ್ಮಕ /*gaṇmaka*/ ನಾ. ಗಂಡು ಮಕ್ಕಳು. male children. ವಾ: ಗಣ್ಮಕ ಹೊರ್‌ಗೆ ಕುದ್ದೊಳೊ.

ಗತಿ /*gɛti*/ ನಾ. ಅವಲಂಬನೆ. dependence. **ಗತಿ ಇಲ್ಲದ ಗಂಡನ ಸೇರಿ, ಹಾಂತೆ ಕಚ್ಚಿ ಜೀವ ಹೋತ್(ಗಾ).** ವಾ: ನಂಗೆ ದೇವರೆ ಗತಿ.

ಗತಿ ಕಾಣ್ಸುದು /*gɛti ka:ṇsudu*/ ಕ್ರಿವಿ. 1. ಕೊನೆಮುಟ್ಟಿಸು, 2. ಅಂತ್ಯಗೊಳಿಸು, 3. ಸದ್ಗತಿಯನ್ನು ದೊರಕಿಸು. 1. to help something reach a logical conclusion, 2. to end something, 3. to reach salvation. ವಾ: ಅದ್ದೊಂದ್ ಗತಿ ಕಾಣ್ಸುದು ಒಳ್ಳೆದ್ ಇಲ್ಲರೆ ಕಾಟ ತಡೆಕಾದ್ಲೆ.

ಗತಿಗೆಟ್ಟಂವ /*gɛtigɛṭṭanva*/ ನಾ. 1. ಗತಿಯಿಲ್ಲದವ, 2. ಅನಾಥ, 3. ಬಡವ, 4. ನಿರ್ಗತಿಕ. 1. a helpless, 2. an orphan, 3. a poor, 4. a destitute. ವಾ: ಗತಿಗೆಟ್ಟಂವನಂಗೆ ಇರ್‌ದು.

ಗತಿಯಾರ್ /*gatiya:rɨ*/ ನಾ. 1. ಗತಿ ಯಾರು?, 2. ದಿಕ್ಕು, 3. ದಾರಿ, 4. ಆಧಾರ, 5. ಆಶ್ರಯ. 1. Who do I rely on? who will save me? etc, 2. a direction, 3. a path, 4. support, 5. care/nurture. ವಾ: ಇನ್ನ್ ನಂಗೆ ಗತಿಯಾರ್?

ಗತ್ತ್ /*gattɨ*/ ನಾ. 1. ಗತ್ತು, 2. ಜಂಬ, 3. ಅಹಂಕಾರ. 1. ostentatiousness, 2. arrogance, 3. excessive pride. ವಾ: ಅಂವ ಬಾರಿ ಗತ್ತ್ ಲಿ ಬಂದದೆ.

ಗದ್ದಳ /*gaddaḷa*/ ನಾ. 1. ಹಬ್ಬ ಹರಿದಿನಗಳಲ್ಲಿ ಮಾಡುವ ವಿಧ ವಿಧದ ಅಡುಗೆ, 2. ಭೂರಿ ಭೋಜನ. 1. an elaborate meal prepared during festivals, 2. a feast. ವಾ: ಹೊಸ ನೆಂಟ್ರಿಗೆ ಗದ್ದಳ ಮಾಡಿದ್ದೊ, ಬಾರೀ ಗದ್ದಳ?

ಗದ್ದೆ /*gaddɛ*/ ನಾ. 1. ಭತ್ತ ಬೆಳೆಯುವ ಸಮತಟ್ಟಾದ ಪ್ರದೇಶ, 2. ಭತ್ತದ ಹೊಲ. 1. a flat arable land to grow paddy, 2. a paddy field. ವಾ: ಬೆಳೆ ಕೊಯ್ಲ್ ಆದ ಮೇಲೆ ಗದ್ದೆಲಿ ತರ್ಕಾರಿ ಬೆಳ್‌ಸುವೆ. **ಗದ್ದೆ ಕೆಲ್ಸ** /*gaddɛ kɛlsa*/ ಬೆಳೆಕೆಲಸ. farm work. ವಾ: ಗದ್ದೆ ಕೆಲ್‌ಸ ಮುಗಿಯೋಸ್ಟ್ರಲಿ ನಂಗೆ ಬೊತ್‌ಉಗ್ಗಪ್ಪ್. **ಗದ್ದೆ ಪುಣಿ** /*gaddɛ puṇi*/ 1. ಗದ್ದೆಯ ಬದು, 2. ಹೊಲ

ಗದ್ದೆಗಳ ಅಂಚಿನಲ್ಲಿ ರಚಿಸಿದ ಮಣ್ಣಿನ ದಿಬ್ಬ, 3. ಗದ್ದೆಕಣ, 4. ಏರಿ. 1. small, raised strips of land to indicate the border of fields, 2. a stretch of heap of earth, 3. a barn field 4. an embankment. ವಾ: ಗದ್ದೆ ಪುಣಿ ಮಳೆಗೆ ಜರ್‌ದುಟು. **ಗದ್ದೆಕಣ** /*gaddɛkaṇa*/ 1. ಗದ್ದೆಯ ಬದು, 2. ಹೊಲ ಗದ್ದೆಗಳ ಅಂಚಿನಲ್ಲಿ ರಚಿಸಿದ ಮಣ್ಣಿನ ದಿಬ್ಬ, 2. ಗದ್ದೆ ಪುಣಿ. 1. small, raised strips of land to indicate the border of fields, 2. a stretch of heap of earth, 3. a raised ridge in a paddy field. ವಾ: ಗದ್ದೆಕಣಲಿ ಜಾಗ್ರತೆಲಿ ಹೋಕು. **ಗದ್ದೆಕರೆ** /*gaddɛkarɛ*/ 1. ಗದ್ದೆಯಬದು, 2. ಪಕ್ಕ, 3. ಮಗ್ಗಲು. 1. small, raised strips of land to indicate the border of fields, 2. side, 3. next to/side. ವಾ: ಗದ್ದೆಕರೆಲಿ ಚೋಡಿಟ್ಟು. **ಗದ್ದೆಪಣಿ** /*gaddɛpaṇi*/ ಗದ್ದೆಯಲ್ಲಿ ನೀರು ನಿಲ್ಲಿಸುವರೇ ಅದರ ಅಂಚಿಗೆ ಹಾಕುವ ದಿಡ್ಡು. small, raised strips of land to stop the flow of water in the field. ವಾ: ಗದ್ದೆ ಮಣಿಗೆ ಮಣ್ಣ್ ಹಾಕಿಕುಟ್ಟು. **ಗದ್ದೆಪುಣಿ** /*gaddɛpuṇi*/ ಎರಡು ಗದ್ದೆಗಳನ್ನು ಬೇರ್ಪಡಿಸುವ ಬದು. a raised stip of land that seperates two paddy fields. ವಾ: ಬಾರಿ ಮಳೆಗೆ ಗದ್ದೆಪುಣಿ ಜರ್‌ದುಟು.

ಗದ್ದೆ ಒಡಾ ಹೋದು /*gaddɛ oḍa: ho:du*/ ನಾ. ಏರಿ ತುಂಡಾಗಿ ಹೋಗುವುದು (ಕೋಡಿ ಹರಿವು). a flooded bund (embankment). ವಾ: ಗದ್ದೆ ಒಡಾ ಹೋಗುಟು, ಹಂಗಾಗಿ ನೀರ್ ನಿಲ್ಲಿಕೆ ಕಟ್ಟ ಹಾಕೊಕು.

ಗದ್ದೆಗೋರಿ[1] /*gaddɛgo:ri*/ ನಾ. ಗದ್ದೆ ಬಿತ್ತಲು, ನೇಜಿ ನೆಡಲು ಹದಮಾಡುವುದು. preparing the paddy field for transplantation of seedlings. ವಾ: ಗದ್ದೆಗೋರಿ ಮಾಡುದು. ಪ: ಕಂಡಕೋರಿ(ತು)

ಗದ್ದೆಗೋರಿ[2] /*gaddego:ri*/ ನಾ. ಗದ್ದೆಬೇಸಾಯದ ಕೊನೆಯ ದಿನದ ಉಳುಮೆ ಮತ್ತು ಕೋಣ ಕಂಬಳ. a buffalo race on the last day of farming. ವಾ: ಗದ್ದೆಗೋರಿಗೆ ಪೋಯಿ.

ಗದ್ದೆಗೋರು /*gaddego:ru*/ ನಾ. ಗದ್ದೆಯನ್ನು ಉಳುಮೆ ಮಾಡಿ ಕೊನೆಗೆ ಹಲಗೆ ಹಾಕಿ ಮೆಟ್ಟಿ ಎತ್ತರ ತಗ್ಗನ್ನು ಸಮತಟ್ಟು ಮಾಡುವುದು. using a rammer to flatten the ploughed paddy field. ವಾ: ಗದ್ದೆ ಹೂಡ್ದ ಮೇಲೆ ಗದ್ದೆಗೋರುವೆ.

ಗದ್ದೆಗೋರ್ /*gaddɛgo:ri*/ ನಾ. ಗದ್ದೆ ಬೇಸಾಯದ ಕೊನೆಯ ದಿನದ ಉಳುಮೆ, ನಾಟಿ ಮೊದಲಾದ ಕೆಲಸಗಳು ಇತ್ಯಾದಿ ಆಚರಣೆಗಳು. ploughing, transplantation and allied work in a paddy field on the last day. ವಾ: ನಾಳೆ ಗದ್ದೆಗೋರ್‌ದುಗಡ.

ಗದ್ದೆಚರ್ಗ್ /*gaddɛcargɨ*/ ನಾ. ಎಣೇಲ್ ಬೇಸಾಯ ಗದ್ದೆಯಲ್ಲಿ ಇರುವ ಸಣ್ಣ ಮೀನು. a small fish found in the waters of a paddy field. ವಾ: ಗದ್ದೆಲಿ ಗದ್ದೆಚರ್ಗ್ ಇದ್ದದೆ.

ಗದ್ದೆಪಾರ /*gaddɛpa:ra*/ ನಾ. 1. ಕಾಡು ಪ್ರಾಣಿಗಳಿಂದ ಬೆಳೆ ರಕ್ಷಿಸಲು ಗದ್ದೆಗೆ ಕಾವಲು ಕೂರುವುದು, 2. ಗದ್ದೆ ಕಾಯುವುದು. 1. guarding the crops from wild animals, 2. guarding the crop. ವಾ: ಬೆಳೆ ತಿಂಬಕೆ ನವಿಲ್ ಗ ಬಂದವೆ, ಹಾಂಗೆ ಗದ್ದೆ ಪಾರ ಕುದ್ದದ್.

ಗದ್ದೆಸರ್ಗ /*gaddɛsarga*/ ನಾ. ಗದ್ದೆಯಲ್ಲಿನ ಮೀನು. fish found in the waters of a paddy field. ವಾ: ಗದ್ದೆಸರ್ಗ ಗದ್ದೆಲಿ ಸಿಕ್ಕುದು.

ಗದ್ದೆಸ್ಂಡ್ /*gaddɛsiṇḍɨ*/ ನಾ. ಗದ್ದೆಯಲ್ಲಿ ದೊರೆಯುವ ಚಿಕ್ಕ ಏಡಿ. crabs found in a paddy field. ವಾ: ಗದ್ದೆಸ್ಂಡ್‌ನ ಹಿಡ್‌ಕಂಡ್ ಬರ್‌ನೊ.

ಗದ್ರ್ಸ್ /*gadirisi*/ ನಾ. 1. ಗದರಿಸು, 2. ಜೋರುಮಾಡು, 3. ಗರ್ಜಿಸು, 4. ಬೆದರಿಸು. 1. to reprimand someone, 2. to shout at someone, 3. to roar, 4. to scare. ವಾ: ಅವು ನಂಗೆ ಗದ್ರ್ ಸಿದೊ ನಾಯಿಗೆ ಗದ್ರ್ಸ್. ಪ: ಗದ್ರ್ ಸಿದೊ

ಗನ್ಕೆ ಸೊಪ್ಪು /*gankɛ soppu*/ ನಾ. ಔಷಧಿ ಯುಕ್ತ ಸೊಪ್ಪು. a herbal plant. ವಾ: ಗನ್ಕೆ ಸೊಪ್ಪುನ ಪಲ್ಯ ಮಾಡಕ್.

ಗನ್ನೆ /*gannɛ*/ ನಾ. 1. ಗಣನೆ, 2. ಲಕ್ಷ್ಯ, 3. ಎಣಿಕೆ. 1. to consider, 2. to focus, 3. to count. ವಾ: ನಾ ಮಾಡೋ ಕೆಲ್‌ಸ ಅವ್‌ಕೆ ಗನ್ನೆ ಇಲ್ಲೆ. **ಗನ್ನೆ ಮಾಡ್ದುಲೆ** /*gannɛ ma:ḍdulɛ*/ 1. ಲೆಕ್ಕಕ್ಕೆ ತೆಗೆದುಕೊಳ್ಳದಿರುವುದು, 2. ಗಣನೆಗೆ ತೆಗೆದುಕೊಳ್ಳದಿರುವುದು. 1. not to count, 2. not to take into consideration. ವಾ: ಸಣ್ಣಪುಟ್ಟ ಬೇನೆಗೆಲ್ಲ ನಾ ಗನ್ನೆ ಮಾಡ್‌ದುಲೆ.

ಗಪ್‌ಚಿಪ್ /*gapicipi*/ ನಾವಿ. ಮೌನ. silence. ವಾ: ಜೋರ್ ಮಾಡ್ದಕೆ ಮಕ್ಕೆಲ್ಲ ಗಪ್‌ಚಿಪ್ ಆದೊ.

ಗಬಗಬ /*gabagaba*/ ಅ. ವೇಗವಾಗಿ ತಿನ್ನು. to eat quickly. ವಾ: ಬಿಸಿ ಇದ್ರು ಗಬಗಬತ ತೀತ್.

ಗಬ್ಬ /*gabba*/ ನಾ. 1. ಗರ್ಭ, 2. ಪ್ರಾಣಿಗಳ ಗರ್ಭ. 1. womb, 2. womb of animals. **ಬಾಗೆ ಮರ ಬಂಗಾರ, ಸೀಗೆ ಮರ ಸಿಂಗಾರ, ಗಬ್ಬದ ಮರ ಗಂಡ್(ಗಾ).** ವಾ: ಗಬ್ಬದ ಹಸ್ ಕೊಟಗೆಗೆ ಬಾತ್‌ಲೆ.

ಗಬ್ಬಡ್ಕ /*gabbaḍka*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಗಬ್ಬಲ ಮರ /*gabbala mara*/ ನಾ. 1. ಔಷಧಿ ಮರ, 2. ಗಬ್ಬಲ ಮರ, 3. ಒಂದು ಕಾಡು ಮರ. 4. ದಡ್ಡಲ್ ಮರ. 1. a tree used in preparing herbal medicine, 2. wild guava, Ceylon oak, patana oak 3. a forest tree, 4. wild guava, Ceylon oak, patana oak. ವಾ: ಗಬ್ಬಲ ಮರದ ಬತ್ತಿಂದ (ತಿರಿ) ತಿರಿತೋಕ್ ಸಿಡ್‌ಸ್‌ತ್ತಿದ್ದೊ. ಪ: ದಡ್ಡಲ್‌ಮರ(ತು)

ಗಬ್ಬಲಡ್ಕ[1] /*gabbalaḍka*/ ನಾ. ಸ್ಥಳನಾಮ. Gabbaladka, a place.

ಗಬ್ಬಲಡ್ಕ[2] /*gabbalaḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಜಾಲ್ಸೂರು ಗ್ರಾಮದ ಜಾಗ. a locality in Jalsuru village in Sullia Taluk of Dakshina Kannada District.

ಗಬ್ಬಲ್ ಕೆತ್ತೆ /*gabbali kettɛ*/ ನಾ. ಮಗುವನ್ನು ಸ್ನಾನ ಮಾಡಿಸುವಾಗ ನೀರಿಗೆ ಹಾಕುವ ಮರದ ಕೆತ್ತೆ. a chip of wood put in the tub of water while bathing a child. ವಾ: ಗಬ್ಬಲ್ ಕೆತ್ತೆನ ನೀರಿಗೆ ಹಾಕಿ ಕೂಸುನ ಮೀಸುದು.

ಗಬ್ಬಲ್ಕಜೆ /*gabbalakajɛ*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಆಲೆಟ್ಟಿ ಗ್ರಾಮದ ಜಾಗ. 1. family, 2. lineage, 3. a locality in Aletti village in Sullia Taluk of Dakshina Kannada District.

ಗಬ್ಬಿಲ /*gabbila*/ ನಾ. ತೊಗಲು ಬಾವಲಿ. bat, a mammal. ವಾ: ಗಬ್ಬಿಲಗ ಹಗ್‌ಲ್ ಮರಲಿ ಪಾಳ್ ಗುಡಿ ಕಲ್ಲ್‌ಲಿ ನೇತಾಡ್‌ದು, ರಾತ್ರೆ ಹಾರಾಡ್‌ದು.

ಗಬ್ಬಿನಾತ /*gabbina:ta*/ ನಾ. 1. ಮುಚ್ಚಿದ ಮೂಗನ್ನು ಬಿಡಲಾರದಷ್ಟು ವಾಸನೆ, 2. ಕೆಟ್ಟವಾಸನೆ, 3. ಹೊಲಸು, 4. ಸೊಕ್ಕು. 1. stench, 2. bad smell, 3. filth. 4. scornfulness. ವಾ: ಕೋಳಿ ಗೊಬ್ಬರ ಬಾರಿ ಗಬ್ಬಿನಾತ ಬಾದು.

ಗಮಗಮ /*gamagama*/ ಅ. 1. ಪರಿಮಳ, 2. ಅಡುಗೆ ಮನೆಯಿಂದ ಬರುವ ಹಿತಕರ ಪರಿಮಳ, 3. ತಿಂಡಿ ತಯಾರಿಸುವಾಗ ಬರುವ ಪರಿಮಳ. 1. fragrance, 2. aroma from the kitchen, 3. odour/smell of food being cooked. ವಾ: ತಿಂಡಿ ಹೊರ್‌ದದ್ ಗಮಗಮ ಬಂದದೆ.

ಗಮನ[1] /*gamana*/ ನಾವಿ. 1. ಅಡುಗೆಯ ಸುವಾಸನೆ, 2. ಪರಿಮಳ. 1. aroma of food, 2. fragrance. ವಾ: ಅಡ್‌ಗೆ ಮನೆಂದ ಬಾರಿ ಒಳ್ಳ ಗಮನ ಬಂದದೆ, ಮಲ್ಲಿಗೆ ಹೂನ ಗಮನ ಅಸ್ಟ್ ದೂರಕೆ ಬಂದದೆ.

ಗಮನ[2] /*gamana*/ ನಾ. 1. ಮನಸ್ಸು ಕೇಂದ್ರೀಕರಿಸು, 2. ಎಚ್ಚರ ವಹಿಸು. 1. to concentrate, 2. to be cautious. ವಾ: ಗಮನ ಇಟ್ಟ್ ನಾ ಹೇಳ್ದ ಪಾಟ ಕೇಳೊಕು. ಪ: ಗಮನಿಸೊಕು – ಗಮನಿಸಬೇಕು

ಗಮಲ್ /*gamali*/ ನಾ. 1. ಪರಿಮಳ, 2. ಸುವಾಸನೆ. 1. aroma 2. fragrance. ವಾ: ಸೂಜಿ ಮಲ್ಲಿಗೆನ ಗಮಲ್ ಎಸ್ಟ್ ದೂರ ಬಂದದೆ ಅಲಾ.

ಗಮಾರ /*gama:ra*/ ನಾ. 1. ಹಳ್ಳಿಯವ, 2. ದಡ್ಡ, 3. ಅನಾಗರಿಕ. 1. a villager, 2. a stupid, 3. an uncivilized. ವಾ: ಹಳ್ಳಿ ಗಮಾರನಂಗೆ ಉಟ್ಟು.

ಗಮ್‌ಜಾಲ್ /*gamija:li*/ ನಾ. 1. ಕೆಲಸ ಇಲ್ಲದೆ ಮೋಜು ಮಾಡುವುದು, 2. ಸದಾ ಮೋಜು ಮಾಡುತ್ತಾ ಕಾಲ ಕಳೆಯುವುದು. 1. idling, 2. loafing. ವಾ: ಗಮ್‌ಜಾಲ್ ಮಾಡಿಕಂಡ್ ಕಾಲ ಕಳ್ದದೆ.

ಗಮ್ಮ /*gamma*/ ನಾವಿ. ಒಮ್ಮಿಂದೊಮ್ಮೆಲೆ ಬರುವ ಸುವಾಸನೆ. appearance of a smell all of a sudden. ವಾ: ಎಲ್ಲಿಂದ ಹೀಂಗೆ ಗಮ್ಮ ಬಾದು.

ಗಮ್ಮತ್[1] /*gammati*/ ನಾ. 1. ಔತಣಕೂಟ, 2. ಸಮ್ಮಾನ, 3. ಭರ್ಜರಿ ಭೋಜನ, 4. ಗದ್ದಳ. 1. a banquet, 2. honour, 3. a feast. ವಾ: ನಿನ್ನೆ ನಿಮ್ಮಲ್ಲಿ ಎಂತ ಗಮ್ಮತ್ತ್.

ಗಮ್ಮತ್ತ್[2] /*gamasti*/ ನಾ. 1. ಗಮ್ಮತ್ತು, 2. ಮೋಜು,

ಮಜಾ, 3. ತಮಾಷೆ, 4. ಸಡಗರ, 5. ಸಂಭ್ರಮ, 6. ಗೌಜು, 7. ಆಡಂಬರ, 8. ವೈಭವ, 9. ಸಮೃದ್ಧಿ. 1. merriment, 2. amusement, 3. gaiety, 4. pleasure, 5. excitement, 6. happy bustling, 7. pomp, 8. glitter;grandeur, 9. prosperity. ವಾ: ಆ ಮೊದುವೆಲಿ ಬಾರಿ ಗಮ್ಮತ್ತ್ ಇತ್ತ್.

ಗಮ್ಮಸ್ತು /*gammastu*/ ನಾ. 1. ಗಮ್ಮತ್ತು, 2. ಮೋಜು. 1. merriment, 2. enjoyment. **ಗಮ್ಮಸ್ತ್ ಮಾಡ್ದು** /*gammastɨ ma:ḍdu*/ 1. ಮೋಜು ಮಾಡುವುದು, 2. ಗಮ್ಮತ್ತು ಮಾಡುವುದು, 3. ಸಡಗರದಿಂದ ಮಾಡುವುದು, 4. ವೈಭವೋಪೇತವಾಗಿ ನೆರವೇರಿಸುವುದು. 1. merriment, 2. to enjoy, 3. fervour, 4. to carry out something with pomp and show. ವಾ: ಗಮ್ಮಸ್ತ್ ಮಾಡೊಮೊ. **ಗಮ್ಮೊಸ್ತ್‌ನ ಉಂಬೊದು** /*gammostɨna umbodu*/ 1. ವಿಶೇಷವಾದ ಊಟ, 2. ಪುಷ್ಕಲವಾದ ಭೋಜನ. 1. a sumptuous meal, 2. a luxurious feast. ವಾ: ಕೋಳಿ ಗೈಪುಲಿ ಗಮ್ಮೊಸ್ತ್ ಉಂಡೊಗಡ.

ಗಯ /*gaya*/ ನಾ. ಹೊಳೆಗಳಲ್ಲಿ ಆಳವಾದ ವಿಶಾಲವಾದ ನೀರಿನ ಗುಂಡಿ. the deepest part of a river. ವಾ: ಹಳ್ಳಕ್ಕೆ ಇಳಿಕನ ನೋಡಿಕಣೊಕು, ಅಲ್ಲಲ್ಲಿ ಗಯಗ ಇದ್ದದೆ. ಪ: ಗಯದಕ್ಕಲೆ – ಗಯದಬಳಿ

ಗರ /*gara*/ ನಾ. 1. ಅಪಸ್ಮಾರ, 2. ಮೂರ್ಚೆ ರೋಗ. 1. fits, 2. seizures. ವಾ: ಗರ ಒಂದ್ ತರದ ಕಾಯ್‌ಲ.

ಗರಗರ /*garagara*/ ಅ. 1. ಗರಗಸದ ಸದ್ದು, 2. ಸಾಯುವ ಸಂದರ್ಭದಲ್ಲಿ ಗಂಟಲಿಂದ ಬರುವ ಸ್ವರ. onomatopoeic expression for the sound produced by the saw while cutting a tree, 2. the sound produced by the dry throat at the time of death. ವಾ: ಮರ ಕೊಯ್ಯಕನ ಗರಗರ ಸದ್ದ್ ಕೇಳ್ದೆ.

ಗರಡಿಮನೆ /*garaḍi manɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಗರಡಿಬೈಲು /*garaḍibailu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಪಂಬೆತ್ತಾಡಿ ಗ್ರಾಮದ ಜಾಗ. a locality in Pambettadi village in Sullia Taluk of Dakshina Kannada District.

ಗರಿ /*gari*/ ನಾ. 1. ಗರಿ, 2. ಹಕ್ಕಿಯ ಪುಕ್ಕದ ಟೊಳ್ಳು ಕಾಂಡ, 3. ರೆಕ್ಕೆ, 4. ಹಕ್ಕಿಗಳಲ್ಲಿ ಕಂಡುಬರುವ ವಿಶೇಷ ನಿರ್ಜೀವ ರಚನೆ. 1. a feather, 2. the empty stem of a feather, 3. wings of bird, 4. soft, light parts of bird on the skin of birds -feather. ವಾ: ಹಿಂದೆಲ್ಲ ಕೋಳಿ ಗರಿನ ಕೆಮಿಗೆ ಹಾಕ್‌ತಿದ್ದೊ.

ಗರಿಕೆ /*gɨrikɛ*/ ನಾ. 1. ಗರಿಕೆ, 2. ದೂರ್ವೆ, 3. ಒಂದು ಬಗೆಯ ಹುಲ್ಲು. Bermuda Grass, Bahama Grass, Devil's Grass, Couch Grass, Wire Grass, Indian Doaba variety of grass. ವಾ: ಗರಿಕೆ ರಸದೊಟ್ಟಿಗೆ ಕಾಯೆಣ್ಣೆ ಹಾಕಿ ತಲೆಗೆ ಹಾಕಿಕೆ ಎಣ್ಣೆ ಕಾಸ್ತಿದ್ದೊ.

ಗರುಗ /*garuga*/ ನಾ. 1. ಭೃಂಗರಾಜ ಗಿಡ, 2. ಔಷಧೀಯ ಸಸ್ಯ. 1. false daisy, 2. a medicinal plant. ವಾ: ಕೂದೊಲು ಕಪ್ಪಾಕೆ ತೆಂಗ್ನೆಣ್ಣೆ ಒಟ್ಟಿಗೆ ಗರುಗ ರಸನ ಕಾಸಿ ಕೂದೊಲಿಗೆ ಹಾಕೊಕು.

ಗರುಗುಂಜ /*garugunja*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಗರುಡ /*garuḍa*/ ನಾ. 1. ಗರುಡ, 2. ಹದ್ದಿನ ಜಾತಿಗೆ ಸೇರಿದ ಒಂದು ಪಕ್ಷಿ, 3. ವಿಷ್ಣುವಿನ ವಾಹನ. 1. an eagle (a kite), 2. a hawk belongs to the family of eagle, 3. vehicle of lord Vishnu. ವಾ: ಗರುಡ ಆಕಸಲಿ ಬಾರಿ ಎತ್ತರಲಿ ಹಾರ್‌ದೆ.

ಗರ್ಕೆಹುಲ್ಲ್ /*garkɛ hullɨ*/ ನಾ. 1. ಗರಿಕೆ ಹುಲ್ಲು, 2. ಔಷಧೀಯ ಗುಣವುಳ್ಳ ಹುಲ್ಲು, 3. ಪೂಜೆಗಳಲ್ಲಿ ಬಳಸುತ್ತಾರೆ. 1. Bermuda Grass, Bahama Grass, Devil's Grass, Couch Grass, Wire Grass, Indian Doaba variety of grass, 2. grass with medicinal properties, 3. grass used in worshipping gods. ವಾ: ಗರ್ಕೆ ಹುಲ್ಲ್‌ದ್ ಚಾಯ ಮಾಡಿ ಕುಡ್ಕಕ್.

ಗರ್ಗ /*garga*/ ನಾ. 1. ತಲೆಗೆ ಹಾಕಲು ಎಣ್ಣೆಯಾಗಿ ಬಳಸುವುದು, 2. ಗರುಗ, 3. ಭೃಂಗರಾಜ. 1. used as hair oil, 2. plant-Eclipta prostrata (false daisy), 3. false daisy. ವಾ: ಗರ್ಗದ ಎಣ್ಣೆನ ಹಾಕಿ ನೋಡಕಾಯ್ತ್. ಪ: ಗರ್ಗದ ದೈ. **ಗರ್ಗದ ಸೊಪ್ಪು** /*gargada soppu*/ 1. ಗರುಗ, 2. ಭೃಂಗರಾಜದ ಎಲೆ.

false daisy (plant Eclipta prostrata), 2. leaf of false daisy plant. ವಾ: ಗರ್ಗದ ಸೊಪ್ಪುನ ತಲೆಗೆ ಹಸಿಯಾಗಿ ಅರ್‌ದ್ ಹಾಕಕ್.

ಗರ್ಗಸ /*gargasa*/ ನಾ. 1. ಗರಗಸ, 2. ಮರ ಕೊಯ್ಯುವ ಸಾಧನ. 1. a saw, 2. a tool used with sharp long blades, used in cutting trees. ವಾ: ಗರ್ಗಸಲಿ ಮರ ಕೊಯ್ಯದು. ಪ: ಗರ್ಗಾಸ್ /*garga:si*/ ವಾ: ಗರ್ಗಾಸ್‌ಗೆ ಅಡ್ಡಮುರಿ ಬಾಳ್‌ತ ಸನ ಹೇಳಿವೆ.

ಗರ್ಗಸೆ ಬೊಳ್ಳಿ /*gargasɛ boḷḷi*/ ನಾ. 1. ಗರಗಸ ಬಳ್ಳಿ, 2. ಸೋಂಕಿಗೆ ಬೈನೆ ಬೇರು, ಕರ್ಮಜೆ ಬೇರು ಹಾಗೂ ಗರಗಸ ಬೇರನ್ನು ಅರೆದು ನಿಂಬೆರಸ ಜೊತೆ ಕುಡಿಯಬೇಕು. 1. a medicinal plant, 2. the paste of this medicinal plant along with others is used with lemon juice to cure infections. ವಾ: ಗರ್ಗಸೆ ಬೊಳ್ಳಿನ ಹುಡ್‌ಕಿಕಂಡ್ ಬಂದೆ.

ಗರ್‌ಡಪತ್ತಲ /*gariḍapattala*/ ನಾ. 1. ಗರುಡಪಾತಾಳ, 2. ಸರ್ಪಾರಿ ಗಿಡ, 3. ಮುಂಗುಸೀಗಿಡ, 4. ಒಂದು ಔಷಧೀಯ ಸಸ್ಯ, ಇದರ ಬೇರು ಸರ್ಪದ ವಿಷ, ನಂಜು ಹುಣ್ಣು, ಬಾಣಂತಿಯ ನಂಜು, ಕುಷ್ಠ, ಹುಚ್ಚು, ಹೊಟ್ಟೆನೋವು ಮೊದಲಾದುವುಗಳಿಗೆ ಔಷಧವಾಗಿ ಉಪಯುಕ್ತ. 1. A medicinal herb said to be an antidote for snake bites, 2. Indian snake root, 3. Mongoose plant, 4. Ophiorrhiza mungos (Rubiaceae). Root from the plat is used to cure poisonous bites, leprosy, mental disorders, stomach pain, etc. ವಾ: ಗರ್‌ಡಪತ್ತಲ ದೈನ ಮೊದ್ದಿಗೆ ಬಳ್‌ಸುವೆ.

ಗರ್ತಿ /*garti*/ ನಾ. 1. ಗರತಿ, 2. ಪತಿವ್ರತೆ, 3. ಗೃಹಿಣಿ. 1. a virtuous woman, 2. a devoted wife, 3. a housewife. ವಾ: ಪುರಾಣದ ಪ್ರಕಾರ ದ್ರೌಪದಿ, ಅಹಲ್ಯ, ಸೀತೆ, ತಾರ, ಮಂಡೋದರಿತ ಐದ್ ಜೆನ ಗರ್ತಿಗ ಇದ್ದೊ.

ಗರ್ದ್ ಹೋತ್ /*gardi ho:ti*/ ನಾ. 1. ಅತಿಯಾದ ಮಳೆ, ಅತಿಯಾದ ಬಿಸಿಲಿನಿಂದ ಗಿಡ, ಮರದ ಹೂ, ಕಾಯಿ ಹಣ್ಣುಗಳು ಉದುರುವುದು, 2. ಗಿಡ ಬೋಳಾಗುವುದು. 1. falling of flowers, fruit from the trees due to heavy, incessant rain, 2. leaves falling off from a plant. ವಾ: ಈ ಜೋರು ಮಳೆಗೆ ದೈಗೆಲ್ಲ ಗರ್ದ್ ಹೋದೊ.

ಗರ್ನಾಲ್[1] /*garna:li*/ ನಾ. 1. ಸಾಮಾನ್ಯವಾಗಿ ಉತ್ಸವಾದಿಗಳಲ್ಲಿ ಬಳಸುವ ದೊಡ್ಡ ಶಬ್ದ ಮಾಡುವ ಸಿಡಿಮದ್ದು, 2. ಒಂದು ಬಗೆಯ ಸ್ಫೋಟಕ, 3. ಗರ್ನಾಲು. 1. a variety of explosives used in festivals as firework, 2. fireworks. ವಾ: ಹುತ್ತೆರಿಲಿ ಕದ್‌ರ್ ಕೊಯ್ಯಕನ ಗರ್ನಾಲ್ ಹೊಡ್‌ಸಿವೆ. ಪ: ಗರ್ನಲ್ ಸದ್ದ್. **ಗರ್ನಾಲ್ ಬೇಂಡ್** /*garna:li be:ṇḍi*/ ಮದುವೆಯ ಬ್ಯಾಂಡು ಬರುವಾಗ ಸಿಡಿಮದ್ದಿನ ಪಟಾಕಿ ಸಿಡಿಸುವುದು. bursting crackers when the wedding band arrives. ವಾ: ಗರ್ನಾಲ್ ಬೇಂಡ್ ಹೊಡ್‌ಸಿರೆ ನೆಲ ಅದ್‌ರ್‌ದು. **ಗರ್ನಾಲ್ ಸಾಯಿಬ** /*garna:li sa:yiba*/ ಸಿಡಿಮದ್ದು ತಯಾರಿಸುವವನು. the one who manufactures firecrackers, small explosives.

ಗರ್ನಾಲ್[2] /*garna:li*/ ಕ್ರಿವಿ. ಶಬ್ದದೊಂದಿಗೆ ಹೊರ ಬರುವ ಹೂಸು. farting (to break wind), accompanied by sound. ವಾ: ಅಂವ ಗರ್ನಾಲ್ ಬುಟ್ಟತ್.

ಗರ್ಬ /*garba*/ ನಾ. 1. ಗರ್ಭ, 2. ಬಸಿರು. 1. womb, 2. pregnancy. ವಾ: ಆ ಗುಡ್‌ಗಿಗೆ ಗರ್ಬ ನಡ್‌ಗಿ ಹೋತು. **ಗರ್ಬಕೋಸ** /*garbako:sa*/ 1. ಗರ್ಭಾಶಯ, 2. ಹೆಣ್ಣು ಸ್ತನಿಗಳಲ್ಲಿ ಭ್ರೂಣ, 3. ಹೊಟ್ಟೆಯೊಳಗಿರುವ ಗರ್ಭ ಧರಿಸುವ ಚೀಲ. 1. the uterus, 2. uterus of mammals, 3. the uterus. ವಾ: ಗರ್ಬಕೋಸನ ತೆಗ್‌ಸಿದ್. **ಗರ್ಬಿಣಿ** /*garbiṇi*/ 1. ಗರ್ಭಿಣಿ, 2. ಬಸುರಿ, 3. ಗರ್ಭ ಧರಿಸಿದಾಕೆ. 1 a pregnant woman, 2. a woman who is bearing a child, 3. a woman who is expecting a child. ವಾ: ಗರ್ಬಿಣಿ ಹೆಂಗ್‌ಸ್ ನಡ್‌ಕಂಡೆ ಬಾತ್.

ಗರ್ವ /*garva*/ ನಾ. 1. ಗರ್ವ, 2. ಅಹಂಕಾರ. 1. arrogance, 2. excessive pride in oneself. ವಾ: ಯಾರೂ ಸನ ಗರ್ವ ಪಡಿಕಾದ್. **ಗರ್ವೊ** /*garvɔ*/ 1. ಸೊಕ್ಕು, 2. ಅಹಂ, 3. ಹೆಮ್ಮೆ, 4. ಗೊಂದಲ, 5. ಕೋಲಾಹಲ. 1. arrogance, 2. ego, 3. pride, 4. confusion, 4. pandamonium. **ಅಲ್ಪ ವಿದ್ಯೆ**

ಕಲ್ತವಂಗೆ ಗರ್ವೊ ಜಾಸ್ತಿ(ಗಾ). ವಾ: ಅವಳ ಗರ್ವೊ ತಗ್ಗಿತ್.

ಗಲಾಟೆ /*gala:ṭɛ*/ ನಾ. 1. ಗದ್ದಲ, 2. ಗಲಭೆ, 3. ಗೊಂದಲ, 4. ಕೋಲಾಹಲ. 1. noise, 2. disturbance, 3. confusion, 4. a tumult. ವಾ: ಅಲ್ಲಿ ಬಾರಿ ಗಲಾಟೆ ನಡೀತುಟ್ಟು.

ಗಲಾಸ್ /*gala:si*/ ನಾ. ಎಪ. 1. ಲೋಟ, 2. ನೀರು, ಚಹ, ಕಾಫಿ ಕುಡಿಯುವ ಲೋಟ. 1. a cup, 2. a cup to drink tea, coffee, water, etc. ವಾ: ಕುಡೆಕೆ ಕುಪ್ಪಿ ಗಲಾಸ್‌ಲೆ ನೀರ್ ಬೇಕ್.

ಗಲಿಬಿಲಿ /*galibili*/ ನಾ. 1. ಗೊಂದಲ, 2. ಅವ್ಯವಸ್ಥೆ, 3. ಕಕ್ಕಾಬಿಕ್ಕಿಯಾಗು. 1. confusion, 2. disorganised, 3. perplexity. ವಾ: ನಾವು ಗಲಿಬಿಲಿಲಿ ಹೊರ್‌ಟದ್.

ಗಲೀಜ್ /*gali:ji*/ ನಾವಿ. 1. ಸ್ವಚ್ಛತೆ ಇಲ್ಲದ, 2. ಕೊಳಕು ತುಂಬಿದ. 1. unclean, 2. filthy. ವಾ: ಗಲ್ಲಿ ವಳೆಗೆ ಹೋಕೆ ಬೊತ್ತ್ ಬಾರಿ ಗಲೀಜ್. **ಗಲೀಜಿ** /*gali:ji*/ 1. ಗಲೀಜು, 2. ಕೊಳಕು. 1. dirt, 2. filth. ವಾ: ಅವು ಗಲೀಜಿ ಅರ್ವೆ ಹಾಕಂಡೊಳೊ.

ಗವಿ /*gavi*/ ನಾ. 1. ಗುಹೆ, 2. ಗವಿ. 1. a cave, 2. a cavern. ವಾ: ನಾವು ಸಿವ ದೇಸ್ತಾನದ ಗವಿಯೊಳಗೆ ಹುಕ್ಕ್ ಬಂದೊ.

ಗವುಡ /*gavuḍa*/ ನಾ. 1. ಗ್ರಾಮದ ಮುಖ್ಯಸ್ಥ, 2. ಗೌಡ. 1. head of the village, 2. a Gowda. ವಾ: ಊರ ಗವುಡ ಬರ್‌ತೊಳ.

ಗಸಗಸೆ /*gasagasɛ*/ ನಾ. 1. ಔಷಧೀಯ ಗುಣಗಳುಳ್ಳ ಸಸ್ಯ, (ರಕ್‌ಉಗ್ಗಪ್ಪಿಸಾರ, ಸನ್ನಿರೋಗ, ನಿದ್ರಾಭಂಗ, ವಾತ ಮೊದಲಾದುವುಗಳಿಗೆ ಔಷಧ), 2. ಅಫೀಮು, 3. ಗಸಗಸೆ. 1. opium poppy, Papaver somniferum (Papaveraceae); a plant of many medicinal qualities. (Used to cure dysentery, typhoid, sleeplessness, rheumatism etc), 2. opium, 3. poppy seeds. ವಾ: ಗಸಗಸೆ ಬೀಜ ತಂಪಾಗಿದ್ದ್ ಬಾಯಿ ಹುಣ್ಣಿಗೆ ಬಾರಿ ಒಳ್ಳ ಮೊದ್ದ್.

ಗಸಿ[1] /*gasi*/ ನಾ. ಅತ್ತ ನೀರೂ ಅಲ್ಲದೆ ಇತ್ತ ಮಂದ ಆಗಿರುವ ಸಾಮಾನ್ಯವಾಗಿ ತೆಂಗಿನ ಕಾಯಿ ಬೆರೆಸಿ ತಯಾರಿಸಿದ ಪದಾರ್ಥ. a curry-a thick liquid dish usually made of grated coconut. ವಾ: ಜೀಗುಜೆ ಗೈಪು ಮಾಡ್ಡಕಿಂತ ಗಸಿ ಮಾಡಿರೆ ಲಾಯ್ಕ್ ಇದ್ದದೆ.

ಗಸಿ[2] /*gasi*/ ನಾ. 1. ಮೋಸ, ವಂಚನೆ, 2. ತೊಂದರೆ, ಕುತ್ತು, 3. ನಷ್ಟ. 1. deceit, 2. trouble, 3. loss. ವಾ: ಅಂವಂಗೆ ಒಳ್ಳೊ ಗಸಿಯಾತ್.

ಗಸ್‌ನಿ[1] /*gasini*/ ನಾ. 1. ತೊಂದರೆ, 2. ರಗಳೆ, 3. ಕೊಳಕು. 1. difficulty, 2. problem, 3. filth.

ಗಸ್‌ನಿ[2] /*gasini*/ ನಾವಿ. 1. ಇಕ್ಕಟ್ಟಾದ, 2. ನೀರುಕೆಸರುಗಳಿಂದ ಕೂಡಿದ. 1. narrow, 2. muddy.

ಗಳಲೆ /*gaḷalɛ*/ ನಾ. ದುಗ್ಧಗ್ರಂಥಿ. mammary glands. ವಾ: ಕಾಲ್‌ಲಿ ಗಾಯ ಆದಕೆ ತೊಡೆ ಸೆರೆಲಿ ಗಳಲೆ ಎದ್ದುಟು.

ಗಳಿಗೆ /*gaḷigɛ*/ ನಾ. 1. ಒಂದು ಕ್ಷಣ, 2. ಪಂಚಾಂಗದ ಎರಡೂವರೆ ಗಳಿಗೆ ಒಂದು ಗಂಟೆ. 1. a unit of time, 2. one unit of time is equivalent to 24 minutes – 24×2. 5=60 minutes. ವಾ: ಇಂದ್ ಅವುಳು ಒಳ್ಳ ಗಳಿಗೆಲಿ ಎದ್ದತ್ಲೆ ಕಂಡದೆ. **ಗಳಿಗೆಗೊಂದ್** /*gaḷigegondi*/ ಕ್ಷಣಕ್ಕೊಂದು. capricious, instability. ವಾ: ಅಂವ ಗಳಿಗೆಗೊಂದ್ ಮಾತಾಡ್‌ದೆ. **ಗಳಿಗ್ಗೆಗೊಮ್ಮೆ** /*gaḷiggɛgommɛ*/ 1. ಕ್ಷಣಕ್ಕೊಂದು, 2. ಗಳಿಗೆಗೊಂದು, 3. ಆಗಾಗ. 1. every now and then, 2. capricious, 3. repeatedly / again and again. ವಾ: ಅವು ಗಳಿಗ್ಗೆಗೊಮ್ಮೆ ಬಂದ್ ನೋಡಿಕಂಡ್ ಹೋದವೆ.

ಗಳು /*gaḷu*/ ನಾ. 1. ಬಿದಿರು ಅಥವಾ ಮರದ ದಂಡಿನ ಫಕ್ಕಾಸು, 2. ದಂಡು. 1. a long beam of wood / staff of bamboo, 2. an oblong piece of timber. ವಾ: ಮನೆದ್ ಮಾಡ್‌ಗೆ ಗಳು ಕೋಸ್ತಾವೊಳೊ.

ಗಳೆ /*gaḷɛ*/ ನಾ. ಅಡಿಕೆ/ ತೆಂಗಿನಕಾಯಿ ಕೀಳಲು ಬಳಸುವ ಉದ್ದನೆಯ ಹಾಗೂ ತೆಳ್ಳಗಿನ ಕೊಕ್ಕೆ. hook attached to a long staff to pluck the areca nut or coconut. ವಾ: ಉದ್ದ ಗಳೆ ಇದ್ದಿದ್ದರೆ ಕಿತ್ತುಳಿ ಕೊಯ್ಯಕಾಯ್ತ್.

ಗಳೆಗತ್ತಿ /*gaḷɛgatti*/ ನಾ. 1. ಕುಳಕತ್ತಿ, 2. ಕತ್ತಿ ಕೊಕ್ಕೆ. 1. a sickle, 2. reaping-hook. ವಾ: ಗಳೆಗತ್ತಿನ ಎಲ್ಲಿಸಿದ?

ಗಳ್ಗೆ /*gaḷgɛ*/ ನಾ. 1. ಘಳಿಗೆ, 2. ಹೊತ್ತು. 1. a measure of time – twenty four minutes, 2. time. ವಾ: ಒಂದ್ ಗಳ್ಗೆ ಸುಮ್ಮನೆ ಕುದ್ರಿಕೆ ಬೊತ್ತ ಮಕ್ಕಳೆ?

ಗಳ್ಮಕ್ಕ /*gaḷmakka*/ ನಾ. ಗಂಡು ಮಕ್ಕಳು. boys, male children. ವಾ: ಗಳ್ಮಕ್ಕ ಆಡಿಕಣ್‌ಲಿ ಬುಡು.

ಗಳ್ಸ್ /*gaḷsɨ*/ ನಾ. 1. ಗಳಿಸು, 2. ಸಂಪಾದಿಸು, 3. ಆರ್ಜಿಸು. 1. to earn, 2. to procure, 3. to attain. **ಅನ್ಯಾಯಂದ ಗಳ್ಸಿದ್ ಒಳಿಯದ್, ನ್ಯಾಯಂದ ಗಳ್ಸಿದ್ ಅಳಿಯದ್(ಗಾ).** ವಾ: ಇಂವ ಮುಂದೆ ಬಾರಿ ದೊಡ್ಡ ಹೆಸ್‌ರ್ ಗಳ್ಸುದು. **ಗಳ್ಸಿತ್** /*gaḷsitɨ*/ 1. ಗಳಿಸು, 2. ಸಂಪಾದಿಸು. 1. to earn, 2. to acquire. ವಾ: ಬಜ್ಜ ಪಟ್ಟ್ ದುಡ್ಡು, ಹೆಸ್‌ರ್ ಗಳ್‌ಸಿತ್.

ಗಾಂಡ್‌ಮತ್ /*ga:ṇḍɨmatɨ*/ ನಾ. 1. ಅಹಂ, 2. ಗರ್ವ, 3. ಹಮ್ಮು, 4. ದೊಡ್ಡಸ್ಥಿಕೆ. 1. ego, 2. arrogance, 3. false pride, 4. having excessive pride (that one belongs to higher status). ವಾ: ಅವುಳು ಗಾಂಡ್‌ಮತ್‌ಲಿ ಸತ್ತದೆ, ಗಾಂಡ್‌ಮತ್ ಮೊನ್‌ಸಂಗೆ ಒಳ್ಳೆದಲ್ಲ. ಪ: ಗಾಂಡ್ ಮತ್ತ್

ಗಾಂದಾರಿಮೆಣ್ಸ್ /*ga:nda:ri mɛṇsɨ*/ ನಾ. ಆಕಾರದಲ್ಲಿ ಸಣ್ಣದಾಗಿದ್ದು ಬಹಳ ಖಾರವಿರುವ ಆರೋಗ್ಯಕ್ಕೆ ಉಪಯುಕ್ತವಾದ ಮೆಣಸು. bird's eye chilli, these have intense flavour. **ಗಾಂದಾರಿ ಮೆಣ್ಸ್‌ನ ಕಾರ ತಿಂದರೆ ತಿಳಿಯೊದು(ಗಾ).** ವಾ: ಗಾಂದಾರಿ ಮೆಣ್ಣ್‌ದ್ ವೈನ್ ಸನ ಮಾಡಿವೆ.

ಗಾಂದಿಗುಲಾಬಿ /*ga:ndigula:bi*/ ನಾ. 1. ಕಮ್ಯುನಿಸ್ಟ್, 2. ಲಾಂಟಾನಾ, 3. ಕಾಂಗ್ರೆಸ್, 4. ಒಂದು ಬಗೆಯ ಕಾಡು ಗಿಡ. 1. communitst plant, 2. Lantana camara, an invasive weed, 3. congress plant, 4. an invasive weed. ವಾ: ಗಾಂದಿಗುಲಾಬಿ ದೈ ಹೋದಲೆಲ್ಲ ಉಟ್ಟು.

ಗಾಚಾರ /*ga:ca:ra*/ ನಾ. 1. ಗ್ರಹಚಾರ, 2. ಅದೃಷ್ಟ, 3. ಹಣೆಬರಹ. 1. fate, 2. luck, 4. destiny. ವಾ: ಗಾಚಾರ ಕೆಟ್ರೆ ಹಗ್ಗನು ಹಾವಾದೆ.

ಗಾಟಿ¹ /*ga:ṭi*/ ನಾ. 1. ಬೆಟ್ಟ ಪ್ರದೇಶ, 2. ಕಡಿದಾದ ಪ್ರದೇಶ, 3. ಕಣಿವೆ ಬೆಟ್ಟಗಳ ನಡುವಣ ಇಕ್ಕಟ್ಟಿನ ದಾರಿ. 1. hilly region, 2. a narrow path between the valley and the mountain-a mountain pass. ವಾ: ಗಾಟಿ ಕಡೆ ಹೋಕನ ಬಾರಿ ಎಚ್ಚರ ಬೇಕ್.

ಗಾಟಿ² /*ga:ṭi*/ ನಾ. 1. ಚತುರ, 2. ಅನುಭವಿ, 3. ಕಿಲಾಡಿ,ನಂಬಲು ಸಾಧ್ಯವಾಗದ, 4. ಅತೀ ಬುದ್ಧಿವಂತ. 1. clever, 2. experienced, 3. impossible to believe, 4. too clever. ವಾ: ಗಾಟಿ ಹೈದಂಗ.

ಗಾಟಿ³ /*ga:ṭi*/ ನಾ. 1. ಜೋರುಮಾತಿನ ಜಗಳ ಮಾಡುವ ಹೆಣ್ಣು. a quarrelsome/an aggressive woman. ವಾ: ಅದ್ ಬಾರಿ ಗಾಟಿ ಹೆಂಗ್‌ಸ್.

ಗಾಟಿ⁴ /*ga:ṭi*/ ನಾ. ಬೈಗುಳ ಪದ. an expletive. ವಾ: ಆ ಗಾಟಿಯವರೊಟ್ಟ್‌ಗೆ ಯವಹಾರ ಬೇಡ.

ಗಾಟ್¹ /*ga:ṭɨ*/ ನಾ. 1. ಘಾಟು, 2. ಕಟುವಾಸನೆ, 3. ತೀಕ್ಷ್ಣವಾದ ವಾಸನೆ. 1. an unpleasant smell, 2. a pungent smell, 3. a strong smell. ವಾ: ಮೆಣ್ಸ್ ಹೊರ್‌ದ ಗಾಟ್ ಇನ್ನೂ ಹೋತ್‌ಲೆ.

ಗಾಟ್² /*ga:ṭɨ*/ ನಾ. 1. ಕಾರ, 2. ತೀಕ್ಷ್ಣತೆ, 3ಘಾಟು ವಾಸನೆ. 1. hot, 2. pungent, 3. pungent smell. ವಾ: ಮೆಣ್ಸ್ ಹೊರ್‌ದ ಗಾಟ್‌ಂದ ಮನೆವಳೆಗೆ ಕುದ್ರಿಕೆ ಬೊತ್.

ಗಾಡಿ /*ga:ḍi*/ ನಾ. 1. ಬಂಡಿ, 2. ಶಕಟ. 1. a carriage usually drawn by animals, 2. a carriage. ವಾ: ಈಗೆಲ್ಲ ಗಾಡಿಗ ನೋಡಿಕೆ ಸಿಕ್ಕುದೆ ಬಾರಿ ಅಪ್‌ರೂಪ. **ಗಾಡಿ ಹೊಡ್ಯಂವ** /*ga:ḍi hoḍyanva*/ ಎತ್ತಿನ ಗಾಡಿಯನ್ನು ಹೊಡೆಯುವವ. a carriage driver. ವಾ: ಗಾಡಿ ಹೊಡ್ಯಂವ ಕಾಂಬದುಲೆ. **ಗಾಡಿಗ** /*ga:ḍiga*/ 1. ವಾಹನಗಳು, 2. ಮನುಷ್ಯರನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಒಯ್ಯುವ ಸಾಧನ. 1. vehicles, 2. a transport vehicle. ವಾ: ಸಾಲಾಗಿ ಎಸ್ಟೊಂದ್ ಗಾಡಿಗ ಬಂದವೆ.

ಗಾಣ /*ga:ṇa*/ ನಾ. 1. ಕಬ್ಬು, ಎಳ್ಳು ಮುಂತಾದವುಗಳನ್ನು ಅರೆಯಲು ಸಾಧ್ಯವಾಗುವಂತೆ ಬೇರೆ ಬೇರೆ ರೀತಿಗಳಲ್ಲಿ ರೂಪುಗೊಂಡ ಕಬ್ಬಿಣದ ಅಥವಾ ಮರದ ಸಾಧನ, 2. ಎಣ್ಣೆಕಾಳು ಅರೆಯುವ ಯಂತ್ರ, 3. ಕಬ್ಬಿನ ಹಾಲು ತೆಗೆಯುವ ಸಾಧನ. 1.

a wooden or a metal press(mill) to grind sugarcane, sesame, etc, 2. an oil mill, 3. a sugarcane press. ವಾ: ಗಾಣಲಿ ಎಣ್ಣೆ ತೆಗೆಯೊದು. **ಗಾಣ ತಿರ್ಗುಸುದು** /*ga:ṇatirgusudu*/ ಜೋಡಿ ಎತ್ತುಗಳನ್ನು ಗಾಣಕ್ಕೆ ಹೂಡಿ ಎಳೆಯುವುದು, ಎತ್ತುಗಳನ್ನು ಹೂಡಲು ಅನುಕೂಲವಾಗುವಂತೆ ಜೋಡಿಸಿರುವ ಉದ್ದ ಕಂಬದ ಮೇಲೆ ಕೆಲವು ಸಲ ವ್ಯಕ್ತಿಯೊಬ್ಬ ಕುಳಿತು ಎತ್ತುಗಳು ನಿಲ್ಲದಂತೆ ನೋಡಿಕೊಳ್ಳುತ್ತಾ ಹಿಂದುಗಡೆಯಲ್ಲಿ ಸುತ್ತುತ್ತಾನೆ. extracting cold pressed oil in a wooden oil mill operated by a pair of bullocks. A load-beam is yoked to a pair of bullocks which move in a circular ambit rotating the pestle, pulverising and then crushing the oilseed. ವಾ: ಎಣ್ಣೆ ತೆಗೆಕೆ ಗಾಣತಿರ್ಗುಸುದು. ಪ: ಗಾಣ ತಿರ್ಗಿದಂಗೆ – ಗಾಣ ತಿರುಗಿದಂತೆ

ಗಾಣಿಂಜ /*ga:ṇiŋja*/ ನಾ. 1. ಗಾಣಿಗ, 2. ವನಸ್ಪತಿ ತೈಲ ತಯಾರು ಮಾಡುವವರು. 1. an oil presser, 2. the one who manufactures cooking oil. ವಾ: ಗಾಣಿಂಜ ಎಣ್ಣೆ ತೆಗೆದು.

ಗಾಣಿಗ /*ga:ṇiga*/ ನಾ. 1. ಗಾಣಿಗ, 2. ತೆಲ್ಲಿಗ, 3. ಗಾಣದಿಂದ ಎಣ್ಣೆಯನ್ನು ತೆಗೆಯುವವನು. 1. oil pressers, 2. oil mongers, 3. the one who extracts oil from seeds. ವಾ: ಗಾಣಿಗ ಗಾಣ ಬಳ್‌ಸಿ ಎಣ್ಣೆ ತೆಗೆದು. **ಗಾಣಿಂಗ** /*ga:ṇiŋga*/ ವಾ: ಗಾಣಿಂಗ ಗಾಣಂದ ಎಣ್ಣೆ ತೆಗ್ದ್ ಮಾರ್‌ದು. **ಗಾಣಿಜ್ಞ** /*ga:ṇiŋŋa*/ **ಗಾಣಿಜ್ಞ ಗಾಣಜ್‌ತಿ ಲಡಾಯಿ ಮಾಡ್ದಂಗೆ(ಗಾ).** ವಾ: ಗಾಣಿಜ್ಞನ ಮನೆ ಹಕ್ಕಲೆ.

ಗಾಣಿಗಿತ್ತಿ /*ga:ṇigitti*/ ನಾ. 1. ಗಾಣಿಗರ ಹೆಂಗಸು, 2. ಗಾಣಿಗನ ಹೆಂಡತಿ. 1. a woman from the family of oil pressers, 2. wife of an oil presser. **ಗಾಣಿಗಿತ್ತಿ ಅಯ್ಯೋ ತೇಳಿರೆ, ಕೂಸುನ ನೆತ್ತಿ ತಂಪಾದ್ಯಾ(ಗಾ).** ವಾ: ಗಾಣ್ಗಿತ್ತಿ ಕರಿತಿತ್. ಪ: ಗಾಣ್ಗಿತ್ತಿ

ಗಾತಿ /*ga:ti*/ ನಾ. 1. ಪೆಟ್ಟು, 2. ಘಾತ ವಿಶ್ವಾಸ ದ್ರೋಹ, 3. ವಂಚನೆ, 4. ಕ್ರೌರ್ಯ, 5. ಹಿಂಸೆ, 6. ಕೋಪ. 1. beating someone, 2. treachery, 3. betrayal, 4. violence. 5. cruelty. 6. anger. ವಾ: ಮೊನ್‌ಸ ಮನ್‌ಸ್‌ಗೆ ಗಾತಿ ಮಾಡಿಕಾಗದ್. **ಗಾತಿಗೆ ಹೇಳ್** /*ga:tige he:ḷi*/ ಗಂಭೀರವಾಗಿ ಹೇಳಿದ ಮಾತು. to say something with utmost earnestness. ವಾ: ಸುಮ್ಮನೆ ತಮಾಸೆಗೆ ಹೇಳ್ದಲ್ಲ, ಗಾತಿಗೆ ಹೇಳ್‌ದ್. **ಗಾತಿಗೆ ಹೇಳ್ದಲ್ಲ** /*ga:tige hɛ:ḷdalla*/ ಹಗುರವಾಗಿ ಹೇಳಿದ ಮಾತು. something uttered in a non-serious (half-hearted) way. ವಾ: ನಾ ನಿಂಗೆ ಗಾತಿಗೆ ಹೇಳ್ದಲ್ಲ.

ಗಾದೆ /*gɘ:dɛ*/ ನಾ. 1. ನಾಣ್ಣುಡಿ, 2. ಲೋಕೋಕ್ತಿ, 3. ಗಾದೆ. 1. a proverb, 2. aphorism, 3. an adage/ an axiom. **ಊಟಕೆ ಮುಂದೆ ಉಪ್ಪನಕಾಯಿ, ಮಾತ್‌ಗೆ ಮುಂದೆ ಗಾದೆ(ಗಾ).** ವಾ: ನಮ್ಮವ್ವಂಗೆ ಸುಮಾರ್ ಒಳ್ಳೊಳ್ಳ ಗಾದೆಗ ಗೊತ್ತುಟು.

ಗಾನದೆತ್ತ್ /*ga:nadɛtti*/ ನಾ. ಎಣ್ಣೆ ತೆಗೆಯಲು ಗಾಣಕ್ಕೆ ಹೂಡಿ ಎಳೆಯಲು ಬಳಸುವ ಜೋಡಿ ಎತ್ತುಗಳು. pair of bullocks used in oil mills. ವಾ: ಎಣ್ಣೆ ತೆಗೆಕನ ಗಾನದೆತ್ತ್ ನ ಬಳ್‌ಸುವೆ.

ಗಾನಿಗ /*ga:niga*/ ನಾ. 1. ಗಾಣಿಗ, 2. ತೆಲ್ಲಿಗ, 3. ಗಾಣದಿಂದ ಎಣ್ಣೆಯನ್ನು ತೆಗೆಯುವವನು. 1. oil pressers, 2. oil mongers, 3. the one who extracts oil from seeds. ವಾ: ಗಾನಿಗನ ಹುಡ್‌ಕಿಕಂಡ್ ಬಂದೊಳೊ.

ಗಾಬ್ರಿ /*ga:bri*/ ನಾವಿ. 1. ಗಾಬರಿ, 2. ಭಯ, 3. ಗೊಂದಲ. 1. fright, 2. fear, 3. confusion. ವಾ: ಗಾಬ್ರಿಲಿ ಓಡಿ ಬಂದದ್ಯಾಕೆ ಹಿಂಗೆ.

ಗಾಯ /*ga:ya*/ ನಾ. 1. ಗಾಯ, 2. ಆಯುಧ ಮೊದಲಾದವುಗಳ ಹೊಡೆತದಿಂದ ದೇಹದಲ್ಲುಂಟಾಗುವ ಪೆಟ್ಟು. 1. a wound, 2. a large wound caused by weapons. ವಾ: ಗಾಯ ಆಗಿ ರಕ್ತ ಹರಿತುಟ್ಟು. **ಗಾಯ ಬಾಡ್** /*ga:ya ba:ḍi*/ 1. ಗಾಯ ಒಣಗು, 2. ಗಾಯ ಮಾಗು. 1. dry wound, 2. scab. ವಾ: ಹಣೆದ್ ಗಾಯ ಬಾಡ್ತ್, ಮತ್ತೆ ಮತ್ತೆ ಪರ್‌ಂಡಿ ದೊಡ್ಡ ಗಾಯ ಆತ್.

ಗಾರಿಗೆ /*ga:rigɛ*/ ನಾ. 1. ಹಲಸಿನ ಹಣ್ಣಿನ ಮಿಶ್ರಣದಿಂದ ಮಾಡಿದ ಅಕ್ಕಿದೋಸೆ. a dosa made of jackfruit and rice. ವಾ: ಗಾರಿಗೆ ಹಿಟ್ಟ್ ಬಿಸಿ ಬಿಸಿ ತಿಂದಿಯನ?

ಗಾರೆ /*ga:rɛ*/ ನಾ. 1. ಸಿಮೆಂಟು, ಮರಳು ಮತ್ತು ನೀರು ಬೆರೆಸಿದ ಗಚ್ಚು, 2. ಸುಣ್ಣ ಮತ್ತು ಮರಳುಗಳ ಮಿಶ್ರಣ, 3. ಗಾರೆ ಕಲ್ಲು, ಇಟ್ಟಿಗೆ,ಮತ್ತು ಕಾಂಕ್ರೀಟಿನ ಕಟ್ಟಡ

ನಿರ್ಮಾಣ ಖಂಡಗಳನ್ನು ಬಂಧಿಸಲು, ಗೋಡೆಗಳಲ್ಲಿ ಅಲಂಕಾರಿಕ ಬಣ್ಣಗಳು ಅಥವಾ ವಿನ್ಯಾಸಗಳನ್ನು ಸೇರಿಸಲು ಬಳಸಲಾಗುವ ಪೇಸ್ಟ್. 1. a mortar made of cement, sand and water, 2. a mixture of limestone and sand, 3. a mortar used to bind the bricks and stones. ವಾ: ನಂಗೆ ಗಾರೆ ಕೆಲ್ಸ ಮಾಡಿಕೆ ಗೊತ್ತುಟು.

ಗಾರೆಕತ್ತಿ /*ga:rɛkatti*/ ನಾ. ಗಾರೆ ಕೆಲಸದಲ್ಲಿ ಬಳಸುವ ಸಲಕರಣೆ, 2. ಗಾರೆಕತ್ತಿ. 1. a hand tool with flat blade used while shaping a mortar, 2. a trowel. ವಾ: ಗಾರೆಕತ್ತಿಲಿ ಸಿಮೆಂಟ್ ಹಾಕುದು.

ಗಾರ್[1] /*ga:rɨ*/ ನಾ. 1. ಶುಷ್ಕ ಪ್ರದೇಶ, 2. ಆವೆಯಿಂದ ಒಣಗಿದ ಜಾಗ. 1. a parched land, 2. a place that is dried completely. ವಾ: ಬಿಸ್ಲ್ ಕಾದ್ ಈ ಮಣ್ಣ್ ನೆಲ ಗಾರ್‌ನಂಗಾವುಟು.

ಗಾರ್[2] /*ga:rɨ*/ ನಾ. 1. ಗಟ್ಟಿ, 2. ಒಣಗಿದ. 1. hard, 2. dried. ವಾ: ನೆಲ ಗಾರ್ ಆಗುಟು, ಅಗೆಕೆ ಆದುಲೆ.

ಗಾರ್ಯ /*ga:riya*/ ನಾ. ಹಲಸಿನ ಹಣ್ಣು ಮತ್ತು ಅಕ್ಕಿಯನ್ನು ರುಬ್ಬಿ ಮಾಡಿದ ಒಂದು ಬಗೆಯ ದೋಸೆ. a dosa made out of the dough prepared using jackfruit pods and rice. ವಾ: ಗಾರ್‌ಯತೇಳ್‌ದು ಒಂದ್ ಬಗೆನ ದೋಸೆ.

ಗಾಳ[1] /*ga:ḷa*/ ಕ್ರಿವಿ. 1. ಆಮಿಷ ತೋರಿಸು, 2. ಹಿಡಿತಕ್ಕೆ ತೆಗೆದುಕೊಳ್ಳು. 1. to lure, 2. taking control. **ಹೇಳ್ದು ಪುರಾಣ ಹಾಕುದು ಗಾಳ(ಗಾ).** ವಾ: ಅಂವ ಅದ್ಕೆ ಗಾಳ ಹಾಕಿತ್. **ಗಾಳ ಹಾಕುದ್** /*ga:ḷa ha:kudɨ*/ 1. ಉಪಾಯದಿಂದ ಹಿಡಿಯುವುದು, 2. ಮೀನು ಹಿಡಿಯುವ ವಿಧಾನ. 1. catching something cleverly, 2. method of catching a fish. ವಾ: ಮೀನ್ ಹಿಡೆಕೆ ಗಾಳ ಹಾಕುದ್.

ಗಾಳ[2] /*ga:ḷa*/ ನಾ. ಮೀನು ಹಿಡಿವ ಸಾಧನ. 1. a hook, 2. an equipment used in fishing. ವಾ: ಮೀನ್ ಹಿಡ್ಯಕೆ ಗಾಳ ಹಾಕೊಕು.

ಗಾಳಿ /*ga:ḷi*/ ನಾ. 1. ಎಲರು, 2. ದೆವ್ವ, 3. ವಾಸನೆ, 4. ಪ್ರಭಾವ, 5. ನಿಂದೆ, 6. ವಾಯು. 1. elaru, 2. the devil, 3. Smell, 4. influence, 5. reproach, 6. air. **ಗಾಳಿ ಬಂದ ಕಡೆ ಕೊಡೆ ಹಿಡಿ, ಗಾಳಿ ಬಂದಕಡೆ ತೂರಿಕೊಂಬೊದು(ಗಾ).** ವಾ: ಇಂದೇಕೋ ಬಾರಿ ಗಾಳಿ ಬೀಸಿದೆ. ಪ: ಅಡ್ಡಗಾಳಿ, ಕರೆಗಾಳಿ, ಕೆಟ್ಟಗಾಳಿ ಚಳಿಗಾಳಿ, ತಂಪುಗಾಳಿ, ಬಿರುಗಾಳಿ, ಬಿಸಿಗಾಳಿ ಸುಡುಗಾಳಿ, ಮಾರಿಗಾಳಿ, ಶೀತಗಾಳಿ

ಗಾಳಿಬಾಳೆಕಾಯಿ /*ga:ḷiba:ḷɛka:yi*/ ನಾ. 1. ಒಂದು ಜಾತಿಯ ಬಾಳೆ,ಗಾಳಿಬಾಳೆ, 2. ಸಾವಿನ ಮನೆಯಲ್ಲಿ ಬೊಜ್ಜಕ್ಕೆ ಈ ಗೊನೆಯನ್ನು ಪದಾರ್ಥಮಾಡಲು ಬಳಸುತ್ತಾರೆ. 1. a variety of plantain/banana, 2. usually used in making curry on the day of funeral feast. ವಾ: ಗಾಳಿ ಬಾಳೆಕಾಯಿನ ತಿತಿಲಿ ಪಲ್ಯಕೆ ಬಳ್ಸುವೆ.

ಗಾಳಿಸೊಪ್ಪು /*ga:ḷisoppu*/ ನಾ. 1. ಔಷಧ ಸಸ್ಯ, 2. ಗಾಳಿ ಸೊಪ್ಪು. 1. a medicinal plant, 2. Purslane weed (Portulaca oleracea). ವಾ: ಗಾಳಿ ಸೊಪ್ಪು ಸೋಂಕು ತೆಗೆಕೆ ಬೇಕಾದೆ. ಪ: ಗಾಳಿಚೊಪ್

ಗಾಳಿಸೋಂಕು /*ga:ḷiso:ŋku*/ ನಾ. ವಾತಾವರಣದ ಏರುಪೇರಿನಿಂದಾಗಿ ಉಂಟಾಗುವ ಕಾಯಿಲೆ. a disease caused by the sudden changes in weather conditions. ವಾ: ಗಾಳಿ ಸೋಂಕು ಆದ್.

ಗಾಳಿಹಾಕ್ /*ga:ḷi ha:kɨ*/ ಕ್ರಿವಿ. 1. ಪುಸಲಾಯಿಸು, 2. ಸವಿಮಾತುಗಳಿಂದ ಮನವೊಲಿಸು, 3. ಪ್ರೇರಿಸು. 1. to coax, 2. to cajole, 3. inspire. ವಾ: ಅಂವ ಗಾಳಿ ಹಾಕಿಕೆ ಸುರ್ ಮಾಡ್ತ್.

ಗಾಳಿಕಿಂಡಿ /*ga:ḷikiṇḍi*/ ನಾ. ಮೇಲ್ ಕಿಡ್ಕೆ. a ventilator window. ವಾ: ಗಾಳಿಕಿಂಡಿಲಿ ಗಾಳಿ ಲಾಯ್ಕಲಿ ಬಂದದೆ.

ಗಾಳಿಗೆ ಹಿಡ್ಯೊದು /*ga:ḷige hiḍyodu*/ ಕ್ರಿ. ದವಸ ಧಾನ್ಯಗಳನ್ನು ಸ್ವಚ್ಛಗೊಳಿಸುವುದು. cleaning grains and seeds. ವಾ: ಬತ್ತನ ಜಳ್ಳ್ ತೆಗ್ಯಕೆ ಗಾಳಿಗೆ ಹಿಡ್ಯೊದು.

ಗಾಳಿಪಟ /*ga:ḷipaṭa*/ ನಾ. 1. ಗಾಳಿಪಟ, 2. ಗಾಳಿಯಲ್ಲಿ ಹಾರಿಸುವ ಆಟದ ಪಟ, 3. ಪತಂಗ. 1. a kite, 2. flying a kite, 3. butterfly. ವಾ: ಗಾಳಿಪಟ ಹಾರ್‌ಸೊಮೊ.

ಗಾಳಿಬುಡ್ದು /*ga:ḷige biḍu*/ ಕ್ರಿ. ಹೂಸು ಬಿಡು. to fart. ವಾ: ಅಂವ ಹಲ್ಸಿನೆಕ್ಕಿ ತಿಂದ್ ಪುರ್ಸೊತಿಲ್ಲದೆ ಗಾಳಿ ಬುಡ್ತಿತ್. ಪ: ಹೂಂಸ್ ಬುಡ್ದು

ಗಾಳಿಮರ /*ga:ḷimara*/ ನಾ. ಒಂದು ಜಾತಿಯ ಚಿಕ್ಕ

ಸೂಜಿಯಂತಹ ಎಲೆಗಳುಳ್ಳ ಮರ. Casuarina tree. ವಾ: ಗಾಳಿ ಮರ ಗಾಳಿ ಬೀಸ್ಕನ ಅಲ್ಲಾಡ್ತ್. ಪ: ಗಾಳಿ ಕೂಪು – ಗಾಳಿ ಮರದ ನೆಡುತೋಪು

ಗಾಳಿಸುದ್ದಿ /*ga:ḷisuddi*/ ನಾ. 1. ಸರಿಯಾದ ಆಧಾರಗಳಿಲ್ಲದೆ ಸುದ್ದಿ ಹರಡುವುದು, 2. ವದಂತಿ. 1. a rumour, 2. gossip. ವಾ: ಗಾಳಿಸುದ್ದಿಗೆಲ್ಲ ತಲೆಕೊಡಿಕಾಗದ್.

ಗಾಳ್ಸ್ /*ga:ḷsɨ*/ ನಾ. 1. ಅಕ್ಕಿಯಿಂದ ನುಚ್ಚನ್ನು ಬೇರ್ಪಡಿಸುವ ವಿಧಾನ, 2. ಸೋಸು, 3. ಜಾಳಿಸು, 4. ಜರಡಿ ಹಿಡಿ, 5. ಶೋಧಿಸು. 1. separating the head rice from the broken rice, 2. to sieve/ to strain 3. to winnow the grain to remove dust, 4. to sift, 5. to clean/to search. ವಾ: ಹಲ್ಸ್‌ನಣ್ಣ್ ಗಾಳ್ಸಿರೆ ಮಾಂಬಳ ಸಿಕ್ಕಿದೆ. ಪ: ಗಾಳ್ಸಿಕನ – ಜರಡಿ ಹಿಡಿಯುವಾಗ

ಗಿಂಡಿ /*giṇḍi*/ ನಾ. 1. ಚಿಕ್ಕ ಬಾಯಿ ಇರುವ ಪಾತ್ರೆ ಗಿಂಡಿ ಚೆಂಬು, 2. ಎಣ್ಣೆ ಗಿಂಡಿ, ಇದಕ್ಕೆ ಮುಚ್ಚಳ ಇರುತ್ತದೆ. 1. small vessel with a nozzle, 2. oil dispenser with nozzle and a cap. ವಾ: ಮೊದ್ವೆಗೆ ಎಣ್ಣೆದ್ ಗಿಂಡಿ ತಂದೊ, ಗಿಂಡಿ ತಕಣಿ. ಪ: ಗಿಂಡಿಲಿ – ಗಿಂಡಿಯಲ್ಲಿ

ಗಿಂಡಿಮಿಳ್ಳಿ /*giṇḍimiḷḷi*/ ನಾ. ಕೊಂಬು ಇರುವ ಹಿತ್ತಾಳೆಯ ಸಣ್ಣ ಕಮಂಡಲು ರೀತಿಯ ಚೆಂಬು, ಮದುವೆ ಶಾಸ್ತ್ರ ಸಂದರ್ಭದಲ್ಲಿ ಇದಕ್ಕೆ ಹಾಲು ಹಾಕಿರುತ್ತಾರೆ. a small vessel made of copper, usually used in wedding – a pitcher pot. ವಾ: ಮೊದುವೆ ಸಾಸ್ತ್ರಲಿ ಬೇಕ್ ಗಿಂಡಿ ಮಿಳ್ಳಿ

ಗಿಜಕ್ಕಿ /*gijakki*/ ನಾ. 1. ಗೀಜುಗ, 2. ಗೀಜಗದ ಹಕ್ಕಿ. weaverbirds. ವಾ: ಗಿಜಕ್ಕಿ ಎಸ್ಟ್ ಲಾಯ್ಕಲಿ ಗೂಡ್ ಕಟ್ಟಿದೆ.

ಗಿಜಿಕ್ಕ /*gijikka*/ ಅ. ಗೆಜ್ಜೆಯಿಂದ ಬರುವ ಅನುಕರಣ ಪದ. an onomatopoeic expression – jingling sound from anklets. ವಾ: ಕೂಸುನ ಕಾಲಿಗೆ ಹಾಕಿದ ಗೆಜ್ಜೆಂದ ಓಡಾಡಿಕನೆಲ್ಲ ಮನೆ ತುಂಬ ಗಿಜಿಕ್ಕತೇಳ್‌ದೆ.

ಗಿಜಿಗಿಜಿ /*gijigiji*/ ಅ. 1. ಸಮಾರಂಭ, ಉತ್ಸವಗಳ ಸಂದರ್ಭದ ಜನ ಜಂಗುಳಿ. a crowd gathered in a festival or a programme. ವಾ: ಸಂತೆಲಿ ಜೆನ ಗಿಜಿಗಿಜಿ ತೇಳ್‌ವೆ.

ಗಿಟ್ಟೆ /*giṭṭɛ*/ ನಾ. 1. ಗಟ್ಟಿಯಾದ ವಸ್ತು, 2. ಮುದ್ದೆ, 3. ಮಣ್ಣಿನ ಹೆಂಟೆ. 1. a solid thing, 2. a ball, 3. a heap of earth. ವಾ: ಮುದ್ದೆ ಗಿಟ್ಟೆನಾಂಗಾಗುಟು. ಪ: ಮೊಣ್ಣ್‌ನ ಹಿಂಟೆ. **ಗಿಟ್ಟೆ ಹಾಕುದು** /*giṭṭɛ ha:kudu*/ ಒಡೆದ ಮಡಕೆಯ ತೂತನ್ನು ಗಿಟ್ಟೆಯಿಂದ ಮುಚ್ಚುವುದು. to fill the hole in a pot. ವಾ: ಕುಲ್ಮ ಮರದ ನೋಳಿ, ಹುತ್ತದ ಮೊಣ್ಣ್, ಗೇರ್‌ಬೀಜ ಎಣ್ಣೆ ಸೇರ್ಸಿ ಮಾಡ್‌ವ ಪಾಕ.

ಗಿಟ್ಟ್ /*giṭṭɨ*/ ಕ್ರಿ. 1. ಸಿಗು, 2. ಎಟುಕು. 1. to be available, 2. to be able to reach. ವಾ: ಇಂದೇನೂ ಗಿಟ್ಟಿತ್‌ಲೆ.

ಗಿಡ /*giḍa*/ ನಾ. 1. ಗಿಡ, 2. ಸಸಿ. 1. a plant, 2. a young plant. ವಾ: ದೈ, ಮರಗ ಇದ್ದರೆ ಅಲ ನಮಿಗೆಲ್ಲ ಉಸಿರಾಡಿಕೆ ಸುದ್ದ ಗಾಳಿ ಸಿಕ್ಕುದು.

ಗಿಡಕಾಳ್ /*giḍa ka:ḷɨ*/ ನಾ. ಹಬ್ಬದಿರುವ ಸಣ್ಣ ಗಿಡದಲ್ಲಾಗುವ ಹುರುಳಿಕಾಯಿ (ಕಾಳು ಬೀನ್ಸ್). Common bean, green bean, French bean. ವಾ: ದೈ ಕಾಳ್ ಬಿತ್ತೊಕು.

ಗಿಡನ ಬಡ್ಡೆಮಾಡ್ದು /*giḍana baḍḍɛma:ḍdu*/ ನಾ. ಗಿಡವನ್ನು ಬುಡದಿಂದ ಕಡೆದು ತುಂಡರಿಸಿ ಚಿಕ್ಕದು ಮಾಡು. pruning a plant from its stem. ವಾ: ಚಾಂಪ ದೈನ ಬಡ್ಡೆ ಮಾಡ್ದು.

ಗಿಡಿಜ /*giḍiɲɲa*/ ನಾ. 1. ಗಿಡುಗ, 2. ಹದ್ದು, ಗರುಡಗಳಿಗೆ ಹತ್ತಿರದ ಸಂಬಂಧಿ. 1. an eagle, 2. a hawk, a vulture. ವಾ: ಗಿಡ್‌ಜ ಹಾವ್‌ನ ಹೊತ್ತತ್, ಚೋರೆ ಗಿಡಿಜ ಕೋಳಿ ಪಿಳ್ಳೆನ ಹೊತ್ತತ್. **ಗಿಡ್ಂಗ** /*giḍɨmba*/ ವಾ: ಗಿಡ್ಂಗ ಆಕಾಸಲಿ ಸುತ್ತಿದೆ.

ಗಿಡಿಯ /*giḍiya*/ ನಾವಿ. ಬೂದು ಬಣ್ಣದ, ಗಿಡುಗನ ಬಣ್ಣದ ಹುಂಜ. a rooster in light brown colour. ವಾ: ಗಿಡಿಯ ಅತ್ತ ಎಲ್ಲೊ ಹೋತು.

ಗಿಡ್ಗ /*giḍga*/ ನಾ. 1. ಗಿಡುಗ, 2. ನಖಗಳು ಹರಿತವಾಗಿ, ಕೊಕ್ಕು ಚೂಪಾಗಿ ಕೊಕ್ಕೆಯಂತೆ ಬಾಗಿ, ಬಲಯುತವಾದ ರೆಕ್ಕೆಗಳನ್ನು ಹೊಂದಿರುವ ಹಿಂಸ್ರ ಪಕ್ಷಿ. 1. an eagle, 2. a bird of prey with powerful wings, long, curved beaks and

sharp claws. ವಾ: ಗಿಡ್ಗ ಹಾರಿಕಂಡಿದ್ದಂಗೆನೆ ಕೋಳಿ ಮರಿನ ಎತ್ತಿತ್.

ಗಿಡ್ಡ /*giḍḍa*/ ನಾ. 1. ಚಿಕ್ಕ, 2. ಪುಟ್ಟ, 3. ಎತ್ತರ ಇಲ್ಲದ ಕುಳ್ಳ, 4. ಗಿಡ್ಡ ವ್ಯಕ್ತಿ. 1. small, 2. little, 3. a short person, 4. a person with short stature. **ಅಡ್ಡ ಹೋದ ಮರಲಿ ಗಿಡ್ಡ ಕುದ್ದುಟ್ಟು ಗಿಡ್ಡದ ತಿಕಲಿ ಜೆಡ್ಡ್ ಸೊರ್ದದೆ – ಹಲ್ಸ್‌ನ ಕಾಯಿ(ಒ).** ವಾ: ಗಿಡ್ಡ ಬರ್‌ತುಟ್ಟು.

ಗಿಡ್ಡಿ /*giḍḍi*/ ನಾ. ಕುಳ್ಳಿ ಹೆಣ್ಣು. a short woman. ವಾ: ಗಿಡ್ಡಿ ಗೂಡೆ ಬಾತ್ ಕಂಡದೆ.

ಗಿಡ್ಡೆ /*giḍḍɛ*/ ನಾ. ಚಿಕ್ಕಪೊದೆ. a small bush. ವಾ: ಗಿಡ್ಡೆ ವಳೆಗೆ ಹೊಕ್ಕಿಕಾದೆನ? ಪ: ಗಿಡ್ಡೆಗ – ಪೊದೆಗಳು

ಗಿಡ್ಪ /*giḍpa*/ ನಾ. ಪೂರ್ತಿ, ಏನೊಂದು ಸ್ಥಳಾವಕಾಶ ಇಲ್ಲದ. completely. ವಾ: ತೋಟಲಿ ಅಡ್ಕೆ ದೈ ಗಿಡ್ಪ ಇತ್ತ್.

ಗಿಣಿ /*giṇi*/ ನಾ. 1. ಗಿಳಿ, 2. ಶುಕ, 3. ಹಸಿರು ಬಣ್ಣದ ಗರಿ ಮತ್ತು ಕೆಂಪು ಕೊಕ್ಕು ಇರುವ ಒಂದು ಪಕ್ಷಿ. a parrot, a bird with bright green feathers and red beak. **ಮಳೆ ಇಲ್ಲೆ ಬೆಳೆ ಇಲ್ಲೆ ಮೈಯೆಲ್ಲಾ ಹಸ್ರ್ – ಗಿಣಿ(ಒ).** ವಾ: ಗಿಣಿ ಕೊಕ್ಕ್ ಕೆಂಪ್.

ಗಿಣಿಕೆ(ಕಾಕೆ) ಸೊಪ್ಪು, /*giṇikɛ (ka:kɛ) soppu,*/ ನಾ. 1. ಗಣಿಕೆ ಸೊಪ್ಪು, 2. ಕಾಕೆ ಸೊಪ್ಪು. leaf of Black nightshade. ವಾ: ಗಿಣಿಕೆ ಸೊಪ್ಪು ನ ಪಲ್ಯ ಮಾಡಿ ತಿಂದರೆ ಒಳ್ಳದ್, ಬಾಣ್ತಿಗಳಿಗೆ ಗಿಣಿಕೆ ಸೊಪ್ಪು ಕೊಟ್ಟವೆ. ಪ: ಗಿಣ್ಕಿ ಸೊಪ್ಪು – ಕಾಗೆ ಸೊಪ್ಪು

ಗಿಣ್‌ಕೆಣ್ಣ್ /*giṇi kɛṇṇi*/ ನಾ. ಗಣಿಕೆ ಗಿಡದಲ್ಲಿ ಬಿಡುವ ತಿನ್ನಲು ಯೋಗ್ಯವಾದ ಸಣ್ಣ ಹಣ್ಣು. edible fruit grown on Black nightshade. ವಾ: ಗಿಣ್‌ಕೆಣ್ಣ್ ಬಾರಿ ಸಣ್ಣದ್ ತಿಂದರೆ ನಾಲಿಗೆ ನೀಲಿ ಬಣ್ಣ ಆದೆ. ಪ: ಗಿಣ್ಕೆ ಹಣ್ಣ್ – ಗಣಿಕೆ ಗಿಡದ ಹಣ್ಣು

ಗಿಣ್‌ಜ /*giṇiṇa*/ ನಾ. ಗಿಡುಗ. an eagle. **ಗಿಣ್‌ಜ ಕೋಳಿ ಹಿಡ್ತ್‌ಂತ ಕಕ್ಕೆ ಕೋಳಿ ಹಿಡಿಯಕೆ ಹೋತ್‌ಗಡ(ಗಾ).** ವಾ: ಗಿಣ್‌ಜ ಹಾರಿ ಬಾತ್.

ಗಿಣ್ಣ /*giṇṇa*/ ನಾ. 1. ಮಿದುಳು, 2. ಮೆದುಳು, 3. ಮಸ್ತಿಷ್ಕ. 1. brain, 2. cerebrum 3. the brain. ವಾ: ಕುರಿ ಗಿಣ್ಣನ ತಿಂದವೆ.

ಗಿಣ್ಣಲ್ /*giṇṇali*/ ನಾ. ಅನ್ನ ತೋಡುವ ಪಾತ್ರೆ. a vessel used to transfer rice. ವಾ: ಗಿಣ್ಣಲ್ ತಂಬಾ.

ಗಿಣ್ಣವರೆ /*giṇṇavarɛ*/ ನಾ. 1. ಅವರೆಕಾಯಿ ಹೆಸರು, 2. ಚಿಕ್ಕ ಅವರೆ. flat beans/hyacinth beans. ವಾ: ಗಿಣ್ಣವರೆ ಬಾರಿ ಲಾಯ್ಕ.

ಗಿಮ್ಚ್ /*gimci*/ ಕ್ರಿ. 1. ಕಿವುಚು, 2. ಹಿಚುಕು. to squeeze. ವಾ: ಟಮೆಟನ ಬೇಸಿ ಗಿಮ್ಚಿ ಇಸ್, ಬನ್ನೆ ತಿಳಿ ಆಂಬರ ಮಾಡಿಕೆ. ಪ: ಹಿಂಚ್, ಗಿಮುಚ್

ಗಿರಾಕಿ /*gira:ki*/ ನಾ. 1. ಗ್ರಾಹಕ, 2. ಕೊಂಡುಕೊಳ್ಳುವವನು. 1. a customer, 2. a consumer. ವಾ: ಗಿರಾಕಿಯೊಟ್ಟಿಗೆ ಹಂಗೆನಾ ಮಾತಾಡ್ಡು.

ಗಿರಾಕ್ರಿ /*gira:kri*/ ನಾ. ತೆಂಗಿನಗರಿಯಿಂದ ಮಾಡಿದ ಚಿಕ್ಕ ತಿರುಗುವ ಚಕ್ರ. a toy windmill made out of the coconut leaflets.

ಗಿರ್ದ /*girda*/ ನಾ. 1. ಕಾಲು ಭಾಗ, 2. ಸ್ವಲ್ಪಭಾಗ, 3. ಹಜ್ಜು. 1. one fourth, 2. a fraction, 3. little bit. ವಾ: ಅರ್ದ ರೊಟ್ಟಿ ನಂಗೆ, ಗಿರ್ದ ರೊಟ್ಟಿ ನಿಂಗೆ.

ಗಿಲಿ /*gili*/ ನಾ. ಚೀಲ, ಬಟ್ಟೆ ಮೊದಲಾದುವುಗಳನ್ನೂ ನೇತುಹಾಕಲು ಸಾಮಾನ್ಯವಾಗಿ ಮರದಿಂದ ಮಾಡಿದ, ಗಿಳಿಯ ಮುಖವನ್ನು ಹೋಲುವ ಗೂಟ ಅಥವಾ ಕೊಕ್ಕೆ. a hook to hang a bag or clothes. ವಾ: ಅರ್ವೆನ ಗಿಲಿಲಿ ಕೋಸಿಸ್.

ಗಿಲಿಟ್ /*giliṭi*/ ನಾ. ನಕಲಿ. duplicate.

ಗಿಲಿಟ್ ಬಳೆ /*giliṭi baḷɛ*/ ನಾ. 1. ಗಾಜಿನ ಮಿರುಗು ಬಳೆ, 2. ಹೊಳೆಯುವ, 3. ಪ್ರಕಾಶಿಸು. 1. glass bangles, 2. something that shines, 3. to shine brightly. ವಾ: ಹಬ್ಬಲಿ ಗಿಲಿಟ್ ಬಳೆ ತಕಂಡದ್.

ಗಿಲೀಟ್ /*gili:ṭi*/ ನಾವಿ. 1. ನಯವಾದ ಮಾತು, 2. ಲೋಹಗಳಿಗೆ ಬಳಿಯುವ ಬಣ್ಣ, 3. ಒಪ್ಪ. 1. an elegant talk, 2. colour used to paint metals, 3. neat. ವಾ: ಈಗ ಗಿಲೀಟ್ ಮಾತೆಲ್ಲ ಬೇಡ.

ಗಿಲ್ಲು /*gillu*/ ನಾವಿ. 1. ಜಿಗುಟು, 2. ಚಿವುಟು. 1. to pinch, 2. to nip. ವಾ: ಕೈಗೆ ಮೆಲ್ಲಂಗೆ ಗಿಲ್ಲುದು.

ಗಿಸಾಲೆ /*gisa:lɛ*/ ನಾ. 1. ಜೋಡಿಪದದ ಉತ್ತರ ಭಾಗ, 2. ಬಸಲೆಗಿಸಲೆ. a reduplicative compound.

ಗಿಳಿ /*giḷi*/ ನಾ. 1. ಗಿಳಿ, 2. ಶುಕ, 3. ಬಾಗಿದ ಕೊಕ್ಕಿನ, ಮಾತನ್ನು ಅನುಕರಿಸುವ ಒಂದು ಜಾತಿಯ ಪಕ್ಷಿ. a parrot, a bird with curved beak, which mimics human voices. **ಗಿಳಿ ಸಾಂಕಿ ಕೊತ್ತಿ ಕೈಲಿ ಕೊಟ್ಟಂಗಾತ್(ಗಾ).** ವಾ: ಗಿಳಿಗ ಸಾಲಾಗಿ ಮರಲಿ ಕುದ್ದೊಳೊ.

ಗೀಚ್ /*gi:ci*/ ನಾ. 1. ಗೀಚುದು, 2. ಓರೆಕೋರೆಯಾಗಿ ಬರೆ, 3. ಕೆಟ್ಟಕೈಬರಹ. 1. scribbling, 2. to write improperly, 3. bad handwriting. ವಾ: ಯಾಕೆ ಹೀಂಗೆ ಗೀಚಿ ಬರ್‌ದದ್ ಒಂದೂ ಓದಿಕಾಲೆ.

ಗೀಜಕ್ಕಿ /*gi:jakki*/ ನಾ. 1. ಗೀಜಗ ಹಕ್ಕಿ, 2. ನೇಯ್ಗೆ ಹಕ್ಕಿ. a weaverbird. ವಾ: ಗೀಜಕ್ಕಿ ಹೆಚ್ಚಿ ನೀರ್ ಹಕ್ಕಲೆ ಗೂಡ್ ಕಟ್ಟಿದೆ. **ಗೀಜಣ್ ಹಕ್ಕಿ** /*gi:jaṇ hakki*/ ವಾ: ಗಂಡ್ ಗೀಜಕ್ಕಿ ಗೂಡ್ ಕಟ್ಟುದು ಹೆಣ್ಣ್ ಗೀಜಕ್ಕಿ ಕಾವ್ ಕೊಡ್‌ದು. ಪ: ಚಾಳೆಹಕ್ಕಿ

ಗೀಟ್[1] /*gi:ṭi*/ ನಾ. 1. ಗೆರೆ, 2. ಗೀಟ್ ಎಳೆದು ಗೆರೆ ಎಳೆಯುವುದು. 1. a line, 2. drawing a line. ವಾ: ಅಲ್ಲೊಂದ್ ಗೀಟ್ ಎಳಿ. ಪ: ಗೀಟುದು – ಗೆರೆ ಎಳೆಯುವುದು; ಗೀಟಿರೆ – ಗೆರೆ ಎಳೆದರೆ

ಗೀಟ್[2] /*gi:ṭi*/ ನಾ. 1. ಮಿತಿ, 2. ಮೇರೆ, 3. ರೇಖೆ, 4. ಗೆರೆ. 1. limit, 2. border, 3. a straight line, 3. a line. ವಾ: ಒಂದ್ ಗೀಟ್ ಸಾಬಾನ್ ಕೊಡಿತ ಕೇಳ್‌ತಿದ್ದೊ. ಪ: ಗೀಟ್ ಹಾಕ್ – ಗೆರೆ ಹಾಕು; ಗೀಟ್‌ಂದಾಚೆ – ಗೀಟಿನಿಂದಾಚೆ

ಗೀಣ /*gi:ṇa*/ ನಾ. ಗಿಳಿ. a parrot. ವಾ: ಗೀಣನ ಹಿಡ್ಕಂಡ್ ಬಾತ್.

ಗೀತ ಇಲ್ಲೆ /*gi:ta illɛ*/ ನಾ. ಅವರಿಗೇನು ಮಾಡಲು ಕೆಲಸವಿಲ್ಲ ಎಂಬ ಮಾತನ್ನು ಸೂಚಿಸುವ ಪದ. stating that someone doesn't have anything to do. ವಾ: ಅವ್‌ಕೆ ಗೀತ ಇಲ್ಲೆ ಅದಿಕೆ ಪಟ್ಟಾಂಗ ಬುಟ್ಕಂಡ್ ಕುದ್ದೊಳೊ. ಪ: ಗೀತಯಿಲ್ಲೆ – ಬೈಗುಳದ ಪದ

ಗೀನ್ಚ್ /*gi:nci*/ ನಾ. 1. ಗೀಚು, 2. ಅವಸರವಸರವಾಗಿ ಅಡ್ಡಾದಿಡ್ಡಿಯಾಗಿ ಬರೆ. 1. to scribble, 2. to write hurriedly. ವಾ: ಪೆನ್ನ್ ತಕಂಡ್ ಗೀನ್ಚಿಕೆ ಗೊತ್ತು ಅಷ್ಟೆ ನಿಂಗೆ.

ಗೀರ್ /*gi:ri*/ ಕ್ರಿ. 1. ಗೀರು, 2. ಉಜ್ಜು, 3. ಗೆರೆ ಎಳೆ, 4. 1. to scribble, 2. to rub, 3. to draw a line. ವಾ: ಗೋಡೆಗೆ ಮೊಸಿಲಿ ಗೀರ್ ಬಡ, ಗೀರ್ದ ಗಾಯ ಸೋರ್‌ತುಟ್ಟು. ಪ: ಗೀರ್ದೆ – ಗೀರಿದೆ; ಗೀರ್ಸಕು – ಗೀರಿಸಬೇಕು; ಗೀರ್ಸಿನೆ – ಗೀರಿಸುತ್ತೇನೆ; ಗೀರ್ಸ್ – ಗೀರಿಸು

ಗೀರ್ದು /*gi:rdu*/ ನಾ. ಒಂದು ವಸ್ತುವನ್ನು ಇನ್ನೊಂದು ವಸ್ತುವಿಗೆ ವೇಗವಾಗಿ ಉಜ್ಜುವುದು. to rub things over each other. ವಾ: ಹಾಸ್‌ಗೆ ಹಕ್ಕಲೆ ನಿತ್ಕಂಡ್ ಬೆಂಕಿಕಡ್ಡಿ ಗೀರ್‌ದು, ಎಲ್ಲಾರ್ ಕಿಡಿ ಹಾರ್‌ರೆ ಎಂತರ ಮಾಡ್‌ದು.

ಗೀಲು /*gi:lu*/ ನಾ. ಸೋಲುಗೀಲು ಪದದ ಉತ್ತರಪದ. a reduplicative compound. ವಾ: ಸೋಲು ಗೀಲೊ ಒಟ್ಟು ಆಟಲಿ ಸೇರ್ದು ಮುಕ್ಯ.

ಗೀಸು /*gi:su*/ ಕ್ರಿ. 1. ಕೀಸು, ಹೆರೆದುಹಾಕು, 2. ಬೋಳಿಸು, 3. ಮೋಸಮಾಡು,ವಂಚನೆ ಮಾಡು, 4. ಶೋಷಣೆ ಮಾಡು, 5. ಗುಪ್ತಾಂಗದ ಕೂದಲು ಬೋಳಿಸು, 6. ಕೀಸು. 1. to peel off 2. to shave, 3. to deceive, 4. to exploit, 5. to shave the pubic hair, 6. to exfoliate. ವಾ: ಕಬ್ಬುನ ಕೀಸಿ ಚೋಲಿ ತೆಗೆದು.

ಗೀಸುಳಿ /*gi:suḷi*/ ನಾ. ಮರವನ್ನು ನಯಗೊಳಿಸಲು ಬಡಗಿಗಳು ಬಳಸುವ ಉಪಕರಣ, ಗೀಸುಳಿ ಹಾಕುದು. a carpenter's chisel, used in smoothing the surface of the wood while making any furniture. ವಾ: ಮರಕ್ಕೆ ಗೀಸುಳಿ (ಚಿಪ್ಪುಳಿ) ಹಾಕುದು.

ಗೀಳಿಡ್ದು /*gi:ḷiḍdu*/ ನಾ. ಆನೆಗಳ ಕೂಗುವಿಕೆ. elephant trumpet. ವಾ: ಆನೆಗ ಗೀಳಿಡ್ದು ಕೇಳ್ತುಟ್ಟು.

ಗೀಳ್[1] /*gi:ḷi*/ ಕ್ರಿವಿ. 1. ಮರವನ್ನು ನಯಗೊಳಿಸಲು ಬಡಗಿಗಳು ಬಳಸುವ ಉಪಕರಣ, 2. ಗೀಸುಳಿ ಹಾಕುದು, 3. ಪೀಠೋಪಕರಣಗಳನ್ನು ತಯಾರಿಸುವ ಮೊದಲು ಮರವನ್ನು ನಯಗೊಳಿಸುವುದು. 1. a chisel, an instrument used by a carpenter to smoothen the wood, 2. chiselling, 3.

smoothing the wood. ವಾ: ಆಚಾರಿಗ ಮರನ ಕೀಸಿ ನಯ ಮಾಡಿಕೆ ಕೋಲ್‌ನ ಬಳ್‌ಸುವೆ.

ಗೀಳ್² /*gi:ḷi*/ ನಾ. 1. ಹಂಬಲ, 2. ಗೀಳು, 3. ಚಟ. 1. desire, 2. addiction, 3. habit. ವಾ: ಹೆಂಡ ಕುಡೆದು ಒಂದ್ ಗೀಳ್.

ಗುಂಗು /*guŋgu*/ ನಾ. 1. ಅಮಲು, 2. ಜೊಂಪು. 1. intoxication, 2. feeling sleepy. ವಾ: ಪಿಚ್ಚರ್ ನೋಡಿ ಬಂದವ್ ಎರ್‌ಡ್ ದಿನ ಅದೆ ಗುಂಗ್‌ಲಿ ಇದ್ದವೆ.

ಗುಂಗುರು /*guŋguru*/ ನಾ. 1. ಸುರುಳಿ ಸುರುಳಿ, 2. ಗುಂಗುರು ಕೂದಲು. 1. spiral/coil, 2. curly hair. ವಾ: ಗುಂಗುರು ಕೂದೊಲು ದಪ್ಪ ಕಾಂಬದು.

ಗುಂಡ /*guṇḍa*/ ನಾ. ಹರಿಸೇವೆಯ ಸಂದರ್ಭ ಬಾಳೆಪಟ್ಟೆಯಿಂದ ಮಾಡುವ ಪುಟ್ಟ ಮಂಟಪ. making miniature temple for worship, using strips of banana stem. ವಾ: ಹರ್‌ಸವೆಲಿ ಬಾಳೆ ರಟ್ಟೆಂದ ಮಾಡೊ ದೇವುರ ಸಣ್ಣ ಮಂಟಪಗಳ್‌ನ ಗುಂಡತ ಕರ್‌ದವೆ. **ಗುಂಡ ಕಟ್ಟುದು** /*guṇḍa kaṭṭudu*/ ಹರಿಸೇವೆಗೆ ಬಾಳೆಪಟ್ಟೆಯಿಂದ ದೇವರ ಗುಡಿಯನ್ನು ಕಟ್ಟಿ ಅಲಂಕರಿಸುವುದು, ಕುಟುಂಬದ ಲೆಕ್ಕದಲ್ಲಿ ಹಾಗು ಹರಕೆ ಮಾಡಿಕೊಂಡ ಕುಟುಂಬದ ಸದಸ್ಯರು ತಮ್ಮ ಸ್ವಂತ ಖರ್ಚಿನಲ್ಲಿ ಕಟ್ಟಿಸುವುದು. making miniature temple for the worship, using strips of banana stem and decorating it. Usually the family members themselves spend money on it.

ಗುಂಡಗದ್ದೆ /*guṇḍagaddɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಗುಂಡಗೆ /*guṇḍagɛ*/ ನಾವಿ. 1. ಉರುಟಾದ, 2. ದುಂಡಾದ. 1. rough, 2. spherical. ವಾ: ಆ ಕಲ್ಲ್ ಗುಂಡಗೆ ಉಟ್ಟು.

ಗುಂಡಡ್ಕ /*guṇḍaḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ನಾಲ್ಕೂರು ಗ್ರಾಮದ ಜಾಗ. a locality in Nalkuru village in Sullia Taluk of Dakshina Kannada District.

ಗುಂಡನ ಬೊಳಿ /*guṇḍana bɔḷi*/ ನಾ. ಗೌಡರ 18 ಗೋತ್ರಗಳಲ್ಲಿ ಒಂದು ಬಳಿ. one of the 18 lineages of Arebhashe speaking Gowda community. ವಾ: ಗುಂಡನ ಬೊಳಿ ಗೌಡರ ಹದಿನೆಂಟ್ ಗೋತ್ರಗಳ್‌ಲಿ ಒಂದ್. **ಗುಂಡರ ಬೊಳಿ** /*guṇḍara bɔḷi*/ ಒಂದು ಗೋತ್ರದ ಹೆಸರು. Gundara Boli, a lineage/a clan. ವಾ: ಗುಂಡರ ಬೊಳಿತೇಳ್‌ದು ಗೌಡ ಜೆನಾಂಗದ ಬೊಳಿದ್ ಹೆಸ್‌ರ್.

ಗುಂಡಾಕ್¹ /*guṇḍa:ki*/ ನಾ. 1. ಕುಡಿದು, 2. ಮದ್ಯಪಾನ ಮಾಡು, 3. ಹೆಂಡ ಮುಂತಾದ ಮಾದಕ ಪಾನೀಯಗಳನ್ನು ಕುಡಿಯುವುದು. 1. having drunk, 2. to drink alcohol, 3. consuming alcohol. ವಾ: ದಿನಾಲು ಗುಂಡಾಕಿ ಮನೆಗೆ ಬಾದು.

ಗುಂಡಾಕ್² /*guṇḍa:ki*/ ನಾ. 1. ಗುಂಡು ಹೊಡೆ, 2. ತುಪಾಕಿಯಿಂದ ಸಿಡಿಸು. 1. to shoot, 2. to shoot. ವಾ: ಹಂದಿಗೆ ಗುಂಡಾಕಿದೊ.

ಗುಂಡಿ¹ /*guṇḍi*/ ನಾ. 1. ಹೊಂಡ, 2. ಆಳ. 1. a pond, 2. depth. **ತನ್ನ ಗುಂಡಿನ ತಾನೆ ತೋಡಿಕಾಂತ್(ಗಾ).** ವಾ: ಹೊಳೆದ್ ನಡು ಬಾಗಕ್ಕೆ ಹೋಬಡ ಗುಂಡಿ ಇದ್ದದೆ.

ಗುಂಡಿ² /*guṇḍi*/ ನಾ. 1. ಬಟನ್, 2. ಉಡುಪಿಗೆ ಹಾಕುವ ಗುಂಡಿ. 1. button, 2. a button sewn to a garment. **ಅಂಗಿ ಬಿಚ್ಚಿ ಗುಂಡಿಗೆ ಹಾರ್ದು – ಬಾಳೆಹಣ್ಣ್(ಒ).** ವಾ: ಸ್ವೆಟರ್‌ದ್ ಗುಂಡಿ ಹಾಕ.

ಗುಂಡಿ ಕಡಿಯ /*guṇḍi kaḍiya*/ ನಾವಿ. ಸತ್ತು ಹೋಗು ಎಂದು ಹೇಳುವ ಬೈಗುಳ ಪದ. an expletive meaning one should 'die'. ವಾ: ಗುಂಡಿಕಡಿಯಕೆ ಎಲ್ಲ ಬೆಂಡ ಎಳ್ಡ್ ಹಾಕೊಳೊ. ಪ: ಗುಂಡಿಕಡಿಯಕೆ **ಗುಂಡಿಕಡೆಕೆ** /*guṇḍikaḍɛkɛ*/ ವಾ: ಅಂವನ ಗುಂಡಿಕಡೆಕೆ. ಪ: ಗುಂಡಿಕಡ್ತ್ – ಹಾಳಾಗಿ ಹೋಯಿತು

ಗುಂಡಿಗದ್ದೆ /*guṇḍigadde*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ತೊಡಿಕಾನ ಗ್ರಾಮದ ಜಾಗ. a locality in Todikana village in Sullia Taluk of Dakshina Kannada District.

ಗುಂಡಿಗೆ /*guṇḍigɛ*/ ನಾ. 1. ಧೈರ್ಯ, 2. ಎದೆಗಾರಿಕೆ. 1. courage, 2. determination. ವಾ: ಅಂವನ ಗುಂಡಿಗೆ ಮೆಚ್ಚಕಾದೆ. **ಗುಂಡೆಗೆ** /*guṇḍege*/ ವಾ: ಗುಂಡಗೆ ಗಟ್ಟಿ ಇರಕು.

ಗುಂಡಿಸಡೆ /*guṇḍisaḍɛ*/ ನಾ. 1. ವೃತ್ತಾಕಾರದ ಗುಂಡಿಯಾದ ಸೌಟು, 2. ಸಾಂಬಾರು, ಮಜ್ಜಿಗೆ, ಬಡಿಸಲು ಬಳಸುವ ಸೌಟು. 1. a ladle, 2. a ladle used in serving curry, buttermilk, etc. ವಾ: ಮಜ್ಜಿಗೆನ ಗಲಾಸಿಗೆ ಹೊಯ್ಯಕೆ ಗುಂಡಿಸಡೆ ಇದ್ದರೆ ಒಳ್ಳೆದ್, ಗುಂಡಿಸಡೆಲೆ ಗೋಂಚಿಕೆ ಲಾಯ್ಕಾದು. ಪ: ಗುಂಡಿಸೆಡೆಲಿ – ಗುಂಡಿ ಇರುವ ಸೌಟಿನಲ್ಲಿ

ಗುಂಡಿಹಿತ್ಲು /*guṇḍʻihitlu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಹರಿಹರ ಪಲ್ಲತಡ್ಕ ಗ್ರಾಮದ ಜಾಗ. a locality in Harihara Pallatadka village in Sullia Taluk of Dakshina Kannada District.

ಗುಂಡು /*guṇḍu*/ ನಾ. 1. ಗೋಳಾಕಾರ, 2. ರುಬ್ಬುವುದಕ್ಕೆ ಉಪಯೋಗಿಸುವ ಕಲ್ಲು, 3. ದಪ್ಪವಾಗಿರುವ ಕಲ್ಲು, 4. ಬಂದೂಕಿಗೆ ಹಾಕುವ ಗೋಲಿ, 5. (ಮಕ್ಕಳು) ಆಟವಾಡುವ ಗೋಲಿ, 6. ಸರಕ್ಕೆ ಹಾಕುವ ಗೋಳಾಕಾರದ ಚಿನ್ನದ ಮಣಿ, 7. ಗುಂಪು. 1. round in shape, 2. a pestle used in grinding, 3. a big stone, 4. a bullet, 5. marbles, 6. golden beads, 7. a group. **ಹೆಣ್ಣ್ ಹೆತ್ತವು ಹಣ್ಣಾದೋ, ಗಂಡ್ ಹೆತ್ತವೂ ಗುಂಡಾದೋ(ಗಾ).** ವಾ: ಗುಂಡು ಕಲ್ಲ್‌ನ ತೊಳಿದು.

ಗುಂಡು ಕಲ್ಲ್ /*guṇḍu kallɨ*/ ನಾ. 1. ಗುಂಡಾಗಿರುವ ಕಲ್ಲು, 2. ರುಬ್ಬುಗುಂಡು, 3. ಎಲೆ ಅಡಿಕೆ ಗುದ್ದುವ ಕಲ್ಲು. 1. a round stone, 2. a pestle, 3. a pounder. ವಾ: ಗುಂಡ್ ಕಲ್ಲ್‌ಗೆ ಮುಳ್ಳು ಹಾಕ್ಸೊಕು. ಪ: ಗುಂಡ್ಕಲ್ಲ್

ಗುಂಡು ಸರಮಣಿ /*guṇḍu saramaṇi*/ ನಾ. ಚಿನ್ನದ ಸರಕ್ಕೆ ಹಾಕುವ ಗೋಳಾಕಾರದ ಚಿನ್ನದ ಮಣಿ. golden beads. ವಾ: ಗುಂಡು ಸರ ಮಣಿನ ಎರ್‌ಡೆಳೆ ಮಾಡಿ ಹಾಕೊಕು.

ಗುಂಡ್ /*guṇḍɨ*/ ನಾ. 1. ಗುಂಡು ಹೊಡೆ, 2. ತುಪಾಕಿಯಿಂದ ಸಿಡಿಸು, 3. ತುಪಾಕಿಯ ಗೋಲಿ. 1. to shoot, 2. to open fire on, 3. a bullet. **ಗಂಡಂಗೆ ಬೇಡಾತಾದರೆ ಗುಂಡ್ ಕಲ್ಲಿಗೂ ಬೇಡ(ಗಾ).** ವಾ: ಅವಿಬ್ಬರ್ ಅಣ್ಣ ತಮ್ಮಂದರ್ ಗುಂಡ್ ಹೊಡ್ಕಂಡ್ ಸತ್ರೊ. ಪ: ಗುಂಡುಹೊಡ್ತ್

ಗುಂಡ್ಯ /*guṇḍya*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಆಲೆಟ್ಟಿ ಗ್ರಾಮದ ಜಾಗ. 1. family, 2. lineage, 3. a locality in Aletti village in Sullia Taluk of Dakshina Kannada District.

ಗುಂಡ್ಯಡ್ಕ /*guṇḍyaḍka*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಜಾಲ್ಸೂರು ಗ್ರಾಮದ ಜಾಗ. 1. family, 2. lineage, 3. a locality in Jalsuru village in Sullia Taluk of Dakshina Kannada District.

ಗುಂಡ್ಲ /*guṇḍla*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಗುಂಡ್‌ಹಾಕ್ /*guṇḍɨha:kɨ*/ ನಾ. 1. ಗುಂಡುಹೊಡಿ, 2. ತುಪಾಕಿಯಿಂದ ಸಿಡಿಸು. 1. to shoot, 2. to open fire on. ವಾ: ಅಂವಂಗೆ ಗುಂಡ್ ಹಾಕ್‌ತ ಹೇಳ್ದ್.

ಗುಂಪು /*gumpu*/ ನಾ. 1. ಗುಂಪು, 2. ರಾಶಿ, 3. ಸಮೂಹ. 1. a group, 2. a heap, 3. an association. ವಾ: ಗುಂಪು ಕಟ್ಟಿಕಾಗದ್ ಗಡ.

ಗುಂಬ[1] /*gumba*/ ನಾ. ಆಹಾರ ವಸ್ತು, ಧಾನ್ಯ ಹಾಗೂ ಸಂಬಾರ ಜಿನಸುಗಳನ್ನು ತೆಗೆದಿರಿಸುವ, ಬಿದಿರಿನ ತುಂಡು ಅಥವಾ ಸೋರೆಕಾಯಿ ಮುಂತಾದ ತರಕಾರಿಗಳ ಹೊರ ಆವರಣದಿಂದ ತಯಾರಿಸಿದ ಮುಚ್ಚಳ ಇರುವ ಕೋಶ. a container with a lid to store grocery and spices, usually made of bamboo strips or bottle gourd. ವಾ: ಜೀರಿಗೆನ ಗುಂಬಲಿ ಇಸಿನೆ.

ಗುಂಬ[2] /*gumba*/ ನಾ. ಕೊತ್ತಂಬರಿ,ಸಾಸಿವೆ ಮೊದಲಾದ ಜಿನಸುಗಳನ್ನು ತುಂಬಿಸಿಡಲು ಉಪಯೋಗಿಸುವ ಮಣ್ಣಿನ ಪಾತ್ರೆ. a container in which coriander seeds and mustard seeds are stored. ವಾ: ಇಡಿ ಸಂಬರನ ಗುಂಬಲಿ ಹಾಕಿಸ್.

ಗುಂಬ[3] /*gumba*/ ನಾ. ಮಣ್ಣಿನ ಮಡಕೆ. an earthen/a clay pot. ವಾ: ಗಣಹೋಮದ ಬಸ್ಮನ ಗುಂಬಲಿ ಕಟ್ಟಿ ಇಸುವೆ.

ಗುಂಬ ಕತ್ತಿ /*gumba kɘtti*/ ನಾ. ಕತ್ತಿ. a knife. ವಾ: ಗುಂಬ ಕತ್ತಿ ತಂಬನೆ.

ಗುಂಯ್‌ಗುಟ್ಟು /*gunyiguṭṭu*/ ಅ. 1. ಪದೇ ಪದೇ ನೆನಪಿಗೆ ಬರು, 2. ಸದಾಮನಸ್ಸಿನಲ್ಲಿ ಹಾದುಹೋಗು. 1. reminisce, 2. to remember. ವಾ: ಅವ್ವಪ್ಪನ

ನೆಂಪು ಯಾಗೊಳು ಕೆಬಿಲಿ ಗುಂಯ್‌ಗುಟ್ಟುದು. ಪ: ಗುಂಯ್ ಗುಡ್ದು

ಗುಗ್ಗು /*guggu*/ ನಾ. 1. ತಿಳುವಳಿಕೆಯಿಲ್ಲದವ, 2. ಹೆಡ್ಡ, 3. ಮೂರ್ಖ, 4. ದಡ್ಡ. 1. a stupid person, 2. a foolish person, 3. an imbecile, 4. an idiot. ವಾ: ಆಡ್ದು, ಮಾತ್ ಎಲ್ಲ ತೇಟ್ ಹಳ್ಳಿ ಗುಗ್ಗುನೆ.

ಗುಗ್ಗುರು /*gugguru*/ ನಾ. ಅಕ್ಕಿ, ಬೇಳೆ ಕಾಳುಗಳಿಗೆ ಸೇರುವ ಕಪ್ಪು ಬಣ್ಣದ ಚಿಕ್ಕದಾದ ಹುಳ, 2. ಹುಟ್ಟೆ ಹುಳ, 3. ಕಾಳನ್ನು ಕೊರೆವ ಹುಳು, 4. ಕುಂಬಾದ ವಸ್ತುಗಳಲ್ಲಿ ಕಂಡುಬರುವ ಕೀಟ. weevils found in rice, lentils. an insect ವಾ: ಬೇಳೆ ಕಾಳಿಗೆ ಗುಗ್ಗುರು ಸೇರ್‌ರೆ ಹೊಡಿ ಹೊಡಿಯಾಗಿ ಎಲ್ಲ ಹಾಳಾದೆ.

ಗುಗ್ಗೆ /*guggɛ*/ ನಾ. ಕಿವಿಯಿಂದ ಹೊರಬರುವ ಕಶ್ಮಲ. earwax. ವಾ: ಗುಗ್ಗೆ ತೆಗಿನೆ, ಕೆಮಿಲಿ ಗುಗ್ಗೆ ಅಡ್ಡಿ ಹೋವುಟು. **ಗುಗ್ಗೆ ಸೆಟ್ಟಿಗ** /*guggɛ sɛṭṭiga*/ 1. ಕಿವಿಯ ಕೊಳಕನ್ನು ತೆಗೆಯುವ ಉಪಕರಣ, 2. ಪರ್ಕಡ್ಡಿ/ಅಲ್ಲ್‌ಕಡ್ಡಿ/ಕೆಲೆಂಬಿರಿ ಸಟ್ಟುಗೊ(ತು). 1. ear scoops, 2. ear picks. ವಾ: ಕೆಮಿಲಿರೊ ಗುಗ್ಗೆನ ಗುಗ್ಗೆ ಸೆಟ್ಟಿಗ ಹಾಕಿ ತೆಗ್ಯದು.

ಗುಜಣಿಕೆ /*gujaṇikɛ*/ ನಾ. ಎಣ್ಣೆ ಹಾಕಿಡುವ ಪಾತ್ರೆ. an oil can. ವಾ: ಗುಜಣಿಕೆನ ಇತ್ತ ಕೊಡೊಮ್ಮೆ.

ಗುಜರಿ ಅಂಗಡಿ /*gujiri angaḍi*/ ನಾ. ಹಳೆಯದಾದ ಹಾಗೂ ಕೆಟ್ಟು ಹೋದ ವಸ್ತುಗಳನ್ನು ಕೊಂಡು ಕೊಳ್ಳುವ ಹಾಗೂ ಮಾರಾಟ ಮಾಡುವ ಅಂಗಡಿ. a second-hand shop – a shop where used things are bought and sold. ವಾ: ಹಳೆ ಪೇಪರ್, ಪಾತ್ರೆನೆಲ್ಲ ಗುಜ್‌ರಿಯವ್ ತಕಂಡವೆ.

ಗುಜರಿ ಬಾಳೆ /*gujari ba:ḷɛ*/ ನಾ. ಬಾಳೆಹಣ್ಣಿನ ವಿಧಗಳು. varieties of banana. ವಾ: ಗುಜರಿ ಬಾಳೆಹಣ್ಣ್ ತಿಂಬಕೆ ರುಚಿಯಾದೆ. **ಗುಜಾರಿ ಬಾಳೆ** /*guja:ri ba:ḷɛ*/

ಗುಜಾಯಿ /*guja:yi*/ ನಾ. ಮಣ್ಣಿನ ಗುಂಬ, ಹಿಂದಿನ ಕಾಲದಲ್ಲಿ ಸರಾಯಿ ತರಲು ಬಳಸುತ್ತಿದ್ದರು. an earthenware used in carrying alcoholic beverages. ವಾ: ಗುಜಾಯಿನ ಹೊತ್ಕಂಡ್ ಬಾತ್.

ಗುಜಾರಿ /*guja:ri*/ ನಾ. 1. ಕುಳ್ಳಿ, 2. ಕುಬ್ಜೆ, 3. ಗಿಡ್ಡೆ. 1. a short girl, 2. a girl with short stature, 3. a dwarf. ವಾ: ಗುಜಾರಿ ಗೂಡೆ ಬಾತ್. ಪ: ಗುಜಾರಿ ಗೂಡೆ – ಕುಳ್ಳಿ ಹುಡುಗಿ

ಗುಜ್ಜೆ /*gujjɛ*/ ನಾ. ಎಳೆಯ ಹಲಸಿನಕಾಯಿ. a breadfruit, (Artocarpus altilis). ವಾ: ಗುಜ್ಜೆನ ಕಡ್ಲೆ ಹಾಕಿ ಪಲ್ಯ, ಗೈಪು ಮಾಡಕ್.

ಗುಜ್ಜೆ ಮೀನು /*gujjɛmi:nu*/ ನಾ. ಒಂದು ವಿಧದ ನದಿ ಮೀನು, ಅಬ್ರೋನಿಯೆಂದೂ ಕರೆಯುತ್ತಾರೆ. a fresh water fish. ವಾ: ಗುಜ್ಜೆಮೀನು ಹೊಳೆಲಿ ಇರೊ ಮೀನುಗಗಡ.

ಗುಜ್ರಿ /*gujri*/ ನಾ. 1. ಹಳೆಯ, 2. ನಿರುಪಯುಕ್ತ, 3. ದುಸ್ಥಿತಿಯಲ್ಲಿರುವ ವಸ್ತು. 1. old, 2. useless, 3. things in a poor physical condition. ವಾ: ಗುಜ್‌ರಿ ಸಾಮಾನ್‌ನ ಹಿಂಗ್ಯಾಕೆ ಕೋಂಬರೆಲಿ ಹಾಕಿಸಿದ್.

ಗುಟುರು /*guṭuru*/ ನಾ. 1. ಜೋರಾಗಿ ಧ್ವನಿ ಮಾಡು, 2. ಹೂಂಕರಿಸು, 3. ಎತ್ತು ಅಥವಾ ಹೋರಿಯ ಡುರುಕು. 1. to make a loud noise, 2. a harrumph-a grunt (sound) produced in order to express anger, frustration etc, 3. bellowing sound of bull. ವಾ: ಹೋರಿ ಗುಟುರು ಹಾಕುದು ಕೇಳ್‌ದೆ. ಪ: ಗುಟ್ರ್ – ಹೂಂಕರಿಸು; ಗುಟ್ರ್ ಹಾಕುದು. **ಗುಟುರ್ ಹಾಕ್** /*guḍuri ha:ki*/ 1. ಜೋರಾಗಿ ಧ್ವನಿ ಮಾಡು, 2. ಹೂಂಕರಿಸು, 3. ಎತ್ತು ಅಥವಾ ಹೋರಿಯ ಡುರುಕು. 1. to make a loud noise, 2. a sound produced in order to express anger, frustration etc. **ಸತ್ತ ಎತ್ತ್ ಗುಟುರ್ ಹಾಕುದು – ಕೋವಿ(ಒ).** ವಾ: ಹೋರಿ ಜೋರ್‌ಲಿ ಗುಟುರ್ ಹಾಕ್‌ತು.

ಗುಟ್ಕ್ /*guṭki*/ ನಾ. 1. ಗುಟುಕು, 2. ಕುಟುಕು, 3. ಒಂದು ಸಲ ಬಾಯಿಗೆ ಹಾಕಿಕೊಂಡು ಕುಡಿಯುವಷ್ಟು ದ್ರವ. 1. a drop, 2. to sting, 3. a drop of water. ವಾ: ಹೊತಾರೆಂದ ಒಂದ್ ಗುಟ್ಕ್ ನೀರ್ ಕುಡ್‌ತ್‌ಲೆ.

ಗುಟ್ಟು /*guṭṭu*/ ನಾ. 1. ರಹಸ್ಯ, 2. ಗೌಪ್ಯ. 1. a secret, 2. secrecy. **ಗಂಡ್‌ಸರ ಕೈಲಿ ದುಡ್ಡು ನಿಲ್ಲಿಕಿಲ್ಲೆ ಹೆಂಗ್‌ಸರ ಬಾಯಿಲಿ ಗುಟ್ಟು ನಿಲ್ಲಿಕಿಲ್ಲೆ(ಗಾ).** ವಾ: ಅವಿಬ್ರೊರು ಸೇರಿಕಂಡ್ ಎಂತೊ ಬಾರಿ ಗುಟ್ಟು ಮಾಡುವೆಪ. **ಗುಟ್ಟ್ ಹೇಳ್ದು** /*guṭṭi he:ḷdu*/ 1. ಗೌಪ್ಯ ನುಡಿ, 2.

ರಹಸ್ಯ ಮಾತು. 1. a clandestine talk, 2. a secret conversation. ವಾ: ಎಂತರ ಹಂಗೆ ಕೆಮಿಲಿ ಗುಟ್ಟ್ ಹೇಳ್‌ದು.

ಗುಡಗೆ /*guḍagɛ*/ ನಾ. 1. ಮುಸುಕು, 2. ಹೊದಿಕೆ, 3. ಮರೆಮಾಡು, 3. ಮುಖವನ್ನು ಮರೆಮಾಡಿಕೊಳ್ಳುವ ಬಟ್ಟೆ. 1. a mask, 2. a blanket, 3. to cover, 4. to cover the face with a long scarf. ವಾ: ಗುಡಗೆನ ತೆಗಿ ಗೂಡೆನ ಮೋರೆನ ಒಮ್ಮೆ ನೋಡ್‌ನೊ.

ಗುಡಾಣ[1] /*guḍa:ṇa*/ ನಾ. 1. ಗೋದಾಮು, 2. ವಸ್ತುಗಳನ್ನು ಶೇಖರಿಸಿ ಇಡುವ ಸ್ಥಳ, 3. ದೊಡ್ಡ ಮಡಕೆ, ಆಕಾರದಲ್ಲಿ ದುಂಡಾಗಿದ್ದು ಸುಮಾರು ಒಂದು ಮೀಟರ್ ಎತ್ತರವಿದ್ದು ರೈತರು ಇದನ್ನು ನೀರು ತುಂಬಿಡಲು, ಕಾಳುಕಡೆ ಹಾಕಿಡಲು ಬಳಸುತ್ತಾರೆ. 1. a godown, 2. a warehouse, 3. a large, round clay pot of one meter in height to store grains, water, etc. ವಾ: ಗುಡಾಣಲಿ ಎಲಿಗ ತುಂಬಿಹೋಗೊಳೊ.

ಗುಡಾಣ[2] /*guḍa:ṇa*/ ನಾ. 1. ಹೊಟ್ಟೆ ತುಂಬ ದಪ್ಪ ಇದ್ದರೆ ತಮಾಷೆಗೆ ಹೇಳುವ ಮಾತು, 2. ಕೊಮ್ಮೆ. 1. a potbelly, used for an obese person, 2. a cauldron. ವಾ: ಉಂಡ್ ಉಂಡ್ ಹೊಟ್ಟೆ ನೋಡ್ ಗುಡಾಣನಂಗೆ ಆವ್ತು.

ಗುಡಾರ[1] /*guḍa:ra*/ ನಾ. ಕೋಳಿಗೂಡು. a hen coop. ವಾ: ಗುಡಾರಲಿ ಹಾವ್ ಸೇರಿಕಂಡುಟು.

ಗುಡಾರ[2] /*guḍa:ra*/ ನಾ. 1. ಗುಡಾರ, 2. ಬಿಡಾರ, 3. ಡೇರೆ. 1. a tent, 2. a temporary shelter, 3. a tent. ವಾ: ಅಲೆಮಾರಿಗಳ ವಾಸ ಗುಡಾರಲೆ.

ಗುಡಿಹೊದ್ದ್ /*guḍihoddɨ*/ ಕ್ರಿವಿ. ತಲೆಯಿಂದ ಕಾಲಿನವರೆಗೆ ಹೊದಿಕೆಯಿಂದ ಹೊದೆದು ಮಲಗು. to cover oneself with blanket from toe to head. ವಾ: ಉಗ್ಗಪ್ಪ ಸೆಳಿತ ಗುಡಿ ಹೊದ್ದ್ ಮೊಲ್ಗಿದ್.

ಗುಡಿ[1] /*guḍi*/ ನಾ. ನೆಲದಲ್ಲಿ ತೋಡುವ ಹೊಂಡ. a pit in the ground. ವಾ: ಕೊಟ್ಟು ತಕಂಡ್ ಗುಡಿ ತೋಂಡುದು.

ಗುಡಿ[2] /*guḍi*/ ನಾ. 1. ಮಂದಿರ, 2. ದೇವಾಲಯ, 3. ದೇವಸ್ಥಾನ. 1. a temple, 2. a place or worship, 3. a temple. ವಾ: ಗುಡಿಗೆ ಹೋಗಿ ಬಂದನಾ?

ಗುಡಿ[3] /*guḍi*/ ನಾ. 1. ಕಂಬಳಿ, 2. ಹೊದಿಕೆ. 1. woolen blanket, 2. a blanket. ವಾ: ಈ ಉರಿ ಬಿಸ್ಲ್‌ಲಿ ಗುಡಿ ಹೊದ್ದ್ ಮೊಲ್ಗಿಟಲ. ಪ: ಗುಡಿಹೊದಿ – ಮುಸುಕು ಹಾಕು

ಗುಡಿವಸ್ತ್ರ /*guḍivastra*/ ನಾ. 1. ಮದುಮಗ ಅಥವಾ ಮದುಮಗಳ ತಲೆಗೆ ಹಾಕುವ ಬಟ್ಟೆ, 2. ಗುಡಿಸೀರೆ. 1. a cloth put on the head of a bride/ bridegroom, 2. a saree used in a ritual. ವಾ: ಮೊದುವೆಲಿ ಹೈದ ಮತ್ತೆ ಗೂಡೆನ ತಲೆಗೆ ಗುಡಿವಸ್ತ್ರನ ಹಾಕಂಡಿದ್ದವೆ. **ಗುಡಿಸೀರೆ** /*guḍisi:rɛ*/ ವಾ: ಮೊದುವೆಲಿ ಹೈದ ಮತ್ತೆ ಗೂಡೆ ತಲೆಗೆ ಗುಡಿಸೀರೆನ ಹಾಕಣಕು.

ಗುಡು /*guḍu*/ ಕ್ರಿ. 1. ಗುಡಿಸು, 2. ಕಸ ತೆಗೆ. 1. to sweep, 2. to dust. ವಾ: ಬೇಗ ಬೇಗ ಮನೆ ಗುಡು.

ಗುಡುಂಜಿ /*guḍuɲji*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಗುಡ್ಕು /*guḍku*/ ನಾ. 1. ಗುಟುಕು, 2. ಕುಟುಕು, 3. ಒಂದು ಸಲ ಕುಡಿಯುವಷ್ಟು, 1. a sip of water, 2. to sting, 3. a quantity of water one can sip at a time. ವಾ: ಬಾಣ್ತಿ ಹದಿನಾರ್ ದಿನಗಳ ಮುಟ್ಟ ಒಂದೊಂದ್ ಗುಡ್ಕು ನೀರ್ ಕುಡಿಯಬೊತ್ತ್. **ಗುಡ್ಕ್ ನೀರ್** /*guḍkɨ ni:ri*/ 1. ಒಂದು ಹನಿ ನೀರು, 2. ಒಂದು ಸಲ ಕುಡಿಯುವಷ್ಟು. 1. a drop of water, 2. a sip of water. ವಾ: ನಾ ಹೊತಾರೆಂದ ಗುಡ್ಕ್ ನೀರ್ ಸನ ಕುಡ್‌ತ್‌ಲೆ.

ಗುಡ್ಗೆ /*guḍgɛ*/ ನಾ. 1. ಮುಸುಕು, 2. ಹೊದಿಕೆ, 3. ಮರೆಮಾಡು, 3. ಮುಖವನ್ನು ಮರೆಮಾಡಿಕೊಳ್ಳುವ ಬಟ್ಟೆ. 1. a mask, 2. a blanket, 3. to cover, 4. to cover the face with a long scarf. ವಾ: ಗುಡಗೆನ ತೆಗಿ ಗೂಡೆನ ಮೋರೆನ ಒಮ್ಮೆ ನೋಡ್‌ನೊ.

ಗುಡ್ಗ್ /*guḍgɨ*/ ನಾ. 1. ಗುಡುಗು, 2. ಮೇಘಗರ್ಜನೆ, 3. ಮೇಘ ಧ್ವನಿ. 1. thunder, 2. a loud rumbling noise due to the movement of clouds, 3. crashing noise of clouds. **ಗುಡ್ಗ್ ಗುಡ್ಗಿತ್ ಬೆಟ್ಟ ನಡ್ಗಿತ್, ಹಸಿಹುಲ್ಲ್ ಹಾಕದ ಬಗೆಯೇನ್, ಹಸಿ ಹುಲ್ಲು ಹಾಕಿದೆ ಕರ್‌ನ ಕಟ್ಟಿದೆ ಮೇಯದ ಬಗೆಯೇನ್ – ಊಟಕೆ ಬೆಣ್ಣೆ ಹಾಕುದು(ಒ).** ವಾ: ಗುಡ್ಗ್ ಸಮೇತ

ಮಳೆ ಬಂದದೆ ಕಂಡದೆ ಮೋಡ ಕಟ್ಟಿಟು, ಬೇಗ ಮನೆಗೆ ಎತ್ತಿಕಂಬೊನೊ.

ಗುಡ್ಚಿಲ್ /*guḍcilɨ*/ ನಾ. 1. ಗುಡಿಸಲು. a hut. ವಾ: ಹಿಂದೆನ ಕಾಲದ ಗುಡ್ಚಿಲ್‌ಲಿ ಇದ್ದ ನೆಮ್ಮದಿ, ಕುಸಿ ಈಗನ ಅರಮನೆಲಿ ಇಲ್ಲೆ.

ಗುಡ್ಡ[1] /*guḍḍa*/ ನಾ. 1. ಸ್ನಾನಗೃಹ, 2. ಬಚ್ಚಲು ಮನೆ. 1. bathroom, 2. a shower. ವಾ: ನಾ ಗುಡ್ಡಕೆ ಮೀಯಕೆ ಹೋನೆ.

ಗುಡ್ಡ[2] /*guḍḍa*/ ನಾ. 1. ಬೆಟ್ಟಗುಡ್ಡ, 2. ದಿಡ್ಡು, 3. ಎತ್ತರದ ಜಾಗ. 1. hill, 2. a hillock, 3. raised ground. ವಾ: ಗುಡ್ಡಲಿ ಮಂಡೆಗೆ ನೀರ್ ಹಾಕೊಕು.

ಗುಡ್ಡ[3] /*guḍḍa*/ ನಾ. 1. ಗಿಡ್ಡ, 2. ಚಿಕ್ಕದಾದ. 1. short, 2. small. ವಾ: ಅರ್ವೆ ಗುಡ್ಡ ಆಗುಟು. ಪ: ಗುಡ್ಡು

ಗುಡ್ಡಂದ್ರ /*guḍḍandra*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಗುಡ್ಡಕೆ ಕಿಚ್ಚಿಹಾಕ್ /*guḍḍakɛ kicciha:kɨ*/ ಕ್ರಿವಿ. ನೀರು ಕಾಯಿಸು. to boil water. ವಾ: ಬೇಗ ಗುಡ್ಡಕೆ ಕಿಚ್ಚಿಹಾಕ್.

ಗುಡ್ಡಕ್ಕೆ ಬೆಂಕಿ ಹಾಕ್ /*guḍḍakkɛ bɛŋki ha:kɨ*/ ನಾ. ಸ್ನಾನಕ್ಕೆ ನೀರು ಕಾಯಿಸುವ ಪಾತ್ರೆಯ ಒಲೆಗೆ ಬೆಂಕಿ ಮಾಡು. starting the fire to boil the water for bath. ವಾ: ಗುಡ್ಡಕ್ಕೆ ಬೆಂಕಿ ಹಾಕ್‌ಕೆ ಕುಂಟೆಗಿದ್ದರೆ ಒಳ್ಳದ್.

ಗುಡ್ಡಗಾಡ್ /*Guḍḍaga:ḍɨ*/ ನಾ. 1. ಗುಡ್ಡಗಾಡು. a mountainous region. ವಾ: ಹಳ್ಳಿದ್ ಹಕ್ಕಲೆಪತ್ರೆಲ್ಲ ಗುಡ್ಡಗಾಡ್ ಜಾಸ್ತಿ.

ಗುಡ್ಡನ /*guḍḍana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಗುಡ್ಡನಮನೆ /*guḍḍanamanɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಗುಡ್ಡಿಲ್ /*guḍḍilɨ*/ ನಾ. ಗುಡಿಸಲು. a hut. ವಾ: ಗುಡ್ಚಿಲ್ ಲಿ ತಟ್ಟಿನೆ ಬಾಗ್ಲ್.

ಗುಡ್ಡು /*guḍḍu*/ ನಾ. 1. ಗಿಡ್ಡದ, 2. ಚಿಕ್ಕದಾದ. 1. short, 2. small. ವಾ: ಗುಡ್ಡು ಹಗ್ಗ ಸಾಕಾದ್ಲೆ ಗೋಣಿ ಬಾಯಿ ಕಟ್ಟಿಕೆ.

ಗುಡ್ಡೆ[1] /*guḍḍɛ*/ ನಾ. ಬೆಟ್ಟ. a hill. ವಾ: ಗುಡ್ಡೆ ನೋಡಿ ಬಂದೊ.

ಗುಡ್ಡೆ[2] /*guḍḍɛ*/ ನಾ. 1. ರಾಶಿ, 2. ರಾಶಿ ಮಾಡು. 1. a heap, 2. to gather. **ಬಟ್ಟೆ ಕರಿ ಆದ್ರೂ ಅಂವನ ನೂಲು ಕರಿ ಆಲೆ – ಗುಡ್ಡಗೆ ಕಿಚ್ಚಿ ಹೋಕನ ನಡೂಲಿರ್ವ ದಾರಿ(ಒ).** ವಾ: ಒಳ್ಳಮೆಣ್ಸ್ ನೆಲ್ಲ ಗುಡ್ಡೆ ಹಾಕಕಾಯ್ತ್. **ಗುಡ್ಡೆಹಾಕ್** /*guḍḍɛ ha:kɨ*/ ನಾವಿ. ರಾಶಿ ಹಾಕು. to gather. ವಾ: ಬೇಗ ಹರ್‌ಗಿದ ಕಾಪಿನ ಗುಡ್ಡೆ ಹಾಕ್.

ಗುಡ್ಡೆ[3] /*guḍḍɛ*/ ನಾ. 1. ಎತ್ತರದ ಪ್ರದೇಶ. higher place. ವಾ: ಕಾಲ್ ಬೇನೆ ತಕಂಡ್ ಗುಡ್ಡೆ ಹತ್ತಿಕಾದೆನ?

ಗುಡ್ಡೆ[4] /*guḍḍe*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ನೆಲ್ಲೂರು ಕೆಮ್ರಾಜೆ ಗ್ರಾಮದ ಜಾಗ. a locality in Nelluru Kemraje village in Sullia Taluk of Dakshina Kannada District.

ಗುಡ್ಡೆದೆವ್ವ /*guḍḍɛdɛvva*/ ನಾ. 1. ಗುಳಿಗ, 2. ತುಳುನಾಡಿನ ದೈವ, 3. ಒಂದು ಶಕ್ತಿ. 1. Guliga, a deity, 2. a deity/bhuta of Tulunadu, 3. a spirit. ವಾ: ಗುಡ್ಡೆ ದೆವ್ವಕ್ಕೆ ಕೋಳಿ ಕೊಯ್ದವೆ.

ಗುಡ್ಡೆನೆಕ್ಕಿ /*guḍḍɛ nɛkki*/ ನಾ. ಒಂದು ಔಷಧ ಸಸ್ಯ, ಪೊದರಾಗಿ ಬೆಳೆಯುವುದು. a medicinal plant. ವಾ: ಗುಡ್ಡೆ ನೆಕ್ಕಿ ಒಂದ್ ಮೊದ್ದ್ ನ ದೈ.

ಗುಡ್ಡೆಮನೆ /*guḍḍemane*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಮರಪಡ್ನೂರು ಗ್ರಾಮದ ಜಾಗ. 1. family, 2. lineage, 3. a locality in Amarapadnuru village in Sullia Taluk of Dakshina Kannada District.

ಗುಡ್ಡೆಹೊಡೆಯದು /*guḍḍɛ hoḍɛyɔdu*/ ನಾ. ಬೆಳೆಯನ್ನು ಅಲ್ಲಲ್ಲಿ ಗುಂಪಾಗಿ ತಿಂದಿರುವುದು, (ಭತ್ತದ ಬೆಳೆಗೆ ಅನ್ವಯವಾಗುವಂತೆ ಹೇಳಲಾಗುತ್ತದೆ). crop being eaten in places (applicable to paddy crop). ವಾ: ಕಾಡಂದಿ ಗದ್ದೆಗೆ ಬಂದ್ ಗುಡ್ಡೆ ಹೊಡೆಯದು.

ಗುಡ್ಡೇರ /*guḍḍe:ra*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಗುಡ್ರ್‌ಕ್ ಹಾಕ್ /*guṭurɨ ha:kɨ*/ ನಾವಿ. 1. ಎತ್ತು

ಅಥವಾ ಹೋರಿಯ ಹೂಂಕಾರ. a sound produced in order to express anger, frustration of bull. ವಾ: ಎತ್ತ್ ಜೋರಾಗಿ ಗುಡ್ರುಕ್ ಹಾಕ್‌ತಿತ್ತ್.

ಗುಡ್ಲು[1] /*guḍlu*/ ನಾ. 1. ಗುಡಿಸಲು. a hut. ವಾ: ಸಣ್ಣದಾಗಿ ಗುಡ್ಲು ಕಟ್ಟಿಕಂಡೊಳೊ.

ಗುಡ್ಲು[2] /*guḍlu*/ ನಾ. 1. ಕೊಲ್ಲಿ, 2. ಚಿಕ್ಕ ಪ್ರವಾಹ, 3. ಹಳ್ಳ, 4. ತೋಟಗಳ ಮಧ್ಯದಲ್ಲಿ, ಸಣ್ಣ ಬೆಟ್ಟಗಳಲ್ಲಿ ಸಣ್ಣ ಪ್ರಮಾಣದಲ್ಲಿ ಹರಿಯುವ ನೀರು. 1. a bay, 2. a small flood, 3. a pond, 4. flowing water in between the fields, hillocks, etc. ವಾ: ಗುಡ್ಲುಲಿ ಹರೆವ ನೀರ್ ಬಾರಿ ತಿಳಿಯಾಗಿ ತಣ್ಣಂಗೆ ಇದ್ದದೆ.

ಗುಡ್ಸ್ /*guḍsi*/ ನಾ. ಗುಡಿಸು, ನಾಶಮಾಡು. to sweep. **ಗುಡ್ಸಿ ಗುಂಡಾಂತರ ತೇಕ್ತ್(ಗಾ).** ವಾ: ಕೋಂಬರೆನ ಗುಡ್ಸ್

ಗುಡ್‌ಸಲ್ /*guḍɨsalɨ*/ ನಾ. ಗುಡಿಸಲು. a hut. **ಗುಣವಂತೆ ಇರ್‌ವ ಗುಡ್‌ಸಲೇ ಸ್ವರ್ಗ(ಗಾ).** ವಾ: ನಾವು ಸಣ್ಣ ಗುಡ್‌ಸಲ್‌ಲಿ ಇರೊಮೊ.

ಗುಡ್ಸು /*guḍsu*/ ನಾ. ಗುಡಿಸು. to sweep. ವಾ: ಮನೆ ಕಸ ಗುಡ್ಸು ಬಾ. ಪ: ಗುಡ್ಸುದು – ಗುಡಿಸುವುದು; ಗುಡ್ಸಿತ್ – ಗುಡಿಸಿದನು/ಳು; ಗುಡ್ಸಿದೆ – ಗುಡಿಸಿದೆ; ಗುಡ್ಸಿನೆ – ಗುಡಿಸುತ್ತೇನೆ; ಗುಡ್ಸಿರೆ – ಗುಡಿಸಿದರೆ;

ಗುಣ /*guṇa*/ ನಾ. 1. ಗುಣ, 2. ಸ್ವಭಾವ, 3. ನಡತೆ. 1. nature, 2. behaviour, 3. character. ವಾ: ದುಡ್ಡಿಲ್ಲರು ಪೊರ್ಲ್‌ನ ಗುಣ ಇರೊಕು. **ಗುಣಪಡ್ಸ್** /*guṇapaḍsi*/ 1. ಚಿಕಿತ್ಸೆ ಕೊಡು, 2. ಗುಣಪಡಿಸು. 1. to treat, 2. to heal. ವಾ: ಮದ್ದ್ ಕೊಟ್ಟ್ ಗುಣಪಡ್ಸ್. ಪ: ಗುಣಪಡ್ಸಕಾರೆ. **ಗುಣವಂತ** /*guṇavanta*/ 1. ಗುಣವಂತ, 2. ಉತ್ತಮ ನಡತೆಯುಳ್ಳವನು. 1. a righteous person, 2. a virtuous person. ವಾ: ಅಂವ ಬಾರಿ ಗುಣವಂತ ಹೈದ. ಪ: ಗುಣವಾತ್ – ಗುಣವಾಯಿತು. **ಗುಣಾತ್** /*guṇa:tɨ*/ 1. ಗುಣವಾಯಿತು, 2. ವಾಸಿಯಾಯಿತು. 1. cured, 2. healed. ವಾ: ಕಾಲಿಗೆ ಆದ ಗಾಯ ಗುಣಾತ್.

ಗುಣುಗುಣು /*guṇuguṇu*/ ಅ. 1. ಗೊಣಗುವ ಶಬ್ದ, 2. ಅಸ್ಪಷ್ಟವಾಗಿ ಮಾತನಾಡುವಿಕೆ, 3. ವಟಗುಡು. 1. expression of dissatisfaction using indistinct expressions, 2. an unclear speech, 3. to talk repeatedly in an unclear way. ವಾ: ಹೆಣ್ಮಕ್ಕೆಲ್ಲ ಸೇರಿಕಂಡ್ ಗುಣುಗುಣುತೇಳ್ವೆ.

ಗುಣ್ಕ /*guṇka*/ ನಾ. ಋಣಾತ್ಮಕ ಚಿಂತನೆ ಇರುವವನು. thinking negativesly about something. ವಾ: ಅಂವನ ಗುಣ್ಕತನ ಎಲ್ಲವ್ಕೆ ಗೊತ್ತಾತ್.

ಗುಣ್ಕುತನ /*guṇkutana*/ ನಾ. ಮರೆಯಲಾಗದ ಕಹಿ ಘಟನೆಗಳ ಮನಸ್ಸಿನಲ್ಲೆ ಲೆಕ್ಕ ಹಾಕುತ್ತಾ ಹಗೆ ಸಾಧಿಸು. to take revenge against somebody keeping in mind the bitter experiences of the past. ವಾ: ಗುಣ್ಕುತನ ಮೋರೆಲಿ ಎದ್ದ್ ಕಂಡದೆ.

ಗುಣ್ಸು /*guṇsu*/ ನಾ. 1. ಗುಣಿಸು, 2. ಗುಣಾಕಾರ ಮಾಡು, 3. ಲೆಕ್ಕ ಹಾಕು. 1. to multiply, 2. multiplication, 3. to count. ವಾ: ಹೈದಂಗೆ ಗುಣ್ಸುದು ಹೆಂಗೆತ ಹೇಳಿಕೊಡು.

ಗುತ್ತಿ[1] /*Gutti*/ ನಾ. 1. ಮಜ್ಜಿಗೆಗುತ್ತಿ, 2. ಮಜ್ಜಿಗೆ ಕಡೆಯುವ ಬಿದಿರಿನ ತುಂಡು, 3. ಅಂಡೆ. 1. a churner (of buttermilk), 2. a bamboo churner (of buttermilk), 3. a bamboo tool. ವಾ: ಗುತ್ತಿಲಿ ಮಜ್ಜಿಗೆ ಕಡೆದು.

ಗುತ್ತಿ[2] /*gutti*/ ನಾ. ಕೊಳವೆ ಆಕಾರದ ಉದ್ದನೆಯ ಪಾತ್ರೆ. a vessel in the shape of a hollow cylinder. ವಾ: ಗುತ್ತಿ ಗಂಜಿಲಿ ದೋಸೆ ಬಂದನ ಹಾಕಿಸ್.

ಗುತ್ತಿ[3] /*gutti*/ ನಾ. 1. ಗುತ್ತಿಗೆ, 2. ಕರಾರು, 3. ಒಪ್ಪಂದ, 4. ಒಡಂಬಡಿಕೆ, 5. ಮುಚ್ಚಳಿಕೆ. 1. a contract, 2. a bond, 3. an agreement, 4. mutual agreement, 5. a written promise. ವಾ: ಜಾಗೆನ ಗುತ್ತಿಲಿ ತಕಂಡದ್.

ಗುತ್ತಿ[4] /*gutti*/ ನಾ. 1. ಮರ, ಗಿಡ ಕಡಿದ ಮೇಲೆ ಬುಡದಲ್ಲಿ ಉಳಿವಂತದು, 2. ಕಾಂಡ ಕತ್ತರಿಸಿದ ಬುಡ, 3. ಗಿಡ ಕಡಿದ ನಂತರ ಉಳಿದಿರುವ ಭಾಗ. 1. foot of a tree, a part that remains on the ground after the stem of the tree has been cut, 2. stem of a tree, 3. the remaining trunk of tree, after the tree has been cut. ವಾ: ಗುತ್ತಿ ಹೆಟ್ಟಿತ್ ಕಾಲಿಗೆ.

ಗುತ್ತಿ[6] /*gutti*/ ನಾ. 1. ವಂಶ, 2. ಪೀಳಿಗೆ, 3. ಕುಲ,

4. ಸಂತತಿ. 1. a lineage, 2. a generation, 3. ancestry, 4. descent. ವಾ: ಗುತ್ತಿ ನಾಸ ಆಗಿ ಹೋತ್.

ಗುತ್ತಿ[7] /*gutti*/ ನಾ. ಹುತ್ತರಿ ಹಬ್ಬದಲ್ಲಿ ಭತ್ತದ ತೆನೆ ತುಂಬಿ ಮನೆಗೆ ತರಲು ಬಳಸುವ ಬಿದಿರಿನ ವಸ್ತು. carrying paddy in a bamboo basket during the festival of harvest. ವಾ: ಕೊಯ್ದ ಕದ್ರ್ ನ ಗುತ್ತಿಲಿ ಹಾಕಂಡ್ ಹಿಡ್ಕಂಡ್ ಬಾದು.

ಗುತ್ತಿಕಡಾಯ /*gutti kaḍa:ya*/ ನಾ. 1. ಸಮಾರಂಭಗಳಲ್ಲಿ ಅಡಿಗೆ ಮಾಡಲು ಬಳಸುವ ಗುತ್ತಿಯಾಕಾರದ ದೊಡ್ಡ ಪಾತ್ರೆ, 2. ಉದ್ದ ರೂಪದಲ್ಲಿರುವ ದೊಡ್ಡ ಪಾತ್ರೆ. 1. a deep vessel used in cooking, during festivals, 2. a deep vessel. ವಾ: ಗುತ್ತಿ ಕಡಾಯ ಇದ್ದರೆ ಒಳ್ಳದಾದೆ.

ಗುತ್ತಿಗಂಜಿ /*guttigaŋji*/ ನಾ. 1. ಕೊಳವೆಯಾಕಾರದ ಉದ್ದನೆಯ ಪಾತ್ರೆ, 2. ಉದ್ದವಾಗಿರುವ ಪಾತ್ರೆ. 1. a deep vessel, usually in the shape of a an empty cylinder, 2. a deep vessel. ವಾ: ಗುತ್ತಿಗಂಜಿನ ಹುಡ್ಕುತೊಳೊ.

ಗುತ್ತಿಗಾರು /*guttiga:ru*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಗುತ್ತಿಗಾರು ಗ್ರಾಮದ ಜಾಗ. 1. family, 2. lineage, 3. a locality in Guttigaru village in Sullia Taluk of Dakshina Kannada District.

ಗುತ್ತಿನಡ್ಕ /*guttinaḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಆಲೆಟ್ಟಿ ಗ್ರಾಮದ ಜಾಗ. a locality in Aletti village in Sullia Taluk of Dakshina Kannada District.

ಗುತ್ತಿಮಂಡ್ಳ /*guttimaṇḍḷa*/ ನಾ. ಒಂದು ಜಾತಿಯ ಮರ. a tree. ವಾ: ಇದ್ ಗುತ್ತಿಮಂಡ್ಳ ಮರನ?

ಗುತ್ತಿಮುಂಡನ /*guttimuṇḍana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಗುತ್ತಿಯೇಟಿ /*guttiye:ṭi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಗುತ್ತಿಲರು /*guttilaru*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಗುತ್ತಿಹಾಕುದು /*gutti ha:kudu*/ ನಾ. ಮನೆ ಅಥವಾ ಕಟ್ಟಡ ಕಟ್ಟುವಾಗ ನಾಲ್ಕು ಮೂಲೆಗಳಲ್ಲಿ ಅಳತೆ ನೋಡಿ ಮರದ ಗೂಟ ಹೊಡೆದು ನೂಲು ಕಟ್ಟುವುದು, ಇದರಲ್ಲಿ ಒಂದು ಗೂಟ ಹಲಸಿನ ಮರದ್ದು ಆಗಿರಲೇಬೇಕು. The process of measuring the plot before the construction of a house. Small stumps/pegs are hammered into the ground, and thread is tied around them connecting all the four directions. As a rule one of the stumps should from a jackfruit tree. ವಾ: ಮನೆ ಕಟ್ಟಿಕೆ ಗುತ್ತಿ ಹಾಕುದು. ಪ: ಗುತಿಹಾಕುವಂದ್ – ಗುದ್ದಲಿ ಪೂಜೆಯ ದಿನ

ಗುತ್ತು /*guttu*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಎಣ್ಮೂರು ಗ್ರಾಮದ ಜಾಗ. 1. family, 2. lineage, 3. a locality in Enmuru village in Sullia Taluk of Dakshina Kannada District.

ಗುತ್ತು ಮನೆ /*guttu manɛ*/ ನಾ. 1. ಐನ್ ಮನೆ, 2. ಮೂಲಮನೆ. an ancestral house of Kodava people (ain mane). ವಾ: ಗುತ್ತು ಮನೆಲಿ ಕುಟುಂಬದವೆಲ್ಲ ವರ್ಸಕೊಮ್ಮೆ ಸೇರ್ವೆ.

ಗುತ್ತುಗಾರಿಕೆ /*guttuga:rikɛ*/ ನಾ. 1. ಜಮೀನ್ದಾರಿತನ, 2. ಘನತೆ, 3. ಗೌರವ, 4. ಅಹಂ. 1. feudalism – land-owning system, 2. status, 3. respect, 4. ego. ವಾ: ಅಂವನ ಗುತ್ತುಗಾರಿಕೆ ಊರಿಗೆಲ್ಲ ಗೊತ್ತುಟು.

ಗುತ್ತುಬೈಲು /*guttubailu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮಂಡೆಕೋಲು ಗ್ರಾಮದ ಜಾಗ. a locality in Mandekolu village in Sullia Taluk of Dakshina Kannada District.

ಗುದ್ದೊಳಿ /*guddɔ:ḷi*/ ನಾ. 1. ಗುದ್ದಲಿ, 2. ನೆಲವನ್ನು ಅಗೆಯಲು ಬಳಸುವ ಮರದ ಉದ್ದನೆಯ ಹಿಡಿಯುಳ್ಳ ಕಬ್ಬಿಣದ ಒಂದು ಸಾಧನ. 1. a spade, tool used in digging, 2. a spade, tool used in digging. ವಾ: ಬಾಳೆ ನೆಡಿಕೆ ಗುದ್ದೊಳಿ ತಕಂಡ್ ಗುಂಡಿ ತೆಗಿ.

ಗುದ್ದ್ /*guddi*/ ಕ್ರಿ. 1. ಗುದ್ದು, 2. ಪೆಟ್ಟು, 3. ಮುಷ್ಟಿಯಿಂದ ಹೊಡೆ. 1. to punch, 2. to beat, 3.

to punch with one's fist. **ಬೊಗ್ಗಿದವಂಗೆ ನಾಲ್ಕ್ ಗುದ್ದ್ ಜಾಸ್ತಿ(ಗಾ).** ವಾ: ಅಂವ ನಂಗೆ ಬೆನ್ನಿಗೆ ಗುದ್ದುದು. **ಗುದ್ದಿ** /*guddi*/ 1. ಗುದ್ದಿ, 2. ತಳ್ಳಿ, 3. ನೂಕಿ, 4. ಚುಚ್ಚಿ. 1. punch 2 push, 3. shove, 4. pierce. ವಾ: ಕರ್ ಕೆಚ್ಚ್‌ಲ್‌ಗೆ ಗುದ್ದಿತ್. **ಗುದ್ದಿಸಿತ್** /*guddisitɨ*/ 1. ಗುದ್ದಿಸಿದನು, 2. ಗುದ್ದಿಸಿದಳು, 3. ಡಿಕ್ಕಿ ಹೊಡೆಸು. 1. he caused an accident/hit someone/something, 2. she caused an accident/hit someone/something, 3. to cause an accident. ವಾ: ಬೈಕ್‌ನ ಬರೆಗೆ ಗುದ್ದಿಸಿತ್. **ಗುದ್ದು** /*guddu*/ 1. ಗುದ್ದು, 2. ಮುಷ್ಟಿಯಿಂದ ಹೊಡೆ, 3. ಏಟುಹಾಕು. 1. to punch, 2. to punch with one's fist, 3. to beat someone. ವಾ: ಬೆನ್ನ್‌ಗೆ ಹಿಂದೆಂದ ಒಂದ್ ಗುದ್ದು. ಪ: ಗುದ್ದಿಕಂಬದು – ಹೊಡೆದಾಟ; ಗುದ್ದಿಕಂಡ್ – ಹೊಡೆದಾಡಿಕೊಂಡು; ಗುದ್ದಿಕೆ – ತಿವಿಯಲು

ಗುನ್ಕ[1] /*gunka*/ ನಾ. 1. ತನ್ನ ಭಾವನೆಗಳನ್ನು ಹೊರ ತೋರ್ಪಡಿಸದೆ ಮನಸ್ಸಿನಲ್ಲಿಯೆ ಲೆಕ್ಕ ಹಾಕುವುದು, 2. ಗುಟ್ಟು ಮಾಡುವುದು, 3. ಇತರರಿಗೆ ತೊಂದರೆ ಮಾಡಿಯೂ ತನಗೇನು ತಿಳಿಯದಂತೆ ಇರುವುದು, 4. ಮಳ್ಳ. 1. not showing one's emotions externally, 2. keeping secrecy, 3. causing trouble to others but acting as if one is unaware of it, 4. secretive. ವಾ: ಎಲ್ಲ ಮಾಡಿ ಗುನ್ಕ ನಂಗೆ ಇರ್‌ದು. ಪ: ಗುಣ್ಕ

ಗುನ್ಕ[2] /*gunnka*/ ಅ. ನುಂಗುವುದನ್ನು ಹೇಳುವ ರೀತಿ. indicates 'swallowing'. ವಾ: ಗುಂನ್ಕತ ಮುದ್ದೆನ ನುಂಗಿತ್. ಪ: ಗುಳ್‌ಕ

ಗುನ್ಕಿ /*gunki*/ ನಾ. 1. ಮಳ್ಳಿ, 2. ಗುಟ್ಟು ಬಿಟ್ಟು ಕೊಡದಿರುವುದು. 1. a secretive woman 2. not revealing secrets. ವಾ: ಅದ್ ಬಾರಿ ಗುನ್ಕಿ.

ಗುನ್ನ /*gunna*/ ನಾವಿ. 1. ಎಲ್ಲವನ್ನು ಮನಸ್ಸಿನಲ್ಲೇ ಇಟ್ಟುಕೊಳ್ಳುವವ, 2. ಬಿಚ್ಚುಮನಸ್ಸಿನಲ್ಲದವ. 1. an introvert, 2. a reticent person. ವಾ: ಅಂವಂದ್ ಗುನ್ನ ಮನ್‌ಸ್, ಎಂತರ್‌ನೂ ಹೇಳ್‌ದುಲೆ.

ಗುಪ್ಪೆ /*guppɛ*/ ನಾ. 1. ರಾಶಿ, 2. ಕುಪ್ಪೆ. 1. a group/a heap, 2. bundle. ವಾ: ಸೆಗ್ಣಿ ಗುಪ್ಪೆ ಗುಪ್ಪೆ ಬಿದ್ದುಟು.

ಗುಬ್ಬಿಹಕ್ಕಿ /*gubbihakki*/ ನಾ. 1. ಗುಬ್ಬಚ್ಚಿ, 2. ಗುಂಚಕ್ಕಿ. 1. a sparrow, 2. a house sparrow. **ಅಯ್ಯೆಗೆ ಹೊಡಿಬಡ ಗುಬ್ಬಿ ಹಕ್ಕಿ ಗೂಡ್ ಹಾಳ್ ಮಾಡ್ಬಡ(ಗಾ).** ವಾ: ಈಗ ಗುಬ್ಬಿಹಕ್ಕಿಗ ಕಾಂಬಕೆ ಸಿಕ್ಕುಲೆ, ಎಲ್ಲ ಅಳ್ದ್ ಹೋಗ್ತುಟ್ಟು.

ಗುಬ್ಬೆ[1] /*gubbɛ*/ ನಾ. ಸೇರು, ಕಳಸೆಯಲ್ಲಿ ಬಾಯಿಗಿಂತಲೂ ಹೆಚ್ಚು ಎತ್ತರ ನಿಲ್ಲುವ ಅಕ್ಕಿ/ಭತ್ತ, ರಾಗಿ ಇತ್ಯಾದಿಗಳನ್ನು ಅಳತೆ ಮಾಡುವ ವಿಧಾನ. a unit of weight, a seer. ವಾ: ಅಕ್ಕಿ, ರಾಗಿ, ಬತ್ತ ಇಂತದರೆಲ್ಲ ಸೇರ್‌ಗೆ ತುಂಬಿ ಅದ್ ಗುಬ್ಬೆ ಆಗಿ ನಿತ್ತ ಮೇಲೆ ಅಲ್ಲಾಡದಂಗೆ ಎತ್ತಿ ಸುರೇತಿದ್ದೊ.

ಗುಬ್ಬೆ[2] /*gubbɛ*/ ನಾ. ಒಂದು ಗುಡ್ಡೆ. a heap. ವಾ: ದಾರಿಲಿ ಬಾಕನ ಒಂದ್ ಗುಬ್ಬೆ ಸೆಗ್ಣಿ ಸಿಕ್ತ್.

ಗುಮಾನ /*guma:na*/ ನಾ. 1. ಸಂದೇಹ, 2. ಅನುಮಾನ, 3. ತಪ್ಪು ತಿಳಿದುಕೊಳ್ಳುವಿಕೆ, 4. ಸಂಶಯ, 5. ಗುಮಾನಿ. 1. a doubt, 2. a suspicion, 3. misunderstanding, 4. a doubt, 4. a suspicion. ವಾ: ನಮಿಗೆ ಅಂವನೇ ಕದ್ದದ್‌ತ ಗುಮಾನ ಉಟ್ಟು.

ಗುಮಾನಿ /*guma:ni*/ ನಾ. ಸಂಶಯ. suspicion. ವಾ: ಅವ್ವ ಕೆಲ್ಸಕೆ ಹೋದೆನ ಇಲ್ಲೆನತ ನಂಗೆ ಗುಮಾನಿ.

ಗುಮ್ಮ /*gumma*/ ನಾ. ಗೂಬೆ. an owl. **ಕಕ್ಕೆಗೆ ಕತ್ತಲೆ ಆಕಿಲೆ ಗುಮ್ಮಂಗೆ ಹಗಲ್ ಆಕಿಲೆ(ಗಾ).** ವಾ: ಗುಮ್ಮ ಬಂದದೆನೆ ಮಕ್ಕಳೆ ಗಲಾಟೆ ಮಾಡ್ಬಡಿ.

ಗುಮ್ಮ ಆಟ /*gumma a:ʈa*/ ನಾ. ಮಕ್ಕಳು ಅಡಗಿಕೊಂಡು ಆಡುವ ಆಟ. I-spy game played by children. ವಾ: ಕತ್ತಲೆ ಕೊಂಬರೆಲಿ ಗುಮ್ಮ ಆಟ ಆಡ್ತಿದ್ದದ್ ನೆಂಪಾದೆ.

ಗುಮ್ಮ ಹೂಂಗುಡ್ಡು /*gumma hu:ŋguɖɖu*/ ಅ. ಗೂಬೆ ಹ್ಞೂಂ ಅನ್ನುವುದು. an owl. ವಾ: ಗುಮ್ಮ ಹೂಂಗುಡ್ಡು ಕೇಳ್ದೆ.

ಗುಮ್ಮಟಗದ್ದೆ /*gummaʈagaddɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಗುಮ್ಮಟೆ ಕಾಯಿ /*gummaʈɛ ka:yi*/ ನಾ. ಚಿಕ್ಕ ಗಿಡದಲ್ಲಿ ಆಗುವ ಸಿಹಿಯಾದ ಕಾಡುಹಣ್ಣು. a wild fruit grown in a small plant. ವಾ: ಗುಮ್ಮಟೆ ಹಣ್ಣ್ ತಿನ್ನಕ್. ಪ: ಗುಮ್ಮಟೆ

ಗುಮ್ಮಟೆ ದೈ /*gummaʈɛ giɖa*/ ನಾ. 1. ಗುಪ್ಪಟ್ಟೆ ಗಿಡ,

2. ಅಜ್ಜಿ ಪುಟಿಕ ಹಣ್ಣು ಬಿಡುವ ಸಣ್ಣ ಗಿಡ. wonderberry/sunberry. ವಾ: ಗುಮ್ಮಟೆ ದೈಲಿ ಹಣ್ಣ್ ಬುಟ್ಟದೆ. **ಗುಮ್ಮಟೆ ಹಣ್ಣ್** /*gummaṭɛ haṇṇi*/ ತೋಟಗಳಲ್ಲಿ ರಸ್ತೆ ಬದಿಯಲ್ಲಿ ಚಿಕ್ಕ ಗಿಡದಲ್ಲಿ ಸಿಗುವ ಗುಪ್ಪಟ್ಟೆ ಗಿಡದ ಹಣ್ಣು. wonderberry/sunberry. ವಾ: ಗುಮ್ಮಟೆ ಹಣ್ಣ್ ಸಣ್ಣದಾಗಿದ್ದದೆ.

ಗುಮ್ಮಟೆ ಸೊಪ್ಪು /*gummaṭɛ soppu*/ ನಾ. ಗುಮ್ಮಟೆ ಗಿಡದ ಸೊಪ್ಪುವಿನಲ್ಲಿ ವಿಟಮಿನ್ ಎ, ವಿಟಮಿನ್ ಸಿ ಹೇರಳವಾಗಿ ಸಿಗುತ್ತದೆ, ಹಾಗಾಗಿ ಔಷಧಿಗೆ ಬಳಸುತ್ತಾರೆ. wonderberry/sunberry is a rich source of vitamin A and C. ವಾ: ಗುಮ್ಮಟೆ ಸೊಪ್ಪುಲಿ ಮೊದ್ದ್ ಮಾಡಿವೆ.

ಗುಯ್ಂಕ್ /*guynki*/ ಅ. ಒಮ್ಮೆಗೆ ಗುದ್ದುವುದಕ್ಕೆ ಹೇಳುವ ಪದ. punching suddenly. ವಾ: ಅಂವನ ಬೆನ್ನಿಗೆ ಅದ್ ಗುಯ್ಂಕ್‌ತ ಗುದ್ದಿತ್.

ಗುರಿ /*guri*/ ನಾ. 1. ಗುರಿ, 2. ಈಡು, 3. ಲಕ್ಷ್ಯ 4. ಉದ್ದೇಶ. 1. aim, 2. target, 3. to aim at, 4. intention. ವಾ: ಬೊದ್ಕ್ ಲಿ ಗುರಿ ಇರೊಕು. ಪ: ಗುರಿಕಂಡ್

ಗುರಿಕಾನ /*gurika:na*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಬಾಳಿಲ ಗ್ರಾಮದ ಜಾಗ. a locality in Balila village in Sullia Taluk of Dakshina Kannada District.

ಗುರು /*guru*/ ನಾ. 1. ಗುರು, 2. ಹಿರಿಯ, 3. ಉಪಾಧ್ಯಾಯ, 4. ಧರ್ಮವನ್ನು ಬೋಧಿಸುವವನು, 5. ಮಂತ್ರೋಪದೇಶವನ್ನು ಮಾಡುವವನು, 6. ವಿದ್ಯೆಯನ್ನು ಕಲಿಸುವವ. 1. a teacher, 2. a senior person in age, 3. a teacher, 4. the one preaches religion, 5. the one who conducts initiation ceremony with hymns and chants, 6. a teacher. ವಾ: ಎಲ್ಲ ವಿದ್ಯೆಗು ಒಂದ್ ಗುರುತ ಇದ್ದವೆ.

ಗುರುಂಪು /*gurumpu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಸುಳ್ಯ ನಗರದ ಜಾಗ. a locality in Suḷya Nagara village in Sullia Taluk of Dakshina Kannada District.

ಗುರುಂಬು /*gurumbu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಜ್ಜಾವರ ಗ್ರಾಮದ ಜಾಗ. a locality in Ajjavara village in Sullia Taluk of Dakshina Kannada District.

ಗುರುಕಾರೋಣ /*guruka:rɔ:ṇa*/ ನಾ. ನಿಧನ ಹೊಂದಿದ ಹಿರಿಯರು. dead ancestors. ವಾ: ಗುರುಕಾರ್ನೋರಿಗೆ ಬಳ್ಸುದು. **ಗುರುಕಾರ್ನೂರು** /*guruka:rnu:ru*/ ವಾ: ಗುರುಕಾರಣರ ಮರೆಕಾಗದ್.

ಗುರುಗುಟ್ಟು /*guruguṭṭu*/ ನಾ. ಸಿಟ್ಟಿನಿಂದ ದುರುಗುಟ್ಟು. staring with anger. ವಾ: ಆ ನಾಯಿ ಗುರುಗುಟ್ಟಿದೆ.

ಗುರುನೆಲೆ /*gurunɛlɛ*/ ನಾ. ಕುಟುಂಬದ ಮೂಲ. roots of one's family. ವಾ: ಗುರುನೆಲೆನ ಮರೆಕಾಗದ್.

ಗುರುವಪ್ಪ /*guruvappa*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. masculine given name. ಪ: ಗುರುವ

ಗುರುವಮೊಟ್ಟೆ /*guruvamoṭṭe*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಜ್ಜಾವರ ಗ್ರಾಮದ ಜಾಗ. a locality in Ajjavara village in Sullia Taluk of Dakshina Kannada District.

ಗುರುವೀಳ್ಯ[1] /*guru vi:ḷya*/ ನಾ. ಮದುವೆಯಲ್ಲಿ ಗುರು-ಹಿರಿಯರನ್ನು ಗೌರವಿಸಿ ಕಟ್ಟುವ ವೀಳ್ಯ. offering a mark of respect to the teacher. ವಾ: ಗುರು ವೀಳ್ಯತ ಕೊಟ್ಟವೆ.

ಗುರುವೀಳ್ಯ[2] /*guruvi:ḷya*/ ನಾ. ಕೊಡಗಿನ ಅರೆಭಾಷೆ ಗೌಡರು ವೀಳ್ಯ ಶಾಸ್ತ್ರದಲ್ಲಿ 6 ರೀತಿಯ ವೀಳ್ಯ ಬದಲಾಯಿಸಿಕೊಳ್ಳುವ ಕ್ರಮ ಇದೆ, ಇದು ಕೂಡ ಅದರಲ್ಲಿ ಒಂದು ಪ್ರಕಾರದ ವೀಳ್ಯ. 5 ಕವಳಿಗೆ ವೀಳ್ಯದೆಲೆ, 5 ಅಡಿಕೆ, ಸ್ವಲ್ಪಅಡಿಕೆ ಹೋಳು ಇಟ್ಟು ಗೋತ್ರದ ಒಕ್ಕಣೆ ಹೇಳಿ ಬಂಧು-ಬಾಂಧವರು, ನೆಂಟರಿಷ್ಟರು, ಗುರುಮನೆ, ಕಟ್ಟೆಮನೆ, ಈ ಗೋತ್ರದ ಈ ಹೆಸರಿನ ವರನಿಗೆ... ಹೀಗೆ ಹೇಳುವ ಘೋಷವಾಕ್ಯ. Guru Veelya, one of the six customs of exchanging Veelya, in an engagement ceremony among the Arebhashe speaking Gowdas. 5 bunches of betel nut, 5 areca nuts, etc. are handed over to the family of the bride after reciting the tradtional invocation and de. ವಾ: ಗುರುವೀಳ್ಯತೇಲ್‌ದು ವೀಳ್ಯಸಾಸ್ತ್ರಲಿ ಬಳ್‌ಸುದು.

ಗುರ್ಜಿ /*gurji*/ ನಾ. 1. ಸಮಾಧಿ, 2. ಗೋರಿ. 1. a tomb, 2. a grave. ವಾ: ಗಂಡಮೊದಲು ಸತ್ತರೆ ಗುರ್ಜಿ ಕಟ್ಟುವೆ, ಹೆಣ್ಣ್ ಸುರೂಗೆ ಸತ್ತರೆ ಗುರ್ಜಿ ಕಟ್ಟುದ್‌ಲೆ.

ಗುರ್ತ /*gurta*/ ನಾ. 1. ಗುರುತು, 2. ಕುರುಹು, 3. ಚಿಹ್ನೆ. 1. a mark of identity, 2. proof of identity, 3. a symbol. ವಾ: ಮರಕೆ ಗುರ್‌ತ ಮಾಡಿಟ್ಟ್ ಕ. ಪ: ಗುರ್ತ್ಹೋಕು – ಗುರುತಿಸಬೇಕು. **ಗುರ್ತು ಚೀಟಿ** /*gurtu cɛ:ṭi*/ ಗುರುತಿನ ಚೀಟಿ. identity cart. ವಾ: ಗುರ್ತು ಚೇಟಿ ಎಲ್ಲ ಕಡೆನು ಕೇಳುವೆ. **ಗುರ್ತುಗ** /*gurtuga*/ ವಾ: ಮೈ ಮೇಲೆಲ್ಲ ಪರ್‌ಚಿದ ಗುರ್ತುಗ ಕಂಡವೆ. **ಗುರ್ತ್ ಇಲ್ಲದಂಗೆ** /*gurtɨ illadaŋgɛ*/ 1. ಗುರುತು, ಪರಿಚಯ ಇಲ್ಲದಂತೆ ಹೋಗುವುದು. unable to identify. ವಾ: ಗುರ್ತ ಇಲ್ಲದಂಗೆ ನೋಡಿ ನೋಡದವರಂಗೆ ಹೋತು.

ಗುರ್ತು[1] /*gurtu*/ ಕ್ರಿವಿ. 1. ತಿಳಿದುಕೊಳ್ಳು, 2. ಪರಿಚಯ. 1. to understand, 2. to introduce. ವಾ: ದಾರಿಲಿ ಹೋಕನ ಎಂತಾರ್ ಗುರ್ತ್ ಇಟ್ಟ್ ಕಣೊನು, ಆಗ ದಾರಿ ತಪ್ಪುದುಲೆ. ಪ: ಗುರ್ತಕೆ – ನೆನಪಿಗೆ.

ಗುರ್ತು[2] /*gurtu*/ ನಾ. ಗುರಿ. aim. ವಾ: ಗುಂಡ್ ಹೊಡೆಕನ ನನ್ನ ಗುರ್ತು ತಪ್ಪಿಕಿಲೆ.

ಗುರ್ತ್ ಸಿಕ್ಕಿತ್ಲೆ /*gurtɨ sikkitle*/ ನಾ. ನೆನಪು ಸಿಗಲಿಲ್ಲ. couldn't remember. ವಾ: ನಿಮ್ಮ ಗುರ್ತ ಸಿಕ್ಕಿತ್ಲೆ.

ಗುರ್ಬಿ /*gurbi*/ ನಾ. 1. ಗುಬ್ಬಚ್ಚಿ, 2. ಗುಂಚಕ್ಕಿ. 1. a sparrow, 2. a house sparrow. ವಾ: ಗುಬ್ಬಿ ಮನೆವಳೆಗೆ ಹುಕ್ಕತ್. ಪ: ಗುರ್ಬಿತ ಹಕ್ಕಿ

ಗುರ್ಮ /*gurma*/ ನಾ. ರಂಧ್ರ ತೆಗೆಯುವ ಸಾಧನ. a sharp tool to make holes. ವಾ: ಗುರ್ಮ ತಕಂಡ್ ಒಟ್ಟೆ ಮಾಡ್ದು.

ಗುರ್ಮೆ /*gurmɛ*/ ನಾ. 1. ಆಯಕಟ್ಟಿನ ಜಾಗ, 2. ತೊಟ್ಟಿ, 3. ಮೂಲೆಯ ಜಾಗ, ನೀರಿನ ಪ್ರಪಾತದಿಂದ ಆದ ದೊಡ್ಡ ಹೊಂಡ. 1. a strategic location. 2. a tank, 3. a corner, 4. a deep natural pond made by continuous fall of water. ವಾ: ಕೊಡಿಂದ ನೀರ್ ಬಿದ್ದ್ ಬಿದ್ದ್ ಗುರ್ಮೆ ಆವುಟು.

ಗುಲಾಮ /*gula:ma*/ ನಾ. ಹೇಳಿದಂತೆ ಕೇಳುವವ ಪ್ರತಿಭಟಿಸದವ. a slave. ವಾ: ಅಂದ್ ಅವೆಲ್ಲ ನಮ್ಮನ್ನ ಗುಲಾಮರಂಗೆ ಕಂಡೊ.

ಗುಲ್ಗಂಜಿ /*gulgaŋji*/ ನಾ. 1. ಗುಲಗಂಜಿ, 2. ಒಂದು ಕೆಂಪು ಕಾಳು, 3. ಗುಂಜಿ, 4. ಹಳದಿ ಬಣ್ಣದ ಗಿಡದಲ್ಲಿ ಕೆಂಪು ಬಣ್ಣದ ಹೂವುಗಳನ್ನು ಬಿಡುತ್ತದೆ, 5. ಹಿಂದಿನ ಕಾಲದಲ್ಲಿ ಅಕ್ಕಸಾಲಿಗರು ಬಂಗಾರವನ್ನು ತೂಕ ಮಾಡಲು ಗುಲಗಂಜಿ ಬೀಜಗಳನ್ನು ಬಳಸುತ್ತಿದ್ದರು,ಬೀಜಗಳು ಕೆಂಪು ಹಾಗು ಕಡುಕಪ್ಪು ಬಣ್ಣದಿಂದ ಕೂಡಿರುತ್ತದೆ. 1. abrus precatorius, jequirity bean or rosary pea, 2. bright red seeds of abrus precatorius, 3. abrus precatorius, 4. a yellow plant with red, 5. goldsmiths used the seeds of rosary pea to check the weight of gold. ವಾ: ಚಿನ್ನ ತೂಕ ಮಾಡಿಕನ ಗುಲ್ಗಂಜಿನ ಬಳ್‌ಸುವೆ, ಅದರ ಮಂಜೆಟಿ ಬೀಜತನೂ ಹೇಳಿವೆ.

ಗುಲ್ಪ್ /*gulpɨ*/ ಕ್ರಿ. ಗುಣಿಸು. to multiply. ವಾ: ಲೆಕ್ಕನ ಗುಲ್ಪ್ ಮಾಡ್.

ಗುಲ್ಲು /*gullu*/ ನಾ. ಗಲಾಟೆ, ಬೊಬ್ಬೆ. a clamour. ವಾ: ಅಂವ ಲಂಚ ತಕಂಡದ್ ಒಂದೇ ರಾತ್ರೆಲಿ ಗುಲ್ಲು ಆತ್. **ಗುಲ್ಲಾತ್** /*gulla:tɨ*/ 1. ಗದ್ದಲ, 2. ಅಲ್ಲಲ್ಲಿ ಹರಡಿರುವ ಸುದ್ದಿ, 3. ಗಲಾಟೆ, 4. ಪುಕಾರು. 1. noise, 2. gossip, 3. clash, 4. bawl. ವಾ: ಆಟಲಿ ಗೆದ್ದ್ ಬಂದದ್ ಊರೆಲ್ಲ ಗುಲ್ಲಾತ್.

ಗುಹೆ /*guhɛ*/ ನಾ. 1. ಗುಹೆ, 2. ಗವಿ, 3. ದೊಡ್ಡ ಬಿಲ, 4. ಕಲ್ಲಿನ ದೊಡ್ಡ ಪೊಟರೆ. 1. cave, 2. a cavern, 3. a large hole in the hill etc, 4. a cavity in rocks. ವಾ: ಗುಹೆ ವಳೆಗೆ ಹುಲಿ ಹೊಕ್ಕತ್.

ಗುಳ /*guḷa*/ ನಾ. 1. ಕುಳ-ಕಬ್ಬಿಣದ ಪಟ್ಟಿ, ಇದನ್ನು ಮರದ ನೇಗಿಲಿನ ತುದಿಗೆ ಜೋಡಿಸುತ್ತಾರೆ, 2. ಪನೋರು. a sharp metal blade – used in the plough. ವಾ: ನೇಗ್‌ಲ್ ಕೊಡಿಗೆ ಗುಳನ ಜೋಡ್ಸುದು. ಪ: ಪೊನ್ನೋಳು. **ಗುಳ ನೇಗ್ಲ್** /*guḷa ne:glɨ*/ ಹಳೆಕಾಲದ ಮರದ ನೇಗಿಲು. an old wooden plough. ವಾ: ಗುಳ ನೇಗ್ಲ್ ಮೂಲೆಗಾವ್ಟು.

ಗುಳಿ /*guḷi*/ ನಾ. 1. ಗುಣಿ, 2. ಚಿಕ್ಕ ಹೊಂಡ. 1. a small cavity, 2. a pond. ವಾ: ರಸ್ತೆಲೆಲ್ಲ ಸುಮಾರ್ ಗುಳಿಗ ವಳೊ.

ಗುಳಿಗ /*guḷiga*/ ನಾ. 1. ಸಾಂಕೇತಿಕವಾಗಿ ಮಣ್ಣಿನ ಪ್ರಕೃತಿಯ ಶಕ್ತಿಗಳನ್ನು ಗುಳಿಗ ಎಂಬ

ಭೂತರೂಪದಲ್ಲಿ ಆರಾಧಿಸುವುದು, 2. ಗುಳಿಂಜ. Guliga, a deity/bhuta, clay idols of nature spirits are worshipped in the name of Guliga. ವಾ: ತೆರೆ ಹಬ್ಬಲಿ ಗುಳಿಗ ಇದ್ದದೆ. **ಗುಳಿಗನ್ಗೆ ಕೊಡ್ದ್** */guḷigan'gɛ koḍḍɨ/* ಗುಳಿಗನಿಗೆ ಬಲಿ ನೀಡುವುದು. a ritual sacrifice for the deity Guliga. ವಾ: ಕೋಳಿನ ಗುಳಿಗನ್ಗೆ ಕೊಡ್ದ್.

ಗುಳಿಗೆ */guḷigɛ/* ನಾ. 1. ಮಾತ್ರೆ, 2. ಪಿಲ್ಸ್. 1. a tablet, 2. a pill. ವಾ: ಜೆರಕೆ ಗುಳಿಗೆ ತಕಂಡನ?

ಗುಳಿಜ್ಜ */guḷiŋŋa/* ನಾ. ಒಂದು ಪ್ರಭಾವಶಾಲಿ ಭೂತ, (ಶಿವನ ಗಣ). Guliga, a powerful Bhuta/deity worshipped in Tulunadu. (Believed to be an attendant spirit of god shiva, this Bhuta demands blood sacrifice). ವಾ: ಗುಳಿಜ್ಜನ ಕೋಲ ರಾತ್ರೆಲಿ ನಡ್ದದೆ.

ಗುಳ್ಕ */guḷnka/* ಅ. ಒಮ್ಮೆಗೆ ನುಂಗುವುದು. swallowing suddenly. ವಾ: ನಮ್ಮ ಹೈದ ಬೊಳುಂವ ಹಣ್ಣ್ ತೋಳೆನ ಗುಳ್ಕ ನುಂಗಿತ್. **ಗುಳ್ಂಕ** */guḷɨŋka/* ವಾ: ಅನ್ನದ ಉಂಡೆನ ಗುಳ್ಂಕತ ನುಂಗಿತ್.

ಗುಳ್ಗುಮೆ */guḷgumɛ/* ನಾ. ಕೋಂಬಕ್ಕಿ. Mountain Imperial- Pigeon. ವಾ: ಗುಳ್ಗುಮೆ ಹಾರಿಕಂಡ್ ಹೋತು. ಪ: ಗೂರ್ಮೆ(ತು)

ಗುಳ್ಗೆ */guḷgɛ/* ನಾ. 1. ಗುಳಿಗೆ, ಮಾತ್ರೆ, 2. ಉಂಡೆ. 1. a pill, a tablet 2. a globule. ವಾ: ಜೆರಕೆ ಗುಳ್ಗೆ ತಿಂಬಕೆ ಹೇಳ್ಯೊಳೊ.

ಗುಳ್ಳ[1] */guḷḷa/* ನಾ. 1. ಹಸಿರು ಬಣ್ಣದ ದುಂಡನೆಯ ಬದನೆ, 2. ಗುಳ್ಳ ಬದನೆ, 3. ಮಂಗಳೂರು ಬದನೆ. 1. variety of green brinjal grown around Udupi and Mangalore, 2. Mattu Gulla, a brinjal, 3. Mangalore Brinjal. ವಾ: ಗುಳ್ಳ ಬದ್‌ನೆನ ಮಂಗ್‌ಳೂರ್ ಕಡೆ ಹೆಚ್ಚಿಗೆ ಬಳ್‌ಸುವೆ.

ಗುಳ್ಳ[2] */guḷḷa/* ನಾವಿ. ಗಿಡ್ಡ ವ್ಯಕ್ತಿ. short person. ವಾ: ಗುಳ್ಳ ಹೈದ ಬಾತ್.

ಗುಳ್ಳಿ */guḷḷi/* ನಾವಿ. ಗಿಡ್ಡ ಹಸು. short cow. ವಾ: ಗುಳ್ಳಿ ದನ ಮೇಯಕೆ ಹೋದ್ದ್ ಬಾತ್ಲೆ.

ಗುಳ್ಳೆ */guḷḷɛ/* ನಾ. 1. ಬೊಕ್ಕೆ, 2. ಬೊಬ್ಬೆ ಏಳು. 1. swelling on the skin – a boil, 2. a boil. **ನೀರ್‌ನ ಮೇಲೆ ಗುಳ್ಳೆ ಇದ್ದಂಗೆ(ಗಾ).** ವಾ: ಬಿಸಿ ನೀರ್ ಮೈಮೇಲೆ ಬಿದ್ದ್ ಗುಳ್ಳೆ ಆಗುಟು. **ಗುಳ್ಳೆ ಏಳ್ದು** */guḷḷɛ e:ḷdu/* 1. ಬೊಕ್ಕೆ ಏಳುವುದು, 2. ಉಬ್ಬು. 1. swelling on the skin, 2. a boil. ವಾ: ಮೋರೆಲಿ ಸಣ್ಣ ಸಣ್ಣ ಗುಳ್ಳೆ ಏಳ್ದು.

ಗುಳ್ಳೆನರಿ */guḷḷɛnari/* ನಾ. 1. ನರಿ, 2. ನಾಯಿ ಜಾತಿಗೆ ಹತ್ತಿರವಾದ ಒಂದು ಕಾಡು ಪ್ರಾಣಿ, 3. ಕೇನಿಡೀ ಕುಟುಂಬಕ್ಕೆ ಸೇರಿದ ಮಾಂಸಾಹಾರಿ ಸ್ತನಿ. a jackal, a foraging mammal of the genus Canis. ವಾ: ಗುಳ್ಳೆನರಿ ನೋಡಿರೆ ಒಳ್ಳದ್‌ತೇಳಿವೆ.

ಗೂಂಜು */gu:ŋju/* ನಾ. ಹಣ್ಣಿನ ಮಧ್ಯ ಇರುವ ತಿರುಳು, ಹಲಸಿನ ಹಣ್ಣಿನ ಗೂಂಜು. the kernel or the soft inner core of a fruit. ವಾ: ಹಲ್‌ಸ್‌ನ ಹಣ್ಣ್‌ನ ನಡುಲಿ ದೊಡ್ಡದಾಗಿ ಗೂಂಜು ಇದ್ದದೆ. ಪ: ಗೂಂಜಿ

ಗೂಂಟ್‌ಕಾಯಿ */gu:ŋṭɨ ka:yi/* ನಾ. ತೊಂಡೆಕಾಯಿ ರೀತಿಯ ಹಣ್ಣು. a vegetable resembling an ivy gourd. ವಾ: ಅದ್ ಗೂಂಟ್ ಕಾಯಿಗಡ. ಪ: ಗೋಂಟೆಕಾಯಿ

ಗೂಂತ್ */gu:ntɨ/* ನಾ. 1. ಗೂನು, 2. ಬೆನ್ನು ಬಾಗಿರುವಿಕೆ, 3. ಡೂಗು. humped back. ವಾ: ಅ ಕೋಳಿ ಗೂಂತ್‌ಕಂಡುಟು. ಪ: ಗೂಂತೋವುಟು – ಬೆನ್ನು ಬಾಗಿ ಹೋಗಿದೆ

ಗೂಂತ್ ಕೂರುದು */gu:ntɨ ku:rudu/* ನಾ. ಕುಕ್ಕರು ಕಾಲಿನಲ್ಲಿ ಕೂರುವುದು. sitting in squat position. ವಾ: ತುಂಬ ಹೊತ್ತ್ ಗೂಂತ್ ಕೂರುದು ಬಜ್ಜ ಅದೆ. ಪ: ಚುರ್ಕರ ಕುದ್ದುರ್ಯ

ಗೂಟ */gu:ṭa/* ನಾ. 1. ಮರದ ಕಂಬ, 2. ದನ ಕಟ್ಟಲು ಬಳಸುವ ಊರಿದ ದೊಣ್ಣೆ, 2. ಚೂಪಾದ ದಸಿ, 3. ಬೆಣೆ. 1. a wooden pillar, 2. a stamp to which cattle are tied, 3. a sharp peg, 4. a wedge. ವಾ: ದನನ ಬಾಣೆಲಿ ಗೂಟಕೆ ಕಟ್ಟ್. **ಗೂಟ ಹೊಡೆದು** */gu:ṭa hoḍɛdu/* ದನ ಕಟ್ಟಲು ದೊಣ್ಣೆಯನ್ನು ಊರುವುದು. wooden post driven in to the ground to tie the cattle. ವಾ: ಅಪ್ಪ ಗದ್ದೆಲಿ ಗೂಟ ಹೊಡೆದು.

ಗೂಟ ಹೊಡ್‌ಕಂಡ್ ಕೂರು */gu:ṭa hoḍɨkaṇḍɨ ku:ru/* ನಾ. ಕುಳಿತಲ್ಲೆ ಸುಮ್ಮನೆ ಒಂದೆಡೆ ಕುಳಿತಿರು.

to sit at one place, doing nothing. ವಾ: ಅಂವ ಅಲ್ಲಿ ಗೂಟ ಹೊಡ್‌ಕಂಡ್ ಕುದ್ದುಟು.

ಗೂಡಂಬಿ /*gu:ḍambi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಗೂಡಿಂಜ /*gu:ḍiṇja*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಆಲೆಟ್ಟಿ ಗ್ರಾಮದ ಜಾಗ. a locality in Aletti village in Sullia Taluk of Dakshina Kannada District.

ಗೂಡುಬೊಳ್ಳಿ /*gu:ḍubɔḷḷi*/ ನಾ. ಬೇಲಿ ಕಟ್ಟಲು ಬಳಸುವ ಒಂದು ಜಾತಿಯ ಕಾಡಿನ ಬಳ್ಳಿ. a wild bush used as a natural fence. ವಾ: ಗೂಡುಬೊಳ್ಳಿಲಿ ಚಿಬುಳೆ ಮಾಡ್‌ವೆ.

ಗೂಡೆ /*gu:ḍɛ*/ ನಾ. ಹುಡುಗಿ. a girl. **ಆ ಗೂಡೆ ಕೆಂಬಡೆ ಹೂನಂಗೆ ಉಟ್ಟು(ಗಾ). ಅರ್‌ಸಣ ಲಂಗದ ಗೂಡೆ, ಲಂಗ ಬಿಚ್ಚಿ ಗವಿ ಸೇರ್‌ದೆ – ಬಾಳೆಹಣ್ಣ್(ಒ).** ವಾ: ಅದೇ ಮೊದುವೆ ಗೂಡೆ. ಪ: ಗೂಡೆಗ – ಹುಡುಗಿಯರು; ಗೂಡೆನ – ಹುಡುಗಿಯ; ಗೂಡೆಗೆಲ್ಲ – ಹುಡುಗಿಯರೆಲ್ಲ. **ಗೂಡೆ ನೋಡ್ವ ಸಾಸ್ತ್ರ** /*gu:ḍɛ no:ḍva sa:stra*/ ಹೆಣ್ಣು ನೋಡುವ ಶಾಸ್ತ್ರ. a custom of seeing the bride before marriage. ವಾ: ಗೂಡೆ ನೋಡ್ವ ಸಾಸ್ತ್ರ ಕೆ ಹೋಕು. **ಗೂಡೆನೋಡ್ದು** /*gu:ḍɛno:ḍu*/ ಕನ್ಯಾ ಪರೀಕ್ಷೆ. a custom of verifying the suitability of a bride. ವಾ: ನಾಳೆ ಹೋಗಿ ಗೂಡೆನೋಡು.

ಗೂಡ್ /*gu:ḍɨ*/ ನಾ. 1. ಗೂಡು, 2. ಹಕ್ಕಿಯ ವಾಸಸ್ಥಾನ, 3. ಮೊಟ್ಟೆಗಳನ್ನಿಟ್ಟು, ಮರಿಗಳು ಸ್ವ ರಕ್ಷಣೆ ಸಾಧ್ಯವಾಗುವ ತನಕ ಮರಿಗಳನ್ನು ಇರಿಸಿ ಬೆಳೆಸಲು ಹಕ್ಕಿ ಪ್ರಾಣಿ ಸಿದ್ಧಗೊಳಿಸಿದ ಆಶ್ರಯ ಅಥವಾ ಹಕ್ಕೆ. 1. a nest, 2. a nest of bird, 3. birds lay eggs in their nests and nurture them. **ಗುಮ್ಮಂಗೆ ಗೂಡ್ ನ ಚಿಂತೆ ಹದ್ದ್ ಗೆ ಹಾರುವ ಚಿಂತೆ(ಗಾ).** ವಾ: ಹಕ್ಕಿಗಳ ಗೂಡ್ ಚೆಲ್ಲಾಪಿಲ್ಲಿಯಾಗುಟು.

ಗೂಡ್‌ಮೊರ /*gu:ḍɨ mora*/ ನಾ. ಗಾಳಿಯಲ್ಲಿ ಭತ್ತವನ್ನು ಹಾರಿಸಲು ಬಳಸುವ ಮೊರ. a winnowing fan. ವಾ: ಗೂಡ್ ಮೊರಲಿ ಬತ್ತ ಹಾರ್‌ಸ್.

ಗೂದೆ /*gu:dɛ*/ ನಾ. 1. ರೋಗ, 2. ಕಾಯಿಲೆ, 3. ಬೇನೆ. 1. a disease, 2. illness, 3. sickness. ವಾ: ಹುಳಿ ತಿಂದ್ ಗೂದೆ ಹಿಡ್‌ಸಿಕಣ್‌ಬಡಿನೆ ಮಕ್ಕಳೆ. **ಗೂದೆ ಹಿಡ್ದುಟು** /*gu:dɛ hiḍḍuṭu*/ 1. ರೋಗ ಹಿಡಿದಿದೆ, 2. ಬೈಗುಳ ಪದ. 1. deceased, 2. an expletive. ವಾ: ನನ್ನೊಟ್ಟಿಗೆ ಮಾತೆ ಆಡ್‌ದುಲೆ ಎಲ್ಲೊ ಗೂದೆ ಹಿಡ್ದುಟು ಕಂಡದೆ. ಪ: ಗೂದೆ ಹಿಡ್ಸಿಕಣ್ ಬಡ – ರೋಗ ಬರಿಸಿಕೊಳ್ಳ ಬೇಡ

ಗೂನ /*gu:na*/ ನಾ. ಗೂನು ಬೆನ್ನಿನವನು. a humped back.

ಗೂನಡ್ಕ /*gu:naḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಸಂಪಾಜೆ ಗ್ರಾಮದ ಜಾಗ. a locality in Sampaje village in Sullia Taluk of Dakshina Kannada District.

ಗೂನ್ /*gu:nɨ*/ ನಾ. 1. ಬೆನ್ನು ಬಾಗಿರುವಿಕೆ, 2. ಡೂಗು. humped back, 2. dowagers hump. ವಾ: ಗೂನ್ ಬೆನ್ನಾದರೇನ್? ಅಂವ ಬಾರಿ ಬುದ್ಧಿವಂತ. ಪ: ಗೂನು

ಗೂಬೆ /*gu:bɛ*/ ನಾ. 1. ಗೂಬೆ, 2. ಗೂಗೆ. 1. an owl, 2. an owl, a nocturnal bird of prey. ವಾ: ಗೂಬೆಗೆ ಹಗ್‌ಲ್ ಕಣ್ಣ್ ಕಾಂಬೊದುಲೆಲ.

ಗೂಮೆ ಮರ /*gu:mɛ mara*/ ನಾ. 1. ಕೂಮೆ ಮರ . 2. ಈ ಮರದಲ್ಲಿ ಎರಡು ವಿಧವಿದೆ. ಒಂದು ಪ್ರಾಣಿಗಳು ಮಾತ್ರ ತಿನ್ನುವ ಹಣ್ಣು. ಇನ್ನೊಂದು ಮನುಷ್ಯ, ಪ್ರಾಣಿಗಳು ತಿನ್ನುವ ಹಣ್ಣು. 1. Deccan Olive tree 2. Deccan Olive tree, available in two varieties: a. with edible fruits for only animals, b. with fruits that can be consumed by both animals and humans. ವಾ: ಗೂಮೆ ಮರಲಿ ಹಣ್ಣ್ ಬುಟ್ಟುಟು.

ಗೂರು /*gu:ru*/ ನಾ. ಗೊರಕೆ. snoring. ವಾ: ಅಂವಂಗೆ ನಿದ್ದೆ ಮಾಡಿಕನ ಗೂರುದು ಅಬ್ಬೆಸ. ಪ: ಗೂರಿಕಂಡ್ – ಗೊರಕೆ ಎಳೆದುಕೊಂಡು; ಗೂರಿದೆ – ಗೂರಲು ಎಳೆಯುತ್ತಾನೆ. **ಗೂರ್ದು** /*gu:rdu*/ ಗೊರಕೆ ಹೊಡೆಯುವುದು. snoring. ವಾ: ಉಗ್ಗಪ್ಪ ಯಾಗೊಳು ನಿದ್ದೆಲಿ ಜೋರಾಗಿ ಗೂರ್ದು. ಪ: ಗೂರ್ದೆ – ಗೂರುತ್ತಿದೆ/ಗೂರುತ್ತಿದ್ದಾನೆ/ಗೂರುತ್ತಿದ್ದಾಳೆ

ಗೂರ್ಲು /*gu:rlu*/ ನಾ. 1. ಮಾತನಾಡುವಾಗ ಗೊರ ಗೊರ ಶಬ್ದ ಬರು, 2. ದಮ್ಮು, 2. ಉಬ್ಬಸ. 1. high-pitched whistling sound, 2. spasm in the bronchi of the lungs, 3. asthma. ವಾ: ಗೂರ್ಲು ಸುರಾದರೆ ಮಾತಾಡಿಕೆ ಬಂಗ ಆದೆ.

ಗೂಸಣ /*gu:saṇa*/ ನಾ. 1. ಭೂಷಣ, 2. ಅಲಂಕರಿಸುವುದು, 3. ಶೃಂಗರಿಸುವುದು, 4. ಚೆಂದ. 1. having aesthetic value, 2. decoration, 3. ornamentation, 4. beautiful. ವಾ: ಅಂವನ ವೇಸ ಗೂಸಣ ನೋಡೊಮ್ಮೆ.

ಗೂಳಿ[1] /*gu:ḷi*/ ನಾ. 1. ಕೊಬ್ಬಿದ ಎತ್ತು, 2. ವೃಷಭ, 3. ಬಸವ, 4. ಹೋರಿ. 1. a bull, 2. an ox, 3. male bovine animal, 4. an uncastrated bull. ವಾ: ಗೂಳಿ ಹಕ್ಕಲೆ ಹೋಬಡ.

ಗೂಳಿ[2] /*gu:ḷi*/ ನಾ. 1. ಹೊಂಡ, 2. ಗುಳಿ, 3. ತಗ್ಗು, 4. ಹಳ್ಳ, 1. a pit, 2. a ditch, 3. a low lying area, 4. a pond. ವಾ: ರಸ್ತೆಲ್ಲ ಗೂಳಿಯಾವುಟು. **ಗೂಳಿಹೊಂಡ** /*gu:ḷihoṇḍa*/ 1. ಹೊಂಡ, 2. ಗುಳಿ, 3. ಹಳ್ಳ, 1. a pit, 2. a ditch, 3. a low lying area. ವಾ: ಅಲ್ಲಿ ಎಸ್ಟ್ ದೊಡ್ಡ ದೊಡ್ಡ ಗೂಳಿಹೊಂಡಗ.

ಗೆಂಡ /*gɛṇḍa*/ ನಾ. ಕೆಂಡ. embers. ವಾ: ಒಲೆಂದ ಗೆಂಡನ ತೆಗ್ದಿಸ್.

ಗೆಂಡದಿಟ್ಟ್ /*gɛṇḍadiṭṭ*/ ನಾ. ಕೆಂಡದ ಹಿಟ್ಟು. a rice cake. ವಾ: ಗೆಂಡದಿಟ್ಟ್ ನ ಚೆಟ್ಟಿಟ್ಟ್ ತ ಹೇಳಿವೆ, ಇದ್ ತುಂಬ ರುಚಿ. ಪ: ಕಲ್ತಪ್ಪ

ಗೆಂಡಿಕಟ್ಟುದ್ /*gɛṇḍikaṭṭud*/ ನಾ. ಗೌಡ ಮಹಿಳೆಯರು ಸೀರೆ ಉಡುವ ಸಾಂಪ್ರದಾಯಿಕ ಶೈಲಿ. a traditional style of wearing saree by the women of Gowda community. ವಾ: ಕೆಲ್ಸ ಮಾಡಿಕನ ಗೆಂಡಿ ಕಟ್ಟುದ್.

ಗೆಂಡೆಮೀನ್ /*gɛṇḍɛmi:n*/ ನಾ. 1. ಗೆಂಡೆಮೀನು, 2. ತಲೆ ಸಣ್ಣದಾಗಿದ್ದು ಬಾಯಿ ಅಗಲವಾಗಿರುವ ನೊಡಲು ಚೆನ್ನಾಗಿರುವ ಮೀನು,ದಪ್ಪ ಹೊಟ್ಟೆಯ ಹೆಚ್ಚು ಮುಳ್ಳುಗಳಿಲ್ಲದ ರುಚಿಯಾದ ಮೀನು. 1. a catla fish, 2. a fish with large and broad head. ವಾ: ಸಂತೆಂದ ಗೆಂಡೆ ಮೀನ್ ತರಕಾಯ್ತ್.

ಗೆಂಡೆರೋಗ /*gɛṇḍɛro:ga*/ ನಾ. ದಪ್ಪ ಹೆಚ್ಚಾದಾಗ ಬರುವ ರೋಗ. a disease caused by obesity. **ತಿಂದ್ ಉಂಡ್ ಗೆಂಡೆ ರೋಗ(ಗಾ).** ವಾ: ತಡಿ ದಪ್ಪ ಆದ್‌ರೆ ಗೆಂಡೆ ರೋಗ ಬಾದು.

ಗೆಂಡೆ[1] /*gɛṇḍɛ*/ ನಾ. 1. ಗೆಡ್ಡೆ, 2. ಆಲೂಗೆಡ್ಡೆ, 3. ಬಟಾಟೆ, 4. ಹೂವಿನ ಗೆಡ್ಡೆ. 1. a root vegetable, 2. potato, 3. potato. ವಾ: ಗೈಪುಗೆ ಗೆಂಡೆ ಹಾಕಿತ್ಲೆನ?

ಗೆಂಡೆ[2] /*gɛṇḍɛ*/ ನಾ. ದಪ್ಪ ಶರೀರದವರಿಗೆ ಗೇಲಿ ಮಾಡಿ ಹೇಳುವ ಮಾತು. usually used to describe an obese man. ವಾ: ತಿಂದ್ ತಿಂದ್ ಗೆಂಡೆನಂಗೆ ಆವುಟು.

ಗೆಂದಗೆಣ /*gɛndagɛṇa*/ ನಾ. 1. ಕೆಂಪು ಗಿಡುಗ, 2. ಗಿಡುಗ. 1. a falcon, 2. an eagle. ವಾ: ಸತ್ತ ದನ ತಿಂಬಕೆ ಗದ್ದೆಲಿ ಗೆಂದಗೆಣಗ ಬಾತಿದ್ದೊ.

ಗೆಂದಾಳೆ /*gɛnda:ḷɛ*/ ನಾ. 1. ಕೆಂದಾಳೆ, 2. ಕೆಂಪು ತೆಂಗು, 3. ಅರಶಿಣ ಬಣ್ಣದ ಎಳನೀರು, 4. ಬೊಂಡ. King coconut/red dwarf coconut. ವಾ: ಗೆಂದಾಳೆ ಕುಡ್ಯಕಿತ್ತಲ.

ಗೆಜ್ಜುಗಕೊಡಿ /*gɛjjugakoḍi*/ ನಾ. ಬಾಣಂತಿಗೆ ಕಷಾಯ ಮಾಡಿ ಕೊಡಲು ಬಳಸುವ ಔಷಧಿ ಸಸ್ಯ. a plant used in making herbal medicine, usually given to a new mother. ವಾ: ಗೆಜ್ಜುಗ ಕೊಡಿನ ಬಾಣ್ತಿಗೆ ಕಸಾಯ ಮಾಡಿ ಕುಡ್‌ಸಿವೆ.

ಗೆಜ್ಜೆ /*gɛjjɛ*/ ನಾ. 1. ಗೆಜ್ಜೆ, 2. ಕಾಲಿಗೆ ತೊಟ್ಟುಕೊಳ್ಳುವ ಆಭರಣ. 1. an anklet, 2. jewellery worn around the ankle. ವಾ: ಗೆಜ್ಜೆ ಕಟ್ಟಿ ಕೊಣಿಯಮೊ.

ಗೆಜ್ಜೆಮಲ್ಕ್ /*gɛjjɛmalki*/ ನಾ. 1. ಚಿನ್ನದ ನೆಕ್ಲೇಸ್, 2. ಚಿನ್ನದ ಸರ, 3. ಮಲ್ಲಿಗೆ ಸರ. 1. a golden necklace, 2. a golden chain, 2. a chain. ವಾ: ಗೆಜ್ಜೆ ಮಲ್ಕ್ ಹಾಕಂಡರೆ ಕುತಿಗೆ ತುಂಬಿ ಕಂಡದೆ.

ಗೆಟ್ಟಿ /*gɛṭṭi*/ ನಾ. ವಯಸ್ಸಾಗಿ ಸೊಂಟ ಬಗ್ಗಿ ಹೋದ ಅಜ್ಜಿಯಂದಿರು ಬಟ್ಟೆಯನ್ನು ಚೂರು ಮೇಲಕ್ಕೆತ್ತಿ ಕಟ್ಟಿಕೊಳ್ಳಲು ಬಳಸುವ ಬಟ್ಟೆಯ ತುಂಡು (ಲಾಡಿ ರೂಪದಲ್ಲಿ). a string or a thread used by older women to tie their saree around their waist. ವಾ: ಗೆಟ್ಟಿ ಕಟ್ಟಿಕಣಿ ಚಾಮೆವ್ವ.

ಗೆಡ್ಡೆ /*gɛḍḍɛ*/ ನಾ. 1. ಗೆಡ್ಡೆ, 2. ನೆಲದೊಳಗೆ ಬೆಳೆಯುವ ಕಾಂಡ ಭಾಗ, 3. ಶರೀರದಲ್ಲಿ ರೋಗದಿಂದ ಬೆಳೆಯುವ ಗಂಟು, 4. ಸಸ್ಯ ತನ್ನ ಆಹಾರವನ್ನು ನೆಲದಡಿಯಲ್ಲಿ ಶೇಖರಿಸಿ ಇಡುವ ಒಂದು ಅವಯವ. 1. a tuber, 2. stem grown in the ground, 4. a tumor grown in the body, 4. a plant storing

its source of nourishment in its tubers. ವಾ: ಗೆಡ್ಡೆ ಗೆಣ್ಸ್ ತಿನೊಕು, ಸರ್ಕಕೆ ಒಳ್ಳೊದ್.

ಗೆಣ್ಸ್ /*gɛɳs*/ ನಾ. 1. ಗೆಣಸು, 2. ಒಂದು ಬಗೆಯ ನೆಲದೊಳಗೆ ಬೆಳೆಯುವ ಗೆಡ್ಡೆ, 3. ಕಂದಮೂಲ. 1. sweet potato, 2. a tuber, 3. edible roots of plant. **ಗೆಣ್ಸ್ ಚೊಲ್ಲಿಕೋ ಆಕಿಲೆ(ನು).** ವಾ: ಮರ ಗೆಣ್ಸ್‌ನ ಬೇಸಿ ಉಪ್ಪುಕರಿ ಮಾಡಿ ತಿಂಬಕೆ ಲಾಯ್ಕ.

ಗೆತಿ /*gɛti*/ ನಾ. ಗತಿ. state/condition. **ಅತಿ ಆಸೆ ಗೆತಿ ಕೇಡ್(ಗಾ).** ವಾ: ಇನ್ನಾರ್ ನಾವ್‌ಗೆ ದೇವುರೆ ಗೆತಿ.

ಗೆದಲೆ /*gedale*/ ನಾ. 1. ಗೆದ್ದಲು, 2. ಗೆಜ್ಜಲು, 3. ಗೊರಲೆ, 4. ಒರಳೆ. 1. termite, 2. eusocial insects, 3. an insect that eats wood, 4. a white ant. ವಾ: ಸೀತ ಹೆಚ್ಚಿ ಇರೊ ಕಡೆ ಮರಮುಟ್ಟು, ಪುಸ್ತಕಗಳಿಗೆಲ್ಲ ಗೆದಲೆ ಹಿಡ್‌ದದೆ.

ಗೆದ್ದ /*gɛdda*/ ಕ್ರಿ. 1. ಗೆದ್ದೆ, 2. ಸಾಧಿಸು, 3. ಜಯಿಸು, 4. ವಿಜಯ, 5. ಗೆಲುವು. 1. won, 2. to achieve, 3. to become victorious,

4. to win, 5. to triumph. ವಾ: ಬೊದ್‌ಕ್‌ನ ಆಟಲಿ ನೀ ಗೆದ್ದ.

ಗೆದ್ಲ್ /*gɛdlɨ*/ ನಾ. 1. ಗೆದ್ದಲು, 2. ಒರಳೆ. 1. termite, 2. white ant. ವಾ: ಗೆದ್ಲ್ ಹಿಡ್‌ದ್ ಮರ ಕುಂಬು ಆದ್. ಪ: ಉದಲ್/ಉದಳ್(ತು). **ಗೆದ್ದ್‌ಲ್** /*gɛddɨlɨ*/ ವಾ: ಮರಕೆ ಗೆದ್ದ್‌ಲ್ ಹಿಡ್ದುಟು. ಪ: ಗೆದ್ಲ್. **ಗೆದ್ಲೆಹುಳ** /*gɛdlɛhuḷa*/ 1. ಬಿಳಿ ಇರುವೆ, 2. ಗೊರಲೆ, 3. ಒಣ ಮರ ಹಾಗು ಕಟ್ಟಿಗೆ ತಿನ್ನುವ ಹುಳು, 4. ಒಂದು ಇರುವೆ ಜಾತಿಯನ್ನು ಹೋಲುವ ಜೀವಿ, ಇವುಗಳು ಹುತ್ತ ಎಂಬ ಒಂದು ರೀತಿಯ ಮಣ್ಣಿನ ಗೋಪುರಗಳನ್ನು ನಿರ್ಮಿಸುತ್ತವೆ. 1. termite, 2. termite, 3. an insect which eats dry wood, 4. an insect resembling ant. ವಾ: ಗೆದ್ಲೆ ಹುಳ ಪುಸ್ತಕ, ಮರ, ಸೌದೆ ಎಲ್ಲದಕು ಬಂದದೆ.

ಗೆಬ್ಬಳ್ಸ್ /*gɛbbaḷsɨ*/ ನಾ. 1. ಆಲೋಚನೆ ಮಾಡುವುದು, 2. ಯೋಚಿಸುವುದು. 1. to think, 2. to ponder. ವಾ: ಎಂತರ ಹೀಂಗೆ ಕುದ್ಕಂಡ್ ಗೆಬ್ಬಳ್ಸುದು.

ಗೆಬ್ಬು /*gɛbbu*/ ನಾ. ಕಿವಿಯ ಭಾಗ. a part of an ear. ವಾ: ಗೆಬ್ಬುಗೆ ಹೊಡ್ದದ್.

ಗೆಬ್ಬುಳ್ಸ್ /*gɛbbuḷsɨ*/ ನಾ. 1. ಮೇಲೆ ನೋಡು, 2. ಸ್ವೀಕರಿಸು, 3. ನಿರೀಕ್ಷೆಮಾಡು, 4. ಅಂಗೈಸ್. 1. to look up, 2. to receive, 3. to expect. ವಾ: ನಾ ಗೆಬ್ಬುಳ್ಸಿಕಂಡ್ ಹೋದೆ ಬಾತ್.

ಗೆಬ್ಬೊಳ್ಸ್ /*gɛbboḷsɨ*/ ಕ್ರಿವಿ. 1. ತಬ್ಬಿಬ್ಬಾಗು, 2. ಗಾಬರಿಗೊಳ್ಳು, 1. to startle, 2. to get bewildered. ವಾ: ನೀ ಗೆಬ್ಬೊಳ್ಸಿಕಂಡ್ ಹೋದರೆ ಆಕಿಲೆ.

ಗೆಯ್ಯಿ /*gɛyyi*/ ನಾ. 1. ದುಡಿ, 2. ಕೆಲಸ ಮಾಡು, 3. ಪರಿಶ್ರಮ ಪಡು. 1. to work, 2. to do one's job, 3. to work hard. ವಾ: ಯಾರತ್ರ ಬೇಡ್ಬಡ ಲಾಯ್ಕಲಿ ಗೆಯ್ಯಿ, ಮುಂದಕ್ಕೆ ಒಳ್ಳೆದಾದೆ. ಪ: ಗೆಯ್ತ್ – ಕೆಲಸ ಮಾಡಿದನು/ಳು; ಗೆಯ್ದನೆ – ಕೆಲಸ ಮಾಡುತ್ತೇನೆ; ಗೆಯ್ದರೆ – ಕೆಲಸ ಮಾಡಿದರೆ; ಗೆಯ್ಯಕು – ಕೆಲಸ ಮಾಡಬೇಕು; ಗೆಯ್ಯಕೆ – ಕೆಲಸ ಮಾಡಲಿಕ್ಕೆ. **ಗೆಯ್ಸುದು** /*gɛysudu*/ 1. ಕೆಲಸ ಮಾಡಿಸುವುದು, 2. ದುಡಿಸಿಕೊಳ್ಳುವುದು. 1. getting work done, 2. make someone work. ವಾ: ಹೊತಾರೆಂದ ರಾತ್ರೆವರ್‌ಗೆ ಗೆಯ್ಸುದು. ಪ: ಗೆಯ್ಸೋಕು – ಕೆಲಸ ಮಾಡಿಸಬೇಕು

ಗೆರಟೆ /*gɛraṭɛ*/ ನಾ. 1. ತೆಂಗಿನ ಚಿಪ್ಪಿ, 2. ಕರಟ. 1. coconut shell, 2. outer shell of coconut. ವಾ: ಗೆರಟೆಗೆ ಅಂಟಿದ ಕಾಯಿನ ಹೆರ್‌ದ್ ಹಾಕ್.

ಗೆರೆ /*gɛrɛ*/ ನಾ. 1. ಗೆರೆ, 2. ರೇಖೆ, 3. ಗೀಟು. 1. a line, 2. a straight line, 3. a mark. ವಾ: ಹಾಕಿದ ಗೆರೆನ ದಾಟಿಕಾದ್.

ಗೆರೆಕಾಡ್ /*gɛrɛka:ḍɨ*/ ನಾ. 1. ಗದ್ದೆ ಪಕ್ಕದಲ್ಲಿರುವ ಬರೆ, 2. ಗದ್ದೆ ಬಯಲಿನ ಸುತ್ತ ಆವರಿಸಿದ ಸಣ್ಣ ಕಾಡು, 3. ಗದ್ದೆ ಬದಿ ಹಾಗೂ ತೋಡಿನ ಮದ್ಯೆ ಇರುವ ಬರೆ. a forest near the paddy field. ವಾ: ಗೆರೆಗಾಡ್ ಕಡ್ದ್ ಬನ್ನೆ. ಪ: ಗೆರೆಗಾಡ್ ಕಡ್ಡೊ – ಗದ್ದೆ ಬಯಲಿನ ಸುತ್ತ ಆವರಿಸಿದ ಸಣ್ಣ ಕಾಡನ್ನು ಸ್ವಚ್ಛಗೊಳಿಸಿದರು

ಗೆಲ್ಲ್[1] /*gɨllɨ*/ ನಾ. 1. ಮರದ ಕಾಂಡ, 2. ಕೊಂಬೆ, 3. ರೆಂಬೆ. 1. stem of a tree, 2. a branch of a tree, 3. a branch. ವಾ: ಕಾಪಿದ್ ಒಳ್ಳೊಳ್ಳ ಗೆಲ್ಲ್‌ಗ ಗಾಳಿಗೆ ಮುರ್‌ದುಟು. ಪ: ಗೆಲ್ಲುನು – ಕೊಂಬೆಯನ್ನು; ಗೆಲ್ಲ್ ಮುರಿಯದು – ಕೊಂಬೆ ಮುರಿಯುವುದು

ಗೆಲ್ಲ್[2] /*gɨllɨ*/ ನಾ. 1. ಗೆಲ್ಲು, 2. ವಿಜಯ ಸಾಧಿಸು, 3. ಜಯಿಸು, 4. ಗೆಲುವು. 1. to win, 2. to become

victorious, 3. to triumph, 4. to win. **ಸೋತ್ ಗೆಲ್ಲ್-ಸೋಲಿನಿಂದ ಪಾಟ ಕಲಿಯುವುದು(ನು).** ವಾ: ಲಾಯ್ಕಲಿ ಆಡಿರೆ ಗೆಲ್ಲ್ ದು. ಪ: ಗೆಲ್ಲುದು. **ಗೆಲ್ವು** /*gɛlɨvu*/ **ಇಂದ್ನ ಸೋಲು, ನಾಳೆನ ಗೆಲ್ವು(ಗಾ).** ವಾ: ಸೊಲು ಗೆಲ್ವು ಬೊದ್ಕ್ ನ ಎರ್‌ಡ್ ಮೋರೆಗ.

ಗೆಲ್ಸ್[1] /*gɛlsɨ*/ ನಾ. ಗೆಣಸು. sweet potato. ವಾ: ಗೆಲ್ಸ್‌ಲಿ ವಿಟಮಿನ್ ಎ ಹೆಚ್ಚಿ ಇದ್ದ್ ಕಣ್ಣ್‌ನ ದೃಷ್ಟಿಗೆ ಒಳ್ಳದ್‌ಗಡ.

ಗೆಲ್ಸ್[2] /*gɛlsɨ*/ ಕ್ರಿ. ಗೆಲ್ಲಿಸು. to make someone win. ವಾ: ದೇವ್‌ರೆ ಈ ಆಟಲಿ ನಮ್ಮ ಗೆಲ್ಸ್.

ಗೆಳಿಹಕ್ಕಿ /*gɛḷihakki*/ ನಾ. 1. ಗಿಳಿ, 2. ಶುಕ, 3. ಮಾತನ್ನು ಅನುಕರಿಸುವ ಒಂದು ಜಾತಿಯ ಪಕ್ಷಿ. a parrot. ವಾ: ಗೆಳಿಹಕ್ಕಿಗ ಪೇರಲಕಾಯಿನ ಕಚ್ಚಿ ಕಚ್ಚಿ ಕೆಡ್‌ಗುವೆ.

ಗೇಂಟಿ /*gɛːṇṭi*/ ನಾ. 1. ಗೇಂಟಿ, 2. ಭುಜದ ಬಳಿ ಸೆರಗನ್ನು ಗಂಟು ಹಾಕಿ ಸೀರೆ ಉಡುವುದು, 3. ಗೌಡ ಸಮುದಾಯದ ಮಹಿಳೆಯರು ಸೀರೆ ಉಡುವ ಸಾಂಪ್ರದಾಯಿಕ ಶೈಲಿ. a style of wearing saree by the women of Gowda community . They usually drape a sari tucking the pleats at the back of the waist, instead of the front. ವಾ: ಗೂಡೆಗೆಲ್ಲ ಗೇಂಟಿ ಕಟ್ಟಿ ಮೊದ್‌ವೆಗೆ ಹೋದೊ. **ಗೇಂಟಿ ಕಟ್ಟುದು** /*gɛːṇṭi kaṭṭudu*/ ಗೌಡ ಸಮುದಾಯದ ಮಹಿಳೆಯರು ಬಲಗಡೆಯ ಹೆಗಲಿನ ಹತ್ತಿರ ಗಂಟು ಕಟ್ಟಿ ಸೀರೆ ಉಡುವುದು. a style of wearing saree by the women of Gowda community. ವಾ: ಅವುಳಿ ಗೇಂಟಿ ಕಟ್ಟಿ ಸೀರೆ ಉಟ್ಟು ಹೊರ್‌ಟುಟು. ಪ: ಗೇಂಟಿಕಟ್ಟಿಕಂಡ್

ಗೇಟ್ /*geːṭɨ*/ ನಾ. 1. ಗೇಟು, 2. ದ್ವಾರ. 1. a gate, 2. an entrance. ವಾ: ಅವು ಗೇಟ್ ಹಾರಿ ಬಂದೊ.

ಗೇಣ /*gɛːṇa*/ ನಾ. ನೆನಪು. memory. **ಗೇಣಮಾಡಿಕ** /*gɛːṇamaːḍika*/ 1. ನೆನಪು ಮಾಡು, 2. ತಿಳಿದಿಕೊಂಡಿರು. 1. to remember, 2. to realise. ವಾ: ಅಂದ್ ಅಲ್ಲಿ ಎಂಉಗ್ಗಪ್‌ಪ್‌ತ ಗೇಣಮಾಡಿಕ.

ಗೇಣಿ /*geːṇi*/ ನಾ. 1. ಗುತ್ತಿಗೆ, 2. ಒಪ್ಪಂದ. 1. to lease, 2. an agreement. ವಾ: ಜಾಗೆನ ಗೇಣಿಗೆ ತಕಂಡದ್.

ಗೇಣ್ /*geːṇ*/ ನಾ. 1. ಗೇಣು, 2. ಹೆಬ್ಬೆರಳ ತುದಿಯಿಂದ ಮೊದಲಾಗಿ ಕಿರುಬೆರಳ ತುದಿಯವರೆಗಿನ ಅಳತೆ, ಸುಮಾರು ಮುಕ್ಕಾಲು ಅಡಿಯಷ್ಟು ಭಾಗ. 1. a unit of measure-nine inches, 2. 3/4 of a foot. ವಾ: ಎಂಟ್ ಗೇಣ್‌ತ ಲೆಕ್ಕ ಹಾಕ್ತಿದ್ದೊ.

ಗೇನ[1] /*gɛːna*/ ನಾ. ಯೋಚನೆ. thought. ವಾ: ನಂಗೆ ಅದ್ ಗೇನನೆ ಇಲ್ಲೆ. ಪ: ಗೇನಗ – ನೆನಪುಗಳು;

ಗೇನ[2] /*geːna*/ ನಾ. 1. ಅರಿವು, 2. ಜ್ಞಾನ. 1. realisation, 2. knowledge. ವಾ: ನಿಂಗೆ ಗೇನ ಇತ್ಲೆನ?

ಗೇನನೇ ಇಲ್ಲೆ /*gɛːnaneː illɛ*/ ನಾ. 1. ನೆನಪಿಲ್ಲ, 2. ಮರೆವು, 3. ಮತಿಯಿಲ್ಲ. 1. don't remember, 2. forgetting, 3. insanity. ವಾ: ನಮ್ಮ ಗೇನನೇ ಇಲ್ಲೆಲ, ಅತ್ತ ಹೋದಂವ ಅತ್ತಳೆ.

ಗೇಪಿಗೆ /*gɛːpigɛ*/ ನಾ. ನೆನಪು. memory. ವಾ: ನಾವ್‌ಗೆ ಗೇಪಿಗೆ ಬಾತ್‌ಲೆ.

ಗೇಮೆ /*geːmɛ*/ ನಾ. 1. ಕೇಮೆ, 2. ಕೆಲಸ. 1. work, 2. job. ವಾ: ಸುಕದ ಬೊದ್‌ಕಿಗೆ ಗೇಮೆ ಮಾಡೊಕು.

ಗೇಯ್ಯಟ /*gɛːyyaṭa*/ ನಾ. 1. ಕೆಲಸ ಮಾಡು2. ದುಡಿಯು. 1. in the work, 2. in doing the job. ವಾ: ಈ ಗೇಯ್ಯಟಲಿ ಮೊದುವೆ ಯಾಗತನೆ ಮರ್‌ತ್ ಹೋತ್.

ಗೇಯ್ಯೊವು /*gɛːyyɔvu*/ ನಾ. ದುಡಿಯುವವರು. workers. ವಾ: ಗೇಯ್ಯೊವು ಗೇಯ್ಯಂಡೆ ಬಾಕಿ. ಪ: ಗೇಯದು – ಕೆಲಸ ಮಾಡುವುದು; ಗೇಯ್ದ – ದುಡಿದ/ ಕೆಲಸ ಮಾಡಿದ

ಗೇರಣ್ಣ್ /*gɛːraṇṇɨ*/ ನಾ. 1. ಗೇರು ಹಣ್ಣು. cashew fruit. ವಾ: ಗೇರ್‌ದ ಹಣ್ಣ್ ಹಳ್ಳ ಸೊನೆ ಸೊನೆ ಅಲ. **ಗೇರ್‌ದ ಮರ** /*geːrda mara*/ ಗೇರು ಹಣ್ಣಿನ ಮರ. cashew tree. ವಾ: ಗೇರ್‌ದ ಮರದ ಒಂದ್ ವಿಸೇಸತೇಳಿರೆ ಇದರ ಬೀಜಗ ಹಣ್ಣ್ ನ ಅಡಿ ಬಾಗಲಿ ಹೊರೆಗೆ ಇದ್ದದೆ.

ಗೇರ್‌ಬೀಜ /*gɛːrɨ biːja*/ ನಾ. 1. ಗೇರುಬೀಜ, 2. ಗೋಡಂಬಿ. 1. cashew nut, 2. cashew. **ಅಣ್ಣನ ತಿಕಲಿ ತಮ್ಮ ನೇತಾಡ್ಡೆ – ಗೇರ್ ಬೀಜ(ಒ).** ವಾ: ಗೇರ್ ಬೀಜನ ಸುಟ್ಟ್ ಸಿಪ್ಪೆ ಸೊಲ್‌ದರೆ ವಳಗೆ ತಿಂಬಕೆ ಸಿಕ್ಕಿದೆ, ಗೇರ್ ಬೀಜ ಆರೋಗ್ಯಕೆ ಒಳ್ಳದ್.

ಗೇರೆಂಟಿ /*gɛːrɛṇṭi*/ ನಾ. ಎಪ. 1. ಖಾತರಿ, 2. ಭರವಸೆ,

3. ಆಶ್ವಾಸನೆ, 4. ಖಾತ್ರಿ. 1. confirmation, 2. promise, 3. assurance, 4. certainty. ವಾ: ಕೊಟ್ಟ ದುಡ್ಡ್ ಸಿಕ್ಕಿದೆತ ಯಾವ ಗೇರೆಂಟಿನೂ ಇಲ್ಲೆ.

ಗೇರ್‌ದು /*gɛ:ridu*/ ನಾ. ಭತ್ತ ಕುಟ್ಟುವುದು. pounding paddy. ವಾ: ಒರ್‌ಳ್‌ಲಿ ಬತ್ತನ ಹಾಕಿ ಗೇರ್‌ದು.

ಗೇಲಿ /*gɛ:li*/ ನಾ. 1. ಗೇಲಿ, 2. ತಮಾಷೆ, 3. ಲೇವಡಿ, 4. ಅಪಹಾಸ್ಯ. 1. to mock, 2. to make fun, 3. mockery, 4. ridicule. ವಾ: ಅವ್ಕೆ ಗೇಲಿ ಮಾಡ್ದು ಬುಟ್ಟರೆ ಬೇರೆಂತ ಬಂದದೆ.

ಗೇಸ್ ಲೈಟ್ /*ge:si laiṭi*/ ನಾ. ಎಪ. ಸಮಾರಂಭಗಳಲ್ಲಿ ರಾತ್ರಿ ಬೆಳಕಿಗಾಗಿ ಸೀಮೆಎಣ್ಣೆ ಹಾಕಿ ಹೊತ್ತಿಸುವ ಲೈಟ್. a gas light, that runs on kerosine. ವಾ: ಕರೆಂಟ್ ಇಲ್ಲರೆ ಗೇಸ್ ಲೈಟ್‌ನೆ ಬಳ್‌ಸುದು.

ಗೈದುಣ್ಣು /*gaiduṇṇu*/ ನಾವಿ. 1. ದುಡಿದು ತಿನ್ನು, 2. ಶ್ರಮವಹಿಸು. 1. to work and sustain oneself, 2. hard labour. ವಾ: ಗೈದುಣ್ಣುತ ದೊಡ್ಡವ್ ಹೇಳ್‌ದ ಮಾತ್ ಸತ್ಯ.

ಗೈಪಾತ್ /*gaipa:ti*/ 1. ಸಾರು ಮಾಡಿ ಆಯಿತು, 2. ಸತ್ತು ಹೋಯಿತು. 1. I have prepared curry/stew/ soup, 2. dead. ವಾ: ಗೈಪಾತವ್ವ? ಹಂಗಾರೆ ಹುಗ್ಗಿ ಇಕ್ಕ್.

ಗೈಪು /*gaipu*/ ನಾ. 1. ಮಾಂಸ ಅಥವಾ ಸಸ್ಯ ಆಹಾರದ ಪದಾರ್ಥ, 2. ಸಾರು. curry/soup/stew made of either meat or vegetable. **ಹಸಿವಾಕನ ಗೈಪು ಬೇಡ ನಿದ್ದೆ ಬಾಕನ ಹಾಸಿಗೆ ಬೇಡ(ಗಾ).** ವಾ: ಗೈಪು ಇನ್ನ್ ಹಷ್ಟ ಬೇಕಿತ್. ಪ: ಗೈಪ್‌ಮಾಡ್ – ಪದಾರ್ಥ ಮಾಡು.

ಗೈಪು ಚೆಟ್ಟಿ /*gaipu cɛṭṭi*/ ನಾ. ಸಾರು ಮಾಡಲು ಬಳಸುವ ಪಾತ್ರೆ. a vessel in which curry/stew/ soup is prepared. ವಾ: ಗೈಪು ಚೆಟ್ಟಿ ಮೊಸಿ ಹಿಡ್ದುಟು ಉಜ್ಜಕಾಯ್ತ್.

ಗೈಪು ಬಾಳೆ /*gaipu ba:ḷɛ*/ ನಾ. 1. ಸಾರಿನ ಬಾಳೆ, 2. ಸಾಂಬಾರು ಮಾಡಲು ಬಳಸುವ ಬಾಳೆ, 3. ಚಟ್ನಿ ಮಾಡಲು ಬಳಸುತ್ತಾರೆ. a variety of plantain used in making curry and chutney. ವಾ: ಗೈಪು ಬಾಳೆಲಿ ಪಲ್ಯ, ಗೈಪು, ಬೋಂಡ, ಬಜ್ಜಿ ಎಲ್ಲ ಮಾಡಿವೆ.

ಗೈಮೆ /*gaimɛ*/ ನಾ. 1. ಕೆಲಸ, 2. ದುಡಿಮೆ. 1. work, 2. job. ವಾ: ಗೈಮೆ ಇರೊಕು ಇಲ್ಲರೆ ತಲೆ ಹಾಳಾದೆ. ಪ: ಗೈಮೆಗೆ – ದುಡಿಯಲು

ಗೈಯ್ದು /*gaiydu*/ ನಾ. 1. ದುಡಿಯುವುದು, 2. ಶ್ರಮ, 3. ಗೈಮೆ. 1. working, 2. hardwork, 3. job. ವಾ: ಗೈಯ್ದು ಉಣೊಕು.

ಗೊಂಚಲ್ /*goŋcali*/ ನಾ. 1. ಗುಚ್ಚ, 2. ಸಮೂಹ, 3. ಕೀಲೆ. 1. a bunch, 2. a group, 3. a bundle. ವಾ: ಹೂನ ಗೊಂಚ್‌ಲ್‌ನ ನೋಡಲ್ಲಿ.

ಗೊಂಚಿಕಂಡ್ /*goŋcikaṇḍi*/ ನಾ. 1. ತುಂಬಿಸಿಕೊಂಡು, 2. ಎಲ್ಲ ತೆಗೆದುಕೊಂಡು ಹೋಗು. 1. to fill everything, 2. carrying everything. ವಾ: ಕಳ್ಳ ದುಡ್ಡು ಗೊಂಚಿಕಂಡ್ ಹೋತ್.

ಗೊಂಚೆ/ಜೆ /*goŋcɛ/jɛ*/ ನಾ. ಗೊಂಚಲು. a bunch. ವಾ: ಗೊಂಚೆ ಗೊಂಚೆ ಕರಿ ದ್ರಾಕ್ಷೆ ಹಿಡ್‌ದುಟು. ಪ: ಜೊಂಗೆ

ಗೊಂಚ್ಲ್ /*goŋcli*/ ನಾ. 1. ಗುಚ್ಚ, 2. ಸಮೂಹ. 1. a group, 2. a bundle. ವಾ: ಒಂದ್ ಗೊಂಚ್ಲ್ ಹಣ್ಣ್ ಸಿಕ್ಕಿತ್.

ಗೊಂಟೆಕಾಯಿನ /*gɔŋṭɛka:yina*/ ನಾ. ತಿನ್ನಬಹುದಾದ ಒಂದು ಕಾಡುಕಾಯಿ. a wild fruit. ವಾ: ಗೊಂಟೆಕಾಯಿನ ತಿಂದವೆಗಡ.

ಗೊಂಡಾರಣ್ಯಕೆ /*goṇḍa:raṇyakɛ*/ ನಾ. 1. ದಟ್ಟ ಕಾಡು, 2. ನಿಗೂಢ ಕಾಡು. 1. a thick forest, 2. a secret forest. ವಾ: ಸೀತೆ ಮೇಲೆ ಅಪ್‌ವಾದ ಬಾಕನ ರಾಮ ಸೀತೆನ ಗೊಂಡಾರಣ್ಯಕೆ ಕಳ್‌ಸಿದ್.

ಗೊಂಡೆ /*gɔṇḍɛ*/ ನಾ. 1. ಕೊಂಡೆ, 2. ತುರುಬು, 3. ಕೂದಲಿನ ಗಂಟು, 4. ಮುಡಿ, 5. ಸ್ತ್ರೀಯರು ತಲೆಗೂದಲು ಕಟ್ಟುವ ವಿಧಾನ. 1. a knot of the hair, 2. having a knot of the hair on the head, 3. a knotted hair, 4. knot of the hair 5. hair knotted in a particular way. ವಾ: ಕೂದೊಲ್ ನ ಗೊಂಡೆ ಕಟ್ಟಿ ಹೂನ ಅದ್ಕೆ ಸುತ್ತ್.

ಗೊಂಡೆ ಹೂ /*gɔṇḍe hu:*/ ನಾ. ಗಂಟೆ ಹೂವು. tulip flower. ವಾ: ಗೊಂಡೆ ಹೂ ದೈಲಿ ಸುಮಾರ್ ಬುಟ್ಟುಟು.

ಗೊಂದ್ /*gondi*/ ನಾ. 1. ಅಂಟು, 2. ಸರಿ. 1. gum/

resin, 2. correct. ವಾ: ಹಾಳೆಗೆ ಗೊಂದ್ ಹಾಕಿ ಅಂಟ್‌ಸ್. ಪ: ಗೋಂದ್

ಗೊಂಬೆ /*gombɛ*/ ನಾ. 1. ಗೊಂಬೆ, 2. ಬೊಂಬೆ. 1. a doll, 2. puppet. ವಾ: ದಸರಲಿ ಮನೆ ಮನೆಲಿ ಗೊಂಬೆ ಕೂರ್‌ಸುವೆ.

ಗೊಂಬೆ ಕುಞ್ಞ /*gombɛ kuŋŋa*/ ನಾ. ಚಿಕ್ಕ ಮಗು, ಮಕ್ಕಳನ್ನು ಪ್ರೀತಿಯಿಂದ ಕರೆಯುವುದು. calling a small child with affection. ವಾ: ನೀ ಮುದ್ದು ಗೊಂಬೆ ಕುಞ್ಞ ಅಲಾ ಹಂಗೆಲ್ಲ ಮರ್‌ಡಿಕಾಗದ್ ಆತ.

ಗೊಂಯ್ಕ್-ಗೊಟಕ್ /*gonykɨ-goṭakɨ*/ ಕ್ರಿ. 1. ಕಥೆ ಮುಗಿಯಿತು, 2. ಯಾರಾದರು ತೀರಿ ಹೋದಾಗ ಬಳಸುವ ಆಡುಭಾಷೆ. 1. the end of a story, 2. a term is used to indicate the death of someone (informal). ವಾ: ಅಂವ ಗೊಂಯ್ಕ್-ಗೊಟಕ್ ಆತ್.

ಗೊಗ್ಗರೆ /*goggarɛ*/ ನಾ. 1. ತುಟಿ ಮೀರಿದ ಹಲ್ಲು, 2. ಉಬ್ಬಿದ ಹಲ್ಲು. 1. teeth that overlapped lips, 2. projected tooth. **ಕೆಪ್ಪಂಗೆ ಕೆಮಿ ಕೇಳ್ ಕಾಕನ ಗೊಗ್ಗರೆನ ಹಲ್ಲ್ ಬೀತ್(ಗಾ).** ವಾ: ಗೊಗ್ಗರೆ ಹಲ್ಲ್ ಬುಟ್ಕಂಡ್ ಬಾತ್. **ಗೊಗ್ಗರೆ ಹಲ್ಲ್** /*goggarɛ hallɨ*/ ತುಟಿಯಿಂದ ಎತ್ತರ ಬಂದ ಹಲ್ಲು. tooth projected forward. ವಾ: ಅದೆರ್‌ದ್ ಗೊಗ್ಗರೆ ಹಲ್ಲ್.

ಗೊಜ್ಜಿ /*gojji*/ ನಾ. 1. ಮಂದವಾದ ದ್ರವದಂತೆ ಮಾಡಿದ ಪದಾರ್ಥ, 2. ಒಂದು ಬಗೆಯ ಮೇಲೋಗರ. a thick liquid dish made of vegetables – a curry. ವಾ: ಸುಮಾರ್ ತರಕಾರಿಗಳ್‌ಲಿ ಗೊಜ್ಜಿ ಮಾಡಕ್.

ಗೊಜ್ಜೆ[1] /*gojjɛ*/ ನಾ. 1. ಕೊಳಕು, 2. ಗಲೀಜು, 3. ಹೊಲಸು, 4. ಕೆಸರು, 5. ಒಂದು ಬಗೆಯ ಸುವಾಸನೆಯ ಹೂವು. 1. filth, 2. dirt 3 dust, 4. mire, 5. a dwarf woman, 6. a fragrant flower. ವಾ: ಅರ್ವೆ ತೀರ ಗೊಜ್ಜೆ ಆತ್.

ಗೊಜ್ಜೆ[2] /*gojjɛ*/ ನಾ. 1. ತೊದಲು ಮಾತನಾಡು, 2. ತಡವರಿಸು. 1. to stutter, 2. to speak with difficulty. ವಾ: ಆ ಗೊಜ್ಜೆ ಮಾಡ್ದ ಊಟ ನಾ ಉಂಬಕಿಲೆ.

ಗೊಜ್ಜ್ /*gojjɨ*/ ಕ್ರಿ. 1. ತಿನ್ನು, 2. ಮಗು ಹಟಮಾಡಿ ತಾಯಿ ಹಾಲು ಕುಡಿಯುವುದು. 1. to eat, 2. a stubborn child drinking milk of its mother. ವಾ: ಕರ್ ಹಾಲ್ ಕುಡೆಕನ ಗೊಜ್ಜಿದೆ. ಪ: ಗೊಜ್ಜಿಕನ – ಗೊಜ್ಜುವಾಗ; ಗೊಜ್ಜಿಕೆ – ಗೊಜ್ಜಲು

ಗೊಟಕ್ /*goṭakɨ*/ ನಾ. 1. ಒಮ್ಮೆಗೆ ಸತ್ತುಹೋಯಿತು, 2. ಸಾಯುವಾಗ ಗಂಟಲಲ್ಲಿ ಗೊಟಕ್ ಧ್ವನಿ ಬಂದು ಸಾಯು. 1. referring to the sudden death of somebody or someone, 2. the sound from the throat after receiving the last drop of water, before dying. ವಾ: ಅಂವ ಗೊಟಕ್ ಆತ್.

ಗೊಟ್ಟ ಒಡಿಯೊದು /*goṭṭaoḍiyodu*/ ನಾ. ಹೋರಿಗಳ ತರಡನ್ನು ನೀರು ಮಾಡುವುದು. castration of a bull. ವಾ: ಪ್ರಾಯ ಬಾಕನ ಹೋರಿನ ಗೊಟ್ಟ ಒಡ್ವೊ.

ಗೊಟ್ಟ[1] /*goṭṭa*/ ನಾ. 1. ಕೆಲವು ಪರಿಶಿಷ್ಟ ಸಮುದಾಯದವರ ಸಾಂಪ್ರದಾಯಿಕ ಮನೆ, 2. ಗುಡಿಸಲು. 1. traditional houses of certain scheduled communities, 2. a small hut. ವಾ: ಅವು ಗೊಟ್ಟಲಿ ಇದ್ದವೆ. ಪ: ಬೊಟ್ಟೊ(ತು)

ಗೊಟ್ಟ[2] /*goṭṭa*/ ನಾ. 1. ಮದುವೆಯಲ್ಲಿ ಹರಿಕೆ ಹಣ ಕಟ್ಟುವ ಗುತ್ತಿ, 2. ಮದುವೆ ಸಮಯದಲ್ಲಿ ನಾಣ್ಯ ಹಾಕಿಡುವ ಓಟೆ ಮರದ ಸಾಧನ. 1. a container in which money is stored during a marriage, 2. a container made of wood to store coins. ವಾ: ಮೊದುವೆಲಿ ಗೊಟ್ಟಲಿ ಹರ್‌ಕೆ ಹಣ ಕಟ್ಟಿಸುದು.

ಗೊಟ್ಟೆ /*gɔṭṭɛ*/ ನಾ. 1. ಜಾನುವಾರುಗಳಿಗೆ ಔಷಧ ಮೊದಲಾದುವುಗಳನ್ನು ಕುಡಿಸಲು ಉಪಯೋಗಿಸುವ ಬಿದಿರಿನ ಕೊಳವೆ, 2. ಗೊಟ್ಟ. a (bamboo) tube used to pour medicine, etc. into the throat of a cattle, 2. A flow pipe to feed the cattle. ವಾ: ಗೊಟ್ಟೆಲಿ ಮೊದ್ದ್ ಕುಡ್‌ಸಿವೆ.

ಗೊಟ್ಟೆ ಹಣ್ಣ್ /*gɔṭṭɛ haṇṇɨ*/ ನಾ. 1. ಮುಳ್ಳು ಗಿಡದಲ್ಲಿ ಹಾಲಿನ ಕೆನೆ ಬಣ್ಣದ ತಿನ್ನಲು ಯೋಗ್ಯವಾದ ಹಣ್ಣು, 2. ಬೆಟ್ಟದ ಮುಳ್ಳೆ ಹಣ್ಣು, 3. ಕಾಡು ಹಣ್ಣು. 1. an edible yellow wild fruit grown on a thorny plant, 2. zunna berry, 3. wild fruit. ವಾ: ಗೊಟ್ಟೆ ಹಣ್ಣ್ ಮರಲಿ ಬಾರಿ ಮುಳ್ಳುಗಿದ್ದದೆ, ಸಣ್ಣ ಹಣ್ಣಾದರ್ ತಿಂಬಕೆ ರುಚಿಯಾಗಿದ್ದದೆ. ಪ: ಕೊಟ್ಟೆ ಪರ್‌ಂದ್(ತು)

ಗೊಟ್ಟೆ ಹೂವ್ /*gɔṭṭɛ hu:vɨ*/ ನಾ. ಗೊಟ್ಟೆ ಮರದ

ಹೂವು). flowers of zunna berry tree. ವಾ: ಅಲ್ಲಿ ನೋಡ್ ಗೊಟ್ಟೆ ಹೂವ್.

ಗೊಟ್ಟೆಹಣ್ಣ್ /*goṭṭɛhanni*/ ನಾ. ಮುಳ್ಳಿನ ಪೊದರಿ ನಂತಹ ಗಿಡದಲ್ಲಿ ಬೆಳೆಯುವ ರುಚಿಕರ ವಾದ ಚಿಕ್ಕ ಬಿಳಿ ಕಾಡುಹಣ್ಣು. a forest fruit, white in colour, grown in the bushes. ಪ: ಕೊಟ್ಟೆ ಪರ್‌ಂದ್(ತು)

ಗೊಡವೆ /*gɔḍavɛ*/ ನಾ. 1. ತಂಟೆ, 2. ಗೋಜು, 3. ಉಸಾಬರಿ, 4. ಗಮನ. 1. a quarrel, 2. dispute, 3. matters of concern, 4. attention. ವಾ: ಅಂವ ಯಾರ ಗೊಡವೆಗೂ ಇಲ್ಲೆ.

ಗೊಡ್‌ಂಗ್ ಕಾಯಿ /*goḍiŋgi ka:yi*/ ನಾ. 1. ಕೊಬ್ಬರಿಕಾಯಿ, 2. ನೀರು ಒಣಗಿದ ಕಾಯಿ, 3. ಗೋಟು ಕಾಯಿ. 1. copra, 2. a dry coconut, 3. a whole coconut with dry shell intact. ವಾ: ನಾವು ಕದ್ದ್ ಗೊಡಂಗ್ ಕಾಯಿನ ತಿಂಬೊದು.

ಗೊಡ್ಡ /*goḍḍa*/ ನಾ. 1. ಕರಿಯ ಬಣ್ಣದ ದೊಡ್ಡ ಇರುವೆ, 2. ಓತಿಕೇತ, 3. ಒಂದು ಬಗೆಯ ಮರ, 4. ಗೊದ್ದ. 1. a big black ant, 2. chameleon, 3. a kind of tree, 4. a large ant. ವಾ: ಗೊಡ್ಡ ಕಚ್ಚುದಾ?+.

ಗೊಡ್ಡಿ /*goḍḍi*/ ನಾ. 1. ಬಂಜೆ, 2. ಗಬ್ಬವಾಗದ ಹಸು ಅಥವಾ ಎಮ್ಮೆ. 1. a barren person/animal, 2. a cow/buffalo which cannot become pregnant. ವಾ: ಅವು ಗೊಡ್ಡಿ ಎಮ್ಮೆನ ನಾವ್‌ಗೆ ಹಿಡ್‌ಸಿದೊ. ಪ: ಗೊಡ್ಡಿ ಹಸ್ – ಬಂಜೆ ಹಸು; ಗೊಡ್ಡೆಮ್ಮೆ – ಗಬ್ಬವಾಗದ ಎಮ್ಮೆ

ಗೊಡ್ಡು[1] /*goḍḍu*/ ನಾ. 1. ಬಂಜೆತನ, 2. ಬಂಜೆ, 3. ಫಲ ಬಿಡದ, 4. 1. barrensess, 2. a barren woman, 3. fruitless. ವಾ: ಅದ್ ಗೊಡ್ಡು ಹಸ್. ಪ: ಗೊಡ್ಡೆಲ್ತಿ

ಗೊಡ್ಡು[2] /*goḍḍu*/ ನಾವಿ. 1. ಅಪರಿಷ್ಕೃತ, 2. ಒರಟಾದ, 3. ಸಾರವಿಲ್ಲದ. 1. rough, 2. crude, 3. uncultured. ವಾ: ಅದ್ ಗೊಡ್ಡು ಎಮ್ಮೆ.

ಗೊಡ್ಡು[3] /*goḍḍu*/ ನಾ. ಮಳೆನೀರು ಹೋಗಿ ಹೋಗಿ ಸವೆತ ಉಂಟಾಗಿ ನಿರ್ಮಾಣವಾದ ಮಳೆನೀರು ಕಣಿವೆ. a worn out place due to continuous flow of water. ವಾ: ಮಳೆ ನೀರ್ ಬಿದ್ದ್ ಬಿದ್ದ್ ಅಲ್ಲಿ ಗೊಡ್ಡು ಆತ್.

ಗೊಡ್ಡು[4] /*goḍḍu*/ ನಾ. 1. ಗೊಡ್ಡಾದ, 2. ಬರಡಾದ. 1. barren, 2. sterile. ವಾ: ಅದೊಂದ್ ಗೊಡ್ಡು ಗದ್ದೆ.

ಗೊಡ್ಡೆಟ್ಟಿರ /*goḍḍɛṭṭira*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಗೊಡ್ಡೆಮ್ಮೆ /*goḍḍɛmmɛ*/ ನಾ. 1. ಗಬ್ಬವಾಗದ ಎಮ್ಮೆ, 2. ಬಂಜೆ. 1. a barren buffalo, 2. a barren person/ animal. **ಒಡ್ಡು ಇಲ್ಲದ ಹೊಲ ಗೊಡ್ಡೆಮ್ಮೆ ಇದ್ದಂಗೆ(ಗಾ).** ವಾ: ಗೊಡ್ಡೆಮ್ಮೆ ಹಟ್ಟಿಗೆ ಬಾತ್‌ಲೆ.

ಗೊಡ್ಡೆಲ್ತಿ /*goḍḍelti*/ ನಾ. ಬಂಜೆ. barrensess. ವಾ: ಗೊಡ್ಡೆಲ್ತಿ ಎಮ್ಮೆನ ಮಾರಿಬುಟ್ಟೊ. ಪ: ಗೊಡ್ಡು

ಗೊಡ್ಲ್ /*goḍli*/ ನಾ. ಎರಡು ಗುಡ್ಡಗಳ ಮಧ್ಯದ ಕಣಿ. a valley. ವಾ: ಗೊಡ್ಲ್ ಹಕ್ಕಲೆ ಹೋಕಾಕಿಲೆ.

ಗೊಡ್ಸನ ಮರ /*goḍsana mara*/ ನಾ. ಒಂದು ವಿಧದ ಕಾಡು ಮರ. a forest tree. ವಾ: ಗೊಡ್ಸನ ಮರತೇಳ್‌ದು ಒಂದ್ ಕಾಡ್ ಮರ.

ಗೊಣ್‌ಂಗುದು /*goṇiŋgudu*/ ನಾವಿ. 1. ಗೊಣಗುಟ್ಟು, 2. ಪಿಸುಮಾತು, 3. ತನ್ನಲ್ಲಿ ಮಾತನಾಡಿಕೊಳ್ಳುವುದು. 1. to grumble, 2. to whisper, 3. to talk in a low and indistinct voice. ವಾ: ಎಂತದೊ ಒಂದೇ ನಿತ್ತ್ ಕಂಡ್ ಗೊಣ್‌ಂಗುದು.

ಗೊಣ್ಗಿಕಂತ್ /*goṇgikanti*/ ನಾ. 1. ಗುಣುಗುಣಿಸು, 2. ಮನಸ್ಸಲ್ಲೇ ಮೆಲು ಧ್ವನಿಯಲ್ಲಿ ಹೇಳು. 1. to talk in a low and indistinct voice, 2. to whisper. ವಾ: ಎಂತದೊ ಒಂದೇ ಗೊಣ್ಗಿಕಂತ್. ಪ: ಗೊಣ್ಗಿಕಂಡ್ – ಗೊಣಗಿಕೊಂಡು;

ಗೊಣ್ಗ್ /*goṇgi*/ ಕ್ರಿ. 1. ಗೊಣಗು, 2. ತನ್ನಲ್ಲಿ ಮಾತನಾಡಿಕೊಳ್ಳುವುದು. 1. to grumble, 2. to talk in a low and indistinct voice. ವಾ: ಎಂತರ ಹಂಗೆ ಗೊಣ್ಗುದು ಹಙ್ಞ ಕೇಳ್ವಂಗೆ ಹೇಳಿರಾದು. ಪ: ಗೊಣ್ಣಾಟ – ಪಿಸುಮಾತು; ಗೊಣ್ಗಿಕಂಡ್ – ಗೊಣಗಿಕೊಂಡು

ಗೊಣ್ಣೆ /*goṇṇɛ*/ ನಾ. 1. ಸಿಂಬಳ, 2. ನೆಗಡಿ, 3. ಮನುಷ್ಯರಿಗೆ ತಗಲುವ ಒಂದು ಸಾಂಕ್ರಾಮಿಕ ರೋಗ. 1. mucous membranes, 2. cold, 3. an infectious disease. **ಎರ್ಡ್ ಕುಪ್ಪಿಲಿ ಒಂದೇ ತರದ ಎಣ್ಣೆ – ಗೊಣ್ಣೆ(ಒ).** ವಾ: ಮೂಕುಂದ ಸೊರ್‌ದದೆ ಗೊಣ್ಣೆನ ಕೈವಸ್ತ್ರಲಿ ತೆಗಿ. **ಗೊಣ್ಣೆ ಸೊರ್ಕ** /*goṇṇɛ*

sorka/ ಮಕ್ಕಳ ಮೂಗಿನಲ್ಲಿ ನೆಗಡಿ ಸುರಿಯುತ್ತಿದ್ದರೆ ಹೇಳುವುದು. children having running nose due to cold. ವಾ: ಗೊಣ್ಣೆ ಸೊರ್ಕ ಇಸ್ಕೂಲಿಗೆ ಬಾತ್.

ಗೊಣ್ಣೆ ಹಣ್ಣ್ /*goṇṇɛ haṇṇɨ*/ ನಾ. ಲೋಳೆಯಾಗಿರುವ ಹಳದಿ ಬಣ್ಣದ ತಿನ್ನುವ ಕಾಡು ಹಣ್ಣು. a yellow slimy wild-fruit. ವಾ: ಗೊಣ್ಣೆ ಹಣ್ಣ್ ಸಣ್ಣದರ್‌ಲಿ ತಿಂಬೊತಿದ್ದೊ.

ಗೊಣ್ಣೆ ಹುಳ /*goṇṇɛ huḷa*/ ನಾ. 1. ಬಸವನ ಹುಳು, 2. ಮೈಮೇಲೆ ಚಿಪ್ಪು ಇಲ್ಲದಿರುವ ನೆಗಡಿ ರೀತಿಯ ದ್ರವವನ್ನು ಸ್ರವಿಸುವ ತೇವಾಂಶ ಇರುವಲ್ಲಿ ಜೀವಿಸುವ ನಿಧಾನವಾಗಿ ತೆವಳುವ ಜೀವಿ. 1. a snail 2. a gastropod mollusks. ವಾ: ಗೊಣ್ಣೆಹುಳ ಹೋದಲೆಲ್ಲ ನೋಳಿ ನೋಳಿ.

ಗೊಣ್ಸುದು /*goṇsudu*/ ಕ್ರಿ. 1. ಗೊಣಗು, 2. ತನ್ನಲ್ಲಿ ಮಾತನಾಡಿಕೊಳ್ಳುವುದು. 1. to grumble, 2. to talk in a low and indistinct voice. ವಾ: ಸುಮ್ಮನೆ ಎಲ್ಲದಕು ಗೊಣ್ಸುದು.

ಗೊತ್‌ಲುಗ್ಗಪ್ಪ /*gotɨuggappa*/ ನಾ. 1. ಗೊತ್ತಾಯಿತೆ?, 2. ಅರಿವಿಗೆ ಬಂತೆ?, 3. ತಿಳಿಯಿತೆ? 1. Do you know? 2. Did you realise? 3. Did you understand? ವಾ: ಲೆಕ್ಕ ಹೆಂಗೆ ಮಾಡ್‌ದುತ ಗೊತ್‌ಲುಗ್ಗಪ್ಪ. ಪ: ಗೊತ್‌ಲುಗ್ಗಪ್ಪಮ್ಮಂತ – ಗೊತ್ತಾಯಿತ ಅಮ್ಮಾಂತ;

ಗೊತ್‌ಲುಗ್ಗಪ್ಪ್ /*gotɨuggappa*/ ನಾ. 1. ಅರಿವಾಯಿತು, 2. ತಿಳಿಯಿತು. 1. realised, 2. understood. ವಾ: ನಂಗೆಲ್ಲ ವಿಸ್ಯ ಗೊತ್‌ಲುಗ್ಗಪ್ಪ್. ಪ: ಗೊತ್ತಾಕಾಯಿತ್ – ಗೊತ್ತಾಗಬೇಕಾಗಿತ್ತು; ಗೊತ್ತಾಗ್ _ ಅರಿವಾಗು; ಗೊತ್‌ಲುಗ್ಗಪ್ಪ್‌ಲಿ – ಗೊತ್ತಾಗಲಿಲ್ಲ;

ಗೊತ್ತಾ /*gotta:*/ ಕ್ರಿ. ಗೊತ್ತಿದೆಯ? Do you know? ವಾ: ನಿಂಗೆ ಅಂವನ ಗೊತ್ತಾ? ಪ: ಗೊತ್ತಾತ – ಗೊತ್ತಾಯಿತ. **ಗೊತ್ತಾಕನ** /*Gotta:kana*/ ಗೊತ್ತಾಗುವಾಗ. by the time we realised. **ಗೊತ್ತಾಕನ ಬೊಳ್ವಾತ್(ನು).** ವಾ: ಗೊತ್ತಾಕನ ಹೇಳಿನೆ. **ಗೊತ್ತಾಕು** /*gotta:ku*/ 1. ಗೊತ್ತಾಗಬೇಕು, 2. ತಿಳಿಯಬೇಕು. 1. need to know, 2. need to understand. ವಾ: ಅವ್‌ಕು ಅಂವರ ಮಜ್ಜ ಹೆಂಗೆತ ಗೊತ್ತಾಕು. ಪ: ಗೊತ್ತಾಕುಂತ – ಗೊತ್ತಾಗಬೇಕೆಂದು; ಗೊತ್ತಾಗಿದ್ – ಗೊತ್ತಾಗಿದ್ದು; ಗೊತ್ತಾಗುಟ್ಟ್ – ಗೊತ್ತಾಗಿದೆ; ಗೊತ್ತಾಗೋಕು – ಗೊತ್ತಾಗಬೇಕು. **ಗೊತ್ತಾದುಲ್ಲೆ** /*gotta:dullɛ*/ ಗೊತ್ತಾಗುವುದಿಲ್ಲ. will not know. ವಾ: ಹೇಳದಿದ್‌ರೆ ನಂಗೆ ಗೊತ್ತಾದುಲ್ಲೆ. ಪ: ಗೊತ್ತಾದ್ಲೆ, ಗೊತ್ತಾದ್‌ಲ್ಲೆ – ಗೊತ್ತಾಗುವುದಿಲ್ಲ; ಗೊತ್ತಿತ್ಲೆ – ಗೊತ್ತಿರಲಿಲ್ಲ, ಗೊತ್ತಿರುದ್‌ಲ್ಲೆ – ಗೊತ್ತಿರುವುದಿಲ್ಲ. **ಗೊತ್ತಾವ್ತು** /*gotta:vṭu*/ ಗೊತ್ತಾಗಿದೆ. understood. ವಾ: ಅವ್‌ಕೆಲ್ಲ ವಿಸ್ಯ ಗೊತ್ತಾವುಟು. ಪ: ಗೊತ್ತಲ್ಲೆ – ಗೊತ್ತಿಲ್ಲ; ಗೊತ್ತಾಕಿಲ್ಲೆಂತ – ಗೊತ್ತಾಗುವುದಿಲ್ಲವೆಂದು; ಗೊತ್ತಿರ್ದೆಲ್ಲ – ಗೊತ್ತಿರುವುದೆಲ್ಲ; ಗೊತ್ತಿರ್ವ – ಗೊತ್ತಿರುವ. **ಗೊತ್ತಿಲ್ಲದಂವ** /*gottilladanva*/ ಗೊತ್ತಿಲ್ಲದವನು. one who doesn't know/without the knowledge of others. **ಏನೂ ಗೊತ್ತಿಲ್ಲದಂವ(ನು).** ವಾ: ಅಂವ ಏನೂ ಗೊತ್ತಿಲ್ಲದವನಂಗೆ ಕುದ್ದುಟು.

ಗೊತ್ತಾದು /*gotta:du*/ ನಾ. 1. ತಿಳಿಯುವುದು, 2. ಅರಿವಾಗುವುದು. 1. understanding, 2. realisation. ವಾ: ನಿಂದ್ ಎಂತ ಕತೆತ ಹೇಳಿರೆ ತಾನೆ ಗೊತ್ತಾದು. ಪ: ಗೊತ್ತಾದೆ – ಗೊತ್ತಾಗುತ್ತದೆ; ಗೊತ್ತಾದೆನ – ಗೊತ್ತಾಗುತ್ತದೆಯೆ?; ಗೊತ್ತಾದ್ – ಗೊತ್ತಾಗಿದ್ದು;

ಗೊತ್ /*gottɨ*/ ನಾ. 1. ಗೊತ್ತಿದೆ, 2. ಗೊತ್ತುಂಟು. 1. knowing, 2. having knowledge of something. ವಾ: ನಂಗೆ ಆ ಕಾಲೇಜ್ ಗೊತ್ತು. ಪ: ಗೊತ್ತುಟ – ಗೊತ್ತಿದೆಯ; ಗೊತ್ತುಟು – ಗೊತ್ತಿದೆ; ಗೊತ್ತುಟ್ಟ – ಗೊತ್ತಿದೆಯ; ಗೊತ್ತುಟ್ಟಲ್ಲ – ಗೊತ್ತಿದೆಯಲ್ಲ; ಗೊತ್ತಿತ್ – ಗೊತ್ತಿತ್ತು; ಗೊತ್ತುಟ್ಟೊ – ಗೊತ್ತಿದೆಯೊ; ಗೊತ್ತೊ – ಗೊತ್ತಿದೆಯೊ. **ಗೊತ್ ಮಾಡ್‌ದು** /*gottɨ ma:ḍidu*/ ತಿಳಿವಳಿಕೆ ಮೂಡಿಸುವುದು. to make someone realise/ understand. ವಾ: ಮಕ್ಕಳಿಗೆ ಒಳ್ಳೆ ವಿಚಾರಗಳ ಗೊತ್ ಮಾಡ್‌ದು. ಪ: ಗೊತ್‌ಮಾಡಿಕೆ – ಗೊತ್ತುಮಾಡಲು. **ಗೊತ್‌ಲೆ** /*gottɨlɛ*/ 1. ಗೊತ್ತಿಲ್ಲ, 2. ತಿಳಿದಿಲ್ಲ. 1. don't know, 2. don't understand. ವಾ: ಮೋರೆಲಿ ಅದ್ ಎಂತಾದ್‌ತ ಗೊತ್‌ಲೆ. ಪ: ಗೊತ್ತಿಲ್ಲದೊವ್ಕೆ – ಗೊತ್ತಿಲ್ಲದವರಿಗೆ

ಗೊತ್‌ಗುರಿ /*gottɨ guri*/ ನಾ. 1. ಸ್ಥಿರವಾದ ಉದ್ದೇಶ, 2. ಧ್ಯೇಯ. 1. persistence, 2. aim/ambition. ವಾ: ಗೊತ್ ಗುರಿ ಇಲ್ಲದವ್ರ ಹಕ್ಕಲೆ ನಿಂಗೆ ಎಂತ ಮಾತ್?

ಗೊದಮೊಟ್ಟೆ /*godamoṭṭɛ*/ ನಾ. ತೆಂಗಿನ ಮಡಲಿನ

ನಾರಿನಿಂದ ಮಾಡಿದ ಹಗ್ಗ. rope made of coconut fibre.

ಗೊದ್ದ ಮೀನ್ /*godda mi:nɨ*/ ನಾ. ಕಪ್ಪುಬಣ್ಣದ ಸಣ್ಣ ಮೀನುಗಳು. black fry, a small young fish. ವಾ: ಗೊದ್ದ ಮೀನ್‌ನ ಹಿಡ್‌ದೊ.

ಗೊದ್ದ[1] /*godda*/ ನಾ. 1. ತೊಂದೆಕಪ್ಪೆ, 2. ಕಪ್ಪೆಮರಿ, 3. ನೀರಿನಲ್ಲಿ ಕಂಡುಬರುವ ಬಾಲವುಳ್ಳ ಕಪ್ಪೆ, 4. ಕಪ್ಪೆಯ ಲಾರ್ವ, 5. ಕಪ್ಪೆಯಾಗುವ ಮೊದಲಿನ ಸ್ಥಿತಿ, 6. ಗೊದ ಮೊಟ್ಟೆ, 7. ಇವುಗಳು ಕಪ್ಪುಬಣ್ಣದ ಮೀನುಗಳು,ದೊಡ್ಡದಾಗುತ್ತ ಬಾಲ ಕಳಚಿ ಕಪ್ಪೆಗಳಾಗುತ್ತವೆ. a tadpole, an aquatic larva of a frog or a toad with a large head and a small tail. ವಾ: ಗೊದ್ದ ಚೋಡ್ ನೀರ್‌ಲಿ ಓಡಾಡ್‌ದೆ ನೋಡ್.

ಗೊದ್ದ[2] /*godda*/ ನಾ. ಬೈಗುಳಪದ. an expletive. ವಾ: ಅಂವ ಬರೆ ಗೊದ್ದನಂಗೆ ಮಾಡ್ತೆ.

ಗೊನೆ[1] /*gonɛ*/ ನಾ. 1. ತುದಿ, 2. ಅಗ್ರಭಾಗ. 1. the end, 2. the highest point of something. ವಾ: ಬಾಳೆಗೊನೆನ ಕಡಿಯಕಾಯ್‌ತ್.

ಗೊನೆ[2] /*gonɛ*/ ನಾ. 1. ಬಾಳೆಯ ಗೊನೆ, 2. ಎಳನೀರ ಗೊನೆ. 1. a plantain/banana bunch/stalk, 2. a tender coconut bunch. **ಬಾಳೆಗೊಂದು ಗೊನೆ ಇರೋಕು, ಬದ್‌ಕಿಗೊಂದು ಗುರಿ ಇರೋಕು(ಗಾ).** ವಾ: ದೆವ್ವಕ್ಕೆ ಗೊನೆ ಕಡ್ದೊಳೊ. ಪ: ಕೈಲ್(ತು)

ಗೊನೆಕಡಿದು /*gonɛkaḍidu*/ ನಾ. ನೇಮ, ಕೋಲ, ನಡಾವಳಿ ಅಥವಾ ಜಾತ್ರೆ ಮುಂತಾದ ದೇವ ಕಾರ್ಯಗಳಿಗೆ ಅಗತ್ಯವಿರುವ ಬಾಳೆಹಣ್ಣಿಗಾಗಿ ವಾರ ಮುಂಚಿತವಾಗಿ ಬಾಳೆಗೊನೆ ಕಡಿಯುವ ಕಾರ್ಯಕ್ರಮ ಅಂದಿನಿಂದ ಆಗಿನ ಆರಂಭ. practice of cutting the banana bunch/stalk required for the religious ceremony at least one week before the actual event. ವಾ: ದೇವಿಗೆ ಕೊಡಿಕೆ ಗೊನೆಕಡಿದು.

ಗೊಪ್ಪೆ /*goppɛ*/ ನಾ. 1. ಮಣ್ಣಿನ ಮುದ್ದೆ, 2. ಕುಪ್ಪೆ, 3. ರಾಶಿ. 1. a heap of soil, 2. a heap, 3. a pile. ವಾ: ಮಣ್ಣ್‌ದ್ ಗೊಪ್ಪೆ ಬಿದ್ದುಟು.

ಗೊಬ್ಬರ /*gobbara*/ ನಾ. 1. ಗೊಬ್ಬರ, 2. ಜಾನುವಾರುಗಳ ಸಗಣಿ, ಎಲೆ ಮುಂತಾದವುಗಳ ಮಿಶ್ರಣ, 3. ಸಗಣಿ, ಎಲೆ, ಕಸಕಡ್ಡಿಗಳ ಕೊಳೆತ ಮಿಶ್ರಣ. 1. fertilizer, 2. organic compost, 3. manure. ವಾ: ದೈಗೆ ಗೊಬ್ಬರ ಹಾಕೊಕು. ಪ: ಗೊಬ್ರ. **ಗೊಬ್ಬರಹರ್ಡುದು** /*gobbaraharḍudu*/ ಗದ್ದೆಗೆ ಸೆಗಣಿ ಗೊಬ್ಬರ ಹಾಕುವುದು. spreading fertilizers in the field. ವಾ: ಗದ್ದೆಗೆ ಗೊಬ್ಬರ ಹಂರ್ಡುವ ಕೆಲ್ಸ ಮಾಡ್‌ತೊಳೊ. **ಗೊಬ್ಬರಹುಳ** /*gobbarahuḷa*/ ಗೊಬ್ಬರ, ಸಗಣಿಯಲ್ಲಿರುವ ಹುಳು. earthworm. ವಾ: ಗೊಬ್ಬರದ ಹುಳ ಬೆಳಿಯಾಗಿದ್ದದೆ. ಪ: ಗೊಬ್ರದುಳ – ಗೊಬ್ಬರ,ಸಗಣಿಯಲ್ಲಿರುವ ಹುಳ. **ಗೊಬ್ಬೆರ** /*gobbɛra*/ ವಾ: ಸೆಗ್‌ಣಿ ಗೊಬ್ಬೆರದ ಮೇಲೆ ಎಂತಾರ್ ಮುಚ್ಚಕಾಯ್ತ್. **ಗೊಬ್ರ** /*gobra*/ **ನಾಊಟ ಕೊಟ್ಟ ಮನೆ ಹಾಳಾಕಿಲ್ಲೆ, ಗೊಬ್ರ ಕೊಟ್ಟ ಮರ ಸಾಯಕಿಲೆ(ಗಾ).** ವಾ: ಕಾಪಿ ದೈಗೆ ಗೊಬ್ರ ಹಾಕಿ ಆತ? **ಗೊಬ್ರದ ಗುಡ್ಡೆ** /*gobrada guḍḍɛ*/ ಗೊಬ್ಬರದ ರಾಶಿ. a heap of organic compost. ವಾ: ಗೊಬ್ರದ ಗುಡ್ಡೆಂದ ಕುಕ್ಕೆಲಿ ಹೊತ್ತರಾತ್.

ಗೊರಂವ /*goranva*/ ನಾ. 1. ತೆಂಗಿನ ಕಾಯಿಯ ಒಳಗಿನ ಹುಳು, 2. ತೆಂಗಿನಕಾಯಿ ಒಳಗೆ ಕಜ್ಜಿ ಕಜ್ಜಿ ಇರುವ ಸ್ಥಿತಿ. 1. an insect found in the coconut, 2. an unhealthy coconut. ವಾ: ಗೊರಂವ ಕಾಯಿ ವಳಿಗೆ ತಿಂಬೊದು. **ಗೊರಂವ ಹೊದು** /*gorava hodu*/ ವಾ: ತೆಂಗ್‌ನಕಾಯಿ ಗೊರಂವ ಹೋದರೆ ರುಚಿ ಇರಿಕಿಲೆ. **ಗೊರವಂಗೆ ಇಸುದು** /*goravaŋgɛ isudu*/ ಬೆಳೆದ ಬೆಳೆ ನಾಶವಾಗಬಾರದು ಎಂದು ದೇವರಿಗೆ ಕೊಡುವ ನೈವೇದ್ಯ. an offering made to the god for the protection of crop. ವಾ: ಬೆಳ್ದ ಬೆಳೆ ಹಾಳಾಗದಂಗೆ ಕಾಪಾಡಲಿತ ಗೊರವಂಗೆ ಇಸುದು.

ಗೊರಸನಕಾಯಿ /*gorasanaka:yi*/ ನಾ. ದೊಡ್ಡ ಮರದಲ್ಲಿ ಆಗುವ, ಉದ್ದ ಉದ್ದ ಬೀಜ ಇರುವ ಹಲಸಿನ ರೂಪದ ಕಾಯಿ. an unripe fruit resembling a jackfruit. ವಾ: ಗೊರಸನಕಾಯಿ ತೇಟ್ ಹಲ್‌ಸ್‌ನ ಹಣ್ಣ್ ನಂಗೆ ಕಂಡದೆ.

ಗೊರಸಿನಮನೆ /*gorasinamanɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಗೊರ್ಕೆ /*gorkɛ*/ ನಾ. 1. ಗೊರಕೆ, 2. ಗೂರು. 1.

snoring, 2. to snore. ವಾ: ಮೋಲ್‌ಗಿರೆ ಸಾಕ್ ಅವುಳು ಜೋರು ಗೊರ್ಕೆ ಹೊಡ್ಯದು.

ಗೊರ್ಗ /*gorga*/ ನಾ. 1. ಗೊರಬೆ, 2. ಕಿಡಿಂಜೋಳು, 3. ಮಳೆಯಿಂದ ರಕ್ಷಣೆ ಪಡೆಯಲು ಕೆಲಸಕ್ಕೆ ಹೋಗುವಾಗ ಹಾಕಿಕೊಳ್ಳುವ ಓಟೆಯಿಂದ ಮಾಡಿರುವ ವಸ್ತು. a hood, usually made of plastic, areca sheath, coconut leaf, etc. to protect from rain. ವಾ: ಗೊರ್‌ಗ, ಕೊರಂಬೆ ಹಾಕಂಡರೆ ತಲೆಗೆ ಮಳೆ ನೀರ್ ಬೀಳ್‌ದುಲೆ. **ಗೊರ್ಗ್ ಸೂಂಡ್ದು** /*gorgɨ su:ŋḍdu*/ 1. ಗೊರಬು ಹಾಕಿಕೊಳ್ಳುವುದು 2. ಗೊರಬೆ ಧರಿಸುವುದು. wearing a hood. ವಾ: ತಲೆಗೆ ಗೊರ್ಗ್ ಸೂಂಡ್ದು.

ಗೊರ್ಜಿ /*gorji*/ ನಾ. 1. ಹೂತುಕೊಳ್ಳುವ ಗದ್ದೆ, 2. ವ್ಯವಸಾಯಕ್ಕೆ ಯೋಗ್ಯವಲ್ಲದ ಹೆಚ್ಚು ನೀರಿನ ತೇವಾಂಶದಿಂದ ಕೂಡಿದ ಜಾಗ. 1. a muddy paddy field (a field with too much of wet soil), 2. a swampy field. ವಾ: ಗೊರ್ಜಿ ಗದ್ದೆಲಿ ಕಾಲ್ ಇಸಿಕೆ ಬೊತ್ತ್, ಕಾಲಾಕಿರೆ ಹೂಣ್‌ದೆ. ಪ: ಕಂಪಗದ್ದೆ, ಗೊರ್ಜಿಗದ್ದೆ – ಹೂತುಕೊಳ್ಳುವ ಗದ್ದೆ

ಗೊರ್ಟೆ ದೈ /*gorṭɛ dai*/ ನಾ. 1. ಗೊರಟೆ ಗಿಡ, 2. ಸ್ಫಟಿಕದ ಗಿಡ, 3. ಗೊರಟಿಗೆ ಗಿಡ. henna plant, Lawsonia inermis. ವಾ: ಗೊರ್ಟೆ ದೈಲಿ ಸಣ್ಣ ಮುಳ್ಳುಗಿರೊ ದೈನೂ ಉಟ್ಟು, ಹಂಗೆ ಮುಳ್ಳು ಇಲ್ಲದಿರೊ ದೈನೂ ಉಟ್ಟು. **ಗೊರ್ಟೆ ಹೂವ್** /*gorṭɛ hu:v*/ ವಾ: ಗೊರ್ಟೆ ದೈಲಿ ಸಣ್ಣ ಮುಳ್ಳುಗಿರೊ ದೈನೂ ಉಟ್ಟು, ಹಂಗೆ ಮುಳ್ಳು ಇಲ್ಲದಿರೊ ದೈನೂ ಉಟ್ಟು. ಪ: ಗೋರಂಟೆ, ಗೋರಟೆ

ಗೊರ್ಣೆಕಟ್ಟ್[1] /*gorɳɛ kaṭṭ*/ ನಾ. ಕಡುಬು, ಒತ್ತುಶ್ಯಾವಿಗೆ ಮಾಡಲು ಬಳಸುವ ಅಕ್ಕಿ ತರಿಯನ್ನು ನೀರಿನಲ್ಲಿ ಹಾಕಿ ಕುದಿಸಿ ಬೇಯಿಸುವಾಗ ಹಿಟ್ಟು ಅಲ್ಲಲ್ಲಿ ಗಂಟು ಕಟ್ಟಿಕೊಳ್ಳುವುದು. formation of lumps while boiling the coarse rice flour which is used in making rice cake or rice vermicelli. ವಾ: ಹಿಟ್ಟ್ ಉಕ್ಕರಿಸಿಕನ ಗೊರ್ಣೆ ಕಟ್ಟ್ ದು.

ಗೊರ್ಣೆಕಟ್ಟ್[2] /*gorɳekaṭṭi*/ ಕ್ರಿವಿ. 1. ಚಂಡುಗಟ್ಟು, 2. ಇಟ್ಟಣಿಸು. formation of lumps in ragi ball.

ಗೊರ್ಸ್ /*gorsɨ*/ ನಾ. 1. ಗೊರಸು, 2. ದನ, ಕುದುರೆ ಮುಂತಾದವುಗಳ ಪಾದದ ಗಟ್ಟಿಯಾದ ಹೊದಿಕೆ, 3. ಪ್ರಾಣಿಗಳ ಕೊಳಗು. hoof of cattle or horse. ವಾ: ಕಾಲಿಗೆ ದನದ ಗೊರ್ಸ್ ತಾಂಗಿತ್, ಕಾಲಿಗೆ ದನದ ಕವಣೆ ತಾಂಗಿತ್.

ಗೊವ್‌ಜಿ /*govji*/ ನಾ. 1. ಮೋಜು, 2. ಮಸ್ತಿ, 3. ಸಡಗರ, 4. ಸಂಭ್ರಮ. 1. merriment, 2. amusement, 3. enthusiasm, 4. celebration. ವಾ: ಮೊದ್‌ವೆ ಬಾರಿ ಗೊವ್ಜಿ ನ? ಪ: ಗೌಜಿ

ಗೊಸರ್ ಮಗ್ಕೊದ್ /*gosarɨ magcodɨ*/ ನಾವಿ. ಕೆಸರು ಗದ್ದೆ ಅಗೆಯುವುದು. digging in the wet field. ವಾ: ಕೊಟ್ಟ್ ತಕಂಡ್ ಗೊಸರ್ ಮಗ್ಕೊದ್.

ಗೊಸ್ರು /*gosru*/ ನಾ. 1. ಕೆಸರು, 2. ತುಂಬ ಕೆಸರು ಇರುವ ಜಾಗ (ಗದ್ದೆ), 3. ಗದ್ದೆಯ ಹೂಳು. 1. mire, 2. mucky/flooded paddy field, 3. the sediment in the paddy field. ವಾ: ಗೊಸ್ರುಲಿ ಹೆಂಗೆ ನಡ್ಯದು. **ಗೊಸ್ತು ಗದ್ದೆ** /*gostu gaddɛ*/ 1. ತುಂಬಾ ಕೆಸರಿರುವ ಗದ್ದೆ, 2. ಕಾಲುಹೂತು ಹೋಗುವಷ್ಟು ಕೆಸರು ಇರುವ ಗದ್ದೆ. 1. a muddy paddy field, 2. a muddy field. ವಾ: ಗೊಸ್ತು ಗದ್ದೆಲಿ ಕಾಲ್ ಹೂಣಿಯೋದೆ. **ಗೊಸ್ರ್ ಗದ್ದೆ** /*gosrɨ gaddɛ*/ ಕೆಸರು ತುಂಬಿದ ಗದ್ದೆ. a muddy paddy field. ವಾ: ಗೊಸ್ರ್ ಗದ್ದೆ ತ ಹಂಗೆನೆ ಬುಟ್ಟೊಟೊ. **ಗೊಸ್‌ರ್‌ಗದ್ದೆ** /*gosɨrgadde*/ ಕಂಪ ಗದ್ದೆ, ಕಾಲು ಹುಗಿದು ಹೋಗುವ ಗದ್ದೆ. muddy paddy field in which legs get sink/buried. ಪ: ಕಜೆಗದ್ದೆ

ಗೊಳೋಂತ /*goḷɔ:nta*/ ನಾ. 1. ನೋವು, ಯಾತನೆ ತುಂಬಿದ ದನಿಯಿಂದ ಗೋಳಾಡುವುದು, 2. ಗೊಳೋ ಎಂದು. a cry of pain. ವಾ: ನನ್ನ ಕಾಂಬಕನ ಗೊಳೋಂತ ಮರ್‌ಟೊ.

ಗೊಳ್ದೊತ್ /*goḷdɔtɨ*/ ನಾ. ನೀರಿನಿಂದ ಆಗುವ ಸವಕಳಿ. erosion due to the continuous flow of water. ವಾ: ನೀರ್ ಬಿದ್ ಬಿದ್ ಆ ಜಾಗೆ ಗೊಳ್ದೊತ್.

ಗೊಳ್ಳೆ /*goḷḷɛ*/ ನಾ. 1. ಗುದದ್ವಾರ, 2. ತಿಕ. 1. asshole, 2. buttock. ವಾ: ಕೂಸುನ ಗೊಳ್ಳೆನ ತೊಳಿ.

ಗೋಂಕು /*go:ŋku*/ ನಾ. ಗೇರುಹಣ್ಣಿನ ಸಾರಾಯಿ. feni, a liquor made out of cashew apple. ವಾ: ಗೋಂಕು ಕುಡೆಕೆ ಬೇಕಿತ್ತಾ?

ಗೋಂಕ್ರ್ ಕಪ್ಪೆ /*go:ŋkri kappɛ*/ ನಾ. ದೊಡ್ಡ ಗಾತ್ರದ ಕಪ್ಪೆ. a large frog. ವಾ: ಗೋಂಕ್ರ್ ಕಪ್ಪೆ ಕೂಂಗುದ್.

ಗೋಂಕ್ರ್ ಚಿಪ್ಪಿ /*go:ŋkri cippi*/ ನಾ. 1. ದೊಡ್ಡ ಗೆರಟೆ, 2. ದೊಡ್ಡ ಗಾತ್ರದ ತೆಂಗಿನ ಚಿಪ್ಪು, 3. ದೊಡ್ಡ ಕರಟ. a large coconut shell. ವಾ: ಗೋಂಕ್ರ್ ಚಿಪ್ಪಿಲಿ ಹಟ್ಟಿ ಬಾಚಿಕೆ ಲಾಯ್ಕ.

ಗೋಂಚ್ /*go:ŋci*/ ಕ್ರಿ. 1. ಗೋಚು, 2. ತೋಡು, 1. to brush, 2. to dig. ವಾ: ನೀರ್‌ನ ಗೋಂಚಿ ಅವುಳ ಮೋರೆಕೆ ಚೇಪು. ಪ: ಗೋಂಚಿದ್ – ಗೋಚುವುದು. **ಗೋಂಚು** /*go:ŋcu*/ ಕ್ರಿ. 1. ಬಾಚಿ ತೆಗೆಯುವುದು, 2. ಗೋರು. 1. to gather, 2. to scrape. ವಾ: ಚೋಡ್‌ಲಿ ಹೊಡಿ ಮೀನ್‌ಗಳ ಗೋಂಚು, ಹರ್‌ಂಡ್‌ದ ಅಕ್ಕಿನ ಕೈಲಿ ಗೋಂಚಿ ತೆಗ್ದವೆ. ಪ: ಗೋಂಚ್

ಗೋಂಜಲ ಮರ /*go:ŋjala mara*/ ನಾ. 1. ಮಣ್ಣಡಿಕೆ ಮರ, 2. ಚಳ್ಳೆ, 3. ಗೋಂದು ಮರ. The sepistan plum tree;The common sebesten plum, myxa, Linn. (Boraginaceae) the fruits of which are very sticky to touch and are of sweet taste. ವಾ: ಗೋಂಜಲ ಮರದ ಹತ್ತ್ ರ ನಿತ್ತದ್.

ಗೋಂಟಡ್ಕ /*go:ŋṭaḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಜಾಲ್ಸೂರು ಗ್ರಾಮದ ಜಾಗ. a locality in Jalsuru village in Sullia Taluk of Dakshina Kannada District.

ಗೋಂಟೆಕಾಯಿ /*go:ŋṭɛka:yi*/ ನಾ. 1. ಕಾಡು ತೊಂಡೆಕಾಯಿ, 2. ಕರೊಳು(ತು). wild ivy gourd. ವಾ: ಗೋಂಟೆಕಾಯಿನ ನೋಡ್ಯೊಳನ?

ಗೋಂದ್ /*gondi*/ ನಾ. 1. ಅಂಟು, 2. ಸರಿ. 1. gum/ resin, 2. correct. ವಾ: ದೂಪದ ಮರಲಿ ಗೋಂದು ಅರ್ದದೆ. **ಗೋಂದು** /*go:ndu*/ 1. ಅಂಟುದ್ರವ, 2. ಸರಿ, 3. ಮರದ ಸೋರಿದ ರಸ. 1. gum, 2. resin, 3. plant gum. ವಾ: ಆ ಮರಲಿ ಕೆಂಪ್ ಬಣ್ಣಲಿ ಗೋಂದು ಸೊರ್‌ದದೆ

ಗೋಚರ /*go:cara*/ ನಾ. 1. ಪ್ರಜ್ಞೆ, 2. ಸ್ಮೃತಿ, 3. ಎಚ್ಚರ. 1. consciousness, 2. memory, 3. awareness. ವಾ: ಟಿವಿ ನೋಡಿಕೆ ಕುದ್ದರೆ ಇದ್ಕೆ ಯಾವ್ದು ಗೋಚರನೆ ಇಲ್ಲೆ. ಪ: ಗೋಚರ ಇಲ್ಲೆ – ಎಚ್ಚರವಿಲ್ಲದ ಸ್ಥಿತಿ

ಗೋಚ್[1] /*go:ci*/ ಕ್ರಿ. 1. ಗೋರು, 2. ತೋಡುವುದು. 1. scraping, 2. digging. ವಾ: ಹೊಯ್‌ಗೆನ ಗುಡ್ಡೆಂದ ಗೋಚಿ ಹಾಕುದು. ಪ: ಗೋಚುದು – ಗೋಚುವುದು

ಗೋಚ್[2] /*go:ci*/ ಕ್ರಿ. 1. ಗೋರು, 2. ಸೆಳೆ. 1. to scrape, 2. to pull. ವಾ: ಯಾಲನ ಗೋಚಿ ಚೀಲಕ್ಕೆ ತುಂಬ್ಸು.

ಗೋಜು /*go:ju*/ ನಾ. 1. ಸಹವಾಸ, 2. ಒಡನಾಟ. 1. an association, 2. a friendship. ವಾ: ಅಂವನ ಗೋಜು ನಂಗೆ ಬೇಡ.

ಗೋಟಡಿಕೆ /*go:ṭaḍikɛ*/ ನಾ. ಸುಲಿದು ಒಣಗಿಸಿದ ಅಡಕೆ. dried, peeled arecanut. ವಾ: ಗೋಟಡಿಕೆ ಬಾರಿ ಗಟ್ಟಿ.

ಗೋಟು /*go:ṭu*/ ನಾವಿ. 1. ಸಂಪೂರ್ಣ ಒಣಗಿದ ಕಾಯಿ, 2. ಗೋಟುಕಾಯಿ, 3. ಗೋಟಡಿಕೆ. 1. completely dried nut, 2. a dried nut, 3. dried areca nut. ವಾ: ನಂಗೆ ಗೋಟು ಅಡ್‌ಕೆನ ಅಗೆಕೆ ಬೊತ್ತ್. ಪ: ಗೋಟ್. **ಗೋಟ್‌ಕಾಯಿ** /*go:ṭika:yi*/ 1. ನೀರು ಆರಿ ಒಣಗಿದ ತೆಂಗಿನಕಾಯಿ, 2. ಕೊಬ್ಬರಿ. copra, a dry coconut. ವಾ: ಗೋಟ್‌ಕಾಯಿ ತಿಂಬೊನ?

ಗೋಡೆ /*go:ḍɛ*/ ನಾ. 1. ಗೋಡೆ, 2. ಕಟ್ಟಡಗಳಿಗೆ ಆಧಾರವಾಗಿ ನಿಂತಿರುವ, ಕಟ್ಟಡದ ಭಾಗ. 1. a wall, 2. a supporting wall. ವಾ: ಗೋಡೆ ಮೇಲೆ ಹಲ್ಲಿ ಹರ್‌ದೆ, ಗೋಡೆಗೆ ಸುಣ್ಣ ಹೊಡ್ಯೊಕು. **ಗೋಡೆ ಇಡುದು** /*go:ḍɛ iḍudu*/ 1. ಗೋಡೆ ಏರಿಸುವುದು, 2. ಗೋಡೆ ಕಟ್ಟುವುದು. 1. building a wall, 2. construction of a wall. ವಾ: ಮನೆಗೆ ಗೋಡೆ ಇಡುದು.

ಗೋಡೆಪೆಟ್ಟಿಗೆ /*go:ḍɛ pɛṭṭigɛ*/ ನಾ. ಗೋಡೆಗೆ ಆತುಕೊಂಡು ನಿರ್ಮಿಸಿರುವ ಪೆಟ್ಟಿಗೆ, 2. ಗೋಡೆಯಲ್ಲಿರುವ ಕಪಾಟು, 3. ಮನೆಯತಿಜೋರಿ. 1. a closet in the wall, 2. a cupboard built in a wall, 3. a safe locker at home. ವಾ: ಗೋಡೆ ಪೆಟ್ಟಿಗೆಲಿ ಗಲಾಸ್ ಇಸಿ ಬಾ.

ಗೋಡೆಹಸೆ /*go:ḍɛ hasɛ*/ ನಾ. ಮದುವೆ ಶಾಸ್ತ್ರದಲ್ಲಿ ಸೂರ್ಯ ಮತ್ತು ಚಂದ್ರರ ಚಿತ್ರವನ್ನು ಗೋಡೆಯಲ್ಲಿ ಬಿಡಿಸುವುದು. drawing images of the sun and the moon on the walls during a marriage ceremony. ವಾ: ಈಗ ಗೋಡೆ ಹಸೆ ಕಾಂಬಕೆ ಸಿಕ್ಕುಲೆ.

ಗೋಣಂಗಾರ /*go:ṇaŋga:ra*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಗೋಣಿ /*go:ṇi*/ ನಾ. 1. ಸೆಣಬಿನ ಚೀಲ, 2. ಗೋಣಿಚೀಲ. 1. a gunny bag, 2. jute bags. ವಾ: ಬತ್ತ ತುಂಬುಸಿಕೆ ಹೊಸ ಗೋಣಿ ತರೊಕು. **ಗೋಣಚೀಲ** /*go:ṇaci:la*/ ನಾ. 1. ಗೋಣಿಚೀಲ, 2. ಸೆಣಬಿನ ಚೀಲ. 1. a burlap sack, 2. a gunny sack. ವಾ: ಗೋಣಚೀಲನ ಸೆಣಬು ಇಲ್ಲರೆ ಕೆಲು ನೈಸರ್ಗಿಕ ನಾರ್‌ಗಳ್‌ಂದ ಮಾಡಿವೆ. **ಗೋಣಿ ಹಾರ್ದು** /*go:ṇi ha:rdu*/ 1. ಶಾಲೆಗಳಲ್ಲಿ ಇದೊಂದು ರೀತಿಯ ಮನೋರಂಜನೆಯ ಕ್ರೀಡೆ, 2. ಗೋಣಿಯೊಳಗೆ ನಿಂತು ಕುಪ್ಪಳಿಸುತ್ತಾ ಮುಂದೆ ಸಾಗುವುದು. 1. an entertainment programme arranged in schools, 2. a frog jump race, sack race or potato sack race. ವಾ: ಇಸ್ಕೂಲ್‌ಲಿ ಮಕ್ಕಳಿಗೆ ಗೋಣಿ ಹಾರ್ದು ಆಟದ ಸ್ಪರ್ದೆನ ನಡ್‌ಸುವೆ, ಇದೊಂದ್ ಮನರಮಜನೆನ ಆಟ. **ಗೋಣಿಬಾಯಿ** /*go:ṇiba:yi*/ ಗೋಣಿಯ ತೆರೆದ ಭಾಗ. the mouth of a jute bag. ವಾ: ಗೋಣಿಬಾಯಿನ ಬೊಳ್ಳಿಲಿ ಕಟ್ಟೊಕು.

ಗೋತ್ರ /*go:tra*/ ನಾ. 1. ವಂಶ, 2. ಕುಲ. 1. lineage, 2. ancestry. **ಆತ್‌ರ ಮಾಡಿ ಗೋತ್ರ ಕೆಡ್ಸಿಕನ್ತ್(ಗಾ).** ವಾ: ಗೌಡ ಜೆನಾಂಗಲಿ ಹದಿನೆಂಟ್ ಗೋತ್ರ ಉಟ್ಟು.

ಗೋದಿಗಂಬ /*go:di gamba*/ ನಾ. ಮರದ ಕಂಬ. wooden pillar. ವಾ: ಗೋದಿ ಗಂಬ ಹತ್ತುದು.

ಗೋದಿರೊಟ್ಟಿ /*go:di roṭṭi*/ ನಾ. ಚಪಾತಿ. a flat bread. ವಾ: ಹೊತಾರೆ ಗೋದಿ ರೊಟ್ಟಿ ತಿಂದದ್.

ಗೋದಿಸರ್ಪ /*go:di sarpa*/ ನಾ. ಗೋಧಿ ಬಣ್ಣದ ನಾಗರಹಾವು. a cobra. ವಾ: ಅದ್ ಗೋದಿ ಸರ್ಪಗಡ.

ಗೋದೆ ಐಮರ /*go:de aimara*/ ನಾ. ಹಳೆ ಕಾಲದಲ್ಲಿ ಮನೆಯ ಮುಂದೆ ಕಂಬಗಳ ನಡುವೆ ಕೂರಲು ನಿರ್ಮಿಸುತ್ತಿದ್ದ ವ್ಯವಸ್ಥೆ, ಅದರ ಅಡಿಯಲ್ಲಿ ಚಿನ್ನ ಹಾಕಲಾಗುತ್ತಿತ್ತು ಹಾಗೂ ಹೆಂಗಸರು ಕುಳಿತುಕೊಳ್ಳುವಂತೆ ಇರಲಿಲ್ಲ. a permanent high wooden seat on the veranda (usually long slabs of wood fixed on low parapets between pillars). Reserved for the head of the family to settle disputes. Gold used to be hidden beneath it, and women were forbidden from sitting on it. ವಾ: ಐನ್ ಮನೆಗಳ್‌ಲಿ ಗೋದೆ ಐಮರ ಇದ್ದದೆ.

ಗೋದೆಗಂಬ /*go:dɛ gamba*/ ನಾ. ಐನ್ ಮನೆಯ ಮುಂದಿನ ಆವರಣದಲ್ಲಿ ಇರಿಸುತ್ತಿದ್ದ ಮರದ ಮುಖ್ಯ ಕಂಬ. the first pillar to the left of the steps to the verandah in an Ainmane. ವಾ: ಗೋದೆ ಗಂಬ ಮನೆ ಎದ್ರಿಗೆ ಇದ್ದದೆ. ಪ: ಗೋದೆಕಂಬ

ಗೋಪಾಲಕಜೆ /*go:pa:lakajɛ*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಜಾಲ್ಸೂರು ಗ್ರಾಮದ ಜಾಗ. a locality in Jalsuru village in Sullia Taluk of Dakshina Kannada District.

ಗೋಮಂತ್ರ /*go:mantra*/ ನಾ. ಹಾಲು ಕರೆಯುವ ಹಸುವಿನ ಮೂತ್ರ. urine of a milch cow. ವಾ: ಗೋಮಂತ್ರ ತಕಣಿಕೆ ಹಟ್ಟಿಲಿ ನಿತ್ತದ್.

ಗೋಮಯ /*go:maya*/ ನಾ. ಹಸುವಿನ ಸಗಣಿ. cow dung. ವಾ: ಗೋಮಯನ ಇಜ್ಜೆಲ್‌ಗೆ ಸಾರ್‌ಸುದು.

ಗೋಮಾಂವ್ನಣ್ಣ್ /*go:ma:nvnaṇṇɨ*/ ನಾ. ಒಂದು ಬಗೆಯ ನಾರಿನಿಂದ ಕೂಡಿದ ಮಾವಿನ ಹಣ್ಣು. a variety of fibrous mango. ವಾ: ಗೋಮಾವ್‌ನ ಹಣ್ಣ್ ತಿಂಬಕನ ಹಞ್ಞ ನಾರ್ ನಾರ್ ಇದ್ದದೆ.

ಗೋಮಾವ್‌ನ ಮರ /*go:ma:vɨna mara*/ ನಾ. ಗೋವೆ ಮಾವಿನ ಮರ. a variety of mango tree. ವಾ: ಗೋಮಾವ್‌ನ ಮರಲಿ ತುಂಬ ಹೂ ಹೋವ್ಚು.

ಗೋರ /*go:ra*/ ನಾ. 1. ಭಯಂಕರ, 2. ಉಗ್ರವಾದ, 3. ಕಠಿಣವಾದ, 4. ತೀಕ್ಷ್ಣವಾದ. 1. horrible, 2. terrible, 3. difficult, 4. strong. ವಾ: ಅಂದ್ ಅವು ಹೊಡ್‌ಕಂಡದ್ ಬಾರಿ ಗೋರ ಆಗಿತ್ತ್.

ಗೋರಜನ /*go:rajana*/ ನಾ. ದನಗಳು ಮೇಕೆ ಕಡಿಯುವಾಗ ಹೊರಸೂಸುವ ಹಿತಕರ ವಾದ ಉಸಿರು. respiration of cattle while chewing the cud. ವಾ: ಹಸ್‌ನ ಗೋರಜನ ಕೇಳ್ದೆ.

ಗೋರಟೆ /*go:raṭɛ*/ ನಾ. ಗೋರಂಟಿ ಹೂವು. henna flower. ವಾ: ಗೋರಟೆ ಹೂನ ಮಾಲೆ ಮಾಡಕಾಯ್ತ್.

ಗೋರಡ್ಕ /*go:raḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಜ್ಜಾವರ ಗ್ರಾಮದ ಜಾಗ. a locality in

Ajjavara village in Sullia Taluk of Dakshina Kannada District.

ಗೋರಿ[1] /*go:ri*/ ನಾ. ಗದ್ದೆ ಗೋರಿ, ಎಲ್ಲರೂ ಕೂಡಿ ಮಾಡುವ ಬೇಸಾಯ. cultivating the land together. ವಾ: ನಾಳೆ ಗದ್ದೆಗೋರಿಗಡ. ಪ: ಗೋರಿಲಿ – ಗದ್ದೆಗೋರಿಯಲ್ಲಿ

ಗೋರಿ[2] /*go:ri*/ ನಾ. ಬಿದಿರಿನಿಂದ ಮಾಡಿದ ಮೀನು ಹಿಡಿಯುವ ಸಾಧನ. a tool to catch fish made of bamboo. ವಾ: ನಾಡ್‌ಲೆಲ್ಲ ಗೋರಿ ತಕಂಡ್ ಮೀನ್ ಹಿಡೆದು.

ಗೋರಿ[3] /*go:ri*/ ನಾ. 1. ಸಮಾಧಿ, 2. ಹೆಣವನ್ನು ಹೂಳುವ ಜಾಗ. 1. a grave, 2. a graveyard. ವಾ: ಗೋರಿಗೆ ವರ್‌ಸೊಳು ಪೂಜೆ ಮಾಡಿವೆ. ಪ: ಗೋರಿಗ – ಸಮಾಧಿಗಳು

ಗೋರಿಕೆ /*go:rikɛ*/ ನಾ. ಸಾರಿಸಲು. to wash or to spread. ವಾ: ಮಳೆಬಾಕೆ ಮುಂದೆ ಅಡ್ಕೆ ಗೋರಿಕೆ ಉಟ್ಟು. ಪ: ಗೋರಿಕನ – ಸಾರಿಸುವಾಗ

ಗೋರಿಗ /*go:riga*/ ನಾ. ಗಂಜಿ ಬಳಸುವ ಸೌಟು. a ladle. ವಾ: ಗೋರಿಗನ ತಕಂಡ್ ಬಾ.

ಗೋರು /*go:ru*/ ಕ್ರಿ. 1. ಗೋರು, 2. ಬಾಚು, 3. ಬಾಚಿತೆಗೆಯುವ ಪಾತ್ರೆ, 4. ಸೌಟು ಮೊದಲಾದುವುಗಳಲ್ಲಿ ತೋಡಿ ತೆಗೆಯು. 1. to gather, 2. to scrape, 3. a vessel to scrape, 4. to scoop out using a ladle. ವಾ: ಯಾಲನ ಬೇಗ ಬೇಗ ಗೋಣಿಗೆ ಗೋರು, ಮಳೆ ಬಾಕೆ ಆತ್. ಪ: ಗೋರುದು – ತುಂಬುವುದು

ಗೋರ್ ಗೋರ್ /*go:rɨ go:rɨ*/ ಅ. 1. ದರದರನೆ, ಗೋರ್ ಗೋರ್ ಎಳೆಯುವುದು, 2. ನೆಲದಲ್ಲೇ ಎಳೆದುಕೊಂಡು ಹೋಗುವುದು. to drag something/someone on the ground by force. ವಾ: ಮರದ ಕುಂಟೆನ ಗೋರ್ ಗೋರ್‌ತ್.

ಗೋರ್ ಗೋರ್ ಹಾಳೆ /*go:rɨ go:rɨ ha:ḷɛ*/ ನಾ. ಮಲೆನಾಡಿನ ಒಂದು ಆಟ, ಅಡಕೆ ಸೋಗೆಯ ಹಾಳೆಯಿಂದ ಮಾಡಿದ ಎಳೆಯಲು ಸಾಧ್ಯವಿರುವ ಒಂದು ಆಟದ ಪರಿಕರ. a toy made out of areca sheath. ವಾ: ಮಕ್ಕೆಲ್ಲ ಗೋರ್ ಗೋರ್ ಆಡ್ತೊಳೊ.

ಗೋರ್[1] /*go:rɨ*/ ಅ. 1. ಅನುಕರಣೆ ಶಬ್ದ (ಎತ್ತಿ ಕುಡಿಯುವುದು), 2. ಬಾಚಿಕೊಳ್ಳುವುದು, 3. ಒಟ್ಟು ಸೇರುವುದು. 1. an onomatopoeia, 2. combing/grabbing, 3. being together. ವಾ: ಅಡ್ಕೆ ಗೋರ್ ಹೈದ.

ಗೋರ್[2] /*go:rɨ*/ ನಾ. 1. ಗದ್ದೆಯನ್ನು ನಾಟಿ ಮಾಡುವುದಕ್ಕೆ ಮೊದಲು ಕೊನೆಯ ಬಾರಿ ಉತ್ತು ಹಲಗೆ ಎಳೆದು ಸಮತಟ್ಟು ಮಾಡುವುದು, 2. ಮಟ್ಟಸ ಮಾಡುವುದು, 3. ಮರ ಹೊಡೆಯುವುದು. levelling a ploughed field with a rammer, before sowing or transplantation. ವಾ: ನಾಟಿಗೆ ಮುಂದೆ ಗದ್ದೆಲಿ ಗೋರ್‌ದು. ಪ: ಕಂಡಕೋರಿ(ತು)

ಗೋರ್ಕಲ್ /*go:rkalɨ*/ ನಾ. ಬಂಡೆ ಕಲ್ಲು. rock. **ಆನೆ / ಗೋರ್ಕಲ್ ಮೇಲೆ ಮಳೆ ಹೊಯ್ದಂಗೆ(ಗಾ).** ವಾ: ಗೋರ್ಕಲ್ ಮೇಲೆ ಮಳೆ ಹೊಯ್ದಂಗೆ.

ಗೋರ್ತಿಲ /*go:rtila*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಬಾಳುಗೋಡು ಗ್ರಾಮದ ಜಾಗ. a locality in Balagodu village in Sullia Taluk of Dakshina Kannada District.

ಗೋರ್‌ಮಣೆ /*go:rɨ maɳɛ*/ ನಾ. 1. ಧಾನ್ಯಗಳನ್ನು ರಾಶಿ ಹಾಕಲು ಬಳಸುವ ಮರದ ಸಾಧನ, 2. ಅಡಿಕೆ, ಭತ್ತ ಮುಂತಾದುವನ್ನು ರಾಶಿ ಮಾಡಲು ಬಳಸುವ ಸಾಧನ. 1. a wooden plank used in gathering the grain, 2. a tool used in gathering areca nut and paddy. ವಾ: ಗೋರ್‌ಮಣೆಲಿ ಕಾಪಿನ ಹರ್‌ಗುದು. ಪ: ಗೋರ್ಮಣೆ – ಕಾಪಿ, ಬತ್ತವನ್ನು ಗುಡ್ಡೆ ಹಾಕುವ ಸಾದನ, ಕೈಪುಲ್(ತು)

ಗೋಲಿ /*go:li*/ ನಾ. 1. ಗೋಲಿ, 2. ಮಕ್ಕಳು ಆಡುವ ಗಾಜಿನಿಂದ ತಯಾರಿಸಿದ ಗಾತ್ರದಲ್ಲಿ ಚಿಕ್ಕದಾದ ದುಂಡಾದ ಆಟಿಕೆ. 1. marbles, 2. glass marbles. ವಾ: ಎಲ್ಲ ಸೇರಿಕಂಡ್ ಗೋಲಿ ಆಟ ಆಡೊಮೊ.

ಗೋಲಿಂಜ /*go:liŋja*/ ನಾ. ಜೇಡ. a spider. ವಾ: ಗೋಲಿಂಜನ ಬಲೆ ಎಸ್ಟ್ ಪೊರ್‌ಲು ಅಲ. ಪ: ಗೋಲಿಜ, ಗೋಲಿಂಗ – ಜೇಡರಹುಳು

ಗೋಲ್ಯಾಡಿ /*go:lya:ḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಗೋವಿಂದಮ್ಮನ /*go:vindammana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಗೋಸ್ಟಿಗೆ /*go:sṭigɛ*/ ನಾ. 1. ಗಮನ, 2. ಗೋಚರ. 1. attention, 2. to appear. ವಾ: ನನ್ನ ಗೋಸ್ಟಿಗೆ ಬಾತ್ಲೆ. **ಗೋಸ್ಟಿಗೆ ಬಾತ್ಲೆ** /*go:sṭigɛ a:tlɛ*/ 1. ಗೋಚರ ಆಗದಿರುವುದು, 2. ಗಮನಕ್ಕೆ ಬಾರದಿರುವುದು. 1. not appeared, 2. unnoticed. ವಾ: ಆ ವಿಚಾರ ಅವರ ಗೋಸ್ಟಿಗೆ ಬಾತ್‌ಲೆ ಕಂಡದೆ.

ಗೋಳಾಡ್ದೆ /*go:ḷa:ḍdɛ*/ ನಾ. 1. ಗೋಳಾಡುತ್ತಿದ್ದಾನೆ/ಳೆ, 2. ಗೋಳಾಡುತ್ತಿದೆ, 3. ನರಕಯಾತನೆ ಅನುಭವಿಸು. 1. suffering, 2. an ordeal, 3. intese suffering. ವಾ: ಅವುಳು ಬಾರಿ ಹೊಟ್ಟೆ ಬೇನೆತ ಗೋಳಾಡ್ದೆ.

ಗೋಳಿ /*go:ḷi*/ ನಾ. 1. ಗೋಳಿ, 2. ಒಂದು ಜಾತಿಯ ಮರ, 3. ಹಾಲು ಬರುವ ಮರ. 1. brown woolly fig tree, 2. hair fig tree, 3. Mysore fig tree. ವಾ: ಗೋಳಿ ಮರದ ಬಿಳಿಲ್‌ನ ಹಿಡ್‌ಕಂಡ್ ಮಕ್ಕ ಉಯ್ಯಾಲೆ ಆಡಿವೆ. ಪ: ಗೋಳಿ ಮರ – ಗೋಳಿ ಮರ. **ಗೋಳಿ ಬೀಣೆ** /*go:ḷi bi:ṇɛ*/ ಬೇರೊಂದು ಮರಕ್ಕೆ ಅಂಟಿಕೊಂಡು ಇಳಿವ ಗೋಳಿ ಮರದ ಬೇರು. the roots of a brown wooly fig tree spreading into the nearest trees. ವಾ: ಗೋಳಿ ಬೀಣೆ ಮರನ ನೋಡ್ ಹೆಂಗುಟ್ಟುತ.

ಗೋಳಿ ಬೊಳಿ /*go:ḷi bɔḷi*/ ನಾ. ಒಂದು ಗೋತ್ರದ ಹೆಸರು. a lineage. ವಾ: ಗೌಡರ 18 ಗೋತ್ರಗಳಲ್ಲಿ ಒಂದು ಬಳಿ.

ಗೋಳಿಬಜೆ /*go:ḷibajɛ*/ ನಾ. ಎಣ್ಣೆಯಲ್ಲಿ ಕಾಯಿಸಿದ ಮೈದಾ ಹುಡಿಯಲ್ಲಿ ತಯಾರಿಸಿದ ತಿಂಡಿ. Goli Baje/ Mangalore bajji – fried fritters. **ನಾಳೆ ರಜೆ ಗೋಳಿ ಬಜೆ.** ವಾ: ಗೋಳಿಬಜೆ ತಿನೊಮಲ.

ಗೋಳಿಯಡ್ಕ /*go:ḷiyaḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮರ್ಕಂಜ ಗ್ರಾಮದ ಜಾಗ. a locality in Markanja village in Sullia Taluk of Dakshina Kannada District.

ಗೋಳು /*go:ḷu*/ ನಾ. ನರಕಯಾತನೆ. an agony/an ordeal. ವಾ: ರೈತರ ಗೋಳು ಕೇಳವಿಲ್ಲೆ.

ಗೋಳೆ /*go:ḷɛ*/ ನಾವಿ. 1. ಟೊಳ್ಳಾದ ಭಾಗ, 2. ಶೂನ್ಯ. 1. a hallow part, 2. void. ವಾ: ಕಾಯಿ ವಳೆಗೆ ಗೋಳೆ ಆಗುಟು.

ಗೋಳ್ /*go:ḷi*/ ನಾ. 1. ಸಂಕಟ, 2. ವ್ಯಥೆ, 3. ದುಃಖ, 4. ಗೋಳು. 1. suffering, 2. painful experience, 3. sorrow, 4. agony. ವಾ: ಇವರ್‌ದ್ ದಿನಾ ಇದೇ ಗೊಳಾತ್.

ಗೋಳ್ತಜೆ /*go:ḷtaje*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕಲ್ಮಡ್ಕ ಗ್ರಾಮದ ಜಾಗ. a locality in Kalmadka village in Sullia Taluk of Dakshina Kannada District.

ಗೋಳ್ತಿಲ /*go:ḷtila*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮುರುಳ್ಯ ಗ್ರಾಮದ ಜಾಗ. 1. family, 2. lineage, 3. a locality in Murulya village in Sullia Taluk of Dakshina Kannada District.

ಗೌಜಿ /*gauji*/ ಕ್ರಿವಿ. 1. ಭವ್ಯ, 2. ಭಾರಿ ಆಡಂಬರದ, 3. ಗಮ್ಮತ್. 1. grandeur, 2. extravagant, 3. merriment. ವಾ: ಮೊದ್‌ವೆ ಬಾರಿ ಗೌಜಿ ಇತ್ತ್.

ಗೌಡ /*gauḍa*/ ನಾ. 1. ಊರಿನ ಮುಖ್ಯಸ್ಥ- ಭೂಮಿಗೆ ಒಡೆಯ, 2. ಯಜಮಾನ, 3. ಒಕ್ಕಲಿಗ ಜಾತಿವಾಚಕ. 1. head of the village, 2. a chief, 3. a caste.

ಗೌಡಬೊಳಿ /*gauḍa bɔḷi*/ ನಾ. ಒಂದು ಗೋತ್ರದ ಹೆಸರು. a lineage. ವಾ: ಗೌಡ ಜೆನಾಂಗದ ಬೊಳಿದ್ ಹೆಸ್‌ರ್.

ಗೌಡತಿ /*gauḍati*/ ನಾ. 1. ಊರ ಗೌಡರ ಹೆಂಡತಿ, 2. ಯಜಮಾನತಿ. 1. wife of the head man, 2. wife of the village head. ವಾ: ಗೌಡತಿಗೆ ಎಲ್ಲೊರೊಟ್ಟಿಗೆನೂ ಕುಸಿಲಿ ಮಾತಾಡಿವೆ.

ಗೌಡದಾರೆ /*gowḍada:rɛ*/ ನಾ. ಗೌಡ ಸಮುದಾಯದಲ್ಲಿ ಗೌಡ ಸಂಪ್ರದಾಯದಂತೆ ಧಾರೆ ಎರೆಯುವ ಕ್ರಮ. a custom of father offering his daughter in marriage on the day of marriage, practised in Bunt community. ವಾ: ಮೊದುವೆ ಗೌಡದಾರೆಲಿ ನಡ್ತ್. ಪ: ಬಂಟದಾರೆ

ಗೌಡಿಗೆ /*gauḍigɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಗೌಡುದಾರೆ /*gauḍuda:rɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಗೌಡ್ರ ಬೊಳಿ /*gauḍra boḷi*/ ನಾ. ಗೌಡರ 18 ಗೋತ್ರಗಳಲ್ಲಿ ಒಂದು ಬಳಿ. one of the 18

lineages or gotra's of Arebhashe gowda community.

ಗೌನ್ /*gaunɨ*/ ನಾ. 1. ಮಕ್ಕಳ ಲಂಗ, 2. ಫ್ರಾಕು, 3. ನಿಲುವಂಗಿ, 4. ಮೇಲಂಗಿ. a frock. ವಾ: ಗೂಡೆ ಗೌನ್ ಹಾಕಂಡ್ ಬಾತ್.

ಗೌರವಿಸೋಕು /*gauraviso:ku*/ ನಾ. ಗೌರವಿಸಬೇಕು. should respect. ವಾ: ಹಿರಿಯರ ಗೌರವಿಸೋಕು. ಪ: ಗೌರವಿಸುದು

ಗೌರಿ ಹೂ /*gauri hu:*/ ನಾ. 1. ಭಾದ್ರಪದ ಮಾಸದಲ್ಲಿ ಕಾಡಿನಲ್ಲಿ, ರಸ್ತೆಬದಿಯಲ್ಲಿ, ತೋಟಗಳಲ್ಲಿ ತಾನಾಗಿಯೆ ಹುಟ್ಟಿ ಬೆಳೆವ ಕೆಂಪು ಹಾಗು ಅರಶಿನ ಮಿಶ್ರಿತ ಬಣ್ಣದ ಸುಂದರವಾದ ಹೂವು, 2. ಗೌರಿ ಗಣೇಶ ಹಬ್ಬವನ್ನು ನೆನಪು ಮಾಡುವ ಹೂವು, 3. ಹೂವಿನ ಮೇಲ್ಭಾಗದಲ್ಲಿ ಕೆಂಪಾಗಿ ಕೆಳಭಾಗ ಹಳದಿ ಬಣ್ಣದಿಂದ ಕೂಡಿರುತ್ತದೆ. 1. flame lily, climbing lily, Gloriosa Superba, 2. a flower that reminds Gowri-Ganesha festival, 3. the flower has red colour on the top and yellow at the bottom. ವಾ: ಗೌರಿ ಹಬ್ಬದ ಸಮೆಲಿ ಗೌರಿ ಹೂ ಬುಡ್‌ದು, ಪಿತ್ತ, ಸಂದಿವಾತ,ತೊನ್ನು, ಸರ್ಪಸುತ್ತುಗೆ ಗೌರಿ ಹೂನ ಮೊದ್ದ್ ರೂಪಲಿ ಬಳ್‌ಸುವೆ, ಕೈಲ್ ಪೋದ್‌ಲಿ ಕೋವಿ ಪೂಜೆಲಿ ಕೋವಿಗೆ ಈ ಹೂನ ಮುಡ್‌ಸಿವೆ. ಪ: ಗೌರಿ ಹೂವ್

ಗೌರಿಗುಂಡಿ /*gauriguṇḍi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ದೇವಚಳ್ಳ ಗ್ರಾಮದ ಜಾಗ. a locality in Devacalla village in Sullia Taluk of Dakshina Kannada District.

ಗೌರಿಹಕ್ಕಿ /*gaurihakki*/ ನಾ. ಬೂದು ಬಣ್ಣದ ಒಂದು ಹಕ್ಕಿ. a gray bird. ವಾ: ಗೌರಿಹಕ್ಕಿ ಹಾರಿಕಂಡ್ ಹೋತು.

ಗೌರುಮೆಂಟ್ /*gaurumeṇṭi*/ ನಾ. ಎಪ. ಸರಕಾರ. the government. ವಾ: ಗೌರುಮೆಂಟಿಗೆ ಬರ್‌ದ್ ಹಾಕೊಳೊ. ಪ: ಗೌರ್ಮೆಂಟ್ – ಸರಕಾರ

ಗೌಳಿಕಂಡ್ /*gauḷikaṇḍɨ*/ ಕ್ರಿ. ಜ್ವಾಲೆ ಇಲ್ಲದೆ ಕೆಂಡ ಮಾತ್ರ ಉರಿಯುತ್ತಿರುವುದು. glowing embers. ವಾ: ಮೇಲೇರಿಲಿ ಕೆಂಡ ಗೌಳಿಕಂಡ್ ಉಟ್ಟು. ಪ: ಗಮೆಲುನ(ತು). **ಗೌಳಿಕಂಡಿದ್ದದೆ** /*gauḷikaṇḍiddadɛ*/ ನಿಗಿ ನಿಗಿ ಬೆಂಕಿ ಕೆಂಡ. glowing embers. ವಾ: ಕೆಂಡ ಗೌಳಿಕಂಡಿದ್ದದೆ.

ಗೌಳು /*gauḷu*/ ನಾ. ನಿಗಿನಿಗಿ ಕೆಂಡದ ಜ್ವಾಲೆ. glowing embers. ಪ: ಗಮೆಲು(ತು)

ಗ್ಯಾನ[1] /*gya:na*/ ನಾ. 1. ಯೋಚನೆ, 2. ನೆನಪು. 1. thought, 2. memory. **ಇಳಿಯಕಾಕನ ತುಂಬಾ ಗ್ಯಾನ ಮಾಡ್(ನು).** ವಾ: ಅಸ್ಟ್ ದಿನಂದ ನಿಂಗೆ ನನ್ನ ಗ್ಯಾನ ಬಾತ್ಲೆನ?

ಗ್ಯಾನ[2] /*gya:na*/ ನಾ. 1. ಜ್ಞಾನ, 2. ಎಚ್ಚರ. 1. knowledge, 2. awareness. **ಇಳಿಯಕಾಕನ ತುಂಬಾ ಗ್ಯಾನ ಮಾಡ್(ಗಾ).** ವಾ: ದುಡ್ಡು ಕದೆಕನ ನಿನ್ನ ಗ್ಯಾನ ಎಲ್ಲಿತ್ತ್?

ಗ್ಯಾರಣ್ /*gya:raṇɨ*/ ನಾ. ಗೇರುಹಣ್ಣು. cashew apple. ವಾ: ಗ್ಯಾರಣ್‌ದ್ ಸೊನೆ ಮುಟ್ಟಿರೆ ಸುಟ್ಟ್/ ಕರ್‌ಗಿ ಹೋದೆ. **ಗ್ಯಾರ್ದಣ್ಣ್** /*gya:rdaṇṇɨ*/ ವಾ: ಗ್ಯಾರ್ದಣ್ಣ್‌ದ್ ಗಂಗಸರ ಮಾಡಿವೆಲ.

ಗ್ರಹಿಸ್ /*grahisɨ*/ ಕ್ರಿ. 1. ಗ್ರಹಿಸು, 2. ತಿಳಿದುಕೊಳ್ಳು, 3. ಅರಿ, 4. ಭಾವಿಸು. 1. to comprehend, 2. to understand, 3. to know, 4. to feel. ವಾ: ನಾ ಗ್ರಹಿಸಿದೆ ನೀವು ಹೀಂಗೆನೆ ಹೇಳುವರಿತ.

ಗ್ರಾಕಿ /*gra:ki*/ ನಾ. 1. ಗ್ರಾಹಕ, 2. ಕೊಂಡುಕೊಳ್ಳುವವನು. 1. a customer, 2. a consumer. ವಾ: ಗ್ರಾಕಿ ಬಾತ್.

ಗ್ರಾಚಾರ /*gra:ca:ra*/ ನಾ. 1. ಗ್ರಹಚಾರ, 2. ಗ್ರಹಗಳ ಚಲನೆಯಿಂದ ಮನುಷ್ಯನ ಜೀವನದ ಮೇಲಾಗುವ ಪರಿಣಾಮ. 1. fate/destiny, 2. the influence of planetary motions on the life of people. **ಗ್ರಾಚಾರ ಸರಿ ಇಲ್ಲದಿರಕನ ಹಗ್ಗನು ಹಾವಾಗಿ ಕಂಡದೆ ಗಡ(ಗಾ). ಗ್ರಾಚಾರ ಕೆಟ್ರೆ ಹುಲ್ಲೂ ಹಾವಾದೆ(ನು).** ವಾ: ಅಂವಂಗೆ ಗ್ರಾಚಾರ ಕೆಟ್ಟುಟು.

ಗ್ರಾಮತಕ್ಕ /*gra:ma takka*/ ನಾ. ಗ್ರಾಮದ ಮುಖಂಡ. the head of a village. ವಾ: ಗ್ರಾಮ ತಕ್ಕ ಬಂದೊ.

ಗ್ರೇಸಿದಾಂಗೆ /*gre:sida:ŋgɛ*/ ನಾ. 1. ಗ್ರಹಿಸಿದಂತೆ, 2. ಯೋಚಿಸಿದಂತೆ. 1. as understood, 2. as thought. ವಾ: ನನ್ನ ಯಾರೋ ಗ್ರೇಸಿದಂಗೆ ಆತ್.

ಗ್ರೇಸು /*gre:su*/ ಕ್ರಿ. 1. ಎಣಿಸು, 2. ಭಾವಿಸು, 3. ಯೋಚಿಸು, 4. ಅಭಿಪ್ರಾಯ, 5. ಗ್ರಹಿಸು, 6. ತಿಳಿಯು,

7. ಪ್ರಿಯವಾದ ವಸ್ತು ಅಥವಾ ವ್ಯಕ್ತಿಯನ್ನು ಸದಾ ನೆನಪಿಸಿಕೊಳ್ಳು, 8. ಮನಸ್ಸಿಗೆ ಹಚ್ಚಿಕೊಳ್ಳು. 1. to think, 2. to presume, 3. to surmise, 4. to understand. 5. to comprehend. 6. to reminisce a dear object or a person, 7.to pine away. ವಾ: ನೆಂಟ್ರ್‌ಗ ಐದಾರ್ ಜೆನ ಬಾವೊತ ನಾ ಗ್ರೆಯಿಸಿದ್ದೆ. ಪ: ಗ್ರೆಸಿಕಂಡ್ – ಬಾವಿಸಿಕೊಂಡು; ಗ್ರೆಸಿಕಂಡೊ – ಬಾವಿಸಿಕೊಂಡರು; ಗ್ರೆಸಿದೊ – ಬಾವಿಸಿದರು; ಗ್ರೆಸಿರಿಕಿಲ್ಲೆ – ಬಾವಿಸಿರಲಿಕ್ಕಿಲ್ಲ; ಗ್ರೇಸಿ – ಬಾವಿಸಿ; ಗ್ರೇಸಿಕಂಡಿತ್ತ್ – ಬಾವಿಸಿಕೊಂಡಿದ್ದನು/ಳು; ಗ್ರೇಸುವಾಂಗೆ – ಗ್ರಹಿಸುವ ಹಾಗೆ;

ಗ್ರೈಸಿಕಂಡ್ /*graisikaṇḍi*/ ನಾ. 1. ಊಹಿಸಿಕೊಂಡು, 2. ಭಾವಿಸಿಕೊಂಡು. 1. guessing, 2. imagining. ವಾ: ನೀವು ನಾಳೆ ಬರುವರಿತ ಗ್ರೈಸಿಕಂಡಿದ್ದೆ.

ಗ್ಲಾಸ್ /*gla:s*/ ನಾ. ಎಪ. ಲೋಟ. a cup. ವಾ: ಗ್ಲಾಸ್‌ಲಿ ನೀರ್ ತಕಂಡ್ ಕುಡಿ.

ಗ್ವಾಡೆ /*gva:ḍɛ*/ ನಾ. 1. ಗೋಡೆ, 2. ಕಟ್ಟಡಗಳಿಗೆ ಆಧಾರವಾಗಿ ನಿಂತಿರುವ, ಕಟ್ಟಡದ ಭಾಗ. 1. a wall, 2. a supporting wall on which a building stands. **ಸೈಯಂ ಸೊಟ್ಟಂ ಗ್ವಾಡೆಗೆ ಲಟ್ಟಂ – ನೆಗ್ಡಿ ಗೊಣ್ಣೆ(ಒ).** ವಾ: ಕೊಟಗೆದ್ ಗ್ವಾಡೆ ಬಿದ್ದೊವು.

ಗ್ವಾಡೆ ಪೆಟ್ಟಿಗೆ /*gva:ḍɛ peṭṭigɛ*/ ನಾ. 1. ಗೋಡೆಗೆ ಆತುಕೊಂಡು ನಿರ್ಮಿಸಿರುವ ಪೆಟ್ಟಿಗೆ, 2. ಗೋಡೆಯಲ್ಲಿರುವ ಕಪಾಟು. 1. a cupboard, 2. a wall cabinet. ವಾ: ಗ್ವಾಡೆ ಪೆಟ್ಟಿಗೆಲಿ ಪುಸ್ತಕಗಳ ಇಸಿದ್ದೊ.

ಚ

ಚಂಗನ /*caŋgana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಚಂಗನಾ /*caŋgana:*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಚಂಗರಿ /*caŋgari*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಚಂಗು /*caŋgu*/ ನಾ. 1. ಬೋಳ, 2. ನಿಷ್ಕ್ರೀಯ, 3. ಕೆಲಸಕ್ಕೆ ಬಾರದ, 4. ಲಾಚಾರು. 1. inactive, 2. debilitated, 3. useless, 4. helpless. ವಾ: ಅಂವ ಬರೇ ಚಂಗುನಂಗೆ ಮಾಡ್ದೆ.

ಚಂಗುಮೂಲೆ /*caŋgumu:le*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಪೆರುವಾಜೆ ಗ್ರಾಮದ ಜಾಗ. a locality in Peruvaje village in Sullia Taluk of Dakshina Kannada District.

ಚಂಗುಲಿ /*caŋguli*/ ನಾ. 1. ದಿನಗೂಲಿ, 2. ಒಂದು ದಿನದ ಕೆಲಸಕ್ಕೆ ಕೊಡುವ ಕೂಲಿ. 1. daily wages, 2. salary paid daily. ವಾ: ನಿಮ್ಮ ಕಡೆ ಚಂಗುಲಿ ಎಷ್ಟ್ ತ?

ಚಂಗುಳಿ[1] /*caŋguḷi*/ ನಾ. ಬಲಿತ ಹಲಸಿನ ತೋಳೆ ಮತ್ತು ಬೀಜಗಳಿಂದ ತಯಾರಿಸಿದ ಪದಾರ್ಥ. a dish prepared by the seeds and pulp of jackfruit. **ಬೊಗ್ಗಿನಾಯಿ ಬೀರಿಕಿಚ್ಚಿಗೆ ಬೀಳಿಕಿಲೆ, ಬರ್ಕ ಚೊಂಗುಳಿ ತಿಂಬೊಕಿಲೆ, ಅದ ನಿನ್ನ ಅಪ್ಪ ಬಂದೊ ದುವೋ ದುವೊ ಆಮು ಮಜ್ಜ ಆಂ(ನು).** ವಾ: ಹಲ್ಸ್‌ನ ಕಾಯಿದ್ ಚಂಗುಳಿ ಮಾಡ್‌ದ್. ಪ: ಚೊಂಗುಳಿ

ಚಂಗುಳಿ[2] /*caŋguḷi*/ ನಾ. ಕೈಲಾಗದವ, ಬೈಗುಳ ಪದ. an incapable person. **ಚಂಗುಳಿ ದೂಮ(ನು).** ವಾ: ಅಂವ ಬರಿ ಚಂಗುಳಿ, ಎಂತ ಹೇಳಿರು ನ್ಯಾವನ ಹೇಳ್‌ದೆ, ಬರೇ ಚೋಗುಳಿ ದೂಮ.

ಚಂಗುಳಿ[3] /*caŋguḷi*/ ನಾವಿ. 1. ಆರಿದ, 2. ತಣಿದ, 3. ನಿಸ್ಸಾರವಾದ, 4. ವ್ಯರ್ಥವಾದ. 1. cooled, 2. cold, 3. insipid, 4. useless. ವಾ: ಅಂವ ಚಂಗುಳಿ ಹೈದ.

ಚಂಗೋಲ /*caŋgo:la*/ ನಾ. ತಕ್ಕರಿಗೆ ಮಾರ್ಗದರ್ಶನ, ಮಾಹಿತಿ ನೀಡುವವರು. advisors. ವಾ: ಚಂಗೋಲ ಅವರ್‌ನ ಒಂದ್ ಮಾತ್ ಕೇಳಿ ಮುಂದುವರೆದು ವಳ್ಳದಿತ್ತ್.

ಚಂಚ /*caŋca*/ ನಾ. ಚಮಚ. a sycophant. ವಾ: ಚಂಚಲಿ ಮೊದ್ದ್ ನ ಬಾಯ್ಗೆ ಹೊಯ್ಯಿ. ಪ: ಚಮ್ಚ

ಚಂಚಲಗಾತಿ /*caŋcalaga:ti*/ ನಾ. 1. ಸ್ಥಿರ ಬುದ್ಧಿ ಇಲ್ಲದವಳು, 2. ಚಂಚಲ ಮನಸ್ಸಿನವಳು. 1. an inconsistent woman. 2. a fickle minded woman. **ಚಂಚಲಗಾತಿ ಕರಿಯಕ್ಕ, ಅತ್ತ ಇತ್ತ ನೋಡಕ್ಕ, ನೆಟ್ಟರೆ ಹುಟ್ಟುದುಲೆ – ಕೂದಲ್(ಒ).** ವಾ: ಅದ್ ಬಾರಿ ಚಂಚಲಗಾತಿ ಹೆಣ್ಣ್, ಚಂಚಲಗಾತಿ ಆದರೆ ಬಾರಿ ಬಂಗ ಆದೆ.

ಚಂಡಿ ತೆಗ್ದ್ /*cɛŋḍi tɛgdi*/ ಕ್ರಿವಿ. ಸ್ನಾನದ ನಂತರ ಮೈ

ನೀರು ಒರೆಸುವುದು. dry off the body after a shower. ವಾ: ಮೈದ್ ಚಂಡಿ ತೆಗ್ದ್ ಬಾ.

ಚಂಡಿ[1] /*cɛŋḍi*/ ನಾವಿ. 1. ಒದ್ದೆ, 2. ಒದ್ದೆಯಾದ. 1. wet, 2. soaked. ವಾ: ಕೂಸು ಹಾಸಿಗೆನ ಚೆಂಡಿ ಮಾಡಿಕಂಡುಟು (ಉಚ್ಚೆ ಮಾಡಿಟು). ಪ: ಚಂಡಿ – ಚೆಂಡಿ – ಒದ್ದೆ ಒದ್ದೆ; ಚಂಡಿಯಾಕು – ಒದ್ದೆ ಆಗಬೇಕು; ಚಂಡಿಯಾಗುಟ್ಟು – ಒದ್ದೆಯಾಗಿದೆ; ಚಂಡಿಯಾದು – ಒದ್ದೆಯಾಗುವುದು

ಚಂಡಿ[2] /*cɛŋḍi*/ ನಾ. 1. ಛಲ, 2. ಉಗ್ರವಾದುದು, 3. ಪ್ರಚಂಡ, 4. ಮೊಂಡಿ, 5. ಕೋಪಿಷ್ಠೆ, 6. ನೀಚ ಹೆಂಗಸು, 7. ಸ್ತ್ರೀ, 8. ದುರ್ಗಿ, 9. ಪಾರ್ವತಿ. 1. resolute, 2. terrifying, 3. formidable, 4. obstinate, 5. an angry woman, 6. a wicked woman, 7. a woman, 8. goddess Durga, 9. goddess Parvati. ವಾ: ಆ ಗೂಡೆ ಚಂಡಿ ಹಿಡ್‌ದ್ ಕುದ್ದುಟು.

ಚಂಡಿಕೋಳಿ[1] /*cɛŋḍiko:ḷi*/ ನಾ. 1. ಒದ್ದೆಯಾದ ಕೋಳಿ, 2. ಪ್ರಯೋಜನಕ್ಕಿಲ್ಲದ ಕೋಳಿ. 1. a wet hen, 2. a useless hen. ವಾ: ಚಂಡಿಕೋಳಿ ಅಲ್ಲೆಲ್ಲೊ ಹೋತ್. ಚಂಡಿಕೋರಿ(ತು).

ಚಂಡಿಕೋಳಿ[2] /*cɛŋḍiko:ḷi*/ ನಾ. ಜವಾಬ್ದಾರಿಯಿಲ್ಲದ ವ್ಯಕ್ತಿ. an irresponsible person. ವಾ: ಚಂಡಿಕೋಳಿ ಮೊನ್‌ಸ ಅಂವ.

ಚಂಡಿಹಿಡಿ /*cɛŋḍʻihiḍi*/ ನಾ. 1. ಹಠಮಾಡು, 2. ಮೊಂಡುತನ. 1. stubborn, 2. obstinate. ವಾ: ಕೂಸು ಚಂಡಿ ಹಿಡಿಯದು.

ಚಂಡೀರ /*caŋḍi:ra*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಚಂಡೆ /*caŋḍɛ*/ ನಾ. ಮಂಗಳ ಸಂದರ್ಭ ಬಳಸುವ ಚರ್ಮವಾದ್ಯ, ಭೂತಾರಾಧನೆ ಸಮಯದಲ್ಲಿ ಹೆಚ್ಚು ಬಳಸುತ್ತಾರೆ. a drum played in a religions event, the head of the drum is made of processed leather, also used during deity/ bhuta worship. ವಾ: ಹಬ್ಬಲಿ ಚಂಡೆ ಕುಟ್ಟುವೆ.

ಚಂಡೇಲು /*caŋḍɛ:lu*/ ನಾ. 1. ಎಳೆಯ ಕಾಯಿ, 2. ತೆಂಗಿನ ಹೀಚು, 3. ಚೆಂಡೆಲ್(ತು). a green tender-coconut (not mature). ವಾ: ಚಾಂಳೆನ ಚಂಡೇಲು ಬಿದ್ದದೆ.

ಚಂಡ್ರ್‌ಪುಳಿ /*caŋḍripuḷi*/ ನಾ. ಸಾಸಿವೆ ಹಾಕಿ ಮಾಡಿದ ಬೇಯಿಸದ ಮಾವಿನ ಹಣ್ಣಿನ ಪದಾರ್ಥ. a mango curry seasoned with mustard seeds. ವಾ: ಚಂಡ್ರುಪುಳಿಲಿ ಗಂಜಿ ಜಾಸ್ತಿ ಉಂಡು ಹೋದೆ.

ಚಂದಡ್ಕ /*candaḍka*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಚಂದನ /*candana*/ ನಾ. 1. ಚಂದನ, 2. ಶ್ರೀಗಂಧ. sandalwood. ವಾ: ಚಂದನ ಅರ್‌ದ್ ಮೋರೆಗೆ ಹಾಕುವೆ.

ಚಂದಪ್ಪಾಡಿ /*candappa:ḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಚಂದಮಾಮ /*candama:ma*/ ನಾ. ಚಂದ್ರ (ಮಕ್ಕಳ ಭಾಷೆ). moon (in the vocabulary of children). ವಾ: ಅವ್ವ ಕೂಸಿಗೆ ಚಂದಮಾಮನ ತೋರ್‌ಸಿ ಊಟ ಮಾಡ್‌ಸುದು.

ಚಂದಿರ /*candira*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಚಂದ್ರ /*candra*/ ನಾ. 1. ಚಂದ್ರ, 2. ಶಶಿ, 2. ಚಂದಿರ. 1. moon, 2. the natural satellite of the earth, 3. moon, a heavenly body. ವಾ: ಅಮಾಸೆಲಿ ಚಂದ್ರ ಕಾಂಬದುಲೆ.

ಚಂದ್ರಕಾಂತಿ ಹೂವ್ /*candraka:nti hu:vi*/ ನಾ. ಚಂದ್ರ ಕಾಂತಿ ಹೂ. white morning-glory or moonflower. ವಾ: ಚಂದ್ರ ಕಾಂತಿ ಹೂವ್ ಹೆಂಗಿದ್ದದೆ.

ಚಂದ್ರಬಾಳೆ /*candraba:ḷɛ*/ ನಾ. 1. ಇದರ ಹೊರ ಮೈ ಕೆಂಪು ಬಣ್ಣದಿಂದ ಕೂಡಿದ್ದು ದೊಡ್ಡದಾದ ಬಾಳೆಹಣ್ಣು, 2. ಕೆಂಪುಬಾಳೆ. red banana. ವಾ: ಚಂದ್ರ ಬಾಳೆನ ತೊಪ್ಪೆ ಕೆಂಪ್ ಇದ್ದದೆ.

ಚಂದ್ರಗಿರಿ /*candragiri*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ದೇವಚಳ್ಳ ಗ್ರಾಮದ ಜಾಗ. a locality in Devacalla village in Sullia Taluk of Dakshina Kannada District.

ಚಂದ್ರವಾರ /*candrava:ra*/ ನಾ. ಸೋಮವಾರ. Monday. ವಾ: ಚಂದ್ರವಾರ ಸಿವನ ಪೂಜೆ ಮಾಡುವೆ.

ಚಂದ್ರಾಯುದ /*candra:yuda*/ ನಾ. ಯುದ್ಧದಲ್ಲಿ ಬಳಸುವ ಒಂದು ಆಯುಧ. a weapon used in wars. ವಾ: ಚಂದ್ರಾಯುದ ಹಿಡ್ಕಂಡ್ ಯುದ್ದ ಮಾಡ್ದೊಗಡ.

ಚಂದ್ರೋಡಿ /*candro:ḍi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ನೆಲ್ಲೂರು ಕೆಮ್ರಾಜೆ ಗ್ರಾಮದ ಜಾಗ. a locality in Nelluru Kemraje village in Sullia Taluk of Dakshina Kannada District.

ಚಂಬರ /*cambara*/ ನಾ. ವಾದ್ಯದವರು. musicians. ವಾ: ಚಂಬರದವು ಹೊರೆಗೆ ಕುದ್ದೊಳೊ.

ಚಂಬೆ[1] /*cambɛ*/ ನಾ. 1. ಚೂಟಿ, 2. ಚುರುಕು. 1. clever, 2. active. ವಾ: ಹಾಡ್ದರ್‌ಲಿ, ಕೊಣಿಯದರ್‌ಲಿ ಎಲ್ಲದರ್‌ಲಿ ಬಾರಿ ಚಂಬೆನ ಕೂಸು ಅದ್.

ಚಂಬೆ[2] /*cambɛ*/ ನಾವಿ. ನುಲಿದು ಮಾತನಾಡುವ ಹುಡುಗಿ. a flirtatious girl. ವಾ: ಬಾರಿ ಚಂಬೆನ ಗೂಡೆ ಅದ್.

ಚಂಬೆ[3] /*cambɛ*/ ನಾ. ಅಂದಗಾತಿ. a beautiful girl. ವಾ: ಅದ್ ಚಂಬೆ ಗೂಡೆ.

ಚಂವ್ಚ /*canvca*/ ನಾ. ಚಮಚ. a spoon. ವಾ: ಉದ್ದ ಚಂವ್ಚ ಎಲ್ಲಿತ?

ಚಕೋತ /*cakota*/ ನಾ. 1. ಚಕ್ಕೋತ, 2. ಈಳೆ ಜಾತಿಗೆ ಸೇರಿದ ತಿನ್ನುವ ಹಣ್ಣು, 3. ಮುಸುಂಬಿಗಿಂತ ದೊಡ್ಡದಾದ ಹಣ್ಣು. Pomelo fruit, Citrus maxima or Citrus grandis. ವಾ: ಚಕೋತದ ಸೊಪ್ಪುದ್ ಕಸಾಯ ನೀರ್ ಮೀದರೆ ಒಳ್ಳೆದ್. ಪ: ಚಕೋತುಳಿ; ಚಕ್ಕೋತ

ಚಕೋತ ಸೊಪ್ಪ್ /*cako:ta sopp*/ ನಾ. 1. ಒಂದು ಬಗೆಯ ತರಕಾರಿ ಸೊಪ್ಪು, 2. ಚಕ್ಕೋತ ಸೊಪ್ಪು. 1. a green leafy vegetable, 2. Mountain Spinach. ವಾ: ಚಕೋತ ಸೊಪ್ಪ್‌ನ ಕಸಾಯ ಮಾಡಿ ಕುಡ್ದರೆ ಜೆರ ಮತ್ತೆ ಮೂಲವ್ಯಾದಿ ಕಮ್ಮಿ ಆದೆ, ಇದರ ಬ್ಯಾಳೆ ಹಾಕಿ ಗೈಪು ಮಾಡಿವೆ.

ಚಕ್ಕ /*cakka*/ ನಾ. ಮಂಗಳಮುಖಿ. a transgender. ವಾ: ಚಕ್ಕ ಹರ್‌ಸಿರೆ ಒಳ್ಳೆದ್. ಪ: ಚಕ್ಕಂಗ

ಚಕ್ಕತಮರ /*cakkatamara*/ ನಾ. ಚಕ್ಕೋತ ಹಣ್ಣಿನ ಮರ. Pomelo a tree (Citrus Maxima). ವಾ: ಚಕ್ಕತ ಮರದ ಚೋಲಿನ ನೀರ್‌ಗೆ ಹಾಕಿ ಮೀದವೆ.

ಚಕ್ಕರ್ /*cakkarɨ*/ ನಾ. 1. ಗೈರುಹಾಜರು, 2. ತಪ್ಪಿಸಿಕೊಳ್ಳುವಿಕೆ. 1. being absent, 2. to escape. ವಾ: ಇಸ್ಕೂಲಿಗೆ ಚಕ್ಕರ್ ಹಾಕಿ ಪಿಚ್ಚರ್ ನೋಡಿಕೆ ಹೋದ್.

ಚಕ್ಕಳಪಕ್ಕಳ /*cakkaḷapakkaḷa*/ ಕ್ರಿವಿ. ಕಾಲು ಮಡಚಿಕೊಂಡು ಪದ್ಮಾಸನ ಹಾಕಿ ಕುಳಿತು ಕೊಳ್ಳುವುದು. sitting cross legged. ವಾ: ಉಂಬಕನ ಚಕ್ಕಳ ಪಕ್ಕಳ ಹಾಕಿ ಕುದ್ರೊಕು. **ಚಕ್ಕಳಬಕ್ಕಳ ಕುದ್ದ್ ಕಂಡ್** /*cakkaḷabakkaḷa kuddɨ kaṇḍi*/ ವಾ: ಚಕ್ಕಳ ಬಕ್ಕಳ ಕುದ್ದ್ ಕಂಡ್ ಉಂಬೊದೆ ಲಾಯ್ಕ. **ಚಕ್ಕಳಮಕ್ಕಳ** /*cakkalamakkala*/ ವಾ: ಉಂಬೊಕೆ ಚಕ್ಕಳಮಕ್ಕಳ ಹಾಕಿ ಮೊಂದ್ರಿಲಿ ಕುದ್ರೊಕು. **ಚಕ್ಕಳ್‌ಪುಕ್ಕಳ್** /*cakkalɨ pukkalɨ*/ ವಾ: ಮಕ್ಕ ಸಾಲಾಗಿ ಚಕ್ಕಲ್ ಪುಕ್ಕಲ್ ಹಾಕಿ ಕುದ್ದೊಳೊ. **ಚಕ್ಳಪಕ್ಳ** /*cakḷapakḷa*/ ವಾ: ಊಂಬಕೆ ಚಕ್ಳಪಕ್ಳ ಹಾಕಿ ಕುದ್ದರೆ ಲಾಯ್ಕ್. **ಚಕ್ಲಪಕ್ಲ** /*caklapakla*/ ವಾ: ಚಕ್ಲಪಕ್ಲ ಹಾಕಿ ತುಂಬ ಹೊತ್ತ್ ಕುದ್ರಿಕಾದುಲೆ.

ಚಕ್ಕಳ್[1] /*cakkaḷa*/ ನಾ. 1. ಚರ್ಮ, 2. ಸಿಪ್ಪೆ, 3. ಚೋಲಿ. 1. skin, 2. peel, 3. a blouse. ವಾ: ಬಿಸಿ ನೀರ್ ಬಿದ್ದ್ ಕೈನ ಚಕ್ಕಳ ಜಾರಿಟು.

ಚಕ್ಕಳ್[2] /*cakkaḷa*/ ನಾ. ಚಿಕ್ಕ ಮಕ್ಕಳನ್ನು ಮಲಗಿಸಲು ಬಿದಿರಿನಿಂದ ಮಾಡಿದ ಚಾಪೆ. a bamboo mat on which children sleep. ವಾ: ಹಿಂದೆನ ಕಾಲಲಿ ಕಡ್‌ವೆ, ಸಾರಗದ ಚಕ್ಕಳಲಿ ಮಕ್ಕಳ ಮೊಲ್‌ಗುಸ್‌ತಿದ್ದೊ.

ಚಕ್ಕಳ್[3] /*cakkaḷa*/ ನಾ. ಬೊಗಸೆಯಷ್ಟು. a handful. ವಾ: ಎರ್ಡ್ ಚಕ್ಕಳ ಪೂರ ನಾಟಿಕಿಲೆ.

ಚಕ್ಕುಲಿವರ್ಲ್ /*cakkulivarlɨ*/ ನಾ. ಚಕ್ಕುಲಿ ತಯಾರಿಸಲು ಬಳಸುವ ಸಾಧನ. chakli/murukku press. ವಾ: ಚಕ್ಕುಲಿ ವರ್ಲ್ ನ ತೊಳ್‌ದಿಸ್.

ಚಕ್ಕೆ /*cakkɛ*/ ನಾ. ಚಿಕ್ಕ ಹೆಣ್ಣು ಮಕ್ಕಳ ಜನನಾಂಗ. a term referring to the vagina of female children. ವಾ: ಕೂಸುನ ಚಕ್ಕೆನ ತೊಳ್‌ಸ್.

ಚಕ್ರ /*cakra*/ ನಾ. 1. ಚಕ್ರ, 2. ಗಾಲಿ. 1. a wheel, 2. a disc. ವಾ: ಎತ್ತ್ ನ ಗಾಡಿನ ಚಕ್ರ ಉರ್‌ಳಿ ಹೋತು.

ಚಗಣೆ /*caganɛ*/ ನಾ. ತಿಗಣೆ. bed bugs. ವಾ: ಚಗಣೆ ಹಾಸ್‌ಗೆಗೆ ಸೇರಿಟು.

ಚಗ್ತೆಬಾಳ್ /*cəgtɛba:ḷi*/ ನಾ. ತಗಚೆ ಗಿಡದ ಕೋಡ್. a branch of sickle senna, ringworm plant. ವಾ: ಚಗ್ತೆ ಬಾಳ್ ಒಣ್ಗಿದ ಮೇಲಿ ಗಿಜಿಗಿಜಿ ಸಬ್ದ ಬಂದದೆ.

ಚಗ್ತೆ^{1} /*cəgtɛ*/ ನಾ. 1. ತಗಚೆ, 2. ಚಕ್ರಗಜ, 3. ಪಲ್ಯಕೆ ಬಳಸುವ ಒಂದು ಜಾತಿಯ ಸೊಪ್ಪು. 1. sickle senna, 2. ringworm plant, 3. green leafy vegetable, used in making curry. ವಾ: ಚೆಗ್ತೆ ಸೊಪ್ಪ್ ದ್ ಕೊಡಿನ ಜಿಂಟಿ ಮುರೆದು. ಪ: ತಜಂಕ್(ತು)

ಚಗ್ತೆ^{2} /*cagtɛ*/ ನಾ. 1. ಚಗಚೆ, 2. ಚೊಗಚೆ. 1. Senna tora plant, 2. a green leafy vegetable. ವಾ: ಚಗ್ತೆ ದೈದ ಕೊಡಿನ ಮುರ್‌ದ್ ಪಲ್ಯ ಮಾಡೊಕು. ಪ: ಚಗ್ಟೆ. **ಚಗ್ತೆಸೊಪ್ಪ್** /*cagtɛsoppi*/ ಚಗಚೆ ಸೊಪ್ಪು. the leaf of Senna tora. ವಾ: ಚಗ್ತೆ ಸೊಪ್ಪುನ ಚಿರಿ ಸಿಕ್ಕಿರೆ ಪಲ್ಯ ಮಾಡಕ್.

ಚಜ್ಞಯ್ /*caŋŋayi*/ ಕ್ರಿವಿ. 1. ಗೆಳೆತನ, 2. ಆತ್ಮೀಯತೆ, 3. ಅನ್ಯೋನ್ಯತೆ. 1. friendship, 2. intimacy, 3. reciprocity. ವಾ: ನಮ್ಮದ್ ಚಜ್ಞಯ್ ದೋಸ್ತಿ, ಬಾರಿ ಹಳೆದ್. ಪ: ಚಜ್ಞಾಯಿ

ಚಚ್ಚ್ /*caci*/ ಕ್ರಿ. ಜಜ್ಜು. to crush. ವಾ: ಚಾಂತಿಕಾಯಿನ ಕಲ್ಲ್ ತಕಂಡ್ ಚಚ್ಚ್.

ಚಟ /*caṭa*/ ಕ್ರಿವಿ. 1. ದುರಭ್ಯಾಸ, 2. ಗೀಳು. 1. a bad habit, 2. fixation/obsession. **ಗಂಡಿಗೆ ಚಟ ಇರೋಕು ಹೆಣ್ಣಿಗೆ ಹಟ ಇರೋಕು(ಗಾ).** ವಾ: ಬೀಡಿ ಎಳೆವ ಚಟ ಒಳ್ಳೆದಲ್ಲ.

ಚಟಾಕ್ /*caṭa:ki*/ ನಾ. ಒಂದು ಸೇರಿನ 1. /1. 2 ನೇ ಭಾಗ. one twelfth of a seer. ವಾ: ಎರ್‌ಡ್ ಚಟಾಕ್ ಹುರಿಗಡ್‌ಲೆನ ತಂದದ್.

ಚಟ್ಟ /*caṭṭa*/ ನಾ. ಶವವನ್ನು ಹೊತ್ತುಕೊಂಡು ಹೋಗಲು ಬಳಸುವ ಬಿದಿರಿನ ಸಾಧನ. a bier made of bamboo. **ಅಮ್ನೋರ್ ಪಟ್ಟಕೆ ಬಾಕನ ಅಯ್ನೋರ್ ಚಟ್ಟಕೆ ಹೋದೊ(ಗಾ). ಚಟ್ಟ ಹತ್ತ್‌ಕನ ಮುಟ್ಟ ಹಟ(ನು).** ವಾ: ಹೆಣ ಹೊರಿಕೆ ಚಟ್ಟನ ತಯಾರ್ ಮಾಡ್‌ತೊಳೊ. ಪ: ಚಟ್ಟ ಕಟ್ಟಿಕೆ

ಚಟ್ಟಡ್ಕ /*caṭṭaḍka*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಚಟ್ಟಿ^{1} /*caṭṭi*/ ನಾ. ಶವ ಹೊರಲು ಬಿದಿರಿನಿಂದ ತಯಾರಿಸಿದ ಸಾಧನ. a bier made of bamboo. ವಾ: ಚಟ್ಟಿಲಿ ಹೆಣನ ಹೊರ್‌ದು.

ಚಟ್ಟಿ^{2} /*caṭṭi*/ ನಾ. 1. ಸಾರಿನ ಪಾತ್ರೆ, 2. ಬಾಣಲೆ. a vessel to cook curry/soup/stew, 2. a frying pan. ವಾ: ಚಟ್ಟಿಲಿ ಗೈಪು ಮಾಡ್‌ದು.

ಚಟ್ಟಿ^{3} /*caṭṭi*/ ನಾ. 1. ಹೂವಿನ ಕುಂಡ, 2. ಗಿಡಗಳನ್ನು ನೆಡಲು ಬಳಸುವ ಮಣ್ಣಿನ ಅಥವಾ ಸಿಮೆಂಟಿನ ವಸ್ತು. 1. a flower pot, 2. a clay or cement pot. ವಾ: ಹೂನ ಚೆಟ್ಟಿನ ಕೊತ್ತಿ ಹಾರಿ ಬೀಳ್‌ಸಿತ್. ಪ: ಹೂನಚಟ್ಟಿ

ಚಟ್ಟಿ^{4} /*caṭṭi*/ ನಾ. ಸಿಮೆಂಟನ್ನು ಒಯ್ಯಲು ಉಪಯೋಗಿಸುವ ಅಗಲ ಬಾಯಿಯ ಪಾತ್ರೆ. a mortar pan. ವಾ: ಚಟ್ಟಿಲಿ ಸಿಮೆಂಟ್‌ನ ಹೊರ್‌ತೊಳದ್.

ಚಟ್ಟಿನೆರವನ /*caṭṭinɛravana*/ ನಾ. ಒಂದು ಮನೆತನದ ಹೆಸರು. 1. family, 2. lineage.

ಚಟ್ಟಿಲೆಕ್ಕ /*caṭṭilekka*/ ಪವಾ. ಗಾರೆ ಅಳೆಯುವ ಸಾಧನ. a tool to measure the mortar. ವಾ: ಚೆಟ್ಟಿ ಲೆಕ್ಕಲಿ ಸಂಬಳ ಕೊಡೊಕು.

ಚಟ್ಟೆಕಂದಡಿ /*caṭṭɛkandaḍi*/ ನಾ. ತಲೆ ಚಪ್ಪಟೆಯಾಗಿರುವ ಒಂದು ಜಾತಿಯ ಕಂದಡಿ ಹಾವು. a viper snake. ವಾ: ಚಟ್ಟೆ ಕಂದಡಿದ್ ತಲೆ ಚಪ್ಪಟೆಗಡ.

ಚಟ್ಟೆಬತ್ತ /*caṭṭɛ batta*/ ನಾ. ಹೊಟ್ಟು ಭತ್ತ. empty kernels of paddy. ವಾ: ಹೊಡ್ಕಿ ಹಾಕಿದರ್‌ಲಿ ಸುಮಾರ್ ಚಟ್ಟೆ ಬತ್ತಗೊಳೊ.

ಚಟ್ಟೆ^{1} /*caṭṭɛ*/ ನಾ. 1. ಉಡ, 2. ಹಲ್ಲಿಯ ಜಾತಿಗೆ ಸೇರಿದ ಒಂದು ದೊಡ್ಡ ಪ್ರಾಣಿ. a monitor lizard. ವಾ: ಚಟ್ಟೆ ಹರ್ಕ್ಂಡ್ ಹೋತು.

ಚಟ್ಟೆ^{2} /*caṭṭɛ*/ ನಾ. ಮಣ್ಣಿನ ಬಟ್ಟಲು. a clay bowl.

ವಾ: ಚಟ್ಟೆಲಿ ಅನ್ನನ ಕೂಸಿಗೆ ಅರ್‌ದ್ ಕೊಡೊಕು. ಪ: ಗದ್ದಯಿ, ಗದ್ದಗ,

ಚಟ್ಟೆ³ /*caṭṭe*/ ನಾವಿ. 1. ಚಪ್ಪಟೆ, 2. ಅಪ್ಪಚ್ಚಿ ಆಗುವುದು. 1. flat (horizontal position), 2. crushed. ವಾ: ದಸರ ನೋಡಿಕೆ ಹೋಗಿರಕನ ನಮ್ಮನ್ನ ಜೆನ ಚಟ್ಟೆ ಮಾಡ್‌ದೊ.

ಚಟ್ಟೆ⁴ /*caṭṭɛ*/ ನಾ. 1. ಮಣ್ಣಿನ ತಟ್ಟೆ, 2. ಮಕ್ಕಳಿಗೆ ಊಟ ಕೊಡುವ ಮಣ್ಣಿನ ಪಾತ್ರೆ, 3. ಗದ್ದಗ/ಗದ್ದಯಿ/ಗದ್ದವೊ/ ಪಲ್ಲಯಿ(ತು). 1. an earthen plate/clay plate, 2. food is served to children using clay plate. ವಾ: ಚಟ್ಟೆಲಿ ಅನ್ನ ಅರ್‌ದ್ ಕೂಸಿಗೆ ಕೊಡೊಕು.

ಚಟ್ಟೆಕಲ್ಲು /*caṭṭekallu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಸಂಪಾಜೆ ಗ್ರಾಮದ ಜಾಗ. a locality in Sampaje village in Sullia Taluk of Dakshina Kannada District.

ಚಟ್ಟ್ /*caṭṭi*/ ನಾ. 1. ಹುರುಳಿಕಾಯಿ, 2. ಬೀನ್ಸ್. french beans. ವಾ: ಚಟ್ಟ್‌ನ ಈಗ ತಾನೆ ಬೊಳ್ಳಿಂದ ಕೊಯ್‌ಕಂಡ್ ಬಂದೆ. ಪ: ಇಲಾತಿ ಚಟ್ಟ್

ಚಟ್ನಿ /*caṭni*/ ನಾ. 1. ಚಟ್ನಿ, 2. ಪೊಜ್ಜಿ. chutney. ವಾ: ಮಾಯ್ನಕಾಯಿ ಚಟ್ನಿ ಒಂದಿದ್ದರೆ ಸಾಕ್ ಉಂಬಕೆ. ಪ: ಬಜ್ಜಿ(ತು)

ಚಡಾಯಿಸು /*caḍa:yisu*/ ಕ್ರಿ. 1. ಬೆಲೆ ಮೊದಲಾದುವುಗಳನ್ನು ಹೆಚ್ಚಿಸು, 2. ಏರಿಸು, 3. ಹೊಡೆತ, 4. ಚಡಿಯೇಟು. 1. to increase the price, 2. to increase, 3. beating, 4. whipping. ವಾ: ಅಂಗಡಿಯಂವ ರೇಟ್ ಚಡಾಯಿಸಿತ್.

ಚಡಾಯಿಸ್ /*caḍa:yisu*/ ಕ್ರಿ. ಲೈಂಗಿಕ ಸಂಬಂಧವಾಚಿ. a sexual slang. ವಾ: ಕಾಗಡೆ ಮನೆ ಗೂಡೆಗೆ ಮೇಗಡೆ ಮನೆ ಹೈದ ಚಡಾಯಿಸಿತ್.

ಚಡಾಯ್ /*caḍa:yɨ*/ ಕ್ರಿ. 1. ಬಾರಿಸು, 2. ಬಯ್ಯು. 1. to hit, 2. to scold. ವಾ: ಅಂವಂಗೆ ಚಡಾಯ್‌ಸ್.

ಚಡಾವು /*caḍa:vu*/ ನಾ. 1. ಎತ್ತರದ ರಸ್ತೆ, 2. ದಿಬ್ಬದ ರಸ್ತೆ, 3. ಏರು ನೆಲ, 4. ದಿಣ್ಣೆ, 5. ಏರಿಕೆ. 1. incline of a road, 2. a road on a slope, 3. a slope, 4. a heap, 5. steep. ವಾ: ಚಡಾವು ಹತ್ತಿಕೆ ಹಚ್ಚಾ ಬಜ ಆದೆ.

ಚಡಿ /*cɛḍi*/ ನಾ. 1. ಕಚ್ಚು, 2. ಚಡಿ, 3. ಸಂದು. 1. to bite, 2. a cane, 3. a joint. ವಾ: ಮರ ಹತ್ತಿಕನ ಚಡಿ ಇದ್ದರೆ ಒಳ್ಳದ್, ಹತ್ತಿಕೆ ಸುಲಬ ಆದೆ.

ಚಡ್ಲೆ ಮರ /*caḍlɛ mara*/ ನಾ. ಹಸಿಯಲ್ಲೆ ಉರಿಯಬಲ್ಲ ಸೌದೆ ಮರ (ಸಾಮಾನ್ಯವಾಗಿ ಹೆಣ ಸುಡಲು ಬಳಸುತ್ತಾರೆ) 2ಹಳದಿ ಕಾಯಿ,ಸಣ್ಣದಾದ ಬಿಳಿ ಹೂ ಬಿಡುವ ಕಾಡು ಮರ. 1. a firewood tree, burns even when it is not completely dry, 2. a forest tree, has yellow flowers, and white nuts. ವಾ: ಚಡ್ಲೆ ಮರದ ಸೊವುದೆ ಲಾಯ್ಕಲಿ ಹೊತ್ತಿದೆ.

ಚಣಿ /*caṇi*/ ನಾ. ತಣ್ಣಗಾಗು. to cool down. ವಾ: ಕಾಪಿ ಬಿಸಿ ಉಟ್ಟು ಹಚ್ಚಾ ಚಣಿಲಿ. ಪ: ಚಣ್ದುಟ್ಟು; ತಣ್ಣಗಾಗಿದೆ; ಚಣಿಯಕೆ – ತಣಿಯಲು

ಚಣಿಲ /*caṇila*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಗುತ್ತಿಗಾರು ಗ್ರಾಮದ ಜಾಗ. a locality in Guttigaru village in Sullia Taluk of Dakshina Kannada District.

ಚಣಿಲ್ /*caṇili*/ ನಾ. 1. ಕೆಂಜಳಿಲು, 2. ಅಳಿಲಿಗಿಂತ ಸ್ವಲ್ಪದೊಡ್ಡ ಗಾತ್ರದ ಕಾಡುಪ್ರಾಣಿ. Indian giant Squirrel. ವಾ: ನಮಿಗೆ ಚಣಿಲ್ ಕಂಡತ್. ಪ: ಚಣಿಲು

ಚಣಿಸು /*caṇisu*/ ಕ್ರಿ. ತಣಿಸು. to cool something down. ವಾ: ಬಿಸಿ ಕಾಪಿನ ಚಣಿಸುದು.

ಚಣೆಲಿ /*caṇɛli*/ ನಾ. 1. ತಣ್ಣಗಾಗಲಿ, 2. ಆರಲಿ. to let something cool down. ವಾ: ಕಾಪಿ ಚಣೆಲಿ ಮತ್ತೆ ಕುಡ್‌ದನೆ.

ಚಣ್ದುಟ್ಟು /*caṇduṭṭu*/ ನಾ. ತಣ್ಣಗಾಗಿದೆ. has become cold. ವಾ: ಗೈಪು ಚಣ್ದುಟ್ಟು. ಪ: ಚಣ್ದರೆ – ತಣಿದರೆ

ಚಣ್ಸ್ /*caṇsi*/ ಕ್ರಿ. ತಣಿಸು. to let something become cold. ವಾ: ಇಸ್ಟ್ ಬಿಸಿ ಕಾಪಿನ ಹೇಂಗೆ ಕುಡ್ಯದು, ಹಚ್ಚಾ ಚಣ್ಸ್

ಚತುರಾನ /*catura:na*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಚತ್ತ್‌ಕಲ್ಲ್ /*catti kalli*/ ನಾ. 1. ಗೋಡೆ ಕಟ್ಟಲು ಬಳಸುವ ಕೆತ್ತಿದ ಕಲ್ಲು, 2. ಮೃದು ಕಲ್ಲು. 1. stone bricks, 2. soft stones. ವಾ: ಚತ್ತ್ ಕಲ್ಲ್ ತಂದ್ ಹಾಕಿಸೊಳೊ. ಪ: ಚೆತ್ತ್‌ಕಲ್ಲ್

ಚತ್ರಪ್ಪಾಡಿ /*catrappa:ḍi*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ನಾಲ್ಕೂರು ಗ್ರಾಮದ ಜಾಗ. 1. family, 2. lineage, 3. a locality in Nalkuru village in Sullia Taluk of Dakshina Kannada District.

ಚದ್ದಲೆ /*caddalɛ*/ ನಾ. ಬಿದಿರಿನಿಂದ ಮಾಡಿದ ಚಾಪೆ. a mat made of strips of bammboo. ವಾ: ಚದ್ದಲೆನ ಮಾಡಿಕೆ ಗೊತ್ತುಟಾ?

ಚದ್ರಂಗಿ[1] /*cadraŋgi*/ ನಾ. ಬಿದಿರಿನ ಒಳ ಭಾಗದ ನುಣುಪು ಅಂಶ. a soft core of bamboo. ವಾ: ಬೆದ್‌ರೆಂಗಿ ಒಳಗೆ ಚದ್ರಂಗಿ ಕುದ್ದುಟು.

ಚದ್ರಂಗಿ[2] /*cadraŋgi*/ ನಾ. ಒಂದು ವಿಧದ ಕಾಡು ಹೂವು. ಕಾಡಲ್ಲಿ ತೋಟದಲ್ಲಿ ಬೆಳೆವ ಚೆಂಡು ಹೂವನ್ನು ಹೋಲುವ ಹೂವು. a flower found in the forests, resembles marigold.

ಚದ್ರಂಗಿ[3] /*cadraŋgi*/ ನಾ. ಚಂದದ ಹುಡುಗಿ, ಜನಪದ ಕತೆಗಳಲ್ಲಿ ಬರುವ ಪಾತ್ರ. a beautiful girl, features in folk stories. ಚೆದ್ರೆಂಗಿ ಗೂಡೆ ಬಿದಿರೊಳಗಿತ್ತ್‌ಂತೇಲುವ ಕತೆ ಉಟ್ಟು

ಚದ್ರಿ /*cadri*/ ನಾ. 1. ಹರಡಿ, 2. ಚದುರಿ. 1. spread, 2. scatter. ವಾ: ಬೂದಿ ಗಾಳಿಗೆ ಎಲ್ಲ ಕಡೆ ಚದ್ರಿ ಹೋತ್.

ಚನಿಯಪ್ಪ /*caniyappa*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. masculine given name. ಪ: ಚನಿಯ

ಚನಿಯಾರು /*caniya:ru*/ ನಾ. ವ್ಯಕ್ತಿ ಹೆಸರು, ಸ್ತ್ರೀ ವಾಚಕ. feminine given name.

ಚನೇರ್ಪುದು /*canɛ:rpudu*/ ನಾ. ಕೈ ಕಾಲು ಜುಂ ಹಿಡಿಯುವುದು. numbness. ವಾ: ಒಂದೇ ಕಡೆ ಕುದ್ದರೆ ಕೈ ಕಾಲ್ ಚನೇರ್ಪುದು. ಪ: ಚಿನೆರ್ಪುದು

ಚಪಾತಿ /*capa:ti*/ ನಾ. ಗೋಧಿ ಹಿಟ್ಟಿನಿಂದ ಕಲಸಿ ಮಾಡುವ ತಿನಿಸು. chapati/roti/a flat bread. ವಾ: ಹಲ್ಲಿಲ್ಲದೆ ಚಪಾತಿ ತಿಂಬಕಾಲೆ.

ಚಪ್ಡಾಸ್ /*capḍa:sɨ*/ ನಾ. ಎಪ. ಅರ್ಧಂಬರ್ಧ ಕೆಲಸ ಮಾಡುವವನು. someone who leaves things unfinished.

ಚಪ್ಪಟ /*cappaṭa*/ ನಾ. ಚಪ್ಪರಿಸುವಿಕೆ. smacking. ವಾ: ಅಂವನ ಚಪ್ಪಟಲಿ ಕೆಬಿ ಮುಚ್ಚಿ ಕುದ್ರಕಸ್ಟೆ.

ಚಪ್ಪಟೆ /*cappaṭɛ*/ ನಾ. 1. ಚಪ್ಪಟೆ, 2. ಸಮತಟ್ಟಾಗಿರುವುದು. 1. flat, 2. level. ವಾ: ಚಪ್ಪಟೆ ಕಲ್ಲ್ ಇದ್ದರೆ ಅರ್ವೆ ಒಗೆಕೆ ಒಳ್ಳೆದ್.

ಚಪ್ಪಟೆ ಚಾರ್ /*cappaṭɛ ca:rɨ*/ ನಾ. 1. ಮಾಡಿದ ಪದಾರ್ಥದಲ್ಲಿ ಉಪ್ಪು ಹುಳಿ ಖಾರ ಕಡಿಮೆಯಾಗಿರುವುದು, 2. ನೀರಸವಾದುದು, 3. ರುಚಿಯಿಲ್ಲದಿರುವುದು, 4. ಸಪ್ಪೆ. 1. flavourless food, 2. bland, 3. flavourless, 4. lacking flavour. **ಗೈಪು ಬರೇ ಚಪ್ಪಟೆ ಚಾರ್ ನಿಪ್ಪಟೆ ನೀರ್(ನು).** ವಾ: ನಿಂಬುಳಿ ಆಂಬರ ಬರಿ ಚಪ್ಪಟೆ ಚಾರ್, ಕಾರ, ಉಪ್ಪು ಎಂತನೂ ಇಲ್ಲೆ.

ಚಪ್ಪಡಿ /*cappaḍi*/ ನಾ. 1. ಚಪ್ಪಡಿ ಕಲ್ಲು, 2. ಹಾಸುಕಲ್ಲು. 1. a stone slab, 2. a slab of stone. ವಾ: ಗುಡ್ಡಲಿ ನೆಲಕ್ಕೆ ಚಪ್ಪಡಿ ಕಲ್ಲ್‌ನ ಹಾಕಿದ್.

ಚಪ್ಪರ /*cappara*/ ನಾ. ಉಗ್ಗಪ್ಪ್‌ಕಾಲಿಕವಾಗಿ ನೆರಳಿಗಾಗಿ/ಆಧಾರಕ್ಕಾಗಿ ಹಾಕುವ ಮಾಡು. a temporary shade/canopy/pandal. **ಮೊದುವೆ ಕರ್ಚ್ ಚಪ್ಪರಕೆ ಮುಗ್ತ್(ಗಾ).** ವಾ: ಮೊದ್‌ವೆಗೆ ಯಾಗ ಚಪ್ಪರ ಹಾಕಿರೆ, ಮೊದ್ವೆ ದಿನ ಹಕ್ಕಲೆ ಬಾತಲ್ಲ. ಪ: ಚಪ್ಪರದಡಿಗೆ – ಚಪ್ಪರದ ಕೆಳಗೆ

ಚಪ್ಪರತಲೆ /*capparatalɛ*/ ನಾ. 1. ಗುಂಗುರು ಕೂದಲು, 2. ಸುರುಳಿ ಸುರುಳಿಯಾದ ಕೂದಲು. curly hair. ವಾ: ಅಂವಂದ್ ಚಪ್ಪರ ತಲೆ.

ಚಪ್ಪರಶಾಸ್ತ್ರ /*capparasa:stra*/ ನಾ. ಮದುವೆಯ ಮೊದಲ ಶಾಸ್ತ್ರ, a ritual performed a day before the wedding, a pandal is erected in front of the groom's and bride's houses. ವಾ: ಚಪ್ಪರ ಶಾಸ್ತ್ರಕೆ ಸುಮಾರ್ ಜೆನ ಬಂದವೆ.

ಚಪ್ಪರಿ /*cappari*/ ನಾ. ಚಟ್ನಿ. chutney. ವಾ: ಕುಡು ಚಪ್ಪರಿಗೆ ನಿಂಬುಳಿ ಹಿಂಡೊಕು.

ಚಪ್ಪರಿಂಗೆ /*cappariŋgɛ*/ ನಾ. ತೆಂಗಿನ ಗೊನೆಯ ಸುತ್ತಿನ ಹೊದಿಕೆ. a pandal prepared by coconut fronds. ವಾ: ಚಪ್ಪರಿಂಗೆನ ತೆಗಿನೆ. ಪ: ಚೆಪ್ಪರಿಂಗೆ(ತು)

ಚಪ್ಪಲ್ /*cappalɨ*/ ನಾ. ಎಪ. 1. ಚಪ್ಪಲಿ, 2. ಮೆಟ್ಟು, 3. ಕೆರ, 4. ಎಕ್ಕಡ. 1. slippers, 2. sandals, 3. footwear, 4. moccasin. **ಹಾರ್ ಕುದ್ರೆ ಓಡ್ ಕುದ್ರೆ**

ನೀರ್ ಕಂಡ್ರೆ ನಿಲ್ಲ್ ಕುದ್ರೆ – ಚಪ್ಪಲ್(ಒ). ವಾ: ಚಪ್ಪಲ್‌ನ ದೇಸ್ತಾನದ ಹೊರಗೆ ಇಸೊಕು. ಪ: ಚಪ್ಪಳಿ

ಚಪ್ಪಾಂಗಿ /*cappa:ŋgi*/ ನಾವಿ. 1. ಕೆಲಸಕ್ಕೆ ಬಾರದ ಮಾತುಗಾರ, 2. (ಬುಡಲ್), 2. ಬೊಗಳೆ ಬಿಡುವವ. 1. a bluffer, 2. ostentatious. ವಾ: ಅಂವ ಯಾಗೊಲು ಚಪ್ಪಾಂಗಿ ಮಾತೆ ಆಡ್ದು. ಪ: ಚಪ್ಡಾಂಗಿ

ಚಪ್ಪಾಸ್ /*cappa:si*/ ನಾ. ಕಾಲ ಹರಣ, ಚಪ್ಪುಡಿ(ತು). an indolent person. ವಾ: ಅಂವ ಬೊರಿ ಚಪ್ಪಾಸ್ ಜೆನ.

ಚಪ್ಪಾಳೆ /*cappa:ḷɛ*/ ನಾ. 1. ಕರತಾಡನ, 2. ಕೈತಟ್ಟುವಿಕೆ. 1. to clap, 2. clapping hands. **ಎರಡ್ ಕೈ ಸೇರದೆ ಚಪ್ಪಾಳೆ ಆದುಲೆ(ಗಾ).** ವಾ: ಮಕ್ಕ ಜೋರಾಗಿ ಚಪ್ಪಾಳೆ ತಟ್ಟಿದೊ.

ಚಪ್ಪುದು /*cappudu*/ ಕ್ರಿ. 1. ಚಪ್ಪರಿಸು, 2. ಚಪ್ಪರಿಸುತ್ತಾ. 1. smacking one's lips, 2. lip smacking. ವಾ: ಹಂದಿ ತಿಂಬಂಗೆ ಚಪ್ಪಿ ಚಪ್ಪಿ ತಿಂಬಡ. **ಚಪ್ಪಿ ಚಪ್ಪಿ ತಿಂಬದ್** /*cappi cappi timbadi*/ ಶಬ್ದ ಬರುವಂತೆ ಚಪ್ಪರಿಸುವುದು. smacking one's lips. ವಾ: ಹಣ್ಣ್‌ನ ಚಪ್ಪಿ ಚಪ್ಪಿ ತೀಂತ್. **ಚಪ್ಪಿ ಚಪ್ಪಿ ಹಾಕುದು** /*cappi cappi ha:kudu*/ ಹಣ್ಣನ್ನು ಚೀಪಿ ಚೀಪಿ ರಸ ಹೀರಿ ಹಾಕುವುದು. to squeeze the juice of a fruit. ವಾ: ಹಕ್ಕಿಗ ಕಿತ್ತುಳಿನ ಚಪ್ಪಿ ಚಪ್ಪಿ ಹಾಕ್ಯೊಳೊ.

ಚಪ್ಪೆ ಗೆಂಡೆ /*cappɛ geṇḍɛ*/ ನಾ. 1. ಔಷಧಿಗೆ ಉಪಯೋಗಿಸುವರು, 2. ದೋಸೆ ಹಿಟ್ಟು ಉದುರು ಬರಲು ಉಪಯೋಗಿಸುವರು. 1. used as medicine, 2. used in making dosa batter. ವಾ: ದೋಸೆ ಕಡಿಯಕನ ಚಪ್ಪೆ ಗೆಂಡೆನ ಹಾಕಿರೆ ಲಾಯ್ಕಲಿ ಬೆಳ್‌ದ್ ಬಂದದೆ.

ಚಪ್ಪೆ[1] /*cappɛ*/ ನಾ. 1. ಯಾವುದೇ ರುಚಿ ಇಲ್ಲದ, 2. ಸಪ್ಪೆ. 1. flavourless food, 2. tasteless. ವಾ: ಮಾಯ್‌ನ ಹಣ್ಣ್ ಬೊರಿ ಚಪ್ಪೆ. ಪ: ಚಪ್ಪೆಬಾರ್ – ರುಚಿಯಿಲ್ಲದ, ಚಿಪ್ಪುಡಿಚಾರ್(ತು). **ಚಪ್ಪೆ ಆಗಿಬುಡು** /*cappɛ a:gibuḍu*/ 1. ತೆಪ್ಪಗಾಗು, 2. ಸುಮ್ಮನಾಗು. 1. to become silent, 2. to become quiet. ವಾ: ಮಾತಾಡ್ಬಡ ನೀ ಚಪ್ಪೆ ಆಗಿಬುಡು.

ಚಪ್ಪೆ[2] /*cappɛ*/ ನಾ. 1. ಸೋತು ಹೋಗು, 2. ರುಚಿಯಿಲ್ಲದುದು, 3. ಉತ್ಸಾಹ ವಿಲ್ಲದುದು. 1. to lose, 2. flavourless, 3. unenthusiastic. **ಚಪ್ಪೆ ಆಗುಟ್ಟುದು(ನು).** ವಾ: ಕೂಸು ಯಾಕೆ ಚಪ್ಪೆ ಮೋರೆ ಹಾಕಂಡ್ ಕುದ್ದುಟು.

ಚಪ್ಪೆ[3] /*cappɛ*/ ನಾವಿ. 1. ಕಟುವಲ್ಲದ, 2. ನೀರಸವಾದ. 1. not bitter, 2. boring. ವಾ: ನಿನ್ನ ಮೋರೆ ಯಾಕೆ ಹಿಂಗೆ ಇಂದ್ ಚಪ್ಪೆ ಆವುಟು ಎಂಲುಗ್ಗಪ್ಪ್?

ಚಪ್ಪ್‌ಡಿ /*cappiḍi*/ ನಾ. ಕೆಲಸವನ್ನು ಸರಿಯಾಗಿ ನಿರ್ವಹಿಸದಿರುವುದು. lackadaisical nature. ವಾ: ಅಂವ ಚಪ್ಪ್‌ಡಿ, ಅಂವನ ನಂಬಿ ಕೆಲ್‌ಸಕೆ ಇಳ್‌ದರೆ ಆಕಿಲೆ. ಪ: ಚಪ್ಡಿ; ಚಪ್ಪುಡಿ. **ಚಪ್ಪುಡಿ** /*cappuḍi*/ 1. ಕಳಪೆ, 2. ಅಪ್ರಯೋಜಕ. 1. inferior quality, 2. useless. ವಾ: ಹೊಸ ರೋಡು ಕೆಲ್ಸ ಚಪ್ಪುಡಿ ಆಗುಟು.

ಚಮತ್ಕಾರ /*camatka:ra*/ ನಾ. 1. ಚಮತ್ಕಾರ, 2. ವಿಸ್ಮಯ, 3. ಚಾತುರ್ಯ, 4. ಕೌಶಲ. 1. a wonder, 2. a marvel, 3. dexterity 4 skillful. ವಾ: ಏನೋ ಚಮತ್ಕಾರ ನಡ್ದದೆ ಈಗ.

ಚಯಿಂಪೆ ಮೀನ್ /*cayimpɛ mi:nɨ*/ ನಾ. ಒಂದು ಜಾತಿಯ ಸಣ್ಣ ಮೀನು. a type of fish. ವಾ: ಸಂತೆಂದ ಬಾಕನ ಚಯಿಂಪೆ ಮೀನ್ ತಂದೊಳೊ, ಗೈಪ್ ಮಾಡೊಕೊಸ್ಟೆ. **ಚಯಿಪೆ ಮೀನ್** /*cayipɛ mi:nɨ*/ ವಾ: ಚಯಿಪೆ ಮೀನ್ ಗೈಪುನೊಟ್ಟ್‌ಗೆ ಉಂಬಕೆ ಲಾಯ್ಕ್.

ಚರಕ /*caraka*/ ನಾ. 1. ಚರಕ, 2. ನೂಲುವ ರಾಟೆ. 1. a spinning wheel, 2. a spinning loom. ವಾ: ಚರಕಲಿ ನೂಲು ತೆಗೆದು.

ಚರಕನ /*carakana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಚರಕ್ /*carakɨ*/ ನಾ. ಎಣ್ಣೆ ಹಾಕಿಡುವ ಹಿತ್ತಾಳೆಯ ಬಟ್ಟಲು. a bronze bowl to keep oil. ವಾ: ಎಣ್ಣೆನ ಚರಕ್‌ಲಿ ಬಿಸಿ ಮಾಡಿ ತಲೆಗೆ ಹಾಕ್. ಪ: ಚರ್ಕ್

ಚರಪರ /*carapara*/ ಅ. ಹರಿದಾಡಿದಂತೆ ಶಬ್ದವಾಗು. crawling sound. ವಾ: ಎಂತೊ ಚರಪರತ ಸದ್ದ್ ಕೇಳ್‌ತ್.

ಚರಸೊತ್ತ್ /*carasottai*/ ನಾ. ಚರಾಸ್ತಿ, ಸಾಗಿಸಲು ಸಾಧ್ಯವಾಗುವಂತಹ ಸ್ವತ್ತುಗಳು. things that can be carried. ವಾ: ಆಸ್ತಿ ಪಾಲ್ ಮಾಡಿಕನ ಚರಸೊತ್ತ್‌ನ ಲೆಕ್ಕ ಹಾಕ್‌ತೊಳೊ.

ಚರಿಪಿರಿ /*caripiri*/ ಅ. ಕಿರಿಕಿರಿ ಮಾತನಾಡುವುದು. to

annoy/to irritate. ವಾ: ಮಕ್ಕ ಮನೆಲಿದ್ದರೆ ಬರೆ ಚರಿಪಿರಿ.

ಚರೆ /*carɛ*/ ನಾ. ಆಧಾರ ಕೋಲು. a stick/post to support. ವಾ: ಚೆಟ್ಟ್ ಬೊಳ್ಳಿಗೆ ಚರೆ ಕುತ್ತೊಕು. ಪ: ಚೆರೆ, ಅಡರ್(ತು). **ಚರೆಕುತ್ತುದು** /*carɛkuttudu*/ ಬಳ್ಳಿಹೋಗುವಂತ ಗಿಡಗಳಿಗೆ ಆಧಾರವಾಗಿ ಬಿದಿರಿನ ಸಣ್ಣ ತುಂಡು ಊರುವುದು. a stick planted in the ground to support the creeper/climber. ವಾ: ಇಲಾತಿಚೆಟ್ಟ್ ಬೊಳ್ಳಿಗೆ ಚರೆಕುತ್ತುದು.

ಚರ್ಂಡಿ /*cariṇḍi*/ ನಾ. 1. ಚರಂಡಿ, 2. ಗಟಾರ, 3. ಮೋರಿ. 1. a drain, 2. a sewer, 3. a sewage. ವಾ: ಚರ್ಂಡಿ ತುಂಬಿ ಹೋಗಿ ಕಟ್ಟಿ ನಿತ್ತುಟು.

ಚರ್ಂಬು ಸೊಯ್ದೆ /*carɨmbu soydɛ*/ ನಾ. ಸಣ್ಣ ಸಣ್ಣ ಹುಡಿ ಸೌದೆಗಳು. pieces of firewood. ವಾ: ಚರ್ಂಬು ಸೊಯ್ದೆ ಇದ್ದರೆ ಬೆಂಕಿ ಲಾಯ್ಕ ಹೊತ್ತಿದೆ. ಪ: ಚೆರ್ಂಬು ಸೊವುದೆ

ಚರ್ಕೊ /*carakɔ*/ ನಾ. ತುಂಬಿಸಿಕೊಳ್ಳು. to fill. ವಾ: ಬೇಗ ಬೇಗ ಚೀಲಕೆ ಚರ್ಕೊ. ಪ: ಚರ್ಕೊನ್ತ್ – ತುಂಬಿಸಿಕೊಡನು/ಳು

ಚರ್ಗ್ /*cargɨ*/ ನಾ. ಸಣ್ಣ ಮೀನುಗಳು. small fish. ವಾ: ಕೆರೆ ಆರ್ಸಿಕನ ಚೆರ್ಗ್‌ಮೀನ್‌ಗ ಸುಮಾರ್ ಸಿಕ್ಕಿತ್.

ಚರ್ಚೆ /*carcɛ*/ ನಾ. 1. ಚರ್ಚೆ, 2. ಚಿಂತನೆ, 3. ಪರ್ಯಾಲೋಚನೆ, 4. ವಾಗ್ವಾದ. 1. discussion, 2. thought, 3. an alternative thought, 4. argument. ವಾ: ನೀ ಸೊಪ್ಪು ಮಾರವಳೊಟ್ಟಿಗೆ ಎಂತ ಚರ್ಚೆ ಮಾಡ್ತಿದ್ದದ್ ಹಾಂಗೆ.

ಚರ್ತ್ /*cartɨ*/ ನಾ. 1. ಪೋಣಿಸಿದನು, 2. ಪೋಣಿಸಿದಳು. 1. he strung, 2. she strung. ವಾ: ಅವುಳು ಮೊಣಿನ ಚರ್ತ್. ಪ: ಚುರ್ತ್

ಚರ್ಟೆ /*cariṭɛ*/ ನಾ. ಮಣ್ಣಿನ ಊಟದ ತಟ್ಟೆ. an earthen/a clay platter. ವಾ: ನಮ್ಮೊಟ್ಟಿಗೆ ಒಂದ್ ಹಳ್ತ್ ಚರ್ಟೆ ಇತ್ತ್. ಪ: ಪಲ್ಲಯಿ, ಗದ್ದಗ

ಚರ್ಪಟೆ /*carpaṭɛ*/ ನಾವಿ. 1. ಗಂಟಲು ಹರಿವಂತೆ ಮಾತನಾಡುವವ, 2. ಕಿರುಚಿ ಮಾತನಾಡುವವ, 3. ವಾಚಾಳಿತನ, 4. ಅತಿಯಾಗಿ ಮಾತನಾಡುವವ, 5. ಮಾತಿನ ಮೂಲಕ ಕೇಳುಗರಿಗೆ ಚಿಟ್ಟು ಹಿಡಿಸುವವ. 1. screaming, 2. shouting, 3. a talkative, 4. loquacious, 5. a chatterbox, 5. a garrulous person. ವಾ: ಅಂವ ಬಾರಿ ಚರ್ಪಟೆ ಮೊನ್ಸ, ಮಾತಾಡಿಕೆ ಸುರು ಮಾಡಿರೆ ತಲೆಬೇನೆ ಬರಗಂಟ ಬುಡಿಕಿಲೆ.

ಚರ್ಬಿ /*carbi*/ ನಾ. 1. ಬೊಜ್ಜು, 2. ಸತ್ವಹೀನವಾಗಿ ಬೆಳೆದ ಮೈ3. ದಪ್ಪನೆಯ ಶರೀರ. 1. obesity, 2. fat, 3. a stout body. ವಾ: ಚರ್ಬಿ ತುಂಬಿ ಅವುಳ್‌ನ ನೋಡಿಕಾದುಲೆ. ಪ: ಚೆರ್ಬಿ. **ಚರ್ಬಿ ತುಂಬಿಟ್ಟು** /*carbi tumbiṭṭu*/ 1. ಬೊಜ್ಜು ತುಂಬಿದೆ, 2. ಬೊಜ್ಜು ಬೆಳೆದಿದೆ. 1. obese, 2. stout. ವಾ: ಕುರ್‌ಕ್‌ಲ್ ತಿಂಡಿ ತಿಂದ್ ಚರ್ಬಿ ತುಂಬಿಟ್ಟು.

ಚರ್ಮ /*carma*/ ನಾ. 1. ಚರ್ಮ, 2. ತೊಗಲು. 1. skin, 2. leather. ವಾ: ಬಿಸ್‌ಲ್‌ಲಿ ಕೆಲ್‌ಸ ಮಾಡಿ ಚರ್ಮ ಸುಟ್ಟ್ ಹೋದಂಗೆ ಆವುಟು.

ಚರ್ಮುರಿ /*carmuri*/ ನಾ. 1. ಹುರಿಯಕ್ಕಿ, 2. ಮಂಡಕ್ಕಿ. 1. popped rice, 2. puffed rice. ವಾ: ಕಾಪಿ ಒಟ್ಟಿಗೆ ಚರ್ಮುರಿ ಇದ್ದರೆ ತಿಂಬಕೆ ಕುಸಿ.

ಚರ್ಮೆ[1] /*carmɛ*/ ನಾ. ಅಲಂಕಾರಿಕ ಕಳೆಗಿಡ. an invasive weed grown as an ornamental shrub. ವಾ: ಚರ್ಮೆನ ಚೆಟ್ಟಿಲಿ ನೆಟ್ಟೊಳೊ.

ಚರ್ಮೆ[2] /*carmɛ*/ ನಾ. ಮೃದು ದಂಟಿನ ಸುರುಳಿಯಾಕಾರದ ಎಲೆಯು ತೋಡು ಹಾಗು ಹೊಳೆ ಬದಿಗಳಲ್ಲಿ ಹುಲುಸಾಗಿ ಬೆಳೆಯುವ ಗಿಡ, ಇದರ ಚಿಗುರನ್ನು ಎಳೆಯ ದಂಟಿನ ಸಮೇತ ಪಲ್ಯ ಮಾಡಲಾಗುತ್ತದೆ. 1. leaf vegetable found on the banks of rivers and other water bodies, 2. Fiddlehead Fern. ವಾ: ಚರ್ಮೆ ಚೋಡ್ ಕರೆಲಿ ಎಸ್ಟ್ ಬೇಕ್. **ಚರ್ಮೆ ಸೊಪ್ಪು** /*carmɛ soppu*/ ಮೃದು ದಂಟಿನ ಸುರುಳಿಯಾಕಾರದ ಎಲೆಯ ತೋಡು ಹಾಗು ಹೊಳೆ ಬದಿಗಳಲ್ಲಿ ಹುಲುಸಾಗಿ ಬೆಳೆಯುವ ಗಿಡ,ಇದರ ಚಿಗುರನ್ನು ಎಳೆಯ ದಂಟಿನ ಸಮೇತ ಪಲ್ಯ ಮಾಡಲಾಗುತ್ತದೆ. Fiddlehead Fern, green leafy vegetable found on the banks of rivers and other water bodies, the shoot, fibre, etc. are used in curry and other dishes. ವಾ: ಚರ್ಮೆ ಸೊಪ್ಪು ಒಟ್ಟಿಗೆ ಮೊಟ್ಟೆ ಹಾಕಿ ಪಲ್ಯ ಮಾಡಿವೆ. ಪ: ಚರ್ಂಬೆ ಸೊಪ್ಪು, ಚೆರ್ಮೆ(ತು)

ಚಲ್ದು /*caldu*/ ಕ್ರಿ. 1. ಚೆಲ್ಲುವುದು, 2. ಚದುರಿಸುವುದು.

1. to throw away, to spread, to spill, 2. to scatter. ವಾ: ಸುಮ್ಮನೆ ನೀರ್ ಚಲ್ದು.

ಚಲ್ಲಂಗಾರು /*callaŋga:ru*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕಲ್ಮಡ್ಕ ಗ್ರಾಮದ ಜಾಗ. a locality in Kalmadka village in Sullia Taluk of Dakshina Kannada District.

ಚಲ್ಲಣ /*callaṇa*/ ನಾ. 1. ಚಡ್ಡಿ, 2. ಒಳ ಉಡುಪು. 1. shorts, boxers, 2. an innerwear. ವಾ: ಚಲ್ಲಣ ಹಾಕಂಡ್ ಬಾ.

ಚಲ್ಲಿ /*calli*/ ನಾ. 1. ಚೆಲ್ಲು ಸ್ವಭಾವದ ಹುಡುಗಿ, 2. ಗಾಂಭೀರ್ಯವಿಲ್ಲದಿರುವಿಕೆ. 1. a flirtatious girl, 2 not being serious. ವಾ: ದೊಡ್ಡವಿದ್ದರು ಲೆಕ್ಕಕಿಲ್ಲೆ ಚಲ್ಲಿ ಚಲ್ಲಿ ಆಡ್ದು ಗೂಡೆ.

ಚಲ್ಲ್[1] /*callɨ*/ ಕ್ರಿ. 1. ಚೆಲ್ಲು, 2. ಸೂಸು, 3. ಹರಡು. 1. to throw away, to spread, to spill, 2. to scatter. ವಾ: ಅರ್ವೆ ಜಾಲ್ಸಿದ ನೀರ್‌ನ ಚಲ್ಲ್.

ಚಲ್ಲ್[2] /*callɨ*/ ನಾ. ಚಿಂದಿ ಬಟ್ಟೆ. rags. ವಾ: ಹೈದ ಚಲ್ಲ್ ಬಟ್ಟೆನ ಹಾಕ್ಯುಟ್ಟು.

ಚವರ /*cavara*/ ನಾ. ಕ್ಷೌರ. to shave. ವಾ: ಚವರ ಮಾಡ್‌ತ್‌ಲೆ ಯಾಕೆ?

ಚವರ ಕತ್ತಿ /*cavara katti*/ ನಾ. ಕ್ಷೌರ ಮಾಡಲು ಬಳಸುವ ಸಣ್ಣದಾದ ಕತ್ತಿ. shaving knife. ವಾ: ಚವರ ಕತ್ತಿ ಹರ್‌ತ ಇಲ್ಲೆ.

ಚವಲ /*cavala*/ ನಾ. ಭೂತ ಕಟ್ಟುವವನ ಕೈಯಲ್ಲಿ ಇರುವ ಬಿಳಿ ಕೂದಲಿನಿಂದ ಮಾಡಿದ ಬೀಸಣಿಗೆ. a fan made of grey hair, held by the impersonator of a deity/spirit/bhuta. ವಾ: ಚವಲ ಬೀಸುದು.

ಚವಿಹಣ್[1] /*cavihaṇɨ*/ ನಾ. ಗೊಂಚಲು ಗೊಂಚಲಾಗಿ ಬೆಳೆಯುವ ಚಿಕ್ಕ ಕಪ್ಪು ಹಣ್ಣು. a small black fruit grown in bunches. ವಾ: ಚವಿಹಣ್ ಬುಟ್ಟುಟು. **ಚವ್ವಿಹಣ್ಣ್** /*cavvihaṇṇɨ*/ ವಾ: ಚವ್ವಿಹಣ್ಣ್ ಜೊಂಪೆ ಜೊಂಪೆ ಹಿಡ್‌ದದೆ.

ಚವಿಹಣ್ಣ್[2] /*cavihaṇṇɨ*/ ನಾ. ಹೊಟ್ಟೆ ನೋವಿಗೆ ಕೊಡುವ ನಾಟಿ ಔಷಧಿ. a native medicine for stomach pain/ailment.

ಚವುಂಟಿದೆ /*cavuṇṭidɛ*/ ಕ್ರಿವಿ. ಹಣ್ಣು ತಿಂದಾಗ ಬಾಯಿ ಒಂದು ರೀತಿ ಒಗರು ಒಗರು ಆಗುವುದು. bitterness caused by eating a fruit. ವಾ: ಚೋಳಿಕಾಯಿ ತಿಂದ್ ಬಾಯೆಲ್ಲ ಚವುಂಟಿದೆ.

ಚವುಳಿ[1] /*cavuḷi*/ ನಾ. ಕೆಂಪಿರುವೆ. red ants/fire ants. **ಕುಂಡೆಗೆ ಚವುಳಿ ಕಚ್ಚಿದಾಂಗೆ(ನು).** ವಾ: ಮೈಗೆಲ್ಲ ಚವುಳಿ ಕಚ್ಚಿತ್. ಪ: ಚವ್‌ಳಿ – ಕೆಂಜಿಗ. **ಚವುಳಿ ಮೂಡೆ** /*cavuḷi mu:ḍɛ*/ 1. ಕೆಂಜಿಗದ ಗೂಡು, 2. ಕೆಂಪಿರುವೆಯ ಗೂಡು. 1. nest of red ants, 2. nest of fire ants. ವಾ: ನೋಡಲ್ಲಿ ಚವುಳಿ ಮೂಡೆ ಮುಟ್ಬಡ.

ಚವುಳಿ[2] /*cavuḷi*/ ನಾ. 1. ತಣ್ಣೀರು, 2. ಕಾಯಿಸದ ತಂಪಾದ ನೀರು. 1. cold water, 2. room temperature water. ವಾ: ಚವುಳಿ ನೀರ್ ಕುಡೆಕಾದ್ ಸೀತ ಆದೆ.

ಚವುಳ್ /*cavuḷɨ*/ ನಾ. 1. ನೆರಳು, 2. ಛಾಯೆ, 3. ಮನುಷ್ಯ, ಮರ, ಗಿಡ, ಕೊಡೆ ಮುಂತಾದವುಗಳ ಛಾಯೆ. 1. shadow, 2. shade, 3. shadow of humans, trees, etc. ವಾ: ಚವುಳ್ ಉದ್ದುದ್ದ ಕಾಂಬೊದು.

ಚವ್ಡಿ /*cavḍi*/ ನಾ. 1. ಚಾವಡಿ, 2. ಮನೆಯ ಮುಂದಿನ ಜಗುಲಿ, 3. ಕಟ್ಟೆ, 4. ಹಳ್ಳಿಯಲ್ಲಿ ಪಂಚಾಯತಿ ಸೇರುವ ಸ್ಥಳ. 1. a veranda, 2. a platform in the front portion of a house, 3. a platform-a sit out, 4. a place where village assembly is held. ವಾ: ಚವ್ಡಿ ಮೇಲೆ ಹತ್ತಿ ನಿತ್ತದ್.

ಚಹ /*ca:kkɛ*/ ನಾ. ವಾಣಿಜ್ಯ ಪ್ರಾಮುಖ್ಯದ ಬೆಟ್ಟ ಸೀಮೆ ಬೆಳೆ, ಇದರ ಎಳೆ ಚಿಗುರಿನಿಂದ ತಯಾರಿಸಿದ ಪಾನೀಯ, ಕೆಫೀನ್‌ಯುಕ್ತ ಉತ್ತೇಜಕ ಪಾನೀಯ. Tea, a commercial crop, grown on the hills, beverage is prepared from the fresh leaves of tea, it contains caffeine. ವಾ: ಚಾಯಕೆ ಸಕ್ರೆ ಹಾಕುದು ಬೇಡ, ಚಪ್ಪೆ ಇರ್‌ಲಿ.

ಚಳಿ /*caḷi*/ ನಾ. 1. ಚಳಿ, 2. ತಂಪು, 3. ಶೀತ, 4. ಥಂಡಿ. 1. cold, 2. chilly, 3. cool, 4. cold. ವಾ: ಚಳಿಂದಾಗಿ ಮನೆ ವಳಿಗೆ ಇರಿಕಾಗ್ತಿಲ್ಲೆ, ಮಫ್ಲರ್ ಸುತ್ತಿಕಂಡದ್. ಪ: ಸೆಳಿ. **ಚಳಿಕೊರ್ದದೆ** /*caḷikordadɛ*/ ಅತಿಯಾದ ಚಳಿ. biting cold. ವಾ:

ಅಬ ಹೊರಗೆ ಹೋಕಾಲೆ ಚಳಿ ಕೊರ್ದದೆ. **ಚಳಿಕಾದ್** /*caḷika:dɨ*/ ಚಳಿ ಕಾಯಿಸಿ. to sit in front of a fireplace to warm oneself against cold. ವಾ: ಇಸ್ಟೊತ್ತ್ ಒಲೆ ಹಕ್ಕಲೆ ಕುದ್ದ್ ಚಳಿಕಾದ್ ಬಂದದ್.

ಚಳೆ /*caḷɛ*/ ನಾ. ಬಳ್ಳಿಗೆ ಆಧಾರವಾಗಿ ಊರುವ ಉದ್ದನೆಯ ಸಣ್ಣ ಕೋಲು. a small stick planted in the ground to support a creeper. ವಾ: ಎಲ್ಸಂಡೆ ಬೊಳ್ಳಿಗೆ ಚಳೆ ಕುತ್ತೊಕು.

ಚಳ್ಕೆ /*caḷkɛ*/ ನಾ. 1. ಅಡರು, 2. ಬರ್ಲು. 1. a twig, 2. a broom. ವಾ: ಮಕ್ಕ ಗಲಾಟೆ ಮಾಡಿರೆ ಚಳ್ಕೆಲಿ ಕೊಡೊಕು. ಪ: ಸಲಕ್ಕೆ, ತಲಕ್ಕೆ(ತು). **ಚಳ್ಪೆ ಕೋಲ್** /*caḷpɛ ko:lɨ*/ ನಾ. 1. ಸಣ್ಣ ಕೋಲು, 2. ತೆಳ್ಳನೆಯ ಕೋಲು. 1. a small stick, 2. a lean stick. ವಾ: ಚಳ್ಪೆ ಕೋಲ್‌ಲಿ ಪೆಟ್ಟ್ ಸಿಕ್ಕಿರೆ ಗೊತ್ತಾದೆ.

ಚಳ್ಕಿಸ್ /*caḷkɨsɨ*/ ಕ್ರಿ. 1. ಚಿಮುಕಿಸು, 2. ಸಿಂಪಡಿಸು. 1. to sprinkle, 2. to scatter. ವಾ: ಮನೆಗೆ ಗಂಜಲನ ಚಳ್ಕ್ ಸ್. ಪ: ತಳಿಪು(ತು)

ಚಳ್ವಲಿ /*caḷvali*/ ನಾ. 1. ಚಳುವಳಿ, 2. ಮುಷ್ಕರ, 3. ಹರತಾಳ. 1. a strike, 2. a protest 3. hartal. ವಾ: ಚಳ್ವಲಿ ಬಾರಿ ಜೆನ ಸೇರಿದ್ದೊ.

ಚಳ್ಳ /*caḷḷa*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ದೇವಚಳ್ಳ ಗ್ರಾಮದ ಜಾಗ. 1. family, 2. lineage, 3. a locality in Devacalla village in Sullia Taluk of Dakshina Kannada District.

ಚಳ್ಳಂಗಾಯ /*caḷḷaŋga:ya*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ತೊಡಿಕಾನ ಗ್ರಾಮದ ಜಾಗ. a locality in Todikana village in Sullia Taluk of Dakshina Kannada District.

ಚಳ್ಳಂಗಾರು /*caḷḷaŋga:ru*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಆಲೆಟ್ಟಿ ಗ್ರಾಮದ ಜಾಗ. 1. family, 2. lineage, 3. a locality in Aletti village in Sullia Taluk of Dakshina Kannada District.

ಚಳ್ಳಕೋಡಿ /*caḷḷako:ḍi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಐವತ್ತೊಕ್ಲು ಗ್ರಾಮದ ಜಾಗ. a locality in Aivattoklu village in Sullia Taluk of Dakshina Kannada District.

ಚಳ್ಳ್ /*caḷḷɨ*/ ನಾವಿ. 1. ತುಂಬಾ ಸಪೂರದ, 2. ತೆಳ್ಳಗಿನ ವ್ಯಕ್ತಿ, 2. ನಗಣ್ಯ ವ್ಯಕ್ತಿ. 1. a lean body, 2. a slim person, 3. an insignificant person. ವಾ: ಚಳ್ ತಡಿಯಂವ ಬಾತ್. **ಚಳ್ಳೆ** /*caḷḷɛ*/ 1. ತೆಳ್ಳಗೆ, 2. ಸಪೂರ ಹಾಗೂ ಎತ್ತರ, 3. ಸಣಕಲು. 1. lean, 2. thin and tall, 3. thin. ವಾ: ಗೂಡೆ ಬಾರಿ ಚಳ್ಳೆ ಆತ್. ಪ: ಚೊಳ್ಳೆ

ಚಾಂಡಾಲ /*ca:ṇḍa:la*/ ನಾವಿ. 1. ಕ್ರೂರಿ, 2. ದುಷ್ಟ, 3. ನಿಷ್ಕರುಣಿ. 1. cruel, 2. evil, 3. merciless. ವಾ: ಚಾಂಡಾಲ ಮೊನ್‌ಸ ಅಂವ.

ಚಾಂಡಾಳಿ /*ca:ṇḍa:ḷi*/ ನಾ. 1. ಚಾಂಡಾಲಿ, 2. ಬೈಗುಳ ಪದ. 1. a derogatory remark against a woman, 2. an expletive. ವಾ: ಆ ಹೆಂಗ್‌ಸ್ ಬಯಂಕರ ಚಾಂಡಾಳಿ.

ಚಾಂಡುದು /*ca:mḍudu*/ ನಾ. ಪಕ್ಷಿಗಳು ಮೇಲಿನಿಂದ ಕೆಳಗೆ ವಿಮಾನದ ರೀತಿ ಇಳಿಯುವುದು. flight of birds, resembling that of airplanes. ವಾ: ಗಿಡ್‌ಜ್ಜ ಚಾಂಡುತಾ ಉಟ್ಟು ಕೋಳಿ ಪಿಳ್ಳೆಗಳ ಕೂಂಟಗೆಲಿ ಮುಚ್ಚಿಹಾಕ್.

ಚಾಂಡೆ /*ca:ṇḍɛ*/ ನಾ. ಹಲಸಿನ ಕಾಯಿಯನ್ನು ತುಂಡು ಮಾಡಿ ಅದರಲ್ಲಿ ಒಂದು ತುಂಡನ್ನು ಚಾಂಡೆ ಎನ್ನುವರು. slices or cubes of raw/unripe jackfruit. ವಾ: ನಮಿಗೆ ಹಲ್‌ಸ್‌ನ ಹಣ್ಣ್ ನ ಚಾಂಡೆ ಕೊಟ್ಟೊ. ಪ: ಸೇಂಡೆ, ಗಡಿ(ತು)

ಚಾಂತಾಳ /*ca:nta:ḷa*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕೊಲ್ಲಮೊಗ್ರು ಗ್ರಾಮದ ಜಾಗ. 1. family, 2. lineage, 3. a locality in Kollamogru village in Sullia Taluk of Dakshina Kannada District.

ಚಾಂತಿಮರ /*ca:nti mara*/ ನಾ. 1. ಒಂದು ಜಾತಿಯ ಮರ, 2. ಶಾಂತಿಮರ. 1. a variety of tree, 2. baheda, bahera, beleric tree. ವಾ: ಚಾಂತಿ ಮರದ ಕಾಯಿನ ತಿಂದವೆ. ಪ: ಸಾಂತಿಮರ. **ಚಾಂತಿಕಾಯಿ** /*ca:ntika:yi*/ ಶಾಂತಿ ಎಂಬ ಮರದ ಗಟ್ಟಿಕಾಯಿ, ಒಣಗಿದ ಈ ಕಾಯಿಯನ್ನು ಒಡೆದಾಗ

ಸಿಗುವ ಬಾದಾಮಿ ಯಂತಹ ತಿರುಳು ತುಂಬಾ ರುಚಿಕರ. kernels from the nuts of baheda or bahera tree are eaten. They taste like almonds. ವಾ: ಮುಳ್ಳು ಹಂದಿಗಳಿಗೆ ಚಾಂತಿಕಾಯಿ ಬೀಜ ತುಂಬಾ ಇಷ್ಟ, ದನಗ ಹಣ್ಣ್ ತಿಂದ್ ಬೀಜನ ಉಗ್‌ದವೆ.

ಚಾಂದಿ /*ca:ndi*/ ನಾ. ಶಾಂತಿಕಾಯಿ. nuts of baheda, bahera, beleric tree. ವಾ: ಚಾಂದಿ (ಚಾಂತಿ ಮರ) ಬಾರಿ ದೊಡ್ಡದಾದೆ. **ಚಾಂದಿ ಮರ** /*ca:ndi mara*/ ಶಾಂತಿಮರ. baheda, bahera, beleric tree. ವಾ: ಚಾಂದಿ ಮರಲಿ ಗಟ್ಟಿ ಕಾಯಿ ಬುಡ್ದು.

ಚಾಂಪ /*ca:mpa*/ ನಾ. 1. ಅಜ್ಜ, 2. ಉಗ್ಗಪ್ಪ. grand father. ವಾ: ಚಾಂಪ ಬಂದ್ ಎಸ್ಟೊತ್‌ಉಗ್ಗಪ್ಪ್.

ಚಾಂಬ /*ca:mba*/ ನಾ. 1. ಬಂಗಡೆ ರೀತಿಯ ಮೀನು, 2. ಒಂದು ಬಗೆಯ ಮೀನು. 1. a variety of fish like that of mackerel, 2. varieties of fish. ವಾ: ಚಾಂಬ ನೋಡಿಕೆ ಅಯಿಲೆ ಮೀನ್‌ನಾಂಗೆ ಇದ್ದದೆ.

ಚಾಂಬರ್ /*ca:mbarɨ*/ ನಾ. 1. ಒಣಗಿದ ಎಲೆ, 2. ತೊಗಟೆ. 1. dried leaf, 2. the bark. ವಾ: ಅವು ಚಾಂಬರ್‌ನ ಗುಡ್ಡೆ ಹಾಕಿಸಿದೊ.

ಚಾಂಬಾಡಿ /*ca:mba:ḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಚಾಂಬಾಡು /*ca:mba:ḍu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ತೊಡಿಕಾನ ಗ್ರಾಮದ ಜಾಗ. a locality in Todikana village in Sullia Taluk of Dakshina Kannada District.

ಚಾಂಬಾರ್ /*ca:mba:rɨ*/ ನಾ. ಒಣಗಿದ ಬಾಳೆಎಲೆ. dried thin branch of a banana plant. ವಾ: ಬಾಳೆ ಚಾಂಬಾರ್ ತುಂಬಿ ಹೋಗುಟು.

ಚಾಂಬು /*ca:mbu*/ ಕ್ರಿ. 1. ಕದಿಯು, 2. ಗೊತ್ತಾಗದಂತೆ ಜಾಗದಿಂದ ತೆರಳು. 1. to steal, 2. to leave a place without the knowledge of others. ವಾ: ಅಂವ ತೋಟ, ಗದ್ದೆಂದ ಹಣ್ಣ್ ತರ್ಕಾರಿನೆಲ್ಲ ಚಾಂಬುದು. ಪ: ಚಾಂಬಿಕೆ – ಕಸಿಯಲು; ಚಾಂಬಿತ್ – ಕಸಿದುಕೊಂಡ; ಚಾಂಬೇಲ – ಕದಿಯಲು ಹೊಂಚು ಹಾಕುವವ

ಚಾಂಬುದು[1] /*ca:mbudu*/ ನಾವಿ. 1. ಕಡಿಮೆಯಾಗು, 2. ತಗ್ಗು. 1. lessen, 2. reduced. ವಾ: ಗೋಣಿಚೀಲಲಿ ಇಸಿದ ಕಳ್ದೊರ್‌ಸದ ಕಾಪಿ ಚಾಂಬುದು.

ಚಾಂಬುದು[2] /*ca:mbudu*/ ನಾವಿ. ಪಕ್ಷಿಗಳು ಮೇಲಿನಿಂದ ಕೆಳಗೆ ವಿಮಾನದ ರೀತಿ ಇಳಿಯುವುದು. flight of a bird. ವಾ: ಹಕ್ಕಿನ ನೋಡ್‌ದ ಹೆಂಗೆ ಚಾಂಬುದುತ. ಪ: ಚಾಂಡುದು

ಚಾಕಟೆ ಮರ /*ca:kaṭɛ mara*/ ನಾ. 1. ಕೂಮತ್ತಿ ಮರ, 2. ಒಂದು ಜಾತಿಯ ಮರ, 3. ಸಗಟೆ, 4. ಸಾಗಡೆ. 1. a variety of tree, 2. the Indian squill, 3. Schleichera oleosa (Sapindaceae), 4. Indian Squill. ವಾ: ಚಾಕಟೆ ಮರದ ಹಣ್ಣ್ ಸಿಂಯಿ ಮತ್ತೆ ಹುಳಿ. **ಚಾಕೊಟೆ ಕಾಯಿ** /*ca:koṭɛ ka:yi*/ ಚಾಕಟೆ ಮರದ ಕಾಯಿ. an unripe fruit of Indian Squill tree. ವಾ: ಚಾಕಟೆ ಕಾಯಿ ತಿಂದರೆ ನಾಲಗೆನ ಅಕ್ರ ಹೋದೆ.

ಚಾಕಟೆ ಹಕ್ಕಿ /*ca:kaṭɛ hakki*/ ನಾ. ಚಾಕಟೆ ಮರದಲ್ಲಿ ಕುಳಿತುಕೊಳ್ಳುವ ಹಕ್ಕಿ, ಇದನ್ನು ತುಳುವಿನಲ್ಲಿ 'ಬಜಕುರೆ ಪಕ್ಕಿ' ಎಂದು ಕರೆಯುವರು. a bird that sits on the Indian Squill tree. ವಾ: ಚಾಕಟೆ ಹಕ್ಕಿ ಚಾಕಟೆ ಮರಲಿ ಕುದ್ದಿದ್ದದೆ.

ಚಾಕಟೆಮೂಲೆ /*ca:kaṭemu:le*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ನೆಲ್ಲೂರು ಕೆಮ್ರಾಜೆ ಗ್ರಾಮದ ಜಾಗ. a locality in Nelluru Kemraje village in Sullia Taluk of Dakshina Kannada District.

ಚಾಕರಿ /*ca:kari*/ ನಾ. 1. ಕೆಲಸ, 2. ಸೇವೆ, 3. ನೌಕರಿ. 1. work, 2. service, 3. job. ವಾ: ಅಂವಂಗೆ ಬೆಂಗ್‌ಳೂರ್‌ಲಿ ಚಾಕರಿ ಸಿಕ್ಕಿತ್.

ಚಾಕರಿ ಉಟ್ಟು /*ca:kari uṭṭu*/ ನಾ. ಕೆಲಸ ಇದೆ. have some work. ವಾ: ಮನೆಲೆ ಬೇಬಜ್ಜ್ ಚಾಕರಿ ಉಟ್ಟು.

ಚಾಕಲೆ /*ca:kalɛ*/ ನಾ. 1. ಕ್ಷೀಣ, 2. ಲಾಚಾರ್, 3. ತೆಳ್ಳಗೆ. 1. to reduce, 2. helpless, 3. lean. ವಾ: ಚಾಕಲೆಬಾಳೆಕಾಯಿ ಹಣ್ಣಾದುಲೆ.

ಚಾಕೊಟೆ /*ca:koṭɛ*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮಂಡೆಕೋಲು ಗ್ರಾಮದ ಜಾಗ. 1. family, 2.

lineage, 3. a locality in Mandekolu village in Sullia Taluk of Dakshina Kannada District.

ಚಾಕೋಟೆ /*ca:ko:ṭɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಚಾಕ್[1] /*ca:kɨ*/ ನಾ. ಹೊಟ್ಟು ಬಾಳೆಕಾಯಿ. a variety of plantain. ವಾ: ಚಾಕ್ ಬಾಳೆಕಾಯಿ ಹಣ್ಣಾದುಲೆ.

ಚಾಕ್[2] /*ca:kɨ*/ ನಾ. ಸರಿಯಾಗಿ ಬೆಳೆಯದ/ಬಲಿಯದ. unripe. ವಾ: ಚಾಕ್ ಬಾಳೆಗೊನೆ.

ಚಾಕ್[3] /*ca:kɨ*/ ನಾ. 1. ಚೂರಿ, 2. ಚಾಕು, 3. ಸಣ್ಣ ಚೂರಿ, 4. ಕೊಯ್ಯುವ ಸಾಧನ. 1. a knife, 2. a knife, 3. a small knife, 4. a cutter. ವಾ: ಚಾಕ್‌ನ ಮಸೆಕಾಯ್ತ್.

ಚಾಕ್ರಿ /*ca:kri*/ ನಾ. 1. ಕೆಲಸ, 2. ವೃತ್ತಿ. 1. work, 2. a career. ವಾ: ಚಾಕ್ರಿ ಮಾಡಿಕೆ ಅಸ್ಟ್ ದೂರ ಹೋದೊ.

ಚಾಚೆ /*ca:cɛ*/ ನಾ. ಸಂಬಂಧವನ್ನು ವಿವರಿಸುವ ರೀತಿ. description of a relationship. ವಾ: ಅತ್ತೆ ಮಜ್ಜ ಚಾಚೆಲಿ ನಂಗೆ ಎಂತಾಕು, ಎಂತತ ಕರ್ಯೊಕು.

ಚಾಚ್ /*ca:cɨ*/ ಕ್ರಿ. 1. ಮಲಗು, 2. ನಿದ್ರಿಸು (ಪುಟ್ಟ ಮಕ್ಕಳಿಗೆ ಬಳಸುವ ಪದ). 1. to sleep, 2. sleep (used for children). ವಾ: ಕತೆ, ಹಾಡ್ ಎಲ್ಲ ಹೇಳಿನೆ ಬೇಗ ಚಾಚ್ ಕೂಸು.

ಚಾಟಿ /*ca:ṭi*/ ನಾ. 1. ಚಾವಟಿ, 2. ಬಾರುಕೋಲು. 1. a whip, 2. a lash. **ಚಾಟಿ ಇಲ್ಲದೇ ಬುಗುರಿ ಆಡ್ಸೋಳು, ಹಗ್ಗ ಇಲ್ಲದೇ ತೊಟ್ಲ್ ಆಡ್ಸುದು(ಗಾ).** ವಾ: ಚಾಟಿ ತಕಂಡ್ ಬಾ.

ಚಾಟೆಕಾಲ್ /*ca:ṭɛka:lɨ*/ ನಾವಿ. ತೊಡರುಗಾಲು. knee knocking. ವಾ: ಅಂವ ಚಾಟೆ ಕಾಲ್ ಹಾಕಂಡ್ ಬಾದು ನೋಡ್.

ಚಾಟೆಲ್ /*ca:ṭɛlɨ*/ ನಾ. ಹೊಳೆಯಲ್ಲಿ ಹೊಯಿಲು ಇಲ್ಲದ, ನೀರು ನಿಂತಂತೆ ಕಾಣುವ. stagnant water in river. ವಾ: ಚಾಟೆಲ್‌ಲಿ ಮೀವವು ಹಞ್ಞ ಜಾಗ್ರೆಲಿರೊಕು.

ಚಾಡಿ /*ca:ḍi*/ ನಾ. 1. ಚಾಡಿಮಾತು, 2. ಬೆನ್ನ ಹಿಂದಿನಿಂದ ಮಾಡುವ ದೋಷಾರೋಪಣೆ. 1. slandering, 2. back biting. **ಚಾಡಿಗೆ ತೂಕ ಜಾಸ್ತಿ(ಗಾ).** ವಾ: ಅದ್ ಬರೀ ಚಾಡಿ ಹೇಳ್‌ದು.

ಚಾಣಾಕ್ಷ /*ca:ṇa:kṣa*/ ನಾವಿ. 1. ವ್ಯವಹಾರ ಚತುರ, 2. ಮಾತಿನ ಕೌಶಲ್ಯ ಹೊಂದಿದವ. 1. a wily person (businessman, 2. an adroit negotiator. ವಾ: ಅಂವ ಬಾರಿ ಚಾಣಾಕ್ಷ ಹೈದ.

ಚಾಣೆ /*ca:ṇɛ*/ ನಾ. 1. ತಲೆ ಕೂದಲು ಇಲ್ಲದಿರುವುದು, 2. ಬೋಳು ತಲೆ. 1. having no hair on the head, 2. bald. **ತಲೆ ಚಾಣೆ ಆಕನ ಬಾಚಣಿಗೆ ಕೊಟ್ಟಾಂಗೆ(ನು).** ವಾ: ಕೂದೊಲು ಹೋಗಿ ಹೋಗಿ ತಲೆ ಚಾಣೆ ಕಂಡದೆ. ಪ: ಚಾಣೆತಲೆ – ಬೋಳು ತಲೆ. **ಚಾಣೆ ಮಂಡೆ** /*ca:ṇɛ manḍɛ*/ ಬೋಳುತಲೆ. bald head. ವಾ: ಅಂವಂದ್ ಈಗಲೆ ತಲೆ ಚಾಣೆ ಮಂಡೆ ಆವ್ಟು. **ಚಾಣೆತಲೆ** /*ca:ṇɛtalɛ*/ ಬೋಳುತಲೆ, ಕೂದಲು ಇಲ್ಲದ ತಲೆ. bald head, having no hair on the head. ವಾ: ಅಂವಂದ್ ಚಾಣೆತಲೆ.

ಚಾಣೆಕಲ್ಲ್ /*ca:ṇɛkallɨ*/ ನಾ. ಮದ್ದು ಅರೆಯುವ ಕಲ್ಲು. a pistol in which herbs are ground for medicinal use. ವಾ: ಮೊದುವೆಲಿ ಚಾಣೆಕಲ್ಲ್ ಹೊರ್‌ಸುದು ಒಂದ್ ಸಾಸ್ತ್ರ.

ಚಾತುಬಾಯಿ /*catuba:yi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಚಾತುರ್ಪು /*ca:turpu*/ ನಾ. 1. ಚಾತುರ್ಯ, 2. ಚತುರ, 3. ಬುದ್ಧಿವಂತಿಕೆ. 1. dexterity, 2. clever, 3. intelligence. ವಾ: ಆ ಹೈದನ ಮಾತ್‌ಲಿ ಚಾತುರ್ಪು ಕಂಡದೆ.

ಚಾಪಟೆಕಲ್ಲ್ /*ca:paṭɛkallɨ*/ ನಾ. ಅಂಗೈ ಒಳಗೆ ಹಿಡಿವಷ್ಟು ಗಾತ್ರದ ತೆಳ್ಳಗಿನ ಕಲ್ಲು. a flat stone which can be held in one's hand. ವಾ: ಚಾಪಟೆ ಕಲ್ಲ್ ಹಳ್ಳಲಿ ನೀರ್‌ನ ಮೇಲೆ ಹೊಡ್ದರೆ ಕಲ್ಲ್ ಹಾರಿಕಂಡ್ ಹಾರಿಕಂಡ್ ತುಂಬ ದೂರ ಹೋದೆ.

ಚಾಮಕಜೆ /*ca:makajɛ*/ ನಾ. ಕೊಡಗು ಜಿಲ್ಲೆಯ ಪೆರಾಜೆ ಗ್ರಾಮದ ಜಾಗ. a locality in peraje village in of Kodagu District.

ಚಾಮಡ್ಕ /*ca:madka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಮರಪಡ್ನೂರು ಗ್ರಾಮದ ಜಾಗ. a locality in Amarapadnuru village in Sullia Taluk of Dakshina Kannada District.

ಚಾಮಯ್ಯ /*ca:mayya*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. masculine given name.

ಚಾಮವ್ವ /*ca:mavva*/ ನಾ. ಅಜ್ಜಿ. grandmother. ವಾ: ಚಾಮವ್ವ ನಿನ್ನ ಆಗಲೆಂದ ಕರಿತೊಳೊ. **ಚಾಮೆವ್ವ** /*ca:mɛvva*/ ವಾ: ಚಾಮೆವ ಹೆಂಗೊಳೊ. ಪ: ಚಾಮ್ಯವ್ವ

ಚಾಮಿ[1] /*ca:mi*/ ನಾ. 1. ದೇವರು, 2. ಚಿಕ್ಕಮಕ್ಕಳಿಗೆ ದೇವರರನ್ನು ಸ್ವಾಮಿ ಎಂದು ಉಚ್ಚರಿಸಲು ಕಷ್ಟವಾದಾಗ 'ಚಾಮಿ' ಎಂದು ಹೇಳಿಸುವುದು. 1. god, 2. an alternative expression of children when they don't know how to pronounce the word properly. **ಮನೆ ಮ್ಯಾಲೆ ಮನೆ ಕಟ್ಟಿ, ಮರಿ ಚಾಮಿ ಗುಡಿ ಕಟ್ಟಿ, ಕೊಂಬೆಮ್ಯಾಲೆ ಕುದ್ದುಟ್ಟು ಕೊರಮ ಶೆಟ್ಟಿ – ಜೇನ್ನೂಡು(ಒ).** ವಾ: ಚಾಮಿ ಕಾಪಾಡ್ತ ಅಡ್ಡ ಬೀಳ್. ಪ: ಚಾಮಿ ಮಾಡ್ – ಸ್ವಾಮಿ ಮಾಡು/ ದೇವರಿಗೆ ನಮಸ್ಕರಿಸು

ಚಾಮಿ[2] /*ca:mi*/ ನಾ. ವ್ಯಕ್ತಿ ನಾಮ. name of a person. ವಾ: ಚಾಮಿ ಸಂತೆಂದ ಇನ್ನು ಬಾತ್‌ಲೆನ?

ಚಾಮಿಯಪ್ಪ /*ca:miyappa*/ ನಾ. 1. ಅಪ್ಪನ ಅಪ್ಪ, 2. ತಂದೆಯ ತಂದೆ, ದೇವರ ಸಮಾನವೆಂಬ ನಂಬಿಕೆ. 1. grand father, 2. father of one's father. ವಾ: ಚಾಮಿಯಪ್ಪ ಮನೆಗೆ ಬಂದೊಳೊ.

ಚಾಮಿಯವ್ವ /*ca:miyavva*/ ನಾ. 1. ಅಪ್ಪನ ಅವ್ವ, 2. ತಂದೆಯ ತಾಯಿ. 1. grandmother, 2. mother of one's father. ವಾ: ಚಾಮಿಯವ್ವ ಹೆಂಗೊಳರಿ? ಸೌಕ್ಯನ?

ಚಾಮೀನ್ /*ca:mi:nɨ*/ ನಾ. ಹೊಳೆಗಳಲ್ಲಿ ಕಾಣಸಿಗುವ ದೊಡ್ಡ ಜಾತಿಯ ಮೀನು. a fresh water fish. ವಾ: ಚಾಮೀನ್ ಹಳ್ಳಗಳ್‌ಲಿ ಸಿಕ್ಕಿದೆ.

ಚಾಮುಣಿ /*ca:muṇi*/ ನಾ. ವ್ಯಕ್ತಿ ನಾಮ. Chamuni, name of a person. ವಾ: ಚಾಮುಣಿ ಎಲ್ಲಿ ಒಳೊಗಡ.

ಚಾಮುಣು /*ca:muṇu*/ ನಾ. ವ್ಯಕ್ತಿ ನಾಮ. Chamunu, name of a person. ವಾ: ಕೂಸುನ ಕುಸೀಂದ ಚಾಮುಣುತ ಕರ್‌ದವೆ.

ಚಾಮೆ /*ca:mɛ*/ ನಾ. ಸಾಮೆ, ಒಂದು ಸಿರಿಧಾನ್ಯ. millet. ವಾ: ಚಾಮೆ ತೆನೆ ಹೆಂಗುಟ್ಟು.

ಚಾಯ /*ca:ya*/ ನಾ. 1. ಚಹಾ, 2. ಟೀ. tea. ವಾ: ಚಾಯ ಕಾಸಕಾಯ್ತ್. **ಚಾಯಕುಡ್ಸುದು** /*ca:yakuḍsudu*/ ಟೀ ಕುಡಿಸುವುದು. to offer someone tea. ವಾ: ದೋಸ್ತಿಗೆಲ್ಲ ಸೇರಿಕಂಡ್ ಚಾಯಕುಡ್ಸುದು.

ಚಾರಿ /*ca:ri*/ ನಾ. 1. ಹಲಸಿನ ಬೀಜವನ್ನು ಆವರಿಸಿರುವ ತೆಳುವಾದ ಹಾಗೂ ಮೃದುವಾದ ಪದರ ಅಥವಾ ಸಿಪ್ಪೆ, 2. ಮಾಂಜೋಳು, 3. ಪೊದುಂಕುಲು. 1. a thin film around the jackfruit seed, 2. skin of jackfruit seed, 3. peel of jackfruit seed (skin). ವಾ: ಪೊಜ್ಜಿ ಮಾಡಿಕನ ಹಲ್‌ಸ್‌ನ ಬೀಜನ ಹೊರ್‌ದ್ ಚಾರಿನ ತೆಗೆಕು.

ಚಾರಿತ್ರ /*ca:ritra*/ ನಾ. ಚಾರಿತ್ರ್ಯ. character/ personality. ವಾ: ಅವನ ಚಾರಿತ್ರ್ಯ ಸರಿ ಇಲ್ಲೆ.

ಚಾರು ಹಸ್ತ /*ca:ru hasta*/ ಕ್ರಿವಿ. ಎರಡು ಕೈಗೆ ನಾಲ್ಕು ಕೈ ಜೋಡಿಸು. joining hands.

ಚಾರೆ[1] /*ca:rɛ*/ ನಾ. ಇಳಿಜಾರು. downward slope. ವಾ: ಚಾರೆಲಿ ನಡೆಕನ ನೋಡಿಕಣಕು ಜಾರ್‌ದು.

ಚಾರೆ[2] /*ca:rɛ*/ ನಾ. ತೊಳೆ ತೆಗೆದ ಬಳಿಕ ಉಳಿಯುವ ಹಲಸಿನ ಸಿಪ್ಪೆ. jackfruit skin, rind, and rags. ವಾ: ಚಾರೆನ ಹಸ್‌ಗೆ ಹಾಕ್, ಗೂಂಜಿನ ಹಾಕ್‌ಬಡ, ದೊಂಡೆಲಿ ಸೆಕ್ಕಿಕಂಡದೆ. ಪ: ಸಾರೆ

ಚಾರ್[1] /*ca:rɨ*/ ನಾ. 1. ಗೊಣ್ಣೆ, 2. ನೀರಾಗಿ ಬರುವ ಸಿಂಬಳ. 1. mucous membrane, 2. nasal mucus fluid. ವಾ: ಮೂಕುಲಿ ಚಾರ್ ಸೊರಿತುಟು ತೆಗಿನೆ.

ಚಾರ್[2] /*ca:r*/ ನಾ. 1. ಚಿಕ್ಕ ಹೊಳೆ, 2. ತೊರೆ. 1. a stream, 2. a rivulet. ವಾ: ಚಾರ್‌ಲಿ ನೀರ್ ಜೋರ್ ಉಟ್ಟು ಹಂಗಾಗಿ ದಾಟಿಕೆ ಆಕಿಲೆ. ಪ: ಸಾರ್, ಹಾರ್(ತು)

ಚಾರ್ಜೆ /*ca:rje*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಬಳ್ಪ ಗ್ರಾಮದ ಜಾಗ. a locality in Balpaa village in Sullia Taluk of Dakshina Kannada District.

ಚಾರ್ಮಾತ /*ca:rma:ta*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ನಾಲ್ಕೂರು ಗ್ರಾಮದ ಜಾಗ. a locality in Nalkuru village in Sullia Taluk of Dakshina Kannada District.

ಚಾರ್ವಾಕ /*ca:rva:ka*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಚಾಲಕ್ /*ca:laki*/ ನಾ. 1. ಬುದ್ಧಿವಂತ, 2. ಎಲ್ಲದರಲ್ಲು ತೊಡಗಿಸಿಕೊಳ್ಳುವವ. 1. intelligent, 2. one who involves oneself in all things. ವಾ: ಅದ್ ಬಾರಿ ಚಾಲಕ್‌ನ ಹೈದ.

ಚಾಲೆ /*ca:lɛ*/ ನಾ. ತೆಳ್ಳನೆಯ ಟವೆಲ್. a thin towel. ವಾ: ಚಾಲೆನ ತಲೆಗೆ ಮುಂಡಾಸ್ ಸುತ್ತಿದಂಗೆ ಸುತ್ತ್.

ಚಾಲೆ ಮುಂಡು /*ca:lɛ muṇḍu*/ ನಾ. 1. ಮುಖದ, ಮೈಯ್ಯ ನೀರನ್ನು ಒರೆಸುವ ತೆಳ್ಳನೆಯ ಬಟ್ಟೆ, 2. ತೆಳು ಟವೆಲ್, 3. ಸ್ನಾನ ಮಾಡಿ ತಲೆಗೆ ಕಟ್ಟುವ ಟವೆಲ್. 1. a face towel/a napkin 3. a thin towel, 4. a towel tied around the head to dry the hair. ವಾ: ತಲೆ ಮೀದ ಮೇಲೆ ಚಾಲೆ ಮುಂಡುನ ಕಟ್ಟ್ ಬೇಗ ನೀರ್ ಹೀರಿಕಂಡದೆ.

ಚಾಲ್ತಿ /*ca:lti*/ ನಾ. 1. ಜಾರಿ, 2. ಚಲಾವಣೆ. 1. implementation, 2. in circulation. ವಾ: ಐವತ್ತ್ ಪೈಸೆ ಈಗ ಚಾಲ್ತಿಲಿಲ್ಲೆಲ.

ಚಾಲ್ಯ /*ca:lya*/ ನಾ. 1. ನೇಯ್ಗೆಯವ, 2. ನೇಯುವುದು. 1. a weaver, 2. weaving. ವಾ: ಚಾಲ್ಯದವು ಈಗೆಲಿ ಒಳೊ, ಬಾರಿ ಕಮ್ಮಿ ಅಲ.

ಚಾಲ್ಯರ ಬೊಳಿ /*ca:lyara bɔḷi*/ ನಾ. ಗೌಡರ 18 ಗೋತ್ರಗಳಲ್ಲಿ ಒಂದು ಬಳಿ. one of the 18 lineages of Gowda community. ವಾ: ಚಾಲ್ಯರ ಬೊಳಿ ಗೌಡ ಜೆನಾಂಗದ ಬೊಳಿದ್ ಹೆಸ್ರ್.

ಚಾವಡಿ /*ca:vaḍi*/ ನಾ. 1. ದೈವಸ್ಥಾನ, 2. ಭೂತಸ್ಥಾನದ ಗರ್ಭಗೃಹದ ಮುಂದೆ ಇರುವ ಹಜಾರ 3. ಮನೆಯ ಒಳಾಂಗಣದ ಜಾಗ, ಗುತ್ತು, ಐನ್‌ಮನೆಗಳಲ್ಲಿ ಇದರ ಮೇಲೆ ಕುಳಿತು ನ್ಯಾಯ ತಿರ್ಮಾನ ಮಾಡುತ್ತಾರೆ, 4. ಜಗಳಿ. 1. a shrine of Bhuta/deity worship, 2. a shrine 3. a raised platform in front of a house (a veranda) where disputes were heard and resolved in Ainmane or guthu house, 4. a veranda. **ಅದುರಂತರ ಚಿದುರಿನ ಚಾವಡಿ, ಅದ್ರತ್ತ ಬಾತ್ ಗಡ್ಡದ ಜೋಗಿ – ಸೇಮಿಗೆ ಒರ್ಲ್(ಒ).** ವಾ: ಚಾವಡಿಲಿ ಕುದ್ದೊಳೊ.

ಚಾವಡಿಬಾಗಿಲು /*ca:vaḍiba:gilu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಬೆಳ್ಳಾರೆ ಗ್ರಾಮದ ಜಾಗ. a locality in Bellare village in Sullia Taluk of Dakshina Kannada District.

ಚಾಳಿ[1] /*ca:ḷi*/ ನಾ. ತಾಳೆ. a palm tree. ವಾ: ಚಾಳಿಂದ ಮೊಂದ್ರಿನು ನೆಯ್ದುವೆ. **ಚಾಳಿಮರ** /*ca:ḷimara*/ ತಾಳೆಮರ. a palm tree. ವಾ: ಚಾಳಿಮರ ಪಾಮೀ ಇಲ್ಲರೆ ಅರಿಕೇಸಿ ಕುಟುಂಬಕ್ಕೆ ಸೇರ್‌ದ ಮರ.

ಚಾಳಿ[2] /*ca:ḷi*/ ನಾ. 1. ಬುದ್ಧಿ, 2. ಕೆಟ್ಟ ಗುಣ, 3. ಅಭ್ಯಾಸ. 1. faculty of intelligence, knowledge, 2. bad nature, 3. habit. **ದೊಡ್ಡಕ್ಕನ ಚಾಳಿ ಮನೆಯೌಕೆಲ್ಲ(ಗಾ).** ವಾ: ಕಲ್ತ ಚಾಳಿ ಬುಡ್ತುಲೆ.

ಚಾಳಿ[3] /*ca:ḷi*/ ನಾ. ಇಳಿಜಾರು. a downward slope. ವಾ: ಚಾಳಿಳಿ ಇಳೆಕೆ ಬೊತ್ತ್.

ಚಾಳಿಕಂಡ್ /*ca:ḷikaṇḍ*/ ನಾ. ಬಾಗಿಕೊಂಡು. a particular walking style. ವಾ: ಹಿಂಗೆ ಚಾಳಿಕಂಡ್ ನಡ್ಯದು ಯಾಕೆ.

ಚಾಳಿಪಡ್ಪು /*ca:ḷipaḍpu*/ ನಾ. ಸ್ಥಳನಾಮ. place name.

ಚಾಳೆ /*ca:ḷɛ*/ ನಾ. ತೆಂಗಿನ ಮರ. a coconut tree. ವಾ: ಚಾಳೆಲಿ ಸುಮಾರ್ ಕಾಯಿ ಹಿಡ್‌ದುಟು. ಪ: ಚಾಳೆ ಹಿತ್ಲ್ – ತೆಂಗಿನ ಮರದ ನೆಡುತೋಪು. **ಚಾಳೆ ಕುತ್ತಿ** /*ca:ḷɛ kɘtti*/ 1. ತೆಂಗಿನ ಮರದ ಬುಡ, 2. ಕಾಂಡ. 1. stump of a coconut tree, 2. stem. ವಾ: ಚಾಳೆ ಕುತ್ತಿಗೆ ಉಪ್ಪು ಹಾಕೊಕು. **ಚಾಳೆ ಗರಿ** /*ca:ḷɛ gari*/ ತೆಂಗಿನಮರದ ಗರಿ. coconut leaf/fronds. ವಾ: ಚಾಳೆ ಗರಿಲಿ ಚೀಪೆ ಮಾಡಕ್. **ಚಾಳೆ ದೈ** /*ca:ḷe dai*/ ನಾ. ತೆಂಗಿನ ಗಿಡ. a coconut plant. ವಾ: ಚಾಳೆ ದೈ ಮುರ್‌ದ್ ಬೀತ್. **ಚಾಳೆ ಪಕ್ಕಾಸ್** /*ca:ḷɛ pakka:si*/ 1. ತೆಂಗಿನ ಮರದಿಂದ ಮಾಡಿದ ಮೇಲ್ಛಾವಣಿ ಮರ, 2. ಪಕ್ಕಾಸ್. 1. beams made of coconut tree, 2. a cross beam. ವಾ: ಚಾಳೆ ಪಕ್ಕಾಸ್ ಸಿಕ್ಕಿತಾ? **ಚಾಳೆ ಬುಡ** /*ca:ḷɛ buḍa*/ ತೆಂಗಿನ ಮರದ ಬುಡ. stump of a coconut tree. ವಾ: ಚಾಳೆ ಬುಡಕೆ ಉಪ್ಪು ಹಾಕೊಕು. **ಚಾಳೆ ಮಟ್ಟೆ** /*ca:ḷɛ maṭṭa*/ ತೆಂಗಿನಮರದ ಕೈ. a bunch of a coconut tree. ವಾ: ಚಾಳೆ ಮಟ್ಟೆ ವಯರ್ ಗೆ ತಾಂಗುವಾಂಗೆ ಉಟ್ಟು. **ಚಾಳೆ ಮರ** /*ca:ḷɛ mara*/ ತೆಂಗಿನ ಮರ. a coconut tree. ವಾ: ಚಾಳೆ ಮರನ ಲೆಕ್ಕ ಹಾಕುದು.

ಚಾಳೆಚಿರಿ /*ca:ḷɛciri*/ 1. ಎಳೆಯ ತೆಂಗಿನಗರಿ, 2. ತೆಂಗಿನ ಚಿಗುರುಗರಿ. a tender coconut leaf. ವಾ: ಚಾಳೆಚಿರಿ ಮುರ್‌ದ್ ಬೀತ್.

ಚಾಳೆ ಹುಲ್ಲ್ /*ca:ḷɛ hullɨ*/ ನಾ. ಗದ್ದೆಯಲ್ಲಿ ಬೆಳೆಯುವ ಒಂದು ಕಳೆ. a weed grown in paddy field. ವಾ: ಗದ್ದೆಲಿ ಚಾಳೆಹುಲ್ಲ್ ಬೆಳ್ದದೆ.

ಚಾಳೆಪಡ್ಪು /*ca:ḷɛpaḍpu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಚಾಳೆಮತ್ತಿ /*ca:ḷɛmatti*/ ನಾ. ಮತ್ತಿ ರೀತಿಯ ಚಪ್ಪಟೆಯಾಗಿರುವ ಮೀನು, ಹೆಚ್ಚಾಗಿ ಒಣಗಿಸಿ ಉಪಯೋಗಿಸುವರು. sardine fish. ವಾ: ಚಾಳೆಮತ್ತಿ ಮೀನ್ ನೋಡಿಕೆ ಮೊತ್ತಿ ಮೀನ್‌ನಂಗೆ, ಆದರೆ ಹಜ್ಞ ಚಪ್ಪಟೆಯಾಗಿದ್ದದೆ.

ಚಾಳೆಹಕ್ಕಿ /*ca:ḷehakki*/ ನಾ. ಗೀಜಗನ ಹಕ್ಕಿ. weaver bird. ವಾ: ಚಾಳೆಹಕ್ಕಿನ ಗೂಡು ಬಾರಿ ಲಾಯ್ಕ್‌ನ ನೆಯ್ಗೆ.

ಚಾಳ್ದು[1] /*ca:ḷdu*/ ನಾ. ಇಳಿಜಾರಾಗಿ ಬರುವುದು (ಮೇಲಿನಿಂದ ಪಕ್ಷಿಗಳು ಇಳಿಜಾರಿನಂತೆ ಇಳಿಯುವುದು). a downward slope (birds whiffling). ವಾ: ಹಕ್ಕಿಗ ಇಳೆಕನ ಚಾಳ್ದು. ಪ: ಚಾಳಿಟು – ಜಾರಿದೆ

ಚಾಳ್ದು[2] /*ca:ḷdu*/ ನಾ. 1. ಕಡಿಮೆಯಾಗು, 2. ತಗ್ಗು. 1. to reduce, 2. to lessen. ವಾ: ಬತ್ತನ ಸುಮಾರ್ ವರ್‌ಸ ಇಸಿರೆ ಅದ್ ಚಾಳ್ದು.

ಚಾಳ್ಸು /*ca:ḷsu*/ ಕ್ರಿ. ಆಳಮಾಡು. to dig deeper.

ಚಿ! /*ciɘ*/ ಅ. 1. ಮೂದಲಿಕೆ, 2. ನಿಷೇಧ ಮೊದಲಾದ ಭಾವಗಳನ್ನು ಸೂಚಿಸುವ ಒಂದು ಶಬ್ದ, 3. ಛೀಮಾರಿ. 1. a scronful expression, 2. forbidden, 3. rebuke. ವಾ: ಚಿ! ಹಿಂಗ್ಯಾಕೆ ಮಾತಾಡಿಯ?

ಚಿಂಗ್ರಿಬತ್ತ /*ciŋgribatta*/ ನಾ. ಘಮ ಘಮ ಪರಿಮಳ ಬರುವ ಭತ್ತ. ಗಂಧಸಾಲೆ ಭತ್ತ a variety of paddy with fragrance. ವಾ: ಈ ವರ್‌ಸ ಚಿಂಗ್ರಿ ಬತ್ತನ ನೆಟ್ಟೊಳೊ.

ಚಿಂಟೆ /*ciṇṭɛ*/ ನಾ. 1. ಜಗಲಿ, 2. ಕುಳಿತು ಕೊಳ್ಳಲು ಮಾಡಿದ ಮಣ್ಣಿನ ಎತ್ತರದ ಜಾಗ. 1. a veranda, a sit-out, 2. a raised platform. ವಾ: ಸುಮ್ಮನೆ ಚಿಂಟೆಲಿ ಕುದ್ದದ್.

ಚಿಂತೆ /*cintɛ*/ ನಾ. 1. ಚಿಂತೆ, 2. ವ್ಯಸನ. 1. anguish, 2. grief. **ಇಲ್ಲದವಂಗೆ ಒಂದ್ ಚಿಂತೆ ಆದ್ರೆ ಇದ್ದವಂಗೆ ನೂರ್ ಚಿಂತೆ(ಗಾ).** ವಾ: ಚಿಂತೆ ಇಲ್ಲದ ಮೊನ್ಸ ಉಟ್ಟಾ? (ಚಿಂತೆನ ಬುಡಿ). **ಚಿಂತೆಬುಟ್ಟ್** /*cintɛbuṭṭi*/ 1. ಚಿಂತೆಬಿಟ್ಟು, 2. ವ್ಯಸನವ ಬಿಟ್ಟು. 1. leaving one's worries, 2. leaving the grief behind. ವಾ: ಚಿಂತೆಬುಟ್ಟ್ ಬೊದ್ಕೊಕು.

ಚಿಂದ್ಬಿಕೊಂಡ್ /*cindbikoṇḍi*/ ಕ್ರಿ. 1. ಕಿವುಚು, 2. ಅದುಮು. 1. to squeeze, 2. to press. ವಾ: ಮಕ್ಕ ಚಿದ್ಬಿಕಂಡ್ ಓಡಿಬಂದೊ. ಪ: ಪುರುಂಚು(ತು)

ಚಿಂದ್ಲ್ /*cindlɨ*/ ನಾ. ತುಂಡಾದ ಭತ್ತ ಮತ್ತು ಅಕ್ಕಿಯ ಮಿಶ್ರಣ. mixing broken paddy and whole rice. ವಾ: ಚಿಂದ್ಲ್ ಬತ್ತನ ಬೇರೆ ತೆಗ್ದಿಸೊಕು.

ಚಿಂರ್ಚು /*cinrcu*/ ಕ್ರಿ. 1. ಒತ್ತು, 2. ಹಿಚುಕು, 3. ತಿರುಚಿ ಸಾಯಿಸುವುದು. 1. to press, 2. to squeese, 3. to kill by twisting / breaking the neck. ವಾ: ಕೋಳಿದ್ ಕುತ್ತಿಗೆನ ಚಿಂರ್ಚುದು.

ಚಿಕಪ /*Cikapa*/ ನಾ. ತಂದೆಯ ಕಿರಿಯ ಸಹೋದರ, ತಾಯಿಯ ತಂಗಿಯರ ಗಂಡಂದಿರು. a younger brother of one's father – an uncle. ವಾ: ಚಿಕಪ ಬಂದೊನ?

ಚಿಕವ /*cikava*/ ನಾ. ಚಿಕ್ಕಮ್ಮ, ತಾಯಿಯ ತಂಗಿ, ಅಥವಾ ತಂದೆಯ ತಮ್ಮಂದಿರ ಪತ್ನಿಯರು. a sister of one's mother – an aunt. ವಾ: ಚಿಕವಂಗೆ ಉಸಾರಿಲ್ಲೆಗಡ. ಪ: ಚಿಕ್ಕವ್ವ, ಚಿಕ್ಕಮ್ಮ

ಚಿಕಾನಾ /*cika:na:*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಚಿಕ್ಕ್[1] /*cikkɨ*/ ಕ್ರಿ. 1. ಸಿಕ್ಕಾಗು, 2. ಸಿಕ್ಕು, 2. ಕೂದಲು ಗಂಟು ಗಂಟಾಗು. 1. intertwined, 2. wrinkled, 3. tangled hair. ವಾ: ಕೂದೊಲು ಚಿಕ್ಕ್ ಚಿಕ್ಕಾವ್ವು ಬಾಚಿ ಬುಡ್‌ಸುದು ಹೆಂಗೆತ? ಪ: ಚಿಕ್

ಚಿಕ್ಕ್[2] / *cikkɨ* / ಕ್ರಿ. ಕೀಳುವುದು. to pluck. ವಾ: ಮಡ್ಲ್ ಚಿಕ್ಕಿದ್ ಸೂಟೆ ಕಟ್ಟಿರಾತ್.

ಚಿಕ್ಕ /*cikka*/ ನಾ. 1. ಚಿಕ್ಕಪ್ಪ, 2. ಅಪ್ಪನ ತಮ್ಮ. 1. an uncle, 2. a brother of one's father. ವಾ: ಪೊಪ್ಪನ ತಮ್ಮನ ಚಿಕ್ಕತ ಕರೆದು ನಾವ್.

ಚಿಕ್ಕಪುತ್ತೂರು /*cikkaputtu:ru*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಚಿಕ್ಕಮ್ಮನ /*cikkammana*/ ನಾ. 1. ಅಮ್ಮನ ತಂಗಿ, 2. ಮಲತಾಯಿ. 1. mother's sister, 2. a step mother. ವಾ: ಚಿಕ್ಕಮ್ಮನ ಮಾತ್ ಕತೆ ನಂಗೆ ಬಾರಿ ಕುಸಿ.

ಚಿಕ್ಕಯ್ಯ /*cikkayya*/ ನಾ. ಚಿಕ್ಕಪ್ಪ. an uncle. ವಾ: ಚಿಕ್ಕಯ್ಯ ಈಗ ಎಲ್ಲಿರ್‌ದು?

ಚಿಕ್ಕಳ್‌ಸುದು /*cikkaḷsudu*/ ನಾ. ಚಿಮುಕಿಸು. to sprinkle. ವಾ: ಹಿಂದೆಲ್ಲ ಮನೆ ಗುಡ್‌ಸಿ ಗಂಜಳನ ಚಿಕ್ಕಳ್‌ಸ್ತಿದ್ದೊ.

ಚಿಕ್ಕಾಸ್ /*cikka:sɨ*/ ನಾವಿ. 1. ತುಂಬಾ ಅಲ್ಪ ಹಣ, 2. ಕಿಸೆಯಲ್ಲಿ ಏನೂ ಹಣ ಇಲ್ಲ. 1. a small amount, 2. having no money in the pocket. ವಾ: ನನ್ನ ಜೋಬುಲಿ ಒಂದ್ ಚಿಕ್ಕಾಸ್ ಕೂಡ ಇಲ್ಲೆ.

ಚಿಕ್ಕಿ[1] /*cikki*/ ನಾ. 1. ಚಿಕ್ಕಮ್ಮ, 2. ಅಮ್ಮನ ತಂಗಿ. 1. an aunt, 2. mother's sister. ವಾ: ಚಿಕವನ ನೀ ಚಿಕ್ಕಿತ ಕರ್‌ಯೊದ?

ಚಿಕ್ಕಿ[2] /*cikki*/ ನಾ. 1. ಚುಕ್ಕೆ, 2. ಬಿಂದುಚಿಹ್ನೆ. 1. a sign/mark, 2. dot. ವಾ: ದೃಷ್ಟಿ ತಾಗದಂಗೆ ಕೆನ್ನೆಗೆ ಸಣ್ಣ ಚಿಕ್ಕಿ ಇಸ್.

ಚಿಕ್ಕು /*cikku*/ ನಾ. 1. ಚಿಕ್ಕು ಹಣ್ಣು, 2. ಸಪೋಟ. sapota fruit. ವಾ: ಚಿಕ್ಕುಲಿ ಜೂಸ್ ಮಾಡಿವೆ.

ಚಿಕ್ಕೆಲಿ /*cikkɛli*/ ನಾ. 1. ಚಿಕ್ಕ ಇಲಿ, 2. ಸೊಂಡಿಲಿ. 1. a mouse, 2. mouse. ವಾ: ಚಿಕ್ಕೆಲಿ ಎಲ್ಲ ಕಡೆನು ಇದ್ದದೆ.

ಚಿಕ್ಮುಳಿ /*cikmuḷi*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಗುತ್ತಿಗಾರು ಗ್ರಾಮದ ಜಾಗ. 1. family, 2. lineage, 3. a locality in Guttigaru village in Sullia Taluk of Dakshina Kannada District.

ಚಿಗಟ /*cigaṭa*/ ನಾ. ಇಲಿಯ ಮೇಲಿರುವ ಹೇನು. lice found on rats/mouse. ವಾ: ಕೊತ್ತಿ ಮೈಮೇಲೆ ಬಾರಿ ಚಿಗಟ ಉಟ್ಟು.

ಚಿಗ್ಟ /*cigṭa*/ ನಾ. 1. ಹೇನು ಕೂರೆ ತಿಗಣೆಗಳ ರೀತಿಯಲ್ಲಿನ ಕ್ರಿಮಿ, 2. ನಾಯಿ, ಹಸು,ಕತ್ತೆ ಮುಂತಾದ ಪ್ರಾಣಿಗಳ ಮೈಯಲ್ಲಿ ಇವು ಇರುತ್ತದೆ. 1. an insect like that of lice, bed bug, etc, 2. flea-usually found on the body of dogs, cows, donkey, etc. ವಾ: ಕೊತ್ತಿ ಮೈ ತುಂಬ ಚಿಗಟ ತುಂಬಿಟು.

ಚಿಗ್ತ್[1] /*cigtɨ*/ ನಾ. 1. ಚಿಗುರು, 2. ಕುಡಿ, 3. ಅಂಕುರ. 1. a shoot, 2. a sprout, 3. apical portions of the shoots. ಕಡ್ಡ ಹೂನ ದೈ ಚಿಗ್ತ್.

ಚಿಗ್ತ್[2] /*cigtɨ*/ ಕ್ರಿ. ಸಿಗಿದು, ವಾ: ಹೂನ ದೈದ ಚಿಗ್ತ್ ಮುರ್‌ತ್.

ಚಿಗ್‌ರ್ /*cigɨri*/ ನಾ. 1. ಚಿಗುರು, 2. ಮೊಳಕೆ, 3. ಎಳೆಯ ಕಾಂಡ ಭಾಗ, 4. ಭೂಮಿ ಮೇಲಿರುವ ಸಸ್ಯದ ಆರಂಭಿಕ ಭಾಗ. 1. a shoot, 2. a sprout, 3. a tender stem, 3. apical portions of the shoots. **ಹಣ್ಣೆಲೆ ಉದ್ರ್‌ಕನ ಚಿಗ್‌ರೆಲೆ ನೆಗಾಡ್ದೆ(ಗಾ).** ವಾ: ಕಾಪಿ ದೈದ ಚಿಗ್‌ರ್ ಒಂದ್ ಮಳೆ ಬಂದರೆ ಸಾಕ್ ಬೇಗ ಬಾದು. ಪ: ಚಿಗರ್ಸುದು – ಚಿಗುರಿಸುವುದು; ಚಿಗುರಿಸೊಕು – ಚಿಗುರಿಸಬೇಕು; ಚಿಗ್‌ರಿ – ಚಿಗುರಿ;

ಚಿಚ್ಚಿ[1] /*cicci*/ ನಾ. ಮಾಂಸ (ಮಕ್ಕಳ ಭಾಷೆ). meat (in the vocabulary of children). ವಾ: ಅವ್ವ ಚಿಚ್ಚಿ ಇನ್ನ್ ಬೇಕ್.

ಚಿಚ್ಚಿ[2] /*cicci*/ ನಾ. 1. ಮಕ್ಕಳು ಮಲ ವಿಸರ್ಜಿಸುವುದು, 2. ಮಕ್ಕಳು ಕಕ್ಕಸ್ಸು ಮಾಡುವುದು. 1. children defecating, 2. children discharging faeces. ವಾ: ಮುಟ್ಟ್‌ಬಡ, ಅದ್ ಚಿಚ್ಚಿ.

ಚಿಟಿಕೆ /*ciṭike*/ ಅ. ಕೈ ಬೆರಳುಗಳಿಂದ ಶಬ್ದ ಬರಿಸುವುದು. snapping finger.

ಚಿಟ್ /*ciṭi*/ ಕ್ರಿವಿ. ಸಾಕೆನಿಸು. having enough of something. ವಾ: ಅವಳ ಪುರುಸೊತ್ತಿಲ್ಲದ ಮಾತಿಗೆ ತಲೆ ಚಿಟ್ ಹಿಡ್‌ದ್ ಹೋತ್.

ಚಿಟ್‌ಗಹಾಕುದು /*ciṭigaha:kudu*/ ನಾವಿ. 10 ರಿಂದ 15 ದಿನದ ಮಗುವಿಗೆ ಕಪ್ಪು ಗಾಜಿನ ಬಳೆ ಚೂರನ್ನು ದೇವರ ದೀಪದಲ್ಲಿ ಬಿಸಿ ಮಾಡಿ ಮಗುವಿನ ಹೊಕ್ಕುಳದ ಭಾಗಕ್ಕೆ ಬಿಸಿ ಇರುವಾಗಲೆ 3 ಬಾರಿ ಮುಟ್ಟಿಸುವುದು. branding on the belly button of a 10 or 15 day child with a hot, black bangle. ವಾ: ಹಿಂದೆನ ಕಾಲಲಿ ಕೂಸಿಗೆ ಚಿಟ್‌ಗ ಹಾಕ್ತಿದ್ದೊ.

ಚಿಟ್ಟಿಕೊಡಿ /*ciṭṭikoḍi*/ ನಾ. 1. ಬಾಣಂತಿಗೆ ಕಷಾಯ

ಮಾಡಿ ಕೊಡಲು ಬಳಸುವ ಔಷಧಿ ಸಸ್ಯ, 2. ಇದನ್ನು ವಿಶೇಷವಾಗಿ ಕೊಡಗಿನಲ್ಲಿ ಚಳಿ ಜ್ವರಕ್ಕೆ ಕಷಾಯ ಮಾಡಲು ಬಳಸುತ್ತಾರೆ. 1. a medicinal plant used in making concoction for the new mother, 2. the plant usually used in Kodagu to cure high fever. ವಾ: ಚಿಟ್ಟೆ ಕೊಡಿನ ಬಾಣ್ತಿಗೆ ಕಸಾಯ ಮಾಡಿ ಕೊಟ್ಟವೆ.

ಚಿಟ್ಟೆ ಗೋಳಿಮರ /*ciṭṭɛ go:ḷi mara*/ ನಾ. ಒಂದು ಜಾತಿಯ ಮರ, ಇದರಲ್ಲಿ ಸಣ್ಣ ಸಣ್ಣ ಹಣ್ಣುಗಳಿರುತ್ತವೆ. a tree, Chitte goli. ವಾ: ಚಿಟ್ಟೆ ಗೋಳಿ ಮರಲಿ ಸಣ್ಣ ಸಣ್ಣ ಹಣ್ಣ್‌ಗ ಇದ್ದದೆ.

ಚಿಟ್ಟೆ[1] /*ciṭṭɛ*/ ನಾವಿ. 1. ಚಿಕ್ಕ, 2. ಪುಟ್ಟ. 1. small, 2. little. ವಾ: ಚಿಟ್ಟೆಗೂಡೆನ ಮೊದುವೆ.

ಚಿಟ್ಟೆ[2] /*ciṭṭɛ*/ ನಾ. 1. ಚಿಟ್ಟೆ, 2. ಪತಂಗ, 3. ಪಾತರಗಿತ್ತಿ, 4. ಬಣ್ಣ ಬಣ್ಣದ ರೆಕ್ಕೆಗಳುಳ್ಳ ಕೀಟ. 1. a butterfly, 2. a moth, 3. a butterfly, 4. an insect with colourful wings. ವಾ: ಚಿಟ್ಟೆ ಹಾರಿಕಂಡ್ ವಳಗೆ ಬಾತ್.

ಚಿಟ್ಟೆಕ್ಕಿ /*ciṭṭɛkki*/ ನಾ. 1. ಚಿಟ್ಟೆಯ ತರಹದ ಸಣ್ಣ ಪಕ್ಷಿ, 2. ಹಸಿರು ಬಣ್ಣದ ಚಿಕ್ಕ ಪಕ್ಷಿ. 1. small bird resembling a butterfly, 2. a small green bird. **ಚಿಟ್ಟೆ ಹಕ್ಕಿಗೆ ಜುಟ್ಟ್ ಉದ್ದ – ಸಣ್ಣ ಮೆಣ್ಸ್ (ಗಾಂಧಾರಿ ಮೆಣ್ಸ್)(ಒ).** ವಾ: ಚಿಟ್ಟೆಕ್ಕಿ ಸಣ್ಣದಾಗಿ ಹಸ್ರ್ ಬಣ್ಣಲಿ ಇದ್ದದೆ. ಪ: ಚಿಟ್ಟೆ ಹಕ್ಕಿ – ಸಣ್ಣ ಜಾತಿಯ ಪಕ್ಷಿ

ಚಿಟ್ಟೆಗಾರ /*ciṭṭɛga:ra*/ ನಾ. ಚಿಟ್ಟೆ ಹಕ್ಕಿ. a small bird. ವಾ: ಚಿಟ್ಟೆಗಾರ ಸಣ್ಣ ಹಕ್ಕಿ.

ಚಿಟ್ಟೆಗೋಳಿ /*ciṭṭɛgo:ḷi*/ ನಾ. ಸಣ್ಣ ಹಣ್ಣಿನ ಗೋಳಿ, ಅದನ್ನು ಉಪ್ಪುಗೋಳಿ ಎಂದೂ ಕರೆಯುತ್ತಾರೆ. a fruit from brown wolly fig tree. ವಾ: ಚಿಟ್ಟೆಗೋಳಿನ ಉಪ್ಪುಗೋಳಿತ ಸನ ಕರ್‌ದವೆ.

ಚಿಡಂಕ್ /*ciḍaŋki*/ ನಾ. 1. ಕೆಲಸಗಾರರು ಸೊಂಟಕ್ಕೆ ಕಟ್ಟಿಕೊಳ್ಳುವ ಕೊಕ್ಕೆ, 2. ಕತ್ತಿ ಸಿಕ್ಕಿಸಿಕೊಳ್ಳುವ ಸಾಧನ. 1. a hook tied around the waist of workers, 2. a hook to which knife is attached. ವಾ: ಸೊಂಟಕೆ ಚಿಡಂಕ್ ಸೆಕ್ಕಿಸಿ ಹೊರ್‌ಟತ್.

ಚಿಡ್ಕ್ ಹಾಕುದು /*ciḍkɨ ha:kudu*/ ಕ್ರಿವಿ. ಮಗುವಿಗೆ ಆರೋಗ್ಯದ ದೃಷ್ಟಿಯಿಂದ ಚಿಡಿಕೆ ಹಾಕುವುದು, ಸುಟ್ಟು ಇಡುವುದು. the practice of branding on the belly button of a small child. ವಾ: ಹಿಂದೆ ಕೂಸಿಗೆ ಚಿಡ್ಕ್ ಹಾಕುದು ಮಾಡ್‌ತ್ತಿದ್ದೊ.

ಚಿಣೆ /*ciṇe:li kudda*/ ಕ್ರಿ. ಚಿಂಟೆ, ಮನೆಯ ಹೊರಭಾಗದಲ್ಲಿ ಕುಳಿತುಕೊಳ್ಳಲು ಇರುವ ಜಾಗ. ಚಿಟ್ಟೆ(ತು). sitting in the sit-out. ವಾ: ಚಿಣೇಲಿ ಕುದ್ದ ಕೊತ್ತಿ ಹಾರಿ ಬಾತ್.

ಚಿತ್ತರ್ ಬೊಳಿ /*cittarɨ bɔḷi*/ ನಾ. ಗೌಡರ 18 ಗೋತ್ರಗಳಲ್ಲಿ ಒಂದು ಬಳಿ. one of the 18 lineages or gotra's of Arebhashe gowda community. ವಾ: ಗೌಡ ಜೆನಾಂಗದ ಬೊಳಿದ್ ಹೆಸ್‌ರ್.

ಚಿತ್ತುಳಿ /*cittuḷi*/ ನಾ. 1. ಕಿತ್ತಳೆ, 2. ರೂಟೇಸಿ ಕುಟುಂಬ, ಸಿಟ್ರಸ್ ಜಾತಿ, ರೆಟಿಕ್ಯೂಲೇಟ ಪ್ರಭೇದಕ್ಕೆ ಸೇರಿದ ರುಚಿಯಾದ ಪುಷ್ಟಿಕರವಾದ ಹಣ್ಣುಬಿಡುವ ಸಣ್ಣಮರ. orange, fruit. ವಾ: ಇಸ್ಟ್ ಚಿತ್ತುಳಿನ ನೀ ತಿಂಬೊನ?

ಚಿತ್ರ /*citra*/ ಕ್ರಿವಿ. 1. ಮೇಲೆ ಮೇಲೆ ಬರೆಯುವುದು, 2. ಮಸುಕಾಗು. 1. shading, 2. blurring. ವಾ: ಅಂವ ಲಾಯ್ಕ್ ಚಿತ್ರ ಬರ್ದದೆ.

ಚಿದಂಗ /*cidaŋga*/ ನಾ. ಅಪ್ರದಕ್ಷಿಣೆ, ಬಡಿಸುವಾಗ ಸೌಟನ್ನು ಎಡಕ್ಕೆ ಬಳಕೆ ಮಾಡುವುದು ನಿಷಿದ್ಧ. it is forbidden to use the ladle from the left side while serving food. ವಾ: ಚಿದಂಗ ಕೈಲಿ ಇಕ್ಕಿಕಾದ್, ಹಂಗೆನೆ ಎಂತನೂ ಕೊಡಿಕಾಗದ್.

ಚಿದ್ಗಲ್ಲು /*cidgallu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಚಿನರ್ಪುದು /*cinarpudu*/ ಕ್ರಿವಿ. 1. ಕೈಕಾಲು ಜೋಮು ಹಿಡಿಯುವುದು, 2. ಜೊಮ್ಮು, 3. ಜೊಂಪು. 1. numbness in the hands and legs, 2. numbness, 3. drowsy. ವಾ: ತಲೆಗೆ ಕೈ ಕೊಟ್ಟ್ ಒಂದೆ ಬರಿಗೆ ಮೊಲ್‌ಗಿರೆ ಕೈ ಚಿನರ್ಪುದು. ಪ: ಚಿನೆರ್ಪಿದೆ – ಜೋಮು ಹಿಡಿದಿದೆ; ಪಿಜಿನ್ ಪರಪುನೆ(ತು)

ಚಿನರ್ಮು /*cinarmu*/ ಕ್ರಿ. (ಒಂದೇ ಕಡೆ ಕಾಲು ಇಡುವುದರಿಂದ ಅದು ಮರಗಟ್ಟಿ) ಇರುವೆ ಹರಿದಾಡಿದಂತಹ ಅನುಭವವಾಗು. be benumbed partially as legs and to feel a sensation of

ants creeping on the limbs, a sensation caused by lowered circulation of blood. ವಾ: ಕುದ್ದಲ್ಲಿ ಕಾಲ್ ಚಿನರ್ಮುದು.

ಚಿನಾಲಿ ಮುಂಡೆ /*cina:li muṇḍɛ*/ ನಾ. ಬೈಗುಳ ಪದ. an expletive. ವಾ: ನೀ ಚಿನಾಲಿ ಮುಂಡೆ.

ಚಿನ್ನ /*cinna*/ ನಾ. 1. ನಿಸರ್ಗದಲ್ಲಿ ಮುಕ್ತ ಸ್ಥಿತಿಯಲ್ಲಿ ದೊರೆಯುವ ಏಕೈಕ ಲೋಹಧಾತು ಬಂಗಾರ, 2. ಸ್ವರ್ಣ, 3. ಹೊನ್ನು. 1. gold, only metal to be found in its pure form, 2. gold, 3. wealth (gold). **ಅಕ್ಕನ ಚಿನ್ನ ಅಕ್ಕಿ ಕಾಳಷ್ಟಾದ್ರು ತೆಗ್ದವೆ(ಗಾ).** ವಾ: ಮೊದುವೆಲಿ ಗೂಡೆಗೆ ಚಿನ್ನ ಎಸ್ಟ್ ಕೊಟ್ಟೊಳೊ. **ಚಿನ್ನದ ಗುಂಡು** /*cinnada guṇḍu*/ ಚಿನ್ನದಿಂದ ಮಾಡಿದ ಸಣ್ಣ ಗುಂಡುಗಳು. golden beads. ವಾ: ಚಿನ್ನದ ಗುಂಡುನ ಕರಿ ಮಣಿ ಒಟ್ಟಿಗೆ ಸೇರ್‌ಸಿದ್. **ಚಿನ್ನಾಬರಣ** /*cinna:baraṇa*/ 1. ಚಿನ್ನಾಭರಣ, 2. ಒಡವೆ. 1. jewellery, 2. ornaments. ವಾ: ಚಿನ್ನಾಬರಣ ಇದ್ದರೆ ಬಜ್ಜ ಕಾಲಕೆ ಬಳ್‌ಕೆ ಆದೆ.

ಚಿನ್ನಪ್ಪ /*cinnappa*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. masculine given name. ಪ: ಚಿನ್ನಣ್ಣ, ಚಿನ್ನಯ

ಚಿನ್ನಿಕೋಲು /*cinniko:lu*/ ನಾ. 1. ಹಳ್ಳಿಗಾಡಿನ ಮಕ್ಕಳ ಆಟ, 2. ಕೋಲಿನಿಂದ ಆಡುವ ಆಟ. a game played by children in the villages using small sticks. ವಾ: ಚಿನ್ನಿ ಕೋಲು ಆಟ ಆಡೊಮೊ.

ಚಿನ್ನಿಬೆರ್ಳ್ /*cinniberḷɨ*/ ನಾ. ಕಿರು ಬೆರಳು. little finger/pinky. ವಾ: ಆ ಕೇರೆ ಹಾವ್ ಚಿನ್ನಿ ಬೆರ್ಳ್ ಸ್ಟೆ ದಪ್ಪಲಿ ಇದ್ದದ್. ಪ: ಕಿನ್ಕ್ ಬಿರೆಲ್(ತು)

ಚಿಪ್ಪಂದಿ /*cippandi*/ ನಾ. 1. ಚಿಪ್ಪು ಹಂದಿ, 2. ಮೈಮೇಲೆ ಚಿಪ್ಪು ಇರುವ ಕಾಡಿನಲ್ಲಿ ವಾಸಿಸುವ ಹಂದಿ. a pangolin. ವಾ: ಚಿಪ್ಪಂದಿನ ಮುಟ್ಟಿರೆ ಚೆಂಡ್‌ನಂಗೆ ಸುಂರ್ಟಿಕಂಡದೆ.

ಚಿಪ್ಪಾರು /*cippa:ru*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಮರಪಡ್ನೂರು ಗ್ರಾಮದ ಜಾಗ. a locality in Amarapadnuru village in Sullia Taluk of Dakshina Kannada District.

ಚಿಪ್ಪಿ /*cippi*/ ನಾ. 1. ಗೆರಟೆ, 2. ತೆಂಗಿನಕಾಯಿಯ ಗೆರಟೆ, 3. ತೆಂಗಿನ ಚಿಪ್ಪು, 4. ಕರಟ. shell of coconut. **ಎಲ್ಲವು ಕಾಯಿ ಹೆರಿಯಕ್‌ನ ನಾವು ಚಿಪ್ಪಿಯಾರ್ ಹೆರಿಯೋಕಲ್ಲ(ಗಾ).** ವಾ: ಚಿಪ್ಪಿನ ಒಲೆಗೆ ಹಾಕ್. **ಚಿಪ್ಪಿ ಸೆಡೆ** /*cippi sɛḍɛ*/ ತೆಂಗಿನ ಕರಟದಿಂದ ಮಾಡಿದ ಸೌಟು. a ladle/spoon made of coconut shell. ವಾ: ಚಿಪ್ಪಿ ಸೆಡೆಲಿ ಮಜ್ಜಿಗೆ ಹೊಯಿ.

ಚಿಪ್ಪುಳಿ /*cippuḷi*/ ನಾ. ಮರದ ಉಪಕರಣ ಮಾಡುವಲ್ಲಿ ನುಣುಪು ಮಾಡಲು ಬಳಸುವ ಸಾಧನ. a chisel. ವಾ: ಮರಕೆ ಚಿಪ್ಪುಳಿ ಹಾಕುದು.

ಚಿಪ್ಪುಳು ಕಾಯಿ /*cippuḷu ka:yi*/ ನಾ. ಒಂದು ಬಗೆಯ ವಿಷ ಕಾಯಿ. ಮೀನು ಹಿಡಿಯಲು ಬಳಸುತ್ತಾರೆ. a poisonous unripe fruit, used in fishing.

ಚಿಪ್ಪುಳುಗುಡ್ಡೆ /*cippuluguḍḍe*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ತೊಡಿಕಾನ ಗ್ರಾಮದ ಜಾಗ. a locality in Todikana village in Sullia Taluk of Dakshina Kannada District.

ಚಿಪ್ಪುಳ್ಸ್[1] /*cippuḷsu*/ ನಾ. ಚಿಮುಕಿಸು. to sprinkle. ವಾ: ಅಂವ ನೆಟ್ಟಿ ದೈಗೆ ನೀರ್ ಚಿಪ್ಪುಳ್ಸ್‌ತಿತ್.

ಚಿಪ್ಪುಳ್ಸ್[2] /*cippuḷsu*/ ನಾವಿ. ಕೈಯಲ್ಲಿ ಸಿಂಪಡಿಸು. to sprinkle with hand. ವಾ: ತಲೆ ಸುತ್ತಿ ಬಿದ್ದವನ ಮೋರೆಕೆ ನೀರ್ ಚಿಪ್ಪುಳ್ಸಿದೊ. ಪ: ಚಿಪ್ಪುಳ್ಸಿಕೆ – ಸಿಂಪಡಿಸಲು

ಚಿಪ್ಪೆಮಣೆ /*cippɛmaṇɛ*/ ನಾ. ಅಡಿಕೆ ರಾಶಿಮಾಡುವ ಅಥವಾ ಹರಡಲು ಬಳಸುವ ಗೋರ್ ಮಣೆ. a wooden plant used in gathering/piling areca nut. ವಾ: ಚಿಪ್ಪೆ ಮಣೆಲಿ ಅಡ್ಕೆನ ಹರ್‌ಂಡುದು.

ಚಿಬಿಲೆ /*cibilɛ*/ ನಾ. ಜನಪದ ಆಟ. a folk game.

ಚಿಬುಳಿ[1] /*cibuḷi*/ ನಾ. 1. ಅನ್ನ ಬಸಿಯಲು, ಬಿಸಿಬಿಸಿ ದೋಸೆ, ರೊಟ್ಟಿ ಹಾಕಲು ಬೆತ್ತ ಅಥವಾ ಬಿದಿರಿನ ಸಲಾಕೆಯಿಂದ ಮಾಡಿದ ಬಟ್ಟಲಿ ನಂತಹ ತಟ್ಟೆ. a bamboo sieve/platter for straining out the excess water from rice, and to keep hot doasa, flat bread, etc. ವಾ: ರೊಟ್ಟಿ ಕಾಸಿ ಚಿಬುಳಿ ಮೇಲೆ ಹಾಕಿಸ್. ಪ: ತೆರಿಯೆ(ತು). **ಚಿಬುಳೆ** /*cibuḷɛ*/ ವಾ: ಚಿಬುಳೆನ ಬೆತ್ತಂದ ಮಾಡುವೆ.

ಚಿಬುಳಿ[2] /*cibuḷi*/ ನಾ. 1. ಹಣತೆ, 2. ಜ್ಯೋತಿ, 3. ದೀಪ. 1. a lamp, 2. a flame, 3. a light. ವಾ: ಚಿಬುಳಿನ

ತೊಳ್ಸಿಕಟ್ಟಿತ್ರ ಇಸಿ. ಪ: ಚಿಬುಳಿನ ದೀಪ – ಹಣತೆ, ತಿಬಿಲೆ(ತು)

ಚಿಬೇರಿ /*cibɛ:ri*/ ನಾ. ತೊಗರಿ ಬೇಳೆ. pigeon pea. ವಾ: ಚಿಬೇರಿನೂ ಚರ್‌ಂಡಿ ಮೀನ್ ಗೈಪುನು ಹಿಟ್ಟ್ ತಿಂಬಕೆ ಲಾಯ್ಕ್ ಚಿಬೇರಿನ ತೊಳ್‌ದ್ ಬಿಸಿ ನಿರ್‌ಲಿ ಪದ್ನಿಸಿರೆ ಹೊಟ್ಟೆಲಿ ಗ್ಯಾಸ್ ಆದುಲೆ.

ಚಿಬ್ಬುಲು /*cibbulu*/ ನಾ. 1. ಅನ್ನ ಮೊದಲಾದುವುಗಳನ್ನು ಬಸಿಯಲು ಬೀಳಲನ್ನು ಹೆಣೆದು ಮಾಡಿದ ತಟ್ಟೆಯಂತಹ ರಚನೆ, 2. ಎಸರುತಟ್ಟೆ, 3. ಬಿಸಿಬಿಸಿ ದೋಸೆ, ರೊಟ್ಟಿ ಹಾಕಲು ಬೆತ್ತ ಅಥವಾ ಬಿದಿರಿನ ಸಲಾಕೆಯಿಂದ ಮಾಡಿದ ಬಟ್ಟಲಿನಂತಹ ತಟ್ಟೆ. 1. a bamboo sieve for straining out the excess water from rice, 2. a platter, 3. a bamboo platter to keep hot dosa, flat bread, etc. **ಸಾವ್ರಾರ್ ಜನ ಮೀಯ್ದ್ ಬಾಕನ ಅಜ್ಜನು ಅಜ್ಜಿನು ಬಾಗ್ಲ್ ತಡ್ದವೆ – ಅನ್ನ ಬಾಗುದು (ಚಿಬ್ಬ್‌ಲ್, ಮರ್ಚಟೆ)(ಒ).** ವಾ: ಅನ್ನ ಬೆಂದ ಮೇಲೆ ಚಿಬ್ಬುಲು ಇಸಿ ಬಾಗ್. ಪ: ಚಿಬ್ಲು, ಚಿಬ್ಬ್‌ಲು, ಚಿಬ್ಬಲು – ಬಿದಿರಿನ ತಟ್ಟೆ

ಚಿಬ್ಲಿ /*cibli*/ ನಾ. ಹುಡುಗಿಯರು ಆಡುವ ಜನಪದ ಆಟ. a folk game played by girls. ವಾ: ಗೂಡೆಗೆಲ್ಲ ಸೇರಿಕಂಡ್ ಚಿಬ್ಲಿ ಆಟ ಆಡುವೆ.

ಚಿಮಿಣಿ /*cimiṇi*/ ನಾ. ಸೀಮೆ ಎಣ್ಣೆಯ ದೀಪ. kerosine lamp. **ಬಂಗಾರದ ಗುಬ್ಬಿ ಬಾಲಲೆ ನೀರ್ ಕುಡ್ದದೆ – ಚಿಮುಣಿ ದೀಪ(ಒ).** ವಾ: ಚಿಮ್ನೆಣ್ಣೆ ದೀಪಕೆ ಬತ್ತಿ ಹಾಕೊಕು. ಪ: ಚಿಮಿಲಿ(ತು); ಚಿಮುಣಿ ದೀಪ. **ಚಿಮುಣೆಣ್ಣೆ–ಚಿಮ್ನೆಣ್ಣೆ** /*cimuṇɛṇṇɛ*/-/*cimnɛṇṇɛ*/ ನಾ. ಸೀಮೆಣ್ಣೆ. kerosine. ವಾ: ಚಿಮ್ನೆಣ್ಣೆ ಈಗ ಸಿಕ್ಕುದು ಬಜ್ಜ **ಚಿಮುಣೆಣ್ಣೆ ಡಬ್ಬ** /*cimuṇɛṇṇɛ ḍabba*/ 1. ಸೀಮೆಣ್ಣೆ ಡಬ್ಬ, 2. ಸೀಮೆಣ್ಣೆಯ ಡಬ್ಬವನ್ನು ಏತದ ನೀರಾವರಿಯಲ್ಲಿ ಬಳಸುತ್ತಿದ್ದರು. 1. kerosine box, 2. kerosine box used in lift irrigation. ವಾ: ಹಿಂದೆನ ಕಾಲಲಿ ಚಿಮುಣೆಣ್ಣೆ ಡಬ್ಬಲಿ ಚಿಮುಣೆಣ್ಣೆನ ಹೊಯ್ದಿಸುತ್ತಿದ್ದೊ.

ಚಿಮೇರ್ಪು /*cimɛ:rpu*/ ನಾ. 1. ಸೆಳೆವು, 2. ಪ್ರವಾಹದ ಎಳೆತ,- ಸೆಳೆತ, 3. ಆಕರ್ಷಣೆ, 4. ಶೀತದಿಂದ ಉಂಟಾಗುವ ನರಗಳ ಬಿಗಿತ, 5. ಒಂದು ಬಗೆಯ ರೋಗ. 1. the force, 2. the force of flood water, 3. attraction, 4. feeling stiff due to excessive cold, 5. a disease. ವಾ: ಕ್ವಾಟಕೆ ಕೈಕಾಲ್ ಚಿಮೇರ್ಪುದು.

ಚಿಮ್ಕುಸ್ /*cimkusɨ*/ ಕ್ರಿ. ಸಿಂಪಡಿಸು. to sprinkle. ವಾ: ದೈಕೆ ಗಂಜಳನ ಚಿಮ್ಕುಸ್.

ಚಿಮ್‌ಟ /*cimiṭa*/ ನಾ. 1. ಚಿಮುಟ, 2. ಇಕ್ಕಳ. pair of tongs. ವಾ: ಬಿಸಿ ಮುಟ್ಬಡ ಚಿಮ್‌ಟ ತಕ. ಪ: ಚಿಮ್ಟ

ಚಿಮ್‌ಟಿ /*cimiṭi*/ ನಾ. ಚಿಮ್‌ಟ. pincers. ವಾ: ಚಿಮ್‌ಟಿನ ಕೊಡು ಇತ್ತ.

.

ಚಿಮ್ಮಿಸ್ /*cimmisɨ*/ ನಾ. ಎಪ. ಹೆಣ್ಣು ಮಕ್ಕಳ ಒಳ ಉಡುಪು. inner wear of girls. ವಾ: ಚಿಮ್ಮಿಸ್ ಹಾಕಿ ಮತ್ತೆ ಗೌನ್ ಹಾಕ.

ಚಿಯಂಡಿರ /*ciyaṇḍira*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಚಿರಕಲ್ಲು /*cirakallu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಚಿರಾವ್ ಮೀನ್ /*cira:vɨ mi:nɨ*/ ನಾ. ಒಂದು ಜಾತಿಯ ಮೀನು. a variety of fish. ವಾ: ಅದ್ ಚಿರಾವ್ ಮೀನ್‌ಗಡ.

ಚಿರಿಮೆಣ್ಸ್ /*ciri meṇsɨ*/ ನಾ. 1. ಸಣ್ಣ ಮೆಣಸು, 2. ಗಾಂಧಾರಿ ಮೆಣಸು, 3. ಲವಂಗ ಮೆಣಸು. bird's eye chilli. ವಾ: ಚಿರಿ ಮೆಣ್ಸ್ ಕಾರ ಆದರು ಅಸ್ಟೆ ಒಳ್ಳೆದ್.

ಚಿರಿ[1] /*ciri*/ ನಾ. ಚಿಗುರು. a sprout/ shoot. ವಾ: ಕಪಿಗ ಯಾಲ ದೈದ ಚಿರಿನ ತಿಂದವೆ.

ಚಿರಿ[2] /*ciri*/ ನಾ. ಪೈರು. plant. ವಾ: ಈ ಸರಿನ ಚಿರಿ ಲಾಯ್ಕ ಉಟ್ಟು.

ಚಿರಿಂಟಿ /*ciriṇṭi*/ ನಾ. ತಿರುಚಿ. to twist. ವಾ: ಅಪ್ಪ ಕೋಳಿ ಕುತ್ತಿಗೆನ ಚಿರಿಂಟಿ ಹಾಕಿತ್.

ಚಿರುಂಬು[1] /*cirumbu*/ ನಾ. 1. ಬಟ್ಟೆಯನ್ನು ಕಲ್ಲಿನಲ್ಲಿ ಉಜ್ಜುವುದು, 2. ತಿರುಟುವುದು, 3. ಕಿವುಚು. 1. to scrub one's clothes with stone, 2. to rub clothes with stones, 3. to squeeze. ವಾ: ಗಾಂದಾರಿ ಮೆಣ್ಸ್‌ನ ಚಿರಿಂಬಿ ಉಪ್ಪು ಹಾಕಿ ಕಿತ್ತುಳಿದ್ ಉಪ್ಮೆಣ್ಸ್ ಮಾಡ್.

ಚಿರುಂಬು[2] /*cirumbu*/ ನಾ. ಕಿವುಚು. to squeeze. ವಾ: ಅನ್ನಕೆ ಸಣ್ಣಮೆಣ್ಸ್ ಚಿರ್‌ಂಬಿ ಉಂಬಕೆ ಲಾಯ್ಕ್. ಪ: ನುರಿಪು(ತು)

ಚಿರೆಕಲ್ಲು /*cirekallu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮಡಪ್ಪಾಡಿ ಗ್ರಾಮದ ಜಾಗ. a locality in Madappadi village in Sullia Taluk of Dakshina Kannada District.

ಚಿರ್‌ಂಬು /*cirɨmbu*/ ಕ್ರಿ. 1. ಹಿಂಡು, 2. ತಿರುಟು. 1. to squeeze, 2. to twist, ವಾ: ಅರ್ವೆನ ಚಿರ್‌ಂಬಿ ಜಾಲ್ಸಿ ಮತ್ತೆ ವಣ್‌ಗಿಕೆ ಹಾಕೊಕು. ಪ: ಚಿರ್‌ಂಬಿತ್ – ಹಿಂಡಿದನು(ಳು)

ಚಿರ್ಕ್ /*cirkɨ*/ ಅ. ದ್ರವ ಚಿಮ್ಮು. gushing water. ವಾ: ಚಿರ್ಕ್ ತ ನೀರ್ ಹಾರ್ತ್.

ಚಿರ್ಪಿಕಂಡ್ /*cirpikaṇḍɨ*/ ನಾ. ಬೊಬ್ಬೆ ಹೊಡೆಯುತ್ತ. screaming. ವಾ: ಮಕ್ಕ ಚಿರ್ಪಿಕಂಡ್ ಓಡಿ ಬಂದೊ.

ಚಿರ್ಪು /*cirpu*/ ನಾ. ಕಿರಾಲ್ ಬೋಗಿಮರ. Hopea parviflora tree. ವಾ: ಅದ್ ಚಿರ್ಪು ಮರ.

ಚಿಲ್ಕ /*cilka*/ ನಾ. 1. ಚಿಲಕ, 2. ಬಾಗಿಲಿಗೆ ಬೀಗ ಹಾಕಲು ಇರುವ ಸರಪಳಿ, 3. ತಾಳ, 4. ಅಗುಳಿ. 1. a latch, 2. a chain to lock the door, 3. a latch, 4. a latch. ವಾ: ಬಾಕನ ಬಾಗ್‌ಲಿಗೆ ಚಿಲ್ಕ ಹಾಕಂಡ್ ಬಾ.

ಚಿಲ್ಕವರೆ /*cilkavarɛ*/ ನಾ. ಅವರೆಕಾಯಿ ಹೆಸರು. hyacinth beans. ವಾ: ಚಿಲ್ಕವರೆನ ಸೊಲ್ದ್ ನೀರ್‌ಲಿ ಪದ್‌ನಿಸಿ ಮತ್ತೆ ಚಿಲ್ಕುಸುದು.

ಚಿಲ್ಕಿ /*cilki*/ ನಾ. ಆಟದ ವಸ್ತು, ಚಪ್ಪಟೆ ಕಲ್ಲು. a flat stone. ವಾ: ಆಡಿಕೆ ಚಿಲ್ಕಿ ಬೇಕಲ? **ಚಿಲ್ಕಿ ಆಟ** /*cilki a:ṭa*/ ಹೆಣ್ಣು ಮಕ್ಕಳು ಆಡುವ ಕುಂಟೋಬಿಲ್ಲೆ ಆಟ. hopscotch, a game played by girls. ವಾ: ಅಲ್ಲಿ ಹೆಣ್ಮಕ್ಕ ಚಿಲ್ಕಿ ಆಟ ಆಡ್ದು ಜೋರು.

ಚಿಲ್ಕ್‌ಕ್ ಕಳಿ /*cilkɨkɨ kaḷi*/ ನಾ. ಕುಂಟೆ ಬಿಲ್ಲೆ ಆಟ. hopscoth game. ವಾ: ಗೂಡೆಗ ಚಿಲ್ಕ್‌ಕ್ ಕಳಿ ಆಡ್‌ತೊಳ.

ಚಿಲ್ತಡ್ಕ /*ciltaḍka*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ನಾಲ್ಕೂರು ಗ್ರಾಮದ ಜಾಗ. 1. family, 2. lineage, 3. a locality in Nalkuru village in Sullia Taluk of Dakshina Kannada District.

ಚಿಲ್ಪಾರು /*cilpa:ru*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಚಿಲ್ಲನ /*cillana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಚಿಲ್ಲಿ /*cilli*/ ನಾ. 1. ಸಾಮಾನ್ಯವಾಗಿ ಕಂಗಿನ ಹಾಳೆಯ ಎರಡು ತುದಿಗಳನ್ನೂ ವಿಶಿಷ್ಟ ರೀತಿಯಲ್ಲಿ ಮಡಚಿ ಕಡ್ಡಿಯಿಂದ ಚುಚ್ಚಿ ಅಥವಾ ಹಗ್ಗದಿಂದ ಕಟ್ಟಿ ತಯಾರಿಸಿದ ಪಾತ್ರೆಯಂತಹ ರಚನೆ, 2. ಊಟ ಮಾಡುವಾಗ ದ್ರವ ಆಹಾರಗಳು ಚೆಲ್ಲಬಾರದೆಂದು ಬಾಳೆ ಎಲೆಯ ಬದಿಗಳನ್ನು ಕಟ್ಟುವುದು. 1. a container/bowl made of plantain leaf or any other leaf, 2. to stitch the edges of plantain leaf so that liquid food doesn’t flow out. ವಾ: ಅಡ್‌ಕೆ ಹಾಳೆಲಿ ಚಿಲ್ಲಿ ಕಟ್ಟುದು. ಪ: ಕಿಳ್ಳಿ

ಚಿಲ್ಲ್[1] /*cillɨ*/ ನಾ. ಕೋವಿ ಈಡ್‌ನಲ್ಲಿ ಉಪಯೋಗಿಸುವ ಸಣ್ಣ ಗಾತ್ರದ ಸೀಸದ ಗೋಲಿ. lead balls used in a gun. ವಾ: ಕೇಪ್‌ನ ಬೆಡಿಗೆ ಚಿಲ್ಲ್ ತುಂಬುಸಿ ಹೊಡೆದು.

ಚಿಲ್ಲ್[2] /*cillɨ*/ ನಾ. ಚಿಕ್ಕಗುಂಡು. a small bullet. ವಾ: ಕೋವಿಗೆ ಚಿಲ್ಲ್ ಹಾಕಿಸೊಳೊ.

ಚಿವ್‌ಂಟಿ ಇಸ್ /*civɨṇṭi isɨ*/ ಕ್ರಿ. ಚಿವುಟುವುದು. to pinch. ವಾ: ಮೆಣ್ಸ್ ದೈನ ಚಿವ್‌ಂಟಿರೆ ದೈ ಅಗಾಲಲಿ ಬಂದದೆ. ಪ: ಜಿಂಟಿ ಇಸ್

ಚಿಳ್ಳೆ /*ciḷḷɛ*/ ನಾ. 1. ಸಣ್ಣದಾದ, 2. ಮರಿ ಗಿಡಗಳು. 1. small, 2. tendrils. ವಾ: ಚಿಳ್ಳೆ ಪಿಳ್ಳೆಗಳಿಗೆ ಅಲ್ಲಿ ಎಂತ ಕೆಲ್‌ಸ?

ಚೀ ಮುಳ್ಳು /*ci: muḷḷu*/ ನಾ. 1. ಒಂದು ವಿಧದ ಮುಳ್ಳು ಗಿಡ, ಇದರ ಚಿಗುರನ್ನು ಚಟ್ನಿ ಮಾಡುತ್ತಾರೆ, 2. ತೋಟ, ಬೇಲಿ ಬದಿಗಳಲ್ಲಿ ಸಿಗುತ್ತದೆ. 1. shoots of this thorny plant used in making chutney, 2. a plant found near the fence of fields. ವಾ: ಚೀ ಮುಳ್ಳು ಚಿಗ್‌ರ್‌ನ ಪೊಜ್ಜಿ ಮಾಡುವೆ.

ಚೀಂಕುಳಿ /*ci:ŋkuḷi*/ ನಾ. ಕಾಡು ಪಾಪ. a lemur. ವಾ: ಚೀಂಕುಳಿ ನೋಡಿಕೆ ಮುದ್ದು ಮುದ್ದು.

ಚೀಂಕ್ /*ci:ŋkɨ*/ ನಾ. ಸೌದೆಯ ಅತೀ ಸಣ್ಣ ಚೂರುಗಳು.

pieces of firewood. ವಾ: ಸೊವುದೆ ಚೀಂಕ್ ಕೈಗೆ ಹೆಟ್ಟಿದ್. ಪ: ಸೀಂಕ್

ಚೀಂಕ್ರ /*ci:ŋkra*/ ನಾ. ವ್ಯಕ್ತಿನಾಮ. name of a person. ವಾ: ಚೀಂಕ್ರ ಬಾತ?

ಚೀಂಕ್ರ್^{1} /*ci:ŋkrɨ*/ ನಾವಿ. ಬೆಳವಣಿಗೆ ಇಲ್ಲದ ಸಸ್ಯ. stunted plant. ವಾ: ನೆಟ್ಟ ಮೆಣ್ಸ್ ದೈಗ ಚೀಂಕ್ರ್ ಆಗೋತ್, ದೈಗ ಬರ್‌ಕತ್ತೆ ಇಲ್ಲೆ.

ಚೀಂಕ್ರ್^{2} /*ci:ŋkrɨ*/ ನಾ. ಮರದ/ಬಿದಿರಿನ ಬೆತ್ತದ ಅಥವಾ ಇತರ ವಸ್ತುಗಳಿಂದ ತೆಗೆದ ಸಪೂರ ಹಾಗೂ ಉದ್ದನೆಯ ಭಾಗ. a thin and long strip of bamboo or wood. ವಾ: ಬೆತ್ತದ ಚೀಂಕ್ರ್ ನ ಕೀಸುದು.

ಚೀಂಕ್ರ್^{3} /*ci:ŋkrɨ*/ ನಾವಿ. ಸಪೂರ ಇರುವ ವಸ್ತು ಅಥವಾ ವ್ಯಕ್ತಿಗಳನ್ನು ಉದಾಹರಿಸಿ ಬಳಸುವ ಪದ. a lean/thin person. ವಾ: ಆ ಗೂಡೆ ಚೀಂಕ್ರನಾಂಗೆ ಉಟ್ಟ್.

ಚೀಂಕ್ಲ್ /*ci:ŋklɨ*/ ನಾ. 1. ಸುಖಿಯಾಗಿ ಬೆಳೆಯದಿರುವುದು, 2. ಬೆಳವಣಿಗೆ ಇಲ್ಲದ ಸಸ್ಯ. a stunted plant. ವಾ: ತೊಂಡೆ ನೆಟ್ಟದ್ ಚೀಂಕ್ಲ್ ಬೊಳ್ಳಿ ಆತ್.

ಚೀಂಗೆಕುಳಿ /*ci:ŋgɛkuḷi*/ ನಾ. 1. ಕಾಡು ಪಾಪ, 2. ನಾಚಿಕೆ ಸ್ವಭಾವದ ಪ್ರಾಣಿ. 1. a lemur, 2. a shy animal. ವಾ: ಚೀಂಗೆಕುಳಿ ಪಾಪದ ಪ್ರಾಣಿ.

ಚೀಂಚಟ್ಟಿ /*ci:ŋcaṭṭi*/ ನಾ. 1. ಕಬ್ಬಿಣದ ಬಾಂಡಲಿ, 2. ಬಾಣಲೆ, 3. ಅಡುಗೆ ಮಾಡಲು ಬಳಸುವ ಅಗಲ ಬಾಯಿಯ ಚಿಕ್ಕ ಪಾತ್ರೆ. 1. cast iron frying pan, 2. a frying pan, 3. a small vessel used in cooking. ವಾ: ಚೀಂಚಟ್ಟಿಲಿ ನಾಕ್ ಒಣ್‌ಗಿಲ್ ಮೀನ್ ಹೊರ್‌ದನೆ.

ಚೀಂಟಿ /*ci:ŋṭi*/ ನಾ. 1. ಸಂಪೂರ್ಣ ಖಾಲಿ ಮಾಡಿ, 2. ಸವರಿ (ಹಿಟ್ಟುವೂ ಬಿಡದಂತೆ ಬೆರಳಿನಿಂದ ಕೈಯಿಂದ ಸವರಿ ತೆಗೆಯುವುದು, 3. ಪೂಜಿ ತೆಗಿ, 4. ಪೂರ್ತಿಯಾಗಿ. 1. emptying something completely, 2. to scrape and remove completely, 3. to remove completely, 4. completely. ವಾ: ಎಲ್ಲ ತಿಂದ್ ಚೆಟ್ಟಿನ ಚೀಂಟಿ ಇಸಿಯೊಳೊ. ಪ: ಚೀಂಟ್ – ತೀಡು

ಚೀಂಪು /*ci:mpu*/ ಕ್ರಿ. 1. ಚೀಪು, 2. ನೆಕ್ಕು, 3. ಹೀರು. 1. to suck, 2. to lick, 3. to draw liquid. ವಾ: ಮಕ್ಕ ಗದೆ ಮಿಟಾಯಿನ ಚೀಂಪುದು.

ಚೀಂಬುಳು /*ci:mbuḷu*/ ನಾ. ನೊರೆ, ನೆಗಡಿಯಂತೆ ಬೇಧಿ. amoebic dysentery. ವಾ: ಚೀಂಬುಳುನಂಗೆ ನಾಕೈದ್ ಸಲ ಹೋತು.

ಚೀಕೊಟೆ /*ci:koṭɛ*/ ನಾ. ಮೀನಿನ ಬಗೆಗಳು. variety of fish. ವಾ: ಅದ್ ಚೀಕೊಟೆ ಮೀನ್‌ಗಡ. ಪ: ಬೋಳುಮುಳ್ಳ ಮೀನ್

ಚೀನಿಕಾಯಿ /*ci:nika:yi*/ ನಾ. ಸಿಹಿ ಕುಂಬಳ ಕಾಯಿ. a pumpkin. ವಾ: ಚೀನಿಕಾಯಿ ಪಲ್ಯ, ಗೈಪು ಎರ್‌ಡೂ ಮಾಡಕ್. ಪ: ಕೆಂಬುಡೆ

ಚೀಪು^{1} /*ci:pu*/ ಕ್ರಿ. 1. ಹೀರು, 2. ಸೀಪು, 3. ನಾಲಗೆಯಿಂದ ಸವಿ ನೋಡು. 1. to draw liquid, 2. to lick, 3. to lick and taste. ವಾ: ಕಿತ್ತುಳಿ ತೊಳೆನ ಚೀಪು ರಸ ಬಂದದೆ.

ಚೀಪು^{2} /*ci:pu*/ ನಾ. 1. ಚಿಲಕ, 2. ಅಗುಳಿ. 1. a latch, 2. a bolt. ವಾ: ಬಾಗ್‌ಲಿಗೆ ಚೀಪು ಹಾಕಿದನ?

ಚೀಪು^{3} /*ci:pu*/ ನಾ. ಬಾಚಣಿಕೆ. a comb. ವಾ: ಚೀಪು ತಕಂಡ್ ತಲೆ ಬಾಚ್.

ಚೀಪೆ ಕಡ್ಡಿ ಸೊಪ್ಪ್ /*ci:pɛ kaḍḍi sopp*/ ನಾ. ಕಜ್ಜಿಗೆ ಔಷಧಿಯಾಗಿ ಬಳಕೆ ಮಾಡುವ ಸೊಪ್ಪು. a medicinal plant used to treat eczema. ವಾ: ಕಜ್ಜಿಗೆ ಚೀಪೆ ಕಡ್ಡಿ ಸೊಪ್ಪ್ ಮೊದ್ದ್ ಹಾಕಿರಾದು.

ಚೀಪೆ ಮರ /*ci:pɛ mara*/ ನಾ. ಚೀಪೆ ಹಣ್ಣಿನ ಮರ, ಒಂದು ಕಾಡುಮರ. guava tree. ವಾ: ಚೀಪೆ ಮರತ ಒಂದ್ ಕಾಡ್ ಮರ.

ಚೀಪೆ ಹಣ್ಣ್ /*ci:pɛ haṇṇɨ*/ ನಾ. 1. ಪೊರಕೆ ಮಾಡಲು ಬಳಸುವ ಗಿಡದಲ್ಲಿ ಬಿಡುವ ನೀಲಿ ಬಣ್ಣದ ಸಿಹಿಯಾದ ತಿನ್ನಲು ಯೋಗ್ಯವಾದ ಹಣ್ಣು, ಈ ಗಿಡವನ್ನು ಒಣಗಿಸಿ ಕಸ ಗುಡಿಸಲು ಪೊರಕೆಯಾಗಿ ಬಳಸುತ್ತಾರೆ, 2. ಚೀಪೆ ಹಣ್ಣು, 3. ಖರ್ಜೂರ ಹಣ್ಣಿನ ಬೀಜದಂತಿರುವ ಜೀಜದ ಹಣ್ಣು. 1. an edible, sweet, blue fruit grown in a tree from which brooms are made, 2. a wild fruit resembling date fruit, 3. a fruit that resembles the seeds of date fruit. ವಾ: ಸಣ್ಣದರ್‌ಲಿ ನಾವು ಅವ್ವನ ಮನೆಗೆ ಹೋಕನ

ಚೀಪೆ ಹಣ್ಣ್ ತಿಂಬೊತಿದ್ದೊ, ಹಣ್ಣ್ ಸೀಂಯಿಯಾಗಿ ಬಾರಿ ಲಾಯ್ಕ ಇದ್ದದೆ.

ಚೀಪೆ^{1} /*ci:pɛ*/ ನಾ. ಸಿಹಿ. sweet. ವಾ: ಕಿತ್ತುಳಿ ಬಾರಿ ಚೀಪೆ ಇತ್ತ್.

ಚೀಪೆ^{2} /*ci:pe*/ ನಾ. 1. ಪೊರಕೆ, 2. ಬರಲು, 3. ಕಸ ಗುಡಿಸುವ ಸಾಧನ, 4. ಕಸಬರಿಗೆ, 5. ಹಿಡಗಲು. 1. a broom, 2. a broom, 3. a tool to sweep the floor, 4. a broom, 5. a broom. **ಬಿಸಾಕಿದ ಕುಂಟು ಚೀಪೆ ಬೇಕ್(ಗಾ). ಸಾವ್ರ ಮಕ್ಕಳ್‌ಗೆ ಒಂದೇ ಉಡದಾರ – ಚೀಪೆ.** ವಾ: ಚೀಪೆನ ಗುಡ್‌ಸಿ ಎಲ್ಲಿ ಇಸಿದ?

ಚೀಮುಳ್ಳು^{1} /*ci:muḷḷu*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕುತ್ಕುಂಜ ಗ್ರಾಮದ ಜಾಗ. 1. family, 2. lineage, 3. a locality in Kutkunja village in Sullia Taluk of Dakshina Kannada District.

ಚೀಮುಳ್ಳು^{2} /*ci:muḷḷu*/ ನಾ. ಒಂದು ಜಾತಿಯ ಮುಳ್ಳಿನ ಗಿಡ. a thorny plant. ಪ: ಚೀಂಪುಳು ಕಾಯಿ

ಚೀಯ /*ci:ya*/ ಅ. ಹೇಸಿಗೆಯನ್ನು ಸೂಚಿಸುವ ಪದ. term indicating intense dislike – detestation. ವಾ: ಚೀಯ ಕೂಸ್ ಕಕ್ಕ ಮಾಡಿಕೊಂಡುಟ್ಟು.

ಚೀಯಪ್ಪನ /*ci:yappana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಚೀರ್ /*ci:ri*/ ನಾ. ತಲೆಹೇನಿನ ಮೊಟ್ಟೆ. lice eggs. ವಾ: ತಲೆಲಿ ಚೀರ್ ತುಂಬಿ ಹೋವ್ಟು. **ಚೀರೆಣಿಗೆ** /*ci:rɛṇigɛ*/ ಸೀರನ್ನು ತೆಗೆಯಲು ಬಳಸುವ ಬಾಚಣಿಗೆ. a comb to remove nits (lice eggs) from hair. ವಾ: ತಲೆಲಿ ಚೀರಿದ್ದರೆ ಚೀರೆಣಿಗೆಲಿ ಎಳಿನೆ.

ಚೀರ್ ಕೊಟ್ಟೆ /*ci:rɨ koṭṭɛ*/ ನಾ. 1. ತೋಡಿನ ಚಿಕ್ಕಮೀನು, 2. ಚೀಕೊಟ್ಟೆ. a variety of fish found in a pond. ವಾ: ಚೀರ್ ಕೊಟ್ಟೆತಗ ಚೋಡ್‌ಲಿ ಒಳೊ.

ಚೀರ್ ಬಾಯಿ /*ci:rɨ ba:yi*/ ನಾ. 1. ಸೀಳುಬಾಯಿ, 2. ಸೀಳು ತುಟಿ. 1. Cleft lip and cleft palate, 2. cleft lip. ವಾ: ಗೂಡೆದ್ ಚೀರ್ ಬಾಯಿ ಮಾತಾಡಿರೆ ಅರ್ತಾದ್ಲೆ.

ಚೀಲ /*ci:la*/ ನಾ. 1. ಚೀಲ, 2. ಬ್ಯಾಗ್, 3. ಪದಾರ್ಥಗಳನ್ನು ತುಂಬಲು ಬಟ್ಟೆ, ಗೋಣಿ ಮೊದಲಾದವುಗಳಿಂದ ಮಾಡಿದ ಸಾಧನ. 1. a bag, 2. a handbag, 3. a gunny bag. ವಾ: ಬತ್ತ ಹಾಕಿಸಿಕೆ ದೊಡ್ಡ ಚೀಲ ಬೇಕಾದೆ.

ಚುಂಕಾಣಿ /*cuŋka:ṇi*/ ನಾ. 1. ದೋಣಿ ಹುಟ್ಟು, 2. ಸುಂಕಾಣಿ. 1. an oar, 2. a paddle. ವಾ: ದೋಣಿಲಿ ಚುಂಕಾಣಿ ಹಾಕಿರೆ ಮುಂದಕೆ ಹೋದು.

ಚುಂಗ್‌ಡಿ /*cuŋgiḍi*/ ನಾ. ಚಿಲ್ಲರೆ ಹಣ. money – lesser denomination -petty cash. ವಾ: ಇಪ್ಪತ್ ರುಪಾಯಿಗೆ ಚುಂಗ್ಡಿ ಬೇಕಿತ್. ಪ: ಚುಂಗುಡಿ

ಚುಂಡಿಲಿ /*cunḍili*/ ನಾ. ಚಿಕ್ಕ ಇಲಿ. mice. ವಾ: ಚುಂಡಿಲಿ ಪಾಪದ್, ಅದರ ಕೊತ್ತಿ ಹಿಡ್ತ್. ಪ: ಸೊಂಡಿಲಿ

ಚುಂಯಿ^{1} /*cunyi*/ ನಾ. ಅ. ಚುಚ್ಚು ಮದ್ದು(ಮಕ್ಕಳ ಭಾಷೆ). injection (in the vocabulary of children). ವಾ: ಜೆರ ಬಂದದಕ್ಕೆ ಆಸ್ಪತ್ರೆಲಿ ಚುಂಯಿ ಚುಚ್ಚಿದೊ.

ಚುಂಯಿ^{2} /*cunyi*/ ನಾ. ಅ. ನೀರ್ ದೋಸೆ(ಮಕ್ಕಳ ಭಾಷೆ). Neer Dosa, a variety of dosa (in the vocabulary of children). ವಾ: ದೋಸೆ ಹೊಯ್ಯಕನ ಚುಂಯಿತೇಳ್ದೆ.

ಚುರ್ಂಗ್ /*curngi*/ ನಾ. ಒಣಗಿ ಹೋಗು. dried. ವಾ: ಉಪ್ಪಿಗೆ ಹಾಕಿದ ಮಾನ ಮಿಡಿ ಚುರ್ಂಗಿಟು.

ಚುಕ್ಕಾಣಿ /*cukka:ṇi*/ ನಾ. ದೋಣಿ ಚಲಿಸುವಂತೆ ಮಾಡಲು ಅಂಬಿಗ ಬಳಸುವ ಹುಟ್ಟು. an oar. **ಚುಕ್ಕಾಣಿ ಇಲ್ಲದ ದೋಣಿನಂಗೆ(ಗಾ).** ವಾ: ನೀರಿಗೆ ಚುಕ್ಕಾಣಿ ಹಾಕಿರೆ ದೋಣಿ ಮುಂದೆ ಹೋದೆ.

ಚುಕ್ಕಿ^{1} /*cukki*/ ನಾ. 1. ಚುಕ್ಕಿ, 2. ಬಿಂದು. 1. a dot, 2. a mark. ವಾ: ದೃಸ್ಟಿಯಾಗದಂಗೆ ಮೋರೆಕೆ ಸಣ್ಣ ಕರಿ ಚುಕ್ಕಿ ಹಾಕ.

ಚುಕ್ಕಿ^{2} /*cukki*/ ನಾ. 1. ನಕ್ಷತ್ರ, 2. ಚುಕ್ಕೆ 3. ತಾರೆ, 4. ಉಡು, 5. ಅಶ್ವಿನಿ ಮೊದಲಾದ ಇಪ್ಪತ್ತೇಳು ನಕ್ಷತ್ರಗಳಲ್ಲಿ ಯಾವುದಾದರೂ ಒಂದು. 1. a star, 2. a dot, 3. a star, 4. to wear, 5. Ashwini, one of 27

stars. ವಾ: ಆಕಾಸಲಿ ಎಸ್ಟೊಂದ್ ಚುಕ್ಕಿಗ ಮಿಣಮಿಣತೇಳ್‌ದೆ.

ಚುಕ್ಕಿತ್ /*cukkitɨ*/ ನಾ. ಹಂದಿ ನೆಲವನ್ನು ಮೂತಿಯಿಂದ ಬಗೆಯುವುದು. rooting behaviour of pigs. ವಾ: ಬೆಲ್ಲದ ಗೆಣ್‌ಸ್‌ನ ಪೂರ ಹಂದಿಗ ಚುಕ್ಕಿ ತಿಂದೊಳೊ.

ಚುಕ್ಕಿಬೆಳಕ್ /*cukkibɛ[akɨ*/ ನಾ. ನಕ್ಷತ್ರ ಮಿನುಗುವುದು. twinkling star. ವಾ: ಆಕಾಸಲಿ ಚುಕ್ಕಿಬೆಳಕ್ ಇಂದ್ ಲಾಯ್ಕಲಿ ಕಂಡದೆ.

ಚುಕ್ಕುದು /*cukkudu*/ ಕ್ರಿ. 1. ಹೂಡು, 2. ಚುಕ್ಕಿತ್. 1. uproot, 2. removed. ವಾ: ನೆಟ್ಟ ತರ್‌ಕಾರಿನೆಲ್ಲ ಹಂದಿ ಚುಕ್ಕುದು. ಪ: ಚುಕ್ಕುವೊ – ಹೂಡಬಹುದು

ಚುಕ್ರಕೂರ್‌ದು /*cukraku:rɨdu*/ ನಾ. ಮೊಣಕಾಲು ಮಡಚಿ ಕೂರುವುದು. sitting cross legged. ವಾ: ಚುಕ್ರಕೂರ್‌ದು ಆದರೆ ಕೂರು ಇಲ್ಲರೆ ಕುರ್‌ಸಿಲಿ ಕೂರು. ಪ: ಚುರ್ಕರ ಕೂರುದು

ಚುಕ್ರಡ್ಕ /*cukraḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅರಂತೋಡು ಗ್ರಾಮದ ಜಾಗ. a locality in Arantodu village in Sullia Taluk of Dakshina Kannada District.

ಚುಟ್ಟಿ /*cuṭṭi*/ ನಾ. 1. ಹಂದಿಯ ಬೊಜ್ಜು, 2. ಹಂದಿ ಮಾಂಸದ ಮೇಲ್ಪದರ, 3. ಹಂದಿಯ ಚರ್ಮದ ಪದರ. 1. fat of a pig, 2. upper layer of pig mutton, 3. layer of pigs skin. ವಾ: ಚುಟ್ಟಿ ತಿಂದನ?

ಚುಡಂಕ್ /*cuḍaŋkɨ*/ ನಾ. ಕತ್ತಿ ಸಿಕ್ಕಿಸುವ ಸಾಧನ, 2. ತೊಡಜ. a sheath/a pouch attached to the waist belt to hold a knife. ವಾ: ಚುಡಂಕ್‌ನ ಸೊಂಟಕೆ ಕಟ್ಟಿದ್. **ಚುಡಂಕೋಳು** /*cuḍaŋko:ḷu*/ ಸೊಂಟದಲ್ಲಿ ಕತ್ತಿ ಇಡುವ ಸಾಧನ. ವಾ: ಚುಡಂಕೋಳುಲಿ ಸೆಕ್ಕಿಸಿದೊ. **ಚುಡೊಂಕ್** /*cuḍoŋkɨ*/ ನಾ. ಕತ್ತಿ ಸಿಕ್ಕಿಸಲು ಸೊಂಟಕ್ಕೆ ಕಟ್ಟುವ ಕಬ್ಬಿಣದ ಕೊಕ್ಕೆ ಇರುವ ಹಗ್ಗದ ಪಟ್ಟಿ. a hook attached to the waist belt to carry a knife. ವಾ: ಚುಡೊಂಕ್ ಕಟ್ಟಿ ಮರಕೆ ಹತ್ತುದು.

ಚುಮಿಚುಮಿ ಬೆಳ್ಕ್ /*cumicumi beḷkɨ*/ ಅ. ಬೆಳಗಿನ ಜಾವ. early morning/dawn. ವಾ: ಈ ಚುಮಿ ಚುಮಿ ಬೆಳ್ಕ್‌ಲಿ ನೀ ಎಲ್ಲಿಗೆ ಹೊರ್‌ಟದ್?

ಚುಮೆಣ್ಣೆ /*cumɛɳɳɛ*/ ನಾ. ಸೀಮೆಎಣ್ಣೆ. kerosine. ವಾ: ಚುಮೆಣ್ಣೆ ಹಾಕಿ ಬೆಂಕಿ ಮಾಡ್‌ದು.

ಚುಮ್ಮ /*cumma*/ ಅ. ಮುತ್ತುಕೊಡುವುದನ್ನು ಹೇಳುವ ಪದ. kiss given to children. ವಾ: ಒಂದ್ ಚುಮ್ಮ ಕೊಡ್‌ನೆ ಕೂಸು.

ಚುಮ್ಮಕ್ಕ /*cummakka*/ ನಾ. ಪ್ರೀತಿಯಿಂದ ಕರೆಯುವುದು. an affectionate way of calling. ವಾ: ಚುಮ್ಮಕ್ಕ ಈಗ ಬಂದನಾ?

ಚುಮ್ಮಣ ಕುಞ /*cummaṇa kuɲɲa*/ ನಾ. ಚಿಕ್ಕ ಮಗು, ಮಕ್ಕಳನ್ನು ಪ್ರೀತಿಯಿಂದ ಕರೆಯುವುದು. an affectionate way of calling small children. ವಾ: ಚುಮ್ಮಣ ಕುಞ ಬಾನೆ ಒಮ್ಮೆ ತೆತ್ತಿಕಣಿ.

ಚುಮ್ಮಣ್ಣ /*cummaɳɳa*/ ನಾ. ಪ್ರೀತಿಯಿಂದ ಕರೆಯುವ ಪದ. an affectionate term. ವಾ: ನೀ ನನ್ನ ಮುದ್ದು ಚುಮ್ಮಣ್ಣಲ.

ಚುಮ್ಮಿ^{1} /*cummi*/ ನಾ. ಗಂಡು ಮಗುವಿನ ಜನನಾಂಗ. penis of a small boy. ವಾ: ಚುಮ್ಮಿ ಮುಚ್ಚಿಕ ಕೂಸು. ಪ: ತುಮ್ಮಿ

ಚುಮ್ಮಿ^{2} /*cummi*/ ನಾ. ಕೊಂಡಾಟದಿಂದ ಕರೆವ ಪದ. an affectionate term.

ಚುಮ್ಮುಣಿ /*cummuṇi*/ ನಾ. ಸೀಮೆ ಎಣ್ಣೆ ದೀಪ. kerosine lamp. ವಾ: ಚುಮ್ಮುಣಿಗೆ ಬತ್ತಿ ಹಾಕೊಕು.

ಚುರಿ /*curi*/ ಕ್ರಿ. 1. ಸಿಕ್ಕಿಸು, 2. ತೂತುಮಾಡು. 1. to hook, 2. to make a hole. ವಾ: ಮಲ್ಲಿಗೆ ಮೊಗ್ಗುನ ಸೂಜಿಲಿ ಚುರಿ. ಪ: ಹೂವುನ ಚುರ್ದ್ – ಮಾಲೆ ಮಾಡು; ಚುರಿನಿ – ಪೋಣಿಸಿ; ಚುರಿಯದು – ಪೋಣಿಸುವುದು; ಚುರಿಯೊಕು – ಪೋಣಿಸಬೇಕು. **ಚುರಿನಿ** /*curini*/ 1. ಪೋಣಿಸಿ, 2. ಸಿಕ್ಕಿಸಿ. 1. to string, 2. to hook. ವಾ: ಮಾಸನ ಬರೆಕೋಲುಗೆ ಚುರಿನಿ ಮತ್ತೆ ಸುಡಿ. **ಚುರ್ತ್** /*curtɨ*/ 1. ಪೋಣಿಸಿದನು, 2. ಪೋಣಿಸಿದಳು. 1. he strung, 2. she strung. ವಾ: ಅವುಳು ಮೊಣಿನ ಚುರ್ತ್.

ಚುರಿಹಣ್ /*curihaṇɨ*/ ನಾ. ಕೊಟ್ಟೆಹಣ್ಣು. wild jujube fruit (ziziphus rugosa). ವಾ: ಚುರಿಹಣ್‌ನ ತಿಂದವೆ. ಪ: ಚೂರಿ ಹಣ್ಣ್

ಚುರುಂಗು /*curuŋgu*/ ನಾ. 1. ಮುದುಡಿಹೋಗು, 2. ತನ್ನ ಗಟ್ಟಿತನವನ್ನು ಕಳೆದುಕೊಳ್ಳುವುದು. 1. withered, 2. losing strength. ವಾ: ಕೊಯ್ದಿಸಿದ ಮಾಯ್ನಣ್ಣ್ ಚುರುಂಗುದು.

ಚುರುಕ್ /*curukɨ*/ ನಾ. 1. ಚುರುಕು, 2. ಚತುರತೆ, 3. ತೀಕ್ಷ್ಣವಾದ. 1. an active person, 2. witty, 3. intense. ವಾ: ಗೂಡೆ ಕೆಲ್‌ಸಲಿ ಬಾರಿ ಚುರುಕ್. ಪ: ಚುರುಕುಟ್ಟು – ಚುರುಕಿದ್ದಾನೆ/ಳೆ

ಚುರೇದು /*curɛ:du*/ ನಾ. ಕರುಳು ಚುರುಕ್ಕೆನ್ನುವುದು. to feel intensely for someone. ವಾ: ಕೂಸು ಕಟ್ಲ್‌ಂದ ಬೀಳಿಕಾಕನ ಅಯ್ಯೆನ ಕರ್‌ಲ್ ಚುರೇದು.

ಚುರ್ಕರ /*curkara*/ ಕ್ರಿವಿ. 1. ಕಾಲನ್ನು ಮಡಚಿ ಶೌಚಕ್ಕೆ ಕುಳಿತುಕೊಳ್ಳುವ ಭಂಗಿಯಲ್ಲಿ ಕುಳಿತು ಕೊಳ್ಳುವುದು, 2. ಕುಕ್ಕರಗಾಲು. 1. sitting in squatting position, 2. a posture of sitting with the body weight on the feet and legs folded at the knees. ವಾ: ಚುರ್ಕರ ಕಾಲ್‌ಲಿ ಯಾಕೆ ಕುದ್ದದ್.

ಚುರ್ಕು /*curku*/ ಕ್ರಿವಿ. 1. ಕ್ರಿಯಾಶೀಲ, 2. ಲವಲವಿಕೆ, 3. ಚುರುಕು. 1. very active, 2. enthusiastic. ವಾ: ಅಕ್ಕ ಎಲ್ಲ ಕೆಲ್‌ಸಲು ಬಾರಿ ಚುರ್ಕು. ಪ: ಚುರ್ಕ್

ಚುರ್ಚಂಗಿ /*curcaŋgi*/ ನಾ. 1. ತುರಿಕೆ ಗಿಡ, 2. ತುರುಚಿ ಸೊಪ್ಪು. 1. stinging nettle plant, 2. Indian stinging nettle. ವಾ: ಚುರ್ಚಂಗಿ ದೈನ ಮುಟ್ಟ್ ಬಡ, ಮುಟ್ಟಿರೆ ತೊರ್‌ಸಿದೆ. ಪ: ಪಚ್‌ರೆಂಗಿ, ಆಕಿರೆ, ಆಕಿರಿಕೆ(ತು)

ಚುರ್ಟಿಕಂಬೊದು /*curṭikambɔdu*/ ಕ್ರಿವಿ. 1. ಸುರುಟಿಕೊಳ್ಳುವುದು, 2. ಸುತ್ತಿಕೊಳ್ಳುವುದು. 1. to spiral, 2. to coil. ವಾ: ಗಂಗೆ ಹುಳನ ಮುಟ್ಟಿರೆ ಚುರ್ಟಿಕಂಬೊದು.

ಚುರ್ದ್ /*curdɨ*/ ನಾ. 1. ಸುರಿದು, 2. ಪೋಣಿಸಿ, 3. ಸಿಕ್ಕಿಸಿ. 1. to spill/to pour, 2. to string, 3. to hook. ವಾ: ಕೈಲ್‌ಪೋದ್‌ಲಿ ಮಾಸನ ಬರೆಕೋಲಿಗೆ ಚುರ್ದ್, ಸುಟ್ಟ್ ಉಪ್ಮೆಣ್ಸ್ ಮಾಡಿವೆ. ಪ: ಚುರ್ಯದು – ಪೋಣಿಸುವುದು. **ಚುರ್ದೊ** /*caradɔ*/ ನಾ. 1. ಪೋಣಿಸಿದರು, 2. ಹೊಂದಿಸಿದರು, 3. ಜೋಡಿಸಿದರು, 4. ಮಣಿ, ಹೂವು ಮುಂತಾದುವನ್ನು ಸರಗಟ್ಟಲು ದಾರದಲ್ಲಿ ಸೇರಿಸಿದರು. 1. to string , 2. to match, 3. to join, 4. stringing flowers or beads to make a garland. ವಾ: ಮಲ್ಲಿಗೆ ಹೂನ ಮೊಗ್ಗ್‌ನ ಚುರ್ದೊ. ಪ: ಚುರ್ದೊಳೊ – ಪೋಣಿಸಿದ್ದಾರೆ

ಚುಳ್ಳರ ಮಾಣಿಕ /*cuḷḷara ma:ṇika*/ ನಾ. ಮರಳಿನ ನೆಲದಲ್ಲಿ ಗುಂಡಿತೆಗೆದು ಒಳಗೆ ಅವಿತುಕೊಳ್ಳುವ ಕ್ರಿಮಿ. an insect which digs the sand and hides inside the burrow. ವಾ: ಚುಳ್ಳರ ಮಾಣಿಕ ಪೊಯ್ಯೆಲಿ ಗುಂಡಿ ತೆಗ್‌ದ್ ಅಣ್‌ಂಗಿ ಕುದ್ದುರ್ದು.

ಚುಳ್ಳಾಡಿಕಂಡ್ /*cuḷḷa:ḍikaṇḍɨ*/ ಕ್ರಿವಿ. ಹಾರಿಕೊಂಡು. flying. ವಾ: ಸುರೂನ ಮಳೆಲಿ ದನಗ ಚುಳ್ಳಾಡಿವೆ.

ಚುಳ್ಳುದು /*cuḷḷudu*/ ಕ್ರಿ. ಹಾರಿ ಹಾರಿ ಓಡುವುದು. jumping and running. ವಾ: ಕರ್ ಬಾಲ ಕುತ್ತಮಾಡಿ ಚುಳ್ಳಿಕಂಡ್ ಓಡ್ತ್. ಪ: ಚುಳ್ಳುವ – ಕುಣಿಯುವ. **ಚುಳ್ಳುಚುಳ್ಳು ಹುಂಜ** /*cuḷḷu cuḷḷu huŋja*/ 1. ಹಾರಿ ಹಾರಿ ಓಡುವ ಹುಂಜ, 2. ಚುಕ್ಕೆ ಇರುವ ಕೋಳಿ. 1. a rooster, jumping and running, 2. a dotted hen. ವಾ: ಚುಳ್ಳು ಚುಳ್ಳು ಹುಂಜ ಅತ್ತೆಲ್ಲೊ ಹೋತ್.

ಚೂಂತಾರು /*cu:nta:ru*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಮರಪಡ್ನೂರು ಗ್ರಾಮದ ಜಾಗ. a locality in Amarapadnuru village in Sullia Taluk of Dakshina Kannada District.

ಚೂಂಪು[1] /*cu:mpu*/ ನಾ. 1. ಮೊನಚು, 2. ಚೂಪು. 1. sharp, 2. sharp-edged. ವಾ: ಚೂಂಪು ಕೋಲ್‌ನ ಹಿಡ್ಕಂಡ್ ಕುತ್ತಿಬುಡ್ಬಡ. ಪ: ಚೂಂಪುಂದ – ಮೊನಚಿನಿಂದ

ಚೂಂಪು[2] /*cu:mpu*/ ನಾ. 1. ಚೀಪು, 2. ನೆಕ್ಕು. 1. to suck, 2. to lick. ವಾ: ಕೊತ್ತಿ ನೆಲಲಿ ಚೆಲ್ಲಿದ ಹಾಲ್‌ನ ಚೂಂಪುದು. ಪ: ಉಜುಂಬು, ಜೂಂಬು(ತು)

ಚೂಗುಟ್ಟ್ /*cu:guṭṭɨ*/ ಕ್ರಿವಿ. ದಾಳಿ ಮಾಡುವಂತೆ ಕರೆ ಕೊಡುವುದು. to order an attack. ವಾ: ತೋಟಕ್ಕೆ ದನಗ ಬಾಕನ ನಾಯಿಗೆ ಚೂಗುಟ್ಟುದ್.

ಚೂಟಿ /*cu:ṭi*/ ಕ್ರಿ. 1. ಚುರುಕು, 2. ಕ್ರಿಯಾಶೀಲ. 1. bright, 2. active. ವಾ: ಚೂಟಿ ಕೂಸು.

ಚೂಟ್‌ಕಳ /*cu:ṭikaḷa*/ ನಾ. 1. ಸ್ಮಶಾನ, 2. ದಹನ ಸ್ಥಳ, 3. ಹೆಣ ಸುಡುವ ಜಾಗ, 4. ರುದ್ರಭೂಮಿ. 1. a graveyard, 2. a place where dead bodies are

cremated, 3. a crematorium, 4. a cemetery. ವಾ: ಚೂಟ್‌ಕಳದ ಕಾಡ್ ಕಡ್‌ದ್ ಬೊಳಿ ಮಾಡಕು, ಚೂಟ್ ಕಳಕೆ ಹಂಗೆಲ್ಲ ಸುಮ್ಮನೆ ಹೋಕಾಗದ್, ಒಂದೊಂದು ಕುಟುಂಬಕ್ಕೆ ಅವರದೇ ಆದ ಚೂಟ್‌ಕಳ ಇದ್ದದೆ. ಪ: ಚೂಟ್ಕಳ, ಚೂಟುಕಳ

ಚೂಟ್‌ಮಣ್ /*cu:ṭimaṇi*/ ನಾ. ನಿರುಪಯುಕ್ತ ಕಾಡು ಕಸಗಳ ಮೇಲೆ ಮಣ್ಣು ಹಾಕಿ ಅದನ್ನು ಸುಟ್ಟು ತಯಾರಿಸಿದ ಫಲವತ್ತಾದ ಮಣ್ಣು. a fertile soil, formed due to the process of burning unwanted plants and allowing it to process with soil-Slash and burn agriculture. ವಾ: ಚೂಟ್‌ಮಣ್ ದೈಕೆ ಹಾಕಕ್. ಪ: ಚೂಟುಮೊಣ್ಣು, ಚೂಟು ಮಣ್ಣ್

ಚೂಟ್‌ಮಾಡ್ /*cu:ṭima:ḍi*/ ಕ್ರಿ. ಶವವನ್ನು ದಹನ ಮಾಡುವ ಅಂತ್ಯಸಂಸ್ಕಾರ ಪ್ರಕ್ರಿಯೆ. the process of cremation. ವಾ: ಹೆಣನ ಚೂಟ್‌ಮಾಡ್‌ದು.

ಚೂಟ್‌ಮೊಣ್ಣ್ /*su:ṭi moŋŋi*/ ನಾ. ಸುಟ್ಟ ಮಣ್ಣು. burnt soil.

ಚೂಡ /*cu:ḍa*/ ನಾವಿ. 1. ಮಾನಸಿಕ ಅಸ್ವಸ್ಥ, 2. ಹುಚ್ಚ ಮೂರ್ಖ, 3. ಅತಿಯಾದ ಸಿಟ್ಟು. 1. mentally challenged, 2. insane, 3. excessive anger. ವಾ: ಅಂವನ ವಿಸ್ಯಕೆ ಹೋಬಡ, ಅಂವ ಬೊರಿ ಚೂಡ.

ಚೂಡಿ ಬೊಳ್ಳಿ /*cu:ḍi bɔḷḷi*/ ನಾ. ತೆಂಗಿನ ನಾರಿನ ಹಗ್ಗ. a coir rope. ವಾ: ಚೂಡಿ ಬೊಳ್ಳಿಲಿ ಚೀಲದ ಬಾಯಿ ಕಟ್ಟಕ್. ಪ: ಪಿರಿಬಲ್ಲ್(ತು)

ಚೂಡು /*cu:ḍu*/ ನಾ. 1. ಶಾಖ, 2. ಸೆಕೆ, 3. ಕಾವು, 4. ಬೇಸಗೆಯ ಝಳ, 5. ಧಗೆ. 1. heat, 2. hot climatic condition, 3. heat, 4. hot rays of sun, 5. heat. ವಾ: ಹೊರೆಗೆ ನೆತ್ತಿ ಸುಟ್ಟದೆ, ಬಾರಿ ಚೂಡುಟ್ಟು.

ಚೂಣ /*cu:ṇa*/ ನಾ. 1. ಗೂಟ, 2. ಬೇಲಿಗೆ ಹಾಕುವ ಕಂಬ. 1. a peg/a wedge, 2. poles used in fencing. ವಾ: ದನ ಕಟ್ಟಿಕೆ ಚೂಣ ಹೊಡೆತಿದ್ದೊ. ಪ: ಚೂನ, ಸೂನೊ(ತು)

ಚೂದಾಡಮ್ಮನ /*cu:da:ḍammana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಚೂನ /*cu:na*/ ನಾ. 1. ಚೂಪಾದ ಮರದ ಗೂಟ, 2. ಬಿದಿರನ್ನು ಸಿಗಿದು ಮಾಡಿದ ಕಂಬ. 1. a sharp edged peg/wedge, 2. a split bamboo used as pole. ವಾ: ಚೂನ ಬಡಿಗೆನ ನೆಲಕೆ ಕುತ್ತಿಸ್.

ಚೂನಗೆಣ್ಸ್ /*cu:nageṇsi*/ ನಾ. ಮಣ್ಣಿನ ಆಳಕ್ಕೆ ಇಳಿಯುವ ಗೆಣಸು. a tuber that grows deep inside the ground. ವಾ: ಚೂನ ಗೆಣ್ಸ್‌ನ ತೀನ ಗೆಣ್ಸ್ ತ ಸನ ಹೇಳಿವೆ. ಪ: ಸೂನಕೆರೆಂಗ್(ತು)

ಚೂಪ್ /*cu:pi*/ ನಾ. 1. ಚೂಪು, 2. ತುದಿ ಮೊನಚು. 1. sharp, 2. sharp edge. ವಾ: ಪೆನ್ಸಿಲ್ ತುದಿನ ಚೂಪ್ ಮಾಡ್.

ಚೂರಿ[1] /*cu:ri*/ ನಾ. ನೇರವಾದ ಚಿಕ್ಕ ಕತ್ತಿ, ಚಾಕು. a straight knife, small in size. **ಚಿನ್ನದ ಚೂರೀಂತ ಕಣ್ಣಿಗೆ ಕುತ್ತಿಗೆ ಆದೆನಾ?(ಗಾ).** ವಾ: ಚೂರಿಲಿ ಹಣ್ಣ್‌ನ ಕೊಯ್ದ್ ಪಾಲ್ ಮಾಡಿ ತಂಬನೆ.

ಚೂರಿ[2] /*cu:ri*/ ನಾ. ಪ್ಯಾಕ್ ಮಾಡದಿರುವ ಹುಡಿ. unpacked powder. ವಾ: ಚೂರಿನ ಕವರ್‌ಗೆ ಹಾಕ್.

ಚೂರಿ[3] /*cu:ri*/ ನಾ. ಒಂದು ವಿಧದ ಮುಳ್ಳುಗಿಡ. **ಚೂರಿ ಕಾಯಿ** /*cu:ri ka:yi*/ ಮುಳ್ಳುಗಿಡದ ಹುಳಿ ರುಚಿಯ ಹಣ್ಣು. a sour fruit that grows on a thorny bush. ವಾ: ಚುರಿಕಾಯಿನ ಕೊಯ್ಯಕಾದುಲೆ. **ಚೂರಿ ಮುಳ್ಳ್** /*cu:ri muḷḷi*/ ಮುಳ್ಳಿನ ಪೊದೆ. a thorny bush. ವಾ: ಚೂರಿ ಮುಳ್ಳ್‌ಂದಾಗಿ ಕಾಲ್ ಹಾಕಿಕೆ ಬೊತ್ತ್. **ಚೂರಿಹಣ್ಣ್** /*cu:rihaṇṇi*/ ಮುಳ್ಳು ಗಿಡದ ಹುಳಿ ರುಚಿಯ ಹಣ್ಣು. a small black forest fruit that grows on a thorny bush. ವಾ: ಚೂರಿಹಣ್ಣ್ ಕೊಯ್ದನ?

ಚೂರಿಹಾಕಿ /*cu:riha:ki*/ ನಾ. 1. ಚೂರಿಯಿಂದ ಚುಚ್ಚಿ, 2. ಇರಿದು. 1. to stab with a knife, 2. to stab. ವಾ: ಚೂರಿಹಾಕಿ ಅಂವನ ಕೊಂದತ್. ಪ: ಚೂರಿ ಹಾಕಿಟು – ಚೂರಿ ಹಾಕಿದ್ದಾನೆ

ಚೂರ್ ಚೂರಾದು /*cu:ri cu:ra:du*/ ನಾ. ಚೂರು ಚೂರಾಗುವುದು. to become small pieces. ವಾ: ಕುಪ್ಪಿ ಬಟ್ಲ್ ಬಿದ್ದ್ ಚೂರ್ ಚೂರಾತ್.

ಚೂರ್ ದಿನ /*cu:ri dina*/ ನಾ. ಸ್ವಲ್ಪದಿನ. some days. ವಾ: ಒಂದ್ ಚೂರ್ ಆಚೆ ಹೋಗು.

ಚೂರ್ ಮಾಡ್ದು /*cu:rima:ḍdu*/ ನಾ. 1. ಚೂರು ಮಾಡುವುದು, 2. ತುಂಡು ಮಾಡುವುದು. 1. cutting

something into small pieces, 2. to cut into. ವಾ: ಪೇಪರ್‌ನ ಹರ್ದ್ ಚೂರ್ ಮಾಡ್‌ದು.

ಚೂರ್[1] /*cu:ri*/ ಕ್ರಿ. 1. ತುಂಡಾಗು, 2. ಹೋಳಾಗು, 3. ಭಾಗವಾಗು. 1. to cut into pieces, 2. to cut into equal pieces, 3. to cut into slices. ವಾ: ಕುಪ್ಪಿ ಗಲಾಸ್ ಬಿದ್ದ್ ಚೂರಾತ್.

ಚೂರ್[2] /*cu:ri*/ ನಾ. 1. ಹಙ್ಷ್, 2. ಚೂರು, 3. ಭಾಗ, 4. ಕೊಂಚ, 5. ತುಂಡು. 1. a little, 2. a portion, 3. a part, 4. a bit, 5. a piece. ವಾ: ಪಲ್ಯ ಚೂರ್ ಕಾರ ಆತ್.

ಚೂರ್ದು /*cu:rdu*/ ನಾ. 1. ತುಂಬಿಸು, 2. ಸೇರಿಸು, 3. ಭರ್ತಿಯಾಗು, 4. ಭರ್ತಿಮಾಡು. 1. to fill, 2. to add, 3. to be filled, 4. to fill. ವಾ: ಗೋಣಿಚೀಲಕೆ ಕಾಯಿನ ಚೂರ್ದು – ತೂರ್ದು.

ಚೂಲಿ[1] /*cu:li*/ ನಾ. 1. ಚರ್ಮ, 2. ತೊಗಲು, 3. ದೇಹದ ಹೊದಿಕೆ, 4. ದೇಹದ ಒಳಗಿನ ದ್ರವ ಪದಾರ್ಥಗಳು ಹೊರಕ್ಕೆ ಸೋರಿ ಹೋಗದಂತೆ, ಬಾಹ್ಯ ಪದಾರ್ಥಗಳು ದೇಹದ ಒಳಕ್ಕೆ ಹೋಗದಂತೆ ರಕ್ಷಣೆ ಒದಗಿಸುವ ಭಾಗ. skin, layer of tissue forming an external covering for the body. ವಾ: ಕೋಳಿ ಚೂಲಿ ತೆಗ್ದ್ ಗೈಪು ಮಾಡಿ.

ಚೂಲಿ[2] /*cu:li*/ ನಾ. ಸಿಪ್ಪೆ. skin/peel. ವಾ: ಕಿತ್ತುಳಿ ಹಣ್ಣ್‌ದ್ ಚೂಲಿನ ಚೊಲ್ಲಿದನ? **ಚೂಲಿ ಎಳೆದು** /*cu:li eḷedu*/ ಸಿಪ್ಪೆ ತೆಗೆಯುವುದು. to peel the skin. ವಾ: ಕಿತ್ತುಳಿದ್ ಚೂಲಿ ಎಳೆದು. **ಚೂಲಿ ಎಳೆಯೊಕು** /*cu:li eḷeyoku*/ ಬೈಗುಳ ಪದ. an expletive. ವಾ: ಮಕ್ಕಳೆ ಬೊಬ್ಬೆ ಹೊಡ್ದರೆ ನಿಮ್ಮ ಚೂಲಿ ಎಳೆಯಕುಟ್ಟು. ಪ: ಚರ್ಮ ಸುಳಿಯಬೇಕು

ಚೂಳಿ ಮರ /*cu:ḷi mara*/ ನಾ. ಒಂದು ವಿಧದ ಕಾಡು ಮರ. a forest tree.

ಚೆ! /*cɛɘ*/ ಅ. 1. ಪಶ್ಚಾತ್ತಾಪದ ಮಾತು, 2. ಕೆಲಸ ಕೈಗೂಡದಾಗ ತೆಗೆವ ಉದ್ಗಾರ. 1. an expression of repentance, 2. an utterance used when an expected things doesn't happen. ವಾ: ಚೆ! ಎಂತಕೆ ನೀ ಹೀಂಗೆ ಮಾಡ್‌ದ್.

ಚೆಂಗಪ್ಪ /*ceŋgappa*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. masculine given name.

ಚೆಂಚಟ್ಟಿ /*cɛŋcaṭṭi*/ ನಾ. ಹಿಡಿಕೆ ಇರುವ ಬಾಣಲೆ. a frying pan with handle. ವಾ: ಚೆಂಚಟ್ಟಿಲಿ ತಿಂಡಿ ಹೊರಿ.

ಚೆಂಚಿ /*cɛŋci*/ ನಾ. ಅಜ್ಜಿಯ ಸೊಂಟದಲ್ಲಿರುವ ಬಟ್ಟೆಯ ಸಣ್ಣ ಚೀಲ, 2. ದುಡ್ಡಿನ ಚೀಲ, 3. ಸಂಚಿ, 4. ಹಿರಿಯರು ಎಲೆ ಅಡಿಕೆ ಇಟ್ಟುಕೊಳ್ಳುವ ಚೀಲ, 5. ಬಟ್ಟೆಯಿಂದ ಮಾಡಿದ ಚಿಕ್ಕ ವೀಳ್ಯದ ಚೀಲ. 1. a small pouch kept by grandmother, 2. a purse, 3. a wallet, 4. a pouch to carry betel leaf and areca nut, 5. a pouch made of cloth to keep areca nut and betel leaf. ವಾ: ಚಾಮೆವ್ವ ನ ಚೆಂಚಿಂದ ಎಲಾಡ್ಕೆ ಕದ್ದದ?

ಚೆಂಡಿ /*cɛṇḍi*/ ನಾ. 1. ಒದ್ದೆ, 2. ತೇವ, 3. ನೆನೆದಿರುವುದು. 1. wet, 2. damp, 3. soaked. **ಅಪ್ಪ ತಂದ ಅಂಗಿ, ನೀರಿಗೆ ಹಾಕಿರೆ ಚಂಡಿನೇ ಆಲೆ – ಕೆಸದ ಸೊಪ್ಪು(ಒ).** ವಾ: ಮಳೆ ಎರ್‌ಚ್ ಲ್ ಹೊಡ್ಡ್ ಗೋಡೆ ಪೂರ ಚೆಂಡಿ. **ಚೆಂಡಿ ತೆಗಿಯೊದ್** /*cɛṇḍi tɛgiyodi*/ ಒದ್ದೆ ಯನ್ನು ಒರೆಸುವುದು. to wipe something that is wet/damp. ವಾ: ತಲೆ ಚೆಂಡಿ ತೆಗ್ದವೆ. **ಚೆಂಡಿಪುಂಡಿ** /*cɛṇḍipuṇḍi*/ ಒದ್ದೆಯಾಗುವಿಕೆ. completely wet. ವಾ: ನಾವ್ ಹೋಕನ ಮಳೆಲಿ ಚೆಂಡಿಪುಂಡಿ.

ಚೆಂಡು ಹೂ /*cɛṇḍu hu:*/ ನಾ. 1. ಉರುಟಾದ ಹೂವು, 2. ಬಣ್ಣ ಬಣ್ಣದ ಅಲಂಕಾರಕ್ಕು, ಔಷಧಿಗು ಬಳಸುವ ದುಂಡನೆಯ ಆಕಾರದ ಹೂವು. 1. a flower, round in shape, 2. marigold flower. ವಾ: ಚೆಂಡು ಹೂನ ದೈನ ನೆಟ್ಟರೆ ಬೇರೆ ದೈಗಳಿಗೆ ಬಾವ ಹುಳಗ ಕಮ್ಮಿ ಆದೆ, ಮದ್ದಿಗೆ ಸನ ಇದರ ಎಲೆ ಮತ್ತೆ ಹೂನ ಬಳ್ಸುವೆ. ಪ: ಚೆಂಡೂವ್

ಚೆಂಡೆ /*cɛṇḍɛ*/ ನಾ. 1. ಒಂದು ಬಗೆಯ ಚರ್ಮವಾದ್ಯ, ಯಕ್ಷಗಾನದ ಮುಖ್ಯ ವಾದ್ಯಗಳಲ್ಲೊಂದು, 2. ಒಂದು ಬದಿಯಲ್ಲಿ ಎರಡು ಕೋಲುಗಳಿಂದ ಬಡಿಯುವ ವೀರವಾದ್ಯ, 3. ಇದರ ಒಂದು ಪ್ರಕಾರ ದೇವಸ್ಥಾನಗಳ ವಾದ್ಯವಾಗಿಯೂ ಬಳಕೆಯಿದೆ. a percussion instrument made of leather, a drum. One of the important instruments used in Yakshagana performance. **ಚೆಂಡೆಗೆ ಬಡ್ದಸ್ಟ್ ಸಾಲ್ದ್, ಹಳಬರ ನೋಡ್ದಸ್ಟ್ ಸಾಲ್ದ್(ಗಾ).** ವಾ: ದೂರಲಿ ಚೆಂಡೆ ಕುಟ್ಟುದು ಕೇಳ್ದೆ.

ಚೆಂಡೆಬಲಿ /*cɛṇḍɛ bali*/ ನಾ. ದೇವರ ಉತ್ಸವದಲ್ಲಿ ಚೆಂಡೆಗಳ ಬಡಿತದೊಂದಿಗೆ ಬರುವ ಪ್ರದಕ್ಷಿಣೆ. cicumabulating the temple during annual rituals, accompanied by the beats of drums. ವಾ: ದೇಸ್ತಾನದ ಉತ್ಸವಲಿ ಚೆಂಡೆಬಲಿ ನಡ್‌ದದೆ.

ಚೆಂಡೆ ಬಲ್ಲೆ /*cɛṇḍɛ ballɛ*/ ನಾ. ಒಂದು ಜಾತಿ ಮುಳ್ಳಿನ ದಟ್ಟ ಪೊದರು. a thorny bush. ವಾ: ಚೆಂಡೆ ಬಲ್ಲೆ ಒಳಗೆ ಹುಗ್ಗಿಕಾದೆನ. **ಚೆಂಡೆ ಬೊಳ್ಳಿ** /*cɛṇḍɛ boḷḷi*/ ಚೆಂಡೆ ಮುಳ್ಳಿನ ಬಳ್ಳಿ, a thorny plant/creeper. ವಾ: ಚೆಂಡೆ ಬೊಳ್ಳಿ ವಳಗೆ ಹೋಕೆ ಬೊತ್.

ಚೆಂಡೆಮೂಲೆ /*ceṇḍɛmu:lɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಚೆಂಡ್ /*cɛṇḍɨ*/ ನಾ. 1. ಚೆಂಡು, 2. ಧಾರ್ಮಿಕ ಕೇಂದ್ರದಲ್ಲಿ ನಡೆವ ಆಟ. 1. ball, 2. a game played in a religious place. ವಾ: ಚೆಂಡ್ ಆಡಿಕನ ಬಾಮಿಗೆ ಬೀತ್.

ಚೆಂದೆಂಗ್ /*cɛndɛŋgɨ*/ ನಾ. ಹೊನ್ನ ಬಣ್ಣದ ಎಳನೀರು. red coconut. ವಾ: ಚೆಂದೆಂಗ್ ಕುಡೆಕು.

ಚೆಂಬು /*cɛmbu*/ ನಾ. 1. ಚೊಂಬು, 2. ಬಾಯಿ ಕಿರಿದಾದ ಗುಂಡನೆಯ ಲೋಹದ ಪಾತ್ರೆ. 1. a pitcher, a small container of water, 2. a round container with a small mouth. ವಾ: ಚೆಂಬುಲಿ ನೀರ್ ತಕಂಡ್ ಬಾ.

ಚೆಂಬೆರಿ /*cɛmbɛri*/ ನಾ. 1. ಕೆಂಪು ಬಣ್ಣದ ಹೊಳೆಯಲ್ಲಿ ದೊರೆಯುವ ಮೀನು, 2. ಮೀನುಗಳನ್ನೇ ಹಿಡಿದು ತಿಂದು ಬದುಕುವ ಮೀನು. 1. a fresh water fish, 2. a fish that eats other fish for survival. ವಾ: ಚೆಂಬೆರಿ ಹೊಳೆಲಿದ್ದದೆ.

ಚೆರ್‌ಂಬು /*cɛrnbu*/ ನಾ. ಚಿಕ್ಕ ಚಿಕ್ಕ ಸೌದೆ ಕೊಳ್ಳಿ, a firebrand/a torch. ವಾ: ಚೆರ್‌ಂಬು ಇದ್ದರೆ ಬೇಗ ಕಿಚ್ಚಿ ಹೊತ್ತಿದೆ. ಪ: ಚೆರುಂಬು ಸೊವುದೆ

ಚೆರ್‌ಂಬೆಕೊಡಿ /*cɛrnbɛkoḍi*/ ನಾ. ಹೊಳೆಗಳ ಬದಿಯಲ್ಲಿ ಬೆಳೆಯುವ ಪದಾರ್ಥ ಮಾಡುವ ಒಂದು ಸಸ್ಯ. a plant that grows on the side of a river. ವಾ: ಚೆರ್‌ಂಬೆಕೊಡಿನ ಹೊಳೆ ಕರೆಂದ ಕಿತ್ತದ್.

ಚೆಕ್ ವಸ್ತ್ರ /*cekɨ vastra*/ ನಾ. 1. ಹೆಣ್ಮಕ್ಕಳು ಗದ್ದೆ, ತೋಟದಲ್ಲಿ ಕೆಲಸ ಮಾಡುವಾಗ ತಲೆಗೆ ಕಟ್ಟಿಕೊಳ್ಳುವ ವಸ್ತ್ರ, 2. ಮದುವೆಯಲ್ಲಿ ವಧು ತಲೆಗೆ ಕಟ್ಟಿಕೊಳ್ಳುವ ವಸ್ತ್ರ. 1. a piece of cloth tied around the head by women while working in the field, 2. a piece of cloth worn by the bride on the day of wedding. ವಾ: ಚೆಕ್ ವಸ್ತ್ರ ಇಲ್ಲೆಲ್ಲು ಸಿಕ್ಕುಲೆ, ಹುಡ್‌ಕಿ ಹುಡ್‌ಕಿ ಸಾಕಾತ್.

ಚೆಕ್ಕೆ /*cɛkkɛ*/ ನಾ. 1. ಕೆತ್ತೆ, 2. ಮರದ ಕೆತ್ತೆ. 1. a chip of wood, 2. a strip of wood. ವಾ: ಚೆಕ್ಕೆ ಸಿಕ್ಕಿತಾ?

ಚೆಕ್ಲ್ ಚೈಲ್ /*cɛklɨ cailɨ*/ ನಾ. 1. ಚಿಂದಿಮಾಡು, 2. ಹರಿದು ಚಿಕ್ಕ ಚಿಕ್ಕ ಚೂರು ಮಾಡು. 1. to destroy/cut completely, 2. to cut something in to pieces. ವಾ: ನಾಯಿ ಕಂಬಳಿನ ಕಚ್ಚಿ ಚೆಕ್ಲ್ ಚೈಲ್ ಮಾಡಿಟು.

ಚೆಚ್ಚಿಕಂಡ್ /*cɛccikaṇḍɨ*/ ನಾ. ಎತ್ತಿಕೊಂಡು ಸೊಂಟದಲ್ಲಿ ಕುಳ್ಳಿರಿಸಿಕೊಂಡು. to make a child sit on the hip bones. ವಾ: ಕೂಸುನ ಚೆಚ್ಚಿಕಂಡ್ ನಡ್ಕಂಡ್ ಬಂದದ್.

ಚೆಟ್ಟಿ /*ceṭṭi*/ ನಾ. 1. ಸಾರು ಮಾಡುವ ಪಾತ್ರೆ, 2. ಹೂವಿನ ಕುಂಡ. 1. a vessel to make lentil based vegetable stew, soup, etc. 2. a flower pot. **ಇಟ್ಟಿ ಮೀನ್ ಎಷ್ಟ್ ಹಾರಿರು ಚೆಟ್ಟಿಗೇ ಬೀಳ್ದು(ಗಾ).** ವಾ: ಚೆಟ್ಟಿನ ತೊಳ್ಕಂಡ್ ಬಂದೆ.

ಚೆಟ್ಟಿಜನ /*ceṭṭijana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಚೆಟ್ಟಿಮಾಡ /*ceṭṭima:ḍa*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಚೆಟ್ಟು /*cɛṭṭu*/ ನಾ. 1. ಬೀನ್ಸ್, 2. ಹುರಳಿಕಾಯಿ. french beans. ವಾ: ಚೆಟ್ಟುನೊಟ್ಟಿಗೆ ಕ್ಯಾರೆಟ್ ಹಾಕಿ ಪಲ್ಯ ಮಾಡ್ದೊ.

ಚೆಟ್ಟೆ /*cɛṭṭɛ*/ ನಾ. 1. ಚಪ್ಪಟೆ, 2. ಮಟ್ಟಸವಾಗಿರುವ, 3. ಸಮತಲವಾದ, 4. ಉಬ್ಬು ತಗ್ಗುಗಳಿಲ್ಲದ. 1. flat, 2. level, 3. plain, 4. without ups and downs. ವಾ: ಚೆಟ್ಟೆ ಮೋರೆ, ಚೆಟ್ಟೆ ಕಲ್ಲ್.

ಚೆಟ್ಟೆಣ್ಣೆ /*cɛṭṭɛṇṇɛ*/ ನಾವಿ. 1. ಕೊಳೆತ ಎಣ್ಣೆ, 2. ವಾಸನೆಯುಕ್ತ ತೆಂಗಿನ ಕಾಯಿ ಎಣ್ಣೆ, 3. ಕಸೆಂಟೆಣ್ಣೆ. 1. rancid oil, 2. rancid coconut oil, 3. rancid oil. ವಾ: ಚೆಟ್ಟ್ ಕಾಯಿನ ಚೆಟ್ಟೆಣ್ಣೆ ವಾಸನೆ.

ಚೆಟ್ಟ್[1] /*cɛṭṭɨ*/ ನಾ. 1. ಬೀನ್ಸ್, 2. ಹುರುಳಿಕಾಯಿ. french beans. ವಾ: ಕಂತ್ರಿ ಚೆಟ್ಟ್ ಲಾಯ್ಕನೆ. **ಚೆಟ್ಟ್ ಕಾಳ್** /*cɛṭṭɨ ka:ḷɨ*/ ವಾ: ಚೆಟ್ಟ್ ಕಾಳ್ ನ ಹೊರ್‌ದ್ ಬೇಳೆ ಮಾಡಿ ಗೈಪುಗೆ ಹಾಕಿದ್. **ಚೆಟ್** /*cɛṭɨ*/ ಇಲಾತಿಚಟ್ಟು. french beans. ವಾ: ಚೆಟ್ ಬುಟ್ಟುಟು.

ಚೆಟ್ಟ್[2] /*cɛṭṭɨ*/ ಕ್ರಿವಿ. 1. ಹಾಳಾಗು, 2. ಕೆಡು, 3. ಕೊಳೆತುಹೋಗು, 4. ಸೊಗಸು ಕುಂದು. 1. to spoil, 2. to ruin, 3. to rot, 4. to lose the texture. ವಾ: ಕಟ್ಟಿದ ಕೋಳಿನ ಗಾಯ ಚೆಟ್ಟೋಗುಟು.

ಚೆಟ್ಟ್[3] /*cɛṭṭɨ*/ ನಾವಿ. 1. ಕೊಳೆತ, 2. ಹಾಳಾದ. 1. rotten, 2. spoiled. ಕೊಳ್ತ ಕುಂಬಳಕೆ ಚೆಟ್ಟ್‌ಕಾಯಿ(ಗಾ) ವಾ: ಕಾಯಿ ಚೆಟ್ಟೋಗುಟು.

ಚೆಟ್ಟ್[4] /*cɛṭṭɨ*/ ನಾ. 1. ನಾಶ, 2. ಕೆಡುಕು, 3. ಕೇಡು. 1. destroyed, 2. ill, 3. evil. ವಾ: ಚೆಟ್ಟ್‌ಲಿ ಮಾಡ್‌ದ ಕೆಲ್ಸ ಕೆಟ್ಟದೆ.

ಚೆಟ್ಟ್[5] /*cɛṭṭɨ*/ ನಾ. ಅವಸರ. urgency.

ಚೆಡುಕರ್ /*ceḍukarɨ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಚೆಡ್ಡಿ /*ceḍḍi*/ ನಾ. 1. ಚಡ್ಡಿ, 2. ಮಂಡಿಯವರೆಗೆ ಬರುವ ಚಲ್ಲಣ, 3. ಅರ್ಧ ಚಣ್ಣ. 1. shorts, 2. knickers, 3. half pants. ವಾ: ಚೆಡ್ಡಿ ನ ನೀನೆ ಒಗಿ.

ಚೆಡ್ಡೆ /*ceḍḍe*/ ನಾ. ಸದಾ ಗೊಣಗುತ್ತಾ ಇರುವವಳು. grumbling all the time. ವಾ: ಚೆಡ್ಡೆ ಹೆಣ್ಣ್.

ಚೆಣಿಲ್ ಬೆಕ್ಕ್ /*cɛṇili bɛkkɨ*/ ನಾ. ಚಿಕ್ಕ ಶರೀರದ, ದಪ್ಪ ಬಾಲದ ಮರದಲ್ಲಿ, ಕಾಡಿನಲ್ಲಿ ಕಾಣಸಿಗುವ ಬೆಕ್ಕು. a small cat with thick tail found in forests and trees. ವಾ: ಚೆಣಿಲ್ ಬೆಕ್ಕ್ ಅತ್ತ ಹೋತು.

ಚೆಣು /*ceṇu*/ ನಾ. ಹೆಣ್ಣಿಗೆ ಬಯ್ಯುವ ಪದ. an expletive used for women. ವಾ: ಚೆಣುನಂಗೆ ಮಾಡ್ದು.

ಚೆಣ್ಣ /*ceṇda*/ ನಾ. 1. ತಣ್ಣಗಾದ, 2. ಆರಿದ. 1. cold, 2. cooled. ವಾ: ಚೆಣ್ಣ ಅನ್ನ ಸೇರ್‌ದುಲೆ. ಪ: ಚೆಣ್ಣ ಗಂಜಿ – ಆರಿದ ಗಂಜಿ; ಚೆಣ್ಣೋಗುಟು; ತಣ್ಣಗಾಗಿದೆ

ಚೆಣ್ಸಿ /*cɛṇsi*/ ಕ್ರಿ. 1. ತಣ್ಣಗಾಗಿಸು, 2. ಆರಿಸು. to make something cool down. ವಾ: ಬಾರಿ ಬಿಸಿ ನೀರ್ ಚೆಣ್ಸಿ ತಕಬಾನೆ. ಪ: ಚೆಣ್ಸಿಕೆ – ತಣ್ಣಗಾಗಿಸಲು.

ಚೆಣ್‌ಸಿಕೆ /*cɛṇisikɛ*/ 1. ತಣಿಸುವುದು, 2. ಆರಿಸುವುದು. to make something cool down. ವಾ: ಕಾಪಿನ ಚೆಣ್‌ಸಿಕೆ ಬೇರೆ ಗಲಾಸ್ ತಕ.

ಚೆತ್ತ್ ಕಲ್ಲ್ /*cettɨ kallɨ*/ ನಾ. 1. ಗೋಡೆ ಕಟ್ಟಲು ಬಳಸುವ ಕೆತ್ತಿದ ಕಲ್ಲು, 2. ಮೃದು ಕಲ್ಲು. 1. trimmed stone/brick used in the construction of wall 2. soft stone.

ಚೆದುಕಾರು /*ceduka:ru*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಚೆದ್‌ರಂಗಿ /*cɛdɨraŋgi*/ ನಾ. ಚದುರಂಗಿ (ಜನಪದ ಕತೆಯಲ್ಲಿ ಬರುವ ಬಿದಿರಿನಲ್ಲಿರುವ ಹುಡುಗಿ). a female character in folktales. ವಾ: ಆ ಗೂಡೆನ ಚೆದ್‌ರಂಗಿ ಆಟಂದಾಗಿ ಅಂವ ಸತ್ತತ್.

ಚೆನ್ನಕ್ಕ /*cennakka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಮರಪಡ್ನೂರು ಗ್ರಾಮದ ಜಾಗ. feminine given name.

ಚೆನ್ನಗಿರಿ /*cennagiri*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ನೆಲ್ಲೂರು ಕೆಮ್ರಾಜೆ ಗ್ರಾಮದ ಜಾಗ. a locality in Nelluru Kemraje village in Sullia Taluk of Dakshina Kannada District.

ಚೆನ್ನಡ್ಕ /*cennaḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಮರಪಡ್ನೂರು ಗ್ರಾಮದ ಜಾಗ. a locality in Amarapadnuru village in Sullia Taluk of Dakshina Kannada District.

ಚೆನ್ನನಾಯಿ /*cɛnnana:yi*/ ನಾ. 1. ತೋಳ, 2. ನಾಯಿ ಜಾತಿಗೆ ಸೇರಿದ ಒಂದು ಕಾಡು ಪ್ರಾಣಿ. a wolf, a large wild animal belonging to the family of dogs. ವಾ: ಚೆನ್ನನಾಯಿ ನೋಡಿಕೆ ನಾಯಿನಂಗೆ ಇದ್ದದೆ.

ಚೆನ್ನಪ್ಪ /*cennappa*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. masculine given name.

ಚೆನ್ನಾಯ /*cɛnna:ya*/ ನಾ. 1. ಕೋಟಿ ಚೆನ್ನಯ ಪಾಡ್ದನದ ಅವಳಿ ವೀರರಲ್ಲಿ ಚಿಕ್ಕವನು. Chennaya, one of the twins of Koti-Chennaya. ವಾ: ಕೋಟಿ ಚೆನ್ನಯ ಇಬ್ಬೊರ್ ಅಣ್ಣ ತಮ್ಮಂದರ್.

ಚೆನ್ನಿ ಜರ /*cɛnni jara*/ ನಾ. ಬಾಣಂತಿಗೆ ಶೀತದಿಂದ

ಬರುವ ಜ್ವರ. fever developed by the new mother. ವಾ: ಬಾಣ್ತಿಗೆ ಚೆನ್ನಿ ಜರ ಬಂದುಟು.

ಚೆನ್ನಿ ಮೀರಿಕೆ /*cɛnni mi:ike*/ ನಾ. ಬೈಗುಳ ಪದ. an expletive.

ಚೆನ್ನಿ ಮೀರ್ದ್ /*cɛnni mi:rdɨ*/ ನಾ. ಬಾಣಂತಿ ಖಾಯಿಲೆ. disease of the new mother. ವಾ: ಚೆನ್ನಿ ಮೀರ್ದ್ ಹೆಂಗೆ ಬಾದು.

ಚೆನ್ನೆ /*cɛnnɛ*/ ನಾ. 1. ಚೆನ್ನೆಮಣೆ ಆಡುವ ಕಾಯಿ, 2. ಚೆನ್ನೆಕಾಯಿ ಮರ. chenne mane/ Ali guli mane game, a wooden plank with 7 pits on two sides. ವಾ: ಚೆನ್ನೆಮಣೆ ಆಡಿಕನ ಚೆನ್ನೆಕಾಯಿನ ಬಳ್‌ಸುವೆ. **ಚೆನ್ನಮಣೆ** /*cɛnnamaṇɛ*/ ನಾ. 7 ಮತ್ತು 7ರ 2ಸಾಲಿನ 14 ಗುಳಿಗಳುಳ್ಳ ಮಣೆಯಲ್ಲಿ ಮಂಜಟಿ ಕಾಯಿ ಹಾಕಿ ಆಡುವ ಜಾನಪದ ಆಟ. chenne mane/ Ali guli mane game, a wooden plank with 7 pits on both the sides. ವಾ: ಚೆನ್ನಮಣೆ ಆಡಿಕಂಡ್ ಕುದ್ದದ್. **ಚೆನ್ನೆಆಟ** /*cɛnnɛa:ṭa*/ ನಾ. 1. ಚೆನ್ನಮಣೆ ಆಟ, 2. ಆಟಿ ತಿಂಗಳಲ್ಲಿ ಆಡುವ ಒಳಾಂಗಣ ಆಟ. 1. chenne mane/ Ali guli mane, a game played using wooden plank with 7 pits on two sides, 2. an indoor game usually played during the month of aati. ವಾ: ಅವೆಲ್ಲ ಚೆನ್ನೆ ಆಟ ಆಡ್‌ತೊಳೊ.

ಚೆಪ್ಪು /*cɛppu*/ ನಾ. 1. ಕಾಯಿ ಚೇರಿ, 2. ತೆಂಗಿನ ನಾರು. 1. coir, 2. coconut fibre. ವಾ: ಪಾತ್ರ ಉಜ್ಜಿಕೆ ಸನ ಚೆಪ್ಪುನ ಬಳ್‌ಸುವೆ.

ಚೆಪ್ಪುಳ್ಸು /*cɛppuḷsu*/ ಕ್ರಿ. ಚಪ್ಪರಿಸು. lip smacking. ವಾ: ಬಾಯಿ ಚೆಪ್ಪುಳ್ಸಿಕಂಡ್ ತಿಂಬದು.

ಚೆಮ್ನೂರು /*cemnu:ru*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಐವರ್ನಾಡು ಗ್ರಾಮದ ಜಾಗ. 1. family, 2. lineage, 3. a locality in Aivarnadu village in Sullia Taluk of Dakshina Kannada District.

ಚೆಯಿಂಪೆ /*cɛyimpɛ*/ ನಾ. 1. ಹುಡಿಮೀನು, 2. ಮೀನಿನ ಬಗೆಗಳು. a variety of fish. ವಾ: ಚೆಯಿಂಪೆ ಮೀನ್ ಬೇಕಿತ್ತಾ? ತಿಂದರೆನಾ? ಪ: ಚೈಪೆ ಮೀನ್

ಚೆರಿಯಮನೆ /*ceriyamanɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಚೆರು /*ceru*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಚೆರೆ /*cɛrɛ*/ ನಾ. ತರಕಾರಿ ಬಳ್ಳಿ ಹಬ್ಬಲು ಆಧಾರವಾಗಿ ಇರಿಸುವ ಕೋಲು. a pole/stick supporting the growth of vegetables. ವಾ: ಚೆಟ್ಟೆಗೆ ಚೆರೆ ಕುತ್ತೊಕು.

ಚೆರ್ಂಡಿ[1] /*cɛrinḍi*/ ನಾ. 1. ಚರಂಡಿ, 2. ಮೋರಿ, 3. ಗಟಾರ. 1. drainage, 2. sewer, 3. a drain. ವಾ: ಚೆರಂಡಿಲಿ ಕೊಳ್ಕ್ ನೀರ್ ಹರೆದು.

ಚೆರ್ಂಡಿ[2] /*cɛrinḍi*/ ನಾ. ಒಣಗಿದ ತೊರಕೆ ಮೀನು. a variety of fish. ವಾ: ಅದರ ಹೆಸ್ರ್ ಚೆರ್ಂಡಿ ಮೀನ್‌ತ.

ಚೆರ್ಂಬ /*cermba*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. masculine given name.

ಚೆರ್ಂಬು /*carimbu*/ ನಾ. 1. ಪುಡಿ ಸೌದೆ, 2. ಅತೀ ಸಣ್ಣ ಕಡ್ಡಿ, ಎಲೆಗಳು, 3. ಚರ್ಂಬು(ತು). 1. pieces of firewood, 2. twigs and leaves. ವಾ: ಬೆಂಕಿ ಹೋಸಿಕೆ ಚರ್ಂಬು ತರೊಕು.

ಚೆರ್ಂವು /*cɛrinvu*/ ನಾ. ಸಣ್ಣ ಸಣ್ಣ ಸೌದೆ, ಕಟ್ಟಿಗೆ. fire wood (small). ವಾ: ಚೆರ್ಂವು ತರೊಕು. ಪ: ಚೆರ್ಂಬು

ಚೆರ್ಕಿಕ /*cɛrakiko*/ ಕ್ರಿ. ಎತ್ತಿಕೊಳ್ಳು. to pick something up. ವಾ: ಬಿದ್ದ ಕಾಯಿನ ಚೆರ್ಕಿಕ.

ಚೆರ್ಕ್ /*cɛrki*/ ನಾ. 1. ಚರಿಗೆ, 2. ಎಣ್ಣೆ ಹಾಕಿಡಲು ಬಳಸುವ ಚಿಕ್ಕ ಪಾತ್ರೆ. 1. a pot, 2. a bowl in which oil is heated. ವಾ: ತಲೆಗೆ ಹಾಕಿಕೆ ಎಣ್ಣೆನ ಚೆರ್ಕ್ ಲಿ ಬಿಸಿ ಮಾಡ್.

ಚೆರ್ಗ್ /*cɛrgɨ*/ ನಾ. ಚಿಕ್ಕ ಪುಟ್ಟ ಮೀನುಗಳು. a variety of fish. ವಾ: ಚೆರ್ಗ್‌ನ ಗೈಪು ಮಾಡ್‌ದು.

ಚೆರ್ನೂರು /*cernu:ru*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಆಲೆಟ್ಟಿ ಗ್ರಾಮದ ಜಾಗ. a locality in Aletti village in Sullia Taluk of Dakshina Kannada District.

ಚೆರ್ಬಿ[1] /*cɛrbi*/ ನಾ. 1. ಅಹಂಕಾರ, ಸೊಕ್ಕು,

ಮದವೆಂಬ ಅರ್ಥವನ್ನು ಸೂಚಿಸುವ ಪದ. excessive pride. ವಾ: ಅವ್ಳಿಗೆ ಬಾರಿ ಚೆರ್ಬಿ.

ಚೆರ್ಬಿ[2] /*cɛrbi*/ ನಾ. 1. ಕೊಬ್ಬು, 2. ಮೇದಸ್ಸು, 3. ತುಪ್ಪ. 1. fat, 2. animal fat, 3. processed butter – Ghee. ವಾ: ಕುರಿಮಾಸಲಿ ಬೊರಿ ಚೆರ್ಬಿನೆ ಇದ್ದದ್.

ಚೆರ್ಬೆ[1] /*cɛrbɛ*/ ನಾ. ಕಾಲಿನ ಹಿಮ್ಮಡಿ ಸಿಪ್ಪೆ ಹೋಗುವುದು. peeled heel/peeling heel. ವಾ: ಉಸ್ಣಕೆ ಮುಡುದು ಚೆರ್ಬೆ ಹೋದು.

ಚೆರ್ಬೆ[2] /*cɛrbɛ*/ ನಾ. ಅಡಿಕೆ ಅಥವಾ ಬೈನೆ ಮರದ ಸಿಬುರು/ಸಿಗುರು. a splinter of areca nut or palm tree. ವಾ: ಚೆರ್ಬೆ ಸಿಕ್ಕಿತಾ?

ಚೆರ್ಮೆ ಸೊಪ್ಪು /*cɛrmɛ soppu*/ ನಾ. ತೋಡು ಹಾಗು ಹೊಳೆ ಬದಿಯಲ್ಲಿ ಹುಲುಸಾಗಿ ಬೆಳೆಯುವ ರುಚಿಕರವಾದ ಸೊಪ್ಪು, ಎಳೆಯ ದಂಟಿನ ಸಹಿತ ಪಲ್ಯ ಮಾಡಲು ಬಳಸುತ್ತಾರೆ. a leafy vegetable that is grown on the banks of rivers. ವಾ: ಚೆರ್ಮೆ ಸೊಪ್ಪು ಚೋಡ್ ಕರೆಲಿ, ಹೊಳೆ ಕರೆಲಿ ಬೇಕದಸ್ಟ್ ಸಿಕ್ಕಿದೆ.

ಚೆಲ್ /*cɛlɨ*/ ನಾವಿ. 1. ಚೆಲ್ಲು ಚೆಲ್ ವರ್ತನೆ ಗಾಂಭೀರ್ಯವಿಲ್ಲದ, 2. ಸೌಜನ್ಯತೆ ಇಲ್ಲದ, 3. ಗೌರವನೀಡದ ಮಾತು ಮತ್ತು ವರ್ತನೆ. 1. undignified behaviour, 2. discourteous, 3. disrespectful behaviour and conversation. ವಾ: ಚೆಲ್ ಚೆಲ್ ಆಡಿರೆ ಸಿಟ್ಟ್ ಬಾದು.

ಚೆಲ್ಯಡ್ಕ /*celyaḍka*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಚೆಲ್ಯಾಣತ್ /*cɛlya:ṇati*/ ನಾವಿ. ಬೈಗುಳ ಪದ. an expletive term. ವಾ: ಅದ್ ಚೆಲ್ಯಾಣತ್ ಗೂಡೆ.

ಚೆಲ್ಲಣ /*cɛllaṇa*/ ಕ್ರಿವಿ. ಬೈಗಳು ಪದ. an expletive term. ವಾ: ಅವು ನಂಗೆ ಚೆಲ್ಲಣತ ಬೈದದ್.

ಚೆಲ್ಲಾಟ /*cɛlla:ṭa*/ ನಾ. 1. ಹುಡುಗಾಟ, 2. ವಿನೋದದ ಆಟ, 3. ಗಂಭೀರತೆಯಿಲ್ಲದ ನಡತೆ. 1. being playful, 2. playful, 3. not a serious behaviour. ವಾ: ಕೊತ್ತಿಗೆ ಚೆಲ್ಲಾಟ ಎಲಿಗೆ ಪ್ರಾಣ ಸಂಕಟ.

ಚೆಲ್ಲ್ /*cɛllɨ*/ ಕ್ರಿ. 1. ಎಸೆಯು, 2. ಹರಡು. 1. to throw, 2. to spread. **ಹಳ್ಳದ ನೀರ್ ಹಳ್ಳಕ್ಕೆ ಚೆಲ್ಲಿದಂಗೆ(ಗಾ).** ವಾ: ಹಳ್ಸಿದ ಗೈಪುನ ಮಡ್ಡಿಗೆ ಚೆಲ್ಲ್. **ಚೆಲ್ಲುದು** /*cɛlludu*/ 1. ಹೊರಸೂಸು, 2. ಕೈಗಳಿಂದ ಪಾತ್ರೆಯಿಂದ ಅಥವಾ ಚೀಲದಿಂದ ಹೊರಕ್ಕೆ ಬಂದು ನೆಲದಲ್ಲಿ ಬೀಳುವುದು, 3. ಹಂರ್ಡ್. 1. to leak/ spread outside, spill, 2. falling off from one's hand or bag,3. seep. ವಾ: ಕಡ್ಜೆ ತುಂಬ ಬತ್ತ ತುಂಬಿರೆ ಚೆಲ್ಲುದು. **ಚೆಲ್ಲದಂಗೆ** /*cɛlladaŋgɛ*/ 1. ಚೆಲ್ಲದಂತೆ, 2. ಹೊರಸೂಸದಂತೆ. 1. so that something doesn't spill, 2. so that something doesn't leak. ವಾ: ಕೊಡಪಾನಲಿ ಚೆಲ್ಲದಂಗೆ ನೀರ್ ತರೊಕು. ಪ: ಚೆಲ್ಲುದು – ಚೆಲ್ಲುವುದು

ಚೆಲ್ಲ್‌ಚೆಲ್ಲ್‌ನ ಗೂಡೆ /*cɛllɨ cɛllɨna gu:ḍɛ*/ ನಾವಿ. 1. ಚೆಲ್ಲು ಚೆಲ್ಲು ಆಡುವ ಹುಡುಗಿ, 2. ಹುಡುಗಾಟದ ಹುಡುಗಿ. 1. a flirtatious girl, 2. a careless girl. ವಾ: ಹಞ್ಞನು ಹೆದ್ರಿಕೆ ಇಲ್ಲೆ ಬೊರಿ ಚೆಲ್ಲ್ ಚೆಲ್ಲ್‌ನ ಗೂಡೆ ಅದ್.

ಚೆಳಿ /*cɛḷi*/ ನಾ. 1. ಚಳಿ, 2. ತಂಪು. 1. cold, 2. cool. **ಇಡಿ ಮುಳುಗಿದವಂಗೆ ಚೆಳಿ ಏನ್?(ಗಾ).** ವಾ: ಚೆಳಿಗೆ ಕೈಕಾಲ್ ಕೊಕ್ಕೆ ಕಟ್ಟಿದೆ. ಪ: ಸೆಳಿ. **ಚೆಳಿ ಕಾಯ್ಸುದು** /*cɛḷi ka:ysudu*/ 1. ಚಳಿ ಕಾಯಿಸುವುದು, 2. ಚಳಿಯನ್ನು ನೀಗಲು ಬೆಂಕಿ ಅಥವಾ ಬಿಸಿಲಿಗೆ ಮೈಯೊಡ್ಡುವುದು. sitting in front of a fireplace to keep oneself warmed. ವಾ: ಒಲೆ ಬುಡಲಿ ಕುದ್ದ್ ಚೆಳಿ ಕಾಯ್ಸುದು. ಪ: ಚೆಳಿಕಾಸುದು. **ಚೆಳಿ ಬುಡ್‌ಸಿನೆ** /*cɛḷi buḍisinɛ*/ 1. ಬೈಗುಳ ಪದ, 2. ಹೆದರಿಸುವುದು. 1. an expletive term, 2 to scare someone. ವಾ: ಹಿಂಗೆ ಆಡಿರೆ ನಿನ್ನ ಚೆಳಿ ಬುಡ್‌ಸಿನೆ. **ಚೆಳಿ ಹಿಡ್ಕಂಡ್** /*cɛḷi hiḍkaṇḍɨ*/ 1. ಚಳಿ ಹಿಡಿಯುವುದು, 2. ನಡುಕ ಬರು. 1. to feel cold, 2. to shiver. ವಾ: ಚೆಳಿ ಹಿಡ್ಕಂಡ್ ಬಾದು ಜೆರ ಬಂದದೆ ಕಂಡದೆ. **ಚೆಳಿ ಹೋದೆ** /*cɛḷi ho:dɛ*/ 1. ಚಳಿ ತೊಲಗುವುದು, 2. ಚಳಿಬಿಡುವುದು. 1. subsiding cold, 2. shivering becoming less intense. ವಾ: ಬಿಸ್ಲ್‌ಗೆ ಮೈ ಒಡ್ಡಿರೆ ಚಳಿ ಹೋದೆ. **ಚೆಳಿಯಾದೆ** /*cɛḷiya:dɛ*/ ಚಳಿಯಾಗುತ್ತದೆ. feeling cold. ವಾ: ಇಂದೇಕೊ ಬಾರಿ ಚೆಳಿಯಾದೆ.

ಚೆಳ್ಕೆ /*cɛḷkɛ*/ ನಾ. 1. ಲಾಚಾರು, 2. ಸಣಕಲು, 3. ಶಲಾಕೆ,

4. ತೆಳ್ಳಗಿನ ಕೋಲು. 1. helplessness, 2. lean, 3. a spear. ವಾ: ಅಂವ ಚೆಳ್ಕೆ ಹೈದ. ಪ: ತಲಕೆ(ತು)

ಚೆಳ್ಕೆ ಕೋಲ್ /*cɛḷkɛ ko:lɨ*/ ನಾವಿ. 1. ಸಣ್ಣ ಕೋಲು, 2. ತೆಳ್ಳನೆಯ ಕೋಲು. 1. a small stick, 2. a lean stick. ವಾ: ಚೆಳ್ಕೆ ಕೋಲ್ ತಕಂಡ್ ಇಸ್ಕೂಲ್‌ಲಿ ಹೊಡೆತಿದ್ದೊ.

ಚೆಳ್ಳಂಗಾರ್ /*ceḷḷaŋga:rɨ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಚೆಳ್ಳ್ /*cɛḷḷɨ*/ ನಾ. 1. ಚಿಗಟ, 2. ನಾಯಿಯ ಮೈ ಮೇಲಿನ ಕ್ರಿಮಿ, 3. ಚಿಕ್ಕಾಡು. 1. a flea, 2. flea on the body of dogs, 3. flea, insect. ವಾ: ನಾಯಿ, ಕೊತ್ತಿನ ಮೈಲಿ ಚೆಳ್ಳ್ ಬಾರಿ ಉಟ್ಟು.

ಚೇ /*cɛ:*/ ಅ. 1. ಛೇ, 2. ಮೂದಲಿಕೆ, ನಿಷೇಧ, ಬೇಸರ ಮೊದಲಾದ ಭಾವಗಳನ್ನು ಸೂಚಿಸುವ ಒಂದು ಶಬ್ದ. an onomatopoeia, to express a scornful remark. ವಾ: ಚೇ ಎಂತ ಹಿಂಗೆ ಮಾಡಿಬುಟಲಾ ನೀ.

ಚೇಂಪಿವೆ /*cɛ:mpivɛ*/ ನಾ. 1. ದ್ರವ ಪದಾರ್ಥವನ್ನು ಎರಚು, 2. ಚೆಲ್ಲು. 1. to sprinkle liquid, 2. to spill. ವಾ: ಸುಮ್ಮನಾರ್ ಮೈಗೆ ನೀರ್ ಚೇಂಪಿವೆ. ಪ: ತೂಸುದು

ಚೇಡಿ /*cɛ:ḍi*/ ನಾ. ಹೆಣ್ಣು ಕರು. female calf. ವಾ: ಒಂದ್ ಚೇಡಿ ಕರ್ ಸತ್ತತ್.

ಚೇಪಟೆ /*ce:paṭɛ*/ ನಾ. ಚಪ್ಪಟೆ. flat. ವಾ: ಆ ಚೇಪಟೆ ಕಲ್ಲ್ ಮೇಲೆ ಕುದ್ರೊಮೊ.

ಚೇಪು /*ce:pu*/ ಕ್ರಿ. 1. ಚೆಲ್ಲು, 2. ಎರಚು. 1. to spill, 2. to scatter. ವಾ: ಇಜ್ಜೆಲ್‌ಗೆ ನೀರ್ ಚೇಪುದು.

ಚೇರದಮೂಲೆ /*ce:radamu:le*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮಂಡೆಕೋಲು ಗ್ರಾಮದ ಜಾಗ. a locality in Mandekolu village in Sullia Taluk of Dakshina Kannada District.

ಚೇರಿ[1] /*cɛ:ri*/ ನಾ. ಪಾತ್ರೆ ತೊಳೆಯಲು ಬಳಸುವ ತೆಂಗಿನ ನಾರು. coconut fibre used in cleaning vessels or dishes. ವಾ: ಪ್ಲಾಸ್ಟಿಕ್ ಚೇರಿಲಿ ಪಾತ್ರನ ಉಜ್ಜಿರೆ ಕಲೆ ಆಲೆ.

ಚೇರಿ[2] /*cɛ:ri*/ ನಾ. 1. ಮೈ ಉಜ್ಜುವ ಬ್ರಷ್, 2. ಸ್ನಾನ ಮಾಡುವಾಗ ಮೈತಿಕ್ಕುವ ವಸ್ತು. 1. a loofah, 2. a sponge used in bathing. ವಾ: ಹೀರೆಕಾಯಿ ಚೇರಿ ಮೈ ಉಜ್ಜಿಕೆ ಒಳ್ಳೆದ್.

ಚೇರೆ /*cɛ:rɛ*/ ನಾ. 1. ಗೇರ್ಕಾಯಿ ಮರ, 2. ಒಂದು ಜಾತಿಯ ಕಾಡು ಮರ. 1. Black-Flowered Varnish Tree 2. a forest tree. ವಾ: ಚೇರೆ ಒಂದ್ ಜಾತಿನ ಹಕ್ಕಿ.

ಚೇರೆಮರ /*cɛ:rɛmara*/ ನಾ. 1. ಕೆಲವು ವರ್ಗದವರ ಮದುವೆಯ ಮಂಟಪದಲ್ಲಿ ಇದರ ಗೆಲ್ಲಿನಿಂದ ಮುಹೂರ್ತ ಕಂಬ ಮಾಡಿ ನೆಡುತ್ತಾರೆ, ಇದರ ಸಿಪ್ಪೆಹಾಕಿ ಎಣ್ಣೆ ಕಾಯಿಸಿ ಅದನ್ನು ವಾತ, ಕುಷ್ಠ, ಉಳುಕು ಮುಂತಾದ ಕಾಯಿಲೆಗಳಲ್ಲಿ ಮೈಗೆ ಹಚ್ಚುತ್ತಾರೆ, 2. ಚೇರೆ. 1. Holigarna ferruginea Marchand tree, (Black-Flowered Varnish Tree), a branch of this tree is used as a post (muhurtha kamba) in the marriage pandal. Oil extracted from this tree is applied as a medicine to cure gout, leprosy and dislocated bones, 2. Bla. ವಾ: ನೀ ಚೇರೆ ಮರಕೆ ಹತ್ತುವನ?

ಚೇರೆಗಾರ /*ce:rɛga:ra*/ ನಾ. 1. ವಾಲಗ ಊದುವವ, 2. ದೇವಾಲಯಗಳಲ್ಲಿ ವಾಲಗ ಊದುವ ಅಧಿಕಾರ ಪಡೆದ ಒಂದು ಜನವರ್ಗ. 1. musicians/ instrumentalists who plays wind instruments 2. a community of musicians in temples. ವಾ: ಚೇರೆಗಾರ ಬಂದೊಳ.

ಚೇಲೆ /*ce:lɛ*/ ನಾ. ಕೊಡವರು ತಮ್ಮ ಸಾಂಪ್ರದಾಯಿಕ ಕುಪ್ಪಸ ಧರಿಸಿ, ಸೊಂಟದಲ್ಲಿ ಕಟ್ಟುವ ಕೆಂಪು ರೇಷ್ಮೆ ಬಟ್ಟೆ. a red cloth made of silk worn as a waist band by Kodava women. ವಾ: ಅವು ಸೊಂಟಕೆ ಕುಪ್ಪೆಚೇಲೆ ಕಟ್ಟಿದೊ.

ಚೇಷ್ಟೆ /*ce:ṣṭɛ*/ ನಾ. 1. ಚೇಷ್ಟೆ, 2. ಕೀಟಲೆ ಮಾಡು. 1. to irritate, 2. to cause nuisance. **ಅಂಗ ಇಲ್ಲದವಂಗೆ ಮಂಗನ ಚೇಷ್ಟೆ(ಗಾ).** ವಾ: ಅಂವ ಕಪಿನಂಗೆ ಚೇಷ್ಟೆ ಮಾಡುದು. ಪ: ಚೇಸ್ಟೆ

ಚೇಳ್[1] /*cɛ:ḷɨ*/ ನಾ. 1. ಚೇಳು, 2. ಬಾಲದಲ್ಲಿ ಕೊಂಡಿಯನ್ನು ಹೊಂದಿರುವ ಒಂದು ಬಗೆಯ ವಿಷಜಂತು. 1. a scorpion, 2. a creature with

a poisonous sting. ವಾ: ಚೇಳ್ ಕೊಂಡಿಲಿ ಕೊಡ್ಪುದು.

ಚೇಳ್^{2} /*cɛ:ḷi*/ ನಾ. 1. ಕೆಸರು, 2. ರಾಡಿ, 3. ಪಂಕ, 4. ನೀರು ಮಿಶ್ರಿತ (ಬೆರೆತ) ಮಣ್ಣು, 5. ಬಗ್ಗಡ. 1. mire, 2. muddy water, 3. muddy, 4. water mixed in mud, 5. sediment. ವಾ: ನಡಿಯೊ ದಾರಿಲಿ ಬರೆ ಚೇಳ್.

ಚೈಂಯಿಪಿಂಯ್ / cainyipiny / ಅ. 1. ಕಾವಲಿಯಲ್ಲಿ ದೋಸೆ ಹೊಯ್ಯುವಾಗ ಬರುವ ಸದ್ದು, 2. ಚಂಯ್ ಚುಂಯ್. 1. sound that comes while making dosa on a pan, 2. an onomatopoeia. **ಚೈಪಿಯ್ ಹಕ್ಕಿಗೆ ನೂರೆಂಟ್ ಕಣ್ಣು – ದ್ವಾಸೆ(ಒ).** ವಾ: ದೋಸೆ ಹೊಯ್ಯಕನ ಆವ ಸಬ್ದ.

ಚೈನ್ /*caini*/ ನಾ. ಎಪ. 1. ಸರ, 2. ಹಾರ, 3. ಸರಪಳಿ. 1. a necklace, 2. a garland, 3. a chain. ವಾ: ಅವುಳ ಕುತ್ತಿಗೆಲಿದ್ದ ಚೈನ್ ತುಂಡಾತ್‌ಗಡ.

ಚೈಪೆ /*caipɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಚೊಂಕ್ರು ನೀರ್ /*cɔŋkru ni:ri*/ ನಾ. 1. ಗಲೀಜು ನೀರು, 2. ಕೊಳಕು ನೀರು. 1. unclean water, 2. dirty water. ವಾ: ಚೊಂಕ್ರು ನೀರ್ ನ ಮುಟ್ಟಿಕಾದ್.

ಚೊಂಗುಳಿ /*cɔŋguḷi*/ ನಾ. ಒಂದು ವಿಧದ ಹಲಸಿನ ಕಾಯಿಯ ಅಡುಗೆ. a jackfruit dish. ವಾ: ಚೊಂಗುಳಿ ಮಾಡ್‌ದ್.

ಚೊಂಟು /*conṭu*/ ನಾ. 1. ಚೋಟು, 2. ಮುರುಟು, 3. ಸಣ್ಣ, 4. ಗಿಡ್ಡ. 1. small, 2. twisted, 3. small, 4. short. ವಾ: ಬೋನ್ಸಾಯ್ ದೈ ಚೊಂಟು ದೈ.

ಚೊಂಟೆ /*cɔnṭɛ*/ ನಾ. 1. ಕೈಯ ಮೂಲಕ ನೀರೆತ್ತುವ ಸಾಧನ, 2. ಏತ. 1. a water-lift, 2. lift irrigation. ವಾ: ಚೊಂಟೆ ನೀರಾವರಿ ಮಾಡಿವೆ.

ಚೊಂಬಟ್ಲ್ /*cɔmbaṭli*/ ನಾ. ಪಾತ್ರೆಪಗಡಿ. vessels/ dishes. ವಾ: ಚೊಂಬಟ್ಲ್ ತಕಂಡ್ ಬಂದೊ. ಪ: ಚೊಂಬ್

ಚೊಂಬು /*cɔmbu*/ ನಾ. 1. ತಂಬಿಗೆ, 2. ಚೆಂಬು. 1. a pot, 2. a pitcher. **ಅಡಿಗೆ ಗೊತ್ತುಟ್ಟುತ್ತಾ ಕರ್ದರೆ, ಒಂದು ಕುಂಬಳಕಾಯಿಗೆ ಒಂಬತ್ತು ಚೊಂಬು ನೀರ್ ಹಾಕಿತ್(ಗಾ).** ವಾ: ನಂಟ್ರ್ ಮನೆಗೆ ಬಾಕನ ಚೊಂಬುಲಿ ನೀರ್ ಕೊಡ್‌ದು ಪದ್ದತಿ. ಪ: ಚೊಂಬುಟ್ಟಲ್ಲ – ಚೆಂಬು ಇದೆಯಲ್ಲ. **ಚೊಂಬು ನೀರ್** /*cɔmbu ni:ri*/ ನೆಂಟರು ಬಂದು ಕುಳಿತುಕೊಳ್ಳುವಾಗ ಹಾಗೂ ಅವರನ್ನು ಊಟಕ್ಕೆ ಎಬ್ಬಿಸುವಾಗ ತಂಬಿಗೆ ನೀರು ಇಟ್ಟು ಆದರಿಸುವ ಆಚರಣೆ. a practice of offering water in a pitcher when relatives visit and also when inviting the relatives to have food. **ಚೊಂಬು ನೀರ್ ಮೊರ್ಯಾದಿ(ನು).** ವಾ: ನೆಂಟಂಗೆ ಚೊಂಬು ನೀರ್ ಕೊಟ್ಟ್ ಮಾತಾಡ್‌ಸುದು.

ಚೊಂಬು ಕುಟ್ಟಿ /*cɔmbu kuṭṭi*/ ನಾ. ಕಂಚು, ತಾಮ್ರ ಪಾತ್ರೆ ವ್ಯಾಪಾರಿ. a seller of bronze and copper vessels. ವಾ: ತಾಂಬ್ರದ ಪಾತ್ರನ ಚೊಂಬು ಕುಟ್ಟಿ ಹಕ್ಕಲೆ ತಕಂಡದ್.

ಚೊಂಬುಕ /*cɔmbuka*/ ನಾ. 1. ಕೆಂಬೂತ, 2. ಕೆಂಪು ಕಾಗೆ, 3. ಸಂಬಾರ ಕಾಗೆ. Greater Coucal or Crow Pheasant. ವಾ: ಚೊಂಬುಕನ ನೋಡಿರೆ ಒಳ್ಳದ್ ಗಡ. ಪ: ಕುಪ್ಪುಲು(ತು)

ಚೊಂಬುಚೆರಿಗೆ /*cɛrigɛ*/ ನಾ. 1. ಚಿಕ್ಕಪುಟ್ಟ ಪಾತ್ರೆಗಳು, 2. ತಂಬಿಗೆ. 1. small vessels, 2. a pot. ವಾ: ಚೊಂಬುಚೆರಿಗೆನೆಲ್ಲ ಅಟ್ಟಲಿ ಕಟ್ಟಿಸಿಯೊಳೊ.

ಚೊಂಬುನ ಮಡ್ಕೆ /*cɔmbuna maḍkɛ*/ ನಾ. ನೀರು ಕಾಯಿಸುವ ಪಾತ್ರೆ. a vessel in which one boils water. ವಾ: ಚೊಂಬುನ ಮಡ್ಕೆಲಿ ನೀರ್ ಕಾಸಿ ಇಸಿಯೊಳೆ ನೋಡ್.

ಚೊಂಯಿಚೊಟ್ಟ್ /*coicoṭṭi*/ ಅ. ಮಕ್ಕಳು ಆಟ ಆಡುವಾಗ ಬಳಸುವ ಪದ. terms used by children while playing.

ಚೊಂಯ್ಕಟೆ /*cɔnykaṭɛ*/ ನಾ. 1. ಒಣಗಿದ ಕಡ್ಡಿಯ ಹಾಗೆ ಇರುವವ, 2. ಸಣಕಲು. 1. a skinny person, 2. lean. ವಾ: ಅದ್ ಚೊಂಯ್ಕಟೆನಂಗೆ ಉಟ್ಟು.

ಚೊಕ್ಕ /*cokka*/ ನಾವಿ. 1. ಸ್ವಚ್ಛ, 2. ಸುಂದರ, 3. ಆಕರ್ಷಕ. 1. clean, 2. beautiful, 3. attractive. ವಾ: ಮನೆನೆಲ್ಲ ಗುಡ್‌ಸಿ ಸಾರ್‌ಸಿ ಚೊಕ್ಕ ಮಾಡ್ತ್.

ಚೊಕ್ಕಾಡಿ /*cokka:ḍi*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಮರಪಡ್ನೂರು ಗ್ರಾಮದ ಜಾಗ. a locality in

Amarapadnuru village in Sullia Taluk of Dakshina Kannada District.

ಚೊಟ್ಟ /*cɔṭṭa*/ ನಾ. 1. ಕಾಲು ಸರಿ ಇಲ್ಲದವ, 2. ವಕ್ರ, 3. ಡೊಂಕಾದ, 4. ಬಾಗಿದ. 1. limping-someone who has problems with his legs, 2. twisted, 3. bent, 4. slant. ವಾ: ಹಂಗೆಲ್ಲ ಚೊಟ್ಟತ ಕರೆಕಾದ್. **ಚೊಟ್ಟೆ** /*cɔṭṭɛ*/ 1. ಕಾಲು ಊನ ಇರುವವ, 2. ಕುಂಟುತ್ತಾ ಹೋಗುವವನು. limping. ವಾ: ಚೊಟ್ಟೆತ ಹೇಳಿರೆ ಅವ್‌ಕೆ ಬೇಜಾರಾದುಲೆನ? ಹಂಗೆ ಕರಿಯಬೊಡಿ.

ಚೊಟ್ಟ ಕೈ /*cɔṭṭa kai*/ ಕ್ರಿವಿ. 1. ಊನಗೊಂಡ ಕೈ, 2. ಬಾಗಿದ. 1. deformed hand, 2. slant. ವಾ: ಚೊಟ್ಟ ಕೈ ಆದ್ರು ಅವರ ಕೆಲ್ಸನ ಅವೆ ಮಾಡಿಕಂಡವೆ.

ಚೊಟ್ಟಂಡ /*coṭṭaṇḍa*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಚೊಟ್ಟಿ /*cɔṭṭi*/ ನಾ. 1. ಕಾಲು ಊನ ಇರುವವಳು, 2. ಚೊಟ್ಟ. a cripple. ವಾ: ಚೊಟ್ಟಿ ಬಾತ್. ಪ: ಚೊಟ್ಟಿಕಂಡ್ – ಕುಂಟುತ್ತಾ, ಕುಂಟಿಕೊಂಡು

ಚೊಟ್ಟು /*cɔṭṭu*/ ಕ್ರಿ. 1. ಕುಂಟುವುದು, 2. ಒತ್ತಾಯ ಮಾಡು. 1. limping, 2. forcing. ವಾ: ಹಂಗೂ ಹಿಂಗು ಅಂವ ದುಡ್ಡು ಚೊಟ್ಟಿಕಂಡ್ ಹೋತು.

ಚೊಟ್ಟೆಮಜಲು /*coṭṭemajalu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಐವತ್ತೊಕ್ಲು ಗ್ರಾಮದ ಜಾಗ. a locality in Aivattoklu village in Sullia Taluk of Dakshina Kannada District.

ಚೊಟ್ಟೋಕು /*cɔṭṭɔːku*/ ನಾ. ವಸೂಲು ಮಾಡು. to recover. ವಾ: ದುಡ್ಡ್ ಕೊಟ್ಟದರ ನಾಳೆ ಚೊಟ್ಟೋಕು. ಪ: ಚೊಟ್ಟೋಕಲೆ – ವಸೂಲು ಮಾಡಬೇಕು

ಚೊಡಂಕ್ /*cɔḍaŋkɨ*/ ನಾ. ಕತ್ತಿಯನ್ನಿಡಲು ಸೊಂಟಕ್ಕೆ ಕಟ್ಟುವ ಕೊಕ್ಕೆಯಂತಹ ಒಂದು ಸಾಧನ. a clasp or a hook to hang a sickle, which is fastened to the waist with a rope.

ಚೊಡಿ /*cɔḍi*/ ನಾ. 1. ತೋಡು, 2. ಸಣ್ಣ ಪ್ರಮಾಣದಲ್ಲಿ ನೀರು ಹರಿಯುವ ಜಾಗ. 1. a pond, 2. a small water body, 3. a ditch. ವಾ: ಚೊಡಿಲಿ ಸಣ್ಣದಾಗಿ ನೀರ್ ಹರ್‌ದದೆ.

ಚೊಡ್ಚುದು /*cɔḍcudu*/ ಕ್ರಿ. ಕಾಲಿಗೆ ಅಡ್ಡ ಸಿಗುವುದು. to stumble. ವಾ: ನಡೆಕನ ಕೊತ್ತಿ ಕಾಲಿಗೆ ಚೊಡ್ಚುದು.

ಚೊಡ್ಡು /*cɔḍḍu*/ ಕ್ರಿ. 1. ಎಡವು, 2. ತಾಗು. 1. to stumble, 2. to touch. ವಾ: ಅಂವ ಕಾಲುಚೊಡ್ಡಿ ಬೀತ್. ಡಂಕುನೆ(ತು)

ಚೊನಕೆಹೋದು /*conakɛhoːdu*/ ನಾವಿ. ಚರ್ಮದ ಸಿಪ್ಪೆ ಹೋಗುವುದು. peeled skin. ವಾ: ಕಾಲ್‌ದ್ ಚೊನಕೆ ಹೋದು. ಪ: ಚೋಂಕೆ ಹೋದು

ಚೊಪ್ಪು /*cɔppu*/ ನಾ. 1. ಸಿಪ್ಪೆ, 2. ತೊಗಟೆ, 3 ಹೊರಪದರ ಕಾಯಿಚೊಪ್ಪು, 4. ಅಡಿಕೆ ಚೊಪ್ಪು. 1. peel, 2. bark, 3. outer layer of a nut, 4. outer layer of areca nut. ವಾ: ತಲೆಲಿ ಚೊಪ್ಪು ಬೆಳ್‌ದುಟು, ಚೌರ ಮಾಡ್‌ಸಿಕಂಡ್ ಬಾ. **ಚೊಪ್ಪುಕೊಟ್ಟೆ** /*cɔppukɔṭṭɛ*/ 1. ಕಾಯಿಗೆ ಸಿಪ್ಪೆ ಅಂಟಿಕೊಂಡಿರುವ ಅಡಿಕೆ, 2. ಸಿಪ್ಪೆ ತೆಗೆಯಲಾಗದ ಅಡಿಕೆ. 1. areca nut with its skin, 2. an areca nut from which skin cannot be peeled off. ವಾ: ಚೊಪ್ಪುಕೊಟ್ಟೆ ಹಣ್ಣ್ ನೋಡಲ್ಲಿ. **ಚೊಪ್ಪುಗುದ್ದಿಕೆ ಹೋಗ್** /*cɔppu guddike hoːgɨ*/ ಬೈಗುಳ ಪದ. an expletive. **ಚೊಪ್ಪುಗುದ್ದು** /*cɔppu guddu*/ ಪ್ರಯೋಜನವಿಲ್ಲದ ಮಾತುಕತೆ. useless conversation.

ಚೊಯ್‌ಂಗಲೆ /*cɔyɨŋgalɛ*/ ನಾ. 1. ಸಣಕಲು, 2. ತೆಳ್ಳಗೆ. 1. lean, 2. skinny. ವಾ: ಅಂವ ಬಾರಿ ಚೊಯ್‌ಂಗಲೆ ಹೈದ.

ಚೊರಪಕ್ಷಿ /*cɔrapakṣi*/ ನಾ. ಚಿಟ್ಟೆ ಪಕ್ಷಿ. a variety of bird. ವಾ: ಚೊರಪಕ್ಷಿ ಸಣ್ಣದಾಗಿದ್ದದೆ.

ಚೊರಿ /*cori*/ ನಾ. ಪ್ಯಾಕ್ ಮಾಡದಿರುವ ಹುಡಿ. un packed flour. ವಾ: ನಂಗೆ ಚೊರಿ ಕಡ್ಲೆ ಹೊಡಿ ಬೇಕು.

ಚೊರೆ /*cɔrɛ*/ ಕ್ರಿವಿ. 1. ಸದಾ ಕಿರಿಕಿರಿ ಮಾಡುವ ವ್ಯಕ್ತಿ, 2. ಸದಾ ಏನಾದರೊಂದು ವಸ್ತುವನ್ನು ನಮ್ಮಿಂದ ಬಯಸುವ ವ್ಯಕ್ತಿ. 1. an annoying person, 2. the one who expects something from others all the time. ವಾ: ಅಂವ ಬರಿ ಚೊರೆ ಮೊನ್ಸ ಯಾಗೊಳು ಚೊರೆ ಮಾಡ್‌ದು. ಪ: ಚೊರೆಮಾಡ್ದ್

ಚೊರೆಪಾಟ್ /*cɔrɛpaːṭi*/ ನಾವಿ. 1. ಉಪದ್ರವ, 2. ಕಿರಿಕಿರಿ, 3. ರಗಳೆ, 4. ತಲೆಹರಟೆ, 5. ಕಿರಿಕಿರಿ

ಮಾಡುವವನು. 1. trouble, 2. irritation, 3. nuisance, 4. an officious person, 5. an irritating person. ವಾ: ಚೊರೆಪಾಟ್ ಮಾಡಿಕೆ ಬಾತ್.

ಚೊಲ್ಲು /*cɔllu*/ ಕ್ರಿ. 1. ಸುಲಿಯುವುದು / ಸಿಪ್ಪೆ ತೆಗೆಯುವುದು, 2. ಸಿಪ್ಪೆ ತೆಗಿ. 1. peeling the skin, 2. removing the skin. **ಗೆಣ್ಸ್ ಚೊಲ್ಲಿಕೆ ಹೋಗ್(ನು).** ವಾ: ಅವರೆ ತೊಪ್ಪೆನ, ಕಾಯಿದ್ ತೊಪ್ಪೆನ ಬೇಗ ಚೊಲ್ಲು. ಪ: ಚೊಲ್ಲುದು – ಸುಲಿಯುವುದು; ಚೊಲ್ಲ್. **ಚೊಲ್ಲಿಕಂಡ್** /*cɔllikaṇḍɨ*/ ಸುಲಿದುಕೊಂಡು. peeled. ವಾ: ಅಡ್‌ಕೆ ತೊಪ್ಪೆನ ಚೊಲ್ಲಿಕಂಡ್ ಕುದ್ದದ್. ಪ: ಚೊಲ್ಸಿದ್ – ಸುಲಿಸಿದ್ದು

ಚೊವ್ಕ /*cɔvka*/ ನಾ. ಕರವಸ್ತ್ರ. a handkerchief. ವಾ: ಚೊವ್ಕ ಬಿದ್ದೊತ್.

ಚೊವ್‌ರಿಙ /*covɨriŋa*/ ನಾ. ಕ್ಷೌರಿಕ. a barber/a hairdresser.

ಚೊಳ್ಕೆ /*cɔḷkɛ*/ ನಾ. ಚರ್ಮದ ಸಿಪ್ಪೆ ಏಳುವುದು. skin peeling. ವಾ: ಅವ್ನ ಕೈ ಕಾಲ್ ಚೊಳ್ಕೆ ಹೋದು.

ಚೊಳ್ಳು /*cɔḷḷu*/ ಕ್ರಿ. ಸಿಪ್ಪೆ ತೆಗೆ. to peel the skin. ವಾ: ಹಣ್ಣ್‌ದ್ ಸೊಪ್ಪೆನ ಚೊಳ್ಳು. ಪ: ಚೊಳ್ಳಿಕೆ – ಸೊಪ್ಪೆ ತೆಗೆಯಲು; ಚೊಳ್ಳಿದ್ – ಸೊಪ್ಪೆ ತೆಗೆದದ್ದು;

ಚೊಳ್ಳೆ /*cɔḷḷɛ*/ ನಾ. 1. ಸಣ್ಣ ಇರುವವರಿಗೆ ಹೇಳುವ ಪದ, 2. ಸಪೂರ, 3. ಸಣಕಲು. 1. a skinny/a lean person, 2. thin, 3. slender. ವಾ: ಚೊಳ್ಳೆನಂಗಾದ್ ಯಾಕೆ ಸೆರಿ ಉಂಬಲೆನ?

ಚೋಂಕು /*co:ŋku*/ ನಾವಿ. ಕೆಟ್ಟ ವಾಸನೆಯ ಕೊಳಕು ನೀರು. filthy water with stench. ವಾ: ಚೆರಂಡಿಲಿ ಚೋಂಕು ನೀರ್ ಹರ್‌ದದೆ.

ಚೋಂಕೆ /*cɔ:ŋkɛ*/ ನಾ. 1. ಚರ್ಮ, 2. ತೊಗಲು. skin. ವಾ: ಚೋಂಕೆಲಿ ಅಲ್ಲಲ್ಲಿ ಬೆಳಿ ಕಲೆ ಆದ್. **ಚೋಂಕೆ ಹೋದು** /*co:nkɛ ho:du*/ ಚರ್ಮದ ಸಿಪ್ಪೆ ಹೋಗುವುದು. shedding skin.

ಚೋಂಕ್ರ[1] /*cɔ:ŋkra*/ ನಾ. ಪುರುಷ ವ್ಯಕ್ತಿನಾಮ. Chonkra, a masculine given name. ವಾ: ಚೋಂಕ್ರನ ಕಂಡರಿಯ?

ಚೋಂಕ್ರ[2] /*co:ŋkra*/ ನಾ. ಕೊಳಕ. an unclean person. ವಾ: ಅದ್ ಬಾರಿ ಚೋಂಕ್ರ ಹೈದ.

ಚೋಂಕ್ರು /*co:ŋkr*/ ನಾ. 1. ಕೆಸರು, 2. ನೀರು ಬೆರೆತ ಮಣ್ಣು, 3. ಪಂಕ. 1. mire, 2. wet soil, 3. mud. ವಾ: ಮಾವ್ನಣ್ಣ್ ತಿಂಬಕನ ಚೋಂಕ್ರ್ ಚೋಂಕ್ರ ಆದೆ. ಪ: ಚೋಂಕರ್

ಚೋಂಗುಲಿ /*cɔ:ŋguli*/ ನಾ. ಹಲಸಿನ ಕಾಯಿಯನ್ನು ಬೇಯಿಸಿ ಮಾಡಿದ ಒಂದು ಖಾದ್ಯ. a dish made out of boiling jackfruit seeds. ವಾ: ಚೋಂಗುಲಿ ಮಾಡಿಸಿಯೊಳೊ.

ಚೋಂಡಾನ /*co:ŋḍa:na*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಚೋಂಡಿ ಕೆಸ /*co:ŋḍi kɛsa*/ ನಾ. ಕಪ್ಪು ಬಣ್ಣದ ಕೆಸ, ದಂಟನ್ನು ಪದಾರ್ಥಕ್ಕೆ ಬಳಸುತ್ತಾರೆ. Colocasia root, used in making curry, etc. ವಾ: ಚೋಂಡಿ ಕೆಸ ಮಳೆಗಾಲಲಿ ಲಾಯ್ಕಲಿ ಬೆಳ್ದದೆ.

ಚೋಂಡಿರ /*co:ŋḍira*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಚೋಂಪ್ /*cɔ:mpɨ*/ ನಾ. 1. ಎರಚುವುದು, 2. ಮೈಮೇಲೆ ಎಸೆ, 3. ಒದ್ದೆಮಾಡು, 4. ಚೇಪು(ತು). 1. to pour, 2. to throw on someone's body, 3. to wet, 4. to soak. ವಾ: ಇಜ್ಜೆಲ್‌ಗೆ ನೀರ್‌ನ ಚೋಂಪಿ ಹಾಕಿದ್. ಪ: ಚೋಂಪಿಕಂಡ್ – ಹಾರಿಸಿಕೊಂಡು; ಚೋಂಪಿದೆ – ಹಾರಿಸುತ್ತಾನೆ/ಳೆ; ಚೋಂಪಿವೆ – ಎರಚುತ್ತಾರೆ; ಚೋಂಪು – ನೀರನ್ನು ಎರಚುವುದು. **ಚೋಂಪು** /*cɔ:mpu*/ ಕ್ರಿ. ನೀರು ಚೋಂಪುದು. to throw/ to pour/to spill water. ವಾ: ಮೋರೆಕೆ ನೀರ್ ಚೋಂಪುದು ಯಾಕೆ? ಪ: ಚೋಂಪುದು – ಚೇಪುವುದು

ಚೋಕುಳು ಹಾಕುದು[1] /*co:kuḷu ha:kudu*/ ಕ್ರಿವಿ. 1. ಸಿಗುತ್ತದೆ ಎಂದು ಬಯಸುತ್ತಾ ಕಾಯುವುದು, 2. ಗಾಳ ಹಾಕು. 1. waiting eagerly for something, 2. to hook. ವಾ: ಎಲ್ಲದಕ್ಕು ಚೋಕುಳು ಹಾಕಂಡ್ ಕೂರ್‌ದು.

ಚೋಕುಳು ಹಾಕುದು[2] /*co:kuḷu ha:kudu*/ ಕ್ರಿವಿ. 1. ಬಿಲದಲ್ಲಿರುವ ಏಡಿಯನ್ನು ಹಿಡಿಯಲು ಉಪಯೋಗಿಸುವ ಕೋಲು ಇದರ ತುದಿಗೆ ಕಪ್ಪೆ, ಚಿಕ್ಕ ಮೀನು ಇತ್ಯಾದಿಗಳನ್ನು ಕಟ್ಟಿ ಬಿಲದ ಬಾಗಿಲಿಗೆ ಹಿಡಿದಾಗ ಏಡಿ ಹೊರ ಬರುತ್ತದೆ, ಆಗ ತೆಂಗಿನ ಮರದ ಕಡ್ಡಿ ಉರುಳು ಮಾಡಿ ಏಡಿಯ ಕೊಂಡಿಗೆ

ಹಾಕಿ ಎಳೆಯುತ್ತಾರೆ, 2. ಕಪ್ಪೆ ಕೋಲು. 1. to put a stick attached with a frog or a tadpole as a bait near the burrow in order to catch crabs, 2. a trap to catch crab. ವಾ: ಎಸ್‌ಂಡ್ ಹಿಡೆಕೆ ಚೋಕುಳು ಹಾಕುದು.

ಚೋಕುಳು ಹಾಕುದು^{3} /*co:kuḷu ha:kudu*/ ಕ್ರಿವಿ. ತೊಂದರೆ ಕೊಡುವುದು. to trouble someone. ವಾ: ಆಚೆ ಮನೆವು ಚೋಕುಳು ಹಾಕುವೆ.

ಚೋಟಕ್ಕಿ /*co:ṭakki*/ ನಾ. ಸಣ್ಣ ಹಕ್ಕಿ. a small bird. **ಚೋಟಕ್ಕಿಗೆ ಜುಟ್ಟುದ್ದ – ಸೂಜಿದಾರ(ಒ).**

ಚೋಟು /*co:ṭu*/ ನಾ. ಎಪ. 1. small, 2. thin, (a foreign word). ವಾ: ಚೋಟು ಗೂಡೆಗೆ ಚೋಟು ಜೆಡೆ.

ಚೋಟುದ್ದ /*co:ṭudda*/ ನಾವಿ. ಬೆರಳಿನಷ್ಟು ಉದ್ದ. as long as a finger. ವಾ: ಚೋಟುದ್ದ ಗೂಡೆ ಎಸ್ಟ್ ಮಾತಾಡ್‌ದೆ ಅಲಾ, ಚೋಟುದ್ದ ಮೆಣ್ಸ್.

ಚೋಡಿ^{1} /*to:ḍu*/ ನಾ. ನೀರು ಹರಿಯುವ ಚಿಕ್ಕ ತೊರೆ. a small stream. ವಾ: ಚೋಡಿಲಿ ಸಣ್ಣ ಮೀನ್ ಗ ಇದ್ದವೆ. ಪ : ಚೋಡ್, ಚೋಡು, **ಅವ್ವ ಕೆರೆ ಹಾರ್‍ರೆ ಮಗ್ಳ ಚೋಡ್ ಹಾರ್ದೆ(ಗಾ).** ವಾ: ಬಾಳೆದೈ ನೆಡಿಕೆ ಗುಂಡಿ ಚೋಡಿದು.

ಚೋಡಿ^{2} /*co:ḍi*/ ನಾ. 1. ತೋಡು, 2. ಸಣ್ಣ ಪ್ರಮಾಣದಲ್ಲಿ ನೀರು ಹರಿಯುವ ಜಾಗ. 1. a pond, 2. a pool, 3. a rivulet, 4. a small lake. ವಾ: ಚೋಡಿಲಿ ನೀರ್ ತುಂಬಿ ಹರ್‌ದದೆ, ಚೋಡಿ ನೀರ್ ಕಳ್‌ಂಕ್, ಚೋಡಿ ಕರೆಗೆ ಹೋಗಿ ಬನ್ನೆ.

ಚೋಡಿಗೆ ಹೋದು /*co:ḍigɛ ho:du*/ ಕ್ರಿ. ಅತಿಬೇಧಿಯಾಗಿ ತೋಡಿಗೆ ಹೋಗುವುದು. uncontrolled dysentery. ವಾ: ಅಂವ ಕೋಳಿಗೈಪ್ ತಿಂದ್ ಇಂದ್ ಅಗಾಗ ಚೋಡಿಗೆ ಹೋದೆ.

ಚೋಡಿಪಣೆ /*co:ḍipaṇe*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅರಂತೋಡು ಗ್ರಾಮದ ಜಾಗ. a locality in Arantodu village in Sullia Taluk of Dakshina Kannada District.

ಚೋಡ್ಕೆಸ /*co:ḍkɛsa*/ ನಾ. ತೋಡಿನ ಬದಿ ಬೆಳೆದ ಕೆಸ. shoot of Colocasia. ವಾ: ಚೋಡ್ಕೆಸದ ಚಿರಿ ಗೈಪು ರೊಟ್ಟಿಗೆ ಲಾಯ್ಕಾದೆ.

ಚೋಡ್ತ್ /*co:ḍtɨ*/ ಕ್ರಿ. ತೋಡಿದನು. he dug. **ಮನೆಗೆ ಬೆಂಕಿ ಹೊತ್ತಿತ್ ತ್ತೇಳಿ ಬಾಮಿ ಚೋಡ್ತ್ ಗಡ(ಗಾ).** ವಾ: ಗುಂಡಿ ಚೋಡ್ತ್.

ಚೋಡ್ನೀರ್ /*co:ḍni:rɨ*/ ನಾ. ತೋಡಿನಲ್ಲಿ ಹರಿಯುವ ನೀರು. water flown in a stream. ವಾ: ಚೋಡ್ನೀರ್ ಕುಡೆಕಾಲೆ.

ಚೋಡ್ಸ್ /*co:ḍsɨ*/ ನಾ. 1. ಮಣ್ಣನ್ನು ಅಗೆದು ತೋಡುವುದು, 2. ಕೆರೆಚೋಡ್, 3. ಕಡ್‌ಂಗ ಚೋಡ್ಸ್. to dig. ವಾ: ಕೆರೆನ ಚೋಡ್ಸ್.

ಚೋದ್ಯ^{1} /*co:dya*/ ನಾ. 1. ಆಶ್ಚರ್ಯ, 2. ಸೋಜಿಗದ ವಿಷಯ, 3. ವಿಚಿತ್ರ, 4. ವಿಸ್ಮಯ, 5. ಸೋಜಿಗದ ಸಂಗತಿ. 1. surprise, 2. a wonder, 3. strange. 4. marvellous, 5. a strange matter. ವಾ: ಅವ್ವ ಕಾಯ್‌ಲಲಿ ನರ್‌ಳಿ ವಳ್ದದೆ ಒಂದು ಚೋದ್ಯ.

ಚೋದ್ಯ^{2} /*co:dya*/ ನಾ. ಪಂಚಾಂಗ ನೋಡುವಾಗ,ಜ್ಯೋತೀಷ್ಯ ಮತ್ತು ಪಂಚಾಂಗ ಕೇಳುವವರ ನಡುವೆ ಸಂವಹಿಸುವ. a hindu calendar. ವಾ: ಚೋದ್ಯೆ ಕೇಳಂವ ಸರಿ ಇತ್ಲೆ ಹಂಗಾಗಿ ಪಂಚಾಂಗ.

ಚೋಪನಮನೆ /*co:panamane*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಏನೆಕಲ್ಲು ಗ್ರಾಮದ ಜಾಗ. a locality in Enekallu village in Sullia Taluk of Dakshina Kannada District.

ಚೋಪಳಿ /*co:paḷi*/ ನಾ. 1. ಸೋತ, 2. ಎಲ್ಲವನ್ನು ಕಳೆದುಕೊಂಡ, 3. ಚೋಪಾರ್. 1. lost, 2. losing everything. ವಾ: ಅಂವ ಚೋಪಳಿ ಆತ್. ಪ: ಚೋಪ್ಪಿ

ಚೋಪಾರ್ /*co:pa:rɨ*/ ನಾವಿ. 1. ಆಸ್ತಿಪಾಸ್ತಿ ಕಳೆದು ಕೊಂಡವ, 2. ಸಂಪೂರ್ಣ ಅನುಭವಿಸಿದವ. 1. the one who has lost all his property/wealth, 2. an experienced. ವಾ: ಅವು ಚೋಪಾರ್ ಆದೊ.

ಚೋಪುಲಿ /*co:puli*/ ನಾ. 1. ಸುಮ್ಮನೆ, 2. ಹೀಯಾಳಿಸುವುದು. 1. simply, 2. to ill-treat. ವಾ: ದೊಡ್ಡ ಮಕ್ಕ ಸಣ್ಣಮಕ್ಕಳ ಆಟಲಿ ಚೋಪುಲಿ ಮಾಡ್ದೊ.

ಚೋಮ /*co:ma*/ ನಾ. 1. ಪುರುಷ ವ್ಯಕ್ತಿ ನಾಮ, 2. ಮುಗ್ಧ. 1. name of a man, 2. an innocent man. ವಾ: ಚೋಮನ ಕರಿ.

ಚೋಮಕ್ಕ /*co:makka*/ ನಾ. ವ್ಯಕ್ತಿ ಹೆಸರು, ಸ್ತ್ರೀ ವಾಚಕ. feminine given name. ಪ: ಚೋಮು, ಚೋಮರು

ಚೋಮಣ್ಣ /*co:maṇṇa*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. Chomana, a masculine given name. ಪ: ಚೋಮ, ಚೋಮಯ್ಯ

ಚೋಮಿ /*co:mi*/ ನಾ. 1. ಸ್ತ್ರೀ ವ್ಯಕ್ತಿ ನಾಮ, 2. ಮುಗ್ಧೆ. 1. Chomi, a feminine given name, 2. an innocent woman. ವಾ: ಅದ್ ಚೋಮಿ ಗೂಡೆ.

ಚೋಮುಣಿ[1] /*co:muṇi*/ ನಾ. ಪುರುಷ ವ್ಯಕ್ತಿ ನಾಮ. Chomuni, a masculine given name. ವಾ: ಚೋಮುಣಿ ಮನೆಗೆ ಬಂದೊಳೊ.

ಚೋಮುಣಿ[2] /*co:muṇi*/ ನಾ. 1. ಪೆದ್ದನ ಹಾಗೆ ಆಡುವ ವ್ಯಕ್ತಿಗೆ ಹೇಳುವ ಮಾತು, 2. ದಡ್ಡತನ. 1. the one who acts stupidly, 2. stupidity. ವಾ: ಚೋಮುಣಿನಾಂಗೆ ಆಡ್ಬಡ.

ಚೋರಕ್ಕಿ /*co:rakki*/ ನಾ. ಪಾರಿವಾಳ ರೀತಿಯ ಒಂದು ವಿಧದ ಪಕ್ಷಿ. a bird resembling a pigeon. ವಾ: ಎಸ್ಟ್ ಚೋರಕ್ಕಿಗ ಒಮ್ಮೆಗೆ ಹಾರ್‌ದೊತ, ಇದ್ರ ಮೈಮೇಲೆಲ್ಲ ಚುಕ್ಕಿಗೊಳೊ. ಪ: ಚೋರೆ ಹಕ್ಕಿ – ಮೈಮೇಲೆ ಚುಕ್ಕಿಗಳಿರುವ ಪಾರಿವಾಳ ರೀತಿಯ ಪಕ್ಷಿ;

ಚೋರೆ /*co:rɛ*/ ನಾ. ಒಂದು ಜಾತಿಯ ಗಿಡುಗದಂತಹ ಪಕ್ಷಿ. a bird belongs to the family of eagles. ವಾ: ಚೋರೆ ಬಂದರೆ ಕೋಳಿಪಿಳ್ಳೆಗಳ ಹೊತ್ತದೆ. ಪ: ಪುದಚ್ಚಲೆ(ತು) **ಚೋರೆ ಗಿಡ್‌ಜ್ಜ** /*co:rɛ gidga*/ ನಾ. ಸೋರೆ ಗಿಡುಗ. ವಾ: ಚೋರೆ ಗಿಡುಗ ಹಾರಿ ಬಂದ್ ಕುದ್ದತ್.

ಚೋರೆಕ್ಕ /*co:rɛkka*/ ನಾ. ಸುಮ್ಮನೆ ಕಿರಿಕಿರಿ ಮಾತಾಡುವ ತಂಗಿ/ಅಕ್ಕ. an annoying/irritating sister. ವಾ: ಚೋರೆಕ್ಕ ಕುದ್ದುಟು.

ಚೋರೆಕ್ಕಿ /*co:rɛkki*/ ನಾ. 1. ಕುಟ್ರೊ ಕುಟ್ರೊ ಎಂದು ಕೂಗುವ ಸಣ್ಣ ಹಕ್ಕಿ, 2. ಸೋರೆ ಪಕ್ಷಿ. rock pigeon bird. **ಕುಟ್ಟನ ಸೆಟ್ಟೀ ಸಾಲ ಕೊರುಕೊರು(ಹಕ್ಕಿಯ ಕೂಗಿಗೆ ಪದಗಟ್ಟು)(ನು).** ವಾ: ಚೋರೆಕ್ಕಿ ಸಣ್ಣದಾಗಿ ನೋಡಿಕೆ ಬಾರಿ ಲಾಯ್ಕ, ಬೆಳೆ ಸಮೇಲಿ ತುಂಬ ಇದ್ದವೆ. ಪ: ಚ್ವಾರೆ ಹಕ್ಕಿ, ಪುದಪಕ್ಕಿ(ತು)

ಚೋರೆಪಂತಿ /*co:rɛpaṇti*/ ನಾ. ಔಷಧಿಯ ಸಸ್ಯ. a medicinal plant.

ಚೋಲಿ[1] /*co:li*/ ನಾ. 1. ಚರ್ಮ, 2. ಸಿಪ್ಪೆ, 3. ಚಕ್ಕಳ, 4. ತಿಗಲು. 1. skin, 2. peel, 3. skin 4 skin. **ಹಣ್ಣ್ ತಿಂದಂವ ಜಾರ್ತ್, ಚೋಲಿ ತಿಂದಂವ ಸಿಕ್ಕಿಬೀತ್(ಗಾ).** ವಾ: ಬಾಳೆಣ್ಣ್ ದ್ ಚೋಲಿ ಸೊಲ್ದ್ ತಿನ್ನ್. ಪ: ಚೋಲು – ಸಿಪ್ಪೆ

ಚೋಲಿ[2] /*co:ḷi*/ ನಾ. 1. ಸಿಪ್ಪೆ, 2. ಹಣ್ಣು ಕಾಯಿ ಮೊದಲಾದವುಗಳ ಹೊರಕವಚ, 3. ಹೊರ ಪದರ. 1. peel, 2. outer layer of fruit, 3. external layer. ವಾ: ಹಣ್ಣ್ ದ್ ಚೋಳಿ ತೆಗ್ದ್ ತಿನ್.

ಚೋಳಿಕಾಯಿ /*co:ḷi ka:yi*/ ನಾ. ಅನಾನಸು ಕಾಯಿ. a pineapple. ವಾ: ಚೋಳಿ ಕಾಯಿ ಹಣ್ಣಾತ್ಲೆ. **ಚೋಳಿಹಣ್ಣ್** /*co:ḷi haṇṇ*/ **ದೈದ ಮೇಲೆ ಹಣ್ಣ್, ಹಣ್ಣ್‌ನ ಮೇಲೆ ದೈ – ಚೋಳಿ ಹಣ್ಣ್(ಒ).** ವಾ: ಚೋಳಿ ಹಣ್ಣ್‌ಗೆ ಉಪ್ಪಾಕಿ ತಿನ್ನೊಕುಯ.

ಚೋಳು /*co:ḷu*/ ನಾ. ದನಗಳ ಮೂತ್ರದ ಮಿಶ್ರಣ. mixing cow urine. ವಾ: ಚೋಳುನ ಸೆಗ್ಣಿನೊಟ್ಟಿಗೆ ಸೇರ್‌ಸಿ ಗೊಬ್ಬರ ಗುಂಡಿಗೆ ಹಾಕೊಕು.

ಚೋಳ್ /*co:ḷi*/ ನಾ. ಕೆಸರು. slime, sludge. **ಹಾವ್‌ಗೆ ಹಲ್ಲ್‌ಲಿ ವಿಸ ಚೋಳ್‌ಗೆ ಬಾಲಲಿ ವಿಸ(ಗಾ).** ವಾ: ಗದ್ದೆಗೆ ಹೋಗಿ ಬಂದ್ ಕಾಲಿಗೆ ಚೋಳ್ ಮೆತ್ತಿಕಣ್ತ್. **ಚೋಳಾತ್** /*cɔ:ḷa:ti*/ ಕೆಸರಾಯಿತು. got muddy. ವಾ: ಕಾಲ್‌ಲಿ ಚೋಳಾದರೆ ಮನೆ ಒಳಗೆ ಬಾಕನ ತೊಳ್ಕಂಡ್ ಬರೊಕು.

ಚೌಚೌ ತಿನ್ಸ್ /*caucau tinsi*/ ನಾ. 1. ತಿಂಡಿ, 2. ಖಾರಸೇವೆ, 3. ಕರಿದ ತಿಂಡಿಗಳ ಮಿಶ್ರಣ, 4. ಒಂದು ವಿಧದ ಅಂಗಡಿ ತಿಂಡಿ. 1. an edible, 2. deep fried snacks, 3. a mixture of deep fried food items, 4. etables bought from a shop/bakery. ವಾ: ಹುರ್‌ಕುಲಿಗೆ ಚೌಚೌ ಹಾಕಿ ಕಲ್‌ಸಿ ಚೆರ್‌ಮುರಿ ಮಾಡ್‌ದು.

ಚೌಂಟೆ /*cauṇṭɛ*/ ನಾ. ಏತ. a water lifting device, used in lift irrigation. ವಾ: ಚೌಂಟೆಲಿ ನೀರೆತ್ತುದು. ಪ: ಚೊಂಟೆ, ಚೊಟ್ಟೆ(ತು)

ಚೌಂಡಿ /*cauṇḍi*/ ನಾ. 1. ಚಾಮುಂಡಿ, 2. ದೇವಿ. goddess Chamundi. ವಾ: ಚೌಂಡಿ ತೆರೆಗೆ ಹೋಕು.

ಚೌಕ /*cauka*/ ನಾ. 1. ಕರವಸ್ತ್ರ, 2. ಕೈ ವಸ್ತ್ರ. a handkerchief. ವಾ: ಮೊದ್ವೆ ಸಾಸ್ತ್ರ ಮಾಡಿಕನ ಚೌಕನ ತಲೆ ಮೇಲೆ ಹಾಕೊಣೊಕು.

ಚೌಕಟ್ /*caukaṭi*/ ನಾ. 1. ಚೌಕಟ್ಟು, 2. ನಾಲ್ಕು ಮೂಲೆಯಾಗಿರುವ ಹೊರಕಟ್ಟು, 3. ಚೌಕ, 4. ಮಿತಿ, 5. ಕ್ರಮ, 6. ಎಲ್ಲೆ. 1. a frame, 2. a frame with four corners, 3. a square 4. limit, 5. an order, 6. border. ವಾ: ಕಾನೂನ್ ಚೌಕಟ್ ಒಳಗೆ ಕೆಲ್ಸ ಆಕು.

ಚೌಕಾಶಿ /*cauka:śi*/ ಕ್ರಿ. ಬೆಲೆ ಇಳಿಸಲು ಅಥವಾ ಏರಿಸಲು ಮಾಡುವ ಚರ್ಚೆ. an act of bargaining. ವಾ: ಹೋಗಿ ಹೋಗಿ ಸೊಪ್ಪ್ ಮಾರವ್ಳ ಹತ್ರ ಚೌಕಾಶಿ ಮಾಡಿಯಲ.

ಚೌಕಿ ವೀಳ್ಯ /*cauki vi:ḷya*/ ನಾ. ಚೌಕಾಕಾರದಲ್ಲಿ ಕುಳಿತು ಗಂಡಿನ ಕಡೆಯವರು ಹೆಣ್ಣಿನ ಕಡೆಯವರಿಂದ ಅನುಮತಿ ಕೇಳುವುದು ಎಂದರೆ ಹೆಣ್ಣನ್ನು ಗಂಡಿನ ಕಡೆಯವರು ಅಂತಿಮ ಒಪ್ಪಿಗೆ ನೀಡುವುದು, ಚೌಕದಲ್ಲಿ ಕುಳಿತು ಗಂಡಿನ ಕಡೆಯವರು – ಹಣ್ಣಿನ ಕಡೆಯವರು ವೀಳ್ಯ ಕಟ್ಟುವುದು ಪದ್ಧತಿ, 5 ಕವಳ ವೀಳ್ಯದೆಲೆ ಮತ್ತು 5 ಅಡಿಕೆ ಹರಿವಾಣದಲ್ಲಿಟ್ಟು ಬದಲಿಸಿಕೊಳ್ಳುತ್ತಾ. an engagement ceremony in which consent for marriage is requrested from bride's parents. Both the parties (of the groom and the bride) sit in a rectangular formation and exchange Veelya (5 bunches of betel leaves and 5 areca nuts), as a token of consent. ವಾ: ವೀಳ್ಯಸಾಸ್ತ್ರಲಿ ಚೌಕಿ ವೀಳ್ಯ ಕಟ್ಟುದು ಪದ್ಧತಿ.

ಚೌಕಿಮನೆ /*caukimanɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಚೌಕ್ರಿ /*caukri*/ ನಾ. 1. ಕೆಲಸ, 2. ಚಾಕರಿ, 3. ಸೇವೆ, 4. ನೌಕರಿ. 1. work, 2. job, 3. service, 4. job. ವಾ: ಚೌಕ್ರಿ ಮಾಡಿ ಆತ?

ಚೌಟಾಜೆ /*cauṭa:jɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಚೌಡಿ /*cauḍi*/ ನಾ. 1. ಚಾವಡಿ, 2. ಮನೆಯ ಮುಂದಿನ ಜಗಲಿ, 3. ಹಳ್ಳಿಯಲ್ಲಿ ಪಂಚಾಯತಿ ಸೇರುವ ಸ್ಥಳ. 1. a sit-out/veranda, 2. a raised platform in front of the house, 3. a place where village panchayat/council is held. ವಾ: ಚೌಡಿ ಮೇಲೆ ಹತ್ತಿಕಾಗದಿತ್, ಬೈತೊಳೊ.

ಚೌತಿ /*cauti*/ ನಾ. 1. ಚೌತಿ, 2. ಚತುರ್ಥಿ, 3. ಪಕ್ಷದ ನಾಲ್ಕನೆಯ ತಿಥಿ. the fourth day in a lunar fortnight. ವಾ: ಚೌತಿ ದಿನ ಚಂದ್ರನ ನೋಡಿಕಾದ್, ನೋಡಿರೆ ಅಪ್ವಾದ ಬಂದದೆಗಡ.

ಚೌತೆ ಸೊಪ್ಪು /*cautɛ soppu*/ ನಾ. ಚಗ್ತೆ ಸೊಪ್ಪು, ಸಮಯವನ್ನು ಈ ಎಲೆಯಿಂದ ತಿಳಿದುಕೊಳ್ಳುತ್ತಿದ್ದರು. Sickle Senna, Cassia tora, a dicot legume plant. ವಾ: ಮಳೆ ಹಿಡ್ಯಕನ ಚೌತೆ ಸೊಪ್ಪು ಹಸ್ರಾಗಿ ಚಿರಿಕಂಡಿದ್ದದೆ.

ಚೌರ /*caura*/ ನಾ. ಕ್ಷೌರ ಮಾಡುವುದು. shaving. **ಚೌರಕ್ಕೆ ಕುದ್ದರೆ ಸೀನಿಕಾಗದ್, ಕಳ್ಳತನಕ್ಕೆ ಹೋಕನ ಕೆಮ್ಮಿಕಾಗದ್(ಗಾ).** ವಾ: ಚೌರ ಮಾಡದೆ ಎಸ್ಟ್ ದಿನ ಆತ್.

ಚೌರಿಂಗ /*cauriŋga*/ ನಾ. ಕ್ಷೌರಿಕ. a barber, haircutter, hairdresser. ವಾ: ಚೌರಿಂಗನಕ್ಕಲೆ ಹೋಗಿ ಚೌರ ಮಾಡ್ಸಿಕಂಡ್ ಬಂದದ್.

ಚೌರಿಙ್ಙ /*cauriŋŋa*/ ನಾ. ಕ್ಷೌರಿಕ. a barber, haircutter, hairdresser. ವಾ: ಚೌರಿಙ್ಙನ ಕರ್‌ಕಂಡ್ ಬಾಕೆನಾಗಿತ್ತ್. ಪ: ಚೌರಿಙ್ಙರ್ – ಕೂದಲು ತೆಗೆವ ಕಸುಬಿನವರು, ಚೌರಿಂಗ(ತು)

ಚೌಲ /*caula*/ ನಾ. ಜಾವಲ, ಮೊದಲನೆಯ ಸಲ ಮಕ್ಕಳಿಗೆ ಕೂದಲು ತೆಗೆಸುವ ಸಂಸ್ಕಾರ. the ceremony of getting a child's head shaven for the first time. ವಾ: ಕೂಸ್‌ನ ಚೌಲ ತೆಗೆವ ಕ್ರಮ ಮಾಡ್ತೊಳೊ. ಪ: ಜಾವಲ-ಕೂದಲು

ಚೌಲಿ /*cauli*/ ನಾ. 1. ಚೌರಿ, 2. ಹೆಂಗಸರು ಕೇಶ ಶೃಂಗಾರಕ್ಕೆಂದು ಸೇರಿಸಿಕೊಳ್ಳುವ ಕೂದಲ ಕುಚ್ಚು. 1. a bunch of processed hair used by women in addition to the natural hair, 2. a tuft tied at the end of plaited hair. ವಾ: ಚೌಲಿ ಹಾಕಿರೆ ಉದ್ದ ಜೆಡೆಯಾದೆ.

ಚೌಳಿ ಪಿಜಿನ್ /*cauḷi pijini*/ ನಾ. 1. ಇವು ಕೆಂಪು

ಬಣ್ಣದ ಕಚ್ಚುವ ಇರುವೆಗಳು ಹೆಚ್ಚಾಗಿ ಮರ ಗಿಡಗಳಲ್ಲಿ ಗೂಡುಕಟ್ಟಿಕೊಂಡಿರುತ್ತವೆ, 2. ಕೆಂಪಿರುವೆ, 3. ಕೆಂಚಿರುವೆ. 1. red ants found in the trees, 2. red ants, 3. fire ant. ವಾ: ಚೌಳಿ ಪಿಜಿನ್ ದೈಲಿ ದೊಡ್ಡ ಗೂಡೆ ಕಟ್ಟಿಟು.

ಚೌಳಿಕಾಯಿ /*cauḷika:yi*/ ನಾ. ಅನಾನಸು. a pineapple. ವಾ: ಈ ಚೌಳಿಕಾಯಿ ಬಾರಿ ಹುಳಿ ತಿಂಬಕೆ ಆದುಲೆ.

ಚ್ಯಾಮಪ್ಪ /*cya:mappa*/ ನಾ. 1. ಉಗ್ಗಪ್ಪ, 2. ಅಜ್ಜ, 3. ಉಗ್ಗಪ್ಪ. 1. grandfather, 2. grandpa, 3. father of one's father or mother. ವಾ: ಚ್ಯಾಮಪ್ಪ ಸಿಕ್ಕಿದ್ದೊ.

ಚ್ಯಾಮೆವ್ವ /*cya:mɛvva*/ ನಾ. 1. ಅಜ್ಜಿ, 2. ಉಗ್ಗವ್ವ. 1. grandmother, 2. mother of one's father or mother. ವಾ: ಚ್ಯಾಮೆವ್ವ ಮನೆಗೆ ಬಂದೊಳೊ.

ಚ್ಯಾಲೆಮುಂಡ್ /*cya:lɛmuṇḍɨ*/ ನಾ. ತೆಳ್ಳನೆಯ ಟವಲ್. a thin towel/a napkin. ವಾ: ಚ್ಯಾಲೆಮುಂಡ್ ದ್ ಕರೆ ಹೊಲೆಕಾಯ್ತ್.

ಚ್ಯೊಂಗಲೆ /*cyoŋgalɛ*/ ನಾ. ದೈಹಿಕವಾಗಿ ಸೊರಗಿದ. lean. ವಾ: ಚ್ಯೊಂಗಲೆ ಹೈದ.

ಚ್ವಾರೆ ಗಿಡುಗ /*cva:rɛ giḍga*/ ನಾ. ಗಿಡುಗ ಪಕ್ಷಿಯ ಇನ್ನೊಂದು ಪ್ರಭೇದ. a bird of an eagle's family. ವಾ: ಚ್ವಾರೆ ದೈಗ ಹೇಂಗೆ ಹಾರ್‌ದೊಲ?

ಚ್ವಾರೆ ಸೊಪ್ಪು /*cva:rɛ sɔppu*/ ನಾ. ದೋರೆ ಸೊಪ್ಪು. a leaf vegetable. ವಾ: ಅವ್ವ ಚ್ವಾರೆಸೊಪ್ಪುನ ಕೊಯ್ಯಕೆ ಹೋಗೊಳೊ.

ಜ

ಜಂಕ್ಳ /*jaŋkḷa*/ ನಾ. ಬಟ್ಟೆ ಸಡಿಲವಾಗು. clothes becoming loose. ವಾ: ಲಾಚಾರಾಗಿ ಜಂಪರ್ ಪೂರಾ ಜಂಕ್ಳ ಜಂಕ್ಳ ಆದೆ.

ಜಂಜಾಲಿ /*jaŋja:li*/ ನಾ. ದೃಢಕಾಯ. muscular/well-built/bulky. ವಾ: ದಂಡ್‌ಗೆ ಸೇರೊಕೊರೆ ಜಂಜಾಲಿಯಾಗಿರೊಕು.

ಜಂಟಿದ್ /*jaṉṯidɨ*/ ಕ್ರಿ. ಚಿವುಟಿದು. pinched. ವಾ: ಅಂವನೇ ನಂಗೆ ಜಂಟಿದ್. **ಜಂಟಿನೆ** /*jaṉṯinɛ*/ ಚಿವುಟುತ್ತೇನೆ. will pinch. ವಾ: ಅಂವಂಗೆ ಜಂಟಿದೆ.

ಜಂಡ್ /*jaṉḏɨ*/ ನಾವಿ. 1. ಬಸಿದು ಉಳಿದದ್ದು, 2. ಕಾಫಿ, ಟೀ ಸೋಸಿದ ನಂತರ ಉಳಿಯುವ ಭಾಗ. 1. the left over after straining, 2. used tea leaves or coffee powder, the remains in a strainer. ವಾ: ಕಾಪಿನ ಸೋಸದೆ ಇದ್ದರೆ ಕುಡೆಕನ ಜಂಡ್ ಸಿಕ್ಕಿದೆ. ಪ: ಜೆಂಡ್, ಜೊರಂಡ್(ತು)

ಜಂತು /*jantu*/ ನಾ. 1. ಹುಳ, 2. ಸಣ್ಣಕ್ರಿಮಿ, 3. ಕರುಳಿನಲ್ಲಿ ಹುಟ್ಟುವ ಒಂದು ಜಾತಿಯ ಹುಳು. 1. a worm, 2. an insect, 3. a worm in the intestine. ವಾ: ಆರ್ ತಿಂಗಳಿಗೊಮ್ಮೆ ಜಂತುಗಳಿಗೆ ಮೊದ್ದ್ ತಕಣೊಕು. ಪ: ಜಂತುಗಳ್ – ಹುಳಗಳು

ಜಂನೆರ್ಲ /*jannɛrla*/ ನಾ. 1. ಜಂಬೂ ಹಣ್ಣು, 2. ತಿಳಿ ಹಳದಿ ಬಣ್ಣದ ಹಣ್ಣು, 2. ಇದನ್ನು ಚಂಪಕ, ರೋಸ್ ಆ್ಯಪಲ್, ಮೌಂಟೇನ್ ಆ್ಯಪಲ್, ವಾಟರ್ ಆ್ಯಪಲ್ ಎಂದು ಕರೆಯಲಾಗುತ್ತದೆ. a Malabar plum, black plum, jamun, Mountain apple, rose apple, etc. ವಾ: ತಿಂಬಕೆ ಜಂನೆರ್ಲ ಬಾರಿ ಲಾಯ್ಕದ ಹಣ್ಣ್, ನೋಡಿಕೆ ನಿಂಬುಳಿ ತರ ಇದ್ದದೆ. ಇದರ ಮರದ ಕೆತ್ತೆದ್ ಕಸಾಯ ಜೆರ, ಜುಲಾಪ್, ನ್ಯಾವ್‌ಸ ಕಾಯ್‌ಲಗಳಿಗೆ ರಾಮಬಾಣತ ಹೇಳಿವೆ.

ಜಂಪರ್ /*jamparɨ*/ ನಾ. ಎಪ. 1. ಬ್ಲೌಸ್, 2. ರವಿಕೆ, 3. ಕುಪ್ಪುಸ. 1. a blouse, 2. a jumper, 3. an upper garment worn by women. **ಜಂಪರೊಳಗೆ ಬಂಪರುಟ್ಟು(ನು).** ವಾ: ಜಂಪರ್ ಹೊಲ್ಸಿಕಂಡನ?

ಜಂಬರ /*jambara*/ ನಾ. 1. ಸಮಾರಂಭ, 2. ಕೆಲಸಕಾರ್ಯ. 1. a celebration, 2. a ritual. **ಅಂಬುಲಿಗೆ ಉಪ್ಪಿಲ್ಲೆ, ಜಂಬರಕ್ಕೆ ಉಪ್ಪರಿಗೆ(ಗಾ).** ವಾ: ನಾ ಜಂಬರಕೆ ಹೋಗಿ ಬಂದದಸ್ಟೆ. ಪ: ಮೊದುವೆ ಜಂಬರ ಮಾಡ್ದು – ಮದುವೆ ಕಾರ್ಯಕ್ರಮ ಮಾಡುವುದು

ಜಂರ್ಜಿಲ್ ಹಕ್ಕಿ /*jarnjilɨ hakki*/ ನಾ. ಬೂದು ಬಣ್ಣದ, ಆಕಾಶಕ್ಕೆ ಹಾರಲು ಬಾರದ ಹಕ್ಕಿ. a bird. ವಾ: ಜಂರ್ಜಿಲ್ ಹಕ್ಕಿಗ ಬಂದರೆ ಒಟ್ಟಿಗೆ ಬಂದವೆ.

ಜಕ್ಕರೆ /*jakkarɛ*/ ನಾ. 1. ಎಚ್ಚರ, 2. ಸೂಕ್ಷ್ಮ ಮಾಡು, 3. ನಾಜೂಕು, 4. ಜೋಪಾನ ಮಾಡು, 5. ರಕ್ಷಣೆ. 1. caution, 2. to be carefull, 3. ostentatious, 4. to take care, 5. protection. ವಾ: ಆದ್ ಆತ್ ಇನ್ನಾರ್ ಜಕ್ಕರೆ ಮಾಡ್.

ಜಗಲ್ /*jagalɨ*/ ನಾ. ಜಗಲಿ ವಾಸ್ತು ಪ್ರಕಾರ ಮನೆಯ ಒಂದು ಭಾಗ. ಚಾವಡಿಯ ಮುಂಭಾಗದಲ್ಲಿ ಜಗಲಿ

ಇರುತ್ತದೆ. a raised platform in the veranda, a sitout. ವಾ: ತಾತ ಜಗಲ್‌ಲಿ ಬಿಸ್‌ಲ್ ಕಾಸಿಕಂಡ್ ಕುದ್ದೊಳೊ.

ಜಗಳಗಂಟ /*jagaḷagaṇṭa*/ ನಾ. ಸದಾ ಜಗಳಕ್ಕಾಗಿ ಕಾಲು ಕೆರೆದುಕೊಂಡು ನಿಲ್ಲುವವ. quarrelsome person. ವಾ: ಅಂವನತ್ರ ವ್ಯವಾರ ಬೇಡ, ಬೊರಿ ಜಗಳಗಂಟ.

ಜಗಳಗಂಟಿ ಮರ /*jagaḷagaṇṭi mara*/ ನಾ. ಮರಗಳ ವಿಧಗಳು. variety of trees. ವಾ: ಅದ್ ಜಗಳಗಂಟಿ ಮರಗಡ, ಅದರ ಸೊಪುದೆನ ಒಲೆಗೆ ಹಾಕಿಕಾಗದ್‌ಗಡ.

ಜಗಿಯೊದು /*jagiyɔdu*/ ಕ್ರಿವಿ. 1. ಅಗಿದು ತಿನ್ನುವುದು, 2. ಬಾಯಲ್ಲಿ ಕಚ್ಚು. 1. chewing, 2. biting. ವಾ: ಎಂತರ ಹಿಂಗೆ ಜಗಿಯೊದೂಂತ. ಪ: ಜಗೀತೀಂತ – ಅಗಿಯುತ್ತೀಯಾಂತ

ಜಗಿಲಿ /*jagili*/ ನಾ. ಜಗುಲಿ. a veranda, a sit-out. ವಾ: ಉಗ್ಗಪ್ಪ ಜಗಿಲಿಲಿ ಬಿಸ್‌ಲ್ ಕಾಸಿಕಂಡ್ ಕುದ್ದೊಳೊ.

ಜಗ್ಗನೊ /*jagganɔ*/ ನಾ. ಎಳೆದಾಡು. a directionless/an aimless pull and push of something. ವಾ: ಬೊಳ್ಳಿ ಹಿಡ್ಕಂಡ್ ಜಗ್ಗನೊ.

ಜಗ್ಗ್[1] /*jaggɨ*/ ಕ್ರಿ. 1. ಜಗ್ಗು, 2. ಎಳೆದಾಡು. 1. to pull, 2. to pull violently. ವಾ: ಹಗ್ಗನ ಹಿಡ್ಕಂಡ್ ಜಗ್ಗ್. ಪ: ಜಗ್ಗ್‌ಸಿತ್ – ಎಳೆದಾಡಿದನು/ಳು; ಜಗ್ಗ್‌ಸಿದೆ – ಜಗ್ಗಿಸಿದೆ; ಜಗ್ಗ್‌ಸ್ – ಜಗ್ಗಿಸು. **ಜಗ್ಗಿತ್** /*jaggiti*/ 1. ಜಗ್ಗಿತು, 2. ತಗ್ಗಿತು. 1. pulled, 2. reduced. ವಾ: ಕಾಟದ ಬೆಂಕಿ ಜಗ್ಗಿತ್. ಪ: ಜಗ್ಗಿಕಾದ್ – ಜಗ್ಗಬಾರದು; ಜಗ್ಗಿದೆ – ಜಗ್ಗುತ್ತದೆ; ಜಗ್ಗಿರೆ – ಜಗ್ಗಿದರೆ; ಜಗ್ಗಿವೆ – ಜಗ್ಗುತ್ತಾರೆ; ಜಗ್ಗಿಸಿರೆ – ಜಗ್ಗಿಸಿದರೆ.

ಜಗ್ಗ್[2] /*jaggɨ*/ ನಾ. ಎಪ. ನೀರು ತುಂಬಿಡುವ ಚಿಕ್ಕ ಪಾತ್ರೆ. a small container of water.

ಜಗ್‌ಲ್[1] /*jaglɨ*/ ನಾ. 1. ಜಗುಲಿ, 2. ವೇದಿಕೆ. 1. a raised platform 2. a stage. ವಾ: ಜಗ್‌ಲ್‌ಲಿ ಸಾಲಾಗಿ ಹೂನ ದೈದ ಚೆಟ್ಟಿಗಳ ಇಸಿಯೊಳೊ, ಕೂಸು ಜಗ್‌ಲ್ ಕರೆಲಿ ಕುದ್ದುಟು. ಪ: ಜಗಲ್; ಜಗಲಿಲಿ – ಜಗಲಿಯಲ್ಲಿ

ಜಗ್ಲ್[2] /*jagli*/ ನಾ. 1. ಜಗಲಿ, 2. ಚಿಂಟೆ, 3. ಪಡಸಾಲೆ. 1. a raised platform/a veranda 2. a porch, 3. a drawing room. ವಾ: ಜಗ್ಲ್ ಇನ್ನ್ ಹಝ್ಜ ಎತ್ತರ ಬೇಕಿತ್.

ಜಗ್ಲ್-ಚಿಂಟೆ /*jaglɨ-ciṇṭɛ*/ ನಾ. ಜಗಲಿ. a veranda, a sit-out. ವಾ: ಜಗ್ಲ್-ಚಿಂಟೆನ ನೆರ್ವೊಳು ಕಾಯಿ ಹಾಕಿ ಉಜ್ಜಕಾಯ್ತ್.

ಜಗ್‌ಳ /*jagɨḷa*/ ನಾ. 1. ಜಗಳ, 2. ಕಲಹ, 3. ಗುದ್ದಾಟ. 1. to quarrel, 2. to fight, 3. a skirmish. **ಇಬ್ಬರ ಜಗ್‌ಳ ಮೂರ್‌ನೆವಂಗೆ ಲಾಬ(ಗಾ).** ವಾ: ಮಕ್ಕ ಬಾರಿ ಜಗ್‌ಳ ಮಾಡಿಕಂಡವೆ.

ಜಜ್ /*jaji*/ ಕ್ರಿ. 1. ಜಜ್ಜಿಹೋಗು, 2. ಅಪ್ಪಚ್ಚಿಯಾಗು, 3. ನಜುಗು, 4. ನಸುಕು. 1. to crush, 2. to squeeze, 3. to crush, 4. early morning. ವಾ: ಸಾಂತಿಕಾಯಿನ ಕಲ್ಲ್ ತಕಂಡ್ ಜಜ್. ಪ: ಜಜ್ಜಿತ್ – ಜಜ್ಜಿದನು/ಳು; ಜಜ್ಜಿದೆ – ಜಜ್ಜುತ್ತಾನೆ; ಜಜ್ಜಿದೊ – ಜಜ್ಜಿದರು; ಜಜ್ಜಿರೆ – ಜಜ್ಜಿದರೆ; ಜಜ್ಜುದು – ಜಜ್ಜುವುದು. **ಜಜ್ಜಿಮಾಡ್ತ್** /*jajjima:ḍti*/ 1. ಜಜ್ಜಿ ಮಾಡುವುದು, 2. ಗುದ್ದಿಹಾಕು. 1. crushed, 2. punched. ವಾ: ಹಲ್ಸ್‌ನಕ್ಕಿ ನ ಪಜ್ಜಿನ ಜಜ್ಜಿಮಾಡ್ತ್.

ಜಜ್ಜ್ /*jajji*/ ಕ್ರಿವಿ. 1. ಪುಡಿಮಾಡು, 2. ಚಟ್ನಿಮಾಡು. 1. to powder, 2. to smash. ವಾ: ಹಿಂಗೆ ಆಡ್‌ತಿರ್ ನಿನ್ನ ಜಜ್ಜದೆ ಬುಡಿಕಿಲೆ.

ಜಟಾಪಟಿ /*jaṭa:paṭi*/ ನಾ. 1. ಜಗಳ, 2. ಹೊಡೆದಾಟ. 1. a quarrel, 2. skirmish. ವಾ: ಅಲ್ಲಿ ಇದ್ದಕಿದ್ದಂಗೆ ಜಟಾಪಟಿ ಸುರಾತ್.

ಜಟಾಯಿ /*jaṭa:yi*/ ನಾ. 1. ರಣಹದ್ದು, 2. ಹೆಣಗಳನ್ನು ತಿನ್ನುವ ದೊಡ್ಡ ಹದ್ದು, 3. ಒಂದು ಜಾತಿಯ ಕ್ರೂರವಾದ ಹದ್ದು. 1. vulture, 2. vulture, a large bird that eats the flesh of animals, 3. a bird of prey. ವಾ: ಸತ್ತ ದನನ ತಿಂಬಕೆ ಜಟಾಯಿಗ ಬಂದವೆ.

ಜಟ್ /*jaṭi*/ ನಾ. ಎಪ. 1. ತೋಟದಲ್ಲಿ ನೀರು ಹಾಕುವುದಕ್ಕೆ ಇರುವ ಯಂತ್ರ, 2. ಚಿಮ್ಮುನಾಳ, 3. ತುಂತುರು ಸಲಕರಣೆ. 1. a water jet, 2. a sprinkler, 3. drip irrigation equipments. ವಾ: ತೋಟಕೆ ನೀರ್ ಹಾರ್‌ಸಿಕೆ ಜಟ್ ಬೇಕ್.

ಜಟ್ಟಿಪಳ್ಳ /*jaṭṭipaḷḷa*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ

ತಾಲೂಕಿನ ಸುಳ್ಯ ನಗರದ ಜಾಗ. a locality in Sulya, Nagara village in Sullia Taluk of Dakshina Kannada District.

ಜಟ್‌ಪಟ್ /*jaṭipaṭi*/ ನಾ. ಎಪ. 1. ಅತ್ಯಂತ ಜರೂರಾಗಿ, 2. ಕೂಡಲೆ, 3. ಬೇಗಬೇಗ. 1. with a sense of obligation, 2. immediately, 2. quickly. ವಾ: ಜಟ್‌ಪಟ್ ಕೆಲ್‌ಸ ಮುಗ್‌ಸಿತ್.

ಜಡ /*jaḍa*/ ಕ್ರಿವಿ. 1. ಆಲಸ್ಯ, 2. ಸೋಮಾರಿತನ, 3. ಜಡತ್ವ. 1. laziness, 2. slothful, 3. sluggish. ವಾ: ಇಂದ್ಯಾಕೊ ಬಾರಿ ಜಡ.

ಜಡಿ /*jaḍi*/ ಕ್ರಿ. 1. ಹೊಡೆತ, 2. ಬೆದರಿಸು, 3. ಗದರಿಸು. 1. beating, 2. threatening, 3. to reprimand. ವಾ: ನಮ್ಮಲ್ಲಿ ಜಡಿ ಮಳೆ ಬಂದದೆ. ಪ: ಜಡಿದು – ಹೊಡೆಯುವುದು

ಜಡಿಗುಟ್ಟಿ /*jaḍiguṭṭi*/ ನಾವಿ. ನಿರಂತರ ಹಾಗೂ ಭಾರಿ ಮಳೆ. incessant and heavy rain. ವಾ: ಜಡಿಗುಟ್ಟಿ ಮಳೆ ಹೊಡ್ತ್.

ಜಡಿಮನೆ /*jaḍimanɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಜಡೆ /*jaḍɛ*/ ನಾ. 1. ಹಾವಿನ ಹೆಡೆ, 2. ಹಾವಿನ ಬಿಚ್ಚಿದ ತಲೆ, 3. ಫಣೆ. 1. hood of snake, 2. snakes spreading their hood, 3. hood. **ತಲೆಲಿ ಜಡೆ ಉಟ್ಟು ಋಷಿಮುನಿಯಲ್ಲ, ಎದೆಲಿ ಹಾಲುಟ್ಟು ಹಸ್ ಅಲ್ಲ, ಎಲೆ ಅಡಿಕೆ ಉಟ್ಟು ವೀಳ್ಯ ಅಲ್ಲ – ಆಲದ ಮರ(ಒ).** ವಾ: ದೊಡ್ಡಾವು ಜಡೆ ತೆಗ್‌ದ್ ನಿತ್ತದೆ. ಪ: ಜಡೆ ತೆಗ್ದೆ – ಹೆಡೆ ಬಿಚ್ಚುತ್ತದೆ; ಜಡೆ ತೆಗೆಕನ – ಹೆಡೆ ಬಿಚ್ಚುವಾಗ

ಜಡೆ ಬೆತ್ತ /*jaḍɛ bɛtta*/ ನಾ. ಒಂದು ಬಗೆಯ ಬೆತ್ತ. a kind of cane/rattan.

ಜಡೆದಾರಿ /*jaḍeda:rinta*/ ನಾ. ಜಟೆಹೊಂದಿರು ವ್ಯಕ್ತಿ. a man with braided/plaited hair. ವಾ: ನಾಗ ಸಾದುಗ ಜಡೆದಾರಿಗ.

ಜಡೆಹಾಕಿ /*jaḍɛha:ki*/ ನಾ. ಕೂದಲನ್ನು ಹೆಣೆಯುವುದು. braiding/plaiting the hair. ವಾ: ಎರ್‌ಡ್ ಜೆಡೆ ಹಾಕಿ ಇಸ್ಕೂಲಿಗೆ ಹೋತಿದ್ದೊ.

ಜಡ್ಜಿ /*jaḍji*/ ನಾ. ಎಪ. 1. ನ್ಯಾಯಾಧೀಶ, 2. ಜಡ್ಜ್, 3. ನ್ಯಾಯಮೂರ್ತಿ. 1. a judge, 2. a magistrate, 3. Justice. ವಾ: ಹೆಣ್ಮಕ್ಕ ಸುಮಾರ್ ಈಗ ಜಡ್ಜಿ ಆಗೊಳ.

ಜಡ್ಡ /*jaḍḍa*/ ನಾ. 1. ಕ್ರಿಯಾಶೀಲತೆ ಕಳೆದುಕೊಳ್ಳು, 2. ದಡ್ಡ, 3. ಹೆಡ್ಡ. 1. to become lethargic, 2. thickheaded, 3. slow-witted. ವಾ: ಬರೀ ಜಡ್ಡ ಎಸ್ಟ್ ಹೇಳಿರು ಗೊತ್ತಾಲೆ.

ಜಡ್ಡ್‌ಕುರ್ಲಿ /*jaḍḍikurli*/ ನಾ. ಒಂದು ವಿಧದ ಪಕ್ಷಿ. a variety of bird. ವಾ: ಅದ್ಕೆ ಜಡ್ಡ್ ಕುರ್ಲಿ ಹಕ್ಕಿತ ಹೇಳ್ವು.

ಜಡ್ಡ್‌ಕುರ್ಲೆ /*jaḍḍikurlɛ*/ ನಾ. ಬಿಳಿ ರೆಕ್ಕೆ ಹಾಗು ಅರಶಿನ ಬಣ್ಣದ ಕೊಕ್ಕನ್ನು ಹೊಂದಿರುವ ಸಣ್ಣ ಪಕ್ಷಿ. a small bird with white feathers and yellow beak. ವಾ: ಬೆಳಿ ರೆಕ್ಕೆಯಾಗಿ ಅರ್‌ಸಣ ಕೊಕ್ಕಾಗಿ ಬೂದಿ ಬಣ್ಣಲಿರೊ ಹಕ್ಕಿ, ದನಗಳ ಮೈ ಮೇಲೆ ಹೇನ್ ಹೆರ್‌ಕ್ತಿದ್ದದೆ. ಪ: ಜಡ್ಡ್ ಕುರ್ಲಿ

ಜಡ್ಡ್[1] /*jaḍḍi*/ ನಾ. 1. ಆಲಸ್ಯ, 2. ಸೋಮಾರಿತನ, 3. ಜಾಡ್ಯ, 4. ದಡ್ಡು, 5. ಚರ್ಮ ದಪ್ಪವಾಗಿ ಕಾಯಿಗಟ್ಟುವುದು. 1. laziness, 2. indolence, 3. disease, 4. lethargy, 5. hardened skin. ವಾ: ಕೆಲ್‌ಸ ಮಾಡಿ ಮಾಡಿ ಕೈ ಜಡ್ಡ್ ಗಟ್ಟಿ ಹೋವುಟು. **ಜಡ್ಡ್‌ಗಟ್ಟಿ ಹೋಗುಟು** /*jaḍḍigaṭṭi ho:guṭu*/ ನಾವಿ. 1. ಚರ್ಮ ದಪ್ಪವಾಗಿ ಕಾಯಿಗಟ್ಟುವುದು, 2. ದಡ್ಡು, 3. ಗಡುಸಾಗು, 4. ಜಡ್ಡುಗಟ್ಟು. 1. hardened skin, 2. lichenification, 3. to become hard, 4. thickened. ವಾ: ಹೊಡ್ಸಿಕಂಡ್, ಬೈಸಿಕಂಡ್ ಮೈ ಮನ್ಸ್ ಜಡ್ಡ್ ಗಟ್ಟಿ ಹೋಗುಟು.

ಜಡ್ಡ್[2] /*jaḍḍi*/ ನಾ. 1. ಕೊಳೆತ ಸ್ಥಿತಿಯ ಮಾಂಸ, 2. ಸತ್ತ ದನದ ಮಾಂಸ. 1. rotten flesh, 2. meat of a dead cow. ವಾ: ಏನ್? ನೀ ಜಡ್ಡ್ ತಿಂಬಕೆ ಹೋದ್ದಾ? (ಬಯ್ಗುಳ).

ಜತ್ತನ /*jattana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಜತ್ತಿಲ /*jattila*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಬಳ್ಪ ಗ್ರಾಮದ ಜಾಗ. 1. family, 2. lineage, 3. a locality in Balpaa village in Sullia Taluk of Dakshina Kannada District.

ಜತ್ತೆ /*Jattɛ*/ ನಾ. ಜೊತೆ. together. **ನೊಗ ಜಾರ್ಕನ ಜತ್ತೆ ಬಿಚ್ಚಿದಂಗೆ(ಗಾ).** ವಾ: ಎತ್ತ್‌ಗಳ ಜತ್ತೆಲಿ ಕಟ್ಟೊಕು.

ಜತ್ತೆಲಿ /*jatɛ:li*/ ನಾ. 1. ಜೊತೆಯಲ್ಲಿ, 2. ಜೋಡಿಯಾಗಿ, 3. ಸಂಗಡ. 1. together, 2. collectively, 3. together with. ವಾ: ರಾತ್ರೆ ಮಾಸ ತಾಕನ ಜತೆಲಿ ಕೊಲೆಗ ಸ ಬಂದವೆತ ಹಿಂದೆ ಹೇಳ್ತಿದ್ದೊ, ಅದ್ಕೆ ಬೆಳ್ಳುಳಿನ ಹಿಡ್ಕಂಬೊತಿದ್ದೊ.

ಜಪತಪ /*japatapa*/ ನಾ. ಜೋಡಿ ಪದ. a compound word. ವಾ: ಜಪತಪ ಮಾಡಿ ಮನ್ಸ್ ನ ಹಿಡ್ಡಿಟ್ಕಂಬೊದು. ಪ: ಜಪತಪೆಲ್ಲ – ಜಪತಪವೆಲ್ಲ; ಜಪಮಾಡ್ಕನ – ಜಪ ಮಾಡುವಾಗ

ಜಪ್ತಿ ಮಾಡ್ /*japti ma:ḍɨ*/ ನಾ. 1. ವಶಪಡಿಸಿಕೊಳ್ಳು, 2. ಸ್ವಾಧೀನ ಪಡಿಸಿಕೊಳ್ಳು, 3. ಮುಟ್ಟುಗೋಲು ಹಾಕು. 1. to confiscate, 2. to occupy, 3. to seize. ವಾ: ಆಸ್ತಿನ ಜಪ್ತಿ ಮಾಡ್‌ದ್.

ಜಪ್ಪುದು /*jappudu*/ ನಾ. ಕೋಪದಿಂದ ಕುಕ್ಕುವುದು. to put/keep something with force. ವಾ: ಕಾಡ್ ಹಂದಿ ಜಪ್ಪಿಕಂಡ್ ಬಂದದೆ.

ಜಪ್ಪೆಕೋಡಿ /*jappɛko:ḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಜಪ್ಪೆಗೋವೆ /*jappɛgo:vɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಜಬರ್‌ದಸ್ತ್ /*jabarɨdastɨ*/ ನಾ. ಎಪ. 1. ಮೇಲ್‌ಸವಾರಿ ಮಾಡು (ಹಿಂದಿ ಮೂಲದ ಪದ), 2. ಬಲವಂತವಾಗಿ. 1. to force something on someone, 2. by force. ವಾ: ಅವುಳ್‌ನ ಜಬರ್ದಸ್ತ್‌ಲಿ ಎಳ್ಕಂಡೋದೊ.

ಜಬಳೆ /*jabaḷe*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಐವರ್ನಾಡು ಗ್ರಾಮದ ಜಾಗ. 1. family, 2. lineage, 3. a locality in Aivarnadu village in Sullia Taluk of Dakshina Kannada District.

ಜಬ್ಬನ /*jabbana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಜಬ್ಬಿಜಬ್ಬಿ /*jabbijabbi*/ ಕ್ರಿವಿ. ಹಣ್ಣಿನ ರಸವನ್ನು ಹೀರಿ ಕಚ್ಚಿ ಕಚ್ಚಿ ಹಾಕು. to squeeze the juice of any fruit. ವಾ: ಗದ್ದೆಗೆ ಕಾಡ್ ಹಂದಿಗ ಬಂದ್ ಕದ್‌ರ್‌ನ ಜಬ್ಬಿ ಜಬ್ಬಿ ಹಾಕೊಳೊ.

ಜಬ್ಬು /*jabbi*/ ಕ್ರಿ. ಕಚ್ಚು. to bite. ವಾ: ಕಬ್ಬುನ ಜಬ್ಬಿ ಹಾಕ್.

ಜಬ್ಬುದು /*jabbudu*/ ನಾ. ಮೊಲೆಹಾಲು ಕುಡಿಯುವುದು. to suck milk from the breast/ latching on. ವಾ: ಕೂಸ್‌ಗೆ ಮೂರ್ ವರ್ಸ ಆದರೂ ಇನ್ನೂ ಜಬ್ಬಿದೆ. ಪ: ಜಬ್ಬು – ಮೊಲೆಹಾಲು ಕುಡಿ

ಜಬ್ಬೆ /*jabbɛ*/ ನಾ. 1. ಹಿಂಡಿ ಉಳಿದದ್ದು, 2. ಸಪ್ಪೆ. 1. a residue, 2. bland. ವಾ: ಅದ್ ಕಬ್ಬ್ ದ್ ಜಬ್ಬೆ.

ಜಬ್ಲಿ /*jabli*/ ನಾ. 1. ಚೌಕಾಬಾರ ಆಟ, 2. ಕಲ್ಲಾಟವೆಂದೂ ಕರೆಯುತ್ತಾರೆ. an ancient, indian board game called Chauka bara. ವಾ: ಜಬ್ಲಿ ಆಟ ಆಡಿಕೆ ಬಂದದೆನ?

ಜಮ್ನೇರಲೆ ಮರ /*jamne:ralɛ mara*/ ನಾ. 1. ಪನ್ನೇರಳೆ ಮರ, 2. ಜಂಬೂ ಹಣ್ಣಿನ ಮರ. 1. tree of Malabar plum, black plum, 2. jamun fruit tree. ವಾ: ಜಮ್ನೇರಲೆ ಮರದ ಕೆತ್ತೆ, ಹಣ್ಣ್, ಬೀಜ ಎಲ್ಲನು ಉಪಯೋಗಕ್ಕೆ ಬಂದದೆ.

ಜಮ್ಮ /*jamma*/ ನಾ. 1. ಹಿರಿಯರಿಂದ ಬಂದ ಭೂಮಿ 2. ಹಕ್ಕು. 1. inherited land, ancestral land, 2. right. ವಾ: ನಿಮಿಗೆ ಜಮ್ಮ ಬೂಮಿ ಎಸ್ಟಿರ್‌ದು? ಪ: ಜಮ್ಮ ಹಿಡಿದು – ಹಕ್ಕು ಸ್ಥಾಪಿಸುವುದು

ಜಯಿಂಟ್ /*jayiṇṭɨ*/ ನಾ. ಎಪ. 1. ಜಂಟಿ, 2. ಕೀಲು, 3. ಸಂಧಿ, 4. ಸೇರಿಕೆ. 1. joints, 2. bones, 3. joint, 4. to join. ವಾ: ಮೂಳೆದ್ ಜಯಿಂಟ್ ಬುಟ್ಟೊವ್ವುಗಡ.

ಜರ /*jara*/ ನಾ. 1. ಜ್ವರ. fever. **ಎತ್ತಿಗೆ ಜರ ಬಾಕನ ಎಮ್ಮೆಗೆ ಬರೆ ಇಟ್ಟೋಗಡ(ಗಾ).** ವಾ: ಜರಕೆ ಮೊದ್ದ್ ತಕಂಡನ? ಪ: ಜರತ – ಜ್ವರವೆಂದು

ಜರಂಗೀಲ್ /*jaraŋgi:lɨ*/ ನಾ. ಒಂದು ಪಕ್ಷಿ. a variety of bird. ವಾ: ಜರಂಗೀಲ್‌ತ ಹಕ್ಕಿಗಡ. ಪ: ಜೆಂಜಿರ್ ಹಕ್ಕಿ, ಎಂಜಿರ್ ಪಕ್ಕಿ(ತು)

ಜರಿ[1] /*jari*/ ಕ್ರಿ. ಜರಿಯುವುದು ಬೀಳು, ಗುಡ್ಡ/ಬರೆ ಜರಿಯುವುದು. landslide. ವಾ: ಬರೆ ಜರಿದ್ ಹೋತ್. ಪ: ಜರ್ತ್ – ಜರಿಯಿತು; ಜರ್ದ್ – ಜರಿದು

ಜರಿ[2] /*jari*/ ನಾ. 1. ನೆರಿಗೆ, 2. ಸೀರೆಯ ಜರಿ. 1. folds

of saree, 2. border of one's saree. ವಾ: ಈ ಕಾಸ್ಮಿ ಸೀರೆದ್ ಜರಿ ಬಾರಿ ದೊಡ್ಡದಾತ್.

ಜರಿ³ /*jari*/ ಕ್ರಿವಿ. 1. ಬಯ್ಯುವುದು, 2. ನಿಂದಿಸು. 1. to scold someone, 2. to criticise. ವಾ: ಸುಮ್ಮನಾರ್ ಬೇರೆಯವರ್‌ನ ಜರಿದು ಯಾಕೆ?

ಜರಿ⁴ /*jari*/ ನಾ. ಆಳವಾದ ಕಣಿವೆಯಲ್ಲಿ ಹರಿಯುವ ನೀರು/ ಜಲಪಾತ. a waterfall. ವಾ: ಕುಂದ್‌ನ ಕೊಡಿಂದ ಜರಿ ಹರ್‌ದೆ.

ಜರ್ಸಿ /*jarasi*/ ನಾ. ಎಪ. ಒಂದು ಜಾತಿಯ ದನ. a variety of cattle. ವಾ: ಜರ್ಸಿ ತುಂಬ ಹಾಲ್ ಕೊಟ್ಟದೆ.

ಜರ್ಸ್ /*jarsɨ*/ ನಾ. ಕುಸಿಯು. to cave in. ವಾ: ಮಣ್ಣ್‌ನ ಜರ್ಸಿದೊ.

ಜಲ /*jala*/ ನಾ. ಎಪ. 1. ಅಂತರ್ಜಲ, 2. ನೆಲದಡಿಯಲ್ಲಿ ಶಿಲಾಸ್ತರಗಳ ನಡುವೆ ಶೇಖರವಾದ ನೀರು, 3. ಭೂಜಲ. 1. ground water, 2. water found in the saturated zones in the layers of rocks beneath the land surface, 3. ground water. ವಾ: ಬರೆಲಿ ಜಲನೀರ್ ಬರ್‌ತುಟ್ಟು.

ಜಲಕದಗುಂಡಿ /*jalakadaguṇḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಜಲ್ದಿ /*jaldi*/ ನಾ. ಎಪ. 1. ಬೇಗನೆ, 2. ಅವಸರವಸರವಾಗಿ. 1. immediately, 2. urgency. ವಾ: ಜಲ್ದಿ ನಡ್ಕಂಡ್ ಹೋದರೆ ಬೇಗ ಮುಟ್ಟಿದೆ.

ಜಲ್ಮ /*jalma*/ ನಾ. 1. ಜನುಮ, 2. ಹುಟ್ಟು, 3. ಜನ್ಮ, 4. ಬಾಳ್ವೆ, 5. ಜೀವನ. 1. life, 2. birth, 3. being, 4. living, 5. existence. ವಾ: ಈ ಹೆಣ್ಣ್ ಜಲ್ಮ ಸಾಕಪ್ಪಾ ಸಾಕ್.

ಜಲ್ಲಿಕಲ್ಲ್ /*jallikallɨ*/ ನಾ. ಕರಿಗಲ್ಲಿನ ಚಿಕ್ಕ ಚಿಕ್ಕ ತುಂಡು. pieces of black stone. ವಾ: ಜಲ್ಲಿ ಕಲ್ಲ್‌ನ ಹೊಡಿ ಮಾಡೊ ಮಿಸಿನ್ ಬಂದುಟುಗಡ.

ಜವಣ /*javaṇa*/ ನಾ. ಯುವಕ. a young man/a youth. ವಾ: ಜವಣ ಹುರ್‌ಪುಲಿ ಕೆಲ್‌ಸ ಮಾಡಿವೆ, ಅದಿಕೆ ಅವ್ಕೆನೆ ಕೆಲ್‌ಸ ಕೊಡೊಕು.

ಜವನಿಕೆ /*javanikɛ*/ ನಾ. 1. ಮೇಲ್ಮುಚ್ಚಿಕೆ ಸೊಪ್ಪು, 2. ರಬ್ಬರ್ ತೋಟಗಳಲ್ಲಿ ಇತರ ಕಳೆಗಿಡಗಳು ಬರದಂತೆ ಹರಡಲು ಬಿಡುವ ಬಳ್ಳಿ. 1. a variety of leaf vegetable, 2. a variety of plant grown in rubber plantation to avoid the growth of weeds. ವಾ: ಜವನಿಕೆ ಬೊಳ್ಳಿಗಳ ರಬ್ಬರ್ ತೋಟಗಳ್‌ಲಿ ನೆಟ್ಟವೆ.

ಜವಾಬು /*java:bu*/ ನಾ. 1. ಉತ್ತರ, 2. ಮರುನುಡಿ. 1. answer, 2. reply. ವಾ: ನಂಗೆ ಜವಾಬು ಕೊಡಿಕೆ ಗೊತ್ತು.

ಜವುಗು ನೆಲ /*javugu nɛla*/ ನಾ. 1. ಒದ್ದೆ, 2. ಜಿನುಗು, 3. ತೇವವಾಗಿರುವ ಭೂಮಿ. 1. wet, 2. to trickle, 3. wet ground. ವಾ: ಅದ್ ಜವುಗು ನೆಲ.

ಜಳೆ /*jaḷɛ*/ ನಾ. ಭತ್ತ ಬಡಿಯಲು ಬಳಸುವ ಸಣ್ಣದಾದ ಉದ್ದನೆಯ ಕೋಲು. grain flail. ವಾ: ಜಳೆಲಿ ಬತ್ತ ಬಡೆದು.

ಜಳ್ಳ /*jaḷḷa*/ ನಾ. 1. ದೋಣಿ ಹುಟ್ಟು, 2. ಸುಂಕಾಣಿ. 1. an oar, 2. used in rowing boat.

ಜಳ್ಳೆಕಾಲ್ /*jaḷḷɛ ka:lɨ*/ ನಾ. ಊನಗೊಂಡ ಕಾಲು. disabled leg.

ಜಳ್ಳ್ /*jaḷḷɨ*/ ನಾ. 1. ಟೊಳ್ಳು, 2. ತಿರುಳಿಲ್ಲದ್ದು, 3. ಪೊಳ್ಳಾದ ಕಾಳು, 4. ಹೊಟ್ಟು. 1. hollow, 2. without the kernel, 3. a hollow grain, 4. rice hulls (or rice husks). ವಾ: ಜಳ್ಳ್ ಬತ್ತನ ಕೋಳಿಗ ತಿಂದವೆನಾ?

ಜಳ್ಳ್ ಬತ್ತ /*jaḷḷɨ batta*/ ನಾ. 1. ತಿರುಳು ಇಲ್ಲದ ಭತ್ತ, 2. ಹೊಟ್ಟುಭತ್ತ. 1. hollow and chaffy particles in paddy, 2. rice hulls (or rice husks). ವಾ: ಹೊಡ್ಕಿರೆ ಜಳ್ಳ್ ಬತ್ತ ಹಾರ್‌ದೆ. ಪ: ದಡ್ಡ್‌ಬತ್ತ

ಜಾಂಗ್ಲ /*ja:ŋgla*/ ನಾವಿ. ತುಂಬಾ ಸಡಿಲವಾದ ಬಟ್ಟೆ. loose clothes. ವಾ: ಜಾಂಗ್ಲ ಹಾಕಂಡ್ ಹೊರ್‌ಟತ್. ಪ: ಜಾಂಗ್ಲೀಸ್

ಜಾಕೆ /*ja:ke*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಪಂಬೆತ್ತಾಡಿ ಗ್ರಾಮದ ಜಾಗ. 1. family, 2. lineage, 3. a locality in Pambettadi village in Sullia Taluk of Dakshina Kannada District.

ಜಾಕೆಟ್ /*ja:kɛṭɨ*/ ನಾ. ಎಪ. 1. ಉದ್ದ ತೋಳಿನ ರವಿಕೆ,

2. ಚಳಿಗೆ ಹಾಕುವ ಅಂಗಿ. 1. a full sleeve blouse, 2. a jacket. ವಾ: ನಮ್ಮವ್ವ ಜಾಕೆಟ್ ಹಾಕ್ತಿದ್ದೊ.

ಜಾಕ್‌ರ್ತೆ /*ja:garitɛ*/ ನಾ. 1. ಜಾಗ್ರತೆ, 2. ಎಚ್ಚರಿಕೆ, 3. ಜಾಗರೂಕತೆ, 4. ಕಾರ್ಯ ತತ್ಪರತೆ. 1. cautious, 2. circumspect, 3. attentive, 4. efficient/ prompt. ವಾ: ಒಬಬ್ಬೆ ಇರಿಕನ ಜಾಗರ್ತೆಲಿರೊಕು.

ಜಾಗ /*ja:ga*/ ನಾ. 1. ಜಾಗ, 2. ಸ್ಥಳ, 3. ನೆಲ. 1. a site, 2. a place/region, 3. land. ವಾ: ಜಾಗನ ನಿನ್ನ ಹೆಸ್ರಿಗೆ ಬರ್‌ಸಿಕಂಡನ?

ಜಾಗ ಕಾಲಿ ಮಾಡ್ದು /*ja:ga ka:li ma:ḍdu*/ ಕ್ರಿವಿ. 1. ಜವಾಬ್ದಾರಿಯಿಂದ ತಪ್ಪಿಸಿಕೊಳ್ಳು, 2. ಸಿಕ್ಕಿಬೀಳದಂತೆ ಓಡಿಹೋಗು. 1. to evade responsibility, 2. to run away. ವಾ: ಏನಾರ್ ಹೇಳಿರೆ ಸಾಕ್ ಜಾಗ ಕಾಲಿ ಮಾಡ್‌ದು.

ಜಾಗೆ /*ja:gɛ*/ ನಾ. 1. ಜಾಗ, 2. ಸ್ಥಳ, 3. ನೆಲ. 1. site, 2. place, 3. land. ವಾ: ಕಾಲಿ ಜಾಗೆ ತುಂಬ ಉಟ್ಟು.

ಜಾಡೆಂಕಿ /*ja:ḍɛŋki*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಜಾಡ್ನೆ /*ja:ḍnɛgɛ*/ ನಾ. ಕಾಯಿಲೆ. for the disease. ವಾ: ಅಂವ ಜಾಡ್ನೆಗೆ ಬಿದ್ದ್ ಬಾರಿ ವರ್‌ಸ ಆತಲ.

ಜಾಡ್ಯ /*ja:ḍya*/ ನಾ. ಮಾನಸಿಕ ಅಂಟುರೋಗ. mental illness. ವಾ: ಅವ್ಕೆ ಹಙ್ಚ ಜಾಡ್ಯ.

ಜಾಣ /*ja:ṇa*/ ನಾವಿ. 1. ಚುರುಕು, 2. ಕ್ರಿಯಾಶೀಲ. 1. active, 2. energetic. ವಾ: ಜಾಣ ಕೂಸು.

ಜಾತಕ /*ja:taka*/ ನಾ. ಹುಟ್ಟಿದ ಸಮಯ ಮತ್ತು ದಿನಾಂಕಕ್ಕೆ ಅನುಗುಣವಾಗಿ ಜ್ಯೋತಿಷಿ ಗಳು ತಯಾರಿಸುವ ಜನ್ಮಕುಂಡಲಿ. a birth chart, Natal Chart, an astrological chart. **ಬೆಣ್ಣೆ ಉಜ್ಜಿ ಜಾತಕ ನೋಡ್ದು ಬ್ಯಾಡ(ಗಾ).** ವಾ: ಕೂಸ್‌ದ್ ಜಾತಕ ಬರ್‌ಸೊಕು.

ಜಾತಿ[1] /*ja:ti*/ ನಾ. 1. ವೃತ್ತಿಗೆ ಅನುಗುಣವಾಗಿ ಪೂರ್ವಿಕರು ರೂಪಿಸಿಕೊಂಡ ಸಾಮಾಜಿಕ ವರ್ಗಿಕರಣ ವ್ಯವಸ್ಥೆ, 2. ಕುಲ, 3. ವಂಶ. 1. Caste, divisions in the Hindu society, originally based on the social functions, 2. lineage, 3. a clan/a family. **ಉಂಡ ಮೇಲೆ ಜಾತಿ ಕೇಳಿ ಕಾಗದ್(ಗಾ).** ವಾ: ಜಾತಿ ಯಾವುದಾದರೇನ್, ಮೊನ್ಸತ್ವ ಮರೆದೆ ಮೊನ್ಸರಂಗೆ ಬೊದ್ಕಕು ಅಸ್ಟೆ. ಪ: ಜಾತಿಯವರೊಟ್ಟಿಗೆ – ಜಾತಿಯವರೊಂದಿಗೆ; ಜಾತಿಯವ್ಕೆ – ಜಾತಿಯವರಿಗೆ; ಜಾತಿಲ್ಲದ – ಜಾತಿಯಲ್ಲದ; ಜಾತ್ಯಿಟ್ಟು – ಜಾತಿ ಇದೆ; ಜಾತಿಯವರದ್ದ್ – ಜಾತಿಯವರದ್ದು

ಜಾತಿ[2] /*ja:ti*/ ನಾ. 1. ಪ್ರಬೇಧ, 2. ತಳಿ. 1. variety, 2. breed. ವಾ: ಕಾಪಿ, ಯಾಲ, ಒಳ್ಳಮೆಣ್ಸ್ ಎಲ್ಲದರ್‌ಲು ಬೇರೆ ಬೇರೆ ಜಾತಿ ಉಟ್ಟು.

ಜಾತಿ[3] /*ja:ti*/ ನಾ. 1. ಕಾಡುಪ್ರಾಣಿ, 2. ಬೇಟೆಯ ಕಾಡುಪ್ರಾಣಿ. 1. a wild animal, 2. a hunting breed. ವಾ: ಬೇಟೆಗೆ ಹೋಕನ ಜಾತಿ ಸಿಕ್ಕಿಟುಗಡ.

ಜಾತ್ರೆ /*ja:trɛ*/ ನಾ. 1. ಉತ್ಸವ, 2. ಪರಿಸೆ. 1. festival, 2. an occasional social gathering to sell and buy things. ವಾ: ಜಾತ್ರೆಗೆ ಪೋಯ.

ಜಾನ /*ja:na*/ ನಾ. 1. ಜಾಣ, 2. ಚತುರ, 3. ಬುದ್ಧಿವಂತ. 1. clever, 2. wise, 3. intelligent. **ಜಾನಂಗೆ ಮಾತ್‌ನ ಪೆಟ್ಟ್, ಕೋಣಂಗೆ ಚಾಟಿನ ಪೆಟ್ಟ್(ಗಾ).** ವಾ: ಜಾನ ಮಕ್ಕ.

ಜಾನಪ್ಪ /*ja:nappa*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. masculine given name. ಪ: ಜಾನು, ಜಾಣು

ಜಾಮೀನ್ /*ja:mi:ni*/ ನಾ. 1. ಇನ್ನೊಬ್ಬರ ಪರ ಆಧಾರ ವಾಗಿ ನಿಲ್ಲುವುದು, 2. ಹೊಣೆಗಾರನಾಗಿ ನಿಲ್ಲುವುದು, 3. ಜವಾಬ್ದಾರಿಯಾಗಿ ನಿಲ್ಲು. 1. to offer surety, 2. an obligant, 3. to assume responsibility. ವಾ: ಅಂವಂಗೆ ಜಾಮೀನ್ ಕೊಡೊಕಡ.

ಜಾಯಿಕಾಯಿ /*ja:yika:yi*/ ನಾ. 1. ಔಷಧಿಗೆ ಬಳಸುವ ಕಾಯಿ, 2. ಜಾಕಾಯಿ, 3. ಬೀಜದಿಂದ ಕೂಡಿದ ಒಂದು ಮಸಾಲಾ ಪದಾರ್ಥ. 1. nutmeg. 2. a spice from the nutmeg tree (Myristica fragrant), 2. a spice from the nutmeg tree. ವಾ: ಸಣ್ಣ ಕೂಸಿಗೆ ಜಾಯಿಕಾಯಿನ ಅರ್‌ದ್ ನೆಕ್ಕಿಸಿವೆ.

ಜಾರಂಗೇಲ್ /*ja:raŋge:li*/ ನಾವಿ. ತುಂಬಾ ಜಾರುವ ಜಾಗ. slippery. ವಾ: ಜಾರಂಗೇಲ್ ಕಡೆ ಹೋಗ್ಬಡ.

ಜಾರತಡ್ಕ /*ja:rataḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಜ್ಜಾವರ ಗ್ರಾಮದ ಜಾಗ. a

locality in Ajjavara village in Sullia Taluk of Dakshina Kannada District. ಪ: ಜ್ಯಾರತಡ್ಕ

ಜಾರ್[1] /*ja:ri*/ ಕ್ರಿವಿ. ಕೆಟ್ಟ ದಾರಿ ಹಿಡಿಯುವುದು. to follow a wrong/and immoral path. ವಾ: ಬೊದ್ಕ್‌ಲಿ ಜಾರ್‌ಕಾಗದ್.

ಜಾರ್[2] /*ja:ri*/ ಕ್ರಿ. 1. ಜಾರಿಸು, 2. ಒಂದು ವಸ್ತುವನ್ನು ಒಂದು ಸ್ಥಳದಿಂದ ಪಕ್ಕದ ಇನ್ನೊಂದು ಜಾಗಕ್ಕೆ ಸ್ಥಳಾಂತರಿಸುವುದು. 1. to slide something over, 2. to shift the place of something. ವಾ: ಬತ್ತ ಚೀಲನ ಅಟ್ಟಂದ ಬಾಡೆಗೆ ಜಾರ್‌ಸ್. **ಜಾರಿಕಂಬದು** /*ja:rikambadu*/ 1. ಜವಾಬ್ದಾರಿಯಿಂದ ನುಣುಚಿಕೊಳ್ಳುವುದು, 2. ಬಟ್ಟೆಗಳನ್ನು ಅವ್ಯವಸ್ಥಿತವಾಗಿ ಧರಿಸು. 1. to be evasive, 2. to dress well. ವಾ: ಈ ಸೀರೆ ಆಗಾಗ ಜಾರಿಕಂಬದು. ಪ: ಜ್ಯಾರಿಕೊಂಬೊದು.

ಜಾರ್[3] /*ja:ri*/ ನಾ. 1. ಜಾರು, 2. ಆಯತಪ್ಪು, 3. ನುಣ್ಣಗಿನ ಮೈಯಿಂದಾಗಿ ಹಿಡಿತ ತಪ್ಪು. 1. to slide, 2. to slip, 3. to loose grip due to the soft surface of something. ವಾ: ಹಾಮಜಿ ಮೇಲೆ ಕಾಲಿಸಿರೆ ಜಾರ್‌ದು.

ಜಾರ್[4] /*ja:ri*/ ಕ್ರಿವಿ. 1. ತಪ್ಪಿಸಿಕೊಳ್ಳು, 2. ಓಡಿಹೋಗು. 1. to escape, 2. to run away. **ಹಣ್ಣ್ ತಿಂದಂವ ಜಾರ್ತ್, ಚೋಲಿ ತಿಂದಂವ ಸಿಕ್ಕಿಬೀತ್(ಗಾ).** ವಾ: ಸಾಲ ಕೇಳಿಕನ ಎಲ್ಲ ಜಾರುವೆ. **ಜಾರಿಹೋದ ಮಾತ್** /*ja:riho:da ma:ti*/ 1. ನುಣುಚಿಕೊಳ್ಳುವ ಮಾತು, 2. ಬೇಜವಾಬ್ದಾರಿ ಮಾತು. 1. beguiling, 2. an irresponsible talk. ವಾ: ಜಾರಿಹೋದ ಮಾತ್ ಆಡಿ ಏನ್ ಸುಕ.

ಜಾರ್ದೆ[1] /*ja:rdɛ*/ ನಾ. ಜಾರುವುದು. slippery. ವಾ: ಮಳೆ ಬಂದರೆ ಅಂಗ್‌ಳ ಜಾರ್ದೆ.

ಜಾರ್ದೆ[2] /*ja:rdɛ*/ ನಾ. ಜವಾಬ್ದಾರಿಯಿಂದ ನುಣುಚಿ ಕೊಳ್ಳುವುದು. to evade responsibility. ವಾ: ಕೆಲ್‌ಸ ಹೇಳಿರೆ ಅವುಳು ಮೆಲ್ಲ ಜಾರ್ದೆ.

ಜಾರ್ದೆತಿಂಗ /*ja:rdɛtiŋga*/ ನಾ. ಅರೆಭಾಷೆಯ ಎಂಟನೆಯ ತಿಂಗಳು. the eight month in Arebhashe calendar. ವಾ: ಜಾರ್‌ದೆ ತಿಂಗಳ್ಲಿ ಹಬ್ಬಗ ಸುರಾದೆ.

ಜಾರ್ಪಡಿ /*ja:rpaḍi*/ ನಾ. 1. ಜವಾಬ್ದಾರಿಯಿಂದ ನುಣುಚಿ ಕೊಳ್ಳುವುದು, 2. ಹಿಂದೆ ಸರಿಯುವುದು. 1. to evade responsibility, 2. to back out/ withdraw. ವಾ: ಅಂವ ಜಾರ್ಪಡಿ ಮೊನ್‌ಸ.

ಜಾರ್ಸು /*ja:rsu*/ ಕ್ರಿ. 1. ಜಾರಿಸು, 2. ಪಕ್ಕಕ್ಕೆ ಸರಿಸು. 1. to slide, 2. to keep something away. ವಾ: ಕೂಸುನ ತಲೆಂದ ತೊಪ್ಪಿನ ಹಙ್ಞ ಹಿಂದಕ್ಕೆ ಜಾರ್ಸು.

ಜಾಲಗೂಡು /*ja:lagu:ḍu*/ ನಾ. 1. ಪಾನವಾಳ ಮರದ ಕೊಂಬೆಗಳನ್ನು ಬಳಸಿ, ಸಮಾಧಿಗೆ ನಿರ್ಮಿಸುವ ಮನೆ, 2. ಮೃತ ಶರೀರವನ್ನು ಮಣ್ಣು ಮಾಡಿದ ಸ್ಥಳ, 3. ಮೂರನೇ ದಿನ ನಿರ್ಮಿಸಿದ ಚಪ್ಪರ. 1. a shelter built over the tomb using the branches of Indian plum tree, 2. a place of burial, 3. a canopy/a pandal built on the third day. ವಾ: ಮಾಡ್ದ ಅಡ್‌ಗೆ, ತಿಂಡಿನೆಲ್ಲ ಸುದ್ದದ ದಿನ ಜಾಲ ಗೂಡು ಹಕ್ಕಲೆ ಇಸುದು.

ಜಾಲಮಾಲ /*ja:lama:la*/ ನಾ. ಮೇಲೆಕೆಳಗೆ. up and down. ವಾ: ಆ ಗೂಡೆ ಸೀರೆ ಜಾಲಮಾಲ ಉಟ್ಟುಟು. ಪ: ಜಾಳಮೇಳ

ಜಾಲು[1] /*ja:lu*/ ನಾ. ಕಣ. an arena/threshing floor. ವಾ: ಜಾಲು ಕಡೆ ಹೋಗಿ ಬಂದದ್.

ಜಾಲು[2] /*ja:lu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಪೆರುವಾಜೆ ಗ್ರಾಮದ ಜಾಗ. a locality in Peruvaje village in Sullia Taluk of Dakshina Kannada District.

ಜಾಲುಮನೆ /*ja:lumane*/ ನಾ. 1. ಕುಟುಂಬ, 2. ಮನೆತನ,3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕೊಲ್ಲಮೊಗ್ರು ಗ್ರಾಮದ ಜಾಗ. 1. family, 2. lineage, 3. a locality in Kollamogru village in Sullia Taluk of Dakshina Kannada District.

ಜಾಲ್ /*ja:li*/ ನಾ. 1. ಅಂಗಳ, 2. ಅಂಗಣ. 1. a courtyard, 2. an open yard. ವಾ: ಜಾಲ್ ದೊಡ್ಡದಲ ಗುಡ್ಸಿಕೆ ಎರ್‌ಡ್ ಗಂಟೆ ಬೇಕ್. ಪ: ಇಜ್ಜಾಲ್. **ಜಾಲ್‌ಗುಡ್ಸಿ** /*ja:li guḍsi*/ 1. ಅಂಗಳ ಗುಡಿಸಿ, 2. ಅಂಗಣ. 1. to broom the courtyard, 2. a courtyard. ವಾ: ಜಾಲ್ ಗುಡ್ಸಿ ಬಂದೆ.

ಜಾಲ್ತಾರು /*ja:lta:ru*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಎಡಮಂಗಲ ಗ್ರಾಮದ ಜಾಗ. a locality in Edamangala village in Sullia Taluk of Dakshina Kannada District.

ಜಾಲ್ತೆತಿಂಗ /*ja:ltɛtiŋga*/ ನಾ. ಅಕ್ಟೋಂಬರ್ 15 ರಿಂದ ನವಂಬರ್ 15 ರವರೆಗೆ. from 15 October to 15 November. ವಾ: ನಾ ನಿಮ್ಮ ಕಡೆ ಜಾಲ್ತೆತಿಂಗಳ್‌ಲಿ ಬನ್ನೆ.

ಜಾಲ್ಸ್ /*ja:lsɨ*/ ನಾ. 1. ಜಾಲಿಸು, 2. ಬಟ್ಟೆ ಒಗೆದ ನಂತರ ಶುದ್ಧ ನೀರಿನಲ್ಲಿ ಅದ್ದಿ ತೆಗೆಯುವುದು. 1. rinsing, 2. to rinse clothes to remove soap from them. ವಾ: ಅರ್ವೆನ ಬೇಗ ಜಾಲ್ಸ್.

ಜಾಸ್ತಿ /*ja:sti*/ ನಾ. 1. ಹೆಚ್ಚಳ, 2. ಅಧಿಕ, 3. ಹೆಚ್ಚು. 1. increase, 2. excess, 3. more. ವಾ: ಸಿಂಯಿ ಜಾಸ್ತಿ ತಿನ್‌ಬಡ. ಪ: ಜಾಸ್ತಿಆಕು – ಹೆಚ್ಚು ಆಗಬೇಕು; ಜಾಸ್ತಿಇರೊಕು – ಹೆಚ್ಚಿರಬೇಕು; ಜಾಸ್ತಿಇರ್ದು – ಹೆಚ್ಚಿರಬಹುದು. **ಜಾಸ್ತಿ ಆದೆ** /*ja:sti a:dɛ*/ 1. ಹೆಚ್ಚಾಗುತ್ತದೆ, 2. ಅಧಿಕವಾಗುತ್ತದೆ. 1. will increase, 2. will exceed. ವಾ: ಕಾಪಿ ಜಾಸ್ತಿಆದು ನೋಡೊಕು. **ಜಾಸ್ತಿಯಾತ್** /*ja:stiya:tɨ*/ ಅತಿಯಾಗು. too much of something. ವಾ: ತಿಂದದ್ ಜಾಸ್ತಿಯಾತ್.

ಜಾಳಮೇಳ /*ja:ḷama:ḷa*/ ನಾ. ಬಟ್ಟೆಯನ್ನು ನೇಕೆಯಲ್ಲಿ ಅವ್ಯವಸ್ಥಿವಾಗಿ ಹಾಕುವುದು. to put clothes on a clothesline in an erratic way.

ಜಾಳ್ದೆ /*ja:ḷdɛ*/ ನಾ. ಅರೆಭಾಷೆಯ ಎಂಟನೇಯ ತಿಂಗಳು. 8th month of Arebhashe calendar.

ಜಾಳ್ಸ್ /*ja:ḷsɨ*/ ನಾ. 1. ಬಟ್ಟೆ ಜಾಲಿಸು, 2. ಪರಿಶುದ್ಧಿ ಗೊಳಿಸು. 1. to rinse: to dip washed clothes in water to remove soap from them, 2. to purify something. ವಾ: ಒಗ್‌ದ ಅರ್ವೆನ ಜಾಳ್ಸ್.

ಜಿಂಕೆ /*jiŋkɛ*/ ನಾ. 1. ರೋಮಂಥಿ ಸ್ತನಿ, 2. ಹರಿಣ, 3. ಚಿಗರೆ, 4. ಹುಲ್ಲೆ, 5. ಎರಳೆ. 1. a deer, 2. muntjac, 3. a deer, 4. a muntjac, 5. a barking deer. ವಾ: ಗಂಡ್ ಜಿಂಕೆಗೆ ಕವ್ಲ್ ತರ ಕೊಂಬುಗಿದ್ದದೆ. ಪ: ಸಾರೆಜ್ಜ

ಜಿಂಗ್ಟ್ /*jiŋgṭi*/ ಕ್ರಿ. 1. ಚಿವುಟು, 2. ಜಿಗುಟು, 3. ಉಗುರುಗಳಿಂದ ಚರ್ಮವನ್ನು ಹಿಂಡು. 1. to pinch, 2. to squeeze someone's skin, 3. to squeeze the skin using nails. ವಾ: ಉಗ್ರ್ ಲಿ ಜಿಂಗ್ಟ್ ದು ಹಾಳ್ ಅಬ್ಬೆಸ.

ಜಿಂಟ್ /*jinṭi*/ ಕ್ರಿ. ಚಿವುಟು. to pinch. **ಎಳ್ತ್‌ಲೇ ಜಿಂಟಿ ಹಾಕೊಕು(ನು).** ವಾ: ದೈನ ಚಿಗ್ರ್‌ನ ಆಡಿಕನ ಮಕ್ಕ ಜಿಂಟಿ ಹಾಕುದುತ. ಪ: ಜಿಂಟಿ – ಚಿವುಟಿ; ಜಿಂಟೊಕು – ಚಿವುಟಬೇಕು; ಜಿಂಟಿತ್ – ಚಿವುಟಿದನು/ಳು; ಜಿಂಟಿದೆ – ಚಿವುಟಿದೆನು/ಚಿವುಟುತ್ತಾನೆ/ಳೆ; ಜಿಂಟಿವೆ – ಚಿವುಟುತ್ತಾರೆ; ಜಿಂಟುವೊ – ಚಿವುಟುವರು. **ಜಿಂಟಿಯನ** /*jinṭiyana*/ ಚಿವುಟುತ್ತೀಯಾ? will you pinch? ವಾ: ಇನ್ನ್ ಜಿಂಟಿಯನ.

ಜಿಗ್ಗ್ /*jiggɨ*/ ನಾ. 1. ಪೊದೆ, 2. ಒತ್ತೊತ್ತಾಗಿ. 1. a bush, 2. together. ವಾ: ಸೀಗೆಬಲ್ಲೆ ಜಿಗ್ಗ್ ಲಿ ಉಟ್ಟು.

ಜಿಗ್‌ಜಾಗ್ /*jig ja:gɨ*/ ನಾ. ಎಪ. 1. ಅಂಕುಡೊಂಕು ಹೊಲಿಗೆ, 2. ವಕ್ರ ವಕ್ರ, 3. ಹೊಲಿಗೆ ಯಂತ್ರದಲ್ಲಿ ಬಟ್ಟೆಯ (ಸೀರೆಯ) ಅಂಚಿಗೆ ವಕ್ರ ವಿನ್ಯಾಸದ ರಚನೆ. 1. zig zag, 2. un even, 3. zig zag. ವಾ: ಸೀರೆ ಕರೆನ ಜಿಗ್‌ಜಾಗ್ ಮಾಡಿಕೆ ಕೊಟ್ಟದ್.

ಜಿಗ್‌ಟ್ /*jigiṭɨ*/ ನಾ. ಕೂದಲು, ನೂಲು ಮುಂತಾದವು ಸಿಕ್ಕಾಗುವುದು. entangled hair, thread, etc. ವಾ: ನೂಲು ಸುತ್ತಿಕನ ಜಿಗ್‌ಟ್ ಆದು.

ಜಿಗ್ಣೆ /*jigṇɛ*/ ನಾ. 1. ಜಿಗಣೆ, 2. ರಕ್ತವನ್ನು ಹೀರುವ ಜೀವಿ, 3. ಇಂಬಳ. leech, a worm that lives in water and attaches itself to other creasure to suck blood. ವಾ: ಯಾಲ ತೋಟಲಿ ಜಿಗ್ಣೆಂದಾಗಿ ಕಾಲ್ ಹಾಕಿಕೆ ಬೊತ್ತ್.

ಜಿಜ್ಜಿ /*jijji*/ ನಾ. ಸ್ನಾನ (ಮಭಾ). bathing (in the vocabulary of children). ವಾ: ಜಿಜ್ಜಿ ಮಾಡ್ಸಿನೆ ಬನ್ನಿನೆ ಮಕ್ಕಳೆ.

ಜಿಡ್ಡ್ /*jiḍḍi*/ ನಾ. 1. ಕೊಳೆ, 2. ಕೊಳೆ ಬೀಳು, 3. ಎಣ್ಣೆ ತುಪ್ಪ ಮುಂತಾದವುಗಳ ಜಿಗುಟು. 1. dirt, 2. becoming dirty, 3. grease (of oil or ghee). ವಾ: ಬೆಳಿ ಅರ್ವೆ ಜಿಡ್ಡ್ ಆತ್.

ಜಿದ್ /*jidɨ*/ ನಾವಿ. 1. ಛಲ, 2. ಪಂಥಾಹ್ವಾನ. 1. resoluteness, 2. to challenge. ವಾ: ಜಿದ್‌ಲಿ ಓದಿ ಕೆಲ್‌ಸಕೆ ಸೇರ್‌ದ್.

ಜಿನಿಜಿನಿ /*jinijini*/ ಅ. 1. ಜಿನುಗುವ, 2. ಹನಿಯುವ, 3.

ಸೋನೆಮಳೆ, 4. ತೊಟ್ಟಿಕ್ಕು. 1. oozing, 2. dripping, 3. drizzling, 4. to fall in drops. ವಾ: ಜಿನಿ ಜಿನಿಂತ ಮಳೆ ಸುರಾತ್.

ಜಿನ್ಕ್ /*jinkɨ*/ ನಾ. 1. ಜಿನುಗು, 2. ಹನಿ, 3. ತೊಟ್ಟಿಕ್ಕು. 1. drizzling, 2. drops, 3. dripping. ವಾ: ಹೊರೆಗೆ ಮಳೆ ಜಿನ್ಕ್ ಕೆ ಸುರಾತ್.

ಜಿನ್ನಪ್ಪ /*jinnappa*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. masculine given name. ಪ: ಜಿನ್ನು

ಜಿನ್ಸಿಟ್ /*jinsiṭ*/ ನಾ. ಎಪ. ಲೋಹದ ಛಾವಣಿ ಹಾಳೆ. roof made of a metal sheets. ವಾ: ಕೊಟಗೆ ಮೇಲೆ ಜಿನ್ಸಿಟ್ ಹಾಕಿ ಮಳೆ ಬಾಕನ ಸದ್ದಾದೆ.

ಜಿಪುಣ /*jipuṇa*/ ನಾ. 1. ಜಿಪುಣ, 2. ಲೋಭಿ, 3. ಕೃಪಣ. 1. a stingy man, 2. miserly, 3. covetous. ವಾ: ಅಂವ ಬಾರಿ ಜಿಪುನ.

ಜಿಪುಣಿ /*jipuṇi*/ ನಾ. ಜಿಪುಣಿ. a stingy woman. ವಾ: ಜಿಪುಣಿತೇಳ್ರೆ ಉಂಡ ಕೈನ ಕೊಡ್ಕಿಕಿಲೆ.

ಜಿಬ್ಬಡಿಕೆ /*jibbaḍikɛ*/ ನಾ. ಬೇಯಿಸಿದ ಅಡಿಕೆ, ಹಸಿ ಅಡಿಕೆಯನ್ನು ಬೇಯಿಸಿ ಮಾಡುವ ಅಡಿಕೆ, 3. ಜಿಬಳಡಿಕೆ. boiled arecanut. ವಾ: ಜಿಬ್ಬಡಿಕೆ ತಿಂದಿಯನ?

ಜಿಬ್ರಡಿಕೆ /*jibraḍikɛ*/ ನಾ. ಜಿಬ್ಬು ಅಡಿಕೆ. boiled arecanut. ವಾ: ಜಿಬ್ರಡಿಕೆ ಇದ್ದರೆ ಕೊಡ್. ಪ: ಜಿಬ್ಬಡ್ಕೆ

ಜಿಬ್ಲಿ /*jɛbli*/ ನಾ. 1. ಚೌಕಾಬಾರ ಆಟ, 2. ಕಲ್ಲಾಟವೆಂದೂ ಕರೆಯುತ್ತಾರೆ. an ancient, indian board game called Chauka bara. ವಾ: ಜಿಬ್ಲಿ ಆಟ ಆಡಿಕೆ ಬಂದದೆನ?

ಜಿರಿಕೂಟ ಮಳೆ /*jiriku:ṭa maḷɛ*/ ನಾ. ಎಡೆಬಿಡದೆ ಸುರಿವ ಮಳೆ. incessant rain. ವಾ: ಜಿರಿಕೂಟ ಮಳೆ ಸರಿ ಹೊಡ್ದದೆ.

ಜಿರಿಗುಟ್ಟ್ /*jiriguṭṭɨ*/ ನಾ. ಸಣ್ಣದಾಗಿ ನಿರಂತರ ಸುರಿವ ಮಳೆ. raining/drizzling continuously. ವಾ: ಮಳೆ ಆಗ್‌ಲೆಂದ ಜಿರಿಗುಟ್ಟಿಕಂಡ್ ಉಟ್ಟು. ಪ: ಜಿರೀ ಗುಟ್ಟು – ಬಿಡದೆ ಸುರಿವ ಮಳೆ

ಜಿರ್ಲೆ /*jirlɛ*/ ನಾ. 1. ಜಿರಳೆ, 2. ಹಾತೆ. 1. a cockroach, 2. an insect. ವಾ: ಜಿರ್ಲೆದ್ ರಕ್ತ ಬೆಳಿ.

ಜಿಲಾಬು /*jila:bu*/ ನಾ. 1. ಭೇದಿ, 2. ಆಮಶಂಕೆ. 1. diarrhea, 2. amoebic dysentery. ವಾ: ಜಿಲಾಬು ನಿಲ್ಲಿಕೆ ಮಜ್ಜಿಗೆ ಕುಡೆಕು.

ಜೀಕುಜ್ಜೆ /*ji:kujjɛ*/ ನಾ. ದೀವಿ ಹಲಸು. a Breadfruit. ವಾ: ಜೀಕುಜ್ಜೆ ನೋಡಿಕೆ ಸಣ್ಣ ಹಲ್ಸಣ್ಣ್ ನಾಂಗೆ. **ಜೀಗುಜ್ಜೆ ಪೋಡಿ** /*ji:gujjɛ po:ḍi*/ ದೀವಿ ಹಲಸನ್ನು ತುಂಡುಮಾಡಿ ಕಡ್ಲೆ ಹುಡಿಯಲ್ಲಿ ಅದ್ದಿ ಎಣ್ಣೆಯಲ್ಲಿ ಕರಿದ ತಿಂಡಿ. fritters prepared by Breadfruit/a deep fried dish. ವಾ: ಜೀಗುಜ್ಜೆ ಪೋಡಿ ಮಾಡಿಕೆ ಬಂದದೆನ?

ಜೀಜೀ /*ji:ji:*/ ಅ. ಮಭಾ. ತೊಟ್ಟಿಲು. cradle (in the vocabulary of children). ವಾ: ನಂಗೆ ಜೀಜೀ ಬೇಕ್.

ಜೀತ[1] /*ji:ta*/ ನಾ. ಸಂಬಳ ಇಲ್ಲದ ದುಡಿಮೆ. bonded labour, working without any remuneration. ವಾ: ಇಸ್ಟ್ ವರ್ಸ ಜೀತ ಮಾಡಿಕಂಡಿದ್ದೊ.

ಜೀತ[2] /*ji:ta*/ ನಾ. ಕೆಲಸ. work/bonded labour. ವಾ: ನೀ ಹಿಂಗೆ ಸುಮ್ಮನೆ ಕುದ್ದಳ ನಿಂಗೇನ್ ಜೀತ ಇಲ್ಲೆನ.

ಜೀಪ್ /*ji:pɨ*/ ನಾ. ಎಪ. ಜೀಪು. a jeep. ವಾ: ಜೀಪ್‌ಲಿ ಮಕ್ಕ ಸಾಲೆಗೆ ಹೋದೊ.

ಜೀಯ /*ji:ya*/ ಅ. ಮಭಾ. ಮಗು ಸ್ನಾನ ಮಾಡುವಾಗ ಹೇಳುವ ಪದ. an onomatopoeia used by children when bathing. ವಾ: ಜಿಜ್ಜಿ ಜೀಯ ಮೀಯಕೆ ಪೋಯಿ ಮಜ್ಜ.

ಜೀಯಾ /*ji:ya:*/ ನಾ. ಮಭಾ. ಸ್ನಾನ. a term used by children for bathing. ವಾ: ಜೀಯಾ ಆತ, ಜೀಯ ಮಾಡ್ದನ?

ಜೀರಿಗೆ /*ji:rigɛ*/ ನಾ. ಸಂಬಾರ ಪದಾರ್ಥ. cumin seeds. ವಾ: ಜೀರಿಗೆ ಕಸಾಯ ಮಾಡಿ ಕುಡ್ಯಕ್.

ಜೀರುಂಗುಳಿ /*ji:ruŋguḷi*/ ನಾ. 1. ಹಣ್ಣು, 2. ಹುಳಿ ರುಚಿಯ ಕಾಡು ಹಣ್ಣು. 1. fruit, 2. a sour forest fruit. ವಾ: ಜೀರುಂಗುಳಿ ಹಣ್ಣ್ ನ ಹೆಚ್ಚ್ ತಿಂಬೇಡಿನೆ, ರಕ್ತ ಹೋದೆ. **ಜೀರುಂಗುಳಿ ಹಣ್ಣ್** /*ji:ruŋguḷi haṇṇɨ*/ ಮಾವಿನ ಹಣ್ಣಿನ ರೀತಿಯ ದೊಡ್ಡ ಹಣ್ಣು. a fruit that resembles mango. ವಾ: ಜೀರುಂಗುಳಿ ಹಣ್ಣ್ ಸಿಕ್ಕಿಟು ಬೇಕಾ?

ಜೀರ್ಕಾಯಿ /*ji:rɨka:yi*/ ನಾ. ಒಳಗಡೆ ಹಾಳಾದ

ತೆಂಗಿನಕಾಯಿ. spoilt coconut. ವಾ: ಜೀರ್‌ಕಾಯಿನ ಎಂತರ ಮಾಡ್‌ದು.

ಜೀರ್ಗುಳಿ /*ji:rguḷi*/ ನಾ. ಹುಳಿ ರುಚಿಯ ಹಣ್ಣು. a sour fruit. ವಾ: ಜೀರ್ಗುಳಿ ಹಣ್ಣ್ ನ ಕೊಯ್ಕಂಡ್ ಬಂದೊ.

ಜೀರ್ದಕ್ಕಿ /*ji:rɨ dakki*/ ನಾ. ಜೀರಿಗೆ. cumin seeds. ವಾ: ಜೀರ್ದಕ್ಕಿ ಕುಟ್ಟಿ ಹೊಡಿ ಮಾಡಿಸೊಕು, ಕಸಾಯ ಕಾಸಿಕೆ ಬೇಕ್. ಪ: ಜೀರ್ದಕ್ಕಿ

ಜೀರ್ಮುಕ್ಕಿ /*ji:rmukki*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ನೆಲ್ಲೂರು ಕೆಮ್ರಾಜೆ ಗ್ರಾಮದ ಜಾಗ. a locality in Nelluru Kemraje village in Sullia Taluk of Dakshina Kannada District.

ಜೀವ /*ji:va*/ ನಾ. 1. ಜೀವ, 2. ಪ್ರಾಣ. 1. life, 2. being. **ಒಲೆಲ್ಲೊಂದು ಸೌದೆ ಕೊಳ್ಳಿ ಇರೋಕು, ಮನೆಲೊಂದು ಮುದಿ ಜೀವ ಇರೋಕು(ಗಾ).** ವಾ: ಜೀವ ಇದ್ದರೆ ಹೆಂಗಾರ್ ಬೊದ್ಕಕ್. **ಜೀವ ಕೂಡಿಟು** /*ji:va ku:ḍiṭu*/ 1. ಜೀವ ಬಂದಿದೆ, 2. ಚಿಗುರು ಬಂದಿದೆ. 1. alive, 2. germinated. ವಾ: ಡೇಲ್ಯ ದೈ ಸತ್ತೊತುತ ಗ್ಯಾನ ಮಾಡ್‌ದೆ, ಈಗ ಮೆಲ್ಲ ಜೀವ ಕೂಡಿಟು. **ಜೀವ ಹಿಂಡಿದೆ** /*ji:va hinḍidɛ*/ 1. ಸಂಕಟ ಪಡು, 2. ಕಷ್ಟದ ಕೆಲಸ. 1. to suffer, 2. hard labour. ವಾ: ಈ ಹೊಟ್ಟೆ ಬೇನೆ ನನ್ನ ಜೀವ ಹಿಂಡಿದೆ, ಇದೊಂದ್ ದುಡ್ಡು ದುಡ್ದುತ ನನ್ನ ಜೀವ ಹಿಂಡಿದೆ.

ಜೀವಕಳೆ /*ji:vakaḷɛ*/ ನಾ. 1. ಜೀವಕಳೆ, 2. ಕಾಂತಿ, 3. ತೇಜಸ್ಸು, 4. ಜೀವಂತಿಕೆ, 5. ಪ್ರಾಣ ಶಕ್ತಿ. 1. radiance, 2. luminosity, 3. lustre, 4. gleam, 5. physical strength. ವಾ: ಅಂವನ ಮೋರೆಲಿ ಜೀವಕಳೆನೆ ಇಲ್ಲೆ.

ಜೀವಲಿ ಉಟ್ಟು /*ji:vali uṭṭu*/ ನಾ. 1. ಬದುಕಿರು 2. ಜೀವಂತವಾಗಿರು. 1. while still alive, 2. while living. ವಾ: ಜೀವಲಿ ಇರ್‌ಕನ ಲಾಯ್ಕಲಿ ನೋಡಿಕಂಬೊದು, ಸತ್ತ ಮೇಲೆ ಮರ್‌ಟ್ ಎಂತ ಸುಕ.

ಜೀವಾದಿ /*ji:va:di*/ ನಾ. 1. ಜೀವಾವಧಿ, 2. ಇಡಿಯ ಜೀವಮಾನ. 1. lifelong, 2. entire life. ವಾ: ಕೊಂದದಕೆ ಜೀವಾದಿ ಸಿಕ್ಸೆ ಆತ್ ಗಡ.

ಜುಂಕಿ /*juŋki*/ ನಾ. 1. ಜುಮುಕಿ, 2. ಕಿವಿಯ ಆಭರಣ. 1. earring, 2. jewellary worn on the ear. ವಾ: ಜುಂಕಿನ ಹಾಕಂಬದುತೇಳಿರೆ ಹೆಣ್ಮಕ್ಕಳಿಗೆ ಬಾರಿ ಕುಸಿ.

ಜುಂಗು[1] /*juŋgu*/ ನಾ. ನೂಲು ಏಳುವುದು. 1. being silly, 2. thread coming out from clothes. ವಾ: ಕಂಬುಳಿ ಹುಳದ ಜುಂಗು ಬೆರಳ್ ಸೆರೆಗೆ ಕುತ್ತಿಕಂಡುಟ್ಟು, ಹೋದ ವರ್ಸ ನರ್ಪಜೆ ಜುಂಗು ಕುತ್ತಿತ್. ಪ: ಹೈಲು

ಜುಂಗು[2] /*juŋgu*/ ನಾ. ಗುಂಗುರು. curl. ವಾ: ಜುಂಗು ಕೂದೊಲು ಬಾಚಿಕೆ ಬಜ್ಜ.

ಜುಂವ /*junva*/ ನಾ. 1. ಜೀವ, 2. ಪ್ರಾಣ. 1. life, 2. vitality/being. ವಾ: ಜುಂವ ಹೋತ್ ಗಡ.

ಜುಗಾರಿ /*juga:ri*/ ನಾ. 1. ಜೂಜಾಟ, 2. ಹಣಕ್ಕಾಗಿ ಪಂಥಕಟ್ಟಿ ಆಡುವುದು. 1. betting game, 2. to bet in a game. ವಾ: ಅವೆಲ್ಲ ಆಗಾಗ ಜುಗಾರಿ ಆಡ್‌ದು.

ಜುಟ್ಟು[1] /*juṭṭu*/ ನಾ. 1. ತಲೆಯ ಉದ್ದವಾದ ಕೂದಲನ್ನು ಸುರುಟಿ ಕಟ್ಟುವುದು, 2. ಶೆಂಡಿ. 1. tying hair bun, 2. hair bun. **ನೂರು ಜುಟ್ಟು ಹೊಂದಿಕಂಡ್ ಇದ್ದವೆ, ಮೂರು ಜಡೆ ಹೊಂದಿಕಂಬದುಲೆ(ಗಾ). ಬಿಳಿ ಮೊನ್ಸಂಗೆ ಹಸ್‌ರ್ ಜುಟ್ಟು – ಮೂಲಂಗಿ(ಒ).** ವಾ: ಅವುಳು ಯಾಗೊಳು ಜುಟ್ಟು ಕಟ್ಟುದು. ಪ: ಜುಟ್ಟುಲಿ – ಕೂದಲಿನ ಜುಟ್ಟಿನಲ್ಲಿ. **ಜುಟ್ಟುಹಿಡ್ಕ** /*juṭṭu hiḍka*/ ಕ್ರಿವಿ. ತಪ್ಪಿಸಿಕೊಳ್ಳದಂತೆ ಹಿಡಿದುಕೊಳ್ಳು, to grip firmly. ವಾ: ಅಂವನ ಜುಟ್ಟು ಹಿಡ್ಕ, ಇಲ್ಲರೆ ಕೈಗೆ ಸಿಕ್ಕಿಕಿಲೆ.

ಜುಟ್ಟು[2] /*juṭṭu*/ ನಾ. ತೆಂಗಿನಕಾಯಿಯ ಜುಟ್ಟು. coconut tuft. ವಾ: ಕಾಯಿದ್ ಜುಟ್ಟು ತೆಗೆಬಡ ಪೂಜೆಗೆ ತಕಣಿಕಿಲೆ.

ಜುಟ್ಟ್ /*juṭṭ*/ ನಾ. 1. ಜುಟ್ಟು, 2. ಮುಡಿ, 3. ಚಂಡಿಕೆ, 4. ಶಿಖೆ. 1. tuft, 2. tied hair, 3. lock of hair, 4. hair. **ಕೆಳಗೆ ಬಿದ್ದರೆ ಕಾಲ್ ಹಿಡ್ಕ, ಮೇಲೆ ಬಿದ್ದರೇ ಜುಟ್ಟ್ ಹಿಡ್ಕ(ಗಾ).** ವಾ: ಎರ್‌ಡ್ ಜುಟ್ಟ್ ಕಟ್ಟಿ ಬಂದದೆ.

ಜುಬ್ಲಿ /*jubli*/ ನಾ. 1. ಚೌಕಾಬಾರ ಆಟ, 2. ಕಲ್ಲಾಟವೆಂದೂ ಕರೆಯುತ್ತಾರೆ. 1. an ancient, indian board game called Chauka bara, 2. an ancient, indian board game played with

stones used as pawns. ವಾ: ಜುಬ್ಲಿ ಆಟ ಆಡಿಕೆ ಬಂದದೆನ?

ಜುಮ್ /*jumɨ*/ ನಾ. ಮೈ ನವಿರು. goosebumps. ವಾ: ಕಾರ್ ಗುದ್ದಿದ್ ನೋಡಿ ಮೈ ಜುಮ್ ತೇಳ್ತ್.

ಜುಮ್ಕಿ /*jumki*/ ನಾ. 1. ಕಿವಿಯಲ್ಲಿ ಓಲೆಗೆ ನೇತು ಹಾಕುವ ಗೊಂಡೆಯಂತಹ ಆಭರಣ, 2. ಝುಮ್ಕಿ. 1. ear pendants, 2. earrings with hangings. ವಾ: ಜುಮ್ಕಿ ಹಾಕಿರೆ ಲಾಯ್ಕ ಕಂಡದೆ.

ಜುಮ್ಮಿ /*jummi*/ ನಾ. 1. ಕಿವಿಯಲ್ಲಿ ಓಲೆಗೆ ನೇತು ಹಾಕುವ ಗೊಂಡೆಯಂತಹ ಆಭರಣ, 2. ಝುಮ್ಕಿ. 1. dangle earrings, 2. earrings with hangings. ವಾ: ಜುಮ್ಕಿ ಹಾಕಿರೆ ಲಾಯ್ಕ ಕಂಡದೆ.

ಜುರಾಬು /*jura:bu*/ ನಾ. 1. ಚಣ್ಣ, 2. ಷರಾಯಿ, 3. ಇಜಾರ. a shirt. ವಾ: ಜುರಾಬು ಹಾಕಂಡ್ ಬರಕಾಯ್ತ್.

ಜುಲಾಪ್ /*jula:pɨ*/ ನಾ. ಜುಲಾಪು. amoebic dysentery. ವಾ: ಜುಲಾಪ್‌ಗೆ ದಾಳಿಂಬೆ ಕೊಡಿನ ಮಜ್ಜಿಗೆಲಿ ಕೊಡೊಕು. ಪ: ಜುಲಾಪಿಗೆ – ಆಮಶಂಕೆಗೆ

ಜುಲಾಬು /*jula:bu*/ ನಾ. 1. ಆಮಶಂಕೆ, 2. ಭೇದಿ. amoebic dysentery. ವಾ: ಜುಲಾಬುಗೆ ಮದ್ದ್ ತಕಂಡನ? ಪ: ಜುಲಾಬ್

ಜುಲ್ಮಾನೆ /*julmanɛ*/ ನಾ. ಎಪ. ದಂಡ. a fine.

ಜುಲ್ಮೆ /*julmɛ*/ ನಾ. ಎಪ. 1. ಬಲಾತ್ಕಾರ, 2. ಒತ್ತಾಯ, 3. ಜುಲುಮೆ. 1. to force, 2. to persuade, 3. compelled. ವಾ: ಜುಲ್ಮೆ ಮಾಡಿ ದುಡ್ಡುನ ಕಿತ್ಕಂಬೊದು.

ಜುವ /*juva*/ ನಾ. 1. ಜೀವ, 2. ಪ್ರಾಣ. 1. life, 2. vitality/being. ವಾ: ಹುಲಿ ಬಾತ್‌ತ ಹೇಳಿಕನ ಜುವ ಕೈಲಿ ಹಿಡ್ಕಂಡ್ ಕುದ್ದದ್. **ಜುವ್ವ** /*juvva*/ ವಾ: ಮಕ್ಕಳಿಗಾಗಿ ಈ ಜುವ್ವ ಒಳ್ದುಟು.

ಜೂಂಗಿತ್ /*ju:ŋgitɨ*/ ಕ್ರಿ. 1. ಬಾಗು, 2. ಡೊಂಕಾಗು. 1. to bow, 2. to curve. ವಾ: ಅಂವ ಕುಡ್‌ದ್ ಜೂಂಗುತುಟ್ಟು. ಪ: ಜೂಂಗಿಸಿ – ಅಲ್ಲಾಡಿಸಿ/ಬಾಗಿಸಿ; ಜೂಂಗುದು – ಬಾಗುವುದು

ಜೂಂಚಿ /*ju:ŋci*/ ನಾ. 1. ಚೂಪು, 2. ಹರಿತ, 3. ಆಯುಧಗಳ ಅಲಗು ಅಥವಾ ತುದಿ. 1. sharp, 2. jagged, 3. sharp edge of a knife. ವಾ: ಕತ್ತಿನ ಜೂಂಚಿನ ಮುಟ್ಟಬೇಡ. ಪ: ಜೂಂಚು – ಮೊನಚು

ಜೂಜಿ /*ju:ji*/ ನಾ. ಮಭಾ. ನಿದ್ರೆ. sleep (in the vocabulary of children). ವಾ: ನಿಂಗೆ ಜೂಜಿ ಬಾತ?, ನೀ ಈಗ ಜೂಜಿ ಮಾಡ್. ಪ: ಜೋಜಿ

ಜೆಂಡ್ /*jɛŋɖɨ*/ ನಾ. 1. ಕಾಫಿ, ಟೀ ಸೋಸಿದ ನಂತರ ಉಳಿಯುವ ಭಾಗ, 2. ಚರಟ, 3. ಸಾರ ತೆಗೆದ ವಸ್ತು. 1. used tea/coffee powder, 2. sediment 3. dregs. ವಾ: ಟೀ ಅರ್ಪೋಕು ಇಲ್ಲರೆ ಜೆಂಡ್ ಬಾಯಿಗೆ ಸಿಕ್ಕುದು.

ಜೆಂತಿ /*jɛnti*/ ನಾ. 1. ಹಲ್ಲಿನ ಒಸಡು, 2. ಹಲ್ಲುಗಳಿಗೆ ಆಧಾರವಾಗಿರುವ ಮಾಂಸಖಂಡ. 1. gums, 2. a firm row of flesh to which teeth are attached. ವಾ: ಮನೆ ಜೆಂತಿನೊಮ್ಮೆ ನೋಡಕಾಯ್‌ತ್.

ಜೆಗಳ /*jɛgaɭa*/ ನಾ. 1. ಜಗಳ, 2. ಲಡಾಯಿ, 3. ಕಚ್ಚಾಡು, 4. ಹೋರಾಟ. 1. quarrel, 2. fight, 3. dispute, 4. a battle. ವಾ: ಹೆಣ್ಮಕ್ಕಳ ಜೆಗಳ ಸುರಾತ್. ಪ: ಜೆಗಳಾಟ

ಜೆಗ್‌ಲ್ /*jɛglɨ*/ ನಾ. ಕಣದಲ್ಲಿ ಆಚೆ ಈಚೆ ಮಣ್ಣಿನಿಂದ ದೊಡ್ಡ ಪ್ರಮಾಣದಲ್ಲಿ ಕಟ್ಟೆಯ ರೀತಿಯಲ್ಲಿ ಕಟ್ಟಿರುತ್ತಾರೆ(ಸಿಮೆಂಟ್‌ನಿಂದಲೂ ಮಾಡುತ್ತಾರೆ). a barrier, a raised mud structure n the threshing floor. ವಾ: ಜೆಗ್‌ಲ್‌ನ ಒಂದು ಬರಿ ಬಿದ್ದೋವ್ಟು.

ಜೆಡಿಕುಟ್ಟ್ /*jɛɖi kuʈʈɨ*/ ನಾ. ಎಡೆಬಿಡದೆ ನಿರಂತರವಾಗಿ ಸುರಿವ ಜೋರಾದ ಮಳೆ. incessant rain. ವಾ: ಕಣ್ಣ್ ಬುಟ್ಟ್ ನೋಡಿಕಾಲೆ ಜೆಡಿಕುಟ್ಟಿ ಹೊಡಿತುಟು ಮಳೆ.

ಜೆಡಿಮಳೆ /*jɛɖimaɭɛ*/ ನಾ. 1. ತುಂಬ ಜೋರಾದ ಮಳೆ, 2. ಎಡೆಬಿಡದೆ ನಿರಂತರವಾಗಿ ಸುರಿವ ಜೋರಾದ ಮಳೆ. 1. incessant heavy rain, 2. continuous rain. ವಾ: ಈ ಜೆಡಿ ಮಳೆಗೆ ಬಂದನ?

ಜೆಡೆ /*jɛɖɛ*/ ನಾ. 1. ಕೂದಲಿನ ಹೆಣಿಗೆ, 2. ಜೆಡೆ. 1. plaited hair, 2. matted hair. ವಾ: ಕೂದೊಲುನ ಇಳ್ಸಿ ಬುಡ್ಬೇಡ, ಜೆಡೆ ಹಾಕಿಕ.

ಜೆಡ್ಕುರ್ಳಿ ಹಕ್ಕಿ /*jɛɖkurɭi hakki*/ ನಾ. ಕುರ್ಣೆ ಹಕ್ಕಿ.

a variety of bird. ವಾ: ಜೆಡ್ಕುರ್ಲೆ ಹಕ್ಕಿ ಗೊತ್ತು, ನೋಡ್ಯೊಳೆ.

ಜೆಡ್ಡ್ /*jɛḍḍɨ*/ ನಾ. 1. ಕೊಳಕು, 2. ಹೊಲಸು. 1. dirt, 2. filth. ವಾ: ಜೆಡ್ಡ್ ವಾಸ್ನೆ ಬಂದದೆ.

ಜೆಡ್ಡ್‌ಕುರ್ಲೆ /*jɛḍḍɨ kurlɛ*/ ನಾ. ಜೆಡ್ಕುರ್ಲೆ ಹಕ್ಕಿ. a variety of bird. ವಾ: ಜೆಡ್ಡ್‌ಕುರ್ಲೆತೇಲ್ದು ಹಕ್ಕಿನ?

ಜೆಡ್ಡ್‌ಪಾಳೆ /*jɛḍḍɨpa:ḷɛ*/ ನಾ. ಸತ್ತ ದನಗಳನ್ನು ತಿನ್ನುವ ಕೊಕ್ಕರೆ. a crane that eats dead cattle. ವಾ: ಜೆಡ್ಡ್‌ಪಾಳೆ ದನದ ಮಾಸನ ತಿಂಬೊದು ನೋಡ್.

ಜೆದಿ /*jɛdi*/ ನಾವಿ. 1. ಮೋಸ, 2. ಕಪಟ, 3. ಸೀಂತ್ರಿ. 1. cheating, 2. cunning, 3. dupe. ವಾ: ಅವೆಲ್ಲ ಜೆದಿ ಜೆನ.

ಜೆನ /*jɛna*/ ನಾ. 1. ಜನರು, 2. ಮನುಷ್ಯ, 3. ಮನುಷ್ಯ ಸಮುದಾಯ. 1. people, 2. human, 3. a community. **ಒಂದ್ ರಾಣಿಗೆ ಸಾವಿರ ಜೆನ ಕೆಲ್ಸದವು – ಜೇನೊಣ(ಒ).** ವಾ: ಜನಿಗೆ ಮಳೆ ಬಂದರು ಹೊಳೆ ಬಂದರು ಎಲ್ಲ ಒಂದೆ.

ಜೆಪ್ಪು[1] / *jɛppu* / ನಾ. ಸಾಗುಹಾಕು. to avoid. ವಾ: ಒಮ್ಮೆ ಈ ಗೂಡೆನ ಮನೆಂದ ಜೆಪ್ಪಿರೆ ಸಾಕಪ್ಪ. ಪ: ಜೆಪ್ಪೊಕು – ಸಾಗು ಹಾಕಬೇಕು

ಜೆಪ್ಪು[2] /*jɛppu*/ ಕ್ರಿ. 1. ಚಚ್ಚು, 2. ಬಡಿ. 1. to crush, 2. to pound. **ತಲೆ ಗಟ್ಟಿ ಉಟ್ಟುತ ಬಂಡೆಗೆ ಜೆಪ್ಪಿರೆ ಆದೇನಾ(ಗಾ).** ವಾ: ತಲೆಗೆ ಜೆಪ್ಪು.

ಜೆಪ್ಪ್‌ಕಲ್ಲ್ /*jɛppɨ kallɨ*/ ನಾ. ಎಲೆ ಅಡಿಕೆ ಕುಟ್ಟಲು ಬಳಸುವ ಕಲ್ಲು. a stone used to crush betel leaf and nut. ವಾ: ಜೆಪ್ಪ್‌ಕಲ್ಲ್‌ಲಿ ಎಲಡ್ಕೆನ ಕುಟ್ಟಿ.

ಜೆಮಿ /*jɛmi*/ ನಾ. 1. ತೆಂಗಿನ ನಾರಿನಿಂದ ಮಾಡಿದ ಹಗ್ಗ, 2. ನೊಗ ಹಾಗು ಎತ್ತುಗಳನ್ನು ಬಿಗಿಯುವ ಹಗ್ಗ. 1. a coir rope made of coconut fibre, 2. a coir rope used in tying cattle to yoke. ವಾ: ಬಾಮಿಂದ ನೀರ್ ಎಳ್ಯಕೆ ದಪ್ಪದ್ ಜೆಮಿ ಇಸಿಯೊಳೊ.

ಜೆಮ್ಮಿಹಗ್ಗ /*jɛmmihagga*/ ನಾ. ನೊಗದಲ್ಲಿ ಎತ್ತನ್ನು ಕಟ್ಟುವ ಹಗ್ಗ. a coir rope used to tie bullocks to the pough. ವಾ: ಜೆಮ್ಮಿ ಹಗ್ಗ ತುಂಡಾತ್.

ಜೆರಿ /*jɛri*/ ನಾ. 1. ಜಾರು, 2. ಮೇಲಿನಿಂದ ಕೆಳಗೆ ಸರಿ. 1. to slip, 2. to slide. ವಾ: ದಾರಿಲಿ ಬಾಕನ ಜೆರಿ ಬಿದ್ದದ್.

ಜೆರ್ತ್ /*jɛrti*/ ಕ್ರಿ. 1. ಕುಸಿಯಿತು, 2. ಜರಿದು ಬಿತ್ತು. 1. collapsed, 2. slid. ವಾ: ಕೆಳ ಅಂತಸ್ ಜೆರ್ತ್.

ಜೆರ್ದ್ /*jɛrdɨ*/ ನಾ. 1. ಜರಿದುಬೀಳು, 2. ಕಳಚಿಬೀಳು, 3. ಉದುರಿ ಬೀಳು. 1. slide (as in landslide), 2. to fall down, 3. dropped down. ವಾ: ಬರೆ ಜೆರ್ದ್ ಮನೆ ಬಾಗ್‌ಲಿಗೆ ಬಂದ್ ನಿತ್ತುಟು.

ಜೆಲ್ಲಿಕಲ್ಲ್ /*jɛllikallɨ*/ ನಾ. 1. ಬೇಬಿಜೆಲ್ಲಿ, 2. ಜೆಲ್ಲಿಕಲ್ಲು, 3. ಪುಡಿಮಾಡಿದ ಕಲ್ಲುಗಳು. 1. gravel, 2. pebble, 3. small stones. ವಾ: ಮನೆ ಕಟ್ಟಿಕೆ ಜೆಲ್ಲಿಕಲ್ಲ್ ತಂದಾಕೊಳೊ.

ಜೆಲ್ಲು /*jɛllu*/ ನಾ. 1. ಲಾಲಾರಸ, 2. ಜೊಲ್ಲು, 3. ಲಾಲಾರಸ ಗ್ರಂಥಿಗಳು ಉತ್ಪಾದಿಸಿ ಸ್ರವಿಸುವ ನೀರಿನಂಥ ಅಂಶ, 4. ಉಗುಳು. 1. saliva, a fluid secreted by salivary glands, 2. spittle, 3. saliva from the mouth, 4. spit. ವಾ: ನಾಯಿಗೆ ತಿಂಬಕೆ ಹಾಕ್, ಪಾಪ ಅದ್ ಜೆಲ್ಲು ಸೊರ್‌ಸಿಕಂಡ್ ಕುದ್ದುಟು.

ಜೆಳ್ /*jɛḷɨ*/ ನಾ. 1. ಜೊಲ್ಲು, 2. ಎಂಜಲು. 1. saliva, a fluid secreted by salivary glands, 2 spit. ವಾ: ಮಾತಾಡಿಕನ ಜೆಳ್ ಹಾರ್‌ಸುದು.

ಜೆಳ್ಳರುದು /*jɛḷḷarudu*/ ಕ್ರಿವಿ. ಜೊಲ್ಲು ಸುರಿಸು. to salivate. ವಾ: ಕೂಸುದ್ ಬಾಯಿಲಿ ಜೆಳ್ಳರುದು.

ಜೆಳ್ಳೆ /*jɛḷḷɛ*/ ನಾ. ತಿರುಚಿದ ಕಾಲು. twisted legs. ವಾ: ಹುಟ್ಟಿಕಾಕನೆ ಜೆಳ್ಳೆ ಕಾಲ್ ಅಂವಂದ್. ಪ: ಜಲ್ಲೆಕಾರ್(ತು)

ಜೆಳ್ಳ್ /*jɛḷḷɨ*/ ನಾ. 1. ಹೊಟ್ಟು ಭತ್ತ, 2. ಹೊಳ್ಳು, 3. ದಡ್ಡು, 4. ವ್ಯರ್ಥವಾದ. 1. husk of paddy, 2. rice hull, 3. rice husk, 4. residue. ವಾ: ಹೊಡ್ಕ್ ಕಾಕನ ಜೆಳ್ಳ್ ಬತ್ತ ಹಾರ್‌ದೆ. ಪ: ಜೆಳ್ಳು, ಜಲ್ಲ್(ತು)

ಜೇಕ್ /*je:kɨ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಜೇಡ /*jɛ:ḍa*/ ನಾ. 1. ಜೇಡರ ಹುಳು, 2. ಬಲೆ ನೇಯುವ ಹುಳು. 1. a spider, 2. a creature that spins webs. ವಾ: ದೈದ, ಮರದ ಸೆರೆಗಲ್ಲಿ ಜೇಡ ಬಲೆ ಕಟ್ಟಿದೆ.

ಜೇಡಿಮಣ್ /*jɛ:ḍimaṇi*/ ನಾ. ಮಣ್ಣಿನ ಪಾತ್ರೆ ಮಾಡಲು ಬಳಸಬಹುದಾದ ಜಿಗುಟು. clay, natural soil. ವಾ: ಜೇಡಿಮಣ್‌ಲಿ ಮಣ್ಣ್‌ನ ಮಡ್‌ಕೆ ಮಾಡಿವೆ.

.

ಜೇನ್ /*jɛ:nɨ*/ ನಾ. 1. ಜೇನು, 2. ಜೇನುತುಪ್ಪ. honey. **ಜೇನ್ ತಿಂದಂವ ಕೈನೆಕ್ಕದಿದ್ದದಾ(ಗಾ). ಅದುರಂತರ ಚಿದುರಿನ ಚಾವಡಿ, ಮೇಲೊಂದಂತರ ಶಿವ ಕಳಸ – ಜೇನ್ ಪೆಟ್ಟಿಗೆ(ಒ).** ವಾ: ಸೀತ ಆಕನ ಕರಿತೊಳ್ಳಿ ಕೊಡಿ, ನೀರುಳಿನ ಗುದ್ದಿ ಜೇನ್ ಒಟ್ಟಿಗೆ ಹಾಕಿಸೊಕು, ಹಳ್ಳು ಹೊತ್ತ್ ಬುಟ್ಟ್ ರಸನ ಹಿಂಡಿ ಮೂರ್ ದಿನ ಹೊತಾರೆ ಕಾಲಿ ಹೊಟ್ಟೆಗೆ ಕುಡೆಕು, ಜೇನ್ ಪೆಟ್ಟಿಗೆಯೊಳ್ಗೆ ಜೇನ್ ಕುಡಿನ ಕೂರ್‌ಸಿ ನೋಡಕಿತ್ ದೋಸೆಗೆ ಜೇನ್ ಹಾಕಂಡ್ ತಿಂಬೊತಿದ್ದೊ. **ಜೇನುಕುಟ್ಟುದು** /*je:nukuṭṭu*/ ಜೇನು ಹುಳ ಕಡಿಯುವುದು. bitten by honey bee. **ಜೇನೆರಿ** /*jɛ:nɛri*/ ಜೇನ್ನೊಣಗಳು ಜೇನು ಸಂಗ್ರಹಿಸುವ ಕೋಶ. a beehive. ವಾ: ಜೇನೆರಿನ ಜೇನ್ ಪೆಟ್ಟಿಗೆಯೊಳಗೆ ಇಸೊಕು. **ಜೇನ್ ಕುಡಿ** /*jɛ:nɨ kuḍi*/ ಜೇನುಹುಳುಗಳ ವಂಶ. a colony of honeybees. ವಾ: ಜೇನ್ ಪೆಟ್ಟಿಗೆಯೊಳ್ಗೆ ಜೇನ್ ಕುಡಿನ ಕೂರ್‌ಸಿ ನೋಡಕಿತ್. **ಜೇನ್‌ಗೂಡ್** /*jɛ:nɨ gu:ḍi*/ ಜೇನು ಕುಟುಂಬಗಳು ವಾಸಿಸುವ ಜೇನು ತಯಾರಿಸುವ. a beehive. ವಾ: ಜೇನ್‌ಗೂಡ್‌ಗೆ ಹಂಗೆಲ್ಲ ಕೈ ಹಾಕಿಕೆ ಆದುಲೆ. **ಜೇನ್‌ನೊಣ** /*jɛ:nɨnoṇa*/ ಜೇನು ನೊಣ. a honey bee. ವಾ: ಜೇನ್ನೊಣ ಕುಡಿ ಹಾರ್‌ತ್. **ಜೇನ್ನೊಣ ಗುಂಯ್‌ಗುಟ್ಟುದು** /*jɛ:nnoṇa gunyiguṭṭudu*/ ಜೇನ್ನೊಣಗಳು ಝೇಂಕರಿಸುವುದು. buzzing sound. ವಾ: ಹೂನ ದೈದತ್ರ ಜೇನ್ನೊಣ ಗುಂಯ್‌ಗುಟ್ಟುದು.

ಜೇನ್ನೆಳ /*jɛ:nnɛḷa*/ ನಾ. ಜೇನುನೊಣ. a honey bee. ವಾ: ಜೇನ್ನೆಳ ಕಚ್ಚಿರೆ ನೀರುಳಿನ ಉಜ್ಜೊಕು.

ಜೇನ್‌ಬಕ್ಕೆ /*jɛ:nɨ bakkɛ*/ ನಾ. 1. ಗಟ್ಟಿಯಾದ ರುಚಿಯಾದ ಹಾಗೆಯೆ ತಿನ್ನಲು ಯೋಗ್ಯವಾಗ ಹಲಸಿನ ಹಣ್ಣು, 2. ಒಂದು ವಿಧದ ಸಿಹಿಯಾದ ಹಲಸಿನ ಹಣ್ಣು. a variety of jackfruit. ವಾ: ಜೇನ್‌ಬಕ್ಕೆ ಹಂಗೆನೆ ತಿಂಬಕೆ ಲಾಯ್ಕ.

ಜೇನ್‌ಸಾಕಣೆ /*jɛ:nɨsa:kaṇɛ*/ ನಾ. ಜೇನು ಕುಟುಂಬಗಳನ್ನು ಜೇನುಪೆಟ್ಟಿಗೆಗಳಲ್ಲಿ ಸಾಕಿ ಜೇನು ಉತ್ಪಾದನಾ ಕೃಷಿ ಮಾಡುವುದು. beekeeping (or apiculture). ವಾ: ನಾಡ್‌ಲಿ, ಪೇಟೆಲಿ ಸುಮಾರ್ ಕಡೆ ಜೇನ್‌ಸಾಕಣೆ ಮಾಡಿವೆ.

ಜೇಬ್ /*je:bɨ*/ ನಾ. ಕಿಸೆ. to/in the pocket. ವಾ: ನನ್ನ ಜೋಬುಲಿ ಒಂದ್ ನಯಾ ಪೈಸೆನೂ ಇಲ್ಲೆ. ಪ: ಜೋಬು

ಜೈಂಕ್‌ಜೈಂಯಿ /*jainkɨjayi*/ ಅ. ತಾಳದಿಂದ ಬರುವ ಶಬ್ದ. sound produced by finger cymbals. ವಾ: ತಾಳ ಗುದ್ದಿಕನ ಜೈಂಕ್ ಜೈಂಯಿ ಸಬ್ದ ಬಂದದೆ.

ಜೈನಿರ /*jainira*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಜೊಂಗೆ /*jɔŋgɛ*/ ನಾ. ಗೊಂಚಲು. a bunch. ವಾ: ಮರಲಿರೊ ಜೊಂಗೆ ಜೊಂಗೆ ಮಾಯ್ನ ಹೂನ ನೋಡ್‌ದೆ ಕುಸಿ.

ಜೊಂಗೆಜೊಂಗೆ /*jɔŋgɛjɔŋgɛ*/ ನಾವಿ. 1. ಜೊಂಪೆ ಜೊಂಪೆ, 2. ಗೊಂಚಲು. 1. a bunch, 2. a bevy. ವಾ: ಜೊಂಗೆ ಜೊಂಗೆ ಹೂವ್ ದೈಲಿ ಬುಟ್ಟುಟು.

ಜೊಂಪೆ /*jɔmpɛ*/ ನಾ. 1. ಗೊಂಚಲು, 2. ಗುಚ್ಛ, 3. ಸಮೂಹ, 4. ರಾಶಿ. 1. bunch, 2. cluster, 3. a swarm, 4. a heap. ವಾ: ಮರಲಿ ಜೊಂಪೆ ನೆಲ್ಲಿಕಾಯಿ ಹಿಡ್ದುಟು.

ಜೊಂಪೆತೊಟ್ಟ್ /*jɔmpɛtɔṭṭɨ*/ ನಾ. ಗಂಡು ಮಕ್ಕಳ ಜನನಾಂಗ (ಮಕ್ಕಳ ಭಾಷೆ). penis (in the vocabulary of children). ವಾ: ಜೊಂಪೆ ತೊಟ್ಟ್‌ನ ಮುಚ್ಚಿಕ.

ಜೊಂಪೆಕಾಯಿ /*jɔmpɛka:yi*/ ನಾ. ಗೊಂಚಲಾಗಿ ಕಾಯಿ ಹಿಡಿಯುವುದು. growing in bunches. **ಅಂತಪ್ಪನ ತ್ವಾಟಲಿ ಎಂತೆಂತ ಕಾಯಿ, ಕೊಂಬೆ ಕೊಂಬೆಗೆ ಜೊಂಪೆಕಾಯಿ – ನೆಲಗಡ್ಲೆ/ಕಡಲೆಕಾಯಿ (ಒ).** ವಾ: ಮರಲಿ ಜೊಂಪೆಕಾಯಿ ಹಿಡ್ದುಟು.

ಜೊಯಿಂಕ /*jɔyiŋka*/ ಅ. ಕಾಯಿಸಿ ಇಡುವುದು. to warm/heat something. ವಾ: ಹಸಿಮೊದ್ದ್ ಅರ್‌ದ್ ಅದ್‌ಕೆ ಕಬ್ಬುಣನ ಕಾಸಿ ಮುಳುಗುಸುದು, ಆಗ ಜೊಯಿಂಕತ ಸದ್ದ್ ಕೇಳ್‌ದೆ.

ಜೊರ /*jɔra*/ ನಾ. 1. ಜ್ವರ, 2. ಶರೀರದ ಶಾಖವೇರುವ ಒಂದು ಬಗೆಯ ಲಕ್ಷಣ. 1. fever, 2. increased

temperature of one's body. ವಾ: ಜೊರಕೆ ಕಳ್‌ಂಜಿ ಕೊಡಿ ಮದ್ದ್ ಕೊಡಕಿತ್.

ಜೊರತೆ /*jorate*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಗುತ್ತಿಗಾರು ಗ್ರಾಮದ ಜಾಗ. a locality in Guttigaru village in Sullia Taluk of Dakshina Kannada District.

ಜೊಲ್ಲ್ /*jɔll*/ ನಾ. ಬಾಯಿಯಲ್ಲಿ ಬರುವ ಲಾಲಾರಸ. saliva, a fluid secreted by salivary glands. ವಾ: ಜೊಲ್ಲ್ ಸುರ್‌ಸ್‌ಬಡ. ಪ: ಜೊಲ್ಲುರ್ಸಿದೆ – ಆಸೆಯಿಂದ ನೋಡುವುದು

ಜೊಳ್ಳು /*jɔḷḷu*/ ನಾವಿ. ಒಳಗೆ ಬೀಜ ಇಲ್ಲದ, ತಿರುಳಿಲ್ಲದ. seedless. **ಒಳ್ಳೊವುತಾ ದಾನಕ್ಕೆ ಕೈ ಚಾಚಿರೆ, ಜೊಳ್ಳು ದಾನ ಮಾಡ್ಡೋ(ಗಾ).** ವಾ: ಈ ಪಪ್ಪಾಯಿ ಹಣ್ಣ್ ಜೊಳ್ಳು.

ಜೋಂಕು /*jɔ:ŋku*/ ನಾ. ಜೋಕಾಲಿ. a swing. ವಾ: ಮಕ್ಕ ಸೀರೆಲಿ ಜೋಂಕು ಕಟ್ಟಿ ಆಡ್‌ದು.

ಜೋಂಗ್ಲಾಸ /*jo:ŋglasɨ*/ ನಾ. ತುಂಬಾ ಸಡಿಲವಾದ ಬಟ್ಟೆ. loose clothes. ಪ: ಜೋಂಬ್ಲಿ, ಜೋಂಬ್ಲಾಸ್.

ಜೋಂಪಳು /*jo:mpaḷu*/ ನಾ. 1. ಗೊಂಚಲು, 2. ಗೊಂಚಲಾಗಿ ಬೆಳೆಯುವ ನೆಲ್ಲಿಕಾಯಿ ಗಾತ್ರದ ಕೆಂಪನೆಯ ಕಾಡುಹಣ್ಣು. 1. a bunch, 2. a bunch of red forest fruit resembling gooseberry. ವಾ: ಜೋಪುಳು ಹಣ್ಣ್‌ನ ಬಣ್ಣ ಕೆಂಪು.

ಜೋಂಪುಳುಹಣ್ಣ್ /*jo:ŋpuḷuhaṇṇɨ*/ ನಾ. ಒಂದು ವಿಧದ ಕಾಡು ಹಣ್ಣು. ಸಣ್ಣ ಮರದಲ್ಲಿ ಆಗುವ ತಿನ್ನಲು ಉಪಯೋಗಿಸುವ ಹಣ್ಣು. an edible wild/forest fruit. grown on small trees ವಾ: ಜೋಂಪುಳು ಹಣ್ಣ್ ಜೊಂಗೆ ಜೊಂಗೆ ದೈಲಿ ಇದ್ದದೆ. ಪ: ಜೋಂಪ್ಳ್‌ಹಣ್ಣ್

ಜೋಕಾಲಿ /*jo:ka:li*/ ನಾ. 1. ಉಯ್ಯಾಲೆ, 2. ಜೋಕಾಲಿ, 3. ತೂಗುಮಣೆ. a swing. ವಾ: ಸಣ್ಣವಿರಕನ ಮರಕೆ ಜೋಕಾಲಿ ಕಟ್ಟಿ ಆಡ್ತಿದ್ದೊ.

ಜೋಕೆಲಿ /*jo:kɛli*/ ನಾ. 1. ಜೋಪಾನ, 2. ಎಚ್ಚರಿಕೆ, 3. ಜಾಗರೂಕತೆ. 1. cautious, 2. warning, 3. careful. ವಾ: ಚಿನ್ನನ ಜೋಕೆಲಿ ಇಸಿಕ.

ಜೋಕ್ /*jo:kɨ*/ ನಾ. ಎಪ. 1. ಹಾಸ್ಯ ಮಾಡು, 2. ತಮಾಷೆ, 3. ವಿನೋದ, 4. ನಗು ಬರಿಸು. 1. to mock, 2. to make fun of, 3. being playful, 4. to make someone laugh. ವಾ: ಅಂವನ ಜೋಕ್ ಕೇಳಿರೆ ಬಿದ್ದ್ ಬಿದ್ದ್ ನೆಗಡೊಕು.

ಜೋಗಿ /*jo:gi*/ ನಾ. 1. ಯೋಗಿ, 2. ತಪಸ್ವಿ, 3. ಅಲೆಯುವ ಬೈರಾಗಿ. 1. a mendicant, 2. an ascetic, 3. a wandering ascetic. ವಾ: ಜೋಗಿ ಮನೆ ಮನೆಗೆ ಬಂದವೆ. ಪ: ಜೋಗಿಗ – ತಪಸ್ವಿಗಳು

ಜೋಗಿಬೆಟ್ಟು /*jo:gibeṭṭu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕಲ್ಮಡ್ಕ ಗ್ರಾಮದ ಜಾಗ. a locality in Kalmadka village in Sullia Taluk of Dakshina Kannada District.

ಜೋಗಿಮೂಲೆ /*jo:gimu:lɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಜೋಗಿಯಡ್ಕ /*jo:giyaḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಮರಪಡ್ನೂರು ಗ್ರಾಮದ ಜಾಗ. a locality in Amarapadnuru village in Sullia Taluk of Dakshina Kannada District.

ಜೋಗುಳ /*jo:guḷa*/ ನಾ. 1. ಮಕ್ಕಳನ್ನು ಮಲಗಿಸುವಾಗ ಹಾಡುವ ಹಾಡು, 2. ಲಾಲಿಪದ. 1. a song sung to make a child fall asleep, 2. a lullaby. ವಾ: ಜೋಗುಳ ಪದ ಹಾಡಿವೆ.

ಜೋಜಿ /*jo:ji*/ ಅ. ನಿದ್ದೆ. ಮಭಾ. sleep (in the vocabulary of children). ವಾ: ಜೋಜಿ ಮಾಡ್ ಕೂಸು. ಪ: ಜೋಜಿ ಮಾಡ್ತ್ – ನಿದ್ರಿಸಿತು

ಜೋಡಿನಿತ್ತುಟು /*jo:ḍinittuṭu*/ ನಾ. (ಪ್ರಾಣಿಗಳಲ್ಲಿ, ಲೈಂಗಿಕ ಸಂಪರ್ಕದಿಂದ) ಗರ್ಭನಿಲ್ಲುವುದು. To conceive (as a result of mating, in animals).

ಜೋಡಿಮಾಡ್[1] /*jo:ḍima:ḍɨ*/ ನಾ. ಜೊತೆಗೂಡಿಸುವುದು. to unite.

ಜೋಡಿಮಾಡ್[2] /*jo:ḍima:ḍɨ*/ ಕ್ರಿವಿ. ಹಸುಗಳಿಗೆ ಗರ್ಭಧಾರಣೆ ಮಾಡಿಸುವುದು. insemination of cattle. ವಾ: ಹೈದ ಹಸ್‌ನ ಜೋಡಿ ಮಾಡ್ಸಿಕೆ ಹೋರಿನಕ್ಕಲೆ ತಕೊಂಡೋವುಟು. **ಜೋಡಿಗೆ ಕರ್ಯೋದು** /*jo:ḍige karyodu*/ ಗರ್ಭಧಾರಣೆಗೆ ಜಾನುವಾರುಗಳು ಹಾಗೂ ಹಕ್ಕಿಗಳು ಕೂಗುವುದು. To low or cry (of cattle and birds for mating). ವಾ: ಹಸ್ ಜೋಡಿಗೆ ಕರೀತಾ ಉಟ್ಟು.

ಜೋಡುಕುಪ್ಲ /*jo:ḍukupla*/ ನಾ. ಸಂಬಾರ ಕಾಗೆ. greater coucal or crow pheasant. ವಾ: ಜೋಡು ಕುಪ್ಲ ಮರಲಿ ಕುದ್ದುಟು.

ಜೋಡುಗುಂಡ /*jo:ḍuguṇḍa*/ ನಾ. ವೆಂಕಟರಮಣ ದೇವರ ಹರಿಸೇವೆಯಲ್ಲಿ ಕಟ್ಟುವ ಬಾಳೆದಿಂಡಿನ ಮಂಟಪ. a pandal/canopy made up of banana stem to worship god Venkataramana. ವಾ: ಹರಿಸೇವೆಲಿ ಜೋಡು ಗುಂಡ ಕಟ್ಟಿಸಿವೆತ ಹೇಳಿಕಂಡಿದ್ದೊ.

ಜೋಡುಗುಂಡು /*jo:ḍu guṇḍu*/ ನಾ. ಇದು ಒಂದು ಸಂಕೇತ. ಹೆಣ ಎತ್ತುವಾಗ ಮತ್ತು ಸ್ಮಶಾನದಲ್ಲಿ ಮಲಗಿಸುವಾಗ ಎರಡು ಗುಂಡುಗಳನ್ನು ಹೊಡೆಯಲಾಗುತ್ತದೆ. offering a gun salute, while lifting the bier and burying the dead. ವಾ: ಹೆಣ ಎತ್ತಿಕನ ಮತ್ತೆ ಕಾಟಕ್ಕೆ ಇಸಕನ ಜೋಡು ಗುಂಡು ಹೊಡ್‌ದವೆ.

ಜೋಡು[1] /*jo:ḍu*/ ನಾವಿ. ಜೊತೆಯಾಗಿರುವ ಎರಡು ವಸ್ತುಗಳು. two. ವಾ: ಗಣ್ಪತಿಗೆ ಜೋಡು ಈಡ್‌ಗಾಯಿ ಹೊಡ್ಡದ್. ಪ: ಜೋಡಾಟ. **ಜೋಡುನಳಿಗೆ** /*jo:ḍunaḷigɛ*/ ಎರಡು ನಳಿಕೆಯ ಕೋವಿ. a double-barreled gun. ವಾ: ಜೋಡು ನಳಿಗೆ ಕೋವಿಲಿ ಹೊಡ್ಡದ್ ಗಡ.

ಜೋಡು[2] /*jo:ḍu*/ ಕ್ರಿ. 1. ಜೋಡಿಸು, 2. ಹೊರಿಸು, 3. ಎಲ್ಲಾ ವಸ್ತುಗಳನ್ನು ವ್ಯವಸ್ಥೆಯಲ್ಲಿ ಕ್ರಮಬದ್ಧ ವಾಗಿ ಇರಿಸು. 1. to add, 2. to help someone to carry a load, 3. to keep things in order. ವಾ: ನಿನ್ನ ಅರ್ವೆನೆಲ್ಲ ಜೋಡು. **ಜೋಡ್ಸಿತ್** /*jo:ḍsitɨ*/ ಜೋಡಿಸಿದ. put together/joined. ವಾ: ತುಂಡಾದರ ಜೋಡ್ಸಿತ್. ಪ: ಜೋಡ್ಸಿದೊ – ಜೋಡಿಸಿದರು; ಜೋಡ್ಸೊಕು – ಜೋಡಿಸಬೇಕು. **ಜೋಡ್ಸೊಕು** /*jo:ḍsoku*/ 1. ಅಣಿಮಾಡು, 2. ಸಜ್ಜುಗೊಳಿಸು, 3. ಸಿದ್ಧಮಾಡಿಕೊಳ್ಳು. 1. to prepare, 2. to arrange, 3. to put in order. ವಾ: ಹೊರ್‌ಡಿಕೆ ಅರ್ವೆ ಜೋಡಿಸೊಕುಂತ ಹೇಳ್ತಿದ್ದೊ. ಪ: ಜೋಡ್ಸಕು – ಜೋಡಿಸಬೇಕು.

ಜೋಡು[3] /*jo:ḍu*/ ನಾ. ಜೊತೆ. a pair. ವಾ: ಒಂದ್ ಜೋಡು ಎತ್ತ್‌ಗ ಒಳೊ. **ಜೋಡೆತ್ತ್** /*jo:ḍɛttɨ*/ 1. ಜೋಡಿ ಎತ್ತುಗಳು, 2. ಎರಡು ಎತ್ತುಗಳು, 3. ಬಂಡಿ ಅಥವಾ ಉಳುವ ಜೋಡಿ ಎತ್ತುಗಳು. 1. a pair of bullocks, 2. two bullocks, 3. a pair of bullocks, used in blullock cart or ploughing. ವಾ: ಜೋಡೆತ್ತ್‌ಗ ಗದ್ದೆ ಹೂಡಿಕೆ ಬೇಕಾದವೆ.

ಜೋಡು[4] /*jo:ḍu*/ ನಾ. 1. ಚಪ್ಪಲಿ, 2. ಕೆರ, 3. ಮೆಟ್ಟು, 4. ಎಕ್ಕಡ. 1. a pair slippers, 2. sandals, 3. footwear, 4. footwear. **ಜೋಡು ಇರುವಲ್ಲೆ ಇರೋಕು(ಗಾ)(ಗಾ).** ವಾ: ಒಂದೇ ಜೋಡು ಇರ್‌ದು ಇನ್ನೊಂದೆಲ್ಲಿತ?

ಜೋಡ್ಗುಂಡ್ /*jo:ḍguṇḍɨ*/ ನಾ. ಸಾವಿನ ವಿಚಾರ ತಿಳಿಸುವ ಗುಂಡು. a gun salute, indicating death of someone. ವಾ: ಜೋಡ್ಗುಂಡ್ ಹೊಡ್ಡ ಸದ್ದ್ ಕೇಳ್ತಲ?

ಜೋಣು /*jo:ɳu*/ ನಾ. 1. ಚೇಳು, 2. ಜೋಡಿ, 3. ಚಿಕ್ಕನೀರಿನ ತೊರೆ. 1. a scorpion, 2. couple, 3. a small stream. ವಾ: ಮನೆ ಕರೆಲಿ ಜೋಣು ಹರ್‌ದೆ.

ಜೋತಿಸ್ಯ /*jo:tisya*/ ನಾ. 1. ಜೋತಿಷ್ಯ, 2. ಹೋರಾಶಾಸ್ತ್ರ, 3. ಜ್ಯೋತಿಶಾಸ್ತ್ರ. astrology. ವಾ: ಜೋತಿಸ್ಯ ಕೇಳಿಕೆ ಹೋದ್.

ಜೋತ್‌ಬೀಳ್ /*jo:tɨbi:ḷi*/ ಕ್ರಿ. 1. ನೇತುಹಾಕು, 2. ತೂಗುಹಾಕು, 3. ಇಳಿಯಬಿಡು, 4. ಜೋಲಾಡು, 5. ನೇತಾಡು. 1. to hang, 2. to suspend, 3. to dangle, 4. to sway, 5. to swing. **ಅಪ್ಪ ಹಾಕಿದ ಆಲದ ಮರಕೆ ಮಕ್ಕ ಜೋತು ಬೀಳ್ದು(ಗಾ).** ವಾ: ಹೋಗುತೇಳ್‌ರೆ ಕೇಳ್‌ದುಲೆ, ನನ್ನೇ ಜೋತ್‌ಬಿದ್ದುಟು.

ಜೋನಿ /*jo:ni*/ ನಾ. ಸಕ್ಕರೆ ಅಥವಾ ಬೆಲ್ಲವನ್ನು ನೀರಿನಲ್ಲಿ ಕುದಿಸಿ ಮಾಡಿದ ಪಾಕ. liquid jaggery/ a sugar or jaggery syrup. ವಾ: ಹೊದರಿ ಉಂಡೆ ಮಾಡಿಕೆ ಬೆಲ್ಲದ ಜೋನಿನ ಹಾಕೊಕು. ಪ: ಜೋನಿಬೆಲ್ಲ; ಜೋನಿಮುತ್ತ್ – ಸಿಹಿಮುತ್ತು

ಜೋಪಡಿ /*jo:paḍi*/ ನಾ. 1. ಮುರುಕಲುಮನೆ, 2. ಗುಡಿಸಲು. 1. a hut, 2. a shack. ವಾ: ನಾವ್ ಹಿಂದೆ ಜೋಪಡಿಲೆ ಇದ್ದದ್.

ಜೋಬು /*jo:bu*/ ನಾ. 1. ಜೇಬು, 2. ಕಿಸೆ. 1. pocket, 2. pouch. **ಅಯ್ಯೆ ಹೊಟ್ಟೆ ನೋಡ್ತ್ ಹೆಣ್ಣ್ ಜೋಬು ನೋಡ್(ಗಾ). ಜೋಬು ಯಾಗೋಳು ಒಟ್ಟೆ(ನು).**

ಕಲ್ತಂವ ಜೋಬುಲಿಟ್ಟ್‌ಕಂಡದೆ, ಕಲಿಯದಂವ ಎಳ್ದ್ ಹೊರಗೆ ಬಿಸಾಕಿದೆ – ಗೊಣ್ಣೆ(ಒ). ವಾ: ಜೋಬುಗೆ ಕೈ ಹಾಕಿ ನೋಡ್ ಎಸ್ಟ್ ದುಡ್ಡು ಉಟ್ಟುತ, ಜೋಬು ಸೆರಿ ಉಟ್ಟ ನೋಡಿಕ. ಪ: ಜೋಬ್

ಜೋಮಾಲೆ /*jo:ma:lɛ*/ ನಾ. ಚಿನ್ನದ ಗುಂಡುಗಳಿಂದ ಮಾಡಲ್ಪಟ್ಟ ಸಾಂಪ್ರದಾಯಿಕ ಮಾಲೆ. a necklace made of golden beads. ವಾ: ಜೋಮಾಲೆ ಮಾಡ್ಸಿಕಂಡೆ.

ಜೋಯಪ್ಪ /*jo:yappa*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. masculine given name.

ಜೋಯಿಸ /*jo:yisa*/ ನಾ. ಜ್ಯೋತಿಷಿ. an astrologer. ವಾ: ಜೋಯಿಸನ ಹಕ್ಕಲೆ ಸಾಸ್ತ್ರ ಕೇಳಿಕೆ ಹೋದ್.

ಜೋಯಿಸರ್ /*jo:yisarɨ*/ ನಾ. ಜ್ಯೋತಿಷಿ. an astrologer. ವಾ: ಜೋಯಿಸರ್ ಏನೋ ಹೇಳ್ದೊ.

ಜೋರಾಗಿ /*jo:ra:gi*/ ನಾ. 1. ಜೋರಾಗಿ, 2. ಉಚ್ಚ ಸ್ವರದಲ್ಲಿ, 3. ದೊಡ್ಡ ಧ್ವನಿಯಲ್ಲಿ, 4. ಅಬ್ಬರದ ದನಿ. 1. loudly, 2. in high pitch, 3. loud voice, 4. to roar. ವಾ: ಜೋರಾಗಿ ಕಿರ್‌ಚಿದಂಗಾತ್. ಪ: ಜೋರಾಗಿದ್ – ಜೋರಾಗಿದ್ದದ್ದು; ಜೋರಾತ್ – ಜೋರಾಯಿತು;

ಜೋರು[1] /*jo:ru*/ ನಾ. 1. ಜೋರಾಗಿ, 2. ಉಚ್ಚ ಸ್ವರದಲ್ಲಿ, 3. ದೊಡ್ಡ ಧ್ವನಿಯಲ್ಲಿ, 4. ಅಬ್ಬರದ ದನಿ, 5. ವೇಗವಾಗಿ. 1. loudly, 2. in high pitch, 3. in a loud voice, 4. to roar 5. fast. ವಾ: ಬಾರಿ ಜೋರಾಗಿ ನಡ್ಕಂಡ್ ಹೋದಿಯ. ಪ: ಜೋರುಟ್ಟು – ಜೋರಿದೆ

ಜೋರು[2] /*jo:ru*/ ನಾ. ಬಜಾರಿ ಎಂಬ ಮಾತನ್ನು ಸೂಚಿಸುವ ಪದ. a quarrelsome woman. ವಾ: ಬಾರಿ ಜೋರುಟ್ಟು ಗೂಡೆ. ಪ: ಜೋರ್

ಜೋರ್ /*jo:ri*/ ನಾ. 1. ವೇಗ, 2. ಧ್ವನಿಯನ್ನು ದೊಡ್ಡದು ಮಾಡು. 1. speed, 2. in a loud voice. ವಾ: ಜೋರಿಲಿ ಮಳೆ ಗುಡ್ಗು, ಸಿಡ್ಲ್ ಬಂದದೆ.

ಜೋಲಿಗೆ /*jo:ligɛ*/ ನಾ. 1. ಭುಜದಿಂದ ತೂಗಾಡಿಸಬಹುದಾದ ಉದ್ದನೆಯ ಚೀಲ, 2. ಜೋಳಿಗೆ. 1. Sling bags/side bags, 2. cross-body bags. ವಾ: ಜೋಲಿಗೆ ಹಾಕಂಡ್ ಹೊರ್‌ಟೊ.

ಜೋಸ್ತಿ /*jo:sti*/ ನಾ. ಎಪ. 1. ದೋಸ್ತಿ, 2. ಗೆಳೆತನ ಸ್ನೇಹ. 1. friendship, 2. amity. ವಾ: ಅವರಿಬ್ಬರ ಜೋಸ್ತಿ ಬಾರಿ ಹಳೇದ್.

ಜ್ಞಾನ /*jna:na*/ ನಾ. 1. ಅರಿವು, 2. ತಿಳಿವಳಿಕೆ. 1. awareness, 2. advice. **ಜ್ಞಾನ ಇಲ್ಲದವಂಗೆ ಸಿಟ್ಟ್ ಜಾಸ್ತಿ(ಗಾ).** ವಾ: ಬಾರಿ ಜ್ಞಾನವಂತಂತ ಹೇಳ್ತಿದ್ದೊ.

ಜ್ವರಬಾದು /*jvaraba:du*/ ನಾ. ಜ್ವರ ಬರಬಹುದು. might get fever. ವಾ: ಸೆಳಿ ಹಿಡ್ಕಂಡ್ ಜ್ವರಬಾದು.

ಜ್ವಾಳ /*jva:ḷa*/ ನಾ. 1. ಜೋಳ, 2. ಒಂದು ಬಗೆಯ ಧಾನ್ಯ, 3. ಪೋಯೆಸಿ ಕುಟುಂಬ, ಆಂಡ್ರೊಪೋಗೋನಿಯ ಗುಂಪು, ಸೋರ್ಗಾಸ್ಟ್ರೇ ಉಪಗುಂಪಿಗೆ ಸೇರಿದ ಪ್ರಪಂಚದ ಅತಿ ಮುಖ್ಯ ಆಹಾರ ಧಾನ್ಯಗಳಲ್ಲಿ ಒಂದು. 1. jowar, new quinoa, a variety of sorghum, Sorghum vulgare, 2. a cereal, 3. a cereal belonging to the grass family of Poaceae, and widely used food grain. **ಹಸ್ರ್ ಕುಪ್ಪಸ ಹಾಕಿದವಂಗೆ ಚಿನ್ನದ ಹಲ್ಲ್ ಹುಟ್ಟಿಟ್ಟು – ಜ್ವಾಳ(ಒ).** ವಾ: ಜ್ವಾಳ ಸುಲೇಕಿತ್ ಹಂಗೆನೆ ಇಸಿ ಹಾಳಾದು.

ಞ

ಞಕ್ ಞೈ /*ɲakkɨ ɲai*/ ಅ. ಹೇಳಿದ್ದನ್ನೇ ಹೇಳು, ಚರ್ವಿತ ಚರ್ವಣ. to repeat.

ಞೈಞೈ / *ɲaiɲai* / ಅ. ಕಿರಿಕಿರಿ ಮಾಡುವುದು, ಬಯ್ಯುತ್ತಾ ಇರುವುದು, ಅಳುತ್ತಾ ಇರುವುದು. annoying, craving, crying.

ಞೆಞ್ಞೆ ಮೆಞ್ಞೆ /*ɲɛŋɲɛmaŋɲɛ*/ ನಾವಿ. 1. ತೊದಲು ಮಾತು, 2. ಹೇಳಿದ್ದನ್ನೇ ಹೇಳುವುದು. 1. stammer, 2. repetitive. ವಾ: ಅಂವ ಞೆಞ್ಞೆ ಮೆಞ್ಞೆನೇ ಮಾತಾಡುದು. ಪ: ಗೊಜ್ಜೆ

ಟ

ಟಕ್ /*ṭakɨ*/ ಕ್ರಿವಿ. 1. ಮೋಸ, 2. ವಂಚನೆ, 3. ಟಕ್ಕ, 4. ಮೋಸ ಮಾಡುವವ. 1. cunning, 2. deception, 3. a thief, 4. a cheater. ವಾ: ಇಂದೆನಿ ಈ ಜಂಪರ್‌ಗೆ ಟಕ್ಕ ಹಾಕಿ ಕೊಡಿ ಸಡ್ಲ ಸಡ್ಲ ಆದೆ.

ಟಕ್ಕ /*ṭhakka*/ ನಾ. ಕಳ್ಳ, a thief. ವಾ: ಟಕ್ಕ ನರಿಗೆ ತಕ್ಕ ಪಾಟ.

ಟಪಾಲುಕಟ್ಟೆ /*ṭapa:lukaṭṭe*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮುಪ್ಪೇರ್ಯ ಗ್ರಾಮದ ಜಾಗ. a locality in Mupperia village in Sullia Taluk of Dakshina Kannada District.

ಟಪ್ಪ /*ṭappa*/ ನಾ. 1. ಒಮ್ಮೆಗೆ, 2. ಒಡನೆ. 1. all of a sudden, 2. immediately. ವಾ: ಹಲ್ಲಿ ಕೊಡಿಂದ ಅಡಿಗೆ ಟಪ್ಪ ಬೀತ್.

ಟಮೆಟ /*ṭamɛṭa*/ ನಾ. ಎಪ. 1. ಟೊಮ್ಯಾಟೊ, 2. ಟಮಾಟೊ, 3. ತರಕಾರಿಯ ರೂಪದಲ್ಲಿ ಬಳಸುವ ಹಣ್ಣು. 1. tomato, 2. tomato, 3. tomato, a fruit used as a vegtable. ವಾ: ಟಮೆಟ ಎಲ್ಲ ಗೈಪುಗು ಬೇಕಾದೆ.

ಟವುಲು /*ṭavulu*/ ನಾ. ಎಪ. 1. ಟವಲು, 2. ಕರವಸ್ತ್ರ. 1. a towel, 2. a handkerchief. ವಾ: ಮೀದ್ ಟವುಲು ಸುತ್ತಿಕಂಡ್ ಬಾತ್. ಪ: ಟುವಾಲ್(ತು)

ಟವ್ನ್ /*ṭavnɨ*/ ನಾ. ಎಪ. 1. ಟೌನ್, 2. ನಗರ, 3. ಪಟ್ಟಣ. 1. a town, 2. a city, 3. a city. ವಾ: ನಾವೆಲ್ಲ ಟವ್ನ್ ಗೆ ಹೋಗಿ ಬಂದೊ.

ಟಾಕುಟೀಕ್ /*ṭha:ku ṭhi:kɨ*/ ನಾವಿ. ಉತ್ತಮ ಪೋಷಾಕು ಧರಿಸಿದ. well dressed. ವಾ: ಅಂವ ಬಾರಿ ಟಾಕು ಟೀಕ್‌ಲಿ ಬಂದದೆ.

ಟಾನಿಕ್ /*ṭa:nikɨ*/ ನಾ. ಎಪ. ಆರೋಗ್ಯವರ್ಧಕ ಔಷಧ. tonic, medicine to improve health. ವಾ: ನೀ ಟಾನಿಕ್ ತಕ.

ಟಾಪ್‌ಡಿಮ್ /*ṭa:pɨḍimɨ*/ ಅ. ಕೇಪಿನ ಕೋವಿ ತಡವಾಗಿ ಹೊಡೆಯುವುದಕ್ಕೆ ಟಾಪ್‌ಡಿಮ್ ಎನ್ನುವರು. bullet fired slower than normal speed in a shooting rifle. ವಾ: ಕೇಪ್ ಸಿಡ್‌ದ್ ಗುಂಡಾದುಕೆ ಟಾಪ್‌ಡಿಮ್‌ತೇಳಿವೆ.

ಟಿಂಟೀಂಯೊ /*ṭiṉṭi:nyɔ*/ ನಾ. 1. ಟಿಟ್ಟಿಬ, 2. ತಿಟ್ಟಿಬಾ ಹಕ್ಕಿ. 1. a plover bird, 2. a lapwing bird. ವಾ: ಟಿಂಟೀಂಯೊ ಹಕ್ಕಿ ಸಣ್ಣದಾಗಿದ್ದ್ ತಲೆಲಿ ಸಣ್ಣ ಜುಟ್ಟು ಉಟ್ಟು. ಪ: ಟೀಂ ಟೀಂ ಹಕ್ಕಿ, ಇದನೆಂಟಿ(ತು)

ಟಿಕಾಣಿಹೂಡ್ /*ṭhika:ṇihu:ḍɨ*/ ಕ್ರಿವಿ. ದೀರ್ಘಕಾಲ ಬಂದು ಉಳಿದುಕೊಳ್ಳುವ ಅತಿಥಿ. a guest who has stayed longer than expected or anticipated. ವಾ: ಅಂವ ನೆಂಟ್‌ರ ಮನೆಲಿ ಟಿಕಾಣಿ ಹೂಡಿ ಸುಮಾರ್ ದಿನ ಆತ್.

ಟಿಕ್ಕಿ /*ṭikki*/ ನಾ. ಕಿವಿಗೆ ಚುಚ್ಚಿಕೊಳ್ಳುವ ಒಂದು ಬಗೆಯ ಓಲೆ. a stud worn on the earlobe. ವಾ: ಹಿಂದೆನ ಕಾಲಲಿ ಟಿಕ್ಕಿ ಹಾಕಂಬೊತಿದ್ದೊ.

ಟೀಪಾಯಿ /*ṭi:pa:yi*/ ನಾ. ಚಿಕ್ಕ ಮೇಜು. a teapoy,

a small desk. ವಾ: ಟೀಪಾಯಿ ಮೇಲೆ ಪೇಪರ್ ಇಸಿದ್.

ಟುವಾಲು /*ṭuva:lu*/ ನಾ. ಎಪ. ಕರವಸ್ತ್ರ. handkerchief. ವಾ: ಟುವಾಲು ತಕ, ಮೀಯಕೆ ಪೋಯಿ. ಪ: ಟವೆಲ್.

ಟೇಂಕಾರ /*ṭhɛ:ŋka:ra*/ ನಾವಿ. 1. ಅತಿಜಂಭ, 2. ಒಣಜಂಭ. 1. excessive pride, 2. vainglorious. ವಾ: ಅಂವಂದ್ ಮಾತ್‌ಲಿ ಬರಿ ಟೇಂಕಾರನೆ ಆತ್.

ಟೇಪು /*ṭe:pu*/ ನಾ. ಜಡೆಗೆ ಹಾಕುವ ರಿಬ್ಬನ್. ribbon used for hair. ವಾ: ಇಸ್ಕೂಲಿಗೆ ಹೋಕನ ಎರ್‌ಡ್ ಜೆಡೆ ಹಾಕಿ ಟೇಪುಲಿ ಮಡ್ಚಿ ಕಟ್ಟೊಕು.

ಟೇಸನ್ /*ṭɛ:sanɨ*/ ನಾ. ಎಪ. 1. ಪೋಲೀಸು ಠಾಣೆ, 2. ಪೋಲೀಸು ದಳದ ಕಛೇರಿ. 1. a police station, 2. a station house. ವಾ: ನೀ ಟೇಸನಿಗೆ ಯಾಕೆ ಹೋದ್?

ಟೊಪ್ಪಿ /*ṭoppi*/ ನಾ. ತಲೆಗೆ ಹಾಕುವ ಟೊಪ್ಪಿ. a cap. ವಾ: ತಲೆಗೆ ಟೊಪ್ಪಿ ಹಾಕ. ಪ: ತೊಪ್ಪಿ

ಟೊಪ್ಪಿಹಾಕ್ /*ṭoppi ha:kɨ*/ ಕ್ರಿ. 1. ಮೋಸಮಾಡು ವಂಚಿಸು. to cheat. ವಾ: ಅಂವ ದುಡ್ಡ್ ತಕಂಡ್ ಇವಂಗೆ ಟೊಪ್ಪಿ ಹಾಕಿತ್. ಪ: ಟೊಪ್ಪಿಹಾಕಟ – ವಂಚಿಸುವಿಕೆ, ಟೊಪ್ಪಿ ಇಸ್

ಟೊಮೆಟೊ /*ṭomeṭo*/ ನಾ. ಎಪ. ಟೊಮೇಟೊ ಹಣ್ಣು. tomato. ವಾ: ದೈಲಿ ಟೊಮೆಟಣ್ಣ್ ಬುಟ್ಟ್‌ಟು.

ಟೊಳ್ /*ṭoḷɨ*/ ನಾವಿ. 1. ಒಳಗೆ ಬರಿದಾದ, 2. ಜಂಭ ಕೊಚ್ಚಿಕೊಳ್ಳುವವ, 3. ತೋರಿಕೆಗೆ ಮಾತ್ರ ಗಟ್ಟಿತನ ಇಲ್ಲದ. 1. vacuum inside, 2. vainglorious, 3. pretentious. ವಾ: ಅಂವ ಬರೇ ಟೊಳ್.

ಟೊಳ್ಳೆ /*ṭoḷḷɛ*/ ನಾವಿ. 1. ಕೃಶಕಾಯದ ವ್ಯಕ್ತಿ, 2. ತೆಳ್ಳಗಿರುವುದು. 1. a man with a slender body, 2. being lean. ವಾ: ಟೊಳ್ಳೆ ಬಾತ್.

ಟೊಳ್ಳ್ /*ṭoḷḷɨ*/ ನಾ. 1. ಟೊಳ್ಳು, 2. ಗಟ್ಟಿ ಅಲ್ಲದ, 3. ಒಳಗೆ ತಿರುಳಿಲ್ಲದ, 4. ಪೊಳ್ಳಾದ. 1. hollow, 2. not strong, 3. having not substance/kernel, 4. having cavity. ವಾ: ಮೂಳೆ ಟೊಳ್ಳ್, ಕಾಯಿ ಟೊಳ್ಳ್

ಟೋಪನ್ /*to:panɨ*/ ನಾ. ಎಪ. ಕೃತಕ ತಲೆಕೂದಲು. a wig, artificial hair. ವಾ: ಕೂದೊಲು ಹೋಗಿ ಟೋಪನ್ ಹಾಕಿದ್.

ಡ

ಡಂಗುರ /*ḍaŋgura*/ ನಾ. ಡಂಗುರ. making announcement by beating a drum. ವಾ: ಎಂತೊ ಡಂಗುರ ಸಾರಿಕಂಡ್ ಹೋದ್ರೊ.

ಡಕ್ಕೆ /*ḍakkɛ*/ ನಾ. ದೇವಾಲಯಗಳಲ್ಲಿ ಮಹಾಮಂಗಳಾರತಿ ಸಂದರ್ಭ ಬಡಿಯುವ ಚರ್ಮ ವಾದ್ಯ. a drum used in temples during the waving of lamps. ವಾ: ದೇಸ್ತಾನಲಿ ಪೂಜೆ ಮಾಡಿಕನ ಡಕ್ಕೆ ಬಾರ್‌ಸುವೆ. **ಡಕ್ಕೆಬಾರ್ಸುದು** /*ḍakkɛba:rsudu*/ ಆರಾಧನಾ ಮೂರ್ತಿಯನ್ನು ಹೊತ್ತುಕೊಂಡು ಡಕ್ಕೆ ಬಾರಿಸಿಕೊಂಡು ಗುಡಿಗೆ ಪ್ರದಕ್ಷಿಣೆ ಬರುವ ಆಚರಣೆ. a ritual of circumambulating the shrine by carrying the portable idol of god by beating the drum known as dakke. ವಾ: ದೇಸ್ತಾನಲಿ ಡಕ್ಕೆ ಬಾರ್ಸುದು.

ಡಕ್ಕೆಬಲಿ /*ḍakkɛbali*/ ನಾ. ಭೂತನಾಗರಿಗೆ ಮಂಡಲ ಬರೆದು ನಡೆಸುವ ಒಂದು ಬಗೆಯ ನೃತ್ಯರೂಪದ ಆರಾಧನೆ. a ritualistic dance, related to snake worship. A mandala is drawn depicting the union of male and female snakes. ವಾ: ಮಂಡಲ ಬರ್‌ದ್ ಡಕ್ಕೆಬಲಿ ಆರಾದನೆ ಮಾಡಿವೆ.

ಡಬಡಬ /*ḍabaḍaba*/ ಅ. ಎದೆ ಡವ ಡವ ಎಂದು ಬಡಿದುಕೊಳ್ಳುವುದು. sound of heartbeat. ವಾ: ಡಬಡಬತ ಎದೆ ಹೊಡ್ಕಣಿಕೆ ಸುರಾತ್.

ಡಬ್ಬ /*ḍabba*/ ನಾ. 1. ಡಬ್ಬ, 2. ವಸ್ತುಗಳನ್ನು ಇಡುವ ತಗಡಿನ ಪೆಟ್ಟಿಗೆ. 1. a box, 2. metal trunk. ವಾ: ಡಬ್ಬಲಿ ಬೆಲ್ಲ ಇಸಿಯೊಳೊ ತೆಗ್ದರೆ ತಿನ್ನಕ್. ಪ: ಡಬ್ಬಿ

ಡಬ್ಬಲ್ /*ḍabbalɨ*/ ನಾ. ಎಪ. 1. ಎರಡು, 2. ಯಗ್ಮ, 3. ಇಮ್ಮಡಿ, 4. ಜೋಡಿ, 5. ದ್ವಿ, 6. ದುಪ್ಪಟ್ಟು. 1. two, 2. two, 3. heels, 4. couple, 5. two, 6. double. ವಾ: ನಮ್ಮ ಕೈಲಿ ಡಬ್ಬಲ್ ಕೆಲ್‌ಸ ಮಾಡ್‌ಸಿದೊ.

ಡಾಬು /*ḍa:bu*/ ನಾ. ಎಪ. 1. ಚಿನ್ನದ ಅಥವಾ ಬೆಳ್ಳಿಯ ಸೊಂಟದ ಪಟ್ಟಿ, 2. ಆಭರಣ. 1. golden or silver waistband, 2. jewellery. ವಾ: ಮೊದ್ವೆ ಗೂಡೆಗೆ ಡಾಬು ಕಟ್ಟಿಕೆ ಮರ್‌ತೋತು.

ಡಾಮರ್ /*ḍa:marɨ*/ ನಾ. ಎಪ. ರಸ್ತೆಗೆ ಬಳಿಯುವ ಕಪ್ಪಾದ ಅಂಟು ದ್ರವ. a tar road. ವಾ: ರಸ್ತೆಗೆ ಡಾಮರ್ ಹಾಕ್ತೊಳದ್. **ಡಾಮರ್ ರೋಡ್** /*ḍa:marɨ ro:ḍɨ*/ ಎಪ. 1. ಟಾರು ರಸ್ತೆ, 2. ಡಾಂಬರು ರಸ್ತೆ. 1. a tar road, 2. bituminous road (Asphalt). ವಾ: ಮನೆವರೆಗೆ ಡಾಮರ್ ರೋಡ್ ಮಾಡ್ತೊಳೊ.

ಡಾರ್ತೋಡಿ /*ḍa:rto:ḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಡಿಬ್ಬಣ /*ḍibbaṇa*/ ನಾ. 1. ದಿಬ್ಬಣ, 2. ಮದುವೆಯ ಮೆರವಣಿಗೆ, 3. ವಧು ಅಥವಾ ವರನ ಕಡೆಯ ಜನರ ಗುಂಪು. 1. a procession of relatives related to either the bride or the groom, 2. a marriae procession, 3. relatives of the bride and the groom. ವಾ: ಡಿಬ್ಬಣ ಮುಕ್ಯಸ್ತ ಯಾರ್?

ಡುಮ್ಮ /*ḍumma*/ ನಾ. ದಡೂತಿ (ಪುರುಷ). an obese man. ವಾ: ಆ ಹೈದ ಬಾರಿ ಡುಮ್ಮ ಕಂಡದೆ.

ಡುಮ್ಮಿ /*ḍummi*/ ನಾ. ದಡೂತಿ (ಸ್ತ್ರೀ). an obese woman. ವಾ: ಡುಮ್ಮನೂ ಡುಮ್ಮಿಯು ಹೋತಿದ್ದೊ ಅಲ್ಲಿ.

ಡೆಂಬಾಳೆ /*ḍemba:ḷε*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಡೆಕ್ಕಳ /*ḍekkaḷa*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಎಡಮಂಗಲ ಗ್ರಾಮದ ಜಾಗ. a locality in Edamangala village in Sullia Taluk of Dakshina Kannada District.

ಡೆಬ್ಬೆಲಿ /*ḍebbeli*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕೊಡಿಯಾಲ ಗ್ರಾಮದ ಜಾಗ. a locality in Kodiyala village in Sullia Taluk of Dakshina Kannada District.

ಡೆಮ್ಮಲೆ /*ḍemmalε*/ ನಾ. ಎತ್ತರ ಜಾಗ. a higher ground/place.

ಡೇಲಿಯಾ ಹೂವ್ /*ḍe:liya: hu:vɨ*/ ನಾ. ಡೇರೆ ಹೂವು. Dahlia flower. ವಾ: ಡೇಲಿಯಾ ಹೂವ್ ಗೆಂಡೆ ನೆಡೊಕು.

ಡೊಂಕ /*ḍoŋka*/ ನಾ. 1. ಕುಂಟುವಿಕೆ, 2. ನೋಂಡಿ ಆಟ (ಒಂಟಿ ಕಾಲಿನ ಆಟ). 1. limping, 2. hopscotch game. ವಾ: ಮಕ್ಕೆಲ್ಲ ಸೇರಿಕಂಡ್ ಡೊಂಕ ಆಟ ಆಡಿವೆ.

ಡೊಂಕೆಲ್ /*ḍoŋkεlɨ*/ ನಾ. 1. ವಕ್ರ, 2. ಓರೆಕೋರೆ. 1. curve, 2. irregular shape. ವಾ: ಕಬ್ಬು ಡೊಂಕೆಲ್ ಆವುಟು.

ಡೊಂಕ್ /*ḍoŋkɨ*/ ನಾ. 1. ವಕ್ರ, 2. ಓರೆಕೋರೆ, 3. ಬಾಗಿರುವ. 1. curve, 2. irregular shape, 3. bent. **ಎಷ್ಟ್ ಹೇಳಿರೂ ನಾಯಿ ಬಾಲ ಡೊಂಕ್(ಗಾ).** ವಾ: ಕಬ್ಬ್ ಡೊಂಕ್ ಡೊಂಕಾವುಟು. ಪ: ಡೊಂಕಿಸಿಕೆ – ಡೊಂಕು ಮಾಡಲು

ಡೊಂಕ್‌ಬುದ್ದಿ /*ḍoŋkɨbuddi*/ ನಾವಿ. 1. ಮೋಸ, 2. ಕುಟಿಲತೆ. 1. cheating, 2. deceit. ವಾ: ಡೊಂಕ್ ಬುದ್ದಿ ಇರಿಕಾದ್.

ಡೊಂಗಿ /*ḍoŋgi*/ ನಾ. ತಮಾಷೆ. being playful. ವಾ: ಅಂವ ಬಾರಿ ಡೊಂಗಿ ಮೊನ್ಸ.

ಡೊಂಟ್ರೆಕಪ್ಪೆ /*ḍoṇṭrɨkappε*/ ನಾ. ದೊಡ್ಡ ಕಪ್ಪೆ. a large frog. ವಾ: ಡೊಂಟ್ರೆ ಕಪ್ಪೆ ಮಳೆ ಬಾಕನ ಜೋರಿಲಿ ಕೂಂಗಿದೆ. ಪ: ಡೋಂಕ್ರೆಕಪ್ಪೆ ಗೋಂಕ್ರೆಕಪ್ಪೆ(ತು)

ಡೊಂಪೆ /*ḍompe*/ ನಾ. ಚಿಕ್ಕ ಮಕ್ಕಳ ಆಟದಲ್ಲಿ ಹೇಳುವ ಶಬ್ದ. a term used by children while playing. ವಾ: ಸಣ್ಣ ಮಕ್ಕ ಆಡಿಕನ ಡೊಂಪೆತ ಹೇಳ್ವ.

ಡೊಂಬಯ /*ḍombaya*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. masculine given name. ಪ: ಡೊಂಬ

ಡೊಂಯ್‌ಗುಟ್ಟುದು /*ḍonyguṭṭuduɨ*/ ಅ. ನೊಣ ಹಾರಾಡುವಾಗ ಕೇಳುವ ಶಬ್ದ. a buzzing sound of a fly. ವಾ: ಹಾಳ್ ನಳಗ ಡೊಂಯ್ ಗುಟ್ಟುದು.

ಡೊಕ್ಕೆ /*ḍokkε*/ ನಾ. ಉಸಿರು. breath. ವಾ: ಜೋರಿಲಿ ಡೊಕ್ಕೆ ತೆಗಿ.

ಡೊಬ್ಬ /*ḍobba*/ ನಾ. ಡಬ್ಬ. a box. ವಾ: ನೆಸೆ ಡೊಬ್ಬನ ಕೊಡ್. ಪ: ಡಬ್ಬಿ

ಡೊಬ್ಬಿ /*ḍobbi*/ ನಾ. 1. ಡಬ್ಬ, 2. ಪೆಟ್ಟಿಗೆ, 3. ಸಂದೂಕ, 4. ಪೆಠಾರಿ. 1. a box, 2. a trunk, 3. a vault, 4. a big/strong box. ವಾ: ಡೊಬ್ಬಿ ಮುಚ್ಚಳ ಕರೆಲಿ ಬುಟ್ಕಂಡುಟ್ಟು.

ಡೋಂಕ್ರೆಕಪ್ಪೆ /*ḍpo:ŋkrɨkappε*/ ನಾ. ದೊಡ್ಡ ಗಾತ್ರದ ಕಪ್ಪೆ. a large frog. ವಾ: ಡೋಂಕ್ರೆಕಪ್ಪೆಗ ಮರ್ಟವೆ. ಪ: ಡೋಂಕ್ರುಕಪ್ಪೆ, ಡೋಕ್ರುಕಪ್ಪೆ.

ಡೋಂಗಿ /*ḍo:ŋgi*/ ನಾ. ಮಾತಿಗೆ ತಪ್ಪುವವ. a renege. ವಾ: ಅಂವನ ಮಾತ್‌ನ ನಂಬ್‌ಬಡ ಡೋಂಗಿ ಬುಡ್‌ದು. **ಡೋಂಗಿಮಾಡ್** /*ḍo:ŋgi ma:ḍɨ*/ ನಾವಿ. ತಮಾಷೆ ಮಾಡುವುದು. to fool/joke around. ವಾ: ಮಾತ್‌ಮಾತ್‌ಗೆ ಡೋಂಗಿ ಮಾಡುದು.

ಡೋಕ್ರು ಕಪ್ಪೆ /*ḍo:kru kappe*/ ನಾ. ದೊಡ್ಡ ಕಪ್ಪೆ. a large frog. ವಾ: ಡೋಕ್ರು ಕಪ್ಪೆಗ ಅಗೆ ಗದ್ದೆಲಿದ್ದವೆ.

ಡೋಲ್ /*ḍo:lɨ*/ ನಾ. ಎರಡು ಮಗ್ಗುಲುಗಳಲ್ಲಿಯೂ ಬಾರಿಸಬಹುದಾದ ಒಂದು ದೊಡ್ಡ ಗಾತ್ರದ ಚರ್ಮ ವಾದ್ಯ,ಡೊಳ್ಳು,ಡೋಲು. a large double headed barrel drum. **ತಮಟೆಗೆ ಒಂದು ಕಡೆ ಏಟ್,**

ಡೋಲಿಗೆ ಎರಡ್ ಕಡೆ ಏಟ್(ಗಾ). ವಾ: ಡೋಲ್ ಕುಟ್ಟುದು.

ಡೋಸು /*ḍo:su*/ ನಾ. ಏಪ. ಮದ್ಯ. alcohol. ವಾ: ಎಡೆ ಹಾಕಿಕನ ಡೋಸು ನ ಇಸೊಕು.

ಡೋಸುಕೊಡ್ದು /*ḍo:sukoḍḍu*/ ನಾವಿ. ಪರೋಕ್ಷವಾಗಿ ಅಥವಾ ವ್ಯಂಗ್ಯವಾಗಿ ಹೇಳಿ ಟೀಕಿಸು ವುದು ಅಥವಾ ಮುಖ್ಯ ತೀರಿಸುವುದು. a sarcastic remark. ವಾ: ಕೆಲೊವು ಜೆನ ಮಾತ್‌ಲೆ ಡೋಸು ಕೊಡ್ದು.

ಡೋಸ್‌ಗೀಸ್ /*ḍo:sɨ gi:sɨ*/ ಏಪ. ನಾ. ಜೋಡಿ ಪದ. compound word. ವಾ: ಡೋಸ್‌ಗೀಸ್ ಮುಟ್ಟುದುಲೆ.

ಡೌಟು /*ḍauṭu*/ ನಾ. ಏಪ. 1. ಅನುಮಾನ, 2. ಸಂಶಯ, 3. ಸಂದೇಹ, 4. ಶಂಕೆ. 1. doubt, 2. suspicion, 3. confusion, 4. apprehension. ವಾ: ಮೊನ್ಸಂಗೆ ಡೌಟು ಇರಿಕಾದ್.

ಡೌಲು /*ḍaulu*/ ನಾ. ಏಪ. 1. ದೊಡ್ಡಸ್ತಿಕೆ, 2. ಬಡಾಯಿ. 1. bragging, 2. boasting about oneself. ವಾ: ಡೌಲು ಬಂದುಟು ಕಂಡದೆ ಗೂಡೆಗೆ. ಪ: ದೌಲು

ಡ್ಯಾರೆ /*ḍya:rɛ*/ ನಾ. ಏಪ. 1. ಟೆಂಟು, 2. ಗುಡಾರ, 3. ಡೇರೆ, 4. ಶಿಬಿರ. 1. a tent, a portable shelter made of sheets of canvas, nylon, fabric, etc. for camping 2. a collapsible shelter, 3. a tupik, 4. a camp. ವಾ: ಡ್ಯಾರೆ ಕಟ್ಟಿಕೆ ಜೆಮಿ ಹಗ್ಗ ಇದ್ರೆ ಬೆಕಿತ್.

ತ

ತ /*ta*/ ಅ. 1. ಎಂದು, 2. ಅಂತಹ-ಅಂಥ, 3. ಆ ತರಹದ. 1. when, 2. of that kind, 3. of that type. ವಾ: ನಾ ಮೊದುವೆಗೆ ಹೋಕೂ ತ ಒಳೆ.

ತಂಗ /*taŋga*/ ನಾ. ತಂಗಿ. younger sister. ವಾ: ತಂಗ ಬನ್ನೆತ ಹೇಳ್ತಲ. ಪ: ತಂಗೆ, ತೆಂಗಿ.

ತಂಗಳ /*taŋgaḷa*/ ನಾ. 1. ತಂಗಳು, 2. ತಣ್ಣಗಾದ ಅನ್ನ, 3. ದಿನ ಮುಂಚಿತದ ಅನ್ನ. 1. left over food, 2. cold rice, 3. yesterday's rice. ವಾ: ತಂಗಳ ಅನ್ನನಾರ್ ಉಂಬಕೆ ಕೊಡ್. ಪ: ತಂಗ್‌ಳ್, ತಂಗ್ಳ್

ತಂಗೀಸ್[1] /*taŋgi:si*/ ನಾ. ಮೀನಿಗೆ ಗಾಳ ಹಾಕಲು ಬಳಸುವ ಪಾರದರ್ಶಕ ನೈಲಾನ್ ನೂಲು. nylon thread used in fishing hook. ವಾ: ತಂಗೀಸ್ ಸಿಕ್ಕಿತ? ಪ: ಸಂಗಿಸ್

ತಂಗೀಸ್[2] /*taŋgi:si*/ ನಾ. ಪ್ಲಾಸ್ಟಿಕ್ ಹಗ್ಗ. a plastic rope. ವಾ: ತಂಗೀಸ್ ಬೇಕಿತ್ತ್. ಪ: ತಂಗೀಸ್ ಚೀಲ್, ತಂಗೀಸ್ ಗೋಣಿ.

ತಂಗೆ /*taŋgɛ*/ ನಾ. 1. ತಂಗಿ, 2. ಸಹೋದರಿ. 1. a younger sister, 2. sister. ವಾ: ತಂಗೆ ಮನೆಗೆ ಬಂದುಟು. ಪ: ತಂಗೆಕ – ತಂಗಿಯರು; ತಂಗೆನೆ – ತಂಗಿಯೆ; ತಂಗೆನೊಟ್ಟಿಗೆ – ತಂಗಿಯೊಂದಿಗೆ; ತಂಗೆನ್ – ತಂಗಿಯ;

ತಂಗ್ಳನ್ನ /*taŋgḷanna*/ ನಾ. 1. ದಿನ ಮುಂಚಿತದ ಅನ್ನ, 2. ತಣ್ಣಗಾದ ಅನ್ನ. 1. leftover rice of yesterday, 2. cold rice. ವಾ: ತಂಗ್ಳ ನ್ನ ಲಿ ನಿಂಬುಳಿ ಇಲ್ಲರೆ ಕಂಯ್ಯುಳಿ ಹಾಕಿ ಚಿತ್ರನ್ನ ಮಾಡಕ್.

ತಂಜಣೆ /*taŋjaṇɛ*/ ನಾವಿ. 1. ಒಯ್ಯಾರದ ಮಾತು, 2. ಸೇಲೆಯ ಮಾತು, 3. ಬಿನ್ನಾಣದ ವರ್ತನೆ. 1. flirtatious conversation, 2. coquette

3. flirtatious behaviour. ವಾ: ಗೂಡೆನ ತಂಜಣೆ ಮಾತಿಗೆ ಒಪ್ಪದಿರಿಕಿಲೆ.

ತಂಟೆ /*taṇṭe*/ ಕ್ರಿವಿ. 1. ತರಲೆ, 2. ಜಗಳ, 2. ಕಿರಿಕಿರಿ, 3. ತಲೆಹರಟೆ. 1. mischievous, 2. to quarrel, 3. irritation, 4. loquacity/logorrhea. ವಾ: ತಂಟೆಕೋರ ಹೈದ.

ತಂಟೆಪ್ಪಾಡಿ /*taṇṭeppa:ḍi*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕಳಂಜ ಗ್ರಾಮದ ಜಾಗ. 1. family, 2. clan, 3. a locality in Kalanja village in Sullia Taluk of Dakshina Kannada District.

ತಂಡ ಆದೊ /*taṇḍa a:do*/ ಕ್ರಿವಿ. ಸುಮ್ಮನೆ ಆಗುವುದು (ತೊಂದರೆ ಮಾಡುವವರು ತಟಸ್ಥವಾದಾಗ ಹೇಳುವ ಮಾತು. to be quiet. ವಾ: ಉರಿ ಬಂದ್ ಸಾಕಾಗಿ ಈಗ ತಂಡ ಆದೊ (ಆದ್).

ತಂತಿ /*tanti*/ ನಾ. 1. ತಂತಿ, 2. ಲೋಹದ ತೆಳುವಾದ ಎಳೆ, 3. ಕಂಬಿ. 1. a wire, 2. a metal wire, 3. a rod. ವಾ: ಅರ್ವೆನ ತಂತಿಲಿ ಹಾಕ್ ವಣ್ಗಲಿ.

ತಂತಿಕಂಬ /*tantikamba*/ ನಾ. ವಿದ್ಯುತ್ ಕಂಬ. an

electric pole. ವಾ: ತಂತಿಕಂಬ ಹತ್ತಿ ಸೆರಿ ಮಾಡ್ತಿದ್ದೊ.

ತಂತ್ರ /*tantra*/ ನಾ. 1. ಧಾರ್ಮಿಕ ವಿಧಿ, ಕ್ರಮ ಮತ್ತು ಅನುಷ್ಠಾನ, 2. ಕೌಶಲ, 3. ಸಾಸ್ತ್ರ, 4. ಇಂದ್ರಜಾಲ. 1. a ritual, 2. a skill, 3. a ritual, 4. black magic. ವಾ: ಅವು ತಂತ್ರ ಮಂತ್ರ ಮಾಡ್‌ಸಿವೆ.

ತಂತ್ರಿ /*tantri*/ ನಾ. 1. ತಂತ್ರ ಶಾಸ್ತ್ರವನ್ನು ಬಲ್ಲವನು. a priest who conducts religious ceremonies/ a conjurer. **ಮೊಂತ್ರಿನ ಮನೆ ಹಾಳ್, ತಂತ್ರಿನ ಕುಲ ಹಾಳ್(ಗಾ).** ವಾ: ತಂತ್ರಿಗ ಮನೆಗೆ ಕಟ್ಟ್ ಮಾಡಿ ಕೊಟ್ಟವೆ.

ತಂದ /*tanda*/ ಕ್ರಿ. 1. ತೆಗೆದುಕೊಂಡು ಬಂದೆಯಾ, 2. ತಂದಿದ್ದೀಯಾ. 1. Did you bring? 2. Have you brought? ವಾ: ಮಾತ್ರೆ ತಂದ? **ತಂದದ್** /*tandadi*/ ತೆಗೆದುಕೊಂಡು ಬಂದಿದ್ದು. something that has been brought. ವಾ: ಹೊಸ್ತ್ ಮರದ ಕುರ್‌ಸಿ ತಂದದ್.

ತಂದಾಕುದು /*tanda:kudu*/ ನಾ. 1. ದುಡಿದು ಮನೆ ಸಂಸಾರ ನಿರ್ವಹಿಸುವುದು, 2. ಸಂಸಾರ ನಿರ್ವಹಣೆ. 1. managing one's home by working, 2. looking after one's family. ವಾ: ಅಪ್ಪ ತಂದಾಕುದು ಮಕ್ಕ ಕುದ್ದ್ ತಿಂಬೊದು.

ತಂದಿಸ್ /*tandisi*/ ಕ್ರಿ. ತಂದಿಡು. causing quarrel between people through slander. ವಾ: ಮರ್‌ಯಾದೆಲಿ ವಾಚಿ ತಕಂಡದನ ತಂದಿಸ್. ಪ: ತಂದಿಸಿಕನ – ತಂದಿಡುವಾಗ

ತಂದಿಸಿದೆ[1] /*tandisidɛ*/ ಕ್ರಿ. ತಂದು ಇಟ್ಟಿರುವೆ. brought it. ವಾ: ಹೂನ ಕೊಯ್ದ್ ಆಗಲೆ ತಂದಿಸಿದೆ.

ತಂದಿಸಿದೆ[2] /*tandisidɛ*/ ಕ್ರಿ. ತಂದಿಡುತ್ತಾನೆ/ಳೆ. She/ He will bring. ವಾ: ಗೊಂಬೆನ ತಕಂಡ್ ಎಲ್ಲಿಗೂ ಹೋದುಲೆ ತಂದಿಸಿದೆ ಬುಡು.

ತಂದಿಸುದು[1] /*tandisudu*/ ಕ್ರಿ. ತಂದಿರಿಸು. to bring something. ವಾ: ಮಳೆ ಹಿಡ್ಯಕೆ ಮುಂದೆನೆ ಎಲ್ಲ ದಿನ್ನಿ ಸಾಮಾನ್‌ಗಳ ಮನೆಗೆ ತಂದಿಸುದು.

ತಂದಿಸುದು[2] /*tandisudu*/ ಕ್ರಿ. ತಂದಿಡಬಹುದು. may bring. ವಾ: ಅದರ ಅವ ತಂದಿಸುದು ಬಲಾ.

ತಂದಿಸುದು[3] /*tandisudu*/ ಕ್ರಿ. 1. ಆಚೆ ಈಚೆ ಹೇಳುವುದು, 2. ಚಾಡಿ ಹೇಳಿ ಜಗಳ ತಂದಿಡುವುದು. 1. to slander, 2. causing quarrel between people through slandering behaviour. ವಾ: ಅವಳೊಟ್ಟಿಗೆ ಹೆಚ್ಚಿ ಮಾತಾಡ್‌ಬಡ ನಮಿಗೆ ತಂದಿಸುದು.

ತಂದೆ ವೀಳ್ಯ /*tandɛ vi:ḷya*/ ನಾ. ತಂದೆಗೆ ಗೌರವ ಕೊಡುವ ವೀಳ್ಯ. a custom of showing respect to one's father.

ತಂದೆ[1] /*tandɛ*/ ಕ್ರಿ. ತೆಗೆದುಕೊಂಡು ಬಂದೆ. I brought. ವಾ: ಮೊದ್ವೆಗೆ ಬೇಕಾದ ಸರ್‌ಟಡಿಗೆನ ತಂದೆ.

ತಂದೆ[2] /*tandɛ*/ ನಾ. 1. ತಂದೆ, 2. ಅಪ್ಪ. 1. father, 2. daddy. ವಾ: ತಂದೆ ಮನೆಲಿ ಒಳೊನ?

ತಂದ್ /*tandi*/ ಕ್ರಿ. 1. ತಂದು. bring. ವಾ: ಹೂನ ತಂದ್ ಇಲ್ಲೆ ಇಸಿದ, ಮನೆ ಒಳಗೆ ಇಸ್. ಪ: ತಂದ್‌ಕೊಟ್ಟತ್ – ತಂದುಕೊಟ್ಟನು/ಳು; ತಂದ್‌ಕೊಟ್ಟದೆ – ತಂದುಕೊಡುತ್ತಾನೆ; ತಂದ್‌ಕೊಟ್ಟದ್ – ತಂದುಕೊಟ್ಟಿದ್ದು; ತಂದ್ ಕೊಟ್ಟೊ – ತಂದುಕೊಟ್ಟರು; ತಂದ್‌ಕೊಟ್ಟಾಕನ – ತಂದುಕೊಟ್ಟಾಗುವಾಗ; ತಂದ್‌ಕೊಡಿಕೆ – ತಂದುಕೊಡಲು; ತಂದ್‌ಕೊಡೊಕು – ತಂದು ಕೊಡಬೇಕು. **ತಂದೊ** /*tando*/ ತಂದರು. they brought. ವಾ: ಅವು ಬಾಕನ ಗೋದಿ ರೊಟ್ಟಿನೂ, ಕುರಿ ಮಾಸನೂ ತಂದೊ. **ತಂದೊಳ**[1] /*tandɔḷa*/ ತಂದಿದ್ದೀಯಾ? did you bring? ವಾ: ಜಾಕೆಟ್ ತಂದೊಳ? ಪ: ತಂದೊಳದ್ – ತಂದಿರುವುದು; ತಂದೊಳರಿಯೊ – ತಂದಿದ್ದೀರೊ; ತಂದೊಳೆ – ತಂದಿದ್ದೇನೆ; ತಂದೊಳೊ,ತಂದೊಳ – ತಂದಿದ್ದಾರೆ; ತಂದೋದು. **ತಂದೊಳ**[2] /*tandɔḷa*/ ತಂದಿದ್ದಾರೆ. they have brought. ವಾ: ಅವು ತಂದೊಳ, ನೀ ತರ್ಬಡ. ಪ: ತಂದೊಳನ – ತಂದಿದ್ದಾರ? **ತಂದ್‌ಕೊಡೊಕು** /*tandikoḍoku*/ ತಂದು ಕೊಡಬೇಕು. should bring. ವಾ: ಮೈಸೂರ್ ಪಾಕ್ ಬೇಕ್‌ತ ಕೇಳ್ತಿತ್ ತಂದ್ಕೊಡೊಕು. ಪ: ತಂದುಟ್ಟ್ – ತಂದಿದ್ದಾನೆ/ಳೆ

ತಂಪಾತ್ /*tampa:ti*/ ನಾ. ತಂಪಾಯಿತು. to cool down. ವಾ: ರಾಗಿ ಗಂಜಿ ಕುಡ್ದ ಮೇಲೆ ತಡಿ ತಂಪಾತ್.

ತಂಬ /*tamba*/ ಕ್ರಿ. 1. ತಾ, 2. ತೆಗೆದುಕೊಂಡು ಬಾ. 1.

bring, 2. bring it. ವಾ: ಕುಡೆಕೆ ಎಂತಾರ್ ತಂಬ ಬೊಚ್ಚಿ ಸತ್ತದೆ.

ತಂಬಟೆ /*tambaṭɛ*/ ನಾ. 1. ತಮಟೆ, 2. ತಂಬಟ, 3. ಒಂದು ರೀತಿಯ ಚಪ್ಪಟೆಯಾದ ಚರ್ಮವಾದ್ಯ. 1. a small drum, used while making an announcement or proclamation, 2. a tambourine, 3. small frame drum, with drum skin on a cicular wooden frame. ವಾ: ಕೆಮಿದ್ ತಂಬಟೆಗೆ ಪಿನ್ನ್ ಹಾಕಿಕಾದ್.

ತಂಬಿಟ್ಟು /*tambiṭṭu*/ ನಾ. ಹುರಿದ ಅಕ್ಕಿಹುಡಿ ಮತ್ತು ಬಾಳೆಹಣ್ಣು ಮಿಶ್ರಿತ ಉರುಟಾದ ಉಂಡೆ, 2. ಕುಸಲಕ್ಕಿ ಹುರಿದು, ಬಾಳೆಹಣ್ಣು, ತೆಂಗಿನ ಕಾಯಿ,ಏಲಕ್ಕಿ,ಎಳ್ಳು,ತುಪ್ಪ ಹಾಕಿ ತಯಾರಿಸಿದ ತಿಂಡಿ, 2. ಹುತ್ತರಿ ದಿನ ಮಾಡುವ ಕೊಡಗಿನ ಶೈಲಿಯ ವಿಶೇಷ ತಿನಿಸು. 1. a round sweet dish made of roasted rice flour, banana, jaggery, coconut, and ghee, 2. a sweet dish made during the harvest festival in Kodagu. **ತನಗೆ ತಾನೆ ತಂಬಿಟ್ಟಿಗೆ ಜೇನೆ(ನು).** ವಾ: ಪಚ್ಚೆಬಾಳೆ ಹಣ್ಣ್ ಗೆ ತಂಬಿಟ್ಟ್ ಹೊಡಿನ ಹಾಕಿ ತಂಬಿಟ್ಟು ಮಾಡ್‌ದು. ಪ: ತಂಬಿಟ್ಟ್

ತಂಬಿನಕ್ಕಿ /*tambinakki*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕಳಂಜ ಗ್ರಾಮದ ಜಾಗ. a locality in Kalanja village in Sullia Taluk of Dakshina Kannada District.

ತಂಬಿನಡ್ಕ /*tambinaḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕೊಲ್ಲಮೊಗ್ರು ಗ್ರಾಮದ ಜಾಗ. a locality in Kollamogru village in Sullia Taluk of Dakshina Kannada District.

ತಂಬಿಲ /*tambila*/ ನಾ. ಭೂತಗಳಿಗೆ ಎಡೆ ಇಡುವ ಆಚರಣೆ. an offering to the deity (Bhuta). ವಾ: ತಂಬಿಲ ಇಸುದು.

ತಂಬು ಊರು /*tambu u:ru*/ ನಾ. 1. ನೆಲೆ ನಿಲ್ಲು, 2. ವಾಸಿಸು. 1. to settle, 2. to live. ವಾ: ಒಂದ್ ಕಡೆ ತಂಬು ಊರು.

ತಂಬ್ಲುಪಾಜೆ /*tamblupa:je*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮಡಪ್ಪಾಡಿ ಗ್ರಾಮದ ಜಾಗ. a locality in Madappadi village in Sullia Taluk of Dakshina Kannada District.

ತಕ /*taka*/ ಕ್ರಿ. ತೆಗೆದುಕೊ. take. **ಆರತಿ ತಕಂಡ್ರೆ ಉಷ್ಣ ತೀರ್ಥ ತಕಂಡ್ರೆ ಶೀತ(ಗಾ).** ವಾ: ಬಿಸಿ ರೊಟ್ಟಿ ಕಾದುಟು ಬಾ ತಕ. ಪ: ತಕ ಬಾ – ತೆಗೆದುಕೊಂಡು ಬಾ. **ತಕಂಡನ** /*takanḍana*/ ತೆಗೆದುಕೊಂಡೆಯಾ? did you take it? ವಾ: ಉಂಬಕೆ ಆತ್, ಬಟ್ಲ್ ತಕ ಮಜ್ಜ. ಪ: ತಕಂಡವೆ – ತೆಗೆದುಕೊಳ್ಳುತ್ತಾರೆ; ತಕಂಡುಟ್ಟು – ತೆಗೆದು ಕೊಂಡಿದ್ದಾಳೆ(ನೆ); ತಕಂಡೇ – ತೆಗೆದುಕೊಂಡೆ; ತಕಂಡುಟ್ಟು – ತೆಗೆದು ಕೊಂಡಿದ್ದಾಳೆ(ನೆ); ತಕಂಡ್ – ತೆಗೆದುಕೊಂಡು. **ತಕಂಡಾ** /*takanḍa:*/ ತೆಗೆದುಕೊಂಡೆಯಾ? did you take it? ವಾ: ಬಳೆ ತಕಂಡಾ? ಪ: ತಕಂಡೆ – ತೆಗೆದುಕೊಂಡೆ; ತಕಂಡೋಗಿ – ತೆಗೆದುಕೊಂಡು ಹೋಗಿ; ತಕಂಡ್ಬರೊಕು – ತೆಗೆದುಕೊಂಡು ಬರಬೇಕು; ತಕಂಡ್‌ಹೋತ್ – ತೆಗೆದುಕೊಂಡು ಹೋದನು/ಳು; ತಕಂಡ್‌ಬಾತ್ – ತೆಗೆದುಕೊಂಡು ಬಂದನು/ಳು. **ತಕಂಬ** /*takamba*/ ತೆಗೆದುಕೊಳ್ಳುವ. let us take. **ತಿಂಬೊದು ಉಂಬೊದು ನೆಂಟಾಚಾರ ಕೊಡ್ದು ತಕಂಬೊದು ಲೆಕ್ಕಾಚಾರ(ಗಾ).** ವಾ: ನೀ ಕಾರ್ ತಕಂಬುಡು. ಪ: ತಕಂಬಕೆ – ತೆಗೆದುಕೊಳ್ಳಲು. **ತಕಂಬಂಕಿಲ್ಲೆ** /*taganvaŋkillɛ*/ ತೆಗೆದುಕೊಳ್ಳುವ ಹಾಗಿಲ್ಲ. shouldn't take. **ತಕಂಬಂಗಿಲ್ಲೆ** /*taganvaŋgillɛ*/ ತೆಗೆದುಕೊಳ್ಳುವ ಹಾಗಿಲ್ಲ. shouldn't take. ವಾ: ಹಂಗೆಲ್ಲ ಎಡ್ದ ಕೈಲಿ ಕತಂಬಂಗಿಲ್ಲೆ. **ತಕಂಬದು** /*takambadu*/ 1. ತೆಗೆದುಕೊಳ್ಳುವುದು, 2. ಖರೀದಿಸುವುದು. 1. taking, 2. buying. **ಕುದ್‌ರೆ ಕೊಟ್ಟ್ ಬದನೆ ತಕಂಬದು(ಗಾ).** ವಾ: ನೀ ಯಾಗ ಅರ್ವೆ ತಕಂಬದು? **ತಕಂಬಾ** /*takamba:*/ ತೆಗೆದುಕೊಂಡು ಬಾ. bring it. ವಾ: ಹಣ್ಣ್ ಸೊಲ್ದ್ ತಕಂಬಾ. ಪ: ತಕಂಬಾಕಾಗದ್ – ತೆಗೆದುಕೊಂಡುಬರಬಾರದು; ತಕೊಂತ – ತೆಗೆದು ಕೋ ಎಂದು. **ತಕಂಬೊದು** /*takambɔdu*/ ತೆಗೆದುಕೊಳ್ಳುವುದು. taking/buying. ವಾ: ಸುಮ್ಮ ಸುಮ್ಮನೆ ತಕಂಬದು ಸೆರಿಯಾದುಲೆ. ಪ: ತಕಂಬೊದುಲೆ – ತೆಗೆದುಕೊಳ್ಳುವುದಿಲ್ಲ

ತಕಣಿ /*takaṇi*/ ಕ್ರಿ. ತೆಗೆದುಕೊಳ್ಳಿ, take it. ವಾ: ನೀವೆಂತ? ಪುಸ್ತಕ ದುಡ್ಡ್ ಕೊಟ್ಟ್ ತಕಣಿ. ಪ: ತಕಣಿಕಾದು – ತೆಗೆದುಕೊಳ್ಳಬಹುದು; ತಕಣೋಕು – ತೆಗೆದುಕೊಳ್ಳಬೇಕು; ತಕಣ್ತ್ – ತೆಗೆದುಕೊಂಡ;

ತಕಣಕು – ತೆಗೆದುಕೊಳ್ಳಬೇಕು; ತಕಣಕ್ – ತೆಗೆದುಕೊಳ್ಳಬಹುದು; ತಕಣಿ – ತೆಗೆದುಕೊಳ್ಳಿ, **ತಕಣಕಡ** /*takaṇa kaḍa*/ ತೆಗೆದುಕೊಳ್ಳಬೇಕಂತೆ. you may have to take it. ವಾ: ಹಣ್ಣ್ ತಕಣಕಡ ಮತ್ತೆ ಸಿಕ್ಕುದ್ಲೆ. ಪ: ತಕಣಕಾಗದ್ – ತೆಗೆದುಕೊಳ್ಳಬಾರದು. **ತಕಣಕಾಯ್ತ್** /*takaṇaka:yti*/ 1. ತೆಗೆದುಕೊಳ್ಳಬೇಕಿತ್ತು, 2. ಖರೀದಿಸಬಹುದಿತ್ತು. 1. should have taken it, 2. should have bought. ವಾ: ಪೂಜೆಗೆ ಹೂನ ತಕಣಕಾಯ್ತ್. **ತಕಬಾ** /*takaba:*/ ತೆಗೆದುಕೊಂಡು ಬಾ. bring it. ವಾ: ಕುಡೆಕೆ ಕಾಪಿ ತಕಬಾ. ಪ: ತಕಬರೊಕು – ತರಬೇಕು; ತಕಬರ್‌ಲಿ – ತೆಗೆದುಕೊಂಡು ಬರಲಿ. **ತಕೊನಿ** /*takoni*/ ತೆಗೆದುಕೊಳ್ಳಿ, take it/have it/buying it. ವಾ: ಅರ್ವೆ ಹೊಸದೇ ತಕೊನಿ. ಪ: ತಕೊನಿಕೆ – ತೆಗೆದುಕೊಳ್ಳಲಿಕ್ಕೆ; ತಕೊನೆಂತ – ತೆಗೆದುಕೋ ಎಂದು; ತಕೊನ್ತ್ – ತೆಗೆದುಕೊಂಡನು/ಳು; ತಕೊನ್ದು – ತೆಗೆದುಕೊಳ್ಳುವುದು; ತಕೊಂಡೋಗಿ – ತೆಗೆದುಕೊಂಡು ಹೋಗಿ. **ತಕ್‌ಂಡ್** /*takiṇḍi*/ ತೆಗೆದುಕೊಂಡು. taking/carrying. ವಾ: ಪಿಕಾಸಿನ ತಕ್‌ಂಡ್ ಆ ಕಡೆನೆ ಹೋದೊಲ. ಪ: ತಕಂಡಿರಿಕಾಕನ – ತೆಗೆದುಕೊಳ್ಳುತ್ತಿರುವಾಗ.

ತಕುಪುಕು /*takupuku*/ ನಾ. 1. ಚಡಪಡು, 2. ಭಯ. fear. ವಾ: ತಡಾಗಿ ಇಸ್ಕೂಲಿಗೆ ಹೋದ ದಿನ ತಕುಪುಕು ಆಗ್ತಿತ್.

ತಕ್ಕತಕ್ಕವ್ /*takkatakkavi*/ ನಾ. ಬೇಕು ಬೇಕಾದವರು. kith and kin or near and dear ones. ವಾ: ತಕ್ಕ ತಕ್ಕವ್‌ಕೆ ಮಣೆ ಹಾಕುದು.

ತಕ್ಕ[1] /*takka*/ ನಾವಿ. 1. ಸೂಕ್ತ, 2. ಅರ್ಹ. 1. suitable, 2. eligible. **ಅತ್ತೆಗೆ ತಕ್ಕ ಸೊಸೆ(ಗಾ).** ವಾ: ಅಪ್ಪಂಗೆ ತಕ್ಕ ಮಜ್ಜ. ಪ: ತಕ್ಕಂಗೆ – ಸರಿಹೊಂದುವಂತೆ

ತಕ್ಕ[2] /*takka*/ ನಾ. ದೇವಾಲಯದ ಮುಖ್ಯಸ್ಥರು. the head of a temple. ವಾ: ತಕ್ಕ ಮುಕ್ಯಸ್ತರೊಟ್ಟಿಗೆ ನಾವ್ ಮಾತಾಡ್ವೆ.

ತಕ್ಕಡ್ಡಿ /*takkaḍḍi*/ ನಾವಿ. ಅತಿಯಾದ ಚಟುವಟಿಕೆ ಯಿಂದ ಕೂಡಿದ ಹುಡುಗಿ. an active girl. ವಾ: ಅದೊಂದ್ ತಕ್ಕಡ್ಡಿ ಗೂಡೆ.

ತಕ್ಕರೆ /*takkarɛ*/ ನಾ. ದೇವಸ್ಥಾನದ ಮುಖ್ಯಸ್ಥರು. the head of a temple. ವಾ: ನಿನ್ನೆ ತಕ್ಕರೆ ಸಿಕ್ಕಿದೊ.

ತಕ್ಕ್‌ಡ್ಚಿ[1] /*takkiḍci*/ ನಾ. 1. ಬಜಾರಿ, 2. ಒಂದು ಬೈಗುಳ ಪದ. 1. quarrelsome girl/woman, 2. an expletive. ವಾ: ತಕ್ಕ್ ಡ್ಚಿಯೊಟ್ಟಿಗೆ ಬಾಯಿ ಕೊಡಿಕೆ ಆಕಿಲೆ.

ತಕ್ಕ್‌ಡ್ಚಿ[2] /*takkiḍci*/ ನಾವಿ. 1. ಹೆಂಗುಸರನ್ನು ಸಂಬೋಧಿಸುವಾಗ ಉಪಯೋಗಿಸುವ ಬೈಗುಳು ಪದ, 2. ಚಿಕ್ಕ ಹೆಣ್ಣು ಮಕ್ಕಳನ್ನು ಪ್ರೀತಿಯಿಂದ ಕರೆಯುವಾಗ ಉಪಯೋಗಿಸುವ ಪದ. 1. an abusive term used while addressing a woman, 2. an affectionate term used for a female child. ವಾ: ಅವುಳು ಬಾರಿ ತಕ್ಕ್‌ಡ್ಚಿ ಉಟ್ಟು. ಪ: ತಕ್ಕ್‌ಡ್ಚಿ ಪುಕ್ಕುಡ್ಚಿ(ಜೋಪ)

ತಕ್ಕ್‌ಳ್ಸ್ /*takkiḷsi*/ ನಾ. ಚಿಮುಕಿಸು. to sprinkle. ವಾ: ಗಂಜಲ ತಕ್ಕ್‌ಳ್ಸ್ ಮನೆ ಸುದ್ದ ಆಗಲಿ. ಪ: ತಕ್ಕ್‌ಳ್ಸುದು – ಚಿಮುಕಿಸುವುದು, ತಲಿಪುನೆ, ಹಲಿಪುನೆ(ತು)

ತಕ್‌ಡಿ /*takiḍi*/ ನಾ. ತಕ್ಕಡಿ. a weighing scale. ವಾ: ಎಲ್ಲ ದಿನ್‌ಸಿ ಸಾಮಾನ್, ತರ್‌ಕಾರಿ, ಹಣ್ಣ್ ತೂಗಿಕೆ ತಕ್ಡಿ ಬೇಕ್.

ತಗಡ್[1] /*tagaḍi*/ ನಾ. ಲೋಹದ ಹಾಳೆ. metal sheet. ವಾ: ತಗಡ್‌ನ ಎಲ್ಲಿ ಹಾಸುದು. ಪ: ತಗ್ಡ್

ತಗಡ್[2] /*tagaḍi*/ ನಾವಿ. 1. ಉಪಯೋಗಕ್ಕೆ ಬಾರದ, 2. ಏನೂ ಪ್ರಯೋಜನವಿಲ್ಲದ. 1. useless, 2. disadvantageous. ವಾ: ತಗಡ್ ಬುದ್ದಿ.

ತಗಡ್[3] /*tagaḍi*/ ನಾ. ತೌಡು. a metal sheet. ವಾ: ತಗಡ್ ತಕ ಹಂದಿಗಾಕ್, ಚೊಂಬು ತಕ ತಿಕ ತೊಳಿ.

ತಗಾದೆ /*taga:dɛ*/ ನಾ. ಏಪ. 1. ವ್ಯಾಜ್ಯ, 2. ಸಮಸ್ಯೆ, 3. ಲೋಪ, 4. ಟೀಕೆ. 1. a dispute, 2. a problem, 3. a fault, 4. criticism. ವಾ: ತಗಾದೆ ತೆಗಿಬಡ.

ತಗ್ಗ್ /*taggi*/ ಕ್ರಿ. ತಗ್ಗಾದ ಸ್ಥಳ. downward slope, a descent, a lower ground. **ತಗ್ಗಿದ್ದ ಕಡೆಗೇ ನೀರ್ ಹರಿಯದು(ಗಾ).** ವಾ: ತಗ್ಗ್ ಇದ್ದ ಕಡೆ ಎಚ್ಚರಲಿ ಹೋಕು. ಪ: ತಗ್ಗಿಕಾದ್. **ತಗ್ಗ್‌ಸ್** /*taggisi*/ 1. ತಗ್ಗಿಸು, 2. ಎತ್ತರ ಕಡಿಮೆ ಮಾಡು, 3. ಬಾಗಿಸು. 1. to shorten, 2. to reduce the height, 3. to bend.

ವಾ: ತೋರಣ ಕಟ್ಟಿದರ ಹಣ್ಣು ತಗ್ಗ್‌ಸ್. ಪ: ತಗ್ಸಿತ್ – ಬಾಗಿಸಿದನು

ತಗ್‌ಡ್ /*tagiḍi*/ ನಾ. 1. ತೌಡು, 2. ಅಕ್ಕಿಯ ಮೇಲ್ಪದರಿನ ಹುಡಿ. 1. husk of paddy, 2. dry outer cover of rice. ವಾ: ಬತ್ತ ಮಿಲ್ಲ್ ಮಾಡ್ಸಿಕನ ತಗ್‌ಡ್ ಸಿಕ್ಕಿದೆ.

ತಗ್‌ಡ್‌ಪುಡ /*tagiḍipuḍa*/ ನಾ. ತೌಡು ಬಣ್ಣದ ಒಂದು ಜಾತಿಯ ಚಿಕ್ಕ ವಿಷವಿಲ್ಲದ ಹಾವ್. a brown non-venomous snake. ವಾ: ತಗ್‌ಡ್ ಪುಡ ಒಂದ್ ಜಾತಿನ ಹಾವ್.

ತಗ್‌ಡ್‌ಬುಗ್‌ಡ್ /*tagidibugiḍi*/ ನಾವಿ. ಏನೂ ಇಲ್ಲ ಎಂದು ಹೇಳುವ ಪದ. term indicating ‘nothing’.

ತಗ್‌ಲ್ /*tagili*/ ಕ್ರಿ. ಏಪ. 1. ತಗಲು, 2. ತಾಕು. 1. to touch, 2. to come into contact. **ಹುಡುಕುವ ಹಗ್ಗ ಕಾಲಿಗೆ ತಗ್‌ಲ್‌ದಂಗೆ(ಗಾ).** ವಾ: ನಡೆಕನ ನೋಡಿಕ ಕಾಲಿಗೆ ಮರ ತಗ್‌ಲ್‌ದು.

ತಜ್ಞಣೆಮಜ್ಞಣೆ /*taŋŋaṇɛmaŋŋaṇɛ*/ ನಾ. 1. ಒಯ್ಯಾರ, 2. ಒನಪು, 3. ಉಪಾಯವಾಗಿ ಕೇಳಿಕೊಳ್ಳು, 1. coquetry, 2. fashion, 3. scheming. ವಾ: ತಂಜಣೆ ಮಜ್ಞಣೆ ಮಾಡಿ ದುಡ್ಡು ಕೇಳಿಕಂಬೊದು.

ತಜಪ್ಪಿ /*tajappi*/ ಕ್ರಿ. 1. ಕೊಚ್ಚು, 2. ತುಂಡುಮಾಡು. 1. chopping, 2. to cut into pieces. ವಾ: ಹಕ್ಕಿಗ ಎಳ್ಸಂಡೆನ ತಜಪ್ಪಿ ತಜಪ್ಪಿ ಹಾಕೊಳೊ. ಪ: ತರಿಯೊದು

ತಟಪಟ[1] /*taṭapaṭa*/ ಅ. 1. ಹೆಚ್ಚು ಕಡಿಮೆ ಆಗುವುದು, 2. ತೊಂದರೆ ಉಂಟಾಗುವುದು. 1. getting into trouble. 2. a troublesome situation. ವಾ: ಕೆಲ್‌ಸ ಎಲ್ಲ ತಟಪಟ ಆತ್.

ತಟಪಟ[2] /*taṭapaṭa*/ ಅ. ಏನಾದರು ಸದ್ದಾಗುವಾಗ ಹೇಳುವ ಪದ (ನಡೆಯುವ ಸದ್ದು). an onomatopoeic expression for sound. ವಾ: ಎತ್ತ್ ಕೆಮಿನ ತಟಪಟ ಬಡ್‌ಕಂತ್.

ತಟ್ಟ /*taṭṭa*/ ನಾ. ಚಿನ್ನದ ಕೆಲಸವಾಡುವವ. jewelry maker. ವಾ: ಮುರ್‌ದ ವಾಲೆನ ಸೆರಿ ಮಾಡಿಕೆ ತಟ್ಟನ ಹಕ್ಕಲೆ ಕೊಟ್ಟೊಳೆ.

ತಟ್ಟನೆ /*taṭṭanɛ*/ ನಾ. 1. ಒಮ್ಮಿಂದೊಮ್ಮೆಲೆ, 2. ತಕ್ಷಣ. 1. all of a sudden, 2. immediately. ವಾ: ತಟ್ಟನೆ ಗ್ಯಾನ ಬಾತ್.

ತಟ್ಟಿ[1] /*taṭṭi*/ ನಾ. 1. ತೆಂಗಿನ ಮರದ ಸೋಗೆಯಿಂದ ಹೆಣೆದ ಚಾಪೆ 2. ಮಡಿಲಿನ ತಡಿಕೆ. 1. woven coconut mat, using coconut leaf/fronds, 2. a screen made out of coconut leaf. ವಾ: ಚಪ್ಪರಕೆ ತಟ್ಟಿ ಹಾಕಿರೆ ತಂಪು ಇದ್ದದೆ. **ತಟ್ಟಿಕಟ್ಟುದು** /*taṭṭikaṭṭudu*/ ಬಿದಿರಿನ ಬೇಲಿ ಕಟ್ಟುವುದು. making a bamboo fence. ವಾ: ಉಗ್ಗಪ್ಪ ತಟ್ಟಿ ಕಟ್ಟುದು ಮಾಡ್ತಿದ್ದೊ.

ತಟ್ಟಿ[2] /*taṭṭi*/ ನಾ. ಬಿದಿರಿನಿಂದ ಮಾಡಿದ ಬಾಗಿಲು. a bamboo door. ವಾ: ಗುಡ್ಲಕೆ ತಟ್ಟಿ ಕಟ್ಟಿದ್.

ತಟ್ಟಿ[3] /*taṭṭi*/ ನಾ. 1. ಹಸಿ ವಸ್ತುಗಳನ್ನು ಒಣಗಿಸಲು ಬಳಸುವುದು, 2. ವಾಟೆ ಅಥವಾ ಬೆತ್ತದಿಂದ ತಯಾರಿಸಿದ ಚಾಪೆ. 1. used in drying things, 2. a bamboo mat (a flat board) used in drying things. ವಾ: ಬೆಸಗೆ ಮೇಲಿಸಿಕೆ ತಟ್ಟಿ ಕಟ್ಟುದು.

ತಟ್ಟೆ[1] /*taṭṭɛ*/ ನಾ. ಅಡಿಕೆಮರ ಅಥವಾ ಬಿದಿರನ್ನು ಸೀಳಿ ತಯಾರಿಸುವ ಸಲಾಕೆ. a spear made of bamboo or areca tree with sharp edge. ವಾ: ಬೇಲಿಗೆ ಕಮ್ಮನ ತಟ್ಟೆ ಹಾಕಿಕಾದೆ. **ತಟ್ಟೆಬಿಲ್ಲ್** /*taṭṭɛbilli*/ 1. ಬಿದಿರಿನ ತಟ್ಟೆಯಿಂದ ಮಾಡಿದ ಬಿಲ್ಲು, 2. ಬಿದಿರಿನಿಂದ ತಯಾರಿಸಿದ ಗಾಂಡೀವ (ಬಿಲ್ಲು). 1. bow made of bamboo strip, 2. a bamboo bow. ವಾ: ತಟ್ಟೆ ಬಿಲ್ಲ್ ಹಿಡ್ಕಂಡ್ ನಿತ್ತದ್.

ತಟ್ಟೆ[2] /*taṭṭɛ*/ ನಾ. ದನಗಳ ಕುತ್ತಿಗೆಗೆ ಗಂಟೆಯ ಹಾಗೆ ಮರದಲ್ಲಿ ಮಾಡಿ ಹಾಕಲಾಗಿರುತ್ತದೆ. a piece of wood of some length tied around the neck of a cattle. ವಾ: ದನದ ಕುತ್ತಿಗೆಗೆ ತಟ್ಟೆ ಕಟ್ಟೊಕು, ಬೇಲಿ ಹಾರ್‌ರೆ ಗೊತ್ತಾದೆ. ಪ: ಮೆಂಟೆ

ತಟ್ಟ್[1] /*taṭṭi*/ ಕ್ರಿ. 1. ತಟ್ಟುವುದು, 2. ಹೊಡೆದು ಮುಟ್ಟುವುದು. 1. to pat, 2. to beat, 3. to touch. ವಾ: ತಲೆಗೆ ತಟ್ಟ್.

ತಟ್ಟ್[2] /*taṭṭi*/ ನಾ. ಸಮತಟ್ಟಾದ ಪ್ರದೇಶ. plains/ plain ground. ವಾ: ತಟ್ಟ್ ಲಿ ದನಗಳ ಮೇಯಕೆ ಬುಟ್ಟದ್ ಹೋಗಿ ಬನ್ನೆ. ಪ: ತಟ್ಟ್ ಜಾಗೆ – ಸಮತಲ ಪ್ರದೇಶ, ತಟ್ಟ್ ಮಾರ್ಗ – ಸಮ ತಟ್ಟಿನ ದಾರಿ. **ತಟ್ಟ್ ಮಾಡ್** /*taṭṭi ma:ḍi*/ ಸಮತಟ್ಟು ಗೊಳಿಸುವುದು. to

level the ground. ವಾ: ಮನೆ ಕಟ್ಟಿಕೆ ನೀಕ ತೆಗ್‌ದ್ ತಟ್ಟ್ ಮಾಡಿಯೊಳೊ.

ತಟ್ಟ್^{3} /*taṭṭi*/ ಕ್ರಿ. ತಟ್ಟು. to flatten/to pat. ವಾ: ರೊಟ್ಟಿ ತಟ್ಟಿತ್. **ತಟ್ಟಿಕನ್ತ್** /*taṭṭikanti*/ ತಟ್ಟಿಕೊಂಡನು/ಳು. he/she patted. ವಾ: ಬೆನ್ನ್ ತಟ್ಟಿಕನ್ತ್. **ತಟ್ಟಿಕಾದ್** /*taṭṭika:di*/ ತಟ್ಟಬಾರದು. don't pat/knock. ವಾ: ಹಂಗೆ ಜೋರಾಗಿ ಬಾಗ್ಲ್ ತಟ್ಟಿಕಾದ್. ಪ: ತಟ್ಟಿತ್ – ತಟ್ಟಿದನು/ಳು; ತಟ್ಟಿದೊ – ತಟ್ಟಿದರು; ತಟ್ಟುದು – ತಟ್ಟುವುದು; ತಟ್ಟುವೆ – ತಟ್ಟುತ್ತಾರೆ

ತಡ /*taḍa*/ ಕ್ರಿವಿ. ಸಮಯ ದಾಟಿಬರುವುದು, ತಡವಾಗಿಬರ. 1. to exceed the time, 2. to go late. ವಾ: ನೆಂಟ್ರ್ ಬಾಕನ ಒಂದ್ ಗಂಟೆ ತಡ ಅತ್, ಬೇಗ ತಯಾರ್ ಮಾಡಿ ಮುಹೂರ್ತ ಮೀರ್ದ್. ಪ: ತಡಾತ್

ತಡಮೆ^{2} /*taḍamɛ*/ ನಾ. 1. ಬೇಲಿ, ಗೋಡೆ ಮೊದಲಾದುವುಗಳ ಮಧ್ಯಭಾಗದಲ್ಲಿ ಮನುಷ್ಯರು ದಾಟಿಹೋಗಲು ಅನುಕೂಲವಾಗುವಂತೆ, ಆದರೆ ಜಾನುವಾರುಗಳ ಪ್ರವೇಶಕ್ಕೆ ಅವಕಾಶ ಕೊಡದಂತೆ ಅಡ್ಡಕೋಲಿನಿಂದ ನಿರ್ಮಿಸಲ್ಪಟ್ಟ ರಚನೆ, 2. ತೊಡಮೆ, 3. ದಾಟುಮೆಟ್ಟು. 1. a stile, 2. a narrow gate or passage with wooden or bamboo poles fixed horizontally in the fence or compund wall to enable people to cross it while forming a barrier to cattle, 3. a barrier. ವಾ: ತಡಮೆ ಇದ್ದರೆ ಬೇಲಿ ದಾಟಿಕೆ ಸುಲಬ.

ತಡಿ^{1} /*taḍi*/ ನಾವಿ. 1. ಬೊಜ್ಜು ಮೈಕಟ್ಟು, 2. ದೊಡ್ಡ ಶರೀರ. 1. obese, 2. a fat body. **ಎಡೇಲಿ ಬಂದ ತಡಿ ಎಡೇಲಿ ಹೋದೆ(ಗಾ).** ವಾ: ಒಳ್ಳ ತಡಿ ಬಂದುಟು ಅಂವಂಗೆ.

ತಡಿ^{2} /*taḍi*/ ನಾ. 1. ದೇಹ, 2. ಶರೀರ. 1. body, 2. human frame. ವಾ: ತಡಿಗೆ ಸುಕ ಇಲ್ಲೆ. ಪ: ತಡಿಯ – ದೊಡ್ಡ ಶರೀರದವ

ತಡಿ^{3} /*taḍi*/ ಕ್ರಿ. ತಡೆ. stop. ವಾ: ಅವಳ ಹೋಗದಾಂಗೆ ತಡಿ. **ತಡಿಯಕೆ ಆಗದ** /*taḍiyakɛ a:gada*/ ಸಹಿಸಲು ಅಸಾಧ್ಯವಾದ. intolerable. ವಾ: ತಡಿಯಕೆ ಆಗದ ತಲೆಬೇನೆ. **ತಡಿಯಕೆಬೊತ್ತ್** /*taḍiyakɛbotti*/ 1. ತಡೆಯಬಾರದು, 2. ಸಹಿಸಲು ಅಸಾಧ್ಯ. 1. shouldn't stop, 2. can't tolerate. ವಾ: ಇರುವ ಒಂದೆರ್‌ಡ್ ಮಕ್ಕಳ ತಡೆಕೆ ಬೊತ್ತ್, ಒಮ್ಮೆ ಇಸ್ಕೂಲ್ ಸುರಾಗಿದ್ದರೆ. **ತಡಿಯಕ್** /*taḍiyakɨ*/ 1. ತಡಿಯು, 2. ವಿರೋಧ ಮಾಡು. 1. to stop, 2. to oppose. ವಾ: ಗಲಾಟೆ ತಡಿಯಕೆ ಹೋಗಿ ಬೈಸಿಕಂಡದ್.

ತಡಿಯಪ್ಪನವರು /*taḍiyappanavaru*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ತಡೆ^{1} /*taḍɛ*/ ಕ್ರಿ. ಬೇಲಿಯ ಬಾಗಿಲು. gate at the fence. ವಾ: ದನಗ ತಡೆ ಹಾರಿ ಬಂದವೆ.

ತಡೆ^{2} /*taḍɛ*/ ನಾ. ಮರಕ್ಕೆ ಹಬ್ಬುವ ಬೇರು ರೂಪದ ದಪ್ಪ ಬಳ್ಳಿಗೆ ಹೇಳುವ ಪದ. a creeper/a climber that grows on trees. ವಾ: ಮರಕೆ ತಡೆ ಬಂದುಟು.

ತಡೆ^{3} /*taḍɛ*/ ಕ್ರಿ. 1. ತಡಮಾಡು. 2. ವಿಳಂಬವಾಗು. 3. ಉಳಿ. 4. ನಿಲ್ಲಿಸು. 5. ಸೈರಿಸು. 6. ಹೆಚ್ಚುಕಾಲ ಬಾಳು. 7. ನಿಂತುಹೋಗು. 8. ಹಿಂದೆಗೆ, 9. ಅಡ್ಡ, 10. ವಿರೋಧಿಸು. 1. procrastinate. 2. delay. 3. chisel. 4. stop. 5. sign. 6. long live. 7. stand back. 8. back, 9. cross, 10. resist. ವಾ: ಹಳ್ಳಲಿ ಹೋವ ನೀರ್‌ಗೆ ತಡೆ ಹಾಕೊಳೊ. **ತಡೆಮಾಡ್** /*taḍɛma:ḍi*/ ಅಡ್ಡಿ ಮಾಡು. to block someone/ to trouble someone. ವಾ: ಕೆಲ್ಸ ಕೆ ತಡೆ ಮಾಡ್‌ದು.

ತಡೆಕಟ್ಟುದು /*taḍɛkaṭṭudu*/ ಕ್ರಿ. 1. ಮನೆಗೆ ತೆಂಗಿನ ಕಾಯಿ ಅಥವಾ ಭಸ್ಮ ರೂಪದಲ್ಲಿ ಮಂತ್ರವಾದಿಗಳಿಂದ ತಯಾರಿಸಿದ ರಕ್ಷೆ, ಇದನ್ನು ಪೂರ್ವ ಪಶ್ಚಿಮಾಭಿಮುಖವಾಗಿರುವ ತೆಂಗಿನಕಾಯಿಯನ್ನು ಮರದಿಂದ ಇಳಿಸಿ ನೆಲಕ್ಕೆ ತಾಗಿಸದೆ ಮಂತ್ರವಾದಿಗಳಿಗೆ ಕೊಟ್ಟರೆ, ಆತ ಅದನ್ನು ಮಂತ್ರಿಸಿ ಕೊಡುತ್ತಾನೆ, ಅದನ್ನು ತಂದು ಮನೆಯ ಬಾಗಿಲಲ್ಲಿ ಛಾವಣಿಯಲ್ಲಿ ಕಟ್ಟುತ್ತಾರೆ. 1. to tie a sanctified coconut to cast off the evil-eye at the door of one's house, 2. tying a sanctified copper plate to ward off the evil. ವಾ: ಮನೆ ಎದುರಿಗೆ ತಡೆ ಕಟ್ಟುದು.

ತಡೆತೆಗೆದು /*taḍɛtɛgɛdu*/ ಕ್ರಿ. ತುಂಬ ಕಷ್ಟನಷ್ಟ ಕೆಲಸ ಕಾರ್ಯಗಳಿಗೆ ಅಡ್ಡಿಗಳಾದಾಗ ದೇವಸ್ಥಾನದಲ್ಲಿ ಅಥವಾ ಜೋತಿಷ್ಯರಲ್ಲಿ ಪೂಜೆ ಮಾಡಿಸುವುದು. practice of offering prayer in the temple

officiated through the priest to solve a problem. ವಾ: ಕಡುವಾರ ತಡೆ ತೆಗೆದು.

ತಡ್ಂಬು /*taḍɨmbu*/ ನಾ. 1. ಹಿಂದಿನವರು ಕತ್ತಿ ತೂಗಿಕೊಳ್ಳಲು ಉಪಯೋಗಿಸುತ್ತಿದ್ದ ಕಂಚಿನ ಸೊಂಟದ ಪಟ್ಟಿ, 2. ತೊಡಂಕ್(ತು). 1. a bronze girdle worn around the waist to hang the knife, 2. a girdle. ವಾ: ತಡ್ಂಬು ಸಿಕ್ಕಿಸಿಕಂಡ್ ಹೋದೊ. ಪ: ಚೊಡ್ಂಕ್

ತಡ್ಕ[1] /*taḍka*/ ಕ್ರಿ. 1. ತಡೆದುಕೊ, 2. ಸಮಧಾನಿಸು, 3. ಸಹಿಸಿಕೊ. 1. to control, 2. to console, 3. to tolerate. ವಾ: ಹಣ್ಣು ದಿನ ತಡ್ಕ, ಬೇನೆ ಕಮ್ಮಿಯಾದೆ. ಪ: ತಡ್ಕಂಡ್ – ತಡೆದುಕೊಂಡು/ಸಹಿಸಿಕೊಂಡು; ತಡ್ಕಂಬಕೆ – ತಡೆದುಕೊಳ್ಳಲು. **ತಡೆಕಾದುಲೆ** /*taḍɛka:dulɛ*/ ತಡೆಯಲಾಗುವುದಿಲ್ಲ. can not tolerate anymore. ವಾ: ಇಂದ್ ಕುಸಿಲಿ ತಡೆಯಕಾಲೆ. **ತಡೆಕೆ** /*taḍɛkɛ*/ 1. ತಡೆ, 2. ನಿರ್ಬಂಧ, 3. ನಿಲ್ಲಿಸಲು. 1. to stop, 2. to ban, 3. to stop. ವಾ: ಜಗಳ ತಡೆಕೆ ಹೋಗಿದ್ದೊ. **ತಡೆಯಕಾಲೆ** /*taḍɛyaka:lɛ*/ ತಡೆಯಲಾಗುವುದಿಲ್ಲ. can not tolerate anymore/intolerable. ವಾ: ಇಂದ್ ಕುಸಿಲಿ ತಡೆಕಾದುಲೆ. **ತಡೆವ** /*taḍɛva*/ 1. ಸಹಿಸುವ, 2. ತಡೆದುಕೊಳ್ಳುವ. 1. to tolerate, 2. to bear. ವಾ: ಬೇನೆ ತಡೆವ ಸಕ್ತಿ ಇಲ್ಲೆ. **ತಡೆಹಿಡ್ದೊ** /*taḍɛhiḍdɔ*/ 1. ತಡೆಹಿಡಿದರು, 2. ನಿಲ್ಲಿಸಿದರು. 1. prevented, 2. stopped. ವಾ: ಕೆಲ್ಸನ ಹಣ್ಣು ದಿನ ತಡೆಹಿಡ್ದೊ.

ತಡ್ಕ[2] /*taḍka*/ ನಾ. ಕೋಳಿ ಮಾಂಸದ ವಿಶೇಷ ಅಡುಗೆ. chicken curry. ವಾ: ತಡ್ಕ ಮಾಡಿಯನ?

ತಡ್ಕೆ /*taḍkɛ*/ ನಾ. ಬಿದಿರಿನ ತಟ್ಟೆ. a bamboo platter. ವಾ: ತಡ್ಕೆ ಮುಚ್ಚಿಸ್.

ತಡ್ಗುಣಿ /*taḍguṇi*/ ನಾ. 1. ತಡಗುಣಿ, 2. ಒಂದು ಬಗೆಯ ದ್ವಿದಳ ಧಾನ್ಯ, 3. ಅಲಸಂದೆ ಕಾಳು. 1. cowpea, a legume, 2. a leguminous seed 3. black eyed beans. ವಾ: ತಡ್ಗುಣಿ ಕಾಳ್ ಹಾಕಿ ಗಸಿ ಮಾಡ್‌ದ್.

ತಡ್ತ್ /*taḍti*/ ನಾ. 1. ನಿಲ್ಲಿಸಿದನು/ಳು, 2. ತಡೆದನು/ಳು. 1. he/she stopped, 2. he/she prevented. ವಾ: ದಾರಿಲಿ ಬಾಕನ ತಡ್ತ್.

ತಡ್ದ /*taḍda*/ ಕ್ರಿ. 1. ತಡೆ ಹಿಡಿದೆಯಾ?, 2. ನಿರ್ಬಂಧ. 1. did you stop, 2. to forbid. ವಾ: ಬಾಕನ ತಡ್ದ ನೀ? ಪ: ತಡ್ದವೆ – ತಡೆಯುತ್ತಾರೆ; ತಡ್ದ್ – ತಡೆದು

ತಡ್ಪೆ[1] /*taḍɨpɛ*/ ನಾ. ನದಿ ದಾಟಲು ಮರ ಅಥವಾ ಬಿದಿರುಗಳನ್ನು ಅಡ್ಡಲಾಗಿ ಬಳಸಲಾಗುತ್ತದೆ. crossing a river using a small bridge made of wooden planks or bamboo poles. ವಾ: ತಡ್‌ಪೆಲಿ ನಡ್ಕಂಡ್ ಬಾದು. ಪ: ತಡಮೆ(ತು)

ತಡ್ಪೆ[2] /*taḍpɛ*/ ನಾ. 1. ಮೊರ, 2. ಅಕ್ಕಿ, ಗೋಧಿ ಒಣಗಿಸಲು ಬಳಸುವ ಅಗಲವಾದ ಬಿದಿರಿನ ವಸ್ತು. 1. a winnowing fan, 2. a winnowing fan used in drying rice, wheat, etc. **ಗರ್ತಿ ಹೆಂಗ್ಸ್ ಮಿಂಡ ಬಾತ್ ತ್ತೇಳಿ ತಡ್ಪೆನ ಅಡ್ಡಕ್ಕೆ ಮಡ್ಗಿತ್ ಗಡ(ಗಾ).** ವಾ: ತಡ್ಪೆಲಿ ತೊಳ್ದ ಅಕ್ಕಿನ ಒಣ್ಗಿಕಿಸುದು. ಪ: ತೊಡ್ಪೆ

ತಡ್ಮೆ /*taḍmɛ*/ ನಾ. 1. ಬೇಲಿ ದಾಟಲು ಹಾಕುವ ಚಿಕ್ಕ ಪಾಲ, 2. ಬೇಲಿಯ ನಡುವೆ ದಾಟುವುದಕ್ಕೆ ಇರುವ ತಡೆ. 1. a stile, 2. a small crossing post in the middle of the hedge. ವಾ: ತಡ್ಮೆಲಿ ದಾಟಿರಾತ್.

ತಡ್ಯಕಾದ್ಲೆ /*taḍyaka:dlɛ*/ ಕ್ರಿ. ತಡೆಯಲಸಾಧ್ಯ. impossible to stop. ವಾ: ಗಲಾಟೆ ತಡ್ಯಕಾದ್ಲೆ.

ತಡ್ಯಕೆ /*taḍyakɛ*/ ಕ್ರಿ. 1. ತಡೆಯಲಿಕ್ಕೆ. to stop. ವಾ: ಹೊಡೆದರ ತಡ್ಯಕೆ ಹೋದರೆ ಬೊಯ್ದವೆ. ಪ: ತಡ್ಯಕ್ – ತಡೆಯಬಹುದು; ತಡ್ಯೊಕು – ತಡೆಯಬೇಕು; ತಡ್ಯೋದುಲ್ಲೆ – ತಡೆಯುವುದಿಲ್ಲ

ತಡ್ರಿಸ್ /*taḍrisikaṇḍɨ* / ಕ್ರಿ. 1. ತಡವರಿಸು, 2. ಹುಡುಕು, 3. ತಡಕಾಡು, 4. ದಡದಡಿಸು, 5. 1. to stammer, 2. to search, 3. to frisk, 4. to stutter. ವಾ: ಅವ್ವ ಕತ್ತಲೆಲಿ ತಡ್ರಿಸಿಕಂಡ್ ಹೋದು.

ತಡ್ಲೆಮರ /*taḍlɛmara*/ ನಾ. ಇದೊಂದು ಸೌದೆಯಲ್ಲಿ ಬಳಕೆ ಮಾಡುವ ಮರ. ಹೆಣ ಸುಡಲು ಈ ಮರವನ್ನು ಬಳಸಲಾಗುತ್ತದೆ. ಹಸಿಯಲ್ಲೇ ಈ ಮರ ಉರಿಯಬಲ್ಲದು. a firewood tree, usually used in cremation. It burns even when it is not completely dry. ವಾ: ತಡ್ಲೆ ಮರ ಹೆಣ ಸುಡಿಕೆ ಒಳ್ಳದಾದೆ.

ತಡ್ಸಲ್ ಮರ /*taḍsilɨ mara*/ ನಾ. 1. ಪೀಠೋಪಕರಣಕ್ಕೆ ಒಳ್ಳೆಯ ಮರ, 2. ಆನೆಗಳ ಆಹಾರಕ್ಕೂ ಒಳ್ಳೆ ಮರ. 1. a tree used in making

furniture, 2. elephants eat the leaves of this tree. ವಾ: ತಡ್ಸ್‌ಲ್ ಮರದ ಚಕ್ಕಳನ ನೀರಿಗೆ ಹಾಕಿ ಆ ಲೋಳೆನ ತಲೆಗೆ ಹಾಕಿರೆ ತಂಪಾದೆ.

ತಡ್‌ಸ್‌ಲ್ ಹಣ್ಣ್ /*taḍisili haṇṇi*/ ನಾ. ಕಾಡು ಹಣ್ಣು. a wild fruit. ವಾ: ಆಸೆಗೆ ಒಂದ್ ತಡ್‌ಸ್‌ಲ್ ಹಣ್ಣ್ ಸಿಕ್ಕಿತ್.

ತಣ್ಕಂಡ್ /*taṇkaṇḍi*/ ನಾ. ತಣ್ಣಗಾಗಿ. cold. ವಾ: ಬಟ್ಲ್‌ಗೆ ಹಾಕಿಸಿದ ಕಡ್ಂಬಿಟ್ಟ್ ತಣ್ಕಂಡ್ ಉಟ್ಟು. ಪ: ತಣ್ಣಂಗೆ – ತಣ್ಣಗೆ

ತಣ್ಯಣ /*taṇyaṇa*/ ನಾ. 1. ತಂಗಳು ಅನ್ನ, 2. ಬಿಸಿಯಿಲ್ಲದ ಅನ್ನ, 3. ರಾತ್ರಿ ಉಳಿದ ಅನ್ನ. 1. leftover rice of yesterday, 2. cold rice, 3. leftover rice of last night. **ರಾತ್ರೆ ಉಣದಂವನೊಟ್ಟಿಗೆ ಮಾರನೇ ದಿನ ತಣ್ಯಣ ಕೇಳ್ದಾಂಗೆ(ಗಾ). ತಣ್ಯಣ ಉಂಬವಂಗೆ ಪಾಯಸ ಬೇರೆ(ನು).**ವಾ: ತಣ್ಯಣಕೆ ಮೊಸ್ರ್ ಹಾಕಿ ಉಂಡರೆ ಲಾಯ್ಕ್. ಪ: ತಣ್ಯಣ ಗಂಜಿ. ಪ: ತಣ್ಯಾಣ

ತಣ್ಸ್ /*taṇsi*/ ಕ್ರಿ. 1. ತಣಿಸು, 2. ತಣ್ಣಗಾಗಿಸು, 3. ತಣಿದು. 1. cold, 2. to cool down, 3. cooled. ವಾ: ಕಾಪಿನ ತಣ್ಸ್. ಪ: ತಣ್ಸಕ್

ತತ್ತೇರಿ /*tatte:ri*/ ನಾ. ಅಸಂಬದ್ಧ ಕೆಲಸವಾದಾಗ ಹೇಳುವ ಶಬ್ದ. an expression used to indicate unhappiness. ವಾ: ತತ್ತೇರಿ ಬಜ್ಜಪಟ್ಟದೆಲ್ಲ ಹಾಳಾತ್.

ತದುಕು /*taduku*/ ಕ್ರಿ. ಹೊಡೆಯು. to beat. ವಾ: ಸಿಟ್ಟ್ ಬಂದ್ ಒಂದ್ ತದ್ಕಿದೆ.

ತನಿಗೆ /*tanigɛ*/ ಸನಾ. 1. ತನಗೆ, 2. ನನಗೆ. 1. for me, 2. for myself. ವಾ: ಕೊಟ್ಟದ್ ತನಿಗೆ ಮುಚ್ಚಿಟ್ಟದ್ ಪರರಿಗೆ.

ತನಿಯಪ್ಪ /*taniyappa*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. masculine given name. ಪ: ತನಿಯ

ತನ್ನ /*tanna*/ ಸನಾ. 1. ತನ್ನ, 2. ನನ್ನ. 1. one's 2. mine. ವಾ: ತನ್ನ ತನನ ಉಳ್ಸಿಕಣೊಕು. ಪ: ತನ್ನವ್ – ತನ್ನವರು, ತನ್ನಾಂಗೆ – ತನ್ನಂತೆ

ತನ್ನತ್ರನೇ /*tannatranɛ:*/ ಸನಾ. ತನ್ನ ಹತ್ತಿರವೇ. with me/near oneself. ವಾ: ತನ್ನತ್ರನೇ ಸುಳ್ಳೇಳ್ದಲ.

ತನ್ನಸ್ಟಕೆ /*tannasṭakɛ*/ ಸನಾ. 1. ತನ್ನಷ್ಟಕ್ಕೆ, 2. ತನಗೆ ತಾನೆ. 1. on its own, 2. by oneself. ವಾ: ತನ್ನಸ್ಟಕೆ ತಾನೇ ಮಾತಾಡಿಕಂಡವೆ.

ತನ್ನಾಲೆ /*tanna:lɛ*/ ಕ್ರಿ. 1. ತನ್ನಷ್ಟಕ್ಕೆ, 2. ತಂತಾನೆ, 3. ಅದರಷ್ಟಕ್ಕೆ. 1. on its own, 2. by oneself, 3. on one's own. ವಾ: ಆ ದೈ ತನ್ನಾಲೆ ಅಳ್ದ್ ಹೋತ್.

ತನ್ನಿ /*tanni*/ ಕ್ರಿ. ತೆಗೆದುಕೊಂಡು ಬನ್ನಿ. you bring it (you-singular). ವಾ: ರವೆ ತನ್ನಿತ ಹೇಳ್ಯೊಳೆ, ಬಾಕನ ತಾವೊ. ಪ: ತನ್ನಿಂತ – ತೆಗೆದುಕೊಂಡು ಬನ್ನಿಯೆಂದು

ತನ್ನಿರೋ /*tanniro:*/ ಕ್ರಿ. ತೆಗೆದುಕೊಂಡು ಬನ್ನಿರೊ. you bring it (you-plural). ವಾ: ಮಣ್ಣ್‌ದ್ ಗಣ್ಪತಿನ ಎತ್ತಿಕಂಡ್ ತನ್ನಿರೋ.

ತನ್ನೆ /*tannɛ*/ ಕ್ರಿ. 1. ತರುತ್ತೇನೆ, 2. ತರುವೆನು. 1. I will bring, 2. I shall bring. **ಹಾಲನ್ನ ಉಂಡ್ ಹಾಸ್ ಮಗಳೇ ತೇಳಿರೆ, ಹೋಗಿ ಬರುವವರ ನೋಡಿಕ್ಕಂಡೆ ಮೂರು ಸಲ ನೀರ್ ತನ್ನೆ ತೆಳ್ತ್(ಗಾ).** ವಾ: ಅಕ್ಕಿನ ನಾಳೆ ಬಾಕನ ತನ್ನೆ ಬಲಾ.

ತನ್ನೆತಾ /*tannɛta:*/ ಕ್ರಿ. ತರುತ್ತೇನೆಂದು. they said that they will bring. ವಾ: ತನ್ನೆತಾ ಹೇಳಿದ್ದೆ.

ತನ್ನೆತ್ತರ /*tannɛttara*/ ನಾ. 1. ಆಳೆತ್ತರದ, 2. ನಮ್ಮ ಸಮಾನ ಬೆಳೆದ. 1. as tall as a grown up man, 2. of the same height. ವಾ: ತನ್ನೆತ್ತರ ಬೆಳ್ದ ಮಕ್ಕಳೊಟ್ಟಿಗೆ ಸಮಾದಾನಲಿ ಮಾತಾಡೊಕು.

ತಪಲೆ /*tapalɛ*/ ನಾ. 1. ತಪ್ಪಲೆ, 2. ಸಣ್ಣ ಆಕಾರದ ದುಂಡನೆಯ ಪಾತ್ರೆ. 1. a vessel, 2. a large pitcher. ವಾ: ಮೀಯಕನ ತಪಲೆಲಿ ನೀರ್ ಹೊಯ್ಕ. ಪ: ತಪ್ಪಲೆ

ತಪಸ್ಸ್ /*tapas'si*/ ನಾ. 1. ತಪಸ್ಸು, 2. ಅಗ್ನಿ, ವ್ರತ ನಿಯಮಾದಿಗಳಿಂದ ದೇಹವನ್ನು ದಂಡಿಸುತ್ತ ಧ್ಯಾನ ಮಾಡುವುದು. 1. meditation, 2. meditating by exposing oneself to harsh conditions. ವಾ: ಹಿಂದೆಲ್ಲ ರುಸಿಗ ತಪಸ್ಸ್ ಮಾಡ್ತಿದ್ದೊ ತ ಕತೆಲಿ ಕೇಳ್ದ್.

ತಪ್ಪಟ /*tappaṭa*/ ನಾ. ತಪ್ಪುವಿಕೆ. to miss/to go wrong. ವಾ: ನನ್ನ ಎಲ್ಲ ಪೈವಾಟ್ ತಪ್ಪಟಂದಾಗಿ ದುಡ್ಡು ಬಾತ್ಲೆ.

ತಪ್ಪಳ /*tappaḷa*/ ಕ್ರಿವಿ. 1. ಚಪ್ಪಾಳೆ, 2. ಕರತಾಡನ, 3. ಕೈ ತಟ್ಟುವಿಕೆ. 1. clapping one's hands, 2. to

applause, 3. hand-clapping. ವಾ: ತಪ್ಪಳ ಹೊಡೆಕನ ತಿರ್‌ಗಿ ನೋಡ್‌ದೊ.

ತಪ್ಪ್ /*tappi*/ ಕ್ರಿ. 1. ತಪ್ಪಿ ಹೋಗು, 2. ಪಡೆಯದೆ ಹೋಗು, 3. ಕಳೆದುಕೊ. 1. missed, 2. not able to get, 3. to lose. ವಾ: ತಡಾಗಿ ಹೋದಿಕೆ ಬಸ್ ತಪ್ಪಿ ಹೋತು. **ತಪ್ಪಿತ್** /*tappiti*/ ತಪ್ಪಿತು. missed. ವಾ: ಹಣ್ಣದರ್‌ಲಿ ತಲೆಗೆ ಮರ ಬೀಳ್ದು ತಪ್ಪಿತ್. **ತಪ್ಪಾಗಿರೊಕು** /*tappa:giroku*/ ತಪ್ಪಾಗಿರಬೇಕು. might be a mistake. ವಾ: ಏನೋ ತಪ್ಪಾಗಿರೊಕು. **ತಪ್ಪಿಕಿಲೆ** /*tappikilε*/ ತಪ್ಪಲಾರದು. can't miss. ವಾ: ಕಾಯ್ಲು ತಪ್ಪಿಕಿಲೆ ಒಂದು ಹೋಕನ ಇನ್ನೊಂದ್ ಸುರಾದೆ. **ತಪ್ಪಿರೆ** /*tappirε*/ 1. ಅಥವಾ, 2. ತಪ್ಪಿದರೆ. 1. or, 2. if it is missed. ವಾ: ನಾಳೆ ತಪ್ಪಿರೆ ನಾಡ್ದ್ ಸಿಕ್ಕಿನೆ ಆದೊ. **ತಪ್ಪಿಸ್** /*tappisi*/ 1. ತಪ್ಪಿಸಿ, 2. ಮರೆಮಾಚಿ. 1. avoiding 2 hiding. ವಾ: ಕಣ್ ತಪ್ಪಿಸಿ ಓಡಾಡ್ದು ಬಜ್ಜ. ಪ: ತಪ್ಪಿಸಿಕನ್ದೆ – ತಪ್ಪಿಸಿಕೊಳ್ಳುತ್ತಾನೆ/ಳೆ/ತಪ್ಪಿಸಿಕೊಳ್ಳುತ್ತದೆ; ತಪ್ಪಿಸಿಕೆ – ತಪ್ಪಿಸುವುದಕ್ಕೆ; ತಪ್ಪಿಸಿಕೊಂಡತ್ – ತಪ್ಪಿಸಿಕೊಂಡಿತು; ತಪ್ಪಿಸಿಕೊಂಡ್ – ತಪ್ಪಿಸಿಕೊಂಡು **ತಪ್ಪುಲೆ** /*tappulε*/ ತಪ್ಪುವುದಿಲ್ಲ. won't miss. ವಾ: ಮಾತಿಗೆ ತಪ್ಪಿಕಿಲೆ.

ತಬ್ಬು /*tabbu*/ ಕ್ರಿ. ಅಪ್ಪಿಕೊಳ್ಳು. to hug. **ಹೆಬ್ಬಾಲ್ಸನ ಮರ ತೊಬ್ಬಿಕೆ ಬೊತ್ತ್ – ಹುಲಿ(ಒ).** ವಾ: ಕುಸಿಲಿ ಮಕ್ಕಳ ತಬ್ಬುದು. ಪ: ತಬ್ಬಿ – ಅಪ್ಪಿಕೊಂಡು; ತಬ್ಬಿಕೊಂಡೊ – ತಬ್ಬಿಕೊಂಡರು

ತಬ್ಬುರಿ /*tabburi*/ ನಾ. 1. ತಬ್ಬಲಿ, 2. ಅನಾಥ, 3. ದಿಕ್ಕಿಲ್ಲದವನು. 1. an orphan, 2. a forsaken person, 3. a destitute. ವಾ: ಅವು ತಬ್ಬುರಿ ಮಕ್ಕಳ ಸಾಂಕಿದೊ. ಪ: ತಬ್ಬೊರಿ; ತಬ್ಬ್‌ಲಿ, ತಬ್ರಿ

ತಬ್ಬುರ್ಸು /*tabbursu*/ ಕ್ರಿ. 1. ತಡವರಿಸು, 2. ತಡಕಾಡು, 3. ದಡದಡಿಸು. 1. to falter, 2. to search, 4. to be in a hurry. ವಾ: ಕತ್ತಲೆಲಿ ದೀಪ ಎಲ್ಲಿತ ತಬ್ಬುರ್ಸುದು. ಪ: ತಬ್ಬರ್ಸಿಕಂಡ್ – ತಡಕಾಡು, ತಬ್ಬರ್ಸುದರ್ಲಿ – ತಡವರಿಸುವುದರಲ್ಲಿ. **ತಬರ್ಸುದು** /*tabarsudu*/ ವಾ: ಕತ್ತಲೆಲಿ ಎಂತಕೆ ತಬರ್ಸುದು.

ತಬ್ರಿ /*tabri*/ ನಾ. ತಬ್ಬುಲಿ. an orphan. ವಾ: ಅವ್ವಪ್ಪ ಇಲ್ಲದೆ ಮಕ್ಕ ತಬ್ರಿಗಾದೊ. ಪ: ತಬ್ರಿ ಗೂಡೆ – ತಬ್ಬಲಿ ಹುಡುಗಿ. **ತಬ್ಬುಲಿ** /*tabbuli*/ 1. ಅನಾಥ, 2. ತಾಯಿ ಇಲ್ಲದ ಮಗು. 1. an orphan, 2. a forsaken person, 3. a destitute. **ತಬ್ಬುಲಿ ಮಕ್ಕ ಕುದ್ದಂಗೆ(ಗಾ).** ವಾ: ತಬ್ಬುಲಿ ಗೂಡೆಗೆ ಒಳ್ಳ ಬೊದ್ಕ್ ಸಿಕ್ಕಲಿ. **ತಬ್ಬೆಲಿ** /*tabbεli*/ ವಾ: ತಬ್ಬೆಲಿ ಮಕ್ಕಳ ಬಾರಿ ಲಾಯ್ಕಲಿ ನೋಡಿಕಂಡೊ.

ತಬ್ರ್ /*tabr*/ ನಾ. 1. ಕೆಂಪು ಇರುವೆ, 2. ಕೆಂಜಿಗ. 1. a red ant, 2. a fire ant. ಪ: ತಬುರು, ಉರಿ(ತು)

ತಮಾಸೆ /*tama:sε*/ ನಾ. 1. ತಮಾಷೆ, 2. ಹಾಸ್ಯಮಯ ಸನ್ನಿವೇಶ/ ಮಾತು ವರ್ತನೆ. 1. fun, 2. a funny situation/act. ವಾ: ಹೈದ ತಮಾಸೆ ಮಾಡಿಕಂಡೆ ಇರ್‌ದು. **ತಮಾಸೆ ಮಾಡ್** /*tama:sε ma:ḍi*/ ಹಾಸ್ಯ ಮಾಡು. to make fun of. ವಾ: ಅವು ಯಾಗೊಳು ಹಂಗೆನೆ ತಮಾಸೆ ಮಾಡ್‌ದು.

ತಮಿಗೆ /*tamigε*/ ಸನಾ. 1. ತಮಗೆ, 2. ನಿಮಗೆ. 1. to us, 2. to you. ವಾ: ತಮಿಗೆ ಹೇಳಿಕೆ ಮರ್‌ತೋದ್.

ತಮ್‌ಟ್ಯಾಡ್ /*tamiṭya:ḍi*/ ಕ್ರಿ. ಉರುಳಾಡು. to roll over. ವಾ: ನೆಲಲಿ ಬಿದ್ಕಂಡ್ ತಮ್‌ಟ್ಯಾಡ್‌ದು.

ತಮ್ಮ /*tamma*/ ಸನಾ. 1. ತಮ್ಮ, 2. ಕಿರಿಯ ಸಹೋದರ. 1. a younger brother, 2. brother. ವಾ: ಇಂವ ನನ್ನ ತಮ್ಮ. **ತಮ್ಮಂತೇ** /*tammante:*/ 1. ತಮ್ಮಂತೆಯೇ, 2. ತಮ್ಮನೆಂದೇ. 1. like ours/us, 2. like a younger brother. ವಾ: ಎಲ್ಲೊವ್‌ರ್‌ನ ತಮ್ಮಂತೇತ ಗ್ಯಾನ ಮಾಡ್‌ದು.

ತಮ್ಮಚ್ಚ /*tammacca*/ ನಾ. ಒಂದು ವಿಧದ ಪಕ್ಷಿ. a variety of bird. ವಾ: ನಾಳೆ ಯಾಲ ತೋಟಲಿ ತಮ್ಮಚ್ಚಂಗೆ ಕೊಡ್‌ದು.

ತಮ್ಮಚ್ಚನ /*tammaccana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ತಮ್ಮಯ್ಯ /*tammayya*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. masculine given name. ಪ: ತಮ್ಮಣ್ಣ

ತಮ್ಮಿ /*tammi*/ ನಾ. ತೆಂಗಿನ ಗರಿ ಬಳಸಿ ಆಚರಿಸುವ ಹಬ್ಬ. a festival in which coconut leaf is used. ವಾ: ತಮ್ಮಿ ಹಬ್ಬಕೆ ಹೋದೊ.

ತಮ್ಮಿಬಳ್ಳಿ /*tammibaḷḷi*/ ನಾ. ನೊಗ ಮತ್ತು ಎತ್ತಿನ ಕುತ್ತಿಗೆಗೆ ಹಾಕುವ ಹಗ್ಗ. a rope that is used in tying a yoke to the neck of a bullock. ವಾ: ತಮ್ಮಿ ಬೊಳ್ಳಿನ ಎಳಿ.

ತಯಮರ /*taya mara*/ ನಾ. ಕೃಷಿಯ ಸಲಕರಣೆಗೆ ಬಳಸುವ ಮರ. a wood/timber used in making agricultural tools. ವಾ: ತಯ ಮರದ ಗೆಲ್ಲ್ ಮುರ್‌ದ್ ಬೀತ್.

ತಯಾರ್ /*taya:ri*/ ಕ್ರಿ. 1. ತಯಾರು, 2. ಅಣಿಮಾಡು, 3. ಸಿದ್ಧಗೊಳಿಸು. 1. preparation, 2. to arrange, 3. to get thing ready. ವಾ: ನಾನೆ ಅಡ್‌ಗೆ ತಯಾರ್ ಮಾಡ್‌ತಿದ್ದೆ. **ತಯರ್ಸಿ** /*tayarasi*/ ನಾ. 1. ಪೂರ್ವ ಸಿದ್ಧವಾಗಿ, 2. ತಯಾರು ಮಾಡು. 1. to pre-plan, 2. to get something ready. ವಾ: ತಿಂಡಿ ತಯರ್ಸಿ ಮಾರ್‌ದು. ಪ: ತಯರ್ಸಿತ್ – ತಯಾರಿಸಿದನು/ಳು; ತಯರ್ಸಿದೊ – ತಯಾರಿಸಿದರು; ತಯರ್ರೊಕ್ – ತಯಾರಿಸಬೇಕು. **ತಯಾರಾತ್** /*taya:ra:ti*/ 1. ತಯಾರಾಯಿತು, 2. ಸಿದ್ಧವಾಯಿತು. 1. prepared, 2. arranged. ವಾ: ತಿಂಡಿ ತಯಾರಾತ್. **ತಯಾರಿಲ್ಲೆ** /*taya:rillɛ*/ 1. ಸಿದ್ದನಿಲ್ಲ, 2. ಹೊಣೆಯಾಗಲಾರೆ. 1. not ready, 2. can't assume responsibility. ವಾ: ಸುಮ್ಮನೆ ಮಾತ್ ಕೇಳಿಕೆ ನಾ ತಯಾರಿಲ್ಲೆ.

ತರವ್ /*taravi*/ ಕ್ರಿ. ತರುವವರು. people who bring something. ವಾ: ಸೊಪ್ಪ್ ತಾವವರ ಹಕ್ಕಲೆ ಹೇಳೊಕು. **ತರಕು** /*taraku*/ ತರಬೇಕು. should bring. ವಾ: ಉಗಾದಿಗೆ ಕಯಿಬೇವ್‌ನ ಸೊಪ್ಪ್ ತರಕು. **ತರಕಾಯ್ತ್** /*taraka:yti*/ ತರಬಹುದಿತ್ತು. could have brought. ವಾ: ಮೀನ್ ತರಕಾಯ್ತ್.

ತರದ /*tarada*/ ನಾ. 1. ತರಹ, 2. ವಿವಿಧ, 3. ಪ್ರಕಾರ, 4. ವಿಧ. 1. like, 2. variety, 3. manner, 4. type. ವಾ: ಸುಮಾರ್ ತರದ ಹೂನ ನೋಡ್ದೆ.

ತರಾವರಿ /*tara:vari*/ ನಾ. 1. ವಿಧವಿಧದ, 2. ತರಹೆವಾರಿ. 1. variety / type, 2. diverse. ವಾ: ತರಾವರಿ ಹೂನ ಬೀಜಗ ಸಿಕ್ಕಿವೆ.

ತರಿಕಡಿಯದು /*tərikaḍiyadu*/ ಕ್ರಿ. ಕಾಡಿನ ನಡುವೆ ದಾರಿ ಮಾಡುವುದು. making a path in the forest. ವಾ: ತರಿ ಕಡಿಯದುತ ಹೇಳ್ದೊ.

ತರಿ ಕುಂಟೆ /*təri kuṇṭɛ*/ ಕ್ರಿವಿ. ಮಾಂಸ ಕತ್ತರಿಸುವ ಮರ. a meat chopping wooden board. ವಾ: ತರಿ ಕುಂಟೆ ಮೇಲೆ ಇಸಿಕಂಡ್ ಮಾಸನ ಕತ್ರ್‌ಸ್.

ತರಿಕುದಂಟಿ /*tərikudaṇṭi*/ ನಾ. ತರಿಯಲು/ ಕಡಿದು ತುಂಡು ತುಂಡುಗಳನ್ನಾಗಿ ಮಾಡಲು ಬಳಸುವ ಮರದ ತುಂಡು. a sharp piece of wood used as a knife to cut/chop. ವಾ: ತರಿ ಕುದಂಟಿ ತಂಬಾ.

ತರಿ[1] /*təri*/ ಕ್ರಿ. ತರಕಾರಿ/ ಮಾಂಸವನ್ನು ಚಿಕ್ಕ ತುಂಡುಗಳನ್ನಾಗಿ ಮಾಡು. to cut meat into pieces. ವಾ: ಮಾಸನ ಸಣ್ಣದಾಗಿ ತರಿ.

ತರಿ[2] /*təri*/ ನಾ. ಅಕ್ಕಿಯನ್ನು ಚೆನ್ನಾಗಿ ಬೇಯಿಸಿ ಕಡೆದು ಹಿಟ್ಟು ಮಾಡುವ ಬಂದಕ್ಕೆ ಸೇರಿಸುವುದು. pulverised rice into granules/coarse powder. ವಾ: ಪಾಪಿಟ್ಟ್ ಮಾಡಿಕೆ ತರಿ ಅಕ್ಕಿ ಒಳ್ಳೆದ್.

ತರಿ[3] /*təri*/ ನಾ. 1. ತರಿಯಾಗಿರುವುದು, 2. ದೊರಗು, 3. ನುಣುಪಲ್ಲದಿರುವುದು. 1. coarse, 2. rough grain, 3. not soft. ವಾ: ಗೋಡೆ ತರಿ ತರಿಯಾಗುಟು.

ತರಿ[4] /*təri*/ ನಾ. 1. ಅಕ್ಕಿಯ ತರಿ(ಹುಡಿ), 2. ನುಚ್ಚಿಗಿಂತಲು ಚಿಕ್ಕ ದಾದ ಅಕ್ಕಿಯ ಕಣಗಳು, 3. ಸಣ್ಣ ನುಚ್ಚು. 1. coarse rice, 2. smaller than broken rice, 3. fragments of rice grains. ವಾ: ಅಕ್ಕಿ ತರಿ ಉಪ್ಪಿಟ್ ಮಾಡ್ದ್. ಪ: ತರಿಯಕೆ – ತುಂಡರಿಸಲು; ತರಿನಿ – ತುಂಡದಿಸಿ

ತರು /*taru*/ ಕ್ರಿ. 1. ತರಿಸು, 2. ತರುವಂತೆ ಮಾಡು. 1. to make someone bring, 2. to make someone get something. **ತರೆಸ್‌ಂತ** /*tarɛsinta*/ 1. ತರಿಸು ಎಂದು, 2. ತರುವಂತೆ ಹೇಳು. 1. to tell someone to make arrangements to bring something, 2. to tell someone to bring something. ವಾ: ತರ್‌ಕಾರಿ, ಸಾಮಾನ್‌ನ ತರೆಸ್‌ಂತ ಹೇಳ್‌ದ್.

ತರೇವಾರಿ /*tarɛ:va:ri*/ ನಾವಿ. 1. ಬೇರೆ ಬೇರೆ ರೀತಿಯ ಬಗೆಬಗೆ, 2. ವೈವಿಧ್ಯಮಯ. 1. of different types, 2. diverse. ವಾ: ತರೇವಾರಿ ತರ್‌ಕಾರಿ ಬೆಳ್ದೊಳೊ.

ತರೊಕು /*taroku*/ ಕ್ರಿ. 1. ತರಬೇಕು, 2. ಕೊಂಡುಕೊಳ್ಳು. 1. should bring, 2. to buy. ವಾ: ಬೆಣ್ಣೆ ತರೊಕು. ಪ: ತರೊಂಬಂತೇಳಿ – ತರಬಹುದೆಂದು ಹೇಳಿ; ತರೊಂವ – ತರುವವ; ತರೋಕಾಗಿತ್ – ತರಬೇಕಾಗಿತ್ತು;

ತರ್ಕ /*tarka*/ ನಾ. 1. ವಾದ, 2. ಚರ್ಚೆ. 1. an argument, 2. debate. **ತರ್ಕ ಮಾಡ್ರೆ**

ಬರ್ಕತ್ತಾದುಲೆ(ಗಾ). ವಾ: ಉಪಯೋಗ ಇಲ್ಲದ ತರ್ಕ ಮಾಡಿಯೇನ್ ಸುಕ, ತರ್ಕ ಮಾಡಿಕೆ ಹೋಕಾಗದ್.

ತರ್ಕಂಡ್ /*tarakandara*/ ನಾ. ಪಾದವನ್ನು ನೆಲಕ್ಕೆ ಒತ್ತಿ ಒರೆಸಿಕೊಂಡು ನಡೆಯುವುದು. to walk by dragging one's feet on to the floor. ವಾ: ಅಂವ ಕಾಲ್‌ನ ತರ್ಕಂಡ್ ತರ್ಕಂಡ್ ಹೋತ್.

ತರ್ಕ್ಸ್ /*tarksi*/ ಕ್ರಿ. 1. ಜರುಗಿಸು, 2. ಪಕ್ಕಕ್ಕೆ ಸರಿಸು, 3. ನೂಕು. 1. to shove, 2. to keep aside, 3. to push. ವಾ: ಮೂಟೆನ ಹಙ್ಙ ಅತ್ತ ತರ್ಕ್ಸ್.

ತರ್ಗಿಸ್ /*targisi*/ ಕ್ರಿ. ತಳ್ಳು. to push. ವಾ: ಅಕ್ಕಿ ಪೊಡಿ ಮಾಡಲು ಬೀಸುವ ಕಲ್ಲಿಗೆ ಅಕ್ಕಿ ಹಾಕಿ ತರ್ಗಿಸ್‌ವೆ.

ತರ್ಚ್ /*tarci*/ ಕ್ರಿ. 1. ಪರಚು, 2. ಗೀರು. 1. to scratch, 2. to scrape. ವಾ: ಸೀಗೆ ಬಲ್ಲೆ ವಳೆಗೆ ಹೊಕ್ಕರೆ ಮೈಗೆಲ್ಲ ತರ್ಚ್‌ದು. ಪ: ತರ್ಚಿಕಂಡ್ ಪರ್ಚಿಕಂಡ್(ಜೋಪ)

ತರ್ಡ್ /*tarḍi*/ ನಾ. ವೃಷಣ, ಬೀಜ. testicle. **ಕುರುಡಂಗೆ ತರ್ಡೇ ಕೈಲಾಸ(ಗಾ). ತುಟಿಗೆ ತುಪ್ಪ ಇಲ್ಲೆ, ತರ್‌ಡ್‌ಗೆ ಪಂಚೇರ್ ಬೆಣ್ಣೆ(ನು).** ವಾ: ಅವಂಗೆ ತರ್ಡ್ ಬೇನೆಗಡ. ಪ: ತರಡ್

ತರ್ತ್ /*tarati*/ ಕ್ರಿ. 1. ಮುಗಿಯಿತು, 2. ಸತ್ತನು. 1. ended, 2. died. ವಾ: ಅಂವ ತರ್ತ್.

ತರ್‌ದ್[1] /*tardi*/ ಕ್ರಿ. 1. ಏನು ಮಹಾ ಕೆಲಸ ಮಾಡ್ತೀಯ ಅಥವಾ ಏನು ಮಾಡ್ತೀಯ ಎಂದು ಕೋಪ, ವ್ಯಂಗ್ಯದಿಂದ ನುಡಿಯುವುದು. remarking sarcastically that one's work is very insignificant. ವಾ: ಎಂತ ತರ್‌ದ್ ಗುಡ್ಡೆ ಹಾಕಿಯ ನಾ ನೋಡ್ನೆ.

ತರ್ದ್[2] /*targi*/ ಕ್ರಿ. ತರಿಯುವುದು. cutting. ವಾ: ಅಂವ ಸೊಪ್ಪ್‌ನ ತರ್ದ್ ತರ್ದ್ ಹಾಕಿತ್.

ತರ್ಬಡ /*tarbaḍa*/ ಕ್ರಿ. 1. ತರಬೇಡ. don't bring. **ಸಾಲ ತರ್ಬಡ ಕದ್ದ್ ತಿನ್ಬಡ(ಗಾ).** ವಾ: ಜೋಡುನ ವಳೆಗೆ ತರ್ಬಡ.

ತರ್‌ಲೆ /*tarile*/ ನಾವಿ. 1. ತಲೆಹರಟೆ, 2. ಕಿರಿಕಿರಿ ಮಾಡುವವ, 3. ಮಾನಸಿಕ ಕಿರುಕುಳ ಕೊಡುವವ. 1. a mischievous person, 2. an annoying person, 3. one who irritates. ವಾ: ಅಂವ ಬೊರಿ ತರ್‌ಲೆ.

ತರ್ಸಿ /*tarasi*/ ಕ್ರಿ. 1. ತರಿಸು, 2. ತರುವಂತೆ ಮಾಡು 3. 1. to make someone bring, 2. to make someone get something. ವಾ: ಜೆರಕೆ ಮೊದ್ದ್ ತರ್‌ಸಿ ಕುಡ್ವೊ. ಪ: ತರ್ಸಿ ಕಂಡೊ – ತರಿಸಿಕೊಂಡರು; ತರ್ಸಿ ಕಂಬದು – ತರಿಸಿಕೊಳ್ಳುವುದು; ತರ್ಸಪ್ಪ – ತರಿಸಪ್ಪ; ತರ್ಸಿ ಕಣ್ಡೆ – ತರಿಸಿಕೊಳ್ಳುತ್ತಾನೆ(ಳೆ); ತರ್ಸಿಕಾಗಿ – ತರಿಸುವುದಕ್ಕಾಗಿ; ತರ್ಸಿದ – ತರಿಸಿದ; ತರ್ಸಿಬುಡಿ – ತರಿಸಿಬಿಡಿ; ತರ್ಸಿತ್ – ತರಿಸಿದನು/ಳು; ತರ್ಸಿದೊ – ತರಿಸಿದರು; ತರ್ಸಿದ್ – ತರಿಸಿದ್ದು; ತರ. **ತರ್ಸೊಕ್** /*tarasoki*/ ತರಿಸಬೇಕು. Should it be brought? ವಾ: ಬೇರೆ ಪೇಪರ್ ತರ್ಸೊಕ.

ತರ್ಸ್[1] /*tarasi*/ ಕ್ರಿ. 1. ತುರಿಸು, 2. ಕೆರೆ, 3. ತಿಕ್ಕು. 1. to scratch, 2. to rub, 3. to scrub. ವಾ: ಕಜ್ಜಿನ ತರ್‌ಸ್ ಬಡ. ಪ: ತೊರ್ಸು, ಕಿರ್‌ಂಬು(ತು)

ತರ್ಸ್[2] /*tarasi*/ ಕ್ರಿ. ತರಿಸು. to make someone bring. ವಾ: ಅಂಗ್ಡಿಂದ ಬೆಲ್ಲ ತರ್ಸ್. ಪ: ತರ್ಸು – ತರಿಸು; ತರ್ಸ್‌ಬಡ – ತರಿಸಬೇಡ

ತಲಾಸ್ /*tala:si*/ ಕ್ರಿ. 1. ಹುಡುಕಿ ಹಿಡಿದು ಒದಗಿಸು, 2. ಕಂಡುಹಿಡಿದು ವ್ಯವಸ್ಥೆ ಮಾಡು. 1. to make something available after a prolonged search, 2. to make arrangements after discovering something.

ತಲುಪ್ಯೊಳನಾ /*talupyoḷa*/ ಕ್ರಿ. ತಲುಪಿದ್ದೀಯ? have you reached? ವಾ: ಕೆಲ್ಸಕೆ ತಲುಪ್ಯೊಳನಾ.

ತಲೆ /*talɛ*/ ನಾ. 1. ತಲೆ, 2. ಶಿರ, 3. ಶಿರಸ್ಸು, 4. ಮಂಡೆ. 1. head, 2. cranium, 3. crown, 4. skull. **ಅಂವನ ತಲೆಮೇಲೆ ಅಂವನ್ದೇ ಕೈ(ಗಾ). ತಲೆಲಿ ಸೆಗಣಿ ತುಂಬ್ಯುಟ್ಟು(ನು).** ವಾ: ತಲೆಗೆ ಹೊಡ್ದದ್. **ತಲೆ ಅಲ್ಲಾಡ್ಸುದು** /*talɛ alla:ḍsudu*/ 1. ತಲೆ ತೂಗುವುದು, 2. ಸಮ್ಮತಿ ಅಥವಾ ಅಸಮ್ಮತಿ ಸೂಚಿಸುವುದು. 1. waving one's head, 2. waving one's head in an act of either agreement or disagreement. ವಾ: ಗೂಡೆ ಮೊದುವೆಗೆ ಒಪ್ಪಿಗೆತ ತಲೆ ಅಲ್ಲಾಡ್ಸುದು. **ತಲೆಂದ** /*talɛnda*/ ತಲೆಯಿಂದ. from the head. ವಾ: ತಲೆಂದ ಹೇನ್ ತೆಗ್ಯದು. **ತಲೆಂದ ಮೇಲೆ** /*talɛnda me:lɛ*/ 1. ತಲೆಯ ಮೇಲೆ, 2. ಎತ್ತರದಲ್ಲಿರುವುದು, 3. ಲೆಕ್ಕಕ್ಕಿಂತ ಹೆಚ್ಚು. 1. on the head, 2. on a higher

ground, 3. more than counted/more than the actual number. ವಾ: ತಲೆಮೇಲೆ ಕೈಹೊತ್ತ್ ಕುದ್ದೊಳೊ.

ತಲೆ ಆಡ್ಸ್ /*talɛ a:ḍsɨ*/ ನಾ. 1. ಗೊತ್ತಿರುವವರಂತೆ ವರ್ತಿಸು, 2. ಹೌದು ಎಂದು ತೋರಿಸುವುದು. 1. to act as if you know it, 2. to pretend. ವಾ: ಕೇಳಿಕನ ಎಲ್ಲದಕು ತಲೆ ಆಡ್ಸ್‌ತಿದ್ದಲ.

ತಲೆ ಇಲ್ಲೆ /*talɛ illɛ*/ ನಾವಿ. 1. ಆಲೋಚನೆ ಇಲ್ಲದಿರುವುದು, 2. ಚಿಂತನೆ ಮಾಡದಿರುವುದು, 3. ದಡ್ಡತನ. 1. thoughtless, 2. unable to think, 3. stupidity. ವಾ: ಅಂವಂಗೆ ತಲೆ ಇಲ್ಲೆ.

ತಲೆ ಉಟ್ಟು /*talɛ uṭṭu*/ ನಾವಿ. ಬುದ್ಧಿಶಕ್ತಿಯಿರುವುದು. having intellect. ವಾ: ಆ ಹೈದಂಗೆ ಒಳ್ಳ ತಲೆ ಉಟ್ಟು.

ತಲೆ ಓಡ್ದುಲೆ /*talɛ o:ḍdulɛ*/ ಕ್ರಿವಿ. 1. ತಲೆ ಚುರುಕು ಕಡಿಮೆ, 2. ಆಲೋಚನೆ ಇಲ್ಲದಿರುವುದು. 1. inactive, 2. unable to think. ವಾ: ಯಾಕೊ ಇಂದ್ ತಲೆ ಓಡ್ದುಲೆ.

ತಲೆಕಟ್ಟುದು /*talɛkaṭṭudu*/ ಕ್ರಿ. 1. ಮುಡಿಯನ್ನು ಕಟ್ಟುವುದು, 2. ಕೂದಲು ಕಟ್ಟುವುದು, 3. ಕೂದಲು ಹೆಣೆಯುವುದು. 1. to tie a knot in the hair, 2. to knot the hair, 3. to plait the hair. ವಾ: ಹೆಣ್ಮಕ್ಕ ತಲೆ ಕಟ್ಟುದು ನೋಡಿಕೆ ಲಾಯ್ಕ.

ತಲೆಕಡಿದು /*talɛkaḍidu*/ ಕ್ರಿವಿ. 1. ತಲೆ ಕಡಿಯುವುದು, 2. ತಲೆ ಕಡಿದು ಬಲಿ ಕೊಡುವುದು. 1. to sever the head, 2. to offer one's head as a sacrifice. ವಾ: ದೇವುರಿಗೆ ಪ್ರಾಣಿ ಬಲಿ ಕೊಡಿಕನ ತಲೆ ಕಡಿದು.

ತಲೆಕುತ್ತುದು /*talɛkuttudu*/ ಕ್ರಿವಿ. ತಲೆ ನೋವಾಗುವುದು. to have headache. ವಾ: ನಂಗೆ ಆಗಾಗ ತಲೆ ಕುತ್ತುದು.

ತಲೆ ಕೆಡ್ಸಿಕೊಂಬೊದು /*talɛ kɛḍsikombɔdu*/ ಕ್ರಿ. ತಲೆಕೆಡಿಸಿಕೊಳ್ಳುವುದು. worrying. ವಾ: ಎಲ್ಲದಕು ತಲೆ ಕೆಡ್ಸಿಕೊಂಬೊದು ಯಾಕೆತ?

ತಲೆಕೊಡ್ದು /*tal koḍdu*/ ಕ್ರಿವಿ. 1. ಗಮನ ಹರಿಸುವುದು, 2. ಹೊಣೆಗಾರಿಕೆ ವಹಿಸುವುದು, 3. ಜವಾಬ್ದಾರಿ ವಹಿಸುವುದು. 1. paying attention to, 2. to assume responsibility, 3. to assign responsibility. ವಾ: ಎಷ್ಟ್ ತ ಎಲ್ಲದಕ್ಕು ತಲೆಕೊಡ್ದು ನಂಗೂ ಸಾಕಾವುಟು.

ತಲೆಚಾಚಿನೆ /*talɛca:cinɛ*/ ನಾ. ತಲೆ ಬಾಚುತ್ತೇನೆ. I will comb hair. ವಾ: ಗೂಡೆನ ತಲೆ ಚಾಚಿನೆ.

ತಲೆತಿಂಬೊದು /*talɛtimbɔdu*/ ಕ್ರಿ. 1. ಅನಗತ್ಯ ಕಿರಿಕಿರಿ ಮಾಡು, 2. ತಲೆ ತಿನ್ನುವುದು, 3. ತೊಂದರೆ ಕೊಡುವುದು, 4. ಬೇಸರ ಹಿಡಿಸುವುದು. 1. to irritate someone, 2. to torment someone, 3. to trouble, 4. to cause dissatisfaction. ವಾ: ಸಿಕ್ಕಿಬುಟ್ರೆ ಸಾಕ್ ತಲೆ ತಿಂಬದು.

ತಲೆತಿರ್ಗಿದೆ /*talɛtirgidɛ*/ ಕ್ರಿವಿ. 1. ತಲೆ ಸುತ್ತಿದಂತೆ ಅನುಭವವಾಗು, 2. ತಲೆಸುತ್ತು ಬರು. 1. feeling dizzy, 2. to faint. ವಾ: ಪಿತ್ತಕೆ ತಲೆ ತಿರ್ಗಿದೆ.

ತಲೆತಿರ್ಗ್ /*talɛtirigɨ*/ ನಾ. 1. ಜಂಭ, 2. ಬುದ್ಧಿ ವಿಕಲ್ಪವಾಗು, 3. ಅಹಂಕಾರ. 1. haughty, 2. imbalance of the mind, 3. arrogance. ವಾ: ದುಡ್ಡ್ ಬಾಕನ ಜೆನಕ್ಕೆ ತಲೆ ತಿರ್ಗುದು.

ತಲೆತೊರ್ಸುದು /*talɛtorɨsudu*/ ಕ್ರಿವಿ. 1. ತಲೆ ತುರಿಸುವುದು, 2. ತಲೆ ತುರಿಸಿ ಮರೆತದ್ದನ್ನು ಜ್ಞಾಪಿಸಿಕೊಳ್ಳುವುದು. 1. to scratch the head, 2. to remember something by scratching one's head. ವಾ: ಅಂವ ಮಾತಾಡಿಕನ ನಡುಲಿ ಮರ್ತರೆ ತಲೆ ತೊರ್ಸುದು.

ತಲೆತೋರ್ಸುದು /*talɛto:rsudu*/ ಕ್ರಿವಿ. 1. ಪ್ರತ್ಯಕ್ಷವಾಗುವುದು, 2. ಎದುರು ಬಂದು ನಿಲ್ಲುವುದು, 3. ತೋರಿಸಿಕೊಳ್ಳು, 4. ಹಾಜರಾಗುವುದು. 1. to appear, 2. to appear infront of someone, 3. to show one's presence, 4. to be present. ವಾ: ಅಂವ ಅಪ್‌ರೂಪಕ್ಕೆ ಬಂದ್ ತಲೆ ತೋರ್ಸುದು.

ತಲೆನೆರೆ /*talɛnɛrɛ*/ ನಾವಿ. ತಲೆ ಕೂದಲು ಬಿಳಿಯಾಗು. to develop grey hair. ವಾ: ತಲೆ ನೆರೆಯಾಕೆ ಸುರಾತ್.

ತಲೆಬಾಗ್ /*talɛba:gɨ*/ ಕ್ರಿ. 1. ತಲೆಬಾಗು, 2. ಶರಣಾಗು, 3. ನಮಸ್ಕರಿಸು, 4. ವಿನಯವನ್ನು ತೋರಿಸು, 5. ವಿಧೇಯವಾಗು. 1. to bend one's head, 2. to surrender, 3. to offer salutations, 4. to show

obedience, 5. to submit oneself. ವಾ: ದೊಡ್ಡವ್ಕೆ ಗುರುಹಿರ್‌ಯರ್‌ಗೆ ತಲೆ ಬಾಗಿ ನಡೆಕು.

ತಲೆ ಬುಟ್ಟೋದಂಗೆ ಆದೆ /*talɛ buṭṭɔ:daŋgɛ a:dɛ*/ ಕ್ರಿವಿ. ತಲೆ ಬಿಟ್ಟು ಹೋದ ಹಾಗೆ ಆಗುತ್ತದೆ. having sever headache. ವಾ: ಬೇನೆಂದ ತಲೆ ಬುಟ್ಟೋದಂಗೆ ಆದೆ.

ತಲೆಬುಡ ಗೊತ್ತಾದುಲೆ /*talɛbuḍa gotta:dulɛ*/ ಕ್ರಿ. 1. ಏನೂ ಗೊತ್ತಾಗದಿರು, 2. ನಿಗೂಢ. 1. unable to understand what's happening, 2. secret. ವಾ: ಅವು ಹೇಳ್ದು ತಲೆ ಬುಡ ಗೊತ್ತಾದುಲೆ.

ತಲೆಬೆಚ್ಚ /*talɛbɛcca*/ ಕ್ರಿ. 1. ತಲೆ ಬಿಸಿ, 2. ಮನಸ್ಸಿಗೆ ಒತ್ತಡವಾದಾಗ ಹೇಳುವುದು. 1. headache, 2. an expression used when someone is going through tremendous stress. ವಾ: ತಲೆ ಬೆಚ್ಚ ಮಾಡಿಕಂಡರೆ ಎಲ್ಲ ಸೆರಿ ಆದೆನ?

ತಲೆಬೊಗ್ಸಿ /*talɛbogsi*/ ಕ್ರಿ. 1. ತಲೆ ಬಗ್ಗಿಸಿ, 2. ತಲೆ ಕೆಳಗೆ ಹಾಕು. 1. bent hend, 2. to bend one's head. ವಾ: ಗೂಡೆ ಮೊದುವೆಲಿ ತಲೆ ಬೊಗ್ಸಿ ಕುದ್ದಿತ್.

ತಲೆಬೋಳ್ಸ್ /*talɛbo:ḷsɨ*/ ಕ್ರಿ. 1. ತಲೆ ಬೋಳಿಸು, 2. ತಲೆ ಕೂದಲು ತೆಗೆ. 1. to tonsure, 2. to shave one's hair. ವಾ: ಹಿಂದೆಲ್ಲ ಗಂಡ ಸತ್ರೆ ಹೆಣ್ಣ್‌ನ ತಲೆ ಬೋಳ್ಸುದು ಮಾಡ್ತಿದ್ದೊಗಡ.

ತಲೆಬ್ಯಾನೆ /*talɛbya:nɛ*/ ಕ್ರಿ. 1. ತಲೆ ನೋವು, 2. ತಲೆ ಶೂಲೆ. 1. headache, 2. migraine (recurring headache). ವಾ: ನಂಗೆ ಬಾರಿ ತಲೆ ಬೇನೆ.

ತಲೆಮಾಸ /*talɛma:sa*/ ನಾ. ತಲೆಯ ಮಾಂಸ. head mutton. ವಾ: ಕುರಿದ್ ತಲೆ ಮಾಸ ತಂದದ್.

ತಲೆಮೀಯೊದು /*talɛmi:yodu*/ ಕ್ರಿವಿ. ತಲೆಗೆ ಸ್ನಾನ ಮಾಡುವುದು. to wash hair. ವಾ: ದಿನಾ ತಲೆ ಮೀಯೊದು.

ತಲೆಸಿಂಗಾರ /*talɛsiŋga:ra*/ ನಾ. ತಲೆಯ ಅಲಂಕಾರ. hair dressing, costumes or ornaments for the head. ವಾ: ನಿನ್ನ ತಲೆ ಸಿಂಗಾರ ಆತ?

ತಲೆಹಂದಾಡ್ಸಿ /*talɛhanda:ḍsi*/ ಕ್ರಿ. ತಲೆ ಅಲ್ಲಾಡಿಸಿ. to shake one's head. ವಾ: ತಲೆ ಹಂದಾಡ್ಸಿರೆ ಗೊತ್ತಾಲೆ.

ತಲೆಹಣ್ಣಾದು /*talɛhaṇṇa:du*/ ಕ್ರಿವಿ. 1. ತಲೆಗೂದಲು ಹಣ್ಣಾಗುವುದು, 2. ತಲೆಗೂದಲು ನೆರೆಯುವುದು, 3. ಮುದಿತನ ಬರುವುದು. 1. to have grey hair, 2. to develop grey hair, 3. to become old. ವಾ: ಈಗೆಲ್ಲ ವಯಸ್ಸಾಕೆ ಮುಂದೆನೆ ತಲೆ ಹಣ್ಣಾದು.

ತಲೆಹಾಕ್ /*talɛha:kɨ*/ ಕ್ರಿ. 1. ಗಮನಹರಿಸು, 2. ಆಸಕ್ತಿ ವಹಿಸು. 1. to concentrate, 2. to show interest. ವಾ: ಸ್ವಲ್ಪ ಅತ್ತಕಡೆ ತಲೆ ಹಾಕ್.

ತಲೆಹೋವ ಕೆಲ್ಸ /*talɛho:va kɛlsa*/ ಕ್ರಿವಿ. 1. ಅಪಾಯಕಾರಿ ಕೆಲಸ, 2. ಮರ್ಯಾದೆ ಹೋಗು. 1. dangerous work, 2. to lose one's respect. ವಾ: ತಲೆ ಹೋವ ಕೆಲ್ಸ ನೀ ಎಂತ ಮಾಡ್ದ?

ತಲೆಂದ್ ತಲೆಗೆ /*talɛndɨ talɛgɛ*/ ನಾ. 1. ಒಂದು ಕಡೆಯಿಂದ ಇನ್ನೊಂದು ಕಡೆಗೆ, 2. ಒಂದು ಬದಿಯಿಂದ ಇನ್ನೊಂದು ಬದಿಗೆ. 1. from one end to another, 2. from one direction to another. ವಾ: ತಲೆಂದ್ ತಲೆಗೆ ಬೇಲಿ ಕಟ್ಟೊಕು.

ತಲೆಂಬು /*talɛmbu*/ ಕ್ರಿವಿ. 1. ತಲೆದಿಂಬು, 2. ತಲೆಗೆ ಆಸರೆಯಾಗಿ ಇಟ್ಟುಕೊಳ್ಳುವ ದಿಂಬು. 1. a pillow, 2. a cushion used below the head. ವಾ: ತಲೆಂಬು ಬೇಡ ನಂಗೆ.

ತಲೆಕಡಿಯಕೆ /*talɛkaḍiyakɛ*/ ಕ್ರಿ. ತಲೆ ಕಡಿಯಲು. to sever/cut off the head. ವಾ: ಕುರಿದ್ ತಲೆಕಡಿಯಕೆ ನನ್ನಂದ ಬೊತ್ತ್.

ತಲೆಕಡೆ /*talɛkaḍɛ*/ ಕ್ರಿ. ತಲೆಯ ಕಡೆ. at the head. ವಾ: ಹಾಸ್‌ಗೆಲಿ ತಲೆಕಡೆ ಇಸಿದ ಅರ್ವೆನ ತೆಗಿನೆ.

ತಲೆಕುತ್ತ /*talɛkutta*/ ನಾ. ತಲೆ ಕೆಳಗೆ. upside down. ವಾ: ಅಂವ ತಲೆಕುತ್ತ ಆಗಿ ಬೀತ್.

ತಲೆಕುದಲ್ /*talɛkudalɨ*/ ನಾ. 1. ತಲೆಗೂದಲು, 2. ಕೇಶ. 1. hair on the head, 2. hair. ವಾ: ಕೂಸುನ ತಲೆಕುದಲ್ ತೆಗ್ಸೊಕು. ಪ: ತಲೆಕೂದಲ್, ತರೆಕೂಜಲ್(ತು)

ತಲೆಕೆಳಗೆ /*talɛkeḷagɛ*/ ನಾ. ಮೇಲೆ ಕೆಳಗೆ. upside down.

ತಲೆಕೊಡ್ /*talɛkoḍɨ*/ ಕ್ರಿ. ಜವಾಬ್ದಾರಿ ವಹಿಸು. to accept responsibility/to offer responsibility

of something to someone. ವಾ: ಮನೆ ಕಡೆ ಹಣ್ಣು ತಲೆಕೊಡ್.

ತಲೆಗ /*talεga*/ ನಾ. ತಲೆಗಳು. heads. ವಾ: ಹಿಂದೆ ಹೋರಾಟಲಿ ಸುಮಾರ್ ತಲೆಗ ಉರ್ಲಿದೊ.

ತಲೆಗಡಿ /*talεgaḍi*/ ಕ್ರಿ. 1. ತಲೆದಿಂಬು, 2. ತಲೆಮೆತ್ತೆ 3ಮಲಗುವಾಗ ತಲೆಗೆ ಆಸರೆಯಾಗಿ ಇಟ್ಟುಕೊಳ್ಳುವ ದಿಂಬು. 1. a pillow, 2. a headrest, 3. a cushion used below the head while sleeping. ವಾ: ತಲೆಗಡಿನ ಎಲ್ಲಿ ಇಸಿದರಿ ಮಕ್ಕಳೆ. ಪ: ತಲೆಗೆಡಿ

ತಲೆಗೆ ಎಣ್ಣೆಹಾಕುದು /*talεgε εṇṇεha:kudu*/ ಕ್ರಿ. ನವ ವಧು ವರರಿಗೆ ನೆಂಟರಿಷ್ಟರ ಮನೆಗೆ ಹೋದಾಗ ನೆತ್ತಿಗೆ ಎಣ್ಣೆ ಹಾಕುವ ಕ್ರಮ, 2. ಸತ್ತ ವ್ಯಕ್ತಿಯ ಮನೆಯಲ್ಲಿ ಕುಟುಂಬಸ್ಥರ ತಲೆಗೆ ಎಣ್ಣೆ ಹಾಕುವ ಕ್ರಮ. 1. a custom of applying oil on the head of the bride and the room when they visit their relatives, 2. a custom, relatives applying oil on to the head of the family members of the dead person. ವಾ: ಸುದ್ದ ದಿನ ಉಂಬಕನ ತಲೆಗೆ ಎಣ್ಣೆ ಹಾಕುದು ಕ್ರಮ ಉಟ್ಟು.

ತಲೆಗೆ ಕೈ ಇಸಿಕೊಂಬೊದು /*talεgε kai isikombɔdu*/ ಕ್ರಿವಿ. ನಿರಾಶನಾಗಿ ತಲೆಯ ಮೇಲೆ ಕೈ ಇಟ್ಟು ಕೂರುವುದು. to sit in disappointment by placing one's palm/hand on the head. ವಾ: ತಲೆಗೆ ಕೈ ಇಸಿಕೊಂಬೊದು ಯಾಕೆ?

ತಲೆಗೆ ಕೈ ಇಸುದು /*talεgε kai isudu*/ ಕ್ರಿವಿ. ತಲೆಗೆ ಕೈಯಿಟ್ಟು ಆಶೀರ್ವದಿಸುವುದು, ತನ್ನ ಹಾಗೆಯೇ ಆಗು ಎಂದು ಹಾರೈಸಿ ತನ್ನ ಗುಣಗಳೆಲ್ಲ ಆತನಲ್ಲಿ ಬರುವಂತೆ ಹಾರೈಸುವುದು. to bless by placing the palm on one's head. ವಾ: ಹಿರಿಯರ್ ಮಕ್ಕಳ ತಲೆಗೆ ಕೈ ಇಸುದು.

ತಲೆಗೆ ಮರಬಿದ್ದಂಗೆ ಆದೆ /*talεgε marabiddaŋgε a:dε*/ ನಾವಿ. 1. ತಲೆಗೆ ಮರ ಬಿದ್ದಂತೆ ಆಗುತ್ತದೆ, 2. ಭಯದ ಸಂದರ್ಭ. 1. sever headache, going through intense pain, 2. situation of sensing danger. ವಾ: ಸಾವ್‌ನ ಸುದ್ದಿ ಕೇಳಿ ತಲೆಗೆ ಮರ ಬಿದ್ದಂಗೆ ಆದೆ.

ತಲೆಗೆಹತ್ತ್ /*talεgεhatti*/ ನಾವಿ. 1. ತಲೆಗೆ ಏರಿ, 2. ನಶೆ ಹತ್ತಿ, 3. ಮಾದಕ ದ್ರವ್ಯಗಳ ಸೇವನೆಯಿಂದಾಗುವ ಅಮಲು. 1. a feeling of intoxication, 2. stupor, 3. inebriation caused by substance consumption. ವಾ: ಹೆಂಡ ಕುಡ್ದಾಕನ ತಲೆಗೆ ಹತ್ತಿದ್.

ತಲೆಗೆಹತ್ತುದು /*talεgεhattudu*/ ಕ್ರಿವಿ. 1. ಅರ್ಥವಾಗುವುದು, 2. ಹೊರೆಯನ್ನು ಕೈಯಿಂದ ಎತ್ತಿ ಇನ್ನೊಬ್ಬನ ತಲೆಗೇರಿಸಲು ಸಹಕರಿಸುವುದು, 3. ಮಾದಕ ದ್ರವ್ಯಗಳ ಸೇವನೆಯಿಂದ ಅಮಲು ಬರುವುದು. 1. to understand, 2. helping others to carry the load, 3. to get intoxicated by consuming intoxicants. ವಾ: ಅಂವಂಗೆ ಪಾಟ ತಲೆಗೆ ಹತ್ತುದು ಕಮ್ಮಿ.

ತಲೆಗೆಹೊಕ್ಕುದು /*talεgεhokkudu*/ ಕ್ರಿವಿ. 1. ತಲೆಯೊಳಗೆ ಹೋಗುವುದು, 2. ಅರ್ಥವಾಗುವುದು, 3. ಮನವರಿಕೆಯಾಗುವುದು. 1. to enter one's mind, 2. to understand, 3. to get convinced.

ತಲೆಗೊಂದ್ ಮಾತಾಡ್ /*talεgondi ma:ta:ḍi*/ ನಾವಿ. 1. ಇಷ್ಟ ಬಂದಂತೆ ಮಾತಾಡು, 2. ಮನಬಂದಂತೆ ಮಾತನಾಡುವುದು. 1. to babble, 2. to talk nonsense. ವಾ: ಜೆನ ತಲೆಗೊಂದ್ ಮಾತಾಡುದು.

ತಲೆತಿರ್ಗುದು /*talεtirgudu*/ ಕ್ರಿ. 1. ತಲೆಸುತ್ತುವಿಕೆ, 2. ಬವಳಿ ಬರು. 1. feeling dizzy, 2. feeling tired. ವಾ: ಪಿತ್ತಕೆ ತಲೆ ತಿರ್‌ಗುದು.

ತಲೆದಂಬು/ ದಿಂಬು /*talεdambu/ dimbu*/ ನಾ. ತಲೆದಿಂಬು. a pillow. ವಾ: ತಲೆದಿಂಬುನ ಇತ್ತ ಕೊಡ್.

ತಲೆನೀರ್ ಒಡ್ಯೊದು /*talεni:ri oḍyodu*/ ಕ್ರಿವಿ. ಹೆರಿಗೆಯ ಸಂದರ್ಭದಲ್ಲಿ ಮಾಸು ಒಡೆದು ನೀರು ಹರಿಯುವುದು. to burst (as amnios) and eject fluid. ವಾ: ಹೆರಿಗೆಗೆ ಮುಂದೆ ತಲೆನೀರ್ ಒಡ್ಯೊದು.

ತಲೆನೀರ್[1] /*talεni:ri*/ ನಾ. ಬೆಟ್ಟದ ತುದಿಯಿಂದ ಇಳಿದುಬರುವ ನೀರಿನ ಒರತೆ. a spring that originates on top of a hill irrigating the lowlands. ವಾ: ತಲೆನೀರ್ ನೋಡಿಕೆ ಕುಸಿ ಆದು.

ತಲೆನೀರ್[2] /*talεni:ri*/ ನಾ. ಪ್ರಸವಕ್ಕೆ ಮೊದಲು ಗರ್ಭಕೋಶದಿಂದ ಹೊರಹರಿಯುವ ನೀರು. the

amniotic fluid. ವಾ: ತಲೆನೀರ್ ಹೋದ ಮೇಲೆ ಹೆರಿಗೆ ಆದು.

ತಲೆಪಟ್ಟ /*talɛpaṭṭa*/ ನಾ. 1. ಭೂತ ನರ್ತಕನ ಶಿರೋಭೂಷಣ, 2. ಭೂತ ನರ್ತಕ ಹಣೆಯ ಮೇಲ್ಭಾಗದಲ್ಲಿ ಅಥವಾ ತಲೆಗೆ ಕಟ್ಟಿಕೊಳ್ಳುವ ಕಿರೀಟಾಕೃತಿಯ ಆಭರಣ. 1. a headdress/ headpiece worn on the forehead or on the head by the impersonator of Bhuta/deity, 2. a crown like jewellery worn by bhuta/ deity impersonator. ವಾ: ಬೂತ ಕೋಲ ಕಟ್ಟಿಕನ ತಲೆಪಟ್ಟ ಕಟ್ಟುವೆ.

ತಲೆಪಳ್ಳ /*talepaḷḷa*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಆಲೆಟ್ಟಿ ಗ್ರಾಮದ ಜಾಗ. a locality in Aletti village in Sullia Taluk of Dakshina Kannada District.

ತಲೆಪಾಸಿ /*talɛpa:si*/ ನಾ. ಮೂಗಿನಲ್ಲಿ ಹಾಗೂ ಒಸಡಿನಲ್ಲಿ ರಕ್ತಸ್ರಾವವಾಗುವ ಒಂದು ತರದ ಕಾಯಿಲೆ. a disease which causes bleeding in the nose or gums;Sinusitis. ವಾ: ಅವ್‌ಕೆ ತಲೆಪಾಸಿತ ಹೇಳ್ತಿದ್ದೊ.

ತಲೆಪಾಳಿ /*talɛpa:ḷi*/ ನಾ. ಮರಣ ಹೊಂದಿದ ವ್ಯಕ್ತಿಯ ಉತ್ತರ ಕ್ರಿಯಾದಿ ಸಂಸ್ಕಾರಗಳನ್ನು ನಿರ್ವಹಿಸಲು ನಿಲ್ಲುವವ. a lead mourner, the son who performs the rituals at the time of obsequial ceremony. ವಾ: ಅಂವ ತಲೆಪಾಳಿಗೆ ನಿತ್ತದ್.

ತಲೆಬರಹ /*talɛbaraha*/ ನಾ. 1. ಹಣೆ ಬರೆಹ, 2. ಅದೃಷ್ಟ, 3. ವಿಧಿ. 1. destiny (as believed to have been written on the forehead), 2. luck, 3. fate. ವಾ: ಕತೆನ ತಲೆಬರಹ ಓದಿನೆ ಕುಸಿಯಾತ್.

ತಲೆಬಾಚಿ /*talɛba:ci*/ ನಾ. ತಲೆಕೂದಲನ್ನು ಬಾಚಿ. to comb hair. ವಾ: ತಲೆಬಾಚಿ ಹೂವ್ ಮುಡ್ಯಕು.

ತಲೆಬಿಸಿ /*talɛbisi*/ ಕ್ರಿವಿ. 1. ಚಿಂತೆ, 2. ಕೆಲಸದ ಒತ್ತಡ. 1. anxiety, 2. work related stress. ವಾ: ತಲೆಬಿಸಿ ಮಾಡಿರೆ ಯಾವ ಕೆಲ್ಸನು ಮಾಡಿಕಾದುಲೆ.

ತಲೆಬುಡ /*talɛbuḍa*/ ನಾವಿ. 1. ಆ ತುದಿ ಈ ತುದಿ ತಿಳಿಯದ, 2. ಆ ಕಡೆ ಈ ಕಡೆ ಗೊತ್ತಿಲ್ಲದ, 3. ಏನೂ ತಿಳಿಯದ. 1. not knowing either of the ends, 2. not having any knowledge, 3. clueless. **ಒಂದಕ್ಕೂ ತಲೆಬುಡ ಇಲ್ಲೆ(ನು).** ವಾ: ತಲೆಬುಡ ಒಂದೂ ಗೊತ್‌ಲೆ.

ತಲೆಬುರುಡೆ /*talɛburuḍɛ*/ ನಾ. ತಲೆಯ ಅಸ್ಥಿಪಂಜರ. skull. ವಾ: ಸುಮ್ಮನಿರ್, ನಿನ್ನ ತಲೆಬುರುಡೆ.

ತಲೆಬೇನೆ /*talɛbɛ:nɛ*/ ನಾ. ತಲೆನೋವು. headache. ವಾ: ತಲೆಬೇನೆ ಯಾಗೊಲು ಇದ್ದದೆ.

ತಲೆಬೋಳ್ಸ್ /*talɛbɔ:ḷsɨ*/ ಕ್ರಿವಿ. 1. ತಲೆಗೀಸುವುದು, 2. ಮೋಸಮಾಡು. 1. to cheat someone, 2. deceive. ವಾ: ಜೊತೆಲಿದ್ದ್ ಕಂಡೆ ಅಂವನ ತಲೆಬೋಳ್ಸಿತ್.

ತಲೆಮಟ್ಟೆ /*talɛmaṭṭɛ*/ ನಾ. 1. ತಲೆದಿಂಬು, 2. ತಲೆಗೆ ಆಸರೆಯಾಗಿ ಇಟ್ಟುಕೊಳ್ಳುವ ದಿಂಬು. 1. a pillow, 2. cushion used below the head. ವಾ: ತಲೆಮಟ್ಟೆ ಹತ್ತಿದಾ ಇಲ್ಲೆ ಚೇರಿದಾ? ಪ: ತಲೆಮೊಟ್ಟೆ – ತಲೆದಿಂಬು

ತಲೆಮಾರ್ /*talɛma:rɨ*/ ನಾ. 1. ವಂಶಾವಳಿ, 2. ಪೀಳಿಗೆ, 3. ವಂಶಾನುಕ್ರಮ. 1. a lineage, 2. a generation, 3. ancestry. ವಾ: ಇದ್ ತಲೆಮಾರ್‌ಂದ ಬಂದ ಆಸ್ತಿ.

ತಲೆಮೇಲೆ ಕುದ್ದ್‌ರ್ದು /*talɛme:lɛ kuddrdu*/ ನಾ. 1. ಸಲಿಗೆ, 2. ಸದರ. 1. intimacy, 2. leniency. **ವಿಸಯ ಗ್ರೇಸಿರೆ ಸಣಪ ತಲೆಗೆ ಮರ ಬಿದ್ದಂಗೆ ಆದೆ(ನು).** ವಾ: ಹಣ್ಣ ಮೆತ್ತಂಗೆ ಮಾತಾಡಿರೆ ಜೆನ ತಲೆಮೇಲೆ ಕುದ್ದ್‌ರ್ದು.

ತಲೆಮೈ /*talɛmai*/ ನಾ. ತಲೆ ಮತ್ತು ಮೈ. head and body. ವಾ: ತಲೆಮೈ ಮೀಯಿ.

ತಲೆಲಿ /*talɛli*/ ನಾ. ತಲೆಯಲ್ಲಿ, in the head. ವಾ: ತಲೆಲಿ ನೂರಾರ್ ನೆಂಪುಗ ಬಂದ್ ಹೋದೆ.

ತಲೆಲಿ ಏನೋ ಉಟ್ಟು /*talɛli ɛ:no: uṭṭu*/ ಕ್ರಿವಿ. ಅಹಂಕಾರದಿಂದ ಮೆರೆಯು. a feeling of contempt or disdain for others. **ತಲೆಲಿ ಏನೋ ಉಟ್ಟು(ನು).** ವಾ: ಅಂವನ ತಲೆಲಿ ಏನೋ ಉಟ್ಟು.

ತಲೆವಸ್ತ್ರ /*talɛvastra*/ ನಾ. ಹಳ್ಳಿಗಳಲ್ಲಿ ಹೊರಗೆ ಕೆಲಸ ಮಾಡುವಾಗ ಸ್ತ್ರೀಯರು ತಲೆಗೆ ಕಟ್ಟಿಕೊಳ್ಳುವ ಬಟ್ಟೆ. a towel tied around the head by women in villages while working. ವಾ: ತಲೆವಸ್ತ್ರ ಎಲ್ಲಿ ಬಿದ್ದೋತ್‌ತ?

ತಲೆಶೂಲೆ /*talɛśu:lɛ*/ ನಾ. 1. ತಲೆಬೇನೆ, 2. ತಲೆ ನೋವು. 1. headache, 2. migraine. ವಾ: ತಲೆಶೂಲೆ ಕಮ್ಮಿನೆ ಆತ್‌ಲೆ.

ತಲೆಸವ್‌ರ್ /*talɛsavirɨ*/ ನಾ. 1. ತಲೆ ನೇವರಿಸಿ, 2. ತಲೆ ಸವರಿ. 1. to touch one's head gently, 2. to pat on the head. ವಾ: ತಲೆಸವ್ರಿ ನೋಡ್ಡ್.

ತಲೆಸುತ್ತುದು /*talɛsuttudu*/ ನಾ. 1. ತಲೆ ಸುತ್ತುವಿಕೆ, 2. ತಲೆ ಸುತ್ತು ಬರು, 3. ತಲೆ ತಿರುಗುವುದು. 1. feeling dizzy, 3. feeling giddy, 3. feeling vertiginous. ವಾ: ತಲೆಸುತ್ತುದು ನಿತ್ತತ?

ತಲೆಹರ್‌ಟೆ /*talɛhariṭɛ*/ ನಾ. ತಲೆ ಹರಟೆ. jabbering/ gabbling. ವಾ: ತಲೆಹರ್‌ಟೆ ಮಾತಾಡ್‌ದೆ, ಬೇಡಾದ್ದೇ ಮಾತ್.

ತಲೆಹಾಕ್ /*talɛha:kɨ*/ ನಾ. ಗಮನಕೊಡು. to focus/ to concentrate. ವಾ: ಇಂದಾ ನಾ ಮನೆ ಕಡೆ ಇಲ್ಲೆ, ತೋಟದ ಕಡೆ ತಲೆ ಹಾಕ್.

ತಲೆಹಿಡ್‌ಕ /*talɛhiḍika*/ ನಾ. 1. ತಲೆ ತಿನ್ನು, 2. ಕಿರಿಕಿರಿ ಮಾಡು. 1. to irritate, 2. annoy. ವಾ: ತಲೆಹಿಡ್ಕ ಬಾತಲ.

ತಲೆಹೋಕ /*talɛho:ka*/ ನಾ. 1. ಪುಂಡ, 2. ಘಟಿಂಗ. 1. a. mischievous person, 2. a naughty person. ವಾ: ತಲೆಹೋಕ ಎಲ್ಲಿ ಹೋತು ಕಾಂಬಲೆ? ಪ: ತಲೆಹೋಕರ್ – ಪುಂಡರು

ತಲ್ಪ್ /*talpɨ*/ ಕ್ರಿ. 1. ತಲುಪು, 2. ಸೇರು. 1. to reach, 2. to join. ವಾ: ಬೇಗ ಕಾಲೇಜಿಗೆ ತಲ್ಪ್.

ತಲ್ಲು /*tallu*/ ಕ್ರಿ. ತಲಪು. to reach. ವಾ: ಅಲ್ಲಿಂದ ಬಂದ್ ತಲ್ಲುಟು.

ತಲ್ವಾರ್ /*talva:rɨ*/ ನಾ. ಉದ್ದನೆಯ ಕತ್ತಿ, ಖಡ್ಗ. a long knife, a sword. ವಾ: ತಲ್ವಾರ್ ಹಿಡ್ಕಂಡ್ ಎತ್ತ ಕಡೆ ಹೊರ್‌ಟದ್.

ತವರ್ /*tavarɨ*/ ನಾ. 1. ತವರು, 2. ಹುಟ್ಟಿದ ಮನೆ, 3. ಜನಿಸಿದ ಮನೆ, 4. ತಂದೆ ತಾಯಿಗಳ ಮನೆ. 1. parent's home, 2. a house where one is born, 3. a house of birth, 3. house of one's father and mother. ವಾ: ಹೆಣ್ಮಕ್ಕಳಿಗೆ ತವರು ಮನೆತೇಳ್ರೆ ಕುಸಿ.

ತವರ್ಮನೆ /*tavarmanɛ*/ ನಾ. 1. ತವರು ಮನೆ, 2. ತವರು, 3. ಹುಟ್ಟಿದ ಮನೆ, 4. ಜನಿಸಿದ ಮನೆ, 5. ತಂದೆ ತಾಯಿಗಳ ಮನೆ. 1. parent's home, 2. a house where one is born, 3. a house of birth, 3. house of one's father and mother. ವಾ: ನಂಗೆ ತವರ್ಮನೆನೆ ಇಲ್ಲೆ.

ತವೆಮರ /*tavɛmara*/ ನಾ. ಗದ್ದೆ ಉತ್ತ ಮೇಲೆ ಗದ್ದೆಯನ್ನು ಸಮತಟ್ಟು ಮಾಡಲು ಈ ಮರದ ಹಲಗೆಯನ್ನು ಉಪಯೋಗಿಸುವರು. a rammer, a wooden plank used in flattening the paddy field after ploughing. ವಾ: ಗದ್ದೆನ ಸಮತಟ್ಟ್ ಮಾಡಿಕೆ ತವೆ ಮರನ ಬಳ್‌ಸುವೆ.

ತಳಮನೆ /*taḷamanɛ*/ ನಾ. 1. ತರವಾಡು ಮನೆ, 2. ಐನ್ ಮನೆ. 1. an ancestral house, 2. Ain mane. ವಾ: ತಳ ಮನೆ ಬಾರಿ ದೊಡ್ಡದ್, ಅಲ್ಲಿ ಎಲ್ಲೊವು ಒಟ್ಟಿಗೆ ಇರ್‌ದು.

ತಳಕಟ್ಟ್ /*taḷakaṭṭɨ*/ ನಾ. 1. ಅಡಿಪಾಯ, 2. ಕಟ್ಟಡ ಭದ್ರವಾಗಿ ನಿಲ್ಲಲು ನೆಲದಲ್ಲಿ ಅಗೆದು ನಿರ್ಮಿಸಿದ ಗಟ್ಟಿನೆಲ, 3. ಅಸ್ತಿಭಾರ, 4. ಬುನಾದಿ, 5. ತಳಹದಿ. 1. a foundation, 2. a solid underground base for a building, 3. bedrock, 4. base, 5. ground work. ವಾ: ಹೊಸ ಮನೆಗೆ ತಳಕಟ್ಟ್ ಹಾಕಿದೊ.

ತಳಕ್ /*taḷakɨ*/ ನಾ. 1. ತಳಕು, 2. ಹೊಳಪು, 3. ಒನಪು, 4. ಕಾಂತಿ, 5. ಒಯ್ಯಾರ, 6. ಮಿನುಗು. 1. glamour, 2. shine, 3. vanity, 4. radiance, 5. flirtatious, 6. twinkle. ವಾ: ಅವಳ್‌ದ್ ಹೊರೆಗೆ ಬರಿ ತಳಕ್.

ತಳಲೆ /*taḷalɛ*/ ನಾ. 1. ತಳ, 2. ಅಡಿ, 3. ಪಾತ್ರೆಯ ಅಡಿಭಾಗ. 1. bottom, 2. lowest part, 3. bottom of a vessel. ವಾ: ಕೊಡಪಾನ ತಳಲೆ ಮಣ್ಣ್ ನಿತ್ತುಟು.

ತಳಿ^{1} /*taḷi*/ ನಾ. 1. ಅನ್ನದ ಗಂಜಿ, 2. ಅನ್ನ ಬಸಿದ ನೀರು. 1. rice gruel, 2. strained excess water of boiled/cooked rice, 3. variety/type. ವಾ: ತಳಿನ ದನಕೆ ಇಸ್. ಪ: ತೆಳಿ

ತಳಿ^{2} /*taḷi*/ ನಾ. ಪ್ರಭೇದ. a breed/a variety. ವಾ: ಒಳ್ಳೆ ತಳಿದ್ ಹಸ್ ಅದ್.

ತಳಿಯಕ್ಕಿ ಬೊಳಕ್ /*taḷiyakki boḷakɨ*/ ನಾ. ಶುಭ ಕಾರ್ಯಕ್ರಮಗಳಲ್ಲಿ ತಟ್ಟೆಯಲ್ಲಿ ಅಕ್ಷತೆಯನ್ನು ಹಾಕಿ

ಅದರ ಮೇಲೆ ದೀಪ ಇಡುವುದು. a custom of keeping a lamp on the turmeric mixed rice in a platter during auspicious occasions. ವಾ: ಸುಬ ಕಾರ್ಯಗಳ್‌ಲಿ ತಳಿಯಕ್ಕಿ ಬೊಳಕ್‌ನ ಇಸುವೆ.

ತಳೂರು /*taḷu:ru*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ದೇವಚಳ್ಳ ಗ್ರಾಮದ ಜಾಗ. 1. family, 2. lineage, 3. a locality in Devacalla village in Sullia Taluk of Dakshina Kannada District.

ತಳ್ /*taḷɨ*/ ಕ್ರಿ. ದೂಡು. to push. ವಾ: ನನ್ನ ತಳ್‌ಬಡ. ಪ: ತಳ್ಳ್

ತಳ್ಂಗದೆ /*taḷɨŋgadɛ*/ ಕ್ರಿ. ತಳಸೇರದೆ. has reached the bottom.

ತಳ್ಕಣಿ /*taḷkaṇi*/ ಕ್ರಿ. ತಿಳಿದುಕೊಳ್ಳಿ. to become aware. ವಾ: ವಿಸ್ಯನ ತಳ್ಕಣಿ, ಮತ್ತೆ ಮಾತಾಡಿ.

ತಳ್ಮೆ /*taḷmɛ*/ ನಾ. 1. ಪಾಲ, 2. ಸೇತುವೆ. a bridge. ವಾ: ಹೆಂಗೊ ತಳ್ಮೆಲಿ ದಾಟಿ ಬಂದೊ. ಪ: ತಡ್ಮೆ

ತಳ್ಯೋದುಲ್ಲೆ /*taḷyo:dullɛ*/ ನಾ. 1. ತಿಳಿಯದಿರುವುದು, 2. ಅರಿವಾಗದಿರುವುದು. 1. unknown, 2. unaware. ವಾ: ಎಂತ ಮಾತಾಡೋಕುತ ತಳ್ಯೋದುಲ್ಲೆ.

ತಳ್ಳನೆ /*taḷḷane*/ ನಾ. 1. ತೆಳುವಾದ, 2. ತೆಳ್ಳಗೆ. 1. thin, 2. lean. ವಾ: ತಳ್ಳನೆ ಅರ್ವೆ ಹಾಕಿ ಸೆಳಿ ಆಗ್‌ತಾ ಉಟ್ಟು. ಪ: ತೆಳ್ಳನೆ – ತೆಳ್ಳಗೆ

ತಳ್ಳಿ /*taḷḷi*/ ನಾ. 1. ಒಂದು ಕಡೆಗೆ ತಳ್ಳು, 2. ನೂಕು, 3. ಪಕ್ಕಕ್ಕೆ ಸರಿಸು. 1. to push, 2. to shove, 3. to keep aside. ವಾ: ನನ್ನ ತಳ್ಳಿ ಹಾಕಿದ್. ಪ: ತಳ್ಳಿಕೆತ – ತಳ್ಳಲೆಂದು; ತಳ್ಳುದು – ತಳ್ಳುವುದು

ತಳ್ಳೆ[1] /*taḷḷɛ*/ ನಾ. 1. ಹಾರೆ, ಪಿಕ್ಕಾಸುಗಳಿಗೆ ಹಾಕುವ ಹಿಡಿ, 3. ಕಾವು. 1. handle of a pick-axe, 2. a handle. ವಾ: ಕೊಟ್ಟುಗೆ ತಳ್ಳೆ ಹಾಕುದು.

ತಳ್ಳೆ[2] /*tallɛ*/ ನಾ. 1. ಹಿಡಿ 2. ಹಾರೆಯ ಹಿಡಿ. 1. a handle, 2. hanlde of crow-bar. ವಾ: ಕೊಟ್ಟುಗೆ ತಳ್ಳೆ ಹಾಕಿಕೆ ಉಟ್ಟು.

ತಳ್ಳ್ /*taḷḷɨ*/ ಕ್ರಿ. 1. ದೂಡು, 2. ತಳ್ಳು, 3. ನೂಕು. 1. to push, 2. to shove, 3. hustle. ವಾ: ಬಾಗ್‌ಲ್‌ನ ತಳ್ಳ್.

ತಾ[1] /*ta:*/ ಕ್ರಿ. ತೆಗೆದುಕೊಂಡು ಬಾ. bring it. ವಾ: ಮಿಟಾಯಿ ನಂಗೆ ತಾ. ಪ: ತಾಯ – ತಾರೊ, ತಾರೇ;

ತಾ[2] /*ta:*/ ಸನಾ. ತಾನು. me/my/myself. **ತಾ ಕಳ್ಳ ಪರರ ನಂಬ(ನು).** ವಾ: ನೀ ದುಡ್ಡು ತಾ.

ತಾಂಗಿ /*ta:ŋgi*/ ನಾ. 1. ತಾಗಿ, 2. ತಗಲು. 1. to touch, 2. to come into contact, 3. to strike. ವಾ: ಗೋಡೆಗೆ ತಾಂಗಿ ನಿತ್ತೆ. ಪ: ತಾಂಗಿಕನ – ತಾಗುವಾಗ; ತಾಂಗಿತ್ – ತಾಗಿತು; ತಾಂಗಿದೆ – ತಾಗಿದೆ; ತಾಗಿದ್ – ತಾಗಿದ್ದು; ತಾಂಗ್ – ತಾಗು, ತಗಲು; ತಾಂಗ್ – ಒರಗು; ತಾಂಗ್‌ತಿತ್ತ್ – ತಾಗುತ್ತಿತ್ತು

ತಾಂಗಿತ್ /*ta:ŋgitɨ*/ ಕ್ರಿ. ಗಾಯವಾಯಿತು. wounded. ವಾ: ತಂತಿ ತಾಂಗಿ ಗಾಯ ಆತ್.

ತಾಂಗು /*ta:ŋgu*/ ಕ್ರಿ. 1. ತಗಲು, 2. ತಾಗು. 1. to touch, 2. to come into contact, 3. to strike. **ತಾಂಗುವ ಮುಂದೆ ಬೊಗ್ಗುದ್ ಒಳ್ಳದ್(ಗಾ).** ವಾ: ಮರದ ಗೆಲ್ಲ್ ತಲೆಗೆ ತಾಂಗುದು.

ತಾಂಗ್[1] /*ta:ŋgɨ*/ ನಾ. 1. ಆಧರಿಸು, 2. ಆಧಾರಕೊಡು, 3. ತಾಳು, 4. ಸಹಿಸು, 5. ತಡೆದುಕೊಳ್ಳು, 6. ಆಧಾರಕೊಡಲಿಕ್ಕಾಗಿ ಕೈಚಾಚು. 1. to depend on, 2. to offer support, 3. to tolerate, 4. to bear, 5. to resist, 6. to offer one's hand to support. ವಾ: ಪಾಲ ದಾಟಕನ ಕೈತಾಂಗ್ ಹಿಡ್‌ಕ.

ತಾಂಗ್[2] /*ta:ŋgɨ*/ ಕ್ರಿ. 1. ಬೆಂಬಲಿಸು, 2. ಆಧಾರವಾಗಿ ನಿಲ್ಲು, 3. ಸಹಾಯ ಮಾಡು. 1. to support, 2. to standby, 3. to help.

ತಾಂಗ್[3] /*ta:ŋgɨ*/ ಕ್ರಿ. ತಾಗು. to touch. ವಾ: ಕಟ್ಟಳೆ ತಲೆಗೆ ತಾಂಗುದು ದಾಟಿಕನ ನೋಡಿಕ.

ತಾಂಗ್ಸುದು /*ta:ŋgsudu*/ ಕ್ರಿ. ತಗುಲಿಸು. to touch/to lean. ವಾ: ಕಾಲ್‌ನ ತಾಂಗ್ಸುದು.

ತಾಂಟಿ /*ta:ṇṭi*/ ಕ್ರಿ. 1. ತಾಗಿ, 2. ತಗಲಿ, 3. ತಾಕು, 4. ಸೋಂಕು. 1. touching, 2. to touch, 3. to come into contact, 4. infection. ವಾ: ಅವೆಲ್ಲ ಮರಕೆ ತಾಂಟಿ ನಿತ್ತಿದ್ದೊ. ಪ: ತಾಂಟಿಕಂಡ್ – ತಾಗಿಕೊಂಡು

ತಾಂಟ್[1] /*ta:ṇṭi*/ ಕ್ರಿ. ತಾಗು. to touch. ವಾ: ಹಣ್ಣ್‌ನ ಮರಕೆ ಕರೆಂಟ್ ವಯರ್ ತಾಂಟ್‌ದು.

ತಾಂಟ್[2] /*ta:ṇṭi*/ ಕ್ರಿ. 1. ಜಗಳವಾಡು, 2. ಸೆಣಸಾಡು. 1. to quarrel 2 to fight. ವಾ: ಮನೆಲಿ ಯಾಗೊಳು ಅಣ್ಣ ತಂಗೆ ತಾಂಟ್‌ದು. ಪ: ತಾಂಟಿಕೆ – ಜಗಳವಾಡಲು

ತಾಂಬ್ರ /*ta:mbra*/ ನಾ. 1. ತಾಮ್ರ, 2. ಕೆಂಪು ಬಣ್ಣದ ಒಂದು ಲೋಹ, 3. ಆವರ್ತ ಕೋಷ್ಟಕದ ಒಂದನೆಯ ಗುಂಪಿನಲ್ಲಿ ಬರುವ ಉಜ್ವಲ ಕೆಂಪುಛಾಯೆಯ ಲೋಹಧಾತು. 1. copper, 2. reddish brown metal, 3. Cu, chemical element, a reddish, ductile metal of Group 11. ವಾ: ತಾಂಬ್ರದ್ ಮಡ್‌ಕೆ ಹೊಸ್ತ?

ತಾಕತ್[1] /*ta:katɨ*/ ನಾವಿ. 1. ಸಾಮರ್ಥ್ಯ, 2. ಗಟ್ಟಿ ಜೀವ. 1. capacity, 2. strong person /stubborn. ವಾ: ನನ್ನ ತಾಕತ್ ಎಂತತ ತೋರ್‌ಸಿನೆ.

ತಾಕತ್[2] /*ta:katɨ*/ ನಾ. ತುಂಬಾ ಆಸ್ತಿ ಇದ್ದವರು. wealthy. ವಾ: ತಾಕತ್ ಇದ್ದವ್ಕೆ ಚಿಂತೆ ಇಲ್ಲೆ.

ತಾಕೆ /*ta:kɛ*/ ಕ್ರಿ. 1. ತರುವುದಕ್ಕೆ, 2. ತರಲು, 3. ತರಲಿಕ್ಕೆ. 1. to bring, 2. to get, 3. bring about. **ಕಂಡಲ್ಲಿಂದ ಹೆಣ್ಣ್ ತಾಕಾಗದ್ ಉಂಡ ಮನೆಲಿ ಮಲ್ಗಿಕಾಗದ್(ಗಾ).** ವಾ: ಬಾಮಿಂದ ನೀರ್ ತಾಕೆ ಹೋದ್. **ತಾಕನ** /*ta:kana*/ 1. ತರುವಾಗ, 2. ತೆಗೆದುಕೊಂಡು ಬರುವಾಗ. 1. while bringing, 2. while getting. ವಾ: ಹಾಲ್ ತಾಕನ ದಾರಿಲಿ ಅತ್ತಿಗೆ ಸಿಕ್ಕಿದೊ.

ತಾಕ್ ಕಂಬ /*ta:kɨ kamba*/ ನಾ. ಹೆಣ ಬೀಳದಂತೆ 4 ಅಡಿ ಅಂತರ ಅಡ್ಡವಾಗಿ 2 ಅಡಿ ಅಂತರದಲಿ 4 ಕಂಬಗಳನ್ನು ಊರುವುದು. to fix 4 poles around the dead body to avoid it from falling off. ವಾ: ತಾಕ್ ಕಂಬಗಳ್ನ ಊರ್‌ದು. ಪ: ತಾಂಗ್‌ಕಂಬ

ತಾಗಿ /*ta:gi*/ ನಾ. 1. ತಾಗಿ, 2. ತಗಲು, 3. ಪೆಟ್ಟು. 1. to touch, 2. to come into contact, 3. to strike. ವಾ: ಉಬ್ಬುಲು ತಾಗಿ ಬೇನೆ. ಪ: ತಾಗಿದ್ – ತಾಗಿದ್ದು;

ತಾಗ್ಯಂಡ್ /*ta:gyaṇḍɨ*/ ಕ್ರಿ. ತಗುಲಿಕೊಂಡು. touching/leaning. ವಾ: ಕೋಸಿಸಿದ ಬ್ಯಾಗ್ ತಲೆಗೆ ತಾಂಗೆಂಡ್ ಇತ್ತ್. ಪ: ತಾಂಗೆಂಡ್ – ತಾಗಿಕೊಂಡು

ತಾಟಕಿ /*ta:ṭaki*/ ನಾವಿ. 1. ತಾಟಗಿತ್ತಿ, 2. ಗಯ್ಯಾಳಿ. 1. a quarrelsome woman, 2. an ill-tempered woman. ವಾ: ಅದೊಂದ್ ತಾಟಕಿ ಹೆಣ್ಣ್.

ತಾಟ್ /*ta:ṭi*/ ನಾ. 1. ತಾಟು, 2. ಕಾಫಿ ಕುಯ್ಯುವಾಗ ನೆಲದ ಮೇಲೆ ಬೀಳದಂತೆ ಬಳಸುವ ದೊಡ್ಡ ಪ್ಲಾಸ್ಟಿಕ್ ಹಾಳೆ. 1. a large sheet, 2. a big plastic sheet spread around the coffee plant so that coffee beans don't fall on to the ground. ವಾ: ತಾಟ್ ಹಾಕಿ ಕಾಪಿ ಕೊಯ್ಯದು.

ತಾಡಿ /*ta:ḍi*/ ನಾ. ಗಡ್ಡ. beard. ವಾ: ಯಾಕೆ ಇಷ್ಟುದ್ದ ತಾಡಿ ಬುಟ್ಟದ್.

ತಾಣಿ ಮರ /*ta:ṇi mara*/ ನಾ. ದೊಡ್ಡ ಜಾತಿಯ ಕಾಡು ಮರ. a big, forest tree. ವಾ: ತಾಣಿ ಮರ ಬೆಳ್ದುಟು.

ತಾದು[1] /*ta:du*/ ಕ್ರಿ. 1. ತರುವುದು, 2. ತೆಗೆದುಕೊಂಡು ಬರುವುದು. 1. bringing, 2. carrying. ವಾ: ಹಬ್ಬಕೆ ಈಗ ಬಾಳೆದ್ಯೆನ ತಾದು.

ತಾದು[2] /*ta:du*/ ಕ್ರಿ. ತರಬಹುದು. can be brought. **ಗಂಡ ಸೀರೆ ತಾದುಂತ ಉಟ್ಟ ಸೀರೆನ ಕಿಚ್ಚಿಗೆ ಹಾಕಿದಂಗೆ(ಗಾ).** ವಾ: ಪೇಟೆಂದ ಬಾಕನ ತಿಂಡಿ ತಾದು.

ತಾನಿತಾನಿ[1] /*ta:ni ta:ni*/ ಅ. ಮಭಾ. 1. ಪುಟ್ಟ ಪುಟ್ಟ ಹೆಜ್ಜೆ ಹಾಕಿ ಬಾ, 2. ಚಿಕ್ಕ ಮಕ್ಕಳಿಗೆ ಹೇಳುವ ಮಾತು. 1. to call a child affectionately, 2. calling a child. ವಾ: ತಾನಿ ತಾನಿ ಬಾ. **ತಾನಿತಾನಿ ನೆಡ್ಯದು** /*ta:ni ta:ni neḍyadu*/ ಪುಟ್ಟ ಮಗುವಿನ ಮೊದ ಮೊದಲ ಹೆಜ್ಜೆ. first steps of a child. ವಾ: ಕೂಸು ತಾನಿ ತಾನಿ ನೆಡ್ಯದು.

ತಾನಿತಾನಿ[2] /*ta:nita:ni*/ ಅ. ಮಭಾ. ನಡೆಯುವುದು. walking (in the vocabulary of children).

ತಾನು /*ta:nu*/ ಸನಾ. 1. ನಾನು. I/me. ವಾ: ತಾನು ತಿಂಬೊಲೆ,ತಿಂಬೊವ್ನ ಬುಡ್‌ದುಲೆ.

ತಾನೆ /*ta:ne*/ ನಾ. ಹೇಳಿದ್ದೆನಲ್ಲವೆ. have i not told? ವಾ: ನಾ ಹೇಳ್ದೆ ತಾನೆ ಅಲ್ಲಿಗೆ ಹೋದು ಬೇಡತ.

ತಾನ್ /*ta:nɨ*/ ಸನಾ. 1. ತಾನು, 2. ನಾನು. 1. I, 2. Me. ವಾ: ತಾನ್ ಆತ್ ತನ್ನ ಕೆಲ್ಸ ಆತ್ ತ ಇರ್‌ದು.

ತಾಪತ್ರಯ /*ta:patraya*/ ಕ್ರಿವಿ. 1. ತೊಂದರೆ, 2.

ಸಮಸ್ಯೆ. 1. trouble, 2. problem. ವಾ: ತಾಪತ್ರಯ ಮೊನ್ನಂಗೆ ಯಾಗೊಳು ಇರ್ದೆ ಅಲ.

ತಾಪತ್ರೆ /*ta:patrɛ*/ ಕ್ರಿ. 1. ತೊಂದರೆ, 2. ಸಮಸ್ಯೆ. 1. trouble, 2. problem. ವಾ: ತಾಪತ್ರೆಗ ಯಾಗ ಮುಗ್ದದೆ.

ತಾಪುಮಾಡ್[1] /*ta:pama:ḍi*/ ನಾವಿ. ಅವಮಾನಿಸುto insult. ವಾ: ಗಂಡ್‌ನ ಕಡೆವು ನಮ್ಮ ತಾಪುಮಾಡಿ ಮಾತಾಡ್ದೊ.

ತಾಪುಮಾಡ್[2] /*ta:puma:ḍʒ*/ ಕ್ರಿ. 1. ಕೀಳಾಗಿ ಕಾಣು, 2. ಕಡೆಗಣಿಸು. 1. to treat someone as inferior, 2. to ignore. ವಾ: ದುಡ್ಡಿಲ್ಲದ ಮೊನ್ನನ ಈ ಸಮಾಜಲಿ ತಾಪುಮಾಡ್‌ದು, ಇನ್ನೊಬ್ಬನ ತಾಪುಮಾಡಿಕಾಗದ್.

ತಾಮನೆ /*ta:manɛ*/ ನಾ. 1. ತಾಯಿಯ ಮನೆ, 2. ತವರುಮನೆ. 1. house of one's parent, 2. one's parent's house. ವಾ: ನಿಮ್ಮ ತಾಮನೆ ಯಾವ್‌ದ್?

ತಾಮರ ತೆಗಿಯದು /*ta:mara tɛgiyadu*/ ಕ್ರಿ. ಒಂದು ರೀತಿಯ ಚಿಕಿತ್ಸಾ ಕ್ರಮ, 'ಗೋಲಾಲುಂಬುಡ' ಗಿಡದ ರಸವನ್ನು ಸಂಗ್ರಹಿಸಿ ಸ್ನಾನ ಮಾಡುವಾಗ ತಲೆಗೆ ಹಾಕಿ ಚೆನ್ನಾಗಿ ತಿಕ್ಕಿ ನೊರೆಬರಿಸಿ ಆನಂತರ 'ಬಿಳಿಸರಳಿ'ಯ ಎಲೆಯನ್ನು ಬೇಯಿಸಿ ಮಾಡಿದ 'ಸರಳಿ'ಯಲ್ಲಿ ತೊಳೆಯುವುದು (ಶೀತ, ಪಿತ್ತದೋಷ ನಿವಾರಣೆಗಾಗಿ, ದೃಷ್ಟಿಶಕ್ತಿ ವರ್ಧಿಸುತ್ತದೆ). a particular treatment for curing the illness caused by bile. ವಾ: ತಾಮರ ತೆಗಿಯದುತೇಳಿರೆ ಸೀತ, ಪಿತ್ತ ಆದರೆ ಮಾಡೊ ಒಂದ್ ರೀತಿನ ಚಿಕಿತ್ಸಾ ಕ್ರಮ.

ತಾಮ್ರಾಣಿ /*ta:mra:ṇi*/ ನಾ. ಒಂದು ಬಗೆಯ ಔಷಧಿ ಗಿಡ, ದೊಡ್ಡಪತ್ರೆ. a medicinal plant. ವಾ: ತಾಮ್ರಾಣಿತೇಳ್‌ದು ಒಂದ್ ಮೊದ್ದ್ ನ ದೈ.

ತಾಯತ /*ta:yata*/ ನಾ. 1. ಉರ್ಕು, 2. ರಕ್ಷಾ ಮಂತ್ರವಿರುವ ಲೋಹ. 1. an amulet, 3. a talisman. ವಾ: ಎಲ್ಲೊವು ತಾಯತ ಕಟ್ಟಿಕಣಿ. ಪ: ತಾಯ್ತು

ತಾಯಮರ /*ta:yamara*/ ನಾ. ಗದ್ದೆ ಉತ್ತು ನಂತರ ಗದ್ದೆಯಲ್ಲಿರುವ ಮಣ್ಣನ್ನು ಸಮತಟ್ಟು ಮಾಡಲು ಬಳಸಲು ಬಳಸುವ ಮರದ ಪಟ್ಟಿ. a rammer, a wooden plank used to flatten paddy field. ವಾ: ತಾಯಮರದ ಹಲಗೆನ ಗದ್ದೆ ಹೂಡ್ದ ಮೇಲೆ ಸಮತಟ್ಟ್ ಮಾಡಿಕೆ ಬಳ್ಸುವೆ.

ತಾಯವ್ವ /*ta:yavva*/ ನಾ. ಅಜ್ಜಿ. grandmother. ವಾ: ತಾಯವ್ವಂಗೆ ನಡೆದು ಬಜ್ಜ ಆದೆ.

ತಾಯಿಮರ /*ta:yimara*/ ನಾ. ತವೆಮರ. a tree. ವಾ: ಸಮತಟ್ಟ್ ಮಾಡಿಕೆ ತಾಯಿ ಮರದ ಹಲಗೆ ಬೇಕಾದೆ.

ತಾಯಿವೀಳ್ಯ /*ta:yi vi:ḷya*/ ನಾ. ತಾಯಿಗೆ ಗೌರವ ಕೊಡುವ ವೀಳ್ಯ. a customary offering of betel leaves and areca nut to one's mother.

ತಾಯಿ[1] /*ta:yi*/ ನಾ. 1. ಮಸಿದ್ರವ, 2. ಕೆಂಪು, ಕಪ್ಪು, ಹಸಿರು ಬಣ್ಣದ ಶಾಯಿ. 1. ink, 2. red, black, green coloured ink. ವಾ: ತಾಯಿ ತಂಬ.

ತಾಯಿ[2] /*ta:yi*/ ನಾ. ಅಜ್ಜವ್ವ. mother. ವಾ: ತಾಯಿ ನಾವ್ಗೆಲ್ಲ ಕತೆ ಹೇಳ್ತಿದ್ದೊ.

ತಾಯಿಬೇರ್ /*ta:yibe:ri*/ ನಾ. 1. ತಾಯಿಬೇರು, 2. ಮರದ ಪ್ರಮುಖ ಬೇರು. 1. the taproot, 2. the main, primary root. ವಾ: ತಾಯಿಬೇರ್ಗೆ ಪೆಟ್ಟಾಕಾಗದ್.

ತಾರಾಪುರ /*ta:ra:pura*/ ನಾ. ನಕ್ಷತ್ರ. a star.

ತಾರಾಮಾರ /*ta:ra:ma:ra*/ ನಾ. 1. ಒಟ್ಟಾರೆ, 2. ಅವ್ಯವಸ್ಥೆ. 1. overall, 2. disorder. ವಾ: ಅಂದ್ ಅವು ನಂಗೆ ತಾರಮಾರ ಬೈದದ್.

ತಾರಿಕ್ /*ta:riki*/ ನಾ. ಎಪ. ದಿನಾಂಕ. date. ವಾ: ತಾರಿಕ್ ಎಸ್ಟಾತ್ ಇಂದಿಗೆ.

ತಾರಿತ್ತಡಿ /*ta:ritaḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ತಾರಿಪಡ್ಪು /*ta:ripaḍpu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ತಾರೀಕ್ /*ta:ri:ki*/ ನಾ. ಎಪ. ನಕ್ಷತ್ರ. date, star (an astronomical sign). ವಾ: ತಾರೀಕ್ ನೋಡೊಕು.

ತಾರೆ /*ta:rɛ*/ ನಾ. ಎಪ. ನಕ್ಷತ್ರ. date, star (an astronomical sign). ವಾ: ತಾರೆಗ ಆಕಾಸಲಿ ಕಂಡತ?

ತಾರೆಕಿ /*ta:rɛki*/ ನಾ. ನಕ್ಷತ್ರ. date, star (an astronomical sign). ವಾ: ತಾರೆಕಿ ಹೊಳ್ದೆ.

ತಾರ್ /*ta:r*/ ನಾ. 1. ಡಾಂಬರು, 2. ತಾರು, 3. ಪೆಟ್ರೋಲಿಯಂ ಅನ್ನು ಪರಿಷ್ಕರಿಸುವಾಗ ದೊರೆಯುವ ಚರಟ. 1. tarmac, obtained from coal and used in making roads, 2. asphalt, 3. a pertoleum by product. ವಾ: ರಸ್ತೆಗೆ ತಾರ್ ಹಾಕ್ಯೊಳೊ.

ತಾಲೂಕ್ /*ta:lu:kɨ*/ ನಾ. ಎಪ. ತಾಲ್ಲೂಕು. taluk. ವಾ: ಮಡಿಕೇರಿ ಒಂದ್ ತಾಲೂಕ್.

ತಾಲೆ /*ta:lɛ*/ ನಾ. 1. ತರುವುದಿಲ್ಲ, 2. ತರಲಾರೆ. 1. won't bring, 2. can't bring. ವಾ: ನಂಗಾದುಲೆ ನಾ ತಾಲೆ. ಪ: ತಾಂವ, ತಾವಂತ

ತಾವರೆ /*ta:varɛ*/ ನಾ. 1. ತಾವರೆ, 2. ಕಮಲದ ಹೂವು, 3. ಒಂದು ಜಲ ಪುಷ್ಪ. 1. lotus, a flower that grows on the surface of water, 2. lotus flower, 3. an aquatic flowers. ವಾ: ತಾವರೆನ ಕೆರೆಲಿ ನೋಡ್ದ್.

ತಾವರೆ ಕಾಸ್ಮಿ ಸೀರೆ /*ta:varɛ ka:smi si:rɛ*/ ನಾ. 1. ಕಮಲದ ಹೂವುಗಳಿರುವ ರೇಷ್ಮೆ ಸೀರೆ, 2. ಸಿಲ್ಕ್ ಸೀರೆ. 1. silk saree with designs of lotus flower, 2. silk saree. ವಾ: ಹಿಂದೆನ ಕಾಲಲಿ ತಾವರೆ ಕಾಸ್ಮಿ ಸೀರೆ ಉಡುದೆ ವಿಸೇಸ.

ತಾವೆಮರ /*ta:vɛ mara*/ ನಾ. ನಾಟಿ ಗದ್ದೆಯನ್ನು ಉಳುಮೆಯ ನಂತರ ಸಮತಟ್ಟು ಮಾಡುವ ಸಾಧನ. a rammer, used in flattening the paddy field after ploughing. ವಾ: ತಾವೆ ಮರದ ಹಲಗೆ ಬೇಕಿತ್.

ತಾವೊ /*ta:vɔ*/ ನಾ. ತರಬಹುದು. can bring. ವಾ: ಸಂತೆಂದ ಬಾಕನ ಎಂತಾರ್ ತಾವೊ.

ತಾಳ ಮದ್ದಳೆ/ಲೆ /*ta:ḷa maddaḷɛ/lɛ*/ ನಾ. 1. ರಂಗಸ್ಥಳ, 2. ವೇಷಧಾರಣೆ ಮುಂತಾದ ಪರಿಕರಗಳಿಲ್ಲದೆ ನಿರ್ವಹಿಸುವ ಒಂದು ಬಗೆಯ ಯಕ್ಷಗಾನ. 1. a theatre/a playhouse/a stage (where a play is performed), 2. a performative debate involving arthadhari (orators),Bhagavata and other musicians. ವಾ: ಅಲ್ಲಿ ದೂರಲಿ ತಾಳ ಮದ್ದಳೆ ನಡಿತುಟ್ಟು.

ತಾಳ[1] /*ta:ḷa*/ ನಾ. 1. ಒಲೆ ಬೆಲ್ಲ. liquid jaggery. ವಾ: ತಾಳಬೆಲ್ಲ ಆರೋಗ್ಯಕೆ ಒಳ್ಳೆದ್.

ತಾಳ[2] /*ta:ḷa*/ ನಾವಿ. 1. ಭಜನೆ ತಾಳ, 2. ಭಜನೆ ಹೇಳುವಾಗ ಬಳಸುವ ತಾಳ. 1. a cymbal, 2. cymbals, used while singing devotional songs. **ಗಂಡನ ತಾಳಕ್ಕೆ ಹೆಣ್ಣ್ ನ ಮೇಳ(ಗಾ).** ವಾ: ಬಜನೆ ಮಾಡಿಕನ ತಾಳ ಹಾಕಿವೆ.

ತಾಳಿ /*ta:ḷi*/ ನಾ. 1. ಮಾಂಗಲ್ಯ, 2. ಮಂಗಳ ಸೂತ್ರ. 1. an ornament indicating auspiciousness, 2. a chain or a necklace with a golden disc worn by an Indian woman to indicate the marital status. **ಪೋಲಿ ಮುಂಡೆಗೆ ತಾಳಿಕಟ್ಟಿರೆ, ಪೋಲಿ ಪೋಲಿನೆ ತಾಳಿ ತಾಳಿನೆ(ಗಾ).** ವಾ: ಅವ್‌ಳಿಗೆ ತಾಳಿ ಕಟ್ಟಿದೊ. ಪ: ತಾಳಿ ಕಟ್ಟುವೆ – ತಾಳಿಕಟ್ಟುತ್ತಾರೆ

ತಾಳಿಕಟ್ಟುದು /*ta:ḷikɘṭṭudu*/ ಕ್ರಿ. 1. ಮದುಮಗ ಮದುಮಗಳ ಕುತ್ತಿಗೆಗೆ ತಾಳಿ ಕಟ್ಟುವುದು, 2. ಮದುವೆಯಾಗುವುದು. 1. tying a chain or a necklace or a sacred thread with a golden disc around the neck of the bride as a sign of marriage, 2. getting married. ವಾ: ಮೊದುವೆಲಿ ತಾಳಿ ಕಟ್ಟುದು ಬಾಳ ಮುಕ್ಯದ ಸಂಪ್ರದಾಯ.

ತಾಳಿಗುಂಡು /*ta:ḷiguṇḍu*/ ನಾ. 1. ಚಿನ್ನದ ಸರ, 2. ತಾಳಿ, ಕರಿಮಣಿ, ಚಿನ್ನದ ಗುಂಡನ್ನು ನೂಲಿನಲ್ಲಿ ಪೋಣಿಸಿ ಮಾಡಿದ ಸರ. 1. a necklace/a chain with a golden disc, 2. a chain or a necklace worn by an Indian woman to indicate that marital status. Usually made of black glass beads and golden beads strung with a thread. ವಾ: ತಾಳಿ ಗುಂಡು ಬಿದ್ದೊತ್.

ತಾಳಿಮರ /*ta:ḷi mara*/ ನಾ. 1. ತಾಳೆಮರ, 2. ಪಾಮೀ ಅಥವಾ ಅರಿಕೇಸಿ ಕುಟುಂಬಕ್ಕೆ ಸೇರಿದ ವನ್ಯವೃಕ್ಷ, 3. ತೆಂಗು, ಈಚಲು, ಅಡಿಕೆ ಮರಗಳ ಹತ್ತಿರದ ಸಂಬಂಧಿ. 1. a palm tree, 2. a tree belonging to the family of Arecaceae, 3. resembles a coconut or an areca nut or date palm. ವಾ: ತಾಳಿ ಮರಂದ ಹೆಂಡ ತೆಗ್ದವೆ, ಇದರ ಎಲೆಂದ ಮೊಂದ್ರಿ ಮಾಡಿವೆ.

ತಾಳಿಮೀನ್ /*ta:ḷi mi:nɨ*/ ನಾ. ಬಿಳಿ ಬಣ್ಣದ ತ್ರಿಕೋನಾಕಾರದ ಮೀನು. a triangular white coloured fish. ವಾ: ತಾಳಿ ಮೀನ್‌ನ ನಾ ಇಂದೇ ನೋಡ್‌ದ್.

ತಾಳಿಕಂಟಿ /*ta:ḷikaṇṭi*/ ನಾ. ತಾಳಿಸರ. a chain or a necklace to which round golden pendant/ disc is attached. ವಾ: ಮೊದುವೆಯಾದ ಹೆಣ್ಮಕ್ಕ ತಾಳಿಕಂಟಿ ಹಾಕಂಡವೆ. ಪ: ತಾಳಿಚೈನ್, ಕರಿಯಮಣಿ

ತಾಳಿಬೆಲ್ಲ /*ta:ḷibella*/ ನಾ. ತಾಳೆಮರದ ಶೇಂದಿಯಿಂದ ತಯಾರಿಸಿದ ಬೆಲ್ಲ. palm jaggery. ವಾ: ತಾಳಿ ಮರದ ಹೆಂಡಂದ (ನೀರಾ) ಬೆಲ್ಲ ಮಾಡಿವೆಗಡ.

ತಾಳಿಸರ /*ta:ḷisara*/ ನಾ. ತಾಳಿ ಜೊತೆಗೆ ಕಪ್ಪು ಮಣಿ ಮತ್ತು ಹವಳದ ಮಣಿಗಳನ್ನು ಪೋಣಿಸಿರುವ ಸರ. a chain/necklace with black glass beads and red coral. ವಾ: ಅವುಳು ತಾಳಿಸರ ಹಾಕಂಡುಟ್ಟು. ಪ: ಕರಿಮಣಿ

ತಾಳೂರು /*ta:ḷu:ru*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ತಾಳೆಕಳ್ಳ್ /*ta:ḷɛkaḷḷɨ*/ ನಾ. ಶೇಂದಿ. toddy. ವಾ: ತಾಳೆ ಕಳ್ಳ್ ಕುಡ್ಯಕ್.

ತಾಳೆಬೆಲ್ಲ /*ta:ḷɛbɛlla*/ ನಾ. ಓಲೆ ಬೆಲ್ಲ. Palm jaggery. ವಾ: ತಾಳೆ ಬೆಲ್ಲ ಹಾಕಿ ಕಾಪಿ ಕಾಸಕ್.

ತಾಳೆಮರ /*ta:ḷɛmara*/ ನಾ. ತಾಳೆಯ ಜಾತಿಗೆ ಸೇರಿದ ಒಂದು ಬಗೆಯ ಮರ ಮತ್ತು ಅದರ ಕಾಯಿ. a palm tree. ವಾ: ತಾಳೆ ಮರಂದ ಸುಮಾರ್ ಪ್ರೇಜನ ಉಟ್ಟು.

ತಾಳೆಹಣ್ಣ್ /*ta:ḷɛhaṇṇɨ*/ ನಾ. 1. ಮೂರು ಕಣ್ಣಿನ ಕಪ್ಪು ಬಣ್ಣದ ತೆಂಗಿನ ಕಾಯಿ ಗಾತ್ರದ ಹಣ್ಣು, 2. ತಾಟಿನಿಂಗು, 3. ಬೇಸಗೆಯಲ್ಲಿ ಬಾಯಾರಿಕೆ ನೀಗಲು ಬಹಳ ಉಪಕಾರಿ. 1. Ice apple, 2. toddy palm, 3. eaten to beat the heat during summer. ವಾ: ತಾಳೆ ಹಣ್ಣ್ ತಿಂದರೆ ಶರ್ರ (ತಡಿ) ತಂಪಾದೆ. ಇದರ್‌ಲಿ ವಿಟಮಿನ್ ಎ, ವಿಟಮಿನ್ ಬಿ, ವಿಟಮಿನ್ ಸಿ, ಜಿಂಕ್ ಎಲ್ಲ ಸಿಕ್ಕಿದೆ. ಪ: ಈರೊಳು(ತು)

ತಾಳೆಗುತ್ತಿ /*ta:ḷɛgutti*/ ನಾ. ತಾಳೆ ಮರದ ಕಾಂಡ (ಇದನ್ನು ಮರಿಗೆಯಾಗಿ ಉಪಯೋಗಿಸುತ್ತಾರೆ). stump of palmyra tree (used in making a trough to store salt, water etc). ವಾ: ತಾಳೆಗುತ್ತಿನ ಮೊರ್‌ಗಿಲ್ ಮಾಡಿಕೆ ಬಳ್‌ಸುವೆ.

ತಾಳೆನೋಡು /*ta:ḷɛno:ḍu*/ ಕ್ರಿ. 1. ಹೊಂದಾಣಿಕೆ, 2. ತಾಳೆ ಹಾಕು. 1. to adjust, 2. to match. ವಾ: ಮೊದುವೆ ಮಾಡಿಕನ ಹೈದ, ಗೂಡೆನ ಜಾತಕನ ತಾಳೆ ನೋಡುವೆ.

ತಾಳ್ /*ta:ḷɨ*/ ನಾ. ಏಲಕ್ಕಿ ಗಿಡ. ಕೆಲ ಗಿಡದ ತಾಳ್ ಕಬ್ಬಿನಷ್ಟೆ ದಪ್ಪವಾಗಿರುತ್ತದೆ. stem of Cardamom plant. **ತಾಳಿದವ ಬಾಳಿ ಬದುಕಿದೆ(ಗಾ).** ವಾ: ತಾಳ್‌ನ ಕಪಿಗ ಸೀಳಿ ತಿಂದೊಳೊ.

ತಿಂಗ /*tiŋga*/ ನಾ. ತಿಂಗಳು. a month. **ಕದ್ದ್ ಹೋಗಿ ಆರ್ ತಿಂಗಾದ ಮೇಲೆ ನಾಯಿ ಬೊಗಳ್ತ್(ಗಾ).** ವಾ: ನಾಕ್ ತಿಂಗ ಆತ್ ಮಜ್ಜನ ಕಾಗದ ಬರದೆ.

ತಿಂಗಳ ಮಾಮ /*tiŋgaḷa ma:ma*/ ನಾ. 1. ಚಂದಿರ, 2. ಚಂದ್ರ, 3. ಭೂಮಿಯ ಏಕೈಕ ಸಹಜ ಉಪಗ್ರಹ, 4. ಆಕಾಶದಲ್ಲಿ ಭೂಮಿಗೆ ಅತ್ಯಂತ ಸಮೀಪ ಕಾಯ. 1. moon, 2. the moon, 3. natural satellite of the earth, 4. the nearest astronomical object to the earth. **ಅಂಗಳಕೆ ಬಂದ ತಿಂಗಳ ಮಾಮ – ಚಂದ್ರ(ಒ).** ವಾ: ತಿಂಗಳ ಮಾಮ ಬಾರಿ ಲಾಯ್ಕಲಿ ಕಂಡದೆ.

ತಿಂಗಳು /*tiŋgaḷu*/ ನಾ. 1. ಬೆಳದಿಂಗಳು, 3. ನಕ್ಷತ್ರ. 1. moonlight, 2. a star. ವಾ: ತಿಂಗೊಳು ಬೊಳ್ಪ್ ಬಾರಿ ಲಾಯ್ಕಲಿ ಕಂಡದೆ. ಪ: ತಿಂಗಳ್ ಬೆಳ್ಕ್

ತಿಂಗಳ್ /*tiŋgaḷɨ*/ ನಾ. 1. ಬೆಳದಿಂಗಳು, 2. ಚಂದ್ರನ ಬೆಳಕು. 1. moonlight, 2. lit by the light of the moon. ವಾ: ಇಂದ್ ತಿಂಗಳ್ ಕಂಡದೆಲ.

ತಿಂಗಾದ್ದು /*tiŋga:ddu*/ ನಾ. ತಿಂಗಳಾಗಬಹುದು. may take one month. ವಾ: ನಾ ಮತ್ತೆ ಈ ಕಡೆ ಬಾಕೆ ತಿಂಗಾದ್ದು.

ತಿಂಗೊಳು ಬೊಳ್ಪ್ /*tiŋgɔḷu bɔḷpɨ*/ ನಾ. ಬೆಳದಿಂಗಳು. moonlight. ವಾ: ತಿಂಗೊಳು ಬೊಳ್ಪ್ ನೋಡಿಕಂಡ್ ಹೊರೆಗೆ ಕುದ್ದದ್. ಪ: ತಿಂಗಳ್ ಬೋಳ್ಪು – ತಿಂಗಳು ಬೆಳಕು

ತಿಂಟೆ /*tiṇṭɛ*/ ನಾ. ಜಗಲಿಗೆ ಆವರಣವಾಗಿ ಕಟ್ಟಿರುವ ಸುಮಾರು 2 ರಿಂದ 3 ಅಡಿ ಎತ್ತರದ ಗೋಡೆ, ಇದನ್ನು

ಆಸನವಾಗಿಯೂ ಬಳಸುತ್ತಾರೆ. a platform, a veranda, a sit out, a raised ground of 2-3 feet high. ವಾ: ತಿಂಟೆಲಿ ನಾಯಿ ಹತ್ತಿ ಕುದ್ದುಟು.

ತಿಂಡಿ /*tiṇḍi*/ ನಾ. 1. ತಿಂಡಿ, 2. ತಿನಿಸು. 1. a dish, 2. an edible. **ಗಂಡಂಗೆ ಗಂಟ್ ತರ್ಸಿಕಾಗದ್, ಮಕ್ಕಳಿಗೆ ತಿಂಡಿ ತರ್ಸಿಕಾಗದ್(ಗಾ).** ವಾ: ಹಬ್ಬಕೆ ಸುಮಾರ್ ತರದ್ ತಿಂಡಿ ಮಾಡಿದ್ದೊ.

ತಿಂಡಿಪೋತ /*tiṇḍipo:ta*/ ನಾ. ಅತಿಯಾಗಿ ತಿಂಡಿ ತಿನ್ನುವವನು. a glutton. ವಾ: ಅದ್ ಬಾರಿ ತಿಂಡಿ ಪೋತ ಹೈದ.

ತಿಂತಾ^{1} /*tinta:*/ ನಾ. 1. ತಿನ್ನುತ್ತಾ, 2. ಸೇವಿಸುತ್ತಾ, 3. ಉಣ್ಣುತ್ತಾ. 1. while eating, 2. eating, 3. while having food. ವಾ: ಪೇರಲ ಹಣ್ಣ್ ತಿಂತಾ ಹೋತಿದ್ದೊ.

ತಿಂತಾ^{2} /*tinta:*/ ಕ್ರಿ. 1. ತಿಂದನಾ?, 2. ತಿಂದಿದ್ದಾನಾ?, 3. ತಿಂದಿದ್ದಾಳ? 1. Did he eat? 2. Has he eaten? 3. Has she eaten? ವಾ: ಏನಾರ್ ಹಙ್ಙ ತಿಂತಾ.

ತಿಂತ್ಲೆ /*tintlɛ*/ ನಾ. 1. ತಿಂದಿಲ್ಲ, 2. ತಿನ್ನಲಿಲ್ಲ. 1. didn't eat, 2. haven't eaten. ವಾ: ನಾ ಅಲ್ಲಿಸಿದ ಹಣ್ಣ್ ತಿಂತ್ಲೆ.

ತಿಂದ /*tinda*/ ನಾ. ತಿಂದೆಯಾ? did you eat? ವಾ: ನೀ ಗೇರ್‌ದಣ್ಣ್ ತಿಂದ? ಪ: ತಿಂದಂವ – ತಿಂದವನು; ತಿಂದವು – ತಿಂದವರು; ತಿಂದವೆ – ತಿನ್ನುತ್ತಾರೆ;

ತಿಂದಳನಾ /*tindaḷana:*/ ಕ್ರಿ. ತಿಂದಿದ್ದೀಯಾ? Have you eaten? ವಾ: ನೀ ಬೆಲ್ಲನ ಕದ್ದ್ ತಿಂದಳನಾ? ಪ: ತಿಂದಳರಿನೋ – ತಿಂದಿದ್ದೀರೋ

ತಿಂದಳೆ /*tindaḷɛ*/ ಕ್ರಿ. ತಿಂದಿದ್ದೇನೆ. I have eaten. ವಾ: ಆ ಹಣ್ಣ್‌ನ ನಾ ತಿಂದಳೆ.

ತಿಂದಾಕ್ /*tinda:kɨ*/ ಕ್ರಿ. ತಿಂದು ಹಾಕು. to eat. ವಾ: ಹುಲಿ ಹಸ್‌ನ ತಿಂದಾಕಿತ್. ಪ: ತಿಂದಾಕಿಟು – ತಿಂದಾಕಿದೆ

ತಿಂದೊ /*tindɔ*/ ಕ್ರಿ. 1. ತಿಂದೆವು, 2. ತಿಂದರು. 1. We have eaten, 2. They have eaten. ವಾ: ನಾವೆಲ್ಲ ಸೇರಿ ಕಡ್‌ಂಬಿಟ್ಟ್ ತಿಂದೊ. ಪ: ತಿಂದೊಳ – ತಿಂದಿದ್ದೀಯ?; ತಿಂದೊಳರಿ – ತಿಂದಿದ್ದೀರ; ತಿಂದ್ಕಂಡ್ – ತಿಂದುಕೊಂಡು; ತಿಂದ್‌ಕಂಡ್ – ತಿಂದುಕೊಂಡು; ತಿಂದ್‌ಕೊಂಡಿರಿಕನ – ತಿಂದುಕೊಂಡಿರುವಾಗ; ತಿಂದ್‌ಕ – ತಿಂದುಕೊ; ತಿಂದ್‌ದ್ – ತಿಂದದ್ದು;

ತಿಂದ್ /*tindɨ*/ ಕ್ರಿ. 1. ತಿಂದು, 2. ಸೇವಿಸಿ. 1. ate, 2. eating. ವಾ: ತಿಂದ್ ಕುದ್ದ್ ಬಿದ್ಕಂಬೊದು ಅಸ್ಟೆ ಕೆಲ್ಸ. ಪ: ತಿಂದುಕೊಂಡು – ತಿಂದುಕೊಂಡು; ತಿಂದುಟ್ಟು – ತಿಂದಿದ್ದಾನೆ/ಳೆ; ತಿಂದ್ರಿಂತ – ತಿಂದರಿಯೆಂದು; ತಿಂದೆ – ತಿಂದೆನು; ತಿಂದೆತ – ತಿಂದೆನು; ತಿಂದೋಗುಟ್ಟು – ತಿಂದು ಹೋಗಿದೆ

ತಿಂದ್ಕಣಿ /*tindkaṇi*/ ಕ್ರಿ. 1. ತಿಂದುಕೊಳ್ಳಿ, 2. ಸೇವಿಸಿ. 1. eat, 2. have food. ವಾ: ಹೊಟ್ಟೆ ತುಂಬ ತಿಂದ್ಕಣಿ.

ತಿಂದ್‌ಕನ್ತ್ /*tindikanti*/ ಕ್ರಿ. ತಿಂದುಕೊಂಡನು/ಳು. he/she has eaten. ವಾ: ಕೊಟ್ಟದರ ಬೇಗ ತಿಂದ್‌ಕನ್ತ್.

ತಿಂಬ /*timba*/ ಕ್ರಿ. 1. ತಿನ್ನುವ, 2. ಉಣ್ಣುವ. 1. let us eat, 2. let us have food. **ಕುದ್ದ್ ತಿಂಬವಂಗೆ ಕೊಪ್ಪರಿಗೆ ಹಣ ಸಿಕ್ಕಿರೂ ಸಾಲ್ದ್(ಗಾ).** ವಾ: ಹಿಂಗೆ ತಿಂಬವನ ನೋಡ್ತೆಲೆ. ಪ: ತಿಂಬೊದು – ತಿನ್ನವುದು

ತಿಂಬ ಸುಣ್ಣ /*timba suṇṇa*/ ನಾ. 1. ತಾಂಬೂಲದಲ್ಲಿ ಬಳಸುವ ಸುಣ್ಣ, 2. ವೀಳ್ಯದೆಲೆಗೆ ಹಚ್ಚುವ ಸುಣ್ಣ. 1. the paste of processed lime, applied on the betel leaf and betel nut before chewing, 2. processed lime. ವಾ: ತಿಂಬ ಸುಣ್ಣನ ಹಙ್ಙ ಇಲ್ಲಿ ಎಲೆಗೆ ಹಾಕ್.

ತಿಂಬಂಗಿಲ್ಲೆ /*timbaŋgillɛ*/ ಕ್ರಿ. ತಿನ್ನುವ ಹಾಗೆ ಇಲ್ಲ. can't be eaten. ವಾ: ಮಾಡ್‌ದ ಅಡ್‌ಗೆನ ಎಡೆ ಹಾಕದೆ ತಿಂಬಂಗಿಲ್ಲೆ.

ತಿಂಬಂವ /*timbanva*/ ಕ್ರಿ. 1. ತಿನ್ನುವವ, 2. ಊಟ ಮಾಡುವವ, 3. ಲಂಚ ತೆಗೆದುಕೊಳ್ಳುವವ. 1. the one who eats, 2. the one eats food, 3. the one who accepts bribe. ವಾ: ನೀ ಬಾರಿ ತಿಂಬಂವ ನಂಗೆ ಗೊತ್ತ್ಲೆನ. ಪ: ತಿಂಬೊ – ತಿನ್ನಬಹುದು; ತಿಂಬೊದು – ತಿನ್ನುವುದು; ತಿಂಬೊದುಂತ – ತಿನ್ನುವುದೆಂದು; ತಿಂಬೊದ್ – ತಿನ್ನುವುದು; ತಿಂಬೋದುಲ್ಲೆ – ತಿನ್ನುವುದಿಲ್ಲ; ತಿಂಬೋವ್ಕೆ – ತಿನ್ನುವವರಿಗೆ; ತಿಂಬೋಸ್ಟ್ – ತಿನ್ನುವಷ್ಟು;

ತಿಂಬಕನ /*timbakana*/ ಕ್ರಿವಿ. 1. ತಿನ್ನುವಾಗ, 2. ಉಣ್ಣುವಾಗ. 1. while eating, 2. while having

food. ವಾ: ತಿಂಬಕನ ಎಂತರ ನಿಂದ್ ನೆಗೆ? ಪ: ತಿಂಬಕಾದು – ತಿನ್ನಬಹುದು; ತಿಂಬಕಾದ್ – ತಿನ್ನಬಾರದು; ತಿಂಬಕೆ – ತಿನ್ನುವುದಕ್ಕೆ; ತಿಂಬಂಕೆಂತ – ತಿನ್ನಲೆಂದು; ತಿಂಬಕ್ಕೆ – ತಿನ್ನಲು; ತಿಂಬಕ್ಕೊ – ತಿನ್ನಲೊ; ತಿಂಬತಿತ್ತ್ – ತಿನ್ನುತಿದ್ದಳು(ನು); ತಿಂಬಲೆ – ತಿನ್ನುವುದಿಲ್ಲ; –

ತಿಂಬಕಾಂವ /*timbaka:va*/ ಕ್ರಿ. 1. ನಿಷ್ಪ್ರಯೋಜಕ, 2. ಉಪಯೋಗಕ್ಕೆ ಬಾರದವ. 1. a useless person, 2. an unwanted person. **ಬೇರೆ ಮನೆನ ಗೈಪು ತಿಂಬಕೆ ಲಾಯ್ಕ್(ನು).** ವಾ: ನೀ ಎಲ್ಲಾರ್ ತಿಂಬಕೆ ಆವ ಅಸ್ಟ್, ಕೈಲಿ ಎಂತನೂ ಹರಿಯಕಿಲೆ.

ತಿಂಬಕೆ ಆವ ಹಣ್ಣ್ /*timbakɛ a:va haṇṇɨ*/ ಕ್ರಿ. 1. ತಿನ್ನಲು ಯೋಗ್ಯವಾದ ಹಣ್ಣು, 2. ತಿನ್ನುವಂತಹ ಹಣ್ಣುಗಳು. 1. an edible fruit, 2. fruits that can be eaten. ವಾ: ತಿಂಬಕೆ ಆವ ಹಣ್ಣ್‌ಗಳ ತಕಂಬಾ.

ತಿಂಬಕೆಹೋಗ್ /*timbakɛ ho:gɨ*/ ಕ್ರಿ. 1. ತಿನ್ನಲು ಹೋಗು, 2. ಬೈಗುಳ ಪದ. 1. to go somewhere in order to eat (used to reprimand), 2. an expletive. ವಾ: ಇಸ್ಟ್ ಸಣ್ಣ ಕೆಲ್‌ಸನು ನಿನ್ನ ಕೈಲಿ ಹರಿಯದ ಮೇಲೆ ಎಲ್ಲಾರ್ ತಿಂಬಕೆ ಹೋಗ್, ನೀ ಅದ್ಕೆ ಸೆರಿ.

ತಿಂಬಡ /*timbaḍa*/ ಕ್ರಿ. ತಿನ್ನಬೇಡ. don't eat. ವಾ: ಅನ್ನರ ಕಟ್ಟಿ ತಿಂಬಡ.

ತಿಂಬಲೆ /*timbalɛ*/ ಕ್ರಿ. ತಿನ್ನುವುದಿಲ್ಲ. won't eat. ವಾ: ನಾ ಮಾಸ, ಮೀನ್ ತಿಂಬಲೆ.

ತಿಂಬೊದು /*timbodu*/ ಕ್ರಿ. ತಿನ್ನುವುದು. the act of eating. **ಸಂಪಾದಿಸುದ್ ಒಬ್ಬ ತಿಂಬೊದು ಇನ್ನೊಬ್ಬ(ಗಾ). ಕೋಳಿ ಹೇಲ್ ಮೆಟ್ಟಿಕೆ ನಾವ್ ಕೋಳಿ ತಿಂಬಕೆ ನೀವ್ (ನು).** ವಾ: ಎಸ್ಟ್ ತಿಂಬೊದು ಈಗ ಸಾಕ್.

ತಿಂಬೊದ್ಲೆ /*timbodle*/ ಕ್ರಿ. ತಿನ್ನುವುದಿಲ್ಲ. won't eat. **ಕಡೆ ನಾ ಕೊಡೆ ಹಂದಿ ಮಾಪ್ಳೆ ತಿಂಬೊದ್ಲೆ ಕುಂಡತನ ಮೂರ್ ಪಾಲ್ ಮಾಡಮ(ಗಾ).** ವಾ: ನಾ ಹೊರೆಗೆ ಎಂತನೂ ತಿಂಬೊದ್ಲೆ.

ತಿಂಬೊವು /*timbɔvu*/ ಕ್ರಿ. ತಿನ್ನುವವರು. those who eat/consume. ವಾ: ಗೆಯ್ಯೊದ್ ಒಬ್ಬ, ಕುದ್ದ್ ತಿಂಬೊವು ನಾಕ್ ಜೆನ.

ತಿಕ /*tika*/ ನಾ. 1. ಮುಕುಳಿ, 2. ಕುಂಡೆ, 3. ಗುದ ದ್ವಾರ. 1. buttock, 2. bottom, 3. anus. **ಹೇತ ಮೇಲೆ ತಿಕ ತೊಲ್ಲಯಕು, ಎದ್ದಮೇಲೆ ಹಲ್ಲುಜ್ಜಕು(ಗಾ). ತನ್ನ ತಿಕ ತೊಳ್ಕಂಬಕೆ ಅದುಲೆ(ನು).** ವಾ: ಕೂಸುನ ತಿಕ ತೊಳ್ಸಕಾಯ್ತ್. ಪ: ಪುಕುಳಿ(ತು)

ತಿಕ್ಕ್ /*tikkɨ*/ ಕ್ರಿ. 1. ಉಜ್ಜು, 2. ತೀಡು, 3. ತಿಕ್ಕು, 4. ತೇಯು. 1. to rub, 2. to press, 4. to scrub, 5. to rub applying pressure. ವಾ: ಹಲ್ಲ್ ತಿಕ್ಕ್. ಪ: ತಿಕ್ಕ್ ತಿದ್ದೊ – ತಿಕ್ಕುತ್ತಿದ್ದರು; ಉಜ್ಜುತ್ತಿದ್ದರು; ತಿಕ್ಕಿ_ದ್ದೊ – ತಿಕ್ಕುತಿದ್ದರು ಉಜ್ಜುತಿದ್ದರು; ತಿಕ್ಕುದು – ಉಜ್ಜುವುದು; ತಿಕ್ಕಿ – ಉಜ್ಜಿ

ತಿಣೆ /*tiṇɛ*/ ನಾ. ಜಗಲಿ. a platform in front of the house/ a veranda. ವಾ: ಹಿರಿಯರೆಲ್ಲ ತಿಣೆಲಿ ಮಾತಾಡಿಕಂಡ್ ಕುದ್ದೊಳೊ. ಪ: ತಿಣೆಲಿ ಮೊಲ್ಗಿದ – ಜಗಲಿಯಲ್ಲಿ ಮಲಗಿದ

ತಿತಿ /*titi*/ ನಾ. 1. ತಿಥಿ, 2. ಶ್ರಾದ್ಧ. 1. ritual performed to pay homage to one's dead parents, 2. death anniversary. **ಅಪ್ಪ ಸತ್ತರೆ ಸಾಯಲಿ ತಿತಿಗೆ ವಡೆ ಸಿಕ್ಕಿದೆ(ಗಾ).** ವಾ: ತಿತಿ ಯಾಗಗಡ?, ತಿತಿಗೆ ಹೋದಿಯನ?

ತಿದಿ /*tidi*/ ನಾ. 1. ಕಮ್ಮಾರ ಗಾಳಿಹಾಕಲು ಬಳಸುವ ಸಾಧನ, 2. ಬೆಂಕಿಯ ಉಷ್ಣತೆ ಏರಿಸಲೋಸುಗ ಅದರ ಮೇಲೆ ಸಾಂದ್ರೀಕೃತ ವಾಯುಧಾರೆ ಹರಿಸಲು ಬಳಸುವ ಸಾಧನ. 1. a forge blower, 2. a device used to increase the air flow toward fire in a coal forge. ವಾ: ಕಮ್ಮಾರ ಕಬ್ಬ್ ಣದ ಕೆಲ್‌ಸ ಮಾಡಿಕನ ಬೆಂಕಿಗೆ ಗಾಳಿನ ಪೂರೈಸಿಕೆ ತಿದಿನ ಬೀಸುದು.

ತಿದ್ದುಪಡಿ /*tiddupaḍi*/ ನಾ. 1. ಸರಿಪಡಿಸುವಿಕೆ, 2. ಸುಧಾರಣೆ. 1. correction, 2. reform. ವಾ: ಪೇಪರ್‌ಲಿ ಒಂದ್ ತಿದ್ದುಪಡಿ ಸೂಚಿಸಿದ್ದೊ.

ತಿದ್ದ್¹ /*tiddɨ*/ ಕ್ರಿ. ತಿದ್ದಿಕೊಳ್ಳು. to rectify. ವಾ: ಮಕ್ಕ ತಪ್ಪ್ ಮಾಡಿಕನ ತಿದ್ದ್.

ತಿದ್ದ್² /*tiddɨ*/ ನಾ. 1. ಶುದ್ಧ ಪಡಿಸು, 2. ಸರಿಪಡಿಸು, 3. ಚಿತ್ರಿಸು. 1. to clean, 2. to correct, 3. to paint. ವಾ: ಬರ್‌ದ ಅಕ್ಸರದ ಮೇಲೆ ತಿದ್ದ್.

ತಿನಸ್ /*tinasɨ*/ ನಾ. 1. ತಿನಿಸು, 2. ಆಹಾರ, 3. ಖಾದ್ಯ.

1. an edible, 2. food, 3. eatables. ವಾ: ಎಂತೆಲ್ಲ ತಿನಸ್ ಉಟ್ಟು.

ತಿನಿಕುತ್ತ /*tinikutta*/ ನಾ. 1. ತಿನ್ನು ಎಂದಾಗ ಬೇಡವೆನ್ನುವುದು, ತಿನ್ನಲು ಬೇಡವೆಂದರು ಬಟ್ಟಲು ತುಂಬ ಇಟ್ಟುಕೊಳ್ಳುವುದು, 2. ಬೈಗುಳಪದ. 1. not eating when it was requested and taking more food than one can eat, 2. an expletive.

ತಿನ್ /*tini*/ ಕ್ರಿ. ತಿನ್ನು. to eat. **ಆಳಾಗಿ ದುಡಿ, ಅರಸಾಗಿ ತಿನ್ನ್(ಗಾ).** ವಾ: ಬೇಗ ಬೇಗ ತಿನ್ನಿ. **ತಿನಟ** /*tinaṭa*/ ತಿನ್ನುವಿಕೆ. eating. ವಾ: ಅಂವನ ತಿನಟ ನೀ ನೋಡೊಕು. **ತಿನದವ್ಕೆ** /*tinadavkɛ*/ 1. ತಿನ್ನದವರಿಗೆ, 2. ಸೇವಿಸದವರಿಗೆ, 3. ಉಣ್ಣದವರಿಗೆ. 1. those who have not eaten, 2. those who haven't had food, 3. those who have not eaten. ವಾ: ಕಾರ ತಿನದವ್ಕೆ ಚಪ್ಪೆ ಊಟನೂ ಉಟ್ಟು.

ತಿನ್ತ್ /*tinti*/ ಕ್ರಿ. 1. ತಿಂದಿತು, 2. ತಿಂದನು/ಳು. 1. it ate, 2. she/he ate. ವಾ: ಅಂವ ಇಕ್ಕಿದೆಲ್ಲನು ತಿನ್ತ್.

ತಿನ್ಪಾಂಡಿ /*tinpa:ṇḍi*/ ಕ್ರಿವಿ. ಆಸೆಪಟ್ಟು ತಿನ್ನುವವನು. to eat with desire. ವಾ: ತಿನ್ಪಾಂಡಿಗೆ ಇಸ್ಟ್ ಸಾಕಾದುಲೆ. ಪ: ತಿಮ್ಮಂಡಿ

ತಿನ್ಸ್[1] /*tinsi*/ ನಾ. ಆಹಾರ, ತಿಂಡಿ. food. ವಾ: ಎಂತ ತಿನ್ಸ್ ಉಟ್ಟು.

ತಿನ್ಸ್[2] /*tinsi*/ ಕ್ರಿ. 1. ತಿನ್ನಿಸು, 2. ಊಟ ಮಾಡಿಸು. 1. to make someone eat food, 2. to feed someone. ವಾ: ಕೂಸ್‌ಗೆ ಹಣ್ಣ್‌ನಾರ್ ತಿನ್ಸ್. **ತಿನ್ಬೇಡ** /*tinbɛ:ḍa*/ ತಿನ್ನಬೇಡ. don't eat. ವಾ: ತಿನ್ಬೇಡತ ಹೇಳ್ದೊ ಅದ್ಕೆ ಕುದ್ದೊಳೆ. ಪ: ತಿಂಬಡ. **ತಿನ್ಸುದು** /*tinsudu*/ 1. ಲಂಚ ಕೊಡು, 2. ಕಾರ್ಯ ಸಾಧನೆಗಾಗಿ ಅಕ್ರಮವಾಗಿ ಪಡೆಯುವ ಅಥವಾ ಕೊಡುವ ಹಣ, ವಸ್ತು, 3. ರುಷವತ್ತು, 4. ಮಾಡುವ ಕೆಲಸಕ್ಕೆ ಪ್ರತಿಫಲವೆಂದು ಅಕ್ರಮವಾಗಿ ಪಡೆಯುವ ಹಣ. 1. to offer bribe, 2. to offer a sum of money or any valuable thing to persuade someone for personal favours, 3. to offer bribe for the service received, 4. money offered to someone for personal favours. ವಾ: ತಿನ್ಸುದು ತಿಂಬದು ಎರ್‌ಡ್ ತೊಪ್ಪೆ.

ತಿಮರೆ /*timarɛ*/ ನಾ. 1. ಒಂದೆಲಗ, 2. ಬ್ರಾಹ್ಮಿ. 1. Indian Pennywort, 2. Centella asiatica. ವಾ: ತಿಮರೆನ ಎಲೆನ ದಿನಾ ಹೊತಾರೆ ಕಾಲಿ ಹೊಟ್ಟೆಲಿ ತಿಂದರೆ ನೆಮಪಿನ ಸಕ್ತಿ ಹೆಚ್ಚಿದೆಗಡ.

ತಿಮ್ಕಕ್ಕ /*timkakka*/ ನಾ. ವ್ಯಕ್ತಿ ಹೆಸರು, ಸ್ತ್ರೀ ವಾಚಕ. feminine given name. ಪ: ತಿಮ್ಮಿ

ತಿಮ್ಮಂಡಿ /*timmaṇḍi*/ ನಾವಿ. ತಿಂದುಕೊಂಡು ಇವುವವನು. a glutton, a greedy eater.

ತಿಮ್ಮಪ್ಪ /*timmappa*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. masculine given name. ಪ: ತಿಮ್ಮ, ತಿಮ್ಮಣ್ಣ

ತಿಮ್ರೆ /*timrɛ*/ ನಾ. 1. ಒಂದೆಲಗ, 2. ಬ್ರಾಹ್ಮಿ ಎಲೆ. 1. Indian Pennywort, 2. Centella asiatica. ವಾ: ತಿಮ್ರೆ ಹಾಕಿ ಎಣ್ಣೆ ಕಾಸಿದ್.

ತಿರಿ /*tiri*/ ನಾ. 1. ತೆಂಗಿನ ತಿರಿ, 2. ಚಿಗುರು. 1. shoot of coconut, 2. coconut sprout. ವಾ: ತಿರಿ ಈಗ ಬಾಕೆ ಸುರಾವ್ಲು.

ತಿರಿಂಟಿಕಂಡ್ /*tiriṇṭikaṇḍi*/ ಕ್ರಿವಿ. 1. ತಿರುಗಿಕೊಂಡು, 2. ಪಿರಿ ಮಾಡಿಕೊಂಡು. 1. twisted, 2. curved. ವಾ: ಕಬ್ಬ್ ತಿರಿಂಟಿಕಂಡ್ ಉಟ್ಟು.

ತಿರುಂಟು /*tiruṇṭu*/ ಕ್ರಿ. 1. ತಿರುಗಿಸು, 2. ಹುರಿ ಮಾಡುವುದು. 1. to turn, 2. to twist. ವಾ: ಹಗ್ಗನ ತಿರುಂಟುದು.

ತಿರುಗುಬೈ /*tirugubai*/ ನಾ. ಭೂತದ ತಲೆಯನ್ನು ಅಲಂಕರಿಸುವ ತೆಂಗಿನ ಎಳೆಗರಿಯ ಕಿರೀಟ. a crown made of coconut tender coconut leaf, worn by the impersonator of bhuta/deity. ವಾ: ಕೋಲ ಕಟ್ಟಿಕನ ತಲೆಗೆ ಹಾಕಿಕೆ ತಿರುಗುಬೈ ಮಾಡಿವೆ.

ತಿರುಪು /*tirupu*/ ಕ್ರಿ. ಲ್ಯಾಂಪಿನ ಬತ್ತಿಯನ್ನು ತಿರುವಿ ಬೆಳಕು ಹೆಚ್ಚು ಕಡಿಮೆ ಮಾಡಲು ಇರುವ ಸಾಧನ. a screw to increase of decrease the intensity of light in a lantern. ವಾ: ಲ್ಯಾಂಪ್‌ದ್ ಬತ್ತಿನ ಹೆಚ್ಚ್ ಕಮ್ಮಿ ಮಾಡಿಕಂಬಕೆ ಒಂದ್ ತಿರುಪು ಇರ್‌ತ್.

ತಿರೋಡಿ /*tiro:ḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ತಿರೋಳ /*tiro:ḷa*/ ನಾ. ದೈವದ ಆವೇಶವನ್ನು

ಮೈಮೇಲೆ ಆವ್ಹಾಹಿಸಿಕೊಳ್ಳುವವನು. inviting the bhuta/deity by the impersonator. ವಾ: ತಿರೋಳ ಬಂದೊಳ.

ತಿರ್ಂಟ್ /*tiriṇṭi*/ ಕ್ರಿ. 1. ತಿರುಚು, 2. ತಿರುಗಿಸು, 3. ತಿರುಂಟುದು. 1. twist, 2. to turn, 3. to spin. ವಾ: ಎಳೆ ಕೂಸ್‌ನ ಕೈನ ಹಂಗೆಲ್ಲ ತಿರ್ಂಟ್‌ಬಡ.

ತಿರ್ಕ /*tirka*/ ನಾ. 1. ತಿರುಕ, 2. ಬಿಕ್ಷುಕ. 1. a beggar, 2. a mendicant. **ತಿರ್ಕಂಗೆ ಯಾಕೆ ಮನೆ ಬೂಮಿ(ಗಾ).** ವಾ: ತಿರ್ಕುಂಗೆ ಅನ್ನ ಹಾಕ್. **ತಿರ್ಕಂಡ್** /*tirikaṇḍi*/ 1. ಭಿಕ್ಷೆಬೇಡು, 2. ತಿರುಗಿಕೊಂಡು ಹೋಗು, 3. ಅಲೆದಾಡು. 1. to beg, 2. to roam around, 3. to wander. ವಾ: ತಿರುಗಿಕೊಂಡ್ ಬೊದ್ಮುದು.

ತಿರ್ಕುಳಿ /*tirkuḷi*/ ನಾ. 1. ತಿರುಗಿ ತಿನ್ನುವವನು, 2. ಭಿಕಾರಿ, 3. ನಿರ್ಗತಿಕ, 4. ಗತಿಯಿಲ್ಲದವನು. 1. a vagabond, 2. a panhandler, 3. a destitute, 4. a mendicant. ವಾ: ತಿರ್ಕುಳಿ ಮನೆ ಮನೆಗೆ ಬಂದದೆ.

ತಿರ್ಗ /*tirga*/ ಕ್ರಿವಿ. 1. ಪುನಃ, 2. ಆಗಾಗ್ಗೆ, 3. ಆಗಾಗ. 1. again, 2. often, 3. frequently. ವಾ: ನೀ ತಿರ್ಗ ಇತ್ತ ಬಂದನಾ?

ತಿರ್ಗಂವ /*tirganva*/ ನಾ. 1. ತಿರುಗುವವ, 2. ಅನಾವಶ್ಯಕವಾಗಿ ಅಲೆಯುವವ. 1. a vagabond, 2. a wanderer-a person who roams about without fixed destination. ವಾ: ತಿರ್ಗಂವ ತಿರ್ಗಿಕಂಡೆ ಬಾಕಿ.

ತಿರ್ಗಣೆ[1] /*tirgaṇɛ*/ ನಾ. 1. ತಿರುಗಿಸಿ ಹಾಕುವ ಮುಚ್ಚಳ, 2. ಕಾರ್ಕ್, 3. ಮಕ್ಕಳ ಆಟದ ವಸ್ತು. 1. a lid, 2. a cork. ವಾ: ಮಕ್ಕ ತಿರ್ಗಣೆ ಚೆಂಡ್‌ಲಿ ಆಡಿವೆ.

ತಿರ್ಗಣೆ[2] /*tirgaṇɛ*/ ನಾ. 1. ರಾಟೆ, 2. ಬೈಗುಳ ಪದ. 1. a pulley, 2. an expletive. ವಾ: ತಿರ್ಗಣೆ ಬಾಮಿಲೆ ಇಸಿಯೊಳೆ.

ತಿರ್ಗಮರ್ಗ /*tirgamarga*/ ನಾ. 1. ತಿರುಗಾ ಮುರುಗ, 2. ಹಿಂದುಮುಂದು. 1. inside out, 2. back and forth. ವಾ: ಈ ಅಂವ ಬನಿನ್‌ನ ತಿರ್ಗಮರ್ಗ ಹಾಕಿದ್.

ತಿರ್ಗಸ್ /*tirgasi*/ ಕ್ರಿ. ತಿರುಗಿಸು. to turn something around. ವಾ: ಕುಪ್ಪಿದ್ ಮುಚ್ಚಳನ ತಿರ್ಗಸ್.

ತಿರ್ಗಾಸ್ /*tirga:si*/ ನಾ. 1. ತಿರುವು, 2. ರಸ್ತೆ ತಿರುವು. 1. a curve, 2. a turn on the road. ವಾ: ತಿರ್ಗಾಸ್ ಲಿ ಬಸ್ ಹೋಕನ ಹೆದ್‌ರಿಕೆ ಆದು.

ತಿರ್ಗಿ /*tirgi*/ ನಾ. 1. ತಿರುಗಿ, 2. ಹಿಂದಕ್ಕೆ ನೋಡು. 1. to turn, 2. to look back. ವಾ: ಹೋಕನ ತಿರ್ಗಿ ನೋಡ್ತ್. **ತಿರ್ಗಿನೋಡ್ಲೆ** /*tirgi no:ḍlɛ*/ ತಿರುಗಿ ನೋಡುವುದಿಲ್ಲ. will not turn back. ವಾ: ದಾರಿಲಿ ಹೋಕನ ತಿರ್ಗಿ ನೋಡ್ಲೆ. **ತಿರ್ಗಿ ಬಾ** /*tirgi ba:*/ 1. ಮರಳಿ ಬಾ, 2. ಮತ್ತೆ ಬಾ. 1. return, 2. to go/ come again. ವಾ: ಇತ್ತ ಎಲ್ಲಾರ್ ಬಾಕನ ಇನ್ನೊಮ್ಮೆ ತಿರ್ಗಿ ಬಾ.

ತಿರ್ಗಿಬೀಳ್ /*tirgi bi:ḷi*/ ಕ್ರಿ. 1. ಪರವಾಗಿದ್ದು ಒಮ್ಮೆಗೆ ವಿರೋಧ ವ್ಯಕ್ತಪಡಿಸು, 2. ಪಕ್ಷ ವಿರೋಧಿ. 1. a turn coat, 2. the one does anti party activities. **ತಿರ್ಗಿ ಬೀಳ್(ನು).** ವಾ: ಜೊತೆಲೆ ಇದ್ದ್ ಕಂಡ್ ತಿರ್ಗಿ ಬೀಳ್‌ದು ಯಾಕೆ?

ತಿರ್ಗಿಕಾದು /*tirgika:du*/ ಕ್ರಿ. 1. ತಿರುಗಾಡು, 2. ಸುತ್ತಾಟ ಆಗು. 1. to wander, 2. to roam around. **ತಲೆ ಎತ್ತಿ ತಿರ್ಗಿಕಾದುಲೆ(ನು).** ವಾ: ಹಂಗೆಲ್ಲ ಯಾಗೊಳು ಹೆಣ್ಮಕ್ಕ ತಿರ್ಗಿಕಾದು.

ತಿರ್ಗಿಕೆ /*tirigikɛ*/ ಕ್ರಿ. 1. ತಿರುಗಲು, 2. ಸುತ್ತಾಡಲು. 1. to roam around, 2. to wander. ವಾ: ತಿರ್ಗಿಕೆ ಬಾರಿ ಉಸಾರ್.

ತಿರ್ಗು /*tirgu*/ ಕ್ರಿ. 1. ಸುತ್ತಾಡು, 2. ಬೈಗುಳ ಪದ. 1. to roam around, 2. an expletive. **ತಿರ್ಗಿ ತಿಂಬವಂಗೆ ಊರೆಲ್ಲವು ನೆಂಟರೆ(ಗಾ).** ವಾ: ಅಂವ ಬರೇ ತಿರ್ಗು. **ತಿರ್ಗುದು** /*tirgudu*/ ಕ್ರಿ. 1. ಅಲೆಯುವುದು, 2. ಸುತ್ತಾಡುವುದು, 3. ತಿರುಗಾಡುವುದು. 1. roaming, 2. wandering, 3. walking. ವಾ: ಮನೆಲಿ ಹಿಂಗೆ ತಿರ್‌ಗುದು ಗೊತ್ತಾರೆ ಅಸ್ಟೆ, ಕತೆ ಬದ್‌ಲಾದೆ.

ತಿರ್ಗೆಲ್ /*tirgɛli*/ ನಾ. ಸದಾ ತಿರುಗಾಡಿ ಕೊಂಡಿರುವವ, ಅಲೆದಾಡಿ ಕೊಂಡಿರುವವ. a wanderer. ವಾ: ಇದ್ ಬಾರಿ ತಿರ್‌ಗೆಲ್ ಗೂಡೆ ಕಂಡದೆ ಅಲ.

ತಿರ್ಗೆಲ್ ಬೊಗ್ಗ /*tirigli bogga*/ ನಾವಿ. ಸದಾ ಮನೆಯಿಂದ ಹೊರಗಡೆ ಇದ್ದು ತಿರುಗಾಡಿ ಕೊಂಡಿರುವವನು. a person who moves aimlessly, a wanderer.

ತಿರ್ಗ್ /*tirgɨ*/ ಕ್ರಿ. ತಿರುಗು. to wander. **ಗಂಡ್ಸ್ ಕುದ್ದ್ ಕೆಟ್ಟ್‌ತ್ ಹೆಂಗ್ಸ್ ತಿರ್ಗಿ ಕೆಟ್ಟ್‌ತ್(ಗಾ).** ವಾ: ಒಮ್ಮೆ ಅತ್ತನ ಬರಿಗೆ ತಿರ್ಗ್.

ತಿರ್ಗ್ ಬೊಗ್ಗಿ /*tirgɨ boggi*/ ನಾವಿ. ಸದಾ ಮನೆಯಿಂದ ಹೊರಗಡೆ ಇದ್ದು ತಿರುಗಾಡಿ ಕೊಂಡಿರುವವಳು. a socialite, a person who spends most of his/her time outside the house. ವಾ: ಅದ್ ಮನೆಲೆ ಇರ್‌ದುಲೆ ಬಾರಿ ತಿರ್ಗ್ ಬೊಗ್ಗಿ.

ತಿರ್ಗ್‌ಮುರ್ಗ್ /*tirgɨmurgɨ*/ ಕ್ರಿವಿ. ತಿರುಗಾ ಮುರುಗ, ತಲೆಕೆಳಗಾಗು, ಅಡಿಮೇಲು. inside out, upside down. ವಾ: ಈಯ ಸರ್ಟ್ ದ್ ಕೊಂಡಿನ ತಿರ್ಗ್ ಮುರ್ಗ್ ಹಾಕಿದ್.

ತಿರ್ಗ್‌ಲ್ ಬಗ್ಗಿ /*tiriglɨ baggi*/ ನಾ. 1. ಅನಾವಶ್ಯಕವಾಗಿ ತಿರುಗಾಡುವವಳು, 2. ಸುತ್ತುವವಳು. 1. a woman who unnecessarily wanders around, 2. a woman who unnecessarily roams around. ವಾ: ತಿರ್ಗ್ ಲ್ ಬಗ್ಗಿ ಯಾವ ಜಾಗೆನು, ಪಿಚ್ಚರ್‌ನು ಬುಡ್‌ದುಲೆ.

ತಿರ್ಗ್‌ಸಿ /*tirɨgsi*/ ನಾ. 1. ತಿರುಗಿಸಿ, 2. ಮೇಲೆ ಕೆಳಗು ಮಾಡಿ. 1. to turn, 2. to make something upside down. ವಾ: ಪಾತ್ರೆನ ತಿರ್ಗ್‌ಸಿ ನೋಡ್‌ದು ಒಟ್ಟೆಯೋವುಟಾತ.

ತಿರ್ಟಿ /*tirṭi*/ ನಾ. 1. ತಿರುವಿ, 2. ತಿರುಚಿ. 1. to turn, 2. to twist. ವಾ: ನನ್ನ ಕೈನ ತಿರ್ಟಿ ಹಾಕಿತ್. ಪ: ತಿರ್ಟ್ – ತಿರುವು/ತಿರುಗಿಸಿ; ತಿರ್ಟಿಕಂಡ್ – ತಿರುವಿಕೊಂಡು; ತಿರ್ಟಿದೆ – ತಿರುವುತ್ತಾನೆ/ಳೆ

ತಿರ್ಪತಿ /*tirpati*/ ನಾ. 1. ತಿರುಪತಿ, 2. ವೆಂಕಟೇಶ್ವರನ ಸನ್ನಿಧಿ. 1. Tirupati, 2. abode of Lord Venkateswara. ವಾ: ಹರ್‌ಸವೆ ಮಾಡಿಕೆ ಮುಂದೆ ತಿರ್ಪತಿಗೆ ಹೋಗಿ ಬಾದು ಪದ್ದತಿ.

ತಿರ್ಪು /*tirpu*/ ನಾ. 1. ತಿರುಪು, 2. ಓಲೆಯ ಹಿಂಬದಿಯ ಕೊಂಡಿ. back screw of an earring. ವಾ: ವಾಲೆದ್ ತಿರ್‌ಪು ಬೀತ್.

ತಿರ್ಪುನ ಮರ /*tirpuna mara*/ ನಾ. ಒಂದು ಜಾತಿಯ ಮರ. a timber tree. ವಾ: ಕರಿತಿರ್ಪುನ ಮರ ಬಾರಿ ಗಟ್ಟಿ. ಪ: ಚಿರ್ಪು(ತು)

ತಿರ್‌ಬೋಕಿ /*tiribo:ki*/ ನಾ. 1. ಬಿಕ್ಷುಕ, 2. ತಿರುಕ, 3. ಬಡವ. 1. a beggar, 2. mindicant, 3. a poor man. ವಾ: ತಿರ್‌ಬೋಕಿತ ಕರ್‌ಯಬಡ.

ತಿರ್ಮಂಡಿ /*tirmaṇḍi*/ ನಾ. 1. ತಿಂಡಿಪೋತ, 2. ಅತಿಯಾಗಿ ತಿನ್ನುವವನು, 3. ಹೊಟ್ಟೆಬಾಕ. 1. a glutton, 2. to eat voraciously, 3. a voracious eater. ವಾ: ಅದ್ ಬರಿ ತಿರ್ಮಂಡಿ ಹೈದ.

ತಿರ್ಲ್ /*tirlɨ*/ ನಾ. 1. ತಿರಳು, 2. ಸಾರ, 3. ಸತ್ವ, 4. ಸಾಮರ್ಥ್ಯ. 1. core, 2. substance, 3. essence, 4. capacity. ವಾ: ಹಣ್ಣ್‌ದ್ ತಿರ್ಲ್‌ನ ಚಂಚಲಿ ತೆಗ್ದ್ ತಿನ್ನ್.

ತಿರ್ಳು /*tirḷu*/ ನಾ. 1. ಹಣ್ಣು ಅಥವಾ ಕಾಯಿಯ ಒಳಭಾಗ, 2. ಮರದ ಕಾಂಡದ ಗಟ್ಟಿಯಾದ, 3. ಮುಖ್ಯಾಂಶ. 1. kernel, the inner part of a fruit, 2. the harder part of the stem of a tree, 3. key points. ವಾ: ಬೈನೆ ದೈದ್ ತಿರ್ಳ್‌ನ ತೆಗ್‌ದ್ ಪಲ್ಯ ಮಾಡಿವೆ.

ತಿಳಿ /*tiḷi*/ ಕ್ರಿ. ತಿಳಿದುಕೊ. understand. ವಾ: ಲಾಯ್ಕಲಿ ಓದಿ ತಿಳಿ, ನೋಡಿ ತಿಳಿ ಮಾಡಿ ಕಲಿತ ಹೇಳೊ ಮಾತುಟ್ಟಲ ಹಾಂಗೆ. ಪ: ತಿಳಿಕಾಗದು – ತಿಳಿಯಬಾರದು; ತಿಳಿಯಕಾದು – ತಿಳಿಯಬಹುದು

ತಿಳಿನೀರ್ /*tiḷini:rɨ*/ ನಾ. 1. ಪರಿಶುದ್ಧವಾದ ನೀರು, 2. ಕಲುಷಿತ ರಹಿತ. 1. pure/clean water, 2. pollution free water. ವಾ: ಹೊಳೆಲಿ ತಿಳಿ ನೀರ್ ಕಾಂಬಕನ ಕುಸಿಯಾದೆ.

ತಿಳಿವಳಿಕೆ /*tiḷuvaḷikɛ*/ ನಾ. 1. ಜ್ಞಾನ, 2. ಅರಿವು, 3. ಬುದ್ದಿವಂತಿಕೆ, 4. ತಿಳಿವಳಿಕೆ, 5. ಪ್ರಜ್ಞೆ, 6. ಎಚ್ಚರ. 1. knowledge, 2. awareness, 3. intelligence, 4. knowledge, 5. consciousness, 6. awakening. ವಾ: ಅಂವಂಗೆ ಸಣ್ಣ ಕೂಸ್‌ಂದನು ತಿಳಿವಳಿಕೆ ಜಾಸ್ತಿ.

ತಿಳು /*tiḷu*/ ಕ್ರಿ. ವಿಷಯ ಗಮನಕ್ಕೆ ತರು. to bring it to the notice of someone. ವಾ: ಮೇಲದಿಕಾರಿಗೆ ವಿಸಯನ ತಿಳು.

ತಿಳ್ಕ /*tiḷka*/ ಕ್ರಿ. 1. ತಿಳಿದುಕೊ, 2. ಅರಿತುಕೊ. 1. to understand, 2. to realise. **ಮಟ್ಟ ತಿಳ್ಕಣದೆ ಮಾತಾಡ್ಬೇಡ(ಗಾ).** ವಾ: ಸೆರಿಯಾಗಿ ವಿಸ್ಯನ ತಿಳ್ಕ. ಪ: ತಿಳ್ಕಂಕಾದ್ – ತಿಳಿದುಕೊಳ್ಳಬಾರದು; ತಿಳ್ಕಂಕೆ – ತಿಳಿದುಕೊಳ್ಳಲು; ತಿಳ್ಕಂಡೊಳೊ –

ತಿಳಿದುಕೊಂಡಿದ್ದೇವೆ/ತಿಳಿದುಕೊಂಡಿದ್ದಾರೆ; ತಿಳ್ಕಂಡ್ – ತಿಳಿದುಕೊಂಡು; ತಿಳ್ಕಣಕು – ತಿಳಿದುಕೊಳ್ಳಬೇಕು; ತಿಳ್ಕಣಿ – ತಿಳಿದುಕೊಳ್ಳಿ; ತಿಳ್ಕಣಿರೊಕು – ತಿಳಿದುಕೊಂಡಿರಬೇಕು; ತಿಳ್ಕಂಬಕೆ – ತಿಳಿದುಕೊಳ್ಳುವುದಕ್ಕೆ; ತಿಳ್ಕೊಣ

ತಿಳ್ಕೊಮ /*tiḷkɔma*/ ಕ್ರಿ. 1. ತಿಳಿದುಕೊಳ್ಳುವ, 2. ಕಲಿಯುವ, 3. ಅರಿಯುವ. 1. the one who understands, 2. the one who studies, 3. the one who learns. ವಾ: ತಿಳ್ಕೊಮ ಮನ್ಸ್ ಇರೊಕು.

ತಿಳ್ದ /*tiḷda*/ ನಾ. ತಿಳಿದ. knowledgeable. ವಾ: ತಿಳ್ದವರ ಹಕ್ಕಲೆ ಕೇಳಿ ಕಲಿಯಕು.

ತಿಳ್ದವ್ /*tiḷdav*/ ನಾವಿ. 1. ವಿದ್ವಾಂಸ, 2. ತುಂಬಾ ಓದಿ ಅಧ್ಯಯನ ಮಾಡಿದವರು, 3. ಜ್ಞಾನಿ, 4. ಅನುಭವಿ. 1. a scholarly person, 2. an intellectual, 3. knowledgeable, 4, experienced. ವಾ: ತಿಳ್ದವ್ ಹೇಳ್ರೆ ಕೇಳಿ ತಿಳ್ಕಂಡ್ ಕಲಿಯೊಕು. ಪ: ತಿಳ್ದ – ಅರಿತ; ತಿಳ್ದ್ – ಅರಿತು

ತಿಳ್ಯಕಿಲ್ಲೆ /*tiḷyakillɛ*/ ಕ್ರಿ. 1. ತಿಳಿಯದಿರುವುದು, 2. ಗೊತ್ತಾಗದಿರುವುದು, 3. ಅರಿವಾಗದಿರುವುದು. 1. unknown, 2. lack of realisation, 3. lack of understanding. ವಾ: ಕೂಸಿಗೆ ಅದೆಲ್ಲ ತಿಳ್ಯಕಿಲ್ಲೆ.

ತಿಳ್ಸ್ /*tiḷsɨ*/ ಕ್ರಿ. 1. ತಿಳಿಯಪಡಿಸು, 2. ಅರಿಯುವಂತೆ ಮಾಡು, 3. ಹೇಳು. 1. to inform, 2. to make someone realise, 3. to tell. ವಾ: ವಿಸ್ಯನ ಬೇಗ ತಿಳ್ಸ್. **ತಿಳ್ಸಿನಿ** /*tiḷsini*/ ತಿಳಿಸಿರಿ. to inform. ವಾ: ನಂಗೆ ನಾಳೆ ಬಾಕಾದುಲೆತ ಅವ್‌ಕೆ ತಿಳ್ಸಿನಿ. **ತಿಳ್ಸ್ಯಳೊ** /*tiḷɨsyaḷɔ*/ 1. ತಿಳಿಸಿದ್ದಾರೆ, 2. ತಿಳಿಯಪಡಿಸು, 3. ಅರಿಯುವಂತೆ ಮಾಡು. 1. informed, 2. to make someone understand, 3. to make someone realise. ವಾ: ತೀರಿ ಹೋದ ವಿಸ್ಯನ ತಿಳ್ ಸ್ಯಳೊ.

ತೀಂಜೊಳು /*ti:ŋjoḷu*/ ನಾ. ಗೊರಬೆ, ಕಿಡಿಂಜೋಲು. a hood/a shield made of the leaves/fronds of coconut tree. ವಾ: ಮಳೆ ಬಾಕನ ತಲೆಗೆ ತೀಂಜೊಳು-ಕಿಡಿಂಜೋಳು ಹಾಕಂಡ್ ಹೋದು.

ತೀಕೆ ನಿಲ್ಲುದು /*ti:kɛ nilludu*/ ಕ್ರಿವಿ. ಸತ್ತವರ ಶ್ರಾದ್ಧ ಕಾರ್ಯ ಮಾಡುವವರು. a lead mourner, a relative who will perform the last rites of the dead. ವಾ: ಯಾರ್ ತೀಕೆ ನಿಲ್ಲುದು.

ತೀಟೆ /*ti:ṭɛ*/ ನಾ. 1. ಅತೀವ ಆಸಕ್ತಿ, 2. ಚಪಲ, 3. ಕೀಟಲೆ. 1. eagerness, 2. ardour, 3. mischief. **ತೀಟ ತರ್ಸಿಕಂಡ ಮೇಲೆ ಜಾಗ ಕಾಲಿ ಮಾಡ್ತ್(ಗಾ).** ವಾ: ಅಂವ ತೀಟೆ ತೀರ್‌ಸಿಕಣ್ತ್.

ತೀನ /*ti:na*/ ನಾ. ತುದಿ ಚೂಪಾಗಿರುವ ಕೋಲು. a stick with sharp end or edge. ವಾ: ತೀನ ಊರಿ ಮೇಲೆ ಬಡಿಗೆ ಕಟ್ಟಿ ಬಸ್ಲೆಗೆ ಚಪ್ಪರ ಹಾಕಿದೊ.

ತೀನಗೆಣ್ಸ್ /*ti:nageŋsɨ*/ ನಾ. ನೆಟ್ಟಿಗೆ ಭೂಮಿಗಿಳಿದ ಗೆಣಸು. a variety of tuber/sweet potato. ವಾ: ನೆಟ್ಟಂಗೆ ಬೂಮಿಗಿಳ್‌ದ ಗೆಣ್ಸ್ ಈ ತೀನ ಗೆಣ್ಸ್

ತೀನಿ /*ti:ni*/ ನಾ. 1. ಕರಿದ ಪದಾರ್ಥ, 2. ಬೇಕರಿ ತಿನಿಸುಗಳು, 3. ತಿಂಡಿ. 1. fried food, 2. bakery food, 3. an edible. ವಾ: ಮಕ್ಕ ಕುರ್‌ಕಲ್ ತೀನಿ ತಿಂಬಕೆ ಆಸೆ ಪಡ್ದು.

ತೀನ್ತ್ /*ti:ntɨ*/ ಕ್ರಿ. 1. ತಿಂದಿತು, 2. ತಿಂದನು, 3. ತಿಂದಳು. 1. it ate, 2. he ate, 3. she ate. ವಾ: ಅವ್ನು ರೊಟ್ಟಿ ತೀನ್ತ್. **ತೀಂತ್** /*ti:ntɨ*/ 1. ತಿಂದನು, 2. ತಿಂದಳು, 3. ತಿಂದಿತು. 1. he ate, 2. she ate, 3. it ate. **ಸತ್ತನೆ ಸತ್ತನೆತೇಳಿ ಸಾವಿರ ಕೋಳಿ ತೀಂತ್ ಗಡ(ಗಾ).** ವಾ: ಅವುಳು ಕೋಳಿ ಮಾಸನ ತೀಂತ್. **ತೀಂತ್ಲೆ** /*ti:ntlɛ*/ ತಿಂದಿಲ್ಲ. didn't eat. ವಾ: ಹಸ್ ಬುಳ್ಳುಲು ತೀಂತ್ಲೆ. **ತೀಂಸಿತ್** /*ti:nsitɨ*/ ತಿನ್ನಿಸಿದನು/ಳು. he/she made someone eat. ವಾ: ಕೂಸುಗೆ ಹಿಟ್ಟ್ ನ ತೀಂಸಿತ್. ಪ: ತಿನ್ಸಿತ್

ತೀರದ್ /*ti:radɨ*/ ನಾ. 1. ಮುಗಿಯದು, 2. ಅಂತ್ಯ. 1. not finished, 2. the end/to get empty. ವಾ: ನಮ್ಮ ಬಜ್ಜ ತೀರದ್.

ತೀರು /*ti:ru*/ ಕ್ರಿ. ಮುಗಿಸು. to complete. ವಾ: ಸಾಲನ ಬೇಗ ತೀರು.

ತೀರ್[1] /*ti:rɨ*/ ಕ್ರಿ. 1. ಸತ್ತು ಹೋಗು, 2. ಮರಣಿಸು, 3. ನಿಧನ ಹೊಂದು. 1. to die, 2. to pass away, 3. to breathe one's last. ವಾ: ಅವು ತೀರಿ ಇಂದಿಗೆ ನಾಕ್ ವರ್‌ಸ ಆತ್. **ತೀರಿ ಹೋಗುಟು** /*ti:ri hɔ:guṭu*/ 1. ಮುಗಿದು ಹೋಗು, 2. ಖಾಲಿಯಾಗು. 1. to get empty, 2. finished/emptied. ವಾ: ಮನೆಲಿ ಉಪ್ಪು, ಬೆಲ್ಲ ತೀರಿ ಹೋಗುಟು. **ತೀರಿಹೋಗ್** /*ti:rihɔ:gɨ*/ ಕ್ರಿ. ನಿಧನ ಹೊಂದು. to die. ವಾ: ಅವು ತೀರಿ ಹೋಗೊಳೊ.

ತೀರ್[2] /*ti:ri*/ ಕ್ರಿ. ಮುಗಿದುಹೋಗು. emptied. ವಾ: ಕರ್‌ಬುಡಿಕೆ ಬಕೆಟ್ ತಂಬ. ಪ: ತೀರ್ತ್ – ಕಾಲಿ/ ಮುಗಿಯಿತು; ತೀರ್ದುಲೆ – ಮುಗಿಯುವುದಿಲ್ಲ; ತೀರ್ರ್ಟೆ – ಮುಗಿದರೆ **ತೀರ್ಸಿಕಂಡ್** /*ti:rsikaṇḍi*/ 1. ಮುಗಿಸಿಕೊಂಡು, 2. ಕಳೆದ ನಂತರ. 1. after the completion of something, 2. after something. ವಾ: ಇಂದ್ ಇದ್ದ್ ಹಬ್ಬ ತೀರ್ಸಿಕಂಡ್ ಹೋಕಾಯಿತ್. ಪ: ತೀರ್ಸುವ – ಮುಗಿಸುವ.

ತೀರ್ಮಾನ /*ti:rma:na*/ ಕ್ರಿ. 1. ನಿರ್ಧಾರ, 2. ನಿರ್ಣಯ. 1. a decision, 2. a resolution. ವಾ: ತೀರ್ಮಾನ ನಿಮ್ಮದೆ, ನಿಮಿಗೆ ಬುಟ್ಟೊಳೆ.

ತುಂಡ /*tuṇḍa*/ ನಾ. 1. ಗಿಡ್ಡ, 2. ಮೋಟು, 3. ಚಿಕ್ಕ. 1. short, 2. broken, 3. small. ವಾ: ತುಂಡ ಅರ್ವೆ ಹಾಕಂಡ್ ಬಂದುಟು.

ತುಂಡು /*tuṇḍu*/ ನಾ. ಒಂದು ಸಣ್ಣ ಭಾಗ. a fraction. **ಒಂದೇ ಪೆಟ್ಟಿಗೆ ಎರಡ್ ತುಂಡು(ನು).** ವಾ: ಮರದ ತುಂಡು ಮೇಲೆ ಇಸಿಕಂಡ್ ಹುಲ್ಲ್‌ನ ಕತ್ರ್‌ಸ್.

ತುಂಡುಕಾಡು /*tuṇḍuka:ḍu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಪೆರುವಾಜೆ ಗ್ರಾಮದ ಜಾಗ. a locality in Peruvaje village in Sullia Taluk of Dakshina Kannada District.

ತುಂಡ್ /*tuṇḍi*/ ಕ್ರಿ. 1. ತುಂಡು, 2. ನಾಲ್ಕನೆಯ ಒಂದು ಅಂಶ, 3. ಕಾಲುಭಾಗ. 1. a piece/a fragment, 2. one fourth, 3. one fourth. ವಾ: ಮಾಸದ ತುಂಡ್‌ನ ಒಂದು ನಾಯಿಗೆ ಹಾಕ್ ಬಲ. **ತುಂಡಾಗಿ** /*tuṇḍa:gi*/ 1. ತುಂಡಾಗಿ, 2. ಕತ್ತರಿಸಿ. 1. cut into pieces, 2. to cut into. ವಾ: ಕಂಬ ತುಂಡಾಗಿ ಬೀತ್. **ತುಂಡುಮಾಡ್** /*tuṇḍuma:ḍi*/ ತುಂಡರಿಸು. to cut. ವಾ: ಕರ್ ಹಗ್ಗನ ತುಂಡು ಮಾಡಿ ಕೊಟಗೆಂದ ಬಂದುಟು.

ತುಂಡ್ ಐಮರ /*tuṇḍi aimara*/ ನಾ. 1. ಜಗಲಿಯಲ್ಲಿನ ಎತ್ತರವಾದ ಮರದ ಚಿಕ್ಕ ಆಸನ, 2. ಮರದ ತಿಟ್ಟೆ. 1. a wooden seat on the veranda (usually a slabs of wood fixed on low parapets between pillars), in Ain mane, 2. a wooden seat. ವಾ: ತುಂಡ್ ಐಮರಲಿ ಕುದ್ದದ್.

ತುಂಡ್ ಹಗ್ಗ /*tuṇḍi hɜgga*/ ನಾ. 1. ಸಣ್ಣ ಹಗ್ಗ, 2. ಮೋಟು ಹಗ್ಗ. 1. a small rope, 2. a broken rope. ವಾ: ತುಂಡ್ ಹಗ್ಗಲಿ ಹಸ್‌ನ ಕಟ್ಟಿಕಾಲೆ.

ತುಂತಜೆ /*tuntajɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ತುಂಬ /*tumba*/ ನಾ. 1. ಬಹಳ, 2. ಅಧಿಕ, 3. ಹೆಚ್ಚಾಗಿ. 1. more, 2. excess, 3. increase. ವಾ: ಇದ್ ತುಂಬ ಬಜ್ಜದ ಕೆಲ್ಸ.

ತುಂಬತ್ತಾಜೆ /*tumbatta:je*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಏನೆಕಲ್ಲು ಗ್ರಾಮದ ಜಾಗ. a locality in Enekallu village in Sullia Taluk of Dakshina Kannada District.

ತುಂಬಿ[1] /*tumbi*/ ಕ್ರಿ. 1. ತುಂಬುವುದು, 2. ಹೆಚ್ಚಾಗುವುದು, 3. ಭರ್ತಿಯಾಗು, 4. ಪೂರ್ಣವಾಗು, 5. ಆವರಿಸಲ್ಪಡು. 1. filling, 2. increasing, 3. to make full, 4. completion, 5. engulfing. ವಾ: ಹೊಳೆನೀರ್ ತುಂಬಿ ಬಂದುಟು. **ತುಂಬಿಕಂಡತ್** /*tumbikaṇḍati*/ 1. ತುಂಬಿಕೊಂಡಿತು, 2. ತುಂಬಿಕೊಳ್ಳು. 1. filled, 2. became full. ವಾ: ನಮ್ಮ ನೋಡಿ ಕಣ್ಣಿರ್ ತುಂಬಿಕಂಡತ್. **ತುಂಬುಸು** /*tumbusu*/ 1. ತುಂಬಿಸು, 2. ಭರ್ತಿಮಾಡು. 1. to fill, 2. to make something full. ವಾ: ಚೀಲಕೆ ಗೊಬ್ಬರನ ತುಂಬುಸು.

ತುಂಬಿ[2] /*tumbi*/ ನಾ. 1. ದುಂಬಿ, 2. ಭ್ರಮರ. 1. a bee, 2. bumblebee. **ಪ್ರೀತಿಂದ ಹೊಟ್ಟೆ ತುಂಬಿಕಿಲ್ಲೆ(ನು).** ವಾ: ಮಕ್ಕೆಲ್ಲ ಸೇರಿಕಂಡ್ ತುಂಬಿನ ಹಿಡ್ದದ್.

ತುಂಬೆ /*tumbɛ*/ ನಾ. 1. ಕರ್ಜಲಿ ಗಿಡ, 2. ತುಂಬಿ, 3. ಬಿಳಿಯ ಸಣ್ಣ ಹೂವುಗಳನ್ನು ಬಿಡುವ ಒಂದು ಗಿಡ ಮತ್ತು ಅದರ ಹೂವು. 1. Ceylon slitwort, Leucas zeylanica, 2. Common Leucas, 3. a plant with white bell shaped flower. ವಾ: ಬೆಳಿ ತುಂಬೆ ಹೂವ್, ಎಲೆ ಎಲ್ಲನೂ ಉಪಯೋಗಕೆ ಬಂದದೆ. ಇದರ ಬಳ್‌ಸಿ ಸುಮಾರ್ ಕಾಯ್‌ಲಗಳ ಗುಣಪಡಿಸಕ್. ಕಣ್ಣ್ ಬೇನೆ, ತಲೆಬೇನೆ ಎಲ್ಲದಕ್ಕೂ ಒಳ್ಳದ್. **ತುಂಬೆ ದೈ** /*tumbɛ giḍa*/ 1. ಕರ್ಜಲಿ ಗಿಡ, 2. ತುಂಬಿ, 3. ಬಿಳಿಯ ಸಣ್ಣ ಹೂವುಗಳನ್ನು ಬಿಡುವ ಒಂದು ಗಿಡ. 1. Ceylon slitwort, Leucas zeylanica, 2. Common Leucas, 3. a plant with white bell shaped flower. ವಾ: ತುಂಬೆ

ದೈನ ಮೊದ್ದ್ ಗೆ ಬಳ್‌ಸುವೆ. **ತುಂಬೆ ಸೊಪ್ಪು** /*tumbɛ soppu*/ 1. ತುಂಬೆ ಗಿಡದ ಸೊಪ್ಪು, 2. ಬಿಳಿಯ ಸಣ್ಣ ಹೂವುಗಳನ್ನು ಬಿಡುವ ಒಂದು ಗಿಡ, ಔಷಧಿಗೆ ಬಹಳ ಪ್ರಯೋಜನಕಾರಿ. 1. Ceylon slitwort, Leucas zeylanica, 2. Common Leucas, a plant with white bell shaped flower, has medicinal values. ವಾ: ತುಂಬೆ ಸೊಪ್ಪು ರಸದ ಎರ್‌ಡ್ ಹನಿನ ಮೂಕಿಗೆ ಬುಟ್ಟರೆ ತಲೆಲಿ, ಹಣೆಲಿ ಕುದ್ದ ಕಪ ಕಮ್ಮಿ ಆದೆ.

ತುಂಬೆಕಣ್ /*tumbɛkaṇɨ*/ ನಾ. ಗದ್ದೆಯಿಂದ ಗದ್ದೆಗೆ ನೀರು ಹೋಗಲು ಮಾಡುವ ಜಾಗ. a passage of water between paddy fields. ವಾ: ತುಂಬೆ ಕಂಡಿ ಮಾಡ್‌ದೊ.

ತುಂಬೆತಡ್ಕ /*tumbetaḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ನೆಲ್ಲೂರು ಕೆಮ್ರಾಜೆ ಗ್ರಾಮದ ಜಾಗ. a locality in Nelluru Kemraje village in Sullia Taluk of Dakshina Kannada District.

ತುಕ್ಕಿ /*tukki*/ ಕ್ರಿ. ಮನೆಮನೆಗೆ ತಿರುಗಾಡಿಕೊಂಡು ಅಲ್ಲಲ್ಲಿ ಕಾಲ ಕಳೆಯುವವ. someone who has the habit of wasting time by visiting others. ವಾ: ಮನೆಲಿ ಇಸ್ಟ್ ಕೆಲ್‌ಸ ಇರಿಕನ ಯಾಕೆ ಸುಮ್ಮನಾರ್ ತುಕ್ಕಿಕಂಡ್ ಹೋದು. **ತುಕ್ಕಿಕಂಡ್ ಹೋಗುಟು** /*tukkikaṇḍɨ hɛguṭu*/ ಅವಶ್ಯಕತೆ ಇಲ್ಲದಿದ್ದರೂ ಮನೆ ಮನೆಗೆ ಹೋಗಿ ಕಾಲ ಕಳೆಯುವುದು. someone who has the habit of wasting time by visiting everyone. ವಾ: ಮಾಡಿಕೆ ಕ್ಯಾಮೆ ಇಲ್ಲದೆ ತುಕ್ಕಿಕಂಡ್ ಹೋಗುಟು.

ತುಕ್ಕು /*tukku*/ ನಾ. ಕಬ್ಬಿಣ ಹಾಗೂ ಇತರ ಲೋಹಗಳಿಗೆ ಬರುವ ಕಿಟ್ಟ. corrosion. ವಾ: ಕಬ್ಬ್‌ಣದ ಪೈಪ್ ತುಕ್ಕು ಹಿಡ್ದುಟು.

ತುಕ್ರಪ್ಪ /*tukrappa*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. masculine given name. ಪ: ತುಕ್ರ, ತುಕ್ರಣ್ಣ

ತುಗಿದು /*tugidu*/ ಕ್ರಿ. ಒಂದು ಬದಿಯಿಂದ ಇನ್ನೊಂದು ಬದಿಗೆ ಅಥವಾ ಮಧ್ಯಕ್ಕೆ ಕೈ ಅಥವಾ ಕಾಲಿನಿಂದ ಸರಿಸುವುದು. to push something with hand or leg. ವಾ: ಕಡಿಯಕಲ್‌ಲಿ ಅಕ್ಕಿ, ಇಲ್ಲರೆ ಮಸಾಲೆ ಕಡಿಯಕನ ಕೈಲಿ ತುಗಿದು. ಪ: ತುಗೆದು – ತುಗಿಯುವುದು, ಒಳಗೆಸೇರಿಸುವುದು

ತುಗ್ಗ /*tugga*/ ನಾ. 1. ಸಂಕುಚಿಸು, 2. ಕುಗ್ಗು, 3. ಕುಗ್ಗಿಸು. 1. contraction, 2. shrink, 3. reduce. ವಾ: ನೀರಿಗೆ ಹಾಕಿದ ಮೇಲೆ ಕಾಟನ್ ಸೀರೆ ತುಗ್ಗ ಬಾದು.

ತುಗ್ಗುದು /*tuggudu*/ ನಾ. ಕಡಿಮೆ ಆಗುವುದು. to lessen. ವಾ: ಬತ್ತನ ಚೀಲಲಿ ಇಸಿ ತುಗ್ಗುದು.

ತುಗ್ಯದು /*tugyadu*/ ಕ್ರಿ. ಕಲ್ಲಿನಲ್ಲಿ ಮಸಾಲೆ ಅಥವಾ ಅಕ್ಕಿಯನ್ನು ರುಬ್ಬುವಾಗ ಕಲ್ಲಿನ ಸುತ್ತ ಕೈ ಆಡಿಸುವುದು. to move one's head around the stone grinder to mix while grinding rice, spices, etc. ವಾ: ಕಡೆಕನ ಕೈಲಿ ಮಸಾಲೆನ ತುಗ್ಯದು.

ತುಟಿ /*tuṭi*/ ನಾ. 1. ತುಟಿ, 2. ಅಧರ. lips. ವಾ: ತುಟಿ ವಣ್‌ಗಿಕಂಡ್ ಬಂದದೆ.

ತುಟಿಬಿಚ್ಚಿತ್‌ಲೆ /*tuṭibiccitɨlɛ*/ ಕ್ರಿ. 1. ಮೌನಿ, 2. ಮೂಕನಾಗು. 1. someone who doesn't speak, 2. unable to speak/ dumb. ವಾ: ಅಸ್ಟ್ ಬೈದರು ನೀ ಯಾಕೆ ತುಟಿ ಬಿಚ್ಚಿತ್‌ಲೆ.

ತುಡುಗು /*tuḍugu*/ ನಾ. 1. ಒದ್ದಾಡು, 2. ಚಡಪಡಿಸು. 1. struggle through, 2. to be anxious. ವಾ: ಎಂತಕೆ ಹಂಗೆ ತುಡುಗುದು.

ತುಡುಗುವ ಮಕ್ಕ /*tuḍuguva makka*/ ನಾ. 1. ಕಿರಿಕಿರಿ ಮಾಡುವ ಮಕ್ಕಳು, 2. ಚುರುಕಿನ ಮಕ್ಕಳು. 1. irritating children, 2. active children. ವಾ: ಅವು ಬರಿ ತುಡುಗುವ ಮಕ್ಕ.

ತುಡುವೆ ಜೇನ್ /*tuḍuvɛ je:nɨ*/ ನಾ. 1. ತುಡುವೆ ಜೇನು, 2. ಮಧ್ಯಮ ಗಾತ್ರದ ಜೇನು, 3. ಜೇನಿನ ವಿಧಗಳು. Apis cerana, a sub-species among honey bees. ವಾ: ತುಡುವೆ ಜೇನ್ ತೆಗ್ಯದು. ಪ: ತೊಡುವೆಜೇನು

ತುಡ್ಗುದು /*tuḍgudu*/ ಕ್ರಿ. ಹುಡುಕುವುದು. searching. ವಾ: ಎಂತನೆ ಮಕ್ಕಳೆ ಹಂಗೆ ತುಡ್ಗುದು.

ತುಣ್ಣೆ /*tuṇṇɛ*/ ನಾ. 1. ಶಿಶ್ನ, 2. ಕುನ್ನೆ(ತು). male reproductive organ, penis. **ಎಣ್ಣೆಲಿ ಬಂದ ಲಾಬ ತುಣ್ಣೆಲಿ ಹೋತ್(ಗಾ). ಚಡ್ಡಿಲಿರ್ದು ತುಣ್ಣೆ(ನು).**

ತುಣ್ಣೆಮೂಂಜು /*tuṇṇɛmu:ŋju*/ ಕ್ರಿವಿ. ಕೆಲಸ ಮಾಡಿಸಿ

ಸಂಬಳ ಕೊಡದೆ ಹೇಳುವ ಬೈಗುಳ ಪದ. a derogatory term, used by someone who doesn't want to pay the one who worked for him. ವಾ: ತೀರದ್ದರೆ ತುಣ್ಣೆ ಮೂಂಜಿಕೆ ಹೋಗ್.

ತುಣ್ಣೆಹಿಡ್ಸುದು /*tuɳɳɛhiḍsudu*/ ಕ್ರಿವಿ. 1. ಮೋಸ ಮಾಡು, 2. ತಪ್ಪಿಸಿಕೊಳ್ಳು, 3. ಬಲದ ಕೈ ಮಣಿಗಂಟನ್ನು ಎಡದ ಕೈಯಲ್ಲಿ ಹಿಡಿದು ಮೇಲೆ ಕೆಳಗೆ ಆಡಿಸಿ ಮಾಡುವ ಕೈಸನ್ನೆ. 1. to cheat, 2. to escape, 3. a derogatory hand sign. ವಾ: ಅಂದರೆ ಅಂವ ನಿಂಗೆ ತುಣ್ಣೆ ಹಿಡ್ಸಿತ್.

ತುದಿ /*tudi* / ಕ್ರಿ. 1. ತುದಿಯಿಂದ, 2. ಮೇಲಿನಿಂದ, 3. ಮೇಲ್ಭಾಗ. 1. from the end, 2. from the top, 3. at the top. ವಾ: ತುದಿಂದ ಬುಡದವರೆಗೆ ಮರ ಒಂದೇ ದಪ್ಪಲಿ ಉಟ್ಟು.

ತುದಿಯಡ್ಕ /*tudiyaḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಜ್ಜಾವರ ಗ್ರಾಮದ ಜಾಗ. a locality in Ajjavara village in Sullia Taluk of Dakshina Kannada District.

ತುಪ್ಪ^{1} /*tuppa*/ ನಾ. 1. ಬೆಣ್ಣೆ ಕಾಯಿಸಿ ತೆಗೆದ ಎಣ್ಣೆ, 2. ವನಸ್ಪತಿಯ ಕೊಬ್ಬು. 1. ghee. processed butter, 2. clarified butter. **ದುಡ್ಡುನ ಆಸೆಗೆ ತುಪ್ಪ ಮಾರಿ, ಕುಪ್ಪಿ ನೆಕ್ಕಿತ್‌ಗಡ(ಗಾ).** ವಾ: ದೋಸೆನ ತುಪ್ಪ ಹಾಕಿಕಂಡ್ ತಿಂದೊ.

ತುಪ್ಪ^{2} /*tuppa*/ ನಾ. ಅರೆಭಾಷೆ ಗೌಡರ ಮದುವೆಯ ಒಂದು ಕ್ರಮ. a ritual after marriage, in Arebhashe Gowda community. ವಾ: ತುಪ್ಪ ಯಾಗ.

ತುಪ್ಪಕಾಸ್ /*tuppaka:sɨ*/ ನಾ. 1. ತುಪ್ಪವನ್ನು ಕಾಯಿಸು, 2. ಬಿಸಿಮಾಡು. 1. to heat ghee, 2. to warm ghee. ವಾ: ತುಪ್ಪ ಕಾಸಿ ಇಸಿನೆ.

ತುಪ್ಪಕೊಯಿಲೆ /*tuppakoyilɛ*/ ನಾ. ಒಂದು ಜಾತಿ ಮೀನು. a variety of fish. ವಾ: ತುಪ್ಪ ಕೊಯಿಲೆ ಮೀನ್‌ತ ಹೇಳ್ದೊ.

ತುಪ್ಪತಾದು /*tuppata:du*/ ನಾ. ಮದುವೆ ಆದ ನಂತರ ವಧೂವರರು ತವರು ಮನೆಗೆ ಮೊದಲ ಬಾರಿಗೆ ಸೇರು ತುಪ್ಪ ತೆಗೆದುಕೊಂಡು ಗೃಹ ಪ್ರವೇಶ ಮಾಡುವ ಸಾಂಪ್ರದಾಯಿಕ ಕಾರ್ಯಕ್ರಮ. a custom of carrying ghee when a bride returns to her parents' home along with her husband after marriage. ವಾ: ಮೊದುವೆ ಕಳ್‌ದ್ ಮೂರ್, ಇಲ್ಲರೆ ಐದ್ ದಿನಕೆ ತುಪ್ಪ ತಾದು. ಪ: ತುಪ್ಪ ತಕೊಂಡೋದು;

ತುಪ್ಪಬಡ್‌ಸ್‌ದು /*tuppa baḍisɨdu*/ ನಾ. ಮದುಮಗಳು ಮದುಮಗನಿಗೆ ತುಪ್ಪ ಬಡಿಸುವ ಆಚರಣೆ. a ritual in which clarified butter is served to the groom by the bride. ವಾ: ತುಪ್ಪ ಬಡ್‌ಸ್‌ದು ನಡಿತುಟ್ಟು.

ತುಪ್ಪಟ /*tuppaṭa*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕೊಲ್ಲಮೊಗ್ರು ಗ್ರಾಮದ ಜಾಗ. a locality in Kollamogru village in Sullia Taluk of Dakshina Kannada District.

ತುಪ್ಪದಕಟ್ಲೆ /*tuppada kaṭlɛ*/ ನಾ. ವಿವಾಹದ ಐದನೇ ಅಥವಾ ಏಳನೇ ದಿನ ನಡೆಯುವ ಕ್ರಮ. a ritual performed on the fifth or the seventh day after marriage. ವಾ: ಮೊದುವೆಯಾದ ಐದನೇ ಇಲ್ಲರೆ ಏಳನೆ ದಿನಲಿ ನಡೆವ ಕ್ರಮನೆ ತುಪ್ಪದ ಕಟ್ಲೆ.

ತುಮ್ತಾಜಿರಾ /*tumta:jira:*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ತುಮ್ತ್ ವಾಟೆ /*tumt va:ṭɛ*/ ನಾ. ಬಿದಿರಿನ ಜಾತಿಯ ಒಂದು ಗಿಡ;ಓಟೆ. a kind of large, thin reed, ochlandra travancorica, gamb. (Poaceae).

ತುಮ್ಮತುಮ್ಮ /*tumma tumma*/ ನಾ. ಮಭಾ. ಕೊಣಿಯೊದು. dancing (in the vocabulary of children). ವಾ: ತುಮ್ಮ ತುಮ್ಮ ಆಡ್ನೊ.

ತುಮ್ಮಿ /*tummi*/ ನಾ. ಮಭಾ. ಚುಮ್ಮಿ. penis of an infant. ವಾ: ಅಂಗಿ ಚೆಡ್ಡಿ ಹಾಕ್ ಇಲ್ಲರೆ ತುಮ್ಮಿ ಕಂಡದೆ.

ತುರಿಕಜ್ಜಿ /*turi kajji*/ ನಾ. 1. ಕಜ್ಜಿ, 2. ಬೊಕ್ಕೆಗಳು ಎದ್ದು ತುರಿಕೆ ಉಂಟಾಗುವ ಒಂದು ಬಗೆಯ ಚರ್ಮರೋಗ. 1. scabies, 2. skin disease. ವಾ: ಮೋರೆಲೆಲ್ಲ ತುರಿ ಕಜ್ಜಿ ಬಂದುಟು.

ತುರುಂಬು /*turumbu*/ ನಾ. 1. ಕೊಂಡೆ, 2. ಕೂದಲಿನ ಗಂಟು, 3. ನೀಳ ಕೂದಲನ್ನು ಸುತ್ತಿ ಕಟ್ಟುವುದು. 1. hair bun, 2. to tie knot in the hair, 3. to tie a hair bun. ವಾ: ತುರುಂಬು ಕಟ್ಟಿ ಹೂ ಮುಡೆದು.

ತುರ್ಕಿ /*turki*/ ನಾ. 1. ತುರುಕ, 2. ತುರ್ಕಿಸ್ಥಾನಿ. 1. a muslim, 2. a person from central asia. ವಾ: ಅವು ತುರ್ಕಿಂದ ಬಂದದ್.

ತುರ್ಕು[1] /*turku*/ ಕ್ರಿ. 1. ತೂರು, 2. ಮಲವಿಸರ್ಜನೆ ಮಾಡು. 1. to pass stools, 2. defecation. ಪ: ತುರ್ಕುತುರ್ಕು – ಅತಿಭೇದಿ

ತುರ್ಕು[2] /*turku*/ ನಾ. 1. ತುರುಕು, 2. ಒತ್ತಿ ತುಂಬು, 3. ಅಡಕು. 1. to tie a knot of the hair, 2. to shove something, 3. to insert. ವಾ: ಅರ್ವೆನ ಪೆಟ್ಟಿಗೆಯೊಳಗೆ ತುರ್ಕಿ ಇಸಿದಾ?

ತುರ್ಟಿ /*turṭi*/ ನಾ. 1. ಸುತ್ತಿ, 2. ಶರೀರವನ್ನು ಬಾಗಿಸಿ. 1. wrapped, 2. bending one's body. ವಾ: ಕೊತ್ತಿ ಚಳಿಗೆ ತುರ್ಟಿ ಮೊಲ್‌ಗಿದ್. ಪ: ತುರ್ಟಿಕಂಡ್ – ಸುತ್ತಿಕೊಂಡು

ತುರ್ಬು /*turibu*/ ನಾ. 1. ಕೊಂಡೆ, 2. ಕೂದಲಿನ ಗಂಟು, 3. ನೀಳ ಕೂದಲನ್ನು ಸುತ್ತಿ ಕಟ್ಟುವುದು. 1. to tie a knot in the hair, 2. a hair bun, 3. to wrap one's plaited hair in a circular coil around itself. ವಾ: ತುರ್ಬು ಕಟ್ಟಿರೆ ಹೂ ಮುಡೆಕು, ಆಗನೆ ಲಾಯ್ಕ ಕಾಂಬದು.

ತುಲ್ಲು /*tullu*/ ನಾ. 1. ಸ್ತ್ರೀಯರ ಜನನಾಂಗ, 2. ಯೋನಿ. 1. vagina, female reproductory organ, 2. female genital canal.

ತುಳಸಿದೈ /*tuḷasigiḍa*/ ನಾ. 1. ತುಳಸಿ ಗಿಡ, 2. ಪೂಜನೀಯ ಹಾಗು ಔಷಧಿ ಸಸ್ಯ. 1. basil plant, 2. a revered medicinal plant. ವಾ: ತುಳಸಿದೈದ ಎಲೆ ವಾತ, ಕಪ, ಸೀತಕ್ಕೆ ಮೊದ್ದಿಗೆ ಬಾರಿ ಒಳ್ಳದ್.

ತುಳಿ /*tuḷi*/ ನಾ. 1. ಹನಿ, 2. ತೊಟ್ಟು, 3. ಬಿಂದು. 1. a drop, 2. a blob, 3. a bead. ವಾ: ಒಂದೇ ಒಂದ್ ತುಳಿ ನೀರ್ ಸೋರ್ತ್‌ಲೆ.

ತುಳು /*tuḷu*/ ನಾ. ಕರಾವಳಿ ಪ್ರದೇಶದಲ್ಲಿ ಮಾತನಾಡುವ ದ್ರಾವಿಡ ಭಾಷೆ. a Dravidian language spoken in the coastal regions of Karnataka. ವಾ: ತುಳು ಮಾತಾಡಿಕೆ ಬಂದದೆನ?

ತುಳುನೇಗಿಲ್ /*tuḷune:gilɨ*/ ನಾ. ನೇಗಿಲಿನ ವಿಧ. a variety of plough.

ತುಳುಬ್ರಾಮಣ /*tuḷubra:maṇa*/ ನಾ. 1. ತುಳುವನ್ನು ಮಾತೃಭಾಷೆಯನ್ನಾಗಿ ಆಡುವ ಬ್ರಾಹ್ಮಣ, 2. ತುಳು ಮಾತನಾಡುವ ಬ್ರಾಹ್ಮಣ. 1. Brahmins who speak Tulu as their first language, 2. a Tulu speaking Brahmin.

ತುಳುಕ್ /*tuḷukɨ*/ ನಾ. 1. ತುಂಬಿ ಚೆಲ್ಲು, 2. ಹೆಚ್ಚಾದ ನೀರು ಪಾತ್ರೆಯಿಂದ ಹೊರ ಬರು, 3. ಹೊರ ಸೂಸುವಿಕೆ, 4. ಉಕ್ಕುವಿಕೆ. 1. spilling, 2. overflow, 3. flow out, 4. spillage. **ತುಂಬಿದ ಕೊಡ್‌ಪನ ತುಳ್‌ಂಕ್‌ಕಿಲ್ಲೆ(ಗಾ).** ವಾ: ಪಾತ್ರೆಂದ ನೀರ್ ತುಳುಕ್‌ತುಟ್ಟು.

ತುಳುಬಾಯಿ /*tuḷuba:yi*/ ನಾ. ತುಳು ಮಾತನಾಡುವವರು. those who speak Tulu. ವಾ: ಅವರ್ದ್ ತುಳುಬಾಯಿ.

ತುಳ್ಕಿದೆ /*tuḷkidɛ*/ ನಾ. 1. ತುಳುಕು, 2. 1. ತುಂಬಿ ಚೆಲ್ಲು, 2. ಹೆಚ್ಚಾದ ನೀರು ಪಾತ್ರೆಯಿಂದ ಹೊರ ಬರು, 3. ಹೊರ ಸೂಸುವಿಕೆ, 4. ಉಕ್ಕುವಿಕೆ. 1. spilling, 2. overflow, 3. to spill over, 4. to flow outside. ವಾ: ಕೊಡಪಾನಲಿ ನೀರ್ ತುಂಬಿ ತುಳ್‌ಕಿದೆ. ಪ: ತುಳ್ಕುಲ್ಲೆ – ತುಳುಕುವುದಿಲ್ಲ; ತುಳ್ಕ್ – ಹೊರ ಚೆಲ್ಲು

ತುಳ್‌ಸಿ /*tuḷɨsi*/ ನಾ. ತುಳಸಿ. a basil plant. ವಾ: ದಿನಾ ಹೊತಾರೆ ನಾಕೆಲೆ ತುಳ್‌ಸಿ ಎಲೆನ ಬಾಯಿಗೆ ಹಾಕಂಡ್ ಅಗಿಯೊಕು.

ತುಳ್‌ಸಿ ದೈ /*tuḷɨsi dai*/ ನಾ. ತುಳಸಿ ಗಿಡ. a basil plant. ವಾ: ಮನೆ ಮುಂದೆ ತುಳ್‌ಸಿ ದೈ ಇದ್ದರೆ ಒಳ್ಳದ್.

ತೂ /*tu:*/ ಅ. ಉಗಿಯುವುದು. spitting. **ಚಿ ತೂ ತ ಹೇಳ್ಸಿಕಂಬಕಾಗದ್(ಗಾ).** ವಾ: ಹೋದಲೆಲ್ಲ ತೂ ತ ಉಗೆದು ಬಾರಿ ಹಾಳ್ ಅಬ್ಬೆಸ.

ತೂಂಗ್ /*tu:ŋgɨ*/ ಕ್ರಿ. ಭಾರ ತಿಳಿಯಲು ತೂಗುವುದು. weigh to measure. ವಾ: ಕಾಯಿನ ತೂಂಗ್‌ತೊಳೊ.

ತೂಂಬು /*tu:mbu*/ ನಾ. 1. ಕೊಳವೆ, 2. ಹೆಚ್ಚಿನ ನೀರನ್ನು ಗದ್ದೆಯಿಂದ ಹೊರಹಾಕಲು ಮಾಡಿದ ಪಾತಿ. 1. a pipe, 2. a passage to release the excess water from the paddy field. ವಾ: ತೂಂಬುಲಿ ನೀರ್ ಬುಡ್‌ದು. ಪ: ತೂಂಬ್ – ನೀರು ಹೋಗುವ ಕೊಳವೆ

ತೂಂಬುಕ್ಕೈ /*tu:mbukai*/ ನಾ. 1. ಆನೆಯ ಸೊಂಡಿಲು, 2. ಆನೆಯ ಬಾಯಿಯ ಮೇಲೆ ಹೊರಕ್ಕೆ ಚಾಚಿಕೊಂಡಿರುವ ಉದ್ದ ಸ್ನಾಯುಭರಿತ ಅಂಗ. 1. the trunk of an elephant, 2. proboscis of an elephant. ವಾ: ತೂಂಬುಕ್ಕೈಲಿ ಆನೆ ನೀರ್‌ನ ಮೈಮೇಲೆ ಹಾಕಂಬೊದು.

ತೂಂಬ್ವಾಟೆ /*tu:mbva:ṭɛ*/ ನಾ. ದಪ್ಪದ ಓಟೆ. a wide hole.

ತೂಕ /*tu:ka*/ ನಾ. ವಸ್ತುವಿನ ಭಾರ. weight of things. **ತೂಗುವ ಕಲ್ಲ್ ಮೇಲೆ, ನಾಯಿ ಉಚ್ಚೆ ಹೊಯ್ದರೆ, ತೂಕನೇ ಹೋತ್(ಗಾ).** ವಾ: ಬಾರಿ ತೂಕ ಉಟ್ಟು ಹೊರಿಕಾದುಲೆ.

ತೂಕಡ್ಸ್ /*tu:kaḍsɨ*/ ಕ್ರಿ. 1. ತೂಗು, 2. ನೇತುಹಾಕು. 1. to hang, 2. to suspend. ವಾ: ಆಣಿಗೆ ಬ್ಯಾಗ್‌ನ ತೂಕಡ್ಸ್.

ತೂಕಸ್ಸ್ /*tu:kassɨ*/ ಕ್ರಿ. ನಿದ್ರೆಯ ಜೊಂಪು, ತಲೆ ತೂಕಡಿಸುವುದು. feeling sleepy. ವಾ: ಕುದ್ದಲ್ಲೆ ತೂಕಸ್ಸ್‌ದು.

ತೂಕ್‌ಂಬೊಳ್‌ಚ /*tu:kɨmboḷɨca*/ ನಾ. ನಡುಮನೆಯಲ್ಲಿ ತೂಗು ಹಾಕಿದ ದೀಪ. a hanging lamp kept in the living area. ವಾ: ನಡುಮನೆಲಿ ತೂಕ್‌ಂಬೊಳ್‌ಚನ ತೂಗಿ ಹಾಕುವೆ.

ತೂಕ್‌ಪೂವು /*tu:kɨpu:vu*/ ನಾ. ಕೊಡಗಿನ ಕಾಡಿನಲ್ಲಿ ಬೆಳೆಯುವ ಕೆಂಪು, ಹಳದಿ ಬಣ್ಣದ ಗೌರಿ ಹೂವು, ಕೈಲ್ ಮುಹೂರ್ತ ಹಬ್ಬದಲ್ಲಿ ಕೋವಿಗೆ ಸಿಕ್ಕಿಸಿ ಪೂಜಿಸುತ್ತಾರೆ. flame lily, climbing lily. ವಾ: ಕೈಲ್‌ಪೋದ್ ಹಬ್ಬಲಿ ತೂಕ್‌ಪೂವುನ ಇಸಿ ಪೂಜೆ ಮಾಡಿವೆ.

ತೂಗಿ /*tu:gi*/ ಕ್ರಿ. 1. ಅಳತೆ ಮಾಡು, 2. ತೂಗು, 3. ತೂಕಕ್ಕೆ ಹಾಕು, 4. ವಸ್ತುವನ್ನು ತಕ್ಕಡಿಯಲ್ಲಿಟ್ಟು ತೂಗುವುದರಿಂದ ಗೊತ್ತಾಗುವ ಭಾರ. 1. to weigh, 2. to measure, 3. to know the weight of things. ವಾ: ಯಾಲಕ್ಕಿನ ತೂಗಿ ನೋಡಕಿತ್ ಎಷ್ಟ್ ಉಟ್ಟುತ?

ತೂಗ್‌ದೀಪ /*tu:gɨ di:pa*/ ನಾ. 1. ದೇವರ ಮಂಟಪದ ಎದುರು ತೂಗು ಹಾಕಿದ ದೀಪ, 2. ತೂಗು ದೀಪ. 1. hanging lamps in front of the gods, 2. hanging lamps. ವಾ: ತೂಗ್‌ದೀಪಲಿ ನೆಣೆ ಇಲ್ಲೆ.

ತೂಟೇರ /*tu:ṭɛra:*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ತೂತ /*tu:ta:*/ ನಾ. ತೂತು. a hole. **ಎಲ್ಲಾರ್ ಮನೆ ದೋಸೆನೂ ತೂತೆಗಡ(ಗಾ).** ವಾ: ಕೊಡಪಾನ ತೂತ ಆವುಟು.

ತೂತ್ /*tu:tɨ*/ ನಾ. 1. ರಂಧ್ರ, 2. ಒಟ್ಟೆ. 1. a hole, 2. a cavity. **ಎಲ್ಲರ ಮನೆ ದೋಸೆ ತೂತ್(ಗಾ). ಎಲ್ಲರ ಮನೆ ದೋಸೆ ತೂತ್(ನು).** ವಾ: ಬಕೆಟ್ ತೂತ್ ಆವ್ಟು.

ತೂತ್ ಚಿಪ್ಪಿ /*tu:tɨ cippi*/ ನಾ. 1. ತೂತು ಚರಟ, 2. ತೂತು ಗೆರಟೆ. 1. a hole in the coconut shell, 2. perforation in the coconut shell. ವಾ: ತೂತ್ ಚಿಪ್ಪಿಲಿ ಸಣ್ಣ ಕೂಸುನ ಮೀಸುದು. ಪ: ಒಟ್ಟೆಚಿಪ್ಪಿ(ತು)

ತೂಬುಕಂಡಿ /*tu:bu kaṇḍi*/ ನಾ. ಬೀದಿರನ್ನು ಸೀಳಿ ನೀರು ಹೋಗುವಂತೆ ಮಾಡುವ ವ್ಯವಸ್ಥೆ. a splint bamboo used as a channel for the water. ವಾ: ತೂಬು ಕಂಡಿಲಿ ನೀರ್ ಹೋಕೆ ಮಾಡ್ದು.

ತೂರಿ /*tu:ri*/ ನಾ. 1. ಹೂಜಿ, 2. ಮಣ್ಣಿನಿಂದ ಮಾಡಿದ ಉದ್ದವಾದ ಕಂಠವಿರುವ ನೀರು ತುಂಬುವ ಪಾತ್ರೆ, 3. ಹಿಡಿ ಅಥವಾ ಎರಡು ಕಿವಿಗಳಿಂದ ಕೂಡಿದ, ಮೂತಿಯುಳ್ಳ ದೊಡ್ಡ ಮಣ್ಣಿನ ಮರಿಗೆ, 4. ನೀರು ತುಂಬುವ ಮಣ್ಣು ಅಥವಾ ಲೋಹದಿಂದ ಮಾಡಿದ ಉದ್ದವಾದ ಕಂಠವಿರುವ ಪಾತ್ರೆ, 5. ಕೂಜ. 1. an earthen/clay water jug with a handle and a nozzle, 2. a clay pot with a handle and a nozzle, 3. a large earthenware, 4. a large earthen or metal water pot, 5. an earthen pot with long and narrow neck. ವಾ: ತೂರಿಲಿ ನೀರ್ ತುಂಬಿಸುದು.

ತೂರಿಕಂಬೊದು /*tu:rikɔmbɔdu*/ ಕ್ರಿವಿ. 1. ಸೇರಿಕೊಳ್ಳು, 2. ನುಗ್ಗಿಕೊಳ್ಳುವುದು. 1. to join, 2. to move into. **ಗಾಳಿ ಬಂದಕಡೆ ತೂರಿಕೊಂಬೊದು, ಗಾಳಿ ಬಂದಾಂಗೆ ತೂರಿಕಂಬಂವ(ನು).**

ತೂರು /*tu:ru*/ ಕ್ರಿ. 1. ಒಳನುಗ್ಗು, 2. ಇಕ್ಕಟ್ಟಾದ ಜಾಗ ಅಥವಾ ಜನಜಂಗುಳಿ ಮಧ್ಯೆ ಒಳಸೇರು. 1. to rush

inside, 2. to enter into a crowd. ವಾ: ಸಂತೆ ವಳೆಗೆ ತೂರಿಕಂಡೆ ಹೋಕು.

ತೂರ್ದು[1] /*tu:rdu*/ ನಾ. 1. ಚೂರ್ದು, 2. ಎರಚುವುದು. 1. to scatter, 2. to fling/to throw about.

ತೂರ್ದು[2] /*tu:rɨdu*/ ಕ್ರಿ. ಮಲ ವಿಸರ್ಜಿಸುವುದು. to pass stool/defecation. ಪ: ತೂರ್

ತೂಸಿ /*tu:si*/ ಕ್ರಿ. ತೋರಿಸು. to show. ವಾ: ಜಾಗೆನ ತೂಸ್ ಬಲಾ.

ತೂಸು /*tu:su*/ ಕ್ರಿ. 1. ಚೆಲ್ಲು, 2. ಬಸಿಯು, 3. ವ್ಯಾಪಿಸು, 4. ಹರಡು, 5. ಸೂಸು. 1. to spill, 2. to strain, 3. to occupy, 4. to spread, 5. to strew about. ವಾ: ಸೂರ್ಯನ ಕಿರಣಗ ಎಲ್ಲ ಕಡೆ ತೂಸುದು.

ತೂಸ್ /*tu:sɨ*/ ಕ್ರಿ. 1. ಚೆಲ್ಲು, 2. ಚದುರಿಸು. 1. broadcast, 2. dissipate. ವಾ: ಇದರ ತೂಸಿ ಬಾಯ.

ತೆಂಕ /*tɛŋka*/ ನಾ. 1. ತೆಂಕುದಿಕ್ಕು, 2. ದಕ್ಷಿಣ ದಿಕ್ಕು. 1. the South, direction, 2. the southern direction. ವಾ: ತೆಂಕ್ ದಿಕ್ಕ್ ಕಡೆ ಹೋಕು. **ತೆಂಕ್** /*tɛŋkɨ*/ 1. ತೆಂಕಣ, 2. ದಕ್ಷಿಣ. 1. the South, 2. the southern. ವಾ: ತೆಂಕ್ ಕಡೆ ಹೋದೊ. ಪ: ತೆಂಕ. **ತೆಂಕ್ ಕಟ್ಟಿದ ಜಾಗೆ** /*tɛŋkɨ kaṭṭida ja:gɛ*/ ನಾ. ಮನೆಯ ದಕ್ಷಿಣ ದಿಕ್ಕಿಗೆ ಬೆಟ್ಟ ಅಥವಾ ಗುಡ್ಡ ಇರುವ ಜಾಗ. a hill on the southern side of one's house. ವಾ: ತೆಂಕ್ ಕಟ್ಟಿದ ಜಾಗೆನ ನೋಡ್.

ತೆಂಕಿಲ /*teŋkila*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ತೆಂಗಿನಡಿ /*ten:ginaḍi*/ ನಾ. ಕೊಡಗು ಜಿಲ್ಲೆಯ ಪೆರಾಜೆ ಗ್ರಾಮದ ಜಾಗ. a locality in peraje village in of Kodagu District.

ತೆಂಗ್ /*tɛŋgi*/ ನಾ. 1. ತೆಂಗು, 2. ತೆಂಗಿನ ಕಾಯಿ. 1. a coconut, 2. a coconut. **ಇಂಗ್ ತೆಂಗ್ ಇದ್ದರೆ ಮಂಗನೂ ಅಡಿಗೆ ಮಾಡ್ದೆ(ಗಾ).** ವಾ: ಉದ್ಯ ಮಾಡಿಕೆ ತೆಂಗ್ ಬೇಕಲ. **ತೆಂಗ್‌ನ ಮರ** /*teŋgina mara*/ 1. ತೆಂಗಿನ ಮರ, 2. ಕಲ್ಪವೃಕ್ಷ, 3. ಕಲ್ಪತರು. a coconut tree. ವಾ: ತೆಂಗ್ ನ ಮರಲಿ ಈಗಸ್ಟೆ ಕಾಯಿ ಬುಡಿಕೆ ಸುರು.

ತೆಕ /*tɛka*/ ಕ್ರಿ. ತೆಗೆದುಕೋ. to take. ವಾ: ಪ್ರೀತಿಯಿಂದ ಕೊಟ್ಟದರ ತೆಕ. ಪ: ತೆಕನೊಕ್ – ತೆಗೆದುಕೊಳ್ಳಬೇಕು; ತೆಕನ್ತ್ – ತೆಗೆದುಕೊಂಡನು/ಳು. **ತೆಕಂಡ್** /*tɛkaṇḍɨ*/ ತೆಗೆದುಕೊಂಡು. taking/carrying. ವಾ: ಅರ್ವೆ ತೆಕಂಡ್ ಚೋಡಿಗೆ ಒಗ್ಯಕೆ ಹೊರ್‌ಟದ್.

ತೆಕ್ಕಟೆ /*tekkaṭɛ*/ ನಾ. 1. ಕಾಡಿನ ಕಿರಿಕೋಳಿ, 2. ಕೇಂಕಣ. 1. junglefowl (Gallus sonneratii), 2. junglefowl. ವಾ: ತೆಕ್ಕಟೆನ ಕುದ್ಕ ಹಿಡ್ಕಂಡ್ ಹೋತು.

ತೆಕ್ಕಡೆ /*tekkaḍɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ತೆಕ್ಕೆಹಾಕ್ /*tekkɛha:kɨ*/ ನಾ. 1. ಸುತ್ತಿ ಕೊಳ್ಳು, rap around. ವಾ: ಬೊಳ್ಳಿ ಮರಕ್ಕೆ ತೆಕ್ಕೆ ಹಾಕಂಡ್ ಹೋವ್ತು.

ತೆಕ್ಕ್ /*tekkɨ*/ ನಾ. ಕಾಡುಕೋಳಿಯ ಕೂಗು. crowing of junglefowl. ವಾ: ಕಾಡ್‌ಕೋಳಿಗ ತೆಕ್ಕ್‌ತಾ ಒಳೊ.

ತೆಕ್ಕ್‌ದು /*tekkɨdu*/ ನಾ. 1. ಮೇಲೆ ಬಿದ್ದು ಮಾತನಾಡಿಸುವುದು, 2. ಮಾತನಾಡಲು ಇಷ್ಟವಿಲ್ಲದಿದ್ದರೂ ಮಾತನಾಡಿಸುವುದು. 1. a loquacious person, 2. blathering. ವಾ: ಇಸ್ಟ ಇಲ್ಲದವರ ತೆಕ್ಕ್‌ದು ಯಾಕೆ?, ತೆಕ್ಕಿಕಂಡ್ ಹೋಗ್ಬಡ. ಪ: ತೆಕ್ಕುದು

ತೆಕ್ಕ್‌ನಸೊಪ್ಪು /*tekkɨnasoppu*/ ನಾ. ಸಾಗುವಾನಿ ಮರದ ಸೊಪ್ಪು. teakwood leaf.

ತೆಗಿ /*tegi*/ ಕ್ರಿ. ತೆಗೆದುಕೊ. take it. ವಾ: ವಣ್‌ಗಿಕೆ ಹಾಕಿದ ಮೆಣ್ಸ್‌ನ ತೆಗಿ. **ತೆಗಿನಿ** /*tɛgini*/ 1. ತೆಗೆಯಿರಿ, 2. ಈಚೆಗೆ ತರು, 3. ಹೊರತರು, 4. ತೆಗೆದುಕೊಳ್ಳು, 1. remove, 2. to bring something outside, 3. to release, 4. to take. ವಾ: ಹೊಸ್ತ್ ಅರ್ವೆ ತೆಗಿನಿ. **ತೆಗಿಬಡ** /*tɛgibaḍa*/ 1. ತೆಗೆಯಬೇಡ, 2. ತೆರೆಯದಿರು. 1. don't open, 2. don't unwrap. ವಾ: ಈಗ ಡೊಬ್ಬಿದ್ ಮುಚ್ಚಳನ ತೆಗಿಬಡ. **ತೆಗೆದು** /*tɛgɛdu*/ ತೆಗೆಯುವುದು. buying. ವಾ: ಪೇಟೆಗೆ ಹೋಗಿ ಪಟ್ಟೆಸೀರೆ ತೆಗೆದುಂತ ಎನಿಸಕಂಡ್ ಒಳೆ. **ತೆಗೇಕು** /*tɛgɛ:ku*/ 1. ತೆಗೆಯಬೇಕು, 2. ತೆಗೆದುಕೊಳ್ಳಬೇಕು. 1. need to buy, 2. need to take. ವಾ: ಪೆನ್ಸಿಲ್ ತೆಗೇಕು. ಪ: ತೆಗೆಯೊದ್. **ತೆಗ್ತ್‌ಲೆ** /*tɛgɨtlɛ*/ 1. ತೆಗೆಯಲಿಲ್ಲ, 2. ತೆರೆಯಲಿಲ್ಲ. 1. didn't bring, 2. didn't open. ವಾ: ಅಂಗ್ಡಿ ಬಾಗ್ಲ್ ತೆಗ್ತ್‌ಲೆ.

ತೆಗುಳ್ದು /*tɛguḷdu*/ ಕ್ರಿವಿ. 1. ತೆಗಳು, 2. ಜರಿಯುವಿಕೆ. 1. to reprove, 2. to censure. ವಾ: ತೆಗುಳ್ದು ತಪ್ಪು.

ತೆಗೆಮುಟ್ಟ /*tɛgɛmuṭṭa*/ ಕ್ರಿ. ತೆಗೆಯುವವರೆಗು. until something is open. ವಾ: ನಾ ಹಟ್ಟೆದ್ ತಟ್ಟಿನ ತೆಗೆಮುಟ್ಟ ನೀ ಬಾಕಾದ್.

ತೆಗ್ದಬಿಗ್ದ /*tɛgda bidda*/ ಕ್ರಿವಿ. ಹಿಂದು ಮುಂದು ಯೋಚಿಸದೆ ಮನ ನೋಯುವಂತೆ ಮಾತನಾಡುವುದು. to talk impulsively. ವಾ: ಅದ್ ತೆಗ್ದ ಬಿಗ್ದ ಮಾತಾಡ್‌ದು.

ತೆಗ್ಸಿ /*tegsi*/ ಕ್ರಿ. 1. ತೆಗೆಸು, 2. ತೆಗೆದು ಹಾಕು, 3. ತೊಡೆದು ಹಾಕು. 1. to get something open, 2. to remove, 3. to get something removed. ವಾ: ಸುಮಾರ್ ಸಿಲ್ವರ್ ಮರನ ತೆಗ್ಸಿದೊ. **ತೆಗ್ದರೆ** /*tegdarɛ*/ 1. ತೆಗೆದರೆ, 2. ಕೊಂಡುಕೊಂಡರೆ. 1. if you buy, 2. in case you buy. ವಾ: ತೆಗ್ದರೆ ಹೊಸ್ತೆ ತೆಗ್ಯಕು. **ತೆಗ್ದಿಸ್** /*tegdisi*/ 1. ಎತ್ತಿಡು, 2. ತೆಗೆದಿಡು. 1. to keep aside, 2. put aside. ವಾ: ಹರ್‌ಂಡಿದ ಪುಸ್ತಕನೆಲ್ಲ ಬೇಗ ತೆಗ್‌ದಿಸ್. **ತೆಗ್ದ್ ಹಾಕಿದಂವ** /*tɛgdi ha:kidanva*/ 1. ಕೆಟ್ಟವ್ಯಕ್ತಿ, 2. ದುಷ್ಟ 3. ಬೈಗುಳ ಪದ. 1. a wicked person, 2. an evil, 3. an expletive. ವಾ: ಆಚೆ ಮನೆ ಹೈದ ತೆಗ್‌ದ್ ಹಾಕಿದಂವ. **ತೆಗ್ಯಕು** /*tɛgyaku*/ ತೆಗೆಯಬೇಕು. need to remove. ವಾ: ಕಳೆ ದೈನ ತೆಗ್ಯಕು.

ತೆಗ್ಳ್ /*tegḷi*/ ಕ್ರಿ. 1. ತೆಗಳು, 2. ಜರಿಯು. 1. to criticise, 2. to censure.

ತೆಙ /*teŋ*/ ನಾ. ತೆಂಗು. Coconut. **ತೆಙನ ಒಲಿ** /*teŋana oli*/ ತೆಂಗಿನ ಗರಿ. coconut leaf/coconut frond. ವಾ: ತೆಙನ ಒಲಿಲಿ ಗುಡ್ಸಿಕೆ ಚೀಪೆ ಮಾಡಿವೆ. **ತೆಙನಮಡ್‌ಲ್** /*teŋinamaḍili*/ ತೆಂಗಿನ ಗರಿಯ ಗೊಂಚಲು ಕೈ. coconut leaf/coconut frond.

ತೆಟ್ಟ್ /*tɛṭṭi*/ ಕ್ರಿ. ಮಗುವನ್ನು ಸೊಂಟದಲ್ಲಿ ಅಥವಾ ಕೈಯಲ್ಲಿ ಕೂರಿಸಿಕೊಂಡು ಕರೆದೊಯ್ಯುವುದು. to carry/hold the child on the hip bone – hip carry. ವಾ: ಕೂಸುನ ತೆಟ್ಟ್ ಕ. ಪ: ತೆತ್

ತೆತ್ತಿ /*tetti*/ ನಾ. ಮೀನಿನ ಮೊಟ್ಟೆ. eggs of fish. ವಾ: ಮೀನ್ ದ್ ಹೊಟ್ಟೆಲಿ ತೆತ್ತಿ ಸುಮಾರಿತ್.

ತೆತ್ತೆರಿಕೆ /*tetterikɛ*/ ಕ್ರಿ. ಬೈದುಕೊಳ್ಳುವುದು. to scold. ವಾ: ತೆತ್ತೆರಿಕೆ ಎಂತ ಕೆಲ್ಸ ಆಗೊತು.

ತೆತ್ /*tetti*/ ಕ್ರಿ. ಮಗುವನ್ನು ಸೊಂಟದಲ್ಲಿ ಎತ್ತಿಕೊಳ್ಳುವುದು. hip carry-holding one's baby on the hip bone. ವಾ: ಕೂಸುನ ತೆತ್. ಪ: ತೆತ್ತಿಕಂಡತ್ – ಎತ್ತಿಕೊಂಡನು/ಳು; ತೆತ್ತಿಕಾ – ಮಗುವನ್ನು ಎತ್ತಿಕೊಳ್ಳುವುದು. **ತೆತ್ತಿಕಂಡ್** /*tettikaṇḍi*/ 1. ಎತ್ತಿಕೊಂಡು, 2. ತಟ್ಟೊಂದು(ತು). 1. holding, 2. carrying. ವಾ: ಕೂಸುನ ತೆತ್ತಿಕಂಡ್ ಹೋದೊ.

ತೆನಸ್ /*tɛnasi*/ ನಾ. 1. ತಿನಿಸು, 2. ಆಹಾರ. 1. eatable, 2. food. ವಾ: ತೆನಸ್ ಎಂತ ಉಟ್ಟು ತಿಂಬಕೆ.

ತೆನೆ /*tenɛ*/ ನಾ. 1. ಧಾನ್ಯದ ಹೊಡೆ, 2. ಕದಿರು. 1. a spike of a plant, 2. an ear of corn. **ಹನಿ ಕೂಡ್‌ರೆ ಹಳ್ಳ ತೆನೆ ಕೂಡ್‌ರೆ ಬಳ್ಳ(ಗಾ).** ವಾ: ಈ ಸರಿನ ಬತ್ತದ ತೆನೆ ಲಾಯ್ಕ ಉಟ್ಟು.

ತೆನೆರಾಶಿ /*tenera:śi*/ ನಾ. 1. ಕದಿರಿನ ರಾಶಿ, 2. ರಾಗಿತೆನೆ ರಾಶಿ. 1. a stack of corn/paddy ear/ spike , 2. a stack of ragi/finger millet ear/ spike. ವಾ: ತೆನೆ ರಾಶಿ ನೋಡಿಕೆ ಕುಸಿ.

ತೆಪ್ಪಂಗೆ /*teppaŋgɛ*/ ನಾ. 1. ತೆಪ್ಪಗೆ, 2. ಸುಮ್ಮನೆ, 3. ಮೌನವಾಗಿ, 4. ಪೆಚ್ಚಾಗಿ, 5. ಬೆಪ್ಪಾಗಿ. 1. to be quiet, 2. simply, 3. silent, 4. disappointed, 5. fooled. ವಾ: ತೆಪ್ಪಂಗೆ ಕುದ್‌ಕ, ಹೆಚ್ಚಿ ಮಾತಾಡ್‌ಬಡ.

ತೆಮಿ /*tɛmi*/ ನಾ. ಎತ್ತುಗಳನ್ನು ಕಟ್ಟುವ ಹಗ್ಗ. a rope to tie bullocks. ವಾ: ತೆಮಿನ ಸುತ್ತಿಸ್.

ತೆರವಿನಹಣ /*teravinahaṇa*/ ನಾ. ತೆರವಿನ ಹಣವಾದ ರೂ, 10.25 ಪೈಸೆಯನ್ನು (6.25) ಪೈಸೆಗೆ ಕಂಚಿಗೆ ಬಳಸಿ ವೀಳ್ಯದೊಂದಿಗೆ ಕೊಡುವುದು, ತೆರವಿನ ಹಣವಾದ ರೂ, 10.25 ಪೈಸೆಯಲ್ಲಿ ಶೃಂಗೇರಿ ಮಠಕ್ಕೆ ಮುತ್ತೈದೆ ಕಾಣಿಕೆಯಾಗಿ ರೂ, 6.25 ಆಗಿರುತ್ತದೆ, ಉಳಿದ 4 ರೂ,ಗಳಲ್ಲಿ ಸ್ಥಳ ಮರ್ಯಾದೆಯಾಗಿ ರೂ, 1.25 ಪೈಸೆ, ಹಾಲೆ ಮರದ ಪಾದ ಕಂಬದ ಕಾಣಿಕೆಯಾಗಿ ರೂ, 1. Money that is paid as a gift or a tax: paying 10 rupees and 25 paisa, out of which 6.25 rupees is paid to Sringeri monastery (in the honour of married woman), the remaining

4.25 rupees is paid for the following; 1.25 rupee for the honour of a place, 1.25. ವಾ: ಮೊದುವೆಲಿ ತೆರವಿನ ಹಣ ಕಟ್ಟಿವೆ.

ತೆರವು ಮರೆವು ವೀಳ್ಯ /*teravu marevu vi:ḷya*/ ನಾ. ಎರಡೂ ಕಡೆಯ ಗೌಡರಿಗೂ ಗೌರವಾರ್ಥ ಅವರವರ ಸಾಮರ್ಥ್ಯಾನುಸಾರ ವೀಳ್ಯ ಕಟ್ಟುತ್ತಾರೆ, ಇದರ ನಂತರ ಗಂಡಿನ ಮತ್ತು ಹೆಣ್ಣಿನ ಕಡೆಯ ಗೌಡರು ತೆರೆ-ಮರೆ ಹಿಡಿದು ನಿಲ್ಲುತ್ತಾರೆ, ಈ ಸಂದರ್ಭದಲ್ಲಿ ಹೆಣ್ಣು ಗಂಡು ಪರಸ್ಪರ ಎದುರಾಗಿ ನಿಲ್ಲುತ್ತಾರೆ. betel-leaves exchaning ceremony at the time of marriage afterwhich the bride and the groom are made to stand behind a cloth curtain facing each other. ವಾ: ಮೊದುವೆಲಿ ತೆರವು ಮರೆವು ವೀಳ್ಯದ ಕ್ರಮ ಉಟ್ಟು.

ತೆರಿಕುದೆಂಟಿ /*terikudenṭi*/ ನಾ. ಮಾಂಸ ಕೊಚ್ಚುವ ಮರದ ತುಂಡು. a wooden chopping board to cut meat. ವಾ: ತೆರಿಕುದೆಂಟಿಲಿ ಹಕ್ಕಿ ಕುದ್ದುಟು.

ತೆರಿದು /*teridu*/ ಕ್ರಿ. ಕೊಚ್ಚುವುದು. to chop. ವಾ: ಮಾಸನ ತೆರಿದು.

ತೆರೆ /*terɛ (ko:la)*/ ನಾ. ದೈವದ ಕೋಲ. a ritual performed for a deity/bhuta. ವಾ: ತೆರೆ ನೋಡಿಕೆ ಹೋಕು ನೋಡಿಕೆ ಬಂದರೆನಾ? ಪ: ತೆರೆಕಟ್ಟಿತ್ – ಕೋಲ ಕಟ್ಟು

ತೆರೆಕಟ್ಟುದು /*terɛkaṭṭudu*/ ನಾ. ಗತಿಸಿ ಹೋದ ಮೂಲಪುರುಷರನ್ನು ಮತ್ತು ಭೂತಗಳನ್ನು (ದೈವ) ಮೈಮೇಲೆ ಆವಾಹಿಸಿಕೊಂಡು ಕುಣಿಯುವುದು. dance performed by the impersonator invoking deities or the dead ancestors. ವಾ: ನಮ್ಮ ಊರ್‌ಲಿ ವರ್‌ಸಕ್ಕೊಮ್ಮೆ ತೆರೆಕಟ್ಟುದು ನಡಿತಿದ್ದದೆ. ಪ: ತೆರೆಕಟ್ಟಿತ್ – ಕೋಲ ಕಟ್ಟು

ತೆರೆಮರೆ /*terɛmarɛ*/ ನಾ. 1. ಮುಚ್ಚುಮರೆ, 2. ಮದುವೆ ಮಂಟಪದಲ್ಲಿ ಗಂಡು ಹೆಣ್ಣು(ಮದುಮಕ್ಕಳು) ಪರಸ್ಪರ ನೋಡದಂತೆ ಅಡ್ಡ ಹಿಡಿಯುವುದು. 1. secrecy, 2. drawing a cloth curtian between the bride and the groom, so that they don't see each other. ವಾ: ತೆರೆಮರೆಲಿ ಆಟ ನಡೆತಿತ್.

ತೆರೆಮರೆವೀಳ್ಯ /*terɛmarɛ vi:ḷya*/ ನಾ. ತೆರವು ಮರೆವು ವೀಳ್ಯ. a bride price paid by the groom's family to bride's father. ವಾ: ತೆರೆಮರೆ ವೀಳ್ಯ ಕೊಟ್ಟಾತ್.

ತೆರೆವಿನವೀಳ್ಯ /*terɛvina vi:ḷya*/ ನಾ. ಗಂಡಿನ ಕಡೆಯವರು ಮದುವೆ ಮಂಟಪದಲ್ಲಿ ಹೆಣ್ಣಿಗೆ ರೂ, 10.25/- ಮತ್ತು ಒಂದು ಅಡಿಕೆಯನ್ನು ತೆರವು ಕಾಣಿಕೆಯಾಗಿ ನೀಡುವರು, ಇದನ್ನು ಹೆಣ್ಣಿನ ತಂದೆಯ ಮುಂಡಾಸಿನ ಒಂದು ತುದಿಯಲ್ಲಿ ಕಟ್ಟುತ್ತಾರೆ, ಇಲ್ಲಿ 'ತರ ಎಂದರೆ ತೆರಿಗೆಯೆಂದೂ ಗಂಡು ಹೆಣ್ಣಿಗೆ ವಧು ದಕ್ಷಿಣೆ ಕೊಡುವ ಕ್ರಮವಿತ್ತು ಎಂಬ ಅಭಿಪ್ರಾಯವಿದೆ, ತೆರವು ಕಟ್. a bride price paid by the groom's family: the groom's party pays rupess 10.25 to the bride along with an arecan nut, the bride's father ties it in his turban. ವಾ: ತೆರೆವಿನ ವೀಳ್ಯ ಕೊಡ್ತಾ ಒಳೊ.

ತೆರೆಹಬ್ಬ /*terɛ habba*/ ನಾ. ದೈವದ ಕೋಲದ ಹಬ್ಬ. the festival of deity/bhuta/spirit worship. ವಾ: ಬೇರೆ ಬೇರೆ ಗ್ರಾಮಲಿ ವರ್‌ಸಕೊಮ್ಮೆ ತೆರೆ ಹಬ್ಬ ನಡ್ದದೆ.

ತೆರ್ಕ್‌ಸ್ /*terkɨsɨ*/ ನಾ. 1. ಸರಿಸು, 2. ಜರುಗಿಸು. 1. to push, 2. to keep aside. ವಾ: ಚೀಲನ ಹಙ್ಞ ಅತ್ತ ತೆರ್ಕ್‌ಸ್. ಪ: ತೆರ್ಕ್ಸ್

ತೆರ್ತ್ /*tertɨ*/ ಕ್ರಿ. ಮಾಡಿದನು/ಳು. he/she did.

ತೆರ್ದಂಗೆ /*terdaŋgɛ*/ ನಾ. 1. ತೆರೆದ ಹಾಗೆ, 2. ತೆರೆದ ತಕ್ಷಣ, 3. ಬಾಗಿಲು ಮುಂತಾದುವನ್ನು ತೆಗೆ, 4. ಬಿಚ್ಚು. 1. as if someone opened, 2. immediately after opening, 3. to open the door, 4. to open. ವಾ: ಬಾಗ್‌ಲ್ ತೆರ್ದಂಗೆ ಕೊತ್ತಿ ವಳೆಗೆ ನುಗ್ಗಿತ್.

ತೆರ್ದ್ /*terdɨ*/ ಕ್ರಿ. 1. ತೆಂಗಿನಕಾಯಿ, ಕೊಬ್ಬರಿ ಮೊದಲಾದುವನ್ನು ಹೆರೆ, ಕೆರೆ, 2. ತುಂಡರಿಸು, 3. ತುರಿ. 1. to grate a coconut, 2. to cut, 3. to grate. ವಾ: ಕಾಯಿನ ತೆರ್ದ್ ಹಾಕ್.

ತೆಲಕೂದಲ್ /*tela ku:dalɨ*/ ನಾ. 1. ತಲೆಕೂದಲು, 2. ಕೇಶ. 1. hair on the head, 2. hair. ವಾ: ತೆಲ ಕೂದಲ್ ಇಳಿ ಬುಡ್‌ಬಡ.

ತೆಲ್‌ಗ್ /*teligɨ*/ ಕ್ರಿ. 1. ಸರಿದು ನಿಲ್ಲು, 2. ಬದಿಗೆನಿಲ್ಲು. 1. to stand on the side, 2. to stand at one side. ವಾ: ಹಙ್ಞ ಅತ್ತನ ಬರಿಗೆ ತೆಲ್‌ಗ್.

ತೆಲ್ದು /*teldu*/ ನಾವಿ. 1. ತೇಲು, 2. ನೀರಿನ ಮೇಲೆ ಚಲಿಸುವಿಕೆ, 3. ನೀರಿನಲ್ಲಿ ಮುಳುಗದಿರು. 1. to float, 2. to move on water, 3. not drown in water. ವಾ: ತುರ್‌ಬು ಕಟ್ಟಿ ಹೂ ಮುಡೆಕು.

ತೆವಳ್ದು /*tevaḷdu*/ ನಾವಿ. 1. ತೆವಳುವುದು, 2. ದೇಕು, 3. ಪಾದಗಳ ಸಹಾಯವಿಲ್ಲದೆ ಮುಂದೆ ಸರಿ, ಚಲಿಸು. 1. to crawl, 2. moving on one's hand and knees, 3. to move on one's hands and knees. ವಾ: ನೆಲಲಿ ತೆವಳ್ದು.

ತೆವ್ಲ್ /*tevlɨ*/ ನಾ. 1. ತೆವಲು, 2. ಗೀಳು, 3. ಚಟ, 4. ಚಾಳಿ. 1. an addiction, 2. a bad habit, 3. an obsession, 4. fetish. ವಾ: ತೆವ್ಲ್ ಜಾಸ್ತಿ ಇರಿಕಾಗದ್.

ತೆಳಿ¹ /*teli*/ ನಾ. 1. ಗಂಜಿನೀರು, 2. ಗಂಜಿತಿಳಿ. 1. water in which rice is boiled. 2. rice gruel. **ಬಂಟ ತೆಳಿ ಕುಡ್ದಂಗೆ(ಗಾ).** ವಾ: ತೆಳಿ ಕುಡ್ದಿಯನ?

ತೆಳಿ² /*teḷi*/ ನಾ. ತಿಳಿ, ಶುದ್ಧ, ಶುಭ್ರ. light, clean.

ತೆಳಿಲಿಬಿದ್ದ ಎಲಿ /*teḷilibidda elina:ŋgɛ*/ ಕ್ರಿವಿ. 1. ನಿಸ್ತೇಜ, 2. ಆಸಕ್ತಿ ಇಲ್ಲದವ. 1. unmoving, 2. not interested. ವಾ: ತೆಳಿಲಿ ಬಿದ್ದ ಎಲಿನಾಂಗೆ ಆಡ್ದೆಲ.

ತೆಳ್ ನೀರ್ /*teḷɨ ni:ri*/ ನಾ. ಕೆಂಡದ ಮೇಲೆ ಅನ್ನದ ಅಗುಳು ಹಾಕಿ ಅದರ ಮೇಲೆ ನೀರು ಹಾಕುತ್ತಾರೆ, ಇದು ಬೂದಿ ಸೇರಿದ ತೆಳ್ ನೀರ್ ಆಗುತ್ತದೆ, ಕೊಡವರು ಶುದ್ಧೀಕರಣಕ್ಕಾಗಿ ಇದನ್ನು ಬಳಸುತ್ತಾರೆ. a process of purification practised by Kodava people.

ತೆಳ್ಳಂಗೆ¹ /*teḷḷaŋge*/ ನಾವಿ. 1. ತಿಳಿಯಾದ, 2. ನೀರಿನ ಅಂಶ ಹೆಚ್ಚಾಗಿರುವ, 3. ಸಪೂರ, 4. ತೆಳ್ಳಗೆ. 1. clear/ clean, 2. moisture, 3. lean, 4. thin. **ಗಟ್ಟಿ ಆದರೆ ರೊಟ್ಟಿ, ತೆಳ್ಳಂಗಾದರೆ ದೋಸೆ(ಗಾ).** ವಾ: ಟಮೆಟ ಆಂಬರ ಬಾರಿ ತೆಳ್ಳಂಗೆ ಆತ್.

ತೆಳ್ಳಂಗೆ² /*teḷḷaŋgɛ*/ ನಾ. 1. ಸ್ಪಷ್ಟವಾಗಿ, 2. ತಿಳಿಯಾಗಿ, 3. ತೆಳುವಾಗಿ. 1. clear, 2. clean, 3. thin. ವಾ: ಬೆಳಿ ಅರ್ವೆ ಬಾರಿ ತೆಳ್ಳಂಗೆ ಉಟ್ಟ್. ಪ: ತೆಲುಪು(ತು)

ತೇ /*te:*/ ಅ. 1. ಹಾಗೆ ಹೇಳುವ, 2. ಅಂತೆ ಹೇಳುವ. 1. in that manner, 2. in that way.

ತೇಂಬಲೆಮರ /*te:mbalɛmara*/ ನಾವಿ. ಗಟ್ಟಿ ಇಲ್ಲದ ಕಾಡು ಮರ. a forest tree. ವಾ: ತೇಂಬಲೆ ಮರಲಿ ಏಂತನೂ ಮಾಡಿಕಾಲೆ.

ತೇಕುದು /*te:kudu*/ ಕ್ರಿ. 1. ತೇಗುವುದು, 2. ಗಟರು, 3. ಢರಕೆ ಹೊಡೆ. 1. burping, 2. belching, 3. eructation. ವಾ: ಹೊಟ್ಟೆ ತುಂಬ ತಿಂದ್ ತೇಕುದು.

ತೇಕ್‌ಮನೆ /*te:kɨmanɛ*/ ನಾ. ಕೊಡಗಿನಲ್ಲಿ ಹನ್ನೆರಡು ದಿನಗಳ ಸೂತಕ ಕಳೆಯುವ ತನಕ ಮೃತನ ಮನೆಗಿರುವ ಹೆಸರು. the term refers to a family which is observing a twelve day mourning period. ವಾ: ಅದ್ ಈಗ ತೇಕ್ ಮನೆ.

ತೇಗಮರ /*te:ga mara*/ ನಾ. 1. ಸಾಗುವಾನಿ, 2. ಒಂದು ಬಗೆಯ ಮರ, 3. ವರ್ಬಿನೇಸೀ ಕುಟುಂಬಕ್ಕೆ ಸೇರಿದ ದುಂಡು ಶಿರದ ಪರ್ಣಪಾತಿ ಮರ. 1. Indian teak wood tree, 2. a tree, 3. a deciduous tree belonging to the family of Lamiaceae. ವಾ: ತೇಗ ಮರಲಿ ಕುರ್‌ಸಿ ಮಾಡ್ಸಿದೊ.

ತೇಗ್ /*te:gɨ*/ ನಾ. 1. ತೇಗು ಬರುವುದು, 2. ತೇಗುವಿಕೆ. 1. burping, 2. belching. ವಾ: ಆಗಾಗ ತೇಗ್ ಬಾದು.

ತೇಟ್ /*te:ṭi*/ ಕ್ರಿವಿ. 1. ನಿಸ್ಸಂಶಯವಾಗಿ, 2. ಅದರಂತೆ. 1. without any doubt, 2. based on something. ವಾ: ಅಂದ ನೋಡಿಕೆ ತೇಟ್ ಅಂವನ ಅಪ್ಪನಾಂಗೆ.

ತೇಡೆ /*te:ḍɛ*/ ನಾ. 1. ಒಂದು ವಿಧದ ನದಿ, 2. ಕಡಲು ಮೀನು, 3. ಸೇಡೆ. 1. a fresh water fish, 2. a salt water fish, 3. catfish. ವಾ: ಅದ್ ತೇಡೆ ಮೀನ್.

ತೇನನ /*te:nana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ತೇನಬೈಲು /*te:nabailu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ತೇಪ್ /*te:pi*/ ಕ್ರಿ. 1. ತೇಪು, 2. ಎರಚು, 3. ಚೆಲ್ಲು, 4. ಉಜ್ಜು, 5. ತಿಕ್ಕು, 6. ಸಾರಣೆ. 1. to rub, 2. to spill 3 to throw, 4. to rub, 5. to scrape. ವಾ: ಗೋಡೆಗೆ ತೇಪ್ ಹಾಕ್‌ತಾ ಒಳೊ. ಪ: ಚೇಂಪು

ತೇಮಾನ /*te:ma:na*/ ಕ್ರಿವಿ. ಉಪಯೋಗದಿಂದ, ಒಣಗಿ ಹೋಗುವುದರಿಂದ ಅಥವಾ ದಾಸ್ತಾನು ಇಡುವುದರಿಂದ ತೂಕದಲ್ಲಿ ಉಂಟಾಗುವ ಕೊರತೆ.

things losing weight due to use and other processes. ವಾ: ವಣ್‌ಗಿದ ಕಾಪಿನ ಚೀಲಲೆ ಇಸಿ ತೇಮಾನ ಆಗುಟು.

ತೇರಣ ಬೆಪ್ಪ ಶಾಸ್ತ್ರ */te:raṇa bɛppa śa:stra/* ನಾ. ವಿವಾಹದ ಹಿಂದಿನ ದಿನ ಅಂದರೆ ಚಪ್ಪರದ ದಿನ ರಾತ್ರಿ ಮದರಂಗಿಯನ್ನು ವಧು ಹಾಗೂ ವರನ ಕೈಗೆಹಚ್ಚುವ ಶಾಸ್ತ್ರ. a ritual of applying henna on the palms and shoulders of the bride and the groom on the day of pendal ceremony. ವಾ: ತೇರಣ ಬೆಪ್ಪ ಶಾಸ್ತ್ರ ಆಗ್ತುಟ್ಟು.

ತೇರ್ */te:rɨ/* ನಾ. 1. ರಥ, 2. ದೇವರ ರಥ, 3. ರಥಬೀದಿ. 1. a chariot, 2. a chariot of god, 3. carstreet. ವಾ: ಮಡಿಕೇರಿ ದಸರಲಿ ಹನ್ನೊಂದ್ ತೇರ್ ಹೊರ್‌ಟದೆ, ಇರ್‌ಲ್ ಅದರ ನೋಡ್‌ದೇ ಒಂದ್ ಹಬ್ಬ.

ತೇರ್ತಮಜಲು */te:rtamajalu/* ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮರ್ಕಂಜ ಗ್ರಾಮದ ಜಾಗ. a locality in Markanja village in Sullia Taluk of Dakshina Kannada District.

ತೇಲಪ್ಪನ */te:lappana/* ನಾ. 1. ಕುಟುಂಬ, 2. ಮನೆತನ. 1. family, 2. lineage.

ತೇಲಬೈಲು */te:labailu/* ನಾ. 1. ಕುಟುಂಬ, 2. ಮನೆತನ. 1. family, 2. lineage.

ತೇಲ್[1] */te:li/* ಕ್ರಿ. 1. ನೀರಿನ ಮೇಲೆ ಚಲಿಸುವಿಕೆ, 2. ಹೆಚ್ಚಿನ ನೀರು. 1. to move on water, 2. excess water. **ನೀಲಿ ಸಮುದ್ರಲಿ ಬಿಳಿ ತಟ್ಟೆ ತೇಲ್ದೆ – ಹುಣ್ಣುಮೆ ಚಂದ್ರ(ಒ).** ವಾ: ಕೆಸನ ಎಲೆ ನೀರ್‌ಲಿ ತೇಲ್ದು. **ತೇಲಿಸು** */te:lisu/* 1. ನೀರಿನಲ್ಲಿ ಮುಳುಗದಂತೆ ಮಾಡು, 2. ಅಮುಖ್ಯವೆಂದು ಪರಿಗಣಿಸು, 3. ಶಿಥಿಲವಾಗಿ ಉಚ್ಚರಿಸು, 4. ಚಾಚು, 5. ಪಾರುಮಾಡು, 6. ನಿವಾರಿಸು. 1. to make things float, 2. to consider as unimportant, 3. to speak/pronounce softly/in feeble voice, 4. to spread, 5. to save, 6. to solve. ವಾ: ಕಾಗದದ ದೋಣಿ ಮಾಡಿ ನೀರ್‌ಲಿ ತೇಲಿಸಿ ಬುಡ್ದು. **ತೇಲು** */te:llu/* ನೀರಿನಲ್ಲಿ ತೇಲುವುದು. to float on water. ವಾ: ಪ್ಲಾಸ್ಟಿಕ್ ನೀರ್‌ಲಿ ತೇಲುದು.

ತೇಲ್[2] */te:lɨ/* ಕ್ರಿ. 1. ನೀರಿನಲ್ಲಿ ಮುಳುಗದೆ ಬೆಂಡಿನಂತಿರು, 2. (ಗಾಳಿಯಲ್ಲಿ) ಹಾರು, 3. ಲಾಭವಾಗಿ ಬರು, 4. (ಎಳೆಯ ಸಸ್ಯಗಳಂತೆ) ಬೇರು ಬಿಡದೆ ಮೇಲೆ ಬರು, 5. ಭೂಮಿಯ ಮೇಲೆ ಕಾಣಿಸು. 1. to float on water (thermocol), 2. to fly in the air, 3. to profit, 4. not having strong roots, 5. to appear on the ground. ವಾ: ಮರದ ದಿಮ್ಮಿ ನೀರ್‌ಲಿ ತೇಲ್‌ದು.

ತೇವ */te:va/* ನಾ. 1. ಒದ್ದೆ, 2. ಸದಾನೀರಿನ ಅಂಶ ಇರುವ. 1. wet, 2. having moisture all the time. ವಾ: ಬೇಜಾರಿಲಿ ಕಣ್ಣ್ ತೇವ ಆತ್.

ತೇಳಿ */te:ḷi/* ಅ. ಹೇಳಿ. tell/say. **ಸಿಹಿ ತೇಳಿ ನಾಯಿ ಸೆಟ್ಟಗ ನೆಕ್ಕಿತ್(ಗಾ).** ವಾ: ಹಂಗೆತೇಳಿ ಹೇಳ್ದೊ. **ತೇಳಿರೆ** */te:ḷirɛ/* ಹೇಳಿದರೆ. if you say. **ಅಡಿಗೆ ಯಾಕೆ ಹಿಂಗೆ ಮಾಡ್ದ ತೇಳಿರೆ, ಬೆಂಕಿ ಸರಿ ಹೊತ್ತಿತ್‌ಲೆ ತೇಳ್ತ್(ಗಾ).** ವಾ: ಇಲ್ಲೆತೇಳಿರೆ ಬೇಡಬುಡಿ. **ತೇಳ್‌ದು** */te:ḷɨdu/* ಹೇಳುವುದು. telling. ವಾ: ತೊಪ್ಪು ಮಾಡಿ ಇಲ್ಲೆ ತೇಳ್‌ದು ಅಬ್ಬೆಸ. ಪ: ತೇಳ್ದು **ತೇಳ್ವೆ** */te:ḷvɛ/* ಹೇಳುತ್ತಾರೆ. they say. ವಾ: ಅಂವು ಬಾಕೆತೇಳ್ವೆನ?

ತೈನಕಾಯಿ */tainaka:yi/* ನಾ. ತೆಂಗಿನಕಾಯಿ. a coconut.

ತೈಯತೈಯ */taiya taiya/* ಅ. ಮಭಾ. ಕುಣಿತ. dancing (in the vocabulary of children). ವಾ: ತೈಯ ತೈಯತ ಕೊಣಿಯದು.

ತೊಂಡ */toṇḍa/* ನಾ. 1. ವಯಸ್ಸಾದವನು, 2. ಮುದುಕ. 1. an old man, 3. an elderly man. ವಾ: ಅವು ಹಣ್ಣ್ ಹಣ್ಣ್ ತೊಂಡನಂಗೆ ಆಗೊಳೊ. ಪ: ತೊಂಡರ್ – ಅಜ್ಜಂದಿರು

ತೊಂಡಚ್ಚ */toṇḍacca/* ನಾ. ವಯನಾಟ್ ಕುಲವನ್ ದೈವ. a deity, spirit.

ತೊಂಡಿ */toṇḍi/* ನಾ. 1. ವಯಸ್ಸಾದವಳು, 2. ಮುದುಕಿ. 1. an old woman, 2. an elderly woman. ವಾ: ನೀ ತೊಂಡಿನಾ? ಮತ್ತೆ ಹಂಗೆ ನಡ್ಡಿಯ?

ತೊಂಡಿ ತುಕ್ರಿ */toṇḍi tukri/* ನಾ. ತುಂಬಾ ವಯಸ್ಸಾದವಳು. an old woman.

ತೊಂಡಿರ */toṇḍira/* ನಾ. 1. ಕುಟುಂಬ, 2. ಮನೆತನ. 1. family, 2. lineage.

ತೊಂಡೆ */toṇḍɛ/* ನಾ. 1. ತೊಂಡೆಕಾಯಿ, 2.

ತರಕಾರಿಯಾಗಿ ಬಳಸುವ ಒಂದು ಬಗೆಯಕಾಯಿ. 1. ivy gourd, a vegetable, 2. scarlet gourd/ tindora. ವಾ: ತೊಂಡೆ ಬೊಳ್ಳಿ ನೆಟ್ಟದ್. **ತೊಂಡೆಕಾಯಿ** /*toṇḍɛka:yi*/ ಚಿಕ್ಕ ತರಕಾರಿ. ivy gourd, a vegetable. ವಾ: ತೊಂಡೆಕಾಯಿ ಬೊಳ್ಳಿಲಿ ಸುಮಾರ್ ಬುಟ್ಟುಟು.

ತೊಂಡ್ /*toṇḍɨ*/ ಕ್ರಿ. ತೊಳೆದುಕೊಂಡು. washing. ವಾ: ಕೈಕಾಲ್ ತೊಂಡ್ ವಳೆಗೆ ಹೋಕು.

ತೊಂದರೆ /*tondarɛ*/ ನಾ. 1. ತೊಂದರೆ, 2. ಬಜ್ಜ, 3. ಪೇಚಾಟ, 4. ಅಡ್ಡಿ, 5. ತೊಡಕು, 6. ತಡೆ, 7. ಕಾಟ. 1. problem, 2. difficulty, 3. mumbling, 4. an obstacle, 4. a hindrance, 5. a hurdle, 6. torture. ವಾ: ಬೊದ್ಕ್‌ಲಿ ತೊಂದರೆ ಇಲ್ಲದೆ ಉಟ್ಟ?

ತೊಂಪು /*tompu*/ ನಾ. 1. ತಂಪು, 2. ತಣ್ಣನೆ. cold. **ಅಪ್ಪನ ಮನೆ ತೊಂಪ್‌ಗ್‌ಂತ, ತಿಪ್ಪೆ ಮರದ ತೊಂಪು ಲೇಸ್(ಗಾ).** ವಾ: ತೊಂಪು ಗಾಳಿ ಬೀಸಕನ ಮೊನ್‌ಸಿಗೆ ಕುಸಿ ಆದೆ.

ತೊಂಬರ /*tɔmbara*/ ನಾ. ಅವಿಭಕ್ತ ಕುಟುಂಬದಲ್ಲಿ ಗೃಹಿಣಿಯರೆಲ್ಲಾ ಒಟ್ಟಾಗಿ ಸೇರಿ ಅಡುಗೆ ಮಾಡುವ ಕೋಣೆ. a kitchen in a nuclear family. **ಕೊಡ್ಡು ಒಂದ್ ಕಾಸ್ ತೊಂಬರ ತುಂಬ ಹಾಸ್(ಗಾ).** ವಾ: ಹೆಣ್ಮಕ್ಕೆಲ್ಲ ತೊಂಬರಲಿ ಸೇರಿಕಂಡೊಳೊ. ಪ: ತೊಂಬರದೂಟ – ಒಂದು ಬಗೆಯ ಕೂಡೂಟ

ತೊಂಬುಳಿ /*tɔmbuḷi*/ ನಾ. 1. ತಂಬುಳಿ, 2. ತೆಂಗಿನಕಾಯಿ, ಜೀರಿಗೆ, ಶುಂಠಿ, ಮೆಣಸು ಮೊದಲಾದುವುಗಳನ್ನು ರುಬ್ಬಿ ಅದಕ್ಕೆ ಮಜ್ಜಿಗೆ ಬೆರೆಸಿ ಮಾಡಿದ ಒಂದು ಬಗೆಯ ಮೇಲೋಗರ, 3. ಪಸಿಂಗರಿ. 1. Thambuli, 2. a soup/stew made of ground grated coconut, jeera, ginger, pepper and mixed with butter milk, 3. curds based curry. ವಾ: ದೊಡ್ಡ್‌ಪತ್ರೆ, ಗಿಣ್‌ಕೆ ಸೊಪ್ಪ್ ಹಂಗೆ ಸುಮಾರ್ ಬೇರೆ ಬೇರೆ ತರದ ಸೊಪ್ಪುಗಳ್‌ಲಿ ತೊಂಬುಳಿ ಮಾಡಕ್, ಇದ್ ಆರೋಗ್ಯಕೆ ಒಳ್ಳೆದ್.

ತೊಂಬೆ /*tɔmbɛ*/ ನಾ. 1. ಹೃದಯ, 2. ದೇಹದ ಮಲಿನ ರಕ್ತವನ್ನು ಶುದ್ಧಗೊಳಿಸಿ ಅಂಗಾಂಗಗಳಿಗೆ ಶುದ್ಧರಕ್ತವನ್ನು ಒದಗಿಸುವ ರಕ್ತಕೋಶ. 1. heart, 2. heart, a muscular organ in the body which purifies and supplied blood to the body.

ತೊಕ್ಕಿಬಿಟ್ಟು /*tokkibiṭṭu*/ ಕ್ರಿವಿ. ನೀರನ್ನು ಇಂಗಿಸುವುದು. to dry the water/to evaporate water/desiccation.

ತೊಕ್ಕುಳಿ /*tokkuḷi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ತೊಟಿಗಿಲ್ /*toṭigilɨ*/ ನಾ. 1. ತೊಟ್ಟಿಲು, 2. ಮಕ್ಕಳ ತೂಗು ಹಾಸು. 1. a cradle, 2. a bassinet/a crib. **ಕೂಸುನ ಜಿಂಟುದು ತೊಟಿಗಿಲ್‌ನೂ ಒಚ್ಚುದು(ಗಾ).** ವಾ: ಯಾಕೆ ಸುಮ್ಮನೆ ತೊಟಿಗಿಲ್‌ನ ಒಚ್ಚುದು. ಪ: ತೊಟ್ಗಿಲ್

ತೊಟ್‌ಗಿಲ್ ಹಣ್ಣ್ /*toṭigilɨ haṇṇi*/ ನಾ. ಕಾಡಿನಲ್ಲಿ ದೊರೆಯುವ ಹಣ್ಣು. a forest fruit.

ತೊಟ್ಟಿ[1] /*toṭṭi*/ ನಾ. 1. ನೀರು ತುಂಬಿಸಿಡುವ ಮರದ ತೊಟ್ಟಿ, 2. ನಾಲ್ಕು ಸೂತ್ರದ ಮನೆಗಳ ಒಳಗಿನ ಚೌಕಾಕಾರದ ಅಂಗಣ. 1. a large wooden tank. 2. a quadrangular courtyard. ವಾ: ಮರದ ತೊಟ್ಟಿಲಿ ನೀರ್ ತುಂಬುಸಿಸುದು.

ತೊಟ್ಟಿ[2] /*toṭṭi*/ ನಾ. 1. ಬಕೀಟು, 2. ನೀರು ಹೊರಲು ಉಪಯೋಗಿಸುವ ಗುಂಡಾಕಾರದ ಹಿಡಿಯುಳ್ಳ ಪಾತ್ರೆ. 1. a bucket, 2. a vessel in the shape of a cylinder with a handle, used in carrying water. ವಾ: ತೊಟ್ಟಿಲಿ ನೀರ್‌ನ ಎತ್ತ್.

ತೊಟ್ಟಿ[3] /*toṭṭi*/ ನಾ. ದನಕ್ಕೆ ಹುಲ್ಲುಹಾಕುವ ಜಾಗ. a trough where one feeds grass to cattle. ವಾ: ತೊಟ್ಟಿಲಿ ಹುಲ್ಲ್ ಹಾಕ್.

ತೊಟಿಗಿಲ್ /*toigil* / ನಾ. ತೊಟ್ಟಿಲು, ಮಕ್ಕಳ ತೂಗುಹಾಸು. a credle. ಕೂಸುನ ಜಿಂಟುದು, ತೊಟಿಗಿಲ್‌ನೂ ಒಚ್ಚುದು(ಗಾ). ವಾ: ಯಾಕೆ ಸುಮ್ಮನೆ ತೊಟಿಗಿಲ್‌ನ ಒಚ್ಚುದು. ಪ: ತೊಟ್ಗಿಲ್. **ತೊಟ್ಟಿಲಿಗೆ ಹಾಕುದು** /*toṭṭligɛ ha:kudu*/ ಮಗು ಜನಿಸಿದ 16ನೇ ದಿನದಂದು ಮೊತ್ತಮೊದಲ ಬಾರಿಗೆ ಮಗುವನ್ನು ತೊಟ್ಟಿಲಿಗೆ ಹಾಕಿ ನಾಮಕರಣ ಮಾಡುವ ಸಮಾರಂಭ. the ceremony of naming a child on the 16th day after its birth. ವಾ: ಕೂಸುನ ತೊಟ್ಟಿಗೆ ಹಾಕುದು. **ತೊಟ್ಲ್ ಹೆಸ್ರ್** /*toṭlɨ hesri*/ ತೊಟ್ಟಿಲಿಗೆ ಹಾಕುವಾಗ ಇಡುವ ಹೆಸರು. a name assigned to the child on the day of its cradle ceremony. ವಾ: ಕೂಸ್‌ದ್ ತೊಟ್ಲ್ ಹೆಸ್ರ್ ಎಂತ?

ತೊಟ್ಟಿಯಾನ /*toṭṭiya:na*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ತೊಟ್ಟು[1] /*toṭṭu*/ ನಾ. 1. ಮೊಲೆತೊಟ್ಟು, 2. ಚೂಚುಕ. 1. the nipple, 2. teat. ವಾ: ಕೂಸಿಗೆ ಹಾಲ್ ಮರ್ಸೋಕರೆ ಮೊಲೆತೊಟ್ಟುಗೆ ಹಳ್ಲ ಕಾಸುಳಿನ ಮೆತ್ತುವೆ.

ತೊಟ್ಟು[2] /*toṭṭu*/ ನಾ. ಹಣ್ಣು, ಹೂವು, ಎಲೆ ಮೊದಲಾದವುಗಳ ದೇಟು. stem supporting a flower or a fruit-a pedicel. ವಾ: ಎಲೆದ್ ತೊಟ್ಟ್ ತೆಗ್‌ದ್ ಮತ್ತೆ ಎಲಾಡ್‌ಕೆ ತಿಂಬೊದ್.

ತೊಟ್ಟೆ /*toṭṭe*/ ನಾ. ಕಾಗದ, ಪ್ಲಾಸ್ಟಿಕ್ ಅಥವಾ ಬಟ್ಟೆಯಿಂದ ತಯಾರಿಸಿದ ಚಿಕ್ಕ ಚೀಲ. a paper or a plastic bag. ವಾ: ತೊಟ್ಟೆಲಿ ತರ್‌ಕಾರಿನ ಕಟ್ಟಿಸ್.

ತೊಟ್ಲೆ ಹಾಂತೆ /*toṭlɨ ha:ntɛ*/ ನಾ. ಕಪ್ಪಗಿನ ದೊಡ್ಡ ಪತಂಗ. a large black moth, an insect resembling a butterfly. ವಾ: ಕೂಸು ತೊಟ್ಲೆ ಹಾಂತೆನ ನೋಡಿ ಹೆದ್‌ರ್‌ದ್.

ತೊಡಂಕ್ /*toḍaŋkɨ*/ ನಾ. ಕತ್ತಿಯನ್ನಿಡಲು ಸೊಂಟಕ್ಕೆ ಕಟ್ಟುವ ಕೊಕ್ಕೆಯಂತಹ ಒಂದು ಸಾಧನ. a hook attached to the waistband to carry a knife. ವಾ: ತೊಡ್‌ಂಕ್‌ಲಿ ಕತ್ತಿನ ಸೆಕ್ಕಿಸಿಕಂಬೊದು.

ತೊಡಂಗ್ /*toḍaŋg*/ ನಾ. ಕೊಡಗಿನಲ್ಲಿ ಸಾಂಪ್ರದಾಯಿಕ ಉಡುಪು ಧರಿಸಿದಾಗ ಸೊಂಟದ ಹಿಂದೆ ಒಡಿಕತ್ತಿಯನ್ನು ಸಿಕ್ಕಿಸಲು ಬಳಸುವ ಚಕ್ರದಂತಹ ಸಾಧನ. a ring in the waistband to hold a traditional knife: ayudha katti or the oidekatti. ವಾ: ಕೊಡವರ್ ತೊಡಂಗ್ ಹಾಕಂಬೊದು.

ತೊಡಙ್ಞ್ /*toḍaŋŋɨ*/ ನಾ. ಸೊಂಟಕ್ಕೆ ಸಿಕ್ಕಿಸಿಕೊಳ್ಳಲು ಬಳಸುವ ಕೊಕ್ಕೆ. a ring in the waist belt/band. ವಾ: ಸೊಂಟಲಿ ತೊಡಙ್ಞ್‌ನ ಸೆಕ್ಕಿಸಿಕಂಡರಾತ್.

ತೊಡಮೆ[1] /*tɔḍamɛ*/ ನಾ. ಬೇಲಿ ದಾಟಲು ಮಾಡಿರುವ ದಾರಿ. ಬೇಲಿಯ ಎರಡೂ ಬದಿಯಿಂದ ಪಾಲದಂತೆ ಎತ್ತರ ಮಾಡಿ ಅದರ ಇನ್ನೊಂದು ಪಕ್ಕ ನೆಲಕ್ಕೆ ಮುಟ್ಟಿಕೊಂಡು ಮನುಷ್ಯರು ಹತ್ತಿಹೋಗುವಂತೆಯೂ ದನಕರುಗಳು ದಾಟದಂತೆಯೂ ಮಾಡುವ ದಾರಿ. a stile, a narrow gate or passage with wooden or bamboo poles fixed horizontally in the fence or compound wall to enable people to cross it while forming a barrier to cattle. ವಾ: ಬೇಲಿ ದಾಟಿಕೆ ತಡಮೆ ಮಾಡಿವೆ. ಪ: ತಡ್ಮೆ

ತೊಡಿಕಾನ[1] /*toḍika:na*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ತೊಡಿಕಾನ ಗ್ರಾಮದ ಜಾಗ. a locality in Todikana village in Sullia Taluk of Dakshina Kannada District.

ತೊಡಿಕಾನ[2] /*toḍika:na*/ ನಾ. ಸುಳ್ಯ ತಾಲೂಕಿನ ಅರಂತೋಡು ಹತ್ತಿರದ ದೇವಸ್ಥಾನದ ಸ್ಥಳನಾಮ ತೊಡಿಕಾನ, ತೋಡು ಮತ್ತು ಕಾನ ಎಂಬ ಎರಡು ಪದಗಳು ಇಲ್ಲಿವೆ. a compound noun referring to a place called Thodikana, near Sullia. **ಕೊಡಿ ತೊಡಿಕಾನ ಕಡೆ ಬಜಪಿಲ(ಉಲ್ಲಾಕುಳು ದೈವದ ನುಡಿ)(ನು).**

ತೊಡುಂಗು /*toḍuŋgu*/ ನಾ. ಕಂಚಿನ ಸಾಧನ ಅದರೊಳಗೆ ಯುದ್ಧದ ಕತ್ತಿಯನ್ನು ಇರಿಸಲಾಗುತ್ತದೆ. a bronze girdle tied around the waist to hold the Kodava war knife (Odi Kathi). ವಾ: ತೊಡುಂಗು ವಳೆಗೆ ಇಸಿಕಣಿ.

ತೊಡುವೆ /*toḍuvɛ*/ ನಾ. ಒಂದು ಜಾತಿಯ ಜೇನು ನೊಣಗಳ ಕುಟುಂಬ. Indian honey bee, Apis cerana indica. ವಾ: ತೊಡುವೆ ಕಚ್ಚಿರೆ ಬಾಪಿದೆ.

ತೊಡುವೆ ನೆಯಿ /*toḍuvɛ neyi*/ ನಾ. ಜೇನುತುಪ್ಪ. honey.

ತೊಡೆ /*toḍɛ*/ ನಾ. ಮೊಣಕಾಲಿನ ಮೇಲಿನ ಸೊಂಟದವರೆಗಿನ ಭಾಗ. thigh (part of leg between the knee and the hip). ವಾ: ತೊಡೆ ಮೇಲೆ ಕೂಸುನ ಮೊಲ್ಗಿಸಿಕ. ಪ: ತೊಡೆನ; ತೊಡೆಲಿ

ತೊಡೆ ಮಾಸ /*toḍɛ ma:sa*/ ನಾ. ಕುರಿ, ಆಡುವಿನ ತೊಡೆಯ ಮಾಂಸ. thigh meat of a sheep, or a lamb. ವಾ: ಕುರಿದ್ ತೊಡೆಮಾಸ ತಂದದ್.

ತೊಡೆಕಟ್ /*toḍɛkaṭi*/ ನಾ. ನೇಗಿಲನ್ನು ನೊಗದೊಂದಿಗೆ ಬಂಧಿಸುವ ಹಗ್ಗ. a rope used in tying the plough with the yoke. ವಾ: ತೊಡೆಕಟ್ ಸೇರ್‌ಸ್.

ತೊಡೆಸಂದ್ /*toḍɛsandɨ*/ ನಾ. ತೊಡೆ ಸೊಂಟಕ್ಕೆ

ಸೇರುವ ಭಾಗ. groin. ವಾ: ತೊಡೆಸಂದ್‌ಲಿ ಕುರ ಎದ್ದುಟು.

ತೊಡ್ ಎಸಂಡ್ /*toḍ ɛsa:ṇḍɨ*/ ನಾ. ದೊಡ್ಡ ಜಾತಿಯ ಏಡಿ. a giant crab. ವಾ: ನಮಿಗೆ ತೊಡ್ ಎಸಂಡ್ ಸಿಕ್ಕಿತ್ತ್.

ತೊಡ್ಕಟ್ಟ್ /*toḍkaṭṭɨ*/ ನಾ. 1. ನೇಗಿಲಿನ ಕೊಕ್ಕೆ, 2. ನೊಗಕ್ಕೆ ಕಟ್ಟಿರುವ ಹಗ್ಗ. 1. hook attached to a plough, 2. a rope attached to the yoke. ವಾ: ನೊಗಕ್ಕೆ ತೊಡ್ಕಟ್ಟ್ ಕಟ್ಟ್.

ತೊಡ್ಕ್ /*toḍkɨ*/ ನಾ. 1. ತೊಡಕು, 2. ಅಡ್ಡಿ, 3. ಅಡಚಣೆ, 4. ಬಜ್ಜ, 5. ತೊಂದರೆ. 1. an obstacle, 2. a hindrance, 3. an impediment, 4. trouble. ವಾ: ಒಳ್ಳ ಕೆಲ್‌ಸಕೆ ನೂರಾರ್ ತೊಡ್ಕ್. **ತೊಡಕೆಂತ** /*toḍakenta*/ ಏನು ಕಷ್ಟ? what is the problem? ವಾ: ಕರೆಕನ ಬಾಕೆ ನಿಂಗೆ ತೊಡಕೆಂತ?

ತೊಡ್ಗೆ /*toḍgɛ*/ ನಾ. 1. ತೊಡುಗೆ, 2. ಉಡುಪು, 3. ವೇಷ. 1. garment, 2. dress, 3. costume. ವಾ: ಅವುಳ ಉಡ್ಗೆ ತೊಡ್ಗೆ ಬಾರಿ ಜೋರಿತ್ತ್.

ತೊಡ್ಚ್ /*toḍcɨ*/ ನಾ. 1. ತಡೆ, 2. ಅಡ್ಡಿ, 3. ವಿಳಂಬ, 4. ನಿಲ್ಲಿಸು. 1. an obstacle, 2. a hindrance, 3. to cause delay, 4. to stop. ವಾ: ಸೀರೆ ಕಾಲಿಗೆ ತೊಡ್ಚ್ ತಾ ಉಟ್ಟು.

ತೊಡ್ಪೆ[1] /*toḍɛ*/ ನಾ. 1. ಧಾನ್ಯಗಳನ್ನು ಸಂಸ್ಕರಿಸಲು ಬಳಸುವ ಬಿದಿರಿನ ಸಲಾಕೆಯಿಂದ ಮಾಡಿದ ಸಾಧನ, 2. ಮೊರ. 1. a winnowing basket, 2. a winnowing fan. **ಹಳೆ ತೊಡ್ಪೆಗೆ ಸೆಗಣಿ ಗಟ್ಟಿ, ಅಜ್ಜಂಗೆ ಅನ್ನ ಗಟ್ಟಿ(ಗಾ).** ವಾ: ತೊಡ್ಪೆ ತಕಂಡ್ ಅಕ್ಕಿನ ಹೊಡ್ಕ್.

ತೊಡ್ಪೆ[2] /*toḍpɛ*/ ನಾ. ಹುಬ್ಬುಗಳ ನಡುವಿನ ಪ್ರದೇಶ. region between eyebrows.

ತೊಡ್ಸ್ /*toḍs*/ ಕ್ರಿ. ತೊಡಿಸು. to make someone wear. ವಾ: ಅವುಳ ಕೈಗೆ ಬಳೆನ ತೊಡ್ಸ್.

ತೊಣ್ /*toṇ*/ ಕ್ರಿ. ಗಟ್ಟಿಯಾದ ಆಹಾರ ಪದಾರ್ಥವನ್ನು ಬಾಯಿ ಒಳಗೆ ಇರಿಸಿ ಕೊಂಡು ಕಚ್ಚುತ್ತಾ ಇರುವುದು. chewing any hard food. ವಾ: ಚಾಮೆವ್ವ ಚಕ್ಕುಲಿನ ತೊಣ್‌ದು.

ತೊಣ್ಕ್ /*toṇk*/ ಅ. ಅನುಕರಣಾವಚಿ ಪದ. an onomatopoeia. ವಾ: ನೀರಿಗೆ ಎಂತದೊ ತೊಣ್ಕ್ ತ ಬೀತ್.

ತೊತ್ಯನ /*totyana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ತೊದಲ್ /*todal*/ ನಾ. 1. ತೊದಲು, 2. ಮಾತಿನಲ್ಲಿ ತಡವರಿಸು, 3. ಮಕ್ಕಳು ಮುದ್ದಾಗಿ ಮಾತನಾಡುವುದು. 1. to stammer, 2. to stutter, 3. lisping. ವಾ: ಕೂಸುನ ತೊದಲ್ ಮಾತ್ ಕೇಳುದೇ ಕುಸಿ.

ತೊಪ್ಟ /*topṭa*/ ನಾ. 1. ತುಪ್ಪಳ, 2. ತುಪ್ಪಟ. wool/skin. ವಾ: ಕೋಳಿ ತೊಪ್ಟ ತೆಗೆದು. ಪ: ತೊಪ್ಪುಳು

ತೊಪ್ಪ /*toppa*/ ನಾ. ಮರದ ತೊಗಟೆ. bark of a tree. ವಾ: ಮರದ ತೊಪ್ಪನ ಕೆತ್ತಿ ಇಸ್.

ತೊಪ್ಪವರೆ /*toppavarɛ*/ ನಾ. ಅವರೆಕಾಯಿ ಹೆಸರು. another name for hyacinth beans. ವಾ: ತೊಪ್ಪವರೆನ ಪಲ್ಯ ಮಾಡಕ್.

ತೊಪ್ಪಳ್ /*toppaḷ*/ ನಾ. ಗರಿ. feather. ವಾ: ಹಿಂದೆನ ಕಾಲಲಿ ಕೋಳಿ ತೊಪ್ಪಳ್‌ನ ಕೆಮಿಗೆ ಹಾಕ್‌ತಿದ್ದೊ. ಪ: ತೊಪ್ಪುಳು

ತೊಪ್ಪಿ /*toppi*/ ನಾ. 1. ಟೊಪ್ಪಿ, 2. ಟೋಪಿ, 3. ಹೆಣೆದು ಅಥವಾ ಹೊಲಿದು ತಯಾರಿಸಿದ ತಲೆಯ ತೊಡುಗೆ, 4. ಟೊಪ್ಪಿಗೆ. 1. a cap, 2. a hat, 3, a woven cap, usually made of wool, cotton, etc. 4. a headdress. ವಾ: ತಲೆಗೆ ತೊಪ್ಪಿ ಹಾಕಿಕಣಕಿತ್.

ತೊಪ್ಪುಟ /*topputa*/ ನಾ. 1. ತುಪ್ಪಳ, 2. ಗರಿ, 3. ಪುಕ್ಕ. 1. wool, 2. feather, 3. plumage. ವಾ: ಇಜ್ಜೆಲ್‌ಲಿ ಸುಮಾರ್ ಕೋಳಿ ತುಪ್ಪಟ ಬಿದ್ದುಟು.

ತೊಪ್ಪೆ[1] /*tɔppɛ*/ ನಾ. 1. ಚೋಲಿ, 2. ಸಿಪ್ಪೆ, 3. ಹಣ್ಣಿನ ದಪ್ಪವಾದ ಹೊರ ಕವಚ, 4. ಹೊರ ಪದರ. 1. a peel, 2. skin, 3. peel of a fruit, 4. outer layer. **ಹಣ್ಣ್ ತಿಂದವ ನುಣ್‌ಚಿಕಂಡತ್, ತೊಪ್ಪೆ ತಿಂದಂವ ಸಿಕ್ಕಿ ಹಾಕಿತ್(ಗಾ). ಅಂವ ಮರ ಹತ್ತ್‌ಕನ ಅಂವನ ಕಚ್ಚೆ ಬಿಚ್ಚಿ ಹೋದೆ – ಬಿದ್‌ರ್ ತೊಪ್ಪೆ(ಒ).** ವಾ: ಹಣ್ಣ್‌ದ್ ತೊಪ್ಪೆ ಸೊಲ್‌ದ್ ತಿನ್ನ್.

ತೊಪ್ಪೆ[2] /*tɔppɛ*/ ನಾ. 1. ಸಿಪ್ಪೆ, 2. ಕೆತ್ತೆ. 1. peel/skin, 2. outer bark. ವಾ: ಗಂದ ಮರದ ತೊಪ್ಪೆನ (ಕೆತ್ತೆ) ವಾಮಕೆ (ಹ್ವಾಮಕೆ) ಹಾಕುವೆ. ಪ: ತೊಪ್ಪೆನ

ತೊಪ್ಪ್ /*tɔpp*/ ಕ್ರಿ. 1. ತಪ್ಪು, 2. ಕ್ರಮ ತಪ್ಪು, 3. ಅಪರಾಧ ಮಾಡು, 3. ನೀತಿಬಿಟ್ಟ ನಡೆ, 4. ದೋಷ, 5. ಕ್ರಮ ತಪ್ಪು. 1. a mistake, 2. to miss the order/ maner, 3. to commit a crime, 4. an immoral/ and unethical/a characterless act, 5. a mistake. **ಕೇಡ್ ಮಾಡ್ರೆ ಕೆಡ್‌ಕ್ ತೊಪ್ಪಿಕಿಲ್ಲೆ(ಗಾ).** ವಾ: ತಪ್ಪ್‌ತ ಹೇಳಿಕೆಬೊತ್ತ್, ಅಸ್ಟ್ ಬೇಗ ಸಿಟ್ಟ್ ಬಂದದೆ, ತೊಪ್ಪು ತೊಪ್ಪೆ. ಪ: ತಪ್ಪ್‌ನ; ತಪ್ಪಾಕಿಲೆ; ತಪ್ಪೊಪ್ಪಿಕೊಂಡ್; ತೊಪ್ಪಾತ್. **ತೊಪ್ಪದೆ** /*toppadɛ*/ ತಪ್ಪಿಸದೆ. without failure. ವಾ: ತೊಪ್ಪದೆ ಮೊದ್ವೆಗೆ ಬರೊಕು. **ತೊಪ್ಪಿತ್** /*toppitɨ*/ ತಪ್ಪಿತು. avoided/ missed. ವಾ: ದೊಡ್ಡ ತೊಂದರೆ ತೊಪ್ಪಿತ್. ಪ: ತೊಪ್ಪಿಸಿಕಂಡ್, ತೊಪ್ಪಿಹೋತ್. **ತೊಪ್ಪುಸ್** /*toppusɨ*/ 1. ತಪ್ಪಿಸು, 2. ಹಾಜರಾಗದಿರು, 3. ತಪ್ಪಿಸಿಕೊಂಡು ಹೋಗು. 1. to avoid, 2. to be absent, 3. to escape. ವಾ: ಆದೊರ್‌ನ ತೊಪ್ಪುಸಿಕೆ ಯಾರಿಂದಲು ಆದುಲೆ.

ತೊಬ್ಬು /*tɔbbu*/ ನಾ. 1. ಅಪ್ಪುಗೆ, 2. ಆಲಿಂಗಿಸು, 3. ತಬ್ಬಿಕೊಳ್ಳು. 1. to hug, 2. to embrace, 3. to cuddle. **ಹೆಬ್ಬಾಲ್‌ನ ಮರ ತೊಬ್ಬಿಕೆ ಬೊತ್ತ್ – ಹುಲಿ(ಒ).** ವಾ: ಅವ್ವ ಕೂಸುನ ತೊಬ್ಬುದು.

ತೊರೆ /*torɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ತೊರ್ಬಲಿಸಿ /*tɔrbalisi*/ ನಾ. ಹಾತೊರೆಯುವುದು. to long for. ವಾ: ಅವ್ವ ಕೂಸುನ ನೋಡಿಕೆ ತೊರ್ಬಲಿಸಿಕಂಡ್ ಕುದ್ದುಟು.

ತೊರ್ಸಿಕಾಂಕೆ /*tɔrsika:ŋkɛ*/ ನಾ. 1. ತುರಿಸಿಕೊಳ್ಳಲು, 2. ಕೆರೆದುಕೊಳ್ಳಲು. 1. to scratch, 2. to rub. ವಾ: ಬೆಳೆ ಕೆಲ್ಸ, ಕಾಪಿ ಕೆಲ್ಸದ ಸಮೆಲಿ ತೊರ್ಸಿಕಾಂಕೆ ಪುರುಸೊತ್ತಿಲ್ಲೆ.

ತೊರ್ಸು[1] /*to:rsu*/ ಕ್ರಿ. ತುರಿಸು. to scratch. **ಕಜ್ಜಿ ಹೋದರೂ ತೊರ್ಸುದು ಹೋತ್ಲೆಗಡ(ಗಾ).** ವಾ: ಮೈ ತೊರ್ಸು.

ತೊರ್ಸು[2] /*tɔrsu*/ ನಾ. 1. ಕೆರೆದುಕೊಳ್ಳು, 2. ತಿಕ್ಕು. 1. to scratch, 2. to rub. **ಕಜ್ಜಿ ಹೋದರೂ ತೊರ್ಸುದು ಹೋತ್ಲೆಗಡ(ಗಾ).** ವಾ: ಕಜ್ಜಿ ವಣ್‌ಗಿಕಾಕನ ತೊರ್ಸುದು. ಪ: ತೊರ್ಸಿಕೆ; ತೊರ್ಸಿಕಂಬಕೆ

ತೊರ್ಸೆಲ್ /*tɔrsel*/ ನಾ. 1. ತುರಿಕೆ, 2. ಕೆರೆತ. 1. itching, 2. scratching. ವಾ: ದೈದ ಸೆರೆಗೆ ಹೋಗಿ ಬಂದರೆ ಮೈಯೆಲ್ಲ ತೊರ್ಸೆಲ್.

ತೊರ್ಸ್ /*tɔrsɨ*/ ನಾ. 1. ತುರಿಸು, 2. ಕೆರೆದುಕೊಳ್ಳು. 1. to scratch, 2. to scrape. ವಾ: ಬೆನ್ನ್ ತೊರ್ಸ್. ಪ: ತೊರ್ಸಿಕ

ತೊಳಸಿ /*toḷasi*/ ನಾ. 1. ತುಳಸಿಗಿಡ, 2. ಪೂಜನೀಯ ಹಾಗು ಔಷಧಿ ಸಸ್ಯ. 1. basil plant, 2. a medicinal and revered plat. ವಾ: ದಿನಾನು ತೊಳಸಿ ಕಟ್ಟೆಗೆ ಪೂಜೆ ಮಾಡಿನೆ. **ತೊಳಸಿ ಕೊಡಿ** /*toḷasi koḍi*/ 1. ತುಳಸಿಯ ಚಿಗುರು, 2. ತುಳಸಿಯ ತುದಿ ಭಾಗ. 1. shoots of basil plant, 2. new plant growth. ವಾ: ತೊಳಸಿ ಕೊಡಿ, ನೀರುಳಿನ ಜಜ್ಜಿ ಅದರೊಟ್ಟಿಗೆ ಜೇನ್ ಹಾಕಿ ರಸನ ಕುಡ್ದರೆ ಸೀತ, ದೊಂಡೆ ಬೇನೆಗೆ ಒಳ್ಳದ್. ಪ: ತೊಳ್ಸಿ ಕೊಡಿ, ತೊಳ್ಸಿ ಹೂವ್, ತೊಳ್ಸಿಕಟ್ಟೆ **ತೊಳ್ಸಿದೈ** /*toḷsidai*/ 1. ತುಳಸಿ ಗಿಡ. basil plant. ವಾ: ತೊಳ್ಸಿದೈ ಮನೆ ಮುಂದೆ ಇದ್ದರೆ ಅದರ ಗಾಳಿಗೆ ಆರೋಗ್ಯ ಇದ್ದದೆ.

ತೊಳಿ /*toḷi*/ ಕ್ರಿ. ತೊಳೆಯುವುದು. to wash. **ಅಳಿಯ ಮನೆ ತೊಳಿಯ(ಗಾ).** ವಾ: ಕಾಲ್ ತೊಳಿ. ಪ: ತೊಳಿಯಕಾದು – ತೊಳೆಯಬಹುದು; ತೊಳಿಯದು – ತೊಳೆಯುವುದು; ತೊಳಿಯೋಕು – ತೊಳೆಯಬೇಕು; ತೊಳೆಕೆ – ತೊಳೆಯಲು; ತೊಳಿದು – ತೊಳಿಯುವುದು; ತೊಳೆಯಕೆಂತ – ತೊಳೆಯಲೆಂದು; ತೊಳೆಯಕ್ಕೆ – ತೊಳೆಯುವುದಕ್ಕೆ; ತೊಳೆಯೊಕು – ತೊಳೆಯಬೇಕು; ತೊಳೆಯೊದ್ – ತೊಳೆಯುವುದು; ತೊಳಿದು – ತೊಳೆಯುವುದು **ತೊಳಿನಿ** /*toḷini*/ ತೊಳೆಯಿರಿ. wash. ವಾ: ಬನ್ನಿ ಕೈ ಕಾಲ್ ಮೋರೆ ತೊಳಿನಿ.

ತೊಳ್ /*toḷɨ*/ ಕ್ರಿ. 1. ಹೊಟ್ಟೆ ತೊಳ್ಸುದು, 2. ವಾಂತಿ ಬರುವಂತಾಗು, 3. ತೊಳೆಸು. vomiting sensation. ವಾ: ತಿಂದದ್ ಏನೋ ಹೆಚ್ಚ್‌ಕಮ್ಮಿ ಆತ್ ಹೊಟ್ಟೆ ತೊಳ್ಸಿದೆ. ಪ: ತೊಳ್ಸುದು

ತೊಳ್ಕ /*toḷka*/ ಕ್ರಿ. 1. ತೊಳೆ, 2. ಸ್ವಚ್ಛ ಮಾಡು, 3. ಶುದ್ಧಗೊಳಿಸು. 1. to wash, 2. to clean, 3. to decontaminate. **ತನ್ನ ತಿಕ ತಾನೆ ತೊಳ್ಕಂಬಕೆ ಆದುಲೆ(ಗಾ).** ವಾ: ನೀ ಕೈ ಕಾಲ್‌ನ ತೊಳ್ಕ. ಪ: ತೊಳ್ಕಂಕಾದ್ – ತೊಳಿಯಬಹುದು; ತೊಳ್ಕಂಡ್ – ತೊಳೆದುಕೊಂಡು; ತೊಳ್ಕಣಿ – ತೊಳೆದುಕೊಳ್ಳಿ;

ತೊಳ್ಕಂಬಕೆ – ತೊಳೆದುಕೊಳ್ಳುವುದಕ್ಕೆ; ತೊಳ್ಕೊಂಡ್ – ತೊಳೆದುಕೊಂಡು;

ತೊಳ್ತ್ /*toḷti*/ ಕ್ರಿ. ತೊಳೆದನು/ಳು. he/she washed. ವಾ: ಬೈಕ್‌ನ ತೊಳ್ತ್. ಪ: ತೊಳ್ತ

ತೊಳ್ದವೆ /*toḷdavɛ*/ ಕ್ರಿ. ತೊಳೆಯುತ್ತಾರೆ. will wash. ವಾ: ಅವು ಪಾತ್ರೆ ತೊಳ್ದವೆ.

ತೊಳ್ಯಟ /*toḷyaṭa*/ ಕ್ರಿ. 1. ತೊಳೆಯುವುದು, 2. ತೊಳೆದದ್ದು. 1. washing, 2. washed/cleaned. ವಾ: ನಿನ್ನದ್ ಎಂತ ಪಾತ್ರ ತೊಳ್ಯಟ ಎಲ್ಲ ಹಂಗೆನೆ ಉಟ್ಟು.

ತೊಳ್ಸಿದಂಗೆ /*toḷsidaŋgɛ*/ ಕ್ರಿವಿ. 1. ಹೊಟ್ಟೆ ತೊಳೆಸಿದಂತೆ, 2. ವಾಕರಿಕೆ ಬರುವಂತಹ ಸ್ಥಿತಿ. vomiting sensation. ವಾ: ಹೊಟ್ಟೆ ತೊಳ್ಸಿದಂಗೆ ಆದೆ.

ತೊಳ್ಸಿನಹಿಟ್ಟ್ /*toḷsina hiṭṭi*/ ನಾ. 1. ಅಕ್ಕಿತರಿಯ ಹಿಟ್ಟು, 2. ಮೊದಲ ಬಾರಿ ಮೈ ನೆರೆದಾಗ ಕೊಡುವ ತಿನಿಸು, 3. ಹಳದಿ ಬಣ್ಣದ ಅಕ್ಕಿ ಸಜ್ಜಿಗೆ, 4. ನನ್ನೆರಿ. 1. coarse rice powder, 2. a dish served to girl when she gets her first menstrual period, 3. a yellow sweet dish made of rice, 4. a dish. ವಾ: ಹೊಲೆ ಕಾಂಬಕನ ತೊಳ್ಸಿನ ಹಿಟ್ಟ್ ಮಾಡಿ ಕೊಟ್ಟವೆ. ಪ: ತಂಬಿಟ್ಟ್

ತೊಳ್ಸ್ /*toḷsi*/ ಕ್ರಿ. 1. ತೊಳೆಸು, 2. ಶುಚಿಗೊಳಿಸು. 1. to wash, 2. to clean. ವಾ: ಕೂಸ್‌ದ್ ಮೋರೆನ ತೊಳ್ಸ್.

ತೋಂಡಿಕೆಸ /*to:ŋḍikɛsa*/ ನಾ. ಕೆಸದ ವಿಧಗಳು. types of Colocasia. ವಾ: ತೋಂಡಿ ಕೆಸ ತಿಂಬಕೆ ಲಾಯ್ಕ.

ತೋಂಡು /*co:ŋḍu*/ ಕ್ರಿ. 1. ನೀರು, ಅನ್ನ ಮೊದಲಾದ ಪದಾರ್ಥವನ್ನು ಒಂದು ಪಾತ್ರೆಯಿಂದ ಇನ್ನೊಂದು ಪಾತ್ರೆಗೆ ಗೋಚಿ ಹಾಕುವುದು, 2. ತೋಡುವುದು. 1. transfering water, rice, etc. from one vessel to another, 2. to dig. ವಾ: ಗಂಜಿಗೆ ಅನ್ನನ ತೋಂಡು.

ತೋಕೆ /*to:kɛ*/ ನಾವಿ. ಫಸಲು ಕೊಯ್ಲಿನ ನಂತರ ಉಳಿವ ತೊಟ್ಟು. stem of harvested plant.

ತೋಟ ತೊಡಿಗೆ /*to:ṭa toḍigɛ*/ ನಾ. 1. ಆಸ್ತಿಪಾಸ್ತಿ, 2. ಸಂಪತ್ತು. 1. property, 2. wealth. ವಾ: ಈ ವರ್ಸ ತೋಟ ತೊಡಿಗೆಲ್ಲ ಹೆಂಗುಟ್ಟು?

ತೋಟ[1] /*to:ṭa*/ ನಾ. 1. ಬಂದೂಕಿನ ಗುಂಡು, 2. ಬಂದೂಕಿನ ಸಿಡಿಮದ್ದು, 3. ಬಂದೂಕಿನಲ್ಲಿಟ್ಟು ಹಾರಿಸುವ ಗುಂಡು, 4. ಕಾಡತೂಸು. 1. a bullet, 2. a bullet, 3. gun powder, 4. a bullet, 4. a cartridge. **ಅಬ್ಯಾಸದಂಗೆ ಆಟ ಬೇಸಾಯದಂಗೆ ತೋಟ(ಗಾ).** ವಾ: ಕೋವಿಗೆ ತೋಟ ಹಾಕಿ ಗುಂಡು ಹೊಡೆದು.

ತೋಟ[2] /*to:ṭa*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಐವತ್ತೊಕ್ಲು ಗ್ರಾಮದ ಜಾಗ. a locality in Aivattoklu village in Sullia Taluk of Dakshina Kannada District.

ತೋಟಂಪಾಡಿ /*to:ṭampa:ḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ತೋಟಂಬೈಲು /*to:ṭambailu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ತೋಟಗಾರ /*to:ṭaga:ra*/ ನಾ. ವ್ಯವಸ್ಥಿತವಾಗಿ ತೋಟದ ನಿರ್ವಹಣೆ ಮಾಡುವಾತ. the one who maintains the farm, a manager. ವಾ: ತೋಟಗಾರ ತೋಟನ ಬಾರಿ ಲಾಯ್ಕಲಿ ನೋಡಿಕಂಡದೆ.

ತೋಟದ ಮೂಲೆ /*to:ṭada mu:le*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಪೆರುವಾಜೆ ಗ್ರಾಮದ ಜಾಗ. a locality in Peruvaje village in Sullia Taluk of Dakshina Kannada District.

ತೋಟಪ್ಪಾಡಿ /*to:ṭappa:ḍi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮಂಡೆಕೋಲು ಗ್ರಾಮದ ಜಾಗ. a locality in Mandekolu village in Sullia Taluk of Dakshina Kannada District.

ತೋಟೆ /*to:ṭɛ*/ ನಾ. 1. ಕಲ್ಲು ಸಿಡಿಸುವ ಮದ್ದು, 2. ಕೋವಿ ತೋಟಾ, 3. ಮೀನು ಹಿಡಿಯಲು ನದಿ ನೀರಿಗೆ ಕಲ್ಲುಕಟ್ಟಿ ಕೇಪಿಗೆ ಬೆಂಕಿಕೊಟ್ಟು ಎಸೆಯುವ ಡೈನಮೈಟ್. 1. dynamite, 2. a cartridge, 3. dynamite. ವಾ: ಕೋವಿಗೆ ತೋಟೆ ಹಾಕ್.

ತೋಟೆ ಕೋವಿ /*to:ṭɛ ko:vi*/ ನಾ. ತೋಟೆ ಇಟ್ಟು

ಸಿಡಿಸುವ ಕೋವಿ. a rifle. ವಾ: ತೋಟೆ ಕೋವಿ ತಕಂಡನ?

ತೋಟೆ ಬೆಡಿ /*beḑi*/ ನಾ. ಕೋವಿ. a rifle. ವಾ: ಬೆಡಿ ತಕಂಡ್ ಹೊರ್‌ಟೊ.

ತೋಟೆಹಾಕ್[1] /*to:ţεha:kɨ*/ ನಾ. 1. ಅಂದಾಜಿಗೆ ಗುಂಡುಹೊಡಿ, 2. ಮೀನು ಹಿಡಿಯಲು ಹಾಕುವ ಸಿಡಿಮದ್ದು. 1. to shoot without proper aim, 2. explosives used in blast fishing. ವಾ: ತೋಟೆ ಹಾಕಿಸಿ ಸುಮಾರ್ ಮೀನ್‌ಗಳ ಹಿಡ್ದೊ.

ತೋಟೆಹಾಕ್[2] /*to:ţεha:kɨ*/ ನಾವಿ. ಇಷ್ಟಪಟ್ಟು ನೋಡುವುದು. seeing something out of desire. ವಾ: ಕೆಲೊವು ಹೈದಂಗಳಿಗೆ ತೋಟೆ ಹಾಕುದೇ ಕೆಲ್ಸ.

ತೋಟಹಾಕ್[3] /*to:ţaha:kɨ*/ ನಾ. ಮೀನಿಗೆ ಹಿಡಿಯಲು ನೀರಿನಲ್ಲಿ ಗುಂಡು ಸಿಡಿಸು. blast fishing. ವಾ: ತೋಟ ಹಾಕಿ ಕಲ್ಲ್ ಒಡ್ದ್ಯೊದ್. ಪ: ತೋಟೆಹಾಕ್

ತೋದ್ /*to:dɨ*/ ನಾ. ಮನೆಗೆ ಹೆಂಚು ಹಾಕುವಾಗ ಬಳಸುವ ಅಳತೆಗೋಲು. a measuring stick used while installing roof tiles.

ತೋನ್ಸ್ /*to:nsɨ*/ ಕ್ರಿ. ತೋರಿಸು. to show. ವಾ: ಕೈಲಿ ಎಂತತ ತೋನ್ಸ್.

ತೋರ /*to:ra*/ ನಾವಿ. 1. ದಪ್ಪವಾದುದು, 2. ಗಾತ್ರ, 3. ಹೆಚ್ಚಳ. 1. thick, 2. size, 3. increase. ವಾ: ಇನ್ನ್ ಹಷ್ಟ ಹಗಲೆಕಾಯಿ ತೋರ ಆಗಲಿ.

ತೋರಣ /*to:raɳa*/ ನಾ. ಬಣ್ಣದ ಕಾಗದ, ವಿದ್ಯುದೀಪಗಳಿಂದ, ಬಾಳೆ, ಮಾವಿನ ಎಲೆಗಳಿಂದ, ಬಣ್ಣದ ಗಿಡಗಳಿಂದ ಅಲಂಕರಿಸುವುದು. buntings made of colour paper, mango leaf, etc. ವಾ: ಹಬ್ಬಲಿ ಮಾಯ್ನ ಎಲೆದ್ ತೋರಣ ಬಾಗ್ಲ್‌ಗೆ ಕಟ್ಟಿದೊ.

ತೋರಿಕಾಗದ್ /*to:rika:gadɨ*/ ಕ್ರಿ. ತೋರಿಸಬಾರದು. shouldn't be shown. ವಾ: ದೌಲತ್ ತೋರಿಕಾಗದ್.

ತೋರಿಕೆ /*to:rikε*/ ಕ್ರಿ. 1. ತೋರಿಸು, 2. ಪ್ರದರ್ಶಿಸು. 1. to show, 2. to display. **ಆಪತ್‌ಗೆ ಹರ್ಕೆ ಸಂಪತ್ತ್‌ಗೆ ತೋರಿಕೆ(ಗಾ).** ವಾ: ಹೊಸ ಮನೆನ ತೋರಿಕೆ ಹೋದ್.

ತೋರೆರಾ /*tho:rεra:*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ತೋರ್ಣೆ /*to:rɳε*/ ನಾ. 1. ತೋರಣ, 2. ಹಬ್ಬ, ಉತ್ಸವ ಮುಂತಾದ ವಿಶೇಷ ಸಂದರ್ಭಗಳಲ್ಲಿ ಅಲಂಕಾರಕ್ಕಾಗಿ ಬಾಗಿಲು, ಬೀದಿ ಮುಂತಾದೆಡೆಗಳಲ್ಲಿ ಕಟ್ಟುವ ತಳಿರು, ಹೂ, ಬಟ್ಟೆ, ಮಣಿ ಮುಂತಾದುವುಗಳ ಮಾಲೆ, ಸರ. 1. a festoon-hanging decorations, 2. buntings made of colour paper, mango leaf, flowers, fabric, beads, etc. used to decorate the streets during festivals and other important occasions. ವಾ: ಮೊದ್ವೆಲಿ ಬಾಳೆದೈನ ತೋರ್ಣೆ ಕಟ್ಟಿವೆ.

ತೋರ್ತು /*to:rtu*/ ನಾ. ಚಿಕ್ಕದಾದ ಪಂಚೆಯೊಂದನ್ನು ಸೊಂಟಕ್ಕೆ ಸುತ್ತಿಕೊಳ್ಳುವ ಕ್ರಮ. tying a small dhoti/a towel around one's waist. ವಾ: ತೋರ್ತು ಕಟ್ಟಿಕಂಬದು.

ತೋರ್ತ್ /*to:rtɨ*/ ನಾ. 1. ಬೈರಾಸ್, 2. ಮುಜುಗರ ಅನುಭವಿಸುವುದು. 1. a towel 2. to feel embarrassed. ವಾ: ತಲೆಗೆ ತೋರ್ತ್ ಕಟ್ಟಿಕ. ಪ: ತೋರ್ತು

ತೋರ್ಬೆರ್ಳ್ /*to:ribεrḷi*/ ನಾ. ತೋರುಬೆರಳು. an index finger. ವಾ: ತೋರ್ಬೆರ್ಳ್‌ಲಿ ತೋರ್‌ಸುದು.

ತೋರ್ಸ್ /*to:rsɨ*/ ಕ್ರಿ. ತೋರಿಸು. to show. **ಅಂಗೈ ತೋರ್ಸಿ ಅವಲಕ್ಷಣ ಹೇಳ್ಸಿ ಕಂಡಾಂಗಾತ್(ಗಾ). ಆಸೆ ತೋರ್ಸಿ ಮೋಸಮಾಡ್(ನು).** ವಾ: ಎಲ್ಲಿ ಮುಳ್ಳು ಹೆಟ್ಟಿದ್‌ತ ತೋರ್ಸ್. **ತೋರ್ಸಿದಾಂಗೆ** /*to:rsida:ŋgε*/ ತೋರಿಸಿದಂತೆ. as pointed/as indicated/as shown. **ಕುರುಡಂಗೆ ಕುರುಡ ದಾರಿ ತೋರ್ಸಿದಾಂಗೆ(ನು).** ವಾ: ದಾರಿ ತೋರ್ಸಿದಾಂಗೆ ಹೋತ್. **ತೋರ್ಸಿಯೆರಿ** /*to:rsiyεri*/ ತೋರಿಸುತ್ತೀರಾ. will you show. ವಾ: ತೊಟ್ಟಿಲಿ ನೀರ್‌ನ ಎತ್ತ್.

ತೋಲಿಯ /*to:liya*/ ನಾ. 1. ನಾಚಿಕೆ, 2. ಲಜ್ಜೆ. 1. shyness, 2. bashfulness. ವಾ: ಗೂಡೆ ತೋಲಿಯಂದ ಮೋರೆ ಮುಚ್ಚಿಕನ್ತ್.

ತೋಲು /*to:lu*/ ನಾ. 1. ಸಿಪ್ಪೆ. peel/skin. ವಾ: ಬಾಳೆಣ್ಣ್‌ದ್ ತೋಲು ತೆಗಿ.

ತೋಳೆ /*to:ḷɛ*/ ನಾ. 1. ಸೋಳೆ, 2. ಹಲಸಿನ ಸೋಳೆ, 3. ಮುಸುಂಬಿ ಸೋಳೆ, 4. ಎಸಲು. 1. the arils 2. jackfruit segment/pod/arils, 3. sweet lemon arils/segment, 3. segment. ವಾ: ಮೂಸಂಬಿದ್ ತೋಳೆ ಬುಡ್‌ಸಿ ಕೊಡಿ.

ತೋಳ್[1] /*to:ḷɨ*/ ನಾ. 1. ತೋಳು, 2. ಭುಜಬಲ, 3. ಅಂಗಿ ಅಥವಾ ಕೋಟಿನ ಕೈಯ ಭಾಗ. 1. shoulder, 2. strength, 2. cuff of a shirt. ವಾ: ತೋಳ್ ಹಜ್ಜ ಉದ್ದ ಆತ್.

ತೋಳ್[2] /*to:ḷɨ*/ ನಾ. 1. ಮರದ ತೊಲೆ, 2. ಕಂಬದಿಂದ ಕಂಬಕ್ಕೆ ಅಥವಾ ಗೋಡೆಯಿಂದ ಗೋಡೆಗೆ ಹಾಕುವ ಮರ, ಪಟ್ಟಡಿ ಮರ, 3. ಮಾಡಿನ ಚೌಕಟ್ಟಿಗೆ ಹಾಕುವ ದೂಲ, ತೀರು. 1. a beam, 2. a log of wood used as a beam, 3. a rafter. ವಾ: ತೋಳ್‌ನ ನೋಡ್ ಎಸ್ಟ್ ದಪ್ಪಲಿ ಉಟ್ಟುತ?

ತೌಡು /*tauḍu*/ ನಾ. 1. ಭತ್ತ ಮುಂತಾದ ಧಾನ್ಯದ ತೆಳು ಪೊರೆ, 2. ಹಂದಿ, ಕೋಳಿಗಳಿಗೆ ಹಾಕುವ ಆಹಾರ. 1. husk of paddy and other grains, 2. outer layer of grain, fruit, etc, 3. bran served to pigs and hen as food. **ತೌಡು ತಿಂಬವ ಹೋಕನ, ಉಮಿ ತಿಂಬವ ಬಾತ್(ಗಾ).** ವಾ: ಬತ್ತ ಮಿಲ್ ಮಾಡ್‌ಸಿಕನ ತೌಡು ಸಿಕ್ಕಿದೆ, ಉಮಿನ ಅಲ್ಲೇ ಬುಟ್ಟವೆ, ತೌಡ್‌ನ ತಕಂಡವೆ.

ತೌರು /*tauru*/ ನಾ. 1. ತವರು, 2. ತಾಯಿಗೆ ತನ್ನ ತಾಯಿಯ ಮನೆ, ಮಕ್ಕಳಿಗೆ ಮಾವನ ಮನೆ. 1. parent's house of a bride, 2. for a mother it is her mother's house, and for the children it is their uncle's house. ವಾ: ತೌರು ಮನೆಗೆ ಹೋಕು. **ತೌರ್‌ಮನೆ** /*taurmanɛ*/ 1. ತವರುಮನೆ, 2. ತಾಯಿಯ ಮನೆ. 1. parent's house of a bride, 2. mother's house. ವಾ: ಹೆಣ್ಣ್ ತೌರ್‌ಮನೆಗೆ ಹೋವುಟು.

ತ್ಯಾಗದ ಮರ /*tya:gada mara*/ ನಾ. ತೇಗದ ಮರ. teak wood. ವಾ: ತ್ಯಾಗದ ಮರ ಕೊಯ್‌ಸಿದ್.

ತ್ಯಾಪೆ /*tya:pɛ*/ ನಾ. 1. ತೇಪೆ, 2. ಹರಿದುದನ್ನು ಸೇರಿಸುವುದಕ್ಕಾಗಿ ಸೇರಿಸಿ ಹೊಲಿದ ತುಂಡು, 3. ಬಟ್ಟೆ ಮುಂತಾದವುಗಳ ಹರಿದ ಭಾಗಕ್ಕೆ ಬೇರೊಂದು ತುಂಡನ್ನು ಹೊಂದಿಸುವುದು. 1. to patch, 2. to patch the torn clothes, 3. a piece of cloth used as a patch. ವಾ: ರಸ್ತೆಗೆ ತ್ಯಾಪೆ ಹಾಕ್‌ತೊಳೊ.

ತ್ರಾಣ /*tra:ṇa*/ ನಾ. 1. ತ್ರಾಣ, 2. ಶಕ್ತಿ, 3. ಬಲ, 4. ಕಸುವು. 1. energy, 2. power, 3. strength, 4. vigour. ವಾ: ಜೀವಲಿ ತ್ರಾಣ ಇಲ್ಲೆ.

ತ್ರಾಸ್ /*tra:sɨ*/ ನಾ. ತಕ್ಕಡಿ, ತೂಗುವ ಸಾಧನ. a scale. ವಾ: ತ್ರಾಸ್ ವಸ್ತುಗಳ ತೂಕನ ಅಳ್‌ತೆ ಮಾಡ್ವ ಸಾದನ.

ತ್ರಿವೊಳಿ /*trivoḷi*/ ನಾ. 1. ತ್ರಿವಳಿ, 2. ಮೂರರ ಒಂದು ಗುಂಪು. 1. a triplet, 2. trio. ವಾ: ತ್ರಿವೊಳಿ ಮಕ್ಕ ಹುಟ್ಟ್ಯೊಳೊಗಡ.

ತ್ವಾಟ /*tva:ṭa*/ ನಾ. ತೋಟ. a farm. ವಾ: ನಮ್ಮ ಅಪ್ಪಂಗೆ ತೋಟತೇಳಿರೆ ಜೂವ.

ದ

ದಂಬೆಹಂಚ್ /*dambɛ haŋcɨ*/ ನಾ. ಹಂಚಿನಿಂದ ನೀರು ಹೋಗಲು ಮಾಡಿರುವ ಕಾಲುವೆ. installing roof gutter. ವಾ: ದಂಬೆ ಹಂಚ್ ತೆಗ್‌ದಿಸಿತ್.

ದಂಕಟ್ಟ್ /*daṁkaṭṭɨ*/ ಕ್ರಿ. 1. ಉಸಿರು ಕಟ್ಟು, 2. ಉಸಿರುಕಟ್ಟಿ ಶಕ್ತಿ ಹಾಕು, 3. ದಂ ಕಟ್ಟಿ ನೀರಿನಲ್ಲಿ ಮುಳುಗು. 1. to hold one's breath, 2. to use all the energy, 3. to jump into water holding one's breath. ವಾ: ನೀರ್‌ಲಿ ದಂ ಕಟ್ಟಿ ಮುಳ್‌ಗ್.

ದಂಗಾಗ್ /*daŋga:gɨ*/ ಕ್ರಿ. 1. ಬೆರಗಾಗು, 2. ಅಚ್ಚರಿಪಡು. 1. awestruck, 2. surprised. ವಾ: ಕೂಸ್‌ನ ಮಾತಿಗೆ ದಂಗಾದ್.

ದಂಟ್ /*danṭɨ*/ ನಾ. 1. ದಂಟು, 2. ಕಾಂಡ, 3. ದೇಟು. 1. a stem, 2. a trunk, 3. a stalk. ವಾ: ಬೆಳ್‌ದ ಸೊಪ್ಪ್‌ನ ದಂಟ್ ಬೇಡ. **ದಂಟ್‌ನ ಸೊಪ್ಪ್** /*danṭina soppɨ*/ 1. ದಂಟಿನ ಸೊಪ್ಪು, 2. ಒಂದು ಜಾತಿಯ ತರಕಾರಿ ಸೊಪ್ಪು. 1. amaranthus, 2. a green leafy vegetable. ವಾ: ದಂಟ್‌ನ ಸೊಪ್ಪ್ ಗೈಪು, ಪಲ್ಯ ಎರ್‌ಡು ಲಾಯ್ಕಾದೆ.

ದಂಡ[1] /*daṇḍa*/ ನಾ. 1. ವ್ಯರ್ಥವಾದದು, 2. ಉಪಯೋಗವಿಲ್ಲದ್ದು, 3. ನಿಷ್ಪ್ರಯೋಜಕವಾದುದು. 1. wasted, 2. useless, 3. not serving any purpose. **ಅನ್ನಕ್ಕೆ ದಂಡ ಬೂಮಿಗೆ ಬಾರ(ಗಾ).** ವಾ: ದಂಡಕೆ ನಿನ್ನ ಸಾಂಕುದುರ.

ದಂಡ[2] /*daṇḍa*/ ನಾ. 1. ದಂಡ, 2. ಅಧಿಕಾರವನ್ನು ಸೂಚಿಸುವ ಬೆತ್ತ, 3. ಅಧಿಕಾರ ದಂಡ. 1. a baton, 2. a truncheon, 3. a staff symbolising power and position.

ದಂಡ[3] /*daṇḍa*/ ನಾ. 1. ಜುಲ್ಮಾನೆ, 2. ದಂಡ. 1. a fine, 2. a penalty. ವಾ: ಹೆಲ್ಮೆಟ್ ಹಾಕದಕ್ಕೆ ದಂಡ ಹಾಕಿದೊ.

ದಂಡಕಜೆ /*daṇḍakajɛ*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಸಂಪಾಜೆ ಗ್ರಾಮದ ಜಾಗ. a locality in Sampaje village in Sullia Taluk of Dakshina Kannada District.

ದಂಡಪಿಂಡ /*daṇḍapiṇḍa*/ ನಾವಿ. ನಿರುಪಯೋಗಿಗಳು, ನಿಷ್ಪ್ರಯೋಜಕರು. useless people. ವಾ: ಮನೆಲಿ ಒಂದ್ ದಂಡಪಿಂಡ ಉಟ್ಟು.

ದಂಡಾಸ್ /*daṇḍa:sɨ*/ ನಾ. ಬಿಸಿ ವಸ್ತುಗಳನ್ನು ಒಲೆಯಿಂದ ಇಳಿಸಲು ಬಳಸುವ ವಸ್ತು. a kitchen towel/napkin.

ದಂಡಿನ /*daṇḍina*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ದಂಡೆ[1] /*daṇḍɛ*/ ನಾ. ದಡ. a river bank. ವಾ: ಹಸ್ ದಂಡೆ ಕರೆಲಿ ನಿತ್ತುಟು.

ದಂಡೆ[2] /*daṇḍɛ*/ ನಾ. ಎರಡು ಕಂಗುಗಳ ಮಧ್ಯೆಯಲ್ಲಿ ಕಣಿ ಮಾಡುವುದು. making a furrow. ವಾ: ದಂಡೆ ಹಕ್ಕಲೆ ಹಾವ್ ಸುರ್‌ಟಿ ಮೊಲ್ಗಿಟು. ಪ: ದಂಡೆಗೆ – ಬತ್ತದ ರಾಶಿಗೆ; ದಂಡೆಮೇಲೆ – ಬತ್ತದ ರಾಶಿ ಮೇಲೆ

ದಂಡೆ[3] /*daṇḍɛ*/ ನಾ. 1. ಹುಲ್ಲನ್ನು ಕೊಡವಿ ಉದ್ದಕ್ಕೆ

ದಡದಂತೆ ಹಾಕುವುದು, 2. ಭತ್ತದ ಹುಲ್ಲಿನ ರಾಶಿ. 1. making a furrow using hay, 3. a haystack.

ದಂಡೆಪೆಟ್ಟ್ /*daṇḍɛpeṭṭɨ*/ ನಾ. ಭುಜಕ್ಕೆ ಭುಜ, ಕೈಗೆ ಕೈಯಿಂದ ಪರಸ್ಪರ ಹೊಡೆದುಕೊಳ್ಳುವ ಆಟ. a kind of game.

ದಂಡ್[1] /*daṇḍɨ*/ ನಾ. 1. ಮರದ ತೊಲೆ, 2. ಕಂಬದಿಂದ ಕಂಬಕ್ಕೆ ಅಥವಾ ಗೋಡೆಯಿಂದ ಗೋಡೆಗೆ ಹಾಕುವ ಮರ, ಪಟ್ಟಿಡಿ ಮರ, 3. ಮಾಡಿನ ಚೌಕಟ್ಟಿಗೆ ಹಾಕುವ ದೂಲ, ತೀರು. 1. a beam, 2. a wooden cross beam , 3. a rafter. ವಾ: ಹಂಚಿನ ಮನೆಗೆ ದಂಡ್ ಹಾಕಿವೆ.

ದಂಡ್[2] /*daṇḍɨ*/ ನಾ. 1. ತಿರುಳು, 2. ಬಾಳೆದಂಡ್, 3. ಸಸ್ಯ ಮತ್ತು ಮರಗಳ ಮಧ್ಯದ ತಿರುಳು, 4. ಬಾಳೆದಂಡು. 1. stem, 2. banana stem, 3. kernel of plants or trees, 4. banana stem. ವಾ: ಬಾಳೆದಂಡ್ ರಸ ಕುಡ್ಯಕ್.

ದಂಡ್[3] /*daṇḍɨ*/ ನಾ. 1. ತುಕಡಿ, 2. ಸೇನೆ. 1. a regiment of army, 2. an army. **ಹೆಣ್ಣ್ ಹೆತ್ತ್ ಸಾಯೋಕು ಗಂಡ್ ದಂಡಿಗೆ ಹೋಗಿ ಸಾಯೋಕು(ಗಾ).** ವಾ: ಮಜ್ಜ ದಂಡ್‌ಲಿ ಉಟ್ಟು.

ದಂಡ್[4] /*daṇḍɨ*/ ನಾ. 1. ದಂಡು, 2. ಗುಂಪು, 3. ಸಮೂಹ. 1. a crowd, 2. a group of people, 3. an assemblage. **ಹೆಣ್ಣ್ ಹೆತ್ತ್ ಸಾಯೋಕು ಗಂಡ್ ದಂಡಿಗೆ ಹೋಗಿ ಸಾಯೋಕು(ಗಾ).** ವಾ: ದಂಡ್ ಕಟ್ಟಿ ಬರ್‌ತೊಳೊ.

ದಂಡ್[5] /*daṇḍɨ*/ ನಾ. ಮಿಲಿಟರಿ(ಸೇನೆ). military. ವಾ: ದಂಡ್‌ಗೆ ಹೋದಂವ ಯಾಗ ಬಾದುಗಡ.

ದಂಡ್‌ಪಿಂಡ /*daṇḍɨpiṇḍa*/ ನಾ. 1. ಉಂಡಾಡಿ, 2. ಅಪ್ರಯೋಜಕ. useless. ವಾ: ಅದೊಂದ್ ದಂಡ್‌ಪಿಂಡ.

ದಂಪತಿಗ /*dampatiga*/ ನಾ. 1. ದಂಪತಿ, 2. ಗಂಡಹೆಂಡಿರು. 1. a couple, 2. husband and wife. ವಾ: ದಂಪತಿಗೆ ಮೂರ್ ಜೆನ ಮಕ್ಕ.

ದಂಬೆ /*dambɛ*/ ನಾ. 1. ಬಿದಿರು, ಅಡಿಕೆ, ಬೈನೆ ಮರದಿಂದ ನೀರು ಹರಿಸಲು ತಯಾರು ಮಾಡುವ ಅರ್ಧ ಚಂದ್ರಾಕೃತಿಯ ಕೊಳವೆ. to split bamboo or palm tree into half and connect them as channels for the smooth flow of water. ವಾ: ದಂಬೆಲಿ ನೀರ್ ಹರ್‌ದ್ ಹೋದೆ. ಪ: ದೊಂಬೆ

ದಂಬೆಕೋಡಿ /*dambeko:ḍi*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಗುತ್ತಿಗಾರು ಗ್ರಾಮದ ಜಾಗ. 1. family, 2. lineage, 3. a locality in Guttigaru village in Sullia Taluk of Dakshina Kannada District.

ದಂಬೆತೋಟ /*dambɛto:ṭa*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ದಂಬ್ಡಿ ಕಾಸಿಲ್ಲೆ /*dammaḍi ka:sillɛ*/ ನಾವಿ. ಒಂದು ಪೈಸೆ ಇಲ್ಲ. penniless.

ದಕ್ಕಯ /*dakkaya*/ ನಾ. ದೀನತೆಯಿಂದ ಬೇಡುವುದು. requesting with great humility. ವಾ: ದಮ್ಮಯ ದಕ್ಕಯ ಹಾಕಿ ಕೇಳಿಕಂಡೊ.

ದಕ್ಕಸ್ /*dakkasɨ*/ ಕ್ರಿ. 1. ದಕ್ಕುವಂತೆ, 2. ದೊರಕುವಂತೆ, 3. ಸಿಗುವಂತೆ ಮಾಡು, 4. ಜೀರ್ಣ ಮಾಡಿಕೊ, 5. ತಡೆದುಕೊ. 1. to make something available, 2. to make something accessible, 3. to make something attainable, 4. to digest, 5 to control/hold. ವಾ: ಅವರ ಮಾತ್‌ನ ದಕ್ಕಿಸಿಕಂಕಾತ್‌ಲೆ. ಪ: ದಕ್ಕ್ – ದೊರೆಯಿತು

ದಕ್ಕಿದ್ /*dakkidɨ*/ ಕ್ರಿ. 1. ದಕ್ಕು, 2. ಪಡೆದುಕೊಳ್ಳು. 1. attain, 2. to acquire something. ವಾ: ನಮಿಗೆ ಇಷ್ಟೆ ದಕ್ಕಿದ್. ಪ: ದಕ್ಕುದು

ದಕ್ಷಿಣೆ /*dakṣiṇɛ*/ ನಾವಿ. 1. ದಕ್ಷಿಣೆ, 2. ಗುರುಹಿರಿಯರು ಮುಂತಾದವರಿಗೆ ನೀಡುವ ಕಾಣಿಕೆ. 1. a fee paid for a service, 2. a fee/token given to elders. ವಾ: ಪೂಜೆ ಮಾಡಿ ದಕ್ಷಿಣೆ ಕೊಡೊಕು.

ದಗಡೆ /*dagaḍɛ*/ ನಾವಿ. ಅನೈತಿಕ ಸಂಬಂಧ ಹೊಂದಿರುವ ಹೆಣ್ಣು, ಏನೂ ಕೆಲಸ ಮಾಡದೆ ದೇಹ ಬೆಳೆಸುವ ಸೋಮಾರಿ ಹೆಣ್ಣು ಮಕ್ಕಳು (ಬೈಗುಳ ಪದ). a woman who has illicit relationships, an expletive used for a lazy woman. ವಾ: ಅಲ್ಲಿ ನೋಡ್ ದಗಡೆ ಒಂದೇ ಕುದ್ದುಟು.

ದಗಣೆ /*dagaṇɛ*/ ನಾವಿ. 1. ಗಂಡುಬೀರಿ, 2. ಜೋರಿನ ಹೆಣ್ಣು, 3. ಹೆಣ್ಣು ಮಕ್ಕಳನ್ನು ಪ್ರೀತಿಯಿಂದ ಬೈಯುವ ಪದ. 1. a masculine woman/a manly woman,

2. an agreesive girl, 3. a term used to rebuke a female child (with affection). ವಾ: ಹ್ಞೇ ದಗಣೆ ಬಾತ್.

ದಗಲ್ಬಾಜಿ /*dagalba:ji*/ ನಾ. 1. ಮೋಸಗಾರ, 2. ಕುತಂತ್ರಿ, 3. ಕಪಟಿ. 1. a deceptive person, 2. a cheat, 3. a crook. ವಾ: ಅಂವ ಬಾರಿ ದಗಲ್ಬಾಜಿ, ವ್ಯವಾರ ಮಾಡಿಕನ ನೋಡಿಕಣೊಕು. **ದಗ್‍ಲ್ಬಾಜಿ** /*dagɨlba:ji*/ ವಾ: ದಗ್‍ಲ್ಬಾಜಿ ಮೊನ್ಸ. ಪ: ದಗಲ್ಬಾಜಿಗ – ಮೋಸಗಾರರು

ದಟ್ಟ /*daṭṭa*/ ನಾ. ಅತಿಯಾದ. excessive/thick. ವಾ: ದಟ್ಟ ಕಾಡ್, ದಟ್ಟ ಮೋಡ, ದಟ್ಟಹೊಗೆ.

ದಟ್ಟಿ[1] /*daṭṭi*/ ನಾ. ಕೊಡಗಿನ ಗೌಡರ ಉದ್ದನೆಯ ಬಿಳಿ ನಿಲುವಂಗಿಯ ಸುತ್ತಲಿನ ರೇಶಿಮೆಯ ಬಟ್ಟೆ. a white silk garment worn on the overcoat by a person from Gowda community (from Coorg). **ನನ್ನಪ್ಪ ದಟ್ಟಿತಂದುಟ್ಟು ಸುತ್ತಿರೆಲ್ಲಿ ತೀರ್ದುಲೆ – ರೋಡ್(ಒ).** ವಾ: ಅವು ದಟ್ಟಿ ಕಟ್ಟಿದ್ ನೋಡ್.

ದಟ್ಟಿ[2] /*daṭṭi*/ ನಾ. ವಯಸ್ಸಾದ ಅಜ್ಜಿಯರು ಪಟ್ಟಿ ರೀತಿಯ ಬಟ್ಟೆಯನ್ನು ಸೀರೆ ಉಟ್ಟ ನಂತರ ಒಳಬದಿಗೆ ಸೊಂಟಕ್ಕೆ ಕಟ್ಟುವುದು. a cloth strip worn around the waist, on the saree by older women. ವಾ: ಸೊಂಟಕೆ ದಟ್ಟಿ ಕಟ್ಟಿರೆ ಯದ ಆದು.

ದಟ್ಟಿಗೆ /*daṭṭigɛ*/ ನಾ. ಪರಿಶಿಷ್ಟ ವರ್ಗದವರ ಮನೆಯನ್ನು ನಿರ್ದೇಶಿಸುವ ಪದ, ಮೇರ ಸಮುದಾಯದವರ ಮನೆ. a house, of Pada and Mera communities. ಪ: ಬುಡಾರ(ತು)

ದಡಕ್ /*daḍakɨ*/ ಅ. 1. ತಕ್ಷಣ, 2. ಒಮ್ಮಿಂದೊಮ್ಮೆಲೆ. 1. immediately, 2. all of a sudden. ವಾ: ಅದೆಂತ ದಡಕ್‍ತ ಸದ್ದಾತಲ್ಲ?

ದಡಬಡ[1] /*daḍabaḍa*/ ನಾ. 1. ಗೊಂದಲ, 2. ಅಸ್ತವ್ಯಸ್ತ, 3. ಅವ್ಯವಸ್ಥೆ. 1. confusion, 2. disorderliness, 3. hotchpotch. ವಾ: ಅವು ಬಾಗ್‍ಲ್‍ನ ದಡಬಡ ಬಡಿತೊಳೊ.

ದಡಬಡ[2] /*daḍabaḍa*/ ಅ. ವೇಗವಾಗಿ ನಡೆಯುವುದನ್ನು ಅಥವಾ ಮಾತನಾಡುವುದನ್ನು ಸೂಚಿಸುವ ರೀತಿ. an onomatopoeic term, used for brisk walking or while stuttering. ವಾ: ಅವರ್‍ದ್ ದಡಬಡ ಮಾತ್, ಹೊಟ್ಟೆಲಿ ಎಂತನೂ ಇಸಿಕಂಬಲೆ. **ದಡದಡ ನಡಿಯೊದು** /*daḍadaḍa naḍiyɔdu*/ ವೇಗವಾಗಿ ನಡೆಯುವುದು. brisk walk. ವಾ: ಅವುಳು ದಡದಡತ ಸದ್ದ್ ಮಾಡಿಕಂಡ್ ನಡಿಯೊದು.

ದಡರ್ /*daḍarɨ*/ ನಾ. 1. ದಡಾರ, 2. ದೇಹದಲ್ಲಿ ಚರ್ಮ ಅಲ್ಲಲ್ಲಿ ದಪ್ಪ ಆಗುವುದು, 3. ಬಿಸುರ್ಪು. 1. measles, 2. swelling caused on the skin, 3. rubeola. ವಾ: ಮೈಮೇಲೆಲ್ಲ ದಡರ್ ಎದ್ದುಟು.

ದಡಾರ /*daḍa:ra*/ ನಾ. ಸಿಡುಬು. smallpox. ವಾ: ದಡಾರದ ಕಲೆ ಮೋರೆಲಿ ಹಂಗೆನೆ ಒಳ್ದುಟು.

ದಡಾರ್ /*daḍa:rɨ*/ ನಾ. ಹಠಾತ್ತನೆ, ಒಮ್ಮೆಲೇ ಬೀಳುವುದನ್ನು ಅಥವಾ ಏಳುವುದನ್ನು ಸೂಚಿಸುವ ಅನುಕರಣಾವ್ಯಯ. an onomatopoeic expression used for the sound of sudden fall. ವಾ: ದಡಾರ್‍ತ ಬಾಗ್‍ಲ್ ಹಾಕಿತ್.

ದಡಿಕುಟ್ಟುದು /*daḍikuṭṭu*/ ನಾ. ನೀರಲ್ಲಿ ಕೈ ಮತ್ತು ಕಾಲನ್ನು ಹೊಡೆದು ಈಜುವಾಗ ಬರುವ ಶಬ್ದ. sounds produced while swimming.

ದಡಿಕೆ[1] /*daḍikɛ*/ ನಾ. 1. ದಡಾರ, 2. ಮೈಮೇಲೆಲ್ಲ ಗುಳ್ಳೆಗಳಾಗಿ ಬಾಧೆ ಯನ್ನುಂಟುಮಾಡುವ, ಸಾಮಾನ್ಯವಾಗಿ ಮಕ್ಕಳಿಗೆ ಬರುವ ಒಂದು ಬಗೆಯ ಅಂಟು ರೋಗ. 1. measles, 2. an infectious disease with eruption of red spots on the skin, occurring in childhood. ವಾ: ಮೈ ತುಂಬ ದಡಿಕೆ ಬಿದ್ದುಟು.

ದಡಿಕೆ[2] /*daḍikɛ*/ ನಾ. ಹುಳ ಕಚ್ಚಿದಾಗ ದಪ್ಪ ದಪ್ಪ ಆಗು. swelling caused by an insect bite. ವಾ: ಮೈಲೆಲ್ಲ ದಡಿಕೆ ಆವುಟು.

ದಡಿಯ /*daḍiya*/ ನಾವಿ. 1. ದಪ್ಪನೆಯ ವ್ಯಕ್ತಿ, 2. ಬೊಡ್ಡ. 1. a fat man, 2. an obese man. ವಾ: ದಡಿಯತ ಹಂಗೆಲ್ಲ ಕರೆಕಾದ್.

ದಡೆ /*daḍɛ*/ ನಾ. ಮಾಂಸವನ್ನು ಅಳೆಯುವ ಮಾನ, 1 ದಡೆ = 2.5ಕೆಜಿ. 2.5 kilograms of meat, a measure of meat. ವಾ: ಮಾಸನ ದಡೆಲಿ ಅಳೆದು.

ದಡೆಗೆ ಹಾಕುದು /*daḍɛgɛ ha:kudu*/ ಕ್ರಿವಿ. ಮರವನ್ನು ಸಿಗಿಯಲು ಮರದ ದಿಮ್ಮಿಗಳಿಂದ ಮಾಡಿದ ಅಟ್ಟಳಿಗೆಗೆ

ಹಾಕುವುದು. to put a log of wood on the planks for sawing. ವಾ: ಮರಗಳ ಸೀಳಿಕೆ ದಡೆಗೆ ಹಾಕುದು.

ದಡ್ಕ್‌ಬಡ್ಕ್ /*daḍkɨbaḍkɨ*/ ಅ. 1. ದಡಬಡ ಶಬ್ದ, 2. ಕ್ರಮ ಅಲ್ಲದ, 3. ತಟಪಟ, 4. ದಡ್‌ಬುಡ್ ಇತ್ಯಾದಿ ಅರ್ಥ ಸೂಚಿಸುವ ಅನುಕರಣವಾಚಿ ಪದ. an onomatopoeic term indicating confusion, disorder, etc. ವಾ: ಅಂವಂದ್ ಯಾಗೊಳು ದಡ್ಕ್‌ಬಡ್ಕ್ ಕೆಲ್‌ಸ.

ದಡ್ಕ್‌ಬೀಳ್‌ದು /*daḍkɨbi:ḷɨdu*/ ಕ್ರಿವಿ. ದಡಕ್ಕ ಬೀಳುವುದು. to fall suddenly. **ದಡ್ಕ್ ಬಿದ್ದ್ ದಿಡ್ಕ್ ಸಾಯೊಕು(ನು).** ವಾ: ಕೊತ್ತಿ ಒಮ್ಮೊಮ್ಮೆ ನಿತ್ಕಂಡಿದ್ದಂಗೆ ಕುಸಿ ಮಾಡಿರೆ ದಡ್ಕ್‌ಬೀಳ್‌ದು.

ದಡ್‌ಗುಡ್ /*daḍɨguḍɨ*/ ಅ. ಅನುಕರಣವಾಚಿ ಪದ. an onomatopoeic term. ವಾ: ದಡ್‌ಗುಡ್‌ತ ಸಬ್ದ ಕೇಳ್‌ತಲ.

ದಡ್ಡ /*daḍḍa*/ ನಾ. 1. ಬುದ್ಧಿಶಕ್ತಿ ಕಡಿಮೆ ಇರುವವ, 2. ಚುರುಕು ಇಲ್ಲದ. a slow witted person. **ದಡ್ಡರ ರಾಜ್ಯಲಿ ಜಾಣನೇ ಹೆಡ್ಡಗಡ(ಗಾ).** ವಾ: ದಡ್ಡಂಗೆ ಎಸ್ಟ್ ಹೇಳಿಕೊಟ್ಟರು ಅರ್‌ತೆ ಆದುಲೆ.

ದಡ್ಡರ್ /*dɘḍḍarɨ*/ ನಾ. 1. ದಡ್ಡರು, 2. ವಿವೇಕ, ತಿಳಿವಳಿಕೆ, ಲೋಕಜ್ಞಾನದ ಕೊರತೆ ಇರುವವರು. 1. stupids, 2. ignorants. ವಾ: ಮೂರ್ ಜೆನ ದಡ್ಡರ್ ಕುದ್ದ್ ಮಾತಾಡ್ತೊಳೊ.

ದಡ್ಡಲ್ ತೊಪ್ಪೆ /*daḍḍalɨ tɔppɛ*/ ನಾ. 1. ಒಂದು ಕಾಡುಮರ. ಇದರ ಸಿಪ್ಪೆಯನ್ನು ತೆಗೆದು ಮನೆ ತುಂಬಿಸುವಾಗ ಕದಿರು ಕಟ್ಟಲು ಬಳ್ಳಿಯಾಗಿ ಬಳಸುತ್ತಾರೆ, 2. ಗಬ್ಬಲ್ ಮರ. 1. a forest tree, 2. wild guava, Ceylon oak, patana oak tree, a forest tree. ವಾ: ದಡ್ಡಲ್ ತೊಪ್ಪೆತ ಒಂದ್ ಜಾತಿನ ಕಾಡ್‌ಮರ.

ದಡ್ಡಲ್ ಬೊಳ್ಳಿ /*daḍḍalɨ bɔḷḷi*/ ನಾ. ದಡ್ಡಲ್ ಮರದ ಸಿಪ್ಪೆಯಿಂದ ತಯಾರಿಸಲಾದ ಬಳ್ಳಿ, ತುಂಬ ನಾರಿನ ಬಳ್ಳಿ ಮತ್ತು ಇದನ್ನು ಮನೆಗೆ ಕದಿರು ಕಟ್ಟಲು ಬಳಸುತ್ತಾರೆ. a rope made of the bark of wild guava tree/ Ceylon oak/ patana oak. ವಾ: ದಡ್ಡಲ್ ಬೊಳ್ಳಿನ ಕದ್‌ರ್ ಕಟ್ಟಿಕೆ ಬಳ್‌ಸುವೆ.

ದಡ್ಡಿ /*daḍḍi*/ ನಾ. 1. ಸೋಮಾರಿ; ಆಲಸಿ, 2. ಹೆಡ್ಡಿ, 3. ಮಂದಬುದ್ಧಿಯವಳು. 1. a lazy woman, 2. a dullard, 3. a foolish woman. **ಕೆಲ್ಸದ ದಡ್ಡಿಗೆ ಮಕ್ಕಳ ಅಡ್ಡಿ(ಗಾ).** ವಾ: ದಡ್ಡಿನಾಂಗೆ ಆಡ್ಬಡ.

ದಡ್ಡು /*daḍḍu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಎಡಮಂಗಲ ಗ್ರಾಮದ ಜಾಗ. a locality in Edamangala village in Sullia Taluk of Dakshina Kannada District.

ದಡ್ಡೆ[1] /*daḍḍɛ*/ ನಾ. ಮರಿ ಹಾಕಿದ ಹಂದಿ. a sow which had delivered piglets. ವಾ: ದಡ್ಡೆ ಮೊರಿಗಳಿಗೆ ಹಾಲ್ ಕೊಟ್ಟದೆ. **ದಡ್ಡೆಹಂದಿ** /*daḍḍɛhandi*/ ವಾ: ಆ ದಡ್ಡೆಗೆ ಹತ್ತ್ ಮೊರಿಗ.

ದಡ್ಡೆ[2] /*daḍḍɛ*/ ನಾವಿ. 1. ಬಂಜೆ, 2. ಪೆದ್ದು ಹೆಂಗಸು, 3. ಸೋಮಾರಿ ಹೆಂಗಸು. 1. a barren woman, 2. a lazy woman, 3. a stupid woman. ವಾ: ದಡ್ಡೆ ಹೆಣ್ಣ್ ಬಾತ್.

ದಡ್ಡ್[1] /*daḍḍɨ*/ ನಾವಿ. 1. ಒಳಗೆ ಅರ್ಧಂಬರ್ಧ ಅಕ್ಕಿ ಇರುವ ಭತ್ತ, 2. ಹೊಟ್ಟು ಭತ್ತ. 1. husk with particles of rice grain, 2. husk of paddy. **ದಡ್ಡ್ ಬತ್ತ** /*daḍḍɨ batta*/ 1. ಹೊಟ್ಟು ಭತ್ತ, 2. ತಿರುಳಿಲ್ಲದ ಭತ್ತ. 1. husk of paddy, 2. rice hull without grains. ವಾ: ದಡ್ಡ್ ಬತ್ತ ಹೊಡ್ಕ್ ಕನ ಹಾರ್‌ದೆ.

ದಡ್ಡ್[2] /*daḍḍɨ*/ ನಾ. 1. ಜಡ್ಡು (ಗಡುಸಾದ ವಸ್ತುವಿನೊಂದಿಗೆ ಮೇಲಿಂದ ಮೇಲೆ ಘರ್ಷಣೆ ಉಂಟಾಗುವುದರಿಂದ), 2. ಚರ್ಮದ ಒರಟಾದ ಭಾಗ. 1. callosity or hardness of the skin of any part of the body which comes into contact with hard objects successively, 2. a callus. **ಉಮಿ ಮಿದ್ದ್ ಕೈ ದಡ್ಡ್ ಮಾಡಿಕಂಡಂಗೆ(ಗಾ).** ವಾ: ಕೈ ದಡ್ಡ್ ಗಟ್ಟಿ ಹೋವುಟು. **ದಡ್ಡ್‌ಗಟ್ಟುದು** /*daḍḍɨgaṭṭudu*/ 1. ದುಡಿವ ಕೈ ಕಾಲಿನ ಚರ್ಮ ಗಟ್ಟಿಯಾಗುವುದು, 2. ಚರ್ಮ ಒರಟಾಗುವುದು. the process of thickening of the skin due to hard labour. ವಾ: ಸೊವ್‌ದೆ ಒಡ್ದ್ ಒಡ್ದ್ ಕೈ ದಡ್ಡ್‌ಗಟ್ಟಿಟು. **ದಡ್ಡ್‌ಗಟ್ಟ್** /*daḍḍɨgaṭṭɨ*/ 1. ಕಠಿಣ ಪರಿಶ್ರಮದಿಂದ ಚರ್ಮ ಗಟ್ಟಿಯಾಗುವುದು, 2. ಒರಟಾಗುವುದು. 1. the process of thickening of the skin due to hard labour, 2. to become rough. ವಾ: ಅಂಗೈ ದಡ್ಡ್ ಗಟ್ಟಿ ಹೋಗುಟು.

ದಡ್ಪಳೆ /*daḍpaḷɛ*/ ನಾ. ಒಂದು ಜಾತಿಯ ನಾರಿನ ಗಿಡ,

ಕುಂಬಾರರು ಮಡಿಕೆ ಹೊರಲು ಬಳಸುವ ಮರದ ದಂಡು. a fibrous plant. ವಾ: ಅದ್ ದಡ್ಸಳೆ ದೈ.

ದಡ್ಸನ ಮರ /*dadsana mara*/ ನಾ. ಕೋವಿ ಪಾತಿ ಮಾಡಲು ಬಹಳ ಸೂಕ್ತವಾದ ಮರ. a type of wood useful in making furniture. ವಾ: ದಡ್ಸನ ಮರನ ತಡ್‌ಸ್‌ಲ್ ಮರತ ಸನ ಕರ್‌ದವೆ.

ದಣಿಕೆ /*daṇikɛ*/ ನಾ. 1. ಆಯಾಸ, 2. ಯಾವುದೇ ಒಂದು ದೈಹಿಕ ಅಥವಾ ಮಾನಸಿಕ ಚಟುವಟಿಕೆಯ ನಂತರ ಮತ್ತೆ ಮೊದಲಿನ ಪ್ರಮಾಣದಲ್ಲಿ ಚಟುವಟಿಕೆಯನ್ನು ಮಾಡಲಾಗದಂತಹ ಸ್ಥಿತಿ, 3. ಬಳಲಿಕೆ. 1. being tired, 2. feeling of physical/mental exhaustion 3. fatigue. ವಾ: ಓಡಿ ಬಂದ್ ದಣಿಕೆ ಆತ್. ಪ: ದಣ್ಕೆ. **ದಣಿದು** /*daṇidu*/ ಕ್ರಿ. 1. ಆಯಾಸಗೊಳ್ಳುವುದು, 2. ದಣಿದು ಹೋಗು. 1. being tired, 2. fatigue. ವಾ: ಬಿಸ್‌ಲ್‌ಲಿ ನಡ್ದ್ ನಡ್ದ್ ದಣಿದು ಹೋದ್.

ದಣ್ಡ್ /*daṇḍi*/ ನಾವಿ. ಆಯಾಸಗೊಂಡು. tired. ವಾ: ದಣ್ಡ್ ಬಂದೊಳನ?

ದತ್ತುಮಜ್ಜ /*dattumaṇja*/ ನಾ. 1. ಹೆಡ್ಡ, 2. ಪೆದ್ದ, 3. ದತ್ತು ಪುತ್ರ. an idiot. ವಾ: ಅಂವ ದತ್ತು ಮಜ್ಜ.

ದದ್ದ್[1] /*daddi*/ ನಾ. 1. ಚಿಂದಿ, 2. ಹರಕಲು, 3. ಪುಡಿಪುಡಿ; ಜಜ್ಜುವಿಕೆ. 1. rags. 2. torn, 3. crushed. ವಾ: ತಲೆಗೆಡಿ ದದ್ದ್ ಆಗುಟು.

ದದ್ದ್[2] /*daddi*/ ನಾ. ಗಲೀಜು. filth/dirt. ವಾ: ದದ್ದ್ ಚೆರಂಡಿ.

ದದ್‌ಮಡ್ಕೆ /*dadi madkɛ*/ ನಾ. 1. ತೂತು ಮಡಕೆ, 2. ರಂಧ್ರ. 1. pot with a hole, 2. a hole. ವಾ: ದದ್‌ಮಡ್ಕೆಲಿ ನೀರ್ ನಿತ್ತದ್ಯಾ?

ದನ /*dana*/ ನಾ. 1. ಹಸು, 2. ಎತ್ತು, 3. ಕರು. 1. a cow, 2. a bullock (ox), 3. a calf. ವಾ: ದನಗ ಬೇಲಿ ಹಾರ್‌ದೊ.

ದನಕುಂಟೆ /*danakuṇṭɛ*/ ನಾ. ದನದ ಕೊರಳಿಗೆ ಕಟ್ಟಿದ ಮರದ ಕೊರಡು. to tie a small log of wood to restrain the movement of the cattle. ವಾ: ಬೇಲಿ ಹಾರಿಕಾದ್‌ತ ದನಕೆ ಕುಂಟೆ ಕಟ್ಟುದು.

ದನಕೂಡುದು /*danaku:ḍudu*/ ನಾ. ಜನಪದ ಆಟ. a folk game.

ದನತಟ್ಟೆ /*dan taṭṭɛ*/ ನಾ. ಜಾನುವಾರುಗಳ ಕೊರಳಿಗೆ ಕಟ್ಟುವ ಶಬ್ದ ಮಾಡುವ ಸಾಧನ. a cowbell. ವಾ: ದನಗ ಬಂದೊ ಕಂಡದೆ ತಟ್ಟೆ ಸದ್ದ್ ಕೇಳ್‌ದೆ. ಪ: ಮೆಂಟೆ

ದನನೋಡ್ದು /*dan no:ḍdu*/ ನಾ. ದನ ಕಾಯುವುದು. grazing the cattle. ವಾ: ಅವು ದನ ನೋಡ್‌ದು.

ದನಮೇಪತ /*daname:pata*/ ನಾ. ದನ ಮೇಯಿಸುವವ. a cowherd. ವಾ: ದನ ಮೇಪತ ದನಗಳ ಮೇಸಿಕಂಡ್ ಬಾಣೆಲಿ ಕುದ್ದುಟು.

ದನಮೇಸ್ /*daname:si*/ ನಾ. ದನ ಮೇಯಿಸು. to graze the cattle. ವಾ: ಬಾಣೆಗೆ ದನ ಮೇಸಿಕೆ ಹೋಕು.

ದನಕರಿದು /*danakaridu*/ ಕ್ರಿ. ಅಂಬಾ. moo-long sound produced by cows-an onomatopoeia. ವಾ: ಕೊಟಗೆಲಿ ದನ ಕರಿದು.

ದನಕರ್ ಆಟ /*danakari a:ṭa*/ ನಾ. ಜನಪದ ಆಟ. a folk game.

ದನದ್ ಉಚ್ಚೆ /*danadi uccɛ*/ ನಾ. ಗೋ ಮೂತ್ರ. cow urine. ವಾ: ದನದ್ ಉಚ್ಚೆನ ಮೊದ್ದಿಗೆ ಬಳ್‌ಸುವೆ.

ದನಮಕ್ಕ /*danamakka*/ ನಾ. ದನವನ್ನು ಕಾಯುವ ಮಕ್ಕಳು. cowherd (children who graze the cattle). ವಾ: ದನಮಕ್ಕ ಗೊಟ್ಟೆ ಹಣ್ಣ್‌ನೆಲ್ಲ ಕೊಯ್‌ದೊ.

ದನಿ ಒಕ್ಲ್ /*dani okli*/ ನಾ. (ಭೂಮಸೂದೆ ಸಂಬಂಧಿಸಿ) ಒಡೆಯನಲ್ಲಿ ಕೆಲಸಕ್ಕೆ ಇರುವ ಜನರು. serfs in feudalism.

ದನಿ[1] /*dani*/ ನಾ. 1. ಧ್ವನಿ, 2. ಸ್ವರ. 1. voice, 2. tone/ tune. ವಾ: ಇದ್ ಎಲ್ಲೊ ಕೇಳ್‌ದ ದನಿನಂಗೆ ಉಟ್ಟಲ.

ದನಿ[2] /*dani*/ ನಾ. 1. ಧನಿ, 2. ಹಿಂದೆ ಜಮೀನ್ದಾರರಾಗಿದ್ದವರು, 3. ಭೂಮಾಲಿಕರಾಗಿದ್ದವರು. 1. a wealthy person/a master/an employer 2. a feudal lord, 3. owners of the land. **ಇದ್ದಷ್ಟರಲ್ಲೇ ತೃಪ್ತಿ ಪಡ್ವನೇ ದನಿ(ಗಾ).** ವಾ: ದನಿಗ ಮನೆಗೆ ಬಂದೊಳೊ.

ದನಿ[3] /*dani*/ ನಾ. 1. ಯಜಮಾನ, 2. ಒಡೆಯ. 1. owner, 2. master. ವಾ: ದನಿಗ ಬಂದೊ ಎದ್ದ್ ನಿಲ್ಲ್.

ದನಿಕ /*danika*/ ನಾ. 1. ಹಣವಂತ, 2. ಸಾಹುಕಾರ. 1. wealthy, 2. a rich person. ವಾ: ದನಿಕಂಗೆ ಇಬ್ಬೊರ್ ಮಕ್ಕ.

ದಪ /*dapa*/ ನಾ. 1. ಸಾರಿ, 2. ಸಲ, 3. ಬಾರಿ. 1. time and time again, 2. (how) often, 3. time after time (repeatedly). ವಾ: ಈ ದಪ ನೀವು ಹೋಕೆ, ಬನ್ನಿ ಬಲ.

ದಪ್ಪ /*dappa*/ ನಾ. 1. ದಪ್ಪ, 2. ತೋರ, 3. ಗಾತ್ರ, 4. ಮಂದವಾಗಿರುವಿಕೆ. 1. fat, 2. stout, 3. bulky, 4. thick. ವಾ: ಅಂವ ತುಂಬಾ ದಪ್ಪದ ಹೈದ.

ದಬಟೆ /*dabaṭɛ*/ ನಾ. 1. ಮಗು ದಷ್ಟಪುಷ್ಟವಾಗಿರುವುದು, 2. ಗುಂಡು ಗುಂಡಾಗಿರುವುದು. 1. a plump child, 2. stout. ವಾ: ದಬಟೆ ಕೂಸು ಎತ್ತಿರೆ ಕೈ ಬೊಚ್ಚಿದೆ.

ದಬಡೆ[1] /*dabaḍɛ*/ ನಾ. 1. ದಪ್ಪಗಿನವಳು, 2. ಸ್ಥೂಲದೇಹಿಯಾದ ಹೆಂಗಸು. 1. a fat woman, 2. a stout woman, 3. female genital organ, 4. a term of abuse. ವಾ: ಅದ್ ದಬಡೆ ಗೂಡೆ.

ದಬಡೆ[2] /*dabaḍɛ*/ ನಾ. 1. ಸ್ತ್ರೀಯ ಗುಪ್ತಾಂಗ, 2. ಯೋನಿ, 3. ಒಂದು ಬೈಗುಳ ಪದ. 1. female's internal reproductive organ, 2. vagina, 3. an expletive.

ದಬರ್ಲಿ /*dabarali*/ ನಾ. 1. ದಬರೆ, 2. ಅಗಲ ಬಾಯಿಯ ಹೆಚ್ಚು ಆಳವಿಲ್ಲದ ಪಾತ್ರೆ. 1. a vessel, 2. vessel with a wide mouth. ವಾ: ದಬರ್ಲಿನ ಎಲ್ಲಿಸಿದ?

ದಬ್ಬಟೆ /*dabbaṭɛ*/ ನಾ. 1. ದಪ್ಪನೆಯ ಹೆಂಗಸು, 2. ದಬಡೆ(ತು) ದಪ್ಪದ ವಸ್ತು. 1. an obese woman 2. a fat thing. ವಾ: ದಬ್ಬಟೆ ಹೆಂಗ್ಸ್

ದಬ್ಬಡ್ಕ /*dabbaḍka*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ದಬ್ಬಣ /*dabbaṇa*/ ನಾ. ಗೋಣಿಚೀಲ ಅಥವಾ ಇತರ ದಪ್ಪನೆಯ ವಸ್ತುಗಳ ಬಾಯಿ ಹೊಲಿಯಲು ಬಳಸುವ ದಪ್ಪನೆಯ ಸೂಜಿ. a thick needle used in knitting the mouth of gunny bags and other thick garments. ವಾ: ದಬ್ಬಣಕೆ ನೂಲ್ ಹಾಕಿ ಕೊಡ್.

ದಬ್ಬಳ /*dabbaḷa*/ ನಾ. ದೊಡ್ಡ ಸೂಜಿ. a packing needle. **ಸೂಜಿಲಿ ಹೋದುನ ನೋಡುವೆ ದಬ್ಬಳಲಿ ಹೋದುನ ನೋಡ್ದುಲೆ(ಗಾ). ಐದ್ ಜನ ಗಂಡಂದ್ರ ಒಳೊ ದ್ರೌಪದಿಯಲ್ಲ, ನಾಲಿಗೆ ಎರಡುಟ್ಟು ಹಾವಲ್ಲ, ಕಣ್ಣೊಂದುಟ್ಟು ಸೂಜಿ ದಬ್ಬಳ ಅಲ್ಲ – ಇಂಕ್ ಪೆನ್ನ್(ಒ).** ವಾ: ಚೀಲದ ಬಾಯಿನ ದಬ್ಬಳಲಿ ಹೊಲಿಯೊಕು.

ದಬ್ಬಿನೆ /*dabbinɛ*/ ನಾ. ತಳ್ಳುತ್ತೇನೆ. will push. ವಾ: ಗಲಾಟೆ ಮಾಡಿರೆ ಹೊರೆಗೆ ದಬ್ಬಿನೆ.

ದಬ್ಬು /*dabbu*/ ಕ್ರಿ. 1. ತಳ್ಳು, 2. ಹೊರದೂಡು. 1. to push, 2. to put something outside. ವಾ: ಅಂವನ ದಬ್ಬು. ಪ: ದಬ್ಬಿನೆ – ದಬ್ಬುತ್ತೇನೆ

ದಬ್ಬೂಸ /*dabbu:sa*/ ನಾವಿ. 1. ಚುರುಕಿಲ್ಲದ ದಪ್ಪನೆಯ, 2. ಬಬ್ಬೂಸ. 1. an obese and lazy person, 2. an inactive person. ವಾ: ದಬ್ಬೂಸ ಹೋದೆ.

ದಬ್ಬೆಮಡ್ಕೆ /*dabbɛmaḍkɛ*/ ನಾ. ಒಡೆದ ಮಡಿಕೆ. a broken pot.

ದಬ್ಬೆ[1] /*dabbɛ*/ ನಾವಿ. 1. ಒಡೆದುಹೋದ. ತೂತಾದ ಮಣ್ಣಿನ ಪಾತ್ರೆ, 2. ತುಂಡಾದ, 3. ಒಡೆದ, 4. ಬಿರುಕುಬಿಟ್ಟ. 1. a broken clay pot, 2. broken, 3. broken 4. developing cracks. **ನಾಯಿ ಬಾಲಕೆ ದಬ್ಬೆ ಕಟ್ಟಿದಂಗೆ(ಗಾ).** ವಾ: ದಬ್ಬೆ ಮಡ್ಕೆನ ಎಲ್ಲಿಸಿದ?

ದಬ್ಬೆ[2] /*dabbɛ*/ ನಾವಿ. 1. ಒಟ್ಟಾರೆ ಮಾತನಾಡುವ ವ್ಯಕ್ತಿ, 2. ಬಡಬಡಿಸು, 3. ಬೈಗುಳ ಪದ. 1. to bluff, 2. to blabber, 3. an expletive. ವಾ: ದಬ್ಬೆ ಎಲ್ಲಿ ಹೋವುಟು? ಇನ್ನೂ ಬಾತ್ಲೆ.

ದಬ್ಬೆ[3] /*dabbɛ*/ ನಾವಿ. ತೋಟ ಕಚಡ ಮಾಡಲು ಬಳಸುವ ಎರಡೂ ಬದಿ ಹರಿತವಾದ ಮುಖಗಳಿರುವ ಉದ್ದನೆಯ ಕತ್ತಿ. a double edged slasher, used in clearing bushes in the farm. ವಾ: ದಬ್ಬೆ ಕತ್ತಿಲಿ ಕಚಡ ಕಡೆಕೆ ಸುಲಬ.

ದಬ್ಬೆಕತ್ತಿ /*dabbekatti*/ ನಾ. ಎರಡು ಬಾಯಿ ಕತ್ತಿ. a double edge sharp blade. ವಾ: ಎರಡ್ ಕಡೆ ಬಾಯಿ ಇರುವ ಕತ್ತಿ 'ದಬ್ಬೆ ಕತ್ತಿ'.

ದಬ್ಬೆಲ್ /*dabbɛli*/ ನಾ. 1. ತುಂಡು, 2. ಸಂದು, 3. ಬಿರುಕು. 1. a fraction, 2. a corner, 3. a crack. ವಾ: ಗೋಡೆ ಸೆರೆಲಿ ದಬ್ಬೆಲ್ ಕಂಡದೆ. ಪ: ಡೆಂಬೆಲ್(ತು)

ದಬ್‌ರ್‌ದಸ್ /*dabiridasi*/ ಎಪ. ಎಪ. 1. ಜೋರು, 2. ಸರ್ವಾಧಿಕಾರಿ ಮನೋಭಾವ, 3. ಅಹಂಕಾರಿ, 4. ಜಬರ್‌ದಸ್ತ್(ಹಿ). 1. arrogant, 2. a dictatorial 3. an egoist, 4. oppressive. ವಾ: ಕೂಸುನ ಬಾದುಲೆತೇಳಿರೂ ದಬ್‌ರ್‌ದಸ್‌ಲಿ ಎಳ್ಕಂಡ್ ಹೋತ್. ಪ: ಜಬರ್‌ದಸ್

ದಬ್ಲಿ /*dabli*/ ನಾವಿ. ದಪ್ಪನೆಯ ಹೆಂಗಸು. an obese/a fat woman. ವಾ: ಅದ್ ದಬ್ಲಿ ಹೆಂಗ್‌ಸ್.

ದಮ್‌ಕಟ್ಟು /*damikaṭṭu*/ ಕ್ರಿವಿ. (ಕೆಲಸ ಮಾಡುವಾಗ,

ಓಡುವಾಗ) ಉಸಿರು ಕಟ್ಟುವುದು. feeling breathlessness – while running, working, etc. ವಾ: ನೀ ದಮ್ ಕಟ್ಟಿ ಓಡಕಾಯ್ತ್. ಪ: ಡಮ್ಮ್‌ಕಟ್ಟ್

ದಮ್ಮಡಿಕಾಸಿಲ್ಲೆ /*dambḍika:sillɛ*/ ನಾವಿ. ಒಂದು ಪೈಸೆ ಇಲ್ಲ, ಚಿಕ್ಕಾಸು ಇಲ್ಲ. penniless. ವಾ: ನನ್ನತ್ರ ದಮ್ಮಡಿ ಕಾಸಿಲ್ಲೆ. ಪ: ದಂಬ್ಡಿಕಾಸ್, ದಂಬುಡಿ.

ದಮ್ಮಯ /*dammaya*/ ನಾ. 1. ಬೇಡಿಕೊಳ್ಳುವಾಗ ಬಳಸುವ ಪದ, 2. ದಮ್ಮಯ್ಯ. to request with great humility. ವಾ: ದಮ್ಮಯ ಹೊಡಿಬೊಡಿ ಬುಟ್ಟ್ ಬುಡಿ.

ದಮ್ಮಯ ದಕ್ಕಯ /*dammaya dakkaya*/ ನಾ. ವಿನಂತಿಸಿಕೊಳ್ಳು. an earnest request. ವಾ: ಹೊಡೆಕನ ದಮ್ಮಯ ದಕ್ಕಯತ ಹೇಳ್‌ದು.

ದಮ್ಮಯ್ಯ /*dammayya*/ ಅ. ಬೇಡಿಕೊಳ್ಳುವಾಗ ಅಥವಾ ವಿನಂತಿಸಿ ಕೊಳ್ಳುವಾಗ ಬಳಸುವ ಪದ. an earnest request. ವಾ: ದಮ್ಮಯ್ಯ, ಇದೊಂದ್ ಉಪಕಾರ ಮಾಡೊಕು.

ದಮ್ಮು /*dammu*/ ಕ್ರಿವಿ. ಉಸಿರು. breath. ವಾ: ಚೊಂಟೆಲಿ ಆ ಕೆರೆನ ನೀರ್‌ನ ಒಂದೇ ದಮ್ಮಿಗೆ ಕಾಲಿ ಮಾಡ್.

ದಮ್ಮ್ /*dammɨ*/ ನಾ. 1. ಅಸ್ತಮಾ, 2. ಗೂರಲು, 3. ಉಬ್ಬಸ, 4. ದಮ್ಮು, 5. ನೇವಸ, 6. ಶ್ವಾಸಕಾಸ, 7. ನಾವು ಉಸಿರಾಡುವ ಗಾಳಿಯಲ್ಲಿರುವ ಕೆಲವು ಒಗ್ಗದಿರುವ ಪದಾರ್ಥಗಳು ನಮ್ಮ ವಾಯುನಾಳವನ್ನು ಪ್ರವೇಶಿಸಿದಾಗ ವಾಯುನಾಳಗಳು ಹಠಾತ್ತನೆ ಸಂಕುಚಿಸಿ ವಾಯು ಸಂಚಾರಕ್ಕೆ ತಡೆ ಉಂಟಾಗುತ್ತದೆ, ಆಗ ವಿಶಿಷ್ಟ ಲಕ್ಷಣಗಳು ತಲೆದೋರುತ್ತವೆ. 1. asthma, 2. to wheeze, 3. difficulty in breathing, 4. asthma, 5. asthma, 6. lungs, 7. a chronic inflammatory disease of the lungs. ವಾ: ದಮ್ಮ್ ಇದ್ದರೆ ಉಸಿರಾಡಿಕೆ ಬಜ್ಜಾದು.

ದಯ /*daya*/ ನಾ. 1. ದೇವರ ದಯೆ, 2. ಕೃಪೆ, 3. ಕರುಣೆ, 4. ಅನುಕಂಪ. 1. grace, 2. blessing, 3. compassion, 4. sympathy. **ದಯನೇ ದರ್ಮದ ಮೂಲ(ಗಾ).** ವಾ: ಮೊನ್ಸಂಗೆ ದಯ ದಾಕ್ಷಿಣೆ ಇರೋಕು.

ದರಕಾಸ್ತು /*daraka:stu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಜಾಗದ ಹೆಸರು. a locality in Dakshina Kannada District. ಪ: ದರ್ಕಾಸ್

ದರಿ /*dari*/ ನಾ. ಮರದಪಟ್ಟಿ ಅಥವಾ ಬಿದಿರಿನ ಸಲಾಕೆಗಳನ್ನು ಸಮಾನಾಂತರದಲ್ಲಿ ಜೋಡಿಸಿ ಮಾಡಿದ ತಟ್ಟಿ, ಗೋಡೆ, ಕಿಟಕಿ ಅಥವಾ ಬಾಗಿಲು. a wall, a window or a door panel made of wooden reapers or split bamboo. ವಾ: ಆ ಮನೆದ್ ಗೋಡೆ ದರಿದ್.

ದರಿದ್ರ /*daridra*/ ನಾ. 1. ಬಡತನ, 2. ದಾರಿದ್ರ್ಯ, 3. ಕೆಡುಕು, 4. ಕೇಡು, 5. ದುರದೃಷ್ಟಕರವಾದದ್ದು. 1. poverty, 2. penury, 3. evil, 4. disaster, 5. misfortune. **ಕುದ್ದ್ ತಿಂಬವಂಗೆ ದರಿದ್ರ ತಪ್ಪದ್(ಗಾ).** ವಾ: ನಮ್ಮದೆಂತ ದರಿದ್ರ ಬೊದ್‌ಕಾತ್.

ದರಿದ್ರ ಹಿಡ್ದಂವ /*daridra hiḍdavɨ*/ ನಾವಿ. 1. ಒಂದು ಬೈಗುಳ ಪದ, 2. ದಾರಿದ್ರ್ಯ ಹಿಡಿದವ; ಕೆಟ್ಟವ; ಕ್ಷುಲ್ಲಕ ಮನಸ್ಸಿನವ. 1. a term of abuse, 2. a crook, a knave person. ವಾ: ಎಲ್ಲಿ ಹೋದರು ಕಣ್ಣೆದುರಿಗೆ ಬಾದು ಸುಟ್ಟ ದರಿದ್ರದವ್.

ದರ್ಕಾಸ್ /*darka:sɨ*/ ಎಪ. 1. ನಿಗದಿತ ತೀರ್ವೆ ವಿಧಿಸಿ ಸರಕಾರದಿಂದ ಕೊಡಮಾಡಿದ ಭೂಮಿ, 2. ಸರಕಾರಿ ಭೂಮಿಯನ್ನು ಒತ್ತುವರಿ ಮಾಡಿಕೊಂಡು ಕೃಷಿ ಮಾಡಿದ ಭೂಮಿ, ಅಲ್ಲೇ ಕಟ್ಟಿಕೊಂಡ ಮನೆ ದರ್ಕಾಸು. 1. land allotted by the government for cultivation, for a fixed annual tax, 2. confiscation of a property/house that is built on an encroached public land. ವಾ: ಅದ್ ದರ್ಕಾಸ್‌ನ ಬೂಮಿ.

ದರ್ಗಣಬೆ /*darganabɛ*/ ನಾ. ಗುಂಪಾಗಿ ಹುಟ್ಟುವ ಸಣ್ಣ ಅಣಬೆ. mushroom grown in clusters. ವಾ: ದರ್ಗಣಬೆ ಸುಮಾರ್ ಹುಟ್ಟಿಕಂಡುಟು.

ದರ್ಗಳಂಬು /*dargaḷambu*/ ನಾ. ದರ್ಗಣಬೆ. a type of mushroom. ವಾ: ದರ್ಗಳಂಬು ಎದ್ದುಟು.

ದರ್ಗುಲಿ /*darguli*/ ನಾ. 1. ಸಣ್ಣ ಜಾತಿಯ ಚಿರತೆ, 2. ಕಿರುಬ, 3. ಹುಲಿಯ ರೀತಿಯ ಪ್ರಾಣಿ. 1. a leopard, 2. a leopard, 3. an animals resembling tiger. ವಾ: ದರ್ಗುಲಿ ಕಾಡ್‌ಲಿ ಇದ್ದದೆ.

ದರ್ಗ್ /*dargɨ*/ ನಾ. ಒಣ ತರಗೆಲೆ. dry leaf. **ಓದುವ ಮಕ್ಕಳಿಗೆ ಓಡಿಟ್ಟ್ ಆಡುವ ಮಕ್ಕಳಿಗೆ ಆಡಿಟ್ಟ್, ದನ ಮೇಸುವ ಮಕ್ಕಳಿಗೆ ದರ್ಗ್ ಹಿಟ್ಟ್(ಗಾ).** ವಾ: ದರ್ಗ್‌ನ ಗೊಬ್ಬರ ಗುಂಡಿಕೆ ಹಾಕುದು. ಪ: ದರ್ಗಡಿ – ತರಗೆಲೆ ರಾಶಿ ಹಾಕುವ ಕೊಠಡಿ

ದರ್ಗ್ ಪಾಂಜ /*dargɨ pa:ŋja*/ ನಾ. 1. ಮರದಿಂದ ಮರಕ್ಕೆ

ಹಾರುವ ಬೆಕ್ಕಿನ ಜಾತಿಯ ಅಳಿವಿನಂಚಿನಲ್ಲಿರುವ ಪ್ರಾಣಿ. a kind of wild cat. ವಾ: ದರ್ಗ್ ಪಾಂಜ ಮರಂದ ಮರಕ್ಕೆ ಹಾರ್‌ದೆ. ಪ: ಪಾಂಚ(ತು)

ದರ್ಗ್ ಮಂಡೋಳಿ /*dargɨ maṇḍo:ḷi*/ ನಾ. ಹಾವಿನ ಹೆಸರು. a snake. ವಾ: ದರ್ಗ್ ಮಂಡೋಳಿತ ಹಾವ್‌ದ್ ಹೆಸ್‌ರ್. ಪ: ಮಂಡೆಲಿ

ದರ್ಗ್ ಹಕ್ಕಿ /*dargɨ hakki*/ ನಾ. ತರಗೆಲೆಗಳಲ್ಲಿ ವಾಸಿಸುವ ಒಂದು ವಿಧದ ಪಕ್ಷಿ. a bird that builds its nest using dry leaf. ವಾ: ಅದ್ ದರ್ಗ್ ಹಕ್ಕಿದ್ ಮೊರಿಗ. ಪ: ಬಜಕುರೆ ಪಕ್ಕಿ(ತು)

ದರ್ಗ್ ಹಾವ್ /*dargɨ ha:vɨ*/ ನಾ. ಹಾವಿನ ಹೆಸರು. a snake variety. ವಾ: ದರ್ಗ್ ಹಾವ್ ಗಡ.

ದರ್ಜಿ /*darji*/ ಎಪ. 1. ದರ್ಜಿ, 2. ಬಟ್ಟೆ ಹೊಲಿಯುವವ, 3. ಸಿಂಪಿಗ. 1. a tailor, 2. a dressmaker, 3. a garment-maker. ವಾ: ದರ್ಜಿ ಹಕ್ಕಲೆ ಅರ್ವೆ ಹೊಲೆಕೆ ಕೊಟ್ಟ್ ಬರೊಕು.

ದರ್ಣಪ್ಪ /*darnappa*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. masculine given name.

ದರ್ದ್ರ /*dardra*/ ನಾ. 1. ದಾರಿದ್ರ್ಯ, 2. ಒಂದು ಬೈಗುಳದ ಮಾತು. 1. poverty, 2. an expletive term. ವಾ: ಮನೆಗೆ ಇದೊಂದ್ ದದ್ರ್ರ.

ದರ್ಪ /*darpa*/ ನಾ. 1. ಗತ್ತು, 2. ಠೀವಿ, 3. ಜಬ್ರು, 4. ಹೆಮ್ಮೆ, 5. ಗರ್ವ. 1. excessive pride, 2. self-esteem, 3. conceit, 4. proud, 5. vanity. ವಾ: ಅಂವ ದರ್ಪ ತೋರ್‌ಸುದು.

ದರ್ಪು /*darpu*/ ಕ್ರಿ. 1. ನಡುಕ, 2. ದರ್ಶನ, 3. ಅದಿರುವಿಕೆ. 1. to shiver, 2. appearance, 3. shivering. **ಮಾಸ್ತರ್ ಪ್ರಸ್ನೆಗೆ ದರ್ಪುದೊರ್ಪುದು(ನು).** ವಾ: ಕಾಡಾನೆನ ನೋಡಿ ಕಾಲ್ ದರ್ಪಿತ್. ಪ: ದರ್ಪುದು – ನಡುಗುವುದು; ದರ್ಸನೊ, ದರಿಪು(ತು). **ದರ್ಪ್ಯೋತ್** /*darpyo:tɨ*/ ನಡುಗಿ ಹೋಯಿತು. shivered. ವಾ: ಹೆದ್‌ರಿ ಮೈಯೆಲ್ಲ ದರ್ಪ್ಯೋತ್.

ದರ್ಬಾರ್ /*darba:rɨ*/ ಎಪ. 1. ಕಾರುಬಾರು, 2. ವ್ಯವಹಾರ. 1. ostentatious behaviour 2. business. ವಾ: ಈಗೀಗ ಅವರ ದರ್ಬಾರ್ ಜೋರುಟ್ಟು.

ದರ್ಬುರು /*darburu*/ ಕ್ರಿವಿ. 1. ಗಡಿಬಿಡಿ ಮಾಡಿ ಕೆಲಸ ಮಾಡು, 2. ಬೈಗುಳದ ಮಾತು. 1. to haste, 2. an expletive. ವಾ: ಅವುಳದ್ ಬೊರಿ ದರ್ಬುರ್ ಕೆಲ್ಸ.

ದರ್ಬೆ[1] /*darbɛ*/ ನಾ. 1. ದರ್ಬೆ, 2. ಕುಶ, 3. ದರ್ಭೆ, 4. ದರ್ಭೆಯು ಪೋಯೇಸಿ (ಗ್ರ್ಯಾಮಿನೀ) ಕುಟುಂಬಕ್ಕೆ ಸೇರಿದ ಒಂದು ಬಗೆಯ ಹುಲ್ಲು, ಉಷ್ಣವಲಯದ ಸಸ್ಯವಾದ ಇದು ಭಾರತಾದ್ಯಂತ ಬಯಲು ಪ್ರದೇಶಗಳಲ್ಲಿ ಸ್ವಾಭಾವಿಕವಾಗಿ ಬೆಳೆಯುತ್ತದೆ. 1. Halfa grass, Big Cordgrass, and Salt read-geass, 2. kusha grass, 3. the sacrificial grass, 4. Desmostachya bipinnata, belonging to the family of Poaceae. ವಾ: ದರ್ಬೆಂದ ಹಗ್ಗನ ತಯಾರ್ ಮಾಡಿವೆ, ಹಂಗೆನೆ ಪೂಜೆಗೂ ಬಳ್‌ಸುವೆ. **ದರ್ಬೆಹುಲ್ಲ್** /*darbɛhullɨ*/ 1. ಒಂದು ಜಾತಿಯ ಹುಲ್ಲು, 2. ದರ್ಭೆ. 1. kusha grass or the sacrificial grass, Poa cynosuroides, or Eragrostis cynosuroides, (Gramineae) or Desmostachya bipinnata (Poaceae), 2. kusha grass. ವಾ: ದರ್ಬೆ ಹುಲ್ಲ್ ಉದ್ದುದ್ದ ಬೆಳ್ದಿದ್ದದೆ.

ದರ್ಬೆ[2] /*darbɛ*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲೂಕಿನ ಒಂದು ಸ್ಥಳದ ಹೆಸರು. a town from Puttur taluk in Dakshina Kannada district. ವಾ: ದರ್ಬೆತ ಒಂದ್ ಊರ್‌ನ ಹೆಸ್‌ರ್.

ದರ್ಬೇಸಿ /*darbe:si*/ ಎಪ. ಒಂದು ರೀತಿಯ ಬೈಯ್ಯುವ ಪದ. an expletive. ವಾ: ಅದ್ ಬರಿ ದರ್ಬೇಸಿ.

ದರ್ಮ /*darma*/ ನಾ. 1. ಧರ್ಮ, 2. ಆಚಾರ, 3. ಧಾರಣ ಮಾಡಿದುದು, 4. ನಿಯಮ, 5. ಪುಣ್ಯ, 6. ಚತುರ್ವಿದ ಪುರುಷಾರ್ಥಗಳಲ್ಲಿ ಒಂದು. 1. religion, 2. ritual, 3. a practice, 4. a ritual, 5. a reward for the good deeds, 6. righteousness, one of the four goals for the mankind. ವಾ: ನಮ್ಮ ದರ್ಮ ಬುಡಿಕಾದ್. ಪ: ದರ್ಮಾಸ್ಪತ್ರೆ – ಸರ್ಕಾರಿ ಆಸ್ಪತ್ರೆ

ದರ್ಮದಾರೆ /*darmada:rɛ*/ ನಾ. 1. ವಿಧಿಪೂರ್ವಕ ಧಾರೆ ಎರೆದು ಮಾಡಿದ ಕನ್ಯಾದಾನ, 2. ಗಂಡಿನ ಕಡೆಯವರ ಖರ್ಚನ್ನೂ ಹೆಣ್ಣಿನ ಕಡೆಯವರೇ ವಹಿಸಿಕೊಂಡು ಮದುವೆ ಮಾಡಿಕೊಡುವುದು. 1. scriptural marriage, 2. a system of marriage in which the expenditure incurred by the groom's party is paid by the bride's party. ವಾ: ಇಂದ್‌ದ್ ದರ್ಮದಾರೆ ಮೊದುವೆ.

ದರ್ಮದೈವ /*darmadaiva*/ ನಾ. ಕುಟುಂಬದ ಮುಖ್ಯ ದೈವ ಧರ್ಮದೈವ. ರುದ್ರಚಾಮುಂಡಿ ಎಂಬ ದೈವ, ಹೆಚ್ಚಿನ ಕುಟುಂಬಗಳ ಧರ್ಮ ದೈವವಾಗಿ ಆಚರಿಸಲ್ಪಡುತ್ತದೆ. a divinity that indicates the right path – Rudra Chamundi daiva. ವಾ: ದರ್ಮ ದೈವಕೆ ವರ್ಸೊಳು ಪೂಜೆ ಕೊಟ್ಟವೆ.

ದರ್ಮನೇಮ /*darmane:ma*/ ನಾವಿ. ಕುಟುಂಬಸ್ಥರೆಲ್ಲ ಸೇರಿ ಮಾಡುವ ಭೂತದ ವೈಭವೋಪೇತ ಆರಾಧನೆ. a bhuta/deity worship, celebrated with great pomp. ವಾ: ಕಾಲಾವದಿಲಿ ದರ್ಮನೇಮ ನಡ್ದದೆ.

ದರ್ವೇಸಿ /*darve:si*/ ಎಪ. 1. ದಾರಿದ್ರ್ಯ, 2. ದರಿದ್ರ. 1. abject poverty, 2. indigence. ವಾ: ನೀ ದರ್ವೇಸಿತ ಯಾಕೆ ಹೇಳ್ದ? ಪ: ದರ್ಬೇಸಿ

ದರ್ಸನ[1] /*darsana*/ ಕ್ರಿವಿ. ದೇವರ ವಿಗ್ರಹ ವೀಕ್ಷಣೆ, ವಿಗ್ರಹದರ್ಶನ. seeing the idol of any deity. ವಾ: ತಿರ್‌ಪತಿಲಿ ದೇವುರ ದರ್ಸನ ಆತ್.

ದರ್ಸನ[2] /*darsana*/ ನಾ. ದೇವರು ಮೈಮೇಲೆ ಬರುವುದು. possessed by a god, spirit, etc, impersonating the deity. ವಾ: ದರ್ಸನ ಬಂದೆ.

ದರ್ಸನಕಾರ /*darsanaka:ra*/ ನಾ. ದೈವ ಪಾತ್ರಿ, ದೈವ ಮೈಮೇಲೆ ಆವಾಹನೆಯಾಗುವವ. the impersonator of the deity/spirit. ವಾ: ದರ್ಸನಕಾರನ ಮೈಮೇಲೆ ದೇವುರು ಬಾದು.

ದಲ್ಲಾಳಿ /*dalla:ḷi*/ ನಾ. 1. ಹಣಕ್ಕಾಗಿ ಎರಡು ತಂಡಗಳ ಮಧ್ಯೆ ವ್ಯಾಪಾರ, 2. ಕುದುರಿಸುವವ. 1. a middle man, 2. a commision agent. ವಾ: ದಲ್ಲಾಳಿ ಮನೆ ಮಾಡಿ ಕೊಟ್ಟನೆತ ಹೇಳ್ಯೊಳೊ.

ದವ್‌ಡೆ[1] /*daviḍε*/ ನಾ. ಒಸಡು, ದಂತಪಂಕ್ತಿಗಳಿರುವ ಎಲುಬು, ದಂತಿ, ಮೇಲ್ದವಡೆ. jaw. ವಾ: ದವ್‌ಡೆಗೆ ಇಸ್‌ವೆ.

ದವ್ಡೆ[2] /*davḍε*/ ನಾ. 1. ಕೆನ್ನೆ, 2. ದವಡೆ. 1. cheeks, 2. jaw. ವಾ: ದವ್ಡೆಗೆ ಎರ್‌ಡ್ ಕೊಡೊಕು.

ದಸ್ಕತ್ /*daskati*/ ನಾ. ಎಪ. ಸಹಿ, ರುಜು. a signature. ವಾ: ಸಾಲಪತ್ರಕೆ ದಸ್ಕತ್ ಹಾಕಿಯೊಳೆ.

ದಳ /*daḷa*/ ನಾ. 1. ಅಡಿಪಾಯ, 2. ಕಟ್ಟಡ ಭದ್ರವಾಗಿ ನಿಲ್ಲಲು ನೆಲದಲ್ಲಿ ಅಗೆದು ನಿರ್ಮಿಸಿದ ಗಟ್ಟಿನೆಲ, 3. ತಳಪಾಯ. 1. foundation, 2. the solid underground base of a building, 3. base. ವಾ: ಮನೆಗೆ ದಳ ಹಾಕಿ ಆತ? **ದಳ ಕಲ್ಸುದು** /*daḷa kalsudu*/ ಮನೆ ಕಟ್ಟಲು ಮಣ್ಣು ಕಲಸಿ ಮಣ್ಣು ಮುದ್ದೆಮಾಡುವುದು. making moulds of soil in the shape of bricks to build a house. ವಾ: ಮನೆ ಕಟ್ಟಿಕೆ ದಳ ಕಲ್‌ಸುದು. **ದಳ ಹಾಕುದು** /*daḷa ha:kudu*/ ಮನೆ ಕಟ್ಟಲುಅಡಿಪಾಯ ಹಾಕುವುದು. laying foundation to build a house. ವಾ: ಮನೆಗೆ ನಾಳೆ ದಳ ಹಾಕುದು.

ದಳಿ[1] /*daḷi*/ ನಾ. ವಿಶಾಲವಾದ ಕಿಟಕಿ. a wide window. ವಾ: ದಳಿ ಹತ್ತ್ ರ ನಿತ್ತ್ ಬೊಗ್ಗಿ ಬೊಗ್ಗಿ ಎಂತರ ಹಂಗೆ ನೋಡ್‌ದು.

ದಳಿ[2] /*daḷi*/ ನಾ. ದನದ ಕುತ್ತಿಗೆ ಅಥವಾ ಕೊಂಬಿಗೆ ಹಾಕುವ ಹಗ್ಗ. something that is tied around the neck or the horn of cattle. ವಾ: ದನದ ಕುತ್ತಿಗೆಲಿದ್ದ ದಳಿ ಕಾಂಬಲೆಲ.

ದಳಿ[3] /*daḷi*/ ನಾ. ಕಿಟಕಿ ಅಳವಡಿಸದಿರುವ ತೆರೆದ ಜಾಗ. open space. ವಾ: ಅಲ್ಲಿ ನೋಡಿ ದಳಿನ ಬಾಗ್‌ಲ್.

ದಳಿಯ /*daḷiya*/ ನಾ. ಮಡಿಬಟ್ಟೆ, ಸಾಂಪ್ರದಾಯಿಕ ಕಾರ್ಯಕ್ರಮಗಳಲ್ಲಿ ಮಡಿವಾಳ ಬಳಸುವ ಸ್ವಚ್ಛವಾದ ಬಿಳಿ ಬಟ್ಟೆ. clothes that are undefiled – not touched by others. ವಾ: ಹಬ್ಬದಂದ್ ಮಡ್ಯೊಳ ದಳಿಯ ಕೊಟ್ಟ್ ಹೋತ್.

ದಳೆ /*daḷε*/ ನಾ. ಮರ ಹತ್ತಲು ಬಳಸುವ ಹಗ್ಗದ ಉರುಟಾದ ಕಾಲುಪಟ್ಟಿ. tree climbing rope support. ವಾ: ದಳೆ ಹಾಕಂಡ್ ಮರ ಹತ್ತುದು.

ದಾಂದೂಂ/ಡಾಂಡೂಂ /*da:mdu:m_/ḍa:mḍu:m*/ ಅ. 1. ಭರ್ಜರಿ, 2. ಅದ್ದೂರಿ, 3. ಆಡಂಬರ. 1. ostentatious, 2. grand, 3. extravagant. ವಾ: ದಾಂ ದೂಂ/ಡಾಂ ಡೂಂ ತ ಮೊದುವೆ ಮಾಡ್‌ದೊ.

ದಾಂದ್ರ /*da:ndra*/ ನಾ. 1. ಹಿಂದಿನ ಕಾಲದ, ಐನ್ ಮನೆಗಳ ಕಟ್ಟಳೆಗಳ ಮೇಲ್ಭಾಗದಲ್ಲಿರುವ ಸಣ್ಣ ಜಾಗ, 2. ಸಣ್ಣ ಸಣ್ಣ ವಸ್ತುಗಳನ್ನು ಇಡುವ ಜಾಗ. 1. an empty space above the door frame to keep small things, in Ain mane, 2. a place to keep small things. ವಾ: ದಾಂದ್ರಲಿ ನೆಸೆಡಬ್ಬಿ ಇಸಿಯೊಳದ್. ಪ: ದಾರ್‌ಂದ

ದಾಕಲೆ /*da:kalε*/ ನಾ. 1. ದಾಖಲೆ, 2. ಲೆಕ್ಕಕ್ಕೆ ಸೇರಿದುದು,

3. ಸಂದಾಯವಾದುದು, 4. ಆಧಾರ ಪೂರ್ವಕವಾದ, ಪ್ರಮಾಣಬದ್ಧವಾದ ಕಾಗದ ಪತ್ರಗಳಲ್ಲಿ ಸೇರಿಸುವ ಒಕ್ಕಣೆ, ನಮೂದು, 5. ಪ್ರಮಾಣಬದ್ಧವಾದ ಕಾಗದ ಪತ್ರ. 1. records, 2. documented, 3. paid, 4. documentary evidence, 5. legal documents. ವಾ: ಆಸ್ತಿದ್ ದಾಕಲೆಪತ್ರನ ನೋಡಕಿತ್.

ದಾಕ್ಸಿ /*da:kṣi*/ ನಾ. 1. ದ್ರಾಕ್ಷಿ, 2. ವೈಟೇಸೀ ಕುಟುಂಬಕ್ಕೆ ಸೇರಿದ ಜನಪ್ರಿಯ ಹಣ್ಣಿನ ಸಸ್ಯ, 3. ಬಳ್ಳಿಯಲ್ಲಿ ಗೊಂಚಲಾಗಿ ಬಿಡುವ ಹಣ್ಣು. 1. grapes, grows in bunches on a vine, 2. grape, a vine plant belonging to the family of Vitaceae, 3. grape, a berry grown in clusters. ವಾ: ದ್ರಾಕ್ಸಿ ಜೊಂಪೆ ಜೊಂಪೆ ಬಿದ್ದುಟು.

ದಾಟಿ /*da:ṭi*/ ಕ್ರಿವಿ. 1. ರೀತಿ, 2. ಕ್ರಮ, 3. ಶೈಲಿ. 1. manner, 2. order, 3. style. ವಾ: ಅಂವ ಹೇಳುವ ದಾಟಿ ಬಾರಿ ಲಾಯ್ಕಿತ್.

ದಾಟ್[1] /*da:ṭɨ*/ ಕ್ರಿ. 1. ದಾಟು, 2. ಹಾಯ್ದು ಹೋಗು. 1. to cross, 2. to cross over. ವಾ: ಕಡಂಗ ದಾಟಿ ಬರೊಕು. **ದಾಟುಲೆ** /*da:ṭulɛ*/ ಕ್ರಿವಿ. 1. ದಾಟುವುದಿಲ್ಲ, 2. ಹಾಯ್ದು ಹೋಗಲಾರೆ. 1. won't cross, 2. won't cross over. **ಲಾಬ ಇಲ್ಲದೆ ಸೆಟ್ಟಿ ಹಳ್ಳ ದಾಟುಲೆ(ಗಾ).** ವಾ: ಅವ್ವ ಹಾಕಿದ ಗೀಟ್‌ನ ಮಜ್ಜ ದಾಟುಲೆ.

ದಾಟ್[2] /*da:ṭi*/ ಕ್ರಿ. 1. ದಾಂಟು/ದಾಟು, 2. ಇನ್ನೊಂದು ಬದಿಗೆ ಸಾಗು, 3. ಕಡ್‌ಂಗ. 1. to cross over, 2. going to the other side. ವಾ: ಅಂವ ಹಳ್ಳದಾಟಿಬಾತ್. ಪ: ದಾಟುದ್ಲೆ – ದಾಟುವುದಿಲ್ಲ

ದಾಡಾಲ /*da:ḍa:la*/ ಅ. ಬೀಳುವ ಕ್ರಿಯೆಯ ಅನುಕರಣವಾಚಿ. an onomatopoeic expression to refer to the sound of sudden falling. ವಾ: ಅವುಳು ದಾಡಾಲತ ಬೀತ್. ಪ: ದಡಾಲ

ದಾಡಿ /*da:ḍi*/ ನಾವಿ. 1. ತೊಂದರೆ, 2. ಕಷ್ಟ, 3. ಸಂಕಟ. 1. a problem, 2. a difficulty, 3. a trouble. ವಾ: ಆ ಕೆಲ್‌ಸ ಮಾಡಿಕೆ ಅಂವಂಗೇನ್ ದಾಡಿ.

ದಾತಡ್ಕ /*da:taḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಮರಪಡ್ನೂರು ಗ್ರಾಮದ ಜಾಗ. a locality in Amarapadnuru village in Sullia Taluk of Dakshina Kannada District.

ದಾನ /*da:na*/ ನಾ. 1. ದಾನ, 2. ಕೊಡುಗೆ, 3. ಕಾಣಿಕೆ, 4. ಚತುರೋಪಾಯಗಳಲ್ಲಿ ಒಂದು, 5. ಉದಾರತೆ, 6. ನೀಡುವಿಕೆ. 1. charity 2 gift, 3. a gift, 4. one of the approaches or strategies (chaturopaya), 5. the act of giving. **ಕೆಟ್ಟ್ ನೆಂಟ್ರ ಸೇರ್‌ಬಡ, ಕೊಟ್ಟದಾನ ತಿರ್‌ಗಿ ಕೇಳ್‌ಬಡ(ಗಾ).** ವಾ: ಎಲ್ಲ ದಾನಕ್ಕಿಂತ ಅನ್ನ ದಾನನೇ ಮೇಲ್. **ದಾನದರ್ಮ** /*da:nadarma*/ ದಾನಧರ್ಮ. charity. ವಾ: ದಾನದರ್ಮ ಬೇಕ್.

ದಾನಿಕೆ ಆದು /*danikɛ a:du*/ ನಾ. ಬಾಯಾರಿಕೆಯಾಗು. feeling thirsty. ವಾ: ಬೇಸಿಗೆ ಕಾಲಲಿ ಬಾರಿ ದಾನಿಕೆ ಆದೆ.

ದಾಪುಗಾಲ್ /*da:puga:lɨ*/ ನಾ. 1. ಬಿರುಸಿನ ನಡಿಗೆ, 2. ದೀರ್ಘ ಹೆಜ್ಜೆ. 1. brisk walk, 2. a long stride. ವಾ: ದಾಪುಗಾಲ್ ಹಾಕಿ ಎತ್ತ ಹೊರ್‌ಟ?

ದಾಯನ /*da:yana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ದಾರ[1] /*da:ra*/ ನಾವಿ. ಬಾಗಿಲಿನ ಮೇಲೆ ವಸ್ತುಗಳನ್ನು ಇಡುವ ಸ್ಥಳ. an empty space above the door frame to keep small things. ವಾ: ದಾರಲಿ ಸಣ್ಣ ಡಬ್ಬಿನ ಇಸಿದ್.

ದಾರ[2] /*da:ra*/ ನಾ. 1. ನೂಲು, 2. ಎಳೆ. 1. thread, 2. strands. ವಾ: ಗಾಳಿಪಟಕೆ ದಾರ ಕಟ್ಟೊಕು.

ದಾರಂದ /*da:randa*/ ನಾ. 1. ಬಾಗಿಲು ಮುಚ್ಚಲು ಹಾಗೂ ತೆರೆಯಲು ಹಿಂದಿನ ಕಾಲದಲ್ಲಿ ಕಟ್ಟಳೆಯಲ್ಲಿ ಇರಿಸಲಾಗುತ್ತಿದ್ದ ಮರದ ಪೆಟ್ಟಿಗೆ ರೂಪದ ಉಪಕರಣ, 2. ಅಟ್ಟದ ದ್ವಾರ, 3. ಮನೆಯ ಮುಖದ್ವಾರದ ಮೇಲ್ಭಾಗದ ಸ್ಥಳ. 1. a plank made of wood used to latch the door, 2. door of attic, 3. an empty space above the frame of front door. ವಾ: ದಾರಂದಲಿ ಬತ್ತಿ ಉಟ್ಟು ತಕ. ಪ: ದಾರ್‌ಂದ – ಕಟ್ಟಳೆಯ ಮೇಲ್ಭಾಗದಲ್ಲಿರುವ ಸಣ್ಣ ಜಾಗ, ಕಟ್ಟಳೆಯ ಮೇಲಿರುವ ಕಂಡಿ

ದಾರಹೀರೆ /*da:rahi:rɛ*/ ನಾ. ಹೀರೆಕಾಯಿ. ridge gourd. ವಾ: ದಾರ ಹೀರೆ ತೊಪ್ಪೆನ ಪಜ್ಜಿ ಮಾಡಕ್. ಪ: ದಾರಪೀರೆ(ತು)

ದಾರಾಮಂಟಪ /*da:ra:manṭapa*/ ನಾ. ಧಾರೆ ಎರೆಯುವ ಮಂಟಪ. a decorated pandal/pavilion where

the ceremony of offering (giving away) one's daughter as a bride is conducted. ವಾ: ದಾರಾ ಮಂಟಪಲಿ ಹೂನ ಹಾಕೊಳೊ.

ದಾರಾಮೂರ್ತ /*da:rɛgɛ*/ ನಾವಿ. ಧಾರಾ ಮುಹೂರ್ತ, 2. ತಾಳಿ ಕಟ್ಟುವ ಸಮಯ. 1. an auspicious time in marriage ceremony, 2. time of tying Mangala sutra.

ದಾರಾಳಿ /*da:ra:ḷi*/ ನಾವಿ. 1. ಧಾರಾಳಿ, 2. ಉದಾರಿ, 3. ಯಥೇಚ್ಛ ವಾಗಿ ದಾನ ಧರ್ಮ ಮಾಡುವವ. 1. spendthrift, 2. generous, 3. a philanthropist. ವಾ: ಬಾರಿ ದಾರಾಳ ಮನ್ಸ್ ಅಂವಂದ್.

ದಾರಿ /*da:ri*/ ನಾ. 1. ರಸ್ತೆ, 2. ದಾರಿ, 3. ಮಾರ್ಗ, 4. ಹಾದಿ. 1. road, 2. path, 3. a route, 4. a way. **ಆನೆ ಹೋದಲ್ಲೇ ದಾರಿ(ಗಾ). ಆನೆ ಹೋದಲ್ಲೇ ದಾರಿ(ನು).** ವಾ: ಈ ದಾರಿಲಿ ಹೋದರೆ ಮೊಟ್ಟೆ ಹತ್ತಕು.

ದಾರಿ ಕಾಂಬೊದುಲೆ /*da:ri ka:mbodulɛ*/ ಕ್ರಿವಿ. 1. ಯೋಜನೆ ಇಲ್ಲದಿರು, 2. ಮುಂದಿನ ಕೆಲಸ ತೋಚದಿರು. 1. not having any plans, 2. unable to think. ವಾ: ನಂಗೆ ಮುಂದೆನ ದಾರಿ ಕಾಂಬೊದುಲೆ.

ದಾರಿಕರೆ /*da:rikarɛ*/ ನಾ. 1. ಹಾದಿಬದಿ, 2. ದಾರಿಬದಿ. 1. road side, 2. on the side of the road. ವಾ: ನೀ ದಾರಿಕರೆಲಿ ನಿತ್ತ್‌ಕ, ಅಲ್ಲಿಗೆ ಬಸ್ಸ್ ಬಂದದೆ.

ದಾರಿನೋಡ್ /*da:rino:ḍɨ*/ ಕ್ರಿ. 1. ಕಾಯು, 2. ನಿರೀಕ್ಷಿಸು. 1. to wait, 2. to expect. ವಾ: ಮಜ್ಜ ಬಂದದೆತ ದಾರಿನೋಡ್‌ದು.

ದಾರಿಬುಡ್ /*da:ribuḍɨ*/ ಕ್ರಿ. ದಾರಿ ಬಿಡು. to give way. ವಾ: ಅಡ್ಡ ನಿತ್ತದ್ ಯಾಕೆ? ಎಲ್ಲಿ ದಾರಿಬುಡ್.

ದಾರಿಬುತ್ತಿ[1] /*da:ributti*/ ನಾ. ಹೆಣವನ್ನು ಸ್ಮಶಾನಕ್ಕೆ ಒಯ್ಯುವಾಗ ಅರ್ಧ ದಾರಿಯಲ್ಲಿ ಅನ್ನ ಆಹಾರ ಇಡುವುದು. keeping food in the middle of the path while carrying the dead body to a cemetery. ವಾ: ದಾರಿಬುತ್ತಿ ಕಟ್ಟಿ ಆತ?

ದಾರಿಬುತ್ತಿ[2] /*da:ributti*/ ನಾ. ದೂರದ ದಾರಿಗಾಗಿ ತಿನ್ನಲು ಕೊಂಡು ಹೋಗುವ ಆಹಾರ. carrying food while travelling long distances.

ದಾರಿಹೋಕ /*da:riho:ka*/ ನಾ. 1. ಪಾದಚಾರಿ, 2. ದಾರಿಯಲ್ಲಿ ನಡೆದುಹೋಗುವ ಅಪರಿಚಿತ. 1. a pedestrian, 2. a stranger on the street. ವಾ: ಯಾರೋ ದಾರಿ ಹೋಕ ಸಿಕ್ಕಿದ್ರೊ, ಹಾಂಗೆ ಮಾತಾಡಿಕಂಡ್ ಬಂದೆ.

ದಾರೆ /*da:rɛ*/ ನಾ. 1. ಧಾರೆ, 2. ಕನ್ಯಾದಾನ. 1. a ceremony of giving away the bride, 2. offering one's daughter in marriage. **ಕೈ ನೋಡಿ ಬಳೆ ಹಾಕ್, ಮುಖ ನೋಡಿ ದಾರೆ ಹುಯ್ಯಿ(ಗಾ).** ವಾ: ದಾರೆ ಎಸ್ಟೊತ್ತಿಗೆ? ಪ: ದಾರೆಕಾರ್ಯ. **ದಾರೆ ಎರಿ** /*da:rɛ ɛri*/ 1. ಧಾರೆ ಎರೆಯು, 2. ಮದುವೆ ಸುಮುಹೂರ್ತದಲ್ಲಿ ವಧುವಿನ ತಂದೆ ಧಾರೆ ಎರೆದು ಕನ್ಯಾದಾನ ಮಾಡುವುದು. 1. a ceremony of giving away the bride, 2. father offering one's daughter in marriage. ವಾ: ಮಗಳ ದಾರೆ ಎರಿಯದು. **ದಾರೆ ಎರೆದು** /*da:rɛ erɛdu*/ ಮದುವೆ ಮನೆಯಲ್ಲಿ ಗಂಡು ಹೆಣ್ಣಿನ ಕೈ ಕೈ ಹಿಡಿದು ಕೈ ಕೆಳಗೆ ಕಂಚಿನ ಬಟ್ಟಲು, ಕೈ ಮೇಲಿಂದ ಕೊಂಬಿನ ಗಿಂಡೆ ತಂಬಿಗೆಯಲ್ಲಿ ಧಾರೆಯೆರೆಯುವುದು. the final ritual of wedding in which both the bride and the groom join their hands and wedding will be solemnised with a ritual of pouring water on the hands using a small pitcher with a nozzel.

ದಾರೆಹುಳಿ /*da:rɛhuḷi*/ ನಾ. 1. ಒಂದು ಜಾತಿಯ ಹುಳಿ ರುಚಿಯ ಹಣ್ಣು, ಇದರ ರಸವನ್ನು ಮಾಂಸಾಹಾರದ ಸಾಂಬಾರಿಗೆ ಬಳಸಲಾಗುತ್ತದೆ, 2. ಮಂತುಳಿ, 3. ನಕ್ಷತ್ರ ಹಣ್ಣ್. 1. a sour fruit, used while cooking non-vegetarian food, 2. a malabar gamboge fruit, 3. malabar gamboge-a star fruit. ವಾ: ದಾರೆಹುಳಿನ ಮಾಸದ ಗೈಪುಗೆ ಹಾಕಿವೆ.

ದಾಲೆಸೂರು /*da:lesu:ru*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮರ್ಕಂಜ ಗ್ರಾಮದ ಜಾಗ. a locality in Markanja village in Sullia Taluk of Dakshina Kannada District.

ದಾಲ್ಚಿನಿ /*da:lcini*/ ನಾ. 1. ಸಂಬಾರ ಜಿನಸು, 2. ಚಕ್ಕೆ. 1. cinnamon, a spice, 2. cinnamon. ವಾ: ದಾಲ್ಚಿನಿನ ಅಡ್‌ಗೆಗೂ, ಚಾಯ ಮಾಡಿ ಕುಡೆಕು ಬಳ್‌ಸುವೆ, ಆರೋಗ್ಯ ದೃಷ್ಟಿಂದ ಇದ್ ಒಳ್ಳೆದ್.

ದಾಸನಕಜೆ /*da:sanakajɛ*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ನೆಲ್ಲೂರು ಕೆಮ್ರಾಜೆ ಗ್ರಾಮದ ಜಾಗ. a

locality in Nelluru Kemraje village in Sullia Taluk of Dakshina Kannada District.

ದಾಸನಮಜಲು /*da:sanamajalu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಬೆಳ್ಳಾರೆ ಗ್ರಾಮದ ಜಾಗ. a locality in Bellare village in Sullia Taluk of Dakshina Kannada District.

ದಾಸಪ್ಪ /*da:sappa*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. masculine given name. ಪ: ದಾಸ

ದಾಸರಹಿತ್ಲು /*da:sarahitlu*/ ನಾ. ಕೊಡಗು ಜಿಲ್ಲೆಯ ಪೆರಾಜೆ ಗ್ರಾಮದ ಜಾಗ. a locality in peraje village in of Kodagu District.

ದಾಸರಬೈಲು /*da:sarabailu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮರ್ಕಂಜ ಗ್ರಾಮದ ಜಾಗ. a locality in Markanja village in Sullia Taluk of Dakshina Kannada District.

ದಾಸಳ /*da:saḷa*/ ನಾ. 1. ದಾಸವಾಳ ಹೂ. hibiscus flower. ವಾ: ದಾಸಳ ದೈದ ಸೊಪ್ಪ್ ಮತ್ತೆ ಪದ್‌ನಿಸಿದ ಮೆಂತೆನ ಕಡ್ಡ್ ತಲೆಗೆ ಹಾಕಿರೆ ಒಳ್ಳೆದ್, ತಲೆ ಬಾರಿ ತಂಪಾದೆ. **ದಾಸ್ವಾಳ** /*da:sva:ḷa*/ ವಾ: ದಾಸ್ವಾಳ ದೈದ ಎಲೆ, ಹೂ ಎಲ್ಲನು ಉಪಯೋಗನೆ.

ದಾಸಿ /*da:si*/ ನಾ. 1. ದಾಸಿ, 2. ಭಕ್ತೆ, 3. ದಾದಿ, 4. ತೊತ್ತು. 1. a slave, 2. a devotee, 3. a nurse, 4. a servant. ವಾ: ರಾಜರ ಕಾಲಲಿ ಸೇವೆ ಮಾಡಿಕೆ ದಾಸಿಗ ಇರ್‌ತ್ತಿದ್ದೊ.

ದಾಸಿಮೆ ಹಾಕಿ ಹೊಟ್ಸ್ /*da:simɛ ha:ki hoṭṭisi*/ ನಾ. ಸಾಸಿವೆ ಹಾಕಿ ಸಿಡಿಸಿ. seasoning food using mustard seeds. ವಾ: ದಾಸಿಮೆ ಹಾಕಿ ಹೊಡ್ಡ ಮೇಲೆ ಎಣ್ಣೆ ಕಾದುಟುತ ಲೆಕ್ಕ.

ದಾಸ್ಮೆ /*da:smɛ*/ ನಾ. ಸಾಸಿವೆ. mustard seeds. ವಾ: ಅಗ್ರಣೆಗೆ ದಾಸಿಮೆ ಹಾಕಿ ಸಿಡ್‌ಸೊಕು. ಪ: ದಾಸಿಮೆ

ದಾಸ್‌ಮೆ ಕಣ್ಣ್ /*da:sɨmɛ kaṇṇi*/ ನಾ. ಸಾಸಿವೆ ಅಂತಹ ಕಣ್ಣು. a spice like mustard seeds. ವಾ: ಆ ಗೂಡೆದ್ ದಾಸ್‌ಮೆ ಕಣ್ಣ್.

ದಾಸ್ರ ಹಾವ್ /*da:sra ha:vɨ*/ ನಾ. 1. ದಾಸರ ಹಾವು, 2. ಹೆಬ್ಬಾವು. a python. ವಾ: ಅಲ್ಲಿ ಹರ್‌ಕಂಡ್ ಹೋದ್ ದಾಸ್ರ ಹಾವ್‌ತ ಹೇಳ್‌ತ್ತಿದ್ದೊ.

ದಾಳಿಂಬೆ /*da:ḷimbɛ*/ ನಾ. 1. ದಾಳಿಂಬ, 2. ದಾಳಿಂಬರಿ ಹಣ್ಣು, 3. ದಾಡಿಮ, 4. ದಾಳಿಂಬೆ. a pomegranate, fruit. ವಾ: ಬೊಸ್ರಿ ಹೆಣ್ಮಕ್ಕ ದಾಳಿಂಬೆ ತಿನೊಕು. **ದಾಳಿಂಬೆ ಮರ** /*da:ḷimbɛ mara*/ ದಾಳಿಂಬೆ ಹಣ್ಣಿನ ಮರ. a pomegranate tree. ವಾ: ದಾಳಿಂಬೆ ಮರಲಿ ಕಾಯಿ ಬುಡಿಕೆ ಸುರು. **ದಾಳ್‌ಂಬೆ** /*da:ḷɨmbɛ*/ ವಾ: ದಾಳ್‌ಂಬೆ ಕೊಡಿನ ಜುಲಾಬಾಕನ ಮೊದ್ದ್ ಮಾಡಿ ಕೊಟ್ಟವೆ.

ದಿಂಡ್[1] /*diṇḍi*/ ನಾ. ಬಾಳೆಗಿಡದ ಒಳಗಿನ ದಂಡು. the tender stalk/stem inside a plantain tree. ವಾ: ಬಾಳೆದಿಂಡ್ ರಸ ಕುಡ್ಕೊಕು ಹೊಟ್ಟೆಲಿ ಕೂದೊಲು, ಕಲ್ಲ್ ಇದ್ದರೆ ಹೋದೆ.

ದಿಂಡ್[2] /*diṇḍi*/ ನಾ. ಬೈಹುಲ್ಲು ಬಡಿಯುವ ಪಡಿಮಂಚದ ಚೌಕಟ್ಟು. frame of a threshing table.

ದಿಂಡ್[3] /*diṇḍi*/ ನಾವಿ. 1. ದಪ್ಪವಾದ, 2. ಬಲವಾದ, 3. ಗಟ್ಟಿಯಾದ, 4. ಒರಟಾದ. 1. stout, 2. strong, 3. rash. ವಾ: ಬಾಳೆದಿಂಡ್ ತಿಂದರೆ, ಅದರ ರಸ ಕುಡ್‌ದರೆ ಸರ್ರಕೆ ಬಾರಿ ಒಳ್ಳೆದ್.

ದಿಂಬು /*dimbu*/ ನಾ. ತಲೆದಿಂಬು. a pillow. ವಾ: ತಲೆದಿಂಬು ಹಾಕಿತ್ತ.

ದಿಕ್ /*dikɨ*/ ನಾ. 1. ದಿಕ್ಕು. direction. ವಾ: ಯಾವ ದಿಕ್ಕ್‌ಲಿ ಹೋದುತ ಗೊತ್ತಾಗ್‌ತಿಲ್ಲೆ.

ದಿಕ್ಕ /*dikka*/ ಅ. ಫಕ್ಕನೆ, ಹಠಾತ್ತಾಗಿ ಎಂಬರ್ಥದಲ್ಲಿ ಬರುವ ಅನುಕರಣವಾಚಿ ಶಬ್ದ. an onomatopoeic expression referring to the sudden action, or movement. ವಾ: ದಿಕ್ಕನೆ ಹೊರ್‌ಟ್ ಬಾತ ಹೇಳ್‌ದೊ.

ದಿಕ್ಕಿಲ್ಲದವ್ಕೆ /*dikkilladavkɛ*/ ನಾವಿ. ದಿಕ್ಕಿಲ್ಲದವರಿಗೆ. to the helpless people. ವಾ: ದಿಕ್ಕಿಲ್ಲದವ್ಕೆ ದೇವ್ರೆ ಗೆತಿ.

ದಿಕ್ಕ್ /*dikkɨ*/ ನಾ. 1. ದಿಕ್ಕು, 2. ಗತಿ, 3. ಆಶ್ರಯ. 1. direction, 2. hope/shelter, 3. shelter. **ದಿಕ್ಕಿಲ್ಲದವಂಗೆ ದೇವ್‌ರೇ ದಿಕ್ಕ್(ಗಾ).** ವಾ: ನಂಗ್ಯಾರ್ ದಿಕ್ ಇಲ್ಲೆ.

ದಿಟ್ಟೆ[1] /*diṭṭɛ*/ ನಾ. ಮನೆಯ ಜಗುಲಿ. a veranda in front of the house, used as a sit-out. ವಾ: ದಿಟ್ಟೆಲಿ ಹೂನ ಚೆಟ್ಟಿ ಇತ್ತ್.

ದಿಟ್ಟೆ[2] /*diṭṭɛ*/ ನಾ. ಕಣದಲ್ಲಿ ಆಚೆ ಈಚೆ ಮಣ್ಣಿನಿಂದ ದೊಡ್ಡ ಪ್ರಮಾಣದಲ್ಲಿ ಕಟ್ಟೆಯ ರೀತಿಯಲ್ಲಿ ಕಟ್ಟಿರುತ್ತಾರೆ. a mud barrier constructed around the threshing floor. ವಾ: ದಿಟ್ಟೆ ಇದ್ದರೆ ಬತ್ತ ಬಡೆಕನ ಹೊರೆಗೆ.

ದಿಡುಪೆ /*diḍupɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ದಿಣ್ಣೆ /*diṇṇɛ*/ ನಾ. 1. ದಿಬ್ಬ, 2. ಎತ್ತರದ ಜಾಗ. 1. a heap, 2. a mound. ವಾ: ದಿಣ್ಣೆಲಿ ಯಾರೋ ಕುದ್ದೊಳೊ.

ದಿನ ಇಸುದು /*dina isudu*/ ನಾವಿ. ದಿನ ನಿಶ್ಚಯಿಸುವುದು. to fix a date/day. ವಾ: ಮೊದುವೆಗೆ ದಿನ ಇಸುದುಗಡ.

ದಿನಕಳಿಯೊದು /*dinakaḷiyodu*/ ನಾವಿ. ಜೀವನ ನಿರ್ವಹಣೆ ಮಾಡುವುದು. to make a living. ವಾ: ಇನ್ನ್ ಮುಂದಕ್ಕೆ ದಿನ ಕಳಿಯೊದು ಬಾರಿ ಬಜ್ಜ ಆದು.

ದಿನಕೇಳ್ದು /*dinake:ḷdu*/ ನಾವಿ. 1. ವಿಶೇಷ ಆಚರಣೆಗಳಿಗೆ ಶುಭದಿನ ಯಾವುದೆಂದು (ಬಲ್ಲವರಲ್ಲಿ) ಕೇಳುವುದು, 2. ಮುಹೂರ್ತ ನಿಶ್ಚಯಿಸುವುದು. 1. asking for an auspicious day to conduct rituals, 2. choosing/ fixing an auspicious day. ವಾ: ವೀಳ್ಯಸಾಸ್ತ್ರಕೆ ದಿನ ಕೇಳ್ದು.

ದಿನದೂಡ್ದು /*dinado:ḍdu*/ ನಾವಿ. ದಿನ ಕಳೆಯುವುದು. spending time without doing anything. ವಾ: ಅಂವ ಕೆಲ್ಸ್ ಮಾಡದೆ ದಿನ ದೂಡ್ತ್.

ದಿನಮಜೂರಿ /*dinamaju:ri*/ ನಾವಿ. 1. ದಿನಗೂಲಿ, 2. ದಿನಸಂಬಳ. 1. daily wages, 2. daily earnings. ವಾ: ನಿಮ್ಮ ಕಡೆ ಕಾಪಿ ಕೊಯ್ಯಕೆ ದಿನ ಮಜೂರಿ ಎಸ್ಟ್?

ದಿನಸಂದ್ /*dinasandi̵*/ ನಾವಿ. ದಿನ ಕಳೆಯಿತು. to indicate that the day is over. ವಾ: ಮೊದುವೆ ದಿನ ಸಂದ್ ಹೋತ್.

ದಿನ[1] /*dina*/ ನಾ. 1. ದಿನ, 2. ದಿವಸ. a day. **ದಿನ ಇದ್ದಾಂಗೆ ದಿನ ಇರ್ದುಲೆ(ನು).** ವಾ: ಮೊನ್ನನ ಬೊದ್‌ಕೆ ಹಾಂಗೆ, ದಿನ ಇದ್ದಾಂಗೆ ಇರ್ದುಲೆ, ಒಮ್ಮೆ ಸುಕ ಬಂದರೆ ಇನ್ನೊಮ್ಮೆ ದುಕ್ಕ ಇದ್ದದೆ. **ದಿನಾಂತ** /*dina:nta*/ ದಿನವೆಂದು. day. ವಾ: ಎಸ್ಟ್ ದಿನಾಂತ ನೀ ಹೀಂಗೇ ಕುದ್ದ್ಯ, ಏನಾರ್ ಮಾಡ್.

ದಿನ[2] /*dina*/ ನಾವಿ. ಹಗಲು. a daytime. ವಾ: ನಿನ್ನೆ ಹಗ್‌ಲ್ ಮಳೆ ಇತ್‌ಲೆ.

ದಿನಂಪ್ರತಿ /*dinamprati*/ ನಾವಿ. 1. ದಿನಂಪ್ರತಿ, 2. ಪ್ರತಿ ದಿನ, 3. ಯಾವಾಗಲು. 1. everyday, 2. daily, 3. all the time. ವಾ: ದಿನಂಪ್ರತಿ ಬೇಗ ಎದ್ರ್ ತ ಹೇಳೊಕ.

ದಿನಕರ್ಚ್ /*dinakarci̵*/ ನಾವಿ. 1. ದಿನದ ಖರ್ಚುವೆಚ್ಚ, 2. ದಿನಖರ್ಚು. 1. daily expenses, 2. daily expenses. ವಾ: ಕೂಲಿ ಆಳಿಗೆ ದಿನಕರ್ಚ್ ಕಳ್ದ್ ಒಳ್ದದ್ದ್ ಲಾಬ.

ದಿನಗ /*dinaga*/ ಸಂವಾ. ದಿನಗಳು. days. ವಾ: ದಿನಗ ಬಾರಿ ಬೇಗ ಹೋದೆ.

ದಿನಗಟ್ಲೆ /*dinagaṭlɛ*/ ನಾವಿ. ದಿನಗಟ್ಟಲೆ. an entire day. ವಾ: ದಿನಗಟ್ಲೆ ಕುದ್ದ್ ಮಾತಾಡಿರೆ ಏನ್ ಸುಕ.

ದಿನಗೂಲಿ /*dinagu:li*/ ನಾವಿ. 1. ಒಂದು ದಿನದ ಕೆಲಸಕ್ಕೆ ಕೊಡುವ ಕೂಲಿ, 2. ಪ್ರತಿ ದಿನವೂ ಕೂಲಿ ಕೆಲಸ ಮಾಡುವವನು. 1. daily wages, 2. the one who works for daily wages. ವಾ: ದಿನಗೂಲಿ ಕೆಲ್‌ಸ ಮಾಡ್‌ದು.

ದಿನನಿತ್ಯ /*dinanitya*/ ನಾವಿ. 1. ಪ್ರತಿದಿನ, 2. ದಿನಂಪ್ರತಿ. everyday. ವಾ: ದಿನನಿತ್ಯದ ಬೊದ್‌ಕ್‌ನ ಜಂಜಾಟಲಿ ಕುಟುಂಬದವರೊಟ್ಟಿಗೆ ಸಂತಸದ ಕ್ಷಣಗಳ ಕಳೆಯೊದೆ ಮರ್‌ತ್ ಹೋವುಟು.

ದಿನಪೂರ /*dinapu:ra*/ ನಾವಿ. 1. ಇಡೀದಿನ, 2. ದಿನಪೂರ್ತಿ. 1. whole day, 2. entire day. ವಾ: ದಿನಪೂರ ಕೆಲ್‌ಸನೆ ಆತ್.

ದಿನಾ /*dina:*/ ಕ್ರಿವಿ. ಪ್ರತಿದಿನ. everyday. ವಾ: ದಿನಾ ಅವುಳು ನಂಗೆ ಸಿಕ್ಕಿದೆ.

ದಿನಾಂಕ /*dina:ŋka*/ ನಾವಿ. 1. ದಿನಾಂಕ, 2. ತಾರೀಖು, 3. ತೇದಿ. date. ವಾ: ಹುತ್ತೆರಿ ಹಬ್ಬದ ದಿನಾಂಕ ಗೊತ್ತ್ ಮಾಡ್ದೊನ?

ದಿನೆದಿನೆ /*dinɛdinɛ*/ ನಾವಿ. ದಿನ ದಿನ. everyday. ವಾ: ಬರ್‌ತಾ ಬರ್‌ತಾ ದಿನೆದಿನೆ ಇದೇ ಗೋಳಾತ್.

ದಿನೋಳು /*dino:ḷu*/ ಕ್ರಿವಿ. 1. ದಿನಾಲು, 2. ಪ್ರತೀದಿನ. everyday. ವಾ: ದಿನೋಳು ಕಡಂಗ ಹಾರಿ ಬಾದು.

ದಿನ್ನ /*dinna*/ ನಾ. 1. ತೂಕ, 2. ಭಾರ. weight. ವಾ: ಕೂಲಿ ಆಳಿಗೆ ದಿನಕರ್ಚ್ ಕಳ್ದ್ ಒಳ್ದದ್ದ್ ಲಾಬ.

ದಿಬ್ಣಬಾದು /*dibṇa ba:du*/ ನಾ. ದಿಬ್ಬಣ ಬರುವುದು. a celebratory wedding procession reaching the venue of wedding. ವಾ: ಈಗ ದಿಬ್ಣ ಬಾದು.

ದಿಬ್ಣಹೊದು /*dibṇahodu*/ ನಾ. ದಿಬ್ಬಣ ಹೋಗುವುದು. celebratory wedding procession. ವಾ: ದಿಬ್ಣಹೊದು ಎಸ್ಟೊತ್ತಿಗೆ?

ದಿಬ್ಬಣ /*dibbaṇa*/ ನಾ. 1. ಮದುವೆಯ ಮೆರವಣಿಗೆ, 2.

ದಿಬ್ಬಣ. 1. a celebratory wedding procession, 2. groom's relatives going in a procession. **ಕುಂಟನ ದಿಬ್ಬಣ ನಡುಮನೆಗೆ ಬಾಕನ, ಕುರುಡಿನಾ ಕೊಟ್ಟ್ ನಾ ಗೆದ್ದೆ(ಗಾ).** ವಾ: ದಿಬ್ಬಣದೊಟ್ಟಿಗೆ ನಾವ್ ಪೋಯ?

ದಿಬ್ಬಣ ಮುಕ್ಯಸ್ತ /*dibbaṇa mukyasta*/ ನಾ. 1. ಮದುವೆ ನಡೆಸಿಕೊಳ್ಳುವವರು, 2. ವಿವಾಹದ ಎಲ್ಲಾ ರೀತಿ, 3. ನಿಯಮ ಬಲ್ಲವನು. 1. the head of the family who oversees the rituals, 2. rituals of the wedding, 3. the one who knows all the ritual of wedding. ವಾ: ದಿಬ್ಬಣ ಮುಕ್ಯಸ್ತನ ಒಮ್ಮೆ ಇತ್ತ ಕರೆನಿ.

ದಿಬ್ಬಣ ಮೊರ್ಯಾದಿ /*dibbaṇa marya:di*/ ನಾ. 1. ದಿಬ್ಬಣಿಗರಿಗೆ ಕೊಡುವ ಆದರಾತಿಥ್ಯ, 2. ಉಪಚಾರ. 1. hospitality offered to the people who took part in celebratory wedding procession, 2. hospitality. ವಾ: ಮೊದುವೆಲಿ ದಿಬ್ಬಣ ಮೊರ್ಯಾದಿ ಮಾಡಿವೆ.

ದಿಬ್ಬಣಿಗರ್ /*dibbaṇigarɨ*/ ಕ್ರಿವಿ. ದಿಬ್ಬಣದವರು. relatives who took part in the celebratory wedding procession. ವಾ: ದಿಬ್ಬಣಿಗರ್ ಬರ್‌ತೊಳೊ.

ದಿಸ್ಟಿಬಳೆ /*dṛsṭi baḷɛ*/ ನಾವಿ. ಕೆಟ್ಟ ನೋಟ, ಕಣ್ಣು ತಾಗಬಾರದೆಂದು ಧರಿಸುವ ಬಳೆ. a bangle worn to ward off malicious sight of others. ವಾ: ದಿಸ್ಟಿ ಬಳೆ ಹಾಕಂಡದ್.

ದಿಸ್ಟಿ[1] /*disti*/ ನಾ. ದೃಷ್ಟಿ. sight. ವಾ: ಅಂವನ ಕೇಡ್ ದಿಸ್ಟಿ ನೋಡ್. ಪ: ದಿಟ್ಟಿ(ತು)

ದಿಸ್ಟಿ[2] /*dṛsṭi*/ ನಾ. 1. ನೋಡುವ ಶಕ್ತಿ, 2. ಕಣ್ಣಿನ ನೋಟ, 3. ದೃಷ್ಟಿ. 1. ability to see, 2. eye sight, 3. sight. ವಾ: ಕಣ್ಣ್‌ದ್ ದಿಸ್ಟಿ ಕಮ್ಮಿ ಆಗುಟು.

ದೀಟಿಗೆ /*di:ṭigɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ದೀಣೆ /*di:ṇɛ*/ ನಾ. 1. ಗುಡ್ಡದ ಸಮತಟ್ಟು ಜಾಗ, 2. ದಿನ್ನೆ(ತು). a level surface on the hillock. ವಾ: ದೀಣೆಗೆ ಹೋಕ ಬನ್ನೆ.

ದೀಪ /*di:pa*/ ನಾ. 1. ಹಣತೆ, 2. ಮಣ್ಣಿನ ಅಥವಾ ಲೋಹದ ಬಟ್ಟಲಿನಲ್ಲಿ ಉರಿಸುವ ಜ್ಯೋತಿ, 3. ದೀಪ. 1. a lamp, 2. an earthen or a metal lamp, 3. a light. **ಕೊತ್ತಿ ತಲೆಲಿ ದೀಪ ಇರ್ಸಿ ಎಲಿ ಬುಟ್ಟಂಗೆ(ಗಾ).** ವಾ: ಹೊತ್‌ಉಗ್ಗಪ್ಪ್ ದೀಪ ಇಸಕಾಯ್ತ್. **ದೀಪ ಆರ್ಸುದು** /*di:pa a:rsudu*/ ದೀಪವನ್ನು ನಂದಿಸುವುದು. to extinguish the lamp. ವಾ: ದೀಪ ಆರ್ಸುದು ಯಾಗ? ಕಣ್ಣಿಗೆ ಕುತ್ತಿದೆ. **ದೀಪ ಕೆಟ್ಟೋತಿತ್** /*di:pa keṭṭo:titɨ*/ ದೀಪ ಆರಿ ಹೋಗುತ್ತಿತ್ತು. the lamp was getting extinguished. ವಾ: ಗಾಳಿಗೆ ದೀಪ ಕೆಟ್ಟೋತಿತ್. **ದೀಪ ಕೆಡ್ಸ್** /*di:pa kecsi*/ ದೀಪ ಆರಿಸು. put off the lamp. ವಾ: ಎಣ್ಣೆ ಕಮ್ಮಿ ಆಗ್‌ತಾ ಉಟ್ಟು ದೀಪ ಕೆಡ್ಸ್. **ದೀಪ ತುಂಬು** /*di:pa tumbu*/ ದೀಪವನ್ನು ನಂದಿಸು. put off the lamp. ವಾ: ದೀಪ ಹೊಸಿ ಸುಮಾರ್ ಹೊತ್‌ಉಗ್ಗಪ್ಪ್ ದೀಪನ ತುಂಬು. **ದೀಪ ಬೆಳ್ಗ್**[1] /*di:pa beḷgɨ*/ 1. ದೀಪವನ್ನು ಶುಚಿ ಮಾಡುವುದು, 2. ತೊಳೆಯುವುದು. 1. cleaning the lamp, 2. washing. **ದೀಪ ಬೆಳ್ಗ್**[2] /*di:pa beḷg*/ ದೀಪ ಉರಿಸು. to light the lamp. ವಾ: ದೇವುರ ದೀಪನ ಬೆಳ್ಗ್. **ದೀಪ ಹಸ್ಸಿತ್** /*di:pa has'sitɨ*/ ದೀಪ ಹಚ್ಚಿದರು. light the lamp. ವಾ: ಅವುಳು ದೀಪ ಹಸ್ಸಿತ್. **ದೀಪ ಹೊತ್ಸಿ** /*di:pa hɔtsi*/ ದೀಪ ಉರಿಸಿ. lighting the lamp. ವಾ: ಕೈಕಾಲ್ ಮೋರೆ ತೊಳ್ದ್ ದೀಪ ಹೊತ್ಸಿ. **ದೀಪ ಹೊಸಿದೊ** /*di:pa hosidɔ*/ ನಾವಿ. ದೀಪ ಉರಿಸಿದರು. light the lamp. ವಾ: ತುಳ್‌ಸಿ ಕಟ್ಟೆ ಹತ್ತ್‌ರ ದೀಪ ಹೊಸಿದೊ. **ದೀಪದ ಎಣ್ಣೆ** /*di:pada ɛŋŋɛ*/ ದೇವರ ದೀಪಕ್ಕೆ ಬಳಸುವ ಎಣ್ಣೆ. coconut nut oil used for lamps. **ದೀಪದ ಗೂಡ್** /*di:pada gu:ḍɨ*/ ದೇವರ ದೀಪ ಹಚ್ಚುವ ಸ್ಥಳ. a place where lamps are kept and lit. ವಾ: ದೀಪದ ಗೂಡ್‌ಲೆ ಬೆಂಕಿಪಟ್ನ ಇಸಿದ್. **ದೀಪದ ಬೊತ್ತಿ** /*di:pada bɔtti*/ 1. ದೀಪದ ಬತ್ತಿ. wick of a lamp. ವಾ: ದೀಪದ ಬೊತ್ತಿ ಇಲ್ಲೆಲ ಇಲ್ಲಿ. **ದೀಪಹೊತ್ಸ್** /*di:pahottisɨ*/ ದೀಪ ಉರಿಸು. light the lamp. ವಾ: ಸಾಂಯ್ಕಲ ದೀಪಹೊತ್ಸ್.

ದೀವುಳ್ಗೆ /*di:vuḷgɛ*/ ನಾವಿ. 1. ದೀಪಾವಳಿ, 2. ದೀವಳಿಗೆ, 3. ಕಾರ್ತಿಕ ಚತುರ್ದಶಿಯಂದು ಆಚರಿಸುವ ಹಬ್ಬ, 4. ಕಾರ್ತಿಕ ಶುದ್ಧ ಪಾಡ್ಯದ ದಿನ ಬಲಿ ಚಕ್ರವರ್ತಿಯ ಹೆಸರಿನಲ್ಲಿ ಆಚರಿಸುವ ಹಬ್ಬ, ಸಾಲು ಸಾಲಾದ ದೀಪಗಳಿಂದ ಮನೆ, ದೇವಾಲಯ ಮೊದಲಾದವುಗಳನ್ನು ಅಲಂಕರಿಸುವ ಹಬ್ಬ. 1. Deepavali, festival, 2. Diwali festival, 3. a festival of lights – celebrated before the arrival of new moon between Ashwina and Karthika (months of Hindu calendar), 4.

festival of lights celebrated during the Hindu month Kartika. ವಾ: ದೀವುಳ್ಗೆಗೆ ಮನೆ ಸುತ್ತ ದೀಪಗಳ ಇಸುದು.

ದುಂಡಾದ /*dunḍa:da*/ ನಾವಿ. ಉರುಟಾದ. round. ವಾ: ಅವಳ್‌ದ್ ದುಂಡಾದ ಮೋರೆ.

ದುಂಡು ಬೆಳಗಾದುಳೆ /*dunḍu beḷaga:dulɛ*/ ನಾವಿ. 1. ಬೈಗುಳ ಪದ, 2. ಸದಾ ಮುಖ ಗಂಟಿಕ್ಕು. 1. an expletive, 2. to frown/to scowl. ವಾ: ಅವ್ನ ದುಂಡು ಬೆಳಗಾದುಳೆ.

ದುಂಡು[1] /*dunḍu*/ ನಾ. 1. ಮುಖ, 2. ಮುಸುಂಡು. face. ವಾ: ದುಂಡು ವರ್ಸಿಕ. ಪ: ದುಂಡುಮೋರೆ.

ದುಂಡು[2] /*dunḍu*/ ನಾವಿ. ಉರುಟಾದ. round. ವಾ: ಗೂಡೆದ್ ದುಂಡು ಮೋರೆ. **ದುಂಡುಮುಕ** /*dunḍumuka*/ ಉರುಟಾದ ಮುಖ. a round face. ವಾ: ಆ ಗೂಡೆದ್ ದುಂಡುಮುಕ.

ದುಂಡು[3] /*dunḍu*/ ನಾ. 1. ಮುಖ ಊದಿಸಿಕೊಳ್ಳು, 2. ಸಿಟ್ಟು ಮಾಡಿಕೊಳ್ಳು, 3. ಮುಖ ಗಂಟಿಕ್ಕು. 1. to frown, 2. to have a long face, 3. to scowl. ವಾ: ಏನಾರ್ ಹೇಳಿರೆ ಸಾಕ್ ದುಂಡು ಬಂದದೆ. **ದುಂಡು ಬಾಪಿಸ್‌ಕಂಡ್** /*dunḍuba:pisɨkandɨ*/ 1. ಮುಖ ಊದಿಸಿಕೊಳ್ಳು, 2. ಸಿಟ್ಟು ಮಾಡಿಕೊಳ್ಳು, 3. ಮುಖ ಗಂಟಿಕ್ಕು. 1. to frown, 2. to have a long face, 3. to scowl. **ದುಂಡು ಹೊತ್ತ್** /*dunḍu hottɨ*/ ಮುಖ ಗಂಟಿಕ್ಕು. to frown/having a long face/to scowl. ವಾ: ದುಂಡು ಹೊತ್ತ್ ಕುದ್ದುಟು.

ದುಂಡುದಪ್ಪ ಮಾಡ್ /*dunḍudappa ma:ḍɨ*/ ಕ್ರಿವಿ. 1. ಕೋಪಮಾಡು, 2. ಮುನಿಸಿಕೊಳ್ಳು, 1. to express anger, 2. to become angry. ವಾ: ದುಂಡುದಪ್ಪ ಮಾಡಿಕಂಡುಟು.

ದುಂದಿ /*dundi*/ ನಾ. 1. ಸೀಮೆ ಎಣ್ಣೆ ದೀಪ, 2. ಕೋಲಿಗೆ ಬಟ್ಟೆ ಚೂರುಗಳನ್ನು ಸುತ್ತಿ ಎಣ್ಣೆ ಸುರಿದು ಹತ್ತಿಸುವ ಪಂಜು, 3. ಹಿಲಾಲು, 4. ಬಟ್ಟೆಯನ್ನು ಎಣ್ಣೆಯಲ್ಲಿ ಅದ್ದಿ ಉರಿಸುವ ಕೈ ದೀಪ. 1. a kerosene lamp, 2. a torch made of a cotton cloth tied to a long strip of wood, and dipped in the kerosene, 3. a firebrand, 4. a lamp made of oil dipped/soaked cloth. ವಾ: ದುಂದಿ ಹೊಸ್ಸೊಕು. ಪ: ದೊಂದಿ – ದೀಟಿಗೆ

ದುಂಬಾಲು /*dumba:lu*/ ನಾ. 1. ಹಟಮಾಡು, 2. ಒತ್ತಾಯ ಪಡಿಸುವಿಕೆ. 1. to be stubborn, 2. to force. ವಾ: ಕಾರ್ ಬೇಕ್ ತ ದುಂಬಾಲು ಬಿದ್ದುಟು.

ದುಂಬಿ /*dumbi*/ ನಾ. 1. ದುಂಬಿ, 2. ಭ್ರಮರ, 3. ತುಂಬಿ. 1. a bee, 2. bumblebee, 3. a honey bee. ವಾ: ಮಕ್ಕ ದುಂಬಿನ ಹಿಡ್ಡ್ ರೆಕ್ಕೆಗೆ ನೂಲ್ ಕಟ್ಟಿ ಆಡ್ವ.

ದುಕ್ಕ /*dukka*/ ನಾ. 1. ಬೇಸರ, 2. ದುಃಖ. 1. sad, 2. sorrow. **ಆಸೆನೇ ದುಕ್ಕಕ್ಕೆ ಮೂಲ(ಗಾ).** ವಾ: ಬಾರಿ ದುಕ್ಕಲಿ ಕುದ್ದೊಳರಿ. **ದುಕ್ಕಳ್ಸ್** /*dukkaḷsɨ*/ 1. ಉಮ್ಮಳಿಸು, 2. ದುಃಖ ಉಕ್ಕಿ ಬರು, 3. ದುಃಖಿಸು. 1. a sudden outburst of sorrow/pain, 2. to feel intense pain, 3. to feel sorrow. ವಾ: ಯಾಕೆ ನೀ ಹೀಂಗೆ ದುಕ್ಕಳ್ಸಿ ಮರ್‌ಡುದು.

ದುಕ್ಕುಡ್ಸು[1] /*dukkuḍsu*/ ಕ್ರಿ. ಬಿಕ್ಕಳಿಸು. to hiccup. ವಾ: ಕೂಸು ದುಕ್ಕುಡ್ಸಿ ದುಕ್ಕುಡ್ಸಿ ಮರ್ಡುದು.

ದುಕ್ಕುಡ್ಸು[2] /*dukkuḍsu*/ ಕ್ರಿ. ಉಮ್ಮಳಿಸು. intense feeling of sorrow. ವಾ: ಯಾಕೆ ಹಿಂಗೆ ದುಕ್ಕುಡ್ಸುದು. **ದುಕ್ಡಿಸಿ** /*dukḍisi*/ 1. ಉಮ್ಮಳಿಸಿ, 2. ಮತ್ತೆ ಮತ್ತೆ ನೆನಪಿಸಿಕೊಂಡು. 1. intense feeling of sorrow, 2. recollecting an intense feeling of sorrow. ವಾ: ಗೂಡೆ ದುಕ್ಡಿಸಿ ದುಕ್ಡಿಸಿ ಜೋರು ಮರ್‌ಡುದು.

ದುಗ್ಗಲಡ್ಕ /*duggalaḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಸುಳ್ಯ ನಗರದ ಜಾಗ. a locality in Suḷya Nagara village in Sullia Taluk of Dakshina Kannada District.

ದುಗ್ಗಳ /*duggaḷa*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ದುಗ್ಗಾಣಿ /*dugga:ṇi*/ ನಾ. ಹಳೆಯ ಕಾಲದ ಹಣ. ancient currency. ವಾ: ದುಗ್ಗಾಣಿನ ಇನ್ನು ಇಸಿಕಂಡೊಳೆ.

ದುಡದುಡ /*duḍaduḍa*/ ಅ. ಬೇಗ ಮೊಳಕೆ ಬರು. to germinate quickly. ವಾ: ಹಾಕಿದ ಕಾಳೆಲ್ಲ ದುಡದುಡ ಆಗುಟು.

ದುಡಿ[1] /*duḍi*/ ಕ್ರಿವಿ. ಕಷ್ಟಪಟ್ಟು ಕೆಲಸ ಮಾಡು. working hard. ವಾ: ನೀ ಬಜ್ಜಪಟ್ಟ್ ದುಡಿ, ಬೊದ್‌ಕ್‌ಲಿ ಸುಕ ಉಟ್ಟು.

ದುಡಿ[2] /*duḍi*/ ನಾ. ಭೂತ ನೃತ್ಯಕ್ಕೆ ಬಳಸುವ ಡೋಲು. a percussion instrument used in bhuta/deity

worship. ವಾ: ಹಬ್ಬಲಿ ದುಡಿ ಇದ್ದದೆ. ಪ: ದುಡಿಬೊಟ್ಟುದು – ಮದುವೆ ಸಂದರ್ಭದಲ್ಲಿ ಬಾರಿಸುವ ಒಂದು ಚರ್ಮವಾದ್ಯ

ದುಡಿ[3] /*duḍi*/ ನಾ. 1. ತುಟಿ, 2. ಮುಖ, 3. ಬಾಯಿ. 1. lips, 2. face, 3. mouth. ವಾ: ಬಿದ್ದ್ ದುಡಿ ಬಾತುಟು.

ದುಡಿಪಣೆ /*duḍipaṇɛ*/ ನಾ. 1. ಮೂಗುದಾರ, 2. ಮುಸುಂಡಿಗೆ ಕಟ್ಟುವ ಹಗ್ಗ. 1. reins – a leather band attached to a horse's mouth, to restrain, 2. reins. ವಾ: ದನಗಳ ಮೂಕಿಗೆ ದುಡಿಪಣೆ ಹಾಕಿವೆ.

ದುಡಿಮೆ /*duḍimɛ*/ ಕ್ರಿ. ಶ್ರಮ ಪಟ್ಟು ಮಾಡುವ ಕೆಲಸ. hard work. ವಾ: ದುಡಿಮೆ ಮಾಡಿರೆ ಎಂದೂ ಹಾಳಾದುಲೆ.

ದುಡಿಮೆಗಾರ /*duḍimɛga:ra*/ ಕ್ರಿವಿ. 1. ಉತ್ತಮ ಕೆಲಸಗಾರ, 2. ಶ್ರಮಜೀವಿ. hard working person. ವಾ: ಅಂವ ಬಾರಿ ದುಡಿಮೆಗಾರ.

ದುಡು[1] /*duḍu*/ ನಾವಿ. 1. ದಪ್ಪ 2. ದಷ್ಟಪುಷ್ಟ. 1. fat, 2. obese. ವಾ: ಬಾಳೆದ್ಕೆ ದುಡುಲಿ ಬೆಳ್ದುಟು.

ದುಡು[2] /*duḍu*/ ನಾವಿ. ಗಟ್ಟಿ. strong. ವಾ: ಬಡಕಜಾಯ ಬಾರಿ ದುಡು ಆಗುಟು.

ದುಡೆವ /*duḍɛva*/ ನಾ. 1. ದುಡಿಯುವ, 2. ಕೆಲಸ ಮಾಡು, 3. ಶ್ರಮಪಡು, 4. ಗಳಿಸು, 5. ಸಂಪಾದಿಸು. 1. working, 2. to work, 3. to work hard, 4. to gain, 5. to earn. ವಾ: ದುಡೆವ ಮನ್ಸ್ ಇರೊಕು.

ದುಡ್ಕು /*duḍku*/ ನಾ. 1. ದುಡುಕು, 2. ಮುಂದಾಲೋಚನೆಯಿಲ್ಲದೆ ನುಗ್ಗು, 3. ಆತುರದಿಂದ ಕೂಡಿರುವಿಕೆ, 4. ಗಡಿಬಿಡಿ, 5. ಅವಸರ, 6. ವಿಚಾರಣೆ ಮಾಡದೆ ಮುನ್ನುಗ್ಗು. 1. unreflecting, 2. to act impetuously, 3. haste, 4. sense of urgency, 5. exigency, 6. to act impulsively without thinking about the pros and the cons. ವಾ: ಅಂವಂದ್ ಬಾರಿ ದುಡ್ಕು ಬುದ್ದಿತ.

ದುಡ್ಡು /*duḍḍu*/ ನಾ. 1. ಹಣ, 2. ರೊಕ್ಕ. money. **ದುಡ್ಡಿದ್ದರೆ ನಿಂಗೆ ನೀ ಕಾಂಬಕಿಲೆ, ದುಡ್ಡಿಲ್ಲದಿದ್ದರೆ ಊರಿಗೇ ನೀ ಕಾಂಬಕಿಲೆ(ಗಾ).** ವಾ: ದುಡ್ಡೇ ದೊಡಪ.

ದುರುದುರು /*duruduru*/ ಅ. 1. ಅತಿಯಾದ ಭೇದಿ, 2. ಮಲವಿಸರ್ಜನೆ ಸೂಚಿಸುವ ಅನುಕರಣವಾಚಿ. 1. chronic diarrhea, 2. an onomatopoeic expression for chronic diarrhea. ವಾ: ಕೂಸ್‌ಗೆ ದುರುದುರು ಸುರುವಾಗುಟು. **ದುರೂಂತ** /*duru:nta*/ ಒಮ್ಮೆಗೆ ಬೇಧಿಯಾಗುವುದನ್ನು ಸೂಚಿಸುವ ಅನುಕರಣವಾಚಿ. an onomatopoeic expression for diarrhea. ವಾ: ದುರೂಂತ ಹೇತಾಕಿತ್.

ದುರ್ಕ /*durɨka*/ ಅ. ಮಲ ವಿಸರ್ಜಿಸುವಾಗಿನ ಸದ್ದಿನ ಅನುಕರಣವಾಚಿ. an onomatopoeic expression to refer to the sound while passing stools/ defecation. ವಾ: ಹೇಲ್‌ಕನ ದುರ್‌ಕತ ಸದ್ದ್ ಕೇಳ್‌ತ್.

ದುರ್‌ಗುಟ್ /*durɨguṭi*/ ಕ್ರಿವಿ. 1. ಸಿಟ್ಟಿನಿಂದ ನೋಡು, 2. ಕೆಕ್ಕರಿಸಿ ನೋಡ್. 1. angry look, 2. to have a sinister look. ವಾ: ನೀ ಯಾಕೆ ನನ್ನ ದುರುಗುಟ್‌ಕಂಡ್ ನೋಡ್‌ದು?

ದುವೊ /*duvo*/ ಅ. ನಾಯಿಗಳನ್ನು ಕರೆಯುವ ಪದ. a term used while calling out a dog.

ದುವ್ವೆ[1] /*duvvɛ*/ ಅ. ಕಣ್ಣಮುಚ್ಚಾಲೆ ಆಟದಲ್ಲಿ ಬಳಸುವ ಪದ. a term used in I-spy game. ವಾ: ಆಟ ಆಡಿಕನ ದುವ್ವೆತ ಹೇಳ್ದು.

ದುವ್ವೆ[2] /*duvvɛ*/ ಅ. ಮಾವಿನ ಓಟೆಯಲ್ಲಿ ಕೂರಿಸುವ ಮೋಜಿನಾಟ. a game played using mango seeds. ವಾ: ಮಾಯಿನ ಹಣ್ಣ್‌ನ ತಿಂಬಕನ ದುವ್ವೆ ಹಾಕಿವೆ.

ದೂಂಗು /*du:ŋgu*/ ಕ್ರಿ. ನಿತ್ರಾಣ/ ನಿಶ್ಶಕ್ತಿಯಿಂದಾಗಿ ಬಳಲು. feeling weak and tired. **ನಿದ್ದೆ ದೂಂಗುವವಂಗೆ ಮೊಂದ್ರಿ ಹಾಕಿ ಕೊಟ್ಟಂಗೆ(ಗಾ).** ವಾ: ತಡಿಲಿ ತ್ರಾಣ ಇಲ್ಲದೆ ನಡೆಕನ ದೂಂಗುದು.

ದೂಂಗೆಲ /*du:ŋgɛla*/ ನಾವಿ. ಸದಾ ನಿಶ್ಶಕ್ತಿಯಿಂದ ಬಳಲುವವ. suffering from asthenia. ವಾ: ರಕ್ತ ಕಮ್ಮಿ ಆಗಿ ದೂಂಗೆಲನಾಂಗೆ ಆಗೋತ್.

ದೂಂಗ್ /*du:ŋgɨ*/ ಕ್ರಿ. 1. ನಿದ್ರೆ ತೂಗು, 2. ಹಿಂದು ಮುಂದು ಚಲಿಸುವ ಒಂದು ಬಗೆಯ ಕುಣಿತದ ಹೆಜ್ಜೆ. 1. feeling sleepy, 2. a dance movement of moving both front and back. ವಾ: ಸುಮ್ಮನೆ ಕುದ್ದರೆ ನಿದ್ರೆ ದೂಂಗ್‌ದು. ಪ: ದೂಂಗಿದೆ – ತೂಕಡಿಸುತ್ತಿದ್ದಾನೆ

ದೂಂಚಿ /*du:ŋci*/ ನಾವಿ. ತುದಿಚೂಪಾದ. having a sharp end. ವಾ: ಸೂಜಿದ್ ಕೊಡಿ ದೂಂಚಿ.

ದೂಜ /*du:ja*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. masculine given name.

ದೂಜಿ /*du:ji*/ ನಾ. 1. ಸೂಜಿ, 2. ಮೊದಲಲ್ಲಿ ಕಣ್ಣುಳ್ಳ, ಮೊನಚಾದ, ತುದಿಯುಳ್ಳ ಬಟ್ಟೆ ಹೊಲಿಯುವ ಲೋಹದ ಸಾಧನ. 1. a needle, 2. a tool used in stitching, having a hole at the end and a sharp point at the front. ವಾ: ದೂಜಿಗೆ ನೂಲ್ ಹಾಕಿಕೆ ಕಣ್ಣ್ ಕಾಂಬಲೆ.

ದೂಡ್ /*du:ḍi*/ ಕ್ರಿ. ತಳ್ಳು, to push. **ದಿನ ದೂಡ್ದೆ ಅಷ್ಟೇ(ಗಾ).** ವಾ: ಬಾಗ್‌ಲ್‌ನ ದೂಡು. ಪ: ದೂಡಿಕೆ – ತಳ್ಳಲು. **ದೂಡಿ** /*du:ḍi*/ 1. ನೂಕಿ, 2. ತಳ್ಳು, 1. to push, 2. to shove. ವಾ: ಚೀಲನ ಲಾರಿಂದ ದೂಡಿ ಹಾಕಿದೊ. **ದೂಡ್ರು** /*du:ḍru*/ 1. ನೂಕಿದರು, 2. ತಳ್ಳಿದರು. 1. pushed, 2. shoved. ವಾ: ಕರ್‌ನ ದೂಡ್ರು ಮುಂದೆ ಹೋದುಲೆಲ.

ದೂಪ ಮರ /*du:pa mara*/ ನಾ. ಒಂದು ಕಾಡು ಮರ. a forest tree. ವಾ: ದೂಪ ಮರಲಿ ನೀಲಿತರಲಿ ದೂಪದ ಕಾಯಿ ಬುಟ್ಟದೆ.

ದೂಪ[1] /*du:pa*/ ನಾ. ಪರಿಮಳಯುಕ್ತ ಸುವಾಸನಾ ದ್ರವ್ಯ, ಧೂಪದ ಮರದಿಂದ ಇದನ್ನು ಪಡೆಯಲಾಗುತ್ತದೆ, ಈ ದ್ರವ್ಯವನ್ನು ಕೆಂಡಕ್ಕೆ ಹಾಕಿದಾಗ ಪರಿಮಳಯುಕ್ತ ಹೊಗೆ ಏಳುತ್ತದೆ. block/powder of frankincense, obtained from Halmaddi (dhoop) trees, emit fragrance when burnt. **ಬೆಟ್ಟದ ಮೇಲೆ ಇರುವ ದೇವುರಿಗೆ, ಬೆಟ್ಟದಸ್ಟ್ ದೂಪ ಹಾಕಿಕೆ ಅದುಲೆ(ಗಾ).** ವಾ: ದೂಪ ಹಾಕಿದನ?

ದೂಪ[2] /*du:pa*/ ನಾ. 1. ಸಾಂಬ್ರಾಣಿ, 2. ಧೂಪ, 3. ಒಂದು ಬಗೆಯ ಸುಗಂಧ ದ್ರವ್ಯ, 4. ಲೋಬಾನ. 1. frankincense, 2. incense, 3. a fragrant substance, 4. a fragrant resin. ವಾ: ಕೂಸುನ ಮೀಸಿದ ಮೇಲೆ ದೂಪ ಹಾಕುದು.

ದೂಪದ ಬಟ್ಟಲ್ /*du:pada baṭṭali*/ ನಾ. ಹೊಗೆ ಹಾಕಲು ಬಳಸುವ ಬಟ್ಟಲು. an incense burner. ವಾ: ದೂಪದ ಬಟ್ಟಲಿ ಕೆಂಡ ತಂಬ.

ದೂಪೆ /*du:pɛ*/ ನಾವಿ. 1. ಶವಸಂಸ್ಕಾರದ ನಂತರ ಸ್ಮಶಾನದಲ್ಲಿ ಮಾಡುವ ಮಣ್ಣಿನ ದಿಬ್ಬ, 2. ಸತ್ತವರ ಬೂದಿಯನ್ನು ಮಣ್ಣಿನೊಂದಿಗೆ ಸೇರಿಸಿ ದಿಬ್ಬ ಮಾಡುವುದು. 1. a mound in the burial ground, 2. making a mound using the soil and ashes of dead person. ವಾ: ಸುದ್ದಕೆ ಮುಂದೆ ದೂಪೆ ಸೇರಿ ಮಾಡಿಸೊಕು.

ದೂಪೆಗದ್ದೆ /*du:pɛgaddɛ*/ ನಾವಿ. 1. ರುದ್ರ ಭೂಮಿ, 2. ಸ್ಮಶಾನ. 1. a graveyard, 2. a cemetery. ವಾ: ದೂಪೆ ಗದ್ದೆಗೆ ಸತ್ತವರ ತಕಂಡ್ ಹೋದು.

ದೂಪೆಹಕ್ಕಲೆ /*du:pɛhakkalɛ*/ ನಾ. ಗೋರಿ ಹತ್ತಿರ. near the tomb. ವಾ: ದೂಪೆ ಹಕ್ಕಲೆ ಸುದ್ದ ಕಳ್‌ದ ಮೇಲೆ ಯಾರು ಹೋದುಲೆ.

ದೂಮ /*du:ma*/ ನಾ. 1. ಬೋಳ, 2. ಪೆದ್ದ, 3. ಬೋದಾಳ. 1. a thick headed person, 2. a stupid, 3. a slow-witted person. ವಾ: ದೂಮ ಬರ್‌ತುಟ್ಟು.

ದೂಮಕೇತು /*du:make:tu*/ ನಾ. 1. ಸೌರವ್ಯೂಹದ ವಿಶಿಷ್ಟ ಸದಸ್ಯ ಕಾಯ, 2. ಅಲ್ಪರಾಶಿ, 3. ಉಲ್ಕೆ, 4. ಬಾಲಚುಕ್ಕೆ 5. ಅಮಂಗಳಕರವಾದುದು, 6. ಅನಿಷ್ಟಕಾರಕ. 1. a celestial body, 2. a mass of dust in the space, 3. a comet, 4. resembles a star with a tail, 5. symbol of ill-omen 6. bad luck. ವಾ: ದೂಮಕೇತ್ ಆಕಾಸಲಿ ಕಂಡತ್.

ದೂಮಕ್ಕ /*du:makka*/ ನಾ. ವ್ಯಕ್ತಿ ಹೆಸರು, ಸ್ತ್ರೀ ವಾಚಕ. feminine given name.

ದೂಮಣ್ಣ /*du:maṇṇa*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. masculine given name.

ದೂರ[1] /*du:ra*/ ಕ್ರಿವಿ. 1. ದೂರದ ಜಾಗ, 2. ದೂರದಲ್ಲಿರುವ ಸ್ಥಳ. 1. a distant place, 2. a faraway place. ವಾ: ಇನ್ನ್ ಎಸ್ಟ್ ದೂರ ಉಟ್ಟು.

ದೂರ[2] /*du:ra*/ ಪವಾ. ದೂರ? ಎಲ್ಲಿಗೆ? ಎಲ್ಲಿಗೆ. Where? ವಾ: ದೂರ ಹೋದು.

ದೂರ[3] /*du:ra*/ ನಾವಿ. ಯಾರಾದರು ಹೊರಗೆ ಹೊರಟಾಗ ಅಥವಾ ದಾರಿಯಲ್ಲಿ ಕಂಡಾಗ ಎಲ್ಲಿಗೆ ಎಂದು ನೇರವಾಗಿ ಕೇಳದೆ ದೂರ ಎಂದು ಕೇಳುವುದು ರೂಢಿ. asking where someone is going. **ಹೊರ ಹೊರಟಾಗ ಎಲ್ಲಿಗೆ ಎಂದರೆ ಅಪಶಕುನವೆಂಬ ನಂಬಿಕೆ(ನು).** ವಾ: ದೂರ ಹೊರ್‌ಟದ್ ಅಕ್ಕ?

ದೂರದೂರ /*du:radu:ra*/ ನಾವಿ. 1. ಅಂತರ, 2. ಸಮೀಪವಲ್ಲದ. 1. distance, 2. not near. ವಾ: ಈಗ ಹಳ್ಳಿ ದೂರ ದೂರ ಆಗೊಳಪ.

ದೂರುದುಗ್ಗು /*du:ruduggu*/ ನಾ. ಚಾಡಿ ಮಾತನಾಡುವುದು. to slander. ವಾ: ನಿನ್ನ ದೂರುದುಗ್ಗು ಬೇಡ.

ದೂರ್ /*du:ri*/ ನಾ. 1. ದೂರು, 2. ಆರೋಪ, 3. ಆಕ್ಷೇಪಿಸ್ಸು. 1. to complain, 2. to accuse, 3. to object. ವಾ: ನನ್ನ ಹತ್ತ್‌ರ ಯಾವ ದೂರ್ ತರ್‌ಬಡ, ನಂಗೆ ಕೇಳಿಕಾದುಲೆ. **ದೂರು** /*du:ru*/ 1. ಆರೋಪ, 2. ಆರೋಪಿಸು, 3. ದ್ವೇಷದ ಮಾತು, 4. ಹಿಂದಿನಿಂದ ಬಯ್ಯುವುದು, 5. ಹಿಂದಿನಿಂದ ಟೀಕಿಸುವುದು. 1. accuse, 2. blame, 3. words of hatred, 4. to slander, 5. defame a person/back-biting. ವಾ: ಎದ್‌ರಕೆ ಲಾಯ್ಕಲಿ ಮಾತಾಡಿ ಹಿಂದೆಂದ ದೂರುದು ಕೆಟ್ಟ ಅಬ್ಬೆಸ. **ದೂರ್ದು** /*du:rdu*/ 1. ಅಪವಾದ ಹೊರಿಸು, 2. ನಿಂದಿಸು, 3. ಆರೋಪ ಮಾಡು. 1. to accuse, 2. to blame, 3. to complain. ವಾ: ನಮ್ಮಲ್ಲೆ ತಪ್ಪ್ ಇಸಿಕಂಡ್ ಬೇರೆಯವರ್‌ನ ದೂರ್ದು ಯಾಕೆ?

ದೂಳು /*du:ḷu*/ ನಾ. ಧೂಳು. dust. ವಾ: ಬಸ್ಸ್ ದೂಳ್ ಏಳ್‌ಸಿಕಂಡ್ ಹೋತು.

ದೃಸ್ಯ /*dṛsya*/ ನಾ. 1. ದೃಶ್ಯ, 2. ಕಣ್ಣಿಗೆ ಕಾಣುವಂತಹುದು, 3. ನೋಟ, 4. ನೋಡಲು ತಕ್ಕುದು, 5. ದೃಸ್ಟಿಗೆ ಗೋಚರವಾಗುವ. 1. a scene, 2. something that is seen, 2. seeing, 4. something that is seeable, 5. visible. ವಾ: ಪಿಚ್ಚರ್‌ಲಿ ಹೊಡ್ದಾಡಿಕಂಬ ದೃಸ್ಯ ನೋಡಿಕೆ ಕುಸಿಯಾಲೆ.

ದೆಂಗ /*deŋga*/ ನಾ. 1. ಒಲೆಯ ಮೇಲಿನ ಭಾಗ, 2. ಬೆಸೆಗೆ. a shelf in the kitchen. ವಾ: ದೆಂಗಕೆ ಕರಿ ಹಿಡ್‌ದುಟು. ಪ: ಬೆಸಗೆ

ದೆಂಡ[1] /*dɛṇḍa*/ ನಾ. 1. ದಂಡ, 2. ಶಿಕ್ಷೆ, 3. ದಂಡನೆ, 4. ಜುಲ್ಮಾನೆ. 1. a fine, 2. a punishment, 3. to penalize, 4. a penalty. ವಾ: ಆ ರಸ್ತೆಲಿ ಹೋದಕೆ ದೆಂಡ ಹಾಕಿದೊ.

ದೆಂಡ[2] /*deṇḍa*/ ನಾ. ಪ್ರಯೋಜನಕಾರಿ ಅಲ್ಲದವನು. useless person. ವಾ: ಅಂವ ಬೆರೀ ದೆಂಡ, ಯಾಕೂ ಆಕಿಲೆ.

ದೆನಿ[1] /*dɛni*/ ನಾ. ಯಾಜಮಾನ. the owner/head of a family. ವಾ: ದೆನಿಗ ನಮ್ಮ ಕಡೆನೆ ಬಂದೊ.

ದೆನಿ[2] /*dɛni*/ ನಾ. ಧ್ವನಿ. voice. ವಾ: ಗದ್ದೆ ಹೂಡಿಕನ ದೆನಿ ಕೊಟ್ಟ್‌ಕೊಂಡ್ ಹೂಡುವೆ.

ದೆಯ್ಯ /*dɛyya*/ ನಾ. 1. ದೆವ್ವ, 2. ಪಿಶಾಚಿ, 3. ಪ್ರೇತಾತ್ಮ. 1. devil, 2. evil spirit, 3. a ghost. ವಾ: ಅಂವ ಯಾಕೆ ಹಂಗೆ ದೆಯ್ಯ ಕಂಡಂಗೆ ಕೂಂಗಿದ್.

ದೆವ್ವ ಬಡಿಯಕೆ /*dɛvva bɔḍiyakɛ*/ ನಾ. ಒಂದು ಬೈಗುಳ ಪದ. an expletive. ವಾ: ನಿಂಗೆ ದೆವ್ವ ಬಡಿಯಕೆ.

ದೆವ್ವ[1] /*dɛvva*/ ನಾ. 1. ದೈವ, 2. ಭೂತ. 1. deity, 2. bhuta/spirit. **ನಾಯಿ ಮಲೆಲಿ ಹಾಲಿರ್ ದೇವ್ರಿಗು ಇಲ್ಲೆ ದೆವ್ವಕು ಇಲ್ಲೆ(ಗಾ).** ವಾ: ದೆವ್ವ ಮುಗ್ದ ಮೇಲೆ ಪ್ರಸಾದ ತಕಣಿ.

ದೆವ್ವ[2] /*dɛvva*/ ನಾ. ದುಷ್ಟಶಕ್ತಿ. 1. devil, 2. evil spirit. ವಾ: ನೀ ಹಿಂಗೆ ಆಡ್, ನಿನ್ನ ದೆವ್ವ ಬುಡ್‌ಸದೆ ಇರಿಕಿಲೆ.

ದೆವ್ವಕೆ ಕೊಡ್ದು /*dɛvvakɛ koḍdu*/ ನಾ. ಎಡೆ ಬಡಿಸುವುದು, ಸನ್ಮಾನ. an annual offering made to the dead ancestors. ವಾ: ಆಟಿ ತಿಂಗಳ್‌ಲಿ ದೆವ್ವಕೆ ಸಮ್ಮನ ಕೊಟ್ಟವೆ. ಪ: ದೆವ್ವಕ್ಕೆ ಕೊಡೊದ್ – ಬೂತಗಳಿಗೆ ಆಹಾರ ಒಪ್ಪಿಸುವುದು

ದೆಸೆ /*desɛ*/ ನಾವಿ. 1. ಅದೃಷ್ಟ, 2. ವಿಧಿ, 3. ದಿಕ್ಕು. 1. luck, 2. fate, 3. direction. ವಾ: ದೆಸೆ ಸೆರಿ ಇಲ್ಲೆ ಕಂಡದೆ ಹಿಡ್ದದ್ ಮುಟ್ಟಿದೆಲ್ಲ ಹಾಳ್.

ದೇಂಗೋಡಿ /*de:ŋgo:ḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ದೇಜಪ್ಪ /*de:jappa*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. masculine given name. ಪ: ದೇಜು

ದೇಜಮ್ಮ /*de:jamma*/ ನಾ. ವ್ಯಕ್ತಿ ಹೆಸರು, ಸ್ತ್ರೀ ವಾಚಕ. feminine given name.

ದೇಣಿಗೆ /*de:ṇigɛ*/ ನಾ. 1. ವಂತಿಗೆ, 2. ಚಂದಾ, 3. ಕೊಡಬೇಕಾದ ಹಣ ಅಥವಾ ಧಾನ್ಯ, 4. ಕೊಡುಗೆ. 1. donation, 2. charity, 3. money or grain that is given away, 4. an offering/gift. ವಾ: ಅವು ದೇಣಿಗೆ ಕೊಡ್ದರ್‌ಲಿ ಎತ್ತಿದ ಕೈ.

ದೇರಕ್ಕ /*de:rakka*/ ನಾ. ವ್ಯಕ್ತಿ ಹೆಸರು, ಸ್ತ್ರೀ ವಾಚಕ. feminine given name. ಪ: ದೇರಮ್ಮ

ದೇರಣ್ಣ /*de:raṇṇa*/ ನಾ. ವ್ಯಕ್ತಿ ಹೆಸರು, ಸ್ತ್ರೀ ವಾಚಕ. feminine given name. ಪ: ದೇರಪ್ಪ

ದೇರಣ್ಣನ /*de:raṇṇana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ದೇರಪ್ಪಜ್ಜನಮನೆ /*de:rappajjanamanɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ದೇರಲ /*de:rala*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ದೇರಳ /*de:raḷa*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಎಡಮಂಗಲ ಗ್ರಾಮದ ಜಾಗ. a locality in Edamangala village in Sullia Taluk of Dakshina Kannada District.

ದೇರಾಜೆ /*de:ra:je*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಐವರ್ನಾಡು ಗ್ರಾಮದ ಜಾಗ. 1. family, 2. lineage, 3. a locality in Aivarnadu village in Sullia Taluk of Dakshina Kannada District.

ದೇರುಮಜಲು /*de:rumajalu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ದೇರೆಮಜಲು /*de:remajalu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ದೇರ್ನಡ್ಕ /*de:rnaḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಪೆರುವಾಜೆ ಗ್ರಾಮದ ಸ್ಥಳನಾಮ. a locality in Peruvaje village in Sullia Taluk of Dakshina Kannada District.

ದೇಲಂಪಾಡಿ /*de:lampa:ḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ದೇಲಪುದ /*de:lapuda*/ ನಾ. ಪಾರಿವಾಳ. pigeon. ವಾ: ದೇಲಪುದನ ಸಾಂಕಿವೆ.

ದೇವ /*de:va*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ದೇವಚಳ್ಳ ಗ್ರಾಮದ ಜಾಗ. a locality in Devacalla village in Sullia Taluk of Dakshina Kannada District.

ದೇವ ಜನ /*de:va jana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ದೇವ ಸಬೆ /*de:va sabɛ*/ ನಾ. ಹನ್ನೆರಡು ಕಂಬದ ಚಪ್ಪರದ ನಡುವಿನಲ್ಲಿ ಚಾಪೆ ಹಾಕಿ ವೀಳ್ಯ ಶಾಸ್ತ್ರಕ್ಕೆ ಇಟ್ಟ ಕ್ರಮದಂತೆ ಮಣೆ, ನಂದಾದೀಪ, ಹರಿವಾಣಗಳೆಲ್ಲವನ್ನು ಜೋಡಿಸಿದ ಮೇಲ್ಕಟ್ಟಿನಡಿಯಲ್ಲಿ ಬಣ್ಣ ಬಂಗಾರ ಬಳಸಲು ಮತ್ತು ತೆರವಿನ ಹಣ ಕೊಡುವುದಕ್ಕಾಗಿ ಕುಳಿತುಕೊಳ್ಳುವ ಎದುರುಬದರಿನ ಮೂರು ಮೂರು ಜನರ ಸಮೂಹಕ್ಕೆ ದೇವಸಭೆ ಎಂದು ಹೆಸರು. An assembly of people under the pandal made up of 12 pillars. Two interested groups, each consisting of three persons will sit in front of each other to negotiate the tax to be paid, to fix the bride price, the exchange value of gold, etc. Usually they wi. ವಾ: ಹನ್ನೆರೆಡ್ ಕಂಬದ ಚಪ್ಪರದ ನಡುಲಿ ದೇವಸಬೆ ನಡ್ದದೆ.

ದೇವಂಗೋಡಿ /*de:vaŋgo:ḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ದೇವಕಜೆ /*de:vakajɛ*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಆಲೆಟ್ಟಿ ಗ್ರಾಮದ ಜಾಗ. a locality in Aletti village in Sullia Taluk of Dakshina Kannada District.

ದೇವಗುಂಡಿ /*de:vaguṇḍi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಪೆರುವಾಜೆ ಗ್ರಾಮದ ಜಾಗ. a locality in Peruvaje village in Sullia Taluk of Dakshina Kannada District.

ದೇವಜನ /*de:vajana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ದೇವತಕ್ಕ /*de:vatakka*/ ನಾ. 1. ದೇವಸ್ಥಾನದ ಮುಖ್ಯಸ್ಥ, 2. ದೇವಸ್ಥಾನದ ಮುಕ್ತೇಶ್ವರ. 1. head of a temple, 2. head of a temple. ವಾ: ದೇವತಕ್ಕರ ಕೇಳೊಕು.

ದೇವತೆಗಳ ಪೋಕ್ /*de:vategaḷa po:kɨ*/ ನಾ. ದೇವತೆಗಳ ಓಡಾಟ. the movement of gods. ವಾ: ದೇವತೆಗಳ ಪೋಕ್ ಕಡೆ ಯಾರೂ ಹೋಕೆ ಬೊತ್ತ್.

ದೇವಪಡ್ಪು /*de:vapaḍpu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ದೇವಚಳ್ಳ ಗ್ರಾಮದ ಜಾಗ. a locality in Devacalla village in Sullia Taluk of Dakshina Kannada District.

ದೇವಪ್ಪ /*da:vappa*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. masculine given name. ಪ: ದ್ಯಾಪು

ದೇವಮ್ಮ /*de:vamma*/ ನಾ. ವ್ಯಕ್ತಿ ಹೆಸರು, ಸ್ತ್ರೀ ವಾಚಕ. feminine given name. ಪ: ದೇಮ

ದೇವರಕಾಡ್ /*de:varaka:ḍi*/ ನಾ. ದೇವರ ಕಾಡು. sacred grove. ವಾ: ದೇವರ ಕಾಡ್ ಜಾಗೆಗೆ ಹೋಕಾಗದ್.

ದೇವರಮೀನ್ /*de:varami:ni*/ ನಾ. ಒಂದು ವಿಧದ ನದಿ ಮೀನು, ಪಯಸ್ವಿನಿ ನದಿಯಲ್ಲಿ ಈ ಮೀನು ಯಥೇಚ್ಚವಾಗಿದೆ, ಇದನ್ನು ದೇವರ ಮೀನೆಂದು ಹೇಳುತ್ತಾರೆ, ಹೆಚ್ಚಾಗಿ ಈ ಮೀನನ್ನು ತಿನ್ನುವುದಿಲ್ಲ, ದೇವರ ಮೀನಾದುದರಿಂದ ಈ ಮೀನನ್ನು ತಿಂದರೆ ವಾಂತಿ ಮಾಡುತ್ತಾರೆ ಎಂಬ ನಂಬಿಕೆಯಿದೆ, ತೊಡಿಕಾನದ ಹೊಳೆಯಲ್ಲಿ ದೇವರ ಮೀನು ಇದೆ. fish dedicated to god, these fish are not eaten, it is believed that if someone eats them, he/she will suffer from indigestion and vomiting. These fish are found in Payaswini river and Thodikana river. ವಾ: ದೇವರ ಮೀನ್‌ನ ತಿಂಬೊದುಲೆ.

ದೇವರವೀಳ್ಯ /*de:varavi:ḷya*/ ನಾ. ದೇವರಿಗೆ ಗೌರವಿಸುವ ವೀಳ್ಯ, ಈ ವೀಳ್ಯವನ್ನು ವೀಳ್ಯ ಶಾಸ್ತ್ರದ ದಿನ ಕಟ್ಟುವುದಿಲ್ಲ, ಮದುವೆಯ ದಿನ ಮಂಟಪದಲ್ಲಿ ಕಟ್ಟುವುದು ರೂಢಿ. a veelya, a combination of betel leaf and areca nut, offered to the gods on the day of wedding. ವಾ: ದೇವರ ವೀಳ್ಯನ ದಾರೆ ದಿನ ಕಟ್ಟಿವೆ.

ದೇವರಗುಂಡ[1] /*de:varaguṇḍa*/ ನಾ. ಸ್ಥಳನಾಮ. Devaragunda, a place.

ದೇವರಗುಂಡ[2] /*de:varaguṇḍa*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮಂಡೆಕೋಲು ಗ್ರಾಮದ ಜಾಗ. 1. family, 2. lineage, 3. a locality in Mandekolu village in Sullia Taluk of Dakshina Kannada District.

ದೇವರಗುಂಡಿ /*de:varaguṇḍi*/ ನಾ. ದೇವರು ಬಂದು ಸ್ನಾನ ಮಾಡುವ ಜಾಗ. a sacred pond, it is assumed that gods have bath there.

ದೇವರಗುಡ್ಡೆ /*de:varaguḍḍe*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಹರಿಹರ ಪಲ್ಲತಡ್ಕ ಗ್ರಾಮದ ಜಾಗ. a locality in Harihara Pallatadka village in Sullia Taluk of Dakshina Kannada District.

ದೇವರಬಲಿ /*de:varabali*/ ನಾ. ಜಾತ್ರೋತ್ಸವದಲ್ಲಿ ದೇವರ ವಿಗ್ರಹವನ್ನು ಪುರೋಹಿತರು ತಲೆಯಲ್ಲಿ ಹೊತ್ತು ದೇವಳದ ಒಳಾಂಗಣದಲ್ಲಿ ಸುತ್ತು ಬರುವುದು. a ritual of priests carrying the portable idols of god on their head and circumambulating the temple premises during the festival. ವಾ: ಜಾತ್ರೆ, ಉತ್ಸವಲಿ ದೇವರಬಲಿ ನಡ್‌ದದೆ.

ದೇವರಹಳ್ಳಿ /*de:varahaḷḷi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಏನೆಕಲ್ಲು ಗ್ರಾಮದ ಜಾಗ. a locality in Enekallu village in Sullia Taluk of Dakshina Kannada District.

ದೇವರುಳಿಯ /*de:varuḷiya*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಹರಿಹರ ಪಲ್ಲತಡ್ಕ ಗ್ರಾಮದ ಜಾಗ. a locality in Harihara Pallatadka village in Sullia Taluk of Dakshina Kannada District.

ದೇವರ್‌ಗೇ ಗೊತ್ತ್ /*De:varige: gotti*/ ನಾವಿ. ಕಷ್ಟವನ್ನು ನಿಭಾಯಿಸಲು ಸಾಧ್ಯವಾಗದ ಸಂದರ್ಭ. an unavoidable difficult situation. ವಾ: ಯಾರ್ ತಕಂಡದೋ ಏನೊ ದೇವರಿಗೇ ಗೊತ್ತ್.

ದೇವಲೋಕ /*de:valo:ka*/ ನಾ. 1. ದೇವಲೋಕ, 2. ಅಮರಲೋಕ. 1. heaven, 2. paradise. ವಾ: ದೇವಲೋಕದ ರಾಜ ಇಂದ್ರ.

ದೇವಸ್ಯ /*de:vasya*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮುಪ್ಪೇರ್ಯ ಗ್ರಾಮದ ಜಾಗ. 1. family, 2. lineage, 3. a locality in Mupperia village in Sullia Taluk of Dakshina Kannada District.

ದೇವಾ /*de:va:*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ದೇವಾಯಿರ /*de:va:yira*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ದೇವಿ /*de:vi*/ ನಾ. 1. ದೇವಿ, 2. ಹೆಣ್ಣು ದೇವತೆ, 3. ದೇವತಾಸ್ತ್ರೀ, 4. ದೇವತೆ. 1. a goddess, 2. a female deity, 3. a female incarnation of a god, 4. a female god. ವಾ: ಕಾಳಿಕಾದೇವಿ ಕಲ್ಲ್‌ಗೆ ಪೂಜೆ ಮಾಡ್ತು.

ದೇವ್ತೆ /*de:vitɛ*/ ನಾ. 1. ದೇವತೆ. a goddess. ವಾ: ದೇವತೆಗ ಓಡಾಡ್ತಿದ್ದ ಜಾಗೆಗಡ ಇದ್.

ದೇವ್‌ದಾರ್ ಮರ /*de:vida:ri mara*/ ನಾ. 1. ದೇವದಾರ, 2. ಪೈನೇಸಿ ಕುಟುಂಬಕ್ಕೆ ಸೇರಿದ ಒಂದು ಕಾಡು ಮರ, ದೇವದಾರು ಎಂದರೆ ಸಂಸ್ಕೃತದಲ್ಲಿ ದೇವರ ಮರ ಎಂದರ್ಥ, ದೇವದಾರು ಮರ ದೀರ್ಘಾಯು, 700 ರಿಂದ 800 ವರ್ಷಗಳು ಬದುಕಿರುವ ಮರಗಳ ದಾಖಲೆಗಳುಂಟು, ಕಡು ಹಸಿರು ಅಥವಾ ಬೆಳ್ಳಿನೀಲಿ ಬಣ್ಣದ ಎಲೆಗಳು ಗುಂಪುಗುಂಪಾಗಿ ಕೊಂಬೆ -ರೆಂಬೆಗಳ ತುದಿಗಳಲ್ಲಿ ಇಳಿಬಿದ್ದಿರು. 1. cedar tree, 2. a coniferous tree belonging to the family Pinaceae, Devadaru means god in Sanskrit. There are instances of this tree surviving upto 700-800 years. ವಾ: ದೇವದಾರ್ ಮರ ಸುಮಾರ್ ವರ್‌ಸ ಇದ್ದದೆ, ಇದರ ಕೆತ್ತೆನ ಮೊದ್ದಿಗೆ ಬಳ್ಸುವೆ.

ದೇವ್‌ರ ಕೋಂಬರೆ ಕಟ್ಟಳೆ /*de:vira ko:mbarɛ kaṭṭaḷɛ*/ ನಾ. ದೇವರ ದೀಪವಿಡುವ ಕೊಠಡಿಗಿರಿಸಿರುವ ಕಟ್ಟಳೆ. a practice/a rule associated with a room where the lamp that is usually lit before the god is kept. ವಾ: ದೇವ್ರು ಕೋಂಬರೆ ಕಟ್ಟಳೆಗೆ ಅರ್‌ಸಣ ಕುಂಕುಮ ಹಾಕಿಸೊಕು.

ದೇವ್‌ರ ಪಟ /*de:vira paṭa*/ ನಾ. ದೇವರ ಚಿತ್ರ. picture/image of god. ವಾ: ಅಡ್ಡ ಬಿದ್ದ್ ದೇವ್ರ ಪಟಕೆ ನಮಸ್ಕಾರ ಮಾಡಿಕ.

ದೇವ್‌ರಿಗೆ ಅಡ್ಡ ಬೀಳ್ /*de:virigɛ aḍḍa bi:ḷi*/ ನಾ. 1. ದೇವರಿಗೆ ನಮಸ್ಕರಿಸಿ, 2. ಅಡ್ಡ ಬಿದ್ದು. 1. showing reverence to god, 2. to prostrate before god. ವಾ: ದೇವ್ರಿಗೆ ಅಡ್ಡ ಬಿದ್ದ್ ಬೇಡಿಕಣೊಕು.

ದೇವ್‌ರ್ /*de:viri*/ ನಾ. 1. ದೇವರು, 2. ದೇವತೆಗಳು. 1. god, 2. gods. **ದೇವ್‌ರ್‌ನಾರ್ ಮೆಚ್‌ಸಕ್ ಮೊನ್ಸರ ಮೆಚ್ಚಿಸಿಕಾಕಿಲ್ಲೆ(ನು).** ವಾ: ದೇವ್‌ರ್ ನಂಬಿದವ್‌ರ ಎಂದೂ ಕೈಬುಡ್ದುಲೆ.

ದೇಶಕೋಡಿ /*de:śako:ḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ದೇಸ /*de:sa*/ ನಾ. 1. ದೇಶ, 2. ನಾಡು, 3. ರಾಷ್ಟ್ರ. 1. a country, 2. a homeland, 3. nation. **ದೇಸ ತಿರ್ಗೊಕು ಬಾಸೆ ಕಲಿಯೊಕು(ಗಾ). ದೇಸ ತಿರ್ಗೊಕು ಕೋಸ ಓದೊಕು(ನು).** ವಾ: ಆಟ ಆಡಿ ಗೆದ್ದ್ ದೇಸಕೆ ಹೆಸ್ರ್ ತಂದವೆ.

ದೇಸಾಂತ್ರ /*de:sa:ntra*/ ನಾ. ದೇಶ ಬಿಟ್ಟು ಬೇರೆ ದೇಶಕ್ಕೆ ಹೋಗುವುದು. to leave one's country. **ಅತ್ತೆ ದೇಸಾಂತ್ರ, ಸೊಸೆ ಸ್ವಾತಂತ್ರ(ಗಾ). ದೇಸಾಂತ್ರ ಹೋದ್ರೂ ಸ್ವತಂತ್ರ ಆಗಿರೊಕು(ನು).** ವಾ: ಅಪ್ಪ ಬೇಜಾರ್‌ಲಿ ದೇಸಾಂತ್ರ ಹೋಗೊಳೊ.

ದೇಸಾಂತ್ರಿ /*de:sa:ntri*/ ನಾ. ಪರವೂರಿಂದ ಬಂದವನು. an outsider. ವಾ: ಅಂವ ದೇಸಾಂತ್ರಿಯಂವ.

ದೇಸೆ /*de:sɛ*/ ನಾ. 1. ಆರತಕ್ಷತೆ, 2. ಸೇಸೆ, 3. ಅಕ್ಕಿ ಕಾಳು ತಲೆಯ ಮೇಲೆ ಹಾಕುವುದು. 1. a custom, to put the rice mixed with turmeric powder, 2. to put rice mixed with turmeric, as a blessing, 3. to put the rice mixed with turmeric powder on the head of the couple as a blessing. ವಾ: ಮೊದುವೆಲಿ ದೇಸೆ ಹಾಕುದು ಪೊದ್ಧತಿ.

ದೇಸ್ತಾನ /*de:sta:na*/ ನಾ. ದೇವಸ್ಥಾನ. temple. **ದೇಸ್ತಾನದ ಕಲಶಲಿ ಕುದ್ದರೂ ಕಾಗೆ ಗರುಡ ಆಕಿಲೆ(ಗಾ). ದೇಸ್ತಾನ ಮೇಲೆ ಕಲಶ ಕೆಳಗೆ – ಗೇರ್ ಹಣ್ಣ್ ಮತ್ತೆ ಬೀಜ(ಒ).**

ದೇಹ /*de:ha*/ ನಾ. 1. ದೇಹ, 2. ಶರೀರ, 3. ಜೀವಿಯ ಪೂರ್ತಿ ಭೌತ ಸಂರಚನೆ. 1. body, 2. physical structure of an individual, 3. anatomy. ವಾ: ದೇಹಕೆ ಬಾರಿ ಸೋಲು ಇಂದ್.

ದೈ /*dai*/ ನಾ. ಗಿಡ. a plant. **ದೈ ಇರ್ಕನ ಬಗ್ಗದ್ದ್ ಮರ ಆಕನ ಬಗ್ಗಿಕ್ಕಿಲ್ಲೆ(ಗಾ).** ವಾ: ಮೊದ್ದ್‌ನ ದೈನ ಕಿತ್ತ್ ಹಾಕ್‌ಬಡ.

ದೈಕ /*daika*/ ನಾ. ಉದ್ದ ಇರುವವನಿಗೆ ಹೇಳುವ ಪದ. someone who is tall. ವಾ: ಅಂವ ಎಸ್ಟ್ ದೈಕ ಅಲ.

ದೈಮರ /*daimara*/ ನಾ. (ಮರವನ್ನು ಹೋಲುವ) ಸಣ್ಣ ಗಿಡ. a small plant. ವಾ: ದೈಮರಲಿ ಹಣ್ಣ್ ಕೊಯ್ಯಕೆ ಲಾಯ್‌ಕ್.

ದೈರ /*daira*/ ನಾ. 1. ಧೈರ್ಯ, 2. ಎದೆಗಾರಿಕೆ, 3. ಕೆಚ್ಚು, 4. ದಿಟ್ಟತನ. 1. courage, 2. valour, 3. intrepidity, 4. gallantry. ವಾ: ದೈರ ಉಟ್ಟು ಗೂಡೆಗೆ.

ದೈರ್ಯ /*dairya*/ ನಾ. ಧೈರ್ಯ. courage. ವಾ: ಬಜ್ಜ ಬಾಕನ ದೈರ್ಯಗೆಡಿಕಾದ್.

ದೈವ /*daiva*/ ನಾ. 1. ದೈವ, 2. ದೇವರು, 3. ದಿವ್ಯ ಶಕ್ತಿ. 1. a deity, 2. a god, 3. a divine spirit. ವಾ: ದೈವ ಎಲ್ಲೊವ್ಕು ಒಂದೇ.

ದೊಂಗುಳ /*doŋguḷa*/ ನಾ. ಎಪ. 1. ಅಂಗಿ ಹಾಕದೆ ಇರುವವರಿಗೆ ಹೇಳುವ ಪದ, 2. ಸಡಿಲವಾದ ಬಟ್ಟೆ ಧರಿಸುವವ. 1. someone who doesn't wear a shirt, 2. someone who wears loose clothes. ವಾ: ದೊಂಗುಳ ಬಾತ್. ಪ: ದೋಂಗ್ಲಾಸ್

ದೊಂಡೆ /*doṇḍɛ*/ ನಾ. ಗಂಟಲು. throat. **ಅಂಡೆ ಬಾಯಿ ಮುಚ್ಚಕ್ ದೊಂಡೆ ಬಾಯಿ ಮುಚ್ಚಿಕೆ ಆದ್ಲೆ(ಗಾ).** ವಾ: ದೊಂಡೆ ಬಾರಿ ಬೇನೆ ಆದೆ. **ದೊಂಡೆ ಕಟ್ಟುದು** /*doṇḍɛ kaṭṭudu*/ ಗಂಟಲು ಕಟ್ಟುವುದು. blocked throat. ವಾ: ಯಾಕೊ ಮಾತಾಡಿಕನ ದೊಂಡೆ ಕಟ್ಟುದು.

ದೊಂಡೆ ಒಡ್ತ್[1] /*doṇḍɛ oḍtɨ*/ ನಾವಿ. ಗಂಟಲು ಒಡೆದಿದೆ. voice crack, voice mutation. ವಾ: ಬೊಬ್ಬೆ ಹಾಕಿ ಅದರ ದೊಂಡೆ ಒಡ್ತ್. ಪ: ದೊಂಡೆಕಟ್ಟಿಕೆ – ಗಂಟಲು ಕಟ್ಟಲಿ

ದೊಂಡೆ ಒಡ್ತ್[2] /*doṇḍɛ oḍtɨ*/ ನಾವಿ. ಧ್ವನಿಯೇರಿಸಿ ಮಾತನಾಡುವುದು. to talk by raising one's voice. ವಾ: ಅಂವ ಬಾರೀ ದೊಂಡೆ ಒಡ್ದ್ ಮಾತಾಡ್ತ್, ಏನ್ ಗಡ?

ದೊಂಡೆಕಟ್ಟಿಕೆ /*doṇḍɛkaṭṭikɛ*/ ನಾವಿ. ಗಂಟಲು ಕಟ್ಟು, ಬೈಗುಳ ಪದ. blocked throat, used as an expletive. ವಾ: ನಿನ್ನ ದೊಂಡೆ ಕಟ್ಟಿಕೆ.

ದೊಂಡೆಕಟ್ಟಿಹೋಕ್ /*doṇḍɛkaṭṭiho:kɨ*/ ನಾವಿ. ಮಾತಾಡದೆ ಇರುವಂತಾಗಲಿಯೆಂದು ಶಾಪ ಹಾಕುವುದು. cursing someone that he/she should never be able to speak. **ನಿನ್ನ ದೊಂಡೆ ಕಟ್ಟಿ ಹೋಗಲಿ(ನು).** ವಾ: ಬಾರಿ ಉರಿ ಬಂದಿಯ ನಿನ್ನ ದೊಂಡೆ ಕಟ್ಟಿ ಹೋಕೆ.

ದೊಂಡೆತೊರ್ಸುದು[1] /*doṇḍɛtɔrsudu*/ ಕ್ರಿ. ಗಂಟಲು ತುರಿಸುವುದು. ಕೆಸು, ಸುವರ್ಣಗೆಡ್ಡೆ ಇತ್ಯಾದಿಗಳನ್ನು ಪದಾರ್ಥ ಮಾಡಿ ತಿಂದರೆ ಕೆಲವರಿಗೆ ಗಂಟಲು ತುರಿಸುತ್ತದೆ. itching sensation in the throat, usually after eating a dish prepared by Colocasia or Elephant Foot Yam. ವಾ: ಕೆಸ ತಿಂದರೆ ಒಮ್ಮೊಮ್ಮೆ ದೊಂಡೆ ತೊರ್ಸುದು.

ದೊಂಡೆತೊರ್ಸುದು[2] /*doṇḍɛtɔrsudu*/ ಕ್ರಿವಿ. 1. ಅನಗತ್ಯವಾಗಿ ವಿರೋಧ ಮಾತನಾಡುವುದು, 2. ಜಗಳ ಕಾಯುವ ಸಂದರ್ಭ, 3. ಜಗಳವಾಡು. 1. to oppose unnecessarily, 2. to provoke a fight/quarrel 3. to fight.

ದೊಂಡೆ ಹಿಂಚಿಕೆ /*doṇḍɛ hiŋcikɛ*/ ನಾವಿ. ಗಂಟಲು ಹಿಂಡು (ಬೈಗುಳ ಪದ). squeezing one's throat, used as an expletive. ವಾ: ನಿನ್ನ ದೊಂಡೆ ಹಿಂಚಿಕೆತ ಯಾಕೆ ಬಯ್ದಿಯ?

ದೊಂಡೆಗೆ /*doṇḍɛgɛ*/ ನಾವಿ. ಗಂಟಲಿಗೆ. to the throat. ವಾ: ದೊಂಡೆಗೆ ಮೀನ್ ಮುಳ್ಳು ಹೆಟ್ಟಿದ್ ಕಂಡದೆ.

ದೊಂಡೆಪಸೆ /*doṇḍɛpasɛ*/ ನಾವಿ. ಗಂಟಲಿನಲ್ಲಿರುವ ನೀರು. dried throat. ವಾ: ಬಿಸ್‌ಲ್‌ಗೆ ದೊಂಡೆಪಸೆ ಆರಿ ಹೋತ್.

ದೊಂದಿ /*dondi*/ ನಾ. 1. ದೀವಟಿಗೆ, 2. ಬೆಂಕಿಯ ಸೂಟೆ,3. ದೀಟಿಗೆ(ತು). 1. a lamp, 2 .a beacon, 3. a torch. ವಾ: ಈ ಕತ್ತಲೆಲಿ ದೊಂದಿ ಹಿಡ್ದ್ ಹೊರೆಗೆ ಎಲ್ಲಿಗೆ ಹೊರ್‌ಟದ್?

ದೊಂಬ /*domba*/ ನಾ. 1. ದೊಂಬರಾಟ ಮಾಡುವವನು, 2. ವ್ಯಕ್ತಿನಾಮ ಪುರುಷ. 1. a man from Domba community who specialises in acrobatics, 2. a given name of a man. **ಅಗಸನ ಕತ್ತೆನ ದೊಂಬಂಗೆ ದಾನ ಮಾಡ್ತ್(ಗಾ).** ವಾ: ದೊಂಬಂಗೆ ದೊಂಬರಾಟನೇ ಹೊಟ್ಟೆಪಾಡ್.

ದೊಂಬಿ ಎದ್ರ್ /*dombi ɛdrɨ*/ ಕ್ರಿವಿ. 1. ದೊಂಬಿ ಏಳು, 2. ಗಲಾಟೆ. 1. to cause a riot, 2. an opposition/a revolt. ವಾ: ಸುಮ್ಮ ಸುಮ್ಮನೆ ಕಾರಣ ಇಲ್ಲದೆ ದೊಂಬಿ ಎದ್ರುವಂಗೆ ಮಾಡ್‌ದು.

ದೊಂಬೆ /*dombɛ*/ ನಾ. ದಂಬೆ. split bamboo.

ದೊಗಲೆ /*dogalɛ*/ ನಾವಿ. 1. ಅಳ್ಳಕ, 2. ಬಿಗಿಯಲ್ಲದ. 1. loose, 2. not tight. ವಾ: ಲಾಚರಾಗಿ ಜಂಪರ್ ದೊಗಲೆ ಆಗೋತ್. **ದೊಗಲ್** /*dogalɨ*/ ವಾ: ದೊಗಲ್ ಪ್ಯಾಂಟ್ ಹಾಕುದು ಈಗನ ಪ್ಯಾಸನ್. **ದೊಗ್ಗುಳೆ-ದೊಗಳೆ** /*dogguḷɛ-dogaḷɛ*/ ವಾ: ದೊಗ್ಗುಳೆ ಸರ್‌ಟ್ ಹಾಕಿರೆ ನೋಡಿಕೆ ಲಾಯ್ಕಿಲ್ಲೆ.

ದೊಗ್ಗು /*doggu*/ ನಾ. ಹುಡಿ ಹುಲ್ಲು. powdered grass/ grass dust. ವಾ: ದೊಗ್ಗುನ ಒಂದ್ ಕಡೆಗೆ ಗುಡ್ಡೆ ಹಾಕಿರಾತ್. ಪ: ನೊಕ್ಕೆ(ತು)

ದೊಗ್ಗೊನಲೆ /*doggonalɛ*/ ನಾ. ಒಕ್ಕಲಿನ ಭತ್ತ ಮತ್ತು ಹುಡಿ ಹುಲ್ಲನ್ನು ಬೇರ್ಪಡಿಸಲು ಉಪಯೋಗಿಸುವ ಜರಡಿ. a

sieve to separate paddy from husk. ವಾ: ದೊಗ್ಗೊನಲೆಲಿ ವಂಚೊಕು.

ದೊಟ್ಟೆ /*doṭṭɛ*/ ನಾ. ದೊಡ್ಡದಾದ ಹೊಟ್ಟೆ. pot belly. ವಾ: ಅಂವ ದೊಟ್ಟೆ ಹೊತ್ಕಂಡ್ ಬಾತ್.

ದೊಡಪ /*doḍapa*/ ಸನಾ. 1. ದೊಡ್ಡಪ್ಪ 2. ತಂದೆಯ ಅಣ್ಣ. an elder brother of one's father. ವಾ: ದೊಡಪ ಬಂದೊಳೊ.

ದೊಡಮ /*doḍama*/ ಸನಾ. 1. ದೊಡ್ಡಮ್ಮ, 2. ತಾಯಿಯ ಅಕ್ಕ. an elder sister of one's mother. ವಾ: ದೊಡಮ ಮನೆಗೆ ಹೋದೊಗಡ.

ದೊಡಾಂತ /*doḍa:nta*/ ಅ. ಜೋರಾಗಿ ಬೀಳುವ ಸದ್ದಿನ ಅನುಕರಣವಾಚಿ. an onomatopoeic expression for loud sound. ವಾ: ಹಣ್ಸ್‌ನಕಾಯಿ ಡೊಡಾಂತ ಬೀತ್.

ದೊಡ್ಡ /*doḍḍa*/ ನಾ. 1. ದೊಡ್ಡ, 2. ಗಾತ್ರದಲ್ಲಿ ಹಿರಿದಾದ, 3. ಹೆಚ್ಚು ಗಾತ್ರದ. 1. big 2 big in size, 3. large. ವಾ: ಆಲ ಬಾರಿ ದೊಡ್ಡ ಮರ ಆದೆ.

ದೊಡ್ಡ ಕಟ್ಟದ ಕೋಳಿ /*doḍḍa kaṭṭada ko:ḷi*/ ನಾವಿ. ಜಾತ್ರೋತ್ಸವ ಕಳೆದ ನಂತರ ಆಗುವ ದೊಡ್ಡ ಕೋಳಿ ಅಂಕದ ಕೋಳಿ, ಈಗಾಗಲೇ ಬೇರೆಬೇರೆ ಅಂಕಗಳಲ್ಲಿ ಗೆದ್ದ ಕೋಳಿ. 1. a gamecock, a rooster trained in cockfighting, 2. a cock that has won in other cockpits. ವಾ: ಅದ್ ದೊಡ್ಡ ಕಟ್ಟದ ಕೋಳಿ.

ದೊಡ್ಡ ಕಣ್ಣ್ ಒನಲೆ /*doḍḍa kaṇṇi onalɛ*/ ನಾವಿ. 1. ದೊಡ್ಡ ತೂತಿನ ವಂದರಿ, 2. ಸಾರಣಿಗೆ, 3. ಜರಡಿ. 1. a sieve with wide holes, 2. a strainer, 3. a sifter. ವಾ: ದೊಡ್ಡ ಕಣ್ಣ್ ಒನಲೆ ಇದ್ದರೆ ಒಳ್ಳದಿತ್. ಪ: ಅರಿಪೆ/ ಗಾಳಿಪೆ(ತು)

ದೊಡ್ಡ ಚೆರ್ಗ್ /*doḍḍa cergi*/ ನಾವಿ. ಒಂದು ವಿಧದ ನದಿ ಮೀನು. a kind of fish found in river/ a freshwater fish. ವಾ: ದೊಡ್ಡ ಚೆರ್ಗ್ ಗೈಪುಗೆ ಲಾಯ್ಕ್. ಪ: ತರುಮೀನ್(ತು)

ದೊಡ್ಡ ಹರ್ವೆ /*doḍḍa harvɛ*/ ನಾವಿ. ದಂಟಿನ ಸೊಪ್ಪು. amaranthus.

ದೊಡ್ಡಂವ /*doḍḍanva*/ ನಾ. 1. ದೊಡ್ಡವನು, 2. ಹಿರಿಯ ಮಗ. 1. elder son, 2. the eldest son. ವಾ: ದೊಡ್ಡಂವ ಕೆಲ್ಸಲುಟ್ಟು, ಸಣ್ಣಂವಂದ್ ಓದಿ ಆತ್ಲೆ.

ದೊಡ್ಡಕಜೆ /*doḍḍakajɛ*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ದೇವಚಳ್ಳ ಗ್ರಾಮದ ಜಾಗ. a locality in Devacalla village in Sullia Taluk of Dakshina Kannada District.

ದೊಡ್ಡಕಾಯಿ ಮರ /*doḍḍaka:yi mara*/ ನಾವಿ. ಹಳೆಯ ತೆಂಗಿನ ಮರ. an old coconut tree. ವಾ: ದೊಡ್ಡಕಾಯಿ ಮರಲಿ ತುಂಬ ಕಾಯಿ ಹಿಡ್‌ದದೆ.

ದೊಡ್ಡಕುಮೇರಿ /*doḍḍakume:ri*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ತೊಡಿಕಾನ ಗ್ರಾಮದ ಜಾಗ. a locality in Todikana village in Sullia Taluk of Dakshina Kannada District.

ದೊಡ್ಡಕೆರೆ /*doḍḍakɛrɛ*/ ನಾವಿ. 1. ದೊಡ್ಡದಾದ ಕೆರೆ, 2. ಗಾತ್ರದಲ್ಲಿ ಹಿರಿದಾದ ಕೆರೆ. 1. a large lake, 2. the largest lake. ವಾ: ದೊಡ್ಡಕೆರೆ ಅಲ ಅದ್ಕೆ ಮೀನ್ ಮರಿಗಳ ಬುಟ್ಟೊಳೊ.

ದೊಡ್ಡಡ್ಕ /*doḍḍaḍka*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ತೊಡಿಕಾನ ಗ್ರಾಮದ ಜಾಗ. 1. family, 2. lineage, 3. a locality in Todikana village in Sullia Taluk of Dakshina Kannada District.

ದೊಡ್ಡಣ್ಣ /*doḍḍaṇṇa*/ ನಾ. 1. ಹಿರಿಯಣ್ಣ, 2. ವ್ಯಕ್ತಿನಾಮ ಪುರುಷ. 1. elder brother, 2. name of a person. ವಾ: ದೊಡ್ಡಣ್ಣ ಇಸ್ಟ್ ಹೊತ್ತಾದರೂ ಯಾಕೆ ಬಾತ್ಲೆ.

ದೊಡ್ಡತೋಟ /*doḍḍato:ṭa*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಮರಪಡ್ನೂರು ಗ್ರಾಮದ ಜಾಗ. a locality in Amarapadnuru village in Sullia Taluk of Dakshina Kannada District.

ದೊಡ್ಡದಾಕನ /*doḍḍada:kana*/ ನಾ. 1. ದೊಡ್ಡವರಾಗುವುದು, 2. ಜೀವದಲ್ಲಿ ಬೆಳೆಯುವುದು, 3. ಅನುಕೂಲವಾಗುವುದು. 1. to grow (as in years), 2. to grow big, 3. to become rich. ವಾ: ದೊಡ್ಡದಾಕನ ಮೊನ್ಸರ ಕಣ್ಣ್ ಕಾಂಬೊದ್ಲೆ.

ದೊಡ್ಡದಾಗುಟು /*doḍḍavaḷa:guṭu*/ ನಾವಿ. ಮೈ ನೆರೆದಿದ್ದಾಳೆ. attained puberty. ವಾ: ಆ ಗೂಡೆ ದೊಡ್ಡದಾಗುಟು.

ದೊಡ್ಡದ್ /*doḍḍadi*/ ನಾ. ದೊಡ್ಡದು. big. ವಾ: ಬಾಳೆದೈ ದೊಡ್ಡದ್ ಕಿಳ್ಳಿಕಾದ್ಲೆ.

ದೊಡ್ಡಮನೆ /*doḍḍamanɛ*/ ನಾ. 1. ಐನ್ ಮನೆ, 2. ಮೂಲ ಮನೆ. 1. ancestral homes of the native people of Kodagu, Ain mane, 2. ancestral home. ವಾ: ದೊಡ್ಡಮನೆಲಿ ಹರಿಸೇವೆ ಮಾಡ್ದು.

ದೊಡ್ಡವರ /*doḍḍavr*/ ನಾ. 1. ಹಿರಿತನದಲ್ಲಿವವರು, 2. ಶ್ರೀಮಂತಿಕೆಯಲ್ಲಿರುವವರು, 3. ಎಲ್ಲಾ ತಿಳಿದಿದೆಯೆಂದು ವಾದಿಸುವವರು. 1. elderly, 2. rich, 3. people who pretend to know everything. **ದೊಡ್ಡವ್‌ರ ಸಣ್‌ತನ(ನು).** ವಾ: ದೊಡ್ಡವರ ಕಾಲ್ ಹಿಡ್‌ದ್ ಆಸೀರ್ವಾದ ತಕಣಿಕೆ ಮಕ್ಕಳಿಗೆ ಕಲ್‌ಸೊಕು.

ದೊಡ್ಡವಾದೊ /*doḍḍava:dɔ*/ ನಾವಿ. 1. ಬೆಳೆದರು, 2. ದೊಡ್ಡವರಾದರು. 1. grown, 2. attained maturity. ವಾ: ಮಕ್ಕ ಬೆಳ್ದ್ ದೊಡ್ಡವಾದೊ.

ದೊಡ್ಡವು /*doḍḍavu*/ ನಾ. ದೊಡ್ಡಮ್ಮ. elder sister of one's mother. ವಾ: ದೊಡ್ಡವ ಇಲ್ಲೆ ಕುದ್ಕಣಿ ಬನ್ನೆ ಈಗ.

ದೊಡ್ಡವ್‌ರೆ /*doḍḍavɨrɛ*/ ನಾ. 1. ಅವರೆಕಾಯಿ, 2. ಅವರೆ ಕಾಳು. hyacinth beans. ವಾ: ಹೊತಾರೆಗೆ ದೊಡ್ಡವ್‌ರೆ ಇಲಾತ್ ಗೆಂಡೆ ಹಾಕಿ ಗಟ್ಟಿಯಾಗಿ ಗೈಪು ಮಾಡ್ಡ್.

ದೊಡ್ಡವ್ವ /*doḍḍavva*/ ನಾ. ದೊಡ್ಡಮ್ಮ. elder sister of one's mother. ವಾ: ದೊಡ್ಡವ್ವಂಗೆ ಉಸಾರಿಲ್ಲೆಗಡ.

ದೊಡ್ಡಸೊಪ್ಪಿನ ಮರ /*doḍḍasoppɨna mara*/ ನಾ. ಒಂದು ವಿಧದ ಕಾಡುಮರ. a forest tree. ವಾ: ದೊಡ್ಡಸೊಪ್ಪ್‌ನ ಮರಕೆ ಹತ್ತುವನ?

ದೊಡ್ಡಸ್ತಿಕೆ /*doḍḍastikɛ*/ ನಾ. ದೊಡ್ಡ ವ್ಯಕ್ತಿಗಳಂತೆ ವರ್ತಿಸುವುದು. excessive vanity. ವಾ: ಮೊನ್ಸಂಗೆ ದೊಡ್ಡಸ್ತಿಕೆ ಬಾಕಾದ್.

ದೊಡ್ಡಾಟ /*doḍḍa:ṭa*/ ನಾ. ಒಂದು ವಿಧದ ಯಕ್ಷಗಾನ, ಇದು ಜನಪದ ಕಲಾಪ್ರಕಾರಕ್ಕೆ ಸೇರಿದೆ, ಬಯಲು ಸೀಮೆಯಲ್ಲಿ ದೊಡ್ಡಾಟ ಆಡುತ್ತಾರೆ. a form of Yakshagana, a folk drama performed in the north eastern part of Karnataka. ವಾ: ದೊಡ್ಡಾಟಲಿ ರಾವಣಂಗೆ ಹತ್ತ್‌ತಲೆ ಇಸಿದ್ ಕೊಣ್ದವೆ.

ದೊಡ್ಡಿಕಾಡು /*doḍḍika:ḍu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ದೇವಚಳ್ಳ ಗ್ರಾಮದ ಜಾಗ. a locality in Devacalla village in Sullia Taluk of Dakshina Kannada District.

ದೊಡ್ಡಿತ್ /*doḍḍitɨ*/ ನಾ. 1. ದೊಡ್ಡದು, 2. ಗಾತ್ರದಲ್ಲಿ ಹಿರಿದಾದ. 1. large in size, 2. bigger in size. ವಾ: ಹಲ್ಸ್‌ನಕಾಯಿ ದೊಡ್ಡಿತ್.

ದೊಡ್ಡಿದಾತ್ /*doḍḍida:tɨ*/ ನಾ. (ದೊಡ್ಡವಳಾಗಿ) ಮಗಳು ಪ್ರಾಯಕ್ಕೆ ಬಂದಾಗ ಹೇಳುವ ಪದ. a term used to describe that one's daughter has attained puberty. ವಾ: ಮಗ್ಳ್ ದೊಡ್ಡಿದಾತ್.

ದೊಡ್ಡಿಹಿತ್ಲು /*doḍḍʻihitlu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ದೊಡ್ಡೀರ /*doḍḍi:ra*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ದೊಡ್ಡೇರಿ /*doḍḍe:ri*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಜ್ಜಾವರ ಗ್ರಾಮದ ಜಾಗ. a locality in Ajjavara village in Sullia Taluk of Dakshina Kannada District.

ದೊಡ್ಡೊಳಗೆ /*doḍḍoḷagɛ*/ ನಾ. 1. ದೊಡ್ಡ ಮನೆಯ ಮಧ್ಯದ ವಿಶಾಲವಾದ ಕೋಣೆ, 2. ಚಾವಡಿ. 1. a courtyard, 2. raised platform in front of a house. ವಾ: ದೊಡ್ಡೊಳಗೆ ದೊಡ್ಡವ್‌ರ ಮಾತ್ ಕೇಳ್ದೆ.

ದೊಡ್‌ದಾಗಿರೊಕು /*doḍɨda:giroku*/ ನಾವಿ. ದೊಡ್ಡದಾಗಿರಬೇಕು. must have grown bigger. ವಾ: ಬಾಳೆಲೆ ದೊಡ್ ದಾಗಿರೊಕು.

ದೊಡ್‌ದ್ /*doḍɨdɨ*/ ನಾ. ದೊಡ್ಡದು. large in size. ವಾ: ದೊಡ್‌ದ್ ಗಂಜಿ ಬೇಕಾದೆ.

ದೊಡ್‌ಪತ್ರೆ /*doḍɨpatrɛ*/ ನಾ. 1. ದೀವಟಿಗೆ, 2. ಬೆಂಕಿಯ ಸೂಟೆ, 3. ದೀಟಿಗೆ(ತು). 1. a torch, 2. a fire brand, 3. a beacon. ವಾ: ದೊಡ್ಡ ಪತ್ರೆ ರಸಕೆ ಅರ್‌ಸಣ ಹೊಡಿ ಹಾಕಿ ಮೂರ್ ದಿನ ಹೊತಾರೆ ಕುಡ್ಯಕು, ಮೈಲಿ ಇರೋ ಸಣ್ಣ ತರಿಕಜ್ಜಿ, ತೊರ್‌ಸುದು ಹೋದೆ. ಪ: ಸಾಂಬ್ರಾಣಿ ಸಪ್ಪು(ತು)

ದೊಡ್‌ಬೆರ್ಳ್ /*doḍɨbɛrḷɨ*/ ನಾವಿ. ಮಧ್ಯದ ಬೆರಳು. the middle finger. ವಾ: ದೊಡ್ ಬೆರ್ಳ್‌ಗೆ ಉಂಗುರ ಹಾಕಿಟು.

ದೊಣ್ಣೆ /*doṇṇɛ*/ ನಾ. ಮರದ ದಪ್ಪನೆಯ ಕೋಲು. a heavy stick, a club, a staff. **ಕುಂಬಾರಂಗೆ ವರ್ಸ ದೊಣ್ಣೆಗೆ ನಿಮಿಸ(ಗಾ).** ವಾ: ದೊಣ್ಣೆ ತಕಂಡ್ ನಾಯಿಗಳ ಬೆರ್‌ಸಿದ್.

ದೊನಿ /*dɔni*/ ನಾ. 1. ಧ್ವನಿ, 2. ಕಂಠದಿಂದ ಹೊರಡುವ ಸದ್ದು, 3. ಕಂಠ, 4. ಶಾರೀರ. 1. voice/tone, 2. sound produced through one's mouth, 3. voice, 4. melody. ವಾ: ಅತ್ತ ಕಡೆಂದೆಲ್ಲೊ ಮರ್‌ಡೊ ದೊನಿ ಕೇಳ್‌ದೆ. **ದೊನಿಪೆಟ್ಟಿಗೆ** /*dɔnipeṭṭigɛ*/ 1. ಧ್ವನಿ ಪೆಟ್ಟಿಗೆ, 2. ಗಂಟಲ ಗೂಡು, 3. ಕಂಠಕುಹರ, 4. ಮನುಷ್ಯರಲ್ಲೂ ಇತರ ಸ್ತನಿಗಳಲ್ಲೂ ಧ್ವನಿತಂತುಗಳನ್ನು ಒಳಗೊಂಡಿರುವ ಮತ್ತು ಶ್ವಾಸಕೋಶಗಳಿಗೆ ಗಾಳಿ ಹೋಗುವ ಮಾರ್ಗವಾಗಿರುವ, ಧ್ವನಿ ಹುಟ್ಟಿಸುವ ಟೊಳ್ಳಾದ ಮಾಂಸಲ ಅಂಗ. vocal cords, determines the pitch of one's voice. It opens while breathing and vibrates while speaking. ವಾ: ದೊನಿ ಪೆಟ್ಟಿಗೆ ಒಡ್ದುಟು.

ದೊನಿತೆಗ್ದ್ ಮೊರ್ಡುದು /*dɔnitɛgdɨ mɔrḍudu*/ ನಾ. ಜೋರಾಗಿ ಅಳುವುದು. crying loudly. ವಾ: ಸತ್ತ ಮನೆಲಿ ಎಲ್ಲವು ದೊನಿತೆಗ್ದ್ ಮೊರ್ಟವೆ.

ದೊನ್ನೆ /*donnɛli*/ ನಾ. 1. ದೊನ್ನೆ, 2. ಬಾಳೆಲೆಯಿಂದ ಅಥವಾ ಅಡಿಕೆ ಹಾಳೆಯಿಂದ ಮಾಡಿದ ಬಟ್ಟಲು. 1. a bowl, 2. a container/a bowl made of plantain/ banana leaf. ವಾ: ದೇಸ್ತಾನಲಿ ದೊನ್ನೆಲಿ ಪುಳಿಯೊಗರೆ, ಪ್ರಸಾದ ಹಾಕಿ ಕೊಟ್ಟವೆ.

ದೊಪ್ಪನೆ /*doppanɛ*/ ಅ. 1. ಒಮ್ಮೆಗೆ, 2. ಒಡನೆ, 3. ಬೀಳುವ ಶಬ್ದದ ಅನುಕರಣವಾಚಿ. 1. all of a sudden, 2. immediately, 3. an onomatopoeic expression indicating 'all of a sudden'. ವಾ: ಹಲ್ಸ್‌ನಕಾಯಿ ದೊಪ್ಪನೆ (ದೊಪ್ಪತ) ಬೀತ್.

ದೊರಿ /*dori*/ ಕ್ರಿ. 1. ಸುರಿ, 2. ಅಕ್ಕಿ ಚೀಲ ಹರಿದು ಚೆಲ್ಲುವುದು, 3. ಹರಡು. 1. to pour out, 2. to cut open a rice bag and pour, 3. to spread. ವಾ: ಚೀಲಕೆ ಅಕ್ಕಿನ ದೊರಿ. ಪ: ದೊರಿದು – ಸುರಿಯುವುದು. **ದೊರಿಯೊದು** /*doriyɔdu*/ 1. ಸುರಿಯುವುದು, 2. ರಾಶಿಬೀಳು, 3. ಚೆಲ್ಲುವುದು, 4. ಹರಡುವುದು, 5. ಮಳೆಸುರಿವಾಗ ಹೇಳುವ ಪದ. 1. to pour, 2. to make a mound, 3. to scatter, 4. to spread, 5. a term indicating heavy rain. ವಾ: ಬತ್ತನ ದೊರಿಯೊದು.

ದೊರೆಗುಮ್ಮಟೆ /*dorɛgummaṭɛ*/ ನಾ. ಇದು ಬಳ್ಳಿ, ಇದರ ಹಣ್ಣಿನ ಹೊರ ಮೈ ವೆಲ್‌ವೆಟ್ ರೀತಿಯದ್ದಾಗಿರುತ್ತದೆ. a velvety textured plant and fruit. ವಾ: ದೊರೆ ಗುಮ್ಮಟೆ ಒಂದ್ ಬೊಳ್ಳಿ.

ದೊರೆಹಣ್ಣ್ /*dorɛhaṇṇɨ*/ ನಾ. ಬಳ್ಳಿಯಲ್ಲಿ ಬಿಡುವ ಚಿನ್ನದ ಬಣ್ಣದ ಹಣ್ಣು, ಇದನ್ನು ತಿನ್ನಲು ಹಾಗು ಜ್ಯೂಸು ಮಾಡಲು ಬಳಸುತ್ತಾರೆ. passion fruit, the fruit is eaten and also used in making juice. ವಾ: ದೊರೆ ಹಣ್ಣ್ ಬೊಳ್ಳಿಲಿ ಆದೆ, ಈ ಹಣ್ಣ್‌ಲಿ ಜೂಸ್ ಮಾಡಿವೆ.

ದೊರೆ[1] /*dorɛ*/ ನಾ. 1. ಅರಸ, 2. ರಾಜ. 1. a king, 2. a monarch. **ದಯೆ ಇರುವವ ದೊರೆಗಿಂತ ಮೇಲ್(ಗಾ).** ವಾ: ಬೊಧ್ಕಿರೆ ದೊರೆನಂಗೆ ಬೊದ್ಕೊಕು.

ದೊರೆ[2] /*dorɛ*/ ನಾ. ಚಿಕ್ಕ ಮಕ್ಕಳನ್ನು ಪ್ರೀತಿಯಿಂದ ಕರೆಯುವುದು. an affectionate term to address children. ವಾ: ದೊರೆಮಜ್ಜ ಬಾ ಇಲ್ಲಿ.

ದೊರೆಮಣಿ /*dorɛmaṇi*/ ನಾ. ವ್ಯಕ್ತಿ ನಾಮ ಪುರುಷ. a given name of a person. ವಾ: ದೊರೆಮಣಿ ಬಂದೊಳೊ.

ದೊರೆವನ /*dorevana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ದೊರ್ಗ್ /*dorgɨ*/ ನಾ. 1. ದೊರಗು, 2. ಒರಟು. 1. dry and rough hands, 2. rough. ವಾ: ಅಂಗೈ ದೊರ್ಗ್ ಮುಟ್ಟಿದೆ.

ದೊರ್ಪುದು /*dorpudu*/ ನಾ. 1. ಮೈ ನಡುಗುವುದು, 2. ದರ್ಶನ ಬರು. 1. shivering, 2. to appear in the body of someone (impersonation/possession). ವಾ: ಚಳಿಂದ ಮೈಯೆಲ್ಲ ದೊರ್ಪುದು. ಪ: ದೊರ್ಪುಸಿದೆ – ಅಲ್ಲಾಡಿಸುತ್ತಾನೆ(ಳೆ), ನಡುಗುತ್ತಾನೆ(ಳೆ)

ದೊಳ್ಳ /*doḷḷa*/ ನಾವಿ. ದೊಡ್ಡ ಹೊಟ್ಟೆಯವ. pot bellied. ವಾ: ದೊಳ್ಳ ಹೊಟ್ಟೆ ಆಡ್ಸಿಕಂಡ್ ಬಂದದೆ.

ದೊಳ್ಳಾಂಬರ /*doḷḷa:mbara*/ ನಾವಿ. ತಿಳಿ ಸಾಂಬಾರು. rasam. ವಾ: ದೊಳ್ಳಾಂಬರಕೆ ಉಪ್ಪನಕಾಯಿ ಇದ್ದರೆ ಸಾಕ್.

ದೊಳ್ಳಿ /*doḷḷi*/ ನಾವಿ. 1. ಹೊಟ್ಟೆ ದಪ್ಪಗಿರುವ ಮಕ್ಕಳಿಗೆ ಹೇಳುವುದು, 2. ದಪ್ಪ ಶರೀರದವಳು. 1. children having a pot belly, 2. a pot bellied girl. ವಾ: ಸೀರೆ ಉಟ್ಟರೆ ದೊಳ್ಳಿ ಕಾಂಬೊದು.

ದೊಳ್ಳೆಕಾಲ್ /*doḷḷɛka:lɨ*/ ನಾವಿ. 1. ತೊಡರುಗಾಲು, 2.

ಅಡ್ಡ ಹೆಜ್ಜೆ ಹಾಕಿ ನಡೆಯುವುದು. 1. knock knees, 2. an abnormal manner of walking caused by knock knees. ವಾ: ದೊಳ್ಳೆ ಕಾಲ್ ಹಾಕಂಡ್ ಬಾತ್.

ದೋಂಗಳೆಚೆಡ್ಡಿ /*do:ŋgaḷɛcɛḍḍi*/ ನಾವಿ. 1. ದೊಡ್ಡ ಚಡ್ಡಿ, 2. (ತೆಳ್ಳಗಿರುವವರು) ಅಳತೆಗಿಂತ ದೊಡ್ಡ ಚಡ್ಡಿ. 1. a loose shorts/half pants, 2, short trousers larger than one's actual measurement. ವಾ: ಅಂವ ದೋಂಗಳೆ ಚೆಡ್ಡಿ ಹಾಕಂಡ್ ಬಾತ್.

ದೋಂಟ /*do:ṇṭa*/ ನಾವಿ. ಸಪೂರ ಹಾಗೂ ಎತ್ತರದ ವ್ಯಕ್ತಿ. a lean and a tall person. ವಾ: ದೋಂಟನಂಗೆ ಬೆಳ್ದುಟು ಹೈದ. ಪ: ದೋಂಟೆ

ದೋಂಟಿ /*do:ṇṭi*/ ನಾ. 1. ಕೊಕ್ಕೆ, 2. ಗಳೆ, ಉದ್ದನೆಯ ಮರದ ಅಥವಾ ಬಿದಿರಿನ ಕೋಲು. 1. a hook, 2. a long bamboo or wooden staff. ವಾ: ದೋಂಟಿ ತಕಂಡ್ ಮರಲಿರೊ ಹಣ್ಣ್‌ನ ಬೀಳ್ಸುದು.

ದೋಂಟೆ /*do:ṇṭɛ*/ ನಾವಿ. ದೋಂಟ, ತೆಳ್ಳಗಿದ್ದು ಎತ್ತರ ಇರುವವ. a lean and a tall person. ವಾ: ದೋಂಟೆ ಬಾತ್.

ದೋಂಬರೆ /*do:mbarɛ*/ ನಾ. ಹೆಗ್ಗಣದ ಬಿಲ. a deep burrow dug by a bandicoot. ವಾ: ಬರೆಲಿ, ಮನೆ ಕರೆಲೆಲ್ಲ ಸುಮಾರ್ ದೋಂಬರೆ ಉಟ್ಟು, ಹೆಗ್ಣಕೆ ಮೊದ್ದ್ ಇಸೊಕು.

ದೋಂಬ್ರು /*do:mbru*/ ನಾ. ಟೊಳ್ಳಾದ ಭಾಗ. cavity.

ದೋಗಣೆ /*do:gaṇɛ*/ ನಾವಿ. 1. ನಯವಾದ ಮಾತಿನಿಂದ ಮುಖಸ್ತುತಿ ಮಾಡು, 2. ಒಯ್ಯಾರ. 1. coquetry, 2. flirtatious. ವಾ: ದೋಗಣೆ ಮಾತಾಡಿ ಕೆಲ್ಸ ಮಾಡ್‌ಸಿಕಂಬದು.

ದೋಗಳೆ /*do:gaḷɛ*/ ನಾ. ಎತ್ತರ ಹಾಗೂ ಸಪೂರವಾದ ವ್ಯಕ್ತಿ. a tall and lean man. ವಾ: ಆ ದೋಗಳೆನ ನೋಡ್.

ದೋಣ /*do:ṇa*/ ನಾ. ಮರ್ಗಿಲ್, ಹಂದಿಗೆ ಆಹಾರವಿಡುವ ಮರದ ಪಾತ್ರೆ. a wooden bowl to serve food to pigs. ವಾ: ಹಂದಿ ಮರ್ಗಿಲ್‌ನ 'ದೋಣ' ತ ಸನ ಹೇಳಿವೆ.

ದೋಣಿ /*do:ṇi*/ ನಾ. 1. ದೋಣಿ, 2. ಓಡ, 3. ಹರಿಗೋಲು, 4. ಅಂಬಿ, 5. ತರಣಿ, 6. ನಾವೆ. a boat. ವಾ: ಹೊಳೆ ದಾಟಿಕೆ ದೋಣಿ ಬಳ್ಸುವೆ.

ದೋಣಿಪಳ್ಳ /*do:ṇipaḷḷa*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕೊಲ್ಲಮೊಗ್ರು ಗ್ರಾಮದ ಜಾಗ. a locality in Kollamogru village in Sullia Taluk of Dakshina Kannada District.

ದೋಣಿಮನೆ /*do:ṇimanɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ದೋಣಿಮೂಲೆ /*do:ṇimu:le*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಆಲೆಟ್ಟಿ ಗ್ರಾಮದ ಜಾಗ. a locality in Aletti village in Sullia Taluk of Dakshina Kannada District.

ದೋತಿ /*do:ti*/ ನಾ. 1. ಪಂಚೆ, 2. ದೋತ್ರ. 1. a dhoti, 2. traditional men's garment worn around the waist. ವಾ: ಜಂಬರಕೆ ಹೋಕನ ದೋತಿ ಹಾಕ. **ದೋತ್ರ** /*do:tra*/ 1. ಧೋತ್ರ, 2. ಪಂಚೆ, 3. ಉತ್ತರೀಯ. 1. a dhoti, 2. a long, loose piece of clothing worn around the waist, 3. a long piece of clothing put on one's shoulders. ವಾ: ದೋತ್ರನ ಇಸ್ತ್ರಿ ಮಾಡಕಿತ್.

ದೋರೆಹಣ್ಣ್ /*do:rɨ haṇṇɨ*/ ನಾ. 1. ಜಾಸ್ತಿ ಹಣ್ಣಾಗದ, 2. ದೋರೆಗಾಯಿ. 1. unripe, 2. half ripe. ವಾ: ದೋರೆ ಮಾಯಿನಣ್ಣ್‌ನ ಕೀಸಿ ತಿಂದರೆ ಬಾರಿ ರುಚಿ ಇದ್ದದೆ.

ದೋಲು /*do:lu*/ ನಾ. ಡೊಳ್ಳು; ದೊಡ್ಡ ಗಾತ್ರದ, ಎರಡು ಕಡೆಗಳಲ್ಲಿಯೂ ಬಡಿಯುವ ಒಂದು ಚರ್ಮವಾದ್ಯ. a double barrel drum. ವಾ: ದೋಲು ಬಡೆದು.

ದೋಸ /*do:sa*/ ನಾ. 1. ದೋಷ, 2. ಲೋಪ, 3. ಕುಂದು, 4. ಕಳಂಕ, 5. ಕೊರತೆ. 1. a defect, 2. a deficiency, 3. a shortcoming, 4. a stigma, 5. a defect/a blemish. ವಾ: ನಾಯಿಗೆ ಒದಿಯಕಾದ್ ದೋಸ ಬಂದದೆ.

ದೋಸೆ /*do:sɛ*/ ನಾ. 1. ದೋಸೆ, 2. ಅಕ್ಕಿಯೊಡನೆ ಉದ್ದು ಅಥವಾ ಇನ್ನಿತರ ಧಾನ್ಯಗಳನ್ನು ನೆನೆಸಿಟ್ಟು ರುಬ್ಬಿ, ಕಾದ ಹೆಂಚಿನ ಮೇಲೆ ಹೊಯ್ದು ಮಾಡುವ ಒಂದು ಬಗೆಯ ಖಾದ್ಯ. 1. dosa/Indian pancake 2. made of fermented batter of rice and black gram. **ನೆರೆ ಮನೆ ದೋಸೆ ತೂತ, ನಮ್ಮ ಮನೆ ಕಾವುಲಿ ತೂತ(ಗಾ).** ವಾ: ದೋಸೆ ಮಾಡಿಕೆ ಕಡ್ಡಿಸೊಕು. **ದೋಸೆ ಕಾವಲಿ** /*do:sɛ ka:vali*/ ಬಳಪದ ಕಲ್ಲು ಅಥವಾ ಕಬ್ಬಿಣದ ಕಾವಲಿಯಲ್ಲಿ ಮಾಡುವ ದೋಸೆ. ಉದಾ: ನೀರ್ ದೋಸೆ, ಹುಳಿದೋಸೆ, ರವಾ ದೋಸೆ. dosa made of a

soapstone tawa/pan. ವಾ: ದೋಸೆ ಕಾವಲಿಲಿ ನೀರ್ ದೋಸೆ ಹೊಯ್ಯಕ್.

ದೋಸ್ತಿ /*do:sti*/ ನಾ. 1. ಗೆಳೆಯ, 2. ಮಿತ್ರ, 3. ಆತ್ಮೀಯ. 1. a friend, 2. a companion, 3. an intimate person. ವಾ: ಅಂವ ನನ್ನ ಚೆಡ್ಡಿ ದೋಸ್ತಿ.

ದೋಳ[1] /*do:ḷa*/ ನಾ. ಜೋಳ. jowar, Sorghum. ವಾ: ದೋಳದ ತೆನೆ ಹೊರ್‌ಟುಟು.

ದೋಳ[2] /*do:ḷa*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮರ್ಕಂಜ ಗ್ರಾಮದ ಜಾಗ. a locality in Markanja village in Sullia Taluk of Dakshina Kannada District.

ದೋಳನಮನೆ /*do:ḷanamanɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ದೋಳಾಂಬರ /*do:ḷa:mbara*/ ನಾ. ತಿಳಿ ಸಾರು. rasam, a soup. ವಾ: ದೋಳಾಂಬರಲಿ ಊಟ ಸೇರ್‌ದು.

ದೋಳು /*do:ḷu*/ ನಾ. ದೋಲು. a double barrel drum. ವಾ: ಹಬ್ಬಲಿ ದೋಳು ಬಡೆದು.

ದೋಳುಪಾಡಿ /*do:ḷupa:ḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ದೋಳ್ತಿಲ /*do:ḷtila*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಎಡಮಂಗಲ ಗ್ರಾಮದ ಜಾಗ. a locality in Edamangala village in Sullia Taluk of Dakshina Kannada District.

ದೌಡೆ /*dauḍɛ*/ ನಾ. 1. ದವಡೆ, 2. ಆಹಾರವನ್ನು ಅಗೆಯುವ ಭಾಗ. 1. jaw, 2. a part with which food is chewed. ವಾ: ದೌಡೆಗೆ ಕೈ ಕೊಟ್ ಕೂರ್‌ಬಡ.

ದೌಲತ್ /*daulatɨ*/ ಕ್ರಿವಿ. 1. ದರ್ಬಾರ್, 2. ಅತಿರೇಕದ ನಡವಳಿಕೆ, 3. ಒಣಜಂಭ, 4. ಅನ್ಯಭಾಷೆ ಪದ ಮೂಲ ಹಿಂದಿ. 1. a meeting held in the courtyard of the king, 2. exaggerated behaviour, 3. display of excessive pride, 4. a Hindi word. **ದೌಲತ್ ಬಾಕನ ಕಣ್ಣ್ ಕಾಂಬದುಲೆ(ಕಣ್ಣಿಗೆ ಯಾರ್ನ‌ಸ ಕಾಂಬಲೆ)(ಗಾ).** ವಾ: ಅವುಳು ಬಾರಿ ದೌಲತ್ ತೋರ್‌ಸುದು.

ದ್ಯಾವತೆ /*dya:vatɛ*/ ನಾ. ಮನೆ ಪಾಷಾಣ ಮೂರ್ತಿ ದೈವ. Pashana Murthy, a deity. ವಾ: ದ್ಯಾವತೆಗೆ ಪೂಜೆ ಮಾಡ್ದ್.

ದ್ಯೇಯ /*dye:ya*/ ನಾ. 1. ಗುರಿ, 2. ಲಕ್ಷ್ಯ, 3. ಉದ್ದೇಶ, 4. ಧ್ಯಾನದ ವಸ್ತು. 1. aim, 2. intention, 3. objective, 4. the object of meditation. ವಾ: ಸಾದನೆ ಮಾಡಿಕೆ ಒಂದೇ ದ್ಯೇಯ ಇರೊಕು.

ದ್ರವ್ಯ /*dravya*/ ನಾ. 1. ವಸ್ತು, 2. ಮೂಲವಸ್ತು, 3. ಐಶ್ವರ್ಯ. 1. a thing, 2. the root/origin, 3. wealth.

ದ್ರಸ್ಟಿ ತೆಗ್ಯೊದು /*drasṭi tɛgyodu*/ ನಾ. 1. ನಿವಾಳಿಸು, 2. ದೃಷ್ಟಿ ದೋಷವನ್ನು ತೆಗೆ, 3. ದೃಷ್ಟಿ ದೋಷ ಪರಿಹಾರಕ್ಕಾಗಿ ಇಳಿತೆಗೆ. warding off the evil by waving mustard seed, rock salt, red chilly, etc. around someone. ವಾ: ದಾಸಿಮೆ, ಕಲ್ಲುಪ್ಪು, ಕೆಂಪ್ ಮೆಣ್ಸ್, ಚೀಪೆನ ಸಣ್ಣ ಚೂರ್ ತಕಂಡ್ ದ್ರಷ್ಟಿ ತೆಗಿಯಕು.

ದ್ರಾಕ್ಸಿ /*dra:ksi*/ ನಾ. 1. ದ್ರಾಕ್ಷಿ, 2. ವೈಟೇಸೀ ಕುಟುಂಬಕ್ಕೆ ಸೇರಿದ ಜನಪ್ರಿಯ ಹಣ್ಣಿನ ಸಸ್ಯ, ಬಳ್ಳಿಯಲ್ಲಿ ಹಸಿರು ಅಥವಾ ನೇರಳೆ ಬಣ್ಣದ ಹಣ್ಣುಗಳು ಗೊಂಚಲು ಗೊಂಚಲಾಗಿ ಬೆಳೆಯುತ್ತವೆ, ತಿನ್ನುವುದಕ್ಕೆ ಮತ್ತು ದ್ರಾಕ್ಷಾ ಮದ್ಯ ತಯಾರಿಕೆಗೆ ಬಳಕೆ. 1. grape, 2. berry of the grapevine, belonging to the family of Vitis vinifera, grown in clusters, and has a purple or green skin and sweet flesh. ವಾ: ದ್ರಾಕ್ಸಿಲಿ ವೈನ್ ಮಾಡಿವೆ.

ದ್ವಾಗಣೆ /*dva:gaṇɛ*/ ನಾ. 1. ರಾಗ ಎಳೆದು ಮಾತನಾಡು, 2. ಮುದ್ದಿನಿಂದ ಮಾತನಾಡುವುದು. 1. to talk in a sing song voice/manner, 2. to talk in an affectionable way. ವಾ: ದ್ವಾಗಣೆ ಮಾತಾಡೊರ್‌ನ ನಂಬಿಕಾಗದ್‌ತ ಹೇಳೊ ಮಾತ್ ಉಟ್ಟು.

ದ್ವಾಸೆ /*dva:sɛ*/ ನಾ. 1. ದೋಸೆ, 2. ಅಕ್ಕಿಯೊಡನೆ ಉದ್ದು ಅಥವಾ ಇನ್ನಿತರ ಧಾನ್ಯಗಳನ್ನು ನೆನೆಸಿಟ್ಟು ರುಬ್ಬಿ, ಕಾದ ಹೆಂಚಿನ ಮೇಲೆ ಹೊಯ್ದು ಮಾಡುವ ಒಂದು ಬಗೆಯ ಖಾದ್ಯ. 1. dosa/Indian pancake 2. made of fermented batter of rice and black gram. **ಎಲ್ಲರ ಮನೆ ದ್ವಾಸೆ ತೂತ ನಮ್ಮ ಮನೆ ಕಾವಲಿ ತೂತ(ಗಾ). ಚೈಪಿಯ್ ಹಕ್ಕಿಗೆ ನೂರೆಂಟ್ ಕಣ್ಣು – ದ್ವಾಸೆ(ಒ).** ವಾ: ನೀರ್ ದೋಸೆ ಮಾಡದೆ ಸುಮಾರ್ ದಿನಾತ್ಕು.

ನ

ನ /*na*/ ವಿಪ್ರ. ಅರೆಭಾಷೆಯ ದ್ವಿತಿಯ ವಿಭಕ್ತಿ ಪ್ರತ್ಯಯ. ಕನ್ನಡದ ಅನ್ನು(ಹೊಸಗನ್ನಡ) ಅಥವಾ ಅಮ್(ಹಳೆಗನ್ನಡ)ವು ಅರೆಭಾಷೆಯಲ್ಲಿ ನ ಅಗುವುದು. ಉದಾಹರಣೆಗೆ ಮರನ ಅಡಿ, ಅಂವನ ಕರಿ. a suffix.

ನಂಗ /*naŋga*/ ಸನಾ. 1. ನನಗಾ, 2. ನನಗೆ. 1. is this for me!, 2. for me. ವಾ: ಇಲ್ಲಿಸಿದ ದುಡ್ಡು ನಂಗ?

ನಂಗದ್ /*naŋgadɨ*/ ಸನಾ. ನನಗೆ ಅದು. to me/for me. ವಾ: ನಂಗದ್ ಬೇಕಿತ್.

ನಂಗನ್ಸಿದೆ /*naŋgansidɛ*/ ಸನಾ. ನನಗೆ ಅನಿಸುತ್ತದೆ. I think, in my opinion. ವಾ: ನಂಗನ್ಸಿದೆ ಅವು ಬಾಕಿಲೆತ.

ನಂಗಾರು /*naŋga:ru*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ನಂಗೂ /*naŋgu:*/ ಸನಾ. ನನಗೂ. to me also. ವಾ: ನಂಗೂ ಹಞ್ಞ ದುಡ್ಡ್ ಬೇಕ್.

ನಂಗೆ /*naŋgɛ*/ ಸನಾ. ನನಗೆ. to me. **ಇಂದ್ ಅಂವಂಗೆ ನಾಳೆ ನಂಗೆ(ಗಾ).** ವಾ: ನಂಗೆ ಕೊಟ್ಟತ್ಲೆಲ. **ನಂಗೆ ಸದ್ಯ ಕೂಡ್‌ದುಲೆ** /*naŋgɛ sadya ku:ḍɨdulɛ*/ ನನಗೆ ಸದ್ಯ ಆಗುವುದಿಲ್ಲ. impossible for me. ವಾ: ಜೊರ ಬಂದ್ ನಂಗೆ ಸದ್ಯ ಕೂಡುದುಲೆ. **ನಂಗೆಂತ** /*naŋgɛnta*/ 1. ನನಗೆಂದು, 2. ನನ್ನವರಿಗೆಂದು. 1. to me/for me, 2. my people. ವಾ: ನಂಗೆಂತ ಯಾರೂ ಇಲ್ಲೆ.

ನಂಗೆನೂ /*naŋgɛnu:*/ ಸನಾ. ನನಗೂ. to me also. ವಾ: ನಂಗೆನೂ ಬಾಕೆ ಹೇಳಿದ್ದೊ.

ನಂಗೆಬೇಡ/ನಂಗೆಬಾಡ /*naŋgɛbe:ḍa/naŋgɛba:ḍa*/ ಸನಾ. ನನಗೆ ಬೇಡ. I don't want. ವಾ: ಬೇಸಿದ್ ಮಟ್ಟೆ ನಂಗೆಬೇಡ.

ನಂಗೆಲ್ಲ /*naŋgɛlla*/ ಸನಾ. ನನಗೆ ಎಲ್ಲ. I know everything/Everything for me. ವಾ: ನಂಗೆಲ್ಲ ಗೊತ್ತಾದೆ.

ನಂಗೆಲ್ಲೂ /*naŋgɛllu:*/ ಸನಾ. ನನಗೆ ಎಲ್ಲೂ. as in – I have not been able to find something anywhere. ವಾ: ನಂಗೆಲ್ಲೂ ಕೆಲ್ಸ ಸಿಕ್ಕಿತ್ಲೆ.

ನಂಗೇಕೊ /*naŋge:ko*/ ಸನಾ. ನನಗೆ ಯಾಕೋ. why do i need. ವಾ: ನಂಗೇಕೊ ಹೋದು ಬೇಡಲುಗ್ಗಪ್ಪ್.

ನಂಗೇನೂ /*naŋge:nu:*/ ಸನಾ. ನನಗೆ ಏನೂ. to me. ವಾ: ನಂಗೇನೂ ಕಮ್ಮಿ ಮಾಡ್ಲೆ.

ನಂಗೊಂದ್ /*naŋgondɨ*/ ಸನಾ. ನನಗೊಂದು. one for/to me. ವಾ: ನಂಗೊಂದ್ ಸಹಾಯ ಮಾಡ್.

ನಂಗೊತ್ಲೆ /*naŋgotlɛ*/ ಸನಾ. ನನಗೆ ಗೊತ್ತಿಲ್ಲ. I don't know. ವಾ: ಅವು ಬಂದವೆನ ಇಲ್ಲೆನತ ನಂಗೊತ್ಲೆ.

ನಂಗ್‌ಮೀನ್ /*naŋgɨ mi:nɨ*/ ನಾ. ಒಂದು ಬಗೆಯ ಕಡಲು ಮೀನು. a kind of sea fish. ವಾ: ನಂಗ್ ಮೀನ್‌ನ ಗೈಪು ಮಾಡ್‌ದಾ, ಇಲ್ಲೆ ಹೊರ್‌ಯೊದ?

ನಂಗ್ಯುಟ್ಟು /*naŋguṭṭu*/ ಸನಾ. ನನಗಿದೆ. I have. ವಾ: ಅದ್ ಬೇಡ ನಂಗ್ಯುಟ್ಟು.

ನಂಚಿಕಂಬುದು /*naŋcikambudu*/ ಕ್ರಿ. 1. ರುಚಿಗಾಗಿ ಊಟದೊಂದಿಗೆ ಬಳಸುವ ಆಹಾರ ವಸ್ತು, 2. ಪದಾರ್ಥ. 1. an accompaniment to the main course of food, 2. a side dish. ವಾ: ಉಂಬಕನ ನಂಚಿಕಂಬಕೆ ಎಂತಾರ್ ಹುಳ್ಳಂಗೆ ಬೇಕ್.

ನಂಜನಮನೆ /*naɲjanamanɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ನಂಜಪ್ಪ /*naɲjappa*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. masculine given name.

ನಂಜಮ್ಮ /*naɲjamma*/ ನಾ. ವ್ಯಕ್ತಿ ಹೆಸರು, ಸ್ತ್ರೀ ವಾಚಕ. feminine given name.

ನಂಜಿ /*naŋji*/ ನಾ. 1. ನಂಜು, 2. ಮತ್ಸರ, 3. ಅಸೂಯೆ. 1. jealousy, 2. enviousness, 3. envy. ವಾ: ಬರೀ ನಂಜಿನ ಹೆಂಗ್ಸ್.

ನಂಜಿ ಏರ್‌ದು /*naŋji'e:rdu*/ ನಾ. ನಂಜು ಏರುವುದು. spreading of infection in the body. ವಾ: ಕೆಲೊವ್ಕೆ ಎಣ್ಣೆ ಬದನೆ ತಿಂದರೆ ನಂಜಿ ಏರ್‌ದು.

ನಂಜಿ ಕಾರ್ದು /*naŋji ka:rdu*/ ಕ್ರಿವಿ. 1. ನಂಜು ಕಾರುವುದು 2. ಮಾತ್ಸರ್ಯ ಪ್ರದರ್ಶಿಸಿ ಮಾತಾಡುವುದು. 1. to emit poison, 2. to express one's feeling of jealousy. ವಾ: ಮಾತ್‌ಲೆ ನಂಜಿ ಕಾರ್ದು. ಪ: ನಂಜಿಕಾರ್ದೆ

ನಂಜಿಗೈಪ್ /*naŋji gaipɨ*/ ಕ್ರಿವಿ. ನಂಜು ಪದಾರ್ಥ. a poisonous food. ವಾ: ನಂಜಿ ಗೈಪ್ ತಿಂಬಕೆ ಬೊತ್ತ್.

ನಂಜಿಬುಡ್ಕೆಲ[1] /*naŋjibuḍkɛla*/ ನಾ. ದ್ವೇಷ ಮಾಡುವವ. an envious person. ವಾ: ನಂಜಿ ಬುಡ್ಕೆಲ ಮೊನ್ಸ. ಪ: ನಂಜಿಪುಡ್ಕೆಲ.

ನಂಜಿಬುಡ್ಕೆಲ[2] /*naŋjibuḍkɛla*/ ನಾ. ಮೈಯೆಲ್ಲಾ ತುರಿಕೆ ಇರುವವ. someone who has itching sensation in the body.

ನಂಜಿರೋಗ /*naŋjiro:ga*/ ಕ್ರಿವಿ. ನಂಜುರೋಗ. an infectious disease. ವಾ: ಅವ್‌ಕೆ ನಂಜಿ ರೋಗ.

ನಂಜಿಕೊಂಬೊದು /*naŋjikombodu*/ ಕ್ರಿವಿ. ನೆಕ್ಕಿಕೊಳ್ಳುವುದು. an accompanying dish, e.g, pickle. ವಾ: ಉಂಬಕನ ನಂಜಿಕೊಂಬಕೆ ಎಂತರ ಮಾಡ್ದು.

ನಂಜಿತಿಂಬೊದು /*naŋjitimbodu*/ ಕ್ರಿವಿ. ಮಳೆಗಾಲದಲ್ಲಿ ಕೊಳಕು ನೀರಿನಲ್ಲಿ ನಡೆದಾಡುವುದರಿಂದಾಗಿ ಕಾಲಿನ ಪಾದದಡಿಯಲ್ಲಿ ಹಾಗು ಬೆರಳುಗಳೆಡೆಯಲ್ಲಿ ಆಗುವ ತುರಿಕೆ ಹಾಗು ಹುಣ್ಣು. to have itching sensation and blisters underneath the foot due to walking in rain water and mud, to have fungal infection. ವಾ: ಕಾಲ್‌ದ್ ಬೆರಲ್ ಸೆರೆಲಿ ನಂಜಿತಿಂಬೊದು.

ನಂಜಿನೆತ್ತ್‌ರ್ /*naŋjinɛttiri*/ ಕ್ರಿವಿ. ನಂಜು ನೆತ್ತರು. Infected blood. ವಾ: ಉಂಬುಳು ಕಚ್ಚಿರೆ ನಂಜಿನೆತ್ತರ್ ಕಡಿಮೆ ಆದೆಗಡ.

ನಂಜಿಬಟ್ಟಲ್ /*naŋjibaṭṭalɨ*/ ಕ್ರಿವಿ. 1. ನಂದಿ ಬಟ್ಟಲು ಹೂವು, 2. ನಂದಿವರ್ಧನ. 1. Crape Jasmine flower, 2. pinwheel flower, East India rosebay. ವಾ: ಬೆಳಿ ನಂಜಿಬಟ್ಟಲ್ ಹೂವ್ ನೋಡಿಕೆ ಲಾಯ್ಕ.

ನಂಜಿಬಟ್ಲ್ /*naŋjɨbaṭṭlɨ*/ ನಾವಿ. ನಂದಿಬಟ್ಟಲು ಹೂವು, ಒಂದು ಔಷಧಿಯ ಗಿಡ. Crape Jasmine flower/pinwheel flower, a medicinal shrub with white fragrant flowers, cultivated in gardens.

ನಂಜಿಬಾಳ್ /*nəŋjiba:ḷɨ*/ ನಾ. ನಂಜು ಕತ್ತಿ. a poisonous knife or razor. ವಾ: ನಂಜಿಬಾಳ್‌ನ ತಾಂಗಿಸಿಕಣ್‌ಬಡ.

ನಂಜಿಮಾತ್ /*naŋjima:tɨ*/ ಕ್ರಿವಿ. 1. ನಂಜು ಮಾತು, 2. ಕೊಂಕುನುಡಿ. 1. a sarcastic remark. 2. a taunt. ವಾ: ನಂಜಿಮಾತ್ ಕೇಳಿಕಾದುಲೆ.

ನಂಜಿಮುಳ್ಳು /*naŋjimuḷḷu*/ ಕ್ರಿವಿ. ನಂಜುಮುಳ್ಳು, a poisonous thorn. ವಾ: ನಂಜಿಮುಳ್ಳು ಕಾಲಿಗೆ ಹೆಟ್ಟಿ ಬಾರಿ ಬಂಗ ಆದ್.

ನಂಜಿಹಲ್ಲ್ /*naŋjihallɨ*/ ಕ್ರಿವಿ. ವಿಷಯುಕ್ತವಾದ ಹಲ್ಲು. poisonous teeth. ವಾ: ಹಾವ್‌ಗೆ ನಂಜಿಹಲ್ಲ್ ಇದ್ದದೆ.

ನಂಜಿಹಾವ್ /*naŋjiha:vɨ*/ ಕ್ರಿವಿ. 1. ವಿಷವುಳ್ಳ ಹಾವು, 2. ಜಂತು. 1. a poisonous snake, 2. an

organism. ವಾ: ನಂಜಿಹಾವ್ ಕಚ್ಚಿರೆ ಬೊದ್ಕುದು ಬಿಜ್ಜ.

ನಂಜಿಳಿಯೊದು /*naŋjiḷiyɔdu*/ ಕ್ರಿವಿ. ನಂಜು ಕಡಿಮೆಯಾಗುವುದು. reduction in the intensity of the poison/infection. ವಾ: ನಿನ್ನೆ ಹತ್ತಿದ ವಿಸದ ನಂಜಿಳಿಯೊದು ಯಾಗ.

ನಂಜೆ /*naŋjɛ*/ ನಾ. ಅಸೂಯೆ ಹೊಂದಿದ ಮಹಿಳೆ. a jealous woman. ವಾ: ಅಲ್ಲಿ ಬಂದದೆಲ ಅದ್ ಬಾರಿ ನಂಜೆ ಹೆಣ್ಣ್.

ನಂಜೆಳ /*naŋjɛḷa*/ ನಾವಿ. ಅಸೂಯೆ ಹೊಂದಿದ ವ್ಯಕ್ತಿ. a jealous man. **ನಂಜೆಳಂಗೆ ಹೊಟ್ಟೆಲಿ ಕಿಚ್ಚಿ(ಗಾ).** ವಾ: ನಂಜೆಳನೊಟ್ಟಿಗೆ ನಿಂದ್ ಎಂತ ಮಾತ್? ಪ: ನಂಜೊಳ.

ನಂಜೆಳ್ /*naŋjɛḷɨ*/ ನಾವಿ. ನಂಜಿನ ವಸ್ತು. a poisonous object/an infections object. ವಾ: ನಂಜೆಳ್ ಹೆಚ್ಚಿ ತಿಂಬಕಾಗದ್.

ನಂಜೆಳ್ತಿ /*naŋjeḷti*/ ನಾವಿ. 1. ನಂಜಿನ ಹೆಂಗಸು, 2. ಕುಲಘಾತಕಿ. 1. a malignant woman, 2. a maleficent woman. ವಾ: ಅದ್ ಬಾರಿ ನಂಜೆಳ್ತಿ ಹೆಣ್ಣ್. ಪ: ನಂಜೊಳ್ತಿ

ನಂಜ್[1] /*naŋjɨ*/ ನಾವಿ. 1. ಅಸೂಯೆ, 2. ಕೇಡು, 3. ದ್ವೇಷ. 1. jealousy, 2. envy, 3. hatred. ವಾ: ಮನ್‌ಸ್‌ಲಿ ನಂಜ್ ಇರಿಕಾಗದ್.

ನಂಜ್[2] /*naŋjɨ*/ ನಾವಿ. 1. ಅಲರ್ಜಿ, 2. ನಮ್ಮ ದೇಹಕ್ಕೆ ಒಗ್ಗದ ಪರವಸ್ತುಗಳು ದೇಹದೊಳಗೆ ಪ್ರವೇಶಿಸಿದಾಗ, ನಮ್ಮ ದೇಹ ತೋರುವ ವಿಪರೀತ (ಅತಿ ಸಂವೇದನಾ) ಪ್ರತಿಕ್ರಿಯೆ, 3. ಒಗ್ಗದಿಕೆ. 1. allergy, an infection, 2. a natural defence mechanism of the body in order to resist the foreign substance, 3. not getting accustomed with. ವಾ: ಮುಳ್ಳ್ ಹೆಟ್ಟಿ ಕಾಲ್ ನಂಜ್ ಆದ್.

ನಂಜ್‌ನಬೀಜ /*naŋjɨnabi:ja*/ ನಾವಿ. 1. ನಂಜಿನ ಬೀಜ, 2. ಔಷಧಿ ಬೀಜ. 1. a seed having medicinal valued which is used in the process of detoxification, 2. a medicinal seed. ವಾ: ಕಾಳ್ಜೀರಿಗೆ ನಂಜ್ ನ ಬೀಜನ ಆರ್ ತಿಂಗಳಿಗೊಮ್ಮೆ ಕೊಟ್ಟರೆ ಹೊಟ್ಟೆ ಸುದ್ದ ಆದೆ.

ನಂಟ /*naṉṯa*/ ನಾ. 1. ನೆಂಟ, 2. ಬಂಧು, 3. ಸಂಬಂಧಿಕ, 4. ಆಪ್ತ ವ್ಯಕ್ತಿ. 1. a relative, 2. a kinsman, 3, kinsfolk, 4. a close friend. ವಾ: ಮನೆಗೆ ಹೊಸ ನಂಟ ಬಾತಲ. ಪ: ನಂಟಸ್ತಿಕೆ

ನಂಟ್ /*naṉṯɨ*/ ನಾ. 1. ನಂಟು, 2. ಸಂಬಂಧ, 3. ಬಾಂಧವ್ಯ, 4. ಪ್ರೀತಿ, 5. ನಂಟಸ್ತಿಕೆ. 1. affinity, 2. bond, 3. kinship, 4 love, 5. relationship. **ನಂಟ್ ಇದ್ದರೆ ಗಂಟ್(ಗಾ).** ವಾ: ನಂಟ್ ಉಳ್ಸಿಕಣೊಕು.

ನಂಟ್ರ್ /*naṉṯri*/ ನಾ. ನೆಂಟರು. relatives. ವಾ: ಮನೆಗೆ ಹೊಸ ನಂಟ್ರ್ ಬಂದೊ.

ನಂಡ್‌ಮೂಕ್ /*naṇḍɨmu:kɨ*/ ನಾ. ದಪ್ಪ ಮತ್ತು ಅಗಲ ಮೂಗು. a thick and wide nose. ವಾ: ನಂಡ್‌ಮೂಕ್‌ತ ಹಂಗ್‌ಸಿ ನೆಗಾಡ್‌ದು ಮಾಡಿಕಾದ್.

ನಂತರ /*nantara*/ ಅ. 1. ಆಮೇಲೆ, 2. ತರುವಾಯ. 1. then, 2. after that. ವಾ: ಓದಿದ ನಂತರ ಕೆಲ್‌ಸ ಹುಡ್ಕುದು.

ನಂದರ ಬೊಳಿ /*nandara bɔḷi*/ ನಾ. ಗೌಡರ 18 ಗೋತ್ರಗಳಲ್ಲಿ ಒಂದು ಬಳಿ. one of the 18 lineages of Gowda community. ವಾ: ನಂದರ ಬೊಳಿತೇಳ್‌ದು ಗೌಡ ಜೆನಾಂಗದ ಬೊಳಿನ ಹೆಸ್‌ರ್.

ನಂದಲ್ಲ /*nandalla*/ ಸನಾ. 1. ನನ್ನದಲ್ಲ, 2. ತನ್ನದಲ್ಲ. 1. not mine, 2. doesn't belong to me. ವಾ: ಈ ಬ್ಯಾಗ್ ನಂದಲ್ಲ.

ನಂದಾದೀಪ /*nanda:di:pa*/ ನಾ. 1. ಆರದೆ ಇರುವ ದೀಪ, 2. ದೇವರ ಮುಂದೆ ನಿರಂತರವಾಗಿ ಉರಿಯುತ್ತಿರುವ ಜ್ಯೋತಿ, 3. ಸದಾ ಉರಿಯುತ್ತಿರುವ ದೀಪ. 1. an unextinguished lamp, 2. a lamp that has been burning, 3. a lamp that has been burning continuously. ವಾ: ನಂದಾದೀಪಕೆ ಎಣ್ಣೆ ಹಾಕಕಿತ್.

ನಂದಿಮರ /*nandimara*/ ನಾ. 1. ನಂದಿ ಮರ, 2. ಬಿಳಿ ನಂದಿ, 3. ಬೆಳಂದಾರು, 4. ಬೆಂದೇಗು, 5. ಬೆಳ್ಳಂದಿ. African Tulip tree. ವಾ: ನಂದಿ ಮರ ಗಟ್ಟಿ, ಹಂಗಾಗಿ ಅದರ್‌ನ ಮನೆ ಕಟ್ಟಿಕೆ, ಹಲಗೆಗಳ ರೂಪಲಿ ಬಳ್‌ಸುವೆ.

ನಂದಿಬಟ್ಲ್ /*nandibaṭli*/ ನಾ. ನಂಜಿಬಟ್ಲ್. pinwheel

flower, crape jasmine. ವಾ: ನಂದಿ ಬಟ್ಲ್ ಹೂನ ಕೀಳಿಕನ ಬೆಳಿ ಹಾಲಿನಂಗೆ ಬರುವ ಅಂಟ್‌ನ ಗಾಯಕ್ಕೆ ಹಾಕಿರೆ ಗಾಯ ಬೇಗ ಮಾಗಿದೆ, ನಂದಿ ಬಟ್ಲ್‌ಲಿ ಸುಮಾರ್ ಮೊದ್ದ್‌ನ ಗುಣಗ ಉಟ್ಟು.

ನಂದಿಲ /*nandila*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ನಂದೊಂದ್ /*nandondi*/ ಸನಾ. 1. ನನ್ನದೊಂದು, 2. ನನ್ನ ಬಳಿಯಿರುವ. 1. mine, 2. something that i have. ವಾ: ನಂದೊಂದ್ ಮಾತ್‌ನ ನೀ ನಡ್‌ಸಿಕೊಟ್ಟಿಯನ?

ನಂದ್ /*nandi*/ ಸನಾ. 1. ನನ್ನದು, 2. ತನ್ನದು. 1. mine, 2. belonging one's own self. ವಾ: ಹೋಕನ ಎಲ್ಲ ಬುಟ್ಟ್ ಹೋದುತ ಗೊತ್ತಿದ್ದರು ಜೆನ ಎಲ್ಲನು ನಂದ್ ನಂದ್‌ತ ಹೊಡ್ದಾಡುವೆ.

ನಂಪ್‌ಸ್ /*nampisi*/ ಕ್ರಿ. ಆಸೆ ಹುಟ್ಟಿಸು. to create a desire. ವಾ: ಸುಮ್ಮನೆ ಮಾತ್‌ಲೆ ನಂಪುಸುದು. ಪ: ನಂಪ್‌ಸಿಕೆ – ಆಸೆ ಹುಟ್ಟಿಸಲು; ನಂಪ್‌ಸಿತ್ – ಆಸೆ ಹುಟ್ಟಿಸಿದ; ನಂಪುಸಿಟು – ಆಸೆ ಹುಟ್ಟಿಸಿದ್ದಾನೆ

ನಂಬಿಕೆ /*nambikɛ*/ ನಾ. 1. ನಂಬಿಕೆ, 2. ವಿಶ್ವಾಸ, 3. ಶ್ರದ್ಧೆ, 4. ನೆಚ್ಚಿಕೆ, 5. ನಂಬುಗೆ. 1. trust, 2. confidence, 3. concentration, 4. faith, 5. reliance. ವಾ: ನಂಬಿಕೆ ಉಳ್ಸಿಕಣೊಕು. ಪ: ನಂಬಿಕೆನವ್ – ನಂಬಿಕೆಯವರು; ನಂಬಿತ್ – ನಂಬಿದನು/ಳು; ನಂಬಿನೆ – ನಂಬುತ್ತೇನೆ;

ನಂಬು /*nambu*/ ಕ್ರಿ. 1. ನಂಬಿಗೆ ಇರಿಸು, 2. ವಿಶ್ವಾಸವಿರಿಸು, 3. ನೆಚ್ಚಿಕೊಳ್ಳು. 1. having trust, 2 having faith, 3. to rely on. **ಕಳ್ಳನ ನಂಬಿರು ಕುಳ್ಳನ ನಂಬಿಕಾಕಿಲೆ(ಗಾ).** ವಾ: ನನ್ನ ನಂಬು. ಪ: ನಂಬುದುಲೆ – ನಂಬುವುದಿಲ್ಲ. **ನಂಬುದ್ಲೆಂತ** /*nambudlɛnta*/ 1. ನಂಬದಿರುವುದು, 2. ವಿಶ್ವಾಸಕ್ಕೆ ತೆಗೆದುಕೊಳ್ಳದಿರು. 1. not trusting someone, 2. not to take into confidence. ವಾ: ಎಂತ ಹೇಳಿರು ನಂಬುದ್ಲೆಂತ ಹೇಳ್ದೊ.

ನಂಬುಡಿರ /*nambuḍira*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ನಂಬ್ಬಾಡ /*nambba:ḍa*/ ನಾ. 1. ನಂಬಬೇಡ. greeting someone with folded hands. **ಅಗತ್ಯಂದ ಹೆಚ್ಚೆ ಯಾರ್‌ನೂ ನಂಬ್ಬಾಡ(ಗಾ).** ವಾ: ಎಂತ ಹೇಳಿರು ನಂಬ್ಬಾಡ. ಪ: ನಂಬುಬಡ – ನಂಬದಿರು

ನಕಲ್ /*nakali*/ ಕ್ರಿ. ನೋಡಿ ಬರೆಯುವುದು. copying. ವಾ: ಪರೀಕ್ಷೆಲಿ ನಕಲ್ ಮಾಡಿಕಾಗದ್.

ನಕ್ಕಲೆಚಂಡೆ /*nakkalɛcaṇḍɛ*/ ನಾ. ಗೀಜಗನ ಗೂಡಿನ ರೂಪದಲ್ಲಿ ಉದ್ದಕ್ಕೆ ಗೂಡು ನಿರ್ಮಿಸಿ ಜೀವಿಸುವ ಪಕ್ಷಿ. a bird that builds nests which resembles the nest of a weaver bird. ವಾ: ನಕ್ಕಲೆಚಂಡೆದ್ ಗೂಡ್ ಮರಲಿ ನೇತಾಡ್‌ದೆ.

ನಕ್ಕುಳು ಒಕ್ಕುದು[1] /*nakkuḷu okkudu*/ ನಾವಿ. ಗಾಳದಿಂದ ಮೀನು ಹಿಡಿಯಲು ಎರೆಹುಳುವನ್ನು ಮಣ್ಣಿನಲ್ಲಿ ಹುಡುಕುವುದು. searching for earthworms to use them as bait while catching fish. ವಾ: ಮೀನ್ ಹಿಡೆಕೆ ನಕ್ಕುಳುನ ಒಕ್ಕುದು.

ನಕ್ಕುಳು ಒಕ್ಕುದು[2] /*nakkuḷu okkudu*/ ನಾವಿ. ಕೆಲಸ ಮಾಡುವಂತೆ ನಟನೆ. to pretend.

ನಕ್ಕುಳು[1] /*nakkuḷu*/ ನಾ. 1. ಎರೆಹುಳು, 2. ನೆಲಹುಳು, 3. ನೆಲದೊಳಕ್ಕೆ ಕೊರೆದು, ಮಣ್ಣಿನಲ್ಲಿ ಇರುವ ಸಾವಯವ ಪದಾರ್ಥವನ್ನು ತಿಂದು, ಅದನ್ನು ಫಲವಂತ ಗೊಬ್ಬರವನ್ನಾಗಿ ಮಾಡುವ ನೆಲಹುಳು. 1. an earthworm, 2. worms that live in the soil, vital to the health of the soil, because they convert dead matter into manure. **ಸುತ್ತಿ ಸುತ್ತಿ ಬರ್ಬಡ ನಂಗಾಗಿ, ನಾನಂತು ಕೆಟ್ಟೆ ನಿಂಗಾಗಿ, ನೀನಂತು ಕೆಡ್ಬಡ ನಂಗಾಗಿ ಮೇಲೊಬ್ಬ ಕುದ್ದುಟ್ಟು ನಿಂಗಾಗಿ – ನಕ್ಕುಳ ಮೀನಿಗೆ ಹೇಳ್ದು(ಒ).** ವಾ: ನಕ್ಕುಳು ಮಣ್ಣ್‌ಲಿ ಹರ್‌ಕಂಡ್ ಹೋದೆ. ಪ: ನೊಕ್ಕುಳು, ನಕ್ಕುರು(ತು). **ನಕ್ಕುಳುಮಣ್ಣ್** /*nakkuḷumaṇṇi*/ ಎರೆಹುಳು ಇರುವ ಮಣ್ಣು. soil that is rich with earthworms. ವಾ: ನಕ್ಕುಳುಮಣ್ಣ್ ಪಲವತ್ತಾಗಿದ್ದದೆ.

ನಕ್ಕುಳು[2] /*nakkuḷu*/ ಕ್ರಿ. ನಗುವುದು. to laugh.

ನಕ್ಷತ್ರಕಾಯಿ /*nakṣatraka:yi*/ ನಾ. ಪನ್ನೇರಳೆ ಕಾಯಿ. rose apple. ವಾ: ನಕ್ಷತ್ರ ಕಾಯಿ ತಿಂಬಕೆ ಬಾರಿ ಲಾಯ್‌ಕ.

ನಕ್ಷತ್ರಮೀನ್ /*nakṣatrami:ni*/ ನಾ. ಆಸ್ಟ್ರೆರಾಯ್ಡಿಯ

ವರ್ಗಕ್ಕೆ ಸೇರಿದ ಸಾಗರವಾಸಿ, ಕಂಟಕಚರ್ಮಿ ಮೀನುಗಳ ಸಾಮಾನ್ಯವಾದ ಹೆಸರು, ದೇಹದ ಮಧ್ಯಭಾಗ ಚಪ್ಪಟೆಯಾಗಿದ್ದು ಅದರಿಂದ ಸುತ್ತ ಕಿರಣಗಳಂತೆ ಐದು ಬಾಹುಗಳು ಹೊರಟು ಒಟ್ಟಿನಲ್ಲಿ ಮೀನು ನಕ್ಷತ್ರಾಕಾರದಲ್ಲಿ ಇರುವುದರಿಂದ ಈ ಹೆಸರು ಬಂದಿದೆ. a starfish, a marine invertebrate, with a central disc and five arms. ವಾ: ನಕ್ಷತ್ರ ಮೀನ್ ಸಂದ್ರಲಿ ಇರ್‌ದು, ಇದ್ ನೋಡಿಕೆ ನಕ್ಷತ್ರದಂಗೆ ಇದ್ದದೆ.

ನಕ್ಷತ್ರಹಣ್ಣ್ /*nakṣatrahaṇṇi*/ ನಾ. ದಾರೆಹುಳಿ. star fruit. ವಾ: ನಕ್ಷತ್ರ ಹಣ್ಣ್ ತಿಂದಿಯನ?

ನಕ್ಸತ್ರಆಮೆ /*naksatraa:mɛ*/ ನಾ. ಈ ಆಮೆಯ ಹೊರ ಮೈ ಚಿಪ್ಪು ಹಳದಿ ಬಣ್ಣದ ಪಟ್ಟೆಗಳಿಂದ ಕೂಡಿರುತ್ತದೆ, ಲಘು ಕಾಡುಗಳು, ಪೊದೆಗಳು, ಮತ್ತು ಅರೆ ಮರುಭೂಮಿಗಳು, ಸವನ್ನಾಗಳು ಮತ್ತು ತಪ್ಪಲಿನಲ್ಲಿ ಕಾಣಬಹುದು, ನದಿಗಳು, ತೊರೆಗಳು, ಸಮುದ್ರತೀರ ಮತ್ತು ಸರೋವರಗಳ ಕಣಿವೆಗಳು ಮತ್ತು ನಿರಂತರ ನೀರಿನ ಮೂಲಗಳನ್ನು ಹೊಂದಿರುವ ಇತರ ಸ್ಥಳಗಳು ಈ ಪ್ರಭೇದಗಳಿಗೆ ಆದ್. Indian star tortoise (Geochelone elegans), the upper shell of the tortoise is convex shaped, found in the thorn scrub forests, semi-desert and arid grasslands. ವಾ: ನಕ್ಸತ್ರ ಆಮೆದ್ ಮೈಮೇಲೆ ಅರ್‌ಸಣ ಬಣ್ಣದ ಪಟ್ಟೆಗ ಇದ್ದದೆ.

ನಗ /*naga*/ ನಾ. 1. ಒಡವೆ, 2. ಆಭರಣ. 1. jewellery, 2. ornaments. ವಾ: ಅವಳತ್ರ ನಗಗ ಸುಮಾರೊಳ.

ನಗಡಿ /*nagaḍi*/ ನಾ. ಸಿಂಬಳ. mucus membrane. ವಾ: ನಗಡಿ ತೆಗ್ದ್ ಬಾ. ಪ: ನೆಗ್‌ಡಿ

ನಗಾಡ್ಸ್ /*naga:ḍsi*/ ಕ್ರಿ. ನಗಿಸು. to make someone laugh. ವಾ: ನಗಾಡ್ವ ಜೆನರ ಮುಂದೆ ಬೀಳಿಕಾದ್. **ನಗಡಿಕೆ** /*nagaḍikɛ*/ 1. ನಗು, 2. ಅಪಹಾಸ್ಯಕ್ಕೆ ಈಡಾಗು. 1. to laugh, 2. to be mocked at. ವಾ: ಜೆನ ನಗಡಿಕೆ ಮಾಡ್ಬಡ. ಪ: ನಗಾಡ್ದೆ – ನಗುತ್ತಾನೆ/ಳೆ; ನಗಾಡ್ವ – ನಗುವ. **ನಗಾಡ್‌ವ** /*naga:ḍiva*/ ನಗಾಡುತ್ತಾರೆ. will laugh at. ವಾ: ನಗಾಡ್‌ವ ಜೆನರ ಮುಂದೆ ಸಾದಿಸಿ ಬೊದ್‌ಕೊಕು.

ನಗಾರಿ /*naga:ri*/ ನಾ. ವೃತ್ತಾಕಾರದ ಚರ್ಮವಾದ್ಯ, ಇದನ್ನು ಎರಡು ಬಾಗಿದ ಕಡ್ಡಿಗಳಿಂದ ಬಡಿಯುತ್ತಾರೆ. Timpani or kettledrums. ವಾ: ನಗಾರಿ ಬಾರ್‌ಸುವೆ.

ನಗ್ /*nagi*/ ಕ್ರಿ. 1. ಜಜ್ಜಿಹೋಗು, 2. ಒಟ್ಟಿಹೋಗು, 3. ನಗ್ಗಿಹೋಗು. 1. to get crushed, 2. to get pounded, 3. to get destroyed. ವಾ: ಕಾರ್ ಮರಕ್ಕೆ ಹೊಡ್ಡರ್ಲಿ ಅದರ ಬಾನೆಟ್ ಪೂರ್ತಿ ನಗ್ಗಿ ಹೋವುಟು. ಪ: ನಗ್ಗ್

ನಗ್ಗುದ್ಲೆ /*naggudlɛ*/ ಕ್ರಿ. 1. ನಜ್ಜಾಗುವುದಿಲ್ಲ, 2. ಜಜ್ಜುವುದಿಲ್ಲ, 3. ನೆಗ್ಗು, 4. ಹಿಂಡು, 5. ಅಜ್ಜಿಬಜ್ಜಿಮಾಡು. 1. won't get crushed, 2. won't get pounded, 3. to pulversie, 4. to squeeze, 5. to mince. ವಾ: ಸಿಂಪೆ ಮೇಲೆ ನೀರ್ ಹಂಡೆ ಇಸಿವೆ, ಹಂಗೆ ಇಸಿರೆ ನೀರ್ ಹಂಡೆ ನಗ್ಗುದ್ಲೆ. ಪ: ನಗ್ಗಿಕಿಲೆ

ನಟ್ಟ /*naṭṭa*/ ನಾ. 1. ನೆಟ್ಟು, 2. ನೆಡು, 3. ಹೂಳು, 4. ಗಿಡ, ಸಸಿ ಮೊದಲಾದವನ್ನು ಊರು, 5. ನಿಲ್ಲಿಸು. 1. to plant, 2. implant, 3. to bury, 4. to plant, 5. to make something stand. **ಎಲ್ಲಾ ಬುಟ್ಟ್ ಮಜ್ಜ ಭಂಗಿ ನಟ್ಟತ್(ಗಾ).** ವಾ: ನಾ ಕೊಟ್ಟ ಹಣ್ಣ್‌ನ ದೈನ ನೀ ನಟ್ಟ? ಪ: ನಟ್ಟವೆ; ನಟ್ಟೊಳೆ

ನಟ್ಟ ಇರ್ಲ್ /*naṭṭa irli*/ ನಾ. 1. ಸರಿರಾತ್ರಿ, 2. ನಡುರಾತ್ರಿ. 1. midnight, 2. in the middle of the night. ವಾ: ನಟ್ಟ ಇರ್ಲ್‌ಲಿ ಬೇಟೆಗೆ ಹೋದವ್ ಬಂದೊ.

ನಟ್ಟಿ /*naṭṭi*/ ನಾ. ತರಕಾರಿ. vegetable. ವಾ: ಸುಮಾರ್ ತರದ ನಟ್ಟಿನ ಬೆಳ್‌ಸಿಯೊಳೊ.

ನಟ್ಟಿಕಾಯಿ /*naṭṭika:yi*/ ನಾ. ನೆಲ್ಲಿಕಾಯಿ. gooseberry. ವಾ: ನಟ್ಟಿಕಾಯಿ ಮರ ಒಂದೆಲ್ಲೊ ಇರೊಕು.

ನಟ್ಟ್ /*naṭṭi*/ ಕ್ರಿ. ನೆಟ್ಟು. to plant. ವಾ: ನೂರ್ ಸಿಲ್ವೊರ್ ದೈ ನಟ್ಟ್ ಬಂದೊ.

ನಡತೆಲಿ /*naḍatɛli*/ ನಾ. 1. ನಡತೆ, 2. ರೀತಿ, 3. ವರ್ತನೆ, 4. ಆಚಾರ, 5. ಗುಣ. 1. behaviour, 2. manner, 3. demeanour, 4. conduct, 5. character. ವಾ: ಒಳ್ಳ ನಡತೆಲಿ ಇದ್ದರೆ ಎಲ್ಲೊವು ಕುಸಿ ಮಾಡಿವೆ.

ನಡಾವಳಿ /*naḍa:vaḷi*/ ನಾ. ದೇವರಿಗೆ, ಭೂತಕ್ಕೆ

ಆರಾಧನೆ ಮಾಡುವ ವಿಶೇಷ ಸಂದರ್ಭ. a ritual performed to deities (Bhuta). ವಾ: ವರ್ಸಕೊಮ್ಮೆ ನಡಾವಳಿಗೆ ಪೇಟೆಂದ ಮಕ್ಕ ಬಾವೊ.

ನಡಿ /*nɛḍi*/ ಕ್ರಿ. ನಡೆ. to walk. **ಎತ್ತ್ ನ ಮುಂದೆ ನಡಿಯಕಾಗದ್ ಕತ್ತೆನ ಹಿಂದೆ ಹೋಕಾಗದ್(ಗಾ).** ವಾ: ಬೇಗ ಬೇಗ ನಡಿ ಹೊತ್ತ್ ಮುಳ್‌ಗಿಕೆ ಮುಂದೆ ಎತ್ತೊನೊ. ಪ: ನಡಿತಾ – ನಡೆಯುತ್ತಾ; ನಡಿನಿ – ನಡೆಯಿರಿ; ನಡಿಯಕನ – ನಡೆಯುವಾಗ; ನಡಿಯೊದ್ – ನಡೆಯುವುದು; ನಡಿಯೋಕು – ನಡೆಯಬೇಕು; ನಡಿವನ – ನಡೆಯುತ್ತೀಯ; ನಡಿವ – ನಡೆಯುವ; ನಡೀದೇ – ನಡೆದೇ

ನಡಿದ್ /*naḍidi*/ ಕ್ರಿ. ನಡೆದು. walked. ವಾ: ನಡಿದ್ ನಡಿದ್ ಕಾಲ್ ಬಚ್ಚಿತ್.

ನಡಿರ್ಲ್ /*naḍirli*/ ನಾ. ಮಧ್ಯರಾತ್ರಿ, ನಡು ಇರುಳು. midnight. ವಾ: ನಡಿರ್ಲ್ ಬಾಗ್‌ಲ್ ಬಡ್ದರೆ ಹೆದ್‌ರಿಕೆ ಆಗದಿದ್ದದೆನಾ? ಪ: ನಡಿಲ್ – ನಡುರಾತ್ರಿ. **ನಡೀರ್ಲ್** /*naḍi:rli*/ 1. ನಡುರಾತ್ರಿ, 2. ಮಧ್ಯರಾತ್ರಿ. 1. midnight, 2. middle of the night. ವಾ: ನಡೀರ್ಲ್‌ಲಿ ಎತ್ತ ಹೊರ್‌ಟದ್?

ನಡು /*naḍu*/ ನಾ. 1. ಸೊಂಟ, 2. ನಡ, 3. ಟೊಂಕ. waist, middle of one's body-between ribs and hips. ವಾ: ನಡು ಬೊಗ್ಗಿಸಿ ಕೆಲ್‌ಸ ಮಾಡೊಕು. ಪ: ನಡುಮುರಿದು – ಸೊಂಟಮುರಿದು. **ನಡುಲಿ** /*naḍuli*/ 1. ಮಧ್ಯದಲ್ಲಿ, 2. ಮಧ್ಯಭಾಗದಲ್ಲಿ, 3. ನಡುವೆ. 1. in the middle, 2. mid, 3. median. ವಾ: ದೊಡ್ಡವ್ ಮಾತಾಡಿಕನ ನಡುಲಿ ಬಾಯಿ ಹಾಕಿಕಾದ್. **ನಡೂಂದ** /*naḍu:nda*/ ಮಧ್ಯ ಭಾಗದಿಂದ. from the middle, in medias res. ವಾ: ತೋಟದ ನಡೂಂದ ತಂತಿ ಹಾಕಿದ್.

ನಡು ಒಳೆಗೆ /*naḍu oḷɛgɛ*/ ನಾ. 1. ಬಾಡೆ, 2. ಮಧ್ಯದ ಕೋಣೆ. 1. a courtyard, 2. a central hall. ವಾ: ಮಳೆಗೆ ನಡು ಒಳೆಗೆ ಸೋರ್‌ದೆ.

ನಡುನೀರ್‌ಲಿ ಬುಡ್ /*naḍuni:rli buḍi*/ ನಾ. ಅರ್ಧದಲ್ಲಿ ಬಿಟ್ಟುಬಿಡು. to quit in the middle of something. **ನಡು ನೀರ್‌ಲಿ ಕೈ ಬುಡ್ದು(ನು).** ವಾ: ಇಸ್ಟ್ ವರ್‌ಸ ಜೊತೆಗಿದ್ದ್ ಈಗ ನಡು ನೀರ್‌ಲಿ ಕೈ ಬುಡ್ದು ಸೆರಿನಾ?

ನಡುಹೊಟ್ಟೆ /*naḍuhoṭṭɛ*/ ನಾ. ಮಧ್ಯದ ಹೊಟ್ಟೆ. midriff. ವಾ: ನಡು ಹೊಟ್ಟೆ ಬೇನೆತ ಹೇಳ್ತಿದ್ದೊ.

ನಡುಗಲ್ಲು /*naḍugallu*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ನಾಲ್ಕೂರು ಗ್ರಾಮದ ಜಾಗ. 1. family, 2. lineage, 3. a locality in Nalkuru village in Sullia Taluk of Dakshina Kannada District.

ನಡ್ಗ್ /*naḍgi* / ಕ್ರಿ. 1. ನಡುಗು, 2. ಕಂಪಿಸು, 3. ಹೆದರು, 4. ಭಯಪಡು, 5. ಅದುರು. 1. to shiver, 2. to shudder, 3. to be fearful, 4. to fear, 5. to tremble. ವಾ: ಚಳಿಲಿ ನಡ್ಗಿದೆ. ಪ: ನಡುಗಿಕೆ – ನಡುಗಲು;

ನಡುತೋಟ /*naḍuto:ṭa*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ನಡುಬಾಡೆ /*naḍuba:ḍɛ*/ ನಾ. ನೆಲ್ಲಕ್ಕಿ ದೀಪ ಇಡುವ ಜಾಗ ಅಥವಾ ಕೋಣೆ. central hall of the house where the traditional lamp is kept. ವಾ: ನಡುಬಾಡೆನ ಗುಡ್ಸಿ ವರ್‌ಸೊಕು.

ನಡುಬಿಟ್ಟ /*naḍubiṭṭa*/ ನಾ. 1. ಮನೆಯ ಬಲಕ್ಕೆ ಹಾಕಿದ ಮರದ ದಿಮ್ಮಿ, 2. ಬಿಟ್ಟ. 1. a log of wood kept on the right side of the house, 2. a log of wood. ವಾ: ನಡುಬಿಟ್ಟಕೆ ಗೆದ್ಲ್ ಹಿಡ್ದುಟು.

ನಡುಬೆಟ್ಟು /*naḍubeṭṭu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ನಡುಬೆರಳ್ /*naḍubɛraḷi*/ ನಾವಿ. ಮಧ್ಯದ ಬೆರಳು. middle finger. ವಾ: ನಡುಬೆರಳ್‌ಗೆ ಎರ್‌ಡ್ ಉಂಗ್‌ರ ಹಾಕುಟು.

ನಡುಬೈಲು /*naḍubailu*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಎಡಮಂಗಲ ಗ್ರಾಮದ ಜಾಗ. 1. family, 2. lineage, 3. a locality in Edamangala village in Sullia Taluk of Dakshina Kannada District.

ನಡುಮಂದು /*naḍumandu*/ ನಾವಿ. ಒಳಗಿನ ಮಾಡು ನೀರು ಹೋಗಲು ಮಾಡಿದ ವ್ಯವಸ್ಥೆ. roof gutter. ವಾ: ನಡುಮಂದುಲಿ ನೀರ್ ಕಟ್ಟಿ ನಿತ್ತುಟು.

ನಡುಮನೆ /*naḍumane*/ ನಾ. 1. ಕುಟುಂಬ, 2.

ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಜಾಲ್ಸೂರು ಗ್ರಾಮದ ಜಾಗ. 1. family, 2. lineage, 3. a locality in Jalsuru village in Sullia Taluk of Dakshina Kannada District.

ನಡುಮುಟ್ಲು /*naḍumuṭlu*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಸುಳ್ಯ ನಗರದ ಜಾಗ. 1. family, 2. lineage, 3. a locality in Suḷya Nagara village in Sullia Taluk of Dakshina Kannada District.

ನಡುಮೊಟ್ಲು /*naḍumoṭlu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ನಡುವಟ್ಟೀರ /*naḍuvaṭṭi:ra*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ನಡುವಡ್ಕ /*naḍuvaḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಜಾಲ್ಸೂರು ಗ್ರಾಮದ ಜಾಗ. a locality in Jalsuru village in Sullia Taluk of Dakshina Kannada District.

ನಡುವಣ^1 /*naḍuvaṇa*/ ನಾ. 1. ಮಧ್ಯದಲ್ಲಿ, 2. ನಡುವಿನ. 1. in the middle, 2. median. ವಾ: ನಮ್ಮಿಬ್ಬರ ನಡುವಣ ದೋಸ್ತಿ ಹಿಂಗೆ ಇರಲಿ. ಪ: ನಡ್‌ವಣ

ನಡುವಣ^2 /*naḍuvaṇa*/ ನಾ. ಮಧ್ಯದ ಸಹೋದರ. middle brother – between the oldest and the youngest. ಪ: ನೊಡುನಂವ

ನಡೆ^{1} /*naḍɛ*/ ನಾ. ದನಗಳ ಲೆಕ್ಕ 10 ನಡೆ = 10 ದನಗಳು. 10 cattle. ವಾ: ಕೊಟಗೆಲಿ ನಾಕ್ ನಡೆ ದನಗ ಒಳದ್.

ನಡೆ^{2} /*naḍɛ*/ ನಾ. ದೈವ ದೇವರುಗಳ ಓಡಾಟದ ದಾರಿ. a path made for the movement of gods. ವಾ: ನಡೆಲಿ ಮೊನ್ಸರ್ ಓಡಾಡಿಕಾದ್.

ನಡೆ^{3} /*naḍɛ*/ ಕ್ರಿ. ನಡೆಯುವುದು. to walk. **ನಡೆಂಗಾತ್** /*naḍɛŋga:ti*/ ನಡೆಯುವಂತಾಯಿತು. had to walk. ವಾ: ಬಸ್ ಇಲ್ಲದೆ ನಡೆಂಗಾತ್. **ನಡೆಕುಂತ** /*naḍɛkunta*/ ನಡೆಯಬೇಕೆಂದು. need to walk. ವಾ: ಇಂದ್ ನಡೆಕುಂತ ಇತ್ತ್ ಕಂಡದೆ ಹಂಗೆ ಆತ್. **ನಡೇಕನ** /*naḍɛ:kana*/ 1. ನಡೆವಾಗ, 2. ನಡೆಯುತ್ತಿರುವಾಗ. 1. while walking, 2. during the walk. ವಾ: ಗದ್ದೆಲಿ ನಡೇಕನ ಕೂಳೆ ಗುತ್ತಿಗ ಇದ್ದದೆ ನೋಡಿಕ ಕಾಲಿಗೆ ಹೆಟ್ಟಿದು. **ನಡ್ಕಂಡ್** /*naḍkaṇḍi*/ ನಡೆದುಕೊಂಡು. walking. ವಾ: ಇಸ್ಕೂಲಿಗೆ ನಡ್ಕಂಡ್ ಹೋದು. ಪ: ನಡ್ಕೊಂಡು – ನಡೆದುಕೊಂಡು; ನಡ್ಕೊಂಡೇ – ನಡೆದುಕೊಂಡೇ; ನಡ್ತಲೊ – ನಡೆದನಲ್ಲ. **ನಡ್ಕಣಕು** /*naḍkaṇaku*/ 1. ನಡೆದುಕೊಳ್ಳು, 2. ಅನುಸರಿಸು, 3. ಪಾಲಿಸು. 1. to follow, 2. to practice, 3. to adhere to. ವಾ: ಹಿರ್‌ಯರ್ ಹೇಳ್ದಂಗೆ ನಡ್ಕಣಕು. ಪ: ನಡ್ಕಣಲಿ – ನಡೆದುಕೊಳ್ಳಲಿ; ನಡ್ಕಂಬದು – ನಡೆದುಕೊಳ್ಳುವುದು/ವರ್ತಿಸುವುದು

ನಡೋಕು /*naḍo:ku*/ ಕ್ರಿ. 1. ಗಿಡ ನೆಡು, 2. ಹೂಳು, 3. ಗಿಡ, ಸಸಿಗಳನ್ನು ಊರು. 1. to plant, 2. to bury, 3. to plant. ವಾ: ಹೂನ ದೈನ ನಡೋಕು.

ನಡ್ಕ /*naḍka*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕಲ್ಮಡ್ಕ ಗ್ರಾಮದ ಜಾಗ. 1. family, 2. lineage, 3. a locality in Kalmadka village in Sullia Taluk of Dakshina Kannada District.

ನಡ್ಗಟ /*naḍgaṭa*/ ಕ್ರಿ. 1. ಚಳಿಯಿಂದ ಬರುವ ವಿಪರೀತವಾದ ನಡುಕ, 2. ಅದಿರುವಿಕೆ. 1. shivering, 2. to shudder. ವಾ: ನಡ್ಗಟ ಬಂದ್ ಹಲ್ಲೆಲ್ಲ ಕಟಕಟತ ಹೇಳ್ದೆ. ಪ: ನಡ್ಗ್ – ನಡುಗು

ನಡ್ಗೆ /*naḍgɛ*/ ನಾ. 1. ಕಾಲು ನಡಿಗೆ, 2. ಕಾಲು ನಡಿಗೆಯ ಮೂಲಕ ಮುಂದೆ ಸಾಗುವುದು. 1. walking, 2. to walk. ವಾ: ಅಪ್ಪನ ನಡ್ಗೆನ ನೋಡೊಕು ಬಾರಿ ತಮಾಸೆ ಇದ್ದದೆ.

ನಡ್ಗ್ /*naḍgi*/ ಕ್ರಿ. 1. ನಡುಕ, 2. ಅದಿರುವಿಕೆ, 3. ಕಂಪನ. 1. shaking, 2, shivering, 3. shuddering. ವಾ: ತಣ್ಣಿರ್‌ಲಿ ಮೀದ್ ಬಂದ್ ನಡ್ಗ್‌ದು. ಪ: ನಡ್ಗಿದೆ – ನಡುಗುತ್ತಾನೆ/ಳೆ; ನಡ್ಗುವ – ನಡಗುವ; ನಡ್ಗ್ತಿತ್ತ್ – ನಡುಗುತಿದ್ದನು(ಳು);

ನಡ್‌ತುಂಡು /*naḍituṇḍu*/ ನಾ. 1. ನಡುಭಾಗ, 2. ಮಧ್ಯದ ತುಂಡು. 1. middle, 2. a piece/a part in the middle. ವಾ: ಮರದ ನಡ್‌ತುಂಡುನ ಒಡೆಕೆ ಬೊತ್ತ್.

ನಡ್ತೆ /*naḍtɛ*/ ನಾ. 1. ನಡತೆ, 2. ರೀತಿ, 3. ವರ್ತನೆ, 4. ನಡವಳಿಕೆ. 1. behaviour, 2. manner, 3.

conduct, 4. demeanour. ವಾ: ಹೆಣ್ಮಕಳ ನಡ್ತೆ ಸೆರಿ ಇರೊಕು, ಇಲ್ಲರೆ ಜೆನ ಬಾಯಿಗೆ ಬಂದಂಗೆ ಮಾತಾಡ್ವೆ.

ನಡ್ತ್[1] /*naḍti*/ ಕ್ರಿವಿ. ಘಟನೆ ನಡೆಯಿತು. occurrence of an incident. ವಾ: ಎಂತದೋ ನಡೆಬಾರ್‌ದ್ ನಡ್ತ್.

ನಡ್ತ್[2] /*naḍtɨ*/ ಕ್ರಿ. 1. ನಡೆಯಿತು, 2. ನಡೆದನು/ಳು, 2. ಚಲಿಸು. 1. walked, 2. she/he walked, 3. to move. ವಾ: ಪಾಪ ಕೂಸು ಅಸ್ಟ್ ದೂರ ನಡ್ತ್. ಪ: ನಡ್ದೊ – ನಡೆದರು; ನಡ್ದರೂ – ನಡೆದರೂ; ನಡ್ಡುಟು – ನಡೆದಿದ್ದಾನೆ/ಳೆ; ನಡ್ದಿರ್ದು – ನಡೆದಿರಬಹುದು. **ನಡ್ದ** /*naḍda*/ 1. ಘಟಿಸಿದ, 2. ನಡೆದ, 3. ಸಂಭವಿಸಿದ. 1. occurred, 2. happened, 3. befell. ವಾ: ನಡ್ದ ಬೇಜಾರ ಸಂಗತಿನ ಮರ್‌ತ್ ಬುಡೊಕು. ಪ: ನಡ್ದ್ – ಸಂಭವಿಸಿ. **ನಡ್ದದೆ** /*naḍdadɛ*/ ನಡೆಯುತ್ತದೆ. will happen. ವಾ: ಕೂಸು ನಡ್ದದೆ. ಪ: ನಡ್ದದೆ – ನಡೆಯುತ್ತಾನೆ/ಳೆ. **ನಡ್ದದ್** /*naḍdadɨ*/ ಕ್ರಿ. ನಡೆದಿರುವುದು. an incident that has occured. ವಾ: ಹಿಂದೆ ನಡ್ದದ್ ಒಳ್ಳ ನೆಂಪಾದರೆ ಇರಲಿ, ಇಲ್ಲರೆ ಮರ್‌ತ್ ಬುಡುದೆ ಒಳ್ಳೆದ್. ಪ: ನಡ್ದರೂ – ನಡೆದರೂ; ನಡ್ಡುಟು – ನಡೆದಿದೆ; ನಡ್ದಿರ್ದು – ನಡೆದಿರಬಹುದು; ಸಂಬವಿಸಿರಬಹುದು. **ನಡ್ದೋತಲ್ಲ[1]** /*nɛḍdɔ:talla*/ ನಡೆದು ಹೋಯಿತಲ್ಲ. occurred already. ವಾ: ನಡೆಕಾಗದ್ ನಡ್ದೋತಲ್ಲ. **ನಡ್ದೋತಲ್ಲ[2]** /*nɛḍdɔ:talla*/ ನಡೆದುಕೊಂಡು ಹೋದನು/ಹೋದಳು. he/she walked away. ವಾ: ಅಂವ ಈಗ ಇತ್ತ ಕಡೆಂದ ನಡ್ದೋತಲ್ಲ.

ನಡ್ದ್ ಬಂದುಟು /*naḍdɨ banduṭu*/ ಕ್ರಿವಿ. ಹಿಂದಿನ ಕಾಲದಿಂದಲು ಆಚರಣೆಯ ಮೂಲಕ ಬಂದಿರುವ ಆಚಾರ, ವಿಚಾರ ಪದ್ಧತಿಗಳು. ancient traditional rituals. ವಾ: ಮೈಮೇಲೆ ಬಂದಂವ ಅಕ್ಕಿನ ಮೇಲೆ ಹಾಕಿ ಹಿಡ್ದ್ ಬಕ್ತಂಗೆ ಕೊಡಕನ 2, 4, 6 ರೀತಿನ ಕಾಳ್ ಸಿಕ್ಕಿರೆ ನಡ್ದ್ ಬಂದುಟು ತೇಳಿವೆ.

ನಡ್ಪಾ /*naḍpa:*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ನಡ್‌ಪು /*naḍɨpu*/ ನಾ. 1. ಆಚಾರ ವಿಚಾರ, 2. ಪದ್ಧತಿ. 1. rituals, 2. custom. ವಾ: ನಮ್ಮ ನಡ್‌ಪುನ ನಾವ್ ಮರೆಕಾದ್.

ನಡ್‌ಮನೆ ದೀಪ /*naḍimanɛ di:pa*/ ನಾವಿ. 1. ಎರಡೂ ಪಕ್ಷವನ್ನು ಬೆಂಬಲಿಸು, 2. ಅಡ್ಡ ಗೋಡೆ ಮೇಲೆ ದೀಪ ಇಟ್ಟಂತೆ ಮಾತನಾಡು. 1. to support both the sides, 2. to waver in one's opinion. ವಾ: ಅಂವನ ಮಾತ್ ನಡ್‌ಮನೆ ದೀಪದಂಗೆ.

ನಡ್ಯಕೆ /*naḍyakɛ*/ ಕ್ರಿ. ನಡೆಯಲು. to walk. **ನೋಡಿಕೆ ಹಕ್ಕಲೆ, ನಡ್ಯಕೆ ದೂರ – ಹುತ್ತ(ಒ).** ವಾ: ಇನ್ಸ್ ನಡ್ಯಕೆ ನಂಗೆ ಬೊತ್ತ್. **ನಡ್ಯಕನ** /*naḍyakana*/ 1. ನಡೆವಾಗ, 2. ನಡೆಯುತ್ತಿರುವಾಗ. while walking. ವಾ: ಗದ್ದೆಲಿ ನಡ್ಯಕನ ಕೂಳೆ ಗುತ್ತಿಗ ಇದ್ದದೆ ನೋಡಿಕ ಕಾಲಿಗೆ ಹೆಟ್ಟುದು. **ನಡ್ಯದಂಗೆ** /*naḍyadaŋgɛ*/ 1. ಆಚರಿಸಲಾಗದ ಸ್ಥಿತಿ, 2. ನಡೆಯಲಾರದ ಸ್ಥಿತಿ. 1. not able to practice, 2. unable to walk. ವಾ: ಹಬ್ಬ ನಡ್ಯದಂಗೆ ತಡ್ದದ್ ಯಾಕೆಗಡ? ಪ: ನಡ್ಯದು – ಆಗುವುದು/ಗಟಿಸುವುದು. **ನಡ್ಯೊಕುತಾ** /*naḍyɔkuta:*/ 1. ನಡೆಯುವುದು, 2. ಕಾಲು ನಡಿಗೆ. 1. walking, 2. by walk. ವಾ: ಡಾಕ್ಟ್ರ್ ದಿನಾ ಹೊತಾರೆ, ಹಿಂಬೊತ್ ನಡ್ಯೊಕುತಾ ಹೇಳ್ಯೊಳೊ.

ನಡ್ಯಾಚೆ /*naḍya:cɛ*/ ನಾ. 1. ತೊಲಗು, 2. ದೂರ ಸರಿ, 3. ಬಿಟ್ಟು ಹೋಗು, 4. ಕೋಪದ ಬೈಗುಳ ಪದ. 1. to go away, 2. to stand away ,3. to leave. ವಾ: ಕಣ್ಣೆದುರಿಗೆ ಇರ್‌ಬಡ ನಡ್ಯಾಚೆ.

ನಡ್‌ರಾತ್ರಿ /*naḍira:tri*/ ನಾ. 1. ಮಧ್ಯರಾತ್ರಿ. midnight. ವಾ: ಕುಡ್ಕಂಡ್ ನಡ್‌ರಾತ್ರಿ ಮನೆಗೆ ಬಂದರೆ ಮನೆವಳಿಗೆ ಸೇರ್‌ಸಿಕಾದ್.

ನಡ್ಸ್ /*naḍsɨ*/ ಕ್ರಿ. 1. ನಡೆಸು, 2. ನೋಡಿಕೊಳ್ಳು, 3. ಜವಾಬ್ದಾರಿ ತೆಗೆದುಕೊಳ್ಳು, 1. to manage, 2. to oversee, 3. to take responsibility. ವಾ: ಹಿರಿ ಮಜ್ಜನೆ ಮನೆ ನಡ್ಸುದು. ಪ: ನಡ್ಸತಾಒಳೆ – ನಡೆಸುತ್ತಿದ್ದೇನೆ; ನಡ್ಸಿಕಂಡೋದೊ – ನಡೆಸಿಕೊಂಡು ಹೋದರು; ನಡ್ಸಿಕಂಡ್ – ನಡೆಸಿಕೊಂಡು; ನಡ್ಸಿಕಾದು – ನಡೆಸಬಹುದು; ನಡ್ಸಿಕೆ – ನಡೆಸಲು; ನಡ್ಸಿದ – ನಡೆಸಿದ; ನಡ್ಸಿದೊ – ನಡೆಸಿದರು; ನಡ್ಸೊಕು – ನಡೆಸಬೇಕು; ನಡ್ಸ್ ಸೋವು – ನಡೆಸುವವರು; ನಡ್ಸುದು

ನಣ್ಕ /*naŋka*/ ನಾ. 1. ಮೈದುನ, 2. ಗಂಡನ ಸಹೋದರ. brother of one's husband. ವಾ:

ನಣ್ಣಂಗೆ ಸಿಟ್ಟ್ ಬಂದುಟು. ಪ: ನಂಣ್ಣಂಗೆ – ಮೈದುನನಿಗೆ

ನದ್‌ರ್ /*nadiri*/ ನಾವಿ. 1. ಯಾವುದಕ್ಕೂ ಸ್ಪಂದಿಸದವ, 2. ನಿರಾಸಕ್ತ. 1. steadfastness, 2. not having any interest in anything. **ನದ್‌ರ್ ಸದ್‌ರ್ ಇಲ್ಲದಂವ(ಗಾ).** ವಾ: ಎಂತ ಹೇಳಿರು ನದ್‌ರ್‌ನಾಂಗೆ ಇರ್‌ದು.

ನನ್ನ /*nanna*/ ಸನಾ. ನನ್ನ. mine. ವಾ: ನನ್ನ ಕಂಡ್ ಅಣ್ಣಿಗ್ ಎಂತಕೆ? **ನನಕ್ಕಲೆ** /*nanakkalɛ*/ ನನ್ನ ಹತ್ತಿರ. with me. ವಾ: ನನಕ್ಕಲೆ ಚಿನ್ನ ಬೆಳ್ಳಿ ಎಂತನೂ ಇಲ್ಲೆ. **ನನ್‌ಕಿಂತ** /*nanikinta*/ ನನಗಿಂತ. none other than me. ವಾ: ನಂಕಿಂತ ಮೂರ್ ವರ್‌ಸಕೆ ಸಣ್ಣದ್. **ನನ್ದ್** /*nandi*/ 1. ನನ್ನದು, 2. ತನ್ನದು. 1. mine, 2. belonging one's own self. ವಾ: ಅವು ಆ ಪುಸ್ತಕನ ನನ್ದ್‌ತ ಹೇಳ್‌ತ್ತಿದ್ದೊ. **ನನ್ನಂಗೆ** /*nannaŋgɛ*/ ನನ್ನ ಹಾಗೆ. like me. ವಾ: ನನ್ನಂಗೆ ರಾಗಿಮುದ್ದೆ ತಿಂದರೆ ಯಾವ ರೋಗನು ಬಾಕಿಲೆ. **ನನ್ನಂದ ಬೊತ್ತ್** /*nannanda botti*/ ನನ್ನಿಂದ ಸಾಧ್ಯವಿಲ್ಲ. impossible for me. ವಾ: ಇನ್ನ್ ಸುಳ್ಳೇಳಿಕೆ ನನ್ನಂದ ಬೊತ್ತ್. **ನನ್ನದೆಂತ** /*nannadɛnta*/ ನನ್ನದೇನಿದೆ. what is there. ವಾ: ನನ್ನದೆಂತ ಮಾಮೂಲಿ ಅದೇ ಕೆಲ್ಸ, ಹೋದು ಬಾದು. ಪ: ನನ್ನದೆಂತಿಲ್ಲೆ – ನನ್ನದೇನಿಲ್ಲ. **ನನ್ನಷ್ಟೆ** /*nannaṣṭɛ*/ ನನ್ನಷ್ಟೆ. like me. ವಾ: ಅವುಳು ನನ್ನಷ್ಟೆ ಬೆಳ್ಳಂಗಿರ್‌ದು. **ನನ್ನಿಂದ ತೀರ್ದುಲೆ** /*nanninda ti:rdulɛ*/ ನನ್ನಿಂದ ಸಾಧ್ಯವಿಲ್ಲ. impossible for me. ವಾ: ಇಷ್ಟ್ ಬರೆಕೆ ನನ್ನಿಂದ ತೀರ್ದುಲೆ. **ನನ್ನಿಂದ ಹರಿಯಲೆ** /*nanninda hariyalɛ*/ 1. ನನ್ನಿಂದಾಗದು, 2. ತನ್ನಿಂದ ಸಾಧ್ಯವಾಗದು. 1. impossible for me, 2. not possible for me. ವಾ: ಸೌದೆ ಒಟ್ಟಿಕೆ ನನ್ನಿಂದ ಹರಿಯಲೆ.

ನನ್ನಯೋಗ /*nannayo:ga*/ ಸನಾ. 1. ನನ್ನ ಅದೃಷ್ಟ, 2. ಷಡ್ದರ್ಶನಗಳಲ್ಲಿ ಒಂದು, 3. ಜ್ಯೋತಿಶ್ಯಾಸ್ತ್ರದಲ್ಲಿ ಒಂದು ಕಾಲಕ್ರಮ. 1. my luck, 2. one of the six views or six insights in Hindu philosophy, 3. a phase/period in Hindu astrology. ವಾ: ನನ್ನಯೋಗ ಇಂತ ಹೆಣ್ಣ್ ಸಿಕ್ತ್.

ನನ್ನಾರಿ ಬೇರ್ /*nanna:ri be:ri*/ ನಾ. 1. ನಾಟಿ ಮದ್ದಿನ ಗಿಡ, 2. ಸೊಗದೆ ಬೇರು, 3. ಸುಗಂಧೀ ಬೇರು, 4. ಸುಕುಮೊರ್ ಬೇರ್. Indian sarsaparilla, a medicinal plant. ವಾ: ನನ್ನಾರಿ ಬೇರ್‌ನ ಕಸಾಯ, ಜೂಸ್, ಚಾಯ ಮಾಡಿ ಕುಡ್ಯಕ್.

ನನ್ನೆರಿ /*nannɛri*/ ನಾ. ಕುಚ್ಚಲು ಅಕ್ಕಿಯನ್ನು ಹುರಿದು ಮಾಡಿದ ಹುಡಿ. flour made of boiled rice. ವಾ: ನನ್ನೆರಿ ಮಾಡಿಸಿದ್.

ನಪ್ಪರೆ /*napparɛ*/ ನಾ. 1. ಜಿಪುಣ, 2. ಆಸೆಬುರುಕ. 1. stingy, 2. desirous. ವಾ: ಅಂವ ಬೊರಿ ನಪ್ಪರೆ ಮೊನ್ಸ. ಪ: ನಪರೆ, ನಪಾರೆ

ನಮಸ್ಕಾರ /*namaska:ra*/ ನಾ. 1. ನಮಸ್ಕಾರ 2. ನಮಸ್ತೆ. greeting someone with folded hands. ವಾ: ನಮಸ್ಕಾರ ಮಾಡಿ.

ನಮೂನೆನ /*namu:nɛna*/ ನಾ. 1. ಮಾದರಿ, 2. ಪ್ರಕಾರ, 3. ರಚನಾಕ್ರಮ, 4. ರೀತಿ, 5. ಬಗೆ, 6. ತರಹ, 7. ಅರ್ಜಿ, ದಾಖಲೆ ಮೊದಲಾದವುಗಳ ಬಗ್ಗೆ ಉಲ್ಲೇಖಿಸಬೇಕಾದ ಅಂಶಗಳನ್ನೊಳಗೊಂಡ ಪತ್ರ. 1. a model, 2. a variety, 3. a structure, 4. type, 5. kind, 6. resembling, 7. application with references. ವಾ: ಈ ನಮೂನೆನ ಲೆಕ್ಕಪತ್ರ ತಯಾರ್ ಮಾಡೊಕು.

ನಮಿಗೆ /*namigɛ*/ ಸನಾ. ನಮಗೆ. to us. ವಾ: ನಮಿಗೆ ದೇವರೇ ಗೆತಿತ ನಂಬಿದ್. **ನಮ್‌ಗೆ** /*namigɛ*/. ನಮಗೆ. to us. ವಾ: ನಮ್ಗೆ ಬಾರಿ ಆಸ್ತಿಯೊಂದೆಂತ ಇಲ್ಲೆ, ಇರ್‌ದುರ್‌ಲೆ ಕುಸಿಪಡ್ದು. **ನಮ್‌ದ್** /*namidi*/. ನಮ್ಮದು. ours. ವಾ: ಇವೆಲ್ಲ ನಮ್ಮದ್‌ಂತ ಹೇಳಿಕೆ ಕುಸಿಯಾದೆ. **ನಮ್ಮಂದ** /*nammanda*/ ನಮ್ಮಿಂದ. from us. **ಅಣ್ಣ ನಮ್ಮಂವ ಆದರೆ, ಅತ್ತಿಗೆ ನಮ್ಮವಳು ಅಲ್ಲ(ಗಾ).** ವಾ: ನಮ್ಮಂದ ಯಾರಿಗೂ ಬಂಗ ಆಕಾಗದ್. ಪ: ನಮ್ಮಂದಾಕಿಲೆ – ನಮ್ಮಿಂದಾಗದು; ನಮ್ಮಂದಾದು – ನಮ್ಮಿಂದ ಆಗಬಹುದು. **ನಮ್ಮದರಲ್ಲಿ** /*nammadaralli*/ 1. ನಮ್ಮಲ್ಲಿ, 2. ನಮ್ಮ ಪದ್ಧತಿಯಲ್ಲಿ. 1. among us, 2. according to our custom. ವಾ: ನಮ್ಮದರಲ್ಲಿ ಸೀರೆ ಉಡ್ಕನ ಸೀರೆದ್ ನೆರಿಗೆ ಮುಂದೆನೆ ಇದ್ದದೆ. **ನಮ್ಮವು** /*nammɔvu*/ 1. ನಮ್ಮವರು, 2. ನಮ್ಮ ಮನೆಯವರು, 3. ಯಜಮಾನರು, 4. ಪತಿ. my husband. ವಾ: ನಮ್ಮವು ಬಂದೊ ಕಂಡದೆ. **ನಮ್ಮವೆಲ್ಲಾ** /*nammɔvɛlla:*/ 1. ನಮ್ಮವರೆಲ್ಲ, 2.

ಜನಾಂಗದವರು, 3. ಬಂಧುಬಾಂಧವರು. 1. all our relatives, 2. from our community, 3. relatives. ವಾ: ನಮ್ಮವೆಲ್ಲಾ ಒಟ್ಟಾಗಿ ಸೇರೊಕು. **ನಮ್ಮವ್‌ಕೆ** /*nammavɨkɛ*/ 1. ನಮ್ಮವರಿಗೆ, 2. ಸಮುದಾಯದವರಿಗೆ, 3. ನನ್ನ ಯಜಮಾನರಿಗೆ. 1. to our relatives, 2. to the people of our community, 3. to my husband. ವಾ: ನಮ್ಮವ್ಕೆ ಇದೆಲ್ಲ ಲಾಯ್ಕ್ ಆದ್ಲೆತ. **ನಮ್ಮೊಟ್ಟಿಗೆ** /*nammɔṭṭigɛ*/ 1. ನಮ್ಮ ಜೊತೆ, 2. ನಮ್ಮೊಂದಿಗೆ. 1. with us, 2. together. ವಾ: ನಮ್ಮೊಟ್ಟಿಗೆ ಮಾತಾಡ್ದುಲೆ. **ನಮ್ಮೊಳಗೆ** /*nammoḷɛgɛ*/ 1. ನಮ್ಮವರಲ್ಲಿ, 2. ನಮ್ಮ ಒಳಗೆ. 1. among us, 2. within us. ವಾ: ಆಗ ನಮ್ಮೊಳಗೆ ಬಾರಿ ಒಗ್ಗಟ್ಟ್ ಇತ್ತ್.

ನಮ್ಮೂರ /*nammu:ra*/ ನಾ. ನಮ್ಮ ಊರಿನ. of our town. ವಾ: ನಮ್ಮೂರ ಜಾತ್ರೆಗೆ ಎಲ್ಲೊವು ಬನ್ನಿ.

ನಮ್ಮೆ /*nammɛ*/ ನಾ. ಹಬ್ಬ. festival. ವಾ: ಊರ ನಮ್ಮೆಗೆ ಹೊರ್‌ಟದ್.

ನಮ್‌ಸ್ಕಾರ /*nasɨka:ra*/ ನಾ. 1. ನಮಸ್ಕಾರ, 2. ಗೌರವ ಸೂಚಕವಾಗಿ ಕೈ ಮುಗಿದು ತಲೆಬಾಗುವುದು, 3. ವಂದನೆ. to greet someone with folded hands. ವಾ: ದೊಡ್ಡವ್‌ಕೆ ನಮ್‌ಸ್ಕಾರತೇಳ್‌ದು ಒಳ್ಳ ಸಂಸ್ಕಾರ.

ನಯ /*naya*/ ನಾ. 1. ನುಣುಪು, 2. ಮೃದುತ್ವ, 3. ಸೌಮ್ಯತೆ, 4. ವಿನಯ, 5. ಸೌಜನ್ಯ. 1. smooth, 2. soft, 3. gentle, 4. polite, 5. courtesy. **ನಯ ಇದ್ದರೆ ಬಯ ಇಲ್ಲೆ(ಗಾ).** ವಾ: ಮೊನ್ಸ ವಿದ್ಯೆ ಕಲ್ತಂಗೆ ನಯ, ವಿನಯ ಅಂವನಲ್ಲಿ ಹೆಚ್ಚಿ ಇರೊಕು.

ನರ /*nara*/ ನಾ. 1. ನರ, 2. ರಕ್ತ ಸಂಚರಿಸುವ ವಾಹಕಗಳು. 1. veins, 2. nervous system. ವಾ: ನರ ಊದಿ ಹಸ್ರ್ ಆತ್.

ನರಪಿಳ್ಳೆ /*nara piḷḷɛ*/ ನಾ. 1. ಮನುಷ್ಯ, 2. ಮಾನವ. 1. a man, 2. a human. ವಾ: ಒಂದೇ ಒಂದು ನರ ಪಿಳ್ಳೆ ಕಾಂಬಲೆ, ನಾವೆ ಇರ್‌ದು ಕಂಡದೆ ಇಲ್ಲಿ.

ನರಂಬು /*narambu*/ ನಾ. ರಕ್ತನಾಳ. veins. ವಾ: ನರಂಬುಲಿ ರಕ್ತ ಹರೆದು.

ನರಗಂಟ್ /*naragaṇṭi*/ ನಾ. ಚಳಿಗೆ ನರಗಳು ಗಂಟಿಕ್ಕಿಕೊಳ್ಳುವುದು. thrombosis. ವಾ: ಚಳಿಗೆ ನರಗಂಟ್ ಆದು.

ನರಜಲ್ಮ /*narajalma*/ ನಾ. ಮಾನವ ಜನ್ಮ. human life. ವಾ: ನರಜಲ್ಮ ಸಾಕಪ್ಪ.

ನರಜೆ /*narajɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ನರಪಚೆ /*narapacɛ*/ ನಾ. 1. ಒರಟು ಕೂದಲಿನ ಕಂಬಳಿ ಹುಳು, 2. ಪತಂಗ, ಚಿಟ್ಟೆ ಮುಂತಾದ ಆರ್ತ್ರಾಪೋಡ ವಿಭಾಗದಲ್ಲಿ ಇರುವ ಲೆಪಿಡಾಪ್ಟರ ಗಣದ ಕೀಟಗಳ ಲಾರ್ವ ಅಥವಾ ಡಿಂಬಸ್ಥಿತಿ, 3. ಮೈಮೇಲೆ ತುಪ್ಪಟವಿರುವ ಒಂದು ಬಗೆಯ ಹುಳು, 4. ಕೋರಿಹುಳು. a caterpillar, a worm which develops into a moth or a butterfly. ವಾ: ನರಪಚೆ ಸಸ್ಯಹಾರಿ, ದೈನೆಲ್ಲ ತಿಂದ್ ಹಾಳ್‌ಮಾಡ್ದೆ.

ನರಪಡೆ /*narapaḍɛ*/ ನಾ. ಜನರ ಪಡೆ. a group of people. ವಾ: ನರಪಡೆ ಅಲ್ಲಿ ಒಂದ್ ಕಡೆ ಸೇರಿಯೊಳೊ.

ನರಮಾನ್ತಿ /*narama:nti*/ ನಾ. 1. ವ್ಯಕ್ತಿ, 2. ಮನುಷ್ಯ(ಸ್ತ್ರೀ). 1. a man, 2. a human. ವಾ: ಅದೊಂದ್ ನರಮಾನ್ತಿಯ ಕಂಡರು ಕಾಣದಂಗೆ ಹೋತ್.

ನರಮೊನ್ಸ /*naramɔnsa*/ ನಾ. ನರ ಮನುಷ್ಯ. a human. ವಾ: ನರಮೊನ್ಸಂತೇಲಿ ಒಂದೂ ಕಾಂಬಲೆ ಈ ದಾರಿಲಿ.

ನರಲು /*naralu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ನರಸಿಂಹಪುರ /*narasinhapura*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಸುಬ್ರಹ್ಮಣ್ಯ ಗ್ರಾಮದ ಜಾಗ. a locality in Subramanya village in Sullia Taluk of Dakshina Kannada District.

ನರಳ್‌ಸುದು /*naraḷɨsudu*/ ಕ್ರಿ. ನರಳಿಸುವುದು. to make someone suffer. ವಾ: ದೇವ್ರು ನಮ್ಮ ಹಿಂಗೆ ಯಾಕೆತ ನಳ್ರ್ಸುದು.

ನರಿಮಂಗಲ /*narimaŋgala*/ ನಾ. ಹುಲಿಯನ್ನು ಕೊಂದ ವೀರನಿಗೆ ನಡೆಸುವ ಅಭಿನಂದನಾ ಸಮಾರಂಭ. celebrating the heroics of the

man who has killed a tiger. ವಾ: ಹಿಂದೆನ ಕಾಲಲಿ ನರಿ ಮಂಗಲತ ಮಾಡ್ತಿದ್ದೊ.

ನರಿಯೂರು /*nariyu:ru*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕನಕಮಜಲು ಗ್ರಾಮದ ಜಾಗ. 1. family, 2. lineage, 3. a locality in Kanakamajalu village in Sullia Taluk of Dakshina Kannada District.

ನರುಂಬು ಸತ್ತಂವ /*narambu sattava*/ ನಾ. ಲವಲವಿಕೆ ಇಲ್ಲದ, ನಿರಾಸಕ್ತಿ. inactive, uninterested.

ನರೆ /*narɛ*/ ನಾ. 1. ಕಾಡಿನಲ್ಲಿ ಬೆಳೆಯುವ ಬೇಯಿಸಿ ತಿನ್ನಬಹುದಾದ ಗಡ್ಡೆ, 2. ಒಂದು ಜಾತಿಯ (ಕಾಡುಗೆಣಸು) ಗೆಣಸು. a kind of sweet potato, wild potato, 2. a yam. ವಾ: ನರೆನ ಬೇಸಿ ತಿಂಬೊದು.

ನರೋಳು ಮರ /*naro:ḷu mara*/ ನಾ. 1. ನೊರೆಕಾಯಿ ಮರ, 2. ಅಂಟುವಾಳ ಮರ. soapnut tree. ವಾ: ನರೋಳು ಮರಕೆ ಹತ್ತಿದ್.

ನರ್ಂಡೆ ಬೊಳ್ಳಿ /*nariṇḍɛ bɔḷḷi*/ ನಾ. ಒಂದು ಬಗೆಯ ಕಾಡು ಬಳ್ಳಿ, ಪರಾವಲಂಬಿಯಾದ ಇದು ಮರಕ್ಕೆ ಹತ್ತುತ್ತದೆ, ಈ ಬಳ್ಳಿಯನ್ನು ಕಡಿವಾಗ ಬಳ್ಳಿಯ ರಸ ಮೈಗೆ ಮುಟ್ಟಿದರೆ ತುರಿಸುತ್ತದೆ, ಅಸ್ತಮಾ ರೋಗಕ್ಕೆ ಔಷಧವಾಗಿ ಉಪಯುಕ್ತ. a creeper. Used in medicine to cure asthma. ವಾ: ನರ್ಂಡೆ ಬೊಳ್ಳಿ ರಸ ಮೈಗೆ ಹಾರಿರೆ ತೊರ್‌ಸಿದೆ. ಪ: ನರ್ಂದೆ ಬೊಳ್ಳಿ, **ನರ್ಂದೆ ಬೊಳ್ಳಿ** /*narindɛ bɔḷḷi*/ ನರ್ಂಡೆ ಬೊಳ್ಳಿ, a creeper.

ನರ್ಕ /*narka*/ ಕ್ರಿ. 1. ನರಕ, 2. ಪಾಪ ಮಾಡಿದವರನ್ನು ಶಿಕ್ಷಿಸುವ ಸ್ಥಳವೆಂದು ನಂಬಲಾಗಿರುವ ಲೋಕ, 2. ಅತಿಯಾದ ಬಜ್ಜ, 3. ಅಧೋಲೋಕ. 1. hell, 2. a belief in a place where evil people will be punished after their death, 3. having enormous difficulties, 4. the place at the bottom of the cosmos. **ಊರು ಬುಟ್ಟವಂಗೆ, ನರ್ಕ ಹಂಗ್ಯಾಕೆ(ಗಾ).** ವಾ: ನರ್‌ಕ ಸ್ವರ್ಗ ಎಲ್ಲ ಈ ಬೂಮಿ ಮೇಲೆನೆ ಇರ್‌ದು. **ನರ್ಕಬಾದು** /*narka ba:du*/ 1. ಕಷ್ಟ ಪಡುವುದು, 2. ನರಳುವುದು. 1. be in pain, 2. suffering. ವಾ: ಕಾಯ್ಲಲಿ ಯಾಗೊಲು ನರ್ಕ ಬಾದು. **ನರ್ಕಟ** /*narkaṭa*/ 1. ನರಳುವುದು 2. ಗಾಯಗೊಂಡಾಗ ನೋವಿನಿಂದ ರೋಧಿಸುವುದು 3. ನಿದ್ರೆಯಲ್ಲಿ ನರಳುವುದು. 1. to moan, 2. to cry in pain, 3. to moan in sleep. ವಾ: ಅಂವ ಮಲ್ಗಿದ ಮೇಲೆ ನರ್ಕಿದೆ. **ನರ್ಕಿಕಂಡ್** /*narkikaṇḍi*/ 1. ನರಕು, 2. ನರಳಾಡು, 3. ಮುಲುಕು ಹಾಕು. 1. to suffer, 2. to be in pain 3. to suffer. ವಾ: ಅಜ್ಜಿ ನರ್ಕಿಕಂಡ್ ಬಾತ್. **ನರ್ಕುದು** /*narkudu*/ 1. ಖಾಯಿಲೆಯಾದಾಗ ಹೊರಡಿಸುವ ಸಂಕಟದ ಸ್ವರ, 2. ಮುಲುಕು. 1. to moan, 2. a painful plaintive cry. ವಾ: ಕಾಯ್ಲ ಬಾಕನ ಬೇನೆ ತಡೆಕಾಗದೆ ನರ್ಕುದು.

ನರ್ಕುಸುದು /*narkusudu*/ ಕ್ರಿವಿ. 1. ತೊಂದರೆ ಕೊಡುವುದು, 2. ಹಿಂಸೆ ಮಾಡುವುದು. 1. to trouble, 2. to torture. ವಾ: ನರ್‌ಕ ಸ್ವರ್ಗ ಎಲ್ಲ ಈ ಬೂಮಿ ಮೇಲೆನೆ ಇರ್‌ದು.

ನರ್ಕ್ /*narki*/ ನಾ. 1. ಅತ್ಯಂತ ನೋವು, 2. ಕಷ್ಟದ ಸಂಕಷ್ಟದ ಪರಿಸ್ಥಿತಿ, 3. ಕೋಳಿ ಮೊಟ್ಟೆ ಇಡುವ ಸಂದರ್ಭದಲ್ಲಿ ಹೊರಡಿಸುವ ಧ್ವನಿ. 1. sever pain, 2. a period of great difficulty, 3. the sound produced by a hen while laying eggs. ವಾ: ನರ್ಕ್‌ನ ಬೊದ್ಕ್. ಪ: ನರ್ಕಿತ್ತ್ – ನರಳಿದನು/ಳು; ನರ್ಕುದು – ನರಳುವುದು

ನರ್ಗುಳಿ /*nɛrguḷi*/ ನಾ. 1. ಭತ್ತ ಕುಟ್ಟುವ ಗುಂಡಿ, 2. ಭತ್ತ ಕುಟ್ಟುವ ಗುಳಿ, 3. ಧಾನ್ಯಗಳ ನುರಿಯುವ ಕುಳಿ. 1. a mortar used in pounding paddy, 2. pounding paddy in a mortar, 3. a mortar to grind. ವಾ: ನರ್ಗುಳಿಗೆ ಹಾಕಿ ಬತ್ತ ಕುಟ್ಟುದು. ಪ: ನೊರ್ಗುಳಿ

ನರ್ಡ್ /*narḍi*/ ನಾ. ದನಗಳಿಗೆ ಅಜೀರ್ಣ ಆಗುವುದು. a cows suffering from indigestion. ವಾ: ದನಕೆ ನರ್ಡ್ ಆವ್ವು ಕಂಡದೆ.

ನರ್ಡ್‌ಬೊಳ್ಳಿ /*narḍibɔḷḷi*/ ನಾ. ಒಂದು ಬಗೆಯ ಕಾಡು ಬಳ್ಳಿ. a wild creeper. ವಾ: ನರ್ಡ್ ಬೊಳ್ಳಿ ಕಾಡ್‌ಲಿ ಸಿಕ್ಕಿದೆ.

ನರ್ಣಯ /*narṇaya*/ ನಾ. 1. ತೀರ್ಮಾನ, 2. ಕೊನೆಯಮಾತು, 3. ನಿರ್ಧಾರ, 4. ಗೊತ್ತುವಳಿ. 1. a

decision, 2. last word, 3. a decision, 4. a resolution. ವಾ: ಏನಾರ್ ಒಂದ್ ನರ್ಣಯ ಮಾಡಿ.

ನರ್ತ್ /*narti*/ ಕ್ರಿ. ಕೂದಲು ಬೆಳ್ಳಗಾಗು. grey hair. **ನರ್ತುಟು** /*nartuṭu*/ ಕೂದಲು ಬಿಳಿಯಾಗಿದೆ. grey hair. ವಾ: ಸಣ್ಣವನಿರಿಕನೆ ಕೂದೊಲು ನರ್ತುಟು. ಪ: ನರ್ದೊಳ – ನೆರೆತ ಕೂದಲಿನವರು. **ನರ್ತ್ಲೆ** /*nartlɛ*/ ನಾ. 1. ಕೂದಲು ನೆರೆಯಲಿಲ್ಲ, 2. ಕೂದಲು ಬಿಳಿಯಾಗಲಿಲ್ಲ. hair has not turned grey. ವಾ: ಇಲ್ಲೆ ಕೂದೊಲು ನರ್ತ್ಲೆ.

ನರ್ತೆ /*nartɛ*/ ನಾ. ಗದ್ದೆಯ ಕೆಸರಿನಲ್ಲಿರುವ ಒಂದು ಜಾತಿಯ ಚಿಪ್ಪುಮೀನು. a shellfish found in marshy land. ವಾ: ನರ್ತೆ ಮೀನ್ ಗದ್ದೆಲಿರ್‌ದು.

ನರ್ಪ /*narpa*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ದೇವಚಳ್ಳ ಗ್ರಾಮದ ಜಾಗ. a locality in Devacalla village in Sullia Taluk of Dakshina Kannada District.

ನರ್ಪಚ /*narpaca*/ ನಾ. 1. ಒರಟು ಕೂದಲಿನ ಕಂಬಳಿ ಹುಳು, 2. ಪತಂಗ, ಚಿಟ್ಟೆ ಮುಂತಾದ ಆರ್ತ್ರಾಪೋಡ ವಿಭಾಗದಲ್ಲಿ ಇರುವ ಲೆಪಿಡಾಪ್ಟರ ಗಣದ ಕೀಟಗಳ ಲಾರ್ವ ಅಥವಾ ಡಿಂಭಸ್ಥಿತಿ, 3. ಮೈಮೇಲೆ ತುಪ್ಪಟವಿರುವ ಒಂದು ಬಗೆಯ ಹುಳು, 4. ಕೋರಿಹುಳು. a caterpillar, a worm that becomes a moth or a butterfly. ವಾ: ನರ್ಪಚ ಮುಟ್ಟಿರೆ ಕೆಲೊವ್‌ಕೆ ನಂಜಿ ಆದೆ.

ನರ್ಪಜ /*narpaja*/ ನಾ. 1. ನರ್ಪಚ, 2. ಕಂಬಳಿಹುಳು. a caterpillar, a worm that becomes a moth or a butterfly. ವಾ: ನರ್ಪಜ ಮುಟ್ಟಿ ಮೈಯೆಲ್ಲ ತೊರ್‌ಸಿ ಕೆಂಪಾವ್ಟು.

ನರ್ಪಜೆ /*narpajɛ*/ ನಾ. ಏಲಕ್ಕಿ ಮತ್ತು ಕಾಫಿ ತೋಟದಲ್ಲಿ ಕಾಣಿಸಿಕೊಳ್ಳುವ ಕಂಬಳಿ ಹುಳ, ಅದರ ಬಣ್ಣ ಕಪ್ಪು ಮತ್ತು ಬಿಳಿಪು, ಅದರ ರೋಮ ಕಾಲಿಗೆ ಚುಚ್ಚಿದರೆ ವಿಷಕಾರಿ. a blanket worm, a venomous insect, usually found in coffee and cardamom plantations. ವಾ: ನರ್ಪಜೆನ ಜುಂಗು ಬೆರಳ್ ಸೆರೆಗೆ ಕುತ್ತಿಕಂಡುಟ್ಟು.

ನರ್ಪಾ /*narpa:*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ನರ್ಲಡ್ಕ /*narlaḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಎಣ್ಮೂರು ಗ್ರಾಮದ ಜಾಗ. a locality in Enmuru village in Sullia Taluk of Dakshina Kannada District.

ನರ್ವಿಸ /*narvisa*/ ನಾ. 1. ನಾಗ ದಾಳಿ, 2. ಔಷಧಿ ಸಸ್ಯ, 3. ಹಾವಿಗೆ ಅಪ್ರಿಯವಾದ ಕಟುವಾದ ವಾಸನೆಯುಳ್ಳ ಒಂದು ಬಗೆಯ ಗಿಡ. Common rue, Ruta graveolens, a medicinal plant. ವಾ: ಸೋಂಕಾದರೆ ಮೈಗೆ ನರ್ವಿಸನ ಉಜ್ಜಿವೆ. ಪ: ನರ್ವೀಸ

ನರ್ವೆತ್ತಾಡಿ /*narvetta:ḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ನರ್ವೊಳು /*narvoḷu*/ ನಾ. 1. ಅಂಟುವಾಳ, 2. ನೊರೆಕಾಯಿ. soapnut. ವಾ: ನರ್ವೊಳು ಹಾಕಿ ನೆಲ ಉಜ್ಜಿರೆ ಪಳಪಳತೇಳ್‌ದೆ. **ನರ್‌ವೊಳು ಕಾಯಿ** /*narɨvoḷu ka:yi*/ ನೊರೆ ಕಾಯಿ. soapnut. ವಾ: ನರ್‌ವೊಳ್‌ಲಿ ಚಿನ್ನ ತೊಳ್ದರೆ ಬಾರೀ ಹೊಳ್ಪ್ ಮತ್ತೆ ಬಾಳ್ತರ ಬಂದದೆ.

ನರ್ಸಿ /*narsi*/ ನಾ. 1. ದಾದಿ, 2. ಆಸ್ಪತ್ರೆಯಲ್ಲಿ ರೋಗಿಗಳ ಸೇವೆಯನ್ನು ಮಾಡುವವಳು, 3. ನರ್ಸು. 1. a maid servant, 2. a woman who takes care of patients in hospitals, 3. a nurse. ವಾ: ಆಸ್ಪತ್ರೆಲಿ ನರ್ಸಿಗ ಕಾಯ್ಲುದವರ ಲಾಯ್ಕಲಿ ಆರೈಕೆ ಮಾಡಿವೆ.

ನರ್ಳ್ /*narḷi*/ ನಾ. 1. ನರಳು, 2. ಪರಿತಪಿಸು, 3. ಸಂಕಟಪಡು, 4. ಸಂಕಟದ ಧ್ವನಿ, 5. ನರಳಾಟ. 1. to suffer, 2. to grieve, 3. to lament, 4. to moan, 5. to wail. ವಾ: ಅವು ಕಾಯ್‌ಲಲಿ ನರ್‌ಳಿ ನರ್‌ಳಿ ಸತ್ತೊ.

ನಲ್‌ಕೆ /*nalɨkɛ*/ ಕ್ರಿ. 1. ನಲಿಕೆ, 2. ಕುಣಿತ, 3. ನರ್ತನ. dance. ವಾ: ಆ ಗೂಡೆಗಳ ನಲ್‌ಕೆನ ಒಮ್ಮೆ ನೋಡ್.

ನಲ್ಲಿನೀರ್ /*nallini:rɨ*/ ನಾ. 1. ನಲ್ಲಿಯ ಮೂಲಕ ಹರಿದು ಬರುವ ನೀರು, 2. ಕೊಳಾಯಿ, 3. ನಳ. 1. tap water, 2. a faucet, 3. a tap. ವಾ: ನಲ್ಲಿನೀರ್ ಇಂದ್ ಬಾತ್ಲೆತ.

ನವುಕೆ /*navukɛ*/ ನಾ. ಬಸವನ ಹುಳು. a snail. ವಾ: ನವುಕೆ ದೈನ ತಿಂಬೊದು.

ನವುಲು /*navulu*/ ನಾ. ನವಿಲು. a peacock. ವಾ: ಗಂಡ್ ನವುಲು ಕೊಣಿಯದು ನೋಡುದೆ ಕುಸಿ.

ನವುಲೆ /*navulɛ*/ ನಾ. 1. ಹೇನಿನ ಮರಿ, 2. ಮರಿ ಹೇನು. nits of louse. ವಾ: ತಲೆಲಿ ನೋಡ್ನೆ ನವುಲೆ. ಪ: ನವ್ಲೆ – ಹೇನಿನ ಸಣ್ಣ ಸಣ್ಣ ಮರಿಗಳು

ನಶ್ಯ /*nɛśya*/ ನಾ. 1. ನಶ್ಯ, 2. ನಾಸಿಕಕ್ಕೆ ಏರಿಸುವ ತಂಬಾಕಿನ ಪುಡಿ. snuff, tobacco to be inhaled. ವಾ: ನಶ್ಯ ಸೇದವರ ಮೂಕ್ ನೆಸೆ ಡಬ್ಬಿ ಆವುಟು. ಪ: ನೆಸೆ. **ನಶ್ಯಕುಪ್ಪಿ** /*nɛśyakuppi*/ 1. ನಶ್ಯ ತುಂಬಿಡುವ ಸೀಸೆ, 2. ಬಾಟಲು. snuff bottle. ವಾ: ನಶ್ಯಕುಪ್ಪಿ ತಂಬಾ. ಪ: ನೆಸೆಕುಪ್ಪಿ – ನಶ್ಯ ತುಂಬಿಡುವ ಡಬ್ಬಿ

ನಷ್ಟ /*nasṭa*/ ಕ್ರಿವಿ. ಹಾಕಿದ ಬಂಡವಾಳ ಪುನಃ ಬಾರದಿರುವುದು ಲಾಭ ಆಗದಿರುವುದು. losing one's investment. ವಾ: ಹೂನ ಯಾಪಾರಲಿ ಬಾರಿ ನಷ್ಟ ಆಗೋತ್.

ನಸ್ರಾಣಿ /*nasra:ṇi*/ ನಾವಿ. 1. ಕೆಟ್ಟ ಮನುಷ್ಯ;ಕೀಳುದರ್ಜೆಯ ವ್ಯಕ್ತಿ, 2. ಕುತಂತ್ರಿ;ಪೋಕರಿ, 3. ಬೈಗುಳ ಪದ. 1. a wicked fellow, 2. a nasty person, 3. an expletive. ವಾ: ನಸ್ರಾಣಿ ಹಕ್ಕಲೆ ಬಾರಿ ಉಸಾರಾಗಿರೋಕು.

ನಳ /*naḷa*/ ನಾ. 1. ನೊಣ, 2. ಮಕ್ಷಿಕ, 3. ಒಂದು ಬಗೆಯ ಹಾರುವ ಸಣ್ಣ ಕೀಟ. a fly, an insect. ವಾ: ಮೂಲಂಗಿ ಗೈಪು ಮಾಡಿರೆ ಸಾಕ್ ಎಲ್ಲಿದ್ದವೆಪ ನಳಗ ವಳೆಗೆ ಬಂದವೆ. ಪ: ನೆಳ

ನಳಿಕೆ /*naḷikɛ*/ ನಾ. ಕೋವಿಯಲ್ಲಿ ಮದ್ದು ಗುಂಡು ತುಂಬುವ ಜಾಗ. bullet, magazine loader in guns, rifles, etc. ವಾ: ಕೋವಿದ್ ನಳಿಕೆಲಿ ಮೊದ್ದ್ ಗುಂಡ್‌ನ ತುಂಬುದು.

ನಳಿಯಾರು /*naḷiya:ru*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮುರುಳ್ಯ ಗ್ರಾಮದ ಜಾಗ. 1. family, 2. lineage, 3. a locality in Murulya village in Sullia Taluk of Dakshina Kannada District.

ನಳ್ಳಿ[1] /*nɛḷḷi*/ ನಾ. 1. ಮಿಡಿ, 2. ಆಗತಾನೆ ರೂಪ ಗೊಂಡ ಕಾಯಿ, 3. ಅಡಿಕೆನಳ್ಳಿ. a tender/unripe fruit. ವಾ: ಅಡ್ಕೆ ನಳ್ಳಿ ಬುಡಿಕೆ ಈಗ ಸುರು.

ನಳ್ಳಿ[2] /*naḷḷi*/ ನಾ. ನೀರಿನ ನಳ್ಳಿ. water tap. ವಾ: ನಳ್ಳಿಲಿ ನೀರ್ ಬಂದದೆನಾ?

ನಳ್ಳ್[1] /*naḷḷɨ*/ ನಾ. ತೊಣಚಿ; ನಾಯಿಯ ಮೈಮೇಲೆ ಕೂತು ರಕ್ತಹೀರುವ ಒಂದು ಜಾತಿಯ ನೊಣ. a fly infesting the body of dogs. ವಾ: ನಳ್ಳ್‌ನ ಹಾರ್‌ಸ್.

ನಳ್ಳ್[2] /*naḷḷɨ*/ ನಾ. 1. ಹಠಮಾರಿ, 2. ಒಂದು ಬೈಗುಳ ಪದ. 1. a stubborn woman, 2. an expletive. ವಾ: ನಳ್ಳ್ ಗೂಡೆ.

ನಾ[1] /*na:*/ ಸನಾ. ನಾನು. me/I. **ಹೊಟ್ಟೆಗಾಗಿ ನಾ ಕೆಟ್ಟೆ(ಗಾ).** ವಾ: ನಾ ಹೋಕ ಬನ್ನೆ. **ನಾ ಬನ್ನೆ**[1] /*na: bannɛ*/ ಹೋಗಿ ಬರುತ್ತೇನೆ. will go and come back. ವಾ: ಸರಿ ಆಗ ನಾ ಬನ್ನೆ. **ನಾ ಬನ್ನೆ**[2] /*na: bannɛ*/ ನಾ ಬರುತ್ತೇನೆ. I will come. ವಾ: ನಿನ್ನೊಟಿಗೆ ನಾನು ಬನ್ನೆ. **ನಾ ಹೋನೆ** /*na: ho:nɛ*/ ನಾ ಹೋಗುತ್ತೇನೆ. I will go. ವಾ: ಹಣ್ಣ ಹೊತ್ ಬುಟ್ಟ್‌ನಾ ಹೋನೆ. **ನಾಯೆಲ್ಲ** /*na:yɛlla*/ ನಾವು ಎಲ್ಲ. all of us. ವಾ: ನಾಯೆಲ್ಲ ಹಂಗೆ ಎಂತನು ಕೇಳಿಕಂಬಲೆ.

ನಾಂಟ್ /*na:ṇṭɨ*/ ಕ್ರಿವಿ. 1. ಅರ್ಥವಾಗು, 2. ಮನಸ್ಸಿಗೆ ಅರ್ಥವಾಗು. 1. to understand, 2. to get convinced. ವಾ: ಹೇಳ್ದ್ ತಲೆಗೆ ಹಣ್ಣನಾರ್ ನಾಂಟಿತ?

ನಾಂತ /*na:nta*/ ನಾ. ಕೆಟ್ಟ ವಾಸನೆ. stench/stink. ವಾ: ಕೋಳಿ ಗೊಬ್ರ ನಾಂತಂದ ಹಕ್ಕಲೆ ನಿಲ್ಲಿಕಾಲೆ.

ನಾಕೈದ್ ದಪ /*na:kaidɨ dapa*/ ಸಂವಾ. ನಾಲ್ಕು ಐದು ಬಾರಿ. four or five times. ವಾ: ನಾಕೈದ್ ದಪ ಬಂದ್ ಹೋದೆ.

ನಾಕೊಟೆ ಬೊಳ್ಳಿ /*na:koṭɛ bɔḷḷi*/ ನಾ. 1. ಒಂದು ಜಾತಿಯ ಬಳ್ಳಿ, 2. ನವುರುಕಟ್ಟೆ, 3. ಕೊಡಕಣೆಬಳ್ಳಿ. Gnetum ula (Gnetaceae), a shrub. ವಾ: ನಾಕೊಟೆ ಬೊಳ್ಳಿತ ಒಂದ್ ಜಾತಿನ ಬೊಳ್ಳಿ.

ನಾಕ್‌ಬುಟ್ಟೆ /*na:kɨbuṭṭɛ*/ ನಾವಿ. ನಾಲ್ಕು ಹೊಡೆದೆ. to hit/to beat four times. ವಾ: ಸಿಟ್ಟ್ ಬಂದ್ ದವ್ಡೆಗೆ ನಾಕ್ ಬುಟ್ಟೆ. **ನಾಕ್‌ಬೊಡ್ಯಕು ನೀವ್ಗೆಲ್ಲ** /*na:kɨboḍyaku ni:vgɛlla*/ ಬೈಗುಳದ ಮಾತು. an expletive. ವಾ: ಮಕ್ಕಳೆ ನಾಕ್ ಬೊಡ್ಯಕು ನೀವ್ಗೆಲ್ಲ.

ನಾಕ್‌ನಡೆ /*na:kɨnaḍɛ*/ ನಾವಿ. 1. ನಾಲ್ಕು ದಾರಿಯಲ್ಲಿ, 2. ನಾಲ್ಕು ಕೂಡುವ ದಾರಿ. the place where four roads meet. ವಾ: ನಾಕ್‌ನಡೆಲಿ ಇಸೊಕು.

ನಾಗಕೇಸರಿ /*na:gake:sari*/ ನಾ. 1. ನಾಗಕೇಸರ, 2. ಔಷಧಿಯ ತಯಾರಿಕೆಯಲ್ಲಿ ಬಳಕೆಯಾಗುವ ಮರ. Iron-wood, Indian rose chestnut, a medicinal flower. ವಾ: ನಾಗ ಕೇಸರಿ ಬೇರ್‌ನ ಅರ್‌ದ್ ತಲೆ ಬೇನೆಗೆ ಹಾಕಿವೆ.

ನಾಗಸಂಪಿಗೆ /*na:gasampigɛ*/ ನಾ. 1. ನಾಗಲಿಂಗ ಪುಷ್ಪ, 2. ಲಿಂಗದ ಹೂವು, 3. ಇದು ಸುಗಂಧ ಭರಿತ ಪುಷ್ಪ, ಐದು ಹೆಡೆಯ ಹಾವಿನ, ಹೆಡೆಯ ಒಳಗೆ ಲಿಂಗದ ಆಕೃತಿಯನ್ನು ಈ ಪುಷ್ಪ ಹೊಂದಿದೆ, ಈಶ್ವರ ದೇವಸ್ಥಾನವಿರುವಲ್ಲಿ ಈ ಮರ ಹೆಚ್ಚಾಗಿ ಕಾಣಸಿಗುತ್ತದೆ, ಬೇಸಿಗೆ ಕಾಲದಲ್ಲಿ ಅರಳುವ ಈ ಹೂ, ಮರ ದೊಡ್ಡದಾಗುತ್ತಿದ್ದಂತೆ ಇಡಿ ಮರದ ರೆಂಬೆ ಕೊಂಬೆಗಳಲ್ಲಿ ಅರಳುತ್. Ceylon ironwood, or cobra saffron flower. The flower has five white petals in the shape of snake's hood and a centre of numerous yellow stamens resembling a Shiva linga. Usually planted near Shiva temples. The flower blooms in summer. Has medicinal proper. ವಾ: ನಾಗ ಸಂಪಿಗೆ ಹೂ ನೋಡಿಕೆ ಲಿಂಗದ ಮೇಲೆ ನಾಗರ ಹಾವ್ ಹೆಡೆ ಎತ್ತಿದಂಗೆ ಕಂಡದೆ, ಈ ಹೂ ಪೆಬ್ರವರಿ, ಮಾರ್ಚಿ ಇಲ್ಲರೆ ಏಪ್ರಿಲ್, ಮೇ ತಿಂಗಳ್‌ಲಿ ಕಂಡ್ ಬಂದದೆ. **ನಾಗಸಂಪಿಗೆ ಮರ** /*na:ga sampigɛ mara*/ ಏಷಿಯಾಖಂಡ ಈ ಮರದ ಉಗಮಸ್ಥಾನ, ಹಿಂದೂ ದೇಶದಲ್ಲಿ ಪೂರ್ವ ಹಿಮಾಲಯ, ಪಶ್ಚಿಮ ಕಣಿವೆ ಪ್ರದೇಶಗಳಲ್ಲಿ, ಕರ್ನಾಟಕ, ಕೇರಳ ಮಲೆನಾಡಿನ ನಿತ್ಯ ಹರಿದ್ವರ್ಣ ಕಾಡುಗಳಲ್ಲಿ ಬೆಳೆಯುತ್ತದೆ. Ceylon ironwood, or cobra saffron or Indian Rose chestnut tree. Usually found in the Western ghats, and the evergreen forests of Karnataka and Kerala. ವಾ: ನಾಗ ಸಂಪಿಗೆ ಮರದ ಹೂವ್ ಬಾರಿ ಪೊರ್ಮಳಗಡ.

ನಾಗತೀರ್ಥ /*na:gati:rtha*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕುತ್ಕುಂಜ ಗ್ರಾಮದ ಜಾಗ. a locality in Kutkunja village in Sullia Taluk of Dakshina Kannada District.

ನಾಗನಮಜಲು /*na:ganamajalu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಪೆರುವಾಜೆ ಗ್ರಾಮದ ಜಾಗ. a locality in Peruvaje village in Sullia Taluk of Dakshina Kannada District.

ನಾಗನಮೂಲೆ /*na:ganamu:le*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ತೊಡಿಕಾನ ಗ್ರಾಮದ ಜಾಗ. a locality in Todikana village in Sullia Taluk of Dakshina Kannada District.

ನಾಗಪಟ್ಟಣ /*na:gapaṭṭaṇa*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಆಲೆಟ್ಟಿ ಗ್ರಾಮದ ಜಾಗ. a locality in Aletti village in Sullia Taluk of Dakshina Kannada District.

ನಾಗಪ್ಪ /*na:gappa*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. masculine given name. ಪ: ನಾಗಣ್ಣ

ನಾಗಪ್ಪಹಿತ್ಲು /*na:gappahitlu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಸುಬ್ರಹ್ಮಣ್ಯ ಗ್ರಾಮದ ಜಾಗ. a locality in Subramanya village in Sullia Taluk of Dakshina Kannada District.

ನಾಗಬನ /*na:gabana*/ ನಾ. ಸರ್ಪಗಳ ವಾಸಕ್ಕಾಗಿ ಕಾದಿರಿಸಿದ ಕಾಡು ತುಂಬಿದ ಪವಿತ್ರ ಜಾಗ. sacred grove/forest preserved for snakes. ವಾ: ನಾಗಬನಕ್ಕೆ ಹಂಗೆಲ್ಲ ಸುಮ್ಮನೆ ಸುತ್ತಾಡಿಕೆ ಹೋಕಾಗದ್. **ನಾಗನಪೂಜೆ** /*na:ganapu:jɛ*/ ನಾ. ನಾಗಾರಾಧನೆ. the ritual of worshipping cobra. ವಾ: ನಾಗನ ಪೂಜೆಗೆ ಸುದ್ದಲಿರೊಕು.

ನಾಗಬೆತ್ತ /*na:ga bɛtta*/ ನಾ. 1. (ಕ್ಯಾಲಮಸ್ ರೋಟಾಂಗ್) ಭಾರತ, ಶ್ರೀಲಂಕಾ ಮತ್ತು ಮ್ಯಾನ್ಮಾರ್ (ಬರ್ಮಾ) ಮೂಲದ ಸಸ್ಯ, ಪ್ರಭೇದ, ಭಾರತದಲ್ಲಿ ಇದು ಪಶ್ಚಿಮ ಘಟ್ಟಗಳ ನಿತ್ಯಹರಿದ್ವರ್ಣ ಕಾಡುಗಳ ಇಳಿಜಾರು ಪ್ರದೇಶಗಳಲ್ಲಿ ಹೆಚ್ಚಾಗಿ ಬೆಳೆಯುತ್ತದೆ, ಸಸ್ಯದ ತಳದ ಭಾಗವು 1.0 ಮೀಟರ್ ಅಥವಾ ಅದಕ್ಕಿಂತ ಹೆಚ್ಚು ಲಂಬವಾಗಿ ಬೆಳೆಯುತ್ತದೆ, ಇದು ಅತ್ಯಂತ ಮ. rattan palm, used in making cane furniture, found in India, Srilanka, Myanmar. Usually found in the slopes of evergreen forests of western ghats. These are monocots and rattan stem grows upto 1 meter or more. ವಾ: ನಾಗಬೆತ್ತಲಿ ಕುರ್ಸಿ, ಬುಟ್ಟಿ, ಸೋಪ, ಎಲ್ಲ ಮಾಡಿವೆ, ನೋಡಿಕೆ ಬಾರಿ ಕುಸಿಯಾದೆ. ಪ: ನಾಗರಬೆತ್ತ

ನಾಗಮ್ಮ /*na:gamma*/ ನಾ. ವ್ಯಕ್ತಿ ಹೆಸರು, ಸ್ತ್ರೀ ವಾಚಕ. feminine given name. ಪ: ನಾಗಿ, ನಾಗು

ನಾಗರಹಾವ್ /*na:garaha:vɨ*/ ನಾ. 1. ನಾಗರ ಹಾವು, 2. ವಿಷಸರ್ಪ, ಇದರ ದೇಹದ ಬಣ್ಣ ಕಗ್ಗಂದು, ಇದರ ಬಾಯಿಯ ಎರಡು ದವಡೆಗಳಲ್ಲೂ ಚಿಕ್ಕ ಹಲ್ಲುಗಳಿವೆ, ಮೇಲುದವಡೆಯ ಮುಂತುದಿಯಲ್ಲಿನ ಎರಡು ಹಲ್ಲುಗಳು ಸುಮಾರು 0,5 ಸೆಂಮೀ, ಉದ್ದವಿದ್ದು ವಿಷದ ಹಲ್ಲುಗಳಾಗಿ ಮಾರ್ಪಟ್ಟಿವೆ. 1. cobra, 2. a venomous snake, has short fangs at the front of the mouth to the venom. ವಾ: ನಾಗರಹಾವ್ ಕಚ್ಚಿರೆ ಬಾಯಿಲಿ ಜೊಲ್ಲು ಸುರ್‌ದದೆ.

ನಾಗರಹುಳು /*na:gara huḷu*/ ನಾ. ಅರಶಿನ ಬಣ್ಣದ ಚಪ್ಪಟೆಯಾಕಾರದ ಹುಳ. cobra, a venomous snake. ವಾ: ನಾಗರ ಹುಳು ಜೆಗ್ಲಿಲಿ ಇತ್.

ನಾಗರಕಟ್ಟೆ /*na:garakaṭṭɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ನಾಗರಬೆತ್ತ /*na:garabɛtta*/ ನಾ. ನಾಗಬೆತ್ತ. cane, common rattan. **ನಾಗರ ಬೆತ್ತಕೋಲು ಮಡ್ಗಿಕೆ ಬೊತ್ – ಹಾವು(ಒ).** ವಾ: ನಾಗರಬೆತ್ತ ಮೆತ್ತಂಗಾಗಿ ಒಂದೇ ದಪ್ಪಲಿ ಇರ್‌ದ್‌ರ್‌ಂದ ಅದರ್‌ನ ಪೀಟೋಪಕರಣ ಮಾಡಿಕೆ ಬಳ್ಸುವೆ.

ನಾಗೋಜಿ /*na:go:ji*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ನಾಗೊಳಿಶಾಸ್ತ್ರ[1] /*na:goḷi śa:stra*/ ನಾ. ಗಂಡಿನ ಮನೆಗೆ ಹತ್ತಿದ ನಂತರ ನೀರು ತಂದು ಮಡಲಕ್ಕಿಯಿಂದ ಪಾಯಸ ಮಾಡುವುದು. a ritual of preparing porridge (kheer) in groom's house on the arrival of both the bride and the groom. ವಾ: ನಾಗೊಳಿ ಶಾಸ್ತ್ರಲಿ ಹೆಣ್ಣ್ ಕುಕ್ಕೆಲಿ ಗದ್ದೆಗೆ ಗೊಬ್ಬರ ಹಾಕಿ ಮನೆಗೆ ಬಾಕನ ಕೊಡಪಾನಲಿ ನೀರ್ ತಂದ್ ಮನೆಗೆ ಹತ್ತಿ, ಮಡ್‌ಲಕ್ಕಿಲಿ ಪಾಯಸ ಮಾಡೊಕು.

ನಾಗೋಳಿಸಾಸ್ತ್ರ[2] /*na:go:ḷi sa:stra*/ ನಾ. 1. ವಿವಾಹದ ನಂತರ ವರನ ಮನೆಯಲ್ಲಿ ವಧುವಿನ (ಬೀಗರು) ಮನೆಯವರನ್ನು ಆಮಂತ್ರಿಸುವುದು, 2. ವರನ ಮನೆಯಲ್ಲಿ ನಡೆಯುವ ಶಾಸ್ತ್ರ. 1. inviting the parents and relatives of one's daughter in law, usually for a dinner, 2. a custom followed in bridegroom's house. ವಾ: ನಾಗೋಳಿ ಸಾಸ್ತ್ರ ಯಾಗ ಇಸಿಕಂಬೊನೊ.

ನಾಚಿಕೆ /*na:cikɛ*/ ನಾ. 1. ನಾಚಿಕೆ, 2. ಲಜ್ಜೆ. 1. shy, 2. shame. ವಾ: ಗೂಡೆಗೆ ನಾಚಿಕೆ ಕಂಡದೆ ಮೋರೆ ಎತ್ತಿ ನೋಡ್ಲೆ. **ನಾಚಿಕೆ ಇಲ್ಲದಂವ** /*na:cikɛ illadanva*/ 1. ಚೆಲ್ಲು ಚೆಲ್ಲಾಗಿ ವರ್ತಿಸುವವ, 2. ಏನೇನು ನಾಚಿಕೆ ಇಲ್ಲದವ, 3. ಗಾಂಭೀರ್ಯ ಇಲ್ಲದವ, 4. ಬೈಗುಳ ಪದ. 1. a flirtatious person, 2. a shameless person, 3. imprudent, 4. an expletive. ವಾ: ಎಸ್ಟ್ ಹೇಳಿರು ಅಸ್ಟೆ, ನಾಚಿಕೆ ಇಲ್ಲದಂವ.

ನಾಚಿಕೆಮುಳ್ಳ್ ದೈ /*na:cikɛmuḷḷ giḍa*/ ನಾ. 1. ನಾಚಿಕೆಗಿಡ, 2. ಮುಟ್ಟಲಮುರಿಕೆ, 3. ಮುಟ್ಟಿದರೆ ಮುನಿ. 1. sensitive plant, shameplant 2. a prickly shrub, 3. Touch Ne Not (Mimosa pudica). ವಾ: ನಾಚಿಕೆ ಮುಳ್ಳ್ ದೈನ **ನಾಚಿಕೆಮುಳ್ಳು** /*na:cikɛmuḷḷu*/ ಮುಟ್ಟಿದರೆ ಮುನಿ ಕಳೆಗಿಡ. Touch me not weed. ವಾ: ನಾಚಿಕೆ ಮುಳ್ಳುಲಿ ಮೊದ್ ಮಾಡಿವೆ. ಮುಟ್ಟಿರೆ ಎಲೆಯೆಲ್ಲ ಮುದ್ದೆಯಾದೆ.

ನಾಚಿಕೆಗೇಡ್ /*na:cikɛge:ḍɨ*/ ನಾವಿ. ಅವಮಾನದ ಕೆಲಸ. a shameful act. ವಾ: ಅವುಳು ಎಂತ ನಾಚಿಕೆಗೇಡ್‌ನ ಕೆಲ್‌ಸ ಮಾಡಿಟು.

ನಾಜೂಕು /*na:ju:ku*/ ನಾವಿ. 1. ಒಪ್ಪ ಓರಣ, 2. ಅಚ್ಚುಕಟ್ಟು. 1. neat and tidy, 2. ordered. ವಾ: ಬಾರಿ ನಾಜೂಕುನ ಗೂಡೆ.

ನಾಟಕ /*na:ṭaka*/ ನಾ. 1. ನಟನೆ, 2. ಕೃತಕ ವರ್ತನೆ. 1. acting, 2. pretentious behaviour. ವಾ: ಅಂವ ಒಳ್ಳ ನಾಟಕ ಮಾಡಿ ಇವರ ಮಂಗ ಮಾಡ್ತ್.

ನಾಟಿ /*na:ṭi*/ ನಾ. 1. ಗದ್ದೆ ಬೇಸಾಯ, 2. ನೇಜಿ ನೆಡುವುದು, 3. ನಾಟಿ ಕೆಲಸ. 1. working in the paddy field 2. transplanting, 3. transplanting the seedlings. ವಾ: ನಾಟಿ ಕೆಲ್‌ಸ ಸುರು ಮಾಡ್ದರಿಯ? **ನಾಟಿ ಆಳ್** /*na:ṭi a:ḷɨ*/ ನಾಟಿ ಕೆಲಸ ಮಾಡುವವರು. workers who transplant the seedlings. ವಾ: ನಾಟಿ ಆಳ್ ವಲೊ. **ನಾಟಿ ಓಟ** /*na:ṭi o:ṭa*/ ನಾಟಿ ಮಾಡಿದ ನಂತರ ಅದೇ ಗದ್ದೆಯಲ್ಲಿ ಓಡುವುದು. to runn a race in the paddy field after transplanting the seedling. ವಾ: ನಾಟಿ ಓಟ ಯಾಗ? **ನಾಟಿನೆಡ್ಡು** /*na:ṭinɛḍḍu*/

ಭತ್ತದ ಸಸಿಗಳನ್ನು ನೆಡುವುದು. transplanting the seedlings in a paddy field. ವಾ: ಬಾನೆ ನಾಟಿ ನೆಡ್ದು ಹೆಂಗೆತ ತೋರ್‌ಸಿ ಕೊಟ್ಟನೆ. **ನಾಟಿಬೆಳೆ** /*na:ṭibɛḷɛ*/ ಭತ್ತದ ಬೇಸಾಯದ ಕಾಲಸೂಚಿ ಪದ. a term indicating the season suitable for paddy cultivation. ವಾ: ನಾಟಿ ಬೆಳೆ, ಪುಂಡಿ ಬೆಳೆ, ಕೊಳ್ಕೆ ಬೆಳೆತ ಮೂರ್ ತರದ ಬೆಳೆಗೊಳ.

ನಾಟಿಕೇರಿ /*na:ṭike:ri*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಐವರ್ನಾಡು ಗ್ರಾಮದ ಜಾಗ. a locality in Aivarnadu village in Sullia Taluk of Dakshina Kannada District.

ನಾಟು /*na:ṭu*/ ಕ್ರಿ. 1. ಮನಸ್ಸಿಗೆ ತಾಗು, 2. ಮನಸ್ಸಿಗೆ ಅರ್ಥವಾಗು. 1. to feel, 2. to understand. ವಾ: ಮನ್ಸಿಗೆ ನಾಟುವಾಂಗೆ ಹೇಳ್. **ನಾಟಿತ್** /*na:ṭiti*/ 1. ಅರ್ಥವಾಯಿತು, 2. ತಾಗುವುದು, 3. ತಲುಪಿತು. 1. understood, 2. to touch, 3. reached. ವಾ: ಹೇಳ್ದ ಮಾತ್ ಮನ್ಸಿಗೆ ನಾಟಿತ್. **ನಾಟುದ್ಲೆ** /*na:ṭudlɛ*/ 1. ಮನಸ್ಸಿಗೆ ಮುಟ್ಟುವುದಿಲ್ಲ, 2. ಅರ್ಥವಾಗುವುದಿಲ್ಲ. 1. won't touch the mind, heart, etc. ,2. not understood. ವಾ: ಎಷ್ಟು ಬೈದ್ರು ನಾಟುದ್ಲೆ.

ನಾಟೆಗೆಣ್ಸು /*na:ṭɛ gɛṇsu*/ ನಾ. ಸಾಂಬಾರದ ಗೆಣಸು. cassava root.

ನಾಟೆಗೆಲ್ಸ್ /*na:ṭɛgɛlsi*/ ನಾ. ಪಾತಿ ಮಾಡಿ ಬೆಳೆಸುವ ಬಳ್ಳಿ ಗೆಣಸು. cultivating cassava. ವಾ: ನಾಟೆಗೆಲ್ಸ್‌ನ ಪಾತಿ ಮಾಡಿ ನೆಡಕು.

ನಾಟೋಳನ /*na:ṭo:ḷana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ನಾಡಿ /*na:ḍi*/ ನಾ. ರಕ್ತನಾಳ. veins. ವಾ: ನರ ನಾಡಿಗೆಲ್ಲ ಬೇನೆ.

ನಾಡೆಯ್ಯನ /*na:ḍɛyyana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ನಾಡ್ /*na:ḍi*/ ನಾ. 1. ಹಳ್ಳಿ, 2. ಗ್ರಾಮೀಣ ಪ್ರದೇಶ. 1. village, 2. a country side. ವಾ: ಪೇಟೆಗಿಂತ ನಾಡ್ ಕುಸಿಯಾದೆ.

ನಾಡ್ದ್ /*na:ḍdi*/ ನಾ. 1. ಎರಡು ದಿನಗಳ ನಂತರ, 2. ನಾಡಿದ್ದು. 1. after two days, 2. day after tomorrow. ವಾ: ನೀ ನಮ್ಮಲ್ಲಿಗೆ ನಾಡ್ದ್ ಬಾ ಅಕಯ.

ನಾಡಿದ್ /*na:ḍidi*/ ನಾಡಿದ್ದು. day after tomorrow. ವಾ: ನಾಡಿದು ಹೋದವೆಗಡ.

ನಾಡ್‌ಮದ್ದ್ /*na:ḍi maddi*/ ನಾ. 1. ಹಳ್ಳಿ ಔಷಧಿ, 2. ನಾಟಿಮೊದ್ದು. 1. herbal medicine, 2. native medicine. ವಾ: ನಾಡ್‌ಮದ್ದ್ ಕುಡ್ದರೆ ಒಳ್ಳೆದಾದೆ. ಪ: ನಾಟಿಮೊದ್ದ್.

ನಾಡ್ಯನ /*na:ḍyana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ನಾಣೇಲ್ /*na:ṇɛ::li*/ ನಾ. 1. ಒಂದು ಜಾತಿಯ ಕಾಡು ಮರ, 2. ನೀರಿನ ಆಶ್ರಯ ಇರುವಲ್ಲಿ ಬೆಳೆಯುವ ಮರ, 4. ಒಂದು ಔಷಧಿಯ ಸಸ್ಯ. 1. a forest tree, 2. grows in marshy areas, 3. a medicinal plant. **ನಾಣೆಲ್‌ಕಾಯಿ** /*na:ṇɛlika:yi*/ ಹೊಳೆಯ ಬದಿಯಲ್ಲಿ ಬೆಳೆಯುವ ಕಾಡು ಮರದ ಕಾಯಿ. a nut usually grown on the bank of a river. ವಾ: ನಾಣೆಲ್‌ಕಾಯಿನ ಹೊಳೆಕರೆಲಿ ಕಂಡೆ.

ನಾಣ್ /*na:ṇi*/ ಕ್ರಿ. 1. ಮೆತ್ತಗಾಗು, 2. ತಣ್ಣಗಾಗು. 1. to become soft, 2. to become cold. ವಾ: ಹುರ್‌ಕುಲು ಗಾಳಿಗೆ ನಾಣಿ ಅಗೆಕೆ ಆದುಲೆ. **ನಾಣಿಹೋಗುಟು** /*na:ṇi ho:guṭu*/ 1. ಮೆತ್ತಗಾಗು, 2. ಗರಿ ಗರಿ ಇಲ್ಲದಿರುವುದು. 1. to become soft, 2. to lose crispiness. ವಾ: ಈ ಹಪ್ಪಳ ನಾಣಿ ಹೋಗುಟು. **ನಾಣಿಹೋದು** /*na:ṇiho:du*/ ಮೆತ್ತನೆಯಾಗು. to become soft. ವಾ: ಗಾಳಿಗೆ, ಚಳಿಗೆ ಒಣ್ಗಿಲ್ ಮೆಣ್ಸ್ ಬೇಗ ನಾಣಿಹೋದು.

ನಾಣ್ಯ /*na:ṇya*/ ನಾ. 1. ನಾಣ್ಯ, 2. ಚಲಾವಣೆಗಾಗಿ ಆಡಳಿತದ ಮುದ್ರೆಯೊತ್ತಿ ತಯಾರಿಸಿದ ಚಿನ್ನ, ಬೆಳ್ಳಿ ಮೊದಲಾದ ಲೋಹದ ದುಡ್ಡು, 2. ಬಿಲ್ಲೆ. 1. a coin, 2. golden or silver coins issued for circulation, 3. a token. ವಾ: ನಾಣ್ಯ ಚಿನ್ನದಾ?

ನಾತ[1] /*na:ta*/ ನಾ. 1. ವಾಸನೆ, 2. ಕೆಟ್ಟ ವಾಸನೆ, 3. ದುರ್ವಾಸನೆ. 1. bad smell, 2. a foul smell, 3. stink. **ಹೆರದಂವ ಹೆತ್ತರೆ ಮನೆ ತುಂಬ ನಾತ(ಗಾ).** ವಾ: ನಾತ ಎಲ್ಲಿಂದ ಬಾದು ಹಿಂಗೆ, ಹೊಟ್ಟೆ ತೊಳ್ಸಿದೆ.

ನಾತ[2] /*na:ta*/ ನಾ. 1. ಮೂಗಿನಿಂದ ಕಂಡುಹಿಡಿಯುವ ಒಂದು ದ್ರವ್ಯಗುಣ, 2. ಸುವಾಸನೆ, 3. ದುರ್ವಾಸನೆ/ ಕೆಟ್ಟವಾಸನೆ, 4. ಕಟುವಾಸನೆ. 1. to smell something, 2. fragrance, 3. bad smell, 4.

stench. **ನಾತ ಬಂದದೆಂತ ಮೂಂಕ್ ಕೊಯ್ಯಕೆ ಆದೆನ(ಗಾ).** ವಾ: ನಾತ-ಗಬ್ಬುನಾತಂದ ಕೂರಿಕೆ ಆದುಲೆ.

ನಾತ[3] /*na:ta*/ ನಾ. ಸುಳಿವು. a clue. ವಾ: ಸರಾಯಿ ಕುಡ್ದೊಳ ನಾತ ಬಂದದೆ.

ನಾತಬೊಳ್ಳಿ /*na:tabɔḷḷi*/ ನಾವಿ. 1. ಒಂದು ವಿಧದ ಕಾಡುಬಳ್ಳಿ, 2. ವಾಸನೆ ಬಳ್ಳಿ. a creeper grown in forest having foul smell.

ನಾದಿನಿ[1] /*na:dini*/ ನಾ. ಗಂಡನ ಅಕ್ಕ, ತಂಗಿಯರು. sisters of one's husband. ವಾ: ನಂಗೆ ಒಬ್ಬೆ ನಾದಿನಿ ಇರ್‌ದು.

ನಾದಿನಿ[2] /*na:dini*/ ನಾ. ಹೆಂಡತಿಯ ತಂಗಿ. sister in law. ವಾ: ನಾದಿನಿ ಬಾತ?

ನಾದಿನಿಕ /*na:dinika*/ ನಾ. ನಾದಿನಿಯರು. sisters in law. ವಾ: ನಾದಿನಿಕ ಎಲ್ಲೊವು ಸೇರಿಕಂಡ್ ತಿಂಡಿ ಹೊರ್‌ದವೆ.

ನಾನೀಲ್ /*na:ni:lɨ*/ ನಾ. 1. ಒಂದು ಜಾತಿಯ ಕಾಡು ಮರ, 2. ನೀರಿನ ಆಶ್ರಯ ಇರುವಲ್ಲಿ ಬೆಳೆಯುವ ಮರ. 1. a forest tree, 2. grows in marshy areas. ವಾ: ನಾನೀಲ್ ಕಾಡ್‌ಮರ ನೀರ್‌ಪಸೆ ಇರ್‌ವಲ್ಲಿ ಬೆಳ್‌ದದೆ.

ನಾನೆ /*na:nɛ*/ ಸನಾ. ನಾನೆ. myself. ವಾ: ರಾಜ ನಾನೆ.

ನಾನಿನ್ನ /*na:ninna*/ ನಾ ನಿನ್ನನ್ನು. to mean – I will never forget you, etc. ವಾ: ನಾನಿನ್ನ ಮರೆಕಿಲೆ.

ನಾಬುಡಿಕಿಲ್ಲೆ /*na:buḍikillɛ*/ ಕ್ರಿವಿ. ನಾನು ಬಿಡುವುದಿಲ್ಲ. I will not leave/spare. ವಾ: ಓದುದುನ ನಾ ಬುಡಿಕಿಲ್ಲೆ.

ನಾಮಹಾವ್ /*na:maha:vɨ*/ ನಾ. ಹಾವಿನ ಹೆಸರು. a kind of snake. ವಾ: ಅದ್ ನಾಮ ಹಾವ್‌ಗಡ.

ನಾಮಧಾರಿ ಒಕ್ಕಲಿಗರ್ /*na:madha:ri okkaligaru*/ ನಾ. ಒಕ್ಕಲಿಗರಲ್ಲಿ ಶ್ರೀ ವೈಷ್ಣವ ಸಂಪ್ರದಾಯದ ನಾಮ ಇಡುವ ಒಂದು ಪಂಗಡ. vertical markings worn by Vaishnavite Vokkaligas.

ನಾಮರ್ದ /*na:marda*/ ನಾ. 1. ಹೇಡಿ, 2. ನಪುಂಸಕ. 1. a coward, 2. an impotent. **ನರ ಸತ್ತ ನಾಮರ್ದನಂಗೆ ಆಡ್ದು(ಗಾ).** ವಾ: ನೀ ನಾಮರ್ದನಂಗೆ ಆಡ್ದು.

ನಾಮಾಸ್ /*na:ma:si*/ ನಾ. 1. ವಯ್ಯಾರ, 2. ಜಂಬ, 3. ಹೆಮ್ಮೆ. 1. flirtatious behaviour, 2. ego, 3. pride. ವಾ: ಅದಿಕೆ ಬಾರಿ ನಾಮಾಸ್.

ನಾಮೊ /*na:mɔ*/ ನಾ. 1. ಹಣೆಗೆ ಹಾಕುವ ತಿಲಕ, 2. ನಾಮ, 3. ಜಾನುವಾರುಗಳ ಹಣೆಯಲ್ಲಿ ನಾಮದಂತೆ ಕಾಣುವ ರೋಮರಾಶಿ. 1. custom of drawing vertical marks on the forehead, 2. custom of drawing vertical marks on the forehead, 3. bunch of hair on the forehead of animals grown vertically. ವಾ: ಅಂವನ ಹಣೆಲಿ ನಾಮೊ ನೋಡ್.

ನಾಮೋಸು /*na:mo:su*/ ನಾವಿ. 1. ದಾಕ್ಷಿಣ್ಯ, 2. ಸಂಕೋಚ. 1. obligation, 2. being shy. ವಾ: ಉಂಬಕೆ ನಾಮೋಸು ಮಾಡ್ಬೇಡಿ.

ನಾಯರ್‌ಬೊಳಿ /*na:yarɨbɔḷi*/ ನಾ. ಗೌಡರ 18 ಗೋತ್ರಗಳಲ್ಲಿ ಒಂದು ಬಳಿ. one of the 18 lineages of Gowda community. ವಾ: ಗೌಡ ಜೆನಾಂಗದ ಬೊಳಿದ್ ಹೆಸ್ರ್.

ನಾಯಿ /*na:yi*/ ನಾ. 1. ಸಾಕುಪ್ರಾಣಿ, 2. ಶ್ವಾನ. 1. pet dog, 2. a dog. **ಜಾತಿಗೆ ಜಾತಿ ಹಗೆ, ನಾಯಿಗೆ ನಾಯಿ ಹಗೆ(ಗಾ). ಬಂದ ನಾಯಿ ಬೊಜ್ಜ ತಿಂದ್ ಹೋದೆಗಡ(ನು).** ವಾ: ನಾಯಿ ನಿಯತ್ತ್‌ಲಿ ಮನೆ ಕಾದದೆ. **ನಾಯಿ ಕಚ್ಚಿದ್** /*na:yi kaccidɨ*/ ನಾಯಿ ಕಚ್ಚುವುದು. a dog bite. ವಾ: ಒಂದ್ ಜೋಡುನ ನಾಯಿ ಕಚ್ಚಿಕಂಡ್ ಹೋತ್. **ನಾಯಿ ಗಂಟ್ ಹಾಕಂಬುದು** /*na:yi ganṭɨ ha:kambudu*/ ನಾಯಿಗಳ ಲೈಂಗಿಕ ಕ್ರಿಯೆ. sexual intercourse between dogs. ವಾ: ದಾರಿಲೆ ನಾಯಿಗ ಗಂಟ್ ಹಾಕಂತಿದ್ದೊ. **ನಾಯಿ ಪಾಂಗ್‌ಕೊಡ್ದು** /*na:yi pa:ŋgɨ koḍdu*/ ನಾಯಿ ಮುಖ ಮೇಲೆ ಮಾಡಿ ಕೂಗುವುದು, ಈ ರೀತಿಯ ಕೂಗನ್ನು ಅಪಶಕುನವೆಂದು ನಂಬಲಾಗುತ್ತದೆ. howling of dogs, considered as ill – omen. ವಾ: ನಾಯಿ ಪಾಂಗ್ ಕೊಡ್ದು ಕೇಳಿಕಾದ್ ಹಾಳ್‌ತ ಹೇಳಿವೆ. **ನಾಯಿ ಬೊಗುಳ್ದು** /*na:yi boguḷdu*/ ನಾಯಿಯ ಬೊಗಳುವುದು. a barking dog. ವಾ: ಹಚ್ಚ ಸದ್ದಾದ್‌ರೂ ನಾಯಿ

ಬೊಗುಳ್ದು. **ನಾಯಿಮೊರಿ** /*na:yi mori*/ ನಾಯಿ ಮುಖ ಮೇಲೆ ಮಾಡಿ ಕೂಗುವುದು, ಈ ರೀತಿಯ ಕೂಗನ್ನು ಅಪಶಕುನವೆಂದು ನಂಬಲಾಗುತ್ತದೆ. howling of dogs, considered as ill – omen. ವಾ: ನಾಯಿಮೊರಿ ಕೇಳಿರೆ ಅಪಶಕುನ. ಪ: ನಾಯಿ ಪಾಂಗ್ ಕೊರ್ಪುನಿ(ತು). **ನಾಯಿಗೂಡ್** /*na:yigu:ḍɨ*/ ನಾಯಿಗಳಿಗಾಗಿ ನಿರ್ಮಿಸಿದ ಪುಟ್ಟ ಕೊಠಡಿ. a kennel. ವಾ: ನಾಯಿನ ನಾಯಿಗೂಡ್‌ಲೆ ಹಾಕಿ ಸಾಂಕುದು. **ನಾಯಿನೊಟ್ಟ್‌ಗೆ** /*na:yinoṭṭgɛ*/ ನಾಯಿಗಳ ಜೊತೆ. with dogs. ವಾ: ನಾಯಿಗಳೊಟ್ಟಿಗೆ ತೋಟಕೆ ಹೋದರೆ ಯಾವ ಹೆದ್ರಿಕೆನು ಇರ್‌ದುಲೆ, ಒಟ್ಟಿಗೆ ಇದ್ದವೆ.

ನಾಯಿಕರ್‌ಂಬು /*na:yikarɨmbu*/ ನಾ. 1. ಒಂದು ಜಾತಿಯ ಕಬ್ಬಿನಂತಹ ಗಿಡ, 2. ನಾಯಿಕರ್‌ಂಬು ಒಂದು ನಾಟಿ ಔಷಧಿ ಸಸ್ಯ. 1. a kind of grass resembling sugar cane, 2. a medicinal plant. ವಾ: ನಾಯಿ ಕರ್‌ಂಬು ಕಬ್ಬುನಂಗೆ ಇರೊ ಒಂದ್ ದೈ.

ನಾಯಿಪರೆಂಗಿ /*na:yiparɛŋgi*/ ನಾ. ನಾಯಿಗಳಿಗೆ ಬರುವ ಒಂದು ಚರ್ಮರೋಗ. a skin disease of dogs. ವಾ: ನಾಯಿ ಪರೆಂಗಿ ನಾಯಿಗೆ ಬರೊ ಒಂದ್ ಕಾಯ್‌ಲ.

ನಾಯಿಮಡಂಗ್ /*na:yimaḍaŋgɨ*/ ನಾ. ಒಂದು ಬಗೆಯ ಮೀನು. a kind of fish. ವಾ: ನಾಯಿ ಮಡಂಗ್‌ತ ಒಂದ್ ಜಾತಿನ ಮೀನ್.

ನಾಯಿ ಸೊಡಂಕ್ /*na:yi soḍaŋkɨ*/ ನಾ. ತುರಿಕೆ ಉಂಟು ಮಾಡುವ ಸಸ್ಯದ ಬೀಜ. seeds of common nettle. ವಾ: ನಾಯಿ ಸೊಡಂಕ್‌ನ ಮುಟ್ಟಿಕಾದ್, ಮುಟ್ಟಿರೆ ತೊರ್‌ಸಿದೆ.

ನಾಯಿಂಬ್ರೆ /*na:yimbrɛ*/ ನಾ. ಒಂದು ಜಾತಿಯ ಅಣಬೆ. a kind of mushroom. ವಾ: ನಾಯಿಂಬ್ರೆತ ಅಳುಂಬುದ್ ಹೆಸ್‌ರ್.

ನಾಯಿಕುಟ್ಟಿ ಮರ /*na:yikuṭṭi mara*/ ನಾ. ಒಂದು ಜಾತಿಯ ಮರ. a kind of tree.

ನಾಯಿಕೂಳಿ ಕಾಯಿ /*na:yiku:ḷi ka:yi*/ ನಾ. ಒಂದು ಜಾತಿಯ ಔಷಧಿ ಸಸ್ಯ, ಇದರಿಂದ ತೆಗೆದ ಎಣ್ಣೆಯನ್ನು ನಾಯಿ ಕಚ್ಚಿದ ಜಾಗಕ್ಕೆ ಹಚ್ಚುತ್ತಾರೆ, ನಾಯಿ ಕಚ್ಚಿದ ಜಾಗದ ವಿಷವನ್ನು ಈ ಎಣ್ಣೆ ತೆಗೆಯುತ್ತದೆ. a medicinal plant from which oil is extracted. The oil is applied on the dog bite to cure the infection. ವಾ: ನಾಯಿ ಕಚ್ಚಿರೆ ನಾಯಿಕೂಳಿ ಕಾಯಿದ್ ಎಣ್ಣೆನ ಬಳ್‌ಸುವೆ.

ನಾಯಿಕೆಮ್ಮು /*na:yikɛmmu*/ ನಾ. ಕೆಮ್ಮು. cough. ವಾ: ನಾಯಿಕೆಮ್ಮ್ ಬಂದರೆ ಬೇಗ ಹೋಕಿಲೆ.

ನಾಯಿಕೊಡೆ /*na:yikoḍɛ*/ ನಾ. 1. ಅಣಬೆ, 2. ಹುತ್ತ, ಗೊಬ್ಬರದ ಗುಂಡಿ, ತಿಪ್ಪೆ, ಮೆದು ಮಣ್ಣು, ಮುಂತಾದ ಕಡೆ ಮಳೆಗಾಲದಲ್ಲಿ ವಿಶೇಷವಾಗಿ ಬೆಳೆಯುವ ಕೊಡೆಯಾಕಾರದ ಒಂದು ಬಗೆಯ ಸಸ್ಯ. 1. mushroom, 2. a fungus with an umbrella shaped head, grown during rainy season on soft mud, heap of dung, etc. ವಾ: ಅಳ್‌ಂಬುಗೆ ನಾಯಿಕೊಡೆತ ಹೇಳ್‌ವೆ.

ನಾಯಿಗೆ ಹುಟ್ಟಿದಂವ /*na:yigɛ huṭṭidanva*/ ನಾವಿ. ಬೈಗುಳ ಪದ. an expletive term. ವಾ: ಅವು ನಾಯಿಗೆ ಹುಟ್ಟಿದವತ ಬೊಯ್ದೊ.

ನಾಯಿತೊಟ್ಟು /*na:yitoṭṭu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ನಾಯಿತೊಳ್ಸಿ ದೈ /*na:yitoḷsi giḍa*/ ನಾ. ಬಯಲು ಸೀಮೆಯ ಹೊಲಗಳ ಬದಿಯ ಗಿಡ. ಇದರಲ್ಲಿ ಮುಳ್ಳುಗಳಿರುತ್ತದೆ. a thorny bush found in the plains. ವಾ: ಬಯಲ್ ಸೀಮೆಲಿ ಬೆಳೆಯೊ ನಾಯಿ ತೊಳ್ಸಿ ದೈಲಿ ಮುಳ್ಳಿದ್ದದೆ.

ನಾಯಿನೆಳ /*na:yinɛḷa*/ ನಾವಿ. ದೊಡ್ಡ ಜಾತಿಯ ನೊಣ. a large fly. ವಾ: ನಾಯಿನೆಳ ಮನೆವಳೆಗೆಲ್ಲ ಹಾರಿಕಂಡ್ ಬಂದದೆ.

ನಾಯಿಮಿರೆ /*na:yimirɛ*/ ನಾ. ನಾಯಿಂಬ್ರೆ. a breed of dog. ವಾ: ನಾಯಿಮಿರೆತ ಒಂದ್ ಜಾತಿನ ಅಳುಂಬು.

ನಾಯಿಸಂಗ್ /*na:yisaŋgɨ*/ ನಾ. ತುರಿಕೆ ಉಂಟು ಮಾಡುವ ಸಸ್ಯದ ಬೀಜ. seeds of common nettle. ವಾ: ನಾಯಿಸಂಗ್ ಮುಟ್ಟಿರೆ ತೊರ್ಸಿದೆ.

ನಾಯಿಸಂತೆ[1] /*na:yisantɛ*/ ನಾ. 1. ಹೇರಳವಾಗಿ ಹಾಗೂ ಅಗ್ಗದ ಬೆಲೆಗೆ ಸಿಕ್ಕುವ ಸಾಮಾನು, 2. ಬೈಗುಳ ಪದ. 1. things that are easily available and inexpensive, 2. an expletive term. **ನಾಯಿ ಸಂತೆಗೆ ಹೋಗಿ ಬಂದಂಗಾತ್(ಗಾ).**

ನಾಯಿಸಂತೆ[2] /*na:yisantɛ*/ ಕ್ರಿವಿ. ಊರೆಲ್ಲ ಗೊತ್ತುಗುರಿ ಇಲ್ಲದೆ ತಿರುಗುವುದು. to roam aimlessly. ವಾ: ನಾಯಿಸಂತೆಗೆ ಹೋದಂಗೆ ಅಂವ ತಿರ್‌ಗಿದೆ.

ನಾಯಿಸರಪಳಿ /*na:yisarapaḷi*/ ನಾ. ನಾಯಿ ಕಟ್ಟಿಹಾಕುವ ಸರಪಳಿ. a dog chain. ವಾ: ನಾಯಿಸರಪಳಿ ತುಂಡಾತ್.

ನಾಯಿಸೂಳೆಮಜ್ಜ /*na:yisu:ḷɛmaŋŋa*/ ನಾವಿ. 1. ಒಂದು ಬೈಗುಳ ಶಬ್ದ, 2. ಕೊಳಕು ಮನುಷ್ಯ. 1. an expletive term, 2. a horrible man. ವಾ: ಅಂವ ನಾಯಿಸೂಳೆಮಜ್ಜ.

ನಾಯಿಸೊಣಂಗ್ /*na:yisoṇaŋg*/ ನಾ. 1. ತುರುಚೀಗಿಡ, 2. ಈ ಗಿಡದ ಕೋಡಿನ ರೋಮಗಳು ಮೈಗೆ ತಾಗಿದರೆ ತುರಿಸುತ್ತದೆ. 1. stinging nettle plant, 2. a plant that causes itching sensation. ವಾ: ನಾಯಿಸೊಣಂಗ್ ದೈನ ಮುಟ್ಟಿರೆ ಮೈ ತೊರ್‌ಸುದು.

ನಾಯಿಹೇನ್ /*na:yihe:nɨ*/ ನಾ. ಒಂದು ಜಾತಿಯ ಹೇನು. a kind of louse. ವಾ: ನಾಯಿಹೇನ್ ಒಂದ್ ಜಾತಿನ ಹೇನ್.

ನಾಯೆರ್ /*na:yɛrɨ*/ ನಾ. 1. ನೇಗಿಲು, 2. ಕೃಷಿ ಉಪಕರಣ. 1. the plough, 2. toll of farming. ವಾ: ನೊಜ್ಜ ನಾಯರ್ ಹೊತ್ತ್‌ಕಂಡ್ ಎಲ್ಲವು ಬೇಸಾಯಕೆ ಹೊರ್ಟೋ.

ನಾಯ್‌ಸೊಳುಂಗು /*na:yɨsoḷuŋgu*/ ನಾ. ನಾಯಿಸೊಣಂಗ್. stinging nettle, a plant that causes itching sensation. ವಾ: ನಾಯ್ ಸೊಳುಂಗು ದೈನ ಮುಟ್ಟಿರೆ ತೊರ್‌ಸುದು.

ನಾಯ್‌ಕುಳಿಮರ /*na:yɨkuṭṭimara*/ ನಾ. ಒಂದು ಔಷಧಿ ಗಿಡ. ನಾಯಿ ಕಚ್ಚಿದರೆ ಇದರ ಬೀಜದ ಎಣ್ಣೆಯನ್ನು ಬಳಸುತ್ತಾರೆ. a medicinal plant, the oil extracted from its seed is used to cure dog bites.

ನಾರಂಗಾಯಿ /*na:rangayi* / ನಾ. ಲಿಂಬೆಹಣ್ಣು. a lemon ವಾ: ನಾರಂಗಾಯಿ ಉಪ್ಪನಕಾಯಿಲಿ ಉಂಬಕೆ ಲಾಯ್ಕಾದೆ.

ನಾರಾಲು /*na:ra:lu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ನಾರಿಯೋರು /*na:riyo:ru*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ನಾರುಕೋಡಿ /*na:ruko:ḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ನಾರುಳಿ /*na:ruḷi*/ ನಾ. 1. ಲಿಂಬೆ, 2. ನಾರಂಗಾಯಿ. 1. a lemon, 2. a citrus fruit. ವಾ: ನಾರುಳಿಂದ ಜೂಸ್ ಮಾಡಿಕೆ ಲಾಯ್ಕಾದೆ.

ನಾರ್‌ಗೆಣ್ಸ್ /*na:rɨgɛṇsi*/ ನಾವಿ. 1. ನೂರೆ ಗೆಣಸು, 2. ನಾರಿರುವ ಗೆಣಸು. 1. a sweet potato with fibre, 2. a fibrous tuber. ವಾ: ನಾರ್ ಗೆಣ್ಸ್ ಈಗೆಲ್ಲ ಎಲ್ಲಿ ಸಿಕ್ಕಿದೆ?

ನಾರ್‌ಬಡ್ಡ್ /*na:rɨbaḍḍi*/ ನಾವಿ. 1. ಅರೆಬರೆ ಒಣಗಿದ ಭತ್ತ, 2. ಪೂರ್ಣ ಪ್ರಮಾಣದಲ್ಲಿ ಒಣಗದಿರುವ ಭತ್ತ. 1. half dried paddy, 2. paddy dried incompletely. ವಾ: ಅರ್ವೆ ಸೆರಿಯಾಗಿ ವಣ್‌ಗಿತ್‌ಲೆ, ನಾರ್ ಬಡ್ಡಾವುಟು.

ನಾರ್‌ರೊಟ್ಟಿ /*na:rɨroṭṭi*/ ನಾವಿ. ರೊಟ್ಟಿ ಕಾಯಿಸಿದ ಬಳಿಕ ತಣ್ಣಗಾಗಿ ಗಟ್ಟಿಯಾಗುವ ಸ್ಥಿತಿ. a dry and hard flat-bread/roti. ವಾ: ನಾರ್ ರೊಟ್ಟಿನ ಅಗೆಕಾದುಲೆ.

ನಾರ್[1] /*na:rɨ*/ ನಾ. 1. ತೆಂಗಿನ ನಾರು, 2. ತೆಂಗಿನ ಕಾಯಿಯ ಸಿಪ್ಪೆಯಲ್ಲಿ ತಯಾರಿಸುವ ನಾರು, 3. ಬಳ್ಳಿ, 1. coconut fibre, 2. coir made of coconut, 3. a creeper. **ಹೂವುನೊಟ್ಟಿಗೆ ಬಾಳೆ ನಾರ್ ಸ್ವರ್ಗಕ್ಕೆ ಹೋದಂಗೆ(ಗಾ).** ವಾ: ತೆಂಗ್‌ನಕಾಯಿ ನಾರ್ ಪಾತ್ರೆ ಉಜ್ಜಿಕೆ ಆದೆ.

ನಾರ್[2] /*na:rɨ*/ ಕ್ರಿ. 1. ಕೆಟ್ಟ ವಾಸನೆ, 2. ನಾತ. 1. bad smell, 2. stench. ವಾ: ತರ್‌ಕಾರಿ ಕೊಳ್ತ್ ನಾರ್‌ತುಟ್ಟು. ಪ: ನಾರ್ದೆ – ಕೆಟ್ಟವಾಸನೆ

ನಾರ್[3] /*na:rɨ*/ ನಾ. 1. ಜಿಗುಟಾಗಿರುವುದು, 2. ಎಳೆದಷ್ಟು ಉದ್ದಬರುವ ವಸ್ತು. 1. sticky, 2. thick, sticky substance. ವಾ: ನಾರ್ ತರ್‌ಕಾರಿನ ಜಾಸ್ತಿ ಬಳ್ಸೊಕು.

ನಾರ್‌ಅರ್ವೆ /*na:rɨbaṭṭɛ*/ ನಾ. ಸನ್ಯಾಸಿಗಳು ಧರಿಸುವ ಬಟ್ಟೆ. garment worn by a celibate. ವಾ: ನಾರ್‌ಅರ್ವೆನ ಸನ್ಯಾಸಿಗ ಹಾಕಂಬದು.

ನಾರ್ಕಣೆ /*na:rkaṇɛ*/ ನಾ. ಒಂದು ಜಾತಿಯ ಸಸ್ಯ, ಇದರ

ತೊಗಟೆಯಿಂದ ಹಗ್ಗ ತಯಾರಿಸುತ್ತಾರೆ, ಈ ಹಗ್ಗದಿಂದ ಗೊರಬೆ ಕುತ್ತುತ್ತಾರೆ, ಕೈವೊಲು ಬಳ್ಳ್(ತು). a type of plant. Rope is made using the stalk of this plant. ವಾ: ನಾರ್ಕಣೆ ತೊಪ್ಪೆಲಿ ಹಗ್ಗ ತಯಾರ್ ಮಾಡಿವೆ. ಪ: ನಾರ್ಕಣೆ ಬೊಳ್ಳಿ

ನಾರ್ಕೋಡು /*na:rko:ḍu*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಆಲೆಟ್ಟಿ ಗ್ರಾಮದ ಜಾಗ. 1. family, 2. lineage, 3. a locality in Aletti village in Sullia Taluk of Dakshina Kannada District.

ನಾರ್ಣಕಜೆ /*na:rṇakajɛ*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ನೆಲ್ಲೂರು ಕೆಮ್ರಾಜೆ ಗ್ರಾಮದ ಜಾಗ. a locality in Nelluru Kemraje village in Sullia Taluk of Dakshina Kannada District.

ನಾಲಾಯಕ್ /*na:la:yakɨ*/ ನಾವಿ. ಎಪ. 1. ಪ್ರಯೋಜನಕ್ಕೆ ಬಾರದವನು, 2. ನಿಷ್ಪ್ರಯೋಜಕ. 1. a useless person, 2. a worthless person. ವಾ: ನೀ ನಾಲಾಯಕ್ ನೆ ಯಾವುದಕ್ಕು ಲಾಯಕಿಲೆ. ಪ: ನಾಲಾಯ್ಕ್

ನಾಲಿಕೆ /*na:likɛ*/ ನಾ. 1. ನಾಲಿಗೆ, 2. ಮಾತನಾಡಲು, ರುಚಿ ನೋಡಲು ಸಾಧಕವಾದ ಒಂದು ಅವಯವ, 3. ಜಿಹ್ವೆ. 1. tongue, 2. an organ used in tasting food, 2. tongue. ವಾ: ನಾಲಿಕೆನ ಒಳ್ಳ ಮಾತಾಡಿಕೆ ಬಳ್‌ಸೊಕು.

ನಾಲಿಗೆ /*na:ligɛ*/ ನಾ. ನಾಲಿಕೆ. tongue. **ಸುತ್ತ ಮುತ್ತ ಕೋಟೆಕಟ್ಟಿ, ಸುವ್ವಾಲೆಂಬ ದೈ ನೆಟ್ಟ್, ನೆಟ್ಟವೊಳೊ ಕೀಳ್ವವಿಲ್ಲೆ – ನಾಲಿಗೆ(ಒ).** ವಾ: ನಾಲಿಗೆ ರುಚಿ ತಿಳ್ಸುದು. **ನಾಲಿಗೆ ಇಳ್ದ್‌ಹೋಕೆ** /*na:ligɛ iḷdɨho:kɛ*/ ಬೈಗುಳದ ಪದ. an expletive term. ವಾ: ಎಸ್ಟ್ ಮಾತಾಡಿಯ ನಿನ್ನ ನಾಲಿಗೆ ಇಳ್ದ್ ಹೋಕೆ.

ನಾಲ್‌ಕಟ್ಟ್ ಮನೆ /*na:likɨkaṭṭɨ manɛ*/ ನಾ. 1. ನಾಲ್ಕು ಸುತ್ತಿನ ಮನೆ, 2. ಸುತ್ತು ಪಡಿಪುರೆ ಮನೆ. a quadrangualar house.

ನಾಲ್ಕಾಣೆ /*na:lka:ṇe* / ಸಂವಾ. ಇಪ್ಪತ್ತೈದು ಪೈಸೆ. twenty five paisa. ವಾ: ನಾಲ್ಕಾಣೆನೆಲ್ಲ ಒಂದು ಡೊಬ್ಬಿಯೊಳೆಗೆ ಹಾಕಿಸ್.

ನಾಲ್ಕುಪಾವು /*na:lku pa:vugɛ*/ ಪವಾ. ಒಂದು ಸೇರು. a seer. ವಾ: ನಾಲ್ಕು ಪಾವುಗೆ ಒಂದ್ ಸೇರ್ ಆದೆ.

ನಾಲ್ಕೆ /*na:lkɛ*/ ನಾ. ನಾಲಿಗೆ. tongue. ವಾ: ಕೂಸುನ ನಾಲ್ಕೆಲಿರೊ ಅಕ್ರನ ತೆಗೆಕಿತ್.

ನಾಲ್ಗುತ್ತು /*na:lguttu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕಳಂಜ ಗ್ರಾಮದ ಜಾಗ. a locality in Kalanja village in Sullia Taluk of Dakshina Kannada District.

ನಾವು /*na:vu*/ ಸನಾ. ನಾವು. we/us. ವಾ: ನಾವು ಹೊರ್‌ಗೆ ಬಾದೆ ಕಮ್ಮಿ. **ನಾವಿಗುಟ್ಟು** /*na:viguṭṭu*/ ನಮಗಿದೆ. we have. ವಾ: ಬಾಳೆ ತೋಟ ನಾವಿಗುಟ್ಟು.

ನಾವೂರು /*na:vu:ru*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಸುಳ್ಯ ನಗರದ ಜಾಗ. 1. family, 2. lineage, 3. a locality in Suḷya Nagara village in Sullia Taluk of Dakshina Kannada District.

ನಾಶ /*na:śa*/ ನಾ. 1. ನಾಶ, 2. ಹಾಳು, 3. ಕೇಡು, 4. ಹಾನಿ, 5. ಅಳಿವು. 1. destruction, 2. to spoil, 3. evil, 4. devastated, 5. end. ವಾ: ದರ್ಮ ನಾಶ ಆಕನ ಮಹಾವಿಷ್ಣು ಅವತಾರ ಎತ್ತಿ ಬಂದದ್.

ನಾಸ /*na:sa*/ ನಾ. ನಾಶ. destruction. ವಾ: ಅವು ಅನ್ಯಾಯ ಮಾಡಿ ಸರ್ವ ನಾಸ ಆದೊ.

ನಾಹೋನೆ /*na:ho:nenɛ*/ ಸನಾ. ನಾನು ಹೋಗುತ್ತೇನೆ. I have told (you) that I will go. ವಾ: ನಾಹೋನೆಂತ ಆಗಲೆ ಹೇಳಿದ್ದೆ.

ನಾಳ /*na:ḷa*/ ನಾ. 1. ಜೀವಿಯ ದೇಹಗಳಲ್ಲಿ ದ್ರವ ಹರಿಯುವ ಕೊಳವೆ, 2. ಸಾಗುದಾರಿ, 3. ಟೊಳ್ಳಾದ ಕೊಳವೆ, 4. ಶ್ವಾಸನಾಳ, 5. ಮೂತ್ರನಾಳ, 6. ದೇಹದಲ್ಲಿ ಅನ್ನಕ್ಷೀರ, ರಕ್ತದ್ರವ ಅಥವಾ ಸ್ರಾವ ಪದಾರ್ಥಗಳನ್ನು ಸಾಗಿಸುವ ಸಾಗುನಾಳ. 1. veins in the body, 2. a route to transport something, 3. an empty pipe, 4. a windpipe, 5. urinary tract, 6. food pipe. ವಾ: ಅವ್‌ಕೆ ಅನ್ನನಾಳದ ಕ್ಯಾನ್ಸರ್ ಆಗಿತ್.

ನಾಳಿ /*na:ḷi*/ ನಾ. ಕುತ್ತಿಗೆ. neck. ವಾ: ನಾಳಿ ಮುರ್‌ದದ್.

ನಾಳೆ /*na:ḷɛ*/ ನಾ. ಈ ದಿನದ ಮರುದಿನ. tomorrow. ವಾ: ನಾಳೆಗೆತ ಯಾವ ಕೆಲ್ಸನೂ ಹಂಗೆ ಇಸಿಕಾಗದ್, ಅಂದ್‌ನ ಕೆಲ್ಸ ಅಂದೇ ಮಾಡಿರೆ ಒಳ್ಳೆದ್. **ನಾಳೆಂದತ್ತ** /*na:ḷɛndatta*/ ನಾಳೆಯಿಂದಾಚೆ. from tomorrow. ವಾ: ನಾಳೆಂದತ್ತ ಕೆಲ್ಸಕೆ ನಾ ಬಾದುಲೆ. **ನಾಳ್ಡ್** /*na:ḷdɨ*/ ನಾಡಿದ್ದು. day after tomorrow. ವಾ: ನಾಳ್ಡ್ ಜಾತ್ರೆಗೆ ಪೋಯಿ.

ನಿಂಗಪ್ಪನ /*niŋgappana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ನಿಂಗೆ /*niŋgɛ*/ ಸನಾ. ನಿನಗೆ. to you. ವಾ: ನಿಂಗೆ ಹೇಳಿಕೇನಾಗಿತ್? **ನಿಂಗ** /*niŋga*/ 1. ನಿನಗ, 2. ನಿನಗೆಯಾ? 1. to you?, 2. is this for you? ವಾ: ಈ ಅರ್ವೆ ನಿಂಗ? **ನಿಂಗೂ** /*niŋgu:*/ ನಿನಗೂ. to you too. ವಾ: ನಿಂಗೂ ಬೇಕಿತ್ತಾ? **ನಿಂಗೆಂತ** /*niŋgɛnta*/ ನಿನಗೇನು. what do you want? ವಾ: ನಿಂಗೆಂತ ಆದ್. **ನಿಂಗೆನ** /*niŋgɛna*/ ನಿನಗೆಯಾ? for you? ವಾ: ಮೇಜದ ಮೇಲೆ ತಿಂಡಿ ಇಸಿದ್ ನಿಂಗೆನ? **ನಿಂಗೇನಾಕು** /*niŋge:na:ku*/ ನಿನಗೇನಾಗಬೇಕು. what do you want? ವಾ: ನಿಂಗೇನಾಕು ಎಲ್ಲೊವು ಲಾಯ್ಕಲಿ ನೋಡುವೆಲ. **ನಿಂಗೊ** /*niŋgɔ*/ ಸನಾ. ನಿನಗೊ. for you? ವಾ: ನಿಂಗೊ ದುಡ್ಡ್ ದ್ ಮದ.

ನಿಂಡ್ /*niṇḍɨ*/ ನಾ. ಚಾಚು. to spread. ವಾ: ಪ್ರಸಾದ ತಕಣಿಕೆ ಕೈ ನಿಂಡ್. ಪ: ನೀಂಡ್

ನಿಂತತ್ /*nintatɨ*/ ಕ್ರಿ. 1. ನಿಂತಿತು, 2. ನಿಲ್ಲು, 3. ತಟಸ್ಥವಾಗು. 1. stopped, 2. to stop, 3. to become immovable. ವಾ: ಮಳೆ ಹೊಡ್‌ದ್ ಈಗ ನಿಂತತ್. **ನಿಂತರಿ** /*nintari*/ 1. ನಿಂತಿದ್ದೀರಾ?, 2. ನಿಲ್ಲುತ್ತೀರಾ?, 3. ತಡೆಯು. 1. are you standing? 2. will you stand? 3. to stop. ವಾ: ಯಾಕೆ ಅಲ್ಲೆ ನಿಂತರಿ? **ನಿಂತರೆ** /*nintarɛ*/ ಎದ್ದು ನಿಲ್ಲುವುದು. to get up and stand. ವಾ: ಸುಮಾರ್ ಹೊತ್ ನಿಂತರೆ ಕಾಲ್ ಬಚ್ಚುದು. **ನಿಂತೆ** /*nintɛ*/ ಎದ್ದುನಿಲ್ಲು. to stand. ವಾ: ನಿಂತೆ ಕಾಲ ಕಳ್ಳೊ. **ನಿಂತೊತ್** /*nintotɨ*/ ನಿಂತುಹೋಯಿತು. stopped. ವಾ: ನೀರ್ ಬಾದು ನಿಂತೊತ್. **ನಿಂತ್‌ಕಂಡ್** /*nintikaṇḍɨ*/ ನಿಂತುಕೊಂಡು. standing. ವಾ: ನಿಂತ್‌ಕಂಡ್ ಉಂಬೊದುತ. **ನಿಂತ್‌ಕನ್ತ್** /*nintikantɨ*/ 1. ನಿಂತು ಕೊಂಡಿತು, 2. ನಿಂತು ಕೊಂಡನು/ಳು. 1. stood up, 2. he/she stood up. ವಾ: ನಾಯಿ ಬಾಲ ಅಲ್ಲಾಡ್ಸಿಕಂಡ್ ನಿಂತ್‌ಕನ್ತ್. **ನಿಂತ್‌ಕೊನೊಕು** /*nintikonoku*/ ನಿಂತುಕೊಳ್ಳಬೇಕು. have to stand up. ವಾ: ಸಾಲ್‌ಲಿ ನಿಂತ್‌ಕೊನೊಕು.

ನಿಂತಿಕಲ್ಲು /*nintikallu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ನೆಲ್ಲೂರು ಕೆಮ್ರಾಜೆ ಗ್ರಾಮದ ಜಾಗ. a locality in Nelluru Kemraje village in Sullia Taluk of Dakshina Kannada District.

ನಿಂದ್ /*nindɨ*/ ಸನಾ. ನಿನ್ನದು. yours. ವಾ: ನಿಂದ್ ಓದಿ ಆತ? **ನಿಂದೆ** /*nindɛ*/ ನಿನ್ನದೆ. yours. ವಾ: ಅದ್ ನಿಂದೆತ ನಂಗೆ ಗೊತ್ತುಬುಡು.

ನಿಂಬುಳಿ /*nimbuḷi*/ ನಾ. ನಿಂಬೆಹುಳಿ. lemon juice. **ಮುಳ್ಳ್ ಮುಳ್ಳ್ ಮರಲಿ ಮುತ್ತ್ ಮುತ್ತ್ ಕಾಯಿ – ನಿಂಬುಳಿ(ಒ).** ವಾ: ನಿಂಬುಳಿ ಜೂಸ್ ಆರೋಗ್ಯಕೆ ಒಳ್ಳೆದ್. **ನಿಂಬುಳಿ ದೈ** /*nimbuḷi dai*/ ನಿಂಬೆ ಹಣ್ಣಿನ ಗಿಡ. a lemon plant. ವಾ: ನಿಂಬುಳಿ ದೈಲಿ ಮುಳ್ಳಿದ್ದದೆ.

ನಿಂಮ್ಮಾಡ್ /*nimmṭa:ḍɨ*/ ಕ್ರಿ. 1. ಹೊರಳಾಡು, 2. ವಿರೋಧಿಸು. 1. to roll over, 2. to oppose. ವಾ: ಹೈದ ಸಿಟ್ಟ್‌ಲಿ ನೆಲಲಿ ಬಿದ್ದ್ ನಿಂಮ್ಮಾಡ್‌ದು.

ನಿಕ್ಕಿಸೊಪ್ಪು /*nikkisoppu*/ ನಾ. 1. ನೆಕ್ಕಿಸೊಪ್ಪು, 2. ಲಕ್ಕಿಸೊಪ್ಪು, 3. ಇದು ಕಾರ, ಕಹಿ, ಒಗರು ರಸಗಳಿಂದ ಕೂಡಿದ್ದು ಉಷ್ಣ ವೀರ್ಯವಾಗಿದೆ, ಇದರ ಎಲೆಗಳ ಮೇಲ್ಭಾಗವು ಹಸಿರು ಬಣ್ಣವಿದ್ದು ಕೆಳಭಾಗವು ಬೂದಿ ಬಣ್ಣದಲ್ಲಿರುತ್ತದೆ, ಹೂಗಳು ನೇರಳೆ ಬಣ್ಣದಲ್ಲಿದ್ದು 5 ಮೀ, ಮೀ, ಉದ್ದವಿದ್ದು ಗೊಂಚಲಾಗಿ ಬಿಡುತ್ತದೆ. 1. leaves of Nirgundi or Five-Leaved Chaste bushy plant, 2. horseshoe vitex, or nisinda bushy plant, 3. It is a potent herb with anti-inflammatory and anti-bacterial properties. Leaves of the shrub are in dark green on the surface and grey at the back. ವಾ: ನಿಕ್ಕಿ ಸೊಪ್ಪುದ್ ಹೊಗೆ ಹಾಕೊಕು, ಆಗ ಮನೆಲಿ ಚಿಗ್‌ಟ, ಸೊಳ್ಳೆ, ಹುಳಹುಪ್ಪಟೆಗ ಇರ್‌ದುಲೆ, ಎಲೆಗಳ ಬಿಸಿ ಮಾಡಿ ಕಟ್ಟಿರೆ ಉಳ್ಕು ಸೆರಿಯಾದೆ.

ನಿಕ್ಸಯ /*nikṣaya*/ ನಾ. 1. ನಿಶ್ಚಯ, 2. ನಿಶ್ಚಿತಾರ್ಥ, 3. ದಿನ ನಿಗದಿಪಡಿಸುವುದು. 1. a decision, 2.

engagement, 3. to fix a day. ವಾ: ಮೊದುವೆ ದಿನನ ನಿಕ್ಷಯ ಮಾಡ್‌ದೊ. ಪ: ನಿಚ್ಚಯ(ತು)

ನಿಗಂಟು /*nigaṇṭu*/ ನಾ. 1. ಶಬ್ದಕೋಶ, 2. ಅರ್ಥಕೋಶ, 3. ಪದಕೋಶ, 4. ದತ್ತಕೋಶ. 1. a dictionary, 2. a lexicon, 3. a glossary, 4. a thesaurus. ವಾ: ಪರಿಷ್ಕರಣೆ ಮಾಡ್ಕನ ನಿಗಂಟಿಗೆ ಹೊಸ ಹೊಸ ಪದಗ ಸೇರ್‌ತಾ ಇದ್ದದೆ.

ನಿಗಂಟ್ /*nigaṇṭi*/ ನಾ. 1. ನಿಶ್ಚಯ, 2. ಗ್ಯಾರಂಟಿ, 3. ಗೊತ್ತುಮಾಡು. 1. to decide, 2. guarantee, 3. to identify. ವಾ: ಮೊದ್ವೆ ಯಾಗತ ನಿಗಂಟ್ ಮಾಡಿ ಬಂದೊ. **ನಿಗದಿಯಾದ್** /*nigadiya:di*/ 1. ನಿಶ್ಚಯ, 2. ನಿರ್ಣಯ, 3. ಗೊತ್ತುಪಾಡು, 4. ಏರ್ಪಾಡು, 5. ವ್ಯವಸ್ಥೆ. 1. a decision, 2. a resolution, 3. to identify, 4. to arrange, 5. to prepare. ವಾ: ನಿಗದಿಯಾದ್ ದಿನನೆ ಜಂಬರ ಮಾಡೊಕು.

ನಿಗರಿಕಣ್ತ್ /*nigarikaṇṭi*/ ನಾವಿ. ತೊಂದರೆ ನೀಡಿದ, ಹಿಂಸೆ ಮಾಡಿದ ವ್ಯಕ್ತಿಗಳು ತೀರಿಕೊಂಡಾಗ ಅಸಮಾಧಾನದಿಂದ ಹೇಳುವ ಮಾತು. an expression used out of displeasure when a troublesome person dies. ವಾ: ಉರಿ ಬಂದ್ ಉರಿಬಂದ್ ನಿಗರಿಕಣ್ತ್.

ನಿಗರ್[1] /*nigari*/ ನಾ. ನೀರಿನೊಳಗಿರುವ ಅಗೋಚರ ಶಕ್ತಿ. a supernatural force in water/water spirit.

ನಿಗರ್[2] /*nigari*/ ಕ್ರಿ. ಎದ್ದು ನಡೆಯಲಿಕ್ಕಾಗದವರಂತೆ ಕುಳಿತಲ್ಲೇ ಚಲಿಸುವುದು. to crawl/to creep. ವಾ: ಗುಹೆಲಿ ನಿತ್ತ್ ನಡ್ಕಂಡ್ ಹೋಕಾದುಲೆ ನಿಗರಿಕಂಡ್ ಹೋಕಾದೆ.

ನಿಗರ್[3] /*nigari*/ ಕ್ರಿ. 1. ದೀರ್ಘಕಾಲದ ಕಾಯಿಲೆಯಿಂದ ನರಳು, 2. ಹಾಸಿಗೆಯಿಂದ ಏಳದ ಸ್ಥಿತಿಯಲ್ಲಿರು, 3. ಅಸಹಾಯ ಸ್ಥಿತಿಯಲ್ಲಿರು. 1. to suffer from prolonged illness or chronic disease, 2. be bedridden, 3. to be invalid. **ಅವುಳು ಬ್ಯಾಡತ ಇವುಳ ತಂದರೆ, ನಿಗರಿ ನಿಗ್‌ರಿಕಂಡೆ ಉಚ್ಚೆ ಹೊಯ್ದೆ(ಗಾ).** ವಾ: ಎಂತಕೆ ಹಿಂಗೆ ನೆಲಲಿ ಕುದ್ದ್ ನಿಗರ್‌ದು. ಪ: ನಿಗರಿಕೆ – ತೆವಳಲು; ನಿಗರಟ – ತೆವಳುವಿಕೆ; ನಿಗರ್ಸಿನೆ – ತೆವಳುವಂತೆ ಮಾಡುತ್ತೇನೆ

ನಿಗರ್[4] /*nigari*/ ನಾ. ಕೊಚ್ಚಿಹೋದ ಭೂಮಿ. a patch of land that is flooded. ವಾ: ಕಳ್‌ದ ಮಳೆಗೆ ಬೂಮಿ ನಿಗರ್‌ತ್. ಪ: ನಿಗರಿಟು – ಜಾರಿಹೋಗಿದೆ

ನಿಗರ್ದು /*nigardu*/ ಕ್ರಿ. 1. ನೆಲದಲ್ಲಿ ಜಾರಿಕೊಂಡೇ ಮುಂದೆ ಸರಿಯುವುದು, 2. ಹೆಚ್ಚು ಸಮಯ ಅನಾರೋಗ್ಯದಿಂದ ಚಾಪೆ ಹಿಡಿಯುವುದು. 1. to crawl/to creep/to slide forward, 2. to be ill for a longtime. ವಾ: ಯಾಕೆ ಹಿಂಗೆ ನಿಗರ್ದು.

ನಿಗರ್ಸುದು /*nigarsudu*/ ಕ್ರಿವಿ. 1. ಹೆಚ್ಚು ಹೆಚ್ಚು ತಿನ್ನುವುದು, 2. ಬೇರೆಯವರ ವಸ್ತುವನ್ನು ವಶಪಡಿಸುವುದು. 1. eating too much of food, 2. to occupy the belongings of others. ವಾ: ನೋಡಿಕೆ ಹಂಗೆ ಇದ್ದರೂ ಸರೀ ನಿಗರ್ಸಿದೆ.

ನಿಗಳ್[1] /*nigaḷi*/ ನಾ. ನಿರ್ದಿಷ್ಟ ಜಾಗ ಕೊಚ್ಚಿಹೋಗು. flooding of a particualr place due to a landslide.

ನಿಗಳ್[2] /*nigaḷi*/ ನಾ. ಕೊಪ್ಪರಿಗೆ ಇರುವ ಜಾಗ ಕುಸಿಯುವುದು ಎಂಬ ನಂಬಿಕೆ. it is believed that the land that has treasure will get flooded.

ನಿಗಾ /*niga:*/ ಕ್ರಿ. 1. ಗಮನನೀಡು, 2. ಎಚ್ಚರಿಕೆ ವಹಿಸು. 1. to focus, 2. to be cautious. ವಾ: ಒಲೆ ಮೇಲೆ ಹಾಲುಟ್ಟು, ಆ ಕಡೆ ಹಞ್ಞ ನಿಗಾ ಇರ್‌ಲಿ. **ನಿಗಾ ಇಲ್ಲೆ** /*niga: illɛ*/ 1. ಗಮನವಿಲ್ಲದಿರುವುದು, 2. ಎಚ್ಚರಿಕೆ ವಹಿಸದಿರುವುದು. 1. not being cautious, 2. not taking care. ವಾ: ಬರೆ ಕೊಳ್ಕ, ಅರ್ವೆ ಮೇಲೆ ಹಞ್ಞನು ನಿಗಾ ಇಲ್ಲೆ.

ನಿಗಾಂಟಾತ್ /*niga:ṇṭa:ti*/ ಕ್ರಿವಿ. 1. ಒಪ್ಪಂದವಾಗುವುದು, 2. ಒಪ್ಪಿಕೊಳ್ಳುವುದು. 1. to make an agreement, 2. to agree. ವಾ: ಗೂಡೆಗೆ ಮೊದುವೆ ನಿಗಾಂಟಾತ್.

ನಿಗಿನಿಗಿ ಕೆಂಡ /*niginigi kɛṇḍa*/ ನಾವಿ. ಕೆಂಪಗೆ ಮಿನುಗುವ ಕೆಂಡ. red and hot ember. ವಾ: ಮೇಲೇರಿಲಿ ನಿಗಿ ನಿಗಿ ಕೆಂಡ ರಾಸಿ ಮೇಲೆ ದೇವು ಬೀಳ್ದು.

ನಿಗುರ್ದು /*nigurdu*/ ನಾವಿ. 1. ಉರಿ ಬರುವುದು, 2. ತೊಂದರೆ ಕೊಡು. 1. burning sensation, 2. to trouble someone. ವಾ: ನಿಗುರ್ದು ಒಳ್ಳದಿಕ್ಕಲ್ಲ.

ನಿಗ್ಗ /*nigga*/ ನಾ. 1. ಒತ್ತೊತ್ತಾಗಿ, 2. ದಟ್ಟವಾಗಿ. 1. together, 2. thick. ವಾ: ಕಾಡ್ ನಿಗ್ಗಲಿ ಬಂದುಟು.

ನಿಗ್ರಿಸಿಬುಟ್ಟನೆ /*nigirisibuṭṭanɛ*/ ನಾ. 1. ಸಾಯಿಸಿ ಬಿಡುವೆ, 2. ಬೈಗುಳ ಪದ. 1. will kill, 2. an expletive term. ವಾ: ನನ್ನ ಸುದ್ದಿಗೆ ಬಂದರೆ ನಿಗ್ರಿಸಿ ಬುಟ್ಟನೆ. **ನಿಗ್‌ರಿಹೋಗ್** /*nigiriho:gi*/ ಸತ್ತು ಹೋಗು ಎಂಬಂತೆ ಹೇಳುವ ಶಾಪ ಪದ. an expletive term. ವಾ: ನೀ ಬೇಗ ನಿಗ್‌ರಿ ಹೋಗು.

ನಿಚ್ಚಕ್ಕಾ /*niccakka:*/ ನಾ. ನಿತ್ಯಕ್ಕೂ ಆಗುವುದು. occuring everyday.

ನಿಜಾಗ್ಲು /*nija:glu*/ ನಾವಿ. 1. ಸತ್ಯವಾಗಿ, 2. ನಿಜವಾಗಿ, 3. ಯಥಾರ್ಥ. 1. true, 2. really, 3. as it is. ವಾ: ಹೌದು ನಿಜವಾಗಿ ಅವು ಬಂದವೆಗಡ.

ನಿಟ್ಟ್ /*niṭṭi*/ ನಾ. 1. ಕ್ರಮ, 2. ನಿಟ್ಟು. 1. an order, 2. neat. ವಾ: ಆ ನಿಟ್ಟ್‌ಲಿ ಕೆಲ್‌ಸ ಮಾಡೊಕು.

ನಿಡಿಂಜಿ /*niḍinji*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ನಿಡುಬೆ /*niḍubɛ*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಐವರ್ನಾಡು ಗ್ರಾಮದ ಜಾಗ. 1. family, 2. lineage, 3. a locality in Aivarnadu village in Sullia Taluk of Dakshina Kannada District.

ನಿಡ್ಕಣ /*niḍkaṇa*/ ನಾ. ಒಂದು ಬಗೆಯ ಸಣ್ಣ ಮೀನು. a small variety of fish. ಪ: ನಿಡ್ಯನ(ತು)

ನಿಡ್ಕಣೆ /*niḍkaṇɛ*/ ನಾ. ಹೊಳೆಗಳಲ್ಲಿ ಕಂಡುಬರುವ ಸುಮಾರು 6 ಇಂಚು ಉದ್ದದ ಮೀನು. a six inch long freshwater fish. ವಾ: ನಿಡ್ಕಣೆತೇಳ್‌ದು ಹಳ್ಳಲಿರೋ ಮೀನ್.

ನಿಡ್ಡಿಮುಂಡಟ /*niḍḍimunḍaṭa*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ನಿಡ್ಪಳ್ಳಿ /*niḍpaḷḷi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ನಿಡ್ಮಾರು /*niḍma:ru*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕೊಡಿಯಾಲ ಗ್ರಾಮದ ಜಾಗ. a locality in Kodiyala village in Sullia Taluk of Dakshina Kannada District.

ನಿಡ್ಯ /*niḍya*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ನಿಡ್ಯಮಲೆ /*niḍyamalɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ನಿತ್ಕಣಿ /*nitkaṇi*/ ಕ್ರಿ. 1. ನಿಂತುಕೊಳ್ಳಿ, 2. ಸ್ವಲ್ಪಇರಿ, 3. ತಡೆಯಿರಿ. 1. to ask someone to stand, 2. wait for sometime, 3. to ask someone to wait. ವಾ: ನಿತ್ಕಣಿ ಈಗ ಬನ್ನೆ.

ನಿತ್ಕೊಣೊಕು /*nitkoṇɔku*/ ಕ್ರಿ. 1. ನಿಂತು ಕೊಳ್ಳಬೇಕು, 2. ಎದ್ದು ನಿಲ್ಲಬೇಕು. 1. have to stand, 2. need to stand up. ವಾ: ಬೇಕರೆ ನಿತ್ಕೊಣೊಕು.

ನಿತ್ /*nitti*/ ಕ್ರಿ. ನಿಂತು. standing. ವಾ: ನಿತ್ ನಿತ್ ನಂಗೆಸಾಕಾತ್. ಪ: ನಿತ್‌ದ್ – ನಿಂತು. **ನಿತ್ತ** /*nitta*/ ನಿಂತರು. they stood up. ವಾ: ಮಳೆ ನಿತ್ತ ಮೇಲೆ ಬಂದರಾತ್. **ನಿತ್ತತ್**[1] /*nittati*/ 1. ನಿಂತಿತು, 2. ನಿಲ್ಲು, 3. ತಟಸ್ಥವಾಗು. 1. stopped, 2. to stop, 3. to become immovable. ವಾ: ಅವುಳಿ ಅಸ್ಟ್ ದೂರ ಹೋಗಿ ನಿತ್ತತ್. **ನಿತ್ತತ್**[2] /*nittati*/ 1. ನಿಂತಿತು, 2. ನಿಂತನು/ಳು, 3. ನಿತ್ತಿತು. 1. stopped, 2. he/she stopped, 3. it stopped. ವಾ: ಮನೆ ಹಕ್ಕಲೆ ಅಂವ ನಿತ್ತತ್. **ನಿತ್ತಲ್ಲೆ** /*nittatlɛ*/ ನಿಲ್ಲಲಿಲ್ಲ. didn't stop/ stand. ವಾ: ಹೇಳಿರು ನಿತ್ತಲ್ಲೆ. **ನಿತ್ತರಿ** /*nittari*/ ನಾ. 1. ನಿಂತಿದ್ದೀರಾ?, 2. ನಿಲ್ಲುತ್ತೀರಾ?, 3. ತಡೆಯು. 1. are you standing? 2. will you stand?, 3. to stop. ವಾ: ನೀವು ಯಾಕೆ ನಿತ್ತರಿ? **ನಿತ್ತುಟು** /*nittuṭu*/ 1. ನಿಂತಿದೆ, 2. ನಿಂತುಹೋಗಿ. 1. stopped, 2. stopped. ವಾ: ಗುಡ್‌ಗ್, ಸಿಡ್ಲ್ ಈಗ ನಿತ್ತುಟು. **ನಿತ್ತೊ**[1] /*nittɔ*/ 1. ನಿಲ್ಲು, 2. ಕಾಲೂರಿ ಇರು, 3. ಸ್ಥಿರವಾಗಿರು. 1. to stop, 2. to stand up, 3. to be firm. ವಾ: ಹೋಗಿ ಹೋಗಿ ಅಲ್ಲೆ ನಿತ್ತೊ. ಪ: ನಿತ್ತೊಳೊ – ನಿಂತಿದ್ದಾರೆ. **ನಿತ್ತೊ**[2] /*nittɔ*/ ನಿಂತರು. to wait. ವಾ: ಬಸ್ಸಿಗೆ ಕಾದ್ ನಿತ್ತೊ. **ನಿತ್ಕ** /*nittika*/ ನಿಂತುಕೊ. standing. ವಾ: ದಾರಿ ಕರೆಲಿ ನಿತ್ಕ ನಾ ಬನ್ನೆ.

ನಿತ್ಯ /*nitya*/ ನಾ. 1. ಯಾವಾಗಲು, 2. ಪ್ರತಿದಿನ, 3. ಅನಂತ, 4. ಶಾಶ್ವತ, 5. ಸದಾ. 1. always, 2. everyday, 3. infinite, 4. permanent, 5. all the time. ವಾ: ನಿತ್ಯ ಪೇಪರ್ ತಂದರೆನ?

ನಿತ್ರಾಣ /*nitra:ṇa*/ ನಾವಿ. 1. ಕ್ಷೀಣ, 2. ಲಾಚಾರು, 3.

ಸುಸ್ತಾಗು, 4. ಆಯಾಸವಾಗು. 1. to lose one's vitality, 2. forlorn, 3. to get tired of, 4. fatigue. ವಾ: ನಿತ್ರಾಣಂದಾಗಿ ಎದ್ದ್ ನಿಲ್ಲಿಕೆ ಬೊತ್ತ್.

ನಿದರ್ಸನ /*nidarsana*/ ನಾ. 1. ನಿದರ್ಶನ, 2. ಉದಾಹರಣೆ, 3. ದೃಷ್ಟಾಂತ. 1. an example, 2. an instance, 3. an illustration. ವಾ: ಇದೊಂದ್ ನಿದರ್ಶನ ಕಂಡದೆ ನಾವ್ಗೆ.

ನಿದಾನ /*nida:na*/ ನಾ. 1. ನಿಧಾನ, 2. ಸಾವಕಾಶ. 1. slow, 2. unhurried. ವಾ: ನಿನ್ನದ್ ಬಾರಿ ನಿದಾನದ ಕೆಲ್ಸ.

ನಿದಿ /*nidi*/ ನಾ. 1. ನಿಧಿ, 2. ಹುದುಗಿಟ್ಟ ಧನ, 3. ನಿಕ್ಷೇಪ, 4. ಸಂಪತ್ತು. 1. treasure 2. hidden treasure 3. a treasure trove 4. wealth. ವಾ: ಹಿಂದೆನ ಕಾಲಲಿ ನಿದಿ ಸಿಕ್ತಿತ್‌ಗಡ.

ನಿದ್ದೆ /*niddɛ*/ ಕ್ರಿವಿ. ನಿದ್ರೆ ಮಾಡು. sleep. ವಾ: ಜಾಗೆ ಬದ್‌ಲಾಗಿ ಲಾಯ್ಕಲಿ ನಿದ್ದೆ ಬಾತ? **ನಿದ್ರೆ**, /*nidrɛ*/ 1. ಸಹಜವಾದ ಸುಪ್ತಾವಸ್ಥೆ ಮತ್ತು ನಿಷ್ಕ್ರಿಯತೆಯ ಸ್ಥಿತಿ, 2. ಎಚ್ಚರವಿಲ್ಲದಿರುವ ಸ್ಥಿತಿ. 1. state of being unconscious, 2. dormant state. ವಾ: ನಿದ್ರೆನೆ ಬಾದುಲೆ.

ನಿನೆ[1] /*ninɛ*/ ನಾ. 1. ಬತ್ತಿ, 2. ಎಣ್ಣೆಯಲ್ಲಿ ಅದ್ದಿದ ಬತ್ತಿ. 1. wick, 2. wick soaked in oil. ಪ: ನೆಣೆ

ನಿನೆ[2] /*ninɛ*/ ನಾ. 1. ಎಳಸು, 2. ಚಿಗುರು, 3. ಮೊಗ್ಗು, 4. ಎಳೆಕಾಯಿ, 5. ಕಸುಗಾಯಿ. 1. tender, 2. shoot, 3. bud, 4. tender fruit, 5. a young fruit.

ನಿನ್ನ /*ninna*/ ಸನಾ. 1. ನಿನ್ನ, 2. ನಿನ್ನದು. 1. your, 2. yours. ವಾ: ನಿನ್ನ ಮಾತಾಡ್‌ಸಿತ್‌ಲೆನ? **ನಿನ್ನ ನಾಲಿಗೆ ಇಳ್ದೊಕೆ** /*ninna na:ligɛ iḷdokɛ*/ ಮಾತು ಬಾರದೆ ಇರಲಿ ಎಂಬ ಬೈಗುಳ ಪದ. an expletive – to mean that one shouldn't be able to speak. ವಾ: ನಿನ್ನ ನಾಲಿಗೆ ಇಳ್ದೊಕೆತ ಹೇಳ್ದಂಗಾತ್. **ನಿನ್ನ ಬೆನ್ನ್‌ಗೆ ಕಾಸ್‌ನೆ** /*ninna bennɨgɛ ka:snɛ*/ ಹೊಡೆಯುತ್ತೇನೆ ಎನ್ನುವುದಕ್ಕೆ ಉಪಯೋಗಿಸುವ ಬೈಗುಳದ ಪದ. an expletive indicating 'I will hit you.'. ವಾ: ಬೇಗ ಮೀಯಕೆ ಬರದಿದ್ರೆ ನಿನ್ನ ಬೆನ್ನಿಗೆ ಕಾಯ್ಸಿನೆ ಈಗ ನೋಡಿಕ. **ನಿನ್ನ ಬೊಜ್ಜ ಮಾಡಿಕೆ** /*ninna bojja ma:ḍikɛ*/ ಬೈಗುಳ ಪದ. an expletive term. ವಾ: ನಿನ್ನ ಬೊಜ್ಜ ಮಾಡಿಕೆ ಹಿಂಗೆ ಉರಿಬಾದು. **ನಿನ್ನ ಸುಡಿಕೆ** /*ninna suḍikɛ*/ ಬೈಗುಳ ಪದ. an expletive term. ವಾ: ನಿನ್ನ ಸುಡಿಕೆ ಇರ್‌ದೋ ಇಸ್ಟ್ ಅರ್ವೆ. **ನಿನ್ನ ಹುಟ್ಟ್ ಗುಣ** /*ninna huṭṭi guṇa*/ ಬೈಗುಳ ಪದ. an expletive term. **ಹುಟ್ಟ್ ಗುಣ ಗಟ್ಟ ಹತ್ತಿರೂ ಬುಡಿಕಿಲೆ(ಗಾ).** ವಾ: ನಿನ್ನ ಹುಟ್ಟ್ ಗುಣ ಸುಟ್ರು ಹೋಕಿಲೆ. **ನಿನ್ನಂತ** /*ninnanta*/ ಸನಾ. ನಿನ್ನದೇ ತರಹ. like you. ವಾ: ನಿನ್ನಂತ ಅಪ್ಪ ಯಾರಿಗೂ ಸಿಕ್ಕಿಕಿಲೆ. **ನಿನ್ನಂದ** /*ninnanda*/ 1. ನಿನ್ನಿಂದ, 2. ನಿನ್ನಿಂದಾಗಿ. 1. because of you, 2. due to. ವಾ: ಆ ಕೆಲ್ಸ ನಿನ್ನಂದ ಮಾಡಿಕಾದೊ. **ನಿನ್ನಪ್ಪಂದ್** /*ninnappana*/ ಬೈಗುಳ ಪದ. an expletive term. **ನಿನ್ನಲಿ** /*ninnali*/ ನಿನ್ನಲ್ಲಿ. with you/from you. ವಾ: ನಿನ್ನಲಿ ಏನೋ ಹುರ್‌ಪು ಉಟ್ಟು. **ನಿನ್ನಾಂಗೆ** /*ninna:ŋgɛ*/ ನಿನ್ನ ಹಾಗೆ, ನಿನ್ನಂತೆಯೇ. like you. ವಾ: ನೋಡಿಕೆ ನಿನ್ನಾಂಗೆ ಉಟ್ಟು. **ನಿನ್ನೆಸರ್** /*ninnɛsarɨ*/ ನಿನ್ನ ಹೆಸರು. your name. ವಾ: ನಿನ್ನೆಸರ್ ಎಂತತ ಹೇಳ್ತೆಲೆ.

ನಿನ್ನಿಕಲ್ಲು /*ninnikallu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ನಿನ್ನೆ /*ninnɛ*/ ನಾ. 1. ಹಿಂದಿನ ದಿನ, 2. ಕಳೆದುಹೊದ. 1. the previous day, 2. yesterday. ವಾ: ನಿನ್ನೆ ಬಾಕನ ಹೊತ್ತಾಗಿತ್ತ್.

ನಿಪ್ಪಕ್‌ತುಣಿ /*nippakɨtuṇi*/ ನಾವಿ. ಶವ ಸಂಸ್ಕಾರದ ದಿನ ಸಾವಿಗೆ ಬಂದ ಸಂಬಂಧಿ ಹೆಂಗಸರು ರವಿಕೆ ತೊಡದೆ ಬಿಳಿ ಸೀರೆ ಉಟ್ಟು ಭುಜಕ್ಕೆ ಬಟ್ಟೆ ಕಟ್ಟಿಕೊಳ್ಳುವುದು. a custom of women wearing a white saree and covering their shoulders and chest with a piece of clothe instead of a blouse when they attend the rituals related to any cremation or a burial service. ವಾ: ನಿಪ್ಪಕ್ ತುಣಿ ಕಟ್ಟಿಕಂಡೊ.

ನಿಮನಿ /*nimani*/ ನಾ. 1. ಒಂದು ತರಹ, 2. ಒಂದು ರೀತಿ, 3. ಒಂದು ನಮೂನೆ. 1. a manner, 2. a type, 3. a category. ವಾ: ರೋಬಸ್ಟ ಒಂದ್ ನಿಮನಿ ದೈ. ಪ: ನಮೂನೆ

ನಿಮರ್ಸ್ /*nimarsɨ*/ ಕ್ರಿವಿ. 1. ಗಟ್ಟಿಗೊಳಿಸುವುದು 2. ನೆಲಕ್ಕೆ ಒತ್ತುವುದು. 1. to make something

strong, 2. to press into the ground. ವಾ: ಆ ಕೆಂಬನ ಒಳ್ಳ ನಿಮರ್ಸ್. ಪ: ನಿಮೊರಿ

ನಿಮ್ಮ /*nimma*/ ಸನಾ. ನಿಮ್ಮದು. to you. **ನಿಮ್ಮಂದ** /*nimmanda*/ 1. ನಿಮ್ಮಿಂದಾಗಿ, 2. ನಿಮ್ಮ ಪ್ರಯತ್ನದಿಂದ. 1. because of you, 2. due to your effort. ವಾ: ಇದ್ ನಿಮ್ಮಂದಾವ ಕೆಲ್ಸ ಅಲ್ಲ. **ನಿಮಿಗೆ** /*nimigɛ*/ ನಿಮಗೆ. to you. ವಾ: ನಿಮಿಗೆ ಕೊಡಿಕೆ ಹೇಳಿದ್ದೆ. ಪ: ನೀವ್‌ಗೆ. **ನಿಮಿಗೆಸ್ಟ್** /*nimigɛsṭɨ*/ ನಿಮಗೆ ಎಷ್ಟು? how much for you? ವಾ: ನಿಮಿಗೆಸ್ಟ್ ಮಕ್ಕ? ಪ: ನೀವ್‌ಗೆಸ್ಟ್ **ನಿಮ್ಮಂದಳೇ** /*nimmandaḷe:*/ ನಿಮ್ಮಿಂದಾಗಿಯೇ. because of you. ವಾ: ನಿಮ್ಮಂದಳೇ ಈ ಕೆಲ್ಸ ಆದ್. **ನಿಮ್ಮಲ್ಲಿ** /*nimmalli*/ 1. ನಿಮ್ಮವರಲ್ಲಿ, 2. ನಿಮ್ಮ ಕಡೆ. 1. among you, 2. at your place. ವಾ: ನಿಮ್ಮಲ್ಲಿ ಯಾರ್‌ನಾರ್ ಒಬ್ಬರ್‌ನ ಕಳ್‌ಸಿ.

ನಿಮಿರಿ ನಿತ್ತತ್ /*nimiri nittatɨ*/ ನಾವಿ. 1. ನೆಟ್ಟಗೆ ನಿಂತಿತು, 2. ಎದ್ದು ನಿಲ್ಲು, 3. ಕೋಪದಿಂದ ಎದ್ದು ನಿಲ್ಲು. 1. stood up straight, 2. to stand up, 3. to stand in anger. ವಾ: ಮೊಲ್‌ಗಿದ್ದ ಕರ್ ನಿಮಿರಿ ನಿತ್ತತ್.

ನಿಮುರ್ತಿ /*nimu:rti*/ ನಾ. ನಿವಾರಣೆ. prevention. ವಾ: ಅದಲ್ಲದೆ ಬೇರೆ ನಿಮುರ್ತಿ ಇಲ್ಲೆ.

ನಿಮುರ್ದು /*nimurdu*/ ಕ್ರಿವಿ. 1. ಸಿಟ್ಟಿನಿಂದ ಮುಂದೆ ಬರು, 2. ಹೊಡೆಯಲು ತಯಾರಾಗಿ ಬರು. 1. to rush in anger, 2. to move in order to hit someone. ವಾ: ಜಗಳ ಮಾಡಿಕನ ನಿಮುರ್ದು, ಬೈಯ್ಯಕನ ನಿಮುರ್ದು.

ನಿಮ್‌ರ್^{1} /*nimirɛ:*/ ನಾ. 1. ಆಸಕ್ತಿ ವಹಿಸು, 2. ಕುತೂಹಲವಿರು. 1. to focus on, 2. to have interest. ವಾ: ಮಕ್ಕಳೆ ಚೂರ್ ನಿಮ್‌ರಿದ್ ಕೇಳಿ.

ನಿಮ್ರ್^{2} /*nimrɨ*/ ನಾ. 1. ಮೈಮುರಿ, 2. ಸೆಟೆಯು. 1. to stretch one's arms and legs as an act of relaxation, 2. to stretch oneself. ವಾ: ಎದ್ದಂಗೆ ನಿಮ್ರ್‌ದು.

ನಿಮ್ಸ /*nimsa*/ ನಾ. 1. ನಿಮಿಷ, 2. ಕಣ್ಣು ಮುಚ್ಚಿ ತೆಗೆಯುವುದು, 3. ಒಮ್ಮೆ ರೆಪ್ಪೆ ಹೊಡೆಯುವಷ್ಟು ಕಾಲ. 1. a minute, 2. to close and open one's eyes, 3. fraction of a minute. ವಾ: ಒಂದ್ ನಿಮ್ಸ ಬನ್ನೆ ಇಲ್ಲೆ ಇರಿ.

ನಿರಾಸೆ /*nira:sɛ*/ ಕ್ರಿವಿ. ಭರವಸೆ ಕಳೆದುಕೊಳ್ಳುವುದು. to lose trust on someone. ವಾ: ಅಂವ ಬಾರಿ ನಿರಾಸೆಂದ ಮಾತಾಡ್‌ದೆ.

ನಿರೀಕ್ಸೆ /*niri:ksɛ*/ ಕ್ರಿ. 1. ನಿರೀಕ್ಷೆ, 2. ಆಶಾವಾದ. 1. expectation, 2. optimism. ವಾ: ನಿರೀಕ್ಷೆ ಇದ್ದರೆ ಬೊದ್ಕಿಗೆ ಒಂದು ಅರ್‌ತ.

ನಿರುಮ್ಮಳ /*nirummaḷa*/ ನಾ. 1. ನೆಮ್ಮದಿ, 2. ಸಮಾಧಾನ, 3. ಶಾಂತಿ. 1. peace of mind, 2. contentment, 3. peace. ವಾ: ಹಾಡ್ ಕೇಳಿರೆ ಮನ್ಸಿಗೆ ನಿರುಮ್ಮಳ ಆದೆ.

ನಿರೂಪಕ /*niru:paka*/ ನಾ. 1. ನಿರೂಪಕ, 2. ವಿವರಿಸುವವನು, 3. ಹೇಳುವವನು, 4. ವಿವರಣೆ ನೀಡುವವನು, 5. ಕಥೆ ಹೇಳುವವನು. Male: 1. host/commentator/ master of ceremony, 2. the one who explains, 3. teller, 4. the one who explains, 5. story teller. ವಾ: ಅಂವ ನಿರೂಪಕ ಆದೆಗಡ.

ನಿರೂಪಕಿ /*niru:paki*/ ನಾ. 1. ನಿರೂಪಕಿ, 2. ವಿವರಿಸುವವಳು, 3. ಹೇಳುವವಳು, 4. ವಿವರಣೆ ನೀಡುವವಳು, 5. ಕಥೆ ಹೇಳುವವಳು. Female: 1. host/commentator/master of ceremony, 2. the one who explains, 3. teller, 4. the one who explains, 5. story teller. ವಾ: ನಿಂಗೆ ನಿರೂಪಕಿ ಆಕೆ ಇಸ್ಟನ?

ನಿರ್ಣಯ /*nirṇaya*/ ನಾ. 1. ನಿರ್ಣಯ, 2. ತೀರ್ಮಾನ, 3. ಕೊನೆಯಮಾತು, 4. ನಿರ್ಧಾರ. 1. a resolution, 2. a decision, 3. last word, 4. a decision taken with determination. ವಾ: ಬೇಗ ಏನಾರ್ ನಿರ್ಣಯ ತಕಣಿ.

ನಿರ್ದಾರ /*nirda:ra* / ಕ್ರಿವಿ. 1. ನಿರ್ಧಾರವಾಗುತ್ತದೆ, 2. ನಿರ್ಧಾರವಾಗಬಹುದು. 1. will be decided, 2. may be divided. ವಾ: ನಾಳೆ ಎಂತತ ನಿರ್ದಾರ ಆದು.

ನಿರ್ನಾಳ್ತಿಂಗ /*nirna:ḷtiŋga*/ ನಾ. ಅರೆಭಾಷೆಯ ಆರನೇ ತಿಂಗಳು. 6th month in Arebhashe

calendar. ವಾ: ನಿರ್ನಾಳ್ತಿಂಗಲಿ ಕಾವೇರಿ ಸಂಕ್ರಮಣ ಆಚರ್‌ಸುವೆ.

ನಿರ್ಪು /*nirpu*/ ನಾ. 1. ಕೆಂಡದ ರಾಶಿ, 2. ಮೇಲೆರಿ. heap of burning coal/embers. ವಾ: ಹಬ್ಬಲಿ ನಿರ್ಪು ಮೇಲೆ ನಡೆದು.

ನಿಲುವು /*niluvu*/ ನಾ. 1. ಅಭಿಪ್ರಾಯ, 2. ಅನಿಸಿಕೆ. 1. opinion, 2. conjecture. ವಾ: ನಿನ್ನ ನಿಲುವು ತಿಳ್ಸಿರೆ ಒಳ್ಳದ್.

ನಿಲ್ /*nilɨ*/ ಕ್ರಿ. ನಿಲ್ಲು. stop. ವಾ: ಎದ್ದ್ ನಿಲ್. ಪ: ನಿಲ್ಲ್

ನಿಲ್‌ಕ್ /*nilɨkɨ*/ ನಾ. 1. ಇಣುಕು, 2. ಇಣಿಕು, 3. ಬಾಗು, 4. ನಿಲುಕು, 5. ಚಾಚುವಿಕೆ. 1. to peep, 2. to peek, 3. to bend, 4. to reach, 5. to spread/to stretch. ವಾ: ಎಲ್ಯಾರ್ ಹೊರ್‌ಡಿಕನ ಬಾಗ್‌ಲ್ ಸೆರೆಲಿ ನಿಲ್‌ಕಿ ನೋಡ್ದು. ಪ: ನಿಲ್ಕಿ – ಇಣುಕಿ; ನಿಲ್ಕೊಕುಂತ – ಇಣುಕಬೇಕೆಂದು; ನಿಲ್ಕ್ – ಇಣುಕು. **ನಿಲ್‌ಕ್‌ಬಡ** /*nilɨkbaḍa*/ 1. ಇಣುಕಬೇಡ, 2. ಬಾಗಿ ನೋಡು. 1. don't peep, 2. to bend and see. ವಾ: ಹಂಗೆಲ್ಲ ನಿಲ್‌ಕ್‌ಬಡ.

ನಿಲ್ಗ್[1] /*nilgɨ*/ ನಾ. 1. ನಿದ್ರೆ ಮಾಡು, 2. ನಿದ್ರಿಸು, 3. ವಿಶ್ರಾಂತಿ ಪಡೆ. 1. to sleep, 2. to nod off, 3. to rest. ವಾ: ನಿಲ್ಗದೆ ಇರಿಕಾದೆನ? ಪ: ನಿಲ್ಗಿಕಾದ್ – ನಿದ್ರೆ ಮಾಡಬಾರದು; ನಿಲ್ಗಿಕೊಂಡಿತ್ – ನಿದ್ರೆ ಮಾಡಿಕೊಂಡಿತ್ತು/ನಿದ್ರೆ ಮಾಡಿಕೊಂಡಿದ್ದಾನೆ/ಳೆ; ನಿಲ್ಗಿಟ್ಟು – ನಿದ್ದೆ ಮಾಡಿದೆ; ನಿಲ್ಗಿತ್ – ನಿದ್ದೆಮಾಡಿತು.

ನಿಲ್ಗ್[2] /*nilgɨ*/ ಕ್ರಿ. ಮಲಗು. to sleep. ವಾ: ಹೊತ್‌ಉಗ್ಗಪ್ಪ್ ಇನ್ನ್ ನಿಲ್ಗ್. **ನಿಲ್ಗಿತ್ಲೆ** /*nilgitlɛ*/ ನಿದ್ರಿಸಲಿಲ್ಲ. didn't sleep. ವಾ: ರಾತ್ರೆಲ್ಲ ನಿಲ್ಗಿತ್ಲೆ ಈಗ ಕಣ್ಣ್ ಉರಿಯಾದೆ. **ನಿಲ್ಗಿದೊ** /*nilgidɔ*/ ಮಲಗಿದರು. slept. ವಾ: ನಿಲ್ಗಿದ ಕೂಸ್‌ನ ಏಳ್ಸದ್ಯಾಕೆ?

ನಿಲ್ಲ್ /*nillɨ*/ ಕ್ರಿ. ನಿಂತುಕೊ. to stand. **ನಿಲ್ಲಿಕೆ ನೆರಳ್ ಇಲ್ಲೆ, ಹಿಡಿಯಕೆ ಕೊಂಬೆ ಇಲ್ಲೆ(ಗಾ).** ವಾ: ಅಲ್ಲೆ ನಿಲ್ಲ್ ನಾ ಬನ್ನೆ. **ನಿಲ್‌ತಿತ್ತ್** /*nilɨtitti*/ ನಿಲ್ಲುತಿತ್ತು. used to stop. ವಾ: ಬಸ್ ಬಂದ್ ಇಲ್ಲೆ ನಿಲ್ತಿತ್. **ನಿಲ್ಲಕ್‌ಂತ** /*nillakɨnta*/ ನಿಲ್ಲಬಹುದೆಂದು. might stop. ವಾ: ಅಲ್ಲಿ ನಿಲ್ಲಕ್‌ಂತ ಹೇಳ್ತಿದ್ದೊ. **ನಿಲ್ಲಟ** /*nillaṭa*/ 1. ನಿಲ್ಲುವುದು, 2. ನಿಲ್ಲುವ ಭಂಗಿ, 3. ನಿಲ್ಲುವ ರೀತಿ. 1. stopping, 2. a manner of standing, 3. a style of standing. ವಾ: ಅದ್ ಎಂತ ನಿಲ್ಲಟ ಹಾಂಗೆ. **ನಿಲ್ಲಲಿ** /*nillali*/ ನಿಂತುಕೊಳ್ಳಲಿ. let someone stand. ವಾ: ಅಲ್ಲೇ ಬಿಸ್ಲ್ ಲಿ ಹಙ್ಞ ಹೊತ್ ನಿಲ್ಲಲಿ. **ನಿಲ್ಲಿಕಾದು** /*nillika:du*/ 1. ನಿಲ್ಲಬಹುದು, 2. ನಿಲ್ಲಬೇಕಾಗಬಹುದು. 1. may stop, 2. may have to stand. ವಾ: ಹಙ್ಞ ಹೊತ್ ನಿಲ್ಲಿಕಾದು. **ನಿಲ್ಲಿಕಾದ್** /*nillika:dɨ*/ ನಿಲ್ಲಬಾರದು. shouldn't stop. ವಾ: ಅಲ್ಲಿ ಹಂಗೆಲ್ಲ ನಿಲ್ಲಿಕಾದ್. **ನಿಲ್ಲಿಸಿ** /*nillisi*/ 1. ನಿಲ್ಲಿಸಿ, 2. ಎದುರಾಗಿರಿಸು. 1. stopping someone/something, 2. to put in front of. ವಾ: ಇವ್ಳು ನನ್ನ ಹಿಂಗೆ ನಿಲ್ಲಿಸಿ ಎಲ್ಲಿಗೆ ಹೋದ್ ತ. **ನಿಲ್ಸದೆ** /*nilsadɛ*/ ನಿಲ್ಲಿಸದೆ. not stopping/without stopping. ವಾ: ಕೈ ತಡ್ದರೂ ಬಸ್ ನಿಲ್ಸದೆ ಹೋತು. **ನಿಲ್ಸಿ** /*nilsi*/ ನಿಲ್ಲಿಸಿ. stopping. ವಾ: ಅವು ನನ್ನ ಕರ್‌ದ್ ನಿಲ್ಸಿ ಮಾತಾಡ್‌ಸಿದೊ. **ನಿಲ್ಸ್** /*nilsɨ*/ ನಿಲ್ಲಿಸು. to stop. ವಾ: ನಿಮ್ಮಲ್ಲಿ ಯಾರ್ನಾರ್ ಒಬ್ಬರ್‌ನ ಕಳ್ಸಿ.

ನಿಶ್ಚಯ[1] /*niścaya*/ ಕ್ರಿ. 1. ಖಂಡಿತವಾಗಿಯೂ, 2. ದೃಢವಾಗಿಯೂ. 1. for sure, 2. certainly. ವಾ: ನಿಶ್ಚಯಾಗಿ ನಿಮಿಗೆ ತಿಳ್‌ಸಿನೆ ಆದೊಲ?

ನಿಶ್ಚಯ[2] /*niścaya*/ ನಾ. ವೀಳ್ಯಶಾಸ್ತ್ರ. a custom of exchanging betel leaf and areca nut. ವಾ: ಇನ್ನು ಯಾವುದು ನಿಶ್ಚಯ ಆತ್‌ಲೆ.

ನಿಸಾರ /*nisa:ra*/ ನಾ. ಸಸಾರ, ತಾತ್ಸಾರ. neglect. ವಾ: ನನ ಕಾಂಬಕನ ಬಾರಿ ನಿಸಾರ ನಿಂಗೆ.

ನಿಸೂರ /*nisu:ra*/ ನಾ. ಜಾಣ. intelligent. **ಹೊಸ ಊರಿಗೆ ಬಹಳ ನಿಸೂರ(ಗಾ).** ವಾ: ಎಸ್ಟ್ ನಿಸೂರಲಿ ಹೇಳ್ದೆ ನಂಗೆ ಬೇಕ್ ತ.

ನೀ /*ni:n*/ ಸನಾ. ನೀನು. you. ವಾ: ನೀ ಬನ್ನೆತ ಹೇಳ್ದನ? **ನೀ ಬಾನೆ** /*ni: ba:nɛ*/ 1. ನೀನು ಬಾ, 2. ಬಾರೆ (ಏವ). 1. you come, 2. calling a young girl. ವಾ: ನೀ ಬಾನೆ ನನ್ನೊಟ್ಟಿಗೆ. **ನೀ ಹೋಗುನೆ** /*ni: ho:gunɛ*/ ನೀನು ಹೋಗು (ಏವ). you go. ವಾ: ನೀ ಹೋಗುನೆ ನಾ ಬಾಲೆ. **ನೀಂಗೇನ್** /*ni:ŋge:nɨ*/ ನಿನಗೇನು? what do you want? ವಾ: ನಾ ಹೋದರೆ ನೀಂಗೇನ್? **ನೀಂತ** /*ni:nta*/ ನೀನೆಂದು. (I) thought it was you. ವಾ: ಈ ನೀಂತ ಗೊತ್ತೇ ಆತ್ಲೆ.

ನೀಂಡಿಮೊಲ್ಗ್ /*ni:ṇḍimɔlgɨ*/ ಕ್ರಿವಿ. 1. ನೆಟ್ಟಗೆ ಮಲಗು, 2. ಉದ್ದಕ್ಕೆ ನೇರವಾಗಿ ಮಲಗು. 1. to sleep

straight, 2. sleeping straight. ವಾ: ಕಾಲ್ ನೀಂಡಿಮೊಲ್ಗ್ ಸೆರಿಯಾದೆ.

ನೀಂಡ್[1] /*ni:ṇḍi*/ ನಾ. 1. ಉದ್ದಕ್ಕೆ ಬಿಡಿಸು, 2. ಚಾಚಿ, 3. ಹರಡು, 4. ನೇರ. 1. to open something straight, 2. to spread, 3. to scatter, 4. straight. ವಾ: ಕಾಲ್ ತೆಗಿ ಅಜ್ಜಿಕಳಂಗೆ ಕಾಲ್ ನೀಂಡಿ ಕುದ್ದುಟು. ಪ: ನೀಂಡಿತ್ – ಚಾಚಿದನು/ಳು; ನೀಂಡಿದೆ – ಚಾಚಿದೆ; ನೀಂಡೊಕು – ಚಾಚಬೇಕು

ನೀಂಡ್[2] /*ni:ṇḍi*/ ಕ್ರಿ. 1. ಚಾಚು, 2. ನೀಂಡಿ. to stretch. **ಕಂಬಳಿ ಇದ್ದಷ್ಟ್ ಕಾಲ್ ನೀಂಡ್(ಗಾ).** ವಾ: ಕಾಲ್ ನೀಂಡಿ ಕುದ್ದ್‌ಕ. ಪ: ನೀಂಡಿಕೆ – ಚಾಚಲು

ನೀಂಬು[1] /*ni:mbu*/ ನಾ. 1. ಉಜ್ಜು, 2. ತಿಕ್ಕು 3. ಮಾಲೀಸು. 1. to rub, 2. to scrub, 3. polish. ವಾ: ಕಾಲ್‌ನ ಹಡ್ಡಿ ನೀಂಬು.

ನೀಂಬು[2] /*ni:mbu*/ ಕ್ರಿ. 1. ರಸ ಒಸರುವಂತೆ ಗಟ್ಟಿಯಾಗಿ ಹಿಸುಕು,- ಅದುಮು, 2. ನುಲಿಚು, 3. ಸುರಿ, 4. ನಿರ್ಬಲಗೊಳಿಸು, 5. (ಹಾಲನ್ನು) ಕರೆ. 1. to squeeze so that the juice comes out of the fruit, 2. to twist, 3. to pour, 4. to weaken, 5. milking. ವಾ: ಕಂಯ್ಯುಳಿ ರಸನ ಚಿತ್ರನ್ನಕ್ಕೆ ನೀಂಬು. **ನೀಂಬಿನೀಂಬಿ** /*ni:mbini:mbi*/ ಹಿಂಡಿ ಹಿಂಡಿ. to squeeze continuously. ವಾ: ನಿಂಬುಳಿನ ನೀಂಬಿ ನೀಂಬಿ ಕೈ ಬೆರ್‌ಳೆಲ್ಲ ಬೇನೆ.

ನೀಕ /*ni:ka*/ ನಾ. ಮಣ್ಣಿನ ತಟ್ಟು. soil that has been levelled. ವಾ: ಮನೆ ಕಟ್ಟಿಕೆ ಮುಂದೆ ನೀಕ ತೆಗೆದು.

ನೀಚ /*ni:ca*/ ನಾವಿ. ಕೀಳುಮಟ್ಟದ. inferior. **ನೀಚಂಗೆ ಉಪಕಾರ ಮಾಡಿಕಾಗದ್(ಗಾ).** ವಾ: ಅದ್ ಬಾರಿ ನೀಚ ಹೆಂಗ್‌ಸ್, ಯಾವ ಮಟ್ಟಕ್ಕು ಹೋಕೆ ಹೇಸಿಕಿಲೆ.

ನೀಟ /*ni:ṭa*/ ನಾ. 1. ಉದ್ದ, 2. ಲಂಬ. 1. long, 2. straight. ವಾ: ಅಲ್ಲಿ ನೀಟಕೆ ಬೇಲಿ ಹಾಕೊಕು. **ನೀಟ ಬಾಳ್** /*ni:ṭa ba:ḷi*/ ಉದ್ದವಾದ ಗರಗಸ, ಮರವನ್ನು ಉದ್ದಕ್ಕೆ ಸೀಳಲು ಬಳಸುವ ಗರಗಸ. a long saw. ವಾ: ನೀಟಾ ಬಾಳ್‌ಲಿ ಮರ ಕೊಯ್ಯದು. **ನೀಟ ಮುರಿ** /*ni:ṭa muri*/ ನಾ. 1. ಗರಗಸದ ಒಂದು ವಿಧ, 2. ಮರವನ್ನು ಉದ್ದಕ್ಕೆ ಸೀಳುವ ಗರಗಸ. 1. a type of saw, 2. a tool with which a log wood is cut perpendicularly. ವಾ: ನೀಟ ಮುರಿಲಿ ಮರನ ಸೀಳುದು. ಪ: ಅಡ್ಡಮುರಿ(ತು). **ನೀಟಕೆ** /*ni:ṭakkɛ*/ 1. ಉದ್ದವಾಗಿ, 2. ಲಂಬವಾಗಿ, 3. ನೇರವಾಗಿ, 4. ಎತ್ತರವಾಗಿ. 1. long, 2. straight, 3. perpendicular, 4. higher. ವಾ: ಉದ್ದಕೆ ಕಾಳ್ ಬಿತ್ತಿಕೆ ಪಾತಿ ಮಾಡೊಕು.

ನೀಡ್ /*ni:ḍi*/ ಕ್ರಿ. 1. ನೀಡು, 2. ಚಾಚು. 1. to give, 2. to spread. ವಾ: ಎಲ್ಲಿ ಕೈ ನೀಡ್. ಪ: ನೀಡ್ತ – ಚಾಚುತ್ತಾ. **ನೀಡ್ದ** /*ni:ḍda*/ 1. ಹರಡಿರುವ, 2. ಚಾಚಿರುವ. 1. spreaded, 2. scattered/ stretched. ವಾ: ನೀ ಕೈ ನೀಡ್ದ. ಪ: ನೀಡ್ದೇ – ನೀಡುತ್ತದೆ; ನೀಡ್ದೊ – ನೀಡಿದರು; ನೀಡ್ನೆ – ನೀಡುವೆ; ನೀಡ್ಯೊಳೊ – ನೀಡಿದ್ದಾರೆ. **ನೀಡ್ಯೊಳೊ** /*ni:ḍɛḷɔ*/ ನೀಡಿದರು. they gave. ವಾ: ನಿನ್ನೆನೆ ನೀಡ್ಯೊಳೊ. ಪ: ಕೊಟ್ಟೊಳೊ

ನೀತಿ /*ni:ti*/ ನಾ. 1. ನೀತಿ, 2. ಮಾರ್ಗದರ್ಶನ, 3. ಒಳ್ಳೆಯನಡತೆ, 4. ಶಿಷ್ಟಾಚಾರ, 5. ಹಿತೋಕ್ತಿ. 1. moral, 2. guidance, 3. a good behaviour, 4. decorum, 5. moral. **ನೀತಿ ಹೇಳ್ದೆ, ನೋತ್‌ಕಂಡೆ ಉಚ್ಚೆ ಹೊಯ್ದೆ(ಗಾ).** ವಾ: ನೀತಿ ನೇಮತ ಇದ್ದದೆ ಅಲ.

ನೀನೂ /*ni:nnu:*/ ಸನಾ. ನೀನೂ. you too. ವಾ: ನೀನೂ ಸೇರಿಕಣಕಾಯ್ತ್. **ನೀಬುಡು** /*ni:buḍu*/ ನೀನು ಬಿಡು. you leave/drop it. ವಾ: ನೀಬುಡು ಎಲ್ಲ ಗೊತ್ತಲ ನಿಂಗೆ. **ನೀಯ** /*ni:ya*/ ನೀನಾ. is that you? ವಾ: ನೀಯ, ನಾ ಯಾರೋ ಬೇರೆವುತ ಗ್ಯಾನ ಮಾಡ್‌ದೆ. **ನೀಯಾಕೆ** /*ni:ya:kɛ*/ ನೀನು ಯಾಕೆ? why you? ವಾ: ನೀಯಾಕೆ ಹಿಂಗೆ ಯಾರೊಟ್ಟಿಗೂ ಸೇರದೆ ಒಂಟಿ ಪಿಸಾಚಿತ ಇರ್‌ದು. **ನೀಯಾರ್** /*ni:ya:ri*/ ನೀ ಯಾರು. who are you? ವಾ: ಅವು ನೀಯಾರ್‌ತ ಕೇಳಿರೆ ಎಂತರ ಹೇಳ್‌ದು.

ನೀರಂಡೆ /*Ni:raṇḍɛ*/ ನಾ. 1. ಜೀರ್‌ಕೊಳವೆ, 2. ಜೀಕಳಿ, 3. ಪಿಚಕಾರಿ. 1. a syringe, 2. a spray gun, 3. water gun. ವಾ: ಬಿಸಿನೀರ್ ಕಾಸಿಕೆ ನೀರಂಡೆ ಇಸಿ.

ನೀರಂಬಡೆ /*ni:rambaḍɛ*/ ನಾ. ಭತ್ತದ ಒಂದು ಪಾರಂಪರಿಕ ತಳಿ. a traditional variety of paddy. ವಾ: ನೀರಂಬಡೆ ಬತ್ತದ ಒಂದ್ ತಳಿ. ಪ: ನೀರಂಬಟೆ(ತು)

ನೀರಕಣಪಡೆ /*ni:rakaṇapaḍɛ*/ ನಾ. 1. ಕಮಟೆಮರ,

2. ಹಾರೋಗಿಡ, 3. ತಿಲ್ಲಮರ. laticiferous tree, Excoecaria agallocha, (Euphorbiaceae).

ನೀರಗಂಟಲ್ /*ni:ragaṉṯali*/ ನಾ. ನೀರಿನ ಮಡಕೆಯ ಕುತ್ತಿಗೆ. neck of a pot. ವಾ: ತಾಂಬ್ರದ ಹಂಡೆದ್ ನೀರ ಗಂಟಲ್ ಬುಟ್ಟ್ ಹೋವುಟು.

ನೀರಗುಂಡಿಗೆ /*ni:raguṉḏigɛ*/ ನಾ. ಅಕ್ಕಸಾಲಿಗರು ಹಾಗೂ ಕಮ್ಮಾರರು ಇಟ್ಟುಕೊಳ್ಳುವ ನೀರಿನ ಪಾತ್ರೆ. the bowl of water used by a carpenter or an ironsmith. ವಾ: ನೀರ ಗುಂಡಿಗೆ ಅಕ್ಕಸಾಲೆ ಅವು ಇಸಿಕಂಡಿದ್ದವೆ.

ನೀರಚುಲ್ಲೆಲು /*ni:racullɛlu*/ ನಾ. ಮೈನೆರೆದ ಹೆಣ್ಣಿಗೆ ಮಾಡುವ ಆಚರಣೆ. a custom observed when a girl attains puberty. ವಾ: ಹೊಲೆ ಕಂಡ ಗೂಡೆಗೆ ನೀರ ಚುಲ್ಲೆಲು ಸಾಸ್ತ್ರ ಮಾಡಿವೆ.

ನೀರಡಿ /*ni:raḏi*/ ನಾ. 1. ಸ್ನಾನದ ಕೋಣೆ, 2. ಬಚ್ಚಲು. 1. a bathroom, 2. a bath. ವಾ: ನೀ ನೀರಡಿಗೆ ಹೋದರೆ ಸದ್ಯಕೆ ಹೊರೆಗೆ ಬಾಕಿಲೆ. ಪ: ನೀರೆಡಿ – ಬಚ್ಚಲುಮನೆ; ನೀರೊಡಿ – ಬಚ್ಚಲುಮನೆ. **ನೀರಡಿಕೊಟೆಗೆ** /*ni:raḏi koṯɛgɛ*/ ಪ್ರತ್ಯೇಕವಾಗಿ ಇರುವ ಬಚ್ಚಲು ಮನೆ. a seperate bathroom. ವಾ: ಮೀಯಕೆ ನೀರಡಿ ಕೊಟೆಗೆಗೆ ಹೋಕು. **ನೀರಡಿಗೆ ಕಿಚ್ಚಿಹಾಕ್** /*ni:raḏigɛ kicciha:kɨ*/ ಸ್ನಾನದ ನೀರು ಕಾಯಿಸುವ ಪಾತ್ರೆಯ ಒಲೆಗೆ ಬೆಂಕಿ ಮಾಡು. to start a fire to boil water. ವಾ: ನಾವು ಹೊತಾರೆನೆ ನೀರಡಿಗೆ ಕಿಚ್ಚಿ ಹಾಕುದ್.

ನೀರಡಿಗೆ[1] /*ni:raḏigɛ*/ ನಾ. 1. ಬಾಯಾರಿಕೆ, 2. ತೃಷೆ, 3. ದಾಹ. 1. thirst, 2. dehydrated, 3. urge to drink water. ವಾ: ನೀರಡಿಗೆ ಆಗಿ ಬೊತ್ತ್, ಕುಡೆಕೆ ನೀರ್ ಕೊಡವ್ವ.

ನೀರಡಿಗೆ[2] /*ni:raḏigɛ*/ ನಾ. 1. ನೀರಿನ ಕೆಳಗೆ, 2. ನೀರಿನ ತಳಭಾಗ. 1. below the water, 2. at the bottom of water. ವಾ: ಹೊಳೆಲಿ ಈಜಿಕನ ನೀರಡಿಗೆ ಹೋದ್.

ನೀರಡ್ಕೆ[1] /*ni:raḏkɛ*/ ನಾ. 1. ಬಾಯಾರಿಕೆ, 2. ದಾಹ, 3. ತೃಷೆ. 1. thirst, 2. dehydrated, 3. urge to drink water. ವಾ: ಆಡಿ ಆಡಿ ನೀರಡ್ಕೆ ಆತ್. ಪ: ನೀರಡಿಕೆ – ದಾಹ

ನೀರಡ್ಕೆ[2] /*ni:raḏkɛ*/ ನಾ. ನೀರಲ್ಲಿ ಹಾಕಿಡುವ ಅಡಿಕೆ. soaked areca nut.

ನೀರನೆರಳು /*ni:ranɛraḻu*/ ನಾ. ಸತ್ತವರು ನೀರ ನೆರಳು ಇಟ್ಟಿರುವಲ್ಲಿಗೆ ಬರುತ್ತಾರೆಂದು ನಂಬುತ್ತಾರೆ, ಹಾಗೆ ಅವರು ಬರುತ್ತಾರೆಂದು ನೀರ ನೆರಳು ಇಟ್ಟಿರುವ ಸ್ಥಳದಲ್ಲಿ ಅಕ್ಕಿಹುಡಿಯನ್ನು ಹರಡಿರುತ್ತಾರೆ, ಸತ್ತವರು ಬಂದರೆ ಅವರ ಕಾಲ ಹೆಜ್ಜೆ ಕಾಣಿಸುತ್ತದೆಂದು ಹೇಳುತ್ತಾರೆ. a belief that one's dead ancestors will return to receive the offerings made by their relatives. Rice flour would be spread next to the offering, and it is believed that the relatives can see the footprints of their dead ancestors who had come to receive. ವಾ: ಸುದ್ದದ ಹಿಂದೆನ ರಾತ್ರೆ ನೀರ ನೆರಳುಗೆ ಇಸಿವೆ.

ನೀರಬಸಿರಿ /*ni:rabasiri*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಜಾಲ್ಸೂರು ಗ್ರಾಮದ ಜಾಗ. a locality in Jalsuru village in Sullia Taluk of Dakshina Kannada District.

ನೀರಬಿದಿರೆ /*ni:rabidirɛ*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಉಬರಡ್ಕ ಮಿತ್ತೂರು ಗ್ರಾಮದ ಜಾಗ. 1. family, 2. lineage, 3. a locality in Aivarnadu village in Sullia Taluk of Dakshina Kannada District.

ನೀರಳೆ ಹಾವ್ /*ni:raḻɛ ha:vɨ*/ ನಾ. ನೀರು, ಗದ್ದೆಯಲ್ಲಿ ಕಾಣಸಿಗುವ ಹಾವು. a snake found in water or in a paddy field. ವಾ: ಚೋಡ್ ಲಿ ನೀರಳೆ ಹಾವ್ ನೋಡ್ಚೆ. ಪ: ಒಳ್ಳೆಹಾವ್

ನೀರಾಂಬರ /*ni:ra:mbara*/ ನಾ. ತಿಳಿಯಾದ ಸಾಂಬಾರು. a soup/stew. ವಾ: ನೀರಾಂಬರಲಿ ಲಾಯ್ಕಲಿ ಉಂಬಕ್.

ನೀರಾತ್[1] /*ni:ra:tɨ*/ ನಾ. 1. ನೀರಾಗು, 2. ತೆಳ್ಳಗಾಗು, 3. ನೀರಿನ ಅಂಶ ಹೆಚ್ಚಾಗು. 1. to liquify, 2. to become thin, 3. increase in moisture content. ವಾ: ದೋಸೆ ಬಂದ ನೀರಾತ್.

ನೀರಾತ್[2] /*ni:ra:tɨ*/ ನಾ. ಒರತೆಯಾಗುವುದು. wet, oozing water from the ground.

ನೀರಾವು /*ni:ra:vu*/ ನಾ. 1. ನೀರಿನಲ್ಲಿರುವ ಹಾವು, 2.

ವಿಷವಿಲ್ಲದ ಒಂದು ಬಗೆಯ ಹಾವು. 1. a water snake, 2. a non-venomous snake. ವಾ: ಅದ್ ನೀರಾವು ಗಡ.

ನೀರಿಲ್ಲೆ /*ni:rillɛ*/ ನಾ. ನೀರು ಇರಲಿಲ್ಲ. There was no water. ವಾ: ಕುಡೆಕೆ ನೀರಿಲ್ಲೆ. **ನೀರಿಲ್ಲದಲ್ಲಿ ತಲೆಕಡಿಯೊಕು** /*ni:rilladalli talekaḍiyoku*/ ಬೈಗುಳ ಪದ. an expletive. ವಾ: ಅಂವ ಬಾರಿ ಅನ್ನಯ ಮಾಡ್ದೆ, ಅಂವನ ನೀರಿಲ್ಲದಲ್ಲಿ ತಲೆ ಕಡಿಯೊಕುತ.

ನೀರಿಸದೆ /*ni:risadɛ*/ ನಾ. 1. ಕಾಯಲು ಇಡದೆ, 2. ನೀರು ಇಡದೆ, 3. ನೀರು ಕೊಡದೆ. without offering/giving/keeping water. ವಾ: ಕುಡೆಕೆ ನೀರಿಸದೆ ಹೋತ್.

ನೀರಿಸುದು[1] /*ni:risudu*/ ಕ್ರಿ. ಸತ್ತ ಮನೆಯಲ್ಲಿ ಸತ್ತ ದಿನದ ರಾತ್ರಿಯಿಂದ ಮುಂದಿನ ಮೂರು ದಿನ ನೀರ ನೆರಳು ಇಡುತ್ತಾರೆ. a custom followed in the house of the dead for three days.

ನೀರಿಸುದು[2] /*ni:risudu*/ ಕ್ರಿವಿ. ಕೆಟ್ಟಕಣ್ಣು, ಕೆಡುಕು ಮಾತು. evil eye/malicious eye, speaking ill. ವಾ: ಕೂಸು ಲಾಯ್ಕ್ ಮಾತಾಡ್ದೆಂತ ಅಂವ ನೀರಿಸಿತ್.

ನೀರಿಸುದು[3] /*ni:risudu*/ ಕ್ರಿ. ಕಮ್ಮಾರ ಕಬ್ಬಿಣದ ಕೃಷಿ ಪರಿಕರವನ್ನು(ಕತ್ತಿ, ಮಚ್ಚು) ಹರಿತ ಉಳಿವಂತೆ ಮಾಡುವ ವಿಧಾನ. quenching the metal. ವಾ: ಆಚಾರಿ ಕತ್ತಿನ ಹರಿತ ಮಾಡಿ ನೀರಿಸಿತ್.

ನೀರುಗುತ್ತಿ /*ni:rugutti*/ ನಾ. ದೊಡ್ಡ ಮರದ ಬಡ್ಡೆಯನ್ನು ತೆಗೆದು, ಒಳಗಿನ ತಿರುಳನ್ನು ಸಂಪೂರ್ಣ ಖಾಲಿ ಮಾಡಿ ನೀರು ತುಂಬಿಸಲು ಉಪಯೋಗಿಸಲಾಗುತ್ತದೆ, ಈಗಿನ ಸಣ್ಣ ಡ್ರಮ್‌ನ ಹಾಗೆ. using the trunk of a tree as a water tank, after removing the heartwood, inner core. ವಾ: ನೀರುಗುತ್ತಿಲಿ ನೀರ್ ತುಂಬಿಸುದು.

ನೀರುಟ್ಟು /*ni:ruṭṭu*/ ಕ್ರಿವಿ. ನೀರು ಇದೆ. there is water. ವಾ: ಕೊಡಪಾನಲಿ ನೀರುಟ್ಟು.

ನೀರುಳಿ /*ni:ruḷi*/ ನಾ. 1. ಈರುಳ್ಳಿ, 2. ಉಳ್ಳಾಗೆಡ್ಡೆ, 3. ನೀರುಳ್ಳಿ, onion. **ಅಂಗಿ ಮೇಲಂಗಿ, ಹದಿನಾರಂಗಿ, ನಾ ಯಾರ್‌ತ ಹೇಳ್ ನನ್ನ ರಂಗಿ – ನೀರುಳಿ(ಒ).** ವಾ: ನೀರುಳಿ ರಸದ ಜೊತೆ ಕಾಯೆಣ್ಣೆ ಅತವಾ ಕಾಯಿನ ಅರ್‌ದ್ ಮಿಸ್ರ ಮಾಡಿ ತಲೆಗೆ ಹಾಕಿರೆ ಕೂದೊಲು ಉದುರುದು ನಿತ್ತದೆ. ಪ: ನೀರುಳ್ಳಿ. **ನೀರುಳ್ಳಿಬಜೆ** /*ni:ruḷḷi bajɛ*/ ನೀರುಳ್ಳಿಯಿಂದ ತಯಾರಿಸಿದ ಬಜ್ಜಿ, ಪಕೋಡ. onion fritters, onion mixed with the flour of bengal gram and fried in oil. ವಾ: ಹೊರೆಗೆ ಮಳೆ ಬರ್‌ತಾ ಇರೊಕು, ಆಗ ಮನೆ ವಳೆಗೆ ಕುದ್ದ್ ಕಂಡ್ ಬಿಸಿ ಬಿಸಿ ಕಾಪಿ ಒಟ್ಟಿಗೆ ನೀರುಳಿ ಬಜೆ ತಿಂಬದೆ ಒಂದು ಸುಕ.

ನೀರೂಜಿದೆ /*ni:ru:jidɛ*/ ಕ್ರಿವಿ. 1. ನೀರು ಜಿನುಗುತ್ತದೆ, 2. ನೀರು ಸೋರುತ್ತದೆ. 1. drizzling water, 2. leaking water. ವಾ: ಮೊಣ್ಣ್‌ನ ಹೊಸ ಕೊಡ್ಪಾನಲಿ ಹಾಕಿಸಿದ ನೀರೂಜಿದೆ.

ನೀರೊಡಿ /*ni:rɔḍi*/ ನಾ. 1. ಸ್ನಾನದ ಕೊಠಡಿ, 2. ಬಚ್ಚಲು ಮನೆ. bathroom. ವಾ: ನಿರೋಡಿಲಿ ಬಾಗ್ಲ್‌ಗೆ ತಾಳ ಇಲ್ಲೆ. ಪ: ನೀರೊಡಿ ಕೊಟಗೆ – ಬಚ್ಚಲು ಮನೆ

ನೀರೊಳ್ಳೆ /*ni:rɔḷḷɛ*/ ನಾ. ನೀರಿನಲ್ಲಿರುವ ವಿಷವಿಲ್ಲದ ಚಿಕ್ಕ ಹಾವು. a non-venomous, small water snake. ವಾ: ನೀರೊಳ್ಳೆ ಸಣ್ಣದ್.

ನೀರ್ /*ni:rɨ*/ ನಾ. 1. ನೀರು, 2. ನಿರ್ಗಂಧ ರುಚಿರಹಿತ ದ್ರವ, ಜೀವಿಗಳಿಗೆ ಅತ್ಯಗತ್ಯ, 3. H2o, 4. ಜಲ. 1. water, 2. a liquid substance without taste and smell, 3. H2O, 4. water. **ಊರಿಗೆ ಬಂದವ್ನ ನೀರಿಗೆ ಬರದಿದ್ದದ್ಯಾ(ಗಾ).** ವಾ: ನೀರ್ ತಾಕೆ ದೂರ ಹೋಕು. **ನೀರೆಲ್ಲ** /*ni:rɛlla*/ ಎಲ್ಲ ನೀರು. all the water. ವಾ: ನೀರೆಲ್ಲ ಅಡಿಗೆ ಚೆಲ್ಲಿಟು. **ನೀರೇ** /*ni:re:*/ 1. ನೀರನ್ನೇ, 2. ನೀರೇ. only water. ವಾ: ಈ ಮಕ್ಕ ನೀರೇ ಕುಡೆದುಲೆ. **ನೀರ್ ಆವಿ ಆದು** /*ni:rɨ a:vi a:du*/ ಬಿಸಿಲಿನಿಂದ ನೀರು ಆವಿಯಾಗಿ ವಾತಾವರಣ ಸೇರುವುದು. evaporation. ವಾ: ಬಿಸ್‌ಲ್‌ಲಿ ಬೇಗ ನೀರ್ ಆವಿ ಆದು. **ನೀರ್ ಉಮ್ಮಣಿ** /*ni:rɨ ummuṇi*/ ಮಳೆಗಾಲದಲ್ಲಿ ರೂಪುಗೊಳ್ಳುವ ಚಿಕ್ಕ ನುಸಿ. a termite that flies, seen during the rainy season. ವಾ: ನೀರ್ ಉಮ್ಮಣಿ ಮಳ್‌ಗಾಲಲಿ ಹೆಚ್ಚಾಗಿ ಕಂಡ್ ಬಂದದೆ.

ನೀರ್ ಎಡ್‌ಪದ್ /*ni:rɨ eḍɨpadɨ*/ ನಾವಿ. ಮಗುವಿನ ನಾಮಕರಣ ಸಂದರ್ಭ ತಾಯಿ, ವಿವಾಹ ಸಂದರ್ಭ ವಧು, ಋತುಶಾಂತಿ ದಿನ ಋತುವಾದ ಹೆಣ್ಣು ಗಂಗಾ ಪೂಜೆ ಮಾಡಿ ಶುದ್ಧಳಾಗಿ ನೀರನ್ನು ಮನೆಗೆ ತರುವ

ಶಾಸ್ತ್ರ. a ritual of bringing water after the ritual bath and after offering prayers to water (goddess Ganga), on the day of naming ceremony by the child's mother, or the bride on the day of her marriage, or the woman who has completed her menstrual period. ವಾ: ಗೂಡೆ ಹೊಲೆಕಾಂಬಕನ ನೀರ್ ಎಡ್‌ಪದ್ ಸಾಸ್ತ್ರ ಮಾಡಿವೆ.

ನೀರ್ ಎರ್ಕುದು /*ni:rɨ erkudu*/ ನಾವಿ. ನೀರು ಉಕ್ಕಿ ಬರು. water that has come to boil and about to spill. ವಾ: ಹೊಳೆಲಿ ನೀರ್ ಎರ್ಕುದು. ಪ: ನೀರ್ ಎರ್ಕಿಟು – ನೀರುನಿಂತಿದೆ

ನೀರ್ ಕಂದಡಿ /*ni:rɨ kandaḍi*/ ನಾ. ಹಸಿರು ಬಣ್ಣದ ಹಾವು, (ಇದನ್ನು ಅಹಂಕಾರಿ ಹಾವೆಂದು ಕರೆಯಲಾಗುತ್ತದೆ). a Smooth Green Snake. ವಾ: ನೀರ್ ಕಂದಡಿ ಹಾವ್ ಎಂತ ಮಾಡ್‌ದುಲೆ. ಪ: ನೀರ್ ಕಂದೇಡಿ – ಚೋಡಿ ಬದಿಯಲ್ಲಿರುವ ಹಾವು

ನೀರ್ ಕಡ್ಡಿ /*ni:ri kaḍḍi*/ ನಾ. 1. ನೀರು ಕಡ್ಡಿ ಗಿಡ, 2. ಕಪ್ಪೆ ಮೆಣಸಿನ ಗಿಡ, 3. ಕಳೆ ಗಿಡದಂತೆ ಬರುವ ಇದು ಔಷಧಿಗಳ ಆಗರವೆಂದು ಕರೆಯಬಹುದು,ಅಡುಗೆ ಹಾಗು ಔಷಧಿಯಲ್ಲಿ ಇದನ್ನು ಬಹಳಷ್ಟು ಬಳಕೆ ಮಾಡಲಾಗುತ್ತದೆ, 3. ಮಳೆಗಾಲದಲ್ಲಿ ಹೆಚ್ಚಾಗಿ ಕಂಡುಬರುವ ಈ ಸಸ್ಯ ದ ಕಾಂಡ ಮೃದುವಾಗಿದ್ದು ಬಹಳಷ್ಟು ನೀರಿನ ಅಂಶವನ್ನು ಹೊಂದಿರುತ್ತದೆ, ಕಣ್ಣಿನ ಉರಿ, ಶಮನವಾಗುತ್ತದೆ. a medicinal plant known as Peperomia pellucida or pepper elder. The juice from the plant is used in curing burning sensation in the eyes, nasal congestion, nasal discharges, sneezing, cold, asthma, fever, cough, dysentery, blood pressure, etc. ವಾ: ನಾವು ಇಸ್ಕೂಲಿಗೆ ಹೋಕನ ಸ್ಲೇಟ್‌ಲಿ ಬರ್‌ದ ಮೇಲೆ ಉಜ್ಜಿಕೆ ನೀರ್ ಕಡ್ಡಿನ ಬಳ್ಸ್ ತಿದ್ದೊ.

ನೀರ್‌ಕಾಗೆ /*ni:rɨka:gɛ*/ ನಾ. ಕಪ್ಪು ಬಣ್ಣದ ಕೊಕ್ಕರೆ ರೀತಿಯ ಪಕ್ಷಿ. cormorant, a bird. ವಾ: ಅಲ್ಲಿ ಕಂಡದೆಲ ಅದೇ ನೀರ್ ಕಾಗೆ. ಪ: ನೀರ್ಕಾಗೆ

ನೀರ್‌ಕುಕ್ಕು /*ni:rɨkukku*/ ನಾ. ನೀರಿನಲ್ಲಿ ಹಾಕಿಟ್ಟ ಮಾವಿನ ಹಣ್ಣು. mangoes dipped in water. ವಾ: ಮಾಯಿನ ಹಣ್ಣ್‌ನ ನೀರ್ ಕುಕ್ಕು ಮಾಡಿ ಬಳ್‌ಸುವೆ.

ನೀರ್‌ಕೊಟ್ಲೆ ಕಜ್ಜಿ /*ni:rɨkoṭḷɛ kajji*/ ನಾ. 1. ಮೈ ಮೇಲೆ ಬೀಳುವ ನೀರು ತುಂಬಿಕೊಂಡ ಸಣ್ಣ ಕಜ್ಜಿ, 2 .ಅಮ್ಮ ಆಗುವುದು. 1. chicken pox – having fluid filled blister bumps, 2. smallpox. ವಾ: ನೀರ್ ಕೊಟ್ಲೆ ಕಜ್ಜಿನ ಮೈಮೇಲೆ ಬೀಳ್‌ದುತ ಕರ್‌ದವೆ. ಆಗ ತುಂಬ ಜರ, ಮೂಕು ಸೋರ್‌ದು ಆದೆ. ಅದ್‌ಕೆ ಪೊಲ್ಲೊಪ್ಪು, ಅರ್‌ಸಣನ ಅರ್‌ದ್ ಹಾಜ್ಞ ಕುಡ್‌ಸಿವೆ. ಮತ್ತೆ ಮೈಗೆ ಪೂಜಿವೆ. ಕಣ್ಣಿಗೆ ಸಂಬಾರ ನೀರ್ ತೊಟ್ಟು ಹಾಕಿವೆ.

ನೀರ್ ಕೊಡ್ಕೊನುದು /*ni:rɨ koḍɨkonudu*/ ಕ್ರಿವಿ. ನೀರನ್ನು ತಲೆ ಮೇಲೆ ಚಿಮುಕಿಸುವುದು, ಪುಣ್ಯ ನೀರನ್ನು ಮನೆಯೆಲ್ಲ ಚಿಮುಕಿಸುವುದು. sprinkling water on the head, sprinkling holy water in the house. ವಾ: ಸುದ್ದ ಮಾಡಿಕನ ಜೆನರ ತಲೆ ಮೇಲೆನೀರ್ ಕೊಡ್ಕೊನುದು. ಪ: ನೀರ್‌ತಲಿಪು(ತು). ಪ: ನೀರ್ ಕೊಡ್ಕ್‌ಯೊಂಬೊದು.

ನೀರ್ ಕೊಳಂಬೆ /*ni:ri koḷambɛ*/ ನಾ. 1. ನೀರು ನಿಂತ ಸ್ಥಳ, 2. ಕೆಸರು ನೀರಿನಿಂದ ಕೂಡಿದ ಸ್ಥಳ. 1. a place of stagnant water, 2. a place of slush/mire. ವಾ: ರಸ್ತೆದ್ ನಡುಲೆಲ್ಲ ನೀರ್ ಕೊಳಂಬೆಗ ಆದ್.

ನೀರ್ ಚಿಪ್ಪುಳ್ಸ್ /*ni:rɨ takkḷsɨ*/ ಕ್ರಿವಿ. 1. ನೀರನ್ನು ಚಿಮುಕಿಸು, 2. ಹನಿಕಿಸು. 1. to sprinkle water, 2. spray. ವಾ: ಹೂನದ್ಮೆಗೆ ನೀರ್ ಚಿಪ್ಪುಳ್ಸಿಕೆ ಉಟ್ಟು.

ನೀರ್ ಚೇಂಪ್ /*ni:rɨ ce:mpɨ*/ ಕ್ರಿವಿ. 1. ನೀರನ್ನು ಎರಚು, 2. ನೀರ್ ಚೆಲ್ಲು. 1. to spread/spill water, 2. to spray water. ವಾ: ನಾಯಿಗ ಕಚ್ಚಾಡಕನ, ಕೋಳಿಗ ಕಚ್ಚಾಡಕನ ನೀರ್ ಚೇಂಪ್‌ದು, ಆಗ ಅವು ಓಡುವೆ.

ನೀರ್ ತಕ್ಕ್‌ಳ್ಸ್ /*ni:rɨ takkɨḷsɨ*/ ಕ್ರಿವಿ. 1. ನೀರನ್ನು ಚಿಮುಕಿಸು, 2. ಹನಿಕಿಸು. 1. to sprinkle water, 2. to spray water. ವಾ: ಇಜ್ಜೆಲ್‌ಗೆ ನೀರ್ ತಕ್ಕ್‌ಳ್ಸ್ ಮತ್ತೆ ಗುಡ್ಸ್ ದೂಳ್ ಏಳ್‌ದುಲೆ.

ನೀರ್‌ತಾವ ಸಾಸ್ತ್ರ /*ni:rɨ taruva sa:stra*/ ನಾವಿ. ಗಂಡಿನ ಮನೆಗೆ ಹತ್ತಿದ ನಂತರ ನೀರು ತಂದು ಮಡಲಕ್ಕಿಯಿಂದ ಪಾಯಸ ಮಾಡುವುದು. a custom of making a sweet dish/porridge

(Kheer) out of the rice and jaggery given to the bride by her parents as a blessing. ವಾ: ಮೊದುವೆ ಆಗಿ ಗಂಡನ ಮನೆಗೆ ಹತ್ತಿದ ಮೇಲೆ ನೀರ್ ತಾವ ಸಾಸ್ತ್ರ ನಡ್‌ದದೆ.

ನೀರ್ ಮಾಡಿಬುಟ್ಟೊ /*ni:ri ma:ḍibuṭṭɔ*/ ಕ್ರಿ. ಬೀಜ(ಹೋರಿಯ ತರಡು) ನೀರು ಮಾಡುವುದು. castration of bull calves. ವಾ: ಬಾರಿ ಉರಿಮಾರಿ ಬಂದದೆತ ಹೋರಿದ್ ಬಿತ್ತ್ ನೀರ್ ಮಾಡಿಬುಟ್ಟೊ.

ನೀರ್‌ಮೆಂಟೆ /*ni:rimɛnṭɛ*/ ನಾ. ಗದ್ದೆಗೆ ಹಂದಿ ಬರುವುದನ್ನು ತಡೆಯಲು ಡಬ್ಬಿಯಿಂದ ಮಾಡಿದ ಸಾಧನ, ಡಬ್ಬಿಗೆ ನೀರು ಬಿದ್ದು ಶಬ್ದ ಉಂಟಾಗುತ್ತದೆ. a tool kept in the paddy field to stop/repel wild boar, it is made out of a metal box and produces a loud noise when water falls on to it. ವಾ: ಗದ್ದೆಗೆ ಹಂದಿಗ ಬಂದ್ ಬೆಳೆನ ತಿಂದ್ ಹಾಳ್‌ಮಾಡದಂಗೆ ನೀರ್ ಮೆಂಟೆತೇಳ್‌ವ ಸಾದನನ ಬಳ್‌ಸುವೆ, ಅದರ ಸದ್ದಿಗೆ ಓಡಿ ಹೋದವೆ.

ನೀರ್‌ಮೊದುವೆ /*ni:rimɔduvɛ*/ ನಾ. ಮದುವೆ ಸಮಾರಂಭದ ಕೊನೆಯಲ್ಲಿ ನಡೆಯುವ ಸಾಂಪ್ರದಾಯಿಕ ಕಾರ್ಯಕ್ರಮ. a custom followed during a marriage ceremony. ವಾ: ನೀರ್ ಮೊದುವೆಲಿ ಕೊಣ್ಣ್ ಕೊಣ್ಣ್ ಸಾಕಾತ್.

ನೀರ್‌ಮೊದ್ದು /*ni:rimɔddu*/ ನಾ. 1. ತೆಳುವಾದ ಔಷಧಿ, 2. ನಾಡು ಔಷಧಿ. 1. liquid medicine/a syrup, 2. native medicine. ವಾ: ನಾ ನೀರ್ ಮೊದ್ದು ಕುಡ್‌ದೆ.

ನೀರ್‌ವಾಟೆ /*ni:riva:ṭɛ*/ ನಾ. ನದಿಯ ತೀರದಲ್ಲಿ ಬೆಳೆಯುವ ಸಣ್ಣಗಾತ್ರದ ಬಿದಿರು. a small bamboo variety usually grown on the bank of a river. ವಾ: ನೀರ್ ವಾಟೆ ಬಾರಿ ಹಗುರ.

ನೀರ್‌ಸೋಂತೆ /*ni:riso:ɔ:ntɛ*/ ನಾ. ನೀರು ಸೌತೆ. Tendergreen Burpless cucumber. ವಾ: ಎಳೆದ್ ನೀರ್ ಸೋಂತೆನ ದಿನಾ ತಿಂದರೆ ಚೆರ್‌ಬಿ ಕರ್‌ಗಿದೆ.

ನೀರ್‌ಕಂಡದೆ /*ni:rikaṇḍadɛ*/ ಕ್ರಿವಿ. ನೀರು ಕಾಣುತ್ತದೆ. can see water. ವಾ: ಗುಂಡಿಲಿ ನೀರ್‌ಕಂಡದೆ.

ನೀರ್‌ಕಂದಡಿ ಹಾವು /*ni:rikandaḍi ha:vu*/ ನಾ. ನಿರುಕಂದಡಿ ಹಾವು. Russell's viper (Daboia russelii). ವಾ: ನೀರ್‌ಕಂದಡಿ ಹಾವುನ ನಾ ಕಂಡತ್ತೆ.

ನೀರ್ಕಜೆ /*ni:rkajɛ*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಪೆರುವಾಜೆ ಗ್ರಾಮದ ಜಾಗ. a locality in Peruvaje village in Sullia Taluk of Dakshina Kannada District.

ನೀರ್ಕಡ್ಡಿ /*ni:rikaḍḍi*/ ನಾ. ನೀರ್ ಕಡ್ಡಿ. a plant with medicinal properties. ವಾ: ನೀರ್ಕಡ್ಡಿನ ಮೊದ್ದಿಗೆ ಬಳ್‌ಸುವೆ.

ನೀರ್ಕಣಿ /*ni:rikaṇi*/ ನಾ. ತೋಟ ಅಥವಾ ಗದ್ದೆ ಗಳಲ್ಲಿ ನೀರು ಇಳಿದು ಹೋಗಲು ಮಾಡುವ ಖಾಯಂ ಆದ ಚರಂಡಿ. a drainage between the paddy fields. ವಾ: ಗದ್ದೆಲಿ ನೀರ್ ಹರ್‌ದ್ ಹೋಕೆ ನೀರ್ಕಣಿ ತೆಗೆದು.

ನೀರ್‌ಕುಡಿದ್ /*ni:rikuḍidi*/ ಕ್ರಿ. ನೀರು ಕುಡಿದು. after drinking water. ವಾ: ಇರ್ ನೀರ್‌ಕುಡಿದ್ ಬನ್ನಿ.

ನೀರ್‌ಕೊಟೆ /*ni:ri koṭɛ*/ ನಾ. ನೀರ್‌ನೀರಾದ ಸಾರು. liquid soup/stew. ವಾ: ನೀರ್‌ಕೊಟೆ ಆಂಬ್ರ. ಪ: ನೀರ್ಪಟ್ಟ್(ತು)

ನೀರ್‌ಗನ್ನಡಿ /*ni:r gannaḍi*/ ನಾ. 1. ನೀರು ಗಾಜು, 2. ಗಾಜುಕೊಳವೆ. 1. water-glass, 2. a glass tube. ವಾ: ನೀರ್‌ಗನ್ನಡಿನ ಯಾದೆ ದ್ರವ್ಯದ ವಿಸ್ಕೊಸಿಟಿ ಕಂಡ್ ಹಿಡಿಯಕೆ ಬಳ್ಸುವೆ.

ನೀರ್‌ತಲ್ತ್ /*ni:ri talti*/ ಕ್ರಿವಿ. 1. ನೀರು ಹನಿಕಿಸು, 2. ಚಿಮುಕಿಸು. 1. to sprinkle water, 2. to spray water. ವಾ: ಮೋರೆಕೆ ಹಞ್ಞ ನೀರ್‌ತಲ್ತ್.

ನೀರ್ತೋಳೆ /*ni:ritɛ:ḷɛ*/ ನಾ. ಉಪ್ಪು ನೀರಿನಲ್ಲಿ ಹಾಕಿದ ಹಲಸಿನ ಸೊಳೆ. jack fruit pods soaked in salt water. ವಾ: ಬರಣಿಲಿ ಉಪ್ಪನಕಾಯಿ, ನೀರ್ತೋಳೆ ಹಾಕಿಸಿಕೆ ಆದೆ.

ನೀರ್‌ದಂಡ್ /*ni:ridaṇḍi*/ ನಾ. ಶಿಶ್ನ, ಗಂಡು ಜನನಾಂಗ. penis, male reproductory organ. ವಾ: ಕೂಸ್‌ನ ನೀರ್‌ದಂಡ್‌ಲಿ ಕುರ ಆವುಟು.

ನೀರ್‌ದಾರೆ /*ni:rida:rɛ*/ ನಾ. ನೀರಿನ ಧಾರೆ. the flow of water. ವಾ: ಮಳೆ ಬಾಕನ ಅಲ್ಲಲ್ಲಿ ನೀರ್‌ದಾರೆ ಕಾಂಬಕೆ ಸಿಕ್ಕಿದೆ.

ನೀರ್‌ದೋಸೆ /*ni:rido:sɛ*/ ನಾ. ತೆಳ್ಳಗಿನ ದೋಸೆ. a thin dosa/Neer Dose, a dosa variant. **ಚಂಯ್ ಚುಂಯ್ ಹಕ್ಕಿಗೆ ಸಾವ್ರಾರ್ ಕಣ್ಣ್ – ನೀರ್ ದೋಸೆ(ಒ).**

ವಾ: ನೀರ್‌ದೋಸೆಗೆ ಅಕ್ಕಿ ಕಡೆಕನ ಹಞ್ಞ ಕಾಯಿನ ಹಾಕಣೊಕು, ದೋಸೆ ಲಾಯ್ಕಲಿ ಎದ್ದ್ ಬಂದದೆ, ನೀರ್ ದೋಸೆಗೆ ಕಾಯಿ ಪಜ್ಜಿ ಮಾಡೊಕು.

ನೀರ್‌ನ /*ni:rina*/ ನಾ. ನೀರನ್ನು. water. ವಾ: ನೀರ್‌ನ ಸುಮ್ಮನೆ ಚೆಲ್ಲಿಕಾಗದ್.

ನೀರ್‌ನರಂಬು /*ni:rinarambu*/ ನಾ. 1. ಗಂಡಸರ ಮೂತ್ರನಾಳ, 2. ಶುಕ್ಲಗ್ರಂಥಿ. 1. a tube that carries urine, 2. the ureter. ವಾ: ನೀರ್ ನರಂಬುಲಿ ಕಲ್ಲ್‌ಗಡ. **ನೀರ್‌ನರಂಬು ಕಲ್ಲ್‌ಕಟ್ಟುದು** /*ni:rinarambu kallikaṭṭudu*/ ಮೂತ್ರನಾಳಕ್ಕೆ ಸಂಬಂಧಿಸಿದ ಒಂದು ರೋಗ. a disease related to the ureter. ವಾ: ನೀರ್‌ನರಂಬು ಕಲ್ಲ್‌ಕಟ್ಟುದು ಒಂದ್ ತರದ ಕಾಯ್‌ಲ.

ನೀರ್‌ನಾಯಿ /*ni:rina:yi*/ ನಾ. 1. ನೀರು ನಾಯಿ, 2. ನೀರಿನಲ್ಲಿ ಓಡಾಡುವ ನಾಯಿ, 3. ಕಾರ್ನಿವೊರ ಗಣ, ಮಸ್ಟೆಲಿಡೀ ಕುಟುಂಬಕ್ಕೆ ಸೇರಿದ ಮಾಂಸಾಹಾರಿ ಜಲವಾಸಿ ಸ್ತನಿ, ಈಜುಗಾರ ನಾಯಿ, ಮುಂಗುಸಿ ಹತ್ತಿರದ ಸಂಬಂಧಿ, ಇದು ಮೀನುಗಳ ಇರವನ್ನು ಸುಲಭವಾಗಿ ಪತ್ತೆ ಹಚ್ಚುತ್ತದೆ, 4. ಒಂದು ಬಗೆಯ ಜಲಚರ ಪ್ರಾಣಿ, 5. ಹೊಳೆಗಳಲ್ಲಿ ವಾಸಿಸುವ ನಾಯಿಯಂತಹ ಉಭಯ ವಾಸ. Otter, a mammal that lives in rivers and eats fish. ವಾ: ನೀರ್‌ನಾಯಿದ್ ತಲೆ ಚಪ್ಪಟೆ, ಬಾಲ ದಪ್ಪ ಮೀನ್, ಎಸ್‌ಂಡ್, ಕಪ್ಪೆ, ಬಾತ್‌ಕೋಳಿನ ಹಿಡ್ದ್ ತಿಂದದೆ.

ನೀರ್‌ನಿರೆಲ್ /*ni:rinirεli*/ ನಾ. ಹೆಣವನ್ನು ಮಲಗಿಸಿರುವ ಜಾಗದಲ್ಲಿ ಒಂದು ತಂಬಿಗೆ ನೀರು ಇಟ್ಟು ಅದಕ್ಕೆ ಒಂದು ಇದ್ದಿಲು ತುಂಡನ್ನು ನೂಲಿನಿಂದ ಕಟ್ಟಿ ನೀರಿಗೆ ತಾಗುವಂತೆ ನೇತಾಡಿಸಿ ಬಿಡುವುದು, ಸತ್ತ ನಂತರ ಮೂರು ದಿನ ಹೀಗೆ ಇಡುವರು, ಕೆಲವು ಕಡೆ ಎಳನೀರನ್ನು ಇಡುವರು, ನೀರನ್ನು ಸತ್ತವರು ಕುಡಿಯುತ್ತಾರೆ ಎಂಬ ನಂಬಿಕೆ. A custom of keeping a pitcher of water for three days, in the spot where the dead body had been kept. A piece of charcoal is also dipped into the water. It is believed that the dead person drinks that water. Tender coconut is kept in some places instea. ವಾ: ಸುದ್ದದ ಹಿಂದೆನ ದಿನ ರಾತ್ರೆ ನೀರ್ ನಿರೆಲ್‌ಗೆ ಇಸುದು ಪದ್ದತಿ.

ನೀರ್‌ನೆರಳಿಗೆ ಇಸುದು /*ni:rinεraḷigε isudu*/ ನಾ. 1. ಸತ್ತವರಿಗೆ ಶುದ್ಧದ ಹಿಂದಿನ ದಿನ ರಾತ್ರಿ ಮಾಡುವ ಕ್ರಮ, 2. ಸತ್ತವರಿಗೆ ನೀರು ಮದ್ಯ ಇಡುವುದು, 3. ಶುದ್ಧದ ಹಿಂದಿನ ದಿನದ ರಾತ್ರಿ ಮೃತರು ಸತ್ತ ಸ್ಥಳವನ್ನು ಸ್ವಚ್ಛಗೊಳಿಸಿ, ನಯವಾದ ಅಕ್ಕಿ ಹುಡಿ ಇಲ್ಲವೆ ಬೂದಿಯನ್ನು ಕಲೆ ಬಾರದಂತೆ ಹರಡಿ, ಅಕ್ಕಿ ಹುಡಿಯ ಮೇಲೆ ಒಂದು ಚೆಂಬು ನೀರು ಮತ್ತು ಎಳೆನೀರನ್ನು (ಮೇಲ್ಭಾ. A custom of cleaning the house, and keeping a pitcher of water and a tender coconut on rice flour on the third night after someone's death. ವಾ: ಸುದ್ದದ ಹಿಂದೆನ ದಿನ ನೀರ್ ನೆರಳಿಗೆ ಇಸುದು ಪದ್ದೆತಿ. ಪ: ನೀರ್ ನೆರ್ಲ್ ಇಸುದು/ನೀರ್ ನೆರಳ್ ಇಡೊದ್ – ಸತ್ತವರಿಗೆ ನೀರು ಮದ್ಯ ಇಡುವುದು; ನೀರ್ ನೆರ್ಲ್ ಮಡ್ಗ್ – ಮೃತಪಟ್ಟವರಿಗೆ ಮೂರನೇ ದಿನ ನೀರು ಇಡುವ ಕ್ರಮ

ನೀರ್‌ನೆರಳ್ /*ni:rinerḷi*/ ನಾ. ಸತ್ತವರಿಗೆ ನೀರ ನೆರಳು ಇಡುವ ಒಂದು ಪದ್ಧತಿ. an offering to dead ancestors.

ನೀರ್‌ನೆಳಲ್ /*ni:rai neraḷui*/ ನಾ. ಉತ್ತರಕ್ರಿಯೆಯ ಮುನ್ನಾ ದಿನದ ಕಾರ್ಯಕ್ರಮ, ಸತ್ತವರು ನೀರ ನೆರಳು ಇಟ್ಟಿರುವಲ್ಲಿಗೆ ಬರುತ್ತಾರೆಂದು ನಂಬುತ್ತಾರೆ, ಹಾಗೆ ಅವರು ಬರುತ್ತಾರೆಂದು ನೀರ ನೆರಳು ಇಟ್ಟಿರುವ ಸ್ಥಳದಲ್ಲಿ ಅಕ್ಕಿಹುಡಿಯನ್ನು ಹರಡಿರುತ್ತಾರೆ, ಸತ್ತವರು ಬಂದರೆ ಅವರ ಕಾಲ ಹೆಜ್ಜೆ ಕಾಣಿಸುತ್ತದೆಂದು ಹೇಳುತ್ತಾರೆ. a belief that one's dead ancestors will return to receive the offerings made by their relatives. Rice flour would be spread next to the offering, and it is believed that the relatives can see the footprints of their dead ancestors who had come to receive. ವಾ: ನಾಳೆ ನೀರ್ ನೆಳಲ್‌ಗೆ ಇಸುದುಗಡ. ಪ: ನೀರ್ ನೆಳಲ್‌ಗೆ; ನೀರ್ ನೆಳಲ್‌ಗೆ ಇಸುವಂದ್

ನೀರ್‌ಪಸೆ /*ni:ri pasε*/ ನಾ. 1. ನೀರಿನ ತೇವಾಂಶ, 2. ತೇವ,3. ಒದ್ದೆ. 1. moisture, 2. wet, 3. soaked. ವಾ: ಮಣ್ಣ್‌ಲಿ ನೀರ್ ಪಸೆ ಆರಿ ಹೊಡಿಹೊಡಿಯಾಗುಟು.

ನೀರ್ಪಾಡಿ /*ni:rpa:ḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ನೀರ್ಪಾತಿ /*ni:ripa:ti*/ ನಾ. ನೀರು ಸರಾಗವಾಗಿ ಹೋಗಲು ಮಾಡಿದ ವ್ಯವಸ್ಥೆ. an arrangement made for the smooth flow of water. ವಾ: ಮನೆ ಮುಂದೆ ಹಂಚಿಗೆ ಒತ್ತಾಗಿ ನೀರ್ಪಾತಿ ಮಾಡಿರೆ ನೀರ್ ಲಾಯ್ಕಲಿ ಹರ್ದ್ ಹೋದೆ.

ನೀರ್ಪುಂಡಿ /*ni:ripuṇḍi*/ ನಾ. ಸಣ್ಣಗಾತ್ರದ ಕಡುಬು, ಒಂದು ತಿನಿಸು. a variety of rice cake. ವಾ: ನೀರ್ಪುಂಡಿನೂ ಹಳ್ಳದ ಮೀನ್ ಗೈಪುನು ಬಾರಿ ರುಚಿ.

ನೀರ್ಪುಂಡಿಬಿತ್ತ್ /*ni:ripuṇḍibitti*/ ನಾ. ನೀರ ಗದ್ದೆಯಲ್ಲಿ ನೀರು ಆರಿಸಿ ಕೈಯಲ್ಲಿ ಸಾಲಾಗಿ ಗೊಬ್ಬರ ಬೆರೆಸಿದ ಹಿಡಿಬೀಜ ಹಾಕಿ ಮಾಡುವ ಭತ್ತದ ಬೇಸಾಯದ ಒಂದು ಕ್ರಮ. a practice of paddy cultivation by sowing the seeds in rows in a marshy field. ವಾ: ನೀರ್ಪುಂಡಿಬಿತ್ತ್ ತೇಳ್‌ದು ಬೇಸಾಯದ ಒಂದ್ ಕ್ರಮ.

ನೀರ್ಬಾತ್ /*ni:riba:ti*/ ನಾ. 1. ನೀರು ಕೋಳಿ, 2. ಜಲಕುಕ್ಕುಟ, 3. ಕೆರೆ ಸರೋವರಗಳಲ್ಲಿ ಗುಂಪು ಗುಂಪಾಗಿ ವಾಸ ಮಾಡುವ ಕೋಳಿ, 4. ಬಂಜರುಕೋಳಿ. white-breasted waterhen, an aquatic rail. ವಾ: ನೀರ್ ಬಾತ್ ಮೊಟ್ಟೆ ಇಸಿಟು.

ನೀರ್ಬೆಲಿ /*ni:ribɛli*/ ನಾ. ಶವದ ಮನೆಯ ಸೂತಕ ಕಳೆಯುವವರೆಗೂ ದೀಕ್ಷೆ ಇದ್ದವರು ಬಾವಿ ಅಥವಾ ಕೆರೆಗೆ ಹೋಗಿ 3 ದಿನ ಮೀನಿಗೆ ಅಕ್ಕಿ ಹಾಕುವುದು. a custom of feeding rice to fish in a pond or a well by the lead mourner, despite observing the period of pollution. ವಾ: ಸೂತಕ ಕಳೆಯ ಮುಟ್ಟ ಮೂರ್ ದಿನ ನೀರ್ಬೆಲಿತ ಮಾಡುವೆ.

ನೀರ್ಬೊಡ್ಡು /*ni:riboḍḍu*/ ನಾ. ನೀರಿನಲ್ಲಿ ನೆನೆದ ಕಟ್ಟಿಗೆ. wet firewood. ವಾ: ಈ ಕುಂಟೆನ ಹೊರ್‌ಗೆ ಇಸಿ ನೀರ್ ಬೊಡ್ಡ್ ಆತ್, ಬೇಗ ಹೊತ್ತುದುಲೆ. ಪ: ನೀರ್ಬೊಡ್ಡ

ನೀರ್ಮಂಡೆ[1] /*ni:rimaṇḍɛ*/ ನಾ. ನೀರು ಕಾಯಿಸುವ ದೊಡ್ಡ ಪಾತ್ರೆ. a large vessel to boil water. ವಾ: ನೀರ್ ನ ಮಂಡೆಗೆ ಮುಚ್ಚಿಸ್.

ನೀರ್ಮಂಡೆ[2] /*ni:rimaṇḍɛ*/ ನಾ. ನೀರು ತುಂಬಿಡುವ ಹಂಡೆ. a cauldron. ವಾ: ತಾಮ್ರದ ನೀರ್ ಮಂಡೆನ ಹುಣ್ಸೆಳಿ ಉಪ್ಪಾಕಿ ಉಜ್ಜಿ ಹೊಳ್ದದೆ.

ನೀರ್ಮಾಡಿಕೊಟ್ಟೊ /*ni:rima:ḍikoṭṭɔ*/ ಕ್ರಿ. ತೆಳ್ಳಗೆ ಮಾಡಿಕೊಡು. in liquid form. ವಾ: ಗೈಪುನ ನೀರ್ಮಾಡಿಕೊಟ್ಟೊ.

ನೀರ್ಮೊಂದ್ರಿ /*ni:rimɔndri*/ ನಾ. ಹೊಸ ನೆಂಟರು ಮನೆಗೆ ಬಂದಾಗ ನೀರು ಕೊಡಿ, ಚಾಪೆ ಹಾಸಿ ಎಂದು ಹೇಳುವರು. a practice of receiving and welcoming the guests by offering water to them and also offer them a seat (usually by spreading a mat/reed mat). ವಾ: ನೆಂಟ್ರ್ ಬಂದೊ ನೀರ್ಮೊಂದ್ರಿ ತನ್ನಿ ಮಕ್ಕಳೆ.

ನೀರ್ಲೆ /*ni:rilɛ*/ ನಾ. ನೀರಿನಲ್ಲೆ. in the water. ವಾ: ಕೂಸು ಎಸ್ಟ್ ಹೊತ್ತಿಗೂ ನೀರ್‌ಲೆ ಆಡ್ತು.

ನೀಲಗಿರಿ ಎಣ್ಣೆ /*ni:lagiri ɛɳɳɛ*/ ನಾ. 1. ನೀಲಗಿರಿ ಎಣ್ಣೆ, 2. ನೀಲಗಿರಿ ತೈಲ, 3. ನೀಲಗಿರಿ ಎಲೆಯಿಂದ ತಯಾರಿಸುವ ತೈಲ. eucalyptus oil. ವಾ: ಸೀತಂದ ಮೂಕ್ ಕಟ್ಟಿರೆ ನೀಲಗಿರಿ ಎಣ್ಣೆ ಬಳ್ಸುವೆ.

ನೀಲಗಿರಿ ಮರ /*ni:lagiri mara*/ ನಾ. 1. ನೀಲಗಿರಿ ಮರ, 2. ನೀಲಗಿರಿ ಮರಗಳು ನೀರಿನ ಅಂಶವನ್ನು ವ್ಯಾಪಕವಾಗಿ ಹೀರಿಕೊಂಡು ನೆಲವನ್ನು ಬರಡು ಮಾಡುತ್ತವೆ, 3. ನೀಲಗಿರಿ ಮರಗಳು ಔಷಧ ತಯಾರಿಕೆಗೆ, ಬಟ್ಟೆ, ಕಾಗದ ತಯಾರಿಕೆಗೆ ಬೇಕಾದ ಕಚ್ಚಾ ವಸ್ತು. 1. eucalyptus tree, 2. eucalyptus tree causes depletion of groundwater, 3. eucalyptus trees are used in preparing medicine, manufacturing fabric, paper, etc. ವಾ: ಒಂದ್ ನೀಲಗಿರಿ ಮರ ಪ್ರತಿದಿನ 15 ರ್‌ಂದ 20 ಲೀಟರ್ ನೀರ್ ಹೀರಿಕಂಡದೆಗಡ, ಹಿಂಗಾಗಿ ಅಂತರ್ ಜಲ ಪಾತಾಳಕ್ಕೆ ಹೋದೆ.

ನೀಲಪ್ಪ /*ni:lappa*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. masculine given name.

ನೀಲಮ್ಮ /*ni:lamma*/ ನಾ. ವ್ಯಕ್ತಿ ಹೆಸರು, ಸ್ತ್ರೀ ವಾಚಕ. feminine given name.

ನೀಲಿ /*ni:li*/ ನಾ. 1. ಒಂದು ಬಣ್ಣ, 2. ನೀಲ, 3. ಶ್ಯಾಮಲವರ್ಣ. 1. a colour, 2. blue, 3. azure. ವಾ: ಆ ಗೂಡೆ ಇಂದ್ ನೀಲಿ ಬಣ್ಣದ್ ಸೀರೆನ ಉಟ್ಟಿತ್ತ್.

ನೀವ್ /*ni:vi*/ ಸನಾ. ನೀವು. you (addressing an elderly). ವಾ: ನೀವ್ ಹೋಕ ಬನ್ನಿ ನಾ ಮತ್ತೆ ಬನ್ನೆ

ಬಲಾ. **ನೀವೆಲ್ಲವ್** /*ni:vɛllavi*/ ನೀವೆಲ್ಲರು. all of you. ವಾ: ನೀವೆಲ್ಲವ್ ಹಬ್ಬಕೆ ಬರೊಕು ಆತ. **ನೀವ್ಗೆ**[1] /*ni:vgɛ*/ ನಿಮಗೆ. to you/for you. ವಾ: ನೀವ್ಗೆ ಗೊತ್ತಲ? **ನೀವ್ಗೆ**[2] /*ni:vgɛ*/ ನಿಮಗೆ. to you/for you. ವಾ: ನೀವ್ಗೆ ಹೇಳಿದ್ದೊಲ. **ನೀವ್ಗೆಂತೇಳಿದ್** /*ni:vgente:ḷidi*/ ನಿಮಗಾಗಿಯೆ. exclusively for you. ವಾ: ನೀವ್ಗೆಂತೇಳಿದ್ ನಾ ದುಡ್ಡು ಕೊಟ್ಟು ಕಳ್ಸಿದ್ದೆ.

ನೀಸೊದು /*ni:sodu*/ ಕ್ರಿ. ಈಜುವುದು. swimming. ವಾ: ರಜಲಿ ಮಕ್ಕೆಲ್ಲ ಸೇರಿಕಂಡ್ ಹೊಳೆಲಿ ನೀಸೊದು. ಪ: ನೀಸಕೆ ಬಂದದೆ – ಈಜಲು ಬರುತ್ತದೆಯೆ?

ನೀಸ್ /*ni:si*/ ಕ್ರಿ. 1. ನಿಭಾಯಿಸು, 2. ನಿರ್ವಹಿಸು, 3. ಸಾಗಿಸಿಕೊಂಡು ಹೋಗು, 4. ತಾಳು. 1. to manage, 2. to maintain, 3. to handle, 4. having patience. ವಾ: ಎಲ್ಲ ಕಾರ್‌ಬಾರ್ ನೀನೆ ನೀಸ್.

ನುಂಗಿ ನೀರ್‌ಕುಡ್ತ್ /*nuŋgi ni:rikuḍti*/ ಕ್ರಿ. 1. ತೊಂದರೆ ಕೊಡು, 2. ಕೊಲ್ಲು, 3. ಸಾಯಿಸು, 4. ಸುಲಭವಾಗಿ ಕಾರ್ಯನಿರ್ವಹಿಸುವುದು. 1. to trouble, 2. to murder, 3. to kill, 4. to manage the work efficiently. ವಾ: ಅಪ್ಪವ್ವನ ನುಂಗಿ ನೀರ್ ಕುಡ್ತ್.

ನುಂಗು /*nuŋgu*/ ನಾ. 1. ಪರರ ಸ್ವತ್ತು, ಹಣ ಮುಂತಾದವುಗಳನ್ನು ಲಪಟಾಯಿಸು, 2. ಕಬಳಿಸು. 1. to swindle money or property, 2. swindling. **ಅಂಗೈ ತೋರ್ಸಿ ಮುಂಗೈ ನುಂಗುದು(ಗಾ).** ವಾ: ದುಡ್ಡು ಕೇಳಿಕಂಡ್ ನುಂಗುದೇ ಅಂವನ ಕೆಲ್ಸ.

ನುಂಗ್ /*nuŋgi*/ ಕ್ರಿ. ನುಂಗು. to swallow. **ಅಗ್ದರೆ ಸವೆಕಿಲೆ, ನುಂಗಿರೆ ಇಳೆಕಿಲೆ(ಗಾ).** ವಾ: ರಾಗಿ ಮುದ್ದೆನ ನುಂಗ್‌ದು. ಪ: ನುಂಗ್‌ದು; ನುಂಗ್ಯಳೆ; ನುಂಗಿಟು. **ನುಂಗಿ** /*nuŋgi*/ 1. ನುಂಗುವುದು, 2. ಆಹಾರ, ಪಾನೀಯ ಮುಂತಾದವುಗಳನ್ನು ಗಂಟಲೊಳಗೆ ಇಳಿಸು. 1. swallowing, 2. to let food pass through one's throat. ವಾ: ಕೊತ್ತಿ ಮಾಸನ ಹಂಗಂಗೆ ನುಂಗಿ ಕಣ್ಣ್ ಕಣ್ಣ್ ಬುಟ್ಕಂಡ್ ಕುದ್ದುಟು. **ನುಂಗಿಕಾದ್** /*nuŋgika:di*/ ನುಂಗಬಾರದು. shouldn't swallow. ವಾ: ಅನ್ನ ನ ಹಂಗೆನೆ ನುಂಗಿಕಾದ್, ಅಗ್ದ್ ತಿನ್ನೊಕು. ಪ: ನುಂಗಿಕಾಗದ್

ನುಗ್ಗಕನ /*nuggakana*/ ಕ್ರಿ. ನುಗ್ಗುವಾಗ. rushing/jostling/hustling. ವಾ: ಇಲಿ ಮಾಳಿಗೆ ನುಗ್ಗಕನ ಕೊತ್ತಿ ಅದರ ಹಿಡ್‌ದ್ ಬುಡ್ತ್.

ನುಗ್ಗಟ /*nuggaṭa*/ ಕ್ರಿ. 1. ನುಗ್ಗಿಕೊಂಡು ಹೋಗುವುದು, 2. ನುಗ್ಗುವ ರಭಸ. 1. rushing towards something, 2. the speed with which one rushes towards something. ವಾ: ದಸರಲಿ ಜೆನಗಳ ನುಗ್ಗಟ ನೋಡೊಕು.

ನುಗ್ಗೆ /*nuggɛ*/ ನಾ. ನುಗ್ಗೆಕಾಯಿ. drumstick. ವಾ: ನುಗ್ಗೆ ಬಾಳ್ ಎಳೆದಿತ್ತ್. ಪ: ನುಗ್ಗೆಗೈಪು – ನುಗ್ಗೆಸಾರು. **ನುಗ್ಗೆಮರ** /*nuggɛmara*/ ನಾ. ವೈಜ್ಞಾನಿಕ ಭಾಷೆಯಲ್ಲಿ ನುಗ್ಗೆ ಮರವನ್ನು ಮೋರಿಂಗ, ಒಲಿಫೇರ ಗಿಡ ಎಂದು ಗುರುತಿಸಲಾಗುತ್ತದೆ, ಇದರಲ್ಲಿ ವಿಶೇಷ ರೀತಿಯ ಔಷಧೀಯ ಗುಣಗಳು ಇವೆ. drumstick tree, has medicinal properties. ವಾ: ನುಗ್ಗೆ ಮರ ಒಣಹವೆಲಿ ಲಾಯ್ಕಲಿ ಬಂದದೆ. **ನುಗ್ಗೆಬಾಳ್** /*nuggɛba:ḷi*/ ನುಗ್ಗೆ ಕಾಯಿ. drumstick. ವಾ: ನುಗ್ಗೆ ಬಾಳ್ ಗೊಜ್ಜು ಮಾಡಿದ್ದೊ. **ನುಗ್ಗೆಸೊಪ್ಪ್** /*nuggɛsoppi*/ 1. ನುಗ್ಗೆ ಸೊಪ್ಪು, 2. ಈ ಸೊಪ್ಪಿನಲ್ಲಿ ಹೆಚ್ಚು ಆಂಟಿ -ಆಕ್ಸಿಡೆಂಟ್‌ಗಳು, ವಿಟಮಿನ್- ಸಿ, ಜಿಂಕ್ ಇದೆ. drumstick leaf, rich in antioxidants, Vitamin C, Zinc, etc. ವಾ: ನುಗ್ಗೆ ಸೊಪ್ಪ್ ಬಳ್ಸಿರೆ ದೃಷ್ಟಿ ದೋಸ ಕಮ್ಮಿ ಆದೆ.

ನುಗ್ಗ್ /*nuggi*/ ಕ್ರಿ. 1. ನುಗ್ಗುವುದು, 2. ನುಸುಳು, 3. ತಳ್ಳಿಕೊಂಡು ಮುಂದೆ ಸರಿ, 4. ರಭಸದಿಂದ ನೂಕಿ ನಡೆ, 5. ಒಳಗೆ ಪ್ರವೇಶಿಸು. 1. to storm into, 2. to creep into, 3. to push oneself, 4. rush towards by force, 4. to enter. ವಾ: ದನ ಬೇಲಿ ನುಗ್ಗುದು.

ನುಚ್ಚ /*nucca*/ ನಾ. ಅಕ್ಕಿಯನ್ನು ಸಂಸ್ಕರಿಸುವಾಗ ದೊರೆಯುವ ಕಡ್ಯಕ್ಕಿ. broken rice, remains while processing rice. ವಾ: ನುಚ್ಚನ ಕೋಳಿಗೆ ಹಾಕಿವೆ'. ಪ: ನುಚ್ಚಿ ಅಕ್ಕಿ. **ನುಚ್ಚಕ್ಕಿ** /*nuccakki*/ 1. ಅಕ್ಕಿಯ ಸಣ್ಣ ಕಣಗಳು, 2. ಅಕ್ಕಿಯ ಚೂರು, 3. ನುಚ್ಚು. 1. broken rice, 2. grians of broken rice, 3. broken pieces of rice. ವಾ: ನುಚ್ಚಕ್ಕಿನ ಕೋಳಿ ಪಿಳ್ಳೆಗೆಳ್‌ಗೆ ಹಾಕಕ್.

ನುಚ್ಚಟೆ[1] /*nuccaṭɛ*/ ನಾ. ತೆರೆ. a curtain/the end.

ನುಚ್ಚಟೆ[2] /*nuccaṭɛ*/ ನಾ. ಒಂದು ಬಗೆಯ ಕಾಡು ಹಣ್ಣು.

a forest fruit. ವಾ: ನುಚ್ಚಟೆ ಕಾಡ್ ಹಣ್ಣ್. **ನುಚ್ಚಟೆ ಹಣ್ಣ್** /*nuccaṭɛ haṇṇi*/ 1. ಕಾಡಿನಲ್ಲಿ ಸಿಗುವ ಕೇಸರಿ ಬಣ್ಣದ ಹಣ್ಣು, 2. ಮುಳ್ಳು ಜಾತಿಯ ಗಿಡದ ಹಣ್ಣು. 1. a saffron coloured forest fruit, 2. a forest fruit grown on a thorny bush. ವಾ: ಮುಳ್ಳುಂದಾಗಿ ನುಚ್ಚಟೆ ಹಣ್ಣ್‌ಗೆ ಕೈ ಹಾಕಿಕೆ ಬೊತ್ತ್.

ನುಚ್ಚಳುಂಬು /*nuccaḷumbu*/ ನಾ. 1. ಅಣಬೆಯ ವಿಧಗಳು, 2. ಸಣ್ಣ ಗಾತ್ರದ ತಿನ್ನಲು ಯೋಗ್ಯವಾದ ಅಣಬೆ. 1. a kind of mushroom, 2. an edible mushroom. ವಾ: ನುಚ್ಚಳುಂಬು ಎದ್ದರೆ ಬೊಟ್ಟ್ ನಂಗೆ ನೋಡಿಕೆ ಬಾರಿ ಲಾಯ್ಕ. ಅದರ ಸರಿ ಮಾಡಿಕೆ ಮಾತ್ರ ಬಾರಿ ಹೊತ್ತಾದೆ.

ನುಚ್ಚಿ /*nucci*/ ನಾ. 1. ನುಚ್ಚು, 2. ಹುಡಿ ಅಕ್ಕಿ, 3. ಅಕ್ಕಿಯ ದಪ್ಪ ತರಿ, 4. ಧಾನ್ಯದ ಸಣ್ಣ ಸಣ್ಣ ಚೂರು. 1. broken rice, 2. grians of broken rice, 3. broken pieces of rice, 4. small pieces of grains. ವಾ: ಅಕ್ಕಿ ವಂಚಿಕನ ನುಚ್ಚಿ ಸಿಕ್ಕಿದೆ. **ನುಚ್ಚಿಟ್ಟ್** /*nucciṭṭi*/ ನುಚ್ಚಿನಿಂದ ಮಾಡುವ ಉಪ್ಪಿಟ್ಟು. upma, a dish made of broken rice. ವಾ: ನುಚ್ಚಿಟ್ಟ್ ಬಾರಿ ರುಚಿ.

ನುಚ್ಚ್ ಕರಿಯದು /*nucci kariyadu*/ ಕ್ರಿವಿ. ಬೇಡವೆಂದು ಹೇಳುವ ಬಗೆ. one of the ways of saying 'no'.

ನುಣ್ಣಂಗೆ /*nuṇṇaŋgɛ*/ ನಾ. 1. ನುಣುಪು, 2. ನಯ, 3. ಒರಟಲ್ಲದುದು,4. ಕೋಮಲತೆ, 5. ಮೃದುತ್ವ, 6. ಹೊಳಪು. 1. soft, 2. smooth, 3. not hard, 4. soft, 5. smooth, 6. shining/bright. **ದೂರದ ಬೆಟ್ಟ ಕಣ್ಣ್‌ಗೆ ನುಣ್ಣಂಗೆ(ಗಾ).** ವಾ: ಕೂಸುನ ತಲೆ ನುಣ್ಣಂಗೆ.

ನುಣ್ಣಿ ಕಂಡತ್ /*nuṇṇi kaṇḍati*/ ಕ್ರಿ. ತಪ್ಪಿಸಿಕೊಳ್ಳು, to escape. ವಾ: ಕೆಲ್‌ಸ ಹೇಳಿಕನ ಅಂವ ಬೇಗ ನುಣ್ಣಿ ಕಂಡತ್.

ನುಣ್ಣು[1] /*nuṇṇu*/ ಕ್ರಿ. ಆಹಾರವನ್ನು ಒತ್ತಿ ಹಿಚುಕಿ ಮೆತ್ತಗೆ ಮಾಡುವುದು. to squeeze. ವಾ: ಕೂಸಿಗೆ ಅನ್ನನ ಕೊಡಿಕೆ ನುಣ್ಣುದು.

ನುಣ್ಣು[2] /*nuṇṇu*/ ನಾವಿ. ನಯವಾದ. soft. ವಾ: ಅಂವ ನುಣ್ಣು ಮಾತಾಡಿ ಸಾಗ್ ಹಾಕಿದೆ.

ನುರ್ತಾಂಗ್ /*nurta:ŋgi*/ ನಾ. ಕಹಿಯಾದ ಮುಳ್ಳುಸೌತೆಕಾಯಿ. bitter variety of cucumber.

ನುರ್ಪಿದೊ /*nurpidɔ*/ ಕ್ರಿ. ನುಗ್ಗಿದರು. to enter forcefully – to rush. ವಾ: ದನಗ ಬೇಲಿ ನುರ್ಪಿದೊ ಬೇಗ ಓಡ್ರಾ.

ನುರ್ಪು /*nurpu*/ ಕ್ರಿ. 1. ತುರುಕು, 2. ಅಡಕು, 3. ಒತ್ತಿ ತುಂಬು. 1. to cram, 2. to stuff, 3. to pack by force. ವಾ: ಬ್ಯಾಗ್ ಗೆ ಅರ್ವೆನ ನುರ್ಪು. ಪ: ನೂರ್ಪು(ತು) – ನುಗ್ಗಿಸು

ನುಲಿ ಎಸ್‌ಂಡ್ /*nuli ɛsiṇḍi*/ ನಾ. ನುಲಿಯನ್ನು ಕತ್ತರಿಸುವ ಏಡಿಯನ್ನು ನುಲಿ ಎಸಂಡ್ ಎಂದು ಕರೆಯುತ್ತಾರೆ. a crab found in a paddy field which cuts the stem of paddy. ವಾ: ನುಲಿ ಎಸ್‌ಂಡ್‌ಗ ಗದ್ದೆಲಿ ನುಲಿನ ಕತ್ತರ್‌ಸುವೆ. ಪ: ನುಲಿ ಎಸಾಂಡ್

ನುಲಿ[1] /*nuli*/ ನಾ. 1. ಭತ್ತದ ನಾಟಿಯ ಗುಚ್ಚ, 2. ಪೈರು, 3. ಭತ್ತದ ಗುತ್ತಿ (ಬೆಳೆ ಕತ್ತರಿಸಿದ ನಂತರ ಗದ್ದೆಯಲ್ಲಿ ಉಳಿಯುವ ಪೈರಿನ ಭಾಗ, 4. ಬಲಿತ ನಾಟಿ, 5. ಭತ್ತದ ಪೈರಿನ ಬುಡ. 1. a bunch of paddy to be transplanted, 2. crop, 3. the remaining part of paddy after harvest, 4. fully grown plant, 4. stem of paddy plant. ವಾ: ಗದ್ದೆಲಿ ನುಲಿ ಇರ್‌ಕನ ನಡೆಕೆ ಬೊತ್ತ್ ಕಾಲಿಗೆ ಹೆಟ್ಟಿದೆ.

ನುಲಿ[2] /*nuli*/ ನಾ. ಭತ್ತದ ಪೈರಿನ ನಾಕೈದು ಸಸಿ(ಕಣೆ)ಯನ್ನು ಒಂದು ನುಲಿ ಎನ್ನುವರು. a bunch of paddy. ವಾ: ಬ್ತತದ ಪೈರ್‌ನ ನಾಕೈದ್ ಕಣೆನ ನುಲಿ ತೇಳಿವೆ.

ನುಸಿ /*nusi*/ ನಾ. 1. ನುಸಿ, 2. ಅರ್‌ಯಾಕ್ನಿಡ ವರ್ಗ ಆಕರೈನ ಗಣಕ್ಕೆ ಸೇರಿದ ಸಂಧಿಪದಿಗಳು, ಕಣ್ಣಿಗೆ ಕಾಣಿಸದಷ್ಟು ಚಿಕ್ಕವು, 3. ನೊರಜು. 1. a mite, 2. an arachnid, 3. gall mite, harvest mite, itch mite, etc. ವಾ: ನುಸಿ ಹಾರಿಕಂಡ್ ಬಂದ್ ಕಣ್ಣಿಗೆ ಬಿದ್ದದೆ.

ನುಸುಲು /*nusulu*/ ನಾ. 1. ಸಡಿಲು, 2. (ಮಣ್ಣು ಮೊದಲಾವುಗಳು) ಬಿಡಿಬಿಡಿಯಾಗಿರುವಿಕೆ, 3. ಮೆದುತನ, 4. ಮೃದುತ್ವ. 1. looseness (soil etc), 2. softness, 3. pliable, 4. ductile. ವಾ: ಅದ್ ನುಸುಲು ಮೊಣ್ಣ್ ಗಡ. **ನುಸುಲು ಮೊಣ್ಣು** /*nusulu*

mɔŋŋu/ 1. ಸಡಿಲು ಮಣ್ಣು, 2. ಮೆದುಮಣ್ಣು. 1. loose soil, 2. soft soil. ವಾ: ಎಳ್ಳಿ ಹಾಕಿದ ಮೊಣ್ಣ್ ಬಾರಿ ನುಸುಳ್ ಇದ್ದದೆ.

ನುಳ್ಳ್ /*nuḷḷɨ*/ ಕ್ರಿ. ಚಿವುಟು. to pinch. ವಾ: ಗೊತ್ತೆ ಆಗದಂಗೆ ಕೈಗೆ ನುಳ್ಳ್‌ದು. ಪ: ನುಳ್ಳಿಸಿತ್ – ಚಿವುಟಿದನು/ಳು; ಜಿಗುಟು; ನುಳ್ಳಿಕೆ – ಚಿವುಟಲು

ನೂಂಗ್ /*nu:ŋgɨ*/ ಕ್ರಿ. ನುಂಗು. to swallow. ವಾ: ಬೇಗ ಬೇಗ ನೂಂಗ್. ಪ: ನುಂಗ್

ನೂಕಪತ್ತಾ /*nu:kapatta:*/ ನಾ. 1. ಉರಡಾಟ, 2. ಗುದ್ದಾಟ. 1. a scuffle, 2. a fight. ವಾ: ಅವರ ನೂಕಪತ್ತಾ ನೋಡೊಮ್ಮೆ.

ನೂಕಾಟ /*nu:ka:ṭa*/ ನಾ. 1. ತಳ್ಳು, 2. ದೂಡು,3. ದೂರ ಮಾಡು. 1. to push someone away, 2. to shove, 3. to maintain distance. **ಆಕಾಶ ನೋಡಿಕೆ ನೂಕಾಟ ಯಾಕೆ(ಗಾ).** ವಾ: ದಸರಲಿ ಜೆನರ ನೂಕಾಟ ಜೋರಿತ್.

ನೂಕೋಲು /*nu:ko:lu*/ ನಾ. ನವಿಲುಕೋಸು. Kohlrabi, knol khol. ವಾ: ಹಸಿ ನೂಕೋಲುನ ಯಾಗೊಲು ತಿಂದರೆ ಇನ್ಸುಲಿನ್ ಸಿಕ್ಕಿದೆ.

ನೂಕ್ /*nu:kɨ*/ ಕ್ರಿ. 1. ನೂಕು, 2. ತಳ್ಳು, 1. to push, 2. to shove. **ಕಂಡವ್ರ ಮಕ್ಕಳ ಬಾಮಿಗೆ ನೂಕಿ ಆಳ ನೋಡ್ದೋಗಡ(ಗಾ).** ವಾ: ಚೀಲನ ಅತ್ತ ನೂಕ್. ಪ: ನೂಕಿತ್ – ನೂಕಿದನು(ಳು); ನೂಕಿದ್ – ನೂಕಿದ್ದು; ನೂಕುದು – ತಳ್ಳುವುದು; ನೂಂಕುದು – ದೂಡುವುದು. **ನೂಕ್ಬೆಡಿ** /*nu:kɨbɛḍi*/ 1. ತಳ್ಳಬೇಡಿ, 2. ದೂಡದಿರು. 1. don't push, 2. don't shove. ವಾ: ನಿತ್ತರೆ ನೂಕ್ಬೆಡಿ.

ನೂಚಿಲ /*nu:cila*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಉಬರಡ್ಕ ಮಿತ್ತೂರು ಗ್ರಾಮದ ಜಾಗ. 1. family, 2. lineage, 3. a locality in Subramanya village in Sullia Taluk of Dakshina Kannada District.

ನೂಜಲು /*nu:jalu*/ ನಾ. 1. ಕುಟುಂಬ, 2. ಮನೆತನ. 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ನೆಲ್ಲೂರು ಕೆಮ್ರಾಜೆ ಗ್ರಾಮದ ಜಾಗ. 1. family, 2. lineage, 3. a locality in Subramanya village in Sullia Taluk of Dakshina Kannada District.

ನೂಜಾಲ /*nu:ja:la*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮಡಪ್ಪಾಡಿ ಗ್ರಾಮದ ಜಾಗ. a locality in Madappadi village in Sullia Taluk of Dakshina Kannada District.

ನೂಜಿ /*nu:ji*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ನೂಜಿಕಲ್ಲು /*nu:jikallu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅರಂತೋಡು ಗ್ರಾಮದ ಜಾಗ. a locality in Arantodu village in Sullia Taluk of Dakshina Kannada District.

ನೂಜಿಬೆಟ್ಟು /*nu:jibeṭṭu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಐನೆಕಿದು ಗ್ರಾಮದ ಜಾಗ. a locality in Inekidu village in Sullia Taluk of Dakshina Kannada District.

ನೂಜಿಬೈಲು /*nu:jibailu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ನೂಜಿಲ /*nu:jila*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ನೂಜುಬೈಲು /*nu:jubailu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ನೂಜೆಲು /*nu:jɛlu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ನೂತ /*nu:ta*/ ಕ್ರಿ. ನೂಲು ತಯಾರಿಸು. making of thread from cotton (spinning). **ಅಜ್ಜಿ ನೂತದೆಲ್ಲಾ ಅಜ್ಜನ ಜನಿವಾರಕ್ಕೆ(ಗಾ).**

ನೂಪಿಟ್ಟ್ /*nu:piṭṭɨ*/ ನಾ. 1. ಶ್ಯಾವಿಗೆ, 2. ಸೇಮಿಗೆ. 1. vermicelli, 2. rice vermicelli. ವಾ: ನೂಪಿಟ್ಟ್ ಮಾಡಿಕೆ ವರ್‌ಲ್ ಬೇಕ್. ಪ: ನೂಪಿಟ್ಟು

ನೂಪೊಟ್ಟೊರ /*nu:poṭṭora*/ ನಾ. ಶಾವಿಗೆಯನ್ನು ಒತ್ತುವ ಮಣೆ. rice vermicelli maker/presser. ವಾ: ನೂಪೊಟ್ಟೊರಲಿ ಹಿಟ್ಟ್ ಒತ್ತುದು.

ನೂಲಕೈತಂಗ್[1] /*nu:lakaitaŋgɨ*/ ನಾ. ಸತ್ಯ ಪರೀಕ್ಷೆ ಮಾಡವ ಸ್ಥಳ. a place where people gather to verify the truthfulness of someone. ವಾ: ಬಾಳೆ ಪಾಲ ನೂಲ ಕೈತಾಂಗ್‌ಲಿ ಹೋಗಿ ಸತ್ಯ ಹೇಳೊಕು(ಜನಪದ ಕತೆ).

ನೂಲಕೈತಾಂಗ್^{2} /*nu:la kaita:ŋgɨ*/ ನಾ. ಸ್ವರ್ಗಕ್ಕೆ ಹೋಗುವ ದಾರಿಯೆಂದು ಜನಪದರ ನಂಬಿಕೆ. a path/way to go to heaven, a folk belief. **ಬಾಳೆ ಪಾಲ ನೂಲ ಕೈತಾಂಗ್(ನು).** ವಾ: ಜೆನಪದಲಿ ನೂಲ ಕೈತಾಂಗ್‌ತೇಳ್‌ದು ಸೊರ್ಗಕ್ಕೆ ಹೋಗೊ ದಾರಿತೇಳ್‌ವ ನಂಬಿಕೆ.

ನೂಲಿಟ್ಟ್ /*nu:liṭṭɨ*/ ನಾ. 1. ಶ್ಯಾವಿಗೆ. rice vermicelli. **ಹಾಕಿಕೊಬ್ಬ ನೂಕಿಕೊಬ್ಬ ದಿಡಿ(ಡ್ಡಿ)ಗೆ ದೀಪ ತೋರ್ಸಿಕೊಬ್ಬ – ನೂಲಿಟ್ಟ್(ಒ).** ವಾ: ನೂಲಿಟ್ಟ್ ಗೆ ಕಾಯಾಲ್ ಮಾಡೊಕು.

ನೂಲು /*nu:lu*/ ನಾ. 1. ನೂಲು, 2. ದಾರ, 3. ಎಳೆ. 1. thread, 2. strand, 3. cord. **ನೂಲಿನಂಗೆ ಸೀರೆ ಅವ್ವನಂಗೆ ಮಗ್ಳ್(ಗಾ).** ವಾ: ಸೂಜಿಗೆ ನೂಲು ಹಾಕ್.

ನೂಲು ಅರ್ವೆ /*nu:lu arvɛ*/ ನಾ. 1. ಹತ್ತಿ ನೂಲಿನ ಬಟ್ಟೆ, 2. ಕೈಮಗ್ಗದ ಬಟ್ಟೆ. 1. cloth made of cotton fibers, 2. handloom cloth. ವಾ: ಸೆಕೆಲಿ ನೂಲುಅರ್ವೆನೆ ಹಾಕಣಕು.

ನೂಲುಪುಟ್ಟು /*nu:lupuṭṭu*/ ನಾ. ಎಪ. ಶ್ಯಾವಿಗೆ ಹಿಟ್ಟು. rice dough used in making vermicelli. ವಾ: ನೂಲುಪುಟ್ಟು ಮಾಡಿದ್ದೊ.

ನೂಲ್ ವಾಟೆ /*nu:lɨ va:ṭɛ*/ ನಾ. ನೂಲಿನ ಉಂಡೆ. a reel of sewing thread. ವಾ: ನೂಲ್ ಮುಗ್ದ ಮೇಲೆ ನೂಲ್ ವಾಟೆ ಇಡ್ಬಡಿ.

ನೆಂಚ್ /*nɛɲci*/ ಕ್ರಿ. ನೆಂಜಿಕೊಳ್ಳು, a side dish. ವಾ: ನೆಂಚ್ ಕಂಬಕೆ ಎಂತಾರ್ ಉಟ್ಟ? **ನೆಂಜಿಕಂಡ್** /*nɛɲjikaṇḍɨ*/ ನೆಕ್ಕಿಕೊಂಡು. to lick. ವಾ: ಕೊತ್ತಿಗ ಅಗಾಗ ನೆಂಜಿಕಂಡ್ ಇರ್‌ದು. ಪ: ನೆಂಜಿಕೆ – ನೆಕ್ಕಲು

ನೆಂಟರವೀಳ್ಯ /*nɛnṭara vi:ḷya*/ ನಾ. ಗಂಡಿನ ಕಡೆಯಿಂದ ಹೆಣ್ಣಿನ ಕಡೆಯವರನ್ನು 5 ಕವಳೆ ವೀಳ್ಯ ಮತ್ತು 5 ಅಡಿಕೆಯನ್ನು ಹರಿವಾಣದಲ್ಲಿಟ್ಟು ಪರಿಚಯ ಮಾಡಿಕೊಳ್ಳುವುದು, ಈ ಎರಡೂ ಸಂದರ್ಭದಲ್ಲೂ ಗಂಡಿನ ಕಡೆಯವರು ಮತ್ತು ಹೆಣ್ಣಿನ ಕಡೆಯವರು ತಮ್ಮ ತಮ್ಮ 'ಬಳಿ'ಯನ್ನು "ಅರಮನೆ ಗುರುಮಠ," ಕ್ರಮದಲ್ಲಿ ಕರೆದು ಹೇಳುವರು. a custom of groom's relatives introducing themselves to bride's relatives by giving 5 betel leaves and 5 pieces of areca nut, and vice versa. During this time, both the parties share their family ancestry. ವಾ: ನೆಂಟರ ವೀಳ್ಯ ಕೊಟ್ಟಾತ್.

ನೆಂಟರಿಷ್ಟರವೀಳ್ಯ /*nɛnṭariṣṭara vi:ḷya*/ ನಾ. ಬಂಧು ಬಾಂಧವರ ಗೌರವಾರ್ಥ ವೀಳ್ಯ ಕಟ್ಟಿ ಮದುವೆ ಕಾಗದವನ್ನು ಎರಡೂ ಕಡೆಯವರು ಜೋರಾಗಿ ಓದುವರು. a loud reading of wedding invitation by the relatives of both the groom and the bride. ವಾ: ನೆಂಟರಿಷ್ಟರ ವೀಳ್ಯತ ಮಾಡಿವೆ.

ನೆಂಟಾಚಾರ /*nɛnṭa:ca:ra*/ ನಾವಿ. ನೆಂಟರಿಗೆ ಮಾಡುವ ಸನ್ಮಾನ. honouring the relatives. **ತಿಂಬೊದು ಉಂಬೊದು ನೆಂಟಾಚಾರ ಕೊಡ್ದು ತಕಂಬೊದು ಲೆಕ್ಕಾಚಾರ(ಗಾ).** ವಾ: ಅಲ್ಲಿ ನೆಂಟಾಚಾರ ನಡಿತುಟ್ಟು.

ನೆಂಟ /*nɛnṭa*/ ನಾ. ಬಂಧು ಬಾಂಧವರು. relatives. **ಎತ್ತ್‌ನ ನಂಬಿ ಬಿತ್ತಿಕಾಗದ್, ನೆಂಟನ ನಂಬಿ ಬದುಕಿಕಾಗದ್(ಗಾ). ಅಪತ್ತ್‌ಗಾದಂವ ನೆಂಟ(ನು).** ವಾ: ಮನೆಗೆ ನೆಂಟ ಬಾತ್. ಪ: ನೆಂಟ್ರ್. **ನೆಂಟ್** /*nɛnṭi*/ ನೆಂಟರು. relatives. **ಕನ್ಸ್‌ನ ನೆಂಟ್ ಕನ್ನಡಿಯೊಳಗಿನ ಗಂಟ್(ಗಾ).** ವಾ: ನಿಮ್ಮ ನೆಂಟ್‌ರ್ ಯಾಗ ಬಾದು. **ನೆಂಟ್ರಿಗೆ** /*nɛnṭrigɛ*/ 1. ನೆಂಟರಿಗೆ, 2. ಬಂಧುಗಳಿಗೆ. 1. to the relatives, 2. for the relatives. ವಾ: ನೆಂಟ್ರಿಗೆ ಎಂತ ಗದ್ದಳ? **ನೆಂಟ್ರ್** /*nɛnṭri*/ 1. ನೆಂಟರು, 2. ಬಂಧುಗಳು. relatives. **ಇಕ್ಕಟ್‌ನ ಜಾಗಕ್ಕೆ, ಇದ್ದ ನೆಂಟ್ರೆಲ್ಲಾ ಬಂದವೆ(ಗಾ).** ವಾ: ನೆಂಟ್ರ್ ಬಂದೊಳೊ ಮನೆಗೆ. **ನೆಂಟ್‌ಸ್ತನ** /*nɛnṭstana*/ 1. ನೆಂಟಸ್ಥಿಕೆ, 2. ನೆಂಟತನ. relationship. ವಾ: ನೆಂಟ್‌ಸ್ತನ ಮಾಡಿಕೆ ಹೋದ್. ಪ: ನೆಂಟಸ್ತಾನ

ನೆಂಟ್ರು ಬರುವಾಟ /*nɛnṭru baruva:ṭa*/ ನಾ. ಜನಪದ ಆಟ. a folk game.

ನೆಂದ್ /*nɛndɨ*/ ಕ್ರಿ. 1. ನೆನೆದು, 2. ಒದ್ದೆಯಾಗು, 3. ತೋಯು. 1. wet, 2. to get wet, 3. soaked. ವಾ: ಮಳೆಲಿ ನೆಂದ್ ಅರ್ವೆಯೆಲ್ಲ ಸೆಂಡಿ. ಪ: ನನೆದ್(ತು)

ನೆಂದ್ ಕೊಂಡೊ /*nɛndɨ koṇḍɔ*/ ನಾವಿ. 1. ನೆನಪಿಸಿಕೊಳ್ಳು, 2. ನೆನೆಸಿಕೊ. 1. to remember, 2. to recollect. ವಾ: ನಿನ್ನ ಬಾರಿ ನೆಂದ್ ಕೊಂಡೊ. ಪ: ನೆಂದ್‌ಕಂಡ್ – ನೆನೆದುಕೊಂಡು

ನೆಂಪು /*nɛmpu*/ ನಾ. ನೆನಪು. memory. ವಾ: ನೆಂಪು ಬಾತ? ಪ: ನೆಂಪುಲಿ – ನೆನಪಿನಲ್ಲಿ. **ನೆಂಪಾತ್** /*nɛmpa:tɨ*/ ನೆನಪಾಯಿತು. recalled. ವಾ: ಹಂಗೆ ಕುದ್ದಿರಕನ ಹಳೆದೆಲ್ಲ ನೆಂಪಾತ್. ಪ: ನೆಂಪಾತ್ಲೆ – ನೆನಪಾಗಲಿಲ್ಲ. **ನೆಂಪಾದ್** /*nɛmpa:dɨ*/ ನೆನಪಾದದ್ದು. remembered. ವಾ: ನೀವು ಕೇಳ್‌ಕನೆ ನಂಗೆ ನೆಂಪಾದ್. **ನೆಂಪಿಲ್ಲೆ** /*nɛmpillɛ*/ ನೆನಪಿಲ್ಲ. don't remember. ವಾ: ಅಮ್ಮಪ ನಂಗೆ ಎಂತನು ನೆಂಪಿಲ್ಲೆ. ಪ: ನೆಂಪಿಲ್ಲೆಗಡ – ನೆನಪಿಲ್ಲವಂತೆ. **ನೆಂಪಿಸಿಕಣೆ** /*nɛmpisikaṇɛ*/ ನೆನಪಿಸಿಕೊಳ್ಳುತ್ತೇನೆ. will remember. ವಾ: ನಿಮ್ಮನ ಯಾಗೊಳು ನೆಂಪಿಸಿಕಣೆ. **ನೆಂಪುಟ್ಟು** /*nɛmpuṭṭu*/ ನೆನಪಿದೆ. I remember. ವಾ: ನೀವು ಹೇಳ್ಯೊಳದ್ ನಂಗೆ ನೆಂಪುಟ್ಟು. ಪ: ನೆಂಪುಟ್ಟಯ – ನೆನಪಿದೆಯ. **ನೆಂಪುಲಿ** /*nɛmpuli*/ ನೆನಪಲ್ಲಿ. in the memory. ವಾ: ನಿಮ್ಮ ನೆಂಪುಲಿ ಇದ್ದವೆ. ಪ: ನೆಂಪುಲಿರಿಕನ – ನೆನಪಲ್ಲಿರುವಾಗ; ನೆಂಪುಲಿದ್ದದೆ – ನೆನಪಿನಲ್ಲಿರುತ್ತದೆ

ನೆಕ್ಕರಕಜೆ /*nekkarakajɛ*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಪಂಬೆತ್ತಾಡಿ ಗ್ರಾಮದ ಜಾಗ. a locality in Pambettadi village in Sullia Taluk of Dakshina Kannada District.

ನೆಕ್ಕರಾಜೆ /*nekkara:jɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ನೆಕ್ಕರೆಮಾವು /*nɛkkarɛma:vu*/ ನಾ. ಒಂದು ವಿಧದ ಮಾವು. a variety of mango. ವಾ: ನೆಕ್ಕರೆ ಮಾವು ತಿಂದಿಯನ?

ನೆಕ್ಕರೆ[1] /*nɛkkarɛ*/ ನಾ. 1. ಸ್ಥಳನಾಮ, 2. ಜವುಗು ಪ್ರದೇಶದಲ್ಲಿ ಬೆಳೆವ ನೇರಳೆ ಹಣ್ಣಿನ ಕುರುಚಲು ಗಿಡ. 1. Nekkare, a place, 2. Malabar melastome, Indian rhododendron plant. ವಾ: ನೆಕ್ಕರೆ ಮಾಯ್ನಕಾಯಿನ ಸಣ್ಣದಾಗಿ ಕತ್ತ್‌ರಿಸಿ ಉಪ್ಪನಕಾಯಿ ಹಾಕುವೆ.

ನೆಕ್ಕರೆ[2] /*nekkarɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ನೆಕ್ಕರೆಮಲೆ /*nekkaremale*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅರಂತೋಡು ಗ್ರಾಮದ ಜಾಗ. a locality in Arantodu village in Sullia Taluk of Dakshina Kannada District.

ನೆಕ್ಕರ್ತೆ /*nɛkkartɛ*/ ನಾ. ತೇವಾಂಶವಿರುವ ಜಾಗದಲ್ಲಿ ಬೆಳೆಯುವ ಪಶುಗಳ ಆಹಾರ ಸಸ್ಯ, ನೇರಳೆ ಬಣ್ಣದ ಹೂವಿನ ಗಿಡ. an edible plant found in wetlands, usually eaten by animals, a purple coloured flowering plant. ವಾ: ನೆಕ್ಕರ್ತೆ ಕೊಯ್ಕಂಡ್ ಬಂದದ್.

ನೆಕ್ಕರ್ತೆಗೆಡ್ಡೆ /*nɛkkartɛgɛḍḍɛ*/ ನಾ. ನೆಕ್ಕರ್ತೆ ಸಸ್ಯದ ಗೆಡ್ಡೆ. root of an edible plant found in wetlands. ವಾ: ನೆಕ್ಕರ್ತೆತೆ ಗೆಡ್ಡೆಲಿ ಮೊದ್ದುನ ಅಂಸ ಉಟ್ಟುಗಡೆ.

ನೆಕ್ಕಿಲ /*nekkila*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಐವತ್ತೊಕ್ಲು ಗ್ರಾಮದ ಜಾಗ. 1. family, 2. lineage, 3. a locality in Aivattoklu village in Sullia Taluk of Dakshina Kannada District.

ನೆಕ್ಕಿಲಾಡಿ /*nekkila:ḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ನೆಕ್ಕ್ /*nɛkkɨ*/ ಕ್ರಿ. 1. ನೆಕ್ಕು, 2. ನಾಲಗೆಯಿಂದ ಬಾಯಿಗೆ ಸೆಳೆದುಕೊಳ್ಳು, 3. ನಾಲಗೆಯಿಂದ ಸವರು. 1. to lick, 2. to slrup, 3. to move one's tongue on the surface of something. **ಜೇನು ತೆಗ್ದವ ನೆಕ್ಕಿ ನೋಡದಿರಿಕಿಲೆ(ಗಾ).** ವಾ: ದನ ಕರ್‌ದ್ ಮೈನ ನೆಕ್ಕಿತ್. **ನೆಕ್ಕಿ** /*nɛkki*/ 1. ನೆಕ್ಕು, 2. ನಾಲಗೆಯಿಂದ ಸವರು. 1. to lick, 2. to move one's tongue on the surface of something. **ನಾರಾಯಣ ಕಟ್ಟ್‌ಸಿದ ಬಾವಿ, ಬೊಗ್ಗಿ ನೋಡ್ರೆ ನೀರಿಲ್ಲೆ, ನೆಕ್ಕಿ ನೋಡ್ರೆ ನೀರುಟ್ಟು – ಬೆಲ್ಲ(ಒ).** ವಾ: ಕೊತ್ತಿ ನೆಲನ ನೆಕ್ಕಿ ನೋಡ್ತುಟ್ಟು. ಪ: ನೆಕ್ಕುದು – ನೆಕ್ಕುವುದು; ನೆಕ್ಕ್(ಕ್ರಿ) – ನೆಕ್ಕು, ನಾಲಗೆಯಿಂದ ಸವರು. **ನೆಕ್ಕಿಕೋಲ್** /*nɛkki ko:lɨ*/ ಗದ್ದೆ ಉಳುವಾಗ ಎತ್ತುಗಳಿಗೆ ಹೊಡೆಯಲು ಉಪಯೋಗಿಸುತ್ತಿದ್ದ ಕೋಲು. a whip used on the oxen while ploughing the field. ವಾ: ನೆಕ್ಕಿ ಕೋಲ್ ಉದ್ದದ್ ಬೇಕ್. **ನೆಕ್ಕಿಸೊಪ್ಪು** /*nɨkki soppu*/ ಬೆಂಕಿಗೆ ಈ ಸೊಪ್ಪನ್ನು ಹಾಕಿ ಹೊಗೆ ಎಬ್ಬಿಸಿದರೆ ಕೋಳಿ ಹೇನು ನಿವಾರಣೆಯಾಗುತ್ತದೆ, ನೋಡಿ : ನಿಕ್ಕಿ ಸೊಪ್ಪು, a smoke produced when the leaves of Nirgundi plant are burnt, it is believed that the smoke removes lice on the body

of hen. ವಾ: ನೆಕ್ಕಿ ಸೊಪ್ಪು ನ ಹೊಗೆ ಹಾಕಿರೆ ನುಸಿ, ನೊಣಗ ಮನೆ ಒಳಗೆ ಬಾದುಲೆ.

ನೆಕ್ರಾಜೆ /*nekra:je*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಜಾಲ್ಸೂರು ಗ್ರಾಮದ ಜಾಗ. 1. family, 2. lineage, 3. a locality in Jalsuru village in Sullia Taluk of Dakshina Kannada District.

ನೆಕ್ರೆಪ್ಪಾಡಿ /*nekreppa:ḍi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಐವರ್ನಾಡು ಗ್ರಾಮದ ಜಾಗ. a locality in Aivarnadu village in Sullia Taluk of Dakshina Kannada District.

ನೆಗಡಿ /*nɛgaḍi*/ ನಾ. 1. ನೆಗಡಿ, 2. ಮನುಷ್ಯನಿಗೆ ತಗಲುವ ಒಂದು ಸಾಂಕ್ರಾಮಿಕ ರೋಗ, 3. ಶೀತ ಬಾಧೆಯಿಂದ ಮೂಗಿನಲ್ಲಿ ಉಂಟಾಗುವ ಉಪದ್ರವ. 1. common cold, 2. an infectious disease, 3. viral infection in the nose. **ನೆಗಡಿ ಆತ್ ತಾ ಮೂಕ್‌ನ ಕೂಯ್ಯಕಾದುಲೆ(ಗಾ). ಸುರ್ ಸುರ್ ನೆಂಟ ಗೋಡೆಗೆ ಬಂಟ – ನೆಗಡಿ(ಒ).** ವಾ: ಮಳೆಲಿ ನೆಂದರೆ ನೆಗಡಿ ಆದು. ಪ: ನೆಗ್ಡಿ

ನೆಗು /*nɛgu*/ ಕ್ರಿ. ನಗು. to laugh. ವಾ: ನೆಗು ಬಂದ್ ತಡೆಕಾದ್ಲೆ. **ನೆಗಾಡ್** /*nɛga:ḍi*/ ನಗು. to laugh. **ಹಣ್ಣೆಲೆ ಉದ್‌ರ್‌ಕನ ಕಾಯೆಲೆ ನೆಗಾಡ್ತ್(ಗಾ). ನೆಗಾಡ್‌ಕನ ಎಲ್ಲವೂ ನೆಂಟ್ರ್(ನು).** ವಾ: ಸುಮಸುಮ್ಮನೆ ನೆಗಾಡ್‌ರೆ ಬೊಯ್ದವೆ. **ನೆಗಡಿಕಂಡ್** /*nɛgaḍikaṇḍi*/ ನಗುತ್ತ. laughing. ವಾ: ಕೆಲೊವು ಜೆನ ನೆಗಡಿಕಂಡೇ ಬತ್ತಿ ಮಡ್‌ಗುವೆ. **ನೆಗಾಡಿಬುಟ್ಟೆ** /*nɛgaḍibuṭṭɛ*/ ನಕ್ಕುಬಿಟ್ಟೆ. laughed. ವಾ: ಜಾರಿ ಬಿದ್ದದರ ನೋಡಿ ನೆಗಡಿಬುಟ್ಟೆ. **ನೆಗಾಡ್ತ ಒಳೊ** /*nɛga:ḍta oḷɔ*/ ನಗುತ್ತಿದ್ದಾರೆ. they are laughing. ವಾ: ಎಲ್ಲೊವು ಸೇರಿಕಂಡ್ ಕತೆ ಹೇಳಿಕಂಡ್ ನೆಗಾಡ್ತ ಒಳೊ. **ನೆಗಾಡ್ವೆ** /*nɛga:ḍvɛ*/ ನಗುತ್ತಾರೆ. they will laugh. ವಾ: ನನ್ನ ಕಾಂಬಕನ ನೆಗಾಡ್ವೆ. ಪ: ನೆಗಾಡ್ಸಂವ – ನಗಾಡಿಸುವವ. **ನೆಗೆಬಾತ್** /*nɛgɛba:tɨ*/ ಕ್ರಿವಿ. ನಗು ಬಂತು. felt like laughing. ವಾ: ನಿನ್ನ ಮಾತ್ ಕೇಳಿ ನಂಗೆ ನೆಗೆಬಾತ್.

ನೆಗೆಬೇಕ್ /*nɛgɛbe:kɨ*/ ಕ್ರಿ. ನಗಬೇಕು. need to laugh. ವಾ: ಈಗನ ಪ್ಯಾಸನ್ ಅರ್ವೆ ಹಾಕುದರ ನೋಡಿಕನ ನೆಗೆ ಬಂದದೆ. ಪ: ನೆಗೊಕು – ನಗಬೇಕು.

ನೆಗೆಮುದ್ದ /*nɛgɛmudda*/ ನಾ. ಸದಾ ನಗುತ್ತಿರುವವ. smiling/laughing all the time.

ನೆಗ್ಡಿಮುದ್ದ /*nɛgḍimudda*/ ನಾ. ಮೂಗಿನಲ್ಲಿ ಸದಾ ನೆಗಡಿ ಸುರಿಸಿಕೊಂಡು ಇರುವವನು. someone who is suffering from running nose/cold for a long time. ವಾ: ನೆಗ್ಡಿಮುದ್ದ ಬಾತ್.

ನೆಗ್ದ್ /*negd*/ ನಾ. 1. ನೆಗೆದು, 2. ಹಾರಿ. 1. jumped, 2. to fly/flew. ವಾ: ನಾವು ಕಟ್ಟೆ ನೆಗ್ದ್ ಬಂದದ್.

ನೆಗ್ದ್‌ಬೀಳ್ /*nɛgdɨ bi:ḷi*/ ಕ್ರಿವಿ. ಸತ್ತು ಹೋಗು ಎಂಬರ್ಥದ ಬೈಗುಳ ಪದ. an expletive indicating one should die. ವಾ: ಬೇಗ ನೆಗ್ದ್ ಬೀಳ್. ಪ: ನೆಗ್ದ್ ಬೀಳೊಕು – ಸತ್ತುಹೋಗಲಿ

ನೆಟ್ಗ /*nɛṭga*/ ನಾ. ಸಟ್ಟುಗ. a long-handled spoon, a ladle. ವಾ: ದೋಸೆ ಎಳ್ಕ್‌ಸಿಕೆ ನೆಟ್ಗ ಬೇಕು.

ನೆಟ್ಟಂಗೆ /*nɛṭṭaŋgɛ*/ ನಾ. 1. ನೆಟ್ಟಗೆ, 2. ನೇರವಾಗಿ. 1. straight, 2. horizontal. **ನಾಯಿ ಬೀಲಕ್ಕೆ ದಬ್ಬೆ ಕಟ್ಟಿರೆ ನೆಟ್ಟಂಗಾದೆನೋ?(ಗಾ).** ವಾ: ನೆಟ್ಟಂಗೆ ಕುದ್ರು.

ನೆಟ್ಟತ್ /*nɛṭṭatɨ*/ ಕ್ರಿ. ನೆಟ್ಟನು/ಳು. he/she planted. ವಾ: ಅಮ್ಮ ಸಪೋಟ ದೈ ನೆಟ್ಟತ್.

ನೆಟ್ಟಾರು /*nɛṭṭa:ru*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಬೆಳ್ಳಾರೆ ಗ್ರಾಮದ ಜಾಗ. 1. family, 2. lineage, 3. a locality in Bellare village in Sullia Taluk of Dakshina Kannada District.

ನೆಟ್ಟಿ[1] /*nɛṭṭi*/ ನಾ. ತರಕಾರಿ ಬೆಳೆ. vegetable crop. ವಾ: ಮನೆ ಹಿಂದೆ ನೆಟ್ಟಿ ಬೆಳ್‌ಸುದು. ಪ: ನೆಟ್ಟಿಕಾಯಿ – ತರಕಾರಿ. **ನೆಟ್ಟಿಕಾಯಿ** /*nɛṭṭika:yi*/ 1. ತರಕಾರಿ, 2. ಕಾಯಿಪಲ್ಯ. vegetable. ವಾ: ನೆಟ್ಟಿಕಾಯಿ ತಂದನ? **ನೆಟ್ಟಿಕಳ** /*nɛṭṭikaḷa*/ ತರಕಾರಿ ಬೆಳೆಯುವ ಜಾಗ. place where vegetable is grown. ವಾ: ನೆಟ್ಟಿಕಳಕೆ ಹೋಗಿ ಬಂದೆ. **ನೆಟ್ಟಿಮಾಡ್ದು** /*nɛṭṭima:ḍdu*/ ತರಕಾರಿ ಬೆಳೆಸುವುದು. growing vegetable. ವಾ: ಕೊಯ್ಲ್ ಕೆಲ್ಸ ಆದ ಮೇಲೆ ಗದ್ದೆಲಿ ನೆಟ್ಟಿಮಾಡ್ದು.

ನೆಟ್ಟಿ[2] /*nɛṭṭi*/ ನಾ. ಬೇಸಾಯ. farming. ವಾ: ಗಂಡ ಹೆಣ್ಣ್ ಸೇರಿಕಂಡ್ ನೆಟ್ಟಿ ಮಾಡಿವೆ.

ನೆಟ್ಟಿಕಡ್ಡಿ /*nɛṭṭikaḍḍi*/ ನಾ. ಕಾಡು ಪೊರಕೆಯ ಕಡ್ಡಿ.

stick in a broom. ವಾ: ನೆಟ್ಟಿಕಡ್ಡಿ ಹೆರ್‌ಕಂಡ್ ಬಂದೊ.

ನೆಟ್ಟಿಪೈ /*nɛṭṭipai*/ ನಾ. ಮಲೆ ಕಾಡಿನಲ್ಲಿ ಸಿಗುವ ಪೊರಕೆ. broom usually found in the malnad region. ವಾ: ನೆಟ್ಟಿಪೈ ತಾಕೆ ಮಲೆಕಾಡಿಗೆ ಹೋಗೊಣೊ.

ನೆಟ್ಟೆ[1] /*nɛṭṭɛ*/ ನಾ. ಕೈ ಬೆರಳ ಸಂದುಗಳನ್ನು ಬಗ್ಗಿಸಿದಾಗ ಉಂಟಾಗುವ ಶಬ್ದ. Knuckle cracking. ವಾ: ದೃಷ್ಟಿ ಆಗದಂಗೆ ನೆಟ್ಟ್ ತೆಗೆದು. ಪ: ನೆಟ್ಟ್ ತೆಗೆದು – ನಟಿಕೆ ಮುರಿಯುವುದು

ನೆಟ್ಟೆ[2] /*nɛṭṭɛ*/ ಕ್ರಿ. ನೆಟ್ಟಾಯಿತು. planted. ವಾ: ದಾಸಳ ದೈನ ನೆಟ್ಟೆ. ಪ: ನೆಟ್ಟಳೆ – ನೆಟ್ಟಿದ್ದೇನೆ

ನೆಟ್ಟ್[1] /*nɛṭṭi*/ ಕ್ರಿ. 1. ನೆಟ್ಟು, 2. ನೆಡು, 3. ಊರು, 4. ಮಣ್ಣಿನಲ್ಲಿ ಚುಚ್ಚಿ ಇಡು. planting. ವಾ: ದೈ ನೆಟ್ಟ್ ಬಂದದಸ್ಟೆ. ಪ: ನೆಟ್ಟ – ನೆಟ್ಟಿರುವ/ನೆಟ್ಟೆಯಾ?

ನೆಟ್ಟ್[2] /*nɛṭṭi*/ ನಾ. ಯಾವುದಾದರು ವಸ್ತುವನ್ನು ಹಾಳು ಮಾಡಿದಾಗ ಕೋಪದಿಂದ ಹೇಳುವ ಮಾತು. a term used in anger against someone who has spoiled something. ವಾ: ಸೊಯ ಇಲ್ಲದಂಗೆ ಒಂದು ವಾಲೆನ ನೆಟ್ಟ್ ಬಂದುಟು.

ನೆಟ್ಟ್[3] /*nɛṭi*/ ನಾ. 1. ನಟಿಗೆ, 2. ಲಟಿಕೆ ಮುರಿ, 3. ಬೆರಳುಗಳನ್ನು ಮಡಿಸಿ ಲಟಕ್ಕೆಂದು ಶಬ್ದಮಾಡುವುದು. Knuckle cracking. ವಾ: ಬೆರ್‌ಲ್ ಲಿ ನೆಟ್ ಮುರ್‌ಯದು. ಪ: ನೆಟ್ಟಿ

ನೆಡಿಗಿಲು /*neḍigilu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ನೆಡಿಲು /*neḍilu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕನಕಮಜಲು ಗ್ರಾಮದ ಜಾಗ. a locality in Kanakamajalu village in Sullia Taluk of Dakshina Kannada District.

ನೆಡುವನ[1] /*nɛḍuvana*/ ಕ್ರಿ. ನೆಡುತ್ತೀಯಾ? will you plant. ವಾ: ಇಸ್ಟ್ ದೈನ ಚೆಟ್ಟಿಲಿ ನೆಡುವನ?

ನೆಡುವನ[2] /*nɛḍuvana*/ ನಾ. 1. ಮಧ್ಯದವನು, 2. ನಡುವಲ್ಲಿರುವವನು. the person in the middle. ವಾ: ಇಂವ ನೆಡುವನ ಮಜ್ಜ.

ನೆಡೆ /*nɛḍɛ*/ ನಾ. 1. ದಾರಿ, 2. ಎಡೆ. 1. path, 2. space. ವಾ: ದೃಸ್ಟಿ ತೆಗ್ದ್ ಮೂರ್ ನೆಡೆ ಕೂಡುವಲ್ಲಿ ಹಾಕೊಣೊ. ಪ: ನೆಡೆಲಿ – ದಾರಿಯಲ್ಲಿ, ಓಣಿಯಲ್ಲಿ

ನೆಡೆನೆಳೆ /*nɛḍɛneɛḷɛ*/ ನಾ. ಮದುವೆ ಹುಡುಗ/ಹುಡುಗಿ ನಡೆದುಕೊಂಡು ಬರುವಾಗ ಅಲ್ಲಿ ಬಿಳಿ ಬಟ್ಟೆ ಹಾಸಿರುವುದು. spreading a white cloth on the designated path of the bride/groom. ವಾ: ಮೊದುವೆಲಿ ನೆಡೆನೆಳೆ ಮೇಲೆ ಮೊದುಮಕ್ಕ ನಡ್ಕಂಡ್ ಬರೊಕು.

ನೆಡ್ /*nɛḍi*/ ಕ್ರಿ. ಗಿಡ ನೆಡುವುದು. to plant a sapling. ವಾ: ವರ್‌ಸಕ್ಕೊಂದ್ ದೈ ನೆಡ್. ಪ: ನೆಡಿಕೆ – ನೆಡಲು; ನೆಡವು – ನೆಡುವವರು. **ನೆಡಿನಿ** /*nɛḍini*/ 1. ನೆಡು, 2. ಗಿಡ ನೆಡಿರಿ. 1. to plant, 2. to plant a sapling. ವಾ: ದೈಗಳ ನೆಡಿನಿ ಮಕ್ಕಳೆ. ಪ: ನೆಡೀಕೆ – ನೆಡಲು

ನೆಡ್ಚಿಲ್[2] /*neḍcilu*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಆಲೆಟ್ಟಿ ಗ್ರಾಮದ ಜಾಗ. 1. family, 2. lineage, 3. a locality in Aletti village in Sullia Taluk of Dakshina Kannada District.

ನೆಡ್ಚಿಲ್[1] /*neḍcil*/ ನಾ. ಒಂದು ಕಾಡುಗಿಡ. a forest plant.

ನೆಡ್ತಿದ್ದೊ /*nɛḍtiddɔ*/ ಕ್ರಿವಿ. ಗಿಡ ನೆಡುತ್ತಿದ್ದರು. they were planting a sapling. ವಾ: ಹಿಂದೆ ತುಂಬ ದೈ ನೆಡ್ತಿದ್ದೊ, ಹಂಗಾಗಿ ಒಳ್ಳ ಗಾಳಿ ಸಿಕ್ತಿತ್.

ನೆಡ್ತಿಲ /*neḍtila*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ನೆಡ್‌ಲಿರುವ /*nɛḍɨliruva*/ ನಾ. ಮಧ್ಯದಲ್ಲಿರುವ. in the middle. ವಾ: ದಾರಿ ನೆಡುಲಿರುವ ಕಲ್ಲ್‌ನ ಅತ್ತ ಹಾಕಕಿತ್. ಪ: ನೆಡುಲಿರುವ – ನಡುವಲ್ಲಿರುವ

ನೆಡ್ಲೆಮರ /*nɛḍlɛmara*/ ನಾ. ಒಂದು ವಿಧದ ಮರ. a kind of tree.

ನೆಣೆಬತ್ತಿ /*nɛṇɛbɔtti*/ ನಾ. 1. ದೇವರ ದೀಪದ ಬತ್ತಿ, 2. ದ್ವಿರುಕ್ತಿ ಪದ. wick in the lamp lit before gods. ವಾ: ನೆಣೆ ಬತ್ತಿನ ದಾರ್‌ಂದಲಿ ಇಸಿಕಣಿ.

ನೆಣೆ[1] /*nɛṇɛ*/ ನಾ. ಬತ್ತಿ. wick in the lamp. ವಾ: ದೇವ್ರ ದೀಪಲಿ ನೆಣೆ ಇಲ್ಲೆಲ, ದೀಪ ಬೆಳ್ಗಿ ಹೊಸದ್ ಹಾಕಕಿತ್.

ನೆಣೆ[2] /*nɛnɛ*/ ನಾ. 1. ಬತ್ತಿ, 2. ಎಣ್ಣೆಯಲ್ಲಿ ಅದ್ದಿದ ಬತ್ತಿ. 1. wick, 2. wick soaked in oil. ವಾ: ದೀಪಲಿ ನೆಣೆ ಇಲ್ಲೆ.

ನೆಣ್ಸ್ /*nɛŋsi*/ ಕ್ರಿ. 1. ನೆನಪು ಮಾಡು, 2. ಒದ್ದೆಮಾಡು. 1. to remind, 2. to soak/wet. ವಾ: ನೆಣೆ ಬತ್ತಿನ ಲಾಯ್ಕ್ ನೆಣ್ಸ್

ನೆತ್ತಿ /*nɛtti*/ ನಾ. ತಲೆಯ ಮೇಲ್ಭಾಗ. calvaria, the part between frontal bone and the parietal bones on the skull. ವಾ: ನೆತ್ತಿಗೆ ಪೆಟ್ಟಾದ್. ಪ: ನೆತ್ತಿಲಿ – ತಲೆಯಲ್ಲಿ

ನೆತ್ತಿಕಣ್ಣ್ ಮೀನ್ /*nɛttikaŋŋi mi:ni*/ ನಾ. ನೆತ್ತಿಯಲ್ಲಿ ಕಣ್ಣಿನ ಆಕಾರವನ್ನು ಹೊಂದಿರುವ ಮೀನು. a fish in the shape of calvaria. ವಾ: ಈ ಮೀನಿಗೆ ನೆತ್ತಿ ಕಣ್ಣ್ ಮೀನ್‌ತ ಹೇಳಿವೆಗಡ.

ನೆತ್ತಿಬೊಟ್ಟು /*nɛtti boṭṭu*/ ನಾ. 1. ಮುಂದಲೆಗೆ ಹಾಕುವ ಪದಕ, 2. ನೃತ್ಯ, ಮದುವೆ, ಸಮಾರಂಭಗಳಲ್ಲಿ ಹೆಣ್ಣು ನೆತ್ತಿಯಲ್ಲಿ ಧರಿಸುವ ಆಭರಣ. an ornament worn on the forehead, a maang tikka. ವಾ: ಮೊದುವೆಲಿ ಗೂಡೆಗೆ ನೆತ್ತಿ ಬೊಟ್ಟು ಹಾಕೊಕು.

ನೆತ್ತಿಗೇರ್ತ್ /*nɛttige:tti*/ ನಾ. 1. ನೆತ್ತಿಗೇರು, 2. ವಿಪರೀತ ಕೋಪ ಮಾಡಿಕೊಳ್ಳು. 1. to get angry, 2. to get enraged. ವಾ: ಸಿಟ್ಟ್ ಬಂದ್ ನೆತ್ತಿಗೇರ್ತ್.

ನೆತ್ತರ್ /*nɛttari*/ ನಾ. ರಕ್ತ. blood. ವಾ: ಗೆಲ್ಲ್ ಕಡೆಕನ ಕೈಗೆ ಕತ್ತಿ ತಾಂಗಿ ನೆತ್ತರ್ ಹರ್‌ತ್. ಪ: ನೆತ್ರ್, ನೆತ್ತೆರ್

ನೆತ್ರ್ /*nɛtri*/ ನಾ. ನೆತ್ತರ್. blood. ವಾ: ಬಿದ್ದ್ ಸುಮಾರ್ ನೆತ್ರ್ ಹರ್‌ತ್.

ನೆನಪು /*nɛnapu*/ ನಾ. 1. ನೆನಕೆ, 2. ಜ್ಞಾಪಕ, 3. ಗುರುತು. 1. to remember, 2. to recollect, 3. identification. ವಾ: ಅವ್ವಪ್ಪನ ನೆನಪು ಯಾಗೊಲು ಬರ್‌ತಿದ್ದದೆ.

ನೆನ್ನೆ /*nɛnnɛ*/ ನಾ. 1. ನಿನ್ನೆ, 3. ಹಿಂದಿನ ದಿನ, 3. ಕಳೆದ ದಿನ. yesterday, a day before. ವಾ: ನೆನ್ನೆ ಮಾವ ಸಿಕ್ಕಿದೊ.

ನೆನ್ನೆಕ್ಕಿ /*nɛnnɛkki*/ ನಾ. 1. ಕುಚ್ಚಲು ಅಕ್ಕಿಯನ್ನು ಹುರಿದು ಪುಡಿಮಾಡಿ ತೆಂಗಿನ ತುರಿ, ಬೆಲ್ಲ ಮಿಶ್ರ ಮಾಡಿ ಕೆಡ್ಡಸ ಹಬ್ಬದಂದು ತಿನ್ನುವುದು ರೂಢಿ, ಹೆಣ್ಣುಮಕ್ಕಳು ಮೈನೆರೆದಾಗಲೂ ನೆನ್ನೆಕ್ಕಿಯನ್ನು ಮಾಡಿ ತಿನ್ನಿಸುತ್ತಾರೆ, 2. ನನ್ನೆರಿ. a dish made of boiled rice flour, grated coconut, and jaggery during the festivals and when a girl attains puberty. ವಾ: ಗೂಡೆಗ ಹೊಲೆ ಕಾಂಬಕನ ನೆನ್ನೆಕ್ಕಿ ಮಾಡಿ ತಿನ್‌ಸುವೆ.

ನೆನ್ಸ್[1] /*nɛnsi*/ ಕ್ರಿ. ನೆನಪು ಮಾಡು. to recall. **ಉಪ್ಪು ಕೊಟ್ಟವನಾ ಮುಪ್ಪಿನವರೆಗೆ ನೆನ್ಸಿಕಾ(ಗಾ).** ವಾ: ಹಳೆದರ, ಕಳ್ದದರ ಯಾಕೆ ನೆನ್ಸ್‌ದು. **ನೆನ್ಪಾತ್** /*nɛnpa:ti*/ ಕ್ರಿವಿ. ನೆನಪು ಮಾಡಿಕೊಳ್ಳು, to remember. ವಾ: ಎಂತೋ ನೆನ್ಪಾತ್ ಹಾಂಗೆ ಬಂದೊ. ಪ: ನೆನ್ಪಾದು – ನೆನಪಾದದ್ದು; ನೆನ್ಪು – ನೆನಪು; ನೆನ್ಪುನ – ನೆನಪುಗಳ; ನೆನ್ಪ್ – ನೆನಪು. **ನೆನ್ಸಿಕ** /*nɛnsika*/ 1. ನೆನೆಸಿಕೊ, 2. ನೆನಪಿಸಿಕೊಳ್ಳು, 1. to remember, 2. to recall. ವಾ: ನೀ ನನ್ನ ನೆನ್ಸಿಕಂಬದೇ ಇಲ್ಲೆ ಅಲ? ಪ: ನೆನ್ಸಿಕಂಡತ್ – ನೆನಪಿಸಿಕೊಂಡನು/ಳು; ನೆನ್ಸಿಕೊಂಡ್ – ನೆನಪಿಸಿಕೊಂಡು; ನೆನ್ಸಿತ್ – ನೆನೆಸಿದನು/ಳು; ನೆನ್ಸಿದ – ನೆನಪಿಸಿಕೊಂಡೆಯ; ನೆನ್ಸಿದಂಗೆ – ನೆನೆಸಿದ ಹಾಗೆ; ನೆನ್ಸಿದಾಂಗೆ – ನೆನೆಸಿದ ಹಾಗೆ/ನೆನೆಸಿಕೊಂಡ ಹಾಗೆ. **ನೆನ್ಸುಕನ** /*nɛnsukana*/ ನೆನಪು ಮಾಡಿಕೊಳ್ಳುವಾಗ. when recalled/recollected. ವಾ: ಕಳ್‌ಕಂಡ ಅವ್ವಪ್ಪನ ನೆನ್ಸುಕನ ಕಣ್ಣೀರ್ ತುಂಬಿ ಬಂದದೆ. ಪ: ನೆನ್ಸುದು – ನೆನೆ ಹಾಕುವುದು, ನೀರಿನಲ್ಲಿ ನೆನೆಸಿಡು; ನೆನ್ಸಿದೊ – ನೆನೆಹಾಕಿದರು

ನೆನ್ಸ್[2] /*nɛnsi*/ ಕ್ರಿ. 1. ನೆನೆಹಾಕು, 2. ನೀರಿನಲ್ಲಿ ನೆನೆಸಿಡು. 1. to soak, 2. to soak in water. ವಾ: ದೋಸೆಗೆ ಅಕ್ಕಿನ ನೆನ್ಸ್. **ನೆನಿ** /*nɛni*/ 1. ಚಂಡಿ, 2. ಒದ್ದೆ, 3. ತೇವವಾಗು. 1. wet, 2. drenched 3. soaked. ವಾ: ಮಳೆ ಬಾಕನ ನೆನಿ, ಮತೆ ಸೀತ ಆಗದಿದ್ದದೆನ? ಪ: ನೆನೆ – ಒದ್ದೆಯಾಗು; ನೆನಿಯಕೆ – ನೆನೆಯಲು. **ನೆನಿಬೊಡಿ** /*nɛnibodi*/ ಮಳೆಯಲ್ಲಿ ಒದ್ದೆಯಾಗಬೇಡಿ. don't get wet in the rain. ವಾ: ಹೇಳ್ದರ ಕೇಳಿ ಮಳೆಗೆ ನೆನಿಬೊಡಿ. **ನೆನ್ಕಂಡ್** /*nɛnkaṇḍi*/ 1. ನೆನೆದುಕೊಂಡು, 2. ಒದ್ದೆಯಾಗಿ. 1. wet, 2. drenched. ವಾ: ಆ ಜಡಿ ಮಳೆಗೆ ನೆನ್ಕಂಡ್ ಬಂದುಟಲ ಎಂತರ ಹೇಳ್ದು.

ನೆಪ್ಪಾದೆ /*nɛppa:dɛ*/ ಕ್ರಿ. ನೆನಪಾಗುತ್ತದೆ. I remember.

ವಾ: ಉಗ್ಗಪ್ಪನ ಬಾರಿ ನೆಪ್ಪಾದೆ. ಪ: ನೆನ್ಪಾದೆಗಡ – ನೆನಪಾಗುತ್ತದೆಯಂತೆ

ನೆಯಾನಿ /*neya:ni*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ನೆಯಿ /*nɛyi*/ ನಾ. ತುಪ್ಪ. ghee, processed butter. ವಾ: ಪೂಜೆಗೆ ಹನೀಸ್ ನೆಯಿ/ತುಪ್ಪ ಬೇಕಿತ್ತ್.

ನೆಯ್ಕೆ /*nɛykɛ*/ ನಾ. 1. ನೌಕೆ, 2. ಬಸವನ ಜಾತಿಯ ಹುಳು. a snail. ವಾ: ನೆಯ್ಕೆ ಮುಟ್ಟಿರೆ ನೋಳಿ ನೋಳಿ, ಎಸ್ಟ್ ತೊಳ್ದರು ಹೋದುಲೆ.

ನೆಯ್ಗೆ[1] /*nɛygɛ*/ ನಾ. ತಟ್ಟೆಯನ್ನು ಕಟ್ಟಿ ಅದರಲ್ಲಿ ದನಗಳಿಗೆ ಹುಲ್ಲು ಹಾಕುವುದು. grazing the cattle using woven bamboo basket/tray/platter. ವಾ: ನೆಯ್ಗೆಲಿ ದನಗಳಿಗೆ ಹುಲ್ಲ್ ಹಾಕ್.

ನೆಯ್ಗೆ[2] /*nɛygɛ*/ ಕ್ರಿ. 1. ನೇಯುವುದು, 2. ಹೆಣೆಯುವುದು. to weave. ವಾ: ನೆಯ್ಗೆ ಕೆಲ್ಸ ಬಂದದೆನ? **ನೆಯ್** /*nɛyɨ*/ 1. ನೇಯುವುದು, 2. ನಿರ್ಮಿಸು, 4. ರಚಿಸು. 1. to weave, 2. to create, 3. to make. ವಾ: ಹಗ್ಗನ ನೆಯಿ. ಪ: ನೆಯಕೆ – ನೇಯಲು

ನೆಯ್ದು /*nɛydu*/ ಕ್ರಿ. ಹೆಣೆಯುವುದು. woven. ವಾ: ಅವ್ವ ಮೊಂದ್ರಿನ ನೆಯ್ದ್ ಮಾಡ್ತಿದ್ದೊ. ಪ: ನೆಯ್ದ್ದ್ – ನೇಯ್ದು

ನೆಯ್‌ಪಿಜಿನ್ /*nɛyɨpijinɨ*/ ನಾ. ಸಣ್ಣಜಾತಿಯ ಚುಚ್ಚುವ ಅನುಭವ ಕೊಡುವ ಇರುವೆಗಳು. small biting ants. ವಾ: ಎಣ್ಣೆ ಚರ್‌ಕ್‌ಗೆ ನೆಯ್ ಪಿಜಿನ್ ಬಂದುಟು.

ನೆಯ್ಬಲೆ /*nɛyɨbalɛ*/ ನಾ. 1. ಕೊಬ್ಬು, 2. ನೆಣ, 3. ಮೇದಸ್ಸು, 4. ಚರ್ಬಿ. fat. ವಾ: ಕುರಿ ಮಾಸಲಿ ಬರಿ ನೆಯ್ಬಲೆ ಇರ್‌ದು.

ನೆಯ್ಯಪ್ಪ /*neyyappa*/ ನಾ. 1. ಅಕ್ಕಿಹಿಟ್ಟು ಬೆಲ್ಲ ತೆಂಗಿನ ಕಾಯಿ ಮುಂತಾದುವುಗಳಿಂದ ತುಪ್ಪದಿಂದ ತಯಾರಿಸುವ ಒಂದು ಬಗೆಯ ತಿಂಡಿ, 2. ಅಪ್ಪದಿಟ್ಟ್. a sweet dishout made of rice flour, jaggery and coconut. ವಾ: ಗಣಪತಿಗೆ ನೆಯ್ಯಪ್ಪ ಅಬಿಸೇಕ ಮಾಡ್‌ವೆ.

ನೆಯ್ಯೇಣಿರ /*neyye:ṇira*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ನೆರಸೇದಿ /*nɛrase:di*/ ನಾ. ನರಸೆಳೆತ. sensation of cramps. ವಾ: ರಾತ್ರೆ ಆದರೆ ಸಾಕ್ ನೆರ ಸೇದಿ ತಡೆಕೆ ಬೊತ್ತ್.

ನೆರಳ್ /*nɛraḷɨ*/ ನಾ. 1. ನೆರಳು, 2. ಅಪಾರಕ ವಸ್ತುವೊಂದು ಬೆಳಕಿನ ಹೊನಲಿಗೆ ಅಡ್ಡ ಬಂದಾಗ ಅತ್ತಬದಿಯಲ್ಲಿ ರೂಪುಗೊಳ್ಳುವ ಬೆಳಕಿಲ್ಲದ ಪ್ರದೇಶ, 3. ಮನುಷ್ಯ, ಮರ, ಗಿಡ, ಕೊಡೆ ಮುಂತಾದವುಗಳ ಛಾಯೆ. 1. shadow, 2. formation of dark shape on the ground when the source of light is at the front of a person or a thing, 3. shadow of a man, tree, plant, umbrella, etc. **ಅಂವನ ನೆರಳ್ಗೆ ಅಂವನೇ ಹೆದರ್ದಾಂಗೆ(ಗಾ).** ವಾ: ಅಕ್ಕಿ ಒಣ್ಗಿಕೆ ಹಾಕಿದಲ್ಲಿ ನೆರಳ್ ಬಾತ್.

ನೆರಳ್‌ಕಟ್ಟೊದ್ /*nɛraḷɨkaṭṭodɨ*/ ಕ್ರಿವಿ. ಶವದ ಮೇಲೆ ಬೆಳಕು ಬಿಳದಂತೆ ಬಟ್ಟೆ ಕಟ್ಟುವುದು. to arrange for shade on the dead body using a white cloth. ವಾ: ಹೆಣಕೆ ನೆರಳ್ ಕಟ್ಟೊದ್.

ನೆರಿ ಆಡ್ಸುದು /*nɛri a:ḍsudu*/ ಕ್ರಿ. 1. ಶೋಕಿಮಾಡು, 2. ವೈಯ್ಯಾರ ಮಾಡು. 1. to become extravagant, 2. to become flirtuous. ವಾ: ಆ ಗೂಡೆ ಬಾರಿ ನೆರಿ ಆಡ್ಸುದು.

ನೆರಿ ನೆರಿಯಾಗುಟು /*nɛri nɛriya:guṭu*/ ಕ್ರಿವಿ. ಮುದ್ದೆ ಮುದ್ದೆಯಾಗಿದೆ. wrinkled. ವಾ: ಸೀರೆ ನೆರಿ ನೆರಿಯಾಗುಟು.

ನೆರಿ[1] /*nɛri*/ ನಾ. 1. ಸೀರೆಯ ನೆರಿಗೆ, 2. ಬಟ್ಟೆ ಮುದ್ದೆಯಾಗು, 3. ಮಡಿಕೆ. 1. folds in the saree, 2. wrinkled clothes, 3. folds. ವಾ: ಮಡ್ಸಿಸಿದ ಅರ್ವೆ ಬಾರಿ ನೆರಿಯಾಗುಟು.

ನೆರಿ[2] /*nɛri*/ ನಾ. 1. ಮುಖದಲ್ಲಿ ಸುಕ್ಕು ಮೂಡುವುದು, 2. ನಿರಿಗೆಗಳು ಮೂಡು, 3. ಪದರವಾಗಿರುವುದು, 4 ಮುದುರು. 1. wrinkles on the face, 2. appearance of folds, wrinkles 3. layered, 4. to shrink. ವಾ: ಮೋರೆಲಿ ನೆರಿ ಕಟ್ಟಿಕೆ ಸುರಾತ್.

ನೆರಿಕುಂಬು[1] /*nɛrikumbu*/ ನಾ. ಬಟ್ಟೆಯ ವೇಲೆ ಬೀಳುವ ಕಪ್ಪು ಕಲೆಗಳು. black spots on the cloth. ವಾ: ಬೆಳಿ ಅರ್ವೆ ಮೆಲೆಲ್ಲ ನೆರಿಕುಂಬು ಬಂದದ್. ಪ: ನೆರಿಕುಂಬ್

ನೆರಿಕುಂಬು[2] /*nɛrikumbu*/ ನಾ. ಹಾಳಾದ ಮರ. a spoiled tree. ವಾ: ನೆರಿಕುಂಬು ಮರ ಯಾವ್‌ದಕೂ ಆಕಿಲೆ.

ನೆರಿಕುಚ್ಚ್ /*nɛrikucci*/ ನಾ. ಬಟ್ಟೆಯ ವೇಲೆ ಬೀಳುವ ಕಪ್ಪು ಕಲೆಗಳು. black spots on the cloth. ವಾ: ಅರ್ವೆ ಸೆರಿ ವಣ್ಗಿದಿದ್ದರೆ ನೆರಿಕುಚ್ಚ್ ಬಂದದೆ.

ನೆರಿಕೊಂಬು /*nɛrikombu*/ ನಾ. ಔಷಧೀಯ ಸಸ್ಯ, ಇದರ ಹೂವನ್ನು ದೀಪಾವಳಿಯಲ್ಲಿ ಬಲೀಂದ್ರನಿಗೆ ಕರ್ಣಾಧರಣವಾಗಿ ಬಳಸುತ್ತಾರೆ. a medicinal plant. Used during Deepavali as an offering to Balindra. ವಾ: ನೆರಿಕೊಂಬು ಒಂದ್ ಮೊದ್ದ್‌ನ ದೈ. ಪ: ನಾಯಿಕರ್‌ಂಬು

ನೆರಿದು /*nɛridu*/ ಕ್ರಿ. 1. ಋತುಮತಿಯಾಗು, 2. ಋತು ಶಾಂತಿ ಲಗ್ನ. 1. to menstruate, 2. a cermony performed at the time of the first menstuation. ವಾ: ಆಚೆಮನೆ ಗೂಡೆ ನೆರಿದು ಸುಮಾರ್ ದಿನಾತ್. ಪ: ನೆರಿಯಕನ – ಋತುಮತಿಯಾಗುವಾಗ; ನೆರಿಯದ – ಋತುಮತಿಯಾಗದ

ನೆರಿಯನ /*neriyana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ನೆರಿಯಾಣ /*neriya:ṇa*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ನೆರೆಕಟ್ಟುವುದು /*nɛrɛkaṭṭuvudu*/ ನಾ. ಹುತ್ತರಿ ಹಬ್ಬದಲ್ಲಿ ಕುಂಬ್ಳ ಎಲೆ, ಕಾಡುಗೇರು ಎಲೆ, ಅಶ್ವತ್ಥ ಎಲೆ, ಹಂಬು ಈ ಎಲೆಗಳನ್ನು ಒಂದರ ಮೇಲೆ ಒಂದು ಇಟ್ಟು ಜೋಡಿಸಿ ಸುರುಳಿ ಸುತ್ತಿ ಅಚ್ಚಿ ನಾರಿನಿಂದ ಬಿಗಿದು ಆ ಕಡೆ ಈ ಕಡೆ ಸ್ವಲ್ಪನಾರನ್ನ ಉದ್ದ ಇಳಿ ಬಿಟ್ಟು ಕಟ್ಟುತ್ತಾರೆ. a custom followed during the harvest festival. The leaves of pumpkin plant, wild cashew tree, peepal tree, along with betel leaf are kept one over the other, and are rolled. The role is tied with a thin natural fibre. ವಾ: ಕದ್‌ರ್ ಕೊಯ್ದ ಮೇಲೆ ನೆರೆ ಕಟ್ಟುದು, ಹುತ್ತೆರಿಲಿ ನೆರೆ ಕಟ್ಟುದು. ಪ: ನೆರೆ ಕಟ್ಟೊದ್

ನೆರೆಕೊಕ್ಕೆ /*nɛrɛkokkɛ*/ ನಾ. ಒಕ್ಕಲು ಹುಲ್ಲು ಕೊಡಹುವ ಕೊಕ್ಕೆ. a hook used in gathering paddy straw/hay. ವಾ: ಒಕ್ಲು ಕೆಲ್‌ಸಕ್ಕೆ ಹುಲ್ಲ್ ಕೊಡ್‌ಕಿಕೆ ನೆರೆಕೊಕ್ಕೆ ಬೇಕಾದೆ.

ನೆರೆಗೆಣ್ಸ್ /*nɛrɛgɛṇsi*/ ನಾ. ಕಾಡಿನಲ್ಲಿ ದೊರಕುವ ಲೋಳೆಯಂತಹ ಗೆಣಸು. a variety of wild sweet potato. ವಾ: ನೆರೆ ಗೆಣ್ಸ್ ಗೈಪು ಬಾರಿ ಲಾಯ್ಕಾದೆ. ಪ: ನರೆ

ನೆರೆ[1] /*nɛrɛ*/ ನಾ. 1. ನಾಟಿ ನೆಟ್ಟುಕೊಂಡು ಹೋಗುವ ಸಾಲು, 2. ನಾಟಿಯ ಸಾಲು. the straight line followed while transplanting the paddy. ವಾ: ನೆರೆ ನೆಟ್ಟಂಗೆ ಇರೊಕು.

ನೆರೆ[2] /*nɛrɛ*/ ನಾ. 1. ಸೇರು, 2. ಅಕ್ಕ ಪಕ್ಕದ ಮನೆ, 3. ಊರು. 1. Join, 2. neighbourhood, 3. neighbouring town. ವಾ: ನೆರೆಕರೆ ಸೆರಿ ಜಂಬರ ಸುದಾರ್‌ಸೊಕು.

ನೆರೆಕರೆ /*nɛrɛkarɛ*/ ನಾ. ಅಕ್ಕಪಕ್ಕ. neighbourhood. ವಾ: ನೆರೆಕರೆತ ಬೇಕಾದೆ.

ನೆರೆಕೂದೊಲು /*nɛrɛku:dɔlu*/ ನಾ. ಬಿಳಿಕೂದಲು. white/grey hair. ವಾ: ನೆರೆಕೂದೊಲುನ ಕೀಳ್‌ಬಡ.

ನೆರೆಕೊಕ್ಕೆ /*nɛrɛkokkɛ*/ ನಾ. 1. ಭತ್ತದ ಹುಲ್ಲು ಗುಡ್ಡೆ ಮಾಡುವ ಸಾಧನ, 2. ಒಕ್ಕಲು ಹುಲ್ಲು ಕೊಡಕುವ ಕೊಕ್ಕೆ. a hook used in bundling hay/straw. ವಾ: ಒಕ್ಲು ಹುಲ್ಲು ಕೊಡ್ಕಿ ಹಾಕಿಕೆ ನೆರೆಕೊಕ್ಕೆ ಬೇಕೆ ಬೇಕ್.

ನೆರೆಮನೆವ್ /*nɛrɛmanɛvi*/ ನಾ. ಅಕ್ಕ ಪಕ್ಕದ ಮನೆಯವರು. neighborhood. ವಾ: ನೆರೆಮನೆವ್ ಎಲ್ಲೊ ಹೋಗೊಳೊ.

ನೆರ್‌ಕೆ ಮನೆ /*nɛrikɛ manɛ*/ ನಾ. ಗುಡಿಸಲು. a hut. ವಾ: ಹಿಂದೆನ ಕಾಲಲಿ ನೆರ್‌ಕೆ ಮನೆಗ ಇರ್‌ತಿತ್.

ನೆರ್ಕೆ[1] /*nɛrkɛ*/ ನಾ. ಗೋಡೆಯ ಬದಲು ಕಟ್ಟುವ ಬಿದಿರಿನ ಚದ್ದಲೆ. erecting a bamboo barrier instead of a wall. ವಾ: ನೆರ್ಕೆ ಕಟ್ಟಿಸಿದ್. ಪ: ಮದೆಪು(ತು)

ನೆರ್‌ಕೆ[2] /*nɛrikɛ*/ ನಾ. 1. ತಡಿಕೆ. 2. ತೆರೆ. 3. ನಿವಾಸ. 4. ಊರೆ. 1. partition 2. screen. 3. residence 4. a structure of wood. ವಾ: ನೆರ್‌ಕೆ ಕಟ್ಟ್‌ತೊಳೊ.

ನೆರ್‌ಗುಳಿ /*nɛrɨ guḷi*/ ನಾ. ಭತ್ತ ಕುಟ್ಟುವ ಕಲ್ಲು. a mortar to pound/mill the rice. ವಾ: ನೆರ್‌ಗುಳಿಗೆ ಹಾಕಿ ಬತ್ತ ಕುಟ್ಟುತಿದ್ದೊ.

ನೆರ್ದ ಮೊದುವೆ /*nɛrda mɔduvɛ*/ ನಾ. 1. ಋತುಮತಿ ಲಗ್ನ, 2. ಋತು ಶಾಂತಿ, 3. ಋತುಮತಿಯಾದಾಗ ಮಾಡುವ ಕಾರ್ಯಕ್ರಮ, 4. ಋತು ಮತಿ ಆದಾಗ ಮಾಡುವ ಮೊದಲಶಾಸ್ತ್ರ. a ceremony conducted when a girl attains puberty/ a cermony performed at the time of the first menstuation. ವಾ: ನೆರ್ದ ಮೊದುವೆಗೆ ಕರ್‌ದೊಳೊ. ಪ: ನೆರ್ದ್‌ಟು – ಋತುಮತಿಯಾಗಿದ್ದಾಳೆ; ನೆರ್ಯೊದು – ಋತುಮತಿಯಾಗು;

ನೆರ್ದಮೊದುವೆ /*nɛrdamɔdvɛ*/ ನಾ. ಗಂಗೆ ಪೂಜೆ. a ritual of worshipping water.

ನೆರ್ದುಟು /*nɛrduṭu*/ ಕ್ರಿ. ಹುಡುಗಿ ಋತುಮತಿಯಾಗಿದ್ದಾಳೆ. girl has attained puberty.

ನೆರ್ದ್ /*nɛrdɨ*/ ಕ್ರಿ. 1. ಸೇರಿದ, 2. ನೆರೆದ. 1. gathered, 2. assembled. ವಾ: ಬಾರಿ ಜೆನ ನೆರ್‌ದೊಳೊ ಕಂಡದೆ.

ನೆರ್ಪಚೆ /*nɛrpacɛ*/ ನಾ. ಕಂಬಳಿಹುಳು. a caterpillar. ವಾ: ನೆರ್ಪಚೆ ಮುಟ್ಟಿರೆ ಕೂದೊಲುನ ಉಜ್ಜೊಕು.

ನೆಲ /*nɛla*/ ನಾ. 1. ನೆಲ, 2. ಭೂಮಿಯ ಮೇಲ್ಮೈ, 3. ಭೂಪ್ರದೇಶ, 4. ಭೂಮಿ. 1. land, 2. the surface, 3. landscape, 4. the earth. **ಕೊಣಿಯಕೆ ಬಾರದವಂಗೆ ನೆಲ ಡೊಂಕುಗಡ(ಗಾ).** ವಾ: ನೆಲ ನೋಡಿಕಂಡ್ ನಡೆಕು.

ನೆಲ ಅಂತಸ್ತ್ /*nela antastɨ*/ ನಾ. ನೆಲಮಟ್ಟದ ಮಾಳಿಗೆ. an attic. ವಾ: ಆ ಬಂಗ್ಲೆಗೆ ನೆಲಾಂತಸ್ತ್ ಉಟ್ಟುಗಡ.

ನೆಲ ಅಳಂಬು /*nɛla aḷambu*/ ನಾ. ಅಣಬೆಯ ಹೆಸರು. a type of mushroom. ವಾ: ನೆಲ ಅಳಂಬು ಎದ್ದದೆ.

ನೆಲ ಉಜ್ಜುದ್ /*nɛla ujjudɨ*/ ಕ್ರಿ. ನೆಲ ಒರೆಸುವುದು. mopping the floor. ವಾ: ಹೊತಾರೆನೆ ಪೂಜೆಗೆ ಮುಂದೆನೆ ನೆಲ ಉಜ್ಜುದ್.

ನೆಲ ಒಳಿ /*nɛla oḷi*/ ನಾ. ನೆಲದಲ್ಲಿ ಮರೆ ಮಾಡಿ ಕೂರುವುದು. hiding in the ground. ವಾ: ಗದ್ದೆಲಿ ರಾತ್ರೆ ನೆಲ ಒಳಿ ಮಾಡಿ ಕಾಡ್ ಪ್ರಾಣಿಗ ಬಂದರೆತ ಪಾರ ಕೂರ್‌ದು.

ನೆಲಸೀಟುದು /*nelasi:ṭudu*/ ಕ್ರಿ. 1. ನೆಲ ಒರೆಸುವುದು, 2. ನೆಲ ತೊಳೆಯುವುದು. 1. mopping the floor, 2. washing the floor. ವಾ: ಯಾಗೊಳು ನೆಲ ಸೀಟುದು.

ನೆಲಕಡ್ಲೆ /*nelakaḍlɛ*/ ನಾ. 1. ನೆಲಗಡಲೆ, 2. ಶೇಂಗಾ, 3. ಕಡಲೆಕಾಯಿ. ground nut. ವಾ: ನೆಲಕಡ್ಲೆ ಹುಟ್ಟಿ ಬಂದುಟು.

ನೆಲಕಿರುಬ /*nelakiruba*/ ನಾ. ವಿಷದ ಜೇಡ. a venomous spider. ವಾ: ನೆಲಕಿರುಬ ಕಚ್ಚಿರೆ ವಿಸ.

ನೆಲಕೆ ಊರಿಕೆ /*nelakɛ u:rikɛ*/ ನಾ. ನೆಲಕ್ಕೆ ಚುಚ್ಚಲು. to pierce something into the ground. ವಾ: ನೆಲಕೆ ಊರಿಕೆ ತೀನ ತಂದದ್.

ನೆಲಕೆ ಕುತ್ತಿ /*nelakɛ kutti*/ ನಾ. 1. ನೆಲದಲ್ಲಿ ಚುಚ್ಚು, 2. ನೆಲದಲ್ಲಿ ಊರು. to pierce something into the ground. ವಾ: ಕೋಲ್‌ನ ನೆಲಕೆ ಕುತ್ತಿಸಿ.

ನೆಲಕೊಕ್ಕೆ /*nelakokkɛ*/ ನಾ. ಹುಲ್ಲು ಗುಡ್ಡೆ ಹಾಕಲು ಬಳಸುವ ಕೋಲು. a stick that is used to gather hay/straw. ವಾ: ನೆಲಕೊಕ್ಕೆ ಇದ್ದದಕೆ ಕೆಲ್‌ಸ ಹಗ್‌ರ ಆತ್.

ನೆಲಗುಬ್ಬಿ /*nɛlagubbi*/ ನಾ. ಒಂದು ಜಾತಿಯ ಗುಬ್ಬಚ್ಚಿ ಹಕ್ಕಿ. a species of sparrow. ವಾ: ನೆಲ ಗುಬ್ಬಿ ಅಂಗ್‌ಳಲಿ ಕುದ್ದುಟು.

ನೆಲಗುರಿ /*nelaguri*/ ನಾ. 1. ಒಳ್ಳ್, 2. ಭತ್ತಕುಟ್ಟುವ ಕಲ್ಲು. 1. a grinding stone, 2. a mortar. ವಾ: ನೆಲಗುರಿಲಿ ಬತ್ತನ ಹಾಕಿ ಕುಟ್ಟುದು.

ಪಾವುಲಿ[1] /*pa:vuli*/ ನಾ. 1. ನೀರಿನಲ್ಲಿರುವ ಜಿಗಣೆ ಜಾತಿಯ ಜೀವಿ, 2. ರಕ್ತ ಹೀರುವ ಜೀವಿ, 3. ದನ ಕರು,

ಪ್ರಾಣಿಗಳ ಮೂಗಿನ ಮೂಲಕ ಒಳಗೆ ಹೊಕ್ಕಿ ಜೀವಿಸುವ ಜಂತು. a worm that resembles a leech. ವಾ: ಪಾವುಲಿ ಪ್ರಾಣಿಗಳ ಮೂಂಕಿಗೆ ಹತ್ತಿರೆ ಕತ್ತಲೆಲಿ ಹೊರಗೆ ಬಾಕನ ಕೈಗೆ ಬೂದಿ ಉಜ್ಜಿಕಂಡ್ ಅದರ ಎಳ್ದ್ ತೆಗೆದು.

ಪಾವುಲಿ^{2} /*pa:vuli*/ ನಾ. ಪಾವಲಿ. a coin – quarter of a rupee. ವಾ: ಈಗ ಪಾವುಲಿ ಬಳಕೆಲಿ ಇಲ್ಲೆ. ಪ: ಪಾವ್ಲಿ – ನಾಣ್ಯ

ಪಾವ್ /*pa:vi*/ ನಾ. 1. ಕಾಡುಪ್ರಾಣಿ, ದನಗಳು ಕಾಡಿನ ತೊರೆಗಳಲ್ಲಿ ನೀರು ಕುಡಿಯುವಾಗ ಮೂಗಿನ ಮುಖಾಂತರ ದೇಹ ಪ್ರವೇಶಿಸುವ ಒಂದು ಜಾತಿಯ ಜಂತು, 2. ಒಂದು ವಿಧದ ಜಿಗಣೆ, 3. ಇಂಬುಳ. 1. a worm that resembles a leech, 2. annelids. ವಾ: ಪಾವ್ ದನಗಳ ಮೂಕೊಳೆಗೆ ಹತ್ತುದೆ ಗೊತ್ತಾಲೆ.

ಪಾಷಾಣಮೂರ್ತಿ /*pa:ṣa:ṇamu:rti* / ನಾ. 1. ಆದಿಶಕ್ತಿ, 2. ದೇವಿಯ ಅಂಶವಿರುವ ದೈವ ಎಂಬ ನಂಬುಗೆಯಿಂದ ಆರಾಧನೆಗೆ ಒಳಪಡುವ ದೈವ. 1. Pashana Murthy, the creator and the destroyer of the universe 2. Pashana Murthy, a daiva/bhuta/spirit with elements of goddess in him. ವಾ: ವರ್ಸಕೊಮ್ಮೆ ಪಾಷಾಣಮೂರ್ತಿಗೆ ಕೋಳಿ ಎಡೆ ಬಡ್ಸುದು.

ಪಾಸಡಿ /*pa:saḍi*/ ನಾ. ಪಾಸಾಡಿ. a companion. ವಾ: ನಿಂದ್ ಪಾಸಡಿ ಬರ್‌ತುಟ್ಟು ನೋಡ್ನೆ ಅಲ್ಲಿ.

ಪಾಸಣ /*pa:saṇa*/ ನಾ. 1. ಪಾಷಾಣ, 2. ಕಲ್ಲು, 3. ವಿಷ. 1. poison, 2. stone, 3. venom. ವಾ: ಪಾಸಣ ಇಸಿರೆ ಹೆಗ್ಣ ಎಲಿಗ ಸತ್ತವೆ.

ಪಾಸಾ /*pa:sa:*/ ನಾ. 1. ಉತ್ತೀರ್ಣ, 2. ಪಾಸು, 3. ತೇರ್ಗಡೆ. 1. to pass, 2. to achieve the required grades in an exam, 3. to pass an exam. ವಾ: ಪರೀಕ್ಸೆಲಿ ನೀ ಪಾಸಾ.

ಪಾಸಾಡಿ /*pa:sa:ḍi*/ ಕ್ರಿ. 1. ಜೊತೆ ಇದ್ದವಳು /ನು, 2. ಜೊತೆಗಾರ. a companion. ವಾ: ನಿನ್ನ ಪಾಸಾಡಿ ಎಲ್ಲಿ ಇಂದ್ ಕಾಂಬದುಲೆಲ.

ಪಾಸಾಣ /*pa:sa:ṇa*/ ನಾ. 1. ಪಾಷಾಣ, 2. ಕಲ್ಲು, 3. ವಿಷ. 1. poison, 2. stone, 3. venom. ವಾ: ಎಲಿಗೆ ಪಾಸಾಣ ಇಸೊಕು, ಇಲ್ಲರೆ ಬತ್ತನ ಮನಾರ ಮಾಡ್ದೆ.

ಪಾಸಿ /*pa:si*/ ನಾ. ಮೊಟ್ಟೆಯೊಳಗಿನ ಹಳದಿ ಭಾಗ. egg yoke. ವಾ: ಪಾಸಿನ ಹೆಚ್ಚಿ ತಿಂಬಕಾದ್. **ಪಾಸಿಮೊಟ್ಟೆ** /*pa:simoṭṭɛ*/ ನಾ. ಕೆಟ್ಟು ಹೋದ ಮೊಟ್ಟೆ. spoiled egg. ವಾ: ಪಾಸಿ ಮೊಟ್ಟೆ ನ ನೀರಿಗೆ ಹಾಕಿರೆ ತೇಲ್‌ದೆ.

ಪಾಸಿಗೆ ಕೊಡ್ದು /*pa:sigɛ koḍdu*/ ನಾ. ಎಪ. 1. ಗಲ್ಲಿಗೇರಿಸು, 2. ನೇಣಿಗೇರಿಸು, 3. ಮರಣದಂಡನೆ, 4. ಶಿಕ್ಷೆ. to hang someone as a punishment. ವಾ: ಅಂವನ ನಾಳೆ ಪಾಸಿಗೆ ಕೊಡ್ದು.

ಪಾಸ್ /*pa:si*/ ನಾ. 1. ತೆಳುವಿನ ಪೊರೆ, 2. ಪಾಸಿ. a thin layer. ಪ: ಪಾಸಿ(ತು)

ಪಾಳಿ^{1} /*pa:ḷi*/ ಕ್ರಿ. ಸರದಿ. a queue. ವಾ: ಪಾಳಿ ಲೆಕ್ಕಲಿ ಕೆಲ್ಸಕೆ ಹೋಕು.

ಪಾಳಿ^{2} /*pa:ḷi*/ ನಾ. 1. ಬದು, 2. ಬೆಳೆಯಿರುವ ಭೂಮಿ. 1. heap like mud structure to separate one farm from the other, 2. a farm land which has a standing crop. ವಾ: ಪಾಳಿ ಕಡೆ ಹೋಗಿ ಬಂದೊ. ಪ: ಪಾಳಿ ತೆಗ್ದೊದು

ಪಾಳಿತೆಗ್ಸುದು /*pa:ḷitegsudu*/ ನಾವಿ. ತಂದೆ ತಾಯಿ ಸತ್ತಾಗ ಗಂಡು ಮಕ್ಕಳು ತಲೆಕೂದಲು ಬೋಳಿಸುವ ಪದ್ಧತಿ. a custom of tonsuring by the sons, on the death of their parents.

ಪಾಳೆ /*pa:ḷɛ*/ ನಾ. 1. ಬೆಳ್ಳಕ್ಕಿ, 2. ಕೊಕ್ಕರೆ, 3. ಒಂದು ಜಾತಿಯ ನೀರು ಹಕ್ಕಿ, 4. ಗ್ರೂಯಿ ಫಾರ್ಮಿಸ್ ಗಣದ ಗ್ರೂಯಿಡೆ ಕುಟುಂಬಕ್ಕೆ ಸೇರಿದ ಹಕ್ಕಿ, ದೊಡ್ಡ ಗಾತ್ರದ ಈ ಹಕ್ಕಿಗಳಿಗೆ ಉದ್ದವಾದ ಕಾಲುಗಳು ಹಾಗೂ ಕತ್ತು, ಚಿಕ್ಕದಾದ ಮತ್ತು ಅಗಲವಾದ ತೋಕೆ, ವಿಸ್ತಾರವಾದ ರೆಕ್ಕೆಗಳು ಇರುತ್ತವೆ. a crane, a long-legged, and long-necked bird, belonging the family of Gruiformes. ವಾ: ಪಾಳೆಗ ಎಸ್ಟೊಂದ್ ಏರಿ ಕರೆಲಿ ಕುದ್ದೊಳೊ.

ಪಾಳ್ಯ /*pa:ḷya*/ ನಾ. ಕೊಡಗು ಜಿಲ್ಲೆಯ ಪೆರಾಜೆ ಗ್ರಾಮದ ಜಾಗ. a locality in peraje village in of Kodagu District.

ಪಿಂಗರ್‌ಬಾಳೆ /*piŋgarɨ ba:ḷɛ*/ ನಾ. ಫಿಂಗರ್ ಬಾಳೆ. Lady Finger banana, fig bananas, date bananas. ವಾ: ಪಿಂಗರ್ ಬಾಳೆತ ನೆಟ್ಟೊ ನೋಡೊಕು ಹೆಂಗೆ ಬಂದದೆತ?

ಪಿಂಗಾಣಿಬಟ್ಲ್ /*piŋga:ṇi baṭli*/ ನಾ. 1. ಪಿಂಗಾಣಿ ಬಟ್ಟಲು, 2. ಬಿಳಿಯ ಜೇಡಿ ಮಣ್ಣಿನಿಂದ ಮಾಡಿದ ಪಾತ್ರೆ. 1. a ceramic bowl, 2. a porcelain bowl. ವಾ: ಪಿಂಗಾಣಿ ಬಟ್ಲ್ ಅದ್ ಗಟ್ಟಿ ಹಿಡ್ಕ, ಬಿದ್ದರೆ ಒಡ್ದೋದೆ.

ಪಿಂಗಾರ /*piŋga:ra*/ ನಾ. ಹಿಂಗಾರ. flower of areca nut. ವಾ: ಮೊದ್ವೆಲಿ ಪಿಂಗಾರ ಬೇಕೆ ಬೇಕ್.

ಪಿಙ್ಙಾಣಿ /*piŋa:ṇi*/ ನಾ. 1. ಪಿಂಗಾಣಿಯ ಚಿಕ್ಕ ಬಟ್ಟಲು, 2. ಬಿಳಿ ಜೇಡಿ ಮಣ್ಣಿನ ಪಾತ್ರೆ, 3. ಪಿಂಗಾಣಿ. 1. a ceramic bowl, 2. a porcelain bowl, 3. porcelain. ವಾ: ಪಿಙಾಣಿಲಿ ಉಪ್ಪನಕಾಯಿ ಹಾಕಿಸ್.

ಪಿಂಚು /*piŋcu*/ ನಾ. ಹಿಚುಕು. to squeeze. ವಾ: ಕೂಸುನ ಕೆನ್ನೆನ ಪಿಂಚು ಬಡ.

ಪಿಂಜಾಣಿ /*piŋja:ṇi*/ ನಾ. ಪದಾರ್ಥ ಹಾಕಲು ಬಟ್ಟಲಿನ ಜತೆ ಬಳಸುವ ಚಿಕ್ಕ ತಟ್ಟೆ. a small plate to keep cooked vegetable. ವಾ: ಪಿಂಜಾಣಿ ತಕ ಬಾ.

ಪಿಂಜಾರಿ /*piŋja:ri*/ ನಾವಿ. 1. ಆಸೆಬುರುಕ, 2. ಜಿಪುಣ. 1. a greedy person, 2. stingy. ವಾ: ಅಂವ ಬಾರಿ ಪಿಂಜಾರಿ.

ಪಿಂಡ /*piṇḍa*/ ನಾ. 1. ಪಿಂಡ, 2. ಗರ್ಭದಲ್ಲಿರುವ ಭ್ರೂಣ, 3. ಶ್ರಾದ್ಧಗಳಲ್ಲಿ ಪಿತೃಗಳಿಗೆ ಇರಿಸುವ ಅನ್ನದ ಉಂಡೆ. 1. an offering made to the dead ancestors, 2. a foetus in the womb, 3. a ball of rice kept as an offering to the dead ancestors. ವಾ: ಬಾಗಮಂಡ್‌ಲಲಿ ಪಿಂಡ ಹಾಕುವೆ. **ಪಿಂಡಬುಡ್ಡು** /*piṇḍa buḍḍu*/ ಸತ್ತವರಿಗೆ ಮೋಕ್ಷ ಸಿಗಲೆಂದು 48 ದಿನದಲ್ಲಿ ಪಿಂಡ ಹಾಕುವುದು. a ceremony performed in the honour of a dead person. ವಾ: ವರ್‌ಸಕೊಮ್ಮೆ ಸತ್ತವ್‌ಕೆ ಪಿಂಡಬುಡ್ಡು. **ಪಿಂಡಹಾಕುದು** /*piṇḍaha:kudu*/ 1. ಶ್ರಾದ್ಧ ಮಾಡುವುದು, 2. ಸತ್ತವರಿಗೆ ಮೋಕ್ಷ ಸಿಗಲೆಂದು 48 ದಿನದಲ್ಲಿ ಪಿಂಡ ಹಾಕುವುದು. 1. the rites performed in the honour the dead person, 2. performing the ceremony in the honour of the dead on the 48th day after the death by immersing a rice ball in river Kaveri. ವಾ: ಸತ್ತ್ ನಲ್ವತ್ತೆಂಟ್ ದಿನ ಕಳ್ದ ಮೇಲೆ ಕಾವೇರಿಗೆ ಹೋಗಿ ಪಿಂಡ ಹಾಕುದು.

ಪಿಂಡಿ[1] /*piṇḍi*/ ನಾ. 1. ತೆಪ್ಪ, 2. ಬಿದಿರನ್ನು ಹೆಣೆದು ಮಾಡುವ ತೆಪ್ಪ. a raft made of bamboo poles. ವಾ: ಪಿಂಡಿ ಬಳ್‌ಸಿ ಹೊಳೆ ದಾಟಕ್.

ಪಿಂಡಿ[2] /*piṇḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಪಿಂಡಿಕಾಯಿ /*piṇḍika:yi*/ ನಾ. ಹಿಂದೆ ಕ್ಯಾಂಡಲ್ ಮಾಡಿ ಇದರಿಂದ ಬೆಳಕು ಪಡೆಯುತ್ತಿದ್ದರು. used in making candles. ವಾ: ಪಿಂಡಿಕಾಯಿಲಿ ಕ್ಯಾಂಡ್ಲ್ ಮಾಡಕಡ.

ಪಿಂಡಿಬನ /*piṇḍibana*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಆಲೆಟ್ಟಿ ಗ್ರಾಮದ ಜಾಗ. a locality in Aletti village in Sullia Taluk of Dakshina Kannada District.

ಪಿಂಡಿಬಿತ್ತ್ /*piṇḍibitti*/ ನಾ. ನೀರ ಗದ್ದೆಯಲ್ಲಿ ನೀರು ಆರಿಸಿ ಕೈಯಲ್ಲಿ ಸಾಲಾಗಿ ಗೊಬ್ಬರ ಬೆರೆಸಿದ ಹಿಡಿಬೀಜ ಹಾಕಿ ಮಾಡುವ ಭತ್ತದ ಬೇಸಾಯದ ಒಂದು ಕ್ರಮ. a practice of paddy cultivation by sowing the seeds in rows in a marshy field.

ಪಿಂಡಿಮನೆ /*piṇḍimanɛ*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅರಂತೋಡು ಗ್ರಾಮದ ಜಾಗ. 1. family, 2. lineage, 3. a locality in Arantodu village in Sullia Taluk of Dakshina Kannada District.

ಪಿಕಿರಿ /*pikiri*/ ನಾ. 1. ಕಿರಿಕಿರಿ, 2. ಕಿರುಕುಳ,3. ಕಾಟ, 4. ಅಸಮಾಧಾನ. 1. irritation, 2. torture, 3. to trouble, 4. dissatisfaction. ವಾ: ಉಸಾರಿಲ್ಲದಿರ್‌ಕನ ಬೊಬ್ಬೆ ಹಾಕಿರೆ ಪಿಕಿರಿ ಆದೆ.

ಪಿಕಿರಿ ಆದೆ /*pikiri a:dɛ*/ ನಾ. ಕಿರಿಕಿರಿ ಆಗು. irritation. ವಾ: ಕತ್ತಲಾಕನ ಮನ್ಸಿಗೆ ಪಿಕಿರಿ ಆದೆ.

ಪಿಕ್ಕಾಸ್ /*pikka:sɨ*/ ನಾ. 1. ಪಿಕಾಸಿ, 2. ನೆಲವನ್ನು ಅಗೆಯಲು ಬಳಸುವ T ಆಕಾರದ ಉಪಕರಣ, 3. ಪಿಕಾಸು. 1. a pick axe, 2. a 'T' shaped tool, used in breaking the hard surface of the ground, 3. a pickaxe. ವಾ: ಪಿಕಾಸಿಲಿ ಮಣ್ಣ್ ಅಗ್ಗೆಕೆ ಒಳ್ಳೆದ್. ಪ: ಪಿಕಾಸಿ, ಪಿಕ್ಕಸ್, ಪಿಕ್ಕಾಸು. a

ಪಿಕ್ಕೆ /*pikkɛ*/ ನಾ. 1. ಕುರಿ, ಆಡು, ಜಿಂಕೆ, ಇಲಿ, ಮೊದಲಾದವುಗಳ ಮಲ, 2. ಪಿಚಿಕೆ, 3. ಕೆಲವು

ಪ್ರಾಣಿಗಳ ಕಾಳಿನ ರೂಪದ ಮಲ. excrement of sheep, goat, deer, rat and other animals. ವಾ: ದಾರಿಲೆಲ್ಲ ಪಿಕ್ಕೆ ಇದ್ದದೆ ನೋಡಿಕಂಡ್ ಹೋಕು.

ಪಿಕ್‌ಲಾಟ /*pikɨla:ṭa*/ ಕ್ರಿವಿ. ತುಂಟಾಟ. mischief. ವಾ: ಪಿಕ್‌ಲಾಟ ಮಾಡ್ಬಡ.

ಪಿಕ್ಲಾಟಿಕೆ /*pikla:ṭikɛ*/ ನಾ. 1. ಪೀಕಲಾಟ, 2. ಪೇಚು, 3. ತೊಂದರೆ, 4. ಬಜ್ಜ. 1. helplessness, 2. vulnerability, 3. a problem, 4. infirmity. ವಾ: ಒಳ್ಳ ಪಿಕ್ಲಾಟಿಕೆ ಆತಲ.

ಪಿಕ್ಸ್ /*piksɨ*/ ಕ್ರಿ. ಎಪ. 1. ಹಿಸುಕು, 2. ಒತ್ತಿ ಒತ್ತಿ ಹದಗೊಳಿಸು, 3. ಹಿಚುಕ, 4. ಹಿಚುಕಿ ಹಿಚುಕಿ ಪುಡಿ ಮಾಡು, ಉದಾ: ಸಣ್ಣಮಕ್ಕಳಿಗೆ ಪಿಣ್ಣಿ ಪಿಣ್ಣಿ ಕೊಡ್ಡು. to squeeze. ವಾ: ಸಣ್ಣಮಕ್ಕಳಿಗೆ ಅನ್ನನ ಪಿಣ್ಣಿಪಿಣ್ಣಿ ಕೊಡ್ಡು.

ಪಿಚ್ಚರ್ /*piccarɨ*/ ನಾ. ಎಪ. 1. ಸಿನಿಮಾ, 2. ಚಲನಚಿತ್ರ. 1. cinema, 2. movie. ವಾ: ರಾಜ್ ಕುಮಾರ್‌ದ್ ಪಿಚ್ಚರ್ ನೋಡಿಕೆ ಪೋಯ.

ಪಿಚ್ಚೆ[1] /*piccɛ*/ ಕ್ರಿವಿ. ಧೈರ್ಯ. courage. ವಾ: ಹೈದ ಬಾರಿ ಪಿಚ್ಚೆಲಿ ಮಾತಾಡ್ದೆ.

ಪಿಚ್ಚೆ[2] /*piccɛ*/ ನಾ. ಪ್ರಾಣಿಗಳ ತರಡು ಬೀಜ. testicle of animals. ವಾ: ಹೋರಿನ ಪಿಚ್ಚೆ ನೀರ್ ಮಾಡಿಯೊಳೊಗಡ.

ಪಿಚ್ಚೆಗುದ್ದ್‌ದ್ /*piccɛgudddɨ*/ ನಾ. ಜಾನುವಾರುಗಳ ಬೀಜ ಹಿಡ ಮಾಡುವುದು. to castrate an animals.

ಪಿಚ್ಚೆತೆಗಿದು /*piccɛtɛgidu*/ ಕ್ರಿ. ಗಾಡಿ ಎತ್ತುಗಳ ಲೈಂಗಿಕ ಹುಮ್ಮಸ್ಸು ಕಡಿಮೆ ಮಾಡಲು ಹಾಗೂ ಗಂಡು ಹಂದಿಗಳ ಬೆಳವಣಿಗೆ ಹೆಚ್ಚಿಸಲು ಅವುಗಳ ತರಡು ಬೀಜವನ್ನು ನಿಷ್ಕ್ರಿಯ ಗೊಳಿಸುತ್ತಾರೆ. castration of animals, inactivation of the testicles of a male animal. ವಾ: ಹಂದಿ ಲಾಯ್ಕಲಿ ಬೆಳೆಯಕೆ ಅದರ ಪಿಚ್ಚೆ ತೆಗಿದು.

ಪಿಜಾವು /*pija:vu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮುರುಳ್ಯ ಗ್ರಾಮದ ಜಾಗ. a locality in Murulya village in Sullia Taluk of Dakshina Kannada District.

ಪಿಜಿಂಟುದು /*pijiṇṭudu*/ ಕ್ರಿ. 1. ಸುರುಳಿ ಸುರುಳಿಯಾಗಿ ಹೆಣೆಯುವುದು, 2. ಕಚ್ಚುವುದು. 1. to string in curls, 2. to bite. ವಾ: ಪಿಜಿನ್ ಪಿಜಿಂಟುದು.

ಪಿಜಿನ್ /*pijanɨ*/ ನಾ. ಇರುವೆ. an ant. ವಾ: ಪಿಜನ್‌ನ ಕೊಲ್‌ಬಡ. ಪ: ಪಿಜ್ನ್

ಪಿಜೆಕ್ಕಳ /*pijɛkkaḷa*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಪಿಜ್ಜ /*pijja*/ ನಾ. ಮುತ್ತಜ್ಜ. great grandfather. ವಾ: ಪಿಜ್ಜ ಇನ್ನು ವಳೊ, ಲಾಯ್ಕಲಿ ಕಣ್ಣ್ ಕಂಡದೆ.

ಪಿಟಾಕಿ /*piṭa:ki*/ ನಾ. 1. ಪಟಾಕಿ, 2. ಹಬ್ಬ ಉತ್ಸವಗಳಲ್ಲಿ ಹಾರಿಸುವ ಸಣ್ಣ ಸಿಡಿಮದ್ದು. 1. crackers, 2. fire crackers burst during festivals. ವಾ: ಪಿಟಾಕಿದ್ ಕಿಡಿ ಹಾರಿ ಸೀರೆ ತೂತ ಆತ್. ಪ: ಪಟಾಕಿ

ಪಿಟಾರ /*piṭa:ra*/ ನಾ. ವಸ್ತುಗಳನ್ನು ಸಂಗ್ರಹ ಮಾಡುವ ಮರದ ಪೆಟ್ಟಿಗೆ. a wooden box or a container. ವಾ: ಪಂಡ್ ಕಾಲದ ಪಟಗಳೆಲ್ಲ ಪಿಟಾರಲಿ ಉಟ್ಟು.

ಪಿಟ್ಟರ್ /*piṭṭarɨ*/ ನಾ. ಎಪ. ಯಂತ್ರದ ಕೆಲಸಗಾರ. a mechanic. ವಾ: ಪಿಟ್ಟರ್ ಕೆಲ್ಸ ಮಾಡ್ತೊಳ.

ಪಿಟ್ಟಾಸಿ /*piṭṭa:si*/ ನಾ. 1. ಆಸೆಬುರುಕ, 2. ಜಿಪುಣ ಪ್ರತಿ ತುಂಡಿಗೂ ಆಸೆಪಡುವವ. 1. greedy person, 2. stingy person. ವಾ: ಅಂವ ಪಿಟ್ಟಾಸಿ ಮೊನ್‌ಸ.

ಪಿಟ್ಟೆ[1] /*piṭṭɛ*/ ನಾ. ಕುರಿ, ಆಡು, ಇಲಿ ಮೊದಲಾದುವುಗಳ ಹಿಕ್ಕೆ. excrement of sheep, goats, rats, etc. ವಾ: ರಸ್ತೆ ಉದ್ದೋಕೆ ಕುರಿದ್ ಪಿಟ್ಟೆಗ ಕಂಡದೆ.

ಪಿಟ್ಟೆ[2] /*piṭṭɛ*/ ನಾ. 1. ಚೂರು, 2. ತುಂಡು, 3. ಚಿಕ್ಕ ಗಾತ್ರದ. 1. a piece, 2. a fragment, 2. small in size. ವಾ: ಒಡ್ಡ ಕುಪ್ಪಿದ್ ಪಿಟ್ಟೆ ಕಾಲಿಗೆ ಹೆಟ್ಟಿದ್.

ಪಿಡ್ಚ /*piḍca*/ ಕ್ರಿ. 1. ಹೆದರಿ ಓಡಿಹೋಗು, 2. ಹೇಳದೆ ಓಡಿಹೋಗು. 1. to run away with fear, 2. to run away without informing anyone. ವಾ: ಬೈದದಕೆ ಅಂವ ಪಿಡ್ಚ ಆತ್.

ಪಿಣ್ಚ್ /*piṇci*/ ಕ್ರಿ. 1. ಕಿವುಚು, 2. ಹಿಚುಕು. to squeeze. ವಾ: ಅನ್ನನ ಪಿಣ್ಚ್.

ಪಿತೂರಿ /*pitu:ri*/ ನಾ. 1. ಪಿತೂರಿ, 2. ಒಳಸಂಚು, 3. ಕುತಂತ್ರ. 1. a conspiracy, 2. machination, 3.

intrigue. ವಾ: ಏನೋ ವಳೆಗೊಳೆಗೆ ಪಿತೂರಿ ನಡ್‌ಸಿವೆ.

ಪಿತ್ತ[1] /*pitta*/ ನಾ. 1. ತ್ರಿದೋಷಗಳಲ್ಲಿ ಒಂದು, 2. ಶರೀರದ ಮೂರು ಧಾತುಗಳಲ್ಲಿ ಒಂದು, ಆ ಧಾತುವಿನಿಂದ ಉಂಟಾಗುವ ವಿಕಾರ. 1. one of the three bodily humors, 2. one of the three fundamental energies an imbalance of bodily humors. ವಾ: ಪಿತ್ತ ನೆತ್ತಿಗೇರಿಟು ಕಂಡದೆ.

ಪಿತ್ತ[2] /*pitta*/ ನಾ. 1. ಪಿತ್ತಕಾಯಿಲೆ, 2. ಕಾಮಾಲೆ ರೋಗ. jaundice, a disease. ವಾ: ಪಿತ್ತ ಕಾಯ್ಲ ಇದ್ದರೆ ಬೇಗ ಸಿಟ್ಟ್ ಬಾದು. **ಪಿತ್ತ ಏರ್‌ದು** /*pitta eridu*/ 1. ಪಿತ್ತ ನೆತ್ತಿಗೇರುವುದು, 2. ಪಿತ್ತ ಅತಿರೇಕವಾಗುವುದು. to suffer from the imbalance of bile. ವಾ: ನಿದ್ದೆಗೆಟ್ಟರೆ ಪಿತ್ತ ಏರ್‌ದು. **ಪಿತ್ತಕಕ್ಕುದು** /*pittakakkudu*/ ಪಿತ್ತ ಜಾಸ್ತಿ ಆಗಿ ವಾಂತಿ ಮಾಡುವಾಗ ಹಳದಿಯಾಗಿರುತ್ತದೆ. bile reflux, usually yellow. ವಾ: ಸರ್ಗಲಿ ಪಿತ್ತ ಹೆಚ್ಚಿ ಆಗಿ ಪಿತ್ತ ಕಕ್ಕುದು ಗಡ. **ಪಿತ್ತಕೆದರ್‌ದು** /*pittakɛdaridu*/ ಪಿತ್ತ ಏರುವುದು. excess of bile. ವಾ: ಚಾಂತಿಕಾಯಿ ತಿಂದರೆ ಪಿತ್ತ ಕೆದರ್‌ದು. **ಪಿತ್ತನೆತ್ತಿಗೇರ್‌ದು** /*pittanɛttige:ridu*/ ಕೋಪ ಹೆಚ್ಚಾಗು. intensified anger. ವಾ: ನಾ ಹಂಗೆ ಹೇಳಕನ ಅಂವನ ಪಿತ್ತ ನೆತ್ತಿಗೇರ್ತಲಾ!.

ಪಿತ್ತ[3] /*pitta*/ ನಾ. 1. ಅಹಂ, 2. ಜಂಭ. 1. ego, 2. false self-esteem. ವಾ: ಅಂವನ ಪಿತ್ತ ಹಿಙ್ಕಾ ಇಳ್ಸೊಕು.

ಪಿತ್ತಾಳೆ /*pitta:ḷɛ*/ ನಾವಿ. ಚಾಡಿ ಮಾತು ಕೇಳುವವ. the one complains all the time about others – a slanderer. **ಪಿತ್ತಾಳೆ ಕೆಬಿ(ನು).** ವಾ: ಅಂವಂದ್ ಪಿತ್ತಾಳೆ ಕೆಮಿ. **ಪಿತ್ತಾಳೆಕೆಬಿ** /*pitta:ḷɛkebi*/ 1. ಹಿತ್ತಾಳೆ ಕಿವಿ, 2. ಚಾಡಿಕೇಳುವ ಸ್ವಭಾವ, 3. ಚಂಚಲ ಮನಸ್ಸು. 1. the one who eagerly listens to slanderous, 2. one who defames others, 3. fickle mind. ವಾ: ಅಂವಂದ್ ಪಿತ್ತಾಳೆ ಕೆಬಿ.

ಪಿತ್ರಾರ್ಜಿತ /*pitra:rjita*/ ನಾ. ವಂಶ ಪಾರಂಪರ್ಯ ವಾಗಿ ಬಂದಂತಹ. heredity. ವಾ: ಪಿತ್ರಾರ್ಜಿತ ಆಸ್ತಿ ಹಙ್ಕಾ ಉಟ್ಟು.

ಪಿದಂಬಲೆ /*pidambalɛ*/ ನಾ. ಔಷಧ ಸಸ್ಯ. medicinal plant. ವಾ: ಪಿದಂಬಲೆ ದೈನ ಹುಡ್ಕುದು.

ಪಿದಮಲೆ /*pidamalɛ*/ ನಾ. 1. ಸಣ್ಣ ಎಲೆಯ ಚಿಕ್ಕ ಗಿಡ, 2. ಔಷಧ ಸಸ್ಯ. 1. a small plant with tiny leaf, 2. a medicinal plant. ವಾ: ಪಿದಮಲೆ ದೈ ಮದ್ದಿಗಾದೆ, ಗದ್ದೆಪುಣಿಲಿ ಇದ್ದದೆ, ಬಾರಿ ಸಣ್ಣ ದೈ ಅದ್.

ಪಿಯ /*piya*/ ನಾ. ಏಪ. ಕಾಫಿ. coffee. ವಾ: ಪಿಯ ಕುಡ್ಡನ?

ಪಿರಂಗಿ /*piraŋgi*/ ನಾ. 1. ಫಿರಂಗಿ, 2. ವಾಹನದ ಮೇಲೆ ಹೂಡಿರುವ ಭಾರವಾದ ಹಿರಿ ತುಪಾಕಿ, 3. ತೋಪು. 1. a cannon, 2. an autocannon, 3. a cannon. ವಾ: ಹಿಂದೆನ ಕಾಲಲಿ ಯುದ್ದ ಮಾಡಿಕನ ಪಿರಂಗಿ ಬಳ್ಸ್ ತಿದ್ದೊ.

ಪಿರಾಂದ್ /*pira:ndɨ*/ ಕ್ರಿ. ಹುಚ್ಚು. madness. ವಾ: ಅಂವ ಹಙ್ಕಾ ಹಂಗೆ, ಅಂವಂಗೆ ಪಿರಾಂದ್.

ಪಿರಿ /*piri*/ ನಾ. 1. ನಶೆ ಇಳಿಯುವುದು, 2. ಅಮಲು ಬಿಡು. 1. reduced intoxication, 2. to sober up. ವಾ: ಪಿರಿ ಇಳ್ತ್ ಕಂಡದೆ ಅಲ.

ಪಿರಿಪಿರಿ ಮಳೆ /*piri piri maḷɛ*/ ನಾ. ಸಣ್ಣದಾಗಿ ಮಳೆ ಜಿನುಗುವುದು. drizzling. ವಾ: ಪಿರಿ ಪಿರಿ ಮಳೆ ಸುರಾತ್ ಇನ್ಸ್ ನಾ ಹೊರ್‌ಟನೆ.

ಪಿರಿಪಿರಿ ಮಾತ್ /*piri piri ma:tɨ*/ ನಾ. ಕಿರಿ ಕಿರಿ ಆಗುವಂತೆ ಮಾತನಾಡುವುದು. to annoy or irritate someone. ವಾ: ಪಿರಿ ಪಿರಿ ಮಾತ್ ಕೇಳ್ದೆ ಬಙ್ಙ.

ಪಿರಿಂಚಿ ತಿಂಬೊದು /*piriɲci timbɔdu*/ ಕ್ರಿ. 1. ಕಿವುಚಿ, 2. ಹಿಂಡಿ ತಿನ್ನುವುದು. 1. to squeeze, 2. to squeeze and eat. ವಾ: ಹಣ್ಣ್‌ನ ಪಿರಿಂಚಿ ಇಸಿತ್.

ಪಿರಿಕಾಯ್ಸ್ /*pirika:ysɨ*/ ಕ್ರಿ. 1. ಪ್ರಚೋದಿಸು, 2. ಸಿದ್ಧ ಗೊಳಿಸು, 3. ಉಬ್ಬಿಸು. 1. to instigate, 2. to prepare, 3. to provoke. ವಾ: ಹುಡ್ಗರ ಪಿರಿಕಾಯ್ಸಿರೆ ಒಳ್ಳ ಕೆಲ್ಸ ಮಾಡುವೊ.

ಪಿರಿಗಂಟ /*piriganṭa*/ ಕ್ರಿ. ನಶೆ ಇಳಿಯುವ ತನಕ. until one sobers up. ವಾ: ಪಿರಿಗಂಟ ತಲೆಗೆ ನೀರ್ ಹೊಯ್ದದ್.

ಪಿರಿಗಂಟ್[1] /*piriganṭɨ*/ ನಾ. 1. ಶಬ್ದಕೋಶ, 2.

ನಿಘಂಟು, 3. ಪದಕೋಶ. 1. a lexicon, 2. a dictionary, 3. a thesaurus. ವಾ: ಪಿರಿಗಂಟ್‌ಲಿ ಎಲ್ಲ ಸಬ್ದಗಳಿಗೆ ಅರ್ತ ಸಿಕ್ಕಿದೆ.

ಪಿರಿಗಂಟ್[2] /*pirigaṇṭi*/ ನಾ. ಹಗ್ಗಕ್ಕೆ ಗಂಟು ಹಾಕಿ ಜಾರದಂತೆ ಹಾಕುವ ಇನ್ನೊಂದು ಗಂಟು. a knot to tighten the loop.

ಪಿರಿದು /*piridu*/ ಕ್ರಿ. ತಲೆಗೆ ಏರಿದ ಅಮಲು ಇಳಿಯುವುದು. sobering up. ವಾ: ರಾತ್ರೆ ಕುಡ್ದದ್ ಹೊತ್ತಾರೆಗೆ ಪಿರಿದು.

ಪಿರಿಪಿರಿ[1] /*piripiri*/ ನಾ. ಗುಣು ಗುಣುಂದೆ ಗೊಣಗಿಕೊಳ್ಳುವುದು. to talk indistinctly, to grumble. ವಾ: ಅಪ್ಪ ಪಿರಿಪಿರಿ ಅಮ್ಮ ಚರಿಪಿರಿ ಮಜ್ಜಂಗೆ ಕಿರಿಕಿರಿ ಇಂವ ಮಾತ್ರ ಸೆರಿಸೆರಿ.

ಪಿರಿಪಿರಿ[2] /*piripiri*/ ಕ್ರಿ. ಮಾತಿನ ಮೂಲಕ ಕಿರಿಕಿರಿ ಮಾಡುವುದು. to irritate by the way of talking. ವಾ: ಸುಮ್ಮನಿರ್ ಪಿರಿಪಿರಿ ಮಾಡ್ಬಡ.

ಪಿರಿಮಣೆ /*pirimaṇɛ*/ ನಾ. ಶ್ಯಾವಿಗೆ ಒತ್ತುವ ಮಣೆ. vermicelli press. ವಾ: ಪಿರಿಮಣೆಲಿ ಇಡ್‌ಮಣೆ ಹಿಟ್ಟ್ ಒತ್ತುದು. ಪ: ಇರ್‌ಮಣೆ; ಇಡ್‌ಮಣೆ; ಒತ್ತುಮಣೆ; ನೂಕುಮಣೆ

ಪಿರಿಯಕನ /*piriyakana*/ ಕ್ರಿವಿ. 1. ಬಿಡುವಾಗ, 2. ಮೈ ಮೇಲೆ ಬಂದ ದೇವರು ಬಿಡುವುದು ಎಂದರ್ಥ. 1. while leaving/exiting, 2. when the god/ spirit leave/exit the human body-releasing the impersonator from possession. ವಾ: ದೇವ್ರು ಮೈ ಮೇಲೆ ಬಂದ್ ಪಿರಿಯಕನ ಹಿಡ್ಕೊಣೊಕು.

ಪಿರ್ಕ /*pirka*/ ಕ್ರಿ. ಪೀಡಕ. the one who tortures. ವಾ: ಅಲ್ಲೊಬ್ಬ ಉಟ್ಟು ಹೇಳಿ ಸುಕ ಇಲ್ಲೆ ಅಸ್ಟ್ ಪಿರ್‌ಕ.

ಪಿರ್ಯಾದಿ /*pirya:di*/ ಕ್ರಿವಿ. ಅಧಿಕೃತವಾಗಿ ನೀಡುವ ದೂರು. an official complaint. ವಾ: ಶಾಸಕರ್‌ಗೆ ಪಿರ್ಯಾದಿ ಕೊಟ್ಟೊಳೊ.

ಪಿಲಾಂದಿಮುರ್ಕ /*pila:ndimurka*/ ನಾ. ಮರಹಾವು. a tree snake. ವಾ: ಪಿಲಾಂದಿಮುರ್‌ಕ ಮರಲಿ ಸುತ್ತಿ ಮೊಲ್ಗಿಟು.

ಪಿಲಾಡ್ಚಿ /*pila:ḍci*/ ನಾ. ಬೈಗುಳದ ಮಾತು. an expletive. ವಾ: ನೀ ಬಾರಿ ಪಿಲಾಡ್ಚಿ.

ಪಿಲಿಂಗೂರಿ /*piliŋgu:ri*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಪಿಲಿಕಜೆ /*pilikajɛ*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಮರಪಡ್ನೂರು ಗ್ರಾಮದ ಜಾಗ. 1. family, 2. lineage, 3. a locality in Amarapadnuru village in Sullia Taluk of Dakshina Kannada District.

ಪಿಲಿಕೋಡಿ /*piliko:ḍi*/ ನಾ. 1. ಕುಟುಂಬ, 2. ಮನೆತನ, 3 ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಜಾಲ್ಸೂರು ಗ್ರಾಮದ ಜಾಗ. 1. family, 2. lineage, 3. a locality in Jalsuru village in Sullia Taluk of Dakshina Kannada District.

ಪಿಲಿಗುಂದ /*piligunda*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಪಿಲಿಚಾಮುಂಡಿ /*pilica:muṇḍi*/ ನಾ. ಆದಿಶಕ್ತಿ ದೇವಿರೂಪಿಣಿ ಎಂದು ಆರಾಧಿಸಲ್ಪಡುವ ಧರ್ಮದೈವದ ಉಗ್ರರೂಪ. Pilichamundi, a ferocious form of goddess of divine mother. ವಾ: ಪಿಲಿಚಾಮುಂಡಿ ಉತ್ಸವ ನಡ್ದದೆ.

ಪಿಲಿಮಾರ್ /*pilima:rɨ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಪಿಲೆ /*pilɨ*/ ನಾ. ಸೂತಕ. a period of impurity/ defilement. ವಾ: ಸುದ್ದ ಕಳೆಯಮುಟ್ಟ ಪಿಲೆ ಮನೆಲಿ ಅಡ್ಗೆ ಮಾಡ್ದುಲೆ.

ಪಿಲೆಕಳೆದು /*pilɨkaḷɨdu*/ ಕ್ರಿವಿ. ಶುದ್ಧ ಮಾಡುವುದು. to ritual purification impurity/defilement. ವಾ: ಸತ್ತ್ ಮೂರ್ ಇಲ್ಲರೆ ಐದಕ್ಕೆ ಪಿಲೆಕಳೆದು ಮಾಡಿವೆ.

ಪಿಲೆಜ್ /*pilɛjɨ*/ ನಾ. ಮೀನಿನ ಹೊರಕವಚ. fish scale. ವಾ: ಪಸ್ಟ್ ಮೀನ್‌ದ್ ಪಿಲೆಜ್ ತೆಗೆಕು. ಮತ್ತೆ ಹೊಟ್ಟೆ. ಪ: ಪೊಲ್ಜಿ, ಪೊಡಸ್(ತು)

ಪಿಲ್ಲಂದಿಮುರ್ಕ /*pillandimurka*/ ನಾ. ಒಂದು ವಿಧದ ಹಾವು. a type of snake. ವಾ: ಪಿಲ್ಲಂದಿ ಮುರ್ಕತ ಒಂದ್ ಹಾವ್ ಉಟ್ಟು.

ಪಿಲ್ಲಾಡ್ಚಿ /*pilla:ḍci*/ ನಾ. ಬೈಗುಳ ಪದ. an expletive. ವಾ: ಪಿಲ್ಲಾಡ್ಚಿತ ಬೈಯ್ಯುದು. ಪ: ಪುಲ್ಯಾರ್ಚಿ(ತು); ಪುಳಿಯಾಡ್ಚಿ

ಪಿಲ್ಲೆಂಕಿ /*pilleŋki*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಪಿಸಾಚಿ /*pisa:ci*/ ನಾ. 1. ಪೀಡೆ, 2. ಪಿಶಾಚಿ. 1. a problem, 2. a devil/a satan. ವಾ: ನೀ ಕೂದೊಲು ಹರಿಂಡಿಕಂಡಿದ್ದರೆ ಪಿಸಾಚಿನಂಗೆ ಕಂಡಿಯ.

ಪಿಸುಗುಟ್ಟಿ /*pisuguṭṭi*/ ಕ್ರಿ. ಸಣ್ಣ ಸ್ವರದಲ್ಲಿ ಮಾತನಾಡುವುದು. to talk in a low voice. ವಾ: ಕೆಮಿಲಿ ಎಂತೊ ಪಿಸುಗುಟ್ಟಿತ್, ಒಂದೂ ಅರ್‌ತೆ ಆತ್ಲೆ.

ಪಿಸ್‌ಂಡ /*pisiŋḍa*/ ನಾವಿ. 1. ಮುಂಗೋಪಿ, 2. ಕೋಪಿಷ್ಠ. 1. short tempered, 2. an angry person. ವಾ: ಪಿಸ್‌ಂಡನೊಟ್ಟಿಗೆ ಮಾತಾಡಿಕೆ ಹೆದ್‌ರಿಕೆ ಆದೆ.

ಪಿಸ್ತ್ /*pisti*/ ನಾ. ಬಟ್ಟೆ ಎಳೆಎಳೆಯಾಗಿ ಬಿಟ್ಟು ಬರುವುದು. disintegration of cloth. ವಾ: ಒಳ್ಳ ಅರ್ವೆ ಪಿಸ್ತ್ ಹೋತ್.

ಪಿಸ್ರ್^{1} /*pisri*/ ನಾ. 1. ಪಿಸುರು, 2. ಕಣ್ಣಿನ ಕೊಳೆ, 3. ಗೀಜು, 4. ಕೋಪ. 1. mucous discharge from the eye, 2. dirt from the eye, 3. rheum of the eyes, 4. anger. ವಾ: ಕಣ್ಣ್‌ಲಿ ಪಿಸ್ರ್ ತುಂಬಿಟು.

ಪಿಸ್ರ್^{2} /*pisri*/ ನಾ. ಉಸಿರಿನ ಜೋಡಿ ಪದ. a word pair. **ಉಸಿರ್ ಪಿಸ್ರ್(ನು).**

ಪಿಳ್ಳಿ^{1} /*piḷḷi*/ ನಾ. 1. ಮರಿಮಗು, 2. ಕಾಗೆಮರಿ. 1. a grandchild, 2. a crow Fledgling. ವಾ: ಪಿಳ್ಳಿ ಬಂದುಟಾ?

ಪಿಳ್ಳಿ^{2} /*piḷḷi*/ ನಾ. 1. ಮೊಮ್ಮಕ್ಕಳು, 2. ಮಗನ/ ಮಗಳ ಮಕ್ಕಳು, 3. ಮೊಮ್ಮಗ /ಮೊಮ್ಮಗಳು. 1. grand children, 2. children of son/daughter, 3. granddaughter/grandson. **ಅಜ್ಜಂಗೆ ಪಿಳ್ಳಿ ಕೆಮ್ಮಿಕೆ ಕಲ್ಸಿದಂಗೆ(ಗಾ).** ವಾ: ಪಿಳ್ಳಿಕ ಸೇರಿಕಂಡ್ ಉಗ್ಗಪ್ಪನ ಬಾರಿ ಗೋಳು ಬರ್‌ಸುವೆ. **ಪಿಳ್ಳಿಕ** /*piḷḷika*/ ಮೊಮ್ಮಕ್ಕಳು. grand children. ವಾ: ಪಿಳ್ಳಿಕಳಿಗೆ ದಿನಾ ರಾತ್ರೆ ಕತೆ ಹೇಳೊಕು.

ಪಿಳ್ಳೆ^{1} /*piḷḷɛ*/ ಸನಾ. 1. ಮೊಮ್ಮಗು, 2. ಮೊಮ್ಮಕ್ಕಳು. 1. a grandchild, 2. grand children. ವಾ: ಉಗ್ಗಪ್ಪ ಪಿಳ್ಳೆನ ಎತ್ತಿಕಂಡೆ ಇರ್‌ದು.

ಪಿಳ್ಳೆ^{2} /*piḷḷɛ*/ ನಾ. 1. ಹಕ್ಕಿಮರಿಗಳು, 2. ಕೋಳಿ ಮರಿಗಳು. 1. fledglings, 2. chicks. **ಕಾಗೆ ಪಿಳ್ಳೆ ಕಾಗೆ ಪ್ರೀತಿ(ಗಾ).** ವಾ: ಕೋಳಿ ಪಿಳ್ಳೆನ ಹಿಡ್ಕನೆ.

ಪಿಳ್ಳೆ^{3} /*piḷḷɛ*/ ನಾ. 1. ಮರಿ, 2. ಚಿಗುರು, 3. ಕಂದು. 1. a fledgling, 2. a sprout/shoot 3. a tendril. ವಾ: ಬಾಳೆ ದೈಲಿ ಸಣ್ಣ ಸಣ್ಣ ಪಿಳ್ಳೆಗ ಕಂಡವೆ.

ಪಿಳ್ಳೆ^{4} /*piḷḷɛ*/ ನಾ. 1. ಬಾಳೆ, ಸುವರ್ಣಗಡ್ಡೆ ಮೊದಲಾದ ಗಿಡಗಳ ಗಡ್ಡೆಯಿಂದ ಹುಟ್ಟುವ ಪುಟ್ಟ ಸಸಿ, 2. ಅಗೆ, 3. ಮೊಗ್ಗು. 1. an offshoot from the bulbous root of plantain, Elephant Foot Yam, etc. 2. a tendril, 3. a bud. ವಾ: ಯಾಲದ ಬುಡಲಿ ಸುಮಾರ್ ಪಿಳ್ಳೆಗೊಳೊ.

ಪಿಳ್ಳೆ^{5} /*piḷḷɛ*/ ನಾ. 1. ಚಿಕ್ಕ ಚಿಗುರು, 2. ಕವಲು. 1. A split, 2. A splint.

ಪಿಳ್ಳೆನ್ಯಾವ /*piḷḷɛn'ya:va*/ ನಾ. 1. ನೆಪ, 2. ಕಾರಣ ಹೇಳು. 1. a pretext 2, an excuse. **ಕಳ್ಳಂಗೊಂದು ಪಿಳ್ಳೆ ನ್ಯಾವನ(ಗಾ).** ವಾ: ಕೆಲ್ಸ ಹೇಳಿರೆ ಎಂತಾರ್ ಪಿಳ್ಳೆನ್ಯಾವ ಹೇಳಿಕೆ ಸುರಾದೆ.

ಪೀಂಕಹಕ್ಕಿ /*pi:ŋkahakki*/ ನಾ. ಒಂದು ವಿಧದ ಹಕ್ಕಿ. a bird. ವಾ: ಪೀಂಕ ಹಕ್ಕಿ ಹಾರಿ ಬಾತ್.

ಪೀಂಕ್ /*pi:ŋki*/ ಕ್ರಿ. 1. ಕಳಚಿಕೊಳ್ಳು, 2. ಜಾರಿಕೊಳ್ಳು, 3. ಹಿಡಿತ ಬಿಟ್ಟುಹೋಗು. 1. to withdraw, 2. to evade, 3. to lose control. ವಾ: ನಾಯಿ ಸಂಕೊಲೆಂದ ಪೀಂಕ್‌ಸಿಕಂಡ್ ಹೋಗುಟು.

ಪೀಂಕ್‌ಸ್^{1} /*pi:ŋkisi*/ ಕ್ರಿ. ಕಟ್ಟವನ್ನು ಸಡಿಲಗೊಳಿಸುವುದು, ಉರುಳು ಅಥವಾ ಹಿಡಿತದಿಂದ ಜಾರಿಸು. to loosening the knot, to escape from the noose or grip. ವಾ: ಕಟ್ಟ್ ಪೀಂಕ್‌ಸಿ ಓಡಿಹೋತ್.

ಪೀಂಕ್ಸ್^{2} /*pi:ŋksi*/ ಕ್ರಿ. 1. ಕೀಳು, 3. ಉಪಾಯದಿಂದ ಪಡೆದುಕೊಳ್ಳು. 1. inferior, 2. being crafty in order to get something. ವಾ: ಮನೆನ ಉಪಯಲಿ ಪೀಂಕ್ಸ್.

ಪೀಂಚೆಲ್ /*pi:ŋceli*/ ನಾ. 1. ಸತ್ತ್ವಹೀನವಾದ, 2. ದುರ್ಬಲವಾದ, 3. ಲಾಚಾರು. 1. essenceless, 2. weak, 3. useless. **ಲಾಚಾರ್ ಗಂಡಂಗೆ ಪೀಂಚೇಲ್ ಹೆಣ್ಣ್(ಗಾ).** ವಾ: ಎಂತಕೆನೆ ಹಿಂಗೆ ಪೀಂಚೆಲ್ ಆಗೊಳ?

ಪೀಕ್ಸು /*pi:ksu*/ ಕ್ರಿ. ಉಪಾಯದಲ್ಲಿ ವಸ್ತು, ಹಣ ಮುಂತಾದುವನ್ನು ಪಡೆದುಕೊಳ್ಳು. to receive money, things, etc. cleverly. ವಾ: ಕೆಣಿ ಮಾಡಿ ಜಾಗೆನ ಪೀಕ್ಸುದು.

ಪೀಕ್ಸ್ /*pi:ksɨ*/ ಕ್ರಿ. 1. ಕೀಳು, 2. ಪೀಂಕಿಸು. 1. to pluck, 2. to take. ವಾ: ಅಂವ ಕೆಣಿ ಮಾಡಿ ದುಡ್ಡುನ ಪೀಕ್ಸ್‌ದು.

ಪೀಚೆ /*pi:cɛ*/ ನಾ. 1. ಎಳಸು, 2. ಎಳೆಯ, 3. ಪೀಚೆ, 4. ಹೀಚು. 1. tender, 2. a seedling, 3. a young plant, 4. a green/an immature fruit. ವಾ: ಈ ಪೇರಲಕಾಯಿ ಪೀಚೆ ತಿಂಬಕಾದುಲೆ, ಎಂತಕೆ ಕೊಯ್ದು.

ಪೀಚೆಕತ್ತಿ /*pi:cɛkatti*/ ನಾ. ಕೊಡವರು ಮತ್ತು ಕೊಡಗಿನ ಅರೆಭಾಷೆ ಗೌಡರು ಸಾಂಪ್ರದಾಯಿಕ ಉಡುಗೆ ತೊಟ್ಟು, ಚೇಲೆಯಲ್ಲಿ ಸಿಕ್ಕಿಸಿಕೊಳ್ಳುವ ಬೆಳ್ಳಿಯ ಸಣ್ಣ ಕತ್ತಿ. a ceremonial silver dagger worn by Kodava people and Gowda's who speak Are bhashe. ವಾ: ಪೀಚೆ ಕತ್ತಿನ ಸೊಂಟಕೆ ಸೆಕ್ಕಿಸಿಕ.

ಪೀಚೆಮನೆ /*pi:cɛmanɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಪೀಟ್ /*pi:ṭɨ*/ ಪವಾ. ಎಪ. ಒಂದು ಅಡಿ ಅಳತೆ. one foot. ವಾ: ಆ ಗುಂಡಿ ಒಂದ್ ಪೀಟ್ ಇರ್‌ದು. ಪ: ಪೀಟು.

ಪೀಟ್ರೋಲ್ /*pi:ṭro:lɨ*/ ಪವಾ. ಎಪ. ಅಡಿಕೋಲು, ಫೂಟ್‌ರೋಲ್. an instrument to measure foot. ವಾ: ಪೀಟ್ರೋಲ್ ತಂಬಾ.

ಪೀಡೆ[1] /*pi:ḍɛ*/ ಕ್ರಿ. 1. ತೊಂದರೆಕೊಡು, 2. ಹಿಂಸೆ, 3. ಉಪದ್ರಮಾಡು, 4. ಪಿಶಾಚಿ. 1. to pester, 2. to torture, 3. to irritate, 4. devil. ವಾ: ಪೀಡೆನಾಂಗೆ ಕಾಡುದು ಯಾಕೆ?

ಪೀಡೆ[2] /*pi:ḍɛ*/ ಕ್ರಿ. 1. ಪ್ರೇಉಗ್ಗಪ್ಪ್ರ/ಪ್ರೇತಾತ್ಮ, 2. ದೆವ್ವ, 3. ಬಾಯಿಗೆ ನೀರಿಲ್ಲದೆ ಸತ್ತಿರುವುದು, 4. ಸತ್ತವರ ಆತ್ಮ. 1. a ghost, 2. a devil, 3. dying without water, 4. soul of the dead. ವಾ: ಪೀಡೆ ಮೈಮೇಲೆ ಹಿಡ್ಕಂಬದ್.

ಪೀಡ್ಸ್ /*pi:ḍsɨ*/ ಕ್ರಿ. 1. ಪೀಡಿಸುವುದು, 2. ಹಿಂಸಿಸು, 3. ಕಾಟಕೊಡು, 4. ನೋಯಿಸು, 5. ಬಾಧೆಗೊಳಿಸು. 1. to trouble, 2. to torture, 3. to pester, 4. to inflict pain. 5. to annoy. ವಾ: ಯಾಕೆ ಸುಮ್ಮನೆ ಪೀಡ್ಸುದು. **ಪೀಡಿಸುದು** /*pi:ḍisudu*/ 1. ಕಾಡು, 2. ಕೀಟಲೆ ಮಾಡು. 1. to trouble, 2. to pester. ವಾ: ಹಿಂಗೆ ಯಾಗೊಳು ದುಡ್ಡು ದುಡ್ಡುತ ಪೀಡ್ಸುದು ಯಾಕೆಗಡ?

ಪೀನಾರಿ /*pi:na:ri*/ ನಾವಿ. 1. ತುಂಬಾ ಜಿಪುಣ, 2. ಆಹಾರಕ್ಕಾಗಿ ಆಸೆಪಡುವವ. 1. stingy person, 2. a gluttonous person. ವಾ: ಕೊಟ್ಟಸ್ಟ್ ಸಾಲಿಕಿಲೆ, ಬಾರಿ ಪೀನಾರಿ ಮೊನ್ಸ ಕಂಡದೆ.

ಪೀನಾರ್ ಮರ /*pi:na:rɨ mara*/ ನಾ. ಕಾಡಿನಲ್ಲಿರುವ ಮದ್ದಿನ ಮರ. ಆ ಮರದಲ್ಲಿ ಹೂವು ಬಿಡುವಾಗ ತುಂಬಾ ದುರ್ವಾಸನೆ ಬರುತ್ತದೆ. a medicinal forest tree, flowers of this tree have a foul smell. ವಾ: ಪೀನಾರ್ ಮರಲಿ ಬುಡೊ ಹೂವ್ ಬಾರಿ.

ಪೀರಕೆ /*pi:rakɛ*/ ನಾ. ಕಾಡು ಹಾಗಲಕಾಯಿ. wild/forest bitter gourd. ವಾ: ಪೀರಕೆನ ನೋಡಿಯೊಳನ?

ಪೀರನಮನೆ /*pi:ranamanɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಪುಂಕುಟ್ಟಿ /*puŋkuṭṭi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಪುಂಗೋಟು /*puŋgo:ṭu*/ ನಾ. ಒಂದು ಬಗೆಯ ಸಣ್ಣನೆಯ ಗುದ್ದಲಿ. a handheld Shovel. ವಾ: ಪುಂಗೋಟು ತಕಂಡ್ ಅಗಿ. ಪ: ಕೊಂಗೋಟು(ತು)

ಪುಂಡ /*punḍa*/ ನಾ. 1. ತುಂಟ, 2. ಪುಂಡಾಟಿಕೆ ಮಾಡುವವ. 1. mischievous, 2. naughty. ವಾ: ನಿಂಗ್ಯಾಕೆ ಪುಂಡರ ಸಾವಾಸ.

ಪುಂಡಿ ಅರಿ /*punḍi ari*/ ನಾ. 1. ಹಿಡಿಯಕ್ಕಿ, 2. ಒಂದು ಮುಷ್ಟಿ ಅಕ್ಕಿ. one fist of rice. ವಾ: ಪುಂಡಿ ಅರಿನ ತಂಬಾ. ಪ: ಪುಂಡ್ಯಕ್ಕಿ

ಪುಂಡಿಕೂಡ್ಸಿ /*punḍi ku:ḍsi*/ ನಾ. ಕೈಮುಷ್ಟಿಯಲ್ಲಿ ಹಿಡಿಯುವಷ್ಟು ಹಣ. fistful of money. ವಾ: ಪುಂಡಿ ಕೂಡ್ಸಿ ಉಂಡೆ ಕಟ್ಟೊಕು.

ಪುಂಡಿಬಿತ್ /*punḍi bittɨ*/ ನಾ. ಭತ್ತ ಬಿತ್ತನೆಯ ಒಂದು ಪದ್ಧತಿ. one practice of transplanting paddy. ವಾ: ಪುಂಡಿ ಬಿತ್ ಕೆಲ್ಸ ಆತ?

ಪುಂಡಿ[1] /*puṇḍi*/ ನಾ. 1. ಹಬೆಯಲ್ಲಿ ಬೇಯಿಸುವ ಹಿಟ್ಟು, 2. ಕಡುಬು. kadubu, steamed rice cake. **ಒಂದ್ ಪುಂಡಿ ಹರ್ವೆನ ಆರ್ ತಿಂಗ ಕೊಯ್ಯುದು – ಬೈನೆ ಕಳ್ಳ್ ತೆಗ್ಯದು(ಒ).** ವಾ: ಹಸ್ತ್ ಬತ್ತದೆ, ಒಂದ್ ಪುಂಡಿ ಇಕ್ಕ್‌ನೆ. **ಪುಂಡಿಮಡ್ಕೆ** /*puṇḍimaḍkɛ*/ ಕಡುಬು ಬೇಯಿಸುವ ಕಳ್ಸಿಗೆ. a pot used in steaming rice cake. ವಾ: ಪುಂಡಿ ಮಡ್ಕೆನ ಎಲ್ಲಿಸಿದ್?

ಪುಂಡಿ[2] /*puṇḍi*/ ನಾ. 1. ಮೋದಕ, 2. ಕಾಯಿಕಡುಬು, 3. ಒಂದು ಬಗೆಯ ಸಿಹಿಕಡುಬು. 1. a steamed sweet dish, 2. a coconut dumpling, 3. a sweet dumpling. **ಒಂದ್ ಪುಂಡಿ ಹರ್ವೆನ ಆರ್ ತಿಂಗ ಕೊಯ್ಯುದು – ಬೈನೆ ಕಳ್ಳ್ ತೆಗ್ಯದು(ಒ).** ವಾ: ಗಣೇಸ ಹಬ್ಬಲಿ ಪುಂಡಿ ಮಾಡಿ ನೈವೇದ್ಯಕೆ ಇಸುವೆ. **ಪುಂಡೆಲಿ** /*puṇḍɛli*/ ಕಡುಬಿನಲ್ಲಿ. in the rice cake. ವಾ: ಪುಂಡೆಲಿ ಕಲ್ಲ್ ಉಟ್ಟು.

ಪುಂಡಿಹಣ /*puṇḍihaṇa*/ ನಾ. ಒಂದು ಮುಷ್ಟಿಯೊಳಗೆ ಹಿಡಿವ ನಾಣ್ಯ. a coin held in the fist.

ಪುಂಡು /*puṇḍu*/ ನಾ. 1. ತುಂಟಾಟ, 2. ಪುಂಡತನ. 1. mischief, 2. naughtyness. ವಾ: ಪುಂಡು ಮಕ್ಕ ಬಾರಿ ಗಲಾಟೆ ಮಾಡಿವೆ.

ಪುಂಡೂರು /*puṇḍu:ru*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕಳಂಜ ಗ್ರಾಮದ ಜಾಗ. a locality in Kalanja village in Sullia Taluk of Dakshina Kannada District.

ಪುಕಾರ್ /*puka:rɨ*/ ನಾ. ಎಪ. ದೂರು. complaint. ವಾ: ಪುಕಾರ್ ತಕಂಡ್ ಬಾತ್.

ಪುಕುಪುಕು /*pukupuku*/ ಅ. 1. ಭಯ, 2. ತಳಮಳ. 1. fear, 2. anxiety. ವಾ: ಪರೀಕ್ಸೆ ಹಕ್ಕಲೆ ಬಾಕನ ಪುಕುಪುಕುತ ಹೇಳ್ದೆ.

ಪುಕುಳಿ /*pukuḷi*/ ಕ್ರಿವಿ. 1. ಕುಂಡೆ, 2. ಮಲ ವಿಸರ್ಜನೆ ಮಾಡುವ ಜಾಗ, 3. ಮುಕುಳಿ. 1. buttocks, 2. anus, 3. bum. **ಎಣ್ಣೆಲಿ ಪುಕುಳಿ ತೊಳ್ದಂಗೆ(ಗಾ). ಪುಕುಳಿ ಒಟ್ಟೆ ಗೈಪುನು ಎಡ್‌ಂಗ್‌ಲ್ ಒಳಗ್‌ನ ನೀರ್ ಬಾದಾದರೆ ಬನ್ನಿ, ಹೋದಾದರೆ ಹೋಗಿ ನೆಂಟ್‌ರೆ(ನು).** ವಾ: ಕೂಸುದ್ ಪುಕುಳಿನ ತೊಳಿ. ಪ: ಪೀಂಕಾನ್(ತು)

ಪುಕುಳಿಚಲ್ಲಣ /*pukuḷicallaṇa*/ ನಾ. ಗಂಡಸರು ಹಾಕುವ ಉಡುಪು(ಪ್ಯಾಂಟ್). pant. ವಾ: ಪಂಡ್‌ನ ಅಜ್ಜಂದರ್ ಪುಕುಳಿ ಚಲ್ಲಣ ಕಟ್ಟಿಕಂಡವೆ.

ಪುಕ್ಕ /*pukka*/ ನಾವಿ. 1. ಭಯಪಡುವವ, 2. ಪುಕ್ಕಲು ಸ್ವಭಾವದವ. 1. afraid, 2. timid. ವಾ: ಅಂವ ಬಾರಿ ಹೆದ್ರ್‌ಪುಕ್ಕ, ಕತ್ತಲೆಲಿ ಒಂದೆ ಹೊರೆಗೆ ಹೋಕಿಲೆ. **ಪುಕ್ಕುಲ** /*pukkula*/ ಎಲ್ಲದಕ್ಕು ಅಂಜುವವನು. a timid. ವಾ: ಅಂವ ಬಾರು ಪುಕ್ಕುಲ. ಪ: ಪುಕ್ಲ – ಅಂಜುಬುರುಕ. **ಪುಕ್ಕೆಲ** /*pukkɛla*/ ನಾ. 1. ಪುಕ್ಕುಲ, 2. ಧೈರ್ಯ ಇಲ್ಲದವನು, 3. ಅಂಜುಬುರುಕ. 1. timid, 2. a coward, 3. faint-hearted. ವಾ: ಪುಕ್ಕೆಲ ಆದ್ರೆ ಬೊದ್ಕಿಕೆ ಬಜ್ಜಾಬುಟದೆ. **ಪುಕ್ಕೆಲ್** /*pukkɛlɨ*/ ಪುಕ್ಕಲುತನ. timidity. ವಾ: ಪುಕ್ಕೆಲ್ ಗೂಡೆತನೆ ಕರ್‌ಯದು.

ಪುಕ್ಕಿ /*pukki*/ ನಾ. ಗಂಡಸರ ಜನನಾಂಗ. penis, a male reproductive organ.

ಪುಕ್ಕುಳಿ /*pukkuḷi*/ ಕ್ರಿವಿ. ಪುಕುಳಿ. anus. ವಾ: ಕೋಳಿ ಪುಕುಳಿ.

ಪುಕ್ಸಟೆ /*puksaṭɛ*/ ಕ್ರಿವಿ. 1. ಉಚಿತವಾಗಿ, 2. ಧರ್ಮಾರ್ಥ ಪುಕ್ಕಟೆ. 1. free, 2. charity. ವಾ: ಪುಕ್ಸಟೆ ಸಿಕ್ಕಿರೆ ಯಾರ್ ಬುಟ್ಟವೆ.

ಪುಕ್ಳಿ /*pukḷi*/ ನಾ. 1. ಮಕ್ಕಳ ಅಂಡಿಗೆ ಬಳಸುವ ಪದ, 2. ಗುದದ್ವಾರ, 3. ಕುಂಡೆ, 4. ತಿಕ. 1. buttock (in the vocabulary of children), 2. anus, 3. bum, 4. buttock. ವಾ: ಪುಕ್ಳಿಗೆ ಒಂದ್ ಬಾರ್‌ಸಕಿತ್. ಪ: ಪುಕ್‌ಳಿ

ಪುಗ್ಗೆ /*puggɛ*/ ನಾ. ಬಲೂನು. balloon. ವಾ: ಪುಗ್ಗೆಲಿ ಮಕ್ಕ ಆಡಿವೆ. ಪ: ಬುಗ್ಗೆ

ಪುಚ್ಚಜೆ /*puccaje*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಎಡಮಂಗಲ ಗ್ರಾಮದ ಜಾಗ. a locality in Edamangala village in Sullia Taluk of Dakshina Kannada District.

ಪುಟ್ಟಣ್ಣ /*puṭṭaṇṇa*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. masculine given name. ಪ: ಪುಟ್ಟು, ಪುಟ್ಟಪ್ಪ

ಪುಟ್ಟಮ್ಮ /*puṭṭamma*/ ನಾ. ವ್ಯಕ್ತಿ ಹೆಸರು, ಸ್ತ್ರೀ ವಾಚಕ. feminine given name. ಪ: ಪುಟ್ಟು, ಪುಟ್ಟಕ್ಕ

ಪುಟ್ಟ್ ಕುಞ್ಞ /*puṭṭɨ kuɲɲa*/ ನಾ. 1. ಚಿಕ್ಕ ಮಗು, 2. ಮಕ್ಕಳನ್ನು ಪ್ರೀತಿಯಿಂದ ಕರೆಯುವುದು. 1. a small child, 2. an affectionate way of calling children. ವಾ: ಪುಟ್ಟ್ ಕುಞ್ಞ ಬಾನೆ ಇಲ್ಲೆ.

ಪುಟ್ಟ್ ದೊಣ್ಣೆ /*puṭṭɨ doṇṇɛ*/ ನಾ. ಹಿಟ್ಟಿನ ದೊಣ್ಣೆ. a wooden stick used in making ragi ball. ವಾ: ರಾಗಿ ಹಿಟ್ಟ್ ನ ತಿರ್‌ಗಿಸಿಕೆ ಪುಟ್ಟ್ ದೊಣ್ಣೆ ಸಾಕ್. ಪ: ದವಣೆ(ತು)

ಪುಡಞ್ಞನೆ /*puḍaɲɲanɛ*/ ನಾ. ದಷ್ಟಪುಷ್ಟ. well built. ವಾ: ಕೋಳಿ ಪುಡಞ್ಞನೆ ಬೆಳ್ದುಟು. ಪ: ಪುಡಿಕ್ಕೆನ(ತು)

ಪುಡಾಯಿ[1] /*puḍa:yi*/ ನಾ. 1. ಬುಟ್ಟಿ, 2. ಹೆಡೆಗೆ. a basket. ವಾ: ಅಟ್ಟದ ಮೇಲೆ ಇಸಿದ ಪುಡಾಯಿ ಕಾಂಬದುಲೆ.

ಪುಡಾಯಿ[2] /*puḍa:yi*/ ನಾ. ಮೀನು ಹಿಡಿಯಲು ಬಳಸುವ ಸಾಧನ. a tool used in fishing. ಪ: ಗೋರಿ

ಪುಡೆ /*puḍɛ*/ ನಾ. 1. ಬದಿ, 2. ಅಕ್ಕ ಪಕ್ಕ, 3. ಬದು. 1. side, 2. neighbourhood, 3. raised bank in fields. ವಾ: ಕೆಳಗೆನ ಪುಡೆ ಹೋಕಾದ್.

ಪುಡೆಬೇನೆ /*puḍɛbe:nɛ*/ ನಾ. ಸಂಧಿ ನೋವು. joint plain. ವಾ: ನಾ ಪುಡೆ ಬೇನೆಂದ ರಾತ್ರೆ ನಿದ್ದೆ ಮಾಡ್‌ತೆಲೆ.

ಪುಡೆಲಿ /*puḍɛli*/ ನಾ. 1. ಕಡೆಯಲ್ಲಿ, 2. ಬದಿಯಲ್ಲಿ. 1. at the end, 2. in the side. ವಾ: ಬಲ್ದ ಪುಡೆಲಿ ಎದ್ದ್ ಬಾ.

ಪುಡ್ಕನೆ /*puḍkanɛ*/ ನಾ. ದಪ್ಪನೆ. fat. ವಾ: ಅಂವ ಬಾರಿ ಪುಡ್ಕನೆ ಆವುಟು.

ಪುಡ್ಕಾಜೆ /*puḍka:je*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಬೆಳ್ಳಾರೆ ಗ್ರಾಮದ ಜಾಗ. a locality in Bellare village in Sullia Taluk of Dakshina Kannada District.

ಪುಡ್ಕಾಯಿ /*puḍka:yi*/ ನಾ. 1. ಉಳುವವನು ನೇಗಿಲವನ್ನು ಹಿಡಿದುಕೊಳ್ಳುವ ಜಾಗ, 2. ಹಿಡಿ ಅಥವಾ ಮೇಣಿ. 1. handle of a plough, 2. a handle/a grip. ವಾ: ಗದ್ದೆ ಹೂಡಿಕನ ಪುಡ್ಕಾಯಿನ ಹಿಡ್‌ಕಣೊಕು.

ಪುಡ್ಚ /*puḍca*/ ಕ್ರಿ. 1. ಸುದ್ದಿ ಇಲ್ಲದೆ ಕಾಲು ಕೀಳುವುದು, 2. ಕೆಲಸದಿಂದ ಜಾರಿಕೊಳ್ಳುವುದು. 1. to escape, 2. to evade responsibility. ವಾ: ನಾ ಕರೆಕನ ಅಂವ ಪುಡ್ಚ ಓಡ್ತ್.

ಪುಣರ್ /*puṇarɨ*/ ನಾ. ಕೋಲಿನಲ್ಲಿ ಹೊಡೆದಾಗ ಉಂಟಾಗುವ ಗಾಯ. a wound caused due to a blow from a stick. ವಾ: ಬೆನ್ನ್ ಲಿ ಪುಣರ್ ಆವುಟು.

ಪುಣಿ[1] /*puṇi*/ ನಾ. 1. ಗದ್ದೆಯ ಬದಿಯ ದಿಡ್ಡು, 2. ಗಮಣಿ. a raised patch of land in field. ವಾ: ಗದ್ದೆ ಪುಣಿಲೆ ಹೋಕು. **ಪುಣಿಕಡಿಯೊದು** /*puṇi kaḍiyodu*/ ಗದ್ದೆ ಬದಿಯ ದಿಡ್ಡು ಕಡಿಯುವುದು. cutting the raised patch of land in the paddy field. ವಾ: ಗದ್ದೆ ಪುಣಿ ಕಡಿಯೊದು.

ಪುಣಿ[2] /*puṇi*/ ನಾ. 1. ಬದು, 2. ತಟ, 3. ದಡ, 4. ಎಲ್ಲೆ. 1. a raised stip of land that seperates two paddy fields, 2. bank, 3. shore, 4. border. ವಾ: ಗದ್ದೆ ಪುಣಿಲಿ ಅಲ್ಲಲ್ಲಿ ಸುಮಾರ್ ಎಲಿ ಮಾಳಿಗ ಕಂಡದೆ.

ಪುಣಿಲ್ /*puṇilɨ*/ ನಾ. 1. ಮೀನುಹಿಡಿಯುವ ಸಾಧನ, 2, ಏಪೆ. a tool to catch fish. ವಾ: ಪುಣಿಲ್‌ಲಿ ಮೀನ್ ಹಿಡೆದು. ಪ: ಏಂಪೆ(ತು)

ಪುಣೇರಿ /*puṇe:ri*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಬಾಳುಗೋಡು ಗ್ರಾಮದ ಜಾಗ. a locality in Balagodu village in Sullia Taluk of Dakshina Kannada District.

ಪುಣ್ಚತ್ತಡಿ /*puṇcattaḍi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಎಡಮಂಗಲ ಗ್ರಾಮದ ಜಾಗ. a locality in Edamangala village in Sullia Taluk of Dakshina Kannada District.

ಪುಣ್ಣೆನೀರ್ /*puṇṇɛ ni:rɨ*/ ನಾವಿ. 1. ತೀರ್ಥ, 2. ಪುಣ್ಯ ನೀರು. sacred/holy water. ವಾ: ಮನೆಗೆ ಪುಣ್ಣೆ ನೀರ್ ತಕ್ಲ್ ಸ್.

ಪುಣ್ಯ /*puṇya*/ ನಾ. ಉತ್ತಮ ಕಾರ್ಯಗಳನ್ನು ಮಾಡಿದಾಗ ಗಳಿಸಿಕೊಳ್ಳುವ ಜನರ ಒಳ್ಳೆಯ ಭಾವನೆ ಹಾಗೂ ಅಭಿಪ್ರಾಯಗಳು. a moral/religious/ ethical merit earned by doing virtuous

deeds. ವಾ: ಯಾರ್ ಮಾಡ್ದ ಪುಣ್ಯನೊ ಇಂದ್ ವಳ್ಕಂಡೆ. **ಪುಣ್ಯಕಟ್ಟಿಕ** /*puṇyakaṭṭika*/ ಪುಣ್ಯ ಬರುವುದು. attaining a moral/religious/ ethical merit by doing virtuous deeds. ವಾ: ಸಾಯ ಮಾಡಿ ಪುಣ್ಯಕಟ್ಟಿಕ.

ಪುಣ್ಯತೀರ್ಥ /*puṇyati:rta*/ ನಾವಿ. 1. ಶುದ್ಧ ಜಲ, 2. ಪುಣ್ಯೋಧಕ. 1. clean water, 2. holy water. ವಾ: ಪುಣ್ಯ ತೀರ್ಥನ ಕುಪ್ಪಿಲಿ ತುಂಬಿಸ್.

ಪುಣ್ಯದ ನೀರು /*puṇyada ni:ru*/ ನಾವಿ. ದೇವಾಲಯಗಳಲ್ಲಿ ದೇವರ ವಿಗ್ರಹಕ್ಕೆ ಅಭಿಷೇಕ ಮಾಡಿದ ನೀರು. water used in the ablution of gods. ವಾ: ಪುಣ್ಯದ ನೀರ್ ತಕಂಡ್ ಬಾ.

ಪುಣ್ಯಾರ್ಚನೆ /*puṇya:rcanɛ*/ ನಾ. ದೇವರ ತೀರ್ಥ. holy water. ವಾ: ಪುಣ್ಯಾರ್ಚನೆ ಸಿಕ್ಕಿತಾ? ಪ: ಪುಣ್ಯಾರ್ಸನ

ಪುತ್ತ /*putta*/ ನಾ. ಮಭಾ. ಚಿಕ್ಕ ಮಕ್ಕಳನ್ನು ಮುದ್ದಿನಿಂದ ಸಂಬೋಧಿಸುವ ಪದ. an affectionate term used for children. ವಾ: ಪುತ್ತ ಇಲ್ಲಿ ಬಾ ಕೂಸು.

ಪುತ್ತರಿಕುತ್ತಿ /*puttari kutti*/ ನಾ. ಸೇರಿನ ಆಕೃತಿಯಲ್ಲಿರುವ ಬಿದಿರಿನ ಸಾಧನ, ಪುತ್ತರಿಯಲ್ಲಿ ಕದಿರು ಕೊಯ್ದು ಈ ಕುತ್ತಿಯಲ್ಲಿ ಹಾಕಿಕೊಂಡು ಮನೆಗೆ ತರುತ್ತಾರೆ. a bamboo jar in the shape of a seer, ears of paddy are brought in this jar during the harvest festival. ವಾ: ಹುತ್ತೆರಿಲಿ ಕದ್‌ರ್ ಕೊಯ್ದ್ ಪುತ್ತರಿ ಕುತ್ತಿಲಿ ಹಾಕಂಡ್ ಬಾದು.

ಪುತ್ತರಿಪಚ್ಚ /*puttari pacca*/ ನಾವಿ. 1. ಪುಟ್ಟದಾದ ಕುಕ್ಕೆ, 2. ಹುತ್ತರಿ ದಿನ ನೆರೆಕಟ್ಟಲು ಬೇಕಾದ ಸಾಮಗ್ರಿಗಳನ್ನು ಈ ಕುಕ್ಕೆಯಲ್ಲಿ ಇಡುತ್ತಾರೆ. 1. a small basket, 2. a basket used on the day of harvest festival to keep the leaves with which a customary role of leaves is made. ವಾ: ಪುತ್ತರಿ ಪಚ್ಚಲಿ ನೆರೆಕಟ್ಟಿಕೆ ಬೇಕಾದ್‌ನೆಲ್ಲ ಹಾಕಿಸುವೆ.

ಪುತ್ತಿಲ /*puttila*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಜ್ಜಾವರ ಗ್ರಾಮದ ಜಾಗ. 1. family, 2. lineage, 3. a locality in Ajjavara village in Sullia Taluk of Dakshina Kannada District.

ಪುತ್ಯ /*putya*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮಂಡೆಕೋಲು ಗ್ರಾಮದ ಜಾಗ. a locality in Mandekolu village in Sullia Taluk of Dakshina Kannada District.

ಪುದ /*puda*/ ನಾ. ಕಾಡು ಪಾರಿವಾಳ. wild pigeon. ವಾ: ಪುದ ಮರದ ಕೊಂಬೆಲಿ ಹಾರಿ ಕುದ್ದತ್. ಪ: ಚೋರೆಕ್ಕಿ

ಪುದಿನ /*pudina*/ ನಾ. ಪದಾರ್ಥಗಳಿಗೆ ಬಳಸುವ ಸಂಬಾರ ಸಸ್ಯ. mint leaf. ವಾ: ಪುದಿನ ಪಜ್ಜಿ ಮಾಡಿವೆ.

ಪುದಿನೆರವನ /*pudinɛravana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಪುದಿಯನೆರವನ /*pudiyanɛravana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಪುದುವೆಟ್ಟು /*puduvɛṭṭu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಪುದೆಲ್ /*pudeḷi*/ ನಾ. 1. ಪೊದರು, 2. ಪೊದೆ, 3. ಪೊಟರೆ, 4. ನೆಲದ ರಂಧ್ರ. 1. a bush, 2. a shrub, 3. a hole in the rock or tree, 4. a pit in the ground. ವಾ: ಪುದೆಲ್ ವಳೆಗೆ ಕೈ ಹಾಕಿಕಾಗದ್.

ಪುದ್ಕಜೆ /*pudkajɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಪುನ /*puna*/ ನಾ. 1. ಪುನಃ – ಪುನಃ, 2. ಮತ್ತೆ ಮತ್ತೆ. 1. again and again, 2. over and over again. ವಾ: ಪುನ ಪುನ ಕೇಳಿರೆ ಕೊಡ್ತುಲೆತ.

ಪುನರ್ಪುಳಿ /*punarpuḷi*/ ನಾ. 1. ಬಿರಿಂಡ ಹಣ್ಣು, 2. ಕೋಕಮ್ ಹಣ್ಣು. kokum fruit. Garcinia indica. ವಾ: ಪುನರ್ಪುಳಿ ಜೂಸ್ ಕುಡೆಕು.

ಪುನ್ಕುಟ್ಟಿ /*punkuṭṭi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ನೆಲ್ಲೂರು ಕೆಮ್ರಾಜೆ ಗ್ರಾಮದ ಜಾಗ. a locality in Nelluru Kemraje village in Sullia Taluk of Dakshina Kannada District.

ಪುರ /*pura*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮರ್ಕಂಜ ಗ್ರಾಮದ ಜಾಗ. 1. family, 2. lineage, 3. a locality in

Markanja village in Sullia Taluk of Dakshina Kannada District.

ಪುರಕೆ /*purakɛ*/ ನಾ. ರವಿಕೆ. a blouse. ವಾ: ಪುರಕೆ ಹಾಕ.

ಪುರಾತನ /*pura:tana*/ ನಾ. 1. ಹಳೆಯದು, 2. ಪೂರ್ವ ಕಾಲಕ್ಕೆ ಸಂಬಂಧಿಸಿದುದು, 3. ಹಿಂದಿನದು. 1. ancient, 2. antique, 3. antiquated. ವಾ: ಬಾರಿ ಪುರಾತನ ದೇಸ್ತಾನತ ಹೇಳ್ತಿದ್ದೊರ.

ಪುರಾವೆ /*pura:vɛ*/ ನಾ. 1. ಸಾಕ್ಷಿ, 2. ಆಧಾರ. 1. evidence, 2. proof. ವಾ: ಪುರಾವೆ ಎಂತನೂ ಸಿಕ್ಕಿತ್‌ಲೆ.

ಪುರಿಯ /*puriya*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಐವತ್ತೊಕ್ಲು ಗ್ರಾಮದ ಜಾಗ. a locality in Aivattoklu village in Sullia Taluk of Dakshina Kannada District.

ಪುರುಂಚ್ /*puruŋcɨ*/ ನಾ. 1. ಕಲಸಿ, 2. ಕಿವುಚಿ. 1. mixed, 2. squeezed. ವಾ: ಅನ್ನನ ಪುರುಂಚಿ ಕೂಸಿಗೆ ಕೊಟ್ಟರಾದು.

ಪುರುಸೊತ್ತು /*purusɔttu*/ ನಾ. 1. ವಿರಾಮ, 2. ಸಮಯಾವಕಾಶ. 1. a recess, 2. a break. ವಾ: ಪುರುಸೊತ್ತು ಮಾಡಿಕಂಡ್ ಮನೆ ಕಡೆ ಬನ್ನಿ ಬಲ. ಪ: ಪುರ್ಸೊತ್ತು. **ಪುರುಸೊತ್ತಿಲ್ಲೆ** /*purusɔttillɛ*/ ವಿರಾಮವಿಲ್ಲ. having no recess/no leisure. **ಮಾಡಿಕೆ ಕೆಲ್ಸ ಇಲ್ಲೆ, ಕುದ್ರಿಕೆ ಪುರುಸೊತ್ತಿಲ್ಲೆ(ಗಾ).** ವಾ: ಆಪೀಸ್ ಕೆಲ್ಸಂದ ಒಂಚೂರ್ ಪುರುಸೋತಿಲ್ಲೆ.

ಪುರುಳೆ /*puruḷɛ*/ ನಾ. ತೆನೆಯುಳ್ಳ ಒಂದು ಬಗೆ ಹುಲ್ಲು. a type of grass with an ear. ವಾ: ಪುರುಳೆ ಅರ್ವೆಗೆಲ್ಲ ಅಂಟಿಕಂಬದು. ಪ: ಅಂಟು ಪುರುಳೆ(ನಾ) – ಸೋಕಿದರೆ ಅಂಟಿಕೊಳ್ಳುವ ತೆನೆಯುಳ್ಳ ಒಂದು ಬಗೆಯ ಹುಲ್ಲು

ಪುರ್ಡುದು /*purḍudu*/ ಕ್ರಿ. ತಡವರಿಸುವುದು. to stammer. ವಾ: ಎಂತರ್‌ನ ನೀವು ಪುರ್ಡಿಕಂಡ್ ವಳರಿ.

ಪುರ್ಬು[1] /*purbu*/ ನಾ. ಕ್ರೈಸ್ತ ಗಂಡಸು. a christian man. ವಾ: ಪುರ್ಬು ಬಾತ್.

ಪುರ್ಬು[2] /*purbu*/ ನಾ. 1. ಹುಬ್ಬು, 2. ಒಡೆಯ. owner. ವಾ: ಪುರ್ಬುನ ಕೂದಲ್ ಕತ್ತರ್ಸಿಕಾಗದ್.

ಪುರ್ಲಕೋಟಿ /*purlako:ṭi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಪುರ್ಸರ ಮರಕೊಡ್ಪ /*pursa marakoḍpa*/ ನಾ. ಕಪ್ಪು ಬಣ್ಣದ ಮರಕುಟಿಗ. a black woodpecker.

ಪುರ್ಸಾದ /*pursa:da*/ ನಾ. ಪ್ರಸಾದ. an offering made to gods in a temple. ವಾ: ಪುರ್ಸಾದ ಸಿಕ್ಕಿತ?

ಪುಲೆಜಿ /*pulɛji*/ ನಾ. 1. ಮೀನಿನ ಮೇಲ್ಭಾಗದಲ್ಲಿ ಕಂಡುಬರುವ ಸಿಪ್ಪೆ/ಪೊರೆ, 2. ಹುರುಪೆ. scales of fish. ವಾ: ಒಣ್ಗಿಲ್ ಮೀನ್‌ದ್ ಪುಲೇಜ್ ತೆಗ್ದಿಸ್. ಪ: ಪೊಲ್ಜಿ

ಪುಲ್ಲಿ /*pulli*/ ನಾವಿ. ಚುಕ್ಕಿ. a dot. ವಾ: ಮೋರೆಲಿ ಒಂದ್ ಪುಲ್ಲಿ ಉಟ್ಟು. ಪ: ಪುಲ್ಲಿ ಪುಲ್ಲಿ – ಚುಕ್ಕಿ ಚುಕ್ಕಿ

ಪುಲ್ಲಿಪಚ್ಚೆ /*pullipaccɛ*/ ನಾವಿ. ಸಂಪೂರ್ಣ ಹಸಿರು. dark green. ವಾ: ಮಳೆ ಬಂದ್ ದೈ, ಹುಲ್ಲೆಲ್ಲ ಪುಲ್ಲಿ ಪಚ್ಚೆ ಆತ್.

ಪುಲ್ಲಿಪುತ್ರ /*pullipatra*/ ನಾ. 1. ಬಣ್ಣ ಬಣ್ಣದ ವಿಷದ ಹಾವು, 2. ಪೂರ್ಲಿಪುತ್ರ(ತು). a multi coloured dotted poisonous snake. ವಾ: ಪುಲ್ಲಿ ಪುತ್ರತ ಒಂದ್ ಜಾತಿನ ವಿಷದ ಹಾವ್.

ಪುಸ್ಕ /*puska*/ ಕ್ರಿವಿ. 1. ಸದ್ದಿಲ್ಲದೆ, 2. ಹೇಳದೆ ಕೇಳದೆ ಜಾಗ ಖಾಲಿ ಮಾಡು. 1. noiseless, 2. to escape. ವಾ: ಕೆಲ್‌ಸಕ್ಕೆ ಅವುಳ್‌ನ ಕರೆಕನ ಪುಸ್ಕತ ಜಾರಿಕಣ್ತ್.

ಪುಸ್ಕಟೆ /*puskaṭɛ*/ ನಾ. 1. ಉಚಿತ, 2. ಪುಕ್ಸಟ್ಟೆ, 3. ದುಡ್ಡಿಲ್ಲದೆ, 4. ಪುಕ್ಕಟೆ. 1. free, 2. at no cost, 3. costing no money, 4. not costing any money. ವಾ: ಪುಸ್ಕಟೆ ಸಿಕ್ಕಿರೆ ಎಲ್ಲೊವ್ಕು ಬೇಕ್.

ಪುಸ್ಕರಟ್ಟಿತ್ /*puskaraṭṭiti*/ ನಾ. 1. ಹೇಳದೆಹೋಗು, 2. ಸದ್ದಿಲ್ಲದೆಹೋದ, 3. ಜಾರಿಕೊಳ್ಳು. 1. to go without informing, 2. to go without telling anyone, 3. to evade. ವಾ: ಕೆಲ್‌ಸ ಹೆಚ್ಚಿಗೆ ಉಟ್ಟುತ ಗೊತ್ತಾಕನ ಪುಸ್ಕರಟ್ಟಿತ್.

ಪುಸ್ಟಿ /*pusṭi*/ ನಾ. 1. ಪುಷ್ಟಿ, 2. ಶಕ್ತಿ, 3. ಬೆಳವಣಿಗೆ. 1. vitality, 2. energy, 3. growth. ವಾ: ದೈ ಒಳ್ಳ ಪುಸ್ಟಿಲಿ ಬೆಳ್ದುಟು.

ಪುಸ್ತಕ /*pustaka*/ ನಾ. 1. ಪುಸ್ತಕ, 2. ಹೊತ್ತಿಗೆ, 3. ಗ್ರಂಥ.

1. a book, 2. a number of printed pages bound together, 3. a published written work. ವಾ: ಹುಟ್ಟುಹಬ್ಬಲಿ ಪುಸ್ತಕ ಕೊಡಿ.

ಪುಸ್‌ಲಾಯಿಸ್ /*pusila:yisi*/ ಕ್ರಿ. ಪ್ರೇರೇಪಿಸು, ಪ್ರೋತ್ಸಾಹಿಸು. to encourage. ವಾ: ಲಾಯ್ಕಲಿ ಪುಸ್‌ಲಾಯಿಸಿ ಬೇಕಾದರ ತಕಂಡ್ ಹೋದೆ.

ಪುಳಂಜನ /*puḷaɲjana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಪುಳಕಂಡ್ರ /*puḷakaṇḍra*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಪುಳಿ /*puḷi*/ ಕ್ರಿ. 1. ಕೈ ಕಾಲು ಸೆಳೆಯುವುದು, 2. ಎಳೆತ. 1. cramp in the legs and hands, 2. muscle cramps. ವಾ: ಹೆಚ್ಚಿ ನಡ್ದರೆ ಕಾಲ್ ಪುಳಿಯದು. ಪ: ಪುಳೆದು – ಸೆಳೆಯುವುದು

ಪುಳಿಕಟೆ /*puḷikaṭɛ*/ ನಾ. ಹುಣಿಸೆಬೀಜ. tamarind seed. ವಾ: ಪುಳಿಕಟೆನ ಹೊರ್‌ದ್ ನೀರಿಗೆ ಹಾಕಿ ತೊಪ್ಪೆ ತೆಗ್ದ್ ತಿಂದವೆ. ಪ: ಪುಲಿಂಕೊಟೆ(ತು)

ಪುಳಿಕುಕ್ಕು /*puḷikukku*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಎಡಮಂಗಲ ಗ್ರಾಮದ ಜಾಗ. 1. family, 2. lineage, 3. a locality in Edamangala village in Sullia Taluk of Dakshina Kannada District.

ಪುಳಿತ್ತಡಿ /*puḷittaḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಪುಳಿಮಾರಡ್ಕ /*puḷima:raḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಮರಪಡ್ನೂರು ಗ್ರಾಮದ ಜಾಗ. a locality in Amarapadnuru village in Sullia Taluk of Dakshina Kannada District.

ಪುಳಿಯಾಡಿ /*puḷiya:ḍi*/ ನಾವಿ. 1. ಜಾರಿಣಿ, 2. ಸೂಳೆ. 1. a prostitute, 2. a whore. ವಾ: ಪುಳಿಯಾಡಿ ಹೆಣ್ಣ್ ಅದ್. ಪ: ಪುಳಿಯಾಡ್ಚಿ

ಪುಳುಕು /*puḷuku*/ ನಾ. ಕಣ್ಣಿನಲ್ಲಿ ಬರುವ ಕಲ್ಮಶ. mucous membrane in the eye. ವಾ: ಕಣ್ಣ್‌ಲಿರೊ ಪುಳುಕುನ ತೆಗಿ. ಪ: ಪುರುಂಕು(ತು)

ಪುಳುಗುತ್ತಿ /*puḷugutti*/ ನಾ. ಬೆಳೆ ಕಟಾವಿನ ಬಳಿಕ ಅದರ ಬುಡವನ್ನು ಕೂಳೆ ಗುತ್ತಿ ಎನ್ನುವರು. stump that remains in the ground after harvest. ವಾ: ಪುಳುಗುತ್ತಿ ಕಾಲಿಗೆ ಹೆಟ್ಟುದು ನೋಡಿಕ. **ಪುಳುಗುತ್ತಿ ನೀರ್** /*puḷugutti ni:ri*/ ಬೆಳೆ ಕೊಯ್ದು ಉಳಿದ ಗುತ್ತಿಯಲ್ಲಿ ಮಂಜಿನ ನೀರು ಸೇರಿ ಆದ ನೀರು. mist formed in the harvested plot. ವಾ: ಗುತ್ತಿ ಮೇಲೆಲ್ಲ ಪುಳುಗುತ್ತಿ ನೀರ್ ನಿತ್ತುಟು.

ಪುಳೆಗುತ್ತಿ /*puḷɛgutti*/ ನಾ. 1. ಭತ್ತದ ಪೈರನ್ನು ಕೊಯ್ದು ಆದಮೇಲೆ ಉಳಿವ ಅದರ ಬುಡ, 2. ಒಡ್ಡು. the remaining stem of paddy after the harvest. ವಾ: ಪುಳೆಗುತ್ತಿ ಹೆಟ್ಟಿರೆ ಗಾಯ ಆದು. ಪ: ಒಡ್ಡು

ಪುಳೆದು /*puḷɛdu*/ ಕ್ರಿ. 1. ಸೆಳವು, 2. ಶೀತದಿಂದ ಉಂಟಾಗುವ ನರಗಳ ಬಿಗಿತ. tightness in the nerves due to cold. ವಾ: ಕೈ ಕಾಲ್ ಪುಳೆದು.

ಪುಳ್ಕು /*puḷku*/ ನಾ. ಕಣ್ಣಿನ ಸಿಬರೆ. Eye Mucus. ವಾ: ಪುಳ್ಕುನ ತೆಗ್ದ್ ಬಾ.

ಪುಳ್ಳಿ /*puḷḷi*/ ನಾ. 1. ಮೊಮ್ಮಗ, 2. ಮರಿಮಕ್ಕಳು, 3. ಮರಿಮಗ/ಳು. 1. a grandson,2. great grandchildren, 3. great grandson/daughter. ವಾ: ಪಿಳ್ಳಿಕ ಬಂದೊ.

ಪುಳ್ಳಿಕಂಗ /*puḷḷikaŋga*/ ನಾ. ಮೊಮ್ಮಕ್ಕಳು. grand children. ವಾ: ಪುಳ್ಳಿಕಂಗ ನಿಮ್ಮಲ್ಲಿಗೆ ಬಂದೊಳನ?

ಪೂಂಕಿ /*pu:ŋki*/ ನಾ. ಹೂಸು (ಬಾಲ ಭಾಷೆ). fart (in the vocabulary of children). ವಾ: ಅಂವ ಪೂಂಕಿ ಬುಟ್ಟ್ ಓಡಿ ಹೋತಲ. ಪ: ಹ್ಹೂಸು

ಪೂಂಗೊಟ್ಟು /*pu:ŋgoṭṭu*/ ನಾ. ಅಗಲ ಕಿರಿದಾದ ಹಾರೆ. a small crow-bar with small chisel edge. ವಾ: ಪೂಂಗೊಟ್ಟುನ ಎಲ್ಲಿಸಿದನೆ?

ಪೂಂಡ್ರುಕೋಡಿ /*pu:ṇḍruko:ḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಪೂಂಬಾಡಿ /*pu:mba:ḍi*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮಡಪ್ಪಾಡಿ ಗ್ರಾಮದ ಜಾಗ. 1. family, 2. lineage, 3. a locality in Madappadi village in Sullia Taluk of Dakshina Kannada District.

ಪೂಂಬಾಳೆ /*pu:mba:ḷɛ*/ ನಾ. 1. ಹೊಂಬಾಳೆ, 2. ಅಡಿಕೆ ಹಿಂಗಾರದ ಹೊದಿಕೆ. 1. tender spathe behind

banana flower, 2. spathe of areca palm. ವಾ: ಪೂಂಬಾಳೆ ದನಗಳಿಗೆ ತಿಂಬಕೆ ಲಾಯ್ಕ್.

ಪೂಂಬೆ /*ku:mbɛ*/ ನಾ. ಬಾಳೆಯ ಹೂ. Banana blossoms. ವಾ: ಕೂಂಬೆನ ಕರ್‌ಗಳಿಗೆ ತಿನ್‌ಸಿರೆ ಹುಳ ಹೋದೆ. **ಪೂಂಬೆಚಟ್ನಿ** /*pu:mbɛcɛṭni*/ ಬಾಳೆಯ ಹೂವಿನ ಚಟ್ನಿ. a chutney made of banana flower. ವಾ: ಪೂಂಬೆ ಚಟ್ನಿ ತಿಂದ್ ನೋಡೊಮ್ಮೆ.

ಪೂಕರೆ ಮಜಲು /*pu:karɛ majalu*/ ನಾ. ಕಂಬಳದ ಗದ್ದೆ. a field where buffalo race is organised. ವಾ: ಪೂಕರೆ ಮಜಲುಲಿ ಕೋಣಗಳ ಓಡ್ಸುದು.

ಪೂಕುಳಿ /*pu:kuḷi*/ ಕ್ರಿವಿ. 1. ಗುದದ್ವಾರ, 2. ಪುಕುಳಿ/ ಮುಕುಳಿ. anus. ವಾ: ಕೂಸ್ ಹೇತುಟು, ಪೂಕುಳಿನ ತೊಳಿಯಕಾಯ್ತ್.

ಪೂಕೊಳೆ /*pu:koḷɛ*/ ನಾ. ಭೂತಕೋಲದ ಸಂದರ್ಭದಲ್ಲಿ ಗದ್ದೆಯಲ್ಲಿ ಎಳೆಯುವ ಬಿದಿರಿನಿಂದ ತಯಾರಿಸಿದ ರಥದಂತ ಆಕೃತಿ. a bamboo chariot drawn in a field during bhuta/deity/spirit worship. ವಾ: ಪೂಕೊಳೆನ ಎಳಿತೊಳ. ಪ: ಪೂಕರೆ(ತು)

ಪೂಕ್ ಇಲ್ಲೆ /*pu:kɨ illɛ*/ ನಾ. ಧೈರ್ಯ ಇಲ್ಲ. timid. ವಾ: ಅಂವಂಗೆ ಪೂಕ್ ಇಲ್ಲೆ ಸುಮ್ಮನೆ ಕೊಚ್ಚುದು.

ಪೂಚಿ /*pu:ci*/ ನಾ. ಮಭಾ. ಹೆಣ್ಣು ಮಗುವಿನ ಜನನಾಂಗ. reproductive organ of a female child (in the vocabulary of children).

ಪೂಚೆ /*pu:cɛ*/ ನಾ. ಬೆಕ್ಕು (ಬಾಲ ಬಾಷೆ). a cat (in the vocabulary of children). ವಾ: ಪೂಚೆ ಬಾಲನ ಹಿಡ್ಯನೊ.

ಪೂಜಾರಿ[1] /*pu:ja:ri*/ ನಾ. 1. ನಡಾವಳಿ, 2. ನೇಮ, 3. ಜಾತ್ರೆ ಸಂದರ್ಭಗಳಲ್ಲಿ ಕುಟುಂಬದ/ ಊರಿನವರ ಪರವಾಗಿ ಮುಂದಾಗಿ ನಿಂತು ಕಾರ್ಯಕ್ರಮ ನಡೆಸಿಕೊಡುವವ. 1. a religious festival, 2. a religious ceremony in the honour of the bhutas/deities, 3. a festival celebrated on behalf of the family or town. **ದೇವ್‌ರ್ ಕೊಟ್ಟರೂ ಪೂಜಾರಿ ಬುಡಿಕಿಲ್ಲೆ(ಗಾ).** ವಾ: ಪೂಜಾರಿ ಬಂದೊ ಪೂಜೆ ಮಾಡಿಕೆ.

ಪೂಜಾರಿ[2] /*pu:ja:ri*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಪೂಜಾರಿ[3] /*pu:ja:ri*/ ನಾ. ತುಳುನಾಡಿನ ಒಂದು ಜಾತಿಯ ಹೆಸರು. Pujari, a caste in Tulunadu. ವಾ: ಅದ್ ಮಂಗ್ಳೂರ್ ಪೂಜಾರಿನ ಮನೆ.

ಪೂಜಾರಿಕೋಡಿ /*pu:ja:riko:ḍi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ನಾಲ್ಕೂರು ಗ್ರಾಮದ ಜಾಗ. a locality in Nalkuru village in Sullia Taluk of Dakshina Kannada District.

ಪೂಜಾರಿಗದ್ದೆ /*pu:ja:rigaddɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಪೂಜಾರಿಮನೆ /*pu:ja:rimanɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಪೂಜಾರಿರ /*pu:ja:rira*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಪೂಜಾರ್ಮೆ /*pu:ja:rmɛ*/ ನಾ. ಪೂಜೆ ಮಾಡುವ ಕೆಲಸ. worshipping gods in a temple, a priesthood. ವಾ: ಪೂಜಾರ್ಮೆನ ಲಾಯ್ಕಲಿ ಕಲ್ತ್‌ಕ.

ಪೂಜಿ[1] /*pu:ji*/ ಕ್ರಿ. 1. ಪೂರ್ತಿಯಾಗಿ, 2. ಸಂಪೂರ್ಣವಾಗಿ, 3. ಮನಾರವಾಗಿ. 1. completely. 2. entirely, 3. solely. ವಾ: ಬಟ್ಟ್‌ಲಿ ಅನ್ನ ಬುಡದೆ ಪೂಜಿ ಉಂಬೊಕು.

ಪೂಜಿ[2] /*pu:ji*/ ಕ್ರಿ. ಸವರು. to touch gently/to smear. ವಾ: ಕರ್‌ದ್ ಮೈನ ಪೂಜಿ ನೋಡುದು.

ಪೂಜಿತ್ /*pu:jitu*/ ಕ್ರಿ. ಒರೆಸುವುದು. to smear/to rub/to apply. ವಾ: ಮೇಜಲಿ ಗೈಪು ಸೂಸಿದರ ಪೂಜಿತು.

ಪೂಜು /*pu:ju*/ ಕ್ರಿ. 1. ಲೇಪಿಸು, 2. ಹಚ್ಚು. 1. to coat, 2. to apply. **ಕುಂಬ್ಳಕಾಯ್ ಕಳ್ಳತೀಳ್ರೆ, ಹೆಗ್ಲ್ ಪೂಜಿ ನೋಡ್ತ್ ಗಡ(ಗಾ).** ವಾ: ಹಣೆಗೆ ಮೊದ್ದ್‌ನ ಪೂಜು.

ಪೂಜೆ /*pu:jɛ*/ ಕ್ರಿ. ದೇವರನ್ನು ಆರಾಧಿಸುವುದು ಬೇರೆ ಬೇರೆ ಸಂದರ್ಭಗಳಲ್ಲಿ ವೈವಿಧ್ಯಮಯ ರೀತಿಯಲ್ಲಿ ದೇವರನ್ನು ಪೂಜಿಸಲಾಗುತ್ತದೆ. worshipping gods, in a number of ways on different occasions. ವಾ: ಹಬ್ಬಲಿ ದೇವರ ಪೂಜೆ ಜೋರಾಗಿತ್ತ್.

ಪೂದ್ರುಕೋಡಿ /*pu:druko:ḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಪೂಪಿ /*pu:pi*/ ನಾ. ಹೂವು (ಬಾಲ ಭಾಷೆ). flower (in the vocabulary of children). ವಾ: ದೈಲಿ ಎಸ್ಟ್ ತರದ ಪೂಪಿಗ ವಳೊಲ.

ಪೂರ /*pu:ra*/ ಕ್ರಿವಿ. ಎಲ್ಲಾ, ಸಂಪೂರ್ಣ. everything. ವಾ: ಬಟ್ಲ್ ಲಿರೊ ಅನ್ನನ ಪೂರ ತಿನ್ನೊಕು ಬಲಾ.

ಪೂರೈಸಿಕೆ /*pu:raisikɛ*/ ಕ್ರಿ. 1. ಸಾಕಾಗುವಷ್ಟು, 2. ಪೂರ್ಣಗೊಳಿಸು, 3. ತುಂಬು. 1. as much as one needs, 2. to complete, 3. to fill. ವಾ: ಅಂವ್ನ ಆಸೆನ ಪೂರೈಸಿಕೆ ಆದುಲೆಪ.

ಪೂರ್ಣಮನೆ /*pu:rṇamanɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಪೂರ್ತಿ /*pu:rti*/ ಕ್ರಿವಿ. 1. ಸಂಪೂರ್ಣ, 2. ಎಲ್ಲವನ್ನು, ಮುಗಿಸು. 1. completely, 2. everything, 3. to complete. ವಾ: ಇಸ್ಟ್ ಇಕ್ಕಿದರ ಪೂರ್ತಿ ಉಂಬಕೆ ಆದೊ?

ಪೂರ್ಲಪಾಡಿ /*pu:rlapa:ḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಪೂರ್ಲಾಡಿ /*pu:rla:ḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಪೂರ್ವಿಕರ್ /*pu:rvikar*/ ನಾ. 1. ಪೂರ್ವಿಕರು, 2. ಹಿರಿಯರು. 1. ancestors, 2. elders. ವಾ: ಪೂರ್ವಿಕರ್ ಬಿಟ್ಟ್ ಹೋದ ಆಸ್ತಿನ ಕಾಪಾಡಿಕಣೊಕು.

ಪೂಲಕಂಡ /*pu:lakaṇḍa*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಪೂವ/ಪೊವ್ವ /*pu:va/ povva*/ ನಾ. ಚೆಂದ (ಬಾಲ ಭಾಷೆ). beautiful (in the vocabulary of children). ವಾ: ಎಸ್ಟ್ ಪೊವ್ವಲ ನಾಯಿ ಮೊರಿ.

ಪೂವಚ್ಚಿ /*pu:vacci*/ ನಾ. ಬಸವನ ಹುಳ. a snail. ವಾ: ಪೂವಚ್ಚಿ ದೈನ ತಿಂಬೊದು.

ಪೂವಣಿ /*pu:vaṇi*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. masculine given name. ಪ: ಪೋಣಿ

ಪೂವಪ್ಪ /*pu:vappa*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. masculine given name. ಪ: ಪೂವಣ್ಣ

ಪೂವಮ್ಮ /*pu:vamma*/ ನಾ. ವ್ಯಕ್ತಿ ಹೆಸರು, ಸ್ತ್ರೀ ವಾಚಕ. feminine given name. ಪ: ಪೂವಕ್ಕ

ಪೂವಲಿ ಮರ /*pu:vali mara*/ ನಾ. ಈ ಮರದ ಕಾಯಿಯನ್ನು ಜಜ್ಜಿ ಬತ್ತಿ ಮಾಡುತ್ತಾರೆ, ಬೀಜದಿಂದ ಎಣ್ಣೆ ತೆಗೆಯುತ್ತಾರೆ. oil is extracted from the nut of this tree, the crushed nut is used as a wick. ವಾ: ಪೂವಲಿ ಮರದ ಕಾಯಿಲಿ ಎಣ್ಣೆ ತೆಗ್ಯಕ್.

ಪೂವಾಜೆ /*pu:va:jɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಪೂವೆ /*pu:vɛ*/ ನಾ. ಹುಣ್ಣಿಮೆಯ ಮರು ದಿನ. first day after the full moon day. ವಾ: ಪೂವೆ ದಿನ ಅವರ್‌ನ ಬಾಕೆ ಹೇಳಿರಾದು.

ಪೂವೊಳ್ /*pu:voḷɨ*/ ನಾ. ಹೊಕ್ಕುಳು. navel. ವಾ: ಪೂವೊಳ್ ಬೊಳ್ಳಿ.

ಪೂಸಿ /*pu:si*/ ನಾ. 1. ನಾಜೂಕುತನ, 2. ಮುದ್ದುಮಾಡು. 1. to act stealthily, 2. to pamper. ವಾ: ಈ ಗೂಡೆಗೆ ಕೆಲ್ಸಲಿ ಹಳ್ಳನೂ ಪೂಸಿ ಇಲ್ಲೆ.

ಪೂಸಿಮಾಡ್ /*pu:sima:ḍɨ*/ ಕ್ರಿ. 1. ಹೊಗಳುವುದು, 2. ಮುಖಸ್ತುತಿ ಮಾಡುವುದು. 1. to praise, 2. to flatter. ವಾ: ಎದ್‌ರ ಕಾಂಬಕನ ಪೂಸಿಮಾಡ್‌ದು, ಹಿಂದೆಂದ ಬೈಯ್ಯದು.

ಪೂಸ್ /*pu:s*/ ಕ್ರಿ. 1. ತೀಡುವುದು, 2. ಉಜ್ಜು, 3. ನೇವರಿಸು, 4. ತಿದ್ದು. 1. to scrub, 2. to rub, 3. to touch gently, 4. to correct. ವಾ: ಕೂಸ್‌ದ್ ಹಣೆನ ಎಣ್ಣೆ ಹಾಕಿ ಪೂಸ್.

ಪೆಂಗ /*peŋga*/ ನಾ. 1. ಪೆದ್ದ, 2. ಹೆಡ್ಡ, 3. ದಡ್ಡ. 1. an idiot, 2. a fool, 3. a stupid. ವಾ: ನೀ ಪೆಂಗನಂಗೆ ಆಡ್‌ಬಡ.

ಪೆಗ್ಗ್ /*pɛggɨ*/ ಪವಾ. ಎಪ. ಪೆಗ್ಗು (60 ಮಿಲಿ). one peg-60 ml. ವಾ: ಬಾರ ಒಂದ್ ಪೆಗ್ಗ್ ಹಾಕಿ ಬರೊನೊ.

ಪೆಚ್ಚಿದೆ /*pɛccidɛ*/ ನಾ. 1. ಮೆತ್ತು, 2. ಬಳಿ, 3. ಲೇಪಿಸು. 1. to apply, 2. to paste, 3. to coat. ವಾ: ಮೋರೆಕೆ ಎಂತೆಲ್ಲ ಪೆಚ್ಚಿದೆ.

ಪೆಟಿಗೆ /*pɛṭigɛ*/ ನಾ. 1. ಪೆಟ್ಟಿಗೆ, 2. ಪೆಠಾರಿ, 5.

ಸಂದೂಕ. 1. a box, 2. a wooden container, 3. a cabinet/cupboard. ವಾ: ಇದ್ ನಮ್ಮವ್ವ ಕೊಟ್ಟ ಪಂಡ್‌ನ ಮರದ ಪೆಟ್ಟಿಗೆ. ಪ: ಪೆಟ್ಟಿಗೆ

ಪೆಟ್ಗೆಜೇನ್ /*pɛṭgɛje:nɨ*/ ನಾ. 1. ಜೇನು ಸಾಕಣೆಯ ಒಂದು ವಿಧ, 2. ಪೆಟ್ಟಿಗೆಯನ್ನಿಟ್ಟು ಜೇನು ಕೃಷಿ ಮಾಡುವುದು, 3. ಪೆಟ್ಟಿಗೆ ಜೇನು. 1. one of the ways of honey bee keeping, 2. Bee rearing in a wooden box, 3. box honey. ವಾ: ಪೆಟ್ಗೆ ಜೇನ್ ಲಾಯ್ಕ. ಪ: ಪೆಟ್ಟಿಗೆ ಜೇನ್

ಪೆಟ್ಟಾಗಿ /*pɛṭṭa:gi*/ ನಾ. 1. ಪೆಟ್ಟಾಗು, 2. ಗಾಯ, 3. ದೇಹದ ಯಾವುದೇ ಭಾಗಕ್ಕೆ ಆದ ಗಾಯ. 1. to get wounded, 2. wound, 3. wound on any part of the body. ವಾ: ಕುಂಡತ ಮೊರಿಗೆ ಪೆಟ್ಟಾಗಿ ಮರಂದ ಬೀತ್.

ಪೆಟ್ಟಿಕೋಟ್ /*peṭṭiko:ṭɨ*/ ನಾ. ಎಪ. 1. ಹೆಣ್ಣು ಮಕ್ಕಳ ಒಳ ಉಡುಪು, 2. ಲಂಗ. 1. an underskirt, 2. petticoat. ವಾ: ಪೆಟ್ಟಿಕೋಟ್ ಕಟ್ಟಿ ಸೀರೆ ಉಡ್‌ದು.

ಪೆಟ್ಟಿಗೆ ತುಂಬುಸುದು /*peṭṭigɛ tumbusudu*/ ನಾ. ವಧುವಿನ ಮನೆಯಲ್ಲಿ ವಧುವನ್ನು ಮುಹೂರ್ತದಿಂದ ಏಳಿಸಿ ಊಟವಾದ ನಂತರ ದಿಬ್ಬಣ ಬರುವುದಕ್ಕೆ ಮುಂಚೆ ವಧುವಿನ ಸಮಕ್ಷಮದಲ್ಲಿ ವಧುವಿನ ತಾಯಿ ಹಾಗು ಹಿರಿಯರು ಸೇರಿ ತಾಯಿಯ ಕಡೆಯಿಂದ ಕೊಡುವ ಎಲ್ಲ ಬಳುವಳಿ ಸಾಮಾನುಗಳನ್ನು ಪೆಟ್ಟಿಗೆಯಲ್ಲಿ ತುಂಬಿ ಅದರ ವಿವರವನ್ನು ಪಟ್ಟಿ ಮಾಡುವುದು. to list and pack the gifts received by the bride from her mother. Usually it is done in the presence of the bride by ther mother and other relatives. ವಾ: ಪೆಟ್ಟಿಗೆ ತುಂಬುಸುದು ಸಾಸ್ತ್ರ ನಡಿತುಟ್ಟು.

ಪೆಟ್ಟ್ /*peṭṭi*/ ನಾ. 1. ಏಟು, 2. ಹೊಡೆತ. 1. a blow, 2. beating. **ಅತ್ತೆಮ್ಯಾಲೆ ಸಿಟ್ಟ್, ಕೊತ್ತಿಗೆ ಪೆಟ್ಟ್(ಗಾ).** ವಾ: ಇಸ್ಕೂಲ್‌ಲಿ ಪೆಟ್ಟ್ ಸಿಕ್ಕಿತಾ? ಪ: ಪೆಟ್ಟು

ಪೆಟ್ಟ್ ಕೂಟ /*peṭṭɨ ku:ṭa*/ ನಾ. 1. ಹೊಡೆದಾಡು, 2. ಬಡಿದಾಡು, 3. ಪೆಟ್ಟು ಹಾಕು. 1. fighting, 2. combat, 3. to beat. ವಾ: ಪೆಟ್ಟ್ ಕೂಟಕೆ ಹೋದ್ಯಾಕೆ ನೀ, ಸುಮ್ಮನೆ ಇರಿಕೆ ಬೊತ್ತಾ?

ಪೆಟ್ಟ್ ಸಿಕ್ಕುದು /*peṭṭɨ sikkudu*/ ನಾ. 1. ಅಗೋಚರ ಶಕ್ತಿಯ ತೊಂದರೆ ಎಂಬ ನಂಬಿಕೆ, 2. ಹಳ್ಳಿಗಳಲ್ಲಿ ಇದ್ದಕ್ಕಿದ್ದಂತೆ ಆರೋಗ್ಯವಂತ ವ್ಯಕ್ತಿ ಯಾರಾದರು ನಿಷಿದ್ಧ ಸ್ಥಳಗಳಿಗೆ ತೆರಳಿ ಸತ್ತರೆ ಅಗೋಚರ ಶಕ್ತಿಯ ಉಪದ್ರವವೆಂದು ನಂಬುವುದು. 1. a belief in supernatural forces, 2. mysterious death of a healthy individual of the village after returning from the forbidden place. It is assumed to be the effect of supernatural forces. ವಾ: ಅತ್ತನ ಬರಿಗೆ ಹೋಕಾದ್ ತೇಳ್ಡೊ, ಅಲ್ಲಿ ಪೆಟ್ಟ್ ಸಿಕ್ಕಿ ಸುಮಾರ್ ಜೆನ ಸತ್ತೊಳೊಗಡ.

ಪೆಟ್ಟ್‌ಕಮ್ಮಿ /*peṭṭkɨammi*/ ನಾವಿ. 1. ಮನೋರೋಗಿ, 2. ತಿಳುವಳಿಕೆ ಕಡಿಮೆ, 3. ಸುತ್ತು ಕಡಿಮೆ. 1. mentally unsound person, 2. lacking knowledge, 3. an unsound person. **ಪೆಟ್ಟ್‌ಕಡ್‌ಮೆನವ(ನು).** ವಾ: ಅದಿಕೆ ಹಞ ಪೆಟ್ಟ್‌ಕಮ್ಮಿ.

ಪೆಡಣ ಬಾಗಿಲ್ /*peḍaṇa ba:gilɨ*/ ನಾವಿ. ಮನೆಯ ಮುಂದಿನ ಬಾಗಿಲು. the front door of a house. ವಾ: ಪೆಡಣ ಬಾಗಿಲ್‌ಗೆ ಒದೆಕಾದ್, ಕಟ್ಟ್‌ಳೆನ ಮೆಟ್ಟಿ ನಿಲ್ಲಿಕಾದ್.

ಪೆತ್ತಾಜೆ /*petta:je*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ತೊಡಿಕಾನ ಗ್ರಾಮದ ಜಾಗ. a locality in Todikana village in Sullia Taluk of Dakshina Kannada District.

ಪೆದಂಬು /*pedambu*/ ಕ್ರಿವಿ. 1. ವಿರೋಧ ಮಾತಾಡು, 2. ಅಧಿಕಪ್ರಸಂಗಿ. 1. to dissent, 2. meddlesome/ intruding. ವಾ: ಪೆದಂಬು ಮಾತಾಡಿರೆ ಒಂದ್ ಕೆಪ್ಪೆಗೆ ಬಾರ್‌ಸೊಕುತಾದೆ. ಪ: ಪೆದುಂಬ – ಅಧಿಕಪ್ರಸಂಗಿ; ಪೆದುಂಬರ್ – ಅಧಿಕಪ್ರಸಂಗಿಗಳು. **ಪೆದುಂಬಮಾತ್** /*pedumbama:tɨ*/ 1. ಅಸಂಬದ್ಧ ಮಾತು, 2. ವಿರೋಧ ಮಾತು. 1. to talk indistintively/to blabber 2. to dissent. ವಾ: ಪೆದುಂಬ ಮಾತ್ ಕೇಳಿರೆ ಸಿಟ್ಟ್ ಬಾದುತ. ಪ: ಪೆದುಂಬು

ಪೆದ್ದ /*pedda*/ ನಾ. ದಡ್ಡ. an idiot. ವಾ: ಪೆದ್ದನಾಂಗೆ ಮಾತಾಡ್‌ದು.

ಪೆದ್ದಪಿಜಿನ್ /*peddapijinɨ*/ ನಾವಿ. ಇರುವೆಗಳ ವಿಧಗಳು. types of ants. ವಾ: ಪೆದ್ದ ಪಿಜಿನ್‌ತ ಸ ಉಟ್ಟಾ?

ಪೆದ್ದೋಳ್ತಿ /*peddo:ḷti*/ ನಾ. 1. ಬಾಣಂತಿ, 2.

ಬಾಣಂತನ. 1. a new mother, 2. a postpartum (or postnatal) period. ವಾ: ಪೆದ್ದೋಳ್ತಿ ನ ನೋಡಿಕೆ ಹೋಕಾಗಿತ್.

ಪೆದ್ಮಲೆ /*pedmali*/ ನಾ. ಔಷಧಿ ಎಲೆ. a medical leaf.

ಪೆನ್ನ್ /*penni*/ ನಾ. ಎಪ. 1. ಪೆನ್ನು, 2. ಲೇಖನಿ. a pen. ವಾ: ಪೆನ್ನ್ ರಾಸಿ ಬಿದ್ದುಟು.

ಪೆಪ್ಪಿ /*peppi*/ ನಾ. ಮಭಾ. 1. ಮಿಠಾಯಿ. a dessert (in the vocabulary of children). ವಾ: ಮಕ್ಕಳಿಗೆ ಪೆಪ್ಪಿತೇಳಿರೆ ಬಾರಿ ಕುಸಿ.

ಪೆಮ್ಮಟೆ /*pemmaṭɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಪೆರಂಗಜೆ /*peran:gaje*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಪೆರಗಾಳ್ಡೆ /*peraga:ḷdɛ*/ ನಾ. ಅರೆಭಾಷೆಯ ಒಂಬತ್ತನೇಯ ತಿಂಗಳು. 9th month of Arebhashe calendar. ಪ: ಪೆರಾರ್ದೆ(ತು)

ಪೆರಲ್ಮೂಲೆ /*peralmu:lɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಪೆರಾಜೆ[1] /*pera:jɛ*/ ನಾ. ಸ್ಥಳನಾಮ. Peraje, a place.

ಪೆರಾಜೆ[2] /*pera:jɛ*/ ನಾ. ಮಡಿಕೇರಿ ತಾಲೂಕಿನ ಪೆರಾಜೆ ಗ್ರಾಮದ ಜಾಗ. a locality in Peraje village in Sullia Taluk of Madikeri.

ಪೆರಾಬೆ /*pera:bɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಪೆರಾರ್ದೆ /*pera:rdi*/ ನಾ. ಅರೆಭಾಷೆಯ ಒಂಬತ್ತನೇ ತಿಂಗಳು. 6th month in Arebhashe calendar. ವಾ: ಪೆರಾರ್ದೆ ತಿಂಗಳ್ಲಿ ಬಾರಿ ಸೆಳಿ ಇದ್ದದೆ.

ಪೆರಿಗೇರಿ /*perige:ri*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಪೆರಿಜುವ /*perijuva*/ ನಾ. 1. ದೊಡ್ಡಜೀವ, 2. ಹೆದರಿಕೊಳ್ಳುವುದು. 1. a hefty person, 2. to be scared. ವಾ: ಅನೆ ಎದುರ ಬಂದದರ ಕಂಡ್ ಪೆರಿಜುವ ಹೋತ್.

ಪೆರಿಯಪೊಮಣ್ಣ /*periyapomaṇṇa*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಪೆರಿಯಾನ /*periya:na*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಪೆರುಂಗೋಡಿ /*peruŋgo:ḍi*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಸಂಪಾಜೆ ಗ್ರಾಮದ ಜಾಗ. 1. family, 2. lineage, 3. a locality in Sampaje village in Sullia Taluk of Dakshina Kannada District.

ಪೆರುಂಬಾರು /*perumba:ru*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕನಕಮಜಲು ಗ್ರಾಮದ ಜಾಗ. a locality in Kanakamajalu village in Sullia Taluk of Dakshina Kannada District.

ಪೆರುಬಾಯಿ /*peruba:yi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಪೆರುಮುಂಡ /*perumuṇḍa*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಪೆರುವಾಜೆ /*peruva:je*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಪೆರುವಾಜೆ ಗ್ರಾಮದ ಜಾಗ. 1. family, 2. lineage, 3. a locality in Peruvaje village in Sullia Taluk of Dakshina Kannada District.

ಪೆರ್‌ಚೂಳಿ /*pericu:ḷi*/ ನಾ. 1. ದೃಷ್ಟಿ ಗೊಂಬೆ, 2. ಹೊಲ, ಗದ್ದೆಗಳಲ್ಲಿ ಪ್ರಾಣಿ ಪಕ್ಷಿಗಳು ಬಾರದಂತೆ, ದೃಷ್ಟಿಯಾಗದಂತೆ ನಿಲ್ಲಿಸುವ ಹುಲ್ಲಿನ ಗೊಂಬೆ, 3. ಬೆದರುಗೊಂಬೆ, 4. ಕೊಡವ ಭಾಷೆಯಲ್ಲಿ ಹೆಗ್ಗಣ. a scarecrow, an effigy of a person dressed in old clothes to frighten the birds away. ವಾ: ಪೆರ್ ಚೂಳಿನ ಗದ್ದೆದ್ ನೊಡುಲಿ ಕಾಣುವಂಗೆ ಇಸೊಕು, ಆಗ ಬೆಳೆ ತಿಂಬಕೆ ಹಕ್ಕಿಗ ಬಾದುಲೆ. ಪ: ಪೆರ್ಚಿ

ಪೆರ್ಚಪ್ಪ /*pɛrcappa*/ ನಾ. 1. ಬೆದರುಗೊಂಬೆ, 2. ಬೆಚ್ಚಗಡಿಗೆ, 3. ರೈತರು ಪಶು -ಪಕ್ಷಿಗಳನ್ನು ಓಡಿಸಲು ಹೊಲದಲ್ಲಿ ಒಂದು ಕೋಲಿಗೆ ಗಡಿಗೆಯನ್ನು ಬೋರಲಾಗಿ ಸಿಕ್ಕಿಸಿ ಅದಕ್ಕೆ ಅಂಗಿ ತೊಡಿಸಿ ಮನುಷ್ಯನ ಆಕಾರ ಕೊಡುವರು. a scarecrow, an effigy of a person dressed in old clothes to frighten the birds away. ವಾ: ಹಕ್ಕಿಗ ಬಂದವೆತ ಪೆರ್ಚಪ್ಪನ ಮಾಡಿಸುದು.

ಪೆರ್ಚಿ[1] /*pɛrci*/ ನಾವಿ. 1. ನಾಚಿಕೆ ಸ್ವಭಾವ, 2. ಬೆರೆಯುವ ಸ್ವಭಾವ ಇಲ್ಲದ, 3. ರೂಢಿಯಿಲ್ಲದ, 4. ಚಡಪಡಿಸು. 1. feeling shy, 2. someone who doesn't mingle with other, 3. not in practice, 4. to be anxious. ವಾ: ಅಂವ ಬಾರಿ ಪೆರ್ಚಿನ ಹೈದ.

ಪೆರ್ಚಿ[2] /*pɛrci*/ ನಾ. ಪೆರ್ಚಪ್ಪ, a scarecrow, an effigy of a person dressed in old clothes to frighten the birds away. ವಾ: ಹುಲ್ಲ್‌ದ್ ಪೆರ್ಚಿ ಮಾಡಿಸುದು.

ಪೆರ್ಚಿ[3] /*pɛrci*/ ನಾ. 1. ಭಯ, 2. ಹುಚ್ಚು ಕಟ್ಟು, 3. ಬೆಚ್ಚಿಬೀಳು, 4. ಗಾಬರಿ. 1. fear, 2. to lose one's mind, 3. to be shocked, 4. to be baffled. ವಾ: ಹೂಡಿಕಂಡಿರಕನ ಕೆಂಪು ಅರ್ವೆ ಹಾಕಂಡ್ ಹೋದರೆ ಎತ್ತ್‌ಗ ಪೆರ್ಚಿ ಆದವೆ.

ಪೆರ್ಜ /*perja*/ ನಾ. ಮಡಿಕೇರಿ ತಾಲೂಕಿನ ಪೆರಾಜೆ ಗ್ರಾಮದ ಜಾಗ. Perja, a place in Peraje Village in Madikeri taluk.

ಪೆರ್ಜಿ /*perji*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಪೆರುವಾಜೆ ಗ್ರಾಮದ ಜಾಗ. a locality in Peruvaje village in Sullia Taluk of Dakshina Kannada District.

ಪೆರ್ಡಿ /*pɛrḍi*/ ನಾ. 1. ದವಡೆ, 2. ಅವುಡು, 3. ಆಹಾರವನ್ನು ಅಗಿಯುವ ಭಾಗ, 4. ಕಪೋಲದ ಒಳಭಾಗದಲ್ಲಿರುವ ಒಸಡಿನ ಭಾಗ, 5. ದಂತಪೀಠ. 1. jaw, 2. the gums, 3. the molars, 4. the gums or gingiva 5. teeth ridge.

ಪೆರ್ಡೆ /*pɛrḍɛ*/ ನಾ. 1. ದವಡೆ, 2. ಅವುಡು, 3. ಆಹಾರವನ್ನು ಅಗಿಯುವ ಭಾಗ, 4. ಕಪೋಲದ ಒಳಭಾಗದಲ್ಲಿರುವ ಒಸಡಿನ ಭಾಗ, 5. ದಂತಪೀಠ. jaw, two bony structures in the mouth that contain teeth and used in chewing food. ವಾ: ಪೆರ್ಡೆಗೆ ಪೆಟ್ಟ್ ಕೊಡ್‌ದು ಅಪಾಯ. ಪ: ಪೆರ್ಡಿ

ಪೆರ್ನಾಜೆ /*perna:jɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಪೆರ್ನೆ /*pernɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಪೆರ್ಪಣ /*pɛrpaṇa*/ ನಾ. 1. ದರ್ಗುಲಿ, 2. ಸಣ್ಣ ಜಾತಿಯ ಚಿರತೆ. 1. 2. a leopard, 3. a small cheetah. ವಾ: ಪೆರ್ಪಣ ಮನೆಹಕ್ಕಲೆ ಬಂದ್ ಗೂಡ್‌ಂದನೆ ಕೋಳಿ ಹೊತ್ತದೆ, ಮರಲಿ ಕುದ್ದರೂ ಗೋಡೆ ಮೇಲೆ ಕುದ್ದರೂ ಹಿಡ್‌ದದೆ, ಹತ್ತ್ ಅಡಿ ಎತ್ತರನೂ ಲೆಕ್ಕಕ್ಕಿಲ್ಲೆ.

ಪೆರ್ಬೈ /*perbai*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಪೆರ್ಮಜೆ /*permaje*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಪಂಬೆತ್ತಾಡಿ ಗ್ರಾಮದ ಜಾಗ. a locality in Pambettadi village in Sullia Taluk of Dakshina Kannada District.

ಪೆರ್ಮುಂಡ /*permuṇḍa*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಪೆಲತ್ತಡ್ಕ /*pelattaḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಮರಪಡ್ನೂರು ಗ್ರಾಮದ ಜಾಗ. a locality in Amarapadnuru village in Sullia Taluk of Dakshina Kannada District.

ಪೆಲಪ್ಪರ್ /*pelappari*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಪೆಲ್ತಡಿ /*peltaḍi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಜ್ಜಾವರ ಗ್ರಾಮದ ಜಾಗ. a locality in Ajjavara village in Sullia Taluk of Dakshina Kannada District.

ಪೆಲ್‌ತಡ್ಕ /*pelɨtaḍka*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಪೇಂಬಿದೆ /*pe:mbidɛ*/ ನಾ. 1. ನೀರಿನಲ್ಲಿ ತೇಲು, 2. ನೀರಿನಲ್ಲಿ ಮುಳುಗದಿರು. to float on water. ವಾ: ಮರದ ದಿಮ್ಮಿ ನೀರ್‌ಲಿ ಪೇಂಬಿದೆ. ಪ: ಪಾಂಬಿದೆ

ಪೇಚಾಟ /*pe:ca:ṭa*/ ನಾ. 1. ಪರದಾಟ, 2. ಬಜ್ಜ, 3. ಗೋಳಾಟ, 4. ಒದ್ದಾಟ. 1. to be in distress, 2. difficulty, 3. to lament, 4. to struggle. ವಾ: ನಿನ್ನ ಪೇಚಾಟನ ನಂಗೆ ನೋಡಿಕೆ ಬೊತ್ತ್.

ಪೇಚಾಡುದು /*pe:ca:ḍudu*/ ನಾ. 1. ಒದ್ದಾಟ, 2. ಕಷ್ಟಪಡು. 1. to struggle, 2. to face difficulty. ವಾ: ನೀ ಯಾಕೆ ಹಿಂಗೆ ಪೇಚಾಡುದು.

ಪೇಚಿಗೆ /*pe:cigɛ*/ ನಾ. 1. ಸಂಕಟಪಡು, 2. ಗೋಳಾಡು, 3. ತೊಡಕು. 1. to be tormented, 2. to lament,

3. a hurdle. ವಾ: ಅವೆಲ್ಲ ನನ್ನ ಬೇಕ್ತ ಪೇಚಿಗೆ ಸಿಕ್ಕಿಸಿದೊ.

ಪೇಟ /*pe:ṭa*/ ನಾ. 1. ರುಮಾಲು, 2. ಮುಂಡಾಸು. 1. a shawl, 2. a turban. ವಾ: ಅವೆಲ್ಲ ಪೇಟ ಕಟ್ಟಿ ಹೊರ್ಟೊ.

ಪೇಟೆ /*pe:ṭɛ*/ ನಾ. 1. ನಗರ, 2. ಪೇಟೆ. 1. a city, 2. a town. ವಾ: ನಂಗೆ ಈಗ ಪೇಟೆಗೆ ಹೋಗಿ ಬರೊಕು.

ಪೇತಾಜೆ /*pe:ta:jɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಪೇಪಿ /*pe:pi*/ ನಾ. ಹಾಲು (ಬಾಲ ಭಾಷೆ). milk (in the vocabulary of children). ವಾ: ನಂಗೆ ಕುಡೆಕೆ ಪೇಪಿ ಬೇಕ್.

ಪೇರಲ್ತಡ್ಕ /*pe:raltaḍka*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಪೇರಳಕಜೆ /*pe:raḷakajɛ*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ದೇವಚಳ್ಳ ಗ್ರಾಮದ ಜಾಗ. a locality in Devacalla village in Sullia Taluk of Dakshina Kannada District.

ಪೇರಳೆ /*pe:raḷɛ*/ ನಾ. 1. ಚೇಪೆಕಾಯಿ, 2. ಸೀಬೆಕಾಯಿ. guava fruit. ವಾ: ಪೇರಳೆ ಮರಕೆ ಹತ್ತುವನ? ಪ: ಪೇರಾಲೆ. **ಪೇರ್ಲಚಿಗ್ರ್** /*pe:rlacigɨri*/ ಸೀಬೆ ಗಿಡದ ಚಿಗುರು. shoots of guava plant. ವಾ: ಪೇರ್ಲ ದ್ಮೆದ ಚಿಗ್ರ್‌ಲಿ ಟೀ ಕಾಸಿ ಕುಡ್ಯಕ್. **ಪೇರ್ಲಕಾಯಿ** /*pe:rlaka:yi*/ 1. ಪೇರಳೆಕಾಯಿ, 2. ಸೀಬೆಕಾಯಿ, 3. ಚೇಪೆಕಾಯಿ. guava fruit. ವಾ: ಪೇರ್ಲಕಾಯಿನ ಗಿಣಿಗ ಬಂದ್ ತಿಂಬೊದು. **ಪೇರ್ಲಮರ** /*pe:rla mara*/ ಸೀಬೆಮರ. a guava tree. ವಾ: ನೀ ಪೇರ್ಲ ಮರ ಹತ್ತಿದರ ನಾ ನೋಡ್ಡೆ.

ಪೇರಾಲು /*pe:ra:lu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮಂಡೆಕೋಲು ಗ್ರಾಮದ ಜಾಗ. a locality in Mandekolu village in Sullia Taluk of Dakshina Kannada District.

ಪೇರಾಲು ಗುತ್ತು /*pe:ra:lu guttu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮಂಡೆಕೋಲು ಗ್ರಾಮದ ಜಾಗ. a locality in Mandekolu village in Sullia Taluk of Dakshina Kannada District.

ಬಾನಮೂಸ್ /*ba:namu:si*/ ನಾ. 1. ಮೇಲೆ ನೋಡಿಕೊಂಡು ಹೋಗು, 2. ವಸ್ತುವನ್ನು ಹುಡುಕುವಾಗ ಕಾಣದಿದ್ದರೆ ಬಳಸುವ ಬೈಗುಳ ಪದ. 1. to walk looking upwards, 2. a term of abuse, used when one couldn't get a thing that he/she has been searching. ವಾ: ಬಾನಮೂಸ್ ಕಂಡ್ ಇರ್ಬಡ, ಸೆರಿ ಕೆಲ್‌ಸ ಮಾಡ್.

ಬಾನೆ /*ba:nɛ*/ ಕ್ರಿ. 1. ಬಾರೆ (ಹುಡುಗಿಯನ್ನು ಏಕವಚನದಲ್ಲಿ ಕರೆಯುವ ದಾಟಿ), 2. ಬಾರೆ ಹುಡುಗ. 1. a term used while calling a girl, 2. a term used while calling a boy. ವಾ: ಬಾನೆ ಪೋಯಿ. ಪ: ಬಾನೇ

ಬಾನ್ /*ba:ni*/ ನಾ. ಆಕಾಶ-ಬಾನು. the sky. ವಾ: ಬಾನ್ ಲಿ ಹಕ್ಕಿಗ ಹಾರಿವೆ. ಪ: ಬಾನ್ಲಿ – ಬಾನಿನಲ್ಲಿ

ಬಾನ್ಚೋಳ್ /*ba:nco:ḷɨ*/ ನಾ. 1. ಬಾನಾಡಿ, 2. ಒಂದು ಬಗೆಯ ಪಕ್ಷಿ, 3. ಟಿಟ್ಟಿಭ, 4. ಅಲಾಡಿಡೀ ಕುಟುಂಬಕ್ಕೆ ಸೇರಿದ ಹಾಡುಹಕ್ಕಿ, 5. ಭಾರದ್ವಾಜ ಹಕ್ಕಿ. 1. a bird, 2. a type of bird, 3. a lapwing, 4. a bird belonging to the family of Charadriidae, 5. a larger plover bird. ವಾ: ಬಾನ್ಚೋಳ್ ಹಕ್ಕಿ ಹಾರ್‌ದೆ.

ಬಾಪು /*ba:pu*/ ಕ್ರಿ. 1. ಬಾಸುಂಡೆ, 2. ಗುಳ್ಳೆ ಊದಿಕೊಂಡಿರು, 3. ಊದುವುದು. 1. a keloid scarsto 2. swelling of the skin, 3. swelling. ವಾ: ತಲೆಗೆ ಬಾಗ್‌ಲ್ ಹೆಟ್ಟಿ ಬಾಪುದು. ಪ: ಬಾಪುದೊ – ಊದಿಕೊಳ್ಳುವುದೊ. **ಬಾಪಿಟು** /*ba:piṭu*/ 1. ನೋವು ಆದಾಗ ದಪ್ಪ ಆಗುವುದು, 2. ಉಬ್ಬುವುದು, 3. ಊದುವುದು. 1. swelling caused by pain, 2. swelling, 3. a bump. ವಾ: ಬಿದ್ದ್ ಕೈ ಕಾಲೆಲ್ಲ ಬಾಪಿಟು. ಪ: ಬಾಪಿಟ್ಟ – ಊದಿಕೊಂಡಿದೆಯ. **ಬಾಪುದು** /*ba:pudu*/ ಊದುವುದು. to blow. ಪ: ಬಾಪಿರೆ – ಊದಿಕೊಂಡರೆ. **ಬಾಪುಸುದು** /*bɔ:pusudu*/ 1. ಊದಿಸುವುದು, 2. ಉಬ್ಬಿಸುವುದು. 1. to blow, 2. to make something bigger. ವಾ: ಬುಗ್ಗೆನ ಬಾಪುಸುದು.

ಬಾಪ್ಪ /*ba:ppa*/ ಕ್ರಿ. ಆತ್ಮೀಯರನ್ನು ಮಕ್ಕಳನ್ನು ಪ್ರೀತಿಯಿಂದ ಕಾಳಜಿಯಿಂದ ಬಾ ಎಂದು ಕರೆಯುವ ರೀತಿ. to call a child with affection. ವಾ: ಬಾಪ್ಪ ಕುದ್ದ್‌ಕ.

ಬಾಬಣ್ಣ /*ba:baṇṇa*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. masculine given name. ಪ: ಬಾಬು

ಬಾಬಿಲಬೆಟ್ಟು /*ba:bilabeṭṭu*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಪಂಬೆತ್ತಾಡಿ ಗ್ರಾಮದ ಜಾಗ. 1. family, 2. lineage, 3. a locality in Pambettadi village in Sullia Taluk of Dakshina Kannada District.

ಬಾಬುಡು /*ba:buḍu*/ ನಾ. ಎಪ. ಹುಡುಗಿಯರ ಕೇಶ ವಿನ್ಯಾಸದ ಹೆಸರು, ಬೋಬ್‌ಕಟ್. a hair style of girls. ವಾ: ಗೂಡೆಗ ಹೈದಗಳಂಗೆ ಬಾಬುಡು ಮಾಡಿಕಂಡರೆ ಕುಸಿಯಾಲೆ.

ಬಾಬೆ /*ba:bɛ*/ ನಾ. 1. ಮಗು, 2. ಕೂಸು. 1. a child, 2. an infant. ವಾ: ಬಾಬೆನ ಎತ್ತಿಕ.

ಬಾಮ /*ba:ma*/ ನಾ. ಬಾವು. swelling. ವಾ: ಕೈಲಿ ಬಾಮ ಆಗುಟು.

ಬಾಮಿ /*ba:mi*/ ನಾ. ಬಾವಿ. a well. **ಅವ್ವ ಇಲ್ಲದ ಮನೆ ನೀರ್ ಇಲ್ಲದ ಬಾಮಿನ ಹಾಂಗೆ(ಗಾ). ಅಂಕ್ ಡೊಂಕ್ ನ ಬಾಮಿ ಇಣ್ಕಿ ನೋಡಿರೆ ನೀರಿಲ್ಲೆ – ಕೆಮಿ(ಒ).** ವಾ: ಬಾಮಿಲಿ ನೀರ್ ಬಾರಿ ಅಡಿಗೆ ಹೋವುಟು.

ಬಾಮಿಕಟ್ಟೆ /*ba:mikaṭṭɛ*/ ನಾ. ಬಾವಿಕಟ್ಟೆ. a compound wall around the well. ವಾ: ಬಾಮಿಕಟ್ಟೆಲಿ ಕೊಡಪಾನ ಇಸಿರೆ ಬಿದ್ದೋದು.

ಬಾಮಿನೇಣ್ /*ba:mine:ṇɨ*/ ನಾ. ಬಾವಿಹಗ್ಗ. rope used to draw water from the well.

ಬಾಮೊನೊ /*ba:monɔ*/ ಕ್ರಿ. ಬರುವರೋ. may come. ವಾ: ಅವು ಇಂದ್ ಬಾಮೊನೊ. ಪ: ಬಾವೊನೊ

ಬಾಯಂಬಾಡಿ /*ba:yamba:ḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಬಾಯಮ್ಮ /*ba:yamma*/ ನಾ. ಕ್ರೈಸ್ತಮಹಿಳೆ. a christian woman. ವಾ: ಬಾಯಮ್ಮ ಚರ್ಚಿಗೆ ಹೋದೊ.

ಬಾಯಾಕಳ್ಸ್ /*ba:ya:kaḷsɨ*/ ಕ್ರಿ. 1. ನಿದ್ರೆ ಬರುವಾಗ ಆಕಳಿಸುವುದು, 2. ಉದಾಸೀನವಾದಾಗ ಆಕಳಿಸುವುದು. yawning, when tired and feeling sleepy. ವಾ: ನಿದ್ದೆ ಬಾಕನ ಬಾಯಾಕಳ್ಸ್‌ದು, ತಡಿಗೆ ಆಲಸ್ಯ ಆದರೆ ಆಗಾಗ ಬಾಯಾಕಳ್ಸ್‌ದು.

ಬಾಯಿ /*ba:yi*/ ನಾ. 1. ಬಾಯಿ, 2. ತಿನ್ನಲು, ಕುಡಿಯಲು, ಮಾತನಾಡಲು ಅಥವಾ ಶಬ್ದದ ಉದ್ಗಾರಗಳಿಗೂ ಬಳಸುವ ಮುಖದ ಅಂಗ. 1. mouth, 2. an organ in the face used for speaking, drinking, eating, etc. **ಕರ್ಜೂರ ಹಣ್ಣ್, ಕಕ್ಕೆ ಬಾಯಿಲಿ ಹುಣ್ಣು(ಗಾ). ಮೂಕ್‌ಂದ ಬಾಯಿಗಿರ್‌ವ ದೂರ(ನು). ಮನೆ ಮನೆಗೆರಡ್ ಬಾಗ್ಲ್, ಬಾಗ್ಲ್ ಮುಂದೆ ಬಾಮಿ ಇದ್ ಮುಚ್ಚಿರೆ ಕತೆ ಮುಗ್ತ್ – ಮೂಗು, ಬಾಯಿ(ಒ).** ವಾ: ಮೊಸಳೆ ಹೆಂಗೆ ಬಾಯಿ ತೆರ್‌ದದೆ ನೋಡ್. **ಬಾಯಿ ತುಂಬ** /*ba:yi tumba:*/ ಪ್ರೀತಿಯಿಂದ, ಹೃದಯವಂತಿಕೆಯಿಂದ ಮಾತನಾಡಿದಾಗ ಹೇಳುವ ಮಾತು. an affectionate term used when someone is

extemely happy. ವಾ: ಮಕ್ಕ ಅಪ್ಪಾ, ಅಮ್ಮಾತ ಬಾಯಿತುಂಬ ಕರ್ದವೆ.

ಬಾಯಿಬುಡು /*ba:yibuḍu*/ ನಾ. ಮಾತನಾಡು. 1. to talk. ವಾ: ಸೆರಿಯಾಗಿ ಬಾಯಿಬುಡು.

ಬಾಯಿಬೊಂಬಾಯಿ /*ba:yi bomba:yi*/ ನಾ. ಯಾವುದೇ ವಿಷಯವನ್ನು ಗೌಪ್ಯವಾಗಿಡದೆ ಹೇಳುವುದು. a bigmouth , unable to keep secrets. ವಾ: ಅಂವನ ಬಾಯಿ ಬೊಂಬಾಯಿ ಆದರ್ಂದ ಹೀಂಗೆಲ್ಲ ಆತ್.

ಬಾಯಿಮಾಡ್ /*ba:yi ma:ḍ*/ ನಾ. 1. ಕೂಗು ಹಾಕು, 2. ಬೊಬ್ಬೆ ಹಾಕು, 3. ಗಟ್ಟಿಯಾಗಿ ಕೂಗು, 4. ಸ್ವರ ಏರಿಸಿ ಕರೆಯುವುದು, 5. ಎತ್ತರದ ಧ್ವನಿಯಿಂದ ಹೇಳುವುದು. 1. to scream, 2. to shout, 3. to call out loudly, 4. to raise one's voice, 5. to shout out. ವಾ: ಗದ್ದೆಗೆ ದನಗ ಬಂದೊಳೊ ಬಾಯಿಮಾಡಿ ಓಡ್ಸಕಿತ್.

ಬಾಯಿಮೊಗ್ಚ್[1] /*ba:yi mogcɨ*/ ಕ್ರಿ. ಬಗ್ಗಿಸಿದ ಅನ್ನದ ಮಡಕೆಯನ್ನು ಅಲುಗಿಸಿ ನೇರ ಇಡು. keeping the rice pot straight. ವಾ: ಅನ್ನದ ಬಾಯಿ ಮೊಗ್ಚ್.

ಬಾಯಿಮೊಗ್ಚ್[2] /*ba:yi mogcɨ*/ ನಾ. ಮಾತು ತಪ್ಪಿಸು. to escape from one's responsibility. ವಾ: ಒಪ್ಪಿಕಂಡ ಮೇಲೆ ಬಾಯಿ ಮೊಗ್ಚಿದು ತೊಪ್ಪು.

ಬಾಯಿಕಚ್ಚಿ /*ba:yikacci*/ ನಾ. ಬಾಯಿ ಮುಟ್ಟಿಸಿ. with the mouth. ವಾ: ಗಲಾಸ್‌ಲಿ ನೀರ್ ಕುಡೆಕನ ಬಾಯಿಕಚ್ಚಿ ಕುಡೆಕಾದ್.

ಬಾಯಿಕಟ್ಟಿದ್ /*ba:yikaṭṭidɨ*/ ನಾ. ಹೇಳಲಾಗದ ಸ್ಥಿತಿ. a helpless situation. ವಾ: ಆ ವಿಸಯನ ಹೇಳ್‌ಕನ ಬಾಯಿ ಕಟ್ಟಿಹೋತ್.

ಬಾಯಿತರ /*ba:yitara*/ ನಾ. ಜನಪದ ಗೀತೆಗಳ ಪ್ರತೀ ಸಾಲಿನ ಕೊನೆಯಲ್ಲಿ ಬರುವ ಸೊಲ್ಲು. an utterance in a folk song. ವಾ: ಬಾಯಿತರ ಕೇಳಿಕೆ ಬಾರಿ ಲಾಯ್ಕಿತ್ತ್.

ಬಾಯಿಪಟ /*ba:yipaṭa*/ ನಾ. ಉರು ಹೊಡೆಯುವುದು. memorising. ವಾ: ಬಾಯಿಪಟ ಮಾಡಿ ಸುಕ ಇಲ್ಲೆ. ಅರ್ತ ಮಾಡಿಕಂಡ್ ಓದೊಕು.

ಬಾಯಿಬುಟ್ /*ba:yibuṭɨ*/ ನಾ. 1. ಬಾಯಿಬಿಟ್ಟು, 2. ನೇರ ಮಾತು. 1. directly, 2. explicitly. ವಾ: ಅಂದೇ ಬಾಯಿಬುಟ್ ಹೇಳಕಿತಲ.

ಬಾಯಿಮಾತ್ /*ba:yima:tɨ*/ ನಾ. 1. ಬಾಯಿಮಾತು, 2. ಮುಖತಃ ಹೇಳಿದ ಮಾತು, 3. ವ್ಯಕ್ತವಾಗಿ ನುಡಿದ ಮಾತು. 1. a word of mouth, 2. told in person, 3. to say with emphasis. ವಾ: ಬರೀ ಬಾಯಿ ಮಾತ್ ಅಸ್ಟೆ. ಬರವಣಿಗೆ ಮಾಡ್‌ತ್‌ಲೆ.

ಬಾಯೆ /*ba:yɛ*/ ನಾ. 1. ತುತ್ತು, 2. ಒಂದು ಸಲಕ್ಕೆ ನುಂಗುವಷ್ಟು ಆಹಾರ. 1. a morsel, 2. a mouthfull of food. ವಾ: ದಿನಾ ಅವ್ವನ ಕೈಂದ ಒಂದ್ ಬಾಯೆ ತಿಂದರೆ ಸಮಾದಾನ.

ಬಾಯ್ಕಟ್ಟುದು /*ba:ykaṭṭudu*/ ಕ್ರಿ. ಊಟದಲ್ಲಿ ಪಥ್ಯ ಮಾಡುವುದು. to follow a diet.

ಬಾಯ್ಗೆ ನೀರ್ ಕೊಡ್ದು /*ba:ygɛ ni:r koḍdu*/ ನಾ. ಸತ್ತಾಗ ಬಾಯಿಗೆ ನೀರು ಕೊಡುವುದು. to put water into the mouth of the dying. ವಾ: ಸತ್ತವ್ಕೆ ಬಾಯ್ಗೆ ನೀರ್ ಕೊಡ್ದು ಪದ್ದೆತಿ.

ಬಾಯ್ಗೆ ಮೊಣ್ಣಾಕಿಕೆ /*ba:ygɛ mɔɳɳa:kikɛ*/ ಕ್ರಿವಿ. 1. ಒಬ್ಬರ ಬದುಕನ್ನು ಹಾಳು ಮಾಡುವುದು, 2. ಒಂದು ಬೈಗುಳ ಪದ. 1. to spoil one's life. 2. an expletive. ವಾ: ಹೆಂಗೆ ಉರಿಬಂದದೆ ಬಾಯ್ಗೆ ಮಣ್ಣಾಕಿಕೆ.

ಬಾಯ್ನೀರ್ /*ba:yni:rɨ*/ ನಾ. 1. ಜೊಲ್ಲು, 2. ಲಾಲಾರಸ ಗ್ರಂಥಿಗಳು ಉತ್ಪಾದಿಸಿ ಸ್ರವಿಸುವ ನೀರಿನಂಥ ಪದಾರ್ಥ, 3. ಲಾಲಾರಸ, 4. ಉಗುಳು. 1. saliva, 2. secretions from the salivary glands, 3. a liquid that is produced in the mouth 4. sputum. ವಾ: ಉಪ್ಪನಕಾಯಿ ನೋಡಿಕನ ತಿನೊಕುಂತ ಬಾಯ್ನೀರ್ ಬಾದು.

ಬಾಯ್ಬಡ್ಕಿ /*ba:ybaḍki*/ ನಾ. ತಡೆಯಿಲ್ಲದೆ ನಿರಂತರವಾಗಿ ಮಾತನಾಡುವವಳು. to talk continuosly. ವಾ: ಅದ್ ಬಾರಿ ಬಾಯಿ ಬಡ್ಕಿ ಹೆಂಗ್ಸ್, ಪುರ್‌ಸೊತ್ತಿಲ್ಲದೆ ಮಾತಾಡ್ದೆ.

ಬಾರ /*ba:ra*/ ಪವಾ. 1. ಭಾರ, 2. ಹೊರೆ, 3. ತೂಕ. 1. weight, 2. a burden, 3. a load. **ಅಜ್ಜಿ ಸಾಂಕಿದ ಮಜ್ಜ ಬೊಜ್ಜಕ್ಕೂ ಬಾರ(ಗಾ).** ವಾ: ವಯ್ಸಾದ ಮೇಲೆ ಬಾರ ಎತ್ತಿಕೆ ಬೊತ್ತ್.

ಬಾರ ಅಡ್ಕೊದ್ /*ba:ra aḍkodi*/ ಪವಾ. 1. ಭಾರ ಇಡುವುದು, 2. ಯಾವುದಾದರು ವಸ್ತುವಿನ ಮೇಲೆ ಭಾರವನ್ನು ಹೇರುವುದು. 1. to put weight on something/someone, 2. to load weight. ವಾ: ಬೆನ್ನ್ ಮೇಲೆ ಹಿಂಗೆ ಬಾರ ಅಡ್ಕೊದ್ ಯಾಕೆ.

ಬಾರಣೆ /*ba:raṇɛ*/ ಕ್ರಿ. 1. ಭೂತಕ್ಕೆ ಕೊಡುವ ಆಹಾರ, 2. ಬಲಿ, 2. ಭೂತನರ್ತಕ ಆಹಾರ ಸ್ವೀಕಾರ. 1. an offering made to a Bhuta/deity/spirit. 2. a sacrifice. 3. acceptance of food on behalf of the Bhuta by the impersonator. ವಾ: ಬಾರಣೆ ಇಸುದು. ಪ: ಬಾರ್ಣೆ

ಬಾರನ /*ba:rana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಬಾರಿಪಟ್ಟಿ /*ba:ripaṭṭi*/ ನಾ. 1. ಜಂತಿ, 2. ಹೆಂಚು ಇರಿಸಲು ಅಳವಡಿಸುವ ಮರದ ಪಟ್ಟಿ. 1. a cross beam, 2. a cross beam that supports roof tiles. ವಾ: ಬಾರಿ ಪಟ್ಟಿ ಹೊಡ್ದ್ ಹಂಚಿನ ಕೂರ್‌ಸುದು.

ಬಾರಿಬ್ಯಾಜರ /*ba:ri bya:jara*/ ನಾ. ತುಂಬ ಬೇಸರ. intesne feeling of sadness. ವಾ: ಹಿಂಗಾಕಾಗದಿತ್ ಬಾರಿ ಬ್ಯಾಜರ.

ಬಾರಿ[1] /*ba:ri*/ ನಾ. 1. ತುಂಬ, 2. ಬಹಳ. 1. plenty, 2. more. ವಾ: ಬಾರಿ ದೊಡ್ಡ ಮನೆ ಕಂಡದೆ.

ಬಾರಿ[2] /*ba:ri*/ ನಾ. 1. ರೀಪು ಹೆಂಚು ಹೊದಿಸುವುದಕ್ಕೆ ಪಕ್ಕಾಸುಗಳ ಮೇಲೆ ಅಡ್ಡವಾಗಿ ಹೊಡೆಯುವ ಮರದ ಪಟ್ಟಿ, 2. ದಬ್ಬೆ, 3. ರೀಪೀಸು ಪಟ್ಟಿ ಕದ ಅಥವಾ ಅಟ್ಟದ ಮುಚ್ಚಿಗೆಯ ಎರಡು ಹಲಗೆಗಳ ನಡುವಿನ ಸಂದನ್ನು ಮುಚ್ಚುವುದಕ್ಕೆ ಉಪಯೋಗಿಸುವ ತೆಳುವಾದ, ಕಿರಿದಗಲದ ಮರದ ಪಟ್ಟಿ, 4. ಸಂದುಪಟ್ಟಿ. 1. a lath. 2. a strip of wood. 3. a thin strip of wood to cover the holes between wooden planks used in doors, roof of atticks, etc. 4. a strip of wood. ವಾ: ಹಂಚಿನ ಮನೆಲಿ ಬಾರಿ ನೋಡಿಕೆ ಸಿಕ್ಕಿದೆ.

ಬಾರಿಕೆ /*ba:rikɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಬಾರಿದೊಡ್ಡ /*ba:ridoḍḍa*/ ನಾ. ಬಹಳ ದೊಡ್ಡ. large. ವಾ: ಬಾರಿದೊಡ್ಡ ಪಾರೆಕಲ್ಲ್.

ಬಾರಿಯಂಡ /*ba:riyaṇḍa*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಬಾರಿಯೆಲು /*ba:riyelu*/ ನಾ. 1. ಪಕ್ಕೆಲುಬು, 2. ಕಶೇರುಕಗಳ ಅಸ್ಥಿಪಂಜರದ ಬೆನ್ನೆಲುಬಿಗೂ ಎದೆಯ ಮೂಳೆಗೂ ಅಂಟಿಕೊಂಡಿರುವ ಕಮಾನು ಆಕಾರದ ಎಲುಬು. 1. rib cage, 2. enclosing structure that connects rib and spinal cord in vertebrates. ವಾ: ಬಾರಿಯೆಲು ಮುರ್‌ದದ್.

ಬಾರೀ /*ba:ri:*/ ನಾ. 1. ಭಯಂಕರ, 2. ಭಾರೀ. 1. horrible, 2. a huge. ವಾ: ಬಾರೀ ದೊಡ್ಡ ಹಾವ್.

ಬಾರೀ ಉಸಾರುಟ್ಟು /*ba:ri: usa:ruṭṭu*/ ನಾ. 1. ಬಹಳ ಜಾಣ, 2. ಚಾಣಕ್ಯ. 1. clever, 2. as celever as Chanakya. ವಾ: ಬಾರೀ ಉಸಾರುಟ್ಟು ಹೈದ.

ಬಾರೆಂಬೆಲ್ಲು /*ba:rembɛllu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಬಾರೊಕಲ್ಲ[1] /*ba:rokalla*/ ಕ್ರಿ. ಬರಬೇಕಲ್ಲ. should come. ವಾ: ಕರ್‌ದರೆ ಬಾರೊಕಲ್ಲ ಬೇಗ.

ಬಾರೊಕಲ್ಲ[2] /*ba:rokalla*/ ಕ್ರಿ. ಬರಲೇಬೇಕಲ್ಲ. must come. ವಾ: ಮನೆ ಜಂಬರತೇಲ್ದ ಮೇಲೆ ಬಂದೆ ಬಾರೊಕಲ್ಲ. ಪ: ಬರೋಕಲ್ಲ

ಬಾರೋಗಂಟ /*ba:rɔ:ganṭa*/ ಕ್ರಿವಿ. 1. ಬರುವ ವರೆಗೆ, 2. ಬರುವ ಹೊತ್ತಿಗೆ. until someone/something comes. ವಾ: ಬಸ್ ಬರೋಗಂಟ ಕುದ್ದ್ ಕುದ್ದ್ ಸಾಕಾತ್.

ಬಾರ್ ಹಾಂತೆ /*ba:rɨ ha:ntɛ*/ ನಾ. ಭತ್ತದಲ್ಲಿರುವ ಹಾರುವ ಸಣ್ಣ ಕೀಟ. a flying insect that is found on paddy plant. ವಾ: ಬತ್ತದ ಕಡ್‌ಕೆಲಿ ಬಾರ್ ಹಾಂತೆ ಹೆಚ್ಚಿಗೆ ಇದ್ದದೆ.

ಬಾರ್[2] /*ba:rɨ*/ ಎಪ. ಮದ್ಯದಂಗಡಿ. a bar. **ಬಾರ್‌ಗೆ ಹೋಕನ ಎಲಿ ಬಾರ್‌ಂದ ಬಾಕನ ಹುಲಿ(ಗಾ).** ವಾ: ಬಾರ್‌ಗೆ ಹೋಗಿ ಕುದ್ಕಂಡರೆ ಸದ್ಯಕೆ ಏಳಿಕಿಲೆ.

ಬಾರ್‌ಕೋಲ್ /*ba:riko:lɨ*/ ನಾ. 1. ಚಾವಟಿ, 2. ಬಾರುಕೋಲು, 3. ಚಬಕ, 4. ಚರ್ಮದ ಹೆಣಿಕೆಯುಳ್ಳ ಚಾವಟಿ. 1. a whip made of cord or leather, 2. a bullwhip , 3. a whip, 4. a scourge. ವಾ: ಬಾರ್ಕೋಲುಲಿ ಎತ್ತ್ ಗಳಿಗೆ ಹೊಡ್ಯದು.

ಬಾರ್ಪಣೆ /*ba:rpaṇe*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಆಲೆಟ್ಟಿ ಗ್ರಾಮದ ಜಾಗ. a locality in Aletti village in Sullia Taluk of Dakshina Kannada District.

ಬಾರ್ಪಾತೆ /*ba:rɨpa:tɛ*/ ನಾ. ಭತ್ತದ ಕಣಜದಲ್ಲಿ ಹುಟ್ಟುವ ಚಿಕ್ಕಚಿಕ್ಕ ಬಿಳಿ ಕೀಟಗಳು. insects that grow in paddy granary. ವಾ: ಬತ್ತಲಿ ಬಾರ್ಪಾತೆ ಸುರಾವುಟು.

ಬಾರ್ಪು /*ba:rpu*/ ನಾ. 1. ಚಪ್ಪಡಿ, 2. ಚಪ್ಪಟೆಯಾದ ಕಲ್ಲು, 3. ಹಾಸುಗಲ್ಲು. 1. a stone slab, 2. flat slab of stone, 3. a slab. ವಾ: ಮನೆ ಹತ್ತ್‌ರದ ಬಾರ್ಪು ಕಲ್ಲ್ ಜಾರಿ ಬೀಳಿಕೆ ಆವುಟು.

ಬಾರ್ಸ್ /*ba:rɨsi*/ ನಾ. 1. ಬಾರಿಸು, 2. ಹೊಡೆ, 3. ವಾದ್ಯ ನುಡಿಸು. 1. to beat, 2. to hit, 3. to play muscial instrument. ವಾ: ಅಂವಂಗೆ ನಾಕ್ ಬಾರ್ಸ್ ಹೇಳ್ದರ ಕೇಳುದ್ಲೆ. ಪ: ಬಾರ್ಸಿತ್ – ಬಾರಿಸಿದನು; ಬಾರ್ಸ್ – ಹೊಡೆ; ಬಾರ್ಸುದು – ಬಾರಿಸುವುದು; ಬಾರಿಸ್ತಿದ್ದೊ – ಹೊಡೆಯುತ್ತಿದ್ದರು

ಬಾಲಹೆಟ್ಟ್ /*ba:laheṭṭi*/ ನಾ. ಬಾಲವನ್ನು ತುರುಕಿಸು. to tuck one's tails. ವಾ: ಕುದ್ಕ ಬಾಲ ಹೆಟ್ಟಿ ಮೋಟೆಂದ ಎಸಂಡ್‌ನ ಎಳ್ದ್ ತೀಂತ್.

ಬಾಲಕ್ಕ /*ba:lakka*/ ನಾ. ವ್ಯಕ್ತಿ ಹೆಸರು, ಸ್ತ್ರೀ ವಾಚಕ. feminine given name. ಪ: ಬಾಲಕ್ಕಿ

ಬಾಲಗಂಜಿ /*ba:lagaŋji*/ ನಾ. ಪುಟ್ಟ ಶಿಶುಗಳಿಗೆ ಆಹಾರ ತಯಾರಿಸುವ ಹಿಡಿಕೆಯುಳ್ಳ ಪಾತ್ರೆ. a small cookware with a handle, used to cook eatables for children. ವಾ: ಬಾಲಗಂಜಿಲಿ ರಾಗಿ ಹಿಟ್ಟ್ ಮಾಡ್ದು.

ಬಾಲಗ್ರ /*ba:lagra*/ ನಾ. 1. ಎಳೆಯ ವಯಸ್ಸಿನ ಮಕ್ಕಳಿಗೆ ಬರುವ ಒಂದು ಬಗೆಯ ಸೆಳವು, 2. ಗ್ರಹಗಳಿಂದ ಉಂಟಾದುದು ಎಂದು ನಂಬಲಾದ ಎಳೆಯ ಮಕ್ಕಳ ಪೀಡೆ ಅಥವಾ ರೋಗ. 1. a form of fits, among children, 2. a nervous disorder among children, believed to be caused by planetary motions. ವಾ: ಕೂಸು ಬಾಲಗ್ರಂದ ನರ್ಳಿದೆ, ಬಾಲಗ್ರ ತೈಲನ ಮೈಗೆ ಉಜ್ಜ್. ಪ: ಬಾಲಗ್ರಹ, ಬಾಲೆಗಿರವು(ತು).

ಬಾಲಣ್ಣ /*ba:laṇṇa*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. masculine given name. ಪ: ಬಾಲಪ್ಪ

ಬಾಲಪಿಳೆ /*ba:lapiḷɛ*/ ನಾ. ಮಕ್ಕಳಿಗೆ ದುಷ್ಟ ಶಕ್ತಿಯಿಂದ ಆಗುವ ಚೇಷ್ಟೆ. a nervous disorder among children, believed to be caused by demonic forces. ವಾ: ಸಣ್ಣ ಮಕ್ಕಳಿಗೆ ಬಾಲಪಿಳೆತ ಆದೆ.

ಬಾಲಾಜೆ /*ba:la:jɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಬಾಳಾಡಿ[1] /*ba:ḷa:ḍi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಏನೆಕಲ್ಲು ಗ್ರಾಮದ ಜಾಗ. a locality in Enekallu village in Sullia Taluk of Dakshina Kannada District.

ಬಾಲಾಡಿ[2] /*ba:la:ḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಬಾಲಾಡ್ ಚೆಂಬೆ /*ba:la:ḍɨ cembɛ*/ ನಾ. ಕಪ್ಪು ಮತ್ತು ಬಿಳಿ ಬಾಲವನ್ನು ಹೊಂದಿರುವ ಪಕ್ಷಿ. a bird with black and white tail. ವಾ: ಬಾಲಾಡ್ ಚೆಂಬೆ ಬಾಲನ ಕೊಣ್ಸಿಕಂಡೆ ಇದ್ದದೆ. ಪ: ಬಾಲಾಡ್ಚಂಬೆ – ಬಾಲಾಡಿ ಕೂಂಬೆ ಹಕ್ಕಿ

ಬಾಲೆ[1] /*ba:lɛ*/ ಕ್ರಿ. ಬರುವುದಿಲ್ಲ. won't come. ವಾ: ನಾ ಎಲ್ಲಿಗೂ ಬಾಲೆ. **ಬಾಲೆಗಡ** /*ba:lɛgaḍa*/ ಬರುವುದಿಲ್ಲವಂತೆ. may not come. ವಾ: ಅವು ಇಂದ್ ಕೆಲ್ಸಕೆ ಬಾಲೆಗಡ.

ಬಾಲೆ[2] /*ba:lɛ*/ ನಾ. ಬಾಲಕಿ. a girl. ವಾ: ಬಾಲೆ ಎಲ್ಲಿ ಹೋತ್. ಪ: ಬಾಲೆದ್ – ಬಾಲಕಿಯದು

ಬಾಲೆಂಬಿ /*ba:lembi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಬಾಲೆಮೀನ್ /*ba:lɛmi:nɨ*/ ನಾ. 1. ಒಂದು ಬಗೆಯ ಮೀನು, 2. ಬಾಳೆಮೀನು. a kind of fish. ವಾ: ಬಾಲೆಮೀನ್ ಮುಗುಡು ಮೀನ್‌ಂತ ಒಂದ್ ಕತೆ ಉಟ್ಟು.

ಬಾಲೆಸಾಂತು /*ba:lɛsa:ntu*/ ನಾ. 1. ಒಂದು ಜನಪದ ಕುಣಿತ, 2. ಮರಾಟಿ ನಾಯ್ಕ ಸಮುದಾಯದವರು ಮಾಯಿ ತಿಂಗಳಲ್ಲಿ ಮಾಡುವ ಕುಣಿತ, 3. ಯುವಕರು ಬೇರೆ ಬೇರೆ ತರದ ವೇಷಗಳನ್ನು ಧರಿಸಿಕೊಂಡು ಮನೆಮನೆಗಳಿಗೆ ಹೋಗಿ ಮಾಡುವ ಕುಣಿತ. 1. a folk dance. 2. Holi festival, Marati-Naik's

perform this dance in the month of Mayi, 3. a dance that is performed by young boys with different costumes. ವಾ: ಬಾಲೆಸಾಂತು ಒಂದ್ ಜನಪದ ಕೋಣ್ತ.

ಬಾಲ್ ಚರಟೆ /*ba:lɨ caraṭɛ*/ ನಾ. 1. ಮೊಗೆಯುವ ಸೌಟು. a ladle. ವಾ: ಬಾಲ್ ಚರಟೆನ ಎಲ್ಲಿಸಿದ್.

ಬಾಲ್‌ಕತ್ತಿ /*ba:lɨkatti*/ ನಾ. ಚಿಕ್ಕ ಖಡ್ಗ. a small sword. ವಾ: ಬಾಲ್‌ಕತ್ತಿನ ನೋಡ್ಡನ?

ಬಾಲ್ಕಾಡಿ /*ba:lka:ḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಬಾಲ್ಗಂಜಿ /*ba:lgaŋji*/ ನಾ. 1. ಕೈ ಪಾತ್ರೆ, 2. ಹಿಡಿಕೆ ಇರುವ ಸಣ್ಣ ಪಾತ್ರೆ. a small vessel with a handle. ವಾ: ಬಾಲ್ಗಂಜಿನ ಕಾಪಿ ಟೀ ಕಾಸಿಕೆಂತನೆ ಇಸಿಕ.

ಬಾಲ್ಜಿ /*ba:lji*/ ಎಪ. ಎಪ. ಬಕೆಟ್. a bucket. ವಾ: ಬಾಲ್ಜಿಗೆ ನೀರ್ ತುಂಬುಸೊಕು. ಪ: ಬಾಲ್ದಿ

ಬಾಲ್ತಿಕುಮೇರು /*ba:ltikume:ru*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಬಾಲ್ದಿ /*ba:ldi*/ ನಾ. ಎಪ. 1. ಬಾಟಲು, 2. ಶೀಷೆ. a bottle. ವಾ: ಬಾಲ್ದಿಗೆ ಜೇನ್ ತುಂಬೊಕು.

ಬಾವದಾರಿ /*ba:v da:rili*/ ಕ್ರಿವಿ. ಬರುವ ದಾರಿ. on the way. ವಾ: ಬಾವ ದಾರಿಲಿ ಅವು ಸಿಕ್ಕಿದೊ.

ಬಾವ[1] /*ba:va*/ ನಾ. ಬರುವ. would come. ವಾ: ಬಾವ ಬಜ್ಜನ ತಡೆಕಾದೆನ? ಪ: ಬಾವಂತ – ಬರುವಂತಹ; ಬಾವಂದ್ – ಬರುವಂದು

ಬಾವ[2] /*ba:va*/ ನಾ. ಸೋದರ ಮಾವನ ಮಗ. son of a maternal uncle. **ಬಾವಂಗೆ ಬಾವನ ಬಲ, ಹಕ್ಕಿಗೆ ರೆಕ್ಕೆ ಬಲ, ಗಂಡಿಗೆ ರಟ್ಟೆ ಬಲ(ಗಾ).** ವಾ: ಬಾವ ಬನ್ನೆತ ಹೇಳ್ದೊ.

ಬಾವ[3] /*ba:va*/ ನಾ. 1. ಅಕ್ಕನ ಗಂಡ, 2. ಭಾವ, 3. ಗಂಡನ ಅಣ್ಣ, 4. ಸೋದರ ಮಾವನ ಮಗ. 1. husband of one's sister, 2. brother-in-law, 3. husband's elder brother, 4. son of maternal uncle. ವಾ: ಬಾವ ಯಾಗ ಬಂದರಿ?

ಬಾವಂದರ್ /*ba:vandari*/ ನಾವಿ. ಬಾವಂದಿರು – ಹೆಂಡತಿಯ ಅಣ್ಣ ತಮ್ಮಂದಿರು. brothers-in-law. ವಾ: ಬಾವಂದರ್ ಇಬ್ಬರ್‌ವಳೊ.

ಬಾವಡೆ /*ba:vaḍɛ*/ ನಾ. ಪಾತ್ರೆಗಳನ್ನು ಮುಚ್ಚಲಿಕ್ಕೆ ಮಾಡಿದ ಮಣ್ಣಿನ ಅಥವಾ ಲೋಹದ ಮೇಲುಬ್ಬಿದ ಪಾತ್ರೆ. a lid or covering of a vessel, frying pan, etc. ವಾ: ಗೈಪುದ್ ಚೆಟ್ಟಿಗೆ ಬಾವಡೆನ ಮುಚ್ಚಿಸ್. ಪ: ಬಾವುಡೆ, ಬಾವೊಡೆ

ಬಾವರಿಯಾ /*ba:vari:*/ ಕ್ರಿ. ಬರುತ್ತೀರಾ? will you come? ವಾ: ನಾಳೆ ನೀವು ಬಾವರಿಯಾ.

ಬಾವಲಿಗುಂಡಿ /*ba:valiguṇḍi*/ ನಾ. ಕೊಡಗು ಜಿಲ್ಲೆಯ ಪೆರಾಜೆ ಗ್ರಾಮದ ಜಾಗ. a locality in peraje village in of Kodagu District.

ಬಾವಿಲಕ್ಕಿ /*ba:vilakki*/ ನಾ. 1. ಬಾವಲಿ, 2. ಕೈರಾಪ್ಟರ ಗಣಕ್ಕೆ ಸೇರಿದ ಮತ್ತು ಹಕ್ಕಿಯಂತೆ ಹಾರಬಲ್ಲ ಸ್ತನಿ, ಇಲಿ ರೂಪದ ಚತುಷ್ಪಾದಿ, 3. ನಿಶಾಚರಿ, 4. ತೋಲಕ್ಕಿ, 5. ಚಕ್ಕಳದ ಹಕ್ಕಿ, 6. ರಾತ್ರಿಯ ಹೊತ್ತು ಸಂಚರಿಸುವ ಇಲಿಯ ಹಾಗಿರುವ, ಹಾರುವ ಒಂದು ಪ್ರಾಣಿ. bat, a mammal belonging to the order of Chiroptera, a nocturnal animal with wings. ವಾ: ಬಾವಿಲಕ್ಕಿ ಹಗ್‌ಲ್ ಮರದ ಗೆಲ್ಲ್‌ಲಿ ತಲೆಕೆಳಗಾಗಿ ನೇತಾಡಿಕಂಡಿದ್ದದೆ.

ಬಾವು /*ba:vu*/ ನಾ. 1. ಊತ, 2. ಶರೀರದ ಯಾವುದೇ ಭಾಗ ಬಾತುಕೊಳ್ಳುವುದು, 3. ಬಾತುಕೊಳ್ಳುವಿಕೆ. 1. swelling, 2. swelling in the body, 3. state of being swollen. ವಾ: ತಲೆ ಮೇಲೆ ಸೌದೆಕೊಳ್ಳಿ ಬಿದ್ದರೆ ತಲೆ ಬಾವುದು. ಪ: ಬಾವ್

ಬಾವುಲಿ /*ba:vuli*/ ನಾ. 1. ಬಾವಲಿ, 2. ಕೈರಾಪ್ಟರ ಗಣಕ್ಕೆ ಸೇರಿದ ಮತ್ತು ಹಕ್ಕಿಯಂತೆ ಹಾರಬಲ್ಲ ಸಸ್ತನಿ, ಇಲಿ ರೂಪದ ಚತುಷ್ಪಾದಿ, 3. ನಿಶಾಚರಿ, 4. ತೋಲಕ್ಕಿ, 5. ಚಕ್ಕಳದ ಹಕ್ಕಿ, 6. ರಾತ್ರಿಯ ಹೊತ್ತು ಸಂಚರಿಸುವ ಇಲಿಯ ಹಾಗಿರುವ, ಹಾರುವ ಒಂದು ಪ್ರಾಣಿ, 7. ಮರಿಹಾಕುವ ಜೀವಿ. bat, a mammal belonging to the order of Chiroptera, a nocturnal animal with wings. ವಾ: ಬಾವುಲಿಗ ಹಣ್ಣೆಲ್ಲ ತಿಂದ್ ದೈನ ಮನಾರ ಮಾಡಿವೆ, ಒಂದ್ ಹಣ್ಣ್ ನು ಮರಲಿ ಬುಡ್ದುಲೆ. ಪ: ಬಾವಲಿ

ಬಾವೆಮಣ್ಣ್ /*ba:vɛmaṇṇi*/ ನಾ. ಮೇಲ್ಪದರದ ಕೆನೆಯಂತಿರುವ ನಯವಾದ ಮಣ್ಣು. soft mud –

top layer of soil. ವಾ: ಹೊಳೆ ನೀರ್ ಗದ್ದೆಗೆ ಹರ್‌ದ್ ಬಂದ್ ನೀರ್ ಇಳ್ದ ಮೇಲೆ ಬಾವೆ ಮಣ್ಣ್ ಗದ್ದೆಲಿ ನಿತ್ತದೆ.

ಬಾವೆರಿ /*ba:vεri*/ ಕ್ರಿ. ಬರುತ್ತೀರಿ? will you come? ವಾ: ನೀವು ನಮ್ಮೊಟ್ಟಿಗೆ ಬಾವೆರಿ. ಪ: ಬಾವೆರಿಯಾ? – ಬರುತ್ತೀರಾ?

ಬಾವೊ /*ba:vɔ*/ ಕ್ರಿ. ಬರಬಹುದು. may come. ವಾ: ಅವು ನಾಳೆ ಮನಿ ಬಾವೊ. ಪ: ಬಾಂವೊ – ಬರಬಹುದು; ಬಾವೊಂತ – ಬರಬಹುದೆಂದು

ಬಾವೊಲ /*ba:vɔla*/ ಕ್ರಿ. ಬರಬಹುದಲ್ಲ, could come. ವಾ: ಅವು ಇಲ್ಲಿಗೆ ಬಾವೊಲ.

ಬಾವ್ /*ba:vɨ*/ ನಾ. ಊದು. swelling. ವಾ: ಪಾದದ ಮೇಲೆ ಕಲ್ಲ್ ಬಿದ್ದ್ ಪಾದ ಬಾವ್ ಬಂದುಟು.

ಬಾವ್ಡೆ /*ba:vḍε*/ ನಾ. ಬಾವಡೆ. earthen lid. ವಾ: ಅಳೆಗೆಗೆ ಬಾವ್ಡೆ ಮುಚ್ಚಿಸ್.

ಬಾವ್‌ಲಿ /*ba:vɨli*/ ನಾ. ಬಾವಲಿ. bat. ವಾ: ಬಾವ್‌ಲಿ ಮರದ ಮೇಲೆ ತಲೆಕೆಳಗಾಗಿ ನೇತಾಡ್ತಿದ್ದದೆ. ಪ: ಬಾವ್ಲಿ

ಬಾಸಣ /*ba:saṇa*/ ನಾ. ಭಾಷಣ. speech. **ಮನೆಗೆ ಅಣ್ಣನಾಗಿ ಹುಟ್ಟ್‌ಬಾಡ, ಬಾಸಣಕ್ಕೆ ಕಡೇಂವ ಆಗಿ ಬರ್‌ಬಾಡ(ಗಾ).** ವಾ: ಅವು ಬಾಸಣ ಮಾಡ್ವೊ.

ಬಾಸಿಂಗ /*ba:siŋga*/ ನಾ. ಮದುಮಗನ ಶಿರೋಭೂಷಣ. a nuptial ornament worn on the forehead by a bridegroom. ವಾ: ಮೊದುವೆಲಿ ಹೈದನ ಮತ್ತೆ ಗೂಡೆನ ಹಣೆಗೆ ಬಾಸಿಂಗ ಕಟ್ಟಿವೆ.

ಬಾಸುಂಡೆ /*ba:suṇḍε*/ ನಾ. ಬಾತು ಹೋಗಿ ಉಂಡೆಯಂತೆ ಕಾಣುವುದು. a bump. ವಾ: ಹೊಡ್ಡದರ್‌ಲಿ ಮೈಮೇಲೆ ಬಾಸುಂಡೆ ಬಂದುಟು.

ಬಾಸೆ[1] /*ba:sε*/ ನಾ. 1. ಸಂಸ್ಕೃತಿ, 2. ಸಂಸ್ಕಾರ. 1. culture, 2. a belief system. **ಮೀಸೆ ಇದ್ದರೆ ಸಾಲದ್ ಬಾಸೆನೂ ಬೇಕು(ಗಾ).** ವಾ: ಮಕ್ಕಳಿಗೆ ಬಾಸೆ ಕಲ್ಸಿರೆ ಒಳ್ಳೊದರ್ಲಿ ಬಾಳ್‌ವೆ ನಡ್ಸ್‌ವೆ.

ಬಾಸೆ[2] /*ba:se*/ ನಾ. ಭಾಷೆ. language. ವಾ: ಬಾಸೆ ಮೇಲೆ ಎಲ್ಲೊವ್ಕು ಅಬಿಮಾನ ಇರೊಕು.

ಬಾಸೆ ಇಲ್ಲದವು /*ba:sε illadavu*/ ನಾವಿ. 1. ಕೊಟ್ಟ ಭಾಷೆಯಂತೆ ನಡೆಯದವರು, 2. ನಂಬಿಕೆಗೆ ಯೋಗ್ಯನಲ್ಲದವರು. 1. a renegade, 2. untrustworthy. ವಾ: ಬಾಸೆ ಇಲ್ಲದವರೊಟ್ಟಿಗೆ ಎಂತ ವ್ಯವಾರ ಮಾಡಿಕೂ ಆದುಲೆ, ಬಾಸೆ ಇಲ್ಲದವು.

ಬಾಸೆ ಒಳ್ಸುದು /*ba:sε oḷsudu*/ ನಾವಿ. ಕೊಟ್ಟ ಮಾತು ಉಳಿಸಿಕೊಳ್ಳುವುದು. to keep a promise. ವಾ: ಬಾಸೆ ಒಳ್ಸುದು ಮೊನ್ಸನ ದೊಡ್ಡ ಗುಣ.

ಬಾಸೆ ಕೊಡ್ /*ba:sε koḍɨ*/ ಕ್ರಿ. 1. ಭರವಸೆ ಕೊಡು, 2. ಪ್ರಮಾಣ ಮಾಡು. 1. to promise, 2. to take an oath. ವಾ: ಏನೆ ಆದರೂ ಜತೆಗೆ ಇದ್ದನೆತ ಬಾಸೆಕೊಡ್, ಬಜ್ಜನೋ ಸುಕನೋ.

ಬಾಸೆ ತೊಪ್ಪುದು /*ba:sε toppudu*/ ನಾವಿ. ಕೊಟ್ಟ ಮಾತಿನಂತೆ ನಡೆಯದಿರುವುದು. to renage. ವಾ: ಬಾಸೆ ತೊಪ್ಪುದು ಎಸ್ಟ್ ಸೆರಿ.

ಬಾಸೆ ಬಾದು /*ba:sε ba:du*/ ನಾವಿ. ಬುದ್ಧಿಬರು. to be able to speak. ವಾ: ಈ ಜೆನಕ್ಕೆ ಯಾಗ ಬಾಸೆ ಬಾದು.

ಬಾಸೆಕೊಟ್ಟನೆ /*ba:sεkoṭṭanε*/ ನಾ. 1. ಮಾತು ಕೊಡುತ್ತೇನೆ, 2. ವಚನ ಕೊಡುವುದು. 1. I promise, 2. to promise. ವಾ: ಹೇಳ್ದಂಗೆ ನಡ್ಕನೆತ ಬಾಸೆಕೊಟ್ಟನೆ.

ಬಾಸೆಕೊಡ್ /*ba:sεkoḍɨ*/ ನಾ. 1. ಭಾಷೆ ಕೊಡು, 2. ಮಾತು ಕೊಡು. 1. to promise, 2. to give one's word. ವಾ: ತೊಪ್ಪು ಕೆಲ್ಸ ಮಾಡ್ಲೆತ ಬಾಸೆಕೊಡ್.

ಬಾಸ್ /*ba:sɨ*/ ನಾ. 1. ಓಟೆಯನ್ನು ಚಿಕ್ಕದಾಗಿ ಸೀಳುವುದು, 2. ಬಿದಿರಿನ ಸಣ್ಣ ಎಳೆ. 1. to slice the seed into small pieces 2. a tendril of bamboo. ವಾ: ಬಾಸ್‌ಲಿ ಕುಕ್ಕೆ, ಪಚ್ಚೆನ ಕಟ್ಟುದು.

ಬಾಳ /*ba:ḷa*/ ನಾ. 1. ಬಹಳ, 2. ಹೆಚ್ಚು, 3. ಅಧಿಕ, 4. ಹೆಚ್ಚಾದ. 1. plenty, 2. abundant, 3. more in quantity, 4. excess. ವಾ: ಮಕ್ಕಳೊಟ್ಟಿಗೆ ಮಾತಾಡ್ದೆ ಬಾಳ ಬಜ್ಜ. ಪ: ಬಾಳಸ್ಟ್

ಬಾಳಜಿ /*ba:ḷaji*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಬಾಳಿಯೊಳೊ /*ba:ḷiyoḷɔ*/ ನಾ. ಬಾಳಿದ್ದೇವೆ. lived. ವಾ: ನಾವೆಲ್ಲ ಒಗ್ಗಟ್ಟ್‌ಲಿ ಬಾಳಿಯೊಳೊ.

ಬಾಳಿಲ /*ba:ḷila*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಬಾಳಿಲ ಗ್ರಾಮದ ಜಾಗ. a locality in

Balila village in Sullia Taluk of Dakshina Kannada District.

ಬಾಳುಗೋಡು /*ba:ḷugo:du*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಬಾಳುಗೋಡು ಗ್ರಾಮದ ಜಾಗ. 1. family, 2. lineage, 3. a locality in Balagodu village in Sullia Taluk of Dakshina Kannada District.

ಬಾಳುವೆ /*ba:ḷuvɛ*/ ನಾ. ಬಾಳುತ್ತೇವೆ. will live. ವಾ: ನಾವೆಲ್ಲೊವು ಒಟ್ಟಿಗೆ ಬಾಳುವೆ.

ಬಾಳೆ /*ba:ḷɛ*/ ನಾ. ಬಾಳೆ ಗಿಡ. a banana plant. **ಬಾಳೆಗೊಂದು ಕಾಲ, ಕೋಳಿಗೊಂದು ಕಾಲ(ಗಾ).** ವಾ: ಬಾಳೆ ದೈ ನೆಟ್ಟದ್ ನೋಡ್ದ? ಪ: ಬಾಳೆಯ ಎಲೆ. **ಬಾಳೆಕಂದ್** /*ba:ḷɛkandɨ*/ ಸಣ್ಣ ಬಾಳೆ ಗಿಡ. a young plant of banana – Banana plant pups. ವಾ: ಸುಮಾರ್ ಬಾಳೆ ಕಂದ್ ಗ ವಳೊ.

ಬಾಳೆಕಡ್ಕ[1] /*ba:ḷɛkaḍka*/ ನಾ. ವಿಷ ಪೂರಿತ ಹಾವು. a venomous snake. ವಾ: ಬಾಳೆ ಕಡ್ಕ ಕಚ್ಚಿದೆಗಡ.

ಬಾಳೆಕಡ್ಕ[2] /*ba:ḷɛkaḍka*/ ನಾ. ಬಾಳೆಗಿಡ ಬುಡದಲ್ಲಿ ಇರುವ ವಿಷದ ಹಾವು. a venomous snake found around the stump of a banana tree.

ಬಾಳೆಕುರ್ಲೆ /*ba:ḷɛkurlɛ*/ ನಾ. ಬಾಳೆ ಸಸಿ. banana plant. ವಾ: ಬಾಳೆ ಕುರ್ಲೆ ಹಾಕೊಳೊ.

ಬಾಳೆಕೂಂಬೆ /*ba:ḷɛku:mbɛ*/ ನಾ. ಬಾಳೆ ಹೂ. banana flower. ವಾ: ಬಾಳೆ ಕೂಂಬೆದ್ ಪಲ್ಯ ಆರೋಗ್ಯಕ್ಕೆ ಒಳ್ಳೆದ್. ಪ: ಬಾಳೆಪೂಂಬೆ

ಬಾಳೆಕೈ /*ba:ḷɛkai*/ ನಾ. ಪೂರ್ಣ ಬಾಳೆ ಎಲೆಯ ಭಾಗ. foliage leaves of banana plant. ವಾ: ಬಾಳೆ ಕೈ ಗಾಳಿಗೆ ತೀರ ಹರ್‌ಕಂಡುಟು.

ಬಾಳೆಚಾಂಬರ್[1] /*ba:ḷɛca:mbar*/ ನಾ. ಬಾಳೆಯ ಒಣ ಕಸ. dry waste of banana. ವಾ: ಬಾಳೆ ಚಾಂಬರ್ ನ ಗೊಬ್ಬರ ಗುಂಡಿಕೆ ಹಾಕಿರೆ ಗೊಬ್ಬರಾದೆ.

ಬಾಳೆಚಾಂಬಾರ್[2] /*ba:ḷɛca:mba:rɨ*/ ನಾ. ಒಣಗಿದ ಬಾಳೆ ಎಲೆ. dried plantain leaf. ವಾ: ಬಾಳೆ ಚಾಂಬಾರ್ ಗೊಬ್ಬರ ಆದೆ.

ಬಾಳೆದರ್ಗ್ /*ba:ḷɛdargɨ*/ ನಾ. ಒಣಗಿದ ಎಲೆ. dried leaf. ವಾ: ಬಾಳೆ ದರ್ಗ್‌ನ ಅತ್ತನ ಬರಿಗೆ ಹಾಕಿಸಿ.

ಬಾಳೆದಿಂಡ್ /*ba:ḷɛdiṇḍɨ*/ ನಾ. 1. ಬಾಳೆಯ ಕಾಂಡದ ಒಳಗಿನ ತಿರುಳು, 2. ಬಾಳೆಯ ದಿಂಡು. 1. tender stalk inside a plantain. 2. stalk of a plantain. 3. plantain stem. ವಾ: ಬಾಳೆ ದಿಂಡ್ ರಸನ ಕುಡ್ದರೆ ತಡಿಗೆ ಒಳ್ಳೆದುಟ್ಟು. ಪ: ಬಾಳೆದಂಡ್

ಬಾಳೆಪಟ್ಟೆ /*ba:ḷɛpaṭṭɛ*/ ನಾ. ಬಾಳೆಯ ಕವಚ. skin of banana. ವಾ: ಬಾಳೆ ಪಟ್ಟೆನ ಸಣ್ಣ ಸಿಗ್ದ್ ಸೊಪ್ಪ್ ಕಟ್ಟ್ ಕಟ್ಟಿಕೆ, ಹೂ ಕಟ್ಟಿಕೆ ಬಳ್ಸುವೆ.

ಬಾಳೆಪುಂಡೆಲ್ /*ba:ḷɛpuṇḍɛlɨ*/ ನಾ. ಬಾಳೆ ಹಿಂಡಿಲು. in the cluster of banana plants. ವಾ: ಬಾಳೆ ಪುಂಡೆಲ್‌ಲಿ ಒಮ್ಮೊಮ್ಮೆ ಬಾಳೆಕಡ್ಕ ಹಾವ್ ಇದ್ದದೆ.

ಬಾಳೆಪೂಂಬೆ /*ba:ḷɛpu:mbɛ*/ ನಾ. ಬಾಳೆ ಹೂ. bunch of banana flower. ವಾ: ಬಾಳೆ ಪೂಂಬೆ ತಿನ್ನೊಕು.

ಬಾಳೆಬಂಬೆ /*ba:ḷɛbambɛ*/ ನಾ. 1. ಬಾಳೆದಿಂಡಿನೊಳಗಿನ ತಿರುಳು, 2. ಬಾಳೆದಿಂಡು. 1. a round stalk inside a plantain stem 2. plantain stem. ವಾ: ಬಾಳೆ ಬಂಬೆದ್ ರಸನ ಕುಡಿಯಕ್, ಬಾಳೆ ಬಂಬೆನ ಗೈಪು, ಪಲ್ಯ ಮಾಡಿ ತಿಂದರೆ ಹೊಟ್ಟೆಲಿ ಕೂದೊಲು ಇದ್ದರೆ ಹೋದೆ, ಹುಳ ಬಾದೆನೂ ಕಮ್ಮಿ ಆದೆ.

ಬಾಳೆಮೀನ್ /*ba:ḷɛmi:nɨ*/ ನಾ. ಹೊಳೆಗಳಲ್ಲಿ ವಾಸಿಸುವ ಮೀನು. flat bodied fresh water fish.

ಬಾಳೆರಟ್ಟೆ /*ba:ḷɛraṭṭɛ*/ ನಾ. ಬಾಳೆ ಗಿಡದ ಹಾಳೆ. a dried leaf of plantain. ವಾ: ಬಾಳೆ ರಟ್ಟೆಲಿ ದೂಪ ಹಾಕಕ್. ಪ: ಬಾಳೆರೆಂಬೆ, ಬಾರೆಪಂಬೆ(ತು)

ಬಾಳೆಸುಳಿ /*ba:ḷɛsuḷi*/ ನಾ. ಬಾಳೆ ಚಿಗುರು. green colour.

ಬಾಳೆಹಣ್ಣ್ /*ba:ḷɛhaṇṇɨ*/ ನಾ. ಬಾಳೆ ಹಣ್ಣು. banana fruit. ವಾ: ಹಸ್ತ್ ಹಲ್ಸಣ್ಣ್, ಉಂಡ್ ಬಾಳೆ ಹಣ್ಣ್ ತಿನೊಕುತ ಗಾದೆ ಮಾತೆ ಉಟ್ಟು.

ಬಾಳೆಕಜೆ /*ba:ḷɛkajɛ*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ತೊಡಿಕಾನ ಗ್ರಾಮದ ಜಾಗ. 1. family, 2. lineage, 3. a locality in Todikana village in Sullia Taluk of Dakshina Kannada District.

ಬಾಳೆಕರೆ /*ba:ḷɛkarɛ*/ ನಾ. ಬಾಳೆ ರಸದ ಕಲೆ. the

stain of banana. ವಾ: ಬಾಳೆಕರೆ ಅರ್ವೆಗಾರೆ ಹೋಕಿಲೆ.

ಬಾಳೆಕಾಯಿ /*ba:ḷɛka:yi*/ ನಾ. ಬಾಳೆಕಾಯಿ. a plantain. ವಾ: ಬಾಳೆ ಕಾಯಿಲಿ ಪಲ್ಯ, ಬಜ್ಜಿ, ಚಿಪ್ಸ್ ಎಲ್ಲ ಮಾಡಕ್, ಇದ್ಕೆಲ್ಲ ಔಂಡ ಬಾಳೆಕಾಯಿ ಒಳ್ಳೆದ್.

ಬಾಳೆಕೀಂತ್ /*ba:ḷɛki:ntɨ*/ ನಾ. ತುಂಡು ಬಾಳೆ ಎಲೆ. part of a banana leaf. ವಾ: ಎಡೆ ಹಾಕಿಕೆ ಬಾಳೆ ಕೀಂತ್ ಬೇಕ್. ಪ: ಬಾಳೆಚೀಂತ್, ಬಾರೆಚೀತ್(ತು)

ಬಾಳೆಕೂಂಬೆ ಹಕ್ಕಿ /*ba:ḷɛku:mbɛ hakki*/ ನಾ. 1. ಚೀಪೆ ಹಕ್ಕಿ, 2. ಉದ್ದ ಕೊಕ್ಕಿನ ಚಿಕ್ಕ ಹಕ್ಕಿ. a bird with long beak. ವಾ: ಅದ್ ಬಾಳೆಕೂಂಬೆ ಹಕ್ಕಿತ ಹೇಳ್ವೊ.

ಬಾಳೆಕೋಡಿ /*ba:ḷɛko:ḍi*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮಂಡೆಕೋಲು ಗ್ರಾಮದ ಜಾಗ. 1. family, 2. lineage, 3. a locality in Mandekolu village in Sullia Taluk of Dakshina Kannada District.

ಬಾಳೆಗುಂಡಿ /*ba:ḷeguṇḍi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ನೆಲ್ಲೂರು ಕೆಮ್ರಾಜೆ ಗ್ರಾಮದ ಜಾಗ. a locality in Nelluru Kemraje village in Sullia Taluk of Dakshina Kannada District.

ಬಾಳೆಗುಡ್ಡೆ /*ba:ḷeguḍḍe*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕಳಂಜ ಗ್ರಾಮದ ಜಾಗ. a locality in Kalanja village in Sullia Taluk of Dakshina Kannada District.

ಬಾಳೆಗೊನೆ /*ba:ḷɛgonɛ*/ ನಾ. ಬಾಳೆಗೊನೆ. bunch of banana.

ಬಾಳೆಚಿರಿ /*ba:ḷeciri*/ ನಾ. ಬಾಳೆ ಎಲೆಯ ಚಿಗುರು. shoot of banana leaf.

ಬಾಳೆಡಿ /*ba:ḷɛḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಬಾಳೆಣ್ಣ್ /*ba:ḷɛṇṇɨ*/ ನಾ. ಬಾಳೆಹಣ್ಣು. ripe banana.

ಬಾಳೆಣ್ಣ್ ಚಿಪ್ಸ್ /*ba:ḷɛṇṇɨ cipsɨ*/ ನಾ. ಬಾಳೆ ಹಣ್ಣಿನ ಚಿಪ್ಸ್. a hand of banana/a cluster of bananas.

ಬಾಳೆದಂಬೆ /*ba:ḷɛdambɛ*/ ನಾ. 1. ಬಾಳೆದಿಂಡಿನೊಳಗಿನ ತಿರುಳು, 2. ಬಾಳೆದಿಂಡು. 1. round stalk inside a plantain stem. 2. plantain stem.

ಬಾಳೆದೈ /*ba:ḷɛdai*/ ನಾ. ಬಾಳೆ ಗಿಡ. a plant of banana.

ಬಾಳೆನಾರ್ /*ba:ḷɛna:rɨ*/ ನಾ. ಬಾಳೆಯ ಒಣಗಿದ ನಾರು. dried banana fibre. **ಬೆಳಿಗ್ಗೆ ಬಾಳೆ ನಾರ್‌ಲಿ ಆನೆನ ಕಟ್ಟಿಕ್(ನು).**

ಬಾಳೆಪಾಪ್ /*ba:ḷɛpa:pakɨ*/ ನಾ. ಸ್ವರ್ಗಕ್ಕೆ ಹೋಗುವ ದಾರಿಯೆಂದು ಜನಪದರ ನಂಬಿಕೆ. a path to heaven, a belief in folk cultures. **ಬಾಳೆ ಪಾಪು ನೂಲ ಕೈತಾಂಗ್(ನು).** ವಾ: ಬಾಳೆ ಪಾಪ್‌ಲಿ ನೂಲ ಕೈತಾಂಗ್‌ಲಿ ಸ್ವರ್ಗಕ್ಕೇ ಸೇರಿಂತ ಸ್ವರ್ಗಕ್ಕೆ ಸಲ್ಲಿಸುವ ಕ್ರಮ.

ಬಾಳೆಪೋಡಿ /*ba:ḷɛpo:ḍi*/ ನಾ. ಬಾಳೆಕಾಯಿ ಬಜ್ಜಿ. banana fritters. ವಾ: ಬಾಳೆಪೋಡಿನ ಕಡ್ಲೆ ಹೊಡಿ ಹಾಕಿ ಮಾಡಿವೆ.

ಬಾಳೆಬಳ್ಪು /*ba:ḷebaḷpu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಆಲೆಟ್ಟಿ ಗ್ರಾಮದ ಜಾಗ. a locality in Aletti village in Sullia Taluk of Dakshina Kannada District.

ಬಾಳೆಬೈಲು /*ba:ḷebailu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕಲ್ಮಕಾರು ಗ್ರಾಮದ ಜಾಗ. a locality in Kalmakar village in Sullia Taluk of Dakshina Kannada District.

ಬಾಳೆಬೊಳ್ಳಿ /*ba:ḷɛbɔḷḷi*/ ನಾ. 1. ಬಾಳೆದಿಂಡಿನ ಸಿಪ್ಪೆಯನ್ನು ಸೀಳಿ ತಯಾರಿಸಿದ (ಹೂ ಕಟ್ಟಲು ಉಪಯುಕ್ತವಾದ) ಹಗ್ಗ, 2. ಬಾಳೆನಾರು. banana fibre. ವಾ: ಬಾಳೆದಿಂಡ್‌ನ ಸೀಳಿ ಎಳೆಯಾಗಿ ತೆಗ್ದರೆ ಬಾಳೆಬೊಳ್ಳಿ ಸಿಕ್ಕುದು.

ಬಾಳೆಮುಕ್ಕಿ /*ba:ḷɛmakki*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಸುಳ್ಯ ನಗರದ ಜಾಗ. 1. family, 2. lineage, 3. a locality in Sullia Nagara village in Sullia Taluk of Dakshina Kannada District.

ಬಾಳೆಮುರಿ /*ba:ḷɛmuri*/ ನಾ. ಬಾಳೆಗಿಡ ಬುಡದಲ್ಲಿ ಇರುವ ವಿಷದ ಹಾವು. a venomous snake found

around the stump of banana tree. ವಾ: ಬಾಳೆಮುರಿ ಬಾಳೆಬುಡಲಿ ಇದ್ದದೆ. ಪ: ಬಾಳೆಮೊರಿ

ಬಾಳೆಲೆ /*ba:ḷεlε*/ ನಾ. ಬಾಳೆ ಎಲೆ. banana leaf. ವಾ: ಬಾಳೆಲೆಲಿ ಉಂಡರೆ ಒಳ್ಳೆದ್.

ಬಾಳೆಹಿತ್ಲು /*ba:ḷεhitlu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಬಾಳ್[1] /*ba:ḷɨ*/ ನಾ. ಗರಗಸ. saw, a tool for cutting solid materials. **ನೂಲು ತುಂಡಾಗಿರ್ದು ಬಾಳ್ ತುಂಡಾತ್‌ಲೆ(ಗಾ).** ವಾ: ಮರ ಕೊಯ್ಯಕೆ ಬಾಳ್‌ಗೆ ಸರೀ ಅರ ಹಾಕಿ ಇಸಿಕಂಡವೆ.

ಬಾಳ್[2] /*ba:ḷɨ*/ ಕ್ರಿ. ಬದುಕು. life. ವಾ: ಹೊಂದಿಕಂಡ್ ಹೋದರೆ ಬಾಳ್ ಸ್ವರ್ಗ ಆದೆ. ಪ: ಬಾಳ್‌ಲಿ – ಬದುಕಿನಲ್ಲಿ; ಬಾಳ್‌ಗೆ – ಬದುಕಿಗೆ

ಬಾಳ್[3] /*ba:ḷɨ*/ ನಾ. ಹುರುಳಿ, ಅವರೆ ಮೊದಲಾದ ಧಾನ್ಯಗಳ ಕೋಡು. pods of horsegram, beans, etc. ವಾ: ಬೊಳ್ಳಿಲಿ ಬಾಳ್ ಬುಡಿಕೆ ಸುರಾವ್ವು.

ಬಾಳ್[4] /*ba:ḷɨ*/ ನಾ. ಕೊಂಬು. horns of animals.

ಬಾಳ್[5] /*ba:ḷɨ*/ ನಾ. 1. ಕ್ಷೌರದ ಕತ್ತಿ, 2. ಬಾಳು. 1. a razor, 2. Shaving blade. ವಾ: ಬಾಳ್‌ಲಿ ಚೂರ್ ಚೂರೆ ಮೀಸೆ ತೆಗಿ. ಪ: ಬಾಳ್ಕಟ್ಟಿದಾ – ಬಾಳುಕಟ್ಟಿದ;

ಬಾಳ್[6] /*ba:ḷɨ*/ ನಾ. ಎರಡು ಕಡೆ ಅಲಗು ಇರುವ ಅಂಕದ ಕೋಳಿಯ ಕಾಲಿಗೆ ಕಟ್ಟುವ ಕತ್ತಿ. a double edged, small knife tied on the leg of a fighting cock. ವಾ: ಕೋಳಿ ಬಾಳ್‌ನಾಂಗೆ ಅವನ ಅಡ್ಕೆ ಕೊಯ್ವ ಕತ್ತಿ. ಪ: ಕಟ್ಟದಬಾಳ್ – ಕೋಳಿ ಕಟ್ಟದ ಬಾಳ್

ಬಾಳ್[7] /*ba:ḷɨ*/ ನಾ. 1. ಕತ್ತಿ, 2. ಖಡ್ಗ. 1. a knife, 2. Sword. ವಾ: ಬಾಳ್ ಕತ್ತಿ ಹಿಡ್ಕಂಡ್ ಮೀನ್ ಕಡಿಯಕೆ ಹೋಗೊಳೊ. ಪ: ಬಾಳ್‌ಕತ್ತಿ – ಉದ್ದನೆಯ ಕತ್ತಿ

ಬಾಳ್ಕತ್ತಿ /*ba:ḷkatti*/ ನಾ. ಉದ್ದನೆಯ ಕತ್ತಿ. (ಬಾಳ್+ಕತ್ತಿ)ದ್ವಿರುಕ್ತಿ ಪದ. a long sword. **ಬಾಳೆಹಣ್ಣ್ ಕೊಯ್ಯಕೆ ಬಾಳ್‌ಕತ್ತಿ ಯಾಕೆ?(ಗಾ).** ವಾ: ಬಾಳ್ಕತ್ತಿನ ಹಿಡ್ಕಂಡ್ ಬಾತ್.

ಬಾಳ್ತರ /*ba:ḷtara*/ ನಾ. 1. ಬಾಳಿಕೆ, 2. ಹೆಚ್ಚು ಸಮಯ ಉಪಯೋಗಕ್ಕೆ ಬರುವುದು. 1. longevity, 2. something that lasts long. ವಾ: ಹಳೆ ಕಾಲದ ವಸ್ತುಗ ಬಾಳ್ತರ ಬಂದದೆ.

ಬಾಳ್‌ಲೆ /*ba:ḷɨlε*/ ನಾ. ಬಾಳೆಯ ಎಲೆ. leaf of banana. ವಾ: ಹಬ್ಬಲಿ ಬಾಳ್‌ಲೆಲಿ ಉಂಬೊದು.

ಬಾಳ್ವೆ /*ba:ḷvε*/ ಕ್ರಿ. 1. ಬಾಳು, 2. ಬದುಕು ಸಾಗಿಸು. 1. life, 2. to live. ವಾ: ಅವು ಕುಸಿಲೆ ಬಾಳ್ವೆ.

ಬಿಂಗಾರ /*biŋga:ra*/ ನಾ. 1. ಅಡಿಕೆಮರದ ಎಳೆಯ ಮಿಡಿಗಳಿರುವ ಹೂವು, 2. ಹಿಂಗಾರ. areca nut flower. ವಾ: ಅಡ್ಕೆ ಮರಲಿ ಬಿಂಗಾರ ನೋಡ್.

ಬಿಂಗ್ರ /*biŋgra*/ ನಾ. 1. ತಲೆಹರಟೆ, 2. ಕಿರಿಕಿರಿ ಮನುಷ್ಯ, 3. ಸೌಜನ್ಯತೆ ಇಲ್ಲದವ. 1. an irritating person, 2. an annoyng person, 3. a mannerless person. ವಾ: ಬಿಂಗ್ರನೊಟ್ಟಿಗೆ ಕುದ್ದರೆ ತಲೆ ಹಾಳಾದು.

ಬಿಂಗ್ರಿ /*biŋgri*/ ನಾ. 1. ಜಾಸ್ತಿ ಮಾತನಾಡುವುದರೊಂದಿಗೆ ಕುಳಿತಲ್ಲಿ ಕೂರದವರು, 2. ಅರೆಹುಚ್ಚು, 3. ಅರೆಮರುಳು, 4. ಸ್ತಿಮಿತವಿಲ್ಲದ ಮನಸ್ಥಿತಿ. 1. restless person, 2. half madness, 3. insanity, 4. senselessness. ವಾ: ಅದ್ ಬಿಂಗ್ರಿ ಗೂಡೆ. ಪ: ಬಿಂಗ್ರಿಗ – ತಲೆಹರಟೆ ಮಾಡುವವರು

ಬಿಂದಿಗೆ /*bindigε*/ ನಾ. 1. ತಂಬಿಗೆ, 2. ಕೊಡ, 3. ನೀರು ತುಂಬುವ ಕಂಠವಿರುವ ಪಾತ್ರೆ. a pot. ವಾ: ಬಿಂದಿಗೆಲಿ ನೀರುಟ್ಟು. ಪ: ಬಿಂದಿಗೆಲಿ – ಬಿಂದಿಗೆಯಲ್ಲಿ

ಬಿಂದ್ /*bindɨ*/ ನಾ. 1. ಬಿಂದು, 2. ಹನಿ, 3. ತೊಟ್ಟು. 1. a dot, 2. a drop, 3. a drop of water. ವಾ: ಮಳೆ ನಿತ್ತರು ಬಿಂದ್ ನಿಲ್ಲುಲೆ.

ಬಿಂಬ /*bimba*/ ನಾ. ದೇವರ ಮೂರ್ತಿ. an idol of god. ವಾ: ಬಿಂಬಕೆ ಪೂಜೆ ಮಾಡಿವೆ.

ಬಿಂಬುಳಿಮರ /*bimbuḷimara*/ ನಾ. ಒಂದು ವಿಧದ ಹುಳಿ ಮರ. bilimbi tree, tree sorrel, cucumber tree. ವಾ: ಬಿಂಬುಳಿ ಮರ ಒಣ್ಗಿಕಂಡ್ ಬಂದದೆ.

ಬಿಕಾರಿ /*bika:ri*/ ನಾ. 1. ಭಿಕ್ಷುಕ, 2. ತಿರುಕ, 3. ಬೈಗುಳದ ಪದ. 1. a beggar, 2. a destitute, 3. a penurious person, 4. an expletive. ವಾ: ಬಿಕಾರಿನಂಗೆ ತಿರ್‌ಗಿದೆ. ಪ: ಬೀದಿಬಿಕಾರಿ

ಬಿಕ್ಕನೆಬಿರಿಯ /*bikkanɛbiriya*/ ನಾ. 1. ಸದಾ ಸಾಕಷ್ಟು, ಅತಿಯಾಗಿ ತಿನ್ನುವುದು, 2. ಚೆನ್ನಾಗಿ ಉಣ್ಣುವುದು. 1. a glutton, 2. eating well. ವಾ: ಅದ್ಕೆ ಬಿಕ್ಕನೆ ಬಿರಿಯ ತಿಂಬೊದು ತಿರ್‌ಗುದು ಅಸ್ಟೆ ಕೆಲ್‌ಸ.

ಬಿಕ್‌ನಾಸಿ /*bikɨna:si*/ ನಾ. 1. ದರಿದ್ರ, 2. ಬೈಗುಳ ಪದ, 3. ಅಬ್ಬೇಪಾರಿ. an expletive term. ವಾ: ನೀ ಬಿಕ್‌ನಾಸಿ. ಪ: ಬಿಕ್ನಾಸಿ – ದರಿದ್ರ; ಬಿಗ್ ನಾಸಿ – ದರಿದ್ರ

ಬಿಕ್ಳಿಕೆ /*bikḷikɛ*/ ನಾ. ಬಿಕ್ಕಳಿಕೆ. hiccups. ವಾ: ಬಿಕ್ಳಿಕೆ ಬಾಕನ ನೀರ್ ಕುಡ್ಯಕು.

ಬಿಕ್‌ಳ್‌ಸ್ /*bikiḷisi*/ ನಾ. ಬಿಕ್ಕಳಿಸು. hiccups. ವಾ: ಕೂಸು ಬಿಕ್‌ಳ್‌ಸ್‌ದು.

ಬಿಗಿ[1] /*bigi*/ ಕ್ರಿ. 1. ಬಾರಿಸು, 2. ಹೊಡೆಯು. 1. to hit, 2. to beat. ವಾ: ಬೇಡದ್ ಮಾತಾಡಿರೆ ನಾಕ್ ಬಿಗಿ.

ಬಿಗಿ[2] /*bigi*/ ಕ್ರಿವಿ. 1. ಕಟ್ಟುನಿಟ್ಟು, 2. ಶಿಸ್ತುಬದ್ಧ. 1. descipline, 2. Disciplined. ವಾ: ಹೊರೆಗೆ ಪೋಲಿಸ್ ಬಿಗಿ ಬಂದೋಬಸ್ತ್ ಉಟ್ಟು.

ಬಿಗಿದು /*bigidu*/ ಕ್ರಿ. 1. ಗಟ್ಟಿಯಾಗುವುದು, 2. ಸಡಿಲವಾಗದ ಹಾಗೆ ಕಟ್ಟುವುದು. 1. to harden, 2. tying something very tight. ವಾ: ಸೊಂಟಕೆ ಪಟ್ಟಿನ ಬಿಗ್ದ್ ಕಟ್ಟ್. ಪ: ಬಿಗ್ದ್ – ಗಟ್ಟಿಯಾಗಿ

ಬಿಗಿಪಟ್ಟಿ /*bigipaṭṭi*/ ನಾ. ದೃಢನಿರ್ಧಾರ. a firm decision. ವಾ: ಏನೇ ಕೆಲ್‌ಸ ಮಾಡಿರು ಬಿಗಿಪಟ್ಟಿ ಇರೊಕು.

ಬಿಗ್ದರೆ /*bigdarɛ*/ ನಾ. 1. ಹೊಡೆದರೆ, 2. ಬಾರಿಸಿದರೆ. 1. if I hit, 2. if I beat you. ವಾ: ನಾಕ್ ಬಿಗ್ದರೆ ಕದ್ದದ್ ಯಾರ್‌ತ ಗೊತ್ತಾದೆ.

ಬಿಗ್ದ್ /*bigidɨ*/ ಕ್ರಿ. 1. ಬಿಗಿಯಾಗಿದೆ, 2. ಗಟ್ಟಿಯಾಗಿದೆ. 1. tight, 2. hard. ವಾ: ಕರ್‌ನ ಕಾಲಿಗೆ ಹಗ್ಗ ಬಿಗ್ದ್ ಕಾಸಿ ಹೋಗಿತ್.

ಬಿಚ್ಚಕು /*biccaku*/ ಕ್ರಿ. 1. ಬಿಚ್ಚಬೇಕು, 2. ಕೆಲಸದ ಸಲುವಾಗಿ ಹಣವನ್ನು ನೀಡು. 1. need to spend/ open, 2. to pay money to get something done. ವಾ: ದುಡ್ಡು ಬಿಚ್ಚಕು ಇಲ್ಲರೆ ಕೆಲ್‌ಸ ಆದುಲೆ.

ಬಿಚ್ಚೋಲೆ /*bicco:lɛ*/ ನಾ. ಕಿವಿ ಮತ್ತು ಕಂಠಾಭರಣ, ಕರಿಮಣಿ, ಕಿವಿಯೋಲೆ. palm-leaf manuscript. ವಾ: ಬಿಚ್ಚೋಲೆ, ಕರಿಮಣಿ ಎಲ್ಲ ಮೊದ್ವೆಲಿ ಕಂಚ್‌ನ ಬಟ್ಲ್‌ಲಿ ಇಸೊಕು.

ಬಿಚ್ಚ್ /*biccɨ*/ ಕ್ರಿ. 1. ಕಳಚು, 2. ತೆರೆದ. 1. to fasten, 2. to open. **ಅಜ್ಜಂಗೆ ಕಚ್ಚೆ ಬಿಚ್ಚ್ ಕನ ಕೈಲಿ ಇದ್ದ ದೊಣ್ಣೆ ಬಿದ್ದದೆ(ಗಾ).** ವಾ: ನಾಟಕ ಮುಗ್ದ ಮೇಲೆ ಪರ್‌ದೆನ ಬಿಚ್ಚ್‌ದು. ಪ: ಬಿಚ್ಚಿ – ತೆರೆದು, ಬಿಚ್ಚಿ

ಬಿಜಾಗ್ರಿ /*bija:gri*/ ನಾ. ಎಪ. 1. ಬಾಗಿಲು ಮತ್ತು ದಾರಂದವನ್ನು ಸಂಪರ್ಕಿಸಲು ಬಳಸುವ ಲೋಹದ ಸಾಧನ, 2 ಬಿಜಾಗರಿ. hinges attached to the door and the doorframe. ವಾ: ಬಾಗ್ಲ್ ನ ಬೀಜಾಗ್ರಿ ತುಂಡಾಗುಟು.

ಬಿಜಿ /*bizi*/ ಎಪ. 1. ಚಟುವಟಿಕೆಯಿಂದ ಕೂಡಿದ, 2. ಬಿಡುವಿಲ್ಲದ, 3. ಕೆಲಸದಲ್ಲಿ ತೊಡಗು, 4. ಕ್ರಿಯಾಶೀಲನಾಗು, 5. ಮಗ್ನ, 6. ನಿರತ. 1. active, 2. busy, 3. occupied with something, 4. agile, 5. engrossed, 6. immerse oneself in. ವಾ: ಕೃಸಿ ಕೆಲ್ಸ್‌ಲಿ ಯಾಗೊಳು ಬಿಜಿ ಇದ್ದವೆ.

ಬಿಟ್ಟ /*biṭṭa*/ ನಾ. 1. ಮಾಡಿನ ಪಕ್ಕಾಸುಗಳನ್ನು ಜೋಡಿಸಲು ಗೋಡೆಯ ಮೇಲೆ ಇರಿಸುವ ಮರದ ದಿಮ್ಮಿ, 2. ವಾಲ್‌ಪ್ಲೇಟ್. 1. wooden beam, 2. a wall plate. ವಾ: ಹಳೆಕಾಲದ ಬಿಟ್ಟಗಳ ನೋಡೊಕು, ಬಾರಿ ದಪ್ಪಲಿ ಗಟ್ಟಿ ಇದ್ದದೆ.

ಬಿಟ್ಟಿಕೆಲಸ /*biṭṭikelasa*/ ನಾವಿ. ಲಾಭವಿಲ್ಲದೆ ಸೇವೆ ಮಾಡುವುದು. serving without any expectations. ವಾ: ಅವು ಬಿಟ್ಟಿ ಕೆಲ್‌ಸ ಮಾಡ್‌ಸಿಕಂಡವೆ.

ಬಿಟ್ಟಿಸಂದಾಯ /*biṭṭisanda:ya*/ ನಾವಿ. ಅರ್ಧದಲ್ಲಿ ಕೆಲಸ ಮಾಡಿ ಬಿಟ್ಟು ಹೋಗುವವರು. to leave any work incomplete. ವಾ: ಬಿಟ್ಟಿಸಂದಾಯ ಮಾಡುವವೆ ಹೆಚ್ಚಿ.

ಬಿಟ್ಟಿ[1] /*biṭṭi*/ ಕ್ರಿ. 1. ಪುಕ್ಕಟೆ ಕೆಲಸ, 2. ಸ್ವಯಂಸೇವೆ. 1. free lancing, 2. self-service. ವಾ: ಬಿಟ್ಟಿ ಸಿಕ್ಕಿರೆ ಯಾರ್ ಬುಟ್ಟವೆ. ಪ: ಬಿಟ್ಟಿಗೆ – ಪುಕ್ಕಟೆ ಕೆಲಸಕ್ಕೆ

ಬಿಟ್ಟಿ[2] /*biṭṭi*/ ಕ್ರಿವಿ. ನಿಯತ್ತಿನಿಂದ ಕೆಲಸ ಮಾಡದಿರುವುದು. dishonesty in work. ವಾ: ಬೇಕಾಬಿಟ್ಟಿ ಕೆಲ್ಸ ಮಾಡಿರೆ ಯಾರಿಗೆ ಕುಸಿಯಾದೆ.

ಬಿಟ್ಟಿಚಾಕ್ರಿ /*biṭṭica:kri*/ ನಾವಿ. ಪುಕ್ಕಟೆ ಮಾಡುವ

ಚಾಕರಿ. to work without any remunertion. **ನಾನೇನ್ ಬಿಟ್ಟಿಗೆ ಬಿದ್ದೊಳೆನಾ?(ನು).** ವಾ: ಬಿಟ್ಟಿಚಾಕ್ರಿ ಮಾಡಿರೆ ಲೆಕ್ಕಕ್ಕಿಲ್ಲೆ.

ಬಿಟ್ಟಿರಮನೆ /*biṭṭiramanɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಬಿಟ್ಟೀರ /*biṭṭi:ra*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಬಿಡಾರ /*biḍa:ra*/ ನಾ. ತಾತ್ಕಾಲಿಕವಾಗಿ ತಂಗುವ ಜಾಗ. a temporary shelter. ವಾ: ಆನೆಗ ತೋಟಗಳ್ಲೆ ಬಿಡಾರ ಹೂಡ್ಯೊಳೊ.

ಬಿಡು /*biḍu*/ ನಾ. ಬಿಡುವು. a break. ವಾ: ಇಂದ್ ಕೆಲ್ಸದ ಬಿಡು ಮಾಡಿಕಂಡ್ ಬಂದೊ.

ಬಿಡ್ಚೆಲ್ /*biḍceli*/ ಕ್ರಿ. ಸಾಕಾಗು, ಆಯಾವಸವಾಗು. fatigue. **ಬಿಡಿಬಿಡ್ಚೆಲ್** /*biḍibiḍceli*/ ಸಾಕು ಸಾಕಾಯಿತು. having enough of something. ವಾ: ಆ ಕೂಸ್ ನನ್ನ ಬಿಡಿಬಿಡ್ಚೆಲ್ ತೆಗ್ದ್ ಬುಡ್ತ್. ಪ: ಬೊಡೆಚ್ಚೆಲ್(ತು). **ಬಿಡಿಹೋದು** /*biḍiho:du*/ 1. ಸಾಕು ಸಾಕನಿಸು, 2. ಬಿಡ್ದ್ ಹೋಗುವುದು, 3. ಬಿಡಿ ಹೋಗುವಿಕೆ. 1. to feel exhausted with something, 2. to feel enough of something, 3. leaving any work in the middle. ವಾ: ಯಾಗೊಳು ತಿಳಿ ಆಂಬರನೆ ಮಾಡಿರೆ ಬಿಡಿಹೋದು.

ಬಿಡ್ತ್ /*biḍti*/ ಕ್ರಿ. 1. ಬಿಡಿದು ಹೋಗು, 2. ಸಾಕೆನಿಸು. 1. to feel enough of something, 2. feeling of exhaustion. ವಾ: ಅಳ್ಂಬು ತಿಂದ್ ತಿಂದ್ ಬಿಡ್ತ್. ಪ: ಬಿಡ್ತ್‌ಗಡ – ಸಾಕೆನಿಸಿತಂತೆ, ಬೊಡಿಂಡ್(ತು). **ಬಿಡ** /*biḍa*/ ಬಿಡುವುದಿಲ್ಲ. not leaving. **ಅಕ್ಕನ ಬಂಗಾರನ ಅಕ್ಕಸಾಲಿ ಬಿಡ(ಗಾ).** ವಾ: ಒಮ್ಮೆ ಬೇಕ್‌ತ ಹಟ ಮಾಡಿರೆ ಮತ್ತೆ ಏನ್ ಮಾಡಿರು ಬಿಡ. **ಬಿಡಿಕಾಗದ್** /*biḍika:gadi*/ ಬಿಡಬಾರದು. shouldn't leave. ವಾ: ಹಿಡ್‌ದ ಯಾವ್‌ದೇ ಕೆಲ್‌ಸನ ಅರ್‌ದಕ್ಕೆ ಬಿಡಿಕಾಗದ್. ಪ: ಬಿಡಿಕಾದು – ಬಿಡಬಹುದು, ಬಿಡಬೇಕಾಗಿ ಬರಬಹುದು.

ಬಿಡ್ಡೊತು[1] /*biḍḍɔtu*/ ಕ್ರಿ. 1. ಸಾಕೆನಿಸುವುದು, 2. ಬಿಡಿಹೋದು. 1. to feel enough of something, 2. being fedup. ವಾ: ಅವರ ಕೊಂಕ್ ಮಾತ್ ಕೇಳಿ ಕೇಳಿ ಬಿಡ್ಡೊತು.

ಬಿಡ್ಡೊತು[2] /*biḍḍɔtu*/ ಕ್ರಿ. ತಿರಸ್ಕಾರಭಾವ ಮೂಡು. 1. to feel enough of something, 2. the mood of rejection, 3. feeling enough of something, 4. to feel that one can't take it anymore. ವಾ: ಅವರ ಸಾವಸ ಬಿಡ್ಡೊತು.

ಬಿಡ್ದ್‌ಹೋತ್ /*biḍḍiho:ti*/ ಕ್ರಿ. 1. ಕೆಲಸ ಮಾಡಿ ಸುಸ್ತಾಗು, 2. ಸೋತು ಹೋಗು. 1. to get tired of excessice work, 2. to feel defeated. ವಾ: ಬುಡದೆ ಕೆಲ್‌ಸ ಮಾಡಿ ಬಿಡ್ದ್‌ಹೋತ್.

ಬಿಡ್ಸಿಕಾದು /*biḍsika:du*/ ಕ್ರಿ. 1. ಬಿಡಿಸಬಾರದು, 2. ಬಿಡಿಸಬೇಕಾಗಿ ಬರಬಹುದು. 1. shouldn't force one to leave, 2. might have to ask someone to leave. ವಾ: ಹಿಂಗಾರೆ ಕೆಲ್‌ಸನ ಬಿಡ್ಸಿಕಾದು.

ಬಿತ್ತ್[1] /*bitti*/ ಕ್ರಿ. ವೃಷಣ ಬೀಜ. testicles. ವಾ: ಅಂವನ ಸರ್ಕಸ್‌ಲಿ ಬಿತ್ತ್ ನೀರಾಗತಿತ್ತ್.

ಬಿತ್ತ್[2] /*bitti*/ ಕ್ರಿ. ಬೀಳು. to fall. ವಾ: ಆಡಿಕನ ಕಲ್ಲ್ ಎಡ್ಗಿ ಬೀತ್.

ಬಿತ್ತ್[3] /*bitti*/ ನಾ. ಬಿತ್ತನೆ ಮಾಡುವ ಬೀಜ. seed. **ಅಯ್ಯೆನ ಮಾತ್, ಅಪ್ಪನ ಬಿತ್ತ್(ಗಾ).** ವಾ: ಗದ್ದೆಲಿ ಬತ್ತದ ಬಿತ್ತ್ ಮಾಡ್ದು. **ಬಿತ್ತು** /*bittu*/ ಬೀಜ. seed. ವಾ: ಬಿತ್ತು ಹಳೆದಾವ್ವು. **ಬಿತ್ತ್ ನೀರ್ ಮಾಡ್ದು** /*bitti ni:ri ma:ḍdu*/ ಗಂಡು ಹಂದಿ ಮರಿಯ ವೃಷಣವನ್ನು ತೆಗೆಯುವುದು, ಗಂಡು ಕರುಗಳ ಬೀಜ ಒಡೆಯುವುದು, ತುಂಬ ಅಹಂಕಾರಿಗಳಿಗೆ ಬಿತ್ತ್‌ನೀರ್ ಮಾಡಬೇಕೆಂದು ಹೇಳುವರ. castrating a male pig. ವಾ: ಹಂದಿ ಲಾಯ್ಕಲಿ ಬೆಳೆಯಲಿತ ಬಿತ್ತ್‌ನೀರ್‌ಮಾಡ್ದು. **ಬಿತ್ತ್ ಹಾಕುದು** /*bi:tti ha:kudu*/ ಗದ್ದೆಗೆ ಬಿತ್ತನೆ ಬಿತ್ತುವುದು. transplanting paddy. ವಾ: ಗದ್ದೆಗೆ ಬತ್ತದ ಬೀಜ ಹಾಕುದು. **ಬಿತ್ತ್‌ನ** /*bittina aḍkɛ*/ ನಾ. ಬೀಜಕ್ಕಾಗಿ ಉಪಯೋಗಿಸಬಹುದಾದ ಅಡಿಕೆ. arecanut used as seed. ವಾ: ಬಿತ್ತ್‌ನ ಅಡ್ಕೆ ಸಿಕ್ಕಿತ್.

ಬಿತ್ರಿ /*bitri*/ ನಾ. 1. ಬಿತ್ತರ, 2. ಪೋಕರಿ, 3. ಬೈಗುಳ ಪದ. 1. flirtuous woman, 2. a naughty girl, 3. an expletive. ವಾ: ಬಿತ್ರಿತೆಲ್ಲ ಬೊಯ್ದವೆ.

ಬಿದಿರುಗದ್ದೆ /*bidirugaddɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಬಿದ್ಕಂಡಿದ್ದೆ /*bidkaṇḍiddɛ*/ ಕ್ರಿ. ಮಲಗಿಕೊಂಡಿದ್ದೆ. was sleeping. ವಾ: ರಾತ್ರೆ ಬೇಗ ಬಿದ್ಕಂಡಿದ್ದೆ. ಪ: ಬಿದ್ಕೊಂಡ್‌ಟ್ಟೆ – ಬಿದ್ದುಕೊಂಡಿದೆ

ಬಿದ್ಕಂಡ್ /*bidkaṇḍi*/ ಕ್ರಿ. 1. ಬಿದ್ದು, 2. ಬೀಳು. 1. fell, 2. to fall. ವಾ: ಗೊಸ್‌ರ್ ಗದ್ದೆಲಿ ಬಿದ್ಕಂಡ್ ಎದ್ಕಂಡ್ ಬಂದೊ. ಪ: ಬಿದ್ಕೊಂಡ್ – ಬಿದ್ದುಕೊಂಡು; ಬಿದ್ದತೊ – ಬಿದ್ದನೊ;

ಬಿದ್‌ಟು[1] /*biditu*/ ಕ್ರಿ. 1. ಬೀಳು, 2. ಉದುರು, 3. ನೆಲಕ್ಕೆ ಬರು. 1. to fall, 2. fall, 3. descended. ವಾ: ದೈದ ಮೇಲೆ ಮಂಜ್‌ನ ಹನಿಗ ಬಿದ್‌ಟು.

ಬಿದ್‌ಟು[2] /*biditu*/ ಕ್ರಿ. 1. ಮಲಗಿದೆ, 2. ಮಲಗಿದ್ದಾನೆ, 3. ಮಲಗಿದ್ದಾಳೆ. 1. it is sleeping, 2. he is sleeping, 3. she is sleeping. ವಾ: ಹಗ್‌ಲೆ ಹಂದಿನಂಗೆ ಬಿದ್‌ಟು. ಪ: ಬಿದ್ದುಟ್ಟೆ – ; ಮಲಗಿದೆ/ಮಲಗಿದ್ದಾನೆ/ಳೆ

ಬಿದ್ದ್ /*biddi*/ ಕ್ರಿ. 1. ಬೀಳು, 2. ಬಿದ್ದು. 1. to fall, 2. fell. **ಅಡಿಗೆ ಬಿದ್ರೂ ಮೂಂಕ್ ಮೇಲೆ(ಗಾ).** ವಾ: ಕೂಸು ಎದ್ದ್ ಬಿದ್ದ್ ತಾನೆ ನಡೆಕೆ ಕಲಿಯದು. ಪ: ಬಿದ್ದ್‌ದ್ – ಬಿದ್ದು. **ಬಿದ್ದ** /*bidda*/ ಬಿದ್ದಿರುವ. something that has fallen. **ಮೂಕ್‌ಂದ ಬಿದ್ದವರಂಗೆ ಮಾಡ್ದು(ನು).** ವಾ: ಬಿದ್ದ ಹೂನ ಹೆರ್‌ಕ್‌ಬಡ. ಪ: ಬಿದ್ದತ್ – ಬಿದ್ದಿತು; ಬಿದ್ದನೆಂತ – ಬೀಳುತ್ತೇನೆಂದು; ಬಿದ್ದಾಕನ; ಬಿದ್ದಾಗುವಾಗ. **ಬಿದ್ದದೆ** /*biddadɛ*/ 1. ಬೀಳುತ್ತದೆ, 2. ಬೀಳುತ್ತಾನೆ, 3. ಬೀಳುತ್ತಾಳೆ. 1. it will fall, 2. he will fall, 3. she will fall. **ತಲೆಗೊಯ್ದ ನೀರ್ ಕಾಲಿಗೆ ಬೀಳ್ದು(ಗಾ).** ವಾ: ಕಲ್ಲ್ ಹೊಡ್ದರೆ ಹಣ್ಣ್ ಬಿದ್ದದೆ. **ಬಿದ್ದುಟ್ಟಿದ** /*bidduṭṭida*/ ಬಿದ್ದು ಹುಟ್ಟಿದ. a plant that has grown from a fallen seed. ವಾ: ಬಿದ್ದುಟ್ಟಿದ ಕೆಂಬಡೆ ಬೊಳ್ಳಿ ಲಾಯ್ಕಲಿ ಬೆಳ್‌ದದೆ. **ಬಿದ್ದುಟ್ಟು** /*bidduṭṭu*/ 1. ಉದುರು, 2. ನೆಲದಲ್ಲಿ ಬೀಳು. 1. to fall, 2. to fall on to the ground. ವಾ: ಅಡಿಲಿ ಸುಮಾರ್ ನಿಂಬುಳಿ ಬಿದ್ದುಟ್ಟು. ಪ: ಬಿದ್ದುಟ್ಟೊ – ಬಿದ್ದಿದೆಯೊ. **ಬಿದ್ದೊ** /*biddɔ*/ ಬಿದ್ದರು. fell. ವಾ: ಚಾಮೆವ್ವ ಜಾರಿ ಬಿದ್ದೊ.

ಬಿದ್ರ್ ಚದಲೆ /*bidri cadalɛ*/ ನಾವಿ. ಬಿದಿರನ್ನು ಗುದ್ದಿ ಅಗಲಮಾಡಿ ಅದಕ್ಕೆ ಮಣ್ಣು ಹೊಡೆದು ಮನೆ ನಿರ್ಮಿಸುವುದು. a house made of split bamboo frame and mud. ವಾ: ಹಿಂದೆ ಬಿದ್ರ್ ಚದಲೆ ಹಾಕಿ ಗೋಡೆ ಕಟ್ಟ್ ತಿದ್ದೊ.

ಬಿನ್ನೆ /*binnɛ*/ ನಾ. 1. ವಿನಂತಿ, 2. ಬಿನ್ನಹ, 3. ದೇವರು, 4. ಭೂತದೊಡನೆ ಬಿನ್ನಹ ಮಾಡಿಕೊಳ್ಳು. 1. a request, 2. an appeal, 3. a supplication before gods. ವಾ: ದೇವರ ಹಕ್ಕಲೆ ಬಿನ್ನೆ ಮಾಡಿಕಂಬೊದು.

ಬಿರಿಂಬಿರಿ /*birimbiri*/ ನಾ. 1. ಮಾತುಗಾರ, 2. ಹರಟೆಮಲ್ಲ. 1. talkative, 2. a verbose person. ವಾ: ಬಾರಿ ಬಿರಿಂಬಿರಿ ಮೊನ್ಸ ಕುದ್ದರೆ ಏಳಿಕಿಲೆ.

ಬಿರುಮಣನ /*birumaṇana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಬಿರೊಲಿಕೆ /*biro:likɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಬಿರ್‌ಕ್ /*biriki*/ ನಾ. 1. ಬಿರುಕು, 2. ಒಡಕು, 3. ಸೀಳು. 1. a crack, 2. a rift, 3. a split. ವಾ: ಮನೆದ್ ಗೋಡೆ ಬಿರ್‌ಕ್ ಬುಟ್ಟದ್.

ಬಿರ್ನೋಡಿ /*birno:ḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಬಿರ್ಮುಕಜೆ /*birmukajɛ*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಐವರ್ನಾಡು ಗ್ರಾಮದ ಜಾಗ. 1. family, 2. lineage, 3. a locality in Aivarnadu village in Sullia Taluk of Dakshina Kannada District.

ಬಿರ್ಸ /*birsa*/ ನಾ. 1. ಜಾಣ, 2. ಬೇಗ, 3. ಚುರುಕು, 4. ಬಿರುದು ಪಡೆದವ ದೊಡ್ಡಜನ, 5. ಗಟ್ಟಿಗ. 1. clever person, 2. swift, 3. smart, 4. a man who has been honoured for his intelligence, 4. a man with strong personality. ವಾ: ಬಿರ್ಸಲಿ ನಡೆದು.

ಬಿರ್ಸಾತಿಕೆ /*birsa:tikɛ*/ ನಾ. 1. ತಿಳುವಳಿಕೆ, 2. ಬುದ್ಧಿವಂತಿಕೆ. 1. wisdom, 2. intelligence. ವಾ: ಬಿರ್ಸಾತಿಕೆಲಿ ಬೊದ್ಕುದು ಕಲೆಕು.

ಬಿರ್ಸೆತಿ /*birsɛti*/ ನಾ. 1. ಎಲ್ಲಾ ತಿಳಿದವಳು, 2. ಗಟ್ಟಿಗಿತ್ತಿ. 1. a woman who knows everything, 2. a woman with a strong personlaity. ವಾ: ಅವ್ಳು ಬಿರ್ಸೆತಿ ಗೂಡೆ.

ಬಿಲ್[1] /*bili*/ ನಾ. 1. ಬಿಲ್ಲು, 2. ಧನಸ್ಸು, 3. ಬಾಣವನ್ನು ಹೂಡಿ ಬಿಡುವ ಸಾಧನ, 4. ಚಾಪ. 1. a bow, 2. an arrow, 3. a bow and an arrow, 4. bow and arrow. **ಅಂಬು ಅಟ್ಟಲಿ, ಬಿಲ್ ಬೆಟ್ಟಲಿ(ಗಾ).** ವಾ: ಅರ್ಜುನನ ಬಿಲ್‌ನ ಹೆಸ್‌ರ್ ಗಾಂಡೀವ. ಪ: ಬಿಲ್ಲ್ – ಬಿಲ್ಲು

ಬಿಲ್[2] /*bili*/ ನಾ. 1. ಬೆಲೆಪಟ್ಟಿ, 2. ಪಾವತಿ ಮಾಡಬೇಕಾದ ಹಣದ ಪಟ್ಟಿ, 3. ದರಪಟ್ಟಿ. 1. a bill, 2. a receipt, 3. a menu. ವಾ: ನೀ ಕರೆಂಟ್ ಬಿಲ್ಲ್ ಕಟ್ಟಿದ?

ಬಿಲ್ಗುಲ್ /*bilguli*/ ನಾ. 1. ಬೈಹುಲ್ಲು, 2. ಒಣಗಿದ ಹುಲ್ಲು. 1. hay, 2. straw. ವಾ: ಬಿಲ್ಗುಲ್‌ನ ಬಳ್‌ಸಿ ಅಳ್‌ಂಬು ಬೆಳ್ಸಕ್. ಪ: ಬಿಳ್ಳುಲ್ಲು

ಬಿಲ್ಪತ್ರೆ /*bilpatrɛ*/ ನಾ. 1. ಬಿಲ್ವಪತ್ರೆ, 2. ಬೆಲ್ಲವತ್ತದ ಎಲೆ. 1. leaves of wood apple tree, 2. leaf of wood apple tree. ವಾ: ಬಿಲ್ಪತ್ರೆ ಸಿವಂಗೆ ಬಾರಿ ಇಸ್ಟ, ಪೂಜೆಗೂ ಬಳ್ಸುವೆ. **ಬಿಲ್ಪತ್ರೆಕಾಯಿ** /*bilpatrɛka:yi*/ ಬಿಲ್ವಪತ್ರೆಯ ಕಾಯಿ. an unripe wood apple. ವಾ: ಬಿಲ್ಪತ್ರೆ ಕಾಯಿಲಿ, ಎಲೆಲಿ ಮೊದ್ದ್ ಮಾಡಿವೆ. **ಬಿಲ್ಪತ್ರೆಮರ** /*bilpatrɛmara*/ 1. ಬಿಲ್ವಪತ್ರೆಯ ಮರ, 2. ಶಿವನ ಪೂಜೆಗೆ ಬಳಸಲ್ಪಡುವ ಮರ. 1. wood apple tree, 2. leaves of wood apple tree are used in worshipping lord Shiva. ವಾ: ಬಿಲ್ಪತ್ರೆ ಮರಗಳ ದೇಸ್ತಾನದ ಹತ್ತ್‌ರ ನೆಟ್ಟವೆಗಡ, ಕಾರಣ ಸುದ್ದಲಿರೊಕುತ.

ಬಿಲ್ಯತಿ /*bilyati*/ ನಾ. 1. ಕಟ್ಟುಹಾವು, 2. ಮೈಯುದ್ದಕ್ಕೂ ಅಡ್ಡಗೆರೆಗಳಿರುವ ಹಾವು. common krait (Bungarus caeruleus). ವಾ: ಬಿಲ್ಯತಿ ಅಟ್ಟದ ಬಿಟ್ಟಲಿ ಇತ್ತ್. ಪ: ಕಟ್ಟಬಳಕ್ಕರಿ, ಕಟ್ಟಮಲಕ್ಕರಿ(ತು)

ಬಿಲ್ಲತಿ /*billati*/ ನಾ. 1. ಒಂದು ವಿಧದ ಹಾವು, 2. ಬಿಲ್ಯತಿ. common krait (Bungarus caeruleus). ವಾ: ಬಿಲ್ಲತಿ ಹಾವ್‌ನ ಹೊಡ್ದ್ ಕೊಂದೊ. ಪ: ಬಿಲ್ಲೆಂತಿ, ಬಿಲ್ಲೋಂತಿ(ತು)

ಬಿಲ್ಲರಮಜಲು /*billaramajalu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಬಿಲ್ಲ್ /*billi*/ ನಾ. ಬಿದಿರಿನ ತಟ್ಟೆಯಿಂದ ಮಾಡಿದ ಬಿಲ್ಲು. a bow made of bamboo strips. ವಾ: ಬಿಲ್ಲ್ ಕಲ್ಲ್ ಹೊಡ್ದ್ ಹಕ್ಕಿ ಬೇಟೆ ಆಡುವೆ.

ಬಿಲ್ಲ್ ಓಂತಿ /*billi o:nti*/ ನಾ. ಒಂದು ವಿಧದ ಹಾವು. common krait (Bungarus caeruleus). ವಾ: ಬಿಲ್ಲ್ ಓಂತಿ ಮರಲಿ ಹರ್‌ದೆ. ಪ: ಮರಹಾವು, ಮರಮರಿ(ತು)

ಬಿಲ್ಲ್ ಬೇಟೆ /*billi be:ṭɛ*/ ನಾ. 1. ಬಿಲ್ಲಿನಿಂದ ಕಲ್ಲು ಹೊಡೆದು ಆಡುವ ಬೇಟೆ 2. ಬೇಟೆಯಲ್ಲಿ ಪ್ರಾಣಿಗಳು ಓಡಾಡುವ ದಾರಿಯಲ್ಲಿ ಕೋವಿ ಹಿಡಿದು ನಿಲ್ಲುವುದು. 1. to hunt animals with sling shot, 2. to wait with a gun in the usual path of animals in order to hunt them. ವಾ: ಬಿಲ್ಲ್ ಬೇಟೆಲಿ ಬೇಟೆ ಆಡಿಕನ ಕಲ್ಲ್ ಲಿ ಹೊಡೆದುಗಡ, ಆಗ ಜಾತಿಗ ಕಾಡಿಗೆ ಎದ್ದ್ ಓಡಿವೆ.

ಬಿಲ್ವಪತ್ರೆ /*bilvapatrɛ*/ ನಾ. ಪವಿತ್ರವಾದ ಮರ, ಇದರ ತೊಗಟೆಯನ್ನು ದೇವರ ಪೂಜೆಗೆ ಬಳಸುತ್ತಾರೆ. wood apple tree, a sacred tree. ವಾ: ಬಿಲ್ವಪತ್ರೆ ಎಲೆನ ಸಿವನ ಪೂಜೆಗೆ ಬಳ್ಸುವೆ, ಎಲೆನ ಕಸಾಯ ಮಾಡಿ ಕುಡ್‌ದವೆ.

ಬಿಲ್ದಾರಮರ /*bilda:ramara*/ ನಾ. ಒಂದು ಕಾಡು ಮರ. a forest tree, Ceylon Rosewood, Black Siris, and Kali Siris tree. ವಾ: ಬಿಲ್ದಾರ ಮರ ಒಂದ್ ಕಾಡ್ ಮರ.

ಬಿಸರ /*bisara*/ ಕ್ರಿವಿ. 1. ತಲೆತಿರುಗು, 2. ನಡುಗು, 3. ನಿಲ್ಲಲು ಸಾಧ್ಯವಾಗದೆ ಇರು. 1. headache, 2. to shiver, 3. to find it difficult to stand. ವಾ: ಪಿತ್ತ ಹೆಚ್ಚಿಯಾದರೆ ಬಿಸರ ಆದು. ಪ: ಬೀಸರ ಹೋದು

ಬಿಸಾಕ್ /*bisa:ki*/ ಕ್ರಿ. 1. ಎಸೆ, 2. ಬಿಸಾಡು, 3. ಒಗೆ. 1. to throw away, 2. to discard, 3. to pelt. ವಾ: ಕರ್‌ಗಿದ ತರ್‌ಕಾರಿನ ಬಿಸಾಕ್. ಪ: ಬಿಸಾಕುದುಲೆ – ಬಿಸಾಡುವುದಿಲ್ಲ; ಬಿಸಾಕುದು – ಬಿಸಾಡುವುದು

ಬಿಸಾತ್ ಇಲ್ಲೆ /*bisa:ti illɛ*/ ನಾ. 1. ಗಣನೆಗೆ ತೆಗೆದುಕೊಳ್ಳದಿರು, 2. ಲೆಕ್ಕಕ್ಕೆ ತೆಗೆದುಕೊಳ್ಳದಿರು. 1. to disregard, 2. to ignore. ವಾ: ಈ ಮಕ್ಕಳಿಗೆ ಬಿಸಾತ್ ಇಲ್ಲೆ.

ಬಿಸಿ /*bisi*/ ನಾ. 1. ಬಿಸಿ, 2. ತಾಪ, 3. ಕಾವು, 4. ಬೆಚ್ಚಗಾದ. 1. heat, 2. heat wave, 3. hot weather, 4. warm. ವಾ: ಈ ಬಿಸಿ ಹಾಲ್‌ನ ಕುಡೆದು ಹೆಂಗೆತ. ಪ: ಬಿಸಿಯಾತ್ – ಬಿಸಿಯಾಯಿತು; ಬಿಸಿರ್ಬಿಸಿ – ಬಿಸಿಬಿಸಿ; ಬಿಸಿಯಾಕನ –

ಬಿಸಿಯಾಗುವಾಗ. **ಬಿಸಿನೀರ್ ಮಂಡೆ** /*bisini:r maṇḍɛ*/ ಸ್ನಾನಕ್ಕೆ ಬಿಸಿನೀರು ಕಾಯಿಸುವ ಹಂಡೆ. a cauldron to boil water. ವಾ: ಬಿಸಿನೀರ್ ಮಂಡೆ ಕಾದ್ ಕೈ ಹಾಕಿಕೆ ಬೊತ್ತ್. **ಬಿಸಿನೀರ್** /*bisini:rɨ*/ 1. ಬಿಸಿನೀರು, 2. ಬೆಚ್ಚನೆಯ ನೀರು. 1. hot water, 2. warm water. ವಾ: ಬಿಸಿನೀರ್ ಕಾಲಿಗೆ ಹೊಯ್ಕಂಡನ? ಪ: ಬೆಂದ್ರ್(ತು)

ಬಿಸು /*bisu*/ ನಾ. 1. ಯುಗಾದಿ, 2. ವರ್ಷಾರಂಭ, 3. ವರ್ಷದ ಮೊದಲ ಹಬ್ಬ. 1. Yugadi festival, 2. New Year, 3. the first festival of the year. ವಾ: ಬಿಸು ಕಣಿ ಬೊಳ್ಪುಗೆ ಇಸುದು. ಪ: ಬಿಸ್ – ಬಿಸು. **ಬಿಸುಕಣಿ** /*bisukaṇi*/ 1. ವಿಷುಕಣಿ, 2. ಸೌರಮಾನ ಎಳೆಯುವುದು, 3. ಯುಗಾದಿ, 4. ಬೇಸಾಯ ಮಾಡುವ ಗದ್ದೆಯಲ್ಲಿ ಪದ್ಧತಿಯಂತೆ ಉಳುಮೆ ಮೂಲಕ ಗೆರೆ ಹಾಕುವುದು. 1. New Year festival, 2, a festival based on the solar calendar, 3. Yugadi festival. ವಾ: ಬಿಸುಕಣಿಲಿ ಉಂಡ್ಲಕ್ಕಿ ಕಾಯಿ ಹೋಳ್ ತಿಂಬಕೆ ಇದ್ದದೆ. **ಬಿಸುಕಣಿ ಇಸುದು** /*bisukaṇi isudu*/ 1. ಅರೆಭಾಷೆಯ ಮೊದಲ ತಿಂಗಳಾದ ಪೊಗ್ಗು ತಿಂಗಳ ಹೊಸವರ್ಷದ ಪ್ರಾರಂಭದ ದಿನ ನಡೆಯುವ ಒಂದು ಆಚರಣೆ; ದೇವರೆದುರಲ್ಲಿ ಹಣ್ಣು, ಕಾಯಿ, ಅಕ್ಕಿ, ಚಿನ್ನ, ಕನ್ನಡಿ ಇತ್ಯಾದಿಗಳನ್ನಿಟ್ಟು ಬೆಳಗ್ಗೆ ಎದ್ದು ಅವುಗಳನ್ನು ನೋಡಿ ನಮಸ್ಕರಿಸುವ ಆಚರಣೆ. a custom followed on the day of New Year: Beginning the first day of the new year by viewing auspicious things. Fruit, coconut, plantain, rice, mirror, etc, are kept in front of the idol of god, and they are seen and saluted in the morning soon aft. ವಾ: ಪೊಗ್ಗು ತಿಂಗಳ್‌ಲಿ ದೇವ್ರಿಗೆ ಬಿಸುಕಣಿ ಇಸಿವೆ.

ಬಿಸುರ್ಪು /*bisurpu*/ ನಾ. ದೇಹದ ತುಂಬೆಲ್ಲಾ ಚಿಕ್ಕ ಚಿಕ್ಕ ಹುಣ್ಣು ಏಳುವುದು. blisters on the skin. ವಾ: ಮೈ ತುಂಬ ಬಿಸುರ್ಪು ಎದ್ದುಟು.

ಬಿಸ್ಕುಟು /*biscuiṭ*/ ನಾ. ಎಪ. ಬಿಸ್ಕೆಟ್. biscuit.

ಬಿಸ್ಕೆಟ್ /*biskeṭɨ*/ ನಾ. ಬಿಸ್ಕತ್ತು. biscuit. ವಾ: ಬಿಸ್ಕೆಟ್ ತಿಂದರೆ ಉಂಬಕಾಲೆ.

ಬಿಸ್ರ್ /*bisrɨ*/ ನಾ. ಶರೀರದಲ್ಲಿ ಶಕ್ತಿ ಇಲ್ಲದಂತಾಗುವುದು. not having energy in the body. ವಾ: ರಕ್ತ ಕಮ್ಮಿ ಆಗಿ ಆಗಾಗ ಬಿಸ್ರ್ ಆದು.

ಬಿಸ್‌ಲ ಹಾವು /*bisɨla:vu*/ ನಾ. ಒಂದು ಜಾತಿಯ ಚಿಕ್ಕ ವಿಷವಿಲ್ಲದ ಹಾವು. a small non venomous snake. ವಾ: ಬಿಸ್‌ಲ ಹಾವು ಎಂತ ಮಾಡ್ದುಲೆ. ಪ: ಬಿಸ್ಲಾವು – ಹಾವಿನ ಹೆಸರು/ಬಿಸಿಲಿನಲ್ಲಿ ಕಾಣಸಿಗುವ ಹಾವು; ಪಗೆಲ(ತು)

ಬಿಸ್ಲುಮಲೆ /*bislumale*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಆಲೆಟ್ಟಿ ಗ್ರಾಮದ ಜಾಗ. a locality in Aletti village in Sullia Taluk of Dakshina Kannada District.

ಬಿಸ್‌ಲ್ /*bisɨlɨ*/ ನಾ. 1. ಬಿಸಿಲು, 2. ತಾಪ, 3. ಸೂರ್ಯನ ಶಾಖ. 1. heat, 2. hot weather, 3. hot rays of the sun. ವಾ: ಇಸ್ಟ್ ಬಿಸ್‌ಲ್‌ಲಿ ಯಾಕೆ ಹೊರೆಗೆ ಹೋದಿಯ? ಪ: ಬಿಸ್ಲ್. **ಬಿಸ್ಲ್ ಬೊಡೆಕು** /*bislɨ boḍɛku*/ ಬಿಸಿಲು ಬರಬೇಕು. sun should rise. ವಾ: ಏಳ್‌ನೆ ಒಮ್ಮೆ, ನಿನ್ನ ಹಾಸಿಗೆಗೆ ಬಿಸ್ಲ್ ಬೊಡೆಕು ಕಂಡದೆ.

ಬಿಳಿ /*biḷi*/ ನಾ. ಬಿಳಿಯ ಬಣ್ಣ. white colour. **ಬಿಳಿ ರೋಡ್ಲಿ ಕರಿ ಕಾರ್ ಓಡಾಡಿದೆ – ಕಣ್ಣ್(ಒ).** ವಾ: ಬಿಳಿ ಬಣ್ಣ ಸತ್ಯ, ಸಾಂತಿ ಮತ್ತೆ ಸುದ್ದತೆನ ಸಂಕೇತ. ಪ: ಬಿಳಿಮಾಡಿಕೆ – ಬಿಳಿಮಾಡಲು

ಬಿಳಿ ಆಮೆ /*biḷi a:mɛ*/ ನಾ. ಬಿಳಿ ಬಣ್ಣದ ಆಮೆ. a white tortoise. ವಾ: ಬಿಳಿ ಆಮೆ ಉಟ್ಟುಗಡ, ನಾ ನೋಡ್‌ತ್‌ಲೆ. ಪ: ಬೊಲ್ಲೇಮೆ(ತು).

ಬಿಳಿಚಿಬ್ಬು /*biḷicibbu*/ ನಾವಿ. ಶರೀರದಲ್ಲಿ ಅಲ್ಲಲ್ಲಿ ಕಂಡು ಬರುವ ಬಿಳಿಯ ಮಚ್ಚೆಗಳು. white patches on the skin. ವಾ: ಮೋರೆಲೆಲ್ಲ ಬಿಳಿ ಚಿಬ್ಬು ಬಂದುಟು.

ಬಿಳಿ ಬಾಗೆಮರ /*biḷi ba:gɛmara*/ ನಾವಿ. ಬಾಗೆ ಮರ. Chinese albizia, silk tree. ವಾ: ಬಿಳಿ ಬಾಗೆ ಮರದಂಗೆ ಕಲ್ಲ್ ಬಾಗೆತ ಇನ್ನೊಂದುಟ್ಟು.

ಬಿಳಿನೆಲೆ /*biḷinelɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಬಿಳಿಮಲೆ /*biḷimalɛ*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕುತ್ಕುಂಜ ಗ್ರಾಮದ ಜಾಗ. 1. family, 2. lineage, 3. a

locality in Kutkunja village in Sullia Taluk of Dakshina Kannada District.

ಬಿಳಿಯಬತ್ತ /*biḷiya batta*/ ನಾವಿ. ಭತ್ತದ ಒಂದು ತಳಿ. a variety of paddy. ವಾ: ಬಿಳಿಯ ಬತ್ತ ಹಿಂದೆ ಇತ್ತ್. ಪ: ಬೊಳ್ದು ಕಯಮೆ(ತು)

ಬಿಳಿಯಂದ್ರ /*biḷiyandra*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಬಿಳಿಯಾರು /*biḷiya:ru*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅರಂತೋಡು ಗ್ರಾಮದ ಜಾಗ. a locality in Arantodu village in Sullia Taluk of Dakshina Kannada District.

ಬಿಳಿಲು ಸರಿ /*biḷilu sari*/ ನಾವಿ. 1. ಬಿಳಲು, 2. ಆಲ ಮುಂತಾದ ಮರಗಳಲ್ಲಿ ಇಳಿಬೀಳುವ ಬೇರು, 3. ಜೋಲು ಬೇರು. 1. aerial root, 2. aerial roots of banyan tree that grow donwards from the main branches, 3. the hanging roots. ವಾ: ಆಲದ ಮರಲಿ ಬಿಳಿಲು ಸರಿನ ನೋಡಕ್.

ಬಿಳ್ಗ್ಲ್ ಕೋಲ್ /*biḷɨgli ko:li*/ ನಾ. ಬೈ ಹುಲ್ಲನ್ನು ರಾಶಿಮಾಡುವ ಕೋಲು. a tool (stick) used in gathering hay. ವಾ: ಬಿಳ್ಗ್ಲ್ ಕೋಲ್‌ನ ಬೆದ್ರ್‌ಂದ ಮಾಡ್‌ವೆ. ಪ: ಬೈಕೋಲು(ತು)

ಬಿಳ್ಗ್ಲ್ ಸೂಂಪೆ /*biḷɨgli su:mpɛ*/ ನಾ. ಭತ್ತದ ಹುಲ್ಲಿನಿಂದ ತಯಾರಿಸಲಾದ ಪಾತ್ರೆಯ ಅಡಿಗೆ ಇಡುವ ಸಾಧನ. a ring made of straw to keep vessels on it. ವಾ: ಬಿಳ್ಗ್ಲ್ ಸೂಂಪೆನ ಪಾತ್ರದ ಅಡಿಗೆ ಇಸಿವೆ. ಪ: ಸುಂಪೆ, ತೆರಿಯೆ(ತು)

ಬಿಳ್ಸ್ /*biḷsɛ*/ ಕ್ರಿ. 1. ಬೀಳಿಸು, 2. ಕೆಡವು. 1. to make something fall, 2. to demolish. ವಾ: ಗಳೆಲಿ ಕುತ್ತಿ ಹಣ್ಣ್ ನ ಬೀಳ್ಸ್. ಪ: ಬಿಳ್ಪೊಸು; ಬೀಳ್ಸಿಕಂಡ್ – ಬೀಳಿಸಿಕೊಂಡು

ಬಿಳ್ಳಿಲ್ /*biḷḷilɛ*/ ನಾ. ಬೈಹುಲ್ಲು. straw. ವಾ: ಬಿಳ್ಳಿಲ್‌ನ ದನಗಳಿಗೆ ಕೊಡ್ದು.

ಬೀಂಗ್ರುಟಿ /*bi:ŋgruṭi*/ ನಾವಿ. ಭಾರಿ ಗಲಾಟೆ ಮಾಡುವ ಮಕ್ಕಳು. mischievous children. ವಾ: ಬೀಂಗ್ರುಟಿ ಮಕ್ಕ ಸುಮ್ಮನೆತ ಕೂರ್‌ದುಲೆಪ.

ಬೀಂಬುಳಿ /*bi:mbuḷi*/ ನಾ. 1. ಮರ ತೊಂಡ, 2. ಪದಾರ್ಥ ಮಾಡಲು, ಉಪ್ಪಿನಕಾಯಿ ಹಾಕಲು ಬಳಸುತ್ತಾರೆ. 1. bilimbi 2 used in making pickles and curry. ವಾ: ಬೀಂಬುಳಿನ ಉಪ್ಪನಕಾಯಿ ಹಾಕಿಕೆ ಬಳ್‌ಸುವೆ. ಪ: ಬಿಂಬುಳಿ, ಬೀಂಪುಳಿ(ತು)

ಬೀಗ /*bi:ga*/ ನಾ. 1. ಬಾಗಿಲು, ಪೆಟ್ಟಿಗೆ ಮುಂತಾದವುಗಳನ್ನು ಭದ್ರಪಡಿಸಲು ಹಾಕುವ ಒಂದು ಬಗೆಯ ಲೋಹದ ಸಾಧನ. a lock, operated with a key. **ಕೈ ಹಾಕಿರೆ ಬಾಯ್ಬುಟ್ಟದೆ – ಬೀಗ(ಒ).** ವಾ: ಕೊರೊನಾಂದಾಗಿ ದೇಸ ಇಡೀ ಬೀಗ ಹಾಕ್ವಂಗಾತ್.

ಬೀಗಕೀ /*bi:gaki:*/ ನಾ. 1. ಅಗುಳಿ, 2. ಕೀಲ, 3. ಪೆಟ್ಟಿಗೆ, ಬಾಗಿಲು ಮುಂತಾದವುಗಳನ್ನು ಭದ್ರಪಡಿಸಲು ಹಾಕುವ ಸಾಧನ, 4. ಗಡಿಯಾರ, ಯಂತ್ರ ಮೊದಲಾದವುಗಳನ್ನು ನಡೆಸುವುದಕ್ಕಾಗಿ ತಿರುಗಿಸುವ ಸುರುಳಿ, 5. ಕೀಲ. 1. a latch, 2. a key, 3. a lock used on the door to keep them secure, 4. a clock key, 5. a key. **ಬಂಗಾರದ ಗಿಣಿ ಬಾಗ್ಲಾಕ್‌ದೆ – ಬೀಗದ ಕೀ(ಒ).** ವಾ: ಬಾಗ್‌ಲ್‌ಗೆ ಬೀಗ ಕೀ ಹಾಕಿಕೆ ಆದುಲೆ. ಪ: ಬೀಗದಕೈ

ಬೀಗರ ಊಟ /*bi:gara u:ṭa*/ ನಾ. 1. ನವವಧು ವರ ಹಾಗು ಅವರ ಕಡೆಯವರಿಗೆ ಮದುವೆಯ ನಂತರದ ದಿನಗಳಲ್ಲಿ ಒಕ್ಕಲಿಗ ಗೌಡರು ಮಾಂಸದ ಭೋಜನ ನೀಡುವುದು, 2. ಬೀಗರಿಗೆ ನೀಡುವ ಔತಣ ಕೂಟ. a custom observed in Vokkaliga Gowda community of serving of non-vegetarian food to the relatives of son's or daughter's father-in-law or mother-in-law, usually after several days of marriage. ವಾ: ಬೀಗರ ಊಟ ಬಾರಿ ಗಮ್ಮತ್ ಇತ್ತ್.

ಬೀಜ /*bi:ja*/ ನಾ. 1. ಗೇರು, 2. ಗೋಡಂಬಿ, 3. ಗೇರುಪಪ್ಪು. cashew nut. ವಾ: ಬೀಜ ಗೇರ್‌ದ ಮರದ ಅಡಿಲಿ ಬಿದ್ದಿದ್ದದೆ.

ಬೀಜಕುಟ್ಟುದು /*bi:jakuṭṭudu*/ ಕ್ರಿವಿ. ಜನಪದ ಆಟ. a folk game. ವಾ: ಬೀಜ ಕುಟ್ಟುವ ಆಟಲಿ ಗುರಿ ಹೊಡಿಯಕೆ ಗೊತ್ತಿರಕು.

ಬೀಜಂತಡ್ಕ /*bi:jantaḍka*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಬೀಜಣ್ಣ್ /*bi:jaṇṇ*/ ನಾ. ಗೇರು ಹಣ್ಣು. cashew fruit. ವಾ: ಬೀಜಣ್ಣ್ ಸಿಕ್ಕಿತ್.

ಬೀಜದ ಎಣ್ಣೆ /*bi:jada eṇṇɛ*/ ನಾ. ಗೇರು ಬೀಜದಿಂದ ತಯಾರಿಸಲಾಗುವ ಎಣ್ಣೆ. oil extracted from cashew nut. ವಾ: ಬೀಜದ ಎಣ್ಣೆಲಿ ವಿಟಮಿನ್-ಇ ಹೆಚ್ಚಿಗೆ ಇದ್ದ್, ಅಡ್ಗೆಗೆ ಬಳ್ಸುವೆಗಡ.

ಬೀಜದ ಕೊಚ್ಚಿ /*bi:jada kocci*/ ನಾ. ಗೇರು ಮರಗಳ ತೋಟ. cashew farm. ವಾ: ಬೀಜದ ಕೊಚ್ಚಿಗೆ ಒಂದ್ ಸುತ್ತಾಕಂಡ್ ಬಂದೊ.

ಬೀಜದ ಬೆಂಡ್ /*bi:jada beṇḍɨ*/ ನಾ. 1. ಗೇರು ಬೀಜ, 2. ಗೇರುಪಪ್ಪು, cashwe nut. ವಾ: ಬೀಜದ ಬೆಂಡ್‌ನ ಸುಡೊಕು.

ಬೀಜದ ಕಟ್ಟೆ /*bi:jada kaṭṭe*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಸಂಪಾಜೆ ಗ್ರಾಮದ ಜಾಗ. a locality in Sampaje village in Sullia Taluk of Dakshina Kannada District.

ಬೀಟಿಮರ /*bi:ṭimara*/ ನಾ. 1. ಕಪ್ಪು ಬಣ್ಣದ ಗಟ್ಟಿ ಮರ, 2. ಸೀಸಂ, 3. ಬೀಟೆ. 1. Rosewood tree, 2. sheesham wood, 3 .black rosewood. ವಾ: ಬೀಟಿ ಮರ ಬಾರಿ ಗಟ್ಟಿ ಇರೊ ಕಾರಣಕ್ಕೆ ಬಾಗ್‌ಲ್, ಕುರ್‌ಸಿ ಮನೆಗೆ ಬೇಕಾದ ಸಾಮಾನ್‌ಗಳ ಮಾಡ್‌ಸಿಕಂಡವೆ.

ಬೀಟ್ /*bi:ṭɨ*/ ಕ್ರಿ. 1. ಮರು ಪಾವತಿಸು, ಹಿಂದಿರುಗಿಸು, 2. ಸಾಲ ಬೀಟುವುದು. 1. to retun, 2. to return the debt. **ಬೀಟ್ ತಿರ್ಗಿಕೆ ಹೋವ್ವು(ನು).** ವಾ: ತಕಂಡ ಸಾಲನ ಬೀಟ್‌ದು.

ಬೀಟ್‌ರೂಟ್ /*bi:ṭiru:ṭɨ*/ ನಾ. 1. ಬೀಟ್ ರೂಟ್, 2. ಬೀಟ್ ಸಸ್ಯದ ಕಡುಗೆಂಪು ಗಡ್ಡೆ, 3. ಒಂದು ಬಗೆಯ ಗೆಡ್ಡೆ ತರಕಾರಿ. beet root, vegetable. ವಾ: ಬೀಟ್ ರೂಟ್ ಜೂಸ್ ಮಾಡಿ ಕುಡ್ಯಕ್.

ಬೀಡ /*bi:ḍa*/ ನಾ. ವೀಳ್ಯದೆಲೆ+ ಅಡಿಕೆಹೋಳು+ ಸುಣ್ಣ ಸೇರಿಸಿ ತಯಾರುಮಾಡಿಟ್ಟ ವೀಳ್ಯ. Paan – prepared with betel leaf, pieces of areca nut and lime. ವಾ: ಅಂವ ಬೀಡ ಅಗೆತುಟ್ಟು. ಪ: ಬೀಡದಂವ – ಬೀಡದ ಅಂಗಡಿಯವ

ಬೀಡಿ /*bi:ḍi*/ ನಾ. 1. ಮಾದಕ ವಸ್ತು, 2. ಸೇದುವ ಹೊಗೆಬತ್ತಿ, 3. ಸೇದುಬತ್ತಿ. a beedi, made of tobacco leaf. ವಾ: ಬೀಡಿ ಎಳೆಕಾದ್, ರೋಗ ಬಂದದೆ.

ಬೀಡು[1] /*bi:ḍu*/ ನಾ. ಉಗ್ಗಪ್ಪಾ್ಕಲಿಕವಾಗಿ ತಂಗುವ. a temporary shelter. ವಾ: ಕಾಟಿಗ ತೋಟದ ಕರೆಲಿ ಬೀಡುಬುಟ್ಟೊಳೊ.

ಬೀಡು[2] /*bi:ḍu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಬೆಳ್ಳಾರೆ ಗ್ರಾಮದ ಜಾಗ. a locality in Bellare village in Sullia Taluk of Dakshina Kannada District.

ಬೀಣೆ ಗೋಳಿಮರ /*bi:ṇɛ go:ḷimara*/ ನಾ. ಬೇರೊಂದು ಮರವನ್ನು ಆಶ್ರಯಿಸಿ ಬೇರು ಬಿಡುವ ಗೋಳಿ ಮರ. a parasitic brown woolly fig tree. ವಾ: ಬೀಣೆ ಗೋಳಿ ಮರಕೆ ಹತ್ತುವನ?

ಬೀಣೆಬೊಳ್ಳಿ /*bi:ṇɛbɔḷḷi*/ ನಾ. ಮರಕ್ಕೆ ಅಂಟಿಕೊಂಡು ಬೆಳೆಯುವ ಗಟ್ಟಿಯಾದ ಬಳ್ಳಿ ಉಗ್ಗಪ್ಪಾ್ಕಲಿಕ ಮಾಡು ಕಟ್ಟಲು ಬಳಸುತ್ತಾರೆ. a sturdy creeper that binds itself to a tree, usually these creepers are used in making temporary roof. ವಾ: ಬೀಣೆಬೊಳ್ಳಿ ಮರಲಿ ದೈಬೆಳ್ದ್ ಆ ಮರಂದ ಅಂಟಿಕಂಡ್ ಕೆಳಗೆ ಬರೊ ಬೇರ್ ನೆಲ ತಾಂಗಿ ಬೆಳ್ದ್ ಇಡೀ ಮರನೇ ಸುತ್ತಿಕಂಡ್ ಬೆಳ್‌ದದೆ.

ಬೀತ್ /*bi:tɨ*/ ಕ್ರಿ. 1. ಬಿತ್ತು, 2. ಬಿದ್ದು ಆಯಿತು. 1. fell, 2. fallen. **ಬಾಳಿಕಾಗದಂವ ಬಾವಿಗೆ ಬೀತ್(ಗಾ). ಕಲ್ತ್ ಕಲ್ತ್ ಹೊಂಡಕೆ ಬೀತ್(ನು).** ವಾ: ಅವ್ವ ಮರಂದ ಬೀತ್.

ಬೀದಿಗುಡ್ಡೆ /*bi:diguḍḍe*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಬಳ್ಪ ಗ್ರಾಮದ ಜಾಗ. a locality in Balpaa village in Sullia Taluk of Dakshina Kannada District.

ಬೀಮಗುಳಿ /*bi:maguḷi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಪಂಬೆತ್ತಾಡಿ ಗ್ರಾಮದ ಜಾಗ. a locality in Pambettadi village in Sullia Taluk of Dakshina Kannada District.

ಬೀಮರಾಜ ಹಕ್ಕಿ /*bi:mara:ja hakki*/ ನಾ. 1. ಭೀಮರಾಜ ಹಕ್ಕಿಯು ಡ್ರೋಂಗೋ ಎಂಬ ಪ್ರಭೇದಕ್ಕೆ ಸೇರಿದ ಪಕ್ಷಿ, 2. ಈ ಹಕ್ಕಿಯ ಬಾಲದ ಎರಡು ಗರಿಗಳು ಉದ್ದವಾಗಿದ್ದು ವಿಶೇಷವಾದ ಆಕಾರವನ್ನು

ಹೊಂದಿರುತ್ತದೆ, ಮಿರುಗುವ ಕಪ್ಪು ಬಣ್ಣ, ಉದ್ದದ ಬಾಲದ ಕಾರಣ ಈ ಪಕ್ಷಿ ಆಕರ್ಷಣೆಯ ಕೇಂದ್ರ ಬಿಂದುವಾಗಿದೆ, ಇದರ ವಿಭಿನ್ನ ಧ್ವನಿಯಿಂದ ಪೋಲಿಸ್ ಹಕ್ಕಿಯೆಂದು ಕರೆಯುತ್ತಾರೆ. 1. Greater Racket – tailed Drongo bird, 2. a bird with notched tail and a glossy neck. It mimics other sounds, 3. also called Black Drongo. ವಾ: ಬೀಮರಾಜ ಹಕ್ಕಿ ಬೇರೆ ದೊಡ್ಡ ಹಕ್ಕಿಗಳ್‌ನ ಹೆದರಿಸಿದೆಗಡ. ಇದರ ಬಾಲ ಉದ್ದ ಆಗಿದ್ದ್, ಹಕ್ಕಿಗಳ ಮೊಟ್ಟೆ ಹಾಲ್‌ದ್ ಕೆನೆ ಬಣ್ಣಲಿ ಇದ್ದದೆಗಡ. ಹುಲಿ ಸ್ವರ ಬಿಟ್ಟ್ ಎಲ್ಲ ಪ್ರಾಣಿ, ಹಕ್ಕಿಗಳ ಸ್ವರನ ಅನುಕರಣೆ ಮಾಡ್ದೆ.

ಬೀರ /*bi:ra*/ ನಾ. ಹಂದಿಯನ್ನು ಕರೆಯುವ ಪದ. a term used to call out a pig. ವಾ: ಹಂದಿನ ತಿನಿ ತಿಂಬಕೆ ಬೀರ ಬೀರತ ಕರ್ದರೆ ಓಡಿ ಬಂದದೆ.

ಬೀರ[1] /*bi:ra*/ ನಾ. 1. ವೀರ, 2. ಕಲಿ, 3. ಶೂರ. 1. brave, 2. valorous, 2. courageous. ವಾ: ಬೀರನಂಗೆ ಹೋರಾಡಿ ಸತ್ತತ್.

ಬೀರ[2] /*bi:ra*/ ನಾ. 1. ಒಂದು ದೈವದ ರೂಪ, 2. ವೀರಭದ್ರ. 1. one of the forms of spirit/deity, 2. lord Veerabhadra. ವಾ: ಬಾಯಿಗೆ ನೀರ್ ಸಿಕ್ಕದೆ ಸತ್ತಂವ ಬೀರ ಆದುಗಡ.

ಬೀರ[3] /*bi:ra*/ ನಾ. ಗಂಡು ಹಂದಿಯನ್ನು ಬೀರ ಎಂದು ಕರೆಯುವುದು. a male pig is also called Beera. ವಾ: ಗಂಡ್ ಹಂದಿನ ಬೀರತ ಕರೆದು.

ಬೀರಂ ಪಾರೆಗ /*bi:raṁ pa:rɛga*/ ನಾ. ಬೀರನ ಬಂಡೆಕಲ್ಲು, ಬೀರರು ವಾಸ ಮಾಡುವ ಜಾಗ. a rock near the place where the spirit Beera lives. ವಾ: ಬೀರಂ ಪಾರೆಗಳ್‌ಲಿ ಬೀರಂಗ ವಾಸ ಮಾಡ್ದಿದ್ದೊತ ನಂಬಿಕೆ ಉಟ್ಟು.

ಬೀರಂಗೊಲೆ /*bi:raŋgolɛ*/ ನಾ. ಕಟ್ಟೆ ಬಾಳೆಯ ಗೊನೆ. a bunch of banana. ವಾ: ಬೀರಂಗೊಲೆ ಗೊನೆ ಪ್ರೇಜನ ಇಲ್ಲೆ.

ಬೀರಂತಡ್ಕ /*bi:rantaḍka*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಬೀರನ ತೆರೆ /*bi:rana tɛrɛ*/ ನಾ. ದೆವ್ವದ ಕೋಲ. spirit/deity/daiva worship. ವಾ: ಬೀರನ ತೆರೆನ ನಡ್ಸಿವೆ.

ಬೀರಮಂಗಲ /*bi:ramaŋgala*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಸುಳ್ಯ ನಗರದ ಜಾಗ. a locality in Suḷya Nagara village in Sullia Taluk of Dakshina Kannada District.

ಬೀರಿ[1] /*bi:ri*/ ನಾ. 1. ಜೀರುಂಡೆ, 2. ಮಿಡತೆ ರೀತಿಯ ಹುಳು. Cicadas insect. ವಾ: ಬೀರಿ ಕಾಡ್ಲಿ ಹೆಂಗೆ ಸಬ್ದ ಮಾಡ್ದೆ. ಪ: ಬೀರಿಹುಳ – ಜೀರುಂಡೆ

ಬೀರಿ[2] /*bi:ri*/ ನಾ. ಕಾಡು ಸುತ್ತುವುದು. to wander in the forest. ವಾ: ಬೀರಿಕಂಡ್ ಬಾವೊನ?

ಬೀರಿ[3] /*bi:ri*/ ನಾ. ಎತ್ತಿನ ಗಾಡಿ ಚಕ್ರದ ಬ್ರೇಕು. a device with which one stops a bullock cart. ವಾ: ಬೀರಿ ಬಿದ್ದರೆ ಗಾಡಿ ಮುಂದೆ ಹೋಕಿಲೆ.

ಬೀರಿ[4] /*bi:ri*/ ನಾ. ಹೆಣ್ಣು ಹಂದಿಯನ್ನು ಬೀರಿ ಬೀರಿ ಎಂದು ಕರೆಯುವುದು. a female pig is called Beeri. ವಾ: ಹೆಣ್ಣ್ ಹಂದಿನ ಬೀರಿತ ಕರೆದು.

ಬೀರಿಕಿಚ್ಚಿ /*bi:rikicci*/ ನಾ. ಕಾಡ್ಗಿಚ್ಚು. wildfire/forest fire.

ಬೀರಿದ್ /*bi:rid*/ ಕ್ರಿ. ಬಲವಾಗಿ ಎಸೆಯುವುದು ಇಲ್ಲವೆ ಹೊಡೆಯುವುದು. to throw or hit by force. ವಾ: ಅಂವ ನಂಗೆ ಬೀರಿದ್ ಹೊಡ್ತ್. ಪ: ಬೀರಿಕನ – ಬೀಸುವಾಗ; ಬೀರಿಕಂಡ್ – ಬೀಸಿಕೊಂಡು

ಬೀರು /*bi:rɨ*/ ನಾ. ಎಪ. 1. ಗೋಡೆ ಪೆಟ್ಟಿಗೆ, 2. ಕಪಾಟು, 3. ಅಲಮಾರು. 1. a cupboard, 2. a cabinet, 3. a closet. ವಾ: ಬೀರ್‌ಲಿ ಅರ್ವೆನ ಇಸುದು.

ಬೀರುಸಾಗು /*bi:rusa:gu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಪೆರುವಾಜೆ ಗ್ರಾಮದ ಜಾಗ. a locality in Peruvaje village in Sullia Taluk of Dakshina Kannada District.

ಬೀರೆಂಗಿ ಹಣ್ಣ್ /*bi:reŋgi haṇṇɨ*/ ನಾ. 1. ಒಂದ್ರಿ ಹಣ್ಣು, 2. ತೊಲ್ಯಾರ್ ಪಣ್ಣ್(ಕೊ). Tholiar pann fruit, native fruit of Kodagu. ವಾ: ಬೀರೆಂಗಿ ಹಣ್ಣ್ ಜಾಸ್ತಿ ತಿಂದರೆ ರಕ್ತ ಹೋದೆ.

ಬೀರ್ಂಗುಳಿ ಹಣ್ಣ್ /*bi:riŋguḷi haṇṇɨ*/ ನಾ. ಕೆಂಪು ಬಣ್ಣದ ತೊಂಡೆ ರೀತಿಯ ಚಿಕ್ಕ ಹಣ್ಣು. a red

coloured fruit that resembles Ivy Gourd. ವಾ: ಬೀರ್‌ಂಗುಳಿ ಹಣ್ಣ್ ತಿಂದೊಳನ?

ಬೀರ್‌ಕಿಚ್ಚಿ /*bi:rikicci*/ ನಾ. ಕಾಡಿಚ್ಚು. a wildfire, forest fire. ವಾ: ಬಿಸ್‌ಲ್ ಕಾದ್ ಒಮ್ಮೊಮ್ಮೆ ಕಾಡ್‌ಗೆ ಬೀರ್‌ಕಿಚ್ಚಿ ಬಿದ್ದದೆ.

ಬೀರ್ದ /*bi:rda*/ ನಾ. 1. ಎಳ್ಳು ಬೆಲ್ಲ ಬೀರು, 2. ಹಂಚು, 3. ವಿತರಣೆ ಮಾಡು. 1. to destribute a mixutre of white sesame, jaggery, etc. during Sankranti Festival, 2. to share, 3. to destribute. ವಾ: ಸಂಕ್ರಾತಿಲಿ ಎಳ್ಳ್ ಬೆಲ್ಲನ ಬೀರ್ದನ?

ಬೀರ್ಯ /*bi:rya*/ ನಾ. 1. ಸೊಕ್ಕು, 2. ಗರ್ವ, 3. ಅಹಂಕಾರ, 4. ಮದ. 1. false pride 2. ego, 3. arrogance, 4. diffidence. ವಾ: ಅವ್ಳಿಗೆ ಈಗೀಗ ಬಾರಿ ಬೀರ್‌ಯ ಬಂದುಟು.

ಬೀಲ ಕಚ್ಚೆಹಾಕುದು /*bi:la kaccεha:kudu*/ ನಾವಿ. 1. ಬಾಲ ಅಡಿಗೆ ಹಾಕಿಕೊಳ್ಳುವುದು, 2. ಸೋತು ತೆಪ್ಪಗಾಗುವುದು, 3. ಸೋತು ಶರಣಾಗುವುದು. 1. to keep quiet, 2. to surrender, 3. to accept defeat. ವಾ: ನಾಯಿಗೆ ಜೋರು ಮಾಡಿಕನ ಅದ್ ಬೀಲ ಕಚ್ಚೆ ಹಾಕುದು.

ಬೀಲಕರ್ಗುದು /*bi:la argudu*/ ನಾವಿ. ಪ್ರಾಣಿಗಳಿಗೆ ಬರುವ ಒಂದು ಕಾಯಿಲೆ. a disease affecting animals. ವಾ: ಪ್ರಾಣಿಗಳ್‌ಗೆ ಬೀಲ ಕರ್ಗುದುತೇಳ್‌ವ ಒಂದ್ ಕಾಯ್ಲ ಬಂದದೆ.

ಬೀಲಮುಳ್ಳುದು /*bi:lamu[[udu*/ ನಾ. ಬಾಲ ಅಲ್ಲಾಡಿಸುವುದು. wagging the tail. ವಾ: ನಾಯಿ ನಮ್ಮ ಕಾಂಬಕನ ಬೀಲ ಮುಳ್ಳುದು.

ಬೀಲಹಿಡ್ಯೊದು /*bi:lahiḍyodu*/ ನಾವಿ. 1. ಹಿಂಬಾಲಿಸುವುದು, 2. ಅನುಸರಿಸು, 3. ಕೆಲಸ ಆಗಬೇಕೆಂದು ಹಿಂದೆಯೇ ಹೋಗುವುದು. 1. to follow, 2. to pursue, 3. to run after. ವಾ: ಕೆಲ್‌ಸ ಮಾಡ್‌ಸಿಕಣ ಮುಟ್ಟ ಬೀಲ ಹಿಡ್ಯೊದು.

ಬೀಲ[1] /*bi:la*/ ನಾ. 1. ಬಾಲ, 2. ಹಿಂಬಾಲಕ, 3. ಕಟ್ಟಾ ಬೆಂಬಲಿಗ. 1. a tail, 2. a follower, 3. a true follower. ವಾ: ಇಂವನ ಅಣ್ಣನ ಬೀಲನೆ ಇದ್ದದೆ.

ಬೀಲ[2] /*bi:la*/ ನಾ. ಬಾಲ. a tail. **ನಾಯಿಗೆ ಹೇಳ್‌ರೆ ನಾಯಿ ಬೀಲದೊಟ್ಟ್‌ಗೆ ಹೇಳ್ತ್(ಗಾ). 1. ಬೀಲ ಎತ್ತಿ ಸೆಗಣಿ ಹಾಕಿಕಾದುಲೆ(ನು), 2. ಬೀಲ ಎತ್ತಿಕಾದುಲೆ(ನು), 3. ನಾಯಿ ಬೀಲನ ಮೆಟ್ಟ್ ಬಡ(ನು).** ವಾ: ಕೊತ್ತಿ ಬೀಲನ ಹಿಡೆಬಡ.

ಬೀಲಕೊಣ್ಸಿ /*bi:lakoṇsi*/ ನಾ. ಬಾಲವನ್ನು ಕುಣಿಸು. to wag the tail. ವಾ: ನಾಯಿ ಕುಸಿಗೆ ಬೀಲಕೊಣ್ಸಿದೆ.

ಬೀಲನ ಕಂಡೆ /*bi:lana kaṇḍε*/ ನಾವಿ. ಬಾಲದ ಬುಡ. tail rump. ವಾ: ಎತ್ತ್ ದ್ ಬೀಲನ ಕಂಡೆನ ಹಿಡೆಬಡ.

ಬೀವು /*bi:vu*/ ನಾ. ಬೆನ್ನುಹುರಿಯ ಮಾಂಸ. bone marrow mutton. ವಾ: ಕುರಿದ್ ಬೀವು ಮಾಂಸ ಹಾಕೊಳೊ.

ಬೀವು ಮೂಳೆ /*bi:vu mu:[ε*/ ನಾ. ಬೆನ್ನಿನ ಮೂಳೆ. back bone. ವಾ: ಬಿದ್ದ್ ಬೀವು ಮೂಳೆ ಮುರ್‌ದದ್.

ಬೀವ್ /*bi:vi*/ ನಾ. ಬೆನ್ನಿನ ಮಧ್ಯ ಭಾಗ. mid section of one's back. ವಾ: ಅಂವಂಗೆ ಬೀವ್‌ಗೆ ಪೆಟ್ಟಾದ್.

ಬೀಸ /*bi:sa*/ ನಾ. 1. ಲಗುಬಗೆ, 2. ಅವಸರ, 3. ತ್ವರೆ. sense of urgency. ವಾ: ಅವ್ವ ಬೀಸಲಿ ಹೊರ್‌ಟ್ ಎಲ್ಲಿ ಹೋತುತ?

ಬೀಸಕತ್ತಿ /*bi:sakatti*/ ನಾ. 1. ಚಿಕ್ಕ ಚಾಕು, 2. ಚೂರಿ. a small knife. ವಾ: ಬೀಸಕತ್ತಿನ ಎಲ್ಲಿ ಹಾಕಿತ್‌ತ ಈ ಗೂಡೆ. ಪ: ಬೀಸ್ ಕತ್ತಿ; ಬೀಸ್ಕತ್ತಿ – ಚೂರಿ, ಚಾಕು

ಬೀಸಣಿಕೆ /*bi:saṇikε*/ ನಾ. 1. ಬೀಸಣಿಗೆ, 2. ಪಂಕ. a fan. ವಾ: ಬೀಸಣಿಕೆಲಿ ಬೀಸಿರೆ ಗಾಳಿ ಲಾಯ್ಕಲಿ ಬಂದದೆ. ಪ: ಬೀಸ್‌ಣಿಕೆ – ಬೀಸಣಿಕೆ

ಬೀಸರ /*bi:sara*/ ಕ್ರಿವಿ. 1. ದೈಹಿಕ ಸಮತೋಲನ ಇಲ್ಲದಿರುವುದು, 2. ತೂಗಾಡು. 1. imbalance, 2. to wobble. ವಾ: ಅಂವ ಬಾರಿ ಬೀಸರಲಿ ಬರ್ತುಟ್ಟು.

ಬೀಸಾಳೆ /*bi:sa:[ε*/ ನಾ. ಅಡಿಕೆ ಹಾಳೆಯಿಂದ ಮಾಡಿದ ಬೀಸಣಿಕೆ. fan made of areca leaf. ವಾ: ಬೀಸಾಳೆಲಿ ಗಾಳಿ ಬೀಸಿಕ.

ಬೀಸಿತ್ /*bi:siti*/ ನಾ. 1. ಬೀಸು. to blow. ವಾ: ರಾತ್ರೆ ಜೋರಾಗಿ ಗಾಳಿ ಬೀಸಿತ್. ಪ: ಬೀಸಿಯಾಕನ – ಬೀಸಿಯಾಗುವಾಗ; ಬೀಸಿರೂ – ಬೀಸಿದರೂ

ಬೀಸುದು /*bi:sudu*/ ನಾ. ಬೀಸುವ ಕಲ್ಲಿನಲ್ಲಿ ಅಕ್ಕಿ ಬೀಸು. to grind grains using Stone Mill/ Grinder. **ಬೆಟ್ಟದ ಸುತ್ತು ಬೆಳ್ಳಿದಾರ – ಅಕ್ಕಿ ಬೀಸುದು**

– **ಬೀಸುಕಲ್ಲ್(ಒ).** ವಾ: ಅಕ್ಕಿನ ಬೀಸುದು. ಪ: ಬೀಸೊಕ್ – ಬೀಸಬೇಕು

ಬೀಸೋಕಲ್ಲ್ /*bi:so:kallɨ*/ ನಾ. ಹಿಟ್ಟು ಬೀಸುವ ಕಲ್ಲು. a Stone Mill/Grinder. **ನನ್ ಹೊಟ್ಟೆ ಮೇಲೆ ನಿನ್ ಹೊಟ್ಟೆ – ಬೀಸೋಕಲ್(ಒ).** ವಾ: ಹಿಂದೆ ಬೀಸೋಕಲ್ಲ್‌ಲೆ ಅಕ್ಕಿನ ಬೀಸಿ ಹೊಡಿ ಮಾಡ್ತಿದ್ದೊ. ಪ: ಬೀಸ್ ಕಲ್ಲ್ – ಬೀಸುವ ಕಲ್ಲು; ಬೀಸ್ವ ಕಲ್ಲ್

ಬೀಸ್ ಕತ್ತಿ /*bi:sɨ katti*/ ನಾ. ಯದ್ಧ ಮಾಡುವ ಖಡ್ಗ. sword. ವಾ: ಬೀಸ್ ಕತ್ತಿ ರಾಜರ ಹಕ್ಕಲೆ ಇರ್‌ತಿತ್.

ಬೀಸ್ಕ /*bi:sɨka*/ ನಾ. ಚೂರಿ. knife. ವಾ: ಬೀಸ್ಕದ ಹಿಡಿ ಮುರ್‌ದೋತ್.

ಬೀಸ್ಕಲ್ಲ್ /*bi:sɨkallɨ*/ ನಾ. ಧಾನ್ಯ ಹುಡಿಮಾಡಲು ಬಳಸುವ ಬೀಸುವ ಕಲ್ಲು. Stone Mill/Grinder. **ಎರ್ಡ್ ಚಕ್ರ ಉಟ್ಟು ಗಾಡಿ ಅಲ್ಲ, ಎರ್ಡ್ ಕಣ್ಣುಟ್ಟು ಪ್ರಾಣಿಯಲ್ಲ, ಕೊಂಬುಟ್ಟು ಎತ್ತಲ್ಲ – ಬೀಸ್ ಕಲ್ಲ್(ಒ).** ವಾ: ಹಿಂದೆ ಎಲ್ಲರ ಮನೆಲು ಬೀಸ್‌ಕಲ್ಲ್ ಇರ್‌ತಿತ್, ಈಗ ಅದರ ಬಳ್‌ಕೆನೆ ಕಮ್ಮಿ ಆತ್.

ಬೀಳ್ /*bi:ḷɨ*/ ಕ್ರಿ. ಬೀಳು. to fall. **ಗಂಡ ಹೆಣ್ಣ್‌ನ ಜಗಳ ಉಂಡ್ ಬೀಳ್ಕನ ಮುಟ್ಟ(ಗಾ).** ವಾ: ಮರಂದ ಮಾಯಿನ ಮಿಡಿಗ ಎಲ್ಲ ಬೀಳ್‌ದು. ಪ: ಬೀಳಿಕಾಗುಟು – ಬೀಳಲಾಗಿದೆ; ಬೀಳಿಕೆಮುಂದೆ – ಬೀಳುವ ಮೊದಲು. **ಬೀಳಕೆ** /*bi:ḷakɛ*/ ಬೀಳುವುದಕ್ಕೆ. to fall. ವಾ: ಆ ಕಂಬ ಬೀಳಕೆ ಆವುಟು. ಪ: ಬೀಳಿಕಾದ್ – ಬೀಳಬಾರದು; ಬೀಳದಂಗೆ – ಬೀಳದ ಹಾಗೆ. **ಬೀಳಿಕನ** /*bi:ḷikana*/ 1. ಬಿದ್ದಾಗ, 2. ಬೀಳುವಾಗ. 1. when something falls, 2. while something was falling. ವಾ: ಹಬ್ಬಲಿ ಮೇಲೇರಿ ಬೀಳಿಕನ ಜೊತೆಲಿದ್ದವು ಹಿಡ್ಕಂಡವೆ. **ಬೀಳಿಕಾವುಟು** /*bi:ḷika:vuṭu*/ ಬೀಳುವಂತಾಗಿದೆ. as if something is about to fall. ವಾ: ಚಪ್ಪರ ಬೀಳಿಕಾವುಟು. **ಬೀಳಿಕಿಲ್ಲೆ** /*bi:ḷikillɛ*/ ಬೀಳುವುದಿಲ್ಲ. won't fall. ವಾ: ಕಟ್ಲ್‌ಂದ ಬೀಳಿಕಿಲ್ಲೆ. **ಬೀಳಿಕೆ** /*bi:ḷikɛ*/ 1. ಬೀಳುವುದಕ್ಕೆ, 2. ಕೆಡೆ, 3. ಕುಸಿ, 4. ನೆಲಕ್ಕೆ ಬರು. 1. to fall, 2. to drop 3. collapse, 4. to discend. ವಾ: ಆಟ ಆಡಿಕೆ ಹೋದರೆ ಬೀಳಿಕೆ ಬೊತ್ತ್. ಪ: ಬೀಳಿಕೆತ – ಬೀಳಲೆಂದು; ಬೀಳಿಂತ – ಬೀಳಿಎಂದು. **ಬೀಳೊಕು** /*bi:ḷoku*/ 1. ಏಟು ಬೀಳು, 2. ಪೆಟ್ಟು ಸಿಗು. to be beaten up. ವಾ: ಇನ್ನ್ ನಾಕ್ ಬೆನ್ನಿಗೆ ಬೀಳೊಕು, ಅಂದರೆ ಬುದ್ಧಿ ಬಾದು. **ಬೀಳ್ದಂಗೆ** /*bi:ḷdaŋgɛ*/ ಬೀಳದ ಹಾಗೆ. not to fall. ವಾ: ಪೊಪ್ಪಾಯಿ ಮರ ಬೀಳ್ದಂಗೆ ಕಬೆ ಕೊಟ್ಟೊಳೊ. **ಬೀಳ್ದು[1]** /*bi:ḷdu*/ ನಾ. ಬೀಳಬಹುದು. may fall. ವಾ: ಕಲ್ಲ್ ಹೊಡ್ದರೆ ಹಣ್ಣ್ ಬೀಳ್ದು. ಪ: ಬೀಳ್ದುಗಡ – ಬೀಳಬಹುದಂತೆ. **ಬೀಳ್ದು[2]** /*bi:ḷdu*/ ಬೀಳುವುದು. falling. ವಾ: ಬಿಸ್‌ಲ್‌ಲಿ ಎಮ್ಮೆಗ ಚೋಳುಲಿ ಪಳ್ಳ ಬೀಳ್ದು. ಪ: ಬೀಳ್ದುಲ್ಲೆ – ಬೀಳುವುದಿಲ್ಲ; ಬೀಳ್ಬೆಡಿ – ಬೀಳಬೇಡಿ. **ಬೀಳ್ಸ್** /*bi:ḷsɨ*/ ಬೀಳಿಸು. to make something fall. **ಎತ್ತಿ ಬೀಳ್‌ಸುವ ಕುದ್ರೆಂದ ಹೊತ್ ಸಾಗ್‌ಸುವ ಕತ್ತೆ ಲೇಸ್(ಗಾ). ಮೇಲೆ ಉಗ್ದ ಮಡೆ ನಮ್ಮ ಮೋರೆಗೇ ಬೀಳ್ಸಿಕಂಬೊದು(ನು).** ವಾ: ಚೀಲನ ದೂಡಿ ಬೀಳ್ಸ್. ಪ: ಬೀಳ್ಸಿ – ಬೀಳಿಸಿ; ಬೀಳ್ಸಿನೂ – ಬೀಳಿಸಿಯು; ಬೀಳ್ಸೊಕು – ಬೀಳಿಸಬೇಕು;

ಬುಂಕು/ ಬುಕ್ಕು /*buŋku/ bukku*/ ಕ್ರಿ. ಉಸಿರುಕಟ್ಟಿ, ಶಕ್ತಿಹಾಕಿ ಮಲವಿಸರ್ಜನೆ ಮಾಡುವುದು. straining to poop. ವಾ: ಕೂಸು ಕುದ್ದಲ್ಲಿ ಬುಕ್ಕುದು. ಪ: ಬುಕ್ಕುದು – ಮುಕ್ಕರಿಯುವುದು

ಬುಂಡೆ /*bunḍɛ*/ ನಾ. ಬುರುಡೆ. skull. ವಾ: ಸೋರೆ ಬುರುಡೆನ ಸೋರೆ ಬುಂಡೆಂತ ಹೇಳ್ವೆ.

ಬುಂಳ್ಕ /*buḷŋka*/ ಅ. ನುಂಗುವುದನ್ನು ಸೂಚಿಸುವ ಅವ್ಯಯ ಪದ. an onomatopoeia for swallowing food.

ಬುಕ್ಕಿ ಮಾತಾಡ್ /*bukki ma:ta:ḍɨ*/ ಕ್ರಿ. ಉಗ್ಗು ಮಾತಾಡು. to stammer. ವಾ: ಬುಕ್ಕಿ ಮಾತಾಡ್‌ಕನ ಬೇಜರಾದೆ.

ಬುಕ್ಕುದು[1] /*bukkudu*/ ಕ್ರಿ. ಮಾತನಾಡುವಾಗ ತಡವರಿಸುವುದು. to stammer while speaking. ವಾ: ಮಾತಾಡಿಕನ ಬುಕ್ಕುದು. ಪ: ಬುಕ್ಕಂಡ್

ಬುಕ್ಕುದು[2] /*bukkudu*/ ಕ್ರಿ. ಮುಕ್ಕರಿಯುವುದು. to struggle. ವಾ: ಹೇಲಿಕನ ಬುಕ್ಕುದು.

ಬುಗುರಿ /*buguri*/ ನಾ. ವೇಗವಾಗಿ ತಿರುಗುವ ಆಟಿಕೆ, ಇದರಲ್ಲಿ ಮೊಳೆತ ತಲೆಬುಗುರಿ, ಗೂಟದ ಬುಗುರಿಯೆಂದು ಎರಡು ವಿಧ. spinning top. ವಾ: ಹಿಂದೆಲ್ಲ ಮಕ್ಕಳಿಗೆ ಪುರ್‌ಸೊತ್ತು ಸಿಕ್ಕಿರೆ ಸಾಕ್ ಬುಗುರಿ ಆಡ್ತಿದ್ದೊ. ಪ: ಬುಗ್ರಿ – ಬುಗುರಿ; ಬುಗರಿನಂಗೆ – ಬುಗುರಿಯ ಹಾಗೆ

ಬುಗ್ಗೆ /*buggɛ*/ ನಾ. ಬೆಲೂನು. balloon. ವಾ: ಬುಗ್ಗೆನೆಲ್ಲ ಊದಿ ನೂಲ್ ಕಟ್ಟೊಕು.

ಬುಗ್ರಿಕಾಯ್ /*bugɨrika:yi*/ ನಾ. ಬುಗುರಿಯಂತೆ ಇರುವ ಸಣ್ಣ ಕಾಯಿಗಳು. seeds of a plant that resemble spinning tops. ವಾ: ಹಿಂದೆಲ್ಲಾ ಮಕ್ಕ ಬುಗ್ರಿಕಾಯಿ ಬೊಳ್ಳಿದ್ ಸುಳಿ ಎಲೆ ಕೊಯ್ಕಂಡ್ ಪಾಸ್ ಪೈಲ್ ನೋಡ್ತಿದ್ದೊ.

ಬುಜ /*buja*/ ನಾ. 1. ಭುಜ, 2. ಹೆಗಲಿನ ಪಕ್ಕ. 1. shoulder, 2. shoulder bone. ವಾ: ಅಂವನ ಬುಜ ತಟ್ಟಿ ಏಳ್ಸಿದ್.

ಬುಟ್ /*buṭi*/ ಕ್ರಿ. 1. ಬಿಟ್ಟು, 2. ತ್ಯಜಿಸಿ, 3. ಬಿಡು, 4. ತೊರೆ, 5. ವಿಸರ್ಜಿಸು. 1. leaving something, 2. abandon, 3. forgo, 4. desert, 5. to dissolve. ವಾ: ಕುಡೆದು ಬುಟ್ ಸುಮಾರ್ ವರ್ಸ ಆತ್. ಪ: ಬುಟ್ಟು – ಬಿಟ್ಟು; ಬುಟ್ಟೊತ್ – ಬಿಟ್ಟುಹೋದರು; ಬುಟ್ಟೊಳೊ – ಬಿಟ್ಟಿದ್ದಾರೆ. **ಬುಟ್ಟ** /*buṭṭa*/ 1. ಬಿಟ್ಟೆಯಾ? did you leave? **ಬುಟ್ಟದೆ ನೋಡು ಮೊಸಳೆ ಕಣ್ಣೀರ್(ಗಾ).** ವಾ: ತಂಗೆನ ಇಸ್ಕೂಲಿಗೆ ಬುಟ್ಟ? ಪ: ಬುಟ್ಟತ – ಬಿಟ್ಟನ/ಳ; ಬುಟ್ಟತ್ – ಬಿಟ್ಟನು/ಳು. **ಬುಟ್ಟತ್** /*buṭṭati*/ 1. ಬಿಡು, 2. ಬಿಡುಗಡೆ, 3. ಬಿಡುವು. 1. to leave, 2. to release, 3. break. ವಾ: ಹೂಂಸ್ ಬುಟ್ಟತ್. ಪ: ಬುಟ್ಟತ್ಲೆ – ಬಿಡಲಿಲ್ಲ; ಬುಟ್ಟನೆ – ಬಿಡುತ್ತೇನೆ; ಬುಟ್ಟವೆ – ಬಿಡುತ್ತಾರೆ; ಬುಟ್ಟವೆಂತ – ಬಿಡುತ್ತಾರೆಂದು; ಬುಟ್ಟವೆನೋ – ಬಿಡುತ್ತಾರೆಯೋ? **ಬುಟ್ಟರೆ** /*buṭṭarɛ*/ ಬಿಟ್ಟರೆ. if you leave. ವಾ: ಅಂವನ ಬುಟ್ಟರೆ ಕೆಟ್ಟೊ. ಪ: ಬುಟ್ಟರೆಂತೇಳಿ – ಬಿಡುವರು ಎನ್ನುತ್ತಾ. **ಬುಟ್ಟೆ** /*buṭṭɛ*/ ನಾ. 1. ಬಿಟ್ಟೆ, 2. ತ್ಯಜಿಸು. 1. left, 2. abandon. ವಾ: ನಾ ಅಲ್ಲಿಗೆ ಹೋದರ್‌ನ ಬುಟ್ಟೆ. ಪ: ಬುಟ್ಟೊ – ಬಿಟ್ಟರು; ಬುಟ್ಟೊಗಡ – ಬಿಟ್ಟರಂತೆ; ಬುಟ್ರೆ – ಬಿಟ್ಟರೆ. **ಬುಟ್ಟ್ ಬುಟ್ಟ್** /*buṭṭi buṭṭi*/ 1. ಬಿಟ್ಟು ಬಿಟ್ಟು, 2. ನಿತ್ತು ನಿತ್ತು. 1. intermittent, 2. sporadic. ವಾ: ಬುಡದೆ ಎಂಟ್ ದಿನಂದ ಮಳೆ ಹೊಡ್ದದೆ.

ಬುಡ /*buḍa*/ ನಾ. 1. ಕೆಳಭಾಗ, 2. ಮರದ ಕಾಂಡದ ಅಡಿಭಾಗ, 3. ಬೊಡ್ಡೆ. 1. bottom, 2. stump of a tree, 3. stump. ವಾ: ದೈದ ಬುಡಕೆ ಗೊಬ್ಬರ ಹಾಕೊಕು. ಪ: ಬುಡಕೆ – ಬುಡಕ್ಕೆ; ಬುಡಂದ – ಬುಡದಿಂದ. **ಬುಡಾಂದ** /*buḍa:nda*/ ನಾ. 1. ಬುಡದಿಂದ, 2. ಗಿಡ, ಮರದ ಕಾಂಡದ ಅಡಿಭಾಗದಿಂದ. 1. from the bottom, 2. from the stem. ವಾ: ಮುಳ್ಳ್ ದೈನ ಬೇರ್ ಸಮೇತ ಬುಡಾಂದ ಕೀಳೊಕು. ಪ: ಬುಡಂದ.

ಬುಡದೆ /*buḍadɛ*/ ನಾ. 1. ಸತತವಾಗಿ, 2. ನಿರಂತರವಾಗಿ, 3. ಬಿಡದೆ. 1. continuously, 2. incessantly, 3. ceaselessly. ವಾ: ಬುಡದೆ ಎಂಟ್ ದಿನಂದ ಮಳೆ ಹೊಡ್ದೆ.

ಬುಡು /*buḍu*/ ಕ್ರಿ. 1. ಬಿಡು, 2. ಬಳ್ಳಿಯನ್ನು ಮರಕ್ಕೆ ಬಳ್ಳಿಯನ್ನು ಹಬ್ಬಿಸು. 1. leave, 2. to let a creeper grow on the tree. ವಾ: ಮರಕೆ ಬೊಳ್ಳಿನ ಬುಡು ಹಾಂಗೆ ಹಬ್ಬಲಿ. ಪ: ಬುಡುವ – ಬಿಡುವ.

ಬುಡ್ /*buḍi*/ ಕ್ರಿ. 1. ಬಿಟ್ಟುಬಿಡು, 2. ತ್ಯಜಿಸು. 1. leave, 2. abandon. **ಗಾಳಿಗೆ ಬುಟ್ಟ ಪೊರ್ಮಳನ ಹಿಡ್ಯಕ್ಕಾದೊ(ಗಾ).** ವಾ: ಕಳ್ಳ್ ಬೀಡಿ ಕುಡೆದರ ಬುಡ್. ಪ: ಬುಡೂ – ಬಿಟ್ಟುಬಿಡು, ಬಿಡೂ; ಬುಡ್ದಾದರೆ – ಬಿಡುವುದಾದರೆ. **ಬುಡು** /*buḍu*/ ಬಿಡಿಸು. to draw/ to open. ವಾ: ಲಾಯ್ಕಲಿ ರಂಗೋಲಿನ ಬುಡು. **ಬುಡಿ** /*buḍi*/ 1. ಬಿಡಿ, 2. ಬಿಟ್ಟುಬಿಡಿ, 3. ಹಿಡಿತದಿಂದ ಕಳಚು. 1. to leave, 2. to abandon, 3. to release from the tight grip. ವಾ: ನನ್ನ ಬುಡಿ, ನಾ ಹೋಕು. ಪ: ಬುಡಿಕಾದ್ – ಬಿಡಬಾರದು; ಬುಡಿಕಿಲ್ಲೆ – ಬಿಡುವುದಿಲ್ಲ; ಬುಡಿಕೆ – ಬಿಡಲಿಕ್ಕೆ; ಬುಡಿಕೆತ – ಬಿಡಲೆಂದು; ಬುಡಿಕೆಲ್ಲೆಂತ – ಬಿಡುವುದಿಲ್ಲಾಂತ; ಬುಡಿಂತ – ಬಿಡಿಯೆಂದು; ಬುಡುಕಿಲ್ಲೆ – ಬಿಡುವುದಿಲ್ಲ; ಬುಡುತ್ತಿತ್ಲೆ – ಬಿಡುತ್ತಿರಲಿಲ್ಲ. **ಬುಡಿಕಿಲೆ** /*buḍikilɛ*/ ಬಿಡುವುದಿಲ್ಲ. won't leave. **ಕಂಡದ್ ಬುಡಿಕಿಲೆ ಮುಂಡೆ ದೆವ್ವ(ಗಾ). ನಾ ಬುಡಿಕಿಲ್ಲೆಂತೇಳಿರೆ ಬುಡಿಕಿಲೆ, ಕೊಡಿ ಎತ್ತಿಸಿಯೇ ಬುಡ್ದು.** ವಾ: ತಾನು ಒಳ್ಳದ್ ಮಾಡಿಕಿಲೆ, ಬೇರೆವ್ಕೂ ಒಳ್ಳದ್ ಮಾಡಿಕೆ ಬುಡಿಕಿಲೆ. **ಬುಡಿಕೆ** /*buḍikɛ*/ 1. ಬಿಡಲು, 2. ತ್ಯಜಿಸಲು. 1. to leave, 2. to abandon. **ಅಜೀರ್ಣ ಆದೆಂತ ಉಂಬೊದು ಬುಡಿಕೆ ಆದೆನಾ?(ಗಾ).** ವಾ: ಕಳ್ಳ್ ಕುಡೆದು ಬುಡಿಕೆ ಮನ್‌ಸೆ ಬಾದುಲೆ. **ಬುಡುಗಡೆ** /*buḍugaḍɛ*/ 1. ಬಿಡುಗಡೆ, 2. ಬಂಧನದಿಂದ ಪಾರಾಗುವಿಕೆ, 3. ವಿಮೋಚನೆ, 4. ಸ್ವಾತಂತ್ರ್ಯ, 5. ಮುಕ್ತಿ, 6. ಮೋಕ್ಷ. 1. release, 2. release from imprisonment, 3. freedom, 4. liberty, 5. liberation, 6. salvation. ವಾ: ಇಂದ್ ಬಜ್ಜಂದ

ಬುಡುಗಡೆ ಸಿಕ್ಕಿತ್. **ಬುಡೊಕ** /*buḍoka*/ 1. ಬಿಡಬೇಕಾ, 2. ಬಿಟ್ಟು ಬರಬೇಕೆ. 1. should i leave, 2. should i come later. ವಾ: ನಿನ್ನ ಮನೆಗೆ ಬುಡೊಕ. ಪ: ಬುಡೊಕಲ್ಲ – ಬಿಡಬೇಕಲ್ಲ; ಬುಡೊಕುತ – ಬಿಡಬೇಕೆಂದು; ಬುಡೊಕ್ – ಬಿಡಬೇಕು; ಬುಡೊಕ್ಕಾಗಿತ್ – ಬಿಡಬೇಕಾಗಿತ್ತು; ಬುಡೊಮಾಂತ – ಬಿಡೋಣವೆಂದು; ಬುಡ್ದಿಲ್ಲೆ – ಬಿಡುವುದಿಲ್ಲ. **ಬುಡ್ತಿತ್ಲೆ** /*buḍtitlɛ*/ ಬಿಡುತ್ತಿರಲಿಲ್ಲ. wouldn't have left. ವಾ: ನಾ ಹೋಕೆ ಬುಡ್ತಿತ್ಲೆ. **ಬುಡ್ದು** /*buḍdu*/ 1. ಬಿಡುವುದು, 2. ಬಿಟ್ಟುಬರು. 1. to leave, 2. to drop someone off. ವಾ: ಇಸ್ಕೂಲಿಗೆ ದಿನ ಬುಡ್ದು. ಪ: ಬುಡ್ದುಂತ – ಬಿಡುವುದೆಂದು. **ಬುಡ್ಸಿ** /*buḍsi*/ 1. ಬಿಡಿಸು, 2. ಕಾಡು, ಕಳೆ ಗಿಡಗಳನ್ನು ತೆರವುಗೊಳಿಸು. 1. to unfasten, to loosen, 2. to to remove weed. ವಾ: ದೈ ಬುಡ್ಸಿ ಗೊಬ್ಬರ ಹಾಕೊಕು. ಪ: ಬುಡ್ಸಿಡ್ – ಬಿಡಿಸಿಡು; ಬುಡ್ಸಿತ್ – ಬಿಡಿಸಿದನು/ಳು; ಬುಡ್ಸಿದ್ – ಬಿಡಿಸಿ; ಬುಡ್ಸಿಕೆ – ಬಿಡಿಸಲು

ಬುಡೆಲು /*buḍɛlu*/ ನಾ. ಎಪ. 1. ಸುಳ್ಳು, 2. ಹುಸಿ, 3. ಅಸತ್ಯ, 4. ಅನೃತ, 5. ಬಂಡಲ್‌ಬಾಜಿ. 1. a lie, 2. falsehood, 3. mendacity, 4. untruthfullness. ವಾ: ನಿನ್ನಾಂಗೆ ಬುಡೆಲು ಬುಡ್ದುರ್‌ಲಿ ಬೇರೆ ಯಾರ್ ಇರ್‌ಕಿಲೆ.

ಬುಡ್ಡೋಳ್ತಿ ಹೆಣ್ಣ್ /*buḍḍo:ḷti heṇṇɨ*/ ನಾ. 1. ವಿಚ್ಛೇದನಕ್ಕೊಳಗಾದ ಹೆಣ್ಣು, 2. ಬುಡುವಲ್ದಿ(ತು). a divorced woman.

ಬುಡ್‌ದಾರೆ /*buḍɨda:rɛ*/ ನಾ. ಕೈ ಹಿಡಿಸುವ ಮದುವೆ. a custom in marriage. ಪ: ಕೈ ಪತ್ತಾವುನೆ(ತು)

ಬುಡ್ಲೆಗುತ್ತು /*buḍlɛguttu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಬುಡ್ಸು /*buḍsu*/ ಕ್ರಿ. 1. ವಿಂಗಡಿಸು. to divide. ವಾ: ಹೂನ ಎಸ್‌ಳ್‌ನ ಬುಡ್ಸುದು. ಪ: ಬುಡ್ಸುನೆ – ಬಿಡಿಸುತ್ತೇನೆ; ಬುಡ್ಸ್ – ಬಿಡಿಸು;

ಬುಡ್‌ಸೊಕು /*buḍɨsoku*/ ಕ್ರಿ. ಬಿಡಿಸು. to seperate/ to loosen/to unfasten. ವಾ: ಹೋಗಿ ಅವರ ಜೆಗ್‌ಳ ಬುಡ್‌ಸೊಕು. ಪ: ಬುಡ್‌ಕನ – ಬಿಡುವಾಗ

ಬುತ್ತಿ /*butti*/ ನಾ. 1. ಕಟ್ಟಿಕೊಂಡು ಹೋಗುವ ಊಟ, 2. ಅದಕ್ಕೆ ಬಳಸುವ ಪಾತ್ರೆ. 1. food that you carry, 2. a tiffin carrier. ವಾ: ಬುತ್ತಿ ಕಟ್ಟಿಕಂಡ್ ಬಾ.

ಬುದ್ದಿ /*buddi*/ ನಾ. 1. ತಿಳಿಯುವ ಶಕ್ತಿ, 2. ಯೋಚನಾ ಶಕ್ತಿ, 3. ವಿವೇಕ. 1. ability to think, 2. thinking ability, 3. wisdom. **ಬೆನ್ನಿಗೆ ಬೀಳದೆ ಬುದ್ದಿ ಬಾಕಿಲೆ(ಗಾ). ಮೀಸೆ ಬಾತ್, ಅದ್‌ರೆ ಬುದ್ದಿ ಬಾತ್ಲೆ(ನು).** ವಾ: ಆ ಕೂಸಿಗೆ ಬಾರಿ ಬುದ್ದಿ.

ಬುದ್ದಿಯೊಂತ /*buddiyonta*/ ನಾ. 1. ಬುದ್ಧಿವಂತ, 2. ತಿಳುವಳಿಕೆ, ವಿವೇಕ ಉಳ್ಳವನು. 1. intelligent, 2. wise. ವಾ: ಬುದ್ದಿಯೊಂತರ್ ಎಲ್ಲಿ ಹೋದರೂ ಲಾಯ್ಕಲಿ ಬೊದ್ಕಿವೆ. ಪ: ಬುದ್ದಿವಂತ – ಬುದ್ಧಿವಂತ

ಬುದ್ದಿವಾದ /*buddiva:da*/ ನಾ. 1. ಬುದ್ಧಿವಾದ, 2. ಉಪದೇಶ, 3. ಜ್ಞಾನವನ್ನು ಬೋಧಿಸುವುದು. 1. advise, 2. counsel, 3. to teach wisdom. ವಾ: ಬುದ್ದಿವಾದ ಹೇಳಿರೆ ಕೇಳಿಕಿಲೆ.

ಬುರುಸ್ /*burusɨ*/ ನಾ. ಎಪ. 1. ಬ್ರಶ್, 2. ಕುಂಚ. brush. ವಾ: ಬುರುಸ್‌ಲಿ ಹಲ್ಲ್ ತಿಕ್ಕೊಕು.

ಬುರ್ಡೆ /*burḍɛ*/ ನಾ. 1. ಬುರುಡೆ, 2. ತಲೆಯ ಚಿಪ್ಪು, 3. ಓಡು, 4. ವೀಣೆ, ತಂಬೂರಿ ಮುಂತಾದ ತಂತಿವಾದ್ಯಗಳ ತುದಿಗೆ ಅಳವಡಿಸುವ ಸೋರೆ, ಕುಂಬಳ ಮುಂತಾದ ಒಣಗಿದ ಕಾಯಿಗಳ ಗುಂಡನೆಯ ಸಾಧನ. 1. skull, 2. skeleton of the head, 3. a spherical, 4. resonators used in Veena, Tanpura, etc. **ಬುರ್ಡೆ ಗಟ್ಟಿ ಉಟ್ಟುತ ಕಲ್ಲಿಗೆ ತಲೆನ ಹೊಡ್ಕಣಿಕೆ ಆದೆನ? ದಾಸ್ ಬುರ್ಡೆ, ದೌಲತ್ ಬುರ್ಡೆ, ಲೋಕಕ್ಕೆಲ್ಲ ಎರ್ಡೇ ಬುರ್ಡೆ – ಸೂರ್ಯ, ಚಂದ್ರ(ಒ).** ವಾ: ಬೈಕ್ ಗುದ್ದಿದರ್ಲಿ ಓಡ್ಸತಿದ್ದವನ ಬುರ್ಡೆ ರೆಟ್ಟಿಟು. **ಬುರ್ಡೆ ಚಿಪ್ಪಿ** /*burḍɛ cippi*/ ತಲೆಯ ಚಿಪ್ಪು. sphenoid bone in the skull. ವಾ: ಬಿದ್ದದರ್ಲಿ ಅವನ ಬುರ್ಡೆ ಚಿಪ್ಪಿ ಜಾರತಿತ್.

ಬುರ್ನಾಸ್ /*burna:sɨ*/ ನಾವಿ. ಎಪ. ಕತ್ತೆಗೆ ಹುಟ್ಟಿದವನೆಂಬ ಬೈಗುಳ ಪದ, 2. ದುರ್ವಾಸನೆಯ, 3. ಹೇಸಿಕೆ ಬರುವ, 4. ಪ್ರಯೋಜನವಿಲ್ಲದ, 5. ಬೋರ್ನ್ ಆಸ್. 1. an expletive, 2. full of stench, 3. disgusting, 4. useless. 5. bornass. ವಾ: ಅವು ಬರೀ ಬುರ್ನಾಸ್ ಮಕ್ಕ.

ಬುಲಾವ್ /*bula:vɨ*/ ನಾ. ಎಪ. 1. ಕರೆ ಬರು, 2.

ಆಹ್ವಾನ. 1. to receive a call, 2. an invitation. ವಾ: ಅವುಳಿಗೆ ಕೆಲ್ಸಕೆ ಬುಲಾವ್ ಬಾತ್.

ಬುಲ್ಸೆ /*bulsɛ*/ ನಾ. 1. ಮೊಟ್ಟೆಯನ್ನು ಬಾಣಲೆಗೆ ಚೂರು ಎಣ್ಣೆ ಹಾಕಿ ಮೊಟ್ಟೆ ಒಡೆದು ಉಪ್ಪು ಖಾರ ಹಾಕಿ ಪುಡಿ ಆಗದಂತೆ ಬೇಯಿಸು, 2. ಬುಲ್ಸ್ ಐ. making egg burji.

ಬುಷ್ಂತ /*buṣinta*/ ಅ. ಹಾವಿನ ಬುಸುಗುಟ್ಟುವಿಕೆ. hissing of a snake. ವಾ: ಹುತ್ತಲಿ ಹಾವ್ ಬುಷ್ಂತ ಹೇಳ್ತ್. ಪ: ಬುಸ್ಂತ

ಬುಸ್ಕೊಟು /*buskoṭu*/ ನಾ. ಎಪ. ಉದ್ದ ತೋಳಿನ ಶರ್ಟು. a shirt with long shouldres. ವಾ: ಬುಸ್ಕೊಟುನ ಇಸ್ತ್ರಿ ಮಾಡ್ದನ?

ಬುಳದ್ /*buḷadi*/ ನಾ. 1. ಬಲಿತ, 2. ಬೆಳೆದ. 1. ripe, 2. fully grown. ವಾ: ಬುಳದ್ ಕೆಂಬಡೆನ ಕೊಯ್ಯಕಾಯ್ತ್.

ಬುಳುಗುಲು /*buḷugulu*/ ನಾ. 1. ಭತ್ತದ ಒಣಹುಲ್ಲು, 2. ಭತ್ತ ಬಡಿದ ನಂತರ ಸಿಗುವ ಒಣಗಿದ ಹುಲ್ಲು. 1. hay, 2. straw. ವಾ: ಬುಳುಗುಲುನ ದನಗಳಿಗೆ ತಿಂಬಕೆ ಹಾಕಿಕೆ ಕಂತೆ ಮಾಡಿ ಹುಲ್ಲು ಮುಂಡಲಿ ಇಸಿಕಂಡವೆ. ಪ: ಬುಳ್‌ಗುಲ್ಲ್

ಬುಳ್ಕ /*buḷka*/ ಅ. ಒಮ್ಮೆಲೆ ಮುಳುಗುವ (ಅನುಕರಣ ಪದ). an omonotopea for dipping in the water. ವಾ: ನೀರ್ ಕೋಳಿ ಬುಳ್ಕತ ಮುಳ್ಗಿತ್, ಮೀನ್‌ನ ಗುಳುಮ್ಮ ನುಂಗಿತ್.

ಬುಳ್ಕರ್ /*buḷkari*/ ನಾ. ಬಲಿತ ಕಾಯಿ. ripe fruit. ಪ: ಬುಲೆಕ್ಕರ್(ತು)

ಬುಳ್ಗಿ /*buḷgi*/ ನಾ. ತೆರೆ. a curtain. ವಾ: ಕೊಡೆನ ಬುಳ್ಗಿ.

ಬುಳ್ಗ್ /*buḷgi*/ ನಾ. 1. ಮಡಚನ್ನು ತೆಗೆ, 2. ಅಗಲ ಮಾಡು. 1. to open, to untie, 2. to spread. ವಾ: ಬಿಸ್‌ಲ್ ಬಾಕನ ಕೊಡೆನ ಬುಳ್‌ಗ್. ಪ: ಬುಳುಗಿರೆ – ಬಿಡಿಸು, ಅಗಲಿಸು; ಬುಳ್ಗಿದೊ – ಬಿಡಿಸಿದರು; ಬುಳ್‌ಗಿಕಂಡ್ – ಬಿಡಿಸಿಕೊಂಡು. **ಬುಳ್ಗುದು** /*buḷgudu*/ 1. ಬಿಡಿಸು, 2. ಅಗಲಿಸು. 1. to unfasten, to open, 2. to spread. ವಾ: ಹೊರೆಗೆ ಬಿಸ್‌ಲ್, ಮಳೆ ಇರಕನ ಕೊಡೆನ ಬುಳ್ಗುದು.

ಬೂಚು /*bu:cu*/ ನಾ. 1. ಮುಚ್ಚಳ, 2. ಬಿರಡೆ. 1. a cap, 2. a cork. ವಾ: ಡಬ್ಬಿನ ಬೂಚುನ ತೆಗ್ದಿಸ್‌ಬಡ.

ಬೂಟ್ /*bu:ṭi*/ ಎಪ. 1. ಬೂಟು, 2. ಶೂ. shoes. ವಾ: ಬೂಟ್‌ಗೆ ಪಾಲಿಸ್ ಮಾಡಿಕ.

ಬೂಡು[1] /*bu:ḍu*/ ನಾ. 1. ಅರಮನೆ, 2. ರಾಜನ ನಿವಾಸ, 3. ರಾಜನ ಮನೆ. a palace. ವಾ: ಮೈಸೂರ್‌ಲಿರೊ ಬೂಡು ನೋಡಿಕೆ ಹೋಗಿದ್ದೊ.

ಬೂಡು[2] /*bu:ḍu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಸುಳ್ಯ ನಗರದ ಜಾಗ. a locality in Suḷya Nagara village in Sullia Taluk of Dakshina Kannada District.

ಬೂಡ್ಸ್ /*bu:ḍsi*/ ನಾ. 1. ಬೂಟು, ಪಾದ ಹಾಗೂ ಕಣಕಾಲನ್ನು ಮುಚ್ಚುವ ಪಾದರಕ್ಷೆ. shoes. **ಬೂಡ್ಸ್ ಹಾಕಿದವಂಗೆ ಗೊತ್ತ್ ಬೂಡ್ಸ್ ಕಚ್ಚಿದೆಂತ(ಗಾ).** ವಾ: ಲಾಯ್ಕದ ಬೂಡ್ಸು ಕಂಡರೆ ಕೆಲೊವು ಕದ್ದವೆ. ಪ: ಬೂಡ್ಸು – ಬೂಟು

ಬೂತ /*bu:ta*/ ನಾ. 1. ದೆವ್ವ, 2. ಪಿಶಾಚಿ. 1. a devil, 2. a deamon. ವಾ: ಬೂತ ಬಂದದೆತ ಹೆದಿರಿಸಿವೆ.

ಬೂತಬುಡು /*bu:tabuḍu*/ ಕ್ರಿ. ಮಾನಸಿಕ ರೋಗಿಗಳಿಗೆ ನೀಡುವ ಮಾಂತ್ರಿಕ ಚಿಕಿತ್ಸೆ. a treatment offered to mentally ill patients by magico-religious rituals. ವಾ: ಬೂತ ಹಿಡ್ದದರ ಬುಡುಸೋಕು, ಹಿಂಸೆ ಕೊಟ್ಟ್ ಬುಡ್ಸುದಲ್ಲ, ಡಾಕ್ಟರ್ ಹಕ್ಕಲೆ ಹೋಕು.

ಬೂತಹಿಡಿ /*bu:tahiḍi*/ ಕ್ರಿ. ಭೂತಕಟ್ಟುವವನಿಗೆ ಆವೇಶ ಬರುವುದು. a deity/spirit/daiva possessing the impersonator. ವಾ: ಕೋಲ ಕಟ್ಟಿಕನ ಬೂತ ಹಿಡಿಯದು.

ಬೂತಕಲ್ಲು /*bu:takallu*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಆಲೆಟ್ಟಿ ಗ್ರಾಮದ ಜಾಗ. 1. family, 2. lineage, 3. a locality in Aletti village in Sullia Taluk of Dakshina Kannada District.

ಬೂತಾಯಿ /*bu:ta:yi*/ ನಾ. ಸಮುದ್ರ ಮೀನು. sardine fish found in Indian ocean. ವಾ: ಬೂತಾಯಿ ಮೀನ್ ಸಾರ್ ಮಾಡ್ರೆ ಬಾರಿ ರುಚಿ.

ಬೂತಾಳೆನಾರ್ /*bu:ta:ḷɛna:ri*/ ನಾ. 1. ಭೂತಾಳ, 2. ಬೇಲಿ ಇತ್ಯಾದಿಗಾಗಿ ಬೆಳಸುವ ನಾರು

ತೆಗೆಯಬಹುದಾದ, ತಾಳೆ ಜಾತಿಯ ಸಸ್ಯ, 3. ಭೂತಾಳೆಯಲ್ಲಿ 300 ಕ್ಕೂ ಹೆಚ್ಚು ಜಾತಿಗಳಿವೆ. 1. agave, 2. agave is as a natural fence, 3. there are 300 species of this plant. ವಾ: ಬೂತಾಳೆ ನಾರ್‌ಲಿ ಬೊಳ್ಳಿ ಮಾಡಿವೆ.

ಬೂದಲ್ಲೂರು /*bu:dallu:ru*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಬೂದಿ /*bu:di*/ ನಾ. 1. ಬೂದಿ, 2. ಯಾವುದೇ ವಸ್ತುವನ್ನು ಸುಟ್ಟ ಮೇಲೆ ಉಳಿಯುವ ಪುಡಿ, 2. ಉರಿದ ಕಟ್ಟಿಗೆಯ ಪುಡಿ. 1. ashes, 2. a residue of the burnt of greyish-white colour, 3. burning firewood. **ಹೇಳ್ದ ಮಾತ್ ಗಟ್ಟಿ ಉಂಡ ಊಟ ಬೂದಿ(ಗಾ). ಬೇಲಿಮ್ಯಾಲೆ ಬಿಳಿ ಎತ್ತ್ ಹಾರ್ದೆ – ಬೂದಿ(ಒ).** ವಾ: ಬೂದಿನ ದೈಗಳಿಗೆ ಹಾಕಿರೆ ಹುಳ ಬಾಕಿಲೆ.

ಬೂದಿಬಣ್ಣ /*bu:dibaṇṇa*/ ನಾ. ಬೂದುಬಣ್ಣ. grey colour. ವಾ: ಬೂದಿ ಬಣ್ಣದ ಅರ್ವೆ ಹಾಕಂಡ್ ಕುದ್ದೊಳ.

ಬೂದಿಮುಚ್ಚುದು /*bu:dimuccudu*/ ಕ್ರಿವಿ. ತೀರಿಕೊಂಡ ಮೂರನೇ ದಿನ ನಡೆಯುವ ಕ್ರಮ, ವ್ಯಕ್ತಿಯನ್ನು ಸುಟ್ಟ ಜಾಗವನ್ನು ಎಳನೀರಿನಿಂದ ಶುದ್ಧ ಮಾಡಿ ಬೂದಿಯಲ್ಲಿ ತಲೆಯ ಭಾಗ ಮಧ್ಯ ಭಾಗ, ಕಾಲಿನ ಭಾಗ ಎಂದು ಮೂರು ಭಾಗ ಮಾಡಿ ದೂಪೆ ಮಾಡುವ ಕ್ರಮ. making a tomb out of the ashes of the dead and purifying the cemetery ground with tender coconut water after three days of cremation. ವಾ: ಬೂದಿ ಮುಚ್ಚುದು ಇದರ ಮೂರರ ಶುದ್ದತನೂ ಹೇಳಿವೆ, ಮೃತರ ಶವಸಂಸ್ಕಾರ ನಡ್‌ದ ಮೂರನೇ ದಿನ ಬೂದಿ ಮುಚ್ಚುವ ಕ್ರಮ ಇದ್ದದೆ.

ಬೂದಿಸರಳಿ /*bu:disaraḷi*/ ನಾ. ಮರದ ಹೆಸರು. a variety of tree. ವಾ: ಬೂದಿ ಸರಳಿತ ಒಂದ್ ಜಾತಿನ ಮರದ ಹೆಸ್‌ರ್.

ಬೂದಿಸುದ್ದ /*bu:disudda*/ ನಾವಿ. ಗೌಡರಲ್ಲಿ ಸತ್ತ 3, 5 ಅಥವಾ 7 ನೇ ದಿನದಂದು ನೆರವೇರಿಸುವ ಕ್ರಮ. a ritual cleaning performed on 3rd, 5th or 7th day after death. ವಾ: ಮೃತರ ಮೂರು, ಐದ್, ಇಲ್ಲರೆ ಏಳನೆ ದಿನ ಬೂದಿ ಸುದ್ದ ಕ್ರಮ ನಡ್‌ಸುವೆ.

ಬೂದಿಗುಂಡಿ /*bu:diguṇḍili*/ ನಾ. ಬೂದಿಯನ್ನು ಶೇಖರಿಸುವ ಗುಂಡಿ. an ash pit. ವಾ: ಬೂದಿನ ಬೂದಿಗುಂಡಿಲಿ ಸೊರ್‌ಗಿರಾತ್.

ಬೂದಿಬಾಳೆ /*bu:diba:ḷɛ*/ ನಾ. 1. ಬಾಳೆಹಣ್ಣಿನ ವಿದಗಳು, 2. ಬೂದುಬಣ್ಣದ ತೆಳ್ಳನೆಯ ಲೇಪ ಹೊಂದಿದ ಬಾಳೆಹಣ್ಣು. 1. a variety plantain, 2. Golden yellow bananas. ವಾ: ಬೂದಿ ಬಾಳೆದ್ ದಿಂಡ್‌ನ ರಸ ಕುಡ್ದರೆ ಕಲ್ಲ್ ಸಮಸ್ಯೆಗೆ ಒಳ್ಳದಾದೆ. ಪ: ಬೂದುಬಾಳೆ – ಬಾಳೆಹಣ್ಣಿನ ಹೆಸರು

ಬೂದು /*bu:du*/ ನಾ. ಬೂದಿಯ ಬಣ್ಣ. grey colour. ವಾ: ಗೂಡೆ ಬೂದು ಬಣ್ಣದ ಗೌನು ಹಾಕಂಡ್ ಬಾತ್. ಪ: ಬೂದ್ – ಬೂದು

ಬೂದ್ ಸಂಪಿಗೆಮರ /*bu:dɨ sampigɛmara*/ ನಾ. ಒಂದು ಜಾತಿ ಸಂಪಿಗೆ ಮರ, ತುಳು ಪ್ರದೇಶದಲ್ಲಿ ಭೂತಸಂಪಿಗೆ ಮರ ಇದೆ. a champaka tree. ವಾ: ಬೂದ್ ಸಂಪಿಗೆ ಮರತ ಒಂದ್ ಜಾತಿನ ಸಂಪಿಗೆ ಮರ.

ಬೂದ್ಗಿಣಿ /*bu:dgiṇi*/ ನಾ. ಬೂದು ಬಣ್ಣದ ಗಿಳಿ ಹಕ್ಕಿ. a grey parrot. ವಾ: ಬೂದಿ ಬಣ್ಣಲಿರೊ ಹಕ್ಕಿನೆ ಬೂದ್ಗಿಣಿ.

ಬೂದ್‌ಗುಂಬಳಕಾಯಿ /*bu:dɨgumbaḷaka:yi*/ ನಾ. 1. ಬೂದು ಕುಂಬಳಕಾಯಿ. ash gourd. ವಾ: ಬೂದ್‌ಗುಂಬಳ ಕಾಯಿಲಿ ಹಲ್ವ ಮಾಡಕ್.

ಬೂಮಿ /*bu:mi*/ ನಾ. 1. ಜೀವಿಗಳು ವಾಸ ಮಾಡುತ್ತಿರುವ ಲೋಕ, 2. ಭೂಲೋಕ, 3. ನೆಲ, 4. ಭೂಪ್ರದೇಶ. 1. the earth, 2. the surface of the land, 3. the land, 4. surface of the land. ವಾ: ಬೂಮಿನ ಹಾಳಾಗದಂಗೆ ಕಾಪಾಡಿಕಂಡ್ ಬಾದು ಮೊನ್ಸರ ಕರ್ತವ್ಯ.

ಬೂರಿ /*bu:ri*/ ನಾ. 1. ಸುಳ್ಳು, 2. ಅಸತ್ಯ, 3. ಹುಸಿ. 1. a lie, 2. falsity, 3. mendacity. ವಾ: ಬಾರಿ ಬೂರಿ ಬುಟ್ಟಿಯಲ ನೀ ನಂಗೆ ಗೊತ್‌ಉಗ್ಗಪ್ಪ್.

ಬೂರುಗಮರ /*bu:rugamara*/ ನಾ. ಹತ್ತಿಮರ. cotton tree, Malabar silk-cotton tree, red silk-cotton. ವಾ: ಬೂರ್‌ಗ ಮರಲಿ ಹೂ ಬುಡಕನ ಒಂದೇ ಒಂದ್ ಸೊಪ್ಪು ಇರ್‌ದುಲೆ.

ಬೂವ /*bu:va*/ ನಾ. ಪಯಣ (ಮಕ್ಕಳ ಪದ). to

travel (in the vocabulary of childre). ವಾ: ಬೇಗ ಮಾಮ್ ಮಾಡ್ ಬೂವ ಪೋಯಿ.

ಬೂಸು[1] /*bu:su*/ ನಾವಿ. 1. ಬೂಸ, 2. ಚುರುಕು ಇಲ್ಲದೆ ಕೊನೆಯಲ್ಲಿರುವವ, 3. ಸೋಲು, 4. ಚುರುಕು ಇಲ್ಲದವ. 1. bran – hard outer layers of cereal grain, 2. inactive, 3. defeat, 4. lethargic. ವಾ: ಅಂವ ಬೂಸು ಮೊನ್ಸ.

ಬೂಸು[2] /*bu:su*/ ನಾ. 1. ಶಿಲೀಂದ್ರ ರೋಗ, 2. ಹಾಳಾದ ತರಕಾರಿ ಇತ್ಯಾದಿ ವಸ್ತುವಿನ ಮೇಲೆ ಬಿಳಿಯಾಗಿ ಬೆಳೆವ ಬೂಸ್ಟ್. 1. fungus, 2. fungi boost. ವಾ: ಮಳ್ಗಾಲಲಿ ಮರದ ಸಾಮಾನ್ಗೆಲ್ಲ ಬೂಸು ಹಿಡ್ದದೆ.

ಬೂಸು[3] /*bu:su*/ ನಾ. 1. ಹೊಟ್ಟಿನ ಭಾಗ, 2. ಧಾನ್ಯದಲ್ಲಿ ಕಾಳಿನ ಅಥವಾ ತಿರುಳಿನ ಹೊರತಾದ ಪದಾರ್ಥ, 3. ಉಮಿ, 4. ಸಿಪ್ಪೆ, 5. ಭತ್ತದ ಹೊಟ್ಟು, 6. ಮರದ ಹೊಟ್ಟು. 1. bran – hard outer layers of cereal grain, 2. an outer cover of the grain, 3. an outer layer, 4. skin, 5. husk, 6. wood dust. ವಾ: ಬತ್ತ ಹೊಡ್ಕ್‌ಕನ ಬೂಸು ಹಾರ್‌ದೆ.

ಬೂಸ್ ತುಂಬಿಟು /*bu:sɨ tumbiṭu*/ ನಾ. 1. ಮಂಜು ಮುಸುಕು, 2. ಮಂಜು ಆವರಿಸು. 1. misty, 2. foggy. ವಾ: ಹೊತಾರೆನೆ ಬೂಸ್ ತುಂಬಿಟು, ದಾರಿನೆ ಕಾಂಬಲೆ.

ಬೂಸ್ಲು /*bu:slu*/ ನಾ. ಕಾಫಿ ಅಳೆಯುವ ಸಾಧನ. instrument to measure coffee. ವಾ: ಬೂಸ್ಲುಲಿ ಕಾಪಿನ ಅಳ್ದ್ ನೋಡಿರಾತ್.

ಬೆಂಕಿ /*bɛŋki*/ ನಾ. 1. ಬೆಂಕಿ, 2. ಅಗ್ನಿ, 3. ಉರಿ, 4. ಧಗೆ, 5. ತಾಪ, 6 .ಕಿಚ್ಚು. 1. fire, 2. flames, 3. burning sensation, 4. heat, 5. hotness, 6. fire. ವಾ: ಕಾಡಿಗೆ ಬೆಂಕಿ ಕೊಟ್ಟೊಳೊ.

ಬೆಂಕಿಕಡ್ಡಿ /*bɛŋkikaḍḍi*/ ನಾ. 1. ಒಂದು ತುದಿಯಲ್ಲಿ ಉಜ್ಜಿದರೆ ತತ್‌ಕ್ಷಣವೇ ಹೊತ್ತಿಕೊಳ್ಳುವಂಥ ದಹನಶೀಲ ಮಿಶ್ರಣ, 2. ರಂಜಕದಂಥಹ ರಾಸಾಯನಿಕವಿರುವ ಕಿರಿದಾದ, ಸುಲಭವಾಗಿ ಹೊತ್ತಿ ಉರಿಯುವ ಮರದ, ಕಾಗದದ ಅಥವಾ ಮತ್ತಾವುದೇ ಸಾಮಾಗ್ರಿಯ ಕಡ್ಡಿ/ತುಂಡು, 3. ಬೆಂಕಿ ಹೊತ್ತಿಸಲು ತುದಿಯಲ್ಲಿ ಮದ್ದು ಲೇಪಿಸಿರುವ ಕಡ್ಡಿ. 1. a matchstick, 2. a short and thin stick with phosphorus at one end, 3. a wooden match, used in igniting fire. ವಾ: ಸೀತಕೆ ಬೆಂಕಿ ಕಡ್ಡಿ ಹೊತ್ತುದೆಲೆ.

ಬೆಂಕಿಪಟ್ಣ /*bɛŋkipaṭṇa*/ ನಾ. ಕಡ್ಡಿ ಪೆಟ್ಟಿಗೆ. a matchbox. ವಾ: ಬೆಂಕಿ ಪಟ್ಣಲಿ ಒಂದ್ ಕಡ್ಡಿಸ ಇಲ್ಲೆ.

ಬೆಂಕಿಕೊಳ್ಳಿ /*bɛŋkikoḷḷi*/ ನಾ. ಉರಿಯುವ ಕಟ್ಟಿಗೆ. fire wood. ವಾ: ಬೆಂಕಿ ಕೊಳ್ಳಿನ ಹಿರ್‌ದ್ ನೀರ್ ಹಾಕಿನೆ ಮಕ್ಕಳೆ.

ಬೆಂಗೈ /*beŋgai*/ ನಾ. ಬೆನ್ನಿನ ಹಿಂದೆ ಕೈ ಕಟ್ಟುವುದು. hands held behind the back. ವಾ: ಬೆಂಗೈ ಕಟ್ಟಿ ನಡಿತಿದ್ದೊ ನಮ್ಮ ಉಗ್ಗಪ್ಪ.

ಬೆಂಚಿ /*beŋci*/ ನಾ. 1. ಬೆಂಚು, 2. ಕುಳಿತುಕೊಳ್ಳಲು ಬಳಸುವ ಉದ್ದನೆಯ ಮರದ ಅಥವಾ ಕಲ್ಲಿನ ಆಸನ. 1. a bench, 2 a wooden or a stone long seat. ವಾ: ಯಾಗೊಳು ಬೆಂಚಿ ಮೇಲೆನೆ ಕುದ್ರ್ ತಿದ್ದೊ.

ಬೆಂಚ್ /*beŋcɨ*/ ನಾ. ಎಪ. 1. ಬೆಂಚು, 2. ಕುಳಿತುಕೊಳ್ಳಲು ಬಳಸುವ ಉದ್ದನೆಯ ಮರದ ಅಥವಾ ಕಲ್ಲಿನ ಆಸನ. 1. a bench, 2 a wooden or a long stone-seat. ವಾ: ಅವೆಲ್ಲ ಬೆಂಚ್ ಮೇಲೆ ಕುದ್ದ್ ಕಂಡ್ ಹರ್‌ಟೆ ಹೊಡ್‌ದವೆ. ಪ: ಬೆಂಚಡಿಗೆ – ಬೆಂಚಿನ ಕೆಳಗೆ

ಬೆಂಡ /*bɛṇḍa*/ ನಾ. ಎಳನೀರು. tender coconut. **ಅಣ್ಣ ಪಾಂಬಿದೆ ತಮ್ಮ ಕಂತಿದೆ – ತೆಂಗಿನಕಾಯಿ, ಬೆಂಡ(ಬೊಂಡ)(ಒ).** ವಾ: ಬಿಸ್‌ಲ್ ಇರಿಕನ ಬೆಂಡ ಕುಡೆಕು. ತಂಪಾದೆ. ಪ: ಬೊಂಡ(ತು)

ಬೆಂಡಾತ್ /*benḍa:ti*/ ಕ್ರಿ. ಎಪ. 1. ತಲೆಬಾಗು, 2. ಬೇರೆಯವರ ಮಾತಿಗೆ ಮರುಳಾಗು. 1. to bend one's head, 2. to get influenced by others. ವಾ: ಆ ಗೂಡೆ ಬೇರೆವರ ಮಾತ್‌ಗೆ ಬೆಂಡಾತ್.

ಬೆಂಡೆಮರ /*benḍɛmara*/ ನಾ. ನಾರಿರುವ ಮೃದು ಮರ, ಈ ಮರ ಆನೆಗಳಿಗೆ ಒಳ್ಳೆಯ ಆಹಾರ. Aden apple, Indian tulip tree, portia tree. ವಾ: ಬೆಂಡೆ ಮರ ಮೆತ್ತಂಗಾಗಿ ಇರ್‌ದರ್‌ಂದ ಆನೆಗ ಬಾರಿ ಕುಸಿಪಟ್ಟ್ ತಿಂದವೆ.

ಬೆಂಡೆಕಾಯಿ /*benḍɛka:yi*/ ನಾ. ಒಂದು ವಿಧದ ತರಕಾರಿ, ಬೆಂಡೆಕಾಯಿ. lady's finger/okra. **ಬಾಳೆಣ್ಣ್ ವಳಗೆ ಬಾರಿ ಗೋಲಿಗ – ಬೆಂಡೆಕಾಯಿ(ಒ).**

ವಾ: ಬೆಂಡೆಕಾಯಿ ತಿಂದರೆ ತಿಳ್‌ವಳಿಕೆ ಹೆಚ್ಚಿದೆಗಡ. ಪ: ಬೆಂಡೆಲಿ – ಬೆಂಡೆಕಾಯಿಯಲ್ಲಿ; ಬೇಂಡಾಯಿ(ತು)

ಬೆಂಡೆಕ್ಕಿಮರ /*beṇḍɛkkimara*/ ನಾ. ಒಂದು ವಿಧದ ಕಾಡುಮರ. a forest tree. ವಾ: ಬೆಂಡೆಕ್ಕಿ ಮರಂದ ಅಡ್ಡ ಹಲಗೆ, ಪಕ್ಕಾಸ್ ಮರ ಕೊಯ್ದುವೆ.

ಬೆಂಡೋಲೆ /*beṇḍo:lɛ*/ ನಾ. 1. ಓಲೆ, 2. ಚಿನ್ನದ ಗುಂಡಿನಿಂದ ಕೂಡಿದ ಓಲೆ. a jewellary/an ornament worn on the ear. ವಾ: ಅವರತ್ರ ಒಂದ್ ಬೆಂಡೋಲೆ ಇತ್ತ್.

ಬೆಂಡ್[1] /*beṇḍi*/ ನಾ. ತಿರುಳು. thread. ವಾ: ಗೈಪು ಮಾಡಿಕನ ಓಡ್ ಸೋಂತೆದ್ ಬೆಂಡ್‌ನ ತೆಗೆಕು.

ಬೆಂಡ್[2] /*beṇḍi*/ ನಾ. 1. ಕಿವಿಯ ಓಲೆ, 2. ಒಂದು ಆಭರಣ. a jewellary/an ornament worn on the ear. ವಾ: ಬೆಂಡ್‌ನ ಕೆಮಿಗೆ ಹಾಕ.

ಬೆಂಡ್[3] /*beṇḍi*/ ನಾ. ಎಪ. 1. ಬೆಂಡಾದ, 2. ಬಾಗಿದ. 1. bent, 2. curved. ವಾ: ಬೆಂಡ್ ಮರಲಿ ಎಂತನು ಮಾಡಿಕಾದುಲೆ.

ಬೆಂಡ್‌ಕುಕ್ಕೆ[1] /*beṇḍikukkɛ*/ ನಾ. ಬೆತ್ತ ಅಥವಾ ಬಿದಿರಿನ ಸಲಾಕೆಯಿಂದ ಮಾಡಿದ ಘನಾಕೃತಿಯ ಕುಕ್ಕೆ/ ಬುಟ್ಟಿ. a basket made of bamboo or cane. ವಾ: ಬೆಂಡ್‌ಕುಕ್ಕೆಗೆ ತೊಳ್ದ ಅಕ್ಕಿನ ಹಾಕಿಸಿರೆ ನೀರ್ ಅರ್‌ದದೆ.

ಬೆಂಡ್‌ಕುಕ್ಕೆ[2] /*boṇḍurvɛ*/ ನಾ. ಸ್ತಂಭಾಕೃತಿಯಲ್ಲಿರುವ ಹಿಡಿಯಿಲ್ಲದ ಬುಟ್ಟಿ. a cylindrical basket without any handle. ವಾ: ಬೆಂಡ್‌ಕುಕ್ಕೆನ ಇತ್ತ ತಂಬಾ. ಪ: ಬೊಂಡುರ್ವೆ

ಬೆಂಡ್ವಾಲೆ /*beṇḍva:lɛ*/ ನಾ. ಬೆಟ್ಟದ ಚಿನ್ನದಿಂದ ಮಾಡಿದ ಚಿನ್ನದ ಗುಂಡೋಲೆ. golden ornament worn on the ear. ವಾ: ಹಿಂದೆಲ್ಲ ಬೆಂಡ್ವಾಲೆ ಹಾಕ್ತಿದ್ದೊ.

ಬೆಂದೋಡಿ /*bendo:ḍi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಹರಿಹರ ಪಲ್ಲತಡ್ಕ ಗ್ರಾಮದ ಜಾಗ. a locality in Harihara Pallatadka village in Sullia Taluk of Dakshina Kannada District.

ಬೆಂದ್ /*bendi*/ ಕ್ರಿ. ಬೆಂದು. cooked. ವಾ: ಅನ್ನ ಬೆಂದ್ ಹೋತ್. **ಬೆಂದದೆ** /*bendadɛ*/ ಬೇಯುತ್ತದೆ. getting cooked. ವಾ: ಮರಗೆಣ್ಸ್ ಒಂದೇ ಕೊದಿಗೆ ಬೆಂದದೆ. **ಬೆಂದುಟು** /*benduṭu*/ ಬೆಂದಿದೆ. cooked. ವಾ: ತರ್‌ಕಾರಿ ಬೆಂದುಟ್ಟು.

ಬೆಕ್ಕಿ /*bɛkki*/ ನಾ. ಬೆಳ್ತಿಗೆ ಅಕ್ಕಿ. raw white rice. ವಾ: ಹೆಚ್ಚಿನಂಸ ಎಲ್ಲೊವು ಬೆಕ್ಕಿನೆ ಉಂಬೊದು. ಪ: ಬೆಳ್ತಿಕ್ಕಿ ಬೆನ್ತಕ್ಕಿ ಬೊಳಂತ್ಯರಿ(ತು)

ಬೆಕ್ಕು /*bekku*/ ನಾ. 1. ಒಂದು ಬಗೆಯ ಮಾಂಸಾಹಾರಿ ಪ್ರಾಣಿ, 2. ಕಬ್ಬೆಕ್ಕು. a cat, a domesticated carnivorous mammal. ವಾ: ಬೆಕ್ಕ್‌ನ ಹಿಡೆಕೆ ಹೋಗಿದ್ದೊ. ಅದ್ ಓಡೇ ಬುಡ್ತ್.

ಬೆಗರ್ /*begari*/ ನಾ. 1. ಬೆವರು, 2. ಸ್ವೇದಗ್ರಂಥಿಗಳು ಚರ್ಮದ ಮೇಲ್ಮೈಗೆ ಸ್ರವಿಸುವ ಲವಣಯುತ ದ್ರವ, ದೇಹೋಷ್ಣತೆಯ ಹೆಚ್ಚಳದ ಪರಿಣಾಮ, 3. ಶ್ರಮ, ಸೆಕೆ ಮುಂತಾದ ಸಂದರ್ಭಗಳಲ್ಲಿ ಚರ್ಮ ರಂಧ್ರಗಳಿಂದ ದ್ರವ ಹೊರಸೂಸು. 1. sweat, 2. to perspire, 3 excretion of perspiration through pores of skin in increased temperatures. ವಾ: ಬೆಗರ್ ಸಿಂಡ್ ಬಾಕನ ಅದ್ ನೀನೆತ ಗೊತ್‌ಉಗ್ಗಪ್ಪ್. ಪ: ಬೆಗ್‌ರೊಕು – ಬೆವರಬೇಕು; ಬೆಗ್‌ರ್‌ಲಿ – ಬೆವರಿನಲ್ಲಿ. ಪ: ಬೆಗ್‌ರ್. **ಬೆಗರ್ ಸಿಂಡ್‌ಬಾದು** /*begari sinḍiba:du*/ ಬೆವರು ವಾಸನೆ ಬರುವುದು. body odor. ವಾ: ಬೆಗರ್ ಸಿಂಡ್ ಬಾದುರ್‌ಂದಾಗಿ ಅಂವನ ಹಕ್ಕಲೆ ಹೋಕೆ ಬತ್ತ್.

ಬೆಚ್ಚ ನೀರ್[1] /*becca ni:ri*/ ನಾ. ಶರಾಬು. Liquor. ವಾ: ಬೆಚ್ಚ ನೀರ್ ಕಾಸಿವೆ.

ಬೆಚ್ಚ ನೀರ್[2] /*becca ni:ri*/ ನಾ. 1. ಬಿಸಿನೀರು, 2. ಕುದಿಸಿದ ನೀರು, 3. ಕುದಿಸಿ ಆರಿದ ನೀರು. 1. hot water, 2. warm water, 3. cooled boiled-water. ವಾ: ಬೆಚ್ಚ ನೀರ್ ಆರೋಗ್ಯಕೆ ಒಳ್ಳೆದ್. **ಬೆಚ್ಚನೀರ್ ಕಾಸುದು**[1] /*beccani:ri ka:sudu*/ ಗೇರು ಹಣ್ಣಿನ ಶರಾಬು ತೆಗೆಯುವುದು. cashew wine-fenny – prepared from the fruit of the cashew tree. ವಾ: ಗೇರ್‌ದಣ್ಣ್ ದ್ ಬೆಚ್ಚ ನೀರ್ ಕಾಸುದು. **ಬೆಚ್ಚನೀರ್ ಕಾಸುದು**[2] /*beccani:ri ka:sudu*/ ಒಲೆಯಲ್ಲಿ ಬಿಸಿ ನೀರು ಕಾಯಿಸುವುದು. to boil water on the stove. ವಾ: ಅವ್ವ ಬೆಚ್ಚ ನೀರ್ ಕಾಸುದು.

ಬೆಚ್ಚ[1] /*becca*/ ನಾ. 1. ಸಿಟ್ಟು, 2. ಕೋಪ, 3. ಮುನಿಸು.

1. anger, 2. rage, 3. vehemence. ವಾ: ಯಾರಾರ್ ಬೇಡದ್ ಮಾತಾಡಿಕನ ತಲೆ ಬೆಚ್ಚ ಆದೆ.

ಬೆಚ್ಚ[2] /*becca*/ ನಾ. 1. ಬಿಸಿಯಾದ, 2. ಕಾವಿನ, 3. ಶಾಖದ, 4. ಸುಖೋಷ್ಣವಾದ, 5. ಬೆಚ್ಚಗಿರುವ. 1. hot, 2. being hot, 3. having high temperature, 4. piping hot, 5. warm. ವಾ: ಕುತ್ತಿಗೆಗೆ ಮಫ್ಲರ್ ಸುತ್ತಿಕ ಬೆಚ್ಚ ಆದೆ. ಪ: ಬೆಚ್ಚ ಆದೆ – ಬಿಸಿ ಆಗುತ್ತದೆ; ಬೆಚ್ಚಮಾಡಿ – ಬಿಸಿಮಾಡಿ. **ಬೆಚ್ಚಮುಟ್ಟಿಸೊಕು** /*beccamuṭṭisoku*/ 1. ಬಿಸಿ ಮುಟ್ಟಿಸುವುದು, 2. ಬಿಸಿ ತಾಗಿಸುವುದು, 3. ಹೆದರಿಕೆ ಹುಟ್ಟಿಸುವುದು. 1. to threaten. 2. to instil fear, 3. to make someone fear. ವಾ: ಅಂವ ಬಾರಿ ಹಾರಾಡ್‌ದೆ ಹಞ್ಞ ಬೆಚ್ಚ ಮುಟ್ಟಿಸೊಕು. **ಬೆಚ್ಚಂಗೆ** /*beccaŋgɛ*/ 1. ಬೆಚ್ಚ, 2. ಬಿಸಿಯಾದ, 3. ಬಿಸಿಯಿಂದ ಕೂಡಿದ, 4. ಯಾವುದೇ ತೊಂದರೆಯಿಲ್ಲದೆ ಇರುವುದು. 1. hot, 2. being hot, 3. having high temperature, 4. being without any problems. ವಾ: ಚಳಿಗೆ ಕಂಬುಳಿ ಹೊದ್ ಬೆಚ್ಚಂಗೆ ಬಿದ್ದುಟು. ಪ: ಬೆಚಂಗೆ – ಬಿಸಿಯಿಂದ ಕೂಡಿ, ಬೆಚ್ಚಗೆ

ಬೆಚ್ಚಿ /*becci*/ ನಾ. ಕಾವೇರಿ ಸಂಕ್ರಮಣ ಸಮಯದಲ್ಲಿ ಎರಡು ದೊಡ್ಡ ಕವಲುಗಳಿರುವ ಕಂಬದ ನಡುವೆ ಹಲಗೆ ಇರಿಸಿ ತಿನಿಸು ಇಡುವ ವ್ಯವಸ್ಥೆ. an arrangment to keep food items between two pillars during the festival of Kaveri Sankramana. ವಾ: ತುಲಾ ಸಂಕ್ರಮಣಲಿ ಗದ್ದೆ, ತೊಳ್ಸಿ ಕಟ್ಟೆಲೆಲ್ಲಾ ಬೆಚ್ಚಿ ಕುತ್ತಿವೆ.

ಬೆಚ್ಚಿಮರ /*beccimara*/ ನಾ. ಇದೊಂದು ಪರಾವಲಂಬಿ ಸಸ್ಯ. a parasitic plant. ವಾ: ಬೆಚ್ಚಿ ಮರದ ಹೂ ಜೊಂಪೆಗೆ ಜೇನ್ನೊಳಂಗ ಮುತ್ತಿವೆ.

ಬೆಚ್ಚಿಬೊಳ್ಳಿ /*beccibɔḷḷi*/ ನಾ. ಕಾವೇರಿ ಮಾತೆಯ ಹದ್ದು ಬಸ್ತಿನ ಗುರುತು. a symbol of godess Kaveri. ವಾ: ಗದ್ದೆಲಿ ಬೆಚ್ಚಿಬೊಳ್ಳಿ ಕಟ್ಟಿಯಾತ್.

ಬೆಞಣ /*beɲaṇa*/ ನಾ. ಕಣಜ. Hornets. ವಾ: ಬೆಞಣ ಕಚ್ಚಿದೆ. ಪ: ಕಡಂದೋಳು

ಬೆಞ್ಞಣ /*beɲɲaṇa*/ ನಾ. 1. ಕಚ್ಚುವ ನೊಣ, 2. ಕಾಡಿನ ಒಂದು ಜಾತಿಯ ಹುಳು. 1. a fly that stings, 2. a forest worm. ವಾ: ಬೆಂಞಣ ಕಚ್ಚಿ ಕಣ್ಣ್ ಬಾತುಟು. ಪ: ಕೂಡೋಳು, ಕಂಚಿಕಾರ

ಬೆಟಿಗೇರಿಮರ /*beṭige:rimara*/ ನಾ. ಕಾಡು ಹಣ್ಣಿನ ಮರ. a forest fruit tree. ವಾ: ಬೆಟಿಗೇರಿ ಮರಲಿ ಹಣ್ಣಾದೆ.

ಬೆಟಿಗೇರಿಹಣ್ಣ್ /*beṭige:rihaṇṇɨ*/ ನಾ. ಹಣ್ಣಿನ ಹೆಸರು. a fruit. ವಾ: ಬೆಟಿಗೇರಿ ಹಣ್ಣ್‌ತ ಇರ್‌ತಿತ್, ಹಿಂದೆ ಸಾಲೆಗೆ ಹೋಕನ ಮಕ್ಕ ತಿಂಬೊತಿದ್ದೊ.

ಬೆಟ್ ಮಾಡಿ /*beṭɨ ma:ḍi*/ ನಾವಿ. ಬೆರಳು ತೋರಿಸಿ. to show one's finger. ವಾ: ಬೆಟ್ ಮಾಡಿ ಮಾತಾಡಿರೆ ಸಿಟ್ಟ್ ಬಾದು.

ಬೆಟ್[1] /*beṭɨ*/ ನಾ. ನೀರಾಶ್ರಯವಿಲ್ಲದ ಜಾಗ. a place sans water and shelter. ವಾ: ಬೆಟ್ ಕಡೆ ಹೋದರೆ ಕುಡಿಕೆ ನೀರ್ ಸಿಕ್ಕಿಕಿಲೆ.

ಬೆಟ್[2] /*beṭɨ*/ ಕ್ರಿ. 1. ಪಂಥ ಕಟ್ಟು, 2. ಬೆಟ್ಟು ಕಟ್ಟುವುದು. 1. to bet, 2. to gamble on.

ಬೆಟ್ಕೇರಿಹಣ್ಣ್ /*beṭke:rihaṇṇɨ*/ ನಾ. ಒಂದು ಜಾತಿ ಹಣ್ಣಿನ ಹೆಸರು. a variety of fruit. ವಾ: ಬೆಟ್ಕೇರಿ ಹಣ್ಣ್ ನ ತಿಂಬತಿದ್ದೊ.

ಬೆಟ್ಟಕಿಚ್ಚ್ /*beṭṭakiccɨ*/ ನಾ. ಭಯಂಕರ ಹೊಟ್ಟೆಕಿಚ್ಚಿನಂವ. an envious person. ವಾ: ಅಂವಂಗೆ ಬಾರಿ ಬೆಟ್ಟ ಕಿಚ್ಚ್.

ಬೆಟ್ಟತಾವರೆ /*beṭṭata:varɛ*/ ನಾ. 1. ಬೆಟ್ಟದಾವರೆ ಹೂ, 2. ಉಪ್ಪಳಿಗೆ, 3. ಇದರ ಕತ್ತರಿಸಿದ ಎಲೆ, ಕೊಂಬೆಗಳಿಂದ ಒಸರುವ ಅಂಟುದ್ರವ, ಅನೇಕ ವ್ರಣಗಳಿಗೆ ಲೇಪನವಾಗಿದೆ, 4. ಇದನ್ನು ಆಯುರ್ವೇದಿಕ ಔಷಧಿಗಳಲ್ಲಿ ಇದರ ಉಪಯೋಗವಿದೆ, 5. ಬಿಳಿ ಹಾಗು ಗುಲಾಬಿ ಬಣ್ಣದ ಹೂಗಳನ್ನು ಕಾಣಬಹುದು. white catamaran flower, used in ayurvedic medicine, it will have white and red flowers. ವಾ: ಬೆಟ್ಟ ತಾವರೆ ಎಲೆ ಮತ್ತೆ ಕೆತ್ತೆನ ಕಸಾಯ ಮಾಡಿ ಕುಡ್ದರೆ ಕಿಡ್ನಿ ಕಲ್ಲ್ ಹೋದೆಗಡ.

ಬೆಟ್ಟ[1] /*beṭṭa*/ ನಾ. 1. ಎತ್ತರ ಹಾಗು ಗಾತ್ರದಲ್ಲಿ ಪರ್ವತಕ್ಕಿಂತ ಚಿಕ್ಕದಾದ ಭೂ ಮೇಲ್ಮೈ ಮೇಲಿನ ತಿಟ್ಟು, 2. ಗಿರಿ, 3. ಪರ್ವತ. 1. a hillock, 2. a hill, 3. mountain. **ಅಟ್ಟಕೆ ಏಣಿ ಹಾಕಕ್ ಬೆಟ್ಟಕೆ ಹಾಕಿಕಾದೆನ(ಗಾ). ಬೆಟ್ಟಕ್ಕೆ ಕಂಬುಳಿ ಹೋಸಿಕಾದ್ಲೆ(ನು).** ವಾ: ನಿ ಬೆಟ್ಟ ಹತ್ತುವನ?

ಬೆಟ್ಟ^2 /*betta*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ನೆಲ್ಲೂರು ಕೆಮ್ರಾಜೆ ಗ್ರಾಮದ ಜಾಗ. a locality in Nelluru Kemraje village in Sullia Taluk of Dakshina Kannada District.

ಬೆಟ್ಟಂಪಾಡಿ /*bettampa:di*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಸುಳ್ಯ ನಗರದ ಜಾಗ. 1. family, 2. lineage, 3. a locality in Suḷya Nagara village in Sullia Taluk of Dakshina Kannada District.

ಬೆಟ್ಟಗೇರಿ /*bettake:ri*/ ನಾ. ಮಡಿಕೇರಿಯ ಒಂದು ಸ್ಥಳನಾಮ. Bettageri, a place.

ಬೆಟ್ಟದ ನೆಲ್ಲಿಕಾಯಿ /*bettada nellika:yi*/ ನಾ. 1. ನೆಲ್ಲಿಕಾಯಿಯ ಒಂದು ವಿಧ, 2. ಆಮ್ಲ. 1. a variety of gooseberry, 2. amla. ವಾ: ಬೆಟ್ಟದ ನೆಲ್ಲಿಕಾಯಿನ ಮೊದ್ದ್‌ನ ರೂಪಲಿ ಬಳ್‌ಸುವೆ. ನೆಲ್ಲಿಕಾಯಿ ಸುರೂಲಿ ತಿಂಬಕನ ಕನರ್ ಆಗಿದ್ದದೆ. ಮತ್ತೆ ಸಿಂಯಿ ಆದೆ. **ಬೆಟ್ಟದ ನೆಲ್ಲಿಕಾಯಿಮರ** /*bettada nellika:yi mara*/ 1. ಬೆಟ್ಟದ ನೆಲ್ಲಿ ಮರ, 2. ಭಾರತದ ಉಪಖಂಡದ ತೇವ, ಕಾಡು, ಗುಡ್ಡಗಾಡು ಪ್ರದೇಶಗಳಲ್ಲಿ ಶರತ್ಕಾಲದಲ್ಲಿ ಪಕ್ವವಾಗುವ ಹುಳಿ ರುಚಿ ಹಣ್ಣನ್ನು ನೀಡುವ ಮರ. 1. gooseberry tree, 2. a tree with tart fruit that grows in the Indian subcontinent, grows in both tropical and subtropical climatic conditions. ವಾ: ಬೆಟ್ಟದ ನೆಲ್ಲಿಕಾಯಿ ಮರ ಕಾಡ್‌ಲಿ ಇದ್ದದೆ.

ಬೆಟ್ಟದಡಿಗೆ /*bettadadigɛ*/ ನಾವಿ. 1. ಬೆಟ್ಟದ ಕೆಳಗೆ, 2. ಬೆಟ್ಟದ ತಪ್ಪಲು. at the bottom of the hill. ವಾ: ನಾವೆಲ್ಲ ಬೆಟ್ಟದಡಿಗೆ ಹೋಗಿ ಬಂದೊ.

ಬೆಟ್ಟನ /*bettana*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅರಂತೋಡು ಗ್ರಾಮದ ಜಾಗ. a locality in Arantodu village in Sullia Taluk of Dakshina Kannada District.

ಬೆಟ್ಟೆ /*bettɛ*/ ನಾವಿ. ಲೈಂಗಿಕ ಸಂಬಂಧಿ ಮಾತುಗಳು. conversation about sexual matters.

ಬೆಟ್ಟ್ /*betti*/ ನಾ. 1. ಬೆರಳು, 2. ಅಂಗುಲಿ, 3. ಹೆಬ್ಬೆರಳು ಬಿಟ್ಟು ಉಳಿದ ನಾಲ್ಕು ಅಂಗುಲಿಗಳಲ್ಲಿ ಒಂದು. 1. a finger, 2. finger, 3. four fingers in one's hand, except the thumb. ವಾ: ಐದ್ ಬೆಟ್ಟ್‌ಗ ಸಮ ಒಳೊನಾ? ಇಲ್ಲೆಲ ಹಂಗೆನೆ ಒಬ್ಬೊಬ್ಬ ಒಂದೊಂದ್ ತರ ಇದ್ದವೆ, ನಾವ್ ಹೊಂದಿಕಂಡ್ ಹೋಕು.

ಬೆಡಿಮೆಟ್ಟುದು /*bedimettudu*/ ನಾ. ಕೋವಿ ಒಡೆಯುವಾಗ ಗಟ್ಟಿಯಾಗಿ ಎದೆಗೆ ಒತ್ತಿ ಹಿಡಿಯಬೇಕು ಇಲ್ಲವಾದರೆ ಎದೆಗೆ ಬಂದು ಗುದ್ದುತ್ತದೆ. holding the gun appropriately to avoid the recoiling effect after the bullet has been fired. ವಾ: ನೋಡಿಕಂಡ್ ಗುಂಡು ಹಾರ್ಸಿ ಇಲ್ಲರೆ ಬೆಡಿ ಮೆಟ್ಟುದು.

ಬೆಡಿಮೊದ್ದು /*bedimoddu*/ ನಾ. ಕೇಪಿನ ಕೋವಿಗೆ ತುಂಬಿಸುವ ರಂಜಕ ಮತ್ತು ಕರಿ ಮದ್ದು. phosphorus and black gun powder used in loading a rifle. ವಾ: ಬೆಡಿ ಮೊದ್ದು ತಾಕೆ ಪೇಟೆಗೆ ಹೋಕುಟ್ಟು.

ಬೆಡಿಲೈಸನ್ಸ್ /*bɛdi laisansi*/ ನಾ. ಎಪ. ಕೋವಿಯನ್ನು ಉಪಯೋಗಿಸಲು ಸರಕಾರದಿಂದ ಕೊಡುವ ಪರವಾನಿಗೆ. a gun licence. ವಾ: ಮನೆಲಿ ಬೆಡಿ ಇಸಿಕಣಕೊರೆ ಬೆಡಿ ಲೈಸನ್ಸ್ ಇರೊಕು.

ಬೆಡಿಕಟ್ಟ್ /*bedikatti*/ ನಾ. ಪ್ರಾಣಿಗಳು ಬರುವ ದಾರಿಗೆ ಬೇಟೆಗಾಗಿ ಬಂದೂಕು ಕಟ್ಟು. to get the rifle ready for hunting. ವಾ: ಬೆಡಿಕಟ್ಟಿ ಪಾರ ಕುದ್ದೊ.

ಬೆಡಿಹೋತ್ /*bediho:ti*/ ನಾ. 1. ಸಾಕಾಗು, 2. ಸಾಕಾಯ್ತು. 1. to get tired of something, 2. having enough of something. ವಾ: ನಡ್ದ್ ನಡ್ದ್ ಬೆಡಿಹೋತ್.

ಬೆಡ್‌ಹಿಂಡ್ /*bedihindi*/ ನಾ. ಬಿದಿರಿನ ಮೆಳೆ. bamboo thicket. ವಾ: ಬೆಡ್ ಹಿಂಡ್ ಬುಡಲಿ ಗಟ್ಟಿ ಮುಳ್ಳುಗ ಇದ್ದದೆ.

ಬೆಡ್‌ರ್ /*bediri*/ ನಾ. ಬಿದಿರು. bamboo. ವಾ: ಬೆಡ್‌ರ್‌ನ ಬೆಳ್ಸುವೆ. ಪ: ಬೆದ್‌ರ್

ಬೆಡ್ಸಿಟ್ /*bedsiti*/ ನಾ. ಎಪ. ಬೆಡ್ ಶೀಟ್. bed spread. ವಾ: ಹಾಸ್ಗೆಗೆ ಬೆಡ್ಸಿಟ್ ಹೋಸಿ.

ಬೆಣ್ಣಂದಿಮರ /*beṇṇandimara*/ ನಾ. ನಂದಿ ಮರ. ben-teak tree. ವಾ: ಬೆಣ್ಣಂದಿ ಮರ ಬಾರಿ ಗಟ್ಟಿ, ಅದರ್‌ಲಿ ಕುರ್‌ಸಿ, ಮೇಜ, ಕಟ್ಲ್ ಎಲ್ಲ ಮಾಡ್ಸಕ್.

ಬೆಣ್ಣೆ /*beṇṇɛ*/ ನಾ. ಮೊಸರು ಕಡೆದಾಗ ಬರುವ ಹಾಲಿನ

ಕೊಬ್ಬು. butter. **ಅಪ್ಪಂಗೆ ಬೆಣ್ಣೆ ಆಗದ್, ಮಜ್ಜಂಗೆ ತುಪ್ಪ ಆಗದ್(ಗಾ).** ವಾ: ಮಕ್ಕ ಬೆಣ್ಣೆ ತಿಂಬದು.

ಬೆಣ್ಣೆಕರ್ತೆ /*beṇṇɛkartɛ*/ ನಾ. ಈ ಸಸ್ಯದ ಎಲೆಯ ಕಸಾಯವನ್ನು ಸ್ನಾನ ಮಾಡುವಾಗ ತಲೆಗೆ ಹಾಕಿಕೊಳ್ಳುತ್ತಾರೆ. paste from this plant is applied while washing hair. ವಾ: ಬೆಣ್ಣೆ ಕರ್ತೆ ಸೊಪ್ಪುಲಿ ತಲೆ ತೊಳ್ದರೆ ಕೂದೊಲು ಲಾಯ್ಕಲಿ ಬಂದದೆ, ಉದ್ದನೂ ಬೆಳ್ದದೆ. ಪ: ಬೆಣ್ಣೆಕರ್ತೆ ಸೊಪ್ಪು – ತಲೆ ತೊಳೆಯಲು ಬಳಸುವ ಒಂದು ಜಾತಿಯ ಸೊಪ್ಪು

ಬೆಣ್ಣೆಚೆಟ್ಟಿ /*beṇṇɛceṭṭi*/ ನಾ. ಬೆಣ್ಣೆ ಹಾಕಿಡುವ ಪಾತ್ರೆ. a butter jar. ವಾ: ಬೆಣ್ಣೆ ಚೆಟ್ಟಿಲಿ ಬೆಣ್ಣೆ ಕಾಸುದು.

ಬೆಣ್ಣೆಹಣ್ಣ್ /*beṇṇɛhaṇṇɨ*/ ನಾ. 1. ಬಟರ್ ಫ್ರೂಟ್, 2. ಅವಕಾಡೊ, 3. ಬೆಣ್ಣೆ ಹಣ್ಣು. 1. butter fruit, 2. avacado, 3. butter fruit. ವಾ: ಬೆಣ್ಣೆ ಹಣ್ಣ್‌ಗೆ ಸಕ್ಕರೆ ಹಾಕಿ ತಿಂಬೊದು.

ಬೆಣ್ಣೆಗಾರ್ತಿಸೊಪ್ಪು /*beṇṇɛga:rtisoppu*/ ನಾ. 1. ತಲೆ ತೊಳೆಯಲು ಬಳಸುವ ಒಂದುಜಾತಿಯ ಹಸಿರು ಮತ್ತು ಬಿಳಿ ಬಣ್ಣದ ಎಲೆಗಳಿಂದ ಕೂಡಿದ ಸೊಪ್ಪು, 2. ಇದನ್ನು ನೀರಿನಲ್ಲಿ ಬೇಯಿಸಿ ತಲೆ ತೊಳೆಯಲು ಬಳಸುವರು. 1. leaf from this plant is used while washing hair, 2. leaf of this tree is boiled in water and then used in washing one's hair. **ಅವ್ವ ಕಪ್ಪ್, ಮಗ್ಳ್ ಬೆಳ್ಳಂಗೆ, ಮಗಳ ಮಗ್ಳ್ ಕೆಂಪ್ – ಬೆಣ್ಣೆಗಾರ್ತಿ ಸೊಪ್ಪ್(ಒ).** ವಾ: ಬೆಣ್ಣೆಗಾರ್ತಿಸೊಪ್ಪುದ್ ಎಲೆ ಹಸ್ರ್ ಮತ್ತೆ ಬೆಳಿ ಇದ್ದದೆ, ತೋಟಗಲ್ಲಿ, ದಾರಿಕರೆಲಿ, ಕಾಡ್‌ಲಿ ಎಲ್ಲ ಕಡೆ ಇದ್ದದೆ. ಪ: ಬೊಳ್ಳೆತಪ್ಪು(ತು)

ಬೆಣ್ತಕ್ಕಿ /*bɛṇtakki*/ ನಾ. 1. ಬೆಳ್ತ್‌ಗೆ, 2. ಅಕ್ಕಿ, 2. ಬೆಳ್ತಕ್ಕಿ. raw white rice. ವಾ: ಕೊಡ್‌ಗ್ ಕಡೆಯೆಲ್ಲ ಬೆಣ್ತಕ್ಕಿನೆ ಹೆಚ್ಚಿ ಉಂಬೊದು. ಪ: ಬೆಂತೆಕ್ಕಿ; ಬೆಳೆಂತೆಕ್ಕಿ; ಬೊಳಂತೆರಿ(ತು)

ಬೆಣ್ತಿಂಗ /*bɛṇtiŋga*/ ನಾ. ಅರೆಭಾಷೆಯ ಏಳನೇ ತಿಂಗಳು. 6th month in Arebhashe calendar. ವಾ: ಬೆಣ್ತಿಂಗಲಿ ಆಟಿ ಸುರಾದು.

ಬೆತ್ತ /*betta*/ ನಾ. 1. ಬೆತ್ತ, 2. ಬಿದಿರಿನ ಒಂದು ಬಗೆ, 3. ಬಿದಿರಿನ ಕೋಲು, 4. ಸಣ್ಣ ಬಿದಿರು, 5. ಬೆತ್ತವು ಅರೆಕೇಸಿ (ಪಾಮೀ) ಕುಟುಂಬಕ್ಕೆ ಸೇರಿದ ಉಪಯುಕ್ತ ಸಸ್ಯ, ಕೇರಳ ಹಾಗು ಕರ್ನಾಟಕದ ಕೊಡಗಿನ ಅರಣ್ಯಗಳಲ್ಲಿ ಬೆಳೆಯುತ್ತವೆ. 1. rattan, a rattan cane, a climbing palm, widely used in Karnataka and Kerala for making baskets, canes, woven mats and other handicrafts. ವಾ: ಬೆತ್ತಲಿ ಕುಕ್ಕೆ, ಪಚ್ಚೆ, ಕುರ್‌ಸಿ, ಬೇರೆ ಬೇರೆ ತರದ ಮನೆ ಸಾಮಾನ್‌ಗಳ ಮಾಡಿವೆ.

ಬೆತ್ತಸುರುಳಿ /*bettasuruḷi*/ ನಾ. ಪಾಷಾಣಮೂರ್ತಿ ದೈವದ ಆಯುಧ, ಬೆಳ್ಳಿ ಕಟ್ಟ ಕಟ್ಟಿದ ಜೋಡಿ ಬೆತ್ತ. weapons of Pashanamurthi daiva, a silver plated twin cane/staff. ವಾ: ಬೆತ್ತ ಸುರುಳಿನ ನೋಡ್ದನ?

ಬೆತ್ತಸೇವೆ /*bettase:vɛ*/ ನಾ. 1. ಪೆಟ್ಟು ಬೀಳು, 2. ಹೊಡೆತ ಸಿಕ್ಕು 3. ಏಟು. 1. to be beaten up, 2. to be battered, 3. beating. ವಾ: ಹಿಂದೆಲ್ಲಾ ಇಸ್ಕೂಲ್‌ಗಳ್‌ಲಿ ಮಕ್ಕಳಿಗೆ ಪೆಟ್ಟ್ ಬೀಳ್ತಿತ್.

ಬೆತ್ತಹಣ್ಣ್ /*bettahaṇṇɨ*/ ನಾ. ಬೆತ್ತದ ಹಣ್ಣು. fruit from the rattan plant. ವಾ: ಹಿಂದೆ ಬೆತ್ತ ಹಣ್ಣ್‌ತ ಸಿಕ್ಕ್‌ತಿತ್.

ಬೆತ್ತಕೋಲು /*bettako:lu*/ ನಾ. ಬೆತ್ತದ ಕೋಲು. a cane. ವಾ: ಇಸ್ಕೂಲ್‌ಲಿ ಹಿಂದೆಲ್ಲ ಸೆರಿ ಪಾಟನ ಕಲಿಯದಿದ್ದರೆ ಬೆತ್ತಕೋಲುಲಿ ಬೆನ್ನಿಗೆ ಬೀಳ್ತಿತ್.

ಬೆತ್ತಲೆ /*bettalɛ*/ ನಾ. 1. ಬೆತ್ತಲೆ, 2. ನಗ್ನ, 3. ಮೈಮೇಲೆ ಬಟ್ಟೆಯಿಲ್ಲದ, 4. ಬರಿಮೈ. 1. naked, 2. nude, 3. bare 4. in one's birth suit. **ಗಂಡ ಸೀರೆ ತಂದದೆತೇಳಿ ಹೆಣ್ಣ್ ಬೆತ್ತಲೆ ಕುದ್ದಂಗೆ(ಗಾ).** ವಾ: ಕೂಸುನ ಹಿಂಗೆ ಬೆತ್ತಲೆ ಕುದ್ರಿಸಿದ್ಯಾಕೆ?

ಬೆತ್ತಸೂಂಪೆ /*bettasu:mpɛ*/ ನಾ. ಬೆತ್ತದಿಂದ ಮಾಡಲಾದ ಪಾತ್ರೆಯ ಅಡಿಗೆ ಇಡುವ ಸಾಧನ. a ring made of cane to keep vessles on it. ವಾ: ಬೆತ್ತಂದ ಮಾಡ್‌ದ ಸೂಂಪೆಗೆ ಬೆತ್ತಸೂಂಪೆತ ಹೇಳಿವೆ.

ಬೆತ್ತ್ /*betti*/ ನಾ. ಕಾವೇರಿ ಸಂಕ್ರಮಣದ ಹಿಂದಿನ ದಿನ ಗದ್ದೆಯಲ್ಲಿ ಊರುವ ಕವಟೆ ದೊಣ್ಣೆ, ಇದಕ್ಕೆ ನೋಕಟೆ ಬಳ್ಳಿಯನ್ನು ಸುತ್ತಿ ಅಲಂಕಾರ ಮಾಡುತ್ತಾರೆ, ಕಾವೇರಿ ತೀರ್ಥ ಬಂದ ನಂತರ ದೋಸೆ ಮಾಡಿ ಅದರೊಂದಿಗೆ ಸಕ್ಕರೆ, ತುಪ್ಪ, ಜೇನು, ಬಾಳೆಹಣ್ಣು, ಕಾಯಿ, ಹೂವನ್ನು ಬೆತ್ತ್ ನ ಮೇಲೆ ಇಟ್ಟು ದೀಪ ಉರಿಸಿ ಪೂಜೆ ಮಾಡುತ್ತಾರೆ. a ritual performed one day before Kaveri Sankramana. A cane stick is

decorated with monkey's bridge climber (Gnetum ula Brongn). After the holy water springs from the pond of Kaveri, the decorated cane is worshipped with an offering of Dosa, honey, s. ವಾ: ಗದ್ದೆಲಿ ಕಾವೇರಿ ಸಂಕ್ರಮಣಲಿ ಬೆತ್ತ್ ಕುತ್ತುವೆ.

ಬೆತ್ತ್‌ಬೊಳ್ಳಿ /*bettibɔḷḷi*/ ನಾ. ಬೆತ್ತದ ಬಳ್ಳಿ. rattan plant, a natural vine.

ಬೆದೆ /*bedɛ*/ ನಾ. ಪ್ರಾಣಿಗಳ ಕಾಮೋತ್ತೇಜಕ ಸ್ಥಿತಿ. the period sexual excitement among animals-estrus. **ಬೆದೆ ಹಾವುನ ಹಕ್ಕಲೆ ಹೋಕಾಗದ್(ಗಾ).** ವಾ: ಹಸ್ ಬೆದೆಗೆ ಬಂದುಟು.

ಬೆದ್‌ರಂಡೆ ಬಿರಿಯಾನಿ /*bedirandɛ biriya:ni*/ ನಾ. ಬಿದಿರಿನ ಕಾಂಡ ಭಾಗವನ್ನು ತುಂಡುಮಾಡಿ ಅದರೊಳಗೆ ಬಿರಿಯಾನಿ ತಯಾರಿ. bamboo biryani, biryani prepared using hollow tubes of a bamboo stem. ವಾ: ಬೆದ್‌ರ್ ಅಂಡೆಲಿ ಮಾಡ್‌ದ ಬಿರಿಯಾನಿನ ತಿಂಬಕೆ ಲಾಯ್ಕಾದೆ.

ಬೆದ್‌ರಕ್ಕಿ /*bedirakki*/ ನಾ. 1. ಬಿದಿರಿನ ಅಕ್ಕಿ, 2. ಬಿದಿರಕ್ಕಿ, 3. ಬಿದಿರಿನ ಜೀವಿತಾವಧಿಯ ಕೊನೆಯಲ್ಲಿ ಉತ್ಪತ್ತಿಯಾಗುವ ಬೀಜವನ್ನು ಬಿದಿರಕ್ಕಿ ಎಂದು ಕರೆಯುತ್ತಾರೆ, 4. ಸುಮಾರು 60 ವರ್ಷಗಳಿಗೊಮ್ಮೆ ಬಿದಿರು ಅಕ್ಕಿ ನೀಡುತ್ತದೆ, ಅಕ್ಕಿ ನೀಡಿದ ನಂತರ ಬಿದಿರು ಸಾಯುತ್ತದೆ, ಬಿದಿರಕ್ಕಿಯ ಕಾಲ ಬಂದರೆ ಅದು ಬರಗಾಲ ಬರುವ ಮುನ್ಸೂಚನೆ ಎಂಬ ನಂಬಿ. bamboo rice/ Mulayari, When a bamboo breathes its last, its flowers grow into seeds resembling rice. Bamboo rice is usually formed after 60 years, and then the bamboo dies out. It is widely believed that occrance of bamboo rice indicates the oncoming p. ವಾ: ಬೆದ್‌ರಕ್ಕಿನ ಅನ್ನ, ಕಿಚಡಿ ಮಾಡಿ ಉಂಡವೆ. ಪ: ಬೆದ್ರಕ್ಕಿ – ಬಿದಿರಿನ ಅಕ್ಕಿ

ಬೆದ್ರು ಗಳು /*bedru gaḷu*/ ನಾ. ಸೋಗೆ ಮಾಡಿಗೆ ಬಿದಿರನ್ನು ಅಡ್ಡ ಹಾಕುವುದು. to keep bamboo horizontally on the the roof made of coconut leaf. ವಾ: ಮಾಡಿಗೆ ಬೆದ್ರು ಗಳುನ ಹಾಕಿಸುವೆ.

ಬೆದ್ರುಪಣೆ /*bedrupaṇe*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅರಂತೋಡು ಗ್ರಾಮದ ಜಾಗ. 1. family, 2. lineage, 3. a locality in Arantodu village in Sullia Taluk of Dakshina Kannada District.

ಬೆದ್ರೇಣಿ /*bedre:ṇi*/ ನಾ. ಬಿದಿರಿನ ಏಣಿ. bamboo ladder. ವಾ: ಬೆದ್ರೇಣಿ ಇದ್ದರೆ ಮರ ಹತ್ತಿಕೆ, ಬೇರೆ ಕೆಲ್ಸಕು ಆದೆ.

ಬೆದ್ರೋಡಿ /*bedro:ḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಬೆದ್‌ರ್ /*bediri*/ ನಾ. 1. ಬಿದಿರು, 2. ಇದು ಹುಲ್ಲಿನ ಜಾತಿಗೆ ಸೇರಿದೆ, ಇದು ದಿನಕ್ಕೆ 3 ರಿಂದ ನಾಲ್ಕು ಅಂಗುಲಗಳಷ್ಟು ಶೀಘ್ರವಾಗಿ ಬೆಳೆಯುತ್ತದೆ. bamboo. **ಗಂದ ಮಾರವನ ಹೆಣ್ಣ್‌ಗೆ ಬೆದ್‌ರ್ ಕಡ್ಡಿ ಮೂಗ್ತಿ(ಗಾ).** ವಾ: ಬೆದ್‌ರ್‌ನ ತೆಪ್ಪ, ದೋಣಿ, ಏಣಿ, ತೊಟಿಗಿಲ್, ಕಾಗದ, ಕೊಳಲ್, ಅರ್ವೆ, ಮೇಜ, ಮೊಂದ್ರಿ, ಎಲ್ಲ ತರದ ಸಾಮಾನ್‌ಗಳ ತಯಾರಿಕೆಲಿ ಬಳ್ಸುವೆ. ಪ: ಬೆದ್ರು – ಬಿದಿರು

ಬೆದ್‌ರ್ ಅಂಡೆ /*bediri aṇḍɛ*/ ನಾ. ಬಿದಿರಿನ ಕಾಂಡ. bamboo stem.

ಬೆದ್‌ರ್ ಅಳಂಬು /*bediri aḷambu*/ ನಾ. ತಿನ್ನಲು ಯೋಗ್ಯವಲ್ಲದ ವಿಷದ ಅಣಬೆ. a poisonous mushroom. ವಾ: ಬೆದ್‌ರ್ ಅಳಂಬುನ ತಿಂಬಕಾದ್. ಪ: ಬೆದರ್ – ಬಿದಿರು

ಬೆದ್ರ್ ಕಳ್‌ಂಜಿ /*bedri kaḷiŋji*/ ನಾ. 1. ಬಿದಿರಿನ ಟಿಸಿಲು, 2. ಕೊಂಬೆ. branches of bamboo. ವಾ: ಬೆದ್ರ್ ಕಳ್‌ಂಜಿ ಸುಮಾರ್ ಹೊರ್‌ಟುಟು.

ಬೆದ್ರ್ ಕೇರ್ಪು /*bedri ke:rpu*/ ನಾ. ಏಣಿಯಂತೆ ಉಪಯೋಗಿಸಬಹುದಾದ,(ಮೆಟ್ಟಿಲುಗಳಾಗಿ ಅದರದೇ) ಗಂಟುಗಳುಳ್ಳ ಒಂಟಿ ಬಿದಿರಿನ ಗಳೆ. a single pole of bamboo with its twigs at the joints cut to size, used as a ladder. ವಾ: ಎಲೆ ಕೊಯಕೆ ಚಾಳೆಗೆ ಬೆದ್ರ್ ಕೇರ್ಪು ಕಟ್ಟಿಯೊಳ.

ಬೆದ್ರ್ ಗೊಟ್ಟ /*bedri goṭṭa*/ ನಾ. ಬಿದಿರಿನ ಕೊಳವೆ. bamboo tube. ವಾ: ಮೊದ್ವೆಲಿ ಬೆದ್ರ್ ಗೊಟ್ಟಲಿ ಸಬ್ಬಮ್ಮ ದೇವಿಗೆ ಹರ್‌ಕೆ ಹಣ ಕಟ್ಟಿಸುವೆ.

ಬೆದ್‌ರ್ ದಬ್ಬೆ /*bediri dabbɛ*/ ನಾ. ಕಳೆ ತೆಗೆಯಲು

ಬಳಸುವ ಕತ್ತಿ. a knife used to remove weed. ವಾ: ಬೆದ್‌ರ್‌ನ ದಬ್ಬೆಲಿ ಕಚಡ ತೆಗೆಯಕ್.

ಬೆದ್ರ್ ಹಿಂಡ್ಲ್ /*bedri hiṇḍili*/ ನಾ. ಬಿದಿರಿನ ಹಿಂಡಿಲು. clumpers of bamboo. ವಾ: ಬೆದ್ರ್ ಹಿಂಡ್ಲ್ ಬಾರಿ ಅಗಲಲಿ ಬಂದೆ.

ಬೆದ್ರ್‌ದ್ ತಟ್ಟಿ /*bedridi taṭṭi*/ ನಾ. 1. ಬಿದಿರಿನ ಬಾಗಿಲು, 2. ಗೋಡೆಯ ಬದಲಿಗೆ ಬಳಸುವ ಬಿದಿರು ತಟ್ಟಿ. 1. a door made of bamboo, 2. a door made of bamboo strips. ವಾ: ಹಿಂದೆಲ್ಲ ಹುಲ್ಲ್‌ನ ಮನೆಗೆ ಬೆದ್ರ್‌ದ್ ತಟ್ಟಿ ನೆ ಕಟ್ಟ್ ತಿದ್ದದ್.

ಬೆದ್ರ್‌ನ ಅರ್ಕೆ /*bedirna arkɛ*/ ನಾ. ಕತ್ತಿ ತೂಗಲು ಉಪಯೋಗ ಮಾಡುವ ವಸ್ತು. a device to hang a knife. ವಾ: ಬೆದ್ರ್‌ನ ಅರ್ಕೆಲಿ ಎಲ್ಲ ಕತ್ತಿಗಳ ತೂಗಿಸುದು.

ಬೆನ್ ಬತ್ತ /*beni batta*/ ನಾ. ಕಡಿಮೆ ಭಾರದ ಭತ್ತ. light weight paddy. ವಾ: ಬೆನ್ ಬತ್ತತ ಬತ್ತದ ಒಂದ್ ತಳಿ.

ಬೆನ್ನಟ್ಟ್ /*bennaṭṭi*/ ಕ್ರಿ. 1. ಬೆನ್ನು ಹತ್ತು, 2. ಹಿಂಬಾಲಿಸು, 3. ಅಟ್ಟಿಸಿಕೊಂಡು ಹೋಗು. 1. to follow someone , 2. to chase someone, 3. to pursue someone. ವಾ: ಕಳ್ಳನ ಬೆನ್ನಟ್ಟಿ ಓಡಿರು ಅಂವ ಸಿಕ್ಕಿತ್ಲೆ.

ಬೆನ್ನೆಲು /*bennelu*/ ನಾ. 1. ಬೆನ್ನೆಲುಬು, 2. ಬೆನ್ನುಮೂಳೆ. back bone. ವಾ: ಹಾವ್‌ಗೆ ಬೆನ್ನೆಲು ಇರ್‌ದುಲೆ. ಪ: ಬೆನ್ನೆಲುಗೆ – ಬೆನ್ನೆಲುಬಿಗೆ; ಬೆನ್ನೆಲುಲಿ – ಬೆನ್ನೆಲುಬಿನಲ್ಲಿ

ಬೆನ್ನ್ /*beni*/ ನಾ. 1. ಬೆನ್ನು, 2. ಮಾನವ ದೇಹದ ಹಿಂಬದಿ ಕತ್ತಿನಿಂದ ಹಿಡಿದು ಬೆನ್ನು ಮೂಳೆಯ ತಳತುದಿಯವರೆಗೂ ವ್ಯಾಪಿಸಿದ ಭಾಗ, 3. ಹಿಂಭಾಗ. the back, backside of the human body between the neck and the pelvis region. **ತನ್ನ ಬೆನ್ನ್ ತನಿಗೇ ಕಾಂಬದುಲೆ(ಗಾ).** ವಾ: ಸಂದ್ರ ಕರೆಲಿ ಸಂದ್ರಕೆ ಬೆನ್ ಹಾಕಿ ನಿಲ್ಲಿಕಾಗದ್. ಪ: ಬೆನ್ನ್ – ಬೆನ್ನು

ಬೆನ್ನ್‌ಮೆಟ್ /*beni meṭi*/ ಕ್ರಿ. ಕೋಳಿಗಳ ಲೈಂಗಿಕ ಕ್ರಿಯೆ. courting and mating Behavior among chicken. ವಾ: ಹೂಂಜ ಬೆನ್‌ಮೆಟ್‌ದು.

ಬೆಪ್ತಕ್ಡಿ /*beptakḍi*/ ನಾ. ಪೆದ್ದ ಎಂದು ತಮಾಷೆ ಮಾಡುವ ರೀತಿ. an idiot. ವಾ: ಅಂವ ಬರಿ ಬೆಪ್ಪತಕ್ಡಿ ಎಂತ ಹೇಳಿರು ನಂಬಿದೆ. ಪ: ಬೆಪ್ಪುತಕ್‌ಡಿ, ಬೆಪ್ಪತಕ್ಡಿ.

ಬೆಪ್ಪ /*beppa*/ ನಾ. ದಡ್ಡ. an idiot. **ಬೆಪ್ಪ ಹೆಂಗೆ ಸತ್ತ್ ತೇಳಿರೆ, ಹಾಂತೆ ಕಚ್ಚಿ ಸತ್ತ್(ಗಾ).** ವಾ: ನಿ ಬೆಪ್ಪನಂಗೆ ಇರ್‌ದು ಯಾಕೆ? ಪ: ಬೆಪ್ಪನಾಂಗೆ – ದಡ್ಡನ ರೀತಿ

ಬೆಪ್ಪಂಗೆ /*beppaŋgɛ*/ ನಾ. ಬೆಚ್ಚಗೆ. warm. ವಾ: ಸಳಿಗೆ ಬೆಪ್ಪಂಗೆ ಕುತ್ತಿಗೆಗೆ ಮಫ್ಲರ್ ಸುತ್ತಿಕಂಡದ್.

ಬೆಪ್ಪು /*beppu*/ ನಾ. ಮೂರ್ಖ. an idiot. ವಾ: ಬೆಪ್ಪುನಾಂಗೆ ಮಾತಾಡ್ಬಡ. ಪ: ಬೆಪ್ಪ

ಬೆಪ್ಪುರನ /*beppurana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಬೆಮ್ಮೆ /*bemmɛ*/ ನಾ. ನೋವು(ಮಕ್ಕಳ ಪದ). pain (in the vocubulary of children). ವಾ: ಹಲ್ಲ್ ಬೆಮ್ಮೆ ಆದೆ.

ಬೆರಂಟ್ /*beranṭi*/ ನಾ. 1. ವಿರೋಧ ಮಾತು, 2. ಅಹಂಕಾರದ ಮಾತು. 1. to oppose something, 2. to bluff. ವಾ: ಬೆರಂಟ್ ಮಾತ್ ಕೇಳಿಕನ ಸಿಟ್ಟ್ ಬಾದು.

ಬೆರಜನ ಹಣ್ಣ್ /*beraŋana haṇṇ*/ ನಾ. ಒಂದು ಕಾಡು ಹಣ್ಣು, ಇದನ್ನು ತಿಂದರೆ ನಾಲಿಗೆ ಸ್ವಚ್ಛಗೊಳ್ಳುತ್ತದೆ. a forest fruit, used as a tongue cleaner.

ಬೆರಜ್ಜಣೆ /*beraŋŋaṇɛ*/ ನಾ. ರಾಗವಾದ ಮಾತು. sing-song tone. ವಾ: ಬಾರಿ ಬೆರಂಜಣೆಲಿ ಅವ್ವು ಮಾತಾಡ್ದು.

ಬೆರಣಿ[1] /*beraṇi*/ ನಾ. 1. ತಟ್ಟಿ ಒಣಗಿಸಿ ಇಂಧನವಾಗಿ ಉಪಯೋಗಿಸಲ್ಪಡುವ ಸಗಣಿ, 2. ಕುರುಳು. dried cow dung. ವಾ: ಬೆರಣಿ ತಟ್ಟುದಾ?, ಬೆರ್ಣಿ ತಟ್ಟಿಕೆ ಸೆಗ್ಣಿ ಬೇಕಲ.

ಬೆರಣಿ[2] /*beraṇi*/ ನಾ. ಉಪ್ಪಿನಕಾಯಿ ಹಾಕಿಡುವ ಪಿಂಗಾಣಿಯ ಪಾತ್ರೆ. pickle jar. ವಾ: ಉಪ್ಪನಕಾಯಿಯ ಬೆರಣಿ ಎಲ್ಲಿಸಿದ ಅವ್ವ. ಪ: ಬೆರ್ಣಿ – ಉಪ್ಪಿನಕಾಯಿ ಶೇಕರಿಸಿಡುವ ಪಿಂಗಾಣಿಯ ಪಾತ್ರೆ, ಬರೊನಿ(ತು)

ಬೆರಳ್ ಬಾತ್ /*beraḷi ba:ti*/ ನಾ. 1. ಬೆರಳು ಊದು, 2. ಊತ. 1. swelling in the finger, 2. swelling. ವಾ: ಬೆರಳ್ ಬಾತ್ ಹಿಟ್ಟ್ ತೊಳ್ಸಿ ಕಟ್ಟಿರು ಕಮ್ಮಿ ಆತೆಲೆ.

ಬೆರಳ್ ಸೆರೆ /*beraḷɨ serɛ*/ ನಾ. 1. ಬೆರಳಿನ ಸಂದಿ, 2. ಸಂದು, 3. ಬೆರಳುಗಳು ಕೂಡುವ ಸ್ಥಳ. interdigital folds or Pilca Interdigital, rudimentary web. ವಾ: ಕಾಲ್‌ದ್ ಬೆರಳ್ ಸೆರೆಲಿ ಕೆಸ್‌ರ್ ಹುಣ್ಣಾದು.

ಬೆರಳ್ಗ /*beraḷɨga*/ ನಾ. ಬೆರಳುಗಳು. fingers. **ಎಲ್ಲಾ ಬೆರಳ್ಗ ಒಂದೇ ಸಮ ಇಲ್ಲೆ(ಗಾ).** ವಾ: ಕೈ ಕಾಲ್‌ನ ಬೆರಳ್ಗ ಒಂದೆ ಸಮ ಉಟ್ಟಾ?

ಬೆರೆ /*bɛrɛ*/ ಅ. 1. ಬರೇ, 2. ಕೇವಲ. 2. hardly, 2. only. ವಾ: ಎಲ್ಲೊರೊಟ್ಟಿಗೆ ಬೆರೆಯೊಕು.

ಬೆರೆಬೆರೆ /*bɛrɛbɛrɛ*/ ಅ. ದನಕರುಗಳು, ಆಡುಕುರಿಗಳು ಅಪಾಯಬಂದಾಗ ಮಾಡುವ ಅನುಕರಣ ಶಬ್ದ. an onomatopoeiac expression produced by the cattle when they are in danger. ವಾ: ದನಗ ಹಟ್ಟಿಲಿ ಬೆರೆಬೆರೆ ಕರ್ದರೆ ಏನೋ ಬಂದುಟುತ ಅರ್‌ತ.

ಬೆರೆವು /*berevu*/ ನಾ. ಬೇರೆಯವರು. others. **ಅಕ್ಕ ಅವಸರಕಿಲ್ಲೆ, ತಂಗೆ ಸಮಯಕಿಲ್ಲೆ, ನನ್ನವೇ ನಂಗಿಲ್ಲೆ ಮತ್ತೆ ಬೆರೆವು ಆದು ಅದೆಂಗೆ(ಗಾ).**

ಬೆರ್ಕೆ /*bɛrkɛ*/ ನಾ. ಮಿಶ್ರಣ. mixing. ವಾ: ಬೆರ್ಕೆ ಸೊಪ್ಪ್‌ದ್ ಪಲ್ಯ ರುಚಿ ಇದ್ದದೆ.

ಬೆರ್ಕೆಗೈಪು /*bɛrkɛgaipu*/ ನಾ. 1. ತರಕಾರಿ ಮತ್ತು ಮೀನು ಜೊತೆ ಸೇರಿದ ಪದಾರ್ಥ, 2. ಬೇರೆ ಬೇರೆ ತರಕಾರಿಗಳನ್ನು ಸೇರಿಸಿ ಮಾಡುವ ಸಾರು. 1. a curry made of vegetable and fish, 2. a mixed vegetable korma. ವಾ: ಬೆರ್ಕೆ ಗೈಪುಲಿ ಉಂಬಕೆ ಲಾಯ್ಕ.

ಬೆರ್ಕೆಮೀನ್ /*bɛrkɛmi:nɨ*/ ನಾ. ಎಲ್ಲ ವಿಧದ ಮೀನು. all types of fish. ವಾ: ಬೆರ್ಕೆ ಮೀನ್ ಸಿಕ್ಕಿದೆನ?

ಬೆರ್ಚಪ್ಪ /*bercappa*/ ನಾ. ದೃಷ್ಟಿ ಸೋಕದಂತೆ ಅಥವಾ ತೆನೆಗಳನ್ನು ಹಕ್ಕಿ ಕಾಡು ಪ್ರಾಣಿಗಳಿಂದ ರಕ್ಷಿಸಲು ಹೊಲಗದ್ದೆಗಳಲ್ಲಿ ನಿಲ್ಲಿಸುವ ಬೃಹತ್ ಗಾತ್ರದ ಮಾನವ ರೂಪ. a scarecrow. ವಾ: ಹಕ್ಕಿಗ, ಕಾಡ್ ಪ್ರಾಣಿಗ ಬಂದ್ ತಿಂಬಕಾಗದ್‌ತ ಗದ್ದೆ, ಹೊಲಲಿ ಬೆರ್ಚಪ್ಪನ ನಿಲ್ಸುವೆ.

ಬೆರ್ದ /*berda*/ ಕ್ರಿ. ಬರೆದ. written. ವಾ: ಎಂತೆಲ್ಲ ಅಡ್ಗೆ ಸಾಮಾನ್ ಬೇಕ್‌ತ ಬೆರ್ದನ?

ಬೆರ್ದ್ /*berdɨ*/ ಕ್ರಿ. ಕೆದಕು. scraping/digging. ವಾ: ಅಂವ ಸಮಸ್ಯೆಗಳ ಬೆರ್ದ್ ಕೂಡ್ದೆ.

ಬೆರ್ಲ್ /*berlɨ*/ ನಾ. ಬೆರಳು. finger. **ಹತ್ತು ಬೆರ್ಲ್ ಸಂದರೆ ಐದು ಬೆರ್ಲ್ ಬಾಯಿಗೆ ಹೋದು(ಗಾ). ಮೋರೆ ಉಟ್ಟು ಕಣ್ಣಿಲ್ಲೆ, ಕೈ ಉಟ್ಟು ಬೆರ್ಳಿಲ್ಲೆ, ಕಾಲ್ ಉಟ್ಟು ಆದ್ರೂ ನಡೆಯಕಾದುಲೆ – ಗಡಿಯಾರ(ಒ).** ವಾ: ಬೆರ್ಲ್‌ನ ಬಾಯ್‌ಗೆ ಹಾಕ್ಬಡ, ಅದ್ ಹಾಳ್ ಅಬ್ಬೆಸ.

ಬೆರ್ಲ್ ಕರ್ಗುದು /*bɛrlɨ kargudu*/ ಕ್ರಿ. ಕೈ ಕಾಲಿನ ಭಾಗ, ಬೆರಳು ಸಂದಿ ಕೊಳೆಯುವುದು. infectin in the interdigital folds/rudimentary web. ವಾ: ಬೆರ್‌ಲ್ ಅಂಟಿಕಂಡಿದ್ದ್ ನೀರ್ ಪಸೆ ಆರದಿದ್ದರೆ ಬೆರ್ಲ್ ಕರ್ಗುದು.

ಬೆರ್ಸಿಕಂಡ್ /*bɛrsikaṇḍɨ*/ ಕ್ರಿ. ಓಡಿಸಿಕೊಂಡು. to chase someone. ವಾ: ನಾಯಿ ಅಂವನ ಬೆರ್ಸಿಕಂಡ್ ಹೋತ್. ಪ: ಬೆರ್ಸುದು – ಬೆರೆಸುವುದು/ಓಡಿಸುವುದು

ಬೆರ್ಸುದು /*bɛrsudu*/ ಕ್ರಿ. ಮಿಶ್ರ ಮಾಡುವುದು. mixing. ವಾ: ದೋಸೆ ಹಿಟ್ಟಿಗೆ ಸೋಡ ಮತ್ತೆ ಉಪ್ಪುನ ಬೆರ್ಸುದು.

ಬೆರ್ಸ್[1] /*bɛras*/ ಕ್ರಿ. 1. ಓಡಿಸು, 2. ಅಟ್ಟು. 1. to chase someone, 2. to scare away. ವಾ: ಕೋಳಿನ ಜೆಗ್ಲ್‌ಂದ ಬೆರ್ಸ್. ಪ: ಬೆರ್ಸಿಕೆ – ಓಡಿಸಲು; ಬೆರ್ಸಿದ್ – ಓಡಿಸಿ; ಬೆರ್ಸಿಕನ – ಓಡಿಸುವಾಗ

ಬೆರ್ಸ್[2] /*bɛrs*/ ಕ್ರಿ. ಬೆನ್ನಟ್ಟು. to chase someone. ವಾ: ನಾಯಿನ ಹೊರೆಗೆ ಬೆರ್ಸ್. ಪ: ಬೆರ್ಸಿರು – ಬೆನ್ನಟ್ಟಿದರೂ; ಬೆರ್ಸಿಯೊಳ – ಓಡಿಸು

ಬೆರ್ಳ್ /*bɛrḷ*/ ನಾ. 1. ಬೆರಳು, 2. ಕೈ ಅಥವಾ ಪಾದದ ಅಂಗುಲಿ, 3. ಬೆಟ್ಟು. 1. fnger, 2. toes, 3. fingers. **ಕೈಲಾಗದಂವ ಬೆರ್ಳ್ ಕಚ್ಚಿದಂಗೆ(ಗಾ).** ವಾ: ಕಾಲ್ ಬೆರಳ್ ಎಸ್ಟ್ ಉದ್ದುದ್ದ ಉಟ್ಟು.

ಬೆಲೆ /*belɛ*/ ನಾ. 1. ಮರ್ಯಾದೆ, 2. ಗೌರವ, 3. ಮೌಲ್ಯ 4. ಕಿಮ್ಮತ್ತು. 1. respect, 2. honour, 3. value, 4. worth. ವಾ: ಹಂಗೆಲ್ಲ ಕೇಳಿಕಾದ್ ನಮ್ಮ ಬೆಲೆ ಕಮ್ಮಿಯಾದೆ.

ಬೆಲ್ಂದಿರಿ /*Beliŋdiri*/ ನಾ. 1. ನಂದಿಮರ, 2. ಬಿಳಿನಂದಿ, 3. ಬೆಳಂದಾರು, 4. ಬೆಂದೇಗು, 5.

ಬೆಳ್ಳಂದಿ. ben-teak tree. ವಾ: ಮನೆ ಕಟ್ಟಿಕೆ ನಂದಿ ಮರನ ಬಳ್ಸುವೆ, ಈ ಮರದ ತೊಪ್ಪೆ ಆಗಾಗ ಉದ್‌ರಿ ಬೀಳ್ತಿದ್ದದೆ.

ಬೆಲ್ಕ ಐಮರ /*belka aimara*/ ನಾ. ಅಡ್ಡಕ್ಕೆ ಕಂಬಗಳಿರುವ ಐಮರ. a wooden plank between pillars in Ain mane.

ಬೆಲ್ಜರೆ /*beljarɛ*/ ನಾ. ಒಂದು ಜಾತಿಯ ಅಣಬೆ. a variety of mushroom. ವಾ: ಬೆಲ್ಜರೆ ಅಳ್‌ಂಬು ಸಣ್ಣದ್.

ಬೆಲ್ಲ /*bella*/ ನಾ. 1. ಬೆಲ್ಲ, 2. ಗುಡ, 2. ಕಬ್ಬಿನ ರಸವನ್ನು ಕಾಯಿಸಿ ತಯಾರಿಸಿದ ಸಿಹಿಯಾದ ಘನ ಪದಾರ್ಥ. jaggery, made from the juice of sugarcane. ವಾ: ಕರಿಬೆಲ್ಲ ಹಾಕಿ ಕಾಪಿ ಕಾಸಿದ್.

ಬೆಲ್ಲತೂಗುದು /*bellatu:gudu*/ ನಾ. 1. ತೂಕಡಿಸು, 2. ನಿದ್ರೆಯಿಂದ ಜೋಲು. 1. to feel drowsy, 2. drowsiness. ವಾ: ಕುದ್ದಲ್ಲೆ ಬೆಲ್ಲ ತೂಗುದು.

ಬೆಲ್ಲದಚ್ಚ್ /*belladaccɨ*/ ನಾ. 1. ಅಚ್ಚಿನಲ್ಲಿ ಹೊಯ್ದು ತಯಾರಿಸಿದ ಬೆಲ್ಲ. jaggery shaped in moulds. **ನಾಲ್ಕ್ ಕಟ್ಟಿನ ಬಾಮಿ, ಬೊಗ್ಗಿ ನೋಡ್ರೆ ನೀರಿಲ್ಲೆ, ನೆಕ್ಕಿ ನೋಡ್ರೆ ನೀರುಟ್ಟು – ಬೆಲ್ಲದಚ್ಚ್(ಒ).** ವಾ: ಬೆಳಿ ಬೆಲ್ಲದಚ್ಚ್, ಕರಿ ಬೆಲ್ಲದಚ್ಚ್ ಎರ್‌ಡೂ ಸಿಕ್ಕಿದೆ.

ಬೆಲ್ಲದಪುಂಡಿ /*belladapuṇḍi*/ ನಾ. 1. ಬೆಲ್ಲದ ಕಡುಬು, 2. ಮೋದಕ. a sweet dish made of jaggery. ವಾ: ಬೆಲ್ಲದಪುಂಡಿ ಗಣಪಂಗೆ ಬಾರಿ ಕುಸಿ, ಚೌತಿ ದಿನ ನೈವೇದ್ಯಕೆ ಇಸುವೆ.

ಬೆಲ್ಲದ್ ಗೆಣ್ಸ್ /*belladɨ geṇsɨ*/ ನಾ. ಸಿಹಿ ಗೆಣಸು. sweet potato. ವಾ: ನೆಲ ಎಳ್ಳಿಕಾಕನ ಬೆಲ್ಲದ್ ಗೆಣ್ಸ್ ಸುಮಾರ್ ಸಿಕ್ತ್. ಪ: ಬೆಲ್ಲ ಗೆಣ್ಸ್ – ಸಿಹಿ ಅಂಶವಿರುವ ಗೆಣಸು/ಬಳ್ಳಿಯ ಸಿಹಿ ಗೆಣಸು

ಬೆಲ್ಲಾರಿಗೆಣ್ಸ್ /*bella:rigeṇsɨ*/ ನಾ. ಸಿಹಿ ಗೆಣಸು. sweet potato. ವಾ: ಬೆಲ್ಲಾರಿ ಗೆಣ್ಸ್‌ನ ಹಸಿನು, ಬೇಸಿನು ತಿನ್ನಕ್.

ಬೆವ್ರು /*bevru*/ ನಾ. 1. ಬೆವರು, 2. ಬೆಗ್‌ರ್. 1. sweat, 2. perspiration. ವಾ: ಬೆವ್ರು ಸಿಂಡ್‌ಂದಾಗಿ ಹಕ್ಕಲೆ ಹೋಕಾಲೆ.

ಬೆಸೆಗೆ /*besagɛ*/ ನಾ. 1. ಒಲೆಯ ಮೇಲ್ಬಾಗದ ಭಾಗ, 2. ಬಿದಿರು ಅಥವಾ ಬೆತ್ತದಿಂದ ಮಾಡಿದ ಮಾಂಸ ಹಾಗು ಇತರೆ ಕಾಳುಕಡ್ಡಿಗಳನ್ನು ಒಣಗಿಸುವ ಸ್ಥಳ, 3. ಒಲೆ ಚಿಂಟೆಯಿಂದ ಸುಮಾರು 5 ಅಡಿ ಎತ್ತರದಲ್ಲಿ ಹಲಗೆ ಹಾಕಿದ ಅಟ್ಟಳಿಗೆ. a shelf, five feet above the stove, usually made of bamboo or cane, useful in drying meat, grains, etc. ವಾ: ಬೆಸೆಗೆ ಹೊಗೆ ಹಿಡ್ದ್ ನೋಡಿಕೆಬತ್ತ್.

ಬೆಸೆಗೆಲಿ ಇಸುದು /*besagɛli isudu*/ ನಾ. ಒಲೆಯ ಮೇಲಿನ ಜಾಗದಲ್ಲಿ ವಿಶೇಷ ಅಡುಗೆಯನ್ನು ಹಿರಿಯರಿಗೆ ಬಡಿಸಿ ಇಡುವುದು. an offering for the ancestors, kept on the kitchen shelf. ವಾ: ಲಾಯ್ಕ್‌ನ ಆಡ್ಗೆ ಮಾಡಿಕನ ಸುರೂಗೆ ಹಿರಿಯವುಕ್ಕೆಂತ ಬೆಸಗೆಲಿ ಇಸುದು.

ಬೆಸ್ಗೆ /*besgɛ*/ ನಾ. 1. ಬೆಸುಗೆ, 2. ಹೊಂದಿಕೆ, 3. ಜೋಡಣೆ. 1. welding, 2. matching, 3. joining. ವಾ: ತಾಳಿಚೈನ್ ಬುಟ್ಟೋವ್ಟು, ಅದ್‌ಕೆ ಬೆಸ್ಗೆ ಹಾಕ್ನೊಕು.

ಬೆಸ್ತವಾರ /*bestava:ra*/ ನಾ. 1. ಗುರುವಾರ. Thursday. ವಾ: ಬೆಸ್ತವಾರ ಗುರುರಾಗವೇಂದ್ರ ಸ್ವಾಮಿಗಳ ಪೂಜೆ ಮಾಡಿವೆ.

ಬೆಳಂದೂರು /*beḷandu:ru*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಬೆಳಗಜೆ /*beḷagaje*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಪಂಬೆತ್ತಾಡಿ ಗ್ರಾಮದ ಜಾಗ. a locality in Pambettadi village in Sullia Taluk of Dakshina Kannada District.

ಬೆಳದ್ /*beḷadɨ*/ ನಾವಿ. 1. ಬೆಳೆದ, 2. ಬಲಿತ. 1. fully grown, 2. ripe. ವಾ: ಬೆಳದ್ ಕಾಯಿನ ತಕಂಬೊನೊ.

ಬೆಳವಣಿಗೆ /*beḷavaṇigɛ*/ ನಾ. 1. ಮನುಷ್ಯ, ಪ್ರಾಣಿ ಮುಂತಾದವುಗಳ ಅಂಗಾಂಗಗಳು ಬಲಿತು ಬೆಳೆಯುವಿಕೆ, 2. ಏಳಿಗೆ. 1. growth of organs, 2. to grow. ವಾ: ಕೂಸುನ ಬೆಳವಣಿಗೆಗೆ ಸೆರಿ ತಿಂಬಕೆ ಕೊಡುಕು.

ಬೆಳವುಲಿ /*beḷavuli*/ ನಾ. ಬೆಳವಣಿಗೆ ಕಾಲದಲ್ಲಿ. during the period of growth. ವಾ: ಮಕ್ಕಳ ಬೆಳವುಲಿ ಲಾಯ್ಕ ಉಂಬೊಕು.

ಬೆಳಿ /*beḷi*/ ನಾ. 1. ಬಿಳಿ, 2. ಶ್ವೇತ ವರ್ಣ, 3. ಹಾಲಿನ ಬಣ್ಣದಂತಹ ಬಣ್ಣ, 4. ಬಿಳುಪು. White. **ಕರಿ**

ನಾಯಿನ ಬೆಳಿ ನಾಯಿ ಮಾಡಿದಂಗೆ(ಗಾ). ವಾ: ಬೆಳಿ ಬಣ್ಣ ಸಾಂತಿಯ ಸಂಕೇತ.

ಬೆಳಿ ಎಸ್ಂಡ್ /*beḷi ɛsiṇḍi*/ ನಾ. ಬಿಳಿ ಬಣ್ಣದ ಏಡಿ. a white crab. ವಾ: ಬೆಳಿ ಎಸ್ಂಡ್‌ನ ಹಾಲೆಸ್ಂಡ್‌ತ ಕರ್‌ದವೆ, ಅದಿಕೆ ಸಕ್ತಿ ಕಮ್ಮಿ, ಸರ್ಲಲಿ ಬೆಳಿರಸ ಇದ್ದದೆ.

ಬೆಳಿಕೆಸ /*beḷikɛsa*/ ನಾ. ತಿಳಿ ಹಸಿರು ಬಣ್ಣದ ಕೆಸು. Colocasia in light green colour. ವಾ: ಬೆಳಿ ಕೆಸ ತಿಂದರೆ ಹಙ್ಞ ಬಾಯಿ ತೊರ್‌ಸಿದೆ.

ಬೆಳಿಗೆಣ್ಸ್ /*beḷigeṇsi*/ ನಾ. ಬಿಳಿ ಗೆಣಸು. white sweet potato. ವಾ: ಬೆಳಿ ಗೆಣ್ಸ್ ಬಾರಿ ಲಾಯ್ಕ.

ಬೆಳಿದಾಸಾಳ /*beḷida:sa:ḷa*/ ನಾ. ಬಿಳಿ ದಾಸವಾಳ. white hibiscus. ವಾ: ಬೆಳಿ ದಾಸಾಳ ಹೂವ್ ಮೊದ್ದಿಗೆ ಒಳ್ಳದ್.

ಬೆಳಿನೆಕ್ಕಿ /*beḷinekki*/ ನಾವಿ. 1. ಲಕ್ಕಿ ಗಿಡ್ಡ, 2. ನೆಕ್ಕಿಗಿಡ, 3. ನೋಚಿ, 4. ನೆಕ್ಕಿಲಿ. Five Leaved Chaste, Horseshoe Vitex. ವಾ: ಬೆಳಿ ನೆಕ್ಕಿ ಬೂದಿ ಬಣ್ಣಲಿ ಇದ್ದ್, ಬೇಲಿಕರೆಲೆಲ್ಲ ಇದ್ದದೆ.

ಬೆಳಿ ಬೆಟ್ಟತಾವರೆ /*beḷi beṭṭata:varɛ*/ ನಾವಿ. 1. ಬಿಳಿ ಬೆಟ್ಟದಾವರೆ, 2. ಬೆಟ್ಟದಾವರೆ ಹೂ, 3. ಉಪ್ಪಳಿಗೆ, 4. ಇದರ ಕತ್ತರಿಸಿದ ಎಲೆ, ಕೊಂಬೆಗಳಿಂದ ಒಸರುವ ಅಂಟುದ್ರವ, ಅನೇಕ ವ್ರಣಗಳಿಗೆ ಲೇಪನವಾಗಿದೆ, 5. ಇದನ್ನು ಆಯುರ್ವೇದಿಕ ಔಷಧಿಗಳಲ್ಲಿ ಇದರ ಉಪಯೋಗವಿದೆ, 6. ಬಿಳಿ ಹಾಗು ಗುಲಾಬಿ ಬಣ್ಣದ ಹೂಗಳನ್ನು ಕಾಣಬಹುದು. 1. white catamaran tree, 2 flowers of white catamaran tree, 3. flowers of white catamaran tree, 4. the resin from the tree is used as varnish, 4. used in arurvedic medicine, 6. usually the tree has white and red flowers. ವಾ: ಬೆಳಿ ಬೆಟ್ಟ ತಾವರೆ ದೊಡ್ಡದಾಗಿ ಇದ್ದದೆ, ಇದರ ನೋಡುದೆ ಒಂತರಾ ಕುಸಿ.

ಬೆಳಿ ಬೆಲ್ಲದಗೆಣ್ಸ್ /*beḷi belladagɛṇsi*/ ನಾ. ಬಿಳಿ ಬಣ್ಣದ ಸಿಹಿ ಗೆಣಸು. white sweet potato. ವಾ: ಬೆಳಿ ಬೆಲ್ಲದ ಗೆಣ್ಸ್ ಉಟ್ಟು.

ಬೆಳಿ ಮತ್ತಿಮರ /*beḷi mattimara*/ ನಾವಿ. 1. ಬಿಳಿ ಮತ್ತಿ, ಹೊಳೆಮತ್ತಿ, ನೀರ್‌ಮತ್ತಿ, ತೋರಮತ್ತಿ ಸಾಧಾರಣವಾಗಿ ಹೊಳೆಯ ದಂಡೆಯಲ್ಲಿ ಬೆಳೆಯುವ ಈ ಸಸ್ಯ ಹೊಟ್ಟೆಯ ಸಮಸ್ಯೆಗೆ ರಾಮಬಾಣವಾಗಿದೆ. a white Crocodile Bark Tree, usually grown on the bank of river, an extract from this is used to cure stomuch ailments. ವಾ: ಬೆಳಿಮತ್ತಿ ಕೆತ್ತೆದ್ ಹೊಡಿನ ಜೆರಕೆ ಬಳ್ಸುವೆಗಡ.

ಬೆಳಿ ಮೆಣ್ಸ್ /*beḷi meṇsi*/ ನಾವಿ. 1. ಬಿಳಿ ಬಣ್ಣದ ಸಣ್ಣ ಜಾತಿಯ ಮೆಣಸು, 2. ಪೊದೆಯಂತೆ ಹೆಚ್ಚಿನ ಆರೈಕೆಯಿಲ್ಲದೆ ಸಹಜವಾಗಿ ಈ ಮೆಣಸು ಮಲೆನಾಡಿನ, ಕರಾವಳಿಯ ಹಿತ್ತಲಿನಲ್ಲಿ ಬೆಳೆಯುತ್ತದೆ, ಇದನ್ನು ಚಟ್ನಿ, ಸಾರು, ಹಪ್ಪಳ, ಸಂಡಿಗೆ ಇತ್ಯಾದಿಗಳ ತಯಾರಿಕೆಯಲ್ಲಿ ಬಳಸುತ್ತಾರೆ, ರುಚಿಯಲ್ಲಿ ಬಹಳ ಖಾರವಾಗಿರುತ್ತದೆ, ಗಿಡಗಳು ಬಹಳ ಮೃದುವಾಗಿರುತ್ತವೆ. 1. White Color Bird's eye chili, 2. usually grown in malnad region and coastal belt, used in chutney, papad, rasam, etc. ವಾ: ಬೆಳಿ ಮೆಣ್ಸ್ ಬಾರಿ ಕಾರ ಇದ್ದದೆ.

ಬೆಳಿಗ್ಗೆ /*beḷiggɛ*/ ನಾ. 1. ಬೆಳಗ್ಗೆ, 2. ಬೆಳಗಿನ ಜಾವ, 3. ನಸುಕು, 4. ಪ್ರಾತಃಕಾಲ, 5. ಮುಂಜಾವ, 6. ಮುಂಜಾನೆ. 1. morning, 2. dawn, 3. daybreak, 4. early morning, 4. time of sunrise, 5. early morning, 6. early morning. ವಾ: ಬೆಳಿಗ್ಗೆನೆ ಅಪ್ಪನ ಯಾರೊ ಬಂದ್ ಕರ್‌ಕಂಡ್ ಹೋದೊ.

ಬೆಳೆಕಮ್ಮಿ /*beḷɛkammi*/ ನಾ. ಕಡಿಮೆ ಫಸಲು. less harvest. ವಾ: ನಮಿಗೆ ಬೆಳೆ ಕಮ್ಮಿ ಆದು.

ಬೆಳೆಬಡಿಯದು /*beḷɛbaḍiyadu*/ ಕ್ರಿವಿ. ಭತ್ತವನ್ನು ಹೊಡೆಯುವುದು. threshing. ವಾ: ಬೆಳೆ ಬಡಿಯದು ಕೆಲ್ಸ ಮಾಡ್ದವ್ಕೆ ಗೊತ್ತು.

ಬೆಳೆಹೊರ್‌ದು /*beḷɛhordu*/ ನಾ. ಭತ್ತವನ್ನು ಹೊತ್ತುಕೊಂಡು ಮನೆಗೆ ತರುವುದು. carrying paddy to one's house. ವಾ: ಬೆಳೆ ಕೊಯ್ದ ಮೇಲೆ ಗದ್ದೆಂದ ಕಳಕೆ ಬೆಳೆ ಹೊರ್‌ದು.

ಬೆಳೆ¹ /*beḷɛ*/ ನಾ. 1. ಫಸಲು, 2. ಪೈರು, 3. ಬೆಳೆಯ ತಳಿಗಳು. 1. standing crop, 2. crop, 3. types of breed. **ಕೊಟ್ಟ ಸಾಲ ಕೇಳದೆ ಹೋತ್, ಬಿತ್ತಿದ ಬೆಳೆ ಕೊಯ್ಯದೆ ಹೋತ್(ಗಾ).** ವಾ: ಬೆಳೆ ಬಾಂಗಿಟು.

ಬೆಳೆ² /*beḷɛ*/ ಕ್ರಿ. ಬೆಳೆಯುವುದು. to grow. ವಾ: ನೀವು ಗದ್ದೆಲಿ ಎಂತ ಬೆಳೆದು. **ಬೆಳಿತಾ** /*beḷita:*/ ಕ್ರಿ. 1. ಬೆಳೆಯುತ್ತಾ, 2. ದೊಡ್ಡದಾಗುತ್ತಾ. 1. growing, 2.

expanding. ವಾ: ಹುಟ್ಟಿಕನ ಅಣ್ಣಮ್ಮಂದ್‌ರ್ ಬೆಳಿತಾ ಬೆಳಿತಾ ದಾಯಾದಿಗಳ ಮಕ್ಕಗಡ. ಪ: ಬೆಳ್ಕಣ್ಣಾ – ಬೆಳೆಯುತ್ತಾ. **ಬೆಳಿಯಕನ** /*beḷiyakana*/ ಬೆಳೆಯುವಾಗ. while growing. **ಹುಟ್ಟ್‌ಕನ ಹಸ್ರ್, ಬೆಳಿಯಕನ ಕೆಂಪು, ಸಾಯಕನ ಕಪ್ಪು – ನೇರ್ಳೆ ಹಣ್ಣ್(ಒ).** ವಾ: ದೈ ಬೆಳಿಯಕನ ಲಾಯ್ಕಲಿ ಗೊಬ್ಬರ ಕೊಟ್ಟರೆ ಪಸ್‌ಲ್ ಬೇಗ ಸಿಕ್ಕಿದೆ. ಪ: ಬೆಳಿಯಕೆ – ಬೆಳಿಯುವುದಕ್ಕೆ. **ಬೆಳಿಯಕಾಯ್ತ್** /*beliyaka:yti*/ ಇನ್ನಷ್ಟು ಬೆಳೆಯಬೇಕಾಗಿತ್ತು. should have grown some more. ವಾ: ಸೋಂತೆಕಾಯಿ ಇನ್ನೂ ಹಿಙ್ಙ ಬೆಳಿಯಕಾತ್. ಪ: ಬೊಲೆಚ್ಚಿಲ್(ತು).

ಬೆಳೆಂಜಿರ್ ಅಳಂಬು /*beḷɛŋjir aḷambu*/ ನಾ. 1. ಅಣಬೆಯ ಹೆಸರು, 2. ಸಣ್ಣದಾದ ಅಣಬೆ. a variety of mushroom. ವಾ: ಬೆಳೆಂಜಿರ್ ಅಳಂಬು ಎದ್ದರೆ ಸುಮಾರ್ ಎದ್ದದೆ, ಅದರ ಸುದ್ದ ಮಾಡಿಕೆ ಬಾರಿ ಸಮೆ ಬೇಕ್.

ಬೆಳೆಕೆಲ್ಸ /*beḷɛkɛlsa*/ ನಾ. ಭತ್ತದ ಕೊಯ್ಲು. harvest. ವಾ: ಬೆಳೆಕೆಲ್ಸದ ಸಮೆಲಿ ನಾವ್‌ಗೆ ಪುರುಸೊತ್ತೆಲ್ಲಿದ್ದದೆ?

ಬೆಳ್ /*beḷi*/ ನಾ. ಬಿಳಿಬಣ್ಣದ್ದು. white in colour. ವಾ: ಬೆಳ್ ಕರ್ ಇತ್ತಳೆ ಹೋತು.

ಬೆಳ್‌ಂದ್ರ್ ಮರ /*beḷindṛi mara*/ ನಾ. ನಂದಿಮರ. Spathodea-African tulip tree.

ಬೆಳ್ಕ್ /*beḷki*/ ನಾ. 1. ಬೆಳಕು, 2. ಪ್ರಕಾಶ, 3. ಹೊಳಪು, 4 ವಸ್ತುಗಳು ಕಣ್ಣಿಗೆ ಕಾಣುವಂತೆ ಮಾಡುವ ಸಹಜ ಶಕ್ತಿ, 5. ಸೂರ್ಯ, ದೀಪ ಮುಂತಾದವುಗಳ ಪ್ರಕಾಶ. 1. light, 2. brightness, 3. shine, 4. effulgence, 4. radiance of the sun, lamp, etc. ವಾ: ಬೆಳ್ಕ್ ಹರ್‌ದ್ ಎಸ್ಟ್ ಹೊತ್‌ಉಗ್ಗಪ್ಪ್ ಇನ್ನು ಎದ್ದತ್‌ಲೆ.

ಬೆಳ್ಕ್ ತೋರ್ಸ್ /*bɛḷki to:rsi*/ ಕ್ರಿವಿ. ದೀಪಾವಳಿ ಹಬ್ಬದಂದು ಗೋಪೂಜೆ ಸಂದರ್ಭ ದನಕರುಗಳಿಗೆ, ಎತ್ತು ಹೋರಿಗಳಿಗೆ ಭತ್ತ, ಅವಲಕ್ಕಿ, ತುಂಡು ಮಾಡಿದ ಬಾಳೆಹಣ್ಣು, ಪಾದೆಹೂವು, ಕುರ್ಡಿಹೂವು ಇತ್ಯಾದಿಯನ್ನು ಮಿಶ್ರಮಾಡಿ ಮೊರದಲ್ಲಿ ದೀಪವಿಟ್ಟು ಪೂಜಿಸುವುದು. worshipping cattle on the day of Deepavali, and serving them with paddy, puffed rice, banana, flowers, etc. ವಾ: ದೀಪೊಳಿಲಿ ಬೆಳ್ಕ್ ತೋರ್ಸುದು.

ಬೆಳ್ಗುದು /*beḷgudu*/ ನಾ. 1. ತೊಳೆಯುವುದು, 2. ಪಾತ್ರೆ ಮೊದಲಾದವುಗಳನ್ನು ತಿಕ್ಕಿ ಸ್ವಚ್ಛ ಮಾಡುವುದು. 1. washing, 2. doing the dishes. ವಾ: ದೀಪ ಬೆಳ್ಗುದು.

ಬೆಳ್ಗೆಂದ /*beḷgɛnda*/ ನಾ. 1. ಬೆಳಗ್ಗಿನಿಂದ, 2. ಬೆಳಗ್ಗೆ, 3. ಬೆಳಗಿನ ಜಾವ, 4. ನಸುಕು, 5. ಪ್ರಾತಃಕಾಲ, 6. ಮುಂಜಾವ, 7. ಮುಂಜಾನೆ. 1. since morning, 2. dawn, 3. early morning, 4. sun rise, 5. day break, 5. early morning, 6. early morning. ವಾ: ಬೆಳ್ಗೆಂದ ಎಂತರ್‌ನ ಹುಡ್ಕುದು ಹಿಂಗೆ.

ಬೆಳ್ಗ್ /*beḷgi*/ ನಾ. 1. ತೊಳೆಯುವುದು, 2. ಪಾತ್ರೆ ಮೊದಲಾದವುಗಳನ್ನು ತಿಕ್ಕಿ ಸ್ವಚ್ಛ ಮಾಡುವುದು. 1. washing, 2. doing the dishes. **ಬೆಳ್ಸ್‌ತಾ ಇದ್ದರೆ ನಂಟ್, ಬೆಳ್ಗ್‌ತಾ ಇದ್ದರೆ ಕಂಚ್(ಗಾ).** ವಾ: ತಾಂಬ್ರದ ಹಂಡೆನ ಬೆಳ್ಗ್.

ಬೆಳ್ಚಲ್ /*beḷcali*/ ನಾವಿ. 1. ತುಂಟತನ, 2. ಕೀಟಲೆ, 3. ದುಷ್ಟತನ, 4. ಚೇಷ್ಟೆ, 5. ಕಿಲಾಡಿತನ. 1. being mischivious, 2. annoyance, 3. wickedness, 4. being naughty, 5. being crafty. ವಾ: ಈ ಮಕ್ಕ ಬಾರಿ ಬೆಳ್ಚಲ್ ಮಾಡಿವೆ. ಪ: ಬೆಳ್ಚಿಲ್ – ತುಂಟತನ

ಬೆಳ್ಚಿಚ್ಚಿ /*beḷcicci*/ ನಾ. 1. ಬಿಳಿ ಬಣ್ಣದ ದನ, 2. ಬೊಲ್ಲೆಚ್ಚಿ(ತು). a white skinned cow. ವಾ: ಬೆಳ್ಚಿಚ್ಚಿ ಕಾಂಬದುಲೆ. ಪ: ಬೊಳ್ಳಿಚ್ಚಿ

ಬೆಳ್ಚಿಲ್ /*belcili*/ ನಾ. ಉಪದ್ರ ಮಾಡು. to annoy/ to trouble. ವಾ: ಬೆಳ್ಚಿಲ್ ಹೈದ ನಾಯಿಗೆ ಕಲ್ಲ್ ಹೊಡ್ಕೊಂಡಿತ್.

ಬೆಳ್ಜರ್ /*beḷjari*/ ನಾ. 1. ಮುಂಜಾವದ ಹೊತ್ತು, 2. ನೆಲಬೊಳ್ಪ್. dim light at dawn. ವಾ: ಬೆಳ್ಜರ್‌ಗೆ ಏಳೊಕು.

ಬೆಳ್ಜಲಳಂಬು /*beḷjarɛ aḷambu*/ ನಾ. ಅಣಬೆಯ ವಿಧ. variety of mushroom. ವಾ: ಬೆಳ್ಜರೆ ಅಳಂಬುದ್ ಗೈಪು ರುಚಿ. ಪ: ಬೆಳ್ಜಿರ ಅಣ್ಬು, ಬೆಳೆಂಜಿರ್ ಅಳಂಬು

ಬೆಳ್ಜಾರಾಕನ /*beḷja: ra:kana*/ ನಾ. ಬೆಳಗಾಗುವಾಗ. in the morning. ವಾ: ಬೆಳ್ಜಾ ರಾಕನ ಎಚ್ಚರಾತ್.

ಬೆಳ್ಜಾರ್ /*beḷja:ri*/ ನಾ. 1. ಬ್ರಾಹ್ಮಿ ಮುಹೂರ್ತದ ಸಮಯ, 2. ಮುಂಜಾವಿನ ಹೊತ್ತು, 3. ಬೆಳಗ್ಗೆ. 1. at

dawn, 2. early morning, 3. at sunrise. ವಾ: ಬೆಳ್ಣಾರ್‌ಗೆ ಯಾಗೊಳು ಎಚ್ಚರಾದೆ.

ಬೆಳ್ತಿಂಗ /*beḷtiŋga*/ ನಾ. 1. ತುಲಾಮಾಸ, 2. ಬೊಂತೆಲ್(ತು). the seventh solar month.

ಬೆಳ್ತಿಗೆ /*beḷtigɛ*/ ನಾ. 1. ಬೆಳ್ತಕ್ಕಿ, 2. ಭತ್ತವನ್ನು ಮಿಲ್‌ನಲ್ಲಿ ಹೆಚ್ಚು ಪಾಲಿಷ್ ಮಾಡಿದಾಗ ಅದು ಬೆಳ್ತಕ್ಕಿ ಆಗುತ್ತದೆ, ಹಾಗೆ ಮಾಡಿದಾಗ ಅದರ ಪೋಷಕಾಂಶ ಕಡಿಮೆಯಾಗುತ್ತದೆ, ಬೆಳ್ತಕ್ಕಿಯಲ್ಲಿ ರಾಜಮುಡಿ, ಬಾಸುಮತಿ ಹೀಗೆ ಹಲವಾರು ವಿಧಗಳನ್ನು ಕಾಣಬಹುದು. 1. raw white rice, 2. rice from which husk, bran, etc. are removed, less nutrituous rice. Rajamudi, Basumati, etc. are white rice varieties. ವಾ: ನಮಿಗೆ ಬೆಳ್ತಿಗೆ ಅಕ್ಕಿನೆ ಉಂಡ್ ಅಬ್ಬೆಸ.

ಬೆಳ್ತೆಕ್ಕಿ /*beḷtɛkki*/ ನಾ. ಬೆಳ್ತಿಗೆ ಅಕ್ಕಿ. raw white rice. ವಾ: ಬೆಳ್ತೆಕ್ಕಿಗಿಂತ ಕೆಂಪಕ್ಕಿ ಉಂಡರೆ ಆರೋಗ್ಯಕೆ ಒಳ್ಳದುಟ್ಟು.

ಬೆಳ್ದಹುತ್ತೆರಿ /*beḷda huttɛri*/ ನಾ. ಡಿಸೆಂಬರ್ ತಿಂಗಳಲ್ಲಿ ನಡೆವ ಬೆಳೆ ಹುತ್ತರಿ. a harvest festival celebrated in the month of December. ವಾ: ಡಿಸಂಬರ್ ತಿಂಗಲ್ಲಿ ಮಾಡೊ ಹಬ್ಬಕೆ ಬೆಳ್ದ ಹುತ್ತೆರಿತ ಹೇಳಿವೆ.

ಬೆಳ್ದ[1] /*beḷda*/ ಕ್ರಿ. 1. ಬೆಳೆಸಿದ, 2. ಬೆಳೆದ, 3. ದೊಡ್ಡದಾದ. 1. grown, 2. developed, 3. grown. ವಾ: ಬೆಳ್ದ ಮಕ್ಕಳೊಟ್ಟಿಗೆ ಕುಸಿಂದ ಮಾತಾಡೊಕು. ಪ: ಬೆಳ್ತ್ – ಬೆಳೆಯಿತು. **ಬೆಳ್ದೊಳೆ[1]** /*beḷdoḷɛ*/ 1. ಬೆಳೆದಿದ್ದೇನೆ, 2. ದೊಡ್ಡವನಾಗಿದ್ದೇನೆ. 1. I have grown up, 2. to grow up. ವಾ: ನಾ ಎತ್ತರ ಬೆಳ್ದೊಳೆ. **ಬೆಳ್ದೊಳೆ[2]** /*beḷdoḷɛ*/ 1. ಬೆಳೆದಿದ್ದೇನೆ, 2. ದೊಡ್ಡವನಾಗು. 1. I have grown up, 2. to grow up. ವಾ: ಸುಮಾರ್ ತರ್‌ಕಾರಿ, ಹೂವ್, ಹಣ್ಣ್ ಬೆಳ್ದೊಳೆ. ಪ: ಬೆಳ್ದ್ – ಬೆಳೆಸಿ. **ಬೆಳ್ಯದು** /*beḷyadu*/ 1. ಬೆಳೆಸುವುದು, 2. ಕೃಷಿ ಮಾಡುವುದು. 1. to grow, 2. farming/cultivation. **ನೀರ್‌ಲೆ ಹುಟ್ಟುದು ನೀರ್‌ಲೆ ಬೆಳ್ಯದು ನೀರ್ಲೆ ಸಾಯುದು – ಉಪ್ಪು(ಒ).** ವಾ: ಗದ್ದೆಲಿ ಸುಮಾರ್ ತರದ ತರ್ಕಾರಿಗಳ ಬೆಳ್ಯದು ನಾವೆ, ತಿಂಬೊದು ನಾವೆ. ಪ: ಬೆಳ್ಯೊದು – ಬೆಳೆಸುವುದು; ಬೆಳ್ಸಕಾಯಿತ್ – ಬೆಳೆಸಬೇಕಾಗಿತ್ತು

ಬೆಳ್ದ[2] /*beḷda*/ ನಾ. 1. ಬೆಳೆದ, 2. ಬಲಿತ. 1. grown, 2. ripe. ವಾ: ಬೆಳ್ದ ಕಾಯಿನ ಕೊಯ್ಯಕಾಯ್ತ್. ಪ: ಬೆಳ್ದರೆ – ಬೆಳೆದರೆ

ಬೆಳ್ದ್ /*beḷdɨ*/ ನಾ. 1. ಬಿಳಿ, 2. ಶ್ವೇತ ವರ್ಣ, 3. ಹಾಲಿನ ಬಣ್ಣದಂತಹ ಬಣ್ಣ, 4. ಬಿಳುಪು. white. ವಾ: ಪೋಳೆ ಬೆಳ್ದ್ ಬಣ್ಣದ್. ಪ: ಬೆಳ್ದ್ ದಂಟು – ಬಿಳಿದಂಟು

ಬೆಳ್ದ್ ನಿತ್ತುಟು[1] /*beḷdɨ nittuṭu*/ ನಾವಿ. 1. ಬೆಳೆದು ನಿಂತಿದ್ದಾನೆ/ಳೆ, 2. ಬೆಳೆದು ನಿಂತಿದೆ. 1. He/she has grown, 2. it has grown. ವಾ: ಮಗ್ಳ್ ಬೆಳ್ದ್ ನಿತ್ತುಟು.

ಬೆಳ್ದ್ ನಿತ್ತುಟು[2] /*beḷdɨ nittuṭu*/ ನಾವಿ. ಸಂಪತ್ತು ತುಂಬಿದೆ. accumulated wealth. ವಾ: ಅವ್ಕೆ ಈಗ ಸಂಪತ್ತ್ ಬೆಳ್ದ್ ನಿತ್ತುಟು.

ಬೆಳ್ದ್‌ಟು /*beḷdiṭu*/ ನಾ. ಬಲಿತಿದೆ. ripe. ವಾ: ಮಾಯ್ನಕಾಯಿ ಬೆಳ್ದ್‌ಟು.

ಬೆಳ್ಯನ /*beḷyana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಬೆಳ್ಯಪ್ಪ /*beḷyappa*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. masculine given name. ಪ: ಬೊಳಿಯ, ಬೊಳಿಯಪ್ಪ

ಬೆಳ್ಯಪ್ಪಣ್ಣ /*beḷyappaṇṇa*/ ನಾ. ನಾಮವಾಚಕ. Bellappanna, a name. ವಾ: ಬೆಳ್ಯಪ್ಪಣ್ಣ ಬಂದ್ ಹೋದೊ.

ಬೆಳ್ವಾರ್ /*beḷva:rɨ*/ ನಾ. ಮುಂಜಾವು. early morning. ವಾ: ಬೆಳ್ವಾರ್‌ಲಿ ತೋಟದ ಕಡೆ ಒಂದ್ ಸುತ್ತ್ ಹಾಕಂಡ್ ಬಂದರೆ ಮನ್ಸಿಗೆ ದಿನ ಎಲ್ಲ ಏನೋ ಹುರ್‌ಪು.

ಬೆಳ್ಸಿಸಾಂಕಿದ /*beḷsisa:ŋkida*/ ಕ್ರಿವಿ. 1. ಬೆಳೆಸಿ ಸಾಕು, 2. ಪೋಷಿಸು, 3. ಕಾಪಾಡು. 1. to raise, 2. to take care of, 3. to save. ವಾ: ಬೆಳ್ಸಿ ಸಾಂಕಿದ ಮಕ್ಕ ಇಂದ್ ನೋಡಿಕೂ ಬಾದುಲೆ.

ಬೆಳ್ಸ್ /*beḷsi*/ ಕ್ರಿ. ಬೆಳೆಸು. to grow. ವಾ: ಕರ್‌ಚಿಗೆ ಬೇಕಾದ ಸೊಪ್ಪು ತರ್ಕಾರಿಗಳ ಬೆಳ್ಸ್

ಬೆಳ್ಳಂಗಿ /*beḷḷaŋgi*/ ನಾ. ತಾವೆಮರದ ಹಿಡಿದುಕೊಳ್ಳುವ ಭಾಗ. a wooden handle.

ಬೆಳ್ಳಂಗೆ /*beḷḷaŋgɛ*/ ನಾವಿ. ಬಿಳಿಯಾದ. white.

ಬೆಳ್ಳಂಗೆ ಇರ್ದೆಲ್ಲ ಹಾಲಲ್ಲ(ಗಾ). ವಾ: ಗೂಡೆ ಬೆಳ್ಳಂಗೆ ಇದ್ದರೆ ಸಾಕ, ಗುಣಸ ಬೇಕಲ. ಪ: ಬೆಳ್ಳಾಂಗೆ

ಬೆಳ್ಳಂಗೆನ /*beḷḷaŋgɛna*/ ನಾ. 1. ಬಿಳಿಯಾದ, 2. ಬೆಳ್ಳಗಿನ. white. ವಾ: ಬೆಳ್ಳಂಗೆನ ಗೂಡೆನ ಹುಡ್ಕ್ ತಿದ್ದದ್.

ಬೆಳ್ಳಂದಿ ಮರ /*beḷḷandi mara*/ ನಾ. 1. ನಂದಿ ಮರ, 2. ಬಿಳಿ ನಂದಿ, 3. ಬೆಳಂದಾರು, 4. ಬೆಂದೇಗು. benteak tree. ವಾ: ಬೆಳ್ಳಂದಿ ಮರ ದೊಡ್ಡದ್ ಮತ್ತೆ ಗಟ್ಟಿಸ ಇದ್ದದೆ.

ಬೆಳ್ಳಕ್ಕಿ /*beḷḷakki*/ ನಾ. 1. ಕೊಕ್ಕರೆ, 2. ಒಂದು ಜಾತಿಯ ನೀರು ಹಕ್ಕಿ, 3. ಭತ್ತದ ಗದ್ದೆಗಳು, ಜೌಗುಭೂಮಿ, ಬಯಲು ಪ್ರದೇಶಗಳಲ್ಲಿ ವಾಸ ಮಾಡುವ ಹಕ್ಕಿ. 1. a crane, 2. a water bird, 4. live in wetlands—such as marshes. ವಾ: ಬೆಳ್ಳಕ್ಕಿಗ ಲಾಚಾರಾಕಂಡ್ ಮೂಳೆ ಮೂಳೆ ಇದ್ದದೆ.

ಬೆಳ್ಳಲ್ /*beḷḷalɨ*/ ನಾ. 1. ಲೈಂಗಿಕ ಸಂಬಂಧ ವರ್ತನೆ/ ಮಾತು, 2. ವಯಸ್ಕರು ಮಾತನಾಡಿದಂತೆ ಮಾತನಾಡುವುದು. 1. to talk about sexual matters, 2. to talk like an adult.

ಬೆಳ್ಳಾರೆ /*beḷḷa:re*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಬೆಳ್ಳಾರೆ ಗ್ರಾಮದ ಜಾಗ. a locality in Bellare village in Sullia Taluk of Dakshina Kannada District.

ಬೆಳ್ಳಿ /*beḷḷi*/ ನಾ. 1. ಬೆಳ್ಳಿ, 2 ರಜತ, 3. ಶುದ್ಧ ಬಿಳಿ ಲೋಹಧಾತು 4. ಬೆಳ್ಳಿ ಒಂದು ಬಿಳಿ ಲೋಹ. silver, a white metal. ವಾ: ಎಲ್ಲೊವು ಬೆಳ್ಳಿದ್ ಕಾಲುಂಗುರನೆ ಹಾಕುದು. ಪ: ಬೆಳ್ಳಿನ – ಬೆಳ್ಳಿಯ

ಬೆಳ್ಳಿಚುಕ್ಕೆ /*beḷḷicukkɛ*/ ನಾ. 1. ನಕ್ಷತ್ರ, 2. ತಾರೆ, 3. ಸೂರ್ಯನಂಥ ಸ್ವಯಂ ಪ್ರಕಾಶಿತ ಖಗೋಳ ಕಾಯ. star, a celestial body. ವಾ: ಬೆಳ್ಳಿ ಚುಕ್ಕೆಗ ಆಕಾಸಲಿ ಮಿಣ್ಕ್ ಮಿಣ್ಕ್ ತೇಳ್ದೆ.

ಬೆಳ್ಳಿಪ್ಪಾಡಿ /*beḷḷippa:ḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಬೆಳ್ಳಿಪ್ಪಾರೆ /*beḷḷippa:re*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಆಲೆಟ್ಟಿ ಗ್ರಾಮದ ಜಾಗ. a locality in Aletti village in Sullia Taluk of Dakshina Kannada District.

ಬೆಳ್ಳುಳ್ಳಿಗಂಜಿ /*beḷḷuḷḷigaŋji*/ ನಾ. ಬಾಣಂತಿಯರಿಗೆ ಕೊಡುವುದು. a soup served to the new mother. ವಾ: ಬೆಳ್ಳುಳ್ಳಿ ಗಂಜಿ ಬಾಣ್ತಿಗಳಿಗೆ ಕೊಟ್ಟವೆ, ಅಮೆ ದಿನದ ವಿಸೇಸ ಪಾಯ್ಸ.

ಬೆಳ್ಳೂರು /*beḷḷu:ru*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಬೆಳ್ಳೆ[1] /*beḷḷɛ*/ ನಾವಿ. ಬಿಳಿ ಬಣ್ಣದ ಕೋಳಿ. a white hen. ವಾ: ಬೆಳ್ಳೆ ಹಾರಿಕಂಡ್ ಹೋದೆ.

ಬೆಳ್ಳೆ[2] /*beḷḷɛ*/ ನಾ. ಬಟ್ಟೆಯಲ್ಲಿರುವ ಹೇನು, ಸೊಂಟದ ಬಟ್ಟೆಯಲ್ಲಿ ಹೆಚ್ಚಾಗಿ ವಾಸಿಸುತ್ತವೆ. nits. ವಾ: ಅರ್ವೆಲಿ ಬೆಳ್ಳೆ ಆವುಟು, ಅರ್ವೆನ ಕೊದಿವ ನೀರ್‌ಗೆ ಹಾಕಿ, ಒಗ್ದ್ ಬಿಸ್ಲ್ ಲಿ ಒಣಗಿಕೆ ಹಾಕೊಕು. ಪ: ಬೊಳ್ಳೆ

ಬೆಳ್ಳೆರಿಕಾಯಿ /*beḷḷɛrika:yi*/ ನಾ. ಮಂಗಳೂರು ಸೌತೆಕಾಯಿ. Mangalore Cucumber. ವಾ: ಬೆಳ್ಳೆರಿ ಕಾಯಿನ ಒಳ್ಳಮೆಣ್ಸ್ ಹಾಕಿ ಪಲ್ಯ ಮಾಡಿಸಾತ?

ಬೆಳ್ಳೆಸೊಪ್ಪ್ /*biḷḷɛsoppɨ*/ ನಾ. ಬೆಲ್ಲೊಟ್ಟೆಗಿಡ. A shrub with yellow flowers contrasting with a large white calycine leaf;The white rag plant, Mussaenda frondos, (Rubiacceae).

ಬೆಳ್ಳೆಸೊಪ್ಪ್ ಮೊದ್ದ್ /*biḷḷɨsoppɨ moddi*/ ನಾ. ಬೇರನ್ನು ನೀರಲ್ಲಿ ಅರೆದು ಉರಿಗಣ್ಣಿಗೆ ಹಚ್ಚುತ್ತಾರೆ. ಎಲೆ ಮತ್ತು ಕಾಯಿಯ ರಸ ದೃಷ್ಟಿಮಾಂದ್ಯಕ್ಕೆ ಉಪಯುಕ್ತ. ಕಡ್ಡಿಗಳ ಕಷಾಯ ಮಕ್ಕಳ ಕೆಮ್ಮಿಗೆ ಫಲಕಾರಿ. ಬೇಯಿಸಿದ ಎಲೆಗಳಿಂದ ತಲೆ ತೊಳೆದರೆ ತಂಪುಗುಣ ಕೊಡುತ್ತದೆ. root of this plant is ground with water and the paste is applied to cure inflamed eye. Juice of leaves and fruits of this plant is a remedy for blindness. The decoction of its twigs cures cough in children. The boiled leaves are used to wash hair becaus. ವಾ: ಬೆಳ್ಳೆಸೊಪ್ಪ್ ಮೊದ್ದ್ ನ ಉರಿಗಣ್ಣಿಗೆ ಹಾಕಿವೆ.

ಬೆಳ್ಳೆಹುಂಜ /*bɛḷḷɛhuŋja*/ ನಾ. ಬಿಳಿ ಹುಂಜ. a white rooster. ವಾ: ಬೆಳ್ಳೆಹುಂಜನ ನಿನ್ನೆ ನೋಡ್ದ್, ಇಂದ್ ಕಂಡತೆಲೆ.

ಬೆಳ್ಳೇರಿ ಮಾಣಿಕ /*beḷḷe:ri ma:ṇika*/ ನಾ. ಕಪ್ಪು ಬಿಳಿ ಬಣ್ಣದ ಪುಟ್ಟ ಹಕ್ಕಿ. a black and white small

bird. ವಾ: ಬೆಳ್ಳೇರಿ ಮಾಣಿಕತ ಸಣ್ಣ ಜಾತಿನ ಹಕ್ಕಿ. ಪ: ಬೊಳ್ಳೆರಮಾಣಿಕ(ತು)

ಬೆಳ್ಳೇರಿ ಹಕ್ಕಿ /*beḷḷe:ri hakki*/ ನಾ. ಒಂದು ಪಕ್ಷಿ. a bird. ವಾ: ಬೆಳ್ಳೇರಿ ಹಕ್ಕಿ ಹಾರಿಕಂಡ್ ಹೋತು.

ಬೇಂಕೆ /*be:ŋkɛ*/ ನಾ. 1. ಬೇಗೆ, 2. ಬೆಂಕಿ, 3. ಉರಿ, 4. ತಾಪ, 5. ಜ್ವಾಲೆ, 6. ಶಾಖ. 1. heat, 2. flames, 3. burning sensation, 4. heat, 5. flames, 5. heat. ವಾ: ಉರಿ ಬಿಸ್‌ಲ್‌ದ್ ಬೇಂಕೆ ತಡೆದುಟ್ಟ.

ಬೇಂಗತ್ತಮಲೆ /*be:ŋgattamale*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮಂಡೆಕೋಲು ಗ್ರಾಮದ ಜಾಗ. a locality in Mandekolu village in Sullia Taluk of Dakshina Kannada District.

ಬೇಂಗದ ಕೆತ್ತೆ /*be:ŋgada kettɛ*/ ನಾ. ಕಷಾಯ ಕೆಂಪು ಬಣ್ಣ ಬರಲು ಹಾಕುವ ಬೇಂಗದ ಮರದ ತೊಗಟೆ. bark from Marsupium Malabar Kino or Benga Tree, used in a medicinal concoction to change its colour. ವಾ: ಕಸಾಯ ಕಾಸಿಕನ ಬೇಂಗದ ಕೆತ್ತೆನ ಹಾಕಿವೆ, ಕನರ್ ಜಾಸ್ತಿ, ಹೊಟ್ಟೆ ಬೇನೆಗೆ ಅದರ ನೀರ್‌ಲಿ ತೊಳ್ಸಿನ ಹಿಟ್ಟ್ ಮಾಡಿ ತಿನ್ಸಿವೆ.

ಬೇಂಗಮಲೆ /*be:ŋgamale*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಐವರ್ನಾಡು ಗ್ರಾಮದ ಜಾಗ. a locality in Aivarnadu village in Sullia Taluk of Dakshina Kannada District.

ಬೇಂಗುದು /*be:ŋgudu*/ ನಾ. ಭತ್ತ ಮತ್ತು ಕಲ್ಲನ್ನು ಬೇರ್ಪಡಿಸುವುದು. to seperate stone from paddy-handpicking. ವಾ: ಮೊರಕೆ ಹಾಕಿ ಬತ್ತಂದ ಕಲ್ಲ್‌ನ ಬೇಂಗುದು.

ಬೇಂಗೆಮರ /*be:ŋgɛmara*/ ನಾ. 1. ಹೊನ್ನೆ ಮರ, 2. ತಿರುಳು ಗಟ್ಟಿಯಾಗಿರುವ ಮರ. 1. Indian laurel tree, 2. a tree with a hard inner core. ವಾ: ಬೇಂಗೆ ಮರದ ಸೊವ್ದೆಲಿ ಬಾರಿ ಹೊಗೆ ಏಳ್ತು.

ಬೇಂಚಿ /*be:ŋci*/ ನಾ. ಏಪ. 1. ಬೆಂಚು, 2. ಕುಳಿತುಕೊಳ್ಳಲು ಬಳಸುವ ಉದ್ದನೆಯ ಮರದ ಅಥವಾ ಕಲ್ಲಿನ ಆಸನ. 1. bench, 2. a long wooden/stone seat. ವಾ: ಬೇಂಚಿಲಿ ಕುದ್ರಿಕೆ ಹೇಳ್ತ್. ಪ: ಬೇಂಚ್‌ಲಿ – ಬೆಂಚಿನಲ್ಲಿ

ಬೇಕಟೆ /*be:kaṭɛ*/ ನಾ. ಹೊಳೆಯುವ ಹಾಳೆಗಳು. shining sheets. ವಾ: ಸಿಗರೇಟ್ ಪ್ಯಾಕೊಳೆಗೆ ಇದ್ದದೆಲ ಅದೇ ಬೇಕಟೆ.

ಬೇಕಡ /*be:kaḍa*/ ನಾ. ಬೇಕಂತೆ. he/she wants. ವಾ: ಇನ್ನು ಹಚ್ಚ ಆಂಬರ ಬೇಕಡ.

ಬೇಕರಿ /*be:kari*/ ನಾ. 1. ಬೇಕರಿ, 2. ಕುರುಕಲು ತಿಂಡಿ, ಬಿಸ್ಕತ್ತು, ಬನ್ನು, ಬ್ರೆಡ್ಡನ್ನು ಬೇಯಿಸಿ ಮಾರುವ ಅಂಗಡಿ. 1. a bakery, 2. a place where fritters, biscuits, bread, buns, etc. are made and sold. ವಾ: ಬೇಕರಿ ತಿಂಡಿನ ಹೆಚ್ಚಿ ತಿಂಬಕಾಗದ್.

ಬೇಕರೆ /*be:karɛ*/ ನಾ. ಬೇಕಾದರೆ. if you want. ವಾ: ಬೇಕರೆ ತಿನ್ನ್ ಇಲ್ಲರೆ ಬುಡು. ಪ: ಬೇಕರೂ – ಬೇಕಾದರು; ಬೇಕಾದು – ಬೇಕಾಗಬಹುದು; ಬೇಕಾದೆಲ್ಲಾ – ಬೇಕಾಗಿರುವುದೆಲ್ಲ; ಬೇಕಾದ್ – ಬೇಕಾಗಿರುವುದು; ಬೇಕಾದ್ದರ – ಬೇಕಾಗಿರುವುದರ; ಬೇಕಾದ್ದ್ – ಬೇಕಾಗಿದ್ದು; ಬೇಕಾದೆ – ಬೇಕಾಗುತ್ತದೆ

ಬೇಕಲ್ /*be:kaḷ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಬೇಕಾದವು /*be:ka:davu*/ ಸನಾ. ನೆಂಟರಿಷ್ಟರು. relatives. ವಾ: ಅವು ನಮಿಗೆ ತುಂಬ ಬೇಕಾದವು.

ಬೇಕಾಬಿಟ್ಟಿ /*be:ka:biṭṭi*/ ಕ್ರಿವಿ. 1. ಗೊತ್ತು ಗುರಿ ಇಲ್ಲದ, 2. ನಿಯತ್ತು ಇಲ್ಲದ, 3. ಶಿಸ್ತು ಬದ್ಧವಲ್ಲದ. 1. aimless, 2. immoral, 3. indisciplined. ವಾ: ಬೇಕಾಬಿಟ್ಟಿ ಕೆಲ್‌ಸ ಮಾಡಿರೆ ಸೆರಿಯಾದುಲೆ.

ಬೇಕ್ /*be:kɨ*/ ಕ್ರಿ. 1. ಬೇಕು, 2. ಇಷ್ಟವನ್ನಾಗಲಿ, ಅಗತ್ಯವನ್ನಾಗಲಿ ಸೂಚಿಸುವ ಮಾತು. 1. wanted, 2. to indicate a need. **ಇರ್‌ಕನ ಯಾರೂ ಬೇಡ, ಇಲ್ಲದಿರ್ಕನ ಎಲ್ಲವೂ ಬೇಕ್(ಗಾ).** ವಾ: ಇನ್ನ್ ಹಚ್ಚ ಬೇಕ್‌ತ ಹೇಳಿಕನ ಉಂಬೊದ್ ನಿಲ್ಸೊಕಡ, ಆರೋಗ್ಯಕೆ ಒಳ್ಳದ್‌ತ ಹೇಳಿವೆ. ಪ: ಬೇಕೊ – ಬೇಕಾ. **ಬೇಕಿತ್** /*be:kitɨ*/ ಬೇಕಿತ್ತು. wanted. ವಾ: ಇನ್ನ್ ಹಚ್ಚ ಮಜ್ಜಿಗೆ ಕುಡೆಕೆ ಬೇಕಿತ್.

ಬೇಗ ಏಳಕು /*be:ga e:ḷaku*/ ನಾವಿ. ಬೇಗ ಏಳಬೇಕು. should wake up early. ವಾ: ಬೊಳ್ಪುಗೆ ಬೇಗ ಏಳಕು.

ಬೇಗ ಮೆದ್ಕ್ /*be:ga medkɨ*/ ನಾವಿ. 1. ಬೇಗ ಬೇಗನೆ ಕೆಲಸ ಮಾಡು, 2. ಚುರುಕಾಗಿರು, 3. ಚತುರತೆ. 1.

to do something quickly, 2. to be active, 3. craftiness. ವಾ: ಬೇಗ ಮೆದ್ಕ್ ಇಲ್ಲರೆ ಬುಟ್ಟ್ ಹೋದವೆ. ಪ: ಬೇಗ ಮೆದ್ಕುದುಲೆ – ಉದಾಸಿನ ಸ್ವಭಾವ

ಬೇಗ^1 /*be:ga*/ ನಾ. 1. ಬೇಗ, 2. ವೇಗವಾಗಿ. 1. quickly, 2. fast. ವಾ: ಬೇಗ ಬೇಗ ನಡೆನಿ ಮಕ್ಕಳೆ.

ಬೇಗ^2 /*be:ga*/ ನಾ. 1. ಶೀಘ್ರ, 2. ತ್ವರೆ. 1. immediately, 2. swift. ವಾ: ಮಳೆ ಬಂದ್‌ಬುಡ್ತು, ಬೇಗ ನಡೆನಿ ಮಕ್ಕಳೆ. ಪ: ಬೇಗನೆ – ತ್ವರೆಯಾಗಿ, ಶೀಘ್ರವಾಗಿ

ಬೇಗಡೆ /*be:gaḍɛ*/ ನಾ. ಹೊಳೆಯುವ ಹಾಳೆಗಳು. shining sheets. ವಾ: ಸಿಗರೇಟ್ ಪ್ಯಾಕೊಳೆಗೆ ಬೇಗಡೆ ಇದ್ದದೆ.

ಬೇಗಬಾಯಿ /*be:gaba:yi*/ ನಾ. ಕೇಳುವ ಮೊದಲೆ ಹೇಳುವುದು. to pre-empt. ವಾ: ಬೇಗಬಾಯಿ ಇರಿಕಾಗದ್, ತೆಗ್ಗಬಿಗ್ಗ ಮಾತಾಡ್‌ದು ತೊಪ್ಪು.

ಬೇಗ್ /*be:gɨ*/ ನಾ. ಎಪ. 1. ಬ್ಯಾಗು, 2. ಚೀಲ, 3. ಕಾಗದ, ಬಟ್ಟೆ, ಪ್ಲಾಸ್ಟಿಕ್ಕುಗಳಿಂದ ಮಾಡಿದ ಕೈಚೀಲ. 1. a bag, 2. rugsack, 3. a cloth/paper/plastic bag. ವಾ: ಬೇಗ್ ಹಾಕಂಡ್ ಹೊರ್‌ಟದೆಲ್ಲಿಗೆ?

ಬೇಜಾರ್ /*be:ja:rɨ*/ ನಾ. 1. ಬೇಸರ, 2. ಬೇಜಾರು, 3. ಆಸಕ್ತಿಯಿಲ್ಲದಿರುವಿಕೆ, 4. ದುಃಖ. 1. sadness, 2. low-spirited, 3. disinterested, 4. grievous. ವಾ: ಬೇಜರ ಕಳೆಯಕೆ ಪುಸ್ತಕ ಓದಿ. ಪ: ಬೇಜಾರ್‍ಲಿ – ಬೇಸರದಲ್ಲಿ; ಬೇಜಾರಾತ್ – ಬೇಜಾರಾಯಿತು. ಪ: ಬೇಜರ, ಬೇಜಾರಾಗಿ – ಬೇಸರವಾಗಿ

ಬೇಟಿ /*be:ṭi*/ ನಾ. 1. ಭತ್ತ ಬಡಿಯುವ ಕಂಬ, 2. ಒಕ್ಕಲು ಕಣದ ಮಧ್ಯದಲ್ಲಿ ಇರಿಸಿರುವ ಮರದ ಕಂಬ, 2. ಮೇಟಿ. a lump of wood kept in the middle of the threshing floor. ವಾ: ಬೇಟಿಕಂಬಕೆ ಬತ್ತನ ಬಡೆದು.

ಬೇಟಿಕಂಬ /*be:ṭi kamba*/ ಅಂಗಳದ ನಡುವಲ್ಲಿ ನೆಡುವ ಕಂಬ. a lump of wood kept in the middle of the threshing floor. ವಾ: ಬತ್ತ ಬಡೆಕೆ ಕಳಲಿ ಬೇಟಿ ಕಂಬನ ಊರಿದ್ದವೆ.

ಬೇಟಿಗಂಬ /*be:ṭigamba*/ ನಾ. ಒಕ್ಕಲು ಕಣದ ಮಧ್ಯೆ ನೆಟ್ಟ ಕಂಬ. a lump of wood kept in the middle of the threshing floor. ವಾ: ಬೇಟಿಗಂಬ ಕಳದ ನಡುಲಿ ಇದ್ದದೆ.

ಬೇಟೆ /*be:ṭɛ*/ ಕ್ರಿ. ಶಿಕಾರಿ. hunting. ವಾ: ಬಾರಿ ಹಿಂದೆ ಆಗಾಗ ಬೇಟೆಗೆ ಹೋತಿದ್ದೊ. ಪ: ಬೇಟೆಗೆ ಹೊದ್ – ಬೇಟೆಗೆ ಹೋಗುವುದು

ಬೇಟೆಕೊತ್ತಿ /*be:ṭɛkotti*/ ನಾ. 1. ಬೇಟೆಯಾಡುವ ಬೆಕ್ಕು, 2. ಕಾಡುಬೆಕ್ಕು, 3. ಕೋವಿಯ ಕೊತ್ತಿ (ಹ್ಯಾಮರ್). 1. a hunting cat, 2. a wild cat, 3. hammer in a firearm. ವಾ: ಬೇಟೆಕೊತ್ತಿ ಕಾಡ್‌ಲಿ ಇದ್ದದೆ.

ಬೇಟೆಮಾಸ /*be:ṭɛma:sa*/ ನಾ. 1. ಬೇಟೆಯಾಡಿದ ಪ್ರಾಣಿಗಳ ಮಾಂಸ. meat of hunted animals. ವಾ: ಬೇಟೆಮಾಸನ ಪಾಲ್ ಮಾಡೊಕು.

ಬೇಡ /*be:ḍa*/ ಕ್ರಿ. 1. ಸಲ್ಲದು, 2. ಕೂಡದು, 3. ಬೇಕಾಗಿಲ್ಲ, 4. ಅಪೇಕ್ಷೆಯಿಲ್ಲ, 5. ನಿಷೇದಾರ್ಥಗಳನ್ನು ಸೂಚಿಸುವ ಒಂದು ಅ, 6. ಬೇಟೆಗಾರ. 1. unwanted, 2. undesirable, 3. not required, 4. unexptectd, 5. forbidden, 6. a hunter. ವಾ: ಬೇಡಂಗೆ ಬೇಟೆನೆ ಬೊದ್‌ಕ್.

ಬೇಡಂವ /*be:ḍanva*/ ಕ್ರಿ. ಬೇಡುವವನು. a begger. ವಾ: ಬೇಡಂವ ಯಾಗೊಳು ಬೇಡಿಕಂಡೆ ಇದ್ದದೆ.

ಬೇಡ /*be:ḍa*/ ನಾ. ಬೇಟೆಗಾರ. beda tribe. **ಬೇಡಕುಮೆರಿ** /*be:ḍakumɛri*/ ಬೇಡ ಜನರು ಮಾಡುವ ಕುಮರಿ ಬೇಸಾಯ. a form of cultivation practised by the Beda tribe.

ಬೇಡಗಡ /*be:ḍagaḍa*/ ಕ್ರಿ. ಬೇಡವಂತೆ. not required. ವಾ: ಈಗ ತಿಂಬಕೆ ಎಂತನು ಬೇಡಗಡ.

ಬೇಡಿ^{1} /*be:ḍi*/ ನಾ. 1. ಕೋಳ, 2. ಸಂಕೋಲೆ. 1. hand cuffs, 2. fetters. ವಾ: ಕಳ್ಳನ ಕೋಳ ಹಾಕಿ ಕರ್‌ಕಂಡ್ ಹೋದೊ.

ಬೇಡಿ^{2} /*be:ḍi*/ ನಾ. ತಿರುಪತಿಗೆ ಹರಕೆ ಹೇಳಿ ಕಾಲಿಗೆ ತೊಡುವ ಕಡಗ. wearing an anklet in the name of god of Tirupati. ವಾ: ಹಿಂದೆನ ಕಾಲಲಿ ಕಾಲಿಗೆ ಬೆಡಿ ಹಾಕ್ತಿದ್ದೊಗಡ.

ಬೇಡ್ /*be:ḍɨ*/ ಕ್ರಿ. ಬೇಡಿಕೊಳ್ಳು, to beg/to request. ವಾ: ಅಂವ ಬಾರಿ ಬಜ್ಜ ಉಟ್ಟು ದುಡ್ಡ್ ಬೆಕ್‌ತ ಬೇಡ್‌ತಿತ್ತ್. ಪ: ಬೇಡುದು – ಬೇಡುವುದು; ಬೇಡಿಕಂಡ್ – ಬೇಡಿಕೊಂಡು **ಬೇಡಿಕಾಂದೆ**

/*bɛ:ḍika:ndɛ*/ 1. ಬೇಡಿಕೊಳ್ಳುತ್ತಾನೆ, 2. ಬೇಡಿಕೊಳ್ಳುತ್ತಾಳೆ. 1. he will request, 2. she will request. ವಾ: ಎಲ್ಲೊಮ್ಮ ಒಳ್ಳದಾಗಲಿತ ದೇವ್ರತ್ರ ಅವುಳು ಬೇಡಿಕಾಂದೆ.

ಬೇಡ್ತಿ /*be:ḍti*/ ನಾ. 1. ಬೇಡುವವಳು, 2. ಬೇಡನ ಹೆಂಡತಿ. 1. a woman who begs, 2. wife of a beggar. ವಾ: ಬೇಡ್ತಿ ಬಾತ್.

ಬೇಣ /*be:ṇa*/ ನಾ. ಜೇನು ಹುಳು ಹೋಲುವ ಕೀಟ. an insect that resembles honey bee. ವಾ: ಬೇಣ ಕಚ್ಚಿರೆ ನೀರುಳಿ ರಸನ ಉಜ್ಜೊಕು.

ಬೇತೇಲೆ /*be:te:lɛ*/ ನಾ. ಬೇಯಲಿಲ್ಲ. uncooked. ವಾ: ಕುರಿ ಮಾಸ ಬೇತೇಲೆ. ಪ: ಬೇತ್ಲೆ – ಬೇಯಲಿಲ್ಲ

ಬೇತ್ /*be:tɨ*/ ಕ್ರಿ. ಬೆಂದಿದೆ. cooked. ವಾ: ಈಗ ಅನ್ನ ಬೇತ್.

ಬೇದಿ /*be:di*/ ನಾ. 1. ಅತಿಸಾರ, 2. ಪದೇ ಪದೇ ಜಲ ರೂಪದ ಮಲ ವಿಸರ್ಜನೆಯಾಗುವುದು. 1. dysentry, 2. diarrhoea. ವಾ: ಬೇದಿ ಆಕನ ಮಜ್ಜಿಗೆ ಕೊಡೊಕು.

ಬೇನೆ /*be:nɛ*/ ನಾ. ನೋವು. pain. **ಹೆತ್ತವ್‌ಳ ಬೇನೆ ತಿಳ್ದವ್ಕೆ ಗೊತ್ತು(ಗಾ).** ವಾ: ಹೊಟ್ಟೆ ಬಾರಿ ಬೇನೆತ ಹೇಳ್ತ್.

ಬೇನೆಮಾಡ್ /*be:nɛma:ḍɨ*/ ಕ್ರಿ. ನೋವು ಕೊಡು. to inflict pain. ವಾ: ಬೈದ್ ಮನ್ಸಿಗೆ ಬೇನೆ ಮಾಡ್‌ದು ಯಾಕೆ?

ಬೇನೆಬಾತ್ /*be:nɛba:tɨ*/ ಕ್ರಿವಿ. ಹೆರಿಗೆ ನೋವು. labour pain. ವಾ: ಹೆರ್‌ಗೆ ಬೇನೆಬಾತ್.

ಬೇಪರಕಾಯಿ /*be:paraka:yi*/ ನಾ. ಒಂದು ವಿಷದ ಕಾಯಿ, ಈ ಕಾಯನ್ನು ಗುದ್ದಿ ತೋಡು ಅಥವಾ ಹೊಳೆಯಲ್ಲಿ ಮೀನು ಹಿಡಿಯಲು ಬಳಸುತ್ತಾರೆ. a poisonous seed, used in fishing. ವಾ: ಬೇಪರ ಕಾಯಿನ ಮೀನ್ ಹಿಡೆಕೆ ಬಳ್‌ಸುವೆ. **ಬೇಪರ್ ಬೀಜ** /*be:parɨ bi:ja*/ ಒಂದು ರೀತಿಯ ಎಣ್ಣೆ ಬೀಜ. an oil seed.

ಬೇಪರ್‌ಚೋರೆ /*bepariccо:re*/ ನಾ. ಒಂದು ಜಾತಿಯ ಹಕ್ಕಿ. a variety of bird.

ಬೇಯಿಸ್ /*be:yisi*/ ನಾ. 1. ಬೇಯಿಸು, 2. ನೀರು ಅಥವಾ ನೀರಿನ ಅಂಶದೊಂದಿಗೆ ಆಹಾರ ಪದಾರ್ಥವನ್ನು ಕುದಿಸು, 3. ಪಕ್ವಮಾಡು, 4. ತಾಪಕ್ಕೆ ಒಳಗು ಮಾಡು, 5. ಅಡು. 1. to boil, 2. to cook with water, 3. to boil, 4. to cook, 5. to cook. ವಾ: ತರ್‌ಕಾರಿನ ಲಾಯ್ಕಲಿ ತೊಳ್ದ್ ಬೇಯಿಸಿ ತಿನ್ನೊಕು.

ಬೇರ /*be:ra*/ ನಾ. 1. ಬೇಹಾರಿ, 2. ವ್ಯಾಪಾರ, 3. ವರ್ತಕ ವೃತ್ತಿ. 1. trade, 2. business, 3. business-trading. ವಾ: ಹೊಸ್ತ್ ಅಂಗ್‌ಡಿ ಹಾಕಿ ಅರ್ವೆ ಬೇರ ಸುರು ಮಾಡ್ದ್.

ಬೇರಲ್‌ಂಬು /*be:ralɨmbu*/ ನಾ. ಹೆಗ್ಗಲಣಬೆ. a variety of mushroom. ವಾ: ಬೇರಂಳ್ಬು ಬಾರಿ ರುಚಿ ಅಲ, ಅದರ ಕಾಲ್ ದೊಡ್ಡದಿದ್ದದೆ.

ಬೇರಿ /*be:ri*/ ನಾ. 1. ಒಂದು ವಾದ್ಯ ಪರಿಕರ, 2. ನಿಮಿರು, 3. ಎತ್ತು. 1. a musical instrument, 2. to stretch, 3. to raise. ವಾ: ಅಂವ ಹೊಡಿಯಕೆ ಕೈ ಬೇರ್‌ತ್. ಪ: ಬೇರಿಕನ – ಬೀಸುವಾಗ

ಬೇರಿಕೆ /*be:rikɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಬೇರಿಬೇರಿ /*be:ribe:ri*/ ನಾ. 1. ಎತ್ತಿ ಎತ್ತಿ ಹೊಡೆ, 2. ಹೊಡೆಯಲು ನಿಮಿರಿ ನಿಲ್ಲುವುದು. 1. to raise a hand (to strke at someone), 2. to position oneself to hit. ವಾ: ಕಳ್ಳಂಗೆ ಪೋಲೀಸ್ ಬೇರಿಬೇರಿ ಹೊಡ್ತ್.

ಬೇರಿಯ /*be:riya*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕೊಡಿಯಾಲ ಗ್ರಾಮದ ಜಾಗ. a locality in Kodiyala village in Sullia Taluk of Dakshina Kannada District.

ಬೇರೆಬೇರೆ ಆದೊ /*be:rebe:re a:dɔ*/ ಕ್ರಿವಿ. 1. ಬೇರೆಬೇರೆ ಆದರು, 2. ಸಂಬಂಧಗಳನ್ನು ಕಡಿದುಕೊಳ್ಳು, 3. ಪ್ರತ್ಯೇಕವಾಗು. 1. seperated, 2. ended the relationship, 3. to seperate. ವಾ: ಗಂಡ ಹೆಣ್ಣ್ ಬೇರೆ ಬೇರೆ ಆದೊ.

ಬೇರೆವ್ /*be:rɛvɨ*/ ನಾ. ಬೇರೆಯವರು. others. ವಾ: ಇಬ್ಬರ ಮದ್ಯಲಿ ಬೇರೆವ್ ಬಂದರೆ ಆತ್ ಮತ್ತೆ ಕತೆ ಮುಗ್ತ್‌ತ ಲೆಕ್ಕ.

ಬೇರ್[1] /*be:rɨ*/ ನಾ. ಮರದ ಬೇರು. roots of a tree.

ಅಂಗೈಲಿ ನೀರ್, ನೀರ್ಲಿ ಬೇರ್, ಬೇರ್ಲಿ ಬೆಂಕಿ – ದೀಪ(ಒ). ವಾ: ಮರದ ಬೇರ್ ಕಿತ್ತ್ ಬಾದುಲೆ. ಪ: ಬೇರ್ಲಿ – ಬೇರಿನಲ್ಲಿ; ಬೇರ್‌ಲೆ – ಬೇರಿನಲ್ಲೆ

ಬೇರ್^{2} /*be:ri*/ ಕ್ರಿ. 1. ಹೊಡೆಯಲು ಕೈ ಎತ್ತು, 2. ಎಳೆದು ನಿಲ್ಲಿಸು (ಗುಂಡು ಹಾರಿಸಲು ಎಳೆದು ನಿಲ್ಲಿಸಿದ ಹ್ಯಾಮರ್). 1. to raise one's hand to hit, 2. to pull the hammer/striker into a spring-loaded position (in a firearm). ವಾ: ಗುಂಡು ಹೊಡೆಕೆ ಬೇರ್ ಎಳ್ದದಸ್ಟೆ.

ಬೇರ್‌ಕೆಸ /*be:rikesa*/ ನಾ. ಕೆಸದ ವಿಧಗಳು. variety of Colocasia. ವಾ: ಬೇರ್ ಕೆಸ ಬಾಡೊಕು, ಮತ್ತೆ ಗೈಪು ಮಾಡೊಕು, ಆಗ ಬಾಯಿ ತೊರ್‌ಸುದ್ಲೆ.

ಬೇರ್ಪಡ್ಕ ಅಮೈ /*be:rpaḍka amai*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಉಬರಡ್ಕ ಮಿತ್ತೂರು ಗ್ರಾಮದ ಜಾಗ. a locality in Ubaradka Mitturu village in Sullia Taluk of Dakshina Kannada District.

ಬೇಲದ ಮರ /*be:lada mara*/ ನಾ. ಬೆಳವಳ ಮರ. a wood apple tree. ವಾ: ಬೇಲದ ಮರನ ಮೈಸೂರ್‌ಲಿ ನೋಡಿದ್ದೆ.

ಬೇಲದ ಹಣ್ಣ್ /*be:lada haṇṇi*/ ನಾ. 1. ಬಳೂಲ ಹಣ್ಣು, 2. ಬಳೂಲ, 3. ಬೆಳವಲ ಹಣ್ಣು, 4. ಕಪಿತ್ಥ. 1. limonia, 2. wood-apple, 3. elephant-apple, 4. monkey fruit. ವಾ: ಬೇಲದ ಹಣ್ಣ್ ಜೂಸ್ ಮಾಡಿ ಕುಡ್ದರೆ ಸುಮಾರ್ ಕಾಯ್ಲಗಳಿಗೆ ಉಪಯೋಗ ಉಟ್ಟು.

ಬೇಲಿ /*be:li*/ ನಾ. 1. ಆವರಣ, 2. ತಡೆಗೋಡೆ. 1. a compound, 2. a retaining wall. ವಾ: ಮನೆ ಸುತ್ತ ಬೇಲಿ ಉಟ್ಟು. **ಬೇಲಿಕರೆಲಿ** /*be:likareli*/ ಬೇಲಿಯ ಬದಿಯಲ್ಲಿ. on the side of fence. ವಾ: ಬೇಲಿಕರೆಲಿ ದಾಸಳ ದೈನ ನೆಟ್ಟರೆ ಹೂ ಬುಡ್ಕನ ನೋಡಿಕೆ ಕುಸಿಯಾದೆ.

ಬೇಲಿಕತ್ತಿ /*be:likatti*/ ನಾ. ತೋಟದ ಬೇಲಿ ಗಿಡವನ್ನು ಕತ್ತರಿಸಲು ಬಳಸುವ ಉದ್ದದ ಕತ್ತಿ. a large knife used to cut the fence. ವಾ: ಬೇಲಿ ಕತ್ತಿ ತಕಂಡ್ ಬೇಲಿ ಕಡ್ತ್.

ಬೇಲ್ಯ /*be:lya*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಜ್ಜಾವರ ಗ್ರಾಮದ ಜಾಗ. a locality in Ajjavara village in Sullia Taluk of Dakshina Kannada District.

ಬೇವರ್ಸಿ^{1} /*be:varsi*/ ನಾವಿ. 1. ಅನಾಥ, 2. ತಬ್ಬಲಿ, 3. ದಿಕ್ಕಿಲ್ಲದವ. 1, an orphan, 2. someone who has lost both parents, 3. a deprived person. ವಾ: ಬೇವರ್ಸಿನಂಗೆ ಇಲ್ಲೆ ಬಿದ್ಕಂಡುಟು.

ಬೇವು^{1} /*be:vu*/ ನಾ. ಔಷಧೀಯ ಸಸ್ಯ. Neem, Indian lilac tree, has medicinal properties. ವಾ: ಬೇವುನ ಸೊಪ್ಪ್‌ನ ಉಗಾದಿಲಿ ಬಳ್ಸುವೆ. ಇದರ ಎಲೆ, ಹೂವ್, ಎಣ್ಣೆ, ಕೆತ್ತೆ ಎಲ್ಲನೂ ಉಪಯೋಗಕ್ಕೆ ಬಂದದೆ.

ಬೇವು^{2} /*be:vu*/ ನಾ. 1. ಹುಳಿ, ಹಣ್ಣು ಗಳು ಕೊಳೆಯುವುದು, 2. ರುಚಿಯಲ್ಲಿ ಕಹಿಯ ಅನುಭವ ನೀಡುವಂತದ್ದು. 1. rotting of sour fruits (frementation), 2. to taste bitter. ವಾ: ಕಿತ್ತುಳಿಗೆ ಬೇವು ಬಂದುಟು. ಪ: ಬೇವ್ – ಬೇವು

ಬೇವ್ನ ಎಣ್ಣೆ /*be:vna eɳɳɛ*/ ನಾ. ಬೇವಿನ ಎಣ್ಣೆ. neem oil. ವಾ: ಬೇವುನ ಎಣ್ಣೆನ ಮೋರೆಕೆ ಕಜ್ಜಿ, ಕಲೆ ಬಂದರೆ ಹಾಕಿವೆ. ಪ: ಬೇವ್ಣೆಣ್ಣೆ

ಬೇವ್ನ ಎಲೆ /*be:vna elɛ*/ ನಾ. ಬೇವಿನ ಎಲೆ. neel leaf. ವಾ: ಬೇವ್ನ ಎಲೆದ್ ರಸದೊಟ್ಟಿಗೆ ಅರ್‌ಸಣ ಹಾಕಿ ಮೋರೆಕೆ ಹಾಕಕ್.

ಬೇವ್ನಮರ /*be:vna mara*/ ನಾ. ಕಹಿ ಬೇವಿನ ಮರ. neem tree/Indian lilac tree. ವಾ: ಬೇವ್ನ ಮರದ ಗಾಳಿ ಬೀಸಿರೆ ಒಳ್ಳೆದ್, ನುಸಿ, ಕ್ರಿಮಿಕೀಟಗ ಬಾದುಲೆ.

ಬೇವ್ನಸೊಪ್ಪು /*be:vna soppu*/ ನಾ. ಬೇವಿನ ಸೊಪ್ಪು. neem leaf. ವಾ: ಬೇವ್ನ ಸೊಪ್ಪುನ ಯುಗಾದಿಲಿ ಮತ್ತೆ ಮೊದ್ದ್ ಮಾಡಿಕೂ ಬಳ್ಸುವೆ.

ಬೇಸ^{1} /*be:ṣa*/ ನಾ. ಅರೆಭಾಷೆ ಮತ್ತು ತುಳು ಮಾತನಾಡುವ ಪ್ರದೇಶದವರಿಗೆ ಬೇಷ ವರ್ಷದ ಎರಡನೆಯ ತಿಂಗಳು, ಮೇ- ಜೂನ್ ತಿಂಗಳ ಅವಧಿ. Bhesha, the second month of a year, according the calendar of Are Bhase and Tulu speaking communities, usually the period between May and June.

ಬೇಸ^{2} /*be:sa*/ ನಾ. 1. ಬೇಸಿಗೆ, 2. ವೈಶಾಖ, 3. ಬಿಸಿಲುಕಾಲ. 1. summer, 2. Vaishaka month, 3.

summertime. ವಾ: ಬೇಸಲಿ ಸೆಕೆ ತಡೆಕಾದುಲೆ. ಪ: ಬೇಸಗೆ

ಬೇಸರ /*be:sara*/ ನಾ. 1. ಬೇಸರ, 2. ದುಃಖ. 1. sad, 2. grief. ವಾ: ಬೇಸರ ಕಳೆಕೆತ ಹೊರೆಗೆ ಸುತ್ತಾಡಿ ಬಂದದ್.

ಬೇಸಾಯ /*be:sa:ya*/ ನಾ. 1. ಬೇಸಾಯ, 2. ವ್ಯವಸಾಯ, 3. ಕೃಷಿ, 4. ಹೊಲ ಗದ್ದೆಗಳನ್ನು ಉತ್ತು ಬೆಳೆಯುವುದು. 1. farming, 2. cultivation, 3. agriculture, 4. tilling a farm and growing crops. ವಾ: ಬೇಸಾಯನೆ ನಮ್ಮ ಬೊದ್ಕ್.

ಬೇಸಿಗೆ /*be:sigɛ*/ ನಾ. 1. ಬೇಸಿಗೆ, 2. ವೈಶಾಖ, 3. ಬಿಸಿಲುಕಾಲ. 1. summer, 2. Vaishaka month, 3. summertime. ವಾ: ಬೇಸೆಗೆಲಿ ಕುಡ್ಯಕೆ ನೀರಿಗೆ ಬಜ್ಜ.

ಬೇಸ್ /*be:sɨ*/ ಕ್ರಿ. ಬೇಯಿಸು. to boil/to cook. ವಾ: ದನಗಳಿಗೆ ಮೊಡ್ಡಿ ಬೇಸ್. ಪ: ಬೇಸಿಕೆ – ಬೇಯಿಸಲು; ಬೇಸಿಕನ – ಬೇಯಿಸುವಾಗ; ಬೇಸಿಕಂಡಿರಿಕನ – ಬೇಯಿಸುತ್ತಿರುವಾಗ. **ಬೇಸಿ** /*be:si*/ ನಾ. 1. ಬೇಯಿಸು, 2. ನೀರು ಅಥವಾ ನೀರಿನ ಅಂಶದೊಂದಿಗೆ ಆಹಾರ ಪದಾರ್ಥವನ್ನು ಕುದಿಸು, 3. ಪಕ್ವಮಾಡು, 4. ತಾಪಕ್ಕೆ ಒಳಗು ಮಾಡು, 5. ಅಡು. process of cooking, boiling, etc. ವಾ: ತರ್‌ಕಾರಿನ ಬೇಸಿ ಇಸಿಯೊಳೆ, ಇನ್ನ್ ಮಸಾಲೆ ಕೂಡ್ಸೊಕು ಅಸ್ಟೆ. ಪ: ಬೇಸಿತ್ – ಬೇಯಿಸಿದನು/ಳು; ಬೇಸಿದ್ – ಬೇಯಿಸಿದ್ದು; ಬೇಸುದ್ – ಬೇಯಿಸುವುದು; ಬೇಸಿಕ – ಬೇಯಿಸಿಕೊ. **ಬೇಸಿಕೊಡ್** /*be:si koḍɨ*/ ಬೇಯಿಸಿ ಕೊಡು. to serve after cooking. ವಾ: ಅವ್ವನೊಟ್ಟಿಗೆ ಮಟ್ಟೆನ ಬೇಸಿ ಕೊಡ್‌ತ ಹೇಳಕಿತಲ.

ಬೇಸ್ತೋರ /*be:sto:ra*/ ನಾ. ಗುರುವಾರ. Thursday. ವಾ: ಬೇಸ್ತೋರ ಉಪಾಸ ಮಾಡಿನೆ.

ಬೈ ಹುಲ್ಲು /*bai hullu*/ ನಾ. 1. ಒಣಗಿದ ಭತ್ತದ ಹುಲ್ಲು, 2. ಒಣಗಿದ ಹುಲ್ಲು. 1. dried straw, 2. hay. ವಾ: ಬೈ ಹುಲ್ಲುನ ದನಗಳಿಗೆ ಹಾಕಿ ಬಂದದಸ್ಟೆ.

ಬೈಕಲೆಮನೆ /*baikalɛmanɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಬೈಗೊಳು /*boiguḷu*/ ನಾ. 1. ಬೈಗುಳ, 2. ಜರಿಯುವಿಕೆ, 3. ತೆಗಳುವಿಕೆ, 4. ನಿಂದನೆ. 1. an expletive/a derogatory term, 2. to abuse someone, 3. to criticise. ವಾ: ಕತ್ತಲಾಕನ ಸಾಲ ಕೇಳಿಕೆ ಹೋದರೆ ಬೈಗುಳು ಸಿಕ್ಕುದು. ಪ: ಬೊಯಿಗೊಳ್

ಬೈಚನ /*baicana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಬೈತಡ್ಕ /*baitaḏka*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಜಾಲ್ಸೂರು ಗ್ರಾಮದ ಜಾಗ. 1. family, 2. lineage, 3. a locality in Jalsuru village in Sullia Taluk of Dakshina Kannada District.

ಬೈತಲೆ /*baitalɛ*/ ನಾ. 1. ಬಾಚಿದ ತಲೆಯನ್ನು ವಿಭಾಗಿಸುವ ಗೆರೆಯಂಥ ಭಾಗ, 2. ತಲೆಯ ಮೇಲ್ಭಾಗದಲ್ಲಿ ಕೂದಲನ್ನು ಎರಡು ಕಡೆಗೂ ಬಾಚಿದಾಗ ಮಧ್ಯೆ ಗೆರೆಯಂತೆ ಕಾಣುವ ನೇರವಾದ ಜಾಗ. 1. a line that seperates two parts of hair, 2. a line between two parts of hair. **ಕಪ್ಪು ಬಾಣೆ, ಬಿಳಿ ದಾರಿ – ಬೈತಲೆ(ಒ).** ವಾ: ಹೆಣ್ಣ್ ಮಕ್ಕ ಬೈತಲೆ ತೆಗ್ದ್ ಬಾಚಿ ಹೂ ಮುಡ್ದರೆ ಒಂದ್ ಲಕ್ಷಣ ಕಾಂಬದು, ಬೈತಲೆ ತೆಗೆದಕು ಅರ್‌ತ ಉಟ್ಟು, ಗಂಡನ ಮನೆಗು, ತವುರ್ ಮನೆಗು ಸಮಪಾಲ್ ಪ್ರೀತಿ ಇರೊಕುತ ಇದರ ಒಳಾರ್‌ತ. **ಬೈತಲೆಬೊಟ್ಟು** /*baitalɛ boṯṯu*/ 1. ಬೈತಲೆ ಸಿಂಗಾರ ಆಭರಣ, 2. ನೆತ್ತಿ ಬೊಟ್ಟು. 1. a jewellary worn on the forehead, 2. a maang tikka – Borla or rakhdi. ವಾ: ಬೈತಲೆ ಬೊಟ್ಟುನ ಮೊದುವೆಲಿ ಹೆಣ್ಮಕ್ಕ ಹಾಕಂಡವೆ.

ಬೈತ್ /*baitɨ*/ ನಾ. 1. ಮುಪ್ಪು, 2. ಮುದಿತನ, 3. ವೃದ್ಧಾಪ್ಯ. 1. old age, 2. senescence, 3. elderliness. **ಬಾಲ್ಯಲಿ ಒಂದ್ ಬೈತ್‌ಲಿ ಒಂದ್(ಗಾ).** ವಾ: ಬೈತ್ ಆಕನ ಪಿಳ್ಳೆಕಳೊಟ್ಟಿಗೆ ಆಡಿಕಂಡಿರಿಕೆ ಮನ್ಸ್ ಬಯ್‌ಸಿದೆ.

ಬೈದೊ /*baidɔ*/ ಕ್ರಿ. ಬಯ್ದರು. scolded. ವಾ: ಅವು ನಂಗೆ ಬೈದೊ. ಪ: ಬೊಯಿದದೆ – ಬಯ್ಯುತಾನೆ. **ಬೈದದೆ** /*baidadɛ*/ ಬಯ್ಯು. to scold. ವಾ: ಸುಮ್ಮನಾರ್ ಅಪ್ಪ ಬೈದದೆ. ಪ: ಬೊಯ್ದವೆ – ಬೈಯುತ್ತಾರೆ.

ಬೈನಾಟಿ /*baina:ṭi*/ ನಾ. ಮಲೆಯಾಳಿ (ತೀಯರು) ಬಿಲ್ಲವ ಜನಾಂಗದವರ ಆರಾಧ್ಯ ದೈವ. a daiva/

spirit worshipped by Malayali speaking Billava people. ವಾ: ಬೈನಾಟಿಗೆ ಪೂಜೆ ಮಾಡಿವೆ.

ಬೈನೆ /*bainε*/ ನಾ. ಬೈನೆ ಮರ. toddy palm tree. **ಒಂದ್ ಪುಂಡಿ ಹರ್ವೆನ ಆರ್ ತಿಂಗ ಕೊಯ್ಯುದು – ಬೈನೆ ಕಳ್ಳ್ ತೆಗ್ಯದು(ಒ).** ವಾ: ಎಳೆದ್ ಬೈನೆ ಮರದ ತಿರ್‌ಳ್ ನ ಪಲ್ಯ ಮಾಡಿರೆ ಮಾಸ ಗೈಪುನೆಲ್ಲ ಅತ್ತ ಇಸೊಕು. **ಬೈನೆಕಳ್ಳ್** /*bainεkaḷḷɨ*/ 1. ಸೇಂದಿ, 2. ಮದ್ಯ, 3. ಹೆಂಡ, 4. ಬೈನೆ ಮರದಿಂದ ತೆಗೆದ ಸೇಂದಿ. 1. toddy, 2. alchohol, 3. firewater, 4. toddy extracted from a palm tree. ವಾ: ಬೈನೆ ಕಳ್ಳ್‌ನ ಕುಡ್ಡೊಳರಿಯ? **ಬೈನೆಮರದ ಕೆತ್ತೆ** /*bainε marada kettε*/ 1. ಬೈನೆ ಮರದ ತೊಗಟೆ, 2. ಬೈನೆ ಮರದ ಚಕ್ಕೆ. 1. bark of toddy palm tree, 2. outer cover of toddy palm tree. ವಾ: ಬೈನೆ ಕೆತ್ತೆಲಿ ಮೊದ್ದ್ ಮಾಡಕ್. **ಬೈನೆಮರ** /*bainεmara*/ ತೆಂಗಿನ ಜಾತಿಗೆ ಸೇರಿದ ಕಾಡು ಮರ. toddy plam tree. **ಬೈನೆ ಮರದ ಕೆಳಗೆ ಮೊಜ್ಜಿಗೆ ಕುಡ್ದಂಗೆ(ಗಾ).** ವಾ: ಬೈನೆಮರಲಿ ಕಳ್ಳ್ ತೆಗ್ದವೆ. ಪ: ಈಂದ್‌ಮರ(ತು)

ಬೈನೆರವನ /*baineravana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಬೈಪಣೆ /*baipaṇε*/ ನಾ. ದನದ ಹಟ್ಟಿಗಳಲ್ಲಿ ಪಶು ಆಹಾರ ಹಾಕಲು ನಿರ್ಮಿಸಿದ ಎತ್ತರದ ಜಾಗ. a raised platform to feed cattle in a catteshed. ವಾ: ಬೈಪಣೆಲಿ ದನಗಳಿಗೆ ತಿಂಬಕೆ ಹಾಕುದು.

ಬೈಪು /*baipu*/ ನಾ. ಮಳೆಗಾಲದಲ್ಲಿ ಬರುವ ಬಿಸಿಲು. heat during rainy season. ವಾ: ಇಂದ್ ಒಳ್ಳೆ ಬೈಪು ಉಟ್ಟು, ತೋಟಕ್ಕೆ ಮೊದ್ದು ಬುಡಕಾಯಿತ್. ಪ: ಬೊಯ್ಪು

ಬೈಮನ /*baimana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಬೈಯ್ಯದು /*baiyyadu*/ ನಾ. 1. ಬಯ್ಯುವುದು, 2. ಬೈಗುಳ, 3. ಜರಿಯುವಿಕೆ, 4. ತೆಗಳುವಿಕೆ. 1. to scold, 2. rebuke, 3. to castigate, 4. to reprimand. ವಾ: ಹಾಂಗೆ ಪುರುಸೊತ್ತಿಲ್ಲದೆ ಬೈಯ್ಯದು ಯಾಕೆತ? ಪ: ಬೊಯ್ಯೊದು

ಬೈರಾಸ್ /*baira:sɨ*/ ನಾ. 1. ಟವೆಲ್, 2. ಉತ್ತರೀಯ, 3. ಮೈಮೇಲೆ ಹೊದೆಯುವ ವಸ್ತ್ರ, 3. ನೀರು ಹೀರಲು ಅನುಕೂಲವಾಗಿರುವಂತೆ ಜಾಳು ಜಾಳಾಗಿ ಹೆಣೆದ ವಸ್ತ್ರ. 1. towel, 2. a shawl, 3. a long piece of cloth worn on the body, 4. absorbent cloth. ವಾ: ಮೀದ ಮೇಲೆ ಬೈರಾಸ್‌ಲಿ ಮೋರೆ, ಮೈನ ಒರ್‌ಸುದು.

ಬೈರೋಡಾ /*bairo:ḍa:*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಬೈಲಕೋಲ /*bailako:la*/ ನಾ. ವಿಷ್ಣುಮೂರ್ತಿ ದೈವವನ್ನು ಆರಾಧಿಸುವ ಭೂತಕೋಲ. worshipping Vishnumoorty deity/spirit. ವಾ: ಬೈಲಕೋಲ ನಡ್ದದೆ. ಪ: ಒತ್ತೆಕೋಲ.

ಬೈಲಾಡಿ /*baila:ḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಬೈಲೆ /*baile*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಸಂಪಾಜೆ ಗ್ರಾಮದ ಜಾಗ. a locality in Sampaje village in Sullia Taluk of Dakshina Kannada District.

ಬೈಲೇರ /*baile:ra*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಬೈಲೋಲಿ /*bailo:li*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಬೈಲ್ /*bailɨ*/ ನಾ. 1. ಬಯಲು, 2. ಗದ್ದೆಬಯಲು. 1. plain, 2. a plain field. ವಾ: ಬೈಲ್ ಕಡೆ ದನಗ ಬಂದೊಳ.

ಬೈಹುಲ್ಲ್ /*baihullɨ*/ ನಾ. 1. ಭತ್ತದ ತೆನೆಯ ಹುಲ್ಲು, 2. ಭತ್ತದ ಹುಲ್ಲು. 1. paddy straw, 2. hay. ವಾ: ಬೈಹುಲ್ಲ್‌ನ ಹುಲ್ಲುಮುಂಡಲಿ ಒಟ್ಟಿಸುದು.

ಬೊಂಕ¹ /*bɔŋka*/ ನಾ. ಗುಡ್ಡೆಗೆ ಹೋಗುವ ದನ, ಕರುಗಳ ಕುತ್ತಿಗೆಗೆ ಕಟ್ಟುವ ಗಂಟೆ. a bell tied to the neck of cattle that grazes in hills. ವಾ: bɔŋka. ಪ: ಮೆಂಟೆ

ಬೊಂಕ² /*bɔŋka*/ ನಾ. ಒಂದು ವಿಧದ ಭತ್ತದ ತಳಿ. ಏಣೇಲು ಬೇಸಾಯದಲ್ಲಿ ಬೆಳೆಯುವ ದೊಡ್ಡ ಗಾತ್ರದ ಭತ್ತ. ಅರಳು ತಯಾರಿಸಲು ಈ ಭತ್ತವನ್ನು ಉಪಯೋಗಿಸುತ್ತಾರೆ. a variety of paddy, usually used in making popped rice.

ಬೊಂಗ /*bɔŋgi*/ ನಾ. ಪೆದ್ದ. an idiot.

ಬೊಂಗಿ /*bɔŋga*/ ನಾ. ಪೆದ್ದಿ, ಏನೂ ತಿಳಿಯುವುದಿಲ್ಲ ಎಂಬುದನ್ನು ಸೂಚಿಸುವ ಪದ, ಹೇಳೊದು ಒಂದು ಮಾಡೊದು ಒಂದು ಆದರೆ ಈ ಪದದಲ್ಲಿ ಬೈಯುವರು. an idiotic woman. ವಾ: ಅದ್ ಸುಟ್ಟ ಬೊಂಗಿನಂಗೆ ಆಡ್ದೆ.

ಬೊಂಗ್ರ /*baŋgrɔ*/ ನಾ. 1. ಪ್ರೀತಿ, 2. ಮೋಹ. 1. love, 2. attraction. ವಾ: ಬಾರಿ ಬಂಗ್ರೊಲಿ ಸಾಂಕಿದ್ದೊ. ಪ: ಬಂಗ್ರೊ(ತು)

ಬೊಂಡ /*bonḍa*/ ನಾ. 1. ಎಳನೀರು, 2. ಸಿಯಾಳ, 3. ಎಳೆಯದಾದ ತೆಂಗಿನಕಾಯಿಯ ನೀರು. tender coconut. ವಾ: ತೆಂಗ್‌ನ ಮರಲಿ ಈಗ ಬೊಂಡ ಆಕೆ ಸುರು ಆವುಟು.

ಬೊಂಡಿ /*bonḍi*/ ನಾ. 1. ಕುಂಡೆ, 2. ತಿಕ. buttocks. ವಾ: ಕೂಸುನ ಬೊಂಡಿನ ತೊಳಿ.

ಬೊಂತೆ /*bontɛ*/ ನಾ. 1. ಚಿಂದಿ ಬಟ್ಟೆಗಳನ್ನು ಹೊಲಿದು ಮಾಡಿದ ಹಚ್ಚಡ, 2. ಕವುದಿ, 3. ಗುಚ್ಚ. a blanket made of pieces of old clothes, rags, etc. **ಕಂತೆಗೆ ತಕ್ಕ ಬೊಂತೆ(ಗಾ).** ವಾ: ಹಳೆ ಅರ್ವೆಗಳ್‌ನ ಬಳ್‌ಸಿ ಬೊಂತೆ ಹೊಲೆಕ್.

ಬೊಂಬಲೆ ರೋಗ /*bombalɛ ro:ga*/ ನಾ. ಗೂನು ಬೆನ್ನು. a humped back. ವಾ: ಅದ್ ಬೊಂಬಲೆ ರೋಗಗಡ, ಬೆನ್ನ್ ಉಬ್ಬಿಕಂಡಿರ್‌ದು.

ಬೊಂಬುಚ್ಚಿ /*bɔmbucci*/ ನಾ. ತರಕಾರಿ/ ತೆನೆಗಳನ್ನು ನಾಶಪಡಿಸುವ ಕೀಟ. an insect that eats vegetable and ears of corn. ವಾ: ಬತ್ತದ ಕದ್ರ್‌ಲಿ ಬೊಂಬುಚ್ಚಿ ಕುದ್ದವೆ, ಮಕ್ಕ ಅದರ ಹಿಡ್ಡ್ ನೂಲು ಕಟ್ಟಿ ಇಮಾನ ಆಟ ಆಡಿವೆ. ಪ: ಬಂಬುಚ್ಚಿ(ತು)

ಬೊಂಬುಡಿ /*bombuḍi*/ ನಾ. 1. ಜೋರಾಗಿ ಮಾತನಾಡು, 2. ಬೊಬ್ಬೆ ಹಾಕಿ ಮಾತನಾಡುವುದು. 1. to speak loudly, 2. to scream. ವಾ: ಇರ್‌ಲ್‌ಲಿ ಹಿಂಗೆ ಬೊಂಬ್ಡಿ ಹೊಡ್ಕಂಬದು ಯಾರ್‌ತ? ಪ: ಬೊಂಬ್ಡಿ – ಬೊಬ್ಬೆ

ಬೊಂಬೆ /*bombɛ*/ ನಾ. 1. ಗೊಂಬೆ, 2. ಆಟಿಕೆ ಗೊಂಬೆ. 1. toys, 2. dolls. ವಾ: ಸಣ್ಣ ಮಕ್ಕಳಿಗೆ ಬೊಂಬೆತೇಳಿರೆ ಬಾರಿ ಕುಸಿ.

ಬೊಕ್ಕ /*bokka*/ ನಾವಿ. ಹಲ್ಲು ಇಲ್ಲದವನು(ಪು). 1. an edentulous man, 2. edentulous, 3. an edentulous woman. ವಾ: ಬೊಕ್ಕ ಬಾತ್ ನೆಗಾಡಿಕಂಡ್. **ಬೊಕ್ಕಬಾಯಿ** /*bɔkkaba:yi*/ ನಾ. 1. ಹಲ್ಲಿಲ್ಲದ ಬಾಯಿ, 2. ಬೊಚ್ಚುಬಾಯಿ. 1. edentulous, 2. toothless. ವಾ: ಬೊಕ್ಕ ಬಾಯಿಯಂವತ ತಮಾಸೆ ಮಾಡ್ದು.

ಬೊಕ್ಕತಲೆ /*bɔkkatalɛ*/ ನಾ. 1. ಬೊಕ್ಕತಲೆ, 2. ಬಕ್ಕತಲೆ, 3. ಚಾಣೆತಲೆ. bald head. **ಬೋಳು ಕಾಕ ಕಾಳಮಂಡೆ ಕೋಕ(ನು).** ವಾ: ಬೊಕ್ಕತಲೆಗೆ ಎಂತ ಹಾಕಿರು ಕೂದೊಲು ಬಾದುಲೆ. ಪ: ಚಾಣೆಮಂಡೆ, ಬೋಳುಮಂಡೆ

ಬೊಕ್ಕಸ /*bɔkkasa*/ ನಾ. 1. ಹಣದ ಭಂಡಾರ, 2. ಕೋಶ, 3. ಖಜಾನೆ. a treasure of money. ವಾ: ಬೊಕ್ಕಸ ಕಾಲಿ ಆತ?

ಬೊಕ್ಕಳು /*bɔkkaḷu*/ ನಾ. ಬಯ್ಯಲು ಬಳಸುವ ಕೆಟ್ಟಪದ. derogatory terms.

ಬೊಕ್ಕಿ /*bɔkki*/ ನಾ. 1. ಬೊಕ್ಕು, 2. ಹಲ್ಲಿಲ್ಲದಾಕೆ(ಸ್ತ್ರೀ). edentulous woman. ವಾ: ಬೊಕ್ಕಿ ಹೋದೆ ನೋಡಲ್ಲಿ.

ಬೊಕ್ಕುಂಡೆ /*bɔkkunḍɛ*/ ನಾ. ಮರದಲ್ಲೇ ಗೇರು ಬೀಜವನ್ನು ತೆಗೆದ ಹಣ್ಣು. a ripe cashew fruit plucked directly from the tree.

ಬೊಕ್ಕುಬಾಯಿ /*bɔkkuba:yi*/ ನಾ. 1. ಬೊಚ್ಚುಬಾಯ, 2. ಹಲ್ಲಿಲ್ಲದ ಬಾಯಿ. 1. edentulous, 2. toothless. ವಾ: ಹಲ್ಲೆಲ್ಲ ಬಿದ್ದೊಗಿ ಬೊಕ್ಕುಬಾಯಿ ಆತ್.

ಬೊಕ್ಕೆ[1] /*bɔkkɛ*/ ನಾ. 1. ಹುಣ್ಣು, 2. ಬಾಪು. 1. a boil, 2. a blister. ವಾ: ಬಿಸಿನೀರ್ ಕೈ ಮೇಲೆ ಚೆಲ್ಲಿ ಬೊಕ್ಕೆ ಬಂದುಟು.

ಬೊಕ್ಕೆ[2] /*bɔkkɛ*/ ನಾವಿ. ಹಲಸಿನ ಹಣ್ಣಿನ ಒಂದು ವಿಧ, ಈ ಹಣ್ಣಿನ ಸೊಳೆ ಗಟ್ಟಿ ಇರುತ್ತದೆ. a variety of jackfruit. ವಾ: ಬೊಕ್ಕೆ ಹಲ್ಸ್‌ನ ಕಾಯಿ ತೋಳೆ ಚೊಂಗುಲಿ ಮಾಡಿಕೆ ಆದೆ. ಪ: ಬೊಕ್ಕೆ ಹಲ್ಸನಹಣ್ಣ್

ಬೊಕ್ಕ್ /*bokkɨ*/ ನಾ. ಸೆಣಬು. jute. ವಾ: ಬೊಕ್ಕ್‌ನ ಬೊಳ್ಳಿನ ಗೋಣಿಲಿ ಅಡ್ಕೆ ಕಟ್ಟಿಸಿರೆ ಬಾಳ್ತರ ಬಂದದೆ. ಪ: ಬೊಕ್ಕ್‌ನ ಬೊಳ್ಳಿ – ಸೆಣಬಿನ ನಾರಿನ ಬಳ್ಳಿ

ಬೊಕ್ತಿ /*bɔkti*/ ನಾವಿ. 1. ಭಕ್ತಿ, 2. ಗುರುಹಿರಿಯರಲ್ಲಿ ತೋರುವ ನಿಷ್ಠೆ, 3. ಪೂಜ್ಯಭಾವನೆ. 1. devotion, 2. respect shown to the elders, 3. a venerable

feeling. **ಬೊಕ್ತಿ ಇಲ್ಲರೆ ಮುಕ್ತಿ ಇಲ್ಲೆ(ಗಾ).** ವಾ: ದೇವ್ರಿಗೆ ಕಾಣಿಕೆಗಿಂತ ಬೊಕ್ತಿ ಮುಕ್ಯ.

ಬೊಗಳಿಕೆ /*bɔgaḷikɛ*/ ನಾವಿ. ಕೋಪ ಬಂದಾಗ ಹೇಳು ಎಂಬ ಪದದ ಬದಲಿಗೆ ಈ ಪದವನ್ನು ಬಳಸುವುದು. barking, used as an expletive. ವಾ: ನಿಂಗೆ ಅಂದೇ ಬೊಗಳಿಕೆ ಏನಾಗಿತ್ತ್?

ಬೊಗಳೆ /*bɔgaḷɛ*/ ಕ್ರಿವಿ. 1. ಸುಳ್ಳು ಹೇಳು, 2. ಬಡಾಯಿಕೊಚ್ಚು. 1. to lie, 2. to bluff. ವಾ: ಸುಮ್ಮನೆ ಅಂವ ಬೊಗಳೆ ಬುಟ್ಟದೆ.

ಬೊಗಿ /*bɔgi*/ ನಾ. 1. ಬಗೆ, 2. ಎಣಿಸು, 3. ಲಕ್ಷಿಸು. 1. a way, 2. to think, 3. to pay attention. ವಾ: ಯಾರಿಗೂ ಕೆಟ್ಟದ್ ಬೊಗಿಕಾಗದ್.

ಬೊಗ್ಗ /*bogga*/ ನಾ. ಗಂಡುನಾಯಿ. male dog. ವಾ: ಬೊಗ್ಗ ನಾಯಿಗ ಎರ್‌ಡ್ ವಳೊ. ಪ: ಬೊಗ್ಗಂಗ – ಗಂಡುನಾಯಿಗಳು

ಬೊಗ್ಗಿಬೊಗ್ಗಿ /*bɔggibɔggi*/ ಕ್ರಿ. 1. ಬಗ್ಗಿ ಬಗ್ಗಿ, 2. ಇಣುಕು. 1. bend, 2. to peep. ವಾ: ಬೊಗ್ಗಿ ಬೊಗ್ಗಿ ಎಂತರ ಹಾಂಗೆ ನೋಡ್ದು.

ಬೊಗ್ಗಿ /*boggi*/ ನಾ. ಹೆಣ್ಣು ನಾಯಿ. a female dog/ a bitch. ವಾ: ಬೊಗ್ಗಿ ಆರ್ ಮೊರಿ ಹಾಕಿತ್ತ್. ಪ: ಬೊಗ್ಗಿಗ – ಹೆಣ್ಣು ನಾಯಿಗಳು

ಬೊಗ್ಗ್ /*bɔggɨ*/ ಕ್ರಿ. 1. ಬಗ್ಗು, 2. ಬಾಗು. bend. **ದೈ ಆಕನ ಬೊಗ್ಗದ್ ಮರ ಆಕನ ಬೊಗ್ಗಿದೆನ?(ಗಾ). ಎದೆ ಬೊಗ್ಗದ ಜಾತಿ(ನು). ನಾರಾಯಣ ಕಟ್ಟ್‌ಸಿದ ಬಾವಿ, ಬೊಗ್ಗಿ ನೋಡ್ರೆ ನೀರಿಲ್ಲೆ, ನೆಕ್ಕಿ ನೋಡ್ರೆ ನೀರುಟ್ಟು – ಬೆಲ್ಲ(ಒ).** ವಾ: ಬೊಗ್ಗ್ ಬೆನ್ನಿಗೆ ಗುದ್ದಿನೆ. ಪ: ಬೊಗ್ಗುದು – ಬಗ್ಗುವುದು. **ಬೊಗ್ಗಿ** /*boggi*/ ಬಗ್ಗು, ಬಾಗು. to bend. **ಬೊಗ್ಗಿಕಂಡ್** /*bɔggikanɨ*/ 1. ಬಾಗಿಕೊಂಡು, 2. ತಲೆಬಾಗು. 1. bent, 2. to surrender. ವಾ: ದೇವ್ರಿಗೆ ಕೈ ಮಗೆಕನ ಬೊಗ್ಗಿಕಂಡ್ ನಿಲ್ಲೊಕು. **ಬೊಗ್ಗಿಹೋತು** /*bɔggiho:tu*/ ಬಾಗಿಹೋಗು. bent. ವಾ: ಅಜ್ಜಿ ವಯಸ್ಸಾಗಿ ಬೊಗ್ಗಿಹೋತು. **ಬೊಗ್ಗು** /*bɔggu*/ 1. ಬಗ್ಗುವುದು, 2. ಬಾಗುವುದು, 3. ಬಾಗಿಕೊಂಡು. to bend. **ತಾಂಗುವ ಮುಂದೆ ಬೊಗ್ಗುದ್ ಒಳ್ಳದ್(ಗಾ).** ವಾ: ಅಂವ ಬೊಗ್ಗಿ ನಮಸ್ಕಾರ ಮಾಡ್ತ್. **ಬೊಗ್ಗ್‌ಸ್** /*bɔggɨsɨ*/ ಬಾಗಿಸು. to bend. ವಾ: ಮರದ ಗೆಲ್ಲ್‌ನ ಹಣ್ಣ ಬೊಗ್ಗ್‌ಸ್. **ಬೊಗ್ಸ್** /*bɔgsɨ*/ 1. ಬಗ್ಗಿಸು, 2. ಬಾಗಿಸು. to bend. ವಾ: ನೀರ್‌ನ ಕೊಡಪಾನಂದ ಚೆಂಬಿಗೆ ಬೊಗ್ಸ್.

ಬೊಗ್ತಲೆ /*bɔgtalɛ*/ ನಾ. ಬೈತಲೆ. parting one's hair. ವಾ: ಬೊಗ್ತಲೆ ತೆಗ್ದ್ ಬಾಚೊಕು. ಇದ್ರ ಅರ್‌ತ ಎಂತ ಗೊತ್ತುಟ? ಗಂಡನ ಮನೆನು. ಅವ್ವನ ಮನೆನು ಸಮ ತ. ಯಾವ್ದಕ್ಕು ಬೇದ ಮಾಡಿಕಾಗದ್‌ತ. ಪ: ಬೊಗ್ತಲೆ ತೆಗೆದು – ಬೈತಲೆ ತೆಗೆಯುವುದು; ಬೊಗ್ತಾಲೆ

ಬೊಗ್ಳದೆ /*bɔgḷadɛ*/ ನಾ. 1. ಮಾತನಾಡದೆ, 2. ಬೊಗಳದೆ ಎಂಬ ಅರ್ಥವುಳ್ಳ ಬೈಗುಳ ಪದ. 1. without talking, 2. without barking (used as an expletive). ವಾ: ನೀ ಬೊಗ್ಳದೆ ಕುದ್ದುರು. **ಬೊಗ್ಳಾದೆನಡಿ** /*bɔguḷa:dɛ nɛḍi*/ 1. ಮಾತಾಡದೆ ಹೋಗು, 2. ಹೇಳದೆ ಹೊರಹೋಗು(ಬೈಗುಳ ಪದ). 1. to go out without saying anything (used an expletive), 2. to go withouth informing anybody. ವಾ: ನೀ ಎಂತ ಬೊಗ್ಳಾದೆ ನಡಿ.

ಬೊಗ್ಳು /*bɔgḷu*/ ನಾ. 1. ಬೈಗುಳ ಪದ, 2. ನಾಯಿಯ ಬೊಗಳುವಿಕೆ. barking, an expletive. **ನೆಂಟ್ರ್ ಬಂದೊ ನಾಯಿಗ ಬೊಗುಳ್ವೆ(ನು).** ವಾ: ನಾಯಿ ಬೊಗ್ಳಿದೆ, ಯಾರೊ ಬಂದೊ ಕಂಡದೆ.

ಬೊಚ್ಚಿ[1] /*bocci*/ ಕ್ರಿ. ಕಿರುಚುವುದು. to scream. ವಾ: ಅವುಳು ಹೆದ್‌ರಿ ಬೊಚ್ಚಿತ್.

ಬೊಚ್ಚಿ[2] /*bocci*/ ನಾ. ಹಲ್ಲು ಇಲ್ಲದವಳು. an edentulous woman. ವಾ: ಬೊಚ್ಚಿ ಬಾತಲ.

ಬೊಚ್ಚಿತ್ /*boccitɨ*/ ನಾ. 1. ಸಾಕಾಗು, 2. ಆಯಾಸವಾಗು. 1. to feel tired, 2. to feel exhausted. ವಾ: ಬೊಗ್ಗಿ ಬೊಗ್ಗಿ ಸೊಂಟ ಬೊಚ್ಚಿತ್. ಪ: ಬೊಚ್ಚಿಟು – ಆಯಾಸವಾಗಿದೆ. **ಬೊಚ್ಚದಾಂಗೆ** /*boccada:ŋgɛ*/ ಸುಸ್ತಾಗದಂತೆ. tireless. ವಾ: ಬೊಚ್ಚದಾಂಗೆ ನೋಡಿಕ. **ಬೊಚ್ಚಲ್** /*bɔccalɨ*/. ಆಯಾಸ. tired. ವಾ: ಮೊಟ್ಟೆ ಹತ್ತಿ ಬಾಕನ ಬೊಚ್ಚಲ್ ಆತ್. ಪ: ಬೊಚ್ಚೆಲ್ – ಆಯಾಸ, ಸುಸ್ತು; ಬೊಚ್ಚೊಕು – ಸುಸ್ತಾಗಬೇಕು; ಬೊಚ್ಚಿತ್ತ್ – ಆಯಾಸವಾಗಿತ್ತು

ಬೊಚ್ಚುಬಾಯಿ /*boccuba:yi*/ ನಾ. 1. ಹಲ್ಲಿಲ್ಲದಬಾಯಿ, 2. ಬೋಡುಬಾಯಿ. edentulous mouth. ವಾ: ಅಜ್ಜಿನ ಬೊಚ್ಚುಬಾಯಿನ ನೋಡೊಮ್ಮೆ.

ಬೊಚ್ಚೋಳ /*bocco:ḷa*/ ನಾ. 1. ತೆಳ್ಳಗಿರುವವನು, 2.

ಸಪೂರ ಆಗಿರುವುದು. 1. a man with a lean body, 2. to be skinny. ವಾ: ಬೊಚ್ಚೋಳ ಹೈದಂಗ ಒಟ್ಟಿಗೆ ಕುದ್ದೊಳ.

ಬೊಜ್ಜ /*bojja*/ ನಾ. 1. ತಿಥಿ, 2. ಉತ್ತರಕ್ರಿಯೆ, 3. ಸತ್ತ ನಂತರ ಮಾಡುವ ಆಚರಣಾತ್ಮಕ ಸಂಸ್ಕಾರ. 1. annual rituals of the dead, 2. rites of the dead, 3. funeral rites. **ಅಜ್ಜಿ ಸಾಂಕಿದ ಪಿಳ್ಳಿ ಬೊಜ್ಜಕ್ಕೂ ಬಾರ(ಗಾ).** ವಾ: ಸತ್ತ ಹನ್ನೊಂದನೆ ದಿನಕೆ ಬೊಜ್ಜ ಮಾಡಿವೆ. **ಬೊಜ್ಜಮಾಡಿಕೆ** /*bojjama:ḍikɛ*/ ತಿಥಿ ಮಾಡಲಿ ಎಂದು ಕೋಪದಿಂದ ಹೇಳುವ ಮಾತು. a term used in anger. ವಾ: ನಿನ್ನ ಬೊಜ್ಜ ಮಾಡಿಕೆ.

ಬೊಜ್ಜಿ /*bɔjji*/ ನಾ. ತೆಂಗಿನ ಕಾಯಿಯ ಹಸಿಚಟ್ನಿ. chutney made of coconut. ವಾ: ಕಾಯಿ ಬೊಜ್ಜಿನು ಕಾವಲಿ ರೊಟ್ಟಿನು, ಲಾಯ್ಕ್ ಆದೆ. ಪ: ಪೊಜ್ಜಿ, ಬಜ್ಜಿ(ತು)

ಬೊಜ್ಜು /*bojju*/ ನಾ. 1. ಬೊಜ್ಜು, 2. ಜಳ್ಳು ಶರೀರ, 3. ದಪ್ಪನೆಯ ದೇಹ, 4. ಶಕ್ತಿ ಬೆಳೆದಿರುವ ಮೈ. 1. obesity, 2. an obese body, 3. corpulent body, 4. protuberant body. ವಾ: ತಿಂದ್ ಕುದ್ದ್ ಬೊಜ್ಜು ಬೆಳ್ಸಿಕಣಿಕಾದ್, ಬೊಜ್ಜ್ ಕರ್‌ಗುಸುದು ಸುಲಬ ಅಲ್ಲ.

ಬೊಟ್ಟ[1] /*boṭṭa*/ ನಾ. ದಲಿತರ ಗುಂಪು ಮನೆ. a dalit colony. ವಾ: ತುಂಬ ಜನ ಬೊಟ್ಟಲಿ ವಾಸ ಮಾಡ್ವೆ.

ಬೊಟ್ಟ[2] /*boṭṭa*/ ನಾ. ಬೆಟ್ಟದಲ್ಲಿ ಮನೆ ಮಾಡಿ ವಾಸಿಸುವವರು. those who live on the hills.

ಬೊಟ್ಟತ್ತಾರು /*boṭṭatta:ru*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಪೆರುವಾಜೆ ಗ್ರಾಮದ ಜಾಗ. a locality in Peruvaje village in Sullia Taluk of Dakshina Kannada District.

ಬೊಟ್ಟ್ /*boṭṭi*/ ನಾ. 1. ಸೌದೆಯನ್ನು ಜೋಡಿಸಿಡು, 2. ಒಟ್ಟಿಡು. 1. to pile firewood, 2. to pile. ವಾ: ಸೌದೆ ಬೊಟ್ಟಿ ಆತ್. ಪ: ಬೊಟ್ಟಿಕೆ – ಬಡಿಯಲು

ಬೊಟ್ಟಿಕಂಡ್ /*boṭṭikanḍi*/ ಕ್ರಿ. 1. ತಟ್ಟಿಕೊಂಡು, 2. ಹೊಡೆದುಕೊಂಡು. to direct the cattle. ವಾ: ದನಗಳ ಬೊಟ್ಟಿಕಂಡ್ ಹೋತ್.

ಬೊಟ್ಟು[1] /*boṭṭu*/ ನಾವಿ. ಟೊಳ್ಳು, shallow.

ಬೊಟ್ಟು[2] /*boṭṭu*/ ನಾ. 1. ತಿಲಕ, ಸಿಂಧೂರ. a mark (vertical) on the forehead, vermilion. **ಅಪ್ಪಂಗೆ ಮೂರು, ಅವ್ವಂಗೆ ಒಂದು – ವಿಭೂತಿ ಪಟ್ಟಿ, ಕುಂಕುಮ ಬೊಟ್ಟು(ಒ).** ವಾ: ಹೆಣ್ಮಕ್ಕಳಿಗೆ ಹಣೆಗೆ ಬೊಟ್ಟು ಹಾಕಿರೆನೆ ಲಕ್ಷಣ.

ಬೊಟ್ಟು[3] /*boṭṭu*/ ಕ್ರಿ. ಮೇಲಿನಿಂದ ಹೊಡೆಯು. to hit.

ಬೊಟ್ಟು[4] /*boṭṭu*/ ನಾ. ಎತ್ತರದಲ್ಲಿರುವ ನೀರಿನ ಒರತೆ ಕಡಮೆ ಇರುವ ಗದ್ದೆ. a dry/drained field situated in a high land. ವಾ: ಅದ್ ಬೊಟ್ಟು ಗದ್ದೆ. ಪ: ಬೆಟ್ಟ್‌ಗದ್ದೆ, ಬೊಟ್ಟಿಕಂಡ(ತು)

ಬೊಟ್ಟು[5] /*boṭṭu*/ ನಾ. ಚಿಕ್ಕ ಗುಡಿಸಲು. a small hut. ವಾ: ಅಲ್ಲೊಂದ್ ಬೊಟ್ಟು ಕಾಂಬದು ನೋಡು.

ಬೊಟ್ಟು[6] /*boṭṭu*/ ಕ್ರಿ. 1. (ಚರ್ಮವಾದ್ಯ) ಬಾರಿಸು, 2. (ಜಾಗಟೆ, ಗಂಟೆ ಮೊದಲಾದುವುಗಳನ್ನು) ಬಡಿಯು, 3. ವಾದನಮಾಡು, ಬೆರಳಿನಿಂದ ಬಡಿಯು, 4. ಮಿಡಿಯು, (ಬೆನ್ನು) ತಟ್ಟು, (ಚಪ್ಪಾಳೆ) ತಟ್ಟು, 5. ಕೈತಟ್ಟು. 1. to beat a drum, 2. to strike (as a metal gong, bell etc), Knock or strike, 3. (with fingers), 4. Pat (on the back), 5. Clap. ವಾ: ಡೋಲು ಬೊಟ್ಟುವ ಸಬ್ದ ಕೇಳ್ತಾ ಉಟ್ಟು.

ಬೊಟ್ಟುಮನೆ /*boṭṭumanɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಬೊಟ್ಟೊ /*boṭṭɔ*/ ನಾ. ಕೆಲವು ಪರಿಶಿಷ್ಟ ವರ್ಗದವರ ಮನೆಯನ್ನು ನಿರ್ದೇಶಿಸುವ ಪದ. a colony of the people belonging to Scheduled castes.

ಬೊಡಿ /*boḍi*/ ಕ್ರಿ. ಹೊಡಿ. to beat/to hit. **ಕಬ್ಬ ಕಾದಿರ್ಕನ ಬೊಡಿಯಕು(ಗಾ).** ವಾ: ನಾಯಿಗೆ ಬೊಡಿಬಡ.

ಬೊಡಿದು /*boḍidu*/ ಕ್ರಿ. ಹೊಡೆಯುವುದು. to beat/ to hit. ವಾ: ಕುಡ್ಕಂಡ್ ಬಂದ್ ಬೊಡಿದು. ಪ: ಬೊಡಿಯಕಾದ್ – ಬಡಿಯಬಾರದು

ಬೊಡಿಬೊಡ್ಸ್ /*boḍiboḍsi*/ ಕ್ರಿವಿ. 1. ಕಷ್ಟಕೊಡು, 2. ಸಾಕಷ್ಟು ತೊಂದರೆ ಕೊಡು. 1. to trouble, 2. to trouble. ವಾ: ನಮ್ಮ ಪಾಡಿಗೆ ಇದ್ದರೂ ಈ ಜೆನ ಬಾರಿ ಬೊಡಿಬೊಡ್ಸುವೆ.

ಬೊಡಿಯಕೆ /*boḍiyakɛ*/ ಕ್ರಿ. ಬಡಿಯಲು. to thresh/ to thrash. ವಾ: ಅರ್ವೆನ ಹಂಗೆ ಬಡಿಬಡ.

ಬೊಡ್ಗೆ /*boḍgɛ*/ ನಾ. 1. ಬಡಿಗೆ, 2. ದೊಣ್ಣೆ. 1. a stick, 2. a staff. ವಾ: ಬೊಡ್ಗೆಲಿ ಕಿತ್ತುಳಿನ ಬಡ್ಜೊಕು.

ಬೊಡ್ಚವ್ವ /*boḍcavva*/ ನಾ. ದೇವರ ಹೆಸರು. Bodchavva, a godess. ವಾ: ಬೊಡ್ಚವ್ವತೇಳ್ಡು ದೇವ್ರ ಹೆಸ್ರ್.

ಬೊಡ್ಚ್[1] /*boḍcɨ*/ ನಾ. 1. ಒಂದೇ ಏಟಿಗೆ ಓಟ, 2. ಒಮ್ಮೆಗೆ ಓಡು, 3. ತಪ್ಪಿಸಿಕೊಂಡು ಓಡು. 1. to escape, 2. to immediately, 3. to escape. ವಾ: ನಮ್ಮ ಕಾಂಬಕನ ಬೊಡ್ಚಿ ಓಡ್ದೊ.

ಬೊಡ್ಚ್[2] /*boḍcɨ*/ ನಾ. ಮರದ ಸಿಪ್ಪೆ ಮೇಲ್ಪದರವನ್ನು ಕೆತ್ತುವುದು. to chip the bark of a tree. ವಾ: ಹಲ್ಸ್‌ನಮರನ ಆಚಾರಿ ಬಾಜಿಲಿ ಬೊಡ್ಚಿತ್. ಪ: ಬಡೆಚ್ಚ್(ತು)

ಬೊಡ್ಡ /*boḍḍa*/ ನಾ. ದಡಿಯ, ದಪ್ಪನೆಯ. did you beat/hit. **ಅಡ್ಡಮರಲಿ ಬೊಡ್ಡ ಕುದ್ದುಟು ಬೊಡ್ಡನ ತಿಕಲಿ ಜೆಡ್ಡ್ ಸೊರ್ದದೆ – ಹಲ್ಸ್‌ನ ಹಣ್ಣ್ ಮತ್ತೆ ಅದರ ಮಾಯಣ(ಒ).** ವಾ: ಅಂವ ಬೊಡ್ಡ.

ಬೊಡ್ಡತ[1] /*boḍḍata*/ ನಾ. 1. ಮೊರಂಟೆ ಮೀನು, 2. ಒಂದು ವಿಧದ ನದಿ, ತೋಡು, ಕರೆಯಲ್ಲಿ ವಾಸಿಸುವ ಮೀನು. a fresh water cat fish/Clarius batractus. ವಾ: ಚೋಡ್‌ಲಿ ನೋಡು ಬೊಡ್ಡತನ.

ಬೊಡ್ಡತ[2] /*boḍḍata*/ ನಾ. ದೊಡ್ಡ ಇರುವೆ. carpenter ants. ವಾ: ಬೊಡ್ಡತ ಪಿಜಿನ್‌ಗ ಸಾಲಾಗಿ ಹೋದವೆ.

ಬೊಡ್ಡತ[3] /*boḍḍata*/ ನಾ. 1. ಕೆಲಸಕ್ಕೆ ಬಾರದ ವ್ಯಕ್ತಿ, 2. ಬೊಬ್ಬುಸ, 3. ಬೂಸ. a useless person. ವಾ: ಬೊಡ್ಡತಂಗೆ ಕೆಲ್ಸ ಹೇಳಿರೆ ಅದ್ ಆದಂಗೆನೆ. ಪ: ಬೊಡ್ಡತ ಕುಞ್ಞಿ – ದಢೂತಿ ವ್ಯಕ್ತಿ

ಬೊಡ್ಡತ[4] /*boḍḍata*/ ನಾ. ದಪ್ಪ ತಲೆಯ ಇರುವೆ. ants with large head. ವಾ: ಬೊಡ್ಡತ ದಪ್ಪ ತಲೆನ ಪಿಜಿನ್. ಪ: ಬೊಡ್ಡತಂಗ – ದಢೂತಿ ವ್ಯಕ್ತಿಗಳು

ಬೊಡ್ಡಪಿಜಿನ್ /*boḍḍapijinɨ*/ ನಾ. ಒಂದು ವಿಧದ ದೊಡ್ಡ ತಲೆಯ ಕಪ್ಪು ಇರುವೆ. a black ant with a large head. ವಾ: ಬೊಡ್ಡ ಪಿಜಿನ್‌ದ್ ತಲೆ ದಪ್ಪ.

ಬೊಡ್ಡಿಟ್ಟು /*boḍḍiṭṭu*/ ನಾ. ಬಳಪದ ಕಲ್ಲಿನ ಕಾವಲಿಯ ಮೇಲೆ ಮಾಡುವ ದೋಸೆ. dosa made on the soapstone pan. ವಾ: ಬಡ್ಡಿಟ್ಟುನು ಗದ್ದೆ ಚೆರ್ಗ್ ಗೈಪುನು ಬಾರೀ ಲಾಯ್ಕಾದೆ. ಪ: ಬೊಡ್ಡಿಟ್ಟ್

ಬೊಡ್ಡು[1] /*boḍḍu*/ ನಾ. ಅರೆ ಬೆಳೆದ, ನೀರು ಅಲುಗಾಡದಿರುವ ತೆಂಗಿನಕಾಯಿ. a half grown/ an unripe coconut. ವಾ: ಬೊಡ್ಡು ಕಾಯಿನ ಗೈಪುಗೆ ಹಾಕಿರೆ ಲಾಯ್ಕಾಕಿಲೆ.

ಬೊಡ್ಡು[2] /*boḍḍu*/ ನಾ. 1. ಮಂದತ್ವ, 2. ದಡ್ಡ. 1. sluggish, 2. stupidity. ವಾ: ಬೊಡ್ಡು ಹೈದ, ಅದ್ರ ತಲೆಲಿ ಒಂದೂ ಇಲ್ಲೆ.

ಬೊಡ್ಡು[3] /*boḍḍu*/ ನಾವಿ. 1. ಹರಿತವಿಲ್ಲದ, 2. ಮೊಂಡು, 3. ಮೊನೆಯಿಲ್ಲದುದು. 1. blunt, 2. without sharp edge, 3. edgeless. **ಸತ್ತವರ ಮೂಕು ಕೊಯ್ಯಕೂ ಆಕಿಲೆ(ನು).** ವಾ: ಬೊಡ್ಡು ಕತ್ತಿನ ತಂದೊಳಲ ಹೆಂಗೆ ಸೌದೆ ಕಡಿಯದು. ಪ: ಬೊಡ್ಡ್‌ಕತ್ತಿ – ಹರಿತವಿಲ್ಲದ ಕತ್ತಿ

ಬೊಡ್ಡುತಲೆ /*boḍḍutalɛ*/ ನಾ. 1. ಮಂದ ಬುದ್ಧಿ, 2. ದಡ್ಡ. 1. stupidity, 2. a stupid. ವಾ: ಅಂವಂದ್ ಬೊಡ್ಡು ತಲೆ, ಹೇಳಿರೆ ಒಂದರ್‌ನು ಅರ್‌ತ ಮಾಡಿಕಂಬಲೆ.

ಬೊಡ್ಡುಮೂಕು /*boḍḍumu:ku*/ ನಾ. ಮೊಂಡು ಮೂಗು. a blunt nose. ವಾ: ನನ್ನ ತಂಗೆದ್ ಬೊಡ್ಡು ಮೂಕು.

ಬೊಡ್ಡ್ /*boḍji*/ ನಾ. 1. ಬಡ್ಡು, 2. ಹರಿತವಿಲ್ಲದ. 1. blunt, 2. not sharp. ವಾ: ಬೊಡ್ಡ್ ಕತ್ತಿಲಿ ಸತ್ತವನ ಮೂಂಕೂ ಕೊಯ್ಯಕಾಕಿಲೆ.

ಬೊಡ್ಡ್ ಉಳಿ /*boḍḍɨ uḷi*/ ನಾ. ಮೊಂಡು ಉಳಿ. a blunt chisel. ವಾ: ಬೊಡ್ಡ್ ಉಳಿಲಿ ಹೆಂಗೆನೆ ಮರನ ಕೆತ್ತುದು.

ಬೊಡ್ಡ್ ಕತ್ತಿ /*boḍḍɨ katti*/ ನಾ. ಮೊಂಡು ಕತ್ತಿ. a blunt knife. ವಾ: ಬೊಡ್ಡ್ ಕತ್ತಿನ ಹರ್‌ತ ಮಾಡಕಿತ್.

ಬೊಡ್ಡ್‌ರೊಟ್ಟಿ /*boḍḍiroṭṭi*/ ನಾ. ಬಳಪದ ಕಲ್ಲಿನ ಕಾವಲಿಯಲ್ಲಿ ದೋಸೆಯಂತೆ ಹೊಯ್ಯುವ ರೊಟ್ಟಿ, ಬೆಳ್ತಿಗೆ ಅಕ್ಕಿ ಮತ್ತು ಕುಚ್ಚಲಕ್ಕಿ ಅನ್ನವನ್ನು ಗಟ್ಟಿ ಕಡೆದು ಹೊಯ್ಯುವ ರೊಟ್ಟಿ ಬೊಡ್ಡ್‌ರೊಟ್ಟಿ. a roti made on the soapstone pan. ವಾ: ಅಕ್ಕಿ ಕಡ್ದ ಕೂಡ್ಲೆ ಬೊಡ್ಡ್‌ರೊಟ್ಟಿ ಹೊಯ್ಯೊಕು.

ಬೊಡ್ದ /*boḍda*/ ಕ್ರಿ. ಹೊಡೆದೆಯ. did you hit/beat? ವಾ: ಅಂವಂಗೆ ಬೊಡಿಬೇಡ. ಪ: ಬೊಡ್ದರೆ – ಹೊಡೆದರೆ;

ಬೊಡ್ಡ್ /*boḍḍi*/ ಕ್ರಿ. 1. ಹೊಡೆ, 2. ಬಡಿ. 1. to beat, 2. to hit. **ಹಾಲ್‌ನ ಎತ್ತಿ ಕಾಸೋಕು, ಮಕ್ಕಳ್ನ ಬೊಡ್ಡ್ ಸಾಂಕೊಕು(ಗಾ).** ವಾ: ದನಕೆ ಬಡ್ಡಂಗೆ ಬೊಡ್ಡದೆ.

ಬೊಡ್ಡ್ ಆರಿಕೆ ಹಾಕಕು /*boḍḍi a:rikɛ ha:kaku*/ ಕ್ರಿ. ಬೈಗುಳದ ಮಾತು. an expletive. ವಾ: ನಿನ್ನ ಬೊಡ್ಡ್ ಆರಿಕೆ ಹಾಕಕು.

ಬೊಡ್ರೊಟ್ಟಿ¹ /*boḍroṭṭi*/ ನಾ. ಅಕ್ಕಿರೊಟ್ಟಿ. rice roti. ವಾ: ಬೊಡ್ರೊಟ್ಟಿ ಮಾಡ್ಯೊಳೆ.

ಬೊಡ್ರೊಟ್ಟಿ² /*boḍroṭṭi*/ ನಾ. 1. ಓಡುದೋಸೆ, 2. ದಪ್ಪನೆಯ ತವದಲ್ಲಿ ಹುಯ್ಯುವ ದೋಸೆ. dosa made on a thick pan. ವಾ: ಅಕ್ಕಿ ಒಟ್ಟಿಗೆ ಅನ್ನನ ಹಾಕಿ ಕಡ್ಡರೆ ಬೊಡ್ರೊಟ್ಟಿ ಹೊಯ್ಯಕ್.

ಬೊತ್ತದೆ /*bottada*/ ಕ್ರಿ. 1. ಆಗುವುದಿಲ್ಲ, 2. ಸಾಧ್ಯವಿಲ್ಲ. impossible. ವಾ: ಬೊತ್ತದ ಮೇಲೆ ಕೆಲ್‌ಸ ಮಾಡಿಕೆ ಹೋದ್ಯಾಕೆ. ಪ: ಬೊತ್ತದ ಕೆಲ್ಸ – ಸಾಧ್ಯವಿಲ್ಲದ ಕೆಲಸ

ಬೊತ್ತ್¹ /*botti*/ ನಾ. 1. ಅಸಾಧ್ಯ, 2. ಆಗೋದಿಲ್ಲ. 1. impossible, 2. not possible. ವಾ: ಇನ್ನ್ ನನ್ನಂದ ನಡೆಕೆ ಬತ್ತ್.

ಬೊತ್ತ್² /*botti*/ ಕ್ರಿ. 1. ಆವಿಯಾಗು, 2. ಬತ್ತಿ ಹೋಗು, 3. ಆರಿಹೋಗು. 1. to evaporate, 2. to extinguish, 3. blew out. ವಾ: ಬೇಸೆಗೆಲಿ ಬಾಮಿಲಿ ನೀರ್ ಬೊತ್ತ್‌ದು. ಪ: ಬೊತ್ತಿಟು – ಬತ್ತಿದೆ

ಬೊದಂಬಾಟೆ /*bodamba:ṭɛ*/ ನಾ. 1. ದುರ್ಬಲ, 2. ಪೊಳ್ಳು, 3. ಟೊಳ್ಳು, 4. ಶಿಥಿಲ. 1. hollow, 2. trash, 3. worthless, 4. looseness.

ಬೊದುಲ /*bodula*/ ನಾ. 1. ಪೆದ್ದ, 2. ಸ್ವಲ್ಪತಡವಾಗಿ ಅರ್ಥವಾಗು. 1. an idiot, 2. a slow learner. ವಾ: ಅಂವ ಹಞ್ಞ ಬೊದುಲ.

ಬೊದುಲ್ /*boduli*/ ಕ್ರಿ. 1. ನೆನೆ ಹಾಕು, 2. ಪದನ್ಸ್. to soak. ವಾ: ದೋಸೆಗೆ ಅಕ್ಕಿ ಉದ್ದುನ ಬೊದುಲ್‌ಸೊಕು.

ಬೊದ್ಕು¹ /*bodku*/ ಕ್ರಿ. 1. ಬದುಕು, 2. ವಾಸಿಸು. to live. **ಸಣ್ಣ ಮೀನ್‌ನ ತಿಂದೇ ದೊಡ್ಡ ಮೀನ್ ಬೊದ್ಕುದು(ಗಾ). ನಂದರ ಬೊದ್ಕ್ ನರಿ ನಾಯಿ ತಿಂದ್ ಹೋತ್(ನು).** ವಾ: ಬೊದ್ಕು ನಾವ್ಗೆ ಹೊಸ ಹೊಸ ಪಾಟನ ಕಲ್ಸ್‌ತಾ ಇದ್ದದೆ.

ಬೊದ್ಕು² /*bodku*/ ನಾ. ಬದುಕಲು ಬೇಕಾಗುವ ಸ್ಥಿರ ಸೊತ್ತು. an immovable property that sustains life. ವಾ: ಅಂವ ಬೇಕಾದಸ್ಟ್ ಬೊದ್ಕ್ ಮಾಡಿಟು.

ಬೊದ್ದ /*bodda*/ ನಾವಿ. ಬೋಧಾಳ. an innocent man. ವಾ: ಅದ್ ಬೊರಿ ಬೊದ್ದ, ಅದ್ಕೆ ಬೈಬಡ.

ಬೊದ್ದೆ /*boddɛ*/ ನಾ. 1. ಸ್ತ್ರೀ ಜನನಾಂಗ, 2. ಯೋನಿ. a vagina, part of reproductive tract in women. **ನಿನ್ನೆ ಕತ್ತಲೆಗೆ ಹಿಡ್ದ ಮೊಳೆ(ಮಳೆ) ಇಂದ್ ಬೊಳ್ಪುಗೆ ಮುಟ್ಟ ಬುಟ್ಟತ್ಲೆ, ಬೊಳ್ಪಿಗೆದ್ದ್ ನೊಡಿಕನ ಗದ್ದೆ ತುಂಬಾ ನೀರ್(ಗಾ).**

ಬೊನ್ನಿ /*bɔnni*/ ನಾ. ಬನ್ನಿ. come. ವಾ: ಮನೆಗೆ ಒಮ್ಮೆ ಸಮೆ ಮಾಡಿಕಂಡ್ ಬೊನ್ನಿ. ಪ: ಬೊನ್ನಿಂತ – ಬನ್ನಿ ಎಂದು

ಬೊಪ್ಪಂಗಾಯಿ /*boppaŋga:yi*/ ನಾ. ಪಪ್ಪಾಯಿ. papaya. ವಾ: ಬೊಪ್ಪಂಗಾಯಿ ಆರೋಗ್ಯಕೆ ಒಳ್ಳದ್.

ಬೊಪ್ಪಟೆ¹ /*boppaṭɛ*/ ನಾ. ಕಾಡುಹಕ್ಕಿ. a wild bird. ವಾ: ಬೊಪ್ಪಟೆ ಹಕ್ಕಿಗ ಈಗ ಕಾಂಬಕೆನೆ ಸಿಕ್ಕುಲೆ.

ಬೊಪ್ಪಟೆ² /*boppaṭɛ*/ ನಾ. ದಪ್ಪಗೆ ಇರುವವರಿಗೆ ಹೇಳುವುದು. an obese person. ವಾ: ಬೊಪ್ಪಟೆ ಗೂಡೆ ಒಂದೆ ನಡ್ಕಂಡ್ ಹೋದೆ. ಪ: ದಪ್ಪಟೆ(ತು)

ಬೊಪ್ಪನಕಾಯಿ /*boppanaka:yi*/ ನಾ. ಪಪ್ಪಾಯಿ. papaya. ವಾ: ಬೊಪ್ಪನಕಾಯಿನ ಹೆರ್‌ದ್ ಪಲ್ಯ ಮಾಡಕ್. ಪ: ಬೊಪ್ಪಂಗಾಯಿ

ಬೊಪ್ಪಾಳೆ /*boppa:ḷɛ*/ ನಾ. ದೊಡ್ಡ ಗಾತ್ರದ ಕೊಕ್ಕರೆ. a large crane. ವಾ: ಬೊಪ್ಪಾಳೆ ಗದ್ದೆಲಿ, ಏರಿಲಿ ಕಾಂಬಕೆ ಸಿಕ್ಕಿದೆ.

ಬೊಪ್ಪುಡ್ತ /*boppuḍta*/ ನಾ. ದೊಡ್ಡ ಗೇರು ಹಣ್ಣು. a large cashew fruit. ವಾ: ನಾ ಈಗ ಬೊಪ್ಪುಡ್ತ ಹಣ್ಣ್ ತಿಂದೆ.

ಬೊಬ್ಬ /*bobba*/ ನಾ. 1. ದನ (ಮಕ್ಕಳ ಪದ). cattle (in the vocabulary of children). ವಾ: ಬೊಬ್ಬ ಬಾತ್, ನಾ ಅದರ್‌ನ ಮುಟ್ಟಿನೆ.

ಬೊಬ್ಬಿರ /*bobbira*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಬೊಬ್ಬೂಸ /*bɔbbu:sa*/ ನಾವಿ. 1. ತೋರದ ವ್ಯಕ್ತಿ, 2.

ಬೂಸ. an inactive person. ವಾ: ತೀಂತ್ ಬೊಬ್ಬೂಸನಾಂಗೆ ಬಿದ್ಕಂತ್. ಪ: ಬೊಬ್ಬುಸ

ಬೊಬ್ಬೆ ಎದ್ದುಟ್ಟು /*bobbɛ edduṭṭu*/ ನಾ. 1. ಗುಳ್ಳೆ ಬರು, 2. ಬೊಕ್ಕೆ ಏಳು, 3. ಸುಟ್ಟ ಗಾಯ. 1. to have boils on the skin, 2. swelling of the skin, 3. burnt wound. ವಾ: ಬಿಸಿನೀರ್ ಬಿದ್ದ್ ಕೈ ಮೇಲೆ ಬೊಬ್ಬೆ ಎದ್ದುಟ್ಟು.

ಬೊಬ್ಬೆಹೊಡಿ /*bobbɛhɔḍi*/ ಕ್ರಿ. 1. ಕಿರುಚಾಡು, 2. ಅರಚಾಡು. 1. to sream, 2. to screech. ವಾ: ಬೊಬ್ಬೆ ಹೊಡೆಬಡಿನೆ ಮಕ್ಕಳೆ, ನೆರೆಕೆರೆವ್ ಎಂತ ಗ್ಯಾನ ಮಾಡಿಕಿಲೆ. ಪ: ಬೊಬ್ಬೆಹೊಡಿದು – ಬೊಬ್ಬೆ ಹಾಕುವುದು; ಬೊಬ್ಬೆಹೊಡ್ಕಂಡ್ – ಬೊಬ್ಬೆ ಹೊಡೆದುಕೊಂಡು

ಬೊಬ್ಬೆಕೇರಿ /*bobbeke:ri*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮುರುಳ್ಯ ಗ್ರಾಮದ ಜಾಗ. a locality in Murulya village in Sullia Taluk of Dakshina Kannada District.

ಬೊಮ್ಮ /*bomma*/ ನಾ. ಬ್ರಹ್ಮ. God Brahma. **ಬಾಯಿಲಿ ಬೊಮ್ಮ, ಹೊಟ್ಟೆಲಿ ಗುಮ್ಮ(ಗಾ).** ವಾ: ಬೊಮ್ಮ ನೆ ಮೊನ್ಸರ ಸೃಷ್ಟಿಕರ್‌ತತ ಹಿಂದೂ ದರ್ಮದವು ನಂಬುವೆ.

ಬೊಮ್ಮಕ್ಕ /*bommakka*/ ನಾ. ವ್ಯಕ್ತಿ ಹೆಸರು, ಸ್ತ್ರೀ ವಾಚಕ. feminine given name.

ಬೊಮ್ಮಣ[1] /*bommaṇa*/ ನಾ. ಕೊಂಡಾಟ ಮಾಡು. 1. to honour, 2. prize, 3. award. ವಾ: ಮಕ್ಕಳ ಹೆಚ್ಚಿ ಬೊಮ್ಮಣ ಮಾಡಿರೆ ಮುಂದೆ ಬಂಗ ಆದೆ.

ಬೊಮ್ಮಣ[2] /*bommaṇa*/ ನಾವಿ. 1. ಬಡಾಯಿ, 2. ದೊಡ್ಡಸ್ತಿಕೆ, 3. ಒಣಹೆಮ್ಮೆ, 4. ಜಂಭ. 1. to bluff, 2. to boast, 3. false pride, 4. vanity. ವಾ: ಐಸುರ ಬಾಕನ ಕೆಲು ಜೆನ ಬೊಮ್ಮಣ ತೋರ್‌ಸಿವೆ.

ಬೊಮ್ಮಣ[3] /*bommaṇa*/ ನಾ. 1. ಬಹುಮಾನ, 3. ಬೋಮಾನ. 1. a prize, 2. a reward.

ಬೊಮ್ಮಣ್ಣ /*bommaṇṇa*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. masculine given name.

ಬೊಮ್ಮದೇರೆ /*bommade:rɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಬೊಮ್ಮಾರು /*bomma:ru*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ನೆಲ್ಲೂರು ಕೆಮ್ರಾಜೆ ಗ್ರಾಮದ ಜಾಗ. 1. family, 2. lineage, 3. a locality in Nelluru Kemraje village in Sullia Taluk of Dakshina Kannada District.

ಬೊಮ್ಮಿಯನ /*bommiyana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಬೊಮ್ಮುಡಿರ /*bommuḍira*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಬೊಮ್ಮೆಗೌಡನ /*bommegauḍana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಬೊಮ್ಮೆಟ್ಟಿ /*bommeṭṭi*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕಲ್ಮಡ್ಕ ಗ್ರಾಮದ ಜಾಗ. 1. family, 2. lineage, 3. a locality in Kalmadka village in Sullia Taluk of Dakshina Kannada District.

ಬೊಯಿನೆಮರ/*bɔyinɛmara*/ ನಾ. ಬೈನೆಮರ, ಬೈನಿಮರ, ಬಗಿನಿ. toddy palm tree. ವಾ: ಬೊಯಿನೆಮರಂದ ಕಳ್ಳ್ ತೆಗ್ದವೆ, ಕುಡಿಯಕೆ ಲಾಯ್ಕಾದೆ. ಪ: ಈಂದ್‌ಮರ. **ಬೊಯಿನೆಮರದ ಹುಡಿ** /*bɔyinɛmarada huḍi*/ ಬೈನೆ ಮರವನ್ನು ಕಡಿದು ಅದರ ತಿರುಳಿನಲ್ಲಿ ಹುಡಿಯನ್ನು ತಯಾರಿಸುವುದು, ಬೈನೆಮರದ ಮಣ್ಣಿಯೆಂದು ಕರೆಯುವರು, ಅಕ್ಕಿ ಹಿಟ್ಟಿನೊಂದಿಗೆ ಬಳಸುವರು. making a flour from the stem of toddy palm tree, usually mixed with rice.

ಬೊಯಿಲ್ /*boyilɨ*/ ನಾ. 1. ಬೈಲು, 2. ಬಯಲು ಪ್ರದೇಶ, 3. ವಿಸ್ತಾರವಾದ ಜಾಗ. 1. a plain land, 2. plains, 3. a large area of land. ವಾ: ಬೊಯಿಲ್ ಗದ್ದೆ ಕಡೆ ಹೋಗಿ ಬನ್ನೆ.

ಬೊಯ್ಕಂಡ /*boykaṇḍa*/ ಕ್ರಿ. ಬಯ್ದುಕೊಂಡೆಯ? scolded. ವಾ: ನಂಗೆ ಬೊಯ್ಕಂಡ ತೇಳ್.

ಬೊಯ್ಕಂಡ್ /*boykaṇḍɨ*/ ಕ್ರಿ. ಬಯ್ಯುತ್ತಾ. scolding. ವಾ: ಬೊಯ್ಕಂಡ್ ಕುದ್ದದ್.

ಬೊಯ್ಕ್ /*boykɨ*/ ನಾ. ಎಪ. 1. ಬೈಕ್, 2. ಮೋಟಾರ್

ಸೈಕಲ್ಲು. 1, a bike, 2. a motor cycle. ವಾ: ಹೈದ ಹೈಸ್ಕೂಲಿಗೆ ಎತ್ತಿತ್ಲೆ ಈಗಲೆ ಬೊಯ್ಕ್ ಬೇಕಡ ಸುತ್ತಿಕೆ.

ಬೊಯ್ಗಳ /*bɔygaḷa*/ ನಾ. 1. ಬೈಗಳು, 2. ಜರಿಯುವಿಕೆ, 3. ತೆಗಳುವಿಕೆ. 1. scolding, 2. criticising, 3. vituperate. ವಾ: ಬೇಡಪ ಆ ಬೊಯ್ಗಳ ಯಾರ್ ಕೇಳ್ದು. ಪ: ಬೊಯ್ತ್ – ಬೈದನು/ಳು;

ಬೊಯ್ಗಳದ ಹಬ್ಬ /*bɔyigaḷada habba*/ ನಾ. ಜೇನು ಕುರುಬರಿಗೆ ಸೋರೆ ಬುರುಡೆ ಅಗತ್ಯ. ಅವರ ವಿಶೇಷ ಹಬ್ಬ ಕುಂಡೆ ಹಬ್ಬ. ಈ ಹಬ್ಬದಲ್ಲಿ ಕುಣಿಯುತ್ತಾ, ಕಂಡ ಕಂಡವರಿಗೆಲ್ಲ ಬಯ್ಯುತ್ತಾ ಹೋಗುವ ಬಯ್ಗುಳದ ಹಬ್ಬ. a festival of hurling abuses, celebrated by Jenu Kuruba tribe. ವಾ: ಬೊಯ್ಗಳದ ಹಬ್ಬಲಿ ಗಂಡ್ ಜೆನ ವಿಚಿತ್ರ ವೇಷ ಹಾಕಂಡ್, ಮೈಗೆ ಬಣ್ಣ ಬಳ್‌ಕಂಡ್ ಕುಂಡೆ, ಕುಂಡೆತ ಕರ್‌ಕಂಡ್ ಬಯ್ಯದು.

ಬೊಯ್ನೆಮರ /*bɔynɛmara*/ ನಾ. 1. ತಾಳೆ, ತೆಂಗಿನ ಜಾತಿಗೆ ಸೇರಿದ ಮರ, 2. ಬೈನೆ ಮರ. a plam tree. ವಾ: ಬೊಯ್ನೆ ಮರದ ಕಳ್ಳ್ ಕುಡ್ದವೆ.

ಬೊಯ್ಪಣೆ /*bɔypaṇɛ*/ ನಾ. ದನಗಳಿಗೆ ಹುಲ್ಲು ಹಾಕುವ ಎತ್ತರದ ಜಾಗ. a raised platfom to feed grass to cattle. ವಾ: ದನಗಳಿಗೆ ಬೊಯ್ಪಣೆಲಿ ಹುಲ್ಲ್ ಹಾಕುದು.

ಬೊಯ್‌ಪು /*bɔyipu*/ ನಾ. 1. ಮಳೆ ನಿಂತು ಮೋಡಗಳಿಲ್ಲದೆ ಆಕಾಶ ಶುಭ್ರವಾಗಿರುವಿಕೆ, 2. ಶುಭ್ರ ವಾತಾವರಣ, 3. ಮಳೆಗಾಲದಲ್ಲಿ ಮಳೆನಿಂತು ಬಿಸಿಲು ಬೀಳುವ ಸಮಯ. 1. a clear sky after rains, 2. good weather, 3. the period when rainy season ends. ವಾ: ಬೊಯ್ಪು ಆಕನ ಕುಸಿಯಾದೆ.

ಬೊಯ್‌ಬಡ /*bɔyibaḍa*/ ಕ್ರಿವಿ. 1. ಬಯ್ಯಬೇಡ, 2. ನಿಂದಿಸದಿರು, 3. ಜರಿಯಬೇಡ. 1. don't scold, 2. don't abuse, 3. don't reprimand. ವಾ: ಬೊಯ್‌ಬಡ ನೀ ಹೇಳ್ದಂಗೆನೆ ಕೇಳ್‌ನೆ ನಾ.

ಬೊಯ್ಯಿ /*bɔyyi*/ ನಾ. ಬಯ್ಯು. to scold. ವಾ: ಅವ್ಕೆ ಸೆರಿ ಬೊಯ್ಯಿ.

ಬೊಯ್ಯು /*bɔyyu*/ ಕ್ರಿ. ಬಯ್ಯು. scolding. **ಉಂಡಂವ ಹರಸಕೂಂತ ಇಲ್ಲೆ, ನೊಂದಂವ ಬೊಯ್ಯಕೂಂತ ಇಲ್ಲೆ(ಗಾ).** ವಾ: ಅಪ್ಪ ಬೊಳ್ಪುಂದ ಬೊಯ್ಯುತಿದ್ದೊ. **ಬೊಯ್ಯುದು** /*bɔyyudu*/ ಬಯ್ಯುವುದು. to scold. **ಅತ್ತೆ ಬೊಯ್ಯುದು ಬುದ್ಧಿಗೆ, ಸೊಸೆ ಬೊಯ್ಯುದು ಸುದ್ದಿಗೆ(ಗಾ).** ವಾ: ನಿಂಗೆ ಸುಮ್ಮನೆ ಬೊಯ್ಯುದು ಯಾಕೆಗಡ? ಪ: ಬೊಯ್ಯದೇಕೆ – ಬಯ್ಯುವುದೇಕೆ. **ಬೊಯ್ವೊ** /*bɔyvɔ*/ ಕ್ರಿ. 1. ಬಯ್ಯುವರು, 2. ಬಯ್ಯಬಹುದು. 1. those who scold, 2. may scold. ವಾ: ಪೇರ್‌ಪಟ್ವಾಲ್ (ಕಟ್ಟೆ, ತಡೆಗೋಡೆ) ಹಾರ್‌ದರ ನೋಡಿರೆ ಬೊಯ್ವೊ. ಪ: ಬೊಯ್ವನ – ಬಯ್ಯುವರೆ

ಬೊಯ್ಲು /*bɔylu*/ ನಾ. 1. ಬಯಲು, 2. ಮೈದಾನ, 3. ಬರಿದಾದ ಜಾಗ, 4. ಸಮತಟ್ಟಾದ ವಿಸ್ತಾರವಾದ ಭೂಮಿ. 1. a plain land, 2. a plain field, 3. an empty field, 4. a flat large area of land. ವಾ: ಬೊಯ್ಲು ಕಡೆ ಹೋಗಿ ಬರಕಾಗಿತ್.

ಬೊರಿ /*bɔri*/ ನಾವಿ. 1. ಬರೇ, 2. ಕೇವಲ. 1. hardly, 2. only. **ಬೊರಿ ಕೈಲಿ ಮೊಳ ಹಾಕಿದಂಗೆ(ಗಾ).** ವಾ: ಬೊರಿ ಗಲಾಟೆ ಜೆನ.

ಬೊರಿಕಳ್ಳ /*bɔrikaḷḷa*/ ನಾ. 1. ಕೆಲಸ ಮಾಡದೆ ಅಡಗು, 2. ಮಾತಿಗೆ ತಪ್ಪು, 3. ಬೈಗುಳ ಮಾತು. 1. to evade/escape from responsibilities, 2. to renege, 3. an expletive. ವಾ: ಅಂವ ಬೊರಿ ಕಳ್ಳ, ಅಂವನ ನಂಬಿರೆ ಆತ್.

ಬೊರಿಮೈ /*bɔrimai*/ ನಾ. 1. ಬರಿಯ ಮೈ, 2. ನಗ್ನ. 1. naked body, 2. nude. ವಾ: ಮೀಸಿದಂಗೆ ಬೊರಿ ಮೈಲಿ ಕೂಸುನ ನಿಲ್ಸಿರೆ ಸೆಳಿ ಆಕಿಲೆನ?

ಬೊರಿಂಕ /*bɔriŋka*/ ನಾ. 1. ಬರಿಂಕ, 2. ಒಂದು ಕಾಡು ಪ್ರಾಣಿ. a Chevrotains, or a mouse-deer. ವಾ: ಬೊರಿಂಕ ಒಂದ್ ಕಾಡ್ ಪ್ರಾಣಿ. ಪ: ಬರಿಂಕ(ತು)

ಬೊರಿಕೆ /*borikɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಬೊರಿಕೈಲಿ /*bɔrikaili*/ ನಾ. 1. ಬರಿ ಕೈಯಲ್ಲಿ, 2. ಬರಿದಾದ ಕೈ, 3. ಖಾಲಿ ಕೈ. empty hands. ವಾ: ಬೊರಿಕೈಲಿ ಬಂದೊಳ? ಎಂತನು ಉಗ್ಗಪ್‌ಪ್‌ಲೆನ?

ಬೊರಿನೆಲ /*borinɛla*/ ನಾ. 1. ಬರೇ ನೆಲ, 2. ಖಾಲಿ ನೆಲ. only the ground. ವಾ: ಬಿಸ್‌ಲ್ ಕಾದ್ ಬೊರಿನೆಲದ ಮೇಲೆ ಕಾಲ್ ಇಸಿಕೆ ಬತ್ತ್.

ಬೊರಿಮುಳ್ಳು /*bɔrimuḷḷu*/ ನಾ. 1. ಬೆನ್ನೆಲುಬು, 2. ಬೆನ್ನುಮೂಳೆ, 3. ಹೆಚ್ಚು ಮುಳ್ಳುಗಳಿರುವ ಮೀನು. 1.

back bone, 2. spine, 3. a bony fish. ವಾ: ತಿಂಬಕೆ ದಪ್ಪ ಮೀನೆ ಒಳ್ಳದ್. ಮೊತ್ತಿ ಮೀನ್‌ಲಿ ಬೊರಿ ಮುಳ್ಳು.

ಬೊರಿಯಾ /*boriya:*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಬೊರ್ಂಬು /*bɔrɨmbu*/ ಕ್ರಿ. 1. ಬಾಚಿಕೊಳ್ಳುವಿಕೆ, 2. ಹಿಡಿದುಕೊಳ್ಳುವುದು. 1. to gather, 2. to hold.

ಬೊರ್ಕ /*bɔrkaya*/ ನಾ. 1. ಕಾಡುಕುರಿ, 2. ಏಡ, 3. ಬೊರಿಂಕ. 1. barking deer, Indian muntjac, 2. a small deer , 3. mouse-deer. ವಾ: ಹಿಂದೆನ ಕಾಲಲಿ ಬೊರ್ಕಯನ ಬೇಟೆ ಆಡ್‌ತ್ತಿದ್ದೊ. ಪ: ಬೊರಿಂಕ

ಬೊಲಿಪಾಡ್ಯ /*bɔlipa:ḍya*/ ನಾ. 1. ಮೂರುದಿನ ಬಲೀಂದ್ರನನ್ನು ಪೂಜಿಸಲಾರಂಭಿಸುವ ದಿನ, 2. ದೀಪಾವಳಿಯ ಸಂದರ್ಭದಲ್ಲಿ ಬರುವ ಪಾಡ್ಯ. 1. the first day of Balipadyami festival, 2. commencement of lunar fortnight. ವಾ: ಬೊಲಿ ಪಾಡ್ಯಮಿ ದಿನ ರಾಕ್ಷಸರ ರಾಜ ಬಲೀಂದ್ರನ ಆರಾದಿಸುವೆ.

ಬೊಲಿಬಾದು /*bɔliba:du*/ ಕ್ರಿವಿ. 1. ದೇವರನ್ನು ಹೊತ್ತುಕೊಂಡು ದೇವಸ್ಥಾನಕ್ಕೆ ಸುತ್ತುವುದು, 2. ಏನೂ ಕೆಲಸವಿಲ್ಲದೆ ಸುತ್ತುವುದು. 1. circumambulating the temple with portable idols of deity, 2. to roam around. ವಾ: ವಿಸೇಸ ದಿನಗಳ್‌ಲಿ ದೇವ್ರ ವಿಗ್ರಹನ ಹಿಡ್‌ಕಂಡ್ ಬೊಲಿಬಾದು.

ಬೊಲಿ[1] /*bɔli*/ ನಾ. 1. ದೈವದೇವಸ್ಥಾನಗಳ ವಿಗ್ರಹ, ಮುಖವಾಡಗಳನ್ನು ಹೊತ್ತುಕೊಂಡು ಸಂಗೀತವಾದ್ಯಗಳೊಂದಿಗೆ ಬಲಿ ಕಲ್ಲುಗಳಿಗೆ ಪತ್ರಪುಷ್ಪಾದಿಗಳನ್ನು ಹಾಕುತ್ತಾ ಗರ್ಭಗುಡಿಗೆ ಪ್ರದಕ್ಷಿಣೆ ಬರುವ ಆಚರಣೆ, 2. ಪ್ರದಕ್ಷಿಣೆ. 1. to circumambulate the sanctum sanctorum carrying portable idols of god, and masks with an accompaniment of musicians, 2. cicumambulation. ವಾ: ದೇಸ್ತಾನಲಿ ಬೊಲಿ ಆಚರಣೆ ನಡ್‌ದದೆ.

ಬೊಲಿ[2] /*bɔli*/ ನಾ. 1. ಬಲಿ, 2. ಆಹಾರವಾಗು, 3. ಆಹುತಿಯಾಗು, 4. ಅರ್ಪಿಸು, 5. ಮಾಂಸಹಾರಿ ಪ್ರಾಣಿಗೆ ಆಹಾರವಾಗುವ ಪ್ರಾಣಿ. 1. sacrifice, 2. an oblation, 2. to become a victim, 4. an offering, 5. a prey. ವಾ: ಕುರಿ, ಕೋಳಿನ ಕೆಲು ಹಬ್ಬಲಿ ಬೊಲಿ ಕೊಡ್ತಿದ್ದೊ. ಪ: ಬೊಲಿತೆಗ್ದನೆ – ಬಲಿ ತೆಗೆದುಕೊಳ್ಳುತ್ತೇನೆ

ಬೊಲಿಮ್ಮೆ /*bɔlimmɛ*/ ನಾ. 1. ಜ್ಯೋತಿಷ್ಯ, 2. ಶಕುನ. 1. astrology, 2. soothsaying/augury. ವಾ: ನಮ್ಮ ಅವ್ವಪ್ಪ ಬಾರಿ ಬೊಲಿಮ್ಮೆನ ನಂಬುತ್ತಿದ್ದೊ.

ಬೊಲಿಮ್ಮೆಕೇಳ್ದು /*bɔlimmɨke:ḷdu*/ ನಾವಿ. ಜ್ಯೋತಿಷ್ಯ ಕೇಳುವುದು. to consult an astrologer or soothsayer. ವಾ: ಬವಿಸ್ಯದ ಬಗ್ಗೆ ಬೊಲಿಮ್ಮೆ ಕೇಳ್ದು.

ಬೊಲಿಮ್ಮೆಹೇಳ್ದು /*bɔlimmɨhe:ḷdu*/ ನಾವಿ. 1. ಭವಿಷ್ಯ ಹೇಳುವುದು, 2. ಶಕುನ ಹೇಳುವುದು. 1. to prophecy 2. to auger. ವಾ: ಬುಡುಬುಡಿಕೆಯವ್ ಬೊಲಿಮ್ಮೆ ಹೇಳ್ದು.

ಬೊಲಿಯಂದ್ರ /*bɔliyandra*/ ನಾ. ವಾಮನರೂಪಿಯಾದ ವಿಷ್ಣುವಿಗೆ ಭೂಮಿದಾನ ಮಾಡಿ ಪಾತಾಳ ಸೇರಿದ ರಾಜ, ದೀಪಾವಳಿಯ ಸಮಯದಲ್ಲಿ ಈತನು ಭೂಮಿಯ ಮೇಲೆ ಬಂದು ಪ್ರಜೆಗಳಿಂದ ಪೂಜೆಗೊಳ್ಳುತ್ತಾನೆಂದು ಪ್ರತೀತಿ. It is believed that King Bali visits the earth every year during Deepavali festival. King Bali was taken to the netherworld after donating the land requested by Vamana.

ಬೊಲಿಯಂದ್ರಮರ /*bɔliyandramara*/ ನಾ. ಬಲೀಂದ್ರನ ಪ್ರತೀಕವಾಗಿ ತುಳಸಿಕಟ್ಟೆಯ ಬಳಿ ಅಥವಾ ಗದ್ದೆಯಲ್ಲಿ ಪೂಜಿಸಲಿಕ್ಕಾಗಿ ನೆಡುವ ಹಾಲೆಮರದ ರೆಂಬೆ. a post of Pala indigo tree or dyer's oleander tree erected in the field as a symbol of King Bali.

ಬೊಲಿಯಂದ್ರಹಬ್ಬ /*bɔliyandrahabba*/ ನಾವಿ. 1. ದೀಪಾವಳಿ, 2. ದೀವಳಿಗೆ, 3. ಕಾರ್ತಿಕ ಶುದ್ಧ ಪಾಡ್ಯದ ದಿನ ಬಲಿ ಚಕ್ರವರ್ತಿಯ ಹೆಸರಿನಲ್ಲಿ ಆಚರಿಸುವ ಹಬ್ಬ. another name for Deepavali, celebrated during the first day in a lunar fortnight. ವಾ: ಬೊಲಿಯಂದ್ರ ಹಬ್ಬ ದೀಪಗಳ ಹಬ್ಬ.

ಬೊಲ್ಪು /*bolpu*/ ನಾ. ಬೆಳಿಗ್ಗೆ. morning. ವಾ: ಬೊಲ್ಪುಗೆ ಬೇಗ ಕರೆನಿ. **ಬೊಲ್ಪಾತ್** /*bolpa:tɨ*/ ಬೆಳಿಗ್ಗೆ

ಆಯಿತು. it is morning. ವಾ: ಎಸ್ಟ್ ಬೇಗ ಬೊಲ್ಪಾತ್.

ಬೊಲ್ಲು /*bollu*/ ನಾ. 1. ಬಿಳಿಬಣ್ಣ, 2. ಬಿಳಿ ಬಣ್ಣದ ನಾಯಿ/ಬೊಲ್ಲುನಾಯಿ. 1. white colour, 2. a white dog. ವಾ: ಅದ್ ಬೊಲ್ಲು ನಾಯಿ. ಪ: ಬೊಳ್ಳು

ಬೊಲ್ಸ್ /*bolsɨ*/ ಕ್ರಿ. 1. ಬಡಿಸು, 2. ಇಕ್ಕು. to serve. ಪ: ಬಳ್ಸ್ – ಬಡಿಸು

ಬೊಸುರಿ /*bɔsuri*/ ನಾ. 1. ಬಸುರಿ, 2. ಗರ್ಭಿಣಿ. a pregnant woman. ವಾ: ಬೊಸುರಿ ಹೆಣ್ಮಕ್ಕ ಕೆಲ್ಸ ಮಾಡ್ದಸ್ಟ್ ಹೆರಿಗೆ ಸುಲಬ ಆದೆಗಡ. ಪ: ಬೊಸರಾಕನ – ಬಸುರಿಯಾಗುವಾಗ; ಬೊಸುರಾತ್ – ಬಸುರಿಯಾದಳು;

ಬೊಸುರು /*bɔsuru*/ ನಾವಿ. 1. ಗರ್ಭ, 2. ಗರ್ಭಧಾರಣೆಯಾದ ಹೆಣ್ಣು. 1. womb, 2. pregnant. **ದಾಕ್ಷಿಣ್ಯಕ್ಕೆ ಬೊಸುರಾದರೆ ಹೆರಿಕೆ ಜಾಗ ಇಲ್ಲೆ, ಹೆಸ್‌ರೊಬ್ಬಂಗೆ ಬೊಸುರೊಬ್ಬಂಗೆ(ಗಾ).** ವಾ: ಅವ್‌ರ ಪಿಳ್ಳಿ ಬೊಸುರುಗಡ. ಪ: ಬೊಸ್‌ರ್ – ಗರ್ಭ

ಬೊಸ್ಕಟೆ /*bɔskaṭɛ*/ ನಾವಿ. 1. ಶಕ್ತಿ ಇಲ್ಲದ, 2. ತೋರದ. 1. not energetic, 2. obese. ವಾ: ಬೊಸ್ಕಟೆ ತಡಿ ಹೊತ್ತ್ ಕಂಡ್ ನಡೆದು ಬಂಗ ಆದೆ.

ಬೊಸ್ರಿ /*bɔsri*/ ನಾ. ಗರ್ಭಿಣಿ. a pregnant woman. **ಬೊಸ್ರಿಲಿ ಗೇಯ್ದ್ ತಿನ್ಸ್, ಬಾಣಂತಿಲಿ ಕುದ್ದ್ ತಿನ್ಸ್(ಗಾ). ಕೆಂಪಣ್ಣನ ಕಾಂಬಕನ ಬೆಳ್ಯಕ್ಕ ಬೊಸ್ರಿ ಆದೆ – ಅಕ್ಕಿ ರೊಟ್ಟಿ(ಬ).** ವಾ: ಬೊಸ್ರಿಗೆ ಏಳ್ ತಿಂಗಳ್‌ಲಿ ಸೀಮಂತ ಮಾಡಿವೆ. ಪ: ಬೊಸ್ರಾಗ್ – ಬಸುರಿಯಾಗು, ಗರ್ಭವತಿಯಾಗು

ಬೊಸ್ರು /*bɔsru*/ ನಾ. 1. ಗರ್ಭ, 2. ಗರ್ಭಧಾರಣೆಯಾದ ಹೆಣ್ಣು. 1. womb, 2. a pregnant woman. **ದರ್ಮಕ್ಕೆ ಬೊಸ್ರಾಗಿ ಹೆರಿಕೆ ಜಾಗೆ ಇಲ್ಲೆ(ಗಾ).** ವಾ: ಬೊಸ್ರು ಹೆಣ್ಮಕ್ಕ ಕುಸಿಲಿ ಇರೊಕು, ಒಳ್ಳೆ ಹಾಡ್ ಕೇಳೊಕು, ಕತೆಗಳ ಓದೊಕು. ಪ: ಬೊಸ್ರುಲಿ – ಗರ್ಭದಲ್ಲಿ; ಬೊಸ್ರಾತ್ – ಗರ್ಭವತಿಯಾದಳು. **ಬೊಸ್‌ರೆಂಗ್ಸ್** /*bɔsrɛŋgsɨ*/ 1. ಗರ್ಭಿಣಿ ಹೆಂಗಸು, 2. ಬಸುರಿ ಹೆಂಗಸು, 3. ಗರ್ಭವತಿ. a pregnant woman. ವಾ: ಬೊಸ್ ರೆಂಗ್ಸ್ ನಿತ್ತುಟು, ಕೂರಿಕೆ ಹೇಳಕಾಯ್ತ್.

ಬೊಸ್ಸ್ /*bos'sɛ*/ ನಾ. ಎಪ. ಬಸ್ಸು. bus. ವಾ: ಇನ್ಸ್ ಬೊಸ್ಸ್ ಬಾದು ಹಿಂಬೊತ್ತ್ ಗೆನೆ, ಅಲ್ಲಿಮುಟ್ಟ ಪಾರಕಾಯೊಕು.

ಬೊಳಂಜ /*boḷaɲja*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಬೊಳಿ[1] /*bɔḷi*/ ನಾ. ಬೆಳಿಗ್ಗೆ. morning. ವಾ: ಬೊಳಿ ಬೊಳಿ ಬುಡ್ಕನ ಮಳೆ ಹನ್ಕ್ ತಿತ್ತ್.

ಬೊಳಿ[2] /*bɔḷi*/ ನಾ. ಬೆಳಕು. light. ವಾ: ಕಾಡೊಳಗೆ ಹಣ್ಣು ಬೊಳಿ ಕಂಡದೆ. ಪ: ಬೊಳಿಗೆ – ಬೆಳಕಿಗೆ

ಬೊಳಿ[3] /*bɔḷi*/ ನಾ. ಗೋತ್ರ. lineage/clan. ವಾ: ನಿಮ್ಮದ್ ಹೆಮ್ಮನ ಬೊಳಿನ?

ಬೊಳಿಜಾಗೆ /*bɔḷi a:gɛ*/ ನಾ. 1. ಅಡೆ ತಡೆ ಇಲ್ಲದ ಸ್ಥಳ, 2. ಕಾಡು ಇಲ್ಲದ ಬೆಳಕು ಇರುವ ಸ್ಥಳ. 1. a place without any obstancles, 2. a place with more light than usual. ವಾ: ಬೊಳಿ ಜಾಗೆಗೆ ಒಬ್ಬನೆ ಹೋಕೆ ಹೆದ್ರಿಕೆ ಆದುಲೆ.

ಬೊಳಿಬಾಣೆ /*bɔḷi a:ɳɛ*/ ನಾ. 1. ತೆರೆದ ಪ್ರದೇಶ, 2. ತೆರೆದ ಮೈದಾನ, 3. ಬಾಣೆ. 1. an open ground, 2. an open field, 3. open area. ವಾ: ಬೊಳಿ ಬಾಣೆಲಿ ನಿತ್ತ್ ನೋಡಿರೆ ಅತ್ತ ಮಡಿಕೇರಿ ಕಂಡದೆ.

ಬೊಳಿಬುಡ್ಕನ /*bɔḷibuḍkana*/ ನಾ. 1. ಬೆಳಗಾಗುವಾಗ, 2. ಬೆಳಗ್ಗಿನ ಜಾವ. in the morning. ವಾ: ಬೊಳಿ ಬುಡ್ಕನ ಹೋಗು ಬಲ.

ಬೊಳಿಬೊಳಿ /*boḷi boḷi*/ ನಾ. ಬೆಳ್ಳಂ ಬೆಳಗ್ಗೆ. early morning. ವಾ: ಬೊಳಿ ಬೊಳಿ ಬುಡ್ಕನ ಎತ್ತ್ ಹೊಡ್ಕಂಡ್ ಗದ್ದೆಗೆ ಹೋತ್.

ಬೊಳಿಕ್ಕಲ /*boḷikkala*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಬೊಳಿಯಕಂಡ /*boḷiyakaṇḍa*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮುಪ್ಪೇರ್ಯ ಗ್ರಾಮದ ಜಾಗ. a locality in Mupperia village in Sullia Taluk of Dakshina Kannada District.

ಬೊಳಿಯಮಜಲು /*boḷiyamajalu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಬೆಳ್ಳಾರೆ, ಮಂಡೆಕೋಲು ಗ್ರಾಮದ ಜಾಗ. a locality in Bellare village in Sullia Taluk of Dakshina Kannada District.

ಬೊಳುಗಲ್ಲು /*boḷugallu*/ ನಾ. 1. ಕುಟುಂಬ, 2.

ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮಂಡೆಕೋಲು ಗ್ರಾಮದ ಜಾಗ. 1. family, 2. lineage, 3. a locality in Mandekolu village in Sullia Taluk of Dakshina Kannada District.

ಬೊಳುಪು /*boḷupu*/ ನಾ. 1. ಬೆಳಕು, 2. ಬೆಳಿಗ್ಗೆ. 1. light, 2. morning. ವಾ: ಬೊಳುಪುಗೆ ಹೋಕ್. ಪ: ಬೊಳೂಪುಗೆ – ಬೆಳ್ಳಂಬೆಳಗ್ಗೆ

ಬೊಳುಬೈಲು /*boḷubailu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಜಾಲ್ಸೂರು ಗ್ರಾಮದ ಜಾಗ. a locality in Jalsuru village in Sullia Taluk of Dakshina Kannada District.

ಬೊಳುವ /*boḷuva*/ ನಾ. 1. ಅಂಬಲಿ ಹಲಸು, 2. ಹೆಚ್ಚು ರಸವಿರುವ ಹಿಟ್ಟು ಮಾಡಲು ಬಳಸುವ ಹಲಸಿನ ಹಣ್ಣು. a variety of jackfruit having more moisture content. ವಾ: ಬೊಳುವ ಹಲ್ಸ್‌ನಣ್ಣ್ ತಂದ್ ಕೂಗಲಿಟ್ಟ್ ಮಾಡ್‌ದ್. ಪ: ಬೊಳ್‌ಂವ

ಬೊಳ್ಕಜೆ /*boḷkajɛ*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಎಡಮಂಗಲ ಗ್ರಾಮದ ಜಾಗ. 1. family, 2. lineage, 3. a locality in Edamangala village in Sullia Taluk of Dakshina Kannada District.

ಬೊಳ್ಕಿರಿ /*boḷkiri*/ ನಾ. 1. ಮಳೆ ನಿಂತು ಮೋಡಗಳಿಲ್ಲದೆ ಆಕಾಶ ಶುಭ್ರವಾಗಿರುವಿಕೆ, 2. ಮೋಡವಿಲ್ಲದ ಆಕಾಶ, 3. ಪ್ರಶಾಂತ ವಾತಾವರಣ, 4. ಬೊಯ್ಪು. 1. a clear sky, 2. a cloudless sky, 3. a pleasant environment, 4. a pleanst condition. **ಇಂದ್ ಮಳೆ ಇಲ್ಲೆ, ಲಾಯ್ಕ್‌ನ ಬೊಳ್ಕಿರಿ(ನು).** ವಾ: ಬೊಳ್ಕಿರಿ ನೋಡಿಕನ ಮನ್ಸಿಗೆ ಲಾಯ್ಕ್ ಆದೆ.

ಬೊಳ್ಕೋಡಿ /*boḷko:ḍi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಮರಪಡ್ನೂರು ಗ್ರಾಮದ ಜಾಗ. a locality in Amarapadnuru village in Sullia Taluk of Dakshina Kannada District.

ಬೊಳ್ಗಂಡೆ /*boḷgaṇḍɛ*/ ನಾ. ಪದಾರ್ಥ ಮಾಡಿ ತಿನ್ನುವ ಕಾಡಿನ ಒಂದು ಗಡ್ಡೆ. a wild root with which curry is made. ವಾ: ಬೊಳ್ಗಂಡೆನ ಎಂತ ಮಾಡ್ದರಿ?

ಬೊಳ್ಗಲ್ಲ್ /*boḷgallɨ*/ ನಾ. 1. ಕತ್ತಿ ಹರಿತ ಮಾಡುವ ಬಿಳಿ ಬಣ್ಣದ ಕಲ್ಲು, 2. ಬೆಣಚು ಕಲ್ಲು. 1. whetstone, 2. quartz. ವಾ: ಹಿಂದೆ ಕತ್ತಿನ ಹರ್‌ತ ಮಾಡಿಕೆ ಬೊಳ್ಗಲ್ಲ್‌ನ ಬಳ್‌ಸ್‌ತ್ತಿದ್ದೊ.

ಬೊಳ್ತಜಿರ /*boḷtajira*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಬೊಳ್ತಿಗೆ /*boḷtigɛ*/ ನಾ. 1. ಬೆಳ್ತಿಗೆ ಅಕ್ಕಿ, 2. ಬೆಳ್ತಕ್ಕಿ, 3. ಬೊಳಂತ್ಯರಿ(ತು). raw white rice. ವಾ: ಬೊಳ್ತಿಗೆ ಅಕ್ಕಿನೆ ಉಂಬಕೆ ಬಳ್‌ಸುದು.

ಬೊಳ್ತೆಲೂ ತಿಂಗ /*boḷtɛlu:tiŋga*/ ನಾ. ಅರೆಭಾಷಿಕರ ಏಳನೆಯ ತಿಂಗಳ ಹೆಸರು. from 15 December to 15 January. ಪ: ಬೆಣ್ತಿಂಗ

ಬೊಳ್ನಾರ್ ಬೊಳ್ಳಿ /*boḷna:rɨ bɔḷḷi*/ ನಾ. ಬೊಳ್ನಾರ್ ಮರದಿಂದ ತೆಗೆದ ಬಳ್ಳಿ. a climber. ವಾ: ಬೊಳ್ನಾರ್ ಬೊಳ್ಳಿಲಿ ಬತ್ತದ ಮುಡಿ ಕಟ್ಟ್‌ವೆ.

ಬೊಳ್ವಾಕನ /*boḷva:kana*/ ನಾ. ಬೆಳಗಿನ ಹೊತ್ತು. in the morning. ವಾ: ಬೊಳ್ವಾಕನ ಹಕ್ಕಿಗ ಹಾರಿ ಹೋದೊ. ಪ: ಬೊಳ್ವಾಕನನೆ – ಬೆಳಗಾಗುವಾಗಲೆ

ಬೊಳ್ವಾತ್ /*boḷpa:tɨ*/ ಕ್ರಿ. ಬೆಳಗಾಯಿತು. morning. **ಗೊತ್ತಾಕನ ಬೊಳ್ವಾತ್(ನು).** ವಾ: ಬೊಳ್ವಾತ್ ಏಳಿನೆ ಮಕ್ಕಳೆ ಹಟ್ಟಿಗೆ ಹೋಗಿ ಬನ್ನಿ.

ಬೊಳ್ಪು /*boḷpu*/ ನಾ. ಬೆಳಕು. light. **ನಿನ್ನೆ ಕತ್ತಲೆಗೆ ಹಿಡ್ದ ಮಳೆ ಇಂದ್ ಬೊಳ್ಪುಗೆ ಮುಟ್ಟ ಬುಟ್ಟತ್ಲೆ, ಬೊಳ್ಪಿಗೆದ್ದ್ ನೊಡಿಕನ ಗದ್ದೆ ತುಂಬಾ ನೀರ್(ಗಾ). ಅಷ್ಟಾಕನ ಬೊಳ್ವಾತ್(ನು).** ವಾ: ಬೊಳ್ಪು ಹರ್‌ದ್ ಎಸ್ಟ್ ಹೊತ್‌ಉಗ್ಗಪ್ಪ್, ಮಕ್ಕ ಇನ್ನೂ ಎದ್ದತ್ಲೆ.

ಬೊಳ್ಪುತೋರುದು /*boḷputo:rudu*/ ನಾ. ಗೋಪೂಜೆಯ ಸಂದರ್ಭದಲ್ಲಿ ದನಗಳಿಗೆ ಹಟ್ಟಿಯಲ್ಲಿ ದೀಪ ತೋರಿಸುವುದು. worshipping the cattle by waving the lamps at them during Deepavali festival. ವಾ: ದೀಪೊಳಿಲಿ ಹಟ್ಟಿಲಿ ಬೊಳ್ಪು ತೋರುದು.

ಬೊಳ್ಪುನ ಪೂಜೆ /*boḷpuna pu:jɛ*/ ನಾ. ಬೆಳಗಿನ ಹೊತ್ತಿನಲ್ಲಿ ಮಾಡುವ ಪೂಜೆ. a practice of worshipping gods in the morning. ವಾ: ಬೊಳ್ವಾಕೆ ಮುಂದೆ ಏಳ್ದು ಒಳ್ಳ ಅಬ್ಬೆಸ.

ಬೊಳ್ಪ್ /*boḷpɨ*/ ನಾ. 1. ಬೆಳಗ್ಗೆ, 2. ಬೆಳಕು. 1. in the

morning, 2. light. ವಾ: ಐದ್ ಗಂಟೆಗೆ ಬೊಳ್ಪ್ ಆದೆ. ಪ: ಬೊಳ್ಪ್‌ಗೆ – ಬೆಳಗ್ಗೆ; ಬೊಳ್ಪುಂದ – ಬೆಳಗ್ಗೆಯಿಂದ; ಬೊಳ್ಪುಂದಳೆ – ಬೆಳಗ್ಗೆಯಿಂದಳೇ; ಬೊಳ್ಪೊರೆಗೆ – ಬೆಳಗ್ಗಿನವರೆಗೆ; ಬೊಳ್ಪಾಕನ – ಬೆಳಗಾಗುವಾಗ

ಬೊಳ್ಮಹಲ್ಸನ ಹಣ್ಣ್ /*boḷmahalsana haṇṇi*/ ನಾ. 1. ಮೆತ್ತಗಿನ ಸೊಳೆಯ ಹಲಸಿನ ಹಣ್ಣು, 2. ಅಂಬಲಿಯಂತಹ ಹಲಸಿನ ಹಣ್ಣು. 1. a small jackfruit, 2. a jackfruit variety with moistiorous content. ವಾ: ಬೊಳ್ಮ ಹಲ್‌ಸ್‌ನ ಹಣ್ಣ್‌ಲಿ ಮಾಂಬಳ ಜಾಸ್ತಿ.

ಬೊಳ್ಳ[1] /*boḷḷa*/ ನಾ. 1. ಪ್ರವಾಹ. flood. **ಲಾಬ ಇಲ್ಲದೆ ಚೆಟ್ಟಿ ಬೊಳ್ಳಕ್ಕೆ ಹೋದ್ಲೆ(ಗಾ).** ವಾ: ಬೊಳ್ಳ ಬಂದ್ ಎಲ್ಲ ಕೊಚ್ಚಿ ಹೋತ್.

ಬೊಳ್ಳ[2] /*boḷḷa*/ ನಾ. 1. ಬಿಳಿ, 2. ಬೆಳ್ಳಗೆ. white.

ಬೊಳ್ಳಕೋಣ /*boḷḷa*/ ನಾವಿ. ಕೋಣ. a buffalo. ವಾ: ಬೊಳ್ಳ ಕೋಣ ಮೇಯಕೆ ಹೋವುಟ್ಟು.

ಬೊಳ್ಳಡೆ /*boḷḷaḍɛ*/ ನಾವಿ. ತುಂಬಾ ಬೆಳಕು ಬರುವ ಜಾಗ. a place which recieves more sunlight. ವಾ: ಕಾಪಿ ದೈಕೆ ಬೊಳ್ಳಡೆ ಇದ್ದರೆ ದೈ ಲಾಯ್ಕಲಿ ಬೆಳೆದು.

ಬೊಳ್ಳಾಜೆ /*boḷḷa:je*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಐವತ್ತೊಕ್ಲು ಗ್ರಾಮದ ಜಾಗ. 1. family, 2. lineage, 3. a locality in Aivattoklu village in Sullia Taluk of Dakshina Kannada District.

ಬೊಳ್ಳಾಡಿ /*boḷḷa:ḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಬೊಳ್ಳಿ[1] /*bɔḷḷi*/ ನಾ. ಹಗ್ಗ. rope. ವಾ: ಬಾಮಿ ಬೊಳ್ಳಿ ಕಟ್ಟಿ ಎಳಿನಿ.

ಬೊಳ್ಳಿ[2] /*bɔḷḷi*/ ನಾ. 1. ಲತೆ, 2. ಬಳ್ಳಿ. 1. a creeper, 2. a climber. **ದೈ ನೋಡಿ ಬೊಳ್ಳಿ ನೆಡಕು(ಗಾ). ಸಾವ್ರ ಬೊಳ್ಳಿ, ಸರ್ಪದಂತ ಬೊಳ್ಳಿ, ನೀರ್‌ಗೆ ಹಾಕಿರೆ ಒಂದೇ ಬೊಳ್ಳಿ – ಕೂದಲ್(ಒ).** ವಾ: ನೋಡಿಕ ನಡೆಕನ ಕಾಲಿಗೆ ಬೊಳ್ಳಿ ಸುತ್ತಿಕಂಬದು.

ಬೊಳ್ಳಿಗೆಣ್ಸು /*bɔḷḷigɛṇsu*/ ನಾ. 1. ಬಳ್ಳಿ ಗೆಣಸು, 2. ಸಿಹಿ ಗೆಣಸು. sweet potato. ವಾ: ಬೊಳ್ಳಿ ಗೆಣ್ಸು ಎಳ್ಳೊಕು.

ಬೊಳ್ಳಿಬದನೆ /*bɔḷḷibadanɛ*/ ನಾ. 1. ಬಳ್ಳಿಯಲ್ಲಿ ಆಗುವ ಬದನೆಕಾಯಿ, 2. ಸೀಮೆ ಬದನೆ. choyote squash, a climbing vine. ವಾ: ಬೊಳ್ಳಿ ಬದನೆಲಿ ಹೆಚ್ಚಿಗೆ ಮೊದ್ದ್ ನ ಗುಣಗ ಉಟ್ಟು.

ಬೊಳ್ಳಿಮುಟ್ಟುದು /*bɔḷḷimuṭṭudu*/ ಕ್ರಿ. 1. ಹಾವು ಕಡಿತ, 2. ವಿಷ ಮುಟ್ಟುವುದು. 1. bitten by snake, 2. spreading of poison. ವಾ: ಬೊಳ್ಳಿ ಮುಟ್ಟುದು ಆದರೆ ಹೆದ್‌ರಿಕೆ ಆಗದ್. ಪ: ಬಲ್ಲ್ ಮುಟ್ಟುನೆ(ತು)

ಬೊಳ್ಳಿಹಾಕಂಬದು /*bɔḷḷiha:kambadu*/ ಕ್ರಿ. ನೇಣು ಹಾಕಿ ಕೊಂಡು ಆತ್ಮಹತ್ಯೆ ಮಾಡಿಕೊಳ್ಳುವುದು. commiting sucide by hanging. ವಾ: ಬೊಳ್ಳಿ ಹಾಕಂಬದು ಪಾಪದ ಕೆಲ್‌ಸ.

ಬೊಳ್ಳಿನಂಗಾಗುಟ್ಟು /*bɔḷḷinaŋga:guṭṭu*/ ಕ್ರಿ. 1. ತೇಳ್ಳಗಾಗು, 2. ಬಡವಾಗು, 3. ಸಣಕಲು, 4. ಸಪೂರ(ತು). 1. to lose weight, 2. to slim down, 3. lean, 4. thin. ವಾ: ಸೆರಿ ಉಣ್ಣದೆ, ನಿದ್ದೆ ಮಾಡದೆ ನೋಡ್ ಹೆಂಗೆ ಬೊಳ್ಳಿನಂಗಾಗುಟ್ಟುತ.

ಬೊಳ್ಳಿಯವ್ವ /*bɔḷḷiyavva*/ ನಾ. ಸ್ತ್ರೀ ನಾಮ. Bolliyavva, name of a woman. ವಾ: ಬೊಳ್ಳಿಯವ್ವನ ತಂಗೆ ಅಲ್ಲಿ ಹೋತಿತ್.

ಬೊಳ್ಳುಬೂತ /*bɔḷḷubu:ta*/ ನಾ. ಅಣ್ಣ ದೈವ. Anna Daiva/deity. ವಾ: ಬೊಳ್ಳು ಬೂತತ ಒಂದು ದೈವ.

ಬೊಳ್ಳುನಾಯಿ /*bɔḷḷu*/ ನಾ. ನಾಯಿ. a white dog. ವಾ: ಕಳ್ಳರ್ ಬಾಕನ ಬೊಳ್ಳ್‌ನಾಯಿ ಬೊಗಳ್ದೆ.

ಬೊಳ್ಳುಮನೆ /*boḷḷumanɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಬೊಳ್ಳುಳ್ಳಿ /*bɔḷḷuḷḷi*/ ನಾ. ಬೆಳ್ಳುಳ್ಳಿ. garlic. **ಅಜ್ಜಿನ ತಲೆಗೆ ಗುದ್ದಿರೆ ಮೂವತ್ತ್ ಮೊಮ್ಮಕ್ಕ – ಬೊಳ್ಳುಳ್ಳಿ(ಒ).** ವಾ: ಬೊಳ್ಳುಳ್ಳಿನ ಎಲ್ಲ ಗೈಪುಗಳ್‌ಲೂ ಬಳ್‌ಸುವೆ.

ಬೊಳ್ಳೂರು /*boḷḷu:ru*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಮರಪಡ್ನೂರು ಗ್ರಾಮದ ಜಾಗ. 1. family, 2. lineage, 3. a locality in Amarapadnuru village in Sullia Taluk of Dakshina Kannada District.

ಬೊಳ್ಳೆಕಳ್ಳ್ /*bɔḷḷɛkaḷḷɨ*/ ಎಪ. ಸೇಂದಿ, ಇದನ್ನು ಕಾರೋಣ ಪೂಜೆಯಲ್ಲಿ ನೈವೇದ್ಯ ಇಡಲು

ಬಳಸುತ್ತಾರೆ. toddy, used as an offerting. ವಾ: ಎಡೆಗೆ, ಕಾರೊಣಕೆ ಬೊಳ್ಳೆಕಳ್ಳ್ನ ಇಸಿವೆ.

ಬೋಂಡು /*bo:ṇḍu*/ ನಾ. ಬುದ್ಧಿಶಕ್ತಿ. intelligence. ವಾ: ಅಂವಂಗೆ ಹಚ್ಚ ಬೋಂಡು ಕಮ್ಮಿ. ಪ: ಬೊಂಡು(ತು)

ಬೋಗುಣಿ /*bo:guṇi*/ ನಾ. 1. ತುರ್ತುಪರಿಸ್ಥಿತಿಯಲ್ಲಿ ಬಳಸುವ ಹಿತ್ತಾಳೆ ಬಟ್ಟಲು, 2. ತಾಮ್ರ ಅಥವಾ ಹಿತ್ತಾಳೆಯ ಪಾತ್ರೆ. 1. a brass plate, 2. a copper plate. ವಾ: ಹಿಂದೆಲ್ಲಾ ವಯಸ್ಸಾದವರ ಕಟ್ಲ್ ಕೆಳೆಗೆ ಬೋಗುಣಿ ಇರ್‌ತಿತ್ತ್.

ಬೋಗ್ಣಿ /*bɔgṇi*/ ನಾ. ಅಗಲ ಬಾಯುಳ್ಳ ಲೋಹದ ಪಾತ್ರೆ. a metal vessel with a wide mouth. ವಾ: ಬೋಗ್ಣಿನ ಕಟ್ಲ್ ಅಡಿಲಿ ಇಸಿಕ.

ಬೋಗ್ಯ /*bo:gya*/ ಕ್ರಿ. ಗೇಣಿಗೆ ಭೂಮಿಯನ್ನು ನೀಡುವುದು. to lease one's land. ವಾ: ಮನೆನ ಬೋಗ್ಯಕೆ ತಕಂಡದ್.

ಬೋಜ /*bo:ja*/ ನಾ. ಚಿಕ್ಕಪ್ಪ. an uncle. ವಾ: ನಿನ್ನೆ ಬೋಜ ಸಿಕ್ಕಿದ್ದೊ.

ಬೋಜಕಾರ /*bo:jaka:ra*/ ನಾ. 1. ವರನ ಜೊತೆಯಲ್ಲಿ ಮದುವೆ ಸಂದರ್ಭ ಇರುವ ಜೊತೆಗಾರ ಬೋಜಕಾರ, 2. ಅಡೋಳಿ. a groomsman or usher, a companion with the bridegroom. ವಾ: ಮೊದುವೆಲಿ ಹೈದನೊಟ್ಟಿಗೆ ಬೋಜಕಾರ ಇದ್ದವೆ.

ಬೋಜಕಾರ್ತಿ /*bo:jaka:rti*/ ನಾ. 1. ವಧುವಿನ ಜೊತೆ ಇರುವವಳು ಬೋಜಕಾರ್ತಿ, 2. ಅಡೋಳಿ. a bridesmaid, a companion with the bride. ವಾ: ಮೊದುವೆಲಿ ಗೂಡೆನೊಟ್ಟಿಗೆ ಬೋಜಕಾರ್ತಿ ಇದ್ದವೆ.

ಬೋಜಕ್ಕ /*bo:jakka*/ ನಾ. ವ್ಯಕ್ತಿ ಹೆಸರು, ಸ್ತ್ರೀ ವಾಚಕ. feminine given name. ಪ: ಬೋಜಮ್ಮ

ಬೋಜಪ /*bo:japa*/ ನಾ. ತಂದೆಯ ಹಿರಿಯ ತಮ್ಮ. an uncle. ವಾ: ಬೋಜಪ ಈಗ ಎಲ್ಲಿ ಹೋಗೊಳೊ?

ಬೋಜಪ್ಪ /*bo:jappa*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. masculine given name. ಪ: ಬೋಜ, ಬೋಜು

ಬೋಜಮ್ಮ /*bo:jamma*/ ನಾ. ಮಾವನ ಸಹೋದರಿ. maternal uncle's sister. ವಾ: ಬೋಜಮ್ಮ ಬನ್ನೆತ ಹೇಳ್ತಿತ್.

ಬೋಜರ /*bho:jara*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಬೋಜವ /*bo:java*/ ನಾ. ಅಮ್ಮನ ಹಿರಿಯ ತಂಗಿ. aunt. ವಾ: ಬೋಜವ ಈಗ ಇಲ್ಲೆ.

ಬೋಟಿ /*bo:ṭi*/ ಎಪ. ಕರುಳು. intestine. ವಾ: ಕುರಿ ಬೋಟಿ ರುಚಿಗಡ.

ಬೋಣಿ /*bo:ṇi*/ ನಾ. ವ್ಯಾಪಾರಿಯ ದಿನದ ಮೊದಲ ವ್ಯಾಪಾರದ ನಗದು ಸ್ವೀಕಾರ. handsel, money recieved from the first customer of the day. ವಾ: ಇಂದ್ ಬೋಣಿ ಆತ್‌ಲೆ.

ಬೋದ /*bo:da*/ ನಾ. 1. ಸ್ಮೃತಿ, 2. ಎಚ್ಚರ. 1. awareness, 2. consciousness. ವಾ: ಬೋದ ಇಟ್ಟ್ ಕೆಲ್‌ಸ ಮಾಡೊಕು.

ಬೋದಗೆಡ್ /*bo:dagɛḍɨ*/ ಕ್ರಿ. ಪ್ರಜ್ಞೆ ಕಳೆದುಕೊಳ್ಳು. to lose consciousness. ವಾ: ಬಿದ್ದಾಕನ ಬೋದಗೆಡ್‌ತ್.

ಬೋದಾಳ /*bo:da:ḷa*/ ಕ್ರಿವಿ. 1. ಮಂದ ಬುದ್ಧಿ, 2. ಬೋಳ, 3. ಹೆಡ್ಡ, 4. ಪೆದ್ದ, 5. ಬೈಗುಳ ಪದ. 1. thickheaded man, 2. a stupid man, 3. an idiotic man, 4. an expletive. ವಾ: ಅಂವ ಬಾರಿ ಬೋದಾಳ, ಹೇಳ್ದೊಂದ್ ಗೊತ್ತಾಲೆ.

ಬೋದಾಳ್ತಿ /*bo:da:ḷti*/ ನಾ. 1. ಹೆಡ್ಡಿ, 2. ಬೈಗುಳ ಪದ. an idiotic woman. ವಾ: ಬೋದಾಳ್ತಿ ಹೆಣ್ಣ್ ಸುಮ್ಮನಿದ್ದದೆ.

ಬೋಬು /*bo:bu*/ ನಾ. ಮಭಾ 1. ಮೊಲೆ ಹಾಲು, 2. ಪುಟ್ಟ ಕಂದಮ್ಮಗಳಿಗೆ ಕುಡಿಸುವ ಹಾಲು. 1. breast milk (in the vocabulary of children), 2. milk that is given to small children. ವಾ: ಅಮ್ಮಾ ಕುಡೆಕೆ ಬೋಬು ಬೇಕ್.

ಬೋಮಾನ /*bo:ma:na*/ ನಾವಿ. 1. ಬಹುಮಾನ, 2. ಬೊಮ್ಮಣ. a prize. ವಾ: ಆಟಾಡಿ ಗೆದ್ದದ್ಕೆ ಬೋಮಾನ ಸಿಕ್ತ್.

ಬೋರಡ್ಕ ಕನ್ನೆಜಾಲು /*bo:raḍka kanneja:lu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಪೆರುವಾಜೆ

ಗ್ರಾಮದ ಜಾಗ. a locality in Peruvaje village in Sullia Taluk of Dakshina Kannada District.

ಬೋರುಗುಡ್ಡೆ */bo:ruguḍḍe/* ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಸುಳ್ಯ ನಗರದ ಜಾಗ. a locality in Suḷya Nagara village in Sullia Taluk of Dakshina Kannada District.

ಬೋರ್ */bo:ra:dɛ/* ನಾ. ಎಪ. 1. ಬೇಸರ, 2. ಮನಸ್ಸಿಗೆ ಖಾಲಿ ಖಾಲಿ ಎನಿಸುವುದು. 1. sadness, 2. feeling of emptyness. ವಾ: ಮಾಡಿಕೆ ಕೆಲ್ಸ ಇಲ್ಲರೆ ಬೋರಾದೆ. ಪ: ಬೋರಾದೆನ – ಬೇಜಾರಾಗುತ್ತದೆಯ

ಬೋಲಾನಾ */bo:la:na:/* ನಾ. 1. ಕುಟುಂಬ, 2. ಮನೆತನ. 1. family, 2. lineage.

ಬೋಲ್ಟ್ */bo:lṭi/* ನಾ. ಎಪ. 1. ಚಿಲಕ, 2. ಅಗುಳಿ, 3. ತಾಳು. latch. ವಾ: ಬಾಗ್ಲಿದ್ ಬೋಲ್ಟ್ ಹಾಕಿತ?

ಬೋಲ್ತಜೀರಾ */bo:ltaji:ra:/* ನಾ. 1. ಕುಟುಂಬ, 2. ಮನೆತನ. 1. family, 2. lineage.

ಬೋವಿ */bo:vi/* ನಾ. 1. ಬೋವಿ ಜನಾಂಗ, 2. ರಾಜ ರಾಣಿಯನ್ನು ಪಲ್ಲಕ್ಕಿಯಲ್ಲಿ ಹೊತ್ತುಕೊಂಡು ಹೋಗುವವರು. 1. Bovi tribe, 2. palanquin bearers of king/queen. ವಾ: ಬೋವಿ ಜೆನಾಂಗತ ವಳೊ.

ಬೋಸುಡಿಕೆ */bo:suḍikɛ/* ನಾ. ಬೈಗಳ ಪದ. an expletive term.

ಬೋಳ[1] */bo:ḷa/* ನಾವಿ. 1. ಹೆಡ್ಡ, 2. ಬೈಗುಳ ಪದ, 3. ಕೆಪ್ಪ. 1. an idiot, 2. an expletive, 3. a deaf. ವಾ: ಬೋಳನಾಂಗೆ ಆಡಿರೆ ಆಕಿಲೆ, ಹಞ್ಞ ಉಸಾರಿರೊಕು.

ಬೋಳ[2] */bo:ḷa/* ನಾ. 1. ಮಂದ ಬುದ್ಧಿಯವ, 2. ಬೋಧಾಳ. 1. a thickheaded man, 2. a dumbwit. ವಾ: ಬೋಳ ತಲೆ ಅಡಿಗೆ ಹಾಕಂಡ್ ಹೋದೆ. ಪ: ಬೋಳಂಗ – ಬೋಳರು

ಬೋಳ[3] */bo:ḷa/* ನಾ. ಬಿಳಿ ಬಣ್ಣದ ಎತ್ತು/ಕೋಣ. a white bullock or buffalo.

ಬೋಳ[4] */bo:ḷa/* ನಾ. ದ್ರವ ರೂಪದಲ್ಲಿರುವ ರಾಗಿಯಿಂದ ಮಾಡಿದ ಗಂಜಿ. a liquid dish made of ragi, finger millet. ವಾ: ಬೋಳ ಕುಡ್ದ್ ಹೊಟ್ಟೆ ತಣ್ಣಂಗಾತ್.

ಬೋಳ[5] */bo:ḷa/* ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಎಡಮಂಗಲ ಗ್ರಾಮದ ಜಾಗ. a locality in Edamangala village in Sullia Taluk of Dakshina Kannada District.

ಬೋಳನ */bo:ḷana/* ನಾ. 1. ಕುಟುಂಬ, 2. ಮನೆತನ. 1. family, 2. lineage.

ಬೋಳಿಹಸ್ */bo:ḷihasɨ/* ನಾ. ಕೊಂಬಿಲ್ಲದ ಹಸು. a cow without horns. ವಾ: ಅಲ್ಲಿರ್‌ದು ಬೋಳಿ ಹಸ್ ನಮ್ಮದ್.

ಬೋಳಿ[1] */bo:ḷi/* ನಾ. ಹೆಣ್ಣು ಕಡವೆ. female stag. ವಾ: ಬೋಳಿ ನೋಡಿಕೆ ಲಾಯ್ಕಲ.

ಬೋಳಿ[2] */bo:ḷi/* ನಾ. ಏನೂ ತಿಳಿಯದವಳು. an innocent girl. ವಾ: ಅದೊಂದ್ ಬೋಳಿ ಗೂಡೆ.

ಬೋಳಿ[3] */bo:ḷi/* ನಾ. ಬೈಗುಳ. an expletive term. **ಅಯ್ಯೆ ಪಡಾರಿ ಮಗ ಬೋಳಿ – ಕಡ್ಕಲ್ಲ್(ಬ).** ವಾ: ನಂಗೆ ಬೋಳಿತ ಹೇಳಿಯ?

ಬೋಳಿ[4] */bo:ḷi/* ನಾ. ತಲೆಯಲ್ಲಿ ಕೂದಲು ಇಲ್ಲದವಳು. a bald woman. ವಾ: ಕೂದಲೆಲ್ಲ ಹೋದಕೆ ನನ್ನ ಬೋಳಿತ ಕರ್‌ಯದು.

ಬೋಳಿಮಙ್ಣ */bo:ḷimaŋŋa/* ನಾ. ಬೈಗುಳ ಪದ. 1. son of a widow, 2. an orphan. ವಾ: ಬೋಳಿ ಮಙ್ಣತ ಬೊಯ್ಯಕಾಗದ್.

ಬೋಳುಮಾಳಿಗೆ */bo:ḷuma:ḷigɛ/* ನಾ. ಮಾಳಿಗೆಯಲ್ಲಿರುವ ತೆರೆದ ಕೋಣೆ. a room on the attick. ವಾ: ಬೋಳು ಮಾಳಿಗೆಗೆ ಸೂರ್‌ಯನ ಬೆಳ್ಕ್ ಲಾಯ್ಕಲಿ ಬಿದ್ದದೆ.

ಬೋಳುಂವ */bo:ḷunva/* ನಾ. (ಮೆತ್ತಗಿನ) ಹಲಸಿನ ಹಣ್ಣಿನ ಒಂದು ಪ್ರಭೇಧ. a variety of jackfruit. ವಾ: ಬೋಳು ಮಾಳಿಗೆಗೆ ಸೂರ್‌ಯನ ಬೆಳ್ಕ್ ಲಾಯ್ಕಲಿ ಬಿದ್ದದೆ.

ಬೋಳ್ */bo:ḷɨ/* ಕ್ರಿವಿ. 1. ಬರಿದಾದ ಸ್ಥಿತಿ, 2. ಖಾಲಿ ಖಾಲಿ ಇರುವ ಸ್ಥಿತಿ. 1. empty, 2. empty space. ವಾ: ಮರ, ಕಾಡ್ ಕಡ್ದ ಮೇಲೆ ತೋಟ,ಬಾಣೆ, ಗದ್ದೆಯೆಲ್ಲ ಬೋಳ್ ಕಂಡದೆ.

ಬೋಳ್‌ಹೀರೆ */bo:ḷɨhi:rɛ/* ನಾ. ಒಂದು ಜಾತಿಯ ಬಳ್ಳಿಯಲ್ಲಿ ಬಿಡುವ ನಯವಾದ ಮೇಲ್ಮೈ

ಹೊಂದಿರುವ ಹೀರೆಕಾಯಿ. ridge gourd with soft outer skin. ವಾ: ಬೋಳ್ ಹೀರೆ ಬೆಳ್ದರೆ ಚೇರಿಯಾದೆ, ಮೀಯಕನ ಮೈ ಉಜ್ಜಿಕೆ ಬಳ್ಸುವೆ, ಪಾತ್ರೆ ಉಜ್ಜಿಕೆ ಸ ಬಳ್ಸುವೆ, ಬೋಳ್ ಹೀರೆನ ಗೈಪು ಮಾಡಿವೆ.

ಬೋಳ್ಸ್[1] /*bo:ḷsɨ*/ ಕ್ರಿ. 1. ಬೋಳಿಸು, 2. ಬೋಳುಮಾಡು, 3. ಬರಿದುಮಾಡು. 1. Shave, 2. Shear, 3. strip off. ವಾ: ದರ್ಮಕೆ ಸಿಕ್ಕಿರೆ ಬೋಳ್ಸಿಕೆ ತುಂಬ ಜನ ಒಳೊ. **ಬೋಳ್ಸಿತ್** /*bo:ḷsitɨ*/ 1. ಹಣ, ಆಸ್ತಿ ಪಡೆದು ಮೋಸ ಮಾಡು, 2. ವಂಚಿಸು, 3. ನಷ್ಟ ಮಾಡು. 1. to swindle, 2. to cheat, 3. to incur loss. ವಾ: ಕೆಣಿ ಮಾಡಿ ಎಲ್ಲನು ನನ್ನ ಕೈಯಿಂದ ಎಳ್ಕಂಡ್ ಲಾಯ್ಕಲಿ ಬೋಳ್ಸಿತ್.

ಬೋಳ್ಸ್[2] /*bo:ḷsɨ*/ ಕ್ರಿ. 1. ಕ್ಷೌರ ಮಾಡಿಕೊ, 2. ತಲೆಗೂದಲನ್ನು ತೆಗೆ. 1. to shave one's beard, 2. to tonsure. **ಕೆಲ್ಸ ಇಲ್ಲದ ಹಜಾಮ ಹೆಣ್ಣ್ ನ ತಲೆ ಬೋಳ್ಸಿತ್ ಗಡ(ಗಾ).** ವಾ: ಕಾವೇರಿಲಿ ಪಿಂಡ ಹಾಕಿಕನ ತಲೆ ಬೋಳ್ಸುದು. ಪ: ಬೋಳ್ಸಿದ – ಬೋಳಿಸಿದ; ಬೋಳ್ಸೊಕು – ಬೋಳಿಸಬೇಕು

ಬೌಸ /*bausa*/ ಅ. 1. ಬಹುಶಃ. probably. ವಾ: ಅವು ಬೊವುಸ ಇಂದ್ ಬಾಕಿಲೆತ ಕಂಡದೆ.

ಬ್ಯಾಂಗಮರ /*bya:ŋgamara*/ ನಾ. ಹೊನ್ನೆ ಮರ. Indian Beach tree. ವಾ: ಬ್ಯಾಂಗ ಮರಲಿ ಹೂವು ಬುಡಕನ ಹುಲಿಕಡ್‌ಂದಿ ಸತ್ತದೆಗಡ. ಪ: ಬೇಂಗಮರ

ಬ್ಯಾಗ /*bya:ga*/ ನಾ. 1. ಬೇಗ, 2. ತ್ವರೆ, 3. ಶೀಘ್ರ, 4. ವೇಗ. 1. speed, 2. swiftness, 3. haste, 4. pace. ವಾ: ಬ್ಯಾಗ ಬನ್ನಿ ಮಕ್ಕಳೆ.

ಬ್ಯಾಗ್ /*bya:gɨ*/ ನಾ. ಎಪ. 1. ಚೀಲ, 2. ಕಾಗದ, ಬಟ್ಟೆ, ಪ್ಲಾಸ್ಟಿಕ್ಕುಗಳಿಂದ ಮಾಡಿದ ಕೈಚೀಲ. 1. a bag, 2. a cloth/paper bag. ವಾ: ಬ್ಯಾಗ್‌ನ ಆಣಿಲಿ ಕೋಸಿಡ್.

ಬ್ಯಾಜರ /*bya:jara*/ ನಾ. 1. ದುಃಖ, 2. ಬೇಸರ. 1. sorrow, 2. grief. **ಕೆಟ್ಟ ಮೇಲೆ ಬುದ್ಧಿ ಸತ್ತ ಮೇಲೆ ಬ್ಯಾಜರ(ಗಾ).** ವಾ: ಸುಮ್ಮನೆ ಕೂರ್‌ದುತೇಳಿರೆ ಬ್ಯಾಜರ ಆದೆ. ಪ: ಬ್ಯಾಜಾರು

ಬ್ಯಾಟೆ /*bya:ṭɛ*/ ನಾ. 1. ಬೇಟೆ, 2. ಶಿಕಾರಿ, 3. ಕಾಡಿನಲ್ಲಿ ಮೃಗಗಳ ಅರಸುವಿಕೆ. 1. hunting, 2. hunting 3. searching for animals in the forest. **ಕೊಡಿಲಿ ಬ್ಯಾಟೆ ಮಾಡ್ಲು, ಅಡಿಲಿ ಅಚ್ಚ್‌ಕಟ್ಟ್ ಮಾಡ್ದು – ಎಲೆ ಕೊಯ್ದೊದು(ಒ).** ವಾ: ಹಿಂದೆಲ್ಲ ಬೇಟೆ ಜೋರಿತ್.

ಬ್ಯಾಡ /*bya:ḍa*/ ಕ್ರಿ. 1. ಬೇಡ, 2. ಸಲ್ಲದು, 3. ಕೂಡದು, 4. ಅಪೇಕ್ಷೆ ಇಲ್ಲ. 1. to avoid, 2. to abjure, 3. to abstain, 4. not to have expectation. **ಗಂಡಂಗೆ ಬ್ಯಾಡಾದ್ ಗುಂಡ್ಕಲ್ಲಿಗು ಬ್ಯಾಡ(ಗಾ).** ವಾ: ನಂಗೆ ಎಂತನು ಬೇಡತ ಎಸ್ಟ್ ಸೆರಿ ಹೇಳ್ದು.

ಬ್ಯಾನೆ /*bya:nɛ*/ ನಾ. 1. ನೋವು, 2. ರೋಗ, 3. ವ್ಯಾಧಿ, 4. ಯಾತನೆ, 5. ಶೂಲೆ. 1. pain, 2. disease, 3. a disorder, 4. an ache, 5. pang. **ಗಾಳಿಗೆ ಗುದ್ದಿ ಮೈ ಬ್ಯಾನೆ ಮಾಡಿಕ್ಕಂಡಂಗೆ(ಗಾ).** ವಾ: ಸೊವುದೆ ಹೊತ್ತ್ ಹೊತ್ತ್ ಮೈಯೆಲ್ಲ ಬಾರಿ ಬೇನೆ.

ಬ್ಯಾಪಡ್ಜೋರೆ /*bya:paḍco:rɛ*/ ನಾ. 1. ಒಂದು ಜಾತಿ ಹಕ್ಕಿ, 2. ಚೊರೆಕ್ಕಿ, 3. ಬೇಪರ್ ಪುದ(ತು). a variety of bird/a small pigeon. ವಾ: ಬ್ಯಾಪಡ್ಜೋರೆ ಪಾರಿವಾಳದಂಗೆ ಇರೊ ಸಣ್ಣ ಹಕ್ಕಿ.

ಬ್ಯಾಪರ /*bya:para*/ ನಾ. ಮತ್ತು ಬರಿಸುವ ವಿಷಯುಕ್ತ ಕಾಯಿ, ನದಿಯಲ್ಲಿ ಮೀನು ಹಿಡಿಯಲು ಬಳಸುತ್ತಾರೆ. an intoxicating nut. ವಾ: ಬ್ಯಾಪರತೇಳ್ದು ವಿಸದ ಕಾಯಿಗಡ, ಅದರ್ ಹಳ್ಳ ಮೀನ್ ಹಿಡಿಯಕೆ ಬಳ್ಸ್‌ವೆ.

ಬ್ಯಾಪರೆಮರ /*bya:parɛ mara*/ ನಾ. ಒಂದು ವಿಷದ ಕಾಯಿಯ ಮರ. a tree with poisonous nuts. ವಾ: ಬ್ಯಾಪರೆ ಮರಲಿ ವಿಸದಕಾಯಿ ಬುಟ್ಟದೆ.

ಬ್ಯಾರಿ /*bya:ri*/ ನಾ. ಕರಾವಳಿ ಭಾಗದಲ್ಲಿ ಕಂಡು ಬರುವ ಮುಸ್ಲಿಂ ಸಮುದಾಯದ ಒಂದು ಪಂಗಡ, ಬೇರ ಮಾಡುವವ ಬ್ಯಾರಿ, ಬೇಹಾರಿ>ಬ್ಯಾರಿ. Beary community, lives in western coast. ವಾ: ಬ್ಯಾರಿಗಳ ಬಾಸೆ ನಿಂಗೆ ಗೊತ್ತಲ ಮಾತಾಡ್ ಕೇಳ್ನೊ.

ಬ್ಯಾರೆ /*bya:rɛ*/ ಅ. 1. ಬೇರೆ, 2. ಪ್ರತ್ಯೇಕ. 1. seperate, 2. seperateness. ವಾ: ಅವು ನಮ್ಮೊಟ್ಟಿಗೆ ಇಲ್ಲೆ ಬ್ಯಾರೆ ಇರ್‌ದು. ಪ: ಬ್ಯಾರೆ ಬ್ಯಾರೆ – ಬೇರೆ ಬೇರೆ

ಬ್ಯಾರೆಕಡೆ /*bya:rɛ kaḍɛ*/ ಅ. ಬೇರೆ ಕಡೆ. in another place. ವಾ: ಇಲ್ಲಿ ಸೆರಿಯಾಲೆತ ಬ್ಯಾರೆ ಕಡೆ ಹೋದೊ.

ಬ್ಯಾರೆತರ /*bya:rɛtara*/ ಅ. ಬೇರೆ ರೀತಿ. in another way. ವಾ: ಬ್ಯಾರೆತರತ ಹೇಳಿರೆ ಹೆಂಗೆತ ಒಮ್ಮೆ ಹೇಳಕ್ಕ.

ಬ್ಯಾರೆವು /*bya:rɛvu*/ ಅ. ಬೇರೆಯವರು. others. ವಾ:

ಬ್ಯಾರೆವು ಸಾವ್ರ ಹೇಳಿವೆ, ನಮ್ಮ ಬುದ್ದಿ ನಮ್ಮ ಕೈಲಿರೊಕು, ನಮ್ಮ ಬುದ್ದಿ ಲದ್ದಿ ತಿಂದರೆ ಬೇರೆಯವರ ಹೇಳಿ ಸುಕ ಇಲ್ಲೆ.

ಬ್ಯಾವರ್ಸಿ[1] /*bya:varsi*/ ನಾ. 1. ಬೇವರ್ಸಿ, 2. ಬೈಗುಳ ಪದ, 3. ಅನಾಥ ವ್ಯಕ್ತಿ, 4. ಕೆಟ್ಟ ವ್ಯಕ್ತಿ ಎಂಬ ಹೀನಾರ್ಥಗಳಲ್ಲಿ ಪ್ರಯೋಗವಾಗುವ ಒಂದು ಬೈಗಳು. an abusive term – a disgusting fellow. ವಾ: ಬ್ಯಾವರ್ಸಿಗ ಇಲ್ಲೆಲ್ಲ ಬಂದ್ಕಂಡ್ ಎಲ್ಲ ನೆಗ್ದ್ ಬೀಳ್ಸಿದೊ.

ಬ್ಯಾವರ್ಸಿ[2] /*bə:varsi*/ ನಾ. 1. ಸೂಳೆಮಗ, 2. ವೇಶ್ಯೆಗೆ ಹುಟ್ಟಿದ ವ್ಯಕ್ತಿ. 1. a bastard, 2. an illegitimate person

ಬ್ಯಾಸಿಗೆ /*bya:sigɛ*/ ನಾ. 1. ಬೇಸಗೆ, 2. ಬಿಸಿಲುಕಾಲ, 3. ವೈಶಾಖ. 1. summer, 2. summer season, 3. Vaishaka month. ವಾ: ಬ್ಯಾಸಿಗೆಲಿ ನೀರ್‌ಗೆ ಬಾರಿ ಬಜ ಬರೊಕು.

ಬ್ಯಾಳೆ /*bya:ḷɛ*/ ನಾ. 1. ಬೇಳೆ, 2. ತೊಗರಿಬೇಳೆ, 3. ದ್ವಿದಳ ಧಾನ್ಯದ ಒಡೆದ ಭಾಗ. Pigeon Pea, a lentil. ವಾ: ಬ್ಯಾಳೆನ ರಾತ್ರೆನೆ ಬಿಸಿ ನೀರ್‌ಲಿ ಪದ್ನಿಕೆ ಹಾಕಿಸಿರೆ, ಗೈಪು ಮಾಡಿಕನ ತಿಂದರೆ ಹೊಟ್ಟೆಲಿ ಗ್ಯಾಸ್ ಆದುಲೆಗಡ.

ಬ್ರಾಂತಿ /*bra:nti*/ ನಾ. 1. ಭ್ರಮೆ, 2. ತಪ್ಪು ತಿಳುವಳಿಕೆ. 1. illusion, 2. misunderstanding. ವಾ: ನಿಂಗೆಲ್ಲೊ ಬ್ರಾಂತಿ ಕಂಡದೆ.

ಬ್ರಾಹ್ಮಣ /*bra:hmaṇa*/ ನಾ. ಚಾತುರ್ವರ್ಣಗಳಲ್ಲಿ ಒಂದು. 1. one of the four varna's, 2. a brahmin. ವಾ: ಬ್ರಾಹ್ಮಣ ಪೂಜೆ ಮಾಡ್ತಾ ಉಟ್ಟು.

ಬ್ರಾಹ್ಮಣದಾರೆ /*bra:hmaṇada:rɛ*/ ನಾ. ಕೊಡಗಿನ ಅರೆಭಾಷೆ ಗೌಡರಲ್ಲಿ ಪ್ರಾಚೀನ ಕಾಲದಲ್ಲಿ ಬ್ರಾಹ್ಮಣರ ನೇತೃತ್ವದಲ್ಲಿ ಧಾರೆ ಎರೆಯುವ ಕ್ರಮವಿತ್ತು, ಆದರೆ ಒಮ್ಮೆ ಹೊಳೆ ದಾಟಲಾಗದೆ ಬ್ರಾಹ್ಮಣನೊಬ್ಬ ಮುಹೂರ್ತಕ್ಕೆ ಸರಿಯಾಗಿ ಬರಲಾಗದೆ, ತಂದೆಯೇ ಮಗಳ ಧಾರೆ ಎರೆಯುವ ಬಂಟಧಾರೆ ಅಸ್ತಿತ್ವಕ್ಕೆ ಬಂತು ಎಂದು ಹೇಳುತ್ತಾರೆ. even among Arebhase gowda's, a brahmin priest used to officiate the ritual of giving aways one's daughter, but it was abandoned, since a brahmin priest couldn't reach in time by crossing the river to officiate the wedding. Now, father of the bride offici. ವಾ: ಹಿಂದೆ ಗೌಡುಗಳ್‌ಲಿ ಬ್ರಾಹ್ಮಣ ದಾರೆ ನಡಿತಿತ್.

ಬ್ರಾಹ್ಮಿ ಎಲೆ /*bra:hmi elɛ*/ ನಾ. 1. ಒಂದೆಲಗ, 2. ಬಿಡಿಬಿಡಿಯಾಗಿ ಒಂದೊಂದೇ ಎಲೆ ಇರುವ ಸಣ್ಣದಾದ ಉದ್ದ ದಂಟಿನ ಗಿಡ. Indian pennywort, brahmi plant. ವಾ: ಬ್ರಾಹ್ಮಿಎಲೆನ ದಿನ ಹೊತಾರೆ ನಾಕೈದ್ ಎಲೆನ ಕಾಲಿ ಹೊಟ್ಟೆಗೆ ತಿನ್ನೊಕು. ನೆಂಪಿನ ಸಕ್ತಿ ಹೆಚ್ಚಿದೆಗಡ.

ಬ್ರೇಂಡಿ /*bre:ṇḍi*/ ನಾ. ಎಪ. ಬ್ರಾಂಡಿ. brandi. ವಾ: ಬ್ರಾಂಡಿ ಕುಡೆಕೆ ಕೊಟ್ಟದ್.

ಬ್ಲೇಡ್[1] /*ble:ḍɨ*/ ನಾ. ಎಪ. 1. ಬ್ಲೇಡು, 2. ಎರಡೂ ಕಡೆ ಬಾಯಿ ಇರುವ ವಸ್ತು. 1. blade, 2. a double edged sharp tool. ವಾ: ಬ್ಲೇಡ್‌ನ ಎಲ್ಲಿಸಿದ?

ಬ್ಲೇಡ್[2] /*ble:ḍɨ*/ ಕ್ರಿವಿ. ಬೋಳಿಸು. to swindle. ವಾ: ಅಂವನ ಅಂಗ್ಡಿಗೆ ಹೋದರೆ ಬ್ಲೇಡ್ ಹಾಕಿದೆ.

ಮ

ಮಂಕಣಿ /*maŋkaṇi*/ ಕ್ರಿವಿ. ಮುಖ ಮೇಲೆ ಬೆನ್ನು ಕೆಳಗೆ ಮಾಡಿ ಮಲಗುವುದು. 1. to sleep in a posture where one's front of the body touches the ground, 2. a prone position, 3. upside down;(lying or placing anything), 4. facing downward. ವಾ: ಮಂಕಣಿ ಮೊಲ್‌ಗ್.

ಮಂಕಣೆ /*maŋkaṇɛ*/ ನಾ. ಅಂಗಾತ. supine position. ವಾ: ಕೂಸು ಕಂಕಣೆ ಮಂಕಣೆ ಮೊಗ್ಗಿದೆ. ಪ: ಮಲಂಕನೆ(ತು)

ಮಂಕುಡೆ /*maŋkuḍɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮಂಕ್ /*maŋkɨ*/ ನಾವಿ. 1. ಉದಾಸೀನ ಮನೋಭಾವ, 2. ನಿರಾಸಕ್ತಿ, 3. ಮಂಕು ಬಡಿದ, 4. ಗರಬಡಿದ. 1. aloof, 2. uninterested, 3. indolence, 4. bewildered. ವಾ: ಯಾಕೊ ಇಂದ್ ಮಂಕ್, ಮನ್‌ಸಿಗೆ ಎಂತನೂ ಬೇಡತ ಆದೆ.

ಮಂಕ್‌ಟೆ /*maŋkiṭɛ*/ ಕ್ರಿವಿ. 1. ಮುದ್ದುಮಾಡು, 2. ಮುದ್ದಿಸು, 3. ಕೊಂಡಾಟ. 1. to papmper, 2. to show affection, 3. propensity. ವಾ: ಮಕ್ಕಳ ಎಷ್ಟ್ ಮಂಕ್‌ಟೆ ಮಾಡೊಕೊ ಅಷ್ಟೆ ಮಾಡೊಕು, ಹೆಚ್ಚಿ ಆದರೆ ಮುಂದಕೆ ನಮಿಗೆ ಬಂಗ ಆದು.

ಮಂಕ್‌ಣಿ /*maŋkɨṇi*/ ಕ್ರಿವಿ. 1. ಅಂಗಾತ, 2. ಬೆನ್ನು ಕೆಳಗೆ ಮುಖ ಮೇಲೆ ಮಾಡಿ ಮಲಗು. supine position. ವಾ: ಕೂಸು ಮಂಕ್‌ಣಿ ಮೊಲ್‌ಗಿಟು.

ಮಂಗ /*maŋga*/ ನಾ. 1. ಮರ್ಕಟ, 2. ಕೋತಿ, 3. ಕಪಿ, 4. ಪ್ರೈಮೇಟ್ ಗಣಕ್ಕೆ ಸೇರಿದ ಸಾಮಾನ್ಯವಾಗಿ ವೃಕ್ಷವಾಸಿಯಾದ ಬಾಲವುಳ್ಳ ಪ್ರಾಣಿ. a monkey, a primate. ವಾ: ಮಂಗ ಮರಂದ ಮರಕೆ ಹಾರ್‌ದೆ. ಪ: ಮಂಗಂಗ – ಕೋತಿಗಳು;

ಮಂಗರೆ /*maŋgarɛ*/ ನಾ. ಕಾಡು ದಾಳಿಂಬೆ. mountain pomegranate.

ಮಂಗಲ್ಪಾಡಿ /*maŋgalpa:ḍi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಮರಪಡ್ನೂರು ಗ್ರಾಮದ ಜಾಗ. a locality in Amarapadnuru village in Sullia Taluk of Dakshina Kannada District.

ಮಂಗಳೂರಿಟ್ಟಿಗೆ /*maŋgaḷu:riṭṭigɛ*/ ನಾ. ಆವೆ ಮಣ್ಣಿನಿಂದ ಮಾಡುವ ಇಟ್ಟಿಗೆ, ಮಂಗಳೂರಿನಲ್ಲಿ ಈ ಮಣ್ಣಿನಿಂದ ಹೆಂಚು ಮತ್ತು ಇಟ್ಟಿಗೆಗಳನ್ನು ತಯಾರಿಸುತ್ತಾರೆ. Mangalore bricks/tiles made of clay. ವಾ: ಮಂಗಳೂರಿಟ್ಟಿಗೆ ಮೊಣ್ಣ್‌ನ ಇಟ್ಟಿಗೆಗಿಂತ ದೊಡ್ಡದ್.

ಮಂಗುಕೊತ್ತಿ /*maŋgukotti*/ ನಾ. ಹೆಣ್ಣುಬೆಕ್ಕು. a female cat. ವಾ: ಮಂಗು ಕೊತ್ತಿ ಮೂರ್ ತಿಂಗಳಿಗೊಮ್ಮೆ ಮೊರಿ ಹಾಕಿದೆ.

ಮಂಗ್ಳಾರ /*maŋgḷa:ra*/ ನಾ. 1. ಮಂಗಳವಾರ, 2. ಕುಜವಾರ, 3. ವಾರದ ಏಳು ದಿನಗಳಲ್ಲಿ ಮೂರನೆಯ ದಿನ. Tuesday, the third day of the week. ವಾ: ಮಂಗ್ಳಾರ, ಸುಕ್ರಾರ ಮನೆಲಿ ಮೆಣ್ಸ್ ಹೊರೆಕಾದ್. ಕಾರ ಬಾಕಾದ್‌ತ ಹೇಳಿವೆ.

ಮಂಗ್ಳಾರ್ತಿ[1] /*maŋgḷa:rti*/ ಕ್ರಿವಿ. 1. ಮಂಗಳಾರತಿ, 2. ದೇವರ ಪೂಜೆಯ ಕಾಲದಲ್ಲಿ ಬತ್ತಿ, ಕರ್ಪೂರಗಳನ್ನು ಹಚ್ಚಿ ಆರತಿಯನ್ನು ಬೆಳಗುವುದು, 3. ಶುಭಕಾರ್ಯದಲ್ಲಿ ಎತ್ತುವ ಆರತಿ. a custom of waving burning camphor and lamp infront of the deity during auspicious occassions. ವಾ: ಮಂಗ್ಳಾರ್ತಿ ತಕಂಡರಿಯ?

ಮಂಗ್ಳಾರ್ತಿ[2] /*maŋgḷa:rti*/ ನಾವಿ. 1. ಬೈಗುಳ ಸಿಗು, 2. ಅಪಮಾನ, 3. ಮುಖಭಂಗ. Disgrace. ವಾ: ಅಂವಂಗೆ ಒಳ್ಳೊ ಮಗ್ಳಾರ್ತಿ ಮಾಡ್ದೊ.

ಮಂಚ /*maŋca*/ ನಾ. ಮಲಗಲು ಬಳಸುವ ನಾಲ್ಕು ಕಾಲುಗಳುಳ್ಳ ಮರ ಅಥವಾ ಲೋಹದ ಸಾಧನ. a metal/wooden cot. ವಾ: ಅಂವ ಮಂಚದ ಮೇಲೆ ಮೊಲ್ಗಿತ್.

ಮಂಚಣ್ಣ /*maɲcaṇṇa*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. masculine given name. ಪ: ಮಂಚ

ಮಂಚಮು /*maŋcama*/ ನಾ. 1. ಮಂಚ, 2. ಭೂತದ ಭಂಡಾರ ಇಡುವ ಮರದ ಸಾಧನ. 1. a cot, 2. a store to keep the paraphernelia of deity/spirit/bhuta. ವಾ: ಕೂಸ್ ಮಂಚಮಲಿ ಮೊಲ್ಗಿಟ್ಟು.

ಮಂಚಮೆ /*maŋcamɛ*/ ನಾ. ಮಂಚ. a cot. ವಾ: ಮಂಚಮೆದ್ ಕಾಲ್ ಮುರ್‌ದುಟು.

ಮಂಚಿಕಟ್ಟೆ /*maɲcikaṭṭe*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಪಂಬೆತ್ತಾಡಿ ಗ್ರಾಮದ ಜಾಗ. a locality in Pambettadi village in Sullia Taluk of Dakshina Kannada District.

ಮಂಜಕ್ಯಾರೆ /*maŋjakya:rɛ*/ ನಾ. ಕೇರೆಹಾವಿನ ಒಂದು ವಿಧ, ಬಡಿವ ಕೇರೆಹಾವು. a rat snake. ವಾ: ಮಂಜ ಕ್ಯಾರೆ ಬಾಲಲಿ ಬಡ್‌ದದೆಗಡ.

ಮಂಜಂದ್ರ /*maŋjaŋdra*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮಂಜಟಿಕಾಯಿ /*maŋjaṭika:yi*/ ನಾ. ಚೆನ್ನಮಣೆ ಆಟ ಆಡಲು ಬಳಸುವ ಕಡುಕೆಂಪು ಬಣ್ಣದ ಚಿಕ್ಕ ಬೀಜ. rosary pea, or Indian licorice used in playing Channe mane. ವಾ: ಚೆನ್ನಮಣೆ ಆಡಿಕನ ಮಂಜಟಿ ಕಾಯಿನ ಬಳ್‌ಸುವೆ.

ಮಂಜಳ /*maŋjaḷa*/ ನಾವಿ. ಕೆಂಪು ಛಾಯೆ ಇರುವ ಹಳದಿ ಬಣ್ಣದ ಹುಂಜ. red and yellow shaded rooster. ವಾ: ಕೋಳಿ ಕಟ್ಟಲಿ ಮಂಜಳ ಕೋಳಿ ಕಟ್ಟಿನಿ.

ಮಂಜಳಪಡ್ಪು /*maɲjaḷapaḍpu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮಂಜಿಕಾನ /*maɲjika:na*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಉಬರಡ್ಕ ಮಿತ್ತೂರು ಗ್ರಾಮದ ಜಾಗ. 1. family, 2. lineage, 3. a locality in Ubaradka Mitturu village in Sullia Taluk of Dakshina Kannada District.

ಮಂಜಿರ್‌ಮಣಿ /*maŋjiriṃaṇi*/ ನಾ. ಮಂಜೊಟ್ಟಿ ಕಾಯಿ. rosary pea, or Indian licorice.

ಮಂಜುನಾಥ /*maŋjuna:ta*/ ನಾ. 1. ದೇವರ ಹೆಸರು, 2. ವ್ಯಕ್ತಿನಾಮ. god Manjunatha.

ಮಂಜೆಟಿ /*maŋjeṭi*/ ನಾ. 1. ಜೆನ್ನೆಮಣೆ ಆಡಲು ಬಳಸುವ ಕೆಂಪು ಬಣ್ಣದ ಸಣ್ಣ ಕಾಯಿ, 2. ಮಂಜಟಿ ಕಾಯಿ. rosary pea, or Indian licorice used in playing Channe mane. ವಾ: ಮಕ್ಕ ಮಂಜೆಟಿ ತಕಂಡ್ ಆಡಿವೆ. ಪ: ಮಂಜೊಟಿ(ತು)

ಮಂಜೇಶ್ವರ /*maŋje:vara*/ ನಾ. ಒಂದು ಸ್ಥಳನಾಮ, ಕೇರಳದ ಕಾಸರಗೋಡು ಜಿಲ್ಲೆಯ ಒಂದು ಸ್ಥಳದ ಹೆಸರು. Manjeshwara, a town in Kasaragod district of Kerala.

ಮಂಜೊಟ್ಟಿ /*maɲjoṭṭi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮಂಜೋಳುಕಜೆ /*maɲjo:ḷukajɛ*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ದೇವಚಳ್ಳ ಗ್ರಾಮದ ಜಾಗ. a locality in Devacalla village in Sullia Taluk of Dakshina Kannada District.

ಮಂಜ್ /*maŋjɨ*/ ನಾ. 1. ಕೆರೆ, ತೋಡು, ನದಿಗಳಲ್ಲಿ ವಾಸವಿರುವ ಆಹಾರಕ್ಕೆ ಉಪಯೋಗಿಸುವ ಮೀನು, ಈ ಮೀನು ಶುಚಿ ಮತ್ತು ರುಚಿ, ಹಾಗಾಗಿ ನೀರಿನ ಶುದ್ದೀಕರಣಕ್ಕಾಗಿ ಕುಡಿವ ನೀರಿನ ಬಾವಿಗೆ ಈ ಮೀನನ್ನು ಹಾಕಿ ಸಾಕುತ್ತಾರೆ, 2. ಮಡ್‌ಂಜಿ ಮೀನ್. snakehead murrel, mudfish – a fresh water fish. **ಮಂಜ್ ಹೋದಲ್ಲಿ ಕಲ್ಕ್ ಇದ್ದದೆ (ಮರ್‌ಟೆ**

ಮೀನು ಹೋಗುತ್ತಾ ನೀರನ್ನು ರಾಡಿ ಮಾಡುತ್ತಾ ಹೋಗುತ್ತದೆ)(ಗಾ). ವಾ: ಮಂಜ್ ಮೀನ್ ಚೋಡ್‌ಲಿ ಇದ್ದದೆ. ಪ: ಮಂಳ್ಜಿ

ಮಂಜ್‌ಗಡ್ಡೆ /*maŋjigaḍḍɛ*/ ನಾ. 1. ನೀರ್ಗಲ್ಲು, 2. ಘನ ಸ್ಥಿತಿಯಾಗಿ ಪರಿವರ್ತಿತವಾಗಿರುವ ನೀರು, 3. ಮಂಜುಗಡ್ಡೆ. 1. a glacier, 2. a mass of ice, 3. ice. **ಚಳೀಲಿ ಹುಟ್ಟಿನೆ, ಬಿಸ್ಲ್‌ಲಿ ಸತ್ತನೆ, ಕಲ್ಲಾಗಿ ಕುದ್ದನೆ, ನೀರಾಗಿ ಹರ್ದನೆ – ಮಂಜ್‌ಗಡ್ಡೆ(ಒ).** ವಾ: ಮಂಜ್‌ಗಡ್ಡೆನ ಕೈಲಿ ಹಿಡೆಕಾದುಲೆ.

ಮಂಟಪ /*maṇṭapa*/ ನಾ. 1. ಮನೆಯ ಮಾಡು, 2. ಮಂಟಪ. 1. roof of the house, 2. a canopy, a temporary structure with a roof/a pandal. ವಾ: ಪೂಜೆಗೆ ಮಂಟಪ ಕಟ್ಟುದು.

ಮಂಟಮೆ /*maṇṭamɛ*/ ನಾ. ಕಾಡು ಆಮೆ. a tortoise. ವಾ: ಮಂಟಮೆ ಕಾಡ್‌ಲಿ ಇದ್ದದೆ.

ಮಂಟಿ /*maṇṭi*/ ನಾ. 1. ಎತ್ತರ ಜಾಗ, 2. ದಿಬ್ಬ, 3. ಏರು ಪ್ರದೇಶ, 4. ದಿಬ್ಬ. 1. a hillock, 2. a mound, 3. a higher ground, 4. a dune. ವಾ: ಮಂಟಿಲಿ ನಿತ್ತರೆ ಬೇರೆ ಬೆಟ್ಟಸ ಕಂಡದೆ.

ಮಂಟೆ /*maṇṭɛ*/ ನಾ. 1. ದನಗಳನ್ನು ಕಾಡಿಗೆ ಮೇಯಲು ಬಿಟ್ಟಾಗ ಅವುಗಳ ಇರುವಿಕೆಯನ್ನು ತಿಳಿದುಕೊಳ್ಳಲು ಅವುಗಳ ಕುತ್ತಿಗೆಗೆ ಕಟ್ಟುವ ಬಿದಿರಿನ ಸಾಧನ, 2. ಬೆಂಟೆ. a bamboo pole tied to the cattle (around the neck) to know the presence of them when they graze in the forest. ವಾ: ದನಗಳ ಕುತ್ತಿಗೆಗೆ ಮಂಟೆ ಕಟ್ಟಿರೆ ಅವು ಎಲ್ಲಿ ಹೋದರೂ ಮಂಟೆ ಸದ್ದಾಕನ ಗೊತ್ತಾದೆ.

ಮಂಡಕತ್ತಿ /*maṇḍakɘtti*/ ನಾ. ಒಂದು ವಿಧದ ಉದ್ದನೆಯ ಪುಕ್ಕವಿರುವ ಪಕ್ಷಿ. Magpie bird. ವಾ: ಮಡಿವಾಳ ಹಕ್ಕಿದ್ ಪುಕ್ಕ ಉದ್ದ ಇದ್ದದೆ.

ಮಂಡಲಿ /*maṇḍali*/ ನಾ. 1. ಮಂಡಳಿ, 2. ಗುಂಪು, 3. ಸಭೆ, 4. ಯಾವುದಾದರೊಂದು ಉದ್ದೇಶಕ್ಕಾಗಿ ರಚಿತವಾದ ಅಧಿಕಾರಿಗಳ ಸಮಿತಿ, ಸಂಸ್ಥೆ ಮೊದಲಾದವು. 1. a committee, 2. a group, 3. an assembly, 4. a committe, an institution formed with a common objective. ವಾ: ಹತ್ತ್ ಸದಸ್ಯರಿರೊ ಒಂದ್ ಮಂಡಲಿ ಇತ್ತ್.

ಮಂಡಳ /*maṇḍaḷa*/ ನಾ. 1. ರಂಗೋಲಿ, 2. ಮಂಡಲ, 3. ನೈವೇದ್ಯ ಮೊದಲಾದವುಗಳನ್ನು ಇಡುವುದಕ್ಕಾಗಿ ನೆಲದ ಮೇಲೆ ಹಾಕುವ ರೇಖಾವಿನ್ಯಾಸ. 1. decoration on the ground – Rangoli, 2. a circular drawing with mystical values, 3. a decorative design draw on the ground to keep the offering. ವಾ: ದೊಡ್ಡ ದೊಡ್ಡ ಪೂಜೆಲಿ ಮಂಡಳ ಹಾಕುವೆ.

ಮಂಡಿಚಿಪ್ಪ್ /*maṇḍicippi*/ ನಾ. 1. ಮೊಣಕಾಲಿನ ಚಿಪ್ಪು, 2. ಮೊರಂಪುದ ಪಲ್ಲೆ(ತು). knee cap. ವಾ: ಮಂಡಿ ಚಿಪ್ಪ್ ಜಾರ್‌ದೆಗಡ.

ಮಂಡೀರ /*maṇḍi:ra*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮಂಡುರ್ಕ /*maṇḍurka*/ ನಾ. 1. ಮಣ್ಣುಹಾವು, 2. ಒಂದು ವಿಧದ ಹಾವು. Indian sand boa, a nonvenomous snake. ವಾ: ಮಂಡುರ್ಕ ಹಾವ್ ಬೊಡ್ಡ್ ಬೊಡ್ಡಾಗಿ ಇದ್ದದೆ.

ಮಂಡೆ[1] /*maṇḍɛ*/ ನಾ. ನೀರು ಕಾಯಿಸಲು ಅಥವಾ ತುಂಬಿಸಿಡಲು ಬಳಸುವ ದೊಡ್ಡ ಪಾತ್ರೆ. a cauldron to store or boil water. ವಾ: ಮಂಡೆಗೆ ನೀರ್ ತುಂಬಿದಾ? ಪ: ಮಂಡೆಗೆ – ದೊಡ್ಡ ಹಂಡೆಗೆ

ಮಂಡೆ[2] /*maṇḍɛ*/ ನಾ. 1. ತಲೆ, 2. ಮಿದುಳು. 1. head, 3. brain. ವಾ: ಅಂವಂಗೆ ಒಳ್ಳ ಮಂಡೆ ಉಟ್ಟು, ವಿಚಾರ ಮಾಡಿ ಮಾತಾಡ್‌ದೆ.

ಮಂಡೆಕತ್ತಿ[1] /*maṇḍɛkatti*/ ನಾ. 1. ಮಾಂಸವನ್ನು ಕಡೆಯಲು ಬಳಸುವ ಕತ್ತಿ, ಇದರ ತುದಿ ಬಾಗಿರುವುದಿಲ್ಲ, 2. ದೊಡ್ಡ ಮರಗಳನ್ನು ಕತ್ತರಿಸಲು ಬಳಸುವ ಕತ್ತಿ. 1. a knife with which meat is beaten into appropriate shapes and sizes, 2. a knife/a long blade with which big trees are cut. ವಾ: ಮಂಡ ಕತ್ತಿಲಿ ಸೌದೆ ಸನ ಕಡ್ಯಕ್.

ಮಂಡೆಕತ್ತಿ[2] /*maṇḍɛkatti*/ ನಾ. 1. ಸೌದೆ ಕಡೆಯುವ ಕತ್ತಿ, 2. ದೊಡ್ಡ ಕತ್ತಿ. 1. an axe to cut firewood, 2. a machette. ವಾ: ಮಂಡೆ ಕತ್ತಿಲೆ ಸೌದೆ ಕಡಿಯಕೆ ಯದ ಆದು.

ಮಂಡೆಮುಕ್ತ /*maṇḍɛmukta*/ ನಾ. ತಲೆ ಮೇಲೆ ಕೆಂಪನೆಯ ಜುಟ್ಟಿನಂತಹ ಆಕೃತಿ ಇರುವ ಒಂದು

ಜಾತಿಯ ಕಾಡು ಹಕ್ಕಿ. a wild bird with red tuft on the head. ವಾ: ಮಂಡೆ ಮುಕ್ತ ಹಕ್ಕಿಗೆ ತಲೆಮೇಲೆ ಜುಟ್ಟು ಇದ್ದದೆ.

ಮಂಡೆಮುಕ್ರ /*maṇḍɛmukra*/ ನಾ. ಹಸಿರುಬಣ್ಣದ ಒಂದು ವಿಧದ ಪಕ್ಷಿ. a green bird. ವಾ: ಮಂಡೆ ಮುಕ್ರನ ಹಸ್ರಕ್ಕಿ ಕೊಟ್ರು ಹಕ್ಕಿತನೂ ಕರ್‌ದವೆ.

ಮಂಡೆಸರ್ಬತ್ /*maṇḍɛsarbatɨ*/ ನಾ. ತಲೆ ಛಿದ್ರವಾಗುವುದು. head scattered into pieces. ವಾ: ಹೆಲ್ಮೆಟ್ ಹಾಕದಿದ್ದರೆ ಮಂಡೆ ಸರ್ಬತ್ ಆಗತಿತ್ತ್.

ಮಂಡೆಕೀಜಣ್ /*maṇḍɛki:jaṇɨ*/ ನಾ. ಒಂದು ವಿಧದ ನದಿ ಮೀನು. a fresh water fish. ವಾ: ಮಂಡೆಕೀಜಣ್ ಒಂದ್ ಜಾತಿ ಮೀನ್.

ಮಂಡೆಕುತ್ತ /*maṇḍɛkutta*/ ನಾ. 1. ತಲೆನೋವು, 2. ಕಾಯಿಲೆ. 1. headache, 2. disease. ವಾ: ಅವು ಯಾಗುಳು ಮಂಡೆಕುತ್ತತೇಳಿವೆ.

ಮಂಡೆಕೂರ್ಲು /*maṇḍɛku:rlu*/ ನಾ. ಒಂದು ವಿಧದ ನದಿ ಮೀನು. a fresh water fish. ವಾ: ಮಂಡೆಕೂರ್ಲು ಹೊಳೆಲಿ ಇರೊ ಮೀನ್.

ಮಂಡೆಕೋಲು /*maṇḍeko:lu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮಂಡೆಕೋಲು ಗ್ರಾಮದ ಜಾಗ. a locality in Mandekolu village in Sullia Taluk of Dakshina Kannada District.

ಮಂಡೆಪ್ಪು /*maṇḍeppu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಬೆಳ್ಳಾರೆ ಗ್ರಾಮದ ಜಾಗ. a locality in Bellare village in Sullia Taluk of Dakshina Kannada District.

ಮಂಡೆಬಿಸಿ /*maṇḍɛbisi*/ ಕ್ರಿವಿ. ಯಾವುದಾದರೂ ವಿಷಯದ ಕುರಿತು ಯೋಚನೆಯಲ್ಲಿ ಇರುವುದು. thinking of something. ವಾ: ಮಂಡೆಬಿಸಿ ಮಾಡಿಕಂಡ್ ಕುದ್ದರೆ ಕೆಲ್‌ಸ ಆಕಿಲೆ.

ಮಂಡೆಬೆಚ್ಚ /*maṇḍɛbɛcca*/ ಕ್ರಿವಿ. 1. ತಲೆಬಿಸಿಯಾಗು, 2. ಒತ್ತಡ, 3. ಉದ್ವೇಗ, 4. ಪ್ರಕ್ಷುಬ್ಧತೆ. 1. to feel stressed, 2. stress, 3. anxiety, 4. disturbance. ವಾ: ಒಪ್ಪಿಕಂಡ ಕೆಲ್‌ಸನ ಸೆರಿ ಸಮೆಲಿ ಮಾಡಿ ಮುಗ್‌ಸದಿದ್ದರೆ ಮಂಡೆಬೆಚ್ಚ ಆದೆ.

ಮಂಡೆಸಮ ಇಲ್ಲೆ /*maṇḍɛsama illɛ*/ ಕ್ರಿವಿ. 1. ಅಸಂಬದ್ಧ ಮಾತು, 2. ಹಿಡಿತವಿಲ್ಲದ ಮಾತು, 3. ತಲೆ ಸರಿ ಇಲ್ಲದಂತೆ ಮಾತಾಡು. 1. talking indiscriminately, 2. to blabber, 3. to prattle. ವಾ: ಮಂಡೆ ಸಮ ಇಲ್ಲದ್ ಎಂತೆಂತೊ ಮಾತಾಡ್‌ದೆ.

ಮಂಡೇಕರ /*maṇḍe:kara*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮಂಡೋಕಜೆ /*maṇḍo:kajɛ*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ನೆಲ್ಲೂರು ಕೆಮ್ರಾಜೆ ಗ್ರಾಮದ ಜಾಗ. a locality in Nelluru Kemraje village in Sullia Taluk of Dakshina Kannada District.

ಮಂಡ್ಜಿಮೀನ್ /*maṇḍjimi:nɨ*/ ನಾ. ಕೆರೆ, ತೋಡು, ನದಿಗಳಲ್ಲಿರುವ ಮೀನು. a fresh water fish. ವಾ: ಮಂಡ್ಜಿಮೀನ್ ಕೆರೆ, ಚೋಡಿಗಳ್‌ಲಿ ಕಾಂಬಕೆ ಸಿಕ್ಕಿದೆ.

ಮಂತ /*manta*/ ನಾ. ಮೆಂತ್ಯ. Fenugreek seeds. ವಾ: ಮಂತನ ಅಡ್ಗೆಗೆ, ಮೊದ್ದಿಗೆ ಬಳ್ಸುವೆ.

ಮಂತುಳಿ /*mɔntuḷi*/ ನಾ. 1. ಒಂದು ಜಾತಿಯ ಹುಳಿ ರುಚಿಯ ಹಣ್ಣು, ಇದರ ರಸವನ್ನು ಮಾಂಸಾಹಾರದ ಸಾಂಬಾರಿಗೆ ಬಳಸಲಾಗುತ್ತದೆ, 2. ದಾರೆಹುಳಿ, 3. ನಕ್ಷತ್ರ ಹಣ್ಣ್. 1. Carambola, 2. fruit of Averrhoa carambola, 3 star fruit. ವಾ: ಮಂತುಳಿನ ಮಾಸ ಮತ್ತೆ ಮೀನ್ ಗೈಪುಗೆ ಹಾಕಿವೆ. ಪ: ಮೊಂತುಳಿ

ಮಂತ್ /*mɔntɨ*/ ನಾ. 1. ಮಜ್ಜಿಗೆ ಕಡಿಯಲು ಬಳಸುವ ದೊಣ್ಣೆ ತುದಿಯ ವಸ್ತು, 2. ಕಡಗೋಲು. 1. a churner, 2. a churn. ವಾ: ಮಂತ್‌ಲಿ ಮಜ್ಜಿಗೆ ಕಡೆದು.

ಮಂತ್ರ /*mantra*/ ನಾ. 1. ಮಂತ್ರ, 2. ವೇದದಲ್ಲಿರುವ ಛಂದೊಬದ್ಧವೂ ಪವಿತ್ರವೂ ಆದ ದೇವತಾಸ್ತುತಿ, 3. ಶ್ಲೋಕ. 1. hymns, 2. vedic hymns, 3. verse. ವಾ: ಮಂತ್ರಕ್ಕೆ ಮಾವ್‌ನ ಕಾಯಿ ಉದುರ್‌ದುಲೆ.

ಮಂತ್ರ ಅಡಿಗೆ /*mantra aḍige*/ ನಾ. ಮಂತ್ರ ಬಳಸಿ ತಯಾರಿಸಿದ ರುಚಿಕರ ಖಾದ್ಯ ಬಾಣಂತಿಯರಿಗೆ ಈ ತಿಂಡಿ ತಯಾರಿಸಿ. special food prepared for new mothers.

ಮಂತ್ರಾಕ್ಷಿ /*mantra:kṣi*/ ನಾ. 1. ಮಂತ್ರಾಕ್ಷತೆ, 2. ಶುಭಕಾರ್ಯಗಳಲ್ಲಿ ಮಂತ್ರ ಪೂರ್ವಕವಾಗಿ ಬಳಸುವ ಅರಿಸಿನ ಅಥವಾ ಕುಂಕುಮದಲ್ಲಿ ಕಲಸಿದ ಅಕ್ಕಿ, 3.

ಅಕ್ಷತೆ. unbroken rice mixed with either turmeric powder or vermillion powder or both – used in religious ceremonies. ವಾ: ಮಂತ್ರಾಕ್ಷಿನ ಪೂಜೆಲಿ ಬಳ್ಸುದು.

ಮಂತ್ರಿ /*mantri*/ ನಾ. 1. ಮಂತ್ರಿ, 2. ವೇದವನ್ನು ಬಲ್ಲವನು, 3. ರಾಜನಿಗೆ ಸಲಹೆ ನೀಡುವವನು, 4. ಸಚಿವ,5. ಪ್ರಜಾತಂತ್ರದಲ್ಲಿ ರಾಜ್ಯದ ಅಥವಾ ರಾಷ್ಟ್ರದ ಆಡಳಿತವನ್ನು ನಿರ್ವಹಿಸುವವನು. 1. a minister, 2. the one who knows Vedas, 3. an advisor to a King, 4. a Minister, 5. Prime Minister. ವಾ: ದೇಸಕ್ಕೆ ಒಳ್ಳ ಆಡಳ್ತೆ ಕೊಡ್ದು ಮಂತ್ರಿಗಳ ಕರ್ತವ್ಯ.

ಮಂತ್ರಿಸ್ /*mantrisi*/ ನಾ. 1. ಮಂತ್ರಾನುಷ್ಠಾನ ಮಾಡು, 2. ಮಂತ್ರದಿಂದ ಬಂಧಿಸು. 1. using mystical hymns to achieve some results, 2. using mystical hymns to bind something/ someone. ವಾ: ನೂಲು ಮಂತ್ರಿಸಿ ಕಟ್ಟಿವೆ. ಪ: ಮಂತ್ರಿಸಿಕೊಟ್ಟ್ – ಮಂತ್ರಿಸಿ ಕೊಟ್ಟು

ಮಂದ[1] /*manda*/ ನಾವಿ. 1. ದಪ್ಪ, 2. ಗಟ್ಟಿಯಾದ ದ್ರವರೂಪ. 1. thick, 2. thick liquid-viscous. ವಾ: ಹುಳಿನೀರ್‌ನ ಮಂದ ಕಾಸೊಕು.

ಮಂದ[2] /*manda*/ ನಾ. 1. ನಿಧಾನವಾದ, 2. ಚುರುಕಿಲ್ಲದ, 3 ಜಡವಾದ, 4. ಆಲಸ್ಯದಿಂದ ಕೂಡಿದ, 5. ಮಂಕಾದ, 6. ಕಾಂತಿಹೀನವಾದ, 7. ದಡ್ಡತನದಿಂದ ಕೂಡಿ. 1. slow, 2. inactive, 3. sluggish, 4. lazy, 5. dull, 6. dreary, 7. idiotic. ವಾ: ಕೆಬಿನು ಹಚ್ಚ ಮಂದ.

ಮಂದ[3] /*manda*/ ನಾ. 1. ಎಗ್ಗ, 2. ದಡ್ಡ, 3. ತಿಳಿಗೇಡಿ. 1. an idiot, 2. a stupid, 3. an ignorant. ವಾ: ಅಂವ ಹಚ್ಚ ಮಂದ ಬುದ್ದಿಯಂವ.

ಮಂದರಸ /*mandarasa*/ ನಾ. ದಪ್ಪ ರಸ. a thick juice – viscous. ವಾ: ನೆಲ್ಲಿಕಾಯಿದ್ ಮಂದರಸ ತೆಗ್ದಿಸಿಕಣೊಕು, ಮತ್ತೆ ದಿನಾ ಹೊತಾರೆ ಎರ್‌ಡ್ ಚಮ್ಚೆ ನೆಲ್ಲಿಕಾಯಿ ರಸಕ್ಕೆ ಬೇಕದಸ್ಟ್ ನೀರ್ ಹಾಕಿ, ಜೇನ್ ಹಾಕಂಡ್ ಕುಡ್ಯಕು, ಇದ್ ವಾತ, ಪಿತ್ತ, ಕಪಕೆ ಒಳ್ಳ ಕೆಲ್ಸ ಮಾಡ್ದೆ, ನೆಲ್ಲಿಕಾಯಿ ಜೂಸ್ ಮಾಡಿಕುಡ್ದರೆ ಪಿತ್ತಕೆ ಬಾರಿ ಒಳ್ಳದ್, ತಡಿಗು ತಂಪಾದೆ.

ಮಂದಟ್ಸ್ /*mandaṭsi*/ ಕ್ರಿ. ಮನದಟ್ಟು ಮಾಡು. to convince. ವಾ: ಅವ್ನಿಗೆ ವಿಸ್ಯನ ಮಂದಟ್ಸ್ ಮಾಡ್ಸ್.

ಮಂದಣ್ಣ /*mandaṇṇa*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮಂದ್ರಪ್ಪಾಡಿ /*mandrappa:ḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮಂದ್ರಿ /*mandri*/ ನಾ. 1. ಚಾಪೆ, 2. ಚಾಪೆ. a mat. ವಾ: ಮಂದ್ರಿನ ಸುತ್ತಿಸ್ ಬಲ.

ಮಂದ್ರೀರ /*mandri:ra*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮಂಪರ್ /*mampari*/ ನಾ. 1. ಅರೆನಿದ್ರಾವಸ್ಥೆ, 2. ಮಂಪರು, 3. ಜೊಂಪು, 4. ತೂಕಡಿಕೆ. feeling drowsy. ವಾ: ಕುದ್ದಲ್ಲೆ ಕುದ್ದ್ ಮಂಪರ್ ಬಂದಾಂಗಾತ್.

ಮಂಯ್ದ್ /*manydi*/ ಕ್ರಿ. ಮೇಯುವುದು. grazing. ವಾ: ದನಗ ಬಾಣೆಲಿ ಮಂಯ್ದ್ ಬಂದೊ.

ಮಕಬಾಪುಸಿಕಂಡ್ /*makau:dsikaṇḍi*/ ಕ್ರಿವಿ. 1. ಬೈಗುಳ ಪದ, 2. ಮುಖ ದಪ್ಪ ಮಾಡು, 3. ಕೋಪಿಸಿಕೊಳ್ಳು. 1. an expletive term, 2. to become lustreless, 3. to get angry. ವಾ: ನಿನ್ನೆಂದ ಮಕ ಬಾಪುಸಿಕಂಡ್ ಕುದ್ದುಟು, ಮಾತಿಲ್ಲೆ, ಕತೆಯಿಲ್ಲೆ.

ಮಕಾಡೆಮಲ್‌ಗ್ /*maka:ḍɛmaligi*/ ನಾ. ಕವುಚಿ ಮಲಗು. to sleep on the stomach – prone position. ವಾ: ಹಚ್ಚ ಹೊತ್ತ್ ಮಕಾಡೆ ಮಲ್‌ಗ್. ಪ: ಕಂಕನೆ(ತು)

ಮಕಾರ್ /*maka:ri*/ ನಾ. ತಮಾಷೆ. a joke. ವಾ: ಉಗ್ಗಪ್ಪ ಮಕಾರ್ ಮಾಡಿಕಂಡೆ ಇದ್ದವೆ.

ಮಕಾರ್‌ಮಾಡ್ದು /*maka:rima:ḍdu*/ ನಾವಿ. ತಮಾಷೆ ಮಾಡುವುದು. to make fun of. ವಾ: ಮಕಾರ್ ಮಾಡದೆ ಸುಮ್ಮನಿರಿಕಿಲೆ ಈ ಹೈದ.

ಮಕ್ಕ /*makka*/ ಸನಾ. 1. ಮಕ್ಕಳು, 2. ನಮ್ಮ ಮಕ್ಕ. 1. children, 2. our children. **ಅಜ್ಜಂಗೆ ಸಾವ್‌ನ ಚಿಂತೆ, ಮಕ್ಕಂಗೆ ಆಟದ ಚಿಂತೆ(ಗಾ). ಕಡ್ದರೆ ಹಾಲ್, ಹೊಡ್ದರೆ ಹಾಲ್, ಒಳಗೆ ಸಾವಿರ ಮಕ್ಕ – ಹಲ್ಸಿನಣ್ಣ್(ಒ).** ವಾ: ಮಕ್ಕ ಹಟ ಮಾಡಿಕಾದ್, ಹೇಳ್ದು ಕೇಳೊಕು. ಪ: ಮಕ್ಕೆಲ್ಲ – ಮಕ್ಕಳೆಲ್ಲ; ಮಕ್ಕಂತ – ಮಕ್ಕಳೆಂದು; ಮಕ್ಕಮರಿ – ಮಕ್ಕಳು ಮರಿ; ಮಕ್ಕಂದ – ಮಕ್ಕಳಿಂದ

ಮಕ್ಕಮೊರಿ /*makkamori*/ ನಾವಿ. ಸಣ್ಣಮಕ್ಕಳು. small children. ವಾ: ಮಕ್ಕ ಮೊರಿತ ಅವ್ವಪ್ಪ ಬಂಗ ಬಂದ್ಕಂಡ್ ಸಾಂಕುದು, ಕೆಲು ಮಕ್ಕಳಿಗೆ ಅದ್ ಗ್ಯಾನನೆ ಇರ್‌ದುಲೆ.

ಮಕ್ಕಡ್ಚಿ /*makkaḍci*/ ನಾ. 1. ಆಚೆ ಈಚೆ ಹೇಳಿ ಕೊಡುವವಳು, 2. ಕೆಟ್ಟ ಸ್ವಭಾವವನ್ನು ಸೂಚಿಸುವ ಪದ, 3. ಚಾಡಿ ಹೇಳು. 1. a slandering woman, 2. evil nature, 3. to slander. ವಾ: ಅದ್ ಬಾರಿ ಮಕ್ಕಡ್ಚಿ ಹೆಣ್ಣ್, ತಂದಾಕುದು ಗೊತ್ತೇ ಆಲೆ.

ಮಕ್ಕತಿ /*makkati*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮಕ್ಕರಿ /*makkari*/ ನಾ. 1. ಬೆತ್ತ, 2. ಬಿದಿರಿನ ಕುಕ್ಕೆ. 1. cane, 2. a bamboo basket. ವಾ: ಬತ್ತನ ಕಡ್‌ಕೆಗೆ ಹಾಕಿಕೆ ಮಕ್ಕರಿ ಇದ್ದರೆ ಆತಿತ್.

ಮಕ್ಕರೆ /*makkarɛ*/ ನಾ. ಒಗರು. salty. ವಾ: ಕರ್‌ಮಜಿ ಹಣ್ಣ್ ಸೆರಿ ಹಣ್ಣಾಗದಿದ್ದರೆ ತಿಂಬಕನ ಮಕ್ಕರೆ ಇದ್ದದೆ.

ಮಕ್ಕರ್ /*makkarɨ*/ ನಾವಿ. ತಮಾಷೆ ಮಾಡುವುದು. to joke/to amuse. ವಾ: ಅಂವ ಮಕ್ಕರ್ ಮಾಡಿಕಂಡೆ ಇದ್ದದೆ.

ಮಕ್ಕಿಗದ್ದೆ /*makkigaddɛ*/ ನಾ. 1. ಕಂಪದ ಗದ್ದೆ, 2. ಸ್ಥಳನಾಮ, 3. ಮಕಿ, 4. ಮಕ್ಕೆ 5. ಮೆಕ್ಕೆ 6. ತರಗು, 7. ಗೋಟು, 8. ಗೋಡು. 1. a field which can't be used to grow paddy, 2. Manki Gadde, a place, 2. infertile field, 4 a barren field, 5. an infertile land, 6. dried/parched, 7. round in shape, 8. alluvial soil.

ಮಕ್ಕೊ /*makkɔ*/ ನಾ. ಮಕ್ಕಳೊ. indicating children/calling out children. ವಾ: ಈಗನ ಮಕ್ಕೊ ಹೇಳ್ದ ಮಾತೇ ಕೇಳ್ತುಲೆ.

ಮಕ್ಕ್ /*makkɨ*/ ನಾವಿ. ಬೆಳೆಯಲ್ಲಿರುವ ಧೂಳು. dust in the crops. **ಅಯ್ಯೆ ಮಕ್ಕ ಆದರೇನ್, ಹೊಟ್ಟೆ ಬೇರೆ ಬೇರೆ ಅಲ್ಲನಾ?(ಗಾ).** ವಾ: ಮಕ್ಕ್ ಮೂಂಕಿಗೆ ಹೋದರೆ ಸೀನಿಕಂಡೆ ಇರೊಕು. ಪ: ಮೊಕ್ಕ್

ಮಗ /*maga*/ ನಾ. ಮಗಳು. daughter. **ಜನ ಮೆಚ್ಚಲಿ ಕುಣಿ ಮಗ ತ ಹೇಳ್ತ್(ಗಾ).** ವಾ: ಕೊಟ್ಟ ಮಗಕ ಬಂದಿದ್ದನಾ? ಪ: ಮಗಕ – ಹೆಣ್ಣುಮಕ್ಕಳು

ಮಗಕ /*magaka*/ ನಾ. 1. ಹೆಣ್ಣು ಮಕ್ಕಳು, 2. ಪುತ್ರಿಯರು. 1. girls, 2. daughters. ವಾ: ಮಗಕ ಮನೆಗೆ ಬಂದರೆ ಅವ್ವಂಗೆ ಕುಸಿಯೋ ಕುಸಿ.

ಮಗಕ್ಕ /*magakka*/ ನಾ. 1. ಹೆಣ್ಣು ಮಕ್ಕಳು, 2. ಪುತ್ರಿ, 3. ಮಗ. 1. girls, 2. daughter, 3. son. ವಾ: ನಿಮ್ಮ ಮಗಕ್ಕಳ ಎಲ್ಲಿಗೆ ಕೊಟ್ಟದ್?

ಮಗಿಯದು /*magiyadu*/ ಕ್ರಿ. ಕವುಚು. to cover. ವಾ: ಕೂಸು ಮಗಿಯಕನ ನೋಡಿಕಣಕು.

ಮಗೆಸಂಬರ /*magɛsambara*/ ನಾ. 1. ದೊಡ್ಡಪತ್ರೆ, 2. ಇದನ್ನು ಸಾಂಬಾರ ಬಳ್ಳಿ, ಸಾವಿರ ಸಂಬಾರ(ಅಜವನದ ಎಲೆ), ಕರ್ಪೂರವಳ್ಳಿ ಎಂಬ ಹೆಸರಿನಿಂದ ಕರೆಯುತ್ತಾರೆ, ಎಲೆಯಲ್ಲಿ ನೀರಿನ ಅಂಶ ಹೆಚ್ಚಾಗಿದ್ದು ಔಷಧೀಯ ಗುಣವಿದೆ. Ajwain plant, Indian Borage, a herb. ವಾ: ಮಗೆ ಸಂಬರದ ಎಲೆದ್ ರಸನ ತೆಗ್ದ್ ಜೇನೊಟ್ಟಿಗೆ ಕೂಡ್ಸಿ ಕುಡ್‌ದರೆ ಕೆಮ್ಮುಲು, ನೆಗ್ಡಿ ಕಮ್ಮಿ ಆದೆ. ಪ: ಸಾಂಬ್ರಾಣಿ(ತು)

ಮಗ್ಗು /*maggu*/ ಕ್ರಿವಿ. ತಲೆಕೆಳಗಾಗಿ ಬೀಳು. to fall upside down. ವಾ: ಸರ್ಕಸ್‌ಲಿ ಕೆಲೊವು ಆಟಲಿ ಮಗ್ಗು ಹಾರಿ ಬಿದ್ದವೆ.

ಮಗ್ಗ್ /*maggɨ*/ ನಾ. ಎಪ. 1. ಮಗ್ಗು, 2. ಉರುಳೆಯಾಕಾರದ ಹಿಡಿಯಿರುವ ಯಾ ಇಲ್ಲದ ಸಣ್ಣ ಪಾತ್ರೆ. a mug. ವಾ: ಮಗ್ಗ್ ತಕಂಡ್ ಮಂಡೆಂದ ನೀರ್ ಗೋಂಚಕ್.

ಮಗ್ಚ್ /*magcɨ*/ ಕ್ರಿ. 1. ಮಗುಚು, 2. ತಳಮೇಲು ಮಾಡು, 3. ಬೋರಲಾಗು, 4. ತಿರುವಿ ಹಾಕು. 1. to put something upside down, 2. to turn upside down, 3. prone position, 4. to turn. ವಾ: ಬೆಳ್ಗಿದ ಪಾತ್ರಗಳ ಬಿಸ್‌ಲ್‌ಲಿ ಮಗ್ಚಿ ಇಸ್. ಪ: ಮಗ್ಚಿ – ಮಗುಚಿ; ಮಗ್ಚಿಕನ – ಮಗುಚುವಾಗ; ಮಗ್ಚಿತ್ – ಮಗುಚಿತು; ಮಗ್ಚಿದೆ – ಮಗುಚುತ್ತಾನೆ/ಳೆ

ಮಗ್ದ್ /*magdɨ*/ ಕ್ರಿ. ಮಗುಚಿ. 1. upside down, 2. to turn the side. ವಾ: ಆ ಕೂಸು ಓಡಿಕನ ಮಗ್ದ್ ಬೀತ್. ಪ: ಮಗ್ಚ್

ಮಗ್ಳ್ /*magḷɨ*/ ನಾ. 1. ಹೆಣ್ಣು ಮಗು, 2. ಪುತ್ರಿ. 1. a female child, 2. daughter. ವಾ: ಮಗ್ಳ್ ಎಲ್ಲಿ ? ನಾ ಬಂದಲ್ಲಿಂದ ಕಂಡತೇಲೆ.

ಮಜ್ಞ /*maŋŋa*/ ನಾ. 1. ಗಂಡು ಮಗು, 2. ಪುತ್ರ. 1. male child, 2. son. **ಅಜ್ಜಿ ಸಾಕಿದ ಮಜ್ಞ ಬೊಜ್ಜಕೂ**

ಲಾಯಕ್ಕಿಲ್ಲೆ(ಗಾ). ವಾ: ಮಜ್ಞಂದ್ ಓದಿ ಆತ್ ಬೇಗ ಮೊದುವೆ ಉಟ್ಟ. ಪ: ಮಜ್ಞತ – ಮಗನೆಂದು; ಮಜ್ಞಂಗೆ – ಮಗನಿಗೆ

ಮಜ್ಞಣೆ /*maɲɲaɳɛ*/ ಕ್ರಿವಿ. 1. ವಯ್ಯಾರದ ಮಾತು, 2. ಪೂಸಿ ಮಾತು. to persuade through flattery. ವಾ: ಮಜ್ಞಣೆ ಮಾಡಿ ಕೂಸುನ ಇಸ್ಕೂಲಿಗೆ ಕಳ್ಸುದು.

ಮಚ್ಚರ /*maccara*/ ನಾ. 1. ಮತ್ಸರ, 2. ಅಸೂಯೆ, 3. ಹೊಟ್ಟೆಕಿಚ್ಚು, 4. ಅಸಮಾಧಾನ. 1. jealousy, 2. suspicion, 3. resentment, 4. dissatisfaction. ವಾ: ಮಚ್ಚರಕೆ ಮೊದ್ದಿಲ್ಲೆ.

ಮಚ್ಚಿ /*macci*/ ನಾ. 1. ಕೊಡಲಿಯಂತೆ ಉದ್ದ ಹಿಡಿಯುಳ್ಳದ್ದು, 2. ಮಚ್ಚು, 3. ಕಡಿಗತ್ತಿ, 4. ಕತ್ತರಿಸಲು ಉಪಯೋಗಿಸುವ ಮರದ ಹಿಡಿಕೆಯುಳ್ಳ ಕಬ್ಬಿಣದ ಒಂದು ಬಗೆಯ ಸಾಧನ. machete, a broad blade with a long handle. ವಾ: ಮಚ್ಚಿ ತಕಂಡ್ ಸೌದೆ ಒಡಿಯೊಕು.

ಮಚ್ಚಿನಡ್ಕ /*maccinaḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಐವರ್ನಾಡು ಗ್ರಾಮದ ಜಾಗ. a locality in Aivarnadu village in Sullia Taluk of Dakshina Kannada District.

ಮಚ್ಚಿಪಾರ್ /*maccipa:rɨ*/ ನಾ. 1. ಬಿಟ್ಟದ ಮೇಲಿರಿಸುವ ಹಲಗೆ, 2. ಮನೆಯ ಮೇಲೆ ಅಟ್ಟದ ಕೆಳಗೆ ಹಾಸಿರುವ ಹಲಗೆಗಳು, 3. ಮನೆ ಅಟ್ಟಕ್ಕೆ ಹೊಡೆಸಿದ ಹಲಗೆ. 1. the wooden floor of the attic, 2. wooden planks used as floor of the attick, 3. wooden planks of an attic. ವಾ: ಹಿಂದೆನ ಹಂಚಿನ ಮನೆಗಲ್ಲಿ ಮಚ್ಚ್ ಪಾರ್ ಕಾಂಬಕೆ ಸಿಕ್ತಿತ್. ಈಗೆಲ್ಲಿ ಬಾರಿ ಕಮ್ಮಿ ಅಲ.

ಮಚ್ಚೆ /*maccɛ*/ ನಾ. ದೇಹದಲ್ಲಿರುವ ಕಪ್ಪು ಅಥವಾ ಕಂದು ಬಣ್ಣದ ಗುರುತು. black and brown spots on the body. ವಾ: ಅಂವನ ನಾಲಿಕೆಲಿ ಮಗಚ್ಚೆ ಉಟ್ಟುಗಡ, ಹೇಳ್ದ್ ಹೇಳ್ದಾಂಗಾದೆಗಡ.

ಮಚ್ಚ್ ಕಾವ್‌ಮರ /*maccɨ ka:vɨmara*/ ನಾ. 1. ಕೊಡಲಿಯ ಹಿಡಿಯಾಗಿ ಉಪಯೋಗಿಸುವ ಮರ, 2. ಕಾಯರ ಮರದಿಂದ ಮಚ್ಚಿನ ಹಿಡಿಯನ್ನು ತಯಾರಿಸುವರು. a tree, handles of axe are made out this tree. ವಾ: ಮಚ್ಚ್ ಕಾವ್ ಮರಲಿ ಕೊಡ್ಲಿಗೆ ಕಾವ್ ಮಾಡಿಕೆ ಬಳ್‌ಸುವೆ.

ಮಜ /*maja*/ ನಾ. 1. ಮಚ್ಚೆ, 2. ಹುಟ್ಟಿನಿಂದಲೇ ದೇಹದ ಮೇಲೆ ಕಂಡುಬರುವ ಕಪ್ಪು ಅಥವಾ ಬಿಳಿಯ ಬಣ್ಣದ ಗುರುತು, 3. ಮತ್ತಿ. 1. a mark, 2. black and white moles on the body, 3. a mark on the skin. ವಾ: ಮೂಕ್‌ನ ಮೇಲೆ ಒಂದ್ ಮಜ ಕಂಡದೆ.

ಮಜಲಕೆರೆ /*majalakerɛ*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕಲ್ಮಡ್ಕ ಗ್ರಾಮದ ಜಾಗ. a locality in Kalmadka village in Sullia Taluk of Dakshina Kannada District.

ಮಜಲುಗದ್ದೆ /*majalugaddɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮಜಲ್ /*majalɨ*/ ನಾ. ತಂಗುವ ಸ್ಥಳ. a lodging. ವಾ: ಮಜಲ್ ಎಲ್ಲಿತೇನಾರ್ ಹೇಳ್ದೊನ?

ಮಜಲ್‌ಗದ್ದೆ ಓಟ /*majalɨgaddɛ o:ṭa*/ ನಾ. ಜನಪದ ಆಟ. a folk game.

ಮಜಾ /*maja:*/ ಕ್ರಿವಿ. 1. ಮೋಜು, 2. ಸಂತೋಷದ ಸಮಯ, 3. ಹರ್ಷ. 1. merriment, 2. a time of enjoyment, 3. delight. ವಾ: ರಜೆಲಿ ಮಜಾ ಮಾಡಕ್.

ಮಜಿಕುಡಲು /*majikuḍalu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮಜಿಕೋಡಿ /*majiko:ḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮಜೂರ /*maju:ra*/ ನಾ. ಸಂಬಳ. salary. ವಾ: ನಿಮ್ಮ ಕಡೆ ಕಾಪಿ ಕೊಯ್ಯಕೆ ಎಸ್ಟ್ ಮಜೂರ ಕೇಳಿವೆ.

ಮಜೆಲ್ /*majelɨ*/ ನಾ. ಮಾನಿ. a man who commands respect.

ಮಜ್ಜಾರು /*majja:ru*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಎಡಮಂಗಲ ಗ್ರಾಮದ ಜಾಗ. a locality in Edamangala village in Sullia Taluk of Dakshina Kannada District.

ಮಜ್ಜಿಗೆ /*majjigɛ*/ ನಾ. 1. ಕಡೆದ ಮೊಸರು, 2. ಅಳೆ, 3. ಕಳಲು, 4. ಕೈಯಳೆ, 5. ತಕ್ರ, 6. ಮೊಜ್ಜಿಗೆ. butter milk. ವಾ: ಮೊಸ್ರಿಗಿಂತ ಮಜ್ಜಿಗೆ ಕುಡ್ದರೆ ಲಾಯ್ಕ್.

ಮಜ್ಜಿಗೆ ಅಂಡೆ /*majjigɛ aɳḍɛ*/ ನಾ. 1. ಮೊಸರು ಕಡೆಯುವ ಸಾಧನ, 2. ಮಜ್ಜಿಗೆ ಕಡೆಯುವ

ಸೊಂಟದಷ್ಟು ಎತ್ತರದ ಗಂಟು ಬಿದಿರು. a churn, a churner. ವಾ: ಮಜ್ಜಿಗೆ ಅಂಡೆಲಿ ಮಜ್ಜಿಗೆ ಕಡ್‌ದರೆ ಹೆಚ್ಚಿ ಬೆಣ್ಣೆ ಬಾದು.

ಮಜ್ಜಿಗೆ ಆಂಬರ /*majjigɛ a:mbara*/ ನಾ. ಮಜ್ಜಿಗೆ ಹಾಕಿ ಮಾಡುವ ಸಾಂಬಾರು. buttermilk sambar. ವಾ: ಸುಂಟಿ ಎಲ್ಲ ಹಾಕಿ ಮಜ್ಜಿಗೆ ಆಂಬರ ಮಾಡಿರೆ ಎಸ್ಟ್ ಉಂಡದ್‌ತನೆ ಗೊತ್ತಾಲೆ.

ಮಜ್ಜಿಗೆಕಡ್ಪಾಗುಟ್ಟು /*majjigɛkaḍpa:guṭṭu*/ ನಾ. ಹುಳಿ ಮಜ್ಜಿಗೆ. sour buttermilk. ವಾ: ಮಜ್ಜಿಗೆ ಕಡ್ಪಾಗುಟ್ಟು ಅದ್‌ಕೆ ಹಸಿಮೆಣ್ಸ್, ಉಪ್ಪು, ಜೀರ್‌ಗೆ ಹೊಡಿ ಹಾಕಿ ಒಣ್ಗಿಸಿರೆ ಮಳಗಾಲಲಿ ಹೊರ್‌ಯಕ್.

ಮಜ್ಜಿಗೆಗುತ್ತಿ /*majjigɛgutti*/ ನಾ. 1. ಮಜ್ಜಿಗೆ ಕಡೆಯುವ ಸಾಧನ, 2. ಬಿದಿರಿನಿಂದ ಮಾಡಿದ ಬೆಣ್ಣೆ ತೆಗೆಯುವ ಸಾಧನ. a churn, a churner. ವಾ: ಮಜ್ಜಿಗೆ ಗುತ್ತಿನ ಮಜ್ಜಿಗೆ ಕಡಿಯಕೆ ಬಳ್ಸುವೆ.

ಮಜ್ಜಿಗೆಮರ /*majjigɛmara*/ ನಾ. ಹಣ್ಣು ಬಿಡುವ ಒಂದು ಕಾಡು ಮರ. a forest fruit tree. ವಾ: ಮಜ್ಜಿಗೆ ಮರ ಒಂದ್ ಕಾಡ್ ಮರ.

ಮಜ್ಜಿಗೆಹಣ್ಣ್ /*majjigɛhaṇṇi*/ ನಾ. ಮಜ್ಜಿಗೆ ಹಣ್ಣು. snotty gobbles, cummingcordia, glue berry. ವಾ: ಮಜ್ಜಿಗೆ ಹಣ್ಣ್ ತ ನಾವ್ ತಿಂಬೊತಿದ್ದೊ, ಜೊಂಪೆ ಜೊಂಪೆ ಹಣ್ಣ್ ಬುಟ್ಟದೆ, ಜುಲಾಯಿ- ಆಗಸ್ಟ್ ತಿಂಗಲಿ ಹಣ್ಣಾದೆ.

ಮಜ್ಜಿಗೆಹುಲ್ಲು /*majjigɛhullu*/ ನಾ. 1. ನಿಂಬೆ ಹುಲ್ಲು, 2. ಔಷಧೀಯ ಮೂಲಿಕೆ. 1. lemon grass, 2. a medicinal herb. ವಾ: ಮಜ್ಜಿಗೆ ಹುಲ್ಲುಲಿ ಜೂಸ್ ಮಾಡಿ ಕುಡ್ದವೆ.

ಮಜ್ಜಿಗೆಹುಳಿ /*majjigɛhuḷi*/ ನಾವಿ. 1. ಪಳಿದೆ, 2. ಪಳಿದ್ಯ, 3. ಮಜ್ಜಿಗೆಯಿಂದ ತಯಾರಿಸಿದ ಸಾರು. buttermilk soup/stew/sambar. ವಾ: ಸುಮಾರ್ ತರ್‌ಕಾರಿನ ಬಳ್‌ಸಿ ಮಜ್ಜಿಗೆ ಹುಳಿ ಮಾಡಿವೆ.

ಮಜ್ಜಿಗೆಗೌಡನ /*majjigɛgauḍana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮಜ್ಜಿಗೆಮನೆ /*majjigɛmanɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮಞ್ಞನಕಾನ /*maɲɲanaka:na*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕಲ್ಮಡ್ಕ ಗ್ರಾಮದ ಜಾಗ. a locality in Kalmadka village in Sullia Taluk of Dakshina Kannada District.

ಮಟ /*maṭa*/ ನಾ. 1. ಮಠ, 2. ಸಂನ್ಯಾಸಿ, ಗುರುಗಳು ವಾಸಿಸುವ ಕುಟೀರ, 3. ಆಶ್ರಮ. 1. monastery, 2. a place where monks/hirmts live, 3. hermitage. ವಾ: ಮಟ ಸನ್ಯಾಸಿ, ಗುರುಗಳ ವಾಸಸ್ತಾನ, ಅಲ್ಲಿ ಪೂಜೆ ಕಾರ್‌ಯಗ ನಡ್‌ದದೆ.

ಮಟತ್ತಡ್ಕ /*maṭattaḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಪೆರುವಾಜೆ ಗ್ರಾಮದ ಜಾಗ. a locality in Peruvaje village in Sullia Taluk of Dakshina Kannada District.

ಮಟಮಟ ಮದ್ಯಾನ /*maṭamaṭa madya:na*/ ನಾ. 1. ಮಧ್ಯಾಹ್ನ, 2. ಅಪರಾಹ್ನ, 3. ನಡುಹಗಲು. 1. afternoon, 2. between noon and evening, 3. midafternoon. ವಾ: ಮಟಮಟ ಮದ್ಯಾನ ಬಿಸ್‌ಲ್‌ಲಿ ಹೊರೆಗೆ ಹೋಕಾದುಲೆ.

ಮಟ್ಟ /*maṭṭa*/ ನಾ. 1. ಅಳತೆ, 2. ತನಕ, 3. ಮಟ್ಟಿಗೆ, 4. ವಸ್ತುವಿನ ಸಮತಟ್ಟನ್ನು ಪರೀಕ್ಷಿಸುವ ಸಾಧನ, 5. ಹಂತ, 6. ದರ್ಜೆ, 7. ವರೆಗೆ. 1. a measure, 2. up to, 3. until a point, 4. an instrument to check the horizontal plane (surveyor's level, builder's level), 5. stage, 6. divison, 7. until. **ಮಟ್ಟ ತಿಳ್ಕಣದೆ ಮಾತಾಡ್ಬೇಡ(ಗಾ).** ವಾ: ಮಳ್‌ಗಾಲಲಿ ಹೊಳೆ ನೀರ್‌ನ ಮಟ್ಟ ಏರ್‌ದೆ. ಪ: ಮಟ್ಟಂದಳು – ಅಳತೆಗಿಂತಲು

ಮಟ್ಟಿ[1] /*maṭṭi*/ ನಾವಿ. 1. ಅಂತಸ್ತು, 2. ಜೀವನಶೈಲಿ. 1. status, 2. life style. ವಾ: ಪ್ರತಿಯೊಬ್ಬನು ಬೇರೆ ಬೇರೆ ಮಟ್ಟಿ ಹೊಂದಿದ್ದವೆ. ಪ: ಮಟ್ಟ್(ತು)

ಮಟ್ಟಿ[2] /*maṭṭi*/ ಕ್ರಿವಿ. 1. ಸುತ್ತಿಗೆ, 2. ಒಂದು ಬಗೆಯ ಬಡಿಯುವ ಕಬ್ಬಿಣದ ಸಾಧನ, 3. ಕಲ್ಲು, ಕಬ್ಬಿಣ ಮೊದಲಾದವುಗಳನ್ನು ಕುಟ್ಟಲು ಬಳಸುವರು. a hammer, a tool with a wooden handle and a metal head, used in hitting nails, breaking stones, etc. ವಾ: ಗೋಡೆಗೆ ಆಣಿನ ಮಟ್ಟಿ ತಕಂಡ್ ಹೊಡ್ಡರಾತ್. ಪ: ಮುಟ್ಟಿ(ತು)

ಮಟ್ಟೆ[1] /*maṭṭɛ*/ ನಾ. 1. ಕೋಳಿ ಮೊಟ್ಟೆ, 2. ತತ್ತಿ, 4. ಅಂಡ. an egg. ವಾ: ಕೋಳಿ ಮಟ್ಟೆ ಬೇಸಿ ತಿಂಬಕೆ ಕುಸಿ.

ಮಟ್ಟೆ² /*maṭṭɛ*/ ನಾ. 1. ಮಡಿಲು, 2. ಉಡಿ. lap, top part of one's legs that forms into a flat surface when someone is sitting on the floor. ವಾ: ಅವ್ವನ ಮಟ್ಟೆಲಿ ತಲೆ ಇಸಿ ಮೊಲ್ಗಿರೆ ಅದೆ ಸೊರ್‌ಗ.

ಮಟ್ಟೆ³ /*maṭṭɛ*/ ನಾ. ಸೊಂಟಕ್ಕೆ ಸುತ್ತಿದ ಸೀರೆ ಅಥವಾ ಪಂಚೆ ತುದಿಯಲ್ಲಿ ಏನಾದರೂ ವಸ್ತುಗಳನ್ನು ಸುತ್ತಿ ಇರಿಸಿ ಕೊಳ್ಳುವುದು. to tie something in the end of one's saree or dhoti. ವಾ: ಮಟ್ಟೆಲಿ ಅಡ್ಕೆನ ಸುತ್ತಿಸಿಕಂಡಡ್. ಪ: ಮೊಟ್ಟೆ(ತು)

ಮಟ್ಟೆಮರಣ /*maṭṭɛmaraṇa*/ ನಾ. 1. ಖಾಕಿ ಬಣ್ಣದ ಕೀಟ, 2. ಮಿಡತೆ. 1. a brownish yellow coloured insect, 2. a locust. ವಾ: ಮಟ್ಟೆಮರಣತ ಅದೊಂದ್ ಹುಳ.

ಮಟ್ಟೊ /*maṭṭɔ*/ ನಾ. 1. ಸಮತಟ್ಟು, 2. ಹತೋಟಿ. 1. level, 2. control.

ಮಟ್ಲ್ /*maṭlɨ*/ ನಾ. ತೆಂಗಿನಮರದ ಗರಿಯ ಮಧ್ಯದಲ್ಲಿ ಇರುವ ಉದ್ದ ಕವಲು. a ridge of coconut leaf. ವಾ: ಕಾಯಿಮರದ ಗರಿ ಮಧ್ಯಲಿರ್‌ದು ಮಟ್ಲ್.

ಮಠಂದೂರು /*maṭhandu:ru*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮಡಗಲಕಾಯಿ /*maḍagalaka:yi*/ ನಾ. 1. ಮಾಡಹಾಗಲಕಾಯಿ, 2. ಕಾಡುಹಾಗಲಕಾಯಿ. spine gourd. ವಾ: ಮಡಗಲಕಾಯಿ ಸಣ್ಣದಾಗಿ ಹಗಲೆಕಾಯಿನಂಗೆ ಇದ್ದದೆ, ಆದರೆ ಕಂಯಿ ಇರ್‌ದುಲೆ, ತಿಂಬಕೆ ಬಾರಿ ರುಚಿ, ಪ್ರೊಟಿನ್ ಸ ಇದ್ದದೆ, ಇದರ್‌ಲಿ ಮೊದ್ದ್‌ನ ಗುಣ ಇದ್ದದೆ.

ಮಡತಾರ್ /*maḍata:r*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮಡಪ್ಪಾಡಿ /*maḍappa:ḍi*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಪಂಬೆತ್ತಾಡಿ ಮತ್ತು ಮಡಪ್ಪಾಡಿ ಗ್ರಾಮದ ಜಾಗ. 1. family, 2. lineage, 3. a locality in Pambettadi and Madappadi village in Sullia Taluk of Dakshina Kannada District.

ಮಡಲ್ /*maḍalɨ*/ ನಾ. ಒಣಗಿದ ತೆಂಗಿನ ಸೋಗೆ/ ಗರಿ. dried leaf of coconut. ವಾ: ವಾರಕ್ಕೊಮ್ಮೆ ಮಡಲ್ ಬೀಳ್ತಿದ್ದದೆ.

ಮಡಿಕೇರಿ /*maḍike:ri*/ ನಾ. ಕೊಡಗು ಜಿಲ್ಲೆಯಲ್ಲಿರುವ ತಾಲ್ಲೂಕು. Madikeri taluk. ವಾ: ಕರ್ನಾಟಕದ ಕಾಸ್ಮೀರತೇಳ್ರೆ ಅದ್ ಮಡಿಕೇರಿ, ಎಲ್ಲಿ ನೋಡಿರು ಬೆಟ್ಟ, ಕಾಡ್, ಹಸ್ರ್, ಮಂಜ್ ತುಂಬಿ ತುಳ್ಕಿದೆ.

ಮಡಿಮಾಡ್ /*maḍima:ḍɨ*/ ಕ್ರಿ. ದೈಹಿಕ ಶಿಕ್ಷೆ ನೀಡುವುದು. to torture. ವಾ: ತೊಪ್ಪ್ ಮಾಡಿರೆ, ಸುಳ್ಳ್ ಹೇಳಿರೆ ಮಡಿಮಾಡ್‌ದು.

ಮಡಿಯಾನ /*maḍiya:na*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮಡಿಯಾಲ /*maḍiya:la*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮಡಿಲ್ /*maḍilɨ*/ ನಾ. 1. ಮಡಿಲು, 2. ಉಡಿ. lap, top part of one's legs that forms into a flat surface when someone is sitting on the floor. ವಾ: ಸಣ್ಣವಿರ್‌ಕನ ಅವ್ವ ಮಡಿಲ್‌ಲಿ ಮೊಲ್ಗಿಸಿಕಂಡ್ ಕತೆ ಹೇಳ್ತಿದ್ದೊ.

ಮಡಿವಾಳ /*maḍiva:ḷa*/ ನಾ. 1. ಅಗಸ, 2. ದೋಬಿ, 3. ರಜಕ, 4. ಬಟ್ಟೆಯನ್ನು ಒಗೆದು ಶುಭ್ರಮಾಡುವ ವೃತ್ತಿಯವನು, 5. ಮಡಿವಳ. 1. a washerman, 2. laundryman, 3. washerman, 4. a Madivala-washerman, 5. washerman. ವಾ: ಮೊದ್ವೆಲಿ ಮಡಿವಾಳ ಬಂದ್ ಮೇಲ್ಕಟ್ಟ್ ಕಟ್ಟಿದೆ.

ಮಡಿವಾಳಮೂಲೆ /*maḍiva:ḷamu:le*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮಂಡೆಕೋಲು ಗ್ರಾಮದ ಜಾಗ. 1. family, 2. lineage, 3. a locality in Mandekolu village in Sullia Taluk of Dakshina Kannada District.

ಮಡೆ¹ /*maḍɛ*/ ನಾ. 1. ಎಂಜಲು, 2. ಉಗುಳು. 1. spittle, 2. saliva. **ಮಡೆ ತಿಂಬವಂಗೆ ಯಾದಾರೇನ್?(ಗಾ). ಮೇಲೆ ಉಗ್ದ ಮಡೆ ನಮ್ಮ ಮೋರೆಗೇ ಬೀಳ್ಸಿಕಂಬೊದು(ನು).** ವಾ: ಮಂಡ ಕತ್ತಿಲಿ ಸೌದೆ ಸನ ಕಡ್ಯಕ್. ಪ: ಮಡೆಲಿ – ಎಂಜಲಿನಲ್ಲಿ; ಮಡೆಂದ – ಮಡೆಯಿಂದ

ಮಡೆ² /*maḍɛ*/ ನಾ. 1. ಒಡ್ಡು, 2. ಗದ್ದೆಗಳಿಗೆ ನೀರು

ಹಾಯಿಸಲು ನಾಲೆಯಲ್ಲಿ ಮಾಡಿರುವ ಕಂಡಿ, 3. ದೇವರಿಗೆ ಅರ್ಪಿಸುವ ನೈವೇದ್ಯ, 4. ದೇವರ ನೈವೇದ್ಯಕ್ಕೆಂದು ಬಿಟ್ಟ ಗದ್ದೆ. 1. an embankment, 2. a hole/gate made in the canal so that water can flow to paddy field, 3. an offering to god, 4. a field dedicated to god. ವಾ: ಹಳ್ಳಕೆ ಮಡೆ ಕಟ್ಟಿದೊ.

ಮಡೆ /*maḍɛ*/ ನಾ. 1. ಎಂಜಲು, 2. ಒಬ್ಬರು ಉಂಡು ಕುಡಿದು ಬಿಟ್ಟ ಆಹಾರ ನೀರು, 3. ತಿಂದು ಉಳಿದದ್ದು, 4. ಎಂಜಿಲ್. 1. saliva, 2. leftover food, 3. surplus food, 4. remaining food on the plate. **ಮಡೆ ತಿಂಬವಂಗೆ ಯಾದಾರೇನ್?(ಗಾ).** ವಾ: ಮಡೆ ಬಟ್ಲ್‌ನ ಹೊರೆಗೆ ಇಸ್.

ಮಡೆಂಜಿ /*maḍɛŋji*/ ನಾ. 1. ಹೊಳೆ/ನದಿಗಳಲ್ಲಿ ಕಾಣಸಿಗುವ ಒಂದರಿಂದ ಎರಡು ಅಡಿಗಳಷ್ಟು ಉದ್ದ ಬೆಳೆವ ದೊಡ್ಡ ಗಾತ್ರದ ರುಚಿಕರವಾದ ಮೀನು, 2. ಮಂಜಿ. promfret fish, a fresh water fish. ವಾ: ಮಡೆಂಜಿ ಮೀನ್ ಬಾರಿ ರುಚಿ.

ಮಡೆಗುತ್ತಿ /*maḍɛgutti*/ ನಾ. ಪೀಕದಾನಿ. a spittoon. ವಾ: ಮಡೆಗುತ್ತಿಲಿ ಎಲಾಡ್ಕೆ ತಿಂದ್ ಉಗೆದು.

ಮಡೆನೀರ್ /*maḍɛni:r*/ ನಾ. 1. ಜೊಲ್ಲು, 2. ಲಾಲಾರಸ ಗ್ರಂಥಿಗಳು ಉತ್ಪಾದಿಸಿ ಸ್ರವಿಸುವ ನೀರಿನಂಥ ಪದಾರ್ಥ, 3. ಲಾಲಾರಸ, 4. ಉಗುಳು. 1. saliva, 2. spittle, 3. saliva, 4. spit. ವಾ: ಮೀನ್ ಗೈಪು ರೊಟ್ಟಿ ನೋಡಿಕನ ಮಡೆನೀರ್ ತಡೆಕಾತ್ಲೆ.

ಮಡ್‌ಂಜಿ /*maḍɨŋji*/ ನಾ. 1. ಕೆರೆ, ತೋಡು, ನದಿಗಳಲ್ಲಿ ವಾಸವಿರುವ ಆಹಾರಕ್ಕೆ ಉಪಯೋಗಿಸುವ ಮೀನು, ಈ ಮೀನು ಶುಚಿ ಮತ್ತು ರುಚಿ, ಹಾಗಾಗಿ ನೀರಿನ ಶುದ್ಧೀಕರಣಕ್ಕಾಗಿ ಕುಡಿವ ನೀರಿನ ಬಾವಿಗೆ ಈ ಮೀನನ್ನು ಬಿಟ್ಟು ಸಾಕುತ್ತಾರೆ, 2. ಮಂಜ್ ಮೀನು. Pomfret Fish, a fresh water fish. ವಾ: ಮಡ್‌ಂಜಿ ಮೀನ್ ಬಾರಿ ರುಚಿ ಅಲ. ಪ: ಮಡೆಂಜಿ(ತು)

ಮಡ್ಕಂಡ್ /*maḍkaṇḍɨ*/ ಕ್ರಿ. 1. ಇಟ್ಟುಕೊಂಡು, 2. ಇರಿಸಿಕೊಳ್ಳು, 1. to keep something, 2. to hold something. ವಾ: ದುಡ್ಡು ಅಂವ ಹಂಗೆನೆ ಮಡ್ಕಂಡ್ ಇತ್ತ್. ಪ: ಮಡ್ಕಣಕು – ಇಟ್ಟುಕೊಳ್ಳಬೇಕು; ಮಡ್ಕಣಿ – ಮಡಗಿಕೊಳ್ಳಿ /ಇಟ್ಟುಕೊಳ್ಳಿ; ಮಡ್ಕಣಿಕಾಗದ್ – ಇಟ್ಟುಕೊಳ್ಳಬಾರದು

ಮಡ್ಕೆ /*maḍkɛ*/ ನಾ. 1. ಮಡಕೆ, 2. ಗಡಿಗೆ, 3. ಮಣ್ಣಿನ ಪಾತ್ರೆ. an earthen pot. **ಹೋತ್ ಗಡ ಬಾತ್ ಗಡ ಅಂಬ್‌ಲಿ ಮಡ್ಕೆ ತೂತ್ ಗಡ(ಗಾ). ಎರ್ಡ್ ಜನ ನೋಡ್ದು, ಒಬ್ಬ ವಾಸನೆ ತಕಂಬದು, ಮೂವತ್ತೆರ್ಡ್ ಜನ ಕೆಲ್ಸಮಾಡ್ದು, ಒಬ್ಬ ಮಡ್ಕೆಗೆ ಹಾರ್ದು – ಕಣ್ಣ್, ಮೂಕು, ನಾಲಿಗೆ, ಹಲ್ಲ್(ಒ).** ವಾ: ಮೊಣ್ಣ್‌ನ ಮಡಕೆಲಿ ಮಜ್ಜಿಗೆ ಹೊಯ್ದಿಸಿದ್. ಮೊಣ್ಣ್‌ನ ಮಡ್‌ಕೆನ ಎಲ್ಲದಕ್ಕು ಬಳ್ಸಿರೆ ಒಳ್ಳದ್. ಪ: ಮಡ್ಕೆ ಕೊಟ್ಟತ್ – ಮಡಕೆ ಕೊಟ್ಟನು/ಳು;

ಮಡ್ಕೆಜೇನ್ /*maḍkɛje:nɨ*/ ನಾ. ಮಣ್ಣಿನ ಮಡಕೆಯಲ್ಲಿ ಜೇನು ಸಾಕುತ್ತಾರೆ. pot-honey. ವಾ: ಮಡ್ಕೆಲಿ ಜೇನ್ ಸಾಕಿವೆ.

ಮಡ್ಕೆಹಣ್ಣ್ /*maḍkɛhaṇṇɨ*/ ನಾ. ಹಳದಿ ಬಣ್ಣದ ಒಂದು ರೀತಿಯ ಹಣ್ಣು. a yellow fruit. ವಾ: ಮಡ್ಕೆ ಹಣ್ಣ್ ಅರ್‌ಸಣ ಬಣ್ಣಲಿ ಇದ್ದದೆ.

ಮಡ್ಕೊಂದ್ /*maḍkɔndɨ*/ ಕ್ರಿ. ಇಟ್ಟುಕೊಳ್ಳುವುದು. to keep. ವಾ: ಅವು ತಲೆಗಡಿನ ಎತ್ತರ ಮಡ್ಕೊಂದ್.

ಮಡ್ಗಲಕಾಯಿ /*maḍgalaka:yi*/ ನಾ. ಮಾಡಹಾಗಲಕಾಯಿ, 2. ಕಾಡುಹಾಗಲಕಾಯಿ. spine gourd. ವಾ: ಹಿಂದೆನ ಕಾಲಲಿ ಮಡ್ಗಲ ಕಾಯಿ ಕಾಡ್‌ಲಿ ಸಿಕ್ತಿತ್ತ್, ಈಗ ಅದ್‌ನ ಎಲ್ಲ ಕಡೆ ಬೆಳ್‌ಸುವೆ.

ಮಡ್‌ಗ್[1] /*maḍɨgɨ*/ ಕ್ರಿ. 1. ಇಡು, 2. ಬಚ್ಚಿಡು, 3. ಅಲುಗದಂತೆ ಇಡು, 4. ಉಳಿಸು, 5. ಇಟ್ಟುಕೊಂಡಿರು, 6. ಹೊಡೆ, 7. ಇಸೆಳೊ, 8. ಇಸಿಯೊಳ. 1. to keep, 2. to keep seceretly, 3. to keep straight, 4. to save, 5. to keep, 6. to beat. ವಾ: ಮೀನ್‌ನ ಕೊಡಿಲಿ ಮಡ್ಗ್, ಅಡಿಲಿ ಇಸಿರೆ ಕೊತ್ತಿ ಮನಿ ಬಾಯಿ ಹಾಕುದು.

ಮಡ್ಗ್[2] /*maḍgɨ*/ ಕ್ರಿವಿ. 1. ಪೆಟ್ಟುಕೊಡು, 2. ಹೊಡೆ, 3. ಬಡಿ. 1. to hit, 2. to beat, 3. to thrash. **ಎತ್ತ್‌ಗೆ ಜರ ಬಾಕನ ಎಮ್ಮೆಗೆ ಬರೆ ಮಡ್ಗಿದೊಗಡ(ಗಾ).** ವಾ: ಕೊತ್ತಿ ಕದ್ದ್ ತಿಂಬಕನ ನಾಕ್ ಮಡ್ಗ್.

ಮಡ್‌ಗಿಕಿಲ್ಲೆ /*maḍɨgikillɛ*/ ಕ್ರಿ. 1. ಮಡಗಲಿಕ್ಕಿಲ್ಲ, 2. ತಪ್ಪು ಮಾಡಿದಾಗ ಉಂಟಾಗುವ ಭಯದ ಭಾವನೆ.

1. won't keep, 2. feeling guilty. ವಾ: ಸುಳ್ಳು ಹೇಳಿರೆ ಅಪ್ಪ ನನ್ನ ಹೊಡ್ದ್ ಮಡ್‌ಗಿಕಿಲ್ಲೆ.

ಮಡ್ಚ್ /*maḍi*/ ಕ್ರಿ. 1. ಮಡಚು, 2. ಮಡಿಸು, 3. ಪದರಗಳಾಗಿ ಮಡಿಸು, 4. ಮಡಿಕೆ. 1. to fold, 2. to bend, 3. to fold on layers, 4. a pot. **ಅಪ್ಪ ಕೊಟ್ಟ ದುಡ್ಡ್‌ನ ಲೆಕ್ಕ ಮಾಡಿಕಾಲೆ ಅಮ್ಮ ಕೊಟ್ಟ ಮೊಂದ್ರಿನ ಮಡ್ಚಿಕಾಲೆ**

– **ನಕ್ಷತ್ರ, ಆಕಾಶ(ಒ).** ವಾ: ಮೊಂದ್ರಿನ ಮಡ್ಚ್.

ಮಡ್ಡಿ /*maḍḍi*/ ನಾ. ಮನೆಯಲ್ಲಿ ತಯಾರಿಸುವ ಪಶು ಆಹಾರ. feed prepared for animals at hhome. ವಾ: ದನಗಳಿಗೆ ಮಡ್ಡಿ ಬೇಸಿಕುಟ್ಟು. ಪ: ಮೊಡ್ಡಿ

ಮಡ್ಡ್ /*maḍḍɨ*/ ನಾವಿ. 1. ಕೆಸರು, 2. ನೀರಿನ ಅಂಶ ಹೆಚ್ಚಿರುವ ಮಣ್ಣು, 3. ಪಂಕ, 4. ರಾಡಿ. 1. sludge, 2. mire, 3. muddy, 4. slime. ವಾ: ಮಡ್ಡ್‌ಲಿ ಎದ್ದ್ ಬಿದ್ದ್ ಬಂದುಟು. ಪ: ಮೊಡ್ಡ್

ಮಡ್ಡ್‌ರೋಡ್ /*maḍḍɨ ro:ḍɨ*/ ನಾ. ಎಪ. ಮಣ್ಣಿನ ರಸ್ತೆ. 1. a mud road, 2. a foreign word. ವಾ: ಮಡ್ಡ್ ರೋಡ್‌ಲಿ ಕಾರೆಲ್ಲ ಹೋಕಿಲೆ.

ಮಡ್ತಿಲ /*maḍtila*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಐವರ್ನಾಡು ಗ್ರಾಮದ ಜಾಗ. 1. family, 2. lineage, 3. a locality in Aivarnadu village in Sullia Taluk of Dakshina Kannada District.

ಮಡ್‌ಪಳೆ /*maḍɨpaḷɛ*/ ನಾ. 1. ಹೊರೆ ಹೊರಲು ಅಡಿಕೆ ಹಾಳೆಯಿಂದ ತಯಾರಿಸಿದ ಶಿರಸ್ತ್ರಾಣ, 2. ಮುಟ್ಟಪ್ಪಾಳೆ, 3. ಮುಟ್ಟಾಳೆ, 4. ಮೊಡ್ಪಾಳೆ. a head gear/a cap/hat made of areca leaf. ವಾ: ಮಡ್ಪಳೆನ ತಲೆಗೆ ಹಾಕಂಬದು. ಪ: ಮಡ್ಪಾಳೆ, ಮೊಡ್ಪಾಳೆ, ಮುಟ್ಟಾಳೆ(ತು)

ಮಡ್ಪಳೆಬೊಳ್ಳಿ /*maḍpaḷɛbɔḷḷi*/ ನಾ. ಮುಟ್ಟಾಳೆಯನ್ನು ತಯಾರಿಸಲು ಬಳಸುವ ಬಳ್ಳಿ, a climber used in the making of areca leaf cap/hat. ವಾ: ಮಡ್ಪಳೆ ಬೊಳ್ಳಿ ಕಪ್ಪು ಬಣ್ಣಲಿದ್ದದೆ.

ಮಡ್ಯಂಗಳ /*maḍyaŋgaḷa*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮಡ್ಯಳ /*maḍyaḷa*/ ನಾ. 1. ಅಗಸ, 2. ದೋಬಿ, 3. ರಜಕ, 4. ಬಟ್ಟೆಯನ್ನು ಒಗೆದು ಶುಭ್ರಮಾಡುವ ವೃತ್ತಿಯವನು, 5. ಮಡಿವಳ. 1. a washerman, 2. laundryman, 3. washerman, 4. a Madivala-washerman, 5. washerman. ವಾ: ಮಡ್ಯಳ ಸುದ್ದ ದಿನ ಪುಣ್ಯರ್‌ಚನೆನ ತಂದ್ ಜೆನಗಳ ಮೇಲೆ, ಮನೆಗೆ ತಕ್ಕಳ್ಸಿವೆ. ಪ: ಮಡ್ಯೊಳ(ತು)

ಮಡ್ಯೊಳಮಜಲು /*maḍyoḷamajalu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮಡ್ಯೊಳ್ತಿ /*maḍyoḷti*/ ನಾ. 1. ಮಡಿವಾಳ ಗಿತ್ತಿ, 2. ಸೂತಕ ತೆಗೆಯುವವಳು, 3. ಶುದ್ಧೀಕರಿಸುವವಳು. 1. a washerwoman, 2. a woman who performs the ritual cleaning, 3. a woman who cleans – as in ritual cleaning. ವಾ: ಕೂಸ್ ಹುಟ್ಟಿದ ಐದ್ ಇಲ್ಲರೆ ಏಳನೇ ದಿನ ಅಮೆತೇಳ್ವ ಸುದ್ದಿ ಕ್ರಿಯೆ ಮಾಡುವೆ, ಆದಿನ ಮಡೊಳ್ತಿ ಮನೆಗೆ ಬಂದ್ ಅವ್ವ ಮತ್ತೆ ಕೂಸುನ ಮೀಸಿ ಸುದ್ದಿಕರಣ ಕಾರ್‌ಯ ಮಾಡಿವೆ. ಪ: ಮೊಡ್ಯೊಳ್ತಿ

ಮಡ್ಲಕ್ಕಿ /*maḍlakki*/ ನಾ. 1. ವಧುವಿನ ಮಡಿಲಲ್ಲಿ ಕಟ್ಟಿದ ಅಕ್ಕಿ, 2. ಹೆಣ್ಣು ಮಕ್ಕಳ ಉಡಿಗೆ ತುಂಬುವ ಅಕ್ಕಿ, 3. ಉಡಿಯಕ್ಕಿ, 4. ಸೋಗಿಲಕ್ಕಿ. a custom of tying a handful of rice to the end of sari. ವಾ: ಮೊದುವೆ ಆದ ದಿನ ಮೊದುವಳ್ತಿ ಮಡ್ಲಕ್ಕಿ ತಂದ್ ಗಂಡನ ಮನೆಲಿ ಪಾಯ್ಸ ಮಾಡೊಕು.

ಮಡ್ಲು /*maḍlu*/ ನಾ. ತೆಂಗಿನಗರಿ. coconut leaf. ವಾ: ಮಡ್ಲು ಬೀತ್.

ಮಡ್ಲೂರು /*maḍlu:ru*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮಡ್ಲ್[1] /*maḍlɨ*/ ನಾ. 1. ಹಸುವಿನ ಜನನಾಂಗ, 2. ಮಡಿಲ್, ಅಂಬಲ(ತು). reproductive tract of a heifer or cow. ವಾ: ಹಸ್ ಮಡ್ಲ್ ಇಳ್ಸಿಟು, ಇಂದ್ ನಾಳೆ ಆಗಿ ಕರ್ ಹಾಕುದುಕಂಡದೆ.

ಮಡ್ಲ್[2] /*maḍlɨ*/ ನಾ. 1. ಮಡಿಲು, 2. ಉಡಿ. 1. lap, 2. top part of one's legs that forms into a flat surface when someone is sitting on the floor. ವಾ: ಗೌರಿ ಹಬ್ಬಲಿ ಹೆಣ್ಮಕ್ಕಳಿಗೆ ಮಡ್ಲ್ ತುಂಬ್ಸಿ ಕಳ್ಸುವೆ.

ಮಡ್ಲ್ ಅಡ್ಡ ಇಸುದು /*maḍlɨ aḍḍa isudu*/ ಕ್ರಿವಿ.

ತೆಂಗಿನಗರಿಯನ್ನು ತಡೆಯಾಗಿ ಕಟ್ಟುವುದು. to tie coconut leaf to block something.

ಮಡ್ಲ್‌ಕಡ್ಡಿ /*maḍlɨkaḍḍi*/ ನಾ. ತೆಂಗಿನಗರಿಯ ಕಡ್ಡಿ. a stick of coconut. ವಾ: ಮಡ್ಲ್ ಕಡ್ಡಿಲಿ ಚೀಪೆ ಮಾಡಿವೆ.

ಮಡ್ಲ್‌ಹೆಟ್ಟುದು /*maḍlɨheṭṭudu*/ ನಾ. ತೆಂಗಿನ ಗರಿ ಹೆಣೆಯುವುದು. to weave the coconut leaves.

ಮಡ್ಸ್ /*maḍsɨ*/ ಕ್ರಿ. 1. ಮಡಚು, 2. ಮಡಿಸು, 3. ಪದರಗಳಾಗಿ ಮಡಿಸು, 4. ಮಡಿಕೆ. 1. to fold, 2. to bend, 3. to fold into layers, 4. layers. ವಾ: ಕಾಪಿ ವಣ್ಸೊ ತಾಟ್‌ನ ಒಬ್ಬಂಗೆ ಮಡ್ಸಿಕೆ ಆದುಲೆ.

ಮಣ /*maṇa*/ ನಾ. 1. ತೂಕದ ಅಳತೆಯ ಮಾನ, 2. ಒಂದು ಮಣ = 25 ಕಿಲೋ, ಒಂದು ಕಂಡಿ – 20 ಮಣ – 250 ಕಿಲೋ. a unit of quantity, equivalent to 2. 5 kilo grams. **ಮಣ ಮಾತ್‌ಂದ್ ಕಣ ಕೃತಿ ಲೇಸ್(ಗಾ).** ವಾ: ಎರ್‌ಡ್ ಮಣ ರಾಗಿನ ಬ್ಯಾಗಿಗೆ ಸೊರ್‌ಗ್.

ಮಣ ಮಣತೇಳ್ದು /*maṇa maṇate:ḷdu*/ ಕ್ರಿ. ಗೊಣಗುವುದು. to grumble, to talk indiscriminately. ವಾ: ಹಿಡ್ದದ್ ಮುಟ್ಟಿದಕೆಲ್ಲ ಮಣ ಮಣತ ಹೇಳಿಕಂಡಿರ್‌ದು.

ಮಣಲ್ /*maṇalɨ*/ ನಾ. 1. ಮರಳು, 2. ಉಸುಕು, 3. ಹೊಯಿಗೆ, 4. ಖನಿಜ ಅಥವಾ ಶಿಲೆಗಳ ಅಸಂಘಟಿತ ಸಣ್ಣಕಣಗಳು. 1. sand, 2. small grains of rocks – sand, 3. sand, 4. small grains of rocks and minerals. ವಾ: ಮಕ್ಕ ಮಣಲ್‌ಲಿ ಆಡಿವೆ.

ಮಣಿ /*maṇi*/ ನಾ. ಮಣಿಸರ. gemstone necklace. ವಾ: ಸಣ್ಣ ಮಕ್ಕಳ ಕುತ್ತಿಗೆಲಿ ಮಣಿ ಇದ್ದರೆ ನೋಡಿಕೆ ಕುಸಿ. ಪ: ಮಣಿಗ – ಮಣಿಗಳು

ಮಣಿಕಟ್ /*maṇikaṭi*/ ನಾ. ಕೈಗಳ ಮಣಿಗಂಟು. wrist. ವಾ: ಮಣಿಕಟ್ಟ್ ಬಾತುಟು.

ಮಣಿಗಂಟ್ /*maṇiganṭɨ*/ ನಾ. ಚೇಳಿನ ಬಾಲದ ಮಣಿ. sting of a scorpion. ವಾ: ಚೇಳ್ ಮಣಿಗಂಟ್‌ಲಿ ಕುತ್ತುದು.

ಮಣಿಮಜಲು /*maṇimajalu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕಳಂಜ ಗ್ರಾಮದ ಜಾಗ. a locality in Kalanja village in Sullia Taluk of Dakshina Kannada District.

ಮಣಿಯಪ್ಪನವರು /*maṇiyappanavaru*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮಣಿಯಾನ /*maṇiya:na*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮಣಿಲ /*maṇila*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಎಡಮಂಗಲ ಗ್ರಾಮದ ಜಾಗ. a locality in Edamangala village in Sullia Taluk of Dakshina Kannada District.

ಮಣೆ /*maṇɛ*/ ನಾ. ನೆಲದಲ್ಲಿ ಕೂತು ಊಟ ಮಾಡುವರೇ ಕುಳಿತುಕೊಳ್ಳಲು ಬಳಸುವ 4ರಿಂದ 6ಇಂಚು ಎತ್ತರದ ಮರದ ವಸ್ತು. 4-6 inch high wooden plank, used as a table to have food while sitting on the floor. **ಹಾಕ್ ಮಣೆ, ನೂಕ್ ಮಣೆ, ತೋರ್ ಮಣೆ(ಗಾ).** ವಾ: ಮರದ ಮಣೆಲಿ ಕುದ್ದ್ ತಿಂಬಕೆ ಕುಸಿಯಾದೆ, ಹಳೆದೆಲ್ಲ ನೆಂಪಾದೆ. ಪ: ಮಣೆಲಿ – ಮಣೆಯಲ್ಲಿ

ಮಣೆ ಹರಿಸೇವೆ /*maṇɛ harise:vɛ*/ ನಾ. ವೆಂಕಟರಮಣ ದೇವರ ಮೂರ್ತಿಯನ್ನು ಮಣೆ ಮೇಲೆ ಇಟ್ಟು ಪೂಜೆ ಮಾಡುವುದು. worshipping an idol of Venkataramana. ವಾ: ಮನೆ ದೇವ್ರನ್ನ ಮಣೆಮೇಲೆ ಕೂರ್‌ಸಿ ಹರಿಸೇವೆ ಮಾಡ್ತುಕೆ ಮಣೆ ಹರಿಸೇವೆತ ಹೇಳಿವೆ.

ಮಣೆದಾರ /*maṇɛda:ra*/ ನಾ. ಅರಣ್ಯ ಅಧಿಕಾರಿ. a forest officer. ವಾ: ಮಣೆದಾರ ಬಂದೊಳೊ.

ಮಣ್ /*maṇɨ*/ ನಾ. 1. ಮಣ್ಣು, 2. ಭೂಮಿ, 3. ನೆಲ, 4. ಸಸ್ಯಗಳು ಬೆಳೆಯುವ ಮತ್ತು ಶಿಥಿಲ ಶಿಲೆಗಳೂ ಜೈವಿಕ ಉಳಿಕೆಗಳೂ ಸೇರಿರುವ ಭೂಮಿಯ ಮೇಲ್ಪದರ. 1. soil, 2. the earth, 3. land, 4. a top layer of soil formed by the broken down organic matter. ವಾ: ಸುರುನ ಮಳೆ ಬೀಳಿಕನ ಮೊಣ್ಣ್‌ದ್ ಗಮನ ಬಂದದೆಲ ಅದ್ ಲಾಯ್ಕ. ಪ: ಮೊಣ್ಣು

ಮಣ್‌ಮಸಿ /*maṇɨmasi*/ ಕ್ರಿವಿ. ಮಾಡಿದ ಕೆಲಸವು ಪ್ರಯೋಜನಕ್ಕೆ ಬಾರದಿದ್ದಾಗ ಹೇಳುವ ಮಾತು. a term used to indicate a work that is no more

useful. ವಾ: ಅಲ್ಲಿಗೆ ಹೋಗಿದ್ದೆ, ಅಲ್ಲಿ ಮಣ್‌ಮಸಿ ಎಂತದೂ ಇಲ್ಲೆ.

ಮಣ್‌ಮೊಸಳೆ /*maṉimosaḷɛ*/ ನಾವಿ. ಸದಾ ಬಿದ್ದುಕೊಂಡೇ ಇರುವವ. refers to a lazy person. ವಾ: ಅಂವ ಯಾಗೊಳು ಮಣ್ ಮೊಸಳೆನಾಂಗೆ ಇರ್‌ದು.

ಮಣ್‌ಕಾಲ್ ಚಿಪ್ಪಿ /*maṉika:li cippi*/ ನಾ. 1. ಮಂಡಿ, 2. ಮನುಷ್ಯನಲ್ಲಿ ಕಾಲಿನ ಮಧ್ಯ ಕೀಲು, 3. ಜಾನು, 4. ಮೊಣಕಾಲು ಚಿಪ್ಪು. 1. knee, 2. a joint in the middle of the leg, 3. knee, 4. knee cap. ವಾ: ಅವುಳು ಮಣ್ ಕಾಲ್ ಚಿಪ್ಪಿ ಮಡ್ಸಿ ಕುದ್ದದ್.

ಮಣ್ಣಿ /*maṇṇi*/ ನಾ. 1. ರಾಗಿ ಹುಡಿಯಿಂದ ತಯಾರಿಸುವ ತಿಂಡಿ, 2. ರಾಗಿಮುದ್ದೆ, 3. ಮೊಣ್ಣಿ. 1. a sweet dish made of finger millet, 2. finger millet ball/ragi ball. ವಾ: ಮಣ್ಣಿ ಕೊಟ್ಟರೆ ಕೂಸು ಆರೋಗ್ಯ ಆಗಿ ಗಟ್ಟಿ ಮುಟ್ಟಾಗಿ ಇದ್ದದೆ.

ಮಣ್ಣಿಂಟೆ /*maṇṇiṇṭɛ*/ ನಾ. ಮಣ್ಣಿನ ಗಟ್ಟಿ. mud block. ವಾ: ನೆಲ ಅಗೆಕನ ಮಣ್ಣಿಂಟೆನೆ ಹೆಚ್ಚಿ ಸಿಕ್ಕುದೆ. ಪ: ಮಣ್ಣ್‌ಗಿಟ್ಟೆ(ತು)

ಮಣ್ಣು ಮಡ್ಗು /*mɔṇṇu maḍgu*/ ನಾವಿ. ಗದ್ದೆ ಏರಿಗೆ ಕೆಸರು ಮಣ್ಣು ಮೆತ್ತುವುದು. to put slush mud to the sides of paddy field. ವಾ: ಗದ್ದೆ ಪುಣಿಗೆ ಮಣ್ಣು ಮಡ್ಗಿರೆ ಗದ್ದೆ ಪುಣಿ ಲಾಯ್ಕ ಇದ್ದದೆ.

ಮಣ್ಣ್ ಉಂಡೆ /*mɔṇṇɨ unḍɛ*/ ನಾವಿ. ಮಣ್ಣಿನ ಉಂಡೆ. mud block/ball. ವಾ: ಮಣ್ಣ್ ಉಂಡೆನ ಹೊಡಿ ಹೊಡಿ ಮಾಡೊಕು.

ಮಣ್ಣ್‌ಕೂಡ್ಸುದು /*mɔṇṇɨku:ḍsudu*/ ನಾವಿ. ಗಿಡಕ್ಕೆ ಮಣ್ಣನ್ನು ಸೇರಿಸುವುದು. to add soil to a plant. ವಾ: ತರ್‌ಕಾರಿ ದೈಗೆ ಮಣ್ಣ್ ಕೂಡ್ಸಿಕುಟ್ಟು.

ಮಣ್ಣ್‌ಚಟ್ಟಿ /*mɔṇṇɨcaṭṭi*/ ನಾವಿ. ಸಾಂಬಾರು ಮಾಡುವ ಮಣ್ಣಿನ ಪಾತ್ರೆ. a vessel to cook curry/sambar/soup. ವಾ: ಹಿಂದೆನ ಕಾಲಲಿ ಮಣ್ಣ್ ಚಟ್ಟಿಲಿ ಗೈಪು ಮಾಡ್ತಿದ್ದದ್, ಅದರ್‌ಲಿ ಗೈಪು ಮಾಡಿರೆ ಬಾರಿ ರುಚಿಯಾದೆ.

ಮಣ್ಣ್‌ತಿಂಬಕ್ಕೆ /*mɔṇṇɨtimbakkɛ*/ ಕ್ರಿವಿ. 1. ಮಣ್ಣು ತಿನ್ನು, 2. ಬಜ್ಜಪಡಬೇಕಾಗುವುದು ಎಂಬುದನ್ನು ಸೂಚಿಸುವ ಪದ, 3. ಶಾಪವಿಡುವುದು. 1. eat mud, 2. a term indicating one has to work very hard, 3. a curse. ವಾ: ಸೇರಿ ಓದದೆ ಅಡ್ಯಾಡಿಕಂಡಿದ್ದರೆ ಮಣ್ಣು ತಿಂಬಕು ಅಸ್ಟೆ.

ಮಣ್ಣ್‌ನ ಓಡು /*mɔṇṇina o:ḍu*/ ನಾವಿ. 1. ಮೇಲ್ಛಾವಣಿಗೆ ಹೊದಿಸಲು ಬಳಸುವ ಮಣ್ಣಿನ ಸಾಧನ, 2. ಮಡಕೆಯ ಚೂರು, 3. ದೋಸೆ ಹುಯ್ಯುವ ಮಣ್ಣಿನ ಕಾವಲಿ, 4. ಮೊಣ್ಣ್‌ನ ಓಡ್. 1. a mud tool, used on the roof, 2. a piece of an earthen pot, 3. a clay tawa, 4. a clay utensil. ವಾ: ಮಣ್ಣ್‌ನ ಓಡುಲಿ ದೋಸೆ ಹೊಯ್ದ್ ಕೊಟ್ಟನೆ ಬಲ.

ಮಣ್ಣ್‌ನ ಚಟ್ಟಿ /*mɔṇṇina caṭṭe*/ ನಾವಿ. 1. ಮಣ್ಣಿನ ತಟ್ಟೆ, 2. ಚಿಕ್ಕ ಮಕ್ಕಳಿಗೆ ಊಟವನ್ನು ಅರೆದು ಕೊಡುವ ಮಣ್ಣಿನ ತಟ್ಟೆ. 1. an earthen plate, 2. a clay platter, usually given to children. ವಾ: ಕೂಸಿಗೆ ಮಣ್ಣ್ ನ ಚಟ್ಟೆಲಿ ಅನ್ನನ ಅರ್‌ದ್ ಕೊಡಿನಿ.

ಮಣ್ಣ್‌ನ ಮನೆ /*mɔṇṇina manɛ*/ ನಾವಿ. ಮಣ್ಣಿನಿಂದ ನಿರ್ಮಿತವಾದ ಮನೆ. a mud house. ವಾ: ಹಿಂದೆಲ್ಲ ಮಣ್ಣ್‌ನ ಮನೆ, ಮಣ್ಣ್‌ನ ಗೋಡೆನೆ ಇರ್‌ತಿದ್ದದ್.

ಮಣ್ಮೊಣ್ಣ್ /*maṉimɔṇṇɨ*/ ನಾವಿ. 1. ಮಣ್ಣು, 2. ಭೂಮಿ, 3. ನೆಲ, 4. ಸಸ್ಯಗಳು ಬೆಳೆಯುವ ಮತ್ತು ಶಿಥಿಲ ಶಿಲೆಗಳೂ ಜೈವಿಕ ಉಳಿಕೆಗಳೂ ಸೇರಿರುವ ಭೂಮಿಯ ಮೇಲ್ಪದರ. 1. soil, 2. the earth, 3. land, 4. a top layer of soil formed by the broken down organic matter. ವಾ: ನೀರ್ ಮಣ್ಮೊಣ್ಣ್ ಬಂದದೆ, ಇಂದ ನೀ ಕುಡ್ದ್ ನೋಡು.

ಮತಾವು /*mata:vu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮತಿ /*mɔti*/ ನಾ. 1. ವಾಸ್ತವದ ಬಗ್ಗೆ ಎಚ್ಚರ ಇರುವುದು, 2. ಬುದ್ಧಿಶಕ್ತಿ, 3. ಮೊತಿ. 1. being aware of reality, 2. intelligence. ವಾ: ಅಂವಂಗೆ ಮತಿ ಇಲ್ಲೆ.

ಮತ್ತಾರಿ /*matta:ri*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮತ್ತಿಮರ /*mattimara*/ ನಾ. 1. ಅರ್ಜುನ ಮರ, 2. ಸಾಲವೃಕ್ಷ. 1. Terminalia Arjuna tree, 2. Arjuna tree. ವಾ: ಮತ್ತಿ ಮರದ ಕೆತ್ತೆನ ಆಯುರ್ವೇದ ಮೊದ್ದಿಗೆ ಬಳ್ಸುವೆ.

ಮತ್ತಿಮೀನ್ /*mɔttimi:ni*/ ನಾ. ಭೂತಾಯಿ ಮೀನು.

sardine fish. ವಾ: ಮತ್ತಿ ಮೀನ್‌ನ ಮಂಗ್‌ಳೂರ್ ಕಡೆ ಬೂತಾಯಿತೇಳ್ವೆ.

ಮತ್ತೆ /*mattɛ*/ ಅ. 1. ಆಮೇಲೆ, 2. ನಂತರ, 3. ಬಳಿಕ. 1. after, 2. later, 3. afterwards. ವಾ: ಅತ್ತೆ ಮತ್ತೆ ಮಾಂವ ಇಬ್ಬರೂ ಬಂದೊ.

ಮತ್ಯಾರಿ /*matya:ri*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮತ್ಸರ /*matsara*/ ನಾ. 1. ಅಸೂಯೆ, 2. ಹೊಟ್ಟೆಕಿಚ್ಚು, 3. ಅಸಮಾಧಾನ. 1. jealousy, 2. envy, 3. displeasure. **ಹೆಣಕ್ಕೆ ಸಿಂಗಾರ ಯಾಕೆ? ಗುಣಕ್ಕೆ ಮತ್ಸರ ಯಾಕೆ?(ಗಾ).** ವಾ: ಮೊನ್ಸಂಗೆ ಮತ್ಸರ ಇರಿಕಾದ್, ಇದ್ದರೆ ಅದ್ ಮರದ ಕೇಡ್ ಮರಕ್ಕೆತೇಳುವಂಗೆ ನಮ್ಮನ್ನೇ ಹಾಳ್ ಮಾಡ್‌ದೆ.

ಮದ /*mada*/ ನಾ. 1. ಅಮಲು, 2. ಆನೆಗೆ ಉಂಟಾಗುವ ಕಾಮೋದ್ರೇಕ, 3. ಗರ್ವ, 4. ಸೊಕ್ಕು. 1. intoxication, 2. musth – heightened sexual aggression in male elephants, 3. excessive pride, 4. vanity. ವಾ: ಆನೆಗೆ ಮದ ಬಂದರೆ ಅದಿಕೆ ಯಾವ್ದೂ ಲೆಕ್ಕ ಇಲ್ಲೆ.

ಮದಕ /*madaka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಉಬರಡ್ಕ ಮಿತ್ತೂರು ಗ್ರಾಮದ ಜಾಗ. a locality in Ubaradka Mitturu village in Sullia Taluk of Dakshina Kannada District.

ಮದನ ಕೈ /*madana kai*/ ನಾ. 1. ವಸ್ತುಗಳನ್ನಿಡುವ ಹಲಗೆಗೆ ಅಥವಾ ಮನೆಯಿಂದ ಮುಂಚಾಚಿಕೊಂಡಿರುವ ಛಾವಣಿ ಮೊದಲಾದುವುಗಳಿಗೆ ಆಧಾರಕ್ಕಾಗಿ ಗೋಡೆಗೆ ಸಿಕ್ಕಿಸಿದ ಮರದ ಗೂಟ, 2. ಚೀಲ ಮೊದಲಾದುವುಗಳನ್ನು ತೂಗುಹಾಕಲಿಕ್ಕಾಗಿ ಗೋಡೆಗೆ ಹೊಡೆದಿರುವ ಗೂಟ. 1. a wooden peg inserted into a wall to support the shelves and roof, 2. a wedge driven into a wall to hang bags, etc.

ಮದಿಬ್ಬಣ /*madibbaṇa*/ ನಾ. ಹೆಣ್ಣುಕೊಟ್ಟ ಮನೆಯಿಂದ ಗಂಡಿನ ಮನೆಗೆ ಶೇಷೋಪಚಾರ (ಅತಿಥಿ ಸತ್ಕಾರ ಕೂಟ)ಕ್ಕೆ ಹೋಗುವ ದಿಬ್ಬಣ. hospitality offered by the bride's relatives to the family of the groom. ವಾ: ಮದಿಬ್ಬಣ ಹೊರ್‌ಟತ್. ಪ: ಮರಿದಿಬ್ಬಣ

ಮದುಮಜ್ಞ /*madumaŋŋa*/ ನಾ. 1. ಮದುವೆಯ ಗಂಡು, 2. ಮದುವಣಿಗ, 3. ವರ. bridegroom. ವಾ: ಮದುಮಜ್ಞನ ಸಿಂಗಾರ ಆವುಟು, ಕರ್ಕಂಡ್ ಬರೊಕ.

ಮದುವಣ /*maduvaṇa*/ ನಾ. ಮದುವೆ ಗಂಡು. bridegroom. ವಾ: ಮದುವಣ ವಾಲಗಕ್ಕೆ ಸೆರಿ ಕೊಣ್ತ್. ಪ: ಮದುವಣ್ಣ – ಮದುವೆಯ ಗಂಡು, ಮದುವಣ್ಗ – ವರ

ಮದುವಣತಿ /*maduvaṇati*/ ನಾ. 1. ಮದುವೆ ಹೆಣ್ಣು, 2. ವಧು. a bride. ವಾ: ಮದುವಣತಿದ್ ಸಿಂಗಾರ ಆತ?

ಮದುವಳಿಗ /*maduvaḷiga*/ ನಾ. 1. ಮದುವೆಯ ಗಂಡು, 2. ಮದುವಣಿಗ,3. ವರ. bridgegroom. ವಾ: ಮದುವಳಿಗಂಗೆ ಸಾಸ್ತ್ರ, ಎಣ್ಣರ್‌ಸಣ ಸುರು ಮಾಡಿ.

ಮದುವೆಗದ್ದೆ /*maduvegadde*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಉಬರಡ್ಕ ಮಿತ್ತೂರು ಗ್ರಾಮದ ಜಾಗ. a locality in Ubaradka Mitturu village in Sullia Taluk of Dakshina Kannada District.

ಮದುಳು /*maduḷu*/ ನಾ. 1. ಮಿದುಳು, 2. ಮೆರಿದು, 3. ಮಸ್ತಿಷ್ಕ. brain. ವಾ: ಗಂಡ್ ಜೆನರ ಮದುಳು ಹೆಣ್ಣ್ ಜೆನರ ಮದುಳುಗಿಂತ ದೊಡ್ಡದ್.

ಮದೆಕಟ್ಟು /*madɛkaṭṭu*/ ಕ್ರಿವಿ. ಚಿಕ್ಕ ಗಿಡಗಳಿಗೆ ಬಿಸಿಲಿನಿಂದ ರಕ್ಷಣೆ ಒದಗಿಸಲು ಕಟ್ಟುವ ಮರೆ. shade provided to small plants from the heat of the sun. ವಾ: ಆಗ ನೆಟ್ಟ ಸಣ್ಣ ದೈಗಳಿಗೆ ಮದೆಕಟ್ಟುದು ಒಳ್ಳೆದ್, ಬೇಗ ಬಾಡಿಕಿಲೆ.

ಮದ್ /*madɨ*/ ನಾ. 1. ವಿಷ, 2. ಗರಳ, 3. ಪಾಷಾಣ, 4. ಯಾವುದೇ ಬಗೆಯಲ್ಲಿ ಜೀವಿಯ ಶರೀರದಲ್ಲಿ ಸೇರಿದಾಗ ಪ್ರಾಣಾಪಾಯ ಉಂಟುಮಾಡುವಂಥ ಪದಾರ್ಥ. poison, a substances that cuases death. ವಾ: ಮದ್ ತಕಣ್ತ್. **ಮದ್‌ಹಾಕೊದ್** /*madɨha:kodɨ*/ ವಿಷ ಹಾಕುವುದು. to put poison. ವಾ: ಮದ್ ಹಾಕೊದ್‌ತ ಕೆಲು ಜೆನ ಹೇಳ್ದು ಕೇಳ್ಯೊಳೆ.

ಮದ್ಂಗಿ /*madɨŋgi*/ ನಾ. ವಿವಾಹಕ್ಕೆ ಮುನ್ನ

ವಧುವರರ ಕೈಗಳಿಗೆ ಮೆಹಂದಿ ಇಡುವ ಕಾರ್ಯಕ್ರಮ. pre-wedding celebration in which Mehandi is applied on the palm, hand, etc. of the bride. ವಾ: ದಾರೆದ್ ಹಿಂದೆನ ದಿನ ಮದ್‌ಂಗಿ ಸಾಸ್ತ್ರ ಇದ್ದದೆ. ಪ: ಮೊದ್‌ರಂಗಿ

ಮದ್ದುಸೊಪ್ಪು /*maddusoppu*/ ನಾ. ಆಷಾಢ ಮಾಸದಲ್ಲಿ ಕೊಡಗಿನ ಕಾಡಿನಲ್ಲಿ ಸಿಗುವ ಸೊಪ್ಪು, ಆಷಾಢ ಮಾಸದ 18ನೇ ದಿನ ಈ ಸೊಪ್ಪಿನಲ್ಲಿ 18 ರೀತಿಯ ಔಷಧೀಯ ಅಂಶಗಳು ಸೇರಿರುತ್ತವೆ ಎಂದು ನಂಬಿಕೆ. medicinnal leaf found in Kodagu during Ashada month (according Hindu Calendar). It is believed that the leaf has 18 medicinal properties. ವಾ: ಮದ್ದು ಸೊಪ್ಪುನ ಬೇಸಿಕನ ನೀಲಿ ಬಣ್ಣಲಿ ನೀರ್ ಬುಟ್ಟದೆ, ಆ ನೀರ್‌ನ ಬಳ್‌ಸಿ ಪಾಯ್ಸ ಮಾಡಿವೆ. ಪ: ಮೊದ್ದ್‌ಸೊಪ್ಪು

ಮದ್ದೊಳಿ /*maddoḷi*/ ನಾ. 1. ಮದ್ದಳೆ, 2. ಮೃದಂಗ, 3. ಡೋಲು, 4. ನಗಾರಿ, 5. ತಬಲ. 1. drum, 2. Mrudanga, 3. a drum, 4. a percussion drum instrument 5. Tabla. ವಾ: ಮದ್ದೊಳಿ ನಾದ ಮನ್ಸಿಗೆ ಕುಸಿಯಾದೆ.

ಮದ್ದ್ /*maddi*/ ನಾ. 1. ಔಷಧಿ, 2. ಮದ್ದು. medicine. **ಕೆಡುವ ಕಾಲಕೆ ಮದ್ದಿಲ್ಲೆ ಮರಣ ಕಾಲಕೆ ಬುದ್ದಿ ಇಲ್ಲೆ(ಗಾ).** ವಾ: ಜರಕೆ ಮದ್ದ್ ತಕಂಡ? ಪ: ಮೊದ್ದ್. **ಮದ್ದ್‌ಕುಪ್ಪಿ** /*maddikuppi*/ 1. ಔಷಧಿಯ ಬಾಟಲು, 2. ಔಷಧಿಯ ಶೀಶೆ, 3. ಗಾಜಿನ ಬುಡ್ಡಿ. 1. bottle containing medicine, 2. a bottle with medicine, 3. a glass bottle. ವಾ: ಮದ್ದ್ ಕುಪ್ಪಿ ಬೀತ್ ವಡ್ತ್.

ಮದ್ದ್‌ಕೂಳು ಪಾಯಸ /*maddiku:ḷu pa:yasa*/ ನಾ. ಆಷಾಢ ಮಾಸದಲ್ಲಿ ಕೊಡಗಿನ ಕಾಡಿನಲ್ಲಿ ಸಿಗುವ ಸೊಪ್ಪು ಬಳಸಿ ಮಾಡುವ ಪಾಯಸ, ಆಷಾಢ ಮಾಸದ 18ನೇ ದಿನ ಈ ಸೊಪ್ಪಿನಲ್ಲಿ 18 ರೀತಿಯ ಔಷಧೀಯ ಅಂಶಗಳು ಸೇರಿರುತ್ತವೆ ಎಂದು ನಂಬಿಕೆ. a sweet dish made of the medicinnal leaf found in Kodagu during Ashada month (according Hindu Calendar). It is believed that the leaf has 18 medicinal properties. ವಾ: ಮದ್ದ್ ಕೂಳು ಪಾಯಸ ಆಟಿ ತಿಂಗಲ್ಲಿ ತಿಂದೆ ತಿನ್ನೊಕು.

ಮದ್ಯ /*madya*/ ನಾ. 1. ಮಧ್ಯ, 2. ನಡು, 3. ಎಡೆ, 4. ನಡುವೆ. 1. middle, 2. midst, 3. in the middle, 4. midpoint. ವಾ: ಮದ್ಯ ಮದ್ಯಲಿ ಮಾತಾಡ್ರೆ ನಂಗೆ ಬಾರಿ ಸಿಟ್ಟ್ ಬಂದದೆ. ಪ: ಮದ್ಯ ಬೆರ್ಳ್ – ಮದ್ಯದ ಬೆರಳು;

ಮದ್ಯಂಗಳ /*madyaŋgaḷa*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮದ್ಯದಂತ ಎಮ್ಮೆ /*madyadanta emmɛ*/ ನಾ. ದೊಡ್ಡ ಎಮ್ಮೆ. a large buffallo. ವಾ: ಮದ್ಯದಂತ ಎಮ್ಮೆ ಹಾಲ್ ಕೊಡ್ತಿತ್.

ಮದ್ಯನ /*madyana*/ ನಾ. 1. ಮಧ್ಯಾಹ್ನ, 2. ನಡುಹಗಲು. afternoon. ವಾ: ಮದ್ಯನ ಮನೆಗೆ ಬನ್ನೆತ ಹೇಳ್ದೊ.

ಮದ್ಯಮಜಲು /*madyamajalu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮದ್ಯರಾತ್ರೆ /*madyara:trɛ*/ ನಾ. 1. ಮಧ್ಯರಾತ್ರಿ, 2. ನಡುರಾತ್ರಿ. mid-night. ವಾ: ಮದ್ಯರಾತ್ರೆಗೆ ಎಲ್ಲಿಗೆ ಎದ್ದ್ ಹೋದು.

ಮದ್ರಂಗಿ /*madraŋgi*/ ನಾ. 1. ಗೋರಂಟಿ, 2. ಲಿತ್ರೇಸೀ ಕುಟುಂಬಕ್ಕೆ ಸೇರಿದ ಒಂದು ಸಸ್ಯ, 3. ಮದರಂಗಿ, 4. ಮೆಹೆಂದಿ, 5. ಮದುವೆಯ ಸಂದರ್ಭದಲ್ಲಿ ಮದುಮಗ ಮತ್ತು ಮದುಮಗಳಿಗೆ ಕೈಗೆ ಹಚ್ಚುವ ಪ್ರಾಕೃತಿಕ ಬಣ್ಣ. 1. henna, 2. belongs to the family of Lythraceae, 3. henna, 4. Mehandi, 5. a reddish brown dye made out of the leaves of henna is applied on the hands of both the groom and the bride during their wedding. ವಾ: ಮದ್ರಂಗಿ ಸೊಪ್ಪುನ ಅರೆಕನ ಅದ್ಕೆ ನಿಂಬುಳಿ ರಸನ ಹಾಕಿಕಣಕು, ಹೆಚ್ಚಿ ಕೆಂಪಾದೆ. ಪ: ಮೊದ್ರೆಂಗಿ, ಮದ್‌ರೆಂಗಿ.

ಮದ್ಲ /*madla*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮದ್ವಣಿಗೆ /*madvaṇigɛ*/ ನಾ. ಮದುಮಗಳು. a bride. ವಾ: ಮದ್ವಣಿಗೆ ಸಾಸ್ತ್ರಕೆ ಮುಂದೆ ಕಾಸ್ತಾಳಿ ಕಟ್ಟಿವೆ.

ಮದ್ವೆ /*madvɛ*/ ನಾ. 1. ಮದುವೆ, 2. ವಿವಾಹ, 3. ಲಗ್ನ, 4. ಪರಿಣಯ, 5. ಸಾಂಗತ್ಯ. marriage, wedding. ವಾ: ಅಬ ಮದ್ವೆ ಹೆಂಗೊ ಕಳ್ತ್.

ಮನಮಾತ್ /*manama:ti*/ ಕ್ರಿವಿ. ಎಲ್ಲರಿಗೂ ತಿಳಿದ ವಿಷಯ. something that is known to everyone. ವಾ: ಅದ್ ಮನಮಾತ್ ವಿಸ್ಯ.

ಮನಸ್ತಾಪ /*manasta:pa*/ ನಾ. 1. ವಿರಸ, 2. ಮಾನಸಿಕ ವೈಷಮ್ಯ. 1. animosity, 2. antipathy. ವಾ: ನೆರೆಕರೆಲಿ ಮನಸ್ತಾಪ ಮಾಡಿಕಂಡರೆ ಬಂಗ ಆದೆ.

ಮನಾರ /*mana:ra*/ ಕ್ರಿವಿ. 1. ಸಂಪೂರ್ಣ, 2. ಸ್ವಚ್ಛ. 1. completely, 2. clean. **ಕಿನಾರ ಕುದ್ದ್ ಮನಾರ ಉಂಬದು(ಗಾ).** ವಾ: ಕೊತ್ತಿ ಹಾಲನ್ನನ ಮನಾರ ತೀಂತ್. **ಮನಾರತೊಳ್ದ** /*mana:rato[da*/ ಸಂಪೂರ್ಣ ತೊಳೆದರು. they cleaned/washed completely. ವಾ: ಪಾತ್ರನೆಲ್ಲ ಮನಾರ ತೊಳ್ದ್ ಇಸೊಕು. **ಮನಾರಮಾಡ್ದು** /*mana:rama:ḍdu*/ ಸ್ವಚ್ಛ ಮಾಡುವುದು. cleaning. ವಾ: ಇಜ್ಜೆಲ್‌ಲಿರೊ ಕಾಡ್‌ದೈ, ಹುಲ್ಲ್ ನೆಲ್ಲ ಕೆತ್ತಿ ತೆಗ್ದ್ ಮನಾರ ಮಾಡ್ದು.

ಮನಿ /*mani*/ ಅ. ಎಲ್ಲಿಯಾದರೂ, ಬಹುಶಃ ಎಂಬ ಅರ್ಥದಲ್ಲಿ ಬಳಕೆಯಾಗುತ್ತದೆ. probably. ವಾ: ಅವ್ಕೆ ಮನಿ ಗೊತ್ತಾರೆ ಬಂಗ ಆದು.

ಮನಿಯ /*maniya*/ ಕ್ರಿವಿ. ಸಾವಿನ ಸುದ್ದಿಯನ್ನು ಮನೆ ಮನೆಗಳಿಗೆ ತಲುಪಿಸುವುದು. sharing information about the death of someone to others. ವಾ: ಮನಿಯ ಬಾತ್.

ಮನುಸ್ಯ /*manusya*/ ನಾ. 1. ಮನುಷ್ಯ, 2. ನರ, 3. ಮಾನವ, 4. ಆಲೋಚನಾ ಶಕ್ತಿಯುಳ್ಳ ಮಾತಾಡಬಲ್ಲ, ಸಸ್ತನಿ ವರ್ಗದ ಸಾಮಾಜಿಕ ಜೀವಿ. a human being, a mammal, a social animal. ವಾ: ಮನುಸ್ಯಂಗೆ ಮೊನ್ಸತ್ವ, ನಿಯತ್ತ್ ಎರ್‌ಡ್ ಇರೊಕು. ಪ: ಮೊನ್ಸ

ಮನೆ /*mane*/ ನಾ. 1. ಮನೆ, 2. ಆಲಯ, 3. ಸದನ, 4. ಗೃಹ, 5. ಆಶ್ರಯಸ್ಥಾನ, 6. ವಾಸಸ್ಥಳ. 1. a house, 2. an abode, 3. a habitat, 4. a home, 5. a shelter, 6. a domicile. **ಮನೆ ಸಣ್ಣದಿರೊಕು, ಮೊನ್ಸ್ ದೊಡ್ಡದಿರೊಕು(ಗಾ).** ವಾ: ಮನೆ ಕಟ್ಟಿ ನೋಡ್, ಮೊದ್ವೆ ಮಾಡಿ ನೋಡ್‌ತ ಹೇಳ್ದು ಸತ್ಯದ ಮಾತ್. **ಮನೆ ಒಕ್ಕುಲು** /*mane okkulu*/ 1. ಗೃಹ ಪ್ರವೇಶ, 2. ಹೊಸದಾಗಿ ಕಟ್ಟಿದ ಮನೆಯನ್ನು ಪ್ರವೇಶಿಸುವುದು ಮತ್ತು ಸಮಾರಂಭ. house warming ceremony. ವಾ: ಅಂವನ ಮನೆ ಒಕ್ಕುಲು ಬಾರಿ ಗಮ್ಮತ್ತ್ ಇತ್ತ್. **ಮನೆ ಕೂಡಿಕೆ** /*manɛ ku:ḍikɛ*/ ವಾ: ಮನೆ ಕೂಡಿಕೆ ಹೋಕಿತ್. ಪ: ಮನೆ ಕೂಡು – ಗೃಹ ಪ್ರವೇಶ. **ಮನೆ ಸೇರ್‌ದು** /*manɛ se:ridu*/ ವಾ: ಹೊಸ ಮನೆ ಒಕ್ಕಲಾಗಿ ಅಂದೇ ಮನೆ ಸೇರ್‌ದು ಕ್ರಮ. **ಮನೆಒಕ್ಲು** /*manɛoklu*/ ಗೃಹಪ್ರವೇಶ ಸಮಾರಂಭ. house warming ceremony. ವಾ: ನಾವ್‌ಗೆ ಮನೆ ಒಕ್ಕುಲುಗೆ ಹೋಕುಟ್ಟು.

ಮನೆತುಂಬುಸುದು /*manɛtumbusudu*/ ನಾ. ಮದುವೆ ಹೆಣ್ಣನ್ನು ಗಂಡಿನ ಮನೆಯವರು ಮನೆಗೆ ತುಂಬಿಕೊಳ್ಳುವುದು. a ritual of letting the bride enter the house of her in-laws for the first time. ವಾ: ಗೂಡೆನ ಮನೆ ತುಂಬುಸುದು ಎಸ್ಟೊತ್ತಿಗೆ.

ಮನೆನೋಡ್ದು /*manɛno:ḍdu*/ ನಾವಿ. ಮದುವೆಗೆ ಮೊದಲು ಹುಡುಗನ ಕಡೆಯವರು ಹುಡುಗಿಯ ಮನೆ ನೋಡಲು ಹೋಗುವುದು, ಹುಡುಗಿಯ ಕಡೆಯವರು ಹುಡುಗನ ಮನೆ ನೋಡಲು ಹೋಗುವುದು. the ritual of prospective bridegrooms' relatives visiting the house of the prospective bride, and vice versa. ವಾ: ಮನೆ ನೋಡ್ದು ಸಾಸ್ತ್ರ ತೀರ್‌ತ್.

ಮನೆಮಾಂದೆ /*manɛma:ndɛ*/ ನಾ. ಹಂಚಿನ ಮನೆಯ ಕೌಕೋಲು ಆಕಡೆ ಈಕಡೆ ಇಳಿಸಿರುವ ಛಾವಣಿ. roofslopes in a tiled house. ವಾ: ಮನೆ ಮಾಂದೆ ಸೋರ್‌ದೆ.

ಮನೆಹಕ್ಕಿ /*manɛhakki*/ ನಾ. 1. ಗುಬ್ಬಚ್ಚಿ, 2. ಗುಬ್ಬಿ, 3. ಒಂದುಜಾತಿಯ ಸಣ್ಣ ಪಕ್ಷಿ, 4. ಗುಬ್ಬಿ ಹಕ್ಕಿ. a sparrow. ವಾ: ಮೊಬೆಲ್ ಬಂದ ಮೇಲೆ ಮನೆಹಕ್ಕಿಗ ಕಾಂಬಕೆ ಸಿಕ್ಕುಲೆ, ಇಲ್ಲರೆ ಅಂಗ್ಳಕೆ ಅಕ್ಕಿ ತಿಂಬಕೆ ಬರ್‌ತಿದ್ದೊ. ಪ: ಮನೆಕ್ಕಿ – ಮನೆ ಪಕ್ಷಿ/ಗುಬ್ಬಚ್ಚಿ

ಮನೆಕೆಲ್ಸ /*manɛkɛlsa*/ ನಾವಿ. ಮನೆಯೊಳಗೆ ಮಾಡುವ ಕೆಲಸ. house work. ವಾ: ಮನೆಕೆಲ್‌ಸನ ನಾವೆ ಮಾಡಿಕಂಡರೆ ಒಳ್ಳೆದ್.

ಮನೆಗೆ ಆಗದ್ /*manegɛ a:gadi*/ ನಾವಿ. ಋತುಮತಿ ಆದ ಸಂದರ್ಭದಲ್ಲಿ ಬಳಸುವ ಪದ. a term used to describe the period of mestruation. ವಾ: ಅದ್ಕೆ ಮನೆಗೆ ಆಗದ್.

ಮನೆತನ /*manɛtana*/ ನಾ. 1. ವಂಶ, 2. ತಲೆಮಾರು. 1. lineage, clan, 2. generation. ವಾ: ಒಳ್ಳೆತನಲಿದ್ದ್ ಮನೆತನದ ಹೆಸ್‌ರ್ ಉಳ್ಸೊಕು.

ಮನೆದೇವ್ರು /*manɛde:vru*/ ನಾ. ಮನೆದೇವರು. family god/house deity. ವಾ: ಎಲ್ಲ ಜೆನಾಂಗಲು ಕುಟುಂಬಕ್ಕೆ ಮನೆದೇವ್ರು ಇದ್ದದೆ.

ಮನೆದ್ ಮಾಡ್ /*manɛdi ma:ḍi*/ ನಾವಿ. ಮನೆಯ ಛಾವಣಿ. roof of one's house. ವಾ: ಮನೆದ್ ಮಾಡ್‌ಗೆ ಹತ್ತಿ ಹಂಚಿ ಒಡ್ದುಟತ ನೋಡಕಿತ್ ?

ಮನೆಲ್ಯುಟು /*manɛlyuṭu*/ ನಾ. ಮನೆಯಲ್ಲಿದೆ. it is at home. ವಾ: ಉಗ್ಗಪ್ಪ ಮನೆಲ್ಯುಟು.

ಮನೆವು /*manɛvu*/ ನಾ. 1. ಮನೆಯವರು, 2. ಪರಿವಾರದವರು, 3. ಕುಟುಂಬದವರು, 4. ಮನೆತನದವರು, 5. ಬಂಧುಗಳು. 1. family members, 2. relatives, 3. members of a family, 4. a clan, 5. relatives. ವಾ: ಮನೆವು ಬಾಕನ ಮಾತಾಡ್ಸಿಕೆ ಆಲೆನ? ವಳೆಗೆ ಹೊಕ್ಕಿಕಂಡ್ ಎಂತರ ಮಾಡ್ದು. ಪ: ಮನೆವೆಲ್ಲ – ಮನೆಯವರೆಲ್ಲ

ಮನೆಸುದ್ದ /*manɛsudda*/ ನಾ. ಸತ್ತ ಮೂರು ಇಲ್ಲವೆ ಐದು ದಿನದಲ್ಲಿ ಮನೆಯನ್ನು ಮಡಿವಾಳರು ಶುದ್ಧೀಕರಿಸುವ ಕ್ರಿಯೆ. a ritual cleaning performed by the washerman on the fifth day after the death. ವಾ: ಮಡಿವಾಳ ಸೂತಕದ ಮನೆಗೆ ಪುಣ್ಯಾರ್ಚನೆ ತಕ್ಕಳ್ಸಿ ಸುದ್ದ ಮಾಡಿವೆ.

ಮನ್ತನ /*mantana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮನ್ನೆ /*mannɛ*/ ನಾ. 1. ಮೊನ್ನೆ, 2. ನಿನ್ನೆಯ ಹಿಂದಿನ ದಿನ. a day before yesterday. ವಾ: ಮನ್ನೆ ದೊಸ್ತಿ ಸಿಕ್ಕಿ ಮಾತಾಡ್ತ್.

ಮನ್ಮತ /*manmata*/ ನಾ. 1. ಮನ್ಮಥ, 2. ಕಾಮದೇವ, 3. ಅಂಗಜ, 4. ಮದನ, 5. ಮಾನವ ಬಯಕೆಯ ಹಿಂದೂ ದೇವರು, 6. ಮಾರ, 7. ರತಿಪತಿ. Kamadeva/Manmatha, the Hindu god of love and desire. **ಮನ್ಸಿಲ್ಲದ ಹೆಣ್ಣ್ ಗೆ ಮನ್ಮಥನನೂ ಆದುಲೆ(ಗಾ).** ವಾ: ಪುರಾಣ ಕತೆಲಿ ಒಮ್ಮೆ ಸಿವ ತಪಸ್ ಮಾಡಿಕನ ಮನ್ಮತ ಹೂನ ಬಾಣ ಬುಟ್ಟ್ ಬಂಗ ಮಾಡ್ದ್ ಆಗ ಸಿವ ಮೂರ್‌ನೆ ಕಣ್ಣ್ ಬುಟ್ಟ್ ಮನ್ಮತನ ಸುಟ್ಟದ್.

ಮನ್‌ಸ /*manisa*/ ನಾ. 1. ಮನುಷ್ಯ, 2. ನರ, 3. ಮಾನವ, 4. ಆಲೋಚನಾ ಶಕ್ತಿಯುಳ್ಳ ಮಾತಾಡಬಲ್ಲ, ಸಸ್ತನಿ ವರ್ಗದ ಸಾಮಾಜಿಕ ಜೀವಿ, 5. ಮನುಜ. a human being, a mammal, a social animal. ವಾ: ಮನ್‌ಸ ಒಳ್ಳೆತನಲಿ ಬೊದ್ಕಕು. ಪ: ಮೊನ್ಸ್ ನರಮಾನಿ(ತು)

ಮನ್ಸಾರೆ /*mansa:rɛ*/ ನಾ. 1. ಮನಸಾರೆ, 2. ಮನಃಪೂರ್ವಕ. 1. wholeheartedly, 2. unreserved/altruistically. ವಾ: ಮನ್ಸಾರೆ ಒಪ್ಪಿಕಣ್ತ್.

ಮನ್ಸ್ /*mansi*/ ನಾ. 1. ಮನಸ್ಸು, 2. ಚಿತ್ತ, 3. ಶರೀರದಲ್ಲಿ ಭೌತಿಕವಲ್ಲದ್ದೆಲ್ಲವನ್ನೂ ಸಂಕೇತಿಸುವ ಚೈತನ್ಯ. mind, consciousness. **ಉಂಡದ್ ಮೈಗೆ ಹಿಡಿಯೊಕ್, ಕಂಡದ್ ಮನ್ಸಿಗೆ ಹಿಡಿಯೋಕ್(ಗಾ). ಒಬ್ಬನ ಮನ್ಸ್ ಗೊತ್ತಾದ್‌ರೆ ಎಲ್ಲರ ಮನ್ಸ್ ಗೊತ್ತಾದೆ – ಅನ್ನ (ಅನ್ನದ ಅಗಳು ಒಂದು ನೋಡಿದರೆ ಬೆಂದಿದೆಯಾ ಎಂಬುದು ತಿಳಿಯುತ್ತದೆ)(ಒ).** ವಾ: ಮನ್ಸ್ ಕಪಿನಾಂಗೆ ಇರ್‌ದು. ಹಿಡ್ದಿಸಿಕಣಕು. ನಾವ್ ಹೆಳ್ದಂಗೆ ಮನ್ಸ್ ಕೇಳಕು. ಅದ್ ಹೇಳ್ದಂಗೆಲ್ಲ ನಾವ್ ಕೇಳಿಕಾದ್. ಪ: ಮನ್ಸ್‌ಲಿ – ಮನಸಿಲ್ಲಿ; ಮನ್ಸ್‌ಗೆ – ಮನಸ್ಸಿಗೆ

ಮಯಮಯ ಕಂಡತ್ತ್ /*maya maya kanḍatti*/ ನಾ. ಅಸ್ಪಷ್ಟವಾಗಿ ಕಾಣು. unclear sight. ವಾ: ದೂರ ಅಲ ಮಯ ಮಯ ಕಂಡತ್ತ್.

ಮಯಣದ ಬತ್ತಿ /*mayaṇada batti*/ ನಾ. ಮೇಣದ ಬತ್ತಿ. candle. ವಾ: ಮಯಣದ ಬತ್ತಿನ ಹೋಸ್.

ಮಯಮಯ /*mayamaya*/ ಅ. 1. ಅಸ್ಪಷ್ಟ ಕಾಣು, 2. ಸಂಜೆಕತ್ತಲು ಸಮಯ, 3. ಬೆಳ್ಳಂಬೆಳಗ್ಗಿನ ಸಮಯ. 1. blurred vision, 2. dusk, 3. before dawn. ವಾ: ಕಣ್ಣ್ ಮಯಮಯ ಆದೆಪ, ಸೆರಿ ಎಂತನೂ ಕಾಂಬಲೆ.

ಮಯಿಮೆ /*mayimɛ*/ ನಾ. 1. ಮಹಿಮೆ, 2. ವೈಶಿಷ್ಟ್ಯ, 3. ಶ್ರೇಷ್ಠತೆ, 4. ಔನ್ನತ್ಯ, 5. ಹಿರಿಮೆ. 1. glory, 2. speciality, 3. greatness, 4. excellency, 5. supremacy. ವಾ: ದೇವ್ರ ಮಹಿಮೆ ಮುಂದೆ ಯಾರ ಆಟನು ನಡೆಕಿಲೆ.

ಮಯಿಸ /*mayisa*/ ನಾ. 1. ಮನುಷ್ಯ, 2. ನರ, 3. ಮಾನವ, 4. ಆಲೋಚನಾ ಶಕ್ತಿಯುಳ್ಳ ಮಾತಾಡಬಲ್ಲ, ಸಸ್ತನಿ ವರ್ಗದ ಸಾಮಾಜಿಕ ಜೀವಿ, 5. ಮನುಜ. a human being, a mammal, a social animal.

ವಾ: ಮಯಿಸ ಹೋದಲೆಲ್ಲ ಹಾಳೆ, ಇಂದಿಗೆ, ನಾಳೆಗೆ, ನಂಗೆ ನಂಗೆತ ಆಸ್ತಿ, ದುಡ್ಡ್‌ನ ಗುಡ್ಡೆ ಹಾಕುದೆ ಆತ್.

ಮಯ್ /*mayi*/ ನಾ. 1. ಮೈ, 2. ಶರೀರ, 3. ತನು, 4. ಒಡಲು, 5. ದೇಹ. 1. body, 2. human body, 3. human frame, 4. torso, 5. human figure. ವಾ: ಮಯ್ ಸುದ್ದ ಯಾಗ ಮಾಡಿಕೆ ಹೇಳ್ತ್.

ಮಯ್‌ಂದ್ /*mayindi*/ ನಾ. 1. ಮಂಜು, 2. ಹಿಮ, 3. ಇಬ್ಬನಿ. 1. fog, 2. frost, 3. dew. ವಾ: ಮಯ್‌ಂದ್ ಮುಚ್ಚಿರೆ ದಾರಿನು ಕಾಂಬಲೆ, ಎಂತನು ಕಾಂಬಲೆ.

ಮಯ್ಲಿಗೆ /*mayligɛ*/ ನಾ. 1. ಮೈಲಿಗೆ, 2. ಸೂತಕ, 3. ಕೊಳೆ, 4. ಹೊಲಸು. period of impurity/ defilement. ವಾ: ನಮ್ಮ ಸಣವಂಗೆ ಬಾರಿ ಮಡಿ ಮಯ್ಲಿಗೆ.

ಮರ /*mara*/ ನಾ. 1. ವೃಕ್ಷ, 2. ತರು. a tree. **ಎಣ್ಣೆ ಹಾಕಿರೆ ಮೈಗೆ ಗುಣ, ಮಣ್ಣ್‌ಗೆ ಹಾಕಿರೆ ಮರಕ್ಕೆ ಗುಣ(ಗಾ).** ವಾ: ಅಸ್ಟ್ ದೊಡ್ಡ ಮರಕೆ ಹತ್ತುವನ?

ಮರ ಅಳಂಬು /*mara aḷambu*/ ನಾ. 1. ಮರದಲ್ಲಿ ಏಳುವ ಅಣಬೆ, 2. ಕೆಲವು ಮರದಲ್ಲಿ ಏಳುವ ಅಣಬೆಗಳು ಮಾತ್ರ ತಿನ್ನಲು ಯೋಗ್ಯವಾಗಿರುತ್ತದೆ, ಆದರೆ ಇವು ಮೃದುವಾಗಿರದೆ ಗಟ್ಟಿಯಾಗಿರುತ್ತದೆ. an edible mushroom that grows on a tree. ವಾ: ಮರ ಅಳಂಬು ಬೇರೆ ಅಳುಂಬುನಾಂಗೆ ಮೆತ್ತಂಗೆ ಅಲ್ಲ, ಹಙ್ಞ ಗಟ್ಟಿ ಇದ್ದದೆ.

ಮರ ಉಜ್ಜುದು /*mara ujjudu*/ ನಾ. ಮರಗಳು ಒಂದಕ್ಕೊಂದು ತಾಗುವುದು. trees rubbing against each other causing friction. ವಾ: ಒಟ್ಟೊಟ್ಟಿಗೆ ಇರುವ ಮರ ಗಾಳಿ ಬಾಕನ ಉಜ್ಜಿಕಂಡವೆ.

ಮರ ಒಳಿ /*mara oḷi*/ ನಾವಿ. ಮರದ ಬುಡದಲ್ಲಿ ಮರೆ ಮಾಡಿ ಕೂರುವುದು. to hide at the stump of a tree. ವಾ: ಹಂದಿ ಪಾರಕ್ಕೆ ಮರ ಒಳಿ ಮಾಡಿ ಕೂರ್‌ದು.

ಮರಕಪ್ಪೆ /*marakappɛ*/ ನಾವಿ. 1. ಮರದ ತೊಗಟೆಯ ಬಣ್ಣ ಹೊಂದಿದ್ದು, ಕಾಲುಗಳು ಉದ್ದವಾಗಿದ್ದು ಮರದಲ್ಲಿ ಹೆಚ್ಚಾಗಿ ಕಂಡು ಬರುತ್ತದೆ, 2. ಮರದ ಪೊಟರೆಗಳಲ್ಲಿ ತೇವಾಂಶ ಇರುವಲ್ಲಿ ವಾಸಿಸುವ ಚಿಕ್ಕ ಕಪ್ಪೆ. a wood frog, resembles the texture of the bark of a tree, usually found in the holes of trees, or in marshy areas. ವಾ: ಮರ ಕಪ್ಪೆಗ ಮರಲಿ ಹೆಚ್ಚಿ ಹಾರಿಕಂಡ್ ಇದ್ದದೆ.

ಮರಕೆಸ /*marakesa*/ ನಾವಿ. 1. ಕೆಸದ ವಿಧಗಳು, 2. ಪತ್ರೊಡೆಗೆ ಎಲೆ ಮತ್ತು ದಂಟು ಸಾಂಬಾರು ಮಾಡಲು ಬಳಸುತ್ತಾರೆ, 3. ಮರದಲ್ಲಿ ಬಿಡುವ ಕೆಸ ಇದಾಗಿದ್ದು ಜುಲೈ ತಿಂಗಳಿನಲ್ಲಿ ಹೆಚ್ಚಾಗಿ ಕಂಡು ಬರುತ್ತದೆ. 1. a type of Colocasia, 2, used to make Patrode-a dish, 3. grows on the trees, usually found in the month of July. ವಾ: ಮರ ಕೆಸ ಆಟಿ ತಿಂಗಳ್ಲಿ ಸಿಕ್ಕಿದೆ, ಅದರ್‌ಲಿ ಪತ್ರಡೆ ಮಾಡ್ದು.

ಮರಕೋತಿ ಆಟ /*marako:ti a:ṭa*/ ನಾವಿ. 1. ಗ್ರಾಮೀಣ ಆಟ, 2. ಮಕ್ಕಳು ಮರವನ್ನು ಹತ್ತಿ ಇಳಿದು ಆಡುವ ಆಟ, 3. ಕಪಿಪ್ಲವನ. 1. a folk game, 2. a Tree-Monkey game, 3. tree-monkey game. ವಾ: ಮರ ಕೋತಿ ಆಟತೇಳ್ರೆ ಈಗನ ಮಕ್ಕಳಿಗೆಂತ ಗೊತ್ತು.

ಮರಕೋಲ /*marako:la*/ ನಾವಿ. ಕೆಂಪು ಅರಿಶಿನ ಬಣ್ಣದ ಹಙ್ಞ ದೊಡ್ಡ ಜಾತಿಯ ಇರುವೆಗಳು, ಇವುಗಳು ಹೆಚ್ಚಾಗಿ ಮರಗಳಲ್ಲಿ ವಾಸವಿರುತ್ತವೆ. a large reddish yellow tree ants. ವಾ: ಮರ ಕೋಲ ಕಚ್ಚಿರೆ ಬಾರಿ ಉರಿಉರಿಯಾದೆ.

ಮರನಾಯಿ /*marana:yi*/ ನಾ. ಕಾಡಿನಲ್ಲಿ ಮರದ ಮೇಲೆ ಓಡಾಡುವ ನಾಯಿ. a dog that walks on trees in the forest. ವಾ: ಮರ ನಾಯಿ ಮರಲಿ ಓಡಾಡ್ದೆ.

ಮರಬಾಳೆ /*maraba:ḷɛ*/ ನಾ. 1. ಬಾಳೆ ಹಣ್ಣಿನ ವಿಧಗಳು, 2. ಗಾಳಿ ಬಾಳೆ. a variety of plantain. ವಾ: ಬೆಸಗೆಲಿಸಿ ಹಣ್ಣ್ ಮಾಡ್ದ ಹೊಗೆ ಹಿಡ್ಕ ಮರ ಬಾಳೆನ ರೊಟ್ಟಿಲಿ ಸುತ್ತಿ ತಿಂಬ ಸುಕ ತಿಂದವಂಗೆ ಗೊತ್ತು.

ಮರಮೀನ್ /*marami:ni*/ ನಾ. ಹೊಳೆ, ನೀರಿನ ಹರಿವುಗಳಲ್ಲಿ ಕಾಣಸಿಗುವ ಒಂದು ಜಾತಿಯ ಮೀನು. a fresh water fish. ವಾ: ಮರ ಮೀನ್ ಹಳ್ಳಲಿ ಸಿಕ್ಕ್‌ವ ಒಂದ್ ಜಾತಿನ ಮೀನ್.

ಮರಹಾವ್ /*maraha:vi*/ ನಾ. 1. ತೋಟದಲ್ಲಿ, ಮರದ ಪೊಟರೆಯಲ್ಲಿ ಕಂಡು ಬರುವ ವಿಷ ಪೂರಿತ ಹಾವು, 2. ದೂರಕ್ಕೆ ನೆಗೆಯಲು ಸಾಮರ್ಥ್ಯವಿರುವ ಮರಗಳಲ್ಲಿ ವಾಸಿಸುವ ವಿಷಯುಕ್ತ ಹಾವು. 1. Indian Rat

Snake, a venomous snake found in the holes/ hollow parts of trees, 2. Indian Rat Snake, that jumps from one tree to another. ವಾ: ಮರ ಹಾವ್ ಹಾರ್‌ದೇಲ? ಪ: ಮರಾವು, ಮರಮರಿ(ತು)

ಮರಹೂವ್ /*marahu:vɨ*/ ನಾ. 1. ಮರದಲ್ಲಿ ಆಗುವ ಹೂವು, 2. ಆರ್ಕಿಡ್, 3. ಸೀತಾಳಿ ಹೂವು. 1. a flower that grows on tress, 2. orchid, 3. orchid flower. ವಾ: ಮರ ಹೂವ್‌ಗಳ್‌ಲಿ ಸೀತೆ ಹೂವ್ ನೋಡಿಕೆ ಬಾರಿ ಲಾಯ್ಕ್.

ಮರಹೊಡೆಯದು /*marahoḍɛyadu*/ ನಾ. 1. ಗದ್ದೆ ಉತ್ತ ಮೇಲೆ ಎತ್ತರ ತಗ್ಗು ಇದ್ದ ಭಾಗವನ್ನು ಮರದ ಹಲಗೆ ಇಟ್ಟು ಸಮತಟ್ಟು ಮಾಡುವುದು, 2. ನಾಟಿ ಮಾಡುವ ಮೊದಲು ಭೂಮಿಯನ್ನು ಸಮ ಮಾಡುವುದು. 1. levelling the paddy field after plouging, using a wooden rammer, 2. levelling the field before sowing seeds. ವಾ: ಗದ್ದೆ ಊಡ್ದ ಮೇಲೆ ನಾಟಿ ಮಾಡಿಕೆ ಮುಂದೆ ಮರ ಹೊಡೆಯದು.

ಮರಕಡ /*marakaḍa*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮರಕತ /*marakata*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ನಾಲ್ಕೂರು ಗ್ರಾಮದ ಜಾಗ. a locality in Nalkuru village in Sullia Taluk of Dakshina Kannada District.

ಮರಕುಂಟೆ /*marakuṇṭɛ*/ ನಾ. ಮರದ ದಿಮ್ಮಿ. timber/log of wood. ವಾ: ಮರಕುಂಟೆನ ಅಲ್ಲಿ ಗುಡ್ಡೆ ಹಾಕೊಳೊ.

ಮರಕುಟಿಕೆ /*marakuṭikɛ*/ ನಾ. 1. ಮರಕುಟಿಗನ ಹಕ್ಕಿ, 2. ಶತಪತ್ರ, 3. ಕಾರೆ, 4. ಮರಗಳ ಕಾಂಡ, ರೆಂಬೆಗಳನ್ನು ಕುಟ್ಟಿ ತೊಗಟೆಗಳ ಒಳಗಿರುವ ಕ್ರಿಮಿಕೀಟಗಳನ್ನು ಭಕ್ಷಿಸುತ್ತವೆ. a woodpecker bird, eats the insects that live in the bark, branch of trees. ವಾ: ಮರಕುಟಿಕೆ ಮರನ ಕೊಡ್ಡಿಕಂಡ್ ಇದ್ದದೆ. ಪ: ಮರಕುಟ್ಕ, ಮರಕೊಡ್ಪೆ(ತು)

ಮರಕೊಡ್ಕ /*marakoḍka*/ ನಾ. 1. ಮರಕುಟಿಗನ ಹಕ್ಕಿ, 2. ಶತಪತ್ರ, 3. ಕಾರೆ, 4. ಮರಗಳ ಕಾಂಡ, ರೆಂಬೆಗಳನ್ನು ಕುಟ್ಟಿ ತೊಗಟೆಗಳ ಒಳಗಿರುವ ಕ್ರಿಮಿಕೀಟಗಳನ್ನು ಭಕ್ಷಿಸುತ್ತವೆ. a woodpecker bird, pecks at the insects that live in the bark, branch of trees. ವಾ: ಮರಕೊಡ್ಕ ಒಂದೆಸಮ ಮರಕೆ ಕೊಡ್ಡಿದೆ.

ಮರಕೊಡ್ಪ /*marakoḍpa*/ ನಾ. ಮರವನ್ನು ಕುಟ್ಟಿ ಒಳಗಡಗಿರುವ ಹುಳು-ಕೀಟಗಳನ್ನು ಹೆಕ್ಕಿ ತಿನ್ನಬಲ್ಲ ಒಂದು ಜಾತಿಯ ಹಕ್ಕಿ. a woodpecker bird, pecks at the insects that live in the bark, branch of trees. ವಾ: ಮರಕೊಡ್ಪ ಹಕ್ಕಿಗ ಮರಕ್ಕೆ ನಿಮಿಸಕೆ ನೂರಿಪ್ಪತ್ ಸಲ ಕೊಡ್ಡಿದೆಗಡ.

ಮರಕೊಪ್ಪ /*marakoppa*/ ನಾ. 1. ಮರಕುಟಿಗ ಹಕ್ಕಿ, 2. ಮರಕುಟ, 3. ಕುರರ, 4. ಮರಕಡಿ. a woodpecker bird, pecks at the insects that live in the bark, branch of trees. ವಾ: ಮರಕೊಪ್ಪದ ಕೊಕ್ಕ್ ತುಂಬ ಗಟ್ಟಿ.

ಮರಕೊಲ್ಲ /*marakolla*/ ನಾ. ಕಪ್ಪು ಬಣ್ಣ ಹೊಂದಿರುವ ತೋಟದಲ್ಲಿ ಹೆಚ್ಚಾಗಿ ಕಂಡುಬರುವ ಕಚ್ಚುವ ಇರುವೆಗಳು. black ants found in farms. ವಾ: ಮರಕೊಲ್ಲ ಪಿಜಿನ್ ಕಚ್ಚಿರೆ ಉಚ್ಚೆ ಒಯ್ಕಣಕು ಅಸ್ಟ್ ಉರಿಯಾದೆ.

ಮರಗೆಣ್ಸ್ /*marageṇsɨ*/ ನಾ. 1. ಮರ ಗೆಣಸು, 2. ಒರಟು ಗೆಣಸು, 3. ಒಂದು ಬಗೆಯ ಗೆಣಸು. Cassava. ವಾ: ಮರ ಗೆಣ್ಸ್ ಉಪ್ಕರಿ ಮಾಡಿರೆ ಬಾರಿ ರುಚಿ. **ಮರಗೆಣ್ಸ್ ಹಪ್ಪಳ** /*marageṇsɨ happaḷa*/ ಮರಗೆಣಸಿನ ಹಪ್ಪಳ. papad made of Cassava. ವಾ: ಮರಗೆಣ್ಸ್ ಹಪ್ಪಳನ ಮಾಡಿಸಿರೆ ಆಗ್ತಿತ್.

ಮರದ ಇಸ್ಕೇಲ್ /*marada iske:lɨ*/ ಪವಾ. ಎಪ. 1. ಅಲತೆಗೋಲು, 2. ಪ್ರಮಾಣ, 3. ಮಾಪಕ, 4. ಅಳತೆಮಾನ, 5. ಮಾನಕ, 6. ಅಳತೆಪಟ್ಟಿ, 7. ಸ್ಕೇಲು. a scale to measure. ವಾ: ಪಂಡ್ ಕಾಲಲಿ ಮರದ ಇಸ್ಕೇಲ್‌ಲಿ ಮಾಸ್ಟ್ರ್‌ಗ ಹೊಡೆತಿದ್ದೊ.

ಮರದ ಕೊಕ್ಕೆ /*marada kokkɛ*/ ನಾ. 1. ಪಡ್ಡೆ ಮರದಿಂದ ಮಾಡಿದ ಭತ್ತದ ಹುಲ್ಲು ಗುಡ್ಡೆ ಮಾಡುವ ಕೊಕ್ಕೆ, 2. ಒಕ್ಕಲು ಹುಲ್ಲು ಕೊಡಕುವ ಕೊಕ್ಕೆ. a hook used in gathering paddy straw. ವಾ: ಮರದ ಕೊಕ್ಕೆ ತಕಂಡ್ ಬತ್ತದ ಹುಲ್ಲ್‌ನ ಗುಡ್ಡೆ ಮಾಡ್ದು.

ಮರದ ಕೊದಂಟಿ /*marada kodaṇṭi*/ ನಾ. ದನಕರುಗಳು ಓಡಿ ಹೋಗದಂತೆ ಮುಂಗಾಲುಗಳ

ನಡುವೆ ನೇತುಬೀಳುವಂತ ಕೊರಳಿಗೆ ಕಟ್ಟಿದ ಮರದ ತುಂಡು. a wooden strip tied to the neck of cattle to restrain their movement. ವಾ: ದನಕರ್‌ಗ ಓಡದಂಗೆ ಮರದ ಕೊದಂಟಿನ ಕುತ್ತಿಗೆಗೆ ಕಟ್ಟುವೆ.

ಮರದ ನೇಗ್ಲ್ /*marada ne:gɨlɨ*/ ನಾ. ಗದ್ದೆ ಉಳುವುದಕ್ಕೆ ಬಳಸುವ ಮರದ ನೇಗಿಲು. a wooden plough used in paddy field. ವಾ: ಮರದ ನೇಗ್‌ಲ್‌ಲೆ ಊಡ್ತಿದ್ದದ್.

ಮರದಡಿಗೆ /*maradaḍigɛ*/ ನಾ. ಮರದ ಕೆಳಗೆ. below the tree. ವಾ: ಗಾಳಿ ಬಂದಾಂಗೆ ಮಾಯ್ಣಣ್ಣೋ ಮರದಡಿಗೆ ಪೋಯಿ.

ಮರದಾಳು /*marada:ḷu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮರಸಂಕ /*marasaŋka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಜಾಲ್ಸೂರು ಗ್ರಾಮದ ಜಾಗ. a locality in Jalsuru village in Sullia Taluk of Dakshina Kannada District.

ಮರಹತ್ತ್ /*marahattɨ*/ ಕ್ರಿವಿ. ಮರವನ್ನು ಏರು. to climb the tree. **ಆಸ್ಲೇಸ ಮಳೆಗೆ ಸೂಸ್ಲೆ ಮರ ಹತ್ತಿತ್ ಗಡ(ಗಾ).** ವಾ: ಬೇಗ ಪೇರಲ ಮರಹತ್ತ್ ತ.

ಮರಹುಳ /*marahuḷa*/ ನಾವಿ. ಮರ ತೂತು ಮಾಡುವ ಹುಳ. wood worms. ವಾ: ಮರಹುಳ ಎಲ್ಲ ಕೊರ್‌ದೆ.

ಮರಹುಳಿ /*marahuḷi*/ ನಾ. 1. ಮುರ್ಗಿನಹುಳಿ, 2. ಮುರಿನ ಹುಳಿ, 3. ಉಂಡೆಹುಳಿ, 4. ಕೆತ್ತೆಹುಳಿ. Monkey jack (Artocarpus lacucha), Monkey fruit. ವಾ: ಮರಹುಳಿ ಕೊಯ್ಯಕೆ ಪೋಯಿ.

ಮರಳುಬೂತ /*maraḷubu:ta*/ ನಾ. ಶೈವ ಗಣಾಂಶವಿರುವ ಗುಳಿಗ ಭೂತ. Guliga daiva/ spirit – belonging to Shaiva tradition. ವಾ: ಕೋಲ ಮಾಡಿಕನ ಮರಳುಬೂತಕೆ ಕೋಳಿನ ಬಲಿ ಕೊಟ್ಟವೆ.

ಮರಾಟಿಹುಳ /*mara:ṭihuḷa*/ ನಾ. 1. ಚಕ್ಕುಲಿ ಹುಳ, 2. ಒಂದು ಜಾತಿ ಹುಳ. a worm, a Millipede. ವಾ: ಮರಾಟಿ ಹುಳತ ಒಂದ್ ಜಾತಿನ ಹುಳ.

ಮರಾಯ /*mara:ya*/ ನಾ. ಮಹಾರಾಯ. a sarcastic term while addressing a man. ವಾ: ಏ ಮರಾಯ ಒಮ್ಮೆ ಸುಮ್ಮನಿರ್, ಸದ್ದ್ ಮಾಡ್‌ಬಡ.

ಮರಾಯ್ತಿ /*mara:yti*/ ನಾ. ಮಹಾರಾಯ್ತಿ. a sarcastic term while addressing a woman. ವಾ: ಆತ್ ಮರಾಯ್ತಿ ಹಂಗೆ ಮಾಡ್ಬೊ, ನೀ ಹೇಳ್ದಂಗೆ ಆಗ್‌ಲಿ.

ಮರಿ¹ /*mari*/ ಕ್ರಿ. 1. ಮರೆತುಬಿಡು, 2. ಮರೆಯು. 1. to forget, 2. forgetting. **ಉಂಡ ಮನೆನ ಕಲ್ತ ವಿದ್ಯೆನ ಮರಿಯಕಾಗದ್(ಗಾ).** ವಾ: ಹಿಂದೆ ನಡ್‌ದ ಕೆಟ್ಟ ಗಟನೆಗಳ ನೀ ಮರಿಯಕು. ಪ: ಮರಿಯಕೆ; ಮರಪ್ಪು(ತು)

ಮರಿ² /*mari*/ ನಾ. 1. ಮರಿ, 2. ಪ್ರಾಣಿ, ಪಕ್ಷಿಗಳಲ್ಲಿ ಎಳೆಯದು, 3. ಮೊರಿ. a baby animal. ವಾ: ಮೀನ್ ಮರಿಗಳ ಕೆರೆಗೆ ಬುಟ್ಟ್ ಸಾಂಕುದು. ಪ: ಕಿನ್ನಿ, ಕುಞ್ಞಿ(ತು)

ಮರಿಕ್ಕೈ /*marikai*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕೊಡಿಯಾಲ ಗ್ರಾಮದ ಜಾಗ. a locality in Kodiyala village in Sullia Taluk of Dakshina Kannada District.

ಮರಿದಿಬ್ಬಣ /*maridibbaṇa*/ ನಾ. ಮದುವೆ ಕಳೆದು ಮದುಮಕ್ಕಳು ವಧುವಿನ ಮನೆಗೆ ನೆಂಟರಿಷ್ಟರೊಂದಿಗೆ ಹೋಗುವ ದಿಬ್ಬಣ. the bride and the groom visiting the famliy of the bride, along with their relatives after the marriage. ಪ: ಮೊರಿದಿಬ್ಬಣ

ಮರುಮಂಜ /*marumañja*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮುಪ್ಪೇರ್ಯ ಗ್ರಾಮದ ಜಾಗ. a locality in Mupperia village in Sullia Taluk of Dakshina Kannada District.

ಮರೆ /*marɛ*/ ನಾ. 1. ಹಿಂಬದಿ, 2. ಕಾಣದಂತೆ ಇರು, 3. ಅಡ್ಡ. 1. back side, 2. to remain hidden. **ಹೊಸದ್ ಬಾಕಾಕನ ಹಳೆದರ್‌ನ ಮರೆಕಾಗದ್(ಗಾ).** ವಾ: ಬಲ್ಲೆ ಮರೆಲಿ ಕುದ್ರ್.

ಮರೆಕಾಗದ್ /*marɛka:gadɨ*/ ನಾ. ಮರೆಯಬಾರದು. don't forget. ವಾ: ಬಜ್ಜಕಾದವರ ಎಂದೂ ಮರೆಕಾಗದ್. ಪ: ಮರೆಕಿಲೆ – ಮರೆಯುವುದಿಲ್ಲ;

ಮರೆಬಿಡ್ /*marebiḍɨ*/ ಕ್ರಿ. 1. ದಾರಿ ಬಿಡು, 2. ಕಾಣುವಂತೆ ಮಾಡು, 3. ಮರೆ ಮಾಡಬೇಡ. 1. to

leave one's way, 2. to make something visible, 3. don't block. ವಾ: ನಂಗೆ ಕಾಂಬಲೆ, ಮರೆಬಿಡ್.

ಮರೋಳಿ /*maro:ḷi*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಎಡಮಂಗಲ ಗ್ರಾಮದ ಜಾಗ. 1. family, 2. lineage, 3. a locality in Edamangala village in Sullia Taluk of Dakshina Kannada District.

ಮರ್ಕ[1] /*marka*/ ನಾ. 1. ಸುಸ್ತು, 2. ಸಂಕಟ. 1. tired, 2. anxiety. **ಸಂಕಟ ಮರ್ಕಟ(ನು).** ವಾ: ಅಯೊ ಬಾರಿ ಸಂಕಟ ಮರ್ಕ ಆಗ್ತುಟ್ಟು. ಪ: ಮರ್ಕಕೆ – ಸುಸ್ತಿಗೆ; ಮರ್ಕಿಕಂಡ್ – ಬಳಲಿಕೊಂಡು

ಮರ್ಕ[2] /*markana*/ ನಾವಿ. 1. ಮರುಕ, 2. ಬೇಗುದಿ, 3. ಅಳಲು. 1. agony, 2. pain, 3. lamentation. ವಾ: ಕೂಸ್‌ನ ಕಳ್ಕಂಡ ಆ ಹೆಣ್ಣ್‌ನ ಮರ್ಕನ ನೋಡಿಕಾಲೆ.

ಮರ್ಕಜೆ /*markajɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage. ಪ: ಮಾರ್ಕಜೆ

ಮರ್ಕಟ /*markaṭa*/ ನಾ. 1. ಸುಸ್ತು, 2. ಆಯಾಸ, 3. ಬಳಲಿಕೆ, 4. ದಣಿವು, 5. ಸಂಕಟ ಮರ್ಕಟ. 1. tired, 2. exausted, 3. burn-out, 4. wearied. ವಾ: ಹೊತಾರೆಂದ ಯಾಕೋ ಬಾರಿ ಮರ್ಕಟ, ಒಮ್ಮೊಮ್ಮೆ ಲೆಕ್ಕಕ್ಕಿಂತ ಹೆಚ್ಚಿಗೆ ಉಂಡರೂ ಮರ್ಕಟ ಆದೆ. ಪ: ಸಂಕಟಮರ್ಕಟ(ಜೋಪ)

ಮರ್ಕಿನ್ ಹೊಡಿ /*markinɨ hoḍi*/ ನಾವಿ. ಮೈದಾ ಹುಡಿ. maida flour. ವಾ: ಮರ್ಕಿನ್ ಹೊಡಿಲಿ ಹೋಳ್‌ಗೆ ಮಾಡ್‌ದು.

ಮರ್ಕೊಲೆಪಿಜನ್ /*markolɛ pijanɨ*/ ನಾ. ದೊಡ್ಡ ಜಾತಿಯ ಇರುವೆ. Carpenter ants. ವಾ: ಮರ್ಕೊಲೆ ಪಿಜಿನ್ ಆ ಮರಲಿ ಉಟ್ಟು.

ಮರ್ಗಿಲಡ್ಕ /*margilaḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಮರಪಡ್ನೂರು ಗ್ರಾಮದ ಜಾಗ. a locality in Amarapadnuru village in Sullia Taluk of Dakshina Kannada District.

ಮರ್ಗಿಲ್ /*margilɨ*/ ನಾ. 1. ಅನ್ನ, ಪದಾರ್ಥ ತೋಡುವ ಪಾತ್ರೆ ದನಗಳಿಗೆ ಕುಡಿಯಲು ನೀರು ತುಂಬಿಸಿಡುವ ಮರದ ಬೋಗುಣಿ, 2. ನಾಯಿಗಳಿಗೆ ಆಹಾರ ಹಾಕುವ ಮರದ ಬಟ್ಟಲು, 3. ಮರದಿಂದ ಮಾಡಿದ ಹಂದಿಗೆ ಗಂಜಿ, ಆಹಾರ ಹಾಕಲು ಬಳಸುವುದು, 4. ಅಕ್ಕಚ್ಚು ಹಾಕುವ ಪಾತ್ರೆ, 5. ದನಕ್ಕೆ ಕುಡಿಯಲು ನೀರಿಡುವುದು. a wooden container/basin in which food and water is served to animals. ವಾ: ಮರ್ಗಿಲ್‌ಲಿ ಗಂಜಿ ಹೊಯ್ದಿಸಿರೆ ಹಂದಿ ಕುಡ್ಕಂಬದು. ಪ: ಮರಾಯಿ(ತು)

ಮರ್ಚಟೆ[1] /*marcaṭɛ*/ ನಾ. 1. ಅನ್ನ ಬಸಿಯುವಾಗ ಪಾತ್ರೆಗೆ ಮುಚ್ಚುವ ಮರದ ತಟ್ಟೆ, ಈ ತಟ್ಟೆಯು ವೃತ್ತಾಕಾರವಾಗಿರುತ್ತದೆ, ಮೆದು ಮರದಿಂದ ತಯಾರಿಸುವ ಮರ್ಚಟೆಯು ಹಗುರವಾಗಿರುತ್ತದೆ, 2. ತರುಂಬುಚ್ಚಿ(ತು). a strainer, circular lid to cover the mouth of a vessel to hold back the rice when the water of the boiled rice is drained out by tilting, 2. a strainer. **ಸಾವ್ರಾರ್ ಜನ ಮೀಯ್ದ್ ಬಾಕನ ಅಜ್ಜನು ಅಜ್ಜಿನು ಬಾಗ್ಲ್ ತಡ್ಡವೆ – ಅನ್ನ ಬಾಗುದು (ಚಿಬ್ಬ್‌ಲ್, ಮರ್ಚಟೆ)(ಒ).** ವಾ: ಅನ್ನ ಬಾಗ್ ಕನ ಚಿಬ್ಲು ಮೇಲೆ ಮರ್‌ಚಟೆನ ಇಸಿಕಣಕು, ಆಗ ಅನ್ನ ಚೆಲ್ಲುದುಲೆ, ಕೈಗೆ ಬಿಸಿ ತಾಂಗುದ್ಲೆ. ಪ: ತರ್‌ಂಬುಚ್ಚಿ(ತು)

ಮರ್ಚಟೆ[2] /*marcaṭɛ*/ ನಾ. ಹಿಟ್ಟು ಕಲಸುವ ಮರದ ಅಗಲ ಸಾಧನ. a wooden tool to mix/blend the flour. ವಾ: ಮರ್ಚಟೆಲಿ ಹಿಟ್ಟ್ ಕಲ್ಸಿರಾತ್.

ಮರ್ಜಿ /*marji*/ ನಾ. 1. ಇಷ್ಟ, 2. ಆಸಕ್ತಿ. 1. desire, 2. interest. **ದೊರೆ ಮರ್ಜಿ ಕುರೆ ಬುದ್ಧಿ(ಗಾ). ಒಬ್ಬನ ಹಿಡ್ದರೆ ಯಲ್ಲವರ ಮರ್ಜಿ(ಗುಣ) ಗೊತ್ತಾದೆ – ಅನ್ನ(ಒ).** ವಾ: ಮೊದುವೆ ವಿಸಯಲಿ ಅಂವನ ಮರ್ಜಿ ಎಂತತ ಗೊತ್ಲೆ.

ಮರ್ಟೆಮೀನ್ /*marṭɛmi:ni*/ ನಾ. ತೋಡಿನಲ್ಲಿರುವ ಸಣ್ಣ ಜಾತಿಯ ಮೀನು. a fresh water fish. ವಾ: ಮರ್ಟೆ ಮೀನ್‌ದ್ ತಲೆ ದಪ್ಪ. ಪ: ಮೊರಂಟೆ(ತು)

ಮರ್ಡ್ /*marḍi*/ ಕ್ರಿ. 1. ಅಳು, 2. ಕೂಗು. 1. cry, 2. scream. **ಅತ್ತೆ ಸತ್ತ ಮೇಲೆ ಸೊಸೆ ಮರ್ಟಿತ್(ಗಾ). ಬಡಂವ ಸಾಯಕನ ಶ್ರೀಮಂತ ಮರ್ಡುದು – ನೀರುಳ್ಳಿ(ಒ).** ವಾ: ಮರ್ಡೊ ಕೂಸಿಗೆ ಮಾತ್ರ ಹಾಲ್ ಸಿಕ್ಕುದು. ಪ: ಮರ್ಡ್‌ಬಡ – ಅಳಬೇಡ; ಮರ್ಡದಿರಿಕಿಲೆ – ಅಳದಿರದು. **ಮರ್ಟಿತ್** /*marṭatɨ*/ 1. ಅತ್ತಳು, 2. ರೋಧಿಸಿದಳು. 1. she cried, 2. she

sobbed. ವಾ: ದಾರಿಲಿ ಬಾಕನ ಬಿದ್ದ್ ಅದ್ ಜೋರಾಗಿ ಅಳ್ತ್. **ಮರ್ಟದೆ** /*marṭadɛ*/ 1. ಅಳುತ್ತದೆ, 2. ರೋದಿಸುತ್ತದೆ, 3. ಕೂಗುತ್ತದೆ. 1. crying, 2. sobbing, 3. weeping. ವಾ: ಕೂಸು ಆಗಲೆಂದ ಮರ್ಟದೆ, ಯಾರಾರ್ ಹೋಗಿ ಎತ್ತಿಕನಿಯ. ಪ: ಮೊರ್ಟರೆ – ಅತ್ತರೆ; ಮೊರ್ಟ್‌ಕಂಡ್ – ಅಳುತ್ತಾ. **ಮರ್ಡಟ** /*marḍaṭa*/ 1. ಅಳು, 2. ಕೂಗಾಟ, 3. ರೋಧನ. 1. cry, 2. sob, 3. weep. ವಾ: ಅವರ ಮರ್ಡಟ ನೋಡಿ ಮನ್‌ಸಿಗೆ ಬಾರಿ ಸಂಕಟ ಆತ್. ಪ: ಮರ್ಡುದು – ಅಳುವುದು; ಮರ್ಡಿಕಾದ್ – ಅಳಬಾರದು. **ಮರ್ಡೆಲ್** /*marḍɛlɨ*/ 1. ಕೂಗು, 2. ಅಳು. 1. cry, 2. weep. ವಾ: ಮರ್ಡ್‌ಬಡನೆ ತಂಗೆ ನಾವು ಪೋಯಿ. **ಮರ್ಡ್‌ಸ್** /*marḍisi*/ 1. ಕೂಗಿಸು, 2. ಅಳುವಂತೆ ಮಾಡು. 1. to make someone sob, 2. to make someone cry. ವಾ: ಕೂಸ್‌ನ ಮರ್ಡ್‌ಸ್‌ಬಡ. ಪ: ಮರ್ಡ್‌ಸ್‌ಬಡ – ಕೂಗಿಸಬೇಡ.

ಮರ್ತ್ /*marti*/ ಕ್ರಿ. ಮರೆತು ಹೋಗು. to forget. ವಾ: ಹೊತಾರೆನೆ ಗುಳಿಗೆ ತಿನ್ನಕಾಯ್ತ್, ಮರ್ತ್ ಬಂದೆ. ಪ: ಮರ್ತುಟ್ – ಮರೆತಿದೆ/ಮರೆತಿದ್ದಾನೆ/ಳೆ. **ಮರ್ತೋತ್** /*marto:tɨ*/ ಮರೆತು ಹೋಯಿತು. forgot. ವಾ: ಅಂದ್ ನೀ ಹೇಳ್‌ದ್ ನಂಗೆ ಮರ್ತೋತ್. ಪ: ಮರ್ತೋತ್ ಗಡ – ಮರೆತು ಹೋಯಿತಂತೆ. **ಮರ್ತ್ ಹೋಗು** /*martɨ ho:gu*/ ಮರೆತು ಹೋಗು. to forget. ವಾ: ಬ್ಯಾಗ್‌ನ ಇಲ್ಲೆ ಮರ್ತ್ ಹೋದ್, ಈಗೀಗ ಒಂದೂ ನೆಂಪಿರ್‌ದುಲೆ. **ಮರ್ತ್ ಹೋವಾಂಗೆ** /*martɨ ho:va:ŋgɛ*/ ಮರೆತು ಹೋದಂತೆ. forgotten. ವಾ: ಅವುಳು ಮರ್ತ್ ಹೋವಾಂಗೆ ನಾಟಕ ಮಾಡ್‌ದೆ ಕಂಡದೆ.

ಮರ್ದಾಳ /*marda:ḷa*/ ನಾ. 1. ಕುಟುಂಬ, 2. ಮನೆತನ. 3 ಸ್ಥಳನಾಮ. 1. family, 2. Lineage, 3. Mardala, a place.

ಮರ್ದಾಳು /*marda:ḷu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮರ್‌ದಿನ /*marɨdina*/ ನಾ. 1. ಮಾರನೇ ದಿನ, 2. ಮುಂದಿನ ದಿವಸ. 1. the third day, 2. the next day. ವಾ: ದಸರದ ಮರ್‌ದಿನ ರಸ್ತೆಯೆಲ್ಲ ಕಾಲಿ ಕಾಲಿ ಇದ್ದದೆ. ಪ: ಮರ್ದಿನ, ಮನತಾನಿ(ತು)

ಮರ್ದು /*maradu*/ ಕ್ರಿ. 1. ಮರೆತು ಹೋಗು, 2. ಮರೆಯುವುದು. to forget. ವಾ: ಅಪ್ಪಂಗೆ ಈಗ ಹೇಳ್ದ್ ಇನ್ನೊಮ್ಮೆಗೆ ಮರ್‌ದು ಹೋದೆ. ಪ: ಮರ್ದುಟ್ಟು – ಮರೆತು ಹೋಗಿದೆ; ಮರ್ದೋತ್ – ಮರೆತು ಹೋಯಿತು. **ಮರ್‌ಯೊದ್** /*marɨyodi*/ 1. ಮರೆಯಬಹುದು, 2. ಮರೆಯುವುದು. 1. can forget, 2. forgetting. ವಾ: ದಿನ ಹೋದಂಗೆ ಮರ್‌ಯೊದ್.

ಮರ್ದೂರು /*mardu:ru*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಎಡಮಂಗಲ ಗ್ರಾಮದ ಜಾಗ. a locality in Edamangala village in Sullia Taluk of Dakshina Kannada District.

ಮರ್ನೆದಿನ /*maranɛdina*/ ನಾ. ಮರುದಿನ. the next day. ವಾ: ಒಂದಿನ ಅಲ್ಲೆ ಇದ್ದ್ ಮರ್ನೆದಿನ ಹೋದ್.

ಮರ್ಪು /*Marpu*/ ನಾ. ಮರೆವು. forgetfullness. ವಾ: ಈಗೀಗ ಮರ್ಪು ಹೆಚ್ಚ್ ಆವುಟು.

ಮರ್ಯಟ /*maryaṭa*/ ನಾ. ಮರೆತು ಹೋಗುವಿಕೆ. forgetting. ವಾ: ಈ ಪ್ರಾಯಕೆ ನಿನ್ನ ಮರ್ಯಟ ಇದ್ದರೆ ಹೆಂಗೆ? ಪ: ಮರ್ಯಟಲಿ – ಮರೆವಿನಲ್ಲಿ

ಮರ್ಯಾದಿ /*marya:di*/ ನಾವಿ. ಘನತೆ ಗೌರವ. respect/stature. **ಮೊರ್ಯಾದಿ ಮೂರ್‌ಕಾಸಾತ್(ನು).** ವಾ: ಮನ್ನ ಆಗಿ ಹುಟ್ಟಿದ ಮೇಲೆ ಮರ್ಯಾದಿಲಿ ಬೊದ್ಕುದು ಕಲಿಯಕು. ಪ: ಮೊರ್ಯಾದಿ

ಮರ್ಲ್[1] /*marlɨ*/ ನಾ. 1. ಮರೆಗುಳಿ, 2. ಮರೆವು, 3. ಸ್ಮರಣೆಯನ್ನು ಕಳೆದುಕೊಳ್ಳು. 1. forgetfullness, 2. to forget, 3. to lose memory. ವಾ: ಬರ್‌ತ ಬರ್‌ತ ಮರ್‌ಲ್ ಹೆಚ್ಚಿ ಆತ್.

ಮರ್ಲ್[2] /*marlɨ*/ ನಾ. ಹುಚ್ಚು. madness. ಪ: ಮೊರ್ಲ್, ಮರ್ಲ್(ತು). **ಮರ್ಲಾಟ** /*marala:ṭa*/ 1. ಹುಚ್ಚಾಟ, 2. ಹುಚ್ಚು ಮನಸ್ಥಿತಿ, 3. ಮೊರ್ಲಾಟ. 1. insanity, 2. madness, 3. lunacy. ವಾ: ಮಕ್ಕಳ ಮರ್ಲಾಟ ಹಾಙ್ ಜಾಸ್ತಿ ಆತ್. ಪ: ಮೊರ್ಲಾಟ. **ಮರ್ಲಾತ್** /*marala:tɨ*/ 1. ಹುಚ್ಚಿ ಹಿಡಿಯಿತು, 2. ಮನಸ್ಸಾಯಿತು, 3. ಆಕರ್ಷಣೆಯಾಗು. 1. becoming insane, 2. liked, 3. attracted. ವಾ: ಹೈದಂಗೆ ಗೂಡೆನ ನೋಡಿ ಮರ್ಲಾತ್. ಪ: ಮೊರ್ಲಾತ್

ಮರ್ವ /*marva*/ ನಾ. 1. ಒಂದು ಜಾತಿಯ ಕಾಡು ಮರ,

2. ಹೊಲ್ವೆಮರ. a forest tree. ವಾ: ಮರ್ವ ಮರಂದ ಪಕಾಸ್ ಕೊಯ್ಯೊಕು, ಬಾರಿ ಗಟ್ಟಿ ಮರ.

ಮರ್ವಾಯ್ /*mariva:yi*/ ನಾ. ಸಮುದ್ರಕ್ಕೆ ಸೇರುವ ನದಿ ತಟಗಳಲ್ಲಿ ಜೀವಿಸುವ ಚಿಪ್ಪು ಮೀನು. a variety of fish found in the delta region. ವಾ: ಮರ್ವಾಯ್‌ನ ತಿಂದವೆ. ಪ: ಮರ್ವಾಯಿ(ತು)

ಮರ್ವು /*marvu*/ ಕ್ರಿ. ಮರೆವು. forgetfullness. ವಾ: ಈಗ ಹೇಳ್ದ್ ಹಿಳ್ಳ ಹೊತ್ತಿಗೆ ನೆಂಪೆ ಇರ್‌ದುಲೆ, ಎಂತ ಮರ್ವೋ.

ಮರ್ಸಿಣಿ /*marsiṇi*/ ನಾ. ಜಾಗದ ದೇವತೆ. a deity of a particular place/region. ವಾ: ಅಲ್ಲಿ ಕಂಡದೆಲ ಅದೆ ಮರ್ಸಿಣಿನ ಜಾಗೆ.

ಮಲಕನ /*malakana*/ ನಾ. ಮಲಗುವಾಗ. while sleeping. ವಾ: ನಿನ್ನೆ ಮಲಕನ ಹೊತ್ತಾಗಿತ್ತ್.

ಮಲವೇಲು /*malave:lu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮಲಾಂಪಚ್ಚೆ /*mala:mpaccɛ*/ ನಾ. 1. ಗಂಗೆ ಪೂಜೆಗೆ ಬಳಸುವ ಬುಟ್ಟಿ, 2. ವಾಲೆಪಚ್ಚೆ. a bamboo basket while performing Ganga Puja during a wedding. ವಾ: ಮೊದ್ವೆಲಿ ಗಂಗೆ ಪೂಜೆಗೆ ಮಲಾಂಪಚ್ಚೆ ಬೇಕಾದೆ.

ಮಲಾದ್ರ /*mala:dra*/ ನಾ. 1. ತೊಂದರೆ, 2. ಬಜ್ಜ, 3. ತೊಡಕು, 4. ಅಡ್ಡಿ, 5. ಕಿರುಕುಳ, 6. ಕಾಟ, 7. ಉಪದ್ರವ. 1. trouble, 2. obstacle, 3. impediment, 4. resistance, 5. torture, 6. torment, 6. distress. ವಾ: ಇನ್ನೊಬ್ಬಂಗೆ ಮಲಾದ್ರ ಕೊಡಿಕಾದ್.

ಮಲಾಮತ್ /*mala:mati*/ ಎಪ. 1. ತೊಂದರೆ, 2. ವಿಪತ್ತು, 3. ಸೊಕ್ಕು, 4. ಗರ್ವ. 1. trouble, 2. a danger, 3. vanity, 4. false pride. ವಾ: ಇಬ್ಬೊರು ಸೇರಿಕಂಡ್ ಒಳೆಗೆಂದೊಳಗೆ ಏನೋ ಮಲಾಮತ್ ಮಾಡಿವೆ.

ಮಲೆ ಅಂಗರೆ /*malɛ aŋgarɛ*/ ನಾ. ತುರಿಸುವ ದೊಡ್ಡ ಜಾತಿಯ ಅಂಗರೆ ಗಿಡ. Nilgiri nettle. ವಾ: ಮಲೆ ಅಂಗರೆ ಮುಟ್ಟಿರೆ ಜರ ಬಂದದೆ. ಪ: ಅಂಗರ – ತುರಿಕೆ ಸೊಪ್ಪಿನ ಗಿಡ

ಮಲೆ ಉಂಬುಳು /*malɛ umbuḷu*/ ನಾ. ದಟ್ಟ ಕಾಡಿನಲ್ಲಿರುವ ಜಿಗಣೆ. leaches found in thick forests. ವಾ: ಮಲೆ ಕಾಡ್‌ಲಿ ಮಲೆ ಉಂಬುಳುಂದಾಗಿ ಕಾಲ್ ಹಾಕಿಕೆ ಬೊತ್ತ್. ಪ: ಉಂಬುಳು

ಮಲೆಕಕ್ಕಡೆ /*malɛkakkaḍɛ*/ ನಾ. 1. ದೀವಟಿಗೆ, 2. ಪಂಜು. 1. a lamp, 2. a torch. ವಾ: ರಾತೋರಾತ್ರೆ ಮಲೆಕಕ್ಕಡ ಹಿಡ್ಕಂಡ್ ದಿಬ್ಬಣದವು ಹೋದೊ.

ಮಲೆಕುಡಿಯರ್ /*malɛkuḍiyari*/ ನಾ. 1. ಮಲೆ ಕುಡಿಯರು, 2. ಕಾಡಿನಲ್ಲಿರುವ ತಳ ಸಮುದಾಯದವರು, ಮಡಿಕೇರಿ ಮತ್ತು ಸುಳ್ಯದ ಸುಬ್ರಹ್ಮಣ್ಯದ ಕಡೆ ಹೆಚ್ಚಾಗಿ ವಾಸಿಸುತ್ತಾರೆ. Male Kudiya tribe, found near Madikeri, Subramanya, etc. ವಾ: ಮಲೆ ಕುಡಿಯರ್ ಹಿಂದೆನ ಕಾಲಲಿ ಬೆಟ್ಟಗುಡ್ಡಗಳ್‌ಲಿ ಓಡಾಡಿಕಂಡ್ ಇರ್‌ತ್ತಿದ್ದೊ.

ಮಲೆಬಾಜಿಗ ಮರ /*maleba:jiga mara*/ ನಾ. ಕಾಡುಮರ. Albizia or Rain tree. ವಾ: ಮಲೆ ಬಾಜಿಗ ಮರದ ಎಲೆ ಅರ ಅರ ಇದ್ದದೆ, ಕುರ್ಚಿ, ಬೆಂಚಿನೆಲ್ಲ ಆ ಎಲೆಲಿ ಉಜ್ಜಿವೆ.

ಮಲೆಮರ /*malemara*/ ನಾ. ಒಂದು ಜಾತಿಯ ಕಾಡುಮರ. a forest tree.

ಮಲೆ[1] /*malɛ*/ ನಾ. 1. ಮೊಲೆ, 2. ಸ್ತನ, 3. ಕುಚ, 4. ಹೆಣ್ಣಿನ ಹಾಲಿನ ಗ್ರಂಥಿ. breats. ವಾ: ಕೂಸಿಗೆ ಮಲೆ ಕುಡ್ಸೊಕು. ಪ: ಮಿರೆ(ತು)

ಮಲೆ[2] /*malɛ*/ ನಾ. 1. ಬೆಟ್ಟ 2. ಶಿಖರ. 1. a hill, 2. a mountain. ವಾ: ಪೂಮಲೆ, ದೇಸಮಲೆ, ಬಂಟಮಲೆ, ಕೋಳಿಕ್ಕ ಮಲೆಗೆಲ್ಲ ನಮ್ಮೂರುನ ದೊಡ್ಡ ದೊಡ್ಡ ಮಲೆಗ.

ಮಲೆಬೆಟ್ಟು /*malɛbɛṭṭu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮಲೆಮಾವ್ /*malema:v*/ ನಾ. ದೇವರ ಬನ. a forest dedicated to god/ a sacred grove. ವಾ: ಮಲೆಮಾವ್ ಕಡೆಗೆ ಹೋಕೆ ಬತ್ತ್.

ಮಲೆಯಾಳಕೆಸ /*maleya:ḷakesa*/ ನಾ. 1. ಒಂದು ವಿಧದ ಕೆಸು, 2. ಹಸಿರುಬಣ್ಣದ ದೊಡ್ಡ ದಂಟು, ಎಲೆಗಳಿರುವ ಕೆಸು. variety of Colocasia, Taro Root. ವಾ: ಮಲೆಯಾಳ ಕೆಸನ ಗೈಪು ಮಾಡಿವೆ, ಅದರ ದಂಟ್‌ನ ಮಜ್ಜಿಗೆ ಹಾಕಿ ಪಚಡಿ ಮಾಡಕ್. ಪ:

ಮಳೆಯಾಳ ಕೆಸ – ದೊಡ್ಡ ಎಲೆಯಿಂದ ಕೂಡಿದ ಎತ್ತರ ಹೋಗುವ ಕೆಸು

ಮಲೆರ್ಪಹಕ್ಕಿ /*malerpahakki*/ ನಾ. ಮಲೆಯಲ್ಲಿ ವಾಸಿಸುವ ಕಾಡು ಹಕ್ಕಿ. a bird found in the hilly region. ವಾ: ಮಲೆರ್ಪ ಹಕ್ಕಿ ಮಲೆ ಕಾಡ್‌ಲಿರೊ ಹಕ್ಕಿ.

ಮಲ್ಕ /*malka*/ ಕ್ರಿ. 1. ಮಲಗು, 2. ಶಯನಿಸು, 3. ನಿದ್ದೆಮಾಡು. to sleep. ವಾ: ನೀ ಮಲ್ಕ ಕೂಸು. ಪ: ಚೆಪ್ಪು/ಜೆರ್ಪು(ತು)

ಮಲ್ಕಜೆ /*malkajɛ*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಗುತ್ತಿಗಾರು ಗ್ರಾಮದ ಜಾಗ. a locality in Guttigaru village in Sullia Taluk of Dakshina Kannada District.

ಮಲ್ಕಣಗಂಟ /*malkaṇgaṇṭa*/ ನಾ. ಮಲಗುವ ತನಕ. until one sleeps. ವಾ: ಹೆಣ್ಮಕ್ಕಳಿಗೆ ಹೊತಾರೆಂದ ಮಲ್ಕಣಗಂಟ ಕೆಲ್‌ಸನೇ ತೀರ್‌ದುಲೆ.

ಮಲ್ಕ್ /*malkɨ*/ ಕ್ರಿ. ಮಲಗು. to sleep. ವಾ: ಮಕ್ಕ ರಾತ್ರೆ ಬೇಗ ಮಲ್ಕ್‌ದು ಒಳ್ಳದ್. ಪ: ಮಲ್ಗಿಕೆ – ಮಲಗಲು

ಮಲ್ಗ್ /*malgɨ*/ ಕ್ರಿ. 1. ಮಲಗು, 2. ಶಯನಿಸು, 3. ನಿದ್ದೆಮಾಡು. to sleep. **ದುಡಿಯದೆ ತಿಂಬಕಾಗದ್ ತಿನ್ನದೆ ಮಲ್ಗಿಕಾಗದ್(ಗಾ).** ವಾ: ನೀ ಮಲ್ಗ್, ನಂಗೆ ಹಞ್ಞ ಕೆಲ್‌ಸ ಉಟ್ಟು. ಪ: ಮಲ್ಗಿಕಾಗದ್ – ಮಲಗಬಾರದು

ಮಲ್ಜಿ /*malji*/ ನಾ. 1. ಹಾವು ಮೀನು, 2. ನದಿಯಲ್ಲಿ ಸಿಗುವ ಹಾವಿನಂತೆ ಉದ್ದವಾದ ದೇಹವಿರುವ ಒಂದು ಬಗೆಯ ಮೀನು, 3. ಹಾವಿನ ಆಕಾರದಲ್ಲಿರುವ ಮೀನು. a snakehead fish, lives in rivers. ವಾ: ಮಲ್ಜಿ ಮೀನ್ ನೋಡಿಕೆ ಹಾವ್‌ನಾಂಗೆ ಉದ್ದ ಇದ್ದದೆ.

ಮಲ್ಲಂದಿರ /*mallandira*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮಲ್ಲಡ್ಕ /*malladka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅರಂತೋಡು ಗ್ರಾಮದ ಜಾಗ. a locality in Arantodu village in Sullia Taluk of Dakshina Kannada District.

ಮಲ್ಲಪ್ಪ /*mallappa*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. masculine given name. ಪ: ಮಲ್ಲ, ಮಲ್ಲಣ್ಣ

ಮಲ್ಲಮ್ಮ /*mallamma*/ ನಾ. ವ್ಯಕ್ತಿ ಹೆಸರು, ಸ್ತ್ರೀ ವಾಚಕ. feminine given name.

ಮಲ್ಲಾರ /*malla:ra*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಹರಿಹರ ಪಲ್ಲತಡ್ಕ ಗ್ರಾಮದ ಜಾಗ. 1. family, 2. lineage, 3. a locality in Harihara Pallatadka village in Sullia Taluk of Dakshina Kannada District.

ಮಲ್ಲಿಗೆ /*malligɛ*/ ನಾ. 1. ಮಲ್ಲಿಗೆ, 2. ಬಳ್ಳಿಯಲ್ಲಿ ಬಿಡುವ ಸುವಾಸನಾಯುಕ್ತವಾದ ಹೂವು, 3. ಜ್ಯಾಸ್ಮಿನಮ್ ಜಾತಿಗೆ ಸೇರಿದ, ಬಿಳಿ ಅಥವಾ ಹಳದಿ ಹೂ ಬಿಡುವ ಬಳ್ಳಿ ಅಥವಾ ಪೊದೆ. 1. jasmine shrub, 2. jasmine flower, 3. belongs to the family of jasminum. ವಾ: ಮಲ್ಲಿಗೆಲಿ ಮೈಸೂರ್ ಮಲ್ಲಿಗೆ, ಸೂಜಿ ಮಲ್ಲಿಗೆ, ಕಾಕಡ ಮಲ್ಲಿಗೆತ ಸುಮಾರ್ ತರದ್ ಉಟ್ಟು.

ಮಲ್ಲೆಕ್ಕಿ ಮರ /*mallekki mara*/ ನಾ. ಒಂದು ಜಾತಿಯ ಮರ. a type of tree.

ಮಲ್ಲ್‌ತ್ ನಿತ್ತುಟು /*malliti nittuṭu*/ ನಾ. ಗರ್ವದಿಂದ ಬೀಗಿ ನಿಂತಿದೆ. posture of being proud. ಪ: ಮಲೆತ್(ತು) – ಕೋಪಗೊಂಡು

ಮಸಣ /*masaṇa*/ ನಾ. 1. ಸ್ಮಶಾನ, 2. ಸುಡುಗಾಡು, 3. ಶವಗಳ ಅಂತ್ಯ ಸಂಸ್ಕಾರ ನಡೆಸುವ ಸ್ಥಳ. 1. graveyard, 2. cemetry, 3. burial ground. **ಕೊಟ್ಟ ಹಣನೂ, ಮಸಣಕ್ಕೆ ಹೋದ ಹೆಣನೂ, ವಾಪಸ್ ಬಾದುಲೆ(ಗಾ).** ವಾ: ಉದ್‌ರಿದ ತಲೆ ಕೂದೊಲು ಮಸಣಕೆ ಹೋದ ಹೆಣ ತಿರ್‌ಗಿ ಬಾಕಿಲೆತ ಹೇಳಿವೆ.

ಮಸಾಲೆ /*masa:lɛ*/ ನಾ. 1. ಮಸಾಲೆ, 2. ಆಹಾರ ಪದಾರ್ಥಗಳನ್ನು ರುಚಿಗೊಳಿಸಲು ಉಪಯೋಗಿಸುವ ಮೆಣಸು, ಜೀರಿಗೆ, ಧನಿಯ, ಚಕ್ಕೆ ಮುಂತಾದ ಸಂಬಾರ ವಸ್ತು ಮತ್ತು ಇವುಗಳನ್ನು ಹುರಿದು ಕುಟ್ಟಿದ ಪುಡಿ. 1. aromatic spices, 2. powder of blended spices made with proper proportions of black pepper, cumin seeds, coriander seeds, cinnamon, etc. ವಾ: ಅಡ್ಗೆ ಮಾಡಿಕನ ಹೆಚ್ಚಿ ಮಸಾಲೆ ಹಾಕಿಕಾಗದ್. **ಮಸಾಲೆ ಕಡೇದು** /*masa:lɛ kaḍɛ:du*/ 1. ಮಸಾಲೆ ರುಬ್ಬುವುದು, 2. ಒರಳಿನಲ್ಲಿ ಹಾಕಿ ತಿರುವು, 4.

ನುಣ್ಣಗಾಗಿಸು, 5. ಅರೆ. to grind spices into powder. ವಾ: ಕಡೆಕಲ್ಲ್‌ಲಿ ಗೈಪುಗೆ ಮಸಾಲೆ ಕಡೇದು.

ಮಸಿ[1] /*mɔsi*/ ನಾ. 1. ಇದ್ದಿಲು, 2. ಕರಿಯಬಣ್ಣ, 3. ಒಲೆಯ ಮೇಲಿಟ್ಟ ಪಾತ್ರೆಯ ತಳಕ್ಕೆ ಅಂಟಿರುವ ಕಪ್ಪುಕಲೆ, 4. ಮೊಸಿ. 1. charcoal, 2. black colour, 3. black stains at the bottom of vessels, 4. black stains. ವಾ: ಸೊವ್ದೆ ಒಲೆಲಿ ಅಡ್ಗೆ ಮಾಡಿರೆ ಪಾತ್ರಗೆಲ್ಲ ಮಸಿ ಹಿಡೆದು. ಪ: ಮೊಸಿ

ಮಸಿ[2] /*mɔsi*/ ಕ್ರಿ. 1. ಉಜ್ಜುವ ಮೂಲಕ ಅಥವಾ ಅದರಂತೆ ಹೊಳಪು ಕೊಡುವುದು; ಹೊಳಪು ಮಾಡು, 2. ತೀಕ್ಷ್ಣವಾದ ಅಥವಾ ತೀಕ್ಷ್ಣಗೊಳಿಸು, 3. ಒಬ್ಬರ ಶ್ರೇಷ್ಠತೆಯನ್ನು, ಇನ್ನೊಬ್ಬರ ಮೇಲೆ ಶ್ರೇಷ್ಠತೆಯನ್ನು ಸ್ಥಾಪಿಸಲು ಹೆಣಗಾಡುವುದು; ಸ್ಪರ್ಧಿಸು, 4. ತೀವ್ರ ಅಥವಾ ಹೆಚ್ಚು ತೀವ್ರವಾಗು, 5. ತೀವ್ರವಾಗಿ ಇಷ್ಟಪಡದಿರು; ದ್ವೇಷಿಸು, 6. ನಾಶ ಅಥವಾ ಸರ್ವನಾಶ. 1. to polish, by rubbing 2. to sharpen, 3. to compete with one another, to establish one's superiority, 4. to become intense, 5. to hate, 6. to destroy or demolish. ವಾ: ಇನ್ನೊಬ್ಬರ ಮೋರೆಕೆ ಮಸಿ ಉಜ್ಜಿಕಾಗದ್. ಪ: ಮಸೆಪುನೆ(ತು) – ಮಸೆಯುವುದು

ಮಸಿ ಅರ್ವೆ /*mɔsiarvɛ*/ ನಾ. 1. ಆವಿಗೆಯಿಂದ ಪಾತ್ರೆಗಳನ್ನು ಹೊರತೆಗೆಯುವಾಗ ಆವಿ ಬಿಸಿ ಇರುವುದರಿಂದ ಕೈಯ್ಯಲ್ಲಿ ಬಟ್ಟೆ ಹಿಡಿದುಕೊಂಡು ಪಾತ್ರೆಗಳನ್ನು ಹೊರತೆಗೆಯುವುದು, 2. ಬಿಸಿಯಾದ ಪಾತ್ರೆಗಳನ್ನು ಕೆಳಗಿಳಿಸಲು ಅಡುಗೆ ಕೋಣೆಯಲ್ಲಿ ಬಳಸುವ ಬಟ್ಟೆ. 1. holding a kitchen towel to take containers out of steam cookers, 2. a kitchen napkin used to hold hot containers. ವಾ: ಮಸಿ ಅರ್ವೆಲಿ ಬಿಸಿ ಪಾತ್ರನ ಹಿಡ್ಕಣಿ ಉಪಯೋಗ್ಸವೆ.

ಮಸಿಗಿಕಿಲ್ಲೆ /*masigikillɛ*/ ಕ್ರಿವಿ. 1. ಕುಳಿತಲ್ಲಿಂದ ಮಿಸುಕಾಡದಿರು, 2. ನಿಧಾನ ಪ್ರವೃತ್ತಿಯವರು, 3. ಅಲ್ಲಾಡದಿರು. 1. immobile, 2. slow, 3. static. ವಾ: ಕುದ್ದಲ್ಲಿಂದ ಮಸಿಗಿಕಿಲ್ಲೆ, ಅಲ್ಲೇ ಬಿದ್ದ್‌ಕಂಡಿದ್ದವೆ. ಪ: ಮಸುಗುದುಲೆ – ಅಲ್ಲಾಡುವುದಿಲ್ಲ/ಕುಳಿತಲ್ಲೆ ಕುಳಿತಿರುವುದು; ಮಸ್ಗುದು – ಅಲ್ಲಾಡುವುದು

ಮಸಿಯದು /*masiyadu*/ ಕ್ರಿ. 1. ಉಜ್ಜುವುದು, 2. ಮಸೆಯುವುದು, 3. ತೀಕ್ಷ್ಣಗೊಳಿಸು, 4. ಹೊಳಪು ಬರುವಂತೆ ಉಜ್ಜು. 1. to rub, 2. to polish, 3. to sharpe, 5. to make something shine. ವಾ: ಕತ್ತಿನ ಹರ್‌ತ ಮಾಡಿಕೆ ಕಲ್ಲಿಗೆ ಮಸಿಯೊಕು. ಪ: ಮಸೆಕ್ಕುನೆ(ತು)

ಮಸೆ /*masɛ*/ ನಾ. 1. ತೀಕ್ಷ್ಣತೆ (ಕತ್ತರಿಸುವ ಆಯುಧದ), ಹೊಳಪು; ಕಾಂತಿ; ಹೊಳಪು, 2. ಭಾವನೆ ಅಥವಾ ಉದ್ರಿಕ್ತ ಪ್ರಕೋಪ; ಹಿಂಸಾತ್ಮಕ ಮಾನಸಿಕ ಆಂದೋಲನದ ಸ್ಥಿತಿ; ಫ್ರೆಂಜಿ, 3. ತೀವ್ರ ಇಷ್ಟವಿಲ್ಲ; ದ್ವೇಷ, 4. ಒಂದು ಬಾಹ್ಯ ಗಾಯ. 1. sharpness (of a cutting weapon). brightness; radiance; lustre, 2. wild or frantic outburst of feeling or action; the state of violent mental agitation; frenzy, 3. intense dislike; hatred, 4. a superficial wound. ವಾ: ಕತ್ತಿನ ಮಸೆದು.

ಮಸ್‌ಗ್ /*masigɨ*/ ಕ್ರಿ. 1. ಮಿಸುಕಾಡು, 2. ಅಲ್ಲಾಡು. 1. to move, 2. to shake. ವಾ: ಕಾಲ್‌ಂದ ಮುಳ್ಳು ತೆಗೆಕನ ಮಸ್‌ಗ್ ಬಡ. ಪ: ಮಸ್ಗುದುಲೆ – ಅಲ್ಲಾಡುವುದಿಲ್ಲ; ಮಸ್ಗ್ – ಮಿಸುಕಾಡು, ಅಲ್ಲಾಡು;

ಮಹೇಸ್ವರ /*mahe:svara*/ ನಾ. 1. ಮಹೇಶ್ವರ, 2. ಈಶ್ವರ. 1. Maheshwara, a god, 2. god Ishwara. ವಾ: ಸಿವನನೆ ಮಹೇಸ್ವರತ ಕರೆದು.

ಮಳಿ /*maḷi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮಳಿಯಾಳ /*maḷiya:ḷa*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಸುಬ್ರಹ್ಮಣ್ಯ ಗ್ರಾಮದ ಜಾಗ. a locality in Subrahmanya village in Sullia Taluk of Dakshina Kannada District.

ಮಳೆಕೋಲ್ /*maḷeko:l*/ ನಾ. ಕಾಡು ಹಕ್ಕಿಗಳನ್ನು ಹಿಡಿಯಲು ಚಿಕ್ಕ ಕಡ್ಡಿಗಳಿಗೆ ಮೇಣ ಹಚ್ಚಿ ಮರಗಳಲ್ಲಿ ಅಲ್ಲಲ್ಲಿ ಇರಿಸುವುದು. attracting birds using torch to catch them. ವಾ: ಮಳೆಕೋಲ್ ಬಳ್‌ಸಿ ಕಾಡ್ ಹಕ್ಕಿಗಳ ಹಿಡೆದು. ಪ: ಮಳ್ಕೋಲ್ ಒಡ್ಡುದು, ಮರೆಕೋಲ್(ತು)

ಮಳೆಕ್ಕಿ /*maḷekki*/ ನಾ. ಮಳೆ ಕರೆಯುವ ಪಕ್ಷಿ. Rain Quail bird. ವಾ: ಮಳೆಕ್ಕಿ ಕೂಂಗಿದೆ.

ಮಳೆಪಾತೆ /*maḷɛpa:tɛ*/ ನಾ. ಮಳೆ ಬಂದ ಮೇಲೆ

ಭೂಮಿ ಅಡಿಯಿಂದ ಏಳುವ ಹುಳುಗಳು. insects which come out of the ground after it rains. ವಾ: ಮಳೆಪಾತೆನೆ ಗೆದ್ಲ್ ಹುಳನ ಮಾಡ್‌ದು.

ಮಳೆಬಾಕನ /*maḷɛba:kana*/ ನಾ. ಮಳೆ ಬರುವಾಗ. while it is raining. ವಾ: ಮಳೆಬಾಕನ ಯಾವ ಮರದಡಿನೂ ನಿಲ್ಲಿಕಾದ್.

ಮಳೆಬಿಲ್ಲ್ /*maḷɛbilli*/ ನಾ. ಕಾಮನ ಬಿಲ್ಲು. a rainbow. ವಾ: ಮಳೆಬಂದ್ ನಿತ್ತ್ ಬಿಸ್‌ಲ್ ಬಾಕನ ಮಳೆಬಿಲ್ಲ್ ಕಾಂಬದು, ಮಳೆಬಿಲ್ಲ್‌ಲಿ ಒಟ್ಟ್ ಏಳ್ ಬಣ್ಣ ಕಂಡದೆ.

ಮಳ್ಕರೆಕಾಯಿ /*maḷkarɛ ka:yi*/ ನಾ. 1. ಸಣ್ಣ ಗಾತ್ರದ ತಿನ್ನುವ ಕಾಯಿ, 2. ಮುಡ್ಕರೆಕಾಯಿ, 3. ಮುಳ್ಳುಕಾರೆಕಾಯಿ, 4. ಎಮ್ಮೆಕಾರೆ. Ziziphus xylopyrus, Woody-fruited Jujube. ವಾ: ಮಳ್ಕರೆ ಕಾಯಿನ ತಿಂದವೆ.

ಮಳ್ಕಾಯಿ ಸೊಪ್ಪು /*maḷka:yi soppu*/ ನಾ. ಸಣ್ಣ ಮಕ್ಕಳ ಮೈಯಲ್ಲಿ ಮುಳ್ಳಾಗುವುದಕ್ಕೆ ಬಳಸುವ ಸೊಪ್ಪು. a medicinal leaf used to cure skin rashes in children.

ಮಳ್ಕ್‌ಬಾದು /*maḷkɨ ba:du*/ ಕ್ರಿ. ಮಕ್ಕಳು ಮಿತಿಮೀರಿದ ಆಟ ಆಡುವುದು. children playing all the time. ವಾ: ಮಕ್ಕ ಬಾರಿ ಮಳ್ಕ್ ಬಾದು. ಪ: ಮಲ್ಕರೊ(ತು)

ಮಳ್‌ಗಾಲ /*maḷiga:la*/ ನಾ. 1. ಮಳೆಗಾಲ, 2. ಕಾರ್ಗಾಲ. rainy season. ವಾ: ಮಳ್‌ಗಾಲಲಿ ಕ್ವಾಟಿಕೆ ಸೀತ, ಜೆರ ಬೇಗ ಆದು.

ಮಳ್ಯಾಳ /*maḷya:ḷa*/ ನಾ. ಮಲಯಾಳಂ ಕೇರಳಿಗರ ಭಾಷೆ. Malayalam language. ವಾ: ಮಳ್ಯಾಳ ಬಾಸೆ ಬಂದದೆ ನಂಗೆ.

ಮಳ್ಸರ /*maḷsara*/ ನಾ. ನದಿಯ ನೀರಲ್ಲಿ ಇರುವ ಕೆಸರು. mire in river water. ವಾ: ಕಡು ಹಾಕಿರೆ ಮಳ್ಸರಲ್ಲಿದ್ದ ಮೀನ್‌ಗ ಸಾಯುದುಲೆ.

ಮಳ್ಳ /*maḷḷa*/ ನಾ. 1. ಮಳ್ಳ, 2. ತಿಳಿದು ತಿಳಿಯದಂತೆ ಇರುವವನು, 3. ಏನೂ ಅರಿಯದಂತೆ ಇರುವವನು. 1. the one who pretends to be innocent, 2. pretentious, 3. phoney. **ಕೆಲ್ಸಕೆ ಕಳ್ಳ ತಿಂಬಕೆ ಮಳ್ಳ(ಗಾ).** ವಾ: ಮಳ್ಳನಂಗೆ ಕುದ್ದುಟು.

ಮಳ್ಗಾಲ /*maḷga:la*/ ನಾ. ಮಳೆಗಾಲ. rainy season. ವಾ: ಮಳ್ಗಾಲಲಿ ಕೊಡೆ ಇಲ್ಲದೆ ಹೊರೆಗೆ ಹೋಕಾದುಲೆ.

ಮಳ್ಳಿ /*maḷḷi*/ ನಾ. 1. ಮಳ್ಳಿ, 2. ತಿಳಿದು ತಿಳಿಯದಂತೆ ಇರುವವಳು, 3. ಬೈಗುಳ ಪದ. 1. a woman who pretends to be innocent, 2. phoney. **ನೋಡಿಕೆ ಮಳ್ಳಿ ಕೆಲ್ಸಕೆ ಕಳ್ಳಿ(ಗಾ).** ವಾ: ಎಲ್ಲ ಗೊತ್ತಿದ್ರು ಮಳ್ಳಿನಾಂಗೆ ಇರ್‌ದು.

ಮಳ್ಳೆ[1] /*maḷḷɛ*/ ನಾ. ಮಳ್ಳಿ, a woman who pretends to be innocent. ವಾ: ಮಳ್ಳೆ ಮೆಲ್ಲ ಬಂದದೆ.

ಮಳ್ಳೆ[2] /*maḷḷɛ*/ ನಾ. 1. ಭಾಗ, 2. ಪಾಲು. a part/a fragment. ವಾ: ಗದ್ದೆ, ತೋಟನ ಮಕ್ಕಳಿಗೆ ಮಳ್ಳೆ ಮಾಡಿ ಕೊಟ್ಟೊಳನ?

ಮಾಂಜಿಮರ /*ma:ŋji mara*/ ನಾ. ಏಪ. 1. ಒಂದು ಜಾತಿ ಕಾಡುಮರ, 2. ಮಾಜಿಯಂ-ನೆಡುತೋಪಿನಲ್ಲಿ ನೆಟ್ಟು ಬೆಳೆಸುವ ಮರ, 3. ಮ್ಯಾಂಜಿಯಮ್ ಮರ. 1. a forest tree, 2. a plantation tree, also known as Acacia mangium, black wattle, hickory wattle, mangium. ವಾ: ಮಾಂಜಿ ಮರ ಒಂದ್ ಕಾಡ್ ಮರ.

ಮಾಂಜಿಮೀನ್ /*ma:ŋjimi:nɨ*/ ನಾ. ಆಳ ಸಮುದ್ರದ ಮೀನು. a variety of sea water fish, Pomfret fish. ವಾ: ಮಾಂಜಿಮೀನ್ ಸಂದ್ರಲಿ ಸಿಕ್ಕುದು.

ಮಾಂಜೋಳು /*ma:ŋjo:ḷu*/ ನಾ. 1. ಹಲಸಿನ ಬೀಜವನ್ನು ಆವರಿಸಿರುವ ತೆಳುವಾದ ಹಾಗೂ ಮೃದುವಾದ ಪದರ ಅಥವಾ ಸಿಪ್ಪೆ, 2. ಮಾಂಜೋಳು, 3. ಚಾರಿ(ತು). white shells that surround jackfruit seeds. ವಾ: ಮಾಂಜೋಳುಗೆ ನೀರ್ ತಾಂಗಿರೆ ಜಾರ್‌ದೆ, ನೋಳಿಂದಾಗಿ ಹಿಡೆಕೆ ಆಕಿಲೆ. ಪ: ಚಾರಿ(ತು)

ಮಾಂದುದು /*ma:ndudu*/ ಕ್ರಿ. ಕೈಯಲ್ಲಿ ನೆಲವನ್ನು ಒಕ್ಕುವುದು. to work with soil. ವಾ: ನೆಲನ ಮಾಂದುದು.

ಮಾಂದೋಡಿ /*ma:ndho:ḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮಾಂದ್ /*ma:ndɨ*/ ಕ್ರಿ. 1. ಕೆರೆದುಕೊಳ್ಳು, 2.

ತುರಿಸಿಕೊಳ್ಳು, 1. to scratch, 2. to rub. ವಾ: ಅಂವಂಗೆತದೋ ಬೇಕ್ತ ಕಂಡದೆ. ತಲೆ ಮಾಂದಿಕಂಡ್ ನೋಡ್ದೆ. ಪ: ಮಾಂದಿದೆ – ಕೆರೆಯುವುದು

ಮಾಂದ್ರ /*ma:ndra*/ ನಾ. 1. ಮಾಂಬಳ, 2. ಹಲಸಿನ/ ಮಾವಿನ ಚಟ್ಟು. preserved pulp of a fruit. ವಾ: ಹಲ್‌ಸ್‌ನ ಮಾಂದ್ರ ತೆಗ್ದಿಸ್.

ಮಾಂಬಳ[1] /*ma:mbaḷa*/ ನಾ. ಕಾಡು ಮಾವಿನಹಣ್ಣಿನ ಸಿಪ್ಪೆ ತೆಗೆದು, ಅದರ ರಸವನ್ನು ಉಪ್ಪು ಮೆಣಸು ಸೇರಿಸಿ ಕಡೆದು ಚಾಪೆ ಮೇಲೆ ತಳ್ಳಗಿನ ಬಟ್ಟೆ ಹಾಕಿ ತಳ್ಳಗೆ ಹರಡಿ ಬಿಸಿಲಿನಲ್ಲಿ ಒಣಗಿಸಿದ ಆಹಾರ, ಇದನ್ನು ಮಳೆಗಾಳದಲ್ಲಿ ಚಟ್ನಿ ಮಾಡಲು ಬಳಸುತ್ತಾರೆ. dried mango pulp – juicy mangoes are grated using a strainer, and lumps are removed from the pulp. Salt and pepper is added to the juice and the mixture is dried under the sun on a white cloth. Usually it is used in rainy seasons to make chutney. ವಾ: ಮಾಂಬಳ ಪೊಜ್ಜಿಲಿ ಉಂಬಕೆ ಲಾಯ್ಕಾದೆ.

ಮಾಂಬಳ[2] /*ma:mbaḷa*/ ನಾ. ಹಲಸಿನ ಹಣ್ಣಿನ ರಸ. juice of jackfruit. ವಾ: ಮಾಂಬಳ ತೆಗ್ದ್ ಅದರ್‌ಲಿ ಇಡ್ಲಿ, ಕಜಯ, ದೋಸೆ, ಕೂಗಲೆಹಿಟ್ಟ್ ಎಲ್ಲ ಮಾಡಕ್.

ಮಾಂಬುಳಿ /*ma:mbuḷi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಆಲೆಟ್ಟಿ ಗ್ರಾಮದ ಜಾಗ. a locality in Aletti village in Sullia Taluk of Dakshina Kannada District.

ಮಾಕಟೆ /*ma:kaṭɛ*/ ನಾ. 1. ವೈಯ್ಯಾರ, 2. ಬೆಡಗು, 3. ಬಿನ್ನಾಣ. 1. charm, 2. flirtuous, 3. coquette. ವಾ: ಅದ್ ಮಾಕಟೆ ಗೂಡೆ.

ಮಾಕಲಿ/ಳಿ /*ma:kali/ḷi*/ ನಾ. ನೇಗಿಲಿನ ಮೊನೆಯ (ಕೋಲಿನ) ಮುಂತುದಿಯಲ್ಲಿ ನೊಗಕ್ಕೆ ಕಟ್ಟಲು ಅನುಕೂಲವಾಗುವಂತೆ ಮಾಡಿದ ಕಚ್ಚು. a rope used to fasten the beam of plough to yoke. ವಾ: ನೇಗ್‌ಲ್‌ದ್ ನೊಗಕ್ಕೆ ಮಾಕಲಿನ ಕಟ್ಟುದು.

ಮಾಕಳಿಬೊಳ್ಳಿ /*ma:kaḷiboḷḷi*/ ನಾ. ನೊಗ ನೇಗಿಲನ್ನು ಜೋಡಿಸುವ ಬಳ್ಳ, rope that connects a yoke with a plough. ವಾ: ಮಾಕಳಿ ಬೊಳ್ಳಿನ ಲಾಯಕ್ ಕಟ್ಟೊಕು.

ಮಾಗಣೆಗೌಡ /*ma:gaṇɛgowḍa*/ ನಾ. ಗೌಡ ಸಮುದಾಯದ ಸಾಂಸ್ಕೃತಿಕ ಮತ್ತು ಸಾಮಾಜಿಕ ನೇತೃತ್ವ ಹೊಂದಿದ ಆಡಳಿತ ವರ್ಗ. ಗೌಡ ಸಮುದಾಯದವರಿಗೆ ಮಾಗಣೆಗೌಡರು ಅಧಿಕಾರಸ್ಥರಾಗಿರುತ್ತಾರೆ. ಒಂದು ಕಟ್ಟೆಮನೆಯ ಆಡಳಿತಕ್ಕೆ ಒಂಭತ್ತು ಮಾಗಣೆಗಳಿವೆ. The administrative class of Gowda community which offers leadership in the cultural and social matters. Usually a Magane Gowda will be holding the positions of power. The administrative cluster will include 9 hobli's. ವಾ: ಮಾಗಣೆ ಗೌಡ್ರ ಊರ್‌ನ ನ್ಯಾಯತೀರ್ಮಾನ ಮಾಡ್‌ವೆ.

ಮಾಜಿ /*ma:jiu*/ ನಾ. 1. ಮಾಸು, 2. ಬಣ್ಣ ಹೋಗು. 1. to fade away, 2. to lose colour. ವಾ: ಅಂಗೈ ಗೆರೆ ಮಾಜಿಟು.

ಮಾಜಿಸ್ /*ma:jisɨ*/ ಕ್ರಿ. ಅಕ್ಕಿ ಹಿಟ್ಟನ್ನು ನೀರಲ್ಲಿ ಕಲಸಿ ಬಾಣಲೆಯಲ್ಲಿ ಹದ ಉರಿಯಲ್ಲಿ ಬೇಯಿಸಿ, ನೀರಾರಿಸುವುದು. frying the rice flour mixed in water in a tawa so that the water evaporates. ವಾ: ಪುಂಡಿಗೆ ಬಂದ ಮಾಜಿಸಿ ಆತ ಅಮ್ಮ?

ಮಾಟ /*ma:ṭa*/ ನಾ. 1. ಅಭಿಚಾರ, 2. ವಾಮಾಚಾರ. 1. witchcraft, 2. back magic. **ಮಾಟ ಮಾಡ್ದವ್ರ ಮನೆ ಹಾಳ್, ತೋಟ ಮಾಡದವ್ರ ಹೊಲ ಹಾಳ್(ಗಾ).** ವಾ: ಕೆಲು ಜೆನ ಬಾರಿ ಮಾಟ ಮಂತ್ರತ ನಂಬಿವೆ.

ಮಾಟಿ /*ma:ṭi*/ ನಾ. ಓಲೆಯಿಂದ ಕಿವಿ ಮೇಲೆಗೆ ಎಳೆಯ ಹಾಗೆ ಹಾಕಿಕೊಳ್ಳುವ ಆಭರಣ. an ornament worn on the ear. ವಾ: ಕೆಮಿಗೆ ಮಾಟಿ ಹಾಕೊಳ.

ಮಾಟೆ /*ma:ṭɛ*/ ನಾ. 1. ಬಿಲ, 2. ತೊರಲು, 3. ಹೋರು, 4. ಬೊಕ್ಕೆಗುದ್ದು, 5. ಪೋಟೆ, 6. ಪೊಟರೆ. a hole in the ground, a burrow. ವಾ: ಹೆಗ್ಗಣ ಮಾಟೆ ಬಾರಿ ದೊಡ್ಡದ್. ಪ: ಮೋಟೆ

ಮಾಡಂಗೊಲು /*ma:ḍaŋgolu*/ ನಾ. ಹೊಲದಲ್ಲಿ ನಿರ್ಮಿಸುವ ಕಾವಲು ಚಪ್ಪರ. a watch tower in the field. ವಾ: ಮಾಡಂಗೊಲು ಮಾಡಿ ರಾತ್ರೆ ಅಲ್ಲಿ ಕುದ್ರುದು.

ಮಾಡಬಾಕಿಲು /*ma:ḍaba:kilu*/ ನಾ. ದಕ್ಷಿಣ ಕನ್ನಡ

ಜಿಲ್ಲೆಯ ಸುಳ್ಯ ತಾಲೂಕಿನ ಅಮರಪಡ್ನೂರು ಗ್ರಾಮದ ಜಾಗ. a locality in Amarapadnuru village in Sullia Taluk of Dakshina Kannada District.

ಮಾಡಾವು /*ma:ḍa:vu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮಾಡಿ /*ma:ḍi*/ ನಾ. 1. ಮಹಡಿ, 2. ಉಪ್ಪರಿಗೆ, 3. ಅಂತಸ್ತು. 1. upstairs, 2. upper floor, 3. floor. ವಾ: ಹತ್ತಿಪ್ಪತ್ ಸರಿ ಮಾಡಿ ಹತ್ತಿಳ್ದ್ ಕಾಲ್ ಬಿದ್ದೊತ್.

ಮಾಡ್[1] /*ma:ḍɨ*/ ನಾ. 1. ಮನೆಯಮಾಡು, 2. ಸೂರು, 3. ಮನೆಯ ಮೇಲ್ಛಾವಣಿ. 1. roof of a house, 2. ceiling, 3. roof. **ಎಲಿನ ಮೇಲೆ ಸಿಟ್ಟ್‌ಲಿ ಮಾಡ್‌ಗೆ ಕಿಚ್ಚಿ ಕೊಟ್ಟತ್‌ಗಡ(ಗಾ).** ವಾ: ಮನೆದ್ ಮಾಡ್‌ಲಿ ಕೊತ್ತಿಗ ಜೆಗಳ ಮಾಡಿವೆ.

ಮಾಡ್[2] /*ma:ḍɨ*/ ಕ್ರಿ. ಕೆಲಸ ಮಾಡು. to do some work. ವಾ: ಬೇಗ ಅಡ್ಗೆ ಮಾಡ್. ಪ: ಮಾಡಿಕಿಲ್ಲೆ – ಮಾಡಲಿಕ್ಕಿಲ್ಲ; ಮಾಡುದ್ಲೆ – ಮಾಡುವುದಿಲ್ಲ; ಮಾಡಿ(ಬವ); ಮಾಡ್‌ತ್ಲೆ – ಮಾಡಲಿಲ್ಲ; ಮಾಡ್ಕಂಡ್ – ಮಾಡಿಕೊಂಡು; ಮಾಡ್ಕನ – ಮಾಡುವಾಗ; ಮಾಡ್ತಿತ್ಲೆ – ಮಾಡುತ್ತಿರಲಿಲ್ಲ. **ಮಾಡಕರ್** /*ma:ḍakarɨ*/ ಮಾಡಬೇಕಾದರೆ. if you want to do. ವಾ: ಮಡಿಕೆಲಿ ಗಂಜಿ ಬೆಂದ ಮೇಲೆ ಹುಗ್ಗೆ ಮಾಡಕರ್ ಗಂಜಿ ತೆಳಿನ ಬಾಗ್ಸಿಕೆ ಮರ್ಚಟೆ ಬೇಕ್. **ಮಾಡಕ್** /*ma:ḍakɨ*/ ಮಾಡಬಹುದು. can do. **ಒಗ್ಗಿರೆ ಕಾಡ್‌ಲೆ ವಾಸ ಮಾಡಕ್(ಗಾ).** ವಾ: ಒಂದ್ ಕೆಲ್ಸ ಮಾಡಕ್, ಇಲ್ಲರೆ ಬುಡಕ್. **ಮಾಡದಕಾನ** /*ma:ḍadaka:na*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅರಂತೋಡು ಗ್ರಾಮದ ಜಾಗ. a locality in Arantodu village in Sullia Taluk of Dakshina Kannada District. **ಮಾಡದಿರಿಕಿಲೆ** /*ma:ḍadirikilɛ*/ ಮಾಡದೆ ಇರುವುದಿಲ್ಲ. will do. ವಾ: ಅವು ಕಿರಿಕಿರಿ ಮಾಡದಿರಿಕಿಲೆ ಜಾಗ್ರತೆ ಮಾಡಿಕನಿ. ಪ: ಮಾಡದಿರಿಕಿಲೆಲ – ಮಾಡದಿರನಲ್ಲ. **ಮಾಡಿಕಂಡ್** /*ma:ḍikanḍɨ*/ ಮಾಡಿಕೊಂಡು. working/doing something. ವಾ: ಇಸ್ಟ್ ವರ್‌ಸ ಗದ್ದೆ ಮಾಡಿಕಂಡ್ ಬಂದೊಳೊ. ಪ: ಮಾಡಿಕಾದೆ – ಮಾಡಲು ಸಾಧ್ಯ; ಮಾಡಿಕಾಗದ್ – ಮಾಡಬಾರದು; ಮಾಡಿಕಾದ್ – ಮಾಡಬಾರದು; ಮಾಡಿಕಿಲೆ – ಮಾಡುವುದಿಲ್ಲ; ಮಾಡಿಯ್ಯೊಳೊ – ಮಾಡಿದ್ದಾರೆ; ಮಾಡಿರೂ – ಮಾಡಿದರೂ; ಮಾಡಿರೆ – ಮಾಡಿದರೆ; ಮಾಡಿರೊಕು – ಮಾಡಿರಬೇಕು; ಮಾಡಿಕೆ – ಮಾಡಲಿಕ್ಕೆ; ಮಾಡಿರ್ದು – ಮಾಡಿರಬಹುದು; ಮಾಡಿವೆ – ಮಾಡುತ್ತೇವೆ. **ಮಾಡಿಕಣಿ** /*ma:ḍikaṇi*/ ಮಾಡಿಕೊಳ್ಳಿ. finish/complete. ವಾ: ಬೇಗ ಊಟ ಮಾಡಿಕಣಿ. **ಮಾಡಿಕಾಂಕು** /*ma:ḍika:ŋku*/ 1. ಮಾಡಬೇಕು, 2. ಮಾಡಿಕೊಳ್ಳಬೇಕು. 1. should make, 2. should prepare. ವಾ: ಯಾಗೊಳು ನಂಗೆ ಅಡಿಗೆ ನಾನೆ ಮಾಡಿಕಾಂಕು. **ಮಾಡಿಕೆ ಬೊತ್ತು** /*ma:ḍikɛ bɔttu*/ ಮಾಡಬಾರದು. shouldn't do. ವಾ: ತೊಪ್ಪ್ ಕೆಲ್‌ಸ ಮಾಡಿಕೆ ಬೊತ್ತ್. **ಮಾಡಿಕೆತ** /*ma:ḍiketa*/ ಮಾಡಲೆಂದು. to do something. ವಾ: ನಾ ಒಳ್ಳದ್ ಮಾಡಿಕೆತ ಹೋಗಿ ನಿಸ್ಟುರ ಆದೆ. ಪ: ಮಾಡಿಕೆತೇಳಿ – ಮಾಡಬೇಕೆಂದು. **ಮಾಡುಲೆ** /*ma:ḍulɛ*/ ಮಾಡುವುದಿಲ್ಲ. won't do. ವಾ: ನಾ ಹಗ್‌ಲ್ ನಿದ್ದೆ ಮಾಡುಲೆ. **ಮಾಡುವೆ** /*ma:ḍuvɛ*/ 1. ಮಾಡುತ್ತೇವೆ, 2. ಮಾಡುತ್ತಾರೆ. will do. ವಾ: ಒಪ್ಪಿಕಂಡ ಮೆಲೆ ನಾವು ಮಾಡುವೆ. ಪ: ಮಾಡೊಕು – ಮಾಡಬೇಕು; ಮಾಡೊಮೋಂತ – ಮಾಡೋಣವೆಂದು; ಮಾಡೋಕ – ಮಾಡಬೇಕ; ಮಾಡೋಕ್‌ಂತ – ಮಾಡಬೇಕೆಂದು; ಮಾಡೋಕಲ್ಲ – ಮಾಡಬೇಕಲ್ಲ

ಮಾಡಿಯಾರು /*ma:ḍiya:ru*/ ನಾ. 1. ಕುಟುಂಬ, 2. ಮನೆತನ. 1. family, 2. lineage. ಪ: ಮಡಿಯಾರು

ಮಾಡುಕೋಲು /*ma:ḍuko:lu*/ ಕ್ರಿ. 1. ಬಿದಿರಿನ ಕಡ್ಡಿಗಳಿಂದ ಸಣ್ಣ ಮನೆ ರೀತಿ ಮಾಡುವುದು, 2. ಗದ್ದೆ ತೋಟ ಕಾಯಲು ಹಾಕುವ ಉಗ್ಗಪ್ಪಾ್ಕಲಿಕ ಗೂಡು, 3. ಮಾಡಂಗೋಲು. building a hut using bamboo sticks, a watch tower in the field. ವಾ: ರಾತ್ರೆಯೆಲ್ಲ ಬೆಳೆ ತಿಂಬಕೆ ಕಾಡ್ ಪ್ರಾಣಿಗ ಬಂದವೆತ ಮಾಡುಕೋಲುಲಿ ಪಾರಕಾಯೊದ್. ಪ: ಮಾಡ್‌ಕೋಲು, ಮಾಡಕೋಲ್ ಮಾಡಂಗೋಲು, ಮಾಳ(ತು)

ಮಾಡೆನ /*ma:ḍɛna*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮಾಡ್ /*ma:ḍɨ*/ ನಾ. ಮನೆಯ ಛಾವಣಿ. roof of a house. ವಾ: ಮಾಡ್‌ಂದ ನೀರ್ ಸೋರ್ದೆ. ಪ: ಮಾಡ್‌ಲಿ – ಛಾವಣಿಯಲ್ಲಿ; ಮಾಡ್‌ಗೆ – ಛಾವಣಿಗೆ

ಮಾಡ್ಕೂರು /*ma:ḍku:ru*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮಾಡ್ಕೋಳ್ /*ma:ḍko:ḷɨ*/ ನಾ. 1. ಹೊಲದಲ್ಲಿ ನಿರ್ಮಿಸುವ ಕಾವಲು ಚಪ್ಪರ, 2. ಮಾಡುಕೋಲು, 3. ಮಾಡಂಗೋಲು(ತು). a watch tower in the field. ವಾ: ಗದ್ದೆಗೆ ಕಾಡ್ ಪ್ರಾಣಿಗ ಬಂದವೆತ ಮಾಡ್ಕೋಳ್‌ಲಿ ಕುದ್ದ್ ಪಾರಕಾಯದು. ಪ: ಮಾಡ್ಕೊಲು

ಮಾಡ್ಡ /*ma:ḍda*/ ಕ್ರಿ. ಮಾಡಿದ(ಏವ). has/have done. **ಅಪ್ಪ ಮಾಡ್ಡ ಪುಣ್ಯ ಮಕ್ಕಳ ಕಾಲಕ್ಕೆ(ಗಾ). ಮಾಡಿದ್ದುಣ್ಣೋ ಮಾರಾಯ(ನು).** ವಾ: ನಿನ್ನೆ ಮಾಡ್ಡ ಕೋಳಿ ಗೈಪು ಉಟ್ಟಾ? ಪ: ಮಾಡ್ದು – ಮಾಡುವುದು; ಮಾಡ್ದುಲೆ – ಮಾಡುವುದಿಲ್ಲ; ಮಾಡ್ದಾಂಗಲ್ಲ – ಮಾಡಿದಾಗಲ್ಲ. **ಮಾಡ್ತಿದ್ದೊ** /*ma:ḍtiddɔ*/ 1. ಮಾಡುತ್ತಿದ್ದರು, 2. ಮಾಡುತ್ತಿದ್ದೆವು. were doing/ making. ವಾ: ಉಗ್ಗಪ್ಪ ಇರಕನ ನಾವು ದಿನಾ ಮೀನ್ ಗೈಪು ಮಾಡ್ತಿದ್ದೊ. ಪ: ಮಾಡ್ತಿದ್ದೊಗಡ – ಮಾಡುತ್ತಿದ್ದರಂತೆ. **ಮಾಡ್ತೊಳದ್** /*ma:ḍtoḷadɨ*/ ಮಾಡುತ್ತಿರುವುದು. doing some work/making something. ವಾ: ಎಂತ ಮಾಡ್ತೊಳದ್ ಮರೆಲಿ ನಿತ್ಕಂಡ್. ಪ: ಮಾಡ್ತ್ – ಮಾಡಿತು/ ಮಾಡಿದನು/ಳು; ಮಾಡ್ತೊಳೆ – ಮಾಡುತ್ತಿದ್ದೇನೆ; ಮಾಡ್ತೊಳೊ – ಮಾಡುತ್ತಿದ್ದಾರೆ; ಮಾಡ್ತ್‌ಲೆ – ಮಾಡಿಲ್ಲ. **ಮಾಡ್ತ್‌ಲೆತ್ತಾರ್** /*ma:ḍitletta:rɨ*/ ಮಾಡಲಿಲ್ಲವಾದರೆ. if one doesn't do something. ವಾ: ಆ ಕೆಲ್‌ಸ ಮಾಡ್ತ್‌ಲೆತ್ತಾರ್ ಬುಡು, ಮತ್ತೆ ಮಾಡಕ್. **ಮಾಡ್ದೆ** /*ma:ḍdɛ*/ 1. ಮಾಡಿದೆ, 2. ಮಾಡಿದ್ದೇನೆ. has/have done. ವಾ: ನಾ ತೋಟ ಮಾಡ್ದೆ. ಪ: ಮಾಡ್ದೊ – ಮಾಡಿದರು; ಮಾಡ್ದೊವು – ಮಾಡಿದವರು; ಮಾಡ್ಯುಟೊ – ಮಾಡಿದ್ದಾನೊ; ಮಾಡ್ವ – ಮಾಡುವ; ಮಾಡ್ವೆ – ಮಾಡುತ್ತೇವೆ; ಮಾಡ್ಸಿಕಾದು – ಮಾಡಿಸಬೇಕಾಗಬಹುದು. **ಮಾಡ್ಯಾತಲ್ಲೆ** /*ma:ḍyata:llɛ*/ ನಾ. ಮಾಡಿ ಆಯಿತಲ್ಲಾ. have to completed. ವಾ: ಮೊನ್ನೆನೆ ಗದ್ದೆ ಕೆಲ್‌ಸ ಮಾಡ್ಯಾತಲ್ಲೆ. **ಮಾಡ್ಸಿ** /*ma:ḍsi*/ ಮಾಡಿಸಿರಿ(ಬವ). to get some work done. ವಾ: ನನ್ನ ಕೆಲ್‌ಸ ಮಾಡ್‌ಸಿ ಕೊಡಿ. ಪ: ಮಾಡ್ಸಿಕೆ – ಮಾಡಿಸಲು; ಮಾಡ್ಸಿತ್ – ಮಾಡಿಸಿದನು/ ಳು. **ಮಾಡ್ಸ್‌ನೆ** /*ma:ḍsne*/ ಮಾಡಿಸು(ಏವ). to get some work done. ವಾ: ಆದಾರ್ ಕಾರ್‌ಡ್ ಮಾಡ್ಸ್‌ನೆ, ಎಲ್ಲದಕ್ಕು ಬೇಕಾದೆ.

ಮಾಡ್ಮಾಡು ಹೊದಿಕೆ /*ma:ḍma:ḍu hodikɛ*/ ನಾವಿ. ಮನೆಯಮಾಡು. roof of a house. ವಾ: ಮಾಡ್ಮಾಡು ಹೊದಿಕೆಲಿ ಎಲಿ ಹೊಕ್ಕಿಟು ಕಂಡದೆ, ಸದ್ದ್ ಮಾಡ್ದೆ.

ಮಾಣಿಕ /*ma:ṇika*/ ನಾ. 1. ಮಾಣಿಕ್ಯ, 2. ರತ್ನ ಖನಿಜ, 3. ಕೆಂಪು ಹರಳು, 4. ನವರತ್ನಗಳಲ್ಲಿ ಒಂದು, 5. ಪದ್ಮರಾಗ, 6. ಕೆಂಪು ರತ್ನ. 1. ruby, 2. precious stone, 3. red stone, 4. one of the nine gems, 5. a pink gemstone, 5. a red gem. ವಾ: ಅಂವನ ಕೈಲಿ ನೋಡ್ ಮಾಣಿಕದ ಉಂಗುರ ಎಸ್ಟ್ ಲಾಯ್ಕ ಹೊಳ್ದದೆ.

ಮಾಣಿಕ್ಯ ಹಕ್ಕಿ /*ma:ṇikya hakki*/ ನಾ. 1. ಕಪ್ಪು ಬಿಳಿ ಬಣ್ಣದ ಪುಟ್ಟ ಹಕ್ಕಿ, 2. ಮಾಣಿಕ ಹಕ್ಕಿ. Manikya bird, a small bird having black and white feathers. ವಾ: ಮಾಣಿಕ್ಯ ಹಕ್ಕಿ ಸಣ್ಣ ಹಕ್ಕಿ.

ಮಾಣಿಬೆಟ್ಟು /*ma:ṇibeṭṭu*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಉಬರಡ್ಕ ಮಿತ್ತೂರು ಗ್ರಾಮದ ಜಾಗ. 1. family, 2. lineage, 3. a locality in Ubaradka Mitturu village in Sullia Taluk of Dakshina Kannada District.

ಮಾಣಿಮರ್ದು /*ma:ṇimardu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಆಲೆಟ್ಟಿ ಗ್ರಾಮದ ಜಾಗ. a locality in Aletti village in Sullia Taluk of Dakshina Kannada District.

ಮಾತಾ /*ma:ta:*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮಾತು ಕರಾರು ವೀಳ್ಯ /*ma:tu kara:ru vi:ḷya*/ ನಾ. 5 ಕವಳಿಗೆ ವೀಳ್ಯದೆಲೆ, 5 ಅಡಿಕೆ, ಸ್ವಲ್ಪ ಚೂರಡಿಕೆ ಇಟ್ಟು ನೀಡುವ ವೀಳ್ಯ. a custom of offering five bunches of betel leaf and 5 pieces of areca nut while promising something to someone. ವಾ: ಮೊದ್ವೆಲಿ ಮಧ್ಯಸ್ತಿಕೆ ವಹಿಸಿದವ್‌ಕೆ, ತಂದ್ ಮಾಡ್‌ದವ್‌ಕೆ ಗೌರವ ರೂಪಲಿ ಮಾತ್ ಕರಾರು ವೀಳ್ಯ ಕೊಡ್ದು.

ಮಾತ್ /*ma:tɨ*/ ಕ್ರಿ. 1. ಮಾತು, 2. ಮಾತಾಡ್. 1. speech, 2. conversation. **ಮಾತಾಡದಂವ ಮನೆ ನುಂಗಿತ್ ಗಡ(ಗಾ).** ವಾ: ಮಾತ್ ಮನೆ ಹಾಳ್

ಮಾಡ್ತ್. ತೂತ ಒಲೆ ಹಾಳ್ ಮಾಡ್ತ್ ತ ಗಾದೆನೆ ಉಟ್ಟು. **ಮಾತಾಡಿಕೆ** /*ma:ta:ḍikɛ*/ ಮಾತನಾಡಲು. to talk. ವಾ: ಅಂವಂಗೆ ದೊಡ್ಡವರೊಟ್ಟಿಗೆ ಮಾತಾಡಿಕೆ ಗೊತ್ಲೆ. ಪ: ಮಾತಾಡ್ರೆ – ಮಾತನಾಡಿದರೆ; ಮಾತಾಡ್ಲೆ – ಮಾತಾಡುವುದಿಲ್ಲ. **ಮಾತಾಡ್ವವು** /*ma:ta:ḍvavu*/ ಮಾತಾಡುವವರು. those who speak. ವಾ: ಬೆನ್ನ್ ಹಿಂದೆ ಮಾತಾಡ್ವವು ಸಾವ್ರ ಜೆನ ಇದ್ದವೆ. ಅದರೆಲ್ಲ ತಲೆಗೆ ಹಾಕಿಕಣಿಕಾಗದ್. ನಾವ್ ನಿಯತ್ತ್‌ಲಿ ಇರೊಕು ಅಸ್ಟೆ. **ಮಾತಾಡ್ಸ್** /*ma:ta:ḍsɨ*/ ಮಾತನಾಡಿಸು. to speak to. ವಾ: ಹೋಗಿ ಅವರ್‌ನ ಮಾತಾಡ್ಸ್. ಪ: ಮಾತಾಡ್ಸೋಕು – ಮಾತನಾಡಿಸಬೇಕು; ಮಾತಾಡ್ಸಿತ್ – ಮಾತನಾಡಿಸಿದನು/ಳು; ಮಾತಾಡ್ಸಿಕೆ – ಮಾತನಾಡಿಸಲು; ಮಾತಾಡ್ಸಕ್ – ಮಾತನಾಡಿಸಬಹುದು; ಮಾತಾಡದೆ – ಮಾತನಾಡದೆ; ಮಾತಾಡ್‌ಕನ – ಮಾತನಾಡುವಾಗ; ಮಾತಡ್ಕನ್‌ತಿದ್ರೊ – ಮಾತನಾಡಿಕೊಳ್ಳುತ್ತಿದ್ದರು. **ಮಾತಾಡ್ಸ್‌ನೆ** /*ma:ta:ḍsɨnɛ*/ 1. ಮಾತನಾಡು(ಏವ), 2. ಮಾತನಾಡಿಸುತ್ತೇನೆ. 1. to talk, 2. I will speak to. ವಾ: ಬಾ ನಿನ್ನ ದೋಸ್ತಿನ ಮಾತಾಡ್ಸ್‌ನೆ. **ಮಾತುಟ್ಟು** /*ma:tuṭṭu*/ ಮಾತಿದೆ. as in, 'I need a favour'/ I need to say something. ವಾ: ನಂದೊಂದ್ ಮಾತುಟ್ಟು ನಡ್‌ಸಿಕೊಟ್ಟಿಯ? **ಮಾತೆಲ್ಲ** /*ma:tɛlla*/ ಮಾತು ಎಲ್ಲ. converstaion. ವಾ: ನಿಮ್ಮ ಮಾತೆಲ್ಲ ಮುಗ್ದಿದ್ದರೆ ಈಗ ಪೋಯ.

ಮಾತ್ ಮರ್ಸುದು /*ma:tɨ marsudu*/ ನಾ. ಮಾತು ಮರೆಸು. to make someone forget his/her words/to deviate. ವಾ: ಅವುಳಿಗೆ ಮಾತ್ಮರ್ಸುದು ಬೇಡತ ಹೇಳ್.

ಮಾತ್‌ಕೊಡ್ /*ma:tikoḍi*/ ಕ್ರಿ. 1. ವಚನ ಕೊಡು, 2. ಭರವಸೆ. 1. to promise, 2. assurance. ವಾ: ಹೇಳಿದಂಗೆ ಕೇಳಿನೆತ ಮಾತ್‌ಕೊಡು.

ಮಾತ್‌ನ ಮೊಲ್ಲಿ /*ma:tina mɔlli*/ ನಾ. ಸದಾ ಮಾತನಾಡಿಕೊಂಡು ಇರುವವಳು. a talkative woman. ವಾ: ಅದ್ ಬರೀ ಮಾತ್‌ನ ಮೊಲ್ಲಿ.

ಮಾತ್ರ /*ma:tra*/ ಅ. 1. ಮಾತ್ರ, 2. ಕೇವಲ, 3. ಬರಿಯ. 1. only, 2. sole, 3. hardly. ವಾ: ಇದೊಂದ್ ಮನೆ ಮಾತ್ರ ಅಂವಂಗೆ ಇದ್ದದ್.

ಮಾತ್ರೆ[1] /*ma:trɛ*/ ನಾ. 1. ಮಾತ್ರೆ, 2. ಗುಳಿಗೆ. 1. tablet, 2. a pill. ma:trɛ

ಮಾತ್ರೆ[2] /*ma:tre*/ ನಾ. ಛಂದಸ್ಸಿನಲ್ಲಿ ಅಕ್ಷರಗಳ ಬೆಲೆ(ಒಂದು ಮಾತ್ರೆ ಕಾಲ, ಎರಡು ಮಾತ್ರೆ ಕಾಲ) (ಲಘು, ಗುರು). meter in poetry – stressed and unstressed syllable.

ಮಾದ /*ma:da*/ ನಾ. 1. ತಿಥಿ, 2. ಅಹಂಕಾರ. 1. a lunar day 2. ego. ವಾ: ಮಾದ ಕಳ್ತ?

ಮಾದನಮನೆ /*ma:danamane*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಏನೆಕಲ್ಲು ಗ್ರಾಮದ ಜಾಗ. a locality in Enekallu village in Sullia Taluk of Dakshina Kannada District.

ಮಾದರ್ಚತ್ /*ma:darcatɨ*/ ಎಪ. ಬೈಗುಳ ಪದ. an expletive term. ವಾ: ಚೇ! ಎಂತ ಮಾದರ್ಚತ್ ಕೆಲ್‌ಸ ಆತ್.

ಮಾದುಳಿ /*ma:duḷi*/ ನಾ. ಚಕ್ಕೋತ ಬಣ್ಣದ ನೋಡಲು ಉದ್ದನೆಯ ಆಕಾರ ಹೊಂದಿದ ಇದರ ಸಿಪ್ಪೆಯನ್ನು ತಿನ್ನುತ್ತಾರೆ. a fruit that resembles Pomelo fruit, skin of the fruit is eaten. ವಾ: ಮಾದುಳಿದ್ ತೊಪ್ಪೆನ ದಪ್ಪಲಿ ಇದ್ದದೆ, ಅದರ ತಿನ್ನಕ್.

ಮಾದುಳಿ ಮರ /*ma:duḷi mara*/ ನಾ. ಚಕ್ಕೋತ ಬಣ್ಣದ ಉದ್ದನೆಯ ಕಾಯಿ ಬಿಡುವ ಮರ. a tree that resembles Pomelo tree. ವಾ: ಮಾದುಳಿ ಮರ ಅಲ್ಲೊಂದಿತ್ತ್, ಈಗ ಉಟ್ಟಾತ ಗೊತ್ತ್ ಲೆ.

ಮಾದೇಪಾಲು /*ma:de:pa:lu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಸಂಪಾಜೆ ಗ್ರಾಮದ ಜಾಗ. a locality in Sampaje village in Sullia Taluk of Dakshina Kannada District.

ಮಾದ್ರಿ /*ma:dri*/ ನಾ. 1. ಮಾದರಿ, 2. ವಿಧ, 2. ನಮೂನೆ, 4. ರೀತಿ, 5. ಬಗೆ. 1. model, 2. type, 3. a form, 4. kind, 5. a category. ವಾ: ಅಲ್ಲಿ ಯಾವ ಮಾದ್ರಿ ಅಡ್ಕೆ ದೈ ನೆಟ್ಟದ್.

ಮಾದ್ರಿಬೊಳ್ಳಿ[1] /*ma:dri bɔḷḷi*/ ನಾ. ಇದು ಒಂದು ಜಾತಿಯ ಬಳ್ಳಿ, ಇದನ್ನು ಕಡಿದಾಗ ಒಳಗೆ ಶುದ್ಧ ನೀರು ಇರುತ್ತದೆ, ಕಾಡಿಗೆ ಹೋದಾಗ ಬಾಯಾರಿಕೆ ತೀರಿಸಲು ಇದನ್ನು ಬಳಸುತ್ತಿದ್ದರು, ಕಣ್ಣಿಗೆ ಕಸ ಬಿದ್ದರೆ ಈ ಬಳ್ಳಿಯ ನೀರು ಬಿಟ್ಟರೆ ಕಸ ಹೋಗಿ ಕಣ್ಣು ತಿಳಿಯಾಗುತ್ತದೆ. a

Mopane Paddle-Pod, Pristimera indica, a climber, liquid from this plant is consumed, and also used to clean the eye. ವಾ: ಮಾದ್ರಿ ಬೊಳ್ಳಿ ಮೊದ್ದ್‌ನ ಬೊಳ್ಳಿ, ಇದರ ರಸನ ಕಣ್ಣ್‌ಗೆ ಬುಟ್ಟವೆ. ಪ: ಮಾದ್ರ್ ಬೊಳ್ಳಿ, ಮಾದೆರ್(ತು)

ಮಾದ್ರಿಬೊಳ್ಳಿ^{2} /*ma:dribɔḷḷi*/ ನಾ. ಒಂದು ವಿಧದ ಕಾಡುಬಳ್ಳಿ, ಬುಟ್ಟಿ, ಪಡಿ ಇತ್ಯಾದಿಗಳನ್ನು ಈ ಬಳ್ಳಿಯಿಂದ ಹೆಣೆಯುತ್ತಾರೆ, ಈ ಬಳ್ಳಿಯಲ್ಲಿ ಹಳದಿ ಬಣ್ಣದ ಹಣ್ಣಾಗುತ್ತದೆ, ಇದನ್ನು ತಿನ್ನುವರು. a forest climber, Basket is woven using the stem of the plant, and the plant has edible yellow fruits. ವಾ: ಮಾದ್ರಿಬೊಳ್ಳಿನ ಬುಟ್ಟಿ ಹೆಣೆಕೆ ಬಳ್‌ಸುವೆ.

ಮಾದ್ರುಳಿ /*ma:druḷi*/ ನಾ. ಚಕ್ಕೋತ ಬಣ್ಣದ ನೋಡಲು ಉದ್ದನೆಯ ಆಕಾರ ಹೊಂದಿದ ಹಣ್ಣು. ಇದರ ಸಿಪ್ಪೆಯನ್ನು ತಿನ್ನುತ್ತಾರೆ. a fruit that resembles Pomelo fruit, skin of the fruit is eaten. ವಾ: ಮಾದ್ರುಳಿನ ತೊಪ್ಪೆನ ತಿಂದವೆ.

ಮಾನ^1 /*ma:na*/ ನಾವಿ. 1. ಮರ್ಯಾದಿ, 2. ಘನತೆ. 1. honour, 2. prestige. **ಅಡ್ಕೆಗೆ ಹೋದ ಮಾನ ಆನೆ ಕೊಟ್ಟರೂ ಬಾದುಲೆ(ಗಾ).** ವಾ: ಮಾನ ಮರ್ಯಾದೆಗೆ ಅಂಜಿವೆ ಜೆನ.

ಮಾನ^2 /*ma:na*/ ಪವಾ. ಅಳತೆಯ ಸಾಧನ, ಎರಡು ಪಾವು = ಒಂದು ಮಾನ. two quarters. ವಾ: ಮಾನಲಿ ಅಳ್‌ತೆ ಮಾಡ್ಡು.

ಮಾನಕ್ಕ /*ma:nakka*/ ನಾ. ವ್ಯಕ್ತಿ ಹೆಸರು, ಸ್ತ್ರೀ ವಾಚಕ. feminine given name. ಪ: ಮಾನು

ಮಾನಡ್ಕ /*ma:naḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಬಾಳುಗೋಡು ಗ್ರಾಮದ ಜಾಗ. a locality in Balagodu village in Sullia Taluk of Dakshina Kannada District.

ಮಾನಾಡು /*ma:na:ḍu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಸುಬ್ರಹ್ಮಣ್ಯ ಗ್ರಾಮದ ಜಾಗ. a locality in Subramanya village in Sullia Taluk of Dakshina Kannada District.

ಮಾನಾಡ್‌ವೀಳ್ಯ /*ma:na:ḍivi:ḷya*/ ನಾ. ವಿವಾಹದ ಸಂದರ್ಭದಲ್ಲಿ ವೀಳ್ಯಶಾಸ್ತ್ರದಲ್ಲಿ ಬಳಸುವ ವೀಳ್ಯ Veelya – betel leaf and betel nut used in rituals of marriage. ವಾ: ಮಾನಾಡ್ ವೀಳ್ಯ ಕೊಟ್ಟಾತ್.

ಮಾನಿ /*ma:ni*/ ನಾ. ಎತ್ತರದ ಗದ್ದೆಗಳ ಸಾಲು. rows of paddy fields on a higher ground. ವಾ: ಮಾನಿ ಕಡೆಂದ ಬಂದೆ.

ಮಾನಿಗದ್ದೆ /*ma:nigaddɛ*/ ನಾ. 1. ಮಳೆಯಾಶ್ರಿತ ಗದ್ದೆ, 2. ಬೆಟ್ಟು ಗದ್ದೆ. a rain fed field. ವಾ: ಮಾನಿ ಗದ್ದೆ ವಣ್‌ಗಿ ಹೋತ್.

ಮಾನ್‌ಬಾವ /*ma:niba:va*/ ನಾ. 1. ಮಹಾನುಭಾವ, 2. ಶ್ರೇಷ್ಠನಾದವನು, 3. ಮಹಾವ್ಯಕ್ತಿ. 1. an excellent man 2. a great man, 3. an important person. ವಾ: ವಿವೇಕಾನಂದ ನಮ್ಮ ದೇಸದ ಮಾನ್‌ಬಾವ ವ್ಯಕ್ತಿ.

ಮಾನ್ಮನೆ /*ma:nmanɛ*/ ನಾ. 1. ತಾಯಿಯ ತವರು ಮನೆ, 2. ಮಕ್ಕಳಿಗೆ ಮಾವನ ಮನೆ. 1. mother's home, 2. uncle's house – for children. ವಾ: ಮಾನ್ಮನೆಗೆ ಹೋಗಿದ್ದ?

ಮಾನ್ಯಡ್ಕ /*ma:nyaḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮುರುಳ್ಯ ಗ್ರಾಮದ ಜಾಗ. a locality in Murulya village in Sullia Taluk of Dakshina Kannada District.

ಮಾಪಲಕಜೆ /*ma:palakajɛ*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ನೆಲ್ಲೂರು ಕೆಮ್ರಾಜೆ ಗ್ರಾಮದ ಜಾಗ. a locality in Nelluru Kemraje village in Sullia Taluk of Dakshina Kannada District.

ಮಾಪಲಡ್ಕ /*mapalaḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಜಾಲ್ಸೂರು ಗ್ರಾಮದ ಜಾಗ. a locality in Jalsuru village in Sullia Taluk of Dakshina Kannada District.

ಮಾಪಲತೋಟ /*ma:palato:ṭa*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮರ್ಕಂಜ ಗ್ರಾಮದ ಜಾಗ. a locality in Markanja village in Sullia Taluk of Dakshina Kannada District.

ಮಾಪಸೀರೆ /*ma:pasi:rɛ*/ ನಾ. 1. ಕಪ್ಪುಬಣ್ಣ ಇಲ್ಲದ ಸೀರೆ, 2. ಮದುವೆ ಕಳೆದು ಮದುಮಗಳಿಗೆ ಗಂಡಿನ

ಮನೆಯವರು ಕೊಡುವ ಸೀರೆ, 3. ಬದಲಿ ಸೀರೆ. 1. a saree, sans black colour, 2. a saree given by the groom's family after marriage, 3. an altenative saree. ವಾ: ಮನೆಗೆ ನೆಂಟ್ರ್‌ಗೆ ಮಾಪಸೀರೆ ಕೊಡ್ದು ಒಂದ್ ಕ್ರಮ.

ಮಾಪಳ /*ma:paḷa*/ ನಾ. 1. ಮಹಾಫಲ, 2. ಮಾದಳ ಹಣ್ಣು. citrus Limonum fruit. ವಾ: ಮಾಪಳ ಹಣ್ಣ್ ತಿಂದವೆ, ಸತ್ಯನಾರಾಯಣ ಪೂಜೆ ಅಗತ್ಯ ಬೇಕಾವ ಹಣ್ಣ್.

ಮಾಪಳೆ /*ma:paḷɛ*/ ನಾ. 1. ಜಾತಿವಾಚಕ ಪುರುಷ, 2. ಮಾಪಿಳ್ಳೈ. Mapilla, a muslim community from Kerala, a trading community. ವಾ: ಮಾಪಳೆಗ ಮೀನ್ ಮಾರಿಕಂಡ್ ಬಂದವೆ.

ಮಾಪಿ /*ma:pi*/ ನಾ. 1. ಕ್ಷಮಿಸು, 2. ರಿಯಾಯಿತಿ ನೀಡು. 1. to forgive, 2. to offer discount. ವಾ: ಇನ್ನೊಮ್ಮೆ ತೊಪ್ಪು ಮಾಡಿಕಿಲೆ ಮಾಪಿ ಮಾಡ್.

ಮಾಪುಳ್ಚಿ /*ma:puḷci*/ ನಾ. 1. ಜಾತಿವಾಚಕ ಸ್ತ್ರೀ, 2. ಮುಸ್ಲಿಂ ಮಹಿಳೆ. a muslim woman. ವಾ: ಮಾಪುಳ್ಚಿ ಮನೆಗೆ ಬಂದಿತ್ತ್.

ಮಾಪೈ /*ma:pai*/ ನಾ. ಮುಸ್ಲಿಂ ಗಂಡಸು. a muslim man. ವಾ: ಮಾಪೈ ಕರೆತಿದ್ದೊ.

ಮಾಪ್ಳೆ /*ma:pḷɛ*/ ನಾ. ಮುಸ್ಲಿಂ ಗಂಡಸು. a muslim man. ವಾ: ಮಾಪ್ಳೆಗ ಮೀನ್ ಮಾರಿಕಂಡ್ ಬಂದವೆ. ಪ: ಮಾಪಳೆ

ಮಾಮು[1] /*ma:mu*/ ಕ್ರಿ. 1. ರಿಯಾಯಿತಿ, 2. ಕ್ಷಮಿಸು. 1. concession, 2. to forgive. ವಾ: ಸುಮಾರ್ ಅರ್ವೆ ಒಟ್ಟಿಗೆ ತಕಂಡರೆ ಮಾಮು ಸಿಕ್ಕಿದೆ.

ಮಾಮು[2] /*ma:mu*/ ನಾ. ಚಿಕ್ಕ ಮಕ್ಕಳಿಗೆ ತಿನ್ನು ಎಂಬ ಪದದ ಬದಲಿಗೆ ಬಳಸುವ ಪದ. to tell children to eat. ವಾ: ಬೇಗ ಮಾಮು ಕೂಸು, ಮತ್ತೆ ಬೂವ ಪೋಯಿ. ಪ: ಮಾಮ್ ಮಾಡ್ – ಊಟ ಮಾಡು

ಮಾಮು[3] /*ma:mu*/ ನಾ. ಮಾವ. maternal uncle.

ಮಾಮೂಲಿ /*ma:mu:li*/ ನಾ. 1. ಮಾಮೂಲು, 2. ರೂಢಿ, 3. ಕಛೇರಿಗಳಲ್ಲಿ ರೂಢಿಯಲ್ಲಿ ಕೊಡಬೇಕಾದ ಲಂಚ. 1. a hahitual action, 2. a convention, 3. bribe, money given to government officials to get some work done. ವಾ: ಕೆಲು ಆಪಿಸ್‌ಗಳ್‌ಲಿ ಕೆಲ್‌ಸ ಆಕೊರೆ ಮಾಮೂಲಿ ಕೊಡಕಾದೆ, ಹಂಗೆ ಕೊಡ್‌ದೂ ತೊಪ್ಪು, ತಕಂಬದು ದೊಡ್ಡ ತೊಪ್ಪು.

ಮಾಮೂಲು /*ma:mu:li*/ ಕ್ರಿ. ಪ್ರತೀದಿನ ಅಥವಾ ಎಲ್ಲಾ ಸಂದರ್ಭಗಳಲ್ಲಿ ನಡೆಯುವುದು. something that happens everyday/usually. ವಾ: ವಾರಕ್ಕೊಮ್ಮೆ ಎಲ್ಲ ಕಡೆ ಸಂತೆ ನಡೆದು ಮಾಮೂಲಿ.

ಮಾಮೂಲ್ /*ma:mu:lɨ*/ ನಾ. 1. ಮಾಮೂಲಿ, 2. ಅಭ್ಯಾಸ, 3. ರೀತಿ. 1. regular, 2. a habit, 3. way. ವಾ: ನಮ್ಮಲ್ಲಿ ಮಳೆ, ಚಳಿ, ಗಾಳಿ ಮಾಮೂಲ್. ಪ: ಮಾಮೂಲ್ ನಂಗೆ – ಮಾಮೂಲಿನಂತೆ

ಮಾಮೆಪ್ಪ /*ma:mɛppa*/ ನಾ. ತಾಯಿಯ ತಂದೆ. father of one's mother – maternal grand father. ವಾ: ಮಾಮೆಪ್ಪ ಬಾಕನ ಮಿಟಾಯಿ ತಂದವೆ.

ಮಾಮೆವ್ವ /*ma:mɛvva*/ ನಾ. ತಾಯಿಯ ತಾಯಿ. mother of one's mother – maternal grand mother. ವಾ: ಮಾಮೆವ್ವ ಬಾರಿ ಕುಸಿ ಮಾಡಿವೆ ನನ್ನ.

ಮಾಯಣ /*ma:yaṇa*/ ನಾ. 1. ಅಂಟು, 2. ಅಂಟಿನಿಂದ ಕೂಡಿದ ಸೊನೆ, 3. ಮೇಣ. 1. gum. 2. white sticky liquid from the stalk of a fruit, 3. gum. ವಾ: ಹಲ್ಸ್ನ ಮಾಯಣ ಕೈಗೆ ಮೆತ್ತಿರೆ ಕಾಯೆಣ್ಣೆ ಹಾಕಿರೆ ಹೋದೆ.

ಮಾಯನ ಮರ /*ma:yana mara*/ ನಾ. ಮಾವಿನ ಮರ. mango tree. ವಾ: ಮಾಯನ ಮರಕೆ ಹತ್ತಿ ಕಾಯಿನ ಬೀಳ್ಸ್. ಪ: ಮಯಣಮರ

ಮಾಯಾಗ್ /*ma:ya a:gɨ*/ ಕ್ರಿ. 1. ಕಣ್ಮರೆಯಾಗು, 2. ಅದೃಶ್ಯವಾಗು. 1. to disappear, 2. to vanish. ವಾ: ಇಮಾನ ಆಕಾಸಲಿ ಹಾರಿಕಂಡಿದ್ದದ್ ಮೋಡದ ಮರೆಲಿ ಮಾಯ ಆತ್. ಪ: ಮಾಯ ಆಗುಟು

ಮಾಯಿ /*ma:yi*/ ನಾ. ಅರೆಭಾಷೆಯ ಹನ್ನೊಂದನೆಯ ತಿಂಗಳು. 11th month of Arebhase calendar. **ಆಟಿಂದತ್ತ ಅರೆಗಾಲ ಮಾಯಿಂದತ್ತ ಮಳೆಗಾಲ(ಗಾ).** ವಾ: ಮಾಯಿಲಿ ಬಿಸ್‌ಲ್ ನೆತ್ತಿ ಸುಟ್ಟದೆ.

ಮಾಯಿಣ /*ma:yiṇa*/ ನಾ. 1. ಮಾಯಣ, 2. ಮೇಣ. 1. gum, 2. glue/resin. ವಾ: ಹಲ್‌ಸ್‌ನ ಹಣ್ಣ್‌ಲಿ ಬಾರಿ ಮಾಯಿಣ ಇದ್ದದೆ.

ಮಾಯಿನಕಾಯಿ /*ma:yinaka:yi*/ ನಾ.

ಮಾವಿನಕಾಯಿ. mango. ವಾ: ಮಾಯಿನ ಕಾಯಿಗೆ ಉಪ್ಮೆಣ್ಸ್ ಹಾಕಿ ಚಪ್ಪ್‌ರ್‌ಸಿಕಂಡ್ ತಿನೊಕು, ಗ್ಯಾನ ಮಾಡಿಕಂಡರೆನೆ ಬಾಯ್‌ಲಿ ನೀರ್ ಬಂದದೆ ಅಲ. ಪ: ಮಾಯಿನ್ನಾಯಿ

ಮಾಯಿನಮರ /*ma:yinamara*/ ನಾ. ಮಾವಿನ ಮರ. a mango tree. ವಾ: ಮಾಯಿನ ಮರಲಿ ಹೂ ಹೋವುಟು. ಪ: ಮಾಯ್ನಮರ

ಮಾಯಿನಮಿಡಿ /*ma:yinamiḍi*/ ನಾ. ಮಾವಿನ ಎಳೆಕಾಯಿ/ಮಿಡಿ. tender mango. ವಾ: ಮಾಯಿನ ಮಿಡಿನ ಉಪ್ಪಿಗೆ ಹಾಕಿಸೊಕು. ಪ: ಕುಕ್ಕುದ ಮುಡಿ(ತು)

ಮಾಯಿನಹೂವ್ /*ma:yinahu:vɨ*/ ನಾ. ಮಾವಿನ ಹೂ. mango flower. ವಾ: ಸುಮಾರ್ ಮಾಯಿನ ಹೂವ್ ಹೋವ್ಟ.

ಮಾಯಿನಣ್ಣ್ /*ma:yinaṇṇɨ*/ ನಾ. ಮಾವಿನ ಹಣ್ಣು. mango fruit. **ವಾಟೆಕಾಡ್ ಮುಚ್ಚಂಗೆ ಎಲುಲಿ ರೋಮ – ಮಾಯ್ನಣ್ಣ್ ಗೊರ್ಟ್(ಒ).** ವಾ: ಮಾಯಿನಣ್ಣ್‌ಲಿ ರಸಯನ, ಜೂಸ್ ಮಾಡಕ್. ಪ: ಮಾಯ್ನಣ್ಣ್

ಮಾಯಿಪಡ್ಕ /*ma:yipaḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಮರಪಡ್ನೂರು ಗ್ರಾಮದ ಜಾಗ. a locality in Amarapadnuru village in Sullia Taluk of Dakshina Kannada District.

ಮಾಯಿಲಕೋಟೆ /*ma:yilako:ṭe*/ ನಾ. ಕೊಡಗು ಜಿಲ್ಲೆಯ ಪೆರಾಜೆ ಗ್ರಾಮದ ಜಾಗ. a locality in peraje village in of Kodagu District.

ಮಾಯಿಲಕೊಚ್ಚಿ /*ma:yilakocci*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮಾಯಿಲಕೋಟೆ /*ma:yilako:ṭɛ*/ ನಾ. ಮಾಯಿಲ ಒಂದು ಸಮುದಾಯದ ಹೆಸರು, ಇವರು ಕಟ್ಟಿರುವ ಕೋಟೆ ಎಂಬ ಐತಿಹ್ಯ. a fort built by the people of Mayila community.

ಮಾಯಿಲಪ್ಪ /*ma:yilappa*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. masculine given name. ಪ: ಮಾಯಿಲ

ಮಾಯಿಲಮೂಲೆ /*ma:yilamu:le*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಉಬರಡ್ಕ ಮಿತ್ತೂರು ಗ್ರಾಮದ ಜಾಗ. a locality in Ubaradka Mitturu village in Sullia Taluk of Dakshina Kannada District.

ಮಾಯಿಲರಮೂಲೆ /*ma:yilaramu:le*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಸುಳ್ಯ ನಗರದ ಜಾಗ. a locality in Suḷya Nagara village in Sullia Taluk of Dakshina Kannada District.

ಮಾಯ್ಪು /*ma:ypu*/ ನಾ. 1. ಪೊರಕೆ, 2. ಕಸಗುಡಿಸುವ ಸಾಧನ, 3. ಹಿಡುಗಲು, 4. ಕಸೂಡಿಗೆ. a broom, a floor cleaning tool. ವಾ: ಮಾಯ್ಪುಲಿ ಮನೆಕಾಡ್ ಗುಡ್‌ಸುದು. **ಮಾಯ್ಪುಸೂಡಿ** /*ma:ypu su:ḍi*/ 1. ಪೊರಕೆಯ ಹಿಡಿ, 2. ಕಡ್ಡಿ ಪೊರಕೆ. handle of a broom. **ಸಾವ್ರಾರು ಮಕ್ಕಳಿಗೆ ಒಂದೇ ಉಡೆನೂಲು – ಮಾಯ್ಪು ಸೂಡಿ(ಒ).** ವಾ: ಮಾಯ್ಪು ಸೂಡಿ ಹೊಡಿಹೊಡಿಯಾತ್.

ಮಾರಂವ /*ma:ranva*/ ನಾ. 1. ವ್ಯಾಪಾರಿ, 2. ಮಾರಾಟಗಾರ. 1. a businessman, 2. a trader. ವಾ: ಸೊಪ್ಪು ಮಾರಂವ ಹೋಕನ ಮೀನ್ ಮಾರಂವ ಬಾತ್.

ಮಾರಜ /*ma:raja*/ ನಾ. 1. ಮಹಾರಾಜ, 2. ಕುಳಿತಲ್ಲಿಗೆ ಕೆಲಸ ಮಾಡಿಸಿಕೊಳ್ಳುವ ವ್ಯಕ್ತಿಗಳಿಗೆ ಬಳಸುವ ಪದ. 1. a king, 2. someone who assigns his work to others. ವಾ: ಒಹೋ ಇಂವ ಬಾರಿ ದೊಡ್ಡ ಮಾರಜ, ಎಲ್ಲ ಕುದ್ದಲ್ಲಿಗೆ ಆಕು.

ಮಾರಾಪು /*ma:ra:pu*/ ನಾ. 1. ಬಟ್ಟೆಗಂಟು, 2. ಗಂಟುಮೂಟೆ. 1. a cloth bag, 2. one's belongings. ವಾ: ಮಾರಾಪು ಕಟ್ಟಿ ಎತ್ತ ಹೊರ್‌ಟ?

ಮಾರಾಮಾರಿ /*ma:ra:ma:ri*/ ಕ್ರಿವಿ. 1. ತೀವ್ರ ಹೊಡೆದಾಟ, 2. ಬಡಿದಾಟ. 1. a sever fight, 2. a quarrel. ವಾ: ಹಿಂದೆಲ್ಲಾ ಮೊದುವೆ ಮನೆಲಿ ಮಾರಾಮಾರಿ ಆತಿತ್.

ಮಾರಾಯ /*ma:ra:ya*/ ಸನಾ. ಪರಿಚಯದ ವ್ಯಕ್ತಿ ಯನ್ನು ಸಂಬೋಧಿಸುವ ಪದ(ಪು). salutation offered between known people (men). ವಾ: ಏ ಮಾರಾಯ ಒಮ್ಮೆ ಸುಮ್ಮನಿರ್.

ಮಾರಾಯರ್ /*ma:ra:yarɨ*/ ನಾ. ಚಂಡೆ ಹೊಡೆವವರು. playing chande, drum.

ಮಾರಾಯ್ತಿ /*ma:ra:yti*/ ನಾ. ಹೆಂಗಸರನ್ನು ಕರೆಯುವ

ಪದ(ಸ್ತ್ರೀ). salutation offered between known people (women). ವಾ: ಏನ್ ಮಾರಾಯ್ತಿ ಹೇಂಗೊಳನೆ?

ಮಾರಿ[1] /*ma:ri*/ ನಾವಿ. 1. ದುಷ್ಟಶಕ್ತಿ, 2. ಕೆಟ್ಟ, 3. ದೊಡ್ಡದಾದ. 1. evil force, 2. bad, 3. large. **ಊರಿಗೆ ಉಪಕಾರಿ ಮನೆಗೆ ಮಾರಿ(ಗಾ).** ವಾ: ನೀನೊಂದ್ ಮನೆಗೆ ಮಾರಿ.

ಮಾರಿ[2] /*ma:ri*/ ನಾ. 1. ಮಾರಮ್ಮ, 2. ಕ್ಷುದ್ರ ದೇವತೆ, 3. ಮೃತ್ಯುದೇವತೆ. 1. godess Maramma, 2. god of lesser importance, 3. godess of death. ವಾ: ನಮ್ಮಲ್ಲಿ ವರ್ಸಕೊಮ್ಮೆ ಮಾರಿಗೆ ಕೊಡ್ದು ಪದ್ಧೆತಿ ಉಟ್ಟು.

ಮಾರಿನೀಕುದು[1] /*ma:rini:kudu*/ ಕ್ರಿ. 1. ಬೈಗುಳ ಪದ, 2. ಹೆಣ್ಣು ಮಕ್ಕಳು ಮನೆಯಲ್ಲಿ ಹೇಳಿದ ಮಾತು ಕೇಳದೆ ಜಗಳ ಮಾಡಿದರೆ ಒಮ್ಮೆ ಮದುವೆ ಮಾಡಿ ಕಳುಹಿಸಿದರೆ ಸಾಕು ಎಂಬರ್ಥದಲ್ಲಿ ಹತಾಶೆಯಿಂದ ನುಡಿವ ಪದ. 1. an expletive, 2. parents use the term out of frustation indicating their daughter should be married off at the earliest due to their daughter's quarrelsome nature. ವಾ: ಒಮ್ಮೆ ನಿನ್ನ ಮಾರಿ ನೀಕೊಕು, ತಡೆಕಾಲೆ ನಿನ್ನ ಕಾಟ, ನೀಕಿರೆ ಮತ್ತೆ ಮನ್ಸಿಗೆ ನಿರುಮ್ಮಳ.

ಮಾರಿನೀಕುದು[2] /*ma:rini:kudu*/ ನಾ. ಮಾರಿಯಮ್ಮನಿಗೆ ಬಲಿ, ಆಹಾರ ಕೊಟ್ಟು ಊರಿಂದಾಚೆ ಕಳುಹಿಸಿಕೊಡುವ ಆಚರಣೆ. a ritual of offering of food to village goddess, Mariyamma, to drive away the evil/disease cuased by her in the village. ವಾ: ಒಂದ್ ಊರ್‌ನ ಮಾರಮ್ಮನ ಇನ್ನೊಂದ್ ಊರಿಗೆ ಕಳ್ಸುದು.

ಮಾರಿಸೂಟೆ /*ma:ri su:ṭɛ*/ ನಾ. 1. ದೊಡ್ಡ ದೀವಟಿಗೆ, 2. ದೊಡ್ಡ ಗಾತ್ರದ ಪಂಜು. a large torch. ವಾ: ಮಾರಿ ಸೂಟೆ ಹಿಡ್ಡ್ ಹೊರ್‌ಟೊ.

ಮಾರಿಕಳ /*ma:rikaḷa*/ ನಾ. ಭೂತ ಕೋಲದಲ್ಲಿ ಹಂದಿ ಅಥವಾ ಕೋಳಿಗಳನ್ನು ತಲೆ ಕಡಿಯುವ ಸ್ಥಳ. a place where the head of hen/pig is severed as an offering in the Bhuta Kola/diety worship. ವಾ: ಮಾರಿಕಳಲಿ ಕೋಳಿ, ಹಂದಿನ ಬಲಿ ಕೊಡ್‌ದು.

ಮಾರಿಕಳ್‌ಂಜ /*ma:rikaḷiŋja*/ ನಾ. 1. ಆಟಿ ತಿಂಗಳಲ್ಲಿ ರೋಗರುಜಿನ ಕಳೆಯುವುದಕ್ಕಾಗಿ ಬರುವ ದೈವ, 2. ಆಟಿಕಳಂಜ. Maarikelanja – a daiva/a spirit who appears during the month of Ati (between July-August). ವಾ: ಮಾರಿಕಳ್‌ಂಜಂಗೆ ಹರ್‌ಕೆ ಮಾಡಿಕಂಡದ್.

ಮಾರಿಮುಂಡೆ /*ma:rimuṇḍɛ*/ ನಾ. ಸ್ತ್ರೀಯರನ್ನು ಬೈಯುವ ಬೈಗುಳ ಪದ. derogatory terms. ವಾ: ಹೋಗ್‌ನೆ ಮಾರಿ ಮುಂಡೆ, ಕೆಲ್‌ಸ ಮಾಡ್.

ಮಾರುತಿ /*ma:ruti*/ ನಾ. 1. ಆಂಜನೇಯ, 2. ಹನುಮಂತ, 3. ವಾಯುವಿನ ಮಗ. 1. god Anjaneya, 2. god Hanumantha, 3. son of Vayu. ವಾ: ಮಾರುತಿಗೆ ಕೈ ಮುಗ್ದ್ ಬಾ.

ಮಾರ್[1] /*ma:ri*/ ಕ್ರಿ. 1. ಮಾರಾಟ ಮಾಡು, 2. ವಿಕ್ರಯಿಸು. 1. to sell off, 2. to sell. ವಾ: ಬೆಳ್ದ ತರ್ಕಾರಿಗಳ ಕರ್ಚಿಗೆ ಇಸಿಕಂಡ್ ಒಳ್ದದರ ಮಾರ್. ಪ: ಮಾರಿಕೆ – ಮಾರಲು; ಮಾರಿಕಂಡ್ – ಮಾರಿಕೊಂಡು

ಮಾರ್[2] /*ma:ri*/ ನಾ. 1. ಒಂದು ಅಳತೆ ಮಾಪನ, 2. ಒಂದು ಮಾರ್, ಕೈಗಳನ್ನು ಅಡ್ಡಕ್ಕೆ ಚಾಚಿದಾಗ ಎಡಕ್ಕೆ ಬೆರಳಿನ ತುದಿಯಿಂದ ಬಲಗೈ ಬೆರಳಿನ ತುದಿಯ ತನಕ ಇರುವಷ್ಟು ಉದ್ದ. a unit of measurement – as long as the distance between two middle fingers when both the arms are stretched completely. ವಾ: ಮೂರ್ ಮಾರ್ ಮಲ್ಲಿಗೆ ಹೂ ತಕಂಡ್ ಬಾ.

ಮಾರ್[3] /*ma:ri*/ ನಾ. 1. ಉಪ್ಪಿನಕಾಯಿ ರಸ, 2. ಗಸಿ. 1. semi liquid portion of pickle, 2. a thick liquid dish.

ಮಾರ್[4] /*ma:ri*/ ನಾ. 1. ಮಾರು, 2. ಆಳದ ಅಥವಾ ಉದ್ದದ ಅಳತೆಯ ಮಾನ. 1. a fathom. 3. a unit of measure.

ಮಾರ್ಕ್ /*ma:rkɨ*/ ನಾ. ಎಪ. 1. ಅಂಕ, 2. ಗುರುತು. 1. marks, 2. mark. ವಾ: ನಿಂಗೆ ಪರೀಕ್ಸೆಲಿ ಮಾರ್ಕ್ ಎಸ್ಟ್ ಬಾತ್.

ಮಾರ್ಗ[1] /*ma:rga*/ ನಾ. 1. ಮಾರ್ಗ, 2. ದಾರಿ, 3. ಹಾದಿ. 1. way, 2. path, 3. road. ವಾ: ಯಾವ ಮಾರ್ಗಲಿ ಹೋದುಗಡ.

ಮಾರ್ಗ[2] /*ma:rga*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮಂಡೆಕೋಲು ಗ್ರಾಮದ ಜಾಗ. a locality in Mandekolu village in Sullia Taluk of Dakshina Kannada District.

ಮಾರ್ಣೆ /*ma:rηε*/ ನಾ. 1. ಮಾರನೆ, 2. ಮರುದಿವಸ. 1. next day, 2 tomorrow. ವಾ: ನಾವೆಲ್ಲ ಅಲ್ಲೆ ಇದ್ದ್ ಮಾರ್ಣೆ ದಿನ ಹೊರ್‌ಟ್ ಬಂದೊ. **ಮಾರ್ಣೆದಿನ** /*ma:rηedina*/ ವಾ: ಇಂದ್ ಇಲ್ಲೆ ಇದ್ದ್ ಮಾರ್ಣೆದಿನ ಹೋಕಪ. **ಮಾರ್ನೆದಿನ** /*ma:rnedina*/ ವಾ: ಒಂದಿನ ಅಲ್ಲೆ ಇದ್ದ್ ಮಾರ್ನೆ ದಿನ ಹೋಕ್.

ಮಾರ್ಣೆಮಿ /*ma:rηemi*/ ನಾ. 1. ಮಹಾನವಮಿ, 2. ನವರಾತ್ರಿಯ ಒಂಭತ್ತನೆಯ ದಿನ ಮತ್ತು ಅಂದು ಆಚರಿಸುವ ಹಬ್ಬ, 3. ಆಶ್ವಯುಜ ಶುದ್ಧ ನವಮಿ. ninth day of Mahanavami festival, during Navratri/Dussehra festival. ವಾ: ಮಾರ್ಣೆಮಿ ದಿನ ಬಾರಿ ಪೂಜೆ ನಡ್ದದೆ. ಪ: ಮಾರ್ನೆಮಿ

ಮಾರ್ದುಳಿ /*ma:rduḷi*/ ನಾ. ನೋಡಲು ಸ್ವಲ್ಪ ಉದ್ದ ರೂಪದಲ್ಲಿರುವ ಒಂದು ಬಗೆಯ ತಿನ್ನುವ ಹಣ್ಣು. Madhuli, a citrus fruit. ವಾ: ದಾರಿಲಿ ಬಾಕನ ನಂಗೊಂದ್ ಮಾರ್ದುಳಿ ಹಣ್ಣ್ ಸಿಕ್ಕಿತ್.

ಮಾರ್ಪಾಡ್ /*ma:rpa:ḍε*/ ಕ್ರಿ. 1. ಬದಲಾಯಿಸು, 2. ಬದಲಾವಣೆ. 1. to change, 2. change. ವಾ: ಕಾನೂನ್‌ಲಿ ಸುಮಾರ್ ಹೊಸ ಮಾರ್ಪಾಡ್ ಆಗುಟು.

ಮಾರ್ವಾಡಿ /*ma:rvaḍi*/ ನಾ. ವ್ಯಾಪಾರಿ, ಬೈಗುಳ ಪದ. a trader/businessman-an expletive. ವಾ: ಅಂವ ಬರೇ ಮಾರ್ವಾಡಿನ ಬುದ್ದಿಯಂವ.

ಮಾಲಿ /*ma:li*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮಾಲೀಸ್ /*ma:li:sε*/ ಕ್ರಿ. 1. ತಿಕ್ಕು, 2. ಉಜ್ಜು, 3. ಅಂಗಮರ್ದನ. 1. to rub, 2. to srub, 2. to massage. ವಾ: ಮೈಕೈ ಬೇನೆ ಇರಿಕನ ಮಾಲೀಸ್ ಮಾಡಿರೆ ಆದೆ.

ಮಾಲುದು /*ma:ludu*/ ಕ್ರಿ. 1. ವಾಲು, 2. ಒಂದು ಪಕ್ಕಕ್ಕೆ ಬಾಗು, 3. ಓರೆಯಾಗು. 1. to bend, 2. curve, 3. to bend. ವಾ: ಗಾಳಿಗೆ ಬಾಳೆದೈ ಅತ್ತ ಇತ್ತ ಮಾಲುದು, ಅದಕ್ಕೊಂದ್ ಕಂಬ ಊತ ಕೊಡೊಕಾದೆ. ಪ: ಮಾಲಿ – ವಾಲಿ/ಬಾಗಿ ಮಾಲಿಕಂಡ್ – ವಾಲಿಕೊಂಡು; ಮಾಲಿ ಬುಡ್ದು – ಪಕ್ಕಕ್ಕೆ ಬಾಗಬಹುದು

ಮಾಲುವೇಲು /*ma:luve:lu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮಾಲೆ /*ma:lε*/ ನಾ. 1. ಹಾರ, 2. ಸರ. 1. a garland, 2. a necklace. ವಾ: ದೇವ್ರಿಗೆ ತೊಳ್ಸಿ ಮಾಲೆ ಕಟ್ಟಿ ಹಾಕಿವೆ. ಪ: ಮಾಲೆಕಟ್ಟಿಕೆಂತ – ಮಾಲೆಕಟ್ಟಲೆಂದು

ಮಾಲೆಂಗಿರಿ /*ma:leŋgiri*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕೊಡಿಯಾಲ ಗ್ರಾಮದ ಜಾಗ. a locality in Kodiyala village in Sullia Taluk of Dakshina Kannada District.

ಮಾಲೆಂಗ್ರಿ /*ma:leŋgri*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಎಡಮಂಗಲ ಗ್ರಾಮದ ಜಾಗ. a locality in Edamangala village in Sullia Taluk of Dakshina Kannada District.

ಮಾಲೆಕಾಯಿ /*ma:lεka:yi*/ ನಾ. 1. ಹಣ್ಣು ಅಲ್ಲ ಕಾಯಿಯೂ ಅಲ್ಲ, ದೋರುಗಾಯಿ, 2 ಎಳತು ಕಾಯಿ. 1. half ripe fruit, 2. tender fruit. ವಾ: ಅಡ್ಕೆ ತೆಗೆಂವ ಮಾಲೆಕಾಯಿನ ಎಳ್ದಾಕುಟು, ಅಂವಂಗೆ ಸೊಯ ಇಲ್ಲೆನ.

ಮಾಲೆತ್ತೋಡಿ /*ma:letto:ḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮಾಲೆಮಣಿ /*ma:lεmaηi*/ ನಾ. ಮದುಮಗ ಧರಿಸುವ ಗುಂಡುಸರ. a necklace worn by bridegroom. ವಾ: ಮದುವಣಂಗೆ ಮಾಲೆಮಣಿನ ಹಾಕಿ ಪೊರ್ಲು ಕಾಂಬೊತಿತ್.

ಮಾಲೆಹಣ್ಣ್ /*ma:lεhaηηi*/ ನಾ. ಅರ್ಧಕಾಯಿ ಅರ್ಧಹಣ್ಣು. half ripe fruit. ವಾ: ಮಾಲೆ ಹಣ್ಣ್ ತಿಂಬಕೆ ಲಾಯ್ಕಾದೆ. ಪ: ಅರೆಹಣ್ಣ್

ಮಾಲ್‌ಮಟ /*ma:lɨmaṭa*/ ನಾ. ಚಿನ್ನದ ಆಭರಣ ಹಾಗೂ ಪಾತ್ರೆ ವಸ್ತುಗಳು. gold jewellery and vessels/dishes. ವಾ: ಮೊದ್ವೆಗೆ ಬೇಕಾದ ಮಾಲ್ ಮಟ ಎಲ್ಲ ತೆಗ್ದ್ ಆತ?

ಮಾಲ್ದು /*ma:ldu*/ ಕ್ರಿ. ಬಾಗುದು. to bend. ವಾ: ಬಸ್‌ಲೆ ಚಪ್ಪರ ಬಾರಕೆ ಮಾಲ್ದು. ಪ: ಮಾಲ್ದೆ – ಬಾಗುತ್ತದೆ

ಮಾಲ್ಮಿ /*ma:lmi*/ ನಾ. 1. ದಿಕ್ಸೂಚಿ, 2. ಹೋಕಾಯಂತ್ರ,

3. ಸಮುದ್ರಯಾನ ಹಾಗು ವಾಯುಯಾನಗಳಲ್ಲಿ ಬಳಸುವ ದಿಕ್ಕನ್ನು ತೋರಿಸುವ ಒಂದು ಸಾಧನ. a compass, shows cardinal directions. ವಾ: ಸಂದ್ರಲಿ ಹೋಕನ ದಾರಿ ತಿಳೆಕೆ ಮಾಲ್ಮಿನ ಬಳ್ಳುವೆ.

ಮಾವ /*ma:va*/ ನಾ. 1. ಗಂಡನ ಅಥವಾ ಹೆಂಡತಿಯ ತಂದೆ, 2. ತಾಯಿಯ ಸಹೋದರ. 1. father of one's husband or wife, 2. brother of one's mother. ವಾ: ಮಾವ ಹೆಂಗೊಳೊ? ಬಂದೊಳೊನ?

ಮಾವಂಜಿ /*ma:vaɲji*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮಂಡೆಕೋಲು ಗ್ರಾಮದ ಜಾಗ. 1. family, 2. lineage, 3. a locality in Mandekolu village in Sullia Taluk of Dakshina Kannada District.

ಮಾವಾಜಿ /*ma:va:ji*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮರ್ಕಂಜ ಗ್ರಾಮದ ಜಾಗ. 1. family, 2. lineage, 3. a locality in Markanja village in Sullia Taluk of Dakshina Kannada District.

ಮಾವಿನಕಟ್ಟೆ /*ma:vinakaṭṭe*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅರಂತೋಡು ಗ್ರಾಮದ ಜಾಗ. a locality in Arantodu village in Sullia Taluk of Dakshina Kannada District.

ಮಾವಿನಪಳ್ಳ /*ma:vinapaḷḷa*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಜ್ಜಾವರ ಗ್ರಾಮದ ಜಾಗ. a locality in Ajjavara village in Sullia Taluk of Dakshina Kannada District.

ಮಾವ್‌ನ ಗೊರ್ಟ್ /*ma:vɨna gorṭɨ*/ ನಾ. 1. ಮಾವಿನ ವಾಟೆ, 2. ಓಟೆ, 3. ಹಣ್ಣಿನ ಗೊರಟೆ. seed of mango. ವಾ: ಮಾವಿನ ಗೊರ್ಟ್‌ನ ಮೊಜ್ಜಿಗೆಲಿ ಅರ್‌ದ್ ಜುಲಾಬ್‌ಗೆ ಮೊದ್ದ್ ತ ಕೊಟ್ಟವೆ.

ಮಾವ್‌ನ ಮಿಡಿ /*ma:vɨna miḍi*/ ನಾ. ಎಳೆ ಮಾವಿನ ಕಾಯಿ. tender mango. ವಾ: ಮಾವ್ನ ಮಿಡಿಲಿ ಉಪ್ಪನಕಾಯಿ ಹಾಕಕ್.

ಮಾವ್‌ನೆಲೆ /*ma:vɨnelɛ*/ ನಾ. ಮಾವಿನ ಎಲೆ. mango leaf. ವಾ: ಬಾಗ್ಲ್‌ಗೆ ತೋರ್‌ಣ ಕಟ್ಟಿಕೆ ಮಾವ್ ನೆಲೆ ಬೇಕ್. ಪ: ಮಾವ್‌ನ ಹಣ್ಣ್ – ಮಾವಿನಹಣ್ಣು; ಮಾವ್‌ನ ಮರ – ಮಾವಿನ ಮರ

ಮಾಸ /*ma:sa*/ ನಾ. ಮಾಂಸ. meat. **ಕೈಲಿ ಕಾಸಿಲ್ಲೆ ಮೈಲಿ ಮಾಸ ಇಲ್ಲೆ(ಗಾ).** ವಾ: ನಮ್ಮಪ್ಪನ ಕಾಲಲಿ ಕಾಡ್ ಮಾಸ ಉಗ್ಗಪ್ಪಿದ್ದೊ.

ಮಾಸಗೈಪು /*ma:sagaipu*/ ನಾ. ಮಾಂಸದ ಪದಾರ್ಥ. meat stew. ವಾ: ಹಂದಿ ಮಾಸ ಗೈಪುಲಿ ಉಂಬಕೆ ಲಾಯ್ಕ್ ಆದೆ.

ಮಾಸತಿನ್ನೊವು /*ma:satinnovu*/ ನಾ. ಮಾಂಸಾಹಾರಿ. nov – vegetarian. ವಾ: ಮಾಸ ತಿನ್ನೊವುತ ಹೇಳಿರೆ ಮೋರೆ ಯಾಕೆ ಹಿಂಡುದು?

ಮಾಸಕಂಡ /*ma:sakaṇḍa*/ ನಾ. ಮಾಂಸ ಖಂಡ. muscles. ವಾ: ಕೊಟ್ಟುಲಿ ನೆಲನ ಎಳ್ಳಿ ಎಳ್ಳಿ ಮಾಸಕಂಡ ಎಲ್ಲ ಹಿಡ್ಕಂಡಂಗಾಗಿ ಬೇನೆಪ.

ಮಾಸಿಕಂಡ್ /*ma:sikaṇḍɨ*/ ಕ್ರಿ. 1. ಬಣ್ಣ ಕಳೆದುಕೊಂಡ, 2. ಮಲೀನವಾದ, 3. ಕಾಂತಿಯಿಲ್ಲದಿರುವಿಕೆ, 4. ಮಾಸಲು. 1. faded, 2. soiled, 3. to be dull, 4. drab. ವಾ: ಬೇರೆ ಅರ್ವೆ ಹಾಕ, ಈ ಅರ್ವೆ ಮಾಸಿಕಂಡ್‌ಟು. ಪ: ಮಾಸಿಕಂಡ – ಬಣ್ಣ ಕಳೆದುಕೊಂಡ

ಮಾಸಿವ /*ma:siva*/ ನಾ. 1. ಮಹಾಶಿವ, 2. ಈಶ್ವರ, 3. ಶೈವರ ಆರಾಧ್ಯ ದೈವ. lord Shiva, worshipped by Shaiva followers. ವಾ: ಮಾಸಿವ ಕೈಲಾಸ ವಾಸಿ.

ಮಾಸುದ್ಲೆ /*ma:sudlɛ*/ ಕ್ರಿ. ಬಣ್ಣ ಅಳಿಸಿ ಹೋಗುವುದಿಲ್ಲ. colours won't fade. ವಾ: ಮಾತ್‌ನ ಬೇನೆ ಅಸ್ಟ್ ಬ್ಯಾಗ ಮಾಸುದ್ಲೆ.

ಮಾಸೆಲ್ /*ma:sɛlɨ*/ ಕ್ರಿ. 1. ಮಾಸಿಹೋದ, 2. ಮಾಸಿ ಹೋಗು, 3. ಬಣ್ಣ ಕಳೆದುಕೊಳ್ಳು, 1. faded, 2. drab, 3. to lose colour. ವಾ: ಈ ಮಾಸ್‌ಲ್ ಜಂಪರ್ ಹಾಕಂಡ್ ಎಲ್ಲಿಗೆ ಹೋದ್‌ತ?

ಮಾಸೊತ್ /*ma:sotɨ*/ ಕ್ರಿ. 1. ಅಳಿಯು, 2. ಬಣ್ಣ ಮಾಸಿ ಹೋಗಿದೆ. 1. to disappear, 2. to fade. ವಾ: ಮೊನೆ ತಕಂಡ ಸೀರೆನ ಬಣ್ಣ ಮಾಸೊತ್.

ಮಾಸ್[1] /*ma:sɨ*/ ಕ್ರಿ. 1. ಮಲಿನವಾಗು. 2. ಕೊಳೆಮಾಡು. 3. ಕಾಂತಿಗುಂದು. 4. ಕುಗ್ಗು. 5. ಕಳಂಕಹೊಂದು. 1. soiled, 2. to make something dirty, 3. to lose shine, 4. to decrease, 5. blemished. **ಒಂದು ಪೆಟ್ಟು**

ಹೊಡ್ದೊರು ಮರಿಯಕ್, ಆದರೆ ಮಾತ್ ಮನ್ನಂದ ಮಾಸಿಕಿಲೆ(ಗಾ).

ಮಾಸ್[2] /*ma:sɨ*/ ನಾ. 1. ಕೊಳೆ. 2. ಭ್ರೂಣವನ್ನು ಆವರಿಸಿರುವ ಪೊರೆ. 3. ದೋಷ. 4. ಬಾಡು. 1. dirt, 2. fetal membranes, 3. fault, 4. a veil.

ಮಾಸ್ಟ್ರ್ /*ma:sṭrɨ*/ ನಾ. ಎಪ. 1. ಅಧ್ಯಾಪಕ, 2. ಮಾಸ್ತರ್. 1. a teacher, 2, a master. ವಾ: ಮಾಸ್ಟ್ರ್ ಬಾಕನ ಎದ್ರಿ ಮಕ್ಕಳೆ.

ಮಾಸ್ತಿಕಟ್ಟೆ /*ma:stikaṭṭe*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಬೆಳ್ಳಾರೆ ಗ್ರಾಮದ ಜಾಗ. a locality in Bellare village in Sullia Taluk of Dakshina Kannada District.

ಮಾಳ[1] /*ma:ḷa*/ ನಾ. 1. ಅಟ್ಟಲಿಗೆ, 2. ರೊಪ್ಪ, ಲಾಯ, 3. ದೊಡ್ಡಿ,ಕೊಟ್ಟಿಗೆ, 4. ತೋಟ ಅಥವಾ ಗದ್ದೆಯ ಪೈರು ಕಾಯಲು, ರಾತ್ರಿ ಮಲಗಲು ಮಾಡಿದ ಪುಟ್ಟ ಮನೆ, 10×10 ಅಡಿ ವಿಸ್ತಾರದ ಹುಲ್ಲಿನ ಛಾವಣಿ, ಒಂದು ಅಟ್ಟಣಿಗೆ ಇರುತ್ತದೆ, ಇಲ್ಲಿ ಪೈರು ಕಾಯಲು ರಾತ್ರಿ ಮಲಗುತ್ತಾರೆ. a 10×10 watch tower built in the field/farm to watch over at night. ವಾ: ಮಾಳಲಿ ರಾತ್ರೆಯೆಲ್ಲ ಬೆಳೆ ಪಾರಕಾಯೊದು.

ಮಾಳ[2] /*ma:ḷa*/ ನಾ. 1. ಸ್ಥಳನಾಮ, 2. ಬಯಲು. 1. Mala, a place, 2. an open field. ವಾ: ದನ ಮೇದ್ ಅಲ್ಲೆಲ್ಲಾ ಮಾಳ ಆವ್ಟು.

ಮಾಳ[3] /*ma:ḷa*/ ನಾ. 1. ನೀರು ಹುಟ್ಟುವ ಜಾಗ/ ಸುರಂಗ 2. ಗುಹೆ. 1. a cave where spring originates, 2. acave. ವಾ: ಮಾಳಂದ ನೀರ್ ಹರ್ದ್ ಬಂದದೆ. ಪ: ಮಾಡಂಗೋಲು(ತು)

ಮಾಳ[4] /*ma:ḷa*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮಾಳಪ್ಪಮಕ್ಕಿ /*ma:ḷappamakki*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕಲ್ಮಡ್ಕ ಗ್ರಾಮದ ಜಾಗ. a locality in Kalmadka village in Sullia Taluk of Dakshina Kannada District.

ಮಾಳಿ /*ma:ḷi*/ ನಾ. 1. ತೂತು, 2. ರಂಧ್ರ, 3. ಬಿಲ, 4. ಗುಹೆ. 1. a hole, 2. a cavity, 3. a burrow, 4. a cave. **ಇಲಿ ಒಳಗೆ ಬುಟ್ಟ್, ಮಾಳಿ ಮುಚ್ಚಿದಂಗೆ(ಗಾ).** ವಾ: ಹೆಗ್ಗ್ಣ ಮಾಳಿಗೆ ಕಲ್ಲ್‌ನ ಅಡ್ಡಿಸೊಕು.

ಮಾಳಿಗೆಮನೆ /*ma:ḷigɛmanɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮಾಳಿಗೆ[1] /*ma:ḷigɛ*/ ನಾ. 1. ಉಪ್ಪರಿಗೆ, 2. ಅಂತಸ್ತು, 3. ಮಾಳಿಗೆ ಮನೆ, 4. ಮಹಡಿ. 1. upper storey, 2. a floor, 3. a storey, 4. a floor. ವಾ: ಮಾಳಿಗೆ ಮನೆಗೆ ಹತ್ತಿಕಾದೊತ ನಿತ್ತ್ ನೋಡ್‌ದು.

ಮಾಳಿಗೆ[2] /*ma:ḷige*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕಲ್ಮಡ್ಕ ಗ್ರಾಮದ ಜಾಗ. a locality in Kalmadka village in Sullia Taluk of Dakshina Kannada District.

ಮಿಂಗೊತ್ತಿ /*miŋgotti*/ ನಾ. ಒಂದು ವಿಧದ ಹಕ್ಕಿ. a type of bird. ವಾ: ಮಿಂಗೊತ್ತಿ ಹಾರಿಕಂಡ್ ಬಂದ್ ಕುದ್ದತ್.

ಮಿಂಚಿಲ್‌ಬಡ್ಸುದು /*miŋcilɨ baḍsudu*/ ಕ್ರಿವಿ. ಸತ್ತವರಿಗೆ ಹನ್ನೊಂದನೆಯ ದಿನ ಬಡಿಸುವ ಕ್ರಮ. a ritual offering of food on the 11th day after death. **ಮೀಂಚ್‌ಲ್ ಊಟ.** ವಾ: ಸತ್ತವ್‌ಕೆ ಹನ್ನೊಂದನೆ ದಿನ ಮಿಂಚಿಲ್ ಬಡ್ಸುದು. ಪ: ಮೀಚಿಲ್(ತು)

ಮಿಂಚ್ /*miŋcɨ*/ ನಾ. 1. ಮಿಂಚು, 2. ಆಕಾಶದಲ್ಲಿ ಮೋಡಗಳ ಘರ್ಷಣೆಯಿಂದ ಬೆಳಕು ಕಾಣಿಸಿಕೊಳ್ಳು. 1. lightning, 2. flashing light from the sky due to the friction cuased by the clouds. **ಮಿಂಚಿ ಹೋದ ಕಾಲಕ್ಕೆ ಚಿಂತಿಸಿ ಫಲ ಇಲ್ಲೆ(ಗಾ).** ವಾ: ಮಿಂಚ್‌ಕನ ಮರದ ಕೆಳೆಗೆ ನಿಲ್ಲಿಕಾದ್.

ಮಿಂಡ /*miŋḍa*/ ನಾ. 1. ವಿವಾಹೇತರ ಪತಿ, 2. ಉಪಪತಿ. paramour, having an extramarital relationship with a man. **ಅಯ್ಯೆಗೆ ಅರಿವೆ ಚಿಂತೆ, ಮಗ್ಳಿಗೆ ಮಿಂಡನ ಚಿಂತೆ(ಗಾ). ಗಂಡ ಅಲ್ಲ ಮಿಂಡ(ನು).** ವಾ: ಮಿಂಡತ ಹೇಳ್ಬಡ.

ಮಿಂಡಿ/ಮಿಂಡೆ /*miŋḍi/miŋḍɛ*/ ನಾ. 1. ಅನಧಿಕೃತ ಉಪಪತ್ನಿ, 2. ತುಂಬು ಯೌವನೆ, 3. ನವತರುಣಿ. 1. paramour, having an extramarital relationship with a woman, 2. youthful woman, 3. a young woman. ವಾ: ಮಿಂಡಿಗಳ ಸಾವಾಸಂದ ಅಂವ ಕೆಟ್ಟತ್.

ಮಿಂಡ್ /*miŋḍɨ*/ ಕ್ರಿ. ಹಲಸಿನ ಹಣ್ಣಿನಿಂದ

ಸೋಳೆಯನ್ನು ಕಿತ್ತು ತೆಗೆಯುವುದು. to seperate jackfruit from its bunches. ವಾ: ಹಲ್ಸ್‌ನ ತೋಳೆನ ಮಿಂಡ್‌ದು.

ಮಿಂಡ್ರ /*minḍra*/ ನಾ. ಮಿಂಡ. a man who has extra-marital affair. ವಾ: ಅವುಳ ಮಿಂಡ್ರ ಬಾತ್.

ಮಿಂಪುಳಿ /*mimpuḷi*/ ನಾ. 1. ಮಿಂಚುಹುಳ, 2. ತನ್ನ ದೇಹದಿಂದ ಬೆಳಕನ್ನು ಹೊಮ್ಮಿಸುವ ಒಂದು ಬಗೆಯ ಹುಳು, 3. ಮಿಂಚುಳಿ, 4. ಮಿಣುಕುಹುಳು. 1. a glowworm, 2. bioluminescenct insects, 3. an insect that emits light from its body, 4. a luminous insect. ವಾ: ರಾತ್ರೆ ಮಿಂಪುಳಿ ಹಾರಕನ ಬೆಳ್‌ಕ್ ಕಂಡದೆ. ಪ: ಮಿನ್ಪುರಿ(ತು)

ಮಿಕ /*mika*/ ನಾ. 1. ಪ್ರಾಣಿ, 2. ಮೃಗ, 3. ಮೋಸಕ್ಕೆ ಗುರಿಯಾಗುವ ವ್ಯಕ್ತಿ. 1. an animal, 2. an animal, 3. someone who gets cheated. ವಾ: ಅಂವ ರಸಲಿ ಮಾತಾಡಿ ನನ್ನೆ ಮಿಕ ಮಾಡಿಬುಡ್ತ್.

ಮಿಕ್ಕ /*mikka*/ ಕ್ರಿವಿ. 1. ಉಳಿದ, 2. ಮಿಗುತೆ. left over. ವಾ: ಮಿಕ್ಕವೆಲ್ಲ ಎಲ್ಲಿ ಹೋದೊ?

ಮಿಗ್ದ /*migda*/ ನಾ. ಮಿಕ್ಕಿದ. left over. ವಾ: ಮಿಗ್ದ ರೊಟ್ಟಿನ ಎಲ್ಲಿಸಿದ?

ಮಿಗ್ದತ್ /*migdatɨ*/ ನಾ. ಮಿಕ್ಕಿತು. left over. ವಾ: ಇಲಾತ್‌ಕಾಳ್ ಆಂಬರ ಸುಮಾರ್ ಮಿಗ್ದತ್.

ಮಿಜ /*mija*/ ಕ್ರಿ. ಸಣ್ಣ ಆಕೃತಿಯ ಗೆರಸೆ. a small kind of basket for winnowing. ವಾ: ದೋರಿನ ಹಾಂಗೇ ಕಾಂಬ ಒಂದು ಹತ್ಯಾರ್.

ಮಿಜಿಮಿಜಿ /*miji miji*/ ಅ. ಹುಣ್ಣು, ಗಾಯ ಅಥವಾ ಇತರ ಕೊಳೆತ ವಸ್ತು, ನೀರು ಮೊದಲಾದುವುಗಳಲ್ಲಿ ತುಂಬಿದ ಅಸಂಖ್ಯಾತ ಹುಳುಗಳು ಇದ್ದಲ್ಲೇ ಹೊರಳಾಡುತ್ತಿರುವುದನ್ನು ಹೇಳುವ ಪದ rolling of innumerable worms (in fruits, cuts/wounds, in rotten things, polluted water etc,). ವಾ: ಉಪ್ಪನಕಾಯಿಲಿ ಹುಳ ಮಿಜಿಮಿಜಿ ಮಿಜುಲುದುಗಡ.

ಮಿಜಿದು /*mijidu*/ ಕ್ರಿ. ಭತ್ತ ಕುಟ್ಟುವುದು. pounding paddy. ವಾ: ಹಿಂದೆಲ್ಲ ಬತ್ತನ ಮಿಜಿತ್ತಿದ್ದೊ. ಪ: ಮಿಜೆದು/ಮಿಜ್ಜುದು

ಮಿಜುಲು /*mijulu*/ ಕ್ರಿ. ದಟ್ಟವಾಗಿ ಹುಳುಗಳಿಂದ ತುಂಬಿದ. infected with worms. ವಾ: ನಿತ್ತ ನೀರ್‌ಲಿ ಹುಳ್‌ಗ ಮಿಜುಲ್‌ವೆ.

ಮಿಜುಲ್‌ದು /*mijulɨdu*/ ಕ್ರಿ. 1. ಮಿಸುಕಾಡು, 2. ಅಲುಗಾಡು, 3. ಅಲ್ಲಾಡು. 1. to move, 2. tremble, 3. to shake. ವಾ: ಆನೆ ಮೆಲ್ಲ ಮಿಜುಲ್‌ದು.

ಮಿಞ್ಞರಿ /*miɲɲari*/ ನಾ. ಕಿತ್ತಳೆ, ಮೂಸಂಬಿ ಹಣ್ಣಿನ ಒಳಗಿರುವ ತಿರುಳು. pulp of an orange. ವಾ: ಕೂಸಿಗೆ ಕಿತ್ತುಳಿ ಮಿಞ್ಞರಿನ ಬುಡ್‌ಸಿ ಕೊಡಿ.

ಮಿಟಾಯಿ /*miṭa:yi*/ ನಾ. ಸಿಹಿತಿಂಡಿ. sweet dish. ವಾ: ಮಕ್ಕ ಮಿಟಾಯಿ ತಿಂಬದು.

ಮಿಡಿ /*miḍi*/ ನಾ. ಕಾಯಿ ಅಥವಾ ಹಣ್ಣಿನ ಎಳೆಯ ರೂಪ. fruit in its tender/early stage. **ಮಿಡಿಗೆ ಹಣ್ಣ್‌ನ ರುಚಿ ಬಾಕಿಲ್ಲೆ(ಗಾ).** ವಾ: ಅಂಬಟೆ ಮಿಡಿ ಸಿಕ್ಕಿರೆ ಉಪ್ಪನಕಾಯಿ ಹಾಕಕ್.

ಮಿಡ್ಕು /*miḍku*/ ಕ್ರಿ. 1. ಮಿಡುಕುವುದು, 2. ಬೆಚ್ಚಿ ಬೀಳುವುದು. to be taken aback by a surpise. ವಾ: ಕೂಸು ನಿದ್ದೆಲಿ ಮಿಡ್ಕುದು.

ಮಿಡ್ಕೆಕಾಯಿ /*miḍkɛ ka:yi*/ ನಾ. ಒಂದು ವಿಧದ ಕಾಯಿ. a type of fruit.

ಮಿಣಿಕಿ /*miṇiki*/ ನಾವಿ. 1. ಮಿಟಕಲಾಡಿ, 2. ಹೆಣ್ಣಿಗೆ ಬಯ್ಯುವ ಪದ. 1. a flirtuos woman, 2. a term of abuse, used against a woman. ವಾ: ಮಿಣಿಕಿ ಗೂಡೆ ಸುತ್ತಿಕಂಡ್ ಬಾತ್.

ಮಿಣ್ಕಾಣಿ /*miṇka:ṇi*/ ನಾವಿ. ಹೆಣ್ಣಿಗೆ ಬಯ್ಯುವ ಪದ. an expletive term used against a woman. ವಾ: ಅವ್ಳು ಬರಿಮಿಣ್ಕಾಣಿ ಹೆಣ್ಣ್. ಪ: ಮಿಂಣ್ಕಾಣಿ – ಬೈಗುಳದ ಮಾತು

ಮಿಣ್ಕ್[1] /*miṇkɨ*/ ಕ್ರಿ. 1. ಮಿನುಗು, 2. ಹೊಳೆ, 3. ಪ್ರಕಾಶಿಸು, 4. ಹೊಳಪು. 1. to shine, 2. to brighten, 3. to gleam, 4. to emit light. ವಾ: ರಾತ್ರೆ ಆಕಾಸಲಿ ಚುಕ್ಕೆಗ ಮಿಣ್ಕ್ ಮಿಣ್ಕ್ ತೇಲ್ದೆ. ಪ: ಮಿಣ್ಕಿದೆ – ಹೊಳೆಯುತ್ತಿದೆ/ಮಿನುಗುತ್ತಿದೆ

ಮಿಣ್ಕ್[2] /*miṇkɨ*/ ಕ್ರಿ. ಮಿನುಗು. to twinkle. ವಾ: ಆಕಾಸಲಿ ರಾತ್ರೆ ಚುಕ್ಕೆಗ ಮಿಣ್ಕುದು ಕಂಡದೆ. ಪ: ಮಿಣ್ಕತಿತ್ – ಮಿನುಗುತಿತ್ತು

ಮಿಣ್ಕುಳ /*miṇkuḷa*/ ನಾ. 1. ಮಿಂಚುಹುಳ, 2. ತನ್ನ

ದೇಹದಿಂದ ಬೆಳಕನ್ನು ಹೊಮ್ಮಿಸುವ ಒಂದು ಬಗೆಯ ಹುಳು, 3. ಮಿಂಚುಳಿ, 4. ಮಿಣುಕುಹುಳು. 1. a glowworm, 2. bioluminescenct insects, 3. an insect that emits light from its body, 4. a luminous insect. ವಾ: ಮಿಣ್ಕುಳ ಬೆಳ್ಕ್ ತೋರ್‌ಸಿದೆ. **ಮಿಣ್ಣುಳಿ** /*miṇṇuḷi*/ ವಾ: ಮಿಣ್ಣುಳಿ ಮೈಲಿ ಪಿಳ್ಕ್ ಪಿಳ್ಕ್ ತ ಬೆಳ್ಕ್ ಬಂದದೆ. **ಮಿಣ್‌ಪುಳಿ** /*miṇɨpuḷi*/ ವಾ: ಮಿಣ್ಣುಳಿ ಇರ್ಲ್‌ಲಿ ಮಿಣ್ಕಿದೆ.

ಮಿಣ್ಣಪ್ಪ /*Miṇṇappa*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. masculine given name. ಪ: ಮಿಣ್ಣ

ಮಿತಾಂಡೇಲ್ /*mita:ṇḍe:lɨ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮಿತೂರ್ /*mitu:rɨ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮಿತ್ತಪೇರಾಲು /*mittape:ra:lu*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮಂಡೆಕೋಲು ಗ್ರಾಮದ ಜಾಗ. 1. family, 2. lineage, 3. a locality in Mandekolu village in Sullia Taluk of Dakshina Kannada District.

ಮಿತ್ತಮಜಲು /*mittamajalu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಜಾಲ್ಸೂರು ಗ್ರಾಮದ ಜಾಗ. a locality in Jalsuru village in Sullia Taluk of Dakshina Kannada District.

ಮಿತ್ತಮರ್ದೂರು /*mittamardu:ru*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಎಡಮಂಗಲ ಗ್ರಾಮದ ಜಾಗ. a locality in Edamangala village in Sullia Taluk of Dakshina Kannada District.

ಮಿತ್ತಿಲ /*mittila*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮಂಡೆಕೋಲು ಗ್ರಾಮದ ಜಾಗ. a locality in Mandekolu village in Sullia Taluk of Dakshina Kannada District.

ಮಿತ್ತೂರು /*mittu:ru*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮಿತ್ತೋಡಿ /*mitto:ḍi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕೊಲ್ಲಮೊಗ್ರು ಗ್ರಾಮದ ಜಾಗ. a locality in Kollamogru village in Sullia Taluk of Dakshina Kannada District.

ಮಿದ್ದ್[1] /*middɨ*/ ನಾ. 1. ಸ್ನಾನಮಾಡು, 2. ಜಳಕ, 2. ಮಜ್ಜನ. 1. to bathe, 2. taking bath, 3. to wash one's body in water. ವಾ: ಗುಡ್ಡಲಿ ಮಿದ್ದ್ ಬಂದದ್. ಪ: ಮಿದ್ದತ್‌ಗಡ; ಸ್ನಾನ ಮಾಡಿದನಂತೆ/ಳೆ

ಮಿದ್ದ್[2] /*middɨ*/ ಕ್ರಿ. 1. ಕುಟ್ಟು, 2. ಒನಕೆ ಮೊದಲಾದವುಗಳಿಂದ ಏಟು ಹಾಕಿ ಧಾನ್ಯಗಳ ಹೊಟ್ಟು ತೆಗೆ, 3. ಭತ್ತದ ಹೊಟ್ಟು ತೆಗೆಯುವುದು. 1. to pound, 2. to pound paddy to seperate rice from chaff, 3. to seperate paddy from its husk. ವಾ: ಬತ್ತನ ಮಿದ್ದ್ ಅಕ್ಕಿ ತೆಗೆದು. ಪ: ಮಿದ್ಯದು – ಕುಟ್ಟುವುದು

ಮಿನಿ /*mini*/ ಅ. ಬಹುಶಃ ಎಂಬ ಅರ್ಥದಲ್ಲಿ ಬಳಕೆಯಾಗುತ್ತದೆ. probably. ವಾ: ನಮ್ಮೊಟ್ಟಿಗೆ ಅವ್ ಮಿನಿ ಬಾಕಿಲೆ. ಪ: ಮೊನಿ

ಮಿನುಂಗೂರ್ /*minuŋgu:rɨ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮಿನ್ /*minɨ*/ ನಾ. ಮೀನಿನ ಮೊಟ್ಟೆ. fish eggs. ವಾ: ಮಳ್ಗಾಲಲಿ ಮೀನ್‌ಲಿ ಮಿನ್ ಹೆಚ್ಚಿ ಇದ್ದದೆ.

ಮಿನ್‌ಚರ /*minɨcara*/ ನಾ. ಮೀನ ಖಂಡ. caf muscle. ವಾ: ಜೋರಾಗಿ ಓಡಿಕನ ಮಿನ್‌ಚರ ಹಿಡ್ಕಂಡುಟು.

ಮಿನ್ನಿರಿ[1] /*minniri*/ ನಾ. 1. ಹಲಸಿನ ರಚ್ಚೆ / ಸಾರೆಯಲ್ಲಿರುವ ಸಣ್ಣ ಸಣ್ಣ ಹಲಸಿನ ತೊಳೆ, 2. ಕನ್ನಿಪಚ್ಚಿಲ್(ತು). a small bulb of jackfruit. ವಾ: ಹಲ್‌ಸ್‌ನಣ್ಣ್ ಮಿನ್ನಿರಿನ ಬುಡ್ಸುದು. ಪ: ಮಿಣ್ಣಿರ್

ಮಿನ್ನಿರಿ[2] /*minniri*/ ನಾ. ಕಿತ್ತಳೆ ಹಣ್ಣಿನ ಎಸಳಿನ ಒಳ ಭಾಗ. pulp of orange. ವಾ: ಕಿತ್ತುಳಿದ್ ಮಿನ್ನಿರಿನ ಬುಡ್‌ಸಿ ಕೂಸಿಗೆ ತಿನ್ಸ್.

ಮಿನ್ಪೊಟ್ಟೆ /*minɨpoṭṭɛ*/ ನಾ. 1. ಕೋಲು ಕಾಲಿನ ಹಿಂಭಾಗ, 2. ಮೀನೊಟ್ಟೆ, 3. ಮೀನಖಂಡ, 4. ಮೀನಪೊಟ್ಟೆ. 1. calf muscle, 2. calf, 3. calf muscle, 4. calf. ವಾ: ಮಿನ್ಪೊಟ್ಟೆ ಊದಿಕಂಡುಟು, ಬೇನೆಂದ ಮುಟ್ಟಿಕಾದುಲೆ.

ಮಿಮ್ಮಿ /*mimmi*/ ನಾ. ಮಭಾ. ಮೀನು. fish (in the vocabulary of children). ವಾ: ನಂಗೆ ಮಿಮ್ಮಿ ಬೇಕ್.

ಮಿಯುದು /*miyudu*/ ಕ್ರಿ. ಸ್ನಾನ ಮಾಡುವುದು. to

bathe/take bath. ವಾ: ಹೊತಾರೆನೆ ಮಿಯುದು ಒಳ್ಳದ್. ಪ: ಮಿಯಕೆ – ಸ್ನಾನ ಮಾಡಲಿಕ್ಕೆ; ಮಿಯೊಕು – ಸ್ನಾನ ಮಾಡಬೇಕು; ಮಿಯೊದ್ – ಸ್ನಾನ ಮಾಡುವುದು; ಮಿಯ್ಯೊದು – ಸ್ನಾನ ಮಾಡುವುದು. **ಮಿಸಿಕೆ** /*misikɛ*/ ಸ್ನಾನ ಮಾಡಿಸಲು. to make someone have bath. ವಾ: ಕೂಸುನ ಮಿಸಿಕೆ ನಂಗೆ ಬೊತ್ತ್. **ಮಿಸುದು** /*misudu*/ ಸ್ನಾನ ಮಾಡಿಸುವುದು. to make someone have bath. ವಾ: ಎಸ್ಟೊತ್ತಿಗೆ ಬಾಣ್ತಿನ ಕೂಸುನ ಮಿಸುದು.

ಮಿಯ್ಯ /*miyya*/ ಅ. ಮಭಾ. ಬೆಕ್ಕು. a cat (in the vocabulary of children). ವಾ: ತಾತ ಮಿಯ್ಯ ಮನೆ ವಳಗೆ ಹೋತು.

ಮಿಯ್ಯೋಣಿ /*miyyo:ṇi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮರ್ಕಂಜ ಗ್ರಾಮದ ಜಾಗ. a locality in Markanja village in Sullia Taluk of Dakshina Kannada District.

ಮಿರ್ಂಡ್ /*miriṇḍɨ*/ ಕ್ರಿ. ಮಕ್ಕಳಿಗಾಗಿ ಆಹಾರವನ್ನು ಕೈಯಲ್ಲಿ ಅರೆಯುವುದು. to grind/mash children's food. ವಾ: ಕೂಸಿಗೆ ಕೊಡಿಕೆ ಅನ್ನನ ಮಿರ್ಂಡುದು.

ಮಿಸಾನ್ /*misa:nɨ*/ ನಾ. ಎಪ. ಮೆಶಿನ್. a machine. ವಾ: ಹೊಲಿಗೆ ಮಿಸಾನ್‌ನ ರಿಪೇರಿ ಮಾಡ್ಳೊಕು.

ಮಿಸ್ಮ /*misma*/ ನಾವಿ. 1. ಚತುರ, 2. ಕೌಶಲ್ಯಪೂರ್ಣ. 1. intelligent, 2. skillful. ವಾ: ಅಂವ ಮಾತ್‌ಲಿ ಬಾರಿ ಮಿಸ್ಮ.

ಮಿಸ್ರ /*misra*/ ನಾ. 1. ಮಿಶ್ರಣ ಮಾಡು, 2. ಸೇರಿಸುವುದು, 3. ಕೂಡಿಸುವುದು, 4. ಬೆರೆಸುವುದು. 1. to mix, 2. addition, 3. adding, 4. combine. ವಾ: ಎಣ್ಬರ್‌ಸನ ಮಾಡಿಕನ ಕಾಯೆಣ್ಣೆಗೆ ಅರ್‌ಸಣ ಹೊಡಿನ ಮಿಸ್ರ ಮಾಡೊಕು.

ಮಿಳ್ಳಿ /*miḷḷi*/ ನಾ. 1. ಚಿಕ್ಕ ಪಾತ್ರೆ, 2. ಇಡ್ಲಿ ಮಿಳ್ಳಿ, 3. ಎಣ್ಣೆ ಮಿಳ್ಳಿ. 1. a small container of water, 2. Idly steamer, 3. an oilcan. ವಾ: ಎಣ್ಣೆ ಮಿಳ್ಳಿಲಿ ಎಣ್ಣೆನ ಬಿಸಿ ಮಾಡುದು.

ಮೀಂಚುಳಿ ಹಕ್ಕಿ /*mi:ŋcuḷi hakki*/ ನಾ. 1. ಮಿಂಚುಳ್ಳಿ ಪಕ್ಷಿ, 2. ಮಿಂಚುಳ್ಳಿಗಳು ಕೊರಾಸಿಫಾರ್ಮ್ಸ್ ವರ್ಗದಲ್ಲಿನ ಚಿಕ್ಕದಿಂದ ಮಧ್ಯಮ ಗಾತ್ರದ ಪ್ರಕಾಶಮಾನವಾದ ಬಣ್ಣವನ್ನೊಂದಿದ ಪಕ್ಷಿಗಳ ಒಂದು ಪಂಗಡ, ಇವು ಮೊನಚಾದ ಕೊಕ್ಕುಗಳನ್ನು, ಕುಳ್ಳಗಿನ ಕಾಲುಗಳನ್ನು, ಮತ್ತು ಮಂದವಾದ ಬಾಲಗಳನ್ನು ಹೊಂದಿವೆ. Kingfisher bird, belong to the order of Coraciiformes, have bright coloured feather, have sharp bills, short legs, and thick tails. ವಾ: ಮೀಂಚುಳಿ ಹಕ್ಕಿಗ ಕುದ್ದ ಗೆಲ್ಲ್‌ಂದನೆ ಹಾರಿ ಮೀನ್‌ನ ಹಿಡ್ದ್ ತಿಂದವೆ.

ಮೀಂಡುದು /*mi:ṇḍudu*/ ಕ್ರಿ. ಎಳೆದು ತೆಗೆಯುವುದು. to pull/to pluck. ವಾ: ಕಾಲಿಗೆ ಹೆಟ್ಟಿದ ಮುಳ್ಳುನ ಮೀಂಡುದು. ಪ: ಮೀಂಡಿದ್ – ಬಲವಾಗಿ ಮೀಟುವುದು

ಮೀಂಡ್[1] /*mi:ṇḍɨ*/ ನಾ. ಬಿಟ್ಟು. left.

ಮೀಂಡ್[2] /*mi:ṇḍɨ*/ ಕ್ರಿವಿ. ಹಲಸಿನ ಹಣ್ಣಿನಿಂದ ಸೋಳೆಯನ್ನು ಕಿತ್ತು ತೆಗೆಯುವುದು. to pull jackfruit bulb from the rind. ವಾ: ಹಲ್‌ಸ್‌ನ ತೋಳೆನ ಮೀಂಡ್.

ಮೀಕಂಡ್ /*mi:kaṇḍɨ*/ ಕ್ರಿ. ಸ್ನಾನ ಮಾಡಿಕೊಂಡು. after having bath. ವಾ: ಈಗ ಮೀಕಂಡ್ ಬಾಕು. ಪ: ಮೀಕಂಡಿರಿಕನ – ಸ್ನಾನ ಮಾಡುತ್ತಿರುವಾಗ

ಮೀಟಿಂಗ್ /*mi:ṭiŋgɨ*/ ನಾ. ಎಪ. 1. ಸಭೆ ಸೇರುವುದು, 2. ಗೋಷ್ಠಿ, 3. ಕೂಟ. 1. to conduct a meeting, 2. a meeting, 3. an event. ವಾ: ಮೀಟಿಂಗ್ ಆತ?

ಮೀದಿ ಇಸುದು /*mi:di isudu*/ ಕ್ರಿ. ಗತಿಸಿದ ಹಿರಿಯರಿಗೆ ನೈವೇದ್ಯ ಇಡುವುದು. an offering for the dead. ವಾ: ವರ್‌ಸಕೊಮ್ಮೆ ಸತ್ತ ಹಿರಿಯವ್ಕೆ ಮೀದಿಗೆ ಇಸುದು.

ಮೀದ್ /*mi:dɨ*/ ಕ್ರಿ. ಸ್ನಾನ ಮಾಡಿ. after having bath. **ಅಂದ್ ಬಾಂತೇಳ್ರೆ ಮೀದ್ ಬಾತ್(ಗಾ).** ವಾ: ಈಗ ಮೀದ್ ಬಂದದ್. ಪ: ಮೀದ – ಸ್ನಾನ ಮಾಡಿದೆಯ; ಮೀದಾಗುಟ್ಟು – ಸ್ನಾನ ಮಾಡಿ ಆಯಿತು. **ಮೀಕಂಡ್** /*mi:kaṇḍɨ*/ ಸ್ನಾನ ಮಾಡಿಕೊಂಡು. after having bath. ವಾ: ಈಗ ಮೀಕಂಡ್ ಬಾಕು. ಪ: ಮೀಕಂಡಿರಿಕನ – ಸ್ನಾನ ಮಾಡುತ್ತಿರುವಾಗ. **ಮೀದಿ ಇಸುದು** /*mi:di isudu*/ ಗತಿಸಿದ ಹಿರಿಯರಿಗೆ ನೈವೇದ್ಯ ಇಡುವುದು. an offering for the dead. ವಾ: ವರ್‌ಸಕೊಮ್ಮೆ ಸತ್ತ ಹಿರಿಯವ್ಕೆ ಮೀದಿಗೆ ಇಸುದು.

ಮೀದ್ ಬಾ /*mi:dɨ ba:*/ ಸ್ನಾನ ಮಾಡಿ ಬಾ. have bath and come. ವಾ: ಹೋಗಿ ಮೀದ್ ಬಾನೆ.

ಮೀನಕಂಡ /*mi:nakaṇḍa*/ ನಾ. ಮೀನ ಖಂಡ, ಕಾಲಿನ ಮಾಂಸಖಂಡ. calf muscle. ವಾ: ಮೀನ್ ಕಂಡ ಬಾತುಟು.

ಮೀನಗದ್ದೆ[1] /*me:na gaddɛ*/ ನಾ. ಒಂದು ಬೇಸಾಯದ ಗದ್ದೆ ಹೆಸರು. ಸ್ಥಳನಾಮ. a name for a paddy field. Name of a place.

ಮೀನಗದ್ದೆ[2] /*mi:nagaddɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮೀನಾಜೆ /*mi:na:je*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ದೇವಚಳ್ಳ ಗ್ರಾಮದ ಜಾಗ. a locality in Devacalla village in Sullia Taluk of Dakshina Kannada District.

ಮೀನುಗೈಪು /*mi:nugaipu*/ ನಾವಿ. ಮೀನು ಪದಾರ್ಥ. fish curry. ವಾ: ಮೀನು ಗೈಪುಗೆ ಹಳ್ಳ ಒಳ್ಳಮೆಣ್ಸ್ ಹೊಡಿ ಹಾಕಿ ಕಾರ ಕಾರಾಗಿ ಮಾಡೊಕು.

ಮೀನೆಣ್ಣೆ /*mi:neɳɳɛ*/ ನಾ. 1. ಮೀನಿನ ಎಣ್ಣೆ, 2. ಮೀನಿನ ಅಂಗಾಂಶದಿಂದ ತೆಗೆದ ಕೊಬ್ಬು ಅಥವಾ ಎಣ್ಣೆ. fish oil. ವಾ: ಕಣ್ಣಿನ ಆರೋಗ್ಯಕೆ ಮೀನೆಣ್ಣೆನ ಬಳ್ಸುವೆ.

ಮೀನೊಟ್ಟೆ /*mi:nɔʈʈɛ*/ ನಾ. 1. ಕೋಲು ಕಾಲಿನ ಹಿಂಭಾಗ, 2. ಮಿನ್ನೊಟ್ಟೆ. Calf muscle. ವಾ: ಸೆಳಿಗೆ ಮೀನೊಟ್ಟೆ ಸಿಡೆದು.

ಮೀನ್ /*mi:nɨ*/ ನಾ. 1. ಮೀನು, 2. ಮತ್ಸ್ಯ, 3. ಕಿವಿರುಗಳನ್ನುಳ್ಳ ಒಂದು ಕಶೇರುಕ ಜಲಚರ ಪ್ರಾಣಿ. fish, an aquatic creature. **ನೀರ್‌ಲಿ ಮೀನ್‌ನ ಹೆಜ್ಜೆ ಹುಡ್ಕಿದಂಗೆ(ಗಾ).** ವಾ: ಅವು ಕೆರೆಲಿ ಸಾಂಕಿದ ಮೀನ್‌ನ ಹಿಡೆದು. ಪ: ಮೀನ್ ಹತ್ತಿಟು – ಮಳೆಗಾಲದಲ್ಲಿ ಗದ್ದೆಗಳಲ್ಲಿ, ಬಯಲು ಪ್ರದೇಶದಲ್ಲಿ ಬರುವ ಮೀನು;

ಮೀನ್‌ಕುಳ್ಳ /*mi:nɨkuḷḷa*/ ನಾ. ಮೀನು ತಿಂದು ಬದುಕುವ ಮಿಂಚುಳ್ಳಿ ಹಕ್ಕಿ. Kingfisher bird, feeds on fish. ವಾ: ಮೀನ್ ಕುಳ್ಳ ಹಕ್ಕಿಗಳ್‌ದ್ ದೊಡ್ಡ ತಲೆ, ಉದ್ದ ಕೊಕ್ಕ್, ಮಂದ ಬಾಲ, ಸಣ್ಣ ಕಾಲ್. ಪ: ಮೀನ್ಕುಳ ಹಕ್ಕಿ – ಮಿಂಚುಳ್ಳಿ/ಜಾಲಗಾರ ಹಕ್ಕಿ

ಮೀನ್‌ಚಲ್ಲ್ /*mi:nɨcalli*/ ನಾ. ಹಾಳಾದ ಮೀನು ಗೊಬ್ಬರ. spoiled fish manure.

ಮೀನ್‌ಪಟ್ಟೆ /*mi:nɨpaʈʈɛ*/ ನಾ. ಕೋಲು ಕಾಲಿನ ಹಿಂಭಾಗ. Calf muscle. ವಾ: ಮೀನ್ ಪಟ್ಟೆ ಸಿಡೆದು. ಪ: ಮಿನ್ನೊಟ್ಟೆ(ತು)

ಮೀನ್‌ಪುಲೆಜಿ /*mi:nɨpuleji*/ ನಾ. ಮೀನಿನ ಮೈಮೇಲಿನ ಸಿಪ್ಪೆ. scale on the body of fish. ವಾ: ಕೆಲು ಮೀನ್ ಪುಲೇಜ್‌ನ ತೆಗೆಕೆ ಕಲ್ಲಿಗೆ ಉಜ್ಜೊಕು. ಬೇಗ ಹೋದೆ. ಪ: ಮೀನ್ ಪೊಲೆಜಿ

ಮೀನ್‌ಕುಮಾರ /*mi:nɨkuma:ra*/ ನಾ. ಅರೆಭಾಷೆ ಜನಪದ ಕತೆಯಲ್ಲಿ ಬರುವ ಒಂದು ಪಾತ್ರದ ಹೆಸರು. a character who appears in the folk story of Arebhase. ವಾ: ಮೀನ್‌ಕುಮಾರ ತೋಟದ ಕೆರೆಲಿ ಇದ್ದದೆ.

ಮೀನ್ಕೂಳಿ /*mi:nku:ḷi*/ ನಾ. 1. ಕೂಳಿ, 2. ಮೀನು ಹಿಡಿಯುವ ಒಂದು ಸಾಧನ. a fishing equipment. ವಾ: ಮೀನ್ಕೂಳಿ ಇದ್ದರೆ ಮೀನ್ ಹಿಡೆಕ್. ಪ: ಕೂರಿ(ತು)

ಮೀನ್ಪುಳಿ /*mi:npuḷi*/ ನಾ. ಹುಳಿ ರುಚಿಯ ಈ ಹಣ್ಣನ್ನು ತಂಪು ಪಾನೀಯಕ್ಕಾಗಿ ಬಳಸಲಾಗುತ್ತದೆ. a sour fruit – used for making juices. ವಾ: ಮೀನ್ಪುಳಿ ರುಚಿಲಿ ಹುಳಿ ಹುಳಿ.

ಮೀನ್‌ರೆಂಕೆ /*mi:nɨrɛŋkɛ*/ ನಾ. 1. ಮೀನಿನ ರೆಕ್ಕೆ, 2. ಮೀನಿನ ಕಿವಿರು. gill of fish. ವಾ: ಮೀನ್ ಮೀನ್‌ರೆಂಕೆಲೆ ಉಸಿರಾಡ್ದು.

ಮೀಯ್ದ್ /*mi:ydi*/ ಕ್ರಿ. 1. ಸ್ನಾನ ಮಾಡುವುದು, 2. ಜಳಕ ಮಾಡುವುದು. have bath. **ಸಾವ್ರಾರ್ ಜನ ಮೀಯ್ದ್ ಬಾಕನ ಅಜ್ಜನು ಅಜ್ಜಿನು ಬಾಗ್ಲ್ ತಡ್ದವೆ – ಅನ್ನ ಬಾಗುದು (ಚಿಬ್ಬ್‌ಲ್, ಮರ್ಚಟೆ)(ಒ).** ವಾ: ಅಪ್ಪ ಮೀಯ್ದ್ ಬಂದೊ. **ಮೀಯು** /*mi:yu*/ ಸ್ನಾನಮಾಡು. to have bath. ವಾ: ಮೀಯಕೆ ಗುಡ್ಡಕೆ ಬೆಂಕಿ ಹಾಕೊಕ? ಪ: ಮೀಯಕೆ ಹೋಗು – ಸ್ನಾನ ಮಾಡಲು ಹೋಗು; ಮೀಯದು – ಸ್ನಾನ ಮಾಡುವುದು; ಮೀಯೊಕು – ಸ್ನಾನ ಮಾಡಬೇಕು; ಮೀಸೊಕು – ಸ್ನಾನ ಮಾಡಿಸಬೇಕು; ಮೀಸ್‌ಬಡ – ಸ್ನಾನ ಮಾಡಿಸಬೇಡ

ಮೀರಿ /*mi:ri*/ ಕ್ರಿವಿ. 1. ದಾಟಿಹೋಗು, 2. ಉಲ್ಲಂಘಿಸು.

1. surpass/disobey, 2. to transgress. ವಾ: ಮಕ್ಕ ದೊಡ್ಡವರ ಮಾತ್ ಮೀರಿ ನಡೆದು ಒಳ್ಳ ಲಕ್ಷಣ ಅಲ್ಲ. ಪ: ಮೀರಿಟು – ಮೀರಿದ್ದಾನೆ

ಮೀಸುದು /*mi:sudu*/ ಕ್ರಿ. ಈಜುವುದು. swimming. ವಾ: ರಜ ಬಂದರೆ ಎಲ್ಲ ಮಕ್ಕ ಸೇರಿಕಂಡ್ ಹಳ್ಳಲಿ ಮೀಸುದು. ಪ: ಮೀಸಿಕೆ – ಈಜಲು

ಮೀಸೆ /*mi:sɛ*/ ನಾ. 1. ಮೀಸೆ, 2. ಗಂಡಸಿನ ಮೇಲ್ತುಟಿಯ ಮೇಲಿರುವ ಕೂದಲು, 3. ಶ್ಮಶ್ರು. moustache, a strip of hair grown above the upper lip. **ಅಡಿಗೆ ಬಿದ್ದರೂ ಮೀಸೆ ಮೊಣ್ಣಾ ಕಾಗದ್(ಗಾ). ಉದ್ದ ಮೀಸೆನಾ ರಾಜ ಸರ್‌ತಾ ಹೋದೆ ಸರ್‌ತಾ ಬಂದೆ – ಹಾಂತೆ(ಒ).** ವಾ: ಮೀಸೆ ತಿರ್‌ಗಿಸಿದವೆಲ್ಲ ಮಣ್ಣ್ ಮುಕ್ಕಿದೊ. **ಮೀಸೆಬಾತ್** /*mi:sɛ ba:tɨ*/ 1. ಯೌವ್ವನಕ್ಕೆ ಬರುವುದು, 2. ಪ್ರಾಯಕ್ಕೆ ಬರು. 1. adulthood-youth, 2. becoming youth. ವಾ: ಮೀಸೆ ಬಾಕನ ದೇಸ ಕಾಂಬಲೆತ ಹಿರಿಯರ್ ಹೇಳ್ದ ಗಾದೆ ಉಟ್ಟು.

ಮೀಸೆಮೀನ್ /*mi:semi:nɨ*/ ನಾ. 1. ಬೆಕ್ಕುಮೀನು, 2. ಉದ್ದನೆಯ ದೊಡ್ಡ ಮೀಸೆ ಹೊಂದಿರುವ ಮೀನು. 1. a catfish, 2. fish barbels, resembling cat's whiskers. ವಾ: ಮೀಸೆ ಮೀನ್‌ಗೆ ಉದ್ದುದ್ದ ಮೀಸೆಗ ಇದ್ದದೆ.

ಮೀಸ್ /*mi:sɨ*/ ಕ್ರಿ. ಸ್ನಾನ ಮಾಡಿಸು. to bathe someone. **ಮೀಸೆ ಇರ್‌ಕನ ಮೀಸಿಕಣಕು(ಗಾ). ಮೀನಿಗೆ ಮೀಸಿಕೆ ಕಲ್ಸೊಕ?(ನು).** ವಾ: ಹೆದ್ರ್ ಬಡ ಕೂಸುನ ನೀನೆ ಮೀಸ್, ಎಲ್ಲನು ಕಲಿಯಕೊಲ. ಪ: ಮೀಸುದು – ಸ್ನಾನ ಮಾಡಿಸುವುದು

ಮುಂಗರ್ಸಿ /*muŋgarsi*/ ನಾ. 1. ಮುಗ್ಗರಿಸಿ, 2. ಎಡವು. 1. to stumble, 2. to trip over. ವಾ: ಸೀರೆ ಉಟ್ಟಿದ್ ಉದ್ದಾಗಿ ನಡೆಕನ ಮುಂಗರ್ಸಿ ಬೀಳ್ತಿದ್ದೆ. ಪ: ಮುಂಗರ್ಸಿದ್

ಮುಂಗಾರ್ /*muŋga:rɨ*/ ನಾ. 1. ಮುಂಗಾರು, 2. ವರ್ಷದ ಮೊದಲ ಮಳೆ. 1. monsoon, 2. the first rain of the year. ವಾ: ಈ ವರ್‌ಸ ಬೇಗ ಮುಂಗಾರ್ ಮಳೆ ಸುರಾದಂಗೆ ಕಂಡದೆ.

ಮುಂಗಾಲ್ /*muŋga:lɨ*/ ನಾ. 1. ಕಾಲಿನ ಮುಂಭಾಗ, 2. ಮುಂಗಾಲು. front of one's leg. ವಾ: ಮುಂಗಾಲ್‌ಗೆ ಕುಂಟೆ ಹೆಟ್ಟಿದ್.

ಮುಂಗುರ್ಸಿ /*muŋgursi*/ ನಾ. 1. ಎಡವು, 2. ಮುಗ್ಗರಿಸು, 3. ಉರುಳು, 4. ಕೆಳಕ್ಕೆ ಬೀಳು. 1. to stumble, 2. trip over, 3. to roll over, 4. to fall down. ವಾ: ಅದಾ, ಅದ್ ಮುಂಗುರ್ಸಿ ಬೀತ್.

ಮುಂಗುಲಿ /*muŋguli*/ ನಾ. ಮುಂಗುಸಿ. a mangoose. ವಾ: ಮುಂಗುಲಿ ಕೋಳಿನ ಹಿಡ್ದ್ ತಿಂದದೆ. ಪ: ಮುಂಗ್‌ಲಿ; ಮುಂಗ್ಲಿ

ಮುಂಗೆ /*muŋge*/ ಕ್ರಿವಿ. 1. ಮೊಳಕೆ, 2. ಆಗ ತಾನೆ ಮೊಳಕೆ ಬಂದ. 1. a sprout, 2. sprouted just then. ವಾ: ಬಿತ್ತಿದ ಇಲಾತ್‌ಕಾಳ್‌ದ್ ಮುಂಗೆ ಕಂಡದೆ. ಪ: ಮುಂಗೆ ಒಡಿದು – ಮೊಳಕೆಯೊಡೆಯುವುದು

ಮುಂಗೈ /*muŋgai*/ ಕ್ರಿವಿ. ಕೈಯ ಮುಂದು. front of one's hand. ವಾ: ಗೂಡೆ ಮುಂಗೈಲಿ ಪಾತ್ರನ ತಳ್ಳಿದ್.

ಮುಂಗ್ಲಿಮನೆ /*muŋglimanɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮುಂಗ್ಸಿ /*muŋgsi*/ ನಾ. 1. ಮುಂಗುಸಿ, 2. ವೈವರಿಡೀ ಕುಟುಂಬಕ್ಕೆ ಸೇರಿದ ಮಾಂಸಾಹಾರಿ ಸ್ತನಿಗಳ ಸಾಮಾನ್ಯ ಹೆಸರು, 3. ವಿಷಸರ್ಪಗಳ ವೈರಿ. 1. mangoose, 2. a carnivorous mammal belongs to the family Herpestidae, 3. assumed to be the enemy of snakes. **ಹಾವು ಮುಂಗ್ಸಿ ಇದ್ದಂಗೆ(ಗಾ).** ವಾ: ಮುಂಗ್ಸಿ ಹಾವ್‌ನ ಕಚ್ಚಿ ಎಳ್ದದೆ.

ಮುಂಡ /*muṇḍa*/ ನಾ. 1. ತಲೆಯಿಲ್ಲದ ದೇಹ, 2. ಅಟ್ಟೆ, 3. ರುಂಡ ಮತ್ತು ಅವಯವರಹಿತ ಮನುಷ್ಯ ದೇಹ, ತಲೆ ಮತ್ತು ಕೈಕಾಲುಗಳನ್ನು ಬಿಟ್ಟು ಶರೀರದ ಮಧ್ಯಭಾಗ. 1. a body without head, 2. trunk of the body, 3. trunk of the body. ವಾ: ತಲೆ ಕೊಯ್ದರೆ ಕೋಳಿನ ಮುಂಡ ರೆಟ್ಟಿದೆ.

ಮುಂಡಡ್ಕ /*muṇḍaḍka*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮುಂಡತ್ತಜೆ /*muṇḍattaje*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕೊಡಿಯಾಲ ಗ್ರಾಮದ ಜಾಗ. a locality in Kodiyala village in Sullia Taluk of Dakshina Kannada District.

ಮುಂಡಪ್ಪ /*muṇḍappa*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. masculine given name.

ಮುಂಡರ್ಕಬೊಳ್ಳಿ /*mundarkabolli*/ ನಾ. ಕಾಡಿನಲ್ಲಿ ದೊರೆಯುವ ನೂತನ ಗೃಹಗಳಿಗೆ ಪ್ರವೇಶ ಮಾಡುವ ದಿನ ಪೂಜೆ ಮಾಡಿ ಸುತ್ತಲು ಕಟ್ಟಲು ಬಳಸುವ ಬಳ್ಳಿ. a forest climber used during the worship and tied around the house on the day of house warming ceremony. ವಾ: ಹೊಸ ಮನೆ ಸೇರಿಕನ ಮುಂಡರ್ಕ ಬಳ್ಳಿನ ಮನೆ ಸುತ್ತ ಕಟ್ಟಿವೆ.

ಮುಂಡಾಜೆ /*munda:jɛ*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಹರಿಹರ ಪಲ್ಲತಡ್ಕ ಗ್ರಾಮದ ಜಾಗ. 1. family, 2. lineage, 3. a locality in Harihara Pallatadka village in Sullia Taluk of Dakshina Kannada District.

ಮುಂಡಾಲ /*munda:la*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮುಂಡಾಸ್ /*munda:si*/ ನಾ. ಪೇಟ. a turban. **ತಲೆ ಹೋದಮೇಲೆ ಮುಂಡಾಸ್ ಮೇಲೆ ಆಸೆ ಎಂತದ್?(ಗಾ).** ವಾ: ಮುಂಡಾಸ್ ಕಟ್ಟಿ ಹೊರ್‌ಟದೆಲ್ಲಿಗೆ?

ಮುಂಡಿ /*mundi*/ ನಾ. 1. ಪ್ರಾಣಿಗಳಲ್ಲಿ ಹೆಣ್ಣನ್ನು ಸೂಚಿಸುವುದು, 2. ಹೆಣ್ಣು. 1. a female animal, 2. a woman. ವಾ: ಅದ್ ಮುಂಡಿ ಕ್ಯಾಮಗಡ.

ಮುಂಡಿಕೆಸ /*mundikesa*/ ನಾ. 1. ಹಸಿರು ಬಣ್ಣದ ದೊಡ್ಡ ಎಲೆಗಳಿಂದ ಕೂಡಿದ ತಿನ್ನಲು ಯೋಗ್ಯವಲ್ಲದ ಕೆಸ. a non-edible green Colocasia plant. ವಾ: ಮುಂಡಿ ಕೆಸನ ತಿಂಬಕಾಗದ್.

ಮುಂಡಿಗೆಣ್ಸ್ /*mundigeṇsi*/ ನಾ. (ಆಹಾರವಾಗಿ ಬಳಸುವ ಕ್ಷಾರವಾದ ಎಲೆಗಳುಳ್ಳ) ಒಂದು ಜಾತಿಯ ಕೆಸವು, ತಿನ್ನಲು ಉಪಯೋಗಿಸುವ ಗೆಣಸು. an edible Colocasia. ವಾ: ಮುಂಡಿ ಗೆಣ್ಸ್‌ನ ಹಸಿ ತಿಂಬಲೆಗಡ.

ಮುಂಡು ಊರು /*mundu u:ru*/ ನಾವಿ. ಮಂಡಿಯೂರುವುದು. to kneel. ವಾ: ಚಾಮಿ ಮಾಡಿಕೆ ಮುಂಡ್ ಊರಿ ಕುದ್ದ್‌ಕೊ.

ಮುಂಡುಹಾಕ್ /*munduha:ki*/ ನಾ. ಮಂಡಿಯೂರುವುದು. to kneel. ವಾ: ಮುಂಡ್‌ಹಾಕಿ ಕುದ್ರ್.

ಮುಂಡು[1] /*mundu*/ ನಾ. 1. ಬಿಳಿ ಪಂಚೆ, 2. ಧೋತರ. 1. white dhoti, 2. dhoti. ವಾ: ಪೂಜೆಗೆ ಮುಂಡು ಉಟ್ಟುಕಂಬದು.

ಮುಂಡು[2] /*mundu*/ ನಾವಿ. ತುದಿ ತುಂಡರಿಸಿದ. Chopped. ವಾ: ಕಮ್ಮುಗಳ ಕೊಡಿ ಮುಂಡಾವುಟು.

ಮುಂಡುಕತ್ತಿ /*mundu katti*/ ನಾ. ತುದಿ ತುಂಡದ ಕತ್ತಿ. sickle with tip cut off.

ಮುಂಡುಗಾರು /*munduga:ru*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕಳಂಜ ಗ್ರಾಮದ ಜಾಗ. a locality in Kalanja village in Sullia Taluk of Dakshina Kannada District.

ಮುಂಡುಚಿರಿ /*mundu ciri*/ ನಾ. ಬಾಳೆ, ತೆಂಗು ಮೊದಲಾದುವುಗಳ ಚಿಗುರು ಮುರುಟಿ ಹೋಗುವ ಒಂದು ರೋಗ. a disease affecting plantain and coconut plants in which their sprouts get shrunk.

ಮುಂಡುಬಾಳೆ /*mundu ba:ḷɛ*/ ನಾ. ಗಿಡ್ಡಜಾತಿಯ ಬಾಳೆಗಿಡ. a dwarf variety of plantain tree.

ಮುಂಡೆ /*mundɛ*/ ನಾವಿ. 1. ಗಂಡನನ್ನು ಕಳೆದುಕೊಂಡವಳು, 2. ವಿಧವೆ, 3. ಒಂದು ಬೈಗುಳ ಶಬ್ದ. 1. one who lost her husband, 2. a widow, 3. an expletive. **ಆನೆ ಮಾವುತನ ಹೆಣ್ಣ್ ಆರ್ ತಿಂಗಳಿಗೆ ಮುಂಡೆ(ಗಾ).** ವಾ: ಮುಂಡೆತ ಯಾಕೆ ಬೊಯ್ದಿಯ? ಹಂಗೆ ಹೇಳಿಕಾಗದ್.

ಮುಂಡೆಮಜ್ಜ /*mundɛmaŋŋa*/ ನಾ. 1. ವಿಧವೆಯ ಮಗ, 2. ಒಂದು ಬೈಗುಳ ಶಬ್ದ. 1. a widow's sone, 2. a term of abuse. ವಾ: ಮುಂಡೆಮಜ್ಜತ ಬೈಯ್ಯಬಡ.

ಮುಂಡೆಮುಚ್ಚು /*mundɛ* / ನಾವಿ. 1. ವಿಧವೆಯಾಗುವುದು, 2. ಸಂಪೂರ್ಣ ಹಾಳಾಗುವುದು, 3. ಸರ್ವನಾಶವಾಗುವುದು. 1. To become a widow, 2. To be ruined completely.

ಮುಂಡೋಕಜೆ /*mundo:kajɛ*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಮರಪಡ್ನೂರು ಗ್ರಾಮದ

ಜಾಗ. a locality in Amarapadnuru village in Sullia Taluk of Dakshina Kannada District.

ಮುಂಡೋಡಿ /*muṇḍo:ḍi*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ದೇವಚಳ್ಳ ಗ್ರಾಮದ ಜಾಗ. 1. family, 2. lineage, 3. a locality in Devacalla village in Sullia Taluk of Dakshina Kannada District.

ಮುಂಡೋವು /*muṇḍo:vu*/ ನಾ. 1. ಇದರ ಗರಿಗಳಿಂದ ಚಾಪೆ ಹೆಣೆಯುತ್ತಾರೆ. ಇದರ ಎಲೆಗಳನ್ನು ಕಡುಬು ಮಾಡಲು ಉಪಯೋಗಿಸುತ್ತಾರೆ, 2. ಹುಚ್ಚು ಹಿಡಿದ ನಾಯಿಗೆ ಇದರ ಗಂಜಿ ಉತ್ತಮ ಔಷಧಿ. 1. Screw pine, Pandanus adoratissimus (Pandanaceae), 2. The leaves the plam are used for weaving mats. Its leaves are also used in steam boiling rice cakes, 3. gruel prepared with this leaf can cure madness in dogs. ವಾ: ಮೊದ್‌ವೆ ಹಸೆಗೆ ಮುಂಡೋವು ಮೊಂದ್ರಿನೇ ಆಕು.

ಮುಂಡೋಳಿ /*muṇḍɛlɛ*/ ನಾ. ಒಂದು ಜಾತಿಯ ವೀಳ್ಯದೆಲೆ. a type of betel leaf. ವಾ: ಎಲೆಡ್ಕೆ ತಿಂಬಕೆ ಮುಂಡೋಳಿನ ಬಳ್‌ಸುವೆ.

ಮುಂಡೋಳಿ[1] /*muṇḍo:ḷi*/ ನಾ. ಒಂದು ಜಾತಿಯ ವೀಳ್ಯದೆಲೆ. a variety of betel leaf. ವಾ: ಮುಂಡೋಳಿತ ಒಂದ್ ಜಾತಿನ ಎಲೆಬೊಳ್ಳಿ. ಪ: ಮುಂಡೋಳೆ

ಮುಂಡೋಳಿ[2] /*muṇḍo:ḷi*/ ನಾ. ಒಂದು ಜಾತಿಯ ಹಾವು. a variety of snake. ವಾ: ಮುಂಡೋಳಿ ಹಾವ್‌ನ ಕಂಡೆ. ಪ: ಮಂಡೆಳಿ

ಮುಂಡೋಳಿಮೂಲೆ /*muṇḍo:ḷimu:le*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಜ್ಜಾವರ ಗ್ರಾಮದ ಜಾಗ. a locality in Ajjavara village in Sullia Taluk of Dakshina Kannada District.

ಮುಂಡ್ರಾಜೆ /*muṇḍra:jɛ*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಮರಪಡ್ನೂರು ಗ್ರಾಮದ ಜಾಗ. 1. family, 2. lineage, 3. a locality in Amarapadnuru village in Sullia Taluk of Dakshina Kannada District.

ಮುಂದರ್ಸ್ /*mundarsi*/ ಕ್ರಿ. ಮುಂದುವರಿಸು. to continue. ವಾ: ಹಿಂದೆದ ನಡ್ಕಂಡ್ ಬಂದ ಆಚಾರ ವಿಚಾರಗಳ ಮುಂದುವರ್‌ಸಿಕಂಡ್ ಹೋಕು. ಪ: ಮುಂದುವರ್ದೊಳೊ – ಮುಂದುವರೆದಿದ್ದಾರೆ; ಮುಂದರ್ಸ್‌ವೊ – ಮುಂದುವರಿಸುವರು

ಮುಂದುಮನೆ /*mundumanɛ*/ ನಾವಿ. 1. ಗೌಡರ ಗ್ರಾಮ ಹಿರಿಯರ ಮನೆ, 2. ಕಟ್ಟೆಮನೆ. house of the most respected person in a village from Gowda community. ವಾ: ಮುಂದು ಮನೆ ಎಲ್ಲಿ ಉಟ್ಟು?

ಮುಂದೆನೆರಿ /*mundɛneri*/ ನಾ. ಸೀರೆಯ ಮುಂದಿನ ನೆರಿಗೆ. folds of a sari. ವಾ: ಗೌಡುಗ ಸೀರೆ ಉಡಿಕನ ಮುಂದೆನೆರಿ ಮಾಡಿ ಗೇಂಟಿ ಕಟ್ಟುದು.

ಮುಂದೆ[1] /*mundɛ*/ ನಾ. 1. ಮುಂಭಾಗ, 2. ಅಗ್ರ, 3. ಚೂಣಿ, 4. ಮುಂಚೂಣಿ. 1. front, 2. first, 3. foremost, 4. paramount. ವಾ: ಹಿರೆರ ಮುಂದೆ ಕಾಲಾಡ್ಸಿಕೆ ಬೊತ್ತ್. ಪ: ಮುಂದೆನ – ಮುಂದಿನ; ಮುಂದೆಗೆನು – ಮುಂದೆಯು

ಮುಂದೆ[2] /*mundɛ*/ ನಾ. 1. ಮೊದಲಿನಿಂದ, 2. ಕಳೆದ ವರ್ಷ, 3. ಹಿಂದೆನ ಕಾಲ. 1. from the beginning, 2. last year, 3. in the past. ವಾ: ಮುಂದೆ ಹಿಂಗೆಲ್ಲ ಇತ್ಲೆಪ. ಪ: ಮುಂದೆಂದ – ಹಿಂದಿನಿಂದ; ಮುಂದೆಂದಳು – ಹಿಂದಿನಿಂದಳು; ಮುಂದೆನೆ – ಮೊದಲೇ. **ಮುಂದೆಂದ** /*mundɛnda*/ 1. ತುಂಬ ವರ್ಷಗಳ ಹಿಂದಿನಿಂದ, 2. ಎದುರಿನಿಂದ. 1. since the ancient past, 2. from the front portion. ವಾ: ಇವು ನಂಗೆ ಮುಂದೆಂದನೇ ಗೊತ್ತು. **ಮುಂದೆನ ಕಾಲ** /*mundɛna ka:la*/ 1. ಹಿಂದಿನ ಕಾಲ, 2. ಕಳೆದ ಸಮಯ. 1. antiquity, 2. past. ವಾ: ಮುಂದೆನ ಕಾಲನೆ ಲಾಯ್ಕಿತ್ತ್. **ಮುಂದೆಬಾವ** /*mundɛba:va*/ 1. ಮುಂದಿನಿಂದ ಬರುವ, 2. ಮುಂದೆ ಬರಲಿರುವ ವರ್ಷ. 1. the next year, 2. the oncoming year. ವಾ: ಮುಂದೆಬಾವ ದಿನಗಳ ಗ್ಯಾನ ಮಾಡಿ ತಲೆಬಿಸಿ ಆತ್. **ಮುಂದ್ ನೊರ್ಸ** /*mundɛ norsa*/ ನಾ. ಮುಂದಿನ ವರ್ಷ. the next year. ವಾ: ಮುಂದ್ ನೊರ್ಸ ಪಾಕ ಹಬ್ಬಕೆ ಪೋಯ?

ಮುಂದೇಡಿರ /*munde:ḍira*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮುಂದೊಳಗೆ /*mundoḷagɛ*/ ಅ. 1. ಮನೆಯೊಳಗಿನ ತೆರೆದ ಜಾಗ, 2. ಮನೆಯ ಮುಂದಿನ ಬಾಗಿಲಲ್ಲಿ ಪ್ರವೇಶವಾದ ಕೂಡಲೇ ಕಾಣುವ ತೆರೆದ ಜಾಗ, ಸುತ್ತು ಪಡಿಪುರೆ ಮನೆಯಲ್ಲಿ ಹೀಗೆ ಇರುತ್ತದೆ. 1. an open yard in the house, 2. an open yard at the entrance of the house. ವಾ: ಮುಂದೊಳಗೆಲಿ ಲಾಯ್ಕ್ ಗಾಳಿ ಬೆಳ್ಕ್ ಬಂದದೆ.

ಮುಂದ್‌ನ /*mundɨna*/ ನಾ. 1. ತರುವಾಯದ, 2. ಆನಂತರದ, 3. ಹೆಚ್ಚು ವಿಸ್ತರಿಸಿದ, 4. ಹೆಚ್ಚು ದೂರ ವ್ಯಾಪಿಸುವ. 1. after, 2. later, 3. spread widely, 4. spread extensively. ವಾ: ನಿಮ್ಮದ್ ಮುಂದಿನ ಹೆಜ್ಜೆ ಎಂತದ್?

ಮುಂದ್ರಪ್ಪಾಡಿ /*mundrappa:ḍi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ನೆಲ್ಲೂರು ಕೆಮ್ರಾಜೆ ಗ್ರಾಮದ ಜಾಗ. a locality in Nelluru Kemraje village in Sullia Taluk of Dakshina Kannada District.

ಮುಂಯ್‌ಮುಂಯ್ /*munyɨmunyɨ*/ ಅ. 1. ಗೊಣಗು, 2. ಅಸಹನೆ ವ್ಯಕ್ತಪಡಿಸು. 1. to grumble, 2. to express discomfort/intolerance. ವಾ: ಸಮೆಕೆ ಸೆರಿಯಾಗಿ ಕೆಲ್ಸ ಆಗದಿದ್ದರೆ ಅಪ್ಪ ಮುಂಯ್ ಮುಂಯ್ ತೇಳ್ವೆ.

ಮುಕ /*muka*/ ನಾ. 1. ಮುಖ, 2. ಮೊಗ, 3. ಮೋರೆ. face, front of the head. **ಒಡ್ಡ ಕನ್ನಡಿಲಿ ಮುಕ ನೋಡಿಕಾದೆನಾ(ಗಾ).** ವಾ: ಎಲ್ಲೊವು ಕೈಕಾಲ್ ಮುಕ ತೊಳ್ಕಂಡ್ ಬನ್ನಿ.

ಮುಕಸಿಂಡ್‌ರ್‌ಸ್ /*muka siṇḍɨrisɨ*/ ನಾವಿ. 1. ಮುಖ ಗಂಟಿಕ್ಕು, 2. ಮೋರೆಮುರಿ. 1. to frown at, 2. to indicate displeasure by knitting one's brows. ವಾ: ಎಂತನು ಹೇಳಿಬುಡಿಕೆ ಬೊತ್ತ್, ಹೇಳಿರೆ ಮುಕ ಸಿಂಡ್‌ರ್‌ಸುದು.

ಮುಕುಡ /*mukuḍa*/ ನಾ. ಕುಳಿತಲ್ಲೆ ನಿದ್ದೆ ತೂಗು. falling drowsy while sitting. ವಾ: ಹೊತ್ತಾಗಿ ಉಂಡರೆ ಕುದ್ರಿಕನ ಮುಕುಡ ಹಾಕಿಕಾದು. ಪ: ಮುಕ್ಕಡ

ಮುಕುಡುಹಾಕು /*mukuḍu ha:ku*/ ಕ್ರಿ. 1. ನಿದ್ರೆ ತೂಗು, 2. ತಲೆ ಅಲ್ಲಾಡಿಸಿ 'ಹೌದು, ಅಲ್ಲ' ಎಂದು ಆಂಗಿಕ ಭಾಷೆಯಲ್ಲಿ ಹೇಳು. 1. feeling drowsy, 2. nod – indicating either yes or no. ವಾ: ಮಕ್ಕಳ ಪಾರ ಕಾದ್ ಕುದ್ದಲ್ಲೆ ಮುಕುಡು ಹಾಕುದು. ಪ: ಮುಕುಡ ಹಾಕ್; ಮುಕ್ಕ್‌ಡ್ಸುದು – ತಲೆ ಅಲ್ಲಾಡಿಸುವುದು

ಮುಕುಳಿ[1] /*mukuḷi*/ ನಾ. 1. ಯೋನಿ, 2. ಆಸನದ್ವಾರ, 3. ಪುಕುಳಿ. 1. vagina, 2. anus, 3. arsehole.

ಮುಕುಳಿ[2] /*mukuḷi*/ ಕ್ರಿ. 1. ಗುಟುಕು, 2. ನೀರು ಇಲ್ಲವೆ ಇತರ ದ್ರವ್ಯವನ್ನ ಒಮ್ಮೆಗೆ ಬಾಯಿಯಲ್ಲಿ ಹಿಡಿದಿರಿಸಿಕೊಳ್ಳುವುದು. to hold water or other liquid in the mouth. ವಾ: ನಾ ಎರ್ಡ್ ಮುಕ್ಕಿ ನೀರ್ ಕುಡ್ದೆ.

ಮುಕ್‌ಕಟ್ಟುದು /*mukɨ kaṭṭudu*/ ನಾ. ಶೀತವಾದಾಗ ಉಸಿರಾಟಕ್ಕೆ ಕಷ್ಟವಾಗುವ ಪರಿಸ್ಥಿತಿ. not able to breath due to sever cold. ವಾ: ಸೀತ ಆದರೆ ಮುಕ್ ಕಟ್ಟುದು.

ಮುಕ್ಕ /*mukka*/ ನಾ. ತೆಂಗಿನಕಾಯಿ. coconut. **ಅಕ್ಕಂಗೆ ಆರ್ ಕಣ್ಣ್, ಮುಕ್ಕಂಗೆ ಮೂರ್ ಕಣ್ಣ್, ನನ್ನಂತ ಪಾಪಿಗೆ ಒಂದೇ ಕಣ್ಣ್ – ಕೊಳಲ್, ಕಾಯಿ (ತೆಂಗಿನಕಾಯಿ), ಸೂಜಿ(ಒ).**

ಮುಕ್ಕಂಡೆ /*mukkaṇḍɛ*/ ಪವಾ. ಮೂರು ಕುಡ್ತೆ, ದ್ರವ ವಸ್ತುವಿನ ಅಳತೆ ಮಾನ. a unit of measuring liquid.

ಮುಕ್ಕಾಟಿ[1] /*mukka:ṭi*/ ನಾ. ತಕ್ಕರಿಗೆ ಮಾರ್ಗದರ್ಶನ, ಮಾಹಿತಿ ನೀಡುವವರು. advisors. ವಾ: ಮುಕ್ಕಾಟಿಯವು ಇದ್ದಿದ್ದರೆ ಒಳ್ಳೆದಿತ್ತ್.

ಮುಕ್ಕಾಟಿ[2] /*mukka:ṭi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮುಕ್ಕಾಟಿರ /*mukka:ṭira*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮುಕ್ಕಾಲಿ /*mukka:li*/ ನಾ. ಮೂರು ಕಾಲಿನ ಮಣೆ. a wooden stool of three legs. ವಾ: ಮೊದ್ವೆಲಿ ಸಾಸ್ತ್ರ ಮಾಡಿಕೆ ಮುಕ್ಕಾಲಿ ಬೇಕೆ ಬೇಕ್.

ಮುಕ್ಕಾಲ್‌ಮಣೆ /*mukka:lɨ maṇɛ*/ ನಾ. ರೊಟ್ಟಿ ಅಥವಾ ಚಪಾತಿ ಮಾಡಲು ಅಥವಾ ಒಲೆಯ ಬದಿ ಕುಳಿತುಕೊಳ್ಳಲು ಬಳಸುವ ಮೂರು ಕಾಲಿನ ಮಣೆ. a wooden plank/stool of three legs, usually used as a seat while making roti/flat bread/ chapti. ವಾ: ಕುದ್ರಿಕೆ ಮುಕ್ಕಾಲ್ ಮಣೆ ಬಳ್ಸುವೆ.

ಮುಕ್ಕಾಲ್[1] /*mukka:lɨ*/ ನಾ. 1. ನಾಲ್ಕನೇ ಮೂರು ಭಾಗ, 2. ಹಳೆಯ ನಾಣ್ಯ-ಒಟ್ಟೆ ಮುಕ್ಕಾಲ್. 1. three fourths – 3/4, 2. money. **ಓದು ವಕ್ಕಾಲ್, ಬುದ್ಧಿ ಮುಕ್ಕಾಲ್(ಗಾ).** ವಾ: ಹಣ್ಣ್‌ದ್ ಮುಕ್ಕಾಲ್ ಪಾಲ್ ಅಂವಂಗೆ ಸಿಕ್ಕಿತ್.

ಮುಕ್ಕಾಲ್[2] /*mukka:lɨ*/ ನಾ. ಮೂರು ಕಾಲಿನ ಮಣೆ. a wooden plank/stool of three legs. ವಾ: ಹಿಂದೆಲ್ಲ ಒಲೆ ಬುಡಲಿ ಮುಕ್ಕಾಲ್‌ಲಿ ಕುದ್ರುದು.

ಮುಕ್ಕು /*mukku*/ ಕ್ರಿ. ಗಬಗಬನೆ ತಿನ್ನು. to swallow. **ದೇವುರಿಗೆತ ಎಡೆ ಇಕ್ಕುದು ಕಡೆಗೆ ನಾವೇ ಮುಕ್ಕುದು(ಗಾ).** ವಾ: ಬೇಗ ಬೇಗ ಮುಕ್ಕು. ಪ: ಮುಕ್ಕ್ – ಮುಕ್ಕು /ತಿನ್ನು; ಮುಕ್ಕಿತ್ – ಗಬಗಬನೆ ತಿಂದನು/ಳು; ಮುಕ್ಕಿದೆ – ಗಬಗಬನೆ ತಿನ್ನುತ್ತಿದ್ದಾನೆ

ಮುಕ್ಕುಡ /*mukkuḍa*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಪಂಬೆತ್ತಾಡಿ ಗ್ರಾಮದ ಜಾಗ. a locality in Pambettadi village in Sullia Taluk of Dakshina Kannada District.

ಮುಕ್ಕುಳಿ /*mukkuḷi*/ ನಾ. ಗುಟುಕು. mouthful of water. ವಾ: ಹೊತಾರೆಂದ ಒಂದ್ ಮುಕ್ಕುಳಿ ನೀರ್ ಕುಡ್‌ತ್‌ಲೆ.

ಮುಕ್ಕುಳು /*mukkuḷu*/ ಕ್ರಿ. 1. ಬಾಯಿ ಮುಕ್ಕಳಿಸು, 2. ತುತ್ತು, 3. ಗುಟುಕು ನೀರು. 1. to rise one's mouth, 2. a morsel, 3. mouthful of water. ವಾ: ದೊಂಡೆ ಬೇನೆಗೆ ಉಪ್ಪು ನೀರ್‌ಲಿ ಬಾಯಿ ಮುಕ್ಕುಳು ಹಾಕೊಕು. ಪ: ಮುಕ್ಕೈಸು

ಮುಕ್ಕುಳ್ ಚೋರೆಹಣ್ಣ್ /*mukkuḷɨ co:rɛ haṇṇɨ*/ ನಾವಿ. ಮುಳ್ಳು ಗಿಡಯಲ್ಲಿ ಬಿಡುವ ತಿನ್ನಲು ಯೋಗ್ಯವಾದ ಲೋಳೆಯಿಂದ ಕೂಡಿದ ಅರಶಿಣ ಬಣ್ಣದ ಕಾಡು ಹಣ್ಣು, ಹಣ್ಣಿನ ಒಳಗಡೆ ಸಣ್ಣದಾದ ಕಪ್ಪು ಬಣ್ಣದ ಬೀಜಗಳಿರುತ್ತವೆ. an edible yellow fruit that grows on a thorny plant, seeds are small and of black colour. ವಾ: ಮುಕ್ಕುಳ್ ಚೋರೆ ಹಣ್ಣ್ ಕಾಡ್‌ಲಿ ಸಿಕ್ಕಿದೆ, ತಿಂಬಕೆ ರುಚಿಯಾಗಿ ನೋಳಿ ನೋಳಿ ಇದ್ದದೆ, ಇದರ ಗೊಣ್ಣೆ ಹಣ್ಣ್‌ತನೂ ಕರ್‌ದವೆ.

ಮುಕ್ಕೂರು /*mukku:ru*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಪೆರುವಾಜೆ ಗ್ರಾಮದ ಜಾಗ. a locality in Peruvaje village in Sullia Taluk of Dakshina Kannada District.

ಮುಕ್ಕ್‌ಡ್ಸು /*mukkɨḍsu*/ ಕ್ರಿ. 1. ಬಿಡಿಸಿಕೊಳ್ಳು, 2. ಹಕ್ಕಿಗಳು ಗರಿ ಬಿಡಿಸಿಕೊಳ್ಳುವುದು. 1. to release, 2. to unfurl. ವಾ: ಕೋಳಿ ಮುಲ್ಲೆ ಮುಕ್ಕ್‌ಡ್ಸುದು.

ಮುಕ್ಯ /*mukya*/ ನಾ. 1. ಮುಖ್ಯ, 2. ಪ್ರಧಾನ, 3. ಪ್ರಮುಖ, 4. ಮಹತ್ವ. 1. main, 2. important, 3. central, 4. cardinal. ವಾ: ನಾವ್ ದೋಸ್ತಿಗೆಲ್ಲ ಸೇರಿಕಂಡ್ ಮುಕ್ಯ ವಿಸಯದ ಬಗ್ಗೆ ಚರ್‌ಚೆ ಮಾಡ್ತಿದ್ದವೆ.

ಮುಕ್ಳಿಸು /*mukuḷisu*/ ಕ್ರಿವಿ. 1. ಮುಕ್ಕುಳಿಸು, 2. ಗಂಡೂಷ ಮಾಡು, 3. ಜಾಲಾಡುವುದು,4. ಗಲಬರಿಸುವುದು. rinse. ವಾ: ಮಾಸ ತಿಂದ ಮೇಲೆ ಬಾಯಿನ ಲಾಯ್ಕ್ ಮುಕ್ಳಿಸೊಕು, ಇಲ್ಲರೆ ವಾಸ್ನೆ ಬಂದದೆ.

ಮುಗರಂಜ /*mugaranja*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮುಗಲ್ /*mugalɨ*/ ನಾ. ಮೋಡ ಕವಿದ ವಾತಾವರಣ. cloudy weather. ವಾ: ಮುಗಲ್ ನೋಡ್ ಹೆಂಗೆ ಕರಿ ಕಟ್ಟಿಕಂಡ್ ಬಂದದೆತ, ಹೀಂಗೆ ಇದ್ದರೆ ಮಳೆ ಬಾದು. ಪ: ಮುಗಲೊಡ್ಡಿಟು – ಮೋಡ ಮುಸುಕಿದೆ

ಮುಗಿತಿತ್ಲೆ /*mugititlɛ*/ ಕ್ರಿ. 1. ಮುಗಿಯುತ್ತಿರಲಿಲ್ಲ, 2. ಕೊನೆಯಾಗುತ್ತಿರಲಿಲ್ಲ. 1. wouldn't have ended, 2. wouldn't have closed. ವಾ: ಅಲ್ಲೆ ಕುದ್ದಿದ್ರೆ ಇನ್ನ್‌ಸ ಮಾತೇ ಮುಗಿತಿತ್ಲೆ.

ಮುಗಿಯಮುಟ್ಟ /*mugiya muṭṭa*/ ನಾ. ಮುಗಿಯುವವರೆಗೆ. until it ends. ವಾ: ಮಾತ್ ಮುಗಿಯ ಮುಟ್ಟ ಕುದ್ರಿಕಾದುಲೆಪ.

ಮುಗಿಲ್ /*mugilɨ*/ ನಾ. 1. ಆಕಾಶ, 2. ಬಾನು, 3. ಮುಗಿಲು. 1. sky, 2. azure, 3. firmament. ವಾ: ಎಂತಕೆ ಉಗ್ಗಪ್ಪ ಮುಗಿಲ್ ನೋಡಿಕಂಡ್ ಕುದ್ದೊಳರಿ?

ಮುಗುಟು /*muguṭu*/ ನಾ. ಹೂವಿನ ಮೊಗ್ಗು. a flower bud. **ಹೂ ಗಮ ಬರೋಕಾದರೆ ಮುಗುಟು ಅರಳೊಕು(ಗಾ).** ವಾ: ಗುಲಾಬಿ ಮುಗುಟು ಬಾರಿ ಪೊರ್ಲುಟ್ಟು. ಪ: ಮುಗುರು – ಮೊಗ್ಗು

ಮುಗುಡು /*muguḍu*/ ನಾ. ಕೊಳಕು ತಿನ್ನುತ್ತಾ ಕೆಸರಲ್ಲಿ

ವಾಸಿಸುವ ಮೀನು. a mud fish. ವಾ: ಮುಗುಡು ಮೀನ್ ಕೆಸರ್‌ಲಿ ಇರ್‌ದುಗಡ. ಪ: ಮುಗ್‌ಡ್ ಮೀನ್

ಮುಗುಪ್ಪು /*muguppu*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮುಪ್ಪೇರ್ಯ ಗ್ರಾಮದ ಜಾಗ. 1. family, 2. lineage, 3. a locality in Mupperia village in Sullia Taluk of Dakshina Kannada District.

ಮುಗುರು /*muguru*/ ನಾ. 1. ಮುಸುಂಡು, 2. ಮುಸುಡು, 3. ಮುಖದ ಎದುರು ಭಾಗದ ಮೂತಿ. front of one's face. **ಮೊಜ್ಜಿಗೆ ಕುಡ್ದಾಕನ ಒಬ್ಬೊಗೆ ಮುಗುರುಲಿ ಮೀಸೆ ಬಂದುಟು(ನು).** ವಾ: ಕೂಸ್‌ದ್ ಮುಗುರುನ ತಿಕ್ಕ್.

ಮುಗುಳಕ್ಕಿ /*muguḷakki*/ ನಾ. ಅರೆ ಬೆಂದ ಅನ್ನ. half cooked/boiled rice. ವಾ: ಮುಗುಳಕ್ಕಿ ಉಂಡರೆ ಕಟ್ರ ಆದು.

ಮುಗುಳಿ /*muguḷi*/ ನಾ. 1. ಬೆಸಸಂಖ್ಯೆ, 2. ದೇವಸ್ಥಾನ, ಭೂತಸ್ಥಾನಗಳ ಮೇಲೆ ಇರುವ ಶಂಕುವಿನಾಕೃತಿಯ ಲೋಹದ ರಚನೆ, 3. ಕಲಶ, 4. ಶಿಖರ. 1. an odd number, 2. a spire in the shape of a conchshell used at the top of the domes of temples, 3. a copper pitcher with water inside and a coconut fitted on its rim over a crown of mango leaves, 4. the summit. ವಾ: ದೇಸ್ತಾನದ ಹೊರೆಗೆನ ಬರಿಗೆ ಮೇಲೆ ಮುಗುಳಿ ಇಸಿದ್ದವೆ.

ಮುಗುಳು /*muguḷu*/ ನಾವಿ. 1. ಅರೆ ಬೆಂದ ಅನ್ನ, 2. ಮೊಗ್ಗೆ, 3. ಚಿಗುರು. 1. half cooked rice, 2. flower bud, 3. a shoot. ವಾ: ಮುಗುಳು ಅಕ್ಕಿ ನ ಉಂಬಕಾದೆನ? ಪ: ಮುಗುಳಿ ಅಕ್ಕಿ; ಮುಗ್ಲಕ್ಕಿ ಮುಗ್‌ಲರಿ(ತು)

ಮುಗೆಕನ /*mugekana*/ ಕ್ರಿ. ಮುಗಿಯುವಾಗ. while it was ending. ವಾ: ನಾಟಕ ಮುಗೆಕನ ಹೊತ್ತಾಗೊತು. ಪ: ಮುಗೆಕಾನ; ಮುಗೆಕೆ, ಮುಗಿನಗ(ತು). **ಮುಗೆಕಮುಟ್ಟ** /*mugɛkamuṭṭa*/ ಮುಗಿಯುವವರೆಗೆ. until it ends. ವಾ: ಕೈಲಿರೊ ದುಡ್ಡು ಮುಗೆಕನ ಮುಟ್ಟ ಮಜ ಮಾಡಿವೆ.

ಮುಗೇರಡ್ಕ /*muge:raḍka*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮುಗೇರು /*muge:ru*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕನಕಮಜಲು ಗ್ರಾಮದ ಜಾಗ. a locality in Kanakamajalu village in Sullia Taluk of Dakshina Kannada District.

ಮುಗೊಲ್[1] /*mugoḷɨ*/ ನಾ. 1. ಮೋಡ, 2. ಮುಗಿಲು, 3. ಆಕಾಶ, 4. ಬಾನು. 1. cloud, 2. sky, 3. azure, 4. firmament. ವಾ: ಮುಗೊಲ್ ನೀಲಿ ನೀಲಿ ಕಂಡದೆ. ಪ: ಮುಗಲ್(ತು)

ಮುಗೊಲ್[2] /*mugoḷɨ*/ ನಾವಿ. ಅಮಲು ತೆಗೊಂಡವರನ್ನು ಗಮನದಲ್ಲಿರಿಸಿ ಹೇಳುವುದು. to say something keeping in mind the one who got intoxicated. ವಾ: ಮುಗೊಲ್ ಆಗುಟು, ಗುಡ್ಗ್ ಸಿಡ್ಲ್‌ನೂ ಉಟ್ಟು.

ಮುಗ್ /*mugɨ*/ ಕ್ರಿ. ಮುಗಿಯಿತು. ended. ವಾ: ಬತ್ತನ ಮಿಲ್ಲ್ ಮಾಡ್ಸಿದ್ ಮುಗ್‌ತ್.

ಮುಗ್ಗಟ್ಟ್ /*muggaṭṭɛ*/ ಕ್ರಿ. 1. ಆರ್ಥಿಕ ತೊಂದರೆ, 2. ಹಣಕಾಸಿನ ಸಂಕಷ್ಟ. 1. financial problem, 2. financial trouble. ವಾ: ಮುಂದೆ ಒಂದಿನ ಜನಕೆ ನೀರ್‌ನ ಮುಗ್ಗಟ್ಟ್ ಗೊತ್ತಾದು.

ಮುಗ್ಗರ್ಸ್ /*muggarsi*/ ಕ್ರಿ. 1. ಎಡವು, 2. ಮುಗ್ಗರಿಸು, 3. ಉರುಳು, 4. ಕೆಳಕ್ಕೆ ಬೀಳು. 1. to stumble, 2. trip over, 3. to roll over, 4. to fall down. ವಾ: ದಾರಿಲಿ ಬಾಕನ ಎರ್‌ಡ್ ಸೆರಿ ಮುಗ್ಗರ್ಸಿತ್. ಪ: ಮುಗ್ಗುರ್ಸುದು – ಮುಗ್ಗರಿಸುವುದು/ಎಡವುದು

ಮುಗ್ಗು[1] /*muggu*/ ಕ್ರಿ. 1. ಮುಗ್ಗಲು, 2. ಧಾನ್ಯ ಕೆಡು, 3. ಬೂಸ್ಟು ಹಿಡಿ, 4. ಕೆಟ್ಟು ಹೋದ. 1. stale, 2. stale grains, 3. fungus on grains, 4. spoiled. **ಅಗ್ಗದಾಸೆಗೆ ಮುಗ್ಗಿದ ಜೋಳ(ಗಾ).** ವಾ: ಸೀತಕೆ ಅಕ್ಕಿ ಬ್ಯಾಳೆ ಕಾಳ್ ಬೇಗ ಮುಗ್ಗು ಬಾದು. ಪ: ಮುಗ್ಗುಲು – ಕೆಟ್ಟವಾಸನೆ

ಮುಗ್ಗು[2] /*muggu*/ ಕ್ರಿ. ಧಾನ್ಯ ಕೆಟ್ಟು ವಾಸನೆ ಬರು. bad smell from grains.

ಮುಗ್ತ್ /*mugtɨ*/ ಕ್ರಿ. ಮುಗಿಯಿತು. ended. ವಾ: ತೆಂಗ್‌ನ ಮರಕೆ ಉಪ್ಪಾಕಿ ಮುಗ್ತ್. ಪ: ಮುಗ್ತ್‌ಗಡ – ಮುಗಿಯಿತಂತೆ. **ಮುಗ್ದಂಗೆ** /*mugdaŋgɛ*/ 1. ಮುಗಿಸು, 2. ಮುಕ್ತಾಯಗೊಳಿಸು. 1. to end, 2. to complete. ವಾ: ಓದಿ ಮುಗ್ದಂಗೆ ಬನ್ನೆ ಬಲ. ಪ: ಮುಗ್ದ

– ಮುಗಿದ; ಮುಗ್ದ್ – ಮುಗಿದು. **ಮುಗ್ದ್** /*mugdɨ*/ ಮುಗಿದು. ended. ವಾ: ಹೊತಾರೆ ಎದ್ದಂಗೆ ದೇವ್ರಿಗೆ ಕೈ ಮುಗ್ದ್ ಬಾ. ಪ: ಮುಗ್ದ ಮೇಲೆ – ಮುಗಿದ ನಂತರ. **ಮುಗ್ಯಕಿಲ್ಲೆ** /*mugyakillɛ*/ ಮುಕ್ತಾಯವಾಗಲಾರದು. won't end. ವಾ: ನಿನ್ನ ರಾಮಯಣ ಮುಗ್ಯಕಿಲ್ಲೆ. **ಮುಗ್ಸಿ** /*mugsi*/ 1. ಮುಗಿಸು, 2. ಮುಕ್ತಾಯಗೊಳಿಸು. 1. to end, 2. to complete. ವಾ: ಬೇಗ ಮನೆ ಕಟ್ಟುದು ಕೆಲ್ಸನ ಮುಗ್ಸಿ ಕೊಡಿತ ಹೇಳ್ತಿದ್ದೊ. ಪ: ಮುಗ್ಸಿತ್ – ಮುಗಿಸಿದನು/ಳು; ಮುಗ್ಸಿದ್ – ಮುಗಿಸಿದ್ದು; ಮುಗ್ಸೋಕು – ಮುಗಿಸಬೇಕು; ಮುಗ್ಸಕಾದು – ಮುಗಿಸಬಹುದು. **ಮುಗ್ಸ್** /*mugsɨ*/ ಮುಗಿಸು. to finish it off. ವಾ: ಅರ್ವೆ ಹೊಲ್ದ್ ಬೇಗ ಮುಗ್ಸ್.

ಮುಚಿಕ /*mucika*/ ಕ್ರಿ. 1. ಮುಚ್ಚಿಕೊಳ್ಳು, 2. ಬಾಯಿ ಮುಚ್ಚು, 3. ಬೈಗಳ ಪದ. 1. to cover/close, 2. to shut one's mouth, 3. an expletive. ವಾ: ಮೋರೆ ಮುಚಿಕಂಡ್ ಹೋತ್.

ಮುಚ್ಚ /*mucca*/ ನಾ. 1. ಮುಜು, 2. ಮುಸಿಯ, 3. ಒಂದು ಜಾತಿಯ ಮಂಗ, 4. ಮುಸು, 5. ಮುಖದ ಸುತ್ತು ಕಪ್ಪು ರೋಮಗಳಿರುವ ಕೋತಿಯಂತಹ ಪ್ರಾಣಿ. 1. Gray langur, 2. common langur, 3. a species of Asian monkeys, 4. langur, 5. langur with pointed black hair around their face. **ಅಪ್ಪ ಸತ್ತದಕ್ಕೂ ಮುಚ್ಚ ಸಿಕ್ಕಿದಕ್ಕೂ ಸರೀ ಆತ್(ತು).** ವಾ: ಮುಚ್ಚನ ತಿಂದವೆಗಡ. ಪ: ಮುಚ್ಚಂಗ. **ಮುಚ್ಚ ಮುಸುಂಟು** /*mucca musuṇṭu*/ 1. ಮಂಗಮೂತಿ, 2. ಬೈಗುಳ ಪದ. 1. a monkey face, 2. an expletive. ವಾ: ನಿನ್ನ ಮುಸುಂಡು ನೋಡ್ ಮುಚ್ಚ ಮುಸುಂಟುನಂಗೆ ಉಟ್ಟು.

ಮುಚ್ಚರ /*muccara*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮುಚ್ಚಾರ /*mucca:ra*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಬಾಳುಗೋಡು ಸಮೀಪದ ಜಾಗ. a locality in Balagodu village in Sullia Taluk of Dakshina Kannada District.

ಮುಚ್ಚಿಗೆ ಮನೆ /*muccigɛ manɛ*/ ನಾ. ಇಟ್ಟಿಗೆ, ಗಾರೆಗಳಿಂದ ಕಟ್ಟಿದ ಮನೆ. a house built by bricks and mortar. ವಾ: ಮುಚ್ಚಿಗೆ ಮನೆ ಗಟ್ಟಿ ಇದ್ದದೆ.

ಮುಚ್ಚಿಯೊಳೆ /*mucciyoḷɛ*/ ಕ್ರಿ. ಮುಚ್ಚಿದ್ದೇನೆ. I have covered/closed. ವಾ: ನಾ ಬಾಗ್ಲ್ ಮುಚ್ಚಿಯೊಳೆ.

ಮುಚ್ಚು /*muccu*/ ಕ್ರಿ. 1. ಮುಚ್ಚು(ಬಾಗಿಲು, ಬಾಯಿ, ಮುಚ್ಚಳ ಮೊದಲಾದುವುಗಳನ್ನು) ಹಾಕು, 2. ಮರೆಮಾಡು. 1. to close (lid, mouth of something, door, etc.), 3. to conceal. ವಾ: ಮೂಡೆನ ಕಿಡ್ಕೆನ ಮುಚ್ಚು. **ಮುಚ್ಚಿಕಂಬ್‌ದು** /*muccikambɨdu*/ ಮುಚ್ಚಿಕೊಳ್ಳುವುದು. to cover/ close. ವಾ: ಬಿಸ್‌ಲ್‌ಗೆ ಕಣ್ಣ್ ಬಿಡಿಕಾಗದೆ ಮುಚ್ಚಿಕಂಬ್‌ದು. **ಮುಚ್ಚಿಸ್** /*muccisɨ*/ 1. ಬಚ್ಚಿಡು, 2. ಅಡಗಿಸಿಡು, 3. ಗುಟ್ಟಾಗಿ ಇಡು. 1. to hide, 2. to conceal, 3. to keep secetely. **ಕೊಟ್ಟದ್ ನಂಗೆ ಮುಚ್ಚಿಸಿದ್ ಬೇರೆಯವ್ಕೆ(ಗಾ).** ವಾ: ಚೆಂಡ್‌ನ ಕಾಣದಾಂಗೆ ಮುಚ್ಚಿಸ್. **ಮುಚ್ಚೊಕಾತ್** /*muccoka:tɨ*/ ಮುಚ್ಚಬೇಕಾಗಿತ್ತು. should have covered with lid. ವಾ: ಕೊರೊನಾಂತೇಳಿ ಸಾಲೆ ಕಾಲೇಜಿಗಳ ಮುಚ್ಚೊಕಾತ್. **ಮುಚ್ಚೊಕಾರೆ** /*muccoka:rɛ*/ ಮುಚ್ಚಬೇಕಾದರೆ. while covering it with a lid. ವಾ: ಹರ್‌ಗಿದ ಕಾಪಿನ ಮುಚ್ಚೊಕಾರೆ ತಾಟೆ ಬೇಕ್.

ಮುಚ್ಚುರುಕಾಯಿ /*muccuruka:yi*/ ನಾ. ಸಸ್ಯಾಹಾರಿ ಕಾಡು ಪ್ರಾಣಿಗಳು ಇಷ್ಟಪಡುವ ಸಿಹಿಯಾದ ಚಿಕ್ಕ ಹಣ್ಣು. a small fruit liked by vegetarian wild-animals. ವಾ: ಮುಚ್ಚುರು ಕಾಯಿನ ಪ್ರಾಣಿಗ ತಿಂದವೆ. ಪ: ಮುಚ್ಚಿರ್(ತು)

ಮುಚ್ಚುಳು /*mucculu*/ ನಾ. 1. ಮುಚ್ಚಳ, 2. ಬಿರಡೆ. 1. a lid, 2. a cork. ವಾ: ಅಕ್ಕಿ ಡೊಬ್ಬಿದ್ ಮುಚ್ಚುಳುನ ಲಾಯ್ಕಲಿ ಹಾಕ್.

ಮುಚ್ಚುಳುಮರ /*mucculumara*/ ನಾ. ಒಂದು ಕಾಡುಮರ. a forest tree. ವಾ: ಮುಚ್ಚುಳು ಮರತ ಒಂದ್ ಕಾಡ್ ಮರ. ಪ: ಮುಚ್ಚಿರ್ ಮರ(ತು)

ಮುಜಂಟಿ ಜೇನ್ /*mujaṇṭi je:nɨ*/ ನಾ. ಒಂದು ವಿಧದ ಜೇನು, ಇದರ ನೊಣಗಳು ತುಂಬ ಚಿಕ್ಕದು. a type of honey bee. ವಾ: ಮುಜಂಟಿ ಜೇನ್ ಮೊದ್ದಿಗೆ ಒಳ್ಳೆದ್.

ಮುಜುಂಕ್ರ /*mujuŋkra*/ ನಾವಿ. 1. ಮುದುಕ, 2.

ಬೈಗುಳ ಪದ. 1. an old man, 2. an expletive. ವಾ: ಇಂವ ಮುಜುಂಕ್ರನಾಂಗೆ ಆಡ್ದೆ.

ಮುಜುಂಡ /*mujuṇḍa*/ ನಾವಿ. 1. ಹಣ್ಣುಹಣ್ಣು ಮುದುಕ, 2. ಬೈಗುಳ ಪದ. 1. an old man, 2. an expletive. ವಾ: ನೀನೊಂದ್ ಮುಜುಂಡ.

ಮುಜುಬೆರಂತ್ /*mujubɛranti*/ ನಾವಿ. 1. ಮುದಿನತದಿಂದಾಗಿ ಬರುವ ಅರಳುಮರುಳು, 2. ಅರೆಮರುಳು, 3. ಮುದಿಮರುಳು. 1. senectitude, 2. senescence, 3. senescent. ವಾ: ಅವ್‌ಕೆ ಹಳ ಮುಜುಬೆರಂತ್ ಸುರಾವುಟು.

ಮುಜೆಂಟ /*mujɛṇṭa*/ ನಾ. ಮರಗಳ ತೂತಿನಲ್ಲಿ ಜೀವಿಸುವ ಚಿಕ್ಕ ನೊಣಗಳ ಜೇನು ಕುಟುಂಬ. a family of small honey bees that live in the cavity of trees. ವಾ: ಮುಜೆಂಟ ಜೇನ್ ಮರಗಳ್‌ಲಿ ಇದ್ದದೆ. ಪ: ಮೊಜಂಟಿ(ತು)

ಮುಟ್ಟ[1] /*muṭṭa*/ ಅ. 1. ವರೆಗೆ, 2. ತನಕ. 1. until then, 2. up to a particular time. **ಅಕ್ಕ ಇರ್ಕನ ಮುಟ್ಟ ಬಾವ(ಗಾ).** ವಾ: ಅವು ಬರೋ ಮುಟ್ಟ ಇಲ್ಲಿ ಕುದ್ದ್ ಕಂಡ್ ಎಂತರ ಮಾಡ್ತುತ.

ಮುಟ್ಟ[2] /*muṭṭa*/ ನಾ. 1. ಎತ್ತರದ ಸ್ಥಳ, 2. ಸಿರಿ; ಐಶ್ವರ್ಯ; ಸಂಪತ್ತು; ಭಾಗ್ಯ. 1. higher ground, 2. wealth. ವಾ: ಕೊಡಿ ಮುಟ್ಟ ಹೋಕಾಯ್ತ್.

ಮುಟ್ಟ[3] /*muṭṭa*/ ಕ್ರಿ. 1. ಮೂಲೆ, 2. ಕೊನೆ, 3. ತಲುಪು, 4. ಹತ್ತಿರ. 1. corner, 2. end, 3. to reach, 4. near. ವಾ: ಬೇಲಿ ಮುಟ್ಟ ಮುಳ್ಳ್‌ಂದಾಗಿ ಹೋಕಾದುಲೆ.

ಮುಟ್ಟಂಪಾಳೆ /*muṭṭampa:ḷɛ*/ ನಾ. 1. ಅಡಕೆಮರದ ಹಾಳೆಯಿಂದ ಮಾಡಿದ ಟೊಪ್ಪಿಗೆಯಂತಹ ರಚನೆ, 2. ಹಾಳೆಯಿಂದ ಮಾಡಿದ ಶಿರಸ್ತ್ರಾಣ. a cap/hat made up of the spathe of an areca nut plam. ವಾ: ಮಳೆ, ಬಿಸ್‌ಲ್‌ಲಿ ಗದ್ದೆ, ತೋಟಗಳಿಗೆ ಕೆಲ್‌ಸಕೆ ಹೋಕನ ಮುಟ್ಟಂಪಾಳೆನ ಹಾಕಂಡವೆ. ಪ: ಮುಟ್ಟಾಳೆ(ತು)

ಮೆಯಿ /*meyi*/ ನಾ. 1. ಮೈ, 2. ಶರೀರ, 3. ದೇಹ. 1. body, 2. human torso, 3. human figure/ frame. ವಾ: ಕೂಸುನ ಮೆಯಿ ಮಾತ್ರ ಮೀಸ್, ಮೆಯಿಗೆ ಉಸಾರಿಲ್ಲೆ. ಪ: ಮೆಯ್

ಮೆರಿಯಕೆ /*meriyakɛ*/ ಕ್ರಿ. 1. ಮೆರೆ, 2. ತೋರಿಸು, 3. ಪ್ರದರ್ಶಿಸು, 4. ಬೀಗು, 5. ಅಹಂಕರಿಸು, 6. ವಿಜೃಂಭಿಸು, 7. ಜಂಭದಿಂದ ತಿರುಗಾಡು, 8. ಶೋಭಿಸು. 1. to show off, 2. to display, 3. to exhibit, 4. exhilarated, 5. to take excessive pride in, 6. to glorify, 7.

haughtiness, 8. to exalt. ವಾ: ದುಡ್ಡ್ ಉಟ್ಟುತ

ಮೆರಿಯಕೆ ಹೋಕಾದಲ ಏನೇಳ್ರೆ? ಮೆರಿಯಕೆ ಹೋಗಿ ಸಿಕ್ಕಿಕಣ್ತ್.

ಮೆರ್ಗ್ /*mergɨ*/ ಕ್ರಿ. 1. ಹೊಳಪು, 2. ಮೆರುಗು, 3. ಕಾಂತಿ. 1. shining, 2. radiance, 3. luminous. ವಾ: ಅಂಟೋಳಕಾಯಿಲಿ ಚಿನ್ನನ ತೊಳ್ದರೆ ಮೆರ್ಗ್ ಬಂದ್ ಹೊಸ್ತಂಗೆ ಆದೆ.

ಮೆರ್ಯತಿದ್ದೊ /*meryatiddɔ*/ ಕ್ರಿ. 1. ಮೆರೆ, 2. ತೋರಿಸು, 3. ಪ್ರದರ್ಶಿಸು, 4. ಬೀಗು, 5. ಅಹಂಕರಿಸು, 6. ವಿಜೃಂಭಿಸು. 1. to show off, 2. to display, 3. to exhibit, 4. to exhilarate, 5. to be proud, 6. to glorify. ವಾ: ಜಂಬರಲಿ ಬಾರಿ ಮೆರ್ಯತಿದ್ದೊ.

ಮೆಲ್ಪುಡೆ /*me:lɨpuḍɛ*/ ನಾವಿ. 1. ಮೇಲಿನ ಭಾಗ, 2. ಮೇಲಿನ ಪಕ್ಕ. 1. the section/part above, 2. above, on, etc. ವಾ: ಮೇಲೆ ಪುಡೆ ನೋಡಿ ಬಾವೊನ? ಪ: ಮೇಲ್‌ಪುಡೆ

ಮೆಲ್ಲ /*mella*/ ಅ. 1. ನಿಧಾನ, 2. ಮೆಲ್ಲನೆ, 3. ಸಾವಕಾಶವಾಗಿ. 1. slowly, 2. not in a hurry, 3. at leisure. ವಾ: ಪಾಲ ದಾಟಿಕನ ಮೆಲ್ಲ ನೋಡಿಕಂಡ್ ಕಾಲ್ ಹಾಕ್. **ಮೆಲ್ಲೆ** /*mellɛ*/ ಅ. 1. ನಿಧಾನ, 2. ನಿಧಾನವಾಗಿ. 1. slow, 2. slowly. ವಾ: ಹಂಗೆ ಹಾರಿಕಂಡ್ ಬಾದ್ಯಾಕೆ? ಮೆಲ್ಲೆ ಬಾನೆ.

ಮೆಳ್ಳೆಗಣ್ಣ್ /*meḷḷɛgaṇṇɨ*/ ನಾ. 1. ಮಾಲುಗಣ್ಣು, 2. ಓರೆಗಣ್ಣು. squint eyes. ವಾ: ಗೂಡೆದ್ ಹಞ್ಞ ಮೆಳ್ಳೆ ಗಣ್ಣ್, ಮೆಳ್ಳೆಗಣ್ಣ್ ಇದ್ದರೂ ಆದು, ಕಳ್ಳಗಣ್ಣ್ ಇರಿಕಾದ್.

ಮೇಂಗತೆ /*me:ŋgatɛ*/ ನಾ. ಸಾವಿನ ಮನೆಯವರು ಸೂತಕ ಕಳೆಯುವ ತನಕ ವ್ರತ ಇರುವುದು. observing the period of impurity or defilement in the family of the dead. ವಾ: ಸೂತಕ ಕಳೆಮುಟ್ಟ ಮನೆವು ಮೇಂಗತೆಲಿರ್‌ದು.

ಮೇಂಗಾಲ್ /*me:ŋga:lɨ*/ ನಾ. ಮೇಲಿನ ಕಾಲು. upper leg. ವಾ: ಮೇಂಗಾಲ್ ಇದ್ದಕಿದ್ದಂಗೆ ಬಾತುಟು.

ಮೇಕಿ /*me:ki*/ ಕ್ರಿವಿ. 1. ಮಿಶ್ರ ಮಾಡು. to mix. ವಾ: ಹಲ್ಸ್‌ನ ಇಡ್ಲಿ ಮಾಡಿಕನ ಮಾಂಬಳೆಗೆ ಅಕ್ಕಿ ತರಿನ, ಕಾಯಿ ಚೂರ್‌ನ ಲಾಯ್ಕ್‌ಲಿ ಮೇಕಿಸೊಕು. **ಮೇಕಿ ತಿಂಬದು** /*me:ki timbadu*/ ಮಿಶ್ರ ಮಾಡಿ ತಿನ್ನು. to mix and eat. ವಾ: ಬೆಣ್ಣೆ ಹಣ್ಣಿಗೆ ಸಕ್ಕರೆನ ಮೇಕಿ ತಿಂಬದು.

ಮೇಕೆ ಕಡಿದು /*me:kɛ kaḍidu*/ ಕ್ರಿವಿ. 1. ದನದಂತ ಪ್ರಾಣಿಗಳು ನುಂಗಿದ ಆಹಾರವನ್ನು ಮತ್ತೆ ಜಗಿದು ನುಂಗುವುದು, 2. ಮೆಲುಕು ಹಾಕು. cattle's rumination or chewing the cud. ವಾ: ದನಗ ನಿತ್ತ್ ಕಂಡ್ ಮೇಕೆ ಕಡಿದು.

ಮೇಗಡೆ /*me:gaḍɛ*/ ನಾ. ಮೇಲ್ಭಾಗ. on top/above. ವಾ: ಮೇಗಡೆ ಮನೆ ಮೋಟೆ ಗೂಡೆಗೆ ಮೊದುವೆ ಉಟ್ಟುಗಡ.

ಮೇಚನ /*me:cana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮೇಚಿ /*me:ci*/ ನಾ. 1. ಆಹಾರ, 2. ಮೇವು. 1. food, 2. fodder. ವಾ: ಮೇಚಿ ಹುಡ್ಕಂಡ್ ಆನೆಗ, ಹುಲಿಗ ಕಾಡ್ ಬುಟ್ಟ್ ನಾಡಿಗೆ ಬಾದು. ಪ: ಮೇಚಿ ಹುಡ್ಕಿಕಂಡ್ – ಆಹಾರ ಹುಡುಕುತ್ತ. **ಮೇಚಿಪಟ್ಟೆ** /*me:ci paṭṭɛ*/ ಕೋಳಿಯ ಆಹಾರ ಚೀಲ. Crop: a pouch in the esophagus used to store food in hens. ವಾ: ಕೋಳಿದ್ ಮೇಚಿ ಪಟ್ಟೆ ಕುತಿಗೆ ಹಕ್ಕಲೆ ಇದ್ದದೆ, ತಿಂದದರೆಲ್ಲ ಅದರ್‌ಲಿ ತುಂಬಿಸಿಕಂಡಿದ್ದದೆ.

ಮೇಜ /*me:ja*/ ನಾ. ಎಪ. 1. ಮೇಜು, 2. ಟೇಬಲ್ಲು, 3. ಮರ, ಲೋಹ ಮೊದಲಾದವುಗಳಿಂದ ಮಾಡಿದ ಬರವಣಿಗೆ ಇತ್ಯಾದಿಗಳಿಗೆ ಉಪಯೋಗಿಸುವ ಎತ್ತರವಾದ ಉಪಕರಣ. 1. a desk, 2. a table, 3. a wooden/metal furniture with four legs, usually used in writing. ವಾ: ಮೇಜಲಿ ಉಂಬಕೆ ಕುದ್ರುದು.

ಮೇಟಿ[1] /*me:ṭi*/ ನಾ. 1. ಕಣದಲ್ಲಿ ನೆಟ್ಟಿರುವ ಕಂಬ, 2. ಸ್ತಂಭ. 1. a stump/post in the thresing floor, 2. a pillar. ವಾ: ಮೇಟಿನ ಕಳದ ಮದ್ಯಲಿ ನೆಟ್ಟ್ ಅದ್‌ಕೆ ಬತ್ತ ಬಡೆದು.

ಮೇಟಿ[2] /*me:ṭi*/ ನಾ. ನೇಗಿಲು. a plough. **ನಾಟಿ ಮಾಡ್ಡ ಗದ್ದೆ ಲಾಯ್ಕ, ಮೇಟಿ ನೆಟ್ಟ ಕಳ ಲಾಯ್ಕ(ಗಾ).** ವಾ: ಹಿಂದೆಲ್ಲ ಮರದ ಮೇಟಿನೆ ಇದ್ದದ್.

ಮೇಡತನ /*me:ḍatana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮೇಡು /*me:ḍu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮೇಡ್ /*me:ḍɨ*/ ನಾ. 1. ಸಮತಟ್ಟಲ್ಲದ ಗದ್ದೆ, 2.

ಎತ್ತರವಾದ ನೆಲ, 3. ದಿಣ್ಣೆ. 1. an uneven field 2. a higher ground, 3. a heap. ವಾ: ಚಾಟೆ ಕಾಲ್ ಹಾಕಂಡ್ ಮೇಡ್ ಕಡೆ ನಡೆಕನ ಬೀಳದಂಗೆ ನೋಡಿಕಣಿ.

ಮೇಣಿ /*me:ɳi*/ ನಾ. 1. ಕುಂಟೆ, 2. ನೇಗಿಲ ಹಿಡಿ, 3. ನೇಗಿಲಲ್ಲಿರುವ ಚಪ್ಪಟೆಯಾಕಾರದ ಸಿಕ್ಕಿಸುವ ಭಾಗ. handle of plough. ವಾ: ಕುಂಟೆ ನೇಗ್ಲ್ ಹಿಡಿನ ಮೇಣಿತ್ತೇಳಿವೆ.

ಮೇದ /*me:da*/ ನಾ. ಬಿದಿರನ್ನು ಕಡಿಯುವ ಸಮುದಾಯದ ಹೆಸರು. Meda, a tribe.

ಮೇದಪ್ಪ /*me:dappa*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. masculine given name.

ಮೇದಾವಿ /*me:da:vi*/ ನಾ. 1. ಬುದ್ಧಿವಂತ, 2. ಬುದ್ಧಿಶಕ್ತಿ ಬಲವಾಗಿರುವವನು, 3. ಮೇಧಾವಿ. 1. intelligent, 2. intelligence, 3. intellectual. ವಾ: ಅಂವ ಮೇದಾವಿನಂಗೆ ಮಾತಾಡ್ದೆ.

ಮೇದಿನಡ್ಕ /*me:dinaḍka*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಜ್ಜಾವರ ಗ್ರಾಮದ ಜಾಗ. 1. family, 2. lineage, 3. a locality in Ajjavara village in Sullia Taluk of Dakshina Kannada District.

ಮೇದ್ /*me:dɨ*/ ಕ್ರಿ. 1. ಮೇಯು, 2. ದನ ಮುಂತಾದ ಪ್ರಾಣಿಗಳು ಹುಲ್ಲು, ಆಹಾರ ಪದಾರ್ಥಗಳನ್ನು ತಿನ್ನು. 1. to graze, 2. to supply fodder. ವಾ: ದನಗ ಹುಲ್ಲ್ ಮೇದ್ ಹಿಂಬೊತ್ತ್‌ಗೆ ಕೊಟಗೆಗೆ ಬಂದ್ ಕೂಡ್‌ವೆ. **ಮೇದವೆ** /*me:davɛ*/ ದನ ಹುಲ್ಲು, ಆಹಾರ ಪದಾರ್ಥಗಳನ್ನು ತಿನ್ನುವುದು. fodder for the cattle. ವಾ: ದನಗ ಬಾಣೆಲಿ ಹುಲ್ಲ್ ಮೇದವೆ. ಪ: ಮೇದ್ – ಮೇದು; ಮೇಯದು – ಮೇಯುವುದು.

ಮೇನಾಲ /*me:na:la*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಜ್ಜಾವರ ಗ್ರಾಮದ ಜಾಗ. a locality in Ajjavara village in Sullia Taluk of Dakshina Kannada District.

ಮೇಪತ /*me:pata*/ ಸನಾ. 1. ಜಾನುವಾರುಗಳನ್ನು ಮೇಯಿಸುವವ, 2. ದನಗಾಹಿ. a cowherd. ವಾ: ಮೇಪತ ಬಾಣೆಲಿ ಕುದ್ದ್ ಜೋರಿಲಿ ಹಾಡ್ದೆ.

ಮೇಪುಳು /*me:puḷu*/ ನಾ. ಕೇಪುವಿನ ಕೋವಿಯಲ್ಲಿ ಕರಿಮದ್ದು ರಂಜಕ ತುಂಬಿದೆಯೇ ಎಂದು ನೋಡುವ ಜಾಗ. ಇದರ ತುದಿಗೆ ಕೇಪು ಇಟ್ಟು ಕೋವಿ ಹೊಡೆಯುತ್ತಾರೆ. ನೇಪುಳು(ತು). percussion cap.

ಮೇಯಿ /*me:yi*/ ಕ್ರಿ. ಮೇಯು. to graze. ವಾ: ದನಗ ಗದ್ದೆ ಬರಿಲಿ ಹಸಿ ಹುಲ್ಲ್‌ನ ಮೇಯಿತೊಳ.

ಮೇರಜೆ /*me:rajɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮೇರ್ಕಜೆ /*me:rkajɛ*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅರಂತೋಡು ಗ್ರಾಮದ ಜಾಗ. 1. family, 2. lineage, 3. a locality in Arantodu village in Sullia Taluk of Dakshina Kannada District.

ಮೇಲಂತಸ್ತ್ /*me:lantastɨ*/ ನಾ. 1. ಉಪ್ಪರಿಗೆ, 2. ಮಾಳಿಗೆ. 1. upstairs, 2. floor. ವಾ: ಮೇಲಂತಸ್ತ್‌ಲಿ ನಿತ್ತರೆ ಇಡಿ ಪೇಟೆನೆ ಕಂಡದೆ.

ಮೇಲಡ್ತಲೆ /*me:laḍtalɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮೇಲಮನೆ /*me:lamanɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮೇಲಾಗಿ /*me:la:gi*/ ನಾವಿ. 1. ಮಿಗಿಲಾಗಿ, 2. ಅದಕ್ಕಿಂತಲೂ ಹೆಚ್ಚಾಗಿ. 1. more over, 2. over and above. ವಾ: ಮೊನ್ನಂಗೆ ಒಬ್ಬರಿಗಿಂತ ಒಬ್ಬ ಮೇಲಾಗಿ ಇರೊಕುತ ಆಸೆ.

ಮೇಲುಟ್ಟು /*me:luṭṭu*/ ಕ್ರಿ. ಮೇಲಿದೆ. on the top/ stairs. ವಾ: ಸೆಡೆಗೆಲ್ಲ ಅಟ್ಟದ ಮೇಲೆ ಒಳೊ.

ಮೇಲೆ /*me:lɛ*/ ಅ. ಹೊರಗಿನ ಭಾಗ. outer layer. ವಾ: ಬರೆ ಮೇಲೆಗೆ ಹೋಗಿ ಬರೊನೊ.

ಮೇಲೆಬೀಳ್ /*me:lɛbi:ḷɨ*/ ಕ್ರಿವಿ. 1. ದಾಳಿಮಾಡು, 2. ಹಲ್ಲೆ. 1. to attack, 2. to assault. ವಾ: ಹುಲಿ ಮೊನ್ನನ ಮೇಲೆ ಬೀಳ್‌ದು.

ಮೇಲೆಹೋದೊ /*me:lɛho:dɔ*/ ಕ್ರಿವಿ. 1. ಸತ್ತು ಹೋದರು, 2. ಎತ್ತರಕ್ಕೆ ಹೋದರು, 3. ಉನ್ನತಿ ಹೊಂದು. 1. died, 2. reached a higher status, 3. to prosper. ವಾ: ಅವು ಮೇಲೆ ಹೋದೊ.

ಮೇಲೇರಿ /*me:le:ri*/ ನಾ. ವಿಷ್ಣುಮೂರ್ತಿ ಭೂತ ಕೋಲದಲ್ಲಿ ನಿರ್ಮಿಸುವ ಕೆಂಡದ ರಾಶಿ. a heap of

embers prepared during the annual ritual (Kola) of Vishnumurthy daiva. ವಾ: ದೈವ್ವ ಮೇಲೇರಿಗೆ ಬೀಳ್ದರ ನೋಡಿಕೆ ಜನಗ ಸೇರುವೆ. ಪ: ನಿರುಪು

ಮೇಲ್ ಕಟ್ಟಡಿ /*me:lɨ kaṭṭaḍi*/ ನಾವಿ. 1. ಮಂಟಪ, 2. ಶುಭಕಾರ್ಯಗಳಿಗೆ ಕಟ್ಟುವ ಚಪ್ಪರ, 3. ದೇವರನ್ನು ಇಡುವ ವಿಶೇಷ ರೀತಿಯ ಗೂಡಿನ ರಚನೆ. 1. a canopy, 2. a temporary shelter/canopy built during auspicious occassions, 3. a hole in the wall to keep a lamp. ವಾ: ಮೇಲ್ ಕಟ್ಟಡಿಲಿ ಮೊದುಮಕ್ಕಳ ಕೂರ್‌ಸಿವೆ.

ಮೇಲ್ಕಟ್ /*me:lkaṭɨ*/ ನಾ. ಗೌಡ ಸಮುದಾಯದ ವಿವಾಹ ಕಾರ್ಯ ನಡೆಯುವ ಚಪ್ಪರದ ಮಧ್ಯ ಭಾಗದಲ್ಲಿ, ನಾಲ್ಕು ಕಂಬಗಳ ನಡುವೆ ಮೇಲ್ಭಾಗ ಬಿಳಿಬಟ್ಟೆ ಕಟ್ಟುವುದು, ಒಂದು ಜೋಡಿ ತೆಂಗಿನಕಾಯಿಯನ್ನು ಮೇಲ್ಕಟ್ಟಿನ ಅಡಿಯಲ್ಲಿ ಕಟ್ಟುವುದು. ಇದನ್ನು ಮಡಿವಾಳರು ಮಾಡುತ್ತಾರೆ. tying a long white cloth below the canopy/ pandal during a marriage ceremonny. ವಾ: ಚಪ್ಪರದ ವಳಿಗೆ ಮೇಲ್ಕಟ್ಟ್ ಕಟ್ಟುದು, ಮೇಲ್ಕಟ್ಟ್‌ನ ಮಡ್ಯಾಳ ಬೆಳಿ ಅರ್ವೆಲಿ ಕಟ್ಟಿವೆ. **ಮೇಲ್ಕಟ್ಟು ಕಟ್ಟುವುದು** /*me:lkaṭṭu kaṭṭuvudu*/ ಮುಹೂರ್ತ ಮಾಡುವ ಮಂಟಪದ ಚಪ್ಪರದ ಕೆಳಗೆ ಬಿಳಿ ಬಟ್ಟೆಗಳನ್ನು ಮಡಿವಾಳನು ಕಟ್ಟುತ್ತಾನೆ, ಇದಕ್ಕೆ ಮೇಲ್ಕಟ್ಟು ಕಟ್ಟುವುದು ಎನ್ನುತ್ತಾರೆ. washerman tying a long white cloth below the canopy/ pandal during a marriage ceremony. ವಾ: ಮೊದುವೆಲಿ ಚಪ್ಪರದ ಎಂಟ್ ಕಂಬಗಳ ಉದ್ದಕ್ಕೂ ಮೂರು ಬೆಳಿ ಪಂಚೆನ ಚಪ್ಪರದ ಒಳಗೆ ಮೇಲೆ ಬಾಗಕೆ ಕಟ್ಟುದಕ್ಕೆ ಮೇಲ್ಕಟ್ಟು ಕಟ್ಟುವುದುತೇಳಿವೆ.

ಮೇಲ್ಚೆಂಬು /*me:lcembu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮೇಲ್ಪಾಡಿ /*me:lpa:ḍi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಐವತ್ತೊಕ್ಲು ಗ್ರಾಮದ ಜಾಗ. a locality in Aivattoklu village in Sullia Taluk of Dakshina Kannada District.

ಮೇಲ್ಪುಡೆ /*me:lpuḍɛ*/ ನಾವಿ. 1. ಮೇಲೆ ಭಾಗ, 2. ಮೇಲೆ. 1. above, 2. up. ವಾ: ಮನೆದ್ ಮೇಲ್ಪುಡೆಗಾಗಿ ಬರೆ ಕಡೆಂದ ಹೋದರೆ ಬಾಣೆ ಸಿಕ್ಕಿದೆ. **ಮೇಲ್ಪುಡೆಬೇತ್** /*me:lpuḍɛ be:tɨ*/ ಮೇಲ್ಭಾಗ ಬೆಂದಿದೆ. top layer has been cooked. ವಾ: ಕೂಗಲಿಟ್ಟ್‌ನ ಮೇಲ್ಪುಡೆ ಬೇತ್, ಸೂಸ್ಲಿಟ್ಟ್‌ದ್ ಮೇಲ್ಪುಡೆ ಬೇಯಕೆ ಇನ್ನೂ ಹಙ್ಞ ಹೊತ್ತ್ ಬೇಕ್.

ಮೇವ್ /*me:vɨ*/ ನಾ. 1. ಪ್ರಾಣಿಗಳ ಆಹಾರ, 2. ದನಕರುಗಳಿಗೆ ಹಾಕುವ ಹುಲ್ಲು ದಂಟು ಇತ್ಯಾದಿ. fodder for animals. ವಾ: ದನಗಳಿಗೆ ಮೇವ್ ಹಾಕೊಕ್.

ಮೇಸ್ /*me:si*/ ಕ್ರಿ. ಮೇಯಿಸು. to graze. ವಾ: ರಜೆಲಿ ಮಕ್ಕ ದನಗಳ ಮೇಸ್‌ದು. ಪ: ಮೇಸುದು – ಮೇಯಿಸುವುದು

ಮೇಳ /*me:ḷa*/ ನಾ. 1. ಹಿಮ್ಮೇಳ, 2. ಗುಂಪು, 3. ಸಂದಣಿ. 1. chorus, 2. a group, 3. a crowd. **ಗಂಡನ ತಾಳಕ್ಕೆ ಹೆಣ್ಣ್ ನ ಮೇಳ(ಗಾ).** ವಾ: ಮೇಳದವು ಅಲ್ಲಿ ಕುದ್ದೊಳೊ.

ಮೈ /*mai*/ ನಾ. ದೇಹ. body. ವಾ: ಮೈ ಯಾಕೊ ಬಿಸಿ ಬಂದದೆ, ಮೈ ಬೊಗ್ಗಿಸಿ ಕ್ಯಾಮೆ ಮಾಡೊಕು.

ಮೈನೀರ್ ಇಳ್ಸ್ /*mai ni:rɨ iḷsi*/ ಕ್ರಿವಿ. ಮೂತ್ರ ಮಾಡು. to urinate.

ಮೈ ಮುರಿಯದು /*mai muriyadu*/ ನಾವಿ. 1. ಮೈಮುರಿಯುವುದು, 2. ಜಡ ತೆಗೆಯುವುದು. to stretch one's arms and legs. ವಾ: ತಿಂದಂಗೆ ಮೈ ಮುರಿಯದು ಹಾಳ್ ಅಬ್ಬೆಸ, ತಿಂದಂಗೆ ಮೈ ಮುರೆಕಾಗದ್‌ತ ಹೇಳೊಕು.

ಮೈ ಹಂದಾಡ್ಸ್ /*mai handa:ḍsi*/ ಕ್ರಿವಿ. ಮೈ ಅಲ್ಲಾಡಿಸು. to shake one's body. ವಾ: ಬೇನೆಂದ ಮೈ ಹಂದಾಡ್ಸಿಕೆ ಬೊತ್ತ್.

ಮೈಂಟ್ /*mainṭi*/ ನಾ. 1. ನಿಗಾ, 2. ಲಕ್ಷ್ಯ, 3. ಗಮನ, 4. ಎಚ್ಚರ. 1. focus, 2. to concentrate, 3. give one's attention to, 4. caution. ವಾ: ಅಂವನ ಮೇಲೆ ಮೈಂಟ್ ಇರ್‌ಲಿ.

ಮೈಂದ /*mainda*/ ನಾ. 1. ದಡ್ಡ, 2. ಬೈಗುಳ ಪದ. 1. an idiot, 2. an expletive. ವಾ: ಎಂತ ಮೈಂದನಂಗೆ ಕುದ್ದೊಳ, ಹೋಗಿ ಕೆಲ್‌ಸ ನೋಡ್.

ಮೈಂದೂರು /*maindu:ru*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಆಲೆಟ್ಟಿ ಗ್ರಾಮದ ಜಾಗ. a locality

in Aletti village in Sullia Taluk of Dakshina Kannada District.

ಮೈಂದ್ /*maindi*/ ನಾ. 1. ಮಂಜು, 2. ಇಬ್ಬನಿ. 1. fog, 2. dew. ವಾ: ಮಡಿಕೇರಿಲಿ ಹೊತಾರೆನ ಮೈಂದ್ ನೋಡಿಕೆ ಎರ್‍ಡ್ ಕಣ್ಣ್ ಸಾಲ್‌ದ್, ಮೈಂದ್ ಮುಚ್ಚಿರೆ ದಾರಿನೆ ಕಾಂಬಕಿಲೆ.

ಮೈಂದ್‌ಹೋದು /*maindiho:du*/ ನಾ. ಋತು ಸ್ರಾವವಾಗುವುದು. menstruate. ವಾ: ಹೆಣ್ಮಕ್ಕ ಹೊರೆಗೆ ಆಕನ ಮೈಂದ್ ಹೋದು.

ಮೈಗಳ್ಳ /*maigaḷḷa*/ ನಾವಿ. 1. ಸೋಮಾರಿ, 2. ಉದಾಸೀನ ಮನೋಭಾವದವ. 1. a lazy person, 2. an idle person. ವಾ: ಮೈಗಳ್ಳತನ ಇರಿಕಾಗದ್.

ಮೈಗೆ ಪೂಜೊಕು /*maigɛ pu:joku*/ ಕ್ರಿವಿ. 1. ಮೈಗೆ ಸವರು, 2. ನೇವರಿಸು, 3. ತಡವು, 4. ಬಳಿ, 5. ಲೇಪಿಸು. 1. to rub gently, 2. to rub softly, 3. to touch, 4. to apply, 5. to coat. ವಾ: ಎಣ್ಣೆನ ಮೈಗೂ ಪೂಜೊಕು.

ಮೈತುಂಬ /*maitumba*/ ನಾ. 1. ದೇಹದ ತುಂಬ, 2. ಶರೀರವೆಲ್ಲ ಆಭರಣ/ರೋಗ. 1. on the entire body, 2. jewellery/disease all over one's body. ವಾ: ಮೈತುಂಬ ಕಜ್ಜಿ ಬಂದ್ ದೊರ್‍ಗ್ ದೊರ್‍ಗ್ ಆವುಟು.

ಮೈತೋಳು /*maito:ḷu*/ ನಾ. 1. ಮೈತ ಬಳ್ಳಿ, 2. ಒಂದು ವಿಧದ ಔಷಧಿ ಬಳ್ಳಿ. a medicinal plant. ವಾ: ಮೈತೋಳು ಒಂದ್ ಮೊದ್ದ್‌ನ ಬೊಳ್ಳಿ.

ಮೈತ್ತಡ್ಕ /*maittaḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮಂಡೆಕೋಲು ಗ್ರಾಮದ ಜಾಗ. a locality in Mandekolu village in Sullia Taluk of Dakshina Kannada District.

ಮೈದಾನ /*maida:na*/ ನಾ. 1. ಮೈದಾನ, 2. ಬಯಲು, 3. ಸಮತಟ್ಟಾದ ವಿಸ್ತಾರವಾದ ಭೂಮಿ. 1. a play ground, 2. a plain field, 3. a level ground. ವಾ: ಮಕ್ಕಲ್ಲ ಮೈದಾನಲಿ ಗುದ್ದಾಡಿವೆ, ಚೆಂಡಾಡಿವೆ.

ಮೈದುನ /*maiduna*/ ನಾ. 1. ಗಂಡನ ಅಥವಾ ಹೆಂಡತಿಯ ತಮ್ಮ, 2. ತಂಗಿಯ ಗಂಡ. 1. brother of one's husband or wife, 2. sister's husband. ವಾ: ಗಂಡನ ತಮ್ಮ ಮೈದುನ, ಅಂವನ ಹೆಣ್ಣ್‌ನಂಗೆ ತಂಗೆ ಆಕು. ಪ: ಮೈದ್‌ನ, ನನ್ಕ ಮೈತ್‌ನ(ತು)

ಮೈನಾಹಕ್ಕಿ /*maina:hakki*/ ನಾ. 1. ಒಂದು ಜಾತಿಯ ಸಣ್ಣದಾದ ಪಕ್ಷಿ, 2. ಇದು ಸ್ಟಾರ್ಲಿಂಗ್ ಕುಟುಂಬದ ಪಕ್ಷಿಯಾಗಿದೆ, ಇದರ ಪುಕ್ಕಗಳು ಗಾಢವಾಗಿದ್ದು ಕಂದು ಬಣ್ಣದಲ್ಲಿರುತ್ತವೆ, ಬಲವಾದ ಪಾದಗಳನ್ನು ಹೊಂದಿದ್ದು ಕೀಟ ಹಾಗು ಹಣ್ಣುಗಳು ಇವುಗಳ ಆಹಾರವಾಗಿದೆ. Indian myna (Acridotheres tristis), a bird. ವಾ: ಮೈನಾ ಹಕ್ಕಿ ನೋಡಿಕೆ ಬಾರಿ ಸಣ್ಣದ್, ಅದರ ಕಣ್ಣತ್ರ, ಕೊಕ್ಕತ್ರ ಮತ್ತೆ ಕಾಲ್ ಎಲ್ಲ ಅರ್‌ಸನ ಬಣ್ಣಲಿ ಇದ್ದದೆ. ಪ: ಕುರ್ಣಿಹಕ್ಕಿ, ಪೂರ್ಲಿಪಕ್ಕಿ(ತು)

ಮೈಪ /*maipa*/ ನಾವಿ. ಕೆಂಬಣ್ಣದ ಹುಂಜ. a red rooster. ವಾ: ಮೈಪ ಇಜ್ಜೆಲ್‌ಲಿ ಹಾರಿಕಂಡ್ ಹೋತು.

ಮೈಪನ /*maipana*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮಡಪ್ಪಾಡಿ ಗ್ರಾಮದ ಜಾಗ. a locality in Madappadi village in Sullia Taluk of Dakshina Kannada District.

ಮೈಪನಮನೆ /*maipanamanɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮೈಮನಿಕೆ /*maimanike*/ ನಾ. ಭೂತದ ಆವೇಶದಿಂದ ಮೈ ನಡುಗುವುದು. bhuta/deity impersonator shaking and swaying his body. ವಾ: ದರ್ಮದೆವ್ವ ಪೂಜಾರಿಗೆ ಮೈಮನಿಕೆ ಬಾತ್.

ಮೈಮುರ್ದ್ /*maimurdi*/ ಕ್ರಿವಿ. 1. ಕಷ್ಟಪಟ್ಟು ಕೆಲಸ ಮಾಡು, 2. ದೈಹಿಕ ಶ್ರಮ. 1. to work hard, 2. physical work. ವಾ: ಮೈಮುರ್‌ದ್ ಗೈಮೆ ಮಾಡಿರೆ ಮುಂದಕೆ ಸುಕ ಉಟ್ಟು.

ಮೈರ್ಪಳ್ಳ /*mairpaḷḷa*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಮರಪಡ್ನೂರು ಗ್ರಾಮದ ಜಾಗ. a locality in Amarapadnuru village in Sullia Taluk of Dakshina Kannada District.

ಮೈಲ /*maila*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕೊಲ್ಲಮೊಗ್ರು ಗ್ರಾಮದ ಜಾಗ. a locality in Kollamogru village in Sullia Taluk of Dakshina Kannada District.

ಮೈಲಿಬೀಳು /*maili bi:ḷu*/ ನಾ. 1. ಕೋಟ್ಲೆ, 2. ಸೀತಾಳೆ,

3. ಅಮ್ಮ ಬೀಳುವುದು. 1. blunt rhynchostylis, 2. foxtail orchid. ವಾ: ಮೈಲಿ ಬೀಳುದಕ್ಕೆ ಕಂಯಿಬೇವ್‌ನ ರಸನ ಕೊಟ್ಟವೆ, ಮೈಗೂ ತಿಕ್ಕುವೆ.

ಮೈಲಿಗೆ /*mailigɛ*/ ನಾ. 1. ಅಶುದ್ಧ, 2. ಮುಟ್ಟು. 1. impure, 2. menstruation. ವಾ: ಹೆಣ್ಮಕ್ಕ ಮೈಲಿಗೆ ಆಕನ ಐದ್ ದಿನ, ಏಳ್ ದಿನ ಪೂಜೆ ಮಾಡ್‌ದುಲೆ.

ಮೈಲಿರ್ದು /*mailirdu* / ಕ್ರಿವಿ. 1. ಶರೀರಕ್ಕೆ ಸೋಕುವುದು, 3. ಗತಿಸಿದವರು ಮೈಮೇಲೆ ಬರುವುದು. 1. to touch one's body, 2. possessed by a dead person. ವಾ: ನಮ್ಮವ್ವ ಸತ್ತ್ ಮೂರನೆ ದಿನಕೆ ಅಪ್ಪನ ಮೈಲಿದ್ದೊ, ಮಾತಾಡ್ದೊ, ಅದೆಲ್ಲ ನಂಬದವ್ಕು ಕಣ್ಣಾರೆ ನೋಡಿ ದಂಗ್ ಬಡ್ದ್ ನಿತ್ತಿದ್ದೆ.

ಮೈಲೆಟ್ಟಿಪಾರೆ /*maileṭṭipa:re*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮಂಡೆಕೋಲು ಗ್ರಾಮದ ಜಾಗ. a locality in Mandekolu village in Sullia Taluk of Dakshina Kannada District.

ಮೈಲ್ /*maiḷ*/ ಎಪ. 1. ಮೈಲು, 2. ದೂರವನ್ನು ಅಳೆಯುವ ಒಂದು ಮಾನ. 1. a mile, 2. a measure of distance. ವಾ: ಇನ್ನು ನಾಕ್ ಮೈಲ್ ಹೋಕು. **ಮೈಲ್‌ಕಲ್ಲ್** /*mailikalli*/ ಎಪ. 1. ಮೈಲಿಗಲ್ಲು, 2. ಮಾರ್ಗದಲ್ಲಿ ದೂರವನ್ನು ಸೂಚಿಸಲು ದಾರಿಯ ಪಕ್ಕದಲ್ಲಿ ನೆಟ್ಟಿರುವ ಕಲ್ಲು. 1. a milestone, 2. a milestone seen on the sides of highways. ವಾ: ಮೈಲ್ ಕಲ್ಲ್ ಹಾಕೊಳೊಲ ನೋಡಿಕ ಬನ್ನೆ.

ಮೈಲ್‌ತುತ್ತು /*mailituttu*/ ನಾ. ತಾಮ್ರದ ಲವಣ. copper sulphate. ವಾ: ರಬ್ಬರ್ ದೈಕೆ ಮೈಲ್‌ತುತ್ತು ಹಾಕಿರೆ ಒಳ್ಳೆದ್‌ಗಡ.

ಮೈಸುದ್ದ /*maisudda*/ ಕ್ರಿವಿ. ಸತ್ತ ಮೂರನೆ ದಿನದಲ್ಲಿ ನಡೆಸುವ ಶುದ್ಧೀಕರಿಸುವ ಕ್ರಿಯೆ. a ritual cleaning conducted on the third day after death. ವಾ: ಮೂರಕೆ, ಐದಕೆ ಹಿಂಗೆ ಅನುಕೂಲ ನೋಡಿಕಂಡ್ ಮೈಸುದ್ದ ಮಾಡಿವೆ.

ಮೈಸೂರ್ ಬಾಳೆ /*maisu:ri ba:ḷɛ*/ ನಾ. ಈ ತಳಿಯ ಗಿಡಗಳು ನೀಳವಾಗಿದ್ದು, ಹಣ್ಣುಗಳು ತಿಳಿಹಳದಿ ಬಣ್ಣದಿಂದ ಕೂಡಿರುತ್ತದೆ. mysore plantain/ banana. ವಾ: ಮೈಸೂರ್ ಬಾಳೆ ದೈಗ ಉದ್ದಕೆ ಹೋದೆ.

ಮೊಂಗು /*moŋgu*/ ನಾ. ಒಲೆಯ ಪಕ್ಕದಲ್ಲಿ ಎತ್ತರವಾದ ಜಾಗ ಇದ್ದು ಮಡಕೆ, ಸೌಟು, ಭರಣಿ ಮೊದಲಾದುವುಗಳನ್ನು ಇಡುವ ಜಾಗ, ಇದರ ಮೇಲೆ ಭತ್ತ, ಏಲಕ್ಕಿ, ಅಡಕೆ, ಕರಿಮೆಣಸು, ರಾಮಪತ್ರೆ, ಒಣಗಿದ ಮೀನು, ತರಕಾರಿ ಬೀಜ ಮೊಲಾದುವುಗಳನ್ನು ಒಣಗಿಸುವ ಜಾಗ. a shelf near the stove/oven, to keep pots, spoons, jars, etc. Paddy, cardamom, areca, pepper, seeds of vegetable, etc. are kept on this shelf for drying. ವಾ: ಮೊಂಗುಲಿ ಅನ್ನದ ಸೆಡೆನ ಇಸಿದ್.

ಮೊಂಜು /*mɔŋju*/ ನಾ. 1. ಇಬ್ಬನಿ, 2. ಹಿಮ. 1. dew, 2. mist. ವಾ: ಮಡಿಕೇರಿಲಿ ಯಾಗೊಳು ಮೊಂಜು ಮುಚ್ಚಿಕಂಡೆ ಇದ್ದದೆ, ಅದ್ನ ನೋಡಿಕೆ ಎಲ್ಲೆಲ್ಲಿಂದನೊ ಬಂದವೆ.

ಮೊಂಟಮೆ /*mɔŋṭamɛ*/ ನಾ. ಬೈಹುಲ್ಲಿನ ರಾಶಿ. a heap of straw. ವಾ: ಮೊಂಟಮೆಗೆ ಬೆಂಕಿ ಬಿದ್ದುಟು.

ಮೊಂಡ /*monḍa*/ ನಾ. ಹಠಮಾರಿ. stubborn. ವಾ: ಅಂವ ಬರಿ ಮೊಂಡ.

ಮೊಂಡಕತ್ತಿ /*monḍa katti*/ ನಾವಿ. ಹರಿತವಿಲ್ಲದ ಕತ್ತಿ. a blunt knife. ವಾ: ಮೊಂಡ ಕತ್ತಿಲಿ ಎಂತ ಮಾಡಿಕು ಆದುಲೆ. ಪ: ಮೊಂಡ್ ಕತ್ತಿ

ಮೊಂಡು /*monḍu*/ ನಾವಿ. ಹರಿತವಿಲ್ಲದ. not sharp. **ಬಂಡ ಮಾವಂಗೆ ಮೊಂಡು ಅಳಿಯ(ಗಾ).** ವಾ: ಮೊಂಡು ಕತ್ತಿಲಿ ಎಂತ ಮಾಡಿಕೂ ಆದುಲೆ.

ಮೊಂತ್ /*m2nti*/ ನಾ. 1. ಮಜ್ಜಿಗೆ ಕಡೆಯುವ ಸಾಧನ, 2. ಕಡೆಗೋಲು. a churning stick. ವಾ: ಮಜ್ಜಿಗೆ ಗುತ್ತಿಯೊಳೆಗೆ ಮೊಂತ್ ಹಾಕಿ ಕಡೆದು.

ಮೊಂತ್ರಿ /*montri*/ ನಾ. ಮಂತ್ರಿ. a minister. **ಮೊಂತ್ರಿನ ಮನೆ ಹಾಳ್, ತಂತ್ರಿನ ಕುಲ ಹಾಳ್(ಗಾ).** ವಾ: ಮೊಂತ್ರಿದ್ ಮಕ್ಕ ಬಂದೊಳ.

ಮೊಂತ್ರಿಸಿ /*montrisi*/ ಕ್ರಿ. 1. ಮಂತ್ರದಿಂದ ಬಂಧಿಸು, 2. ಮಂತ್ರಾನುಷ್ಠಾನ ಮಾಡು. 1. to capture someone/something by mystical chanting, 2. to enchant someone. ವಾ: ಹಾಂರಂವ ನೂಲ್, ಕಾಯಿ ಮಂತ್ರಿಸಿ ಕೊಟ್ಟವೆ.

ಮೊಂದ್ರಿ /*mɔndri*/ ನಾ. 1. ಚಾಪೆ, 2. ಮಂದಲಿಗೆ. a mat. **ಅವು ಮೊಂದ್ರಿ ಕೆಳ್ಗೆ ನುಗ್ಗಿರೆ ಇವು ರಂಗೋಲಿ ಕೆಳ್ಗೆ ನುಗ್ಗಿವೆ(ಗಾ). ಅವ್ವ ಕೊಟ್ಟ ಮೊಂದ್ರಿ ಮಡ್ಚಿಕಾದ್ಲೆ ಅಪ್ಪ ಕೊಟ್ಟ ದುಡ್ಡ್ ಲೆಕ್ಕ ಮಾಡಿಕಾದ್ಲೆ – ಆಕಾಸ ಮತ್ತೆ ನಕ್ಷತ್ರ(ಒ).** ವಾ: ಮೊದುವೆಗೆ ಹಸೆ ಮೊಂದ್ರಿನೆ ಬೇಕ್. ಪ: ಮೊಂದ್ರಿಲಿ – ಚಾಪೆಯಲ್ಲಿ. **ಮೊಂದ್ರಿ ಒಲಿ** /*mondri oli*/ ಚಾಪೆ ಹೆಣೆಯಲು ಬಳಸುವ ಗರಿ. a reed mat. ವಾ: ಮೊಂದ್ರಿ ಒಲಿ ಸಿಕ್ಕಿತ್.

ಮೊಂಬಟ್ಟ /*mombaṭṭa*/ ನಾ. ಗುಂಡಿ ಇರುವ ಸ್ವಲ್ಪ ಅಗಲವಾದ ಬಟ್ಟಲು. a bowl. ವಾ: ಕೂಸ್‌ಗೆ ಮೊಂಬಟ್ಟ್‌ಲಿ ಉಂಬಕೆ ಕೊಟ್ಟೊ.

ಮೊಕ್ಕು /*mokku*/ ನಾ. ಭತ್ತದ ಧೂಳು. dust of paddy. ವಾ: ಒಕ್ಕುಲು ಕೆಲ್ಸಲಿ ಕಳಲಿ ಮೋರೆಕು ಹೆಂಗೆ ಎದ್ದದೆ.

ಮೊಕ್ಕೊಂಡ್ /*mokkoṇḍi*/ ನಾ. ಮಗುಚಿಕೊಂಡು. upside down. ವಾ: ಕೂಸು ಮೋರೆ್‌ಕೊಂಡ್ ಬಂದೆ.

ಮೊಗ /*moga*/ ನಾ. ಭೂತಗಳು ಧರಿಸುವ ಮುಖವಾಡ. mask worn by spirits/daiva/bhuta. ವಾ: ಕೋಲ ಕಟ್ಟಿಕನ ಮೊಗನ ಹಾಕಂಡವೆ.

ಮೊಗರಣೆ ಉಳ್ಳಾಲಾಡಿ /*mogaraṇe uḷḷa:la:ḍi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಎಣ್ಮೂರು ಗ್ರಾಮದ ಜಾಗ. a locality in Enmuru village in Sullia Taluk of Dakshina Kannada District.

ಮೊಗರೆಕಾಯಿ /*mogarɛka:yi*/ ನಾ. ಮುಳ್ಳಿರುವ ಮರದ ಕಾಯಿ. vegetable grown on a tree which has thorns. ವಾ: ಮೊಗರೆ ಕಾಯಿನ ತಿಂಬೊದು.

ಮೊಗರ್ಪಣೆ /*mogarpaṇe*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಸುಳ್ಯ ನಗರದ ಜಾಗ. a locality in Suḷya Nagara village in Sullia Taluk of Dakshina Kannada District.

ಮೊಗಿದು[1] /*mogidu*/ ಕ್ರಿ. 1. ಉರುಳುವುದು, 2. ಮೊಗ್ಗು ಬೀಳು. 1. to roll over, 2. falling of bud. ವಾ: ನೀರ್ ಮೊಗಿದು ತುಂಬಿ ಹೊರೆಗೆ ಚೆಲ್ಲುದು.

ಮೊಗಿದು[2] /*mogidu*/ ಕ್ರಿ. ಮಗುಚುವುದು. to turn upside down. ವಾ: ಕೂಸು ತೊಟಿಗಿಲ್‌ಲಿ ಮೊಗಿದು ನೋಡಿಕ.

ಮೊಗೇರಾನ /*moge:ra:na*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮೊಗ್ಗಿ /*mɔggi*/ ನಾ. 1. ಮಗ್ಗಿ, 2. ಅಂಕಗಣಿತದ ಕೋಷ್ಟಕ, 3. ಒಂದರಿಂದ ಹತ್ತರವರೆಗೆ ಅಥವಾ ಇನ್ನೂ ಮುಂದಕ್ಕೆ ಕ್ರಮವಾಗಿ ಗುಣಿಸುವ ಅಂಕಿಗಳ ಪಟ್ಟಿ. arithmetical tables, consists of calculations. ವಾ: ಹಿಂದೆನ ಕಾಲಲಿ ದಿನ ಮೊಗ್ಗಿ ಹೇಳ್‌ಸ್‌ತಿದ್ದೊ.

ಮೊಗ್ಗುದು /*mɔggudu*/ ಕ್ರಿ. 1. ಬಸಿಯುವುದು, 2. ಒಂದು ಪಾತ್ರೆಯಿಂದ ಇನ್ನೊಂದು ಪಾತ್ರೆಗೆ ಹಾಕುವುದು. 1. to strain excess water, 2. to transfer from one vessel to another. ವಾ: ಚಾ ಮೊಗ್ಗುದು.

ಮೊಗ್ಗೆ /*mɔggɛ*/ ನಾ. 1. ಮೊಗ್ಗು, 2. ಪೂರ್ತಿಯಾಗಿ ಅರಳದೆ ಇರುವ ಹೂವು. 1. a bud, 2. a bloomed flower. ವಾ: ದಾಸಳ ಮೊಗ್ಗೆನ ನೀರ್‌ಲಿ ಹಾಕಿಸಿರೆ ಅರ್‌ಲಿದೆ.

ಮೊಗ್ಚಿ /*mɔgci*/ ನಾ. 1. ಕವುಚಿ, 2. ಅಡಿಮೇಲೆಮಾಡಿ. 1. to cover, 2. to put something upside down. ವಾ: ಕಡ್‌ಂಬಿಟ್ಟ್ ಮಾಡಿಕೆ ಹಿಟ್ಟ್‌ನ ಉಕ್ಕರಿಸಿಕನ ಲಾಯ್ಕಲಿ ಮೊಗ್ಚ್.

ಮೊಗ್ಚ್ /*mogcɨ*/ ಕ್ರಿ. ಮಗುಚು. to put upside down. **ಮೂಳೆ ಇಲ್ಲದ ನಾಲ್ಗೆ ಹೆಂಗೆ ಬೇಕಾರೂ ಮೊಗ್ಚಿದೆ(ಗಾ).** ವಾ: ಕೊತ್ತಿ ಹಾಲಳಗೆನ ಮೊಗ್ಚಿ ಹಾಕಿತ್. ಪ: ಮೊಗ್ಚಿಕೆ – ಮಗುಚಲು; ಮೊಗ್ಚಿತ್ಲೆ – ಮಗುಚಲಿಲ್ಲ; ಮೊಗ್ಚಿದ್ – ಮಗುಚಿದ್ದು; ಮೊಗ್ಚಕು – ಮಗುಚಬೇಕು. **ಮೊಗ್ಚಿತ್** /*mɔgcitɨ*/ 1. ಮಗುಚಿತು, 2. ಅಡಿಮೇಲಾಯಿತು. 1. upside down, 2. overturned. ವಾ: ಕೊತ್ತಿ ಹಾಲಳಗೆನ ಮೊಗ್ಚಿ ಹಾಕಿತ್.

ಮೊಗ್ದ್ /*mogdɨ*/ ಕ್ರಿ. ಮಗುಚಿ. to put upside down. ವಾ: ಕೊಟಗೆ ಮೊಗ್ದ್ ಬೀತ್. ಪ: ಮೊಗ್ದುಟು – ಮಗುಚಿದೆ. **ಮೊಗ್ಯದು** /*mogyadu*/ 1. ಮಗುಚುವುದು, 2. ಕವುಚಿ ಬೀಳು. 1. to put upside down, 2. to fall upside down. ವಾ: ಕೂಸು ಮೊಗ್ಯದು ನೋಡ್.

ಮೊಗ್ಯದು /*mogyadu*/ ಕ್ರಿ. ಮೇಲೆ ಎತ್ತಿಹಾಕು. to keep upside down.

ಮೊಗ್ಯಮೊಗ್ಯ ನೀರ್ ಹಾಕುದು /*mogyamogya ni:rɨ ha:kudu*/ ಕ್ರಿವಿ. ತುಂಬುವಷ್ಟು ನೀರು ಹಾಕುವುದು. to fill water in a vessel. ವಾ: ಚೊಂಬಿಗೆ ಮೊಗ್ಯಮೊಗ್ಯ ನೀರ್ ಹಾಕುದು.

ಮೊಗ್ರ /*mogra*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಗುತ್ತಿಗಾರು ಗ್ರಾಮದ ಜಾಗ. 1. family, 2. lineage, 3. a locality in Guttigaru village in Sullia Taluk of Dakshina Kannada District.

ಮೊಚ್ಚಿ /*mɔcci*/ ನಾ. ಕೊಡಲಿಯಂತಿರುವ ಸಾಧನ. an axe. **ಉಗುರುಂದ ಆದೊಕ್ಕೆ ಮೊಚ್ಚಿ ಯಾಕೆ?(ಗಾ).** ವಾ: ಮೊಚ್ಚಿ ಕಾಂಬಕೆ ಕೊಡ್‌ಲಿಯಂಗೆ, ಆದರೆ ಹಿಇ ವ್ಯತ್ಯಾಸ ಉಟ್ಟು. ಪ: ಮೊಚ್ಚು

ಮೊಜ್ಜಿಗೆ /*mɔjjigɛ*/ ನಾ. ಮಜ್ಜಿಗೆ. butter milk. **ಅಜ್ಜಿ ಇಲ್ಲದ ಮನೆ ಮೊಜ್ಜಿಗೆ ಇಲ್ಲದ ಊಟದಂಗೆ(ಗಾ).** ವಾ: ಮೊಸ್‌ರ್‌ಗಿಂತ ಹೆಚ್ಚಿ ಮಜ್ಜಿಗೆ ಬಳ್ಸಿರೆ ತಡಿಗೆ ಒಳ್ಳದ್, ದಿನಾ ಮೊಜ್ಜಿಗೆ ಕುಡೆಕು. **ಮೊಜ್ಜಿಗೆಕಡ್ಯೊದು** /*mɔjjigɛkaḍyodu*/ ಮಜ್ಜಿಗೆ ಆಡಿಸುವುದು. to churn buttermilk. ವಾ: ಮಜ್ಜಿಗೆ ಗುತ್ತಿ ತುಂಬ ಮೊಜ್ಜಿಗೆ ಕಡ್ಯೊದು.

ಮೊಜ್ಜಿಗೆಕಾಯಿ /*mɔjjigɛka:yi*/ ನಾ. ಒಂದು ವಿಧದ ಕಾಯಿ. a variety of nut/fruit. ವಾ: ಮೊಜ್ಜಿಗೆ ಕಾಯಿಲಿ ಉಪ್ಪನಕಾಯಿ ಮಾಡಿಕಾದೆ.

ಮೊಜ್ಜಿಗೆಗುತ್ತಿ /*mɔjjigɨgutti*/ ನಾ. ಮಜ್ಜಿಗೆ ಕಡೆಯುವ ಪಾತ್ರೆ. a butter milk churning vessel. ವಾ: ಮೊಜ್ಜಿಗೆ ಗುತ್ತಿಲಿ ಮಜ್ಜಿಗೆ ಕಡ್ದರೆ ಲಾಯ್ಕಲಿ ಬೆಣ್ಣೆ ಬಾದು.

ಮೊಟೆ /*moṭɛ*/ ನಾ. ಪೊಟರೆ. hollow or hole in a tree. ವಾ: ಮೊಟೆಲಿ ಹಕ್ಕಿ ಮೊರಿಗ ವಳೊತ ಹಂಗೆಲ್ಲ ಒಂದೆ ಸೆರಿ ಕೈ ಹಾಕಿಕಾದ್, ಮೊಟೆಲಿ ಹಾವ್ ಹೊಕ್ಕಿದ್ದರು ಗೊತ್ತಾದ್ಲೆ.

ಮೊಟ್ಟನ /*moṭṭana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮೊಟ್ಟೆ /*moṭṭɛ*/ ನಾ. ಸೊಂಟಕ್ಕೆ ಸುತ್ತಿದ ಸೀರೆ ಅಥವಾ ಪಂಚೆ ತುದಿಯಲ್ಲಿ ಏನಾದರೂ ವಸ್ತುಗಳನ್ನು ಸುತ್ತಿ ಇರಿಸಿ ಕೊಳ್ಳುವುದು. to tie something in the end of one's saree or dhoti. ವಾ: ಮೊಟ್ಟೆಲಿ ಅಡ್ಕೆನ ಸುತ್ತಿಸಿಕಂಡದ್.

ಮೊಟ್ಟೆ ಅಳ್‌ಂಬು /*moṭṭɛ aḷɨmbu*/ ನಾ. 1. ಅಣಬೆಯ ಹೆಸರು, 2. ಗೋಲಾಕಾರದ ಅಣಬೆ. a variety of mushroom, round in shape. ವಾ: ಮೊಟ್ಟೆ ಅಳ್‌ಂಬು ನೋಡಿಕೆ ಉರುಟಾಗಿ ಮೊಟ್ಟೆನಾಂಗೆ ಇದ್ದದೆ.

ಮೊಟ್ಟೆಹಣ್ಣ್ /*moṭṭɛ haṇṇɨ*/ ನಾ. ಮೊಟ್ಟೆ ಯಾಕಾರದ ಅರಶಿನ ಬಣ್ಣದ ಹಣ್ಣು. an egg shaped yellow fruit. ವಾ: ಮೊಟ್ಟೆ ಹಣ್ಣ್ ತಿಂಬಕೆ ಬೆಣ್ಣೆ ತರ ಲಾಯ್ಕ.

ಮೊಟ್ಟೆಹತ್ತುದು /*moṭṭe hattudu*/ ನಾ. ಬೆಟ್ಟ ಏರುವುದು. climbing a hill.

ಮೊಟ್ಟೆ[1] /*moṭṭɛ*/ ನಾ. 1. ಮಡಿಲು, 2. ಉಡಿ. 1. lap, 2. a flat surface on the legs when one sits in a cross legged position. ವಾ: ನನ್ನ ಮೊಟ್ಟೆಲಿ ಕೂಸು ಉಟ್ಟು, ಕುಡೆಕೆ ವಳೆಗೆಂದ ನೀನೆ ತಕ.

ಮೊಟ್ಟೆ[2] /*moṭṭɛ*/ ನಾ. 1. ಬೆಟ್ಟ, 2. ಉಬ್ಬು ದಾರಿ – ಎತ್ತರದ ದಾರಿ. 1. hill, 2. having a steep ascent on the road. ವಾ: ಈ ಮೊಟ್ಟೆ ಹತ್ತಿಕೆ ನನ್ನಂದ ಬೊತ್ತಪ, ಕಾಲ್ ಬಿದ್ದೊದು.

ಮೊಟ್ಟೆ[3] /*moṭṭɛ*/ ನಾ. 1. ಕೋಳಿ ಮೊಟ್ಟೆ, 2. ತತ್ತಿ, 3. ಅಂಡ. 1. Chicken egg, 2. egg, 3. egg. ವಾ: ಬೇಸಿದ ಕೋಳಿ ಮೊಟ್ಟೆ ತಿಂದಿಯನ? **ಮೊಟ್ಟೆ ಆಮ್ಲೇಟ್** /*moṭṭɛ a:mle:ṭɨ*/ ಈರುಳ್ಳಿ, ಅರಸಿನ ಹುಡಿ, ಹಸಿಮೆಣಸು, ಕೊತ್ತಂಬರಿ ಸೊಪ್ಪುನೊಂದಿಗೆ ಹಸಿ ಮೊಟ್ಟೆಯನ್ನು ಮಿಶ್ರಮಾಡಿ ಕಾವಲಿಯಲ್ಲಿ ಹೊಯ್ಯುವುದು. egg omlet. ವಾ: ಮೊಟ್ಟೆ ಆಮ್ಲೇಟ್ ಮಾಡೊಮೊ. **ಮೊಟ್ಟೆದೋಸೆ** /*moṭṭɛdo:sɛ*/ ಕೋಳಿಮೊಟ್ಟೆಯನ್ನು ಕಾವಲಿಗೆ ಹಾಕಿ ಮಾಡುವ ದೋಸೆ. an omlet. ವಾ: ಮೊಟ್ಟೆದೋಸೆ ಮಾಡಿವೆ. **ಮೊಟ್ಟೆಸಾರ್** /*moṭṭesa:ri*/ ಮೊಟ್ಟೆಸಾಂಬಾರು. egg curry. ವಾ: ಮೊಟ್ಟೆ ಸಾರ್‌ನ ಬೇಸಿ ಮಾಡ್ಡ, ಇಲ್ಲೆ ಹಂಗೆ ಹೊಯ್ಯದ? **ಮೊಟ್ಟೆಪೊಜ್ಜಿ** /*moṭṭɛpojji*/ ಮೊಟ್ಟೆ ಚಟ್ನಿ. egg chutney. ವಾ: ಮೊಟ್ಟೆಪೊಜ್ಜಿನ ಕಾಯಿ ಹಾಕಿ ಮಾಡಿವೆ.

ಮೊಟ್ಟೆ[4] /*moṭṭɛ*/ ನಾ. 1. ಎತ್ತರದ ದಾರಿ, 2. ಉಬ್ಬು ತಗ್ಗುಗಳಿರುವ ದಾರಿ. 1. a steep ascent on the

road, 2. an uneven road. ವಾ: ನೀ ಮೊಟ್ಟೆ ಹತ್ತುವನ?

ಮೊಟ್ಟೆ[5] /*moṭṭɛ*/ ನಾ. 1. ಸೊನ್ನೆ, 2. ಗೋಳೆ, 3. ಸೋಲು. 1. zero, 2. defeat, 3. insult. ವಾ: ಅಂವಂಗೆ ಪರೀಕ್ಷೆಲಿ ಮೊಟ್ಟೆ ಸಿಕ್ಕಿತ್.

ಮೊಟ್ಟೆಂಗಾರು /*moṭṭeŋga:ru*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ತೊಡಿಕಾನ ಗ್ರಾಮದ ಜಾಗ. a locality in Todikana village in Sullia Taluk of Dakshina Kannada District.

ಮೊಟ್ಟೆಕೋಸು /*moṭṭɛko:su*/ ನಾ. 1. ಕೋಸುವಲ್ಲೆ, 2. ಕ್ಯಾಬೇಜ್. cabbage. ವಾ: ಗದ್ದೆಲಿ ಮೊಟ್ಟೆಕೋಸು ಬೆಳ್ದದ್.

ಮೊಟ್ಟೆಗಸಿ /*moṭṭɛgasi*/ ನಾವಿ. ಮೊಟ್ಟೆಯ ಗಟ್ಟಿ ಸಾರು. egg curry. ವಾ: ಚಪಾತಿಗೆ ಮೊಟ್ಟೆಗಸಿ ಮಾಡ್ದ್.

ಮೊಟ್ಟೆಗೋಸ್ /*moṭṭego:s*/ ನಾ. 1. ಮೊಟ್ಟೆಕೋಸು, 2. ಎಲೆಕೋಸು. cabbage. ವಾ: ಮೊಟ್ಟೆಗೋಸ್ ದೈಲೆಲ್ಲ ಬಾರಿ ಹುಳ. ಪ: ಮೊಟ್ಟೆಕೋಸ್

ಮೊಟ್ಟೆಮಜಲು /*moṭṭɛmajalu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಎಣ್ಮೂರು ಗ್ರಾಮದ ಜಾಗ. a locality in Enmuru village in Sullia Taluk of Dakshina Kannada District.

ಮೊಟ್ಟೆಮನೆ /*moṭṭɛ manɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮೊಟ್ಟೇರ /*moṭṭe:ra*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮೊಡಂಕಿದೆ /*moḍaŋkidɛ*/ ಕ್ರಿವಿ. 1. ಹೊಡೆ, 2. ಕುಟ್ಟಿಹಾಕಿದೆ. 1. to beat, 2. powdered/ smashed/pounded. ವಾ: ಏನಾರ್ ಜೋರಿಲಿ ಮಾತಾಡಿರೆ ತಲೆಗೆ ಮೊಡಂಕಿದೆ.

ಮೊಡಂಕ್[1] /*moḍaŋkɨ*/ ಕ್ರಿ. ವಿರುದ್ಧ ಮಾತನಾಡು. to oppose. ವಾ: ದೊಡ್ಡವ್ರ ಮೊಡಂಕ್ ಮಾತಾಡಿಕಾಗದ್.

ಮೊಡಂಕ್[2] /*moḍaŋkɨ*/ ನಾ. 1. ಮಡಿ, 2. ಶುಭ್ರ, 3. ನೈರ್ಮಲ್ಯ, 4. ಆಚಾರ, 5. ಸಂಪ್ರದಾಯ. 1. state of purity, 2. clean, 3. pure, 4. custom, 5. tradition. ವಾ: ನಮ್ಮವ್ವಂಗೆ ಮೊಡಂಕ್ ಹೆಚ್ಚಿ, ಅದ್ ಮುಟ್ಟ್‌ಬಡ, ಇದ್ ಮುಟ್ಟ್‌ಬಡತ ಹೇಳಿವೆ.

ಮೊಡಂಬೋಡಿ ಸೊಪ್ಪು /*moḍambo:ḍi soppu*/ ನಾ. ಒಂದು ಬಗೆಯ ಔಷಧಿಯ ಸೊಪ್ಪು. a medicinal plant. ವಾ: ಮೊಡಂಬೋಡಿ ಸೊಪ್ಪುತ ಒಂದ್ ಜಾತಿನ ಮೊದ್ದ್ ಸೊಪ್ಪು.

ಮೊಡಿ[1] /*moḍi*/ ನಾ. 1. ಏಟು, 2. ಹೊಡೆತ. 1. to beat, 2. to thrash. ವಾ: ಅಂವಂಗೆ ಹಂಗೆ ಮೊಡಿಬಡ.

ಮೊಡಿ[2] /*moḍi*/ ಕ್ರಿ. ಮಡಚಿಕೊಳ್ಳು. get folded.

ಮೊಡಿ[3] /*moḍi*/ ನಾ. 1. ಸಾಯು, 2. ಮಡಿಯು. 1. to die, 2. death. ವಾ: ಅಂವಂಗೆ ಮೊಡಿತ ಬೈಯ್ಯಬಡ.

ಮೊಡಿ[4] /*moḍi*/ ಕ್ರಿ. ಒಳಕ್ಕೆ ಸರಿಯು. draw back.

ಮೊಡಿ[5] /*moḍi*/ ನಾ. 1. ನಾರುಮಡಿ, 2. ಮಡಿಬಟ್ಟೆ, 3. ಮಡಿಮಾಡಿದ ಬಟ್ಟೆ. 1. sanctified, 2. pure flothes, 3. undefiled clothes. ವಾ: ಪೂಜೆಗೆ ಕೂರಿಕನ ಮೊಡಿ ಬಟ್ಟೆ ಹಾಕ.

ಮೊಡಿಕೆ /*moḍikɛ*/ ನಾ. 1. ಮಡಿಕೆ, 2. ಮಣ್ಣಿನ ಪಾತ್ರೆ. 1. a clay pot, 2. an earthen pot. **ಅಂಬುಲಿ ಕುಡ್ದಂವ ಮೊಡಿಕೆ ಹೊತ್ತದ್ಯಾ.(ಗಾ).** ವಾ: ಮೊಣ್ಣ್ ನ ಮೊಡಿಕೆಲಿ ಮಜ್ಜಿಗೆ ಹೊಯ್ದಿಸಿಯೊಳೆ, ಹೊಯ್ಕಂಡ್ ಕುಡೆನಿ.

ಮೊಡ್ಗ್ /*moḍgɨ*/ ಕ್ರಿ. 1. ಇಡು, 2. ಬಚ್ಚಿಡು, 3. ಅಲುಗದಂತೆ ಇಡು, 4. ಉಳಿಸು, 5. ಇಟ್ಟುಕೊಂಡಿರು, 6. ಹೊಡೆ, 7. ಮಡಗು. 1. to keep, 2. to hide something, 3. to keep something steady/ unmoving, 4. to save, 5. to keep, 6. to hit, 7. to keep. ವಾ: ಮಣೆನ, ಮುಕ್ಕಾಲ್‌ನ ನೆಲ್ಲಕ್ಕಿ ಬಾಡೆಲಿ ಮೊಡ್ಗ್. ಪ: ಮೊಡ್ಗುವೆ – ಇಡುತ್ತಾರೆ; ಮೊಡ್ಗಿಕಿಲೆ – ಉಳಿಸುವುದಿಲ್ಲ

ಮೊಡ್ಚಿ ಕುದ್ದ್‌ರ್[1] /*moḍci kuddirɨ*/ ಕ್ರಿ. ಮಡಚಿ ಕುಳಿತುಕೊಳ್ಳುವುದು. to sit by folding legs. ವಾ: ನೀ ಮೊಡ್ಚಿ ಕುದ್ದ್‌ರ್.

ಮೊಡ್ಚಿ ಕುದ್ದ್‌ರ್[2] /*moḍci kuddirɨ*/ ನಾ. ಮಾತಾನಾಡದೇ ಕುಳಿತುಕೊಳ್ಳು, ಬೈಗುಳ ಪದ. to sit quietly, an expletive term.

ಮೊಡ್ಚ್ /*moḍcɨ*/ ಕ್ರಿ. ಮಡಚು. to fold. **ಹಾಕಿದ**

ಮೊಂದ್ರಿ ಮೊಡ್ಚಿಕೆ ಬೊತ್ತು – ಆಕಾಶ(ಒ). ವಾ: ಹಾಸ್‌ಗೆನ ಮೊಡ್ಚು, ಆ ಹಾಸಿಗೆ ಮೊಡ್ಚುದೇ ಕಮ್ಮಿ. ಪ: ಮೊಡ್ಚು. **ಮೊಡ್ಚಿ** /*moḍci*/ ಮಡಚು. to fold. ವಾ: ಕಂಬುಳಿನ ಮೊಡ್ಚಿ ತೆಗ್ದಿಸಿದೊ.

ಮೊಡ್ಡಿ¹ /*moḍḍi*/ ನಾ. ಕರುಹಾಕಿದ ಜಾನುವಾರುಗಳಿಗೆ ಕೊಡುವ, ನುಚ್ಚಕ್ಕಿ, ತೌಡು ಮೊದಲಾದುವುಗಳನ್ನು ಹಾಕಿ ಬೇಯಿಸಿದ ಆಹಾರ. cattle fodder cooked with broken rice, bran, etc. usually served to cattle who have delivered calves. ವಾ: ಮೊಡ್ಡಿ ಒಲೆ ಮೇಲೆ ಉಟ್ಟು, ಚೆಣ್ಣ ಮೇಲೆ ದನಗಳಿಗೆ ಕೊಟ್ಟರಾತ್.

ಮೊಡ್ಡಿ² /*moḍḍi*/ ನಾ. ಅತಿಯಾಗಿ ಬೆಂದ ಅನ್ನ ಅಥವಾ ಇತರ ಆಹಾರ ಪದಾರ್ಥಗಳು. over boiled rice or other food items. ವಾ: ಮೊಡ್ಡಿನ ಬಕೆಟ್‌ಗೆ ಹೊಯ್ದಿಸಿಯೊಳೆ.

ಮೊಡ್ಡಿ³ /*moḍḍi*/ ನಾ. ಕಡಲೆಬೇಳೆ ಬೇಯಿಸಿ ಬೆಲ್ಲ ಅಥವಾ ಸಕ್ಕರೆ, ತೆಂಗಿನಕಾಯಿ ಹಾಕಿ ಮಾಡಿದ ಒಂದು ಭಕ್ಷ್ಯ ವಿಶೇಷ. a sweet dish made of boiled split bengal-gram, mixed with coconut and jaggery or sugar. ವಾ: ಮೊಡ್ಡಿ ತಿಂದಿಯನ?

ಮೊಡ್ಡು /*moḍḍu*/ ಕ್ರಿ. ಮಡಚಿ ಇಡುವುದು. to keep things folded. ವಾ: ಮೊಂದ್ರಿನ ಮೊಡ್ಡು.

ಮೊಡ್ಡ್¹ /*moḍḍɨ*/ ನಾ. ಜಿಡ್ಡು. grease. ವಾ: ಎಣ್ಣೆ ಪಸೆ ಹೋತೇಲೆ, ಮೊಡ್ಡ್ ಹಂಗೇ ಉಟ್ಟು.

ಮೊಡ್ಡ್² /*moḍḍɨ*/ ನಾ. ಕಿವಿಯ ಗುಗ್ಗೆ. ear wax. ವಾ: ಕೆಬಿನ ಮೊಡ್ಡ್‌ನ ತೆಗಿಯಕನ ಜಾಗ್ರತೆ.

ಮೊಡ್ಪಾಳೆ /*moḍpa:ḷɛ*/ ನಾ. 1. ಹಾಳೆಯಲ್ಲಿ ಮಾಡುವ ಒಂದು ರೀತಿಯ ಟೊಪ್ಪಿ, 2. ಮುಟ್ಟಪಾಳೆ ಕಂಗಿನ ಹಾಳೆಯಿಂದ ಮಾಡಿದ ತಲೆಗೆ ಹಾಕುವ ಟೋಪಿ. a cap made of areca palm leaf. **ಮುಡಾಸ್‌ನಂವ ಬಾದುಲೆ ಮೊಡ್ಪಾಳೆನಂವಂಗೆ ಕೊಡ್ದುಲೆ(ಗಾ).** ವಾ: ಗೊಬ್ಬರ ಹೊರಿಕೆ ತಲೆಗೆ ಮೊಡ್ಪಾಳೆ ಇಸಿರೆ ಲಾಯ್ಕಾದೆ.

ಮೊಡ್ಯಳ /*moḍyaḷa*/ ನಾ. 1. ಮಡಿವಾಳ, 2. ಗೌಡ ಜನಾಂಗದವರ ಎಲ್ಲಾ ಶುಭ ಕಾರ್ಯಗಳಲ್ಲಿ ಮತ್ತು ಮರಣ ಸಂದರ್ಭಗಳಲ್ಲಿ ಇವರ ಪಾಲ್ಗೊಳ್ಳುವಿಕೆಯಿದೆ. 1. washerman, 2. people belonging washermen community take part in all the important occassions of Gowda community. ವಾ: ಗೌಡರಲ್ಲಿ ಜಂಬರಕೆ, ಸುದ್ದ, ಸೂತಕಕ್ಕೆ ಮೊಡ್ಯಾಳ ಬೇಕ್.

ಮೊಡ್ಯಳ್ತಿ /*moḍyaḷti*/ ನಾ. 1. ಮಡಿವಾಳಗಿತ್ತಿ, 2. ಋತುಶಾಂತಿ ಕಾರ್ಯಗಳಲ್ಲಿ ಮತ್ತು ಬಯಕೆ ಸಂದರ್ಭಗಳಲ್ಲಿ ಇವರ ಪಾಲ್ಗೊಳ್ಳುವಿಕೆಯಿದೆ. 1. a washerwoman, 2. washerwomen participate in pregnancy related rituals and mensturation rituals. ವಾ: ಕೂಸು ಹುಟ್ಟಿದ ಐದ್ ಇಲ್ಲರೆ ಏಳನೇ ದಿನ ಅಮೆತ್ತೇಳುವ ಸುದ್ದಿ ಕ್ರಿಯೆ ಇದ್ದದೆ, ಅಂದ್ ಮೊಡ್ಯಳ್ತಿ ಮನೆಗೆ ಬಂದ್ ಅವ್ವ ಮತ್ತೆ ಕೂಸುನ ಮೀಸಿ ಸುದ್ದೀಕರಣ ಮಾಡ್‌ದೆ.

ಮೊಡ್ಯಾಳಹಕ್ಕಿ /*moḍya:ḷahakki*/ ನಾ. 1. ಮಡಿವಾಳ ಹಕ್ಕಿ, 2. ಇದು ಪ್ಯಾಸೆರೀನ್ ಜಾತಿಯ ಒಂದು ಸಣ್ಣ ಪಕ್ಷಿಯಾಗಿದೆ, ಕಪ್ಪು ಮತ್ತು ಬಿಳಿ ಬಣ್ಣದ, ನೆಲದ ಮೇಲೆ ಮೇಯುವ ಅಥವಾ ಕುಳಿತುಕೊಳ್ಳುವ ವಿಶಿಷ್ಟ ಪಕ್ಷಿಗಳು ಇವು ತಮ್ಮ ಇಂಪಾದ ಹಾಡಿ ದನಿಯಿಂದ ಹೆಸರುವಾಸಿಯಾಗಿವೆ, ಮಕರಂದ, ಸಣ್ಣ ಹುಳುಗಳು, ಕೀಟಗಳು ಇವುಗಳ ಆಹಾರ. Oriental magpie-robin, a passerine bird with black and white feathers, and distinctive songs. They consume nectar from flowers, worms, insects, etc. ವಾ: ಮೊಡ್ಯಾಳ ಹಕ್ಕಿ ಬೊಳ್ಪಾಕನ ಹಾಡ್ದೆ.

ಮೊಡ್ರ /*moḍra*/ ನಾ. ಹೊರೆ ಹೊರಲು ಬಳಸುವ ಉದ್ದನೆಯ, ದಪ್ಪದ ಬಟ್ಟೆ ಚೀಲ, ಇದರ ಮಧ್ಯಕ್ಕೆ ಕಟ್ಟಿ ಹಾಕಿ ಎರಡು ಭಾಗ ಮಾಡಿ ಒಂದು ಭಾಗವನ್ನು ತಲೆಯಲ್ಲೂ ಇನ್ನೊಂದು ಭಾಗವನ್ನು ಬೆನ್ನಿನಲ್ಲೂ ಹೊತ್ತೊಯ್ಯುತ್ತಾರೆ. a long cloth bag to carry bundles. ವಾ: ಹೊರೆ ಹೊರಿಕನ ಮೊಡ್ರನ ಬಳ್ಸುವೆ.

ಮೊಡ್ಸದೆ /*moḍsaraci:la*/ ಕ್ರಿ. ಮಡಚದೆ. without folding. ವಾ: ಕಾಲ್ ಮೊಡ್ಸದೆ ಕುದ್ದೊಳ.

ಮೊಡ್ಸರಚೀಲ /*moḍsadɛ*/ ನಾ. ಸಾಮಾನುಗಳನ್ನು ತೆಗೆದುಕೊಂಡು ಹೋಗುವ ಚೀಲ, ಅದನ್ನು ಎರಡು ಭಾಗ ಮಾಡಿ ಹೆಗಲ ಮೇಲೆ ಹಾಕಿಕೊಂಡು ಹೋಗುವುದು. a bag to carry things, carried on shoulder.

ಮೊಣಕೈ /*moṇakai*/ ನಾ. 1. ಮೊಣಕೈ, 2. ಕಣಕೈ ಮತ್ತು ತೋಳುಗಳ ನಡುವಿನ ಭಾಗ. 1. elbow, 2. a part between upper and lower parts of arm. ವಾ: ಮೊಣಕೈನ ಹಿಞ್ಞ ಹಂಗೆ ಹಿಂಚ್.

ಮೊಣಪಣ /*moṇapaṇa*/ ನಾ. 1. ಮೋನಪ್ಪ, 2. ವ್ಯಕ್ತಿನಾಮ ಪುರುಷ. Monappa, a name of a person. ವಾ: ಮೊಣಪಣ ಬಂದೊಳ.

ಮೊಣಿ /*moṇi*/ ನಾ. 1. ಮಣಿ. a precious stone – a gem. ವಾ: ಗೂಡೆಗ ಮೊಣಿ ಹಾಕುದು ನೋಡ್ಯಳೆ, ಹೈದಾಗಿ ಮೊಣಿ ಹಾಕಿದ್ ಇದೆ ನೋಡ್ದ್.

ಮೊಣಿಕಟ್ /*moṇikaṭi*/ ನಾ. 1. ಮಣಿಕಟ್ಟು, 2. ಹಸ್ತಮೂಲ, 3. ಮುಂಗೈಯ ಹರಡು. wrist, a joint between the arm and the hand. ವಾ: ಮೊಣಿಕಟ್ಟ್‌ಗೆ ಮಿಡಿಬಡ.

ಮೊಣಿಪುನಬೊಳ್ಳಿ /*moṇipunabɔḷḷi*/ ನಾ. ಹುರಿಹಗ್ಗ. rope made of fibre/coir. ವಾ: ಮೊಣಿಪುನಬೊಳ್ಳಿಲಿ ಚೀಲದ ಬಾಯಿನ ಎಳ್ದ್ ಕಟ್ಟಿ ಹಿರೆಗಂಟ್ ಹಾಕೊಕು, ಆಗ ಬಿಚ್ಚಿಕೆ ಸುಲಬಾದೆ.

ಮೊಣಿಮಾಲೆ /*moṇima:lɛ*/ ನಾ. ಮಣಿಸರ. a chain made of gemstones. ವಾ: ಗೂಡೆಗಳಿಗೆ ಮೊಣಿಮಾಲೆ ಹಾಕಿರೆ ಲಾಯ್ಕ್.

ಮೊಣ್ಕಾಲ್ /*moṇka:lɨ*/ ನಾ. ಮಂಡಿ. the joint between the thigh and the lower part of the human leg; the knee. ವಾ: ಹೆಂಗಸರ ಬುದ್ದಿ ಮೊಣ್ಕಾಲ್ ಕೆಳೆಗೆತ ಹೇಳ್ವ ಮಾತುಟ್ಟು. **ಮೊಣಕಾಲ್** /*moṇaka:lɨ*/ 1. ಮೊಣಕಾಲು, 2. ಕಾಲು ಮತ್ತು ತೊಡೆ ಸೇರುವ ಭಾಗ. 1. knee, 2. the joint between thighs and bottom of one's leg. ವಾ: ಮೊಣಕಾಲ್ ಗಂಟ್ ಬೇನೆ. **ಮೊಣ್ ಕಾಲೂರಿ** /*moṇɨ ka:lu:ri*/ ಮಂಡಿಯೂರು. on the knees. ವಾ: ಇಸ್ಕೂಲ್‌ಲಿ ಗಲಾಟೆ ಮಾಡ್ದಕೆ ಮೊಣ್ ಕಾಲೂರಿ ಕೂರ್‌ಸಿದೊ. **ಮೊಣ್ಕಾಲ್ ಚಿಪ್ಪಿ** /*mokka:lɨ cippi*/ ಮೊಣಕಾಲು ಮಂಡಿ ಚಿಪ್ಪು. knee.

ಮೊಣ್ಕೈ /*moṇkai*/ ನಾ. 1. ಮೊಣ ಕೈ, 2. ಮೊಣಕೈ ಗಂಟು. the bend or joint of the human arm between upper arm and forearm; the elbow. ವಾ: ಮೊಣ್ಕೈನ ಮಡ್ಸ್.

ಮೊಣ್ಣಿ /*mɔṇṇi*/ ನಾ. 1. ರಾಗಿ ಹುಡಿಯಿಂದ ತಯಾರಿಸುವ ತಿಂಡಿ, 2. ರಾಗಿಮುದ್ದೆ, 3. ಮೊಣ್ಣಿ. 1. a sweet dish made of finger millet, 2. finger millet ball/ragi ball. ವಾ: ಕೂಸಿಗೆ ರಾಗಿ ಮೊಣ್ಣಿ ಮಾಡಿ ಕೊಡ್ದು.

ಮೊಣ್ಣು /*mɔṇṇu*/ ನಾ. 1. ಮಣ್ಣು, 2. ಸಸ್ಯಗಳು ಬೆಳೆಯುವ ಮತ್ತು ಶಿಥಿಲ ಶಿಲೆಗಳೂ ಜೈವಿಕ ಉಳಿಕೆಗಳೂ ಸೇರಿರುವ ಭೂಮಿಯ ಮೇಲ್ಪದರ. soil, top layer of the earth. **ಮೊಣ್ಣಾಕನ ಉಗಿರಿಲ್ಲೆ ಉಗುರಾಕನ ಮೊಣ್ಣಿಲ್ಲೆ(ಗಾ).** ವಾ: ಮೊಣ್ಣು ಪರೀಕ್ಸೆ ಮಾಡ್ಸಿವೆಗಡ. **ಮೊಣ್ಣಡಿಗೆ** /*mɔṇṇaḍigɛ*/ 1. ಮಣ್ಣಿನ ಕೆಳಗೆ, 2. ಮಣ್ಣಿನ ಅಡಿಗೆ. below/under the ground/ soil. ವಾ: ಮನೆ, ಬರೆ ಬಿದ್ದ್ ಇಬ್ರೊರ್ ಮೊಣ್ಣಡಿಗೆ ಆಗೊಳೊ. **ಮೊಣ್ಣುಂಡೆ** /*mɔṇṇuṇḍɛ*/ ಮಣ್ಣಿನ ಉಂಡೆ. a mud ball. ವಾ: ಮೊಣ್ಣ್ ಉಂಡೆನ ಹೊಡಿ ಹೊಡಿ ಮಾಡೊಕು. ಪ: ಮೊಣ್ಣ್.

ಮೊಣ್ಣುಮುಕ್ಕಿತ್ /*mɔṇṇumukkitɨ*/ ಕ್ರಿವಿ. 1. ಸಂಕಟಕ್ಕೆ ಒಳಗಾಗುವುದು, 2. ಸಂಕಟಪಡಬೇಕು. 1. to be in distress, 2. should be distressed. ವಾ: ಆ ಕಂಟ ಕೊತ್ತಿ ಬಾರಿ ಉರಿ ಬಂದದೆ, ಅದ್ನ ಹೊಡ್ದ್ ಮೊಣ್ಣ್ ಮುಗ್ಸೊಕು.

ಮೊಣ್ಣೊಡ್ಡ /*mɔṇṇɔḍḍa*/ ನಾ. ಮಣ್ಣಿನಿಂದ ಕೊಳಕಾಗಿರುವವ. muddy. ವಾ: ಮಣ್ಣ್ ಲಿ ಆಡಿ ಆಡಿ ನೋಡ್ ನಿನ್ನ ಕೋಲನ, ತೇಟ್ ಮೊಣ್ಣೊಡ್ಡನೆ.

ಮೊಣ್ಣೊತ್ತರ /*moṇṇottara*/ ನಾ. ಮನೆಯ ಬಿಟ್ಟದ ಕೆಳಗಿನ ಮರ, ಈ ಮರದ ಮೇಲಿನಿಂದ ಬಿಟ್ಟ ಏರಿಸಲಾಗುವುದು. a wall plate. ವಾ: ಮೊಣ್ಣೊತ್ತರಲಿ ಸೆರೆ ಬುಟ್ಟುಟು. ಪ: ಕುತ್ತಂಗೋಲು, ಕತ್ತಂಕೋಲು, ಕುತ್ತಿಕೋಲು

ಮೊಣ್ಣ್ ಕಾವಲಿ /*moṇṇɨ ka:vali*/ ನಾ. 1. ಮಣ್ಣಿನಿಂದ ಮಾಡಿದ ಕಾವಲಿ, 2. ಓಡ್‌ಪಾಲೆ ರೊಟ್ಟಿಯನ್ನು ಈ ಕಾವಲಿಯಲ್ಲಿ ಬೇಯಿಸುತ್ತಾರೆ. an earthen/clay pan/tawa. ವಾ: ರೊಟ್ಟಿನ ಮೊಣ್ಣ್ ಕಾವಲಿಲಿ ಕಾಸುದು. ಪ: ಓಡಿಟ್ಟ್ ಕಾವಲಿ

ಮೊಣ್ಣ್ ಮಾಡ್[1] /*mɔṇṇɨma:ḍi*/ ಕ್ರಿ. ಅಶುದ್ಧ ಮಾಡು. to pollute. ವಾ: ಬಟ್ಟೆನ ಮೊಣ್ಣ್‌ಮಾಡ್‌ದ್ ಯಾಕೆ?

ಮೊಣ್ಣ್ ಮಾಡ್[2] /*mɔṇṇɨma:ḍi*/ ಕ್ರಿವಿ. 1. ಭೂಮಿಯೊಂದಿಗೆ ಬೆರೆಸುವುದು ಅಥವಾ

ನೆಲದಡಿಯಲ್ಲಿ ಹೂಳುವುದು, 2. ನಾಶವಾಗುವುದು. 1. to be mixed with soil or buried under the ground, 2. to be ruined or destroyed. ವಾ: ಸತ್ತವರ ಮೊಣ್ಣ್‌ಮಾಡ್‌ದು.

ಮೊಣ್ಣ್ ವಾಸನೆ[1] /*mɔŋŋi va:sanɛ*/ ನಾವಿ. 1. ಮಣ್ಣಿನ ವಿಶಿಷ್ಟವಾದ ವಾಸನೆ, ಒಣ ಪ್ರದೇಶದ ಮೇಲೆ ಲಘು ಮಳೆ ಬಿದ್ದಾಗ ಹೆಚ್ಚಾಗುತ್ತದೆ, 2. ಸಾಹಿತ್ಯ ಮತ್ತು ಕಲೆಯಲ್ಲಿ ಸ್ಥಳೀಯ ಸಮಸ್ಯೆಗಳು, ಕಾಳಜಿಗಳು, ದೃಷ್ಟಿಕೋನಗಳು ಇತ್ಯಾದಿಗಳನ್ನು ಪ್ರತಿಬಿಂಬಿಸುವ, ಸ್ಥಳೀಯ ಗುಣಗಳಿಗೆ ನಿಷ್ಠರಾಗಿರುವ ಸ್ವಭಾವ. 1. characteristic odour of the soil, that is raised when a light shower falls in the dry area, 2. response of literary texts and other forms arts to the local issues, concerns, views, etc. ವಾ: ಸುರೂನ ಮಳೆಗೆ ಬಾವ ಮೊಣ್ಣ್ ವಾಸನೆ ಲಾಯ್ಕ. ಪ: ಮಣ್ಣ್‌ಮೂರಿ(ತು)

ಮೊಣ್ಣ್ ವಾಸನೆ[2] /*mɔŋŋi va:sanɛ*/ ನಾವಿ. ಸಾವು ಸಮೀಪಿಸು, ಬೈಗುಳ ಪದ. nearing death, an expletive. ವಾ: ನಿಂಗೆ ಮೊಣ್ಣ್ ಮೂರಿ ಬಾಕೆ ಸುರುವಾವುಟು.

ಮೊಣ್ಣ್[1] /*mɔŋŋi*/ ನಾ. ಮಣ್ಣು. soil. **ಮೊಣ್ಣ್‌ಗೆ ಕಡ್ಡ್ ಕಲ್ಲ್‌ತೆಗ್ದೆ, ಕಲ್ಲ್‌ಗೆ ಕಡ್ಡ್ ಬೆಳ್ಳಿತೆಗ್ದೆ, ಬೆಳ್ಳಿಗೆ ಕಡ್ಡ್ ನೀರ್‌ತೆಗ್ದೆ – ಕಾಯಿ(ತೆಂಗಿನ್ನಾಯ್)(ಒ).** ವಾ: ಕೂಸು ಮೊಣ್ಣ್‌ನ ಬಾಯಿಗೆ ಹಾಕಿದರ ನಾ ನೋಡ್ಡೆ.

ಮೊಣ್ಣ್[2] /*mɔŋŋi*/ ನಾ. 1. ಬೇಸಾಯ ಮಾಡುವ ಸ್ಥಳ, 2. ಭೂಮಿ; ನೆಲ. 1. a field/farm for agriculture, 2. the earth, land. ವಾ: ಮೊಣ್ಣ್ ರಾಸಿ ಬಿದ್ದುಟು, ಮಕ್ಕ ಮೊಣ್ಣ್‌ಲಿ ಆಡ್ತು.

ಮೊಣ್ಣ್[3] /*mɔŋŋi*/ ನಾ. 1. ನೆಲವನ್ನು ಆಸ್ತಿ ಎಂದು ಪರಿಗಣಿಸಲಾಗುತ್ತದೆ, 2. ಎಸ್ಟೇಟ್, 3. ಭೂಮಿ. 1. land is considered as property, 2. estate, 3. the earth. ವಾ: ಮೊಣ್ಣ್‌ಗೆ ಹೆಚ್ಚಿ ಆಸೆಪಡಿಕಾಗದ್.

ಮೊಣ್ಣ್[4] /*mɔŋŋi*/ ನಾ. 1. ಗಾಳಿಯಲ್ಲಿ ಸುಲಭವಾಗಿ ಹಾರಾಡುವಷ್ಟು ಸೂಕ್ಷ್ಮವಾದ ಪುಡಿ ಭೂಮಿ, 2. ಧೂಳು. 1. small particles of soil, 2. dust. **ಅಡಿಗೆ ಬಿದ್ರೂ ಮೀಸೆಗೆ ಮೊಣ್ಣಾತ್ಲೆ(ಗಾ).** ವಾ: ಮಕ್ಕಳಿಗೆ ಯಾಗೊಳು ಮೊಣ್ಣ್‌ಲೆ ಆಟ.

ಮೊಣ್ಣ್‌ಮಸಿ /*mɔŋŋimasi*/ ನಾ. 1. ನಿಷ್ಪ್ರಯೋಜಕ, 2. ನಿಷ್ಪ್ರಯೋಜಕ ವಸ್ತು. 1. a useless, 2. worthless thing. ವಾ: ಜೋಯ್ಸರ್ ಮೊಣ್ಣ್‌ಮಸಿ ಎಂತೊ ಹೇಳಿ ನನ್ನ ತಲೆ ಹಾಳ್ ಮಾಡ್ದೊ.

ಮೊಣ್ಣ್‌ಮುಕ್ಕುದು /*mɔŋŋimukkudu*/ ಕ್ರಿವಿ. 1. ಸಾಮರ್ಥ್ಯವಿಲ್ಲದ, 2. ಮಣ್ಣುತಿನ್ನು, ಹಾಳಾಗು ಎಂಬರ್ಥದ ಬೈಗುಳ ಪದ. 1. an inefficient, 2. an expletive. ವಾ: ಉರಿ ಬಂದವು ಮೊಣ್ಣ್‌ಮುಕ್ಕುವೆ.

ಮೊಣ್ಣ್‌ಮುತ್ತಿ ಹೋಗ್ /*moŋŋi mutti ho:gi*/ ಕ್ರಿವಿ. 1. ಸಂತನ ಆಳಿದುಹೋಗು, 2. ಬೈಗುಳ ಪದ. 1. losing one's children, 2. an expletive.

ಮೊಣ್ಣ್‌ಮೆತ್ತ್[1] /*mɔŋŋimetti*/ ನಾ. 1. ಮೈಯೆಲ್ಲ ಮಣ್ಣು ಮಾಡಿಕೊಳ್ಳು, 2. ಕೊಳಕು ಮಾಡಿಕೊಳ್ಳು. 1. to get soiled, 2. to get dirty. ವಾ: ಗದ್ದೆ ಕೆಲ್‌ಸ ಮಾಡಿಕನ ಮಕ್ಕ ಮೈ, ಕೈಯೆಲ್ಲ ಮೊಣ್ಣ್ ಮೆತ್ತಿಕಂಡ್ ಬಂದೊಳೊ.

ಮೊಣ್ಣ್‌ಮೆತ್ತ್[2] /*mɔŋŋimetti*/ ಕ್ರಿ. ಮಣ್ಣಿನಿಂದ ಗೋಡೆ ಕಟ್ಟುವುದು. to build a mud wall. ವಾ: ಅವು ಗೋಡೆಗೆ ಮೊಣ್ಣ್‌ಮೆತ್ತ್ ತ್ತಿದ್ದೊ.

ಮೊತಿ /*mɔti*/ ನಾ. 1. ಬುದ್ಧಿ, 2. ತಿಳುವಳಿಕೆ, 3. ಆಲೋಚನೆ, 4. ಮತಿ, 5. ಸೊಯ. 1. wisdom, 2. knoweldge, 3. thought, 5. mind. **ಗೆತಿಕಟ್ಟರೂ ಮೊತಿಕೆಡಿಕಾಗದ್(ಗಾ).** ವಾ: ನಮಿಗೆ ಗೆತಿ ಇಲ್ಲೆ, ಅಂವಂಗೆ ಮೊತಿ ಇಲ್ಲೆ.

ಮೊತಿತೊಪ್ಪು /*mɔtitoppu*/ ನಾವಿ. 1. ಎಚ್ಚರ ತಪ್ಪು, 2. ಅಜಾಗರೂಕತೆ. 1. to lose consciousness, 2. carelessness. ವಾ: ಮೊನ್ನ ಮೊತಿತೊಪ್ಪಿಕಾದ್.

ಮೊತ್ತಿಮರ /*motti mara*/ ನಾ. ಮತ್ತಿಮರ, ಒಂದು ಜಾತಿಯ ಕಾಡು ಮರ. sardine fish, a sea fish. **ಒಣ್ಗಿಲ್ ಮೊತ್ತಿನಾಂಗೆ(ನು).** ಪ: ಮರುವ ಮರ

ಮೊತ್ತಿಮೀನ್ /*motti mi:ni*/ ನಾ. 1. ಸಮುದ್ರದಲ್ಲಿ ದೊರೆಯುವ ರುಚಿಕರವಾದ ಮತ್ತಿ ಮೀನು, 2. ಬೂತಾಯಿ. sardine fish, a sea fish. ವಾ: ಮೊತ್ತಿ ಮೀನ್ ಕಿಚ್ಚಾಕಿ ತಿಂಬಕೆ ರುಚಿ.

ಮೊದುಮಕ್ಕ /*modumakka*/ ನಾ. ವಧುವರರು. bride and bridegroom. ವಾ: ಮೊದುಮಕ್ಕ ಸಿಂಗಾರ ಆಗಿ ಪೊರ್ಲುು ಕಂಡವೆ.

ಮೊದುಮಜ್ಞ /*modumaŋŋa*/ ನಾ. 1. ಮದುಮಗ, 2. ವರ. a bridegroom. **ಮೊದುಮಜ್ಞನ ಬುಟ್ಟು ದಿಬ್ಬಣ**

ಹೋದಾಂಗೆ(ಗಾ). ವಾ: ಸಾಸ್ತ್ರ ಆದ ಮೇಲೆ ಮೊದ್ ಮಜ್ಜನ ಮೋರೆಲಿ ಒಂದ್ ಕಳೆ ಬಂದದೆ, ಮೊದುಮಜ್ಜಂಗೆ ಕೊಡೆ ಹಿಡೆನಿ.

ಮೊದುವೆ /*maduvɛ*/ ನಾ. 1. ವಿವಾಹ, 2. ಲಗ್ನ, 3. ವಿಧಿವತ್ತಾಗಿ ಗಂಡ ಹೆಂಡಿರಾಗುವಿಕೆ. 1. marriage, 2. wedding, 3. solemnizing a marriage. ವಾ: ಮೊದುವೆ ಸೊರ್ಗಲೆ ನಡ್ದದೆತ ಹೇಳಿವೆ.

ಮೊದುವೆ ಪ್ರಸ್ತಾಪ /*moduvɛ prasta:pa*/ ನಾ. ಮದುವೆ ಸಂಬಂಧ ಪ್ರಸ್ತಾಪಿಸುವುದು. to propose a marriage. ವಾ: ಮನೆಲಿ ದೊಡ್ಡವೆಲ್ಲ ಸೇರಿಕಂಡ್ ಮೊದುವೆ ಪ್ರಸ್ತಾಪ ಮಾಡ್ತಿದ್ದೊ.

ಮೊದೊಳಿಗೆ /*modoḷigɛ*/ ನಾ. 1. ಮದುಮಗಳು, 2. ವಧು. a bride. ವಾ: ಮೊದಳಿಗೆನ ಮೀಸ್‌ಕನ ಎಣ್ಣರ್‌ಸಣ ಹೋಕೆ ಬಾಳೆಣ್ಣ್, ಸೀಗೆಹೊಡಿ ಹಾಕಿ ಉಜ್ಜೊಕು. ಪ: ಮೊದೊಳಿಗೆಗೆ – ಮದುಮಗಳಿಗೆ

ಮೊದ್ದಿಸುದು /*moddisudu*/ ಕ್ರಿವಿ. ಮೀನು ಹಿಡಿಯಲು ವಿಷ ಇಡುವುದು. to poison the waterbody to cath fish. ವಾ: ಮೀನ್ ಹಿಡೆಕೆ ಮೊದ್ದಿಸುದು ತಪ್ಪು. ಪ: ಮೊದ್ದಿಸಿಯೊಳೊ – ವಿಷ ಹಾಕಿದ್ದಾರೆ

ಮೊದ್ದ್ /*moddi*/ ನಾ. ಔಷಧಿ. medicine. **ಇದ್ದಂವ ತಿಂದರೆ ಮೊದ್ದಿಗೆ ಇಲ್ಲದಂವ ತಿಂದರೆ ಹೊಟ್ಟೆಗೆ(ಗಾ). ಒಂದ್ ಕುಪ್ಪಿಲಿ ಎರ್ಡ್ ತರದ ಮೊದ್ದ್ – ಮೊಟ್ಟೆ(ಒ).** ವಾ: ಬಾಣ್ತಿಗೆ ಮೊದ್ದ್ ಅರ್‌ದವೆ. ಪ: ಮೊದ್ದ್‌ಗೆ – ಔಷಧಿಗೆ. **ಮೊದ್ದು** /*moddu*/ 1. ಔಷಧಿ, 2. ವಿಷ. 1. medicine, 2. poison. **ಕೆಡೊ ಕಾಲಕ್ಕೆ ಬುದ್ದಿ ಇಲ್ಲೆ ಮರಣ ಕಾಲಕ್ಕೆ ಮೊದ್ದಿಲ್ಲೆ(ಗಾ).** ವಾ: ಚಾಮೆವ್ವಂಗೆ ಸೀತಕೆ ಮೊದ್ದು ಕೊಟ್ಟನ? ಪ: ಕಂಯಿಕೋಟೆ ಇಸ

ಮೊದ್ದ್ ಕೂಳ್ /*moddi ku:ḷi*/ ನಾ. 1. ಮದ್ದಿನ ಕೂಳು, 2. ಔಷಧೀಯ ಅನ್ನ, 3. ಆಟಿ ತಿಂಗಳಿನಲ್ಲಿ ಮಾಡುವ ಆಟಿ ಸೊಪ್ಪಿನ ಪಾಯಸ. 1. a medicated food, 2. medicinal food, 3. a porridge made during the month of Aati. ವಾ: ಮೊದ್ದ್ ಕೂಳ್ ಸೊಪ್ಪ್‌ನ ಬೇಸಿರೆ ಅದರ ರಸ ನೀಲಿ ಬಣ್ಣಲಿ ಇದ್ದದೆ. ಅದರ್‌ಲಿ ಹಲ್‌ವ, ಪಾಯ್ಸ, ಕೇಸರಿ ಬಾತ್ ಮಾಡಕ್. ಅಕ್ಕಿ ತರಿ ಹಾಕಿ ಸ ಪಾಯ್ಸ ಮಾಡಿವೆ. ಪಾಯ್ಸಕೆ ಹಸ್‌ನ ತುಪ್ಪ, ಜೇನ್ ಹಾಕಿ ತಿಂಬೊದ್ ಪದ್ದೆತಿ. ಮದ್ದ್ ಕೂಳ್ ತಿನಿಸ್ ತಿಂದ ಮೇಲೆ ನಮ್ಮ ಉಚ್ಚೆ ಕೆಂಪ್ ಬಣ್ಣಲೆ ಇದ್ದದೆ.

ಮೊದ್ರೆಂಗಿ /*mɔdrɛŋgi*/ ನಾ. 1. ಮದರಂಗಿ, 2. ಗೋರಂಟಿ. henna. ವಾ: ಮೊದ್ರೆಂಗಿಗೆ ಹಜ್ಞ ಸುಣ್ಣನೂ ನಿಂಬುಳಿ ರಸ ಹಾಕಿ ಅರ್‌ದರೆ ಕೈಗೆ ಹಾಕಿಕನ ಹೆಚ್ಚಿ ಕೆಂಪಾದೆ. ಪ: ಮದ್ರಂಗಿ.

ಮೊದ್ರೆಂಗಿಸಾಸ್ತ್ರ /*mɔdrɛŋgi sa:stra*/ ನಾ. ಮದರಂಗಿ ಶಾಸ್ತ್ರ, pre-wedding ritual of applying henna to the bride. ವಾ: ಮೊದ್ರೆಂಗಿ ಸಾಸ್ತ್ರನ ಮೊದ್ವೆಲಿ ಹೈದಂಗು, ಗೂಡೆಗು ಮಾಡಿವೆ.

ಮೊದ್ಲ್ /*modlɨ*/ ನಾ. 1. ಮೊದಲು, 2. ಆರಂಭ, 3. ಆದಿ. 1. the first, 2. the beginning, 3. origin. ವಾ: ಮೊದ್‌ಮೊದ್ಲ್ ನಾವೆಲ್ಲ ಲಾಯ್ಕಲಿದ್ದೊ, ಅವುಳು ಮೊದ್ಲ್ ನಮ್ಮೊಟ್ಟಿಗೆ ಲಾಯ್ಕಲಿ ಇರ್‌ತಿತ್, ಈಗ ಹಂಗಿಲ್ಲೆ.

ಮೊದ್ಲ್-ಮೊದ್ಲು /*modlɨ-modlu*/ ನಾ. ಮೊದಮೊದಲು. in the beginning. ವಾ: ಮೊದ್ಲ್-ಮೊದ್ಲು ನಂಗೆ ಹಿಂಗೆತ ಗೊತ್ತೇ ಆತ್ಲೆತ.

ಮೊದ್ವಳಿ /*modvaḷi*/ ನಾ. ಮದುಮಗಳು. bride. ವಾ: ನಾಚಿಕೆಂದ ಮೊದ್ವಳಿಗೆ ಮೋರೆ ಕೆಂಪಾತ್.

ಮೊನ /*mona*/ ನಾ. 1. ಮೊಲ, 2. ಶಶಾಂಕ, 3. ಒಂದು ಸಸ್ಯಾಹಾರಿ ಪ್ರಾಣಿ. 1. a hare, 2. a rabbit, 3. a vegetarian animal. ವಾ: ಕ್ಯಾರೆಟ್, ಗರಿಕೆ ಮೊನನ ಆಹಾರ.

ಮೊನಿ /*mɔni*/ ಅ. ಆದರೋ, ಏನೂ, ಏನಾದರೂ, ಯಾವುದಾದರೂ ಎಂಬ ಅರ್ಥದಲ್ಲಿ ಬಳಕೆಯಾಗುತ್ತದೆ. and so forth etcetera. ವಾ: ಅವು ನಾಳೆ ಮೊನಿ ಬಾವೊತ ಕಂಡದೆ.

ಮೊನ್‌ಕಾಲ್ /*monika:lɨ*/ ನಾ. 1. ಮೊಣಕಾಲು, 2. ಕೂರ್ಪ, 3. ಕಾಲು ಮತ್ತು ತೊಡೆ ಸೇರುವ ಭಾಗ. 1. knee, 2. knee, 3. a part between thighs and bottom of one's leg. **ಪಾಪಿ ಹೋದಲ್ಲಿ ಮೊನ್‌ಕಾಲ್ ನೀರ್(ಗಾ).** ವಾ: ಬೀಳಿಕನ ಮೊನ್‌ಕಾಲ್‌ಗೆ ಬೇನೆ ಆತ್.

ಮೊನ್ನೆ /*monnɛ*/ ನಾ. 1. ಎರಡು ದಿನಕ್ಕೆ ಹಿಂದೆ, 2. ನಿನ್ನೆಯ ಹಿಂದಿನ ದಿನ. 1. two days ego, 2. one day before yesterday. ವಾ: ಮೊನ್ನೆ ತಂದ ಕಳಸೋಂತೆಗೆ ಬೆಇಣ ಕುತ್ತಿಟು.

ಮೊನ್ಸ /*monsa*/ ನಾ. 1. ಮನುಷ್ಯ, 2. ಮನುಜ, 3. ಮಾನವ. a human being. **ನಾಯಿ ಕಂಡರೆ**

ಬೊಗುಳ್ದೆ, ಮೊನ್ನ ಕಾಣದಿದ್ದರೋ ಬೊಗುಳ್ದೆ(ಗಾ). ಇನ್ನೂರ್ ವರ್ಷದ ಆಲದ ಮರ, ಮೇಲೆ ಅಂಬುಲಿ ಕುಡಿಕೆ, ಕುಡಿಕೆ ಮ್ಯಾಲೆ ಎರ್ಡ್ ಸೆಟ್ಟ್ ಗ, ಸೆಟ್ಟ್ ಗದ ಮ್ಯಾಲೆ ಕರಿ ಬೆಟ್ಟ, ಬೆಟ್ಟದ ಮೇಲೆ ಕುರಿ ಮೇದದೆ ಕಂಡಾಪುರದವು ಕಂಡ್ ಕಂಡ್ಲೊಟ್ಟಾಪುರದವು – ಮೊನ್ನನ ದೇಹ(ಒ). ವಾ: ಈ ಮೊನ್ಸ ಬಾರಿ ಸ್ವಾರ್ತಿ.

ಮೊನ್ಸ್ /*monsɨ*/ ನಾ. ಮನಸ್ಸು. mind. **ಕಳ್ಳನ ಮೊನ್ಸ್ ಹುಳ್ಳಂಗೆ(ಗಾ).** ವಾ: ಮೊನ್ಸ್ ಸುದ್ದಲಿರೊಕು, ಕೇಡ್ ಗ್ಯಾನ ಮಾಡಿಕಾದ್.

ಮೊಬ್ಬು /*mobbu*/ ನಾ. 1. ಮಬ್ಬು, 2. ಮಸುಕು, 3. ನಸುಗತ್ತಲೆ. 1. dusky, 2. dim, 3. late evening. ವಾ: ಹೊರೆಗೆ ಮೊಬ್ಬು ಮೊಬ್ಬು ಕಂಡದೆ.

ಮೊಮ್ಮ /*momma*/ ನಾ. ಮಭಾ. ಮೊಲೆ. breast (in the vocabulary of children). ವಾ: ಕೂಸು ಮೊಮ್ಮ ಬೇಕ್‌ತ ಮರ್‌ಟದೆ, ಹಿಂಗಾರೆ ಹಾಲ್ ಮರ್‌ಸುದು ಹೆಂಗೆತ?

ಮೊಮ್ಮಾಲ್ /*momma:li*/ ನಾ. ತಾಯಿಯ ಎದೆ ಹಾಲು. mother's breast milk. ವಾ: ಮೊಮ್ಮಾಲ್ ಮಕ್ಕಳ ಬೆಳವಣ್ಗೆಗೆ ಬಾರಿ ಒಳ್ಳದ್.

ಮೊಯಿಂಸ /*moyinsa*/ ನಾ. 1. ಮನುಷ್ಯ, 2. ಮನುಜ, 3. ಮಾನವ. 1. a human being, 2. a human, 3. a homo sapien. ವಾ: ಮೊಯಿಂಸ ಕಾಡೆಲ್ಲ ಕಡ್ಡ್, ಕಾಡೊಟ್ಟಿಗೆ ಊರ್‌ನು ಹಾಳ್ ಮಾಡ್ತ್. ಪ: ಮೊಂಯ್ಸ

ಮೊಯ್ಲ್ಗೆ /*moylɨgɛ*/ ನಾ. 1. ಅಶುದ್ಧ, 2. ಮೈಲಿಗೆ. 1. polluted, 2. state of impurity. ವಾ: ಮೊಯ್ಲಿಗೆ ಆದೆ ಮುಟ್ಟಡ, ಹೋಗಿ ಮೀದ್ ಬಾ.

ಮೊರ /*mora*/ ನಾ. 1. ಭತ್ತವನ್ನು ಬಾಚುವ, 2. ಗೋಚುವ ಸಾಧನ. a winnowing fan in which paddy is gathered. **ದಾಸಪ್ಪ ಬಂದಂಗೆ ದಾಸಮ್ಮ ಮೊರ ಹಿಡ್ಕಂಡ್ ಬಾತ್(ಗಾ).** ವಾ: ಮೊರಕೆ ಹಾಕಿ ಕಸ ಕಡ್ಡಿನ ಹೆರ್‌ಕಿ ಹೊಡ್ಕಿರೆ ಆದೆ.

ಮೊರಂಗಲ್ಲು /*moraŋgallu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಆಲೆಟ್ಟಿ ಗ್ರಾಮದ ಜಾಗ. a locality in Aletti village in Sullia Taluk of Dakshina Kannada District.

ಮೊರಂಡ[1] /*moraṇḍa*/ ನಾವಿ. 1. ಮೊಂಡಾದ, 2. ತುದಿ ಚೂಪ ಇಲ್ಲದ, 3. ತುದಿ ಉರುಟಾದ. 1. a blunt, 2. not sharp, 3. blunt. ವಾ: ಮೊರಂಡ ಚಾಕ್ ತಕಂಡ್ ಎಂತರ ಮಾಡ್‌ಲಿ.

ಮೊರಂಡ[2] /*moraṇḍa*/ ನಾ. ಏಟಾದ ಜಾಗದಲ್ಲಿ ಊದಿಕೊಳ್ಳುವುದು. swelling on the wounded part of the body. ಪ: ಕೊಟ್ಟಬಾದು

ಮೊರಂಪಕಲ್ಲು /*morampakallu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ತೊಡಿಕಾನ ಗ್ರಾಮದ ಜಾಗ. a locality in Todikana village in Sullia Taluk of Dakshina Kannada District.

ಮೊರಟೆ /*moraṭɛ*/ ನಾ. ತೋಡುಗಳಲ್ಲಿ, ಕೆರೆಗಳಲ್ಲಿ ವಾಸಿಸುವ ಮೀನು. a fresh water fish. ವಾ: ಮೊರಟೆ ಮೀನ್‌ದ್ ದಪ್ಪ ತಲೆ. ಪ: ಮೊರಂಟೆ(ತು)

ಮೊರಿ /*mori*/ ನಾ. ಮರಿ. a baby/child. **ತನ್ನ ಮೊರಿ ಹೊನ್ನ ಮೊರಿ, ಪರರ ಮೊರಿ ಕಾಕಮೊರಿ(ಗಾ).** ವಾ: ಪ್ರಾಣಿದ್ ಎಲ್ಲ ಮೊರಿಗಳು ನೋಡಿಕೆ ಬಾರಿ ಲಾಯ್ಕ್.

ಮೊರಿಪಿಳ್ಳಿ /*moripiḷḷi*/ ನಾ. ಮರಿಮಗ/ಳು, ಮೂರನೇ ತಲೆಮಾರು. great grand child, third generation. ವಾ: ಮೊರಿ ಪಿಳ್ಳಿ ಕರ್‌ದದೆ.

ಮೊರಿಪುದ್ವಾರ್ /*mɔripudva:r*/ ನಾ. 1. ಹೊಸ ಅಕ್ಕಿ ಊಟ-ಹೊಸ್ತೂಟ, 2. ಹೊಸ್ತೂಟ ಕಳೆದ ನಂತರ ಮಾಡುವ ಕಾರ್ಯಕ್ರಮ. 1. a feast of newly harvested rice, 2. a custom followed after the feast of newly harvested rice.

ಮೊರಿದು /*moridu*/ ಕ್ರಿ. ಬೊಗಳು. to bark. ವಾ: ನಾಯಿ ಮೊರ್ದದೆ, ಯಾರ್ ಬಂದ ನೋಡ್‌ನೆ. ಪ: ಕೊರೆಪ್ಪು(ತು)

ಮೊರಿಯ /*moriya*/ ನಾ. ಜವಾಬ್ದಾರಿಯಿಂದ ಜಾರಿಕೊಳ್ಳುವವನು. someone who evades responsibility. ವಾ: ಅಂವ ಬಾರೀ ಮೊರಿಯ, ಯಾವುದರ್‌ಲೂ ಸಿಕ್ಕಿ ಹಾಕಂಕಿಲೆ.

ಮೊರ್‌ಂಟೆ /*moriṇṭɛ*/ ನಾ. ತೋಡು, ಕೆರೆಗಳಲ್ಲಿರುವ ಸಣ್ಣಜಾತಿಯ ಮೀನು. a fresh water fish. ವಾ: ಮೊರ್‌ಂಟೆ ಹಿಡೆಕೆ ಕುದ್ದದ್. ಪ: ಮೊರ್ಟೆಮೀನ್

ಮೊರ್ಟದೆ /*morṭadɛ*/ ನಾ. ಅಳುತ್ತದೆ. will cry. ವಾ: ಹಟ ಮಾಡಿಕಂಡ್ ಮೊರ್‌ಟದೆ. ಪ: ಮರ್ಟದೆ

ಮೊರ್ಡು /*morḍu*/ ಕ್ರಿ. 1. ಅಳು, 2. ರೋದಿಸು, 3.

ದುಃಖಿಸು. 1. to cry, 2. to weep, 3. to snivel. ವಾ: ಯಾಕೆನೆ ಮಕ್ಕಳೆ ಕೂಸುನ ಹಿಂಗೆ ಮೊರ್‌ಡಿಸಿರೆ. ಬಂದ್ ಎತ್ತಿಕಣಿಕೆ ಬೊತ್ತ? ಪ: ಮೊರ್‌ಡ್, ಮರ್ಡ್

ಮೊರ್ದಿನ /*mordina*/ ನಾ. 1. ಮರುದಿನ, 2. ಮಾರನೆಯ ದಿವಸ. 1. the next day, 2. tomorrow. ವಾ: ಮೊರ್ದಿನ ನೋಡಿಕನ ಮರಲಿ ಹಣ್ಣೆ ಇತ್ಲೆ.

ಮೊರ್ಯಾದಿ /*morya:di*/ ನಾ. 1. ಮರ್ಯಾದೆ, 2. ಗೌರವ, 3. ಮನ್ನಣೆ. 1. honour, 2. respect, 3. recognition. ವಾ: ಮೊನ್ಸ ಮೊರ್ಯಾದಿ ಬುಟ್ಟ್ ಬೊದ್ಕಿಕಾದ್.

ಮೊರ್ಲ /*mɔrla*/ ನಾ. 1. ಮಾನಸಿಕ ಅಸ್ವಸ್ಥ, 2. ಹುಚ್ಚ. 1. insanity, 2. madness. ವಾ: ಕೆಲವು ಮೊರ್ಲರಂಗೆ ಆಡಿವೆ.

ಮೊರ್ಲಾಟ /*morla:ṭa*/ ನಾ. 1. ಹುಚ್ಚಾಟ, 2. ಹುಚ್ಚು ಮನಸ್ಥಿತಿ, ಮರ್ಲಾಟ. 1. madness, 2. insanity. ವಾ: ಮೊದ್ವೆ ಮಾಡದೆ ಮೊರ್ಲ್ ಬುಡಿಕಿಲ್ಲೆ.

ಮೊರ್ಲಿ /*mɔrli*/ ನಾ. 1. ಮರುಳಿ, 2. ಹುಚ್ಚಿ, 3. ಅವಿವೇಕಿ. 1. a mad woman, 2. an insane woman, 3. an imprudent person. ವಾ: ಅವ್ಳು ಬರ್‌ತಾ ಬರ್‌ತಾ ಮೊರ್ಲಿ ಆಗ್ತುಟ್ಟು.

ಮೊರ್ಲು /*mɔrlu*/ ನಾವಿ. 1. ಹುಚ್ಚಾಟ, 2. ಹುಚ್ಚು ಮನಸ್ಥಿತಿ, ಮರ್ಲಾಟ. 1. madness, 2. insanity, 3. foolishness. **ಪೊರ್ಲಿಗೆ ಮೊರ್ಲಿಲ್ಲೆ, ಮೊರ್ಲಂಗೆ ಪೊರ್ಲಿಲ್ಲೆ(ಗಾ).** ವಾ: ಅದ್ ಹಾಂಗೆ ಅದ್ಕೆ ಹಳ್ಳ ಮೊರ್‌ಲ್. **ಮೊರ್ಲ್ ಪಿಜಿನ್** /*mɔrlɨ pijinɨ*/ ನಾ. ಹುಚ್ಚುಚ್ಚಾಗಿ ಓಡುವ ಇರುವೆ, ಇದು ಆಕಾರದಲ್ಲಿ ಚಿಕ್ಕದಾಗಿದ್ದು ಕೆಂಪು ಬಣ್ಣದಿಂದಿರುತ್ತದೆ, ಕಚ್ಚುವುದಿಲ್ಲ. a red ant, an ant that moves around without any purpose, it doesn't bite. ವಾ: ಮೊರ್ಲ್ ಪಿಜಿನ್ ಕಚ್ಚುಲೆ.

ಮೊಲ /*mola*/ ನಾ. 1. ಶಶಾಂಕ, 2. ಸಣ್ಣಬಾಲದ ಉದ್ದ ಕಿವಿಗಳ ಪ್ರಾಣಿ, 3. ರ್‍ಯಾಬಿಟ್ಟು. a hare/ a rabbit. **ಕತೆ ಕತೆ ತೇಳ್ದು ವ್ಯಥೆಯಾತ್, ಬದ್ಕ್ ಮೂರು ಪಾಲಾತ್, ನಿನ್ನೆ ಹೊಡ್ದ ಮೊಲ ನಿನ್ನೆ ಇಂದ್ ಸಾರಾತ್, ಮೊಲ ಹೊಡ್ದವ ಸತ್ತ್ ಆರ್ ತಿಂಗ ಆತ್ – ಉತ್ತರ : ಮದುವೆ ಆದ ಮೇಲೆ, ಗಂಡಹೆಣ್ಣ್‌ನ ಜಗಳ, ಬಿರುಕು, ನೇಣ್ ಹಾಕಂಡ ಗಂಡ(ಒ).** ವಾ: ಮೊಲ ಸಾಂಕ್ ಪ್ರಾಣಿನೂ ಹೌದು, ಕಾಡ್ ಪ್ರಾಣಿನೂ ಹೌದು.

ಮೊಲೆ /*molɛ*/ ನಾ. 1. ಸ್ತನ, 2. ಕುಚ. 1. breast, 2. boobs. **ಗೂಡೆಗಳಿಗೆ ಮೊಲೆ ಬಾಕನ ನೆಲ ಕಾಂಬಲೆ, ಹೈದಂಗಳಿಗೆ ಮೀಸೆ ಬಾಕನ ದೇಸ ಕಾಂಬಲೆ(ಗಾ).** ವಾ: ಕೂಸಿಗೆ ಮೊಲೆ ಕುಡ್ಸಿ ಆತ?

ಮೊಲೆತೊಟ್ಟು /*molɛ toṭṭu*/ ನಾ. ಮೊಲೆಯ ತುದಿ. nipple. ವಾ: ಕೂಸ್ ಮೊಲೆಹಾಲ್ ಕುಡೆದು ಮರ್‌ಸೊಕೊರೆ ಮೊಲೆತೊಟ್ಟಿಗೆ ಕಾಸುಳಿನ ತಿಕ್ಕಿವೆ.

ಮೊಲೆಹಾಲ್ /*molɛha:lɨ*/ ನಾ. ಎದೆಹಾಲು. breast milk. ವಾ: ಕೂಸು ಹುಟ್ಟಿದಾಂಗೆ ಮೊಲೆಹಾಲ್ ಕುಡ್ಸೊಕು, ಅದೆ ಕೂಸಿಗೆ ಸಕ್ತಿ ಅಲ.

ಮೊಲ್ಗು /*molgu*/ ನಾ. ಮಲಗು. to sleep. **ಮೊಲ್ಗಿದಂವಂಗೆ ಮೊದುವೆ ಇಲ್ಲೆ(ಗಾ).** ವಾ: ಬೇಗ ಮೊಲ್ಗು ಹೊತಾರೆ ನಾಕಂಟೆಗೆ ಏಳೊಕು, ಹೊತ್ತಾದರೆ ಎಚ್ಚರ ಆಕಿಲೆ.

ಮೊಲ್ಗ್ ತಿದ್ದೊ /*molgɨ tiddɔ*/ ನಾ. ಮಲಗುತ್ತಿದ್ದರು. were sleeping. ವಾ: ಅವ್ವನವು ಈ ಪತಯ ಕೋಂಬರೆಲಿ ಮೊಲ್‌ಗ್‌ತ್ತಿದ್ದೊ.

ಮೊಸರ್ವೆ /*mosarvɛ*/ ನಾ. ಮಸಿ ಬಟ್ಟೆ. a soiled napkin/a kitchen towel. ವಾ: ಮೊಸರ್ವೆ ಬಾರಿ ಮೊಸಿ ತುಂಬಿಟ್ಟು. ಪ: ಕೈಕುಂಟು(ತು)

ಮೊಸಲೆ /*mosalɛ*/ ನಾ. 1. ಮಸಾಲೆ, 2. ಆಹಾರ ಪದಾರ್ಥಗಳನ್ನು ರುಚಿಗೊಳಿಸಲು ಉಪಯೋಗಿಸುವ ಮೆಣಸು, ಜೀರಿಗೆ, ಧನಿಯ, ಚೆಕ್ಕೆ ಮುಂತಾದ ಸಂಬಾರವಸ್ತು ಮತ್ತು ಇವುಗಳನ್ನು ಹುರಿದು ಕುಟ್ಟಿದ ಪುಡಿ. powder of a whole spice mixture, usually of pepper, jeera, coriander seeds, cinnamon, etc. ವಾ: ಕಡೆಕಲ್ಲ್‌ಲಿ ಗೈಪುಗೆ ಮೊಸಲೆ ಕಡೆದು.

ಮೊಸಿ[1] /*mosi*/ ನಾ. ಇದ್ದಿಲು. charcoal. **ಎಲ್ಲಾ ಬಣ್ಣನ ಮೊಸಿ ನುಂಗಿತ್(ನು).** ವಾ: ಮೊಸಿನ ಹೊಡಿ ಮಾಡಿ ಸೆಗ್ಣಿನೊಟ್ಟಿಗೆ ಮಿಸ್ರ ಮಾಡಿ ಸೆಗ್‌ಣಿ ಕೆರ್ದರೆ ನೆಲ ಕಪ್ಪು ಕಂಡದೆ.

ಮೊಸಿ[2] /*mosi*/ ಕ್ರಿ. 1. ಮಸೆಯುವುದು, 2. ಹರಿತ ಮಾಡು. sharpening. **ಕರ್ಯೋಂ ಕಿರ್ಯೋಂ ಅಜ್ಜಿ ಕತ್ತಿ ಮೊಸಿಯನ(ನು).** ವಾ: ಕತ್ತಿನ ಲಾಯ್ಕ್ ಮೊಸಿ.

ಮೊಸಿಯೊದು /*mosiyodu*/ ಹಲ್ಲು ಕಡೆಯೋದು. to grind one's teeth. ವಾ: ನಿದ್ರೆಲಿ ಕಟಕಟಾತ ಹಲ್ಲ್ ಮೊಸಿಯೊದು.

ಮೊಸುರು /*mosuru*/ ನಾ. 1. ಮೊಸರು, 2. ಹೆಪ್ಪುಗಟ್ಟಿದ ಹಾಲು. 1. curds, 2. yogurt. ವಾ: ಮೊಸುರು ಕಡ್ದರೆ ಮಜ್ಜಿಗೆ, ಬೆಣ್ಣೆ ಸಿಕ್ಕುದು. ಪ: ಮೊಸ್ರು

ಮೊಸೆರ್ವೆ /*moservɛ*/ ನಾ. ಅಡುಗೆ ಕೋಣೆಯಲ್ಲಿ ಬಿಸಿ ಪಾತ್ರೆಯನ್ನು ಹಿಡಿಯಲು ಬಳಸುವ ಬಟ್ಟೆ. kitchen towel. ವಾ: ಮೊಸೆರ್ವೆನ ಹಿಡ್ಕಂಡ್ ಬಿಸಿ ಪಾತ್ರನ ಒಲೆಂದ ಇಳ್ಸಕಾಯ್ತ್. ಪ: ಕೈಂಕುತ್ತ

ಮೊಸ್ಕ್ /*moskitɨ*/ ಕ್ರಿ. ಅಲುಗಾಡು. to move/shake. ವಾ: ಅಬ್ಬ, ಕರ್‌ದ್ ಕರ್‌ದ್ ಈಗ ಮೊಸ್ಕಿತ್. ಪ: ಮೆದ್ಕ್(ತು). **ಮೊಸ್ಕುದುಲ್ಲೆ** /*moskudullɛ*/ 1. ಬೇಕೊ ಬೇಡವೊ ಎಂಬಂತೆ ನಿಧಾನವಾಡು, 2. ಇದ್ದಲ್ಲೆ ಇರು, 3. ಅಲ್ಲಾಡದಿರು. 1. indicisive, 2. to stay where one is, 3. immovable. ವಾ: ಅಂವ ಕರ್‌ದರೆಲ್ಲ ಬೇಗ ಮೊಸ್ಕುದುಲ್ಲೆ.

ಮೊಸ್ತತ್ /*mostatɨ*/ ಕ್ರಿ. 1. ಕತ್ತಿ ಮಸೆಯು, 2. ಹರಿತ ಮಾಡು. to sharpen. ವಾ: ಮಂಡೆ ಕತ್ತಿನ ಮೊಸ್ತತ್. ಪ: ಮೊಸೆಕ್(ತು). **ಮೊಸ್ಯುದು** /*mosyudu*/ 1. ಮಸೆಯುವುದು, 2. ದ್ವೇಷ ಸಾಧಿಸುವುದು. 1. to sharpen, 2. to maintain enmity. ವಾ: ವಳೆಗೊಳೆಗೆ ಕತ್ತಿ ಮೊಸ್ಯುದು.

ಮೊಸ್ರ್ /*mosrɨ*/ ನಾ. ಮೊಸರು. curds. **ಕೈ ಕೆಸರಾದ್ರೆ ಬಾಯಿ ಮೊಸ್ರ್(ಗಾ).** ವಾ: ಮೊಸ್ರ್‌ನ ಮಜ್ಜಿಗೆ ಮಾಡ್ದು ಹೆಂಗೆತ ಅವ್ಕೆ ಗೊತ್ತೆ.

ಮೊಳ /*moḷa*/ ನಾ. ಕೈ ಬೆರಳಿನ ತುದಿಯಿಂದ ಮೊಣಗಂಟಿನ ತನಕದ ಉದ್ದ, ಮೂರು ಮೊಳ – ಒಂದು ಮಾರ್. a unit of measure=length of the arm. **ಬೊರಿ ಕೈಲಿ ಮೊಳ ಹಾಕ್‌ದಾಂಗೆ(ನು).** ವಾ: ಹೂನ ಮೊಳ ಹಾಕಿ ಅಳೆದು.

ಮೊಳಂಪ್ /*moḷampɨ*/ ನಾ. 1. ಕೆಸರು ಮಣ್ಣು, 2. ಗದ್ದೆಯ ಕೆಸರು. 1. muddy, 2. slush in a flooded paddy field. ವಾ: ಕಾಲಿಗೆ ಮೊಳಂಪ್ ಮೆತ್ತಿಟು.

ಮೊಳೆ[1] /*moḷɛ*/ ನಾ. 1. ಮಳೆ, 2. ಮೋಡಗಳಿಂದ ನೀರು ಹನಿಗಳಾಗಿ ಸುರಿಯುವುದು, 3. ಮೋಡದಿಂದ ತುಂತುರಾಗಿ ಬೀಳುವ ನೀರು. 1. rain, 2. drops of water falling from the sky, 3. drizzling water from the sky. **ಮಳೆಯಿಲ್ಲದ ಬೆಳೆ – ಕೂದಲ್(ಒ).** ವಾ: ಮೊಳೆ ಬಂದರೆಲ ಬೆಳೆ ಬೆಳ್ಯದು.

ಮೊಳೆ[2] /*moḷɛ*/ ನಾ. 1. ಮೊಳಕೆ ಬರುವುದು, 2. ಮುಂಗಬರು. to sprout. ವಾ: ಹಲ್‌ಸ್‌ನಕ್ಕಿ ಮೊಳೆ ಬಂದುಟು.

ಮೊಳ್ಕೆ /*moḷkɛ*/ ನಾ. ಮೊಳಕೆ. to sprout. ವಾ: ಕುಡುನ ಮೊಳ್ಕೆ ಬರ್‌ಸಿ ಗೈಪು ಮಾಡಿರೆ ಒಳ್ಳೆದ್.

ಮೊಳ್ಳೆ /*moḷḷɛ*/ ನಾ. ನರ ಊತ. swelling of the nerve. ವಾ: ಹಣೆಲಿ ಮೊಳ್ಳೆ ಎದ್ದುಟು.

ಮೋಂಟ /*mo:ṇṭa*/ ನಾ. ವ್ಯಕ್ತಿನಾಮ ಪುರುಷ. Monta, name of a person. ವಾ: ಮೋಂಟನ ಕರೆಕಿತ್.

ಮೋಂಟ/ಮೋಂಟಿ /*mo:ṇṭa/mo:ṇṭi*/ ನಾ. ಕುಂಟುತ್ತಾ ನಡೆಯುವವ/ಳು. limping person. ವಾ: ಮೋಂಟ ಮೋಂಟಿ ಒಟ್ಟಿಗೆ ಬಂದೊ.

ಮೋಂಟಡ್ಕ /*mo:ṇṭaḍka*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮೋಂಟಣ್ಣ /*mo:ṇṭaṇṇa*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. masculine given name. ಪ: ಮೋಂಟ

ಮೋಂಟಮ್ಮ /*mo:ṇṭamma*/ ನಾ. ವ್ಯಕ್ತಿ ಹೆಸರು, ಸ್ತ್ರೀ ವಾಚಕ. feminine given name. ಪ: ಮೋಂಟಿ

ಮೋಂಟುಕಾನ /*mo:ṇṭuka:na*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಮರಪಡ್ನೂರು ಗ್ರಾಮದ ಜಾಗ. a locality in Amarapadnuru village in Sullia Taluk of Dakshina Kannada District.

ಮೋಂಟೋಳು /*mo:ṇṭo:ḷu*/ ನಾ. ಒಂದು ಜಾತಿಯ ಕಂದು ಬಣ್ಣದ ನೆಲದಲ್ಲೆ ಅಡ್ಡಾಡುವ ಕಾಡು ಹಕ್ಕಿ. a brown forest bird.

ಮೋಂದಾಯ[1] /*mo:nda:ya1*/ ನಾ. ಮಾಡಿಗೆ ಇರುವ ಆಧಾರ ಸ್ತಂಭ. a pillar supporting the roof. ವಾ: ಮೋಂದಾಯ ನಿಲ್ಸಿಕೆ ಕುತ್ತಂಗೋಲು ಬೇಕು. ಪ: ಕುತ್ತಂಗೋಲು

ಮೋಂದಾಯ[2] /*mo:nda:yi*/ ನಾ. ಕೌಕೋಲುಗಳು ತಗ್ಗದಂತೆ ಹಂಚು ಮನೆ ಮಹಡಿಯ ಮಧ್ಯ ಭಾಗದಲ್ಲಿ ಅಡ್ಡಲಾಗಿ ಹಾಕಿರುವ ಮರದ ಅಥವಾ ಬಿದಿರಿನ ದಂಡುಗಳು. wooden or bamboo cross beam.

ವಾ: ಹುಲ್ಲ್ ಮಾಡ್‌ನ ಮನೆಗಳ್‌ಲಿ ಮೋಂದಾಯ ಇದ್ದದೆ.

ಮೋಂದಾಯಿ /*mo:nda:yi*/ ನಾ. 1. ದ್ವಾರದ ಮೇಲಿನ ರಂಧ್ರ, 2. ಮನೆಯ ನಡೂ ಭಾಗಗಳು ಅಥವಾ ಪಕ್ಕಾಸ್ ಎರಡೂ ಮಾಡಿನಿಂದ ಕೂಡುವ ವ್ಯವಸ್ಥೆ. a small crevice right above the door frame. ವಾ: ಐನ್ ಮನೆಗಳ್‌ಲಿ ಸಣ್ಣ ಸಣ್ಣ ಸಾಮಾನ್‌ಗಳ ಮೊಂದಾಯಿಲಿ ಇಸ್ತಿದ್ದೊ.

ಮೋಂದೈ /*mo:ndai*/ ನಾ. ಹಂಚು ಮನೆ ಚಾವಣಿ ಮೂಲೆ ಹಂಚು ಕೂಡುವ ತುದಿಗೆ ಹೇಳುವ ಪದ. ridge roof. ವಾ: ಮೋಂದೈ ಕಡೆ ಹತ್ತಿದ್.

ಮೋಕ್ತೆಸರ /*mokte:sara*/ ನಾ. ದೈವ/ ದೇವಸ್ಥಾನಗಳ ಆಡಳಿತ ನೋಡಿಕೊಳ್ಳುವವ. an administrator of a temple.

ಮೋಗೇರ /*mo:ge:ra*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಮೋಚುದು /*mo:cudu*/ ಕ್ರಿ. 1. ಜಂಬ ಕೊಚ್ಚುವುದು, 2. ತನ್ನನ್ನೇ ಹೊಗಳುವುದು. 1. smugness, 2. to praise oneself all the time. ವಾ: ನಂಗೊತ್ಲೆನ, ನಾ ನೋಡ್ತ್‌ಲೆನ ಇಸ್ಟ್ ವರ್‌ಸಂದ ಮೋಚಿ ಗುಡ್ಡ್ ಹಾಕಿದ್.

ಮೋಞ್ಞ /*moŋɲa*/ ನಾ. 1. ಬೋಳ, 2. ಪೆದ್ದ. 1. an innocent, 2. an idiot. ವಾ: ಮೋಞ್ಞ ಹೋದೆ.

ಮೋಟುಕುಳ್ಳ ಹಕ್ಕಿ /*mo:ṭukuḷḷa hakki*/ ನಾ. ಕಾಡಿನಲ್ಲಿ ವಾಸಿಸುವ ಉದ್ದ ಬಾಲದ ಕಪ್ಪು ಬಣ್ಣದ ಚಿಕ್ಕ ಪಕ್ಷಿ. a small black forest-animal with a long tail. ಪ: ಮೋಂಟುಮುಲ್ಲೆ, ಮೋಂಟೋಲು(ತು)

ಮೋಟುಗೂಡೆ /*mo:ṭugu:ḍɛ*/ ನಾ. 1. ಚೋಟುದ್ದ ಹುಡುಗಿ, 2. ಗಿಡ್ಡ ಹುಡುಗಿ. 1. a short girl, 2. a girl of short stature. ವಾ: ಮೋಟು ಗೂಡೆ ಕೊಣ್ಕಂಡ್ ಕೊಣ್ಕಂಡ್ ಬಾತ್.

ಮೋಟುಲಂಗ /*mo:ṭulaŋga*/ ನಾ. ಗಿಡ್ಡ ಲಂಗ. short skirt. ವಾ: ನೋಡಲ್ಲಿ ಆ ಗೂಡೆ ಮೋಟು ಲಂಗ ಹಾಕಂಡ್ ಬಂದದೆ.

ಮೋಟು¹ /*mo:ṭu*/ ನಾ. 1. ಕುಳ್ಳ, 2. ಗಿಡ್ಡ, 3. ಮೋಂಟ. 1. short stature, 2. short, 3. dwarfish. **ಮೋಟುದ್ದ ಗೂಡೆಗೆ ಚೋಟುದ್ದ ಲಂಗ(ನು).** ವಾ: ಈ ಮೋಟು ಬೊಳ್ಳಿನ ಹೆಂಗೆ ಸುತ್ತುದು.

ಮೋಟು² /*mo:ṭu*/ ನಾ. 1. ತುಂಡು, 2. ಉಳಿಕೆ. 1. a small piece, 2. left over.

ಮೋಟುಕಾನ /*mo:ṭuka:na*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕಳಂಜ ಗ್ರಾಮದ ಜಾಗ. a locality in Kalanja village in Sullia Taluk of Dakshina Kannada District.

ಮೋಟೆ /*mo:ṭɛ*/ ನಾ. 1. ಬಿಲ, 2. ತೊರಲು, 3. ಹೋರು, 4. ಬೊಕ್ಕೆಗುದ್ದು, 5. ಪೋಟೆ, 6. ಪೊಟರೆ, 7. ಮಾಟೆ. 1. a hole, 2. a burrow, 3. holes, 4. cavity, 4. hollow, 5. tree hole, 6. tree hole, 7. hollow. ವಾ: ಹೆಗ್ಗಣ ಮೋಟೆ ದೊಡ್ಡದ್.

ಮೋಟ್‌ಕುಳ /*mo:ṭɨ kuḷa*/ ನಾ. ಕಪ್ಪು ಬಣ್ಣದ ಸಣ್ಣ ಹಕ್ಕಿ. a small black bird. ವಾ: ಮೋಟ್ ಕುಳ ಕರಿ ಬಣ್ಣದ ಹಕ್ಕಿ.

ಮೋಟ್ರ್ ಸೈಕಲ್ /*mo:ṭrɨ saikalɨ*/ ನಾ. ಎಪ. 1. ಬೈಕ್, 2. ಮೋಟಾರ್ ಸೈಕಲ್ಲು. 1. a bike, 2. motoc cycle. ವಾ: ಹೈದ ಹೈಸ್ಕೂಲಿಗೆ ಎತ್ತಿತ್ತೆ ಈಗಲೆ ಮೋಟ್ರ್ ಸೈಕಲ್ ಬೇಕಡ ಸುತ್ತಿಕೆ.

ಮೋಡ¹ /*mo:ḍa*/ ನಾ. 1. ಮೋಡ, 2. ಮೇಘ. clouds. ವಾ: ಮೋಡ ಕಟ್ಟಿಟು, ಮಳೆ ಬಾದೊತ. **ಮೋಡ ಕಟ್ಯುಟ್ಟು** /*mo:ḍa kaṭyuṭṭu*/ ಮೋಡ ಕಟ್ಟಿದೆ. formation of clouds. ವಾ: ಆಕಸಲಿ ಕರಿ ಮೋಡ ಕಟ್ಟಿಟು.

ಮೋಡ² /*mo:ḍa*/ ನಾವಿ. ಮಾತನಾಡದೆ ಮೌನವಹಿಸು. to keep silence. ವಾ: ಇಂದೆಕೊ ಗೂಡೆನ ಮೋರೆ ಮೋಡ ಆವ್ರು, ಯಾಕೆನೆ ಎಂತ ಆತ್? ಪ: ಮೋಡೆ – ಮುನಿಸು

ಮೋಡಿ /*mo:ḍi*/ ನಾ. 1. ಮಾಯಾಜಾಲ, 2. ಇಂದ್ರಜಾಲ, 3. ಆಕರ್ಷಣೆ, 4. ಕೈಚಳಕ. 1. magic, 2. conjuring, 3. attraction, 4. tricks. ವಾ: ಮೋರೆ ನೋಡಿಕಂಡೆ ಇದ್ದರೆ ಮೋಡಿ ಮಾಡುವೆಗಡ. ಪ: ಮೋಡಿಗೆ – ಮೋಡಿಗೆ

ಮೋನಕ್ಕ /*mo:nakka*/ ನಾ. ವ್ಯಕ್ತಿ ಹೆಸರು, ಸ್ತ್ರೀ ವಾಚಕ. feminine given name.

ಮೋನಪ್ಪ /*mo:nappa*/ ನಾ. ವ್ಯಕ್ತಿ ಹೆಸರು, ಪುರುಷ

ವಾಚಕ. masculine given name. ಪ: ಮೋಣ, ಮೋನ, ಮೋನು

ಮೋರಜ್ಜ /*mo:rajja*/ ನಾ. ಕೇರೆ ಹಾವಿನಲ್ಲಿ ದೊಡ್ಡ ಜಾತಿ. a large rat-snake. ವಾ: ಮೋರಜ್ಜ ಮನೆ ಮಾಡ್‌ಲಿ ಇದ್ದ ಎಲಿಗಳ ಹಿಡ್ತ್. ಪ: ಕೇರೆಹಾವು, ಕೇರಿ(ತು)

ಮೋರಿ[1] /*mo:ri*/ ನಾ. ಸಣ್ಣ ಸಂಖ. a small conch shell. ವಾ: ನಾ ಹಿಂಬೋತ್ ಮೋರಿ ಹಕ್ಕಲೆ ಸಿಕ್ಕಿನೆ.

ಮೋರಿ[2] /*mo:ri*/ ನಾ. ಊದುವ ವಾದ್ಯ, ಒಂದೂವರೆಯಿಂದ ಎರಡು ಅಡಿಗಳಷ್ಟು ಉದ್ದವಿರುತ್ತದೆ, ಹದಿನಾಲ್ಕರವರೆಗೆ ರಂಧ್ರಗಳಿರುತ್ತವೆ. a gourd-pipe. ವಾ: ಮೋರಿ ಊದಿವೆ.

ಮೋರೆ /*mo:rε*/ ನಾ. 1. ಮುಖ, 2. ಮೊಗ, 3. ಮೋರೆ. face. **ನಿನ್ನ ಮೋರೆ ವಾರೆ ಅದ್ಕೆ ಕನ್ನಡಿನ ದೂರ್ದು ಯಾಕೆ(ಗಾ). ಅಂವನ ಮೊರೆ ಸುಟ್ಟ ಬದನೆನಾಂಗೆ(ನು).** ವಾ: ಯಾಕೆ ಹೀಂಗೆ ಮೋರೆನ ನೋಡಿಯ? **ಮೋರೆಚಂಡಿ ತೆಗ್ತ್** /*mo:rε caṇḍi tεgti*/ ಮುಖದ ನೀರನ್ನು ಒರೆಸಿದ. to wipe sweat on the face. ವಾ: ಮೋರೆ ಚಂಡಿ ತೆಗ್ದ್ ಬಾ. **ಮೋರೆ ಸಿಂಡ್‌ರ್ಸ್** /*mo:rε siṇḍrisi*/ 1. ಮುಖ ಸಿಂಡರಿಸು, 2. ಮುಖ ಗಂಟಿಕ್ಕು. 1. to frown, 2. showing an expression of displeasure. ವಾ: ಮೋರೆ ಸಿಂಡ್‌ರ್‌ಸಿ ಕಂಡಿದ್ದರೆ ಮಾತಾಡಿಕೆ ಮನ್ಸ್ ಬಾದುಲೆ, ಹೆಣ್ಮಕ್ಕ ಮನೆಲಿ ಮೋರೆ ಸಿಂಡ್‌ರ್‌ಸಿಕಂಡಿದ್ದರೆ ನೋಡವ್ಕೆ ಬೇಜರಾದೆ.

ಮೋಸ /*mo:sa*/ ನಾ. 1. ವಂಚನೆ, 2. ಕಪಟ, 3. ಠಕ್ಕು. 1. cheating, 2. deceiving, 3. hoodwinking. ವಾ: ಅಂವ ದುಡ್ಡ್ ಕೊಟ್ಟನೆತ ಹೇಳಿ ಮೋಸ ಮಾಡ್ತ್.

ಮೋಸ್ಗಿತ್ /*mo:sgiti*/ ಕ್ರಿ. ಮುಸುಕಿತು. veiled/covered. ವಾ: ಮಂಜ್ ಮೋಸ್ಗಿತ್.

ಮೋಹ /*mo:ha*/ ನಾ. ಅನುರಾಗ. love/affection/fondness. ವಾ: ಅವ್‌ಳ ಮೇಲೆ ಅಂವಂಗೆ ಬಾರಿ ಮೋಹ.

ಮೋಹಬೆಲೆ /*mo:ha belε*/ ನಾ. ನಿರ್ದಿಷ್ಟ ವಸ್ತುವಿನ ಆಕರ್ಷಣೆಗೆ ಇರುವ ಬೆಲೆ. a price of attraction.

ಮೌನ /*mauna*/ ನಾ. 1. ನೀರವತೆ, 2. ಮಾತನಾಡದಿರುವಿಕೆ, 3. ಸುಮ್ಮನಿರುವಿಕೆ. 1. boredom, 2. being quiet, 3. to remain silent. **ಮಾತ್ ಬೆಳ್ಳಿ ಮೌನ ಬಂಗಾರ(ಗಾ). ಅನಗತ್ಯ ಮಾತಾಡ್‌ಬಡ, ಅಗತ್ಯ ಬಾಕನ ಸುಮ್ಮನಿರ್‌ಬಡ(ನು).** ವಾ: ಮಾತಿಗಿಂತ ಮೌನಕ್ಕೆ ಹೆಚ್ಚಿ ಬೆಲೆ, ಸುಮಾರ್ ಸಮಸ್ಯೆಗ ಮೌನಲೆ ಬಗೆಹರೆದು.

ಮ್ಯಾಜ /*mya:ja*/ ನಾ. ಎಪ. ಮೇಜು. a table. ವಾ: ಮ್ಯಾಜಕೆ ಅರ್ವೆ ಹೋಸಕಿತ್.

ಮ್ಯಾನಹಣ್ಣ್ /*mya:na haṇṇi*/ ನಾ. ಮಾವಿನ ಹಣ್ಣು. mango fruit. ವಾ: ಮ್ಯಾನ ಹಣ್ಣ್ ಲಿ ಎಸ್ಟ್ ತರದ ಅಡ್ಗೆ ಮಾಡಿವೆ ಅಲ.

ಮ್ಯಾಲೆ /*mya:lε*/ ನಾ. ಮೇಲೆ. above/up. **ಅಡ್ಡ ಗೋಡೆ ಮ್ಯಾಲೆ ದೀಪ ಇಟ್ಟಂಗೆ(ಗಾ).** ವಾ: ಕರಿ ಹೊಡೆಕನ ಮ್ಯಾಲೆ ನೋಡ್ತ, ಕಣ್ಣಿಗೆ ಕಾಡ್ ಬಿದ್ದುಟು.

ಮ್ಯಾಸೆಕತ್ತಿ /*mya:sε kətti*/ ನಾ. ಕತ್ತಿಯ ವಿಧ. variety of swords. ವಾ: ಮ್ಯಾಸೆ ಕತ್ತಿನ ಎಲ್ಲಿಸಿದನೆ? ಬೇಕಾಕನ ಸಿಕ್ಕುಲೆ.

ಯ

ಯಂಕನ /*yaŋkana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಯಂತ /*yanta*/ ಅ. 1. ಎಂತಹ, 2. ಏನು. 1. how? 2. what? ವಾ: ಯಂತ ಮರೆ ಹಿಂಗೆ ಮಾಡಿಬುಟ್ಟ ನೀ.

ಯಕ್ಸಗಾನ /*yaksaga:na*/ ನಾ. 1. ಯಕ್ಷಗಾನ, 2. ಬಯಲಾಟ. 1. Yakshagaana, 2. Bayalaata. ವಾ: ಬಾನೆ ಯಕ್ಸಗಾನ ನೋಡಿಕೆ ಪೋಯಿ.

ಯಜಮಾಂತಿ /*yajama:nti*/ ನಾ. 1. ಯಜಮಾನಿ; ಒಡತಿ, 2. ಹೆಂಡತಿಯನ್ನು ಗೌರವದಿಂದ ಗಂಡ ಹೇಳಿಕೊಳ್ಳುವ ಪದ. 1. a woman; the head of a household, 2. a honorific term used by husbands for their wives. ವಾ: ಯಜಮಾಂತಿ ಎಲ್ಲಿ ಕಾಂಬದುಲೆಲ?

ಯಜಮಾನಿಕೆ /*yajama:nikɛ*/ ನಾ. ಒಡೆತನ. ownership. ವಾ: ಈಗೆಲ್ಲ ಮನೆಲಿ ಹೆಣ್ಣ್ ಜೆನದೆ ಯಜಮಾನಿಕೆ.

ಯಜ್ಮಾನ /*yajma:na*/ ನಾ. ಕುಟುಂಬದ ಮುಖ್ಯಸ್ಥ, ಕುಟುಂಬದ ಹಿರಿಯ. head of the family. master. ವಾ: ಮನೆ ಯಜ್ಮಾನ ಹೇಳ್ದಂಗೆ ಕೇಳೊಕು.

ಯಡ್ದ್ /*yaḍdi*/ ನಾ. ಎಡ. the left. ವಾ: ಯಡ್ದ ಕೈನ ಮಡ್ಸ್, ಯಡ್ದ ಕಣ್ಣ್ ಹೊಡ್ಕಂಡದೆ. ಪ: ಯಡ್ದ್‌ಬಲ್ದ್, ಎಡತ್ತ್‌ಬಲತ್ತ್(ತು)

ಯಣ್ಣೆ /*yaɳɳɛ*/ ನಾ. 1. ಎಣ್ಣೆ, 2. ತೈಲ, 3. ಎಳ್ಳು, ಅಗಸೆ, ಹುಚ್ಚೆಳ್ಳು ಮೊದಲಾದ ಕಾಳುಗಳಿಂದ ಹಿಂಡಿ ತೆಗೆದ ದ್ರವ ಪದಾರ್ಥ. oil, extracted from oil seeds such as groundnut, sunflower, seasame, etc. ವಾ: ದೀಪಕೆ ಬೇರೆ, ಅಡ್ಗೆಗೆ ಬೇರೆ ಯಣ್ಣೆ ಬಳ್ಸುದ?, ಅಗ್ರಣೆ ಹಾಕಿಕೆ ಯಣ್ಣೆ ಬೇಕೆ ಬೇಕ್.

ಯಣ್ಣೆಹೊಡ್ಯೊದು /*yaɳɳɛhoḍyodu*/ ನಾ. ಅಮಲು ಪದಾರ್ಥ ತೆಗೆದುಕೊಳ್ಳುವುದು. .

ಯತಾರ್ತ /*yata:rta*/ ನಾ. 1. ಸತ್ಯ, 2. ನಿಜ, 3. ವಾಸ್ತವ. 1. truth, 2. reality, 3. fact. ವಾ: ಪ್ರವಾಹ ಬಂದ್ ಕೊಚ್ಚಿಕಂಡ್ ಹೋಗಿ ಯತಾರ್ತ ಸ್ತಿತಿಗೆ ಬಾಕೆ ಇನ್ನೂ ಆತ್‌ಲೆ.

ಯತ್ವಾಸ /*yatva:sa*/ ನಾ. 1. ವ್ಯತ್ಯಾಸ, 2. ಮಾರ್ಪಾಡು. 1. difference, 2. change. ವಾ: ಅವು ಕೇಡ್ ಮಾಡಿವೆತ ನಾವ್ಗೆ ಹಂಗೆ ಮಾಡಿಕಾದೆನ? ಹಂಗೆ ಮಾಡಿರೆ ಅವ್ಕು. ನಾವ್ಗು ಎಂತ ಯತ್ವಾಸ ಹೇಳ್?

ಯದಾಗಿ /*yada:gi*/ ನಾ. 1. ಆರಾಮದಾಯಕವಾಗಿ, 2. ಹಾಯಾಗಿ, 3. ಸುಖಕರ, 4. ಹಿತಕರ, 5. ತೃಪ್ತಿದಾಯಕ. 1. comfortably, 2. pleasant, 3. amiable, 4. affable, 4. satisfactory. ವಾ: ಕುಂಡತಗ ಎಲ್ಲಿ ಯದಾಗಿ ಕೂರಿಕೆ ಆದೆನೊ ಆ ಕಾಪಿ ದೈನ ಗೆಲ್ಲ್‌ಲಿ ಲಾಯ್ಕ್‌ಲಿ ಕುದ್ಕಂಡ್ ಕಾಪಿ ಹಣ್ಣೆನೆಲ್ಲ ಹೊರ್‌ಳಿಸಿ ಹಾಕಿವೆ.

ಯದ್ವಾತದ್ವಾ /*yadva:tadva:*/ ನಾ. 1. ಕ್ರಮವಿಲ್ಲದ, 2. ವ್ಯವಸ್ಥೆ ಇಲ್ಲದ, 3. ನೀತಿ ನಿಯಮ ಇಲ್ಲದ. 1. unorganised, 2. unsystematic, 3.

indisciplined. ವಾ: ರಸ್ತೆಲಿ ಯದ್ವಾತದ್ವಾ ಗಾಡಿ ಓಡ್ಸಿರೆ ಬೊಡಿವೊ.

ಯಮ /*yama*/ ನಾ. 1. ಮೃತ್ಯು ದೇವತೆ, 2. ಕೀನಾಶ, 3. ಅಂತಕ. Yama, god of death. **ನಿಯಮ ಇದ್ದರೆ ಯಮನೂ ಹೆದರ್ದೆ(ಗಾ).** ವಾ: ಯಮತೇಳಿರೆ ಸಾವುತ ಅರ್ತ.

ಯಮ್ಮ!/ಯಪ್ಪ! /*yammaə/ Yappaə*/ ಅ. ಆಶ್ಚರ್ಯ ವ್ಯಕ್ತಪಡಿಸುವ ಉದ್ಗಾರಗಳು. an onomatopoeiac expression to express surprise. ವಾ: ಯಮ್ಮ ಎಸ್ಟ್ ದೊಡ್ಡ ಹಲ್ಸ್‌ನ ಹಣ್ಣ್.

ಯರಕ್ಕಲ /*yarakkala*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಯಲ್ಸಂಡೆ /*yalsaṇḍtɛ*/ ನಾ. 1. ಅಲಸಂಡೆ, 2. ಅಲಸಂದೆ. black eyed beans. ವಾ: ಯಲ್ಸಂಡೆ ಬಾಳ್ ಪಲ್ಯ ಮಾಡಿರೆ ಲಾಯ್ಕ್.

ಯವಸಾಯ /*yavasa:ya*/ ನಾ. 1. ವ್ಯವಸಾಯ, 2. ಬೇಸಾಯ. 1. agriculture, 2. farming. ವಾ: ಒಕ್ಕಲಿಗರ್ ಯವಸಾಯ ಹಿನ್ನೆಲೆಂದ ಬಂದೊವು.

ಯವಸ್ತೆ /*yavastɛ*/ ನಾ. 1. ವ್ಯವಸ್ಥೆ, 2. ಅಚ್ಚುಕಟ್ಟು, 3. ಏರ್ಪಾಡು, 4. ಸ್ಥಿತಿ, 5. ನಿಯಮ. 1. arrangement, 2. neat, 3. arrangement, 4. condition, 4. regulations. ವಾ: ಸಮಾಜದ್ ಯವಸ್ತೆ ಸೆರಿಯಾಕೊರೆ ಸುರೂಗೆ ನಾವೇ ಸೆರಿಯಾಕು, ಸುಮ್ಮನೆ ದೂರಿ ಏನ್ ಪ್ರೇಜನ.

ಯವ್ವನ /*yavvana*/ ನಾ. 1. ಯೌವನ, 2. ತಾರುಣ್ಯ. 1. youth, 2. virility, 3. manhood. ವಾ: ಯವ್ವನಲೇ ಮೊದುವೆ ಆಕು.

ಯಸಂಡ್ /*yasaṇḍɨ*/ ನಾ. 1. ಏಡಿ, 2. ನಳ್ಳಿ, 3. ಏಡಿಕಾಯಿ. a crab. ವಾ: ನಮ್ಮಪ್ಪ ಯಸಂಡ್ ನೊಡಿರೊ, ಅದ್ರೆರ್‌ಡ್ ಕಣ್ಣ್ ನೊಡಿರೊತ ಹಾಡ್ತಿದ್ದೊ.

ಯಳ್ದವೆ /*yaḷdavɛ*/ ನಾ. ಎಳೆಯುತ್ತಾರೆ. they will pull. ವಾ: ಮುಂದೆ ಬಾಕನ, ಒಳ್ಳದಾಕನ ಜೆನ ಕಾಲ್ ಯಳ್ದವೆ.

ಯಾಂವ /*ya:nva*/ ಸನಾ. ಯಾವನು. who? ವಾ: ಯಾಂವ ಇಂವ ಹಿಂಗೆ ಆಡ್ದೆ.

ಯಾಕಲ್ ಎಳ್ಕ್‌ಸೊದ್ /*ya:kalɨ eḷkɨsodɨ*/ ಕ್ರಿವಿ. ಪೈರು ತೆಗೆದು ಮುಗಿಸುವುದು. harvesting. ವಾ: ಯಾಕಲ್ ಎಳ್ಕ್ ಸೊದ್ ಕೆಲ್ಸ ಆಗ್‌ತುಟ್ಟು.

ಯಾಕಾಗಿ /*ya:ka:gi*/ ಸನಾ. 1. ಯಾವ ಉದ್ದೇಶಕ್ಕಾಗಿ?, 2. ಯಾವ ಕಾರಣಕ್ಕಾಗಿ?, 3. ಎಂತಹದಕ್ಕಾಗಿ. 1. what is the purpose? 2. what is the reason, 3. why? ವಾ: ನೀ ಯಾಕಾಗಿ ನನ್ನ ಮೇಲೆ ಸಿಟ್ಟ್ ಮಾಡಿಕಂಡ?

ಯಾಕಾರ್ /*Ya:ka:rɨ*/ ಸನಾ. ಯಾಕಾದರು. why? ವಾ: ಯಾಕಾರ್ ಸೀತ ಆದೆತ? ಸೀನ್‌ದು, ಮೂಕ್ ಕಚ್ಚುದ್ ರ್‌ಂದ ತಡೆಕೆ ಬೊತ್ತ್.

ಯಾಕೆ /*ya:kɛ*/ ಸನಾ. ಏಕೆ?, ಕಾರಣವೇನು? why? what is the reason? ವಾ: ನೀ ಯಾಕೆ ಹಿಂಗಾದ್?

ಯಾಕೆತಂದ /*Ya:ketanda*/ ಸನಾ. ಏಕೆ ತೆಗೆದುಕೊಂಡು ಬಂದೆ. why did you bring it? ವಾ: ಅಯೊ ಹಕ್ಕಿ ಮೊರಿನ ಯಾಕೆ ತಂದನೆ?

ಯಾಕೆತ್ತೇಳಿರೆ /*ya:ktɛtte:ḷirɛ*/ ಸನಾ. ಏಕೆಂದರೆ. because. ವಾ: ಯಾಕೆತ್ತೇಳಿರೆ ಓದಿ ದೊಡ್ಡ ಕೆಲ್ಸಕೆ ಸೇರ್‌ತ, ಒಳ್ಳ ಬೊದ್ಕ್ ಸಿಗಲಿತ ಹೇಳ್ದು.

ಯಾಕೇಂತ /*ya:ke:nta*/ ಸನಾ. 1. ಏಕೆ ಅಂತ, 2. ಏಕೆಂದರೆ. because. ವಾ: ಅಂವ ಬಂದದ್ ಯಾಕೇಂತ?

ಯಾಕ್ /*ya:kɨ*/ ಸನಾ. 1. ಏತಕ್ಕೆ, 2. ಏಕೆ, 3. ಕಾರಣವೇನು? 1. why, 2. why, 3. what is the reason? ವಾ: ಯಾಕ್ ಹಿಂಗೆ ಮಾತಾಡಿಯ?

ಯಾಕ್ಲ್ /*ya:klɨ*/ ಸನಾ. ಭತ್ತ ಬೀಜ ಬಿತ್ತುವ ಗದ್ದೆ. a field where paddy seeds are planted. ವಾ: ಯಾಕ್ಲ್ ಗದ್ದೆಗೆ ನೀರ್ ಬಂದುಟು.

ಯಾಗ /*ya:ga*/ ಸನಾ. ಯಾವಾಗ. when? ವಾ: ಯಾಗ ಇತ್ತ ಕಡೆ ಬಂದಿಯ ಹೇಳ್.

ಯಾಗಳು /*ya:gaḷu*/ ಸನಾ. ಯಾವಾಗಲು. all the time. ವಾ: ಯಾಗಳು ಬಂದರೆನ?

ಯಾಗಾದರ್ /*ya:ga:darɨ*/ ಸನಾ. ಯಾವಾತ್ತಾದರೂ. any day/time. ವಾ: ಯಾಗಾದರ್ ಒಮ್ಮೊಮ್ಮೆ ಪಿಚ್ಚರ್‌ಗೆ ಹೋದು.

ಯಾಗಾರ್ /*ya:ga:rɨ*/ ಸನಾ. ಯಾವಾಗಲಾದರೂ. any day/time. ವಾ: ಯಾಗಾರ್ ಒಮ್ಮೆ ನಮ್ಮ ಕಡೆ ಬನ್ನಿ.

ಯಾಗೋಳ್ /*ya:go:ḷɨ*/ ನಾ. ಯಾವಾಗಲು, ಎಂದೂ, ಪ್ರತಿನಿತ್ಯ. you, all the time. ವಾ: ನೀ ಯಾಗೋಳ್ ಹೊತಾರೆ ಎಲ್ಲಿಗೆ ಹೋದು.

ಯಾಟೆಮೀನ್ /*ya:ṭemi:ntɨ*/ ನಾ. ಯಾಟೆ ಮೀನು. a variety of fish. ವಾ: ಯಾಟೆ ಮೀನ್ ಬಾರಿ ನಂಜಿತ ನಮ್ಮತ್ತೆ ಹೇಳ್ತಿದ್ದೊ, ಒಬ್ಬೊಬ್ಬಂಗೆ ತಿಂದರೆ ಆಕಿಲೆ.

ಯಾದಾರು /*ya:da:ru*/ ಸನಾ. ಯಾವುದಾದರು. any day/time. ವಾ: ಯಾದಾರು ಅರ್ವೆ ಹಾಕ, ಒಮ್ಮೆ ಬೇಗ ಹೊರ್‌ಟ್ ಬಾ.

ಯಾಪ /*ya:pa*/ ನಾ. ಮಳೆಗಾಲದಲ್ಲಿ ಸಣ್ಣ ತೊರೆಗಳು ಉಂಟುಮಾಡುವ ಜಲಪಾತಗಳಲ್ಲಿ ಮೀನು ಹಿಡಿಯಲು ಬಳಸುವ ಉಪಕರಣ. equipments used in fishing. ವಾ: ಯಾಪ ತಕಂಡ್ ಮೀನ್ ಹಿಡೆದು. ಪ: ಯಾಪೆ

ಯಾಪಾರ /*ya:pa:ra*/ ನಾ. 1. ವ್ಯಾಪಾರ, 2. ಕೊಳ್ಳುವ ಮಾರುವ ವ್ಯವಹಾರ. 1. business, 2. trading. ವಾ: ನಿಮ್ಮ ಅರ್ವೆ ಯಾಪಾರ ಹೆಂಗುಟ್ಟು?

ಯಾಪಾರೆ /*ya:pa:rɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಯಾಪ್ಲ್ /*ya:plɨ*/ ನಾ. ಎಪ. 1. ಆಪಲ್, 2. ಸೇಬು. apple. ವಾ: ಯಾಪ್ಲ್ ಗಿಂತ ಪೇರಲಕಾಯಿ ತಿಂಬೊದೊಳ್ಳೆದ್, ಯಾಪ್ಲ್ ಗಿಂತನು ಪೇರಲಕಾಯಿಲಿ ಇನ್ನ್ ಹೆಚ್ಚಿಗೆ ಪೋಸಕಾಂಸ ಸಿಕ್ಕಿದೆಗಡ.

ಯಾಮಾರ್ಸ್ /*ya:ma:rsɨ*/ ನಾ. ಮೋಸ ಮಾಡು. to cheat. ವಾ: ಸುಳ್ಳ್ ಹೇಳಿ ಯಾಮಾರ್‌ಸುದು ಯಾಕೆ?

ಯಾಮೆ /*ya:mɛ*/ ನಾ. 1. ಆಮೆ, 2. ಕೂರ್ಮ, 3. ಕಮಠ, 4. ಕಚ್ಛಪ. a tortoise. **ಮ್ಯಾಲೆ ಪಾರೆ ಕೆಳೆಗೆ ಪಾರೆ ನಡೂಲಿ ಜೀವ – ಯಾಮೆ(ಒ).** ವಾ: ಯಾಮೆ ಮೊಲನ ಸೋಲ್‌ಸಿದ ಕತೆ ನಿಂಗೆ ಗೊತ್ತುಟಾ?

ಯಾರಾರ್ /*ya:ra:rɨ*/ ಸನಾ. ಯಾರಾದರು. any one. ವಾ: ಯಾರಾರ್ ನನ್ನ ಸುದ್ದಿ ಮಾತಾಡಿರೆ ಸುಮ್ಮನೆ ಇರಿಕಿಲೆ.

ಯಾರುಟ್ಟು /*ya:ruṭṭu*/ ಸನಾ. ಯಾರಿದ್ದಾನೆ? Who is there? ವಾ: ಅಲ್ಲಿ ಯಾರುಟ್ಟು?

ಯಾರೂ /*Ya:ru:*/ ಸನಾ. ಯಾರನ್ನೂ? who else? ವಾ: ಯಾರೂ ಕಂಡತ್‌ಲೆ.

ಯಾರೊಳೊ? /*ya:roḷo?*/ ಸನಾ. ಯಾರಿದ್ದಾರೆ? Who is there? ವಾ: ಕೋಂಬರೆ ವಳೆಗೆ ಯಾರೊಳೊ?

ಯಾರ್ /*Ya:rɨ*/ ಸನಾ. ಯಾರು. who? ವಾ: ಮನೆಗೆ ಯಾರ್ ಬಂದೊಳತ. ಹೊರೆಗೆ ಜೋಡು ಕಂಡದೆ.

ಯಾರ್ ದಿಕ್ಕಿಲ್ಲೆ /*ya:rɨ dikkillɛ*/ ಸನಾ. 1. ಯಾರು ಇಲ್ಲ, 2. ಆಶ್ರಯವಿಲ್ಲದಿರು. 1. none, 2. having no shelter/protection. ವಾ: ನಂಗೆ ಯಾರ್ ದಿಕ್ಕಿಲ್ಲೆ, ದೇವ್ರೆ ದಿಕ್ಕ್.

ಯಾರ್‌ನೆ /*ya:rɨnɛ*/ ಸನಾ. ಯಾರು? who? ವಾ: ಯಾರ್‌ನೆ ಅಸ್ಟ್ ಜೋರಿಲಿ ಮರ್‌ಡುದು.

ಯಾಲ /*ya:la*/ ನಾ. ಏಲಕ್ಕಿ. cardamom. ವಾ: ಯಾಲ ಕೊತ್ತ್‌ಗೆ ಕೈ ಹಾಕಿಕೆ ಬುಡ್ದುಲೆ ಈ ಉಂಬುಳುಗ. ಎಲ್ಲೆಲ್ಲ ಹತ್ತಿಕಂಡ್ ಬಂದವೆತ ಗೊತ್ತಾಲೆಪ ದೇವ್ರೆ. **ಯಾಲಕ್ಕಿ ತಾಳ್** /*ya:lakki ta:ḷɨ*/ ಏಲಕ್ಕಿಯ ಸಣ್ಣ ಗಿಡಗಳು. a young plants of cardamom. ವಾ: ಯಾಲಕ್ಕಿ ತಾಳ್ ಸುಮಾರ್ ಬುಡಲಿ ಹುಟ್ಟಿಕಂಡುಟು. **ಯಾಲಕ್ಕಿ ಸ್ವಾಗೆ** /*ya:lakki sva:gɛ*/ ಏಲಕ್ಕಿಯ ಒಣಗಿದ ಗುಚ್ಚ. dried bunch of cardamom. ವಾ: ಯಾಲಕ್ಕಿ ಸ್ವಾಗೆ ಒಣ್ಗಿದ ಮೇಲೆ ಗೊಬ್ಬರಾದೆ

ಯಾಲಕ್ಕಿ ಬಾಳೆ /*ya:lakki ba:ḷɛ*/ ನಾ. 1. ಏಲಕ್ಕಿ ಬಾಳೆ, 2. ಪುಟ್ಟುಬಾಳೆ. a variety of banana. ವಾ: ಯಾಲಕ್ಕಿ ಬಾಳೆನ ನಮ್ಮ ಬಾಸೆಲಿ ಹೂ ಬಾಳೆತ ಹೇಳಿವೆ.

ಯಾಲದಾಳು /*ya:lada:ḷu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಯಾವ ಪಾಪತ್ತ್[1] /*ya:va pa:pattɨ*/ ಸನಾ. 1. ಎಷ್ಟೊಂದು, 2. ತುಂಬ. 1. so much? 2. more/ abundance. ವಾ: ಮಳ್ಗಾಲಲಿ ತೋಟಕೆ ಹೋಕೆ ಬೊತ್ತ್, ಯಾವ ಪಾಪತ್ತ್ ಉಂಬುಳ್‌ಗ.

ಯಾವ ಪಾಪತ್ತ್[2] /*ya:va pa:pattɨ*/ ಸನಾ. ತುಂಬ ದುಃಖ, ಕಷ್ಟದ ಮೇಲೆ ಕಷ್ಟ ಬಂದಾಗ ಹೇಳುವ ಮಾತು. having difficulties all the time. ವಾ: ಯಾವ ಪಾಪತ್ತ್ ಇದ್. ನೋಡಿಕೆ ಬೊತ್ತ್. ಹಿಂಗೆ ದೇವ್ರ್ ಬಜ್ಜ ಕೊಡಿಕಾದ್, ಕಾಯ್ಲಲಿ ಮೊಲ್ಗಿದಲ್ಲೆಯಾಗಿ ಯಾವ ಪಾಪತ್ತ್ ನರ್‌ಲಿಕಂಡ್ ಬಂಗ ಬಂದದ್.

ಯಾವ ಮಾದ್ರಿ /*ya:va ma:dri*/ ಸನಾ. ಎಸ್ಟೊಂದು. so much. ವಾ: ಕಬ್ಬೆಕ್ಕ್ ಕುಂಡತಗ ಯಾವ ಮಾದ್ರಿ

ಕಾಪಿ ಹಣ್ಣ್‌ನ ಬ್ಯಾಳೆ ಮಾಡಿ ಹಾಕೊಳತ, ಇದನ ಹೆರ್‌ಕುದೆಂಗೆನೆ?

ಯಾಳ್ಮೆಕಾಲ್ /*ya:ḷmeka:l*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಯೆತೆನೆ /*yetεnε*/ ನಾ. 1. ಯಾತನೆ, 2. ನೋವು, 3. ಬಾಧೆ. 1. suffering, 2. pain, 3. sorrow/ache. ವಾ: ಮೊನ್ನಂಗೆ ಯೆತೆನೆ ತೊಪ್ಪಿದಲ್ಲ.

ಯೆಯ್ಪಂಜಿ /*yεypaŋji*/ ನಾ. ಮುಳ್ಳು ಹಂದಿ. a porcupine. ವಾ: ಯೆಯ್ಪಂಜಿ ಮೈಮೇಲೆ ಮುಳ್ಳು ಮುಳ್ಳು ತರ ಇದ್ದದೆ. ಪ: ಎಯ್ಪಂಜಿ(ತು)

ಯೆಲಿಕಾ /*yelika:*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಯೇಗ್ಯತೆ /*ye:gyatε*/ ನಾ. 1. ಯೋಗ್ಯತೆ, 2. ಅರ್ಹತೆ, 3. ಸಾಮರ್ಥ್ಯ. 1. eligibility, 2. qualification, 3. suitability. ವಾ: ಮೊನ್ನ ಯೇಗ್ಯತೆ ಉಳ್ಳಿಕಣೊಕು.

ಯೇಚನೆ /*ye:canε*/ ನಾ. 1. ಯೋಚನೆ, 2 ಎಣಿಕೆ, 3. ವಿಚಾರ, 4. ಆಲೋಚನೆ, 5. ಚಿಂತನೆ. 1. thought, 2. to ponder, 3. idea, 4. contemplation, 5. reflection. ವಾ: ಯೇಚನೆ ಮಾಡಿಕೆಂತ ಇಲ್ಲೆ, ಸೀದ ನಮ್ಮೊಟ್ಟಿಗೆ ಬಾದಸ್ಟೆ ನಿಮ್ಮ ಕೆಲ್ಸ, ನೀ ಎಂತರ ಹೀಂಗೆ ಯೇಚನೆ ಮಾಡಿಕಂಡ್ ಕುದ್ದದ್.

ಯೇಮೆ /*ye:mε*/ ನಾ. 1. ಆಮೆ, 2. ಕೂರ್ಮ, 3. ಕಮಠ, 4. ಕಚ್ಛಪ. a tortoise, a reptile. **ಬುದ್ದಿ ಇಲ್ಲದ ಯೇಮೆ ಕೊರಂಗು ಸಹವಾಸ ಮಾಡ್ದಂಗೆ(ಗಾ).** ವಾ: ಯೇಮೆ ಮೆಲ್ಲಂಗೆ ನಡೆದು, ಅದ್ ನೀರ್‌ಲು, ಬೂಮಿಲು ಇದ್ದದೆ. ಪ: ಯಾಮೆ(ತು)

ಯೇಸ /*ye:sa*/ ನಾ. 1. ವೇಷ, 2. ಉಡುಗೆ ತೊಡುಗೆ. 1. costume, 2. attire. ವಾ: ಇದೆಂತ ಯೇಸ ನಿನ್ನದ್, ನಾಟಕ ಮಾಡಿಕನ ರಾಜನ ಯೇಸ ಹಾಕಿದ್ದೆ.

ಯೋಗ /*yo:ga*/ ನಾ. 1. ಅದೃಷ್ಟ, 2. ವಿಧಿ. 1. luck, 2. fate. ವಾ: ಅಂವನ ಯೋಗ ನೋಡ್, ಬಯಸಿದ್ ಸಿಗೊಕೊರೆ ಯೋಗ ಇರೊಕು.

ಯೋಗ್ಯ /*yo:gya*/ ನಾವಿ. 1. ಉತ್ತಮ ವ್ಯಕ್ತಿ, 2. ಗೌರವಾರ್ಹ ವ್ಯಕ್ತಿ. 1. a good person, 2. honourable person. ವಾ: ಆ ಕೆಲ್ಸಕೆ ಅಂವನೆ ಯೋಗ್ಯತ ಗ್ಯಾನ ಮಾಡ್ಡ್.

ಯೋಗ್ಯತೆ /*yo:gyatε*/ ನಾ. 1. ಸಾಮರ್ಥ್ಯ, 2. ಅರ್ಹತೆ. 1. capacity, 2. eligibility. ವಾ: ಯೋಗ್ಯತೆ ತಿಳ್ದ್ ಮಾತಾಡ್.

ಯೋಚನೆ ಮಾಡ್ /*yo:canε ma:ḍi*/ ಕ್ರಿ. ಯೋಚಿಸು. to think. ವಾ: ಸಾಲನ ಹೇಂಗೆ ತೀರ್‌ಸುದುತ ಯೋಚನೆ ಮಾಡ್‌ದು, ಮಕ್ಕಳ ಹೆಂಗೆ ಓದ್‌ಸುದುತ ಯೋಚನೆ ಮಾಡ್.

ಯೋಚ್ಸೊಳೊ /*yo:csoḷɔ*/ ಕ್ರಿ. 1. ಯೋಚಿಸು, 2. ವಿಚಾರ ಮಾಡು, 3. ಆಲೋಚಿಸು, 4. ಯೋಚಿಸಲಾಗಿದೆ. 1. to think, 2. to ponder over, 3. to contemplate, 4. thought over. ವಾ: ಅಂವನ ಕರ್‌ದ್ ಬುದ್ದಿ ಹೇಳೊಕುತ ಯೋಚ್ಸೊಳೊ.

ರ

ರಂಕೆ /*raŋkɛ*/ ನಾ. ರೆಕ್ಕೆ. feather. ವಾ: ಕಾಗೆದ್ ರಂಕೆ ಮುರ್‌ದುಟು, ರಂಕೆ ಪುಕ್ಕ ಬಂದ ಮೇಲೆ ಮತ್ತೇನ್?

ರಂಕ್‌ಣಿ[2] /*raŋkɨṇi*/ ನಾ. ಹೆಣ್ಣು ಮಕ್ಕಳಿಗೆ ಬೈಯ್ಯುವ ಪದ. an expleive term used against a woman. ವಾ: ನೀ ರಂಕ್‌ಣಿನಂಗೆ ಆಡ್‌ಬಡ.

ರಂಗತ್ತಮಲೆ /*raŋgattamale*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಆಲೆಟ್ಟಿ ಗ್ರಾಮದ ಜಾಗ. a locality in Aletti village in Sullia Taluk of Dakshina Kannada District.

ರಂಗೋಲಿ /*raŋgo:li*/ ನಾ. 1. ರಂಗೋಲಿ, 2. ರಂಗವಲ್ಲಿ ಹಸೆಗಳನ್ನು ಮೂಡಿಸಲು ಉಪಯೋಗಿಸುವ ಸುಣ್ಣದ ಕಲ್ಲಿನ ಪುಡಿ. geometric patterns drawn on the floor, using lime stone powder. ವಾ: ಹೊತಾರೆನೆ ಮನೆ ಅಂಗ್ಳಲಿ ರಂಗೋಲಿ ಹಾಕುವೆ.

ರಂಗ್ /*raŋgɨ*/ ನಾ. 1. ಬಣ್ಣ, 2. ವರ್ಣ, 3. ರೇಷ್ಮೆ, ಉಣ್ಣೆ, ಹತ್ತಿ ವಸ್ತ್ರಗಳಿಗೆ ಬಣ್ಣ ಕೊಡಲು ಬಳಸುವ ರಾಸಾಯನಿಕ ಪದಾರ್ಥ. 1. colour, 2. complexion, 3. dye used in silk and woolen clothes. ವಾ: ರಂಗ್ ರಂಗ್‌ನ ಹೂವ್, ಅರ್ವೆನ ನೋಡಿಕೆ ಕುಸಿ ಆದೊಲ.

ರಂಗ್‌ನ ಮಾತ್ /*raŋgɨna ma:t*/ ನಾ. ತುಂಬ ಹಿತವಾಗಿ ಮಾತನಾಡು. .

ರಂಜಳ ಹಕ್ಕಿ /*raŋjaḷa hakki*/ ನಾ. ಒಂದು ವಿಧದ ಹಕ್ಕಿ. a variety of bird. ವಾ: ಈಗ ಕೂಂಗಿದ್ ರಂಜಳ ಹಕ್ಕಿನೆ ಇರೊಕು.

ರಂಜುದು /*raŋjudu*/ ಕ್ರಿ. 1. ಪದೇಪದೇ ಹೇಳು, 2. ಆಗ್ರಹಿಸು, 3. ವಿನಂತಿಸು. 1. to say something repeatedly, 2. to demand, 3. to request. ವಾ: ಅವು ಮನೆಗೆ ಬಂದ್ ಆಗಾಗ ಅದ್ ಬೇಕ್, ಇದ್ ಬೇಕ್‌ತ ರಂದುದು. ಪ: ರಂದ್ – ಆಗ್ರಹಿಸು

ರಂಜೊಳ /*raŋjoḷa*/ ನಾ. 1. ಒಂದು ವಿಧದ ಕಾಡು ಮರದ ತಿನ್ನುವ ಹಣ್ಣು, 2. ಕಾಡು ಹಣ್ಣು, 3. ಎಳಂದೆ ಹಣ್ಣು, 4. ಎಳ್ದೆ ಹಣ್ಣು. fruit of Bullet wood tree. ವಾ: ರಂಜೊಳ ಹಣ್ಣ್ ಅಡಿಲಿ ಸುಮಾರ್ ಬಿದ್ದುಟು. ಪ: ರಂಜೋಳ ಹೂ. **ರಂಜಳಹಣ್ಣ್** /*raŋjaḷahaṇṇi*/ 1. ಒಂದು ವಿಧದ ಕಾಡು ಮರದ ಹಣ್ಣು, ಈ ಹಣ್ಣನ್ನು ತಿನ್ನುತ್ತಾರೆ, 2. ಕಾಡು ಹಣ್ಣು, 3. ಎಳಂದೆ ಹಣ್ಣು, 4. ಎಳ್ದೆ ಹಣ್ಣು. fruit of Bullet wood tree. ವಾ: ರಂಜಳ ಹಣ್ಣ್ ತುಂಬ ಹಣ್ಣಾರೆ ತಿಂಬಕೆ ಒಳ್ಳದ್, ಇಲ್ಲರೆ ನಾಲಿಗೆ ಮಕ್ಕರೆ ಮಕ್ಕರೆ ಆದೆ. **ರಂಜೆಳೆಹೂವು** /*raŋjeḷɛhu:vu*/ ರೆಂಜೆ ಹೂವು. Mimusops elengi – Bakula, Ranjal – flowers of Bullet wood tree. ವಾ: ಅವು ಮನೆಗೆ ಬಂದ್ ಆಗಾಗ ಅದ್ ಬೇಕ್, ಇದ್ ಬೇಕ್‌ತ ರಂದುದು, ಸಕ್ಕರೆ, ಬೆಲ್ಲ, ಕಾಪಿ ಹೊಡಿ, ದುಡ್ಡುತ ಎಲ್ಲನು ರಂದ್‌ದು. **ರಂಜೊಳಮರ** /*raŋjoḷamara*/. ಕಾಡು ಹಣ್ಣಿನ ಮರ. a wild fruit bearing tree. ವಾ: ರಂಜೊಳ ಮರ ಬಾರಿ ಕೊಡಿಗೆ ಹೋದೆ.

ರಂಡೆ /*raṇḍɛ*/ ನಾ. ಹೆಂಗಸರಿಗೆ ಬೈಯ್ಯುವ ಪದ. an expletive term used against women. ವಾ: ರಂಡೆತ ಬಯ್ಯಬಡ. ಪ: ರಂಡೆಗಳೆ; ರಂಡೆಮಜ್ಜ

ರಂದ್ /*randu*/ ನಾ. 1. ಒತ್ತಾಯಿಸು, 2. ಬಲವಂತ ಮಾಡು. 1. to force, 2. coercion. ವಾ: ಹಿಂಗ್ಯಾಕೆ ರಂದ್‌ದು ಕೈ ಕಾಲ್‌ಲಿ ಬಲ ಉಟ್ಟಲ ಮೈ ಮುರ್‌ದ್ ಗೈಮೆ ಮಾಡಿಕೆ ಬೊತ್ತ? ಪ: ರಂಜುದು

ರಂಪ /*rampa*/ ನಾ. 1. ಜಗಳ, 2. ಘರ್ಷಣೆ, 3. ಗದ್ದಲ. 1. a fight, 2. a tussle, 3. a scuffle. ವಾ: ರಂಪ ಮಾಡಿ ಹೊಸ್ತ್ ಕಾರ್ ತೆಗ್ಸಿಕಣ್ತ್. **ರಂಪಾಟ** /*rampa:ṭa*/ ವಾ: ಆ ಮನೆಲಿ ರಂಪಾಟ ಮುಗಿಯಕಿಲೆ. **ರಂಪ್** /*rampɨ*/ 1. ತಮಾಷೆ, 2. ಹಾಸ್ಯ, 3. ವಿನೋದ. 1. to make fun of, 2. to ridicule, 3. to deride. ವಾ: ರಂಪ್ ಮಾಡ್ದ್ ಸಾಕ್, ಕೆಲ್ಸ ನೋಡಿಕಣಿ. **ರಂಬಾರೂಟಿ** /*ramba:ru:ṭi*/ 1. ಕೂಗಾಟ, 2. ಗಲಾಟೆ, 3. ಗದ್ದಲ, 4. ರಂಪ. 1. screaming, 2. a scuffle, 4. an uproar, 4. a clamour. ವಾ: ಮನೆಲಿ ರಂಬಾರೂಟಿ ನಡಿತುಟ್ಟು. **ರಕ್ಕಾಸಿ ನಾರ್** /*rakka:si na:rɨ*/ 1. ಭೂತಾಳೆ, 2. ಕತ್ತಾಳೆ ನಾರು. 1. agave, 2. fibre of agave. ವಾ: ರಕ್ಕಾಸಿ ನಾರ್ ತೆಗ್ದ್ ಬಲೆಚೀಲ ಮಾಡಿ ಅದರ್‌ಲಿ ನೀರುಳಿ, ಇನ್ನೆಂತೆಲ್ಲೊ ಸಾಮಾನ್ ಗಳ ಹಾಕಿಸ್ ತಿದ್ದೊಗಡ. **ರಕ್ಕಸಾಳೆ** /*rakkasa:ḷɛ*/ 1. ಭೂತಾಳೆ, 2. ಕತ್ತಾಳೆ ನಾರು. 1. agave, 2. fibre of agave. ವಾ: ರಕ್ಕಸಾಳೆ ಬಾರಿ ಗಟ್ಟಿ. . **ರಕ್ಕಸಪಟ್ಟೆ** /*rakkasa paṭṭɛ*/ 1. ಭೂತಾಳೆ, 2. ಕತ್ತಾಳೆ ನಾರು. 1. agave, 2. fibre of agave. ವಾ: ರಕ್ಕಸ ಪಟ್ಟೆನ ಸಿಗ್ಯಕನ ಅದರ್‌ಲಿ ಬೆಳಿ ನಾರ್‌ನಂಗೆ ಸಿಕ್ಕಿದೆ. ಅದರ್‌ಲಿ ಬಲೆ ಚೀಲ, ಹುರಿ (ಹಗ್ಗ) ಮಾಡ್ತಿದ್ದೊ. ಬಾರಿ ಗಟ್ಟಿ ಇರ್‌ತಿತ್ತ್, ರಕ್ಕಸ ಪಟ್ಟೆ ಹಸಿನ ಸಣ್ಣದಾಗಿ ಸೀಳಿ ಹುರಿ ಮಾಡಿ ಬೇಲಿ ಕಟ್ಟಿಕೆ ಸನ ಬಳ್‌ಸ್‌ತ್ತಿದ್ದೊ

ರಕ್ಕಸ /*rakkasa*/ ನಾ. 1. ರಾಕ್ಷಸ, 2. ದೇವತೆಗಳ ಶತ್ರು, 3. ದೈತ್ಯ. 1. a demon, 2. an enemy of gods, 3. a hunk. ವಾ: ನಮ್ಮಪ್ಪ, ಅವ್ವ ರಾತ್ರೆ ಮೊಲ್ಗ್ ಕನ ರಕ್ಕಸನ ಕತೆನ ಬಾರಿ ರಸಲಿ ಹೇಳ್ತಿದ್ದೊ

ರಕ್ಕಸಿ /*rakkasi*/ ನಾ. ರಾಕ್ಷಸಿ. a demon (female). ವಾ: ರಕ್ಕಸಿನಂಗೆ ಬಾಯಿ ತೋರ್‌ಸಿದೆ.

ರಕ್‌ತ /*rakɨta*/ ನಾ. 1. ರಕ್ತ, 2. ನೆತ್ತರು. blood. ವಾ: ನನ್ನಂದ ರಕ್‌ತ ನೋಡಿಕೆ ಆದುಲೆಪ.

ರಕ್ತಸಿಂಬಳ /*raktasimbaḷa*/ ನಾ. ರಕ್ತ ಬೇಧಿ. bloody diarrhea. ವಾ: ಉಸ್ನಾದರೆ ರಕ್ತ ಸಿಂಬಳ ಹೋದು.

ರಕ್ತಬಳ /*raktabaḷa*/ ನಾ. 1. ರಕ್ತ ಬೋಳ, 2. ಒಂದು ಔಷಧಿ ದ್ರವ್ಯ. a medicinal liquid made of Herabol myrrh tree.

ರಗಳೆ /*ragaḷɛ*/ ನಾ. ಕಿರಿಕಿರಿ. to irritate. ವಾ: ಏನಾರ್ ಮಾಡಿಕಣಿ ನಿಮ್ಮ ರಗಳೆ ಬೇಡ ನಂಗೆ, ನನ್ನ ಬುಟ್ಟ್ ಬುಡಿ.

ರಗ್‌ಳೆ /*ragɨḷɛ*/ ನಾ. ತೊಂದರೆ ಕೊಡುವುದು, ಕಿರಿಕಿರಿ ಮಾಡು. to trouble/to irritate someone. ವಾ: ಕೊತ್ತಿ, ನಾಯಿ, ಮೊನ್ನರ ರಗ್‌ಳೆ ತಡೆಕಾದುಲೆ, ಹಗ್‌ಲ್‌ಲಿ ಮೊನ್ನರ ರಗ್‌ಳೆ, ರಾತ್ರೆ ಆದರೆ ನಾಯಿ, ಕೊತ್ತಿದ್ ರಗ್‌ಳೆ, ನಾವ್ಗಂತು ಸಾಕ್ ಸಾಕಾವ್ತು.

ರಚ್ಚೆ[1] /*rɛccɛ*/ ನಾ. ಹಲಸಿನ ಹಣ್ಣಿನ ಮೇಲ್ಪದರ ಸಿಪ್ಪೆ. a spiky outer layer of jackfruit. ವಾ: ಹಲ್ಸ್‌ಣ್ಣ್ ದ್ ರಚ್ಚೆನ ದನಗಳಿಗೆ ಹಾಕಕ್, ಅವ್ಕೆ ತಿಂಬಕೆ ಬಾರಿ ಕುಸಿ.

ರಚ್ಚೆ[2] /*rɛccɛ*/ ನಾ. ತಲೆಹರಟೆಪಟ್ಟುಹಿಡಿಯುವವ, ತೊಂದರೆ ಕೊಡುವವ. Nuisance. ವಾ: ಕೂಸ್ ಬೊಂಬೆ ಬೇಕ್‌ತ ರಚ್ಚೆ ಹಿಡ್ದ್ ಮೊರ್ಟದೆ.

ರಟ್ಟಣ್‌ಚಿ /*raṭṭaṇici*/ ನಾ. ಹೆಣ್ಣಿಗೆ ಬೈಯ್ಯುವ ಪದ. an expletive term used for women. ವಾ: ಎಲ್ಲಿಗೋಗಿತ್ತೊ ಈಗ ಬಾತ್ ರಟ್ಟಣ್‌ಚಿ.

ರಟ್ಟಾಗು /*raṭṭa:gu*/ ಕ್ರಿ. 1. ಗುಟ್ಟು ಬಯಲಾಗು, 2. ಎಲ್ಲರಿಗೂ ಗೊತ್ತಾಗು. 1. revealed, 2. divulged. ವಾ: ಗುಟ್ಟ್ ಮಾಡಿ ಮಾಡಿ ಈಗೆಲ್ಲ ರಟ್ಟಾತ್.

ರಟ್ಟಿಸ್ /*raṭṭisɨ*/ ಕ್ರಿ. 1. ಹಾರಿಸು, 2. ಎತ್ತರ ಹಾರಿಸು. 1. to fly (kite), 2. to make something fly. ವಾ: ಕಾರ್ ನೀರ್ ರಟ್ಟಿಸಿಕಂಡ್ ಹೋತ್. ಪ: ರಟ್ಟಿಬೀಳ್ – ಹಾರಿಬೀಳು; ರಟ್ಟಿಹೋತ್ – ಹಾರಿಹೋಯಿತು; ರಟ್ಟಿತ್ – ಹಾರಿತು; ರಟ್ಟಿದೆ – ಎಡವಿದೆ; ರಟ್ಟಿಸಿತ್ – ಹಾರಿಸಿತು; ಹಾರಿಸಿದರು; ರಟ್ಟಿಸಿದ್ – ಹಾರಿಸಿದ

ರಟ್ಟೆ[1] /*raṭṭɛ*/ ಕ್ರಿ. ಮೊಣ ಕೈಯ ಮೇಲಿನ ಭಾಗ. region above the elbow. **ಬಾವಂಗೆ ಬಾವನ ಬಲ, ಹಕ್ಕಿಗೆ ರೆಕ್ಕೆ ಬಲ, ಗಂಡಿಗೆ ರಟ್ಟೆ ಬಲ(ಗಾ).** ವಾ: ರಟ್ಟೆ ಬಲ

ಇರಿಕೆ ಮುಟ್ಟ ಗೈಮೆ ಮಾಡ್ದು, ಹೊಟ್ಟೆಗಟ್ಟಿ ಇದ್ದರೆ ರಟ್ಟೆ ಗಟ್ಟಿ, ಹೊಟ್ಟೆಲಿರ್ವ ಸಿಟ್ಟ್ ರಟ್ಟೆಗೆ ಬಂದರೆ? ಪ: ರಟ್ಟೆಲಿ – ರಟ್ಟೆಯಲ್ಲಿ; ರಟ್ಟೆಗೆ – ರಟ್ಟೆಗೆ

ರಟ್ಟೆ^{2} /*raṭṭɛ*/ ಕ್ರಿ. ಬಾಳೆ ದಿಂಡಿನ ಒಂದು ಹಾಳೆ. a sheet of banana stem. ವಾ: ಇಡ್ಮಣೆ ಹಿಟ್ಟ್ ಒತ್ತಿಕನ ಒರ್‌ಲ್ ಅಡಿಲಿ ಬಾಳೆ ರಟ್ಟೆನ ಉದೊಕೆ ಹಿಡ್ಯಕು, ಹಿಟ್ಟ್ ಲಾಯ್ಕಿಲಿ ರಟ್ಟೆ ಮೇಲೆ ಬಿದ್ದದೆ.

ರಟ್ಟ್ /*raṭṭ*/ ನಾ. 1. ಹಾರು, 2. ಹಾರಿ ಬೀಳು. 1. to jump, 2. to leap and fall. ವಾ: ಡೊಬ್ಬಿದ್ ಮುಚ್ಚಳ ರಟ್ಟಿತ್.

ರಟ್ಸ್ /*raṭsi*/ ಕ್ರಿ. 1. ಚಿಮ್ಮು, 2. ರಾಚು, 3. ಎರಚು, 4. ನೀರು ರಟ್ಟುದು, 5. ಕೆಸರು ರಟ್ಟುದು. 1. to spring, 2. to throw something by force, 3. to spill something by force, 4. to spill water, 5. to spill sludge. ವಾ: ಮೋರೆಗೆ ಕೆಸ್‌ರ್‌ನ ರಟ್ಸಿದ್. ಪ: ರಟ್ಸ್‌ಬಡ – ಚಿಮ್ಮಿಸಬೇಡ

ರಣ /*raṇa*/ ನಾ. 1. ಪಿಶಾಚಿ, 2. ಪ್ರೇತ. 1. a demon, 2. a devil. ವಾ: ಅಬ್ಬಾ! ಯಂತಾ ರಣ ಮಳೆ.

ರಣಗಿಡ್‌ಜ್ಜ /*raṇagiḍga*/ ನಾ. 1. ರಣ ಗಿಡುಗ, 2. ರಣಹದ್ದು. a vulture. ವಾ: ರಣಗಿಡ್‌ಜ್ಜ ಕೋಳಿನೆಲ್ಲ ಹೊತ್ತದೆ.

ರಣಗುಟ್ಟ /*raṇaguṭṭa*/ ಕ್ರಿವಿ. 1. ಮಾರಣಾಂತಿಕ, 2. ರಣಗುಟ್ಟ. deadly. ವಾ: ರಣಗುಟ್ಟ ಪೆಟ್ಟ್ ಸಿಕ್ಕುಟು.

ರಣಪೋಲಿ /*raṇapo:li*/ ನಾವಿ. ಮಹಾಪೋಲಿ. capricious person.

ರಣಬಿಸ್ಲ್ /*raṇabisli*/ ನಾ. 1. ವಿಪರೀತ ಬಿಸಿಲು, 2. ಉಗ್ರವಾದ ಬಿಸಿಲು, 3. ಉರಿಬಿಸಿಲು, 4. ಉರಿಯಂತೆ ಉಗ್ರವಾದ ಬಿಸಿಲು. high temperature, severe heat. ವಾ: ರಣಬಿಸ್ಲ್ ಹೊರೆಗೆ ಹೋದರೆ ನೆತ್ತಿ ಬುಟ್ಟೊದು, ಪಾಪ ಹೊರೆಗೆ ಕೆಲ್ಸ ಮಾಡೊವು ಹೆಂಗೆ ಇದ್ದವೆತ?

ರಣಹಂದಿ /*raṇahandi*/ ನಾವಿ. ದೊಡ್ಡಹಂದಿ. a large boar.

ರಣಹದ್ದ್ /*raṇahaddɨ*/ ನಾ. ಸತ್ತ ಪ್ರಾಣಿ ಪಕ್ಷಿಗಳನ್ನು ತಿನ್ನುವ ಹದ್ದು. a vulture. ವಾ: ರಣಹದ್ದ್ ಸತ್ತ ದನನ ತಿಂಬತಿತ್ತ್.

ರಣಹಿಡ್ದುಟು /*raṇahiḍḍuṭu*/ ಕ್ರಿವಿ. ಮೈಮೇಲೆ ಪ್ರೇತದ ಆವೇಶವಾಗುವುದು. to be possessed by a ghost. ವಾ: ರಣಹಿಡ್ದಂಗೆ ಆಡ್‌ದೆ.

ರತ್ತ /*ratta*/ ನಾ. 1. ರಕ್ತ, 2. ನೆತ್ತರು. blood. ವಾ: ನೂಕೊಲು ಕೊಯ್ಯಕನ ಕೈ ಕೊಯ್ಕಂಡೆ ರತ್ತ ಬಾತ್.

ರಪಕ್ಕ /*rapakka*/ ಅ. ಎಪ. ಫಕ್ಕನೆ ಓಡುವ, ಹಾರುವ ಕ್ರಿಯೆಯ ಅನುಕರಣವಾಚಿ. onomatopoeic expression to refer to the action of sudden running or jumping.

ರಪ್ಪನೆ /*rappane*/ ಅ. 1. ವೇಗವಾಗಿ, 2. ರಭಸವಾಗಿ. 1. in great speed, 2. with great force. ವಾ: ಅಲ್ಲೆ ನಿತ್ತಿರಕನ ರಪ್ಪನೆ ಬಾಗ್ಲ್ ಹಾಕಿದ್.

ರಬ್ಬರ್ ಮರ /*rabbarɨ mara*/ ನಾ. ರಬ್ಬರು ಮರ, ಇದರಿಂದ ಲ್ಯಾಟೆಕ್ಸ್ ಸಂಗ್ರಹಿಸಲಾಗುತ್ತದೆ. rubber tree, latex is collected from its bark. ವಾ: ರಬ್ಬರ್ ಮರದ ಕೆತ್ತೆನ ಕೆತ್ತಿ ಕೊಳಾಯಿ ಆಕಾರ ಮಾಡಿಸಿ ಅದರ್‌ಂದ ಲ್ಯಾಟೆಕ್ಸ್ ಸಾರನ ಕೂಡಿಟ್ಟವೆ, ಇದ್‌ನ ರಬ್ಬರ್ ಆಗಿ ಸುದ್ದಿಕರಿಸುವೆ.

ರಬ್ಸ /*rabsa*/ ನಾ. 1. ವೇಗ, 2. ರಭಸ, 3. ಜೋರು. 1. speed, 2. with force, 3. loud. ವಾ: ಬಾರಿ ರಬ್ಸಲಿ ಬಂದವೆ.

ರವೆ ಉಂಡೆ /*ravɛ uṇḍɛ*/ ನಾ. ಉಪ್ಪಿಟ್ಟು ರವೆಯಿಂದ ಮಾಡುವ ಸಿಹಿ ತಿನಿಸು. a sweet dish(ball) made of semolina and sugar. ವಾ: ರವೆ ಉಂಡೆ ಮಾಡಿಕನ ಹಾಲ್ ಹಾಕಿ ಉಂಡೆ ಕಟ್ಟುದು. ಪ: ರವೆಲಾಡ್

ರವ್ಕೆ /*ravkɛ*/ ನಾ. 1. ಕುಪ್ಪಸ, 2. ರವಿಕೆ. a blouse. ವಾ: ರವ್ಕೆ ಕೈ ಹೊಲ್ಸಿದ್ ಹಾಳ ತುಂಡಾತ, ಇನ್ನ್ ಹಾಳ ಉದ್ದ ಇರಕಿತ್. ಪ: ರೊವುಕೆ

ರಸಬಾಳೆ /*rasaba:ḷɛ*/ ನಾ. ಒಂದು ಬಗೆಯ ಶ್ರೇಷ್ಠವಾದ ಬಾಳೆ. a variety of plantain grown in Nanjanagudu region. ವಾ: ರಸ ಬಾಳೆ ಬಾರಿ ರುಚಿ, ಆರೋಗ್ಯಕು ಒಳ್ಳದ್.

ರಸಬುಡ್ದು^{1} /*rasabuḍdu*/ ನಾ. 1. ಅಲಂಕಾರಿಕವಾಗಿ ಮಾತನಾಡು, 2. ಲೆಕ್ಕಕ್ಕಿಂತ ಹೆಚ್ಚು ಮಾತನಾಡು – ಒಂದು ವಾಕ್ಯದ ಮಾತನ್ನು ಎರಡು ವಾಕ್ಯದಲ್ಲಿ ಮಾತನಾಡು. 1. grandiloquence, 2. verbose.

ವಾ: ಅಂವ ಮಾತ್‌ಲಿ ರಸ ಬುಡ್ದು ಅಲ, ಕೇಳಿಕೆ ಕುಸಿ ಆದೆ.

ರಸಬುಡ್ದು[2] /*rasabuḍdu*/ ನಾ. ಮೂಲಿಕೆಗಳ ರಸ. juice of medicinal plants. ವಾ: ಲಾವಂಚ ಬೇರ್‌ನ ನೀರ್‌ಗೆ ಹಾಕಿರೆ ರಸಬುಟ್ಟದೆ.

ರಸ[1] /*rasa*/ ನಾ. ಹಣ್ಣುಗಳ ದ್ರವ. juice. ವಾ: ಕಿತ್ತುಳಿ ಹಣ್ಣ್‌ದ್ ರಸನ ಕುಡೆನಿ.

ರಸ[2] /*rasa*/ ನಾ. 1. ರುಚಿ, 2. ಸವಿ. 1. taste, 2. to taste. ವಾ: ರಸ ರಸಾಗಿ ಅಡ್ಗೆ ಮಾಡಿನೆ ಮಕ್ಕಳೆ.

ರಸಾಯನ /*rasa:yana*/ ನಾ. ಹಣ್ಣಿನಿಂದ ತಯಾರಿಸಿದ ರುಚಿಕರ ಖಾದ್ಯ. a sweet dish made of sliced banana, jaggery, etc. ವಾ: ಹಣ್ಣ್ ಗಳ್‌ನ ಬಳ್‌ಸಿ ರಸಾಯನ ಮಾಡಿವೆ.

ರಸೀದಿ /*rasi:di*/ ನಾ. ಎಪ. 1. ರಶೀದಿ, 2. ಪಾವತಿ ಪತ್ರ, 3. ಸಲ್ಲಿಕೆಯ ಚೀಟಿ. 1. a reciept, 2. a bill, 3. a sales slip. ವಾ: ದೇಸ್ತಾನಲಿ ಸಾಂತಿ ಪೂಜೆ ಮಾಡಿಕೆ ರಸೀದಿ ಬರ್‌ಸೊಕು.

ರಾಂಪಲ /*ra:mpala*/ ನಾ. ರಾಮಫಲ. Custard apple. ವಾ: ರಾಂಪಲ ಹಣ್ಣ್ ಲಿ ಕಬ್ಬುಣದ ಅಂಸ ಸಿಕ್ಕಿದೆ, ತಡಿಲಿ ರಕ್ತ ಕಮ್ಮಿ ಇದ್ದರೆ ಅದ್ ಹೆಚ್ಚಿ ಆದೆಗಡ.

ರಾಕ್ಸಸಜ್ಜಿ /*ra:ksasajji*/ ನಾ. ರಾಕ್ಷಸಿ ಅಜ್ಜಿ. an aged demonic woman/devil. ವಾ: ನಾ ಸಣ್ಣದಿರಿಕನ ನಮ್ಮವ್ವ ಹೊನ್ನಮನ ಕತೆ, ಹಂದಿ ಮತೆ ಕರ್‌ಮಜಣ್ಣ್ ಕತೆ, ರಾಕ್ಸಸಜ್ಜಿ ಕತೆನ ದಿನ ಮೊಲ್ಗಿಕನ ಹೇಳ್ತಿದ್ದೊ.

ರಾಗ /*ra:ga*/ ನಾ. ಒಂದೇ ರೀತಿಯ ಏರಿಳಿತಗಳಿಲ್ಲದ ಮಾತು, ಒಂದೇ ರೀತಿಯ ಬೇಡಿಕೆ. a monotonous tone of talking. ವಾ: ಅದರ್‌ದ್ ಅದೇ ರಾಗ, ಅದೇ ಹಾಡ್.

ರಾಗಕೊಯ್ಯೊದು[1] /*ra:gakoyyodu*/ ನಾ. ನಿರಂತರ ಅಳುವುದು. crying inconsolably. ವಾ: ನಿನ್ನ ರಾಗ ಕೊಯ್ಯೊದು ಸಾಕ್.

ರಾಗಕೊಯ್ಯೊದು[2] /*ra:gakoyyodu*/ ನಾ. ಬೈಗುಳ ಪದ. an expletive term.

ರಾಗಯೆಳ್ಯೊದು /*ra:gayeḷyodu*/ ನಾ. ರಾಗವಾಗಿ ಮಾತನಾಡುವುದು. sing song tone of talking. ವಾ: ಮಾತಾಡಿಕನ ರಾಗ ಯೆಳ್ಯೊದು. ಮೊನ್ನೇ. . . ಎಂತಾತ್‌ತೇಳ್ರೆ. .

ರಾಗಮಾಲೆ /*ra:gama:lɛ*/ ನಾ. 1. ಮಾತು ಮಾತಿಗು ಅಳುವುದು, 2. ಅಳುಮುಖ. 1. a crybaby, 2. a whiner. ವಾ: ರಾಗಮಾಲೆ ಬಾತ್.

ರಾಗಲಿ /*ra:gali*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ರಾಗಿ /*ra:gi*/ ನಾ. ಒಂದು ಬಗೆಯ ಏಕದಳ ಧಾನ್ಯ. finger millet, ragi. **ಹೋಕನ ಕೆಂಪ್ ಬಾಕನ ಬಿಳಿ – ರಾಗಿ(ಒ).** ವಾ: ರಾಗಿ ತಿಂದಂವಂಗೆ ರೋಗ ಇಲ್ಲೆಗಡ. **ರಾಗಿ ಅಂಬುಲಿ** /*ra:gi ambuli*/ 1. ರಾಗಿ ಅಂಬಲಿ, 2. ರಾಗಿಯನ್ನು ಬೇಯಿಸಿ ಮಾಡಿದ ತೆಳು ದ್ರವ ಪದಾರ್ಥ. 1. a porridge made of finger millet, 2. a gruel made of finger millet. ವಾ: ಬಿಸ್‌ಲ್ ಇರಿಕನ ರಾಗಿ ಅಂಬುಲಿ ಕುಡ್ಯಕು, ತಡಿ ತಂಪಾದೆ. ಪ: ಅಂಬ್ಲಿ – ಅಂಬಲಿ

ರಾಗಿಕಲ್ಲ್ /*ra:gi kallɨ*/ ನಾ. ರಾಗಿ ಬೀಸುವ ಕಲ್ಲು. finger millet griding stone. ವಾ: ರಾಗಿ ಕಲ್ಲ್‌ಲಿ ರಾಗಿ ಬೀಸುದು ಅಕ್ಕಿ ಬೀಸಿದಂಗೆಲ್ಲ, ರಾಗಿ ಬೇಗ ಹೊಡಿಯಾದುಲೆ.

ರಾಗಿಬೀಸುದು /*ra:gi bi:sudu*/ ನಾ. ರಾಗಿ ಬೀಸುವುದು. to grind finger millet. **ಕುದುರೆ ಓಡ್ಯನ ಕುಂಕುಮ ಚೆಲ್ಲಿದೆ – ರಾಗಿ ಬೀಸುದು(ಒ).** ವಾ: ರಾಗಿ ಬೀಸುದು ಬಂಗದ ಕೆಲ್‌ಸ, ಅವ್ವ ರಾಗಿ ಬೀಸುದು.

ರಾಗಿ ಬೋಳ /*ra:gi bo:ḷa*/ ನಾ. ರಾಗಿ ಹುಡಿಯನ್ನು ಹಾಲಿನೊಂದಿಗೆ ಕುದಿಸಿದ ಪಾಕ. a concoction made of finger millet flour and milk. ವಾ: ರಾಗಿ ಹೊಡಿನ ಹಾಲ್‌ನೊಟ್ಟಿಗೆ ಹಾಕಿ ಕುದ್‌ಸಿರೆ ರಾಗಿ ಬೋಳ ಆದೆ.

ರಾಗಿ ಮಣ್ಣಿ /*ra:gi mɔṇṇi*/ ನಾ. 1. ರಾಗಿಯಿಂದ ಮಾಡಿದ ತೆಳು ಗಂಜಿ, 2. ಅಂಬ್ಲಿ. a porridge made of finger millet. ವಾ: ಸಣ್ಣ ಕೂಸಿಗೆ, ಸಣ್ಣ ಮಕ್ಕಳಿಗೆ ರಾಗಿ ಮಣ್ಣಿ ಮಾಡಿ ಕೊಟ್ಟವೆ. ಪ: ರಾಗಿ ಮೊಣ್ಣಿ

ರಾಗುಟಿ /*ra:guṭi*/ ನಾ. 1. ಚಿನ್ನದ ಜಡೆ ಬಿಲ್ಲೆ, 2. ಮದುಮಗಳ ತಲೆಗೂದಲಿಗೆ ಮುಡಿಸುವ ಚಿನ್ನದ ಬಿಲ್ಲೆ. 1. a golden disk (a jewellery), 2. a

golden disk worn by the bride on her hair. ವಾ: ಹಿಂದೆನ ಕಾಲಲಿ ಮೊದುವೆಲಿ ಮೊದುವಳ್ತಿ ನ ಕೂದೊಲಿಗೆ ರಾಗುಟಿನ ಹಾಕ್ತಿದ್ದೊಗಡ.

ರಾಜಬಾಳೆ /*ra:jaba:ḷɛ*/ ನಾ. ಬಾಳೆಹಣ್ಣಿನ ವಿಧ. a variety of banana. ವಾ: ರಾಜ ಬಾಳೆ ದೈ ನಮ್ಮಲ್ಲಿತ್ತ್.

ರಾಜಂಗ /*ra:jaŋga*/ ನಾ. ರಾಜರು. kings. ವಾ: ರಾಜಂಗ ಜೆನಗಳ ಬಜ್ಜಸುಕ ನೋಡಿಕಣ್ತಿದ್ದೊ.

ರಾಜಬಾರಿಕೆ /*ra:jaba:rikɛ*/ ನಾ. 1. ರಾಜ್ಯಭಾರ, 2. ಆಡಳಿತ, 3. ಆಳ್ವಿಕೆ. 1. administration of a kingdom, 2. administration, 3. governance. ವಾ: ರಾಮನ ಕಾಲದ ರಾಜಬಾರಿಕೆ ನಂಗೆ ಮತ್ತೆ ಬಾದೊ.

ರಾಜಿ /*ra:ji*/ ಕ್ರಿ. ಎರಡೂ ತಂಡಗಳ ಒಪ್ಪಿಗೆ. mutual consent. ವಾ: ಆಡಿಕನ ಜೆಗಳ ಮಾಡಿಕಂಡ್ ಮತ್ತೆ ರಾಜಿ ಆದೊ.

ರಾಟೆ[1] /*ra:ṭɛ*/ ನಾ. ಬಾವಿಯಿಂದ ನೀರೆತ್ತಲು ಹಗ್ಗಕ್ಕೆ ಬಳಸುವ ಕಬ್ಬಿಣದ ಚಕ್ರ. pulley, used in a well. **ಕೋಟೆ ಮೇಲೆ ಕಣ್ಣ್, ರಾಟೆ ಮೇಲೆ ಕೈ(ಗಾ).** ವಾ: ಬಾಮಿಗೆ ರಾಟೆ ಹಾಕಿ ನೀರ್ ಎಳೆದು.

ರಾಟೆ[2] /*ra:ṭɛ*/ ನಾ. 1. ಭತ್ತ ಕುಟ್ಟಲು ಬಳಸುವ ಮರದ ಉಪಕರಣ, 2. ಕಾಲಿನಿಂದ ಭತ್ತ ಕುಟ್ಟುವ ಸಾಧನ. a pestle used to pound paddy. ವಾ: ಹೊತಾರೆ ನಾಕಂಟೆಗೆ ಎದ್ದ್ ರಾಟೆಲಿ ಬತ್ತ ಕುಟ್ಟುತ್ತಿದ್ದೊ.

ರಾಟೆ[3] /*ra:ṭɛ*/ ನಾ. ಹೆಣ್ಣು ಮಕ್ಕಳಿಗೆ ಬೈಯ್ಯುವ ಪದ. an expletive term used against women. ವಾ: ರಾಟೆ ಹೋದು ನೋಡ್, ಹೇಳ್ದರೊಂದ್ ಕೇಳ್ದುಲೆ.

ರಾಣಿಗ /*ra:ṇiga*/ ನಾ. ರಾಣಿಯರು. queens. ವಾ: ದಸರತ ರಾಜಂಗೆ ಕೌಸಲ್ಯ, ಕೈಕೆಯಿ, ಸುಮಿತ್ರತ ಮೂರ್ ಜೆನ ರಾಣಿಗ ಇದ್ದೊ.

ರಾಮಕಜೆ /*ra:makajɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ರಾಮಕಡ್ತಲೆ /*ra:makaḍtalɛ*/ ನಾವಿ. 1. ಭಾರಿ ಜೋರಿನ ಹೆಂಗಸು, 2. ಗಯ್ಯಾಳಿ. 1. a quarrelsome woman, 2. an aggressive woman. ವಾ: ಅದ್ ರಾಮಕಡ್ತಲೆ ಹೆಣ್ಣ್.

ರಾಮತಿಕಾರು /*ra:matika:ru*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕಲ್ಮಡ್ಕ ಗ್ರಾಮದ ಜಾಗ. a locality in Kalmadka village in Sullia Taluk of Dakshina Kannada District.

ರಾಯಿಕಲ್ಲ್ /*ra:yikallɨ*/ ನಾ. ರಾಗಿ ಬೀಸುವ ಕಲ್ಲು. a finger millet griding stone. ವಾ: ರಾಯಿಕಲ್ಲ್‌ಲಿ ಇಡಿ ರಾಗಿನ ಹಾಕಿ ಬೀಸುದು.

ರಾವು /*ra:vu*/ ನಾ. 1. ರಾಹು, 2. ರಾಕ್ಷಸ. 1. Rahu, one of the nine celestial bodies, 2. a deamon. ವಾ: ರಾವುಕೇತು ರಾಕ್ಸಸರ್ ದೇವ್ರೊಟ್ಟಿಗೆ ಕುದ್ಕಂಡ್ ಅಮೃತ ಕುಡೆಕನ ವಿಸ್ಣುಗೆ ಗೊತ್ತಾಗಿ ಸುದರ್‌ಸನ ಚಕ್ರ ಬುಡಿಕನ ರಾವು ಕೇತುದ್ ತಲೆ ಹಾರ್‌ದ್, ಅಮೃತ ದೊಂಡೆಮುಟ್ಟ ಮಾತ್ರ ಇಳ್ದಿತ್ತ್ ಗಡ, ಹಂಗಾಗಿ ರಾವು ಕೆತುದ್ ತಲೆ ಮಾತ್ರ ಇರ್‌ದುತ ಪುರಾಣ ಕತೆ. ಪ: ರಾವುಕುಲೆ

ರಾವುಬುಡ್ಡು /*ra:vubuḍdu*/ ನಾ. ದುರಾಸೆ ಬಿಡುವುದು. to leave greedy behaviour.

ರಾವುಹಿಡಿಯೊದು /*ra:vuhiḍiyodu*/ ನಾ. ದುಷ್ಟಶಕ್ತಿ ಮೈಮೇಲೆ ಬರುವುದು. to be possessed by an evil spirit. ವಾ: ಅಂವ ರಾವು ಹಿಡ್ದಾಂಗೆ ತಿಂದದೆ.

ರಾವುಕಟ್ಟುದು /*ra:vukaṭṭudu*/ ನಾ. ಅತ್ಯಾಸೆಪಟ್ಟು ತಿನ್ನುವುದು, ತೀವ್ರಾಸಕ್ತಿಯಿಂದ ಕಬಳಿಸುವುದು. to gulp with greed.

ರಾವುಕೊಲೆ /*ra:vukole*/ ನಾ. ಒಂದು ದುಷ್ಟಶಕ್ತಿ. an evil spirit.

ರಾವುಬೀಜ ಮರ /*ra:vubi:ja mara*/ ನಾ. ಗುಡ್ಡೆರೆಂಜೆಮರ. The tree Elaeocarpus dicera, Vabl (Tilioceae).

ರಾವುಬೊಡಿಯಲಿ /*ra:vuboḍiyali*/ ನಾ. ಅಂಗಾಂಗಗಳು ಊನವಾಗಲಿ ಎಂದು ಶಾಪ ಕೊಡುವುದು. to curse that someone should become a handicap or a disabled. ವಾ: ಅಂವಂಗೆ ರಾವುಬೊಡಿಯಲಿ.

ರಾವುಬೊಡಿಯೊದು /*ra:vuboḍiyodu*/ ನಾ. ದುಷ್ಟಶಕ್ತಿ ಹಿಡಿಯುವುದು. possession by an evil spirit

ರಾಸಿರಾಸಿ /*ra:si ra:si*/ ನಾ. ಯಥೇಚ್ಛವಾಗಿರುವುದು. heap. ವಾ: ರಾಸಿ ರಾಸಿ ಅರ್ವೆ ಬಿದ್ದುಟು ಮಡ್ಡಿಕೆ.

ರಾಸಿ[1] /*ra:śi*/ ನಾ. 1. ಒಟ್ಟಿಗೆ ಸೇರಿಸಿದ, 2. ಗುಡ್ಡೆ ಹಾಕಿದ. 1. put together, 2. piled. ವಾ: ಒಗೆಕೆ ರಾಸಿ ಅರ್ವೆ ಬಿದ್ದುಟು.

ರಾಸಿ[2] /*ra:si*/ ನಾ. 1. ರಾಶಿ ಇಡು, 2. ಜ್ಯೋತಿಷ್ಯ ಕೇಳು. consulting an astrologer. ವಾ: ರಾಸಿ ಮಡ್‌ಗಿಸಿ ಕೇಳ್ಸುದು.

ರಾಸ್ಕಲ್ /*ra:skal*/ ನಾ. ಎಪ. ಬೈಗಳ ಪದ. an expletive term. ವಾ: ನಂಗ್ಯಾಕೆ ರಾಸ್ಕಲ್‌ತ ಹೇಳ್ದ?

ರಾಹ್ /*ra:hɨ*/ ನಾ. 1. ರಾಹು, 2. ರಾಕ್ಷಸ. 1. rahu, one of the nine celestial bodies, 2. a deamon. ವಾ: ರಾಹುದೆಸೆಲಿ ರಾವು ಸಾಂತಿ ಮಾಡ್ಲೊಕು, ಸುಬ್ರಮಣ್ಯ ದೇವ್ರ ಪೂಜೆ ಮಾಡೊಕು, ಹಳ್ಳನಾರ್ ಸಾಂತಿ ಆದೆ.

ರಿಪೇರಿ /*ripe:ri*/ ಎಪ. 1. ದುರಸ್ತಿ, 2. ಸರಿಪಡಿಸುವಿಕೆ. 1. to repair, 2. to rectify. ವಾ: ನಂಗೆ ಹಳ್ಳ ಹಳ್ಳ ರಿಪೇರಿ ಕೆಲ್‌ಸ ಬಂದದೆ.

ರಿಬ್ಬನ್ /*ribbanɨ*/ ಎಪ. ತಲೆ ಕೂದಲನ್ನು ಕಟ್ಟುವ ಬಟ್ಟೆ ದಾರ. ribbon. ವಾ: ನಾವ್‌ಗೆಲ್ಲ ಇಸ್ಕೂಲಿಗೆ ಹೋಕನ ಎರ್‌ಡ್ ಜೆಡೆಗೆ ರಿಬ್ಬನ್ ಹಾಕಿ ಮಡ್ಸಿ ಕಟ್ಟಕಾಗಿತ್.

ರಿಯಾಯಿತಿ /*riya:yiti*/ ಕ್ರಿ. ವಿನಾಯಿತಿ. concession. ವಾ: ಹಬ್ಬ ಬಾಕನ ಅರ್ವೆಗೆ ಬಾರಿ ರಿಯಾಯಿತಿ ಸಿಕ್ಕಿದೆ.

ರೀಪು /*ri:pu*/ ಎಪ. 1. ಹಂಚು ಗಟ್ಟಿನಿಲ್ಲಲು ಹಾಕುವ ಮರ, 2. ಬಾರಿ, 3. ರೀಪರ್. 1. a wooden beam used to support roof tiles, 2. a reaper. ವಾ: ರೀಪು ಗಟ್ಟಿ ಇರೊಕು.

ರುಚಿ /*ruci*/ ನಾ. ಸ್ವಾದ. taste. ವಾ: ಸೀತ ಆಗಿ ಎಂತ ರುಚಿನು ಗೊತ್ತೆ ಆದುಲೆ, ಹುಳ್ಳಂಗೆ ಒಳ್ಳಮೆಣ್ಸ್ ಆಂಬರ ಮಾಡಿರೆ ಉಂಬಕ್.

ರುಣ /*ruṇa*/ ನಾ. ಋಣ. indebtedness. ವಾ: ಯಾರ ರುಣನೂ ಇಸಿಕಣ್ಣಾಗದ್.

ರುತಿ /*ruti*/ ನಾ. 1. ರುಚಿ, 2. ಸ್ವಾದ. 1. taste, 2. flavour. ವಾ: ಚೆಟ್ಟ್ ಗೈಪು ರುತಿನೆ ಇಲ್ಲೆ.

ರುದ್ರ ಚಾಮುಂಡಿ /*rudra ca:muṇḍi*/ ನಾ. ಗೌಡ ಸಮುದಾಯದವರು ಆರಾಧಿಸಿಕೊಂಡ ಬಂದ ಪ್ರಮುಖ ದೈವ. rudra chamundi, a deity. ವಾ: ರುದ್ರ ಚಾಮುಂಡಿ ದೈವಕೆ ಹರ್‌ಕೆ ಮಾಡಿಕಂಡಿದ್ದೊ.

ರುಮಾಲ್ /*ruma:lɨ*/ ನಾ. ಎಪ. ತಲೆಗೆ ಮುಂಡಾಸಿನಂತೆ ಕಟ್ಟುವ ಬಟ್ಟೆ. a veil worn by women on the waist.

ರುವಿ /*ruvi*/ ನಾ. ಕಾಸು. money. ವಾ: ಗೈಮೆ ಮಾಡಿರೆ ಅಲ ರುವಿ ಸಿಕ್ಕುದು. ಪ: ರುಯಿ(ತು)

ರುಸ್ತುಂ /*rustuṁ*/ ನಾ. ಎಪ. 1. ನಿಪುಣ, 2. ಜಾಣ. 1. skillful, 2. intelligent. ವಾ: ಮರ ಹತ್ತಿ ಗೆಲ್ಲ್ ಕಡೆದರ್ಲಿ ಅಂವ ಬಾಳಾ ರುಸ್ತುಂ.

ರೂಪ /*ru:pa*/ ನಾ. 1. ಮುಖದ ಅಂದ, 2. ಮುಖಚಹರೆ, 3. ಮುಖ ಸೌಂದರ್ಯ. 1. beauty of one's face, 2. face, 3. beautiful face. **ದೀಪ ಇಲ್ಲದ ಮೇಲೆ ರೂಪ ಎಲ್ಲಿಟು(ಗಾ).** ವಾ: ರೂಪುಗಿಂತ ಗುಣ ಮುಕ್ಯ.

ರೆಂಕಿಲ್[1] /*reŋkilɨ*/ ನಾ. ರೆಕ್ಕೆ. feathers. **ಬಾವಂಗೆ ಬಾವನ ಬಲ, ಹಕ್ಕಿಗೆ ರೆಕ್ಕೆನ ಬಲ(ಗಾ).** ವಾ: ಹಕ್ಕಿಗ ರೆಕ್ಕೆ ಬಡ್ಕಂಡ್ ಹಾರಿವೆ.

ರೆಂಕಿಲ್[2] /*reŋkilɨ*/ ನಾ. ಒಂದು ವಿಧದ ಬಿದಿರು, ಲೆಂಕಿರಿ ಬಿದಿರು. a variety of bamboo.

ರೆಂಜಾಳ /*renja:ḷa*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮರ್ಕಂಜ ಗ್ರಾಮದ ಜಾಗ. a locality in Markanja village in Sullia Taluk of Dakshina Kannada District.

ರೆಂಪಿಗೆ /*rempigɛ*/ ನಾ. ಸಮಗಾರನ ಕೈಯಲ್ಲಿ ಇರುವ ಚರ್ಮ ಹದಮಾಡುವ ಸಾಧನ. an equipment with which animal leather is tempered.

ರೆಂಬೆ /*rembɛ*/ ನಾ. ಬಾಳೆ ಗಿಡದ ಸಿಪ್ಪೆ. skin of banana plant.

ರೆಕ್ಕೆ /*rekkɛ*/ ನಾ. ಗಿಡದ ಸಣ್ಣ ಸಣ್ಣ ರೆಂಬೆ. 1. feathers, 2. young branches. ವಾ: ಕಾಪಿ ದೈನ ಸಣ್ಣ ಸಣ್ಣ ರೆಕ್ಕೆಗಳ ಮುರ್‌ದ್ ತೆಗೆಕು, ರೆಕ್ಕೆ ಅಗಲ ಹೋಕೆ ಬುಡಿಕಾಗದ್.

ರೆಕ್ಕೆ ಅವರೆ /*rekkɛ avarɛ*/ ನಾ. ಒಂದು ವಿಧದ ಅವರೆಕಾಯಿ. a variety of hyacinth beans. ವಾ: ರೆಕ್ಕೆ ಅವರೆ ಈಗ ಹಿಡೆಕೆ ಸುರು.

ರೆಕ್ಕೆರು /*rekkɛru*/ ನಾ. ಕಪ್ಪು ಬಣ್ಣದ ಬಿಳಿಯ ಸಣ್ಣ ರೆಕ್ಕೆಗಳಿರುವ ಮತ್ತು ಕಚ್ಚುವ ಇರುವೆ. black ants

with small white feathers. ವಾ: ರೆಕ್ಕೆರು ಕಚ್ಚಿಬುಡ್ತ್.

ರೆಚ್ಚೆ[1] /*reccɛ*/ ನಾ. 1. ಹಠ ಮಾಡುವುದು, 2. ರಂಪ. 1. stubborn, 2. to clamour. ವಾ: ಮಕ್ಕ ರೆಚ್ಚೆ ಹಿಡ್ದರೆ ಸಮ್‌ದಾನ ಮಾಡೊಕು, ಅದ್ ಬುಟ್ಟ್ ಹೊಡ್ದರೆ ಕೇಳುವೆನ?, ಅದ್ಕೆ ಮನೆಲಿ ದೊಡ್ಡವ್ ಇರೊಕುತ ಹೇಳ್ದು, ಅನುಬವದ ಮಾತ್‌ಗಳ ಹೇಳಿವೆಲ ನಾವ್ಗೆ ಕಲ್ಯಕೆ ಒಳ್ಳೆದ್.

ರೆಚ್ಚೆ[2] /*reccɛ*/ ನಾ. 1. ಹಲಸಿನ ಹಣ್ಣಿನ ಸಿಪ್ಪೆ, 2. ಹೊರ ಭಾಗ, 3. ಮೇಲ್ಪದರ, 4. ಸಾರೆ. 1. spiky outer skin of jackfruit, 2. outer layer, 3. top layer, 4. superstrate. ವಾ: ರೆಚ್ಚೆನ ತೆಗಿನಿ.

ರೆಟ್ಟಿ /*reṭṭi*/ ಕ್ರಿ. ಹಾರಿ. jump. ವಾ: ಎಡ್ಗಿ ರೆಟ್ಟಿ ಬೀತ್.

ರೆಟ್ಟೆ[1] /*reṭṭɛ*/ ನಾ. ಬಾಳೆಗಿಡದ ಮೇಲಿನ ಸಿಪ್ಪೆ. outer skin of banana plant. ವಾ: ಬಾಳೆ ರೆಟ್ಟೆನ ದೂಪ ಹಾಕಿಕೆ ಬಳ್ಸುವೆ.

ರೆಟ್ಟೆ[2] /*reṭṭɛ*/ ನಾ. 1. ರಟ್ಟೆ, 2. ತೋಳು. 1. shoulder, 2. arm. ವಾ: ರೆಟ್ಟೆ ಗಟ್ಟಿ ಇರಿಕನನೆ ಲಾಯ್ಕಲಿ ಕ್ಯಾಮೆ ಮಾಡೊಕು. ಪ: ರೆಟ್ಟೆಬಲ – ತೋಳುಬಲ

ರೆಟ್ಸಿದ್ /*reṭsidɨ*/ ಕ್ರಿ. 1. ಎರಚಿದ, 2. ಹಾರಿಸಿದ. 1. spilled, 2. flew. ವಾ: ಕೆಸ್ರ್ ರೆಟ್ಸಿದ್.

ರೆಪ್ಪೆ /*reppɛ*/ ನಾ. ಕಣ್ಣಿನ ರೆಪ್ಪೆ. eye lashes. ವಾ: ಆ ಗೂಡೆದ್ ರೆಪ್ಪೆಗ ಎಸ್ಟ್ ಉದ್ದುದ್ದಲ, ನೋಡಿಕೆ ಕುಸಿಯಾದೆ.

ರೆಸಿಗೆ /*resigɛ*/ ನಾ. 1. ಕೀವು, 2. ಕೊಳೆತ ರಕ್ತ, 3. ರೇಸಿ. 1. pus, 2. clotted blood, 3. suppuration. ವಾ: ಕೈಲಿ ಆದ ಗಾಯಲಿ ರೆಸಿಗೆ ಹೊರ್‌ಟದೆ.

ರೇಸಿ /*re:si*/ ನಾ. 1. ಕೀವು, 2. ರೆಸಿಗೆ. 1. pus, 2. suppuration. ವಾ: ಕುರ ಹಣ್ಣಾಗಿ ಒಡ್ದ್ ರೇಸಿ ಹೊರ್‌ಟರೆ ಸೆರಿ ಆದೆ, ಆಗ ಬೇನೆ ಇರ್‌ದುಲೆ.

ರೇಸ್ಮೆ /*re:smɛ*/ ನಾ. 1. ರೇಷ್ಮೆ, 2. ರೇಷ್ಮೆ ಹುಳುಗಳ ಗೂಡಿನ ನವುರಾದ ಎಳೆಗಳಿಂದ ಪಡೆಯಲಾದ ಪ್ರೋಟೀನ್ ನೂಲು. silk, fibre obtained from silkworm. ವಾ: ರೇಸ್ಮೆ ಹುಳಗಳ ಚಂದ್ರಿಕೆಲಿ ಬುಟ್ಟೊಳದ್.

ರೈಟ /*raiṭa*/ ನಾ. ತೋಟಗಳ ಮೇಲುಸ್ತುವಾರಿ ನೋಡಿಕೊಳ್ಳುವವ. a writer in farm, a manager. ವಾ: ತೋಟ ನೋಡಿಕಣಿಕೆ ರೈಟ ಉಟ್ಟು.

ರೈಲ್ /*railɨ*/ ಎಪ. 1. ಉಗಿಬಂಡಿ, 2. ರೈಲು. 1. a train, 2. a rail. **ರೈಲ್ ಹೋದ ಮೇಲೆ ಟಿಕೆಟ್ ತಕಂಬದು(ಗಾ). ರೈಲ್ ಬುಡ್ದು(ನು).** ವಾ: ರೈಲ್ ಹಳಿಗಳ ಮೇಲೆ ಹೋದು.

ರೈಲ್ ಬುಡ್ದು[1] /*railɨ buḍdu*/ ನಾ. 1. ಆಗದ ಹೋಗದ ಮಾತು, 2. ಬಡಾಯಿ ಕೊಚ್ಚುವುದು, 3. ಒಣ ಹೆಮ್ಮೆ. 1. boasting, 2. flattery, 3. false pride. ವಾ: ಅಂವ ಯಾಗೊಳು ರೈಲ್ ಬುಡ್ದು.

ರೈಲ್ ಬುಡ್ದು[2] /*railɨ buḍdu*/ ಕ್ರಿವಿ. 1. ಹುಸಿಯನ್ನು ಸತ್ಯದಂತೆ ಮಾತನಾಡುವುದು, 2. ತನಗೆ ಸಂಬಂಧಿಸದ ವಿಚಾರವನ್ನು ಮಾತನಾಡುವುದು. 1. to lie, 2. meddlesome. ವಾ: ಹೋಗಿ ಹೋಗಿ ಅಂವನ ಮಾತ್ ನಂಬಿಯೊಳಲ, ಅಂವ ಬರಿ ರೈಲ್ ಬುಡ್ದು.

ರೈಲ್ ಮಿಳ್ಳಿ /*railɨ miḷḷi*/ ಕ್ರಿವಿ. ಮದುವೆ ಸಮಾರಂಭದಲ್ಲಿ ಎಣ್ಣೆ ತೆಗೆದುಕೊಂಡು ಹೋಗಲು ಬಳಸುವ ವಸ್ತು. a small can in which oil is carried to a wedding ceremony. ವಾ: ಮೊದುವೆಲಿ ರೈಲ್ ಮಿಳ್ಳಿನ ಬಳ್ಸಿವೆ.

ರೈಸುದು /*raisudu*/ ಕ್ರಿ. 1. ಅತಿರೇಕದ ವರ್ತನೆ, 2. ತನ್ನನ್ನು ಎಲ್ಲರೂ ಗಮನಿಸಬೇಕೆಂಬ ವರ್ತನೆ, 3. ಹೊಸ ಹೊಸ ಬಟ್ಟೆ ಬರೆ, ಆಭರಣ ಗಳನ್ನು ಧರಿಸಿ ಮಿಂಚುವುದು. 1. uncontrolled extreme behaviour, 2. to invite attention of others, 3. showing off. ವಾ: ಆಗೂಡೆಗೆಲ್ಲ ಹೆಂಗೆ ರೈಸುದು ನೋಡ್ದನ?

ರೊಂಕ್‌ಣಿ[1] /*roŋkiṇi*/ ನಾ. ಹೆಣ್ಣು ಮಕ್ಕಳಿಗೆ ಬೈಯ್ಯುವ ಪದ. an expletive term used against women.

ರೊಕ್ಕ /*rokka*/ ನಾ. 1. ಹಣ, 2. ನಗದು, 3. ದುಡ್ಡು. money. **ರೊಕ್ಕ ಇಲ್ಲದ ಮೊನ್‌ಸ್ಯ ರೆಕ್ಕೆ ಇಲ್ಲದ ಹಕ್ಕಿನಂಗೆ(ಗಾ).** ವಾ: ರೊಕ್ಕ ತಕಂಡ್ ನಡ್ತ್.

ರೊಟ್ಟಿ /*roṭṭi*/ ನಾ. ಅಕ್ಕಿಹಿಟ್ಟು ಮತ್ತು ಅನ್ನವನ್ನು ಕಲಸಿ ಮಾಡುವ ತಿನಿಸು. a round flat bread made of rice flour, roti. **ರೊಟ್ಟಿ ಜಾರಿ ತುಪ್ಪಕ್ಕೆ ಬಿದ್ದಂಗೆ(ಗಾ). ಹತ್ತ್ ರೊಟ್ಟಿ, ಏಳ್ರೊಟ್ಟಿ, ಆರ್ರೊಟ್ಟಿ ಒಟ್ಟ್ ಎಸ್ಟ್ ರೊಟ್ಟಿ**

– **ಒಂದೇ ರೊಟ್ಟಿ(ಒ).** ವಾ: ಅಕ್ಕಿರೊಟ್ಟಿ ಪಲ್ಯಕೆ, ಗೈಪುಗೆ, ಪಜ್ಜಿಗೆ, ಗೊಜ್ಜಿಗೆ ಎಲ್ಲದಕ್ಕು ಬಾರಿ ಲಾಯ್ಕ ಅದರ್‌ಲು ರೊಟ್ಟಿನ ಕೆಂಡಲಿ ಕಾಸಿರೆ ಅದರ ಗಮ್ಮತ್ತೆ ಬೇರೆ.

ರೊಟ್ಟಿಕಾವ್‌ಲಿ /*roṭṭika:vɨli*/ ನಾ. 1. ರೊಟ್ಟಿ ಬೇಯಿಸುವ ಬಳಪದ ಕಲ್ಲಿನ ಕಾವಲಿ, 2. ಬೊಡ್ಡ್‌ರೊಟ್ಟಿ. a tawa/pan made of soapstone. ವಾ: ರೊಟ್ಟಿ ಕಾವ್‌ಲಿನ ತೊಳಿ.

ರೊಟ್ಟಿತಟ್ಟೆ /*roṭṭitaṭṭɛ*/ ನಾ. ರೊಟ್ಟಿ ಹದಮಾಡುವ ತಟ್ಟೆ. a flat board/plate on which dough for roti is prepared. ವಾ: ಹಿತ್ತಾಳೆದ್ ರೊಟ್ಟಿ ತಟ್ಟೆ ಹಿಡ್ಕಣಿಕಾದುಲೆ, ಬಾರಿ ಬಾರ ಇದ್ದದೆ, ಆದ್ರೆ ರೊಟ್ಟಿ ಕಲ್ಸಿಕೆ ಲಾಯ್ಕಾದೆ. ಪ: ರೊಟ್ಟಟ್ಟೆ

ರೊಟ್ಟಿಮರ್ಚಟೆ /*roṭṭimarcaṭɛ*/ ನಾ. 1. ರೊಟ್ಟಿಗೆ ಹಿಟ್ಟು ಹದಮಾಡು ಮರದ ಹಲಗೆ, 2. ಮರ್ಚಟೆ. a wooden board/plank on which dough for roti is preapared. ವಾ: ರೊಟ್ಟಿ ಮರ್ಚಟೆಲಿ ಅನ್ನಕೆ ಅಕ್ಕಿ ಹೊಡಿ ಹಾಕಿ ಕಲ್ಸುದು.

ರೊಟ್ಟಿಮೆತ್ತ್ /*roṭṭimettɨ*/ ನಾ. ರೊಟ್ಟಿ ತಟ್ಟು. to make roti. ವಾ: ಹಾಳೆ ಮೇಲೆ ಹಾಕಂಡ್ ನೀರ್ ಮುಟ್ಸಿಕಂಡ್ ಕಲ್ಸಿದ ಅನ್ನದ ಉಂಡೆ ತಕಂಡ್ ರೊಟ್ಟಿ ಮೆತ್ತ್.

ರೊಟ್ಟಿಪಚ್ಚೆ /*roṭṭipaccɛ*/ ನಾ. ರೊಟ್ಟಿ ಹಾಕುವ ತಟ್ಟೆ. a plate on which roti is kept. ವಾ: ರೊಟ್ಟಿನ ಕೆಂಡಲಿ ಕಾಸಿ ಚಿಬ್ಬುಲ್ ಮೇಲೆ ಹಾಕಿಸಿ ಮತ್ತೆ ರೊಟ್ಟಿ ಪಚ್ಚೆಗೆ ಹಾಕೊಕು, ಆಗ ರೊಟ್ಟಿ ಬೇಗ ಮೆತ್ತಂಗಾಲೆ.

ರೊವ್ಕೆ /*rovkɛ*/ ನಾ. 1. ರವಿಕೆ, 2. ಕುಪ್ಪಸ. a blouse. ವಾ: ಹೊಲೆಕೆ ಕೊಟ್ಟ ರೊವ್ಕೆ ತಕ.

ರೋಗ /*ro:ga*/ ನಾ. 1. ಕಾಯಿಲೆ, 2. ವ್ಯಾಧಿ, 3. ರೋಗ. 1. disease, 2, illness, 3. sickness. ವಾ: ರೋಗ ಮೊನ್ನಂಗೆ ಬರದೆ ಮರಕೆ ಬಂದದೆನ?

ರೋಗಂಟ /*ro:ganṭa*/ ನಾ. 1. ಕಾಯಿಲೆಯವನು, 2. ಕಾಯಿಲೆ ತಪ್ಪದವನು. 1. someone suffering from disease, 2. healthy. ವಾ: ಅಂವ ರೋಗ ಹಿಡ್ದಂವನಂಗೆ ಕಂಡದೆ.

ರೋಗದ್ /*ro:gadɨ*/ ನಾ. 1. ಕಾಯಿಲೆ ಇರುವ ವಸ್ತು, 2. ಬೈಗುಳ ಪದ. 1. an unwell, 2. an expletive. ವಾ: ರೋಗದ್ ಕೊತ್ತಿಗ ಉರಿಬಂದ್ ಸತ್ತವೆ, ಕದ್ದ್ ತಿಂಬೊದ್, ಜೆಗಳ ಮಾಡಿಕಂಬೊದ್ ಬೆರ್‌ಸಿ ಬೆರ್‌ಸಿ ಸಾಕಾದೆ.

ರೋಗಸ್ಟಿ /*ro:gasṭi*/ ನಾ. ಹೆಂಗಸರಿಗೆ ಬೈಯ್ಯುವ ಪದ. an expletive term used against women. ವಾ: ರೋಗಸ್ಟಿತ ಬೈಯ್ಯಬಡ.

ರೋಗಿಸ್ಟ /*ro:gisṭa*/ ನಾ. ಸದಾ ರೋಗಿಯಾಗಿರುವವನಿಗೆ ಹೇಳುವ ಮಾತು. someone who is sick/unwell all the time. ವಾ: ರೋಗಿಸ್ಟತ ಹೇಳ್ಬಡ, ಕೇಳಿರೆ ಜೇಜರ ಮಾಡಿಕಂಬೊದು ಕಾಯ್ಲನ ಯಾರಾರ್ ಬೇಕ್‌ತ ಮಾಡಿಕಂಡವೆನ?

ರೋಜಬಲ್ಲೆ /*ro:ja ballɛ*/ ನಾ. 1. ಒಂದು ರೀತಿಯ ಕಾಡು ಗಿಡ, 2. ಉಣ್ಣಿ ಗಿಡ, 3. ಲಂಟಾನ, 4. ಚದುರಂಗಿ ಗಿಡ/ಪೊದೆ. Lantana plant. ವಾ: ರೋಜ ಬಲ್ಲೆನ ಕಡೆಯಕಿತಲ, ಕಾಡ್ ನಂಗೆ ಬಂದುಟು.

ರೋಜುಕಾಯಿ /*ro:juka:yi*/ ನಾ. ಚದುರಂಗಿ ಪೊದೆ, ಗಿಡದಲ್ಲಿ ಬಿಡುವ ಹಸಿರು ಬಣ್ಣದ ಸಣ್ಣ ಸಣ್ಣ ಕಾಯಿಗಳು. fruit in a Lantana bush. ವಾ: ನಾವು ಸಣ್ಣದರ್‌ಲಿ ಆಡಿಕೆ ಹೋಕನ ರೋಜುಕಾಯಿ ತಿಂಬೊತಿದ್ದೊ.

ರೋಜುಬಲೆ /*ro:jubalɛ*/ ನಾ. 1. ಒಂದು ರೀತಿಯ ಕಾಡು ಗಿಡ, 2. ಉಣ್ಣಿ ಗಿಡ, 3. ಲಂಟಾನ, 4. ಚದುರಂಗಿ ಗಿಡ, 5. ಪೊದೆ. Lantana, an invasive weed. ವಾ: ರೋಜುಬಲೆ ಆಗ ಕಾಡ್ ದೈ, ಈಗ ಮನೆ ಮನೆಲಿ ಶೋ ದೈ, ಕಸಿ ಮಾಡಿ ಎಸ್ಟ್ ತರದ ಹೂವು ಆದೆ.

ರೋಟು /*ro:ṭu*/ ನಾ. ಎಪ. 1. ರೋಡು, 2. ರಸ್ತೆ, 3. ಮಾರ್ಗ. 1. road, 2. route, 3. path. ವಾ: ಮಳೆ ಬಂದ್ ರೋಟುಲಿ ಅಲ್ಲಲ್ಲಿ ಗುಂಡಿಗುಡ್ಡು ಹೆಚ್ಚಿ.

ರೋಡ್ /*ro:ḍɨ*/ ನಾ. ಎಪ. 1. ರೋಡು, 2. ರಸ್ತೆ, 3. ಮಾರ್ಗ. 1. road, 2. route, 3. path. **ನಮ್ಮವ್ವನ ಸೀರೆ ಎಷ್ಟ್ ಮಡ್ಚಿರು ತೀರುದೇಲೆ – ರೋಡ್(ಒ).** ವಾ: ರೋಡ್‌ಲಿ ಆಡಿಕಾಗದ್ ಮಕ್ಕಳೆ.

ರೋಮ /*rɨva:ga*/ ನಾ. ದೇಹದ ಮೇಲಿನ ಕೂದಲು. hair on one's body. **ಅಂವನ ರೋಮ**

ಅಲ್ಲಾಡ್‌ದಸ್ಟ್ ಸರೀರ ಅಲ್ಲಾಡ್ದುಲೆ(ಗಾ). ವಾ: ದಾರಿಲಿ ಬಾಕನ ಹಾವ್‌ನ ನೋಡಿ ಮೈ ಅಕ್ಕಿ ಹೊಡ್ದ್ ರೋಮಗೆಲ್ಲ ನೆಟ್ಟಂಗಾತ್.

ಲ

ಲಂಗ /*laŋga*/ ನಾ. ಸ್ತ್ರೀಯರ ಒಳ ವಸ್ತ್ರ. inner garments of women. ವಾ: ಲಂಗ ಕಟ್ಟಿ ಸೀರೆ ಉಡ್‌ದು, ಲಂಗನ ಕೇಸ್ಮೆಂಟ್ ಅರ್ವೆಲಿ ಹೊಲ್ಸಿರೆ ಬಾಳ್ಕೆ ಬಾದು.

ಲಂಗದಾವಣಿ /*laŋgada:vaṇi*/ ನಾ. 1. ಹೆಣ್ಣು ಮಕ್ಕಳು ಲಂಗದ ಮೇಲೆ ಧರಿಸುವ ಮೇಲು ಹೊದಿಕೆ, 2. ಲಂಗ ರವಿಕೆ. two-piece sari or half sari. ವಾ: ಗೂಡೆಗ ಲಂಗದಾವಣಿ ಹಾಕಿರೆ ಬಾರಿ ಲಕ್ಷಣ ಕಂಡವೆ.

ಲಂಗರ್ /*laŋgarɨ*/ ನಾ. 1. ಬಂದರಿನಲ್ಲಿ ಹಡಗನ್ನು ನಿಲ್ಲಿಸುವಾಗ ನೀರಿನಲ್ಲಿ ಇಳಿಬಿಡುವ ಭಾರವಾದ ಕಬ್ಬಿಣದ ಸಲಕರಣೆ, 2. ಗುಂಡು ಮತ್ತು ಸರಪಳಿ. 1. anchor, a metal object dropped from the boat/ship to prevent the movement of a boat/ship, 2. an anchor. **ಲಂಗರ್ ಹಾಕಿದ ಹಡ್ಗ್‌ನಂಗೆ(ಗಾ).** ವಾ: ಸಂದ್ರಕೆ ಲಂಗರ್ ಹಾಕಿದೊ.

ಲಂಬು /*lambu*/ ನಾವಿ. ಎತ್ತರವಾಗಿರುವವನು. a tall person. ವಾ: ಆ ಹೈದ ಬಾರಿ ಲಂಬು.

ಲಕಲಕ /*lakalaka*/ ಅ. 1. ಮಿನುಗು, 2. ಪ್ರಕಾಶಿಸು. 1. to shine, 2. radiance. ವಾ: ಚಿನ್ನದ ಚೈನ್ ಲಕಲಕತ ಹೊಳ್ದೆ.

ಲಕುಮಿ /*lakumi*/ ನಾ. ಲಕ್ಷ್ಮಿ. godess Lakshmi. ವಾ: ಸುಕ್ರವಾರ ಲಕುಮಿಗೆ ಪೂಜೆ ಮಾಡಿವೆ. ಪ: ಲಚ್ಚಿಮಿ(ತು)

ಲಕೋಟೆ /*lako:ṭɛ*/ ನಾ. 1. ಪತ್ರವನ್ನು ಇಟ್ಟು (ಅಂಟಿಸಿ) ಕಳುಹಿಸುವ ಕಾಗದದ ಸಣ್ಣ ಚೀಲ, ಸಣ್ಣ ಕವರು, 2. ಮುಚ್ಚಿದ ಅಥವಾ ಮೊಹರು ಮಾಡಿದ ಪತ್ರ. 1. envelop, 2. a sealed letter. ವಾ: ಲಕೋಟೆ ತೆಗ್ದ್ ನೋಡೊಮ್ಮೆ ಎಂತತ?

ಲಕ್ಕಂಡ್ರ /*lakkaṇḍra*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಲಕ್ಕಪ್ಪ /*lakkappa*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. masculine given name.

ಲಕ್ಕಪ್ಪನವರು /*lakkappanavaru*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಲಕ್ಸ /*laksa*/ ನಾ. 1. ಲಕ್ಷ, 2. ನೂರು ಸಾವಿರ. 1. one lakh, 2. one hundred thousand. ವಾ: ಲಕ್ಸ ಲಕ್ಸ ದುಡ್ಡಿದ್ರು ನೆಮ್ಮದಿ ಇಲ್ಲರೆ ಎಂತ ಪ್ರೇಜನ, ಅಲ್ಲಿ ಲಕ್ಸ ಜೆನ ಸೆರಿದ್ದೊ.

ಲಕ್ಷಣ /*lakṣaṇa*/ ನಾ. 1. ಚಿಹ್ನೆ, 2. ವಿಶಿಷ್ಟವಾದ ಗುರುತು, 3. ಪೀಳಿಗೆಯಿಂದ ಪೀಳಿಗೆಗೆ ಅನುವಂಶಿಕವಾಗಿ ಹರಿಯುವ ಮತ್ತು ಸ್ಪಷ್ಟವಾಗಿ ಗುರುತಿಸಲಾಗುವ ಗುಣ ವಿಶೇಷ, 4. ವಿಶಿಷ್ಟವಾದ ಗುಣ, 5. ಶುಭಚಿಹ್ನೆ, 6. ಚೆಲುವು. 1. a mark, 2. a special mark, 3. inherited quality, 4. special quality, 5. good sign, 6. beauty. ವಾ: ಮೋರೆದ ಲಕ್ಷಣ ನೋಡಿ ಹೇಳಿವೆಗಡ, ಗೂಡೆ ಬಾರಿ ಲಕ್ಷಣ ಉಟ್ಟು.

ಲಕ್ಸ್ಮಣ ಪಲ /*laksɨmaṇa pala*/ ನಾ. ಲಕ್ಷ್ಮಣ ಫಲ.

soursop fruit. ವಾ: ಲಕ್ಸ್ಮಣ ಪಲ ಬಾರಿ ಒಳ್ಳೆ ಹಣ್ಣ್, ಹಣ್ಣ್ ಕ್ಯಾನ್ಸರ್, ಸಕ್ರೆ ಕಾಯ್ಲ ಹಿಂಗೆ ಸುಮಾರ್ ಕಾಯ್ಲಗಳಿಗೆ ಒಳ್ಳೆದುಟ್ಟು, ಹಣ್ಣ್ ಸ ಹುಳಿ, ಸೀಂಯಾಗಿ ತಿಂಬಕೆ ಬಾರಿ ಕುಸಿಯಾದೆ, ಲಕ್ಸ್ಮಣ ಪಲದ ಎಲೆಲಿ ಸನ ಟೀ ಮಾಡಿ ಕುಡ್ಯಕ್, ಬಾರಿ ಒಳ್ಳೆದ್‌ಗಡ.

ಲಕ್ಸ್ಮಿ ಚೋಳ್ /*lakṣmi co:ḷi*/ ನಾ. 1. ಲಕ್ಷ್ಮೀ ಚೇಳು, 2. ಚೇಳ್. Centipede. ವಾ: ಲಕ್ಷ್ಮಿ ಚೋಳ್‌ಗೆ ವಿಸ ಉಟ್ಟು.

ಲಗಾಡಿ /*laga:ḍi*/ ಕ್ರಿವಿ. ಎಪ. ಸಂಪೂರ್ಣ ಹಾಳಾಗು. to spoil completely. ವಾ: ಹೈದ ತಿರ್‌ಗಿ ತಿರ್‌ಗಿ ಲಗಾಡಿ ಆಗೋತ್, ಅಂವಂಗೆ ವಾಹನ ಕೊಟ್ರೆ ಲಗಾಡಿ ಆಗದೆ ಇದ್ದದೆನ.

ಲಗಾಯಿತ್ /*laga:yitɨ*/ ಅ. ಎಪ. 1. ಪ್ರಾರಂಭದಿಂದ, 2. ಮೊದಲಿಂದ, 3. ಪ್ರಾರಂಭದಿಂದ ಕೊನೆ ವರೆಗೆ. 4. ಲಾಗಾಯತು/ಲಾಗಾಯ್ತು. 1. from the beginning, 2. from the first, 3. from the beginning to the end. ವಾ: ವರ್‌ಸದ ಲಗಾಯಿತ್‌ಂದ ಮಳೆ ಸುರಾವ್ಟು.

ಲಗಾಯಿಸು[1] /*laga:yisu*/ ಕ್ರಿ. ಎಪ. 1. ಹೊಡೆ, 2. ಬಾರಿಸು, 3. ಲಗಾಯಿಸು, 4. ಮಾತಿನ ಪೆಟ್ಟು. to eat to one's fill. ವಾ: ದಾರ್ಮಕ್ಕೆ ಸಿಕ್ಕಿತ್‌ಂತ ಸೆರಿ ಲಗಾಯ್ಸಿತ್.

ಲಗಾಯಿಸು[2] /*laga:yisu*/ ಕ್ರಿ. ಎಪ. ಸಂಭೋಗ ಮಾಡು. to have sexual intercourse. ಪ: ಜಂಬರ ಮಾಡ್

ಲಗಾವು /*laga:vu*/ ಕ್ರಿ. ಎಪ. ಸಂಬಂಧಪಡು. to be related.

ಲಗಾಸ್ /*laga:sɨ*/ ಕ್ರಿ. ಎಪ. 1. ಹೊಡಿ, 2. ಬಡಿ. 1. to beat, 2. to thrash. ವಾ: ಅವ್ನೆ ಸೆರಿ ಲಗಾಸ್.

ಲಗೋರಿ /*lago:ri*/ ನಾ. ಏಳು ಕಲ್ಲು ಚಪ್ಪಡಿಯನ್ನು ಒಂದರ ಮೇಲೊಂದು ನಿಲ್ಲಿಸಿ, ನಿಶ್ಚಿತ ದೂರದಿಂದ ಚೆಂಡಿನಿಂದ ಹೊಡೆದು ಬೀಳಿಸುವ ಆಟ, ಇದನ್ನು ಎರಡು ಗುಂಪಾಗಿ ಸ್ಪರ್ಧೆಯಾಗಿ ಆಡುತ್ತಾರೆ, ಇದಕ್ಕೆ ಲಗೋರಿ ಆಟವೆಂದು ಕರೆಯುತ್ತಾರೆ. lagori, a team game, played with seven flat stones and a ball. ವಾ: ಹಿಂದೆನ ಕಾಲದ ಆಟಗಳೆ ಲಾಯ್ಕಿತ್ತ್, ಇಸ್ಕೂಲ್‌ಲಿ ಆಡಿಕೆ ಬುಟ್ಟರೆ ಓಡಿ ಹೋಗಿ ಲಗೋರಿ ಆಡ್ತಿದ್ದೊ, ಅದೆಲ್ಲ ಈಗ ನೆಂಪು ಅಸ್ಟೆ.

ಲಗ್ತಿ /*lagti*/ ಕ್ರಿ. 1. ಹತ್ತಿರದಲ್ಲೇ ಇರು, 2. ತಾಗಿಕೊಂಡು, 3. ಲಗತ್ತಿಸು. 1. to be near, 2. to be in close proximity, 3. to attach. ವಾ: ಆ ಬೂಮಿ ನಮ್ಮ ಬೂಮಿಗೆ ಲಗ್ತಿ, ನನ್ನ ಅರ್ಜಿ ಒಟ್ಟಿಗೆ ಲಗೀಕರಿಸೊಳೆ.

ಲಗ್ನ /*lagna*/ ನಾ. 1. ಮದುವೆ, 2. ಶುಭಕೆಲಸವನ್ನು ಮಾಡಲು ಮಂಗಳಕರವೆಂದು ಗೊತ್ತುಪಡಿಸುವ ಗಳಿಗೆ. 1. wedding, 2. an auspicious time/ period. ವಾ: ಲಗ್ನ ನೋಡ್ಸಿದರಿಯ?

ಲಗ್ನವೀಳ್ಯ /*lagnavi:ḷya*/ ನಾ. 5 ಕವಳಿಗೆ ಎಲೆ 5 ಅಡಿಕೆಯನ್ನು ಹರಿವಾಣದಲ್ಲಿ ಕಡೆ ಕೊಡಿ ಇಟ್ಟು ಗಂಡು-ಹೆಣ್ಣಿನ ಕಡೆಯವರು ಹಂಚಿಕೊಳ್ಳುವರು, ಇದರಲ್ಲಿ 5 ಎಲೆ ಒಂದು ಅಡಿಕೆಯನ್ನು ಎರಡೂ ಕಡೆಯವರು ತೆಗೆದು ಹೆಣ್ಣಿಗೆ ಮತ್ತು ಗಂಡಿಗೆ ಪೂರ್ತಿ ತಿನ್ನಲು ನಿರ್ದೇಶಿಸುವರು, ಇಲ್ಲಿಂದ ಗಂಡು-ಹೆಣ್ಣಿಗೆ ವೀಳ್ಯ ಹಾಕಲು ಹಿರಿಯರು ಅನುಮತಿ ನೀಡುವರು. Lagna Veelya, a betrothal ceremony in which 5 bunches of betel leaf and 5 pieces of areca nut are kept on a platter to be exchanged between the relatives of the prospective bride and the groom. As a mark of formal engagement, 5 betel leaves and an areca. ವಾ: ಹೈದ ಗೂಡೆನ ಕಡೆವು ಲಗ್ನ ವೀಳ್ಯನ ಹಂಚಿಕಂಬದು.

ಲಗ್ನಕುರಿವೀಳ್ಯ /*lagnakurivi:ḷya*/ ನಾ. 5 ಕವಳಿಗೆ ವೀಳ್ಯದೆಲೆ, 5 ಅಡಿಕೆಯೊಂದಿಗೆ ಲಗ್ನಪತ್ರಿಕೆ ಇಟ್ಟು ಒಕ್ಕಣೆ ಹೇಳಿ ಬದಲಾಯಿಸಿಕೊಳ್ಳುವ ವೀಳ್ಯ. a custom of exchanging 5 bunches of betel leaf, 5 pieces of areca nut, and the wedding invitation card after the ritual invocation. ವಾ: ಲಗ್ನಕುರಿ ವೀಳ್ಯ ಕೇಳಿಕಂಬದು.

ಲಚ್ಚಿಮಿ /*laccimi*/ ನಾ. ಲಕ್ಷ್ಮೀ. godess Lakshmi. ವಾ: ಆ ಗೂಡೆನ ಹೆಸ್‌ರ್ ಲಚ್ಚಿಮಿತ ಕಂಡದೆ.

ಲಟಕ್ /*laṭaki*/ ನಾ. ಎಪ. ಏನಾದರು ವಸ್ತು ಮುರಿಯುವಾಗ ಬರುವ ಸದ್ದಿಗೆ ಹೇಳುವ ಪದ. an onomatopoeiac expression for the sound

produced while breaking something. ವಾ: ಆನೆ ಮರನ ಲಟಕ್‌ತ ಮುರ್‌ದಾಂಗಾತ್.

ಲಟಪಟ[1] /*laṭapaṭa*/ ಅ. ಏನಾದರು ಸದ್ದಾಗುವಾಗ ಕೇಳುವ ಅನುಕರಣ ಅವ್ಯಯ ಪದ (ಮರ ಅಥವಾ ಮೂಳೆ ಮುರಿಯುವ ಸದ್ದು). an onomatopoeiac expression. ವಾ: ಗಾಳಿ ಬಿಸಿಕನ ಲಟಪಟಂತ ಗೆಲ್ಲ್ ಮುರ್‌ದಾಂಗೆ ಆತ್. ಪ: ತಟಪಟ

ಲಟಪಟ[2] /*laṭapaṭa*/ ಅ. 1. ಜವಾಬ್ದಾರಿ ಇಲ್ಲದ, 2. ಏನೂ ಕೆಲಸವಿಲ್ಲ, 3. ಸೋಮಾರಿ. 1. irresponsible, 2. jobless, 3. lazy. ವಾ: ಅಂವ ಜನ ಬರೆ ಲಟಪಟ.

ಲಟಲಟ /*laṭalaṭa*/ ಅ. ಮರ ಮುರಿವ ಸದ್ದು. an onomatopoeia, sound of tree cracking.

ಲಟಾಪಟಿ /*laṭa:paṭi*/ ನಾ. 1. ಮಾರಾಮಾರಿ, 2. ಬಡಿದಾಟ, 3. ಪರಸ್ಪರ ನಡೆಯುವ ತೀವ್ರ ಹೊಡೆದಾಟ, 3. ಜಟಾಪಟಿ. 1. a fight, 2. a scuffle, 3. a clash, 4. josstle. ವಾ: ಹೊರೆಗೆ ಲಟಾಪಟಿ ಸುರಾವ್ತು. ಪ: ಜಟಾಪಟಿ

ಲಟ್ಟಾಸ್ /*laṭṭa:sɨ*/ ನಾ. ಎಪ. 1. ಹಾಳಾದ, 2. ಕೊಳೆತ. 1. spoiled, 2. rotten. ವಾ: ಆ ಮರ ಕುಂಬುಲಟ್ಟಾಸ್.

ಲಡಬಡ /*laḍabaḍa*/ ಅ. ಗಡಿಬಿಡಿಯಿಂದ ಮಾಡುವ ಕೆಲಸ. to work in hurry. ವಾ: ಲಡಬಡ ಕೆಲ್‌ಸ ಸರಿಯಾದ್ಲೆ. ಪ: ದಡಬಡ

ಲಡಾಯಿ /*laḍa:yi*/ ನಾ. 1. ಜಗಳ, 2. ಹೋರಾಟ. 1. a fight, 2. battle. ವಾ: ಲಡಾಯಿ ಸುರಾತ್, ಇನ್ನ್ ರಾತ್ರೆ ನಮಿಗೆ ನಿದ್ದೆ ಇಲ್ಲೆ.

ಲಡ್ಕಾಸ್ ಬಸ್ /*laḍka:sɨ basɨ*/ ನಾ. ಎಪ. ಗುಜರಿ ಬಸ್ಸ್. a scrapped bus. ವಾ: ಲಡ್ಕಾಸ್ ಬಸ್‌ಲಿ ಬಂದ್ ಮೈಕೈಯೆಲ್ಲ ಬೇನೆ.

ಲಡ್ಡಿ /*laḍḍi*/ ನಾ. 1. ಆನೆಯ ಲದ್ದಿ, 2. ಸೆಗಣಿ, 3. ಕಕ್ಕಸ್. 1. elephant dung, 2. dung, 3. feces. ವಾ: ತೋಟದ ದಾರಿ ಕರೆಲಿ ಆನೆ ಲಡ್ಡಿನ ಕಂಡೊ. ಪ: ಆನೆಲದ್ದಿ

ಲಡ್ಡಿ ಎತ್ತಿಕೆ /*laḍḍi'ettikɛ*/ ನಾ. 1. ಸೆಗಣಿ ತೆಗೆಯುವುದು, 2. ಏನೂ ಪ್ರಯೋಜನಕ್ಕೆ ಬಾರದವರಿಗೆ ಲಡ್ಡಿ ಎತ್ತಲು ಹೋಗೆಂಬ ಬೈಗುಳ ಪದ. 1. to remove cow dung, 2. an abusive term used against a useless person. ವಾ: ಓದದಿದ್ದರೆ ಲಡ್ಡಿ ಎತ್ತಿಕೆ ಹೋಕು ಅಸ್ಟೆ. ಪ: ಬೆಜೆಂಟ್ ಹೆರ್ಕ್ – ಒಣಗಿದ ಬೆರಣಿ ಹೆಕ್ಕು

ಲದ್ದಿ /*laddi*/ ನಾ. 1. ಕುದುರೆ, ಆನೆ ಮುಂತಾದ ಪ್ರಾಣಿಗಳ ಮಲ, 2. ಕಕ್ಕಸ್. feces of horse, elephant, etc. **ಆನೆ ಲದ್ದಿ ಹಾಕಿದೆತೇಳ್ರೆ ಆಡ್ ಲದ್ದಿ ಹಾಕಿದ್ಯಾ(ಗಾ).** ವಾ: ನಿನ್ನ ಸುಟ್ಟ ತಲೆಲಿ ಎಂತ ಲದ್ದಿ ಇರ್‌ದ.

ಲವಂಗ /*lavaŋga*/ ನಾ. 1. ಸುವಾಸನೆಯುಳ್ಳ ಒಂದು ಬಗೆಯ ಸಂಬಾರ ಪದಾರ್ಥ, 2. ದೇವಕುಸುಮ. cloves. **ಒಂದ್ ಕಂಬಕೆ ನಾಲ್ಕ್ ಕೆಮಿ – ಲವಂಗ(ಒ).** ವಾ: ಲವಂಗ ಹಲ್ಲ್ ಬೇನೆಗೆ ಒಳ್ಳ ಮೊದ್ದ್.

ಲಾಂಬು[1] /*la:mbu*/ ನಾ. 1. ಎತ್ತರ, 2. ಲಂಬು. 1. height, 2. high. ವಾ: ಅಂವ ಲಾಂಬುನಾಂಗೆ ಬೆಳ್ದುಟು.

ಲಾಂಬು[2] /*la:mbu*/ ನಾ. 1. ಗುಂಪು, 2. ಸಮೂಹ. 1. a group, 2. a crowd. ವಾ: ಲಾಂಬು ಹೆಚ್ಚಿ ಇರೊ ಕಡೆ ಹೋಕಾದ್.

ಲಾಕಿ /*la:ki*/ ನಾ. 1. ಮೊಟ್ಟೆ ಹಾಕದ ಕೋಳಿ, 2. ಇನ್ನು ಸಾಕಷ್ಟು ಬಲಿಯದ ಕೋಳಿ. a hen which has not hatched eggs yet. ವಾ: ಲಾಕಿಗಳ ಬಲ್ಜಿಲಿ ಮುಚ್ಚಿ ಹಾಕಕಾಯ್ತ್.

ಲಾಕಿಟ್ /*la:kiṭi*/ ನಾ. 1. ಹಾರದಲ್ಲಿ ಧರಿಸುವ ಚಿನ್ನ ಅಥವಾ ಬೆಳ್ಳಿಯ ಪದಕ, 2. ಲಾಕೆಟ್ಟು. a locket made of either gold or silver. ವಾ: ಲಾಕಿಟ್ ವಳೆಗೆ ಯಾರ ಪಟ ಇರ್‌ದು.

ಲಾಗ /*la:ga*/ ಕ್ರಿ. 1. ಪಲ್ಟಿಹೊಡಿ, 2. ಲಾಗಹಾಕು, 3. ತಲೆಕೆಳಗೆ, 4. ಸೋಲು, 5. ವಿಫಲವಾಗು. 1. to somersault, 2. somersault, 3. head upside down, 4. to fail, 4. to not succeed. **ಜಾಗ ನೋಡಿ ಲಾಗ ಹಾಕ್(ಗಾ).** ವಾ: ನೆಲಲಿ ಲಾಗ ಹಾಕ್.

ಲಾಗ್ಯಾತ್ /*la:gya:tɨ*/ ನಾ. 1. ಹಿಂದಿನಿಂದ, 2. ಮೊದಲಿಂದ, 3. ಅಂದಿನಿಂದ. 1. behind, 2. from the beginning, 3. from then. ವಾ: ಸ್ವಾತಂತ್ರ್ಯ ಸಿಕ್ಕಿದ ಲಾಗ್ಯಾತ್.

ಲಾಚಾರ್[1] /*la:ca:rɨ*/ ನಾ. 1. ಸಣಕಲು, 2. ಅಸಹಾಯಕ, 3. ಬಲಹೀನ. 1. a lean, 2. helpless,

3. a weak. **ಅಕ್ಕಿ ಕರ್ಚಾಕಾಗದ್, ಅಕ್ಕನ ಮಕ್ಕ ಲಾಚಾರಾಕಾಗದ್(ಗಾ).** ವಾ: ನಾಯಿ ಲಾಚರ್ ಆಗಿ ನೋಡಿಕಾಲೆ, ಸಾಯಕಾಕಂಡುಟ್ಟು, ಕೊತ್ತಿ ಈ ಮಾದ್ರಿ ಹಾಲ್, ತುಪ್ಪಕೆನೆ ಹಾಕಿದ ಅನ್ನ ತಿಂದದೆ, ಆದ್ರು ಲಾಚಾರ್ ಆಕಂಡ್ ಬಂದೆ.

ಲಾಚಾರ್[2] /*la:ca:rɨ*/ ನಾ. 1. ಸತ್ತ್ವಹೀನವಾದ, 2. ದುರ್ಬಲವಾದ, 3. ಪೀಂಚೆಲ್. 1. essenceless 2. weak, 3. useless. **ಲಾಚಾರ್ ಗಂಡಂಗೆ ಪೀಂಚೇಲ್ ಹೆಣ್ಣ್(ಗಾ).** ವಾ: ಎಂತಕೆನೆ ಹಿಂಗೆ ಸಾಯಕೆ ಬಿದ್ದವ್ನಂಗೆ ಲಾಚಾರಾಗೊಳ?

ಲಾಟೀನ್ /*la:ṭi:nɨ*/ ನಾ. 1. ಕಂದೀಲು, 2. ಲಾಂದ್ರ. 1. a lamp, 2. a torch. ವಾ: ಕತ್ತಲೆಲಿ ಹೊರೆಗೆ ಹೋಕನ ಲಾಟೀನ್ ಹಿಡ್ಕ.

ಲಾಟ್‌ಬುಡ್ಡು /*la:ṭibuḍḍu*/ ನಾ. 1. ಉಪಯೋಗಕ್ಕೆ ಬಾರದ ಮಾತು, 2. ರೈಲ್ ಬುಡ್ಡು. 1. useless converstation, 2. to lie. ವಾ: ಅಂವನ ಮಾತ್ ಕೇಳಿರೆ ಗೊತ್ತಾಲೆನ ಬರಿ ಲಾಟ್ ಬುಡ್ತುತ.

ಲಾಟ್ನ /*la:ṭna*/ ನಾ. ಲಾಂದ್ರ. a lamp. ವಾ: ರಾತ್ರೆ ಲಾಟ್ನ ಹಿಡ್ಕಂಡ್ ಓಡಾಡ್ಡು.

ಲಾಟ್‌ಪೋಟ್ /*la:ṭipo:ṭi*/ ನಾ. 1. ಪ್ರಯೋಜನಕ್ಕೆ ಬಾರದವ, 2. ಉಪಯೋಗಕ್ಕೆ ಬಾರದವ, 3. ಕೆಲಸಕ್ಕೆ ಬಾರದವ, 4. ಲೊಟ್ಟೆ. 1. a useless person, 2. a worthless person, 3. incompetent, 3. inept. ವಾ: ಬರಿ ಲಾಟ್‌ಪೋಟ್ ಜೆನ. ಬಾಯಿಲೆ ಬೊರಿ, ಕೈಲಿ ಎಂತ ಇಲ್ಲೆ. ಸುಮ್ಮನಾರ್ ತಿರ್‌ಗಿಕಂಡಿರ್‌ದು. ಪ: ಲಾಯ್‌ಲೋಟ್(ತು)

ಲಾಡಿ /*la:ḍi*/ ನಾ. 1. ಬಟ್ಟೆಯ ನೀಳಪಟ್ಟಿ, 2. ದಾರ. 1. a string, 2. thread. **ಲಾಡಿ ಕಟ್ಟಿಕೆ ಗೊತ್ತ್‌ಲೆ, ಲೇವಡಿ ಮಾಡ್ದೆ(ಗಾ).** ವಾ: ಲಾಡಿ ಕಟ್ಟಿಕ.

ಲಾಡಿಬೊಳ್ಳಿ /*la:ḍibɔḷḷi*/ ನಾ. ಲಂಗ, ಚಡ್ಡಿ ಇತ್ಯಾದಿಗಳನ್ನು ಸೊಂಟದಲ್ಲಿ ನಿಲ್ಲುವಂತೆ ಕಟ್ಟಿಕೊಳ್ಳುವ ದಾರ. a string to tie skirt, shorts, etc. ವಾ: ಲಂಗಕೆ ಲಾಡಿಬೊಳ್ಳಿ ಹಾಕೊಕು.

ಲಾಡಿಹುಳ್ /*la:ḍʿihuḷɨ*/ ನಾ. 1. ಲಾಡಿ ಹುಳು, 2. ತೆಳುವಾಗಿ ಉದ್ದಕ್ಕೆ ಲಾಡಿಯಾಕಾರವಾಗಿರುವ ಒಂದು ಹುಳು. a tape worm. ವಾ: ಆರ್ ತಿಂಗಳಿಗೊಮ್ಮೆ ಲಾಡಿಹುಳ್‌ಗೆ ಮೊದ್ದ್ ತಕಣೊಕು.

ಲಾತ್‌ಕಾಳ್ /*la:tɨka:ḷɨ*/ ನಾ. 1. ಹುರುಳಿಕಾಯಿ ಕಾಳು, 2. ಬೀನ್ಸ್ ಕಾಳು. seeds of french beans. ವಾ: ಲಾತ್ಕಾಳ್, ಇಲಾತ್ ಗೆಂಡೆ,ವಣ್ಗ್ ಲ್ ಮೀನ್ ಹಾಕಿ ಗೈಪು ಮಾಡಿ,ಅಕ್ಕಿ ರೊಟ್ಟಿ ಮಾಡಿ ತಿಂಬಕೆ ಕುದ್ದರೆ ಏಳಿಕೆ ಮನ್ಸ್ ಇರ್‌ದುಲೆ, ರೊಟ್ಟಿ ತಿಂದ್ ಕಂಡೆ ಬಾಕಿಯಾದವೆ. ಪ: ಇಲಾತಿ ಚಟ್ಟ್(ತು)

ಲಾತ್ಗೆಂಡೆ /*la:tgeṇḍɛ*/ ನಾ. ಆಲುಗೆಡ್ಡೆ. potato. ವಾ: ಲಾತ್ಗೆಂಡೆನ ತೊಪ್ಪೆ ಸಮೇತ ಹಾಕಿ ಗೈಪು ಮಾಡಿರೆ ಗ್ಯಾಸ್ ಆದುಲೆಗಡ.

ಲಾತ್‌ಬಾಳ್ /*la:tɨba:ḷɨ*/ ನಾ. ಬೀನ್ಸ್. french beans. ವಾ: ಲಾತ್ ಬಾಳ್‌ಲಿ ಎರ್‌ಡ್ ತರದ್ ಉಟ್ಟು, ದೈದ್ ಮತ್ತೆ ಹಬ್ಬುದು.

ಲಾಬ[1] /*la:ba*/ ನಾ. 1. ಪ್ರಯೋಜನ, 2. ಗಳಿಕೆ, 3. ಪ್ರಾಪ್ತಿ, 4. ದೊರಕುವಿಕೆ, 5. ಖರ್ಚು ಕಳೆದು ಬರುವ ಗಳಿಕೆ. 1. usefulnes, 2. earning, 3. earned, 4. availability, 5. profit. ವಾ: ಲಾಬ ಇಲ್ಲದೆ ಕೆಲ್ಸ ಮಾಡಿವೆನ? ಪ: ಲಾಬಕೆ – ಲಾಬಕ್ಕೆ

ಲಾಬ[2] /*la:ba*/ ನಾ. ವ್ಯಾಪಾರದಲ್ಲಿ ಬರುವ ಲಾಭ. profit. **ಲಾಬ ಇಲ್ಲದೆ ಅಂವ ಬೊಳ್ಳಲಿ ಹೋಕಿಲೆ(ಗಾ).** ವಾ: ಇಂದ್ ಬಾರಿ ಲಾಬ ಆತ್.

ಲಾಯಿಕ /*la:yika*/ ನಾ. 1. ಚಂದ, 2. ಉತ್ತಮ, 3. ಚೆನ್ನಾಗಿ, 4. ಸರಿಯಾದ. 1. beautiful, 2. excellent, 3. good, 4. correct. **ಕತ್ತೆ ಮೊರಿಲಿ ಲಾಯಿಕ, ಅತ್ತೆ ಹೊಸದರ್ಲಿ ಲಾಯಿಕ(ಗಾ).** ವಾ: ಎಲ್ಲೊವು ಕುಸಿಲಿ ಲಾಯಿಕಲಿ ಇರಿ. ಪ: ಲಾಯ್ಕ್(ತು); ಲಾಯಿಕಾತ್ – ಚೆನ್ನಾಗಿ ಬಂತು; ಲಾಯ್ಕ ಮಾತಾಡೊಕು – ಚೆನ್ನಾಗಿ ಮಾತನಾಡಬೇಕು;

ಲಾಯಿಕಾತ್ಲೆ /*la:yika:tlɛ*/ ನಾ. 1. ಒಳ್ಳೆಯದಾಯಿತು, 2. ಉತ್ತಮವಾಯಿತು, 3. ಸರಿಯಾಯಿತು. to mean, something was good/correct/perfect/ satisfied to one's expectations. ವಾ: ಜಂಪರ್ ಹೊಲ್ದದ್ ಲಾಯಿಕಾತ.

ಲಾಯಿಕಿತ್ತ್ /*la:yikitti*/ ನಾ. 1. ಚೆನ್ನಾಗಿತ್ತು, 2. ಸರಿ ಇತ್ತು. 1. it was good, 2. it was correct. ವಾ: ಹಿಂದೆನ ಕಾಲದ ಬೊದ್ಕೆ ಲಾಯಿಕಿತ್ತ್.

ಲಾಯಿಕ್ /*la:yikɨ*/ ನಾ. 1. ಚೆನ್ನಾಗಿ, 2. ಒಳ್ಳೆಯ. 1. excellent, 2. good. **ಕಾಡ್ ಕೆಸಕ್ಕೆ ಮಣ್ಣ್ ಕೂಡಿಕೂ**

ಲಾಯಕಿಲ್ಲದಂವ(ಗಾ). ವಾ: ಗೂಡೆ ಲಾಯಿಕ್ ಮಾತಾಡ್ವೆ, ಹಣ್ಣನು ಹಾಂಕರಿಲ್ಲೆ.

ಲಾಯ್ಕ್ /*la:yki*/ ನಾ. ಚಂದ. excellence. **ದೊಡ್ಡವರ ಮಾತ್ ಲಾಯ್ಕ ಬಡವಂನ ಊಟ ಲಾಯ್ಕ್(ಗಾ).** ವಾ: ಅಂವರ ಮಾತ್ ಲಾಯ್ಕ್

ಲಾಲಿ /*la:li*/ ನಾ. 1. ಜೋಗುಳ, 2. ಚಿಕ್ಕ ಮಕ್ಕಳನ್ನು ಮಲಗಿಸುವಾಗ ಹಾಡುವ ಹಾಡು. 1. lullaby, 2. a cradle song. ವಾ: ಕೂಸುನ ಲಾಲಿ ಹಾಡಿ ಮೊಲ್ಸುಸುದು.

ಲಾವಂತಡ್ಕ /*la:vantaḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಐವರ್ನಾಡು ಗ್ರಾಮದ ಜಾಗ. a locality in Aivarnadu village in Sullia Taluk of Dakshina Kannada District.

ಲಾಸ್ /*la:si*/ ನಾ. ಎಪ. 1. ನಷ್ಟ, 2. ಹಾನಿ, 3. ಕಳೆದುಕೊಳ್ಳುವುದು. 1. loss, 2. harm, 3. losing. ವಾ: ನಂಗೆ ಯಾಪಾರಲಿ ಬಾರಿ ಲಾಸ್ ಆಗೊತ್.

ಲಾಳ /*la:ḷa*/ ನಾ. ಕುದುರೆ ಅಥವಾ ಎತ್ತಿನ ಕಾಲುಗಳ ಗೊರಸಿಗೆ ಅಥವಾ ಬೂಟ್ ಗಳ ತಳಕ್ಕೆ ಹಾಕುವ ಕಬ್ಬಿಣದ ಪಟ್ಟಿ. horse shoe. ವಾ: ಗಾಡಿ ಎತ್ತ್ ಗಳ ಕವಣೆ ಸಮ್ದದೆತ ಅದರ ಅಡಿಗೆ ಲಾಳ ಹೊಡೆದು. ಹಂಗೆ ಬಳ್ಸಿದ ಕವಣೆ ಬಿದ್ದ್ ಸಿಕ್ಕಿರೆ ಅದ್ ನ ತಂದ್ ಕಾಸಿ ಸಣ್ಣ ಕೂಸುನ ಮೀಸಿಕನ ಆ ನೀರಿಗೆ ಹಾಕಿ ಮೀಸುದುಗಡ ಒಳ್ಳದಾದೆತ.

ಲಿ /*li*/ ವಿಪ್ರ. ಅರೆಭಾಷೆಯ ಸಪ್ತಮಿ ಪ್ರತ್ಯಯ. ಹೊಸಗನ್ನಡದ 'ಅಲ್ಲಿ', ಹಳಗನ್ನಡದ 'ಒಳ್' ಪ್ರತ್ಯಯಾರ್ಥ. li – 'a syllable. ವಾ: ರಾಜರ ಕಾಲಲಿ. ಪ: ಲಿ – ಅಲ್ಲಿ

ಲಿಂಗಪ್ಪ /*liŋgappa*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. masculine given name. ಪ: ಲಿಂಗ

ಲಿಂಗಮ್ಮ /*liŋgamma*/ ನಾ. ವ್ಯಕ್ತಿ ಹೆಸರು, ಸ್ತ್ರೀ ವಾಚಕ. feminine given name. ಪ: ಲಿಂಗು

ಲಿಂಗರಾಜನ ಮನೆ /*liŋgara:jana manɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಲಿಂಗಾಯಿತಬೊಳಿ /*liŋga:yitabɔḷi*/ ನಾ. ಗೌಡರ 18 ಗೋತ್ರಗಳಲ್ಲಿ ಒಂದು ಬಳಿ. one of the 18 lineages/clans of Arebhase Gowda community. ವಾ: ಗೌಡ ಜೆನಾಂಗದ ಬೊಳಿದ್ ಹೆಸ್ರ್.

ಲಿಂಗೇರಿ /*liŋge:ri*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಲುಂಗಿ /*luŋgi*/ ನಾ. 1. ಪಂಚೆ, 2. ಮುಂಡು, 3. ಲೂಟಿ. 1. lungi, 2. dhoti, 3. to loot. ವಾ: ಲುಂಗಿ ಉಟ್ಟ್‌ಕ.

ಲೂಟಿ[1] /*lu:ṭi*/ ಕ್ರಿ. 1. ಉಪದ್ರ, 2. ತೊಂದರೆ. 1. trouble, 2. harm. ವಾ: ಹೈದಂಗ ಬರೇ ಲೂಟಿ ಮಾಡವ್.

ಲೂಟಿ[2] /*lu:ṭi*/ ನಾ. 1. ದರೋಡೆ, 2. ಸುಳಿಗೆ, 3. ಕೊಳ್ಳೆ, 1. loot, 2. theft, 3. plunder. ವಾ: ಮನೆನ ಲೂಟಿ ಹೊಡ್ದೊ. **ಲೂಟಿಮಾಡಂವ** /*lu:ṭi ma:ḍanva*/ 1. ಕೊಳ್ಳೆ ಹೊಡೆಯುವ, 2. ದರೋಡೆ ಮಾಡುವ, 3. ಲೂಟಿಕೋರ. 1. plunderer, 2. looter, 3. a robber. ವಾ: ಲೂಟಿ ಮಾಡಂವನ ಪೋಲಿಸ್‌ನೊವು ಹಿಡ್‌ದೊ. **ಲೂಟಿಕೋರ** /*lu:ṭiko:ra*/ 1. ಕೊಳ್ಳೆ ಹೊಡೆಯುವ, 2. ದರೋಡೆ ಮಾಡುವ, 3. ಲೂಟಿಕೋರ. 1. plunderer, 2. looter, 3. a robber. ವಾ: ಲೂಟಿಕೋರರನ ಹಿಡ್ದೊಳೊಗಡ.

ಲೂಸ್ /*lu:si*/ ನಾ. ಎಪ. 1. ಚಿಲ್ಲರೆ, 2. ಅಸ್ಥಿರತೆ, 3. ಮಾನಸಿಕವಾಗಿ ದುರ್ಬಲ. 1. petty/insignificant, 2. inconsistency, 3. mentally weak. ವಾ: ಅಂವಂಗೆ ಹಳ್ಳಾ ಲೂಸ್.

ಲೆಂಕಿರಿಗಳೆ /*leŋkirigaḷɛ*/ ನಾ. 1. ಓಟೆ ಬಿದಿರಿನ ಕೊಕ್ಕೆ, 2. ಒಂದು ವಿಧದ ಗಟ್ಟಿ ಬಿದಿರು. 1. a hook made of bamboo, 2. a variety of bamboo. ವಾ: ಕಿತ್ತುಳಿ ಬಡ್ಜಿಕೆತ ಲೆಂಕಿರಿ ಗಳೆನ ಮಾಡಿಸಿದ್ದೆ.

ಲೆಂಕಿರಿಬೆದ್‌ರ್ /*leŋkiribedɨri*/ ನಾ. ತೆಳ್ಳಗಿನ ಜಾತಿಯ ಮುಳ್ಳು ಇಲ್ಲದ ಉದ್ದನೆ ಬೆಳೆಯುವ ಮೃದು ಬಿದುರು. a variety of soft and long bamboo, without thorns. ವಾ: ಲೆಂಕಿರಿ ಬೆದ್‌ರ್ ಮೆತ್ತಂಗೆ, ಹೆಚ್ಚಿ ಗಟ್ಟಿ ಇರ್‌ದುಲೆ.

ಲೆಕ್ /*lekɨ*/ ನಾ. ರಿಯಾಯಿತಿ. discount. ವಾ: ಸುಮಾರ್ ಬಟ್ಟೆ ತಕಣಿಕನ ಲೆಕ್ ಸಿಕ್ಕಿತ್.

ಲೆಕ್ಕದ್ /*lekkadɨ*/ ಕ್ರಿ. 1. ಎಷ್ಟು ಬೇಕು ಅಷ್ಟೇ, 2. ಅಳತೆ ಮಾಡಿ. 1. as much as one needs, 2. weighed/

measured. ವಾ: ಊಟ ಲೆಕ್ಕದ್ ತಂದದ್. **ಲೆಕ್ಕಲಿ** /*lekkali*/ ಲೆಕ್ಕದಲ್ಲಿ. in the account/count. ವಾ: ನಮ್ಮತ್ತೆ ಲೆಕ್ಕಲಿ ಬಾರಿ ಉಸಾರ್, ಲೆಕ್ಕಲಿ ಅವು ಮಾಂವ ಆಕು.

ಲೆಕ್ಕಮಾಡ್ /*lekkama:ḍi*/ ಕ್ರಿ. ಎಣಿಸು. to count. ವಾ: ದುಡ್ಡ್‌ನ ಸೆರಿ ಲೆಕ್ಕಮಾಡ್. ಪ: ಲೆಕ್ಕಮಾಡಿಕೆ – ಲೆಕ್ಕಮಾಡಲು

ಲೆಕ್ಕೆಸಿರಿ /*lekkesiri*/ ನಾ. ಒಂದು ದೈವ. a deity. **ನಂಗೆ ಒಂದ್ ದೈವ ಉಟ್ಟು ಲೆಕ್ಕಿಸಿರಿ, ನಾ ಮಾಡ್ದ್ ಎಲ್ಲ ಅದ್ಕೆ ಸರಿ.** ವಾ: ಲೆಕ್ಕೆಸಿರಿಗೆ ಪೂಜೆ ಮಾಡ್‌ತೊಳದ್.

ಲೆಗ್ಗೆ ಆಟ /*leggɛ a:ṭa*/ ನಾ. ಒಂದು ವಿಧದ ಚೆಂಡಿನ ಆಟ. a ball game. ವಾ: ಮಣೆ ಇಲ್ಲರೆ ಪಾರ್‌ಗೆ ಗುರಿ ಹೊಡ್ದ್ ಪೊತ್ತೋ ಪೊತ್ತುತೇಳಿ ಆಡುವ ಚೆಂಡಾಟ.

ಲೆಜ್ಜಬಂಡ /*lejjabaṇḍa*/ ನಾ. ಬೈಗುಳ ಪದ. an expletive term. ವಾ: ಲೆಜ್ಜಬಂಡಂಗೆ ಎಸ್ಟ್ ಹೇಳ್‌ರೂ ಅಸ್ಟೆ.

ಲೆಜ್ಜಮಂಡ /*lejjamaṇḍa*/ ನಾ. ಬೈಗುಳ ಪದ. an expletive term. ವಾ: ಅಂವ ಬರೇ ಲೆಜ್ಜಮಂಡ.

ಲೆಪ್ಪ /*leppa*/ ನಾ. 1. ಲೇಪನ, 2. ಬಳಿಯುವಿಕೆ, 3. ಮದ್ದನ್ನು ಲೇಪಿಸು, ಲೇಪಹಾಕು. 1. to appy, 2. to coat, 3. to apply medicine. ವಾ: ಗಂದ,ಅರ್‌ಸಣ,ನೋಳಿಸರದ ಲೆಪ್ಪನ ಮೋರೆಕೆ ಹಾಕಿವೆ, ದೊಂಡೆ ಬೇನೆಗೆ ಕಾಸುಳಿಗೆ ಸುಣ್ಣನ ಮೇಕಿ ಬಿಸಿ ಬಿಸಿ ಬಾಕನ ದೊಂಡೆಗೆ ಹೊರೆಗೆಂದ ಲೆಪ್ಪ ಹಾಕುದು ಆಗ ಬೇನೆ ಕಮ್ಮಿ ಆತಿತ್ತ್.

ಲೇಪ /*le:pa*/ ನಾ. 1. ಲೇಪನ, 2. ಬಳಿಯುವಿಕೆ, 3. ಔಷಧಿ ಹಚ್ಚುವಿಕೆ. 1. to appy, 2. to coat, 3. to apply medicine. ವಾ: ದಡಾರ (ಮೈಮೇಲೆ ಬೀಳ್ದು) ಆಕನ ಬೇವ್ನ ಸೊಪ್ಪಿಗೆ ಹಸಿ ಅರ್‌ಸಣನ ಹಾಕಿ ಅರ್‌ದ್ ರಸನ ಹೊಟ್ಟೆಗು ಕೊಡೊಕು. ಮೈಗು ಲೇಪ ಹಾಕೊಕು.

ಲೇಪಹಾಕು /*le:paha:ku*/ ಕ್ರಿ. 1. ಪಾತ್ರೆಯ ಅಡಿಗೆ ಕಲಾಯಿ ಹಾಕು, 2. ಗಾಯಕ್ಕೆ ಹಸಿ ಮದ್ದು ಲೇಪಿಸು. 1. coating of tin, 2. to apply medicine on to a wound. ವಾ: ತಾಂಬ್ರದ ಪಾತ್ರಗಳಿಗೆ ಲೇಪ ಹಾಕುದು.

ಲೇಪ್ಸ್ /*le:pasu*/ ಕ್ರಿ. 1. ಲೇಪಿಸು, 2. ಲೇಪಹಾಕು. 1. to apply, 2. to coat. ವಾ: ಗಾಯಕೆ ಮೊದ್ದ್ ನ ಲೇಪ್ಸ್.

ಲೇಸ್[1] /*le:si*/ ನಾ. 1. ಲೇಸು, 2. ಸೂಕ್ತ, 3. ಒಳಿತು. 1. appropriate, 2. suitable, 3.

congruous. **ಅಪಮಾನಕ್ಕಿಂತ ಸಾಯೋದೇ ಲೇಸ್(ಗಾ).** ವಾ: ನಿಂಗಿಂತ ಅಂವನೆ ಲೇಸ್.

ಲೇಸ್[2] /*le:si*/ ನಾ. ಎಪ. ಬೂಟು ಕಟ್ಟಲು ಬಳಸುವ ದಾರ. thread used to tie a baloon. ವಾ: ಬೂಟಿಗೆ ಲೇಸ್ ಕಟ್ಟ್.

ಲೈಕ /*laika*/ ನಾ. ಎಪ. 1. ಇಷ್ಟವಾಗು, 2. ಚಂದ, 3. ಲಾಯಕ್. 1. to like, 2. suitability, 3. good. ವಾ: ನಿಂಗೆ ಆ ಬಟ್ಟೆ ಲೈಕ ಕಂಡದೆ. ಪ: ಲೈಕಾತ್ – ಚೆನ್ನಾಗಿ ಆಯಿತು

ಲೈಟ್‌ಗೆ ಹೋದು /*laiṭigɛ ho:du*/ ಕ್ರಿವಿ. ರಾತ್ರಿ ಹೊತ್ತು ತಲೆಗೆ ಲೈಟ್ ಕಟ್ಟಿ ಬೇಟೆಗೆ ಹೋಗುವುದು. to go for hunting by attaching a flashlight to one's forehead. ವಾ: ಇಂದ್ ಪಿರಿಪಿರಿ ಮಳೆ ಬಂದುಟ್ಟು ಲೈಟ್‌ಗೆ ಹೋದರೆ ಮುಣ್‌ಜ ಸಿಕ್ಕುದು.

ಲೈನು /*lainu*/ ನಾ. ಎಪ. 1. ಸಾಲು, 2. ಗೆರೆ. 1. a line, 2. a mark. ವಾ: ಮಗ್ಗಿ ಬರೆಕನ ನಡುಲಿ ಲೈನು ಹಾಕ, ಲೈನು ಹೊಡ್ದ್ ಸಿಕ್ಕಿಕಂಡತ್.

ಲೈನ್ಕಜೆ /*lainkajɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಲೈಸನ್ಸ್ /*laisansi*/ ನಾ. ಎಪ. 1. ಪರವಾನಗಿ, 2. ಒಪ್ಪಿಗೆ, 3. ಅನುಮತಿ, 4. ಅಪ್ಪಣೆ. 1. permission, 2. consent, 3. assent, 4. concurrence. ವಾ: ಕೋವಿಗೆ ಲೈಸನ್ಸ್ ಮಾಡ್ಸಿಕಂಡೊಳರಿನ?

ಲೊಕ್ಕಟೆ /*lokkaṭɛ*/ ನಾ. ಎಪ. ಲಕೋಟೆ. envelop. ವಾ: ಲೊಕ್ಕಟೆ ತೆಗ್‌ದ್ ನೋಡಿ ಅಲ.

ಲೊಟ್ಟಾಸ್ /*loṭṭa:si*/ ನಾ. 1. ಸುಳ್ಳು, 2. ಅಸತ್ಯ. 1. falsehood, 2. a lie. ವಾ: ಅಂವ ಲೊಟ್ಟಾಸ್ ಬುಡ್ದು.

ಲೊಟ್ಟೆ /*loṭṭɛ*/ ನಾ. 1. ಸದಾ ಸುಳ್ಳು ಹೇಳುವವ, 2. ಬುಡೆಲ್, 3. ಸುಳ್ಳು ಹೇಳು. a lier, a person who lies often. **ಹಾಕಂಡದ್ ಪಟ್ಟೆ ಮಾತಾಡ್ದು ಲೊಟ್ಟೆ(ನು).** ವಾ: ಹಂಗೆ ಮಾಡಿನೆ, ಹಿಂಗೆ ಮಾಡಿನೆತ ಲೊಟ್ಟೆ ಬುಟ್ಟದೆ.

ಲೊಟ್ಟೆಕೂಸು /*loṭṭɛku:su*/ ನಾ. 1. ಸಣ್ಣ ಮಗು, 2. ಸೋಮಾರಿತನದವರಿಗೆ ಹೇಳುವ ಮಾತು. 1. an

infant, 2. a lazy person. ವಾ: ನೀನಿನ್ನ್ ಲೊಟ್ಟೆ ಕೂಸುತ ಗ್ಯಾನ ಮಾಡ್ದನ ಕುದ್ದಲ್ಲಿಗೆ ಎಲ್ಲ ಬಡ್ಡೆ ಮಾಡಿಕೊಡಿಕೆ, ಲೊಟ್ಟೆ ಕೂಸು ಕುದ್ದಲ್ಲಿಗೆ ಎಲ್ಲ ಮಾಡಿಕೊಡೊಕು.

ಲೊಟ್ಟೆಬುಡ್ಡು /*loṭṭɛbuḍdu*/ ಕ್ರಿವಿ. 1. ಸದಾ ಸುಳ್ಳು ಹೇಳುವವ, 2. ಬುಡೆಲ್, 3. ಸುಳ್ಳು ಹೇಳು. a lier, a person who lies often. ವಾ: ಸುಮ್ಮನೆ ಲೊಟ್ಟೆ ಬುಡ್ಡು.

ಲೊಡ್ಕಸ್ /*loḍkasɨ*/ ನಾ. ಎಪ. 1. ಹಾಳಾದ, 2. ಪ್ರಯೋಜನಕ್ಕೆ ಬಾರದ. 1. spoiled, 2. useless. ವಾ: ಲೊಡ್ಕಸ್ ಬಸ್‌ನ ಬುಡುವಂವ ಹಾರ್‌ಸಿಕಂಡ್ ಬಾತ್. ಪ: ಲಟ್ಟಸ್ – ಹಾಳಾದದ್ದು; ಲಡಾಸ್ – ಕುಂಬು ಲಡಾಸ್

ಲೋಟಣೆ /*lo:ṭaṇɛ*/ ನಾ. 1. ಸಲಕರಣೆ ಸಾಮಾಗ್ರಿ, 2. ಏನೂ ಕೆಲಸವಿಲ್ಲದ. 1. utensils, 2. without work. ಪ: ಲೋಟನೆ(ತು) – ಅನಗತ್ಯ ಉಪಯೋಗವಿಲ್ಲದ ಕೆಲಸಮಾಡು

ಲೋಟಿ /*lo:ṭi*/ ನಾ. ಲೋಟ. a cup. ವಾ: ಉದ್ದ ಲೋಟಿಲಿ ಕಾಪಿ ಕುಡ್ದರೆ ಯದ ಆದು, ಏನೋ ಸಮ್‌ದಾನ.

ಲೋಟೆ /*lo:ṭɛ*/ ನಾ. 1. ಲೋಟ, 2. ಗ್ಲಾಸ್. 1. a cup, 2. a glass. ವಾ: ಲೋಟಲಿ ನೀರ್ ಕುಡೆದು.

ಲೋಲಾಕ್ /*lo:la:kɨ*/ ನಾ. ಕಿವಿಯ ಓಲೆಗೆ ನೇತು ಹಾಕುವ ಆಭರಣ. a hangings (ear jewellery). ವಾ: ಗೂಡೆಗ ಲೋಲಾಕ್ ಹಾಕಂಬದು.

ಲೋಲುಗಾರಿಕೆ /*lo:luga:rikɛ*/ ನಾ. 1. ಏನೂ ಕೆಲಸವಿಲ್ಲ, 2. ಸೋಮಾರಿತನ. 1. having no work, 2. lazy. ವಾ: ಲೋಲುಗಾರಿಕೆ ಮಾಡಿಕಂಡ್ ಕುದ್ದರೆ ಆದುಲೆ.

ಲ್ಯಾಕಿಲಿ /*lya:kili*/ ನಾ. ಚೆನ್ನಾಗಿ. good. ವಾ: ಲ್ಯಾಕಿಲಿ ದುಡೆನಿ ಮಕ್ಕಳೆ.

ಲ್ಯಾಕ್ /*lya:kɨ*/ ನಾವಿ. 1. ಚಂದ, 2. ಚೆನ್ನಾಗಿ, 3. ರುಚಿಕರ. 1. beauty, 2. good, 3. tasty. ವಾ: ಅಡ್ಗೆ ಬಾರಿ ಲ್ಯಾಕ್ ಇತ್ತ್.

ಲ್ಯಾಟೀನ /*lya:ṭi:na*/ ನಾ. ಲಾಂದ್ರ. a lamp. ವಾ: ಲ್ಯಾಟೀನ ಹೋಸಕಿತಲ.

ವ

ವಂಕಿ /*vaŋki*/ ನಾ. 1. ಕೈ ತೋಳ ಬಂದಿ, 2. ಕೈಗೆ ಕಟ್ಟುವ ಆಭರಣ. an armlet, a jewelleary. ವಾ: ನಾಟಕ ಮಾಡಿಕನ, ಮೊದ್ವೆಗೆಲ್ಲ ವಂಕಿ ಹಾಕುವೆ.

ವಂಕಿ ಉಂಗುರ /*vaŋki uŋgura*/ ನಾ. 'ವಿ' ಆಕಾರದ ಹಾಗೆ ಇರುವ ಉಂಗುರ. a finger ring in the shape of letter 'V'. ವಾ: ವಂಕಿ ಉಂಗುರ ನಮ್ಮ ಅವ್ವನ ಹಕ್ಕಲೆ ಒಂದ್ ಇತ್ತ್.

ವಂಚು /*vaŋcu*/ ಕ್ರಿ. 1. ಜರಡಿ ಹಿಡಿ, 2. ಬಸಿ, 3. ಸೋಸು. 1. to strain, 2. to strain, 3. to sieve. ವಾ: ಅಕ್ಕಿನ ವನಲೆಲಿ ವಂಚುದು.

ವಂದ್ರಿ /*vandri*/ ನಾ. 1. ಜರಡಿ ಹಿಡಿಯುವ ಸಾಧನ, 2. ವಂದರಿ. 1. strainer, 2. a sieve, a colander. ವಾ: ವಂದ್ರಿಲಿ ಅಕ್ಕಿನ ವಂಚುದು.

ವಂದ್ರಿಹಣ್ಣ್ /*vandri haṇṇɨ*/ ನಾ. ಹುಳಿ ರುಚಿಯ ಬೀರುಗ ಹಣ್ಣು. a citrus fruit. ವಾ: ವಂದ್ರಿ ಹಣ್ಣ್ ಹುಳಿ ಮಾರಿ, ಜಾಸ್ತಿ ತಿಂದರೆ ರಕ್ತ ಹೋದೆ.

ವಕ್ಕಾಲ್ /*vakka:lɨ*/ ನಾ. 1. ಕಾಲು ಭಾಗ, 2. ಅರ್ಧಂಬರ್ಧ, 3. ಪೂರ್ತಿಯಾಗದ. 1. one fourth, 2. half, 3. incomplete. **ಓದು ವಕ್ಕಾಲ್, ಬುದ್ಧಿ ಮುಕ್ಕಾಲ್(ಗಾ).** ವಾ: ಅಂವಂದೆಲ್ಲ ವಕ್ಕಾಲ್ ಕೆಲ್‌ಸನೆ.

ವಕ್ಕ್‌ರ್ಸ್ /*vakkɨrsɨ*/ ಕ್ರಿ. 1. ಆಗಮಿಸು, 2. ಅತಿಥೇಯರಿಗೆ ಇಷ್ಟ ಇಲ್ಲದಿದ್ದರೂ ಆಗಮಿಸುವುದು, 3. ವಕ್ಕರಿಸು, 4. ಅನಪೇಕ್ಷಿತವಾಗಿ ಬರು. 1. to arrive, 2. to visit someone without invitation/ information, 3. to gatecrash, 4. to visit someone unexpectedly. ವಾ: ಮನೆಗೆ ಅವು ಮತ್ತೆ ವಕ್ಕ್‌ರ್ಸಿದೊ.

ವಜನ /*vajana*/ ನಾ. ಏಪ. 1. ತೂಕ, 2. ಭಾರ, 3. ದೊಡ್ಡಸ್ತಿಕೆ. 1. weight, 2. load, 3. prestige. ವಾ: ಈ ವಜನ ಚೀಲನ ನಂಗೆ ಹೊರಿಕೆ ಬೊತ್ತ್.

ವಟಗುಟ್ಟ್ /*vaṭaguṭṭi*/ ಕ್ರಿ. 1. ಒಳಗೊಳಗೆ ಮಾತನಾಡು, 2. ಗುಣುಗುಟ್ಟು, 3. ಅಸಮಾಧಾನದ ಮಾತು, 4. ಲೊಟಕು. 1. to whisper, 2. to express displeasure, 3. to express disgruntlement, 4. to grumble. ವಾ: ಯಾರ್ ವಳಗೆ ಒಂದೆಸಮ ವಟಗುಟ್ಟುದು.

ವಟ್ಟಿಗೆ /*vaṭṭigɛ*/ ನಾ. 1. ಒಟ್ಟಿಗೆ, 2. ಜೊತೆಯಲ್ಲಿ. 1. together, 2. collectively. ವಾ: ಎಲ್ಲೊವು ವಟ್ಟಿಗೆ ಕುದ್ದ್ ಉಣ್ಣದೆ ಎಸ್ಟ್ ದಿನ ಆಗಿತ್ತಲ.

ವಟ್ಟೆ /*vaṭṭɛ*/ ನಾ. 1. ತೂತು, 2. ರಂಧ್ರ, 3. ಕಂಡಿ. 1. hole, 2. a burrow, 3. a cavity. ವಾ: ವಟ್ಟೆ ಪಾತ್ರಗೆ ನೀರ್ ಹೊಯ್ದಿಸಿರೆ ನಿತ್ತದೆನ? ಪ: ವಟ್ಟೆ ಚಿಪ್ಪಿಂದ – ತೂತಾದ ಗೆರಟೆ; ವಟ್ಟೆ ಪಾತ್ರೆ – ತೂತು ಪಾತ್ರೆ

ವಟ್ಟೆಕಾಸ್ /*vaṭṭɛka:sɨ*/ ನಾ. 1. ಮರ್ಯಾದಿ, 2. ಮೂರು ಕಾಸು, 3. ಅವಮಾನ. 1. respect, 2. reverence, 3. insult. ವಾ: ವಟ್ಟೆಕಾಸ್ ಬೆಲೆ ಇಲ್ಲೆ. ಪ: ವಟ್ಟೆಮುಕ್ಕಾಲ್ – ಹಳೆಯ ನಾಣ್ಯ

ವಡೆರ /*vaḍɛra*/ ನಾ. 1. ಸೀಳಿದ, 2. ಒಡೆದ. 1. split, 2. burst. ವಾ: ಒಲೆಗೆ ಬೆಂಕಿ ಹೊಸಿಕೆ ಕೋಲ್ ಸೌದೆವೊಟ್ಟಿಗೆ ವಡೆರ ಸೌದೆನು ಇದ್ದರೆ ಬೇಗ ಬೆಂಕಿ ಹಿಡ್ಯದು. ಪ: ವಡೆರ ಸೌದೆ – ಸೀಳಿದ ಸೌದೆ; ವಡೆರಾ ಸೊವುದೆ – ದಪ್ಪವಾಗಿರುವ ಸೌದೆಯನ್ನು ತುಂಡಾಗಿಸಿರುವುದು

ವಡ್ಚಲಿಗೆ /*vaḍcaligɛ*/ ನಾ. ಸಮತಟ್ಟಾದ ಆವರಣವಿರುವ ಜಾಗ. a flat surface. ಪ: ಒಳಚ್ಚಿಲ್(ತು)

ವಡ್ವೆ /*vaḍɨvɛ*/ ನಾ. 1. ಒಡವೆ, 2. ಆಭರಣ. jewellery. ವಾ: ಮೊದ್ವೆಗೆ ಗೂಡೆಗೆ ವಡ್ವೆ ಮಾಡ್ಸಿಯಾತ್.

ವಣ್ಕ /*oṇk*/ ನಾ. ಹಿಂದಿನ ಕಾಲದವರು ಉಪಯೋಗಿಸುತ್ತಿದ್ದ ಸ್ನಾನ ಮಾಡಲು ನೀರು ತೋಡಲು ತೆಂಗಿನ ಗೆರಟೆಯ ಕೈ ಇದ್ದ ಸಾಧನ. a coconut shell ladle, used in taking hot water for bathing. ವಾ: ವಣ್ಕನ ಮೀಯಕನ ಬಳ್ಸುದು.

ವತ್ತಲೆಬ್ಯಾನೆ /*vattalɛbya:nɛ*/ ನಾ. ಅರ್ಧ ತಲೆ ನೋವು. a moderate headahce. ವಾ: ಬೆಳಗಾಕನ ವತ್ತಲೆ ಬೇನೆ ಸುರಾದೆ, ಕತ್ತಲಾಕನ ಕಮ್ಮಿ ಆದೆ, ರಾತ್ರೆ ಬೇನೆ ಇರ್‌ದುಲೆ.

ವತ್ತಾಯ /*vatta:ya*/ ನಾ. 1. ಒತ್ತಾಯ, 2. ಬಲವಂತ. 1. to force, 2. to compel. ವಾ: ವತ್ತಾಯ ಮಾಡಿ ಇರ್‌ಸಿಕಂಡೊ.

ವದಂತಿ /*vadanti*/ ನಾ. ಗಾಳಿಸುದ್ದಿ. gossip. ವಾ: ವದಂತಿನ ನಂಬಿಕಾದ್.

ವದಿಯದು /*vadiyadu*/ ಕ್ರಿ. ಒದೆಯುವುದು. to kick. ವಾ: ಹಿಂದೆಂದ ವದಿಯದು.

ವದ್ದದೆ /*vaddadɛ*/ ಕ್ರಿ. ಒದೆಯುತ್ತದೆ. will kick. ವಾ: ಹಾಲ್ ಕರೆಕನ ಹಸ್ ವದ್ದದೆ.

ವನಲೆ /*vanalɛ*/ ನಾ. 1. ಜರಡಿ ಹಿಡಿಯುವ ಸಾಧನ, 2. ಅಕ್ಕಿ ಆರಿಸುವ ಸಾಧನ, 3. ವಂದರಿ, 4. ಬಿದಿರಿನಿಂದ ಮಾಡಿದ ಜರಡಿ ಹಿಡಿಯುವ ಸಾಧನ. 1. strainer, 2. sieve, 3. colander, 4. a sifter. ವಾ: ಸಣ್ಣ ಕಣ್ಣ್‌ದ್ ವನಲೆಲಿ ಅಕ್ಕಿ ವಂಚಿರೆ ಅಡಿಲಿ ನುಚ್ಚಿ ಬಿದ್ದದೆ, ಪೊಯ್ಯ ಒಂಚಿಕೆ ಒನಲೆ ಬೇಕು.

ವಯಿಸ್ಕಂಡ್ /*vayiskaṇḍi*/ ನಾ. 1. ವಹಿಸಿಕೊಂಡು 2 ಪರವಾಗಿ ಮಾತನಾಡಿಕೊಂಡು. 1. to take one's side, 2. in support of. ವಾ: ತೊಪ್ಪು ಮಾಡಿಕನ ಅವುಳ ನೀ ವಯಿಸಿಕಂಡ್ ಬರ್‌ಬಡ.

ವಯ್ಯಕಯ್ಯ /*vayyakayya*/ ನಾ. 1. ಹುಳಿ ರಗಳೆ, 2. ಸದಾ ಕಿರಿಕಿರಿ. 1. to irritate, 2. to annoy. ವಾ: ಅಂವ ವಯ್ಯಕಯ್ಯ ಮಾಡಿಕಂಡೆ ಇರ್‌ದು.

ವಯ್ಯಾರ /*vayya:ra*/ ನಾ. 1. ಒನಪು, 2. ಬೆಡಗು, 3. ಬಿನ್ನಾಣ. 1. charm, 2. flirtuous, 3. coquette. ವಾ: ಗೂಡೆ ಬಾರಿ ವಯ್ಯಾರಲಿ ನಡ್ಕಂಡ್ ಬಂದದೆ.

ವಯ್ಸ್ /*vaysigɛ*/ ನಾ. ವಯಸ್ಸು. according to one's age. ವಾ: ವಯ್ಸಿಗೆ ಬಾಕನ ತೆಗ್ಗಿಬೊಗ್ಗಿ ನಡ್ಯಕು.

ವರೆಕ್ಕಾ /*varekka:*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ವರ್ಗಟೆ /*vargaṭɛ*/ ನಾ. ಒಂಟಿ ಬೀಜದ ಹಂದಿ. a wild boar. ವಾ: ವರ್ಗಟೆ ಹಂದಿ ಒಂದುಟು.

ವರ್ಗಣಹಂದಿ /*vargaṇahandi*/ ನಾ. ಕಾಡಿನ ಗಂಡು ಹಂದಿ. a male wild boar.

ವರ್ಗಲ /*vargala*/ ನಾ. ಕಾಡಿನ ಗಂಡು ಹಂದಿ. a wild boar. ವಾ: ವರ್ಗಲ ಕಾಡ್‌ಲಿ ಇದ್ದದೆ. ಪ: ರಣಹಂದಿ, ವರ್ಗಣ

ವರ್ಜಿ /*varji*/ ನಾವಿ. 1. ಗತ್ತು, 2. ಘನತೆ, 3. ಗಾಂಭೀರ್ಯಗಳಿಂದ ಕೂಡಿದ ಜೀವನ ಶೈಲಿ. 1. prestige, 2. esteem, 3. uprightness. ವಾ: ಅಂವ ವರ್ಜಿಲಿ ಬೊದ್ಕ್ ನಡ್ಸಿದಂವ.

ವರ್ಣರ ಪಂಜುರ್ಲಿ /*varṇara paṇjurli*/ ನಾ. ಒಂದು ಭೂತದ ಹೆಸರು, ರುದ್ರ ಚಾಮುಂಡಿಯ ಆಶ್ರಿತ ದೈವ. a bhuta/a deity who is the aid of Rudra Chamundi. ವಾ: ವರ್ಣರ ಪಂಜುರ್ಲಿ ದೆವ್ವ ನೋಡಿಕೆ ಬಾರಿ ಲಾಯ್ಕ್.

ವರ್ತಮಾನ /*vartama:na*/ ನಾ. 1. ಸಮಾಚಾರ, 2. ಸುದ್ದಿ. 1. news, 2. information. ವಾ: ಇಂದ್‌ನ ಪೇಪರ್ ನೋಡ್ನೊ ಎಂತ ವರ್ತಮಾನ ಉಟ್ಟುತ.

ವರ್ತೆನೀರ್ /*vartɛni:ri*/ ನಾ. 1. ನೀರು ಜಿನುಗುವ ಸ್ಥಳ, 2. ಒಸರು, 3. ಸೋರು. water flowing out slowly through a small opening. ವಾ: ಹಂಚಿ ಮೂಲೆಂದ ವರ್ತೆ ನೀರ್ ಬಿದ್ದದೆ.

ವರ್ತ್ /*varti*/ ನಾ. 1. ಅವಗಾಹನೆ ಆಯಿತು, 2. ಗಮನಕ್ಕೆ ಬರು, 3. ಬಿಟ್ಟು. 1. to consider, 2. to bring into the attention, 3. to leave. ವಾ: ಅಂವನ ವರ್ತ್ ಯಾರಿಗೂ ಗೊತ್ಲೆ.

ವರ್ದಿ /*vardi*/ ನಾ. 1. ಸುದ್ದಿ, 2. ಸಮಾಚಾರ, 3. ಯಾವುದಾದರೂ ಸಂಗತಿ ಅಥವಾ ಕಾರ್ಯಕ್ರಮದ ವಿವರವಾದ (ಲಿಖಿತ) ನಿರೂಪಣೆ. 1. news, 2 information, 3. a report/commentary on an event or a programme. ವಾ: ಪೇಪರ್‌ಲಿ ವರ್ದಿ ಬಂಡುಟು.

ವರ್ಮ /*varma*/ ನಾ. ಮರ್ಮ. senstive area/spot in the body. ವಾ: ಪಂಡ್‌ನ ಈಡ್‌ಗಾರರ್ ಒರ್ಮಕೆ ಹೊಡ್ಯೊತಿದ್ದೊ.

ವರ್ಲೆ /*varlɛ*/ ನಾ. 1. ಗೆದ್ದಲು, 2. ತಿಗಣೆ. 1. termite, 2. bedbug. ವಾ: ವರ್ಲೆಗೆ ಮೊದ್ದ್ ಹೊಡೆಕು.

ವರ್ಲೆಪಿಜಿನ್ /*varlɛpijini*/ ನಾ. ಇರುವೆಗಳ ವಿಧ. variety of ants. ವಾ: ವರ್ಲೆ ಪಿಜಿನ್‌ಗ ಕಚ್ಚುವೆನ?

ವರ್ಸ /*varsa*/ ನಾ. 1. ಭೂಮಿಯು ಸೂರ್ಯನ ಸುತ್ತ ಒಂದು ಪರಿಭ್ರಮಣೆ ಮುಗಿಸಲು ತೆಗೆದುಕೊಳ್ಳುವ ಅವಧಿ, 2. ಹನ್ನೆರಡು ತಿಂಗಳ ಕಾಲಾವಧಿ, 3. ŋ. 1. a year, a period of twelve months, a total time taken by the earth to complete one revolution of the sun, 2. a year. ವಾ: ವರ್‌ಸ ಹೋದೆ ಗೊತ್ತಾಲೆ, ನೂರ್ ವರ್‌ಸ ಬೊದ್ಕಿದೊ.

ವರ್ಸಮುಟ್ಟ /*varsamuṭṭa*/ ನಾ. 1. ವರುಷಗಟ್ಟಲೆ, 2. ವರ್ಷದವರೆಗೆ. 1. throughout the year, 2. up to one year. ವಾ: ವರ್ಸ ಮುಟ್ಟ ಕಾದದೆ ಬಾತ್.

ವರ್ಸಾವರ್ತಿ /*varsa:varti*/ ನಾ. ವಾರ್ಷಿಕಾವರ್ತನ. annual. ವಾ: ಗುಳಿಗಂಗೆ ವರ್ಸಾವರ್ತಿ ಕೊಡ್ತಾವೊಳೊ, ಆದರೂ ಕಷ್ಟ ಕಮ್ಮಿ ಆತ್ಲೆ.

ವರ್ಸು /*varsu*/ ಕ್ರಿ. 1. ಅಳಿಸು, 2. ನಿರ್ನಾಮ ಮಾಡು. 1. to clean, 2. to destroy. **ಹಂದಿ ಹೇಲ್ ತಿಂದ್ ಎಮ್ಮೆಕರ್ ಮೇಲೆ ವರ್ಸಿತ್ ಗಡ(ಗಾ).** ವಾ: ಮೈಂದ ಸೆಂಡಿನ ಬೇಗ ವರ್ಸು. ಪ: ವರ್ಸ್.

ವರ್ಸ್ /*varsi*/ ಕ್ರಿ. 1. ಒರೆಸು, 2. ಉಜ್ಜು, 3. ತಾಕು. 1. to rub something away, 2. to scrub, 3. to touch. ವಾ: ತಿಂದ್ ಮುಸುಂಡುನ ಅರ್ವೆಗೆ ವರ್ಸಿತ್.

ವರ್ಸುದು /*varsudu*/ 1. ಒರಸುವುದು, 2. ಉಜ್ಜುವುದು, 3. ಬಳಿಯುವುದು. 1. to clean, 2. to rub, 3. to apply. ವಾ: ಅರ್ವೆಲಿ ಮೇಜನ, ಕುರ್‌ಸಿನ ವರ್ಸುದು.

ವಲಸಿರಿ /*valasiri*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಜಾಲ್ಸೂರು ಗ್ರಾಮದ ಜಾಗ. a locality in Jalsuru village in Sullia Taluk of Dakshina Kannada District.

ವಲಾಂಡ ಎಳ್ಯೋದ್ /*vala:ṇḍa eḷyo:di*/ ಕ್ರಿವಿ. ಗದ್ದೆಯ ಮಧ್ಯೆ ಕಡಿದು ತೆಗೆಯುವ ಚರಂಡಿ. a passage (ditch) dug in a pady filed. ವಾ: ಕೊಟ್ಟೆ ತಕಂಡ್ ಗದ್ದೆಲಿ ವಲಾಂಡ ಎಳ್ಯೋದ್.

ವಲಿ /*vali*/ ನಾ. ಬಾಳೆಯ ಎಳೆಯ ಎಲೆಗಳು (ಕೋಲದ, ಮೇಲೇರಿ ಸಂದರ್ಭದಲ್ಲಿ ಉಪಯೋಗಿಸುವರು). tender plantain leaf. ವಾ: ಕೋಲ ಕಟ್ಟಿಕನ ವಲಿನ ಬಳ್ಸುವೆ.

ವಲೆ /*valɛ*/ ನಾ. 1. ಒಲೆ, 2. ಬೆಂಕಿ ಹೊತ್ತಿಸುವ ಸ್ಥಳ. 1. a stove, 2. an oven. ವಾ: ಒಲೆನ ಕೊಳ್ವೆ ತಕಂಡ್ ಉರ್‌ಗು.

ವಲ್‌ಚಿಂಟೆ /*valciṇṭɛ*/ ನಾ. ಒಲೆಯ ಮೇಲಿನ ಜಾಗ. an empty space on the stone/oven. ವಾ: ವಲ್ ಚಿಂಟೆಲಿ ಬೆಂಕಿ ಕಾಸಿಕಂಡ್ ಕೊತ್ತಿ ಕೂರ್‌ದು.

ವಲ್ಚೆ /*valce*/ ನಾ. 1. ಹೊಲಸು, 2. ಗಬ್ಬು, 3. ಕೊಳೆ. 1. dirt, 2. stench, 3. dirt. ವಾ: ಮೊತ್ತಿ ಮೀನ್ ಬಾರಿ ವಲ್ಚೆ ಬಾದು, ಕೈನ ನಿಂಬುಳಿ ಹಾಕಿ ತೊಳ್ದರೆ ಸರಿಯಾದೆ.

ವಸೀ /*vasi:*/ ನಾ. 1. ಸ್ವಲ್ಪ, 2. ಹಞ್ಞ/ಹನೀಸ್. 1. little, 2. small. ವಾ: ವಸೀ ಕುಡೆಕೆ ಕೊಡ್. ಪ: ಒಸಿ.

ವಸೂಲ್ /*vasu:li*/ ನಾ. ಎಪ. 1. ಸಾಲದ ಹಣ, ತೆರಿಗೆಬಾಕಿ, ಕೊಟ್ಟ ವಸ್ತು ಇತ್ಯಾದಿಗಳನ್ನು (ಒತ್ತಾಯದಿಂದ) ವಾಪಸ್ಸು ಪಡೆಯುವುದು, 2. ವಸೂಲು ಮಾಡುವುದು, 3. ಎತ್ತುವಳಿ. 1. to collect debt, 2. debt collection, 3. collection. ವಾ: ಕೊಟ್ಟ ಸಾಲನ ಹೆಂಗೆ ವಸೂಲ್ ಮಾಡ್ದುತ ಗೊತ್ತಾದುಲೆಲ, ಕಂದಾಯ ವಸೂಲ್ ಮಾಡಿವೆ.

ವಸ್ತ್ /*vasti*/ ನಾ. 1. ವಸ್ತು, 2. ಕಣ್ಣಿಗೆ ಕಾಣಿಸುವ ಅಥವಾ ಇಂದ್ರಿಯಗೋಚರ ಭೌತಿಕ ಪದಾರ್ಥ. 1. a

thing, 2. a physical object. ವಾ: ಪಂಡ್ ಕಾಲದ ವಸ್ತ್‌ಗಳ ಹಾಳ್ ಮಾಡದೆ ಜೋಪನ ಮಾಡೊಕು, ಅದೆಲ್ಲ ಇನ್ನ್ ಮುಂದಕೆ ಸಿಕ್ಕಿಕಿಲೆ.

ವಸ್ತ್ರ /*vastra*/ ನಾ. ಹಿಂದೆ ಕೆಲಸ ಮಾಡುವಾಗ ತಲೆಗೆ ಕಟ್ಟಲು, ಮದುವೆ ಸಾಸ್ತ್ರ ಮಾಡುವಾಗ ಕಟ್ಟಿಕೊಳ್ಳಲು ಹಾಗು ಮಡಿಲಕ್ಕಿ ಕಟ್ಟಲು ಬಳಸುತ್ತಿದ್ದ ಚೌಕಾಕಾರದ ಕಳ್ಳಿ ವಿನ್ಯಾಸದ ದೊಡ್ಡ ಬಟ್ಟೆ. a square towel, used in some rituals and also by women to dry their hair. ವಾ: ಹಿಂದೆಲ್ಲ ನಾಡ್‌ಲಿ ತಲೆಗೆ ವಸ್ತ್ರ ಕಟ್ಟಿನೆ ಹೊರ್‌ಗೆ ಕ್ಯಾಮೆ ಮಾಡಿಕೆ ಹೋತಿದ್ದೊ (ಮೊದ್ವೆಲಿ ಮೊದುವಳ್ತಿಗೆ ಮಡ್ಲಕ್ಕಿನ ವಸ್ತ್ರಲೆ ಕಟ್ಟುದು. ಸಾಸ್ತ್ರ ಮಾಡಿಕನ ಸ ತಲೆಗೆ ವಸ್ತ್ರ ಕಟ್ಟಿಕಂಡವೆ).

ವಳ[1] /*vaḷa*/ ನಾ. 1. ಇದ್ದಾರೆ, 2. ಒಳೊ. (someone) is there. ವಾ: ಉಗ್ಗಪ್ಪ, ಅವ್ವ, ಅಪ್ಪ ಎಲ್ಲೊವ್ ಮನೆಲಿ ವಳ.

ವಳ[2] /*vaḷa*/ ನಾ. 1. ಇದ್ದೀಯ, 2. ಒಳ. 1. are you there? 2. inside. ವಾ: ನೀ ಎಲ್ಲಿ ವಳ?

ವಳಗೆ /*vaḷagɛ*/ ಅ. 1. ಒಳಗೆ, 2. ಒಳಗಡೆ. inside. ವಾ: ಕೋಂಬರೆ ಒಳಗೆ ಕರಿ ಕತ್ತಲೆ.

ವಳಲಂಬೆ /*vaḷalambe*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಗುತ್ತಿಗಾರು ಗ್ರಾಮದ ಜಾಗ. a locality in Guttigaru village in Sullia Taluk of Dakshina Kannada District.

ವಳ್ಳ /*vaḷḷa*/ ನಾ. ಒಳ್ಳೆಯ. good. ವಾ: ಅದ್ ಒಳ್ಳ ಗೂಡೆ.

ವಳ್ಳಮೆಣ್ಸ್ /*vaḷḷa mɛɳisɨ*/ ನಾ. 1. ಕರಿಮೆಣಸು, 2. ಕಾಳುಮೆಣಸು, 3. ಖಾರ ರುಚಿಯ, ಔಷಧಿಯ ಗುಣವುಳ್ಳ ಸಂಬಾರ ಪದಾರ್ಥ. black pepper, a spice. ವಾ: ಸೀತಕೆ ವಳ್ಳಮೆಣ್ಸ್ ಆಂಬರ ಮಾಡಿರೆ ಉಂಬಕ್, ಕೆಮ್ಮುಲಿಗೆ ಜೆನ್‌ವೊಟ್ಟಿಗೆ ವಳ್ಳಮೆಣ್ಸ್ ಹೊಡಿನ ಮೇಕಿ ತಿನ್ನೊಕು. ಪ: ಒಳ್ಳಮೆಣ್ಸ್.

ವಳ್ಳಕೆಲ್ಸ /*vaḷḷakes'sa*/ ನಾ. ಒಳ್ಳೆಯ ಕೆಲಸ. a good work. ವಾ: ವಳ್ಳ ಕೆಲ್ಸಕ್ಕೆ ನೂರೆಂಟ್ ಅಡೆತಡೆಗ. ಪ: ವಳ್ಳಕೆಲ್ಸ, ವಳ್ಳೊಕೆಲ್ಸ. ಪ: ಒಳ್ಳೊಕೆಲ್ಸ್

ವಳ್ಳದ್ /*vaḷḷadɨ*/ ನಾ. 1. ಒಳ್ಳೆಯ, 2. ಒಳ್ಳೆಯದು. 1. good, 2. a good thing. **ನಾಲಿಗೆ ವಳ್ಳದಿದ್ದರೆ ನಾಡೆಲ್ಲ ವಳ್ಳದೆ(ಗಾ).** ವಾ: ಅಮೃತ ಬೊಳ್ಳಿ ಮದ್ದಿಗೆ ಬಾರಿ ವಳ್ಳದ್.

ವಳ್ಳೆ /*vaḷḷɛ*/ ನಾ. ಒಳ್ಳೆಯ. good. ವಾ: ಎಲ್ಲೊವು ಅವು ಬಾರಿ ವಳ್ಳೆ ಜೆನತ ಹೇಳ್ತಿದ್ದೊ.

ವಾಂಕತೆ /*va:ŋkatɛ*/ ನಾ. ವಾಕರಿಕೆ ಬಂದಂತಾಗು. vomiting sensation. ವಾ: ಯಾಕೋ ವಾಂಕತೆ ಬಂದಂಗೆ ಆದೆ.

ವಾಂಕ್‌ರಿಕೆ /*va:ŋkɨrikɛ*/ ನಾ. 1. ವಾಕರಿಕೆ, 2. ಉಬ್ಬಳಿಕೆ, 3. ಓಕರಿಕೆ, 4. ವಾಕಳಿಕೆ. to feel like vomiting. ವಾ: ಬಸ್‌ಲಿ ಹೋಕನ ವಾಂಕ್‌ರಿಕೆ ಬಂದೆ. ಪ: ವಾಂಕುರ್ಸುದು/ವಾಂಕ್ರಿಕೆ

ವಾಂತಿ /*va:nti*/ ನಾ. 1. ವಾಂತಿ, 2. ವಮನ, 3. ಜಠರದಿಂದ ಆಹಾರ ಪದಾರ್ಥವನ್ನು ಬಲವಂತವಾಗಿ ಹೊರಹಾಕುವುದು. 1. to vomit, 2. puking, 3. to bring out the food from the stomach through the mouth in an involuntary spasmic movements. ವಾ: ಯಾಕೆನೆ ವಾಂತಿ ಮಾಡಿಕಂಡ? ಪಿತ್ತನ? ವಿಸೇಸನ?

ವಾಕರಿಕೆ /*va:karikɛ*/ ಕ್ರಿ. ವಾಂತಿ. vomit. ವಾ: ಒಬ್ಬ ವಾಂತಿ ಮಾಡ್ದು ನೋಡ್ರೆ ಇನ್ನೊಬ್ಬಂಗೂ ವಾಕರಿಕೆ ಬಂದಂಗಾದೆ.

ವಾಕ್‌ಸಾಪ /*va:kɨsa:pa*/ ನಾ. 1. ಕೆಡುಕಾಗಲೆಂದು ಬಯಸಿ ಹೇಳುವ ಮಾತು, 2. ನಿಷ್ಠುರದ ನುಡಿ. 1. a curse, 2. harsh words. ವಾ: ನೆಲಕೆ ಕೈ ಹೊಡ್ದ್ ವಾಕ್‌ಸಾಪ ಹಾಕಿತ್‌ಗಡ.

ವಾಚಾಳಿ /*va:ca:ḷi*/ ನಾ. ಅತಿಯಾಗಿ ಮಾತನಾಡುವವ. a blabbermouth. ವಾ: ಅಂವ ಬೊರಿ ವಾಚಾಳಿ ಮೊನ್ಸ.

ವಾಚಿ /*va:ci*/ ನಾ. 1. ವಾಚು, 2. ಕೈಗಡಿಯಾರ. 1. watch, 2. a wristwatch. ವಾ: ವಾಚಿ ನೋಡಿ ಹೇಳ್ ಗಂಟೆ ಎಸ್ಟಾತ್‌ತ?

ವಾಟೀಸ್ /*va:ʈisɨ*/ ನಾ. ಎಪ. ಶರಾಬು. alchohol. ವಾ: ವಾಟೀಸ್ ಕುಡ್ದಮೇಲೆ ಬಾಯಿಗೆ ಬಂದದ್ ಮಾತಾಡ್ವೆ. ಪ: ಸರಾಯ

ವಾಟುಳಿ /*va:ʈuḷi*/ ನಾ. 1. ಹುಣಿಸೆ ಹುಳಿ, 2. ಹುಣುಸೆ, 3. ಓಟೆಪುಲಿ(ತು). tamarind. ವಾ: ವಾಟುಳಿ

ಎಳೆದಕ್ಕೆ ಉಪ್ಪು ಮೆಣ್ಸ್ ಹಾಕಿ ತಿನೊಕು, ಗ್ಯಾನ ಮಾಡಿರೆ ಬಾಯ್ಲಿ ನೀರ್ ಬಾದು ಅಲ.

ವಾಟೆ ಉಪ್ಪನಕಾಯಿ /*va:ṭɛ uppanaka:yi*/ ನಾ. ಓಟೆಯ (ಎಳೆಯ ಬಿದಿರಿನ) ಉಪ್ಪಿನಕಾಯಿ. pickle made of tender bamboo/bamboo shoot. ವಾ: ವಾಟೆ ಉಪ್ಪನಕಾಯಿ ತಿಂಬಕೆ ಲಾಯ್ಕ ಆದ್ರೆ ಹಳ್ಳ ಉಸ್ಣ. ಪ: ಕಣಲೆನ ಉಪ್ಪನಕಾಯಿ

ವಾಟೆಕಣಲೆ /*va:ṭɛkaṇalɛ*/ ನಾ. ಎಳೆಯ ಬಿದಿರು. bamboo shoot. ವಾ: ವಾಟೆ ಕಣಲೆಲಿ ಎರ್‌ಡ್ ತರ ಉಟ್ಟು. ಕಲ್ಲ್ ವಾಟೆ. ಹೊಳೆವಾಟೆ (ದೊಡ್ಡ ವಾಟೆ). ಹಿಂದೆನ ಕಾಲಲಿ ಹೊಳೆ ವಾಟೆಲಿ ಕಾವೇರಿ ತೀರ್‌ತ ತರ್‌ತಿದ್ದೊಗಡ. ಹೊಳೆವಾಟೆ ಗಂಟ್‌ಂದ ಗಂಟ್ ಗೆ ಉದ್ದುದ್ದಗಡ. ಹಂಗಾಗಿ ಅದರ್‌ಲಿ ತೀರ್‌ತ ಹೆಚ್ಚಿ ಹಿಡ್ಸಿತ್ತ್ ಗಡ. ಪ: ವಾಟೆ ಬೆದ್ರ್

ವಾಟೆತಡಿಕೆ /*va:ṭɛtaḍikɛ*/ ನಾವಿ. ಓಟೆ ಬಿದಿರಿನಿಂದ ಮಾಡಿದ ಚಾಪೆ. made of bamboo.

ವಾಟೆ[1] /*va:ṭɛ*/ ನಾ. 1. ಬಿದಿರಿನಲ್ಲಿ ಒಂದು ಬಗೆ, 2. ಓಟೆ. a variety of bamboo. **ಆಚೆ ವಾಟೆ ಪಡ, ಈಚೆ ವಾಟೆ ಪಡ, ನಡೂಲಿ ಕೂಗಲೆ ಪಡ – ಕೊರ್‌ಂಬೆ(ಒ).** ವಾ: ವಾಟೆ ಕಣ್ಲೆ ಗೈಪು ಬಾರಿ ರುಚಿ. ಪ: ಓಟೆ –

ವಾಟೆ[2] /*va:ṭɛ*/ ಕ್ರಿವಿ. ಒಲೆ ಊದುವ ಬಿದಿರಿನ ಕೊಳವೆ. bamboo blowpipe. ವಾ: ವಾಟೆನ ಎಲ್ಲಿಸಿದನೆ?

ವಾಟೆಣ್ಣ್ /*va:ṭɛṇṇi*/ ನಾ. ಹುಣಸೇ ಹಣ್ಣು. tamarind. ವಾ: ವಾಟೆಣ್ಣ್‌ನ ಹಂಗೆ ತಿನ್ನ್‌ಬಡ.

ವಾಟೆದ್ ಕಟ್ಟ್ /*va:ṭɛd kaṭṭi*/ ನಾವಿ. 1. ಓಟೆ ಬಿದಿರಿನ ಕಟ್ಟು, 2. ಕಂತೆ, 3. ಹೊರೆ. 1. a cluster of bamboo, 2. a bundle, 3. a load. ವಾ: ವಾಟೆದ್ ಕಟ್ಟ್ ಕಟ್ಟಿ ಆತ?

ವಾಟೆನ ಹೊರೆ /*va:ṭɛna horɛ*/ ನಾವಿ. 1. ಓಟೆ ಬಿದಿರಿನ ಒಂದು ಹೊರೆ, 2. ಕಟ್ಟು. 1. bundle of bamboo, 2. bunch. ವಾ: ವಾಟೆನ ಹೊರೆನ ತಲೆಲಿ ಹೊತ್ತ್ ತಂದೊ.

ವಾಟೇರಿರ /*va:ṭe:rira*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ವಾಡಿಕೆ /*va:ḍikɛ*/ ಕ್ರಿವಿ. 1. ಸಾಂಪ್ರದಾಯಿಕ ನಿಯಮ, 2. ಕಟ್ಟುಕಟ್ಟಳೆ. 1. traditonal custom, 2. rituals. ವಾ: ವಾಡಿಕೆನಂಗೆ ಈಗೊಳು ಹಂಗೆನೆ ಪೂಜೆ ಮಾಡಿವೆ.

ವಾದ /*va:da*/ ನಾ. 1. ವಾದ, 2. ಮಾತು, 3. ಸಂಭಾಷಣೆ, 4. ಚರ್ಚೆ, 5. ತರ್ಕ, 6. ವ್ಯಾಖ್ಯಾನ. 1. to argue, 2. conversation, 3. dialogue, 4. debate, 5. logic, 6. interpretation. ವಾ: ವಾದ ಮಾಡಿಕೆಲ್ಲ ಸಮೆ ಇದಲ್ಲ.

ವಾದ್ಯ /*va:dya*/ ನಾ. 1. ಓಲಗ, 2. ಶುಭ ಹಾಗು ಸೂತಕದ ಸಮಯದಲ್ಲಿ ನುಡಿಸುವ ಸಾಧನ. 1. single-reed wind instrument, 2. a musical instrument played on the day of wedding. ವಾ: ಮೊದುವೆಗೆ, ಸತ್ತಲ್ಲಿಗೆ ವಾದ್ಯ ಬೇಕೆ ಬೇಕ್, ವಾದ್ಯತೇಳ್ದು ಒಂದ್ ಸಂಪ್ರದಾಯ. **ವಾದ್ಯದವು** /*va:dyadavu*/ 1. ಓಲಗ ನುಡಿಸುವವರು, 2. ವಾಲಗ ಊದುವವರು. the player of a signle-reed wind instrument. ವಾ: ವಾದ್ಯದವು ಕಳ್ಳ್ ಕುಪ್ಪಿ ಕೇಳಿವೆಲ. ಕೊಡ್ದ?

ವಾಪಾಸ್ /*va:pa:si*/ ಕ್ರಿ. 1. ಪುನಃ, 2. ಮತ್ತೆ. 1. again, 2. one more time. ವಾ: ಅರ್‌ದ ದಾರಿಗೆ ಹೋಗಿ ವಾಪಾಸ್ ಬಂದೊ. ಪ: ಒಪಾಸ್

ವಾಮ /*va:ma*/ ನಾ. 1. ಓಂ ಕಾಳು, 2. ಓಮ. Ajwain seeds-seeds of Bishop's Weed. ವಾ: ವಾಮನ ಮೊದ್ದಿಗೆ, ತಿಂಡಿಗೆ ಎಲ್ಲದಕು ಬಳ್‌ಸುವೆ.

ವಾಮಕ್ಕಿ /*va:makki*/ ನಾ. ಓಮದ ಕಾಳು. Ajwain seeds-seeds of Bishop's Weed. ವಾ: ವಾಮಕ್ಕಿ ನೀರ್ ಕುಡ್ದರೆ ತಡಿ ಇಳ್ದದೆ. ಕಟ್ರ, ಗ್ಯಾಸ್ ಆದರೆ ವಾಮಕ್ಕಿ ಬಳ್ಸಿರೆ ಬಾರಿ ಒಳ್ಳೆದಾದೆ. ಪ: ಓಮ

ವಾಯಿದೆ ವಾಯ್ದ /*va:yidɛ/va:yda*/ ನಾ. 1. ಕಾಲಾವಧಿ, 2. ಕಾಲವಕಾಶ, 3. ಗಡುವು, 4. ಅವಧಿ. 1. time period, 2. a period, 3. a deadline, 4. tenure. ವಾ: ಉಗ್ಗಪ್ಪಿದ್ ವಾಯಿದೆ ಮುಗ್ದುಟು, ವಾಯ್ದ ಮುಗ್ದ ವಸ್ತುಗಳ ತಕಂಬಕಾಗದ್.

ವಾರಕೋರ/ಓರೆಕೋರ /*va:rako:ra/o:reko:ra*/ ನಾವಿ. 1. ಅಂಕು ಡೊಂಕು, 2. ವಕ್ರ. 1. narrow, 2. curve. ವಾ: ಗಳೆ ವಾರಕೋರ ಇದ್ದರೆ ಆಕಿಲೆ, ನೆಟ್ಟಂಗೆ ಇರೊಕು. ಪ: ವಾರೆಕೋರೆ

ವಾರಣಾಸಿ /*va:raṇa:si*/ ನಾ. ದಕ್ಷಿಣ ಕನ್ನಡ ಜಿಲ್ಲೆಯ

ಸುಳ್ಯ ತಾಲೂಕಿನ ಕಳಂಜ ಗ್ರಾಮದ ಜಾಗ. a locality in Kalanja village in Sullia Taluk of Dakshina Kannada District.

ವಾರೆ /*va:rɛ*/ ನಾ. 1. ಅಂಕು ಡೊಂಕು, 2. ವಕ್ರ. 1. narrow, 2. curve. ವಾ: ಸೀರೆದ್ ಕರೆ ಹೊಲ್ದದ್ ಹಞ್ಞ ವಾರೆ ಆತ್.

ವಾರ್ಸ್‌ದಾರ /*va:rsɨda:ra*/ ನಾ. ವಾರಸುದಾರ. heir, a designated to inherit the property. ವಾ: ಆಸ್ತಿಗೆ ನನ್ನ ಮಜ್ಜನೆ ವಾರ್ಸ್ ದಾರ.

ವಾಲಗ /*va:laga*/ ನಾ. 1. ಓಲಗ, 2. ಶುಭ ಹಾಗು ಸೂತಕದ ಸಮಯದಲ್ಲಿ ನುಡಿಸುವ ಸಾಧನ. 1. single-reed wind instrument, 2. a musical instrument played on the day of wedding. ವಾ: ವಾಲಗಕೆ ಕೊಣ್ತ ಹಾಕ್‌ನೆ.

ವಾಲಗದ ಕೇರಿ /*va:lagada ke:ri*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಸುಬ್ರಹ್ಮಣ್ಯ ಗ್ರಾಮದ ಜಾಗ. a locality in Subramanya village in Sullia Taluk of Dakshina Kannada District.

ವಾಲಸಿರಿಗುಂಡಿ /*va:lasiriguṇḍi*/ ನಾ. ಕೊಡಗು ಜಿಲ್ಲೆಯ ಪೆರಾಜೆ ಗ್ರಾಮದ ಜಾಗ. a locality in peraje village in of Kodagu District.

ವಾಲಾಡಿಕಂಡ್ /*va:la:ḍikaṇḍi*/ ನಾ. 1. ಓಲಾಡುತ್ತ, 2. ತೂರಾಡುತ್ತ. 1. swaying, 2. to walk unsteadily. ವಾ: ಕಳ್ಳ್ ಕುಡ್ದ್ ದಾರಿಲಿ ವಾಲಾಡಿಕಂಡ್ ಬಾದುಕಿಂತ ಮನೆಲಿ ಕುಡ್ದ್ ಸದ್ದಿಲ್ಲದೆ ಬೀಳಕಲ.

ವಾಲಾಡ್ದು /*va:la:ḍdu*/ ನಾ. 1. ಉಯ್ಯಾಲೆಯಲ್ಲಿ ಕುಳಿತು ತೂಗಾಡು, 2. ಓಲಾಡು, 3. ಮನಸ್ಸು ಡೋಲಾಯಮಾನವಾಗು, 4. ತೊನೆದಾಡು. 1. to rock on the swing, 2. to sway, 3. to be inconsistent, 4. to waver. ವಾ: ಮಕ್ಕ ಉಯ್ಯಲೆಲಿ ಕುದ್ದ್ ವಾಲಾಡ್ದು.

ವಾಲಿಟು /*va:liṭu*/ ನಾ. 1. ಬಾಗು, 2. ಡೊಂಕಾಗು, 3. ವಕ್ರವಾಗು. 1. to bend, 2. to bend, 3. to become curved. ವಾ: ಗುಡ್ಡದ ಒಂದ್ ಬರಿ ಹಞ್ಞ ವಾಲಿಟು. ಪ: ಮಾಲಿಟು

ವಾಲೆ /*va:lɛ*/ ನಾ. 1. ಕಿವಿಗೆ ಧರಿಸುವ ಆಭರಣ, 2. ಓಲೆ. earrings. ವಾ: ಕೂಸಿಗೆ ಕೆಮಿ ಕುತ್ಸಿ ಸಣ್ಣ ವಾಲೆ ಹಾಕಿರಾತ್.

ವಾಲೆಪಚ್ಚೆ /*va:lɛpaccɛ*/ ನಾ. 1. ಬಿದಿರಿನ ಸಣ್ಣ ಬಗೆಯ ಕುಕ್ಕೆ, 2. ಗಂಗೆ ಪೂಜೆಗೆ ಬಳಸುವ ಬುಟ್ಟಿ, 3. ಮಲಾಂಪಚ್ಚೆ. 1. a bamboo basket, 2. a basket used in the customory Ganga pooja during a wedding. ವಾ: ವಾಲೆ ಪಚ್ಚೆಲಿ ಅಕ್ಕಿನ ತೊಳ್ದಿಸ್, ನೀರ್ ಅರೆಲಿ.

ವಾಲೆಮರ /*va:lɛ mara*/ ನಾ. ವಾಲೆ ಮರದ ಹಣ್ಣು ಕಪ್ಪಾಗಿರುತ್ತದೆ, ಇದರಿಂದ ಬತ್ತಿ ಮಾಡುತ್ತಾರೆ ಹಾಗೂ ಬೀಜದಿಂದ ಎಣ್ಣೆ ತೆಗೆಯುತ್ತಾರೆ. a black fruit of toddy plam tree – ice apple. ವಾ: ವಾಲೆ ಮರದ ಬೀಜಲಿ ಎಣ್ಣೆ ತೆಗ್ದವೆಗಡ. ಪ: ವಾಲೆಮರದ ಸೊಪ್ಪ್ – ವಾಲೆ ಮರದ ಎಲೆಯನ್ನು ಬೆಲ್ಲದೊಂದಿಗೆ ಅರೆದು ತೆಗೆದುಕೊಳ್ಳುವುದರಿಂದ ಬೇದಿ ಉಪಶಮನವಾಗುತ್ತದೆ

ವಾಲೆಹಣ್ಣ್ /*va:lɛ haṇṇɨ*/ ನಾ. ನುಚ್ಚಿ ಹಣ್ಣು. ice apple.

ವಾಲ್ತಾಜೆ /*va:lta:jɛ*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ದೇವಚಳ್ಳ ಗ್ರಾಮದ ಜಾಗ. 1. family, 2. lineage, 3. a locality in Devacalla village in Sullia Taluk of Dakshina Kannada District.

ವಾಲ್ದು /*va:ldu*/ ಕ್ರಿ. 1. ಬಾಗು, 2. ಡೊಂಕಾಗು, 3. ವಕ್ರವಾಗು. 1. to bend, 2. to twist, 3. to become curved. ವಾ: ಗಾಳಿಗೆ ಮರ ವಾಲ್ದು ನೋಡಿಕನ ಹೆದ್ರಿಕೆ ಆದೆ. ಪ: ಮಾಲ್ದು

ವಾಲ್ಸಿರಿ /*va:lsiri*/ ನಾ. ಊರ ಜಾತ್ರೆಯಲ್ಲಿ ರಥೋತ್ಸವದ ಹಿಂದಿನರಾತ್ರಿ ನಡೆಯುವ ಉತ್ಸವ. a ritual celebration on the night before the car festival. ವಾ: ವಾಲ್ಸಿರಿ ನೋಡಿಕಂಡ್ ಬಂದೊ.

ವಾಸಪ್ಪ /*va:sappa*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. masculine given name. ಪ: ವಾಸು

ವಾಸಿ[1] /*va:si*/ ಕ್ರಿ. 1. ಗುಣಮುಖ, 2. ಚೇತರಿಸಿಕೊಳ್ಳು. 1. to recover, 2. to regain health. ವಾ: ಕಾಯ್ಲೆ ಈಗ ವಾಸಿ ಆತ್.

ವಾಸಿ[2] /*va:si*/ ನಾ. 1. ಉತ್ತಮ, 2. ಚೆನ್ನಾಗಿ. 1. best,

2. good. ವಾ: ನಂಗಿಂತ ಅಂವನ ಪರಿಸ್ತಿತಿ ಎಸ್ಟೋ ವಾಸಿ.

ವಾಸ್ನೆ /*va:snɛ*/ ನಾ. 1. ವಾಸನೆ, 2. ಒಳ್ಳೆಯ ಕಂಪು, 3. ಕೆಟ್ಟನಾತ. 1. smell, 2. fragrance, 3. stench. ವಾ: ಕೇನೆ ಅರ್ಳಿರೆ ವಾಸ್ನೆ ಬಂದದೆ.

ವಿಕಾರ /*vika:ra*/ ನಾವಿ. 1. ವಿದ್ರೂಪ, 2. ಕುರೂಪ. 1. ugly, 2. repulsive. ವಾ: ಸುಟ್ಟ ಗಾಯಂದ ಮೋರೆ ವಿಕಾರ ಆತ್.

ವಿಚಾರ್ /*vica:rɨ*/ ಕ್ರಿ. 1. ವಿಚಾರಿಸು, 2. ತನಿಖೆ ಮಾಡು, 3. ವಿವರ ಸಂಗ್ರಹಿಸು. 1. to enquire, 2. interrogate, 3. to collect information. ವಾ: ಆ ಮನೆಲಿದ್ದವ್ ಎತ್ತ ಹೋದೊತ ವಿಚಾರ್ ಮಾಡಕಿತ್. ಪ: ಇಚಾರ

ವಿದ್ಯೆ /*vidyɛ*/ ನಾ. 1. ವಿದ್ಯೆ, 2. ಜ್ಞಾನ, 3. ತಿಳುವಳಿಕೆ, 4. ಓದು, 5. ಶಿಕ್ಷಣ. 1. knoweldge, 2. wisdom, 3. acumen, 4. reading, 4. education. **ವಿದ್ಯೆ ಇದ್ದರೆ ಸಾಲದು ಬಾಸೆನು ಬೇಕ್(ಗಾ).** ವಾ: ವಿದ್ಯೆ ಇಲ್ಲದಂವ ಪ್ರಾಣಿಗೆ ಸಮ ತ ಹೇಳ್‌ವ ಮಾತುಟ್ಟು.

ವಿನ /*vina*/ ಅ. 1. ವಿನಃ, 2. ಹೊರತು. 1. without, 2. except. ವಾ: ನಿನ್ನ ವಿನ ಕಾರ್‌ಬಾರ್ ಆಕಿಲೆತ ಗ್ಯಾನ ಮಾಡ್ದನ?

ವಿನಾಸ /*vina:sa*/ ನಾ. 1. ವಿನಾಶ, 2. ಹಾಳು, 3. ಸರ್ವನಾಶ. 1. destruction, 2. ruin, 3. devastation. **ವಿನಾಸ ಕಾಲಕ್ಕೆ ವಿಪರೀತ ಬುದ್ದಿ(ಗಾ).** ವಾ: ಸುಮಾರ್ ಪ್ರಾಣಿಗ, ಹಕ್ಕಿಗ ವಿನಾಸದ ಕಡೆಲಿ ಒಳೊ.

ವಿರೋದಿಸೊಕು /*viro:disoku*/ ನಾ. 1. ಎದುರಿಸು, 2. ಸವಾಲು ಹಾಕು. 1. to oppose, 2. to challenge. ವಾ: ತೊಪ್ಪು ಯಾರೆ ಮಾಡಿರು ಅದನ ವಿರೋದಿಸೊಕು.

ವಿಲೇವಾರಿ /*vile:va:ri*/ ಕ್ರಿ. 1. ಹಂಚುವಿಕೆ, 2. ವಿತರಣೆ, 3. ವಿಂಗಡಣೆ. 1. distribution, 2. diffusion, 3. classificaiton. ವಾ: ವಸ್ತುಗಳ ವಿಲೇವಾರಿ ಮಾಡಿ ಆತ?

ವಿಷ್ಣುಮಂಗಿಲ /*viṣṇumaŋgila*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಬಳ್ಪ ಗ್ರಾಮದ ಜಾಗ. a locality in Balpaa village in Sullia Taluk of Dakshina Kannada District.

ವಿಸ /*visa*/ ನಾ. 1. ವಿಷ, 2. ಗರಳ, 3. ನಂಜು, 4. ಯಾವುದೇ ಬಗೆಯಲ್ಲಿ ಜೀವಿಯ ಶರೀರದಲ್ಲಿ ಸೇರಿದಾಗ ಪ್ರಾಣಾಪಾಯ ಉಂಟುಮಾಡುವಂಥ ಪದಾರ್ಥ. poison, a substance that causes death. **ವಿಸ ತೆಗ್ದ ಹಾವ್‌ನಾಂಗೆ(ನು).** ವಾ: ಮುಳ್ಳ್‌ನ ಮುಳ್ಳ್‌ಂದನೆ ತೆಗ್ದವೆಲ ಹಾಂಗೆ ವಿಸಕೆ ವಿಸನೆ ಮೊದ್ದ್ ಗಡ. ಪ: ಇಸ

ವಿಸಯ /*viṣaya*/ ನಾ. 1. ವಸ್ತು, 2. ವಿಚಾರ, 3. ಸಂಗತಿ, 4. ಸನ್ನಿವೇಶ. 1. a thing, 2. a matter, 3. a news, 4. an incident. ವಾ: ಬೇಗ ವಿಸಯ ತಿಳ್‌ಸ್, ಯಾಗೊಳು ಒಳ್ಳ ವಿಷಯನೆ ಮಾತಾಡೊಕು. ಪ: ಇಸಯ

ವಿಸವೇರ್ /*visave:rɨ*/ ನಾ. ವಿಷ ಏರು. rising poison. ವಾ: ಹಾವ್ ಕಚ್ಚಿ ವಿಸಯೇರಿ ಸತ್ತತ್.

ವಿಸೇಸ /*vise:sa*/ ನಾ. ಮಾಮೂಲಿಯಲ್ಲದ್ದು. not ordinary. ವಾ: ಇಂದ್ ಎಂತ ವಿಸೇಸ ದಿನ? ಪ: ಇಸೇಸ

ವಿಸ್ಯ /*visya*/ ನಾ. ವಿಷಯ. subject. ವಾ: ರಾಗ ಎಳಿಬಡ ವಿಸ್ಯ ಹೇಳ್. ಪ: ಇಸ್ಯ

ವಿಳೇಸಾಸ್ತ್ರ /*viḷe:śa:stra*/ ನಾ. 1. ನಿಶ್ಚಿತಾರ್ಥ, 2. ಗಂಡು ಹೆಣ್ಣಿನ ಕಡೆಯವರು ಬಂಧುಬಾಂಧವರು, ಊರಿನವರ ಸಮ್ಮುಖದಲ್ಲಿ ಮದುವೆ ನಿಶ್ಚಯ ಮಾಡುವುದು. 1. betrothal ceremony, 2. engagement ceremony, a ritual conducted in the presence of the relatives. ವಾ: ವಿಳೇಸಾಸ್ತ್ರ ಆದ ಮೇಲೆ ದಾರೆ ಆಕನ ಮುಟ್ಟ ಹೈದ ಗೂಡೆ ಒಬ್ಬರನೊಬ್ಬರ್ ನೋಡಿಕಾದ್. ಪ: ವೀಳ್ಯ ಶಾಸ್ತ್ರ – ವೀಳ್ಯ ನೀಡುವ ಒಪ್ಪಂದದ ಸಂಕೇತ; ವೀಳ್ಯ ನೀಡಿ ಆಮಂತ್ರಿಸು.

ವೀಳ್ಯ /*vi:ḷya*/ ನಾ. 1. ತಾಂಬೂಲ, 2. ವೀಳ್ಯದೆಲೆ, 3.ಮದುವೆಗೆ ಮುನ್ನ ನಡೆಯುವ ನಿಶ್ಚಯ ತಾಂಬೂಲ. 1. a combination of betel leaf, areca nut and lime, 2. betel leaf. **ತಕ್ಕ ತಕ್ಕವ್‌ಕೆ ತಟ್ಟೇಲಿ ವೀಳ್ಯ, ಮಿಕ್ಕವ್ಕೆ ಲ್ಲ ಕೈಲಿ ವೀಳ್ಯ(ಗಾ).** ವಾ: ವೀಳ್ಯಕೊಟ್ಟ್ ಮೊದ್‌ವೆಗೆ ಕರೆದು.

ವೀಳ್ಯಕೊಡ್ದು /*vi:ḷyakoḍdu*/ ನಾ. ಮದುವೆ ಸಮಾರಂಭಕ್ಕೆ ನೆರೆಮನೆಯವರಿಗೂ, ಬಂಧುಗಳಿಗೂ ತಾಂಬೂಲ ಕೊಟ್ಟು ಕರೆಯುವುದು. to invite relatives and neighbours by giving them betel leaf and areca nut. ವಾ: ಮನೆವ್ಕೆಲ್ಲ ಕಾಗದದೊಟ್ಟಿಗೆ ವೀಳ್ಯ ಕೊಡ್ದು ಪದ್ದೆತಿ.

ವೀಳ್ಯಸಾಸ್ತ್ರದ ವೀಳ್ಯ /*vi:ḷyasa:strada vi:ḷya*/ ನಾ. ವೀಳ್ಯಶಾಸ್ತ್ರವನ್ನು ನಡೆಸಿಕೊಡುವಂತೆ ಊರ ಹಿರಿಯರನ್ನು ಕೇಳಿಕೊಳ್ಳುವ ವೀಳ್ಯ. invite the village eleders to solemnise the ritauls during marriage. ವಾ: ವೀಳ್ಯಸಾಸ್ತ್ರ ನಡ್‌ಸಿಕೊಡೊಕುತ ಊರ ಹಿರಿಯವ್ಕೆ ವೀಳ್ಯ ಸಾಸ್ತ್ರದ ವೀಳ್ಯ ಕೊಟ್ಟ್ ಕರೆದು.

ವುದ್ಕ /*vudka*/ ನಾ. ಸಾರು. curry. ವಾ: ಕೋಳಿ ವುದ್ಕ ಒಲೆ ಮೇಲೆ ಕೊದ್ದದೆ ಕಂಡದೆಲ.

ವೆಂಕಟಾದ್ರಿ /*veŋkaṭa:dri*/ ನಾ. 1. ವೆಂಕಟಾಚಲ ಬೆಟ್ಟ, 2. ತಿರುಪತಿ ಬೆಟ್ಟ. Tirupati Hill. ವಾ: ವೆಂಕಟಾದ್ರಿ ದೇಸ್ತಾನಕೆ ಹೋಗಿ ಬಂದ್ ಹರ್‌ಸೆವೆ ಮಾಡ್ದು.

ವೆಂಕಟ್ರಮಣ ಸ್ವಾಮಿ /*veŋkaṭramaṇa sva:mi*/ ನಾ. 1. ಗೌಡರ ಕುಲಗುರು, 2. ಮನೆ ದೇವರು. 1. lord Venkataramana, family deity Gowda community, 2. a house deity of Gowda community. ವಾ: ಗೌಡುಗಳ ಕುಲ ದೇವ್ರೆ ವೆಂಕಟ್ರಮಣ ಸ್ವಾಮಿ.

ವೆಂಕಪ್ಪ /*veŋkappa*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. masculine given name. ಪ: ಎಂಕ, ಎಂಕಪ್ಪ

ವೆಂಕಮ್ಮ /*veŋkamma*/ ನಾ. ವ್ಯಕ್ತಿ ಹೆಸರು, ಸ್ತ್ರೀ ವಾಚಕ. feminine given name. ಪ: ಎಂಕು, ಎಂಕಮ್ಮ

ವೆಂಟ್ /*venṭi*/ ನಾ. 1. ಸೊಪ್ಪು ತರಕಾರಿಯ ಕಾಂಡ, 2. ಬಸಳೆ ದಂಟ್. stem of green leafy vegetable. ವಾ: ವೆಂಟ್ ದಪ್ಪಲಿ ಬೆಳ್ದುಟು.

ವೆವಾರ /*veva:ra*/ ನಾ. 1. ವ್ಯವಹಾರ, 2. ಕಾರ್ಯಭಾರ, 3. ವಹಿವಾಟು. 1. business, 2. trade, 3. transactions. ವಾ: ವೆವಾರ ಎಲ್ಲ ಯಾರ್ ನೋಡಿಕಂಡವೆ?

ವೇದ /*ve:da*/ ನಾ. 1. ಜ್ಞಾನ, 2. ಶ್ರುತಿ, ಧರ್ಮ ಮತ್ತು ಬ್ರಹ್ಮಜ್ಞಾನ ಬೋಧಕವಾದ ಅಪೌರುಷೇಯ ವಾಕ್ಯರಾಶಿ. 1. knoweldge, 2. Veda, (a body of religilous texts – impersonal words, authorless texts). **ವೇದ ಸುಳ್ಳಾದರು ಗಾದೆ ಸುಳ್ಳಾಲೆ(ಗಾ).**

ವೇಸ /*ve:sa*/ ನಾ. ವಿಶೇಷ ಉಡುಪು. special clothing. ವಾ: ಹುಲಿವೇಸ ಮಾರ್ನಮಿಗಾಕನ ಕಾಂಬಕೆ ಸಿಕ್ಕಿದೆ.

ವೇಸ್ಟಿ /*ve:sṭi*/ ನಾ. ಇಮ್ಮಡಿ ಅಳತೆಯ ಬಿಳಿ ಧೋತಿ. double dhoti. ವಾ: ಜಂಬರಲಿ ವೇಸ್ಟಿ ಹಾಕಂಬದು.

ವೈಪಾಲ /*vaipa:la*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಪೆರುವಾಜೆ ಗ್ರಾಮದ ಜಾಗ. a locality in Peruvaje village in Sullia Taluk of Dakshina Kannada District.

ವೈರತ್ವ /*vairatva*/ ನಾ. 1. ವೈಮನಸ್ಸು, 2. ದ್ವೇಷ, 3. ವಿರೋಧಿ ಭಾವನೆ. 1. hatred, 2. enmity, 3. feeling of antagonism. ವಾ: ಯಾರೊಟ್ಟಿಗೆನೂ ವೈರತ್ವ ಬೆಳ್ಸಿಕಣಿಕಾಗದ್. ಪ: ಒಯಿರತ್ವ

ವೈವಾಟ್ /*vaiva:ṭi*/ ಕ್ರಿವಿ. 1. ವಹಿವಾಟು, 2. ವ್ಯವಹಾರ. 1. transaction, 2. business. ವಾ: ನಿಮ್ಮ ವೈವಾಟ್ ಹೆಂಗುಟ್ಟು?

ವೊಂತಿ /*vontikya:ta*/ ನಾ. ಓತಿಕೇತ. a Chamaeleon. ವಾ: ವೊಂತಿಕ್ಯಾತನ ಕೊತ್ತಿ ಆಡ್ಸಿ ಆಡ್ಸಿ ಕೊಂದತ್.

ವೊಗ್ಗಟ್ಟ್ /*voggaṭṭi*/ ನಾ. 1. ಒಗ್ಗಟ್ಟು, 2. ಐಕ್ಯಮತ್ಯ 3. ಒಟ್ಟಿಗೆ ಇರುವುದು. 1. unity, 2. harmony, 3. syncretism. ವಾ: ಆ ಕುಟುಂಬಲಿ ವೊಗ್ಗಟ್ಟ್ ಉಟ್ಟು.

ವೊಟ್ಟ್ ಕೂಡಿ /*voṭṭi ku:ḍi*/ ನಾ. ಎಲ್ಲರು ಒಟ್ಟಾಗಿ. unity. ವಾ: ನಾವೆಲ್ಲ ವೊಟ್ಟ್ ಕೂಡಿ ಗದ್ದೆ, ತೋಟಲಿ ಕೆಲ್‌ಸ ಮಾಡಿವೆ.

ವೊಯ್ಯಪ್ಪುರೆ /*voyyappurɛ*/ ನಾ. ಚಪ್ಪರ. a temporary shelter/a canopy. ವಾ: ಮೊದ್ವೆ ಮನೆಲಿ ಮಳೆಂದ ತೊಂದರೆ ಆಗದಾಂಗೆ ವೊಯ್ಯಪ್ಪುರೆನ ಹಾಕೊಳೊ.

ವೊರ್ಸ /*vorsa*/ ನಾ. 1. ಭೂಮಿಯು ಸೂರ್ಯನ ಸುತ್ತ ಒಂದು ಪರಿಭ್ರಮಣೆ ಮುಗಿಸಲು ತೆಗೆದುಕೊಳ್ಳುವ

ಅವಧಿ, 2. ಹನ್ನೆರಡು ತಿಂಗಳ ಕಾಲಾವಧಿ, 3. ವರುಷ. 1. time taken by the earth for one revolution of the sun, 2. a period of twelve months, 3. a year. ವಾ: ಅಯ್ಯೆ ಹೋಗಿ ಹನ್ನೆರ್‌ಡ್ ವೊರ್ಸ ಆತ್.

ವೊಸ್ಯ /*vɔsya*/ ಅ. 1. ಸ್ವಲ್ಪ, 2. ಒಸಿ. 1. a little, 2. a small quantity. ವಾ: ವೊಸ್ಯ ಉಪ್ಪು ಹಾಕ್. ಪ: ಹಞ್ಜ, ಹನೀಸ್

ವೋಟೋಳಿ /*vo:ṭo:ḷi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮುರುಳ್ಯ ಗ್ರಾಮದ ಜಾಗ. a locality in Murulya village in Sullia Taluk of Dakshina Kannada District.

ವ್ಯಬಿಚಾರ /*vyabica:ra*/ ನಾ. 1. ಹಾದರ, 2. ಸೂಳೆಗಾರಿಕೆ. prostitution. **ದೊಡ್ಡಂವ ಮಾಡ್ರೆ ವ್ಯವಾರ, ಬಡಂವ ಮಾಡ್ರೆ ವ್ಯಬಿಚಾರ(ಗಾ).** ವಾ: ವ್ಯಬಿಚಾರ ಮಾಡಿಕಾದ್.

ವ್ಯವಾರ /*vyava:ra*/ ನಾ. 1. ವ್ಯವಹಾರ, 2. ಕಾರ್ಯಭಾರ, 3. ವಹಿವಾಟು. 1. business, 2. administration, 3. transaction. ವಾ: ಅಂವನೊಟ್ಟಿಗೆ ಯಾವ ವ್ಯವಾರನು ಇಲ್ಲೆ.

ವ್ಯಸನ /*vyasana*/ ನಾ. 1. ಚಿಂತೆ, 2. ಯೋಚನೆ, 3. ವ್ಯಥೆ. 1. grief, 2. concern, 3. anguish. **ವ್ಯಸನ ಇಲ್ಲದವನೇ ಇಲ್ಲೇ(ಗಾ).** ವಾ: ವ್ಯಸನ ಮಾಡಿಕಂಡ್ ಕುದ್ದರೆ ಆಕಿಲೆ.

ವ್ಯಾಜ್ಯ /*vya:jya*/ ನಾ. 1. ದಾವ, 2. ಕಲಹ. 1. a case in the court of law, 2. a quarrel. ವಾ: ಕೋರ್ಟ್‌ಲಿ ಇನ್ನೂ ವ್ಯಾಜ್ಯ ತೀರ್‌ತ್‌ಲೆ.

ವ್ಯಾದೆ /*vya:de*/ ನಾ. 1. ಗಡುವು ನೀಡಿದ, 2. ನಿಶ್ಚಿತ ಕಾಲಾವಧಿ. 1. a tenure, 2. a fixed period. ವಾ: ನಾ ಕೊಟ್ಟ ವ್ಯಾದೆ ಇಂದಿಗೆ ತೀರ್‌ತ್.

ವ್ಯಾಪಾರೆ /*vya:pa:rɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ವ್ರತ /*vrata*/ ನಾ. ಧಾರ್ಮಿಕ ಆಚರಣೆ. ritualistic celebration. ವಾ: ಅವು ತಿಂಗ ತಿಂಗ ವ್ರತ ಮಾಡಿವೆ.

ಶ

ಶಂಕ[1] /*ʃaŋka*/ ನಾ. 1. ಸಮುದ್ರದಲ್ಲಿರುವ ಒಂದು ಬಗೆಯ ಜಲಚರಜೀವದ ಗೂಡು,- ಚಿಪ್ಪು, 2. ಮಂಗಳಕರವಾದ ಪಂಚಮಹಾವಾದ್ಯಗಳಲ್ಲಿ ಒಂದು, 3. ಕೆನ್ನೆಯ ಎಲುಬು, 4. ಹಣೆಯ ಮೂಳೆ, 5. ಕುಬೇರನ ನವನಿಧಿಗಳಲ್ಲಿ ಒಂದು, 6. ಒಂದು ಬಗೆಯ ಸುಗಂಧದ್ರವ್ಯ, 7. ಶಂಕ. 1. a mollusk which lives in a conch shell, 2, a conch shell, one of the five traditional musical instruments, 3. zygomatic bone (cheekbone), 4. the frontal bone, 5. one of the nine divine treasures of Kubera, the treasurer of gods, 6. a perfume, 7. a con. ವಾ: ನಾಡ್‌ಗಳ್‌ಲಿ ಈಗೊಳು ಕೆಲು ಮನೆಲಿ ಶಂಕ ಊದಿ ಪೂಜೆ ಮಾಡಿವೆ.

ಶಂಕ[2] /*ʃaŋka*/ ನಾ. 1. ಊದುವ ಶಂಖ, 2. ಶಂಖ ನಾದ. 1. a conch shell, 2. whooshing sound of blowing conch shell. ವಾ: ಸತ್ಯನಾರಾಯಣ ಸ್ವಾಮಿ ಪೂಜೆ ಮಾಡಿಕನ ಶಂಕ ಉರ್ಗುವೆ.

ಶಂಕ ಊದು /*ʃaŋka u:du*/ ನಾ. 1. ರಂಪಮಾಡು, 2. ಗದ್ದಲ, 3. ರಗಳೆ. 1. to cause uproar, 2. commotion, 3. ruckus. ವಾ: ಈ ಹೈದ ಶಂಕ ಊದಿರೆ ಊರಿಗೆಲ್ಲ ಕೇಳ್ದು.

ಶಂಕಪಾಲ /*ʃaŋkapa:la*/ ನಾ. 1. ಅಷ್ಟ ಫಣಿಗಳಲ್ಲಿ ಒಂದು, 2. ಸರ್ಪ. 1. one of the eight serpents carrying the weight of the earth, 2. a serpent. ವಾ: ಬೊಳಿ ಬುಡಿಕೆ ಮುಂದೆ ಎದ್ದಂಗೆ ಶಂಕಪಾಲಂಗೆ ಕೈ ಮುಗೆಕು.

ಶಂಕಮಸ್ಟಿ /*ʃaŋkamasṭi*/ ನಾ. ಶಂಖಪುಷ್ಪ;ಒಂದು ಜಾತಿಯ ಬಿಳಿ ಅಥವಾ ನೀಲಿ ಪುಷ್ಪ. 1. Butterfly Pea, a flower plant, 2. a medicinal plant. ವಾ: ಶಂಕಮಷ್ಟಿತ ಮೊದ್ದ್‌ನ ದೈ.

ಶಂಕರತೋಟ /*ʃaŋkarato:ṭa*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕಲ್ಮಡ್ಕ ಗ್ರಾಮದ ಜಾಗ. a locality in Kalmadka village in Sullia Taluk of Dakshina Kannada District.

ಶಂಕೆ /*ʃaŋke*/ ಕ್ರಿವಿ. 1. ಸಂದೇಹ, 2. ಸಂಶಯ. 1. a doubt, 2. suspicion. ವಾ: ಮಸ್ಸ್‌ಲಿ ಶಂಕೆ ಇಟ್ಟ್ ಕೆಲ್ಸ ಸುರು ಮಾಡಿರೆ ಆಕಿಲೆ.

ಶಕುನ /*ʃakuna*/ ನಾ. ಒಂದು ಕೆಲಸಕ್ಕೆ ಹೊರಡುವಾಗ ಕಂಡುಬರುವ ಎದುರಿಸುವ ಕೆಲವೊಂದು ಸನ್ನಿವೇಶಗಳನ್ನು ಶುಭ ಶಕುನ. good omen. ವಾ: ಶಕುನ ಒಳ್ಳೆದುಟ್ಟು, ಹೋದ ಕೆಲ್‌ಸ ಆತ್.

ಶಕ್ತಿಕೋಲ್ /*ʃakti ko:lɨ*/ ನಾ. ಶಕ್ತಿ ಪ್ರದರ್ಶನ ಆಟ. a game of displaying one's strength. ವಾ: ಶಕ್ತಿ ಕೋಲ್ ಆಟ ಆಡಿವೆ.

ಶರ್ತ /*ʃarta*/ ನಾ. 1. ಪಂದ್ಯ, 2. ಒಪ್ಪಂದದ ನಿಯಮ, 3. ನಿರ್ಬಂಧ. 1. a game, 2. rules of agreement, 3. restriction. ವಾ: ಆಟದ ಶರ್ತ ಎಂತ?

ಶರ್‌ಬತ್ ಹಣ್ /*ʃaribatɨ haṇɨ*/ ನಾ. 1.

ನಿಂಬೆಹಣ್ಣಿನಂತಹ ಆಕರ್ಷಣೀಯ ಹಣ್ಣು, 2. ಶರಬತ್ ಮಾಡಲು ಬಳಸುತ್ತಾರೆ. 1. a citrus fruit, 2. a fruit used in making juice. ವಾ: ಶರ್‌ಬತ್ ಹಣ್‌ಲಿ ಜೂಸ್ ಮಾಡಿವೆಗಡ.

ಶಾಂತಿಯಡ್ಕ /*ʃa:ntiyaḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಎಡಮಂಗಲ ಗ್ರಾಮದ ಜಾಗ. a locality in Edamangala village in Sullia Taluk of Dakshina Kannada District.

ಶಾಂತಿಲಾ /*ʃa:ntila:*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಶಾಸ್ತ್ರಿ /*ʃa:stri*/ ಕ್ರಿ. ಶಿಕ್ಷೆ, ದಂಡನೆ. punishment. ವಾ: ಅಂವ ಮಾಡ ಅತ್ರೋಣಕ್ಕೆ ಅಂವಂಗೆ ತಕ್ಕ ಶಾಸ್ತಿ ಆವುಟು.

ಶಿಕಂಡಿ /*ʃikaṇḍi*/ ನಾ. 1. ನಪುಂಸಕ, 2. ದಿಟ್ಟ ನಿರ್ಧಾರ ಕೈಗೊಳ್ಳದವ, 3. ಷಂಡ. 1. a eunach, 2. the one who can't take firm decision, 3. an emasculated man. ವಾ: ಶಿಕಂಡಿತ ಬೈಬಡ.

ಶಿರಡ್ಕ /*ʃiraḍka*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಶಿರಾಜೆ /*ʃira:jɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಶಿರಾಡಿ /*ʃira:ḍi*/ ನಾ. ಊರಿನ ಹೆಸರು. Shiradi, name of a town. ವಾ: ಶಿರಾಡಿ ಕಡೆ ಬೆಟ್ಟಗುಡ್ಡ, ಕಾಡ್ ಹೆಚ್ಚಿ.

ಶಿರಾಡಿ ಬೂತ /*ʃira:ḍi bu:ta*/ ನಾ. ಭೂತದ ಹೆಸರು. Shiradi Bhuta, name of a bhuta/a deity. ವಾ: ಶಿರಾಡಿ ಬೂತ ತೇಳ್ದು ತುಳುನಾಡಿನ ಬೂತಾರಾದನೆಯ ದೈವ.

ಶಿರೂರು /*ʃiru:ru*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕೊಲ್ಲಮೊಗ್ರು ಗ್ರಾಮದ ಜಾಗ. a locality in Kollamogru village in Sullia Taluk of Dakshina Kannada District.

ಶಿಲ್ವೆಮರ /*ʃilvemara*/ ನಾ. 1. ಮೋಪಿಗಾಗಿ ಬಳಸುವ ಗಟ್ಟಿಯಾದ ಮರ, 2. ಇದರ ಬೀಜ ತಿನ್ನಲು ರುಚಿ. 1. strong wood used in construction, 4. fruit of this tree has edible seeds. ವಾ: ಶಿಲ್ವೆಮರ ಬಾರಿ ಗಟ್ಟಿ.

ಶಿವಾಲ /*ʃiva:la*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಬಾಳುಗೋಡು ಗ್ರಾಮದ ಜಾಗ. a locality in Balagodu village in Sullia Taluk of Dakshina Kannada District.

ಶೀರಡ್ಕ /*ʃi:raḍka*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮಡಪ್ಪಾಡಿ ಗ್ರಾಮದ ಜಾಗ. 1. family, 2. lineage, 3. a locality in Madappadi village in Sullia Taluk of Dakshina Kannada District.

ಶುಂಟಿ ದೈ /*ʃuṇṭi dai*/ ನಾ. ಶುಂಠಿ ಗಿಡ. a ginger plant. ವಾ: ಶುಂಟಿ ದೈಗೆ ಕೊಳೆ ರೋಗ ಬಾದು.

ಶುಂಠಿ /*ʃuṇṭhi*/ ನಾ. ಪದಾರ್ಥಗಳಲ್ಲಿ ಬಳಸುವ ಸಂಬಾರ ವಸ್ತು. ginger. **ಆಯಿ ಡೂಯಿ ಮಣ್ಣೊಳಗೆ – ಶುಂಠಿ(ಒ).** ವಾ: ಶುಂಟಿ ಹಾಕಿ ಟೀ ಕಾಸಿವೆ.

ಶುಚಿ /*ʃuci*/ ನಾ. 1. ಸ್ವಚ್ಛ, 2. ನಿರ್ಮಲ. 1. clean, 2. pure. ವಾ: ಪರಿಸರನ ಎಲ್ಲೊವು ಶುಚಿಯಾಗಿಟ್ಟ್ ಕಣೊಕು.

ಶೆಟ್ಟಿಯಡ್ಕ /*ʃeṭṭiyaḍka*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಶೆವಿರೆ /*ʃevirɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಶೇಕ /*ʃe:ka*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಶೇಡಿಕಜೆ /*ʃe:ḍikajɛ*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕಳಂಜ ಗ್ರಾಮದ ಜಾಗ. a locality in Kalanja village in Sullia Taluk of Dakshina Kannada District.

ಶೇಡಿಕೆರೆ /*ʃe:ḍikere*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕಲ್ಮಡ್ಕ ಗ್ರಾಮದ ಜಾಗ. a locality in Kalmadka village in Sullia Taluk of Dakshina Kannada District.

ಶೇಣಿ /*ʃe:ṇi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಮರಪಡ್ನೂರು ಗ್ರಾಮದ ಜಾಗ. a locality in Amarapadnuru village in Sullia Taluk of Dakshina Kannada District.

ಶೇಸೋಪಚಾರ /*śe:so:paca:ra*/ ನಾ. 1. ವಿವಾಹ

ಸಮಾರಂಭದಲ್ಲಿ ಧಾರಾಕಾರ್ಯದ ನಂತರ ವಧು ವರರಿಗೆ ಹರಸುವ ಕಾರ್ಯಕ್ರಮ, 2. ಅತಿಥಿ ಸತ್ಕಾರ ಕೂಟ. 1. reception – the programme of blessing the newly wed couple, 2. a food that is served to guests on the day of wedding. ವಾ: ಮೊದುವೆ ಕಳ್ದ ಮೇಲೆ ಶೇಷೋಪಚಾರ ನಡ್ದದೆ.

ಶ್ಯಾನುಬೋಗ /*śya:nubo:ga*/ ನಾ. ಹಿಂದೆ ಪ್ರತಿ ಗ್ರಾಮದಲ್ಲಿ ಇರುತ್ತಿದ್ದ ಕಂದಾಯ ಇಲಾಖೆಯ ಗ್ರಾಮ ಮಟ್ಟದ ಅಧಿಕಾರಿ. a village accountant. ವಾ: ಗ್ರಾಮದ ವೆವಾರಕ್ಕೆ ಸಂಬಂದಪಟ್ಟ ಲೆಕ್ಕಪತ್ರಗಳ ಬರೆವ್ಕೆ ಶ್ಯಾನುಬೋಗತೇಳಿವೆ.

ಷ

ಷಂಡ /*ṣaṇḍa*/ ನಾವಿ. ನಪುಂಸಕ. an eunach. ವಾ: ಷಂಡತ ಬೊಯ್ಯಕಾಗದ್.

ಷಡ್ಡುಗ /*ṣaḍḍuga*/ ನಾ. ಹೆಂಡತಿಯ ಸೋದರಿಯ ಪತಿ. brother-in-law. ವಾ: ಷಡ್ಡುಗ ಮನೆಗೆ ಬಂದೊಳೊ.

ಷರತ್ತು /*ṣarattu*/ ನಾ. ಕರಾರು. a contract. ವಾ: ನೀ ಎಲ್ಲ ಷರತ್ತುಗಳ್‌ಗೆ ಒಪ್ಪಿಕಂಡರೆ ನಮ್ಮೊಟ್ಟಿಗೆ ಬರಕ್.

ಸ

ಸ /*sa*/ ಕ್ರಿ. 1. ಕೂಡ, 2. ಸಂಗಡ, 3. ಸಹ. 1. together, 2. along with, 3. too. ವಾ: ನಾ ಸಾ ನಿಮ್ಮೊಟ್ಟಿಗೆ ಬನ್ನೆ, ಅವಂಗೆಸ ನಾ ಹೇಳಿದ್ದೆ.

ಸಂಕ[1] /*saŋka*/ ನಾ. ಶಂಖ. conch shell. **ದಾಸಯ್ಯಂಗೆ ಯಾವ ಮನೆ ಆದರೆ ಏನ್ ಸಂಕ ಊದಿಕೆ(ಗಾ).** ವಾ: ಸಂಕ ಊದಿಕೆ ಬಂದದೆನ?

ಸಂಕ[2] /*saŋka*/ ನಾ. ಸೇತುವೆ. a bridge. **ಅಡ್ಡ ಕೊಯ್ದರೆ ಚಕ್ರ, ಉದ್ದ ಕೊಯ್ದರೆ ಸಂಖ, ಬುಡ್ಸಿರೆ ನೂರಾರ್ – ಈರುಳ್ಳಿ(ಒ).** ವಾ: ಮಳೆಲಿ ಸಂಕ ಕೊಡಿಗೆ ನೀರ್ ಬಂದದೆ.

ಸಂಕಟ /*saŋkaṭa*/ ನಾ. ಅನಾರೋಗ್ಯದಿಂದ ಉಂಟಾಗುವ ದೈಹಿಕ ನೋವು. feeling of uneasiness. ವಾ: ಈ ಸಂಕಟ ತಡೆಕೆಬೊತ್ತ್.

ಸಂಕಡ್ಕ /*saŋkaḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಐವತ್ತೊಕ್ಲು ಗ್ರಾಮದ ಜಾಗ. a locality in Aivattoklu village in Sullia Taluk of Dakshina Kannada District.

ಸಂಕಪಾಲ /*saŋkapa:la*/ ನಾ. ಅತೀ ಉದ್ದವಾದ ವಿಷದ ಹಾವು. a long venomous-snake. **ಅಂಕ್‌ಡೊಂಕ್ ಸಂಕಪಾಲ ಮೂರ್ ತಲೆ ಹತ್ತ್ ಕಾಲ್ – ಉತ್ತರ : ನೊಗ, ನೇಗಿಲ್, ಮೊನ್ಸ, ಎರಡ್ ಎತ್ತ್‌ಗ(ಒ).** ವಾ: ಕಾಳಿಂಗ ಸರ್ಪಕೆ ಸಂಕಪಾಲಂತ ಹೇಳುವೆ. ಪ: ಸಂಕಬಳ

ಸಂಕಪಾಷಾಣ /*saŋkapa:ṣa:ṇa*/ ನಾ. ಒಂದು ಬಗೆಯ ವಿಷ. ಇಲಿಯನ್ನು ಕೊಲ್ಲಲು ಬಳಸುವರು. white oxide of arsenic, rat poison. **ಸಂಕಪಾಷಾಣ ತಕಂಬಕೂ ದುಡ್ಡಿಲ್ಲೆ(ನು).**

ಸಂಕಪಿತ್ಲು /*saŋkapitlu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಮರಪಡ್ನೂರು ಗ್ರಾಮದ ಜಾಗ. a locality in Amarapadnuru village in Sullia Taluk of Dakshina Kannada District.

ಸಂಕಪ್ಪ /*saŋkappa*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. masculine given name. ಪ: ಸಂಕು

ಸಂಕಬಳ್ಳ /*saŋkabaḷḷa*/ ನಾ. ಕಾಳಿಂಗ ಸರ್ಪ. King cobra. ವಾ: ಸಂಕಬಳ್ಳ ಕಚ್ಚಿರೆ ಬೊದ್ಕಿಕಿಲೆ.

ಸಂಕಲೆ /*saŋkalɛ*/ ನಾ. 1. ಸಂಕೋಲೆ, 2. ಸರಪಳಿ. 1. manacles, 2. chains. ವಾ: ಆನೆದ್ ಕಾಲಿಗೆ ದೊಡ್ಡ ಸಂಕಲೆ ಹಾಕಿವೆ.

ಸಂಕಲ್ಪ /*saŋkalpa*/ ನಾ. 1. ತೀರ್ಮಾನ, 2. ನಿರ್ಣಯ, 3. ಉದ್ದೇಶ, 4. ಗುರಿ. 1. decision, 2. deliberations, 3. intention, 4. aim. ವಾ: ಸಂಕಲ್ಪ ಮಾಡಿ ಪೂಜೆ ವ್ರತ ಮಾಡ್ತು, ಲಾಯ್ಕಲಿ ಓದಿ ಕೆಲ್ಸಕೆ ಸೇರಿ ಒಳ್ಳ ಬೊದ್ಕ್ ನಡ್ಸಿನೆತ ಮೊನ್ಸ್‌ಲಿ ಸಂಕಲ್ಪ ಮಾಡಿಕಣೊಕು.

ಸಂಕು /*saŋku*/ ನಾ. ಶಂಖ. conch shell. ವಾ: ಹಿಂದೆಲ್ಲ ಸಂಕು ಊದಿನೆ ಯುದ್ದ ಸುರು ಮಾಡ್ತು.

ಸಂಕೆ /*saŋkɛ*/ ನಾ. ಸಂಖ್ಯೆ. number. ವಾ: ಸಂಕೆಗು ಅಂಕೆಗು ಯತ್ವಾಸ ಎಂತತ ಗೊತ್ತುಟ?

ಸಂಕೇಸ /*saŋke:sa*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಮರಪಡ್ನೂರು ಗ್ರಾಮದ ಜಾಗ. a locality in Amarapadnuru village in Sullia Taluk of Dakshina Kannada District.

ಸಂಕೋಲೆಕೋಸ್ /*saŋko:lɛko:sɨ*/ ನಾ. ಸರಪಳಿ ಹಾಕಿ. chained. ವಾ: ರಾಜೆರ ಕಾಲಲಿ ಕದ್ದವ್ಕೆ ಸಂಕೋಲೆ ಕೋಸಿ ಜೇಲ್ ವಳೆಗೆ ಹಾಕ್ತಿದ್ದೊಗಡ.

ಸಂಗ[1] /*saŋga* / ನಾ. 1. ಒಡನಾಟ, 2. ಸಹವಾಸ, 3. ಮೈತ್ರಿ, 4. ಗೆಳೆತನ. 1. friendship, 2. association, 3. amity, 4.

alliance. ವಾ: ಒಳ್ಳ ಜೆನೆರ ಸಂಗ ಮಾಡೊಕು.

ಸಂಗ[2] /*saŋga* / ನಾ. 1. ಸಂಘ, 2. ಒಕ್ಕೂಟ. 1. associations, 2. groups/societies. ವಾ: ಎಲ್ಲ ಊರ್‌ಗಳ್‌ಲು ಸುಮಾರ್ ಸಂಗಗ ವಳೊ.

ಸಂಗಟ[1] /*saŋgaṭa* / ನಾ. 1. ಸಂಕಟ, 2. ದುಃಖ, 3. ನೋವು. 1. anxiety, 2. suffering, 3. pain. ವಾ: ಅವಳ ಸಂಗಟ ನೋಡಿಕಾದುಲೆ.

ಸಂಗಟ[2] /*saŋgaṭa* / ಅ. 1. ಜೊತೆ, 2. ಕೂಡ, 3. ಸಂಘಾತ. 1. together, 2. too, 3. alliance. ವಾ: ದೊಡ್ಡವರ ಸಂಗಟ ಮಾಡಿಕನ ಚೂರ್ ಜಾಗ್ರತೆ.

ಸಂಗತ /*saŋgata*/ ನಾ. 1. ಸಂಗಾತಿ, 2. ಒಡನಾಡಿ, 3. ಜೊತೆಗಾರ. 1. a companion, 2. a friend, 3. an associate. ವಾ: ಜೀವನ ಸಂಗತನೊಟ್ಟಿಗೆ ಹೊಂದಾಣಿಕೆ ಇರೊಕು.

ಸಂಗತಿ /*saŋgati*/ ನಾ. 1. ಕೂಡುವಿಕೆ, 2. ಸಹವಾಸ, 3. ಜೊತೆ, 4. ಸಂಬಂಧ, 5. ಒಳ್ಳೆಯ ಗತಿ,- ಇರವು, 6. ವಿಷಯ, 7. ಹಾಡುವಾಗ ಒಂದೇ ಸಾಲನ್ನು ಸ್ವರವ್ಯತ್ಯಾಸದೊಂದಿಗೆ ಪುನಃ ಪುನಃ ಹಾಡುವುದು. 1. a companionship, 2. association, 3. together, 4. status, 5. an appropriate stage, 6. subject matter, 7. singing the same stanza with different tonal variations. ವಾ: ಅವ್ಳು ನಡ್‌ದ ಎಲ್ಲ ಸಂಗತಿನ ಹೇಳ್ತ್.

ಸಂಗಮ /*saŋgama*/ ನಾ. 1. ಎರಡು ಅಥವಾ ಹೆಚ್ಚು ನದಿಗಳು ಕೂಡುವ ಸ್ಥಳ, 2. ಸಂಗಮ ಕ್ಷೇತ್ರ, 3. ನದಿಗಳು ಕೂಡುವ ಸ್ಥಳ. a confluence, where rivers meet. ವಾ: ಬಾಗಮಂಡಲಲಿ ಕಾವೇರಿ, ಕನ್ನಿಕೆ ಮತ್ತೆ ಸುಜೋತಿ ಹೊಳೆಗ ಕೂಡುವ ಜಾಗೆ ಸಂಗಮ.

ಸಂಗಾಲ /*saŋga:la*/ ನಾ. ಬೇಸಿಗೆ ಕಾಲ. the summer season. ವಾ: ಸಂಗಾಲಲಿ ಕುಡೆ ನೀರಿಗೆ ಬಂಗ ಬರೊಕು.

ಸಂಗೀಸ್-ಟಂಗೀಸ್ /*saŋgi:sɨ–ṭaŋgi:sɨ*/ ನಾ. ಎಪ. ಟ್ವೈನ್ ಹಗ್ಗ. thread/rope made of jute. ವಾ: ಸಂಗೀಸ್ ಹಗ್ಗ ಬಾರಿ ಗಟ್ಟಿ.

ಸಂಗ್ತಿ /*saŋgti*/ ನಾ. 1. ಕೂಡುವಿಕೆ, 2. ಸಹವಾಸ, 3. ಜೊತೆ, 4. ಸಂಬಂಧ, 5. ಒಳ್ಳೆಯ ಗತಿ,- ಇರವು, 6. ವಿಷಯ, 7. ಹಾಡುವಾಗ ಒಂದೇ ಸಾಲನ್ನು ಸ್ವರವ್ಯತ್ಯಾಸದೊಂದಿಗೆ ಪುನಃ ಪುನಃ ಹಾಡುವುದು, 8. ಸಂಗತಿ. 1. a companionship, 2. association, 3. together, 4. status, 5. an appropriate stage, 6. subject matter, 7. singing the same stanza with different tonal variations, 8. a matter. ವಾ: ಒಂದ್ ಸಂಗ್ತಿ ಹೇಳೊಕುತ ಓಡಿಕಂಡ್ ಬಂದೆ.

ಸಂಚಮೂರ್ತಿ /*saɲcamu:rti*/ ನಾ. ದೇವರ ಹೆಸರು. Sanchamurthy, a god. ವಾ: ಸಂಚಮೂರ್ತಿತ ದೇವ್‌ರ ಹೆಸ್‌ರ್.

ಸಂಚಾರ /*saɲca:ra*/ ನಾ. 1. ಅಡ್ಡಾಡುವುದು, 2. ತಿರುಗಾಟ, 3. ಪ್ರವಾಸ. 1. wandering, 2. moving, 3. a tour. ವಾ: ವಾಹನ ಸಂಚಾರ ನಿತ್ತತ್.

ಸಂಚಿ /*saɲci*/ ನಾ. ಎಲೆ ಅಡಿಕೆ ಚೀಲ. a pouch to carry betel leaf and betel nut. ವಾ: ಅಜ್ಜಿಕ ಸಂಚಿಲಿ ಎಲಾಡ್ಕೆನ ಹಾಕಿಸಿಕಂಡ್ ಸೊಂಟಲಿ ಸೆಕ್ಕಿಸಿಕಣ್ತಿದ್ದೊ, ಚೆಂಚಿ ಎಲ್ಲಿ ಬಿದ್ದೋತಪ್ಪಾ. ಪ: ಚೆಂಚಿ

ಸಂಡಿ /*saṇḍi*/ ನಾ. 1. ಒದ್ದೆ, 2. ತೇವ, 3. ನೆನೆದಿರುವುದು, 4. ಚಂಡಿ. 1. wet, 2. soak, 3. soaked, 4. wet. ವಾ: ಒಂದೆ ಸೆರಿ ಮಳೆ ಬಂದ್ ಅರ್ವೆಯೆಲ್ಲ ಸಂಡಿ ಆತ್. ಪ: ಚೆಂಡಿಪುಂಡಿ – ಪೂರ್ಣ ಒದ್ದೆ

ಸಂತ /*santa*/ ನಾ. 1. ವಾರಕ್ಕೊಂದು ದಿನ ನಡೆಯುವ ತೆರೆದ ಮಳಿಗೆ ವ್ಯಾಪಾರ, 2. ಜಾತ್ರೆಗಳಲ್ಲಿ ಬರುವ ಅಂಗಡಿಮಟ್ಟುಗಳು. 1. weekly fair-market day, 2. shops during festival, etc. ವಾ: ನಮ್ಮಲ್ಲಿ ಸುಕ್ರವಾರ ಸಂತ ನಡೆದು.

ಸಂತತಿ /*santati*/ ನಾ. 1. ವಂಶ, 2. ಪೀಳಿಗೆ. 1. lineage, 2. generation. ವಾ: ಮನೆ ಹಕ್ಕಿಗಳ ಸಂತತಿ ಅಳಿತುಟ್ಟು.

ಸಂತಾನ /*santa:na*/ ನಾ. 1. ಸಂತಾನ, 2. ಪೀಳಿಗೆ. 1. children, 2. generation. ವಾ: ಸಂತಾನ ಯಾವ್ದೇಳ್, ಮತ್ತೆ ಜೆಗಳ ಮಾಡದಿದ್ದವೆನ? **ಸಂತಾನ ಅಡ್ಸಿ ಹೋಕೆ** /*saŋta:na adsi ho:kɛ*/ 1. ಸಂತನ ಆಳಿದುಹೋಗು, 2. ಬೈಗುಳ ಪದ. 1. losing one's children, 2. an expletive. **ಸಂತಾನ ಮುತ್ತಿ ಹೋಕೆ** /*santa:na mutti ho:kɛ*/ ಶಾಪ, ಬೈಗುಳದ ಪದ. an expletive term. ವಾ: ಬಾರಿ ಉಪದ್ರ ಕೊಟ್ಟವೆ. ಅವರ ಸಂತಾನ ಮುತ್ತಿ ಹೋಕೆ. **ಸಂತಾನ ಮುತ್ತಿಕೆ** /*santa:na muttikɛ*/ ವಂಶ ನಾಶವಾಗಲಿ ಎಂಬ ಬೈಗುಳ. a term which means 'let your family be destroyed'. ವಾ: ಎಸ್ಟ್ ಹೊಟ್ಟೆ ಉರ್‌ಸುವೆ ಅವ್ರ ಸಂತಾನ ಮುತ್ತಿಕೆ.

ಸಂತಾನದ ಗುಣ /*santa:nada guṇa*/ ನಾ. ಬೈಗುಳದ ಪದ. an expletive term. ವಾ: ಸಂತಾನದ ಗುಣ ಎಲ್ಲಿ ಹೋದೆ.

ಸಂತೆ[1] /*santɛ*/ ನಾ. 1. ಬಾಯಿಪಾಠ ಮಾಡುವುದು, 2. ಬಾಯಿಪಾಠ ಮಾಡಬೇಕಾದ ಭಾಗ, 3. ಗುಂಪು, 4. ಗೊತ್ತಾದ ದಿನ ಮತ್ತು ಸ್ಥಳದಲ್ಲಿ ವ್ಯಾಪಾರಕ್ಕಾಗಿ ಸೇರುವ ಜನರ ಗುಂಪು,- ನೆರವಿ, 5. ದೊಂಬಿ. 1. to memorize, 2. a section to be memorized, 3. a group, 4. a paritcular place where weekly fairs are held, 5. a mob. ವಾ: ಸಂತೆ ಹೇಳ್.

ಸಂತೆ[2] /*santɛ*/ ನಾ. ಅನಗತ್ಯವಾದ ವಸ್ತು. unnecessary things. ವಾ: ಮನೆನ ಸಂತೆ ಮಾಡಿಬುಟ್ಟೊಳೊ.

ಸಂತೆ[3] /*santɛ*/ ನಾ. 1. ಮಾರುಕಟ್ಟೆ, 2. ಮಂಡಿ, 3. ಬಜಾರು, 4. ಪೇಟೆ, 5. ಸಂತೆಮಾಳ, 6. ತರಗಿನಂಗಡಿ, 7. 1. ಸರಕುಗಳನ್ನು ಮಾರುವುದಕ್ಕೂ ಕೊಳ್ಳುವುದಕ್ಕೂ ನಿರ್ದಿಷ್ಟ ದಿನಗಳಲ್ಲಿ ಜನರು ಸೇರುವ ಸ್ಥಳ, 2. ಗೊತ್ತಾದ ದಿನ ಮತ್ತು ಸ್ಥಳದಲ್ಲಿ ವ್ಯಾಪಾರಕ್ಕಾಗಿ ಸೇರುವ ಜನರ ಗುಂಪು, 3. ನೆರವಿ. 1. market, 2. a market place, 3. a bazar, 4. a town, 5. a placce where weekly fairs are organised. **ಚಿಂತೆ ಇಲ್ಲದವಂಗೆ ಸಂತೆಲಿ ನಿದ್ರೆ(ಗಾ).** ವಾ: ವಾರಕ್ಕೊಮ್ಮೆ ಸಂತೆ ನಡ್‌ದದೆ.

ಸಂತೆಡ್ಕ /*santeḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ದೇವಚಳ್ಳ ಗ್ರಾಮದ ಜಾಗ. a locality in Devacalla village in Sullia Taluk of Dakshina Kannada District.

ಸಂತೋಷಕೂಟ /*santo:ṣaku:ṭa*/ ನಾ. 1. ಎಲ್ಲಾರು ಸಂತೋಷದಿಂದ ಪಾಲ್ಗೊಳ್ಳುವ ಕಾರ್ಯಕ್ರಮ. to participate happily in a gathering. ವಾ: ಕೈಲ್ ಪೋದ್ ಕಳ್ದ ಮೇಲೆ ಗೌಡ ಸಮಾಜೆಲಿ ಗೌಡುಗಳ ಸೇರ್‌ಸಿಕಂಡ್ ವರ್‌ಸೊಳು ಸಂತೋಷ ಕೂಟ ಮಾಡಿವೆ.

ಸಂದತ್ /*sandatɨ*/ ಕ್ರಿ. 1. ಕಳೆದುಹೋಗು, 2. ತೀರು. 1. to lose, 2. to die. ವಾ: ಕಾಲ ಸಂದತ್. ಆದರೂ ಮೊನ್ನ್‌ನ ಬೇನೆ ಕಮ್ಮಿ ಆಕಿಲೆ.

ಸಂದರ್ಪ /*sandarpa*/ ನಾ. 1. ಸಂದರ್ಭ, 2. ಅವಕಾಶ, 3. ಪ್ರಸಂಗ, 4. ಸಮಯ. 1. occassion, 2. opportunity, 3. incident, 4. time. ವಾ: ಒಳ್ಳ ಸಂದರ್ಪ ಬರ್‌ಲಿತ ಕಾದದ್.

ಸಂದಾಟ /*sanda:ṭa*/ ನಾ. ಹರಕೆ ಒಪ್ಪಿಸುವುದು. to fulfil the vow to a deity. **ಸಂದಾಟಕ್ಕೊಂದ್ ಸುಂದಾಟ(ಗಾ).**

ಸಂದಾಯ /*sanda:ya*/ ನಾ. 1. ಮುಕ್ತಾಯ, 2. ಚುಕ್ತ. 1. end, 2. to repay one's debt completely. ವಾ: ಇಂದಿಗೆ ಎಲ್ಲ ಲೆಕ್ಕ ಸಂದಾಯ ಮಾಡಿ ಆತ್.

ಸಂದಿ /*sandi*/ ನಾ. 1. ಸಂದಿ, 2. ಮೂಲೆ. 1. a corner, 2. a nook. ವಾ: ಒಂದ್ ಕಡೆ ಕೂರಿ ಮಕ್ಕಳೆ. ಎಲ್ಲಿಗೆ ಸಂದಿ ಸಂದಿ ನುಗ್ಗುದು?

ಸಂದಿಗ್ದ /*sandigda*/ ನಾ. ಇಕ್ಕಟ್ಟಿನ ಸ್ಥಿತಿ. a tricky situation. ವಾ: ನೀ ಎಂತ ಸಂದಿಗ್ದ ಸ್ತಿತಿಗೆ ತಂದ್‌ಬುಟ್ಟೆ?

ಸಂದಿವಾತ /*sandiva:ta*/ ನಾ. ಗಂಟು ನೋವು. joint pain. ವಾ: ಸಂದಿವಾತ ಇದ್ದರೆ ಗಂಟ್ ಗಂಟೆಲ್ಲ ಬಾರಿ ಬೇನೆ.

ಸಂದ್[1] /*sandi*/ ನಾ. 1. ಎರಡು ವಸ್ತುಗಳನ್ನು ಜೋಡಿಸಿದ ಜಾಗ, 2. ಎಡೆ, 3. ಕೊನೆ. 1. a place

where two things join, 2. side, 3. end. ವಾ: ಪೆಟಿಗೆ ಸಂದ್‌ಲಿ ಹಾಂತೆಗ ತುಂಬ್ಯೊಳೊ.

ಸಂದ್^{2} /*sandi*/ ನಾ. 1. ಶರೀರ ಬಾಗುವ ಜಾಗ, 2. ಗಂಟು ಭಾಗ. 1. joints in one's body, 2. joints. ವಾ: ಸಂದ್ ಸಂದೆಲ್ಲ ಬೇನೆ.

ಸಂದ್^{3} /*sandi*/ ನಾ. 1. ಸಂದು, 2. ಬಿರುಕು ಮಧ್ಯಾಂತರ, 3. ಎಡೆಹೊತ್ತು, 4. ಮಧ್ಯದ ಅಂತರ. 1. a cleft, 2. fissure, 3. opening, 4. an interval of time. **ಒಂದಿದ್ದ ಮಗಳಿಗೆ ಸಂದೆಲ್ಲಾ ಬ್ಯಾನೆ(ಗಾ). ಸಂದ್ ನೋಡಿ ಉಳಿ ಹಾಕೊಕು(ನು).** ವಾ: ಗೋಡೆ ಸಂದ್‌ಲಿ ಗಾಳಿ ಬಂದದೆ.

ಸಂದ್^{4} /*sandi*/ ನಾ. 1. ಇನ್ನೊಂದು ವಸ್ತುವಿನ ಮೂಲಕ ಆಗುವ ಸಂಪರ್ಕ, 2. ಅಪ್ರತ್ಯಕ್ಷ ಸಂಪರ್ಕ, 3. ಇತರ ಸಾಧನಗಳ ಮೂಲಕ ಸಾಗುವ ಸ್ಪರ್ಶ ಸಂಪರ್ಕ. 1. indirect contact through an object, 2. indirect connection, 3. a contact.

ಸಂದ್‌ಪುಡ್ಕಾಯಿ /*sandipuḍka:yi*/ ನಾ. ನೇಗಿಲನ್ನು ಹಿಡಿದುಕೊಳ್ಳಲು ಸೇರಿಸಿದ ಮರದ ಹಿಡಿ. handle of plough. ವಾ: ಸಂದ್‌ಪುಡ್ಕಾಯಿನ ಹಿಡ್ಕ.

ಸಂದ್ರ /*sandra*/ ನಾ. ಸಮುದ್ರ. an ocean.

ಸಂದ್ರೆಪ /*sandripa*/ ನಾ. 1. ಸಂದರ್ಭ, 2. ಸಮಯ, 3. ಅವಕಾಶ, 4. ಪ್ರಸಂಗ. 1. a situation, 2. time, 3. opportunity, 4. incident. ವಾ: ಈ ಸಂದ್ರೆಪಲಿ ಮಾತಾಡಿಕೆ ಬೊತ್ತ್.

ಸಂಪಟ /*Sampaṭa*/ ನಾ. 1. ಕಲ್ಲನ್ನು ಬೀಸಿ ಬಹುದೂರ ಬಿಸಾಡಲು ಬಳಸುವ ಹುರಿ ಹಗ್ಗದಿಂದ ಮಾಡಿದ ಸಾಧನ, 2. ಕವಣೆ. sling shot. ವಾ: ಸಂಪಟಲಿ ಕಲ್ಲ್ ಬೀಸಿ ಹೊಡೆದು.

ಸಂಪಟಕಟ್ಟುದು /*sampaṭakaṭṭudu*/ ಕ್ರಿ. ತೋಳುಗಳು, ಗಳುಗಳು, ಕಂಬಗಳ ಎರಡೂ ಬದಿಯಿಂದ ತಟ್ಟೆಗಳನ್ನಿಟ್ಟು ಕಟ್ಟುವ ಕಟ್ಟ. a girder. ವಾ: ಸಂಪಟ ಕಟ್ಟುದುತ ಹೇಳೊಕು.

ಸಂಪಡ್ಕ /*sampaḍka*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಸಂಪಣ /*sampaṇa*/ ನಾ. ದೋಸೆ ಹಿಟ್ಟು. dosa batter. ವಾ: ಕಡ್ಡಿಸಿದ ಸಂಪಣ ಹುಳಿ ಬಂದುಟು.

ಸಂಪಾಜೆ /*sampa:je*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಸಂಪಾಜೆ ಗ್ರಾಮದ ಜಾಗ. a locality in Sampaje village in Sullia Taluk of Dakshina Kannada District.

ಸಂಪಾದ್ನೆ /*sampa:dnɛ*/ ನಾ. 1. ಸಂಪಾದನೆ, 2. ಗಳಿಕೆ, 3. ಆದಾಯ. 1. earnings, 2. income, 3. salary. ವಾ: ಒಳ್ಳ ಹೆಸ್‌ರ್ ಸಂಪಾದ್ನೆ ಮಾಡ್ದು ಸುಲಬದ ಮಾತಲ್ಲ.

ಸಂಪಿಗೆಮರ /*sampigɛmara*/ ನಾ. 1. ಸಂಪಿಗೆ ಮರ, 2. ತೆಳು ಹಳದಿ ಬಣ್ಣದ ಸುವಾಸನಾಯುಕ್ತ ಹೂ ಬಿಡುವ ದೊಡ್ಡ ಮರ. 1. Champak Tree, 2. a tree has light yellow coloured fragrant flowers. ವಾ: ಸಂಪಿಗೆ ಮರನ ಇಮಾನ, ಹಡ್‌ಗ್, ಅಡ್ಡ ಪಲ್ಲಕ್ಕಿ, ಗೊಂಬೆ, ಪೆನ್ಸಿಲ್ ಮಾಡಿಕೆ ಬಳ್ಸುವೆಗಡ, ಸಂಪಿಗೆ ಮರದ ಬೀಜಂದ ಎಣ್ಣೆ ತೆಗ್ದವೆ. **ಸಂಪಿಗೆಹೂವ್** /*sampigihu:vi*/ 1. ತೆಳು ಹಳದಿ ಬಣ್ಣದ ಸುವಾಸನೆಯುಕ್ತ ಹೂವು, 2. ಒಂದು ಹೂವಿನ ಹೆಸರು,ಈ ಹೂವುಗಳು ಸಾಮಾನ್ಯವಾಗಿ ಉದ್ಯಾನಗಳಲ್ಲಿ, ದೇವಸ್ಥಾನದ ಅಂಗಳದಲ್ಲಿ ಕಾಣ ಸಿಗುತ್ತದೆ. 1. light yellow coloured fragrant flowers of Champaka tree, 2. a flower. ವಾ: ಸಂಪಿಗೆ ಹೂವ್ ಬಾರಿ ಗಮನ ಅಲ, ತಲೆಗೆ ಒಂದ್ ಹೂನ ಮುಡ್ದರೆ ಸಾಕ್ ಗಮನ ಬರ್‌ತಿದ್ದದೆ.

ಸಂಪೊತ್ತ್ /*sampotti*/ ನಾ. 1. ಸಂಪತ್ತು, 2. ಐಶ್ವರ್ಯ, 3. ಸಿರಿ. 1. wealth, 2. riches, 3. opulence. **ಸಂಪೊತ್ತು ಹೆಚ್ಚಿದಾಂಗೆ ಕೆಸರೂ ಅಂಟಿಕಂಡದೆ(ಗಾ).** ವಾ: ಸಂಪೊತ್ತ್ ಬಾಕನ ಬಡಾಯಿ ಬಾಕಾದ್.

ಸಂಪ್ಯ /*sampya*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಸಂಪ್ಯಾಡಿ /*sampya:ḍi*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಬಳ್ಪ ಗ್ರಾಮದ ಜಾಗ. 1. family, 2. lineage, 3. a locality in Balpaa village in Sullia Taluk of Dakshina Kannada District.

ಸಂಪ್ರೊದಾಯ /*samproda:ya*/ ನಾ. 1. ಪೂರ್ವಿಕರಿಂದ ಪರಂಪರೆಯಾಗಿ ಬಂದಿರುವ ಆಚಾರ, ವ್ಯವಹಾರ, 2. ಪರಂಪರಾಗತವಾಗಿ ಬಂದಿರುವ ರೂಢಿ, 3. ಪದ್ಧತಿ. 1. ancestral

customs, rituals, practices, 2. ritual, 3. tradition. ವಾ: ಸಂಪ್ರೊದಾಯ ಬುಟ್ಟ್ ಹೋಕಾದ್.

ಸಂಬಂದ /*sambanda*/ ನಾ. 1. ಸಂಬಂಧ, 2. ನೆಂಟು, 3. ಬಾಂಧವ್ಯ. 1. relationship, 2. relation, 3. alliance. ವಾ: ನೀವು ಸಂಬಂದಗಳಿಗೆ ಬೆಲೆ ಕೊಟ್ಟ್ ಬಂದರೆಲ ಕುಸಿ ಆತ್.

ಸಂಬಂದಪಟ್ಟವು /*sambandapaṭṭavu*/ ನಾ. ಸಂಬಂಧಿಸಿದವರು. related. ವಾ: ಸಂಬಂದಪಟ್ಟ ಕಾಗದ, ಕ್ರಯ ಪತ್ರನೆಲ್ಲ ಸೆರಿ ನೋಡಿಕಣಿ ಆಗದ?

ಸಂಬರ /*sambara*/ ನಾ. ಕೊತ್ತಂಬರಿ ಬೀಜ. coriandar seeds. ವಾ: ಇಡಿ ಸಂಬರನ ಹೊರ್‌ದ್ ಹೊಡಿ ಮಾಡಿಸೊಕು.

ಸಂಬರನೀರ್ /*sambarani:rɨ*/ ನಾ. ಸಂಬಾರವನ್ನು ನೆನೆಸಿದ ನೀರು. coriandar seeds soaked water. ವಾ: ಸಂಬರ ನೀರ್‌ನ ಪಂಚ್ಚತ್ರೆ ಸೊಪ್ಪ್‌ಲಿ ಕಣ್ಣಿಗೆ ಬೇನೆ ಆಕನ ಬುಟ್ಟವೆ.

ಸಂಬಳ /*sambaḷa*/ ನಾ. 1. ಪಗಾರ, 2. ಸಂಬಳ, 3. ವೇತನ. 1. salary, 2. wages, 3. remuneration. ವಾ: ನಿಮ್ಮಲ್ಲಿ ಕಾಪಿ ಕೊಯ್ಯುವ್ಕೆ ಎಸ್ಟ್ ಸಂಬಳ ಕೊಟ್ಟರೆ, ಸಂಬಳ ಎಸ್ಟ್ ಸಿಕ್ಕುದು.

ಸಂಬಾರ್ ಸೊಪ್ಪು /*samba:rɨ soppu*/ ನಾ. ಕೊತ್ತಂಬರಿ ಸೊಪ್ಪು. coriander leaf. ವಾ: ಸಂಬಾರ್ ಸೊಪ್ಪು ಮಾಸ ಗೈಪು, ತರ್‌ಕಾರಿ ಗೈಪು, ಕೊಚ್ಚಂಬ್, ಪಲಾವ್ ಹಿಂಗೆ ಎಲ್ಲದಕ್ಕು ಹಾಕಿವೆ. ಹಾಕಿರೆ ಗಮನ ಲಾಯ್ಕ ಬಂದದೆ.

ಸಂಬ್ರಾಜನೆ /*sambra:janɛ*/ ನಾ. ಸಮಾರಂಭ. a programme. ವಾ: ಅಲ್ಲಿ ದೊಡ್ಡ ಸಂಬ್ರಾಜನೆ ನಡಿತುಟ್ಟು. ಪ: ಸಂಬ್ರಾಜ್ಯನೆ

ಸಂಮಾನ /*samma:na*/ ನಾ. 1. ವಿಶೇಷ ಸಾಧನೆ ಮಾಡಿದಾಗ, ಪ್ರಶಸ್ತಿ ಬಂದಾಗ ಮಾಡುವ ಅಭಿನಂದನಾ ಕಾರ್ಯಕ್ರಮ. a ceremony to honour someone. ವಾ: ಸಾದನೆ ಮಾಡಿರೆ ಸಂಮಾನ ಮಾಡಿವೆ.

ಸಂಮ್ಮಂದಪಟ್ಟ /*sammmandapaṭṭa*/ ನಾವಿ. ಸಂಬಂಧಿಸಿದ. related to. ವಾ: ಸಂಮ್ಮಂದ ಪಟ್ಟವೆಲ್ಲ ಬರೊಕು.

ಸಂಮ್ರಾಜನೆ /*sammra:janɛ*/ ನಾ. 1. ಸಮಾರಾಧನೆ, 2. ತೃಪ್ತಿಪಡಿಸುವಿಕೆ, 3. ಸೇವೆ, 4. ದೇವರು, ಪಿತೃಗಳು ಮುಂತಾದವರ ಪ್ರೀತ್ಯರ್ಥವಾಗಿ ಮಾಡುವ ಒಂದು ಧಾರ್ಮಿಕವಿಧಿ ಮತ್ತು ಅದರ ಅಂಗವಾಗಿ ಮಾಡುವ ಅನ್ನ ಸಂತರ್ಪಣೆ. 1. a feast, 2. satisfying, 3. service, 4. an annual ritual perfomred in the name of god, ancestors, etc. and an offering of food to the people. ವಾ: ತಿತಿ (ವೈಕುಂಟ) ಸಂಮ್ರಾಜನೆಗೆ ಹೋಕುಟ್ಟು. ಪ: ಸಮ್ರಾದನೆ ಊಟ

ಸಂವ್ದ್ /*sanvdɨ*/ ಕ್ರಿ. ಸವೆದು. to erode/to wear out. ವಾ: ಪಾತ್ರನ ನೆಲಲಿ ಹಾಕಂಡ್ ಬೆಳ್ಗಿಕನ ಸಂವ್ದ್ ಹೋದೆ. ಅದ್ಕೆ ಪಾತ್ರ ಅಡಿಲಿ ಅರ್ವೆ ಹಾಕೊಣೊಕು.

ಸಂಸಯ /*sansaya*/ ನಾ. 1. ಅನುಮಾನ, 2. ಸಂದೇಹ, 3. ಶಂಕೆ. 1. a doubt, 2. confusion, 3. suspicion. ವಾ: ಎಲ್ಲದಕ್ಕು ಸಂಸಯ ಪಡ್ದು ತಪ್ಪು, ಸಂಸಯ ಬೊದ್‌ಕ್‌ನೆ ನಾಸ ಮಾಡ್‌ದೆ. ಪ: ಸಂಶಯ – ಸಂಶಯ/ಅನುಮಾನ

ಸಂವ್ಸಾರ /*sanvsa:ra*/ ನಾ. 1. ಸಂಸಾರ, 2. ಕುಟುಂಬ, 3. ಪರಿವಾರ. 1. a family, 2. a household, 3. a family. ವಾ: ಸಂಸಾರ ತೇಲ್ದ ಮೇಲೆ ಬಜ್ಜ, ಸುಕ, ಮಾತ್, ಕತೆ, ಸಿಟ್ಟ್, ಪ್ರೀತಿ ಇದ್ದದ್ದೆ.

ಸಂವ್ಸಾರ ನೀಸ್ತೊಳೊ / *sanvsa:ra ni:stoḷo*/ ನಾವಿ. ಸಂಸಾರ ಸಾಗಿಸುತ್ತಿದ್ದಾರೆ. managing the affairs of the family. ವಾ: ಎಂಬತ್ತೆಂಟ್ ವರ್‌ಸಂದ ಗಂಡ ಹೆಣ್ಣ್ ಲಾಯ್ಕಲಿ ಸಂಸಾರ ನೀಸ್ತೊಳೊ.

ಸಂಸೋದನೆ /*sanso:dane*/ ನಾ. ಸಂಶೋಧನೆ. research. **ಅವಸ್ಯಕತೆನೇ ಸಂಸೋದನೆಗೆ ಮೂಲ(ಗಾ).** ವಾ: ಜಗತ್ತ್ ಲಿ ಆಗಾಗ ಹೊಸ ಹೊಸ ಸಂಸೋದನೆಗ ನಡಿತ್ತಿದ್ದದೆ.

ಸಕತ್ /*sakatɨ*/ ಕ್ರಿವಿ. ಎಪ. 1. ಭಾರಿ, 2. ತುಂಬಾ, 3. ತೀವ್ರ, 4. ಚೆನ್ನಾಗಿ, 5. ಸಾಕಷ್ಟು. 1. large, 2. too much, 3. intense, 4. amiable, 4. plenty. ವಾ: ನಮ್ಮಲ್ಲಿ ನಿನ್ನೆ ಸಕತ್‌ಮಳೆ ಹೊಡ್‌ತ್.

ಸಕಲ¹ /*sakala*/ ನಾ. 1. ಎಲ್ಲ, 2. ಸಮಗ್ರ. 1. entire, 2. comprehensive. ವಾ: ಅವನೊಟಿಗೆ ಸಕಲ ಬಾಗ್ಯನೂ ಉಟ್ಟು.

ಸಕಲ² /*sakala*/ ನಾ. 1. ಪೂರ್ಣ, 2. ಸಂಪೂರ್ಣ. 1. full, 2. entire. ವಾ: ಸಕಲ ವಿದ್ಯೆ ಪಾರಂಗತ ಆಕು.

ಸಕ್ಕರೆ /*sakkarɛ*/ ನಾ. 1. ಕಬ್ಬಿನ ರಸದಿಂದ ತಯಾರಿಸಿದ ಸಿಹಿಯಾದ ಪದಾರ್ಥ, 2. ಶರ್ಕರೆ. sugar. **ಆನೆಯಾಗಿ ಸೊಪ್ಪು ತಿಂಬದುಕ್ಕಿಂತ ಪಿಜಿನ್ ಆಗಿ ಸಕ್ಕರೆ ತಿನ್ನ್(ಗಾ).** ವಾ: ಸಕ್ಕರೆನ ಕಮ್ಮಿ ಬಳ್ಸೊಕು. ಪ: ಸಕ್ರೆ – ಸಕ್ಕರೆ

ಸಕ್ಕರೆಕಾಯಿಲೆ /*sakkarɛka:yilɛ*/ ನಾ. ಮಧುಮೇಹ. diabetes. ವಾ: ಸಕ್ಕರೆ ಕಾಯಿಲೆ ಬರದಂಗೆ ಎಚ್ಚರ ಮಾಡೊಕು.

ಸಕ್ಕರೆಪಿಜಿನ್ /*sakkarɛpijinɨ*/ ನಾ. 1. ಇರುವೆಗಳ ವಿಧಗಳು, 2. ಇವುಗಳು ಬೇರೆ ಇರುವೆಗಳನ್ನು ಓಡಿಸುತ್ತವೆಂದು ಮತ್ತು ಇವುಗಳು ಇದ್ದಕಡೆ ಏಳಿಗೆ ಎಂದು ಹೇಳುತ್ತಾರೆ. variety among ants. ವಾ: ಸಕ್ಕರೆ ಪಿಜಿನ್ ಸ್ಪೀಂ ಇದ್ದಲ್ಲೆಲ್ಲ ಮಾಯೆನಾಂಗೆ ಮುತ್ತಿಕಂಡವೆ, ಈ ಪಿಜಿನ್ ಇರೊಕಡೆ ಬರ್ಕತ್ತ ಹೇಳಿವೆ.

ಸಗಣಿ /*sagaṇi*/ ನಾ. 1. ಸೆಗಣಿ, 2. ದನದ ಮಲ. 1. cow dung, 2. feces of cattle. **ತಲೆಲಿ ಸಗಣಿ ತುಂಬಿಟ್ಟು(ಗಾ).** ವಾ: ಸಗಣಿ ಗೊಬ್ರ ದೈಗೆ ಹಾಕಿವೆ, ಸಗ್ಣಿ ಗೊಬ್ಬರಲಿ ಸ ಗ್ಯಾಸ್ ತಯರ್ ಮಾಡಿವೆ. ಪ: ಸಗ್ಣಿ

ಸಗಣಿಕೆರೆದು /*sagaṇikeredu*/ ನಾ. ಸಗಣಿ ಸಾರಿಸುವುದು. to apply/smear cow dung. ವಾ: ಹಿಂದೆನ ಕಾಲಲಿ ಸೆಗಣಿ ನೆಲನೆ ಇದ್ದದ್, ಆಗ ವಾರಕ್ಕೊಮ್ಮೆ ಸಗಣಿ ಕೆರೆದು ಕೆಲ್ಸ ಇರ್‌ತಿತ್.

ಸಗಣಿಗುಬ್ಬೆ /*sagaṇigubbɛ*/ ನಾ. ಸಗಣಿ ಮುದ್ದೆ. cow dung ball. ವಾ: ಹಾದಿಲಿ ಬಾಕನ ಎರ್‌ಡ್ ಎಮ್ಮೆದ್ ಸಗಣಿ ಗುಬ್ಬೆ ಸಿಕ್ಕಿತ್, ಗುಬ್ಬೆ ಸಗಣಿ ಕೈಗೆ ಅಂಟುಲೆ.

ಸಗ್ದ್ ಮಾತಾಡ್ದು /*sagdɨ ma:ta:ḍdu*/ ಕ್ರಿ. 1. ಚೀರಿ ಮಾತನಾಡು, 2. ಬೊಬ್ಬೆ ಹಾಕಿ ಮಾತನಾಡು. 1. to scream, 2. to shout loudly. ವಾ: ಸಗ್ದ್ ಮಾತಾಡ್ದು ಹಇ ಕಮ್ಮಿ ಮಾಡ್.

ಸಜ್ಜಿಗೆ /*sajjigɛ*/ ನಾ. 1. ರವೆ, 2. ಉಪ್ಪಿಟ್ಟು. 1. semolina, 2. upma. ವಾ: ಸಜ್ಜಿಗೆ ತಿಂದದ್. ಪ: ಸಜ್ಜಿಗೆ ರೊಟ್ಟಿ – ರವೆಯಿಂದ ಮಾಡಿದ ರೊಟ್ಟಿ

ಸಜ್ಜೆ¹ /*sajjɛ*/ ನಾ. ಒಂದು ಬಗೆಯ ಸಿರಿಧಾನ್ಯ. pearl millet. ವಾ: ಸಜ್ಜೆ ಆರೋಗ್ಯಕ್ಕೆ ಒಳ್ಳೆದ್.

ಸಜ್ಜೆ² /*sajjɛ*/ ನಾ. 1. ಮಹಡಿಯ ಮುಂಭಾಗ, 2. ಉಪ್ಪರಿಗೆಯ ಮೊಗಸಾಲೆ. 1. a corridor, 2. a balcony. ವಾ: ನಿಂಗೆ ಮನೆದ್ ಸಜ್ಜೆಗೆ ಹತ್ತಿಕಾದೊ?

ಸಟ್‌ಗ /*saṭga*/ ನಾ. ಕಾವಲಿಯಿಂದ ಹಿಟ್ಟನ್ನು ತಿಂಡಿಯನ್ನು ಎಬ್ಬಿಸಲು ಬಳಸುವ ಚಪ್ಪಟೆಯ ಸೌಟು. a spatula. ವಾ: ರೊಟ್ಟಿ, ದೋಸೆನ ಮೊಗ್‌ಚಿ ಹಾಕಿಕೆ ಸಟ್ಗ ಬೇಕಾದೆ. ಪ: ಸಟ್ಟ್‌ಗ, ಸಟ್ಟುಗ

ಸಟ್ಗದಮರ /*saṭgadamara*/ ನಾ. 1. ಕಡ್ಡಿ ಪೆಟ್ಟಿಗೆ ಮರ, 2. ಮೃದು ಜಾತಿಯ ಕಾಡು ಮರ. Aspen tree, used in making match sticks. ವಾ: ಬೆಂಕಿಕಡ್ಡಿ ಮಾಡಿಕೆ ಸಟ್ಗದ ಮರ ಬಾರಿ ಒಳ್ಳ ಮರ.

ಸಟ್ಗದಹಣ /*saṭgadahaṇa*/ ನಾ. ಮದುವೆಯ ಕ್ರಮ, ಪಾಯಸ ಬಡಿಸಿದ ನವ ವಧುವಿಗೆ ಕೊಡುವ ತೆರವಿನ ಹಣ. a custom followed in marriage, giving some money to the bride for serving kheer, a sweet dish.

ಸಡಗರ /*saḍagara*/ ನಾ. 1. ಸಮಾರಂಭದ ಗೌಜಿ, ಹುರುಪು, 2. ಉತ್ಸಾಹ, 3. ಸಂಭ್ರಮ, 4. ಅತಿಶ್ರದ್ಧೆ. 1. excitement of celebration, 2. enthusiasm, 3. celebration, 4. keen interest. ವಾ: ಬಾರಿ ಸಡಗರಲಿ ಒಳೊ, ಕೂಸಿಗೆ ಹೆಸ್ರಾಕ್‌ಕನ ಎಲ್ಲೊರ ಸಡಗರ ನೋಡಕಿತ್. ಪ: ಸಡ್ಗರ

ಸಡನ್ನೆ /*saḍannɛ*/ ನಾ. ಎಪ. 1. ಕೂಡಲೇ, 2. ಆಕಸ್ಮಿಕ, 3. ಹಠಾತ್, 4. ಅನಿರೀಕ್ಷಿತವಾದ, 5. ಮುನ್ಸೂಚನೆಯಿಲ್ಲದ. 1. immediately, 2. by chance, 3. all of a sudden, 4. unexpectedly, 5. without any intimation. ವಾ: ಮನೆಗೆ ಸಡನ್ನೆ ನಂಟ್ರ್ ಗ ಬಂದ್‌ಬುಟ್ಟೊ. ಪ: ಸಡನ್

ಸಡಿಲ /*saḍila*/ ನಾ. 1. ಚಿಲ್ಲರೆ, 2. ಅಸ್ಥಿರತೆ, 3. ಬಿಗಿಯಲ್ಲದ್ದು, 4. ಮಾನಸಿಕವಾಗಿ ದುರ್ಬಲ, 5. ಲೂಸ್. 1. insignificant, 2. inconsistency, 3. lose, 4. mentally weak, 5. lose. ವಾ: ಕಟ್ಟಿದ್ದ್ ಅರ್ಕಟ್ ಸಡಿಲ ಆದರೆ ಬಿಚ್ಚಿಹೋದೆ.

ಸಡೆ /*saḍɛ*/ ನಾ. ದೊಡ್ಡ ಚಮಚ. a big spoon / a ladle. ವಾ: ಮರದ ಸಡೆಲಿ ಹುಗ್ಗಿ ಇಕ್ಕ್ ತ್ತಿದ್ದೊ.

ಸಡೆಕಾವು /*saḍɛka:vu*/ ನಾ. ಚಮಚದ ಹಿಡಿ. handle of spoon/ladle. ವಾ: ಸಣ್ಣ ಮಕ್ಕಳಿಗೆ, ಪ್ರಾಣಿಗಳಿಗೆ

ಬಾಯಿಗೆ ಸಡೆಕಾವು ಹಾಕಿ ಮೊದ್ದ್ ಹೊಯ್ಯದು. ಪ: ಸೆಡೆಕಾವು

ಸಡೆಹಿಟ್ಟ್ /*saḍɛhiṭṭɨ*/ ನಾ. ಚಮಚಕ್ಕೆ ಅಕ್ಕಿ ಹಿಟ್ಟು ಅದ್ದಿ ಬೇಯಿಸಿದ ತಿಂಡಿ. a dish made of rice batter. ವಾ: ರೊಟ್ಟಿ ಬಂದ ವಳ್ದರೆ ಸಡೆಗೆ ಹಿಟ್ಟ್‌ನ ಮೆತ್ತಿಸಿ ಅನ್ನ ಬೇಯಕನ ಮಡ್ಕೆ ವಳೆಗೆ ಹಾಕಿ ಬೇಸುದು, ಅದೆ ಸಡೆ ಹಿಟ್ಟ್.

ಸಡ್ಲೆಮರ /*saḍlɛmara*/ ನಾ. ಕಾಡು ಬದನೆಕಾಯಿ ಗಿಡ. a forest brinjal plant. ವಾ: ಸಡ್ಲೆ ಮರಲಿ ಹೂವಾಕನ ಉಣ್ಣಿಗ ಜಾಸ್ತಿಗಡ.

ಸಡ್ಲ್ /*saḍlɨ*/ ನಾ. 1. ಸಿಡಿಲು, 2. ಎರಡು ಮೋಡಗಳ ಗುಂಪಿನ ನಡುವಿನ ಘರ್ಷಣೆಯ ಫಲವಾಗಿ ಜೋರಾದ ಶಬ್ದದೊಂದಿಗೆ ಗೋಚರಿಸುವ ವಿದ್ಯುತ್ಪ್ರವಾಹ, 3. ಅಶನಿ. 1. lightning, 2. spark of electricity and huge noise caused in the atmosphere because of friction between clouds, 3. thunder. ವಾ: ಸಡ್ಲ್ ಬಡೆಕನ ಮರದ ಕೆಳಗೆ ಹೋಕಾದ್.

ಸಣಪ /*saṇapa*/ ಸನಾ. ಚಿಕ್ಕಪ್ಪ. younger brother of one's father-uncle. ವಾ: ಸಣಪ ಈಗ ಬಂದರಿಯ? ಸಣಪಂಗೆ ನೀರ್ ಕೊಟ್ಟರಿನ ಮಕ್ಕಳೆ? ಪ: ಸಣ್ಣಪ್ಪ

ಸಣವ /*saṇava*/ ಸನಾ. ಚಿಕ್ಕಮ್ಮ. younger sister of one's father-aunt. ವಾ: ಸಣವ ಹೆಂಗೊಳರಿ ಸೌಕ್ಯನ? ಪ: ಸಣ್ಣವ್ವ

ಸಣ್‌ಕಲ /*saṇikala*/ ನಾ. 1. ಬಹಳ ತೆಳ್ಳಗಿರುವವನು, 2. ಬಡಕಲು. 1. a lean person, 2. a weak person. ವಾ: ಅದ್ ಬಾರಿ ಸಣ್‌ಕಲ ಕೂಸು.

ಸಣ್ಕೆಲಾಂಡಿ /*saṇkɨla:ṇḍi*/ ನಾ. 1. ಬಹಳ ತೆಳ್ಳಗಿರುವವನು, 2. ಬಡಕಲು. a lean person, 2. a weak person. ವಾ: ಸಣ್ಕೆಲಾಂಡಿ ಹೈದ ಬಾತ್.

ಸಣ್ಣ /*saṇṇa*/ ನಾ. 1. ಚಿಕ್ಕ, 2. ಪುಟ್ಟ. 1. small, 2. little. ವಾ: ಸಣ್ಣ ಸಣ್ಣ ವಿಸ್ಯಕೆ ಸಿಟ್ಟ್ ಮಾಡಿಕಾದ್, ಬೊದ್ಕ್‌ಲಿ ಎಲ್ಲನು ಇದ್ದದೆ, ಹೊಂದಿಕಂಡ್ ಹೋಕು.

ಸಣ್ಣ ಉರ್ಲ್ /*saṇṇa urlɨ*/ ನಾವಿ. 1. ಚಿಕ್ಕ ನೇಣು, 2. ಕುಣಿಕೆ. 1. a small noose, 2. noose. ವಾ: ಅದ್ ಸಣ್ಣ ಉರ್ಲ್ ಆತ್.

ಸಣ್ಣಗುಮ್ಮಟೆ /*saṇṇagummaṭɛ*/ ನಾವಿ. 1. ಗುಪ್ಪಟ್ಟೆ ಹಣ್ಣು, 2. ಗುಮ್ಮಟೆ ಹಣ್ಣು, 3. ಪಟಾಕಿ ಹಣ್ಣು, 4. ಗದ್ದೆ ಹಣ್ಣಿನ ಗಿಡ, ಇದು ರಸ್ತೆ ಬದಿ, ತೋಟ ಹಾಗು ಖಾಲಿ ಜಾಗಗಳಲ್ಲಿ ಹೆಚ್ಚಾಗಿ ಕಂಡು ಬರುತ್ತದೆ. wonderberry/sunberry (Solanum burbanki). ವಾ: ಆಯುರ್ವೇದಲಿ ಸಣ್ಣ ಗುಮ್ಮಟೆನ ಸೊಪ್ಪುನ ಮೊದ್ದಿಗಾಗಿ ಬಳ್ಸುವೆ.

ಸಣ್ಣಚುಂಡೆ /*saṇṇ cuṇḍɛ*/ ನಾವಿ. ಹಸಿರು ಬದನೆ ರೀತಿಯ ದುಂಡನೆಯ ಸಣ್ಣ ಕಾಡು ಕಾಯಿಗಳು. West Indian nightshade. ವಾ: ಸಣ್ಣ ಚುಂಡೆನ ಮೊಸರ್‌ಲಿ ಹಾಕಿ ಬಿಸ್‌ಲ್‌ಲಿ ಒಣ್ಗಿಸಿ ಇಸಿಕಂಡರೆ ಮಳ್ಗಾಲಲಿ ಉಂಬಕನ ಹೊರ್‌ಕಂಡರೆ ಊಟ ಸೇರಿಕೆ ಒಳ್ಳದ್. **ಸಣ್ಣಚುಂಡೆ ದೈ** /*saṇṇacuṇḍɛ giḍa*/ ಕಾಡು ಬದನೆಕಾಯಿ ಗಿಡ. West Indian nightshade. **ಕುದುನೆ ಗಿಡಕೆ ಏಣಿ ಇಸಿಕಾದು(ನು).** ವಾ: ಸಣ್ಣ ಚುಂಡೆ ದೈಕೆ ಕಸಿ ಮಾಡಿ ಅದರ್‌ಲಿ ದೊಡ್ಡ ಬದನೆ ಬೆಳ್ದವೆ. ಪ: ಕುದನೆ ದೈ.

ಸಣ್ಣಚೆರ್ಗ್ /*saṇṇacergɨ*/ ನಾವಿ. 1. ಮೀನಿನ ಹೆಸರು, 2. ಹುಡಿ ಮೀನುಗಳು. a variety of fish. ವಾ: ಸಣ್ಣ ಚೆರ್ಗ್ ತಿಂಬಕೆ ಲಾಯ್ಕ.

ಸಣ್ಣಚೈಪೆ /*saṇṇacaipɨ*/ ನಾವಿ. ಮೀನಿನ ಒಂದು ಜಾತಿ. a variety of fish. ವಾ: ಸಣ್ಣ ಚೈಪೆ ಗೈಪು ಬೇಕಾ?

ಸಣ್ಣಂವ /*saṇṇanva*/ ನಾ. ಕಿರಿಯವ. the youngest. **ಆಳ್ ಸಣ್ಣಂವಾದರೂ, ಆಸ್ತಿ ದೊಡ್ಡದ್(ಗಾ).** ವಾ: ಇಂವ ಸಣ್ಣಂವ, ಅಂವ ದೊಡ್ಡಂವ.

ಸಣ್ಣಕ್ಕ /*saṇṇakka*/ ನಾ. ವ್ಯಕ್ತಿನಾಮ ಸ್ತ್ರೀ. Sannakka, name of a woman. ವಾ: ಸಣ್ಣಕ್ಕ ಯಾಗ ಬಂದರಿ?

ಸಣ್ಣಕ್ಕಿಮರ /*saṇṇakki mara*/ ನಾ. ಕಾಡುಮರ. a forest tree. ವಾ: ಸಣ್ಣಕ್ಕಿ ಮರದ ಹೂನ ತಿಂದರೆ ಒಣದ್ರಾಕ್ಷೆ ತಿಂದಂಗಾದೆ.

ಸಣ್ಣಕ್ಕಿಮಜಲು /*saṇṇakkimajalu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಸಂಪಾಜೆ ಗ್ರಾಮದ ಜಾಗ. a locality in Sampaje village in Sullia Taluk of Dakshina Kannada District.

ಸಣ್ಣಜನ /*saṇṇajana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಸಣ್ಣದ್ /*saṇṇadɨ*/ ನಾ. 1. ಕಿರಿದು, 2. ಚಿಕ್ಕ. 1. small,

2. tiny. ವಾ: ಮನೆ ಸಣ್ಣದ್ ಆದರೇನ್ ಮನ್ಸ್ ದೊಡ್ಡದಿದ್ದರಾತ್.

ಸಣ್ಣಮನೆ[1] /*saṉṉamanɛ*/ ನಾ. ಚಿಕ್ಕ ಮನೆ. a small house. ವಾ: ನಮ್ಮದ್ ಹಳ್ಳ ಸಣ್ಣಮನೆ.

ಸಣ್ಣಮನೆ[2] /*saṉṉamane*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಸಂಪಾಜೆ ಗ್ರಾಮದ ಜಾಗ. a locality in Sampaje village in Sullia Taluk of Dakshina Kannada District.

ಸಣ್ಣಮೆಣ್ಸ್ /*Saṉṉameṉsi*/ ನಾ. 1. ಗಾಂಧಾರಿ ಮೆಣಸು, 2. ಲವಂಗ ಮೆಣಸಿನಕಾಯಿ. 1. Bird eye chilli, 2. Gandhari Chilly. ವಾ: ಸಣ್ಣಮೆಣ್ಸ್‌ಲಿ ಸನ ವೈನ್ ಮಾಡಿವೆ.

ಸಣ್ಣಮ್ಮನ /*saṉṉammana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಸಣ್ಣವು /*saṉṉavu*/ ನಾ. 1. ಚಿಕ್ಕವರು, 2. ಚಿಕ್ಕ ಮಕ್ಕಳು. 1. younger, 2. young children. ವಾ: ಸಣ್ಣವು ಇರಿಕನ ಅವರ ಮುಂದೆ ಹೊಡ್ದಾಡಿಕಂಡರೆ ಮುಂದೆ ಅವು ಅದೆ ಕಲೆದು.

ಸಣ್ಣೆತ್ /*saṉṉeti*/ ನಾ. 1. ಚಿಕ್ಕದು, 2. ಕಿರಿದು. 1. small, 2. tiny. **ಮೂರ್ತಿ ಸಣ್ಣೆತಾದರೂ ಕೀರ್ತಿ ದೊಡ್ಡದ್(ಗಾ).** ವಾ: ಅಂವ ನೋಡಿಕೆ ಸಣ್ಣೆತ್ ಆದರೂ ಪೆಟ್ಟ್ ಬಲಾಗಿದ್ದದೆ.

ಸಣ್ಣೋಳು /*saṉṉo:ḷu*/ ನಾ. 1. ಪಣೋಳು, 2. ಚಿಕ್ಕವಳು. 1. a young girl, 2. younger girl. ವಾ: ಅವ್ಳೆ ಸಣ್ಣೋಳು. ಕಡೆಕೂಸು.

ಸತ್ಕಾರ /*satka:ra*/ ಕ್ರಿ. 1. ಉಪಚಾರ, 2. ಆತಿಥ್ಯ. 1. hospitality, 3. reception. ವಾ: ಮನೆಗೆ ಬಂದವರ ಸತ್ಕಾರ ಮಾಡೊಕು.

ಸತ್ತಪಾಪ್ರು /*sattapa:pru*/ ನಾ. ಬೈಗುಳ ಪದ. an expletive term. ವಾ: ಸತ್ತ ಪಾಪ್ರು ಎಲ್ಲಿ ಹೋತು ತ? ಕಾಯೊದೆ ಆತ್.

ಸತ್ತಂವ /*sattanva*/ ಕ್ರಿ. 1. ಮರಣಹೊಂದು, 2. ಗತಿಸು, 3. ನಿಧನ ಹೊಂದು. to die. ವಾ: ಸತ್ತಂವ ಯಾರ್‌ತನೆ ಗೊತ್ತಿಗಡ.

ಸತ್ತಲಿಸಾಯ್ಲಿ /*sattalisa:yli*/ ನಾ. 1. ಸತ್ತು ಹೋಗಲಿ, 2. ಬೈಗುಳ ಪದ. 1. let him/her die, 2. an expletive. ವಾ: ಮನಾರ ಕದ್ದವೆ. ಕದ್ದವ್ ಸತ್ತಲಿಸಾಯ್ಲಿ.

ಸತ್ತಲ್ಲಿಸತ್ತೇಹೋಗ್ /*sattalli satte:ho:gi*/ ನಾ. ಸತ್ತು ಹೋಗೆಂದು ಶಾಪವಿಡುವುದು. to curse that someone should die.

ಸತ್ಯ /*satya*/ ನಾ. 1. ನಿಜ, 2. ಯಥಾರ್ಥ. truth. **ಸತ್ಯ ಕ್ಕೋದವನ ತಿಕ ಬೆತ್ತಲೆ(ಗಾ).** ವಾ: ಮಕ್ಕಳಿಗೆ ಸತ್ಯ ಹೇಳಿಕೆ ಕಲ್‌ಸೊಕು.

ಸತ್ಯನಿಲಯ /*satyanilaya*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ನೆಲ್ಲೂರು ಕೆಮ್ರಾಜೆ ಗ್ರಾಮದ ಜಾಗ. a locality in Nelluru Kemraje village in Sullia Taluk of Dakshina Kannada District.

ಸತ್ಯಾದಿಗಿತ್ತಿ /*satya:digitti*/ ನಾ. 1. ಸತ್ಯ ಹೇಳುವವಳು, 2. ಸತ್ಯವಂತಳು. a woman who is truthful. ವಾ: ಸತ್ಯಾದಿಗಿತ್ತಿ ಹೆಣ್ಣ್ ಅದ್. ಸುಳ್ಳ್ ಪಳ್ಳೆಲ್ಲ ಹೇಳಿಕಿಲೆ.

ಸದಸ್ಯರ್ /*sadasyar*/ ನಾ. 1. ಸದಸ್ಯರು, 2. 2. ಸಮಾಜ, ಸಮಿತಿ, ಸಂಘ ಮುಂತಾದ ಘಟಕಗಳಲ್ಲಿ ಸೇರಿರುವವರು. members of a committe, association, etc. ವಾ: ಸಂಗದ ಸದಸ್ಯರ್ ಒಮ್ಮತಲಿ ಕೆಲ್‌ಸ ಮಾಡಿವೆ.

ಸದೆ /*sadɛ*/ ನಾ. ಕಸ. garbage. ವಾ: ಸದೆನ ಹೊರೆಗೆ ಬಿಸಾಕ್.

ಸದ್ /*sadi*/ ನಾ. 1. ಶಬ್ದ, 2. ಗದ್ದಲ. 1. sound, 2. noise. ವಾ: ಸದ್ ಮಾಡ್ಬಡ, ಕೂಸು ಎದ್ದದೆ.

ಸದ್ದ್ /*saddi*/ ನಾ. 1. ಸದ್ದು, 2. ಶಬ್ದ, 3. ಗದ್ದಲ. 1. sound, 2. noise, 3. commotion. **ಆನೆ ಹಿಂದೆ ಇದ್ದರೂ, ಗಂಟೆ ಸದ್ದ್ ಮುಂದೆ(ಗಾ).** ವಾ: ಪಾತ್ರ ಸದ್ದ್ ಮಾಡ್ಬಡನೆ. ಪ: ಸದ್ದುಗದ್ದಲ.

ಸನ /*sana*/ ಅ. 1. ಸಹ, 2. ಕೂಡ. 1. too, 2. also. ವಾ: ನೀವ್ ಹೆಂಗೊಳರಿತ ಸನ ಕೇಳಿಕೆ ಬೊತ್ತ?

ಸನಿ /*sani*/ ನಾ. 1. ಶನಿ, 2. ಸೂರ್ಯನ ಪುತ್ರ, 3. ನವಗ್ರಹಗಳಲ್ಲಿ ಒಂದು. 1. Shani, 2. son of the sun, 3. one of nine planets. ವಾ: ಸನಿ ಸಾಂತಿ ಮಾಡ್ಸೊಕು, ಇಲ್ಲರೆ ದೆಸೆಪಲಲಿ ಆಡ್ಸಿದೆ.

ಸನಿವಾರ /*saniva:ra*/ ನಾ. 1. ಶನಿವಾರ, 2. ವಾರದ ಏಳು ದಿನಗಳಲ್ಲಿ ಒಂದು. 1. Saturday, 2. one of

the days of a week. ವಾ: ಸನಿವಾರ ಆಂಜನೆಯ ದೇಸ್ತಾನಕೆ ಪೂಜೆ ಮಾಡ್ಸಿರೆ ಒಳ್ಳೆದ್.

ಸನ್ನಿಪಾತ /*sannipa:ta*/ ನಾ. ಬಾಣಂತಿಗೆ ಶೀತದಿಂದ ಬರುವ ಜ್ವರ. a fever developed by a new mother due to cold. ವಾ: ಸನ್ನಿಪಾತ ಆದರೆ ಕೂಸಿಗೂ ಬಾಣ್ತಿಗು ಬಾರಿ ಬಂಗ ಆದೆ.

ಸನ್ನೇಸಿ /*sanne:si*/ ನಾ. 1. ಯತಿ, 2. ಸನ್ಯಾಸಿ, 3. ಐಹಿಕ ಸುಖಗಳನ್ನು ತೊರೆದವನು, 4. ಯೋಗಿ. 1. a monk, 2. a celibate, 3. an ascetic, 4. a sage. ವಾ: ಅಂವ ಸಂಸಾರ ಬುಟ್ಟ್ ಸನ್ನೇಸಿ ಆತ್.

ಸನ್ಯಾಸಿವೇಸ /*san'ya:sive:sa*/ ನಾ. ಸನ್ಯಾಸಿವೇಷ. monk's attire. ವಾ: ಇಸ್ಕೂಲ್‌ಲಿ ಸನ್ಯಾಸಿವೇಸ ಹಾಕಿದ್ದೊ.

ಸನ್ಸಾರ /*sansa:ra*/ ನಾ. 1. ಸಂಸಾರ, 2. ಪರಿವಾರ, 3. ಕುಟುಂಬ, 4. ಲೌಕಿಕ ಜೀವನ, 5. ಗೃಹಜೀವನ. 1. family, 2. kinsmen, 3. family, 4. worldy life, 5. family life. ವಾ: ಸನ್ಸಾರತೇಲ್ಲ ಮೇಲೆ ಬಜ್ಜ, ಸುಕ ಇದ್ದದ್ದೆ, ಸುದಾರ್‌ಸಿಕಂಡ್ ಹೋಕು.

ಸಪಟಕಾಯಿ /*sapaṭaka:yi*/ ನಾ. 1. ಸಪೋಟ, 2. ಚಿಕ್ಕು. 1. sapota, 2. chikoo fruit. ವಾ: ಸಪಟಕಾಯಿ ಕೊಯ್ಯಕನ ಅದರ ಹಾಲ್ ಕಣ್ಣಿಗೆ ಹಾರದಂಗೆ ನೋಡಿಕಣಕು.

ಸಪಾಯಿ[1] /*sapa:yi*/ ನಾ. 1. ನಯ, 2. ನುಣುಪು. 1. smooth, 2. glossy. ವಾ: ಈ ನೆಲ ಸಪಾಯಿನಂಗೆ ಉಟ್ಟು.

ಸಪಾಯಿ[2] /*sapa:yi*/ ನಾ. 1. ಕೊಲ್ಲುವಿಕೆ, 2. ನಿರ್ನಾಮ. 1. act of killing, 2. destruction.

ಸಪೂರ /*sapu:ra*/ ನಾ. ತೆಳ್ಳಗೆ. thin/lean. ವಾ: ಗೂಡೆ ಸಪೂರ ಆಗಿ ಉದ್ದ ಉಟ್ಟು.

ಸಪೋಟಹಣ್ಣ್ /*sapo:ṭa haṇṇi*/ ನಾ. 1. ಸಪೋಟ ಹಣ್ಣು, 2. ಚಿಕ್ಕು. 1. sapota, 2. chikoo fruit. ವಾ: ಸಪೋಟ ಹಣ್ಣ್ ಯಾವ ಸೀಂಯಿ.

ಸಬಳ /*sabaḷa*/ ನಾ. 1. ಹಾರೆ, 2. ಸಬ್ಬಾಳ್. a crow-bar. **ಸಾದಿಸಿರೆ ಸಬಳ ನುಂಗಕ್(ಗಾ).** ವಾ: ಸಬಳಲಿ ನೆಲ ಎಳ್ಳುದು.

ಸಬಾಬಾಡೆ /*saba:ba:ḍɛ*/ ನಾ. 1. ಸಭಾಂಗಣ, 2. ಸಭೆ, ಸಮಾರಂಭಗಳು ನಡೆಯುವ ಭವನ, 3. ಶ್ರೋತೃ ಸ್ಥಳ, 4. ಪ್ರೇಕ್ಷಾಗೃಹ. 1. an auditorium, 2. a hall where events are ogranised, 3. a concert hall, 4. a theatre. ವಾ: ಸಬಾಬಾಡೆಲಿ ಎಲ್ಲೊವು ಸೇರ್‌ದು.

ಸಬಾಸದರ್ /*saba:sadarɨ*/ ನಾ. ಸಭೆಯ ಸದಸ್ಯರು. members atteding the meeting. ವಾ: ಸಬಾಸ್‌ದ ಎಲ್ಲೊವು ಬಂದೊಳನ?

ಸಬುದ /*sabuda*/ ನಾ. 1. ಶಬ್ದ, 2. ಸದ್ದು, 3. ಸಪ್ಪುಳ, 4. ಗದ್ದಲ. 1. sound, 2. noise, 3. sound, 4. commotion. ವಾ: ಹೊರೆಗೆ ಎಂತೊ ಬಿದ್ದಾಂಗೆ ಸಬುದ ಕೇಳ್ತ್.

ಸಬೂಬು /*sabu:bu*/ ಕ್ರಿವಿ. 1. ಸಮರ್ಥನೆ, 2. ಕ್ಷುಲ್ಲಕ ಕಾರಣ ನೀಡು, 2. ನೆಪ. 1. to justify, 2. offer a petty reason, 3. excuse. ವಾ: ಅಂವ ಸಬೂಬು ಹೇಳಿಕಂಡೆ ತಿರ್‌ಗುದು, ಸಬೂಬು ಹೇಳಿಕಾಗದ್.

ಸಬೆ /*sabɛ*/ ನಾ. 1. ಸಭೆ, 2. ಗೋಷ್ಠಿ, 3. ಒಂದು ಉದ್ದೇಶಿತ ಅಥವಾ ಕಾರ್ಯಕ್ರಮಕ್ಕಾಗಿ ಕಲೆತ ಜನಗಳ ಸಮುದಾಯ. 1. a meeting, 2. a gathering, 3. a programme. ವಾ: ಅಲ್ಲಿ ಯಾವ್ದೊ ವಿಚಾರಕೆ ಸಬೆ ಸೇರಿಯೊಳ.

ಸಬ್ಬಕತ್ತಿ /*sabbakatti*/ ನಾ. ದಬ್ಬೆ ಕತ್ತಿ, ಎರಡೂ ಕಡೆ ಬಾಯಿ ಇರುವ ಕತ್ತಿ. ಕಾಫಿ ತೋಟದ ಕಳೆ ಕತ್ತರಿಸುವ ಕತ್ತಿ. a sharp two-edged knife. ವಾ: ಸಬ್ಬಕತ್ತಿನ ಕಾಪಿ ತೋಟದ ಕಳೆ ತೆಗೆಕೆ ಬಳ್‌ಸುವೆ.

ಸಬ್ಬಂಡ್ರ /*sabbaṇḍra*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಸಬ್ಬಮ್ಮ /*sabbamma*/ ನಾ. 1. ಸರಸ್ವತಿ ದೇವಿ, 2. ಕೆಲವೊಂದು ಗೌಡಕುಟುಂಬಗಳು ಆರಾಧಿಸುವ ಕುಲ ದೇವತೆ. 1. godess Saraswathi, 2. a family deity among the Gowda community. ವಾ: ಸಬಮ್ಮ ದೇವಿಗೆ ಮೊದ್ವೆಲಿ ಹರ್‌ಕೆ ಹಣ ಕಟ್ಟಿಸುವೆ.

ಸಬ್ಬಲ್[1] /*sabbalɛ*/ ನಾ. 1. ಒಂದು ಬದಿ ಚೂಪಾದ ಸನ್ನೆಯಾಗಿ ಬಳಸಲು ಉಪಯೋಗಿಸುವ ಕಬ್ಬಿಣದ ದಪ್ಪನೆಯ ಸರಳು ಸವೆಗೋಲು, 2. ಹಾರೆಕೋಲು. a crow bar. ವಾ: ಸಬ್ಬಲ್ ತಂದೊ.

ಸಬ್ಬಲ್[2] /*sabbalɛ*/ ನಾ. 1. ಗಂಡು ಜನನಾಂಗ, 2. ಶಿಶ್ನ.

penis, a male reproductory organ. **ಸಬ್ಬಲ್ ಕುತ್ತ ಆಗುಟು(ನು).** ವಾ: ಸಬ್ಬಲ್ ಹೆಗಲಿಗಿಸಿಕಂಡ್ ಊರೊರ್ಮೆ ಹೋತ್.

ಸಬ್ಬಲ್[3] /*sabbal*/ ನಾ. ನೆಲ ಅಗೆಯಲು ಉಪಯೋಗಿಸುವ ಸಲಾಕೆ. a crowbar. ವಾ: ಸಬ್ಬಲ್ ತಕಂಡ್ ನೆಲ ಎಳ್ಳಿಕೆ ಉಟ್ಟು.

ಸಬ್ಬಾಳ್[4] /*sabba:ḷɛ*/ ನಾ. 1. ಹಾರೆಗೋಲು, 2. ಸೈಂಗೋಲು. a crow bar. ವಾ: ಸಬ್ಬಲುಲಿ ನೆಲ ಎಳ್ಳಿ ಗುಂಡಿ ತೆಗೆದು.

ಸಬ್ಬಿನಡ್ಕ /*sabbinaḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮಂಡೆಕೋಲು ಗ್ರಾಮದ ಜಾಗ. a locality in Mandekolu village in Sullia Taluk of Dakshina Kannada District.

ಸಬ್ಸಿಗೆ /*sabsigɛ*/ ನಾ. 1. ಒಂದು ಬಗೆಯ ತರಕಾರಿ ಸೊಪ್ಪು, 2. ಸಬ್ಬಸ್ಸಿಗೆ. 1. a green leafy vegetable, 2. dill leaves. ವಾ: ವಡೆ ಮಾಡಿಕನ ಸಬ್ಸಿಗೆ ಸೊಪ್ಪ್‌ನ ಹಾಕಿವೆ.

ಸಮಮಾಡ್ /*samama:ḍi*/ ಕ್ರಿ. ಹದಗೊಳಿಸು. to make something even. ವಾ: ದೈ ನೆಡಿಕೆ ನೆಲನ ಸಮ ಮಾಡ್.

ಸಮ[1] /*sama*/ ನಾ. ಸರಿ. correct. **ತಲೆ ಸಮ ಇಲ್ಲದಂವ(ನು).** ವಾ: ಅಂವಂಗೆ ಸಮ ಹೊಡ್ತ್.

ಸಮ[2] /*sama*/ ನಾ. 1. ಸಮಸಂಖ್ಯೆ, 2. ಸಮಾನವಾದ, 3. ಮಟ್ಟಸವಾದ. 1. even number, 2. equivalent, 3. even. ವಾ: ಲೆಕ್ಕ ಸಮ ಆತ್.

ಸಮ[3] /*sama*/ ನಾ. ತುಂಬ. too much/many. ವಾ: ಅಂವ ಸಮ ಪಟ್ಟ್ ತಿಂದದೆ.

ಸಮ[4] /*sama*/ ನಾ. ಮಾನಸಿಕ ಸ್ಥಿತಿ. state of mind. ವಾ: ಅವಂಗೆ ಈಗೀಗ ಸಮ ಇಲ್ಲೆ.

ಸಮಗಟ್ಟ್ /*samagaṭṭi*/ ನಾ. 1. ಸರಿಯಾಗಿ ನೆರವೇರು, 2. ಕ್ರಮಪ್ರಕಾರ. 1. to conduct appropritely, 2. according to an order. ವಾ: ಸಮಗಟ್ಟ್ ಲಿ ಕೆಲ್‌ಸ ನಡೆಕು.

ಸಮಗಾರ /*samaga:ra*/ ನಾ. 1. ಚರ್ಮ ಹದಮಾಡುವವ, 2. ಚಪ್ಪಲಿ ತಯಾರಿಸುವವ. 1. a cobbler, 2. the one makes sandles. ವಾ: ಸಮಗಾರ ಜೋಡು ತಯಾರ್ ಮಾಡ್ದು.

ಸಮಚಾರ /*samaca:ra*/ ನಾ. 1. ಸಂಗತಿ, 2. ವಿಷಯ, 3. ಸುದ್ದಿ, 4. ವರ್ತಮಾನ. 1. matter, 2. subject, 3. news, 4. information. ವಾ: ಎಂತ ಸಮಚಾರಗಡ.

ಸಮತಟ್ಟ್ /*samataṭṭi*/ ನಾ. 1. ಸಮತಟ್ಟು, 2. ಮಟ್ಟಸವಾದುದು, 3. ಸಮತಳ, 4. ತಗ್ಗುದಿಣ್ಣೆಗಳಿಲ್ಲದಿರುವುದು. 1. to flatten, 2. to level, 3. to make a place even, 4. a flat surface withouth ups and down. ವಾ: ನೆಲನ ಸಮತಟ್ಟ್ ಮಾಡ್ದು.

ಸಮದಾನ /*samada:na*/ ನಾ. 1. ಸಮಾಧಾನ, 2. ಮನಸ್ಸಿನ ನೆಮ್ಮದಿ, ಶಾಂತಿ, 3. ತೃಪ್ತಿ, 4. ತಾಳ್ಮೆ. 1. satisfaction, 2. tranquility, 3. contentment, 4. patience. ವಾ: ನಮ್ಮತ್ತೆದ್ ಸಮದಾನದ ಮಾತ್, ಸಮದಾನಲಿ ಇದ್ದರೆ ಜೆಗಳ ಬಾಕಿಲೆ.

ಸಮದಾರಿ /*samada:ri*/ ನಾ. 1. ಸಮತಟ್ಟಿನ ದಾರಿ, 2. ಮಟ್ಟಸ. 1. a flat road, 2. a level road. ವಾ: ಸಮದಾರಿಲಿ ನಡೆಕೆ ಸುಲಬ.

ಸಮನಕೆಕರ್‌ಸುದು /*samanakekarsudu*/ ನಾ. 1. ನೂತನ ವಧುವರರಿಗೆ ನೀಡುವ ಔತಣಕೂಟ, 2. ಸನ್ಮಾನಕ್ಕೆ ಕರೆಯುವುದು. 1. dinner hosted in the honour of newly married couple, 2. an invitation to honor someone. ವಾ: ಸಮನಕೆ ಕರ್‌ಸಿಕನ ಎಲ್ಲೊವ್ರ ಮನೆಲಿ ಉಂಡ್ ಉಂಡ್ ಸಾಕಾದೆ. ಪ: ಸಮ್ಮಾನಕ್ಕೆ ಕರ್ಸುದು

ಸಮಪಾಲ್ /*samapa:li*/ ನಾ. ಸಮಭಾಗ. equal parts. ವಾ: ನಂಗೆ ಆಸ್ತಿಲಿ ಸಮಪಾಲ್ ಕೊಡೊಕು.

ಸಮಸ್ಯೆ /*samasyɛ*/ ನಾ. 1. ಸಮಸ್ಯೆ, 2. ಕಗ್ಗಂಟು, 3. ಬಿಡಿಸಲು ಕಷ್ಟವಾದ ಪ್ರಶ್ನೆ, 4. ತೊಂದರೆ, 5. ತೊಡಕು. 1. a problem, 2. a difficult situation, 3. a difficult question, 4. an obstacle, 5. a hurdle. ವಾ: ಸಮಸ್ಯೆ ಬಾಕನ ಹೆದಿರಿಕೆ ಆಗದ್.

ಸಮಾ /*sama:*/ ನಾ. ಸರಿಯಾಗಿ. correctly. ವಾ: ದಾರಿಲಿ ಅವು ಸಮಾ ಹೇಳ್ದೊ.

ಸಮಾ ನೀರ್‌ಹಾಕಿವೆ /*sama: ni:riha:kivɛ*/ ನಾ. ತುಂಬಾ ನೀರನ್ನು ಹಾಕುವುದು. to put excess

water. ವಾ: ಬಾಣ್ತಿಲಿ ಮೀಸಿಕನ ಸಮಾ ನೀರ್ ಹಾಕಿವೆ.

ಸಮಾಬೊಡಿನಿ /*sama: bodini*/ ನಾ. ಸರಿಯಾಗಿ ಹೊಡೆ. to beat someone severly.

ಸಮಾಕುಟ್ಟಿ /*sama:kuṭṭi*/ ನಾ. 1. ಸರಿಯಾಗಿ ಜಜ್ಜಿ, 2. ಸರಿಯಾಗಿ ಕುಟ್ಟಿ. 1. crushing properly, 2. pounding properly. ವಾ: ಒಣ್ಗಿದ ಸೀಗೆ ಕಾಯಿನ ವರ್ಲ್‌ಲಿ ಹಾಕಿ ಸಮಾಕುಟ್ಟಿರೆ ಹೊಡಿಯ್ಯಾದೆ ಮತ್ತೆ ವಂಚಿ ತೆಗ್ದರೆ ಆತ್.

ಸಮಾನ /*sama:na*/ ನಾ. 1. ಸಮಾನ, 2. ಒಂದೇ ರೀತಿ. 1. equal, 2. in a similar way. ವಾ: ನಮ್ಮತ್ತೆ ಎಲ್ಲೊವ್ರ ಸಮಾನಲಿ ಕಂಡವೆ.

ಸಮಿದು[1] /*samidu*/ ಕ್ರಿ. 1. ಸವಿಯುವುದು, 2. ರುಚಿನೋಡು. 1. to taste, 2. to check the taste. ವಾ: ಮಂಗ ಹಣ್ಣ್‌ನ ಸಮಿದರ ನೋಡಿ.

ಸಮಿದು[2] /*samidu*/ ಕ್ರಿ. 1. ಸವೆತ, 2. ಕಳೆಯು, 3. ಕರಗು. 1. erosion, 2. lost, 3. melt. ವಾ: ಜಾಯ್ ಕಾಯಿನ ಕಲ್ಲ್ ಲಿ ಸಮಿದು ಹಿಞ ಕೂಸಿಗೆ ನೆಕ್ಕಿಸಿರೆ ಆತ್, ಬಾಮಿಲಿ ರಾಟೆಗೆ ಹಗ್ಗ ಸೆಕ್ಕಿಸಿ ಎಳೆಕನ ಸಮಿದು ಅಲ.

ಸಮಿಯ /*samiya*/ ನಾ. 1. ಸಮಯ, 2. ಹೊತ್ತು. 1. time, 2. period. ವಾ: ಇದೆ ಒಳ್ಳ ಸಮಿಯ, ವಿಸ್ಯ ಹೇಳಿಬುಡು.

ಸಮೂದ್ /*samu:dɨ*/ ನಾ. ಸವೆಯುವುದು. erosion. ವಾ: ಗಂದನ ಕಲ್ಲ್‌ಲಿ ಸಮೂದ್ ಹಾಕಿರಾತ್. ಪ: ಸಮಿಯೊದು

ಸಮೆ /*samɛ*/ ನಾ. 1. ಸಮಯ, 2. ಕಾಲ, 3. ವೇಳೆ. 1. time, 2. period, 3. length of time. ವಾ: ಸಮೆನ ಹಾಳ್ ಮಾಡ್ದೆ ಲಾಯ್ಕಲಿ ಬಳ್ಸಿಕಣೊಕು, ಕಳ್ದ ಸಮೆ ಮತ್ತೆ ಬಾದುಲೆಲ.

ಸಮೆಯ /*sameya*/ ನಾ. ಶವ ದರ್ಶನಕ್ಕೆ ಬರುವಾಗ ಮೃತರ ತವರಿನವರು ತರುವ ಹರಳೆಣ್ಣೆಯಿಂದ ಮಾಡಿದ ಮೂರು ಕಜ್ಜಾಯ, ಒಂದು ತೆಂಗಿನಕಾಯಿ, ಸ್ವಲ್ಪ ತೆಂಗಿನ ಎಣ್ಣೆ, ಪೂರಿ, ಮಾಂಸ ಅಥವಾ ಕೋಳಿ ಮೊಟ್ಟೆಯ ಸಾರಿನ ಬುತ್ತಿ ಹಾಗೂ ಅರಿಶಿನ ಕಲೆಸಿದ ಅಕ್ಕಿ. carrying three pieces of a sweet dish (fried in castor oil), meat, coconut, oil, egg curry, turmeric mixed rice, etc. by the relatives when they visit the dead. ವಾ: ಹೆಣ ನೋಡಿಕೆ ಬಾಕನ ತವುರು ಮನೆವು ಸಮೆಯನ ತಾದು.

ಸಮೇತ /*same:ta*/ ನಾ. ಸಹಿತ. together/with. ವಾ: ಕುಟುಂಬ ಸಮೇತ ಜಂಬರಕೆ ಒಂದ್ ದಿನ ಮುಂದೆನೆ ಬಂದ್ಬುಡಿ ಆತ.

ಸಮ್ತ್‌ಗೆ /*samtigɛ*/ ನಾ. 1. ಶಾವಂತಿಗೆ ಹೂವು, 2. ಸೇವಂತಿಗೆ ಹೂವು. Chrysanthemum flowers. ವಾ: ಚೌತಿಗೆ ಗಣ್ಪತಿಗೆ ಸಮ್ತ್‌ಗೆ ಹೂನ ಮಾಲೆನೆ ವಿಸೇಸ.

ಸಮ್ದದೆ /*samdadɛ*/ ಕ್ರಿ. ಸವೆಯು. to erode. ವಾ: ದಿನ ನಡ್ದರೆ ಜೋಡು ಸಮ್ದದೆ.

ಸಮ್‌ದಾನ /*samɨda:na*/ ನಾ. 1. ಸಮಾಧಾನ, 2. ಮನಸ್ಸಿನ ನೆಮ್ಮದಿ, ಶಾಂತಿ, 3. ತೃಪ್ತಿ, 4. ತಾಳ್ಮೆ. 1. tranquility, 2. contentment, 3. satisfaction, 4. patience. ವಾ: ಎರ್‌ಡ್ ಕುಟುಂಬದ ಜೆಗಳನ ಸಮ್‌ದಾನ ಮಾಡಿ ಕಳ್ಸಿದೊ.

ಸಮ್ಮಂದ /*sammanda*/ ನಾ. 1. ನೆಂಟು, 2. ಬಾಂಧವ್ಯ. 1. relationship, 2. relation. ವಾ: ನಮ್ಮದ್ ಹಳೆ ಸಮ್ಮಂದ.

ಸಮ್ಮಂದ ಅಡಕವು /*sammanda aḍakavu*/ ನಾವಿ. ಹೆಣ್ಣನ್ನು ಗಂಡಿನ ಕುಟುಂಬಕ್ಕೆ ಒಪ್ಪಿಸಿಕೊಡುವ ಶಾಸ್ತ್ರ. a custom of handing over the bridge to the family of bridgegroom. ವಾ: ಸಮ್ಮಂದ ಅಡಕವೊ ಸಾಸ್ತ್ರ ನಡ್ಡದೆ.

ಸಮ್ಮನ /*sammana*/ ನಾ. ನೂತನ ವಧುವರರಿಗೆ ನೀಡುವ ಔತಣಕೂಟ. a feast that is offered to the newly wed couple. ವಾ: ಮೊದ್ವೆ ಆದ ಹೊಸ್ತ್‌ಲಿ ನೆಂಟ್‌ರ್ ಮನೆಗೆ ಸಮ್ಮನಕೆ ಕರ್‌ಸಿ ಗದ್ದಳ ಮಾಡಿವೆ.

ಸಮ್ಮಾನ /*samma:na*/ ನಾ. ಸನ್ಮಾನ. honour. **ನೆರೆಮನೆ ಮೊದುವೆಲಿ ಮಿಂಡಂಗೆ ಸಮ್ಮಾನ(ಗಾ).** ವಾ: ಸಾಲೆಲಿ ಹೂನ ಮಾಲೆ ಹಾಕಿ ಸಮ್ಮನ ಮಾಡ್ದೊ.

ಸಮ್ಮುಕ /*sammuka*/ ನಾ. 1. ಸಮ್ಮುಖ, 2. ಎದುರುಗಡೆ, 3. ಮುಂಭಾಗ. 1. in front of, 2.

opposite, 3. before. ವಾ: ದೊಡ್ಡವರ ಸಮ್ಮುಕಲಿ ಮಾತಾಡಿರೆ ಸೆರಿಯಾದು.

ಸಯನ /*sayana*/ ನಾ. 1. ನಿದ್ದೆ, 2. ಕ್ರಮಬದ್ಧವಾಗಿ ಮನುಷ್ಯರು ಮತ್ತು ಪ್ರಾಣಿಗಳಲ್ಲಿ ಉಂಟಾಗುವ ಎಚ್ಚರರಹಿತ ಸ್ಥಿತಿ. 1. sleep, 2. a state of not being wakeful. ವಾ: ಸಯನ ಮಾಡಿ ಎದ್ದನ?

ಸಯಿಸಿಕಂಬೊದು /*sayisikɔmbodu*/ ನಾ. ಸಹಿಸಿಕೊಳ್ಳುವುದು. to tolerate. ವಾ: ಇಸ್ಟ ಇಲ್ಲರು ಸಯಿಸಿಕಂಬೊದುಂತ.

ಸಯ್ಯಂಸೊಟ್ಟಂ /*sayyam soṭṭam*/ ಅ. ಗೊಣ್ಣೆ ಎಳೆದು ಸಿಡುಕು. inhaling mucous membrane.

ಸರಕ್ /*saraki*/ ನಾ. ಅಪ್ಪ ಅಥವಾ ಅಮ್ಮ ಸತ್ತರೆ ಕೊಟ್ಟ ಹೆಣ್ಣುಮಕ್ಕಳು ಅಕ್ಕಿ, ತೆಂಗಿನಕಾಯಿ, ಕುಂಬಳಕಾಯಿ, ಬಾಳೆಎಲೆ ಇತ್ಯಾದಿ ವಸ್ತುಗಳನ್ನು ತವರು ಮನೆಗೆ ಬೊಜ್ಜಕ್ಕೆ ಮೊದಲು ಕಳುಹಿಸಿಕೊಡುವುದು ರೂಢಿಯಲ್ಲಿದೆ. daughters bringing along with them rice, coconut, sweet gourd, betel leaf, etc, during the funeral feast of one's father or mother. ವಾ: ಅಪ್ಪ ಇಲ್ಲರೆ ಅವ್ವ ತೀರಿಹೋಕನ ತಿತಿಗೆ ಮುಂದೆನೆ ಮಗಕ ಸರಕ್ ತಾದು.

ಸರಪಣಿ /*sarapaṇi*/ ನಾ. ಸರಪಳಿ. chain. ವಾ: ನಾಯಿ ಸರಪಣಿ ಬಿಚ್ಚಿಕಂಡ್ ಓಡಿ ಹೋತು.

ಸರಬತ್ತ್ /*sarabatti*/ ನಾ. ನಿಂಬೆ, ಕಿತ್ತಳೆ, ದ್ರಾಕ್ಷಿ ಮೊದಲಾದ ಹಣ್ಣುಗಳ ರಸವನ್ನು ನೀರಿಗೆ ಮಿಶ್ರ ಮಾಡಿ ಅದಕ್ಕೆ ಸಕ್ಕರೆ, ಏಲಕ್ಕಿ ಮುಂತಾದುವನ್ನು ಸೇರಿಸಿ ತಯಾರಿಸುವ ಪಾನೀಯ. juice of lemon, orange, grape, etc. ವಾ: ನಿಂಬುಳಿ ಸರಬತ್ತ್ ಕುಡ್ದರೆ ಒಳ್ಳೆದ್.

ಸರವೂರು /*saravu:ru*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಸರಳಿಕಂಬ /*saraḷikamba*/ ನಾ. ಉತ್ತರಕ್ರಿಯಾದಿಗಳಲ್ಲಿ ಬಳಸುವ ಸರಳಿ ಮರದ ಸಣ್ಣ ಕೊಂಬೆಗಳು. twigs used in the funeral. ವಾ: ದೂಪೆಗೆ ಚಪ್ಪರ ಹಾಕಿಕೆ ಸರಳಿ ಕಂಬನ ನೆಡ್ಡು.

ಸರಳಿಹಣ್ಣ್ /*saraḷihaṇṇi*/ ನಾ. ಕಾಡುಮರದಲ್ಲಿ ಬಿಡುವ ರುಚಿಕರ ಹಣ್ಣು. a forest fruit. ವಾ: ಸರಳಿ ಹಣ್ಣ್ ರುಚಿಯಾದ ಕಾಡ್‌ಹಣ್ಣ್.

ಸರಳಿಕುಂಜ /*saraḷikuɲja*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಆಲೆಟ್ಟಿ ಗ್ರಾಮದ ಜಾಗ. a locality in Aletti village in Sullia Taluk of Dakshina Kannada District.

ಸರಳಿಮರ /*saraḷimara*/ ನಾ. ಚಿಕ್ಕ ಜಾತಿಯ ಕಾಡು ಮರ, ಚಿಕ್ಕದಾದ ರುಚಿಕರ ಹಣ್ಣು ನೀಡುತ್ತದೆ, ಇದರ ಕೊಂಬೆಯನ್ನು ಉತ್ತರಕ್ರಿಯಾ ಕಾರ್ಯಕ್ರಮಗಳಲ್ಲಿ ಬಳಸುತ್ತಾರೆ. twigs of a forest tree, used in funeral. ವಾ: ಸರಳಿಮರಲಿ ಹಣ್ಣ್ ಬುಟ್ಟದೆ.

ಸರಳಿಸೊಪ್ಪ್ /*saraḷisoppi*/ ನಾ. ಸಮಾದಿ ಮೇಲೆ ಇಡುವ ಸೊಪ್ಪು, ಈ ಸೊಪ್ಪನ್ನು ಇಡುವುದರಿಂದ ತಂಪು ಹೆಚ್ಚು ಇರುತ್ತದೆಯೆಂದು ನಂಬಿಕೆ. a green leaf that is kept on the tomb. ವಾ: ದೂಪೆಗೆ ಚಪ್ಪರ ಹಾಕಿಕೆ ಸರಳಿಸೊಪ್ಪ್ ನ ಬಳ್ಸಿವೆ.

ಸರಳು /*saraḷu*/ ನಾ. 1. ಸಲಾಕೆ, 2. ಕಬ್ಬಿಣ ಮೊದಲಾದ ಲೋಹದ ಕಂಬಿ. an iron rod. ವಾ: ಕಿಡ್ಕೆಗೆ ಹಾಕಿದ ಸಣ್ಣ ಸರಳುಗಳ ಸೆರೆಲಿ ಕೊತ್ತಿಗ ಹೊಕ್ಕಿ ವಳೆಗೆ ಬಂದವೆ.

ಸರಾಗ /*sara:ga*/ ನಾ. 1. ಸಲೀಸಾಗಿ, 2. ಸುಲಭವಾಗಿ. easily. ವಾ: ಆ ಗೂಡೆ ಬಾರಿ ಸರಾಗಲಿ ಹಾಡ್ತೆ.

ಸರಾಯ /*sara:ya*/ ನಾ. ಸಾರಾಯಿ. alchohol. ವಾ: ಸರಾಯ ಕುಡ್ದರೆ ಹಾಳ್‌ತ ಗೊತ್ತಿದ್ರು ಜೆನ ಯಾಕೆ ಕುಡೆಕೆ ಸತ್ತವೆತ.?

ಸರಾಯಿ /*sara:yi*/ ನಾ. 1. ಸಾರಾಯಿ, 2. ಹೆಂಡ, 3. ಸಾರಾಯ. alchohol. ವಾ: ಸರಾಯಿ ಕುಡೆದು ಒಳ್ಳೆದಲ್ಲ.

ಸರಿ /*sari*/ ಅ. 1. ಹೌದು, 2. ಆಗಬಹುದು, 2. ಒಪ್ಪಿಗೆ. 1. affirmation, 2. granting permission, 3. consent. ವಾ: ಸರಿ ಆತ್ ಹಂಗೆ ಮಾಡಿ ಆಗ.

ಸರಿಮುಗುಳಿ /*sari muguḷi*/ ನಾ. ಜನಪದ ಆಟ. a folk game.

ಸರಿಗಟ್ಸ್ /*sarigaṭsi*/ ಕ್ರಿ. 1. ಸರಿಯಾದ ಪರಿಸ್ಥಿತಿ, 2. ಇಕ್ಕಡೆಗಳಿಗೂ ಒಪ್ಪಿಗೆ, 3. ಸನ್ನಿವೇಶ, 4. ಸಂದರ್ಭಗಳು ಕೂಡಿಬರು. mutual consent. ವಾ: ಎಲ್ಲ ಸರಿಗಟ್ಸ್ ಆದರೆ ಒಳ್ಳೆದಿತ್ತ್.

ಸರಿಗೆ /*sarigɛ*/ ನಾ. ಉಕ್ಕಿನ ತಂತಿ. steel wire. ವಾ: ಸರಿಗೆನ ಎಲ್ಲಿಸಿದ?

ಸರಿಮಾಡ್ /*sarima:ḍ*/ ಕ್ರಿ. 1. ಸರಿಪಡಿಸು, 2. ಸರಿ ಮಾಡಬೇಕು, 3. ಪರಿಹರಿಸು. 1. to correct something, 2. should rectify, 3. to solve. ವಾ: ಜಾಗೆದ್ ಸಮಸ್ಯೆನ ಸರಿ ಮಾಡೊಕು.

ಸರಿರಾತ್ರಿ /*sarira:tri*/ ನಾ. ನಡುರಾತ್ರಿ. mid-night. ವಾ: ಈ ಸರಿರಾತ್ರಿಲಿ ಎಲ್ಲಿಗೆ ಹೊರ್‌ಟದ್.

ಸರೀರ /*sari:ra*/ ನಾ. 1. ಶರೀರ, 2. ದೇಹ, 3. ಒಡಲು. 1. body, 2. human physique, 3. human torso. ವಾ: ಇಂದ್ ಸರೀರಕೆ ಯಾಕೊ ಉಸಾರಿಲ್ಲೆ.

ಸರುಳಿ /*saruḷi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಸರೊಳಿಕಾನ /*saroḷika:na*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಸರ್ಕಂತ /*sarkanta*/ ಅ. 1. ಕೂಡಲೆ, 2. ಸರಕ್ಕನೆ. 1. immediately, 2. all of a sudden. ವಾ: ಸರ್ಕಂತ ವಳೆಗೆ ಹೋಗಿ ಬಾಗ್‌ಲ್ ಹಾಕಣ್ಣ್.

ಸರ್ಕಿಟ್ ಹೊಡೆಯದು /*sarkiṭi hoḍeyadu*/ ನಾ. ಎಪ. 1. ಅಡ್ಡಾಡುವುದು, 2. ಸುಮ್ಮನೆ ಅಲೆದಾಡು. 1. to wander, 2. to roam. ವಾ: ಎಲ್ಲಿಗೆ ಹಿಂಗೆ ಅತ್ತಂದಿತ್ತ ಸರ್ಕಿಟ್ ಹೊಡೆಯದು.

ಸರ್ಕ್ /*sarkɨ*/ ನಾ. ಉತ್ತರ ಕ್ರಿಯೆ ನಡೆಯುವ ಮನೆಗೆ, ಉತ್ತರ ಕ್ರಿಯಾ ಕಾರ್ಯಕ್ರಮದ ಭೋಜನಕ್ಕೆ ಅವಶ್ಯವಿರುವ ವಸ್ತುಗಳನ್ನು ಮೃತರ ಬಂಧುಗಳು ಕಳುಹಿಸಿಕೊಡುವ ಪದ್ಧತಿ. relatives offering the essential food items during one's funeral. ವಾ: ತಿತಿಗೆ ಮುಂದೆನೆ ಸೂತಕದ ಮನೆಗೆ ಹೆಣ್ಮಕ್ಕ ಮತ್ತೆ ನೆಂಟ್ರ್‌ಗ ಸರ್ಕ್ ತಂದವೆ. **ಸರ್ಕ್ ಕಳ್ಸುವ ಕ್ರಮ** /*sarkɨ kaḷsuva krama*/ ಸತ್ತವರ ಮನೆಯವರಿಗೆ ಉತ್ತರ ಕ್ರಿಯಾದಿ ಮಾಡಲು ವಸ್ತುಗಳನ್ನು ಕಾಣಿಕೆ ರೂಪದಲ್ಲಿ ನೀಡುವುದು. relatives offering the essential food items during one's funeral. ವಾ: ಗೌಡ ಜೆನಾಂಗಲಿ ಸರ್ಕ್ ಕಳ್ಸುವ ಕ್ರಮ ಉಟ್ಟು.

ಸರ್ಗ್[1] /*sargɨ*/ ನಾ. 1. ಸೆರಗು, 2. ಸೀರೆ ತುದಿ. 1. end of a saree, 2. border of a saree. ವಾ: ಸೀರೆ ಸರ್ಗ್ ಸೆರಿ ಮಾಡಿಕ. ಪ: ಸೊರ್ಗ್

ಸರ್ಗ್[2] /*sargɨ*/ ನಾ. 1. ಸುರಿ, 2. ಸೊರ್ಗ್. 1. to spill, 2. to pour/dump. ವಾ: ಬತ್ತನ ಚೀಲಕೆ ಸರ್ಗ್. ಪ: ಸರ್ಗುದು – ಸುರಿಯುವುದು; ಸರ್ಗಿದೊ – ಸುರಿದರು; ಸರ್ಗಿತ್ – ಸುರಿದನು;

ಸರ್ಜಾಮೂಲೆ /*sarja:mu:lɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಸರ್ಟಡಿಗೆ /*sarṭaḍigɛ*/ ನಾ. 1. ತಾಳಿಯನ್ನು ಜೊತೆಗೆ ಪೋಣಿಸಿರುವ ಕತ್ತಿನ ಸರ, 2. ದಪ್ಪನೆಯ ಗಟ್ಟಿಯಾದ ಹಿಂದಿನ ಕಾಲದವರು ಬಳಸುತ್ತಿದ್ದ ತಾಳಿಚೈನು. 1. a necklace with a golden pendant, 2. a thick chain or a necklace. ವಾ: ಹಿಂದೆನ ಕಾಲಲಿ ಸರ್ಟಡಿಗೆನೆ ತಾಳಿ ಚೇನ್.

ಸರ್ಟ್ /*sarṭi*/ ನಾ. ಎಪ. ಅಂಗಿ. shirt. ವಾ: ಸರ್ಟ್ ದ್ ಕೊಂಡಿ ಬಿದ್ದೊಟು.

ಸರ್ತ /*sarta*/ ನಾ. 1. ನೆಟ್ಟಗೆ, 2. ನೇರ, 3. ನೀಳ. 1. straight, 2. linear, 3. unbending. ವಾ: ಸರ್ತ ಹಾದಿಲೆ ಹೋಗಿ.

ಸರ್ತಿ /*sarti*/ ನಾ. 1. ಬಾರಿ, 2. ಸಲ. 1. turn, 2. turn, 3. both the times, 4. two times. ವಾ: ಈ ಸರ್ತಿ ಮಳೆ ಬೇಗ ಹಿಡೆದು.

ಸರ್ಪ /*sarpa*/ ನಾ. ಕಾಳಿಂಗ ಸರ್ಪ. a King cobra. **ಸರ್ಪದ ಸಿಟ್ಟ್ ಹನ್ನೆರಡ್ ವರ್ಸ(ಗಾ).** ವಾ: ಸರ್ಪ ಹೆಡೆ ತೆಗ್ದದೆ.

ಸರ್ಪಗೆಣ್ಸ್ /*sarpa geṇsɨ*/ ನಾ. ಸರ್ಪ ಗೆಣಸು. a variety of sweet potato. ವಾ: ಅದ್ ಸರ್ಪ ಗೆಣ್ಸ್ ಗಡ.

ಸರ್ಪಸುತ್ತು /*sarpasuttu*/ ನಾ. 1. ಹರ್ಪೀಸ್, 2. ಗುಳ್ಳೆಗಳು ತಂಡತಂಡವಾಗಿ ಏಳುವ ಒಂದು ವೈರಸ್ ಚರ್ಮರೋಗ, 3. ಸರ್ಪರೋಗ. Herpes, a contagious skin disease. ವಾ: ಸರ್ಪ ಸುತ್ತುಗೆ ನಾಡ್ ಮದ್ದ್ ಮಾಡಿವೆ.

ಸರ್ಪಳಿ /*sarpaḷi*/ ನಾ. ಸರಪಳಿ. chains. ವಾ: ನಾಯಿ ಕಟ್ಟಿಕೆ ಸಣ್ಣ ಸರ್‌ಪುಳಿ ಸಾಕ್. ಪ: ಸರ್ಪುಳಿ

ಸರ್ಪೋಳಿ /*sarpo:ḷi*/ ನಾ. ಸರಪಳಿ. chains. ವಾ: ಆನೆದ್ ಕಾಲಿಗೆ ದೊಡ್ಡ ಸರ್ಪೋಳಿ ಹಾಕೊಳೊ.

ಸರ್ಬತ್ /*sarbati*/ ನಾ. ಸಕ್ಕರೆ, ನೀರು, ನಿಂಬೆರಸದ ಪಾನಕ, ಪೇಯ. 1. lemon juice, 3. a beverage. ವಾ: ಸರ್ಬತ್ ಮಾಡಿ ಕುಡೆಮೊ. ಪ: ಸರ್ಬೊತ್

ಸರ್ಬತ್ ಹಣ್ಣ್ /*sarbatɨ haṇṇɨ*/ ನಾ. ನಿಂಬೆಹಣ್ಣಿನ ರೀತಿಯ ಹಣ್ಣನ್ನು ಶರಬತ್ತು ಮಾಡಲು ಬಳಸುತ್ತಾರೆ. a citrus fruit. ವಾ: ಸರ್ಬತ್ ಹಣ್ಣ್‌ಲಿ ಜೂಸ್ ಮಾಡ್ದು.

ಸರ್ಮಾಲೆ /*sarma:le*/ ನಾ. 1. ಸರಮಾಲೆ, 2. ದೊಡ್ಡಹಾರ. 1. a large garland, 2. a garland. ವಾ: ಸಂಮಾನ ಮಾಡಿಕನ ಸರ್ಮಾಲೆ ಹಾಕಿದೊ.

ಸರ್ಮಾಲೆ ದೀಪ /*sarma:lɛ di:pa*/ ನಾ. ದೈವದೇವಸ್ಥಾನಗಳಲ್ಲಿರುವ ತೂಗುದೀಪ. a row of lampsThe hanging lamp in shrines.

ಸರ್ಯ /*saraya*/ ನಾ. 1. ಸೂರ್ಯ, 2. ಸೌರವ್ಯೂಹದ ಕೇಂದ್ರತಾರೆ, 3. ರವಿ. 1. the sun, 2. the centre of our solar system, 3. the sun. ವಾ: ಸರ್ಯ ನೆತ್ತಿಗೆ ಬಾಕನ ಹೊರೆಗೆ ನಿಲ್ಲಿಕಾದುಲೆ.

ಸರ್ಯಕಿಲ್ಲೆ /*saryakillɛ*/ ನಾ. ಸರಿಯದಿರು. not to move. ವಾ: ಕುದ್ದಲ್ಲಿಂದ ಅತ್ತ ಸರ್ಯಕಿಲ್ಲೆ.

ಸರ್ಯದೇವರ್ /*sarayade:varɨ*/ ನಾ. ಸೂರ್ಯದೇವರು. sun god. ವಾ: ದಿನಾ ಹೊತಾರೆ ಸರ್ಯದೇವರ್‌ಗೆ ನಮಸ್ಕಾರ ಮಾಡೊಕು.

ಸರ್ಯಾಗಿ /*sarya:gi*/ ಕ್ರಿ. ಸರಿಯಾಗಿ. correctly. ವಾ: ಲೆಕ್ಕ ಮಾಡಿಕನ ಸರ್ಯಾಗಿ ನೋಡಿಕಣಿ ಮತ್ತೆ ಸರಿಯಾತ್‌ಲೆತ ಹೇಳ್‌ಬಡಿ.

ಸರ್ರ /*sarara*/ ನಾ. 1. ಶರೀರ, 2. ಒಡಲು, 3. ದೇಹ. 1. body, 2. physique, 3. torso. ವಾ: ಅವುಳ ಸರ್ರ ಬಾರಿ ಇಳ್ದೋವ್ಚು.

ಸರ್ಲ್ /*sarlɨ*/ ನಾ. 1. ಸರಳು, 2. ಕಬ್ಬಿಣ ಮೊದಲಾದ ಲೋಹದ ಕಂಬಿ. 1. a rod, 2. iron rod. ವಾ: ತಪ್ಪು ಮಾಡಿರೆ ಜೇಲ್‌ಲಿ ಸರ್ಲ್ ವಳೆಗೆ ಕೂಡ್‌ಸುವೆ.

ಸರ್ವೆ /*saravɛ*/ ನಾ. 1. ಸರ್ವೆ, 2. ಸಮೀಕ್ಷೆ. 1. survey, 2. survey. ವಾ: ಜಾಗೆದ್ ಸರ್ವೆ ಮಾಡ್ಸಿಯಾತ?

ಸರ್ಸ್[1] /*sarsɨ*/ ಕ್ರಿ. 1. ಸರಿಸು, 2. ಜಾರಿಸು. 1. to push aside, 2. to slide. ವಾ: ಕುಂಟೆನ ಅತ್ತ ಸರ್ಸ್. ಪ: ಸರ್ಸಿ

ಸರ್ಸ್[2] /*sarsɨ*/ ಕ್ರಿ. ಮೊರ, ಕದಿಕೆ, ಕಳಸೆ ಇತ್ಯಾದಿಗಳಿಗೆ ಸೆಗಣಿಯನ್ನು ಅಥವಾ ಮೆಂತೆ, ಉದ್ದು ಮತ್ತು ಕಾಗದಗಳನ್ನು ನೀರಿನಲ್ಲಿ ನೆನೆಸಿ ಕಡೆದು ಮಾಡಿದಹಿಟ್ಟನ್ನು ಸಾರಿಸುವುದು. to coat the winnowing fan with a mixture made of fenugreek seeds, paper, black gram, etc. ವಾ: ಪದ್‌ನಿಸಿದ ಮೆಂತೆ, ಕಾಗದನ ಕಡ್ಡ್ ಮೊರ ಹಾಳಾಗದಂಗೆ ಸರ್ಸ್‌ದು.

ಸಲ /*sala*/ ನಾ. 1. ಬಾರಿ, 2. ಸಲ. 1. turn, 2. times, 3. both the times, 4. two times. ವಾ: ಈ ಸಲನು ಬಾರಿ ಮಳೆ ಉಟ್ಟುಗಡ.

ಸಲಯ ಅಳಿಯೊದು[1] /*salaya aḷiyodu*/ ಕ್ರಿವಿ. ಸಾವು ಆದ ಮನೆಯಲ್ಲಿ ರಂಧ್ರವಿರುವ ಗೆರೆಸೆ (ಕಣ್ಣ್‌ತಡ್ಪೆ) ಯಲ್ಲಿ ಕರ್ಮ ಹಿಡಿವವರ ತಲೆಗೆ ಅಕ್ಕಿಯನ್ನು ತೊಳೆದ ನೀರು ಹಾಕುವುದು. to put rice washed water on the head of the lead mourner through a sieve. ವಾ: ಬೊಜ್ಜದಂದ್ ಸುದ್ದ ಆದಮೇಲೆ ಸಲಯ ಅಳಿಯಕೆಇದ್ದದೆ.

ಸಲಯ ಅಳಿಯೊದು[2] /*salaya aḷiyodu*/ ಕ್ರಿವಿ. ಭತ್ತವನ್ನು ಅಳತೆ ಮಾಡುವುದು. measuring the quantity of paddy.

ಸಲಾಂ /*sala:ṁ*/ ನಾ. ಏಪ. 1. ನಮಸ್ಕಾರ, 2. ವಂದನೆ. 1. offering a salutation, 2. thanking. ವಾ: ನಿಮ್ಮ ಪ್ರಮಕ್ಕೆ ನನ್ನ ದೊಡ್ಡ ಸಲಾಂ.

ಸಲಾಯಿ ಅಳಿ /*sala:yi aḷi*/ ನಾ. ಮರಣದ ಸಂದರ್ಭದಲ್ಲಿ ನಡೆಸುವ ಕ್ರಮ. ಮಡಿವಾಳ ಮತ್ತು ಕ್ಷೌರಿಕನಿಗೆ ನೀಡುವ ವಸ್ತು. a custom of giving certain things to the washerman on the death of someone. ವಾ: ಸಲಯ ಅಳ್ದದರಲಿ ಒಂದ್ ಪಾಲ್ ಮೊಡ್ಯಾಳಂಗೆ ಇನ್ನೊಂದ್ ಚೌರಿಂಜಂಗೆ.

ಸಲಾವಳಿ ವೀಳ್ಯ /*sala:vaḷi vi:ḷya*/ ನಾ. ಮದುವೆ ಸಂದರ್ಭದಲ್ಲಿ ಕಟ್ಟುವ ವೀಳ್ಯ. a wedding ritual. ವಾ: ಮೊದುವೆಲಿ ಸಲಾವಳಿ ವೀಳ್ಯ ಕಟ್ಟುದು.

ಸಲಿಗೆ /*saligɛ*/ ನಾ. 1. ಸಲಾಕೆ, 2. ಏನೂ ಹೇಳದೆ ಸುಮ್ಮನಿರು. 1. an iron rod, 2. to keep quiet. **ದೊಡ್ಡವರೊಟ್ಟಿಗೆ ಹಗೆ ಬ್ಯಾಡ ಸಣ್ಣವರೊಟ್ಟಿಗೆ ಸಲಿಗೆ ಬ್ಯಾಡ(ಗಾ).** ವಾ: ಸಲಿಗೆಲಿ ಕುತ್ತಿದ್‌ತ ಹೇಳ್ತಿದ್ದೊ, ಸಲಿಗೆ ಕೊಡಿಕಾಗದ್.

ಸಲೀಸ್ /*sali:sɨ*/ ಕ್ರಿವಿ. 1. ಸುಲಭವಾಗಿ, 2. ನವಿರಾಗಿ. 1.

easily, 2. cleverly. ವಾ: ಅಸ್ಟ್ ಸಲೀಸ್ ಆಗಿ ಅವು ಅದ್‌ಕೆಲ್ಲ ಒಪ್ಪಿಕಿಲೆ.

ಸಲು/ತಳು /*salu/taḷu*/ ನಾ. ತೆಳ್ಳಗೆ. thin. ವಾ: ಈ ರೀಪರ್ ಬಾರಿ ತಳು ಉಟ್ಟು.

ಸಲ್ಯಾಣತ್ /*salya:ṇati*/ ಕ್ರಿವಿ. ಬೈಗಳು ಸಿಕ್ಕಿತು ಎಂಬುದನ್ನು ಸೂಚಿಸುವ ಪದ. to say that one has been shouted at by someone. ವಾ: ಅಂವ ಮಾಡ್ದ ತೊಪ್ಪುಗೆ ಸಮಾ ಸಲ್ಯಾಣತ್ ಸಿಕ್ಕಿತ್.

ಸಲ್‌ಸ್ /*salisi*/ ಕ್ರಿ. 1. ಸಲ್ಲಿಸು, 2. ಅರ್ಪಿಸು, 3. ಕೊಡು. 1. to offer, 2. to surrender, 3. to give. ವಾ: ಸುಮಾರ್ ವರ್‌ಸಂದನೆ ಆ ದೇವ್‌ರಿಗೆ ಪೂಜೆ ಸಲ್‌ಸ್ತಾ ವಳೊ. ಪ: ಸಲ್‌ಸ್ಯೊಳ – ಸಲ್ಲಿಸಿದ್ದಾರೆ; ಸಲ್ಲಿಸಿದೊ – ಸಲ್ಲಿಸಿದರು; ಸಲ್ಲೊಕು – ಸಲ್ಲಬೇಕು;

ಸವುಂಟು /*savuṇṭu*/ ನಾ. 1. ಸೌಟು, 2. ಅಡುಗೆ ಮಾಡುವಾಗ ತೋಡಲು, ಬಡಿಸಲು ಬಳಸುವ ಉದ್ದ ಹಿಡಿಯ ಸಾಧನ. 1. a ladle, 2. a long spoon used in serving. ವಾ: ಗಂಜಿ ತೋಂಡುವ ಸವುಂಟುದ್ ಹಿಡಿ ಮುರ್‌ತ್.

ಸವ್‌ತ್ /*saviti*/ ಕ್ರಿ. ಸವೆಯು. to erode/to wear out. ವಾ: ಗಂದದ ಕೊರ್‌ಡ್ ಸಾಣೆಕಲ್ಲಿಗೆ ಉಜ್ಜಿ ಉಜ್ಜಿ ಸವ್‌ತ್.

ಸಸಾರ /*sasa:ra*/ ಕ್ರಿವಿ. 1. ಕಡೆಗಣಿಸು, 2. ತಿರಸ್ಕಾರದಿಂದ, 3. ಗೌರವ ಕೊಡದೆ, 4. ಭಯವಿಲ್ಲದೆ ನಡೆದುಕೊಳ್ಳುವುದು. 1. to neglect, 2. be contemptuous 3. to show disrespect, 4. to live without any fear. **ಸಸಾರ ಬುಟ್ಟರೆ ತಲೆಮೇಲೆ ಕುದ್ರುದು(ಗಾ).** ವಾ: ನನ್ನ ಕಾಂಬಕನ ಮೊನ್ಸರಿಗೆ ಹೋಗಲಿ ಕೊತ್ತಿ ನಾಯಿಗು ಸಸಾರ. ಕರ್‌ದರೆ ಬಾದೆಲೆ.

ಸಸಿ /*sasi*/ ನಾ. 1. ಸಸಿ, 2. ಎಳೆಯ ಗಿಡ. 1. a plant, 2. a tender plant. ವಾ: ಬಾಣೆ ಜಾಗೆಲಿ ಸುಮಾರ್ ಸಿಲ್ವರ್ ಸಸಿಗಳ ನೆಟ್ಟೊ.

ಸಸ್ಯ ತಿನ್ನವ /*sasya tinnava*/ ನಾ. ಸಸ್ಯಹಾರಿ. vegetarian. ವಾ: ಅಂವ ಸಸ್ಯ ತಿನ್ನವ.

ಸಹ /*saha*/ ಅ. 1. ಜೊತೆ, 2. ಸಂಗಡ, 3. ಕೂಡ. 1. together, 2. jointly, 3. in conjunction with

. ವಾ: ಅವು ಸಹ ನಮ್ಮೊಟ್ಟಿಗೆ ಇರ್‌ದು.

ಸಹಿಸೋಕು /*sahiso:ku*/ ಕ್ರಿ. 1. ಸಹಿಸು, 2. ತಾಳು, 3. ಸೈರಿಸು. 1. to tolerate, 2. to endure, 3. to put up with. ವಾ: ಮೊನ್ಸಾಗಿ ಹುಟ್ಟಿದ ಮೇಲೆ ಎಲ್ಲನು ಸಹಿಸೋಕು.

ಸಹಿಸ್ /*sahisi*/ ಕ್ರಿ. 1. ಸಹಿಸು, 2. ತಾಳು, 3. ಸೈರಿಸು. 1. to tolerate, 2. to endure, 3. to put up with. ವಾ: ಎಸ್ಟ್ ಬೇನೆನ ಸಹಿಸ್‌ದು. ಪ: ಸಹ್‌ಸಿಟು – ಸಹಿಸಿದ್ದಾನೆ

ಸಳಿ /*saḷi*/ ನಾ. 1. ಚಳಿ, 2. ತಂಪು, 3. ಶೀತ. 1. cold, 2. cool, 3. freezing. ವಾ: ಹೊರೆಗೆ ಬಾರಿ ಸಳಿ ಉಟ್ಟು.

ಸಳಿಜರ /*saḷijara*/ ನಾ. 1. ಚಳಿ ಜ್ವರ, 2. ಚಳಿಯೊಡನೆ ಬರುವ ಜ್ವರ. 1. chills with fever, 2. fever with cold. ವಾ: ಸಳಿ ಜರ ಬಂದಂಗೆ ಆದೆ.

ಸಳಿಕಾದ್ /*saḷika:di*/ ನಾ. ಚಳಿಕಾಯಿಸು. to warm oneself. ವಾ: ಒಲೆ ಹಕ್ಕಲೆ ಕುದ್ಕಂಡ್ ಸಳಿಕಾದ್ ಬನ್ನೆ.

ಸಳಿಗಾಲ /*saḷiga:la*/ ನಾ. 1. ಚಳಿಗಾಲ, 2. ಸಾಮಾನ್ಯವಾಗಿ ಉತ್ತರಾಯಣಾರಂಭ ದಿನದಿಂದ (ಡಿಸೆಂಬರ್ 22) ವಸಂತ ವಿಷುವದ (ಮಾರ್ಚ್ 21) ವರೆಗಿನ ಅವಧಿ. winter, usually between 22 December to 21 March. ವಾ: ಸಳಿಗಾಲಲಿ ನೀರಿಗೆ ಕೈ ಹಾಕಿಕೆ ಆದುಲೆ. ಅಸ್ಟ್ ಕ್ವಾಟ ಇದ್ದದೆ ನೀರ್.

ಸಳ್ಳಿ /*saḷḷi*/ ನಾ. ಹಂದಿಮಾಂಸದ ಚರ್ಬಿ ತುಂಬಿದ ಚರ್ಮ. skin of a pig laden with fat. ವಾ: ಹಂದಿ ಸೆಳ್ಳಿನ ಎಣ್ಣೆ ತೆಗ್ದ್ ಗೈಪು ಮಾಡ್ರೆ ತಿಂಬಕೆ ಲಾಯ್ಕ್.

ಸಾಂಕ್ /*sa:ŋki*/ ಕ್ರಿ. ಸಾಕುವುದು. raising. **ಅಜ್ಜಿ ಸಾಂಕಿದ ಪಿಳ್ಳಿ ಬೊಜ್ಜಕ್ಕೂ ಆಗದ್(ಗಾ).** ವಾ: ಮೊಲದ ಮೊರಿನ ಸಾಂಕ್. ಪ: ಸಾಂಕಿಕೆ – ಸಾಕಲು; ಸಾಂಕಿಕನ – ಸಾಕುವಾಗ. **ಸಾಂಕಿ** /*sa:ŋki*/ 1. ಸಾಕು, 2. ಪೋಷಿಸು, 3. ಬೆಳೆಸು. 1. to raise, 2. taking care, 3. nurture. ವಾ: ಅಜ್ಜಿನೆ ಪಿಳ್ಳೆಕಳ ಸಾಂಕಿದ್. ಪ: ಸಾಂಕನ – ಸಾಕುವಾಗ; ಸಾಂಕದಿದ್ದರೆ – ಸಾಕದಿದ್ದರೆ; ಸಾಂಕಿಕಾಂತ – ಸಾಕಿಕೋ ಎಂದು. **ಸಾಂಕಿಕೆ** /*sa:ŋkikɛ*/ 1. ಸಾಕಲು, 2. ಬೆಳೆಸಲು, 3. ಪೋಷಿಸಲು. 1. to raise, 2. to take care, 3. to nurture. ವಾ: ನನ್ನಂದ ಕೊತ್ತಿಗಳ ಸಾಂಕಿಕೆ ಬೊತ್ತ್. **ಸಾಂಕಿನೆ** /*sa:ŋkinɛ*/ 1. ಸಾಕುತ್ತೇನೆ, 2. ಪೋಷಿಸುತ್ತೇನೆ. 1. will raise, 2. will take care of. ವಾ: ನಾಯಿ ಸಾಂಕಿನೆ. **ಸಾಂಕು** /*sa:ŋku*/ 1.

ಸಾಕು, 2. ಪೋಷಿಸು, 3. ಬೆಳೆಸು. 1. to raise, 2. to take care, 3. to nurture. **ಹಾಲ್‌ನ ಎತ್ತಿ ಕಾಸೋಕು, ಮಕ್ಕಳ್‌ನ ಬೊಡ್ಡ್ ಸಾಂಕೊಕು(ಗಾ).** ವಾ: ಮಕ್ಕಳ ಸಾಂಕುದು ಸುಲಬದ ಮಾತಲ್ಲ. ಪ: ಸಾಂಕುದು – ಸಾಕುವುದು.

ಸಾಂತಪ್ಪ /*sa:ntappa*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. masculine given name. ಪ: ಸಾಂತ, ಸಾಂತಣ್ಣ

ಸಾಂತಾಣಿ /*sa:nta:ṇi*/ ನಾ. ಒಣಗಿಸಿ ರಕ್ಷಿಸಿಡುವ ಹಲಸಿನ ಬೀಜ. dried jackfruit seed. ವಾ: ಸಾಂತಾಣಿ ರುಚಿ ಇದ್ದರೂ ಅಗಿಯಕೆ ಬಾರಿ ಗಟ್ಟಿ.

ಸಾಂತಿಕಾಯಿ /*sa:ntika:yi*/ ನಾ. 1. ಕಾಡು ಮರ, 2. ಸಾಂತಿಮರದ (ಚಾಂತಿ) ಕಾಯಿ ತಿನ್ನಲು ಮುಳ್ಳುಹಂದಿ ಬರುವುದು. 1. a forest tree, 2. wildboar feasts on the fruits grown on this tree. ವಾ: ಸಾಂತಿಕಾಯಿನ ತಿಂದರೆ ಪಿತ್ತ ಹೆಚ್ಚಿ ಆದೆ.

ಸಾಂತ್ /*sa:ntɨ*/ ನಾ. 1. ಶಾಂತಿ, 2. ನೆಮ್ಮದಿ, 3. ಸಮಾಧಾನ, 4. ಮೌನ. 1. peace, 2. peace of mind, 3. tranquility, 4. silence. ವಾ: ಬಾರಿ ಸಾಂತ್ ಸೊಬವ ಅವಳ್‌ದ್. **ಸಾಂತಿ**/*sa:nti*/ ವಾ: ಮೊನ್ನಂಗೆ ಮನ್ಸಿಗೆ ಸಾಂತಿ ಇರೊಕು.

ಸಾಂಬ್ರಾಣಿ /*sa:mbra:ṇi*/ ನಾ. ಪರಿಮಳ ದ್ರವ್ಯ. perfume. ವಾ: ಕೂಸುನ ಮೀಸಿದ ಮೇಲೆ ಸಾಂಬ್ರಾಣಿ ಹೊಗೆ ಹಾಕಿವೆ.

ಸಾಂಬ್ರಾಣಿ ದೈ /*sa:mbra:ṇi giḍa*/ ನಾ. ದೊಡ್ಡ ಪತ್ರೆ. ajwain plant. ವಾ: ಸಾಂಬ್ರಾಣಿ ದೈದ್ ಎಲೆನ ಮೊದ್ದಿಗೆ, ಅಡ್ಗೆಗೆ ಬಳ್ಸಿವೆ.

ಸಾಂಬ್ರಾಣಿಸೊಪ್ಪ್ /*sa:mbra:ṇisopp*/ ನಾ. 1. ದೊಡ್ಡಪತ್ರೆ, 2. ಇದನ್ನು ಸಾಂಬಾರ ಬಳ್ಳಿ, ಸಾವಿರ ಸಂಬಾರ(ಅಜವನದ ಎಲೆ), ಕರ್ಪೂರವಳ್ಳಿ ಎಂಬ ಹೆಸರಿನಿಂದ ಕರೆಯುತ್ತಾರೆ, ಎಲೆಯಲ್ಲಿ ನೀರಿನ ಅಂಶ ಹೆಚ್ಚಾಗಿದ್ದು ಔಷಧೀಯ ಗುಣವಿದೆ. Ajwain plant, Indian Borage, a herb. ವಾ: ಸಾಂಬ್ರಾಣಿ ಎಲೆದ್ ರಸನ ತೆಗ್ದ್ ಜೇನೊಟ್ಟಿಗೆ ಕೂಡ್ಸಿ ಕುಡ್‌ದರೆ ಕೆಮ್ಮುಲು, ನೆಗ್ಡಿ ಕಮ್ಮಿ ಆದೆ.

ಸಾಂಮ್ರಾಜನ /*sa:mmra:jana*/ ನಾ. 1. ಬಹುದೊಡ್ಡ ಕಾರ್ಯಕ್ರಮ, 2. ಸಂಭ್ರಮ. 1. a programme, 2. celebration. ವಾ: ಸಾವಿರಾರ್ ಜೆನರ ಸೇರ್‌ಸಿ ಸಾಂಮ್ರಾಜನ ಮಾಡ್ದೊ.

ಸಾಂಯ್ಕಾಲ /*sa:nyka:la*/ ನಾ. 1. ಸಾಯಂಕಾಲ, 2. ಇಳಿಹೊತ್ತು, 3. ಸಂಜೆ. 1. evening, 2. sunset, 3. dusk. ವಾ: ಸಾಂಯ್ಕಾಲ ತಲೆ ಬಾಚಿಕಾದ್, ಅರ್ವೆ ಒಗೆಕಾದ್, ದೀಪ ಇಸಿದ ಮೇಲೆ ಗುಡ್ಸಿಕಾದ್.

ಸಾಕ್^{1} /*sa:kɨ*/ ಕ್ರಿ. 1. ಇಷ್ಟು ಸಾಕು, 2. ಇನ್ನು ಬೇಡ. 1. enough, 2. don’t need any more. ವಾ: ನಂಗೆ ಇಸ್ಟೆ ಜಾಗೆ ಸಾಕ್, ನಂಗೆ ಊಟ ಸಾಕ್. ಪ: ಸಾಕಾಂತ – ಸಾಕೇನೊ. **ಸಾಕಾಕಿಲೆ** /*sa:ka:kile*/ ಸಾಕಾಗಲಿಕ್ಕಿಲ್ಲ. insufficient. ವಾ: ಇಸ್ಟ್ ಸೆಗ್ಣಿ ಗೊಬ್ಬರ ದೈಕೆ ಸಾಕಾಕಿಲೆ. **ಸಾಕಾತ್** /*sa:ka:tɨ*/ ಸಾಕಾಗು. to feel tired/ having enough of something. ವಾ: ನಡ್ದ್ ನಡ್ದ್ ಸಾಕಾತ್. ಪ: ಸಾಕಾತ್‌ಯ – ಸಾಕಾಯಿತು; ಸಾಕಾಗಿತ್ತ್ – ಸಾಕಾಗಿತ್ತು. **ಸಾಕಾತ್ಲೆ** /*sa:ka:tlɛ*/ 1. ಸಾಕಾಗದಿರು, 2. ಹೊಟ್ಟೆ ತುಂಬದಿರು. 1. insufficient, 2. to remain hungry. ವಾ: ನಂಗೆ ನಿದ್ದೆ ಸಾಕಾತ್ಲೆ. **ಸಾಕಾಗಿಹೋತ್** /*sa:ka:giho:tɨ*/ 1. ಸುಸ್ತಾಗಿ ಹೋಗು, 2. ಆಯಾಸವಾಗು, 3. ದಣಿವಾಗು. 1. to feel tired, 2. exhausted, 3. fatigued. ವಾ: ಕುಂದು ಹತ್ತಿ ಬರೊಕರೆ ನಂಗಂತು ಸಾಕಾಗಿ ಹೋತ್. **ಸಾಕಾತ್** /*sa:ka:tɨ*/ 1. ಕೆಲಸ ಮಾಡಿ ಸುಸ್ತಾಗುವುದು, 2. ಆಯಾಸವಾಗು. 1. to feel tired, 2. to feel exhausted. ವಾ: ಬೆಳೆಕೆಲ್ಸ, ತೋಟ ಕೆಲ್ಸತ ಅತ್ತ ಇತ್ತ ಸುತ್ತಿ ಸಾಕಾತ್.

ಸಾಕ್^{2} /*sa:kɨ*/ ಕ್ರಿ. 1. ಸಾಕು, 2. ಪೋಷಿಸು, 3. ಬೆಳೆಸು. 1. to raise, 2. to take care, 3. to nurture. ವಾ: ಕೋಳಿಗಳ ಸಾಂಕ್. **ಸಾಕಂಬದು** /*sa:kambadu*/ 1. ಸಾಕು, 2. ಬೆಳೆಸು, 3. ಪೋಷಿಸು. 1. to raise, 2. taking care, 3. nurture. **ಕಳ್ಳನ ಗೊತ್ತಿದ್ದ್ ಮನೆಲಿ ಸಾಕಂಬದು ಕೆಂಡನ ಸೆರ್ಗ್‌ಲಿ ಕಟ್ಟಿಕಂಬದು ಎರ್ಡೂ ಒಂದೇ(ಗಾ).** ವಾ: ಹಸ್ ಸಾಕಂಬದು ಒಳ್ಳದ್. **ಸಾಕಣಿ** /*sa:kaṇi*/ ಸಾಕಿಕೊಳ್ಳಿ, to take care/to nurutre. ವಾ: ನಾಡ್‌ಲಿ ಇರಿಕನ ನಾಕ್ ಕೋಳಿ ಸಾಕಣಿ. ಮಟ್ಟೆಗಾರ್ ಆದೊಲ. **ಸಾಕಣೆ** /*sa:kaṇe*/ 1. ಸಾಕುವುದು, 2. ಬೆಳೆಸುವುದು, 3. ಪೋಷಿಸುವುದು. 1. to raise, 2. taking care, 3. nurture. ವಾ: ಅವು ಕೋಳಿ ಸಾಕಣೆ ಮಾಡ್ತಿದ್ದೊ. **ಸಾಕಣ್ತ್** /*sa:kaṇti*/ ಸಾಕಿಕೊಂಡರು. adopted/taking

care/raise. ವಾ: ಯಾರ್‌ದೋ ಹಸ್ ಕೊಟಗೆಗೆ ಬಂದ್ ಸೇರಿಕಂಡದರ ಅಂವ ಸಾಕಣ್ತ್ ಗಡ! **ಸಾಕಲೆ** /*sa:kale*/ ಸಾಕಲ್ವ. is it not enough? ವಾ: ತುಪ್ಪ ಹಾಕಿದ್ ಸಾಕಲೆ.

ಸಾಕಿ ಸಲ್‌ಗಿದ /*sa:ki saɨl gida*/ ನಾವಿ. ಸಾಕಿ ಸಲುಹಿದ. raised/ brought up. ವಾ: ಸಾಕಿ ಸಲ್‌ಗಿದ ಅವ್ವಪ್ಪನ ಮರೆಕಾದ್ ಮಕ್ಕಳೆ.

ಸಾಕ್‌ಮಕ್ಕ /*sa:kɨ makka*/ ನಾ. 1. ಸಾಕುಮಕ್ಕಳು, 2. ಅನಾಥ ಮಕ್ಕಳ ಪೋಷಣೆ. 1. adopated children, 2. raising orphans. ವಾ: ಹೆತ್ತ ಮಕ್ಕಳಿಗಿಂತ ಸಾಕ್ ಮಕ್ಕ ಳಿಗೆ ಪ್ರೀತಿ ಹೆಚ್ಚ್.

ಸಾಕ್ಷಿ /*sa:kṣi*/ ನಾ. 1. ರುಜುವಾತು, 2. ಪುರಾವೆ. 1. to prove, 2. proof. ವಾ: ಕದ್ದದಕೆ ಸಾಕ್ಷಿ ಎಂತ ಉಟ್ಟು?, ಸಾಕ್ಸಿ ಹೇಳಿಕೆ ಯಾರಾರ್ ವಳೊನ?

ಸಾಗರಹುಡುಕುದು /*sa:garahuḍukudu*/ ನಾವಿ. ಊಟದಲ್ಲಿ ರುಚಿ ಹುಡುಕುವುದು. to find taste in one's food. ವಾ: ಉಂಬಕೆ ಸಾಗರ ಹುಡುಕುದು. ಅದ್ ಬೇಕ್, ಇದ್ ಬೇಕ್, ಅದ್ ರುಚಿ ಇಲ್ಲೆ, ಇದ್ ರುಚಿ ಇಲ್ಲೆತ.

ಸಾಗರಲಿಹೋವ್ಟ್ /*sa:garaliho:vṭi*/ ನಾವಿ. ರುಚಿಯಾಗಿರುವುದನ್ನು ಬಯಸುವುದು. desiring tasty food. ವಾ: ಅದ್ ಸಾಗರಲಿ ಹೋವ್ಟ್.

ಸಾಗು /*sa:gu*/ ನಾ. ಸಬ್ಬಕ್ಕಿ. sago. ವಾ: ಪಾಯ್‌ಸ ಮಾಡಿಕನ ಸಾಗು ಹಾಕಿವೆ.

ಸಾಗ್ /*sa:gɨ*/ ಕ್ರಿ. 1. ಸಾಗು, 2. ಮುಂದಕ್ಕೆ ಹೋಗು, 3. ಚಲಿಸು. 1. to move, 2. to move forwad, 3. to move. ವಾ: ಕಾಲ್ ದಾರಿಲೆ ಮುಂದಕ್ಕೆ ಸಾಗ್. ಪ: ಸಾಗಿತ್ತ್ – ಸಾಗುವುದು, ಸಾಗುತ್ತಿದ್ದ; ಸಾಗಿವೆ – ಸಾಗುತ್ತಾರೆ; ಸಾಗುದು – ಸಾಗುವುದು

ಸಾಗ್ತಿತ್ತ್ /*sa:gtitti*/ ಕ್ರಿ. 1. ಸಾಗುತಿತ್ತು, 2. ಕಳೆಯುತ್ತಿತ್ತು. 1. was moving, 2. was happening. ವಾ: ಅವ್‌ರ ಬೊದ್ಕ್ ಹಂಗೇ ಮುಂದೊರ್‌ತ್.

ಸಾಗ್ಸಿಕೆ /*sa:gsikɛ*/ ಕ್ರಿ. 1. ಸಾಗಿಸು, 2. ರವಾನಿಸು, 3. ಕಳುಹಿಸು. 1. to trasport, 2. to send, 3. to transmit. ವಾ: ಮನೆ ಸಾಮಾನ್ ಸಾಗ್ಸಿಕೆ ಬಾರಿ ಬಂಗ ಆದೆ.

ಸಾಗ್ಸುವೆ /*sa:gsuvɛ*/ ಕ್ರಿ. 1. ಸಾಗಿಸುತ್ತಾರೆ, 2. ರವಾನಿಸು. 1. will transport, 2. sending. ವಾ: ಆನೆನ ಲಾರಿಲಿ ಹೆಂಗೆ ಸಾಗ್ಸುವೆತ.

ಸಾಜಾ /*sa:ja:*/ ನಾ. 1. ಒಳ್ಳೆಯ, 2. ನೇರ, 3. ಸಾಚಾ, 4. ನಿಜ. 1. good, 2. straight forward, 3. honest, 4. truth. ವಾ: ಬಾರಿ ಸಾಜಾನಂಗೆ ಆಡ್ತೆ.

ಸಾಣೆ /*sa:ṇɛ*/ ಕ್ರಿ. ಸಾಣೆ ಹಿಡಿಯುವುದು. sharpening. ವಾ: ಕತ್ತಿನ ಸಾಣೆ ಹಿಡ್ಸೊಕು.

ಸಾಣೆಕಲ್ಲ್ /*sa:ṇekalli*/ ನಾ. 1. ಗಂಧ ತೇಯುವ ಕಲ್ಲು, 2. ಸಾಣೆಕಲ್ಲು, a stone on which sandal is rubbed to make sandal paste. ವಾ: ಸಾಣೆಕಲ್ಲ್ ಲಿ ಗಂದನ ಅರ್‌ದರಾದೆ.

ಸಾತ್ಕಾರ /*sa:tka:ra*/ ನಾ. 1. ವ್ಯಾಪಾರಿ, 2. ಹಣದ ವಹಿವಾಟು ಮಾಡುವವ. 1. a business man, 2. a money lender. ವಾ: ಸಾತ್ಕಾರನತ್ರ ದುಡ್ಡ್ ತಕಂಡದ್, ಸಾತ್ಕಾರ ಕೊಟ್ಟ ದುಡ್ಡ್‌ನ ಕೇಳ್ತ್. ಪ: ಸಾವ್ಕಾರ

ಸಾತ್ರ /*sa:tra*/ ನಾ. 1. ಶಾಸ್ತ್ರ, 2. ಕ್ರಮ. 1. a custom, 2. a ritual. ವಾ: ಎಸ್ಟ್ ಮಾಡಿರೂ ಸಾತ್ರ ಮುಗಿದೇಲೆ.

ಸಾತ್ಲಡಿ /*sa:tlaḍi*/ ನಾ. ಮೂಸಂಬಿ ಹಣ್ಣು. sweet lemon. ವಾ: ಸಾತ್ಲಡಿ ತಿಂದರೆ ಆರೋಗ್ಯಕೆ ಒಳ್ಳದ್.

ಸಾದಾರಣ /*sa:da:raṇa*/ ನಾ. 1. ಸಾಧಾರಣ, 2. ಸಾಮಾನ್ಯವಾದ, 3. ಸುಮಾರಾದ. 1. ordinary, 2 commonplace, 3. average. ವಾ: ಇಂದ್ ನಮ್ಮ ಕಡೆ ಸಾದಾರಣ ಮಳೆ ಆವುಟು.

ಸಾದ್ಯ /*sa:dya*/ ನಾ. 1. ಸಾಧ್ಯ, 2. ಸಾಧಿಸಬಹುದಾದ, 3. ಕಾರ್ಯ ರೂಪಕ್ಕೆ ತರಬಹುದಾದ. 1. possibble, 2. attainable, 3. something that can be achieved. ವಾ: ನಿನ್ನಂದ ಆ ಕೆಲ್ಸ ಮಾಡಿಕೆ ಸಾದ್ಯ ಉಟ್ಟು.

ಸಾದ್ಸ್ /*sa:dsi*/ ಕ್ರಿ. 1. ಸಾಧಿಸು, 2. ದೊರಕಿಸಿಕೊಳ್ಳು, 3. ರುಜುವಾತು ಮಾಡು. 1. to prove, 2. to attain, 3. to prove. ವಾ: ಬೊದ್ಕ್ ಲಿ ಏನಾರ್ ಒಳ್ಳದ್ ಸಾದ್ಸ್. ಪ: ಸಾದ್ಸಕಾಯಿತ್ – ಸಾದಿಸಬಹುದಿತ್ತು; ಸಾದ್ಸೋಕು – ಸಾದಿಸಬೇಕು

ಸಾನ /*sa:na*/ ನಾ. ಸ್ನಾನ. to have bath. ವಾ: ಸಾನ ಮಾಡ್ದ?

ಸಾನೆಬಳೆ /*sa:nɛbaḷɛ*/ ನಾ. ಸಾದಾ ಬಳೆ. ordinary bangles. ವಾ: ಹೆಣ್ಮಕ ಕೈ ತುಂಬ ಸಾನೆ ಬಳೆ ಹಾಕಂಡರೆ ನೋಡಿಕೆ ಕುಸಿಯಾದೆ.

ಸಾಪ /*sa:pa*/ ನಾ. 1. ಶಾಪ, 2. ನಿಷ್ಠುರದ ನುಡಿ, 3. ಕೆಡುಕಾಗಲೆಂದು ಬಯಸಿ ಹೇಳುವ ಮಾತು. 1. to curse, 2. overt, 3. a curse. ವಾ: ಮನೆಲಿ ಸಾಪ ಹಾಕಿಕಂಡ್ ಇರಿಕಾದ್.

ಸಾಬನ /*sa:bana*/ ನಾ. 1. ಸೋಪು, 2. ಸಾಬೂನು, 3. ಸಬಕಾರ. soap. ವಾ: ಸಾಬನ ಮೈಗೆ ಬೇರೆ. ತಲೆಗೆ ಬೇರೆ ಹಾಕುದ? **ಸಾಬನ್** /*sa:bani*/ ವಾ: ಹಿಂದೆ ನೂರಾ ಒಂದ್ ಸೋಪು ಬರ್‌ತಿತ್. ಅದರ್‌ಲೆ ಅರ್ವೆ ಒಗ್ಯದು. ಅದರ್‌ಲೆ ತಲೆ ತೊಳೆದು. ಕೂದೊಲುಸ ಲಾಯ್ಕಿರ್ತಿತ್.

ಸಾಮನ್[1] /*sa:mani*/ ನಾ. 1. ಸಾಮಾನು, 2. ಪದಾರ್ಥ, 3. ಸಾಮಾಗ್ರಿ, 4. ಸರಕು. 1. utensils, 2. things, 3. things, 4. goods. ವಾ: ಮನೆಗೆ ಸಾಮಾನ್ ತರಕಿತ್.

ಸಾಮನ್[2] /*sa:mani*/ ನಾ. 1. ಅಸಾಮಾನ್ಯ ವ್ಯಕ್ತಿ, 2. ಅಸಾಧ್ಯ ವ್ಯಕ್ತಿ. 1. an extraordinary person, 2. an impossible person. ವಾ: ಅಂವ ಬಯಂಕರ ಸಾಮಾನ್.

ಸಾಮಾನ್ /*sa:ma:ni*/ ನಾ. 1. ಜನನಾಂಗ, 2. ಮನುಷ್ಯ ಅಥವಾ ಪ್ರಾಣಿಗಳ ಗುಪ್ತಾಂಗ. reproductory organs of animals and humans. ವಾ: ನಿನ್ನ ಸರ್ಕಸ್‌ಲಿ ಸಾಮಾನ್ ನೀರಾಗತಿತ್.

ಸಾಮಾನ್ಯ /*sa:ma:nya*/ ನಾ. ಸಾಮಾನ್ಯವಾಗಿ. usually. ವಾ: ಅವು ಸಾಮಾನ್ಯಾಗಿ ಹಂಗೆಲ್ಲ ಮಾತಾಡ್ತುಲೆತ.

ಸಾಮಿ /*sa:mi*/ ನಾ. ಮಭಾ. 1. ದೇವರು, 2. ಸ್ವಾಮಿ, 3. ಚಾಮಿ, 4. ಬಂಗಾರ್ ಕೂಸ್. god (in the vocabulary of children). ವಾ: ಅಡ್ಡ ಬಿದ್ದ್ ಸಾಮಿ ಮಾಡ್. ಪ: ಸಾಮೀ; ಸ್ವಾಮಿ, ಚಾಮಿ.

ಸಾಮ್ರಾಜನೆ /*sa:mra:janɛ*/ ನಾ. 1. ಸಾಮ್ರಾಜ್ಯ, 2. ಸಂಭ್ರಮ. 1. empire, 2. celebration. **ಒಂದು ಬಡಾ ಹೆಂಗ್ಸ್ ಹತ್ತ್ ಮಕ್ಕಳ ಕಟ್ಟಿಕಂಡ್ ಸಮ್ರಾಜನೆ ಮಾಡ್ದೆ – ಬೆಳ್ಳುಳ್ಳಿ(ಒ).** ವಾ: ಹಿಂದೆ ರಾಜನ ಸಾಮ್ರಾಜನೆ ಬಾರಿ ವಿಸ್ತಾರಲಿ ಇತ್.

ಸಾಯ /*sa:ya*/ ನಾ. 1. ಸಹಾಯ, 2. ನೆರವು. 1. help, 2. aid. ವಾ: ಮೊನ್ಸ ಮೊನ್ಸಂಗೆ ಸಾಯ ಮಾಡೊಕು.

ಸಾಯಮಾಡ್ದೊ /*sa:yama:ḍdɔ*/ ನಾ. ಸಹಾಯ ಮಾಡಿದರು. helped. ವಾ: ಸಾಯ ಮಾಡ್ದ ರ ಮರೆಕಾದ್.

ಸಾಯಕನ ಮುಟ್ಟ /*sa:yakana muṭṭa*/ ನಾ. 1. ಸಾಯುವ ವರೆಗೆ, 2. ಜೀವ ಇರುವ ತನಕ. 1. until the death, 2. until the last breath. ವಾ: ಸಾಯಕನ ಮುಟ್ಟ ಇದ್ದದೆ. ಮತ್ತೆ ಎಲ್ಲ ಹೊತ್ಕಂಡ್ ಹೋದವೆನ?

ಸಾಯಕಾಗೊಳ /*sa:yaka:goḷa*/ ನಾ. 1. ಕೃಶ, 2. ಲಾಚಾರು, 3. ತೆಳ್ಳಗೆ, 4. ಕ್ಷೀಣ. 1. guant, excessively thin and angular, 2. helpless, 3. thin, 4. decreased. ವಾ: ಊಟ,ನಿದ್ದೆ ಸೇರಿ ಮಾಡದೆ ನೋಡ್ ಹೆಂಗೆ ಸಾಯಕಾಗೊಳ.

ಸಾಯಕಾದ್ /*sa:yaka:di*/ ನಾ. ಸಾಯಬಾರದು. shouldn't die. ವಾ: ದುಡ್ಡು ದುಡ್ಡು ತ ಸಾಯಕಾದ್. ಪ: ಸಾಯಕೆ – ಸಾಯುವುದಕ್ಕೆ; ಸಾಯತ್ತಿತ್ – ಸಾಯುತ್ತಿತ್ತು;

ಸಾಯಕೆ ಬಿದ್ದಂಗಾಗೊಳ /*sa:yakɛ biddaŋga:gɔḷa*/ ನಾ. 1. ಶರೀರ ಕೃಶ, 2. ಲಾಚಾರ್ ಆಗಿಗು, 3. ತೆಳ್ಳಗಾಗು, 4. ಕ್ಷೀಣವಾಗು. 1. guant, excessively thin and angular, 2. helpless, 3. lean, 4. decreased. ವಾ: ದನಗ ಕುಡೆಕೆ ನೀರಿಲ್ಲದೆ ಸಾಯಕೆ ಬಿದ್ದಂಗಾಗೊಳ.

ಸಾಯದು /*sa:yadu*/ ಕ್ರಿ. ಸಾಯುವುದು. to die. **ನೀರ್‌ಲೆ ಹುಟ್ಟುದು ನೀರ್‌ಲೆ ಬೆಳ್ಯದು ನೀರ್ಲೆ ಸಾಯದು – ಉಪ್ಪು(ಒ).** ವಾ: ಸಾಯದು ಯಾಕೆ? ಧೈರ್‌ಯಲಿ ಬೊದ್ಕೊಕು.

ಸಾಯಿ[1] /*sa:yi*/ ಕ್ರಿ. 1. ಸತ್ತುಹೋಗು, 2. ನಿಧನವಾಗು, 3. ಶಾಪ ರೂಪದಲ್ಲಿ ಹೇಳುವ ಪದ. to die (used as a curse). ವಾ: ಎಲ್ಲೊವು ಒಂದಲ್ಲ ಒಂದ್ ದಿನ ಸಾಯೊದೆ.

ಸಾಯಿ[2] /*sa:yi*/ ನಾ. 1. ಶಾಯಿ, 2. ಇಂಕು, 3. ಮಸಿ. ink. ವಾ: ಪೆನ್ನಿಗೆ ಸಾಯಿ ಹಾಕಿ ಬರೆದು.

ಸಾರ /*sa:ra*/ ನಾ. 1. ತಿರುಳು, 2. ಗುಣ, 3. ಸತ್ಯ. 1. essence, 2. quality, 3. truth. ವಾ: ಆ ಕತೆದ್ ಸಾರ ತಿಳ್ಕಣೊಕು.

ಸಾರ ಇಲ್ಲೆ /*sa:ra illɛ*/ ನಾ. 1. ಪರವಾಗಿಲ್ಲ, 2.

ತೊಂದರೆಯಿಲ್ಲ, 3. ದೊಡ್ಡ ಸಂಗತಿಯಲ್ಲ. 1. to say that something is alright, 2. no problem, 3. not a serious matter. ವಾ: ಸಾರ ಇಲ್ಲೆ, ಅದ್ಕೆಲ್ಲ ನೀವೆನ್ ಬೇಜರ ಮಾಡಿಕನ್ ಬೊಡಿ.

ಸಾರಕರೆ /*sa:rakare*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕೊಡಿಯಾಲ ಗ್ರಾಮದ ಜಾಗ. a locality in Kodiyala village in Sullia Taluk of Dakshina Kannada District.

ಸಾರಕೂಟೇಲು /*sa:raku:ṭe:lu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಸಾರಗ /*sa:raga*/ ನಾ. 1. ಸಾರಂಗ, 2. ಮೈಮೇಲೆ ಚುಕ್ಕೆಗಳಿರುವ ಗಂಡು ಚಿಗರೆ, 3. ಜಿಂಕೆ. 1. spotted deer, 2. a spotted male deer, 3. a deer. ವಾ: ಸಾರಗನ ಹುಲಿ ಹಿಡ್ದ್ ತಿಂದದೆ.

ಸಾರಣೆ /*sa:raṇɛ*/ ಕ್ರಿ. 1. ನೆಲ, ಗೋಡೆಗೆ ಸಿಮೆಂಟ್ ಸಾರಿಸುವುದು, 2. ಗಾರೆ ಹಾಕು. 1. to put cement on the floor, 2. to apply the mortar to make the ground solid. ವಾ: ಮನೆದ್ ಗೋಡೆಗೆ ಸಾರಣೆ ಮಾಡೊಕು.

ಸಾರಿಕಂಡ್[1] /*sa:rikaṇḍi*/ ಕ್ರಿ. ಡಂಗುರ ಹೊಡೆ. to beat the drum – while announcing something. ವಾ: ಎಂತರ ಸಾರಿಕಂಡ್ ಬಂದದ್.

ಸಾರಿಕಂಡ್[2] /*sa:rikaṇḍi*/ ನಾ. 1. ನಿಧಾನವಾಗಿ ಹೋಗು, 2. ಸದ್ದಿಲ್ಲದೆ ಹೋಗು. 1. to go slowly, 2. to move without any sound. ವಾ: ಬೇಟೆಯಾಡೊಕಾರೆ ಸಾರಿಕಂಡ್ ಹೋಕು.

ಸಾರಿಪಳ್ಳ /*sa:ripaḷḷa*/ ನಾ. 1. ಒಂದು ವಿಷಯುಕ್ತ ಹಾವು, 2. ತಾರಿಪಳವ(ತು). 1. a venomous snake, 2. a snake. ವಾ: ಸಾರಿಪಳ್ಳ ವಿಸ ಇರ್‌ವ ಹಾವು. ಪ: ಸಾರಿಬಳ

ಸಾರಿಯಾಡ್ /*sa:riya:ḍi*/ ಕ್ರಿ. 1. ತೆವಳು, 2. ಹೊರಳು, 3. ಮೆಲ್ಲನೆ ಹೋಗು. 1. to crawl, 2. to turn, 3. to go slowly. ವಾ: ಕೊತ್ತಿ ಸಾರಿಯಾಡಿ ಸಾರಿಯಾಡಿ ಎಲಿನ ಹಿಡ್ತ್.

ಸಾರು[1] /*sa:ru*/ ಕ್ರಿ. 1. ಹೊಂಚುಹಾಕು, 2. ಅವಕಾಶಕ್ಕಾಗಿ ಕಾಯು. 1. to wait for the appropriate time, 2. to wait for one's turn. ವಾ: ಕೊತ್ತಿ ಹಕ್ಕಿ ಹಿಡೆಕೆ ಸಾರುದು.

ಸಾರು[2] /*sa:ru*/ ಕ್ರಿ. 1. ಸಾರಿಸು, 2. ನೆಲಕ್ಕೆ ಸೆಗಣಿ ಸಾರಿಸುವುದು, 3. ಬಳಿಯುವುದು. 1. to mop, 2. to clean the floor by applying cow dung, 3. to apply something. ವಾ: ಇಜ್ಜೆಲ್‌ಗೆ ಸೆಗ್‌ಣಿನ ಸಾರುದು.

ಸಾರೆ /*sa:rɛ*/ ನಾ. 1. ಹಲಸಿನ ಹಣ್ಣಿನ ಸಿಪ್ಪೆ, 2. ಹೊರ ಭಾಗ, 3. ಮೇಲ್ಪದರ, 4. ರೆಚ್ಚೆ(ತು). 1. pointy/scaly skin of jackfruit, 2. outer shell, 3. top layer, 4. external layer. ವಾ: ಹಲ್‌ಸ್‌ನ ಸಾರೆನ ದನಗಳಿಗೆ ಹಾಕಿರೆ ತಿಂದವೆ.

ಸಾರೆಙ್ಙ /*sa:rɛŋa*/ ನಾ. ಜಿಂಕೆ. deer. ವಾ: ಸಾರೆಙ್ಙ ನೋಡಿಕೆ ಲಾಯ್ಕ. ಪ: ಸಾರೆಂಗ

ಸಾರ್ /*sa:ri*/ ನಾ. 1. ಸಾಂಬಾರ್, 2. ತಿಳಿ ಸಾರು. 1. thick soup/curry made of lentils and vegetables, 2. thin soup. ವಾ: ಸಾರಿಗೆ ಹಙ ಉಪ್ಪ್ ಬೇಕ್ ಕಂಡದೆ. **ಸಾರ್‌ಂದ** /*sa:rinda*/ 1. ರಸದಿಂದ, 2. ರುಚಿಯಿಂದ. 1. from the juice, 2. from the taste. ವಾ: ಮಾಯ್ನ ಹಣ್ಣ್ ಸಾರ್‌ಂದಾಗಿ ಎಸ್ಟ್ ಕೊಟ್ಟರು ತಿಂಬಕ್.

ಸಾರ್‌ಬಾಳೆ /*sa:ri ba:ḷɛ*/ ನಾ. 1. ಸಾರು ಮಾಡಲು ಬಳಸುವ ಬಾಳೆಕಾಯಿ, 2. ಔಂಡಬಾಳೆ. 1. plantain used in making a thick soup/curry, 2. a plantain. ವಾ: ಸಾರ್ ಬಾಳೆಲಿ ಗೈಪು ಮಾಡಕ್. ಪಲ್ಯನು ಮಾಡಕ್, ಸಾರ್ ಬಾಳೆದ್ ಪಲ್ಯನ ತುಪ್ಪಲಿ ಮಾಡಿ ಬಾಣ್ತಿಗಳಿಗೆ ಕೊಟ್ಟವೆ.

ಸಾರ್‌ಂಗ /*sa:riŋga*/ ನಾ. 1. ಸಾರಂಗ, 2. ಮೈಮೆಲೆ ಚುಕ್ಕೆಗಳಿರುವ ಗಂಡು ಚಿಗರೆ, 3. ಜಿಂಕೆ. 1. spotted deer, 2. a spotted male deer, 3. a deer. ವಾ: ಹಿಂದೆನ ಕಾಲಲಿ ಸಾರ್‌ಂಗನ ಬೇಟೆಗೆ ಹೋಕನ ಹೊಡ್ದ್ ತರ್‌ತಿದ್ದೊ.

ಸಾರ್ಣೆ /*sa:rŋɛ*/ ಕ್ರಿ. 1. ಸಾರಣೆ, 2. ಗೋಮಯದಿಂದ ನೆಲವನ್ನು ಸಾರಿಸು. 1. to mop the floor with cowdung, 2. to apply cowdung on to the floor. ವಾ: ನೆಲ ಸಾರ್ಣೆ ಮಾಡ್ದು.

ಸಾರ್ದೆ /*sa:rdɛ*/ ಕ್ರಿ. 1. ಎಲ್ಲರೊಂದಿಗೆ ಹೇಳಿಕೊಂಡು

ಬರು, 2. ಡಂಗುರ ಸಾರು. 1. to tell everyone, 2. to announce. **ಆರೆಡೆಗೆ ಇರ್ಸಿಕಂಡ್ ಮೂರೆಡೆಗೆ ಸಾರ್ದೆ(ಗಾ).** ವಾ: ಅದಿಕೆ ಏನಾರ್ ವಿಸ್ಯ ಸಿಕ್ಕುದೆ ತಡ ಹಂಗೆನೆ ಎಲ್ಲೊರೊಟ್ಟಿಗೆ ಸಾರ್‌ದೆ.

ಸಾರ್ಸ್ /*sa:rsi*/ ಕ್ರಿ. 1. ನೆಲ ಸಾರಿಸು, 2. ನೆಲ ಒರೆಸು. 1. to mop the floor, 2. to swab the floor. ವಾ: ಹೊತಾರೆನೆ ದೀಪ ಇಸಿಕೆ ಮುಂದೆನೆ ನೆಲನ ಸಾರ್ಸ್. ಪ: ಸಾರ್ಸಿ – ಸಾರಿಸಿ; ಸಾರ್ಸಿನೆ – ಸಾರಿಸುತ್ತೇನೆ; ಸಾರ್ಸುದು – ಸಾರಿಸುವುದು. **ಸಾರ್‌ಸುದು** /*sa:risudu*/ ಸಾರಿಸು. to mop. ವಾ: ನೀ ನೆಲಕೆ ಸಾರ್‌ಸುದು ಎಂತರ? ನೆಲಕ್ಕೆ ಕೈ ಮಣ್ಣ್ ಕೊಟ್ಟ್ ಸಾರ್‌ಸಿವೆ. ಪ: ಸಾರ್ಸುದ್

ಸಾಲ /*sa:la*/ ನಾ. 1. ಸಾಲ, 2. ಎರವು, 3. ಕಡ, 4. ಉದ್ದರಿ. 1. debt, 2. credit, 3. borrowing, 4. to take loan. **ಶ್ರೀಮಂತನ ಸಾಲ ಸತ್ತಮೇಲೆ(ಗಾ).** ವಾ: ಸಾಲ ತಕಂಬೊದ್ ದೊಡ್ಡ್ ವಿಸ್ಯ ಅಲ್ಲ, ಅದರ ತೀರ್‌ಸೊಕಲೆ.

ಸಾಲಾವಳಿ /*sa:la:vaḷi*/ ನಾ. ಮದುವೆ ಸಂದರ್ಭದಲ್ಲಿ ಗಂಡುಹೆಣ್ಣಿನ ಸಂಬಂಧ ಜ್ಯೋತಿಷ್ಯದ ಆಧಾರದಲ್ಲಿ ನಿಗದಿಗೊಳಿಸುವುದು. to fix the date of marriage based on the astronomical calendar. ವಾ: ಸಾಲಾವಳಿ ಗೊತ್ತ್ ಮಾಡ್ದ್.

ಸಾಲೆ /*sa:lɛ*/ ನಾ. 1. ಶಾಲೆ, 2. ಸ್ಕೂಲು, 3. ವಿದ್ಯೆಯನ್ನು ಕಲಿಸುವ ಸ್ಥಳ, 4. ಪಾಠಶಾಲೆ. a school. **ಅಮ್ಮ ಮಾತಾಡಿಕೆ ಕಲ್ಸಿದೆ, ಸಾಲೆ ಏನ್ ಮಾತಾಡುಕೂಂತ ಕಲ್ಸಿದೆ, ಜಗತ್ ಯಾಗ ಮಾತಾಡುಕೂಂತ ಕಲ್ಸಿದೆ(ಗಾ).** ವಾ: ಇಂದ್ ಸಾಲೆ ಇಲ್ಲೆನ? ಸಾಲೆ ಸುರು ಆತ್?

ಸಾಲೆಪ್ಪ /*sa:leppa*/ ನಾ. ವಿದ್ಯಾವಂತ ದೊಡ್ಡಪ್ಪ ಅಥವಾ ಚಿಕ್ಕಪ್ಪ. an educated uncle. ವಾ: ಸಾಲೆಪ್ಪ ಬಾಕನ ಮಿಠಾಯಿ ತಾವೊ.

ಸಾಲೆಬೊಳಿ /*sa:lɛbɔḷi*/ ನಾ. ಗೌಡರ 18 ಗೋತ್ರಗಳಲ್ಲಿ ಒಂದು ಬಳಿ. one of the 18 lineages/clans of Arebhase Gowda community. ವಾ: ಗೌಡ ಜೆನಾಂಗದ ಬೊಳಿದ್ ಹೆಸ್‌ರ್.

ಸಾಲ್ /*sa:lɨ*/ ನಾ. 1. ಸಾಲಾಗಿ ನಿಲ್ಲು, 2. ಸರದಿಯ ಸಾಲು. 1. to stand in line, 2. a row. ವಾ: ಅಂಗ್ಡಿ ಮುಂದೆ ಸಾಲ್ ಸಾಲ್ ಜೆನ ನಿತ್ತೊಳ. **ಸಾಲಾಗಿ** /*sa:la:gi*/ ಪಂಕ್ತಿ. 1. in a row, 2. in a line. ವಾ: ಸೊಸೈಟಿ ಮುಂದೆ ಸಾಲಾಗಿ ನಿಲ್ಲೊಕು.

ಸಾಲ್ತಾಡಿ /*sa:lta:ḍi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ನಾಲ್ಕೂರು ಗ್ರಾಮದ ಜಾಗ. a locality in Nalkuru village in Sullia Taluk of Dakshina Kannada District.

ಸಾಲ್ದ್ /*sa:ladi*/ ಕ್ರಿ. ಸಾಕಾಗುವುದಿಲ್ಲ. not enough. ವಾ: ಅಂವಂಗೆ ಅಸ್ಟ್ ಕೊಟ್ರೆ ಸಾಲ್ದ್. **ಸಾಲ್ದುಲೆ** /*sa:ldulɛ*/ ಸಾಕಾಗುವುದಿಲ್ಲ. not enough. ವಾ: ನಂಗೆ ಎರ್‌ಡ್ ರೊಟ್ಟಿ ಸಾಲ್ದುಲೆ. ಇನ್ನ್ ಬೇಕ್.

ಸಾವಸ /*sa:vasa*/ ನಾ. 1. ಸಹವಾಸ, 2. ಒಡನಾಟ, 3. ಸ್ನೇಹ. 1. association, 2. affinity, 3. friendship. ವಾ: ಯಾಗೊಳು ನಾವು ಒಳ್ಳೆವರ ಸಾವಸ ಮಾಡೊಕು.

ಸಾವಿರಕದಳಿ /*sa:vira kadaḷi*/ ನಾ. 1. ಸಾವಿರಾರು ಬಾಳೆಕಾಯಿ ಇರುವ ಒಂದೇ ಬಾಳೆಗೊನೆ, 2. ಕದಳಿಬಾಳೆ. 1. having thousands of plantain in a bunch, 2. a variety of plantain. ವಾ: ಸಾವಿರ ಕದಳಿ ಸಾವಿರ ಕಾಯಿ ಉಟ್ಟು.

ಸಾವಿರಕಾಲ್ ಜಡೆ /*sa:viraka:lɨ jaḍɛ*/ ನಾ. ತುಂಬಾ ಎಳೆಗಳನ್ನು ಉಪಯೋಗಿಸಿ ಕಟ್ಟುವ ಜಡೆ. having many strands in the plait. ವಾ: ಅವ್ವ ಸಾವಿರಕಾಲ್ ಜಡೆ ಹಾಕಿಟು. ಅದ್ ನೋಡಿಕೆ ಲಾಯ್ಕ.

ಸಾವು^{1} /*sa:vu*/ ನಾ. 1. ಸತ್ತವರಿಗೆ ಮಾಡುವ ಆಚರಣಾತ್ಮಕ ಕ್ರಿಯೆ, 2. ಬೈಗುಳಪದ. 1. a ritual related to death, 2. an expletive. **ಹುಟ್ಟಿದಂವಂಗೆ ಸಾವು ತೊಪ್ಪಿಕಿಲೆ(ಗಾ). ಅಮ್ಮಪ್ಪ ಸಾವು ಅದರ ಹೆಸ್ರೇ ಬಾದ್ಲೆ(ನು).** ವಾ: ಅಂವನ ಸಾವು, ಎಂತ ಹಿಂಗೆ ಬಟ್ಟೆ ಹೊಲ್‌ದುಟು.

ಸಾವು^{2} /*sa:vu*/ ನಾ. 1. ಮರಣ, 2. ನಿಧನ. 1. death, 2. demise. **ಹುಟ್ಟಿದಂವಂಗೆ ಸಾವು ತೊಪ್ಪಿಕಿಲೆ(ಗಾ).** ವಾ: ಹುಟ್ಟು,ಸಾವು ಎಲ್ಲೊವ್ಕ ಇದ್ದದ್ದೆ. ಅದರ ಎಡೆಲಿ ನಾವ್ ಹೆಂಗೆ ಬೊದ್ಕುವೆತ ಇರ್‌ದು. ಪ: ಸಾವುಟ್ಟ – ಸಾವಿದೆಯಾ;

ಸಾವುಕಾರ /*sa:vuka:ra*/ ನಾ. 1. ಸಾಹುಕಾರ, 2. ಧನಿಕ, 3. ಶ್ರೀಮಂತ. 1. a rich person, 2. a wealthy person, 3. an affluent person. ವಾ: ಊರಿಗೆ ಅಂವನೆ ಸಾವುಕಾರ.

ಸಾವುರ /*sa:vura*/ ನಾ. 1. ಸಾವಿರ, 2. ಹತ್ತುನೂರು. 1. one thousand, 2. ten hundreds. **ಸಾವುಕಾರ ಮುಂದೆ ಸಾವುರ ಜನ ಹಿಂದೆ – ಬಾಳೆಗೊನೆ(ಒ).** ವಾ: ಮರಲಿ ಸಾವುರ ಮಾಯಿನಕಾಯಿ ಇರ್‌ದು.

ಸಾವ್ಕಾರ /*sa:vka:ra*/ ನಾ. 1. ಸಾಹುಕಾರ, 2. ಧನಿಕ, 3. ಶ್ರೀಮಂತ. 1. a rich person, 2. an affluent person, 3. a wealthy person. **ಸಾವ್ಕಾರ ಮುಂದೆ ಸಾವ್ರ ಜನ ಹಿಂದೆ – ಬಾಳೆಗೊನೆ(ಒ).** ವಾ: ಸಾವ್ಕಾರ ಎಂತ ಹೇಳ್ದ್?

ಸಾವ್ಕಾಸ /*sa:vka:sa*/ ನಾ. 1. ನಿಧಾನವಾಗಿ, 2. ವಿರಾಮವಿರುವ, 3. ಬಿಡುವಿರುವ, 4. ಸಾವಕಾಶ. 1. slowly, 2. leisure, 3. free time, 4. at leisure. ವಾ: ಸಾವ್ಕಾಸಲಿ ಬನ್ನಿ.

ಸಾವ್ರ /*sa:vra*/ ನಾ. 1. ಸಾವಿರ, 2. ಹತ್ತುನೂರು. 1. one thousand, 2. ten hundreds. ವಾ: ಹಿಂದೆಂದ ಸಾವ್ರ ಜೆನ ಮಾತಾಡಿವೆ. ಅದ್ಕೆಲ್ಲ ತಲೆ ಕೊಡಿಕಾದ್. ನಮ್ಮ ಕೆಲ್ಸ ನಾವ್ ಮಾಡಿಕಂಡಿರೊಕು.

ಸಾವ್ರಕಾಲ್ ಚೇಳ್ /*sa:vra ka:lɨ ce:ḷɨ*/ ನಾ. ಸಾವಿರ ಕಾಲಿನ ಲಕ್ಷ್ಮೀ ಚೇಳು. centipede. ವಾ: ಸಾವ್ರ ಕಾಲ್ ಚೇಳ್ ಕಚ್ಚುದು.

ಸಾಸ /*sa:sa*/ ನಾ. 1. ಸಹವಾಸ, 2. ಒಡವಾಟ, 3. ಸ್ನೇಹ. 1. association, 2. affinity, 3. friendship. ವಾ: ಯಾಗೊಳು ಒಳ್ಳವರ ಸಾಸ ಮಾಡೊಕು.

ಸಾಸಿವೆ /*sa:sivɛ*/ ನಾ. ಸಂಭಾರ ಜೀನಸು. sesame. ವಾ: ಗೈಪು, ಆಂಬರಕೆ ಅಗ್ರಣೆ ಹಾಕಿಕನ ಎಣ್ಣೆಗೆ ಸಾಸಿವೆ ಹಾಕಿ ಸಿಡ್‌ಸುದು.

ಸಾಸ್ತಾವ್ /*sa:sta:vɨ*/ ನಾ. 1. ದೇವರ ನೆಲೆ, 2. ದೇವರ ಹೆಸರು, ಇಲ್ಲಿ ಮಣ್ಣಿನ ನಾಯಿಯ ಮೂರ್ತಿಗಳನ್ನು ಹರಕೆಯ ರೂಪದಲ್ಲಿ ಅರ್ಪಿಸಲಾಗುತ್ತದೆ, ಯಾವ ದುಷ್ಟ ಶಕ್ತಿಗಳು ಕಾಡದಿರಲಿ ಎಂದು, 3. ಮಡಿಕೇರಿ ಜಿಲ್ಲೆಯ ನಾಪೋಕ್ಲುವಿನ ಬೇತು ಗ್ರಾಮದಲ್ಲಿ ಪ್ರತಿ ವರ್ಷ ಉತ್ಸವ ನಡೆಯುತ್ತದೆ. 1. an adobe of god, 2. Sasthav, a god. idols of clay dogs are offered in this temple, 3. a festival celebrated in the Bethu village of Napoklu, Madikeri. ವಾ: ಮಡಿಕೇರಿ ಜಿಲ್ಲೆನ ನಾಪೋಕ್ಲುಲಿ ಮಕ್ಕಿ ಸಾಸ್ತಾವ್ ದೇವ್‌ರ ಉತ್ಸವ ನಡ್ದದೆ.

ಸಾಸ್‌ರ /*sa:sɨra*/ ನಾ. 1. ಶಾಸ್ತ್ರ, 2. ಮದುವೆ ಮುಂತಾದ ಶುಭ ಕಾರ್ಯಗಳಲ್ಲಿ ಮಾಡುವ ಶಾಸ್ತ್ರ. 1. a custom, 2. a custom followed in the marriage. ವಾ: ಮೊದುವೆ ಸಾಸ್‌ರ ಮಾಡಿಕೆ ಗೊತ್ತುಟಾ?

ಸಿಂಗಾರ /*siŋga:ra*/ ನಾ. 1. ಅಲಂಕಾರ, 2. ಶೃಂಗಾರ. 1. decoration, 2. embellishment. **ಅಂಗ ಬಂಗ ಆದ್ರೂ ಸಿಂಗಾರಕ್ಕೇನ್ ಕೊರ್ತೆ ಇಲ್ಲೆ(ಗಾ).** ವಾ: ಸಿಂಗಾರ ಮಾಡಿಕಂಡ್ ಎತ್ತ ಹೊರ್‌ಟದ್?

ಸಿಂಗ್ಲಿಂಗ /*siŋgliŋga*/ ನಾ. 1. ಸಿಂಗಲೀಕ, 2. ಕಪ್ಪು ಮೂತಿಯ ಮಂಗ, 3. ಚಿಂಗ್ಲಿಂಗ. 1. a langur, 2. a black faced monkey. ವಾ: ಅದ್ ಸಿಂಗ್ಲಿಂಗ, ನೋಡಿಕೆ ಮಂಗನೆ. ಪ: ಮುಸಿಯ

ಸಿಂಗ್ಲೀಕ /*siŋgli:ka*/ ನಾ. ನೋಡಲು ಕುರೂಪಿ ವರ್ತನೆಯ ಮಂಗ. a langur. ವಾ: ಸಿಂಗ್ಲೀಕನ ಆಟ ನೋಡಿಕೆ ಬೊತ್ತ್, ಹಂಗೆ ಆಡ್ದೆ.

ಸಿಂಡರ್ಸ್ /*siṇḍarsɨ*/ ಕ್ರಿ. 1. ಮುಖ ಸಿಂಡರಿಸು, 2. ಅಸಹನೆ, 3. ಅತೃಪ್ತಿ, 4. ಅಸಮಾಧಾನವನ್ನು ಮುಖದಲ್ಲಿ ವ್ಯಕ್ತಪಡಿಸು. 1. expression of frowning, 2. expression of intolerance, 3. dissatisfaction, 4. to grimace to indicate dissatisfaction. ವಾ: ಆಗಾಗ ಮೋರೆನ ಸಿಂಡರ್‌ಸುದು.

ಸಿಂಡಿ /*siṇḍi*/ ನಾ. 1. ಸೆಂಡ್, 2. ಜುಟ್ಟು. 1. noxious, 2. tuft of hair. ವಾ: ಅವುಳ ಸಿಂಡಿನ ನೋಡೊಮ್ಮೆ.

ಸಿಂಡ್ /*siṇḍɨ*/ ನಾ. 1. ಜಿಡ್ಡ್ ವಾಸನೆ, 2. ಸೆಂಡ್. 1. stench, 2. bad smell, 3. noxious. ವಾ: ಹಳ್ತ್ ಎಣ್ಣೆ ಸಿಂಡ್ ಬಂದದೆ.

ಸಿಂಡ್‌ವಾಸ್ನೆ /*siṇḍɨva:snɛ*/ ನಾವಿ. 1. ಬೆವರಿನ ವಾಸನೆ, 2. ಕೊಳೆತ ವಾಸನೆ. 1. smell of sweat, 2. rotten smell. ವಾ: ಆನೆ, ಹಂದಿ ಸಿಂಡ್ ದೂರಕೇ ಬಂದದೆ.

ಸಿಂಪೆ /*simpɛ*/ ನಾ. ತಲೆಯ ಮೇಲೆ ಭಾರವಾದ ವಸ್ತುಗಳನ್ನು ಹೊರುವಾಗ ತಲೆಗೆ ಒತ್ತದಂತೆ ಬಟ್ಟೆ ಅಥವಾ ಹುಲ್ಲನ್ನು ವೃತ್ತಾಕಾರವಾಗಿ ಸುತ್ತಿ ಇಟ್ಟುಕೊಳ್ಳುವುದು. a ring made of cloth or reed to carry heavy things on the head. ವಾ: ಹುಲ್ಲ್‌ಲಿ, ಚೆರ್‌ಮೆ ಸೊಪ್ಪ್ ಲೆಲ್ಲ ಸಿಂಪೆ ಕಟ್ಟಿ ತಲೆಮೇಲೆ ಇಸಿಕಂಡ್ ಅದರ ಮೇಲೆ ಹೊರೆನ

ಹೊತ್ಕಂಡ್ ಬಾದು. ಆಗ ತಲೆಗೆ ಒತ್ತುದುಲೆ. ಪ: ಸಿಂಬೆ, ಸುಂಪೆ

ಸಿಂಬಿ /*simbi*/ ನಾ. ತಲೆಯ ಮೇಲೆ ಭಾರವಾದ ವಸ್ತುಗಳನ್ನು ಹೊರುವಾಗ ತಲೆಗೆ ಒತ್ತದಂತೆ ಬಟ್ಟೆ ಅಥವಾ ಹುಲ್ಲನ್ನು ವೃತ್ತಾಕಾರವಾಗಿ ಸುತ್ತಿ ಇಟ್ಟುಕೊಳ್ಳುವುದು. a ring made of cloth or reed to carry heavy things on the head. ವಾ: ನಿಂಗೆ ಸಿಂಬಿ ಕಟ್ಟಿಕೆ ಗೊತ್ತುಟ?

ಸಿಂಯಿ^{1} /*sinyi*/ ನಾ. ಸಿಹಿ. sweet. ವಾ: ಸಪೋಟ ಹಣ್ಣ್ ಬಾರಿ ಸಿಂಯಿ ಉಟ್ಟು, ಜೂಸ್‌ನ ಬಾರಿ ಸಿಂಯಿ ಮಾಡ್ಬಡ.

ಸಿಂಯಿ^{2} /*sinyi*/ ನಾ. ಮಣ್ಣಿನ ಗುಡ್ಡ. a hillock of mud.

ಸಿಂವ /*sinva*/ ನಾ. 1. ಸಿಂಹ, 2. ಫೀಲಿಡೀ ಕುಟುಂಬಕ್ಕೆ ಸೇರಿದ ಬೃಹತ್ ಗಾತ್ರದ ಮಾಂಸಾಹಾರಿ ಸಸ್ತನಿ, 3. ಸಿಂಗ, 4. ವನ್ಯಮೃಗ. 1. loin, 2. a wild mammal, belongs to the family of Felidae, 3. an animal, 4. a wild animal. ವಾ: ಗಂಡ್ ಸಿಂವ ನೋಡಿಕೆ ಲಾಯ್ಕ. ಹೆಣ್ಣ್ ಸಿಂವ ಬೋಳಿ.

ಸಿಂವಗರ್ಜನೆ /*sinvagarjanɛ*/ ಕ್ರಿ. 1. ಸಿಂಹಘರ್ಜನೆ, 2. ಸಿಂಹರವ, 3. ಸಿಂಹನಾದ. 1. lion's roar, 2. sound made by a lion, 3. roaring sound of lion. ವಾ: ಕಾಡ್‌ಲಿ ಸಿಂಹ ಗರ್ಜಿಸುದು ಕೇಳ್ದೆ.

ಸಿಂಹಿ-ಕಂಹಿ /*sinhi-kanhi*/ ನಾ. ಸಿಹಿ-ಕಹಿ. bitter-sweet. ವಾ: ಬೇವು ಬೆಲ್ಲತೇಳಿರೆ ಸಿಂಹಿ- ಕಂಹಿ ಎರ್‌ಡು ಇರೊಕುತ.

ಸಿಕ್ಕಿತ್ /*sikkiti*/ ಕ್ರಿ. 1. ಸಿಗು, 2. ಲಭ್ಯವಾಗು, 3. ದೊರಕು, 4. ಎಟುಕು. 1. to become available, 2. availalble, 3. obtainable, 3. accessible. ವಾ: ಹೊಸ್ತ್ ಪುಸ್ತಕ ಸಿಕ್ಕಿತ್. **ಸಿಕುವೊಂತ** /*sikuvonta*/ ಸಿಗಬಹುದೆಂದು. might find. ವಾ: ಈಗ ಹೋದರೆ ಅವು ಸಿಕುವೊಂತ ಹೇಳ್ದೊ. **ಸಿಕ್ಕಿತ್ಲೆ** /*sikkitlɛ*/ ಕ್ರಿ. ಸಿಗಲಿಲ್ಲ. didn't get. ವಾ: ನಂಗೆ ಹಣ್ಣ್ ಸಿಕ್ಕಿತ್ಲೆ. ಪ: ಸಿಕ್ಕಿತ್ಲೆನ – ಸಿಗಲಿಲ್ಲವ. **ಸಿಕ್ಕಿನೆ** /*sikkinɛ*/ ಸಿಗುತ್ತೇನೆ. will meet you. ವಾ: ನಾ ನಾಡ್ದ್ ಸಿಕ್ಕಿನೆ. ಪ: ಸಿಕ್ಕಿರು – ಸಿಕ್ಕಿದರು. **ಸಿಕ್ಕುದು** /*sikkudu*/ 1. ಸಿಗುವುದು, 2. ಪಡೆಯುವುದು. 1. to become available, 2. to recieve. ವಾ: ನಾಳೆ ಅಳ್‌ಂಬು ಸಿಕ್ಕುದು. ಪ: ಸಿಕ್ಕುದುಟ್ಟು – ಸಿಗುವುದಿದೆ, ಸಿಗಲಿಕ್ಕಿದೆ; ; ಸಿಕ್ಕದೆ – ಸಿಗದೆ; ; ಸಿಕ್ಕಕಾಗಿತ್ತ್ – ಸಿಗಬೇಕಿತ್ತು; ಸಿಕ್ಕಕ್ಕಾದು – ಸಿಗಬಾರದು; ಸಿಕ್ಕದಿರ್ದು – ಸಿಕ್ಕದಿರುವುದು; ಸಿಕ್ಕವಂಗೇ – ಸಿಗುವವನಿಗೆ. **ಸಿಕ್ಕುಲೆ** /*sikkulɛ*/ ಸಿಗುವುದಿಲ್ಲ. will not be available. **ಅಂಡೆಗೆ ಸಿಕ್ಕುಲೆ ಅಳಗೆಗೆ ಸಿಕ್ಕುಲೆ(ಗಾ). ಕಣ್ಣಿಗೆ ಕಂಡ್ರೂ ಕೈಗೆ ಸಿಕ್ಕುಲೆ – ಗಾಳಿ(ಒ).** ವಾ: ಕರ್ ಹಿಡೆಕೆ ಸಿಕ್ಕುಲೆ. ಪ: ಸಿಕ್ಕೊಕು – ಸಿಗಬೇಕು. **ಸಿಕ್ಕ್‌ಸ್** /*sikkɨsi*/ 1. ಸಿಗುವಂತೆ ಇಡು, 2. ಸಿಕ್ಕಿಸಿ ಹಾಕು. 1. keep something within the reach, 2. to hook. ವಾ: ಕತ್ತಿನ ಸೊಂಟಲಿ ಸಿಕ್ಕ್‌ಸ್.

ಸಿಕ್ಕಾಕನ್ತ್ /*sikka:kanti*/ ಕ್ರಿ. 1. ಸಿಕ್ಕಿಬೀಳು, 2. ಸಿಕ್ಕಿಬಿದ್ದರು. 1. to get caught, 2. got caught. ವಾ: ಕದೆಕನ ಸಿಕ್ಕಾಕನ್ತ್.

ಸಿಕ್ಕಾಬಟ್ಟೆ /*sikka:baṭṭɛ*/ ಕ್ರಿ. 1. ಒಟ್ಟಾರೆ, 2. ಗೊತ್ತು ಗುರಿಯಿಲ್ಲದೆ, 3. ಯೋಜನಾರಹಿತ. 1. together, 2. aimless, 3. unplanned. ವಾ: ಜಾತ್ರೆಲಿ ಸಿಕ್ಕಾಬಟ್ಟೆ ಜೆನ ಇದ್ದೊ.

ಸಿಕ್ಕಿಕನ್ತ್ /*sikkikanti*/ ಕ್ರಿ. ಸಿಕ್ಕಿಕೊಳ್ಳು. to be caught. ವಾ: ತಂತಿ ಸೆರೆಗೆ ಅರ್ವೆ ಸಿಕ್ಕಿಕನ್ತ್.

ಸಿಕ್ಕಿಕಿಲ್ಲೆ /*sikkikillɛ*/ ಕ್ರಿ. 1. ಸಿಗಲಾರದು, 2. ಸಿಗಲಿಕ್ಕಿಲ್ಲ. 1. won't be available, 2. won't be there. ವಾ: ಉಂಗುರ ಬಿದ್ದದ್ ಇನ್ನ್ ಸಿಕ್ಕಿಕಿಲ್ಲೆ. ಪ: ಸಿಕ್ಕಿತಿಲ್ಲೆ – ಸಿಕ್ಕಲಿಲ್ಲ.

ಸಿಕ್ಕ್ /*sikki*/ ಕ್ರಿವಿ. 1. ಸಿಕ್ಕು, 2. ಸಿಕ್ಕಾಗುವುದು, 3. ಬಿಡಿಸಲು ಕಷ್ಟವಾಗುವ, 4. ಗೋಜಲು ಗೋಜಲು, 5. ಜಟಿಲವಾಗುವುದು. 1. entangled, 2. to get entangled, 3. difficult to untwist, 4. enmeshd, 5. embroiled. ವಾ: ಕೂದೊಲು ಬಾರಿ ಸಿಕ್ಕ್ ಆಗುಟು. ಬಾಚಿಕೆ ಆದುಲೆ.

ಸಿಕ್‌ಸಿಡ್ /*sikɨsiḍi*/ ಕ್ರಿ. 1. ನೇತಾಡಿಸು, 2. ಸಿಕ್ಕಿಸು, 3 ಸಿಗುವಂತೆ ಮಾಡು. 1. to hang, 2. hanged, 3. to keep within the reach of someone. ವಾ: ಆಣಿಗೆ ಬೇಗ್‌ನ ಸಿಕ್‌ಸಿತ್.

ಸಿಕ್ಸ್ /*siksi*/ ಕ್ರಿ. 1. ಸಿಗು, 2. ಲಭ್ಯವಾಗು, 3. ಭೇಟಿಯಾಗು. 1. to become available, 2. to make something available, 3. to meet. ವಾ: ನೀ ಅಲ್ಲಿ ಸಿಕ್ಸ್ ಮಾತಾಡಮೊ.

ಸಿಗದ್ /*sigadi*/ ಕ್ರಿ. ಕೈಗೆ, ಕಣ್ಣಿಗೆ ಸಿಗದಂತೆ ಮಾಡು. to hide.

ಸಿಗಿ /*sigi*/ ಕ್ರಿ. 1. ಸೀಳುಮಾಡು, 2. ಭಾಗ ಮಾಡು. 1. to split, 2. to cut into. ವಾ: ಬಾಳೆ ರಟ್ಟೆನ ಸಿಗಿ. ಪ: ಸಿಗಿಯಕೆ – ಸಿಗಿಯಲು; ಸಿಗ್ದನೆ – ಸಿಗಿಯುತ್ತೇನೆ

ಸಿಗ್ತ್[1] /*sigti*/ ಕ್ರಿ. ಸಿಕ್ಕಿತು. got it. ವಾ: ಬಿದ್ದ ವಾಲೆದ್ ತಿರ್‌ಪು ಸಿಗ್ತ್. **ಸಿಗೋಕು** /*sigo:ku*/ 1. ಸಿಗಬೇಕು, 2. ಭೇಟಿ ಮಾಡು. 1. to become available, 2. to meet. ವಾ: ನೀ ನಾಳೆ ನಂಗೆ ಸಿಗೋಕು.

ಸಿಗ್ತ್[2] /*sigti*/ ಕ್ರಿ. ಚಿಗ್ತ್. ಚಿಗಿಯು, ಸೀಳಾಗು. ವಾ: ಮರದ ಗೆಲ್ಲ್ ಸಿಗ್ತ್.

ಸಿಗ್ದ್ /*sigdi*/ ಕ್ರಿ. ಸೀಳುಮಾಡಿ. to split. ವಾ: ಕಬ್ಬ್‌ದ್ ತೊಪ್ಪೆನ ಹಲ್ಲ್‌ಲೆ ಕಚ್ಚಿ ಸಿಗ್ದ್ ಹಾಕಿತ್. ಪ: ಸಿಗ್ದ್‌ಕಂಡ್ – ಸೀಳಿಕೊಂಡು

ಸಿಗ್ಯಕು /*sigyaku*/ ಕ್ರಿ. ಸೀಳಬೇಕು. need to split. ವಾ: ಬೆತ್ತ ನ ತಂದ್ ಸಣ್ಣದಾಗಿ ಸೀಳಿ ಮತ್ತೆ ಕುಕ್ಕೆ ಪಚ್ಚೆನ ನೇಯದು. ಪ: ಸಿಗ್ಯದು – ಸೀಳುವುದು

ಸಿಗ್ಸ್ /*sigsi*/ ಕ್ರಿ. 1. ಸಿಕ್ಕಿಸು, 2. ತೊಡರಿಸು. 1. to insert, 2. to stumble. ವಾ: ಆಣಿಗೆ ಬ್ಯಾಗ್‌ನ ಸಿಗ್ಸ್.

ಸಿಟ್ಟ್ /*siṭṭi*/ ನಾ. 1. ಸಿಟ್ಟು, 2. ಕೋಪ. 1. to express anger, 2. anger. **ಅತ್ತೆ ಮೇಲೆನ ಸಿಟ್ಟ್ ಕೊತ್ತಿನ ಮೇಲೆ(ಗಾ).** ವಾ: ಹಿಡ್ದದ್ ಮುಟ್ಟಿದಕೆಲ್ಲ ಸಿಟ್ಟ್ ಮಾಡಿಕಂಡರೆ ಆದೆನ? ಪ: ಸಿಟ್

ಸಿಡಿ[1] /*siḍi*/ ನಾ. ಹಕ್ಕಿಗಳನ್ನು ಹಿಡಿಯಲು ಕಾಡಿನ ಬಲ್ಲೆಗಳಲ್ಲಿ ಹಗ್ಗ ಮತ್ತು ಬಾಗಿದ ಕೋಲಿನಿಂದ ಮಾಡುವ ನಮೂನೆ. hooks made out of climbers and sticks to catch birds. ವಾ: ಸಿಡಿ ಹಾಕಿಕೆ ಹೋಗಿ ಒಬ್ಬ ಕಣ್ಣ್ ಕಳ್ಕಂಡತ್.

ಸಿಡಿ[2] /*siḍi*/ ನಾ. 1. ಕೋಪ, 2. ಉರುಟುತನ, 3. ಉರುಂಟಿ. 1. anger, 2. round in shape, 3. circular. ವಾ: ಯಾಗೊಳು ಸಿಡಿಸಿಡಿತ ಹೇಳ್ತಿದ್ದವೆ.

ಸಿಡ್ /*siḍi*/ ನಾ. ಸಿಡಿಲು. lightning. ವಾ: ಇಂದ್ ಮಳೆ ಒಟ್ಟಿಗೆ ಬಾರಿ ಸಿಡ್ ಹೊಡ್ತ್.

ಸಿಡ್ಕ /*siḍka*/ ನಾ. 1. ಸಿಡುಕ, 2. ಕೋಪಿಷ್ಟ, 3. ಸಿಟ್ಟುಗೊಂಡಾತ. 1. an angry man, 2. an acrimonious man, 3. an exasperated man. ವಾ: ಆ ಮಾಸ್ಟ್ರ್ ಬರಿ ಸಿಡ್ಕ.

ಸಿಡ್ಕಿ /*siḍki*/ ನಾ. 1. ಸಿಡುಕಿ, 2. ಕೋಪಗೊಂಡಾಕೆ, 3. ಸಿಟ್ಟುಗೊಂಡಾಕೆ. 1. an angry woman, 2. an acrimonious woman, 3. an exasperated woman. ವಾ: ಅದ್ ಬಾರಿ ಸಿಡ್ಕಿ ಎಲ್ಲದಕ್ಕು ಸಿಡ್ಕಿಕಂಡೆ ಇದ್ದದೆ.

ಸಿಡ್ಕ್‌ಮಿಡ್ಕ್ /*siḍkɨmiḍkɨ*/ ನಾ. ಸಿಡುಕು ಮಿಡುಕು. expression of anger. ವಾ: ಹೊತಾರೆಂದ ಸಿಡ್ಕ್ ಮಿಡ್ಕ್‌ತ ಕುದ್ದುಟು.

ಸಿಡ್‌ಕ್[1] /*siḍiki*/ ನಾವಿ. 1. ಸಿಡುಕು, 2. ಸಿಡುಕಿನಿಂದ ಮಾತನಾಡು, 2. ಕೋಪದಿಂದ ಮಾತನಾಡು. 1. to express anger, 2. to speak in anger, 3. to converse in anger. ವಾ: ಅದೊಂದ್ ಸಿಡ್‌ಕ್ ಮೊನ್ಸ, ಸಿಡ್‌ಕ್ ಮೋರೆ ಹೊತ್ಕಂಡ್ ಬಾತ್. **ಸಿಡ್‌ಕ್ ಮೋರೆ** /*siḍiki mo:rɛ*/ 1. ಸಿಡುಕಿನ ಮುಖ, 2. ಸದಾ ಕೋಪದ ಮುಖ. 1. angry face, 2. an acrimonious face. ವಾ: ಸಿಡ್‌ಕ್ ಮೋರೆ ಹೊತ್ಕಂಡ್ ಬಾತ್.

ಸಿಡ್ಕ್[2] /*siḍki*/ ಕ್ರಿ. 1. ಕೊಡಹು, 2. ಒದರು. 1. to shake, 2. to remove dust by shaking. ವಾ: ಸೆಟರ್‌ಲಿರೊ ನರ್‌ಪಜನ ತೆಗ್ದ್ ಸಿಡ್ಕ್.

ಸಿಡ್ತ[1] /*siḍta*/ ನಾ. ಯಾತನೆಯಿಂದ ಸ್ನಾಯುಗಳು ಮಿಡಿಯುವಿಕೆ. 1. sever headache, pain, 2. muscle pain, 3. pain. ವಾ: ಕುರ ಸಿಡ್ತ ತಡೆಕಾಲೆ.

ಸಿಡ್ತ[2] /*siḍta*/ ನಾ. 1. ಸಿಡಿತ, 2. ನೋವು, 3. ಜುಂಜುಂ ನೋವು. 1. tingling sensation in the head or other parts of body, 2. pain, 3. tinglin sensation. ವಾ: ತಲೆ ಸಿಡ್ತಲಿ ತಡಿಯಕೆ ಬೊತ್ತ್.

ಸಿಡ್ಬು /*siḍbu*/ ನಾ. 1. ಸಿಡುಬು, 2. ಮೈಮೇಲೆ ಬೊಕ್ಕೆಗಳು ಏಳುವ ಒಂದು ಸಾಂಕ್ರಾಮಿಕ ರೋಗ, 3. ಮೈಲಿಬೇನೆ, 4. ಅಮ್ಮ. small pox, contagious disease. ವಾ: ಸಿಡ್ಬುಗೆ ಈಗ ಮೊದ್ದ್ ಉಟ್ಟು.

ಸಿಡ್ಲುಕಜೆ /*siḍlukajɛ*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ನೆಲ್ಲೂರು ಕೆಮ್ರಾಜೆ ಗ್ರಾಮದ ಜಾಗ. a locality in Nelluru Kemraje village in Sullia Taluk of Dakshina Kannada District.

ಸಿಡ್ಳ್ ಮಿಂಚ್ /*siḍḷɨ miŋci*/ ನಾ. 1. ಸಿಡಿಲು ಮಿಂಚು,

2. ಜೋರಾದ ಮಳೆಯೆಂದು ಹೇಳುವಾಗ ಬಳಸುವ ಪದ. 1. thunder and lightning, 2. to indicate a downpour. ವಾ: ಸಿಡ್ಲ್ ಮಿಂಚ್‌ಕನ ಹೊರೆಗೆ ಹೋಬಡಿ.

ಸಿದ್ದವೇಷ /*siddave:ṣa*/ ನಾ. ಕೊಡಗು ಜಿಲ್ಲೆಯ ಮಡಿಕೇರಿ ತಾಲೂಕಿನ ಚೆಂಬು ಗ್ರಾಮ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ, ಪುತ್ತೂರು ಮತ್ತು ಬೆಳ್ತಂಗಡಿ ತಾಲೂಕುಗಳಲ್ಲಿ ವಾಸ ಮಾಡುತ್ತಿರುವ 'ಗೌಡ' ಜನಾಂಗದವರು ಸುಗ್ಗಿ ಹುಣ್ಣಿಮೆಯ ಸಂದರ್ಭದಲ್ಲಿ ಕುಣಿಯುವ ಆರಾಧನಾ ಕುಣಿತ. a ritualistic harvest dance performed on the full moon day by the people of Gowda community who live in Chembu village in Madikeri (Kodagu), and Sulya, Belthangadi Taluks. ವಾ: ಸುಗ್ಗಿ ಹುಣ್‌ಮೆಲಿ ಗೌಡ್‌ಗ ಸಿದ್ದವೇಷ ಹಾಕಿ ಕೊಣ್ದವೆ.

ಸಿದ್ಧಿ /*siddi*/ ನಾ. 1. ಜಯ, 2. ಸಾಧನೆ, 3. ಗೆಲುವು. 1. victory, 2. achievement, 3. win. ವಾ: ಆ ಜನಕೆ ಸಿದ್ಧಿ ಉಟ್ಟು, ಅವು ಮುಟ್ಟಿದೆಲ್ಲ ಚಿನ್ನ.

ಸಿನೆಹಿತ /*sinehita*/ ನಾ. 1. ಸ್ನೇಹಿತ, 2. ಗೆಳೆಯ, 3. ಮಿತ್ರ. 1. friend, 2. companion, 3. confidant. ವಾ: ಸಿನೆಹಿತ ಬಂದ್ ಕುದ್ದುಟು. **ಸಿನೇತರ್** /*sine:tari*/ 1. ಸ್ನೇಹಿತರು, 2. ಮಿತ್ರರು. 1. friends, 2. companions. ವಾ: ಸಿನೇತರ್ ಎಲ್ಲ ಸೇರಿಕಂಡ್ ಕುಂದ್ ಗೆ ಹೋಗಿ ಬಂದೊ.

ಸಿನ್ಮ /*sinma*/ ನಾ. 1. ಸಿನಿಮಾ, 2. ಚಲನಚಿತ್ರ. 1. cinema, 2. movie. ವಾ: ರಾಜ್‌ಕುಮಾರ್ ಸಿನ್ಮ ನೋಡಿಕೆ ಬಂದಿಯನ?

ಸಿಪಾಂಗಿ /*sipa:ŋgi*/ ನಾ. ಅಡ್ಡ ಕಸುಬಿ. an inexperienced/non professional person. ವಾ: ಅಂವ ಒಬ್ಬ ಸಿಪಾಂಗಿ.

ಸಿಪ್ಪೆ /*sippɛ*/ ನಾ. 1. ಹಣ್ಣಿನ ದಪ್ಪ/ತೆಳು ಹೊರ ಕವಚ, 2. ಹೊರ ಪದರ. 1. outer skin of a fruit, 2. outer layer. **ಹಣ್ಣ್ ತಿಂದಂವ ತೊಪ್ಪಿಸಿಕಣ್ಡ್, ಸಿಪ್ಪೆ ತಿಂದಂವ ಸಿಕ್ಕಿ ಬೀತ್(ಗಾ).** ವಾ: ಕಿತ್ತುಳಿದ್ ಸಿಪ್ಪೆ ಚೊಲ್ಲ್.

ಸಿಬುರ್ದು /*siburdu*/ ನಾ. 1. ಮಿಡುಕು, 2. ಕಂಪಿಸು, 3. ಬೆಚ್ಚಿಬೀಳು, 4. ನಡುಗು, 5. ಅಲುಗಾಟ, 6. ಸಣ್ಣ ಹನಿ ಮಳೆ. 1. to tremble, 2. to shiver, 3. to get shocked, 4. to shiver, 5. to shake, 6. to drizzle. ವಾ: ಸಿಬುರು ಮಳೆಗೆ ಬಟ್ಟೆ ಪೂರಾ ಚಂಡಿ ಆತ್.

ಸಿಮಿಸ್ /*simisi*/ ನಾ. ಹೆಣ್ಣುಮಕ್ಕಳು ಧರಿಸುವ ಒಳ ಉಡುಪು. innerwear of women. ವಾ: ಗೌನ್‌ದ್ ವಳೆಗೆ ಸಿಮಿಸ್ ಹಾಕಂಬದು.

ಸಿಮೆಬೆದ್‌ರ್ /*simebediri*/ ನಾ. ತೆಳ್ಳಗಿನ, ಉದ್ದ ಜಾತಿಯ ಬಿದಿರು. a lean bamboo. ವಾ: ಸಿಮೆ ಬೆದ್‌ರ್ ಉದ್ದ ಹೋದೆ. ಪ: ಸೀಮೆ ಬೆದ್‌ರ್

ಸಿಮೆಂಟ್ ಮನೆ /*simenṭi manɛ*/ ನಾ. ಸಿಮೆಂಟು ಬಳಸಿ ಕಟ್ಟಿದ ಮನೆ. a house built by using cement. ವಾ: ಈಗೆಲ್ಲ ಸಿಮೆಂಟ್ ಮನೆನೆ ಇರ್‌ದು.

ಸಿರಪ್ /*sirapi*/ ನಾ. 1. ಟಾನಿಕ್, 2. ಶಕ್ತಿವರ್ಧಕ ಔಷಧ. 1. syrup/tonic, 2. immunity booster medicine. ವಾ: ಸಿರಪ್ ಕುಡ್ದನ? (ಕುಡೆಕಾಯ್ತ್).

ಸಿರಾಂಡಿ /*sira:ṇḍi*/ ನಾ. 1. ಚರಂಡಿ, 2. ಮೋರಿ, 3. ಗಟಾರ. 1. drainage, 2. a sewer, 3. drainage. ವಾ: ಸಿರಾಂಡಿ ಕಟ್ಟಿ, ನೀರ್ ಹೋದುಲೆ.

ಸಿರಿಹೊನ್ನೆ /*sirihonnɛ*/ ನಾ. ನೀರನ್ನು ಆಶ್ರಯಿಸಿ ಬದುಕುವ ಬೆಲೆ ಬಾಳುವ ಕಾಡುಮರ. ಈ ಮರದಲ್ಲಿ ಕೊಂಬೆ ಕಡಿಮೆ. ನೇರವಾಗಿ ಬೆಳೆಯುವ ಮರ, ಹೆಚ್ಚಾಗಿ ನದಿ, ಹಳ್ಳದ ಬದಿಯಲ್ಲಿ ಬೆಳೆಯುತ್ತದೆ. indian laurel tree. ವಾ: ಸಿರಿ ಹೊನ್ನೆ ಕಾಡ್ ಮರ.

ಸಿರ್ಕಜೆ /*sirkajɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಸಿರ್ಬಾಯಿ /*sirba:yi*/ ನಾ. 1. ಸೀಳು ತುಟಿ, 2. ಚಿರ್ಬಾಯಿ. 1. cleft lip/palate, 2. cleft lip. ವಾ: ಸಿರ್ಬಾಯಿ ಇದ್ದರೆ ಮಾತಾಡಿಕನ ಸೆರಿ ಗೊತ್ತಾಲೆ.

ಸಿಲ್ವೆಮರ /*silvɛmara*/ ನಾ. ಒಂದು ಜಾತಿಯ ಕಾಡು ಮರ. a forest tree.

ಸಿವ /*siva*/ ನಾ. 1. ಶಿವ, 2. ಪರಮೇಶ್ವರ. 1. lord Shiva, 2. lord Parameshwara. ವಾ: ಸಿವಂಗೆ ಬಿಲ್ಪತ್ರೆ ಕುಸಿ. ಹಂಗಾಗಿ ಪೂಜೆಗೆ ಬಳ್‌ಸುವೆ.

ಸಿವನೆ ಕಟ್ಟುದು /*sivanɛ kaṭṭudu*/ ನಾ. ಕೊಂಕು ಮಾತು. to taunt indirectly. ವಾ: ಮೂಕ್ ದಪ್ಪ ಕಣ್ಣ್ ಕೋಸ್‌ತ ಎಲ್ಲೊಮ್ಮ ಸಿವನೆ ಕಟ್ಟುದು.

ಸಿಸ್ತ್ /*sisti*/ ನಾ. 1. ಶಿಸ್ತು, 2. ಕಟ್ಟಳೆ, 3. ಕಟ್ಟುಪಾಡು. 1. descipline, 2. rules, 3. regulations. ವಾ: ಬೊದ್ಕ್‌ಲಿ ಸಿಸ್ತ್ ಇರೊಕು.

ಸಿಹಿಕುವ್ವೆ /*sihikuvvɛ*/ ನಾ. 1. ಗೆಣಸಿನಂತಹ ಈ ಗೆಡ್ಡೆಯನ್ನು ಬೇಯಿಸಿ ತಿನ್ನಲು ಬಳಸುತ್ತಾರೆ, 2. ಕುವ್ವೆಗೆಂಡೆ. 1. an edible toor, 2. root arrowroot. ವಾ: ಗೆಂಡೆನ ಬೇಸಿ ತಿಂಬೊದು.

ಸಿಹಿಗೆಣ್ಸ್ /*sihigeṇsi*/ ನಾ. ತಿನ್ನಲು ಬಳಸುವ ಸಿಹಿಗೆಣಸು. sweet potato. ವಾ: ಸಿಹಿ ಗೆಣ್ಸ್‌ನ ಹಂಗೆನೂ ತಿಂದವೆ, ಬೇಸಿನು ತಿಂದವೆ.

ಸಿಹಿಮುಟ್ಟಿಟ್ಟು /*sihimuṭṭiṭṭu*/ ನಾ. ಸಿಹಿಯಾಗಿದೆ. sweet. ವಾ: ಪಾಯ್ಸ ಸಿಹಿಮುಟ್ಟಿಟ್ಟು ಸಾಕ್ ಕಂಡದೆ.

ಸೀಂಕುಳಿ /*si:ŋkuḷi*/ ನಾ. ಕಾಡುಪಾಪ. a lemur. ವಾ: ಸೀಂಕುಳಿ ನಿದ್ದೆ ಮಾಡಿಕನ ಬಾಲನ ಮರದ ಗೆಲ್ಲ್‌ಗೆ ಸುತ್ತಿ ಮೊಲ್ಗುದು, ಇರದ ಬಾಲ ತೋರಲಿ ಇದ್ದದೆ.

ಸೀಂಕ್ /*si:ŋkɨ*/ ನಾ. 1. ಚೂಪಾದ ಚಿಕ್ಕ ಮರದ ತುಂಡು, 2. ಸಿಗುರು, 4. ಹಡಸು ಪದರ, 5. ಹಕ್ಕಳೆ. 1. a sharp, small wooden piece, 2. a sharp piece of wood, 3. a thin layer of wood, 4. a thin piece of wood. ವಾ: ಸೀಂಕ್ ಬೆರ್‌ಳಿಗೆ ಹೆಟ್ಟಿಟು, ಸೂಜಿಲಿ ತೆಗೆಕು.

ಸೀಂಕ್ರ್ ಬೀಸಿತ್ /*si:ŋkrɨ bi:sitɨ*/ ನಾ. ಗಾಳಿ ಬೀಸುವಿಕೆಯಿಂದ ಅಡ್ಡಲಾಗಿ ಬೀಳುವ ಮಳೆ. splashing of rain particles inside the roof due to wind. ವಾ: ಗಾಳಿ ಮಳೆ ಬಾಕನ ಒಳಗೆ ರೆಟ್ಟುವ ನೀರ್.

ಸೀಂಕ್ಲ್ ಬೀಸುದು /*si:ŋkli bi:sudu*/ ಕ್ರಿವಿ. 1. ಎರಚಲು ಹೊಡೆಯುವುದು, 2. ಎರಚಲು ಮಳೆ, 3. ಇರಳಿ. 1. rain splashing, 2. splashing rain, 3. rain splash. ವಾ: ಮೂಡನ ಬಾಗ್ಲ್ ಗೆ ಮಳೆ ಬಾಕನ ಸೀಂಕ್ಲ್ ಬೀಸುದು.

ಸೀಂತ್ ಮಾಡ್ /*si:ntɨ ma:ḍi*/ ಕ್ರಿ. ಸಿಗಿದು ಹಾಕು. to split in to two. ವಾ: ರಕ್ಕಸೆ ಹಾಳೆನ ಸೀಂತ್ ಮಾಡ್.

ಸೀಂತ್[1] /*si:ntɨ*/ ನಾ. ಮಳೆಯ ಜೊತೆ ಗಾಳಿ ಬೀಸುವಾಗ ಬೀಸಿ ಬರುವ ಮಳೆನೀರು. splashing water during rain. ವಾ: ಮಳೆ ಒಟ್ಟಿಗೆ ಜೋರಾಗಿ ಸೀಂತ್ ಬಂದದೆ.

ಸೀಂತ್[2] /*si:ntɨ*/ ನಾ. ಸೀನು. to sneeze. ವಾ: ಸೀತ ಆಕನ ಸೀಂತ್ ತಲೆ, ಎದೆ ತೀರ ಬೇನೆ.

ಸೀಂತ್ರಿ /*si:ntri*/ ನಾ. 1. ಮೋಸ, 2. ಕಪಟ, 3. ಕುತಂತ್ರ. 1. deception, 2. duplicity, 3. deceit. ವಾ: ಅಂವ ಬಾರಿ ಸೀಂತ್ರಿನ ಮೊನ್ಸ.

ಸೀಂಬುಳ್ /*si:mbuḷi*/ ನಾ. 1. ಒಂದು ಜಾತಿಯ ಮುಳ್ಳು ಗಿಡ, 2. ಚೀಮುಳ್ಳು. a thorny plant. ವಾ: ಸೀಂಬುಳ್‌ದ್ ಕೊಡೊಲಿ ಪಜ್ಜಿ ಮಾಡಿವೆ.

ಸೀಗೆ /*si:gɛ*/ ನಾ. ಮುಳ್ಳಿನ ಮರಬಳ್ಳಿಯಲ್ಲಿ ಬಿಡುವ ಸೀಗೆಕಾಯಿ. shikakai. **ಎಣ್ಣೆ ಸೀಗೆ ಇದ್ದಂಗೆ(ಗಾ). ಗಿಜಿಗಿಜಿ ಕಾಯಿ ಕೊಯ್ಯೊವ್ ಒಳೊ ತಿನ್ನೊವ್ ಇಲ್ಲೆ – ಸೀಗೆ(ಒ).** ವಾ: ಸೀಗೆ ಹೊಡಿಲಿ ತಲೆ ತೊಳೆದು.

ಸೀಗೆಕೊಡಿ /*si:gɛ koḍi*/ ನಾ. ಸೀಗೆಯ ಕುಡಿಯನ್ನು ಬೇಯಿಸಿ ಹೊಟ್ಟೆ ಅಜೀರ್ಣಕ್ಕೆ ಸಾರ್ ಮಾಡುತ್ತಾರೆ. shoots of shikkai climber is boiled and the water is consumed for indigestion. ವಾ: ಸೀಗೆ ಕೊಡಿನ ಆಂಬರ ಮಾಡಿವೆಗಡ.

ಸೀಗೆಹೊಡಿ /*si:gɛ hoḍi*/ ನಾ. ಸೀಗೆ ಪುಡಿ. shikakai powder. ವಾ: ತಲೆ ಮೀಯಕನ ಸೀಗೆ ಹೊಡಿ ಹಾಕಿರೆ ಆದೆ.

ಸೀಗೆಕೊಡಿ ಪಸಂಗರಿ /*si:gɛkoḍi pasaŋgari*/ ನಾ. ಸೀಗೆ ಕುಡಿಯನ್ನು ಬೇಯಿಸಿ ಮಾಡುವ ಸಾರ್. a soup made of shoots of shikakai climber. ವಾ: ಸೀಗೆಕೊಡಿ ಪಸಂಗರಿ ಮಾಡೊಕು.

ಸೀಗೆಬೊಳ್ಳಿ /*si:gɛbɔḷḷi*/ ನಾ. 1. ಮುಳ್ಳಿನ ಮರಬಳ್ಳಿ, ಕಾಡಿನ ಇನ್ನಿತರ ಮರಗಳ ಮೇಲೆ ಹಬ್ಬಿ ತುಂಬ ಹುಲುಸಾಗಿ ಬೆಳೆಯುತ್ತದೆ, 2. ಸೀಗೆ ಬಳ್ಳಿ, 1. shikakai climber, 2. shikakai climber. ವಾ: ಸೀಗೆ ಬೊಳ್ಳಿ ನಿಗ್ಗಲಿ ಬೆಳ್ದ್. ಹಂಗೆ ಬಾರಿ ಮುಳ್ಳು ಸನ ಇದ್ದದೆ.

ಸೀತ /*si:ta*/ ನಾ. 1. ಶೀತ, 2. ನೆಗಡಿ, 3. ಮನುಷ್ಯರಿಗೆ ತಗಲುವ ಒಂದು ಸಾಂಕ್ರಾಮಿಕ ರೋಗ. 1. common cold, 2. cold, 3. an infectious disease. ವಾ: ವರ್‌ಸಕೊಮ್ಮೆ ಸೀತ ಆಕೊಡ. ತಲೆಂದೆಲ್ಲ ಹೋದೆ.

ಸೀತಾಪಲ /*si:ta:pala*/ ನಾ. ಸೀತಾಫಲ. custard apple.

ಸೀತಾವಳಿ ಚಪ್ಪರ /*si:ta:vaḷi cappara*/ ನಾ. 1. ಮದುವೆಯ ಚಪ್ಪರ, 2. 12 ಕಂಬದಿಂದ ಹಾಕಲ್ಪಟ್ಟ ಚಪ್ಪರ. ಇದರಲ್ಲಿ ಒಂದು ಕಂಬ ಹಾಲು ಬರುವ ಮರದ ಕಂಬ ಆಗಿರುತ್ತದೆ. 1. a canopy/panadal built during marriage, 2. a canopy/pandal built by using 12 posts, one of the posts is a milk post (from Devil's tree). ವಾ: ಮೊದ್ವೆಲಿ ಸೀತಾವಳಿ ಚಪ್ಪರಲಿ ಮೇಲ್ಕಟ್ಟ್‌ನ ಮೊಡ್ಯಾಳ ಕಟ್ಟಿವೆ. ಸೀತಾವಳಿ ಚಪ್ಪರ ವಳೆಗೆ ಜೋಡು ಹಾಕಿಕಾಗದ್.

ಸೀತೆ ಹೂ /*si:tɛ hu:*/ ನಾ. ಮಳೆಗಾಲದಲ್ಲಿ ಮರದ ಕೊಂಬೆ ಮೇಲೆ ಬೆಳೆಯುವ ಸುಂದರ ಬಣ್ಣದ ಹೂವು. a variety of flower that grows on the branches of trees in the rainy season. ವಾ: ಸೀತೆ ಹೂ ಮರಲಿ ಜೊಂಪೆ ಜೊಂಪೆ ಉಟ್ಟು.

ಸೀತೆಹಕ್ಕಿ /*si:tehakki*/ ನಾ. ಟಿಟ್ಟಿಬ. Lapwing birds. ಪ: ಇದ್‌ನೆಂಟಿ(ತು)

ಸೀದ /*si:da*/ ನಾ. 1. ನೇರವಾದ, 2. ನೆಟ್ಟಗೆ, 3. ಅಂಕುಡೊಂಕಿಲ್ಲದ. 1. straight, 2. in line, 3. without any twists and turns. ವಾ: ಹಿಂಗೆ ಸೀದ ಹೋದರೆ ನಮ್ಮನೆಗೆ ಹೋಕ್. ಪ: ಸೀದೆ

ಸೀದಬೊಯ್ತ್ /*si:daboyt*/ ಕ್ರಿವಿ. ಹಿಂದು ಮುಂದು ನೋಡದೆ ಬಯ್ಯುವುದು. to abuse someone without thinking. ವಾ: ಅಂವ ಅವ್‌ಕೆ ಸೀದ ಬೊಯ್ತ್.

ಸೀದಮಾತ್ /*si:dama:t*/ ನಾ. 1. ನೇರ ನಡೆನುಡಿ, 2. ಶುದ್ಧ ಮನಸ್ಸಿನ ಮಾತು. 1. strait forward conversation, 2. conversation with pure intentions. ವಾ: ಯಾಗೊಳು ಸೀದ ಸೀದ ಮಾತ್ ಆಡೊಕು.

ಸೀದಬಾತ್ /*si:daba:tɨ*/ ನಾ. ಎತ್ತ ಕಡೆಯು ನೋಡದೆ ನೇರವಾಗಿ ಬರು. to walk straight. ವಾ: ಇಸ್ಕೂಲ್ ಬುಟ್ಟಂಗೆ ಹೈದ ಯಾರೊಟ್ಟಿಗು ಮಾತಾಡದೆ ಸೀದಬಾತ್.

ಸೀದಹೋತ್ /*si:daho:tɨ*/ ನಾ. 1. ಎತ್ತ ಕಡೆಯು ನೋಡದೆ ನೇರವಾಗಿ ಹೋಗು, 2. ತಲೆ ಎತ್ತಿ ನೋಡದೆ ಹೋಗು. 1. to walk straight, 2. to walk without lifting one's head. ವಾ: ಬಾತ್ ಸೀದ ಹೋತ್, ಎಂತನು ಹೇಳ್ತ್‌ಲೆ.

ಸೀನಪ್ಪ /*si:nappa*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. masculine given name. ಪ: ಸೀನ

ಸೀನಿಂಬುಳಿ /*si:nimbuḷi*/ ನಾವಿ. 1. ಸಿಹಿ ನಿಂಬೆ, 2. ಗಜನಿಂಬೆ. 1. a Citron, 2. a citron fruit. ವಾ: ಸೀನಿಂಬುಳಿಲಿ ಜೂಸ್ ಮಾಡಕ್.

ಸೀನು /*si:nu*/ ಕ್ರಿ. ಸೀನುವುದು. to sneeze. ವಾ: ಸೀನ್‌ಕನ ಮೋರೆ ಮುಚ್ಚಿಕ.

ಸೀಬೆಣ್ /*si:beṇi*/ ನಾ. 1. ಸೀಬೆಹಣ್ಣು, 2. ಪೇರಲ ಹಣ್ಣು, 3. ಚೇಪೆಕಾಯಿ. guava fruit. ವಾ: ಮಳ್ಳಾಗಲಲಿ ಸೀಬೆಣ್‌ಲಿ ಹುಳ ಇದ್ದದೆ.

ಸೀಮೆ /*si:mɛ*/ ನಾ. 1. ಗಡಿ, 2. ಮೇರೆ, 3. ಗಡಿಯನ್ನು ನಿರ್ದೇಶಿಸುವ ಸ್ಥಳದಲ್ಲಿರುವ ಹಳ್ಳಿ, 4. ವಲಯ, 5. ಕ್ಷೇತ್ರ, 6. ಪ್ರದೇಶ. 1. border, 2. frontier, 3. a border village, 4. region, 5. place, 6. province. ವಾ: ಈ ಸೀಮೆ ದಾಟಿ ಅತ್ತನ ಬರಿಗೆ ಹೋಕಾಗದ್.

ಸೀಮೆಬೆದ್ರ್ /*si:mɛ bedrɨ*/ ನಾ. ಅರಿಶಿನ ಬಣ್ಣದ ನಾಮವಿರುವ ಬಿದಿರು, ಬಣ್ಣದ ಬಿದಿರು. a variety of bamboo. ವಾ: ಸೀಮೆ ಬೆದ್ರ್ ಅರ್‌ಸಣ ಬಣ್ಣಲಿ ಇದ್ದದೆ.

ಸೀಮೆಕುಂಬಳ /*si:mekumbaḷa*/ ನಾ. 1. ಸೀಮೆಬದನೆ, 2. ಬಳ್ಳಿಯಲ್ಲಿ ಬಿಡುವ ಕೆನೆ ಬಣ್ಣದ ಹಾಗು ಹಸಿರು ಬಣ್ಣದ ಕಾಯಿ. 1. Chayote, mirliton, choko, 2. an edible green squash belonging to the gourd family. ವಾ: ಸೀಮೆಕುಂಬಳ ಗೈಪು, ಪಲ್ಯ ಮಾಡಿ ಆಗಾಗ ತಿನೊಕುಗಡ, ತಡಿಗೆ ಒಳ್ಳೆದುಟ್ಟು.

ಸೀಮೆಹುಲ್ಲು /*si:mɛhullu*/ ನಾ. ದನಗಳ ಮೇವಿಗೆ ಬೆಳೆಸುವ ಹುಲ್ಲು. grass grown as fodder for cattle. ವಾ: ಸೀಮೆಹುಲ್ಲುನ ದನಗ ಕುಸಿಪಟ್ಟ್ ತಿಂದವೆಗಡ.

ಸೀಮೊಣ್ಣೆಬೊಡ್ಡಿ /*si:moṇṇeboḍḍi*/ ನಾ. ಗಾಜಿನ ಬಾಟಲಿಗೆ ತೆಂಗಿನ ಚಿಪ್ಪು, ಬಟ್ಟೆ ಸುತ್ತಿ ಸೀಮೆ ಎಣ್ಣೆ ಹೊಯ್ದು ಉರಿಸುವ ದೀಪ. a kerosine lamp. ವಾ:

ಹಿಂದೆನ ಕಾಲಲಿ ಬೆಳ್‌ಕ್‌ಗೆ ಸೀಮೊಣ್ಣೆಬೊಡ್ಡಿನೆ ಬಳ್‌ಸ್‌ತ್ತಿದ್ದದ್. ಪ: ಸೀಮೆಣ್ಣೆ ದೀಪ

ಸೀರುಂಡು /*si:ruṇḍu*/ ನಾ. ಸೊಂಟಕ್ಕೆ ಸುತ್ತಿಕೊಳ್ಳಲು ಬಳಸುವ ಬಟ್ಟೆ ತುಂಡು, ಸೀರೆ ತುಂಡು. half saree. ವಾ: ಸೀರುಂಡುನ ಸೊಂಟಕೆ ಸುತ್ತಿಕಂಬದು.

ಸೀರೆ /*si:rɛ*/ ನಾ. 1. ಸೀರೆ, 2. ಹೆಂಗಸರು ಧರಿಸುವ ಬಟ್ಟೆ. saree. ವಾ: ಹೆಣ್ಮಕ್ಕಳಿಗೆ ಸೀರೆ ಉಟ್ಟರೆನೆ ಲಕ್ಷಣ. **ಸೀರೆನ ಕರೆ** /*si:rɛna karɛ*/ ಸೀರೆಯ ಅಂಚು. end of saree. **ಸೀರೆಕರೆನ ಹಿಡ್ಕಂಡ್ ಸುತ್ತಾಡ್ದೆಂತೇಳಿರೆ ಹೆಣ್ಣು ಹಿಂದೆ ಸುತ್ತಾಡುವವನು ಎಂಬರ್ತ(ನು).** ವಾ: ಸೀರೆನ ಕರೆ ಹೊಲ್ಕಂಡ್ ಬನ್ನೆ.

ಸೀರ್‌ಬಾಯಿ /*si:ṙiba:yi*/ ನಾವಿ. 1. ಸೀಳುತುಟಿ, 2. ಸಿರ್ಬಾಯಿ. 1. cleft lip/palate, 2. cleft lips. ವಾ: ಈಗೆಲ್ಲ ಸೀರ್‌ಬಾಯಿನ ಸೆರಿ ಮಾಡಿವೆ.

ಸೀಳ್ /*si:ḷi*/ ಕ್ರಿ. 1. ಸೀಳುವುದು, 2. ತುಂಡರಿಸು, 3. ಭಾಗಮಾಡು. 1. to split, 2. to cut, 3. to make into parts. **ಎದೆ ಸೀಳಿರು ಎರಡಕ್ಷರ ಇಲ್ಲೆ(ಗಾ).** ವಾ: ಮೀನ್‌ನ ಹೊಟ್ಟೆನ ಸೀಳುದು, ವಡೆರ ಸೌದೆನ ಸೀಳ್.

ಸೀಳ್ಡು /*si:ḷdu*/ ಕ್ರಿ. 1. ಬಿರುಕು, 2. ಒಡಕು, 3. ಸೀಳು. 1. crack, 2. cleave, 3. splinter. ವಾ: ಕೊಟಗೆದ್ ಮಣ್ಣ್‌ದ್ ಗೋಡೆ ಸೀಳ್ದುಟು.

ಸುಂಕಾಣಿ[1] /*suŋka:ṇi*/ ನಾ. ತೆಂಗಿನ ಗರಿ ಅಥವಾ ಬಿದಿರಿನ ತಟ್ಟೆಯಿಂದ ಮಾಡಿದ ಸೂಟೆ. a torch made of coconut leaf or bamboo leaf. ವಾ: ಸುಂಕಾಣಿ ಹಿಡ್ದ್ ಹೊರ್‌ಟೊ.

ಸುಂಕಾಣಿ[2] /*suŋka:ṇi*/ ನಾ. 1. ದೋಣಿ ಹುಟ್ಟು, 2. ಚುಂಕಾಣಿ. rowing the boat. ವಾ: ದೋಣಿಲಿ ಸುಂಕಾಣಿ ಹಾಕಿರೆ ಮುಂದಕೆ ಹೋದು. ಪ: ಚುಂಕಾಣಿ

ಸುಂಕಾಣಿ[3] /*suṅka:ṇi*/ ನಾ. ಹೆಂಗಸರಿಗೆ ಹೇಳುವ ಬೈಗುಳ. an expletive term used against women. ವಾ: ಆ ಸುಂಕಾಣಿ ಎತ್ತ ಹೋತ್.

ಸುಂಜೆ /*suŋjɛ*/ ನಾ. ಪಾತ್ರೆಗಳನ್ನು ಒಲೆಯಿಂದ ತಗೆದು ಮಗುಚಿ ಬೀಳದಂತೆ ತಳದಲ್ಲಿಡುವ ಬೈಹುಲ್ಲಿನಿಂದ ಮಾಡಿದ ವೃತ್ತಾಕಾರದ ಸಾಧನ. a ring made of reed to keep vessels. ವಾ: ಬಿಸಿ ಪಾತ್ರಗಳ ಸುಂಜೆ ಮೇಲೆ ಇಸುದು. ಪ: ಸುಂಪೆ. ತೆರಿಯೆ(ತು)

ಸುಂಟಿ /*suṇṭi*/ ನಾ. 1. ಶುಂಠಿ. ginger. ವಾ: ಸುಂಟಿನ ಮೊದ್ದಿಗೆ, ಅಡ್ಗೆಗೆ ಬಳ್ಸುವೆ, ಸುಂಟಿ ಟೀ ಕಾಸಿ ಕುಡೆಕ್.

ಸುಂದರ /*sundara*/ ನಾ. 1. ಸುಂದರ, 2. ಸೌಂದರ್ಯವಂತ, 3. ವ್ಯಕ್ತಿನಾಮ ಪುರುಷ. 1. beautiful, 2. handsome, 3. Sundara, a name. ವಾ: ಸುಂದರ ಹೈದನ ಕರೆಕಿತಲ, ಅಂವ ನೋಡಿಕೆ ಬಾರಿ ಪೊರ್ಲು.

ಸುಂದರಿ /*sundari*/ ನಾ. ಸುಂದರಿ, 2. ಸೌಂದರ್ಯವತಿ, 3. ವ್ಯಕ್ತಿನಾಮ ಸ್ತ್ರೀ. 1. beautiful, 2. pretty, 3. Sundari, a name. ವಾ: ಗುಣ, ನಡ್‌ತೆಲಿ, ನೋಡಿಕು ಎಲ್ಲದರ್‌ಲು ಆ ಗೂಡೆ ಸುಂದರಿ.

ಸುಂದ್ /*sundi*/ ಕ್ರಿ. 1. ಸುತ್ತು ಹಾಕು, 2. ಸುರುಳಿ, 3. ಸುತ್ತ್. 1. to circle, 2. spiral, 3 around. ವಾ: ಬೊಳ್ಳಿನ ಮರಕ್ಕೆ ಸುಂದಿ ಹಸ್‌ನ ಕಟ್ಟಿ ಹಾಕೊಕು. ಪ: ಸುಂದಿ. **ಸುಂದಾಟ** /*sunda:ṭa*/ ಸುತ್ತಿಕೊಳ್ಳುವುದು. to spiral around. **ಸಂದಾಟಕ್ಕೊಂದ್ ಸುಂದಾಟ(ಗಾ).** ವಾ: ಬಿಚ್ಚಿದ ಬೊಳ್ಳಿನ ಸುತ್ತಿಕೊಂಬ ಆಟ ಸುಂದಾಟ.

ಸುಂಪೆ /*sumpɛ*/ ನಾ. ಪಾತ್ರೆಗಳನ್ನು ಒಲೆಯಿಂದ ತಗೆದು ಮಗುಚಿ ಬೀಳದಂತೆ ತಳದಲ್ಲಿಡುವ ಬೈಹುಲ್ಲಿನಿಂದ ಮಾಡಿದ ವೃತ್ತಾಕಾರದ ಸಾಧನ. a ring made of reed to keep vesselss. ವಾ: ಬುಳ್ಳುಲ್‌ಲಿ ಸುಂಪೆ ಮಾಡಿವೆ, ಅದರ ಉರುಟ್‌ಲಿ ಸುತ್ತಿ ಎಸ್ಟ್ ಲಾಯ್ಕಲಿ ಕಟ್ಟುವೆ ಗೊತ್ತ? ದೊಡ್ಡ ದೊಡ್ಡ ಪಾತ್ರಗಳ ಸುಂಪೆ ಮೇಲೆ ಇಸಿಕೆ ಲಾಯ್ಕ.

ಸುಕ /*suka*/ ನಾ. 1. ಸುಖ, 2. ನೆಮ್ಮದಿ, 3. ನಲಿವು. 1. pleasure, 2. peace of mind, 3. happiness. **ಸತ್ಯಕೆ ಸಾವಿಲ್ಲೆ, ಸುಳ್ಳಿಗೆ ಸುಕ ಇಲ್ಲೆ(ಗಾ).** ವಾ: ಮೊನ್ಸಂಗೆ ಬೊದ್‌ಕ್‌ಲಿ ಸುಕ, ನೆಮ್ಮದಿಗಿಂತ ಬೇರೆ ಆಸ್ತಿ ಇನ್ನೊಂದಿಲ್ಲೆ.

ಸುಕೃತ /*sukṛta*/ ನಾ. 1. ಪುಣ್ಯ, 2. ಅದೃಷ್ಟ, 3. ಭಾಗ್ಯ, 4. ಪುಣ್ಯಕಾರ್ಯ. 1. luck, 2. good fortune, 3. serendipity, 4. virtuous deeds. ವಾ: ಎಲ್ಲ ಅವರವರ ಸುಕೃತ, ಇಂತ ಅವ್ವಪ್ಪನ ಪಡ್ದದ್ ಪೂರ್ವ ಜನ್ಮದ ಪುಣ್ಯತ ಕಂಡದೆ.

ಸುಕ್ಕಿಕಂಡ್ /*sukkikaṇḍi*/ ಕ್ರಿ. 1. ತಿರುಗಾಡಿಕೊಂಡು, 2. ಅಲೆದಾಡಿಕೊಂಡು. 1. wandering, 2. roaming. ವಾ: ಹಗ್‌ಲೆಲ್ಲ ಸುಕ್ಕಿಕಂಡ್ ಈಗ ಮನೆಗೆ ಬಾತ್.

ಸುಕ್ಕುಳಿ /*sukkuḷi*/ ನಾ. ಒಂದು ಕುಟುಂಬದವರಿಗಾಗಿ ಮೀಸಲಿಟ್ಟ ಸ್ಮಶಾನ ಸ್ಥಳ. a place of funeral reserved for the members of a particular family. ವಾ: ಸುಕ್ಕುಳಿಲಿ ಹೆಣನ ಮಣ್ಣ್ ಮಾಡ್ದು, ಸುಡ್ದು. ಪ: ಸುಡ್ಕುಳಿ

ಸುಕ್ಡಿಮೂಲೆ /*sukḍimu:le*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಆಲೆಟ್ಟಿ ಗ್ರಾಮದ ಜಾಗ. a locality in Aletti village in Sullia Taluk of Dakshina Kannada District.

ಸುಕ್ರಾರ /*sukra:ra*/ ನಾ. 1. ಶುಕ್ರವಾರ, 2. ವಾರದ ಏಳು ದಿನಗಳಲ್ಲಿ ಒಂದು. 1. Friday, 2. one of the fifth days of a week. ವಾ: ಸುಕ್ರಾರ ನಮ್ಮಲ್ಲಿ ಸಂತೆ ನಡ್ದದೆ. ಪ: ಸುಕ್ರೋರ

ಸುಕ್ರುಂಡೆ /*sukruṇḍɛ*/ ನಾ. 1. ಅರಳು, ಬೆಲ್ಲ, ತೆಂಗಿನ ತುರಿ ಸೇರಿಸಿ ಕಟ್ಟಿದ ಉಂಡೆಯನ್ನು ಅಕ್ಕಿ ಹಿಟ್ಟಿನಲ್ಲಿ ಮುಳುಗಿಸಿ ಎಣ್ಣೆಯಲ್ಲಿ ಕರಿದತಿಂಡಿ, 2. ಹೊದ್ಲು. a ball (sweet dish) made of roasted rice flour, corn, and grated coconut. ವಾ: ಸುಕ್ರುಂಡೆ ಮಾಡಿಸಿಯೊಳ.

ಸುಕ್ರುಮ ಬೇರ್ /*sukruma be:ri*/ ನಾ. ನನ್ನಾರಿ ಬೇರು. root of Indian sarsaparilla. ವಾ: ಬಾಯಿ ಹುಣ್ಣು ಆಕನ ಸುಕ್ರುಮ ಬೇರ್‌ನ ಬಾಯಿಲಿ ಹಾಕಂಡ್ ಅಗೆಕುಗಡ, ಸುಕ್ರುಮ ಬೇರ್‌ದ್ ಟೀ ಕಾಸಿ ಕುಡ್ದರೆ ತಡಿಗೆ ತ್ರಾಣ ಬಂದದೆ.

ಸುಕ್ಸ್‌ಗಟ್ಟ್ /*suksigaṭṭi*/ ಕ್ರಿ. 1. ಮುದುಡಿಹೋಗು, 2. ನೆರಿಗೆ ಕಟ್ಟು. 1. to shrink, 2. wrinkled. ವಾ: ವಯಸ್ಸಾದಂಗೆ ಮೊಕಲಿ ಸುಕ್ಸ್‌ಗಟ್ಟಿಕೆ ಸುರಾದೆ.

ಸುಗುಡೆ ಬೇರ್ /*suguḍɛ be:ri*/ ಕ್ರಿ. ಸೊಗದೆ ಬೇರು. root of sarsaparilla. ವಾ: ಸುಗುಡೆ ಬೇರ್ ತಡಿದ್ ಉಷ್ಣನ ಕಮ್ಮಿ ಮಾಡ್ದೆ.

ಸುಗ್ಗಿ /*suggi*/ ನಾ. 1. ಬೆಳೆಯನ್ನು ಕೊಯ್ಯುವ ಕಾಲ, 2. ವಸಂತಕಾಲ, 3. ಹಬ್ಬ, 4. ಹೆಚ್ಚಳ, 5. ಸಮೃದ್ಧಿಯ ಕಾಲ, 6. ಬತ್ತದ ಎರಡನೆಯ ಬೆಳೆಯ ಗದ್ದೆ, 7. ಧಾನ್ಯದ ಹಬ್ಬ, 8. ಎರಡನೇ ಭತ್ತದ ಬೆಳೆ. 1. harvest season, 2. spring season, 3. festival, 4. excess, 5. period of abundance, 6. the second crop of paddy, 7. a harvest festival, 8. the second crop of paddy. ವಾ: ಸುಗ್ಗಿ ಕೃಸಿಕರ್‌ಗೆ ಪುರುಸೊತ್ತಿಲ್ಲದ ಕಾಲ.

ಸುಗ್ಗಿತಿಂಗ /*suggitiŋga*/ ನಾ. ಅರೆಭಾಷೆಯ ಹನ್ನೆರಡನೇ ತಿಂಗಳು. 12th month of Arebhashe. ವಾ: ಸುಗ್ಗಿ ತಿಂಗ ಸುರಾತ್.

ಸುಚ್ಚಿ /*succi*/ ನಾ. ಎಪ. 1. ಸ್ವಿಚ್, 2. ಒತ್ತುಗುಂಡಿ, 3. ವಿದ್ಯುತ್ತಿನ ಕೀಲುಗುಂಡಿ. 1. a switch, 2. a button, 3. an electric switch. ವಾ: ಕರೆಂಟ್ ಸುಚ್ಚಿ ಎಲ್ಲಿ ಹಾಕುದುತ?

ಸುಟ್ಟ ಹಣೆಬರ /*suṭṭa haṇebara*/ ನಾ. ಭವಿಷ್ಯ ಕಳೆದುಕೊಳ್ಳು ಎಂಬ ಬೈಗುಳ ಪದ. an expletive indicating one shouldn't have a bright future. ವಾ: ಸುಟ್ಟ ಹಣೆಬರ ನಮ್ಮದ್ ಯಾಗೊಳು ಒಂದೇ.

ಸುಟ್ಟಂವ /*suṭṭanva*/ ನಾ. ಆಗಾಗ ಕಿರುಕುಳ ಕೊಡುವವರನ್ನು ಉದ್ದೇಶಿಸಿ ಹೇಳುವ ಬೈಗುಳ ಪದ. an expletive used for an irritating/annoying person. ವಾ: ಸುಟ್ಟಂವ ಎಲ್ಲಿ ಹೋತುತ, ಕರ್‌ದರು ಕೇಳ್ದುಲೆ ಅವಂಗೆ.

ಸುಟ್ಟತ್ /*suṭṭati*/ ಕ್ರಿ. 1. ಸುಡು, 2. ದಹಿಸು, 3. ಸುಟ್ಟು ಹಾಕು, 4. ಉರಿಯಲ್ಲಿ ಬೇಯುವಂತೆ ಮಾಡು, 5. ಬೆಂಕಿಯಲ್ಲಿ ಬೇಯಿಸು. 1. to burn, 2. to be in flames, 3. to set on fire, 4. to go up in flames, 5. to boil something using fire. **ಅಂಕೆಯಿಲ್ಲದ ಕಪಿ ಲಂಕೆ ಸುಟ್ಟತ್(ಗಾ).** ವಾ: ತಂಗೆ ಒಲೆಲಿ ಹಪ್ಪಳನ ಸುಟ್ಟತ್. ಪ: ಸುಟ್ರೆ – ಸುಟ್ಟರೆ; ಸುಡೊಕು – ಸುಡಬೇಕು; ಸುಡಲಿ – ಸುಟ್ಟು ಹೋಗಲಿ; ಸುಟ್ಟವೆ – ಸುಡುತ್ತಾರೆ

ಸುಟ್ಟದ್ /*suṭṭadi*/ ನಾ. 1. ಸುಟ್ಟುಹೋದ, 2. ಬೆಂಕಿಯಲ್ಲಿ ಬೆಂದ. 1. burnt, 2. charred. ವಾ: ಗಂಜಿ ಉಂಬಕೆ ಒಣ್ಗಿಲ್ ಮೀನ್ ಸುಟ್ಟದ್.

ಸುಟ್ಟವು /*suṭṭavu*/ ನಾವಿ. ಅಸಮಾಧಾನದಿಂದ ಗೊಣಗಿಕೊಂಡು ಕೋಪದಿಂದ ಹೇಳುವ ಬೈಗುಳ ಪದ. grumbling/expressing displeasure. ವಾ: ಸುಟ್ಟವು ಬರದಿದ್ದರೆ ಕೆಲ್ಸ ಮುಗಿಯತಿತ್.

ಸುಟ್ಟ್ /*suṭṭi*/ ಕ್ರಿ. 1. ಸುಡು, 2. ದಹಿಸು, 3. ಸುಟ್ಟು ಹಾಕು, 4. ಉರಿಯಲ್ಲಿ ಬೇಯುವಂತೆ ಮಾಡು, 5

ಬೆಂಕಿಯಲ್ಲಿ ಬೇಯಿಸು. 1. to burn, 2. to be in flames, 3. to set on fire, 4. to go up in flames, 5. to boil something using fire. **ತಲೆ ಸಿಡ್ಡ್ ಮೈಯೆಲ್ಲಾ ಸುಟ್ಕಂಡದೆ – ಬೆಂಕಿ ಕಡ್ಡಿ(ಒ).** ವಾ: ಗೇರ್‌ದ ಬೀಜನ ಒಲೆಲಿ ಸುಟ್ಟ್ ತೊಪ್ಪೆನ ಚೊಲ್ಲಿರೆ ವಳೆಗೆ ತಿಂಬಕೆ ಸಿಕ್ಕಿದೆ.

ಸುಡಕಿರಿಗುಡ್ಡೆ /*suḍakiriguḍḍe*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಜಾಲ್ಸೂರು ಗ್ರಾಮದ ಜಾಗ. a locality in Jalsuru village in Sullia Taluk of Dakshina Kannada District.

ಸುಡಲಿ /*suḍali*/ ಕ್ರಿ. ಪ್ರಯತ್ನ ಮಾಡಿಯೂ ಸಿಗದಿರುವಾಗ ನಿರಾಸೆಯಿಂದ ಹೇಳುವ ಪದ. a term expressing disappointment. ವಾ: ಆ ಕೆಲ್‌ಸ ಇನ್ನೂ ಆತ್ಲೆ. ಅದ್ ಸುಡಲಿ ಅತ್ತ.

ಸುಡಿಕೆ /*suḍikɛ*/ ಕ್ರಿ. 1. ಸುಟ್ಟು ಹೋಗಲಿ, 2. ದನಕರುಗಳು ತೋಟಕ್ಕೆ ಕದ್ದು ಮೇಯಲು ಬಂದಾಗ ಹೇಳುವ ಬೈಗುಳ ಪದ. 1. let it burn, 2. an expletive used against cattle when they trespass the farms. ವಾ: ಯಾಗ ನೋಡ್ರೂ ಬೇಲಿ ಹಾರಿ ಗದ್ದೆಗೆ ನುಗ್ಗಿದೆ, ಅದರ ಸುಡಿಕೆ.

ಸುಡುಕುಣಿ /*suḍukuṇi*/ ನಾ. 1. ಸ್ಮಶಾನ, 2. ರುದ್ರಭೂಮಿ, 3. ಹೆಣ ಸುಡುವ ಜಾಗ. 1. a graveyard, 2. cemetry, 3. crematory. ವಾ: ಸುಡುಕುಣಿಗೆ ಹೋಗಿ ಬಂದವು ಮೀದ್ ಮನೆಗೆ ಹ್ವತಕು.

ಸುಡುಮಣ್ಣ್ /*Suḍumaṇṇi*/ ನಾ. 1. ಸುಟ್ಟಮಣ್ಣು, 2. ಮಣ್ಣು ಮತ್ತು ಕಸವನ್ನು ರಾಶಿ ಹಾಕಿ ಸುಡುವುದು, ಈ ಮಣ್ಣು ಗೊಬ್ಬರದಂತೆಯೆ ಫಲವತ್ತತೆಯನ್ನು ನೀಡುವುದು. 1. burnt soil, 2. to burn soil along with garbage. ವಾ: ಸುಡುಮಣ್ಣ್ ದೈಕೆ ಹಾಕಿರೆ ಬಾರಿ ಲಾಯ್ಕಲಿ ಬಂದದೆ.

ಸುಡ್ /*suḍi*/ ಕ್ರಿ. 1. ಸುಡು, 2. ದಹಿಸು, 3. ಸುಟ್ಟು ಹಾಕು, 4. ಉರಿಯಲ್ಲಿ ಬೇಯುವಂತೆ ಮಾಡು, 5 ಬೆಂಕಿಯಲ್ಲಿ ಬೇಯಿಸು. 1. to burn, 2. to be in flames, 3. to set on fire, 4. to go up in flames, 5. to boil something using fire. **ಕಿಡಿ ಸಣ್ಣದಾದರೇನ್ ಕಾಡ ಸುಡಕ್(ಗಾ).** ವಾ: ಗೆರೆಕಾಡ್‌ನ ಬೆಂಕಿ ಹಾಕಿ ಜೋಳನ ಸುಡ್. ಪ: ಸುಡ್ದರ್ಲಿ – ಸುಡುವುದರಲ್ಲಿ; ಸುಡ್ದಕ್ಕೆ – ಸುಡುವುದಕ್ಕೆ; ಸುಡೋಣ – ಸುಡುವ; ಸುಡೊಕಾಯಿತ್ – ಸುಡಬೇಕಾಗಿತ್ತು; ಸುಡೋಕ್ – ಸುಡಬೇಕು; ಸುಡ್ದು – ಸುಡುವುದು; ಸುಡು – ಸುಡುವುದು

ಸುಡ್ಕಣಿ /*suḍkaṇi*/ ನಾ. 1. ಸುಡುಗಾಡು, 2. ಸ್ಮಶಾನ, 3. ಮಸಣ, 4. ಚೂಟ್ಕಳ. 1. a cemetry, 2. graveyard, 3. crematory. ವಾ: ಸುಡ್ಕಣಿಲಿ ಹೆಣನ ದಪನ ಮಾಡ್ದು.

ಸುಡ್ಕಿರಿ /*suḍkiri*/ ನಾ. 1. ಸುಡುಗಾಡು, 2. ಸ್ಮಶಾನ, 3. ಮಸಣ, 4 ಚೂಟ್ಕಳ. 1. a cemetry, 2. graveyard, 3. crematory. ವಾ: ಸುಡ್ಕಿರಿಲಿ ಕೆಲು ಪದ್ದೆತಿನಾಂಗೆ ಹೂಣ್ದು, ಸುಡ್ದು ಮಾಡಿವೆ.

ಸುಡ್ಕುಳಿ /*suḍkuḷi*/ ನಾ. ಹೆಣವನ್ನು ಸುಡುವ ಸ್ಥಳ, ಸ್ಮಶಾನ. a crematory. ವಾ: ಸುಡ್ಕುಳಿಲಿ ಕಾಟದ ಮೇಲೆ ಹೆಣನ ಮೊಲ್ಗುಸುದು.

ಸುಡ್‌ಗಾಡ್ /*suḍiga:ḍi*/ ನಾ. 1. ಸ್ಮಶಾನ, 2. ಮಸಣ, ಚೂಟ್ಕಳ. 1. a cemetry, 2. graveyard, 3. crematory. **ಸುಡ್‌ಗಾಡ್‌ಗೆ ಹೋದ ಹೆಣ, ತಲೆಂದ ಉದ್‌ರಿದ ಕೂದೊಲು ಮತ್ತೆ ಬಾಕಿಲೆತ ಹೇಳ್‌ವ ಮಾತುಟ್ಟ್(ನು).** ವಾ: ಸುಡ್‌ಗಾಡ್‌ಲಿ ಹೆಣನ ಸುಡ್ದು. ಪ: ಸುಡ್ಗಾಡ್

ಸುಡ್ದು /*suḍḍu*/ ನಾ. ಸುಡುವುದು. to burn. ವಾ: ಕೋಳಿನ ತೊಪ್ಪಟ ತೆಗ್ದ್ ಕೆಂಡಲಿ ಸುಡ್ದು.

ಸುಡ್‌ಸುಡ್ ಮಾಡ್ /*suḍisuḍi ma:ḍi*/ ಕ್ರಿವಿ. ಮುಖ ಸಿಂಡರಿಸು. to frown.

ಸುಣ್ಣ /*suṇṇa*/ ನಾ. 1. (ಒಂದು ಬಗೆಯ ಬಿಳಿಯ ಭಸ್ಮದಿಂದ ಕೂಡಿದ) ಕಲ್ಲು ಅಥವಾ ಕಪ್ಪೆಚಿಪ್ಪು ಇತ್ಯಾದಿಗಳನ್ನು (ಆವಿಗೆಯಲ್ಲಿ ಅಥವಾ ಒಲೆಯಲ್ಲಿ) ಸುಟ್ಟು ತಯಾರು ಮಾಡಿದ ಪದಾರ್ಥ. 2. ನೀರಿನಲ್ಲಿ ಕುದಿದು ಬಿಳುಪಾದ, ಚೊಕ್ಕವಾದ ಸುಣ್ಣ. 3. ಮೆದುಮಾಡಿದ (ಕೆನೆಯಂಥ) ಸುಣ್ಣ. processed/ refined lime stone. **ಒಂದ್ ಕಣ್ಣ್‌ಗೆ ಬೆಣ್ಣೆ ಒಂದ್ ಕಣ್ಣ್‌ಗೆ ಸುಣ್ಣ(ಗಾ).** ವಾ: ಮನೆಗೆ ಸುಣ್ಣ ಹೊಡಿಯಕೆ ಉಟ್ಟು. **ಸುಣ್ಣಬಣ್ಣ ಬಳ್ದ್** /*suṇṇa baṇṇa baḷdi*/ ಮನೆಗೆ, ಗೋಡೆಗೆ ಸುಣ್ಣವನ್ನು ಬಳಿಯುವುದು. to whitewash the walls of house with refined lime. ವಾ: ಹುತ್ತೆರಿ ಬಾಕನ ಮನೆಗೆಲ್ಲ ಸುಣ್ಣ ಬಣ್ಣ ಬಳ್ದ್ ಸುದ್ದ ಮಾಡ್ದು. **ಸುಣ್ಣ ಹೊಡ್ಯದ್** /*suṇṇa*

hodyadi/ ಗೋಡೆಗೆ ಬಣ್ಣ ಬಳಿಯುವುದು. to paint the walls. ವಾ: ಮಕ್ಕೆಲ್ಲ ಸೇರಿಕಂಡ್ ಗೋಡೆಗೆ ಸುಣ್ಣ ಹೊಡ್ಯದ್.

ಸುಣ್ಣಕುಪ್ಪಿ /*suṇṇakuppi*/ ನಾ. 1. ತಾಂಬೂಲ, 2. ವೀಳ್ಯದ ಪೆಟ್ಟಿಗೆ, 3. ಹರಿವಾಣದಲ್ಲಿ ಸುಣ್ಣ ತುಂಬಿಸಿ ಇರಿಸುವ ಅಗಲ ಬಾಯಿಯ ಚಿಕ್ಕ ಬಾಟ್ಲಿ. a casket in which one keeps betel leaf and areca nut. ವಾ: ಸುಣ್ಣ ಕುಪ್ಪಿ ಎಲ್ಲಿಸಿದ?, ಕಾಂಬಲೆ ಯಾರ್ ಹೊತ್ತ್ ಬುಟ್ಟೊನ.

ಸುಣ್ಣಂಡೆ /*suṇṇaṇḍɛ*/ ನಾ. ಸುಣ್ಣದ ಕುಪ್ಪಿ, ಹರಿವಾಣದಲ್ಲಿ ಸುಣ್ಣ ತುಂಬಿಸಿಡುವ ಚಿಕ್ಕ ಕುಪ್ಪಿ. a casket in which of refined lime is stored. ವಾ: ಸುಣ್ಣಂಡೆನ ಇತ್ತ ಕೊಡೊಮ್ಮೆ.

ಸುಣ್ಣಕಲ್ಲ್ /*suṇṇakallɨ*/ ನಾ. ಸುಟ್ಟಾಗ ಸುಣ್ಣವನ್ನು ಬಿಡುವ ಒಂದು ಬಗೆಯ ಕಲ್ಲು. limestone shells. ವಾ: ಆ ಜಾಗೆಲಿ ಸುಣ್ಣಕಲ್ಲ್ ಸಿಕ್ಕಿದೆ.

ಸುಣ್ಣಕಾಯಿ /*suṇṇaka:yi*/ ನಾ. ತಾಂಬೂಲಕ್ಕೆ ಬಳಸುವ ಸುಣ್ಣವನ್ನು ತುಂಬಿಡುವ ಚಿಕ್ಕ ಲೋಹದ ಡಬ್ಬಿ. a casket in which one keeps betel leaf and areca nut. ವಾ: ಬೆಳ್ಳಿದ್ ಸುಣ್ಣಕಾಯಿ ಚೆಂಚಿಲಿತ್ತ್.

ಸುಣ್ಣಮೂಲೆ /*suṇṇamu:lɛ*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕನಕಮಜಲು ಗ್ರಾಮದ ಜಾಗ. 1. family, 2. lineage, 3. a locality in Kanakamajalu village in Sullia Taluk of Dakshina Kannada District.

ಸುತಾರಾಂ /*suta:ra:ṁ*/ ನಾ. 1. ಹಜ್ಞ, 2. ಏನೂ ಉಪಾಯವಿಲ್ಲದೆ, 3. ಇಷ್ಟವಿಲ್ಲ. 1. small, 2. without any hope, 3. don't like. ವಾ: ನಂಗೆ ಅಲ್ಲಿಗೆ ಹೋಕೆ ಸುತಾರಾಂ ಕುಸಿ ಇಲ್ಲೆ.

ಸುತ್ತ ಅಂಕಣ /*sutta aŋkaṇa*/ ನಾ. 1. ಸುತ್ತಲೂ ಚಾವಡಿ, 2. ಸುತ್ತ ತೆರೆದ ಅಂಗಣ. 1. open yard in the house, 2. a veranda.

ಸುತ್ತಬಾಕೆ /*sutt ba:kɛ*/ ನಾ. 1. ಸುತ್ತು ಬರಲು, 2. ತಿರುಗಲು. 1. going around, 2. to turn. ವಾ: ದೇಸ್ತಾನದ ಸುತ್ತ ಬಾಕೆ ಹೇಳ್ದೊ.

ಸುತ್ತ ಸರಿ ಉಟ್ಟು /*sutta sari uṭṭu*/ ನಾ. ಮಾನಸಿಕ ಸ್ಥಿರತೆ. mental stability. ವಾ: ಅಂವಂಗೆ ಸುತ್ತ ಸರಿಉಟ್ಟು. ಅಂವನ ಮಾತೆ ಹಾಂಗೆ ಅಸ್ಟೆ.

ಸುತ್ತಮುತ್ತ /*suttamutta*/ ನಾ. 1. ಅಕ್ಕಪಕ್ಕ, 2. ಸುತ್ತಲೂ. 1. in the neighbourhood, 2. around. ವಾ: ಸುತ್ತಮುತ್ತ ಒಂದ್ ಮನೆನೂ ಇಲ್ಲೆ.

ಸುತ್ತಿಗೆ /*suttigɛ*/ ನಾ. ಕಲ್ಲು, ಕಬ್ಬಿಣ ಮೊದಲಾದವುಗಳನ್ನು ಕುಟ್ಟಲು ಬಳಸುವ ಒಂದು ಬಗೆಯ ಕಬ್ಬಿಣದ ಸಾಧನ. a hammer. ವಾ: ಸುತ್ತಿಗೆ ತಕಂಡ್ ಗೋಡೆಗೆ ಆಣಿ ಹೊಡೆದು.

ಸುತ್ತುಕಮ್ಮಿ /*suttu kammi*/ ನಾ. 1. ಸುತ್ತುಸಡಿಲ, 2. ಪೆಟ್ಟ್‌ಕಮ್ಮಿ. 1. unstable, 2. unsound. ವಾ: ಅಂವಂಗೆ ಒಂದ್ ಸುತ್ತು ಕಡಿಮೆ.

ಸುತ್ತುಪಡಿಪುರೆ /*suttupaḍipurɛ*/ ನಾ. ಗರ್ಭಗೃಹದ ಸುತ್ತಲೂ ಇರುವ ಜಗಲಿ ಹಾಗೂ ಗೋಡೆ. a raised platfrom and a wall that surrounds the sactum sactorum. ವಾ: ದೇಸ್ತಾನದ ಸುತ್ತು ಪಡಿಪುರೆ ಹೆಂಗೆ ಉಟ್ಟು ಅಲಾ.

ಸುತ್ತುಮುತ್ತೊಳು /*suttumuttoḷu*/ ನಾ. 1. ಸುತ್ತ ಮುತ್ತ, 2. ಪರಿಸರ, 3. ಸನ್ನಿವೇಶ. 1. in the neighbourbood, 2. environment, 3. situation. ವಾ: ಮನೆ ಸುತ್ತು ಮುತ್ತೊಳು ತೋಟನೆ ಇರ್‌ದು.

ಸುತ್ತುಸಡಿಲ /*suttu saḍila*/ ನಾ. 1. ಮಾನಸಿಕ ಅಸ್ಥಿರತೆ, 2. ಕಡಿಮೆ ಸ್ಥಿರತೆ, 3. ಪೆಟ್ಟ್‌ಕಮ್ಮಿ. 1. losing sanity, 2. unstable, 3. unsound. ವಾ: ಸುತ್ತು ಸಡಿಲದವಂಗೆ ಕೂಸ್‌ನ ಕೊಡ್ಡು ಬೇಡ.

ಸುತ್ತೊಗುಟ್ಟ್ /*suttoguṭṭi*/ ಕ್ರಿ. ಸುರುಳಿಯಾಕಾರದಲ್ಲಿ ಸುತ್ತಿಕೊಳ್ಳು. to spiral around. ವಾ: ಕರ್‌ನ ಗಂಟ್ಲ್‌ಗೆ ಬೊಳ್ಳಿ ಸುತ್ತೊಗುಟ್ಟ್.

ಸುತ್ತೊಳು /*suttoḷu*/ ನಾ. 1. ಸುತ್ತಲೂ, 2. ಮನೆಯ ಸುತ್ತಮುತ್ತ. 1. around, 2. around the house. ವಾ: ಸುತ್ತೊಳು ತೋಟ, ನೊಡುಲಿ ಮನೆ ಇರ್‌ದು.

ಸುತ್ತ್ /*suttɨ*/ ಕ್ರಿ. 1. ಸುತ್ತುವುದು, 2. ಅಲೆದಾಡು, 3. ತಿರುಗಾಡು, 4. ಸುರುಳಿ ಮಾಡು. 1. to roam around, 2. to wander, 3. to walk around, 4. to spiral. **ಸುತ್ತಿ ಮಾತಾಡ್ದು(ನು).** ವಾ: ನೀ ಹಿಂಗೆ ಸುಮ್ಮನಾರ್ ದೋಸ್ತಿಗಳೊಟ್ಟಿಗೆ ಸುತ್ತು, ಜೀತ

ಇಲ್ಲದಂವ. **ಸುತ್ತಾಕು** /*sutta:ku*/ 1. ಸುತ್ತು ಬರು. to circle. **ಅಪ್ಪ ನೆಟ್ಟ ಆಲದ ಮರಕ್ಕೆ ಸುತ್ತಾಕುದು(ಗಾ).** ವಾ: ಅರ್‌ಳಿ ಮರಕೆ ಒಂಬತ್ ಸುತ್ತಾಕ್. **ಸುತ್ತ್ ಬಾಕನ** /*sutti ba:kana*/ 1. ಸುತ್ತು ಬರು, 2. ಪ್ರದಕ್ಷಿಣೆ ಹಾಕು. 1. to go around, 2. circumambulate. ವಾ: ದೇಸ್ತಾನದ ಸುತ್ತ್ ಬಾಕನ ಹಳೆ ದೋಸ್ತಿ ಸಿಕ್ಕಿತ್. ಪ: ಸುತ್ಬಾದ್ – ಸುತ್ತು ಬರುವುದು;

ಸುದಾರ್ಣೆ /*suda:rηε*/ ನಾ. 1. ಸುಧಾರಣೆ, 2. ತಿದ್ದುಪಡಿ, 3. ಸಂಸ್ಕರಿಸುವುದು, 4. ಏಳಿಗೆ, 5. ಅಭಿವೃದ್ಧಿ. 1. reformation, 2. correction, 3. processing, 4. growth, 5. development. ವಾ: ಸುಮಾರ್ ಒಳ್ಳ ಕೆಲ್ಸ ಮಾಡಿ ಎಲ್ಲದರ್‌ಲು ಸುದಾರ್ಣೆ ತಂದೊಳ.

ಸುದಾರ್ಸುದು /*suda:rsudu*/ ನಾ. 1. ತಿದ್ದು, 2. ಸಂಸ್ಕರಿಸು, 3. ಚೇತರಿಸಿಕೊಳ್ಳು, 4. ಸಂಬಾಳಿಸು. 1. to correct, 2. to process, 3. to recover, 4. to manage. ವಾ: ಅಂವನ ನಡೆನ ಸುದಾರ್ಸಿಕೆ ಬೊತ್ತ್, ಅಂವ ಮೊದುವೆ ಆದ ಮೇಲೆ ಸುದಾರ್‌ಸಿದ್.

ಸುದಾರ್ಸ್ /*suda:rsɨ*/ ಕ್ರಿ. 1. ಸುಧಾರಿಸು, 2. ಜವಾಬ್ದಾರಿಯಿಂದ ಕೆಲಸವನ್ನು ನೆರವೇರಿಸುವುದು. 1. to tolerate, 2. to act with responsibility. ವಾ: ಬನ್ನಿ ಕುದ್ಕಂಡ್ ಹಞ್ಞ ಸುದಾರ್ಸಿ ಕಣಿ.

ಸುದೆನಾನೀಲ್ /*sudεna:ni:lɨ*/ ನಾ. ನದಿಯ ದಡದಲ್ಲಿ ಬೆಳೆಯುವ ಮರ. a tree that grows on river banks. ವಾ: ಸುದೆ ನಾನೀಲ್ ನದಿ ಕರೆಲಿ ಬೆಳೆಯೊ ಮರ.

ಸುದ್ದ ಆದೊ /*sudda a:dɔ*/ ನಾ. 1. ಶುದ್ಧವಾಗು, 2. ಸೂತಗ ಕಳೆಯು. 1. to clean, 2. a ritualistic purrificaiton. ವಾ: ಪುಣ್ಯಾರ್‌ಚೆನೆನ ತಲೆಗೆ ಮೈಗೆ ತಕ್ಲಿಸಿಕಂಡರೆ ಸುದ್ದ ಆದೊತ ಅರ್‌ತ.

ಸುದ್ದಕ್ರಿಯೆ /*suddɔkriye*/ ಕ್ರಿ. 1. ಶುದ್ಧ ಮಾಡುವ ಕ್ರಮ, 2. ಶುದ್ಧೀಕರಣ. 1. a purificatory ritual, 2. purification.

ಸುದ್ದಮುದ್ರಿಕೆ /*suddamudrikε*/ ನಾ. 1. ಮಡಿ, 2. ಶುಭ್ರ, 3. ನೈರ್ಮಲ್ಯ. 1. purity, 2. purified, 3. cleanliness. ವಾ: ಹಬ್ಬಕೆ ಕಟ್ಟ್ ಬಿದ್ದ ಮೇಲೆ ಸುದ್ದ ಮುದ್ರಿಕೆಲಿ ಇರೊಕು.

ಸುದ್ದ[1] /*sudda*/ ನಾ. ಸೂತಕದ ಮೂರು, ಐದು ದಿನಗಳ ನಂತರ ಶುದ್ಧ ಮಾಡುವ ಕ್ರಿಯೆ. a ritual cleaning after the 5th day of death. **ಅಗಸಂದ್ ಕೈ ಸುದ್ದ, ಕತ್ತೆದ್ ಬೆನ್ನ್ ಸುದ್ದ(ಗಾ).** ವಾ: ಮನೆ ಸುದ್ದ ಮಾಡೊಕು.

ಸುದ್ದ[2] /*sudda*/ ನಾ. ಶುದ್ಧ, ದೇವರ ತೀರ್ಥ ಪುಣ್ಯಾರ್ಚನೆ ಸಿಂಪಡಿಸಿಕೊಂಡು ಸೂತಕದಿಂದ ವಿಮುಕ್ತನಾಗು, ದೇವರ ಪೂಜಾರಿಗಳು ಜಾತ್ರಾ ಸಮಯದಲ್ಲಿ ಮಾಂಸ, ಮದ್ಯ, ಸ್ತ್ರೀ ಸಂಗವನ್ನೆಲ್ಲಾ ತ್ಯಜಿಸಿ ದಿನಕ್ಕೆ ಮೂರು ಬಾರಿ ಸ್ನಾನಾದಿಗಳನ್ನು ಮಾಡಿ ಸದಾ ಶುಚಿರ್ಭೂತರಾಗಿ ಶುದ್ಧದಲ್ಲಿರುವುದು. period of purity, observed during festivals, rituals, etc. during this period consumption of meat and achohol, sexual relationship with women are not allowed. ವಾ: ಹಬ್ಬಹರಿದಿನಗಳ್‌ಲಿ ಎಲ್ಲೊವು ಸುದ್ದಲಿರೊಕು.

ಸುದ್ದಲಿರ್ದು /*Suddalirdu*/ ನಾ. ಸೂತಕವಿಲ್ಲದೆ ಶುದ್ಧವಾಗಿ ಮಾಡುವ ಕ್ರಮ. to perfom rites without any defilement. ವಾ: ಹಬ್ಬಕೆ ಕಟ್ಟ್ ಬೀಳಿಕನ ಊರ್‌ಲಿ ಎಲ್ಲೊವು ಮೀನ್ ಮಾಸ ಮಾಡದೆ ಸುದ್ದಲಿ ಇರೊಕು.

ಸುದ್ದಿ /*suddi*/ ನಾ. 1. ಸುದ್ದಿ, 2. ವಾರ್ತೆ, 3. ಸಮಾಚಾರ. 1. information , 2. news, 3. a bulletin. ವಾ: ಪೇಪರ್‌ಲಿ ಎಂತಾರ್ ಹೊಸ್ತ್ ಸುದ್ದಿ ಉಟ್ಟ?

ಸುದ್ದಿಸುರಾಣ್ /*suddisura:ηɨ*/ ನಾ. 1. ಪತ್ತೆಯಿಲ್ಲದಿರು, 2. ನಾಪತ್ತೆಯಾಗು, 3. ಮೌನವಾಗಿರು. 1. vanished, 2. to disappear, 3. to be quiet. ವಾ: ಎಂತ ಅಂವನ ಸುದ್ದಿ ಸುರಾಣ್ ಇಲ್ಲೆಲ.

ಸುದ್ದಿಸುಲಾಕ್ /*suddisula:kɨ*/ ನಾ. ಅವರ ಸುದ್ದಿಯೇ ಬೇಡ. I don't want to hear their news. ವಾ: ನಮಿಗೆ ಅವರ ಸುದ್ದಿ ಸುಲಾಕ್ ಬೇಡ.

ಸುದ್ದಿಕೊಟ್ಟ್ /*suddikoṭṭɨ*/ ನಾ. ಸುದ್ದಿಮುಟ್ಟಿಸಿ. to reach the news. ವಾ: ಅವ್‌ಕೆ ಸುದ್ದಿ ಕೊಟ್ಟ್ ಬಾ ಬೇಗ.

ಸುದ್ದಿಯಾತ್ /*suddiya:tɨ*/ ನಾ. 1. ಸುದ್ದಿಮಾಡು, 2. ಪ್ರಚಾರಮಾಡು. 1. to propogate news, 2. to publicise. ವಾ: ನೀರ್‌ಲಿ ಕೊಚ್ಚಿ ಹೋತಿದ್ದವರ ಕಾಪಾಡ್ದ್ ದೊಡ್ಡ ಸುದ್ದಿಯಾತ್.

ಸುದ್ದಿಯೇ ಇಲ್ಲೆ /*suddiye: illɛ*/ ನಾ. ಪತ್ತೆ ಇಲ್ಲ. no whereabouts. ವಾ: ನಿಂದ್ ಸುದ್ದಿಯೆ ಇಲ್ಲೆಲ.

ಸುನ್ನಾಜೆ /*sunna:jɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಸುಬಗ /*subaga*/ ನಾ. 1. ಉತ್ತಮ ನಡತೆಯವ, 2. ಪ್ರಾಮಾಣಿಕ. 1. righteous, 2. honest. ವಾ: ಅಂವ ಬಾರಿ ಸುಬಗನಾಂಗೆ ಆಡ್‌ದೆ.

ಸುಬಗಳಿಗೆ /*subagaḷigɛ*/ ನಾ. 1. ಶುಭ ಕಾರ್ಯದ ಸಮಯ, 2. ಒಳಿತಾಗು, 3. ಮಂಗಳಕರ. 1. an auspicious time, 2. occurance of something good, 3. auspicious. ವಾ: ಮನೆಲಿ ಸುಬಕಾರ್‌ಯ ನಡೆದೆ ಸುಮಾರ್ ವರ್‌ಸ ಆತ್.

ಸುಬಾವು /*suba:vu*/ ನಾ. 1. ಸ್ವಭಾವ, 2. ಮನೋಗುಣ, 3. ಸಹಜಗುಣ, 4. ಹುಟ್ಟುಗುಣ. 1. behaviour, 2. conduct, 3. manner, 4. attitude. ವಾ: ಮೊನ್ನನ ಸುಬಾವು ಒಳ್ಳೆದಿರೊಕು.

ಸುಬ್ಬಕ್ಕ /*subbakka*/ ನಾ. ವ್ಯಕ್ತಿ ಹೆಸರು, ಸ್ತ್ರೀ ವಾಚಕ. feminine given name.

ಸುಬ್ಬಣ್ಣ /*subbaṇṇa*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. masculine given name. ವಾ: ಸುಬ್ಬ ಎಲ್ಲಿ ಹೋತುತ? ಸಂತೆಗೆ ಹೋದಂವ ಅತ್ತಳೆ ಹೋಬುಡ್‌ಉಗ್ಗಪ್ಪ. ಪ: ಸುಬ್ಬ, ಸುಬ್ಬಪ್ಪ, ಸುಬ್ಬಯ್ಯ

ಸುಬ್ಬಮ್ಮ /*subbamma*/ ನಾ. ವ್ಯಕ್ತಿನಾಮ ಸ್ತ್ರೀ. Subbamma, name of a woman. ವಾ: ಸುಬ್ಬಮ್ಮ ಬನ್ನಿ ಮನೆಗೆ.

ಸುಬ್ಬಿ /*subbi*/ ನಾ. ವ್ಯಕ್ತಿನಾಮ ಸ್ತ್ರೀ. Subbi, name of a woman. ವಾ: ಸುಬ್ಬಿ ಬನ್ನೆತ ಹೇಳ್ದ ಮತ್ತೆ ಪತ್ತೆ ಇಲ್ಲೆ.

ಸುಬ್ರಹ್ಮಣ್ಯ /*subrahmaṇya*/ ನಾ. ನಾಗದೇವತೆಗಳ ಆರಾಧನಾ ಸ್ಥಳ, ಕುಕ್ಕೆಸುಬ್ರಹ್ಮಣ್ಯ ಸ್ಥಳನಾಮ. Subramanya, a temple town. ವಾ: ಸುಬ್ರಹ್ಮಣ್ಯಕೆ ಹೋಗಿ ಬರೊಮೊ.

ಸುಮನ /*sumana*/ ನಾ. ಕಿರಿಕಿರಿ, ಚೇಷ್ಟೆ ಮಾಡಿದಾಗ ಹೇಳುವ ಪದ. to irritate. ವಾ: ನೆಗಾಡಿರೆನ ನಂಗೆ ನಡೆಕೆ ಕುದ್ರಿಕೆ ಬೊತ್ತ್, ನನ್ನ ಬಂಗ ನಂಗೆ, ನಿಮಿಗೆಂತ ಸುಮನ.

ಸುಮನೆ /*sumanɛ*/ ಕ್ರಿ. 1. ಸುಮ್ಮನೆ, 2. ಸದ್ದಿಲ್ಲದೆ, 3. ಮೌನವಾಗಿ, 4. ಕಾರಣವಿಲ್ಲದೆ, 5. ವ್ಯರ್ಥವಾಗಿ. 1. simply, 2. without noise, 3. quiet, 4. without any reason, 5. wasted. ವಾ: ಸುಮನೆ ನೋಡಿಕಂಡ್ ಪೋಯಿತ ಬಂದದ್.

ಸುಮಾನ /*suma:na*/ ನಾ. ಹುಚ್ಚು (ಬೈಗುಳ ಪದ). mad (used as an expletive). ವಾ: ನಿಮಿಗೆನೊ ಸುಮಾನ.

ಸುಮಾರ್ /*suma:ri*/ ಕ್ರಿವಿ. 1. ಸಾಧಾರಣ, 2. ಹೆಚ್ಚು ಕಡಿಮೆ, 3. ಹತ್ತಿರ ಹತ್ತಿರ, 4. ಸುತ್ತಮುತ್ತ. 1. ordinary, 2. more or less, 3. nearly, 4. around. ವಾ: ಸುಮಾರ್ ಹಕ್ಕಲೆತ್ರ ನೂರ್ ಬೇಗ್ ಕಾಪಿ ಆಗಿರ್‌ದು.

ಸುಮ್ಕಿರ್ /*sumkir*/ ಕ್ರಿ. 1. ಸುಮ್ಮನಿರು, 2. ತೆಪ್ಪಗಿರು. 1. to be silent, 2. keeping quiet. ವಾ: ನೆಗಾಡ್ಬಡ ಹಞ್ಞ ಸುಮ್ನಿರ್.

ಸುಮ್ನಿರೋಕು /*sumniro:ku*/ ಕ್ರಿ. 1. ನಿಷ್ಕ್ರಿಯವಾಗಿರು, 2. ವಿಶ್ರಾಂತಿ ಕೊಡು, 3. ಸುಮ್ಮನಿರು, 4. ತೆಪ್ಪಗಿರು. 1. inactive, 2. to offer rest, 3. to be quiet, 4. to be silent. ವಾ: ಮಕ್ಕ ಹಟ ಮಾಡದೆ ದೊಡ್ಡವ್ ಮಾತಾಡಿಕನ ಸುಮ್ನಿರೋಕು.

ಸುಮ್ಮಂಗ /*summaŋga*/ ಕ್ರಿ. 1. ಸುಮ್ಮನೆ, 2. ಸದ್ದಿಲ್ಲದೆ, 3. ಮೌನವಾಗಿ, 4. ಕಾರಣವಿಲ್ಲದೆ, 5. ವ್ಯರ್ಥವಾಗಿ. 1. simply, 2. without noise, 3. quiet, 4. without any reason, 5. wasted. ವಾ: ಸುಮ್ಮಂಗ ಕುದ್ದೊಳೆ, ನೋಡಮ್ಮ, ಅವ್ವು ಸುಮ್ಮಂಗಾರ್ ನನ್ನನ್ನೇ ಹೇಳ್ವು. **ಸುಮ್ಮಂಗಾರ್** /*sum'maṅga:r*/ ಸುಮ್ಮನೆ. simply. ವಾ: ನೀವು ಸುಮ್ಮಂಗಾರ್ ಎಂತೆಲ್ಲ ಹೇಳ್ಬಡಿ.

ಸುಮ್ಮನಿರ್ /*summaniri*/ ಕ್ರಿ. 1. ಮಾತನಾಡದಿರುವಿಕೆ 2. ಸದ್ದಿಲ್ಲದೆ ಇರುವುದು. 1. to maintain silence, 2. not making any noise. ವಾ: ಯಾರ ತಂಟೆ ತಕರಾರ್ ಹೋಗದೆ ಸುಮ್ಮನಿರ್.

ಸುಮ್ಮನುಟ್ಟು /*summanuṭṭu*/ ಕ್ರಿವಿ. 1. ತಟಸ್ಥನಾಗಿರು, 2. ತೆಪ್ಪಗಿರು, 3. ಮೌನಿಯಾಗಿರು. 1. to be neutral, 2. to be quiet, 3. to remain silent. ವಾ: ಸುಮಾರ್ ಸಮೆ ಆತ್ ಜೆಗಳ ಮಾಡದೆ ಸುಮ್ಮನುಟ್ಟು.

ಸುಮ್ಮನೆ /*summanɛ*/ ಕ್ರಿವಿ. 1. ಮೌನವಾಗಿ, 2. ಯಾವುದೇ ಪ್ರತಿಕ್ರಿಯೆ ಇಲ್ಲದ. 1. to be quiet, 2.

having no reactions. ವಾ: ಯಾಕೆ ಸುಮ್ಮನೆ ಕುದ್ದೊಳರಿ?

ಸುಯ್ಂಪು /*suyimpu*/ ಕ್ರಿ. 1. ಮೂಗಿನಲ್ಲಿರುವ ಸಿಂಬಳವನ್ನು ತೆಗೆಯುವುದು, 2. ಹಾವು ಕೋಪದಲ್ಲಿ ಬುಸುಗುಡುವುದು. 1. to clean the mucus membranes from the nose, 2. hissing sound of a snake.

ಸುರಗಿ /*suragi*/ ನಾ. ಪರಿಮಳಯುಕ್ತ ಒಣಗಿಸಿ ಬಳಸುವ ಹೂವು. West Indian jasmine. ವಾ: ಸುರಗಿ ಹೂ ಬಾರಿ ಗಮನ ಬಾದು.

ಸುರಾಗ್ /*sura:gi*/ ನಾ. ಸ್ವರ. voice/tone.

ಸುರಾತ್ /*sura:ti*/ ಕ್ರಿ. 1. ಪ್ರಾರಂಭ, 2. ಆರಂಭ, 3. ಮೊದಲು ಮಾಡುವಿಕೆ. 1. beginning, 2. starting, 3. to begin. ವಾ: ಅಯೊ ಅದ್‌ಕೆ ಮತ್ತೆ ಬೇನೆ ಸುರಾತ್.

ಸುರಾತ್ಲೆ /*sura:tlɛ*/ ಕ್ರಿ. 1. ಪ್ರಾರಂಭಿಸಲಿಲ್ಲ, 2. ಆರಂಭವಾಗಿಲ್ಲ. 1. didn't begin, 2. didn't start. ವಾ: ಪಿಚ್ಚರ್ ಇನ್ನೂ ಸುರಾತ್ಲೆ.

ಸುರಾಲ್ /*sura:li*/ ನಾ. ಪ್ಯಾಂಟ್. pant. ವಾ: ಸುರಾಲ್‌ದ್ ಕೊಂಡಿ ಬಿದ್ದೋವುಟು.

ಸುರಿ[1] /*suri*/ ಕ್ರಿ. 1. ಮೇಲಿನಿಂದ ನೀರು ಬೀಳುವುದು, 2. ಮಳೆ ಸುರಿಯುವುದು. 1. water falling from a height, 2. raining. ವಾ: ಹೊರೆಗೆ ಮಳೆ ಜೋರಾಗಿ ಸುರಿತುಟ್ಟು.

ಸುರಿ[2] /*suri*/ ಕ್ರಿ. 1. ಪಾಯಸ ಕೈಯಿಂದ ತಿನ್ನುವುದು, 2. ಪಾಯಸ ಸುರಿದು ತಿನ್ನುವುದು. to eat payasa (liquid sweet dish) with hands. ವಾ: ಪಾಯ್ಸನ ಅಲ್ಲಿ ಸುರಿಬೇಡ.

ಸುರಿ[3] /*suri*/ ಕ್ರಿ. ಪೋಣಿಸು. to string. ವಾ: ಮಲ್ಲಿಗೆ ಮೊಗ್ಗಗನ ಸೂಜಿಲಿ ಸುರಿ. ಪ: ಸುರಿಯೊಕುಂತ – ಪೋಣಿಸಬೇಕೆಂದು

ಸುರು /*suru*/ ನಾ. 1. ಆರಂಭ, 2. ಪ್ರಾರಂಭ. 1. beginning, 2. starting. ವಾ: ನಾಳೆಂದ ಮಕ್ಕಳಿಗೆ ಇಸ್ಕೂಲ್ ಸುರು.

ಸುರುಂಟು /*suruṇṭu*/ ಕ್ರಿವಿ. 1. ಸುತ್ತಿಕೊಂಡು, 2. ಸುರುಟಿ ಕೊಂಡು. 1. wrapped, 2. covered. ವಾ: ನೀರೆಳೆ ಹಗ್ಗನ ಸುರುಂಟ ಮಾಡಿಸಿದ್.

ಸುರುಂದ /*surunda*/ ನಾ. 1. ಪ್ರಾರಂಭದಿಂದ, 2. ಮೊದಲಿನಿಂದ. 1. from the beginning, 2. from the first. ವಾ: ಸುರುಂದಳೇ ಅಯ್ಯೆಕ ಮಕ್ಕಳಿಗೆ ಒಳ್ಳೆದ್, ಕೆಟ್ಟದರ ಬಗ್ಗೆ ಹೇಳಿಕೊಡೊಕು.

ಸುರುಗೆ /*surugɛ*/ ನಾ. 1. ಮೊದಲು, 2. ಮೊದಲನೆಯ. 1. in the beginning, 2. the first. ವಾ: ಸುರುದಕ್ಕೆ ಕೊಟ್ಟರೆ ಎರಡ್‌ನೆದಕ್ಕೆ ದುಂಡು ಬಂದದೆ.

ಸುರುಳಿಮನೆ /*suruḷimanɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಸುರೂನ /*suru:na*/ ನಾ. ಮೊದಲನೆಯ. the first. ವಾ: ಸುರೂನ ಮಳೆಗೆ ಮೊಣ್ಣ್ ನ ಗಮನ ಮೂಕ್‌ಗೆ ಬಡೆಕನ ಕುಸಿಯಾದೆ.

ಸುರೂನ ಕೂಸು /*suru:na ku:su*/ ನಾ. ಮೊದಲ ಮಗು. the first child. ವಾ: ಸುರೂನ ಕೂಸು ಹುಟ್ಟಿಕನ ಕೊಂಡಾಟ. ಎರೆಡ್ನದಕೆ ಬಂಡಾಟ. ಮೂರನೆದಕೆ ಕೋಲಾಟಗಡ.

ಸುರ್ಕುಳಿ /*surkuḷi*/ ನಾ. 1. ಸ್ಮಶಾನ, 2. ಮಸಣ. 1. a graveryard, 2. a cemetery. ವಾ: ಸುರ್ಕುಳಿ ಹಕ್ಕಲೆ ದೊಡ್ಡ ಮರ ಇತ್ತಲ. ಅದ್ ಬಿದ್ದೋವ್ಚು.

ಸುರ್ಗೆ[1] /*surgɛ*/ ನಾ. ದೈವರಾಧನೆಲಿ ಬಳಸುವ ಖಡ್ಗ. a sword used by the deity/bhuta/spirit. ವಾ: ವಿಷ್ಣುಮೂರ್ತಿ ದೆವ್ವಕೆ ಸುರ್ಗೆ ಮತೆ ಬಿಲ್ಲ್ ಆಯುದಂಗ.

ಸುರ್ಗೆ[2] /*surgɛ*/ ನಾ. 1. ಪರಿಮಳಯುಕ್ತ ಒಣಗಿಸಿ ಬಳಸುವ ಹೂವು, 2. ಸುರಗಿ. West Indian jasmine. ವಾ: ಸುರ್‌ಗೆತೇಳ್ದು ಗಮನ ಇರೊ ಹೂವ್. **ಸುರ್ಗೆಮರ** /*surgɛ mara*/ ಔಷಧಿಗೆ ಬಳಸುವ ಒಂದು ಜಾತಿಯ ಕಾಡುಮರ, ಸುರಗಿ ಮರದ ತೊಗಟೆ ಮತ್ತು ಹೂವನ್ನು ಔಷಧಿಯಾಗಿ ಬಳಸುತ್ತಾರೆ. West Indian jasmine tree, bark and flowers of the tree are used as medicine. ವಾ: ಸುರ್ಗೆ ಮರ ಒಂದ್ ಕಾಡ್ ಮರ. **ಸುರ್ಗೆ ಹೂವ್** /*surgɛ hu:vi*/ 1. ಪರಿಮಳಯುಕ್ತ ಒಣಗಿಸಿ ಬಳಸುವ ಹೂವು, 2. ಸುರಗಿ ಹೂವು. West Indian jasmine flower. ವಾ: ಸುರ್ಗೆ ಹೂವ್ ಸಣ್ಣದಾಗಿ ನೊಡುಲಿ

ಅರ್ಸಣಲಿ ಇದ್ದದೆ. ಇದ್ ಒಣ್ಗಿದ ಮೇಲೂ ಗಮನ ಇದ್ದದೆ. ಹಂಗೆ ಸುಮಾರ್ ದಿನನು ಇದ್ದದೆ. ಹಿಂದೆಲ್ಲ ಮೊದ್ವೆ ಗೂಡೆದ್ ಪೆಟಿಗೆಗೆ ಕರಿಮೊಣಿ. ಬಿಚ್ಚೋಲೆವೊಟ್ಟಿಗೆ ಒಣ್ಗಿದ ಸುರ್ಗೆ ಹೂವ್‌ನ ಮಾಲೆನ ಸನ ಹಾಕ್ತಿದ್ದೊ.

ಸುರ್ಟಿಕಂಡ್ /*surṭikaṇḍɨ*/ ಕ್ರಿ. ಸುತ್ತಿಕೊಂಡು. spiralled. ವಾ: ಕೊತ್ತಿ ಸುರ್ಟಿಕಂಡ್ ಮೊಲ್ಗಿಟು. ಪ: ಸುರ್ಟುದು – ಸುರುಟುವುದು/ಸುತ್ತಿಕೊಳ್ಳುವುದು

ಸುರ್ಟಿಕಂಬದ್ /*surṭikambadɨ*/ ಕ್ರಿ. ಸುರುಳಿ ಸುತ್ತಿಕೊಳ್ಳುವುದು. to spiral. ವಾ: ಹಸೆಮೊಂದ್ರಿ ಸುರ್ಟಿಕಂಬದ್.

ಸುರ್‌ಟು /*surɨṭu*/ ಕ್ರಿ. ಸುರುಳಿ ಮಾಡು. to make coil. ವಾ: ಹಾವ್ ಸುರುಟು ಕಂಡ್ ಮೊಲ್ಗಿದ್. ಪ: ಸುರುಟ – ಸುತ್ತಿಕೊಂಡು, ಸುರುಟಿ ಕೊಂಡು;

ಸುರ್ದ್ /*surdɨ*/ ನಾ. 1. ಸುರಿಯು, 2. ಪೋಣಿಸು. 1. to pour, 2. to string. ವಾ: ಬತ್ತನ ಕಡ್ಕೆಗೆ ಸುರ್ದ್ ಆತ?

ಸುರ್ಪ /*surpa*/ ನಾ. 1. ರೂಪ, 2. ಮುಖದ ಆಕಾರ, 2. ಮುಖದ ನೋಟ, 3. ಸ್ವರೂಪ. 1. form, 2. shape of one's face, 3. sight of one's face. ವಾ: ಸುರ್ಪನೊಮ್ಮೆ ನೋಡ್ ಹೆಂಗಾಗುಟುತ.

ಸುರ್ಪುದು /*surpudu*/ ಕ್ರಿ. ಹಾವು ಬುಸುಗುಟ್ಟುವುದು. hissing of the snakes. ವಾ: ದೊಡ್ಡ ಹಾವ್ ಹೆಡೆ ಎತ್ತಿ ಸುರ್ಪುದೆ. ಸುಯುಂಪು(ತು)

ಸುರ್‌ಮಾಡ್ /*surɨma:ḍɨ*/ ಕ್ರಿ. ಪ್ರಾರಂಭಿಸು. to begin. ವಾ: ಕೆಲಸಕ್ಕೆ ಸುರ್‌ಮಾಡ್. ಪ: ಸುರ್‌ಮಾಡ್ದೊ – ಪ್ರಾರಂಭ ಮಾಡಿದರು;

ಸುರ್ಯದು /*suryadu*/ ಕ್ರಿ. ಸುರಿಯುವುದು. to pour. ವಾ: ಪೊಯ್ಯನ ಎಲ್ಲಿಗೆ ಸುರ್ಯದು.

ಸುರ್ಸು /*sursu*/ ಕ್ರಿ. 1. ಸುರಿಸು, 2. ಹರಿಸು, 3. ಸ್ರವಿಸು, 4. ಸೂಸು. 1. to shed, 2. to let it flow, 3. to ooze out, 4. to release. ವಾ: ಕಣ್ಣೀರ್ ಸುರ್ಸುಬಡ. ಪ: ಸುರ್ಸುದು – ಸುರಿಸುವುದು

ಸುರ್‌ಳಿ /*surɨḷi*/ ಕ್ರಿ. 1. ಸುರುಳಿ, 2. ಸುತ್ತಿಕೊಳ್ಳುವುದು. 1. to spiral, 2. wrap. ವಾ: ಹೂವ್ ಅರ್‌ಳದೆ ಸುರ್‌ಳಿ ಕಂಡುಟು.

ಸುಲ /*sula*/ ನಾ. ಒಂದು ಜಾತಿಯ ಹಕ್ಕಿ, ಇಂಪಾದ ಸ್ವರದಲ್ಲಿ ಸಿಳ್ಳೆ ಹಾಕುವ ರೀತಿಯಲ್ಲಿ ಕೂಗುವ ಕಾಡಿನ ಪುಟ್ಟ ಹಕ್ಕಿ. Malabar whistling thrush. ವಾ: ಸುಲ ಕಾಡ್‌ಲಿರೊ ಸಣ್ಣ ಹಕ್ಕಿ.

ಸುಲಬ /*sulaba*/ ನಾ. 1. ಪ್ರಯಾಸವಿಲ್ಲದ, 2. ಕಷ್ಟಕರವಲ್ಲದ. effortless. ವಾ: ಕುಂಟೆನ ಸುಲಬಲಿ ಎತ್ತಿಕಂಡ್ ಹೋದೊ.

ಸುಲಿ /*suli*/ ಕ್ರಿ. ಸಿಪ್ಪೆ ತೆಗಿ. to peel the skin. ವಾ: ತೆಂಗಿನಕಾಯಿ ಸುಲಿದು.

ಸುಲಿಗೆ /*suligɛ*/ ಕ್ರಿವಿ. 1. ಮೋಸದ ಹಣ, 2. ಮೋಸಮಾಡು. 1. money earned through cheating, 2. to swindle. ವಾ: ಸಾಮಾನ್‌ಗಳಿಗೆ ರೇಟ್ ಹೆಚ್ಚಿ ಹೇಳಿಕಂಡ್ ಜೆನರ ಸುಲಿಗೆ ಮಾಡಿವೆ.

ಸುಲುಬ /*suluba*/ ನಾ. ಸುಲಭ. easy. ವಾ: ಮಾತಾಡ್ದು ಸುಲುಬ. ಹಂಗೆ ನಡ್ಕಂಬೊದ್ ಬಜ್ಜ.

ಸುವ್ವಾ /*suvva:*/ ನಾ. ಭತ್ತ ಕುಟ್ಟುವಾಗ ಉಚ್ಚರಿಸುವುದು. sounds produced while pounding paddy. ವಾ: ಬತ್ತ ಕುಟ್ಟಿಕನ ಅವ್ವ ಸುವ್ವಾತ ಯಾಕೆ ಹೇಳ್ದು?

ಸುವ್ವಿ /*suvvi*/ ನಾ. 1. ಸೋಬಾನೆ, 2. ಗರತಿಯ ಹಾಡು. songs sung by women on auspicious occassions. ವಾ: ಸುವ್ವಿ ಹಾಡಿಕೆ ಕಲಿಯಕು. ನಮ್ಮ ಆಚಾರ. ವಿಚಾರಗ ನಾವ್ಗೆ ಗೊತ್ತಿರೊಕೊಲೆ.

ಸುಸ್ತು /*sustu*/ ಕ್ರಿ. 1. ಆಯಾಸ, 2. ಬಚ್ಚಲು, 3. ಸೋಲು. 1. tired, 2. bathroom, 3. defeat. ವಾ: ಮೆಟ್ಟ್ ಹತ್ತಕನ ಬಾರಿ ಸುಸ್ತು.

ಸುಸ್ನೆ /*susnɛ*/ ಕ್ರಿ. ಸೃಷ್ಟಿಸು. to create. ವಾ: ಅಂವ ಅಲ್ಲಿ ಒಂದು ಪರಿಸ್ಥಿತಿ ಸುಸ್ನೆ ಮಾಡ್ತ್. ಪ: ಸುಸ್‌ತ್ನೆ

ಸುಳಿ ಎಲೆ /*suḷi elɛ*/ ನಾ. 1. ಸಸ್ಯಗಳ ಕುಡಿ, 2. ಎಳೆಯ ಚಿಗುರು. shoot of a plant. ವಾ: ಸುಳಿ ಎಲೆ ತಿನ್ನೊಕು, ನಾಲ್ಗೆ ದಪ್ಪ ಆಲೆ.

ಸುಳಿ[1] /*suḷi*/ ನಾ. 1. ನೀರಿನ ಸುಳಿ, 2. ಹೊಳೆಗಳಲ್ಲಿ ನೀರು ಸುತ್ತು ಸುತ್ತು ತಿರುಗುವುದು. a whirlpool, in rivers. **ಸುಳಿಗೆ ಸಿಕ್ಕಿದ ಮೇಲೆ ಚಳಿಗೆ ಹೆದ್ರಿಕೆ ಇಲ್ಲೆ(ಗಾ).** ವಾ: ಹೊಳೆಲಿ ಆಡಿಕನ ಸುಳಿಗೆ ಸಿಕ್ಕಿದ್.

ಸುಳಿ[2] /*suḷi*/ ಕ್ರಿ. 1. ಸುಳಿದಾಡು, 2. ಕಾಣಬರು. 1. to

hover, 2. to appear. ವಾ: ಅಂವ ಅಲ್ಲೆ ಸುಳಿದಾಡ್ತಾ ಇತ್ತ್, ಇಂವ ಇಲ್ಲೆಲ್ಲೊ ಸುಳಿದಾಡ್ತಿತ್.

ಸುಳಿ^{3} /*suḷi*/ ನಾ. ಎಳೆಯ ಚಿಗುರು. shoot of a plant. ವಾ: ದೈದ ಸುಳಿಗಳ ಹುಳಗ ತಿಂಬೊದು.

ಸುಳಿಗಾಳಿ /*suḷiga:ḷi*/ ನಾ. 1. ಮೆಲ್ಲನೆ ಬೀಸುವ ಗಾಳಿ, 2. ಮಂದವಾಗಿ ಬೀಸುವ ಗಾಳಿ. 1. breeze, 2. a cool wind. ವಾ: ಸುಳಿಗಾಳಿ ಬೀಸಿಕೆ ಸುರಾತ್.

ಸುಳಿರ್ ಅಲ್ಂಬು /*suḷiri alimbu*/ ನಾ. ಒಂದು ವಿಧದ ಅಣಬೆ. a variety of mushroom. ವಾ: ಸುಳಿರ್ ಅಲ್ಂಬು ತಿಂಬಕೆ ರುಚಿ. ಪ: ಸುಳೆರಿ ಅಳಂಬು, ಸುರ್ಳ್ ಅಲ್ಂಬು

ಸುಳಿವಾಂಗೆ /*suḷiva:ŋgɛ*/ ನಾ. 1. ಸುಳಿದಾಡು, 2. ಕಾಣಬರು. 1. to hover, 2. to appear. ವಾ: ಯಾರೊ ಕತ್ತಲೆಲಿ ಸುಳಿವಾಂಗೆ ಆತ್.

ಸುಳ್ಪು /*suḷpu*/ ಕ್ರಿ. 1. ಬುಸುಗುಡು, 2. ಸುಯ್ಂಪು. to hiss. ವಾ: ಮೆಣ್ಸ್ ಅಗ್ದ್ ಜೋರಿಲಿ ಸುಳ್ಪುದು.

ಸುಳ್ಪುದು /*suḷpudu*/ ನಾ. ಖಾರ ಆದಾಗ ಬಾಯಿಯ ಮೂಲಕ ವೇಗವಾಗಿ ಉಸಿರಾಡುವುದು. to breath through the mouth when one eats spicy food. ವಾ: ಯಾಕಿಂಗೆ ಸುಳ್ಪುದು ಕಾರ ಆತ, ನೀರ್ ಕುಡೆನಿ.

ಸುಳ್ಯ /*suḷya*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಒಂದು ತಾಲೂಕಿನ ಹೆಸರು, ಅಮರ ಮತ್ತು ಸುಳ್ಯ ಎಂಬ ಎರಡು ಸೀಮೆಗಳ ಹೆಸರು ರಾಜರಕಾಲದಲ್ಲಿ ಬಳಕೆಯಲ್ಲಿತ್ತು. Sullya, a taluk in Dakshina Kannada district. ವಾ: ಸುಳ್ಯ ದಕ್ಷಿಣ ಕನ್ನಡ ಜಿಲ್ಲೆನ ಒಂದ್ ತಾಲೂಕ್‌ನ ಹೆಸ್ರ್.

ಸುಳ್ಯಕೋಡಿ /*suḷyako:ḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಸುಳ್ಳ /*suḷḷa*/ ನಾ. 1. ಸುಳ್ಳು ಹೇಳುವವನು, 2. ಹುಸಿಕ. 1. a liar, 2. a falsifier. ವಾ: ಅಂವನ ಮಾತ್ ನಂಬಿಕಾದ್, ಬರಿ ಸುಳ್ಳ ಅಂವ.

ಸುಳ್ಳಾಕಿಲೆ /*suḷḷa:kilɛ*/ ನಾ. ಸುಳ್ಳಾಗದು. won't be a lie. ವಾ: ನಾ ಹೇಳ್ದ ಮಾತ್ ನೋಡಿಕ ಸುಳ್ಳಾಕಿಲೆ.

ಸುಳ್ಳಾಲೆ /*suḷḷa:lɛ*/ ನಾ. ಸುಳ್ಳಾಗುವುದಿಲ್ಲ. won't be a lie. ವಾ: ವೇದ ಸುಳ್ಳಾರೂ ಗಾದೆ ಸುಳ್ಳಾಲೆ.

ಸುಳ್ಳಿ /*suḷḷi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ನೆಲ್ಲೂರು ಕೆಮ್ರಾಜೆ ಗ್ರಾಮದ ಜಾಗ. a locality in Nelluru Kemraje village in Sullia Taluk of Dakshina Kannada District.

ಸುಳ್ಳು /*suḷḷu*/ ನಾ. 1. ಹುಸಿ, 2. ಅಸತ್ಯ. 1. a lie, 2. false, 3. untrue. ವಾ: ಸುಳ್ಳು ಹೇಳಿಕೆ ಬೊತ್ತ್.

ಸುಳ್ಳೊ /*suḷḷɔ*/ ನಾ. ಸುಳ್ಳು ಹೇಳುವ ರೀತಿ. a way of lying. ವಾ: ಅಂವ ಹೇಳೊ ಸುಳ್ಳೊ ಸತ್ಯದ ತಲೆ ಮೇಲೆ ಹೊಡ್ದಂಗಿದ್ದದೆ.

ಸೂಂಚೋಡಿ /*su:ɲco:ḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಸೂಂಟು /*su:ṇṭu*/ ಕ್ರಿ. ಹುರಿದಾಗ ಅಥವಾ ಬೇಯಿಸುವಾಗ ಸರಿಯಾಗಿ ಕರಡದಿದ್ದರೆ ತಳಭಾಗ ಅಡಿಹಿಡಿದು. food getting charred or burnt when not stirred properly. ವಾ: ಹಿಟ್ಟ್ ಸೂಂಟು ಗಮನ ಬಂದೆ.

ಸೂಂಟೆ /*su:ṇṭɛ*/ ನಾ. 1. ಸೂಟೆ, 2. ದೊಂದಿ. a torch made of coconut leaf or bamboo sticks. ವಾ: ಸೂಂಟೆ ಹೋಸಕಾಯ್ತ್.

ಸೂಂಟ್ರಿ /*su:ṇṭri*/ ಕ್ರಿ. ತಳಭಾಗ ಕರಟಿಹೋಗು. burnt/charred food. ವಾ: ಹಾಲ್ ಕೊದ್ದ್ ಸೂಂಟ್ರಿ ಹಿಡ್ದುಟು, ಕಡ್ಂಬಿಟ್ಟ್ ಉಕ್ಕ್‌ರ್‌ಸಿದ್ ಸೂಂಟ್ರು ಬರ್‌ತುಟ್ಟು.

ಸೂಂಡುದು /*su:ṇḍudu*/ ಕ್ರಿ. ಮಳೆಬಂದಾಗ ಕೊಡೆ ಅಥವಾ ಗೊರಬೆಯನ್ನು ತಲೆಯ ಮೇಲೆ ಹಿಡಿಯುವುದು. holding an umbrella or areca spathe over the head when it rains. ವಾ: ಮಳೆ ಬಾಕನ ಕೊಡೆನ ಸೂಂಡುದು.

ಸೂಂತೋಡು /*su:nto:ḍu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಉಬರಡ್ಕ ಮಿತ್ತೂರು ಗ್ರಾಮದ ಜಾಗ. a locality in Ubaradka Mitturu village in Sullia Taluk of Dakshina Kannada District.

ಸೂಂತ್ರಿ /*su:ntri*/ ನಾ. ಒಲೆ ಊದಿ ಬೆಂಕಿ ಉರಿಯುವಂತೆ ಮಾಡಲು ಬಳಸುವ ಬಿದಿರಿನ ಅಥವಾ ಲೋಹದ ಚಿಕ್ಕ ಕೊಳವೆ. a blow pipe.

ನಾಯಿ ಬೀಲಕ್ಕೆ ಸೂಂತ್ರಿ ಹಾಕಿದಂಗೆ(ಗಾ). ವಾ: ಸೂಂತ್ರಿಲಿ ಗಾಳಿ ಉರ್ಗಿ ಕಿಚ್ಚ್ ಉರ್ಸುದು.

ಸೂಂಪೆ /*su:mpɛ*/ ನಾ. 1. ದೂಪೆ, 2. ಸಮಾದಿ ಸ್ಥಳ. 1. a grave, 2. a grave yard. ವಾ: ಸತ್ತವರ ಸೂಂಪೆ ತಕಂಡೋದು.

ಸೂಕ್ಸ್ಮ /*su:ksɨma*/ ನಾ. 1. ಸೂಕ್ಷ್ಮ, 2. ತೀಕ್ಷ್ಣ 3. ಚತುರತೆ. 1. sensitive, 2. sharp, 3. cleverness. ವಾ: ಅಪ್ಪನ ಕೆಮಿ ಉಟ್ಟಲ ಬಾರಿ ಸೂಕ್ಷುಮ, ನೋಡಿ ಮಾತಾಡ್.

ಸೂಗುಟ್ಟು /*su:guṭṭu*/ ನಾ. ಗಟ್ಟಿಯಾಗಿ ಉಸಿರು ಬಿಡು. to pant. ವಾ: ನೀಯಾಕೆ ಹಿಂಗೆ ಓಡಿ ಬಂದ್ ಸೂಗುಟ್ಟುದು. ಪ: ಸೂಗುಟ್ಟುದು – ಗಟ್ಟಿಯಾಗಿ ಉಸಿರು ಬಿಡುವುದು

ಸೂಚನೆ /*su:canɛ*/ ನಾ. 1. ತಿಳಿಸುವಿಕೆ, 2. ನಿರ್ದೇಶಿಸುವಿಕೆ, 3. ಸುಳಿವು, 4. ಎಚ್ಚರಿಕೆ. 1. informing, 2. administering, 3. clue, 4. warning. ವಾ: ಮುಂದೆ ಎಂತದೊ ನಡ್ದದೆತ ಹೇಳ್ವ ಸೂಚನೆ ಇದ್.

ಸೂಜಿಮರ /*su:ji mara*/ ನಾ. ಸೂಜಿ ಪರ್ಣದ ಮರ. Suji (Pleomele angustifolia). ವಾ: ಅದ್ ಸೂಜಿ ಮರ.

ಸೂಟುಮಣ್ಣ್ /*su:ṭumaṇṇɨ*/ ನಾ. 1. ಸುಟ್ಟಮಣ್ಣು, 2. ಸುಡುಮಣ್ಣು, 3. ಬೇಸಿಗೆ ಕಾಲದಲ್ಲಿ ಮನೆ, ತೋಟದ ಸುತ್ತ ಇರುವ ಕಸ ಕಡ್ಡಿ ಧೂಳುಮಣ್ಣನ್ನು ರಾಶಿಹಾಕಿ ಸುಡುವುದು. 1. burnt soil, 2. burnt soil, 3. to burn dried plants, waste material along with soil in the summer. ವಾ: ಸೂಟುಮಣ್ಣ್‌ನ ತರ್‌ಕಾರಿ ದೈಕೆ ಹಾಕೊಕು. ಪ: ಸೂಟ್‌ಮಣ್ಣಣ್, ಸೂಂಟಾನ್(ತು); ಸೂಂಟ್‌ಮಣ್

ಸೂಟೆ[1] /*su:ṭɛ*/ ನಾ. ತೆಂಗಿನ ಗರಿ ಅಥವಾ ಬಿದಿರಿನ ಕಡ್ಡಿಗಳಿಂದ ಮಾಡಿದ ದೊಂದಿ. a torch made of coconut leaf or bamboo sticks. ವಾ: ಕೋಲ ನಡೆಕನ ಸೂಟೆ ಹಿಡ್ದವೆ.

ಸೂಟೆ[2] /*su:ṭɛ*/ ನಾ. 1. ಜೋರಿನ ಹೆಂಗಸನ್ನು ಅಪಹಾಸ್ಯ ಮಾಡುವ ಬೈಗಳ ಪದ, 2. ಕುದ್ರೆ. an expletive term used against a quarrelsome woman. ವಾ: ಆ ಗೂಡೆ ಹೆಂಗೆ ಸೂಟೆನಂಗೆ ಆಡ್ದೆ ನೋಡ್.

ಸೂಟೆ[3] /*su:ṭɛ*/ ನಾ. ಬಿದಿರನ್ನು ಉದ್ದಕ್ಕೆ ಕಟ್ಟಿದ ದೊಂದಿ, ಇದನ್ನು ಭೂತ ನಡೆವ ಹಿಂದಿನ ದಿನ ಭೂತ ಚಾವಡಿಯ ಎದರು ರಾತ್ರಿ ಬೆಳಗಾಗುವವರೆಗೆ ಉರಿಸುತ್ತಾರೆ, ಈ ಸೂಟೆಯನ್ನು ಕಾಪಾಡರು ಕಟ್ಟುವ ಜವಾಬ್ದಾರಿಯನ್ನು ವಹಿಸಿರುತ್ತಾರೆ. a torch made of bamboo, practice of keeping the torch burning for the entire night – during Bhuta Kola. People from Mugera community are usually in-charge of this. **ಕುರ್ಡಂಗೆ ಸೂಟೆ ಕೊಟ್ಟಂಗೆ(ಗಾ).** ವಾ: ಸೂಟೆನ ಹಿಡ್ಕ.

ಸೂಟೆಗದ್ದೆ /*su:ṭegadde*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮರ್ಕಂಜ ಗ್ರಾಮದ ಜಾಗ. a locality in Markanja village in Sullia Taluk of Dakshina Kannada District.

ಸೂಡಿ[1] /*su:ḍi*/ ಪವಾ. 1. ಒಂದುಕಟ್ಟು, 2. ಹಿಡಿಸೂಡಿ. 1. one bundle, 2. a broom. ವಾ: ಒಂದ್ ಸೂಡಿ ಎಲೆ ತಂಬ.

ಸೂಡಿ[2] /*su:ḍi*/ ನಾ. 1. ಕಟ್ಟು, 2. ಚಿಕ್ಕ ಕಂತೆ. 1. bundle, 2. a small bundle. ವಾ: ಎರ್‌ಡ್ ಎಲೆದ್ ಸೂಡಿಗೆ ಎಸ್ಟ್ ದುಡ್ಡು.

ಸೂಡಿ[3] /*su:ḍi*/ ಕ್ರಿ. 1. ತಲೆಕಟ್ಟ, 2. ಬೈಹುಲ್ಲಿನಕಟ್ಟ, 3. ಕೊಂಡೆ-ತುರುಬು ಕಟ್ಟಲು ಉಪಯೋಗಿಸುವ ಸಿಂಬೆಯಂತ ಸಾಧನ. 1. a ring made of grass/reed, 2. a bundle of grass, 3. a grass/reed ring. ವಾ: ಕೂದೊಲುನ ಸೂಡಿ ಕಟ್ಟಿದ್. ಪ: ಸೂಡಿಯಂವ

ಸೂಡ್ಲು /*su:ḍlu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಸೂತಕ /*su:taka*/ ನಾ. ಹುಟ್ಟು ಸಾವಿನ ದಿನಗಳಲ್ಲಿ ಆಚರಿಸುವ ಮೈಲಿಗೆ ದಿನಗಳು, ದೇವ ಕಾರ್ಯಗಳಿಗೆ ನಿಷಿದ್ಧವಾದ ದಿನಗಳು. the period of impurity-usually on the birth and the death of someone. ವಾ: ಗೂಡೆಗ ಹೊಲೆ ಕಾಂಬಕನ ಹದ್‌ನಾರ್ ದಿನ ಸೂತಕ ಇದ್ದದೆ.

ಸೂತ್ಗೆ /*su:tɨgɛ*/ ಕ್ರಿವಿ. 1. ಆಶುದ್ಧ, 2. ಸೂತಕ, 3. ಮುಟ್ಟು, 4. ದೋಷ. 1. impure, 2. defilement, 3. the period of menstruation, 4. impurity. ವಾ: ಹೆತ್ತರೆ, ಸತ್ತರೆ, ಹೊಲೆಕಂಡರೆ ಸೂತ್‌ಗೆ ಆದೆ.

ಸೂತ್ರಕಂಡಿ /*su:trakaṇḍi*/ ನಾ. ದೊಡ್ಡಮನೆಯ ಬಾಗಿಲ ಬಳಿ ಗಾಳಿ ಹೋಗಲು ಇರಿಸಿರುವ ರಂಧ್ರ, ವಾಸ್ತು ಕಿಟಕಿ. Vastu Window – a small window in the door. ವಾ: ಮನೆಲಿ ಬಾಗ್‌ಲ್ ಹಕ್ಕಲೆ ಗಾಳಿ ಹೋಕೆ ಸೂತ್ರಕಂಡಿ ಮಾಡಿಸುವೆ.

ಸೂದನ /*su:dana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಸೂದಾಡಮ್ಮನ /*su:da:ḍammana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಸೂದಾದಿ /*su:da:di*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಸೂನೆ /*su:nɛ*/ ನಾ. 1. ಟೀಕೆ, 2. ಹಿಂದಿನಿಂದ ನಿಂದಿಸು, 3. ಗುಣದೋಷ ವಿಮರ್ಶೆ, 4. ಜರೆ, 5. ದೂಷಿಸು. 1. criticism, 2. to denounce, 3. to censure, 4. to find fault with, 5. to complain. ವಾ: ಅವ್‌ಳ ಮೂಕ್ ಕೊಂಡೆ, ತಲೆ ದಪ್ಪತ ಯಾಕೆ ಸೂನೆ ಹೇಳ್ದು. **ಸೂನೆಹೇಳ್ದು** /*su:nɛ he:ḷdu*/ 1. ನಿಂದಿಸಿ ಮಾತನಾಡುವುದು, 2. ದೂರು ಹೇಳುವುದು. 1. to criticise, 2. to complain. ವಾ: ಎಂತ ಹಾಳ್ ಅಬ್ಬೆಸ, ಎಲ್ಲದಕು ನೀ ಸೂನೆ ಹೇಳ್ದು ಬುಡೊಕು.

ಸೂಯೆ /*su:yɛ*/ ನಾವಿ. ಪ್ರಶ್ನೆ. a question. ವಾ: ತಲೆಲಿ ನೂರಾರ್ ಸೂಯೆ ಎದ್ದದೆ.

ಸೂರ /*su:ra*/ ನಾವಿ. 1. ಧೈರ್ಯದ ವ್ಯಕ್ತಿ, 2. ಹೋರಾಟಗಾರ, 3. ಸಾಹಸಿ. 1. a courageous person, 2. a fighter, 3. brave person. ವಾ: ಅಂವನ ಸೂರತನನ ಹೊಗ್‌ಳ್ತಿದ್ದೊ.

ಸೂರಂಗಿ /*su:raŋgi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕಳಂಜ ಗ್ರಾಮದ ಜಾಗ. a locality in Kalanja village in Sullia Taluk of Dakshina Kannada District.

ಸೂರಡಿ /*su:raḍi*/ ನಾ. ಮಾಡಿನಿಂದ ಮಳೆ ನೀರು ಬೀಳುವ ಸ್ಥಳ. roof gutter. ವಾ: ಸೂರಡಿಲಿ ಕೊಡಪಾನನ ಇಸುಬಡಿ.

ಸೂರು /*su:ru*/ ನಾ. 1. ಮನೆಯ ಮಾಡು, 2. ಮನೆಯ ಮೇಲ್ಛಾವಣಿ. 1. roof of a house, 2. roof. ವಾ: ಮರ ಬಿದ್ದ್ ಸೂರ್ ಸೋರ್‌ದೆ.

ಸೂರ್ತಲೆ /*su:rtalɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಸೂರ್ತಿಲ /*su:rtila*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಸೂರ್ಯ /*su:rya*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಸೂರ್ಯ ಕಂತಿದ ಮ್ಯಾಕೆ /*su:rya kantida mya:kɛ*/ ನಾ. ಸೂರ್ಯಾಸ್ತದ ನಂತರ. after sunset. ವಾ: ಸೂರ್ಯ ಕಂತಿದ ಮ್ಯಾಲೆ ಮನೆಲಿ ದೀಪ ಇಸುದು, ಮತ್ತೆ ಗುಡ್ಡಿಕಾದ್.

ಸೂರ್ಯ ಮುಳ್ಳುದು /*su:rya muḷḷudu*/ ಕ್ರಿ. 1. ಸೂರ್ಯ ಅಸ್ತಮಿಸುವುದು, 2. ಸೂರ್ಯ ಕಂತುವುದು. 1. 2 sunset, 2. sunset. ವಾ: ಸೂರ್ಯ ಮುಳ್ಳುದು ನೋಡಿಕೆ ಲಾಯ್ಕ, ಆಕಾಸ ಕೆಂಪಾಗಿದ್ದದೆ.

ಸೂರ್ಯಕಾಂತಿ ಹೂವ್ /*su:ryaka:nti hu:vɨ*/ ನಾ. ಸೂರ್ಯಕಾಂತಿ ಹೂ. sunflower. ವಾ: ಸೂರ್ಯಕಾಂತಿ ಹೂವ್ ಯಾಗೊಳ್ ಸೂರ್‌ಯನ ಕಡೆಗೆ ತಿರ್‌ಗಿದ್ದದೆ, ನೋಡ್ಯೊಳನ ನೀ?

ಸೂರ್ಯಮೂಡ್ದು /*su:ryamu:ḍḍu*/ ಕ್ರಿ. ಸೂರ್ಯ ಉದಯಿಸುವುದು. sunrise. ವಾ: ಸೂರ್ಯಮೂಡ್ದು ನೋಡ್, ಎಸ್ಟ್ ಲಾಯ್ಕ ಉಟ್ಟುತ.

ಸೂಲ /*su:la*/ ನಾ. 1. ಶೂಲ, 2. ತ್ರಿಶೂಲ, 3. ಚೂಪಾದ ತುದಿಯುಳ್ಳ ಒಂದು ಬಗೆಯ ಆಯುಧ. 1. a spear, 2. a trident, 2. a sharp weapon. ವಾ: ಚಾಮುಂಡಿ ದೇವಿ, ಸಿವನ ಕೈಲುಟ್ಟಲ ಅದೆ ಸೂಲ.

ಸೂಲಗಿತ್ತಿ /*su:lagitti*/ ನಾ. 1. ಹೆರಿಗೆ ಮಾಡಿಸುವವಳು, 2. ನರ್ಸ್. 1. a midwife, 2. a nurse. ವಾ: ಹೆರ್‌ಗೆ ಮಾಡ್ಸವ್ಕೆ ಸೂಲಗಿತ್ತಿತ ಕರ್‌ದವೆ.

ಸೂಸಮ್ಮ /*su:samma*/ ನಾ. ಅರೆಭಾಷೆ ಜನಪದ ಕತೆಯಲ್ಲಿ ಬರುವ ಸ್ತ್ರೀ ಪಾತ್ರ, ಕೆಲವು ಕತೆಯಲ್ಲಿ ಸೇಸಮ್ಮ ಹೆಸರಿದೆ. a character in the folk stories of Are Bhase. ವಾ: ಸೂಸಮ್ಮಾ ಸೂಸಮ್ಮಾ ಬಾಗ್‌ಲ್ ತೆಗಿ ಸೂಸಮ್ಮಾ.

ಸೂಸಿದಂಗೆ /*su:sidaŋgɛ*/ ಕ್ರಿವಿ. ಚೆಲ್ಲಿದ ಹಾಗೆ. as if something is spread. ವಾ: ಹಸ್ರ್ ದೈದ ಮೇಲೆ ಮೊಸ್ರ್ ಸೂಸಿದಂಗೆ ಮಲ್ಲಿಗೆ ಹೂ ಕಾಂಬೊದಲ.

ಸೂಸು /*su:su*/ ಕ್ರಿ. 1. ಚೆಲ್ಲು, 2. ಎರಚು, 3. ತೂಸು. 1. to spill, 2. to throw, 2. spill. ವಾ: ದೃಷ್ಟಿ ತೆಗ್ದ ಅರ್‌ಸಣ ನೀರ್‌ನ ಮೂರ್ ದಾರಿ ಕೂಡುವಲ್ಲಿ ಸೂಸು. ಪ: ಸೂಸಿ – ಚೆಲ್ಲಿ

ಸೂಸು/ಸುಸುಮಾಡ್ದು /*su:su/susuma:ḍdu*/ ನಾ. ಮಭಾ. ಮೂತ್ರ ಮಾಡುವುದು. urinate (in the vocabulary of children). ವಾ: ಪಪ್ಪ ಸೂಸು ಬಂದೆ.

ಸೂಸುದು /*su:sudu*/ ಕ್ರಿ. ಊಟದ ತಟ್ಟೆಯಲ್ಲಿರುವ ಎಂಜಲು ನೀರು ಚೆಲ್ಲುವುದು. used water in the plate. ವಾ: ಬಟ್ಲ್‌ಲಿರೊ ನೀರ್‌ನ ಸೂಸುದು.

ಸೂಸ್ಲಿಟ್ಟು /*su:sliṭṭu*/ ನಾ. ಹುರಿದ ಎಳ್ಳು, ಬೆಲ್ಲ ಕುಟ್ಟಿ ಮಿಶ್ರಣ ಮಾಡಿ, ಅಕ್ಕಿಯ ತರಿಯನ್ನು ನೀರಿನಲ್ಲಿ ಬೇಯಿಸಿ, ಬೆಂದ ಹಿಟ್ಟನ್ನು ಅರಿಶಿನದ ಎಲೆಯ ಮೇಲೆ ಹಾಕಿ ಅಗಲವಾಗಿ ತಟ್ಟಿ ಅದರೊಳಗೆ ಎಳ್ಳು ಬೆಲ್ಲದ ಮಿಶ್ರಣ ಹಾಕಿ ಹಬೆಯಲ್ಲಿ ಬೇಯಿಸುವ ತಿನಿಸು. a steam baked sweet dish made up of roasted sesame, rice flour, jaggery, etc. ವಾ: ಚೌತಿಗೆ ಸೂಸ್ಲಿಟ್ಟು ಮಾಡಿವೆ. ಪ: ಸೂಸ್ಲಿಟ್

ಸೂಸ್ಲೆ /*su:slɛ*/ ನಾ. ಒಂದು ಬಗೆಯ ಮೀನು. a variety of fish. ವಾ: ಸೂಸ್ಲೆ ಮೀನ್‌ತ ಅದರ ಹೆಸ್ರ್.

ಸೂಸ್ಲ್ ಎಲೆ /*su:slɨhiṭṭi*/ ನಾ. ಅರಸಿನ ಎಲೆ. turmeric leaf. ಪ: ಮಂಜಲ್ ಇರೆ.

ಸೂಸ್ಲ್‌ಹಿಟ್ಟ್ /*su:slɨhiṭṭi*/ ನಾ. 1. ಸೂಸಲು ಕಡಬು, 2. ಎಳ್ಳು ಬೆಲ್ಲ ಹಾಕಿ ಅರಶಿನದ ಎಲೆಯಲ್ಲಿ ಮಾಡುವ ತಿನಿಸು, ಇದು ಚೌತಿಗೆ ಮಾಡುತ್ತಾರೆ, ಗಣಪತಿಗೆ ಬಹಳ ಪ್ರಿಯವಾದುದು. a rice cake made of seasame, jaggery wrapped in turmeric leaf. ವಾ: ಸೂಸ್ಲ್ ಹಿಟ್ಟ್‌ನ ಚೌತಿಗೆ ಗಣ್ಪತಿಗೆ ನೇವೆದ್ಯಕೆ ಇಸಿವೆ.

ಸೂಳೆ /*su:ḷɛ*/ ನಾ. ವೇಶ್ಯೆ. a prostitute. **ಅಡಿಗೆ ಬಿದ್ದ ಸೂಳೆದ್ ಮೂಕು ಮೇಲೆ(ಗಾ).** ವಾ: ಅವ್ಳು ಸೂಳೆತ ಎಲ್ಲೊವು ಹೇಳಿವೆ.

ಸೂಳೆಪಿಜಿನ್ /*su:ḷɛpijinɨ*/ ನಾ. ಸುಮ್ಮನೆ ಹರಿದಾಡುವ ಇರುವೆಗಳು. variety of ants. ವಾ: ಸೂಳೆ ಪಿಜಿನ್‌ಗ ಹೋದಲೆಲ್ಲ ಇದ್ದವೆ. ಪ: ಮೊರ್ಲ್ ಪಿಜಿನ್

ಸೂಳೆಮಜ್ಞ /*su:ḷɛmaɲɲa*/ ನಾ. ಸೂಳೆಮಗನೆಂಬ ಬೈಗಳ ಪದ. a son of a prostitute (an expletive). ವಾ: ನಂಗೆ ಸೂಳೆ ಮಜ್ಞತ ಬೈದೊ.

ಸೂಳೆತನ /*su:ḷɛtana*/ ನಾ. ಗಂಭೀರತೆಯಿಲ್ಲದಿದ್ದರೆ ಬೈಯ್ಯುವ ಪದ. an expletive term. ವಾ: ಆ ಗೂಡೆ ಸೂಳೆತನಲಿ ಸತ್ತದೆ.

ಸೂಳೆಹಕ್ಕಿ /*su:ḷɛhakki*/ ನಾ. ಕಾಡಿನ ಹಕ್ಕಿ. a wild bird. ವಾ: ಸೂಳೆಹಕ್ಕಿ ಕಾಡ್‌ಲಿ ಇದ್ದದೆ.

ಸೆಂಡ್[1] /*seṇḍɨ*/ ನಾ. 1. ಬೆವರಿದ ಮೈ ಅಥವಾ ಹುಳಿ ವಾಸನೆ, 2. ಕಸೆಂಟ್. body odor. ವಾ: ಸೆಂಡ್‌ಂದಾಗಿ ಅಂವನ ಹತ್ರ ನಿಲ್ಲಿಕೆ ಬೊತ್ತ್. ಪ: ಸಿಂಡ್

ಸೆಂಡ್[2] /*seṇḍɨ*/ ನಾ. 1. ಸೆಂಡಿ, 2. ಜುಟ್ಟು. a tuft or crest of hair. ವಾ: ಮಳೆಲಿ ನೆಂದ್ ಪೂರಾ ಸೆಂಡ್ ಆತ್.

ಸೆಕೆ /*sekɛ*/ ನಾ. ಅತೀ ಹೆಚ್ಚಿನ ಉಷ್ಣದ ವಾತಾವರಣ. heat. ವಾ: ಸೆಕೆ ತಡೆಕೆ ಬೊತ್ತ್.

ಸೆಕೆಪಿಜಿನ್ /*sekɛpijinɨ*/ ನಾ. ತೇವಾಂಶ ಇದ್ದಕಡೆ ಕಂಡು ಬರುವ ಇರುವೆ. ants which are attracted to moisture. ವಾ: ಪಸೆ ಇರೋವಲ್ಲಿ ಸೆಕೆ ಪಿಜಿನ್‌ಗ ಬಂದವೆ.

ಸೆಕೆಂಡ್ ಪಾರಂ /*sekɛṇḍɨ pa:raṁ*/ ನಾ. ಆರನೇ ತರಗತಿ. the sixth standard. ವಾ: ಸೆಕೆಂಡ್ ಪಾರಂಲಿ ಓದಿಕಾಕನ ನಮಿಗೆ ಒಳ್ಳೊಳ್ಳ ಪಾಟ ಮಾಡ್ತಿದ್ದ ಮಾಸ್ಟ್ರ ಗ ಇದ್ದೊ.

ಸೆಕ್ಕ್ /*sekkɨ*/ ಕ್ರಿ. 1. ಸಿಕ್ಕಿಹಾಕಿಕೊ, 2. ಸಿಲುಕು. 1. to get caught, 2. to get stuck. ವಾ: ಬೇಲಿ ದಾಟಿಕನ ಮುಳ್ಳಿಗೆ ಅರ್ವೆ ಸೆಕ್ಕ್ ಕಣ್ತ್. ಪ: ಸೆಕ್ಸು – ಸಿಕ್ಕಿಸು. **ಸೆಕ್ಕಿ** /*sekki*/ 1. ಸಿಕ್ಕಿಕೊಳ್ಳು, 2. ತಾಕು. 1. to get stuck, 2. to touch. ವಾ: ಮೀನ್‌ದ್ ಮುಳ್ಳ್ ದೊಂಡೆಲಿ ಸೆಕ್ಕಿರೆ ಅನ್ನದ ಉಂಡೆ ಮಾಡಿ ನುಂಗೊಕು. **ಸೆಕ್ಕಿಕಂಡುಟು** /*sekkikanḍuṭu*/ ಸಿಕ್ಕಿಹಾಕಿಕೊಂಡಿದೆ. got stuck. ವಾ: ನಾಯಿಗೆ ದೊಂಡೆಲಿ ಮೂಳೆ ಸೆಕ್ಕಿಕಂಡುಟು. **ಸೆಕ್ಕಿಕಂಬದ್** /*sekkikambadɨ*/ ಸಿಕ್ಕಿಸಿಕೊಳ್ಳುವುದು. getting stuck. ವಾ: ಸೀರೆ ಸೆರ್‌ಗ್‌ದ್ ತುದಿನ ಸೊಂಟಕೆ ಸೆಕ್ಕಿಕಂಬದ್. **ಸೆಕ್ಕಿಕೊಂಡ್** /*sɛkkikoṇḍɨ*/ ಸಿಕ್ಕಿಸಿಕೊಂಡು. got stuck. ವಾ: ಪಂಚೆನ ಎತ್ತಿ ಸೆಕ್ಕಿಕೊಂಡ್ ಹೋದೊ. **ಸೆಕ್ಕಿಸಿಡ್ದು** /*sekkisiḍdu*/ 1. ಸಿಕ್ಕಿಸಿಡುವುದು, 2. ತೊಡರಿಸು. 1. to get caught,

2. to stumble. ವಾ: ಸುರಾಲ್‌ನ ಆಣಿಗೆ ಸೆಕ್ಕಿಸಿಡ್‌ದು. **ಸೆಕ್ಕು** /*sɛkku*/ 1. ಸಿಕ್ಕಿಸು, 2. ಸಿಗುವಂತೆ ಮಾಡು. 1. to hang, 2. to make something available. ವಾ: ಕೈಗೆ ಸಿಕ್ಕುವಂಗೆ ಬ್ಯಾಗ್‌ನ ಆಣಿಗೆ ಸೆಕ್ಕು. **ಸೆಕ್ಕೆಂಟು/ ಸೆಕ್ಕೆಂಡುಟು** /*sɛkkɛṇṭu/sɛkkɛṇḍuṭu*/ 1. ಮೈ ತುಂಬ ಒಡವೆ ಹಾಕಿ ಅಲಂಕಾರ ಮಾಡಿಕೊಂಡಾಗ ಈ ಮಾತನ್ನು ಹೇಳಲಾಗುತ್ತದೆ, 2. ಸಿಕ್ಕಿಸಿಕೊಂಡಿದ್ದಾಳೆ, 3. ಕೋಸಿಕಂಡುಟು. 1. refers to someone who is wearing excessive jewellery, 2. has put on, worn, etc. ವಾ: ಇರೊಬರೊ ಚಿನ್ನನೆಲ್ಲ ಸೆಕ್ಕೆಂಡುಟು. **ಸೆಕ್ಕೆಂತ್** /*sɛkkɛnti*/ 1. ಸಿಕ್ಕಿಕೊಂಡಿತು, 2. ಸುತ್ತಿಕೊಳ್ಳು, 3. ಕೋಸಿಕನ್ತ್. 1. to get caught by, 2. got coiled. ವಾ: ನಾಯಿನ ಕಾಲಿಗೆ ಬೊಳ್ಳಿ ಸೆಕ್ಕೆಂತ್. **ಸೆಕ್ಕೆಂದೆ** /*sɛkkɛndɛ*/ 1. ಕೊಕ್ಕೆ ಕಟ್ಟುತ್ತದೆ, 2. ಕೋಸಿದೆ. the feeling of numbness in any part of the body. ವಾ: ಕ್ವಾಟಕೆ ಕಾಲ್ ಸೆಕ್ಕೆಂದೆ. **ಸೆಕ್ಕೆಂಬೊದು** /*sɛkkɔmbodu*/ ನೇತಾಡಿಕೊಳ್ಳುವುದು. 1. hanging onto something, 2. a hook. ವಾ: ಕುರೆಗ ಮರದ ಗೆಲ್ಲ್‌ಲಿ ಸೆಕ್ಕೆಂಬೊದು. ಪ: ನೇಲ್ದು, ಕೋಸಿಕಂಬುದು. **ಸೆಕ್ಸಿಟು** /*seksiṭu*/ ಸಿಕ್ಕಿಕೊಂಡಿದೆ. stuck/caught. ವಾ: ಉದ್ದ ಜೆಡೆಗೆ ಮೊಣಿಗಳ ಸೆಕ್ಸಿಟು.

ಸೆಗಣಿಗೊಬ್ಬರ /*segaṇigobbara*/ ನಾ. ಸಗಣಿ ಗೊಬ್ಬರ. compost/manure. ವಾ: ಸೆಗಣಿ ಗೊಬ್ಬರನೆ ದೈಕೆ ಹಾಕೊಕು.

ಸೆಗಣಿಮುದ್ದ /*segaṇimudda*/ ನಾ. ಕಾಡು ಹಕ್ಕಿ. a wild bird. ವಾ: ಸೆಗಣಿ ಮುದ್ದ ಮರಲಿ ಕುದ್ದುಟು.

ಸೆಗಣಿಕೆರ್ದು /*sɛgaṇikɛrdu*/ ಕ್ರಿ. 1. ಸೆಗಣಿ ಸಾರಿಸುವುದು, 2. ಮಣ್ಣಿನ ನೆಲಕ್ಕೆ ಸೆಗಣಿ ಕೆರೆಯುವುದು. 1. to smear cow dung on the floor, 2. to apply cow dung on the floor. ವಾ: ಹಿಂದೆಲ್ಲ ಮನೆದ್ ನೆಲಗಳಿಗೆ ಸೆಗಣಿಕೆರ್ದು ಮಾಡ್‌ತ್ತಿದ್ದೊ.

ಸೆಗ್‌ಣಿ /*segiṇi*/ ನಾ. ದನದ ಸಗಣಿ. cow dung. **ಸೆಗ್‌ಣಿಲಿ ಹುಳ ಹುಡ್ಕಿದಂಗೆ(ಗಾ).** ವಾ: ಕೊಟಗೆಲಿರೊ ಸೆಗ್‌ಣಿನ ಚಿಪ್ಪಿ ತಕಂಡ್ ಬಾಚುದು. ಪ: ಸೆಗ್ಣಿ – ಸಗಣಿ

ಸೆಗ್ಣಿಕೇರ /*segṇika:ra*/ ನಾ. ಸೆಗಣಿಯಿಂದ ಹುಳು ಹುಪ್ಪಟೆ ಹೆಕ್ಕಿ ತಿನ್ನುವ ಒಂದು ಜಾತಿಯ ಕಾಡು ಹಕ್ಕಿ. a bird that picks worms from cowdung. ವಾ: ಸೆಗ್ಣಿಕೇರ ಹಕ್ಕಿ ನೆಲಲಿ ಕೇರಿಕಂಡ್ ಇತ್ತ್. ಪ: ಸೆಗಣಿಕಾರ, ಸೆಗಣಿಕೇರ

ಸೆಟ್ಟಿ /*seṭṭi*/ ನಾ. 1. ಶೆಟ್ಟಿ, 2. ವ್ಯಾಪಾರಿ, 3. ವರ್ತಕ. 1. a businessman, 2. a trader, 3. a merchant. **ಸೆಟ್ಟಿ ಸಾಲ ಸತ್ತ ಮೇಲೆ ಗೊತ್ತು(ಗಾ).** ವಾ: ಸೆಟ್ಟಿಗಳ ಹಕ್ಕಲೆ ಲಕ್ಷ್ಮಿ ಕಾಲ್ ಮುರ್‌ಕಂಡ್ ಬಿದ್ದಿದ್ದದೆತ ಹೇಳಿವೆ.

ಸೆಟ್ಟಿಜನ /*seṭṭijana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಸೆಟ್ಟಿಬೊಳಿ /*seṭṭibɔḷi*/ ನಾ. ಗೌಡರ 18 ಗೋತ್ರದ ಗೋತ್ರದ ಒಂದು ಬಳಿಯ ಹೆಸರು. 1. a lineage, 2. a clan. ವಾ: ಗೌಡ ಜೆನಾಂಗದ ಬೊಳಿದ್ ಹೆಸ್‌ರ್.

ಸೆಟ್ಟಿಮಜಲು /*seṭṭimajalu*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮಡಪ್ಪಾಡಿ ಗ್ರಾಮದ ಜಾಗ. 1. family, 2. lineage, 3. a locality in Madappadi village in Sullia Taluk of Dakshina Kannada District.

ಸೆಟ್ಟಿಮೂಲೆ /*seṭṭimu:le*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಪಂಬೆತ್ತಾಡಿ ಗ್ರಾಮದ ಜಾಗ. a locality in Pambettadi village in Sullia Taluk of Dakshina Kannada District.

ಸೆಟ್ಟೆಜನ /*seṭṭejana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಸೆಟ್ಟ್‌ಗ /*seṭṭga*/ ನಾ. 1. ಸಟ್ಟುಗ, 2. ಸೌಟು, 3. ರೊಟ್ಟಿ, ದೋಸೆಯನ್ನು ಮಗುಚಲು ಉಪಯೋಗಿಸುವ ವಸ್ತು. a ladle/a spatula. **ಸೆಟ್ಟಗ ಇರ್‌ಕನ ಕೈ ಯಾಕೆ ಸುಟ್ಟ್ ಕಂಬೂದು(ಗಾ).** ವಾ: ದೋಸೆ ಎಳ್ಕ್‌ಸಿಕೆ ಸೆಟ್ಟ್‌ಗ ಇಲ್ಲರೆ ಆಕಿಲೆ. **ಸೆಟ್ಟುಕ** /*seṭṭuka*/ ನಾ. ಸೆಟ್ಟ್‌ಗ/ಸೆಟ್ಟುಗ ವಾ: ಸೆಟ್‌ಗದ ತುದಿ ಅಗಲ ಬೇಕ್.

ಸೆಟ್ಟ್‌ಗ ಮರ /*seṭṭiga mara*/ ನಾ. ಬೆಂಕಿ ಕಡ್ಡಿ ತಯಾರಿಕಾ ಮೃದು ಜಾತಿ ಮರ. aspen tree. ವಾ: ಸೆಟ್ಟ್ ಗ ಮರಲಿ ಬೆಂಕಿ ಕಡ್ಡಿ ಮಾಡಿವೆ.

ಸೆಟ್ಯಡ್ಕ /*seṭyaḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ತೊಡಿಕಾನ ಗ್ರಾಮದ ಜಾಗ. a locality in Todikana village in Sullia Taluk of Dakshina Kannada District.

ಸೆಡೆ^{1} /*seḍɛ*/ ನಾ. 1. ಸೌಟು, 2. ಅನ್ನ ಬಡಿಸುವ ಚಮಚ.

1. a ladle, 2. rice serving Spoons. ವಾ: ಗೈಪುನ ಸೆಡೆಲಿ ಗೈಪು ಇಕ್ಕ್.

ಸೆಡೆ^{2} /*seḍɛ*/ ನಾ. ಗರಟೆಯಿಂದ ಮಾಡಿದ ಸಟ್ಟುಗ. 1. a ladle, 2. a ladle made of coconut shell. ವಾ: ಚೆಟ್ಟಿಂದ ಸೆಡೆಲಿ ಆಂಬರನ ಗೋಂಚಿ ಗಂಜಿಕೆ ಹಾಕಿಸಿ. ಪ: ಅನ್ನದ ಸೆಡೆ ದೊಡ್ಡದ್ ಬೇಕಿತ್ತ್

ಸೆಡೆಕಣೆ /*seḍɛkaṇɛ*/ ನಾ. ಸಟ್ಟುಗದ ಹಿಡಿಕೆ. handle of a ladle or spatula. ವಾ: ಸೆಡೆಕಣೆ ಉದ್ದ ಬೇಕ್.

ಸೆಡೆಕಾವು /*seḍɛka:vu*/ ನಾ. ಬಿದಿರಿನಿಂದ ಮಾಡಿರುವ ಸೌಟಿನ ಹಿಡಿಕೆ. handle of a ladle (of coconut shell). ವಾ: ಹಿಂದೆನ ಕಾಲಲಿ ಮಕ್ಕಳಿಗೆ ಸೆಡೆಕಾವುನ ಬಾಯ್ಗೆ ಹಾಕಿ ಮದ್ದ್ ಹೊಯ್ತಿದ್ದೊ.

ಸೆಡ್ಲ /*seḍla*/ ಕ್ರಿವಿ. 1. ಸಡಿಲ, 2. ಲೂಸು. loose. ವಾ: ಆ ಕಟ್ಟನ ಹಗ್ಗ ಸೆಡ್ಲ ಮಾಡಿಕಣಿ.

ಸೆನಿ^{1} /*sɛni*/ ನಾ. 1. ಸೂರ್ಯನ ಮಗ, 2. ಶಿವನ ಹೆಸರುಗಳಲ್ಲಿ ಒಂದು, 3. ಶನಿವಾರ, 4. ಹಾವು, 5. ನವಗ್ರಹಗಳಲ್ಲಿ ಒಂದು, 6. ಶನಿ. 1. son of the Sun, 2. one of the names of Shiva, 3. Saturday, 4. a snake, 5. one of the nine planets, 6. Shani. **ಅನಿಷ್ಟಕ್ಕೆಲ್ಲಾ ಸೆನಿದೇವುರುನೇ ಮೂಲ ತೇಳ್ದಂಗೆ(ಗಾ).** ವಾ: ಪುರಾಣ ಕತೆಲಿ ಸೆನಿ ದೇವ್ರ ಅಪ್ಪ ಸೂರ್ಯ, ಅವ್ವ ಚಾಯಾದೇವಿ, ಆಂಜನೆಯ ದೇವ್ರು, ಸೆನಿ ದೇವ್ರು ಬಾರಿ ದೋಸ್ತಿಗ, ಹಂಗಾಗಿ ಸೆನಿದೆಸೆಲಿ ಆಂಜನೆಯಂಗೆ ಪೂಜೆ ಮಾಡಿರೆ ಸೆನಿ ದೇವ್ರಿಗೆ ಕುಸಿಯಾದೆತ, ಒಳ್ಳೆದ್ ಮಾಡ್ದೆತ ನಂಬಿಕೆ ಉಟ್ಟು.

ಸೆನಿ^{2} /*sɛni*/ ನಾ. ಶನಿ ಹಿಡಿದವನೆಂಬ ಬೈಗುಳ ಪದ. an expletive term. ವಾ: ನಿಂಗೆ ಸೆನಿ ಹಿಡ್ಡುಟ?

ಸೆನಿಹಕ್ಕಿ /*sɛnihakki*/ ನಾ. ಶಕುನದಹಕ್ಕಿ. a variety of bird. ವಾ: ಸೆನಿಹಕ್ಕಿ ಕೂಂಗಿರೆ ಅಪಸಕುನತ ನಂಬಿಕೆ ಉಟ್ಟು.

ಸೆಪ್ಪ /*sɛppa*/ ನಾ. ಜನನಾಂಗದ ಸುತ್ತಲೂ ಬರುವ ಕೂದಲು. pubic hair, hair around the genital area. **ಸೆಪ್ಪ ಹರಿಯೊದು, ಸೇಟ ತರಿಯೊದು(ಗಾ).** ವಾ: ನೀ ನನ್ನ ಸೆಪ್ಪಕ್ಕೆ ಸಮ.

ಸೆಯಿಸಿಕ /*sɛyisika*/ ಕ್ರಿ. 1. ಸಹಿಸಿಕೊಳ್ಳು, 2. ಸೈರಿಸು, 3. ತಾಳು. 1. to tolerate, 2. to put up with, 3. to endure. ವಾ: ಆಸ್ಪತ್ರೆಗೆ ಹೊಕೆ ಮುಟ್ಟ ಬೇನೆ ಸೆಯಿಸಿಕ.

ಸೆರಂಗ್ /*seraŋgɨ*/ ನಾ. 1. ಸೀರೆಯ ಸೆರಗು, 2. ಸೀರೆಯಲ್ಲಿ ಹೊದೆಯುವ ಭಾಗ. 1. end of saree, 2. border of a saree. ವಾ: ಸೆರಂಗ್‌ನ ಸೊಂಟಕೆ ಸೆಕ್ಕಿಸಿಕ.

ಸೆರಗಣ /*seragaṇa*/ ನಾ. 1. ಮದುವೆಯ ಸಮಯದಲ್ಲಿ ಬಟ್ಟೆಯಲ್ಲಿ ಕಟ್ಟುವ ಹಣ, 2. ಮದುಮಕ್ಕಳು ಮನೆಯ ಮೆಟ್ಟಿಲು ದಾಟಿ ಮೇಲ್ಕಟ್ಟಡಿಗೆ ಬಂದಾಗ ಸೋದರ ಮಾವ ಮುಸುಕಿನ ವಸ್ತ್ರದ ಒಂದು ತುದಿಗೆ ಒಂದು ಬೆಳ್ಳಿಯ ರೂಪಾಯಿಯನ್ನು ಸೆರಗಿನ ಹಣವಾಗಿ ಕಟ್ಟುವುದು. custom of maternal uncle tying a silver coin to the border of the clothing worn by the groom and the bride. ವಾ: ಗೂಡೆಗೆ ಸೆರಗಣ ಕಟ್ಟುತೊಳ.

ಸೆರಗಿನ ಹಣಕಟ್ಟುದು /*seragina haṇa kaṭṭudu*/ ನಾ. ಮದುಮಕ್ಕಳು ಮನೆಯ ಮೆಟ್ಟಿಲು ದಾಟಿ ಮೇಲ್ಕಟ್ಟಡಿಗೆ ಬಂದಾಗ ಸೋದರ ಮಾವ ಮುಸುಕಿನ ವಸ್ತ್ರದ ಒಂದು ತುದಿಗೆ ಒಂದು ಬೆಳ್ಳಿಯ ರೂಪಾಯಿಯನ್ನು ಸೆರಗಿನ ಹಣವಾಗಿ ಕಟ್ಟುವುದು. custom of maternal uncle tying a silver coin to the border of the clothing worn by the groom and the bride. ವಾ: ಗೂಡೆಗೆ ಸೋದರ ಮಾಂವ ಸೆರಗಿನ ಹಣ ಕಟ್ಟುದು.

ಸೆರಿ /*sɛri*/ ನಾ. 1. ಸರಿಯಾದ, 2. ತಪ್ಪಲ್ಲದ. 1. correct, 2. accurate. ವಾ: ಲೆಕ್ಕನ ಸೆರಿ ಮಾಡ್, ಗೊಜಲೆ ಗೊಜಲೆ ಮಾತಾಡ್ಬಡ. ಸೆರಿ ಮಾತಾಡ್. ಪ: ಸೆರಿಯಾಕನೆ – ಸರಿಯಾಗುವಾಗಲೇ. **ಸೆರಿಯಾಕನ** /*seriya:kana*/ ಸರಿಯಾಗುವಾಗ. the process of correction. ವಾ: ಎಲ್ಲ ಸೆರಿಯಾಕನೆ ಕರೆಂಟ್ ಹೋಕ.

ಸೆರಿಗಟ್ಟ್ /*serigaṭṭi*/ ನಾ. 1. ನೇರ ನೇರ, 2. ಮುಖ ಕೊಟ್ಟು. 1. straight forward, 2. showing interest. ವಾ: ಸೆರಿಗಟ್ಟ್ ಮಾತಾಡ್.

ಸೆರಿಗೆ /*serigɛ*/ ನಾ. ನೂಲಿನಂತಿರುವ ತಂತಿ. a thin wire. ವಾ: ವಯರ್‌ದ್ ಒಳಗೆ ಸಣ್ಣ ಸೆರಿಗೆಗ ಇದ್ದದೆ.

ಸೆರಿಯಲ್ಲ /*seriyalla*/ ನಾ. ಸರಿಯಲ್ಲ. incorrect. ವಾ: ಹಿಂಗೆಲ್ಲ ಬೈಯ್ಯದು ಸೆರಿಯಲ್ಲ.

ಸೆರೆಸಿಕ್ಕಿವೆ /*serɛsikkivɛ*/ ಕ್ರಿ. 1. ಸೆರೆ ಸಿಕ್ಕು, 2. ಸಿಕ್ಕಿಹಾಕಿಕೊಳ್ಳು. 1. to get arrested, 2. to get stuck. ವಾ: ಕದ್ದಂವ ಒಂದಲ್ಲ ಒಂದಿನ ಸೆರೆ ಸಿಕ್ಕ್‌ವೆ.

ಸೆರೆಹತ್ತ್ /*serɛ hatti*/ ನಾ. 1. ಊಟ ಮಾಡುವಾಗ ಆಹಾರದ ತುಣುಕು ಶ್ವಾಸನಾಳಗಳಿಗೆ ಪ್ರವೇಶಿಸುವುದು, 2. ಸೆರೆಹತ್ತುವುದು. sensation of choking when food goes into the windpipe. ವಾ: ಮೆಲ್ಲ ತಿನ್ನ್ ಸೆರೆ ಹತ್ತ್‌ದು. ಪ: ಸೆರೆಹತ್ತಿತ್

ಸೆರೆ[1] /*serɛ*/ ನಾ. 1. ಸ್ವಲ್ಪಜಾಗ ಇರುವ, 2. ಇಕ್ಕಟ್ಟಾದ. 1. narrow space, 2. constrict. ವಾ: ಆ ಸೆರೆಲಿ ಹಾವು ವಳೆಗೆ ಬಾತ್.

ಸೆರೆ[2] /*serɛ*/ ನಾ. 1. ಅಡ್ಡಹಿಡಿಯುವುದು, 2. ಮರೆ ಮಾಡುವುದು. 1. to block, 2. to obstruct. ವಾ: ಮೊದ್ವೆಲಿ ದಾರೆ ಸಮೆಲಿ ಅರ್ವೆನ ಸೆರೆ ಹಿಡ್ದವೆ.

ಸೆರೆ[3] /*serɛ*/ ನಾ. 1. ಬಂಧನ, 2. ಬಂದಿ, 3. ಹಿಡಿದಿಡು. 1. arrest, 2. captured, 3. to hold someone captive. ವಾ: ಹುಲಿನ ಸೆರೆ ಹಿಡ್ಡೊ.

ಸೆರೆಗಾರ /*serega:ra*/ ನಾ. ಜಾತಿವಾಚಕ ಪದ, ಚೇರೆಗಾರ. Seregara, a caste. ವಾ: ಅಲ್ಲಿ ಕಾಂಬೊದು ಸೆರೆಗರ್ರ ಮನೆ. ಪ: ಸೇರೆಗಾರ

ಸೆರೆಹವುದು /*serehavudu*/ ನಾ. 1. ಊಟ ಮಾಡುವಾಗ ಆಹಾರದ ತುಣುಕು ಶ್ವಾಸನಾಳಗಳಿಗೆ ಪ್ರವೇಶಿಸುವುದು, 2. ಸೆರೆಹತ್ತುವುದು. sensation of choking when food goes into the windpipe. ವಾ: ನೀರ್ ಕುಡೆಕನ ಸೆರೆಹವುದು. ಪ: ಸೇರೆ ಹೋವುದು

ಸೆರೆಹಿಡಿದು /*serehiḍidu*/ ಕ್ರಿ. ಅಮಲೇರುವುದು. to get intoxicated. ವಾ: ಕುಡ್ದರೆ ತಲೆಗೆ ಸೆರೆಹಿಡಿದು.

ಸೆರೇಲಿ /*sere:li*/ ನಾ. ಬೈಗುಳದ ಮಾತು. an expletive term.

ಸೆರ್‌ಂಗ್ /*Seriŋgi*/ ನಾ. 1. ಸೀರೆ ಸೆರಗು, 2. ಸೀರೆಯ ಕೊನೆಯ ಭಾಗ. 1. end of a saree, 2. border of a saree. ವಾ: ಸೀರೆ ಉಡಿಕನ ಸೆರ್‌ಂಗ್ ಉದ್ದ ಬುಡೊಕು.

ಸೆರ್ಕ /*serka*/ ನಾ. 1. ಜರುಗು, 2. ಪಕ್ಕಕ್ಕೆ ಹೋಗು. 1. to move towards a side, 2. to move. ವಾ: ಹಣ್ಣ್ ಅತ್ತ ಸೆರ್ಕ.

ಸೆರ್ಗ್ /*sergi*/ ನಾ. 1. ಸೀರೆಯ ಸೆರಗು, 2. ಸೀರೆಯಲ್ಲಿ ಹೊದೆಯುವ ಭಾಗ. 1. end of a saree, 2. border of a saree. ವಾ: ಸೆರ್ಗ್‌ಗೆ ಅದರ್‌ದೆ ಆದ ಬೆಲೆ ಉಟ್ಟು. ಗೌರಿ ಹಬ್ಬಲಿ ಬಾಗ್‌ನ ಕೊಡಿಕನ ಸೆರ್‌ಗ್ ಮುಟ್ಟಿಸಿಯೆ ಕೊಡ್ದು. ಮೈ ಮುಚ್ಚಿಕಣಿಕೆ, ಕಣ್ಣೀರ್ ವರ್‌ಸಿಕೆ, ಕೂಸುಗೆ ಹಾಲ್ ಕುಡ್ಸಿಕನ ಮುಚ್ಚಿಕಣಿಕೆ ಎಲ್ಲದಕು ಸೆರ್‌ಗ್ ಬೇಕ್.

ಸೆರ್ಟಡಿಗೆ /*serṭaḍigɛ*/ ನಾ. ಹಿಂದಿನ ಕಾಲದ ತಾಳಿ ಸರ. a necklace of antiquity – Mangala sutra. ವಾ: ಸೆರ್ಟಡಿಗೆ ಕುತಿಗೆಗೆ ಹತ್ತ ಇದ್ದದೆ. ತಾಳಿ ಉದ್ದ ಬುಡಿಕಾದ್‌ತ ಹೇಳಿವೆ. ಹಿಂದೆನ ಕಾಲಲಿ ಸೆರ್ಟಡಿಗೆನೆ ಹಾಕ್ತಿದ್ದೊ.

ಸೆರ್ಟ್ /*serṭi*/ ನಾ. 1. ಶರ್ಟ್, 2. ಅಂಗಿ. a shirt. ವಾ: ಬೆಳಿ ಸೆರ್ಟ್ ಗೆ ಕರೆ ಆವುಟು.

ಸೆರ್ತಿ /*serti*/ ನಾ. 1. ಸಲ, 2. ಬಾರಿ, 3. ಸರದಿ. turn. ವಾ: ನಾ ಎರ್ಡ್ ಸರ್ತಿ ಉಂಡೆ.

ಸೆರ್ಯಾತ್ /*serya:ti*/ ಕ್ರಿ. ಸರಿಯಾಯಿತು. correct. ವಾ: ವಾಚಿ ನಿತ್ತೊಗಿತ್ತ್. ಈಗ ಸೆರಿಯಾತ್.

ಸೆಲೆ[1] /*selɛ*/ ನಾ. 1. ಕಿರಿದಾಗಿ ತೆರೆದ ಭಾಗ, 2. ಕಲ್ಲು ಮರಗಳಲ್ಲಿರುವ ಬಿರುಕು. 1. a small opening, 2. a crack. ವಾ: ಮೂಕ್‌ಲಿ ಸೆಲೆ ಒಡ್ದ್ ರಕ್ತ ಬಾತ್.

ಸೆಲೆ[2] /*selɛ*/ ನಾ. ನೀರಿನ ಸೆಲೆ, ನೀರಿನ ಮೂಲ. source of water.

ಸೆಲ್ಗೆ /*selgɛ*/ ನಾ. ತಂತಿ. wire. ವಾ: ಚಪ್ಪರ ಕಟ್ಟಿಕೆ ಸಲ್ಗೆ ತರಕು.

ಸೆಳಿ /*seḷi*/ ನಾ. 1. ಚಳಿ, 2. ತಂಪು, 3. ಶೀತ. cold. ವಾ: ಮಡಿಕೇರಿಲಿ ಬಾರಿ ಸೆಳಿ ಉಟ್ಟು.

ಸೆಳ್ಳಿ /*seḷḷi*/ ನಾ. ಕೊಬ್ಬಿನ ಅಂಶವಿರುವ ಮಾಂಸ, ಚುಟ್ಟಿ. meat with the contents of saturated fat. ವಾ: ಹಂದಿ ಮಾಸಲಿ ಬೊರಿ ಸೆಳ್ಳಿನೆ ಜಾಸ್ತಿ ಹಾಕೊಳೊ.

ಸೇಂಕ್ /*se:ŋki*/ ಕ್ರಿ. ಏದುಸಿರು ಬಿಡು. to pant. ವಾ: ಓಡಿಕಂಡ್ ಬಂದ್ ಸೇಂಕುದು.

ಸೇಂಡ /*se:ṇḍa*/ ನಾ. ಇಡೀ ಹಲಸಿನ ಹಣ್ಣನ್ನು ಕುಯ್ದು ಮಾಡಿದ ಸಾರ ಸಹಿತವಾದ ಭಾಗಗಳು. to cut

jackfruit into parts. ವಾ: ಒಂದ್ ಹಲ್ಸ್ನಣ್ಣ್ ಲಿ ನಾಕ್ ಸೇಂಡ ಮಾಡಕ್. ಪ: ಸೇಂಡೆ

ಸೇಂದಿ /*se:ndi*/ ನಾ. 1. ಬೈನೆ, 2. ತೆಂಗಿನ ಮರದಿಂದ ತೆಗೆಯುವ ನೀರಾ. 1. toddy, 2. palm wine. ವಾ: ಸೇಂದಿ ಕುಡ್ದರೆನ? ಪ: ಕಳ್ಳ್

ಸೇಕ /*se:ka*/ ನಾ. ಶಾಖ-ಕಾವು. heat. ವಾ: ಮೈಕೈ ಬೇನೆಗೆ ಉಪ್ಪುನ ಬೆಳಿ ಅರ್ವೆಲಿ ಸುತ್ತಿ ಬಿಸಿ ಮಾಡಿ ಸೇಕ ಕೊಟ್ಟರೆ ಒಳ್ಳದಾದು.

ಸೇಕಡ /*se:kaḍa*/ ನಾ. 1. ಶೇಕಡ, 2. ನೂರಕ್ಕೆ ಇಸ್ಟು, 3. ಪ್ರತಿಶತವನ್ನು ಸೂಚಿಸುವ ಚಿಹ್ನೆ. percentage. ವಾ: ಸೇಕಡ ಲೆಕ್ಕಲಿ ನೋಡಿರೆ ಈಗ ಜನಗ ಎಲ್ಲೊಳೊ.

ಸೇಕಪಟ್ಟಿ /*se:kapaṭṭi*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಆಲೆಟ್ಟಿ ಗ್ರಾಮದ ಜಾಗ. a locality in Aletti village in Sullia Taluk of Dakshina Kannada District.

ಸೇಕಲ /*se:kala*/ ನಾ. ಕಡುಬು ಬೇಯಿಸುವ ಪಾತ್ರೆ. a vessel to make idli. ವಾ: ಕಡ್ಂಬಿಟ್ಟ್‌ನ ಸೇಕಲಲಿ ಬೇಸುದು.

ಸೇಕಳ /*se:kaḷa*/ ನಾ. ಕಳಸಿಗೆ, ಕಳಸೆ. a measure, equivalent to 14 seers. ವಾ: ಸೇಕಳಲಿ ಇಡ್ಮಣೆ ಹಿಟ್ಟ್ ನ ಬೇಸಿ ಮತ್ತೆ ವರ್‌ಲ್ ಲಿ ಒತ್ತುದು.

ಸೇಗ್ /*se:gɨ*/ ನಾ. ತಿರುಳು. kernel. ವಾ: ಬೀಟಿ ಮರಲಿ ಒಳ್ಳ ಸೇಗ್ ಇದ್ದದೆ.

ಸೇಡೆ /*se:ḍɛ*/ ನಾ. 1. ಒಂದು ವಿಧದ ನದಿ, 2. ಕಡಲು ಮೀನು, 3. ತೇಡೆ. a fresh water fish. ವಾ: ಅದ್ ಸೇಡೆ ಮೀನ್.

ಸೇಡ್ /*se:ḍɨ*/ ನಾ. 1. ದ್ವೇಷ ಸಾಧಿಸು, 2 ವೈರ, 3. ಹಗೆ, 4. ಪ್ರತೀಕಾರ, 5. ಮುಯ್ಯಿ. 1. to hate, 2. hatredness, 3. envious, 4. revenge, 5. vengeance. ವಾ: ಮನ್ಸ್ ಲಿ ಸೇಡ್ ಇಸಿಕಣಿಕಾಗದ್.

ಸೇತ್ವೆ /*se:tvɛ*/ ನಾ. 1. ಸೇತುವೆ, 2. ಹೊಳೆ, ಹೆದ್ದಾರಿ, ತಗ್ಗುಪ್ರದೇಶ, ಮುಂತಾದವುಗಳಿಗೆ ಅಡ್ಡವಾಗಿ ಹಗ್ಗ, ಬಿದಿರು, ಮರ, ಕಲ್ಲು, ಕಬ್ಬಿಣ ಮುಂತಾದವನ್ನು ಉಪಯೋಗಿಸಿ ನಡಿಗೆಗೆ ಇಲ್ಲವೇ ವಾಹನ ಸಂಚಾರಕ್ಕೆ ಅನುಕೂಲವಾಗುವಂತೆ ಕಟ್ಟಿದ ಕೃತಕ ಮಾರ್ಗ. a bridge. ವಾ: ಮಳ್ಗಾಲಲಿ ಸೇತ್ವೆ ಮುಟ್ಟ ನೀರ್ ಬಂದದೆ.

ಸೇನಾಮೂಲೆ /*se:na:mu:lɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಸೇಬ್ /*se:bɨ*/ ನಾ. ಸೇಬು. an apple. ವಾ: ಸೇಬ್ ತಿಂದರೆ ಒಳ್ಳದ್.

ಸೇಮಿಗೆ /*se:migɛ*/ ನಾ. 1. ಶ್ಯಾವಿಗೆ, 2. ನೂಪಿಟ್ಟ್. vermicelli. ವಾ: ಸೇಮಿಗೆಗೆ ಕಾಯಾಲ್ ಬಾರಿ ರುಚಿ.

ಸೇರ /*se:ra*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮುರುಳ್ಯ ಗ್ರಾಮದ ಜಾಗ. a locality in Murulya village in Sullia Taluk of Dakshina Kannada District.

ಸೇರಾಜೆ /*se:ra:jɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಸೇರ್¹ /*se:rɨ*/ ನಾ. ಅಳತೆಯ ಮಾನ, 4 ಪಾವು – ಸೇರು, 42ಸೇರು. 42 seers. **ಅಕ್ಕನ ಮನೆಗೆ ತಂಗೆ ಹೋದೆ, ತಂಗೆನ ಮನೆಗೆ ಅಕ್ಕ ಹೋದುಲೆ – ಮಾನ, ಸೇರ್(ಒ).** ವಾ: ನಾಕ್ ಪಾವ್ ಸೇರಿರೆ ಒಂದ್ ಸೇರ್ ಆದೆ.

ಸೇರ್² /*se:ri*/ ಕ್ರಿ. 1. ಜೊತೆ ಸೇರಿಸು, 2. ಒಟ್ಟುಗೂಡಿಸು, 3. ಸೇರ್ಪಡೆ. 1. to put people or things together, 2. to bring together, 3. addition. **ಸೇರ್ದುಲೆ ಸೇರ್ದುಲೆ ಸೇರಕ್ಕಿ ಕುಟ್ಟುದು(ಗಾ).** ವಾ: ಮಕ್ಕೆಲ್ಲ ಒಟ್ಟಿಗೆ ಒಂದೆ ಕಡೆ ಸೇರ್‌ದೊ. ಪ: ಸೇರ್ತ್; ಸೇರ್‌ವ **ಸೇರಿ** /*se:ri*/ 1. ಒಟ್ಟಾಗು, 2. ಕೂಡು, 3. ಬೆರೆ, 4. ಜೊತೆಯಾಗು. 1. to unite, 2. to join, 3. to come together, 4. to associate. ವಾ: ಎಲ್ಲ ಮಕ್ಕ ಸೇರಿಕಂಡ್ ಗಲಾಟೆ ಮಾಡಿವೆ. **ಸೇರಿಕನ** /*se:rikana*/ 1. ಸೇರುವಾಗ, 2. ಜೊತೆಯಾಗುವಾಗ, 3. ಬೆರೆಯುವಾಗ. 1. while joining, 2. while uniting, 3. while associating. ವಾ: ಆಚೆ ಮನೆ ಮಕ್ಕಳೊಟ್ಟಿಗೆ ಸೇರಿಕನ ಬೊಯ್ದುವೆ ಗಲಾಟೆ ಮಾಡಿರೆತ. ಪ: ಸೇರಿಕನ್ತ್ – ಜೊತೆಯಾದನು; ಸೇರಿಕೆ – ಜೊತೆಯಾಗಲು; ಸೇರಿಕೊಂಡದೆ; ಸೇರಿಕೊಳ್ಳುತ್ತದೆ; ಸೇರಿಟ್ಟು – ಜೊತೆಯಾಗಿದೆ; ಸೇರಿತ್ – ಸೇರಿತ್ತು; ಸೇರಿದೊ – ಸೇರಿದರು; ಸೇರ್ಕನ – ಜೊತೆಯಾಗುವಾಗ. **ಸೇರಿಕಿಲೆ** /*se:rikilɛ*/ 1. ಜೊತೆ ಸೇರದಿರು, 2. ಬೆರೆಯದಿರು. 1. not joining, 2. not associating. ವಾ: ಅಂವ ಆಡಿಕೆ ನಮ್ಮೊಟ್ಟಿಗೆ ಸೇರಿಕಿಲೆ. **ಸೇರೊಮೊ** /*se:romɔ*/ ಸೇರುವಾ. let us

join. ವಾ: ನಾಡ್ದ್ ದೊಸ್ತಿಗೆಲ್ಲ ಮಾಮೂಲಿ ಜಾಗೆಲಿ ಸೇರೊಮೊ. **ಸೇರ್ದ** /*se:rda*/ 1. ಸೇರಿದ, 2. ಕೂಡಿದ, 3. ನೆರೆದ. 1. gathered, 2. joined, 2. assembled. ವಾ: ಅಲ್ಲಿ ಸೇರ್‌ದವೆಲ್ಲ ಹೇಳ್ತಿದ್ದೊ. ಪ: ಸೇರ್ದೊ – ನೆರೆದರು. **ಸೇರ್ದು** /*se:rdu*/ 1. ಕೂಡುವುದು, 2. ಜೊತೆಯಾಗುವುದು. 1. to join, 2. to accompany. **ನೀರ್ ಸೇರ್ದು ಸಮುದ್ರನೆ ಹಣ ಸೇರ್ದು ಇದ್ದವರ್ನೆ(ಗಾ).** ವಾ: ನೀರ್ ಹರ್‌ದ್ ಸಂದ್ರಕೆನೆ ಸೇರ್‌ದು.

ಸೇರ್ದುಲೆ /*se:rdulɛ*/ ಕ್ರಿ. 1. ಒಗ್ಗುವುದಿಲ್ಲ, 2. ರುಚಿಸುವುದಿಲ್ಲ. 1. doesn't tase, 2. wouldn't taste appropriate. ವಾ: ಸೀತ, ಜೆರ ಬಂದರೆ ಅನ್ನ ಸೇರ್‌ದುಲೆ.

ಸೇರ್ದೆ /*se:rdɛ*/ ಕ್ರಿ. 1. ಸೇರು, 2. ತಲುಪು, 3. ಕೂಡು. 1. to join, 2. to reach, 3. to unite. ವಾ: ಈ ದಾರಿ ಸೀದ ಹೋದರೆ ಕೂಟೊಳೆಗೆ ಸೇರ್‌ದೆ.

ಸೇರ್ಯಾತ್ /*se:rya:tɨ*/ ನಾ. 1. ಪ್ರವೇಶ ಪಡೆ, 2. ದಾಖಲಾಗು. 1. to get admission, 2. to join. ವಾ: ಕಾಲೇಜಿಗೆ ಸೇರ್‌ಯಾತ್.

ಸೇರ್ಯೊಳರಿ /*se:ryoḷari*/ ಕ್ರಿ. 1. ಪ್ರವೇಶ ಪಡೆದಿದ್ದೀರ, 2. ದಾಖಲಾಗಿದ್ದೀರ. 1. have you been admitted, 2. have you joined. ವಾ: ಸಂಗಕೆ ಸೇರ್ಯೊಳರಿನ? ಪ: ಸೇರ್ಯೊಳೊ – ಸೇರಿದ್ದಾರೆ; ಸೇರ್ಸಿಕೆ – ಸೇರಿಸಲು; ಸೇರ್ಸಿತ್ – ಸೇರಿಸಿದ; ಸೇರ್ಸಿರೆ – ಸೇರಿಸಿದರೆ

ಸೇಲೆ /*se:lɛ*/ ಕ್ರಿವಿ. 1. ಬೆಡಗು, 2. ಬಿನ್ನಾಣ. 1. flirtuous, 2. coquetry. ವಾ: ಅವುಳ ಸೇಲೆ ನೋಡ್.

ಸೇವಂತಿಗೆ /*se:vantigɛ*/ ನಾ. 1. ಶಾವಂತಿಗಿ ಹೂವು, 2. ವಾಸಂತಿಕೆ ಹೂವು. chrysanthemum flower. ವಾ: ಸೇವಂತಿಗೆ ಹೂನ ಮಾಲೆ ಮಾಡಿಸುದು.

ಸೇವಾಜೆ /*se:va:jɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಸೇವೆಕೋಲು /*se:veko:lu*/ ನಾ. ವೆಂಕಟರಮಣ ಸ್ವಾಮಿಯ ಬೆತ್ತ. cane of lord Venkataramana. ವಾ: ಹರಿಸೇವೆಲಿ ವೆಂಕಟ್ರಮಣ ದೇವ್ರ್ ಬಾಕನ ಸೆವೆಕೋಲು ಹಿಡ್ಕಂಡ್ ಕೊಣಿಯದು. ಅದರ್‌ಲಿ ಜೆನಗಳಿಗೆ ಆಸೀರ್‌ವಾದ ಮಾಡ್ದು. ಸೇವೆಕೋಲುನ ಹಾಲ್ ಬೆತ್ತಲಿ (ಬಾರಿ ಸಣ್ಣ ಬೆತ್ತ) ಮಾಡಿವೆ.

ಹಯ್ದಂಗ /*haydaŋga*/ ನಾ. 1. ಗಂಡು ಮಕ್ಕಳು, 2. ಹುಡುಗರು. 1. male children, 2. boys. ವಾ: ಈ ಹಯ್ದಂಗ ಹೇಳ್ದ ಮಾತೊಂದು ಕೇಳ್ದುಲೆಪ.

ಹಯ್ಲ್ ಮರ /*haylɨ mara*/ ನಾ. 1. ಕುಯಿಲು ಮರ, 2. ಜುಂಗು ಮರ. a type of tree. ವಾ: ಹಯ್ಲ್ ಮರ ಮುಟ್ಟಿಕಾಗದ್. ಮುಟ್ಟಿರೆ ಮೈ ಕೈಗೆ ಅಂಟಿ ತೊರ್‌ಸಿದೆ. ಇದರ್‌ಲಿ ಸೌದೆ ಸನ ಮಾಡ್‌ದು ಕಮ್ಮಿ.

ಹರಟೆ /*haraṭɛ*/ ನಾ. 1. ಖಚಿತ ವಿಷಯವಿಲ್ಲದ ಮಾತು, 2. ಲೋಕಾಭಿರಾಮ. 1. idle talk, 2. irrelevant talk. ವಾ: ಹಿಂಬೊತ್ತ್ ಮನೆವೆಲ್ಲ ಕುದ್ಕಂಡ್ ಹರಟೆ ಹೊಡೆದು.

ಹರಟೆಮಲ್ಲ /*haraṭɛmalla*/ ನಾವಿ. ಸದಾ ಹರಟೆ ಮಾತಿನಲ್ಲಿ ತೊಡಗಿಕೊಂಡಿರುವವ. the one indulges in an idle talk. ವಾ: ಹರಟೆ ಮಲ್ಲ, ಮಾತಿಗೆ ಕುದ್ದರೆ ಬೇಗ ಏಳಿಕಿಲೆ.

ಹರಟೆಮಲ್ಲಿ /*haraṭɛ malli*/ ನಾ. ಸದಾ ಹರಟೆ ಮಾತಿನಲ್ಲಿ ತೊಡಗಿಕೊಂಡಿರುವವಳು. the one indulges in an idle talk. ವಾ: ಹರಟೆ ಮಲ್ಲಿ ಪುರುಸೊತ್ತಿಲ್ಲದೆ ಮಾತಾಡ್ದೆ.

ಹರಿ^{1} /*hari*/ ಕ್ರಿ. ಹರಿದುಹಾಕು. to tear. **ಕೈಲಿ ಹರಿಯದಂವ ಮೈ ಪರ್ಚಿ ಕಣ್ತ್(ಗಾ).** ವಾ: ಅರ್ವೆನ ಹರಿಬೇಡ. ಪ: ಹರಿಬಡ – ಹರಿಯಬೇಡ.

ಹರಿ^{2} /*hɘri*/ ನಾ. 1. ಮೊನಚು, 2. ಹರಿತ. 1. sharp, 2. honed. ವಾ: ಕತ್ತಿ ಒಳ್ಳ ಹರಿ ಉಟ್ಟು.

ಹರಿ^{3}**/ಹರಿಯದು** /*hari/hariyadu*/ ಕ್ರಿ 1. ಹರಿಯುವುದು, 2. ಹೊಳೆ ಹರಿ. 1. to flow, 2. flowing stream. ವಾ: ನಮ್ಮ ತೋಟದ ಕರೇಲಿ ಕಾವೇರಿ ಹೊಳೆ ಹರಿಯದು. ಪ: ಹರಿಯಲೆ – ಹರಿಯುವುದಿಲ್ಲ; ಹರ್‌ಕಂಡ್ – ಹರಿದುಕೊಂಡು

ಹರಿಬಿದ್ ಓಡ್ /*haribidɨ oːḍɨ*/ ಕ್ರಿ. ಹಾರಿಬಿದ್ದು ಓಡು. to pick up speed all of a sudden. ವಾ: ಬಸ್‌ಗೆ ಹೊತ್ತಾತ್‌ತ ಉಗ್ಗಪ್ಪ ಹರಿಬಿದ್ ಓಡ್‌ತ್ತಿದ್ದೊ.

ಹರಿಬಿದ್ದ್ /*haribidd*/ ನಾವಿ. 1. ಎದ್ದು ಬಿದ್ದು, 2. ಅವಸರದಿಂದ, 3. ಆತುರದಿಂದ. 1. in a hurry, 2.

in an urgency, 3. in haste. ವಾ: ಕೋಳಿಕಟ್ಟಲಿ ಪೋಲಿಸಿನವರ ನೋಡಿ ಎಲ್ಲವೂ ಹರಿಬಿದ್ದ್ ಓಡ್ದೊ.

ಹರಿಯಕಿಲೆ /*hariyakilɛ*/ ಕ್ರಿ. ಸಾಧ್ಯವಾಗಲಾರದು. impossible. ವಾ: ಅಂವಂದ ಆ ಕೆಲ್ಸ ಹರಿಯಕಿಲೆ.

ಹರಿಯಕೋಡಿ /*hariyako:ḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಹರಿವಾಣ /*hariva:ṇa*/ ನಾ. ದೇವರಿಗೆ ಹಣ್ಣುಕಾಯಿ ಇತ್ಯಾದಿ ಅರ್ಪಿಸಲು ಬಳಸುವ ಹಿತ್ತಾಳೆ ಬಟ್ಟಲು. a platter of bronze, coconut and plantain are kept on it and served to god. ವಾ: ಹಿಂದೆಲ್ಲ ಯಾಗೊಲು ಹರಿವಾಣಲೆ ಎಲೆ ಅಡಿಕೆ ಹಾಕಿ ಇಸ್ತಿದ್ದೊ. ಪ: ಹರ್ವಾಣ – ಹರಿವಾಣ/ ಎಲೆ; ಅಡಿಕೆ ಇಡುವ ತಟ್ಟೆ/ ವೀಳ್ಯದೆಲೆ ತಟ್ಟೆ

ಹರಿಸೇವೆ /*harise:vɛ*/ ನಾ. 1. ತಿರುಪತಿ ವೆಂಕಟರಮಣ ದೇವರಿಗೆ ಮುಡಿಪು ಕಟ್ಟುವಾಗ ಮಾಡುವ ಆಚರಣೆ, ಗೌಡ ಸಮುದಾಯದವರು ತಿರುಪತಿ ವೆಂಕಟರಮಣನ ಭಕ್ತರಾಗಿದ್ದು ಪ್ರತೀ ಮನೆಯಲ್ಲೂ ಮುಡಿಪು ಕಟ್ಟುತ್ತಾರೆ, 2. ಹರ್ಸಯ, 3 ಮುಡಿಪು ಶುದ್ದ. a ritualistic vow of leaving the hair unkempt and uncut until it is shaven off in the premises of god Tirupati Venkataramana, members of Gowda community worship Tirupati Venkataramana. ವಾ: ತಿರುಪತಿ ವೆಂಕಟರಮಣ ದೇವರ ಮುಡಿಪು ಸುದ್ದ ಕಾರ್ಯಲಿ ಹರಿಸೇವೆ ನಡ್ದದೆ.

ಹರಿಹರ /*harihara*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಹರಿಹರ ಪಲ್ಲತಡ್ಕ ಗ್ರಾಮದ ಜಾಗ. a locality in Harihara Pallatadka village in Sullia Taluk of Dakshina Kannada District.

ಹರುಂಬುಳಿ /*harumbuḷi*/ ಕ್ರಿ. ಹೋರಿಯನ್ನು ಹಸುವಿಗೆ ಜೋಡಿಗಾಗಿ ಬಿಡುವುದು. to let a bull mate with a cow. ವಾ: ಹೋರಿ ಹರುಂಬುಳಿ ಹತ್ತಿದೆ. ಪ: ಅರ್ಂಬುಳಿ. ಸೊರ್ಕಲ(ತು)

ಹರೆಕೆ /*harekɛ*/ ಕ್ರಿ. 1. ಹರಿ, 2. ಹರಿದುಹಾಕು. 1. to tear, 2. to rip up. ವಾ: ಪುಸ್ತಕ ಹರೆಕೆ ಬೊತ್ತ್. ಪ: ಹರೆಕೆತೇಳಿ – ಹರಿಯಬೇಕೆಂದು

ಹರೆಯ /*hareya*/ ನಾ. 1. ಪ್ರಾಯ. age. **ಹರೆಯಕೆ ಬಾಕನ ಹಂದಿನು ಲಾಯಿಕ್(ಗಾ).** ವಾ: ಹರೆಯ ಬಾಕನ ಮಕ್ಕ ದೊಡ್ಡವರ ಮಾತೆ ಕೇಳಿಕಿಲೆ.

ಹರ್ಂಡ್ /*hariṇḍi*/ ಕ್ರಿ. 1. ಹರಡು, 2. ವಿಸ್ತರಿಸು, 3. ಬಿಡಿಸಿಹಾಕು, 4. ಹಬ್ಬು. 1. to spread, 2. to extend, 3. to sprawl, 4. to proliferate. ವಾ: ಎಲೆಬೊಳ್ಳಿ ನೆಲಲಿ ಹರ್ಂಡಿಕಂಡುಟು. **ಹರ್ಂಡಕಾರ್** /*hariṇḍaka:ri*/ ಹರಡಲು. while spreading. ವಾ: ಅಡ್ಕೆ ಬತ್ತ ಹರ್ಂಡಕಾರ್, ಇಜಾಲ್ ಸಪಾಯಿ ಇರೊಕು. **ಹರ್ಂಡಿ** /*hariṇḍi*/ 1. ಹರಡು, 2. ಹರಹು, 3. ಅಗಲಗೊಳಿಸು. 1. to spread, 2. to scatter, 3. to extend. ವಾ: ಯಾಕೆ ಪುಸ್ತಕನ ಹೀಂಗೆ ಹರ್ಂಡಿಸಿದ್? ಪ: ಹರ್ಡಿ – ಹರಡಿ; ಹರ್ಡಿನೆ – ಹರಡುತ್ತೇನೆ; ಹರ್ಡಿಕೆ – ಹರಡಲು.

ಹರ್ಕಚೆ /*harkacɛ*/ ನಾ. ಕಚ್ಚೆ ಪಂಚೆ. a particular style of wearing a dhoti. ವಾ: ಹರ್ಕಚೆ ಕಟ್ಟಿ ಕೆಸ್ರ್ ಗದ್ದೆಲಿ ಹೋಕಾದೆನ?

ಹರ್ಕಟ್ಟ್ /*harkaṭṭi*/ ನಾ. 1. ಹರಿದ ಬಟ್ಟೆ, 2. ಪರಿಕ್ಕೊಟೆ(ತು). torn cloth. ವಾ: ಹರ್ಕಟ್ಟ್ ನ ಹಾಕ್‌ಬಡ.

ಹರ್ಕಂಡು ಹೋದು /*harkaṇḍu ho:du*/ ಕ್ರಿ. ಸಣ್ಣ ಮಕ್ಕಳು ಅಂಬೆಗಾಲಲ್ಲಿ ಹರಿಯುತ್ತಾ ಹೋಗುವುದು. crawling children. ವಾ: ಕೂಸು ಹರ್ಕಂಡ್ ಹೋಕನ ನೋಡಿಕಣಕು ಬಿದ್ದ್ ಬುಡ್ದು.

ಹರ್ಕಣ್ /*harikaṇi*/ ಕ್ರಿ. ಹರಿದುಹಾಕು. 1. to tear, 2. to rip up. **ಊಟ ಗೊತ್ತಿಲ್ಲದಂವ ಬಾಳೆಲೆ ಹರ್ಕಣ್ತ್(ಗಾ).** ವಾ: ಉಂಬಕೆ ಕೊಟ್ಟ ಬಾಳೆಲೆನ ಹರ್ಕಣ್ತ್.

ಹರ್ಕನ್ ಹೋವ /*harkanɨ ho:va*/ ಕ್ರಿ. ಹರಿದುಕೊಂಡು ಹೋಗುವ. flowing. ವಾ: ಹರ್ಕನ್ ಹೋವ ನೀರ್‌ನ ತಡೆಕಾದುಲೆ.

ಹರ್ಕಿ ಇಟ್ಟತ್ /*haraki iṭṭatɨ*/ ಕ್ರಿ. 1. ಎತ್ತಿ ಬಿಸಾಡು, 2. ಎಸೆಯು. to throw away. ವಾ: ಕಾಲಿಗೆ ಎಡ್ಡಿದ ಕಲ್ಲ್ ನ ಹರ್ಕಿ ಇಟ್ಟತ್. ಪ: ಹೆರ್ಕಿ ಇಟ್ಟತ್

ಹರ್ಕೆ /*harkɛ*/ ಕ್ರಿ. 1. ಹರಿಕೆ, 2. ದೇವರಿಗೆ ಅರ್ಪಿಸುವ ಕಾಣಿಕೆ, 3. ಹರಿಕೆ ಸಂದಾಯ ಕೊಟ್ಟ ಹಾಗೆ ಮಾಡು, 4. ಬಜ್ಜ ಬಂದಾಗ ಅಥವಾ ನೆನೆದ ಕಾರ್ಯ

ನೆರವೇರಲೆಂದು ದೇವರಲ್ಲಿ ಮಾಡಿಕೊಂಡ ಪ್ರಾರ್ಥನೆ, 5. ಹರಿಕೆ. a promise made during the time of difficulty at the time of prayer to god, a vow. **ಆಪತ್‌ಗೆ ಹರ್ಕೆ ಸಂಪತ್ತ್‌ಗೆ ತೋರಿಕೆ(ಗಾ).** ವಾ: ಹರ್ಕೆ ಮಾಡಿಕಂಡ ಮೇಲೆ ತೀರ್‌ಸೊಕು, ಕಟ್ಟಿ ಹಂಗೆ ಇಸಿಕಣಿಕಾಗದ್. ಪ: ಹರ್‌ಕೆ ಕಟ್ಟುದು – ಹರಕೆ ಕಟ್ಟುವುದು

ಹರ್ಕ್ /*harkɨ*/ ನಾ. 1. ಹರಕು, 2. ಹರಿದ. torn. ವಾ: ಹರ್‌ಕ್ ಅರ್ವೆ ಹಾಕ್‌ಕಾಗದ್. ಪ: ಹರ್ಕ್‌ಲ್ – ಹರಿದ; ಹರ್‌ಕಲ್ – ಹರಿದು ಹೋದ; ಹರ್ಕ್‌ಲ್‌ಪರ್ಕ್‌ಲ್(ಜೋಪ) – ಹರಿದು ಹೋದ

ಹರ್ಕ್ ಬೊಳ್ಳಿ /*harkɨbɔḷḷi*/ ನಾ. ಒಂದು ಜಾತಿಯ ಕಾಡು ಬಳ್ಳಿ, ಇದರಿಂದ ಕುಡ್ಪು, ಚಿಬುಳಿಯನ್ನು ಹೆಣೆಯುತ್ತಾರೆ. a forest climber, used in making baskets. ಪ: ಹಾಲ್ ಬೊಳ್ಳಿ

ಹರ್ಕ್ಯಾಣ /*harkya:ṇa*/ ನಾ. ಮದುವೆ ಕಾರ್ಯಕ್ರಮ ಆರಂಭಕ್ಕೆ ಮುನ್ನ ಕುಲದೇವರಿಗೆ ಕಟ್ಟುವ ಹರಿಕೆ ಹಣ. an amount of money kept aside as a vow at the beginning of a wedding. ವಾ: ಗಂಗೆ ಪೂಜೆ ಮಾಡಿ ನೆಲ್ಲಕ್ಕಿ ಅಡಿಲಿ ಕುಲದೇವ್ರಿಗೆ ಹರಿಕೆ ಹಣ ಕಟ್ಟುದು, ಮೊದ್ವೆಲಿ ಹರಿಕೆ ಹಣ ಕಟ್ಟುದು ಗೌಡ ಪದ್ದೆತಿ. ಪ: ಹರಿಕೆಹಣ. **ಹರ್ಕ್ಯಾಣ ಕಟ್ಟುದು** /*harkya:ṇa kaṭṭudu*/ 1. ಹರಕೆ ಹಣವನ್ನು ಕುಲದೇವರಾದ ತಿರುಪತಿ ತಿಮ್ಮಪ್ಪನಿಗೆ ಕಟ್ಟುವುದು, ಈ ಹಣವನ್ನು ಗೊಟ್ಟೆಯಲ್ಲಿ ತುಂಬಿಸಿಡುತ್ತಾರೆ, 2. ಗೊಟ್ಟೆ, ಕೊಟ್ಟೆ. to pay the money kept aside as a vow to Tirupati Thimmappa. ವಾ: ಮೊದುವೆಲಿ ಮೊದುಮಕ್ಕಳ ಹೆಸ್ರ್‌ಲಿ ಹರಿಕೆ ಹಣ ಕಟ್ಟುದು.

ಹರ್ಕ್‌ಲ್ /*harkɨlɨ*/ ನಾವಿ. ಹರಿದುಹೋದ. torn. ವಾ: ಹರ್ಕ್‌ಲ್ ಬಟ್ಟೆ ಹಾಕ್‌ಬಡ.

ಹರ್ಕ್‌ಲ್‌ಬಾಯಿ /*harkɨlɨba:yi*/ ನಾ. 1. ಗುಟ್ಟು ನಿಲ್ಲದ ಬಾಯಿ, 2. ಹರಕುಬಾಯಿ, 3. ಹರಟುವ ಬಾಯಿ. 1. a talebearer, 2. a blabbermouth, 3, a prater. ವಾ: ಅಯೊ ಸಣವನೊಟ್ಟಿಗೆ ಎಂತದು ಹೇಳ್ಬಡಪ ಅವಳ್ದ್ ಹರ್ಕ್‌ಲ್ ಬಾಯಿ ನಿಂಗೊತ್ತುಟಲ.

ಹರ್ಗಲ್ /*hargalɨ*/ ನಾ. 1. ಬೀಳುಮೀನು(ದೇವರ ಮೀನು), 2. ಹೆರ್ಗೆಲ್. 1. God's fish, 2. Mahseer fish. ವಾ: ಹರ್ಗಲ್ ಮೀನ್ ತಿಂದರೆ ಕಕ್ಕಿಕೆ ಬಂದದೆಗಡ. ಪ: ಪೆರ್ವೊಲ್ ಮೀನ್(ತು)

ಹರ್ಗುದು[1] /*hargudu*/ ಕ್ರಿ. ಹರಡುವುದು. spreading. ವಾ: ಹಸಿ ಕಾಪಿನ ಕಳಲಿ ಹರ್ಗುದು, ಮೊಂದ್ರಿ ಮೇಲೆ ಅರ್ವೆ ಹೋಸಿ ತೊಳ್ದ ಅಕ್ಕಿನ ಹರ್ಗುದು, ಬತ್ತ ಹರ್ಗುದು, ಅಡಿಕೆ ಹರ್ಗುದು.

ಹರ್ಟ್ /*harṭi*/ ನಾ. ಹರಡಿಹೋಗು. to spread. ವಾ: ಇಜ್ಜಾಲ್‌ಲಿ ಮಕ್ಕ ಕಸ ಹರ್ಟ್ ಹೋಗೊಳೊ. ಪ: ಪರಡು(ತು)

ಹರ್‌ಟ್[1] /*harṭi*/ ನಾ. ಹರಟುವುದು. an idel talk/to chatter. ವಾ: ಹೋಟ್ಲ್‌ಲಿ ಜನಗ ಹರ್ಟಿಕೆನೆ ಬಾದು.

ಹರ್ದಕ್ಕಿ /*haradakki*/ ನಾ. ಹುರಿದ ಅಕ್ಕಿ. ಕುಚ್ಚಲಕ್ಕಿಯನ್ನು ಹುರಿದು ಹುಡಿ ಮಾಡಿ ಬೆಲ್ಲ ತೆಂಗಿನಕಾಯಿ ಬೆರೆಸಿ ತಿನ್ನುತ್ತಾರೆ. ಕೆಡ್ಡಸ ಹಬ್ಬದಂದು ಹರ್ದಕ್ಕಿ ನನ್ನೆರಿ ಮಾಡುತ್ತಾರೆ. a sweet dish made of roasted rice, grated coconut, jaggery, etc. ವಾ: ಕಿಡ್ಡಾಸ ಹಬ್ಬಲಿ ಹರ್ದಕ್ಕಿ ನನ್ನೆರಿ ಮಾಡಿವೆ. ಪ: ಹುರ್ದಕ್ಕಿ

ಹರ್ದ್ /*hardɨ*/ ಕ್ರಿ. 1. ಹೆರೆಯು, 2. ಒರೆದುಹಾಕು, 3. ಕೆರೆತವುಂಟಾಗು. 1. to peel off, 2. to remove the skin, 3. to scratch.

ಹರ್ದ್‌ಹಾಕ್ /*hardɨha:kɨ*/ ಕ್ರಿ. ಹರಿದುಹಾಕು. to tear. ವಾ: ಸಿಟ್ಟ್‌ಲಿ ಅರ್ವೆನ ಹರ್‌ದ್ ಹಾಕಿಕನ್ತ್. ಪ: ಹರ್‌ಕಂಡ್ – ಹರಿದುಕೊಂಡು; ಹರ್‌ಕಂಬಕೆ – ಹರಿದುಕೊಳ್ಳುವುದಕ್ಕೆ; ಹರಿಯಕೆ – ಹರಿಯುವುದಕ್ಕೆ; ಹರಿಯದು – ಹರಿಯುವುದು; ಹರ್‌ದದೆ – ಹರಿಯುತ್ತದೆ

ಹರ್ದ್‌ಬಾತ್ /*hardɨba:tɨ*/ ಕ್ರಿವಿ. ಹರಿದು ಬಂತು. flowed. ವಾ: ಗುಡ್ಡೆಂದ ಕಂಳ್ಕ್ ನೀರ್ ಮನೆ ಹಕ್ಕಲೆ ಹರ್‌ದ್ ಬಾತ್.

ಹರ್ಪುಳಿ /*Harpuḷi*/ ನಾ. 1. ಚಿಟ್ಟೆ, 2. ಪತಂಗ, 3. ಪಾತರಗಿತ್ತಿ. butterfly. ವಾ: ನೋಡಲ್ಲಿ ದೈನ ಮೇಲೆ ಹರ್‌ಪುಳಿ ಕುದ್ದುಟು.

ಹರ್ಮಣೆ ಸೊಪ್ಪು /*harmaṇɛ soppu*/ ನಾ. ಅಜೀರ್ಣಕ್ಕೆ ಬಳಸುವ ಔಷಧೀಯ ಸಸ್ಯ. a leaf used to cure indigestion. ವಾ: ಕಟ್ರೆಗೆ ಹರ್ಮಣೆ ಸೊಪ್ಪುನ ಮೊದ್ದ್ ಮಾಡಿವೆ. ಪ: ಹೆರ್ಮಣೆ ಸೊಪ್ಪು

ಹರ್ಯೋದುಲೆ /*hariyo:dulɛ*/ ಕ್ರಿ. ಹರಿಯುವುದಿಲ್ಲ. won't flow. **ಉಟ್ಟ ಸೀರೆ ಗಟ್ಟಿ ಇದ್ದರೆ ಮೆಟ್ಟಿರು ಹರ್ಯೋದುಲೆ(ಗಾ).**

ಹರ್ಲಡ್ಕ /*harladka*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ನೆಲ್ಲೂರು ಕೆಮ್ರಾಜೆ ಗ್ರಾಮದ ಜಾಗ. 1. family, 2. lineage, 3. a locality in Nelluru Kemraje village in Sullia Taluk of Dakshina Kannada District.

ಹರ್ಲೆಣ್ಣೆ /*harleṇṇɛ*/ ನಾ. 1. ಔಡಲ ಬೀಜದ ಎಣ್ಣೆ, 2. ಹರಳೆಣ್ಣೆ, 3. ಅಲಂಬುಡ ಎಣ್ಣೆ. caster oil. **ಹರ್ಲೆಣ್ಣೆ ಕುಡ್ದವನಂಗೆ(ಗಾ).** ವಾ: ಹರ್ಲೆಣ್ಣೆ ತಲೆಗೆ ಹಾಕಿರೆ ತಂಪಾದೆ.

ಹರ್ಲ್ /*harli*/ ನಾ. ಹರಳು. caster. ವಾ: ಬೇಲಿ ಹರ್ಲ್ ಸೊಪ್ಪುಲಿ ಗುಳ್ಳೆ ಬುಡಿಕಾದೆ. **ಹರ್ಲ್‌ಸೊಪ್ಪು** /*harlisoppu*/ ಹರಳು ಗಿಡದ ಸೊಪ್ಪು. leaf of caster plant. ವಾ: ತಲೆಗೆ ಎಣ್ಣೆ ಹಾಕಿದ ಮೇಲೆ ತಲೆಲಿ ಎಣ್ಣೆ ಅರಿಯದಂಗೆ ಹರ್ಲ್ ಸೊಪ್ಪ್‌ನ ಕಟ್ಟಿವೆ.

ಹರ್ವೆ ಸೊಪ್ಪ್ /*harvɛ soppi*/ ನಾ. ಕೀರೆ ಸೊಪ್ಪು. a variety of amaranthus. ವಾ: ಹರ್ವೆ ಸೊಪ್ಪ್ ಗೈಪು, ಪಲ್ಯ ಬಾರಿ ಲಾಯ್ಕ.

ಹರ್ಸ /*harsa*/ ನಾ. 1. ಸಂತೋಷ, 2. ಆನಂದ, 3. ಹರ್ಷ. 1. happiness, 2. cheerfulness, 3. gaiety. ವಾ: ಮಳೆ ಬಾಕನ ಕೃಸಿಕರಿಗೆ ಬಾರಿ ಹರ್ಸ ಆದೆ.

ಹರ್ಸವೆ /*harisavɛ*/ ನಾ. 1. ತಿರುಪತಿ ವೆಂಕಟರಮಣ ದೇವರಿಗೆ ಮುಡಿಪು ಕಟ್ಟುವಾಗ ಮಾಡುವ ಆಚರಣೆ, ಗೌಡ ಸಮುದಾಯದವರು ತಿರುಪತಿ ವೆಂಕಟರಮಣನ ಭಕ್ತರಾಗಿದ್ದು ಪ್ರತೀ ಮನೆಯಲ್ಲೂ ಮುಡಿಪು ಕಟ್ಟುತ್ತಾರೆ, 2. ಹರ್ಸಯ, 3 ಮುಡಿಪು ಶುದ್ದ. a ritualistic vow of leaving the hair unkempt and uncut until it is shaven off in the premises of god Tirupati Venkataramana, members of Gowda community worship Tirupati Venkataramana. ವಾ: ಗೌಡ ಕುಟುಂಬದಲ್ಲಿರ್‌ವ ವಿಸಿಸ್ಟ ಪದ್ದತಿ ಈ ಹರ್ಸವೆ. ಕೆಲೊವು ಹಣ್ಣ್ ಹಂಪಲ್‌ಲಿ ಇನ್ನ್ ಕೆಲೊವು ಬೇಟೆ ಕೊಟ್ಟ್ ಹರ್ಸವೆ ಮಾಡುವೆ. ಪ: ಹರ್ಸವೆ – ಹರಿಸೇವೆ; ಹರ್ಸಯ – ಹರಿಸೇವೆ

ಹರ್ಸಾಯ /*harsa:ya*/ ನಾ. 1. ಹರಿಸೇವೆ, 2. ತಿರುಪತಿ ವೆಂಕಟರಮಣ ದೇವರಿಗೆ ಮಾಡುವ ಆಚರಣೆ. a celebration related to god Venkataramana of Tirupati. ವಾ: ಗೌಡ್ರುಗ ಎಂಕಟ್ರಮಣ ದೇವ್ರುಗೆ ಹರ್ಸಯ ಮಾಡುವೆ.

ಹರ್ಸೊಕು /*harsoku*/ ನಾ. ಆಶೀರ್ವದಿಸಬೇಕು. should bless. ವಾ: ದೊಡ್ಡವು ಮಕ್ಕಳ್‌ನ ಹರ್ಸೊಕು. ಪ: ಹರ್ಸಿಕೆ – ಆಶೀರ್ವದಿಸಲಿಕ್ಕೆ

ಹರ್ಸ್ /*harsi*/ ನಾ. ಹರಸು. to bless. ವಾ: ಮೊದುಮಕ್ಕಳ್ಗೆ ಒಳ್ಳ ಮನ್ಸ್‌ಲಿ ಹರ್ಸ್.

ಹರ್ಳೆಣ್ಣೆ /*harḷeṇṇɛ*/ ನಾ. 1. ಹರಳೆಣ್ಣೆ, 2. ಔಡಲೆಣ್ಣೆ. caster oil. ವಾ: ಹರ್ಳೆಣ್ಣೆ ತಲೆಗೆ, ಕಣ್ಣಿಗೆ ತಂಪು. ಆಯುರ್ವೇದಲಿ ಹರ್ಳೆಣ್ಣೆದ್ ಬಾರಿ ಉಪಯೋಗ ಉಟ್ಟು.

ಹರ್ಳ್ ಅಲ್ಂಬು /*harḷi alimbu*/ ನಾ. ಆಕಾರದಲ್ಲಿ ಸ್ವಲ್ಪ ಬೂದು ಬಣ್ಣದ ನೂಡಲ್ಸ್ ಆಕಾರದ ಅಣಬೆ. a small grey mushroom. ವಾ: ಹರ್ಲಳುಂಬು ಸಣ್ಣದಾಗಿ ತಿಂಬಕೆ ಬಾರಿ ಲಾಯ್ಕ. ಪ: ಹರ್ಳ್‌ಅಣ್ಬು – ಹುಲ್ಲು ಅಣಬೆ

ಹರ್ಳ್‌ಮರ /*harḷimara*/ ನಾ. ಹರಳು ಮರ. caster tree. **ಮೂಡಂದ ಮೂರ್ ಸೂಳೆಗ ಬಂದೊ ಬಿಸ್ಲ್ ಬಾಕನ ಮುಸ್ಕ್ ತೆಗ್ದೊ – ಹರ್ಳ್ ಬೀಜ, ಬ್ಯಾಪರೆ ಬೀಜ(ಒ).** ವಾ: ಹರ್ಳ್ ಮರ ಬೇಗ ಬೆಳ್ಯದು.

ಹರ್ಳ್‌ಚ್ವಾರೆ /*harḷicva:rɛ*/ ನಾ. 1. ಹರಳು ಬೀಜ ತಿನ್ನುವ ಪಕ್ಷಿ, 2. ಹಸಿರು ಬಣ್ಣವನ್ನು ಹೊಂದಿರುವ ಇದರ ಹಾರುವ ವೇಗ ಜಾಸ್ತಿ. 1. a bird that eats seeds of caster tree, 2. a green bird. ವಾ: ಹರ್ಳ್‌ಚ್ವಾರೆ ಹರ್ಲ್ ಬೀಜನ ತಿಂಬಕೆ ಬಾದು. ಹಸ್ರ್ ಬಣ್ಣದ ಚೋರೆ. ಕೆಲೊಮ್ಮೆ ಬೆಳಿಗೋಡೆಗೆ ಡಿಕ್ಕಿ ಹೊಡ್ದ್ ಸಾಯೋದೂ ಉಟ್ಟು. ಪ: ಹರ್ಳ್‌ಚೋರೆ ಹಕ್ಕಿ ಬೇಪರ್‌ಚೋರೆ

ಹಲಂಗ /*halaŋga*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಹಲಗೆ /*halagɛ*/ ನಾ. ಮರದ ಹಲಗೆ. wooden board/pank. ವಾ: ಮರದ ಹಲಗೆ ಅಗಲ ಬೇಕ್.

ಹಲಗೆ ಮೆಟ್ಟಿ /*halagɛ meṭṭi*/ ಕ್ರಿ. ಉಳುಮೆ ಮಾಡಿ ನೇಜಿ ನೆಡುವ ಮೊದಲು ಕೆಸರು ಮಣ್ಣನ್ನು ಎತ್ತುಗಳಿಂದ ಹಲಗೆಯನ್ನು ಎಳೆಸಿ ಸಮತಟ್ಟು ಮಾಡುವುದು. to flatten the soil using wooden planks before plouging. ವಾ: ಹಲಗೆ ಮೆಟ್ಟಿ ಗದ್ದೆನ ಸಮತಟ್ಟ್ ಮಾಡ್‌ವೆ.

ಹಲಸಿನ ತೊಳೆ /*halasina toḷɛ*/ ನಾ. 1. ಹಲಸಿನ ಸೊಳೆ, 2. ಪೆಲಕ್ಕಾಯಿದ ಪಚ್ಚಿಲ್(ತು). jackfruit segments. ವಾ: ಹಲಸಿನ ತೊಳೆಲಿ ಸುಮಾರ್ ಮಾಂಬಳೆ ಸಿಕ್ಕುದು. ಹಿಟ್ಟ್, ಕಜಯ ಎಲ್ಲ ಮಾಡಕ್. ಕೂಳೆ ಹಲ್‌ಸ್‌ನ ಹಣ್ಣ್‌ಲಿ ಮಾಂಬಳ ಜಾಸ್ತಿ.

ಹಲಸಿನ ಮಾಯಣ /*halasina ma:yaṇa*/ ನಾ. ಹಲಸಿನ ಮೇಣ. gum of jackfruit. ವಾ: ಹಲಸಿನ ಮಾಯಣ ಅಂಟಿರೆ ಕಾಯೆಣ್ಣೆ ಹಾಕಿ ತೊಳೆಕು.

ಹಲಸಿನಕ್ಕಿ /*halasinakki*/ ನಾ. ಹಲಸಿನ ಬೀಜ. jackfruit seeds. ವಾ: ಹಲಸಿನಕ್ಕಿನ ಹೊರ್‌ದ್ ತಿಂಬದು.

ಹಲಸಿನಡ್ಕ /*halasinaḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ದೇವಚಳ್ಳ ಗ್ರಾಮದ ಜಾಗ. a locality in Devacalla village in Sullia Taluk of Dakshina Kannada District.

ಹಲೆಗೆ /*halegɛ*/ ನಾ. ಮರದ ಹಲಗೆ. a wooden plank. ವಾ: ಹಿಂದೆಲ್ಲ ಪಾತ್ರಗಳ ಹಲೆಗೆ ಮೇಲೆ ಇಸ್‌ತ್ತಿದ್ದೊ.

ಹಲ್‌ಕತ್ತಿ /*hali katti*/ ನಾ. ಕತ್ತಿಯ ಬಾಯಿಯಲ್ಲಿ ಸಣ್ಣ ಸಣ್ಣ ಹಲ್ಲುಗಳಿರುತ್ತದೆ, ಭತ್ತದ ಪೈರು ಕೊಯ್ಯಲು ಈ ಕತ್ತಿಯನ್ನು ಬಳಸುತ್ತಾರೆ. a serrated blade used in cutting paddy. ವಾ: ಹಸಿ ಹುಲ್ಲು ಕೊಯ್ಯಕೆ ಹಲ್ಕತ್ತಿನೆ ಸೆರಿಯಾದು. ಪ: ಹಲ್ ಕತ್ತಿಲಿ – ಹಲ್ಲು ಕತ್ತಿಯಲ್ಲಿ; ಹಲ್ ಕತ್ತಿನ – ಹಲ್ಲು ಕತ್ತಿಯನ್ನು

ಹಲ್ಕ /*halka*/ ನಾ. 1. ನೀಚ, 2. ನಿಕೃಷ್ಟ ವ್ಯಕ್ತಿ. 1. an evildoer, 2. a blackguard. ವಾ: ಹಲ್ಕತ ಬೈಯ್ಯುದು ತಪ್ಪು.

ಹಲ್ಕಕೆಲ್ಸ /*halka kelsa*/ ಕ್ರಿವಿ. ನೀಚ ಕೆಲಸ. a wicked act. ವಾ: ಅಂವ ಹಲ್ಕಿ ಕೆಲ್‌ಸ ಮಾಡಿ ಸಿಕ್ಕಿಕಣ್ತ್.

ಹಲ್ಕ ಸೂಳೆಮಜ್ಞ /*halka su:ḷɛ maŋŋa*/ ನಾ. ನೀಚನಿಗೆ ಹುಟ್ಟಿದವನು ಎಂಬ ಬೈಗುಳ ಪದ. someone who is born to an evildoer-used as an expletive term. ವಾ: ಹಲ್ಕ ಸೂಳೆ ಮಜ್ಞ ಸಾಯಕೆ ನನ್ನ ದುಡ್ಡ್ ತಿಂದತ್.

ಹಲ್ಕಟ್ /*halkaṭi*/ ಕ್ರಿವಿ. 1. ನೀಚ ಕೆಲಸ, 2. ನೀತಿಗೆಟ್ಟ. 1. a wicked person, 2. immoral. ವಾ: ಎಂತ ಹಲ್ಕಟ್ ಜೆನ ವಳೊಪ ಈ ಲೋಕಲಿ.

ಹಲ್ಕಿಬೀಳ್ದು /*halkibi:ḷdu*/ ಕ್ರಿವಿ. ಬೆಚ್ಚಿಬೀಳುವುದು. to get shocked/startled. ವಾ: ರಾತ್ರೆ ನಿದ್ದೆಲಿ ಒಮ್ಮೊಮ್ಮೆ ಹಲ್ಕಿಬೀಳ್ದು.

ಹಲ್ತಡ್ಕ /*haltaḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಮರಪಡ್ನೂರು ಗ್ರಾಮದ ಜಾಗ. a locality in Amarapadnuru village in Sullia Taluk of Dakshina Kannada District.

ಹಲ್ದಡ್ಕ /*haldaḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮರ್ಕಂಜ ಗ್ರಾಮದ ಜಾಗ. a locality in Markanja village in Sullia Taluk of Dakshina Kannada District.

ಹಲ್ಲಕತ್ತಿ /*hallakatti*/ ನಾ. ಭತ್ತದ ಬೆಳೆಯನ್ನು ಕೊಯ್ಯಲು ಬಳಸುವ ಕತ್ತಿ. a knife used to cut the ear of paddy. ವಾ: ಹಲ್ಲಕತ್ತಿನ ಬೆಳೆ ಕೊಯ್ಯಕೆ ಬಳ್‌ಸುವೆ.

ಹಲ್ಲಿಲ್ಲೆ /*hallillɛ*/ ನಾ. 1. ಹಲ್ಲು ಇಲ್ಲ, 2. ಬೊಕ್ಕುಬಾಯಿ. toothless. ವಾ: ಚಕ್ಕುಲಿ ಬೇಡ ನಂಗೆ ಅಗ್ಯಕೆ ಹಲ್ಲಿಲ್ಲೆ.

ಹಲ್ಲುಜ್ಜ್ /*hallujji*/ ಕ್ರಿ. 1. ಹಲ್ಲುಜ್ಜು, 2. ದಂತಧಾವನ. 1. to brush one's teeth, 2. brushing teeth. ವಾ: ಬೊಳ್ಪುಗೆ ಎದ್ದಂಗೆನೆ ಹಲ್ಲುಜ್ಜ್ ಮತ್ತೆ ಕಾಪಿಗೀಪಿ ಎಲ್ಲ ಕುಡೆದು. ಪ: ಹಲ್ಲುಜಿತ್ – ಹಲ್ಲುಜ್ಜಿದನು/ಳು; ಹಲ್ಲ್ ಉಜ್ಜಿದೊ – ಹಲ್ಲು ಉಜ್ಜಿದರು; ಹಲ್ಲ್ ಕಿರ್‌ದದೆ – ಹಲ್ಲು ತೋರಿಸುವುದು; ಹಲ್ಲ್ ಬುಡ್ದು – ಹಲ್ಲು ತೋರಿಸುವುದು

ಹಲ್ಲೆ /*hallɛ*/ ನಾ. ಏಡಿಯ ದೇಹ. body of crab. ವಾ: ಎಸ್‌ಂಡ್‌ನ ಹಲ್ಲೆ ಕಿಚ್ಚಿಹಾಕಿ ತಿಂಬಕೆ ಲಾಯ್ಕ. ಪ: ಪಲ್ಲೆ

ಹಲ್ಲ್ /*halli*/ ನಾ. ಹಲ್ಲು. tooth. **ಹಲ್ಲ್ ಇರ್ಕನ ಕಡ್ಲೆ ಇಲ್ಲೆ, ಕಡ್ಲೆ ಇರ್ಕನ ಹಲ್ಲ್ ಇಲ್ಲೆ(ಗಾ).** ವಾ: ಮೊಸಿಲಿ ಹಲ್ಲ್ ಉಜ್ಜಿರೆ ಪಳಪಳಾತ ಹೇಳ್ದೆ.

ಹಲ್ಲ್ ಕುಂಚ /*halli kuṇca*/ ನಾ. ಹಲ್ಲುಜ್ಜುವ ಬ್ರೆಶ್. a toothbrush. ವಾ: ಹಲ್ಲ್ ಕುಂಚನ ಎಲ್ಲಿಸಿದ?

ಹಲ್ಲ್‌ಕಡ್ಡಿ /*hallikaḍḍi*/ ನಾ. ಹಲ್ಲಿನ ಸೆರೆಯಲ್ಲಿ ನಿಂತ ಆಹಾರದ ತುಣುಕನ್ನು ತೆಗೆಯಲು ಬಳಸುವ ಕಡ್ಡಿ. a toothpick. ವಾ: ಹಲ್ಲ್ ಸೆರೆಗೆ ಹಲ್ಲ್‌ಕಡ್ಡಿನ ಕುತ್ತುದು ತಪ್ಪು.

ಹಲ್ಸಂಡೆ /*halsaṇḍɛ*/ ನಾ. 1. ಅಲಸಂಡೆ, 2. ಅಲಸಂದೆ. cowpea/black eyed peas. ವಾ: ಹಲ್ಸಂಡೆ ಬೊಳ್ಳಿಲಿ ಬುಡಿಕೆ ಈಗಸ್ಟೇ ಸುರು.

ಹಲ್ಸಿನ ಬೀಜ /*halsina bi:ja*/ ನಾ. ಹಲಸಿನ ಬೀಜ. seeds of jackfruit. **ಚಿನ್ನದ ಪೆಟ್ಟಿಗೆಲಿ ಬೆಳ್ಳಿ ಲಿಂಗ – ಹಲ್ಸಿನ ಬೀಜ(ಒ).** ವಾ: ಒಂದೊಂದ್ ಮರದ ಹಲ್ಸಿನ ಬೀಜ ಸಣ್ಣದಿದ್ದದೆ.

ಹಲ್ಸ್‌ನ ಕಾಯಿ /*halsɨna ka:yi*/ ನಾ. ಹಲಸಿನಕಾಯಿ. unripe jackfruit. ವಾ: ಹಲ್ಸ್‌ನಕಾಯಿಲಿ ಹಪ್ಪಳ,ಚೊಂಗುಳಿ ಮೂಡೆಟ್ಟ್ ಮಾಡಿಕಾದೆ. ಪ: ಹಲ್ಸ್‌ನ ಮರ – ಹಲಸಿನ ಮರ; ಹಲ್ಸ್‌ನಣ್ಣ್ – ಹಲಸಿನ ಹಣ್ಣು; ಹಲ್ಸ್‌ನಿಟ್ಟ್ – ಹಲಸಿನ ಹಣ್ಣಿನ ಕಾದ್ಯ; ಹಸ್ನಣ್ಣ್ – ಹಲಸಿನ ಹಣ್ಣು

ಹಲ್ಸ್‌ನ ಹಣ್ಣ್ /*halsɨna haṇṇi*/ ನಾ. ಹಲಸಿನ ಹಣ್ಣು. ripe jackfruit. **ಅಡ್ಡಮರಲಿ ಬೊಡ್ಡ ಕುದ್ಲುಟು ಬೊಡ್ಡನ ತಿಕಲಿ ಜೆಡ್ಡ್ ಸೊರ್ದದೆ – ಹಲ್ಸ್‌ನ ಹಣ್ಣ್ ಮತ್ತೆ ಅದರ ಮಾಯಣ(ಒ).** ವಾ: ರುದ್ರಾಕ್ಷಿ ಹಲ್ಸ್‌ನ ಹಣ್ಣ್ ನ ನೋಡ್ಯಳರಿಯ.

ಹಲ್ಸ್‌ನಕ್ಕಿ /*halsɨnakki*/ ನಾ. 1. ಹಲಸಿನ ಬೀಜ, 2. ಹಸ್‌ನಕ್ಕಿ, 3. ಹನ್ಸ್‌ನಕ್ಕಿ. seeds of jackfruit. **ಹಲ್ಸ್‌ನಕ್ಕಿಗೆ ಮಣ್ಣ್ ಮೆತ್ತಿದಂಗೆ ಉಟ್ಟು(ಗಾ).** ವಾ: ರೊಟ್ಟಿಗೆ ಹಲ್ಸ್‌ನಕ್ಕಿ ಪೊಜ್ಜಿ ಮಾಡಿ ತಿಂಬದೆ ಗಮ್ಮತ್ತ್. ಪ: ಹಲ್ಸನಕ್ಕಿ ಪೊಜ್ಜಿ(ಹಲ್ಸ್ ನೆಕ್ಕಿ) – ಹಲಸಿನ ಬೀಜದ ಚಟ್ನಿ; ಹಲ್ಸ್‌ನಣ್ಣ್‌ನ ಗೂಂಜಿ – ಹಲಸಿನ ಹಣ್ಣಿನ ನಡುವಿನ ತಿರುಳು,

ಹವಳ /*havaḷa*/ ನಾ. 1. ಹವಳ, 2. ನವರತ್ನಗಳಲ್ಲಿ ಒಂದು, 3. ಒಂದು ಬಗೆಯ ಕೆಂಪು ಬಣ್ಣದ ಮಣಿ. 1. coral, 2. one of the nine gems, 3. a red gem. ವಾ: ತಾಳಿ ಒಟ್ಟಿಗೆ ಹವಳದ ಗುಂಡುನಸ ಸೇರ್‌ಸುವೆ. ಪ: ಹವಳದ ಸರ – ಹವಳದ ಮಣಿಗಳಿಂದ ಮಾಡಿದ ಕತ್ತಿನ ಸರ

ಹವುದ್ /*havudɨ*/ ಅ. ಹೌದು. an term of affirmation. ವಾ: ಹವುದ್ ಕಂಡದೆ ಅವ್ವೆ ಆಗಿರೊಕು.

ಹಸ /*hasa*/ ನಾ. 1. ಹಸು, 2. ಆಕಳು. 1. a cow, 2. a calf. **ಒಬ್ಬನ ಕಟ್ಟಿದ್ದೆ, ಒಬ್ಬನ ಬಿಟ್ಟಿದ್ದೆ, ಒಬ್ಬನ ಕರ್ಕಂಡ್ ಒಳೆಗೋದೆ – ಹಸ, ಕರ್, ಹಾಲ್(ಒ).** ವಾ: ಹಸನ ಮೇಸುದು.

ಹಸಿ /*hasi*/ ನಾ. 1. ಬೇಯಿಸದ, 2. ಒಣಗದ. 1. uncooked, 2. not dried. **ಹಸಿ ಗೋಡೆಗೆ ಕಲ್ಲ್ ಇಟ್ಟಂಗೆ(ಗಾ).** ವಾ: ಕೆಲು ಹಸಿ ತರ್‌ಕಾರಿನ ತಿಂದರೆ ಆರೋಗ್ಯಕೆ ಒಳ್ಳೆದ್.

ಹಸಿನೀರ್ /*hasi ni:r*/ ನಾ. ತಣ್ಣೀರು. cold water. ವಾ: ನೀರ್ ಮಂಡೆಂದ ಹಂಗೆ ಹಸಿ ನೀರ್ ಗೋಂಚಿ ಕುಡಿಬಡ. ಸೀತ ಆಗಿ ಜರ ಬಂದರೆ ಎಂತ ಮಾಡ್ತು.

ಹಸಿಮೆಣ್ಸ್ /*hasi meṇsɨ*/ ನಾ. ಹಸಿರು ಮೆಣಸು. green chilly. ವಾ: ಅವ್ವ ಹಸಿ ಮೆಣ್ಸ್ ಹಾಕಿ ಕಾರಾಗಿ ಪೊಜ್ಜಿ ಮಾಡ್ ತಿಂಬಕನ ಎಲ್ಲ ಕಡೆಂದ ನೀರ್ ಸೊರ್‌ಯಕು.

ಹಸಿ ಮೈ /*hasi mai*/ ನಾ. ಮದುವೆಯ ಅರಶಿನ ಶಾಸ್ತ್ರದಲ್ಲಿ ಅರಸಿನ ಉಜ್ಜಿ ಅದ ಮೇಲೆ ಕರೆಯುವುದು. refers to a prewedding ritual in which the bride and groom are smeared with turmeric paste. ವಾ: ಮೊದುಮಕ್ಕ ಹಸಿ ಮೈಲಿ ಹೊರೆಗೆ ಹೋಕೆ ಬತ್ತ್.

ಹಸಿಹುಲ್ಲ್ /*hasi hullɨ*/ ನಾ. 1. ಹಸಿರು ಹುಲ್ಲು, 2. ತೋಟ-ಗದ್ದೆಯ ಹುಲ್ಲು, 1. green grass, 2. grass found in the farms and fields. ವಾ: ದನಗಳಿಗೆ ದಿನಾ ಹಸಿಹುಲ್ಲ್ ಬೇಕಾದೆ ನಾನೆ ಕೊಯ್ಕಂಡ್ಬಂದ್ ಹಾಕಿನೆ.

ಹಸಿಂಬೆ /*hasimbɛ*/ ನಾ. 1. ಸಿಂಬೆ, 2. ಭತ್ತವನ್ನು ಹೊರಲು ಉಪಯೋಗಿಸುವ ಬಿಳಿ ಬಟ್ಟೆಯಿಂದ ಮಾಡಿದ ಚೀಲ. 1. a ring, 2. a cloth bag to carry bundle of paddy. ವಾ: ಹಾರಂವಂಗೆ ಕೊಟ್ಟ ಉಂಬುಳಿ ಬತ್ತನ ಅಂವ ಹಸಿಂಬೆಲಿ ಹೊತ್ಕಂಡ್ ಹೋತ್. ಪ: ಹಸ್ಂಬೆ – ಬಿಳಿ ಅರ್ವೆಯಿಂದ ಮಾಡಿದ ಚೀಲ; ಪಸ್ಂಬೆ(ತು)

ಹಸಿಬಿಸಿ /*hasibisi*/ ನಾ. ಅರೆಬೆಂದ. half-cooked/boiled. ವಾ: ಹಸಿಬಿಸಿ ಮಾಡಿ ಹಲ್ಸನಕ್ಕಿ ತಿಂಬೇಡಯ.

ಹಸಿಮೊಟ್ಟೆ /*Hasimoṭṭɛ*/ ನಾ. ಹಸಿರು ಬಣ್ಣದ ಚಿಟ್ಟೆ. a green butterfly. ವಾ: ಹೂನ ದೈನ ಚಿಗ್ರನೆಲ್ಲ ಹಸಿಮಟ್ಟೆಗ ತಿಂಬದು. ಪ: ಹಸಿಮಟ್ಟೆ

ಹಸಿಯಡ್ಕ /*hasiyaḍka*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಹಸಿಯಲೆ /*hasiyalɛ*/ ಕ್ರಿ. ಹಸಿವಾಗುವುದಿಲ್ಲ. not feeling hungry. ವಾ: ಇಸ್ಟ್ ಬೇಗ ಹೊಟ್ಟೆ ಹಸಿಯಲೆ.

ಹಸಿರಾವು /*hasira:vu*/ ನಾ. 1. ಹಾವಿನ ಹೆಸರು, 2. ಹಸಿರು ಹಾವು. 1. a snake, 2. a green snake. ವಾ: ಕಾಪಿ ದೈದ ಮೇಲೆಲ್ಲ ಹಸಿರಾವು ಇದ್ದದೆ. ಅದರ ಬಣ್ಣ ಸನ ಹಸ್ರ್. ಹಾಂಗಾಗಿ ಕೆಲುವೊಮ್ಮೆ ಗೊತ್ತೇ ಆದುಲೆ. ಪ: ಹಸಿಹಾವ್ – ಹಸಿರು ಹಾವು; ಹಸ್ರಾವು – ಹಸಿರು ಹಾವು(ಇವುಗಳು ಹಸಿರು ಗಿಡದ ಎಲೆಗಳ ಮದ್ಯದಲ್ಲಿ ಇರುತ್ತವೆ

ಹಸಿವ್ /*hasivɨ*/ ನಾ. ಹಸಿವು. hunger. ವಾ: ಹಸಿವು ಹೆಚ್ಚೊ, ದುಕ್ಕ ಹೆಚ್ಚೊತ ಹಿರ್‌ಯರ ಮಾತುಟ್ಟು.

ಹಸಿಹಾವು /*hasiha:vu*/ ನಾ. ಎಲೆಗಳ ಮೇಲೆ ಕಂಡು ಬರುವ ಹಸಿರು ಬಣ್ಣದ ಚಿಕ್ಕ ನಿರುಪದ್ರವಿ ಹಾವು. a green snake. ವಾ: ಹಸಿಹಾವು ದೈಗಳ್‌ಲಿ ಇದ್ದರೆ ಗೊತ್ತೆ ಆದುಲೆ.

ಹಸೀಕಾಯಿ /*hasi:ka:yi*/ ನಾ. ಇನ್ನೂ ಬೆಳೆಯದ ಕಾಯಿ. tender. ವಾ: ಹಸೀಕಾಯಿನ ಕೊಯ್ದರೆ ಎಂತದಕು ಆದುಲೆ.

ಹಸುಕೂಸ್ /*hasuku:sɨ*/ ನಾ. ಹಸುಳೆ-ಹಸುಕೂಸು. an infant. ವಾ: ಹಸುಕೂಸುನ ಹಂಗೆಲ್ಲ ಹೊರೆಗೆ ಕರ್‌ಕಂಡ್ ಹೋಕಾಗದ್.

ಹಸೆ /*hasɛ*/ ನಾ. ಸೋದರ ಮಾವ ಅಥವಾ ಬಾವಂದಿರು ಮದುವೆ ಮನೆಯ ನೆಲ್ಲೆಕ್ಕಿ ಅಡಿಯ ಗೋಡೆಮೇಲೆ ಸೂರ್ಯ-ಚಂದ್ರ ಇತ್ಯಾದಿ ಚಿತ್ರಗಳನ್ನು ಬರೆಯುವುದು. painting the pictures of sun, moon, etc. on the walls, usually done on the day of wedding by maternal uncles or brothers in law. ವಾ: ಮೊದುವೆಲಿ ಗೋಡೆಲಿ ಹಸೆ ಬರ್‌ದವೆ.

ಹಸೆ ಬರ್ಯದು /*hasɛ baryadu*/ ಕ್ರಿವಿ. ಮದುವೆ ಸಂದರ್ಭದಲ್ಲಿ ಗೋಡೆ ದೀಪದ ಕೆಳಗೋಡೆಯಲ್ಲಿ ಸಗಣಿ ಸಾರಿಸಿ ಸೂರ್ಯ-ಚಂದ್ರ ಹುಡುಗ-ಹುಡುಗಿಯ ಹೆಸರಿನ ಜೊತೆ ಚಿತ್ರ ಬಿಡಿಸುವುದು. painting the pictures of sun, moon, etc. on the walls, usually done on the day of wedding by maternal uncles or brothers in law. ವಾ: ಮೊದುವೆಲಿ ಸೋದರ ಮಾವ ಹಸೆ ಬರ್ಯದು.

ಹಸೆಮೊಂದ್ರಿ /*hasɛmɔndri*/ ನಾ. ಮದುವೆಯಲ್ಲಿ ಹಸೆಯ ಹತ್ತಿರ ಹಾಕುವ ಚಾಪೆ. a mat spread near the painted wall. ವಾ: ಹಸೆಮೊಂದ್ರಿ ಮೊದುವೆ ಸಾಸ್ತ್ರಕೆ ಬೇಕಾದೆ.

ಹಸ್[1] /*hasɨ*/ ನಾ. 1. ಹಸಿವು, 2. ಆಹಾರ ಸೇವನೆಯನ್ನು ನಿಯಂತ್ರಿಸುವ ಶಾರೀರಿಕ ಹಾಗೂ ಮಾನಸಿಕ ವ್ಯವಸ್ಥೆ, 3. ಆಹಾರದ ಅವಶ್ಯಕತೆ. 1. hunger, 2. state of lack of food 3. need for food. **ಹಸ್ ಅದರೆ ರುಚಿ ಬೇಡ(ನು).** ವಾ: ಹಸ್ ಆಗಿ ಕಣ್ಣೆ ಕಾಂಬದುಲೆ.

ಹಸ್[2] /*has*/ ನಾ. 1. ದನ 2. ಜಾನುವಾರು. 1. a cow, 2. cattle. **ಹಾಲಿಗೆ ಬಂದವಂಗೆ ಹಸ್‌ನ ಕ್ರಯ ಯಾಕೆ(ಗಾ).** ವಾ: ನಿಮ್ಮ ಹಸ್ ಎಸ್ಟ್ ಹಾಲ್ ಕೊಟ್ಟದೆ. **ಹಸ್‌ಕರ್** /*hasɨkarɨ*/ ಹಸು ಕರು. cow and calf. ವಾ: ನಮ್ಮ ಹಸ್ ಕರ್ ಇತ್ತ ಬಾತ ನೀವು ಎಲ್ಲಾರ್ ನೋಡ್ದರಿಯಾ?

ಹಸ್ಕಸ್ಕ್ /*haskaskɨ*/ ನಾ. ಕೆಲವು ತರಕಾರಿಗಳು ಬೇಯಿಸಿದಾಗಲೂ ಹಸಿ ಹಸಿ ಬರುವುದು. vegetable that don't get cooked completely ever after boiling them. ವಾ: ತೊಪ್ಪವರೆನ ಸೆರಿ ಬಾಡ್ಸದೆ ಪಲ್ಯ ಮಾಡಿರೆ ಹಸ್ಕಸ್ಕ್ ಬಾದು ತಿಂಬಕಾದುಲೆ.

ಹಸ್‌ಗ್ /*hasigɨ*/ ನಾವಿ. ಹಿತಕರವಲ್ಲದ ರುಚಿ. an unpleasant taste.

ಹಸ್ದ್ /*hasdi*/ ನಾ. 1. ಹಸಿದು, 2. ದಣಿವು. 1. hungry, 2. tired. **ಹಸ್ದ್ ಹಲಸ್ ತಿನ್ನ್, ಉಂಡು ಮಾವ್ ತಿನ್ನ್(ಗಾ).** ವಾ: ಅಂವ ಹಸ್ದ್ ಬಂದುಟು. ಬೇಗ ಇಕ್ಕಿ. ಪ: ಹಸ್‌ವಾದುಲೆ – ಹಸಿವು ಆಗುವುದಿಲ್ಲ; ಹಸ್‌ವಾಕೆ – ಹಸಿವಾಗಲು; ಹಸ್‌ವಾಕನ – ಹಸಿವಾಗುವಾಗ

ಹಸ್‌ನಕ್ಕಿ /*hasɨnakki*/ ನಾ. ಹಲಸಿನ ಬೀಜ. seeds of jackfruit. ವಾ: ಹಸ್‌ನಕ್ಕಿನ ಹೊರ್‌ಯದು. ಪ: ಹನ್ಸ್‌ನಕ್ಕಿ, ಹಲ್ಸ್‌ನಕ್ಕಿ

ಹಸ್ರ್ /*hasɨri*/ ನಾ. ಹಸಿರು ಬಣ್ಣ. green colour.

ಹಸ್‌ರಿದ್ದ ಕಡೆ ಮೇಯೋದು, ಬಿಸಿ ಇದ್ದಕಡೆ ಮಲ್ಗುದು(ಗಾ). ವಾ: ಎಲೆಗಳ ಬಣ್ಣ ಹಸ್‌ರ್.

ಹಸ್ರ್ ಮಂಡೋಳಿ /*hasrɨ manḍo:ḷi*/ ನಾ. ಒಂದು ಜಾತಿಯ ಹಾವು. a variety of snake. ವಾ: ಹಸ್ರ್ ಮಂಡೋಳಿತ ಹಾವ್.

ಹಸ್ಸಿ /*has'si*/ ನಾ. 1. ಉರಿಸು, 2. ಹೊತ್ತಿಸು. 1. to burn, 2. to kindle. ವಾ: ಹಸಿ ಸೌದೆಲಿ ಒಲೆ ಹಸ್ಸಿಕೆ ಆದುಲೆ.

ಹಳಗೆ /*haḷagɛ*/ ನಾ. ಹಾಲು ಕಾಯಿಸುವ ಪಾತ್ರೆ. a vessel to boil milk. ವಾ: ನಮ್ಮ ಚಾಮೆವ್ವನ ಕಾಲಲಿ ಹಳಗೆಲಿ ಹಾಲ್ ಕಾಯಿಸ್ತಿದ್ದದ್.

ಹಳಬ /*haḷaba*/ ನಾ. ಹಿರಿಯ ವ್ಯಕ್ತಿ. an elderly person. ವಾ: ಯಾವ್‌ದೆ ವಿಸ್ಯನಾರ್ ಹಳಬರ್‌ನ ಕೇಳ್ರೆ ಒಳ್ಳೆದ್, ಅವ್ಕೆ ಅನುಬೊವ ಜಾಸ್ತಿ ಇದ್ದದೆ. ಪ: ಹಳ್ಬರ್ – ಹಳಬರು(ಹಿರಿಯರು); ಹಳ್ಬ್ – ಹಿರಿಯರು

ಹಳು /*haḷu*/ ನಾ. ಕಳೆಗಿಡ. a weed. ವಾ: ಗದ್ದೆಲಿ ಬೆಳೆಗಳ ಮದ್ಯೆಲಿ ಬಾರಿ ಹಳು ಬೆಳ್ದುಟು.

ಹಳೆನೆಂಟ /*haḷenenṭa*/ ನಾ. ಹಳೆಯ ನೆಂಟರು. old relatives. ವಾ: ಹೊಸ ನಂಟ ಸಿಕ್ಕಿಕಾಕನ ಹಳೆ ನೆಂಟನ ಮರೆಕಾಗದ್.

ಹಳೆಗೇಟು /*haḷege:ṭu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಸುಳ್ಯ ನಗರದ ಜಾಗ. a locality in Suḷya Nagara village in Sullia Taluk of Dakshina Kannada District.

ಹಳೆದ್ /*haḷedɨ*/ ನಾ. ಹಳೆಯದು. old. ವಾ: ಈ ಕೊಳ್ಪೆ ಹಳೆದ್. ಎಲ್ಲ ಕಡೆ ತೂತ ಆಗಿ ಬೆಂಕಿ ಉರ್‌ಗಿಕೆ ಆದುಲೆ. ಪ: ಹಳೆದಕೆ – ಹಳೆಯದಕ್ಕೆ; ಹಳೆದಾತ್ – ಹಳೆಯದಾಯಿತು; ಹಳೆದಾದ್ಕೆ – ಹಳೆಯದಾದುದಕ್ಕೆ

ಹಳೆಮನೆ /*haḷɛmanɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಹಳ್ತ್ /*haḷti*/ ನಾ. 1. ಹಳೆಯದಾದ, 2. ಪಾರಂಪರಿಕ. 1. olden, 2. ancestral/traditional. ವಾ: ಈ ಕಳ್ಸಿಗೆ ಬಾರಿ ಹಳ್ತ್ ಆತ್ ಉಜ್ಜಿ ಉಜ್ಜಿ ತೂತಾಕೆ ಆವ್ಟು. ಪ: ಹಳ್ತಾದ್‌ಕೆ – ಹಳೆಯದಾದುದಕ್ಕೆ; ಹಳ್ತ್‌ನೆ – ಹಳೆಯದನ್ನೆ; ಹಳ್ತಾದ್ – ಹಳೆಯದಾಗಿದ್ದು; ಹಳ್‌ಉಗ್ಗಪ್ಪ್ – ಹಳೆಯದಾಯಿತು

ಹಳ್ಸಿದ್ /*haḷsidɨ*/ ನಾ. ಹಳಸಿದ. stale. ವಾ: ಹಳ್ಸಿದ್ ತಿಂಬಡನೆ ಹೊಟ್ಟೆ ಹಾಳಾದೆ. ಪ: ಹಳ್ಸಿಯುಟು

ಹಳ್ಸೆಲ್ /*haḷselɨ*/ ನಾ. 1. ಹಳಸಿದ, 2. ಆಹಾರದ ಸ್ವರೂಪ ಹಾಗೂ ರುಚಿ ಕೆಡು, 3. ಹಾಳಾಗು, 4. ಕೆಟ್ಟುಹೋಗು. 1. stale, 2. spoiled food, 3. spoiled, 4. spoilt. ವಾ: ಹಳ್ಸೆಲ್ ಅನ್ನನ ತಿಂಬಕಾದುಲೆ.

ಹಳ್ಸ್ /*haḷsɨ*/ ನಾ. 1. ಹಳಸಿದ, 2. ಆಹಾರದ ಸ್ವರೂಪ ಹಾಗೂ ರುಚಿ ಕೆಡು, 3. ಹಾಳಾಗು, 4. ಕೆಟ್ಟುಹೋಗು. 1. stale, 2. spoiled food, 3. spoiled, 4. spoilt. **ಅನ್ನ ಹಳ್ಸಿತ್ತ್ ನಾಯಿ ಹಸಿದಿತ್ತ್(ಗಾ).** ವಾ: ಗೈಪುನ ಸೆರಿ ಕುದಿ ಬರ್‌ಸದಿದ್ದರೆ ಹಳ್ಸುದು.

ಹಳ್ಸ್‌ಲನ್ನ /*haḷsɨlanna*/ ಕ್ರಿ. ಹಳಸಿದ ಅನ್ನ. stale rice. ವಾ: ಹಳ್ಸ್‌ಲನ್ನನ ತಿಂಬಕಾದೆನ?

ಹಳ್ಳಹಿಡ್ತ್ /*haḷḷahiḍti*/ ಕ್ರಿವಿ. 1. ಕೈಗೊಂಡ ಕೆಲಸ ಅಪೂರ್ಣವಾಗು, 2. ಅರ್ಧಂಬರ್ಧ ಕೆಲಸ. incomplete work. ವಾ: ಆ ಕೆಲ್‌ಸ ಹಳ್ಳ ಹಿಡ್ತ್ ಕಂಡದೆ.

ಹಳ್ಳ /*haḷḷa*/ ನಾ. 1. ಹೊಳೆ, 2. ನೀರು ಹರಿಯುವ ಸಣ್ಣ ತೋಡು, 3. ನದಿ, 4. ತಗ್ಗು. 1. a river, 2. a rill. **ಮಳೆಗೆ ಹೆದ್‌ರಿ ಹಳ್ಳಕ್ಕೆ ಹಾರ್ತ್(ಗಾ). ಹಳ್ಳಲಿ ಹರ್ದ್ ಹೋದ ನೀರಿನಂಗೆ(ನು).** ವಾ: ಮಕ್ಕ ಎಲ್ಲ ಸೇರಿಕಂಡ್ ಹಳ್ಳ ಕಡೆ ಹೋದೊ.

ಹಳ್ಳದ ಕರೆ /*haḷḷadakarɛ*/ ನಾ. ನದಿ ಅಥವಾ ತೋಡಿನ ದಡ. bank of the river. ಪ: ಸುದೆಕರೆ(ತು)

ಹಳ್ಳದಕ್ಕಲೆ /*halladakkalɛ*/ ನಾವಿ. 1. ನದಿ ಪಕ್ಕ, 2. ಹೊಳೆಕರೆ. near the river. ವಾ: ಹಿಂಬೊತ್ತ್ ಹಳ್ಳದಕ್ಕಲೆ ಹೋಕಾಗದ್.

ಹಳ್ಳಿ /*haḷḷi*/ ನಾ. ಗ್ರಾಮೀಣ ಪ್ರದೇಶ. country side. ವಾ: ಹಳ್ಳಿ ಬೊದ್ಕೆ ಸುಕ.

ಹಳ್ಳಿ ಬೊದ್ಕ್ /*haḷḷi bodkɨ*/ ನಾ. ಹಳ್ಳಿಯ ಜೀವನ. life in the country side. ವಾ: ಹಳ್ಳಿ ಬೊದ್ಕ್‌ನ ಗಮ್ಮತ್ತೆ ಬೇರೆ. ಗೊತ್ತಿದವ್ಕೆ ಗೊತ್ತು.

ಹಳ್ಸುದು /*haḷsudu*/ ಕ್ರಿ. 1. ಹಳಸಿ ಹೋಗು, 2. ಆಹಾರ ಕೆಟ್ಟು ಹೋಗು. 1. to stale, 2. food getting

spoiled. ವಾ: ಮೊದುವೆ ಮನೆದ್ ಅಡ್ಗೆ ಸುಮಾರ್ ಹಳ್ಳುದು.

ಹಳ್ಳೈನಾಯಿ^{1} /*haḷḷɛ na:yi*/ ನಾ. 1. ಮರಿ ಹಾಕಿದ ನಾಯಿ, 2. ಹೆಣ್ಣು ನಾಯಿ. 1. a dog that has delivered puppies, 2. a female dog. ವಾ: ಹಳ್ಳೈ ನಾಯಿ ಮೊರಿಗಳ ಬಾರಿ ಜೋಪಾನ ಮಾಡಿ ನೋಡಿಕಂಡದೆ. ಪ: ಬೊಗ್ಗಿನಾಯಿ(ತು)

ಹಳ್ಳೈನಾಯಿ^{2} /*haḷḷɛ na:yi*/ ನಾ. ಬೀದಿ ಸುತ್ತುವ ನಾಯಿ. a stray dog.

ಹಳ್ಳೈತಿರ್ಗುದು /*haḷḷetirgudu*/ ಕ್ರಿ. ಏನೊಂದು ಉದ್ದೇಶವಿಲ್ಲದೆ ತಿರುಗಾಡುವುದು, ಬೈಗುಳ ಪದ. to wander aimlessly. ವಾ: ಅಂವ ಸುಮ್ಮನೆ ಹಳ್ಳೈತಿರ್ಗುದು.

ಹಾಂ /*ha:ṁ*/ ಅ. ಹ್ಞಾಂ. a term indicating affirmation. ವಾ: ಹಾಂ ಎಸ್ಟ್ ದೊಡ್ಡ ಹಲ್‌ಸ್‌ನ ಕಾಯಿ.

ಹಾಂಹಾಂ! /*ha:ṁha:ṁə*/ ಅ. ಆಯಿತು. a term indicating affirmation. ವಾ: ಮೊದುವೆಲಿ ಸಾಸ್ತ್ರಕೆ ಬಂದ್ಬುಡಿ ಅತ್ತೆ. ಹಾಂ ಬನ್ನೆ.

ಹಾಂಕಾರ /*ha:ŋka:ra*/ ನಾ. 1. ದರ್ಪ, 2. ಅಹಂಕಾರ, 3. ಜಂಭ, 4. ಹಮ್ಮು. 1. excessive pride, 2. vanity, 3. pride, 4. ego. **ಹಾಂಕಾರಕ್ಕೆ ಉದಾಸೀನ ಮೊದ್ದ್(ಗಾ).** ವಾ: ಹಾಂಕಾರ ತೋರ್‌ಸಿರೆ ಅವರ್‌ನ ಹಂಗೆನೆ ಬುಡೊಕು.

ಹಾಂಗ /*ha:ŋga*/ ಅ. ಹಾಗ. in that way. ವಾ: ಓ ಹಾಂಗಾ. ನಂಗೆ ಇದ್ ಗೊತ್ತೇ ಇಲ್ಲೆ.

ಹಾಂಗರೆ /*ha:ŋgarɛ*/ ಅ. ಹಾಗಾದರೆ. so. ವಾ: ಹಾಂಗರೆ ನಿಮ್ಮೊಟ್ಟಿಗೆ ನಾನ್ ಬಾದು ಬೇಡನ? ಪ: ಹಾಂಗಾಗಿ – ಹಾಗಾಗಿ; ಹಾಂಗಾತ್; ಹಾಗಾಯಿತು; ಹಾಂಗಿತ್ತ್ – ಹಾಗಿತ್ತು; ಹಾಂಗಿದ್ದರೆ – ಹಾಗಿದ್ದರೆ; ಹಾಂಗಿರಕನ/ ಹಾಂಗಿರಿಕನ – ಹಾಗಿರುವಾಗ; ಹಾಂಗೂ ಹೀಂಗೂ – ಹಾಗೂಹೀಗೂ; ಹಾಂಗಿರಕಾಯ್ತ್ – ಹಾಗಿರಬೇಕಿತ್ತು; ಹಾಂಗಿರೊಕು – ಹಾಗಿರಬೇಕು

ಹಾಂಗಲ್ಲ /*ha:ŋgalla*/ ಅ. ಹಾಗೇ ಅಲ್ಲ. not that way. ವಾ: ಹಾಂಗಲ್ಲ ಮರಕ್ಕೆ ಬಡ್ಚುದು. ಗಳೆ ಕೊಡು ಇತ್ತ ನಾ ಬಡ್ಚಿನೆ. ಪ: ಹಾಂಗಲ್ಲಗಡ – ಹಾಗಲ್ಲವಂತೆ

ಹಾಂಗುಟ್ಟು /*ha:ŋguṭṭu*/ ಅ. 1. ಹಾಗೆ ಇದೆ, 2. ಹಾಂಗೇಂತ, 3. ಹಾಗೆಂದು. to affirm. ವಾ: ದೈಗೆ ಮುಚ್ಚಿಸಿದ್ ಹಾಂಗುಟ್ಟು.

ಹಾಂಗೂಹೀಂಗೂ /*ha:ŋgu:hi:ŋgu:*/ ಅ. ಹೀಗೂ, ಒಟ್ಟಾರೆಯಾಗಿ. in total. ವಾ: ಹಾಂಗೂ ಹೀಂಗೂ ಕತ್ತಲೆ ಆಕನ ಮನೆಗೆ ಬಂದ್ ಎತ್ತಿದೊ.

ಹಾಂಗೆ /*ha:ŋgɛ*/ ಅ. ಹಾಗೆ. in that way. **ಕತ್ತೆ ಹಂಗಿರುವ ಅತ್ತೆ ಇರೋಕು, ಮುತ್ತಿನಂಗಿರೋ ಗಂಡ ಇರೋಕು(ಗಾ).** ವಾ: ಹಾಂಗೆ ನೀವು ನೋಡಿರೆ ನಂಗೆ ನಾಚ್ಕೆ ಆದೆ.

ಹಾಂಗ್ಯಾಕು /*ha:ŋgya:ku*/ ಅ. ಹಾಗಾಗಬೇಕು. should happen that way. ವಾ: ಅದ್ ಹೀಂಗಲ್ಲ ಹಾಂಗ್ಯಾಕು.

ಹಾಂಟಿಯಾಡ್ದು /*ha:ṇṭiya:ḍdu*/ ನಾ. ಎಡತಾಕು. to go in between. ವಾ: ಕತ್ತಲೆಲಿ ಹಿಂಗ್ಯಾಕೆ ಹಾಂಟಿಯಾಡ್ದು, ದೀಪ ಹೋಸು ಒಮ್ಮೆ.

ಹಾಂಟ್ /*ha:ṇṭɨ*/ ನಾ. 1. ತಾಗು, 2. ತಗುಲು. 1. to touch, 2. touch. ವಾ: ಅತ್ತಂದಿತ್ತ ಒಡಾಡಿಕಂಡ್ ಹಾಂಟ್‌ದು ಯಾಕೆನೆ ಮಕ್ಕಳೆ. ಸುಮ್ಮನೆ ಒಂದ್ಕಡೆ ಕುದ್ರಿಕೆ ಬೊತ್ತಾ.

ಹಾಂಟ್‌ಸ್ /*ha:ṇṭisɨ*/ ಕ್ರಿ. 1. ತಾಗಿಸು, 2. ಡಿಕ್ಕಿಹೊಡೆ. 1. to touch, 2. to crash. ವಾ: ಗೋಡೆಗೆ ತಲೆನ ಹಾಂಟ್‌ಸ್‌ದು.

ಹಾಂತೆ /*ha:ntɛ*/ ನಾ. ಜಿರಳೆ. a small cockroach. **ಗತಿ ಇಲ್ಲದ ಗಂಡನ ಸೇರಿ, ಹಾಂತೆ ಕಚ್ಚಿ ಜೀವ ಹೋತ್(ಗಾ). ಉದ್ದ ಮೀಸೆನಾ ರಾಜ ಸರ್ ತಾ ಹೋದೆ ಸರ್ ತಾ ಬಂದೆ – ಹಾಂತೆ(ಒ).** ವಾ: ಹಾಂತೆಲಿ ಹೆಬ್ಬಾಂತೆ, ಮನೆಹಾಂತೆ, ಕಾಡ್‌ಹಾಂತೆತೆಲ್ಲಾ ವಳೊ. ಪ: ಹಾಂತ

ಹಾಂತ್ಕಂಡ್ /*ha:ntkaṇḍɨ*/ ನಾ. 1. ಇಷ್ಟವಿಲ್ಲದಿದ್ದರು ಪದೇ ಪದೇ ಮೇಲೆ ಬಿದ್ದು ಹೋಗು, 2. ಪದೇ ಪದೇ ಮನೆಗೆ ಹೋಗು. 1. to meet someone frequently, 2. to visit others without any invitation. ವಾ: ಹಾಂತ್ಕಂಡ್ ಹೋಗೊ ಬುದ್ಧಿ ಇರಿಕಾಗದ್. ಪ: ಓಂಗಿಕೊಂಡ್ ಹೋದ್

ಹಾಂತ್ಕಂಡ್ ಬಾದು /*ha:ntkaṇḍɨ ba:du*/ ನಾ. ಬಂಡಗೆಟ್ಟು ಬರು. to visit someone without

invitation. ವಾ: ಎಸ್ಟ್ ಹೇಳಿರು ಹಾಂತ್ಕಂಡ್ ಬಾದು ಮರ್ಯಾದಿ ಇಲ್ಲದವ್ರಂಗೆ.

ಹಾಕ /*Ha:ka*/ ಕ್ರಿ. 1. ಬಡಿಸಿಕೊ, 2. ಹಾಕಿಕೊ. 1. to serve, 2. to put on. ವಾ: ಅನ್ನ, ಆಂಬರ, ಉಪ್ಪನಕಾಯಿ ಎಲ್ಲ ಒಂದೇ ಕಡೆ ಉಟ್ಟು ನೀನೆ ಹಾಕ ಹೋಗು. ಪ: ಹಾಕಕು – ಹಾಕಬೇಕು; ಹಾಕಿಕೆ – ಹಾಕಿಕೊಳ್ಳುವುದಕ್ಕೆ; ಹಾಕಂಡ್ – ಹಾಕಿಕೊಂಡು; ಹಾಕಂಡ – ಹಾಕಿಕೊಂಡೆಯಾ/ ಹಾಕಿಕೊಂಡ; ಹಾಕಂಬನ – ಹಾಕಿಕೊಳ್ಳುವ; ಹಾಕಂಡವೆ – ಹಾಕಿಕೊಳ್ಳುತ್ತಾರೆ

ಹಾಕಂಬಕಿರುವ /*ha:kambakiruva*/ ಕ್ರಿ. ಹಾಕಿಕೊಳ್ಳಲು ಇರುವ. something to be worn. ವಾ: ಹಾಕಂಬಕಿರುವ ಬಟ್ಟೆನ ತೆಗ್ದಿಸ್.

ಹಾಕಂಬೊದು /*ha:kambodu*/ ಕ್ರಿ. 1. ಹಾಕಿಕೊಳ್ಳುವುದು, 2. ಧರಿಸು, 3. ಅಂಗಿ ಹಾಕಂಬೊದು. to wear. ವಾ: ಸರ್ಟ್ ಹಾಕಂಬೊದು.

ಹಾಕಿಟು /*ha:kitu*/ ನಾ. 1. ಹಾಕಿದ್ದಾನೆ, 2. ಸಾರಾಯಿ ಕುಡಿದವನು. 1. inebriated, 2. intoxicated with alcohol. ವಾ: ಅಂವ ಬಾರಿ ಮಾತಾಡಿದೆ, ಹಣ್ಣ ಹಾಕಿಟು ಕಂಡದೆ.

ಹಾಕಿತ್ಲೆ /*ha:kitlɛ*/ ಕ್ರಿ. ಹಾಕಲಿಲ್ಲ. not worn. ವಾ: ನಿನ್ನೆ ಪೇಪರ್ ಯಾಕೆ ಹಾಕಿತ್ಲೆ.

ಹಾಕಿನೆ /*ha:kinɛ*/ ಕ್ರಿ. ಹಾಕುತ್ತೇನೆ. will wear/ will put. ವಾ: ನಿಂಬುಳಿ ಸುಮಾರ್ ಉಟ್ಟು. ಉಪ್ಪನಕಾಯಿ ಹಾಕಿನೆ ಅಲಾ.

ಹಾಕಿವೆ /*ha:kivɛ*/ ಕ್ರಿ. ಹಾಕುತ್ತಾರೆ. will wear/ will put. ವಾ: ಹುತ್ತೆರಿಲಿ ಪಾಯ್ಸಕೆ ಸಣ್ಣ ಕಲ್ಲ್ ಬತ್ತ ಹಾಕಿವೆ. ನಮ್ಮ ಕಡೆ ಹಂಗೆನೆ. ತಿಂಬಕನಕಲ್ಲ್ ಸಿಕ್ಕಿರೆ ಕಲ್ಲಾಯ್ಸತ ಹೇಳ್ವೆ.

ಹಾಕಿವೆಗಡ /*ha:kivɛgaḍa*/ ಕ್ರಿ. ಹಾಕುತ್ತಾರಂತೆ. may wear/may put. ವಾ: ಬ್ಯಾಂಕಿಗೆ ದುಡ್ಡ್ ಹಾಕಿವೆಗಡ.

ಹಾಕುಲೆ /*ha:kulɛ*/ ಕ್ರಿ. ಹಾಕುವುದಿಲ್ಲ. won't wear/ won't put. ವಾ: ಇಲ್ಲೆಪ ನಾ ಹೈದಗಳಂಗೆ ಸುರಾಲ್ ಎಲ್ಲ ಹಾಕುಲೆ. ಪ: ಹಾಕಿತ್ಲೆ – ಹಾಕಲಿಲ್ಲ; ಹಾಕುದುಲೆ – ಹಾಕುವುದಿಲ್ಲ

ಹಾಕ್ /*ha:kɨ*/ ಕ್ರಿ. 1. ಹಾಕು, 2. ನೀಡು, 3. ನೀರ್ ಹಾಕ್, 4. ಗಾಳಿ ಹಾಕ್, 5. ಗಾಳಹಾಕ್, 6. ಊಟಹಾಕ್. 1. to put something, 2. to give something, 3. to put water, 4. to fan, 5. to hook, 6. to serve food. **ನೀರ್‌ಗೆ ಹಾಕ್(ನು).** ವಾ: ಮೋರೆಕೆ ಗಾಳಿ ಹಾಕ್.

ಹಾಗಲ /*Ha:gala*/ ನಾ. ಹಾಗಲಕಾಯಿ. bitter gourd. **ಹಾಗಲ ಹಣ್ಣಾದರೇನ್, ಸೊಪ್ಪಾದರೇನ್, ಹಗಲಕಾಯಿ ಕಂಯಿಂತೇಳಿ ಇಡಿಕಾಗದ್, ಅತ್ತೆ ಬೊಯ್ದದ್‌ಂತೇಳಿ ಮೊರ್ಡಿಕಾಗದ್(ಗಾ).** ವಾ: ಹಾಗಲದ ರುಚಿ ಕಂಯಿ.

ಹಾಜೀರ್ /*ha:ji:ri*/ ನಾ. 1. ಹಾಜರಿ, 2. ಇರುವಿಕೆ. 1. presence 2. being present. ವಾ: ಅವ್ವಪ್ಪ ಇಬ್ಬೊರ್ ಇಸ್ಕೂಲ್‌ಲಿ ಹಾಜೀರ್ ಇರೊಕುಗಡ.

ಹಾಡಾವಳೆ /*ha:ḍa:vaḷe*/ ನಾ. ಪುರಾಣಕತೆ. an epic story. ವಾ: ಹಾಡಾವಳೆ ಕೇಳಿರೆ ಅದರಂದ ಕಲಿಯುವಂತ ವಿಷಯ ಸಾಕಷ್ಟಿದ್ದದೆ.

ಹಾಡಿಕಲ್ಲು /*ha:ḍikallu*/ ನಾ. 1. ಕುಟುಂಬ, 2. ಮನೆತನ,3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮಡಪ್ಪಾಡಿ ಗ್ರಾಮದ ಜಾಗ. 1. family, 2. lineage, 3. a locality in Madappadi village in Sullia Taluk of Dakshina Kannada District.

ಹಾಡಿವೆ /*ha:ḍive*/ ಕ್ರಿ. ಹಾಡುತ್ತಾರೆ. will sing. ವಾ: ನಾಡ್‌ಲಿ ಹಿಂಬೊತ್ತ್ ಮಕ್ಕ ಎಲ್ಲ ಸೇರಿಕಂಡ್ ಹಾಡಿವೆ.

ಹಾಡ್^{1} /*ha:ḍɨ*/ ನಾ. ಹಾಡು. to sing. ವಾ: ಅಜ್ಜಿಕಳ ಹಕ್ಕಲೆ ಹೋದ್ರೆ ಎಲ್ಲತರದ ಹಾಡ್ ಸಿಕ್ಕುದು. ಪ: ಹಾಡ್ತಿತ್ತ್ – ಹಾಡುತ್ತಿದ್ದಳು/ನು; ಹಾಡ್ತಿದ್ದೊ – ಹಾಡುತ್ತಿದ್ದರು; ಹಾಡಿಕೆ – ಹಾಡಲು

ಹಾಡ್^{2} /*ha:ḍɨ*/ ನಾವಿ. ಹಗಲು ಎಂಬ ಪದಕ್ಕೆ ನಾಮ ವಿಶೇಷಣ. a day. ವಾ: ಈಗೆಲ್ಲ ಹಾಡ್ ಹಗ್‌ಲೆ ಕಳ್ಳರ್ ಮನೆಗೆ ನುಗ್ಗಿವೆ.

ಹಾಡ್ತನ /*ha:ḍtana*/ ನಾ. ಪಾಡ್ದನ. folk songs of Dakshina Kannada and Udupi districts. ವಾ: ತುಳು ನಾಡ್‌ಲಿ ಹಾಡ್ತನ ಹೆಚ್ಚಿ ಕಂಡ್ ಬಂದದೆ.

ಹಾದರ /*ha:dara*/ ನಾ. 1. ವ್ಯಭಿಚಾರ, 2. ಜಾರತನ. 1. lascivious behaviour, 2. immoral behaviour. **ಹರೆಯ ಇರ್‌ಕನ ಹಾದರ ಮಾಡಿ, ಮುಪ್ಪು ಬಾಕನ**

ಆಚಾರ ಹೇಳ್ತ್(ಗಾ). ವಾ: ಹಾದರ ಮಾಡಿ ಬೊದ್ಕಿಕಾಗದ್.

ಹಾದರಗಿತ್ತಿ /*ha:daragitti*/ ನಾ. 1. ಸೂಳೆತನ, 2. ಬೆಲೆವೆಣ್ಣು, 3. ನಡತೆಗೆಟ್ಟವಳು. 1. prostitution, 2. a prostitute, 3. an immoral woman. ವಾ: ಹಾದರಗಿತ್ತಿತ ಬೊಯ್ಯದೇಕೆತ ಹೇಳ್ರೆ ಅವ್‌ಳೊಂದ್ ಹಾದರಗಿತ್ತಿ.

ಹಾದಿ /*ha:di*/ ನಾ. 1. ದಾರಿ, 2. ರಸ್ತೆ, 3. ಬೀದಿ, 4. ಮಾರ್ಗ. 1. path, 2. road, 3. way, 4. route. **ಹಾದಿ ಬುಟ್ಟವಂಗೆ ಹದಿನೆಂಟ್ ದಾರಿತ(ಗಾ).** ವಾ: ಹಾದಿಲಿ ಹಿಂಗೆಲ್ಲ ಕಾಲ್ ನೀಂಡಿ ಕೂರ್‌ಬಡ ಎಡ್ಡಿ ಬಿದ್ದ್‌ಬುಡ್‌ವೊ, ಅತ್ತನಬರಿನ ದಾರಿಲೆ ಬೊನ್ನಿ.

ಹಾನಿ[1] /*ha:ni*/ ನಾ. 1. ಅಳತೆಯ ಮಾನ, 2. ಎರಡು ಸೇರು~ ಒಂದು ಹಾನಿ, 3. ಮಾಂಸದ. two seers. ವಾ: ಈಗೆಲ್ಲ ಹಾನಿ ಅಳೆಯಕೆ ಹೋಗಲಿ ನೋಡಿಕು ಸಿಕ್ಕುಲೆ ಕಂಡದೆಲಾ.

ಹಾನಿ[2] /*ha:ni*/ ಕ್ರಿ. 1. ತೊಂದರೆ, 2. ನಷ್ಟ. 1. trouble, 2. loss. ವಾ: ಮೊನ್ನೆನ ಮಳೆಲಿ ಬಾರಿ ಹಾನಿ ಆತ್.

ಹಾನ್ಗೆ /*ha:n'ge*/ ಅ. ಅ. 1. ಹಾಗೆ, 2. ಆ ರೀತಿಯಲ್ಲಿ, 3. ಆ ಕ್ರಮದಲ್ಲಿ. 1. in that way, 2. in that manner, 3. in that order. ವಾ: ಹಾನ್ಗೆ ಸ್ವಲ್ಪ ಹೊತ್ತ್ ನಿತ್ತ್‌ಕ. ಪ: ಹಾಂಗೆ

ಹಾಬಿ /*ha:bi*/ ನಾ. ಮಭಾ. ಹುಳ. a worm (in the vocabulary of children). ವಾ: ಅಲ್ಲಿ ಹಾಬಿ ಹರ್‌ಕಂಡ್ ಹೋದೆ.

ಹಾಮಜಿ /*ha:maji*/ ನಾ. 1. ಹಾವಸೆ, 2. ಪಾಚಿ. moss. ವಾ: ಹಾಮಜಿ ಮೇಲೆ ಕಾಲ್ ಇಸಿರೆ ಜಾರ್‌ದು.

ಹಾಮಸೆ /*ha:mase*/ ನಾ. 1. ಪಾಚಿ, 2. ಪಾಮಜಿ(ತು). moss.

ಹಾಯದು /*ha:yadu*/ ಕ್ರಿ. 1. ಹಾಯುವುದು, 2. ಅಪ್ಪಳಿಸು, 3. ಡಿಕ್ಕಿಹೊಡೆ, 4. ಆಕ್ರಮಣಮಾಡು, 5. ಮೇಲೆಬೀಳು, 6. ಕೋಡಿನಿಂದ ತಿವಿ. 1. to mow down, 2. to strike, 3. to crash, 4. to attack, 5. to fall, 6. cattle attacking with their horns. ವಾ: ಹೋರಿ ಹಕ್ಕಲೆ ಹೋಬಡ ಎಲ್ಲಾರ್ ಹಾಯದು.

ಹಾರ /*ha:ra*/ ನಾ. 1. ಆಹಾರ, 2. ದೇಹದ ಪೋಷಣೆಗೆ ಮತ್ತು ಬೆಳವಣಿಗೆಗೆ ಅವಶ್ಯವಾದ, ಜೀರ್ಣವಾಗುವಂಥ ಖಾದ್ಯ ವಸ್ತು. 1. food, 2 nutrients required for life. ವಾ: ಪ್ರತಿ ಜೀವಿಗೂ ಹಾರ ಬಾರಿ ಮುಕ್ಯ.

ಹಾರಂವ /*ha:ranva*/ ನಾ. 1. ಬ್ರಾಹ್ಮಣ, 2. ಪುರೋಹಿತ. 1. a brahmin, 2. a priest who performs rituals. ವಾ: ಹಾರಂವ ಪೂಜೆಗೆ ಬಾಕನ ಹೊತ್ತಾಗಿತ್ತ್.

ಹಾರಣೆ /*ha:raṇe*/ ನಾ. 1. ಹಾವು ರಾಣಿ, 2. ಸರೀಸೃಪಕೆ ಸೇರಿದ ಒಂದು ಜೀವಿ. 1. a skink, 2. a lizard. ವಾ: ಹಾರಣೆನ ಕೊತ್ತಿಗ ಬೆರ್‌ಸಿ ಹಿಡ್ದೊ.

ಹಾರಾಟ /*ha:ra:ṭa*/ ಕ್ರಿ. 1. ಅಬ್ಬರ, 2. ಗತ್ತು, 3. ಬಡಾಯಿ, 4. ಕೂಗಾಟ. 1. hullabaloo, 2. excessive pride, 3. exaggerate, 4. shouting. ವಾ: ಹೊರೆಗೆ ಹೋದು ಬೇಡತ ಹೇಳ್ದಕ್ಕೆ ಅಂವಂನ ಹಾರಾಟ ನೋಡ್ ಒಮ್ಮೆ, ಅಂವ ದುಡ್ಡು ಉಟ್ಟುತ ಬಾರಿ ಹಾರಾಡ್ಡೆ.

ಹಾರಾಡಿ /*ha:ra:ḍi*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಹಾರಾಡ್ /*ha:ra:ḍi*/ ಕ್ರಿವಿ. 1. ಸಿಡಿಮಿಡಿಗೊಳ್ಳು, 2. ಸಿಟ್ಟಿನಿಂದುಂಟಾಗುವ ಉದ್ರೇಕಕಾರಿ ಸ್ಥಿತಿ, 3. ಅತಿರೇಕದ ವರ್ತನೆ. 1. to get irritated, 2. to get angry, 3. excessive behaviour. ವಾ: ಅಂವ ಮಾತಾಡಿಕೆ ಮುಂದೆ ಹಾರಾಡ್‌ದು.

ಹಾರಿಕೆಮಾತ್ /*ha:rikɛ ma:ti*/ ನಾ. 1. ಸ್ಪಷ್ಟವಲ್ಲದ ಮಾತು, 2. ತಪ್ಪಿಸಿಕೊಳ್ಳುವಂತಹ ಮಾತು. 1. to talk unclearly, 2. to evade. ವಾ: ಹಾರಿಕೆ ಮಾತ್ ಬೇಡ. ನಿನ್ನಂದ ಆದೆನ ಇಲ್ಲೆನ ಹೇಳ್.

ಹಾರೆ /*ha:reɛ*/ ನಾ. 1. ಕಬ್ಬಿಣದ ಸಲಾಕೆ, 2. ಹಾರೆ. crow-bar. ವಾ: ನೆಲ ಅಗ್ಯಕೆ ಹಾರೆ ಇದ್ದರೆ ಒಳ್ಳೆದ್.

ಹಾರೆಂಗೋಲ್ /*ha:rɛŋgo:li*/ ನಾ. ಮಣ್ಣು ಅಗೆಯಲು ಬಳಸುವ ಕಬ್ಬಿಣದ ಸಲಾಕೆ. a crow-bar. ವಾ: ಹಾರೆಂಗೋಲ್ ಇದ್ದಿದ್ದರೆ ಲಾಯ್ಕಲಿ ದೈ ನೆಡಿಕೆ ಗುಂಡಿ ತೆಗೆಯಕಾಗಿತ್ತ್. ಪ: ಸೈಂಗೋಲ್

ಹಾರೆಯಿಸ್ /*ha:rɛyisi*/ ನಾ. 1. ಹಾರೈಸು, 2. ಅಪೇಕ್ಷಿಸು, 3. ಶುಭಕೋರು. 1. to bless, 2. to expect, 3. to bless. ವಾ: ಹಿರಿಯರ್ ಹಾರೆಯಿಸಿರೆ ಒಳ್ಳೆದಾದೆ.

ಹಾರ್ /*ha:rɨ*/ ಕ್ರಿ. 1. ಹಾರು, 2. ನೆಗೆಯು. 1. to jump, 2. to leap. **ಎತ್ತ್ ಹಾರಿಕೆ ಮುಂದೆ ಹೊದಿಕೆ ಹರ್ದಂಗೆ(ಗಾ). ಬೇಲಿಮ್ಯಾಲೆ ಬಿಳಿ ಎತ್ತ್ ಹಾರ್ದೆ – ಬೂದಿ(ಒ).** ವಾ: ನೀ ಈ ಚೋಡಿನ ಹಾರ್, ಮರಂದ ಹಾರ್‌ಬಡ.

ಹಾರ್ ಗಪ್ಪೆ /*ha:rɨ gappɛ*/ ನಾ. ಒಂದು ವಿಧದ ಕಪ್ಪೆ. a variety of frog. ವಾ: ಅಲ್ಲಿ ನೋಡ್ ಹಾರ್ ಗಪ್ಪೆ.

ಹಾರ್ಕಚ್ಚೆ /*ha:rkaccɛ*/ ನಾ. 1. ದೋತರ, 2. ಉತ್ತರೀಯ, 3. ವಲ್ಲಿ, 4. ದೋತ್ರ. dhoti. ವಾ: ಹಾರ್ಕಚ್ಚೆ ಗಾಳಿಗೆ ಹಾರಿ ಹೋತು.

ಹಾರ್ತಿ /*ha:rti*/ ನಾ. ಬ್ರಾಹ್ಮಣ ಸ್ತ್ರೀ. a brahmin woman. ವಾ: ಪೂಜೆಲಿ ಹಾರ್ತಿಗೆ ಸೀರೆ, ಅರ್‌ಸಣ, ಕುಂಕುಮ ಕೊಟ್ಟದ್.

ಹಾರ್ತ್ /*ha:rtɨ*/ ಕ್ರಿ. ಹಾರಿಹೋಯಿತು. flew away. ವಾ: ಹಕ್ಕಿ ಹಾರ್ತ್, ಅಂವ ಕುದ್ದಲ್ಲಿಂದಲೇ ಹಾರ್ತ್.

ಹಾರ್ದು /*ha:rdu*/ ಕ್ರಿ. 1. ಹಾರು, 2. ನೆಗೆಯು. 1. to jump, 2. to leap. **ದಂಡ್‌ಗೆ ಹೆದ್ರಿ ಕೆರೆಗೆ ಹಾರ್ದಂಗೆ(ಗಾ).** ವಾ: ಈಜಿಕೆ ಮಕ್ಕ ಹೊಳೆಗೆ ಹಾರ್‌ದು. ಪ: ಹಾರ್ದುಲೆನ – ಹಾರುವುದಿಲ್ಲವ

ಹಾರ್ನಡ್ಕ /*ha:rnaḍka*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಹಾರ್ಬೆಕ್ಕ್ /*ha:rbekkɨ*/ ನಾ. ಮರದಿಂದ ಮರಕ್ಕೆ ಜಿಗಿಯುವ ಬೆಕ್ಕಿನ ಸ್ವರೂಪದ್ದು. a jumping cat. ವಾ: ಮರಂದ ಮರಕ್ಕೆ ಹಾರ್‌ದೆಗಡ ಹಾರ್‌ಬೆಕ್ಕ್ ನೀ ನೋಡ್ಯೊಳನ? ಪ: ಕುತ್ರಿ

ಹಾರ್ಸಿಕಂಬೊದು /*ha:rsikambodu*/ ಕ್ರಿ. ಹಾರಿಸಿಕೊಳ್ಳು. to invite trouble by one's action. **ಕೆಸರ್‌ಗೆ ಕಲ್ಲ್ ಹೊಡ್ದ್ ಮೈಗೆ ಹಾರ್ಸಿಕಂಬದು(ಗಾ).** ವಾ: ಕೆಸ್ರ್‌ಗೆ ಕಲ್ಲ್ ಹಾಕಿ ಮೊಕಕೆ ಹಾರ್ಸಿಕಂಬೊದು ಯಾಕೆ?

ಹಾರ್ಸೊದು /*ha:rsodu*/ ಕ್ರಿ. ಗಟ್ಟಿಸಾರು. thick curry.

ಹಾಲಗ್ಗ /*ha:lagga*/ ನಾ. ಒಂದು ವಿಧದ ಬಳ್ಳಿ. a variety of vine/creeper/climber. ವಾ: ಹಾಲಗ್ಗತ ಒಂದ್ ಜಾತಿನ ಬೊಳ್ಳಿ. ಪ: ಹಾಲ್ ಬೊಳ್ಳಿ

ಹಾಲಳಗೆ /*ha:laḷage*/ ನಾ. ಹಾಲು ಕಾಯಿಸುವ ಮಣ್ಣಿನ ಮಡಕೆ. an earthen pot to boil milk. ವಾ: ಹಿಂದೆನ ಕಾಲಲಿ ಹಾಲಳಗೆಲಿ ಹಾಲ್ ಕಾಯಿಸ್ತಿದ್ದೊಗಡ.

ಹಾಲೆ /*ha:le*/ ನಾ. ಬೆಳ್ಳಗೆ. white. ವಾ: ಅದ್ ಹಾಲೆ ಗೂಡೆ.

ಹಾಲೆಹಣ್ಣ್ /*ha:lɛ haṇṇɨ*/ ನಾ. ಮೇಣದಿಂದ ಕೂಡಿದ ಸಿಹಿಯಾದ ಬಲು ರುಚಿಯಾದ ಕಾಡು ಹಣ್ಣು. a sweet, forest fruit. ವಾ: ಹಾಲೆ ಹಣ್ಣ್ ತಿಂಬಕೆ ಲಾಯ್ಕಾದೆ. ಆದ್ರೆ ತಿಂಬಕನ ಮಾಯಣಂದಾಗಿ ಬಾಯಿ ಅಂಟಿಕಂಡಂಗೆ ಆದೆ.

ಹಾಲೆಮಜಲು /*ha:lɛmajalu*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಹಾಲೆಮರ /*ha:lɛmara*/ ನಾ. 1. ಪಾಲೆಮರ, 2. ದೀಪಾವಳಿ ಯಲ್ಲಿ ಬಲೀಂದ್ರ ಹಾಕಲು ಬಳಸುವ ಮರ, 3. ಇದರ ಕೆತ್ತೆಯನ್ನು ಔಷಧಿಯಾಗಿ ಬಳಸುತ್ತಾರೆ. 1. blackboard tree or devil's tree, 2. human figurine is made out of this tree during Deepavali, 3. a medicinal tree. ವಾ: ಹಾಲೆಮರದ ಕೆತ್ತೆನ ಮೊದ್ದುಗೆ ಬಳ್ಸಿವೆ.

ಹಾಲೆಸಂಡ್ /*ha:lesaṇḍɨ*/ ನಾ. 1. ಬಿಳಿ ಬಣ್ಣದ ದ್ರವವನ್ನು ಸ್ರವಿಸುವ ಏಡಿ, 2. ಮೆದುವಾದ ಚಿಕ್ಕ ಏಡಿ. 1. a crab that releases white liquid, 2. a small soft crab. ವಾ: ಹಾಲೆಸ್‌ಂಡ್‌ನ ತಿಂಬದುಲೆ.

ಹಾಲ್ /*ha:lɨ*/ ನಾ. 1. ಹಾಲು, 2. ಕ್ಷೀರ. milk. ವಾ: ರಾತ್ರೆ ಮೊಲ್ಗಿಕನ ಒಂದ್ ಗಲಾಸ್ ಹಾಲ್ ಕುಡಿಯೊಕು.

ಹಾಲ್ ಕಂಬ /*ha:lɨ kamba*/ ನಾ. ಹಾಲು ಬರುವಂತಹ ಮರದ ಕಂಬ. a wooden pillar, from a tree which releases white liquid from its bark-milk post. ವಾ: ಮೊದುವೆಲಿ ಚಪ್ಪರ ಹಾಕಿಕನ ಒಂದ್ ಕಂಬ ಹಾಲ್ ಕಂಬ ಆಗಿರೊಕು.

ಹಾಲ್ ಕಮ್ಮಿ /*ha:lɨ kammi*/ ನಾ. ಹಾಲು ಕಡಿಮೆ. less milk. ವಾ: ಹಸ್ ಹಾಲ್ ಕೊಡ್ದು ಕಮ್ಮಿ ಮಾಡಿಟು.

ಹಾಲ್ ಗುಂಬ /*ha:lɨ gumba*/ ನಾ. ಹಾಲಿನ ಪಾತ್ರೆ. a wooden post, from a tree which releases white liquid from its bark. ವಾ: ಹಾಲ್ ಗುಂಬನೆಲ್ಲ ನಾವು ನೋಡ್ತೆಲೆ. ಹೇಳ್ದ್ ಕೇಳ್ದಷ್ಟೆ.

ಹಾಲ್ ಬಾಯಿ /*ha:lɨ ba:yi*/ ನಾ. ಶಿಶುವಿನ ಕಡೆ

ಬಾಯಿ. mouth of toddler who is still brestfeeding. ವಾ: ಕೂಸುನ ಬಾಯಿ ಹಾಲ್ ಹಾಲ್ ವಾಸ್‌ನೆ ಬಾದು.

ಹಾಲ್ ಬೆತ್ತ /*ha:lɨ betta*/ ನಾ. ಬೆತ್ತಗಳಲ್ಲಿ ಒಂದು ಜಾತಿ. a variety of cane. ವಾ: ಹರಿಸೇವೆಲಿ ಹಾಲ್ ಬೆತ್ತನ ದೇವ್ರು ಬಾಕನ ಹಿಡ್ಕಂಬೊಕೆ ಬಳ್ಸುವೆ.

ಹಾಲ್ ಬೊಳ್ಳಿ /*ha:lɨ bɔḷḷi*/ ನಾ. ಒಂದು ವಿಧದ ಬಳ್ಳಿ, a variety of creeper/vine. ವಾ: ಅವು ಹಾಲ್ ಬೊಳ್ಳಿನ ಹುಡ್‌ಕುದು.

ಹಾಲ್ ಮಣಿ /*ha:lɨ maṇi*/ ನಾ. 1. ಕಪ್ಪು ಬಿಳಿ ಹಾಲು ಮಣಿ, 2. ದೃಷ್ಟಿ ಮಣಿಯ ಹಾರ. 1. beads, 2. Bracelet of black and white beads. ವಾ: ಸಣ್ಣ ಕೂಸುನ ಕೈಗೆ ಕಾಲ್‌ಗೆ ದೃಷ್ಟಿ ಆಕಾಗದ್‌ತ ಹಾಲ್ ಮಣಿ ಹಾಕಿವೆ.

ಹಾಲ್‌ಕುಕ್ಕರ /*ha:lɨkukkara*/ ನಾ. ಒಂದು ವಿಧದ ಅಣಬೆ. a variety of mushroom. ವಾ: ಹಾಲ್‌ಕುಕ್ಕರತ ಒಂದ್ ಜಾತಿನ ಅಳುಂಬು.

ಹಾಲ್ಗೆಂಡೆ /*ha:lgɛṇḍɛ*/ ನಾ. 1. ಆಲೂಗೆಡ್ಡೆ, 2. ಸೋಲನೇಸಿ ಕುಟುಂಬಕ್ಕೆ ಸೇರಿದ ತರಕಾರಿ ಸಸ್ಯ. 1. potato, 2. a tuber belonging to the family of Solanum tuberosum. ವಾ: ಹಾಲ್ಗೆಂಡೆ ಸಾದಾರಣ ಎಲ್ಲ ಗೈಪಿಗು ಬೇಕಾದೆ ಅಲ.

ಹಾಲ್ತುಪ್ಪ /*ha:ltuppa*/ ನಾ. 1. ಮದುಮಕ್ಕಳಿಗೆ ಮಾಡುವ ಶಾಸ್ತ್ರ, 2. ಒಂದು ಕಂಚಿನ ಬಟ್ಟಲಿನಲ್ಲಿ ಹಾಲು, ಒಂದೆರಡು ಚಮಚೆ ತುಪ್ಪ ಹಾಕಿ ಎದುರಿನಲ್ಲಿ ಒಂದು ಮಣೆಯ ಮೇಲೆ ಬಟ್ಟಲನ್ನು ಇಟ್ಟು ಒಂದು ಚೆಂಬು ನೀರನ್ನು ಇಟ್ಟು ವರನ/ವಧುವಿನ ಬಲಕೈಯನ್ನು ಮೊದಲು ನೀರಿಗೆ ಮುಳುಗಿಸಿ ನಂತರ ಹಾಲಿನ ಬಟ್ಟಲಿಗೆ ಮುಳುಗಿಸಿ ಮುತ್ತೈದೆಯರು ಶಾಸ್ತ್ರ ಮಾಡುವುದು. 1. ritual perfomed during a marriage, 2. milk-ghee ritual performed by the bridge and the groom. ವಾ: ಮೊದುಮಕ್ಕಳ ಒಟ್ಟಿಗೆ ಕೂರ್‌ಸಿ ಹಾಲ್ತುಪ್ಪ ಸಾಸ್ತ್ರ ಮಾಡಿವೆ.

ಹಾಲ್ಪರೆ /*ha:lparɛ*/ ನಾ. ದೊಡ್ಡ ಮನೆಯ ಸುತ್ತಲಿನ ಇತರ ಮನೆಗಳು. small houses surrounding the main house. ವಾ: ಹಾಲ್ಪರೆ ಕಡೆಂದ ಬಂದದ್.

ಹಾವಿ /*ha:vi*/ ನಾ. ಅ. ಹುಳ(ಮಕ್ಕಳ ಭಾಷೆ). a folk game. ವಾ: ಜೆಗ್‌ಲ್‌ಲಿ ಹಾವಿ ಹೋದೆ.

ಹಾವು ಎಣೆಯಾಡ್ದು /*ha:vu eṇeya:ḍdu*/ ನಾ. 1. ಹಾವು ಹೆಣೆಯಾಡುವುದು, 2. ಕೇರೆ ಹಾವು ಮತ್ತು ನಾಗರ ಹಾವಿನ ಸಮಾಗಮ ಎನ್ನುವ ನಂಬಿಕೆ. 1. snakes intertwining, 2. belief in mating of a Cobra with a russel viper. ವಾ: ಹಾವು ಎಣೆಯಾಡ್ದು ನೋಡಿಕಾಗದ್‌ತ ಹೇಳಿವೆ.

ಹಾವುಚೂಲಿ /*ha:vu cu:li*/ ನಾ. ಪೊರೆ ಕಳಚಿಕೊಂಡ ಹಾವು. a snake that has shed its skin. ವಾ: ಹಾವು ಚೂಲಿ ಅಲ್ಲಿ ಬಿದ್ದುಟು.

ಹಾವು ಬುಸುಗುಡ್ದು /*ha:vu busuguḍḍu*/ ಕ್ರಿವಿ. 1. ಹಾವು ಬುಸುಗುಟ್ಟುವುದು. hissing snake. ವಾ: ಹೆಂಗೆ ಹಾವು ಬುಸುಗುಡ್ದುತ ನೋಡಕಿತ್.

ಹಾವುಜಡೆ /*ha:vujaḍɛ*/ ನಾ. ಹಾವಿನಂತಹ ಜಡೆ. hood of a snake. ವಾ: ಅವುಳು ಹಾವುಜಡೆ ಹಾಕಿಟು.

ಹಾವುಮೀನ್ /*ha:vumi:nɨ*/ ನಾ. ಹೊಳೆಗಳಲ್ಲಿ ಕಂಡು ಬರುವ ಹಾವಿನಂತೆ ಕಾಣುವ ಸುಮಾರು ಒಂದರಿಂದ ಎರಡು ಅಡಿ ಉದ್ದದ ಕಪ್ಪು ಮೀನು. snake fish, found in fresh water. ವಾ: ಹಾವುಮೀನ್ ಉದ್ದ ಇದ್ದದೆ. ಪ: ಹಾವ್‌ಮೀನ್

ಹಾವ್ /*ha:vɨ*/ ನಾ. ಹಾವು. a snake. **ಶನಿ ಹಿಡಿಯಕನ ಬೊಳ್ಳಿನೇ ಹಾವಾಗಿ ಕಚ್ಚುದು(ಗಾ). ಹಲ್ಲಿಲ್ಲದ ಹಾವ್ – ನಿರುಪದ್ರವಿ(ನು).** ವಾ: ಹಾವ್ ಹುತ್ತಂದ ಹೊರೆಗೆ ಬಾತ್.

ಹಾವ್ನಪೊರೆ /*ha:vnaporɛ*/ ನಾ. ಹಾವಿನ ಪೊರೆ. snakeskin. ವಾ: ಹಾವ್ನ ಪೊರೆ ಒಮ್ಮೊಮ್ಮೆ ನೋಡಿಕೆ ಸಿಕ್ಕಿದೆ.

ಹಾಸನಡ್ಕ /*ha:sanaḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅಮರಪಡ್ನೂರು ಗ್ರಾಮದ ಜಾಗ. a locality in Amarapadnuru village in Sullia Taluk of Dakshina Kannada District.

ಹಾಸಪಾರೆ /*ha:sapa:re*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಅರಂತೋಡು ಗ್ರಾಮದ ಜಾಗ. a locality in Arantodu village in Sullia Taluk of Dakshina Kannada District.

ಹಾಸಿ /*ha:si*/ ಕ್ರಿ. ಹೊದಿಸು. to put blanket/to cover. ವಾ: ಬೆಟ್ಟದ ಮೇಲೆ ಹಸುರ್‌ನ ರಾಶಿ ಹಾಸಿಕಂಡುಟು.

ಹಾಸ್ /*ha:sɨ*/ ಕ್ರಿ. 1. ಹಾಸು, 2. ಬಿಚ್ಚಿ ಹರಡು. 1. to spread, 2. to open. **ಕೊಡ್ದು ಮೂರು ಕಾಸ್, ಕೋಣೆ ತುಂಬಾ ಹಾಸ್ ತೇಳಿರೆ, ಹಾಸಿರೆ ಹಾಸ್ ಇಲ್ಲರೆ ಬಿಸಾಕ್ ನನ್ನ ಕಾಸ್(ಗಾ).** ವಾ: ಮೊದುವೆಲಿ ಸಾಸ್ತ್ರ ಮಾಡಿಕನ ಮೊಂದ್ರಿನ ಹಾಸ್‌ವೆ.

ಹಾಸ್ಗಲ್ಲ್ /*ha:sgallɨ*/ ನಾ. 1. ಹಾಸುಕಲ್ಲು, 2. ನೆಲಕ್ಕೆ ಹಾಕಿರುವ ಅಗಲವಾದ ಕಲ್ಲು. a stone slab. ವಾ: ನೆಲಕೆ ಹಾಸ್ಗಲ್ಲ್ ಹಾಕಿರೆ ಒಳ್ಳೆದ್.

ಹಾಸ್ಗೆ /*ha:sgɛ*/ ನಾ. 1. ಹಾಸಿಗೆ, 2. ಗಾದಿ, 3. ಶಯ್ಯೆ. bed. ವಾ: ಅವುಳು ಹಾಸ್ಗೆಂದ ಇನ್ನೂ ಎದ್ದತ್ಲೆ.

ಹಾಸ್‌ಪಾದೆ /*ha:sɨpa:dɛ*/ ನಾ. 1. ಹಾಸುಗಲ್ಲು, 2. ನೆಲಕ್ಕೆ ಹಾಕಿರುವ ಅಗಲವಾದ ಕಲ್ಲು. stone slab. ವಾ: ಹಾಸ್‌ಪಾದೆನ ನೆಲಕೆ ಹಾಕಿವೆ.

ಹಾಳಾತ್ /*ha:ḷa:tɨ*/ ಕ್ರಿ. 1. ಹಾಳಾಗು, 2. ಹದಗೆಡು, 3. ಸೊರಗು, 4. ದುರ್ಗತಿಗೀಡಾಗು. 1. to spoil, 2. to ruin 3. to weaken, 4. gut-wrenching. ವಾ: ಮಳೆಗೆ ತರ್ಕಾರಿ ಎಲ್ಲ ಕರ್‌ಗಿ ಹಾಳಾತ್.

ಹಾಳಾದುಲೆ /*ha:ḷa:dulɛ*/ ಕ್ರಿ. 1. ನಾಶವಾಗುವುದಿಲ್ಲ, 2. ಹದಗೆಡದಿರು, 3. ಹಾಳಾಗುವುದಿಲ್ಲ. 1. will not spoil, 2. unspoiled, 3. won't spoil. **ಅನ್ನ ಹಾಕಿದ ಮನೆ ಹಾಳಾದುಲೆ, ಗೊಬ್ಬರ ಹಾಕಿದ ಹೊಲ ಹಾಳಾದುಲೆ(ಗಾ).** ವಾ: ಹಿರಿಯರ ಮಾತ್ ಕೇಳಿರೆ ಬೊದ್ಕ್ ಹಾಳಾದುಲೆ, ಬ್ಯಾಳೆಕಾಳ್‌ಗಳ ಲಾಯ್ಕಲಿ ಒಣ್ಗಿಸಿರೆ ಬೇಗ ಹಾಳಾದುಲೆ.

ಹಾಳೆಕಿಳ್ಳಿ /*ha:ḷɛkiḷḷi*/ ನಾ. ತೋಟಕ್ಕೆ ನೀರು ಹಾಕಲು ಹಾಳೆಯಿಂದ ಮಾಡಿರುವುದು. a tool made of spathe to supply water to the farm. ವಾ: ತೋಟಕೆ ನೀರ್ ಬುಡಿಕೆ ಪೈಪ್‌ನಂಗೆ ಹಾಳೆ ಕಿಳ್ಳಿನೂ ಬಳ್‌ಸಕ್.

ಹಾಳೆತೊಟ್ಟೆ /*ha:ḷɛtoṭṭɛ*/ ನಾ. ಸೆಗಣಿ ಕೆರೆದು ಸಾರಿಸಲು ಬಳಸುವ ಆಯತಾಕಾರದ ಹಾಳೆಯ ತುಂಡು. a square piece of paperboard used in smearing cow dung on the floor. ವಾ: ಸೆಗ್ಣಿ ಸಾರ್‌ಸಿಕೆ ಹಾಳೆ ತೊಟ್ಟೆನ ಬಳ್ಸಿವೆ.

ಹಾಳೆಬಟ್ಲ್ /*ha:ḷɛbaṭlɨ*/ ನಾ. ಹಾಳೆಯಿಂದ ಮಾಡಿದ ಬಟ್ಟಲು. a plate made of leaf/ paper. ವಾ: ಜಂಬರ ಮಾಡಕನ ಹಾಳೆ ಬಟ್ಲ್ ನ ಬಳ್‌ಕೆ ಮಾಡಿವೆ.

ಹಾಳೆ¹ /*ha:ḷɛ*/ ನಾ. ಅಡಿಕೆ ಸೋಗೆಯ ಜೊತೆಗಿರುವ ಹಿಂಗಾರವನ್ನು ಮುಚ್ಚುವ ಭಾಗ. spathe. ವಾ: ಅಡ್‌ಕೆ ಹಾಳೆದ್ ಬಟ್ಲ್‌ನ ಉಂಬಕೆ ಬಳ್ಸುವೆ.

ಹಾಳೆ² /*ha:ḷɛ*/ ನಾ. ಪೇಪರಿನ ಒಂದು ಪುಟ. a page. ವಾ: ಸುಮ್ಮ ಸುಮ್ಮನೆ ಹಾಳೆ ಮೇಲೆ ಗೀಚಿ ಹರ್‌ಯಕಾಗದ್‌ನೆ.

ಹಾಳ್ /*ha:ḷɨ*/ ಕ್ರಿ. 1. ಹಾಳು, 2. ನಾಶ. 1. spolied, 2. destruction. ವಾ: ಬತ್ತನ ಹಂಗೆಲ್ಲ ಚೆಲ್ಲಾಡ್ಸಿ ಹಾಳ್ ಮಾಡ್ಬಡ. **ಹಾಳ್ ಮಾಡ್** /*ha:ḷɨ ma:ḍɨ*/ 1. ಹಾಳು ಮಾಡು, 2. ಕೆಟ್ಟದು ಮಾಡು, 3. ತೊಂದರೆ ಮಾಡು. 1. to destroy, 2. to spoil, 3. to trouble. ವಾ: ಆನೆಗ ಗದ್ದೆಗೆ ಬಂದ್ ಬೆಳೆಗಳ್‌ನೆಲ್ಲ ಹಾಳ್ ಮಾಡಿವೆ. **ಹಾಳ್ ಮಾಡ್ಕಾಂತ್** /*ha:ḷɨ ma:ḍka:ntɨ*/ ಹಾಳು ಮಾಡಿಕೊಂಡನು/ಳು. someone who spoiled one's life. ವಾ: ತನ್ನ ಕೈಯ್ಯಾರೆ ಬೊದ್ಕ್‌ನ ಹಾಳ್ ಮಾಡ್ಕಾಂತ್.

ಹಾಳ್ ಅಬ್ಯಾಸ /*ha:ḷɨ abya:sa*/ ನಾ. 1. ಕೆಟ್ಟ ಅಭ್ಯಾಸ, 2. ರೂಢಿ. 1. bad behaviour, 2. a habit. ವಾ: ಉಗ್‌ರ್ ಕಚ್ಚುದು ಹಾಳ್ ಅಬ್ಯಾಸ.

ಹಾಳ್‌ಮೂಳ್ /*ha:ḷɨmu:ḷɨ*/ ನಾ. 1. ಜೋಡಿಪದ, 2. ಹಾಳಾದ. 1. a compound word, 2. spoiled. ವಾ: ಹಾಳ್ ಮೂಳ್ ತಿಂಬದು ಮತ್ತೆ ಹೊಟ್ಟೆ ಬೇನೆಂತ ಹೇಳ್ದು.

ಹಿಂಕಳ /*hiŋkaḷa*/ ನಾ. ಬಿದಿರಿನ ಏಣಿಯ ಕೈ. handle of a ladder. ವಾ: ಒಂದ್ ಹಿಂಕಳ ಮುರ್‌ದ್ ಹೋವುಟು. ಪ: ಹಿಂಕ್‌ಲ್

ಹಿಂಕ್ಲ್¹ /*hiŋklɨ*/ ನಾ. ಬಿದಿರಿನ ರೆಂಬೆ ಒಡೆದ ಜಾಗ. an area where bamboo has split. ವಾ: ಬೆದ್ರ್ ಹಿಂಕ್ಲ್ ಬುಡ್ಸಿಕೆ ಬಾರಿ ಬಂಗ ಬಂದೊ ನಾವು.

ಹಿಂಕ್ಲ್² /*hiŋklɨ*/ ನಾ. 1. ಒಂದು ಎಳೆ, 2. ಒಂದು ಚಿಗುರು. a shoot. ವಾ: ಕರ್‌ಬೇವ್ (ಅಗ್ರಣೆ) ಸೊಪ್ಪ್‌ನ ಒಂದ್ ಹಿಂಕ್ಲ್ ಕೊಯ್ಕಂಡ್ ಬಂದಿಯ?

ಹಿಂಗಾರ /*hiŋga:ra*/ ನಾ. ಅಡಿಕೆ, ತೆಂಗಿನ ಹೂವು. areca, coconet flower. **ಸಣ್ಣ ಸಣ್ಣ ಪೆಟ್ಟಿಗೆ ಚಿನ್ನದ**

ಪೆಟ್ಟಿಗೆ, ಮುಚ್ಚಳ ತೆಗ್ದರೆ ಮುನ್ನೂರು ಪೆಟ್ಟಿಗೆ – ಹಿಂಗಾರ(ಒ). ವಾ: ಮೊದುವೆಲಿ ಬಣ್ಣ ಬಂಗಾರದೊಟ್ಟಿಗೆ ಹಿಂಗಾರ ಇಸಿವೆ.

ಹಿಂಗಾರಮಾಲೆ /*hiŋga:ra ma:lɛ*/ ನಾ. ಅಡಿಕೆ ಹೂವಿನ ಹಾರ. garland made by areca flower. ವಾ: ಮೊದುವೆಲಿ ಹಿಂಗಾರದ ಮಾಲೆನ ಹೈದ ಗೂಡೆಗೆ, ಗೂಡೆ ಹೈದಂಗೆ ಹಾಕುದು.

ಹಿಂಗಾರ್ /*hiŋga:r*/ ನಾ. 1. ಹಿಂಗಾರು, 2. ವರ್ಷದ ಕಡೆಯ ಮಳೆಗಾಲದಲ್ಲಿ ಈಶಾನ್ಯ ದಿಕ್ಕಿನಿಂದ ಬೀಸುವ ಗಾಳಿ, 3. ಈಶಾನ್ಯ ವಾಣಿಜ್ಯ ಮಾರುತ. 1. retreating monsoon, 2. retreating monsoon winds from the north east, 3. North-East trade wind. ವಾ: ನವಂಬರ್ ಡಿಸಂಬರ್‌ಲಿ ಬಾದು ಹಿಂಗಾರ್ ಮಳೆ.

ಹಿಂಗಾಲ್ /*hiŋga:lɨ*/ ನಾ. 1. ಕಾಲಿನ ಹಿಂಭಾಗ, 2. ಹಿಮ್ಮಡಿ, 3. ಪಾದದ ಹಿಂಭಾಗ. 1. back part of one's foot , 2. heel, 3. back side of one's foot. ವಾ: ಹಿಂಗಾಲ್ ಒಡ್ಡ್ ರಕ್ತ ಸೋರ್‌ದೆ.

ಹಿಂಗೆ /*hiŋgɛ*/ ಅ. ಹೀಗೆ. this way. ವಾ: ಹಿಂಗೆ ಆದೆತ ನಂಗೆ ಮೊದ್‌ಲೆ ಗೊತ್ತಿತ್ತ್. ಪ: ಹಿಂಗಿರೊಕು – ಹೀಗೆ ಇರಬೇಕು; ಹಿಂಗಿರ್‌ದು – ಹೀಗೆ ಇರಬಹುದು/ ಹೀಗೆ ಇರುವುದು; ಹಿಂಗುಟ್ಟು – ಹೀಗೆ ಇದೆ; ಹಿಂಗೆನೆ – ಹೀಗೆನೆ; ಹಿಂಗಿರಿಕಾಗದ್ – ಹೀಗೆ ಇರಬಾರದು

ಹಿಂಚುದು /*hiɲcudu*/ ಕ್ರಿ. 1. ಹಿಸುಕು, 2. ಕಿವಿಚು, 3. ಹಿಂಡು, 4. ಅದುಮು, 5. ಒತ್ತು. to squeeze. ವಾ: ಹಿಂಚ್ಚಡ ಬೇನೆ ಆದೆ.

ಹಿಂಟೆ /*hiɳʈɛ*/ ನಾವಿ. 1. ಮಣ್ಣಿನ ಚಿಕ್ಕ ಬೊಡ್ಡೆ, 2. ಮಣ್ಣಿನ ಹಿಂಟೆ/ಚಿಂಟೆ. soil clumps. ವಾ: ಕೆಂಪ್ ಮೊಣ್ಣ್‌ದ್ ಹಿಂಟೆ ಗಟ್ಟಿ ಇದ್ದದೆ. ಪ: ಮಣ್ಣಿಂಟೆ, ಮೊಣ್ಣಿಂಟೆ.

ಹಿಂಟೆಂಗ ಸೊಪ್ಪು /*hiɳʈɛŋga soppu*/ ನಾ. 1. ತಗ್ಗೀಗಿಡ, 2. ಇಟ್ಟೋವು(ತು). leaf of Hill Glory Bower.

ಹಿಂಟೆಂಗೆ /*hiɳʈɛŋgɛ*/ ನಾ. 1. ಇಟ್ಟೋವು, 2. ಒಂದು ವಿಧದ ಕಾಡು ಗಿಡ, 3. ಭತ್ತ ಬೀಜ ಮೊಳಕೆಗೆ ಇಟ್ಟೋವು ಎಲೆಯನ್ನು ಬಳಸುತ್ತಾರೆ. a forest plant, leaf of this plant is used with seeds of paddy to help them to sprout. ವಾ: ಹಿಂಟೆಂಗೆ ಒಂದ್ ಕಾಡ್‌ದೈ.

ಹಿಂಡಿ /*hiɳɖi*/ ನಾ. ಎಣ್ಣೆ ತೆಗೆದ ಮೇಲೆ ಗಾಣದಲ್ಲಿ ಅಥವಾ ಒತ್ತು ಯಂತ್ರದಲ್ಲಿ ಉಳಿಯುವ ಎಣ್ಣೆ ಬೀಜಗಳ ಘನಪದಾರ್ಥ, ದನಗಳ ಮೇವಿಗೂ, ಗೊಬ್ಬರಕ್ಕೂ ಉಪಯೋಗ ಮಾಡಲಾಗುತ್ತದೆ. the remains of oil seeds after pressing in a mill, used as a live stock fodder or manure. ವಾ: ದನಗಳಿಗೆ ಮೊಡ್ಡಿವೊಟ್ಟಿಗೆ ಹಿಂಡಿನು ಹಾಕಿರೆ ಆದೆ.

ಹಿಂಡ್[1] /*hiɳɖɨ*/ ನಾ. 1. ಹಿಂಡು, 2. ಗುಂಪು, 3. ಸಮೂಹ. 1. a flock, 2. a group, 3. a congregation. ವಾ: ದನಗಳ ಹಿಂಡ್ ಬರ್‌ತುಟ್ಟು.

ಹಿಂಡ್[2] /*hiɳɖɨ*/ ಕ್ರಿ. 1. ರಸ ಒಸರುವಂತೆ ಗಟ್ಟಿಯಾಗಿ ಹಿಸುಕು, 2. ಹಿಸುಕಿ ದ್ರವವನ್ನು ತೆಗೆ. to squeeze firmly to extract juice. ವಾ: ನಿಂಬುಳಿನ ಸೆರಿಯಾಗಿ ಹಿಂಡ್. **ಹಿಂಡುದು** /*hiɳɖudu*/ 1. ಒತ್ತಿ, 2. ರಸ ತೆಗೆಯುವುದು. 1. to press, 2. to extract juice. ವಾ: ನಿಂಬುಳಿ ಹಿಂಡುದು.

ಹಿಂದೆಬರಿ /*hindebari*/ ನಾ. 1. ಹಿಂದುಗಡೆ, 2. ಮನೆಯ ಹಿಂಬದಿ. 1. back side, 2. back of a house. ವಾ: ಹಿಂದೆಬರಿ ಬಾರಿ ಕಾಡ್ ಬೆಳ್ದುಟು, ಹಾವ್ ಗೀವ್ ಬಂದರೆ ಗೊತ್ತಾಕಿಲೆ.

ಹಿಂದೆಮೈ /*hindemai*/ ನಾ. 1. ಹಿಂಬದಿ, 2. ಬೆನ್ನು. 1. backside, 2. back. ವಾ: ಹಿಂದೆ ಮೈಲಿ ಸಣ್ಣ ತರಿಕಜ್ಜಿ ಎದ್ದುಟು.

ಹಿಂದೆನ ಬಾಕಿಲ್ /*hindena ba:kilɨ*/ ನಾ. ಹಿಂಬದಿ ಬಾಗಿಲು. back door. ವಾ: ಎಲ್ಯಾರ್ ಹೋಗಿ ಬಾಕನ ಹಿಂದೆನ ಬಾಕಿಲ್‌ಲಿ ನುಗ್ಗಿಕಾಗದ್. ಪ: ಹಿಂದೆನ ಬಾಗ್‌ಲ್.

ಹಿಂದೆನವ್ರ /*hindenavra*/ ನಾ. 1. ಹಿಂದಿನವರು, 2. ಹಿರಿಯರು. 1. ancestors, 2. elders. ವಾ: ಹಿಂದೆನವು ನಡ್ಸಿಕಂಡ್ ಬಂದ ಸಾಸ್ತ್ರಗಳ ಬುಡಿಕಾಗದ್. ಎಲ್ಲದಕ್ಕು ಒಂದು ಅರ್‌ತ ಇದ್ದದೆ.

ಹಿಂದ್ಕಡೆ /*hindkaɖe*/ ನಾ. ಹಿಂಭಾಗ. son of the deceased lighting the pyre (by facing his back to the dead body).

ಹಿಂಬತ್ ಪೂಜೆ /*himbatɨ pu:je*/ ನಾ. ಸಾಯಂಕಾಲದ

ನಂತರದ ಪೂಜೆ. offering prayer in the evening. ವಾ: ಮನೆಗಳ್‌ಲಿ ಹೊತಾರೆ ಮತ್ತೆ ಹಿಂಬತ್ ಪೂಜೆ ಮಾಡುವೆ.

ಹಿಂಬಾಗ್ಲ್ /*himba:gli*/ ನಾ. ಹಿಂದಿನ ಬಾಗಿಲು. back door. ವಾ: ಹಿಂಬಾಗ್ಲ್ ಸೆರೆ ಬುಟ್ಕಂಡ್ ಬಂದದೆ.

ಹಿಂಬಾಲ್ಸಿಕಂಡ್ /*himba:lsikaṇḍi*/ ಕ್ರಿ. ಹಿಂಬಾಲಿಸಿಕೊಂಡು. to follow. ವಾ: ಯಾರೊ ನನ್ನ ಹಿಂಬಾಲ್ಸಿಕಂಡ್ ಕಡಂಗದವರೆಗೆ ಬಂದೊ. ಮತ್ತೆ ಎತ್ತ ಹೋದೊತ ಗೊತ್ಲೆ.

ಹಿಂಬೊತು /*himbotu*/ ನಾ. ಸಂಜೆ. evening. ವಾ: ಹಿಂಬೊತ್ ಹೆಣ್ಮಕ್ಕ ಮೊಲ್ಗಿಕಾದ್. ಪ: ಹಿಂಬೋತುಗೆ – ಸಂಜೆಗೆ.

ಹಿಕ್ಕೆ /*hikkɛ*/ ನಾ. ಪಕ್ಷಿ, ಪ್ರಾಣಿಗಳ ಮಲ. feces of birds. ವಾ: ಮನೆದ್ ಜೆಗ್‌ಲ್‌ಲೆಲ್ಲ ಹಿಕ್ಕೆ ಬಿದ್ದುಟು.

ಹಿಕ್ಮತ್[1] /*hikmatɨ*/ ನಾ. 1. ಗುಟ್ಟಾದ ಉಪಾಯ, 2. ದುರಾಲೋಚನೆ. 1. a secret plan, 2. a wicked idea. ವಾ: ಅವು ಒಳಗೆಂದೊಳಗೆ ಹಿಕ್ಮತ್ ಮಾಡಿವೆ.

ಹಿಕ್ಮತ್[2] /*hikmatɨ*/ ನಾ. ಎಪ. 1. ಕೆನಿ, 2. ಜಾಣತನ. cleverness. ವಾ: ಬಾರಿ ಹಿಕ್‌ಮತ್‌ನ ಹೈದ ನೀನ್.

ಹಿಕ್ಸ್ /*hiksɨ*/ ನಾ. 1. ಹಿತ್ತಿಲು, 2. ಮನೆಯ ಸುತ್ತು ಮುತ್ತಲಿನ ಜಾಗ. 1. backyard, 2. space around the house. ವಾ: ಮನೆದ್ ಹಿಕ್ಸ್ ಲಿ ಎಲ್ಲ ತರದ ತರ್ಕಾರಿಗಳ ಬೆಳ್ಸಿದ್. ಪ: ಹಿತ್ಲ್, ಪಿತ್ತಿಲ್(ತು).

ಹಿಗ್ಗ್ /*higgɨ*/ ನಾ. 1. ಹಿಗ್ಗು, 2. ಸಂತೋಷ, 3. ಆನಂದ, 4. ದೊಡ್ಡದಾಗು, 5. ಅಗಲವಾಗು, 6. ಸಂತೋಷದಿಂದ ಉಬ್ಬು. 1. to swell with happiness, 2. happiness, 3. happy, 4. enlarge, 5. to beam with happiness, 6. to feel extremely happy. ವಾ: ಮನ್ಸ್ ಕುಸಿಲಿ ಹಿಗ್ಗಿ ಹೋತ್.

ಹಿಚ್ಕ್ /*hickɨ*/ ಕ್ರಿ. 1. ಹಿಚುಕು, 2. ಕೈಯಿಂದ ಒತ್ತಿ ಅಪ್ಪಚ್ಚಿ ಮಾಡು, 3. ಚಂಬುರ್ಗ್. to squeeze. ವಾ: ಹಿಚ್ಕ್‌ಬಡ ಪಿಚಕ್ಕಾದರೆ ತಿಂಬಕಾದ್ಲೆ.

ಹಿಟ್ ಮಡ್ಗುದು /*hiṭɨ maḍgo:du*/ ಕ್ರಿ. ದೈವದೇವರಿಗೆ ಆಹಾರ ಇಡುವುದು. to serve food to Pandava brothers. ವಾ: ಕಾವೇರಿ ಸಂಕ್ರಮಣದಂದ್ ತೀರ್ತೋದ್ಭವ ಆದ ಮೇಲೆ ಗದ್ದೆಲಿ ಬೆತ್ತ್‌ಲಿ ಹಿಟ್ಟ್ ಮಡ್ಗುವೆ.

ಹಿಟ್ಟಲ್ಲ್ /*hiṭṭallɨ*/ ನಾ. 1. ಹಿಟ್ಟು ಹಲ್ಲು, 2. ಹಾಲು ಹಲ್ಲು. primary (baby) teeth. ವಾ: ಹಿಟ್ಟ್ ಹಲ್ಲ್ ಗಟ್ಟಿ ಇರ್‌ದುಲೆ. ಪ: ಹಿಟ್ಟ್ – ಹಿಟ್ಟು

ಹಿಟ್ಟ್ /*hiṭṭɨ*/ ನಾ. ಅಕ್ಕಿಯನ್ನು ಕಡೆದು, ಬಂದ ಮಾಡಿ ಕಾವಲಿಯಲ್ಲಿ ಬೇಯಿಸಿ ಮಾಡಿದ ತಿಂಡಿ. a dish made from rice flour after baking/roasting/ steaming. **ಅಳಿಯಂಗೆ ಬುಟ್ಟ ನೆಂಟ ಇಲ್ಲೆ, ರೊಟ್ಟಿಗೆ ಬುಟ್ಟ ಹಿಟ್ಟಿಲ್ಲೆ(ಗಾ).** ವಾ: ದೋಸೆ ಹಿಟ್ಟ್ ಬೆಳ್ದ್ ಬಂದುಟಾ? **ಹಿಟ್ಟ್ ಅಡಿ ಹಿಡ್ಯದು** /*hiṭṭɨ aḍi hiḍyadu*/ ಹಿಟ್ಟು ತಳ ಹಿಡಿಯುವುದು. burnt/ charred rice. ವಾ: ಜಾಸ್ತಿ ಬೆಂಕಿ ಉರಿ ಇದ್ದರೆ ಹಿಟ್ಟ್ ಅಡಿ ಹಿಡ್ಯದು. **ಹಿಟ್ಟ್ ಎಲ್ಕಿಸುವ ಸಟ್ಟ್‌ಗ** /*hiṭṭɨ elkisuva saṭṭiga*/ ದೋಸೆ ಮೊದಲಾದ ತಿಂಡಿಗಳನ್ನು ಕಾವಲಿಯಿಂದ ಎಬ್ಬಿಸುವ, ತೆಗೆಯುವ ಸಟ್ಟುಗ. Turner (Tavitha, Spatula). ವಾ: ಹಿಟ್ಟ್ ಎಲ್ಕಿಸುವ ಸಟ್ಟ ಎಲ್ಲಿಟು ಹುಡ್ಕಿರೆ ಸಿಕ್ಕುಲೆ, ನೀನೆ ಬಂದ್ ತೆಕ್ಕೊಡ್. **ಹಿಟ್ಟ್ ಬೆಳ್ದ್ ಬಾದು** /*hiṭṭɨ beḷdɨ ba:du*/ ಉದುರು ಬರುವುದು. fermented batter. ವಾ: ಹಿಟ್ಟ್ ಬೆಳ್ದ್ ಬಂದರೆ ಇಡ್ಲಿ, ದೋಸೆ ಮೆತ್ತಂಗೆ ಇದ್ದದೆ. **ಹಿಟ್ಟ್ ಹುಳಿಬಾದು** /*hiṭṭɨ huḷiba:du*/ ಕ್ರಿ. ಅಕ್ಕಿಯ ಬಂದಕ್ಕೆ ಉದ್ದನ್ನು ಕಡೆದು ಹಾಕಿ ಬುರುಗಿಸುವುದು. fermentation. ವಾ: ದೋಸೆ, ಇಡ್ಲಿಗೆ ಕಡ್ಡಿಸಿದ ಹಿಟ್ಸ್ ಹುಳಿಬಾದು.

ಹಿಡಿ[1] /*hiḍi*/ ನಾ. ಪೈರಿನ ಒಂದು ಕಟ್ಟು. a bundle. ವಾ: ಗದ್ದಗೆ ನಾಟಿ ಮಾಡ್ಕನ ಒಂದೆ ಸರಿಗೆ ಹತ್ತ್, ಹನ್ನೆರ್‌ಡ್ ಹಿಡಿ ಹೊತ್ಕಂಡ್ ಹೋದು.

ಹಿಡಿ[2] /*hiḍi*/ ಕ್ರಿ. ಯಾವುದೇ ವಸ್ತುವಿನ ಹಿಡಿದುಕೊಳ್ಳುವ ಭಾಗ. a handle. **ಐದ್ ಕತ್ತಿಗೆ ಒಂದೇ ಹಿಡಿ – ಕೈ(ಒ).** ವಾ: ಕತ್ತಿದ್ ಹಿಡಿ ಸಡ್ಲ ಆಗುಟು. ಪ: ಹಿಡ್ದಂಗೆ – ಹಿಡಿದ ಹಾಗೆ; ಹಿಡ್ದವೆ – ಹಿಡಿಯುತ್ತಾರೆ; ಹಿಡ್ದೊಳೊ – ಹಿಡಿದಿದ್ದಾರೆ; ಹಿಡ್ದುಟು – ಹಿಡಿದಿದ್ದಾನೆ/ಳೆ

ಹಿಡಿ[3] /*hiḍi*/ ಕ್ರಿ. 1. ಕೈಯ್ಯಲ್ಲಿ ಹಿಡಿದುಕೊ, 2. ತೆಗೆದುಕೊಳ್ಳು, 3. ವಶಪಡಿಸಿಕೊಳ್ಳು. 1. to hold in the hand, 2. to take, 3. to occupy. **ಹಿಡಿ**

ಹುಲ್ಲಿಗೂ ಹೊಡ್ದಾಡುವೆ, ಹೊರೆ ಹುಲಿಗೆ ಹೊಡ್ದಾಡಿಕಿಲ್ಲೆ(ಗಾ). ವಾ: ಕೊತ್ತಿ ಮೊರಿನ ಹಿಡಿಬಡ.

ಹಿಡಿಂಜಿಹಣ್ಣ್ /*hiḍiŋjihaṇṇɨ*/ ನಾ. ಕಾಡಿನಲ್ಲಿ ಸಿಗುವ ನೀಲಿ ಬಣ್ಣದ ಹಣ್ಣು. blue wild fruit. ವಾ: ಹಿಡಿಂಜಿ ಹಣ್ಣ್‌ನ ತಿಂದವೆ, ಜಾಸ್ತಿ ತಿಂದರೆ ನಾಲಿಗೆ ಗಾಯ ಆದು, ಜಾಗ್ರತೆ.

ಹಿಡಿಕೈ /*hiḍikai*/ ನಾ. 1. ಮುಷ್ಟಿ, 2. ಕೈಯೊಳಗಿನ ವಸ್ತು. 1. fist, 2. thing that is in one's hand. ವಾ: ಒಂದು ಹಿಡಿಕೈ ಅಕ್ಕಿನ ತಂಬ.

ಹಿಡಿಬೆಳ್ಕ್ /*hiḍibeḷkɨ*/ ನಾ. ಕೈಯಲ್ಲಿ ಹಿಡಿದುಕೊಂಡು ಹೋಗುವ ಲಾಟೀನ್ ಬೆಳಕು. light of the lantern. ವಾ: ಏನೇ ಆಗಲಿ ಸಾದಾರಣ ಗಾಳಿ ಬಂದರೂ ಕೆಡದೇ ಇದ್ದ ಒಂದೇ ಒಂದ್ 'ಹಿಡಿಬೆಳ್ಕ್'ತ್ತೇಳ್ರೆ ಲಾಟೀನ್ ಮಾತ್ರ.

ಹಿಡಿಯಕು /*hiḍiyaku*/ ಕ್ರಿ. ಹಿಡಿದುಕೊಳ್ಳು. to hold. **ಕೆಲ್ಸ ಆಕುತೇಳ್ರೆ ಕತ್ತೆ ಕಾಲ್ ಸಹ ಹಿಡಿಯಕುಗಡ(ಗಾ).** ವಾ: ಪೈಪ್‌ಂದ ನೀರ್ ಹಿಡಿಯಕು.

ಹಿಡಿಯದು /*hiḍiyadu*/ ಕ್ರಿ. 1. ಕೈಯ್ಯಲ್ಲಿ ಹಿಡಿಯುವುದು, 2. ತೆಗೆಯುವುದು, 3. ವಶಪಡಿಸುವುದು. 1. to hold in one's hand, 2. to take 3 to occupy. ವಾ: ಹಕ್ಕಿಗಳ ಹಿಡಿಯದು ಬೇಡತ ಹೇಳ್.

ಹಿಡಿವ /*hiḍiva*/ ಕ್ರಿ. ಹಿಡಿಯುವ. hold. ವಾ: ಬೇರೊಬ್ಬನ ಕುತ್ತಿಗೆ ಹಿಡಿವ ಕೆಲ್‌ಸ ನಿಂಗ್ಯಾಕೆ.

ಹಿಡಿವ ಆಟ /*hiḍiva a:ṭa*/ ನಾ. ಜನಪದ ಆಟ. a folk game.

ಹಿಡಿಸುಡಿ /*hiḍisuḍi*/ ನಾ. 1. ಪೊರಕೆ, 2. ಬರಲು, 3. ಕಸ ಗುಡಿಸುವ ಸಾಧನ. broom. ವಾ: ಮನೆ ಗುಡ್ಸಿಕೆ ಈಗೆಲ್ಲ ಪ್ಲಾಸ್ಟಿಕ್ ಹಿಡಿಸುಡಿ ಸಿಕ್ಕಿದೆ.

ಹಿಡೆಕೆ /*hiḍekɛ*/ ಕ್ರಿ. 1. ಹಿಡಿಯು. to hold. ವಾ: ದನಗ ಓಡಿಕಾಕನ ಹಿಡೆಕೆ ಬೊತ್ತ್.

ಹಿಡೆಕೆಹೋದು /*hiḍekɛho:du*/ ಕ್ರಿ. ಅತ್ಯಾಚಾರಕ್ಕೆ ಪ್ರಯತ್ನ. rape case. ವಾ: ಅಂವ ಗೂಡೆನ ಹಿಡೆಯಕೆ ಹೋಗಿ ಜೈಲಿಲಿಟ್ಟು.

ಹಿಡೆತಿತ್ /*hiḍɛtitɨ*/ ಕ್ರಿ. 1. ಹಿಡಿಯು, 2. ಫಸಲು ಬಿಡು. 1. to hold, 2. to have a good harvest. ವಾ: ನಾಯಿ ಕೋಳಿನ ಹಿಡೆತಿತ್.

ಹಿಡೆವು /*hiḍɛvu*/ ಕ್ರಿ. 1. ಹಿಡಿದುಕೊಳ್ಳುವವರು, 2. ಹಿಡಿಯುವವರು. 1. catchers, 2. those who catch.

ಹಿಡ್ಕ /*hiḍka*/ ಕ್ರಿ. ಹಿಡಿದುಕೊ. hold. **ನಾಲ್‌ಗೆ ಬಿಗಿ ಹಿಡ್ಕ(ನು).** ವಾ: ಪಾಲ ದಾಟಿಕನ ಬಡಿಗೆಗಳ ಗಟ್ಟಿ ಹಿಡ್ಕ. ಪ: ಹಿಡ್ಕಂಡ್ – ಹಿಡಿದುಕೊಂಡು; ಹಿಡ್ಕಂಡತ್ – ಹಿಡಿದುಕೊಂಡನು/ಳು; ಹಿಡ್ಕಂಡ್ತ್(ಹಿಡ್ಕಣ್ತ್) – ಹಿಡಿದುಕೊಂಡನು/ಳು; ಹಿಡ್ಕಂಬಕೆ – ಹಿಡಿದುಕೊಳ್ಳುವುದಕ್ಕೆ; ಹಿಡ್ಕಣಿ – ಹಿಡಿದುಕೊಳ್ಳಿ; ಹಿಡ್ಕಣೆ – ಹಿಡಿದುಕೊಳ್ಳುತ್ತೇನೆ; ಹಿಡ್ಕೊಂಡೊ – ಹಿಡಿದುಕೊಂಡರು; ಹಿಡ್ಕೊಂಬೊದು – ಹಿಡಿದುಕೊಳ್ಳುವುದು.

ಹಿಡ್ಕಟ್ /*hiḍkaṭɨ*/ ನಾ. 1. ಕಟ್ಟುಪಾಡು, 2. ನಿಯಮ, 3. ಕ್ರಮ. 1. rules, 2. regulations, 3. ordinance. ವಾ: ಎಷ್ಟೆ ಸಿರಿವಂತರಾದ್ರು ನಮ್ಮ ಹಿಡ್ಕಟ್‌ಗಳ ನಾವು ಮರೆಕಾಗದ್.

ಹಿಡ್ಕಾಂತ್ /*hiḍka:ntɨ*/ ಕ್ರಿ. ಹಿಡಿದುಕೊಂಡನು. hold. **ಗೆದ್ದ ಎತ್ತ್‌ನ ಬಾಲ ಹಿಡ್ಕಾಂತ್(ಗಾ).** ವಾ: ಅವುಳು ಕೈಲಿ ಹಾವ್‌ನ ಹಿಡ್ಕಾಂತ್.

ಹಿಡ್ಗ್‌ಲ್ /*hiḍgɨlɨ*/ ನಾ. 1. ಪೊರಕೆ, 2. ಬರಲು, 3. ಕಸ ಗುಡಿಸುವ ಸಾಧನ. broom. ವಾ: ಹಿಡ್ಗ್‌ಲ್‌ಲೆ ಇಜ್ಜಾಳ್ ಗುಡ್ಸುದು. ಪ: ಮಾಯ್ಸುಸೂಡಿ, ಚೀಪೆ.

ಹಿಡ್ದುಟು /*hiḍduṭu*/ ಕ್ರಿ. 1. ಹಿಡಿದಿದ್ದಾನೆ/ಳೆ, 2. ಹಿಡಿದಿದೆ. 1. to hold, 2. to act in a strange way. ವಾ: ದೆವ್ವ ಹಿಡ್ದುಟು ಕಂಡದೆ ಅಂವಂಗೆ ಹೆಂಗೆಲ್ಲೊ ಆಡ್ದೆ. ಪ: ಹಿಡ್ದಾಂಗೆ.

ಹಿಡ್ದೊಳೊ /*hiḍkoḷɔ*/ ಕ್ರಿ. ಹಿಡಿದಿದ್ದೇವೆ. held. ವಾ: ಅವೆಲ್ಲ ಸೇರಿ ಕಳ್ಳನ ಹಿಡ್ದೊಳೊ.

ಹಿಡ್ದ್ /*hiḍdi*/ ಕ್ರಿ. ಹಿಡಿದು. to hold. **ನಾ ಹಿಡ್ದ ಮೊಲಕ್ಕೆ ಮೂರೇ ಕಾಲ್(ನು).** ವಾ: ಕೊಂಬೆಗಳ ಹಿಡ್ದ್ ಮರ ಹತ್ತುದು. ಪ: ಹಿಡ್ಯದು.

ಹಿಡ್ದ್ ಕೊಡ್ದು /*hiḍdɨ koḍdu*/ ಕ್ರಿ. ಹಿಡಿದು ಕೊಡುವುದು. to catch something and handover. ವಾ: ಕೋಳಿ ಪಿಳ್ಳೆಗಳ ಹಿಡ್ದ್ ಕೊಡ್ದು.

ಹಿಡ್ಸುದು /*hiḍsudu*/ ಕ್ರಿ. ಮೋಸ ಮಾಡು. wouldn't like. ವಾ: ಅಂವಂಗೆ ದುಡ್ಡ್ ಕೊಟ್ಟರೆ ಎಪ್ಪೆ ಹಿಡ್ಸುದು.

ಹಿಡ್ಸುದ್ಲೆ /*hiḍsudlɛ*/ ಕ್ರಿ. 1. ಹಿಡಿಸುವುದಿಲ್ಲ, 2. ಇಷ್ಟವಾಗುವುದಿಲ್ಲ, 3. ಹೊಂದಿಕೆಯಾಗಲಾರದು, 4. ಹಿತಕರವಲ್ಲದ. 1. wouldn't suit, 2. won't like, 3. won't match, 4. unpleasant. ವಾ: ಅವ್ರ ಮಾತ್ ಸೆರಿ ಇಲ್ಲೆ ನಂಗೆ ಹಿಡ್ಸುದ್ಲೆ.

ಹಿತ್ತಲ್ /*hittalɨ*/ ನಾ. 1. ಮನೆಯ ಹಿಂಭಾಗದ ಸ್ಥಳ, 2. ತರಕಾರಿ, ಹೂವಿನ ಗಿಡಗಳು ಮುಂತಾದುವನ್ನು ಬೆಳೆಸುವ ಸ್ಥಳ. 1. backside of one's house, 2. a backyard where one can grow vegetable. **ಹಿತ್ತಲ ದೈ ಮೊದ್ದಲ್ಲ(ಗಾ).** ವಾ: ಅಂವ ಹಿತ್ತಲ್ ಕಡೆಂದ ಬಾತ್. ಪ: ಹಿತ್ತ್‌ಲ್.

ಹಿತ್ತಾಳೆಕೆಬಿ /*hitta:ḷɛkebi*/ ನಾ. ಅವರಿವರ ಚಾಡಿ ಮಾತನ್ನು ಕೇಳಿ ಅದನ್ನು ನಂಬುವವ. credulous, gullible. ವಾ: ಅವರ್‌ದ್ ಬರಿ ಹಿತ್ತಾಳೆ ಕೆಬಿ.

ಹಿತ್ಲ್ /*hitlɨ*/ ನಾ. ಹಿತ್ತಲು. backyard. **ಇಕ್ಕಲಾರದವ್ನು ಹಿತ್ಲಿಗೋತು ಕೊಡಲಾರದವ್ನು ಕೋಂಬರೆಗೆ ಹೋತು(ಗಾ).** ವಾ: ಹಿತ್ಲ್ ಕಡೆ ಬಾಳೆದೈ ಉಟ್ಟು, ಅಲ್ಲಿಂದ ಬಾಳೆಲೆ ಕೊಯ್ಕ.

ಹಿಪ್ಪ್‌ನೇರಳೆ /*hippɨne:raḷɛ*/ ನಾ. ರೇಷ್ಮೆ ಸೊಪ್ಪು. mulberry. ವಾ: ಹಿಪ್ಪ್‌ನೇರಳೆ ದೈದ ಸೊಪ್ಪ್‌ನ ಕತ್ರಿಸಿ ರೇಸ್ಮೆ ಹುಳಕೆ ತಿಂಬಕೆ ಹಾಕಿವೆ. ಪ: ರೆಸ್ಮೆ ಸೊಪ್ಪು.

ಹಿಮ್ಮ್‌ಡಿ /*himmɨḍi*/ ನಾ. 1. ಹಿಮ್ಮಡಿ, 2. ಪಾದದ ಹಿಂಭಾಗ. 1. heels, 2. back of one's feet. ವಾ: ಹಿಮ್ಮಡಿ ಒಡ್ಡ್ ಬಾಯಿ ಬುಟ್ಟ್ ಬೇನೆ ಉಟ್ಟು.

ಹಿರಿಪಾಲ್ /*hiripa:lɨ*/ ನಾ. ದೊಡ್ಡ ಪಾಲು. a major share. ವಾ: ಚೋಳಿಹಣ್ಣ್ ನ ಹಿರಿಪಾಲ್ ಸಣ್ಣವ್ಕೆ ಕೊಡೊನೊ.

ಹಿರಿ[1] /*hiri*/ ನಾ. ದೊಡ್ಡದು. a large one. ವಾ: ಹಿರಿದ್ ಕಳ್ಳಿಗೆ ನಂಗೆ ಬೇಕ್.

ಹಿರಿ[2] /*hiri*/ ನಾ. 1. ಹೊರಕ್ಕೆ ಎಳಿ, 2. ಹೊರ ತೆಗೆ. 1. to pull something out, 2. to carry something outside. ವಾ: ಒಲೆಂದ ಸೊವ್ದೆ ಕೊಳ್ಳಿನ ಹಿರಿ.

ಹಿರಿತಲೆ /*hiritale*/ ನಾ. ಹಿರಿಯರು. eleders. ವಾ: ನಮ್ಮ ಕುಟುಂಬಲಿ ಚಾಂಪನೆ ಹಿರಿತಲೆ ತ ವಳದ್.

ಹಿರಿಮಗ್ಳ್ /*hirimagḷɨ*/ ನಾ. ದೊಡ್ಡಮಗಳು. the eldest daughter. ವಾ: ಹಿರಿಮಗ್ಳ್‌ಗೆ ಸುರೂ ಮೊದುವೆ ಆಕು.

ಹಿರಿಮಜ್ಞ /*hirimaŋŋa*/ ನಾ. ದೊಡ್ಡಮಗ. the eldest son. ವಾ: ಹಿರಿಮಜ್ಞನೆ ಆಸ್ತಿ ನೋಡಿಕಂಬದು.

ಹಿರಿಯಡ್ಕ /*hiriyaḍka*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಬಾಳುಗೋಡು ಗ್ರಾಮದ ಜಾಗ. 1. family, 2. lineage, 3. a locality in Balagodu village in Sullia Taluk of Dakshina Kannada District.

ಹಿರಿಯವರ ಪರೆಂಚಲ್ /*hiriyavara pareŋcalɨ*/ ನಾವಿ. ಹಿರಿಯರ ಕಿರಿಕಿರಿ. irritating elders. ವಾ: ಕೆಲ್ಸ ಇಲ್ಲದಕೆ ಮನೆಲಿ ಹಿರಿಯವರ ಪರೆಂಚಲ್ ಕೇಳಿಕಾದುಲೆ. ಪ: ಪಿರಿಪಿರಿ ಹೇಳ್ದು.

ಹಿರೇಕಜೆ /*hire:kajɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಹಿರೇಜೇನ್ /*hire:je:nɨ*/ ನಾವಿ. 1. ಹೆಜ್ಜೇನು, 2. ಜೇನಿನ ಒಂದು ವಿಧ. a variety of honey bee. ವಾ: ಹಿರೇಜೇನ್ ನಳಗ ಕಚ್ಚಿರೆ ಕಸ್ಟ.

ಹಿರ್ದ /*hirda*/ ಕ್ರಿ. ಎಳೆದ. pulled. ವಾ: ಗುಡ್ಡಲಿ ನೀರ್ ಕಾಯಕೆ ಹಾಕಿದ ಕುಂಟೆನ ಹಿರ್‌ದ ನಾ. ಪ: ಹಿರ್‌ಯದು – ಎಳೆಯುವುದು; ಹಿರ್‌ಯಕೆ – ಎಳೆಯುವುದಕ್ಕೆ.

ಹಿರ್ದ್ ಇಸ್ /*hirdɨ isi*/ ಕ್ರಿ. ಎಳೆದು ಇಡು. to pull. ವಾ: ಸೌದೆ ಕೊಳ್ಳಿನ ಒಲೆಂದ ಹಿರ್‌ದ್ ಇಸ್. ಪ: ಹಿರ್‌ದ್ ಇಸಿದ – ಎಳೆದು ಇಟ್ಟ; ಹಿರ್‌ದ್ ಇಸಿಕೆ – ಎಳೆದು ಇಡುವುದಕ್ಕೆ.

ಹಿರ್ಯರ /*hiryara*/ ನಾ. ಹಿರಿಯರ. of elders. ವಾ: ಬದ್ಕೊಕೊರೆ ಹಿರ್‌ಯರ ಮಾತ್ ಕೇಳೊಕು.

ಹಿಸ್ /*hisi*/ ಕ್ರಿ. 1. ಹಸಿವು, 2. ಆಹಾರದ ಬಯಕೆ. 1. hunger, 2. desire for food. **ಹೊಟ್ಟೆ ಹಿಸಿರೆ ತಣ್ಣಣನೂ ಅಮೃತ(ಗಾ).**

ಹಿಸ್ಕಿ /*hiski*/ ಕ್ರಿ. 1. ಹಿಸುಕಿ, 2. ಕಿವಿಚು, 3. ಹಿಂಡು. to squeeze. ವಾ: ಪಿಜಿನ್ ಕಚ್ಚಿಕನ ಅದರ ಹಿಸ್ಕಿ ಹಾಕಿದೊ.

ಹಿಳ್ಳೈ /*hiḷḷɛ*/ ನಾ. ಪಿಳ್ಳೈ, ಗೆಲ್ಲು, offshoot. ವಾ: ದಾಸೊಳ ದೈಲಿ ಸುಮಾರ್ ಹಿಳ್ಳೈಗ ಬಂದುಟು.

ಹೀ ಬಾ[1] /*hi: ba:*/ ಅ. ದನಗಳನ್ನು ಕರೆಯುವ ಪದ. a term used to call the cattle. ವಾ: ದನಗಳ ಹೀ ಬಾತ ಕರೆದು.

ಹೀ ಬಾ[2] /*hi: ba:*/ ಅ. 1. ತಿರುಗಿ ಬಾ, 2. ತಿರುಗು. 1. return, 2. to turn. ವಾ: ಹೀ ಬಾ ಹೀ ಬಾ ತೇಳಿ ಗುಡ್ಡೆಗೋದ ದನಗಳ ಕರ್ದವೆ.

ಹೀ ಹೋ /*hi: ho:*/ ಅ. ದನಗಳನ್ನು ಹಟ್ಟಿಗೆ ಹೊಡೆದು ಕೊಂಡು ಹೋಗುವಾಗ ಬಳಕೆಯಾಗುವ ಪದಗಳು. term used while guiding the cattle back home. ವಾ: ದನಗಳ ಹೊಡ್ಕಂಡ್ ಬಾಕನ ಅತ್ತಿತ್ತ ಹೋಗದಾಂಗೆ ಹೀ ಹೋ ತ ಕರ್‌ಯೊದ್.

ಹೀಂಗಾದರೆ /*hi:ŋga:dare*/ ಅ. ಹೀಗಾದರೆ. if it happens. ವಾ: ವರ್‌ಸೊಳು ಹೀಂಗಾದರೆ ಮುಂದಕೆ ಹೆಂಗೆತ. ಪ: ಹಿಂಗಾರೆ

ಹೀಂಗಿತ್ತ್ /*hi:ŋgittɨ*/ ಅ. ಹೀಗಿತ್ತು. it was like. ವಾ: ಈ ಪಟ ನೋಡು ನಮ್ಮ ಕಾಲಲಿ ಹೀಂಗಿತ್ತ್.

ಹೀಂಗಿದ್ದ್ /*hi:ŋgiddɨ*/ ಅ. ಹೀಗೆ ಇದ್ದು. it will be like. ವಾ: ಹೀಂಗಿದ್ದ್ ನಂಗೆ ಒಂದು ಮಾತ್ ಹೇಳ್‌ತ್‌ಲೆಲ.

ಹೀಂಗಿರಿಕನ /*hi:ŋgirikana*/ ಅ. ಹೀಗಿರುವಾಗ. it will be like. ವಾ: ಚಾಮೆವ್ವಂಗೆ ನಡೆಕಾದುಲೆ. ಹೀಂಗಿರಕನ ಅಸ್ಟ್ ದೂರ ಕರ್‌ಕಂಡ್ ಹೋಕಾದೆನ. ಪ: ಹೀಂಗಿರ್ಕನ

ಹೀಂಗೆ /*hi:ŋge*/ ಅ. ಹೀಗೆ. this way. ವಾ: ಹೀಂಗೆ ಮಳೆ ಗಾಳಿ ಇದ್ದರೆ ಹೊರೆಗೆ ಹೋಕಾದುಲೆ.

ಹೀಂಚಣಿಗೆ /*hi:ŋcaŋige*/ ನಾ. ಸೀರ್ ಹೇನನ್ನು ಕೂದಲಿನಿಂದ ತೆಗೆಯುವ ಬಾಚಣಿಗೆ. a comb to remove nits from hair. ವಾ: ಹೀಂಚಣಿಗೆಲಿ ಎಳ್ದರೆ ಕೂದೊಲ್‌ಂದ ಚೀರ್ ಬಂದದೆ. ಪ: ಒಯ್ಸುನೆ(ತು).

ಹೀಂಚ್ /*hi:ŋcɔ*/ ಕ್ರಿ. ಎಳೆಯು. tender. ವಾ: ಕೋಣನ ಕುತಿಗೆಲಿರೊ ಬೊಳ್ಳಿ ನ ಹೀಂಚ್.

ಹೀಂಪು /*hi:mpu*/ ಕ್ರಿ. 1. ಚೀಪು, 2. ಹೀರು, 3. ಸೀಪು. 1. to suck, 2. to draw liquid, 3. to squeeze. ವಾ: ಮಾಯಿನ ಹಣ್ಣ್ ಹೀಂಪಿ ಹೀಂಪಿ ತಿಂದರೆ ರುತಿಯಾದೆ.

ಹೀಚ್ /*hi:cɔ*/ ಕ್ರಿ. 1. ಎಳಸು, 2. ಎಳೆಯಕಾಯಿ, 3. ಮಿಡಿ, 4. ಪೀಚು. tender. ವಾ: ಬಾಳೆಗೊನೆ ಹೀಚ್ ಇನ್ನ್ ಒಂದ್ವಾರ ಬೇಕ್ ಬೆಳೆಕೆ.

ಹೀಯ /*hi:ya*/ ಅ. 1. ನಿಂದಿಸು, 2. ದೂಷಿಸು ಅವಮಾನಿಸು, 3. ಕಡೆಗಣಿಸು. 1. to accuse, 2. to insult, 3. to ignore. ವಾ: ಯಾರ್‌ನೂ ಸುಕಾಸುಮ್ಮನೆ ಹಿಯಾಳಿಸಿಕಾಗದ್.

ಹೀಯಾಳ್ಸುದು /*hi:ya:ḷsudu*/ ಕ್ರಿ. 1. ತೆಗಳುವುದು, 2. ಹೀಯಾಳಿಸುವುದು. 1. to ciricise, 2. to rebuke. ವಾ: ಕೈಲಿ ದುಡ್ಡಿಲ್ಲರೆ ಎಲ್ಲವು ಹೀಯಾಳ್ಸುದು.

ಹೀರೆಕಾಯಿ /*hi:reka:yi*/ ನಾ. ಹೀರೆಕಾಯಿ ತರಕಾರಿ. ridge gourd. ವಾ: ಆಗಾಗ ಹೀರೆಕಾಯಿ ತೊಪ್ಪೆನ ಪೊಜ್ಜಿ ಮಾಡಿ ತಿನ್ನೊಕು. ತಡಿಗೆ ಒಳ್ಳದ್.

ಹೀರ್ /*hi:rɨ*/ ಕ್ರಿ. 1. ನೇರವಾಗಿ ಕುಡಿ, 2. ತುಟಿ ನಾಲಗೆಗಳ ಸಹಾಯವಿಲ್ಲದೆ ಕುಡಿ. 1. to suck, 2. to draw liquid. **ಕಾನೂನು ಬಡವನ ಹೀರ್‌ದೆ ಸ್ರೀಮಂತ ಕಾನೂನುನ ಹೀರ್‌ದೆ(ಗಾ).** ವಾ: ಹೀಂಚಣಿಗೆಲಿ ಕುದೊಲುಂದ ಚೀರ್ ತೆಗೆದು.

ಹೀರ್ ಬಾ /*hi:rɨ ba:*/ ನಾ. ದನಗಳಿಗೆ ನೀರು ಕುಡಿಯಲು ಕರೆಯುವುದು. calling cattle to drink water. ವಾ: ದನಂಗಳ ನೀರ್ ಕುಡಿಯಕೆ ಕರೆದು.

ಹೀರ್ತ್ /*hi:rtɨ*/ ಕ್ರಿ. ಹೀರು. to suck/to draw liquid. ವಾ: ಜೇನ್ನೊಳ ಹೂನ ರಸನ ಹೀರ್ತ್, ಉಂಬುಳು ರಕ್ತ ಹೀರ್‌ದು ಗೊತ್ತೇ ಆಲೆ. ಪ: ಹೀರ್‌ದು – ಹೀರುವುದು; ಹೀರ್‌ದೆ – ಹೀರುತ್ತದೆ.

ಹೀಲಿ /*hi:li*/ ನಾ. 1. ರಸರಹಿತ, 2. ಟೊಳ್ಳು. 1. juceless, 2. empty. ವಾ: ಓಡುಸೋಂತೆ ಒಳಗೆಲ್ಲ ನೀರ್ ಆರಿ ಹೀಲಿಯಾಗುಟು.

ಹುಂ /*huṁ*/ ಅ. ಹೂಂಗುಡು. to affirm. ವಾ: ಹೊನ್ನಮ್ಮನ ಕತೆ ಹೇಳವ್ವ. ಸೆರಿ ಹೇಳ್ನೆ ನಿದ್ದೆ ಮಾಡದೆ ಹೂಂಗುಟ್ಟಿಯ?

ಹುಂಜ ಲಾಕಿ /*huŋja la:ki*/ ನಾ. ಚಿಕ್ಕದಾದ ಹುಂಜ ಕೋಳಿ. a young rooster. ವಾ: ಹುಂಜ ಲಾಕಿ ಕಾಂಬದುಲೆ.

ಹುಂಯ್ಕ್ /*hunyk*/ ನಾ. 1. ಶಾಂತವಾಗಿದ್ದುಕೊಂಡು ಒಳಗೊಳಗೆ ಸಂಚು ಹೂಡುವುದು, 2. ಪಿತೂರಿ ಮಾಡು. 1. to conspire, 2. an intrigue. ವಾ: ಮೊನ್ನಂಗೆ ಹುಂಯ್ಕ್ ಬುದ್ದಿ ಇರ್‌ಕಾಗದ್.

ಹುಕಾರ್ /*huka:rɨ*/ ನಾವಿ. 1. ಚುರುಕು, 2. ಬುದ್ಧಿವಂತ. 1. clever, 2. intelligent. ವಾ: ಅಂವ ಬಾರಿ ಹುಕಾರ್‌ನ ಹೈದ.

ಹುಕ್ಕ /*hukka*/ ಕ್ರಿ. ಒಳಗೆ ಪ್ರವೇಶಿಸು. to enter. **ಹಟ್ಟಿಗೆ ಹುಕ್ಕ ಮೇಲೆ ಕಾಲಿಗೆ ಸೆಗ್‌ಣಿ ಆದೆಂತ ನೋಡಿಕಾದೆನಾ(ಗಾ).** ವಾ: ಹುಲಿ ಗುಹೆಗೆ ಹುಕ್ಕತ್.

ಹುಕ್ಕೊ /*hukkɔ*/ ಕ್ರಿ. 1. ನುಗ್ಗಿದರು, 2. ಒಳಗೆ ಪ್ರವೇಶಿಸು. 1. stormed, 2. to enter. ವಾ: ಬೆಟ್ಟಲಿ ಗುಹೆನಂಗೆ ದೊಡ್ಡ ಮಾಳಿ ಇತ್ತ್, ಅತ್ತನ ಬರಿಗೆ ದಾರಿ ಉಟ್ಟಾ ತ ನೋಡಿಕೆ ಎಲ್ಲವು ಅದ್‌ರೊಳೆಗೆ ಹುಕ್ಕೊ.

ಹುಕ್ಕ್ /*hukkɨ*/ ಕ್ರಿ. 1. ಹೊಕ್ಕು, 2. ನುಗ್ಗು. 1. enter, 2. storm. ವಾ: ಹೆಗ್ಗಣ ಮಾಳಿಯೊಳೆಗೆ ಹುಕ್ಕುದು. ಪ: ಹುಕ್ಕರ್ – ನುಗ್ಗಿದರು; ಹುಕ್ಕಿಕೆ – ನುಗ್ಗಲು; ಹುಕ್ಕಂವ – ನುಗ್ಗಿದವನು; ಹುಕ್ಕತ್ – ನುಗ್ಗಿತು; ಹುಕ್ಕಿದೊ – ನುಗ್ಗಿದರು; ಹುಕ್ಕುತ್ – ನುಗ್ಗಿತು; ಹುಕ್ಕುದು – ನುಗ್ಗುವುದು; ಹುಕ್ಕೊತ್ – ನುಗ್ಗಿತು(ಪ್ರವೇಶಿಸಿತು).

ಹುಕ್ರಪ್ಪ /*hukrappa*/ ನಾ. ವ್ಯಕ್ತಿ ಹೆಸರು, ಪುರುಷ ವಾಚಕ. masculine given name. ಪ: ಉಕ್ರ, ಚುಕ್ರ, ಹುಕ್ರ.

ಹುಗಿದು /*hugidu*/ ಕ್ರಿ. ನೆಲದಲ್ಲಿ ಹೂಳುವುದು. to bury. ವಾ: ಸತ್ತ ನಾಯಿನ ಗುಂಡಿ ತೋಂಡಿ ಹುಗಿದು.

ಹುಗ್ಗು /*huggu*/ ಕ್ರಿ. 1. ಒಳಹೋಗು, 2. ಹೊಕ್ಕು, 3. ನುಗ್ಗು. 1. to go inside, 2. to enter, 3. to storm into. ವಾ: ಮನೆ ವಳೆಗೆ ಹುಗ್ಗು. ಪ: ಹುಗ್ಗ್ – ನುಗ್ಗು; ಹುಗ್ಗಿಕೆ – ನುಗ್ಗಲು; ಹುಗ್ಗಿಕಂಡ್ – ನುಗ್ಗಿಕೊಳ್ಳುತ್ತಾ.

ಹುಗ್ಗೆ /*huggɛ*/ ನಾ. 1. ಅನ್ನ, 2. ಉಗ್ಗೆ. rice. ವಾ: ಕುಕ್ಕರ್‌ಲಿ ಬೇಸಿದ ಹುಗ್ಗೆಗಿಂತ, ಬಸ್ತ ಹುಗ್ಗೆನ ಉಂಬಕೆ ಕುಸಿಯಾದು. ಪ: ಹುಗ್ಗೆಗೆ – ಅನ್ನಕ್ಕೆ

ಹುಗ್ಗೆಬಾಗ್ /*huggɛ ba:gɨ*/ ಕ್ರಿ. ಅನ್ನ ಬಸಿ. straining the starch of rice/draining off the excess starch from rice. ವಾ: ಬೇಗ ಹುಗ್ಗೆ ಬಾಗ್ ಬೆಂದ್ ಮೊಡ್ಸಿ ಆಗೋತ್.

ಹುಗ್ದ್ /*hugdɨ*/ ಕ್ರಿ. 1. ಹುಗಿ, 2. ನೆಲದಲ್ಲಿ ಕುಳಿ ಮಾಡಿ ಮುಚ್ಚು, 3. ನೆಲದಲ್ಲಿ ಮುಚ್ಚಿಡು, 4. ಹೂತು ಹಾಕು. 1. to bury, 2. to put or hide underground, 3. to bury in the ground, 4. to hide in the ground. ವಾ: ಸತ್ತ ನಾಯಿನ ಗುಂಡಿ ಹುಗ್ದ್ ಹಾಕೊನೊ.

ಹುಗ್ಸ್ /*hugsɨ*/ ಕ್ರಿ. 1. ತೂರಿಸು, 2. ಒಳಹೋಗು, 3. ಹುಗಿಸು. 1. to insert, 2. to go inside, 3. to bury. ವಾ: ಈ ಬೊಳ್ಳಿನ ಅ ಸಂದಿಲಿ ಹುಗ್ಗ್‌ಸ್.

ಹುಚ್ ಮುಂಡೆ /*hucɨ muɳɖɛ*/ ನಾ. 1. ಹುಚ್ಚುಚ್ಚು ಆಡುವ ಹೆಂಗಸು, 2. ಹೆಂಗಸರಿಗೆ ಬೈಯುವ ಪದ. 1. a mad woman, 2. an expletive used against women. ವಾ: ಇವ್ಳಿಗೆಂತಾದ್ ಇಂದ್ ಹುಚ್ ಮುಂಡೆನಂಗೆ ಆಡುದು.

ಹುಚ್ಚರಾಂಪ /*huccara:mpa*/ ನಾ. ಹುಚ್ಚನ ವರ್ಣಿಸಲು ಬಳಸುವ ಪದ. acts of a mad man. ವಾ: ಎಂತೆಂತೊ ತಲೆಬುಡ ಇಲ್ಲದಂಗೆ ಮಾತಾಡಿರೆ ಹುಚ್ಚರಾಂಪ ತನೆ ಹೇಳ್ದು ಮತ್ತೆ.

ಹುಚ್ಚಣ್ಣ /*huccaɲɲa*/ ನಾ. ಸ್ವಲ್ಪ ಹುಚ್ಚು. little mad. ವಾ: ಅದ್ಕೆ ಹಞ್ಞ ಹುಚ್ಚಞ್ಞ.

ಹುಚ್ಚುಪುಕುಳಿ /*huccupukuḷi*/ ನಾ. ಬೈಗುಳ ಪದ. an expletive term. ವಾ: ನಿಮ್ಮ ಹಚ್ಚುಪುಕುಳಿ ವೈವಾಟ್‌ಂದಾಗಿ ನನ್ನ ತಲೆ ರೆಟ್ಟದ್ ಪುಣ್ಯ.

ಹುಚ್ಚೆ ಅಳಂಬು /*hucce aḷambu*/ ನಾ. ವಿಷದ ಅಣಬೆ. a poisonous mushroom. ವಾ: ಹುಚ್ಚೆ ಅಳಂಬಿನ ತಿಂಬದುಲೆ.

ಹುಚ್ಚ್ /*huccɨ*/ ನಾವಿ. 1. ಮಾನಸಿಕ ಅಸ್ಥಿರತೆ, 2. ಮೊರ್ಲ್. 1. mentally unstable, 2. insane. ವಾ: ನಾವೊಂದ್ ಹೇಳಿರೆ ಅದ್ ಇನ್ನೊಂದ್ ಹೆಳ್ದಿ ಹುಚ್ಚ್ ಕಂಡದೆ.

ಹುಚ್ಚ್ ಚೋಳ್ /*huccɨ co:ḷɨ*/ ನಾ. ಕಂಬಳಿ ಹಣ್ಣು. raspberry fruit. ವಾ: ಹುಚ್ಚ್ ಚೋಳ್ ಹಣ್ಣ್‌ನ ತಿಂದವೆ. ಅದರ ದೈನ ಎಲೆನ ಸಣ್ಣದಾಗಿ ಕೊಚ್ಚಿ ರೇಸ್ಮೆ ಹುಳಕೆ ತಿಂಬಕೆ ಹಾಕಿವೆ.

ಹುಟ್ಟಿಕಣ್ತಿತ್ಲೆ /*huṭṭikaɳtitlɛ*/ ಕ್ರಿ. ಹುಟ್ಟಿಕೊಳ್ಳುತ್ತಿರಲಿಲ್ಲ. wouldn't have been born. ವಾ: ತೋಟಲಿ ಮೊದ್ಲ್ ಹೊಡ್ಡಿದ್ದರೆ ಇಸ್ಟ್ ಉದ್ದ ಹುಲ್ಲ್ ಹುಟ್ಟಿಕಣ್ತಿತ್ಲೆ.

ಹುಟ್ಟುಗುಣ /*huṭṭuguɳa*/ ನಾವಿ. ಸಹಜಗುಣ.

natural behaviour. **ಹುಟ್ಟ್‌ಗುಣ ಗಟ್ಟ ಹತ್ತಿರೂ ಹೋಕಿಲೆ.** ವಾ: ಹುಟ್ಟುಗುಣ ಸುಟ್ಟರೂ ಹೋಕಿಲೆ.

ಹುಟ್ಟುವಳಿ /*huṭṭuvaḷi*/ ನಾ. ಉತ್ಪತ್ತಿ. birth/origin. ವಾ: ಅವರ ಹುಟ್ಟುವಳಿ ನಿತ್ತುಟು.

ಹುಟ್ಟೊಳಿ[1] /*huṭṭoḷi*/ ನಾ. 1. ಹುಟ್ಟಿನಿಂದಲೇ ಬಂದ, 2. ಸಹಜವಾದ. that which was born with a person, natural. ವಾ: ಹುಟ್ಟೊಳಿಂದ ಬಂದ ಆಸ್ತಿ ಇದ್.

ಹುಟ್ಟೋಳಿ[2] /*huṭṭo:ḷi*/ ನಾ. ನರಗಳ ವ್ಯಾಧಿ, ಶಕ್ತಿಹೀನವಾದ (ಮುಖ್ಯವಾಗಿ ಕೈ ಮತ್ತು ಕಾಲು) ಅಂಗ, ವಿಕೃತಾಂಗ. paralysed part (especially hands and legs) the disease polio.

ಹುಟ್ಟ್ /*huṭṭi*/ ನಾ. 1. ಹುಟ್ಟು, 2. ಜನನ, 3. ಜನಿಸು, 4. ಜನ್ಮತಾಳು. 1. birth/origin, 2. birth, 3. to be born, 4. birth. **ಓಡ್ದ ದಾರಿಲಿ ಹುಲ್ಲು ಹುಟ್ಟಿಕಿಲ್ಲೆ(ಗಾ).** ವಾ: ಹುಟ್ಟ್ ಸಾವು ದೇವ್ರು ಕೊಟ್ಟದ್. ಅದ್ ನ್ಮಮ ಕೈಲಿ ಇಲ್ಲೆ. ಪ: ಹುಟ್ಟಿಕಾದ್ – ಹುಟ್ಟಬಾರದು; ಹುಟ್ಟಿತ್ – ಹುಟ್ಟಿತು; ಹುಟ್ಟೊಕು – ಹುಟ್ಟಬೇಕು;

ಹುಟ್ದವ್ /*huṭdavi*/ ಕ್ರಿ. ಹುಟ್ಟಿದವರು. those who were born. ವಾ: ಹೆಣ್ಮಕ ಸುಕ್ರವಾರ ಹುಟ್ದವಾದರೆ ಲಕ್ಷ್ಮೀತ ಹೇಳಿವೆ.

ಹುಡು /*huḍu*/ ಕ್ರಿ. ಹುಡುಕಾಡು. to search. ವಾ: ನೀ ಎಂತರ ಹೀಂಗೆ ಹುಡುಕಾಡ್‌ದು.

ಹುಡ್ಕಾಡ್ /*huḍka:ḍi*/ ಕ್ರಿ. ಹುಡುಕಾಡು. to search. ವಾ: ಕೂಸು ಅಯ್ಯೆ ಎಲ್ಲಿತ ಆಗಲೆಂದ ಹುಡ್ಕಾಡ್ದೆ. ಪ: ಹುಡ್ಕಿಕಂಡ್ – ಹುಡುಕಿಕೊಂಡು; ಹುಡ್ಕಿಕಾದು – ಹುಡುಕಬೇಕಾಗಬಹುದು; ಹುಡ್ಕಿರು – ಹುಡುಕಿದರು; ಹುಡ್ಕಿನೆ – ಹುಡುಕಿರಿ; ಹುಡ್ಕೊಕು – ಹುಡುಕಬೇಕು; ಹುಡ್ಕಿ – ಹುಡುಕಿ;

ಹುಡ್ಕೆನ್ /*huḍkɛni*/ ಕ್ರಿ. ಹುಡುಕಿಕೊಂಡು. in search of. ವಾ: ನಿನ್ನ ಹುಡ್ಕೆನ್ ಬಂದದ್. ಪ: ಹುಡ್ಕೆಂಡ್.

ಹುಡ್ಕ್ /*huḍki*/ ಕ್ರಿ. 1. ಹುಡುಕು, 2. ಅರಸು. 1. to search, 2. to explore. **ಕೈಲಿ ಬೆಣ್ಣೆ ಹಿಡ್ಕಂಡ್ ತುಪ್ಪಕ್ಕೆ ಊರು ಎಲ್ಲಾ ಹುಡ್ಕಿತ್ ಗಡ(ಗಾ).** ವಾ: ಅಕ್ಕಿ ಹೊಡಿ ಎಲ್ಲಿತ ಹುಡ್ಕ್‌ದು. ಪ: ಹುಡ್ಕಿಕೆ – ಹುಡುಕಲು; ಹುಡ್ಕಿಕಂಡ್ – ಹುಡುಕಿಕೊಂಡು.

ಹುಣ್ಣ್ /*huṇṇi*/ ನಾ. ವ್ರಣ. an ulcer. **ಅಂಗೈ ಹುಣ್ಣ್ ಗೆ ಕನ್ನಡಿ ಯಾಕೆ(ಗಾ).** ವಾ: ಬಾಯಿಲಿ ಹುಣ್ಣ್ ಆಕನ ಬಸಳೆ ಸೊಪ್ಪ್ ನ ಅಗೆಕು.

ಹುಣ್ಸೆ /*huṇse*/ ನಾ. ಹುಣಸೇಹಣ್ಣು. tamrind. **ಹೊಳೆಲಿ ಹುಣ್ಸೆ ಹಣ್ಣ್ ತೊಳ್ದಂಗೆ(ಗಾ).** ವಾ: ಸಣ್ಣ ಮಕ್ಕ ಹುಣ್ಸೆಹಣ್ಣಿಗೆ ಉಪ್ಪು, ಜೀರಿಗೆ, ಹಜ್ಞ ಮೆಣ್ಸ್ ಹಾಕಿ ಕುಟ್ಟಿ ಉಂಡೆ ಮಾಡಿ ತಿಂಬೊದು. **ಹುಣ್ಸುಳಿ** /*huṇsuḷi*/ ಹುಣಸೆ ಹಣ್ಣು. tamarind. **ಹುಣ್ಸುಳಿ ಮರ ಮುಪ್ಪಾರೆ ಹುಳಿಗೆ ಮುಪ್ಪಿಲ್ಲೆ(ಗಾ).** ವಾ: ಹುಣ್ಸುಳಿ ರಸ ಎಲ್ಲ ಗೈಪಿಗು ಹಾಕಿವೆ. ಪ: ಹುಣ್ಸೊಳಿ – ಹುಣಸೇ ಹಣ್ಣು. **ಹುಣ್ಸುಳಿ ಅಡರ್** /*huṇsuḷi aḍari*/ ಹುಣಸೆ ಮರದ ಚಿಕ್ಕ ಚಿಕ್ಕ ರೆಂಬೆ. small branches of tamarind tree. ವಾ: ಹುಣ್ಸುಳಿ ಅಡರ್‌ಲಿ ಕೊಟ್ಟರೆ ಉಟ್ಟಲ್ಲ ಚೋಳಿ ಜಾರೊಕು. **ಹುಣ್ಸುಳಿ ಮರ** /*huṇsuḷi mara*/ ಹುಣಸೇ ಮರ. tamarind tree. ವಾ: ಹುಣ್ಸುಳಿ ಮರ ಬಾರಿ ಗಾತ್ರದ ಮರ. ಇದರ ಹಣ್ಣ್ ನ ಅಡ್‌ಗೆಗೂ, ಹಿತ್ತಾಳೆ ಪಾತ್ರಗಳ ಬೆಳ್‌ಗಿಕೂ ಬಳ್‌ಸುವೆ.

ಹುತ್ತ /*hutta*/ ನಾ. 1. ಗೆದ್ದಲು ಹುತ್ತ, 2. ಹಾವಿನ ವಾಸಸ್ಥಾನ, 3. ಗೆದ್ದಲು ಕಟ್ಟುವ ಮಣ್ಣಿನ ಗೂಡು, 4. ಇರುವೆಗೂಡು, 5. ಇವುಗಳಲ್ಲಿ ಹಾವುಗಳು ಕೂಡಾ ವಾಸ ಮಾಡುತ್ತವೆ. an ant hill. **ದುಡಿಮೆ ಯಾರ್‌ದೊ, ಲಾಬ ಯಾರಿಗೊ. ಕೆಂದ ಎತ್ತ್‌ಗೆ ನೂರಾರ್ ಬಾಯಿ – ಹುತ್ತ(ಒ).** ವಾ: ಗೆದ್ಲ್ ಹುತ್ತ ಕಟ್ಟಿದೆ, ಹಾವು ಹುತ್ತಲಿ ಇದ್ದದೆ.

ಹುತ್ತ ಜೇನ್ /*hutta je:ni*/ ನಾ. ಹುತ್ತದ ಜೇನು. a honey bee found in an ant hill. ವಾ: ಹುತ್ತಲಿ ಕಟ್ಟುದು ಹುತ್ತ ಜೇನ್.

ಹುತ್ತರಿ /*huttari*/ ನಾ. ಕೊಡಗಿನ ಸುಗ್ಗಿ ಹಬ್ಬ, ಹೊಸ ಭತ್ತವನ್ನು ಮನೆಗೆ ತೆಗೆದುಕೊಂಡು ಬರುವ ಸಮಯದಲ್ಲಿ ಆಚರಿಸುವ ಹಬ್ಬ, ಹುತ್ತರಿ ಹಬ್ಬ ಕಳೆದ ನಂತರವೇ ಭತ್ತದ ಬೆಳೆ ಕೊಯ್ದು ಮನೆಗೆ ತರಬೇಕೆಂಬ ರೂಢಿ ಮತ್ತು ಹೊಸ ಅಕ್ಕಿಯನ್ನು ಊಟ ಮಾಡಬಹುದೆಂದು ಪದ್ಧತಿಯಲ್ಲಿರುವುದು. festival of harvest, the annual rice harvest festival, after the festival newly harvested paddy/ rice is carried home, and used in cooking. ವಾ: ಹುತ್ತರಿ ಹಬ್ಬಲಿ ಮನೆನ ಸಾರ್‌ಸಿ, ಸುಣ್ಣ ಹೊಡ್ದ್, ಅಂಗಳ, ಕಳಕ್ಕೆಲ್ಲ ಸೆಗ್ಣಿ ಸಾರ್‌ಸಿ, ರಂಗೋಲೆ ಬರ್‌ದ್ ಚೆಂಡ್ ಹೂಲಿ ತೋರಣ ಕಟ್ಟಿವೆ, ಹಬ್ಬಲಿ ಐನ್

ಮನೇಲಿ ಕುಟುಂಬಸ್ತರೆಲ್ಲ ಸೇರಿ ಕದ್‌ರ್ ಕೊಯ್ದುವೆ. ಪ: ಹುತ್ರಿ – ಕೊಡಗಿನ ಸುಗ್ಗಿ ಹಬ್ಬ.

ಹುತ್ತೆರಿಪಚ್ಚೆ /*hutteri pacce*/ ನಾ. ಹುತ್ತರಿಯ ದಿನ ಉಪಯೋಗಿಸುವ ಬಿದಿರಿನ ಸಣ್ಣ ಬುಟ್ಟಿ. a small bamboo basket used during harvest festival. ವಾ: ಕದ್ರ್ ಕೊಯ್ಯಕೆ ಹೋಕನ ಹುತ್ತೆರಿ ಪಚ್ಚೆಲಿ ಎಲ್ಲ ಪೂಜೆ ಸಾಮಾನ್ ಹಾಕಂಡ್ ಹೋದು.

ಹುತ್ರಿಗೆಣ್ಸ್ /*hutri geṇsi*/ ನಾ. ಹುತ್ತರಿ ಹಬ್ಬದಲ್ಲಿ ಉಪಯೋಗಿಸುವ ಗೆಣಸು. a tuber used during the harvest festvial. ವಾ: ಹುತ್ರಿ ಹಬ್ಬಲಿ ಪಲಾರಕ್ಕೆ ಹುತ್ರಿ ಗೆಣ್ಸ್ ಬೇಕ್.

ಹುದುರಿ /*huduri*/ ನಾ. 1. ಭತ್ತದ ಅರಳು/ಹೊದುಳು, 2. ಭತ್ತವನ್ನು ಹುರಿದಾಗ ಭತ್ತದ ಸಿಪ್ಪೆ ಬೇರೆಯಾಗಿ, ಅಕ್ಕಿ ಹುದುರಿಯಾಗುತ್ತದೆ. popped paddy. ವಾ: ಎಡೆ ಹಾಕಿಕೆ ಹುದುರಿ ಬೇಕ್. ಪ: ಹೊದುರಿ.

ಹುದೇರಿ /*hude:ri*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಹುದ್ಗಿಸಿ /*hudgisi*/ ನಾ. 1. ಅಡಗಿಸು, 2. ಮರೆಮಾಡು. 1. to hide, 2. to conceal. ವಾ: ಅರ್ವೆನೆಲ್ಲ ಹುದ್ಗಿಸಿ ಮಡ್ಗಿಟು. ಪ: ಹುದ್ಗ್ – ಹುದುಗು.

ಹುನ್ನರು /*hunnaru*/ ನಾ. 1. ಹುನ್ನಾರ, 2. ಉಪಾಯ. 1. a paln, 2. a plot. ವಾ: ಏನೋ ಹುನ್ನರು ಮಾಡಿ ಜಾಗೆ ಹೊಡ್‌ಕಂಡೊ.

ಹುಬ್ಬು /*hubbu*/ ನಾ. ಕಣ್ಣಿನ ಮೇಲ್ಭಾಗ. eye brow. ವಾ: ಕೂಸುನ ಹುಬ್ಬು ತಿದ್ದಿದಂಗೆ ಉಟ್ಟು.

ಹುಬ್ಬೇ /*hubbe:*/ ನಾ. ಹುಬ್ಬಾ ನಕ್ಷತ್ರ. Hubba, a star. **ಹುಬ್ಬೇ ಮಳೆಲಿ ಬಿತ್ತಿರೆ ಹುಲ್ಲೂ ಇಲ್ಲೆ, ಕಾಳೂ ಇಲ್ಲೆ(ಗಾ).** ವಾ: ನಕ್ಷತ್ರಗಳ ಮಾಲಿಕೆಲಿ ಹನ್ನೊಂದನೆ ನಕ್ಷತ್ರನೆ ಹುಬ್ಬೇ.

ಹುರಿಬಳೆ /*huribaḷe*/ ನಾ. ಕೈಗೆ ಹಾಕುವ ಕಡಗ. a braclet. ವಾ: ಚಿನ್ನದ ಹುರಿ ಬಳೆ ಬಾರಿ ಗಟ್ಟಿಯಾಗಿದ್ದದೆ.

ಹುರಿಯಕ್ಕಿ /*huriyakki*/ ನಾ. ಮಂಡಕ್ಕಿ. puffed rice. ವಾ: ಹುರಿಯಕ್ಕಿ ತಿಂಬಕೆ ಲಾಯ್ಕ.

ಹುರ್‌ಕ್‌ಲು /*hurikilu*/ ನಾ. 1. ಪುರಿ, 2. ಭತ್ತದ ಅರಳು, 3. ಮಂಡಕ್ಕಿ. puffed rice. ವಾ: ಹುರ್‌ಕ್‌ಲುಲಿ ಚೆರ್‌ಮುರಿ ಮಾಡಿರೆ ತಿಂಬಕೆ ಲಾಯ್ಕ.

ಹುರ್‌ಪು /*huripu*/ ನಾ. 1. ಉತ್ಸಾಹ, 2. ಹುಮ್ಮಸ್ಸು. 1. enthusiasm, 2. excitement. ವಾ: ಯಾವ್ದೆ ಕೆಲ್ಸ ಮಾಡಿರು ಹುರ್‌ಪು ಇರೋಕು.

ಹುಲಿಕಡ್‌ಂದ್ /*hulikaḍindi*/ ನಾ. ಕಣಜ ಹುಳು. waps. ವಾ: ಹುಲಿಕಡ್‌ಂದ್ ಕಚ್ಚಿರೆ ಬಾತ್‌ಕಂಡದೆ. ಪ: ಕಡ್‌ಂದೊಳು.

ಹುಲಿಮನೆ /*hulimanɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಹುಲಿಮೊದ್ವೆ /*hulimɔdvɛ*/ ನಾ. ದಶಕಗಳ ಹಿಂದೆ ಹುಲಿಯನ್ನು ಕೊಂದವರಿಗೆ ಮಾಡುವ ಗೌರವ. honoring the people who have killed a tiger, a custom followed in the past. ವಾ: ಹಿಂದೆ ಬೇಟೆಲಿ ಹುಲಿ ಕೊಂದವ್‌ಕೆ ಹುಲಿ ಮೊದ್‌ವೆತ ಮಾಡಿ ಸಮ್ಮಾನ ಮಾಡ್ತಿದ್ದೊ.

ಹುಲಿಹೊರಿಕೆ /*hulihorikɛ*/ ನಾ. ಬೈಗುಳ ಪದ. an expletive term. ವಾ: ನಾಯಿ ನಿನ್ನ ಹುಲಿ ಹೊರಿಕೆ.

ಹುಲುಸು /*hulusu*/ ನಾವಿ. 1. ಚೆನ್ನಾಗಿ, 2. ಸಮೃದ್ಧಿಯಾಗಿ, 3. ಫಲವತ್ತಾಗಿ. 1. beautiful, 2. plentiful, 3. fertile. ವಾ: ತೋಟಲಿ ಹಸಿ ಹುಲ್ಲ್ ಹುಲುಸಾಗಿ ಬೆಳ್ದುಟು.

ಹುಲ್‌ಕತ್ತಿ /*hulikatti*/ ನಾ. ಹುಲ್ಲು ಕತ್ತರಿಸುವ ಕತ್ತಿ. a sickle. ವಾ: ಹುಲ್‌ಕತ್ತಿದ್ ಹಲ್ಲ್ ತುದಿ ಚೂಪ್ ಚೂಪ್ ಇದ್ದದೆ ಬೇಗ ಹುಲ್ಲ್ ಕೊಯ್ಯಕ್. ಪ: ಹುಲ್ಲು ಕತ್ತಿ – ಜೊಂಡು ಹುಲ್ಲನ್ನು ಕತ್ತರಿಸುವ ಕತ್ತಿ.

ಹುಲ್ಲಳಂಬು /*hullaḷambu*/ ನಾ. ಒಂದು ವಿಧದ ಅಣಬೆ. a variety of mushroom. ವಾ: ನೀವ್ಗೆ ಹುಲ್ಲಳುಂಬು ಸಿಕ್ಕಿಟೊ.

ಹುಲ್ಲು /*hullu*/ ನಾ. 1. ಪೋಯೇಸಿ ಕುಟುಂಬಕ್ಕೆ ಸೇರಿದ ಏಕದಳೀಯ ಸಸ್ಯ, 2. ಮೇಯುವ ಪ್ರಾಣಿಗಳು ತಿನ್ನುವ ಒಂದು ಹಸಿರು ಸಸ್ಯಜಾತಿ. 1. grass, belongs to the family of Poaceae, 2. fodder for cattle. **ದನ ನೋಡಿ ಹುಲ್ಲಾಕೊಕು(ಗಾ).** ವಾ: ಹಿಂದೆಲ್ಲ ಹುಲ್ಲುನ ಮಾಡ್‌ಗಳೆ ಇದ್ದದ್. ಪ: ಹುಲ್ಲ್ – ಹುಲ್ಲು

ಹುಲ್ಲುಕಟ್ಟುದು /*hullu kaṭṭudu*/ ನಾ. ಬಿಡಿ ಒಣ

ಹುಲ್ಲನ್ನು ಕಂತೆಯಾಗಿ ಕಟ್ಟುವುದು. bundling the grass. ವಾ: ಬತ್ತ ಬಡ್ದ ಮೇಲೆ ಹುಲ್ಲು ಕಟ್ಟುದು.

ಹುಲ್ಲುಕುಮ್ರಿ /*hullukumri*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ನಾಲ್ಕೂರು ಗ್ರಾಮದ ಜಾಗ. a locality in Nalkuru village in Sullia Taluk of Dakshina Kannada District.

ಹುಲ್ಲುದೊಡ್ಡು /*hullu doḍḍu*/ ನಾ. ಹುಲ್ಲುಗಾವಲು. grassland. ವಾ: ಹುಲ್ಲು ದೊಡ್ಡುಲಿ ದನಗ ಮೇದವೆ.

ಹುಲ್ಲುಬೆಂಕಿ /*hullubɛŋki*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಹುಲ್ಲುಮನೆ /*hullumane*/ ನಾ. ಹುಲ್ಲಿನ ಮೇಲ್ಛಾವಣಿ ಹೊಂದಿರುವ ಮನೆ. thatch roof. ವಾ: ಹಿಂದೆನ ಕಾಲಲಿ ಹುಲ್ಲುಮನೆನೆ ಹೆಚ್ಚಿ ಇದ್ದದ್.

ಹುಲ್ಲುಮುಂಡ /*hullumuṇḍa*/ ನಾವಿ. 1. ಬತ್ತದ ಹುಲ್ಲಿನ ಬಣವೆ, 2. ಹುಲ್ಲಿನ ಮೆದೆ, 3. ಹುಲ್ಲಿನ ರಾಶಿ, 4. ಹುಲ್ಲಿನ ಒಟ್ಟಿಲು. stack of hay. ವಾ: ಹುಲ್ಲು ಮುಂಡಂದ ನಾಕ್ ಕಂತೆ ಹುಲ್ಲ್ ಎಳ್ಕಂಡ್ ಬಂದ್ ದನಗಳಿಗೆ ಹಾಕ್.

ಹುಲ್ಲುಹೊಸುದು /*hulluhosudu*/ ಕ್ರಿ. ಹುಲ್ಲು ಹರಡುವುದು. to spread grass/hay. ವಾ: ಮನೆಗೆ, ಕೊಟಗೆಗೆ ಹುಲ್ಲು ಹೋಸೊಕು.

ಹುಲ್ಲೊಳ್ಂಗಿತ್ /*hulloḷiŋgitti*/ ಕ್ರಿವಿ. ಹುಲ್ಲು ಒಣಗಿದೆ. hay/grass has dried. ವಾ: ಕಣಲಿ ಹಾಕಿದ ಹುಲ್ಲೊಳ್ಂಗಿತ್.

ಹುಲ್ಲ್ಕಂತೆ /*hullɨkante*/ ನಾವಿ. ಹುಲ್ಲಿನ ಸಣ್ಣಸಣ್ಣ ಕಟ್ಟು. a small bundle of grass/hay. ವಾ: ಹರ್ಂಡಿರೊ ಹುಲ್ಲ್ನ ಕಂತೆ ಕಟ್ಟೊಕು.

ಹುಲ್ಲ್ನ ಹೊರೆ /*hullɨna horɛ*/ ನಾ. ಹುಲ್ಲಿನ ಕಟ್ಟು. a small bundle of grass/hay. ವಾ: ಅವ್ವ ದಿನಾ ಹೊಳೆಕರೆಂದ ಹಸಿ ಹುಲ್ಲ್ನ ದೊಡ್ಡ ಹೊರೆ ಹೊತ್ಕಂಡ್ ಬಂದ್ ದನಗಳಿಗೆ ಹಾಕುವೆ. ಪ: ಹುಲ್ಲೊರೆ – ಒಟ್ಟು ಮಾಡಿದ ಹುಲ್ಲಿನ ಒಂದು ಕಟ್ಟು

ಹುವ್ವ /*huvva*/ ನಾ. 1. ಹೂವು, 2. ಪುಷ್ಪ. fllowers. ವಾ: ದೈಲಿ ಸುಮಾರ್ ದಾಸೊಳ ಹುವ್ವ ಬುಟ್ಟುಟು.

ಹುಳ /*huḷa*/ ನಾ. ಹುಳು. worms. **ಮರನ ಹುಳ ಮರನೇ ಕೊರೆದು(ಗಾ).** ವಾ: ಹೂನ ದೈನ ಹುಳ ತಿಂಬದು. ಪ: ಹುಳ್ – ಹುಳ

ಹುಳಮೇಯ್ದು /*huḷame:yḍu*/ ನಾ. 1. ಹುಳುಕಡ್ಡಿ, 2. ಗಜಕರ್ಣ. ringworm. ವಾ: ಕುತ್ತಿಗೆ ಹಿಂದೆ ಹುಳಮೇಯ್ದುಟು.

ಹುಳಿ /*huḷi*/ ಕ್ರಿ. 1. ಹುಳಿ, 2. ಕಿತ್ತಳೆ ಹಣ್ಣು. 1. sour, 2. orange. **ಹಾಲ್‌ಗೆ ಹುಳಿ ಹಿಂಡಿದಾಂಗೆ(ನು).** ವಾ: ಹುಳಿಲಿ ವಿಟಮಿನ್ ಎ, ವಿಟಮಿನ್ ಸಿ ಇದ್ದದೆ, ಉಪ್ಮೆಣ್ಸ್ ಹಾಕಿ ತಿಂಬಕೆ ಲಾಯ್ಕಾದೆ. ಪ: ಹುಳಿಕಿತ್ಲೆ – ಹುಳಿಯಾದ ಕಿತ್ತಳೆ ಹಣ್ಣು.

ಹುಳಿಕಳ್ಳ್ /*huḷikaḷḷi*/ ಕ್ರಿ. ಹುಳಿ ಸೇಂದಿ. sour toddy. ವಾ: ನೀ ಹುಳಿಕಳ್ಳ್ ಕುಡ್ದಿಯನ?

ಹುಳಿತೇಗ್ /*huḷite:gɨ*/ ಕ್ರಿ. 1. ಉಬ್ಬಳಿಕೆ, 2. ಹುಳಿತೇಗು. 1. belching/burping, 2. sour burps. ವಾ: ಉಂಡದ್ ಸೆರಿಯಾತ್ಲೆ ಕಟ್ರನಂಗೆ ಆಗಿ ಹುಳಿತೇಗ್ ಬಂದದೆ.

ಹುಳಿದೋಸೆ /*huḷido:se*/ ಕ್ರಿ. ಬಂದವನ್ನು ಹುಳಿ ಬರಿಸಿ, (ಬುರುಗಿಸಿ) ತಯಾರಿಸಿದ. fermented dosa batter. ವಾ: ಇಂದ್ ಬಂದ ಕಡ್ದ್ ನಾಳೆ ಹೊಯ್ಯೊದೆ ಹುಳಿದೋಸೆ.

ಹುಳಿನೀರ್ /*huḷini:rɨ*/ ಕ್ರಿ. 1. ಕಾಚಂಪುಳಿ, 2. ಪನರ್ಪುಳಿ ಎಂಬ ಹಣ್ಣಿನ ರಸವನ್ನು ಮಂದವಾಗಿ ಕಾಯಿಸಿ ತೆಗೆಯುವ ಹುಳಿರಸ. 1. extracts of Cambogia Gummi-Gutta fruit, 2. sour juice extracted from Cambogia Gummi. ವಾ: ಹುಳಿನೀರ್ ಜಾಸ್ತಿ ಮಾಸ ಗೈಪುಗೆ ಹಾಕುದು. ಪ: ಹುಳ್ನೀರ್.

ಹುಳಿಮರ /*huḷimara*/ ಕ್ರಿ. ಕಿತ್ತಳೆ ಮರ. orange juice. ವಾ: ಹುಳಿ ಮರಲಿ ಒಂದೇ ಒಂದ್ ಹುಳಿ ಇಲ್ಲೆ.

ಹುಳಿಮೆಣ್ಸ್ /*huḷimeṇsɨ*/ ಕ್ರಿ. ಹುಳಿ ಮೆಣಸು. sour pepper. ವಾ: ಹುಳಿಮೆಣ್ಸ್ ಕಡ್ದ್ ಮೀನ್‌ಗೈಪು ಮಾಡ್ದು.

ಹುಳಿಯಡ್ಕ /*huḷiyaḍka*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಉಬರಡ್ಕ ಮಿತ್ತೂರು ಗ್ರಾಮದ ಜಾಗ. a locality in Ubaradka Mitturu village in Sullia Taluk of Dakshina Kannada District.

ಹುಳಿರಗಳೆ /*hul̩iragal̩ɛ*/ ಕ್ರಿ. ಸದಾ ಕಿರಿಕಿರಿ. irritation. ವಾ: ಅವರ್‌ದ್ ಯಾಗೊಳು ಇದ್ದದೆ ಹುಳಿರಗಳೆ.

ಹುಳಿಲಂಡ್ /*hul̩ilaṇḍ*/ ಕ್ರಿ. ಅತಿಯಾದ ಹುಳಿ. too sour. ವಾ: ಅಬಾ! ಚೋಳಿಹಣ್ಣ್ ಹುಳಿಲಂಡನಂಗುಟು ತಿಂಬಕಾದುಲೆ.

ಹುಳಿಸೊಪ್ಪ್ /*hul̩isoppɨ*/ ಕ್ರಿ. ಹುಳಿ ಸೊಪ್ಪು. sour leaf. ವಾ: ಹೂನ ದೈದ ನಡುಲಿ, ಚೆಟ್ಟಿಲೆಲ್ಲ ಹುಳಿಸೊಪ್ಪ್ ಬೆಳ್ದದೆ. ಅದರ ದಂಟ್, ಸೊಪ್ಪ್ ಎಲ್ಲ ಹುಳಿ ಹುಳಿ.

ಹುಳುಕಡ್ಡಿ /*hul̩ukaḍḍi*/ ನಾ. 1. ಗಜಕರ್ಣ, 2. ಚರ್ಮರೋಗ. ringworm. ವಾ: ಹುಳುಕಡ್ಡಿ ಒಬ್ಬರ್‌ಂದ ಒಬ್ಬರ್‌ಗೆ ಹರ್‌ಂಡಿದೆ. ಪ: ಹುಳ್‌ಕಡ್ಡಿ

ಹುಳುಕು /*hul̩uku*/ ನಾ. 1. ನಂಜು, 2. ಮತ್ಸರ, 3. ಸಣ್ಣ ಬುದ್ಧಿ. 1. envy, 2. jealousy, 3. silly behaviour. ವಾ: ಮೊನ್ಸಂಗೆ ಹುಳುಕು ಬುದ್ಧಿ ಇರಿಕಾದ್.

ಹುಳ್ ಕಂಟ /*hul̩ɨ kaṇṭa*/ ನಾ. ಹುಳ ಕಚ್ಚಿ ತರಕಾರಿ ಒಳಗೆ ಅರಿಶಿನ ಬಣ್ಣ ಬರುವುದು. vegetable turning yellow as they were bitten by worms. ವಾ: ಸೋಂತೆ ವಳೆಗೆಲ್ಲ ಹುಳ್ಕಂಟ ಆಗುಟು.

ಹುಳ್ಕ /*hul̩ka*/ ನಾ. 1. ಅಸೂಯೆ, 2. ಮತ್ಸರ ಹೊಂದಿದವ. 1. jealousy, 2. a jealous. ವಾ: ಅಂವ ಬರಿ ಹುಳ್ಕ.

ಹುಳ್ಕಹಲ್ಲ್ /*hul̩kahallɨ*/ ನಾ. ಹಾಳಾದ ಹಲ್ಲು. spoiled tooth. ವಾ: ಹುಳ್ಕ ಹಲ್ ಇದ್ದರೆ ಆಗಾಗ ಬೇನೆ ಬಾದು ತೊಪ್ಪಿಕಿಲೆ.

ಹುಳ್ಕಿ /*hul̩ki*/ ನಾ. ಅಸೂಯೆ, ಮತ್ಸರ ಸ್ತ್ರೀ. a jealous woman. ವಾ: ಅವ್ಳು ಹುಳ್ಕಿ.

ಹುಳ್‌ಕ್ ಬುದ್ದಿ /*hul̩ɨkɨ buddi*/ ನಾ. ಕೆಟ್ಟ ಬುದ್ದಿ. wicked behaviour. ವಾ: ಹುಳ್‌ಕ್ ಬುದ್ದಿ ಇರ್‌ಕಾಗದ್ ಮರದ ಕೇಡ್ ಮರಕ್ಕೆತೇಳುವಂಗೆ ಆದೆ ಮತ್ತೆ.

ಹುಳ್‌ಹುಳ್ಳಂಗೆ /*hul̩ɨhul̩l̩aŋgɛ*/ ಕ್ರಿ. ಹುಳ್ಳಗೆ. insecure. ವಾ: ಕದ್ದಂವನ ಮೊನ್ಸ್ ಹುಳ್‌ಹುಳ್ಳಂಗೆ ಇದ್ದದೆ.

ಹುಳ್ಳಂಗೆ /*hul̩l̩aŋgɛ*/ ಕ್ರಿ. 1. ರುಚಿಕರವಾದ, 2. ಪುಲ್ಲೆನ. tasty. **ಕಳ್ಳನ ಮೊನ್ಸ್ ಹುಳ್ಳಂಗೆ ಹುಳ್ಳಂಗೆ(ಗಾ).** ವಾ: ಮೀನ್ ಆಂಬರಲಿ ಹುಳ್ಳಂಗೆ ಉಂಬಕ್ಕೆ ಆದೆ. ಪ: ಹುಳ್ಳ / ಹುಳ್ಳ್‌ಂಗೆ – ಬಾಯಿಗೆ ರುಚಿಯಾಗುವ ಹಾಗೆ ಹುಳಿಹುಳಿಯಾಗಿ; ಪುಳಿಪ್ಪೆನೊ(ತು)

ಹೂಬಾಳೆ /*hu:ba:l̩ɛ*/ ನಾ. 1. ಬಾಳೆ ಹಣ್ಣಿನ ವಿಧಗಳು, 2. ಏಲಕ್ಕಿ ಬಾಳೆ, 3. ಮೈಸೂರು ಕದಳಿ. types of banana/plantain. ವಾ: ಹೂ ಬಾಳೆನ ಪೂಜೆಗೆ ಬಳ್ಸುವೆ.

ಹೂಬಿಸಿಲ್ /*hu:bisilɨ*/ ನಾ. ಬೆಳಗ್ಗಿನ ಬಿಸಿಲು. morning sun. ವಾ: ಸಣ್ಣ ಕೂಸುನ ಹೊತಾರೆನ ಹೂ ಬಿಸಿಲ್‌ಗೆ ಹಿಡಿಯೊಕು ವಿಟಮಿನ್ ಡಿ ಸಿಕ್ಕಿದೆ.

ಹೂಮಾರ್ /*hu:ma:ri*/ ನಾವಿ. 1. ಒಂದು ಮಾರು ಹೂವು, 2. ಹೂವನ್ನು ಮಾರು. 1. a measure covering the distance between the tip of middle fingers when one's are completely streched, 2. to sell flowers. ವಾ: ಪೂಜೆಗೆ ಎಂಟ್ ಹೂ ಮಾರ್ ಬೇಕಾದು.

ಹೂಮುಡ್ಸುವ ಹಬ್ಬ /*hu: muḍsuva habba*/ ನಾ. ಸೀಮಂತ. a baby shower ceremony. ವಾ: ಬೊಸ್ರಿ ಹೆಣ್ಮಕ್ಕಳಿಗೆ ಏಳ್ ತಿಂಗಳ್‌ಲಿ ಹೂ ಮುಡ್ಸುವ ಹಬ್ಬ ಮಾಡಿವೆ.

ಹೂಮೊಗ್ಗ ಮನೆ /*hu:mogga mane*/ ನಾ. ಐನ್ ಮನೆಯ ಮುಂಭಾಗದಲ್ಲಿರುವ ತ್ರಿಕೋನಾಕಾರದ ಸೂರು. a small shrine with a triangular roof infront of Ain Mane. ವಾ: ಕೆಲವು ಐನ್ ಮನೆ ಮುಂದೆ ಹತ್ತ್ ಕಾಕನ ಸುರುಗೆ ಸಿಕ್ಕುದೆ ಹೂ ಮೊಗ್ಗ ಮನೆ.

ಹೂ ಸುರ್ಯದು /*hu:suryadu*/ ಕ್ರಿ. ಹೂ ಪೋಣಿಸು. to string flowers. ವಾ: ಹೂನ ಸೂಜಿಲಿ ಸುರ್‌ಯದು ಸುಲಾಬ. ಪ: ಹೂ ಚೂರ್ಯೊದು

ಹೂಂಕುಟ್ಟು /*hu:ŋkuṭṭu*/ ಕ್ರಿ. 1. ಮಾತನಾಡುವಾಗ ಹೂಂ ಎಂದು ಹೇಳುವುದು, 2. ಹೂಂಗುಟ್ಟುವುದು. affirmation. ವಾ: ಕತೆ ಹೇಳ್ಕನ ಹೂಂಕುಟ್ಟು ಇಲ್ಲರೆ ನಿದ್ದೆ ಬಂದದೆ. ಪ: ಹೂಂಗುಟ್ಟು – ಹೂಂಗುಟ್ಟು

ಹೂಂಜ /*hu:ŋja*/ ನಾ. ಹುಂಜ. a rooster. ವಾ: ಕರ್ಬೆಳ್ಳೆ ಹೂಂಜ ಮೆಟ್ಟಿಕೆ ಹುಸಾರುಟ್ಟು. **ಹೂಂಜ ಕೂಂಗುದು** /*hu:ŋja koŋgudu*/ ಹುಂಜ

ಕೂಗುವುದು. crowing rooster. ವಾ: ದೂರಲಿ ಹೂಂಜ ಕೂಂಗುದು ಕೇಳ್‌ದೆ.

ಹೂಂಜ ಲಾಕಿ /*hu:ŋjala:ki*/ ನಾ. ಗಂಡು ಕೋಳಿ. a rooster. ವಾ: ಹೂಂಜ ಲಾಕಿಗ ಎಸ್ಟೊಳೊ.

ಹೂಂಣ್ದು /*hu:ŋṇdu*/ ಕ್ರಿ. 1. ಹೂಳುವುದು, 2. ಹೂತು ಹಾಕುವುದು. 1. to bury, 2. put or hide underground. ವಾ: ಅಲ್ಲಿ ಸತ್ತವರ್‌ನ ಹೂಂಣ್ದು.

ಹೂಂದೈ /*hu:ndai*/ ನಾ. ಹೂವಿನ ಗಿಡ. a flowering plant. ವಾ: ಆ ಹೂಂದೈನ ಕೀಳ್ಬಡ.

ಹೂಂಸ್ /*hu:nsuɨ*/ ನಾ. 1. ಹೂಸು, 2. ಅಪಾನವಾಯು, 3. ಕೆಟ್ಟ ಗಾಳಿ, 4. ಹೂಸು. 1. fart, 2. breaking wind, 3. bad smell, 4. reflex response. **ಹೂಂಸಿದ್ ನಾರದಿದ್ದದೆನಾ(ಗಾ). ನಾಯಿ ಹೂಂಸ್‌ದು ಕೇಳಿಕಾಗದ್‌ಗಡ, ಕೆಮಿ ಕಿವುಡಾದೆಗಡ!(ನು). ನೆಲಕೆ ಗುಂಡ್ ಮೂಕ್ ಗೆ ಪೆಟ್ಟ್ – ಹೂಂಸ್(ಒ).** ವಾ: ಕೂಸು ಆಗಾಗ ನಿದ್ದೆಲಿ ಹೂಂಸುದು.

ಹೂಕೂಂಬೆ /*hu:kombɛ*/ ನಾ. ಬಾಳೆಯ ಹೂವು. plantain fllower. ವಾ: ಹೂಕೂಂಬೆನ ಪಲ್ಯ. ಗೊಜ್ಜ್ ಮಾಡಕ್, ಕೂಂಬೆನ ಸಿಗಳ್ ಮಾಡಿ ಕರ್‌ಗಳ್‌ಗೂ ತಿನ್ಸಿವೆ.

ಹೂಕೂಸು /*hu:ku:su*/ ನಾ. ಎಳೆಮಗು. an infant. ವಾ: ಅದಿನ್ನು ಹೂ ಕೂಸು ಅದ್‌ನ ಹಂಗೆಲ್ಲ ಎತ್ತಿಕೆ ಹೋಗ್‌ಬಡ.

ಹೂಗ /*hu:ga*/ ನಾ. ಹೂವುಗಳು. flowers. ವಾ: ಎಸ್ಟ್ ತರದ ಹೂಗ ಬೇಕ್ ಬೇಲಿ ಕರೆಲಿ ಹೋಗಿ ನೋಡ್.

ಹೂಗೋಸ್ /*hu:go:si*/ ನಾ. ಎಪ. 1. ಹೂಕೋಸು, 2. ಬ್ರಾಸಿಕೇಸೀ ಕುಟುಂಬಕ್ಕೆ ಸೇರಿದ ತರಕಾರಿ ಸಸ್ಯ. 1. cauliflower, 2. a cruciferous vegetable. ವಾ: ಹೂಗೋಸ್‌ಲಿ ಸಲ್ಪರ್ ಅಂಶ ದಾರಾಳಾಗಿ ಇದ್ದದೆಗಡ. ತಡಿಗೆ ಒಳ್ಳದ್. ಪ: ಹೂಕೋಸ್ – ಹೂಕೋಸು.

ಹೂಜಿ /*hu:ji*/ ನಾ. ನೀರು ತುಂಬಿಸಿಡುವ ಪಾತ್ರೆ. vessel containing water/a jug. ವಾ: ಹೂಜಿಲಿ ನೀರ್ ತುಂಬಿ ಇಸುದು.

ಹೂಟೆ /*hu:ʈɛ*/ ನಾ. 1. ಉಳುಮೆ, 2. ಹೂಡುವುದು. 1. to plough, 2. to till the soil. **ಕರ್‌ಬುಡಿಕೆ ಹೋಕನ ದನ ಹೂಟೆಗೆ ಹೋಕನ ಎತ್ತ್(ಗಾ).** ವಾ: ಗದ್ದೆ ಹೂಟೆ ಮಾಡಿಕೆ ಎತ್ತ್ ಗ ಬೇಕಾದೆ.

ಹೂಡು /*hu:ḍu*/ ಕ್ರಿ. 1. ಉಳುಮೆ ಮಾಡು, 2. ತೊಡಗಿಸು. 1. to plough, 2. to take part. **ಹೂಡುದು ಬುಟ್ಟ್ ಎಸ್‌ಂಡ್ ಹಿಡ್ದಂಗೆ(ಗಾ).** ವಾ: ಗದ್ದೆ ಹೂಡುದು ಯಾಗಂದ ಸುರು ಮಾಡ್‌ದು.

ಹೂಡ್ /*hu:ḍɨ*/ ಕ್ರಿ. ಉಳುಮೆಮಾಡು. to plough. **ಗೂಳಿಗೇನ್ ಗೊತ್ತು ಹೂಡುವೆತ್ತ್ ನ ಕಷ್ಟ(ಗಾ).** ವಾ: ಹೊತಾರೆನೆ ಗದ್ದೆ ಹೂಡ್‌ದು. ಪ: ಹೂಡ್ದು – ಉಳುಮೆ ಮಾಡುವುದು; ಹೂಡಿಕೆ – ಉಳುಮೆ ಮಾಡುವುದಕ್ಕೆ; ಹೂಡ್ವ – ಉಳುಮೆ ಮಾಡುವ

ಹೂಡ್ತೊಳೊ /*uḍtɔlɔ*/ ಕ್ರಿ. 1. ಉಳುತ್ತಿದ್ದಾರೆ, 2. ಹೂಡುತ್ತಿದ್ದಾರೆ. 1. they are ploughing, loosening the soil to sow seeds, 2. they are tilling. ವಾ: ಗದ್ದೆ ಉಡ್ತಲೊ.

ಹೂಣ /*hu:ṇa*/ ನಾ. 1. ಹೂಡು, 2. ಉಳುಮೆ ಮಾಡು. 1. to plough, 2. to till the soil. **ಹೂಣದೆ ಗದ್ದೆ ಹಾಳಾತ್, ನೋಡದೆ ಮನೆ ಹಾಳಾತ್(ಗಾ).** ವಾ: ಗದ್ದೆನ ಹೂಣಕು.

ಹೂಣಿ /*hu:ṇi*/ ಕ್ರಿ. 1. ಹೂಳು, 2. ಹೂತು. 1. to bury, 2. put or hide underground. ವಾ: ಗೊಸ್‌ರ್‌ಲಿ ಕಾಲ್ ಹೂಣಿ ಹೋತ್. ಪ: ಹೂಣೊಕು – ಹೂತು ಹಾಕಬೇಕು.

ಹೂತಗ್ಸಿನೋಡು /*hu:tagsi no:ḍu*/ ಕ್ರಿ. ವಿವಾಹ ಸಂಬಂಧ ಕೂಡಿ ಬರುತ್ತದೆಯೇ ಎಂಬುದನ್ನು ದೇವರ ಮುಂದೆ ಹೂ ತೆಗೆಸಿ ನೋಡುವುದು. a custom of confirming if the prospective marriage alliance would work. ವಾ: ಮೊದುವೆಗೆ ಸಂಬಂದ ಕೂಡಿ ಬಾದೊತ ಹೂತಗ್ಸಿ ನೋಡುದು. ಪ: ಹೂ ತೆಗ್ಸಿನೋಡ್.

ಹೂತ್ಹೋಗು /*hu:tho:gu*/ ಕ್ರಿ. ಹೂತು ಹೋಗು. to get buried. ವಾ: ಕೋಣ ಕೊರ್‌ಜಿಲಿ ಹೂತ್ಹೋಗುಟು.

ಹೂದ್ರಿ /*hu:dri*/ ನಾ. 1. ಅರಳು, 2. ಹೊದಲು, 3. ಹುರಿದ ಅಕ್ಕಿ. popped rice. ವಾ: ಹೂದ್ರಿನ ತಿಂಬದು. ಪ: ಹೊದ್ರಿ.

ಹೂನಕೊಪ್ಪಳ /*hu:nakoppaḷa*/ ನಾವಿ. ಹೂವಿನತೋಟ. flower farm, floriculture. ವಾ:

ಮನೆ ಮುಂದೆ ಹೂನ ಕೊಪ್ಪಳ ಇರೋಕು ಅಂದರೆ ಮನ್ಸಿಗೆ ಕುಸಿಯಾದು. ಬೇಜಾರಾಕನ ಅಡ್ಡಾಡಿ ಬರಕ್.

ಹೂನಗೊಂಡೆ /*hu:nagoṇḍɛ*/ ನಾವಿ. 1. ಹೂವಿನ ದಂಡೆ, 2. ಹೂಕಟ್ಟುವ ಒಂದು ಬಗೆ. 1. a bunch of flowers, 2. a style of stringing flowers. ವಾ: ಕೂದೊಲುನ ಕೊಂಡೆ ಕಟ್ಟಿರೆ ಹೂನಗೊಂಡೆ ಮುಡ್ಯಕೆ ಲಾಯ್ಕ.

ಹೂನದಂಟ್ /*hu:nadaṇṭi*/ ನಾವಿ. ಹೂವಿನ ದಂಟು. stem of flowers. ವಾ: ಚೆಂಡ್ ಹೂನ ದಂಟ್ ಮೆತ್ತಂಗೆ. ಬೇಗ ಮುರ್‌ದೋದೆ.

ಹೂನ ದೈ /*hu:na dai*/ ನಾವಿ. ಹೂವಿನ ಗಿಡ. a flowering plant. ವಾ: ಮನೆ ಮುಂದೆ ಹೂನ ದೈಗ ಇದ್ದರೆ ಅದೇ ಮನೆಗೆ ಲಕ್ಷಣ.

ಹೂನಮಾಲೆ /*hu:nama:lɛ*/ ನಾವಿ. ಹೂವಿನ ಹಾರ. a graland of flowers. ವಾ: ಮೊದುಮಕ್ಕಳಿಗೆ ಹೂನ ಮಾಲೆ ಹಾಕುವೆ.

ಹೂನ್ಸ್ /*h:nsi*/ ನಾ. 1. ಹೂಸು, 2. ಅಪಾನವಾಯು. 1. fart, 2. breaking wind. **ಹೂನ್ಸದ ಮನ್ಸ ಇಲ್ಲೆ, ಕಾಸದ ಕಬ್ಬಿಣ ಇಲ್ಲೆ(ಗಾ). ಹೂನ್ಸ್‌ಗೆ ಹೆದರಿ ಜಾತ್ರೆ ನಿಂತದೇನಾ?(ನು).** ವಾ: ಕೂಸು ಆಗಾಗ ನಿದ್ದೆಲಿ ಹೂನ್ಸ್‌ದು. ಪ: ಹೂಂಸ್ – ಹೂಸು; ಹೂಂಸಿದ – ಹೂಸಿದ/ ಹೂಸು ಬಿಟ್ಟ; ಹೂಂಸುದು – ಹೂಸುದು.

ಹೂಪಾತಿ /*hu:pa:ti*/ ನಾ. ಹೂ ಗಿಡಗಳ ಸಾಲು. row of flowering plants. ವಾ: ಹೂಪಾತಿ ಮಾಡಿರೆ ನೀರ್ ಹಾಕಿಕೆ ಸುಲಬ ಆದೆ.

ಹೂಪಿಳ್ಳೆ /*hu:piḷḷɛ*/ ನಾ. ಒಂದೆರಡು ದಿನಗಳ ಪಿಳ್ಳೆ. a two day old infant. ವಾ: ಹೂಪಿಳ್ಳೆಗಳ ಕಾಪುಂದ ಇಳ್ಸಿದನೊ.

ಹೂರಿದು /*hu:ridu*/ ಕ್ರಿ. ಹುರಿಯುವುದು. to roast. ವಾ: ಜೋಳನ ಹೂರಿದು ತಿಂಬದು.

ಹೂರು /*hu:ru*/ ಕ್ರಿ. ಹೊತ್ತುಕೊಂಡು ಹೋಗು. to carry something. ವಾ: ಮೂಟೆನ ತಲೆ ಮೇಲೆ ಹೂರು.

ಹೂಲಿ /*hu:li*/ ಕ್ರಿ. ಹೊಲಿಯುವುದು. stitching. ವಾ: ಮೆಸಿನ್‌ಲಿ ಅರ್ವೆ ಹೂಲಿಯದು. ಪ: ಹೊಲಿ.

ಹೂವ್ /*hu:vi*/ ನಾ. ಹೂವು. flowers. ವಾ: ಮನೆ ಮುಂದೆ ಹೂವ್‌ಗ ಇದ್ದರೆ ನೋಡಿಕೆ ಕುಸಿ, ನಮ್ಮಲ್ಲಿ ಎಲ್ಲ ತರದ ಹೂವ್‌ಗ ವಳೊ.

ಹೂವ್ ಅಡ್ಕ ಕೀಳೊಕ /*hu:vi aḍka ki:ḷoka*/ ಕ್ರಿವಿ. ಹೂವಿನ ಸಮೇತ ಕೀಳಬೇಕಾ? should i pluck the plant with the flowers. ವಾ: ದೈನ ಹೂವ್ ಅಡ್ಕ ಕೀಳೊಕ.

ಹೂಳು /*hu:ḷu*/ ಕ್ರಿ. ದಫನ ಮಾಡು. to bury. ವಾ: ಸತ್ತವರ ಚೂಟ್‌ಕಳಲಿ ಹೂಳ್‌ದು.

ಹೂಳ್[1] /*hu:ḷi*/ ನಾ. ಹೂಳು. to bury. ವಾ: ಕೆರೆಲಿ ನಿತ್ತ ಹೂಳ್ ತೆಗೆಕು.

ಹೂಳ್[2] /*hu:ḷi*/ ಕ್ರಿ. 1. ತಾಗು, 2. ಹಾಕು, 3. ತುರುಕು. 1. to touch, 2. to put, 3. to put something by force. ವಾ: ಸತ್ತವರ ಗುಂಡಿ ತೆಗ್ದ್ ಹೂಳ್‌ದು.

ಹೆಂಗರ್ /*heŋgari*/ ಅ. ಹೇಗಾದರು. somehow. ವಾ: ಹೆಂಗರ್ ಹುಟ್ಟಿರೆ ಎಲ್ಲವ್ಕು ಕುಸಿನೆ ಅಲಾ.

ಹೆಂಗರ್‌ಳ್ /*heŋgariḷi*/ ನಾವಿ. ಹೆಣ್ಣಿನಂತಹ ಮನಸ್ಸು. mind of a woman. ವಾ: ಎಲ್ಲರ ಮೊನ್ಸುಲು ಹೆಂಗರ್‌ಳ್ ಇದ್ದದೆ. ಬೇರೆವ್ಕೆ ಬಜ್ಜ ಬಾಕನ, ಬೇನೆ ಆಕನ ಕನಿಕರಂದ ಕಣ್ಣೀರ್ ಬಂದದೆ ಅಲಾ ಮನ್ಸ್ ಒದ್ದಾಡಿದೆ ಅಲಾ ಅದೆ ಹೆಂಗರ್‌ಳ್. ಇದರ್‌ಲಿ ಗಂಡ್ ಜೆನ ಹೆಣ್ಣ್ ಜೆನತ ಬೇದ ಇಲ್ಲೆ.

ಹೆಂಗಾರ್ /*heŋga:ri*/ ಅ. ಹೇಗಾದರೂ. somehow. ವಾ: ಹೆಂಗಾರ್ ಮಾಡಿ ಕರ್‌ನ ಕಾಲ್ ಸೆರಿ ಮಾಡೊಕು.

ಹೆಂಗಿರ್ದು /*heŋgirdu*/ ಅ. ಹೇಗಿರಬಹುದು. how could it be/how is it. ವಾ: ಮನೆ ಸುತ್ತೆಲ್ಲ ಬರೀ ಹೂನ ದೈ ಇದ್ದ್ ತುಂಬ ಹೂಗ ಇದ್ದರೆ ನೋಡಿಕೆ ಹೆಂಗಿರ್‌ದು. ಪ: ಹೆಂಗಿದ್ದಿರ್ದು – ಹೇಗಿದ್ದಿರಬಹುದು.

ಹೆಂಗು /*heŋgu*/ ಅ. ಹೇಗೂ. somehow. ವಾ: ಹೆಂಗು ನಾಳೆ ರಜೆ ಉಟ್ಟು ನೆಂಟ್ರ ಮನೆಗೆ ಹೋಗಿ ಬರೊಮ.

ಹೆಂಗೆ /*heŋgɛ*/ ಅ. ಹೇಗೆ. how. ವಾ: ಅಕ್ಕ ಈ ಬೆತ್ತದ ಪಚ್ಚೆನ ಹೆಂಗೆ ಮಾಡ್ದ.

ಹೆಂಗೆಲ್ಲ /*heŋgella*/ ಅ. ಹೇಗೆಲ್ಲ. how. ವಾ: ಈ ಮನೆ ಕಟ್ಟಿಕೆ ಹೆಂಗೆಲ್ಲ ಬಜ್ಜ ಬಂದೊಳೊತ ನಾವ್ಗೆ ಮಾತ್ರ ಗೊತ್ತು.

ಹೆಂಗೆಲೋ /*heŋgelɔ*/ ಅ. ಹೇಗೆ ಹೇಗೋ. how (wondering). ವಾ: ಅಂವ ಹೆಂಗೆಲೊ ಆಡ್‌ದೆ.

ಹೆಂಗೋ /*heŋgɔː*/ ಅ. ಹೇಗೊ. how. ವಾ: ಹೆಂಗೋ ಹಳ್ಳ ದಾಟಿ ಬಂದೊ.

ಹೆಂಗ್‌ಸ್ /*heŋgɨsɨ*/ ನಾ. 1. ಹೆಣ್ಣು, 2. ಸ್ತ್ರೀ. 1. a woman, 2. a female. ವಾ: ಮೊದುವೆ ಆದ ಮೇಲೆ ಹೆಣ್ಮಕ್ಕಳ ಹೆಂಗ್‌ಸ್‌ತನೆ ಕರೆದು. ಪ: ಹೆಂಗ್ಸ್ – ಹೆಂಗಸು.

ಹೆಂಟೆ /*heṇṭɛ*/ ನಾ. 1. ಹೇಂಟೆ, 2. ಹೆಣ್ಣು ಕೋಳಿ. 1. a hen, 2. a female fowl. **ನಮ್ಮ ಊರುಲಿ ಹೂಂಜ, ಬೇರೆ ಊರುಲಿ ಹೆಂಟೆ(ಗಾ).** ವಾ: ಹೆಂಟೆ ಕೂಂಗಿರೆ ಮೊಟ್ಟೆ ಹಾಕಿದೆತ ಅರ್‌ತ. ಪ: ಹೇಂಟೆ – ಹೆಣ್ಣು ಕೋಳಿ; ಹೇಂಟೆ ಕಡ್ತ – ಪ್ರಾಯ್ಕಕೆ ಬಂದ ಕೋಳಿ

ಹೆಂಡ /*heṇḍa*/ ನಾ. 1. ಸರಾಯಿ, 2. ಮದ್ಯ. 1. alchohol, 2. an alchoholic beverage. **ಹೇಲ್ ತಿಂಬ ದೇವುರಿಗೆ, ಹೆಂಡ ಕುಡಿಯುವ ಪೂಜಾರಿ(ಗಾ).** ವಾ: ಹೆಂಡ ಕುಡ್ಯಕೆ ನೀ ಅಬ್ಬೆಸ ಮಾಡ್‌ಬಡ ಬಲಾ. **ಹೆಂಡದಂಗಡಿ** /*heṇḍadaŋgaḍi*/ ಸಾರಾಯಿ ಅಂಗಡಿ. a wineshop. ವಾ: ಹೆಂಡದಂಗಡಿ ಮುಂದೆ ಹೆಣ್ಣ್ ಜೆನಸ ನಿತ್ತೊಳೊ ಹೆಂಡ ತಕಣಿಕೆ.

ಹೆಕ್ಕೆ /*hekkɛ*/ ನಾ. ಆಡು, ಮೊಲದ ಮಲ. feces of rabbit, goat, etc. ವಾ: ಆಡ್ ಹೆಕ್ಕೆ ನೋಡಲ್ಲಿ ಮೆಟ್ಟಿಬುಡ್ಬಡ.

ಹೆಗ್ಗಂಬ /*heggamba*/ ನಾ. 1. ಮನೆಯ ದೊಡ್ಡ ಕಂಬ, 2. ಗೋದೆ ಕಂಬ. a pillar in the house. ವಾ: ಹೆಗ್ಗಂಬನ ಬೀಟೆ, ಹೊನ್ನೆ, ತೇಗ, ನಂದಿ ಮರಂದ ಮಾಡಿವೆ.

ಹೆಗ್ಗಣ /*heggaṇa*/ ನಾ. ದೊಡ್ಡ ಗಾತ್ರದ ಇಲಿ. a roddent. **ಹೆತ್ತವ್‌ಕೆ ಹೆಗ್ಗಣ ಮುದ್ದ್(ಗಾ). ಕರಿ ಕಂಬ್ಳಿ ನೆಂಟ ಸರಿಹೊತ್ತ್ ಗೆ ಹೊಂಟ – ಹೆಗ್ಗಣ(ಒ).** ವಾ: ಹೆಗ್ಗಣಗ ದೈಗಳೆಲ್ಲ ಹಾಳ್ ಮಾಡಿವೆ. ಅಲ್ಲಲ್ಲಿ ದೊಡ್ಡ ದೊಡ್ಡ ಮಾಳಿ ತೆಗ್ದವೆ.

ಹೆಗ್ಗಳ್ಮೆ /*heggaḷme*/ ನಾ. 1. ಹೆಗ್ಗಳಿಕೆ, 2. ಶ್ರೇಷ್ಠತೆ, 3. ಬಿರುದು. 1. greatness, 2. paramount 3. a title. ವಾ: ದಂಡ್‌ಗೆ ಕೊಡಗ್‌ಂದ ಜಾಸ್ತಿ ಜೆನ ಹೋದುತೇಳ್ವ ಹೆಗ್ಗಳ್ಮೆ ನಮ್ಮದ್.

ಹೆಗ್ಗುಮ್ಮ /*heggumma*/ ನಾ. ದೊಡ್ಡ ಜಾತಿಯ ಗೂಬೆ. a large owl. ವಾ: ನಿನ್ನೆ ಮನೆ ಹಕ್ಕಲೆ ಹೆಗ್ಗುಮ್ಮ ಮರ್ಡತಿತ್ತ್.

ಹೆಗ್ಗೆ /*heggɛ*/ ನಾ. ಹೆಗ್ಗಳಿಕೆ. matter of pride. ವಾ: ನಾವು ಬಾರತೀಯರ್‌ತೇಳ್‌ವ ಹೆಗ್ಗೆ ನಮ್ಮದ್.

ಹೆಗ್ಗ್‌ಲಂಳ್ಬು /*heggɨ lanḷbu*/ ನಾ. 1. ಅಣಬೆಯ ಹೆಸರು, 2. ಬೇರಣಬೆ, 3. ದೊಡ್ಡ ಜಾತಿಯ ಅಣಬೆ. a variety of mushroom. ವಾ: ಹೆಗ್ಗ್ ಅಳಂಬು ಎದ್ದರೆ ಅಲ್ಲಲ್ಲಿ ಸುಮಾರ್ ಎದ್ದದೆ.

ಹೆಗ್ಣ /*hegṇa*/ ನಾ. ಹೆಗ್ಗಣ. roddent. ವಾ: ಹೆಗ್ಣ ಮನೆ ಹಕ್ಕಲೆ ಸುಮಾರ್ ಮಾಳಿ ಮಾಡಿಟು.

ಹೆಗ್ಲ್^{1} /*heglɨ*/ ನಾ. 1. ಹೆಗಲು, 2. ಭುಜ. shoulders. **ಕುಂಬಳಕಾಯಿ ಕದ್ದಂಬ ಹೆಗ್‌ಲ್ ಮುಟ್ಟಿ ನೋಡ್ತ್ ಗಡ(ಗಾ).** ವಾ: ಸಣ್ಣದರ್‌ಲಿ ಅಪ್ಪ ನಮ್ಮನ ಹೆಗ್ಲ್ ಮೇಲೆ ಕೂರ್‌ಸಿಕಂಡ್ ಹೋತಿದ್ದೊ.

ಹೆಗ್ಲ್^{2} /*heglɨ*/ ನಾ. ಎತ್ತುಗಳ ಭುಜ. shoulders of bull. ವಾ: ಎತ್ತ್‌ಗಳ ಹೆಗ್ಲ್‌ಗೆ ನೊಗ ಕಟ್ಟುದು.

ಹೆಚ್ಚಿ /*hecci*/ ನಾ. ಹೆಚ್ಚು. more. ವಾ: ನೀನ್ ಇನ್ನ್ ಒಂದ್ ಹೆಚ್ಚಿಗೆ ಮಾತಾಡ್ಬಡ. ಪ: ಹೆಚ್ಚಾದೆ – ಹೆಚ್ಚಾಗುತ್ತದೆ

ಹೆಚ್ಚ್ ಕಮ್ಮಿ /*heccɨ kammi*/ ಅ. ಹೆಚ್ಚು ಕಡಿಮೆ. more or less. ವಾ: ಸಿಕ್ಕಾಬಟ್ಟೆ, ಸಿಕ್ಕಿದೆಲ್ಲ ತಿಂದ್ ಹೆಚ್ಚ್ ಕಮ್ಮಿ ಮಾಡಿಕಣ್ಬಡ.

ಹೆಜ್ಜ /*hejja*/ ನಾ. 1. ಹೆಜ್ಜೆ, 2. ಪಾದವನ್ನು ಊರಿದ ಗುರುತು. 1. steps, 2. footprints. ವಾ: ಅಲ್ಲಿ ಹುಲಿ ಹೆಜ್ಜ ನೋಡ್ದನ?

ಹೆಜ್ಜೇನ್ /*hejjeːni*/ ನಾ. 1. ದೊಡ್ಡ ಗಾತ್ರದ ಜೇನು, 2. ಹೆಜ್ಜೇನು. a variety of honey bee. ವಾ: ಹೆಜ್ಜೇನ್ ಹೆಚ್ಚಿ ಕಚ್ಚಿರೆ ಮೊನ್ನ ಸತ್ತವೆ.

ಹೆಟ್ಟ್^{1} /*heṭṭɛ*/ ಕ್ರಿ. 1. ತೂರಿಸು, 2. ಕುತ್ತು, 3. ಗುದ್ದು, 4. ನಾಟಿಸು. 1. to insert, 2. a danger, 3. to punch, 4. to plant. **ನಾಯಿ ಬಾಲಕ್ಕೆ ಕೊಳ್ವೆ ಹೆಟ್ಟಿದಂಗೆ(ಗಾ).** ವಾ: ಬರಿಕಾಲ್‌ಲಿ ಹೊರೆಗೆ ಹೋದರೆ ಮುಳ್ಳು ಹೆಟ್ಟ್‌ದು. ಪ: ಹೆಟ್ಟುದು – ತಾಗಿಸುವುದು.

ಹೆಟ್ಟ್^{2} /*heṭṭɛ*/ ಕ್ರಿ. 1. ಹೆಟ್ಟು, 2. ಸಂಭೋಗಿಸು, 3. ತಿವಿ, 4. ಚುಚ್ಚು. 1. to put something, 2. to have sexual intercourse, 3. to poke, 4. to stab.

ಹೆಡಗೆ /*heḍage*/ ನಾ. ಬಳ್ಳಿಯಿಂದ ಮಾಡಿದ ಒಂದು ಮುಡಿ ಹಿಡಿವಷ್ಟು ದೊಡ್ಡ ಬುಟ್ಟಿ. a small basket.

ಹೆಡಗೆ ಹೋದೇ ಕಾಂಬೂದು, ಹಡಗ್ ಹೋದು ಕಾಂಬದುಲೆ(ಗಾ). ವಾ: ಹೆಡಗೆನ ಎಲ್ಲಿಸಿದ್?

ಹೆಡೆಗೆ /*heḍɛgɛ*/ ನಾ. 1. ಬುಟ್ಟಿ, 2. ಪುಡಾಯಿ. 1. a basket, 2. something that is to be read. ವಾ: ಹೆಡೆಗೆನ ಬೆತ್ತುಂದ ಹೆಣಿದು.

ಹೆಡೆಮಂಡೆ /*heḍemanḍɛ*/ ನಾ. ಅವಕಾಶ ಆದಾಗ ಎಚ್ಚೆತ್ತುಕೊಳ್ಳು, opportunism. **ಹೆಣ್ ಜನರ ಬುದ್ದಿ ಹೆಡೆಮಂಡೆ ಲಿ ಗಡ(ಗಾ).**

ಹೆಡ್ಡ /*heḍḍa*/ ನಾ. 1. ಮುಗ್ಧ, ಏನೂ ತಿಳಿಯದವ, 2. ಏನೂ ಅರಿಯದವ, 3. ಪೆದ್ದ. 1. an innocent person, 2. a stupid person, 3. a stupid. **ಹೆಡ್ಡನ ಆರಂಬ ಗೊಬ್ಬರಲಿ(ಗಾ).** ವಾ: ಅದ್ ಬಾರಿ ಹೆಡ್ಡ ಕೂಸು.

ಹೆಡ್ಡಿಗೆ ಬೀಳ್ದು /*heḍḍige bi:ḷdu*/ ನಾ. 1. ಬೇರೆಯವರ ಮಾತನ್ನು ನಿಜವಲ್ಲದಿದ್ದರೂ ನಂಬುವುದು, 2. ಮೋಸ ಹೋಗುವುದು. 1. credulous, 2. gullible. ವಾ: ಅಂವನ ರಸ ರಸ ಮಾತಿಗೆ ನಾ ಹೆಡ್ಡಿಗೆ ಬಿದ್ದ್ ದುಡ್ಡು ನೀರ್‌ಲಿ ಹೋಮ ಆತ್.

ಹೆಡ್ಡ್ /*heḍḍɨ*/ ನಾ. ಮೋಸ. cheating. ವಾ: ಲಾಯ್ಕಲಿ ವಿಚಾರ್‌ಸ್ ಒಬ್ಬನ ಮಾತ್ ಕೇಳಿ ಹೆಡ್ಡ್ ಗೆ ಬೀಳ್ಬಡ.

ಹೆಡ್‌ಲ್ಸ್ /*heḍlɨsi*/ ನಾ. 1. ಹೆದರಿಸು, 2. ಬೆದರಿಸು. 1. to scare someone, 2. to frighten someone. ವಾ: ಯಾಕೆ ಅವ್‌ಕೆ ಹೆಡ್‌ಲ್ಸ್‌ದು. ಪ: ಹೆದ್‌ರ್ಸ್.

ಹೆಣ /*heṇa*/ ನಾ. ಶವ. a dead body. **ಜನ ನಿನ್ನ ಹೆಣಾಂತ ಹೇಳಿಕೆ ಮುಂದೆ ಪುಣ್ಯಮಾಡ್(ಗಾ).** ವಾ: ಜೀವಲಿ ಇರಿಕನ ಮೊನ್ಸ, ಉಸಿರ್ ನಿತ್ತರೆ ಹೆಣ. **ಹೆಣಬೀಳ** /*heṇabi:ḷa*/ 1. ಶವ ಬೀಳಲಿ ಎಂದು ಹೇಳುವುದು, 2. ಬೈಗುಳ ಪದ. 1. let some die, 2. an expletive. ವಾ: ಬಾರಿ ಉರಿಬಂದ್ಯ ನಿನ್ನ ಹೆಣ ಬಿದ್ದೋಕೆ.

ಹೆಣಕ್ಕೆ ಮೊದುವೆ ಮಾಡ್ಸುದು /*heṇakke mɔduve ma:ḍsudu*/ ನಾವಿ. ಮದುವೆ ಆಗದೆ ಸತ್ತವರನ್ನು ಅಂತ್ಯ ಸಂಸ್ಕಾರಕ್ಕು ಮೊದಲು ಬಾಳೆದಿಂಡು ಅಥವ ಹುಲ್ಲಿನ ಗೊಂಬೆಯೊಂದಿಗೆ ಮದುವೆ ಮಾಡಿಸುವುದು. a ritual of symbolic marriage performed before the funeral, between an unmarried dead person and the stem of a plantain, or a straw figurine. ವಾ: ಮೊದುವೆಗೆ ಮುಂದೆನೆ ಸಣ್ಣ ಪ್ರಾಯಲಿ ಸತ್ತರೆ ಬೊದ್ಕ್ ನ ಪದ್ದೆತಿನಂಗೆ ಹೆಣಕ್ಕೆ ಮದುವೆ ಮಾಡ್ಸುದು.

ಹೆಣಿ /*heṇi*/ ಕ್ರಿ. 1. ನೇಯು, 2. ಹೊಸೆ, 3. ಹೆಣಿ. 1. to weave, 2. to lace, 3. to knit. ವಾ: ನಾರ್‌ಂದ ಮೊಂದ್ರಿನ ನಮ್ಮವ್ವ ಹೆಣಿಯದು ನೋಡಿಕೆ ಕುಸಿ. ಪ: ಹೆಣಿಯಕೆ – ನೇಯುವುದಕ್ಕೆ; ಹೆಣಿಯೊದು – ನೇಯುವುದು; ಹೆಣಿಯೊಕು – ನೇಯಬೇಕು; ಹೆಣ್ದೊಳೊ – ಹೆಣೆದಿದ್ದಾರೆ

ಹೆಣ್‌ಗಿ /*heṇigi*/ ಕ್ರಿ. 1. ಹೆಣಗು, 2. ಗೋಳಾಡು, 3. ಹೋರಾಡು, 4. ಬಜ್ಜಪಡು, 5. ಪ್ರಯಾಸಪಡು. 1. to suffer, 2. to cry over, 3. to endure, 4. to go through, 5. to struggle. ವಾ: ಹೆಂಡ ಕುಡಿಯೊ ಗಂಡನೊಟ್ಟಿಗೆ ಹೆಣ್‌ಗಿ ಸಾಕಾದೆ.

ಹೆಣ್ಣಾಳ್ /*heṇṇa:ḷɨ*/ ನಾ. ಹೆಣ್ಣು ಕೆಲಸದಾಕೆ. a female domestic servant. ವಾ: ಒಣ್ಗಿದ ಕಾಪಿನ ಹೊಡ್ಕಿ ಕಸ ಕಡ್ಡಿ ಹೆರ್‌ಕಿಕೆ ಹೆಣ್ಣಾಳ್ ಬೇಕಾದೆ.

ಹೆಣ್ಣ್ /*heṇṇɨ*/ ನಾ. 1. ಹೆಣ್ಣು, 2. ಹೆಂಡತಿ, 3. ಸ್ತ್ರೀ. 1. woman, 2. wife, 3. a lady. **ಅಯ್ಯೆ ಹೊಟ್ಟೆ ನೋಡ್ತ್ ಹೆಣ್ಣ್ ಜೋಬು ನೋಡ್ತ್(ಗಾ).** ವಾ: ನಿಮ್ಮ ಹೆಣ್ಣ್ ಕೆಲ್ಸಲಿ ಉಟ್ಟಾ?

ಹೆಣ್ಣ್ ಇಳ್ಸುದು /*heṇṇɨ iḷsudu*/ ನಾವಿ. ನವ ವಧುವನ್ನು ತವರಿನಿಂದ ಬೀಳ್ಕೊಡುವುದು. sending the bride and the bridegroom from the house of the bride to their house. ವಾ: ಹೆಣ್ಣ್ ಇಳ್ಸುದು ಎಸ್ಟ್ ಹೊತ್ತಿಗೆಗಡ.

ಹೆಣ್ಣ್ ಹುಡ್ಕ್‌ವ ಸಾಸ್ತ್ರ /*heṇṇɛ huḍkɛva sa:stra*/ ನಾ. ದಿಬ್ಬಣ ಬಂದ ಮೇಲೆ ಹುಡುಗನ ಕಡೆಯವರು ಹೆಣ್ಣನ್ನು ಹುಡುಕಿ ಹಿಡಿಯುವುದು. a custom followed in marriage of searching for the bride after the arrival of groom's party. ವಾ: ದಿಬ್ಬಣ ಬಂದ ಹೈದನ ಕಡೆವ್ ಹೆಣ್ಣ್ ಹುಡ್ಕ್‌ವ ಸಾಸ್ತ್ರ ಮಾಡಿವೆ.

ಹೆಣ್ಣ್‌ಗಡಿ /*heṇṇigaḍi*/ ನಾ. ತೆಂಗಿನ ಕಾಯಿಯ ಮೂರು ಕಣ್ಣುಗಳಿರುವ ಭಾಗ. one half of the coconut, endocarp with three germination pores or eyes.

ಹೆಣ್ಣ್‌ಜನ /*heṇṇɛ janige*/ ನಾ. ಹೆಂಗಸರು. to women. ವಾ: ಹೆಣ್ಣ್‌ಜನಿಗೆ ಮಾತಾಡಿಕೆ ಕುದ್ದರೆ ಬೆಳಗಾದು ರಾತ್ರೆಯಾದು ಗೊತ್ತಾಲೆ.

ಹೆಣ್ಮಕ /*heṇmaka*/ ನಾ. ಹೆಂಗಸರು. women. ವಾ: ಹೆಣ್ಮಕ ಓದು,ಕೆಲ್ಸತ ಎಲ್ಲದರ್‌ಲು ಮುಂದೆ ಬಂದೊಳೊ.

ಹೆತ್ತವ್ /*hettavɛ*/ ನಾ. 1. ಜನ್ಮ ನೀಡಿದವರು, 2. ಹೆತ್ತವರು. 1. those who have given birth, 2. parents. ವಾ: ಹೆತ್ತವ್‌ಕೆ ಹೆಗ್ಗಣನು ಮುದ್ದು ತ ಹೇಳ್‌ವಂಗೆ ಮಕ್ಕ ಹೆಂಗಿದ್ದರು ಕುಸಿನೆ, 2. ಹೆತ್ತವ್ ಮಕ್ಕಳಿಗೆ ತಾನೆ ಹೊಟ್ಟೆ ಅರ್ವೆ ಕಟ್ಟುದು.

ಹೆತ್ಲಾಂಡಿ /*hetla:ṇḍi*/ ನಾವಿ. ಬೈಗುಳ ಪದ. an expletive term. ವಾ: ಅದೊಂದ್ ಹೆತ್ಲಾಂಡಿ.

ಹೆದಂಬ /*hedamba*/ ನಾ. ಮನೆಯ ಆಧಾರ ಕಂಬ. pillars of the house. ವಾ: ಹೆದಂಬ ಬಾರಿ ಗಟ್ಟಿ ಉಟ್ಟು.

ಹೆದರಿಕಿಲೆ /*hedarikilɛ*/ ಕ್ರಿ. ಹೆದರುವುದಿಲ್ಲ. not scared. ವಾ: ನಾ ಹೆದರಿಕಿಲೆ. ನಂಗೆ ಒಬ್ಬಳೆ ಇದ್ದ್ ಅಬ್ಬೆಸ ಉಟ್ಟು.

ಹೆದ್ದನಮನೆ /*heddanamanɛ*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಹೆದ್ದೆಮಿ /*heddemi*/ ನಾ. ಹೊಗೆ ಸೊಪ್ಪಿನಂತಿರುವ ಗಿಡ. a plant that resembles tobacco plant. ವಾ: ಹೆದ್ದೆಮಿ ದೈ ಹೊಗೆಸೊಪ್ಪ್ ನಾಂಗೆ ಇರೊ ದೈ. ಪ: ಹೆದ್ದೆಂಬಿ.

ಹೆದ್‌ರಿ /*hedɨri*/ ನಾ. 1. ಹೆದರು, 2. ಭಯಪಡು, 3. ಅಂಜು. 1. to get scared, 2. to get frightened, 3. to be in fear. ವಾ: ಏರಿಲಿ ನಡ್ಕಂಡ್ ಹೋಕಾಕನ ಒಮ್ಮೆಗೆ ಹಕ್ಕಿ ಹಾರ್‌ತ. ನಂಗೆ ಹೆದ್‌ರಿ ಜೀವ ಬಾಯ್‌ಗೆ ಬಂದಿತ್ತ್. ಪ: ಹೆದ್ರಿಕೆ – ಹೆದರಿಕೆ; ಬಯ; ಹೆದ್ರಿ ಹೋತ್ – ಹೆದರಿ ಹೋದನು/ಳು; ಹೆದ್ರಿತ್ – ಹೆದರಿ ಹೋದಳು/ನು; ಹೆದ್ರ್‌ಸಿ – ಹೆದರಿಸಿ; ಹೆದ್‌ರ್‌ದೊ – ಹೆದರಿದರು..

ಹೆದ್ರ್ ಪುಕ್ಲ /*hedrɨ pukla*/ ನಾ. 1. ಪುಕ್ಕಲು ಸ್ವಭಾವದವನು, 2. ಪುಕ್ಕಲ. 1. a timid person, 2. an irresolute. ವಾ: ಅಂವ ಬರೆ ಹೆದ್ರ್‌ಪುಕ್ಲ. ಬೊಳ್ಳಿ ನೋಡಿರು ಹಾವ್‌ತ ಕಿರ್‌ಚಿ ಓಡಿದೆ.

ಹೆದ್ರ್ ಬೋಡಿ /*hedrɨ bo:ḍi*/ ನಾ. 1. ಹೆದರಬೇಡಿ, 2. ಭಯಪಡದಿರು. 1. don't be scared, 2. don't get frightened. ವಾ: ಹಾವ್ ನೋಡಿ ಅಸ್ಟ್ ಹೆದ್ರ್ ಬೋಡಿ.

ಹೆಪ್ಪುಗಟ್ಟಿ /*heppugaṭṭi*/ ಕ್ರಿ. 1. ಹೆಪ್ಪುಗಟ್ಟುವುದು, 2. 0° ಉಷ್ಣತೆಯಲ್ಲಿ ನೀರು ಗಟ್ಟಿಯಾಗು. 1. to freeze, 2. water freezes in 0 degree celcius. ವಾ: ಬಿದ್ದಾಕನ ರಕ್ತ ಹೆಪ್ಪುಗಟ್ಟಿತ್.

ಹೆಬಗ /*hebaga*/ ನಾ. 1. ಹೆಣ್ಣಿಗ, 2. ಲಜ್ಜೆ ಇಲ್ಲದವ. 1. effeminate, 2. a shameless person. ವಾ: ಅಂವ ಹೆಬಗನಂಗೆ ಆಡ್ದೆ.

ಹೆಬ್ಬಂದಿಮರ /*hebbandimara*/ ನಾ. ಬೋಧಿ ವೃಕ್ಷ. sacred fig tree.

ಹೆಬ್ಬಟೆಬೆರಳ್ /*hebbaṭeberaḷɨ*/ ನಾ. ಹೆಬ್ಬೆರಳು. thumb. ವಾ: ಹೆಬ್ಬಟೆ ಬೆರಳ್‌ಗೆ ಪೆಟ್ಟಾದ್.

ಹೆಬ್ಬಲಸ್ /*hebbalasɨ*/ ನಾ. 1. ಕಾಡು ಹಲಸು, 2. ಹೆಬ್ಬಲಸು, 3. ತಿನ್ನಲು ಯೋಗ್ಯವಲ್ಲದ ಸಣ್ಣ ಹಲಸಿನ ಕಾಯಿ. 1. a forest jack tree, 2. Wild Jack tree, 3. an inedible jack fruit. ವಾ: ಹೆಬ್ಬಲಸ್ ನೋಡಿಕೆ ಹಲ್‌ಸ್‌ನಣ್ಣ್ ನಂಗೆ ಇದ್ದದೆ. ಪ: ಹೆಬ್ಬಲ್ಸ್ – ಕಾಡು ಹಲಸು. **ಹೆಬ್ಬಾಲ್ಸ್ ಮರ** /*hebba:lsɨ mara*/ 1. ಹಲಸಿನಂತೆ ಹೋಲುವ ಮರ, ಈ ಮರದಲ್ಲಿ ಹಲಸನ್ನು ಹೋಲುವ ಸಣ್ಣ ಕಾಯಿ ಆಗುತ್ತದೆ. Wild Jack tree. **ಹೆಬ್ಬಾಲ್ಸ್‌ನ ಮರ ತೊಬ್ಬಿಕೆ ಬೊತ್ – ಹುಲಿ(ಒ).** ವಾ: ಹೆಬ್ಬಾಲ್ಸ್ ಮರ ಬಾರಿ ದೊಡ್ಡದಿದ್ದದೆ.

ಹೆಬ್ಬಾಜ್ /*hebba:jɨ*/ ನಾ. ಮರ ಕೆತ್ತುವ ಸಾಧನ. a chisel. ವಾ: ಹೆಬ್ಬಾಜ್ ಇದ್ದರೆ ಮರ ಕೆತ್ತುದು ಸುಲಬದ ಕೆಲ್‌ಸ.

ಹೆಬ್ಬಾರಹಿತ್ಲು /*hebba:rahitlu*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಕುತ್ಕುಂಜ ಗ್ರಾಮದ ಜಾಗ. a locality in Kutkunja village in Sullia Taluk of Dakshina Kannada District.

ಹೆಬ್ಬಾವ್ /*hebba:vɨ*/ ನಾ. 1. ಹೆಬ್ಬಾವು, 2. ದೊಡ್ಡ ಗಾತ್ರದ ಹಾಗೂ ಬಹಳ ಉದ್ದವಿರುವ ಒಂದು ಬಗೆಯ ಹಾವು. 1. a python, 2. a nonvenomous, large snake. ವಾ: ಹೆಬ್ಬಾವ್ ಮೊಲ, ಸಾರಗ, ಆಡ್‌ನೆಲ್ಲ ನುಂಗಿದೆಗಡ.

ಹೆಬ್ಬುಲಿ /*hebbuli*/ ನಾ. 1. ದೊಡ್ಡ ಹುಲಿ, 2. ಮಹಾವ್ಯಾಘ್ರ. 1. a ferocious Tiger, 2. a fierce tiger. **ತಬ್ಬುಲಿ ಮಕ್ಕಳಿಗೆ ಹೆಬ್ಬುಲಿ ಬಾಯಿ(ಗಾ).** ವಾ: ಹೆಬ್ಬುಲಿ ಕಾಡ್‌ಲಿ ಇದ್ದದೆ. ಪ: ಹೆಬ್ಬ್‌ಲಿ.

ಹೆಬ್ಬೆಟ್ಟ್ /*hebbeṭṭi*/ ನಾ. ಹೆಬ್ಬೆರಳು. thumb. ವಾ: ಹಿಂದೆನ ಕಾಲಲಿ ಹೆಬ್ಬೆಟ್ಟ್ ಹಾಕ್‌ತ್ತಿದ್ದವರ ಸಂಕೆ ಹೆಚ್ಚಿ ಇತ್ತ್‌ತ್. ಪ: ಹೆಬ್ಬೆರ್ಳ್ – ಹೆಬ್ಬೆರಳು

ಹೆಬ್ಬೆದ್ರ್ /*hebberdi*/ ನಾ. ಮುಳ್ಳು ಇರುವ ಹೊಳೆ ಬದಿಯ ಬಿದಿರು. a bamboo that grows on the bank of rivers. ವಾ: ಹೆಬ್ಬೆದ್ರ್ ಹೊಳೆಕರೆಲಿ ಹರ್‌ಂಡಿ ಇದ್ದದೆ. ಬುಡದತ್ರ ಹೋಕಾಲೆ ಬರಿ ಮುಳ್ಳು.

ಹೆಮ್ಮನ /*hemmana*/ ನಾ. 1. ಕುಟುಂಬ, 2. ಮನೆತನ. 1. family, 2. lineage.

ಹೆಮ್ಮನ ಬೊಳಿ /*hemmana bɔḷi*/ ನಾ. ಗೌಡರ 18 ಗೋತ್ರಗಳಲ್ಲಿ ಒಂದು ಬಳಿ. one of the 18 lineages or gotra's of Arebhashe gowda community. ವಾ: ಗೌಡರ ಹದಿನೆಂಟ್ ಬೊಳಿಗಳ್‌ಲಿ ಈ ಹೆಮ್ಮನ ಬೊಳಿ ಒಂದು.

ಹೆಮ್ಮೆ /*hemmɛ*/ ನಾ. 1. ಹಿರಿಮೆ, 2. ಅಭಿಮಾನ. 1. pride, 2. gratification, 3. affection. ವಾ: ನಾ ಈ ಮಣ್ಣ್‌ಲಿ ಹುಟ್ಟಿಯೊಳೆಲಾ ಅದೇ ನಂಗೆ ಹೆಮ್ಮೆ.

ಹೆರಕಿ /*hɛraki*/ ನಾ. 1. ಬೇರ್ಪಡಿಸು, 2. ಆರಿಸು, 3. ಕೆದಕು. 1. to seperate, 2. to pick, 3. to scatter. ವಾ: ಅಕ್ಕಿಂದ ಕಲ್ಲ್, ಬತ್ತನ ಹೆರಕಿ ಇಸುದು.

ಹೆರಿ¹ /*hɛri*/ ಕ್ರಿ. 1. ತುರಿಯು, 2. ಕೆರೆಯು, 3. ಕೆರೆದುಹೋಗು, 4. ತುರಿದುಹೋಗು. 1. grate, 2. scrape, 3. grated, 4. scraped. ವಾ: ಕಾಯಿನ ಹೆರ್‌ಮಣೆಲಿ ಹೆರಿಯದು. ಪ: ಹೆರ್ದ್‌ಕೊಡ್ – ತುರಿದು ಕೊಡು; ಹೆರ್‌ಯಕು – ತುರಿಯಬೇಕು; ಹೆರ್ದ – ತುರಿದ; ಹೆರ್‌ಯದು – ತುರಿಯುವುದು

ಹೆರಿ² /*hɛri*/ ಕ್ರಿ. 1. ತೆಂಗಿನಕಾಯಿ ತುರಿಯುವುದು, 2. ಕಾಯಿ ಹೆರಿ, 3. ಸೊಪ್ಪು ಕೊಯ್ಯುವುದು, 4. ಸೊಪ್ಪು ಹೆರಿದು, 5. ಹುಲ್ಲು ಹರಿದು. 1. 1. to grate or scrape coconut, 2. to shredding coconut, 3. to cut leafy vegetable, 4. to cut leaf, 5. to cut grass. ವಾ: ಕಾಯಿನ ಹೆರಿ. ಪ: ಹೆರಿಯಕೆ – ಹೆರೆಯಲು; ಹೆರಿಯಕನ – ಹೆರೆಯುವಾಗ

ಹೆರೆಕಜೆ /*herekajɛ*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ದೇವಚಳ್ಳ ಗ್ರಾಮದ ಜಾಗ. a locality in Devacalla village in Sullia Taluk of Dakshina Kannada District.

ಹೆರೆಕೆ /*hɛrekɛ*/ ಕ್ರಿ. ಕೆರೆಯು. to scrape. ವಾ: ಅಂಗ್‌ಳಲಿರೊ ಹುಲ್ಲ್‌ನ ಹೆರೆಕೆ ಕೊಟ್ಟು ತಕಣಕು.

ಹೆರ್¹ /*heri*/ ಕ್ರಿ. 1. ಹೆರಿಗೆ, 2. ಪ್ರಸವಿಸು, 3. ಹಡೆ. to deliver a child. ವಾ: ಹೆರ್‌ದು ಹೆಣ್ಣಿಗೆ ಮತ್ತೆ ಹುಟ್ಟಿ ಬಂದಂಗೆ. ಪ: ಹೆರ್‌ದು – ಪ್ರಸವಿಸುವುದು, ಹೆರುವುದು; ಹೆರಿಗೆ ಬೇನೆ – ಹೆರಿಗೆ ನೋವು; ಹೆರಿಗೆಲಿ – ಹೆರಿಗೆಯಲ್ಲಿ; ಹೆರಿಕಾಕನ – ಹೆರುವಾಗ; ಹೆರಿಕೆ – ಹೆರಲು

ಹೆರ್² /*hɛri*/ ನಾ. 1. ಹೆಪ್ಪು, 2. ಹಾಲು ಮೊಸರಾಗಿ ಪರಿವರ್ತನೆ ಹೊಂದು. 1. curd starter, 2. fermentation. ವಾ: ಹಾಲ್‌ಗೆ ಹೆಪ್ಪು ಹಾಕುದು.

ಹೆರ್ಕಿಸುದು /*herkisudu*/ ನಾ. ತೆಗೆದು ಎಸೆಯುವುದು. to pick something and throwing it away. ವಾ: ಮಕ್ಕ ಕಲ್ಲ್ ನ ನೀರಿಗೆ ಹೆರ್ಕಿಸುದು.

ಹೆರ್‌ಕೆ /*herike*/ ಕ್ರಿ. ಕಾಫಿ ಗಿಡದ ಕೆಳಗೆ ಇರುವ ಕಳೆ ತೆಗೆಯು. to remove the weed from coffee. ವಾ: ಹೆರ್‌ಕೆ ಮಾಡ್ರೆ ತೋಟ ನೋಡಿಕೆ ಲಾಯ್ಕ.

ಹೆರ್ಕ್¹ /*hirki*/ ಕ್ರಿ. 1. ಹೆಕ್ಕು, 2. ಆಯು. to seperate/ to sift. ವಾ: ನೆಲಲಿ ಬಿದ್ದ ಕಾಪಿನ ಹೆರ್‌ಕಿ ಆಕೊರೆ ಸೊಂಟ ಬಿದ್ದೊದೆ. ಪ: ಹೆರ್‌ಕ್ – ಹೆರಕು; ಹೆಕ್ಕು; ಬಿದ್ದಿರುವುದನ್ನು ತೆಗೆ; ಹೆರ್‌ಕುದು – ಹೆರಕುವುದು; ಹೆಕ್ಕುವುದು; ಆಯುವುದು

ಹೆರ್‌ಕ್² /*heriki*/ ಕ್ರಿ. 1. ಬೇರ್ಪಡಿಸು, 2. ಪ್ರತ್ಯೇಕಿಸು, 3. ಬೆದಕು. 1. to sift, 2. to seperate, 3. to divide, 4. to pick, 5. scatter. **ಹೇಲ್‌ಂದ ದುಡ್ಡು ಹೆರ್ಕುವ ಜಾತಿ(ನು).** ವಾ: ಮಕ್ಕ ತಡ್‌ಸ್‌ಲ್ ಹಣ್ಣ್ ಹೆರ್‌ಕ್‌ತ್ತಿದ್ದೊ.

ಹೆರ್‌ಗೆ /*herigɛ*/ ನಾ. 1. ಹೆರಿಗೆ, 2. ಪ್ರಸವಿಸು, 3. ಹಡೆ, 4. ಜನ್ಮ ನೀಡು. delivering a child. ವಾ: ಹೆರ್‌ಗೆ ಬೇನೆ ಬಾಕೆ ಹೊತ್ತು ಗೊತ್ತು ಉಟ್ಟಾ.

ಹೆರ್ಗೆಲ್ ಮೀನ್ /*hergeli mi:ni*/ ನಾ. 1. ದೇವರ ಮೀನು, 2. ಹರ್ಗಲ್, 3. ಪೆರ್ವೊಲ್ ಮೀನ್(ತು). 1, god's fish, 2. a variety of fish. ವಾ: ಹೆರ್ಗೆಲ್

ಮೀನ್ ದೇವರ ಮೀನ್‌ತೇಳಿ ಯಾರೂ ತಿಂಬೊದ್ಲೆ. ತಿಂದರೆ ವಾಂತಿಯಾದೆಗಡ.

ಹೆರ್ಗ್ಲ್ /*hergli*/ ನಾ. ಮೀನಿನ ಬಗೆ. variety of fish. ವಾ: ಹೆರ್ಗ್ಲ್ ತ ಒಂದ್ ಜಾತಿನ ಮೀನ್.

ಹೆರ್‌ತೆ ಮಾಡ್ದು /*herte ma:ḍdu*/ ಕ್ರಿ. ಭೂಮಿಯಲ್ಲಿನ ಕಳೆ ಗಿಡಗಳನ್ನು ನೆಲದಿಂದ ಕೆರೆಯುವುದು. to scrape the weed. ವಾ: ಕಾಪಿ ತೋಟಲಿ ಹೆರ್‌ತೆ ಮಾಡಿರೆ ಕಾಪಿ ಕೊಯ್ಯಕನ ಬಿದ್ದರೆ ಬೇಗ ಹೆರ್‌ಕಕ್. ಇಲ್ಲರೆ ಕಾಡ್ ಬಂದ್ ಕಾಲ್ ಹಾಕಿಕೆ ಆದುಲೆ. ಪ: ಹೆರೆತೆ – ಹೆರತೆ; ಹೆರ್‌ತೆ ಕೆಲ್ಸ – ಹೆರತೆ ಕೆಲಸ

ಹೆರ್ದ್ /*herdi*/ ಕ್ರಿ. 1. ಕೆರೆಯುವುದು, 2. ಹೆರೆಯುವುದು. 1. scratching, 2. scraping. ವಾ: ಹುಲ್ಲು ಹೆರ್‌ದ್ ಆತ.

ಹೆರ್‌ನೆನಾ /*herinena:*/ ಕ್ರಿ. ಹೆದರುವೆನಾ. will i get scared. ವಾ: ಆ ಕಾಲದ ಜಡಿ ಮಳೆಗೆ ಹೆದರ್‌ತ್ಲೆ ಅಂತದರ್‌ಲಿ ಈ ಮಳೆಗೆ ಹೆರ್‌ನೆನಾ.

ಹೆರ್‌ಮಣೆ /*herimaṇɛ*/ ನಾ. 1. ತುರಿಮಣೆ, 2. ತೆಂಗಿನಕಾಯಿ ತುರಿಯುವ ಮಣೆ. 1. a grater, 2. a coconunt scraper. ವಾ: ಹೆರ್‌ಮಣೆಲಿ ಕಾಯಿ ಹೆರೆದು ಸುಲಬ.

ಹೆಸ್ರಾಕಿವೆ /*hesra:kive*/ ಕ್ರಿವಿ. ಹೆಸರು ಹಾಕುತ್ತಾರೆ. writing one's name. ವಾ: ಕೂಸಿಗೆ ಎರ್ಡ್ ಮೂರ್ ತಿಂಗ ಆಕನ ಹೆಸ್ರಾಕಿವೆ.

ಹೆಸ್ರು ಇಸುದು /*hesru isudu*/ ನಾ. ನಾಮಕರಣ ಮಾಡು. naming/christening ceremony. ವಾ: ಕೂಸಿಗೆ ಹೆಸ್ರ್ ಇಸುದು.

ಹೆಸ್ರು ಹೋದಂವ /*hesru ho:danva*/ ಕ್ರಿವಿ. ಪ್ರಸಿದ್ಧ. famous. ವಾ: ಊರ್‌ಲೆಲ್ಲ ಅಂವ ಹೆಸ್ರು ಹೋದಂವ.

ಹೆಸ್ರುವಾಸಿ /*hesruva:si*/ ನಾ. ಹೆಸರುವಾಸಿ. well known. ವಾ: ಕೊಡ್‌ಗ್ ಕಾಪಿ, ಯಾಲ, ಕಿತ್ತುಳಿಗೆ ಹೆಸ್ರುವಾಸಿಯಾದ್.

ಹೆಸ್ರ್ /*hesrɛ*/ ನಾ. 1. ನಾಮಧೇಯ, 2. ಹೆಸರು, 3. ನಾಮಾಂಕಿತ, 4. ವ್ಯಕ್ತಿ ಅಥವಾ ವಸ್ತು ಮೊದಲಾದವುಗಳನ್ನು ಗುರುತಿಸಲು ಬಳಸುವ ಶಬ್ದ. 1. a name, 2. word/words indicating a peron, place, thing, etc. 3. a proper noun, 4. a name of a person, thing, etc. **ಹೆಸ್ರ್‌ಗೊಬ್ಬ ಬೊಸ್ರ್‌ಗೊಬ್ಬ(ಗು). ಹೆಸ್ರ್‌ಲಿ ಎಂತ ಉಟ್ಟು ಮಾಡೊ ಕೆಲ್ಸಲಿ ಇರೊಕು(ನು).** ವಾ: ಹೆಸ್ರ್ ಎಂತ ನಿನ್ನದ್.

ಹೆಸ್ರ್ ಹಾಕ್ /*hesrɛ ha:kɛ*/ ನಾವಿ. ಹೆಸರು ಹಾಕು. to write one's name. ವಾ: ಹಸ್‌ಗೆ ಒಂದ್ ಒಳ್ಳೆ ಹೆಸ್ರ್ ಹಾಕ್.

ಹೆಳ್ಮಕ್ಕ /*heḷmakka*/ ನಾ. ಹೆಣ್ಣು ಮಕ್ಕಳು. female children. ವಾ: ಹೆಳ್ಮಕ್ಕ ಬಾರಿ ಗಟ್ಟಿಗಿತ್ತಿಗ.

ಹೇಂಗಾತ್ /*he:ŋga:tɛ*/ ಅ. ಹೇಗಾಯಿತು. How did it happen? ವಾ: ಇದ್ ಹೇಂಗಾತ್? ಪ: ಹೇಂಗಾದರ್ – ಹೇಗೆ ಆದರೂ; ಹೇಂಗಾದು – ಹೇಗೆ ಆಗುವುದು;

ಹೇಂಗಾರ್ /*he:ŋga:rɛ*/ ಅ. ಹೇಗಾದರೂ. anyhow/somehow. ವಾ: ಹೇಂಗಾರ್ ಮಾಡಿ ಈ ಸರ್‌ತಿ ಕೆಲ್‌ಸಕೆ ಸೇರಿಬುಡು.

ಹೇಂಗಿತ್ತ್ ಹೇಂಗಾತ್ /*he:ŋgittɛ he:ŋga:tɛ*/ ಅ. ಹೇಗಿತ್ತು ಹೇಗಾಯಿತು. indicating transformation. ವಾ: ಹಿಂದೆ ತೋಟ ಹೇಂಗಿತ್ತ್ ಈಗ ಹೇಂಗಾತ್.

ಹೇಂಗೆ /*he:ŋgɛ*/ ಅ. ಹೇಗೆ? how? ವಾ: ಇದ್ ಹೇಂಗೆ ಆತ್?

ಹೇಂಗೆ ಆಗ್‌ಬಡ /*he:ŋge a:gibaḍa*/ ಅ. ಹೇಗೆ ಆಗಬೇಡ. indiating how one must have felt. ವಾ: ತಪ್ಪಿಲ್ಲದೆ ಸುಮಸುಮ್ಮನೆ ಬೈದರೆ ಮನ್ಸಿಗೆ ಹೇಂಗೆ ಆಗ್‌ಬಡ.

ಹೇಂಗೊಳ /*hɛ:ŋgoḷa*/ ಅ. ಹೇಗಿದ್ದೀಯ? How are you? ವಾ: ನೀ ಹೇಂಗೊಳ? ಕಾಣದೆ ಸುಮಾರ್ ಸಮೆ ಆತ್.

ಹೇಂಟಿಕಂಡ್ /*hɛ:ṇṭikaṇḍi*/ ನಾ. ಕುಂಟಿಕೊಂಡು. limping. ವಾ: ದಾರಿಲಿ ಕಾಲಿಗೆ ಮುಳ್ಳು ಹೆಟ್ಟಿ ಹೇಂಟಿಕಂಡ್ ಬಂದದ್.

ಹೇಂಟೆ /*hɛ:ṇṭɛ*/ ನಾ. 1. ಹೇಂಟೆ, 2. ಹೆಣ್ಣು ಕೋಳಿ. 1. a hen, 2. a female fowl. **ಹೇಂಟೆ ಕೂಂಗಿ ಹುಂಜನ ತಲೆ ತೆಗ್ದಾಂಗೆ(ಗಾ). ಕತ್ತಲೆ ಕೋಂಬರೆಲಿ ಕರಿ ಹೇಂಟೆ ಕುದ್ದುಟ್ಟು ಮುಟ್ಟಿಕೆ ಹೋದರೆ ಕಚ್ಚಿಕೆ ಬಂದೆ – ಕಾವಲಿ(ಒ).** ವಾ: ಹೇಂಟೆ ಕಾವು ಕೊಡಿಕೆ ಕುದ್ದುಟು. **ಹೇಂಟೆ ಕಾಂಕ್ರುಸುದು** /*hɛ:ṇṭɛ ka:ŋkrusudu*/ ಮೊಟ್ಟೆ ಇಡಲು ತಯಾರಾದ ಹೇಂಟೆಯ ಧ್ವನಿ.

crowing hen. ವಾ: ಮಟ್ಟೆ ಹಾಕಿಕೆ ಹೇಂಟೆ ಕಾಂಕ್ರಿಸಿದೆ.

ಹೇಡಿ /*he:ḍi*/ ನಾ. 1. ಪುಕ್ಕಳ, 2. ಕೈಲಾಗದವ, ಅಂಜುಬುರುಕ. 1. timid, 2. helpless person, scared person. ವಾ: ಹೇಡಿನಂಗೆ ಬೊದ್ಕಿ ಸುಕ ಇಲ್ಲೆರ.

ಹೇತ /*he:ta*/ ಕ್ರಿ. ಕಕ್ಕಸ್ ಮಾಡಿದೆಯಾ? did you pass stool/feces? **ನೀರೊಳಗೆ ಕುದ್ದ್ ಹೇತರೆ ಮೇಲೆ ಬರದಿದ್ದದೆನಾ(ಗಾ).** ವಾ: ಕೂಸು ಹೇತತ? ಪ: ಹೇತ್ಕಂಡ್ – ಮಲ ವಿಸರ್ಜನೆ ಮಾಡಿಕೊಂಡು.

ಹೇತ್ /*he:tɨ*/ ನಾ. 1. ಕಾರಣ, 2. ನೆಪ, 3. ಕ್ಷುಲ್ಲಕ ಕಾರಣ. 1. reason, 2. pretext, 3. unimportant. ವಾ: ಎಲ್ಲದಕ್ಕು ಹೇತ್ ಹೇಳಿಕಂಡ್ ಕುದ್ದರೆ ಆಕಿಲೆ.

ಹೇನ್ /*he:nɨ*/ ನಾ. ಹೇನು. lice. **ಕುರೆ ಮೈಮೇಲೆ ಹೇನ್ ಬುಟ್ಟಾಂಗೆ(ಗಾ). ಆಳೆತ್ತರದ ಗುಡ್ಡೆಲಿ ಕಾಳೆತ್ತು ಮೇಯ್ದುದೆ ಎಂತ ಅದು? – ಹೇನು(ಒ).** ವಾ: ತಲೆಲಿ ಹೇನ್ ತುಂಬಿರೆ ಬೇಗ ಹೋದುಲೆ. **ಹೇನ್ ಕೋಂಬು** /*he:nɨ ko:mbu*/ ಹೇನು ತೆಗೆಯಲು ಬಳಸುವ ಬಾಚಣಿಗೆ. a comb to remove lice. ವಾ: ಹೇನ್ ಕೋಂಬುಲಿ ಹೇನ್‌ನ ತೆಗೆದು. **ಹೇನ್ ವರ್‌ಯದ್** /*he:nɨ variyadi*/ ಹೇನು ಸೀರನ್ನು ಉಗುರಿನ ಮಧ್ಯೆ ಇಟ್ಟು ಒತ್ತುವುದು. to keep the lice and mites between the nails press them. ವಾ: ಹೇನ್‌ನ ತೆಗ್ದ್ ಹಿಂಗೆ ವರ್‌ಯದು. ಪ: ಪೇನ್ ಕುಟ್ಟುನ(ತು).

ಹೇಮಳ /*he:maḷa*/ ನಾ. 1. ಕುಟುಂಬ, 2. ಮನೆತನ, 3. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಎಣ್ಮೂರು ಗ್ರಾಮದ ಜಾಗ. 1. family, 2. lineage, 3. a locality in Enmuru village in Sullia Taluk of Dakshina Kannada District.

ಹೇರುಳಿ /*he:ruḷi*/ ನಾ. ಬಂಡುಳಿ. Citron. ವಾ: ಹೇರುಳಿನ ಬಡ್ಡುಳಿತ ಸ ಹೇಳಿವೆ. **ಹೇರುಳಿಮರ** /*he:ruḷimara*/ ಬಂಡುಳಿ ಮರ. a Citron tree. ವಾ: ಅಲ್ಲೊಂದ್ ಹೇರುಳಿ ಮರ ಕಂಡದೆ.

ಹೇರ್ /*he:rɨ*/ ಕ್ರಿ. 1. ಹೊತ್ತು ಕೊಳ್ಳು, 2. ಎತ್ತಿಕೊಳ್ಳು, 1. to carry, 2. to hold. ವಾ: ಅಕ್ಕಿ ಮೂಟೆನ ಬೆನ್ನ್ ಮೇಲೆ ಹೇರಿಕಂಡ್ ಬಂದದ?

ಹೇಲಿಕೆ /*he:like*/ ನಾ. ಮಲವಿಸರ್ಜನೆಗೆ. to pass feces. ವಾ: ಮಕ್ಕಳ್ನ ಹಂಗೆಲ್ಲ ಹೊರ್‌ಗೆ ಹೇಲಿಕೆ ಕೂರ್‌ಸಿಕಾಗದ್.

ಹೇಲ್ /*he:lɨ*/ ನಾ. ಮಲ. excreta. **ಉಪ್ಪರಿಗೆ ಮೇಲೆ ಇದ್ದ ನಾಯಿ ಹೇಲ್ ಕಾಂಬಕನ ಅಡಿಗೆ ಇಳ್ತ್(ಗಾ). ಹೇಳ್ದಾಂಗೆ ಕೋಣಿದು-ಸ್ವಂತ ಬುದ್ಧಿ ಇಲ್ಲ(ನು).** ವಾ: ಕೊತ್ತಿ ಹೇಲ್ ಮೆಟ್ಟ್ ಬಡ.

ಹೇಸಿಕೆ /*he:sikɛ*/ ನಾ. 1. ಗಲೀಜು, 2. ಕೊಳಕು. 1. dirty, 2. filth. **ಅನ್ನ ಇಲ್ಲದಂವ ಎಂಜ್‌ಲಿಗೆ ಹೇಸಿಕಿಲ್ಲೆ, ಅರ್ವೆ ಇಲ್ಲದಂವ ಮೈಲಿಗೆ ಹೇಸಿಕಿಲ್ಲೆ(ಗಾ).** ವಾ: ಹೇಸಿಕೆ ಕೆಲ್‌ಸ ಮಾಡ್‌ಬಡ. **ಹೇಸಿಗೆ** /*he:sigɛ*/ ಹೇಸಿಕೆ. **ನೆರ್ದ ಮೇಲೆ ನಾಚಿಕೆ ಇಲ್ಲೆ, ಹೆತ್ತ ಮೇಲೆ ಹೇಸಿಕೆ ಇಲ್ಲೆ(ಗಾ).** ವಾ: ಆ ದಾರಿಲಿ ಹೋಕೆ ಹೇಸಿಗೆ ಆದೆ.

ಹೇಳಿಕೆ /*he:ḷike*/ ಕ್ರಿ. ಕರೆಯೋಲೆ. an invitation. **ಮೊದುವೆ ಹೇಳಿಕೆ ತಕಂಡ್ ಬಂದೊಳೊ.** ವಾ: ಮೊದುವೆಗೆ ಹೇಳಿಕೆ ತಕಂಡ್ ಬಂದೊಳೊ.

ಹೇಳಿಗೆ /*he:ḷige*/ ಕ್ರಿ. ಮದುವೆಯಲ್ಲಿ ಹರಿಕೆ ಹಣ ಕಟ್ಟುವ. money that is kept aside as a vow during marriage. ವಾ: ಮೊದುವೆಲಿ ಸಾಸ್ತ್ರಕೆ ಹೇಳಿಗೆ ಬೇಕ್.

ಹೇಳು /*he:ḷu*/ ಕ್ರಿ. ಹೇಳುವುದು. to tell/to inform. ವಾ: ಅವ್ವಯ್ಯಂಗೆ ಹೊನ್ನಮ್ಮನ ಕತೆ ಲಾಯ್ಕಲಿ ಗೊತ್ತು. ಪ: ಹೇಳಿಟ್ಟು – ಹೇಳಿದ್ದಾನೆ/ಳೆ; ಹೇಳಿದೊ – ಹೇಳಿದರು; ಹೇಳಿರೆ – ಹೇಳಿದರೆ; ಹೇಳಿರೆಸ – ಹೇಳಿದರು ಕೂಡ; ಹೇಳಿವೆ – ಹೇಳುತ್ತಾರೆ; ಹೇಳುಲೆ – ಹೇಳುವುದಿಲ್ಲ; ಹೇಳುವೆ – ಹೇಳುತ್ತಾರೆ; ಹೇಳೊಕಾದೆ – ಹೇಳಬೇಕಾಗುತ್ತದೆ; ಹೇಳೊಕು – ಹೇಳಬೇಕು. **ಹೇಳಂವ** /*he:ḷanva*/ ಹೇಳುವವನು. someone who tells/informs. ವಾ: ಅಂವ ಹೇಳಂವ ಇಂವ ಕೇಳಂವ. **ಹೇಳಕಲ** /*he:ḷakala*/ ಹೇಳಬಹುದಲ್ವ. can you say/tell? ವಾ: ನಿಂಗೆ ಬಾಕಾಗದಿದ್ದರೆ ಹೇಳಕಲ ಕಾಯೊದು ತೊಪ್ಪ್ ತಿತ್. **ಹೇಳಕ್** /*he:ḷakɨ*/ ಹೇಳಬೇಕು. should tell. ವಾ: ಮತ್ತೆ ಎಂತ ವಿಸೇಸ? ನೀವೆ ಹೇಳೊಕು. ಪ: ಹೇಳಕ್ – ಹೇಳಬಹುದು; ಹೇಳಿ ಬಂದುಟ್ಟ – ಹೇಳಿ ಬಂದಿದಿಯಾ? ಹೇಳಿಕಾತ್ಲೆ – ಹೇಳಲು ಆಗಲಿಲ್ಲ. **ಹೇಳಿಕಂಡ್** /*he:ḷikaṇḍi*/ ಹೇಳಿಕೊಂಡು. telling. ವಾ: ಹೇಳ್‌ದರ್‌ನೆ ಹೇಳಿಕಂಡ್ ಇರ್‌ಬಡ.

ಹೇಳಿಕಣಿಕೆ /*he:ḷikaṇike*/ ಹೇಳಿಕೊಳ್ಳಲು. to tell/ to inform. ವಾ: ನೀ ಎಂತನು ಹೇಳಿಕಣಿಕೆ ಹೋಗ್‌ಬಡ. **ಹೇಳ್ಕಂಡ್** /*he:ḷkaṇḍɨ*/ ಹೇಳಿಕೊಂಡು. telling. ವಾ: ಸುಮಸುಮ್ಮನೆ ಇಲ್ಲದನ್ನ ಹೇಳಿಕಂಡ್ ತಿರ್‌ಗ್‌ಬಡ. ಪ: ಹೇಳ್ಕನ್ಡ್ – ಹೇಳಿಕೊಂಡಿದ್ದು. **ಹೇಳ್ತ್** /*he:ḷtɨ*/ ಹೇಳಿದನು (ಳು). told. ವಾ: ಅಂವ ಹೇಳ್ತ್ ಹಾರೆ ಅವರ್‌ದಲ್ಲಗಡ. ಪ: ಹೇಳ್ತಿತ್ – ಹೇಳುತ್ತಿದ್ದನು/ಳು; ; ಹೇಳ್ತಿದ್ದೊ – ಹೇಳುತ್ತಿದ್ದರು; ಹೇಳ್ತೊಳೆ – ಹೇಳುತ್ತಿದ್ದೇನೆ. **ಹೇಳ್ದಸ್ಟ್** /*he:ḷdasṭɨ*/ ಹೇಳಿದಷ್ಟು. as much as one told. ವಾ: ನಾ ಹೇಳ್ದಸ್ಟ್ ಮಾಡ್. **ಹೇಳ್ದು** /*he:ḷdu*/ ಹೇಳುವುದು. to tell. **ಹೇಳ್ದೊಂದು ಮಾಡ್ದೊಂದು(ನು).** ವಾ: ಅಂವನ ಮಾತ್ ನಂಬ್‌ಬಡ ಹೇಳ್ದು ಎಲ್ಲ ಪೊಟ್ಟು. ಪ: ಹೇಳ್ದಾಂಗೆ – ಹೇಳಿದ ಹಾಗೆ; ಹೇಳ್ದೆ ಬೇಡ – ಹೇಳುವುದೇ ಬೇಡ; ಹೇಳ್ಡ್ – ಹೇಳಿದ್ದು; ಹೇಳ್ದೆ – ಹೇಳಿದೆ. **ಹೇಳ್ನೆ** /*he:ḷne*/ ಹೇಳುತ್ತೇನೆ. will tell. ವಾ: ನಾ ಮನೆಲಿ ಹೇಳ್ನೆ ನಿಂಗೆ ಇಸ್ಕೂಲ್ ಲಿ ಪೆಟ್ಟ್ ಸಿಕ್ಕಿತ್‌ತ. ಪ: ಹೇಳ್ವೆ – ಹೇಳುತ್ತಾರೆ; ಹೇಳುತ್ತೇವೆ; ಹೇಳ್ಸಕು – ಹೇಳಿಸಬೇಕು; ಹೇಳ್ಸ್‌ನೆ – ಹೇಳಿಸೆ.

ಹೈದ /*haida*/ ನಾ. ಹುಡುಗ. boy, lad. **ಹೈದಂಗಳಿಗೆ ಮೀಸೆ ಬಾಕನ ದೇಸ ಕಾಂಬಲೆ, ಗೂಡೆಗೆ ಮೊಲೆ ಬಾಕನ ನೆಲ ಕಾಂಬಲೆ(ಗಾ). ದೊಡ್ಡ ಹೊಟ್ಟೆ ಹೈದಂಗೆ ಹಿಂದೆ ಬಾಲ ಮುಂದೆನು ಬಾಲ – ಆನೆ(ಒ).** ವಾ: ಈ ಹೈದ ಎಲ್ಲಿ ಹೋತು?

ಹೈದಂಗೂರು /*haidaŋgu:ru*/ ನಾ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಮರ್ಕಂಜ ಗ್ರಾಮದ ಜಾಗ. a locality in Markanja village in Sullia Taluk of Dakshina Kannada District.

ಹೈಲ್¹ /*hailɨ*/ ನಾ. ಕಟಾವಿನ ಸಂದರ್ಭದಲ್ಲಿ ಭತ್ತ ಅಥವಾ ಭತ್ತದ ತೆನೆಯಿಂದ ತುಂಡಾಗಿ ಹೊರಬರುವ ಅತೀ ಚಿಕ್ಕ ತುಂಡು. a tiny piece of straw, stubble. ವಾ: ಹೈಲ್ ಮೈಗೆ ತೀರ ಅಂಟಿದೆ. ಪ: ಜುಂಗು.

ಹೈಲ್² /*hailɨ*/ ನಾ. ಬೈಗುಳ ಪದ. an expletive. ವಾ: ಇದ್‌ಕೆ ಹಞ್ಞ ಹೈಲ್.

ಹೊಂಕಣ /*hoŋkaṇa*/ ಕ್ರಿ. 1. ಸಗಣಿಯ ಮೇಲೆ ಕೂರುವ ಹುಳ (ಹಸಿರು ರೆಕ್ಕೆಯ ನೀಲಿ ಬಣ್ಣದ್ದಾಗಿರುತ್ತದೆ) ಕೆಟ್ಟ ವಾಸನೆಗೆ ಬರುವಂತಹುದು, 2. ದೊಡ್ಡ ನೊಣ. 1. an insect/a fly that sits on cow dung, 2. a large fly. ವಾ: ಮೂಲಂಗಿ ಗೈಪು ಮಾಡಿರೆ ಸಾಕ್ ಎಲ್ಲಿದ್ದವೆಪ ಈ ಹೊಂಕಣಗ ಅಡ್‌ಗೆ ಮನೆಗೆ ಬಂದವೆಲಾ. ಪ: ಹೂಂಕಣ.

ಹೊಂಗರೆ /*hoŋgarɛ*/ ನಾ. 1. ಹೊಂಗರೆ ಮರ, 2. ಪಾನುವಾಳ ಮರ. 1. tiger's claw, 2. Indian coral tree. ವಾ: ಹೊಂಗರೆ ಮರಕೆ ಒಳ್ಳೆಮೆಣ್ಸ್ ಬೊಳ್ಳಿನ ಹಬ್ಬುವೆ. **ಹೊಂಗರೆ ಹೂವ್** /*hoŋgarɛ hu:vɨ*/ ಪಾನುವಾಳ ಮರದಲ್ಲಿ ಬಿಡುವ ಕೆಂಪು ಬಣ್ಣದ ಹೂವು. red flowers of tiger's claw or Indian coral tree. ವಾ: ಹೊಂಗರೆ ಹೂವ್‌ಲಿ ಪೊಜ್ಜಿ ಮಾಡಕ್. **ಹೊಂಗೆಮರ** /*hoŋgɛmara*/ 1. ತಮಾಲ ವೃಕ್ಷ, 2. ಆಯುರ್ವೇದ ಶಾಸ್ತ್ರ ಪ್ರಕಾರ ಹೊಂಗೆ ಮರ ಒಂದು ಗಿಡ ಮೂಲಿಕೆ ಎಂದು ಗುರುತಿಸಲಾಗಿದೆ. 1. Indian Beech Tree, 2. a tree with medicial properties. ವಾ: ಹೊಂಗೆ ಮರದ ಹೂ, ಕೆತ್ತೆ, ಬೇರ್ ಎಲ್ಲನು ಆಯುರ್‌ವೇದಲಿ ಮೊದ್ದಿಗೆ ಬಳ್ಸಿವೆಗಡ.

ಹೊಂಚುಹಾಕುದು /*hoɲcuha:kudu*/ ಕ್ರಿ. ದಾಳಿ ನಡೆಸಲು ಕಾದು ನಿಲ್ಲುವುದು. to wait for the right time/opportunity to attack/to pounce on. ವಾ: ಹುಲಿ ಪ್ರಾಣಿಗಳ ಹಿಡೆಕೆ ಹೊಂಚು ಹಾಕುದು.

ಹೊಂಡ /*hoṇḍa*/ ನಾ. ಆಳವಾದ ಗುಂಡಿ. a deep ditch. ವಾ: ಗದ್ದೆ ಏರಿಲಿ ಹೊಂಡಗಿದ್ದವೆ ನೋಡಿಕಂಡ್ ಹೋಕು.

ಹೊಂತಗಾರ /*hontaga:ra*/ ನಾ. 1. ಯುವಕ, 2. ಜವ್ವಣಿಗ, 3. ಪ್ರಾಯಕ್ಕೆ ಬಂದವ. 1. a young man, 2. youth, 3. young adult male. ವಾ: ಹೊಂತಗಾರ ಹೈದಾಗಿ ಹಿಂಗೆ ಮಾತಾಡಿರೆ ವಯ್ಸಾದೊವು ಹೆಂಗೆ ಮಾತಾಡೊಕು ಹೇಳ್. **ಹೊಂತಕಾರಿ ಹೈದ** /*hontaka:ri haida*/ ಗಟ್ಟಿ ಮುಟ್ಟಿನ ಹುಡುಗ. a strong boy. **ಹೊಂತಗಾರ ಹೈದ** /*hontaga:ra haida*/ 1. ಯೌವ್ವನದ ಹುಡುಗ, 2. ಪ್ರಾಯಕ್ಕೆ ಬಂದ ಹುಡುಗ. 1. a young man, 2. youth. ವಾ: ಮನೆಲಿ ಇಬ್ಬರ್ ಹೊಂತಗಾರ ಹೈದಂಗ ಒಳೊಲ.

ಹೊಂದಿಕಂಡ್ /*hondikaṇḍɨ*/ ಕ್ರಿ. ಹೊಂದಿಕೊಂಡು.

adjusted/matched. ವಾ: ಮನೆಲಿ, ಹೋದಲಿ ಹೆಣ್ಮಕ್ಕ ಹೊಂದಿಕಂಡ್ ಹೋಕು. ಪ: ಹೊಂದಿಕೊಂಡಿತ್ತ್ – ಹೊಂದಿಕೊಂಡಿದ್ದನು(ಳು).

ಹೊಕಂಡ್ /*hokaṇḍi*/ ಕ್ರಿ. ಹೋಗುತ್ತಾ. going. ವಾ: ಮನೆ ಕಡೆ ಹೊಕಂಡ್ ಬಂದ್‌ಕಂಡ್ ಇರಿ ಬಲಾ.

ಹೊಕಂಬದು /*hokambadu*/ ಕ್ರಿ. ಸುರಿದುಕೊಳ್ಳುವುದು. to pour.

ಹೊಕಾಚೆ /*hoka:ce*/ ಕ್ರಿ. 1. ಹೋಗುವಾಗ, 2. ಆಚೆ ಹೋಗಬೇಕು. 1. while going, 2. should go outside. ವಾ: ನಂಗೆ ಹಿಂಬೋತುಗೆ ಹೋಕಾಚೆ.

ಹೊಕುಟ್ಟು /*hokuṭṭu*/ ಕ್ರಿ. ಹೋಗಬೇಕು. should go. ವಾ: ನಂಗೆ ಆಪೀಸ್‌ಗೆ ಹೊಕುಟ್ಟು.

ಹೊಕ್ಕತ್[1] /*hokkati*/ ನಾ. ತುರ್ತು ಸಮಯ. emergency.

ಹೊಕ್ಕತ್[2] /*hokkati*/ ಕ್ರಿ. 1. ಹುಕ್ಕು, 2. ನುಗ್ಗು, 3. ಹೊಗು. 1. to storm in, 2. to enter by force, 3. to go. ವಾ: ಎಲಿ ಕಡ್ಮೆ ಒಳಗೆ ಹೊಕ್ಕತ್.

ಹೊಕ್ಕ್‌ಳ್ /*Hokkiḷi*/ ನಾ. ನಾಭಿ. navel/umbilicus. ವಾ: ಹೊಕ್ಕ್‌ಳ್ಗೆ ಕಾಯೆಣ್ಣೆ ಹಾಕಿರೆ ಒಳ್ಳದ್. **ಹೊಕ್ಕುಳಬೊಳ್ಳಿ ಹುಗ್ಗದ್** /*hokkuḷabɔḷḷi huggadi*/ ಒಂದು ಸ್ಥಳದಲ್ಲಿ ಖಾಯಂ ಆಗಿ ಠಿಕಾಣಿ ಹೂಡಿದರೆ ಈ ರೀತಿ ಹೇಳುತ್ತಾರೆ. to live in a place permanently. ವಾ: ಅಂವನ ಹೊಕ್ಕುಳ ಬಳ್ಳಿ ಅಲ್ಲೆ ಹುಗ್ಗದ್. **ಹೊಕ್ಕುಳುಬೊಳ್ಳಿ** /*hokkuḷubɔḷḷi*/ ನಾಭಿಬಳ್ಳಿ. umbalical cord. ವಾ: ಕೂಸುನ ಹೊಕ್ಕುಳು ಬಳ್ಳಿ ಬೀತ್.

ಹೊಕ್ಸ್ /*hoksi*/ ಕ್ರಿ. ಉರುಳು. to roll over. ವಾ: ಅಂವ ಓಡ್‌ಕನ ಹೊಕ್ಸ್ ಬೀತ್.

ಹೊಗಳ್ತೆ /*hogaḷtɛ*/ ನಾ. ಹೊಗಳು. praising. ವಾ: ಹಿಂಗೆ ಹೊಗ್ ಳ್ತಿದ್ದರೆ ಕೊಂಬು ಬಾದು.

ಹೊಗುಟ್ಟು /*hoguṭṭu*/ ಕ್ರಿ. 1. ಹೋಗು, 2. ತೆರಳು, 3. ಗಮಿಸು. 1. to go, 2. to exit, 3. to depart. ವಾ: ಅವುಳು ಚೋಡ್‌ಗೆ ಅರ್ವೆ ತೊಳೆಕೆತ ಹೊಗುಟ್ಟು. ಪ: ಹೊಗೊಲೊ – ಹೋಗಿದ್ದಾರೆ; ಹೊಕು – ಹೋಗಬೇಕು – ಹೊಕೆನ್ – ಹೋಗುವುದಕ್ಕೇನು; ಹೊಗ್ತಿರ್‌ಕನ – ಹೋಗುತ್ತಿರುವಾಗ

